ಯುದ್ಧಕಾಂಡೇ ಷಷ್ಠಿತಮಸ್ಸರ್ಗಃ

ಸಪ್ರವಿಶ್ಯ ಪುರೀಂ ಲಂಕಾಂ ರಾಮಬಾಣಭಯಾರ್ದಿತಃ । ಭಗ್ನದರ್ಪಸ್ತದಾ ರಾಜಾ ಬಭೂವ ವ್ಯಥಿತೇಂದ್ರಿಯಃ ॥ ೧ ॥ ಮಾತಂಗಇವ ಸಿಂಹೇನ ಗರುಡೇನೇವ ಪನ್ನಗಃ । ಅಭಿಭೂತೋಽಭವದ್ರಾಜಾ ರಾಘವೇಣ ಮಹಾತ್ಮನಾ ॥ ೨ ॥ * ಬ್ರಹ್ಮ ದಂಡ ಪ್ರಕಾಶಾನಾಂ ವಿದ್ಯುತ್ಸದೃಶವರ್ಚಸಾಂ । ಸ್ಮರ್ರ್ ರಾಘವಬಾಣಾನಾಂ ವಿವ್ಯಥೇ ರಾಕ್ಷಸೇಶ್ವರಃ ॥ ೩ ॥ ಸ ಕಾಂಚನಮಯಂ ದಿವ್ಯಮಾಶ್ರಿತ್ಯ ಪರಮಾಸನಂ । ವಿಪ್ರೇಕ್ಷ

ಸರಾಜಾ - ಆ ರಾಕ್ಷಸಾಧಿಪತಿಯು, ರಾಮ....ತಃ - ಶ್ರೀರಾಮಬಾಣಗಳ ಭೀತಿಯಿಂದ ತಳಮಳಗೊಂಡು, ಲಂಕಾಪುರೀಂ - ಲಂಕಾಪಟ್ಟಣವನ್ನು, ಪ್ರವಿಶ್ಯ - ಹೊಕ್ಕು, ತದಾ - ಆಗ, ಭಗ್ನದರ್ಪಃ - ಮುರಿದ ಗರ್ವವುಳ್ಳವನಾಗಿ, ವ್ಯಥಿತೇಂದ್ರಿಯಃ - ದುಃಖಿತವಾದ ಮನಸ್ಸುಳ್ಳವನು, ಬಭೂವ - ಆದನು. ॥ ೧ ॥ ರಾಜಾ - ರಾಕ್ಷಸರಾಜನು, ಸಿಂಹೇನ - ಸಿಂಹದಿಂದ, ಮಾತಂಗ ಇವ - ಆನೆಯಂತೆಯೂ, ಗರುಡೇನ - ಗರುಡನಿಂದ, ಪನ್ನಗಇವ - ಸರ್ಪದಂತೆಯೂ, ಮಹಾತ್ಮನಾ - ಮಹಾನುಭಾವನಾದ, ರಾಘವೇಣ - ಶ್ರೀರಾಮನಿಂದ, ಅಭಿಭೂತಃ - ತಿರಸ್ಕರಿಸಲ್ಪಟ್ಟವನು, ಅಭವತ್ - ಆದನು. ॥ ೨ ॥ ರಾಕ್ಷಸೇಶ್ವರಃ - ರಾಕ್ಷಸಾಧಿಪತಿಯು, ಬ್ರಹ್ಮ....ನಾಂ - ಪ್ರಳಯ ಕಾಲದಲ್ಲಿ ಹುಟ್ಟುವ ಅಗ್ನಿವರ್ಣವಾದ "ಬ್ರಹ್ಮದಂಡ" ಎಂಬ ಧೂಮಕೇತುವಿಗೆ ಸಮಾನವಾದ, ವಿದ್ಯು....ಸಾಂ - ಮಿಂಚಿಗೆ ಸಮಾನವಾದ ಬೆಳಕುಳ್ಳ, ರಾಘ....ನಾಂ - ರಾಮಚಂದ್ರನ ಬಾಣಗಳನ್ನು, ಸ್ಮರ್ರ್ - ಸ್ಮರಿಸಿಕೊಂಡು, ವಿವ್ಯಥೇ - ದುಃಖಿತನಾದನು. ॥ ೩ ॥ ಸರಾವಣಃ - ಆ ರಾವಣನು, ಕಾಂಚನಮಯಃ - ಸುವರ್ಣವಿಕಾರವಾದ, ದಿವ್ಯಂ - ಮನೋಹರವಾದ, ಪರಮಾಸನಂ - ಉತ್ತಮವಾದ ಆಸನವನ್ನು, ಆಶ್ರಿತ್ಯ - ಆಶ್ರಯಿಸಿ, ರಕ್ಷಾಂಸಿ - ರಕ್ಕಸರನ್ನು, ವಿಪ್ರೇಕ್ಷಮಾಣಃ -

---

ಈ ಪ್ರಕಾರವಾಗಿ ಶ್ರೀರಾಮಮೂರ್ತಿಯ ಬಾಣಗಳಿಂದ ಪೀಡಿತನಾಗಿ, ಮದವುಡುಗಿದ ಆ ರಾವಣಾಸುರನು ಬಹಳವಾಗಿ ವ್ಯಾಕುಲವಾದ ಸರ್ವೇಂದ್ರಿಯಗಳುಳ್ಳವನಾಗಿ ಲಂಕಾನಗರವನ್ನು ಪ್ರವೇಶಿಸಿದನು. ಹೀಗೆ ಪಟ್ಟಣವನ್ನು ಪ್ರವೇಶಿಸಿ ಸಿಂಹದಿಂದ ಆನೆಯಂತೆಯೂ, ಗರುಡನಿಂದ ಮಹಾ ಸರ್ಪದಂತೆಯೂ ಶ್ರೀರಾಮನಿಂದ ಅವಮಾನಿತನಾದದು ಮಾತ್ರವಲ್ಲದೆ, ರಾಕ್ಷಸಾಧಿಪತಿಯಾದ ಆ ರಾವಣಾಸುರನು ಬ್ರಹ್ಮದಂಡಕ್ಕೆ ಸಮಾನವಾದ ಪ್ರಕಾಶವುಳ್ಳವೂ, ಮಿಂಚಿನ ಬಳ್ಳಿಯನ್ನು ಹೋಲುವುವೂ ಆದ ಶ್ರೀರಾಮ ಬಾಣಗಳನ್ನು ಸ್ಮರಿಸಿಕೊಂಡು ಬಹಳವಾಗಿ ಪರಿತಪಿಸಿ ಹೋದನು. ಅವನು ಹೀಗೆ ವ್ಯಸನಪರಿಪೀಡಿತ

---

* "ಬ್ರಹ್ಮದಂಡ ಪ್ರಕಾಶಾನಾಂ" ಇಲ್ಲಿ "ಬ್ರಹ್ಮದಂಡ"ವೆಂದರೆ ಮೂರು ಬಗೆಯಾಗಿ ಅರ್ಥವಾಗುತ್ತದೆ. (೧) ಸಮಸ್ತ ಶಸ್ತ್ರಾಸ್ತ್ರಗಳನ್ನೂ ಧ್ವಂಸಗೊಳಿಸಿದ, ವಸಿಷ್ಠನು ಪ್ರಯೋಗಿಸಿದ ದಂಡ. (೨) ಪ್ರಳಯಕಾಲದಲ್ಲಿ ಹುಟ್ಟುವ ಅಗ್ನಿವರ್ಣವುಳ್ಳ ಧೂಮಕೇತುವು. (೩) ಬ್ರಹ್ಮ ಸಂಬಂಧವಾದ ದಂಡ (ಅಥವಾ ಆತನ ಅಜ್ಞೆ) ಆ ಬ್ರಹ್ಮದಂಡಕ್ಕೆ ಸಮಾನವಾದ ಕಾಂತಿಯುಳ್ಳ (ಬಾಣಗಳು.)

ಮಾಣೋ ರಕ್ಷಾಂಸಿ ರಾವಣೋ ವಾಕ್ಯಮಬ್ರವೀತ್ ॥ ೪ ॥ "ಸರ್ವಂ ತತ್ಖಲು ಮೇ ಮೋಘಂ ಯತ್ತಪ್ತಂ ಪರಮಂ ತಪಃ । ಯತ್ಸಮಾನೋ ಮಹೇಂದ್ರೇಣ ಮಾನುಷೇಣಾಽಸ್ಮಿ ನಿರ್ಜಿತಃ ॥ ೫ ॥ ಇದಂ ತದ್ಬ್ರಹ್ಮಣೋ ಘೋರಂ ವಾಕ್ಯಂ ಮಾಮಭ್ಯುಪಸ್ಥಿತಂ । 'ಮಾನುಷೇಭ್ಯೋ ವಿಜಾನೀಹಿ ಭಯಂ ತ್ವಮಿತಿ' ತತ್ತಥಾ ॥ ೬ ॥ ದೇವದಾನವಗಂಧರ್ವೈರ್ಯಕ್ಷರಾಕ್ಷಸಪನ್ನಗೈಃ । ಅವಧ್ಯತ್ವಂ ಮಯಾ ಪ್ರಾಪ್ತಂ ಮಾನುಷೇಭ್ಯೋ ನಯಾಚಿತಂ ॥೭॥ ‡ ವಿದಿತಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ ।

ನೋಡುವವನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೪॥ ಯತ್ - ಯಾವ ಕಾರಣದಿಂದ, ಮಹೇಂದ್ರೇಣ - ದೇವೇಂದ್ರನೊಡನೆ, ಸಮಾನಃ - ಸಮಾನನಾಗಿ, ಮಾನುಷೇಣ - ಮನುಷ್ಯನಿಂದ, ನಿರ್ಜಿತಃ - ಜಯಿಸಲ್ಪಟ್ಟವನು, ಅಸ್ಮಿ - ಆಗಿದ್ದೇನೆಯೋ, ತತ್ - ಆ ಕಾರಣದಿಂದ, ಪರಮಂ- ಉತ್ತಮವಾದ, ಯತ್ತಪಃ - ಯಾವ ತಪಸ್ಸು, ತಪ್ತಂ - ಮಾಡಲ್ಪಟ್ಟಿತೋ, ಮೇ - ನನ್ನ, ತತ್ಸರ್ವಂ- ಅದೆಲ್ಲ, ಮೋಘಂ - ವ್ಯರ್ಥವಾಯಿತು. ॥ ೫ ॥ ತ್ವಂ - ನೀನು, ಮಾನುಷೇಭ್ಯಃ - ಮನುಷ್ಯರಿಂದ, ಭಯಂ - ಭೀತಿಯೆಂದು, ವಿಜಾನೀಹಿ - ತಿಳುದುಕೋ, ಇತಿ - ಇಂತೆಂದು, ಮಾಂ - ನನ್ನನ್ನು ಕುರಿತು, ಬ್ರಹ್ಮಣಃ - ಬ್ರಹ್ಮನ, ಘೋರಂ - ಭಯಂಕರವಾದ, ಯದ್ವಾಕ್ಯಂ - ಯಾವ ಮಾತು, ಉಕ್ತಂ - ಹೇಳಲ್ಪಟ್ಟಿತೋ, ತದಿದಂ - ಆ ಈ ವಾಕ್ಯವು, ಮಾಂ - ನನ್ನನ್ನು ಕುರಿತು, ಅಭ್ಯುಪಸ್ಥಿತಂ - ಪ್ರಾಪ್ತವಾಯಿತು, ತತ್ - ಅದು, ತಥಾ - ಹಾಗೆಯೇ ಸಫಲವಾಯಿತು. ॥ ೬ ॥ ದೇವ....ರ್ವೈಃ - ದೇವತೆಗಳಿಂದಲೂ, ದಾನವರಿಂದಲೂ, ಗಂಧರ್ವರಿಂದಲೂ, ಯಕ್ಷ....ಗೈಃ - ಯಕ್ಷರಿಂದಲೂ, ರಾಕ್ಷಸರಿಂದಲೂ, ಸರ್ಪಗಳಿಂದಲೂ, ಅವಧ್ಯತ್ವಂ - ಸಂಹರಿಸಲಸಾಧ್ಯತ್ವವು, ಮಯಾ - ನನ್ನಿಂದ, ಪ್ರಾಪ್ತಂ - ಹೊಂದಲ್ಪಟ್ಟಿತು, ಮಾನುಷೇಭ್ಯಸ್ತು - ಮನುಷ್ಯರಿಂದ, ಅವಧ್ಯತ್ವಂ - ಅವಧ್ಯತ್ವವು, ನಯಾಚಿತಂ - ಪ್ರಾರ್ಥಿಸಲ್ಪಡಲಿಲ್ಲ. ॥ ೭ ॥ ಪುರಾ - ಪೂರ್ವದಲ್ಲಿ, ಇಕ್ಷ್ವಾ....ನ - ಇಕ್ಷ್ವಾಕುಕುಲಕ್ಕೆ ನಾಥನಾದ, ಅನರಣ್ಯೇನ - ಅನರಣ್ಯನಿಂದ, ಕುಲಾಧಮ - ವಂಶದಲ್ಲಿ ನೀಚನೇ, ದುರ್ಮತೇ-ದುರ್ಬುದ್ಧಿಯುಳ್ಳವನೇ, ಹೇ ರಾಕ್ಷಸಾಧಮ - ಎಲೈ ರಾಕ್ಷಸಾಧಮನೇ, ಯಾ - ಯಾವ

ನಾಗಿದ್ದರೂ, ಸುವರ್ಣಮಯವಾದುದೂ, ಬಹು ಶ್ರೇಷ್ಠವಾದುದೂ ಆದ ಸಿಂಹಾಸನದಮೇಲೆ ಕುಳಿತು ತನ್ನವರಾದ ರಾಕ್ಷಸರೆಲ್ಲರನ್ನೂ ನೋಡಿ ಹೀಗೆಂದನು: "ಎಲೈ ರಾಕ್ಷಸೋತ್ತಮರಿರಾ! ನಾನೆಸಗಿದ ಮಹಾ ಭಯಂಕರವಾದ ತಪಸ್ಸೆಲ್ಲವೂ ಇದೀಗ ವ್ಯರ್ಥವಾಗಿ ಹೋಯಿತು. ಮಹೇಂದ್ರನಿಗೆ ಸಮಾನನಾದ ನಾನು ಕೇವಲ ಮಾನವಮಾತ್ರನಾದ ಆ ರಾಮನಿಂದ ಜಿತನಾಗಿ ಹೋದೆನು. ॥ ೧-೫ ॥ ಹಿಂದೆ ಬ್ರಹ್ಮದೇವನು, "ಎಲಾ ರಾವಣಾ! ನಿನಗೆ ಮಾನವನಿಂದ ಭಯವಡಸುತ್ತದೆ" ಎಂದು ನುಡಿದ ಭಯಂಕರವಾದ ಮಾತು ಇದೀಗ ಸಾದೃಶ್ಯಕ್ಕೆ ಬಂದಿತು. ಆಹ! ಬ್ರಹ್ಮವಚನವು ಸುಳ್ಳಾದೀತೆ! ಅಯ್ಯಾ ರಾಕ್ಷಸಶ್ರೇಷ್ಠರಿರಾ! ನಾನು ದೇವದಾನವಗಂಧರ್ವರಿಂದಲೂ, ಯಕ್ಷರಾಕ್ಷಸಪನ್ನಗರಿಂದಲೂ ಯಾವ ಭಯವೂ ಉಂಟಾಗದಂತೆ ಆತನಿಂದ ವರವನ್ನು ಪಡೆದೆನು. ಹಿಂದೆ ನಾನು ರಘುಕುಲದಲ್ಲಿ ಅಗ್ಗಳೆಯನಾದ

---

‡ "ಯಸ್ತ್ವಾಂ" ಇಲ್ಲಿ "ಯಃ, ತು, ಅಂ" ಎಂದೂ "ಯಃ, ತ್ವಾಂ" ಎಂದೂ ಎರಡು ವಿಧವಾಗಿ ಪದಚ್ಛೇದ ಮಾಡಬೇಕು. (ಅಂ—ನಿಶ್ಚಯವು.)

ಇಕ್ಷ್ವಾಕುಕುಲನಾಥೇನ ಅನರಣ್ಯೇನ ಯತ್ಪುರಾ ॥ ೮ ॥ ಉತ್ಪತ್ಸ್ಯತೇಹಿ ಮದ್ವಂಶೇ ಪುರುಷೋ ರಾಕ್ಷಸಾಧಮ! । ಯಸ್ತ್ವಾಂ ಸಪುತ್ರಂ ಸಾಮಾತ್ಯಂ ಸಬಲಂ ಸಾಶ್ವ ಸಾರಥಿಂ । ನಿಹನಿಷ್ಯತಿ ಸಂಗ್ರಾಮೇ ತ್ವಾಂ ಕುಲಾಧಮ! ದುರ್ಮತೇ!" ॥ ೯ ॥ ಶಪ್ತೋಽಹಂ ವೇದವತ್ಯಾಚ ಯದಾ ಸಾ ಧರ್ಷಿತಾ ಪುರಾ । ಸೇಯಂ ಸೀತಾ ಮಹಾಭಾಗಾ ಜಾತಾ ಜನಕನಂದಿನೀ ॥ ೧೦ ॥ * ಉಮಾ ನಂದೀಶ್ವರಶ್ಚಾಪಿ ರಂಭಾ ವರುಣ

ಪುರುಷನು, ಸಂಗ್ರಾಮೇತು - ಕಾಳೆಗದಲ್ಲಿ, ಸಪುತ್ರಂ - ಮಕ್ಕಳೊಡಗೂಡಿದ, ಸಾಮಾತ್ಯಂ - ಮಂತ್ರಿಗಳೊಡಗೂಡಿದ, ಸಬಲಂ - ಸೈನ್ಯಸಮೇತನಾದ, ಸಾಶ್ವಸಾರಥಿಂ - ಕುದುರೆಗಳಿಂದಲೂ, ಸಾರಥಿಯಿಂದಲೂ ಒಡಗೂಡಿದ, ತ್ವಾಂ - ನಿನ್ನನ್ನು, ನಿಹನಿಷ್ಯತಿ - ಸಂಹಾರ ಮಾಡುವನೋ, ಸಪುರುಷಃ - ಅಂಥಾ ಪುರುಷನು, ಮದ್ವಂಶೇ - ನನ್ನ ವಂಶದಲ್ಲಿ, ಉತ್ಪತ್ಸ್ಯತೇಹಿ - ಹುಟ್ಟುವನಷ್ಟೆ, ಆಂ - ನಿಶ್ಚಯವು, ಇತಿ - ಇಂತೆಂದು, ಯತ್ - ಯಾವ ಕಾರಣದಿಂದ, ಶಪ್ತಃ - ಶಪಿಸಲ್ಪಟ್ಟೆನೋ, ತತ್ - ಆ ಕಾರಣದಿಂದ, ದಶ....ಜಂ - ದಶರಥನಿಗೆ, ಪುತ್ರತ್ವೇನ - ಅವತಾರ ಮಾಡಿದ, ರಾಮಂ - ಶ್ರೀರಾಮನನ್ನು, ಮಾನುಷಂ - ಮನುಷ್ಯನನ್ನಾಗಿ, ಮನ್ಯೇ - ತಿಳಿದಿದ್ದೇನೆ, ವಿದಿತಂ - ತಿಳಿಯಲ್ಪಟ್ಟಿತು. ॥ ೮-೯ ॥ ಪುರಾ - ಪೂರ್ವದಲ್ಲಿ, ಸಾ - ಆ ದೇವತೆಯು, ಯದಾ - ಯಾವ ಕಾಲದಲ್ಲಿ, ಮಯಾ - ನನ್ನಿಂದ, ಧರ್ಷಿತಾ - ತಿರಸ್ಕೃತಳಾದಳೋ, ತದಾ - ಆ ಕಾಲದಲ್ಲಿ, ವೇದವತ್ಯಾಚ - ವೇದವತಿಯಿಂದಲೂ, ಅಹಂ - ನಾನು, ಶಪ್ತಃ - ಶಪಿಸಲ್ಪಟ್ಟೆನು, ಸೇಯಂ - ಆ ಈ ವೇದವತಿಯು, ಮಹಾಭಾಗಾ - ಮಹಾ ಪುಣ್ಯವತಿಯಾದ, ಜನಕನಂದಿನೀ - ಜನಕರಾಯನ ಮಗಳಾದ, ಸೀತಾ - ಸೀತಾದೇವಿಯಾಗಿ, ಜಾತಾ - ಹುಟ್ಟಿದಳು. ॥ ೧೦ ॥ ಉಮಾ - ಪಾರ್ವತಿಯೂ, ನಂದೀಶ್ವರಶ್ಚಾಪಿ -

---

ಅನರಣ್ಯನೆಂಬವನೊಡನೆ ಯುದ್ಧಮಾಡಿ ಅವನನ್ನು ಕಾಂದಶೀಕನನ್ನಾಗಿಯೂ ಮಾಡಿದೆನು. ಆಗ ಆ ಅನರಣ್ಯನು ಮಹಾ ಕೋಪೋದ್ದೀಪಿತನಾಗಿ, "ಎಲೈ ರಾಕ್ಷಸನೇ! ನಮ್ಮ ಕುಲದಲ್ಲಿ ದಶರಥಮಹಾರಾಜನಿಗೆ ರಾಮನೆಂಬವನು ಪುತ್ರನಾಗಿ ಜನಿಸಿ ನಿನ್ನನ್ನು ಪುತ್ರಮಿತ್ರಕಳತ್ರಾದಿಗಳೊಡನೆ ಸಂಹರಿಸುವನು" ಎಂದು ಹೇಳಿದನು. ಆ ರಾಮನು ಈತನೇ ಎಂದು ತಿಳಿಯುತ್ತೇನೆ. ಅಲ್ಲದೆ ಪೂರ್ವದಲ್ಲಿ ನಾನು ಮದೋದ್ರಿಕ್ತನಾಗಿ ಪೂಜ್ಯಳೂ, ತಪೋವಂತಳೂ ಆದ ವೇದವತಿಯೆಂಬಾಕೆಯ ಜಡೆಮುಡಿಯನ್ನು ಹಿಡಿದೆಳೆದೆನು. ಆಗಲಾ ಮಹಾತ್ಮಳು, "ಎಲೈ ರಾಕ್ಷಸಾಧಮನೇ! ನಾನು ನಿನ್ನ ಪಟ್ಟಣವಾದ ಲಂಕೆಯಲ್ಲಿಯೇ ಹುಟ್ಟಿ, ನಿನ್ನ ಲಂಕೆಯನ್ನೇ ಅಲ್ಲದೆ ನಿನ್ನ ವಂಶವೆಲ್ಲವನ್ನೂ ನಾಶಮಾಡುವೆನು" ಎಂದಳು. ಆ ಪೂಜ್ಯಳೇ ಈ ಸೀತೆಯೆಂದು ತೋರುತ್ತದೆ. ॥ ೬-೧೦ ॥ ಇದೂ ಅಲ್ಲದೆ, ನಾನು ಮೇರುಪರ್ವತವನ್ನೆತ್ತಿದಾಗ ಪಾರ್ವತೀ

---

* ಉಮಾ ಶಾಪ:—ರಾವಣನು ಕೈಲಾಸಾದ್ರಿಯನ್ನು ಮೇಲಕ್ಕೆತ್ತಿದಾಗ ಉಮೆಯು ಸ್ತ್ರೀ ಮೂಲಕವಾಗಿಯೇ ನಿನಗೆ ವಧೆಯುಂಟಾಗಲೆಂದು ಶಾಪವಿತ್ತಳು.

ನಂದೀಶ್ವರ ಶಾಪ:—ರಾವಣಾಸುರನು ವಾನರಾಕಾರನಾದ ನಂದೀಶ್ವರನನ್ನು ಅವಹೇಳನ ಮಾಡಿದಂದು ಆತನು, "ಯಸ್ಮಾದ್ವಾನರಮೂರ್ತಿಂ ಮಾಂ ದೃಷ್ಟ್ವಾ ರಾಕ್ಷಸ! ದುರ್ಮತೇ!! ಮೌರ್ಖ್ಯಾನ್ಮಾಮವ ಜಾನೀಷೇ ಪರಿಹಾಸಂಚ ಮುಂಚಸಿ ॥ ತಸ್ಮಾನ್ಮದ್ರೂಪ ಸಂಯುಕ್ತಾಃ ಮದ್ವೀರ್ಯ ಸಮತೇಜಸಃ । ಉತ್ಪತ್ಸ್ಯಂತೇ ವಧಾರ್ಥಂಹಿ ಕುಲಸ್ಯ ತವ ವಾನರಾಃ ॥"

ಕನ್ಯಕಾ । ಯಥೋಕ್ತಾಸ್ತಪಸಾ ಪ್ರಾಪ್ತಂ ನಮಿಥ್ಯಾ ಋಷಿಭಾಷಿತಂ ॥ ೧೧ ॥
ಏತದೇವಾಭ್ಯುಪಾಗಮ್ಯ ಯತ್ನಂ ಕರ್ತುಮಿಹಾರ್ಹಥ । ರಾಕ್ಷಸಾಶ್ಚಾಪಿ ತಿಷ್ಠಂತು
ಚರ್ಯಾಗೋಪುರಮೂರ್ಧಸು ॥ ೧೨ ॥ ಸಚಾಪ್ರತಿಮಗಂಭೀರೋ ದೇವದಾನವ

ನಂದೀಶ್ವರನೂ, ರಂಭಾ - ರಂಭೆಯೂ, ವರುಣಕನ್ಯಕಾ - ವರುಣನ ಮಗಳಾದ ಪುಂಜಿಕಸ್ಥಲೆಯೂ, ತಪಸಾ - ತಪಃಪ್ರಭಾವದಿಂದ, ಯಥಾ - ಹೇಗೆ, ಉಕ್ತಾಃ - ಹೇಳಿದರೋ, ತತ್ - ಅದು, ತಥೈವ - ಹಾಗೆಯೇ, ಪ್ರಾಪ್ತಂ - ಸಂಭವಿಸಿತು, ಋಷಿಭಾಷಿತಂ - ತಪೋವಂತರ ಮಾತು, ಮಿಥ್ಯಾ - ಸುಳ್ಳು, ನ - ಆಗುವುದಿಲ್ಲವು. ॥ ೧೧ ॥ ಏತದೇವ - ಈ ಶಾಪವನ್ನೇ, ಅಭ್ಯುಪಾಗಮ್ಯ - ತಿಳಿದು, ಇಹ - ಈಗ, ಯತ್ನಂ - ಪ್ರಯತ್ನವನ್ನು, ಕರ್ತುಂ - ಮಾಡುವುದಕ್ಕೆ, ಅರ್ಹಥ - ಯೋಗ್ಯರಾಗಿರಿ, ಚರ್ಯಾ....ಸು - ಊರುಬಾಗಿಲುಗಳಲ್ಲಿಯೂ, ಭಟರು ಸಂಚರಿಸತಕ್ಕ ಪ್ರದೇಶಗಳಲ್ಲಿಯೂ, ಊರುಬಾಗಿಲುಗಳ ಮೇಲ್ಭಾಗಗಳಲ್ಲಿಯೂ, ರಾಕ್ಷಸಾಃ - ರಕ್ಕಸರು, ತಿಷ್ಠಂತು - ಇರುವವರಾಗಲಿ. ॥ ೧೨ ॥ ಬ್ರಹ್ಮ....ತಃ -

---

ದೇವಿಯು ಮಹಾ ಕುಪಿತಳಾಗಿ, "ಎಲಾ ರಾಕ್ಷಸಾಧಮನೇ! ನೀನು ಸ್ತ್ರೀರತ್ನವನ್ನಪಹರಿಸಿ, ಆಕೆಯ ಭರ್ತನಿಂದಲೇ ಸಕುಟುಂಬನಾಗಿ ಹಾಳಾಗಿ ಹೋಗುವೆ" ಎಂದು ಶಪಿಸಿದಳು. ಪೂರ್ವದಲ್ಲಿ ನಾನು ಅತಿಯಾಗಿ ಗರ್ವಿಸಿ ಹಾಸ್ಯಮಾಡುದುದರಿಂದ ನಂದಿಕೇಶ್ವರನು ಕೆರಳಿದವನಾಗಿ, "ಎಲೈ ರಾವಣನೇ! ನನ್ನಂತಹ ವಿಕಾರಸ್ವರೂಪರಾದ ವಾನರರಿಂದಲೇ ನಿನ್ನ ಲಂಕೆಯೆಲ್ಲವೂ ನಾಶವಾಗಲಿ" ಎಂದು ಶಪಿಸಿದನು. ಇದೂ ಅಲ್ಲದೆ ನಾನು ಬಲಾತ್ಕಾರವಾಗಿ ರಂಭೆಯನ್ನು ಹಿಡಿದಂದು ನಳಕೂಬರನು, "ಎಲೆವೊ ರಾಕ್ಷಸನೇ! ನಿನಗೆ ಸ್ತ್ರೀಮೂಲಕವಾಗಿಯೇ ನಾಶವುಂಟಾಗಲಿ" ಎಂದೂ ಶಾಪವಿತ್ತನು. ವರುಣಕನ್ಯೆಯಾದ ಪುಂಜಿಕಸ್ಥಲೆಯೆಂಬವಳಿಗೆ ಅವಮಾನ ಮಾಡಿದಾಗ ಚತುರಾನನು, "ಎಲೈ! ನಿನಗೆ ಸ್ತ್ರೀಮೂಲಕವಾಗಿಯೇ ನಾಶವುಂಟಾಗಲಿ" ಎಂದು ಶಪಿಸಿದನು. ಇದರಮೇಲಾಗಿ ಅನೇಕ ಋಷಿಶ್ರೇಷ್ಠರೂ ನನ್ನನ್ನು ಹಾಗೆಯೇ ಶಪಿಸಿದರು. ಆ ಮಾತುಗಳೆಲ್ಲವೂ ಸುಳ್ಳಾದಾವೆ? ಆಗವು. ಆದುದರಿಂದೆಲೈ ರಾಕ್ಷಸೋತ್ತಮರಿರಾ! ನೀವು ಈ ವಿಷಯಗಳೆಲ್ಲವನ್ನೂ ಸಮಗ್ರವಾಗಿ ಯೋಚಿಸಿ ಲಂಕಾನಗರವನ್ನು ಕಾಪಾಡಲು ಸರ್ವಪ್ರಯತ್ನವನ್ನೂ ಮಾಡಿರಿ. ಇದೂ ಅಲ್ಲದೆ ಮಹಾ ಗಂಭೀ

"ಎಲಾ ದುರ್ಬುದ್ಧಿಯುಳ್ಳ ರಾವಣಾಸುರನೇ! ವಾನರಾಕಾರನಾದ ನನ್ನನ್ನು ನೋಡಿ ತಿರಸ್ಕರಿಸಿದುದೂ ಅಲ್ಲದೆ ಅಪಹಾಸ್ಯವನ್ನೂ ಮಾಡುತ್ತಿರುವೆಯಾದಕಾರಣ, ನನ್ನ ರೂಪದಿಂದಲೇ ಕೂಡಿ, ನನ್ನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳ ವಾನರರು ನಿನ್ನ ಕುಲನಾಶಕ್ಕಾಗಿ ಹುಟ್ಟುತ್ತಾರೆಯೆಂದು ತಿಳಿ" ಎಂದು ಶಾಪವಿತ್ತನು.

ರಂಭಾ ನಿಮಿತ್ತವಾದ ಶಾಪಃ—ರಾವಣನು ಹಿಂದೊಮ್ಮೆ ರಂಭೆಯನ್ನು ಬಲಾತ್ಕರಿಸಿ ಹಿಡಿದೆಳೆದಾಗ ನಳಕೂಬರನು,

"ಯದಾತ್ವಕಾಮಾಂ ಕಾಮಾರ್ತೋ ಧರ್ಷಯಿಷ್ಯತಿ ಯೋಷಿತಂ!
ಮೂರ್ಧಾತು ಶತಧಾ ತಸ್ಯ ಶಕಲೀ ಭವಿತಾ ತದಾ ॥"

"ತನ್ನನ್ನು ಬಯಸಿದವಳಲ್ಲದ ಹೆಂಗುಸನ್ನು ಕಾಮಾರ್ತನಾದ ಈ ರಾವಣನು ಕೆಡಿಸಿದಾಗಲೇ ಇವನ ತಲೆಯು ನೂರು ಹೋಳುಗಳಾಗಿ ಒಡೆದುಹೋಗುವುದು" ಎಂದು ಶಾಪವಿತ್ತಿದ್ದನು.

ವರುಣಕನ್ಯಕೆಯಾದ ಪುಂಜಿಕಸ್ಥಲೆಯನ್ನು ಕೆಣಕಿದುದರ ಫಲವಾಗಿ ಬ್ರಹ್ಮನು ರಾವಣನನ್ನು ಶಪಿಸಿದ್ದನು. ಇದು ರಾವಣಾಸುರನ ಪ್ರಲಾಪದಲ್ಲಿಯೇ ವ್ಯಕ್ತವಾಗಿದೆ.

ದರ್ಪಹಾ । ಬ್ರಹ್ಮಶಾಪಾಭಿಭೂತಸ್ತು ಕುಂಭಕರ್ಣೋ ವಿಬೋಧ್ಯತಾಂ" ॥ ೧೩ ॥ ಸಪರಾಜಿತಮಾತ್ಮಾನಂ ಪ್ರಹಸ್ತಂ ಚ ನಿಷೂದಿತಂ । ಜ್ಞಾತ್ವಾ ರಕ್ಷೋಬಲಂ ಭೀಮ ಮಾದಿದೇಶ ಮಹಾಬಲಃ ॥ ೧೪ ॥ "ದ್ವಾರೇಷು ಯತ್ನಃ ಕ್ರಿಯತಾಂ ಪ್ರಾಕಾರಶ್ಚಾಧಿ ರುಹ್ಯತಾಂ । ನಿದ್ರಾವಶಸಮಾವಿಷ್ಟಃ ಕುಂಭಕರ್ಣೋ ವಿಬೋಧ್ಯತಾಂ ॥ ೧೫ ॥ ¶ ಸುಖಂ ಸ್ವಪಿತಿ ನಿಶ್ಚಿಂತಃ ಕಾಲೋಪಹತಚೇತನಃ । ನವಷಟ್ಸಪ್ತ ಚಾಷ್ಟೌಚ

ಬ್ರಹ್ಮಶಾಪದಿಂದ ತಿರಸ್ಕೃತನಾದ, ದೇವ....ಹಾ - ದೇವರಾಕ್ಷಸರ ಗರ್ವವನ್ನು ಭಂಜಿಸುವ, ಅಪ್ರ....ರಃ - ಸಮಾನವಿಲ್ಲದ ಗಾಂಭೀರ್ಯವುಳ್ಳ, ಸಕುಂಭಕರ್ಣಶ್ಚ - ಆ ಕುಂಭಕರ್ಣನು, ವಿಬೋಧ್ಯತಾಂ - ಎಬ್ಬಿಸಲ್ಪಡಲಿ. ॥ ೧೩ ॥ ಮಹಾಬಲಃ - ಬಹು ಸಾಮರ್ಥ್ಯವಂತನಾದ, ಸರಾವಣಃ - ಆ ರಾವಣನು, ಆತ್ಮಾನಂ - ತನ್ನನ್ನು, ಪರಾಜಿತಂ - ಪರಾಜಯವನ್ನು ಹೊಂದಿದವನನ್ನಾಗಿಯೂ, ಪ್ರಹಸ್ತಂಚ - ಪ್ರಹಸ್ತನನ್ನೂ, ನಿಷೂದಿತಂ - ಹೊಡೆಯಲ್ಪಟ್ಟವನನ್ನಾಗಿಯೂ, ಜ್ಞಾತ್ವಾ - ತಿಳಿದು, ಭೀಮಂ - ಭಯಂಕರವಾದ, ರಕ್ಷೋಬಲಂ - ರಾಕ್ಷಸಸೈನ್ಯವನ್ನು, (ಈ ರೀತಿ) ಆದಿದೇಶ - ಆಜ್ಞಾಪಿಸಿದನು. ॥ ೧೪ ॥ ದ್ವಾರೇಷು - ಬಾಗಿಲುಗಳಲ್ಲಿ, ಯತ್ನಃ - ಪ್ರಯತ್ನವು, ಕ್ರಿಯತಾಂ - ಮಾಡಲ್ಪಡಲಿ, ಪ್ರಾಕಾರಶ್ಚ - ಕೋಟೆಯೂ ಸಹಾ, ಅಧಿರುಹ್ಯತಾಂ - ಏರಲ್ಪಡಲಿ, ನಿದ್ರಾ....ಷ್ಟಃ - ನಿದ್ರೆಯಿಂದ ಪರಾಧೀನನಾದ, ಕುಂಭಕರ್ಣಃ - ಕುಂಭಕರ್ಣನು, ವಿಬೋಧ್ಯತಾಂ - ಎಬ್ಬಿಸಲ್ಪಡಲಿ. ॥೧೫॥ ಕಾಲೋ....ನಃ - ನಿದ್ರೆಯೆಂಬ ಯಮನಿಂದ ಹೊಡೆಯಲ್ಪಟ್ಟ ಪ್ರಜ್ಞೆಯುಳ್ಳ, ರಾಕ್ಷಸಃ -ರಕ್ಕಸನಾದ ಕುಂಭಕರ್ಣನು, ನಿಶ್ಚಿಂತಃ - ಚಿಂತಾರಹಿತನಾಗಿ, ಸುಖಂ - ಸುಖವಾಗಿ, ಸ್ವಪಿತಿ - ನಿದ್ದೆ ಮಾಡುತ್ತಿರು

ರನೂ, ದೇವತೆಗಳ ಮತ್ತು ರಾಕ್ಷಸರ ಗರ್ವವನ್ನು ನಾಶಮಾಡುವಂತಹ ಪರಾಕ್ರಮವುಳ್ಳವನೂ ಆದರೂ ಬ್ರಹ್ಮದೇವನ ಶಾಪದಿಂದ ತಿರಸ್ಕೃತನಾದವನೂ ಆದ ಕುಂಭಕರ್ಣನನ್ನು ಎಚ್ಚರಗೊಳಿಸಿರಿ. ॥ ೧೧–೧೩ ॥ ಈ ರೀತಿ ರಾವಣಾಸುರನು ತಾನು ಅವಮಾನಿತನಾದುದನ್ನೂ, ಪ್ರಹಸ್ತನು ಮೃತನಾದುದನ್ನೂ ಸ್ಮರಿಸಿಕೊಂಡು ಇನ್ನು ಶ್ರೀರಾಮನನ್ನು ಜಯಿಸುವುದು ಬಹಳ ಅಸಾಧ್ಯವೆಂದು ಯೋಚಿಸಿ ಭಯದಿಂದ ನುಡಿದು ಮತ್ತೆ ತನ್ನ ಬಳಿಯಲ್ಲಿದ್ದ ರಾಕ್ಷಸರನ್ನು ಕುರಿತು, "ಎಲೈ ರಾಕ್ಷಸಶ್ರೇಷ್ಠರೇ ! ನೀವು ಪುರದ್ವಾರಗಳಲ್ಲಿ ಮಹಾ ಪ್ರಯತ್ನವುಳ್ಳವರಾಗಿ ಬಹು ಎಚ್ಚರಿಕೆಯಿಂದಿರತಕ್ಕುದು ಆವಶ್ಯಕವು. ಪ್ರಾಕಾರಗಳನ್ನೇರಿ ಪಟ್ಟಣವನ್ನು ಕಾಪಾಡಬೇಕು. ನಿದ್ರಿಸುತ್ತಿರುವ ಆ ಕುಂಭಕರ್ಣನನ್ನು ಮೊದಲು ಎಚ್ಚರಗೊಳಿಸಬೇಕು.

¶ ಇಲ್ಲಿನ ವಿಶೇಷಾರ್ಥವು:—ನಾನು ಅನವಾಪ್ತಕಾಮನಾಗಿ ಸಂತಪಿಸುತ್ತ ಎಚ್ಚೆತ್ತಿರುವಾಗ ಕಾಲೋಪಹತಚೇತನನಾದ ಈ ಕುಂಭಕರ್ಣನು ಸುಖವಾಗಿ ನಿದ್ರಿಸುವನು. ಇವನು ಕೆಲವು ವೇಳೆ ಒಂಬತ್ತು ತಿಂಗಳುಗಳು, ಕೆಲವು ವೇಳೆ ಆರು ತಿಂಗಳುಗಳು, ಕೆಲವು ವೇಳೆ ಏಳು ತಿಂಗಳುಗಳು, ಕೆಲವು ವೇಳೆ ಎಂಟು ತಿಂಗಳುಗಳು ಅಂತೂ ಕಾಲನಿಯಮವೇ ಇಲ್ಲದೆ ನಿದ್ರಿಸುತ್ತಾನೆ. ಉತ್ತರಕಾಂಡದಲ್ಲಿಯೂ ಕುಂಭಕರ್ಣನು ಬ್ರಹ್ಮದೇವನಲ್ಲಿ ವರವನ್ನು ಬೇಡುವಾಗ, "ಸ್ವಪ್ತುಂ ವರ್ಷಾಣ್ಯನೇಕಾನಿ ದೇವದೇವ ಮಮೇಪ್ಸಿತಂ – ಎಲೈ ದೇವದೇವನೇ ! ಅನೇಕ ವರ್ಷಗಳವರೆಗೂ ನಿದ್ರಿಸಬೇಕೆಂದು ನನಗೆ ಅಭಿಲಾಷೆಯಿರುವುದು" ಎಂದು ಕೇಳಿರುವನು. ಮುಂದೆ ವಿಭೀಷಣನು ಶ್ರೀರಾಮನಲ್ಲಿ ಕುಂಭಕರ್ಣನ ವಿಚಾರವಾಗಿ ಹೇಳುತ್ತ, "ಇವನು ಆರು ತಿಂಗಳುಗಳವರೆಗೂ ಮಲಗಿ ಒಂದು ದಿನ ಮಾತ್ರ ಎದ್ದಿದ್ದು ಮತ್ತೆ ನಿದ್ರಿಸುತ್ತಾನೆ" ಎಂದು ಹೇಳುವನು. ಆದರೆ ಈ ಮಾತು ಹಿಂದೆ ಹೇಳಿದ ಅವಧಿಗಳ ಉಪಲಕ್ಷಕವೇ ಹೊರತು ಮತ್ತೆ ಬೇರೆಯಲ್ಲವು. ಏಳು ತಿಂಗಳುಗಳವರೆಗೂ ಮಲಗಿರುವನೆಂದರೂ ಆರೇ ತಿಂಗಳುಗಳಾಗುವುದು. "ನವಸಪ್ತ ದಶಾಷ್ಟೌಚ

ಮಾಸಾನ್ ಸ್ವಪಿತಿ ರಾಕ್ಷಸಃ ॥ ೧೭ ॥ * ಮಂತ್ರಂ ಕೃತ್ವಾ ಪ್ರಸುಪ್ತೋಽಯಮಿತಸ್ತು ನವಮೇಽಹನಿ । ತಂ ತು ಬೋಧಯತ ಕ್ಷಿಪ್ರಂ ಕುಂಭಕರ್ಣಂ ಮಹಾಬಲಂ ॥ ೧೮ ॥

ವನು, ಕದಾಚಿತ್-ಒಂದಾನೊಂದುಕಾಲದಲ್ಲಿ, ನವಮಾಸಾನ್ ಒಂಬತ್ತುತಿಂಗಳು, ಸ್ವಪಿತಿ-ನಿದ್ದೆಮಾಡುತ್ತಾನೆ, ಕದಾಚಿತ್-ಒಂದಾನೊಂದುಕಾಲದಲ್ಲಿ, ಷಟ್‌ಮಾಸಾನ್ - ಆರು ತಿಂಗಳು, ಕದಾಚಿತ್-ಒಂದಾನೊಂದುಕಾಲದಲ್ಲಿ, ಸಪ್ತಚಮಾಸಾನ್ - ಏಳು ತಿಂಗಳು, ಕದಾಚಿತ್ - ಒಂದಾನೊಂದುಕಾಲದಲ್ಲಿ, ಅಷ್ಟೌಚಮಾಸಾನ್ - ಎಂಟು ತಿಂಗಳು, ಸ್ವಪಿತಿ - ಮಲಗುತ್ತಾನೆ. ॥ ೧೭ ॥ ಇತಸ್ತು - ಇಲ್ಲಿಗಾದರೆ, ನವಮೇಽಹನಿ - ಒಂಬತ್ತನೇ ದಿನದಲ್ಲಿ, ಮಂತ್ರಂ - ಆಲೋಚನೆಯನ್ನು, ಕೃತ್ವಾ - ಮಾಡಿ, ಅಯಂ - ಈ ಕುಂಭಕರ್ಣನು, ಪ್ರಸುಪ್ತಃ - ಮಲಗಿದನು, ಮಹಾಬಲಂ - ಮಹಾ ಬಲಪರಾಕ್ರಮಿಯಾದ, ತಂಕುಂಭಕರ್ಣಂ - ಆ ಕುಂಭಕರ್ಣನನ್ನು, ಬೋಧಯತ - ಎಬ್ಬಿಸಿರಿ. ॥ ೧೮ ॥ ಮಹಾಬಾಹುಃ -

ಅವನು ಕಾಲೋಪಹತಚೇತನನಾಗಿ ಒಂಬತ್ತು ತಿಂಗಳುಗಳೋ, ಆರು ತಿಂಗಳುಗಳೋ, ಏಳು ತಿಂಗಳುಗಳೋ, ಎಂಟು ತಿಂಗಳುಗಳೋ ನಿದ್ರಿಸುವನು. ಇವತ್ತಿಗೆ ಒಂಬತ್ತು ದಿನಗಳ ಹಿಂದೆಯೇ ಎಚ್ಚರಗೊಳ್ಳನೆಂದು ನಿದ್ರಿಸಿದನು. ಆದುದರಿಂದ ಮಹಾ ಬಲನಾದ ಅವನನ್ನು ಬಹಳ ಜಾಗ್ರತೆಯಾಗಿ ಎಬ್ಬಿಸಿರಿ. ಅಯ್ಯಾ ರಾಕ್ಷಸರಿರಾ! ಆ ಕುಂಭಕರ್ಣನು

ಮಾಸಾನ್ ಸ್ವಪಿತಿ ರಾಕ್ಷಸಃ" ಎಂದು ಪಾಠಾಂತರವು. ಇಲ್ಲಿ "ಅಷ್ಟಿಃ" ಎಂದರೆ ಕಳೆಯುವುದು ಎಂದರ್ಥ. ಎಂದರೆ (ನವ+ಸಪ್ತ= ಷೋಡಶ—ದಶ = ಷಟ್) ಆರೇ ತಿಂಗಳುಗಳು. ಅಥವಾ, "ಮಾಸ" ಎಂದರೆ, ಆರು ದಿನಗಳೆಂದರ್ಥ. "ಷಡಹೈರ್ಮಾಸಾಂತ್ಸಂಪದ್ಯಾಹರುತ್ಸೃಜಂತಿ" ಮೊದಲಾದ ಆಧಾರಗಳಿಂದ ಮಾಸವೆಂದು ಆರು ದಿನಗಳೆಂದರ್ಥ. ಅಲ್ಲಿಗೆ "ನವಷಟ್ಸಪ್ತ ಚಾಷ್ಟೌಚ ಮಾಸಾನ್ = ತ್ರಿಂಶನ್ಮಾಸಾನ್—(೩೦ ಮಾಸಗಳು) = (೩೦×೬) ೧೮೦ ದಿವಸಗಳು ಅಥವ ೬ ತಿಂಗಳುಗಳು" ಹೀಗೆ ಲೆಕ್ಕ ಮಾಡಿದರೂ ಕುಂಭಕರ್ಣನ ನಿದ್ರೆಯು ಆರು ತಿಂಗಳುಗಳವರೆಗೆಂದೇ ಅರ್ಥವಾಗುತ್ತದೆ. (ಗೋ)

* "ಮಲಗಿದ್ದವನನ್ನು ಎಚ್ಚರಗೊಳಿಸುವುದೆಂತು" ಎಂಬ ಸಂಶಯವುದಿಸಿದರೆ—ಈಗತಾನೇ ಮಲಗಿರುವುದರಿಂದ ಎಚ್ಚರಗೊಳಿಸುವುದು ಸುಲಭ ಸಾಧ್ಯವೆಂದು ಹೇಳುತ್ತಾನೆ.

ಇಲ್ಲಿ ಕೆಲವರು ಈ ರೀತಿ ಹೇಳುತ್ತಾರೆ:—"ಏಕಾಹಂ ಜಾಗರಿಷ್ಯತಿ" ಎಂದು ಹೇಳಿರುವುದರಿಂದ ಕುಂಭಕರ್ಣನು ಒಂದೇ ದಿನ ಎಚ್ಚರವಾಗಿದ್ದು ಮಾರನೆಯ ದಿನವೇ ಮಲಗುವನಾದುದರಿಂದ ರಾವಣನ ಮಂತ್ರಾಲೋಚನೆಯ ದಿನ ಕುಂಭಕರ್ಣನು ಎಚ್ಚರವಾಗಿದ್ದನೆಂದು ಹೇಳಿರುವುದರಿಂದ ಆ ಮಾರನೆಯ ದಿನವೇ ಅವನು ಮಲಗಿ ನಿದ್ರಿಸಿದನೆಂಬ ವಿಷಯವು ನಿರ್ವಿವಾದವು. "ಅಜಗಾಮಮುಹೂರ್ತೇನ" ಎಂದಿರುವುದರಿಂದ ವಿಭೀಷಣನು ಶ್ರೀರಾಮನಲ್ಲಿ ಶರಣಾಗತನಾಗಿ ಬಂದುದೂ ಮಂತ್ರಾಲೋಚನೆಯ ದಿನವೇ. "ವಿಭೀಷಣೇನಾಶು ಜಗಾಮ ಸಂಗಮಂ" ಎಂದಿರುವುದರಿಂದ ಆ ದಿನವೇ ಶ್ರೀರಾಮನೂ ಸಹ ವಿಭೀಷಣನನ್ನು ಶರಣನನ್ನಾಗಿ ಸ್ವೀಕರಿಸಿದುದು. ಅಲ್ಲಿಂದ ಮೂರು ದಿನಗಳ ಮೇಲೆ ಶ್ರೀರಾಮನು ಸಮುದ್ರರಾಜನನ್ನು ಪ್ರಾರ್ಥಿಸಲೋಸುಗ ದರ್ಭಶಯನ ಮಾಡಿದುದು. ಅಲ್ಲಿಂದ ಐದು ದಿನಗಳ ಮೇಲೆ ಸೇತುಬಂಧನವು. ಸೇತುಬಂಧನವು ಪೂರ್ತಿಯಾದ ದಿನವೇ ಸಾಯಂಕಾಲದಲ್ಲಿ ಸುವೇಲಪರ್ವತಾರೋಹಣವು. ಅಂದಿನ ರಾತ್ರಿಯೇ ಸುಗ್ರೀವನಿಗೂ, ರಾವಣನಿಗೂ ದ್ವಂದ್ವಯುದ್ಧವಾದುದು. ಆದರ ಮಾರನೆಯ ದಿನವೇ ತುಮುಲಯುದ್ಧವು. ಅಂದಿನ ರಾತ್ರಿಯೇ ನಾಗಪಾಶಬಂಧನ ಮತ್ತು ಮೋಕ್ಷವು. ಆ ದಿನವೇ ಧೂಮ್ರಾಕ್ಷ, ವಜ್ರದಂಷ್ಟ್ರ, ಅಕಂಪನ ರಾಕ್ಷಸರ ವಧವು. ಆದರ ಮಾರನೆಯ ದಿನವೇ ಪ್ರಹಸ್ತನ ವಧೆ. ಮತ್ತು ಆ ದಿನವೇ ರಾವಣನ ಕಿರೀಟಗಳನ್ನು ಕೆಡವಿದುದು. ಈ ರೀತಿ ದಿನಗಳನ್ನೆಣಿಸಬೇಕೆಂದು ಹೇಳುತ್ತಾರೆ. ಇಲ್ಲಿಗೆ ಕುಂಭಕರ್ಣನು ಮಲಗಿ ಒಂಬತ್ತು ದಿನಗಳಾಗುತ್ತವೆ. (ಹೀಗೆ ವ್ಯಾಖ್ಯಾನಿಸಿರುವವರು ರಾಮಪಂಡಿತರು.)

§ ಸತು ಸಂಖ್ಯೇ ಮಹಾಬಾಹುಃ ಕಕುದಸ್ಸರ್ವರಕ್ಷಸಾಂ । ವಾನರಾನ್ರಾಜಪುತ್ರೌಚ ಕ್ಷಿಪ್ರಮೇವ ವಧಿಷ್ಯತಿ ॥ ೧೮ ॥ ಏಷ ಕೇತುಃ ಪರಸ್ಸಂಖ್ಯೇ ಮುಖ್ಯೋವೈ ಸರ್ವರಕ್ಷಸಾಂ । ಕುಂಭಕರ್ಣಸ್ಸದಾಶೇತೇ ಮೂಢೋ ಗ್ರಾಮ್ಯಸುಖೇ ರತಃ ॥ ೧೯ ॥ ರಾಮೇಣಹಿ ನಿರಸ್ತಸ್ಯ ಸಂಗ್ರಾಮೇಽಸ್ಮಿನ್ ಸುದಾರುಣೇ । ಭವಿಷ್ಯತಿ ನಮೇ ಶೋಕಃ ಕುಂಭಕರ್ಣೇ ವಿಬೋಧಿತೇ ॥ ೨೦ ॥ ಕಿಂ ಕರಿಷ್ಯಾಮ್ಯಹಂ ತೇನ ಶಕ್ರತುಲ್ಯಬಲೇನಹಿ । ಈದೃಶೇ ವ್ಯಸನೇ ಪ್ರಾಪ್ತೇ ಯೋ ನ ಸಾಹ್ಯಾಯ ಕಲ್ಪತೇ" ॥ ೨೧ ॥ ತೇತು ತದ್ವಚನಂ ಶ್ರುತ್ವಾ ರಾಕ್ಷಸೇಂದ್ರಸ್ಯ ರಾಕ್ಷಸಾಃ । ಜಗ್ಮುಃ ಪರಮಸಂಭ್ರಾಂತಾಃ ಕುಂಭ

ಮಹಾ ಬಲಶಾಲಿಯಾದ, ಸತು - ಆ ಕುಂಭಕರ್ಣನಾದರೆ, ಸರ್ವರಕ್ಷಸಾಂ-ಸಮಸ್ತ ರಾಕ್ಷಸರಲ್ಲಿಯೂ, ಕಕುದಃ - ಶ್ರೇಷ್ಠನಾದಕಾರಣ, ವಾನರಾನ್ - ಕಪಿಗಳನ್ನು, ರಾಜಪುತ್ರೌಚ - ರಾಜಕುವರರನ್ನೂ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ವಧಿಷ್ಯತಿ - ಕೊಲ್ಲುವನು. ॥ ೧೮ ॥ ಏಷಃ - ಈ ಕುಂಭಕರ್ಣನು, ಸಂಖ್ಯೇ - ಕಾಳಗದಲ್ಲಿ, ಪರಃ - ಶ್ರೇಷ್ಠವಾದ, ಕೇತುಃ - ಧ್ವಜಪ್ರಾಯನು, ಸರ್ವರಕ್ಷಸಾಂ - ಎಲ್ಲ ರಕ್ಕಸರಲ್ಲಿ, ಮುಖ್ಯಃವೈ - ಮುಖ್ಯನಾದವನು, ಕುಂಭಕರ್ಣಃ - ಕುಂಭಕರ್ಣನು, ಮೂಢಃ - ಮೂಢನಾಗಿ, ಗ್ರಾಮ್ಯಸುಖೇ - ವಿಷಯಸುಖದಲ್ಲಿ, ರತಃ - ಆಸಕ್ತನಾಗಿ, ಶೇತೇ - ಮಲಗಿದ್ದಾನೆ. ॥ ೧೯ ॥ ಸಕುಂಭಕರ್ಣೇ - ಆ ಕುಂಭಕರ್ಣನು, ವಿಬೋಧಿತೇ - ಎಬ್ಬಿಸಲ್ಪಟ್ಟವನಾದರೆ, ಸುದಾರುಣೇ - ಬಹಳ ಕ್ರೂರವಾದ, ಅಸ್ಮಿಸಂಗ್ರಾಮೇ - ಈ ಕಾಳಗದಲ್ಲಿ, ರಾಮೇಣ - ಶ್ರೀರಾಮನಿಂದ, ನಿರಸ್ತಸ್ಯ - ನಿರಾಕೃತನಾದ, ಮೇ - ನನಗೆ, ಶೋಕಃ - ವ್ಯಸನವು, ನಭವಿಷ್ಯತಿ - ಇರಲಾರದು. ॥ ೨೦ ॥ ಯಃ - ಯಾವ ಕುಂಭಕರ್ಣನು, ಈದೃಶೇ - ಇಂಥಾ, ವ್ಯಸನೇ - ದುಃಖವು, ಪ್ರಾಪ್ತೇ - ಒದಗಿರುವಾಗ, ಸಾಹ್ಯಾಯ - ಸಹಾಯಕ್ಕೆ. ನಕಲ್ಪತೇ - ಸಮರ್ಥನಾಗುವುದಿಲ್ಲವೋ, ಶಕ್ರ....ನ - ಇಂದ್ರನಿಗೆ ಸಮಾನವಾದ ಬಲವುಳ್ಳ, ತೇನ - ಅಂಥಾ ಕುಂಭಕರ್ಣನಿಂದ, ಅಹಂ - ನಾನು, ಕಿಂಕರಿಷ್ಯಾಮಿ - ಏನು ಮಾಡಿಯೇನು. ॥ ೨೧ ॥ ತೇ ರಾಕ್ಷಸಾಸ್ತು - ಆ ರಾಕ್ಷಸರಾದರೆ, ರಾಕ್ಷಸೇಂದ್ರಸ್ಯ - ರಾವಣಾಸುರನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಪರ....ತಾಃ - ಬಹಳ ತ್ವರೆಗೊಂಡವನಾಗಿ, ಕುಂಭ....ನಂ - ಕುಂಭ

ಯುದ್ಧಮಾಡುವಾಗ ಸಮಸ್ತ ರಾಕ್ಷಸರಿಗೂ ವೃಷಭಪ್ರಾಯನಾಗಿ ವಾನರರನ್ನೂ, ಆ ರಾಮಲಕ್ಷ್ಮಣರನ್ನೂ ವಧಿಸುವನು. ಇವನು ನಮ್ಮ ರಾಕ್ಷಸರಲ್ಲೆಲ್ಲಾ ಶ್ರೇಷ್ಠನೂ, ಧ್ವಜಪ್ರಾಯನೂ ಆಗಿದ್ದಾನೆ. ಇಂತಹನು ಯಾವಾಗಲೂ ಕೇವಲ ಗ್ರಾಮ್ಯಗಳಾದ ಸುಖಗಳಲ್ಲಿ ನಿರತನಾಗಿ ಯಾವಾಗಲೂ ಮಲಗಿ ನಿದ್ರಿಸುತ್ತಿರುವನು. ಮಹಾ ಭಯಂಕರವಾದ ಈ ಯುದ್ಧದಲ್ಲಿ ರಾಮನಿಂದ ಪರಾಜಿತನಾಗಿರುವ ನನಗೆ ನಮ್ಮ ಕುಂಭಕರ್ಣನೆಚ್ಚರಗೊಂಡ ಬಳಿಕ ಯಾವ ಭಯವೂ ಇರುವುದಿಲ್ಲವು. ॥೧೬-೨೦॥ ಆ ನನ್ನ ತಮ್ಮನಾದರೋ ಮಹೇಂದ್ರ ಸಮಾನವಾದ ಪರಾಕ್ರಮವುಳ್ಳವನೇ ಸರಿ. ಆದರೂ ಏನು ಪ್ರಯೋಜನ! ಅವನು ಯಾವ ಸಹಾಯಕ್ಕೂ ಬಾರದಿದ್ದರೆ ಇಂತಹ ವಿಪತ್ಕಾಲದಲ್ಲಿ ನಾನು ಏನುತಾನೆ ಮಾಡಲಾದೀತು?" ಎಂದು ಹೇಳಿದನು. ರಾಕ್ಷಸರಾಜನಾದ ರಾವಣಾಸುರನೀರೀತಿ ನುಡಿಯಲು ಆ ರಾಕ್ಷಸರೆಲ್ಲರೂ ಕೂಡಲೇ ಕುಂಭಕರ್ಣನ ಮನೆಯನ್ನು ಕುರಿತು ಹೊರಟರು. ರಾವಣ

---

§ "ಸತು" ಕುಂಭಕರ್ಣನಾದರೋ ನನ್ನಂತೆ ಶಾಪಗ್ರಸ್ತನಲ್ಲ ಎಂದು ರಾವಣ ವಾಕ್ಯಾಭಿಪ್ರಾಯವು.

ಕರ್ಣನಿವೇಶನಂ ॥ ೨೨ ॥ ತೇ ರಾವಣಸಮಾದಿಷ್ಟಾ ಮಾಂಸಶೋಣಿತಭೋಜನಾಃ । ಗಂಧಮಾಲ್ಯಾಂಸ್ತಥಾ ಭಕ್ಷ್ಯಾನಾದಾಯ ಸಹಸಾ ಯಯುಃ ॥ ೨೩ ॥ ತಾಂ ಪ್ರವಿಶ್ಯ ಮಹಾದ್ವಾರಾಂ ಸರ್ವತೋ ಯೋಜನಾಯತಾಂ । ಕುಂಭಕರ್ಣಗುಹಾಂ ರಮ್ಯಾಂ ಸರ್ವಗಂಧಪ್ರವಾಹಿನೀಂ ॥ ೨೪ ॥ ಕುಂಭಕರ್ಣಸ್ಯ ನಿಶ್ವಾಸಾದವಧೂತಾ ಮಹಾಬಲಾಃ । ಪ್ರತಿಷ್ಠಮಾನಾಃ ಕೃಚ್ಛ್ರೇಣ ಯತ್ನಾತ್ಪ್ರವಿವಿಶುರ್ಗುಹಾಂ ॥ ೨೫ ॥ ತಾಂ ಪ್ರವಿಶ್ಯ ಗುಹಾಂ ರಮ್ಯಾಂ ಶುಭಾಂ ಕಾಂಚನಕುಟ್ಟಿಮಾಂ । ದದೃಶುರ್ನೈರ್ಋತವ್ಯಾಘ್ರಂ ಶಯಾನಂ ಭೀಮದರ್ಶನಂ ॥೨೬॥ ತೇ ತು ತಂ ವಿಕೃತಂ ಸುಪ್ತಂ ವಿಕೀರ್ಣಮಿವ ಪರ್ವತಂ । ಕುಂಭಕರ್ಣಂ ಮಹಾನಿದ್ರಂ ಸಹಿತಾಃ ಪ್ರತ್ಯಬೋಧಯನ್ ॥೨೭॥

ಕರ್ಣನ ಮನೆಯನ್ನು ಕುರಿತು, ಜಗ್ಮುಃ - ತೆರಳಿದರು. ॥ ೨೨ ॥ ಮಾಂಸ... ನಾಃ - ಮಾಂಸವೂ, ರಕ್ತವೂ ಭೋಜನವಾಗುಳ್ಳ, ತೇ - ಆ ರಾಕ್ಷಸರು, ರಾವ....ಷ್ಟಾಃ - ರಾವಣನಿಂದ ಆಜ್ಞಪ್ತರಾಗಿ, ಸಹಸಾ - ಜಾಗ್ರತೆಯಾಗಿ, ಗಂಧಮಾಲ್ಯಾನಿ - ಗಂಧವನ್ನೂ, ಹುವ್ವಿನ ಸರಗಳನ್ನೂ, ತಥಾ - ಹಾಗೆಯೇ, ಭಕ್ಷ್ಯಾನ್ - ಭಕ್ಷ್ಯಗಳನ್ನೂ, ಆದಾಯ - ತೆಗೆದುಕೊಂಡು, ಯಯುಃ - ತೆರಳಿದರು. ॥೨೩॥ ಮಹಾದ್ವಾರಾಂ - ದೊಡ್ಡ ಬಾಗಿಲುಳ್ಳ, ಸರ್ವತಃ - ಸರ್ವಪ್ರದೇಶಗಳಲ್ಲಿಯೂ, ಯೋಜನಾಯತಾಂ - ಗಾವುದದಷ್ಟು ವಿಸ್ತಾರವಾದ, ರಮ್ಯಾಂ - ಮನೋಹರವಾದ, ಸರ್ವ....ನೀಂ - ನಾನಾಬಗೆಗಳಾದ ಗಂಧಗಳ ಪ್ರವಾಹವುಳ್ಳ, ತಾಂಕುಂ....ಹಾಂ - ಆ ಕುಂಭಕರ್ಣನ ಮನೆಯನ್ನು, ಪ್ರವಿಶ್ಯ - ಹೊಕ್ಕು, ಕುಂಭಕರ್ಣಸ್ಯ - ಕುಂಭಕರ್ಣನ, ನಿಶ್ವಾಸಾತ್ - ನಿಟ್ಟುಸುರಿನಿಂದ, ಅವಧೂತಾಃ - ಕೊಡಹಲ್ಪಟ್ಟವರಾದ, ಮಹಾಬಲಾಃ - ಬಹಳ ಸಾಮರ್ಥ್ಯವಂತರಾದಕಾರಣ, ಕೃಚ್ಛ್ರೇಣ - ಕಷ್ಟದಿಂದ, ಪ್ರತಿಷ್ಠಮಾನಾಃ - ನಿಂತವರಾಗಿ, ಯತ್ನಾತ್ - ಪ್ರಯತ್ನದಿಂದ, ಗುಹಾಂ - ಗುಹೆಯನ್ನು, ಪ್ರವಿವಿಶುಃ - ಹೊಕ್ಕರು. ॥ ೨೪-೨೫ ॥ ರಮ್ಯಾಂ - ಮನೋಹರವಾದ, ತಾಂಗುಹಾಂ - ಆ ಗುಹೆಯನ್ನು, ಪ್ರವಿಶ್ಯ - ಹೊಕ್ಕು, ಶಯಾನಂ - ಮಲಗಿರುವ, ಭೀಮದರ್ಶನಂ - ಭಯಂಕರವಾದ ನೋಟವುಳ್ಳ, ನೈರ್ಋತವ್ಯಾಘ್ರಂ - ರಾಕ್ಷಸಶ್ರೇಷ್ಠನಾದ ಕುಂಭಕರ್ಣನನ್ನು, ದದೃಶುಃ - ಕಂಡರು. ॥ ೨೬ ॥ ತೇತು - ಆ ರಾಕ್ಷಸರಾದರೆ, ವಿಕೀರ್ಣಂ - ಎರಚಲ್ಪಡುತ್ತಿರುವ, ಪರ್ವತಮಿವ - ಬೆಟ್ಟದಂತೆ, ಸುಪ್ತಂ - ಮಲಗಿರುವ, ವಿಕೃತಂ - ವಿಕಾರ ರೂಪವುಳ್ಳ, ಮಹಾನಿದ್ರಂ - ಬಹಳವಾದ ನಿದ್ರೆಯುಳ್ಳ, ತಂಕುಂಭಕರ್ಣಂ -

---

ನಿಂದ ಆಜ್ಞಾಪಿತರಾದ ಅವರೆಲ್ಲರೂ ರಕ್ತಮಾಂಸಗಳ ತೀನಿಯನ್ನೂ, ಗಂಧಮಾಲ್ಯಾದಿಗಳನ್ನೂ, ಭಕ್ಷ್ಯಗಳನ್ನೂ ತೆಗೆದುಕೊಂಡು ಆ ಕುಂಭಕರ್ಣನ ಮನೆಗೆ ಹೊರಟರು. ಎಲ್ಲೆಡೆಯಲ್ಲಿಯೂ ಒಂದು ಯೋಜನ ವಿಸ್ತೀರ್ಣವುಳ್ಳದಾಗಿಯೂ, ಮಹಾ ದ್ವಾರವುಳ್ಳದಾಗಿ, ಬಹು ಸುಂದರವಾಗಿಯೂ, ಸಮಸ್ತ ವಾಸನೆಗಳನ್ನೂ ಹೊರಡಿಸುತ್ತಿರುವುದಾಗಿಯೂ ಇರುವ ಆ ಮನೆಯನ್ನೂ ಪ್ರವೇಶಿಸಿ ಮಹಾ ದ್ವಾರದಲ್ಲಿಯೇ ಆ ಕುಂಭಕರ್ಣನ ನಿಶ್ವಾಸ ವಾಯುವಿನಿಂದ ಕೊಡಹಲ್ಪಟ್ಟವರಾದರೂ ಕಷ್ಟಪಟ್ಟುಕೊಂಡು ಮುಂದೆ ನುಗ್ಗಿ ಅವನು ಮಲಗಿ ನಿದ್ರಿಸುತ್ತಿದ್ದ ಗುಹೆಯನ್ನು ಪ್ರವೇಶಿಸಿದರು. ॥ ೨೧–೨೬ ॥ ಬಹು ಮಂಗಳಕರವಾಗಿಯೂ, ಚಿನ್ನದ ಜಗುಲಿಗಳಿಂದ ಸೊಗಸುಗೊಂಡುದಾಗಿಯೂ ಇರುವ ಆ ಗುಹೆಯಲ್ಲಿ ಆ ರಾಕ್ಷಸರೆಲ್ಲರೂ ಭೀಮದರ್ಶನನಾಗಿ ಮಲಗಿ ನಿದ್ರಿಸುತ್ತಿರುವ ಆ ಕುಂಭಕರ್ಣನನ್ನು ಕಂಡರು. ಆ ಕೂಡಲೇ ಆ ರಾಕ್ಷಸಪುಂಗವರೆಲ್ಲರೂ ಒಂದಾಗಿ ಸೇರಿ ಪರ್ವತದಂತೆ ಬಿದ್ದು ಮಹಾ ನಿದ್ರೆಯಿಂದ

ಊರ್ಧ್ವರೋಮಾಚಿತತನುಂ ಶ್ವಸಂತಮಿವ ಪನ್ನಗಂ । ತ್ರಾಸಯಂತಂ ಮಹಾಶ್ವಾಸೈಃ ಶಯಾನಂ ಭೀಮದರ್ಶನಂ ॥೨೮॥ ಭೀಮನಾಸಾಪುಟಂ ತಂ ತು ಪಾತಾಳವಿಪುಲಾನನಂ । ಶಯ್ಯಾಯಾಂ ನ್ಯಸ್ತಸರ್ವಾಂಗಂ ಮೇದೋರುಧಿರಗಂಧಿನಂ ॥ ೨೯ ॥ ಕಾಂಚನಾಂಗದನದ್ಧಾಂಗಂ ಕಿರೀಟಿನಮರಿಂದಮಂ । ದದೃಶುರ್ನೈಋತವ್ಯಾಘ್ರಾಃ ಕುಂಭಕರ್ಣಂ ಮಹಾಬಲಂ ॥ ೩೦ ॥ ತತಶ್ಚಕ್ರುರ್ಮಹಾತ್ಮಾನಃ ಕುಂಭಕರ್ಣಾಗ್ರತಸ್ತದಾ । ಮಾಂಸಾನಾಂ ಮೇರುಸಂಕಾಶಂ ರಾಶಿಂ ಪರಮತರ್ಪಣಂ ॥ ೩೧ ॥ ಮೃಗಾಣಾಂ ಮಹಿಷಾಣಾಂಚ ವರಾಹಾಣಾಂಚ ಸಂಚಯಾನ್ । ಚಕ್ರುರ್ನೈಋತಶಾರ್ದೂಲಾ

ಆ ಕುಂಭಕರ್ಣನನ್ನು, ಸಹಿತಾಃ - ಒಟ್ಟಾಗಿ ಸೇರಿ, ಪ್ರತ್ಯಬೋಧಯನ್ - ಎಬ್ಬಿಸಿದರು. ॥ ೨೭ ॥ ಊರ್ಧ್ವ....ನೂ - ಊರ್ಧ್ವಾಕಾರವಾದ ಮೈಗೂದಲುಗಳಿಂದ ವ್ಯಾಪ್ತವಾದ ಶರೀರವುಳ್ಳ, ಪನ್ನಗಮಿವ - ಸರ್ಪದಂತೆ, ಶ್ವಸಂತಂ - ಉಸಿರುಬಿಡುತ್ತಿರುವ, ಮಹಾಶ್ವಾಸೈಃ - ದೊಡ್ಡ ಉಚ್ಛ್ವಾಸ ನಿಶ್ವಾಸಗಳಿಂದ, ತ್ರಾಸಯಂತಂ - ಹೆದರಿಸುತ್ತ, ಶಯಾನಂ - ಮಲಗಿರುವ, ಭೀಮದರ್ಶನಂ - ಭಯಂಕರವಾದ ನೋಟವುಳ್ಳ, ಭೀಮ....ಟಂ-ಭಯಂಕರವಾದ ಮೂಗಿನ ಹೊಳೆಗಳುಳ್ಳ, ಪಾತಾ....ನಂ-ಪಾತಾಳಲೋಕದಂತೆ ಆಳವಾದ ಬಾಯಿಯುಳ್ಳ, ಶಯ್ಯಾಯಾಂ-ಹಾಸಿಗೆಯಮೇಲೆ, ನ್ಯಸ್ತಸರ್ವಾಂಗಂ-ಇರಿಸಿದ ಸರ್ವಾವಯವಗಳುಳ್ಳ, ಮೇದೋ....ನಂ - ಮೈಕೊಬ್ಬಿನ ನೀರಿನ ಮತ್ತು ರಕ್ತದ, ಗಂಧವುಳ್ಳ, ಕಾಂಚ....ಗಂ - ಭಂಗಾರದ ತೋಳ್ಬಂದಿಗಳಿಂದ ಕಟ್ಟಲ್ಪಟ್ಟ ಶರೀರವುಳ್ಳ, ಕಿರೀಟನಂ - ಕಿರೀಟಧಾರಿಯಾದ, ಅಶುಃ - ಕಂಡರು. ॥ ೨೮-೩೦ ॥ ತತಃ - ಬಳಿಕ, ಮಹಾತ್ಮಾನಃ - ಮಹಾ ಶರೀರಗಳುಳ್ಳ ಆ ರಕ್ಕಸರು, ತದಾ - ಆಗ, ಕುಂಭ....ತಃ-ಕುಂಭಕರ್ಣನ ಮುಂಗಡೆ, ಮೇರುಸಂಕಾಶಂ-ಮೇರುಪರ್ವತಕ್ಕೆ ಸಮಾನವಾದ, ಪರಮತರ್ಪಣಂ - ಬಹಳ ತೃಪ್ತಿಕರವಾದ, ಮಾಂಸಾನಾಂ - ಮಾಂಸಗಳ, ರಾಶಿಂ - ರಾಶಿಯನ್ನು, ಚಕ್ರುಃ - ಮಾಡಿದರು. ॥ ೩೧ ॥ ನೈಋ....ಲಾಃ - ರಾಕ್ಷಸೋತ್ತಮರು, ಮೃಗಾಣಾಂ - ಜಿಂಕೆಗಳ, ಮಹಿಷಾಣಾಂ - ಎಮ್ಮೆಗಳ, ವರಾಹಾಣಾಂಚ - ಹಂದಿಗಳ,

---

ಮೈಮರೆತಿದ್ದ ಆ ಕುಂಭಕರ್ಣನನ್ನು ಎಚ್ಚರಗೊಳಿಸಲಾರಂಭಿಸಿದರು. ನಿದ್ರಿಸುತ್ತಿರುವ ಆ ರಾಕ್ಷಸನಾದರೊ ಮೇಲಕ್ಕೆ ನೆಮಿರಿದ ರೋಮಗಳುಳ್ಳವನಾಗಿ ಮಹಾ ಸರ್ಪದಂತೆ ದೊಡ್ಡ ದೊಡ್ಡ ಗೊರಕೆಗಳಿಟ್ಟು, ಉಚ್ಛಾಸ ನಿಶ್ವಾಸಗಳಿಂದ ಎಲ್ಲರನ್ನೂ ಭಯಗೊಳಿಸುತ್ತ ಬಹು ಭಯಂಕರ ದರ್ಶನನಾಗಿದ್ದನು. ಭಯಂಕರವಾದ ಮೂಗಿನ ಹೊಳ್ಳೆಗಳುಳ್ಳವನೂ, ಪಾತಾಳಕ್ಕೆ ಸಮಾನವಾದ ಬಾಯಿಯುಳ್ಳವನೂ, ಹಾಸಿಗೆಯಲ್ಲಿರುವ ಸರ್ವಾಂಗಗಳುಳ್ಳವನೂ, ಮೇದಸ್ಸು ರಕ್ತಗಳ ಗಂಧವುಳ್ಳವನೂ, ಸ್ವರ್ಣಾಂಗದ ಭೂಷಿತವಾದ ತೋಳ್ತಿಕ್ಕೆಗಳುಳ್ಳವನೂ, ಕಿರೀಟವಿರಾಜಿತನೂ, ಶತ್ರುಮರ್ದನನೂ, ಮಹಾ ಬಲಾಢ್ಯನೂ ಆದ ಆ ಕುಂಭಕರ್ಣನನ್ನು ಆ ರಾಕ್ಷಸಶ್ರೇಷ್ಠರೆಲ್ಲರೂ ಕಂಡರು. ಆ ಬಳಿಕ ಮಹಾ ಕಾಯರಾದ ಆ ರಾಕ್ಷಸರೆಲ್ಲರೂ ಆ ಕುಂಭಕರ್ಣನೆದುರಿನಲ್ಲಿ ಮೇರುಪರ್ವತವನ್ನೇ ಹೋಲುವ ಮಾಂಸ ರಾಶಿಗಳನ್ನು ಆತನ ತೃಪ್ತ್ಯರ್ಥವಾಗಿ ಕಲ್ಪಿಸಿದರು. ॥ ೨೭–೩೧ ॥ ನಾನಾವಿಧಗಳಾದ ಮೃಗಗಳ, ಆನೆಗಳ ಎಮ್ಮೆಗಳ ಮತ್ತು ಕಾಡುಹಂದಿಗಳ ಮಾಂಸಗಳನ್ನೂ ರಾಶಿರಾಶಿಯಾಗಿ ಸುರಿದು ಸಿದ್ಧಗೊಳಿಸಿದರು. ಇಷ್ಟೆಯಲ್ಲದೆ ಆ ರಾಕ್ಷಸರೆಲ್ಲರೂ ಪರಮಾಶ್ಚರ್ಯಕರನಾದ ಅನ್ನದ ರಾಶಿಗಳನ್ನೂ

ರಾಶಿಮನ್ನಸ್ಯ ಚಾದ್ಭುತಂ ॥ ೩೨ ॥ ತತಃ ಶೋಣಿತಕುಂಭಾಂಶ್ಚ ಮದ್ಯಾನಿ ವಿವಿಧಾನಿಚ । ಪುರಸ್ತಾತ್ ಕುಂಭಕರ್ಣಸ್ಯ ಚಕ್ರುಃ ತ್ರಿದಶಶತ್ರವಃ ॥ ೩೩ ॥ ಲಿಲಿಪುಶ್ಚ ಪರಾರ್ಧ್ಯೇನ ಚಂದನೇನ ಪರಂತಪಂ । ದಿವ್ಯೈರಾಚ್ಛಾದಯಾಮಾಸುರ್ಮಾಲ್ಯೈರ್ಗಂಧೈಸ್ಸುಗಂಧಿಭಿಃ ॥ ೩೪ ॥ ಧೂಪಂ ಸುಗಂಧಂ ಸಸೃಜುಸ್ತುಷ್ಟುವುಶ್ಚ ಪರಂತಪಂ । ಜಲದಾ ಇವ ಚೋನ್ನೇದುರ್ಯಾತುಧಾನಾಸ್ತತಸ್ತತಃ ॥ ೩೫ ॥ ಶಂಖಾನಾಪೂರಯಾಮಾಸುಃ ಶಶಾಂಕಸದೃಶಪ್ರಭಾನ್ । ತುಮುಲಂ ಯುಗಪಚ್ಚಾಪಿ ವಿನೇದುಶ್ಚಾಪ್ಯಮರ್ಷಿತಾಃ ॥ ೩೬ ॥ ನೇದುರಾಸ್ಫೋಟಯಾಮಾಸುಶ್ಚಿಕ್ಷಿಪುಸ್ತೇ ನಿಶಾಚರಾಃ । ಕುಂಭಕರ್ಣವಿಬೋಧಾರ್ಥಂ ಚಕ್ರುಸ್ತೇ ವಿಪುಲಂ ಸ್ವನಂ ॥ ೩೭ ॥ ಸಶಂಖಭೇರೀ

ಸಂಚಯಾನ್ - ರಾಶಿಗಳನ್ನು, ಅನ್ನಸ್ಯ - ಅನ್ನದ, ಅದ್ಭುತಂ - ಆಶ್ಚರ್ಯಕರವಾದ, ರಾಶಿಂಚ - ರಾಶಿಯನ್ನೂ, ಚಕ್ರುಃ - ಮಾಡಿದರು. ॥ ೩೨ ॥ ತತಃ - ಬಳಿಕ, ತ್ರಿದಶಶತ್ರವಃ - ದೇವಶತ್ರುಗಳಾದ ರಕ್ಕಸರು, ಶೋಣಿ....ಶ್ಚ - ರಕ್ತದ ಬಿಂದಿಗೆಗಳನ್ನೂ, ವಿವಿಧಾನಿ - ನಾನಾಬಗೆಗಳಾದ, ಮದ್ಯಾನಿ - ಮದ್ಯಗಳನ್ನೂ, ಕುಂಭಕರ್ಣಸ್ಯ - ಕುಂಭಕರ್ಣನ, ಪುರಸ್ತಾತ್ - ಮುಂಗಡೆ, ಚಕ್ರುಃ - ಮಾಡಿದರು. ॥ ೩೩ ॥ ಪರಾರ್ಧ್ಯೇನ - ಶ್ರೇಷ್ಠವಾದ, ಚಂದನೇನ - ಗಂಧದಿಂದ, ಲಲಿಪುಶ್ಚ - ಲೇಪನೆ ಮಾಡಿದರು, ಪರಂತಪಂ - ಶತ್ರುಸಂಹಾರಕನಾದ ಕುಂಭಕರ್ಣನನ್ನು, ದಿವ್ಯೈಃ - ಮನೋಹರಗಳಾದ, ಸುಗಂಧಿಭಿಃ - ಸುವಾಸನೆಯುಳ್ಳ, ಗಂಧೈಃ - ಗಂಧಗಳಿಂದಲೂ, ಮಾಲ್ಯೈಶ್ಚ - ಹೂವಿನ ಸರಗಳಿಂದಲೂ, ಆಚ್ಛಾದಯಾಮಾಸುಃ - ಹೊದ್ದಿಸಿದರು. ॥ ೩೪ ॥ ಸುಗಂಧಂ - ಪರಿಮಳಯುಕ್ತವಾದ, ಧೂಪಂ - ಧೂಪವನ್ನೂ, ಸಸೃಜುಃ - ಹಾಕಿದರು, ಪರಂತಪಂ - ಶತ್ರುಸಂಹಾರಕನಾದ ಕುಂಭಕರ್ಣನನ್ನು, ತುಷ್ಟುವುಃ - ಸ್ತುತಿಸಿದರು, ಯಾತುಧಾನಾಃ - ರಕ್ಕಸರು, ತತಸ್ತತಃ - ಅಲ್ಲಲ್ಲಿ, ಜಲದಾ ಇವ - ಮೇಘಗಳಂತೆ, ಉನ್ನೇದುಃ - ಗಟ್ಟಿಯಾಗಿ ಗರ್ಜಿಸಿದರು, ಶಶಾಂ......ಭಾನ್ - ಚಂದ್ರನಿಗೆ ಸಮಾನವಾದ ಕಾಂತಿಯುಳ್ಳ, ಶಂಖಾನ್ - ಶಂಖಗಳನ್ನೂ, ಆಪೂರಯಾಮಾಸುಃ - ಪೂರಿಸಿದರು, ಅಮರ್ಷಿತಾಃ - ಕೋಪಿಷ್ಠರಾಗಿಯೇ, ತುಮುಲಂ - ಸಂಕುಲವಾಗಿ, ಯುಗಪಚ್ಚಾಪಿ - ಏಕಕಾಲದಲ್ಲಿಯೇ, ವಿನೇದುರಪಿ - ಕೂಗಲೂ ಕೂಗಿದರು. ॥ ೩೫-೩೬ ॥ ತೇನಿಶಾಚರಾಃ - ಆ ರಕ್ಕಸರು, ನೇದುಃ - ಧ್ವನಿ ಮಾಡಿದರು, ಆಸ್ಫೋಟಯಾಮಾಸುಃ - ಭುಜಾಸ್ಫಾಲನ ಮಾಡಿದರು, ಚಿಕ್ಷಿಪುಃ - ಶರೀರವನ್ನು ಕದಲಿಸಿದರು, ತೇ - ಆ ರಕ್ಕಸರು, ಕುಂಭ......ರ್ಥಂ - ಕುಂಭಕರ್ಣನನ್ನೆಬ್ಬಿಸುವ ನಿಮಿತ್ತವಾಗಿ, ವಿಪುಲಂ - ವಿಸ್ತಾರ

ತಂದು ಸಿದ್ಧಗೊಳಿಸಿದರು. ಲೆಕ್ಕವಿಲ್ಲದಷ್ಟು ರಕ್ತ ಮತ್ತು ಹೆಂಡದ ಗಡಿಗೆಗಳನ್ನೂ ತಂದಿಟ್ಟರು. ಈ ರೀತಿ ಅವರೆಲ್ಲರೂ ಅನೇಕ ಭೋಜನ ಪದಾರ್ಥಗಳನ್ನು ಆ ಕುಂಭಕರ್ಣನೆದುರಿಗೆ ಸಿದ್ಧಗೊಳಿಸಿಟ್ಟರು. ಇದಾದ ತರುವಾಯ ಅವರು ಶತ್ರುತಾಪನನಾದ ಆ ಕುಂಭಕರ್ಣನ ಶರೀರವನ್ನೆಲ್ಲ ಲೋಕೋತ್ತರವಾದ ಪರಿಮಳ ದ್ರವ್ಯಗಳಿಂದ ಲೇಪಿಸಿದರು. ಪುಷ್ಪಮಾಲಿಕೆಗಳಿಂದಲೂ, ಸುಗಂಧಗಳಿಂದಲೂ, ಧೂಪಗಳಿಂದಲೂ ಆ ಕುಂಭಕರ್ಣನ ಶರೀರಾದ್ಯಂತವನ್ನೂ ಶೃಂಗರಿಸಿದರು. ಇಷ್ಟೆಲ್ಲವೂ ಮುಗಿದ ಬಳಿಕ ಆ ರಾಕ್ಷಸರೆಲ್ಲರೂ ನಾಲ್ಕೂ ದಿಕ್ಕುಗಳಲ್ಲಿ ಮುತ್ತಿಕೊಂಡು ಆ ಕುಂಭಕರ್ಣರಾಕ್ಷಸನನ್ನೆಬ್ಬಿಸಲು ಮೇಘಗಳಂತೆ ಗರ್ಜಿಸಿದರು. ಚಂದ್ರನಿಗೆ ಸಮಾನವಾದ ವರ್ಣವುಳ್ಳ ಶಂಖಗಳನ್ನು ಏಕಪ್ರಕಾರವಾಗಿ ಪೂರಿಸಿದರು. ॥ ೩೧-೩೭ ॥ ಎಲ್ಲರೂ ಕೂಡಿ ಏಕಪ್ರಕಾರವಾಗಿ ಶಂಖ ಮತ್ತು

ಪಣವಪ್ರಣಾದನೂಸ್ಫೋಟಿತಕ್ಷ್ವೇಳಿತಸಿಂಹನಾದಂ । ದಿಶೋ ದ್ರವಂತಸ್ತ್ರಿದಿವಂ ಕಿರಂತಃ ಶ್ರುತ್ವಾ ವಿಹಂಗಾಸ್ಸಹಸಾ ನಿಪೇತುಃ ॥ ೩೮ ॥ ಯದಾಭೃಶಾರ್ತೈರ್ನಿನದ್ಭೈರ್ಮಹಾತ್ಮಾ ನ ಕುಂಭಕರ್ಣೋ ಬುಬುಧೇ ಪ್ರಸುಪ್ತಃ । ತತೋ ಮುಸುಂಠೀರ್ಮುಸಲಾನಿ ಸರ್ವೇ ರಕ್ಷೋಗಣಾಸ್ತೇ ಜಗೃಹುರ್ಗದಾಶ್ಚ ॥ ೩೯ ॥ ತಂ ಶೈಲಶೃಂಗೈರ್ಮುಸಲೈರ್ಗದಾಭಿರ್ವೃಕ್ಷೈಸ್ತಲೈರ್ಮುದ್ಗರಮುಷ್ಟಿಭಿಶ್ಚ । ಸುಖಪ್ರಸುಪ್ತಂ ಭುವಿ ಕುಂಭಕರ್ಣಂ ರಕ್ಷಾಂಸ್ಯುದಗ್ರಾಣಿ ತದಾ ನಿಜಘ್ನುಃ ॥ ೪೦ ॥ ತಸ್ಯ ನಿಶ್ವಾಸವಾತೇನ ಕುಂಭಕರ್ಣಸ್ಯ ರಕ್ಷಸಃ । ರಾಕ್ಷಸಾ ಬಲವಂತೋಽಪಿ ಸ್ಥಾತುಂ ನಾಽಶಕ್ನುವನ್ ಪುರಃ

ವಾದ, ಸ್ವನಂ - ಧ್ವನಿಯನ್ನು, ಚಕ್ರುಃ - ಮಾಡಿದರು. ॥ ೩೭ ॥ ವಿಹಾಗಾಃ - ಹಕ್ಕಿಗಳು, ಸಶಂ....ದಂ - ಶಂಖಗಳ, ಭೇರಿಗಳ, ಮದ್ದಳೆಗಳ ಧ್ವನಿಯಿಂದೊಡಗೂಡಿದ, ಆಸ್ಫೋ.....ದಂ - ಭುಜಾಸ್ಫಾಲನದಿಂದ ಹುಟ್ಟಿದ ಶಬ್ದವನ್ನೂ, ಕೋಲಾಹಲಧ್ವನಿಯನ್ನೂ, ಸಿಂಹನಾದವನ್ನೂ, ಶ್ರುತ್ವಾ - ಕೇಳಿ, ದಿಶಃ - ದಿಕ್ಕುಗಳನ್ನು ಕುರಿತು, ದ್ರವಂತಃ - ಓಡಿಹೋಗುತ್ತ, ತ್ರಿದಿವಂ - ಅಂತರಿಕ್ಷವನ್ನು, ಕಿರಂತಃ - ವ್ಯಾಪಿಸಿ, ಸಹಸಾ - ಜಾಗ್ರತೆಯಾಗಿ, ನಿಪೇತುಃ - ಬಿದ್ದವು. ॥ ೩೮ ॥ ಯದಾ - ಯಾವ ಕಾಲದಲ್ಲಿ, ಭೃಶಾರ್ತೈಃ - ಬಹಳವಾಗಿ ಸಂತಪಿಸಿ, ನಿನದ್ಭೈಃ-ದೀನಧ್ವನಿಗಳಿಂದಲೂ, ಪ್ರಸುಪ್ತಃ - ನಿದ್ದೆಗೊಂಡಿರುವ, ಮಹಾತ್ಮಾ - ಮಹಾ ಶರೀರವುಳ್ಳ, ಕುಂಭಕರ್ಣಃ - ಕುಂಭಕರ್ಣನು, ನಬುಬುಧೇ - ಏಳಲಿಲ್ಲವೋ, ತತಃ - ಬಳಿಕ, ಸರ್ವೇ - ಸಮಸ್ತರಾದ, ತೇರಕ್ಷೋಗಣಾಃ - ಆ ರಾಕ್ಷಸರ ತಂಡಗಳು, ಮುಸುಂಠೀಃ - ಮುದ್ಗರಾಯುಧಗಳನ್ನೂ, ಮುಸಲಾನಿ - ಒನಕೆಗಳನ್ನೂ, ಗದಾಶ್ಚ - ಗದಾಯುಧಗಳನ್ನೂ, ಜಗೃಹುಃ - ಹಿಡಿದುಕೊಂಡರು. ॥ ೩೯ ॥ ತದಾ - ಆ ಕಾಲದಲ್ಲಿ, ಉದಗ್ರಾಣಿ - ಉನ್ನತರಾದ, ರಕ್ಷಾಂಸಿ - ರಕ್ಕಸರು, ಭುವಿ - ನೆಲದಲ್ಲಿ, ಸುಖಪ್ರಸುಪ್ತಂ - ಸುಖವಾಗಿ ಮಲಗಿರುವ, ಕುಂಭಕರ್ಣಂ - ಕುಂಭಕರ್ಣನನ್ನು, ಶೈಲಶೃಂಗೈಃ - ಬೆಟ್ಟದ ಶಿಖರಗಳಿಂದಲೂ, ಮುಸಲೈಃ - ಒನಕೆಗಳಿಂದಲೂ, ಗದಾಭಿಃ - ಗದಾಯುಧಗಳಿಂದಲೂ, ವೃಕ್ಷೈಃ - ಗಿಡಗಳಿಂದಲೂ, ತಲೈಃ - ಅಂಗೈಗಳಿಂದಲೂ, ಮುದ್ಗ.....ಶ್ಚ - ಮುದ್ಗರಾಯುಧಗಳಿಂದಲೂ ಕೋಲುಗಳಿಂದಲೂ, ಜಘ್ನುಃ - ಹೊಡೆದರು. ॥ ೪೦ ॥ ತಸ್ಯ - ಆ, ಕುಂಭಕರ್ಣಸ್ಯ - ಕುಂಭಕರ್ಣನೆಂಬ, ರಕ್ಷಸಃ - ರಕ್ಕಸನ, ನಿಶ್ವಾಸವಾತೇನ - ನಿಟ್ಟುಸಿರಿನ ಗಾಳಿಯಿಂದ, ರಾಕ್ಷಸಾಃ - ರಕ್ಕಸರು, ಬಲವಂತೋಪಿ - ಬಲಿಷ್ಠರಾದರೂ,

---

ಭೇರೀನಾದಗಳನ್ನು ಮಾಡಿದರು. ಎಲ್ಲರೂ ಕರತಾಡನ ಮಾಡಿದರು. ಸಿಂಹನಾದವನ್ನು ಮಾಡಿದರು. ಈ ಮಹಾ ಧ್ವನಿಯನ್ನು ಕೇಳಿ ಪಕ್ಷಿಗಳು ಆಕಾಶಕ್ಕೆ ಹಾರಿ ಎತ್ತಕಡೆಗೆ ಹೋಗಬೇಕೆಂಬುದೇ ತೋರದೆ ಭೂಮಿಗೆ ಬೀಳುತ್ತಿದ್ದುವು. ಬಹು ದೈನ್ಯದೊಡನೆ ಧ್ವನಿಮಾಡುತ್ತಿರುವ ಆ ರಾಕ್ಷಸರ ಆರ್ತನಾದಗಳನ್ನು ಕೇಳಿಯೂ ಮಹಾಕಾಯನೂ, ನಿದ್ರಿಸುತ್ತಿರುವವನೂ ಆದ ಆ ಕುಂಭಕರ್ಣನು ಎಚ್ಚರಗೊಳ್ಳದೇ ಹೋದನು. ಆ ತರುವಾಯ ಆ ರಾಕ್ಷಸರೆಲ್ಲರೂ ಮುದ್ಗರಾಯುಧಗಳನ್ನೂ, ಇತರ ಆಯುಧವಿಶೇಷಗಳನ್ನೂ, ಮುಸಲಗಳನ್ನೂ, ಗದೆಗಳನ್ನೂ ಗ್ರಹಿಸಿ ಪರ್ವತಶಿಖರಗಳಿಂದಲೂ, ಮುಷ್ಟಿಗಳಿಂದಲೂ ಸುಖವಾಗಿ ನಿದ್ರಿಸುತ್ತಿದ್ದ ಆ ಕುಂಭಕರ್ಣನನ್ನು ಬಲವಾಗಿ ಪ್ರಹರಿಸಿದರು. ॥ ೩೮-೪೦ ॥ ಆ ಸಮಯದಲ್ಲಿ ಮಹಾ ಭಯಂಕರಪರಾಕ್ರಮವುಳ್ಳ ಆ ರಾಕ್ಷಸವೀರರೂ ಕೂಡ ಆ ಕುಂಭಕರ್ಣನ ನಿಟ್ಟುಸಿರುಗಾಳಿಯ ಹೊಡೆತವನ್ನು ತಾಳಲಾರದೆ ತತ್ತಳಿಸಿ ಹೋದರು. ಆಮೇಲೆ ಮಹಾ ಪರಾಕ್ರಮಿಗಳಾದ

॥ ೪೧ ॥ ತತಃ ಪರಿಹಿತಾ ಗಾಢಂ ರಾಕ್ಷಸಾ ಭೀಮವಿಕ್ರಮಾಃ । ಮೃದಂಗಪಣವಾ೯ ಭೇರೀಶ್ಶಂಖಕುಂಭಗಣಾಂಸ್ತದಾ । ದಶರಾಕ್ಷಸಸಾಹಸ್ರಾ ಯುಗಪತ್ಪರ್ಯವಾದಯ೯ ॥ ೪೨-೪೩ ॥ ನೀಲಾಂಜನಚಯಾಕಾರಾಸ್ತೇ ತು ತಂ ಪ್ರತ್ಯಬೋಧಯ೯ । ಅಭಿಘ್ನಂತೋ ನದಂತಶ್ಚ ನೈವ ಸಂವಿವಿದೇತು ಸಃ ॥ ೪೪ ॥ ಯದಾ ಚೈನಂ ನಶೇಕುಸ್ತೇ ಪ್ರತಿಬೋಧಯಿತುಂ ತದಾ । ತತೋ ಗುರುತರಂ ಯತ್ನಂ ದಾರುಣಂ ಸಮುಪಾಕ್ರಮ೯ ॥ ೪೫ ॥ ಅಶ್ವಾನುಷ್ಟ್ರಾ೯ ಖರಾನ್ನಾಗಾ೯ ಜಘ್ನುರ್ದಂಡಕಶಾಂಕುಶೈಃ ।

ಪುರಃ - ಮುಂದುಗಡೆ, ಸ್ಥಾತುಂ - ನಿಲ್ಲುವುದಕ್ಕೆ, ನಾಶಕ್ನುವ೯ - ಸಮರ್ಥರಾಗಲಿಲ್ಲ. ॥ ೪೧ ॥ ತತಃ - ಬಳಿಕ, ಗಾಢಂ - ದೃಢವಾಗಿ, ಪರಿಹಿತಾಃ - ಹೊದಿಕೆಗಳನ್ನು ಕಟ್ಟಿಕೊಂಡವರಾಗಿ, ಭೀಮವಿಕ್ರಮಾಃ - ಭಯಂಕರವಾದ ಪರಾಕ್ರಮವುಳ್ಳ, ದಶ....ಸ್ರಾಃ - ಹತ್ತುಸಾವಿರ ಸಂಖ್ಯೆಯುಳ್ಳ ರಕ್ಕಸರು, ರಾಕ್ಷಸಾಃ - ರಕ್ಕಸರು, ತದಾ - ಆ ಕಾಲದಲ್ಲಿ, ಮೃದಂಗಪಣವಾ೯ - ಮದ್ದಲೆಗಳನ್ನೂ ತಪಟೆಗಳನ್ನೂ, ಭೇರೀಶ್ಚ - ದೊಡ್ಡ ಭೇರಿಗಳನ್ನೂ, ಶಂಖ....ಣಾ೯ - ಶಂಖಗಳನ್ನೂ ಕುಂಭವಾದ್ಯತಂಡಗಳನ್ನೂ, ಯುಗಪತ್ - ಏಕಕಾಲದಲ್ಲಿ, ಪರ್ಯವಾದಯ೯ - ಬಾರಿಸಿದರು. ॥ ೪೨-೪೩ ॥ ನೀಲಾಂ....ರಾಃ - ಕಪ್ಪಾಗಿರುವ ಕಾಡಿಗೆಯ ರಾಶಿಗೆ ಸಮವಾದ ಆಕಾರವುಳ್ಳ, ತೇತು - ಆ ರಕ್ಕಸರಾದರೆ, ತಂ - ಆ ಕುಂಭಕರ್ಣನನ್ನು, ಅಭಿಘ್ನಂತಃ - ಹೊಡೆಯುತ್ತ, ನದಂತಶ್ಚ - ಧ್ವನಿಗೈದು, ಪ್ರತ್ಯಬೋಧಯ೯ - ಎಬ್ಬಿಸಿದರು, ಸಃ - ಆ ಕುಂಭಕರ್ಣನು, ನೈವಸಂವಿವಿದೇ - ಏಳಲೇ ಇಲ್ಲವು. ॥೪೪॥ ಯದಾ - ಯಾವ ಕಾಲದಲ್ಲಿ, ತೇ - ಆ ರಕ್ಕಸರು, ಏನಂ - ಈ ಕುಂಭಕರ್ಣನನ್ನು, ಪ್ರತಿಬೋಧಯಿತುಂ - ಎಚ್ಚರಗೊಳಿಸುವುದಕ್ಕೆ, ನಶೇಕುಃ - ಸಮರ್ಥರಾಗದೇ ಹೋದರೋ, ತದಾ - ಆ ಕಾಲದಲ್ಲಿ, ತತಃ - ಅದಕ್ಕಿಂತಲೂ, ಗುರುತರಂ - ಹೆಚ್ಚಾದ, ದಾರುಣಂ - ಕ್ರೂರವಾದ, ಯತ್ನಂ - ಪ್ರಯತ್ನವನ್ನು, ಸಮುಪಾಕ್ರಮ೯ - ಆರಂಭಿಸಿದರು. ॥೪೫॥ ಅಶ್ವಾ೯ - ಕುದುರೆಗಳನ್ನು, ಉಷ್ಟ್ರಾ೯ - ಒಂಟೆಗಳನ್ನೂ, ಖರಾ೯ - ಕತ್ತೆಗಳನ್ನೂ, ನಾಗಾ೯ - ಆನೆಗಳನ್ನೂ, (ಅವನಮೇಲೆ) ವಿಸೃಜುಃ - ಬಿಟ್ಟರು, ದಂಡ....ಶೈಃ - ಕೋಲುಗಳಿಂದಲೂ, ಕೊರಡೆಗಳಿಂದಲೂ, ಅಂಕುಶಗಳಿಂದಲೂ, ಜಘ್ನುಃ - ಹೊಡೆದರು, ಭೇರೀ....ಶ್ಚ - ಭೇರಿಗಳನ್ನೂ, ಶಂಖಗಳನ್ನೂ, ಮದ್ದಲೆಗಳನ್ನೂ, ಸರ್ವಪ್ರಾಣೈಃ -

---

ಹತ್ತುಸಾವಿರ ಮಂದಿ ರಾಕ್ಷಸರು ಆ ಕುಂಭಕರ್ಣನನ್ನು ಎಚ್ಚರಗೊಳಿಸುವುದರಲ್ಲಿ ಪ್ರಯತ್ನವುಳ್ಳವರಾಗಿ ಐಕಮತ್ಯದಿಂದ ಮೃದಂಗಗಳನ್ನೂ, ತಪ್ಪಟೆಗಳನ್ನೂ, ರಣಭೇರಿಗಳನ್ನೂ, ಶಂಖಗಳನ್ನೂ, ಕುಂಭವಾದ್ಯಗಳನ್ನೂ ಬಲವಾಗಿ ಮೊಳಗಿಸಿದರು. ಕಾಡಿಗೆಯ ಬೆಟ್ಟಕ್ಕೆ ಸಮಾನವಾದ ಆಕಾರವೂ ಗಾತ್ರವೂ ಉಳ್ಳ ಆ ರಾಕ್ಷಸರು ಬಗೆಬಗೆಯ ಪ್ರಯತ್ನಗಳನ್ನು ಮಾಡಿದರೂ ಆ ಕುಂಭಕರ್ಣನು ನಿದ್ರೆಯಿಂದೆಚ್ಚರಗೊಳ್ಳಲೇ ಇಲ್ಲವು. ಹೀಗೆ ಎಷ್ಟು ಪಯತ್ನಿಸಿದರೂ ಅವನು ಎಚ್ಚರಗೊಳ್ಳದಿರಲು ಆ ರಾಕ್ಷಸರೆಲ್ಲರೂ ಏನು ಮಾಡಬೇಕೆಂದು ಆಲೋಚಿಸಿ ಮೊದಲಿಗಿಂತಲೂ ಬಲವಾದ ಪ್ರಯತ್ನಗಳನ್ನು ಮಾಡುವವರಾಗಿ ಕುದುರೆಗಳನ್ನೂ, ಒಂಟಿಗಳನ್ನೂ, ಹೇಸರಕತ್ತೆಗಳನ್ನೂ, ಆನೆಗಳನ್ನೂ ಅವನ ಮೇಲೆ ಹಾಯಿಸಿದುದು ಮಾತ್ರವಲ್ಲದೆ ಕೋಲುಗಳಿಂದಲೂ, ಕೋರಡೆಗಳಿಂದಲೂ, ಅಂಕುಶಗಳಿಂದಲೂ ಚೆನ್ನಾಗಿ ಹೊಡೆದು ಅತಿಯಾಗಿ ಹಿಂಸಿಸಿದರು. ॥ ೪೧–೪೫ ॥ ಇಷ್ಟೆಯಲ್ಲದೆ ಆ ಕುಂಭಕರ್ಣನ ಅವಯವಗಳನ್ನು ಬಹು ದೊಡ್ಡ ದೊಡ್ಡ ಕೋಲುಗಳಿಂದಲೂ, ಒನಕೆಗಳಿಂದಲೂ ಬಲವಾಗಿ ಮರ್ದಿಸಿದರು;

ಭೇರೀಶಂಖಮೃದಂಗಾಂಶ್ಚ ಸರ್ವಪ್ರಾಣೈರವಾದಯನ್ ॥ ೪೬ ॥ ನಿಜಘ್ನುಶ್ಚಾಸ್ಯ ಗಾತ್ರಾಣಿ ಮಹಾಕಾಷ್ಠಕಟಂಕರೈಃ । ಮುದ್ಗರೈರ್ಮುಸಲೈಶ್ಚೈವ ಸರ್ವಪ್ರಾಣಸಮುದ್ಯತೈಃ ॥ ೪೭ ॥ ತೇನ ಶಬ್ದೇನ ಮಹತಾ ಲಂಕಾ ಸಮಭಿಪೂರಿತಾ । ಸಪರ್ವತವನಾ ಸರ್ವಾ ಸೋಽಪಿ ನೈವ ಪ್ರಬುಧ್ಯತ ॥ ೪೮ ॥ ತತಸ್ಸಹಸ್ರಂ ಭೇರೀಣಾಂ ಯುಗಪತ್ಸಮಹನ್ಯತ । ಮೃಷ್ಟಕಾಂಚನಕೋಣಾನಾಮಾಸಕ್ತಾನಾಂ ಸಮಂತತಃ ॥ ೪೯ ॥ ಏವಮಪ್ಯತಿನಿದ್ರಸ್ತು ಯದಾ ನೈವ ಪ್ರಬುಧ್ಯತೇ । ಶಾಪಸ್ಯ ವಶಮಾಪನ್ನಸ್ತತಃ ಕ್ರುದ್ಧಾ ನಿಶಾಚರಾಃ ॥ ೫೦ ॥ ಮಹಾಕ್ರೋಧಸಮಾವಿಷ್ಟಾಸ್ಸರ್ವೇ ಭೀಮಪರಾಕ್ರಮಾಃ । ತದ್ರಕ್ಷೋ ಬೋಧಯಿಷ್ಯಂತಶ್ಚಕ್ರುರನ್ಯೇ ಪರಾಕ್ರಮಂ ॥ ೫೧ ॥ ಅನ್ಯೇ

ತಮ್ಮ ಬಲವನ್ನೆಲ್ಲ ಬಿಟ್ಟು, ಅವಾದಯನ್ - ಬಾರಿಸಿದರು. ॥ ೪೬ ॥ ಅಸ್ಯ - ಈ ಕುಂಭಕರ್ಣನ, ಗಾತ್ರಾಣಿ - ಅವಯವಗಳನ್ನು, ಮಹಾ......ರೈಃ - ದೊಡ್ಡ ಕೊರಡುಗಳಿಂದಲೂ, ಎಂಟುಮೂಲೆ ಕಂಭಗಳಿಂದಲೂ, ಸರ್ವ....ತೈಃ - ಸಮಸ್ತ ಬಲದಿಂದಲೂ ಎತ್ತಲ್ಪಟ್ಟ, ಮುದ್ಗರೈಃ - ಮುದ್ಗರಾಯುಧಗಳಿಂದಲೂ, ಮುಸಲೈಶ್ಚೈವ - ಒನಕೆಗಳಿಂದಲೂ, ನಿಜಘ್ನುಶ್ಚ - ಹೊಡೆದರು. ॥ ೪೭ ॥ ಮಹತಾ - ಬಹಳವಾದ, ತೇನಶಬ್ದೇನ - ಆ ಶಬ್ದದಿಂದ, ಸಪರ್ವತವನಾ - ಬೆಟ್ಟಗಳಿಂದಲೂ, ಅರಣ್ಯಗಳಿಂದಲೂ ಒಡಗೂಡಿದ, ಸರ್ವಾ - ಸಮಸ್ತವಾದ, ಲಂಕಾಂ - ಲಂಕಾಪಟ್ಟಣವು, ಸಮಭಿಪೂರಿತಾ - ತುಂಬಿಸಲ್ಪಟ್ಟಿತು, ಸೋಪಿ - ಆ ಕುಂಭಕರ್ಣನಾದರೆ, ನೈವಪ್ರಬುಧ್ಯತ - ಎಚ್ಚರಗೊಳ್ಳಲೇ ಇಲ್ಲವು. ॥ ೪೮ ॥ ತತಃ - ಬಳಿಕ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಆಸಕ್ತಾನಾಂ - ಹೊಡೆಯಲ್ಪಟ್ಟ, ಮೃಷ್ಟ......ನಾಂ - ಶೋಧಿತವಾದ ಭಂಗಾರದ ಗೂಟಗಳುಳ್ಳ, ಭೇರೀಣಾಂ - ಭೇರಿಗಳ, ಸಹಸ್ರಂ - ಸಾವಿರವು, ಯುಗಪತ್ - ಏಕಕಾಲದಲ್ಲಿ, ಸಮಹನ್ಯತ - ಹೊಡೆಯಲ್ಪಟ್ಟಿತು. ॥ ೪೯ ॥ ಏವಮಪಿ - ಹೀಗಾದರೂ, ಶಾಪಸ್ಯ - ಶಾಪಕ್ಕೆ, ವಶಂ - ಅಧೀನತೆಯನ್ನು, ಆಪನ್ನಃ - ಹೊಂದಿದ, ಅತಿನಿದ್ರಸ್ತು - ಬಹಳ ನಿದ್ದೆಗೊಂಡಿರುವ ಕುಂಭಕರ್ಣನು, ಯದಾ - ಯಾವ ಕಾಲದಲ್ಲಿ, ನೈವಬುಧ್ಯತೇ - ಎಬ್ಬಿಸಲ್ಪಡಲಿಲ್ಲವೋ, ತತಃ - ಬಳಿಕ, ನಿಶಾಚರಾಃ - ರಕ್ಕಸರು, ಕ್ರುದ್ಧಾಃ - ಕೋಪಿಷ್ಟರಾದರು. ॥ ೫೦ ॥ ಮಹಾ......ಷ್ಟಾಃ - ಬಹಳ ಕೋಪಾಕ್ರಾಂತರಾಗಿ, ಭೀಮಪರಾಕ್ರಮಾಃ - ಭಯಂಕರ ಪರಾಕ್ರಮವುಳ್ಳ, ಸರ್ವೇ - ಸಮಸ್ತರೂ, ತದ್ರಕ್ಷಃ - ಆ ರಕ್ಕಸನನ್ನು, ಬೋಧಯಿಷ್ಯಂತಃ - ಎಬ್ಬಿಸಬೇಕೆಂಬ ಇಚ್ಛೆ

ಮುದ್ಗರಗಳು, ಮುಸಲಗಳೇ ಮೊದಲಾದ ಆಯುಧಗಳಿಂದ ತಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಹೊಡೆದರು. ಆ ಮಹಾ ಧ್ವನಿಯು ಲಂಕಾನಗರದಲ್ಲೆಲ್ಲ ತುಂಬಿ ಪ್ರತಿಧ್ವನಿತವಾಯಿತು ; ಪರ್ವತಗಳಲ್ಲಿಯೂ, ವನೋಪವನಗಳಲ್ಲಿಯೂ ವ್ಯಾಪಿಸಿ ಪ್ರತಿ ಧ್ವನಿತವಾಗುತ್ತಿದ್ದಿತು. ಇಷ್ಟಾದರೂ ಆ ಕುಂಭಕರ್ಣನು ಎಚ್ಚರಗೊಳ್ಳದೇ ಹೋದನು. ಆ ತರುವಾಯ ಅಲ್ಲಿದ್ದ ರಾಕ್ಷಸರೆಲ್ಲರೂ ಒಂದಾಗಿ ಸೇರಿ ಸ್ವರ್ಣದಂಡಗಳಿಂದ ಒಂದು ಸಾವಿರ ಭೇರಿಗಳನ್ನು ಏಕಕಾಲದಲ್ಲಿಯೇ ಬಹು ಭಯಂಕರವಾಗಿ ಹೊಡೆಯಿಸಿ ನೋಡಿದರು. ಹೀಗೆ ಎಷ್ಟು ವಿಧವಾಗಿ ಪ್ರಯತ್ನಿಸಿದರೂ ಶಾಪೋಪಹತಚೇತನನಾದ ಆ ಕುಂಭಕರ್ಣನು ನಿದ್ರೆತಿಳಿದೇಳದಿರಲು ಆ ರಾಕ್ಷಸವೀರರೆಲ್ಲರೂ ಇನ್ನೊಮ್ಮೆ ಒಂದಾಗಿ ಭಯಂಕರವಾದ ತಮ್ಮ ಪರಾಕ್ರಮವನ್ನು ಪ್ರದರ್ಶಿಸಿ ಆ ಕುಂಭಕರ್ಣನನ್ನು ಮತ್ತೂ ಕ್ರೂರವಾಗಿ ಪೀಡಿಸಲಾರಂಭಿಸಿದರು. ಕೆಲವರು ರಾಕ್ಷಸರು ಮತ್ತೆ ರಣಭೇರಿಗಳನ್ನು ಮೊಳಗಿಸಿದರು ; ಕೆಲವರು ಮೊದಲಿಗಿಂತಲೂ ಭಯಂ

ಭೇರೀಸ್ಸಮಾಜಘ್ನುರನ್ಯೇ ಚಕ್ರುರ್ಮಹಾಸ್ವನಂ । ಕೇಶಾನನ್ಯೇ ಪ್ರಲುಲುಪುಃ ಕರ್ಣಾವನ್ಯೇ ದಶಂತಿಚ ॥೩೨॥ ಉದಕುಂಭಶತಾನನ್ಯೇ ಸಮಸಿಂಚಂತ ಕರ್ಣಯೋಃ । ನಕುಂಭಕರ್ಣಃ ಪಸ್ಪಂದೇ ಮಹಾನಿದ್ರಾವಶಂಗತಃ ॥ ೩೩ ॥ ಅನ್ಯೇಚ ಬಲಿನಸ್ತಸ್ಯ ಕೂಟಮುದ್ಗರಪಾಣಯಃ । ಮೂರ್ಧ್ನಿ ವಕ್ಷಸಿ ಗಾತ್ರೇಷು ಪಾತಯನ್ ಕೂಟಮುದ್ಗರಾನ್ ॥ ೩೪ ॥ ರಜ್ಜುಬಂಧನಬದ್ಧಾಭಿಃ ಶತಘ್ನೀಭಿಶ್ಚ ಸರ್ವತಃ । ವಧ್ಯಮಾನೋ ಮಹಾಕಾಯೋ ನ ಪ್ರಾಬುಧ್ಯತ ರಾಕ್ಷಸಃ ॥೩೫॥ ವಾರಣಾನಾಂ ಸಹಸ್ರಂತು ಶರೀರೇಽಸ್ಯಪ್ರಧಾವಿತಂ । ಕುಂಭಕರ್ಣಸ್ತತೋ ಬುದ್ಧಸ್ಸ್ಪರ್ಶಂ ಪರಮಬುಧ್ಯತ

ಯುಳ್ಳವರಾಗಿ, ಅನ್ಯೇ - ಮತ್ತೆ ಕೆಲವರು, ಪರಾಕ್ರಮಂ - ಮುಷ್ಟಿಪ್ರಹಾರಾದಿಗಳನ್ನು, ಚಕ್ರುಃ - ಮಾಡಿದರು. ॥ ೩೧ ॥ ಅನ್ಯೇ - ಮತ್ತೆ ಕೆಲವರು, ಭೇರೀಃ - ಭೇರಿಗಳನ್ನು, ಸಮಾಜಘ್ನುಃ - ಹೊಡೆದರು, ಅನ್ಯೇ - ಕೆಲವರು, ಮಹಾಸ್ವನಂ - ದೊಡ್ಡ ಕೂಗನ್ನು, ಚಕ್ರುಃ - ಮಾಡಿದರು, ಕೇಶಾನ್ - ಕೂದಲುಗಳನ್ನು, ಅನ್ಯೇ - ಕೆಲವರು, ಪ್ರಲುಲುಪುಃ - ಕಿತ್ತರು, ಅನ್ಯೇ - ಕೆಲವರು, ಕರ್ಣೌ - ಕಿವಿಗಳನ್ನು, ದಶಂತಿಚ - ಕಚ್ಚಿದರು, ಅನ್ಯೇ - ಮತ್ತೆ ಕೆಲವರು, ಕರ್ಣಯೋಃ - ಕಿವಿಗಳಲ್ಲಿ, ಉದ......ನಿ - ನೂರು ಬಿಂದಿಗೆಗಳ ನೀರನ್ನು, ಸಮಸಿಂಚಂತ - ಹೊಯ್ದರು, ಮಹಾನಿದ್ರಾವಶಂ - ಬಹಳ ನಿದ್ರೆಯಿಂದ ಪರಾಧೀನನಾದ, ಕುಂಭಕರ್ಣಃ - ಕುಂಭಕರ್ಣನು, ನಪಸ್ಪಂದೇ - ಕದಲಲಿಲ್ಲವು. ॥ ೩೩ ॥ ಅನ್ಯೇಬಲಿನಃ - ಬಲವಂತರಾದ ಮತ್ತೆ ಕೆಲವರು, ಕೂಟ....ಯಃ - ಕಬ್ಬಿಣದ ಮುದ್ಗರಾಯುಧಗಳೇ ಹಸ್ತದಲ್ಲುಳ್ಳವರಾಗಿ, ತಸ್ಯ - ಆ ಕುಂಭಕರ್ಣನ, ಮೂರ್ಧ್ನಿ - ಮಂಡೆಯಲ್ಲಿ, ವಕ್ಷಸಿ - ಎದೆಯಲ್ಲಿಯೂ, ಗಾತ್ರೇಷು - ಹಸ್ತಪಾದಾದ್ಯವಯವಗಳಲ್ಲಿಯೂ, ಕೂಟಮುದ್ಗರಾನ್ - ಕಬ್ಬಿಣದ ಕಟ್ಟುಗಳು ಹಾಕಿದ ದೊಣ್ಣೆಗಳನ್ನು, ಪಾತಯನ್ - ಬೀಳಿಸಿದರು. ॥ ೩೪ ॥ ರಜ್ಜು......ಭಿಃ - ಹಗ್ಗಗಳಿಂದ ಕಟ್ಟೋಣದರಿಂದ, ಶತಘ್ನೀಭಿಶ್ಚ - ಪಿರಂಗಿಗಳಿಂದಲೂ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ವಧ್ಯಮಾನೋಪಿ - ಹೊಡೆಯಲ್ಪಟ್ಟವನಾದರೂ, ಮಹಾಕಾಯಃ - ದೊಡ್ಡ ಶರೀರವುಳ್ಳ, ರಾಕ್ಷಸಃ - ಕುಂಭಕರ್ಣನು, ನಪ್ರಾಬುಧ್ಯತ - ಏಳಲೇ ಇಲ್ಲ. ॥ ೩೫ ॥ ವಾರಣಾನಾಂ - ಆನೆಗಳ, ಸಹಸ್ರಂ - ಸಾವಿರವಾದರೆ, ಅಸ್ಯ - ಈ ಕುಂಭಕರ್ಣನ, ಶರೀರೇ - ಶರೀರದಲ್ಲಿ, ಪ್ರಧಾವಿತಂ - ಓಡಿಸಲ್ಪಟ್ಟಿತು, ತತಃ - ಆದರಿಂದ, ಕುಂಭಕರ್ಣಃ - ಕುಂಭಕರ್ಣನು, ಬುದ್ಧಃ - ಎಚ್ಚರಗೊಂಡು, ಸ್ಪರ್ಶಂಪರಂ -

ಕರವಾಗಿ ಸಿಂಹನಾದವನ್ನು ಮಾಡಿದರು, ಕೆಲವರು ಆ ಕುಂಭಕರ್ಣನ ಕಿವಿಗಳನ್ನು ಬಲವಾಗಿ ಕಡಿದರು; ಕೆಲವರು ಅವನ ತಲೆಗೂದಲುಗಳನ್ನು ಕಿತ್ತೆಳೆದರು; ಕೆಲವರು ಸಹಸ್ರಾರು ಬಿಂದಿಗೆಗಳ ನೀರನ್ನು ತಂದು ಆ ಕುಂಭಕರ್ಣನ ಕಿವಿಗಳಲ್ಲಿ ಸುರಿದರು. ಇಷ್ಟು ಮಾಡಿದರೂ ಮಹಾ ನಿದ್ರೆಗೆ ವಶನಾಗಿ ಹೋಗಿದ್ದ ಆ ಕುಂಭಕರ್ಣರಾಕ್ಷಸನು ಎಚ್ಚರಗೊಳ್ಳದೇ ಹೋದನು. ಆಗ ಮತ್ತೆ ಕೆಲವರು ರಾಕ್ಷಸರು ಕೂಟಮುದ್ಗರಾದ್ಯಾಯುಧಗಳನ್ನು ಧರಿಸಿ ಬಂದು ಆ ರಾಕ್ಷಸನ ವಕ್ಷಸ್ಥಳದಲ್ಲಿಯೂ, ಇತರ ಅವಯವಗಳಲ್ಲಿಯೂ ಬಲವಾಗಿ ಪ್ರಹರಿಸಿದರು. ಮಹಾ ಬಲಾಢ್ಯರಾದ ಮತ್ತೆ ಕೆಲವರು ರಾಕ್ಷಸರು ಹಗ್ಗಗಳಿಂದ ಬಿಗಿದು ಬಲವಾದ ಗದಾವಿಶೇಷಗಳಿಂದ ಆ ಕುಂಭಕರ್ಣನನ್ನು ಬಹು ಕ್ರೂರವಾಗಿ ಪ್ರಹರಿಸಿದರು. ಇಷ್ಟಾದರೂ ಆ ಕುಂಭಕರ್ಣನು ಎಚ್ಚರಗೊಳ್ಳಲಿಲ್ಲವು. ಆಗ ರಾಕ್ಷಸರೆಲ್ಲರೂ ಒಂದುಗೂಡಿ ಏನುಮಾಡಬೇಕೆಂದು ಯೋಚಿಸಿ ಒಂದುಸಾವಿರ ಆನೆಗಳನ್ನು ಏಕಕಾಲದಲ್ಲಿಯೇ ಅವನ ಮೇಲೆ ಓಡಿಸಿ ನೋಡಿದರೂ

|| ೫೬ || ಸಪಾತ್ಯಮಾನೈರ್ಗಿರಿಶೃಂಗವೃಕ್ಷೈರಚಿಂತಯಂಸ್ತಾನ್ವಿಪುಲಾನ್ ಪ್ರಹಾರಾನ್ | ನಿದ್ರಾಕ್ಷಯಾತ್ ಕ್ಷುದ್ಭಯಪೀಡಿತಶ್ಚ ವಿಜೃಂಭಮಾಣಸ್ಸಹಸೋತ್ಪಪಾತ || ೫೭ || ಸನಾಗಭೋಗಾಚಲಶೃಂಗಕಲ್ಪೌ ವಿಕ್ಷಿಪ್ಯ ಬಾಹೂ ಗಿರಿಶೃಂಗಸಾರೌ | ವಿವೃತ್ಯ ವಕ್ತ್ರಂ ಬಡಬಾಮುಖಾಭಂ ನಿಶಾಚರೋಽಸೌ ವಿಕೃತಂ ಜುಜೃಂಭೇ || ೫೮ || ತಸ್ಯ ಜಾಜೃಂಭಮಾಣಸ್ಯ ವಕ್ತ್ರಂ ಪಾತಾಳಸನ್ನಿಭಂ | ದದೃಶೇ ಮೇರುಶೃಂಗಾಗ್ರೇ ದಿವಾಕರ ಇವೋದಿತಃ || ೫೯ || ಸ ಜೃಂಭಮಾಣೋಽತಿಬಲಃ ಪ್ರತಿಬುದ್ಧೋ ನಿಶಾಚರಃ | ನಿಶ್ವಾಸಶ್ಚಾಽಸ್ಯ ಸಂಜಜ್ಞೇ ಪರ್ವತಾದಿವ ಮಾರುತಃ || ೬೦ || ರೂಪಮುತ್ತಿಷ್ಠತಸ್ತಸ್ಯ ಕುಂಭ

ಸ್ಪರ್ಶಮಾತ್ರವನ್ನಾಗಿ, ಅಬುಧ್ಯತ - ತಿಳಿದುಕೊಂಡನು. || ೫೬ || ಸಃ - ಆ ಕುಂಭಕರ್ಣನು, ಪಾತ್ಯಮಾನೈಃ - ಬೀಳಿಸಲ್ಪಟ್ಟ, ಗಿರಿಶೃಂಗವೃಕ್ಷೈಃ - ಬೆಟ್ಟದ ಶಿಖರಗಳಿಂದಲೂ, ಮರಗಳಿಂದಲೂ, ವಿಪುಲಾನ್ - ವಿಸ್ತಾರವಾದ, ತಾನ್‌ಪ್ರಹಾರಾನ್ - ಆ ಹೊಡೆತಗಳನ್ನೂ, ಅಚಿಂತಯನ್ - ಎಣಿಸದಿರುವವನಾಗಿ, ನಿದ್ರಾಕ್ಷಯಾತ್ - ನಿದ್ದೆಯ ಪರಿಹಾರದಿಂದ, ಕ್ಷುದ್ಭಯಪೀಡಿತಶ್ಚ - ಹಸಿವಿನಿಂದಲೂ, ಭಯದಿಂದಲೂ ಬಾಧಿತನಾಗಿ, ವಿಜೃಂಭಮಾಣಃ - ಆಕಳಿಸುತ್ತ, ಸಹಸಾ - ಜಾಗ್ರತೆಯಾಗಿ, ಉತ್ಪಪಾತ - ಮೇಲಕ್ಕೆದ್ದನು. || ೫೭ || ಅಸೌನಿಶಾಚರಃ - ಈ ರಕ್ಕಸನು, ನಾಗ.....ಲ್ಪೌ - ಸರ್ಪಶರೀರಗಳಿಗೂ, ಬೆಟ್ಟದ ತುದಿಗಳಿಗೂ ಸಮಾನವಾದ, ಗಿರಿ.....ರೌ - ಬೆಟ್ಟದ ಶಿಖರದಂತೆ ಬಲಿಷ್ಠಗಳಾದ, ಬಾಹೂ - ಭುಜಗಳನ್ನು, ವಿಕ್ಷಿಪ್ಯ - ಚಾಚಿ, ಬಡಬಾಮುಖಾಭಂ - ಸಮುದ್ರದಲ್ಲಿರುವ ಹೆಣ್ಣುಕುದುರೆಯ ಮುಖದಂತೆ ಹೊಳೆಯುತ್ತಿರುವ, ವಕ್ತ್ರಂ - ಬಾಯಿಯನ್ನು, ವಿವೃತ್ಯ - ತೆರೆದು, ವಿಕೃತಂ - ವಿಕಾರವಾಗಿ, ಜಜೃಂಭೇ - ಆಕಳಿಸಿದನು. || ೫೮ || ಜಾಜೃಂಭಮಾಣಸ್ಯ - ಆಕಳಿಸುತ್ತಿರುವ, ತಸ್ಯ - ಆ ಕುಂಭಕರ್ಣನ, ಪಾತಾಳಸನ್ನಿಭಂ - ಪಾತಾಳಕ್ಕೆ ಸಮಾನವಾದ, ವಕ್ತ್ರಂ - ಮುಖವು, ಮೇರುಶೃಂಗಾಗ್ರೇ - ಮೇರುಪರ್ವತ ಶಿಖರದ ತುದಿಯಲ್ಲಿ, ಉದಿತಃ - ಹುಟ್ಟಿದ, ದಿವಾಕರಇವ - ಸೂರ್ಯನಂತೆ, ದದೃಶೇ - ಕಾಣಿಸಿತು. || ೫೯ || ಪ್ರತಿಬುದ್ಧಃ - ಎಚ್ಚರಗೊಂಡ, ಅತಿಬಲಃ - ಬಹಳ ಬಲವಂತನಾದ, ಸನಿಶಾಚರಃ - ಆ ರಕ್ಕಸನು, ಜೃಂಭಮಾಣಃ - ಆಕಳಿಸುತ್ತಿದ್ದನು, ಅಸ್ಯ - ಈ ಕುಂಭಕರ್ಣನ, ನಿಶ್ವಾಸಶ್ಚ - ನಿಟ್ಟುಸಿರೂ, ಪರ್ವತಾತ್ - ಬೆಟ್ಟದಿಂದ, ಮಾರುತಇವ - ಚಂಡಮಾರುತದಂತೆ, ಸಂಜಜ್ಞೇ - ಆಯಿತು. ||೬೦|| ಉತ್ತಿಷ್ಠತಃ - ಮೇಲಕ್ಕೇಳುತ್ತಿರುವ, ತಸ್ಯಕುಂಭಕರ್ಣಸ್ಯ -

---

ಅವನು ನಿದ್ರೆಯಿಂದ ಎಚ್ಚತ್ತುಕೊಳ್ಳಲಿಲ್ಲವು. ಆ ರಾಕ್ಷಸರು ಇಷ್ಟಕ್ಕೆ ತಮ್ಮ ಪ್ರಯತ್ನವನ್ನು ನಿಲ್ಲಿಸದೆ ಪುನಃ ಒಗ್ಗಟ್ಟಾಗಿ ಪರ್ವತಶಿಖರಗಳಿಂದಲೂ ವೃಕ್ಷಗಳಿಂದಲೂ ಆ ಕುಂಭಕರ್ಣನನ್ನು ಮತ್ತೆ ಬಲವಾಗಿ ಪ್ರಹರಿಸಿದರು. ಇಷ್ಟಾದ ತರುವಾಯ ಆ ಕುಂಭಕರ್ಣನು ನಿದ್ರೆಯನ್ನು ತೊರೆದು ಹಸಿವಿನಿಂದ ಬಹಳವಾಗಿ ಬಳಲಿದವನಾಗಿ ಆಕಳಿಸುತ್ತ ಬಹು ಜಾಗ್ರತೆಯಾಗಿ ಮೇಲಕ್ಕೆದ್ದನು. || ೫೫–೫೮ || ಹೀಗೆ ಮೇಲಕ್ಕೆದ್ದು ನಾಗಭೋಗಾಚಲಶಿಖರಗಳಿಗೆ ಸಮಾನವಾದುವೂ, ಪರ್ವತಶಿಖರಗಳಂತೆ ಬಹು ಬಲಾಢ್ಯವಾದುವೂ ಆದ ತನ್ನತೋಳುಗಳನ್ನು ಬೀಸಿ ಬಡಬಾ ಮುಖಕ್ಕೆ ಸರಿಹೋಲುವ ತನ್ನ ಬಾಯಿಯನ್ನು ತೆರದನು. ಹೀಗೆ ಭಯಂಕರವಾಗಿ ಆಕಳಿಸುತ್ತಿದ್ದ ಆ ಕುಂಭಕರ್ಣನ ಬಾಯಿಯು ಪಾತಾಳಲೋಕಕ್ಕೆ ಸಮಾನವಾಗಿದ್ದಿತು. ಆ ಸಮಯದಲ್ಲಿ ಆ ಕುಂಭಕರ್ಣ ರಾಕ್ಷಸನು ಮೇರುಪರ್ವತದ ಶಿಖರಾಗ್ರದಲ್ಲಿ ಉದಯಿಸುತ್ತಿರುವ ಸೂರ್ಯನಂತೆ ಶೋಭಿಸುತ್ತಿದ್ದನು. ಹೀಗೆ ನಿದ್ರೆಯನ್ನು ತೊರೆದೆದ್ದ

ಕರ್ಣಸ್ಯ ತದ್ರೂಪಂ ಬಭೌ । ತಪಾಂತೇ ಸಬಲಾಕಸ್ಯ ಮೇಘಸ್ಯೇವ ವಿವರ್ಷತಃ ॥ ೬೧ ॥ ತಸ್ಯ ದೀಪ್ತಾಗ್ನಿಸದೃಶೇ ವಿದ್ಯುತ್ಸದೃಶವರ್ಚಸೀ । ದದೃಶಾತೇ ಮಹಾನೇತ್ರೇ ದೀಪ್ತಾವಿವ ಮಹಾಗ್ರಹೌ ॥ ೬೨ ॥ ತತಸ್ತ್ವದರ್ಶಯನ್ ಸರ್ವಾನ್ ಭಕ್ಷ್ಯಾಂಶ್ಚ ವಿವಿಧಾನ್ ಬಹೂನ್ । ವರಾಹಾನ್ ಮಹಿಷಾಂಶ್ಚೈವ ಸಬಭಕ್ಷ ಮಹಾಬಲಃ ॥ ೬೩ ॥ ಅದನ್ ಬುಭುಕ್ಷಿತೋ ಮಾಂಸಂ ಶೋಣಿತಂ ತೃಷಿತಃ ಪಿಬನ್ । ಮೇದಃಕುಂಭಾಂಶ್ಚ ಮದ್ಯಂಚ ಪಪೌ ಶಕ್ರರಿಪುಸ್ತದಾ ॥೬೪॥ ತತಸ್ತೃಪ್ತಇತಿ ಜ್ಞಾತ್ವಾ ಸಮುತ್ಪೇತುರ್ನಿಶಾಚರಾಃ ।

ಆ ಕುಂಭಕರ್ಣನ, ತದ್ರೂಪಂ - ಆ ರೂಪವು, ತಪಾಂತೇ - ವರ್ಷಋತುವಿನಲ್ಲಿ, ವಿವರ್ಷತಃ - ಮಳೆಗರೆಯುತ್ತಿರುವ, ಸಬಲಾಕಸ್ಯ - ನೀರುಕೋಳಿಗಳಿಂದೊಡಗೂಡಿದ, ಮೇಘಸ್ಯ - ಮೇಘದ, ರೂಪಮಿವ - ರೂಪದಂತೆ, ಬಭೌ - ಹೊಳೆಯುತ್ತಿತ್ತು. ॥ ೬೧ ॥ ದೀಪ್ತಾಗ್ನಿಸದೃಶೇ - ಹೊಳೆಯುತ್ತಿರುವ ಅಗ್ನಿಗೆ ಸಮಾನಗಳಾದ, ವಿದ್ಯು.....ಸಿ - ಮಿಂಚಿಗೆ ಸಮಾನವಾದ ತೇಜಸ್ಸುಗಳುಳ್ಳ, ತಸ್ಯ - ಆ ಕುಂಭಕರ್ಣನ, ಮಹಾನೇತ್ರೇ - ದೊಡ್ಡ ಕಣ್ಣುಗಳು, ದೀಪ್ತೌ - ಹೊಳೆಯುತ್ತಿರುವ, ಮಹಾಗ್ರಹಾವಿವ - ಶನ್ಯಂಗಾರಕರಂತೆ, ದದೃಶಾತೇ - ಕಾಣಲ್ಪಟ್ಟವು. ॥ ೬೨ ॥ ತತಃ - ಬಳಿಕ, ಸರ್ವಾನ್ - ಸಮಸ್ತಗಳಾದ, ಭಕ್ಷ್ಯಾಂಶ್ಚ - ತಿನ್ನುವ ಪದಾರ್ಥಗಳನ್ನೂ, ಬಹೂನ್ - ಅನೇಕಗಳಾದ, ವಿವಿಧಾನ್ - ನಾನಾಬಗೆಗಳಾದ, ವರಾಹಾನ್ - ಹಂದಿಗಳನ್ನೂ, ಮಹಿಷಾಂಶ್ಚೈವ - ದೊಡ್ಡ ಕೋಣಗಳನ್ನೂ, (ಆ ರಕ್ಕಸರು) ಅದರ್ಶಯನ್ - ತೋರಿಸಿದರು, ಮಹಾಬಲಃ - ಬಹಳ ಬಲಶಾಲಿಯಾದ, ಸಃ - ಆ ಕುಂಭಕರ್ಣನು, ಬಭಕ್ಷ - ತಿಂದನು, ಬುಭುಕ್ಷಿತಃ - ಹಸಿವುಳ್ಳವನಾದಕಾರಣ, ಮಾಂಸಂ - ಮಾಂಸವನ್ನು, ಅದನ್ - ತಿನ್ನುತ್ತ, ತೃಷಿತಃ - ನೀರಡಿಕೆಯುಳ್ಳವನಾಗಿ, ಶೋಣಿತಂ - ರಕ್ತವನ್ನು, ಪಿಬನ್ - ಕುಡಿಯುತ್ತ, ಶಕ್ರರಿಪುಃ - ದೇವೇಂದ್ರ ಶತ್ರುವಾದ ಕುಂಭಕರ್ಣನು, ತದಾ - ಆಗ, ಮೇದಃಕುಂಭಾಂಶ್ಚ - ಹರಿವಾಣಗಳಲ್ಲಿ ತುಂಬಿರುವ ಮೇದಸ್ಸುಗಳನ್ನೂ, ಮದ್ಯಂಚ - ಮದ್ಯವನ್ನೂ, ಪಪೌ - ಕುಡಿದನು. ॥ ೬೪ ॥ ತತಃ - ಬಳಿಕ, ತೃಪ್ತಇತಿ - ತೃಪ್ತನೆಂದು, ಜ್ಞಾತ್ವಾ - ತಿಳಿದು, ನಿಶಾಚರಾಃ - ರಕ್ಕಸರು, ಸಮುತ್ಪೇತುಃ - ಎದುರಾಗಿ ಬಂದರು, ಶಿರೋಭಿಃ - ಶಿರಸ್ಸುಗಳಿಂದ, ಏನಂ - ಈ ಕುಂಭಕರ್ಣನನ್ನು,

---

ಆ ಕುಂಭಕರ್ಣನ ಆಕಾರವು ವರ್ಷಾಕಾಲದಲ್ಲಿ ಮಳೆಗರಿಯುತ್ತಿರುವ ಮೇಘದ ಆಕಾರವನ್ನು ಹೋಲಿದ್ದಿತು. ಅಲ್ಲದೆ ಎಚ್ಚೆತ್ತು ಆಕಳಿಸುತ್ತಿರುವ ಆ ಕುಂಭಕರ್ಣನು ಪರ್ವತದಿಂದ ಹೊರಹೊರಟ ವಾಯುವಿನಂತೆ ತೋರುತ್ತಿದ್ದನು. ಅವನು ಈ ರೀತಿ ನಿದ್ರೆತಿಳಿದೆದ್ದ ಕೂಡಲೇ ಕೋಪದಿಂದ ಬಹುವಾಗಿ ಕೆರಳಿ ಕಣ್ಣುಗಳನ್ನು ತಿರುಗಿಸುತ್ತಿರಲು ಅವು ಪ್ರಜ್ವಲಿಸುತ್ತಿರುವ ಅಗ್ನಿಹೋತ್ರನಿಗೂ, ಮಿಂಚಿನ ಬಳ್ಳಿಗೂ ಸಮಾನವಾಗಿದ್ದುವು. ಅಲ್ಲಿದ್ದ ರಾಕ್ಷಸರೆಲ್ಲರೂ ಹೀಗೆ ಆ ಕುಂಭಕರ್ಣನ ಕಣ್ಣುಗಳು ಕೆರಳಿ, ಕೆರಳಿದ ಶನ್ಯಂಗಾರಕ ಗ್ರಹಗಳಂತಿರುವುದನ್ನು ನೋಡಿ ಅಲ್ಲಿಯೇ ತಾವು ಸಿದ್ಧಗೊಳಿಸಿದ್ದ ವಿವಿಧ ಭಕ್ಷ್ಯಗಳನ್ನೂ, ಮದ್ಯ, ಮಾಂಸ, ರಕ್ತಭಾಂಡಗಳನ್ನೂ ಕೈಸಜ್ಞೆಯಿಂದಲೇ ತೋರಿಸಿದರು. ॥ ೫೯–೬೨ ॥ ಆಗಲಾ ಕುಂಭಕರ್ಣನು ಅಪರಿಮಿತವಾದ ವಿವಿಧ ಭಕ್ಷ್ಯಪದಾರ್ಥಗಳೆಲ್ಲವನ್ನೂ ಭುಜಿಸಿ, ಕಾಡುಹಂದಿಗಳ ಮತ್ತು ಎಮ್ಮೆಗಳ ಮಾಂಸಗಳ ರಾಶಿಗಳೆಲ್ಲವನ್ನೂ ಮೆದ್ದು ಅಲ್ಲಿಯೇ ಸಿದ್ಧಗೊಳಿಸಿಟ್ಟಿದ್ದ ಮದ್ಯದ ಮಡಕೆಗಳೆಲ್ಲವನ್ನೂ ಕುಡಿದು ಅಲ್ಲಿಗೂ ತೃಪ್ತನಾಗದೆ ರಕ್ತಭಾಂಡಗಳನ್ನೂ ಬರಿದಾಗಿ ಆಮೇಲೆ ತೃಪ್ತನಾದನು. ಇದಾದ ತರುವಾಯ ಅಲ್ಲಿದ್ದ ರಾಕ್ಷಸರೆಲ್ಲರೂ ಆ ಕುಂಭಕರ್ಣನು ತೃಪ್ತನಾಗಿರುವನೆಂದು

ಶಿರೋಭಿಶ್ಚ ಪ್ರಣಮ್ಯೈನಂ ಸರ್ವತಃ ಪರ್ಯವಾರಯನ್ ॥ ೭೫ ॥ ನಿದ್ರಾವಿಶದನೇತ್ರಸ್ತು ಕಲುಷೀಕೃತಲೋಚನಃ । ಚಾರಯನ್ ಸರ್ವತೋ ದೃಷ್ಟಿಂ ತಾನ್ ದದರ್ಶ ನಿಶಾಚರಾನ್ ॥೭೬॥ ಸಸರ್ವಾನ್ ಸಾಂತ್ವಯಾಮಾಸ ನೈರ್‍ಋತಾನ್ನೈರ್‍ಋತರ್ಷಭಃ । ಬೋಧನಾದ್ವಿಸ್ಮಿತಶ್ಚಾಪಿ ರಾಕ್ಷಸಾನಿದಮಬ್ರವೀತ್ ॥ ೭೭ ॥ "ಕಿಮರ್ಥಮಹಮಾದೃತ್ಯ ಭವದ್ಭಿಃ ಪ್ರತಿಬೋಧಿತಃ । ಕಚ್ಚಿತ್ ಸುಕುಶಲಂ ರಾಜ್ಞೋ ಭಯವಾನೇಷವಾ ನ ಕಿಂ ॥ ೭೮ ॥ ಅಥವಾ ಧ್ರುವಮನ್ಯೇಭ್ಯೋ ಭಯಂ ಪರಮುಪಸ್ಥಿತಂ । ಯದರ್ಥಮೇವಂ ತ್ವರಿತೈರ್ಭವದ್ಭಿಃ ಪ್ರತಿಬೋಧಿತಃ ॥ ೭೯ ॥ ಅದ್ಯ ರಾಕ್ಷಸರಾಜಸ್ಯ ಭಯಮುತ್ಪಾ

ಪ್ರಣಮ್ಯ - ನಮಸ್ಕರಿಸಿ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಪರ್ಯವಾರಯನ್ - ಸುತ್ತಿಕೊಂಡರು. ॥ ೭೫ ॥ ನಿದ್ರಾ....ಸ್ತು - ನಿದ್ದೆಯಿಂದ ಸ್ಪಷ್ಟವಾಗದಿರುವ ಕಣ್ಣುಗಳುಳ್ಳ ಕುಂಭಕರ್ಣನಾದರೆ, ಕಲು....ನಃ - ಕಲುಷವಾದ ನೇತ್ರಗಳುಳ್ಳವನಾಗಿ, ಸರ್ವತಃ - ಸರ್ವ ಪ್ರದೇಶದಲ್ಲಿಯೂ, ದೃಷ್ಟಿಂ - ದೃಷ್ಟಿಯನ್ನು, ಚಾರಯನ್ - ಪ್ರಸರಿಸುವಂತೆ ಮಾಡಿ, ತಾನ್ನಿಶಾಚರಾನ್ - ಆ ರಾಕ್ಷಸರನ್ನು, ದದರ್ಶ - ಕಂಡನು. ॥ ೭೬ ॥ ನೈರ್‍ಋತರ್ಷಭಃ - ರಾಕ್ಷಸಶ್ರೇಷ್ಠನಾದ, ಸಃ - ಆ ಕುಂಭಕರ್ಣನು, ಸರ್ವಾನ್ - ಸಮಸ್ತರಾದ, ನೈರ್‍ಋತಾನ್ - ರಾಕ್ಷಸರನ್ನು, ಸಾಂತ್ವಯಾಮಾಸ - ಸಮಾಧಾನಗೊಳಿಸಿ, ಬೋಧನಾತ್ - ತನ್ನ ಎಬ್ಬಿಸುವಿಕೆಯಿಂದ, ವಿಸ್ಮಿತಶ್ಚಾಪಿ - ಆಶ್ಚರ್ಯಗೊಂಡವನೂ ಆಗಿ, ರಾಕ್ಷಸಾನ್ - ರಕ್ಕಸರನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೭೭ ॥ ಅಹಂ - ನಾನು, ಆದೃತ್ಯ - ಆದರಿಸಿ, ಭವದ್ಭಿಃ - ನಿಮ್ಮಿಂದ, ಕಿಮರ್ಥಂ - ಏತಕ್ಕಾಗಿ, ಪ್ರತಿಬೋಧಿತಃ - ಎಬ್ಬಿಸಲ್ಪಟ್ಟೆನು, ರಾಜ್ಞಃ - ಒಡೆಯನಾದ ರಾವಣನಿಗೆ, ಕುಶಲಂಕಚ್ಚಿತ್ - ಕ್ಷೇಮವೇ, ಅಥವಾ - ಹಾಗಲ್ಲದಿದ್ದರೆ, ಏಷಃ - ಈ ರಾಜನು, ಭಯವಾನ್ - ಭೀತಿಯುಳ್ಳವನು, ನಕಿಂ - ಆಗಲಿಲ್ಲವೇ ಏನು. ॥ ೭೮ ॥ ಅಥವಾ - ಹಾಗಲ್ಲದಿದ್ದರೆ, ಅನ್ಯೇಭ್ಯಃ - ಶತ್ರುಗಳ ದೆಸೆಯಿಂದ, ಪರಂಭಯಂ - ಬಹು ಭೀತಿಯು, ಉಪಸ್ಥಿತಂ - ಪ್ರಾಪ್ತವಾಗಿರುವುದು, ಧ್ರುವಂ - ನಿಶ್ಚಯವು, ಯದರ್ಥಂ - ಯಾವ ವ್ಯಸನ ನಿಮಿತ್ತದಲ್ಲಿ, ಏವಂ - ಈ ಪ್ರಕಾರವಾಗಿ, ತ್ವರಿತೈಃ - ತ್ವರೆಯುಳ್ಳವರಾದ, ಭವದ್ಭಿಃ - ನಿಮ್ಮಿಂದ, ಪ್ರತಿಬೋಧಿತಃ - ಎಬ್ಬಿಸಲ್ಪಟ್ಟನೋ. ॥ ೭೯ ॥ ಅದ್ಯ - ಈಗ, ರಾಕ್ಷಸರಾಜಸ್ಯ - ರಾಕ್ಷಸಾಧಿಪತಿಯ, ಭಯಂ - ಭೀತಿಯನ್ನು, ಅಹಂ - ನಾನು, ಉತ್ಪಾಟಯಾಮಿ -

---

ತಿಳಿದು ತಮ್ಮ ಪ್ರಯತ್ನವು ನೆರವೇರಿದುದಕ್ಕೆ ಸಂತೋಷಪಟ್ಟುಕೊಂಡು ಆನತಶಿರಸ್ಕರಾಗಿ ಅವನಿಗೆ ಮಣಿದರು. ॥೭೩–೭೫॥ ಇಷ್ಟುಹೊತ್ತಿಗೆ ನಿದ್ರೆಯನ್ನು ತೊರೆದಿದ್ದರೂ ಇನ್ನೂ ಅರೆವಾಸಿಯಾಗಿ ಮುಚ್ಚಿದ ಕಣ್ಣುಗಳುಳ್ಳ ಆ ಕುಂಭಕರ್ಣನು ನಾಲ್ಕೂ ದಿಕ್ಕುಗಳನ್ನು ದೃಷ್ಟಿಸಿ ನೋಡಿ ತನ್ನ ಬಳಿಯಲ್ಲಿದ್ದ ರಾಕ್ಷಸರೆಲ್ಲರನ್ನೂ ನೋಡಿದನು. ಆಗಲವನು ಎಲ್ಲರನ್ನೂ ಸಮಾಧಾನಗೊಳಿಸಿ ತನ್ನನ್ನು ಎಚ್ಚರಗೊಳಿಸಿದ್ದಕ್ಕಾಗಿ ಮಹದಾಶ್ಚರ್ಯಭರಿತನಾಗಿ ಅವರನ್ನು ಕುರಿತು, "ಅಯ್ಯಾ ರಾಕ್ಷಸರಿರಾ! ನೀವು ಯಾವ ಕಾರಣದಿಂದ ನನ್ನನ್ನು ನಿದ್ರೆಯಿಂದೆಬ್ಬಿಸಿದಿರಿ? ಒಡೆಯನಾದ ರಾವಣಾಸುರನು ಕ್ಷೇಮದಿಂದಿರುವನಷ್ಟೆ. ಆತನಿಗೆ ಯಾವ ಭಯವೂ ಅಡಸಿಲ್ಲವಷ್ಟೆ? ನೀವೆಲ್ಲರೂ ಬಹಳ ತ್ವರೆಯುಳ್ಳವರಾಗಿ ನನ್ನನ್ನು ನಿದ್ರೆಯಿಂದ ಎಚ್ಚರಗೊಳಿಸಿದುದನ್ನು ನೋಡಿದರೆ ನನ್ನ ಒಡೆಯನಿಗೆ ಇತರರಿಂದ ಯಾವುದೋ ಒಂದು ಭಯವು ಘಟಿಸಿರಬೇಕೆಂದು ತೋರುತ್ತಿದೆ. ಹಾಗೊಂದುವೇಳೆ ತೊಂದರೆಯಾಗಿದ್ದರೆ ಹೇಳಿರಿ. ಇದೋ!

ಟಯಾಮ್ಯಹಂ । ಪಾತಯಿಷ್ಯೇ ಮಹೇಂದ್ರಂವಾ ಶಾತಯಿಷ್ಯೇ ತಥಾಽನಲಂ ॥೨೦॥ ನಹ್ಯಲ್ಪಕಾರಣೇ ಸುಪ್ತಂ ಬೋಧಯಿಷ್ಯತಿ ಮಾಂ ಗುರುಃ । ತದಾಖ್ಯಾತಾರ್ಥತತ್ವೇನ ಮತ್ಪ್ರಬೋಧನಕಾರಣಂ" ॥ ೨೧ ॥ ಏವಂ ಬ್ರುವಾಣಂ ಸಂರಬ್ಧಂ ಕುಂಭಕರ್ಣಂ ಮಹಾಬಲಂ । ಯೂಪಾಕ್ಷಸ್ಸಚಿವೋ ರಾಜ್ಞಃ ಕೃತಾಂಜಲಿರುವಾಚಹ ॥ ೨೨ ॥ "ನ ನೋ ದೈವಕೃತಂ ಕಿಂಚಿದ್ಭಯಮಸ್ತಿ ಕದಾಚನ । ಮಾನುಷಾನ್ನೋ ಭಯಂ ರಾಜಂಸ್ತುಮುಲಂ ಸಂಪ್ರಬಾಧತೇ ॥ ೨೩ ॥ ನದೈತ್ಯದಾನವೇಭ್ಯೋವಾ ಭಯಮಸ್ತಿ ಹಿ ತಾದೃಶಂ । ಯಾದೃಶಂ ಮಾನುಷಂ ರಾಜನ್! ಭಯಮಸ್ಮಾನುಪಸ್ಥಿತಂ ॥ ೨೪ ॥

ಕಳಚಿಹಾಕುವೆನು, ಮಹೇಂದ್ರಂವಾ - ಇಂದ್ರನನ್ನಾಗಲಿ, ಪಾತಯಿಷ್ಯೇ - ಬೀಳಿಸುವೆನು, ತಥಾ - ಹಾಗೆಯೇ, ಅನಲಂವಾ ಅಗ್ನಿಯನ್ನಾಗಲೀ, ಶಾತಯಿಷ್ಯೇ-ತಣ್ಣಗೆ ಮಾಡುವೆನು. ॥ ೨೦ ॥ ಹಿ-ಯಾವ ಕಾರಣದಿಂದ, ಗುರುಃ - ಅಣ್ಣನು, ಸುಪ್ತಂ - ಮಲಗಿರುವ, ಮಾಂ - ನನ್ನನ್ನು, ಅಲ್ಪಕಾರಣೇ - ಸ್ವಲ್ಪ ಕಾರ್ಯ ನಿಮಿತ್ತವಾಗಿ, ನಬೋಧಯಿಷ್ಯತಿ - ಎಬ್ಬಿಸುವುದಿಲ್ಲವೋ, ತತ್ - ಆ ಕಾರಣದಿಂದ, ಮತ್ಪ್ರಬೋಧನಕಾರಣಂ - ನನ್ನನ್ನು ಎಬ್ಬಿಸುವಿಕೆಗೆ ಕಾರಣವನ್ನು, ಅರ್ಥತತ್ವೇನ - ಯಥಾರ್ಥವಾಗಿ, ಆಖ್ಯಾತ - ಹೇಳಿರಿ. ॥ ೨೧ ॥ ಏವಂ - ಈ ಪ್ರಕಾರವಾಗಿ, ಬ್ರುವಾಣಂ - ಹೇಳುತ್ತಿರುವ, ಸಂರಬ್ಧಂ - ಕುಪಿತನಾದ, ಮಹಾಬಲಂ - ಬಹು ಬಲವಂತನಾದ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ರಾಜ್ಞಃ - ರಾವಣನ, ಸಚಿವಃ - ಮಂತ್ರಿಯಾದ, ಯೂಪಾಕ್ಷಃ - ಯೂಪಾಕ್ಷನು, ಕೃತಾಂಜಲಿಃ - ಅಂಜಲಿಬದ್ಧನಾಗಿ, ಉವಾಚಹ - ಹೇಳಿದನಷ್ಟೆ. ॥ ೨೨ ॥ ಹೇ ರಾಜನ್ - ಎಲೈ ಆರಸೇ, ನಃ - ನಮಗೆ, ದೈವಕೃತಂ - ದೇವತೆಗಳಿಂದ ಮಾಡಲ್ಪಟ್ಟ, ಭಯಂ - ಭೀತಿಯು, ಕದಾಚನ - ಯಾವಾಗಲಾದರೂ, ಕಿಂಚಿದಪಿ - ಸ್ವಲ್ಪವಾದರೂ, ನಾಸ್ತಿ - ಇಲ್ಲವು, ಮಾನುಷಾತ್ - ಮನುಷ್ಯನಿಂದುಂಟಾದ, ತುಮುಲಂ - ಅಸಾಧ್ಯವಾದ, ಭಯಂ - ಭೀತಿಯು, ನಃ - ನಮ್ಮನ್ನು, ಸಂಪ್ರಬಾಧತೇ - ಪೀಡಿಸುತ್ತಲಿದೆ. ॥ ೨೩ ॥ ಹೇ ರಾಜನ್ - ಎಲೈ ಆರಸೇ, ಅಸ್ಮಾನ್ - ನಮಗೆ, ಮಾನುಷಂ - ಮನುಷ್ಯನಿಂದುಂಟಾದ, ಭಯಂ - ಭೀತಿಯು, ಯಾದೃಶಂ - ಎಂಥಾದ್ದಾಗಿ, ಉಪಸ್ಥಿತಂ - ಪ್ರಾಪ್ತವಾಗಿದೆಯೋ, ತಾದೃಶಂ - ಅಂಥಾದ್ದಾದ, ಭಯಂ - ಭೀತಿಯು, ದೈತ್ಯ....ವಾ - ದೈತ್ಯರಿಂದಲಾಗಲಿ, ದಾನವರಿಂದಲಾಗಲಿ, ನಾಸ್ತಿಹಿ - ಇಲ್ಲವಷ್ಟೆ. ॥ ೨೪ ॥ ಪರ್ವತಾಕಾರೈಃ -

---

ಈಗ ನಾನು ಮಹೇಂದ್ರನನ್ನಾದರೂ ಹಿಡಿದು ತಂದು ಮರ್ದಿಸಿ ಬಿಡುವೆನು. ಅಗ್ನಿಹೋತ್ರನನ್ನಾದರೂ ಹೆಸರಿಲ್ಲದಂತೆ ತಣ್ಣಗೆ ಮಾಡುವೆನು. ನನಗೆ ಗುರುವಾದ ರಾವಣಾಸುರನು ಉಚಿತವಾದ ಕಾರಣವಿಲ್ಲದೆ ನನ್ನನ್ನೀರೀತಿ ಎಚ್ಚರಗೊಳಿಸುತ್ತಿರಲಿಲ್ಲವೆಂದು ತಿಳಿಯುತ್ತೇನೆ. ಆದುದರಿಂದ ನೀವು ನನ್ನನ್ನು ಎಬ್ಬಿಸಿದುದರ ಕಾರಣವನ್ನು ತಿಳಿಸಿರಿ" ಎಂದು ಕೇಳಿದನು. ॥ ೬೬–೨೧ ॥ ಮಹಾ ಬಲಾಢ್ಯನಾದ ಕುಂಭಕರ್ಣನೀರೀತಿ ನುಡಿಯಲು ರಾವಣನ ಮಂತ್ರಿಯಾದ ಯೂಪಾಕ್ಷನೆಂಬ ರಾಕ್ಷಸೋತ್ತಮನು ಕೈಗಳನ್ನು ಜೋಡಿಸಿಕೊಂಡು, "ರಾಕ್ಷಸ ಪುಂಗವನಾದ ಕುಂಭಕರ್ಣನೇ! ಈಗ ನಮಗೆ ದೈವಸಂಬಂಧವಾದ ಭಯವೇನೂ ಬಂದಿರುವುದಿಲ್ಲವು. ಆದರೆ ಮಾನವರಿಂದ ನಮಗೆ ಯುದ್ಧಸಂಬಂಧವಾದ ಮಹಾ ಭಯವೇ ಒದಗಿದೆ. ಈಗ ಸಂಭವಿಸಿರುವ ಈ ಮಾನವಸಂಬಂಧವಾದ ಭಯವು ದೈತ್ಯರಿಂದಾಗಲಿ, ದಾನವರಿಂದಾಗಲಿ ಈವರೆಗೂ ಉಂಟಾಗಿರಲಿಲ್ಲವು. ಎಲೈ ರಾಕ್ಷಸೋತ್ತಮನೇ! ಈಗ

ವಾನರೈಃ ಪರ್ವತಾಕಾರೈರ್ಲಂಕೇಯಂ ಪರಿವಾರಿತಾ । ಸೀತಾಹರಣಸಂತಪ್ತಾದ್ರಾ
ಮಾನ್ನಸ್ತುಮುಲಂ ಭಯಂ ॥ ೭೫ ॥ ಏಕೇನ ವಾನರೇಣೇಯಂ ಪೂರ್ವಂ ದಗ್ಧಾ
ಮಹಾಪುರೀ । ಕುಮಾರೋ ನಿಹತಶ್ಚಾಕ್ಷಸ್ಸಾನುಯಾತ್ರಸ್ಸಕುಂಜರಃ ॥೭೬॥ ಸ್ವಯಂ
ರಕ್ಷೋಧಿಪಶ್ಚಾಪಿ ಪೌಲಸ್ತ್ಯೋ ದೇವಕಂಟಕಃ । ಮೃತೇತಿ ಸಂಯುಗೇ ಮುಕ್ತೋ
ರಾಮೇಣಾಽದಿತ್ಯತೇಜಸಾ ॥ ೭೭ ॥ ಯನ್ನದೇವೈಃ ಕೃತೋ ರಾಜಾ ನಾಪಿ ದೈತ್ಯೈರ್ನ
ದಾನವೈಃ । ಕೃತಸ್ಸ ಇಹ ರಾಮೇಣ ವಿಮುಕ್ತಃ ಪ್ರಾಣಸಂಶಯಾತ್" ॥ ೭೮ ॥
ಸಯೂಪಾಕ್ಷವಚಃ ಶ್ರುತ್ವಾ ಭ್ರಾತುರ್ಯುಧಿ ಪರಾಜಯಂ । ಕುಂಭಕರ್ಣೋ ವಿವೃ

ಪರ್ವತಗಳಂತೆ ಬೃಹದಾಕಾರಗಳುಳ್ಳ, ವಾನರೈಃ - ಕಪಿಗಳಿಂದ, ಇಯಂಲಂಕಾಂ - ಈ ಲಂಕಾಪಟ್ಟಣವು, ಪರಿವೃತಾ - ಪರಿವೃತವಾಗಿದೆ, ಸೀತಾ....ತ್ - ಸೀತಾಪಹಾರದಿಂದ ಸಂತಪಿಸುವವನಾದ, ರಾಮಾತ್ - ರಾಮನಿಂದ, ನಃ - ನಮಗೆ, ತುಮುಲಂ - ಸಂಕುಲವಾದ, ಭಯಂ - ಭೀತಿಯು. ॥೭೫॥ ಪೂರ್ವಂ - ಮೊದಲು, ಇಯಂಮಹಾಪುರೀ - ಈ ಮಹಾ ಪಟ್ಟಣವು, ಏಕೇನವಾನರೇಣ - ಒಬ್ಬ ವಾನರನಿಂದ, ದಗ್ಧಾ - ದಹಿಸಲ್ಪಟ್ಟಿತು, ಸಾನುಯಾತ್ರಃ - ಹಿಂಬಲದಿಂದ ಕೂಡಿದ, ಸಕುಂಜರಃ - ಆನೆಗಳಿಂದೊಡಗೂಡಿದ, ಅಕ್ಷಃಕುಮಾರಶ್ಚ - ಅಕ್ಷಕುಮಾರನೂ ಸಹ, ನಿಹತಃ - ಹೊಡೆಯಲ್ಪಟ್ಟನು. ॥ ೭೬ ॥ ದೇವಕಂಟಕಃ - ದೇವತೆಗಳಿಗೆ ಕಂಟಕನಾದ, ಪೌಲಸ್ತ್ಯಃ - ಪುಲಸ್ತ್ಯವಂಶೋತ್ಪನ್ನನಾದ ರಕ್ಷೋಧಿಪಶ್ಚಾಪಿ - ರಾಕ್ಷಸರಾಜನಾದ ರಾವಣನೂ ಕೂಡ, ಸ್ವಯಂ - ತಾನು, ಆದಿತ್ಯತೇಜಸಾ - ಸೂರ್ಯನ ತೇಜಸ್ಸುಳ್ಳ, ರಾಮೇಣ - ಶ್ರೀರಾಮನಿಂದ, ಸಂಯುಗೇ - ಕಾಳಗದಲ್ಲಿ, ಮೃತೇತಿ - ಮೃತನಾದವನೇ ಎಂದು, ಮುಕ್ತಃ - ಬಿಡಲ್ಪಟ್ಟನು. ॥ ೭೭ ॥ ಯತ್ರಾಜಾ - ಯಾವ ರಾಕ್ಷಸರಾಜನು, ದೇವೈಃ - ದೇವತೆಗಳಿಂದ, ಪ್ರಾಣಸಂಶಯಾತ್ - ಪ್ರಾಣಸಂಶಯವನ್ನು ಹೊಂದಿ, ವಿಮುಕ್ತಃ - ಬಿಡಲ್ಪಟ್ಟವನು, ನಕೃತಃ - ಮಾಡಲ್ಪಡಲಿಲ್ಲವೋ, ದೈತ್ಯೈರಪಿ - ದೈತ್ಯರಿಂದಲೂ, ನಕೃತಂ - ಮಾಡಲ್ಪಡಲಿಲ್ಲವೋ, ದಾನವೈಃ - ರಾಕ್ಷಸರಿಂದಲೂ, ನ - ಇಲ್ಲವೋ, ಸಃ - ಆ ರಾವಣನು, ರಾಮೇಣ - ಶ್ರೀರಾಮನಿಂದ, ಇಹ - ಈಗ, ಪ್ರಾಣಸಂಶಯಾತ್ - ಪ್ರಾಣಸಂಶಯವನ್ನು ಹೊಂದಿ, ವಿಮುಕ್ತಃ - ಬಿಡಲ್ಪಟ್ಟವನು, ಕೃತಃ - ಮಾಡಲ್ಪಟ್ಟನು. ॥ ೭೮ ॥ ಸಕುಂಭಕರ್ಣಃ - ಆ ಕುಂಭಕರ್ಣನು, ಯುಧಿ - ಕಾಳಗದಲ್ಲಿ, ಭ್ರಾತುಃ - ತನ್ನ ಅಣ್ಣನ, ಪರಾಜಯಂ - ಪರಾಜಯ ರೂಪ

ಮಹತ್ತರವಾದ ಭಯವೇ ಒದಗಿ ಬಂದಿದೆ. ಪರ್ವತಾಕಾರರಾದ ವಾನರರಿಂದ ಈ ನಮ್ಮ ಲಂಕಾನಗರವೆಲ್ಲವೂ ವ್ಯಾಪಿಸಿ ಹೋಗಿದೆ. ನಮ್ಮ ದೊರೆಯಾದ ರಾವಣಾಸುರನು ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಅಪಹರಿಸಿಕೊಂಡು ಬಂದನಷ್ಟೆ! ಆದರಿಂದ ಶ್ರೀರಾಮನು ಮಹಾ ಕೋಪೋದ್ದೀಪಿತನಾಗಿ ಯುದ್ಧಸನ್ನದ್ಧನಾಗಿ ಬಂದಿರುವನು. ಅದರಿಂದ ನಮಗೆ ಬಹಳ ಭಯವುಂಟಾಗಿದೆ. ಈ ಮೊದಲೇ ಒಬ್ಬ ವಾನರನು ನಮ್ಮ ಲಂಕೆಗೆ ಬಂದು ಪಟ್ಟಣವನ್ನೆಲ್ಲ ಸುಟ್ಟು ಹೋದನು. ಅದೇ ವಾನರನೇ ನಮ್ಮ ಯೂಪಾಕ್ಷ ಕುಮಾರನನ್ನೂ ಅವನ ಪರಿವಾರದವರನ್ನೂ, ಅವನ ಆನೆಗಳನ್ನೂ ಬಡಿದು ಕೆಡವಿದನು. ಈಗಲಾದರೋ ದೇವಕಂಟಕನೂ, ರಾಕ್ಷಸಾಧಿಪತಿಯೂ ಆದ ರಾವಣಾಸುರನು ಸೂರ್ಯಸಮಾನವಾದ ತೇಜಸ್ಸುಳ್ಳ ಆ ರಾಮನೊಡನೆ ಯುದ್ಧಮಾಡಿ, " ನೀನು ಮೃತನೇ, ಹೋಗು ಬಿಟ್ಟಿದ್ದೇನೆ " ಎಂದು ಆತನಿಂದ ಬಿಡಲ್ಪಟ್ಟು ಹಿಂತಿರುಗಿದನು. ಇಂತಹ ಯುದ್ಧವು ನಮ್ಮ ಒಡೆಯನಾದ

ತ್ತಾಕ್ಷೋ ಯೂಪಾಕ್ಷಮಿದಮಬ್ರವೀತ್ ॥ ೭೯ ॥ " ಸರ್ವಮದ್ಯೈವ ಯೂಪಾಕ್ಷ! ಹರಿಸೈನ್ಯಂ ಸಲಕ್ಷ್ಮಣಂ । ರಾಘವಂಚ ರಣೇ ಹತ್ವಾ ಪಶ್ಚಾದ್ದ್ರಕ್ಷ್ಯಾಮಿ ರಾವಣಂ ॥ ೮೦ ॥ ರಾಕ್ಷಸಾಂಸ್ತರ್ಪಯಿಷ್ಯಾಮಿ ಹರೀಣಾಂ ಮಾಂಸಶೋಣಿತೈಃ । ರಾಮಲಕ್ಷ್ಮಣಯೋಶ್ಚಾಪಿ ಸ್ವಯಂ ಪಾಸ್ಯಾಮಿ ಶೋಣಿತಂ " ॥ ೮೧ ॥ ತತ್ತಸ್ಯ ವಾಕ್ಯಂ ಬ್ರುವತೋ ನಿಶಮ್ಯ ಸಗರ್ವಿತಂ ರೋಷವಿವೃದ್ಧದೋಷಂ । ಮಹೋದರೋ ನೈರ್ಋತಯೋಧಮುಖ್ಯಃ ಕೃತಾಂಜಲಿರ್ವಾಕ್ಯಮಿದಂ ಬಭಾಷೇ ॥ ೮೨ ॥ " ರಾವಣಸ್ಯ ವಚಃಶ್ರುತ್ವಾ ಗುಣದೋಷೌ ವಿಮೃಶ್ಯಚ । ಪಶ್ಚಾದಪಿ ಮಹಾಬಾಹೋ! ಶತ್ರೂನ್

ವಾಗಿರುವ, ಯೂಪಾಕ್ಷವಚಃ - ಯೂಪಾಕ್ಷನ ಮಾತನ್ನು, ಶ್ರುತ್ವಾ - ಕೇಳಿ, ವಿವೃತ್ತಾಕ್ಷಃ - ತಿರುಗುತ್ತಿರುವ ಕಣ್ಣುಗಳುಳ್ಳವನಾಗಿ, ಯೂಪಾಕ್ಷಂ - ಯೂಪಾಕ್ಷನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೭೯ ॥ ಹೇ ಯೂಪಾಕ್ಷ - ಎಲೈ ಯೂಪಾಕ್ಷನೇ, ಅದ್ಯೈವ - ಈಗಲೇ, ಸರ್ವಂ - ಸಮಸ್ತವಾದ, ಹರಿಸೈನ್ಯಂ - ವಾನರಸೈನ್ಯವನ್ನು, ಸಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ರಾಘವಂಚ - ಶ್ರೀರಾಮನನ್ನೂ ಸಹ, ರಣೇ - ಯುದ್ಧರಂಗದಲ್ಲಿ, ಹತ್ವಾ - ಕೊಂದು, ಪಶ್ಚಾತ್ - ಬಳಿಕ, ರಾವಣಂ - ರಾವಣನನ್ನು, ದ್ರಕ್ಷ್ಯಾಮಿ - ನೋಡುವೆನು. ॥ ೮೦ ॥ ಹರೀಣಾಂ - ವಾನರರ, ರಾಮ....ಪಿ - ರಾಮಲಕ್ಷ್ಮಣರ, ಮಾಂಸಶೋಣಿತೈಃ - ಮಾಂಸದಿಂದಲೂ, ರಕ್ತದಿಂದಲೂ, ರಾಕ್ಷಸಾನ್ - ರಕ್ಕಸರನ್ನು, ತರ್ಪಯಿಷ್ಯಾಮಿ - ತೃಪ್ತಿಗೊಳಿಸುವೆನು, ಸ್ವಯಮಪಿ - ನಾನೂ ಕೂಡ, ರುಧಿರಂ - ರಕ್ತವನ್ನು, ಪಾಸ್ಯಾಮಿ - ಕುಡಿವೆನು. ॥ ೮೧ ॥ ಬ್ರುವತಃ - ಹೇಳುತ್ತಿರುವ, ತಸ್ಯ - ಆ ಕುಂಭಕರ್ಣನ, ತದ್ವಾಕ್ಯಂ - ಆ ಮಾತನ್ನು, ನಿಶಮ್ಯ - ಕೇಳಿ, ನೈರ್ಋ....ಖ್ಯಃ - ರಾಕ್ಷಸಭಟರಲ್ಲಿ ಮುಖ್ಯನಾದ, ಮಹೋದರಃ - ಮಹೋದರನು, ಸಗರ್ವಿತಂ - ಗರ್ವಯುಕ್ತನಾದ, ರೋಷ....ಷಂ - ಕೋಪದಿಂದ ವೃದ್ಧಿಹೊಂದಿದ ದೋಷವುಳ್ಳ ಕುಂಭಕರ್ಣನನ್ನು ಕುರಿತು, ಕೃತಾಂಜಲಿಃ - ಅಂಜಲಿಬದ್ಧನಾಗಿ, ಇದಂವಾಕ್ಯಂ - ಈ ಮಾತನ್ನು, ಬಭಾಷೇ - ಹೇಳಿದನು. ॥ ೮೨ ॥ ಹೇ ಮಹಾಬಾಹೋ - ಎಲೈ ಮಹಾ ಭುಜಬಲಪರಾಕ್ರಮಿಯೇ, ರಾವಣಸ್ಯ - ರಾವಣನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಗುಣದೋಷೌ - ಗುಣದೋಷಗಳನ್ನು, ವಿಮೃಶ್ಯಚ -

---

ರಾವಣಾಸುರನಿಗೆ, ದೈತ್ಯದಾನವರೊಡನೆ ಕೂಡ ಯಾವಾಗಲೂ ಸಂಭವಿಸಿರಲಿಲ್ಲ" ಎಂದು ಹೇಳಿದನು. ॥ ೭೨–೭೮ ॥ ಈ ಮಾತುಗಳನ್ನು ಕೇಳುತ್ತಲೇ ಆ ಕುಂಭಕರ್ಣನು ತನ್ನ ಅಣ್ಣನಾದ ರಾವಣನಿಗೆ ಯುದ್ಧದಲ್ಲಿ ಅಪಜಯವಾಯಿತೆಂದು ತಿಳಿದು ಕಣ್ಣಾಲಿಗಳನ್ನು ತಿರುಗಿಸುತ್ತ ಆ ಯೂಪಾಕ್ಷನನ್ನು ಕುರಿತು, "ಎಲೈ ಯೂಪಾಕ್ಷನೇ! ನಾನು ಈಗಲೇ ಆ ವಾನರಸೈನ್ಯವನ್ನೂ, ರಾಮಲಕ್ಷ್ಮಣರನ್ನೂ ಸಂಹರಿಸಿಬಿಡುವೆನು. ಆಮೇಲೆ ನನ್ನ ಗುರುವಾದ ರಾವಣನನ್ನು ನೋಡುತ್ತೇನೆ. ಆ ವಾನರರ ರಕ್ತದಿಂದ ರಾಕ್ಷಸರೆಲ್ಲರನ್ನೂ ತೃಪ್ತಿಗೊಳಿಸುವೆನು. ನಾನಾದರೋ ಆ ರಾಮಲಕ್ಷ್ಮಣರ ರಕ್ತವನ್ನೇ ಕುಡಿದು ತೃಪ್ತನಾಗುತ್ತೇನೆ" ಎಂದನು. ಈ ರೀತಿ ನುಡಿಯುತ್ತ ಮಹಾ ಕುಪಿತನಾಗಿ ಗರ್ವಿಸಿದ ಆ ಕುಂಭಕರ್ಣನ ಮಾತುಗಳನ್ನು ಕೇಳಿ ರಾಕ್ಷಸಶ್ರೇಷ್ಠನಾದ ಮಹೋದರನೆಂಬವನು ಬದ್ಧಾಂಜಲಿಪುಟನಾಗಿ "ರಾಕ್ಷಸೋತ್ತಮಾ! ಮೊದಲು ನೀನು ಯುದ್ಧಕ್ಕೆ ಹೋಗುವುದು ಯುಕ್ತವಲ್ಲ. ಒಡೆಯನಾದ ರಾವಣಾಸುರನನ್ನು ನೋಡಿ, ಅವನು ಹೇಳುವುದೆಲ್ಲವನ್ನೂ ಕೇಳಿ, ಗುಣದೋಷಗಳನ್ನು ವಿಚಾರ

ಯುಧಿ ವಿಜೇಷ್ಯಸಿ ॥ ೮೩ ॥ ಮಹೋದರವಚಃ ಶ್ರುತ್ವಾ ರಾಕ್ಷಸೈಃ ಪರಿವಾರಿತಃ । ಕುಂಭಕರ್ಣೋ ಮಹಾತೇಜಾಸ್ಸಂಪ್ರತಸ್ಥೇ ಮಹಾಬಲಃ ॥ ೮೪ ॥ ತಂ ಸಮುತ್ಥಾಪ್ಯ ಭೀಮಾಕ್ಷಂ ಭೀಮರೂಪಪರಾಕ್ರಮಂ । ರಾಕ್ಷಸಾಸ್ತ್ವರಿತಾ ಜಗ್ಮುರ್ದಶಗ್ರೀವನಿವೇಶನಂ ॥ ೮೫ ॥ ತತೋ ಗತ್ವಾ ದಶಗ್ರೀವಮಾಸೀನಂ ಪರಮಾಸನೇ । ಊಚುರ್ಬದ್ಧಾಂಜಲಿಪುಟಾಸ್ಸರ್ವಏವ ನಿಶಾಚರಾಃ ॥೮೬॥ “ ಪ್ರಬುದ್ಧಃ ಕುಂಭಕರ್ಣೋಽಯಂ ಭ್ರಾತಾ ತೇ ರಾಕ್ಷಸರ್ಷಭ! । ಕಥಂ ತತ್ರೈವ ನಿರ್ಯಾತು ದ್ರಕ್ಷ್ಯಸ್ಯೇನಮಿಹಾಗತಂ” ॥೮೭॥ ರಾವಣಸ್ತ್ವಬ್ರವೀದ್ಧೃಷ್ಟೋ ರಾಕ್ಷಸಾಂಸ್ತಾನುಪಸ್ಥಿತಾನ್ । “ದ್ರಷ್ಟು

ವಿಚಾರವನ್ನೂ ಮಾಡಿ, ಪಶ್ಚಾತ್ - ಬಳಿಕ, ಯುಧಿ - ಯುದ್ಧದಲ್ಲಿ, ಶತ್ರೂನಪಿ - ಶತ್ರುಗಳನ್ನೂ ಕೂಡ, ವಿಜೇಷ್ಯಸಿ - ಜಯಿಸುವೆ. ॥ ೮೩ ॥ ಮಹೋದರವಚಃ - ಮಹೋದರನ ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷಸೈಃ - ರಕ್ಕಸರಿಂದ, ಪರಿವಾರಿತಃ - ಸುತ್ತುವರೆಯಲ್ಪಟ್ಟವನಾಗಿ, ಮಹಾಬಲಃ - ಬಹು ಬಲವಂತನಾದ, ಮಹಾತೇಜಾಃ - ಮಹಾ ತೇಜಸ್ಸಾದ, ಕುಂಭಕರ್ಣಃ - ಕುಂಭಕರ್ಣನು, ಸಂಪ್ರತಸ್ಥೇ - ತೆರಳಲು ಸಿದ್ಧನಾದನು. ॥ ೮೪ ॥ ರಾಕ್ಷಸಾಃ - ರಾಕ್ಷಸರು, ಭೀಮಾಕ್ಷಂ - ಭಯಂಕರವಾದ ಕಣ್ಣುಗಳುಳ್ಳ, ಭೀಮ....ಮಂ - ಭಯಂಕರವಾದ ರೂಪವೂ, ಪರಾಕ್ರಮವೂ ಉಳ್ಳ, ತಂ - ಆ ಕುಂಭಕರ್ಣನನ್ನು, ಸಮುತ್ಥಾಪ್ಯ - ಎಬ್ಬಿಸಿ, ದಶ....ನಂ - ರಾವಣನ ಮನೆಯನ್ನು ಕುರಿತು, ತ್ವರಿತಾಃ - ತ್ವರೆಯುಳ್ಳವರಾಗಿ, ಜಗ್ಮುಃ - ತೆರಳಿದರು. ॥ ೮೫ ॥ ತತಃ - ಆನಂತರದಲ್ಲಿ, ಸರ್ವೇ - ಸಮಸ್ತರಾದ, ನಿಶಾಚರಾಃ - ರಾಕ್ಷಸರು, ಗತ್ವಾ - ಹೋಗಿ, ಪರಮಾಸನೇ - ಉತ್ತಮ ಪೀಠದಲ್ಲಿ, ಆಸೀನಂ - ಕುಳಿತಿರುವ, ದಶಗ್ರೀವಂ - ದಶಕಂಠನನ್ನು ಕುರಿತು, ಬದ್ಧಾಂಜಲಿಪುಟಾಏವ - ಬದ್ಧವಾದ ಅಂಜಲಿಪುಟವುಳ್ಳವರಾಗಿಯೇ, ಊಚುಃ - ಹೇಳಿದರು. ॥ ೮೬ ॥ ಹೇ ರಾಕ್ಷಸರ್ಷಭ - ಎಲೈ ರಾಕ್ಷಸಶ್ರೇಷ್ಠನೇ, ತೇ - ನಿನ್ನ, ಭ್ರಾತಾ - ಒಡಹುಟ್ಟಿದ, ಅಯಂಕುಂಭಕರ್ಣಃ-ಈ ಕುಂಭಕರ್ಣನು, ಪ್ರಬುದ್ಧಃ-ಎಚ್ಚರಗೊಂಡನು, ತತ್ರೈವ-ಅಲ್ಲಿಯೇ, ನಿರ್ಯಾತುವಾ - ಯುದ್ಧಕ್ಕೆ ಹೋಗಲೇ, ಇಹ - ಇಲ್ಲಿಗೆ, ಆಗತಂ - ಬಂದವನನ್ನಾಗಿ, ಏನಂ - ಈ ಕುಂಭಕರ್ಣನನ್ನು, ದ್ರಕ್ಷ್ಯಸಿವಾ - ನೋಡುತ್ತೀಯೋ, ಕಥಂ - ಹೇಗೆ. ॥ ೮೭ ॥ ರಾವಣಸ್ತು - ರಾವಣನಾದರೆ, ಹೃಷ್ಟಃ - ಸಂತೋಷಗೊಂಡವನಾಗಿ, ಉಪಸ್ಥಿತಾನ್ - ನಿಂತಿರುವ, ತಾನ್‌ರಾಕ್ಷಸಾನ್ - ಆ ರಕ್ಕಸರನ್ನು

ಮಾಡಿ ಆಮೇಲೆ ಯುದ್ಧಕ್ಕೆ ಹೊರಟು ಶತ್ರುಗಳನ್ನು ನಿಗ್ರಹಿಸು ” ಎಂದು ಹೇಳಿದನು. ಮಹೋದರನ ಮಾತುಗಳನ್ನು ಕೇಳಿ ಮಹಾ ತೇಜಸ್ವಿಯೂ, ಮಹಾ ಬಲನೂ ಆದ ಆ ಕುಂಭಕರ್ಣನು ಅಲ್ಲಿದ್ದ ರಾಕ್ಷಸರೆಲ್ಲರೊಡನೆಯೂ ರಾವಣಾಸುರನನ್ನು ಕಾಣಲು ಹೊರಡಲನುವಾದನು. ॥೭೯–೮೫॥ ಹೀಗೆ ಮಹಾ ಭಯಂಕರ ಪರಾಕ್ರಮವುಳ್ಳವನೂ, ಮಹೋಗ್ರವಾದ ನೇತ್ರಗಳುಳ್ಳವನೂ ಆದ ಆ ಕುಂಭಕರ್ಣನನ್ನು ಹೊರಡಿಸಿ ಆ ಬಳಿಕ ರಾವಣಾಸುರನಿಗೆ ಆ ಸಮಾಚಾರವನ್ನು ತಿಳಿಸಲು ರಾಕ್ಷಸರೆಲ್ಲರೂ ಬಹು ಶೀಘ್ರವಾಗಿ ತೆರಳಿ ಶ್ರೇಷ್ಠವಾದ ಸಿಂಹಾಸನದಮೇಲೆ ಸುಖಾಸನಾಸೀನನಾಗಿದ್ದ ಆ ರಾವಣಾಸುರನನ್ನು ಕಂಡು ಬದ್ಧಾಂಜಲಿಪುಟರಾಗಿ ನಿಂತು, “ ರಾಕ್ಷಸರಾಜೋತ್ತಮನಾದ ರಾವಣಾಸುರನೇ! ನಿನ್ನ ತಮ್ಮನಾದ ಕುಂಭಕರ್ಣನು ನಿದ್ರೆಯಿಂದೆಚ್ಚೆತ್ತನು. ಆತನು ಹಾಗೆಯೇ ಯುದ್ಧಕ್ಕೆ ಹೊರಡಲೇ ಅಥವಾ ಆತನನ್ನಿಲ್ಲಿ ನೋಡುವೆಯೋ ಎಂಬುದನ್ನು ತಿಳಿಸಬೇಕು ” ಎಂದರು. ಆಗ ರಾವಣನು

ನೇನಮಿಹೇಚ್ಛಾಮಿ ಯಥಾನ್ಯಾಯಂ ಚ ಪೂಜ್ಯತಾಂ" ‖೮೮‖ ತಥೇತ್ಯುಕ್ತ್ವಾ ತು ತೇ ಸರ್ವೇ ಪುನರಾಗಮ್ಯ ರಾಕ್ಷಸಾಃ । ಕುಂಭಕರ್ಣಮಿದಂ ವಾಕ್ಯಮೂಚೂ ರಾವಣಚೋದಿತಾಃ ‖ ೮೯ ‖ "ದ್ರಷ್ಟುಂ ತ್ವಾಂ ಕಾಂಕ್ಷತೇ ರಾಜಾ ಸರ್ವರಾಕ್ಷಸಪುಂಗವಃ । ಗಮನೇ ಕ್ರಿಯತಾಂ ಬುದ್ಧಿರ್ಭ್ರಾತರಂ ಸಂಪ್ರಹರ್ಷಯ" ‖೯೦‖ ಕುಂಭಕರ್ಣಸ್ತು ದುರ್ಧರ್ಷೋ ಭ್ರಾತುರಾಜ್ಞಾಯ ಶಾಸನಂ । ತಥೇತ್ಯುಕ್ತ್ವಾ ಮಹಾಬಾಹುಃ ಶಯನಾದುತ್ಪಪಾತಹ ‖ ೯೧ ‖ ಪ್ರಕ್ಷಾಳ್ಯ ವದನಂ ಹೃಷ್ಟಸ್ಸ್ನಾತಃ ಪರಮಭೂಷಿತಃ । ಪಿಪಾಸುಸ್ತ್ವರಯಾಮಾಸ ಪಾನಂ ಬಲಸಮೀರಣಂ ‖ ೯೨ ‖ ತತಸ್ತೇ ತ್ವರಿತಾಸ್ತಸ್ಯ

ಕುರಿತು, ಏನಂ - ಈ ಕುಂಭಕರ್ಣನನ್ನು ಕುರಿತು, ಇಹ - ಇಲ್ಲಿಯೇ, ದ್ರಷ್ಟುಂ - ನೋಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಯಥಾನ್ಯಾಯಂ-ಯಥಾಯೋಗ್ಯವಾಗಿ, ಏಷಃ - ಈ ಕುಂಭಕರ್ಣನು; ಪೂಜ್ಯತಾಂ - ಪೂಜಿಸಲ್ಪಡಲಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ‖ ೮೮ ‖ ತಥೇತಿ - ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಸರ್ವೇ - ಸಮಸ್ತರಾದ, ರಾವ....ತಾಃ - ರಾವಣಾಸುರನಿಂದ ಪ್ರೇರಿತರಾದ, ತೇ ರಾಕ್ಷಸಾಃ - ಆ ರಕ್ಕಸರು, ಪುನಃ - ಮತ್ತು, ಆಗಮ್ಯ - ಬಂದು, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಇದಂವಾಕ್ಯಂ - ಈ ಮಾತನ್ನು, ಊಚುಃ - ಹೇಳಿದರು. ‖ ೮೯ ‖ ಸರ್ವ....ವಃ - ಸಮಸ್ತ ರಾಕ್ಷಸರಿಗೆ ಅಧಿಪತಿಯಾದ, ರಾಜಾ - ಅರಸು, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡಲು, ಕಾಂಕ್ಷತೇ - ಕೋರುತ್ತಾನೆ, ಗಮನೇ - ಗಮನದಲ್ಲಿ, ಬುದ್ಧಿಃ - ಬುದ್ಧಿಯು, ಕ್ರಿಯತಾಂ - ಮಾಡಲ್ಪಡಲಿ, ಭ್ರಾತರಂ - ಅಣ್ಣನನ್ನು, ಸಂಪ್ರಹರ್ಷಯ - ಸಂತೋಷಗೊಳಿಸು. ‖ ೯೦ ‖ ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ, ಮಹಾಬಾಹುಃ - ಮಹಾ ಭುಜಬಲಶಾಲಿಯಾದ, ಕುಂಭಕರ್ಣಸ್ತು - ಕುಂಭಕರ್ಣನಾದರೆ, ಭ್ರಾತುಃ - ಅಣ್ಣನ, ಶಾಸನಂ - ಆಜ್ಞೆಯನ್ನು, ಆಜ್ಞಾಯ - ತೆಗೆದುಕೊಂಡು, ತಥೇತಿ - ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಶಯನಾತ್ - ಹಾಸಿಗೆಯಿಂದ, ಉತ್ಪಪಾತಹ - ಎದ್ದನು. ‖ ೯೧ ‖ ಹೃಷ್ಟಃ - ಸಂತೋಷಗೊಂಡವನಾಗಿ, ವದನಂ - ಮುಖವನ್ನು, ಪಕ್ಷಾಳ್ಯ - ತೊಳೆದುಕೊಂಡು, ಸ್ನಾತಃ - ಸ್ನಾನಮಾಡಿ, ಪರಮಭೂಷಿತಃ - ಉತ್ತಮವಾದ ಒಡವೆಗಳಿಂದ ಅಲಂಕೃತನಾಗಿ, ಪಿಪಾಸುಃ - ನೀರಡಿಕೆಯುಳ್ಳವನಾಗಿ, ಬಲಸಮೀರಣಂ - ಬಲವನ್ನು ಹೆಚ್ಚಿಸುವ, ಪಾನಂ - ಪಾನವನ್ನು, ತ್ವರಯಾಮಾಸ - ತ್ವರೆಗೊಳಿಸಿದನು. ‖ ೯೨ ‖

ಪರಮ ಸಂತುಷ್ಟಾಂತರಂಗನಾಗಿ ಅವರನ್ನು ಕುರಿತು, "ಎಲೈ ರಾಕ್ಷಸೋತ್ತಮರಿರಾ! ನಾನು ಆತನನ್ನು ಇಲ್ಲಿಯೇ ಕಾಣಲಪೇಕ್ಷಿಸುತ್ತೇನೆ. ಯಥಾನ್ಯಾಯವಾಗಿ ನೀವು ಆತನನ್ನು ಗೌರವಿಸಿ ಕರೆದು ತನ್ನಿರಿ" ಎಂದು ನುಡಿದನು. ಆ ಕೂಡಲೇ ಆ ರಾಕ್ಷಸರೆಲ್ಲರೂ, 'ಅಪ್ಪಣೆ' ಎಂದು ಹೊರಟು ಕುಂಭಕರ್ಣನನ್ನು ಕಂಡು, "ಎಲೈ ರಾಕ್ಷಸೋತ್ತಮನೇ! ರಾಕ್ಷಸನಾಥನಾದ ರಾವಣಾಸುರನು ನಿನ್ನನ್ನು ಕಾಣಲಪೇಕ್ಷಿಸುವನು. ಆದುದರಿಂದ ನೀನಾತನನ್ನು ನೋಡಲು ಉಚಿತವಾದ ಪ್ರಯತ್ನವನ್ನು ಮಾಡು" ಎಂದರು. ‖ ೮೭–೯೦ ‖ ಆಗ ಕುಂಭಕರ್ಣನು ತನ್ನ ಅಗ್ರಜನಾದ ರಾವಣನ ಅಪ್ಪಣೆಯನ್ನು ಕೇಳಿ ತಿಳಿದುಕೊಂಡವನಾಗಿ ಶಯ್ಯೆಯಿಂದ ಶೀಘ್ರವಾಗಿ ಮೇಲಕ್ಕೆದ್ದನು. ಆಮೇಲೆ ಪರಮ ಸಂತುಷ್ಟನಾಗಿ ಮುಖವನ್ನು ತೊಳೆದುಕೊಂಡು ಸ್ನಾನಮಾಡಿ ಚೆನ್ನಾಗಿ ಅಲಂಕರಿಸಿಕೊಂಡು ಬಾಯಾರಿದವನಾಗಿ ಬಲವನ್ನು ಹೆಚ್ಚಿಸುವ ಮದ್ಯವನ್ನು ಕುಡಿಯಲಪೇಕ್ಷಿಸಿದನು. ಆಗ ಅಲ್ಲಿದ್ದ ರಾಕ್ಷಸರು ವಿವಿಧ

ರಾಕ್ಷಸಾ ರಾವಣಾಜ್ಞಯಾ । ಮದ್ಯಕುಂಭಾಂಶ್ಚ ವಿವಿಧಾನ್ ಕ್ಷಿಪ್ರಮೇವೋಪಹಾರಯನ್ ॥ ೯೩ ॥ ಪೀತ್ವಾ ಘಟಸಹಸ್ರೇ ದ್ವೇ ಗಮನಾಯೋಪಚಕ್ರಮೇ । ಈಷತ್ಸಮುತ್ಕಟೋ ಮತ್ತಸ್ತೇಜೋಬಲಸಮನ್ವಿತಃ । ಕುಂಭಕರ್ಣೋ ಬಭೌ ಹೃಷ್ಟಃ ಕಾಲಾಂತಕಯಮೋಪಮಃ ॥ ೯೪ ॥ ಭ್ರಾತುಸ್ಸಭವನಂ ಗಚ್ಛನ್ ರಕ್ಷೋಗಣಸಮನ್ವಿತಃ । ಕುಂಭಕರ್ಣಃ ಪದನ್ಯಾಸೈರಕಂಪಯತ ಮೇದಿನೀಂ ॥ ೯೫ ॥ ಸರಾಜಮಾರ್ಗಂ ವಪುಷಾ ಪ್ರಕಾಶಯನ್ ಸಹಸ್ರರಶ್ಮಿರ್ಧರಣೀಮಿವಾಂಶುಭಿಃ । ಜಗಾಮ ತತ್ರಾಂಜಲಿಮಾಲಯಾವೃತಃ ಶತಕ್ರತುರ್ಗೇಹಮಿವ ಸ್ವಯಂಭುವಃ ॥ ೯೬ ॥ ತಂ

ತತಃ - ಬಳಿಕ, ತೇ ರಾಕ್ಷಸಾಃ - ಆ ರಕ್ಕಸರು, ರಾವಣಾಜ್ಞಯಾ - ರಾವಣನ ಆಜ್ಞೆಯಿಂದ, ತ್ವರಿತಾಃ - ತ್ವರೆಗೊಂಡವರಾಗಿ, ವಿವಿಧಾನ್ - ನಾನಾಬಗೆಗಳಾದ, ಮದ್ಯಕುಂಭಾಂಶ್ಚ - ಮದ್ಯಕುಂಭಗಳನ್ನೂ, ಕ್ಷಿಪ್ರಮೇವ - ಜಾಗ್ರತೆಯಾಗಿಯೇ, ತಸ್ಯ - ಆ ಕುಂಭಕರ್ಣನಿಗೆ, ಉಪಹಾರಯನ್ - ಕಾಣಿಕೆಯಾಗಿ ಸಮರ್ಪಿಸಿದರು. ॥ ೯೩ ॥ ದ್ವೇಘಟಸಹಸ್ರೇ - ಎರಡುಸಾವಿರ ಬಿಂದಿಗೆಗಳ ಮದ್ಯಗಳನ್ನು, ಪೀತ್ವಾ - ಕುಡಿದು, ಗಮನಾಯ - ಹೊರಡುವುದಕ್ಕೆ, ಉಪಚಕ್ರಮೇ - ಉಪಕ್ರಮಿಸಿದನು, ಈಷತ್ - ಸ್ವಲ್ಪವಾಗಿ, ಸಮುತ್ಕಟಃ-ಮತ್ತನಾಗಿ, ಮತ್ತಶ್ಚ-ಸ್ವಭಾವದಿಂದಲೇ ಮತ್ತನಾದ, ತೇಜೋ....ತಃ - ತೇಜಸ್ಸಿನಿಂದಲೂ, ದೇಹತ್ರಾಣದಿಂದಲೂ ಕೂಡಿರುವ, ಕುಂಭಕರ್ಣಃ - ಕುಂಭಕರ್ಣನು, ಹೃಷ್ಟಃ - ಸಂತೋಷಗೊಂಡು, ಕಾಲಾಂ....ಮಃ - ಪ್ರಳಯಕಾಲದ ಯಮನಿಗೆ ಸಮಾನನಾಗಿ, ಬಭೌ - ಹೊಳೆಯುತ್ತಿದ್ದನು. ॥ ೯೪ ॥ ಭ್ರಾತುಃ - ಅಣ್ಣನಾದ ರಾವಣನ, ಭವನಂ - ಮನೆಯನ್ನು ಕುರಿತು, ಗಚ್ಛನ್ - ಹೋಗುತ್ತ, ರಕ್ಷೋ....ತಃ - ರಾಕ್ಷಸರ ತಂಡಗಳಿಂದ ಕೂಡಿದ, ಕುಂಭಕರ್ಣಃ - ಆ ಕುಂಭಕರ್ಣನು, ಪದನ್ಯಾಸೈಃ - ಹೆಜ್ಜೆಗಳಿಡುವಿಕೆಯಿಂದ, ಮೇದಿನೀಂ - ಭೂಮಿಯನ್ನು, ಅಕಂಪಯತ - ನಡುಗಿಸಿದನು. ॥ ೯೫ ॥ ವಪುಷಾ - ಶರೀರದಿಂದ, ಸಃ - ಆ ಕುಂಭಕರ್ಣನು, ರಾಜಮಾರ್ಗಂ - ರಾಜಬೀದಿಯನ್ನು, ಸಹಸ್ರರಶ್ಮಿಃ - ಸೂರ್ಯನು, ಅಂಶುಭಿಃ - ಕಿರಣಗಳಿಂದ, ಧರಣೀಮಿವ - ಭೂಮಿಯನ್ನಂತೆ, ಪ್ರಕಾಶಯನ್ - ಕಂಗೊಳಿಸುವಂತೆ ಮಾಡುತ್ತ, ತತ್ರ - ಆ ಲಂಕಾಪಟ್ಟಣದಲ್ಲಿ, ಅಂಜಲಿಮಾಲಯಾ-ಪ್ರಜೆಗಳ ಬೊಗಸೆಗಳ ಸಾಲುಗಳಿಂದ, ಆವೃತಃ-ಸುತ್ತುವರೆಯಲ್ಪಟ್ಟವನಾಗಿ, ಶತಕ್ರತುಃ - ದೇವೇಂದ್ರನು, ಸ್ವಯಂಭುವಃ - ಬ್ರಹ್ಮನ, ಗೇಹಮಿವ - ಮನೆಯನ್ನಂತೆ, ಜಗಾಮ - ತೆರಳಿದನು. ॥ ೯೬ ॥ ರಾಜಮಾರ್ಗಸ್ಥಂ - ರಾಜಬೀದಿಯಲ್ಲಿರುವ, ಅಮಿತ್ರಘಾತಿನಂ -

ಮದ್ಯಭಾಂಡಗಳನ್ನು ತಂದು ಅವನ ಮುಂದಿರಿಸಿದರು. ಆಗಲಾ ಕುಂಭಕರ್ಣನು ಎರಡು ಸಾವಿರ ಮದ್ಯಭಾಂಡಗಳನ್ನು ಕುಡಿದು ಮುಗಿಸಿ, ಸ್ವಲ್ಪ ಅಮಲೇರಿ ಸಸ್ಮಿತವದನನೂ ಆಗಿ ರಾವಣನ ಬಳಿಗೆ ಹೋಗಲು ಮನಸ್ಸು ಮಾಡಿದನು. ಆ ಸಮಯದಲ್ಲಿ ಅವನು ಕಾಲಾಂತಕನಿಗೆ ಸಮಾನನಾಗಿ ರಾಕ್ಷಸರೊಡಗೂಡಿ ರಾವಣನ ಅರಮನೆಯನ್ನು ಕುರಿತು ಹೋಗುತ್ತಿರುವಾಗ ಅವನ ಪಾದಘಟ್ಟನವನ್ನು ತಾಳಲಾರದೆ ಭೂಮಿಯೆಲ್ಲವೂ ಗಡಗಡನೆ ನಡುಗಿಹೋಯಿತು. ॥ ೯೧–೯೫ ॥ ಹಾಗೆ ನಡೆದು ಬರುತ್ತಿರುವ ಆ ಕುಂಭಕರ್ಣನು ಸಹಸ್ರನೇತ್ರನಾದ ದಿನಕರನಂತೆ ಶೋಭಿಸುತ್ತಿದ್ದನು. ಅವನು ಈ ರೀತಿ ಹೊರಟು ಮಾರ್ಗದಲ್ಲಿ ಕೈಗಳನ್ನು ಜೋಡಿಸಿ ಮಣಿಯುವ ಪೌರಜನರನ್ನು ಮನ್ನಿಸುತ್ತ ದೇವೇಂದ್ರನು ಬ್ರಹ್ಮಭವನಕ್ಕೆ ಹೊರಟಂತೆ ರಾವಣನ ಅರಮನೆಗೆ ಹೊರಟನು. ಹೀಗೆ ರಾಜಮಾರ್ಗದಲ್ಲಿ ಹೋಗು

ರಾಜಮಾರ್ಗಸ್ಥಮಮಿತ್ರಘಾತಿನಂ ವನೌಕಸಸ್ತೇ ಸಹಸಾ ಬಹಿಸ್ಸ್ಥಿತಾಃ । ದೃಷ್ಟ್ವಾಽ ಪ್ರಮೇಯಂ ಗಿರಿಶೃಂಗಕಲ್ಪಂ ವಿತತ್ರಸುಸ್ತೇ ಹರಿಯೂಥಪಾಲಾಃ ॥ ೯೭ ॥ ಕೇಚಿಚ್ಛರಣ್ಯಂ ಶರಣಂಸ್ಮ ರಾಮಂ ವ್ರಜಂತಿ ಕೇಚಿದ್ವ್ಯಥಿತಾಃ ಪತಂತಿ । ಕೇಚಿದ್ದಿಶಸ್ಸ್ಮ ವ್ಯಥಿತಾಃ ಪ್ರಯಾಂತಿ ಕೇಚಿದ್ಭಯಾರ್ತಾ ಭುವಿ ಶೇರತೇಸ್ಮ ॥ ೯೮ ॥

ತಮದ್ರಿಶೃಂಗಪ್ರತಿಮಂ ಕಿರೀಟಿನಂ
ಸ್ಪೃಶಂತಮಾದಿತ್ಯಮಿವಾತ್ಮತೇಜಸಾ ।
ವನೌಕಸಃ ಪ್ರೇಕ್ಷ್ಯ ವಿವೃದ್ಧಮದ್ಭುತಂ
ಭಯಾರ್ದಿತಾ ದುದ್ರುವಿರೇ ತತಸ್ತತಃ ॥ ೯೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಷ್ಟಿತಮಸ್ಸರ್ಗಃ

ಶತ್ರುಸಂಹಾರಕನಾದ, ಅಪ್ರಮೇಯಂ - ಅಪರಿಮಿತವಾದ ಶರೀರವುಳ್ಳ, ಗಿರಿಶೃಂಗಕಲ್ಪಂ - ಬೆಟ್ಟದ ಶಿಖರಕ್ಕೆ ಸಮಾನನಾದ, ತಂ - ಆ ಕುಂಭಕರ್ಣನನ್ನು, ಬಹಿಃ - ಹೊರಗೆ, ಸ್ಥಿತಾಃ - ಇರುವ, ತೇವನೌಕಸಃ - ಆ ಕಪಿಗಳು, ತೇ ಹರಿಯೂಥಪಾಲಾಶ್ಚ - ಆ ವಾನರಯೂಥಪತಿಗಳೂ, ಸಹಸಾ - ಹಠಾತ್ತಾಗಿ, ದೃಷ್ಟ್ವಾ-ಕಂಡು, ವಿತತ್ರಸುಃ - ಭಯಗೊಂಡರು. ॥ ೯೭ ॥ ಕೇಚಿತ್ - ಕೆಲವರು, ಶರಣ್ಯಂ - ಸಂರಕ್ಷಕನಾದ, ರಾಮಂ - ಶ್ರೀರಾಮನನ್ನು, ಶರಣಂ - ಸಂರಕ್ಷಕನನ್ನಾಗಿ, ವ್ರಜಂತಿ - ಹೊಂದಿದರು, ಕೇಚಿತ್ - ಕೆಲವರು, ವ್ಯಥಿತಾಃ - ವ್ಯಸನಗೊಂಡವರಾಗಿ, ಪತಂತಿ - ಬೀಳುತ್ತಿದ್ದರು, ಕೇಚಿತ್ - ಕೆಲವರು, ವ್ಯಥಿತಾಃ-ವ್ಯಸನಗೊಂಡವರಾಗಿ, ದಿಶಃ-ದಿಕ್ಕುಗಳನ್ನು ಕುರಿತು, ಪ್ರಯಾಂತಿಸ್ಮ-ಓಡಿಹೋದರಷ್ಟೆ, ಕೇಚಿತ್ - ಕೆಲವರು, ಭಯಾರ್ತಾಃ - ಭಯದಿಂದ ದೀನರಾಗಿ, ಭುವಿ - ನೆಲದಲ್ಲಿ, ಶೇರತೇಸ್ಮ-ಮಲಗಿದರಷ್ಟೆ. ॥ ೯೮ ॥ ಅದ್ರಿ....ಮಂ-ಬೆಟ್ಟದ ಕೋಡುಗಲ್ಲಿಗೆ ಸಮಾನವಾದ, ಕಿರೀಟಿನಂ-ಕಿರೀಟಧಾರಿಯಾದ, ಆತ್ಮತೇಜಸಾ - ತನ್ನ ತೇಜಸ್ಸಿನಿಂದ, ಆದಿತ್ಯಂ - ಸೂರ್ಯನನ್ನು, ಸ್ಪೃಶಂತಮಿವಸ್ಥಿತಂ - ಸ್ಪರ್ಶಮಾಡುತ್ತಾನೋ ಎಂಬಂತಿರುವ, ಅದ್ಭುತಂ - ಆಶ್ಚರ್ಯಕರವಾದ, ವಿವೃದ್ಧಂ - ವೃದ್ಧಿಗೊಳ್ಳುತ್ತಿರುವನಾದ, ತಂ - ಆ ಕುಂಭಕರ್ಣನನ್ನು, ವನೌಕಸಃ - ಕಪಿಗಳು, ಪ್ರೇಕ್ಷ್ಯ - ಕಂಡು, ಭಯಾರ್ದಿತಾಃ-ಭಯದಿಂದ ಆಕ್ರಾಂತರಾಗಿ, ತತಸ್ತತಃ-ಅಲ್ಲಿಅಲ್ಲಿ, ದುದ್ರುವಿರೇ-ಓಡಿಹೋದರು.॥ ೯೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಷ್ಟಿತಮಸ್ಸರ್ಗಃ

ತ್ತಿರುವ ಶತ್ರುಮರ್ದನನಾದ ಆ ಕುಂಭಕರ್ಣನನ್ನು ನೋಡಿ ಪಟ್ಟಣದ ಹೊರಗಣ ಪ್ರಾಕಾರಗಳಲ್ಲಿ ಸಂಚರಿಸುತ್ತಿದ್ದ ವಾನರರೆಲ್ಲರೂ ಭಯದಿಂದ ತತ್ತಳಿಸಿಹೋದರು. ಅವರಲ್ಲಿ ಕೆಲವರು ಶ್ರೀರಾಮನ ಬಳಿಗೈದಿ, ರಕ್ಷಿಸೆಂದು ಮೊರೆಯಿಟ್ಟರು. ಕೆಲವರು ಭಯಭ್ರಾಂತರಾಗಿ ಕೆಳಕ್ಕೆ ಬಿದ್ದರು. ಕೆಲವರು ಹೆದರಿ ನಾಲ್ಕುದಿಕ್ಕುಗಳಿಗೂ ಓಡಿದರು. ಕೆಲವರು ಅಲ್ಲಲ್ಲಿಯೇ ಮುಗ್ಗರಿಸಿ ಬಿದ್ದರು. ಇಷ್ಟೆಯಲ್ಲದೆ ಆ ವಾನರರು ಸೂರ್ಯನಂತೆ ಪ್ರಕಾಶಿಸುತ್ತ, ಪರ್ವತಶಿಖರೋಪಮನಾಗಿ ಕಿರೀಟವನ್ನು ಧರಿಸಿ ಮಹಾ ಭಯಂಕರನಾಗಿರುವ ಆ ಕುಂಭಕರ್ಣನನ್ನು ನೋಡಿ ಭಯದಿಂದ ದಿಕ್ಕೆಟ್ಟು ನಾನಾದಿಕ್ಕುಗಳಿಗೆ ಓಡಿಹೋದರು. ॥ ೯೭—೯೯ ॥

ಇಂತಿದು ಕುಂಭಕರ್ಣ ಪ್ರಬೋಧನವೆಂಬ ಅರುವತ್ತನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಏಕಷಷ್ಠಿತಮಸ್ಸರ್ಗಃ

ತತೋ ರಾಮೋ ಮಹಾತೇಜಾ ಧನುರಾದಾಯ ವೀರ್ಯವಾನ್ । ಕಿರೀಟಿನಂ ಮಹಾಕಾಯಂ ಕುಂಭಕರ್ಣಂ ದದರ್ಶಹ ॥ ೧ ॥ ತಂ ದೃಷ್ಟ್ವಾ ರಾಕ್ಷಸಶ್ರೇಷ್ಠಂ ಪರ್ವತಾಕಾರದರ್ಶನಂ । ಕ್ರಮಮಾಣಮಿವಾಕಾಶಂ ಪುರಾ ನಾರಾಯಣಂ ಪ್ರಭುಂ ॥ ೨ ॥ ಸ ತೋಯಾಂಬುದಸಂಕಾಶಂ ಕಾಂಚನಾಂಗದಭೂಷಣಂ । ದೃಷ್ಟ್ವಾ ಪುನಃ ಪ್ರದುದ್ರಾವ ವಾನರಾಣಾಂ ಮಹಾಚಮೂಃ ॥ ೩ ॥ ವಿದ್ರುತಾಂ ವಾಹಿನೀಂ ದೃಷ್ಟ್ವಾ ವರ್ಧಮಾನಂಚ ರಾಕ್ಷಸಂ । ಸವಿಸ್ಮಯಮಿದಂ ರಾಮೋ ವಿಭೀಷಣಮುವಾಚಹ ॥೪॥

ತತಃ - ಬಳಿಕ, ಮಹಾತೇಜಾಃ - ಬಹು ತೇಜೋವಂತನಾದ, ವೀರ್ಯವಾನ್ - ಪರಾಕ್ರಮಿಯಾದ, ರಾಮಃ - ಶ್ರೀರಾಮನು, ಧನುಃ - ಧನುಸ್ಸನ್ನು, ಆದಾಯ - ತೆಗೆದುಕೊಂಡು, ಮಹಾಕಾಯಂ- ದೊಡ್ಡ ಶರೀರವುಳ್ಳ, ಕಿರೀಟಿನಂ - ಕಿರೀಟವುಳ್ಳ, ಕುಂಭಕರ್ಣಂ - ಕುಂಭಕರ್ಣನನ್ನು, ದದರ್ಶಹ - ಕಂಡನಷ್ಟೆ, ಪುರಾ - ಪೂರ್ವದಲ್ಲಿ, ಆಕಾಶಂ - ಅಂತರಿಕ್ಷವನ್ನು, ಕ್ರಮಮಾಣಂ - ಆಕ್ರಮಿಸುತ್ತಿರುವ, ಪರ್ವ....ನಂ - ಬೆಟ್ಟದ ಆಕಾರದಂತೆ ನೋಟವುಳ್ಳ, ಸತೋ....ಶಂ - ನೀರಿನಿಂದೊಡಗೂಡಿದ ಮೇಘಕ್ಕೆ ಸಮಾನವಾದ, ಕಾಂಚ....ಣಂ - ಸ್ವರ್ಣವಿಕಾರವಾದ ಒಡವೆಗಳುಳ್ಳ, ತಂರಾಕ್ಷಸಶ್ರೇಷ್ಠಂ - ಆ ರಾಕ್ಷಸೋತ್ತಮನಾದ ಕುಂಭಕರ್ಣನನ್ನು, ದೃಷ್ಟ್ವಾ - ಕಂಡು, ರಾಮಃ - ಶ್ರೀರಾಮನು, ಯತ್ತಃ - ಯುದ್ಧದಲ್ಲಿ ಆಸಕ್ತನು, ಬಭೂವ - ಆದನು. ॥ ೧-೨ ॥ ವಾನರಾಣಾಂ - ಕಪಿಗಳ, ಮಹಾಚಮೂಃ - ದೊಡ್ಡ ಸೈನ್ಯವು, ತಂ - ಆ ಕುಂಭಕರ್ಣನನ್ನು, ದೃಷ್ಟ್ವಾ - ನೋಡಿ, ಪುನಃ - ಮತ್ತೆ, ಪ್ರದುದ್ರಾವ - ಓಡಿಹೋಯಿತು. ॥ ೩ ॥ ರಾಮಃ - ಶ್ರೀರಾಮನು, ವಿದ್ರುತಾಂ - ಓಡಿಹೋಗುತ್ತಿರುವ, ವಾಹಿನೀಂ - ಕಪಿಸೈನ್ಯವನ್ನು, ವರ್ಧಮಾನಂ - ವೃದ್ಧಿಗೊಂಡಿರುವ, ರಾಕ್ಷಸಂ - ರಕ್ಕಸನನ್ನು, ದೃಷ್ಟ್ವಾ - ಕಂಡು, ಸವಿಸ್ಮಯಂ - ಆಶ್ಚರ್ಯದಿಂದ ಕೂಡಿದಂತೆ, ವಿಭೀಷಣಂ - ವಿಭೀಷಣನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ॥ ೪ ॥ ಹೇ ವೀರ - ಎಲೈ ಶೂರನೇ,

---

ಆಗ ಮಹಾತೇಜಸ್ವಿಯೂ, ಉತ್ತಮ ಪರಾಕ್ರಮಿಯೂ ಆದ ಶ್ರೀರಾಮಮೂರ್ತಿಯು ಹೀಗೆ ಮಹಾ ವಿಭವದಿಂದೈತರುತ್ತಿದ್ದ ಕಿರೀಟಧಾರಿಯೂ, ಮಹಾ ಶರೀರಿಯೂ ಆದ ಆ ಕುಂಭಕರ್ಣರಾಕ್ಷಸನನ್ನು ಕಂಡನು. ಆ ರಾಕ್ಷಸನಾದರೋ ಪೂರ್ವದಲ್ಲಿ ಆಕಾಶವನ್ನೇ ಆಕ್ರಮಿಸಿದ ಶ್ರೀಮನ್ನಾರಾಯಣನಂತೆ ಮಹಾ ಪರ್ವತೋಪಮನಾಗಿಯೂ, ಕಾಲಮೇಘೋಪಮನಾಗಿಯೂ, ಬಂಗಾರದ ಬಾಹುಜಿಗೆಗಳಿಂದಲೂ, ಬಂಗಾರದ ಒಡವೆಗಳಿಂದಲೂ ಅಲಂಕೃತನಾಗಿ ಅದ್ಭುತನಾಗಿ ಕಾಣುತ್ತಿದ್ದನು. ಆ ಸಮಯದಲ್ಲಿ ಅಲ್ಲಿದ್ದ ಸಮಸ್ತ ವಾನರಸೈನ್ಯವೂ ಅವನನ್ನು ಕಂಡು ಭಯದಿಂದ ತತ್ತಳಿಸಿ ಹೋಗಿ ನಲ್ದಿಕ್ಕುಗಳಿಗೂ ಓಡಿಹೋದುವು. ॥ ೧-೩ ॥ ಆಗ ಶ್ರೀರಾಮನು ಈ ರೀತಿ ವಾನರರು ಭಯಭ್ರಾಂತರಾಗಿ ಓಡುತ್ತಿರುವುದನ್ನೂ, ಕುಂಭಕರ್ಣನು ವೃದ್ಧಿಗೊಳ್ಳುತ್ತಿರುವುದನ್ನೂ ನೋಡಿ ಪರಮಾಶ್ಚರ್ಯಭರಿತನಾಗಿ ತನ್ನ ಸಮೀಪದಲ್ಲಿದ್ದ ವಿಭೀಷಣನನ್ನು ಕುರಿತು, “ ಎಲೈ ರಾಕ್ಷಸೋತ್ತಮನೇ! ವಿಭೀಷಣಾ !!

"ಕೋಽಸೌ ಪರ್ವತಸಂಕಾಶಃ ಕಿರೀಟೀ ಹರಿಲೋಚನಃ । ಲಂಕಾಯಾಂ ದೃಶ್ಯತೇ ವೀರ! ಸವಿದ್ಯುದಿವ ತೋಯದಃ? ॥ ೫ ॥ ಪೃಥಿವ್ಯಾಃ ಕೇತುಭೂತೋಽಸೌ ಮಹಾನೇಕೋಽತ್ರ ದೃಶ್ಯತೇ । ಯಂ ದೃಷ್ಟ್ವಾ ವಾನರಾಸ್ಸರ್ವೇ ವಿದ್ರವಂತಿ ತತಸ್ತತಃ? ॥ ೬ ॥ ಆಚಕ್ಷ್ವ ಮೇ ಮಹಾನ್ ಕೋಽಸೌ ರಕ್ಷೋ ವಾ ಯದಿವಾಸುರಃ । ನ ಮಯ್ಯೈವಂ ವಿಧಂ ಭೂತಂ ದೃಷ್ಟಪೂರ್ವಂ ಕದಾಚನ" ॥ ೭ ॥ ಸಪೃಷ್ಟೋ ರಾಜಪುತ್ರೇಣ ರಾಮೇಣಾಕ್ಲಿಷ್ಟಕರ್ಮಣಾ । ವಿಭೀಷಣೋ ಮಹಾಪ್ರಾಜ್ಞಃ ಕಾಕುತ್ಸ್ಥಮಿದಮಬ್ರವೀತ್ ॥ ೮ ॥ ಯೇನ ವೈವಸ್ವತೋ ಯುದ್ಧೇ ವಾಸವಶ್ಚ ಪರಾಜಿತಃ ।

ಕಿರೀಟೀ - ಕಿರೀಟಧಾರಿಯಾದ, ಪರ್ವತಸಂಕಾಶಃ - ಬೆಟ್ಟಕ್ಕೆ ಸಮಾನನಾದ, ಹರಿಲೋಚನಃ - ಹಚ್ಚಗಿರುವ ಕಣ್ಣುಗಳುಳ್ಳ, ಅಸೌ - ಈ ರಾಕ್ಷಸನು, ಸವಿದ್ಯುತ್ - ಮಿಂಚಿನಿಂದೊಡಗೂಡಿದ, ತೋಯದ ಇವ - ಮೇಘದಂತೆ, ಲಂಕಾಯಾಂ - ಲಂಕಾಪಟ್ಟಣದಲ್ಲಿ, ದೃಶ್ಯತೇ - ಕಾಣಲ್ಪಡುತ್ತಾನೆ, ಕಃ - ಯಾರು. ॥ ೫ ॥ ಯಂ - ಯಾವನನ್ನು, ದೃಷ್ಟ್ವಾ - ಕಂಡು, ಸರ್ವೇವಾನರಾಃ - ಸಮಸ್ತ ಕಪಿಗಳೂ, ತತಸ್ತತಃ - ಅಲ್ಲಲ್ಲಿ, ವಿದ್ರವಂತಿ - ಓಡಿಹೋಗುತ್ತಾರೋ, ಅತ್ರ - ಈ ಲಂಕಾಪಟ್ಟಣದಲ್ಲಿ, ಮಹಾನ್ - ದೊಡ್ಡವನಾದ, ಅಸೌ - ಈ ಪುರುಷನು, ಏಕಃ - ಒಬ್ಬನೇ, ಪೃಥಿವ್ಯಾಃ - ಭೂಮಿಗೆ, ಕೇತುಭೂತಃ - ಧ್ವಜಪ್ರಾಯನಾಗಿ, ದೃಶ್ಯತೇ - ಕಾಣುತ್ತಾನೆ. ॥ ೬ ॥ ಮಹಾನ್ - ದೊಡ್ಡವನಾದ, ಅಸೌ - ಇವನು, ಕಃ - ಯಾರು, ರಕ್ಷೋವಾ - ರಾಕ್ಷಸನೋ, ಸುರಃ - ದೇವತೆಯೋ, ಮಯಾ - ನನ್ನಿಂದ, ಏವಂಭೂತಂ - ಇಂಥಾ ಭೂತವು, ಕದಾಚನ - ಎಂದಿಗೂ, ನದೃಷ್ಟಪೂರ್ವಂ - ಪೂರ್ವದಲ್ಲಿ ನೋಡಲ್ಪಡಲಿಲ್ಲವು, ಮೇ - ನನಗೆ, ಆಚಕ್ಷ್ವ - ಹೇಳು. ॥ ೭ ॥ ತತಃ - ಬಳಿಕ, ರಾಜಪುತ್ರೇಣ - ರಾಜಪುತ್ರನಾದ, ಅಕ್ಲಿಷ್ಟಕರ್ಮಣಾ - ಕ್ಲೇಶವಿಲ್ಲದೆ ಕಾರ್ಯಗಳನ್ನು ಮಾಡುವ, ರಾಮೇಣ - ಶ್ರೀರಾಮನಿಂದ, ಪೃಷ್ಟಃ - ಪ್ರಶ್ನೆ ಮಾಡಲ್ಪಟ್ಟ, ಮಹಾಪ್ರಾಜ್ಞಃ - ಮಹಾ ವಿವೇಕಶಾಲಿಯಾದ, ಸವಿಭೀಷಣಃ - ಆ ವಿಭೀಷಣನು, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೮ ॥ ಯೇನ - ಯಾವನಿಂದ, ಯುದ್ಧೇ - ಕಾಳಗದಲ್ಲಿ, ವಾಸವಶ್ಚ - ದೇವೇಂದ್ರನೂ, ವೈವಸ್ವತಃ - ಯಮನೂ ಪರಾಜಿತಃ - ಜಯಿಸಲ್ಪಟ್ಟರೋ, ಸಏಷಃ - ಆ ಈತನು, ಪ್ರತಾಪವಾನ್ - ಪರಾಕ್ರಮಶಾಲಿಯು, ಸದೃಶಃ ಇವನಿಗೆ ಸಮಾನನಾದ, ಅನ್ಯಃರಾಕ್ಷಸಃ - ಮತ್ತೊಬ್ಬ ರಾಕ್ಷಸನು,

---

ಪರ್ವತಸಮಾನನೂ ಕಿರೀಟಧರನೂ, ಹರಿಲೋಚನನೂ, ಮಿಂಚುಗಳೊಡಗೂಡಿದ ಮಹಾಮೇಘವನ್ನು ಹೋಲಿರುವವನೂ ಆಗಿ ಲಂಕಾನಗರದಲ್ಲಿ ಸಂಚರಿಸುತ್ತಿರುವ ಈ ರಾಕ್ಷಸನಾರು? ಅಯ್ಯಾ ವಿಭೀಷಣನೇ! ಮಹಾ ಕಾಯನಾದ ಈ ರಾಕ್ಷಸನು ಭೂಮಂಡಲಕ್ಕೆ ಕೇತುಪ್ರಾಯನಾಗಿ ಕಾಣುತ್ತಿದ್ದಾನೆ? ಇವನಾರೆಂಬುದನ್ನು ತಿಳಿಸು. ಇವನನ್ನು ನೋಡಿ ನಮ್ಮ ವಾನರರೆಲ್ಲರೂ ನಲ್ದಿಕ್ಕುಗಳಿಗೂ ಓಡುತ್ತಿದ್ದಾರೆ. ಈ ಮಹಾ ರಾಕ್ಷಸನಾರೆಂಬುದನ್ನು ತಿಳಿಸು. ವಿಭೀಷಣಾ! ನಾನಿದುವರೆಗೂ ಇಂತಹ ಭೂತವನ್ನೇ ಕಂಡುದಿಲ್ಲ. ಆದುದರಿಂದ ಇವನ ವೃತ್ತಾಂತವೆಲ್ಲವನ್ನೂ ತಿಳಿಸು" ಎಂದು ಕೇಳಿದನು. ॥ ೫–೭ ॥ ಅನಾಯಾಸದಿಂದ ಸಮಸ್ತ ಕಾರ್ಯಗಳನ್ನೂ ನೆರವೇರಿಸುವ ಶ್ರೀರಾಮನಾಡಿದ ಮಾತುಗಳನ್ನು ಕೇಳಿ ಮಹಾಮತಿಯಾದ ವಿಭೀಷಣನು, "ರಾಮಚಂದ್ರ! ಅಲ್ಲಿ ಬರುತ್ತಿರುವವನು ವಿಶ್ರವಸ್ಸಿನ ಮಗನಾದ ಕುಂಭಕರ್ಣ ರಾಕ್ಷಸನು; ಇವನು ರಣಾಂಗಣದಲ್ಲಿ ಯಮನನ್ನೇ ಸೋಲಿಸಿದ್ದಾನೆ. ದೇವೇಂದ್ರನೂ ಇವನಿಗೆ

ಸ್ಯೈಷ ವಿಶ್ರವಸಃ ಪುತ್ರಃ ಕುಂಭಕರ್ಣಃ ಪ್ರತಾಪವಾನ್ । ಅಸ್ಯ ಪ್ರಮಾಣಾತ್ಸದೃಶೋ ರಾಕ್ಷಸೋಽನ್ಯೋ ನವಿದ್ಯತೇ ॥ ೯ ॥ ಏತೇನ ದೇವಾ ಯುಧಿ ದಾನವಾಶ್ಚ ಯಕ್ಷಾ ಭುಜಂಗಾಃ ಪಿಶಿತಾಶನಾಶ್ಚ । ಗಂಧರ್ವವಿದ್ಯಾಧರಕಿನ್ನರಾಶ್ಚ ಸಹಸ್ರಶೋ ರಾಘವ ! ಸಂಪ್ರಭಗ್ನಾಃ ॥ ೧೦ ॥ ಶೂಲಪಾಣಿಂ ವಿರೂಪಾಕ್ಷಂ ಕುಂಭಕರ್ಣಂ ಮಹಾಬಲಂ । ಹಂತುಂ ನಶೇಕುಸ್ತ್ರಿದಶಾಃ ಕಾಲೋಽಯಮಿತಿ ಮೋಹಿತಾಃ ॥ ೧೧ ॥ ಪ್ರಕೃತ್ಯಾ ಹ್ಯೇಷ ತೇಜಸ್ವೀ ಕುಂಭಕರ್ಣೋ ಮಹಾಬಲಃ । ಅನ್ಯೇಷಾಂ ರಾಕ್ಷಸೇಂದ್ರಾಣಾಂ ವರದಾನಕೃತಂ ಬಲಂ ॥೧೨॥ ಏತೇನ ಜಾತಮಾತ್ರೇಣ ಕ್ಷುಧಾರ್ತೇನ ಮಹಾತ್ಮನಾ। ಭಕ್ಷಿತಾನಿ ಸಹಸ್ರಾಣಿ ಸತ್ವಾನಾಂ ಸುಬಹೂನ್ಯಪಿ ॥೧೩॥ ತೇಷು ಸಂಭಕ್ಷ್ಯಮಾಣೇಷು

ನವಿದ್ಯತೇ - ಇರುವುದಿಲ್ಲವು. ॥ ೯ ॥ ಹೇ ರಾಘವ - ಎಲೈ ಶ್ರೀರಾಮನೇ, ಏತೇನ - ಈ ಕುಂಭಕರ್ಣನಿಂದ, ದೇವಾಃ - ದೇವತೆಗಳೂ, ದಾನವಾಶ್ಚ - ದಾನವರೂ, ಯಕ್ಷಾಃ - ಯಕ್ಷರೂ, ಭುಜಂಗಾಃ - ಸರ್ಪಗಳೂ, ಪಿಶಿತಾಶನಾಶ್ಚ - ಮಾಂಸಭಕ್ಷಕರೂ ಆದ ಇತರ ಜಾತೀಯರೂ, ಗಂಧ....ಶ್ಚ - ಗಂಧರ್ವರೂ, ವಿದ್ಯಾಧರರೂ, ಕಿನ್ನರರೂ ಸಹ, ಸಹಸ್ರಶಃ - ಸಾವಿರಾರು ಮಂದಿ, ಯುಧಿ - ಕಾಳೆಗದಲ್ಲಿ, ಸಂಪ್ರಭಗ್ನಾಃ - ಮುರಿಯಲ್ಪಟ್ಟರು. ॥ ೧೦ ॥ ಶೂಲಪಾಣಿಂ - ತ್ರಿಶೂಲವೇ ಹಸ್ತದಲ್ಲಿ ಉಳ್ಳ, ವಿರೂಪಾಕ್ಷಂ - ವಕ್ರವಾದ ನೇತ್ರಗಳುಳ್ಳ, ಮಹಾಬಲಂ - ಬಹಳ ಬಲವಂತನಾದ, ಕುಂಭಕರ್ಣಂ - ಕುಂಭಕರ್ಣನನ್ನು, ಹಂತುಂ - ಹೊಡೆಯುದಕ್ಕೆ, ತ್ರಿದಶಾಃ - ದೇವತೆಗಳು, ನಶೇಕುಃ - ಸಮರ್ಥರಾಗದೇ ಹೋದರು, ಅಯಂ - ಈ ಪುರುಷನು, ಕಾಲಇತಿ - ಯಮನೆಂದು, ಮೋಹಿತಾಃ - ಭ್ರಾಂತರಾಗಿದ್ದಾರೆ. ॥ ೧೧ ॥ ಏಷಃಕುಂಭಕರ್ಣಃ - ಈ ಕುಂಭಕರ್ಣನು, ಪ್ರಕೃತ್ಯಾ - ಸ್ವಭಾವದಿಂದಲೇ, ತೇಜಸ್ವೀ - ಅಂತಸ್ಸತ್ವವುಳ್ಳವನು, ಮಹಾಬಲಃ - ಬಹು ತ್ರಾಣವುಳ್ಳವನು, ಅನ್ಯೇಷಾಂ - ಕೆಲವರು, ರಾಕ್ಷಸೇಂದ್ರಾಣಾಂ - ರಾಕ್ಷಸೋತ್ತಮರಿಗೆ, ವರದಾನಕೃತಂ - ವರಪ್ರದಾನದಿಂದ ಮಾಡಲ್ಪಟ್ಟ, ಬಲಂ - ಬಲವು. ॥ ೧೨ ॥ (ಇವನಾದರೋ) ಜಾತಮಾತ್ರೇಣ - ಹುಟ್ಟಿದೊಡನೆಯೇ, ಕ್ಷುಧಾರ್ತೇನ - ಹಸಿವಿನಿಂದ ಪೀಡಿತನಾದ, ಮಹಾತ್ಮನಾ - ಮಹಾ ಶರೀರವುಳ್ಳ, ಏತೇನ - ಈ ಕುಂಭಕರ್ಣನಿಂದ, ಸತ್ವಾನಾಂ - ಜಂತುಗಳು, ಸುಬಹೂನಿ - ಅನೇಕಗಳಾದ, ಸಹಸ್ರಾಣಿ - ಸಾವಿರಗಳು, ಭಕ್ಷಿತಾನಿ - ತಿನ್ನಲ್ಪಟ್ಟವು. ॥ ೧೩ ॥ ತೇಷು - ಆ ಜಂತುಗಳು, ಭಕ್ಷ್ಯಮಾಣೇಷು -

---

ಸೋತುಹೋಗಿರುವನು. ರಾಮಾ ! ಈ ಕುಂಭಕರ್ಣನಿಗೆ ಸಮಾನನಾದ ರಾಕ್ಷಸನು ಈ ಭೂಮಂಡಲದಲ್ಲಿ ಮತ್ತಾವನೂ ಇರುವುದಿಲ್ಲ. ದೇವತೆಗಳು, ಯಕ್ಷರು, ಪನ್ನಗರು, ರಾಕ್ಷಸರು, ಗಂಧರ್ವ ವಿದ್ಯಾಧರ ಕಿನ್ನರರು ಮುಂತಾದವರೆಲ್ಲರೂ ರಣರಂಗದಲ್ಲಿ ಈ ರಾಕ್ಷಸನಿಂದ ಎಷ್ಟೋ ಸಲ ಪರಾಜಿತರಾಗಿ ಹೋಗಿದ್ದಾರೆ. ॥ ೮–೧೦ ॥ ಶೂಲಾಯುಧವನ್ನು ಕೈಯಲ್ಲಿ ಹಿಡಿದು, ವಿಕಾರವಾದ ನೇತ್ರಗಳುಳ್ಳವನಾಗಿಯೂ, ಅಧಿಕ ಬಲಸಮನ್ವಿತನಾಗಿಯೂ ಇರುವ ಈ ಕುಂಭಕರ್ಣನನ್ನು ಜಯಿಸಬಯಸಿದ ದೇವತೆಗಳೆಲ್ಲರೂ ಭಂಗ ಹೊಂದಿ ಇವನು ಸಾಕ್ಷಾತ್ ಯಮನೆಂದೇ ತಿಳಿದು ಭಯಭ್ರಾಂತರಾಗಿ ಹೋದರು. ಮಹಾ ಬಲಾಢ್ಯನಾದ ಈ ಕುಂಭಕರ್ಣನು ಸ್ವಭಾವದಿಂದಲೇ ಮಹಾ ತೇಜಸ್ವಿಯಾದವನು ; ಮಹಾನುಭಾವನು. ಹಸಿವಿನಿಂದ ಕಂಗೆಟ್ಟ ಇವನು ಹುಟ್ಟಿದೊಡನೆಯೇ ಅನೇಕಾನೇಕ ಜಂತುಗಳನ್ನು ನುಂಗಿಬಿಟ್ಟನು. ಹಾಗೆ ಸಮಸ್ತ ಭೂತಗಳನ್ನೂ ಭುಜಿಸುತ್ತ ಎಲ್ಲ ಪ್ರಜೆಗಳಿಗೂ ಮಹದ್ಭಯವನ್ನುಂಟುಮಾಡಲು ಅವರು

ಪ್ರಜಾ ಭಯನಿಪೀಡಿತಾಃ । ಯಾಂತಿಸ್ಮ ಶರಣಂ ಶಕ್ರಂ ತಮಪ್ಯರ್ಥಂ ನ್ಯವೇದಯನ್ ॥ ೧೪ ॥ ಸ ಕುಂಭಕರ್ಣಂ ಕುಪಿತೋ ಮಹೇಂದ್ರೋ ಜಘಾನ ವಜ್ರೇಣ ಶಿತೇನ ವಜ್ರೀ । ಸಶಕ್ರವಜ್ರಾಭಿಹತೋ ಮಹಾತ್ಮಾ ಚಚಾಲ ಕೋಪಾಚ್ಚ ಭೃಶಂ ನನಾದ ॥೧೫॥ ತಸ್ಯ ನಾನದ್ಯಮಾನಸ್ಯ ಕುಂಭಕರ್ಣಸ್ಯ ಧೀಮತಃ। ಶ್ರುತ್ವಾತಿನಾದಂ ವಿತ್ರಸ್ತಾ ಭೂಯೋ ಭೂಮಿರ್ವಿತತ್ರಸೇ ॥ ೧೬ ॥ ತತ್ರ ಕೋಪಾನ್ಮಹೇಂದ್ರಸ್ಯ ಕುಂಭಕರ್ಣೋ ಮಹಾಬಲಃ । ವಿಕೃಷ್ಯೈರಾವತಾದ್ದಂತಂ ಜಘಾನೋರಸಿ ವಾಸವಂ ॥ ೧೭ ॥ ಕುಂಭ ಕರ್ಣಪ್ರಹಾರಾರ್ತೋ ವಿಜಜ್ವಾಲ ಸವಾಸವಃ । ತತೋ ವಿಷೇದುಸ್ಸಹಸಾ ದೇವ

ತಿನ್ನಲ್ಪಟ್ಟವುಗಳಾಗಲೂ, ಪ್ರಜಾಃ - ಪ್ರಜೆಗಳು, ಭಯಪೀಡಿತಾಸ್ಸಂತಃ - ಭಯದಿಂದ ಬಾಧಿತರಾಗಿ, ಶಕ್ರಂ - ದೇವೇಂದ್ರನನ್ನು, ಶರಣಂ - ರಕ್ಷನನ್ನಾಗಿ, ಯಾಂತಿಸ್ಮ - ಹೊಂದಿದೆರಷ್ಟೆ, ತಮರ್ಥಮಪಿ - ಆ ಅರ್ಥವನ್ನು, ನ್ಯವೇದಯನ್ - ತಿಳಿಸಿದರು. ॥ ೧೪ ॥ ಕುಪಿತಃ - ಕೋಪಿಸ್ಕೊನಾದ, ವಜ್ರೀ - ವಜ್ರಾಯುಧಧಾರಿಯಾದ, ಸಮಹೇಂದ್ರಃ - ಆ ದೇವೇಂದ್ರನು, ವಜ್ರೇಣ - ವಜ್ರಾಯುಧದಿಂದ, (ಇವನನ್ನು) ಜಘಾನ - ಹೊಡೆದನು, ಶಕ್ರ....ತಃ-ದೇವೇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ, ಮಹಾತ್ಮಾ-ಮಹಾ ಶರೀರವುಳ್ಳ, ಸಃ-ಆ ಕುಂಭಕರ್ಣನು, ಕೋಪಾತ್-ಕೋಪದಿಂದ, ಚಚಾಲ- ಕದಲಿದನು, ಭೃಶಂ - ಬಹಳವಾಗಿ, ನನಾದಚ - ಧ್ವನಿಯನ್ನೂ ಮಾಡಿದನು. ॥ ೧೫ ॥ ನಾನದ್ಯ ಮಾನಸ್ಯ - ಕೂಗುತ್ತಿರುವ, ಧೀಮತಃ - ಬುದ್ಧಿಶಾಲಿಯಾದ, ತಸ್ಯಕುಂಭಕರ್ಣಸ್ಯ - ಆ ಕುಂಭ ಕರ್ಣನ, ನಿನಾದಂ - ಧ್ವನಿಯನ್ನು, ಶ್ರುತ್ವಾ - ಕೇಳಿ, ವಿತ್ರಸ್ತಾ - ಭಯಗೊಂಡುದಾಗಿ, ಭೂಮಿಃ - ನೆಲವು, ವಿತತ್ರಸೇ - ನಡುಗಿತು. ॥ ೧೬ ॥ ತತ್ರ - ಆ ಕಾಲದಲ್ಲಿ, ಮಹಾಬಲಃ - ಬಹಳ ಬಲವಂತ ನಾದ, ಕುಂಭಕರ್ಣಃ - ಕುಂಭಕರ್ಣನು, ಕೋಪಾತ್ - ಕೋಪದಿಂದ, ಮಹೇಂದ್ರಸ್ಯ - ದೇವೇಂ ದ್ರನ, ಐರಾವತಾತ್ - ಐರಾವತವೆಂಬ ಆನೆಯಿಂದ, ದಂತಂ - ದಂತವನ್ನು, ವಿಕೃಷ್ಯ - ಕಿತ್ತು, ಉರಸಿ-ವಕ್ಷಸ್ಥಲದಲ್ಲಿ, ವಾಸವಂ-ದೇವೇಂದ್ರನನ್ನು, ಜಘಾನ-ಹೊಡೆದನು. ॥೧೭॥ ಕುಂಭ....ರ್ತಃ - ಕುಂಭಕರ್ಣನ ಪೆಟ್ಟನಿಂದ ಪೀಡಿತನಾದ, ಸವಾಸವಃ - ಆ ದೇವೇಂದ್ರನು, ವಿಜಜ್ವಾಲ - ಉರಿಯು ತ್ತಿದ್ದನು, ತತಃ - ಬಳಿಕ, ದೇವ....ವಾಃ - ದೇವತೆಗಳೂ ಬ್ರಹ್ಮರ್ಷಿಗಳೂ ದಾನವರೂ, ಸಹಸಾ -

---

ಮಹೇಂದ್ರನನ್ನು ಮೊರೆಹೊಕ್ಕರು. ಆಗ ವಜ್ರಧರನಾದ ದೇವೇಂದ್ರನು ಮಹಾ ಕುಪಿತ ನಾಗಿ ತನ್ನ ವಜ್ರಾಯುಧದಿಂದ ಆ ಕುಂಭಕರ್ಣನನ್ನು ಬಲವಾಗಿ ಹೊಡೆದನು. ಹೀಗೆ ವಜ್ರಾಯುಧದಿಂದ ಹೊಡೆದ ಕೂಡಲೇ ಮಹಾಕಾಯನಾದ ಆ ಕುಂಭಕರ್ಣನು ಕೋಪ ದಿಂದ ಕೆರಳಿ ಬಹು ಭಯಂಕರವಾಗಿ ಕೂಗಿಟ್ಟನು. ॥೧೧—೧೫॥ ಆ ಕೂಗನ್ನು ಕೇಳಿ ಸಮಸ್ತ ಭೂತಗಳೂ ಭಯದಿಂದ ತತ್ತಳಿಸಿ ಹೋದುವು. ಭೂಮಂಡಲವೇ ಗಡಗಡನೆ ನಡುಗಿ ಹೋಯಿತು. ಆಮೇಲೆ ಮಹಾ ಬಲನಾದ ಆ ಕುಂಭಕರ್ಣರಾಕ್ಷಸನು ಮಹಾ ಕುಪಿತನಾಗಿ ಆ ದೇವೇಂದ್ರನ ವಾಹನವಾದ ಐರಾವತದ ದಂತವೊಂದನ್ನು ಮುರಿದುಕೊಂಡು ಅದ ರಿಂದಲೇ ದೇವೇಂದ್ರನೆದೆಗೆ ಬಲವಾಗಿ ಗುದ್ದಿದನು. ಆ ಹೊಡೆತವನ್ನು ತಾಳಲಾರದೆ ಮಹೇಂ ದ್ರನು ಮಹಾ ಕುಪಿತನಾಗಿಯೂ (ಆ ಕುಂಭಕರ್ಣನೊಡನೆ ಯುದ್ಧಮಾಡಲಸಮರ್ಥನಾಗಿ ಓಡಿಹೋದನು.) 'ಆ ಸಮಯದಲ್ಲಿ ದೇವತೆಗಳೂ, ಬ್ರಹ್ಮರ್ಷಿಗಳೂ, ದಾನವರೂ ಬಹಳವಾಗಿ ಭಯಗೊಂಡು ಸಂತಪಿಸಿ ಆ ದೇವೇಂದ್ರನನ್ನೂ ಹಿಂದಿಟ್ಟುಕೊಂಡು ಬಹು ಜಾಗ್ರತೆಯಾಗಿ

ಬ್ರಹ್ಮರ್ಷಿದಾನವಾಃ ॥ ೧೮ ॥ ಪ್ರಜಾಭಿಸ್ಸಹ ಶಕ್ರಶ್ಚ ಯಯೌ ಸ್ಥಾನಂ ಸ್ವಯಂ ಭುವಃ । ಕುಂಭಕರ್ಣಸ್ಯ ದೌರಾತ್ಮ್ಯಂ ಶಶಂಸುಸ್ತೇ ಪ್ರಜಾಪತೇಃ ॥೧೯॥ ಪ್ರಜಾನಾಂ ಭಕ್ಷಣಂಚಾಪಿ ದೇವಾನಾಂಚಾಪಿ ಧರ್ಷಣಂ । ಆಶ್ರಮಧ್ವಂಸನಂ ಚಾಪಿ ಪರಸ್ತ್ರೀ ಹರಣಂ ಭೃಶಂ ॥ ೨೦ ॥ "ಏವಂ ಪ್ರಜಾ ಯದಿತ್ವೇಷ ಭಕ್ಷಯಿಷ್ಯತಿ ನಿತ್ಯಶಃ । ಅಚಿರೇಣೈವ ಕಾಲೇನ ಶೂನ್ಯೋ ಲೋಕೋ ಭವಿಷ್ಯತಿ" ॥೨೧॥ ವಾಸವಸ್ಯ ವಚಃ ಶ್ರುತ್ವಾ ಸರ್ವಲೋಕಪಿತಾಮಹಃ । ರಕ್ಷಾಂಸ್ಯಾವಾಹಯಾಮಾಸ ಕುಂಭಕರ್ಣಂ ದದರ್ಶಹ ॥೨೨॥ ಕುಂಭಕರ್ಣಂ ಸಮೀಕ್ಷ್ಯೈವ ವಿತತ್ರಾಸ ಪ್ರಜಾಪತಿಃ । ದೃಷ್ಟ್ವಾ

ಜಾಗ್ರುತೆಯಾಗಿ, ವಿಷೇದುಃ - ವ್ಯಸನಗೊಂಡರು. ॥ ೧೮ ॥ ಶಕ್ರಶ್ಚ - ದೇವೇಂದ್ರನೂ, ಪ್ರಜಾಭಿಸ್ಸಹ - ಪ್ರಜೆಗಳೊಡನೆ, ಸ್ವಯಂಭುವಃ - ಬ್ರಹ್ಮನ, ಸ್ಥಾನಂ - ಸ್ಥಾನವಾದ ಸತ್ಯಲೋಕವನ್ನು ಕುರಿತು, ಯಯೌ - ತೆರಳಿದನು, ತೇ - ಆ ಪ್ರಜೆಗಳು, ಪ್ರಜಾಪತೇಃ - ಬ್ರಹ್ಮನಿಗೆ, ಕುಂಭಕರ್ಣಸ್ಯ - ಕುಂಭ ಕರ್ಣನ, ದೌರಾತ್ಮ್ಯಂ - ದೌಷ್ಟ್ಯವನ್ನು, ಶಶಂಸುಃ - ಹೇಳಿದರು. ॥ ೧೯ ॥ ಪ್ರಜಾನಾಂ - ಪ್ರಜೆಗಳ, ಭಕ್ಷಣಂಚಾಪಿ - ತಿನ್ನುವಿಕೆಯನ್ನೂ, ದೇವಾನಾಂ - ದೇವತೆಗಳ, ಧರ್ಷಣಂಚಾಪಿ - ತಿರಸ್ಕಾರವನ್ನೂ, ಆಶ್ರ....ಪಿ - ಆಶ್ರಮಗಳನ್ನು ಹಾಳುಮಾಡಿದುದನ್ನೂ, ಭೃಶಂ - ಬಹಳವಾಗಿ ನಡೆದ, ಪರ....ಣಂ - ಪರಸ್ತ್ರೀಯರ ಅಪಹಾರವನ್ನೂ, ಶಶಂಸುಃ - ಹೇಳಿದರು. ॥ ೨೦ ॥ ಏಷಃ - ಈ ಕುಂಭಕರ್ಣನು, ಏವಂ - ಹೀಗೆ, ಪ್ರಜಾಃ - ಪ್ರಜೆಗಳನ್ನು, ನಿತ್ಯಶಃ - ದಿನವೂ, ಭಕ್ಷಯಿಷ್ಯತಿಯದಿ - ತಿಂದುದೇ ಆದರೆ, ಲೋಕಃ - ಲೋಕವು, ಅಚಿ....ನ - ಶೀಘ್ರದಲ್ಲಿಯೇ, ಶೂನ್ಯಃ - ಬರಿದು, ಭವಿಷ್ಯತಿ - ಆಗುವುದು. ॥ ೨೧ ॥ ವಾಸವಸ್ಯ-ದೇವೇಂದ್ರನ, ವಚಃ-ಮಾತನ್ನು, ಶ್ರುತ್ವಾ-ಕೇಳಿ, ಸರ್ವ....ಹಃ - ಸಮಸ್ತ ಜನರಿಗೂ ತಾತನಾದ ಬ್ರಹ್ಮನು, ರಕ್ಷಾಂಸಿ - ರಾಕ್ಷಸರನ್ನು, ಆವಾಹಯಾಮಾಸ - ಕರೆ ಯಿಸಿದನು, ತೇಷು - ಆ ರಕ್ಕಸರಲ್ಲಿ, ಕುಂಭಕರ್ಣಃ - ಕುಂಭಕರ್ಣನನ್ನು, ದದರ್ಶಹ - ಕಂಡನಷ್ಟೆ, ಸ್ವಯಂಭೂಃ - ತನಗೆ ತಾನೇ ಹುಟ್ಟಿದ, ಪ್ರಜಾಪತಿಃ - ಬ್ರಹ್ಮನು, ಕುಂಭಕರ್ಣಂ - ಕುಂಭಕರ್ಣ ನನ್ನು, ಸಮೀಕ್ಷ್ಯೈವ - ನೋಡುತ್ತಲೇ, ವಿತತ್ರಾಸ - ನಡುಗಿದನು, ದೃಷ್ಟ್ವಾ - ಕಂಡು, ವಿಶ್ವಾ ಸ್ಯಚ - ಪ್ರಸನ್ನನನ್ನಾಗಿ ಮಾಡಿ, ಇದಂ - ಈ ರಕ್ಕಸನನ್ನು ಕುರಿತು, ಇದಂ - ಈ ಮಾತನ್ನು,

---

ಬ್ರಹ್ಮಲೋಕಕ್ಕೆ ಹೋಗಿ ಆ ಕುಂಭಕರ್ಣರಾಕ್ಷಸನ ದೌರಾತ್ಮ್ಯವನ್ನು ಬ್ರಹ್ಮದೇವನಿಗೆ ಅರಿಕೆ ಮಾಡಿದರು. ಅವರು ಆ ರಾಕ್ಷಸನು ಪ್ರಜೆಗಳೆಲ್ಲರನ್ನೂ ಭಕ್ಷಿಸುತ್ತಿರುವನೆಂದೂ, ದೇವತೆ ಗಳನ್ನು ಬೆದರಿಸಿ, ತಪಸ್ವಿಗಳ ಆಶ್ರಮಗಳೆಲ್ಲವನ್ನೂ ಹಾಳು ಮಾಡುತ್ತಿರುವನೆಂದೂ, ಪರ ಸ್ತ್ರೀಯರನ್ನು ಹೊತ್ತುಕೊಂಡು ಬರುತ್ತಿರುವನೆಂದೂ ಹೇಳಿ, "ಎಲೈ ದೇವೋತ್ತಮನೇ! ಬ್ರಹ್ಮನೇ! ಹೀಗೆ ಪ್ರತಿದಿನದಲ್ಲಿಯೂ ಆ ಕುಂಭಕರ್ಣನು ಜಂತುಗಳೆಲ್ಲವನ್ನೂ ಭುಜಿಸು ತ್ತಿದ್ದರೆ ಬಹು ಬೇಗನೆಯೇ ಪ್ರಪಂಚವು ನಿರ್ಮಾನುಷವಾಗಿ ಹೋಗುವುದರಲ್ಲಿ ಸಂದೇಹ ವಿಲ್ಲ" ಎಂದು ಅರಿಕೆ ಮಾಡಿದರು. ॥೧೯-೨೧॥ ದೇವೇಂದ್ರನೇ ಮೊದಲಾದವರಿಂತು ಅರಿಕೆ ಮಾಡುತ್ತಲೇ ಸರ್ವಲೋಕಪಿತಾಮಹನಾದ ಚತುರಾನನು ಸಮಸ್ತ ರಾಕ್ಷಸರೊಡಗೂಡಿದ ಆ ಕುಂಭಕರ್ಣನನ್ನು ಕರೆಯಿಸಿದನು. ಮಹಾ ಕಾಯನಾದ ಆ ಕುಂಭಕರ್ಣನು ಬಳಿಗೈದಿ ದೊಡನೆ ಆ ಬ್ರಹ್ಮದೇವನೂ ಅವನನ್ನು ನೋಡಿ ಭಯಭ್ರಾಂತನಾಗಿ ಹೋದನು. ಆಮೇಲೆ ಆತನು ಆ ಕುಂಭಕರ್ಣನನ್ನು ಸವಿನುಡಿಗಳಿಂದ ಪ್ರಸನ್ನನಾಗಿಸಿಕೊಂಡು ಅವನನ್ನು ಕುರಿತು,

ವಿಶ್ವಾಸ್ಯ ಚೈವೇದಂ ಸ್ವಯಂಭೂರಿದಮಬ್ರವೀತ್ ॥ ೨೩ ॥ ಧ್ರುವಂ ಲೋಕವಿನಾಶಾಯ ಪೌಲಸ್ತ್ಯೇನಾಽಸಿ ನಿರ್ಮಿತಃ । ತಸ್ಮಾತ್ತ್ವಮದ್ಯ ಪ್ರಭೃತಿ ಮೃತಕಲ್ಪಃ ಶಯಿಷ್ಯಸೇ ॥ ೨೪ ॥ ಬ್ರಹ್ಮಶಾಪಾಭಿಭೂತೋಽಥ ನಿಪಪಾತಾಗ್ರತಃ ಪ್ರಭೋಃ । ತತಃ ಪರಮಸಂಭ್ರಾಂತೋ ರಾವಣೋ ವಾಕ್ಯಮಬ್ರವೀತ್ ॥ ೨೫ ॥ "ವಿವೃದ್ಧಃ ಕಾಂಚನೋ ವೃಕ್ಷಃ ಫಲಕಾಲೇ ನಿಕೃತ್ಯತೇ । ನನಪ್ತಾರಂ ಸ್ವಕಂ ನ್ಯಾಯ್ಯಂ ಶಪ್ತುಮೇವಂ ಪ್ರಜಾಪತೇ! ॥೨೬॥ ನಮಿಥ್ಯಾ ವಚನಶ್ಚತ್ವಂ ಸ್ವಪ್ಸ್ಯತ್ಯೇಷ ನಸಂಶಯಃ । ಕಾಲಸ್ತು ಕ್ರಿಯತಾಮಸ್ಯ ಶಯನೇ ಜಾಗರೇ ತಥಾ" ॥ ೨೭ ॥ ರಾವಣಸ್ಯ ವಚಃ

ಅಬ್ರವೀತ್ - ನುಡಿದನು. ॥ ೨೨-೨೩ ॥ ಪೌಲಸ್ತ್ಯೇನ - ವಿಶ್ರವಸ್ಸಿನಿಂದ, ಲೋಕವಿನಾಶಾಯ - ಜನರ ವಿನಾಶಕ್ಕೋಸುಗ, ನಿರ್ಮಿತಃ - ಹುಟ್ಟಿಸಲ್ಪಟ್ಟವನು, ಅಸಿ - ಆದೆ, ಧ್ರುವಂ - ನಿಶ್ಚಯವು, ತಸ್ಮಾತ್ - ಆದುದರಿಂದ, ತ್ವಂ - ನೀನು, ಅದ್ಯಪ್ರಭೃತಿ - ಈ ಮೊದಲ್ಗೊಂಡು, ಮೃತಕಲ್ಪಃ - ಮೃತಪ್ರಾಯನಾಗಿ, ಶಯಿಷ್ಯಸೇ - ಮಲಗುತ್ತೀಯೆ. ॥೨೪॥ ಅಥ - ಬಳಿಕ, ಬ್ರಹ್ಮ....ತಃ - ಬ್ರಹ್ಮಶಾಪದಿಂದ ತಿರಸ್ಕೃತನಾಗಿ, ಪ್ರಭೋಃ - ಬ್ರಹ್ಮನ, ಅಗ್ರತಃ - ಮುಂಗಡೆಯೇ, ನಿಪಪಾತ - ಬಿದ್ದನು, ತತಃ - ಬಳಿಕ, ಪರ....ತಃ - ಬಹಳ ಭ್ರಾಂತನಾಗಿ, ರಾವಣಃ - ರಾವಣನು, ವಾಕ್ಯಂ - ಮಾತನ್ನು, ಅಬ್ರವೀತ್ ನುಡಿದನು. ॥ ೨೫ ॥ ಹೇ ಪ್ರಜಾಪತೇ - ಎಲೈ ಬ್ರಹ್ಮನೇ, ಕಾಂಚನೋವೃಕ್ಷಃ - ಸ್ವರ್ಣವೃಕ್ಷವು, ವಿವೃದ್ಧಃ - ವೃದ್ಧಿಗೊಂಡು, ಫಲಕಾಲೇ - ಫಲಕಾಲದಲ್ಲಿ, ನಿಕೃತ್ಯತೇ - ಕತ್ತರಿಸಲ್ಪಡುತ್ತದೆ, ಸ್ವಕಂ - ಸ್ವಕೀಯನಾದ, ನಪ್ತಾರಂ - ಮೊಮ್ಮಗನನ್ನು, ಏವಂ - ಹೀಗೆ, ಶಪ್ತುಂ - ಶಪಿಸುವುದಕ್ಕೆ, ನ್ಯಾಯ್ಯಂ - ನ್ಯಾಯವಾದದ್ದು, ನ - ಅಲ್ಲ. ॥ ೨೬ ॥ ತ್ವಂ - ನೀನು, ಮಿಥ್ಯಾವಚನಃ - ಸುಳ್ಳುಮಾತುಗಾರನು, ನ - ಅಲ್ಲ, ಏಷಃ - ಈ ಕುಂಭಕರ್ಣನು, ಸ್ವಪ್ಸ್ಯತಿ - ಮಲಗಿದವನೇ ಆಗುತ್ತಾನೆ, ನಸಂಶಯಃ - ಸಂಶಯವಿಲ್ಲ, ಅಸ್ಯ - ಈ ಕುಂಭಕರ್ಣನಿಗೆ, ಶಯನೇ - ಮಲಗೋಣದರಲ್ಲಿ, ತಥಾ - ಹಾಗೆಯೇ, ಜಾಗರೇ - ಎಚ್ಚರವಾಗುವ ಕಾಲದಲ್ಲಿಯೂ, ಕಾಲಸ್ತು - ಕಾಲವು, ಕ್ರಿಯತಾಂ - ಮಾಡಲ್ಪಡಲಿ. ॥ ೨೭ ॥ ರಾವಣಸ್ಯ - ರಾವಣನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಸ್ವಯಂಭೂಃ - ಬ್ರಹ್ಮನು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ಏಷಃ - ಈ ಕುಂಭಕರ್ಣನು,

---

"ಅಯ್ಯಾ ಕುಂಭಕರ್ಣನೇ! ನೀನು ನಿಜವಾಗಿಯೂ ಲೋಕನಾಶಕ್ಕೋಸ್ಕರವೇ ಕುಂಭಕರ್ಣನೆಂಬ ನಾಮಧೇಯದಿಂದ ವಿಶ್ರವಸ್ಸಿನ ಮೂಲಕ ನಿರ್ಮಿತನಾಗಿರುವೆ. ಆದುದರಿಂದ ನೀನು ಇದು ಮೊದಲ್ಗೊಂಡು ಮರಣಹೊಂದಿದವನಂತೆ ಮಹಾ ನಿದ್ರೆಯಿಂದ ಬಿದ್ದಿರು" ಎಂದನು. ಆ ಕೂಡಲೇ ಕುಂಭಕರ್ಣನು ಬ್ರಹ್ಮಶಾಪಾಹತನಾಗಿ ಕೆಳಕ್ಕೆಬಿದ್ದನು. ಆಗ ರಾವಣಾಸುರನು ಮಹಾ ಸಂಭ್ರಾಂತನಾಗಿ, "ಎಲೈ ದೇವೋತ್ತಮನೇ! ಚತುರಾನನೇ!! ಸ್ವರ್ಣ ವೃಕ್ಷವನ್ನು ಫಲಕಾಲದಲ್ಲಿ ಯಾರಾದರೂ ಛೇದಿಸುವುದುಂಟೆ? ನಿನಗೆ ಮೊಮ್ಮಗನಾದ ಈ ಕುಂಭಕರ್ಣನನ್ನು ಈ ರೀತಿ ಶಪಿಸುವುದುಂಟೆ? ಮಹಾತ್ಮನಾದ ನಿನ್ನ ವಚನವು ಅನ್ಯಥಾ ಆಗಲಾರದು. ಇದರಲ್ಲಿ ಸ್ವಲ್ಪಮಾತ್ರವೂ ಸಂಶಯವಿಲ್ಲವು. ಆದುದರಿಂದೆಲೈ ಬ್ರಹ್ಮನೇ! ಈ ಕುಂಭಕರ್ಣನು ನಿದ್ರಿಸುವುದಕ್ಕೂ, ಎಚ್ಚರಗೊಳ್ಳುವುದಕ್ಕೂ ಕಾಲವನ್ನು ನಿರ್ದೇಶಿಸು. ನನ್ನ ಪ್ರಾರ್ಥನೆಯನ್ನು ಲಾಲಿಸು" ಎಂದು ಕೇಳಿಕೊಂಡನು. ॥ ೨೨–೨೭ ॥ ಆಗ ಬ್ರಹ್ಮದೇವನು ರಾವಣಾಸುರನ ಪ್ರಾರ್ಥನೆಯನ್ನು ಲಾಲಿಸಿ, "ಎಲೈ ರಾಕ್ಷಸಶ್ರೇಷ್ಠನೇ! ಈ ಕುಂಭಕರ್ಣನು ಆರು

ಶ್ರುತ್ವಾ ಸ್ವಯಂಭೂರಿದಮಬ್ರವೀತ್ । "ಶಯಿತಾ ಹ್ಯೇಷ ಷಣ್ಮಾಸಾನೇಕಾಹಂ ಜಾಗರಿಷ್ಯತಿ ॥ ೨೮ ॥ ಏಕೇನಾಹ್ನಾ ತ್ವಸೌ ವೀರಶ್ಚರನ್ ಭೂಮಿಂ ಬುಭುಕ್ಷಿತಃ । ವ್ಯಾತ್ತಾಸ್ಯೋ ಭಕ್ಷಯೇಲ್ಲೋಕಾನ್ ಸಂಕ್ರುದ್ಧ ಇವ ಪಾವಕಃ" ॥ ೨೯ ॥ ಸೋಽಸೌ ವ್ಯಸನಮಾಪನ್ನಃ ಕುಂಭಕರ್ಣಮಬೋಧಯತ್ । ತ್ವತ್ಪರಾಕ್ರಮಭೀತಶ್ಚ ರಾಜಾ ಸಂಪ್ರತಿ ರಾವಣಃ ॥ ೩೦ ॥ ಸ ಏಷ ನಿರ್ಗತೋ ವೀರ! ಶಿಬಿರಾದ್ಭೀಮವಿಕ್ರಮಃ । ವಾನರಾನ್ ಭೃಶಸಂಕ್ರುದ್ಧೋ ಭಕ್ಷಯನ್ಪರಿಧಾವತಿ ॥ ೩೧ ॥ ಕುಂಭಕರ್ಣಂ ಸಮೀಕ್ಷ್ಯೈವ ಹರಯೋಽದ್ಯ ಪ್ರವಿದ್ರುತಾಃ । ಕಥಮೇನಂ ರಣೇ ಕ್ರುದ್ಧಂ ವಾರಯಿಷ್ಯಂತಿ

ಷಣ್ಮಾಸಾನ್ - ಆರು ತಿಂಗಳು, ಶಯಿತಾಹಿ - ಮಲಗುವನಷ್ಟೆ, ವೀರಃ - ಶೂರನಾದ, ಅಸೌ - ಈ ಕುಂಭಕರ್ಣನು, ಏಕೇನಾಹ್ನಾ - ಒಂದು ಹಗಲಿನಲ್ಲಿ, ಭೂಮಿಂ - ಭೂಮಿಯಲ್ಲಿ, ಚರನ್ - ಸರಚರಿಸುತ್ತ, ಬುಭುಕ್ಷಿತಃ - ಹಸಿದವನಾಗಿ, ವ್ಯಾತ್ತಾಸ್ಯಃ - ತೆರೆಯಲ್ಪಟ್ಟ ಬಾಯಿಯುಳ್ಳವನಾಗಿ, ಪಾವಕ ಇವ - ಅಗ್ನಿಯಂತೆ, ಸಂಕ್ರುದ್ಧಃ - ಕೋಪಗೊಂಡು, ಲೋಕಾನ್ - ಲೋಕಗಳನ್ನು, ಭಕ್ಷಯೇತ್ - ತಿನ್ನುವನು. ॥ ೨೮-೨೯ ॥ ಸೋಽಸೌ - ಆ ಈ, ರಾಜಾ - ಅರಸಾದ, ರಾವಣಃ - ರಾವಣನು, ಸಂಪ್ರತಿ - ಈಗ, ತ್ವತ್ಪ....ಶ್ಚ - ನಿನ್ನ ಪರಾಕ್ರಮದಿಂದ ಭಯಗೊಂಡು, ವ್ಯಸನಂ - ವ್ಯಸನವನ್ನು, ಆಪನ್ನಃ - ಹೊಂದಿ, ಕುಂಭಕರ್ಣಂ - ಕುಂಭಕರ್ಣನನ್ನು, ಅಬೋಧಯತ್ - ಎಬ್ಬಿಸಿದನು. ॥ ೩೦ ॥ ಹೇ ವೀರ - ಎಲೈ ಶೂರನೇ, ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ಸಏಷಃ - ಆ ಈ ಕುಂಭಕರ್ಣನು, ಶಿಬಿರಾತ್ - ತನ್ನ ಮನೆಯಿಂದ, ನಿರ್ಗತಃ - ಹೊರಟನು, ಭೃಶಸಂಕ್ರುದ್ಧಃ - ಬಹಳ ಕೋಪಿಷ್ಠನಾಗಿ, ವಾನರಾನ್ - ಕಪಿಗಳನ್ನು, ಭಕ್ಷಯನ್ - ತಿನ್ನುತ್ತ, ಪರಿಧಾವತಿ - ಓಡಿಬರುವನು. ॥ ೩೧ ॥ ಹರಯಃ - ಕಪಿಗಳು, ಕುಂಭಕರ್ಣಂ - ಕುಂಭಕರ್ಣನನ್ನು, ಸಮೀಕ್ಷ್ಯೈವ - ನೋಡುತ್ತಲೇ, ಅದ್ಯ - ಈಗ, ಪ್ರವಿದ್ರುತಾಃ - ಓಡಿಹೋದರು, ವಾನರಾಃ - ಕಪಿಗಳು, ರಣೇ - ಕಾಳಗದಲ್ಲಿ, ಕ್ರುದ್ಧಃ - ಕೋಪಿಷ್ಠನಾದ, ಏನಂ - ಈ ಕುಂಭಕರ್ಣನನ್ನು, ಕಥಂವಾರ

ತಿಂಗಳುಗಳಕಾಲ ನಿದ್ರಿಸುವನು. ಆಮೇಲೆ ಒಂದು ದಿನ ಮಾತ್ರ ಎಚ್ಚರದಿಂದಿದ್ದು ಆಮೇಲೆ ಮತ್ತೆ ಆರು ತಿಂಗಳು ನಿದ್ರಿಸುವನು. ಆ ಒಂದು ದಿನದಲ್ಲಿ ಈ ಕುಂಭಕರ್ಣನು ಮೂರು ಲೋಕಗಳನ್ನೂ ಭಕ್ಷಿಸುವಷ್ಟು ಶಕ್ತಿಯುಳ್ಳವನಾಗಿರುತ್ತಾನೆ. ಇಷ್ಟೆಯಲ್ಲದೆ ಇವನು ಆ ದಿನದಲ್ಲಿ ಕೋಪೋದ್ರಿಕ್ತನಾದುದೇ ಆದರೆ ಯಜ್ಞೇಶ್ವರನಂತೆ ಸಮಸ್ತ ಲೋಕಗಳನ್ನೂ ನಾಶಗೊಳಿಸಿ ಬಿಡುತ್ತಾನೆ" ಎಂದು ಹೇಳಿದನು. ಅದು ಮೊದಲ್ಗೊಂಡು ಈ ಕುಂಭಕರ್ಣನು ಆರು ತಿಂಗಳು ನಿದ್ರಿಸುತ್ತಲೂ, ಒಂದುದಿನ ಮಾತ್ರ ಎಚ್ಚರಗೊಳ್ಳುತ್ತಲೂ ಇರುವನು. ಈಗ ರಾವಣಾಸುರನು ನಿನ್ನ ಪರಾಕ್ರಮದಿಂದ ಭೀತನಾಗಿ ನಿದ್ರಿಸುತ್ತಿದ್ದ ಈ ಕುಂಭಕರ್ಣನನ್ನೆಚ್ಚರಗೊಳಿಸಿದ್ದಾನೆ. ಆದುದರಿಂದಲೇ ಇವನು ತನ್ನ ಶಿಬಿರದಿಂದ ಹೊರಗೆ ಬಂದಿರುವುದು. ಆದುದರಿಂದ ಭಯಂಕರಪರಾಕ್ರಮಿಯಾದ ಈ ಕುಂಭಕರ್ಣನು ಕ್ರೋಧೋದ್ದೀಪಿತನಾಗಿ ಈ ವಾನರರನ್ನು ಕಂಡು ಮತ್ತಷ್ಟು ಜಾಗ್ರತೆಯಾಗಿ ಹೊರಟು ಬರುತ್ತಿದ್ದಾನೆ. ಇವನನ್ನು ನೋಡಿ ಈ ವಾನರರೆಲ್ಲರೂ ಭಯಚಕಿತರಾಗಿ ಓಡುತ್ತಿರುವರು. ಕೋಪಯುಕ್ತನಾದ ಈ ಕುಂಭಕರ್ಣನನ್ನು ನಮ್ಮ ವಾನರರು ಯಾವ ರೀತಿ ಸಂಹರಿಸುವರೊ! ರಾಮಚಂದ್ರ! ಭಯಪೀಡಿತರಾದ ಈ ವಾನರರು ಇವನನ್ನು ಎಷ್ಟುಮಾತ್ರಕ್ಕೂ ಸಂಹರಿಸಲಾರರು. ಆದುದರಿಂದ ನೀನೀಗ ವಾನರ

ವಾನರಾಃ ॥ ೩೨ ॥ ಉಚ್ಯಂತಾಂ ವಾನರಾಸ್ಸರ್ವೇ ಯಂತ್ರಮೇತತ್ಸಮುಚ್ಛ್ರಿತಂ । ಇತಿ ವಿಜ್ಞಾಯ ಹರಯೋ ಭವಿಷ್ಯಂತೀಹ ನಿರ್ಭಯಾಃ " ॥ ೩೩ ॥ ವಿಭೀಷಣವಚಃ ಶ್ರುತ್ವಾ ಹೇತುಮತ್ಸುಮುಖೇರಿತಂ । ಉವಾಚ ರಾಘವೋ ವಾಕ್ಯಂ ನೀಲಂ ಸೇನಾಪತಿಂ ತದಾ ॥ ೩೪ ॥ "ಗಚ್ಛ ಸೈನ್ಯಾನಿ ಸರ್ವಾಣಿ ವ್ಯೂಹ್ಯ ತಿಷ್ಠಸ್ವ ಪಾವಕೇ । ದ್ವಾರಾಣ್ಯಾದಾಯ ಲಂಕಾಯಾಶ್ಚರ್ಯಾಶ್ಚಾಪ್ಯಥ ಸಂಕ್ರಮಾನ್ ॥ ೩೫ ॥ ಶೈಲಶೃಂಗಾಣಿ ವೃಕ್ಷಾಂಶ್ಚ ಶಿಲಾಶ್ಚಾಪ್ಯುಪಸಂಹರ । ತಿಷ್ಠಂತು ವಾನರಾಸ್ಸರ್ವೇ ಸಾಯುಧಾಶ್ಶೈಲಪಾಣಯಃ ॥ ೩೬ ॥ ರಾಘವೇಣ ಸಮಾದಿಷ್ಟೋ ನೀಲೋ ಹರಿಚಮೂ

ಯಿಷ್ಯಂತಿ - ಹೇಗೆ ನಿವಾರಿಸುವರು. ॥೩೨॥ ಸರ್ವೇವಾನರಾಃ - ಸಮಸ್ತ ವಾನರರೂ, ಏತತ್ - ಇದು, ಸಮುಚ್ಛ್ರಿತಂ-ಅತ್ಯುನ್ನತವಾದ, ಯಂತ್ರಂ - ವಾನರಭೀಷಣಾರ್ಥವಾದ (ಯಂತ್ರ) ವೇಷವು, ಇತಿ - ಇಂತೆಂದು, ಉಚ್ಯಂತಾಂ - ಹೇಳಲ್ಪಡಲಿ, ಇತಿ - ಈ ಪರಿಯಾಗಿ, ವಿಜ್ಞಾಯ - ತಿಳಿದು, ಹರಯಃ - ಕಪಿಗಳು, ನಿರ್ಭಯಾಃ - ಭಯವಿಲ್ಲದವರು, ಭವಿಷ್ಯಂತಿ - ಆಗುವರು. ॥ ೩೩ ॥ ಹೇತುಮತ್ - ಹೇತುಗರ್ಭಿತವಾದ, ಸುಮುಖೇರಿತಂ - ಸುಮುಖವಾದಂತೆ ಹೇಳಲ್ಪಟ್ಟ, ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ರಾಘವಃ - ಶ್ರೀರಾಮನು, ತದಾ - ತತ್ಕ್ಷಣದಲ್ಲಿ, ಸೇನಾಪತಿಂ - ಸೇನಾಪತಿಯಾದ, ನೀಲಂ - ನೀಲನನ್ನು ಕುರಿತು, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೩೪ ॥ ಹೇ ಪಾವಕೇ - ಎಲೈ ಅಗ್ನಿಪುತ್ರನಾದ ನೀಲನೇ, ಗಚ್ಛ - ಹೋಗು, ಸರ್ವಾಣಿ - ಸಮಸ್ತಗಳಾದ, ಸೈನ್ಯಾನಿ - ಸೈನ್ಯಗಳನ್ನು, ವ್ಯೂಹ್ಯ - ಗುಂಪು ಸೇರಿಸಿ, ಲಂಕಾಯಾಃ - ಲಂಕಾಪಟ್ಟಣದ, ದ್ವಾರಾಣಿ - ಬಾಗಿಲುಗಳನ್ನು, ಆದಾಯ - ತಡೆದು, ಚರ್ಯಾಃ - ಮಾರ್ಗಗಳನ್ನು, ಅಥ - ಬಳಿಕ, ಸಂಕ್ರಮಾನಪಿ - ಸಂಚಾರ ಸ್ಥಳಗಳನ್ನೂ, ಆದಾಯ - ತಡೆದು, ತಿಷ್ಠಸ್ವ - ನಿಲ್ಲು. ॥ ೩೫ ॥ ಶೈಲಶೃಂಗಾಣಿ - ಬೆಟ್ಟದ ಶಿಖರಗಳನ್ನೂ, ವೃಕ್ಷಾಂಶ್ಚ - ಮರಗಳನ್ನೂ, ಶಿಲಾಶ್ಚ - ಕಲ್ಲುಗಳನ್ನೂ, ಉಪಸಂಹರ - ತಂದಿಟ್ಟುಕೋ, ಸರ್ವೇವಾನರಾಃ - ಸಮಸ್ತ ವಾನರರೂ, ಸಾಯುಧಾಃ - ಆಯುಧಗಳಿಂದೊಡಗೂಡಿ, ಶೈಲಪಾಣಯಃ - ಕಲ್ಲುಗಳೇ ಕೈಯಲ್ಲುಳ್ಳವರಾಗಿ, ತಿಷ್ಠಂತು - ನಿಲ್ಲಲಿ, ಇತಿ - ಇಂತೆಂದು, ಉವಾಚ - ಹೇಳಿದನು. ॥ ೩೬ ॥ ರಾಘವೇಣ - ಶ್ರೀರಾಮನಿಂದ, ಸಮಾದಿಷ್ಟಃ - ಆಜ್ಞಾಪಿಸಲ್ಪಟ್ಟ, ಹರಿಚಮೂಪತಿಃ - ವಾನರಾಧಿಪತಿಯಾದ, ಕಪಿಕುಂಜರಃ - ಉತ್ತಮ ವಾನರನಾದ, ನೀಲಃ - ನೀಲನು, ವಾನರಾನೀಕಂ - ಕಪಿಸೈನ್ಯವನ್ನು, ಯಥಾವತ್ - ಶ್ರೀರಾಮನ ಆಜ್ಞೆಯಂತೆ,

---

ರನ್ನು ಭಯಗೊಳಿಸಲು ಕಳುಹಿಸಿರುವ ಬಹು ದೊಡ್ಡ ಯಂತ್ರವಿದೆಂದು ಎಲ್ಲರಿಗೂ ತಿಳಿಸು. ನೀನು ಆ ರೀತಿ ಹೇಳಿದರೆ ಈ ವಾನರರೆಲ್ಲರೂ ಭಯವನ್ನುಳಿದು ಸಮಾಧಾನ ಹೊಂದುವರು" ಎಂದು ಹೇಳಿದನು. ॥ ೨೮–೩೩ ॥ ವಿಭೀಷಣನೀರೀತಿ ಹೇಳಿದ ಮಾತುಗಳನ್ನು ಕೇಳಿ ಶ್ರೀರಾಮಮೂರ್ತಿಯು ಪರಮ ಸಂತುಷ್ಟನಾಗಿ ನೀಲನೆಂಬ ವಾನರಾಧಿಪತಿಯನ್ನು ನೋಡಿ, "ಅಯ್ಯಾ ನೀಲನೇ! ನೀನೀಗಲೇ ಜಾಗ್ರತೆಯಾಗಿ ಹೋಗಿ ನಮ್ಮ ವಾನರರೆಲ್ಲರನ್ನೂ ಒಟ್ಟುಗೂಡಿಸಿ ಲಂಕಾನಗರದ ದ್ವಾರಪ್ರದೇಶಗಳನ್ನಾಕ್ರಮಿಸುವಂತೆ ಮಾಡು. ಇದೂ ಅಲ್ಲದೆ ಪರ್ವತಶಿಖರಗಳನ್ನೂ, ದೊಡ್ಡದೊಡ್ಡ ವೃಕ್ಷಗಳನ್ನೂ, ಬಂಡೆಗಳನ್ನೂ ಧರಿಸಿ ವಾನರಸೈನ್ಯವೆಲ್ಲವೂ ಸರ್ವಸಿದ್ಧವಾಗಿರಲಿ" ಎಂದು ಹೇಳಿದನು. ಶ್ರೀರಾಮನಿಂತು ನುಡಿದೊಡನೆಯೆ ಸೇನಾಧಿಪತಿಯಾದ ನೀಲನು ವಾನರರೆಲ್ಲರೂ ಯುದ್ಧಸನ್ನದ್ಧರಾಗಿರಬೇಕೆಂದು ಆಜ್ಞಾ

ಪತಿಃ । ಶಶಾಸ ವಾನರಾನೀಕಂ ಯಥಾವತ್ಕಪಿಕುಂಜರಃ ‖ ೩೭ ‖ ತತೋ ಗವಾಕ್ಷಃ ಶರಭೋ ಹನುಮಾನಂಗದಸ್ತಥಾ । ಶೈಲಶೃಂಗಾಣಿ ಶೈಲಾಭಾ ಗೃಹೀತ್ವಾ ದ್ವಾರಮಭ್ಯಯುಃ ‖ ೩೮ ‖ ರಾಮವಾಕ್ಯಮುಪಶ್ರುತ್ಯ ಹರಯೋ ಜಿತಕಾಶಿನಃ । ಪಾದಪೈರರ್ದಯನ್ವೀರಾ ವಾನರಾಃ ಪರವಾಹಿನೀಂ ‖ ೩೯ ‖

ತತೋ ಹರೀಣಾಂ ತದನೀಕಮುಗ್ರಂ
ರರಾಜ ಶೈಲೋದ್ಯತ ದೀಪ್ತಹಸ್ತಂ ।
ಗಿರೇಸ್ಸಮೀಪಾನುಗತಂ ಯಥೈವ
ಮಹನ್ಮಹಾಂಭೋಧರಜಾಲಮುಗ್ರಂ ‖ ೪೦ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಷಷ್ಟಿತಮಸ್ಸರ್ಗಃ.

ಶಶಾಸ - ಆಜ್ಞಾಪಿಸಿದನು. ‖೩೭‖ ತತಃ - ಬಳಿಕ, ಶೈಲಾಭಾಃ - ಬೆಟ್ಟಕ್ಕೆ ಸಮಾನರಾದ, ಗವಾಕ್ಷಃ - ಗವಾಕ್ಷನೂ, ಶರಭಃ - ಶರಭನೂ, ಹನೂಮಾನ್ - ಆಂಜನೇಯನೂ, ತಥಾ - ಹಾಗೆಯೇ, ಅಂಗದಃ - ಅಂಗದನೂ, ಈ ನಾಲ್ವರೂ, ಶೈಲಶೃಂಗಾಣಿ - ಬೆಟ್ಟಗಳ ಶಿಖರಗಳನ್ನು, ಗೃಹೀತ್ವಾ - ತೆಗೆದುಕೊಂಡು, ದ್ವಾರಂ - ಬಾಗಿಲುಗಳನ್ನು ಕುರಿತು, ಅಭ್ಯಯುಃ - ಅಭಿಮುಖವಾಗಿ ಬಂದರು. ‖ ೩೮ ‖ ರಾಮವಾಕ್ಯಂ - ಶ್ರೀರಾಮನ ಮಾತನ್ನು, ಉಪಶ್ರುತ್ಯ - ಕೇಳಿ, ಜಿತಕಾಶಿನಃ - ಜಯಶೀಲರಾದ, ಹರಯಃ - ಅಪಹಾರದಲ್ಲಿ ಸಮರ್ಥರಾದ, ವೀರಾಃ - ಶೂರರಾದ, ವಾನರಾಃ - ಕಪಿಗಳು, ಪಾದಪೈಃ - ಮರಗಳಿಂದ, ಪರವಾಹಿನೀಂ - ಶತ್ರುಸೈನ್ಯವನ್ನು, ಅರ್ದಯನ್ - ಹೊಡೆದರು. ‖ ೩೯ ‖ ತತಃ - ಬಳಿಕ, ಶೈಲೋ.....ಸ್ತಂ - ಬೆಟ್ಟಗಳಿಂದ ಎತ್ತಲ್ಪಟ್ಟ ಹೊಳೆಯುತ್ತಿರುವ ಹಸ್ತಗಳುಳ್ಳ, ಉಗ್ರಂ - ಭಯಂಕರವಾದ, ಹರೀಣಾಂ - ಕಪಿಗಳ, ತದನೀಕಂ - ಆ ಸೈನ್ಯವು, ಗಿರೇಃ - ಬೆಟ್ಟಕ್ಕೆ, ಸಮೀ....ತಂ - ಸಮೀಪದಲ್ಲಿ ಬರುತ್ತಿರುವ, ಮಹತ್ - ದೊಡ್ಡದಾದ, ಉಗ್ರಂ - ಭಯಂಕರವಾದ, ಮಹಾಂ....ಥಾ - ದೊಡ್ಡ ಮುಗಿಲುಗಳ ಸಮೂಹದಂತೆ, ರರಾಜ - ಹೊಳೆಯುತ್ತಿತ್ತು. ‖ ೪೦ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಷಷ್ಟಿತಮಸ್ಸರ್ಗಃ.

ಪಿಸಿದನು. ಆಗ ಗವಾಕ್ಷ, ಶರಭ, ಹನುಮಂತ, ಅಂಗದನೇ ಮೊದಲಾದ ವಾನರರೆಲ್ಲರೂ ಪರ್ವತೋಪಮವಾದ ಶಿಖರಗಳನ್ನು ಕೈಯಲ್ಲಿ ಹಿಡಿದವರಾಗಿ ಲಂಕಾನಗರದ ದ್ವಾರಪ್ರದೇಶಗಳನ್ನು ಕುರಿತು ಹೊರಟರು. ಈ ಪ್ರಕಾರವಾಗಿ ಜಯಶೀಲರೂ, ವೀರರೂ ಆದ ಆ ವಾನರರೆಲ್ಲರೂ ಶ್ರೀರಾಮನ ಆಜ್ಞೆಯಂತೆ ಶತ್ರುಗಳನ್ನು ಬಗೆಬಗೆಯಾಗಿ ಪೀಡಿಸತೊಡಗಿದರು. ಆ ಸಮಯದಲ್ಲಿ ಮಹಾ ಭಯಂಕರವಾದುದೂ, ಶಿಖರಗಳನ್ನು ಕೈಯಲ್ಲಿ ಹಿಡಿದ ವಾನರರಿಂದ ತುಂಬಿರುವುದೂ, ಪರ್ವತ ಸಮೀಪದಲ್ಲಿ ಸಂಚರಿಸುತ್ತಿರುವುದೂ, ಮೇಘಸಮೂಹಗಳಂತೆ ಪ್ರಕಾಶಿಸುತ್ತಿರುವುದೂ ಆದ ಆ ವಾನರರ ಮಹಾ ಸೇನೆಯು ವಿರಾಜಿಸುತ್ತಿದ್ದಿತು. ‖ ೩೪–೪೦ ‖

ಇಂತಿದು ವಿಭೀಷಣವಿಸ್ತೃತ ಕುಂಭಕರ್ಣಸ್ವರೂಪ ವೃತ್ತಾಂತವೆಂಬ
ಅರುವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ದ್ವಿಷಷ್ಟಿತಮಸ್ಸರ್ಗಃ

ಸತು ರಾಕ್ಷಸಶಾರ್ದೂಲೋ ನಿದ್ರಾಮದಸಮಾಕುಲಃ । ರಾಜಮಾರ್ಗಂ ಶ್ರಿಯಾಜುಷ್ಟಂ ಯಯೌ ವಿಪುಲವಿಕ್ರಮಃ ॥ ೧ ॥ ರಾಕ್ಷಸಾನಾಂ ಸಹಸ್ರೈಶ್ಚ ವೃತಃ ಪರಮದುರ್ಜಯಃ । ಗೃಹೇಭ್ಯಃ ಪುಷ್ಪವರ್ಷೇಣ ಕೀರ್ಯಮಾಣಸ್ತದಾ ಯಯೌ ॥ ೨ ॥ ಸಹೇಮಜಾಲವಿತತಂ ಭಾನುಭಾಸ್ವರದರ್ಶನಂ । ದದರ್ಶ ವಿಪುಲಂ ರಮ್ಯಂ ರಾಕ್ಷಸೇಂದ್ರನಿವೇಶನಂ ॥ ೩ ॥ ಸತತ್ತದಾ ಸೂರ್ಯ ಇವಾಭ್ರಜಾಲಂ ಪ್ರವಿಶ್ಯ ರಕ್ಷೋಧಿಪತೇರ್ನಿವೇಶಂ । ದದರ್ಶ ದೂರೇಽಗ್ರಜಮಾಸನಸ್ಥಂ ಸ್ವಯಂಭುವಂ

ವಿಪುಲವಿಕ್ರಮಃ - ವಿಸ್ತಾರವಾದ ಪರಾಕ್ರಮವುಳ್ಳ, ನಿದ್ರಾ....ಲಃ - ನಿದ್ದೆಯಿಂದಲೂ, ಮದದಿಂದಲೂ ವ್ಯಾಕುಲನಾದ, ಪರ....ಯಃ - ಜಯಿಸಲಸಾಧ್ಯನಾದ, ರಾಕ್ಷ....ಲಃ - ರಾಕ್ಷಸಶ್ರೇಷ್ಠನಾದ, ಸತು-ಆ ಕುಂಭಕರ್ಣನಾದರೆ, ರಾಕ್ಷಸಾನಾಂ - ರಕ್ಕಸರ, ಸಹಸ್ರೈಃ - ಸಾವಿರಾರುಗಳಿಂದಲೂ, ವೃತಃ - ಸುತ್ತುವರೆಯಲ್ಪಟ್ಟವನಾಗಿ, ಶ್ರಿಯಾ - ಕಾಂತಿಯಿಂದ, ಜುಷ್ಟಂ - ವ್ಯಾಪ್ತವಾದ, ರಾಜಮಾರ್ಗಂ - ರಾಜಬೀದಿಯಲ್ಲಿ, ಯಯೌ - ತೆರಳಿದನು. ॥೧॥ ಗೃಹೇಭ್ಯಃ-ಮನೆಗಳಿಂದ, (ಬರುತ್ತಿದ್ದ) ಪುಷ್ಪವರ್ಷೇಣ - ಹೂಮಳೆಯಿಂದ, ತದಾ - ಆ ಕಾಲದಲ್ಲಿ, ಕೀರ್ಯಮಾಣಃ - ಎರಚಲ್ಪಟ್ಟವನಾಗಿ, ಯಯೌ - ತೆರಳಿದನು. ॥ ೨ ॥ ಸಃ - ಆ ಕುಂಭಕರ್ಣನು, ಹೇಮ....ತಂ - ಚಿನ್ನದಮೇಲ್ಕಟ್ಟುಗಳಿಂದ ವಿಸ್ತರಿಸಲ್ಪಟ್ಟ, ಭಾನು....ನಂ - ಸೂರ್ಯನಂತೆ ಹೊಳೆಯುತ್ತಿರುವ ನೋಟವುಳ್ಳ, ವಿಪುಲಂ - ವಿಸ್ತಾರವಾದ, ರಮ್ಯಂ - ಇಂಪಾಗಿರುವ, ರಾಕ್ಷ....ನಂ - ರಾವಣನ ಮನೆಯನ್ನು, ದದರ್ಶ - ಕಂಡನು. ॥ ೩ ॥ ಸಃ - ಆ ಕುಂಭಕರ್ಣನು, ತದಾ - ಆ ಕಾಲದಲ್ಲಿ, ಸೂರ್ಯಃ - ಸೂರ್ಯನು, ಅಭ್ರಜಾಲಮಿವ - ಮೇಘಗಳ ತಂಡಗಳಂತೆ, ರಕ್ಷೋಧಿಪತೇಃ - ರಾವಣನ, ನಿವೇಶಂ - ಮನೆಯನ್ನು, ಪ್ರವಿಶ್ಯ - ಹೊಕ್ಕು, ದೂರೇ - ದೂರದಲ್ಲಿ, ಶಕ್ರಃ - ದೇವೇಂದ್ರನು, ಆಸನಸ್ಥಂ - ಪೀಠದಲ್ಲಿ ಕುಳಿತುಕೊಂಡಿರುವ, ಸ್ವಯಂಭುವಮಿವ - ಬ್ರಹ್ಮನನ್ನಂತೆ, ಆಸನಸ್ಥಂ - ಪೀಠಸ್ಥನಾದ, ಅಗ್ರಜಂ - ಅಣ್ಣ

ಇತ್ತ ನಿದ್ರಾಮದದಿಂದ ವ್ಯಾಕುಲನಾದ ಕುಂಭಕರ್ಣನು ಸಮಸ್ತ ಸಂಪತ್ತುಗಳಿಂದ ಶೋಭಿಸುತ್ತಿರುವ ಲಂಕಾನಗರದ ರಾಜಬೀದಿಯಲ್ಲಿ ನಡೆದು ಬರುತ್ತಿದ್ದನು. ಅನೇಕ ಸಹಸ್ರ ಮಂದಿ ರಾಕ್ಷಸರು ಅವನನ್ನು ಹಿಂಬಾಲಿಸಿ ಬರುತ್ತಿದ್ದರು. ಆ ಕುಂಭಕರ್ಣನಿಂತು ಮಹಾ ವೈಭವದಿಂದ ರಾವಣನ ಅರಮನೆಗೈತರುತ್ತಿರಲು ದಾರಿಯಲ್ಲಿ ಮನೆಮನೆಗಳವರೂ ಅವನ ಮೇಲೆ ಪೂಮಳೆಗರೆದರು. ಹೀಗೆ ಶತ್ರುಮರ್ದನನಾದ ಆ ರಾಕ್ಷಸನು ಉತ್ಸವದಿಂದ ಹೊರಟು ಸ್ವರ್ಣನಿರ್ಮಿತಗಳಾದ ಗವಾಕ್ಷಗಳಿಂದ ಕೂಡಿ, ಸೂರ್ಯನಂತೆ ಪ್ರಕಾಶಿಸುತ್ತಿರುವ ಬಹು ಮನೋಹರವೂ, ಬಹು ವಿಶಾಲವೂ ಆದ ತನ್ನ ಅಣ್ಣನಾದ ರಾವಣಾಸುರನ ಅರಮನೆಯನ್ನು ಕಂಡನು. ಆಮೇಲೆ ಅವನು ಸೂರ್ಯನು ಮೇಘಮಂಡಲವನ್ನು ಪ್ರವೇಶಿಸುವಂತೆ ಆ ಅರಮನೆಯನ್ನು ಪ್ರವೇಶಿಸಿ, ಸ್ವಲ್ಪ ದೂರದಲ್ಲಿದ್ದ ಸಿಂಹಾಸನದಲ್ಲಿ ಸುಖಾಸೀನನಾಗಿರುವ ತನ್ನ ಅಣ್ಣನಾದ ರಾವಣಾಸುರನನ್ನು, ಬ್ರಹ್ಮದೇವನನ್ನು ದೇವೇಂದ್ರನೆಂತೋ ಅಂತು ಕಂಡನು.

ಶಕ್ರಮಿವಾಸನಸ್ಥಂ ॥ ೪ ॥ ಭ್ರಾತುಸ್ಸಭವನಂ ಗಚ್ಛನ್ ರಕ್ಷೋಗಣಸಮನ್ವಿತಂ । ಕುಂಭಕರ್ಣಃ ಪದನ್ಯಾಸೈರಕಂಪಯತ ಮೇದಿನೀಂ ॥ ೫ ॥ ಸೋಽಭಿಗಮ್ಯ ಗೃಹಂ ಭ್ರಾತುಃ ಕಕ್ಷ್ಯಾಮಭಿವಿಗಾಹ್ಯ ಚ । ದದರ್ಶೋದ್ವಿಗ್ನಮಾಸೀನಂ ವಿಮಾನೇ ಪುಷ್ಪಕೇ ಗುರುಂ ॥ ೬ ॥ ಅಥ ದೃಷ್ಟ್ವಾ ದಶಗ್ರೀವಃ ಕುಂಭಕರ್ಣಮುಪಸ್ಥಿತಂ । ತೂರ್ಣಮುತ್ಥಾಯ ಸಂಹೃಷ್ಟಸ್ಸನ್ನಿಕರ್ಷಮುಪಾನಯತ್ ॥೭॥ ಅಥಾಸೀನಸ್ಯ ಪರ್ಯಂಕೇ ಕುಂಭಕರ್ಣೋ ಮಹಾಬಲಃ । ಭ್ರಾತುರ್ವವಂದೇ ಚರಣೌ ಕಿಂಕೃತ್ಯಮಿತಿ ಚಾಬ್ರವೀತ್ ॥ ೮ ॥ ಉತ್ಪತ್ಯ ಚೈನಂ ಮುದಿತೋ ರಾವಣಃ ಪರಿಷಸ್ವಜೇ । ಸಭ್ರಾತ್ರಾ

ನಾದ ರಾವಣನನ್ನು, ದದರ್ಶ - ಕಂಡನು. ॥೪॥ ಸಃಕುಂಭಕರ್ಣಃ - ಆ ಕುಂಭಕರ್ಣನು, ಭ್ರಾತುಃ - ಅಣ್ಣನ, ರಕ್ಷೋ...ತಂ - ರಾಕ್ಷಸರ ಸಮೂಹದಿಂದ ಕೂಡಿರುವ, ಭವನಂ - ಮನೆಯಲ್ಲಿ, ಗಚ್ಛನ್ - ಹೋಗುತ್ತ, ಪದನ್ಯಾಸೈಃ - ಹೆಜ್ಜೆಗಳನ್ನಿಡೋಣದರಿಂದ, ಮೇದಿನೀಂ - ಭೂಮಿಯನ್ನು, ಅಕಂಪಯತ - ಕಂಪಿಸುವಂತೆ ಮಾಡಿದನು. ॥ ೫ ॥ ಸಃ - ಆ ಕುಂಭಕರ್ಣನು, ಭ್ರಾತುಃ - ಅಣ್ಣನ, ಗೃಹಂ - ಮನೆಯನ್ನು ಕುರಿತು, ಅಭಿಗಮ್ಯ - ಬಂದು, ಕಕ್ಷ್ಯಾಂ - ತೊಟ್ಟಿಯನ್ನು, ಅವಿಗಾಹ್ಯಚ - ಪ್ರವೇಶಮಾಡಿ, ಪುಷ್ಪಕೇವಿಮಾನೇ - ಪುಷ್ಪಕವಿಮಾನದಲ್ಲಿ, ಆಸೀನಂ - ಕುಳಿತಿರುವ, ಉದ್ವಿಗ್ನಂ - ಭಯಗ್ರಸ್ತನಾದ, ಗುರುಂ - ಅಣ್ಣನಾದ ರಾವಣನನ್ನು, ದದರ್ಶ - ಕಂಡನು. ॥ ೬ ॥ ಅಥ - ಬಳಿಕ, ದಶಗ್ರೀವಃ - ರಾವಣನು, ಉಪಸ್ಥಿತಂ - ಸಮೀಪದಲ್ಲಿರುವ, ಕುಂಭಕರ್ಣಂ - ಕುಂಭಕರ್ಣನನ್ನು, ದೃಷ್ಟ್ವಾ - ಕಂಡು, ಸಂಹೃಷ್ಟಃ - ಸಂತೋಷಗೊಂಡು, ತೂರ್ಣಂ - ಜಾಗ್ರತೆಯಾಗಿ, ಉತ್ಥಾಯ - ಎದ್ದು, ಸನ್ನಿಕರ್ಷಂ - ಸಮೀಪವನ್ನು ಕುರಿತು, ಉಪಾನಯತ್ - ಕರೆದುಕೊಂಡನು. ॥ ೭ ॥ ಅಥ - ಬಳಿಕ, ಪರ್ಯಂಕೇ - ಮಂಚದಲ್ಲಿ, ಆಸೀನಸ್ಯ-ಕುಳಿತುಕೊಂಡಿರುವ, ಭ್ರಾತುಃ - ಅಣ್ಣನ, ಚರಣೌ - ಪಾದಗಳನ್ನು, ಮಹಾಬಲಃ - ಬಹಳ ಬಲಶಾಲಿಯಾದ, ಕುಂಭಕರ್ಣಃ - ಕುಂಭಕರ್ಣನು, ವವಂದೇ - ವಂದಿಸಿದನು, ಕಿಂಕೃತ್ಯಂ - ಏನುಕಾರ್ಯವು, ಇತಿ - ಇಂತೆಂದು, ಅಬ್ರವೀಚ್ಚ - ನುಡಿಯಲೂ ನುಡಿದನು. ॥ ೮ ॥ ರಾವಣಃ - ರಾವಣನು, ಮುದಿತಃ - ಸಂತೋಷಗೊಂಡವನಾಗಿ, ಉತ್ಪತ್ಯ - ಎದ್ದು, ಏನಂ - ಈ ಕುಂಭಕರ್ಣನನ್ನು, ಪರಿಷಸ್ವಜೇ - ಅಪ್ಪಿಕೊಂಡನು, ಸಃಕುಂಭಕರ್ಣಃ - ಆ ಕುಂಭಕರ್ಣನು, ಭ್ರಾತ್ರಾ - ಅಣ್ಣನಿಂದ, ಸಂಪರಿಷ್ವಕ್ತಃ - ಅಪ್ಪಿಕೊಳ್ಳಲ್ಪಟ್ಟವನಾಗಿ, ಯಥಾವಚ್ಚ - ಯಥಾಯೋಗ್ಯವಾಗಿ, ಅಭಿನಂದಿತಃ - ಸಂತೋಷಗೊಳಿಸಲ್ಪಟ್ಟವನಾಗಿ, ದಿವ್ಯಂ - ಮನೋ

ಅನೇಕ ರಾಕ್ಷಸರೊಡಗೂಡಿರುವುದೂ, ತನ್ನ ಅಣ್ಣನಾದ ರಾವಣಾಸುರನ ವಾಸಸ್ಥಾನವಾದುದೂ ಆದ ಅರಮನೆಯನ್ನು ಪ್ರವೇಶಿಸಿ ಆ ಕುಂಭಕರ್ಣನು ತನ್ನ ನಡಿಗೆಯಿಂದಲೇ ಭೂಮಿಯನ್ನು ನಡುಗಿಸುತ್ತ ಒಳಹೊಕ್ಕು ಬಹಳವಾದ ಉದ್ವೇಗದಿಂದ ಸಂತಪಿಸುತ್ತಿದ್ದ ಆ ರಾವಣಾಸುರನನ್ನು ಕಂಡನು. ॥ ೧–೫ ॥ ಆ ಕೂಡಲೇ ರಾವಣಾಸುರನು ಕುಂಭಕರ್ಣನನ್ನು ಕಂಡು ಪರಮ ಸಂತುಷ್ಟನಾಗಿ ತಟಕ್ಕನೆ ಆಸನದಿಂದೆದ್ದು ಅವನನ್ನು ತನ್ನ ಬಳಿಗೆ ಬರಮಾಡಿಕೊಂಡನು. ಆಗ ಕುಂಭಕರ್ಣನು ಸಿಂಹಾಸನಾಸೀನನಾಗಿ ತನ್ನ ಅಣ್ಣನ ಪಾದಗಳಿಗೆ ಮಣಿದು ತನ್ನಿಂದಾಗಬೇಕಾದ ಕಾರ್ಯವೇನೆಂದು ಕೇಳಿದನು. ರಾವಣನಾದರೋ ಬಹು ಪ್ರೇಮದಿಂದ ತಮ್ಮನನ್ನು ಆಲಿಂಗಿಸಿ ಆತನಿಗೆ ಸಂತೋಷವನ್ನುಂಟುಮಾಡಿದ ತರುವಾಯ ಅವನಿಗೆ ಉಚಿತವಾದೊಂದು ಆಸನವನ್ನಿತ್ತು ಅವನನ್ನದರಲ್ಲಿ ಕುಳ್ಳಿರಿಸಿದನು. ಆಗ ಮಹಾ ಬಲಸಾದ

ಸಂಪರಿಷ್ವಕ್ತೋ ಯಥಾವಚ್ಚಾಭಿನಂದಿತಃ । ಕುಂಭಕರ್ಣಃ ಶುಭಂ ದಿವ್ಯಂ ಪ್ರತಿಪೇದೇ ವರಾಸನಂ ॥ ೯ ॥ ಸತದಾಸನಮಾಶ್ರಿತ್ಯ ಕುಂಭಕರ್ಣೋ ಮಹಾಬಲಃ । ಸಂರಕ್ತನಯನಃ ಕೋಪಾದ್ರಾವಣಂ ವಾಕ್ಯಮಬ್ರವೀತ್ ॥ ೧೦ ॥ ಕಿಮರ್ಥಮಹಮಾದೃತ್ಯ ತ್ವಯಾ ರಾಜನ್ನಿಬೋಧಿತಃ । ಶಂಸ ಕಸ್ಮಾದ್ಭಯಂ ತೇಽಸ್ತಿ ಕೋಽದ್ಯ ಪ್ರೇತೋ ಭವಿಷ್ಯತಿ ॥ ೧೧ ॥ ಭ್ರಾತರಂ ರಾವಣಃ ಕ್ರುದ್ಧಂ ಕುಂಭಕರ್ಣಮವಸ್ಥಿತಂ । ಈಷತ್ತು ಪರಿವೃತ್ತಾಭ್ಯಾಂ ನೇತ್ರಾಭ್ಯಾಂ ವಾಕ್ಯಮಬ್ರವೀತ್ ॥ ೧೨ ॥ "ಅದ್ಯ ತೇ ಸುಮಹಾನ್ ಕಾಲಃ ಶಯಾನಸ್ಯ ಮಹಾಬಲ! । ಸುಖಿತಸ್ತ್ವಂ ನಜಾನೀಷೇ ಮಮ ರಾಮಕೃತಂ ಭಯಂ ॥ ೧೩ ॥ ಏಷ ದಾಶರಥೀ ರಾಮಸ್ಸುಗ್ರೀವಸಹಿತೋ ಬಲೀ । ಸಮುದ್ರಂ

ಹರವಾದ, ಶುಭ್ರಂ - ಶೋಭಾಯಮಾನವಾದ, ವರಾಸನಂ-ಉತ್ತಮವಾದ ಪೀಠವನ್ನು, ಪ್ರತಿಪೇದೇ-ಹೊಂದಿದನು. ॥೯॥ ಮಹಾಬಲಃ - ಬಹಳ ಬಲವಂತನಾದ, ಸಕುಂಭಕರ್ಣಃ - ಆ ಕುಂಭಕರ್ಣನು, ತದಾಸನಂ - ಆ ಪೀಠವನ್ನು, ಆಶ್ರಿತ್ಯ - ಹೊಂದಿ, ಕೋಪಾತ್ - ಕೋಪದಿಂದ, ಸಂರಕ್ತನಯನಃ - ಕೆಂಗಣ್ಣುಗಳುಳ್ಳವನಾಗಿ, ರಾವಣಂ - ರಾವಣನನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧೦ ॥ ಹೇ ರಾಜನ್ - ಎಲೈ ರಾವಣನೇ, ತ್ವಯಾ-ನಿನ್ನಿಂದ, ಆದೃತ್ಯ - ಆದರಪಟ್ಟು ಅಹಂ - ನಾನು, ಕಿಮರ್ಥಂ - ಯಾವ ನಿಮಿತ್ತವಾಗಿ, ವಿಬೋಧಿತಃ - ಎಬ್ಬಿಸಲ್ಪಟ್ಟೆ, ತೇ - ನಿನಗೆ, ತಸ್ಮಾತ್ - ಯಾವನ ದೆಸೆಯಿಂದ, ಭಯಂ - ಭಯವು, ಕಃ - ಯಾವನು, ಅದ್ಯ - ಈಗ, ಪ್ರೇತಃ - ಮರಣವನ್ನು ಹೊಂದಿದವನು, ಭವಿಷ್ಯತಿ - ಆಗುವನು, ಶಂಸ - ಹೇಳು. ॥೧೧॥ ರಾವಣಃ - ರಾವಣನು, ಭ್ರಾತರಂ - ತಮ್ಮನಾದ, ಅವಸ್ಥಿತಂ - ಕುಳಿತುಕೊಂಡಿರುವ, ಕ್ರುದ್ಧಂ - ಕೋಪಿಷ್ಠನಾದ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಈಷತ್ - ಸ್ವಲ್ಪ, ಪರಿವೃತ್ತಾಭ್ಯಾಂ - ತಿರುಗುತ್ತಿರುವ, ನೇತ್ರಾಭ್ಯಾಂ-ಕಣ್ಣುಗಳಿಂದ, ಉಪಲಕ್ಷಿತಃ-ಕೂಡಿ, ವಾಕ್ಯಂ-ಮಾತನ್ನು, ಅಬ್ರವೀತ್-ನುಡಿದನು. ॥ ೧೨ ॥ ಹೇ ಮಹಾಬಲ - ಎಲೈ ಮಹಾ ಬಲನೇ, ಶಯಾನಸ್ಯ - ಮಲಗಿರುವ, ತೇ - ನಿನಗೆ, ಅದ್ಯ - ಈಗ, ಸುಮಹಾನ್‌ಕಾಲಃ - ಬಹಳಕಾಲವಾಯಿತು, ಸುಖಿತಃ - ಸುಖವಾಗಿ ನಿದ್ದೆಗೊಂಡಿರುವ, ತ್ವಂ - ನೀನು, ಮಮ - ನನಗೆ, ರಾಮಕೃತಂ - ಶ್ರೀರಾಮನಿಂದ ಉಂಟಾಗಿರುವ, ಭಯಂ - ಭೀತಿಯನ್ನು, ನಜಾನೀಷೇ - ಅರಿಯೆ. ॥ ೧೩ ॥ ದಾಶರಥಿಃ - ದಶರಥರಾಯನಿಗೆ ಕುವರನಾದ, ಏಷರಾಮಃ - ಈ ಶ್ರೀರಾಮನು, ಸುಗ್ರೀವಸಹಿತಃ - ಸುಗ್ರೀವನಿಂದ ಕೂಡಿ, ಬಲೀ - ಬಲಿಷ್ಠನಾಗಿ, ಸಬಲಃ -

---

ಕುಂಭಕರ್ಣನು ಕೋಪದಿಂದ ಕೆಂಪಡರಿದ ಕಣ್ಣುಗಳುಳ್ಳವನಾಗಿ ಅವನನ್ನು ಕುರಿತು, "ಎಲೈ ರಾಕ್ಷಸರಾಜೋತ್ತಮಾ, ಅಣ್ಣಾ ರಾವಣಾಸುರನೇ! ನನ್ನನ್ನು ಯಾವ ನಿಮಿತ್ತವಾಗಿ ನನ್ನನ್ನು ಬರಮಾಡಿದೆ. ನಿನಗೆ ಯಾರಿಂದ ಭಯವುಂಟಾಗಿರುವುದು? ಈಗ ಯಾವ ದುರ್ಮಾರ್ಗನು ಮೃತಿಯೊಂದಲು ಸಿದ್ಧವಾಗಿರುವನು. ಆ ವಿಷಯವೆಲ್ಲವನ್ನೂ ನನಗೆ ತಿಳಿಸು" ಎಂದನು. ॥ ೬–೧೧ ॥ ಆಗ ರಾವಣಾಸುರನು ತನ್ನ ತಮ್ಮನಾದ ಕುಂಭಕರ್ಣನು ಶತ್ರುಗಳಲ್ಲಿ ಕ್ರೋಧಯುಕ್ತನಾಗಿರುವುದನ್ನರಿತು ಕಣ್ಣಾಲಿಗಳನ್ನು ಗಿರಗಿರನೆ ತಿರುಗಿಸುತ್ತ ಅವನನ್ನು ಕುರಿತು, ಎಲೈ ಮಹಾ ಬಲನೇ; ಕುಂಭಕರ್ಣಾ! ನೀನು ನಿದ್ರಿಸಿ ಈಗ್ಗೆ ಬಹುಕಾಲವಾಗಿ ಹೋಗಿದೆ. ನೀನು ಸುಖನಿದ್ರೆಯಲ್ಲಿದ್ದುದರಿಂದ ನಮಗೆ ರಾಮನದೆಸೆಯಿಂದುಂಟಾಗಿರುವ ಭಯವನ್ನು ತಿಳಿಯಲಿಲ್ಲ. ಸಹೋದರ! ದಶರಥಮಹಾರಾಜಪುತ್ರನಾದ ಆ ರಾಮನು

ಸಬಲಸ್ತೀರ್ತ್ವಾ ಮೂಲಂ ನಃ ಪರಿಕೃಂತತಿ ॥ ೧೪ ॥ ಹಂತ! ಪಶ್ಯಸ್ವ ಲಂಕಾಯಾಂ ವನಾನ್ಯುಪವನಾನಿಚ । ಸೇತುನಾ ಸುಖಮಾಗಮ್ಯ ವಾನರೈಕಾರ್ಣವೀಕೃತಂ ॥೧೫॥ ಯೇ ರಕ್ಷಸಾಂ ಮುಖ್ಯತಮಾ ಹತಾಸ್ತೇ ವಾನರೈರ್ಯುಧಿ । ವಾನರಾಣಾಂ ಕ್ಷಯಂ ಯುದ್ಧೇ ನಪಶ್ಯಾಮಿ ಕದಾಚನ । ನಚಾಪಿ ವಾನರಾ ಯುದ್ಧೇ ಜಿತಪೂರ್ವಾಃ ಕದಾಚನ ॥ ೧೬-೧೭ ॥ ತದೇತದ್ಭಯಮುತ್ಪನ್ನಂ ತ್ರಾಯಸ್ವೇಮಾಂ ಮಹಾಬಲ! । ನಾಶಯ ತ್ವಮಿಮಾನದ್ಯ ತದರ್ಥಂ ಬೋಧಿತೋ ಭವಾನ್ ॥ ೧೮ ॥ ಸರ್ವಕ್ಷಪಿತ ಕೋಶಂಚ ಸತ್ವಮಭ್ಯವಪದ್ಯ ಮಾಂ । ತ್ರಾಯಸ್ವೇಮಾಂ ಪುರೀಂ ಲಂಕಾಂ ಬಾಲ

ಬಲದಿಂದೊಡಗೂಡಿ, ಸಮುದ್ರಂ - ಕಡಲನ್ನು, ತೀರ್ತ್ವಾ - ದಾಟಿ, ನಃ - ನಮ್ಮ, ಮೂಲಂ - ಬುಡವನ್ನು, ಪರಿಕೃಂತತಿ - ಕಿತ್ತುಹಾಕುತ್ತಾನೆ. ॥ ೧೪ ॥ ಲಂಕಾಯಾಂ - ಲಂಕಾಪಟ್ಟಣದಲ್ಲಿ, ವನಾನಿ - ವನಗಳನ್ನೂ, ಉಪವನಾನಿಚ - ಹುಪ್ಪಿನ ತೋಟಗಳನ್ನೂ, ಪಶ್ಯಸ್ವ - ನೋಡು, ಹಂತ - ಕಷ್ಟವು, ಸೇತುನಾ - ಸೇತುವಿನಿಂದ, ಸುಖಂ - ಸುಖವಾಗಿ, ಆಗಮ್ಯ - ಬಂದು, ಸರ್ವಂ - ಎಲ್ಲ ಪ್ರದೇಶವೂ, ವಾನರೈ....ತಂ - ವಾನರರೂಪವೂ ಒಂದೇ ಸಮುದ್ರವಾಗಿ ಮಾಡಲ್ಪಟ್ಟಿತು. ॥ ೧೫ ॥ ರಕ್ಷಸಾಂ - ರಕ್ಕಸರಲ್ಲಿ, ಯೇ - ಯಾರು, ಮುಖ್ಯತಮಾಃ - ಮುಖಂಡರೋ, ತೇ - ಅವರು, ವಾನರೈಃ - ಕಪಿಗಳಿಂದ, ಯುಧಿ - ಕಾಳೆಗದಲ್ಲಿ, ಹತಾಃ - ಸಂಹಾರಮಾಡಲ್ಪಟ್ಟರು, ಯುದ್ಧೇ - ಕಾಳೆಗದಲ್ಲಿ, ವಾನರಾಣಾಂ - ಕಪಿಗಳ, ಕ್ಷಯಂ - ನಾಶವನ್ನು, ಕದಾಚನ - ಯಾವ ಕಾಲಕ್ಕೂ, ನಪಶ್ಯಾಮಿ - ಕಾಣೆನು. ॥೧೬॥ ಯುದ್ಧೇ - ಕಾಳೆಗದಲ್ಲಿ, ವಾನರಾಃ - ಕಪಿಗಳು, ಕದಾಚನ - ಒಂದು ಕಾಲದಲ್ಲಿಯೂ, ನಜಿತಪೂರ್ವಾಃ - ಪೂರ್ವದಲ್ಲಿ ಜಯಿಸಲ್ಪಡಲಿಲ್ಲ. ॥ ೧೭ ॥ ತದೇತತ್ - ಆ ಈ, ಭಯಂ - ಭಯವು, ಹೇ ಮಹಾಬಲ - ಎಲೈ ಬಲಶಾಲಿಯೇ, ಉತ್ಪನ್ನಂ - ಹುಟ್ಟಿದೆ, ಇಮಾಂ - ಈ ಪಟ್ಟಣವನ್ನು, ತ್ರಾಯಸ್ವ - ಸಂರಕ್ಷಿಸು, ಇಮಾನ್ - ಈ ವಾನರರನ್ನು, ಅದ್ಯ - ಈಗ, ತ್ವಂ - ನೀನು, ನಾಶಯ - ಸಂಹಾರಮಾಡು, ತದರ್ಥಂ - ಆ ಕಾರ್ಯಾರ್ಥವಾಗಿ, ಭವಾನ್ - ನೀನು, ಬೋಧಿತಃ - ಎಬ್ಬಿಸಲ್ಪಟ್ಟೆ. ॥ ೧೮ ॥ ಸತ್ವಂ - ಆ ಈ ನೀನು, ಸರ್ವ......ಶಂ - ನಾಶಗೊಳಿಸಲ್ಪಟ್ಟ ಸರ್ವೈಶ್ವರ್ಯವುಳ್ಳದ್ದಂತೆ, ಅಭ್ಯವಪದ್ಯ - ತಿಳಿದುಕೋ, ಬಾಲ......ತಾಂ - ಬಾಲರೂ ವೃದ್ಧರೂ ಅವಶಿಷ್ಟರಾಗಿ ಮಾಡಲ್ಪಟ್ಟ,

---

ಸುಗ್ರೀವನೊಡನೆಯೂ, ವಾನರ ಸೈನ್ಯದೊಡನೆಯೂ ಸಾಗರವನ್ನು ದಾಟಬಂದು ನಮ್ಮ ಲಂಕೆಯನ್ನು ಸಮೂಲವಾಗಿ ನಾಶಗೊಳಿಸುತ್ತಿರುವನು. ನೋಡು; ನೋಡು. ಅಯ್ಯೋ! ನಮ್ಮ ನಗರದಲ್ಲಿನ ವನಗಳೂ, ಉಪವನಗಳೂ ಹಾಳಾಗಿ ಹೋಗಿರುವುವು. ವಾನರರೆಲ್ಲರೂ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ನಮ್ಮ ಲಂಕೆಗೆ ಬಂದು ಎಲ್ಲೆಲ್ಲಿಯೂ ಮುತ್ತಿಕೊಂಡಿದ್ದಾರೆ. ॥೧೧–೧೫॥ ಎಲೈ ಕುಂಭಕರ್ಣನೇ! ರಾಕ್ಷಸಮುಖ್ಯರೆಲ್ಲರೂ ರಣರಂಗದಲ್ಲಿ ವಾನರರಿಂದ ಹತರಾಗಿ ಹೋಗಿರುವರು. ಆ ವಾನರರಾದರೋ ಸಾಯದೆ ವೃದ್ಧಿಗೊಳ್ಳುತ್ತಿರುವರು. ಅಯ್ಯಾ ಅನುಜನೇ! ನಾನು ಹಿಂದಾವಾಗಲೂ ವಾನರರೊಡನೆ ಯುದ್ಧಮಾಡಿ ಅವರನ್ನು ಕೊಂದುದಿಲ್ಲ. ಆದುದರಿಂದ ಈಗ ನನಗೆ ಆ ವಾನರರಿಂದ ಮಹದ್ಭಯವಡಸಿರುವುದು. ಆದುದರಿಂದ ನೀನೀಗ ನನ್ನನ್ನು ಸಂರಕ್ಷಿಸಬೇಕು. ಆ ವಾನರರೆಲ್ಲರನ್ನೂ ನೀನೀಗಲೇ ನಾಶಗೊಳಿಸು. ವಾನರ ನಾಶಕ್ಕಾಗಿಯೇ ಸುಖವಾಗಿ ನಿದ್ರಿಸುತ್ತಿದ್ದ ನಿನ್ನನ್ನು ಎಚ್ಚರಗೊಳಿಸಿದುದುದಾಯಿತು. ಎಲೈ ಶತ್ರುತಾಪನನಾದ ಕುಂಭಕರ್ಣನೇ! ಈಗ ನಮ್ಮ ಧನಾಗಾರ

ವೃದ್ಧಾಃವಶೇಷಿತಾಂ ॥ ೧೯ ॥ ಭ್ರಾತುರರ್ಥೇ ಮಹಾಬಾಹೋ! ಕುರು ಕರ್ಮ ಸುದುಷ್ಕರಂ । ಮಯೈವಂ ನೋಕ್ತಪೂರ್ವೋಹಿ ಕಚ್ಚಿದ್ಭ್ರಾತಃ! ಪರಂತಪ! ॥೨೦॥ ತ್ವಯ್ಯಸ್ತಿ ತು ಮಮಸ್ನೇಹಃ ಪರಾ ಸಂಭಾವನಾಚ ಮೇ । ದೈವಾಸುರೇಷು ಯುದ್ಧೇಷು ಬಹುಶೋ ರಾಕ್ಷಸರ್ಷಭ! । ತ್ವಯಾ ದೇವಾಃ ಪ್ರತಿವ್ಯೂಹ್ಯ ನಿರ್ಜಿತಾ ಶ್ಚಾಸುರಾ ಯುಧಿ ॥೨೧॥ ತದೇತತ್ಸರ್ವಮಾತಿಷ್ಠ! ವೀರ್ಯಂ ಭೀಮಪರಾಕ್ರಮ! । ನಹಿ ತೇ ಸರ್ವಭೂತೇಷು ದೃಶ್ಯತೇ ಸದೃಶೋ ಬಲೀ ॥ ೨೨ ॥

ಇಮಾಂಲಂಕಾಂಪುರೀಂ-ಈ ಲಂಕಾಪಟ್ಟಣವನ್ನೂ, **ಮಾಂಚ** - ನನ್ನನ್ನೂ, **ತ್ರಾಯಸ್ವ** - ಸಂರಕ್ಷಿಸು. ॥ ೧೯ ॥ **ಹೇ ಮಹಾಬಾಹೋ** - ಎಲೈ ಮಹಾಭುಜನೇ, **ಹೇ ಪರಂತಪ** - ಎಲೈ ಶತ್ರುಸಂಹಾರಕನೇ, **ಹೇ ಭ್ರಾತಃ** - ಎಲೈ ತಮ್ಮನೇ, **ಭ್ರಾತುರರ್ಥೇ**-ಜ್ಯೇಷ್ಠಭ್ರಾತೃವಾದ ನನ್ನ ನಿಮಿತ್ತವಾಗಿ, **ಸುದುಷ್ಕರಂ**-ಮಾಡಲಸಾಧ್ಯವಾದ, **ಕರ್ಮ** - ವ್ಯಾಪಾರವನ್ನು, **ಕುರು** - ಮಾಡು, **ಏವಂ** - ಈಪರಿಯಾಗಿ, **ಮಯಾ** - ನನ್ನಿಂದ, **ಉಕ್ತಪೂರ್ವಃ** - ಪೂರ್ವದಲ್ಲಿ ಹೇಳಲ್ಪಟ್ಟವನು, **ನಹಿ** - ಅಲ್ಲವಷ್ಟೆ, **ಕಚ್ಚಿತ್** - ಏನು. ॥ ೨೦ ॥ **ಹೇ ರಾಕ್ಷಸರ್ಷಭ** - ಎಲೈ ರಾಕ್ಷಸಶ್ರೇಷ್ಠನೇ, **ಮಮ** - ನನಗೆ, **ತ್ವಯಿ** - ನಿನ್ನಲ್ಲಿ, **ಸ್ನೇಹಸ್ತು** - ಸ್ನೇಹವು, **ಅಸ್ತಿ** - ಇರುವುದು, **ದೈವಾಸುರೇಷು** - ದೇವಾಸುರ ಸಂಬಂಧಗಳಾದ, **ಯುದ್ಧೇಷು** - ಕಾಳೆಗಗಳಲ್ಲಿ, **ಬಹುಶಃ** - ಬಹುಪ್ರಕಾರವಾಗಿ, **ತ್ವಯಾ** - ನಿನ್ನಿಂದ, **ದೇವಾಃ** - ದೇವತೆಗಳನ್ನು, **ಅಸುರಾಶ್ಚ** - ಅಸುರರೂ, **ಪ್ರತಿವ್ಯೂಹ್ಯ**-ಯುದ್ಧಮಾಡಿ, **ಯುಧಿ** - ಕಾಳೆಗದಲ್ಲಿ, **ನಿರ್ಜಿತಾಶ್ಚ**-ಜಯಿಸಲ್ಪಟ್ಟರು, **ಇತಿ** - ಇಂತೆಂದು, **ಮೇ** - ನನಗೆ, **ಪರಾ** - ಉತ್ಕೃಷ್ಟವಾದ, **ಸಂಭಾವನಾ** - ಆದರಣೆಯೂ, **ಅಸ್ತಿ** - ಇದೆ, **ಹೇ ಭೀಮಪರಾಕ್ರಮ** - ಎಲೈ ಭಯಂಕರ ಪರಾಕ್ರಮವುಳ್ಳವನೇ, **ಸರ್ವಭೂತೇಷು** - ಸರ್ವ ಪ್ರಾಣಿಗಳಲ್ಲಿಯೂ, **ತೇ** - ನಿನಗೆ, **ಸದೃಶಃ** - ಸಮಾನನಾದವನು, **ನಹಿ** - ಇಲ್ಲ, **ತತ್** - ಆ ಕಾರಣದಿಂದ, **ಸರ್ವಂ** - ಸಮಸ್ತವಾದ, **ಏತದ್ವೀರ್ಯಂ** - ಈ ಪರಾಕ್ರಮವನ್ನು, **ಆತಿಷ್ಠ** - ತೆಗೆದುಕೋ, **ಹೇ ಪ್ರಿಯರಣ** - ಎಲೈ ಯುದ್ಧದಲ್ಲಿಷ್ಟವುಳ್ಳವನೇ, **ಹೇ ಬಾಂಧವಪ್ರಿಯ** - ಎಲೈ ಬಂಧುಪ್ರೇಮವುಳ್ಳವನೇ, **ಮೇ** - ನನಗೆ, **ಪ್ರಿಯಹಿತಂ** - ತತ್ಕಾಲಕ್ಕೆ ಹಿತವಾಗಿಯೂ ಮುಂದೆ ಶ್ರೇಯಸ್ಕರವಾಗಿಯೂ ಇರುವ, **ಉತ್ತಮಂ** - ಉತ್ತಮವಾದ, **ಏತತ್** - ಈ ಕಾರ್ಯವನ್ನು, **ಯಥಾ**

ವೆಲ್ಲವೂ ಬರಿದಾಗಿ ಹೋಗಿರುವುದು. ನಮ್ಮ ನಗರದಲ್ಲಿ ಸ್ತ್ರೀಬಾಲವೃದ್ಧರನ್ನುಳಿದು ಎಲ್ಲ ರಾಕ್ಷಸವೀರರೂ ಮಡಿದು ಹೋಗಿರುವರು. ನೀನು ಈಗ ಉಳಿದಿರುವ ಆ ಸ್ತ್ರೀಬಾಲವೃದ್ಧರನ್ನಾದರೂ ಸಂರಕ್ಷಿಸುವವನಾಗು. ಎಲೈ ಮಹಾ ಭುಜನೇ! ನೀನು ಅಣ್ಣನಾದ ನನ್ನ ನಿಮಿತ್ತವಾಗಿ ಬಹು ದುಷ್ಕರವಾದ ಭಯಂಕರಯುದ್ಧವನ್ನು ಮಾಡಬೇಕು. ನೀನು ಶತ್ರುಗಳನ್ನು ಸದೆಬಡಿವುದರಲ್ಲಿ ಮಹಾ ಸಮರ್ಥನಲ್ಲವೆ! ಎಲೈ ತಮ್ಮನೇ! ನಾನಿದುವರೆಗೆ ಎಂದೂ ನಿನ್ನೊಡನೆ ಈ ರೀತಿ ಹೇಳಿದುದಿಲ್ಲ. ॥೧೬–೨೦॥ ನಿನ್ನಲ್ಲಿ ನನಗೆ ಪರಮ ಪ್ರೇಮವಿರುವುದು. ನೀನು ಮಹಾ ಬಲಾಢ್ಯನೆಂದು ನಾನು ಬಲ್ಲೆನು. ಎಲೈ ರಾಕ್ಷಸಶ್ರೇಷ್ಠನೇ! ನೀನು ಹಿಂದೆ ಅನೇಕ ಸಲ ದೇವಾಸುರ ಯುದ್ಧಗಳಲ್ಲಿ ದೇವತೆಗಳನ್ನು ಮರ್ದಿಸಿರುವೆ. ನಿನ್ನ ಪರಾಕ್ರಮವು ಅಸಾಧಾರಣವಾದುದು. ಆದುದರಿಂದ ಮಹಾ ಭಯಂಕರಪರಾಕ್ರಮವುಳ್ಳ ನೀನು ಈಗ ನಿನ್ನ ಆ ಪರಾಕ್ರಮವನ್ನು ತೋರಿ ಮೆರೆಯಬೇಕು. ಎಲೈ ಕುಂಭಕರ್ಣನೇ! ಜಾಗ್ರತೆಯಾಗಿ ರಣಾಂಗಣಕ್ಕೆ ತೆರಳು. ಸರ್ವಭೂತಗಳಲ್ಲಿಯೂ ನಿನಗೆ ಸಮಾನವಾದ ಬಲಾಢ್ಯವಾದ

ಕುರುಷ್ವ ಮೇ ಪ್ರಿಯಹಿತಮೇತದುತ್ತಮಂ
ಯಥಾ ಪ್ರಿಯಂ ಪ್ರಿಯರಣ! ಬಾಂಧವಪ್ರಿಯ! ।
ಸ್ವತೇಜಸಾ ವಿಧಮ ಸಪತ್ನವಾಹಿನೀಂ
ಶರದ್ಘನಂ ಪವನಇವೋದ್ಯತೋ ಮಹಾನ್ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಷಷ್ಟಿತಮಸ್ಸರ್ಗಃ

ಪ್ರಿಯಂ - ನಮ್ಮ ವಿಶ್ವಾಸಕ್ಕೆ ಅನುರೂಪವಾಗಿ, ಕುರುಷ್ವ - ಮಾಡು, ಉದ್ಯತಃ - ಹುಟ್ಟಿರುವ, ಮಹಾನ್ - ದೊಡ್ಡದಾದ, ಪವನಃ - ಚಂಡಮಾರುತವು, ಶರದ್ಘನಮಿವ - ಶರತ್ಕಾಲೀನವಾದ ಮೇಘದಂತೆ, ಸ್ವತೇಜಸಾ - ನಿನ್ನ ಸಾಮರ್ಥ್ಯದಿಂದ, ಸಪತ್ನವಾಹಿನೀಂ - ಶತ್ರುಸೈನ್ಯವನ್ನು, ವಿಧಮ - ಧ್ವಂಸಮಾಡು. ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಷಷ್ಟಿತಮಸ್ಸರ್ಗಃ.

ಭೂತವಾವುದೂ ಇರುವುದಿಲ್ಲ. ಯುದ್ಧಪ್ರಿಯನೂ, ಬಂಧುಪ್ರಿಯನೂ, ನನ್ನಲ್ಲಿ ಪರಮ ಪ್ರೀತಿಯುಳ್ಳವನೂ ಆದ ಎಲೈ ಕುಂಭಕರ್ಣನೇ! ಈಗ ನಿನ್ನ ತೇಜಸ್ಸಿನಿಂದ ಶತ್ರುಸೇನೆಯೆಲ್ಲವನ್ನೂ ಶರತ್ಕಾಲದ ಮೇಘಗಳನ್ನು ವಾಯುವು ತೂರಿ ಬೀಸುವಂತೆ ಓಡಿಸಿ ಜಯಶೀಲನಾಗು" ಎಂದು ಹೇಳಿದನು. ॥ ೨೧-೨೩ ॥

ಇಂತಿದು ರಾವಣಕೃತ ಕುಂಭಕರ್ಣ ಸಾಂತ್ವನವೆಂಬ ಅರುವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ತ್ರಿಷಷ್ಟಿತಮಸ್ಸರ್ಗಃ

ತಸ್ಯ ರಾಕ್ಷಸರಾಜಸ್ಯ ನಿಶಮ್ಯ ಪರಿದೇವಿತಮ್ । ಕುಂಭಕರ್ಣೋ ಬಭಾಷೇದಂ ವಚನಂ ಪ್ರಜಹಾಸಚ ॥೧॥ "ದೃಷ್ಟೋ ದೋಷೋಹಿ ಯೋಽಸ್ಮಾಭಿಃ ಪುರಾ ಮಂತ್ರ ವಿನಿರ್ಣಯೇ । ಹಿತೇಷ್ವನಭಿರಕ್ತೇನ ಸೋಽಯಮಾಸಾದಿತಸ್ತ್ವಯಾ ॥೨॥ ಶೀಘ್ರಂ ಖಲ್ವಭ್ಯುಪೇತಂ ತ್ವಾಂ ಫಲಂ ಪಾಪಸ್ಯ ಕರ್ಮಣಃ । ನಿರಯೇಷ್ವೇವ ಪತನಂ ಯಥಾ ದುಷ್ಕೃತಕರ್ಮಣಃ ॥ ೩ ॥ ಪ್ರಥಮಂ ವೈ ಮಹಾರಾಜ! ಕೃತ್ಯಮೇತದಚಿಂತಿತಮ್ ।

ತಸ್ಯರಾಕ್ಷಸರಾಜಸ್ಯ - ಆ ರಾವಣನ, ಪರಿದೇವಿತಂ - ಅಳುವಿಗೆ ಸಮಾನವಾದ ಮಾತನ್ನು, **ನಿಶಮ್ಯ** - ಕೇಳಿ, ಕುಂಭಕರ್ಣಃ - ಕುಂಭಕರ್ಣನು, ಇದಂವಚನಂ - ಈ ಮಾತನ್ನು, ಬಭಾಷೇ - **ಹೇಳಿದನು,** ಪ್ರಜಹಾಸಚ - ನಕ್ಕನು. ॥ ೧ ॥ ಪುರಾ - ಪೂರ್ವದಲ್ಲಿ, ಮಂತ್ರವಿನಿರ್ಣಯೇ - **ಆ**ಲೋಚನೆಯಿಂದ ನಿರ್ಣಯಿಸತಕ್ಕ ಕಾಲವು ಪ್ರಾಪ್ತವಾಗಿದ್ದಾಗ, ಅಸ್ಮಾಭಿಃ - ನಮ್ಮಿಂದ, **ಯೋ ದೋಷಃ** - ಯಾವ ದೋಷವು, ದೃಷ್ಟಃ - ಆಲೋಚಿಸಲ್ಪಟ್ಟಿತೋ, ಹಿತೇಷು - ಹಿತಪರರಲ್ಲಿ, **ಅನಭಿರಕ್ತೇನ** - ಆಸಕ್ತನಲ್ಲದಿರುವ, ತ್ವಯಾ - ನಿನ್ನಿಂದ, ಸೋಽಯಂದೋಷಃ - ಆ ಈ ದೋಷವು, **ಆಸಾದಿತೋಹಿ** - ಹೊಂದಲ್ಪಟ್ಟಿತಷ್ಟೆ. ॥ ೨ ॥ ದುಷ್ಕೃ....ಣಃ - ಪಾಪಕೃತ್ಯವುಳ್ಳ ಪುರುಷನಿಗೆ, **ನಿರಯೇಷ್ವೇವ** - ನರಕಗಳಲ್ಲಿಯೇ, ಪತನಂ - ಬೀಳೋಣವು, ಯಥಾ-ಹೇಗೋ, ತಥಾ-ಹಾಗೆಯೇ, **ಪಾಪಸ್ಯ** - ಪಾಪಕರವಾದ, ಕರ್ಮಣಃ - ಸೀತಾಪಹಾರ ರೂಪವಾದ ಕೃತ್ಯದ, ಫಲಂ - ಫಲವು, **ಶೀಘ್ರಂ** - ಜಾಗ್ರತೆಯಾಗಿ, ತ್ವಾಂ - ನಿನ್ನನ್ನು, ಅಭ್ಯುಪೇತಂಖಲು - ಹೊಂದಿತಷ್ಟೆ. ॥ ೩ ॥ **ಹೇ ಮಹಾರಜ** - ಎಲೈ ಮಹಾರಾಜನೇ, ಪ್ರಥಮಂ - ಸೀತಾಪಹಾರ ಮಾಡುವ ಮೊದಲು, **ಏತತ್ಕೃತ್ಯಂ** - ಈ ಪಾಪಕೃತ್ಯದ ಫಲವು, ನಚಿಂತಿತಂ - ಆಲೋಚಿಸಲ್ಪಡಲಿಲ್ಲ, ಕೇವಲಂ - **ಮುಖ್ಯವಾಗಿ,** ವೀರ್ಯದರ್ಪೇಣ - ಪರಾಕ್ರಮದ ಕೊಬ್ಬಿನಿಂದ, (ತ್ವಯಾ - ನಿನ್ನಿಂದ) ಅನುಬಂಧಃ -

---

ಆ ರೀತಿ ರಾಕ್ಷಸರಾಜನಾದ ರಾವಣನು ನುಡಿದ ದುಃಖವಾರ್ತೆಯೆಲ್ಲವನ್ನೂ ಕೇಳಿ ಕುಂಭಕರ್ಣನು ನಕ್ಕು ಈ ರೀತಿ ಹೇಳಿದನು: "ಎಲೈ ರಾಕ್ಷಸರಾಜನೇ! ಎಲ್ಲವೂ ಆಗಿ ಹೋದಮೇಲೆ ಈಗ ದುಃಖಿಸಿ ಪ್ರಯೋಜನವೇನು? ಈ ಮುಂಚೆಯೇ ನಾವು ಮಂತ್ರಾಲೋಚನಾಸಭೆ ಸೇರಿದ್ದಾಗ ಈ ಪಾಪಕೃತ್ಯದ ವಿಚಾರವಾಗಿ ಯೋಚಿಸಿ ಇದನ್ನು ಮಾಡಿದ್ದಾದರೆ ನಮಗೆ ಕೇಡಾಗುವುದು ಖಂಡಿತವೆಂದು ನಿರ್ಧರಿಸಿದ್ದೆವಲ್ಲವೆ? ಆದರೂ ನೀನು ಹಿತಬೋಧಕರ ಮಾತುಗಳನ್ನು ಕೇಳದೆ ದುಡುಕಿ ಈ ಆಪತ್ತನ್ನು ಬರಮಾಡಿಕೊಂಡೆ. ಅದಕ್ಕೆ ಯಾರೇನು ಮಾಡಬಲ್ಲರು? ಅಂತು ನೀನು ಮಾಡಿದ ಸೀತಾಪಹರಣ ರೂಪವಾದ ಪಾಪಕ್ಕೆ ತಕ್ಕ ಫಲವು ಈಗ ಒದಗಿಬಂದಿತು. ॥ ೧-೩ ॥ ಅಯ್ಯಾ ರಾಕ್ಷಸರಾಜನೇ! ನೀನು ಮೊದಲೇ ಯುಕ್ತಾಯುಕ್ತಗಳನ್ನು ವಿಚಾರಿಸದೆ ವೀರ್ಯಗರ್ವಿತನಾಗಿ ಈ ಕಾರ್ಯವನ್ನು ಮಾಡಿದೆ. ಅದಕ್ಕೆ ತಕ್ಕಂತೆ ಕೇಡೂ ಸಂಭವಿಸಿತು. ಎಲೈ ಮಹಾರಾಜನೇ! ಲೋಕದಲ್ಲಿ ಯಾವನು ಕೇವಲ ಐಶ್ವರ್ಯದಿಂದ ಮತ್ತನಾಗಿ ಪೂರ್ವೋತ್ತರಗಳನ್ನಾಲೋಚಿಸದೆಯೆ

ಕೇವಲಂ ವೀರ್ಯದರ್ಪೇಣ ನಾಽನುಬಂಧೋ ವಿಚಾರಿತಃ ||೪|| ಯಃ ಪಶ್ಚಾತ್ಪೂರ್ವ ಕಾರ್ಯಾಣಿ ಕುರ್ಯಾದೈಶ್ವರ್ಯಮಾಸ್ಥಿತಃ । ಪೂರ್ವಂ ಚಾಽಪರಕಾರ್ಯಾಣಿ ನಸ ವೇದ ನಯಾಽನಯೌ || ೫ || ದೇಶಕಾಲವಿಹೀನಾನಿ ಕರ್ಮಾಣಿ ವಿಪರೀತವತ್ । ಕ್ರಿಯಮಾಣಾನಿ ದುಷ್ಯಂತಿ ಹವೀಂಷ್ಯಪ್ರಯತೇಷ್ವಿವ ||೬|| ತ್ರಯಾಣಾಂ ಪಂಚಧಾ ಯೋಗಂ ಕರ್ಮಣಾಂ ಯಃ ಪ್ರಪಶ್ಯತಿ। ಸಚಿವೈಸ್ಸಮಯಂ ಕೃತ್ವಾ ಸಸಭ್ಯೇ ವರ್ತತೇ ಪಥಿ || ೭ || ಯಥಾಗಮಂಚ ಯೋ ರಾಜಾ ಸಮಯಂ ವಿಚಿಕೀರ್ಷತಿ । ಬುಧ್ಯತೇ

ದೋಷೋತ್ಪಾದವು, ನವಿಚಾರಿತಃ - ವಿಚಾರಿಸಲ್ಪಡಲಿಲ್ಲ. || ೪ || ಯಃ - ಯಾವ ಪುರುಷನು, ಐಶ್ವರ್ಯಂ - ಪ್ರಭುತ್ವವನ್ನು, ಆಸ್ಥಿತಃ - ಹೊಂದಿ, ಪೂರ್ವಕಾರ್ಯಾಣಿ - ಮೊದಲು ಮಾಡತಕ್ಕ ಕೆಲಸಗಳನ್ನು, ಪಶ್ಚಾತ್ - ಆಮೇಲೆ, ಕುರ್ಯಾತ್ - ಮಾಡುವನೋ, ಪೂರ್ವಂ - ಮೊದಲು, ಅಪರ ಕಾರ್ಯಾಣಿ - ಆಮೇಲೆ ಮಾಡತಕ್ಕ ಕಾರ್ಯಗಳನ್ನು, ಕುರ್ಯಾತ್ - ಮಾಡುವನೋ, ಸಃ - ಆ ಪುರುಷನು, ನಯಾಽನಯೌ - ನೀತಿ ಮತ್ತು ದುರ್ನೀತಿಗಳನ್ನು, ನವೇದ - ತಿಳಿಯಲಾರನು. || ೫ || ದೇಶ.....ನಿ - ದೇಶಕಾಲಗಳ ಯೋಚನೆಯಿಲ್ಲದೆ, ಕ್ರಿಯಮಾಣಾನಿ - ಮಾಡಲ್ಪಡುವ, ಕರ್ಮಾಣಿ - ಕೃತ್ಯಗಳು, ವಿಪರೀತವತ್ - ಪ್ರತಿಕೂಲಕರ್ಮಗಳಂತೆಯೂ, ಅಪ್ರಯತೇಷು - ಮಂತ್ರಾಧ್ಯಯನ ವಿಲ್ಲದಿರುವ ಅಪಾತ್ರಗಳಲ್ಲಿ ಕೊಡಲ್ಪಟ್ಟ, ಹವೀಂಷೀವ - ಹವಿಸ್ಸುಗಳಂತೆ, ದುಷ್ಯಂತಿ-ವಿರುದ್ಧ ಫಲ ಗಳನ್ನು ಕೊಡುತ್ತವೆ. || ೬ || ಸಚಿವೈಃ - ಮಂತ್ರಿಗಳೊಡಗೂಡಿ, ಸಮಯಂ - ಸಿದ್ಧಾಂತ ನಿಶ್ಚಯ ವನ್ನು, ಕೃತ್ವಾ - ಮಾಡಿ, ಯಃ - ಯಾವ ಪುರುಷನು, ತ್ರಯಾಣಾಂಕರ್ಮಣಾಂ - ಉತ್ತಮ, ಮಧ್ಯಮ, ಅಧಮಗಳೆಂಬ ಮೂರು ಕರ್ಮಗಳ, ಪಂಚಧಾ - ಐದು ಬಗೆಯಾದ, ಯೋಗಂ - ಸಂಬಂಧವನ್ನು, ಪಶ್ಯತಿ - ತಿಳಿದುಕೊಳ್ಳುವನೋ, ಸಃ - ಆ ಪುರುಷನು, ಸಭ್ಯೇ - ಸಾಧುವಾದ, ಪಥಿ - ಮಾರ್ಗದಲ್ಲಿ, ವರ್ತತೇ - ಇರುತ್ತಾನೆ. || ೭ || ಯೋರಾಜಾ - ಯಾವ ಅರಸು, ಯಥಾಗಮಂ - ಯಥಾಶಾಸ್ತ್ರವಾಗಿ, ಸಮಯಂ - ಕಾರ್ಯನಿಶ್ಚಯವನ್ನು, ವಿಚಿಕೀರ್ಷತಿ - ಮಾಡುವನೋ, ಬುದ್ಧ್ಯಾ - ಮತಿಯಿಂದ, ಸಚಿವಾನ್ - ಮಂತ್ರಿಗಳನ್ನು, ಬುಧ್ಯತೇ - ತಿಳಿದುಕೊಳ್ಳು

ಕಾರ್ಯಗಳನ್ನು ಮಾಡುವನೋ, ಅವನು ಕಾರ್ಯಾಕಾರ್ಯಗಳನ್ನೂ, ನಯಾನಯನ ಗಳನ್ನೂ ಅರಿತುಕೊಳ್ಳಲಾರನು. ಎಲೈ ಮಹಾರಾಜನೇ! ದೇಶಕಾಲಗಳನ್ನಾಲೋಚಿಸದೆ ಮಾಡುವ ಕಾರ್ಯಗಳೆಲ್ಲವೂ ಅಯೋಗ್ಯರಿಗೆ ಮಾಡಿದ ಉಪಕಾರದಂತೆ ನಾಶವಾಗಿ ಹೋಗು ವುದು. ಇದೂ ಅಲ್ಲದೆ ನಾವು ಮಾಡುವ ಪ್ರತಿಯೊಂದು ಕಾರ್ಯದಲ್ಲಿಯೂ ಉತ್ತಮ ಮಧ್ಯಮಾಧಮ ಪ್ರಭೇದಗಳನ್ನು ಚೆನ್ನಾಗಿ ಆಲೋಚಿಸಬೇಕು. ಆ ತರುವಾಯ ಆ ಮೂರು ವಿಧವಾದ ಕಾರ್ಯಗಳಲ್ಲಿಯೂ, ಆರಂಭೋಪಾಯ, ಪುರುಷದ್ರವ್ಯಸಂಪತ್ತುಗಳು, ದೇಶಕಾಲ ವಿಭಾಗಗಳು, ವಿಪತ್ಪ್ರತೀಕಾರ, ಕಾರ್ಯಸಿದ್ಧಿ ಎಂಬ ಈ ಐದಂಶಗಳನ್ನೂ ವಿಮರ್ಶಿಸಿ ಒಂದು ನಿರ್ಣಯಕ್ಕೆ ಬರಬೇಕು. ಇಷ್ಟೆಲ್ಲ ಅವಶ್ಯವೆಂದು ತಿಳಿದು ಚೆನ್ನಾಗಿ ಆಲೋಚಿಸ ಬಲ್ಲವನು ಮಾತ್ರವೇ ಸಭಾಪ್ರವೇಶಕ್ಕೆ ಅರ್ಹನು. ರಾಕ್ಷಸನಾಥ! ಶಾಸ್ತ್ರಾನುಸಾರವಾಗಿ ಆ ಆ ಸಮಯಗಳಿಗನುಗುಣವಾಗಿ ಕಾರ್ಯಗಳನ್ನು ಮಾಡಬೇಕು. ಇಷ್ಟೆಯಲ್ಲದೆ ಸ್ವಬುದ್ಧಿಯನ್ನೂ ಉಪಯೋಗಿಸಿ ಮಂತ್ರಿಗಳಲ್ಲಿಯೂ, ಮಿತ್ರರಲ್ಲಿಯೂ, ಚೆನ್ನಾಗಿ ಆಲೋ ಚಿಸಬೇಕು. ಅವರಲ್ಲಿ ಆಲೋಚಿಸುವ ಮೊದಲೇ ಅವರು ಮಂತ್ರಾಲೋಚನೆಗೆ ಅರ್ಹರೇ

ಸಚಿರ್ವಾ ಬುದ್ಧ್ಯಾ ಸುಹೃದಶ್ಚಾನುಪಶ್ಯತಿ ॥ ೮ ॥ ಧರ್ಮಮರ್ಥಂಚ ಕಾಮಂಚ ಸರ್ವಾ ವಾ ರಕ್ಷಸಾಂಪತೇ! । ಭಜೇತ ಪುರುಷಃ ಕಾಲೇ ತ್ರೀಣಿ ದ್ವಂದ್ವಾನಿ ವಾ ಪುನಃ ॥ ೯ ॥ ತ್ರಿಷು ಚೈತೇಷು ಯಚ್ಛ್ರೇಷ್ಠಂ ಶ್ರುತ್ವಾ ತನ್ನಾವಬುಧ್ಯತೇ । ರಾಜಾ ವಾ ರಾಜಮಾತ್ರೋವಾ ವ್ಯರ್ಥಂ ತಸ್ಯ ಬಹುಶ್ರುತಂ ॥೧೦॥ ಉಪಪ್ರದಾನಂ ಸಾಂತ್ವಂ ವಾ ಭೇದಂ ಕಾಲೇಚ ವಿಕ್ರಮಂ । ಯೋಗಂಚ ರಕ್ಷಸಾಂ ಶ್ರೇಷ್ಠ ತಾವುಭೌ ಚ

ತ್ತನೋ, ಸುಹೃದಶ್ಚ - ಮಿತ್ರರನ್ನು, ಅನುಪಶ್ಯತಿ - ಅನುಸರಿಸಿ ನೋಡುವನೋ, ಸಃ - ಅವನೂ ಕೂಡ, ಸಭ್ಯೇಪಥಿ - ಸನ್ಮಾರ್ಗದಲ್ಲಿ, ವರ್ತತೇ - ಇರುತ್ತಾನೆ. ॥ ೮ ॥ ರಕ್ಷಸಾಂಪತೇ - ರಾಕ್ಷಸ ರಾಜನೇ, ಪುರುಷಃ - ಪುರುಷನು, ಕಾಲೇ - ಯೋಗ್ಯಕಾಲದಲ್ಲಿ, ಧರ್ಮಂ - ಧರ್ಮವನ್ನೂ, ಅರ್ಥಂ- ಅರ್ಥವನ್ನೂ, ಕಾಮಂಚ - ಕಾಮವನ್ನೂ, ಸರ್ವಾವಾ - ಮೂರನ್ನಾಗಲಿ, ಭಜೇತ - ಸೇವಿಸ ತಕ್ಕದ್ದು, ತ್ರೀಣಿ - ಮೂರಾದ, ದ್ವಂದ್ವಾನಿವಾಪುನಃ - ದ್ವಂದ್ವಗಳನ್ನಾಗಲಿ, ಭಜೇತ - ಸೇವಿಸ ತಕ್ಕದ್ದು. ॥ ೯ ॥ ಏತೇಷುತ್ರಿಷು - ಈ ಮೂರು ಸೇವೆಗಳಲ್ಲಿ. ಯತ್ - ಯಾವದು, ಶ್ರೇಷ್ಠಂ - ಉತ್ತಮವಾದದ್ದೋ, ತತ್ - ಅದನ್ನು, ಶ್ರುತ್ವಾ - ಕೇಳಿ, ಯಃರಾಜಾ - ಯಾವ ರಾಜನಾಗಲಿ, ರಾಜಮಾತ್ರೋವಾ - ರಾಜಸದೃಶನಾಗಲಿ, ತತ್ - ಅದನ್ನು, ನಾವಬುಧ್ಯತೇ - ತಿಳಿಯದೇ ಇರು ವನೋ, ತಸ್ಯ - ಆ ಪುರುಷನ, ಬಹುಶ್ರುತಂ - ಬಹು ಶಾಸ್ತ್ರಜ್ಞತೆಯು, ವ್ಯರ್ಥಂ - ನಿಷ್ಫಲಯೋ ಜನವು. ॥ ೧೦ ॥ ರಕ್ಷಸಾಂ - ಶ್ರೇಷ್ಠ ರಾಕ್ಷಸರಲ್ಲಿ ಉತ್ತಮನೇ, ಕಾಲೇ - ಆಯಾ ಕಾಲದಲ್ಲಿ, ಉಪಪ್ರದಾನಂ - ಹಣ ಕೊಡುವಿಕೆಯನ್ನೂ, ಸಾಂತ್ವಂವಾ - ಸಮಾಧಾನವನ್ನೂ, ಭೇದಂವಾ - ಭೇದೋಪಾಯವನ್ನೂ, ವಿಕ್ರಮಂಚ-ದಂಡೋಪಾಯವನ್ನೂ, ಯೋಗಂಚ-ಈ ನಾಲ್ಕರ ಸಂಬಂಧ ವನ್ನೂ, ತೌ - ಆ ಪೂರ್ವೋಕ್ತಗಳಾದ, ನಯಾನಯೌಚ - ನೀತಿ ನೀತಿ ವಿರೋಧಗಳನ್ನೂ, ಕಾಲೇ -

---

ಅಲ್ಲವೇ ಎಂಬ ವಿಚಾರವನ್ನೂ ಸ್ವಬುದ್ಧಿಯಿಂದಲೇ ತಿಳಿದುಕೊಳ್ಳಬೇಕು. ಎಲೈ ರಾಕ್ಷಸೇ ಶ್ವರನೇ! ಲೋಕದಲ್ಲಿ ಉತ್ತಮ ಪುರುಷನಾವನು ಧರ್ಮಾರ್ಥಕಾಮಗಳು ಮೂರನ್ನೂ ಚೆನ್ನಾಗಿ ಯೋಚಿಸಿ ಅವುಗಳನ್ನು ಸೇವಿಸಬೇಕು. ಆ ರೀತಿ ಉಚಿತವರಿತು ಆ ಮೂರರಲ್ಲಿ ಮೂರನ್ನಾಗಲಿ, ಎರಡನ್ನಾಗಲಿ ಯಾವಾಗಲೂ ಬಿಡದೆ ಸೇವಿಸುತ್ತಿರಬೇಕು ॥ ೪–೧೦ ॥ ಹಾಗಿಲ್ಲದಿದ್ದರೆ ಆ ಮೂರರಲ್ಲಿ ತತ್ಕಾಲಕ್ಕೆ ಉತ್ತಮವಾದುವುದೆಂಬುದನ್ನಾದರೂ ಯೋಚಿಸಿ ತಿಳಿದು ಅದನ್ನಾದರೂ ಸೇವಿಸುವುದು ಉತ್ತಮ. ಈ ರೀತಿ ವರ್ತಿಸದವನು ರಾಜನಾಗಲಿ, ರಾಜಸಮಾನನಾಗಲಿ ಅವನ ಜೀವನವು ವ್ಯರ್ಥವೆನಿಸುತ್ತದೆ. ಅವನಿಗಿರುವ ಬಹು ಶಾಸ್ತ್ರ ಜ್ಞತೆಯೂ ಅಪ್ರಯೋಜಕವೆನಿಸುವುದು. ಇದೂ ಅಲ್ಲದೆ ಎಲೈ ರಾಕ್ಷಸರಾಜನೇ! ತನಗೆ ಸಮಯವಲ್ಲದ ಸಮಯದಲ್ಲಿ ಶತ್ರುವು ಸೆಣಸಿ ಯುದ್ಧಕ್ಕೆ ಬಂದಲ್ಲಿ ಅವನಿಗೆ ದ್ರವ್ಯ ವನ್ನಿತ್ತು ಸಮಾಧಾನ ಮಾಡಬೇಕು. ಅಥವಾ ಪ್ರಿಯಭಾಷಣದಿಂದಲಾದರೂ ಅವನನ್ನು ಸಾಂತ್ವನಗೊಳಿಸಬೇಕು. ಅದೂ ಇಲ್ಲದಿದ್ದರೆ ಶತ್ರುವರ್ಗದವರಲ್ಲಿಯೇ ಬೇದವನ್ನು ಕಲ್ಪಿಸ ಬೇಕು. ಅದಾಗುವುದಿಲ್ಲವೆಂದರೆ ತಕ್ಕ ಅವಕಾಶವಿದ್ದರೆ ಪರಾಕ್ರಮವನ್ನವಲಂಬಿಸಿ ದಂಡೋ ಪಾಯವನ್ನು ಪ್ರಯೋಗಿಸಬೇಕು. ಇದೆಲ್ಲವನ್ನೂ ಚೆನ್ನಾಗಿ ಬಲ್ಲವನಾಗಿ ರಾಜಕಾರ್ಯ ಗಳಲ್ಲಿ ಪ್ರವರ್ತಿಸುವವನು ನಯಾನಯನಗಳನ್ನು ವಿಶದವಾಗಿ ಪರ್ಯಾಲೋಚಿಸಿ ತಿಳಿಯ ಬೇಕು. ಎಲೈ ರಾಜೋತ್ತಮನೇ! ಯಾರಾದರೆ ಧರ್ಮಾರ್ಥಕಾಮಗಳನ್ನು ಕುರಿತು ಮಂತ್ರಿ

ನಯಾಽನಯೌ ॥೧೧॥ ಕಾಲೇ ಧರ್ಮಾರ್ಥಕಾಮಾನ್ ಯಸ್ಸಮ್ಮಂತ್ರ್ಯ ಸಚಿವೈಸ್ಸಹ। ನಿಷೇವೇತಾತ್ಮವಾನ್ ಲೋಕೇ ನಸ ವ್ಯಸನಮಾಪ್ನುಯಾತ್ ॥ ೧೨ ॥ ಹಿತಾನುಬಂಧ ಮಾಲೋಚ್ಯ ಕಾರ್ಯಾಕಾರ್ಯಮಿಹಾತ್ಮನಃ । ರಾಜಾ ಸಹಾರ್ಥತತ್ವಜ್ಞೈಸ್ಸಚಿವೈಸ್ಸಹಿ ಜೀವತಿ ॥ ೧೩ ॥ ಅನಭಿಜ್ಞಾಯ ಶಾಸ್ತ್ರಾರ್ಥಾನ್ ಪುರುಷಾಃ ಪಶುಬುದ್ಧಯಃ । ಪ್ರಾಗಲ್ಭ್ಯಾದ್ವಕ್ತುಮಿಚ್ಛಂತಿ ಮಂತ್ರೇಷ್ವಭ್ಯಂತರೀಕೃತಾಃ ॥೧೪॥ ಅಶಾಸ್ತ್ರವಿದುಷಾಂ ತೇಷಾಂ ನಕಾರ್ಯಮಹಿತಂ ವಚಃ । ಅರ್ಥಶಾಸ್ತ್ರಾನಭಿಜ್ಞಾನಾಂ ವಿಪುಲಾಂ ಶ್ರಿಯಮಿಚ್ಛತಾಂ ॥ ೧೫ ॥ ಅಹಿತಂ ಚ ಹಿತಾಕಾರಂ ಧಾರ್ಷ್ಟ್ಯಾಜ್ಜಲ್ಪಂತಿ ಯೇ ನರಾಃ ।

ಕಾಲದಲ್ಲಿ, ಧರ್ಮಾರ್ಥಕಾಮಾನ್-ಧರ್ಮಾರ್ಥಕಾಮಗಳನ್ನೂ, ಯಃ-ಯಾವ ಪುರುಷನು, ಆತ್ಮವಾನ್-ಜಿತವಾದ ಮನಸ್ಸುಳ್ಳವನಾಗಿ, ಸಚಿವೈಸ್ಸಹ - ಮಂತ್ರಿಗಳೊಡನೆ, ಸಂಮಂತ್ರ್ಯ - ಆಲೋಚಿಸಿ, ನಿಷೇವೇತ - ಸೇವಿಸುವನೋ, ಸಃ - ಆ ಪುರುಷನು, ಲೋಕೇ - ಲೋಕದಲ್ಲಿ, ವ್ಯಸನಂ - ದುಃಖವನ್ನು, ನಾಪ್ನುಯಾತ್ - ಹೊಂದಲಾರನು. ॥ ೧೧-೧೨ ॥ ಇಹ - ಈ ಲೋಕದಲ್ಲಿ, ಯಃರಾಜಾ - ಯಾವ ರಾಜನು, ಆತ್ಮನಃ - ತನಗೆ, ಹಿತಾನುಬಂಧಂ - ಮುಂದೆ ಶ್ರೇಯಸ್ಕರವಾದ ಕಾರ್ಯವನ್ನೂ, ಕಾರ್ಯಾಕಾರ್ಯಂ - ಮಾಡತಕ್ಕುದನ್ನೂ, ಮಾಡಬಾರದುದನ್ನೂ, ಅರ್ಥತತ್ವಜ್ಞೈಃ - ಕಾರ್ಯತತ್ವವನ್ನು ತಿಳಿದಿರುವ, ಸಚಿವೈಸ್ಸಹ - ಮಂತ್ರಿಗಳೊಡನೆ, ಆಲೋಚ್ಯ - ಆಲೋಚಿಸಿ, ಕಾರ್ಯಂ - ಕೆಲಸವನ್ನು, ನಿಷೇವೇತ - ಸೇವಿಸುತ್ತಾನೆಯೋ, ಸಃ - ಅವನು, ಜೀವತಿಹಿ - ಬದುಕುವನಷ್ಟೆ. ॥ ೧೩ ॥ ಪಶುಬುದ್ಧಯಃ - ಪಶುಗಳಂತೆ ವಿವೇಕಶೂನ್ಯವಾದ ಬುದ್ಧಿಯುಳ್ಳ, ಯೇಪುರುಷಾಃ - ಯಾವ ಪುರುಷರು, ಶಾಸ್ತ್ರಾರ್ಥಾನ್ - ಶಾಸ್ತ್ರಗಳ ಅರ್ಥಗಳನ್ನು, ಅನಭಿಜ್ಞಾಯ - ತಿಳಿಯದೆ, ಪ್ರಾಗಲ್ಭ್ಯಾತ್ - ಚಾತುರ್ಯದಿಂದ, ಅಭ್ಯಂತರೀಕೃತಾಃ - ಮಂತ್ರಿಪಟ್ಟದಲ್ಲಿ ಅಂಗೀಕೃತರಾಗಿ, ಮಂತ್ರೇಷು - ಮಂತ್ರಕಾಲಗಳಲ್ಲಿ, ವಕ್ತುಂ - ಸ್ವೇಚ್ಛೆಯಾಗಿ ಹೇಳುವದಕ್ಕೆ, ಇಚ್ಛಂತಿ - ಇಚ್ಛಿಸುತ್ತಾರೋ. ॥ ೧೪ ॥ ಅಶಾ....ಷಾಂ - ಶಾಸ್ತ್ರವನ್ನು ತಿಳಿಯದ, ಅರ್ಥ.....ನಾಂ - ನೀತಿಶಾಸ್ತ್ರದ ಪರಿಚಯವಿಲ್ಲದ, ತೇಷಾಂ - ಆ ಮಂತ್ರಿಗಳ, ಅಹಿತಂ - ಅಶ್ರೇಯಸ್ಕರವಾದ, ವಚಃ - ಮಾತು, ವಿಪುಲಾಂ - ವಿಸ್ತಾರವಾದ, ಶ್ರಿಯಂ-ಐಶ್ವರ್ಯವನ್ನು, ಇಚ್ಛತಾಂ - ಅಪೇಕ್ಷಿಸುವ ರಾಜರಿಗೆ, ನಕಾರ್ಯಂ-ಗ್ರಾಹ್ಯಮಾತ್ರ ತಕ್ಕುದಲ್ಲ. ॥೧೫॥ ಯೇನರಾಃ-ಯಾವ ಮಾನವರು, ವಸ್ತುತಃಅಹಿತಂ-ನಿಜವಾಗಿಯೂ ಅಶ್ರೇಯಸ್ಕರ

ಗಳೊಡನೆ ಆಲೋಚಿಸಿ ಅವುಗಳನ್ನು ಸೇವಿಸುವನೋ ಅವನು ಲೋಕದಲ್ಲಿ ಎಂದಿಗೂ ವ್ಯಸನವನ್ನು ಹೊಂದುವದಿಲ್ಲವು. ಇದೂ ಅಲ್ಲದೆ, ರಾಜನಾದವನು ತನಗೆ ಹಿತವಾವುದೆಂಬುದನ್ನು ಚೆನ್ನಾಗಿ ಆಲೋಚಿಸಿಕೊಂಡು ಮಾಡಬೇಕಾದ ಕಾರ್ಯವಾವುದೆಂಬುದನ್ನು ನಿರ್ಣಯಿಸಿಕೊಂಡು ಪ್ರವರ್ತಿಸಬೇಕು. ಎಲ್ಲ ಕಾರ್ಯಗಳನ್ನೂ ಅರಿತ ನುರಿತ ಮಂತ್ರಿಗಳೊಡನೆ ಆಲೋಚಿಸುವುದರಿಂದ ಸುಖವುಂಟು. ಪಶುಗಳಿಗೆ ಸಮಾನವಾದ ಬುದ್ಧಿಯುಳ್ಳ ಪುರುಷರು ಶಾಸ್ತ್ರಾರ್ಥಗಳನ್ನು ತಿಳಿಯದೆ ಮಂತ್ರಾಲೋಚನೆಯಲ್ಲಿ ಪ್ರವೇಶಿಸಿ ದುರಹಂಕಾರದಿಂದ ಮಾತನಾಡುವರು. ಅರ್ಥಶಾಸ್ತ್ರಗಳನ್ನರಿತವರೂ, ಮಹದೈಶ್ವರ್ಯವನ್ನು ಕೋರುವವರೂ ಆದ ಮಂತ್ರಿಗಳು ಹೇಳಿದಂತೆ ನಡೆಯುವಾತನೇ ಲೋಕದಲ್ಲಿ ರಾಜೋತ್ತಮನೆನಿಸುತ್ತಾನೆ. ಅಂತಹನು ಅರ್ಥಶಾಸ್ತ್ರವನ್ನರಿಯದವನೂ, ಸಂಪತ್ಕಾಮಿಯೂ, ಶ್ರೇಯಸ್ಕಾಮಿಯೂ ಅಲ್ಲದವನೂ ಆದ ಸಚಿವನನ್ನು ವಿಚಾರಿಸಿ ಅವನ ಹೇಳಿಕೆಯಂತೆ ನಡೆಯಬಾರದು. ॥೧೧-೧೫॥ ಎಲ್ಲಿ

ಅವೇಕ್ಷ್ಯ ಮಂತ್ರಬಾಹ್ಯಾಸ್ತೇ ಕರ್ತವ್ಯಾಃ ಕೃತ್ಯದೂಷಣಾಃ ||೧೬|| ವಿನಾಶಯಂತೋ ಭರ್ತಾರಂ ಸಹಿತಾಃ ಶತ್ರುಭಿರ್ಬುಧೈಃ । ವಿಪರೀತಾನಿ ಕೃತ್ಯಾನಿ ಕಾರಯಂತೀಹ ಮಂತ್ರಿಣಃ ||೧೭|| ತಾನ್ ಭರ್ತಾ ಮಿತ್ರಸಂಕಾಶಾನಮಿತ್ರಾನ್ ಮಂತ್ರನಿರ್ಣಯೇ । ವ್ಯವಹಾರೇಣ ಜಾನೀಯಾತ್ಸಚಿವಾನುಪಸಂಹಿತಾನ್ ||೧೮|| ಚಪಲಸ್ಯೇಹ ಕೃತ್ಯಾನಿ ಸಹಸಾಽನುಪ್ರಧಾವತಃ । ಛಿದ್ರಮನ್ಯೇ ಪ್ರಪದ್ಯಂತೇ ಕ್ರೌಂಚಸ್ಯ ಖಮಿವ ದ್ವಿಜಾಃ ||೧೯|| ಯೋಹಿ ಶತ್ರುಮವಿಜ್ಞಾಯ ನಾತ್ಮಾನಮಭಿರಕ್ಷತಿ । ಅವಾಪ್ನೋತಿ ಹಿ

ವಾದ, ಹಿತಾಕರಂ-ಪ್ರಕೃತಕ್ಕೆ ಹಿತವಾಗಿ ತೋರುವ ಮಾತನ್ನು, ಧಾರ್ಷ್ಟ್ಯಾತ್-ಧೂರ್ತತೆಯಿಂದ, ಜಲ್ಪಂತಿ - ಬೊಗಳುವರೋ, ಕೃತ್ಯದೂಷಣಾಃ - ಕಾರ್ಯಘಾತುಕರಾದ, ತೇ - ಆ ಮಂತ್ರಿಗಳು, ಅವೇಕ್ಷ್ಯ - ಕಂಡು, ಮಂತ್ರ....ವ್ಯಾಃ - ಆಲೋಚನೆಯ ಕಾಲದಲ್ಲಿ ಹೊರಗಿಡಲ್ಪಡಬೇಕು. ||೧೬|| ಇಹ - ಈ ಲೋಕದಲ್ಲಿ, ಬುಧೈಃ - ತಿಳಿದಿರುವ, ಶತ್ರುಭಿಃ - ಶತ್ರುಗಳಿಂದ, ಸಹಿತಾಃ - ಸೇರಿ, ಯೇಮಂತ್ರಿಣಃ - ಯಾವ ಮಂತ್ರಿಗಳು, ಭರ್ತಾರಂ - ಪೋಷಕನಾದ ರಾಜನನ್ನು, ವಿನಾಶಯಂತಃ - ನಾಶಗೊಳಿಸಿ, ವಿಪರೀತಾನಿ - ವ್ಯತ್ಯಸ್ತಗಳಾದ, ಕೃತ್ಯಾನಿ - ಕಾರ್ಯಗಳನ್ನು, ಕಾರಯಂತಿ-ಮಾಡಿಸುತ್ತಾರೆಯೋ, ಭರ್ತಾ-ಪೋಷಕನಾದ ರಾಜನು, ಮಿತ್ರಸಂಕಾಶಾನ್-ಮಿತ್ರರಂತೆ ತೋರುವ, ಅಮಿತ್ರಾನ್ - ಶತ್ರುಪ್ರಾಯರಾದ, ಉಪಸಂಹಿತಾನ್ - ಲಂಚ ಕೊಟ್ಟು ಶತ್ರುಗಳಿಂದ ಸ್ವಾಧೀನ ಮಾಡಿಕೊಳ್ಳಲ್ಪಟ್ಟ, ತಾನ್‌ಸಚಿವಾನ್ - ಆ ಮಂತ್ರಿಗಳನ್ನು, ಮಂತ್ರನಿರ್ಣಯೇ - ಮಂತ್ರಾಲೋಚನೆಯ ಕಾಲದಲ್ಲಿ, ವ್ಯವಹಾರೇಣ - ಮಿಶ್ರಭಾಷಣದಿಂದ, ಜಾನೀಯಾತ್ - ತಿಳಿದುಕೊಳ್ಳಬೇಕು, ಇಹ - ಈ ಪ್ರಸ್ತುತಕಾರ್ಯದಲ್ಲಿ, ಕೃತ್ಯಾನಿ - ಅಂಥಾ ವಂಚಕರಾದ ಮಂತ್ರಿಗಳಿಂದ ಆಲೋಚಿಸಲ್ಪಟ್ಟ ಕಾರ್ಯಗಳನ್ನು, ಸಹಸಾ - (ವಿಮರ್ಶೆಮಾಡದೆ) ಬೇಗ, ಅನುಪ್ರಧಾವತಃ - ಅನುಸರಿಸಿ ಮಾಡುತ್ತಿರುವ, ಚಪಲಸ್ಯ - ಚಪಲಚಿತ್ತನಾದ ರಾಜನ, ಛಿದ್ರಂ - ರಂಧ್ರಾನ್ವೇಷಣವನ್ನು, ಅನ್ಯೇ - ಶತ್ರುಗಳು, ದ್ವಿಜಾಃ - ಪಕ್ಷಿಗಳು, ಕ್ರೌಂಚಸ್ಯ - ಕ್ರೌಂಚಪರ್ವತದ, ಖಮಿವ-ರಂಧ್ರವನ್ನೆಂತೋ ಅಂತು, ಪ್ರಪದ್ಯಂತೇ-ತಿಳಿದುಕೊಳ್ಳುವರು. ||೧೭-೧೯|| ಯಃ - ಯಾವ ಅರಸು, ಶತ್ರುಂಮಿತ್ರತ್ವೇನ-ಮಿತ್ರನಂತೆ ವರಿಸಲ್ಪಟ್ಟ ಶತ್ರುವನ್ನು, ಅಭಿಜ್ಞಾಯ - ತಿಳಿದು, ಆತ್ಮಾನಂ - ತನ್ನನ್ನು, ನಾಭರಕ್ಷತಿ - ಸಂರಕ್ಷಣೆ ಮಾಡಿಕೊಳ್ಳುವದಿಲ್ಲವೋ, ಸಃ - ಆ ಅರಸು, ಅನರ್ಥಾನ್ - ವಿಪತ್ತುಗಳನ್ನು, ಅವಾಪ್ನೋತಿ -

---

ರಾಕ್ಷಸೋತ್ತಮನೇ! ದುಷ್ಟರಾದ ಮಂತ್ರಿಗಳು ಸಕಲೋಪಾಯಗಳನ್ನೂ ತಿಳಿದಿರುವ ಶತ್ರುಗಳಿಂದ ಪ್ರೇರೇಪಿತರಾಗಿ ವಿಪರೀತವಾದ ಕಾರ್ಯಗಳನ್ನೇ ಮಾಡಿಬಿಡುವರು. ಹಾಗೆ ಹೊರಗೆ ಮಿತ್ರರಂತೆ ತೋರುತ್ತ, ಒಳಗೊಳಗೇ ಕ್ರೂರಕೃತ್ಯಗಳನ್ನು ಮಾಡುತ್ತಿರುವ ಮಂತ್ರಿಗಳಾರೆಂಬುದನ್ನು ಚೆನ್ನಾಗಿ ತಿಳಿದು ರಾಜನೆನಿಸಿದವನು ಕಪಟಸ್ವಭಾವವುಳ್ಳವನಾದರೂ, ಕಪಟವಿಲ್ಲದವನಂತೆ ನಟಿಸಿ ಎಲ್ಲ ವಿಷಯಗಳಲ್ಲಿಯೂ ಜಾಗರೂಕನಾಗಿರಬೇಕು. ಹಾಗೆ ಮಾಡದೆ ಚಪಲಸ್ವಭಾವವುಳ್ಳವರಾಗಿ ಸಂಚರಿಸುವ ರಾಜರ ಛಿದ್ರಗಳನ್ನು, ಕ್ರೌಂಚಪರ್ವತದ ಛಿದ್ರಗಳನ್ನು ಹಂಸಗಳೆಂತೋ ಅಂತು ಶತ್ರುಗಳಾದವರು ಅರಿತು ಪ್ರತೀಕಾರಕ್ಕೆ ತೊಡಗುತ್ತಾರೆ. ಈ ರೀತಿ ಶತ್ರುಗಳಿಗೆ ತನ್ನ ಛಿದ್ರಗಳು ತಿಳಿಯುವುದರಿಂದ ಖಂಡಿತವಾಗಿಯೂ ವಿನಾಶವು ಸಂಭವಿಸುತ್ತದೆ. ಇಷ್ಟೆಯಲ್ಲದೆ, ಎಲೈ ಸಹೋದರನಾದ ರಾವಣಾಸುರನೇ! ಶತ್ರುಗಳ ವೃತ್ತಾಂತವನ್ನು ತಿಳಿದೂ ಆತ್ಮರಕ್ಷಣೆಯನ್ನು ಮಾಡಿಕೊಳ್ಳದ ರಾಜನಿಗೆ ಅವಶ್ಯವಾಗಿಯೂ

ಸೋಽನರ್ಥಾನ್ ಸ್ಥಾನಾಚ್ಚ ವ್ಯವರೋಪ್ಯತೇ ॥ ೨೦ ॥ ಯದುಕ್ತಮಿಹ ತೇ ಪೂರ್ವಂ ಕ್ರಿಯತಾಮನುಜೇನಚ । ತದೇವ ನೋ ಹಿತಂ ಕಾರ್ಯಂ ಯದಿಚ್ಛಸಿ ಚ ತತ್ಕುರು" ॥ ೨೧ ॥ ತತ್ತು ಶ್ರುತ್ವಾ ದಶಗ್ರೀವಃ ಕುಂಭಕರ್ಣಸ್ಯ ಭಾಷಿತಂ । ಭ್ರುಕುಟೀಂ ಚೈವ ಸಂಚಕ್ರೇ ಕ್ರುದ್ಧಶ್ಚೈನಮಭಾಷತ ॥ ೨೨ ॥ "ಮಾನ್ಯೋ ಗುರುರಿವಾಚಾರ್ಯಃ ಕಿಂ ಮಾಂ ತ್ವಮನುಶಾಸಸಿ? । ಕಿಮೇವಂ ವಾಕ್ಶ್ರಮಂ ಕೃತ್ವಾ ಕಾಲೇ ಯುಕ್ತಂ ವಿಧೀಯತಾಂ ॥೨೩॥ ವಿಭ್ರಮಾಚ್ಚಿತ್ತಮೋಹಾದ್ವಾ ಬಲವೀರ್ಯಾಶ್ರಯೇಣವಾ । ನಾಭಿ

ಹೊಂದುವನಷ್ಟೆ, ಸ್ಥಾನಾಚ್ಚ - ಸ್ವಸ್ಥಾನದಿಂದಲೂ, ವ್ಯವರೋಪ್ಯತೇ - ತೆಗೆದುಹಾಕಲ್ಪಡುವನು. ॥ ೨೦ ॥ ತೇ - ನಿನಗೆ, ಪೂರ್ವಂ - ಪೂರ್ವದಲ್ಲಿ, ಅನುಜೇನ - ತಮ್ಮನಾದ ವಿಭೀಷಣನಿಂದ, ಯದುಕ್ತಂ - ಯಾವದು ಹೇಳಲ್ಪಟ್ಟಿತೋ, ತದೇವ - ಅದೇ, ನಃ - ನಮಗೆ, ಹಿತಂ - ಶ್ರೇಯಸ್ಕರವಾದ, ಕಾರ್ಯಂ - ಕಾರ್ಯವು, ಕ್ರಿಯತಾಂ - ಮಾಡಲ್ಪಡಲಿ, ಯತ್ - ಯಾವುದನ್ನು, ಇಚ್ಛಸಿ - ಅಪೇಕ್ಷಿಸುತ್ತೀಯೋ, ತತ್ - ಅದನ್ನು, ಕುರು - ಮಾಡು. ॥ ೨೧ ॥ ದಶಗ್ರೀವಃ - ದಶಕಂಠನು, ಕುಂಭಕರ್ಣಸ್ಯ - ಕುಂಭಕರ್ಣನ, ತದ್ಭಾಷಿತಂ - ಆ ಮಾತನ್ನು, ಕ್ರುದ್ಧಃ - ಕೋಪಿಷ್ಠನಾಗಿ, ಏನಂ - ಇವನನ್ನು ಕುರಿತು, ಅಭಾಷತ - ನುಡಿದನು. ॥ ೨೨ ॥ ಮಾನ್ಯಃ - ಪೂಜ್ಯನಾದ, ಆಚಾರ್ಯಃ - ಆಚಾರಪ್ರವರ್ತಕನಾದ, ಗುರುರಿವ - ಗುರುವಿನಂತೆ, ತ್ವಂ - ನೀನು, ಮಾಂ - ನನ್ನನ್ನು, ಅನುಶಾಸನಿಕಿಂ - ಆಜ್ಞಾಪಿಸುವೆಯಾ, ಏವಂ - ಈ ಪ್ರಕಾರವಾಗಿ, ವಾಕ್ಯಶ್ರಮಂ - ಮಾತಿನ ಶ್ರಮವನ್ನು, ಕೃತ್ವಾ - ಮಾಡಿ, ಕಿಂ - ಏನು ಪ್ರಯೋಜನವು, ಕಾಲೇ - ಈ ಕಾಲದಲ್ಲಿ, ಯತ್ - ಯಾವುದು, ಯುಕ್ತಂ - ಯುಕ್ತವೋ, ತತ್ - ಅದು, ವಿಧೀಯತಾಂ - ಮಾಡಲ್ಪಡಲಿ. ॥ ೨೩ ॥ ವಿಭ್ರಮಾತ್ - ಭ್ರಾಂತಿಯಿಂದಲಾಗಲಿ, ಚಿತ್ತಮೋಹಾತ್ - ಜ್ಞಾನವಿಲ್ಲದಯಿಂದಲಾಗಲೀ, ಬಲ.....ವಾ-ಶಕ್ತಿ ಮತ್ತು ಪರಾಕ್ರಮುಗಳ ಆಶ್ರಯದಿಂದಲಾಗಲೀ, ಯತ್ಕಾರ್ಯಂ-ಯಾವ ಕಾರ್ಯವು, ನಾಭಿಪನ್ನಂ - ಮಾಡಲ್ಪಡಲಿಲ್ಲವೋ, ತಸ್ಯ - ಆದರ ವಿಷಯವಾದ, ಪುನಃಕಥಾಃ - ಮರಳಿಯಾಡಿದ

ಅನೇಕ ಅನರ್ಥಗಳು ಒದಗುತ್ತವೆ. ॥೧೬—೨೦॥ ಎಲೈ ಮಹಾರಾಜನೇ! ಹಿಂದೆ ನಿನ್ನ ತಮ್ಮನಾದ ವಿಭೀಷಣನು ನಿನಗೆ ಶ್ರೇಯಸ್ಕರವಾದ ಮಾರ್ಗವನ್ನು ಹೇಳಿದನಲ್ಲವೆ. ಅದೇ ಹಿತವೆಂದು ನನಗೂ ತೋರುತ್ತದೆ. ಅದನ್ನೇ ಮಾಡುವವನಾಗು. ಈ ವಿಷಯಗಳೆಲ್ಲವೂ ನಾನು ನಿನಗೆ ಒಡಹುಟ್ಟಿದವನಾಗಿರುವುದರಿಂದ ಹೇಳಿದೆನಾಗಲಿ ನಿನ್ನನ್ನು ಅವಮಾನಪಡಿಸಬೇಕೆಂದು ಹೇಳಲಿಲ್ಲವು. ಆದುದರಿಂದೆಲೈ ರಾಕ್ಷಸೋತ್ತಮನೇ! ಪ್ರಕೃತದಲ್ಲಿ ನಾನು ಮಾಡಬೇಕಾಗಿರುವ ಕಾರ್ಯವಾವುದೋ ಅದನ್ನು ನಿರ್ಣಯಿಸಿ ಹೇಳುವವನಾಗು" ಎಂದು ಹೇಳಿದನು. ॥ ೨೧ ॥ ಕುಂಭಕರ್ಣನಿಂತು ನುಡಿಯುತ್ತಲೇ ರಾವಣನು ಹುಬ್ಬುಗಳನ್ನು ಗಂಟಿಕ್ಕಿ ಮಹಾ ಕೋಪೋದ್ದೀಪಿತನಾಗಿ, "ಎಲಾ ಕುಂಭಕರ್ಣಾ! ಏನಿದು? ಪೂಜ್ಯನಾದ ಗುರುವು ಶಿಷ್ಯನನ್ನು ಉಪದೇಶದಿಂದ ಶಿಕ್ಷಿಸುವಂತೆ ನನ್ನನ್ನು ಕುರಿತು ಸಲ್ಲದ ಮಾತುಗಳೆಲ್ಲವನ್ನೂ ಹೇಳಿ ಶಿಕ್ಷಿಸುತ್ತಿರುವೆಯಲ್ಲ! ನೀನೀರೀತಿ ಮಾತನಾಡುವುದು ಉಚಿತವಲ್ಲ. ಆದುದರಿಂದ ಪ್ರಕೃತದಲ್ಲಿ ಅವಶ್ಯವಾಗಿಯೂ ಮಾಡಲೇ ಬೇಕಾದ ಕಾರ್ಯವಾವುದೋ ಅದನ್ನು ಯೋಚಿಸಿ ಸಾಧಿಸುವವನಾಗು. ಭ್ರಾಂತಿಯಿಂದಲೋ, ಪರಾಕ್ರಮದಿಂದ ಗರ್ವಿಸಿಯೋ, ತಿಳಿದೋ, ತಿಳಿಯದೆಯೋ ನಾನು ಹಿಂದೆ ಮೀರಿ ನಡೆದುಬಿಟ್ಟಿರುವೆನು. ಈಗ ಆ ವಿಚಾರವನ್ನೆತ್ತಿಹಾಕೆ ಮಾತನಾಡುವುದರಿಂದೇನು ಪ್ರಯೋಜನ? ಎಲೈ ರಾಕ್ಷಸಶ್ರೇಷ್ಠನೇ! ಈ ವಿಷಮಕಾಲದಲ್ಲಿ

ಪನ್ನಮಿದಾನೀಂ ಯದ್ವ್ಯರ್ಥಾಸ್ತಸ್ಯ ಪುನಃ ಕಥಾಃ ॥ ೨೪ ॥ ಅಸ್ಮಿನ್ ಕಾಲೇತು ಯದ್ಯುಕ್ತಂ ತದಿದಾನೀಂ ವಿಧೀಯತಾಂ । ಗತಂತು ನಾನುಶೋಚಂತಿ ಗತಂತು ಗತ ಮೇವಹಿ ॥ ೨೫ ॥ ಮಮಾಪನಯಜಂ ದೋಷಂ ವಿಕ್ರಮೇಣ ಸಮೀಕುರು । ಯದಿ ಖಲ್ವಸ್ತಿ ಮೇ ಸ್ನೇಹೋ ವಿಕ್ರಮಂ ವಾಽವಗಚ್ಛಸಿ ॥೨೬॥ ಯದಿ ವಾ ಕಾರ್ಯಮೇ ತತ್ತೇ ಹೃದಿ ಕಾರ್ಯತಮಂ ಮತಂ । ಸಸುಹೃದ್ಯೋ ವಿಪನ್ನಾರ್ಥಂ ದೀನಮಭ್ಯವ ಪದ್ಯತೇ ॥ ೨೭ ॥ ಸಬಂಧುರ್ಯೋಽಪನೀತೇಷು ಸಾಹಾಯ್ಯಾಯೋಪಕಲ್ಪತೇ" ।

ಮಾತುಗಳು, ಇದಾನೀಂ - ಈಗ, ವ್ಯರ್ಥಾಃ - ನಿಷ್ಪ್ರಯೋಜನಗಳು. ॥ ೨೪ ॥ ಅಸ್ಮಿನ್ಕಾಲೇತು - ಈ ವಿಪತ್ಕಾಲದಲ್ಲಿ, ಯತ್ - ಯಾವದು, ಯುಕ್ತಂ - ಯುಕ್ತವೋ, ತತ್ - ಅದು, ಇದಾನೀಂ - ಈಗ, ವಿಧೀಯತಾಂ - ಮಾಡಲ್ಪಡಲಿ, (ಪಂಡಿತಾಃ - ಬಲ್ಲವರು), ಗತಂತು - ಕಳೆದುಹೋದ ಕಾರ್ಯವನ್ನು ಕುರಿತು, ನಾನುಶೋಚಂತಿ - ವ್ಯಸನಪಡುವದಿಲ್ಲ, ಗತಂತು - ಹೋದದ್ದಾದರೆ, ಗತಮೇವಹಿ - ಹೋಗಲೇ ಹೋಯಿತಷ್ಟೆ. ॥೨೫॥ ಮೇ - ನನ್ನ ವಿಷಯದಲ್ಲಿ, ಸ್ನೇಹಃ - ವಿಶ್ವಾಸವು, ಅಸ್ತಿಖಲು- ಇದ್ದದ್ದಾದರೆ, ವಿಕ್ರಮಂವಾ - ಪರಾಕ್ರಮವನ್ನಾದರೂ, ಅವಗಚ್ಛಸಿಯದಿ - ಹೊಂದಿದವನಾದರೆ (ಅಥವಾ - ತಿಳಿದವನಾದರೆ), ತೇ - ನಿನಗೆ, ಏತತ್ಕಾರ್ಯಂ - ಈ ಕಾರ್ಯವು, ಹೃದಿ - ಮನಸ್ಸಿನಲ್ಲಿ, ಕಾರ್ಯತಮಂ - ಅವಶ್ಯವಾಗಿ ಮಾಡತಕ್ಕದ್ದೆಂದು, ಮತಂಯದಿವಾ - ಇಷ್ಟವಾಗಿದ್ದರೆ, ವಿಕ್ರಮೇಣ- ಪರಾಕ್ರಮದಿಂದ, ಮಮ - ನನ್ನ, ಅಪನಯಜಂ - ನೀತಿ ತಪ್ಪಿದ್ದರಿಂದ ಹುಟ್ಟಿದ, ದೋಷಂ - ದೋಷವನ್ನು, ಸಮೀಕುರು - ಸರಿಮಾಡು. ॥ ೨೬ ॥ ಯಃ - ಯಾವ ಪುರುಷನು, ವಿಪನ್ನಾರ್ಥಂ - ಕೆಟ್ಟ ಪ್ರಯೋಜನವುಳ್ಳ, ದೀನಂ - ದೀನಮನಸ್ಕನನ್ನು, ಅಭ್ಯವಪದ್ಯತೇ - ಎಲ್ಲ ವಿಷಯ ಗಳಲ್ಲಿಯೂ ಹೊಂದುವನೋ, ಸಃ - ಅವನು, ಸುಹೃತ್ - ಸ್ನೇಹಿತನು, ಯಃ - ಯಾವ ಪುರು ಷನು, ಅಪನೀತೇಷು - ನೀತಿಮಾರ್ಗವನ್ನು ತಪ್ಪಿದ ಪುರುಷನ ವಿಷಯದಲ್ಲಿ, ಸಾಹಾಯ್ಯಾಯ - ಸಹಾಯಕ್ಕಾಗಿ, ಉಪಕಲ್ಪತೇ - ಸಮರ್ಥನಾಗುತ್ತಾನೋ, ಸಃ-ಅವನು, ಬಂಧುಃ-ಬಂಧುವು. ॥೨೭॥ ಅಥ-ಬಳಿಕ, ಏವಂ-ಈ ಪರಿ, ಧೀರದಾರುಣಂ - ಧೈರ್ಯಯುಕ್ತವಾಗಿಯೂ ಕಠೋರವಾಗಿಯೂ ಇರುವ, ವಚನಂ-ಮಾತನ್ನು, ಬ್ರುವಾಣಂ-ಹೇಳುವ ರಾವಣನನ್ನು, ಅಯಂ - ಇವನು, ರುಷ್ಟಇತಿ -

ನಾವು ಯಾವ ಕಾರ್ಯವನ್ನು ಮಾಡಬೇಕೋ ಅದನ್ನು ಯೋಚಿಸು. ಬುದ್ಧಿವಂತರಾದವರು ಕಳೆದುಹೋದುದನ್ನು ಕುರಿತು ಯೋಚಿಸುವುದಿಲ್ಲವು. ಕಳೆದುದು ಕಳೆದೇ ಹೋಗುವುದಲ್ಲದೆ ಮತ್ತೆ ಬರುವುದಿಲ್ಲ. ನಾನು ನನ್ನ ಅವಿವೇಕದಿಂದ ಮಾಡಬಾರದ ಕೆಲಸವನ್ನೇ ಮಾಡಿದ್ದೇನೆ. ಆದರೆ ನೀನು ಈಗ ಅದನ್ನು ನಿನ್ನ ಪರಾಕ್ರಮದಿಂದ ಸರಿಪಡಿಸು. ನಿನಗೆ ನನ್ನಲ್ಲಿ ಪ್ರೀತಿಯೂ, ಮೈತ್ರಿಯೂ ಇರುವುದು ನಿಜವಾದರೆ ಈಗ ಶತ್ರುಗಳ ಮೇಲೆ ನಿನ್ನ ಪರಾಕ್ರಮವನ್ನು ಪ್ರದರ್ಶಿಸು. ಹಾಗಿಲ್ಲದಿದ್ದರೆ, ನಿನ್ನ ಮನಸ್ಸಿನಲ್ಲಿ ಯಾವ ಕಾರ್ಯವನ್ನು ಮಾಡಬೇಕೆಂದಿರುವುದೋ ಆ ಕಾರ್ಯವನ್ನೇ ಮಾಡಿಬಿಡು. ಲೋಕದಲ್ಲಿ ಯಾವನು ಆಪತ್ಕಾಲದಲ್ಲಿ ಮಿತ್ರನನ್ನು ಕಾಪಾಡುವನೋ ಆತನೇ ನಿಜವಾದ ಸ್ನೇಹಿತನೆನಿಸುವನು. ನೀತಿಯಿಲ್ಲದೆ ದುಷ್ಕಾರ್ಯಗಳನ್ನು ಮಾಡಿದವನಲ್ಲಿಯೂ ದಯೆಯುಳ್ಳವನಾಗಿ ಅವನ ದುಷ್ಕಾರ್ಯಗಳನ್ನೂ ಸತ್ಕಾರ್ಯಗಳನ್ನಾಗಿ ಮಾಡುವನೋ ಅವನೇ ಬಂಧುವೆನಿಸುತ್ತಾನೆ" ಎಂದು ಹೇಳಿದನು. ॥ ೨೨–೨೭ ॥ ಈ ರೀತಿ ಅತಿ ದಾರುಣವಾಗಿಯೂ, ಗಂಭೀರವಾಗಿಯೂ ನುಡಿದ ರಾವಣನ ಮಾತುಗಳನ್ನು ಕೇಳಿ ಮಹಾಮತಿವಂತನಾದ ಕುಂಭಕರ್ಣನು ಆತನಿಗೆ ಕೋಪ

ತಮುಕ್ತ್ವೈವಂ ಬ್ರುವಾಣಂತು ವಚನಂ ಧೀರದಾರುಣಂ ॥ ೨೮ ॥ ರುಷ್ಟೋಽಯಮಿತಿ ವಿಜ್ಞಾಯ ಶನೈಃ ಶ್ಲಕ್ಷ್ಣಮುವಾಚಹ । ಅತೀವಹಿ ಸಮಾಲಕ್ಷ್ಯ ಭ್ರಾತರಂ ಕ್ಷುಭಿತೇಂದ್ರಿಯಂ ॥ ೨೯ ॥ ಕುಂಭಕರ್ಣಃ ಶನೈರ್ವಾಕ್ಯಂ ಬಭಾಷೇ ಪರಿಸಾಂತ್ವಯನ್ । "ಅಲಂ ರಾಕ್ಷಸರಾಜೇಂದ್ರ! ಸಂತಾಪಮುಪಪದ್ಯ ತೇ ॥೩೦॥ ರೋಷಂಚ ಸಂಪರಿತ್ಯಜ್ಯ ಸ್ವಸ್ಥೋ ಭವಿತುಮರ್ಹಸಿ । ನೈತನ್ಮನಸಿ ಕರ್ತವ್ಯಂ ಮಯಿ ಜೀವತಿ ಪಾರ್ಥಿವ! ॥ ೩೧ ॥ ತಮಹಂ ನಾಶಯಿಷ್ಯಾಮಿ ಯತಸ್ತ್ವಂ ಪರಿತಪ್ಯಸೇ । ಅವಶ್ಯಂತು ಹಿತಂ ವಾಚ್ಯಂ ಸರ್ವಾವಸ್ಥಂ ಮಯಾ ತವ ॥ ೩೨ ॥ ಬಂಧುಭಾವಾದಭಿಹಿತಂ ಭ್ರಾತೃಸ್ನೇಹಾಚ್ಚ ಪಾರ್ಥಿವ! । ಸದೃಶಂ ಯತ್ತು ಕಾಲೇಽಸ್ಮಿನ್ ಕರ್ತುಂ ಸ್ನಿಗ್ಧೇನ ಬಂಧುನಾ

ಕುಪಿತನಾದನೆಂದು, ವಿಜ್ಞಾಯ - ತಿಳಿದು, ಶನೈಃ - ಮೆಲ್ಲಗೆ, ಶ್ಲಕ್ಷ್ಣಂ - ಮೃದುವಾಗಿ, ಉವಾಚಹ- ಹೇಳಿದನಷ್ಟೆ. ॥ ೨೮ ॥ ಕುಂಭಕರ್ಣಃ-ಕುಂಭಕರ್ಣನು, ಅತೀವ-ಬಹಳವಾಗಿ, ಕ್ಷುಭಿತೇಂದ್ರಿಯಂ- ದುಃಖಿತವಾದ ಇಂದ್ರಿಯಗಳುಳ್ಳ, ಭ್ರಾತರಂ - ಅಣ್ಣನನ್ನು, ಸಮಾಲಕ್ಷ್ಯ - ಕಂಡು, ಪರಿಸಾಂತ್ವಯನ್ - ಸಮಾಧಾನಗೊಳಿಸುತ್ತ, ಶನೈಃ - ಮೆಲ್ಲಗೆ, ವಾಕ್ಯಂ - ಮಾತನ್ನು, ಬಭಾಷೇಹಿ - ಹೇಳಿದನಷ್ಟೆ. ॥೨೯॥ ಹೇ ರಾಕ್ಷಸರಾಜೇಂದ್ರ-ಎಲೈ ರಾಕ್ಷಸರಾಜರಿಗೆ ಅಧಿಪತಿಯಾದವನೇ, ತೇ - ನಿನ್ನಿಂದ, ಸಂತಾಪಂ - ಸಂಕಟವನ್ನು, ಉಪಪದ್ಯ - ಹೊಂದಿ, ಅಲಂ - ಸಾಕು, ರೋಷಂಚ - ಕೋಪವನ್ನೂ, ಸಂಪರಿತ್ಯಜ್ಯ - ಬಿಟ್ಟು, ಸ್ವಸ್ಥಃ - ಸ್ವಸ್ಥಚಿತ್ತನಾಗಿ, ಭವಿತುಂ - ಇರುವದಕ್ಕೆ, ಅರ್ಹಸಿ - ಯೋಗ್ಯನಾಗು. ॥೩೦॥ ಹೇ ಪಾರ್ಥಿವ - ಎಲೈ ಅರಸೇ, ಮಯಿ - ನಾನು, ಜೀವತಿ - ಬದುಕಿರಲು, ಏತತ್- ಈ ಮಾತು, ಮನಸಿ - ಮನಸ್ಸಿನಲ್ಲಿ, ನಕರ್ತವ್ಯಂ - ಮಾಡತಕ್ಕುದಲ್ಲ, ಯತ್ಕೃತೇ - ಯಾವ ಶ್ರೀರಾಮನ ನಿಮಿತ್ತವಾಗಿ, ಪರಿತಪ್ಯಸೇ - ಸಂಕಟಪಡುತ್ತಿದ್ದೀಯೋ, ತಂ - ಆ ಶ್ರೀರಾಮನನ್ನು, ಅಹಂ - ನಾನು, ನಾಶಯಿಷ್ಯಾಮಿ - ನಾಶಗೊಳಿಸುತ್ತೇನೆ. ॥ ೩೧ ॥ ಹೇ ಪಾರ್ಥಿವ - ಎಲೈ ಅರಸೇ, ಮಯಾ ನನ್ನಿಂದ, ತವ-ನಿನಗೆ, ಬಂಧು....ತ್-ಬಾಂಧವ್ಯ ಪ್ರೇಮದಿಂದಲೂ, ಭ್ರಾತೃಸ್ನೇಹಾಚ್ಚ- ಭ್ರಾತೃಸೌಹಾರ್ದದಿಂದಲೂ, ಸರ್ವಾವಸ್ಥಂ - ಸಮಸ್ತ ಅವಸ್ಥೆಗಳನ್ನೂ ಹೊಂದಿರುವ, ಅವಶ್ಯಂ - ಅಗತ್ಯವಾಗಿ, ವಾಚ್ಯಂ-ಹೇಳತಕ್ಕ, ಹಿತಂ ಹಿತಕರವಾದ ಮಾತು, ಅಭಿಹಿತಂಹಿ-ಹೇಳಲ್ಪಟ್ಟಿತಷ್ಟೆ.॥೩೨॥ ಅಸ್ಮಿನ್‌ಕಾಲೇ - ಈ ಕಾಲದಲ್ಲಿ, ಸ್ನಿಗ್ಧೇನ - ಸ್ನೇಹಿತನಿಂದಲೂ, ಬಂಧುನಾ - ಬಂಧುವಾದವನಿಂದಲೂ, ಯತ್ - ಯಾವ ಕಾರ್ಯವು, ಕರ್ತುಂ - ಮಾಡುವದಕ್ಕಾಗಿ, ಸದೃಶಂ - ಯೋಗ್ಯವಾದದ್ದೋ,

---

ಬಂದಿರುವುದೆಂಬುದನ್ನು ತಿಳಿದು ಆತನನ್ನು ಸವಿನುಡಿಗಳಿಂದ ಸಮಾಧಾನಗೊಳಿಸುತ್ತ, "ರಾಕ್ಷಸರಾಜ! ಸಂತಪಿಸಬೇಡ. ರೋಷವನ್ನು ತೊರೆ. ಸ್ವಸ್ಥಚಿತ್ತನಾಗಿರು. ಅಣ್ಣಾ! ನಿನಗೆ ಅನುಜಾತನಾದ ನಾನಿರುವಾಗ ನೀನು ದುಃಖಿಸುವುದೆಂದರೇನು? ನೀನು ಯಾರಗೋಸ್ಕರ ಪರಿತಪಿಸುತ್ತಿರುವೆಯೋ ಆ ರಾಮನನ್ನು ನಾನು ನಾಶಗೊಳಿಸುವೆನು. ನಾನು ಎಲ್ಲ ವಿಧಗಳಿಂದಲೂ ಪ್ರಮಾಣಮಾಡಿ ಹೇಳುತ್ತೇನೆ. ಕೇಳು; ನನ್ನ ಮಾತುಗಳನ್ನು ನಂಬು. ನೀನು ನನಗೆ ಪರಮ ಪ್ರಿಯಬಂಧುವಾಗಿರುವುದರಿಂದಲೂ, ನನಗೆ ನಿನ್ನಲ್ಲಿರುವ ಭ್ರಾತೃಸ್ನೇಹದಿಂದಲೂ ಈ ರೀತಿ ಮಾತನಾಡಿದೆನಲ್ಲದೆ ಮತ್ತೆ ಬೇರೆಯಲ್ಲವು. ಆ ಮಾತು ಹೋಗಲಿ. ॥ ೨೮-೩೨ ॥ ಪ್ರಕೃತದಲ್ಲಿ ಯಾವ ಕಾರ್ಯವು ಅವಶ್ಯವಾಗಿ ಮಾಡಬೇಕಾಗಿರುವುದೋ ಆ ಕಾರ್ಯವನ್ನೇ ಮಾಡುವೆನು? ಇದೋ, ನಾನೀಗಲೇ ಹೊರಟು

॥ ೩೩ ॥ ಶತ್ರೂಣಾಂ ಕದನಂ ಪಶ್ಯ ಕ್ರಿಯಮಾಣಂ ಮಯಾ ರಣೇ । ಅದ್ಯ ಪಶ್ಯ ಮಹಾಬಾಹೋ! ಮಯಾ ಸಮರಮೂರ್ಧನಿ ॥ ೩೪ ॥ ಹತೇ ರಾಮೇ ಸಹಭ್ರಾತ್ರಾ ದ್ರವಂತೀಂ ಪರವಾಹಿನೀಂ । ಅದ್ಯ ರಾಮಸ್ಯ ತದ್ದೃಷ್ಟ್ವಾ ಮಯಾಽನೀತಂ ರಣಾಚ್ಛಿರಃ ॥ ೩೫ ॥ ಸುಖೀಭವ ಮಹಾಬಾಹೋ! ಸೀತಾ ಭವತು ದುಃಖಿತಾ । ಅದ್ಯ ರಾಮಸ್ಯ ಪಶ್ಯಂತು ನಿಧನಂ ಸುಮಹತ್ಪ್ರಿಯಂ ॥೩೬॥ ಲಂಕಾಯಾಂ ರಾಕ್ಷಸಾಸ್ಸರ್ವೇ ಯೇ ತೇ ನಿಹತಬಾಂಧವಾಃ । ಅದ್ಯ ಶೋಕಪರೀತಾನಾಂ ಸ್ವಬಂಧುವಧಕಾರಣಾತ್ ॥ ೩೭ ॥ ಶತ್ರೋರ್ಯುಧಿ ವಿನಾಶೇನ ಕರೋಮ್ಯಸ್ರಪ್ರಮಾರ್ಜನಂ । ಅದ್ಯ ಪರ್ವತ

ರಣೇ - ಕಾಳಿಗದಲ್ಲಿ, ಮಯಾ - ನನ್ನಿಂದ, ಕ್ರಿಯಮಾಣಂ - ಮಾಡಲ್ಪಡುತ್ತಿರುವ, ಶತ್ರೂಣಾಂ - ದ್ವೇಷಿಗಳ, ತತ್ಕದನಂ - ಆ ಯುದ್ಧವನ್ನು, ಪಶ್ಯ - ನೋಡು. ॥ ೩೩ ॥ ಹೇ ಮಹಾಬಾಹೋ - ಎಲೈ ಮಹಾ ಭುಜಬಲಪರಾಕ್ರಮಿಯೇ, ಅದ್ಯ- ಈಗ, ಮಯಾ-ನನ್ನಿಂದ, ರಾಮೇ - ಶ್ರೀರಾಮನು, ಭ್ರಾತ್ರಾಸಹ - ತಮ್ಮನೊಡಗೂಡಿ, ಸಮರಮೂರ್ಧನಿ - ಯುದ್ಧರಂಗದಲ್ಲಿ, ಹತೇ - ಹೊಡೆಯಲ್ಪಟ್ಟವನಾಗಲು, ದ್ರವಂತೀಂ - ಓಡಿಹೋಗುತ್ತಿರುವ, ಪರವಾಹಿನೀಂ - ಶತ್ರುಸೇನೆಯನ್ನು, ಪಶ್ಯ - ನೋಡು. ॥ ೩೪ ॥ ಹೇ ಮಹಾಬಾಹೋ - ಎಲೈ ಮಹಾ ಭುಜಬಲಶಾಲಿಯೇ, ಮಯಾ - ನನ್ನಿಂದ, ರಣಾತ್ - ಯುದ್ಧದಿಂದ, ಆನೀತಂ - ತರಲ್ಪಟ್ಟ, ರಾಮಸ್ಯ - ಶ್ರೀರಾಮನ, ತಚ್ಛಿರಃ - ಆ ಶಿರವನ್ನು, ದೃಷ್ಟ್ವಾ - ಕಂಡು, ಸುಖೀ - ಸುಖವಂತನು, ಭವ - ಆಗು, ಸೀತಾ - ಸೀತಾದೇವಿಯು, ದುಃಖಿತಾ - ವ್ಯಸನಗೊಂಡವಳು, ಭವತು - ಆಗಲಿ. ॥ ೩೫ ॥ ಲಂಕಾಯಾಂ - ಲಂಕಾಪಟ್ಟಣದಲ್ಲಿ, ಯೇರಾಕ್ಷಸಾಃ-ಯಾವ ರಾಕ್ಷಸರು, ನಿಹತಬಾಂಧವಾಃ-ಹತರಾದ ಬಂಧುಗಳುಳ್ಳವರಾಗಿದ್ದಾರೆಯೋ, ತೇಸರ್ವೇ - ಅವರೆಲ್ಲರೂ, ಅದ್ಯ - ಈಗ, ಸುಮಹತ್ - ದೊಡ್ಡದಾದ, ಪ್ರಿಯಂ - ಇಷ್ಟವಾದ, ರಾಮಸ್ಯ - ಶ್ರೀರಾಮನ, ನಿಧನಂ - ಸಂಹಾರವನ್ನು, ಪಶ್ಯತು - ನೋಡಲಿ. ॥ ೩೬ ॥ ಅದ್ಯ - ಈಗ, ಸ್ವಬಂ.. ತ್ - ತಮ್ಮತಮ್ಮ ಬಂಧುಗಳು ಮಡಿದುದರಿಂದ, ಶೋಕ....ನಾಂ - ವ್ಯಸನಗೊಂಡ ರಕ್ಕಸರಿಗೆ, ಯುಧಿ - ಕಾಳಿಗದಲ್ಲಿ, ಶತ್ರೋಃ - ಶತ್ರುವಿನ, ವಿನಾಶೇನ - ಸಹಾಯದಿಂದ, ಅಸ್ರ....ನಂ - ಕಣ್ಣೀರು ಒರೆಸುವಿಕೆಯನ್ನು, ಕರೋಮಿ - ಮಾಡುವೆನು. ॥೩೭॥ ಅದ್ಯ - ಈಗ, ಪರ್ವತಸಂಕಾಶಂ- ಪರ್ವತಕ್ಕೆ ಸಮಾನನಾದ, ಪ್ಲವಗೋತ್ತಮಂ-ವಾನರೋತ್ತಮನಾದ, ಸುಗ್ರೀವಂ-ಸುಗ್ರೀವನನ್ನು,

---

ಶತ್ರುಗಳೊಡನೆ ಮಹಾ ಭಯಂಕರವಾದ ಯುದ್ಧವನ್ನು ಮಾಡುವೆನು. ನಂಬು. ಎಲೈ ಮಹಾ ಭುಜಬಲಪರಾಕ್ರಮಶಾಲಿಯೆ! ಈಗ ಯುದ್ಧಭೂಮಿಯಲ್ಲಿ ಕಾಳೆಗ ಮಾಡುವ ನನ್ನ ಪರಾಕ್ರಮವನ್ನಾದರೂ ನೋಡು. ನಾನು ನಿನ್ನ ಶತ್ರುವಾದ ಆ ರಾಮನನ್ನು ಕೊಂದು ಅವನ ತಲೆಯನ್ನು ನಿನಗೆ ತಂದೊಪ್ಪಿಸುವೆನು: ನಾನು ಆ ರೀತಿ ಮಾಡಿದರೆ ವಾನರರೆಲ್ಲರೂ ಭಯದಿಂದ ಓಡಿಹೋಗುತ್ತಾರೆ. ಅದೆಲ್ಲವನ್ನೂ ನೋಡಿ ನೀನು ಪರಮಾನಂದಭರಿತನಾಗು. ಆ ರಾಮನ ಮರಣವನ್ನು ಕೇಳಿ ಸೀತೆಯು ಅಧಿಕವಾಗಿ ದುಃಖಿಸುವಳು: ದುಃಖಿಸಲಿ. ॥ ೩೩-೩೫ ॥ ಎಲೈ ರಾಕ್ಷಸೋತ್ತಮನೇ! ನೀನು ಅತ್ಯಂತ ಸಂತೋಷಕರವಾದ ರಾಮನ ಮರಣ ವೃತ್ತಾಂತವನ್ನು ಕೇಳುವೆ. ಲಂಕಾನಗರದಲ್ಲಿ ಅನೇಕ ರಾಕ್ಷಸವೀರರು ಆ ರಾಮನಿಂದ ಹತರಾದರಲ್ಲವೆ? ಈಗ ಆ ರಾಮನನ್ನು ಶೂರನಾದ ನಾನು ಸಂಹರಿಸುವೆನು. ನೀನು ಯೋಚಿಸಬೇಡ. ಅಣ್ಣಾ! ಈಗ ನಾನು ವಾನರಾಧಿಪತಿಯಾದ ಸುಗ್ರೀವನನ್ನು

ಸಂಕಾಶಂ ಸಸೂರ್ಯಮಿವ ತೋಯದಂ ॥ ೩೮ ॥ ವಿಕೀರ್ಣಂ ಪಶ್ಯ ಸಮರೇ ಸುಗ್ರೀವಂ ಪ್ಲವಗೋತ್ತಮಂ । ಕಥಂ ತ್ವಂ ರಾಕ್ಷಸೈರೇಭಿರ್ಮಯಾಚ ಪರಿರಕ್ಷಿತಃ ॥ ೩೯ ॥ ಜಿಘಾಂಸುಭಿರ್ದಾಶರಥಿಂ ವಧ್ಯಸೇ ತ್ವಮಿಹಾನಘ ! । ಅಥಪೂರ್ವಂ ಹತೇ ತೇನ ಮಯಿ ತ್ವಾಂ ಹಂತಿ ರಾಘವಃ ॥೪೦॥ ನಾಹಮಾತ್ಮನಿ ಸಂತಾಪಂ ಗಚ್ಛೇಯಂ ರಾಕ್ಷಸಾಧಿಪ ! । ಕಾಮಂ ತ್ವಿದಾನೀಮಪಿ ಮಾಂ ವ್ಯಾದಿಶ ತ್ವಂ ಪರಂತಪ ! ॥ ೪೧ ॥ ನಪರಃ ಪ್ರೇಷಣೀಯಸ್ತೇ ಯುದ್ಧಾಯಾಽತುಲವಿಕ್ರಮ ! । ಅಹಮುತ್ಸಾದ

ಸಮರೇ - ಕಾಳಗದಲ್ಲಿ, ಸಸೂರ್ಯಂ - ಸೂರ್ಯನಿಂದೊಡಗೂಡಿದ, ತೋಯದಮಿವ - ಮೇಘವನ್ನಂತೆ, ವಿಕೀರ್ಣಂ - ಪುಡಿಮಾಡಲ್ಪಟ್ಟವನನ್ನಾಗಿ, ಪಶ್ಯ - ನೋಡು. ॥ ೩೮ ॥ ಹೇ ಅನಘ - ಎಲೈ ನಿರ್ದೋಷನೇ, ದಾಶರಥಿಂ - ಶ್ರೀರಾಮನನ್ನು, ಜಿಘಾಸುಭಿಃ - ಹೊಡೆಯಲಿಚ್ಛೆಯುಳ್ಳ, ಏಭಿಃರಾಕ್ಷಸೈಃ - ಈ ರಾಕ್ಷಸರಿಂದಲೂ, ಮಯಾಚ - ನನ್ನಿಂದಲೂ, ಪರಿರಕ್ಷಿತಃ - ಸಂರಕ್ಷಿಸಲ್ಪಡುತ್ತಿರುವ, ತ್ವಂ - ನೀನು, ಇಹ - ಈಗ, ಕಥಂ - ಹೇಗೆ, ವಧ್ಯಸೇ - ಹೊಡೆಯಲ್ಪಡುತ್ತೀಯೆ. ॥೩೯॥ ಹೇ ರಾಕ್ಷಸಾಧಿಪ - ಎಲೈ ರಾಕ್ಷಸರಾಜನೇ, ಅಥವಾ - ಹಾಗಲ್ಲದಿದ್ದರೆ, ತೇನ-ಆ ಶ್ರೀರಾಮನಿಂದ, ಮಯಿ - ನಾನು, ಪೂರ್ವಂ - ಮೊದಲು, ಹತೇ - ಹೊಡೆಯಲ್ಪಟ್ಟವನಾಗಲೂ, ರಾಘವಃ - ಶ್ರೀರಾಮನು, ತ್ವಾಂ - ನಿನ್ನನ್ನು, ಹಂತಿ - ಹೊಡೆಯುತ್ತಾನೆ, ಅಹಂ - ನಾನು, ಆತ್ಮನಿ-ನನ್ನ ವಿಷಯವಾಗಿ, ಸಂತಾಪಂ - ಸಂಕಟವನ್ನು, ನಾವಗಚ್ಛೇಯಂ - ಹೊಂದಲಾರೆನು. ॥ ೪೦ ॥ ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಅತುಲವಿಕ್ರಮ - ಸಮಾನವಿಲ್ಲದ ಪರಾಕ್ರಮವುಳ್ಳವನೇ, ಮಾಂ - ನನ್ನನ್ನು, ತ್ವಂ - ನೀನು, ಇದಾನಿಮಪಿ - ಈಗಲೇ, ಕಾಮಂ - ಯಥೇಷ್ಟವಾಗಿ, ವ್ಯಾದಿಶ - ಆಜ್ಞಾಪಿಸು, ತೇ - ನಿನ್ನಿಂದ ಯುದ್ಧಕ್ಕಾಗಿ, ಪರಃ - ಮತ್ತೊಬ್ಬ ಪುರುಷನು, ನಪ್ರೇಷಣೀಯಃ - ಕಳುಹಿಸಲ್ಪಡತಕ್ಕವನಲ್ಲ. ॥ ೪೧ ॥ ಹೇ ಮಹಾಬಲ - ಎಲೈ ಬಹು ಬಲಿಷ್ಠನೇ, ಅಹಂ - ನಾನು,

---

ರಣರಂಗದಲ್ಲಿ ವಿವಿಧಾಯುಧಗಳಿಂದ ಮರ್ದಿಸುವೆನು. ಅವನು ರಕ್ತಸಿಕ್ತವಾದ ಗಾತ್ರವುಳ್ಳವನಾಗಿ ಸೂರ್ಯನೊಡಗೂಡಿದ ಮೇಘದಂತೆ ಪೇಲವವಾಗುತ್ತಾನೆ. ಎಲೈ ರಾಕ್ಷಸನಾಥನೇ! ಅಂತಾಗುವ ಕಪೀಶ್ವರನನ್ನು ನೋಡಿ ನೀನು ಪರಮ ಸಂತುಷ್ಟನಾಗುವೆ. ಎಲೈ ವೀರನೇ! ರಣರಂಗದಲ್ಲಿ ಕಾದಾಡಿ ಮಡಿದವರ ಸ್ತ್ರೀಯರೆಲ್ಲರೂ, ಈಗ ಶತ್ರುಗಳು ನಾಶವಾಗುವುದರಿಂದ ವ್ಯಸನಗಳನ್ನು ತೊರೆದು ಸುಖಿಗಳಾಗುವರು. ಎಲೈ ನಿರ್ದೋಷನೇ! ಈಗ ನೀನು ದಶರಥಪುತ್ರನಾದ ಆ ರಾಮನನ್ನು ಸಂಹರಿಸುವ ರಾಕ್ಷಸರಿಂದ ಸುರಕ್ಷಿತನಾಗಿ ವಾನರರೆಲ್ಲರನ್ನೂ ಸಂಹರಿಸುವೆ. ಆ ರಾಮನು ನನ್ನನ್ನು ಸಂಹರಿಸಿದ ಹೊರ್ತು ನಿನ್ನನ್ನು ಸಂಹರಿಸಲಾರನಷ್ಟೆ. ನಾನು ಜೀವಿಸಿರುವಲ್ಲಿ ರಾಮನಿಂದ ನಿನಗಾವ ಭಯವೂ ಇರುವುದಿಲ್ಲವು. ಅವನು ನಿನ್ನನ್ನು ಎಷ್ಟುಮಾತ್ರಕ್ಕೂ ಕೊಲ್ಲಲಾರನು. ರಾಕ್ಷಸೇಶ್ವರಾ! ನಾನು ನನ್ನ ಮರಣಕ್ಕಾಗಿ ಎಷ್ಟುಮಾತ್ರವೂ ದುಃಖಿಸುವುದಿಲ್ಲವು. ಎಲೈ ಶತ್ರುಮರ್ದನನೇ! ನನ್ನನ್ನೀಗ ಯುದ್ಧಕ್ಕೆ ಕಳುಹಿಸು. ಈಗ ನನ್ನನ್ನು ಬಿಟ್ಟು ಯುದ್ಧಕ್ಕೆ ಹೋಗಲು ಯಾವನುತಾನೆ ಸಮರ್ಥನಾದಾನು. ಇತರರನ್ನು ಕಳುಹಿಸುವುದೂ ಯುಕ್ತವಲ್ಲ. ॥೩೬–೪೧॥ ಎಲೈ ಮಹಾಬಲನೇ! ಈಗ ನಾನು ಯುದ್ಧಭೂಮಿಗೆ ಹೋಗಿ ನಿನ್ನ ಶತ್ರುಗಳನ್ನು ಸಂಹರಿಸುವೆನು. ಈಗ ದೇವೇಂದ್ರ,

ಯಿಷ್ಯಾಮಿ ಶತ್ರೂಂಸ್ತವ ಮಹಾಬಲ! ॥ ೪೨ ॥ ಯದಿ ಶಕ್ರೋ ಯದಿ ಯಮೋ ಯದಿ ಪಾವಕಮಾರುತೌ। ತಾನಹಂ ಯೋಧಯಿಷ್ಯಾಮಿ ಕುಬೇರವರುಣಾವಪಿ॥೪೩॥ ಗಿರಿಮಾತ್ರಶರೀರಸ್ಯ ಶಿತಶೂಲಧರಸ್ಯ ಮೇ। ನರ್ದತಸ್ತೀಕ್ಷ್ಣದಂಷ್ಟ್ರಸ್ಯ ಬಿಭೀಯಾಚ್ಚ ಪುರಂದರಃ ॥ ೪೪ ॥ ಅಥವಾ ತ್ಯಕ್ತಶಸ್ತ್ರಸ್ಯ ಮೃಧ್ನತಸ್ತರಸಾ ರಿಪೂನ್ । ನಮೇ ಪ್ರತಿಮುಖೇ ಸ್ಥಾತುಂ ಕಸ್ಸ್ಯಾಚ್ಛಕ್ತೋ ಜಿಜೀವಿಷುಃ ॥ ೪೫ ॥ ನೈವಶಕ್ತ್ಯಾ ನಗದಯಾ ನಾಸಿನಾ ನಿಶಿತೈಃ ಶರೈಃ । ಹಸ್ತಾಭ್ಯಾಮೇವ ಸಂರಬ್ಧೋ ಹನಿಷ್ಯಾಮ್ಯಪಿ ವಜ್ರಿಣಂ ॥೪೬॥ ಯದಿ ಮೇ ಮುಷ್ಟಿವೇಗಂ ಸ ರಾಘವೋಽದ್ಯ ಸಹಿಷ್ಯತೇ । ತತಃ ಪಾಸ್ಯಂತಿ

ತವ - ನಿನ್ನ, ಶತ್ರೂನ್ - ದ್ವೇಷಿಗಳನ್ನು, ಉತ್ಸಾದಯಿಷ್ಯಾಮಿ - ಉತ್ಪಾಟನ ಮಾಡುತ್ತೇನೆ. ॥೪೨॥ ಶಕ್ರೋಯದಿ - ಇಂದ್ರನಾದರೂ, ಯಮೋಯದಿ-ಯಮನಾದರೂ, ಪಾವ.....ದಿ-ಅಗ್ನಿ ವಾಯುಗಳಾದರೂ, ಕುಬೇ....ದಿ-ಕುಬೇರ ವರುಣರಾದರೂ, ಅಹಂ-ನಾನು, ತಾನಪಿ-ಅವ(ರೊಡನೆಯೂ)ರನ್ನೂ, ಯೋಧಯಿಷ್ಯಾಮಿ - ಯುದ್ಧಮಾಡುವೆನು. ॥ ೪೩ ॥ ಗಿರಿ.....ಸ್ಯ - ಬೆಟ್ಟದಂತೆ ಶರೀರವುಳ್ಳ, ಶಿತ....ಸ್ಯ - ತೀಕ್ಷ್ಣವಾದ ತ್ರಿಶೂಲವನ್ನು ಧರಿಸಿ, ನರ್ದತಃ - ಗರ್ಜಿಸುತ್ತಿರುವ, ತೀಕ್ಷ್ಣ....ಸ್ಯ - ತೀಕ್ಷ್ಣವಾದ ಕೋರೆದಾಡೆಗಳುಳ್ಳ, ಮೇ - ನನ್ನದೆಶೆಯಿಂದ, ಪುರಂದರಶ್ಚ - ಇಂದ್ರನೂ ಕೂಡ, ಬಿಭೀಯಾತ್ - ಭಯಪಡುವನು. ॥ ೪೪ ॥ ಅಥವಾ - ಹಾಗಲ್ಲದಿದ್ದರೆ, ತ್ಯಕ್ತಶಸ್ತ್ರಸ್ಯ - ಬಿಡಲ್ಪಟ್ಟ ಆಯುಧಗಳುಳ್ಳ, ತರಸಾ - ಬಲದಿಂದಲೇ, ರಿಪೂನ್ - ಶತ್ರುಗಳನ್ನು, ಮೃಧ್ನತಃ - ಅರಿಯುತ್ತಿರುವ, ಮೇ - ನನ್ನ, ಪ್ರತಿಮುಖೇ - ಎದುರಲ್ಲಿ, ಕಃ - ಯಾವನುತಾನೇ, ಜಿಜೀವಿಷುಃ - ಬದುಕಲಿಚ್ಛೆಯುಳ್ಳವನು, ಸ್ಥಾತುಂ - ನಿಲ್ಲುವದಕ್ಕೆ, ಶಕ್ತಃ - ಸಮರ್ಥನು, ಸ್ಯಾತ್ - ಆಗುವನು. ॥ ೪೫ ॥ ಸಂರಬ್ಧಃ - ಕೋಪಿಸ್ಠನಾಗಿ, ವಜ್ರಿಣಮಪಿ - ದೇವೇಂದ್ರನನ್ನಾಗಲಿ, ಹಸ್ತಾಭ್ಯಾಮೇವ - ಕೈಯಿಂದಲೇ, ಹನಿಷ್ಯಾಮಿ - ಹೊಡೆಯುವೆನು, ಶಕ್ತ್ಯಾ - ಶಕ್ತ್ಯಾಯುಧದಿಂದ, ನೈವ - ಹೊಡೆಯುವುದಿಲ್ಲ, ಗದಯಾಪಿ - ಗದೆಯಿಂದಲೂ, ನ - ಇಲ್ಲವು, ಅಸಿನಾ - ಕತ್ತಿಯಿಂದ, ನ - ಇಲ್ಲ, ನಿಶಿತೈಃ - ತೀಕ್ಷ್ಣವಾದ, ಶರೈರಪಿ - ಬಾಣಗಳಿಂದಲೂ, ನ - ಹೊಡೆಯುವದಿಲ್ಲ. ॥೪೬॥ ಅದ್ಯ - ಈಗ, ಸರಾಘವಃ - ಆ ಶ್ರೀರಾಮನು, ಮೇ - ನನ್ನ, ಮುಷ್ಟಿವೇಗಂ - ಮುಷ್ಟಿಯ ವೇಗವನ್ನು, ಸಹಿಷ್ಯತೇಯದಿ -

ಯಮ, ಅಗ್ನಿ, ವಾಯು, ವರುಣ, ಕುಬೇರ ಇವರಲ್ಲಿ ಯಾರಾದರೂ ಸರಿಯೆ ನನ್ನೊಡನೆ ಯುದ್ಧಕ್ಕೆ ಬಂದರೆ ಅವರನ್ನು ಖಂಡಿತವಾಗಿಯೂ ಕೊಲ್ಲುವೆನು. ಎಲೈ ರಾಕ್ಷಸವೀರನೇ! ಪರ್ವತಕ್ಕೆ ಸಮಾನವಾದ ಶರೀರವುಳ್ಳವನೂ, ಬಹು ತೀಕ್ಷ್ಣವಾದ ಶೂಲಾಯುಧವನ್ನು ಧರಿಸಿರುವವನೂ, ಬಹಳ ಚೂಪಾದ ಕೋರೆದಾಡೆಗಳುಳ್ಳವನೂ, ಅತಿ ಭಯಂಕರವಾಗಿ ಸಿಂಹನಾದವನ್ನು ಮಾಡುತ್ತಿರುವವನೂ ಆದ ನನ್ನನ್ನು ನೋಡಿ ದೇವೇಂದ್ರನೂ ಕೂಡ ಭಯದಿಂದ ನಡುಗಿಹೋಗುವನು. ನಾನು ಶಕ್ತಿ, ಗದೆ ಮೊದಲಾದ ಆಯುಧಗಳನ್ನಾಗಲಿ, ತೀಕ್ಷ್ಣವಾದ ಬಾಣಗಳನ್ನಾಗಲಿ ಪ್ರಯೋಗಿಸಿ ಆ ಮಹೇಂದ್ರನನ್ನು ಕೊಲ್ಲಬೇಕಾದುದಿಲ್ಲ. ಒಂದೇ ಒಂದು ಮುಷ್ಟಿ ಪ್ರಹಾರದಿಂದಲೇ ಅವನನ್ನು ಕೊಂದುಬಿಡುತ್ತೇನೆ. ಹಾಗೊಂದುವೇಳೆ ನಾನು ಬಿಲ್ಲುಬಾಣಗಳನ್ನು ಧರಿಸಿ ರಣರಂಗದಲ್ಲಿ ನಿಂತುದೇ ಆದರೆ ಈ ಲೋಕದಲ್ಲಿ ನನ್ನ ಮುಂದೆ ಯಾರೊಬ್ಬರೂ ನಿಲ್ಲಲಾರರು. ॥ ೪೩-೪೬ ॥ ಒಂದುವೇಳೆ ಆ ರಾಮನು ನನ್ನ ಮುಷ್ಟಿಘಾತವನ್ನು ಸಹಿಸಿದುದಾದರೆ ನನ್ನ ಕೂರಂಬುಗಳಿಂದ ಅವನ ರಕ್ತವನ್ನು ಕುಡಿದು

ಬಾಣೌಘಾ ರುಧಿರಂ ರಾಘವಸ್ಯತು ॥ ೪೭ ॥ ಚಿಂತಯಾ ಬಾಧ್ಯಸೇ ರಾಜನ್! ಕಿಮರ್ಥಂ ಮಯಿ ತಿಷ್ಠತಿ? । ಸೋಽಹಂ ಶತ್ರುವಿನಾಶಾಯ ತವ ನಿರ್ಯಾತು ಮುದ್ಯತಃ ॥೪೮॥ ಮುಂಚ ರಾಮಾದ್ಭಯಂ ರಾಜನ್! ಹನಿಷ್ಯಾಮೀಹ ಸಂಯುಗೇ। ರಾಘವಂ ಲಕ್ಷ್ಮಣಂಚೈವ ಸುಗ್ರೀವಂಚ ಮಹಾಬಲಂ ॥ ೪೯ ॥ ಹನೂಮಂತಂ ಚ ರಕ್ಷೋಘ್ನಂ ಲಂಕಾ ಯೇನ ಪ್ರದೀಪಿತಾ । ಹರೀಂಶ್ಚಾಪಿ ಹನಿಷ್ಯಾಮಿ ಸಂಯುಗೇ ಸಮವಸ್ಥಿತಾನ್ ॥ ೫೦ ॥ ಅಸಾಧಾರಣಮಿಚ್ಛಾಮಿ ತವ ದಾತುಂ ಮಹದ್ಯಶಃ । ಯದಿ ಚೇಂದ್ರಾದ್ಭಯಂ ರಾಜನ್! ಯದಿವಾಪಿ ಸ್ವಯಂಭುವಃ ॥ ೫೧ ॥ ಅಪಿ ದೇವಾಃ

ಸಹಿಸುವನೇ ಆದರೆ, ತತಃ - ಬಳಿಕ, ಬಾಣೌಘಾಃ - ಬಾಣಗಳ ತಂಡಗಳು, ರಾಘವಸ್ಯ - ಶ್ರೀರಾಮನ, ರುಧಿರಂ - ರಕ್ತವನ್ನು, ಪಾಸ್ಯಂತಿ - ಪಾನಮಾಡುತ್ತವೆ. ॥ ೪೭ ॥ ಹೇ ರಾಜನ್ - ಎಲೈ ಅರಸೇ, ಮಯಿ - ನಾನು, ತಿಷ್ಠತಿ - ಇರಲು, ಚಿಂತಯಾ - ಆಲೋಚನೆಯಿಂದ, ಕಿಮರ್ಥಂ - ಏತಕ್ಕೋಸ್ಕರ, ಬಾಧ್ಯಸೇ - ಬಾಧಿಸಲ್ಪಡುತ್ತಿರುವೆ, ಸೋಽಹಂ - ಆ ಈ ನಾನು, ತವ-ನಿನ್ನ, ಶತ್ರುವಿನಾಶಾಯ - ಶತ್ರುಸಂಹಾರಾರ್ಥವಾಗಿ, ನಿರ್ಯಾತುಂ - ಹೊರಡುವುದಕ್ಕೆ, ಉದ್ಯತಃ - ಸಿದ್ಧನಾಗಿದ್ದೇನೆ. ॥ ೪೮ ॥ ಹೇ ರಾಜನ್ - ಎಲೈ ಅರಸೇ, ರಾಮಾತ್ - ರಾಮನ ದೆಶೆಯಿಂದ, ಭಯಂ - ಭೀತಿಯನ್ನು, ಮುಂಚ - ಬಿಡು, ಸಂಯುಗೇ - ಕಾಳಗದಲ್ಲಿ, ಇಹ - ಈಗಲೇ, ರಾಘವಂ - ಶ್ರೀರಾಮನನ್ನೂ, ಲಕ್ಷ್ಮಣಂಚೈವ - ಲಕ್ಷ್ಮಣನನ್ನೂ, ಮಹಾಬಲಂ - ಮಹಾ ಬಲನಾದ, ಸುಗ್ರೀವಂಚ - ಸುಗ್ರೀವನನ್ನೂ, ಹನಿಷ್ಯಾಮಿ - ಹೊಡೆಯುವೆನು, ಲಂಕಾ - ಲಂಕಾಪಟ್ಟಣವು, ಯೇನ - ಯಾವನಿಂದ, ಪ್ರದೀಪಿತಾ - ದಹಿಸಲ್ಪಟ್ಟಿತೋ, ರಕ್ಷೋಘ್ನಂ - ರಕ್ಕಸರನ್ನು ಹೊಡೆದಿರುವ, ತಂಹನೂಮಂತಂಚ - ಆ ಹನುಮಂತನನ್ನೂ, ಸಂಯುಗೇ - ಕಾಳಿಗದಲ್ಲಿ, ಸಮವಸ್ಥಿತಾನ್ - ಬಂದಿರುವ, ಹರೀಂಶ್ಚಾಪಿ - ವಾನರರನ್ನೂ, ಹನಿಷ್ಯಾಮಿ - ಹೊಡೆಯುವೆನು, ತವ - ನಿನಗೆ, ಅಸಾಧಾರಣಂ - ಇತರರಿಂದ ಅಸಾಧ್ಯವಾದ, ಮಹತ್ - ದೊಡ್ಡದಾದ, ಯಶಃ - ಕೀರ್ತಿಯನ್ನು, ದಾತುಂ - ಕೊಡುವದಕ್ಕಾಗಿ, ಇಚ್ಛಾಮಿ - ಇಚ್ಛಿಸುತ್ತೇನೆ. ॥ ೪೯-೫೦ ॥ ಹೇ ರಾಜನ್ - ಎಲೈ ಅರಸೇ, ಇಂದ್ರಾತ್ - ಇಂದ್ರನ ದೆಶೆಯಿಂದ, ಭಯಂಯದಿ - ಭೀತಿಯಾದರೆ, ಸ್ವಯಂಭುವೋವಾ - ಬ್ರಹ್ಮನ ದೆಶೆಯಿಂದಲಾದರೂ, ಭಯಂಅಸ್ತಿಯದಿ - ಭಯವಿದ್ದರೆ. ॥೫೧॥ ಮಹೀತಲೇ - ಭೂಮಂಡಲದಲ್ಲಿ, ಮಯಿ - ನಾನು, ಕ್ರುದ್ಧೇ - ಕೋಪಿಷ್ಠನಾಗಲೂ, ದೇವಾಅಪಿ - ದೇವತೆಗಳೂ, ಶಯಿಷ್ಯಂತೇ - ಮಲಗುವರು,

---

ಬಿಡುವೆನು. ಎಲೈ ರಾಕ್ಷಸರಾಜನೇ! ನಾನು ಬದುಕಿರುವಾಗ ನೀನೇಕೆ ವ್ಯಸನಪಡಬೇಕು? ಇದೋ! ನಾನು ನಿನ್ನ ಶತ್ರುಗಳನ್ನು ನಾಶಗೊಳಿಸಲು ಉದ್ಯುಕ್ತನಾಗಿದ್ದೇನೆ. ಆದುದರಿಂದ ರಾಮನಿಂದ ನಿನಗುಂಟಾಗಿರುವ ಭಯವನ್ನು ತೊರೆದುಬಿಡು. ಮಹಾಬಲರಾದ ರಾಮಲಕ್ಷ್ಮಣರನ್ನು ಕೊಂದು ನಿನಗೆ ಸಂತೋಷವನ್ನುಂಟುಮಾಡುತ್ತೇನೆ. ಲಂಕೆಯನ್ನು ಸುಟ್ಟು, ಅನೇಕ ರಾಕ್ಷಸರನ್ನು ಕೊಂದು ಓಡಿಹೋದ ಆ ಹನುಮಂತನೆಂಬ ವಾನರನನ್ನೂ, ಇತರರನ್ನೂ ಕೊಂದು ನಿನಗೆ ಆನಂದವನ್ನುಂಟುಮಾಡುವೆನು. ಈ ಮೂಲಕ ನಿನಗೆ ಅಪರಿಮಿತವಾದ ಕೀರ್ತಿಯನ್ನುಂಟುಮಾಡಲಪೇಕ್ಷಿಸುವೆನು. ॥ ೪೭-೫೦ ॥ ಎಲೈ ಮಹಾರಾಜನೇ! ನಿನಗೆ ದೇವೇಂದ್ರನಿಂದಾಗಲಿ, ಬ್ರಹ್ಮದೇವನಿಂದಾಗಲಿ ಭಯವುಂಟಾಗುವುದೆಂದು ಸಂಶಯಪಡಬೇಡ. ನಾನು ಅವರನ್ನೂ ಅವರೊಡನೆ ಬಂದ ದೇವತೆಗಳನ್ನೂ ಯುದ್ಧದಲ್ಲಿ ಕೊಲ್ಲುವೆನು.

ಶಯಿಷ್ಯಂತೇ ಕ್ರುದ್ಧೇ ಮಯಿ ಮಹೀತಲೇ । ಯಮಂ ಚ ಶಮಯಿಷ್ಯಾಮಿ ಭಕ್ಷಯಿಷ್ಯಾಮಿ ಪಾವಕಂ ॥ ೫೨ ॥ ಆದಿತ್ಯಂ ಪಾತಯಿಷ್ಯಾಮಿ ಸನಕ್ಷತ್ರಂ ಮಹೀತಲೇ । ಶತಕ್ರತುಂ ವಧಿಷ್ಯಾಮಿ ಪಾಸ್ಯಾಮಿ ವರುಣಾಲಯಂ ॥ ೫೩ ॥ ಪರ್ವತಾಂಶ್ಚೂರ್ಣಯಿಷ್ಯಾಮಿ ದಾರಯಿಷ್ಯಾಮಿ ಮೇದಿನೀಂ । ದೀರ್ಘಕಾಲಂ ಪ್ರಸುಪ್ತಸ್ಯ ಕುಂಭಕರ್ಣಸ್ಯ ವಿಕ್ರಮಂ ॥ ೫೪ ॥ ಅದ್ಯ ಪಶ್ಯಂತು ಭೂತಾನಿ ಭಕ್ಷ್ಯಮಾಣಾನಿ ಸರ್ವಶಃ । ನನ್ವಿದಂ ತ್ರಿದಿವಂ ಸರ್ವಮಾಹಾರಸ್ಯ ನಪೂರ್ಯತೇ ॥೫೫॥ ವಧೇನ ತೇ ದಾಶರಥೇಸ್ಸುಖಾರ್ಹಂ ಸುಖಂ ಸಮಾಹರ್ತುಮಹಂ ವ್ರಜಾಮಿ । ನಿಹತ್ಯ ರಾಮಂ ಸಹಲಕ್ಷ್ಮಣೇನ ಖಾದಾಮಿ ಸರ್ವಾ‌ನ್ ಹರಿಯೂಥಮುಖ್ಯಾನ್ ॥ ೫೬ ॥

ಯಮಂಚ - ಯಮನನ್ನು ಕೂಡ, ಶಮಯಿಷ್ಯಾಮಿ - ಶಾಂತನನ್ನಾಗಿ ಮಾಡುವೆನು, ಪಾವಕಂ - ಅಗ್ನಿಯನ್ನು, ಭಕ್ಷಯಿಷ್ಯಾಮಿ - ತಿನ್ನುವೆನು, ಸನಕ್ಷತ್ರಂ - ನಕ್ಷತ್ರಗಳೊಡಗೂಡಿದ, ಆದಿತ್ಯಂ - ಸೂರ್ಯನನ್ನು, ಮಹೀತಲೇ-ನೆಲದಲ್ಲಿ, ಪಾತಯಿಷ್ಯಾಮಿ-ಕೆಡಹುವೆನು, ಶತಕ್ರತುಂ-ದೇವೇಂದ್ರನನ್ನು, ವಧಿಷ್ಯಾಮಿ - ಸಂಹಾರ ಮಾಡುವೆನು, ವರುಣಾಲಯಂ - ಸಮುದ್ರವನ್ನು, ಪಾಸ್ಯಾಮಿ - ಕುಡಿಯುವೆನು, ಪರ್ವತಾನ್ - ಬೆಟ್ಟಗಳನ್ನು, ಚೂರ್ಣಯಿಷ್ಯಾಮಿ - ಪುಡಿಮಾಡುವೆನು, ಮೇದಿನೀಂ - ನೆಲವನ್ನು, ದಾರಯಿಷ್ಯಾಮಿ - ಸೀಳುವೆನು. ॥೫೨-೫೩॥ ದೀರ್ಘಕಾಲಂ - ಬಹುಕಾಲ, ಪ್ರಸುಪ್ತಸ್ಯ- ನಿದ್ರಿತನಾದ, ಕುಂಭಕರ್ಣಸ್ಯ - ಕುಂಭಕರ್ಣನ, ವಿಕ್ರಮಂ - ಪರಾಕ್ರಮವನ್ನು, ಅದ್ಯ - ಈಗ, ಸರ್ವಶಃ - ಸರ್ವಪ್ರಕಾರದಲ್ಲಿಯೂ, ಭಕ್ಷ್ಯಮಾಣಾನಿ - ತಿನ್ನಲ್ಪಡುತ್ತಿರುವ, ಭೂತಾನಿ - ಪ್ರಾಣಿಗಳನ್ನು, ಪಶ್ಯಂತು - ನೋಡಲಿ. ॥ ೫೪ ॥ ಸರ್ವಂ - ಸಮಸ್ತವಾದ, ಇದಂತ್ರಿದಿವಂ - ಈ ಮೂರು ಲೋಕಗಳೂ, ಮಮ - ನನ್ನ, ಆಹಾರಸ್ಯ-ಆಹಾರಕ್ಕೆ, ನಪೂರ್ಯತೇ - ಸಾಕಾಗುವದಿಲ್ಲ. ॥ ೫೫ ॥ ಅಹಂ - ನಾನು, ದಾಶರಥೇಃ - ಶ್ರೀರಾಮನ, ವಧೇನ - ಸಂಹಾರದಿಂದ, ತೇ - ನಿನಗೆ, ಸುಖಾರ್ಹಂ- ಸುಖಕರವಾದ, ಸುಖಂ - ಸುಖವನ್ನು, ಸಮಾಹರ್ತುಂ - ತರುವುದಕ್ಕಾಗಿ, ವ್ರಜಾಮಿ - ಹೊರಡುತ್ತೇನೆ, ರಾಮಂ - ಶ್ರೀರಾಮನನ್ನು, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ನಿಹತ್ಯ - ಹೊಡೆದು, ಸರ್ವಾನ್ - ಸಮಸ್ತರಾದ, ಹರಿಯೂಥಮುಖ್ಯಾನ್ - ವಾನರಯೂಥಪತಿಗಳನ್ನು, ಖಾದಾಮಿ - ತಿನ್ನುತ್ತೇನೆ. ॥ ೫೬ ॥ ಮಯಾ - ನನ್ನಿಂದ, ಅದ್ಯ - ಈಗ, ರಾಮೇ - ಶ್ರೀರಾಮನು, ಯಮಕ್ಷಯಂ -

---

ನನಗೆ ಕೋಪಬಂದು ಕೆರಳಿದೊಡನೆಯೇ ಆ ದೇವತೆಗಳೆಲ್ಲರೂ ನಾಶಹೊಂದುವರು. ನಾನು ಯಮನನ್ನೂ ಮೃತಿಯೊಂದಿಸುವೆನು. ಅಗ್ನಿಯನ್ನಾದರೂ ನುಂಗಿಬಿಡುವೆನು. ಗ್ರಹಮಂಡಲ ಸಹಿತನಾದ ಸೂರ್ಯನನ್ನೂ ಕೆಳಕ್ಕಿಳಿಸುವೆನು. ದೇವೇಂದ್ರನನ್ನು ವಧಿಸಬಲ್ಲೆನು. ಸಾಗರವನ್ನೇ ಪಾನಮಾಡಿಯೇನು. ಪರ್ವತಗಳನ್ನು ಪುಡಿಗುಟ್ಟಬಲ್ಲೆನು. ಭೂಮಿಯನ್ನು ಭೇದಿಸಿಯೇನು. ಬಹುಕಾಲದಿಂದಲೂ ಮಲಗಿದ್ದ ಈ ಕುಂಭಕರ್ಣನ ಪರಾಕ್ರಮವನ್ನು, ಅವನು ಶತ್ರುಗಳೆಲ್ಲವನ್ನೂ ನುಂಗುವಾಗ ಎಲ್ಲರೂ ನೋಡಲಿ. ರಾಕ್ಷಸೋತ್ತಮಾ! ಈಗ ಮೂರು ಲೋಕಗಳನ್ನು ಭಕ್ಷಿಸಿದರೂ ನನ್ನ ಹಸಿವು ಅಡಗುವುದಿಲ್ಲ. ಎಲೈ ಸುಖಾರ್ಹನೇ! ದಶರಥ ರಾಜಕುಮಾರನಾದ ಆ ರಾಮನನ್ನು ಕೊಂದು, ನಿನಗೆ ಅಪಾರ ಸುಖವನ್ನುಂಟುಮಾಡುವೆನು. ಲಕ್ಷ್ಮಣಸಹಿತನಾದ ಆ ರಾಮನನ್ನೂ, ಸಕಲ ವಾನರಮುಖ್ಯರನ್ನೂ ಕೊಂದು ತಿನ್ನುವೆನು. ರಾಕ್ಷಸೋತ್ತಮಾ! ಚಿಂತಿಸಬೇಡ ನಿನ್ನ ಇಷ್ಟಾನುಸಾರ ರಮಿಸು. ಮನೋಹರವಾದ ಮದ್ಯ

ರಮಸ್ವ ಕಾಮಂ ಪಿಬ ಚಾಗ್ರ್ಯವಾರುಣೀಂ
ಕುರುಷ್ವ ಕೃತ್ಯಾನಿ ವಿನೀಯತಾಂ ಜ್ವರಃ ।
ಮಯಾಽದ್ಯ ರಾಮೇ ಗಮಿತೇ ಯಮಕ್ಷಯಂ
ಚಿರಾಯ ಸೀತಾ ವಶಗಾ ಭವಿಷ್ಯತಿ ॥ ೫೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಷಷ್ಟಿತಮಸ್ಸರ್ಗಃ.

ಯಮನ ಮನೆಯನ್ನು, ಗಮಿತೇ - ಹೊಂದಿಸಲ್ಪಟ್ಟವನಾಗಲೂ, ಚಿರಾಯ - ಸಾವಕಾಶವಾಗಿ, ಸೀತಾ - ಸೀತಾದೇವಿಯು, ವಶಗಾ - ಸ್ವಾಧೀನಳು, ಭವಿಷ್ಯತಿ - ಆಗುವಳು, ಕಾಮಂ - ಯಥೇಷ್ಟವಾಗಿ, ರಮಸ್ವ - ವಿಹರಿಸು, ಅಗ್ರ್ಯವಾರುಣೀಂ - ಶ್ರೇಷ್ಠವಾದ ಮದ್ಯವನ್ನು, ಪಿಬ - ಕುಡಿ, ಕೃತ್ಯಾನಿ - ಕಾರ್ಯಗಳನ್ನು, ಕುರುಷ್ವ - ಮಾಡು, ಜ್ವರಃ - ಸಂತಾಪವು, ವಿನೀಯತಾಂ - ಹೋಗಲಾಡಿಸಲ್ಪಡಲಿ. ॥ ೫೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಷಷ್ಟಿತಮಸ್ಸರ್ಗಃ.

ಗಳನ್ನು ಪಾನಮಾಡು. ಇಷ್ಟಬಂದ ಕಾರ್ಯಗಳೆಲ್ಲವನ್ನೂ ಮಾಡು. ನಿನ್ನ ಮನಸ್ಸಿಗೆ ಯಾವ ಯೋಚನೆಯೂ ಇಲ್ಲದಿರಲಿ. ಈಗ ನಾನು ಶೀಘ್ರವಾಗಿ ಹೋಗಿ ಆ ರಾಮನನ್ನು ಕೊಂದುಬಿಡುವೆನು. ಅವನು ಮಡಿದ ಬಳಿಕ ಬಹು ಕಾಲದಿಂದಲೂ ಸ್ವಾಧೀನಳಾಗದಿರುವ ಆ ಸೀತೆಯು ನಿನ್ನ ಸ್ವಾಧೀನಳಾಗುವಳು.'' ॥ ೫೧–೫೭ ॥

ಇಂತಿದು ಕುಂಭಕರ್ಣ ಬುದ್ಧಿಯೆಂಬ ಅರುವತ್ತಮೂರನೆಯ ಸರ್ಗವು
ಸಮಾಪ್ತವಾದುದು.

ಈ ಸರ್ಗದಲ್ಲಿ ತೋರಿಬರುವ ಕುಂಭಕರ್ಣ ವಾಕ್ಯಗಳಲ್ಲಿಯ ರಹಸ್ಯಾರ್ಥ :—

"ಮಹಾರಾಜ ! ನಾನು ಜೀವಂತನಾಗಿದ್ದರೆ ರಾಮನ ವಿಚಾರದಲ್ಲಿ ಹೀಗೆ ನೀನು ಚಿಂತಾಕ್ರಾಂತನಾಗತಕ್ಕುದು ನ್ಯಾಯ. ನಾನೇ ಬದುಕುವುದಿಲ್ಲ. ರಾಮಬಾಣಗಳಿಂದ ನಾನು ಮೃತನಾಗುವುದೇ ದಿಟ. ಹೀಗಿರುವಲ್ಲಿ ನೀನೇಕೆ ಯೋಚಿಸಬೇಕು. "ಇವನು ದೃಢವಾಗಿ, ಸುಖವಾಗಿದ್ದರೂ ನನಗೋಸ್ಕರ ಶತ್ರುನಿರ್ಮೂಲನಕ್ಕೆ ಪ್ರಯತ್ನಿಸದೆ ಕಾಲ ಕಳೆಯುತ್ತಿದ್ದಾನೆಂದು" ನೀನೇಕೆ ದುಃಖಿಸಬೇಕು. ಇದೋ ನಾನು ಈ ನನ್ನನ್ನು ರಾಮಬಾಣಗಳಿಂದ ನಾಶಗೊಳಿಸುತ್ತೇನೆ. ಚಿಂತಿಸಬೇಡ. "ಹಾಗಾದರೆ ಈ ರೀತಿ ನನಗೆ ಹಿತೋಪದೇಶವನ್ನೇಕೆ ಮಾಡಿದೆ" ಎಂದು ಕೇಳುವೆಯೇನೋ ! ನಾನು ಹಾಗೆ ನಿನಗೆ ಬುದ್ಧಿ ಹೇಳಿದುದು ನೀನು ನನಗೆ ಸಹೋದರನೆಂಬ ಪ್ರೀತಿ ಮತ್ತು ಮೈತ್ರಿಗಳಿಂದ ಮಾತ್ರ. ಆ ಪ್ರೀತಿ ಸ್ನೇಹಗಳು ನನಗಿಲ್ಲದಿದ್ದರೆ ನಾನು ಎಂದಿಗೂ ನಿನಗೆ ಹಿತವನ್ನು ಹೇಳುತ್ತಲೇ ಇರಲಿಲ್ಲ. ಎಲೈ ಅಗ್ರಜನೇ ! ರಣರಂಗ ದಲ್ಲಿ ರಾಮನಿಂದ ನಾನು ಮೃತನಾದೊಡನೆಯೇ ಆ ರಾಮನಿಗೋಸ್ಕರ ನಿನ್ನನ್ನು ಕುರಿತು ಅಟ್ಟಿಬರುವ ವಾನರಸೇನೆಯನ್ನು ನೀನು ಬಹು ಬೇಗನೆಯೇ ನೋಡುತ್ತೀಯೆ. ಅತ್ಯಲ್ಪಕಾಲದಲ್ಲಿಯೇ ರಾಮಬಾಣಗಳಿಂದ ಮೇಲಕ್ಕೆ ಹಾರಿಸಲ್ಪಡುವ ನನ್ನ ಶಿರಸ್ಸನ್ನು ನೀನು ನೋಡುವೆ; ಆದಾದಮೇಲೆ ನೀನು ಸುಖವಾಗಿರುವೆಯಂತೆ. ನಾನು ಮೃತನಾದ ತರುವಾಯ ಸರ್ವಲೋಕ ಜನನಿಯಾದ ಸೀತಾದೇವಿಯು, "ಅಯ್ಯೋ ! ಇವನೂ ಅನ್ಯಾಯವಾಗಿ ಮೃತನಾದನೆಂದು ಕನಿಕರಪಟ್ಟು ದುಃಖಿಸಲಿ. ರಾಮನು ನನ್ನನ್ನು ಕೊಂದಮೇಲೆ ನಿಹತಬಾಂಧವರಾದ ರಾಕ್ಷಸರೆಲ್ಲರೂ ದುಃಖಿಸಲಿ. ಏಕೆಂದರೆ, "ನ ದುಃಖಂ ಪಂಚಭಿಸ್ಸಹ" ಎಂದಲ್ಲವೆ ಇರುವುದು ? ಇದೂ ಅಲ್ಲದೆ ಕೇವಲ ವಧಾಪೇಕ್ಷೆಯುಳ್ಳ ನನ್ನಂಥವರಿಂದ ರಕ್ಷಿತನಾದ ನಿನ್ನನ್ನು ರಾಮನು ಕೊಲ್ಲದಿರುವನೆ ? ಆದರೆ ಅವನು ನನ್ನನ್ನು ಕೊಂದಮೇಲೆಯೇ ನಿನ್ನನ್ನು ಕೊಂದಾನು. ಅದುದರಿಂದ ನಾನು ಮಡಿಯುವವರೆಗೂ ನೀನೀರೀತಿ ದುಃಖಿಸುವ ಆವಶ್ಯಕತೆಯಿರುವುದಿಲ್ಲ. ಅದುವರೆಗೂ ಸಮಾಧಾನಚಿತ್ತನಾಗಿರು. "ನಾನು ಸಾಯುವೆನಲ್ಲ" ಎಂಬ ಚಿಂತೆ ನನಗಿರುವುದಿಲ್ಲ. ಆದರೆ, "ನಾನು ಮಡಿದ ತರುವಾಯ ರಾಮನು ನಿನ್ನನ್ನು ಕೊಲ್ಲುತ್ತಾನೆಯಲ್ಲವೆ ?" ಎಂಬ ಚಿಂತೆ ನನಗೆ ಬಹಳವಾಗಿರುವುದು. ಆದರೆ ಇಷ್ಟು ಮಾತ್ರ ಹೇಳುವೆನು. ಮಹಾ ಶಠನಾದ ನೀನು ಮಡಿದ ಬಳಿಕ ರಾಮನು ಸುಖವನ್ನು ಹೊಂದುತ್ತಾನೆ. ಸೀತೆಯೂ ಚಿರಕಾಲ ರಾಮವಶವರ್ತಿನಿಯಾಗು ವಳು. ಇಷ್ಟಾಗುವುದು ಅಪರಿಹಾರ್ಯವಾಗಿರುವಾಗ ನಾನು ಯುದ್ಧಕ್ಕೆ ಹೋಗುವುದು ತಪ್ಪೇತೆ ? ತಪ್ಪುವುದಿಲ್ಲ."

(ಗೋವಿಂದರಾಜರು.)

ಯುದ್ಧಕಾಂಡೇ ಚತುಃಷಷ್ಠಿತಮಸ್ಸರ್ಗಃ

ತದುಕ್ತಮತಿಕಾಯಸ್ಯ ಬಲಿನೋ ಬಾಹುಶಾಲಿನಃ । ಕುಂಭಕರ್ಣಸ್ಯ ವಚನಂ ಶ್ರುತ್ವೋವಾಚ ಮಹೋದರಃ ॥ ೧ ॥ "ಕುಂಭಕರ್ಣ! ಕುಲೇ ಜಾತೋ ಧೃಷ್ಟಃ ಪ್ರಾಕೃತದರ್ಶನಃ । ಅವಲಿಪ್ತೋ ನಶಕ್ನೋಷಿ ಕೃತ್ಯಂ ಸರ್ವತ್ರ ವೇದಿತುಂ ॥ ೨ ॥ ನಹಿ ರಾಜಾ ವಿಜಾನೀತೇ ಕುಂಭಕರ್ಣ! ನಯಾನಯೌ? । ತ್ವಂ ತು ಕೈಶೋರಕಾ ದ್ಧೃಷ್ಟಃ ಕೇವಲಂ ವಕ್ತುಮಿಚ್ಛಸಿ ॥ ೩ ॥ ಸ್ಥಾನಂ ವೃದ್ಧಿಂಚ ಹಾನಿಂಚ ದೇಶಕಾಲ

ಅತಿಕಾಯಸ್ಯ - ದೊಡ್ಡ ಶರೀರವುಳ್ಳ, ಬಲಿನಃ - ಬಲಿಷ್ಠನಾದ, ಬಾಹುಶಾಲಿನಃ - ಭುಜಬಲ ಪರಾಕ್ರಮಶಾಲಿಯಾದ, ಕುಂಭಕರ್ಣಸ್ಯ-ಕುಂಭಕರ್ಣನಿಂದ, ಉಕ್ತಂ-ಹೇಳಲ್ಪಟ್ಟ, ತದ್ವಚನಂ-ಆ ಮಾತನ್ನು, ಶ್ರುತ್ವಾ - ಕೇಳಿ, ಮಹೋದರಃ - ಮಹೋದರನು, ಉವಾಚ - ಹೇಳಿದನು. ॥ ೧ ॥ ಹೇ ಕುಂಭಕರ್ಣ - ಎಲೈ ಕುಂಭಕರ್ಣನೇ, ಕುಲೇ - ಸತ್ಕುಲದಲ್ಲಿ, ಜಾತಃ - ಹುಟ್ಟಿದವನಾದರೂ, ಧೃಷ್ಟಃ - ಧೂರ್ತನಾದ, ಪ್ರಾಕೃ....ನಃ-ಕ್ಷುದ್ರಬುದ್ಧಿಯುಳ್ಳ, ಅವಲಿಪ್ತಃಇವ - ಗರ್ವಿತನಾದವನಂತೆ, ತ್ವಂ-ನೀನು, ಸರ್ವತ್ರ-ಎಲ್ಲ ಕಾರ್ಯಗಳಲ್ಲಿಯೂ, ಕೃತ್ಯಂ-ಮಂತ್ರಾಲೋಚನಾರೂಪವಾದ ಕಾರ್ಯ ವನ್ನು, ವೇದಿತುಂ-ತಿಳಿಯುವುದಕ್ಕಾಗಿ, ನಶಕ್ನೋಷಿ-ಯೋಗ್ಯನಾಗದಿರುವೆ. ॥೨॥ ಹೇ ಕುಂಭಕರ್ಣ - ಎಲೈ ಕುಂಭಕರ್ಣನೇ, ರಾಜಾ - ಅರಸಾದ ರಾವಣನು, ನಯಾನಯೌ - ನೀತಿಯನ್ನೂ ದುರ್ನೀತಿ ಯನ್ನೂ, ನಜಾನೀತಇತಿನ - ತಿಳಿದವನಲ್ಲವೆಂಬುದಿಲ್ಲ, ತ್ವಂತು - ನೀನಾದರೆ, ಕೈಶೋರಕಾತ್ - ಬಾಲಭಾವದಿಂದ, ಧೃಷ್ಟಃ - ಧೂರ್ತನಾಗಿ, ಕೇವಲಂ - ಬಹಳವಾಗಿ, ವಕ್ತುಂ - ಮಾತನಾಡುವದಕ್ಕೆ, ಇಚ್ಛಸಿ - ಅಪೇಕ್ಷಿಸುತ್ತೀಯೆ. ॥ ೩ ॥ ದೇಶ....ತ್ - ದೇಶಕಾಲಗಳ ವಿಭಾಗವನ್ನು ತಿಳಿದಿರುವ, ರಾಕ್ಷಸರ್ಷಭಃ - ರಾವಣನು, ಆತ್ಮನಃ - ತನ್ನ, ಪರೇಷಾಂಚ - ಶತ್ರುಗಳ, ಸ್ಥಾನಂ - ಸಮತ್ವ

ಮಹಾ ಭುಜಬಲಪರಾಕ್ರಮವಂತನೂ, ಮಹಾಕಾಯನೂ ಆದ ಕುಂಭಕರ್ಣ ನೀರೀತಿ ಮಾತನಾಡುತ್ತಿರಲು, ಮಹೋದರನೆಂಬವನು, ರಾವಣನು ಮಂತ್ರಿಗಳೊಡನೆ ಆಲೋಚಿಸದೆಯೇ ರಾಮನೊಡನೆ ಯುದ್ಧಮಾಡುವೆನೆಂದು ಹೇಳುವುದು ಉಚಿತವಲ್ಲವೆಂದು ಹೇಳಬಯಸಿ ಕುಂಭಕರ್ಣನನ್ನು ಕುರಿತು "ಅಯ್ಯಾ ಕುಂಭಕರ್ಣನೇ! ನೀನು ರಾಜವಂಶ ದಲ್ಲಿ ಹುಟ್ಟಿಯೂ ಕೇವಲ ಧೃಷ್ಟನಾಗಿದ್ದೀಯೆ. ನಿನಗೆ ರಾಜನೀತಿ ಶಾಸ್ತ್ರಗಳ ಗಂಧವೇ ಇರುವುದಿಲ್ಲ. ನಿನಗೆ ಬುದ್ಧಿಯೆಂಬುದು ಸ್ವಲ್ಪವೂ ಇಲ್ಲವೇ ಇಲ್ಲ. ನೀನು ಕೇವಲ ಗರ್ವ ಗ್ರಂಥಿಯೆಂಬುದು ಮಾತ್ರ ವ್ಯಕ್ತವಾಯಿತು. ಆದುದರಿಂದಲೇ ನೀನು ಕಾರ್ಯಾಕಾರ್ಯಗಳ ಸ್ವಭಾವಗಳನ್ನೇ ಅರಿಯದೆ ಮಾತನಾಡುತ್ತಿರುವೆ. ಕುಂಭಕರ್ಣಾ! ನೀನು ಕೇವಲ ಬಾಲ್ಯದ ಚಾಪಲ್ಯದಿಂದಲೂ, ನಿನಗಿರುವ ಪರಾಕ್ರಮದಿಂದಲೂ ಮೆರೆದು, ತಿಳಿವಳಿಕೆಯಿಲ್ಲದಿದ್ದರೂ ಮಹಾ ತಿಳಿವಳಿಕೆಯಿರುವವನಂತೆ ಮಹಾರಾಜನಿಗೆ ನಯಾನಯಗಳು ತಿಳಿಯವೆಂದು ಅವ ನಿಗೆ ಉಪದೇಶಮಾಡಲು ಹೊರಟಿರುವೆ. ಇದು ಸರ್ವಥಾ ಉಚಿತವಲ್ಲವೆಂದು ತಿಳಿದುಕೊ. ರಾಕ್ಷಸೋತ್ತಮನಾದ ರಾವಣಾಸುರನು ಶತ್ರುಗಳ ಸ್ಥಾನವನ್ನೂ, ಹಾನಿ ಮತ್ತು ವೃದ್ಧಿ

ವಿಭಾಗವಿತ್ । ಆತ್ಮನಶ್ಚ ಪರೇಷಾಂಚ ಬುಧ್ಯತೇ ರಾಕ್ಷಸರ್ಷಭಃ ॥ ೪ ॥ ಯತ್ತ್ವ ಶಕ್ಯಂ ಬಲವತಾ ಕರ್ತುಂ ಪ್ರಾಕೃತಬುದ್ಧಿನಾ । ಅನುಪಾಸಿತವೃದ್ಧೇನ ಕಃ ಕುರ್ಯಾತ್ತಾದೃಶಂ ಬುಧಃ ॥ ೫ ॥ ಯಾಂಸ್ತು ಧರ್ಮಾರ್ಥಕಾಮಾಂಸ್ತ್ವಂ ಬ್ರವೀಷಿ ಪೃಥಗಾಶ್ರಯಾನ್ । ಅವಬೋದ್ಧುಂ ಸ್ವಭಾವೇನ ನಹಿ ಲಕ್ಷಣಮಸ್ತಿ ತೇ ॥ ೬ ॥ ಕರ್ಮಚೈವ ಹಿ ಸರ್ವೇಷಾಂ ಕಾರಣಾನಾಂ ಪ್ರಯೋಜನಂ । ಶ್ರೇಯಃ ಪಾಪೀಯಸಾಂ

ಸ್ಥಿತಿಯನ್ನು, ವೃದ್ಧಿಂಚ - ಅಭಿವೃದ್ಧಿಯನ್ನೂ, ಹಾನಿಂಚ - ಹಾನಿಯನ್ನೂ, ಬುಧ್ಯತೇ - ತಿಳಿದವನೇ ಸರಿ. ॥ ೪ ॥ ಬಲವತಾ - ಶೌರ್ಯಾದಿ ಬಲವನ್ನು ಹೊಂದಿರುವ, ಪ್ರಾಕೃತಬುದ್ಧಿನಾ - ಪಾಮರಬುದ್ಧಿಯುಳ್ಳ, ಅನು....ನ - ಸೇವಿಸಲ್ಪಡದಿರುವ ವೃದ್ಧರುಳ್ಳ ಪುರುಷನಿಂದ, ಯತ್ - ಯಾವ ಕರ್ಮವೂ, ಕರ್ತುಂ - ಮಾಡುವುದಕ್ಕೆ, ಶಕ್ಯಂ - ಸಾಧ್ಯವೋ, ತಾದೃಶಂಕರ್ಮ - ಅಂಥಾ ಕರ್ಮವನ್ನು, ಬುಧಃ - ಪಂಡಿತನಾದ, ಕಃ - ಯಾವನು, ಕುರ್ಯಾತ್ - ಮಾಡುವನು. ॥ ೫ ॥ ತ್ವಂ - ನೀನು, ಪೃಥಗಾಶ್ರಯಾನ್ - ಬೇರೆ ಬೇರೆ ಆಶ್ರಯಗಳುಳ್ಳ, ಯಾನ್ ಧರ್ಮಾರ್ಥಕಾಮಾನ್ - ಯಾವ ಧರ್ಮವನ್ನೂ, ಅರ್ಥವನ್ನೂ, ಕಾಮವನ್ನೂ, ಬ್ರವೀಷಿ - ಹೇಳುವೆಯೋ, ತಾನ್ - ಅವುಗಳನ್ನು, ಸ್ವಭಾವೇನ - ಸ್ವರೂಪದಿಂದ, ಅವಬೋದ್ಧುಂ - ತಿಳಿದುಕೊಳ್ಳುವುದಕ್ಕೆ, ತೇ - ನಿನಗೆ, ಲಕ್ಷಣಂ - ಕಾರಣವು, ನಾಸ್ತಿಹಿ - ಇಲ್ಲವಷ್ಟೆ. ॥ ೬ ॥ ಸರ್ವೇಷಾಂ - ಸಮಸ್ತಗಳಾದ, ಕಾರಣಾನಾಂ - ಸ್ವರ್ಗನರಕರೂಪಗಳಾದ ಫಲಗಳಿಗೆ, ಕರ್ಮೈವ - ಕರ್ಮವೇ, ಪ್ರಯೋಜಕಂ - ಸಾಧಕವಾದದ್ದು, ಅತ್ರ - ಈ ಕರ್ಮಸಮೂಹದಲ್ಲಿ, ಪಾಪೀಯಸಾಂ - ಪಾಪಿಷ್ಠಗಳಾದ, ಕರ್ಮಣಾಂಚ - ಕೆಲಸಗಳಿಗೂ,

---

ಗಳನ್ನೂ, ದೇಶಕಾಲ ವಿಭಾಗಗಳನ್ನೂ, ಶತ್ರುಗಳಿಗೂ ತನಗೂ ಇರುವ ತಾರತಮ್ಯಗಳನ್ನೂ ಚೆನ್ನಾಗಿ ತಿಳಿದುಕೊಂಡೇ ಇದ್ದಾನೆ. ॥೧-೪॥ ಅಯ್ಯಾ ರಾಕ್ಷಸೋತ್ತಮನೇ! ಸ್ವಲ್ಪಬುದ್ಧಿಯುಳ್ಳವನೂ, ಬಲಹೀನನೂ ಆದ ಮಾನವನು ಹಿರಿಯರನ್ನಾಶ್ರಯಿಸಿ ನಯಾನಯಗಳನ್ನೂ, ಕಾರ್ಯಾಕಾರ್ಯಗಳನ್ನೂ ತಿಳಿಯದವನಾದರೆ ರಾಜಕಾರ್ಯಗಳಾವುವನ್ನೂ ಮಾಡಲು ಸಮರ್ಥನೆನಿಸುವುದಿಲ್ಲ. ಅಂತಹನು ಯಾವ ಸಾಹಸಕಾರ್ಯಗಳನ್ನೂ ಮಾಡಲಾರನು. ಎಂದಮೇಲೆ ನಮ್ಮ ಮಹಾರಾಜನಾದ ರಾವಣಾಸುರನು ಮಂತ್ರಾಲೋಚನೆಯಿಲ್ಲದೆ ಅಶಕ್ಯವಾದ ಕಾರ್ಯವಾವುದನ್ನೂ ಮಾಡನೆಂದೂ ಹೇಳಬೇಕೆ? ರಾವಣಾಸುರನು ಎಲ್ಲವನ್ನು ಚೆನ್ನಾಗಿ ಆಲೋಚಿಸಿಯೇ ಸಮಸ್ತ ಕಾರ್ಯಗಳನ್ನೂ ಮಾಡುತ್ತಿರುವನು. ಆದುದರಿಂದ ನೀನೀರೀತಿ ಹೇಳುವುದು ಉಚಿತವಾಗಿ ತೋರುವುದಿಲ್ಲ. ಇದೂ ಅಲ್ಲದೆ ಎಲೈ ಕುಂಭಕರ್ಣನೇ! ನೀನು ಧರ್ಮಾರ್ಥಕಾಮಗಳನ್ನು ಬೇರೆಬೇರೆಯಾಗಿರಬೇಕೆಂದು ಹೇಳುತ್ತಿರುವೆ. ನೀನು ಹಾಗೆ ಹೇಳುವುದಕ್ಕಾಗಲಿ, ತಿಳಿದುಕೊಳ್ಳುವುದಕ್ಕಾಗಲಿ ರಾಜನೀತಿಶಾಸ್ತ್ರದ ಯಾವ ಆಧಾರವೂ ಇರುವುದಿಲ್ಲ. ಅಯ್ಯಾ ಎಲ್ಲ ಸುಖಗಳಿಗೂ ಕರ್ಮವೆಂಬುದು ಮೂಲಾಧಾರವಾಗಿರುವುದು. ಆದರೂ ಪುಣ್ಯಕರ್ಮದಲ್ಲಿ ಶ್ರೇಯಸ್ಸೇ ಫಲವಾಗುತ್ತದೆ. ವಿಚಾರಿಸಿ ನೋಡುವಲ್ಲಿ ಆ ಶ್ರೇಯಃಫಲವು ಪಾಪಕರ್ಮಗಳಿಗೂ ಲಭಿಸುತ್ತದೆ. ಆದುದರಿಂದ ಪಾಪಕರ್ಮದಿಂದ ಅಶ್ರೇಯಸ್ಸೇ ಲಭಿಸುವುದೆಂದಾಗಲಿ, ಪುಣ್ಯಕರ್ಮದಿಂದ ಶ್ರೇಯಸ್ಸೇ ಲಭಿಸುವುದೆಂದಾಗಲಿ ಹೇಳಲಾಗುವುದಿಲ್ಲ. ಹಾಗೆ ಯಾವ ನಿಯಮವೂ ಇರುವುದಿಲ್ಲ. ಆದುದರಿಂದ ನೀನು ನಿನ್ನ ಅಗ್ರಜನಾದ ರಾವಣನಿಗೆ

ಚಾಽತ್ರ ಫಲಂ ಭವತಿ ಕರ್ಮಣಾಂ ॥ ೭ ॥ ನಿಃಶ್ರೇಯಸಫಲಾವೇವ ಧರ್ಮಾರ್ಥಾ ವಿತರಾವಪಿ । ಅಧರ್ಮಾನರ್ಥಯೋಃ ಪ್ರಾಪ್ತಿಃ ಫಲಂಚ ಪ್ರತ್ಯವಾಯಿಕಂ ॥ ೮ ॥ ಐಹಲೌಕಿಕಪಾರತ್ರಂ ಕರ್ಮಪುಂಭಿರ್ನಿಷೇವ್ಯ ತೇ । ಕರ್ಮಾಣ್ಯಪಿತು ಕಲ್ಯಾಣಿ ಲಭತೇ ಕಾಮಮಾಸ್ಥಿತಃ ॥ ೯ ॥ ತತ್ರ ಕ್ಲೃಪ್ತಮಿದಂ ರಾಜ್ಞಾ ಹೃದಿ ಕಾರ್ಯಂ ಮತಂಚ ನಃ । ಶತ್ರೌಹಿ ಸಾಹಸಂ ಯತ್ಸ್ಯಾತ್ಕಿಮಿವಾಽತ್ರಾಪನೀಯತಾಂ? ॥ ೧೦ ॥ ಏಕಸ್ಯೈವಾಽಭಿಯಾನೇತು ಹೇತುರ್ಯಃ ಕಥಿತಸ್ತ್ವಯಾ । ತತ್ರಾಪ್ಯನುಪಪನ್ನಂತೇ

ಶ್ರೇಯಃ - ಶ್ರೇಯಸ್ಸು, ಭವತಿ - ಆಗುತ್ತದೆ. ॥ ೭ ॥ ಧರ್ಮಾರ್ಥೌ - ಧರ್ಮಾರ್ಥಸಾಧಕಗಳಾದ ಕರ್ಮಗಳೂ, ನಿಶ್ರೇಯಸಫಲೌ - ಮೋಕ್ಷವೇ ಫಲವಾಗುಳ್ಳವುಗಳು, ಅಧ....ಯೋಃ - ಅಧರ್ಮಕ್ಕೂ ಅನರ್ಥರೂಪವಾದ ಪಾಪಕ್ಕೂ, ಪ್ರತ್ಯವಾಯಿಕಂ - ಪ್ರತ್ಯವಾಯಜನಕವಾದ, ಪ್ರಾಪ್ತಿಃ - ಪ್ರಾಪ್ತಿ ರೂಪವಾದ, ಫಲಂ - ಫಲವು. ॥ ೮ ॥ ಐಹ....ತ್ರಂ - ಇಹಲೋಕಕ್ಕೂ ಉಪಯೋಗವಾದ ಪರ ಲೋಕಕ್ಕೂ ಉಪಯೋಗವಾದ, ಕರ್ಮ - ವ್ಯಾಪಾರವು, ಪುಂಭಿಃ - ಪುರುಷರಿಂದ, ನಿಷೇವ್ಯತೇ - ಸೇವಿಸಲ್ಪಡುತ್ತದೆ, ಕಲ್ಯಾಣಿ - ಶುಭಕರವಾದ, ಕರ್ಮಾಣಿ - ಕರ್ಮಫಲಗಳನ್ನು, ಕಾಮಂ - ಬಹಳ ವಾದ ಕಾಮಗುಣವನ್ನು, ಆಸ್ಥಿತಃ - ಹೊಂದಿದ ಪುರುಷನು, ಲಭತೇ - ಹೊಂದುತ್ತಾನೆ. ॥ ೯ ॥ ತತ್ರ - ಆ ಕರ್ಮದ ಶುಭಾಶುಭ ಫಲಗಳನ್ನು ಕೊಡುತ್ತಿರುವ ಕರ್ಮಗಳ ವಿಷಯದಲ್ಲಿ, ರಾಜ್ಞಾ - ಅರಸಿನಿಂದ, ಇದಂಕಾರ್ಯಂ - ಈ ಸೀತಾಪಹಾರ ರೂಪಕಾರ್ಯವು, ಹೃದಿ - ಮನಸ್ಸಿನಲ್ಲಿ, ಕ್ಲೃಪ್ತಂ- ನಿಶ್ಚಯ ಮಾಡಲ್ಪಟ್ಟಿತು, ನಃ - ನಮಗೆ, ಮತಂಚ - ಸಮ್ಮತವೂ ಹೌದು, ಶತ್ರೌ - ಶತ್ರುವಿನ ವಿಷಯದಲ್ಲಿ, ಯತ್ಸಾಹಸಂ - ಯಾವ ಪ್ರಯತ್ನವು, ಸ್ಯಾತ್ - ಆಗುವುದೋ, ತತ್ರ - ಆ ಸಾಹಸ ವಿಷಯದಲ್ಲಿ, ಕಿಮಿವ - ಏನುತಾನೆ, ಅಪನೀಯತಾಂ - ಏಂಗಡಿಸಿ ತೋರಿಸಲ್ಪಟ್ಟೀತು. ॥ ೧೦ ॥ ತ್ವಯಾ - ನಿನ್ನಿಂದ, ಏಕಸ್ಯೈವ - ಒಬ್ಬನ, ಅಭಿಯಾನೇ - ಯುದ್ಧಾರ್ಥವಾಗಿ ಪ್ರಯಾಣದಲ್ಲಾದರೆ, ಯಃಹೇತುಃ - ಯಾವ ಕಾರಣವು, ಕಥಿತಃ - ಹೇಳಲ್ಪಟ್ಟಿತೋ, ತತ್ರಾಪಿ - ಆ ಪಕ್ಷದಲ್ಲಿಯೂ, ಯತ್ - ಯಾವದು, ಅಸಾಧ್ಯಂ - ಅಯೋಗ್ಯವೋ, ಅನುಪಪನ್ನಂಚ-ಸಂಭವಿಸುವುದಿಲ್ಲವೋ, ತತ್- ಅದನ್ನು, ತೇ - ನಿನಗೆ, ವಕ್ಷ್ಯಾಮಿ - ಹೇಳುವೆನು. ॥ ೧೧ ॥ ಪೂರ್ವಂ - ಮೊದಲು, ಜನಸ್ಥಾನೇ -

---

ಪಾಪಕ್ಕೆ ತಕ್ಕ ಫಲವನ್ನು ಹೊಂದಿದೆಯೆಂದು ಹೇಳಿದುದು ತೀರ ಅನುಚಿತ. ಎಲೈ ರಾಕ್ಷ ಸೋತ್ತಮನಾದ ಕುಂಭಕರ್ಣನೇ! ಧರ್ಮಾರ್ಥಗಳೂ, ಇತರ ಪುಣ್ಯಕರ್ಮಗಳೂ ಮೋಕ್ಷ ಫಲಗಳೆಂಬುದರಲ್ಲಿ ಸಂದೇಹವಿಲ್ಲ. ಅಧರ್ಮಾನರ್ಥಗಳ ಫಲವು ಮಾನವನಿಗೆ ಪ್ರತ್ಯವಾಯ ವನ್ನುಂಟುಮಾಡುತ್ತದೆ. ॥ ೫-೮ ॥ ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಸುಖ ವನ್ನುಂಟುಮಾಡುವ ಧರ್ಮಾರ್ಥಕಾಮರೂಪವಾದ ಕರ್ಮವು ಮನುಷ್ಯರಿಂದ ಸೇವಿಸ ಲ್ಪಡುತ್ತಿದೆ. ಕೇವಲ ಕಾಮಾಪೇಕ್ಷಿಯಾಗಿ ತಿರುಗುತ್ತಿರುವವನು ಶುಭಫಲಗಳನ್ನೇ ಹೊಂದು ತ್ತಿರುವನು. ಈಗ ರಾವಣಾಸುರನು ಮಾಡಿದ ಸೀತಾಪಹರಣರೂಪವಾದ ಕಾರ್ಯವು ನಮ್ಮೆಲ್ಲರಿಗೂ ಇಷ್ಟವಾದುದೇ! ಅದಂತಿರಲಿ. ಪ್ರಕೃತದಲ್ಲಿ ನೀನು ಒಬ್ಬನೇ ಯುದ್ಧಕ್ಕೆ ಹೋಗುವೆನೆಂದು ಹೇಳುತ್ತಿರುವೆಯಲ್ಲವೆ! ಇಂತಹ ಸಾಹಸವನ್ನು ಮಾಡಬೇಡ. ನೀನು ಹಾಗೆನ್ನುವುದು ಸರ್ವಥಾ ನ್ಯಾಯವಲ್ಲ. ಅಯ್ಯಾ! ನಿನ್ನ ಮಾತುಗಳು ಉಚಿತವಾಗಿಲ್ಲ ವೆಂಬುದಕ್ಕೆ ಕಾರಣವನ್ನು ಹೇಳುವೆನು ಕೇಳು. ಹಿಂದೆ ಆ ರಾಮನು ಜನಸ್ಥಾನದಲ್ಲಿ

ವಕ್ಷ್ಯಾಮಿ ಯದಸಾಧುಚ ||೧೧|| ಯೇನ ಪೂರ್ವಂ ಜನಸ್ಥಾನೇ ಬಹವೋಽತಿಬಲಾ ಹತಾಃ । ರಾಕ್ಷಸಾ ರಾಘವಂ ತತ್ತ್ವಂ ಕಥಮೇಕೋ ಜಯಿಷ್ಯಸಿ || ೧೨ || ಯೇ ಪುರಾ ನಿರ್ಜಿತಾಸ್ತೇನ ಜನಸ್ಥಾನೇ ಮಹೌಜಸಃ । ರಾಕ್ಷಸಾಂಸ್ತಾನ್ ಪುರೇ ಸರ್ವಾನ್ ಭೀತಾ ನದ್ಯಾಪಿ ಪಶ್ಯಸಿ || ೧೩ || ತಂ ಸಿಂಹಮಿವ ಸಂಕ್ರುದ್ಧಂ ರಾಮಂ ದಶರಥಾತ್ಮಜಂ । ಸರ್ಪಂ ಸುಪ್ತಮಿವಾಬುಧ್ಯ ಪ್ರಬೋಧಯಿತುಮಿಚ್ಛಸಿ || ೧೪ || ಜ್ವಲಂತಂ ತೇಜಸಾ ನಿತ್ಯಂ ಕ್ರೋಧೇನ ಚ ದುರಾಸದಂ । ಕಸ್ತಂ ಮೃತ್ಯುಮಿವಾಸಹ್ಯಮಾಸಾದಯಿತು

ಜನಸ್ಥಾನದಲ್ಲಿ, ಅತಿಬಲಾಃ - ಬಹು ಬಲವಂತರಾದ, ಬಹವೋರಾಕ್ಷಸಾಃ - ಅನೇಕ ರಾಕ್ಷಸರು, ಯೇನ - ಯಾವ ಶ್ರೀರಾಮನಿಂದ, ಹತಾಃ - ಹೊಡೆಯಲ್ಪಟ್ಟರೋ, ತ್ವಂ - ನೀನು, ಏಕಃ - ಒಬ್ಬನೇ, ತಂರಾಘವಂ - ಆ ರಾಮನನ್ನು, ಕಥಂಜಯಿಷ್ಯಸಿ - ಹೇಗೆ ಜಯಿಸುವೆ. || ೧೨ || ಪುರಾ - ಪೂರ್ವ ದಲ್ಲಿ, ಜನಸ್ಥಾನೇ - ದಂಡಕಾರಣ್ಯದಲ್ಲಿ, ತೇನ - ಆ ಶ್ರೀರಾಮನಿಂದ, ಮಹೌಜಸಃ - ಮಹಾ ಪರಾಕ್ರಮಿಗಳಾದ, ಯೇ - ಯಾವ ರಾಕ್ಷಸರು, ನಿರ್ಜಿತಾಃ - ಜಯಿಸಲ್ಪಟ್ಟರೋ, ಪುರೇ - ಪುರದಲ್ಲಿ, ಭೀತಾನ್ - ಭಯಬಿದ್ದ, ಸರ್ವಾನ್ - ಸಮಸ್ತರಾದ, ತಾನ್ - ಆ ಜನಸ್ಥಾನದಲ್ಲಿ ಹತರಾದವರ ಸಂಬಂಧಿಗಳಾದ, ರಾಕ್ಷಸಾನ್ - ರಕ್ಕಸರನ್ನು, ಅದ್ಯಾಪಿ - ಈಗಲೂ ಕೂಡ, ಪಶ್ಯಸಿ - ನೋಡುತ್ತ ಲಿರುವೆಯಷ್ಟೆ. || ೧೩ || ದಶರಥಾತ್ಮಜಂ - ದಶರಥಪುತ್ರನಾದ, ತಂರಾಮಂ - ಆ ರಾಮನನ್ನು, ಸಂಕ್ರುದ್ಧಂ - ಕುಪಿತವಾದ, ಸಿಂಹಮಿವ - ಸಿಂಹವನ್ನಂತೆ, ಅವಬುಧ್ಯ - ತಿಳಿಯದೆ, ಸುಪ್ತಂ - ಮಲಗಿರುವ, ಸರ್ಪಮಿವ - ಹಾವನ್ನಂತೆ, ಪ್ರಬೋಧಯಿತುಂ - ಎಬ್ಬಿಸುವದಕ್ಕೆ, ಇಚ್ಛಸಿ - ಅಪೇಕ್ಷಿ ಸುತ್ತಿರುವೆ. ||೧೪|| ನಿತ್ಯಂ - ಯಾವಾಗಲೂ, ತೇಜಸಾ - ಪರಾಕ್ರಮದಿಂದ, ಜ್ವಲಂತಂ - ಪ್ರಜ್ವಲಿ ಸುತ್ತಿರುವ, ಕೋಪೇನಚ - ಕೋಪದಿಂದಲೂ ಕೂಡ, ದುರಾಸದಂ - ಹೊಂದಲಸಾಧ್ಯನಾದ, ತಂ - ಆತನನ್ನು, ಅಸಹ್ಯಂ - ಸಹಿಸಲಸಾಧ್ಯವಾದ, ಮೃತ್ಯುಮಿವ - ಮೃತ್ಯುವಿನನ್ನಂತೆ, ಅಸಹ್ಯಂ - ಪರಿ ಹರಿಸಲಶಕ್ಯವಾದ ಪರಾಕ್ರಮವುಳ್ಳ, ತಂ - ಆ ಶ್ರೀರಾಮನನ್ನು, ಕಃ - ಯಾವನು, ಆಸಾದಯಿತುಂ-

---

ಅನೇಕ ಸಹಸ್ರಮಂದಿ ರಾಕ್ಷಸರನ್ನು ವಧಿಸಿದ್ದಾನೆ. ಅಷ್ಟು ಮಂದಿಯನ್ನೂ ಅವನೊಬ್ಬನೇ ನಿಂತು ಸಂಹರಿಸಿದ್ದಾನೆ. ಹಾಗೆ ಸಕಲ ರಾಕ್ಷಸರನ್ನೂ ಸಂಹರಿಸಿದ ರಘುಕುಲೋದ್ಭವ ನಾದ ಆ ರಾಮನೊಡನೆ ನೀನೊಬ್ಬನೇ ಯುದ್ಧಮಾಡಿ ಹೇಗೆತಾನೇ ವಿಜಯಿಯಾಗುವುದು ಸಾಧ್ಯ? ಎಲೈ ಕುಂಭಕರ್ಣನೇ! ಹಿಂದೆ ಜನಸ್ಥಾನದಲ್ಲಿ ಅತ್ಯಧಿಕ ತೇಜಸ್ವಿಗಳಾದ ರಾಕ್ಷಸ ರನೇಕರು ಆ ರಾಮನೊಡನೆ ಯುದ್ಧಮಾಡಲಶಕ್ತರಾಗಿ ಹಿಂದೋಡಿ ಬಂದರು. ಹಾಗೆ ಬಂದವರು ಈಗಲೂ ರಾಮನೆಂದರೆ ಭಯದಿಂದ ನಡುಗುತ್ತಿದ್ದಾರೆ. || ೯–೧೩ || ಅಯ್ಯಾ ಕುಂಭಕರ್ಣನೇ! ಹಾಗೆ ಆ ರಾಮಬಾಣಗಳಿಂದ ಭಯಗೊಂಡು ತತ್ತಳಿಸುತ್ತಿರುವ ರಾಕ್ಷಸ ರನೇಕರನ್ನು ಇಂದಿಗೂ ಈ ಲಂಕೆಯಲ್ಲಿ ನೀನು ನೋಡಬಹುದು. ನೀನು ಈ ವಿಷಯ ಗಳೆಲ್ಲವನ್ನು ತಿಳಿದೂ ಸಿಂಹಪರಾಕ್ರಮವುಳ್ಳವನೂ, ದಶರಥಮಹಾರಾಜನ ಪುತ್ರನೂ ಆದ ಆ ರಾಮನನ್ನು ನಿದ್ರಿಸುತ್ತಿರುವ ಸರ್ಪವನ್ನೆಬ್ಬಿಸಿ ಪ್ರಮಾದಕ್ಕೆ ತುತ್ತಾಗುವಂತೆ ಕೆಣಕಿ ಸಂಹರಿಸಬೇಕೆಂದು ಪ್ರಯತ್ನಿಸುತ್ತಿರುವೆ. ನೀನು ಈ ರೀತಿ ಪ್ರವರ್ತಿ ಸುವುದು ಸರ್ವಥಾ ಉಚಿತವಲ್ಲವು. ಇದೂ ಅಲ್ಲದೆ ಎಲೈ ಕುಂಭಕರ್ಣನೇ! ಅತ್ಯಧಿಕ ತೇಜಸ್ಸಿನಿಂದ ಪ್ರಕಾಶಿಸುತ್ತಿರುವವನೂ, ಕೋಪದಿಂದ ಸಮೀಪಿಸುವುದಕ್ಕೂ ಸಾಧ್ಯನಲ್ಲ

ಮರ್ಹತಿ? ॥ ೧೫ ॥ ಸಂಶಯಸ್ಥಮಿದಂ ಸರ್ವಂ ಶತ್ರೋಃ ಪ್ರತಿಸಮಾಸನೇ। ಏಕಸ್ಯ ಗಮನಂ ತತ್ರ ನಹಿ ಮೇ ರೋಚತೇ ಭೃಶಂ ॥ ೧೬ ॥ ಹೀನಾರ್ಥಸ್ಸಸಮೃದ್ಧಾರ್ಥಂ ಕೋ ರಿಪುಂ ಪ್ರಾಕೃತಂ ಯಥಾ । ನಿಶ್ಚಿತ್ಯ ಜೀವಿತತ್ಯಾಗೇ ವಶಮಾನೇತುಮಿಚ್ಛತಿ ॥೧೭॥ ಯಸ್ಯ ನಾಸ್ತಿ ಮನುಷ್ಯೇಷು ಸದೃಶೋ ರಾಕ್ಷಸೋತ್ತಮ! । ಕಥಮಾಶಂಸಸೇ ಯೋದ್ಧುಂ ತುಲ್ಯೇನೇಂದ್ರವಿವಸ್ವತೋಃ" ॥ ೧೮ ॥ ಏವಮುಕ್ತ್ವಾತು ಸಂರಬ್ಧಃ ಕುಂಭಕರ್ಣಂ ಮಹೋದರಃ । ಉವಾಚ ರಕ್ಷಸಾಂ ಮಧ್ಯೇ ರಾವಣಂ ಲೋಕ

ಹೊಂದುವುದಕ್ಕೆ, ಅರ್ಹತಿ - ಯೋಗ್ಯನಾಗುತ್ತಾನೆ. ॥ ೧೫ ॥ ಶತ್ರೋಃ - ಶತ್ರುವಾದ ರಾಮನ, ಪ್ರತಿಸಮಾಸನೇ - ಪ್ರತಿಮುಖಸ್ಥಿತಿಯಾಗಲೂ, ಸರ್ವಂ - ಸಮಸ್ತವಾದ, ಇದಂ - ರಾಕ್ಷಸಬಲವು, ಸಂಶಯಸ್ಥಂ - ಸಂದೇಹವಿಲ್ಲದಿರುವದೋ, ತತ್ರ - ಆ ಶತ್ರುಸಮಿಾಪದಲ್ಲಿ, ಏಕಸ್ಯ - ಒಬ್ಬನಾದ ನಿನ್ನ, ಗಮನಂ - ಹೋಗೋಣವು, ಮೇ - ನನಗೆ, ಭೃಶಂ - ವಿಶೇಷವಾಗಿ, ನರೋಚತೇಹಿ - ಇಷ್ಟವೇ ಇಲ್ಲ. ॥ ೧೬ ॥ ಹೀನಾರ್ಥಃ - ಹೀನವಾಗುತ್ತಲಿರುವ ಬಲವುಳ್ಳ, ಕಃ - ಯಾವನು, ಜೀವಿತತ್ಯಾಗೇ - ಪ್ರಾಣತ್ಯಾಗ ವಿಷಯದಲ್ಲಿ, ನಿಶ್ಚಿತ್ಯ - ನಿಶ್ಚಯ ಮಾಡಿಕೊಂಡು, ಸುಸಮೃದ್ಧಾರ್ಥಂ - ವೃದ್ಧಿ ಹೊಂದುತ್ತಿರುವ ಬಲವುಳ್ಳ, ರಿಪುಂ - ಶತ್ರುವನ್ನು ಪ್ರಾಕೃತಂಯಥಾ - ಕ್ಷುದ್ರ ಪುರುಷನನ್ನಂತೆ, ವಶಂ - ಸ್ವಾಧೀನವನ್ನು, ಆನೇತುಂ - ಹೊಂದಿಸುವದಕ್ಕೆ, ಇಚ್ಛತಿ - ಇಚ್ಛಿಸುತ್ತಾನೆ. ॥೧೭॥ ಹೇ ರಾಕ್ಷಸೋತ್ತಮ - ಎಲೈ ರಾಕ್ಷಸಶ್ರೇಷ್ಠನೇ, ಯಸ್ಯ - ಯಾವ ಶ್ರೀರಾಮನಿಗೆ, ಸದೃಶಃ- ಸಮಾನನಾದ ಪುರುಷನು, ಮನುಷ್ಯೇಷು - ಮನುಷ್ಯರಲ್ಲಿ, ನಾಸ್ತಿ - ಇಲ್ಲವೋ, ಇಂದ್ರ......ತೋಃ - ಇಂದ್ರ ಸೂರ್ಯರಿಗೆ, ತುಲ್ಯೇನ - ಸಮಾನನಾದ (ಶ್ರೀರಾಮನೊಡನೆ), ಯೋದ್ಧುಂ - ಯುದ್ಧ ಮಾಡುವುದಕ್ಕೆ, ಕಥಮಾಶಂಸಸೇ - ಹೇಗೆ ಇಚ್ಛಿಸುತ್ತೀಯೆ. ॥೧೮॥ ಏವಂತು - ಈ ರೀತಿಯಾದರೆ, ಮಹೋದರಃ - ಮಹೋದರನು, ಸಂರಬ್ಧಃ - ಕೋಪವುಳ್ಳವನಾಗಿ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಉಕ್ತ್ವಾ - ಹೇಳಿ, ರಕ್ಷಸಾಂ - ರಕ್ಕಸರ, ಮಧ್ಯೇ - ಮಧ್ಯದಲ್ಲಿ, ಲೋಕರಾವಣಂ - ಲೋಕವನ್ನು ದೀನಧ್ವನಿಯುಳ್ಳದನ್ನಾಗಿ ಮಾಡುತ್ತಿರುವ, ರಾವಣಂ - ರಾವಣನನ್ನು ಕುರಿತು, ಉವಾಚ - ಹೇಳಿದನು. ॥ ೧೯ ॥ ಹೇ ರಾಕ್ಷಸೇಶ್ವರ - ಎಲೈ ರಾಕ್ಷಸಾಧಿಪತಿಯೇ, ತ್ವಂ - ನೀನು,

---

ದವನೂ, ಮೃತ್ಯುದೇವತೆಯಂತೆ ಸಹಿಸಲಸಾಧ್ಯನಾದವನೂ ಆದ ರಾಮನೊಡನೆ ಯುದ್ಧ ಮಾಡುವುದು ಉಚಿತವಲ್ಲವೆಂಬುದನ್ನು ತಿಳಿ. ಅಯ್ಯಾ! ಹಗೆಯನಾದ ಆ ರಾಮನೊಡನೆ ಯುದ್ಧಮಾಡಲು ನೀನು ಒಂಟಿಯಾಗಿಯೇ ಹೋಗುವೆನೆಂದು ಬೇರೆ ಹೇಳುತ್ತಿರುವೆ. ನೀನು ಹಾಗೆನ್ನುವುದು ನನ್ನ ಮನಸ್ಸಿಗೇನೇನೂ ರುಚಿಸಲಿಲ್ಲ. ॥ ೧೮–೧೬ ॥ ಹೀನವಾದ ಸೈನ್ಯ ಸಂಪತ್ತುಳ್ಳ ನೀನು ಅಧಿಕಬಲೋಪೇತನಾದ ಶತ್ರುವನ್ನು ಸಾಮಾನ್ಯನನ್ನಾಗಿ ತಿಳಿದು ಜೀವಿತಾಶೆಯನ್ನೇ ತೊರೆದು ಸಾಹಸಕ್ಕೆ ಕೈಹಾಕುವವನಿಗೆ ಸಮಾನನಾದವನೇ ಎಂದು ತೋರುವುದು. ಇಂತಹ ದುಡುಕುತನದ ಕೆಲಸವನ್ನು ಮಾಡುವವನು ಮೂರುಲೋಕಗಳಲ್ಲಿಯೂ ಇರುವುದಿಲ್ಲ. ನೀನು ದೇವೇಂದ್ರನೊಡನೆಯೂ, ಯಮನೊಡನೆಯೂ ಏಕಕಾಲದಲ್ಲಿಯೇ ಯುದ್ಧ ಮಾಡಲು ಹೊರಟಿರುವಂತೆ ತೋರುತ್ತದೆ. ಇದು ಸರ್ವಥಾ ಅನುಚಿತವೇ ಸರಿ" ಎಂದು ಹೇಳಿ ಮತ್ತಷ್ಟು ಆಟೋಪದಿಂದ ಸಕಲಲೋಕ ಭಯಂಕರನಾದ ರಾವಣಾಸುರನನ್ನೇ ಕುರಿತು ಎಲ್ಲ ರಾಕ್ಷಸರಿಗೂ ಕೇಳಿಸುವಂತೆ "ಎಲೈ ರಾಕ್ಷಸರಾಜೋತ್ತಮನಾದ ರಾವಣಾಸುರನೇ!

ರಾವಣಂ ॥ ೧೯ ॥ "ಲಬ್ಧ್ವಾ ಪುನಸ್ತ್ವಂ ವೈದೇಹೀಂ ಕಿಮರ್ಥಂ ಸಂಪ್ರಜಲ್ಪಸಿ । ಯದೀಚ್ಛಸಿ ತದಾ ಸೀತಾ ವಶಗಾ ತೇ ಭವಿಷ್ಯತಿ ॥ ೨೦॥ ದೃಷ್ಟಃ ಕಚ್ಚಿದುಪಾಯೋ ಮೇ ಸೀತೋಪಸ್ಥಾನಕಾರಕಃ । ರುಚಿರಶ್ಚೇತ್ಸ್ವಯಾ ಬುದ್ಧ್ಯಾ ರಾಕ್ಷಸೇಶ್ವರ! ತಂ ಶೃಣು ॥ ೨೧ ॥ ಅಹಂ ದ್ವಿಜಿಹ್ವಸ್ಸಂಹ್ರಾದೀ ಕುಂಭಕರ್ಣೋ ವಿತರ್ದನಃ । ಪಂಚ ರಾಮವಧಾಯೈತೇ ನಿರ್ಯಾಂತ್ವಿತ್ಯವಘೋಷಯ ॥ ೨೨ ॥ ತತೋ ಗತ್ವಾ ವಯಂ ಯುದ್ಧಂ ದಾಸ್ಯಾಮಸ್ತಸ್ಯ ಯತ್ನತಃ । ಜೇಷ್ಯಾಮೋ ಯದಿ ತೇ ಶತ್ರೂನ್ನೋಪಾಯೈಃ ಕೃತ್ಯಮಸ್ತಿ ನಃ ॥ ೨೩ ॥ ಅಥ ಜೀವತಿ ನಃ ಶತ್ರುರ್ವಯಂಚ ಕೃತಸಂ

ವೈದೇಹೀಂ - ಸೀತಾದೇವಿಯನ್ನು, ಲಬ್ಧ್ವಾ ಹೊಂದಿ, ಪುನಃ - ಮತ್ತೂ, ಕಿಮರ್ಥಂ - ಏತಕ್ಕಾಗಿ, ಸಂಪ್ರಜಲ್ಪಸಿ - ವಿಧವಿಧವಾಗಿ ಮಾತನಾಡುತ್ತಿರುವೆ, ಇಚ್ಛಸಿಯದಿ - (ನಾನು ಹೇಳತಕ್ಕ ಉಪಾಯವನ್ನು) ಬಯಸಿದರೆ, ತದಾ - ಆಗಲೇ, ಸೀತಾ - ಸೀತಾದೇವಿಯು, ತೇ - ನಿನಗೆ, ವಶಗಾ - ಸ್ವಾಧೀನಳು, ಭವಿಷ್ಯತಿ - ಆಗುವಳು, ಸೀತೋ.....ಕಃ - ಸೀತಾದೇವಿಯು, ತಾನೇ ನಿನ್ನ ಸಮೀಪಕ್ಕೆ ಬರುವಂತೆ ಮಾಡುತ್ತಿರುವ, ಕಚ್ಚಿದುಪಾಯಃ - ಒಂದು ಉಪಾಯವು, ಮೇ - ನನ್ನಿಂದ, ದೃಷ್ಟಃ - ಕಾಣಲ್ಪಟ್ಟಿದೆ, ರುಚಿರಶ್ಚೇತ್ - ಇಷ್ಟವಿದ್ದರೆ, ಸ್ವಯಾ - ನಿನ್ನ, ಬುದ್ಧ್ಯಾ - ಬುದ್ಧಿಯಿಂದ, ತಂ - ಅದನ್ನು, ಶೃಣು - ಕೇಳು. ॥ ೨೦-೨೧ ॥ ಅಹಂ - ನಾನು, ದ್ವಿಜಿಹ್ವಃ - ದ್ವಿಜಿಹ್ವನು, ಸಂಹ್ರಾದೀ - ಸಂಹ್ರಾದಿಯು, ಕುಂಭಕರ್ಣಃ - ಕುಂಭಕರ್ಣನು, ವಿತರ್ದನಃ - ವಿತರ್ದನನು, (ಎಂಬ) ಏತೇಪಂಚ - ಈ ಐದುಮಂದಿಯೂ, ನಿರ್ಯಾಂತ್ವಿತಿ - ಹೊರಡಲೆಂದು, ಅವಘೋಷಯ - ಸಾರಿಸು. ॥೨೨॥ ತತಃ - ಬಳಿಕ, ವಯಂ - ನಾವು, ಗತ್ವಾ - ಹೋಗಿ, ತಸ್ಯ - ಆ ಶ್ರೀರಾಮನಿಗೆ, ಯತ್ನತಃ - ಪ್ರಯತ್ನದಿಂದ, ಯುದ್ಧಂ - ಯುದ್ಧವನ್ನು, ದಾಸ್ಯಾಮಃ - ಕೊಡುತ್ತೇವೆ, ತೇ - ನಿನ್ನ, ಶತ್ರೂನ್-ದ್ವೇಷಿಗಳನ್ನು, ಜೇಷ್ಯಾಮೋಯದಿ-ಜಯಿಸಿದರೆ (ಸೀತೆಯು ಸ್ವಾಧೀನಳಾಗುವಳು,) ನಃ - ನಮಗೆ, ಉಪಾಯೈಃ - ಸೀತೆಯನ್ನು ಸ್ವಾಧೀನಪಡಿಸಿಕೊಳ್ಳುವ ಉಪಾಯಗಳಿಂದ, ಕೃತ್ಯಂ - ಕೆಲಸವು, ನಾಸ್ತಿ - ಇಲ್ಲವು. ॥ ೨೩ ॥ ವಯಂ - ನಾವು, ಕೃತ....ಶ್ಚ - ಮಾಡಲ್ಪಟ್ಟ ಯುದ್ಧವುಳ್ಳವ

ನೀನು ಆ ಸೀತೆಯನ್ನು ಪಡೆದಿದ್ದೀಯೆ. ಆದರೂ ನೀನೀರೀತಿ ಮಾತನಾಡುವುದೇಕೆ? ಮಹಾರಾಜ! ನೀನು ವಾಸ್ತವವಾಗಿ ಆ ಸೀತೆಯನ್ನು ಬಯಸುವೆಯಾದರೆ ಅವಳು ನಿನ್ನ ಸ್ವಾಧೀನಳಾಗಲಾರಳೆ! ಆಗದೆಯೇನು? ನಾನದಕ್ಕೆ ಒಂದು ಉಪಾಯವನ್ನು ಹುಡುಕಿದ್ದೇನೆ. ಆ ಉಪಾಯದಿಂದ ಸೀತೆಯು ತಾನಾಗಿಯೇ ನಿನ್ನ ವಶವರ್ತಿನಿಯಾಗುವಳು. ಎಲೈ ರಾಕ್ಷಸಾಧಿಪನೇ! ನಿನಗೆ ಸಮ್ಮತವಾದರೆ ನಾನದನ್ನು ಹೇಳುವೆನು; ಲಾಲಿಸು. ॥ ೧೭-೨೧ ॥ ನಾನೂ, ದ್ವಿಜಹ್ವ, ಸಂಹ್ರಾದಿ, ಕುಂಭಕರ್ಣ ಮತ್ತು ವಿತರ್ದನ ನಾವೈವರೂ ಯುದ್ಧಕ್ಕೆ ಹೊರಡುವೆವು. ನಾವೈವರೂ ಯುದ್ಧಕ್ಕೆ ಹೊರಡುವೆವೆಂದು ಲಂಕಾಪಟ್ಟಣದಲ್ಲೆಲ್ಲಾ ಸಾರಿಸುವವನಾಗು. ಮಹಾರಾಜ! ನೀನು ಹೀಗೆ ಮಾಡಿದರೆ ನಾವೈವರೂ ಯುದ್ಧರಂಗಕ್ಕೆ ಹೊರಟು ಆ ರಾಮನೊಡನೆ ಭಯಂಕರವಾದ ಯುದ್ಧವನ್ನು ಮಾಡುವೆವು. ನಾವು ಆ ಯುದ್ಧದಲ್ಲಿ ನಿನ್ನ ಶತ್ರುವನ್ನು ಜಯಿಸುತ್ತೇವೆ. ಒಂದು ವೇಳೆ ನಾವು ವಿಜಯಿಗಳಾದರೆ ಈ ಉಪಾಯವನ್ನೇನೂ ಯೋಚಿಸಬೇಕಾಗಿರುವುದಿಲ್ಲ. ಹಾಗೆ ಜಯಿಸದಿದ್ದರೆ ಆಗ್ಗೆ ಈ ಉಪಾಯವನ್ನು ಮಾಡಬೇಕೆಂದು ನಿರ್ಧರಿಸಿದ್ದೇನೆ:—ಲೋಕದಲ್ಲಿ ಉಪಾಯದಿಂದ ಗೆಲ್ಲಲು

ಬಂಧಯಾ । ಅಕಾಮಾ ತ್ವದ್ವಶಂ ಸೀತಾ ನಷ್ಟನಾಥಾ ಗಮಿಷ್ಯತಿ ॥೬೨॥ ರಂಜನೀಯಂಹಿ ಭರ್ತಾರಂ ವಿನಷ್ಟಮವಗಮ್ಯ ಸಾ । ನೈರಾಶ್ಯಾತ್ ಸ್ತ್ರೀಲಘುತ್ವಾಚ್ಚ ತ್ವದ್ವಶಂ ಪ್ರತಿಪತ್ಸ್ಯತೇ ॥೬೩॥ ಸಾ ಪುರಾ ಸುಖಸಂವೃದ್ಧಾ ಸುಖಾರ್ಹಾ ದುಃಖಕರ್ಶಿತಾ । ತ್ವಯ್ಯಧೀನಂ ಸುಖಂ ಜ್ಞಾತ್ವಾ ಸರ್ವಥೋಪಗಮಿಷ್ಯತಿ ॥೬೪॥ ಏತತ್ಸು

ರಾಜನೇ, ಭಯ....ಯಾ - ಸಂಪಾದಿಸಲ್ಪಟ್ಟ ಭಯವೂ ದುಃಖವೂ ಉಳ್ಳ, ಅನುಯೋಪಧಯಾ - ಈ ಕಪಟೋಪಾಯದಿಂದ, ಅಕಾಮಾ - ಕಾಮರಹಿತಳಾದರೂ, ನಷ್ಟನಾಥಾ - ನಷ್ಟನಾದ ನಾಥನುಳ್ಳ, ಸೀತಾ - ಸೀತಾದೇವಿಯು, ತ್ವದ್ವಶಂ - ನಿನ್ನ ವಶವನ್ನು, ಗಮಿಷ್ಯತಿ - ಹೊಂದುವಳು. ॥೬೨॥ ಸಾ- ಆ ಸೀತಾದೇವಿಯು, ರಂಜನೀಯಂ - ರಮಿಸತಕ್ಕ, ಭರ್ತಾರಂ - ಗಂಡನನ್ನು, ವಿನಷ್ಟಂ - ಗತಿಸಿರುವವನನ್ನಾಗಿ, ಅವಗಮ್ಯ - ತಿಳಿದು, ನೈರಾಶ್ಯಾತ್ - ನಿರಾಶೆಯಿಂದ, ಸ್ತ್ರೀಲಘುತ್ವಾಚ್ಚ - ಹೆಣ್ಣಿನ ಚಪಲತೆಯಿಂದ, ತ್ವದ್ವಶಂ - ನಿನ್ನ ವಶವನ್ನು, ಪ್ರತಿಪತ್ಸ್ಯತೇ - ಹೊಂದುವಳು. ॥೬೩॥ ಸಾ - ಆ ಸೀತಾದೇವಿಯು, ಪುರಾ - ಪೂರ್ವದಲ್ಲಿ, ಸುಖಸಂವೃದ್ಧಾ - ಸುಖದಿಂದಲೇ ಬೆಳದವಳು, ಸುಖಾರ್ಹಾ- ಸುಖಕ್ಕೆ ಯೋಗ್ಯಳಾದಕಾರಣ, ದುಃಖಕರ್ಶಿತಾ - ದುಃಖದಿಂದ ಸವೆದು, ತ್ವಯಿ - ನಿನ್ನಲ್ಲಿ, ಸುಖಂ - ಸುಖವನ್ನು, ಅಧೀನಂ - ಸ್ವಾಧೀನವಾದದ್ದನ್ನಾಗಿ, ಜ್ಞಾತ್ವಾ - ತಿಳಿದು, ಸರ್ವತಃ - ಎಲ್ಲ ವಿಧಗಳಿಂದಲೂ ನಿನ್ನನ್ನು ಕುರಿತು, ಉಪಗಮಿಷ್ಯತಿ - ಬರುತ್ತಾಳೆ. ॥೬೪॥ ಮಮ - ನನ್ನ, ದರ್ಶನೇನ - ದೃಷ್ಟಿಯಿಂದ, ಏತತ್ - ಇದು, ಸುನೀತಂ - ನಿರ್ಣಯಿಸಲ್ಪಟ್ಟಿದೆ, ರಾಮಂ - ಶ್ರೀರಾಮ

ಕಪಟೋಪಾಯಗಳಿಂದ ಆ ಸೀತೆಯು ತಾನು ಪತಿಹೀನೆಯಾದಳೆಂದು ನಂಬಿ ಬೇರೊಂದು ಗತಿಯಿಲ್ಲದೆ ಖಂಡಿತವಾಗಿಯೂ ನಿನ್ನನ್ನು ಹೊಂದುತ್ತಾಳೆ ; ನಂಬು. ಎಲೈ ಮಹಾರಾಜನೇ ! ಆ ಸೀತಾದೇವಿಯು ತನಗೆ ಅತ್ಯಂತ ಪ್ರಿಯಕರನಾದ ಭರ್ತನು ನಶಿಸಿಹೋಗಿರುವನೆಂದು ನಂಬುವುದರಿಂದಲೂ, ಇನ್ನು ಆತನು ದೊರಕುವನೆಂಬ ಆಶೆಯಿಂದ ದೂರಳಾಗುವುದರಿಂದಲೂ, ಸ್ತ್ರೀಗೆ ಸಹಜವಾದ ಚಾಪಲ್ಯದಿಂದಲೂ ನಿನ್ನ ವಶವರ್ತಿನಿಯಾಗುವಳು.॥೬೯–೬೩॥ ಹಿಂದೆ ಬಹು ಸುಖದಿಂದ ಕೋಮಲವಾಗಿ ಬೆಳೆದವಳೂ, ಯಾವಾಗಲೂ ಸುಖವನ್ನೇ ಪಡೆಯಲು ಅರ್ಹಳಾಗಿರುವವಳೂ, ಪ್ರಕೃತದಲ್ಲಿ ದುಃಖಪೀಡಿತೆಯಾಗಿರುವವಳೂ ಆದ ಸೀತಾದೇವಿಯು ದಿಕ್ಕಿಲ್ಲದವಳಾಗಿ ಇನ್ನುಮೇಲೆ ನೀನೇ ಸುಖದಾಯಕನೆಂದರಿತು ಎಲ್ಲ ವಿಧಗಳಲ್ಲಿಯೂ ನಿನ್ನನ್ನೇ ಹೊಂದುವಳು. ಮಹಾರಾಜ! ಈ ವಿಷಯವೆಲ್ಲವನ್ನೂ ನಾನು ಬಹಳ ಯೋಚಿಸಿ ನಿರ್ಣಯಿಸಿದ್ದೇನೆ. ಆ ರಾಮನಿಗೆ ಈ ವಿಧವಾಗಿ ನಿಜವಾಗಿಯೂ ಅನರ್ಥವೇ

"ನಷ್ಟನಾಥಾಗಮಿಷ್ಯತಿ" ಎಂಬ ಕಡೆ "ನಷ್ಟ-ನ-ಅಥ-ಆಗಮಿಷ್ಯತಿ" ಎಂದು ಪದಚ್ಛೇದ. (ನನ್ನ ಪತಿಯಾದ ಶ್ರೀರಾಮನು ನಿಜವಾಗಿಯೂ ಮಡಿದಿಲ್ಲ, ಬದುಕಿದ್ದಾನೆ, ಬರುತ್ತಾನೆ.) (ಎಂದರ್ಥ) ಅಥವಾ "ಹೇ ನಷ್ಟ-ಎಲೆವೊ ನಾಶ ಹೊಂದುವ ರಾವಣನೇ ! ಅಕಾಮಾ-ವಿಷ್ಣುಸ್ವರೂಪನಾದ ಶ್ರೀರಾಮನನ್ನೇ ಕಾಮಿಸುವ ಸೀತೆಯೂ ಈ ಉಪಾಯದಿಂದಲೂ ನಿನ್ನ ವಶವರ್ತಿನಿಯಾಗುವುದಿಲ್ಲ. ಪರಮಪತಿವ್ರತೆಯಾದ ಆ ದೇವಿಯು, ಅವನು ಮಡಿದನೆಂದು ತಿಳಿದರೂ, ತನ್ನ ಆಶೆಯು ನಿರಾಶೆಯಾದರೂ, ಸ್ತ್ರೀಲಾಘವದಿಂದಲಾದರೂ ಯಾವುದೇ ರೀತಿಯಿಂದಲಾದರೂ ನಿನ್ನನ್ನು ಹೊಂದುವುದಿಲ್ಲವೆಂಬುದನ್ನು ತಿಳಿ." ಪೂರ್ವದಲ್ಲಿ ಆಕೆಯು ಸುಖದಿಂದ ಬೆಳೆದು ಈಗ ದುಃಖಕರ್ಶಿತೆಯಾಗಿದ್ದರೂ ನಿನ್ನ ಅಧೀನೆಯಾಗುವುದು ಕೇವಲ ಪಾಪಕರವೆಂದು ತಿಳಿದು ಸರ್ವಥಾ ಶ್ರೀರಾಮನನ್ನೇ ಅನುಸರಿಸಿಹೋಗುವಳು. ಈ ವಿಷಯವನ್ನು ನಾನು ಬಹಳವಟ್ಟಿಗೆ ಯೋಚಿಸಿ ನಿರ್ಧರಿಸಿದ್ದೇನೆ. ಆದ್ದರಿಂದ ಉತ್ಸುಕನಾಗಬೇಡ. (ಮಹೇಶ್ವರತೀರ್ಥರು)

ನೀತಂ ಮಮ ದರ್ಶನೇನ ರಾಮಂಹಿ ದೃಷ್ಟ್ವೈವ ಭವೇದನರ್ಥಃ । ಇಹೈವ ತೇ ಸೇತ್ಸ್ಯತಿ ಮೋತ್ಸುಕೋ ಭೂರ್ಮಹಾನಯುದ್ಧೇನ ಸುಖಸ್ಯ ಲಾಭಃ ॥ ೩೫ ॥

ಅದೃಷ್ಟಸೈನ್ಯೋ ಹ್ಯನವಾಪ್ತಸಂಶಯೋ
ರಿಪೂನಯುದ್ಧೇನ ಜಯನ್ನರಾಧಿಪಃ ।
ಯಶಶ್ಚ ಪುಣ್ಯಂಚ ಮಹಾನ್ಮಹೀಪತೇ !
ಶ್ರಿಯಂಚ ಕೀರ್ತಿಂಚ ಚಿರಂ ಸಮಶ್ನುತೇ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಃಷಷ್ಠಿತಮಸ್ಸರ್ಗಃ

ನನ್ನು, ದೃಷ್ಟ್ವೈವ - ನೋಡುತ್ತಲೇ, ತೇ - ನಿನಗೆ, ಅನರ್ಥಃ - ಅನರ್ಥವು, ಭವೇತ್ - ಆಗುವುದು, ಉತ್ಸುಕಃ - ರಣೋದ್ಯುಕ್ತನು, ಮಾಭೂಃ - ಆಗಬೇಡ, ತೇ - ನಿನಗೆ, ಅಯುದ್ಧೇ - ಯುದ್ಧಮಾಡದಿರುವಿಕೆಯಿಂದ, ಮಹಾನ್ - ದೊಡ್ಡದಾದ, ಸುಖಸ್ಯ - ಸುಖದ, ಲಾಭಃ - ಪ್ರಾಪ್ತಿಯು, ಇಹೈವ-ಇಲ್ಲಿಯೇ, ಸೇತ್ಸ್ಯತಿ - ಲಭಿಸುತ್ತದೆ. ॥ ೩೫ ॥ ಹೇ ಮಹೀಪತೇ - ಎಲೈ ಅರಸೇ, ಅದೃಷ್ಟಸೈನ್ಯಃ - ನೋಡಲ್ಪಡದಿರುವ ಶತ್ರುಸೈನ್ಯವುಳ್ಳ, ಅನ......ಯಾ - ಹೊಂದಲ್ಪಡದಿರುವ ಸಂಶಯವುಳ್ಳ, ನರಾಧಿಪಃ-ರಾಜನು, ಅಯುದ್ಧೇನ - ಕಾಳಿಗವನ್ನು ಬಿಟ್ಟು, ಜಯನ್ - ಜಯಿಸಿದವನಾಗಿ, ಮಹತ್ - ಬಹಳವಾದ, ಯಶಶ್ಚ - ಕೀರ್ತಿಯನ್ನೂ, ಪುಣ್ಯಂಚ - ಪುಣ್ಯವನ್ನೂ, ಶ್ರಿಯಂಚ - ಐಶ್ವರ್ಯವನ್ನೂ, ಕೀರ್ತಿಂಚ - ಪರಂಪರಾಪ್ರಾಪ್ತವಾದ ಯಶಸ್ಸನ್ನೂ, ಚಿರಂ - ಬಹುಕಾಲ, ಸಮಶ್ನುತೇ - ಅನುಭವಿಸುತ್ತಾನೆ. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಃಷಷ್ಠಿತಮಸ್ಸರ್ಗಃ.

ಘಟಿಸುವುದೆಂದು ನಿಶ್ಚಯಿಸಿದ್ದೇನೆ. ನೀನು ಪಟ್ಟಣದಲ್ಲಿಯೇ ಇರು. ಯುದ್ಧಕ್ಕೆ ಹೋಗಬೇಕೆಂದು ಸ್ವಲ್ಪವಾದರೂ ಯೋಚಿಸಲೇ ಬೇಡ. ನಿನಗೆ ಆ ಕುತೂಹಲವೇ ಇರಬೇಕಾದುದಿಲ್ಲ. ಎಲೈ ರಾಕ್ಷಸೋತ್ತಮನೇ! ನಿನ್ನ ಸೈನ್ಯವು ನಾಶವಾಗುವುದೂ ಇಲ್ಲ. ಸಂದೇಹಪಡುವೆಯೇಕೆ? ನಾವೈವರೂ ಯುದ್ಧರಂಗಕ್ಕೆ ಹೋಗಿ ಸೆಣಸುವೆವು. ಯುದ್ಧಮಾಡದೆಯೆ ಯಾವ ರಾಜನು ಶತ್ರುಗಳನ್ನು ಜಯಿಸುವನೋ ಅವನಿಗೆ ಪುಣ್ಯವೂ ಉಂಟು; ಕೀರ್ತಿಯೂ ಉಂಟು. ಆದುದರಿಂದ ಈಗ ನಾವು ಮಾತ್ರ ಯುದ್ಧಕ್ಕೆ ಹೊರಡುತ್ತೇವೆ. ನಾವು ಯುದ್ಧಮಾಡುವುದರಿಂದಲೇ ನಿನಗೆ ಅಪಾರ ಕೀರ್ತಿಯುಂಟಾಗುವುದು'' ಎಂದು ಹೇಳಿದನು. ॥ ೩೪—೩೬ ॥

ಇಂತಿದು ಮಹೋದರಕೃತ ಕುಂಭಕರ್ಣಭರ್ತ್ಸನವೆಂಬ ಅರುವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚಷಷ್ಠಿತಮಸ್ಸರ್ಗಃ

ಸತಥೋಕ್ತಸ್ತು ನಿರ್ಭರ್ತ್ಸ್ಯ ಕುಂಭಕರ್ಣೋ ಮಹೋದರಂ। ಅಬ್ರವೀದ್ರಾಕ್ಷಸಶ್ರೇಷ್ಠಂ ಭ್ರಾತರಂ ರಾವಣಂ ತತಃ ॥ ೧ ॥ "ಸೋಽಹಂ ತವ ಭಯಂ ಘೋರಂ ವಧಾತ್ತಸ್ಯ ದುರಾತ್ಮನಃ । ರಾಮಸ್ಯಾಽದ್ಯ ಪ್ರಮಾರ್ಜಾಮಿ ನಿರ್ವೈರೋಹೀ ಸುಖೀ ಭವ ॥ ೨ ॥ ಗರ್ಜಂತಿ ನವೃಥಾ ಶೂರಾ ನಿರ್ಜಲಾ ಇವ ತೋಯದಾಃ । ಪಶ್ಯ ಸಂಪಾದ್ಯಮಾನಂತು ಗರ್ಜಿತಂ ಯುಧಿ ಕರ್ಮಣಾ ॥೩॥ ನಮರ್ಷಯತಿ ಚಾತ್ಮಾನಂ ಸಂಭಾವಯತಿ ನಾತ್ಮನಾ । ಅದರ್ಶಯಿತ್ವಾ ಶೂರಾಸ್ತು ಕರ್ಮ ಕುರ್ವಂತಿ ದುಷ್ಕರಂ

ತಥಾ - ಆ ಪ್ರಕಾರವಾಗಿ, ಉಕ್ತಃ - ಹೇಳಲ್ಪಟ್ಟ, ಕುಂಭಕರ್ಣಸ್ತು - ಕುಂಭಕರ್ಣನಾದರೆ, ಮಹೋದರಂ-ಮಹೋದರನನ್ನು, ನಿರ್ಭರ್ತ್ಸ್ಯ-ಗದರಿ, ತತಃ-ಬಳಿಕ, ರಾಕ್ಷಸಶ್ರೇಷ್ಠಂ - ರಾಕ್ಷಸೋತ್ತಮನಾದ, ಭ್ರಾತರಂ - ಅಣ್ಣನಾದ, ರಾವಣಂ - ರಾವಣನನ್ನು ಕುರಿತು, ಅಬ್ರವೀತ್ - ನುಡಿದನು. ॥ ೧ ॥ ಸೋಹಂ - ಅಂಥಾ ನಾನ, ದುರಾತ್ಮನಃ - ದುರ್ಬುದ್ಧಿಯುಳ್ಳ, ತಸ್ಯರಾಮಸ್ಯ - ಆ ರಾಮನ, ವಧಾತ್ - ಸಂಹಾರದಿಂದ, ಘೋರಂ - ಭಯಂಕರವಾದ, ತವ - ನಿನ್ನ, ಭಯಂ - ಭೀತಿಯನ್ನು, ಅದ್ಯ - ಈಗ, ಪ್ರಮಾರ್ಜಾಮಿ - ಹಿಂತಿರುಗಿಸುವೆನು, ನಿರ್ವೈರಃ - ದ್ವೇಷವಿಲ್ಲದವನಾಗಿ, ಸುಖೀ - ಸುಖವಂತನು, ಭವ - ಆಗು. ॥೨॥ ಶೂರಾಃ - ಶೂರರು, ನಿರ್ಜಲಾಃ - ಉದಕವಿಲ್ಲದ, ತೋಯದಾಇವ - ಮೇಘಗಳಂತೆ, ವೃಥಾ - ವ್ಯರ್ಥವಾಗಿ, ನಗರ್ಜಂತಿ - ಗರ್ಜಿಸುವುದಿಲ್ಲ, ಯುಧಿ - ಯುದ್ಧದಲ್ಲಿ, ಕರ್ಮಣಾ - ವ್ಯಾಪಾರದಿಂದ, ಸಂಪಾದ್ಯಮಾನಂ - ಸಂಪಾದಿಸಲ್ಪಡುವ, ಗರ್ಜಿತಂ - ಗರ್ಜನೆಯನ್ನು, ಪಶ್ಯ - ನೋಡು. ॥ ೩ ॥ ಶೂರಾಸ್ತು - ವೀರರಾದರೆ, ಆತ್ಮಾನಂ - ತಮ್ಮನ್ನು, ನಮರ್ಷಯಂತಿ - ಪೌರುಷವಿಲ್ಲದೆ ತೃಪ್ತರಾಗುವದಿಲ್ಲ, ಆತ್ಮನಾ - ತನ್ನಿಂದ, ನಸಂಭಾವ

ಈ ಪ್ರಕಾರವಾಗಿ ನುಡಿಯುತ್ತಿರುವ ಮಹೋದರನ ಮಾತುಗಳನ್ನು ಕೇಳಿ ಕುಂಭಕರ್ಣನು ರೋಷಗೊಂಡು ಅವನನ್ನು ಗದರಿಸಿ, ರಾಕ್ಷಸೋತ್ತಮನೂ, ತನ್ನ ಅಣ್ಣನೂ ಆದ ರಾವಣಾಸುರನನ್ನು ಕುರಿತು, "ಎಲೈ ಮಹಾರಾಜನೇ! ದುರಾತ್ಮನಾದ ಆ ರಾಮನನ್ನು ವಧಿಸಿ ನಿನಗೀಗ ಸಂಭವಿಸಿರುವ ಭಯವನ್ನು ನಿವಾರಿಸುವೆನು. ನಾನು ಆ ರಾಮನನ್ನು ಕೊಂದು ಅವನಿಂದ ನಿನಗುಂಟಾಗಿರುವ ಭಯವನ್ನು ನಾಶಗೊಳಿಸಿದ ತರುವಾಯ ನೀನು ಶತ್ರುಹೀನನಾಗುವೆ. ಶೂರರಾದವರು ನೀರಿಲ್ಲದ ಮುಗಿಲುಗಳಂತೆ ನಿಷ್ಪ್ರಯೋಜನವಾಗಿ ಕೂಗಾಡುವುದಿಲ್ಲ. ಅವರು ರಣರಂಗದಲ್ಲಿ ಪರಾಕ್ರಮವನ್ನು ಮೆರೆವ ವೀರಗರ್ಜನೆಯನ್ನೇ ಮಾಡುವರು. ಆದುದರಿಂದ ನಾನು ಯುದ್ಧರಂಗದಲ್ಲಿ ನಿಂತು ಯುದ್ಧಮಾಡುವಾಗ ನನ್ನ ಪ್ರಾಗಲ್ಭ್ಯವನ್ನು ನೋಡುವೆಯಂತೆ. ಈಗ ನಾನೇನನ್ನೂ ಹೇಳುವುದಿಲ್ಲ. ಶೂರರಾದವರು ಕನಲಿದಾಗ ತಮ್ಮ ಪರಾಕ್ರಮವನ್ನು ಪ್ರದರ್ಶಿಸದೆ ಸುಮ್ಮನಿರಲಾರರು. ಹಾಗವರು ಸುಮ್ಮನೆ ಕುಳಿತರೆ ಅವರಿಗೆ ಶಾಂತಿಯೇ ಇರುವುದಿಲ್ಲ. ಅವರೆಂದಿಗೂ ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವುದಿಲ್ಲ. ಎಲೈ ರಾಕ್ಷಸೋತ್ತಮನೇ! ಶೂರಶ್ರೇಷ್ಠರು ತಮ್ಮ ಪೌರುಷವನ್ನು ಕೊಚ್ಚಿಕೊಳ್ಳದೆ ರಣರಂಗದಲ್ಲಿ

॥ ೪ ॥ ವಿಕ್ಲಬಾನಾಮಬುದ್ಧೀನಾಂ ರಾಜ್ಞಾ ಪಂಡಿತಮಾನಿನಾಂ । ಶ್ರುಣ್ವತಾ ಸಾದಿತಮಿದಂ ತ್ವದ್ವಿಧಾನಾಂ ಮಹೋದರ ! ॥ ೫ ॥ ಯುದ್ಧೇ ಕಾಪುರುಷೈರ್ನಿತ್ಯಂ ಭವದ್ಭಿಃ ಪ್ರಿಯವಾದಿಭಿಃ । ರಾಜಾನಮನುಗಚ್ಛದ್ಭಿಃ ಕೃತ್ಯಮೇತದ್ಧಿ ಸಾದಿತಂ ॥ ೬ ॥ ರಾಜಶೇಷಾ ಕೃತಾ ಲಂಕಾ ಕ್ಷೀಣಃ ಕೋಶೋ ಬಲಂ ಹತಂ । ರಾಜಾನಮಿದಮಾಸಾದ್ಯ ಸುಹೃಚ್ಚಿಹ್ನಮಮಿತ್ರಕಂ ॥ ೭ ॥ ಏಷ ನಿರ್ಯಾಮ್ಯಹಂ ಯುದ್ಧಮುದ್ಯತಃ ಶತ್ರು

ಯಂತಿಚ-ತನ್ನನ್ನೇ ಶ್ಲಾಘಿಸಿಕೊಳ್ಳುವದಿಲ್ಲ, ಅರ್ದಯಿತ್ವಾ-ಪ್ರಕಾಶವನ್ನು ಮಾಡದೆ, ದುಷ್ಕರಂ-ಮಾಡಲಸಾಧ್ಯವಾದ, ಕರ್ಮ - ಕೆಲಸವನ್ನು, ಕುರ್ವಂತಿ - ಮಾಡುತ್ತಾರೆ. ॥೪॥ ಹೇ ಮಹೋದರ - ಎಲೈ ಮಹೋದರನೇ, ವಿಕ್ಲಬಾನಾಂ-ಭಯಗ್ರಸ್ತರಾದ, ಅಬುದ್ಧಿನಾಂ-ಬುದ್ಧಿಯಿಲ್ಲದ, ಪಂಡಿ....ನಾಂ-ನಾನೇ ಪಂಡಿತನೆಂಬ ಅಭಿಮಾನವುಳ್ಳ, ತ್ವದ್ವಿಧಾನಾಂ - ನಿನ್ನಂಥವರ, (ವಚಃ - ಮಾತನ್ನು), (ಅಥವಾ - ನಿಮ್ಮಂಥಾವರ ದೆಸೆಯಿಂದ), ಶ್ರುಣ್ವತಾ - ಕೇಳುತ್ತಲಿರುವ, ರಾಜ್ಞಾ - ರಾಜನಿಂದ, ಇದಂ - ಇಂಥಾದ್ದು, ಆಸಾದಿತಂ - ಪ್ರಾಪ್ತಿಯು, (ಭವತಿ - ಆಗುವದು). ॥೫॥ ಯುದ್ಧೇ - ಯುದ್ಧದಲ್ಲಿ, ಕಾಪುರುಷೈಃ - ದುಷ್ಟರಾದ, ರಾಜಾ.....ದ್ಭಿಃ - ರಾಜೇಚ್ಛಾನುಸಾರಿಗಳಾದ, ನಿತ್ಯಂ - ಯಾವಾಗಲೂ, ಪ್ರಿಯವಾದಿಭಿಃ-ಇಷ್ಟವಾದ ಮಾತುಗಳನ್ನು ಹೇಳುತ್ತಿರುವ, ಭವದ್ಭಿಃ-ನಿಮ್ಮಗಳಿಂದ, ಏತತ್-ಈ ಪ್ರಾಪ್ತಿಯು, (ಸೀತಾಪಹರಣರೂಪಕಾರ್ಯವು) ಸಾದಿತಂ-ಸಂಪಾದಿಸಲ್ಪಟ್ಟಿತಷ್ಟೆ. ॥ ೬ ॥ ಸುಹೃಚ್ಚಿಹ್ನಂ - ಸ್ನೇಹಿತನೆಂಬ ವ್ಯಪದೇಶವುಳ್ಳ, ಅಮಿತ್ರಕಂ - ಮಿತ್ರನಲ್ಲದಿರುವ, ಇನುಂರಾಜಾನಂ - ಈ ಅರಸನನ್ನು,ಅನುಗಚ್ಛದ್ಭಿಃ-ಅನುಸರಿಸುತ್ತಿರುವ ನಿಮ್ಮಿಂದ,ಲಂಕಾ-ಲಂಕಾಪಟ್ಟಣವು, ರಾಜಶೇಷಾ-ಅರಸುಮಾತ್ರ ಉಳಿದವನಾಗಿ, ಕೃತಾ-ಮಾಡಲ್ಪಟ್ಟಿತು, ಕೋಶಃ-ಬೊಕ್ಕಸವು, ಕ್ಷೀಣಃ-ನಾಶಗೊಂಡಿತು, ಬಲಂ - ಸೈನ್ಯವು, ಹತಂ - ಹೊಡೆಯಲ್ಪಟ್ಟಿತು. ॥ ೭ ॥ ಏಷೋಽಹಂ - ಈ ನಾನು, ಇಹ - ಈಗ, ಆಹವೇ - ಕಾಳೆಗದಲ್ಲಿ, ಭವತಾಂ - ನಿಮ್ಮ, ದುರ್ನಯಂ - ದುರ್ನೀತಿಯನ್ನು, ಅದ್ಯ -

---

ತಮ್ಮ ಅಮಿತ ಪರಾಕ್ರಮ ಪೌರುಷಗಳನ್ನು ದರ್ಪದಿಂದ ಪ್ರದರ್ಶಿಸಿ ಶೋಭಿಸುತ್ತಾರೆ" ಎಂದು ಹೇಳಿ ಮಹೋದರನಿಗಭಿಮುಖವಾಗಿಯೇ ನಿಂತು "ಎಲಾ ಮಹೋದರಾ! ವಿವಶತೆಯನ್ನು ಹೊಂದಿದವರೂ, ಬುದ್ಧಿಹೀನರೂ, ಪಂಡಿತರೆಂದು ತಮ್ಮನ್ನು ತಾವೇ ಹೊಗಳಿಕೊಳ್ಳುವವರೂ ಆದ ನಿನ್ನಂತಹ ನಿಷ್ಪ್ರಯೋಜಕರ ವಾಕ್ಕುಗಳನ್ನು ಕೇಳಿದುದರಿಂದಲೇ ರಾಕ್ಷಸೇಶ್ವರನಾದ ರಾವಣಾಸುರನಿಗಿಂತಹ ವಿಪತ್ತು ಸಂಭವಿಸಿತು. ॥ ೧-೫ ॥ ಎಲವೆಲವೋ ಮಹೋದರನೇ! ಕುತ್ಸಿತರಾಗಿ ಯಾವಾಗಲೂ, ಸವಿನುಡಿಗಳನ್ನೇ ನುಡಿಯುವವರೂ, ಈ ನಮ್ಮ ರಾಕ್ಷಸರಾಜನಾದ ರಾವಣಾಸುರನನ್ನು ಅನುಸರಿಸಿಕೊಂಡಿರುವವರೂ ಆದ ನಿನ್ನಂತಹ ಬುದ್ಧಿಹೀನರಿಂದಲೇ ಈ ವರೆಗೂ ನಮ್ಮ ಮಹಾರಾಜನಿಗೆ ಇಂತಹ ಅಪಜಯವುಂಟಾಗಿರುವುದು. ಮಹೋದರಾ! ಮಹಾರಾಜನಾದ ರಾವಣಾಸುರನನ್ನುಳಿದು ನಮ್ಮ ಲಂಕಾನಗರದ ರಾಕ್ಷಸವೀರರೆಲ್ಲರೂ ಮೃತಿಯೊಂದಿದರು. ಅಪಾರವಾದ ಸೈನ್ಯಸಂಪತ್ತೆಲ್ಲವೂ ನಾಶವಾಗಿಹೋಯಿತು. ಭಂಡಾರವೆಲ್ಲವೂ ಬರಿದಾಗಿಹೋಯಿತು. ನೀವೆಲ್ಲರೂ ಸೇರಿ ನಮ್ಮ ಮಹಾರಾಜನಾದ ರಾವಣಾಸುರನಿಗೆ ಶತ್ರುಗಳು ಮಾಡಬೇಕಾದ ಕಾರ್ಯಗಳೆಲ್ಲವನ್ನೂ ಮಾಡಿಬಿಟ್ಟರಿ. ಅದೆಲ್ಲವೂ ಹಾಗಿರಲಿ. ಇದೋ ನೋಡು. ನಾನು ಶತ್ರುಗಳನ್ನು ಜಯಿಸಲು

ನಿರ್ಜಯೇ । ದುರ್ನಯಂ ಭವತಾಮದ್ಯ ಸಮೀಕರ್ತುಮಿಹಾಹವೇ" ॥ ೮ ॥ ಏವ ಮುಕ್ತೋವತೋ ವಾಕ್ಯಂ ಕುಂಭಕರ್ಣಸ್ಯ ಧೀಮತಃ । ಪ್ರತ್ಯುವಾಚ ತತೋ ವಾಕ್ಯಂ ಪ್ರಹಸನ್ ರಾಕ್ಷಸಾಧಿಪಃ ॥ ೯ ॥ "ಮಹೋದರೋಽಯಂ ರಾಮಾತ್ತು ಪರಿತ್ರಸ್ತೋ ನಸಂಶಯಃ । ನಹಿ ರೋಚಯತೇ ತಾತ! ಯುದ್ಧಂ ಯುದ್ಧವಿಶಾರದ ! ॥ ೧೦ ॥ ಕಶ್ಚಿನ್ಮೇ ತ್ವತ್ಸಮೋ ನಾಸ್ತಿ ಸೌಹೃದೇನ ಬಲೇನಚ । ಗಚ್ಛ ಶತ್ರುವಧಾಯ ತ್ವಂ ಕುಂಭಕರ್ಣ! ಜಯಾಯಚ ॥೧೧॥ ತಸ್ಮಾತ್ತು ಭಯನಾಶಾರ್ಥಂ ಭವಾನ್ ಸಂಬೋಧಿತೋ ಮಯಾ । ಅಯಂಹಿ ಕಾಲಸ್ಸುಹೃದಾಂ ರಾಕ್ಷಸಾನಾಮರಿಂದಮ ! ॥ ೧೨ ॥

ಈಗ, ಸಮೀಕರ್ತುಂ - ಸರಿಮಾಡುವದಕ್ಕೆ, ಶತ್ರುನಿರ್ಜಯೇ - ಶತ್ರುವನ್ನು ಜಯಿಸುವಿ ಯಲ್ಲಿ, ಉದ್ಯತಃ - ಉದ್ಯುಕ್ತನಾಗಿ, ಯುದ್ಧಂ - ಕಾಳಗವನ್ನು ಕುರಿತು, ನಿರ್ಯಾಮಿ - ಹೊರಡು ತ್ತೇನೆ. ॥ ೮ ॥ ಧೀಮತಃ - ಬುದ್ಧಿಶಾಲಿಯಾದ, ಕುಂಭಕರ್ಣಸ್ಯ - ಕುಂಭಕರ್ಣನು, ಏವಂ - ಈ ವಾಕ್ಯಂ - ಮಾತನ್ನು, ಉಕ್ತವತಃ - ಹೇಳುತ್ತಿರಲು, ತತಃ - ಬಳಿಕ, ಪ್ರಹಸನ್ - ನಗುತ್ತ ರಾಕ್ಷಸಾಧಿಪಃ - ರಾವಣನು, ವಾಕ್ಯಂ - ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು ॥ ೯ ॥ ಹೇ ಯುದ್ಧವಿಶಾರದ - ಎಲೈ ಕಾಳೆಗದಲ್ಲಿ ಸಮರ್ಥನೇ, ಹೇ ತಾತ - ಎಲೈ ಅಪ್ಪನೇ ಅಯಂಮಹೋದರಸ್ತು - ಈ ಮಹೋದರನು, ರಾಮಾತ್ತು - ರಾಮನ ದೆಶೆಯಿಂದ, ಪರಿತ್ರಸ್ತಃ - ಭಯಗೊಂಡಿದ್ದಾನೆ, ಯುದ್ಧಂ - ಯುದ್ಧವನ್ನು, ನರೋಚಯತೇಹಿ - ಸಮ್ಮತಿಸುವದಿಲ್ಲವಷ್ಟೆ ॥ ೧೦ ॥ ಹೇ ಕುಂಭಕರ್ಣ - ಎಲೈ ಕುಂಭಕರ್ಣನೇ, ಸೌಹೃದೇನ - ಸ್ನೇಹದಿಂದಲೂ, ಬಲೇನಚ - ಬಲದಿಂದಲೂ, ಮೇ - ನನಗೆ, ಕಶ್ಚಿತ್ - ಯಾವನೂ, ತ್ವತ್ಸಮಃ - ನಿನಗೆ ಸಮಾನನು, ನಾಸ್ತಿ - ಇಲ್ಲವು, ತ್ವಂ - ನೀನು, ಶತ್ರುವಧಾಯ - ಶತ್ರುಸಂಹಾರಕ್ಕೋಸ್ಕರ, ಜಯಾಯಚ - ಜಯಕ್ಕಾ ಗಿಯೂ, ಗಚ್ಛ - ಹೋಗು. ॥೧೧॥ ತಸ್ಮಾತ್ - ಆದಕಾರಣ, ಭಯನಾಶಾರ್ಥಂ - ಭೀತಿ ಪರಿಹಾರ್ಥ ವಾಗಿ, ಭವಾನ್ - ನೀನು, ಮಯಾ - ನನ್ನಿಂದ, ಸಂಬೋಧಿತಃ - ಎಬ್ಬಿಸಲ್ಪಟ್ಟೆ, ಹೇ ಅರಿಂದಮ -

---

ಹೊರಡುವೆನು. ನಾನು ರಣರಂಗಕ್ಕೆ ಹೊರಟು ನೀವೆಲ್ಲರೂ ಮಾಡಿದ ದೋಷಗಳನ್ನು ಸರಿಪಡಿ ಸುವೆನು" ಎಂದು ಹೇಳಿದನು. ॥ ೬–೮ ॥ ಈ ರೀತಿ ನುಡಿಯುತ್ತಿರುವ ಮಹಾ ಬುದ್ಧಿಶಾಲಿ ಯಾದ ಕುಂಭಕರ್ಣನ ಮಾತುಗಳನ್ನು ಕೇಳಿ ರಾಕ್ಷಸಾಧಿಪತಿಯಾದ ರಾವಣಾಸುರನು ನಸು ನಕ್ಕು, "ಅಯ್ಯಾ ರಾಕ್ಷಸೋತ್ತಮನಾದ ಕುಂಭಕರ್ಣನೇ! ಈ ಮಹೋದರನು ರಾಮ ನೊಡನೆ ಯುದ್ಧಮಾಡಲು ಬಹಳವಾಗಿ ಭಯಗೊಂಡಿದ್ದಾನೆ. ಅವನೆಲ್ಲಿ? ಯುದ್ಧವಿಶಾರದ ನಾದ ನೀನೆಲ್ಲಿ ? ನಿನ್ನಂತೆ ರಣಾಂಗಣದಲ್ಲಿ ಎದೆಗುಂದದೆ ಪರಾಕ್ರಮಿಸಿ ಯುದ್ಧ ಮಾಡುವವರಾರು ? ಕುಂಭಕರ್ಣಾ ! ನಿನ್ನ ಸಮಾನನಾದ ಸ್ನೇಹಿತನು ನನಗೆ ಯಾರೂ ಇರುವುದಿಲ್ಲ. ಆದುದರಿಂದ ನನಗೆ ವಿಜಯವನ್ನುಂಟುಮಾಡುವುದಕ್ಕೂ, ನನ್ನ ಶತ್ರುವಾದ ಆ ರಾಮನನ್ನು ವಧಿಸುವುದಕ್ಕೂ, ನೀನೇ ಯೋಗ್ಯನಾದವನು. ಆದುದರಿಂದ ನೀನೀಗಲೇ ಯುದ್ಧಭೂಮಿಗೆ ತೆರಳಿ ನಿನ್ನ ಪರಾಕ್ರಮವನ್ನು ಮೆರೆದು ನನಗೆ ಸಂತೋಷ ವನ್ನುಂಟುಮಾಡುವವನಾಗು. ಕುಂಭಕರ್ಣಾ ! ನೀನು ನನಗೆ ರಾಮನಿಂದುಂಟಾ ಗಿರುವ ಭಯವನ್ನು ಹೋಗಲಾಡಿಸಿ ನನ್ನನ್ನು ಸಂರಕ್ಷಿಸು. ನಾನು ನಿದ್ರಾಸಕ್ತನಾದ

ತದ್ಗಚ್ಛ ಶೂಲಮಾದಾಯ ಪಾಶಹಸ್ತ ಇವಾಂತಕಃ । ವಾನರಾನ್ ರಾಜಪುತ್ರೌ ಚ ಭಕ್ಷ
ಯಾಽದಿತ್ಯತೇಜಸೌ ॥೧೩॥ ಸಮಾಲೋಕ್ಯತು ತೇ ರೂಪಂ ವಿದ್ರವಿಷ್ಯಂತಿ ವಾನರಾಃ ।
ರಾಮಲಕ್ಷ್ಮಣಯೋಶ್ಚಾಪಿ ಹೃದಯೇ ಪ್ರಸ್ಫುಟಿಷ್ಯತಃ" ॥ ೧೪ ॥ ಏವಮುಕ್ತ್ವಾ
ಮಹಾರಾಜಃ ಕುಂಭಕರ್ಣಂ ಮಹಾಬಲಂ । ಪುನರ್ಜಾತಮಿವಾತ್ಮಾನಂ ಮೇನೇ
ರಾಕ್ಷಸಪುಂಗವಃ ॥ ೧೫ ॥ ಕುಂಭಕರ್ಣಬಲಾಭಿಜ್ಞೋ ಜಾನಂಸ್ತಸ್ಯ ಪರಾಕ್ರಮಂ ।
ಬಭೂವ ಮುದಿತೋ ರಾಜಾ ಶಶಾಂಕಇವ ನಿರ್ಮಲಃ ॥ ೧೬ ॥ ಇತ್ಯೇವಮುಕ್ತ

ಎಲೈ ಶತ್ರುಸಂಹಾರಕನೇ, ಅಯಂ - ಇದು, ಸುಹೃದಾಂ - ಸ್ನೇಹಿತರಿಗೂ, ರಾಕ್ಷಸಾನಾಂ - ರಕ್ಕಸರಿಗೂ, ಯುದ್ಧಾಯ - ಕಾಳಗಕ್ಕೆ, ಕಾಲಃ - ಕಾಲವು. ॥ ೧೨ ॥ ತತ್ - ಆ ಕಾರಣದಿಂದ, ಶೂಲಂ - ತ್ರಿಶೂಲವನ್ನು, ಆದಾಯ - ತೆಗೆದುಕೊಂಡು, ಗಚ್ಛ - ಹೋಗು, ಪಾಶಹಸ್ತಃ - ಪಾಶವೇ ಹಸ್ತದಲ್ಲುಳ್ಳ, ಅಂತಕಇವ - ಯಮನಂತೆ, ವಾನರಾ - ಕಪಿಗಳನ್ನು, ಆದಿ....ಸಾ - ಸೂರ್ಯನಂತೆ ತೇಜಸ್ಸುಳ್ಳ, ರಾಜಪುತ್ರೌ - ಅರಸುಮಕ್ಕಳಾದ ರಾಮಲಕ್ಷ್ಮಣರನ್ನು, ಭಕ್ಷಯ - ತಿನ್ನು. ॥ ೧೩ ॥ ತೇ - ನಿನ್ನ, ರೂಪಂ - ಆಕಾರವನ್ನು, ಸಮಾಲೋಕ್ಯತು - ನೋಡುತ್ತಲೇ, ವಾನರಾಃ - ಕೋತಿಗಳು, ವಿದ್ರವಿಷ್ಯಂತಿ - ಓಡಿಹೋಗುವುವು, ರಾಮ....ಯೋಃ - ರಾಮಲಕ್ಷ್ಮಣರ, ಹೃದಯೇಚಾಪಿ - ಎದೆಗಳೂ ಕೂಡ, ಪ್ರಸ್ಫುಟಷ್ಯತಃ - ಒಡೆದುಹೋಗುವುವು. ॥ ೧೪ ॥ ರಾಕ್ಷ.....ವಃ - ರಾಕ್ಷಸಶ್ರೇಷ್ಠನಾದ, ಮಹಾರಾಜಃ - ಮಹಾರಾಜನಾದ ರಾವಣನು, ಮಹಾಬಲಂ - ಬಹಳ ಬಲಶಾಲಿಯಾದ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಆತ್ಮಾನಂ - ತನ್ನನ್ನು, ಪುನರ್ಜಾತಮಿವ - ತಿರುಗಿ ಹುಟ್ಟಿದವನಂತೆ, ಮೇನೇ - ತಿಳಿದುಕೊಂಡನು. ॥ ೧೫ ॥ ಕುಂಭ.....ಜ್ಞಃ - ಕುಂಭಕರ್ಣನ ಬಲವನ್ನು ತಿಳಿದಿರುವ, ತಸ್ಯ - ಆ ಕುಂಭಕರ್ಣನ, ಪರಾಕ್ರಮಂ - ಪರಾಕ್ರಮವನ್ನು, ಜಾನನ್ - ತಿಳಿದವನಾದಕಾರಣ, ರಾಜಾ - ಅರಸಾದ ರಾವಣನು, ನಿರ್ಮಲಃ - ದೋಷರಹಿತನಾದ, ಶಶಾಂಕಇವ - ಚಂದ್ರನಂತೆ, ಸಂತೋಷಗೊಂಡವನು, ಬಭೂವ - ಆದನು. ॥೧೬॥ ಇತ್ಯೇವಂ - ಈ ಪರಿಯಾಗಿ, ಉಕ್ತಃ - ಹೇಳ

ನಿನ್ನನ್ನೆಚ್ಚರಗೊಳಿಸಿದುದೂ ಈ ಕಾರಣದಿಂದಲೇ! ಎಲೈ ಶತ್ರುನಿಷೂದನನೇ! ಈಗ ಮಿತ್ರಧರ್ಮವನ್ನು ಪ್ರಕಟಿಸಲು ತಕ್ಕ ಸಮಯವಾಗಿರುವುದು. ಹಾಗೆ ಆ ಧರ್ಮವನ್ನು ನಿರ್ವಹಿಸುವುದಕ್ಕೆ ನೀನು ಅರ್ಹನೂ ಆಗಿರುವೆ. ಆದುದರಿಂದ ನೀನು ಯಮನಂತೆ ಆಯಸಭೂಯಿಷ್ಠವಾದ ಶೂಲವನ್ನು ಹಿಡಿದು ರಣಾಂಗಣಕ್ಕೆ ತೆರಳುವವನಾಗು. ಸಹೋದರ! ನೀನು ಯುದ್ಧಭೂಮಿಯಲ್ಲಿ ನನ್ನ ಶತ್ರುಗಳೆಲ್ಲರನ್ನೂ ವಧಿಸುವವನಾಗು. ಆ ನನ್ನ ಶತ್ರುಗಳೆಲ್ಲರೂ ಮಹಾ ಶೂರನಾದ ನಿನ್ನನ್ನು ನೋಡಿದೊಡನೆಯೇ ಭಯದಿಂದ ತತ್ತಳಿಸಿಹೋಗಿ ನಲ್ದಿಕ್ಕುಗಳಿಗೂ ಓಡಿಹೋಗುತ್ತಾರೆ. ಇದೂ ಅಲ್ಲದೆ ನಿನ್ನನ್ನು ನೋಡಿದೊಡನೆಯೇ ಆ ರಾಮಲಕ್ಷ್ಮಣರ ಹೃದಯಗಳೂ ಒಡೆದುಹೋಗುವುವು" ಎಂದು ಹೇಳಿದನು. ॥ ೯-೧೪ ॥ ರಾಕ್ಷಸೋತ್ತಮನಾದ ಆ ರಾವಣಾಸುರನು ಈ ರೀತಿ ಮಹಾ ಬಲಾಢ್ಯನಾದ ಕುಂಭಕರ್ಣನೊಡನೆ ನುಡಿದು ತಾನು ಮತ್ತೊಮ್ಮೆ ಹುಟ್ಟಿದಂತಾಯಿತೆಂದು ತಿಳಿದುದು ಮಾತ್ರವಲ್ಲದೆ, ಆ ಕುಂಭಕರ್ಣನ ಬಲಪರಾಕ್ರಮಗಳನ್ನು ಚೆನ್ನಾಗಿ ತಿಳಿದಿದ್ದುದರಿಂದ ತನ್ನ ಮನಸ್ಸಿನಲ್ಲಿದ್ದ ಶಂಕೆಯನ್ನು ತೊರೆದು ಚಂದ್ರನಂತೆ ಕಳಂಕಹೀನನಾದನು. ರಾವಣಾಸುರ

ಸ್ಸಂಹೃಷ್ಟೋ ನಿರ್ಜಗಾಮ ಮಹಾಬಲಃ । ರಾಜ್ಞಸ್ತು ವಚನಂ ಶ್ರುತ್ವಾ ಕುಂಭಕರ್ಣಸ್ಸಮುದ್ಯತಃ ॥ ೧೭ ॥ ಆದದೇ ನಿಶಿತಂ ಶೂಲಂ ವೇಗಾಚ್ಛತ್ರುನಿಬರ್ಹಣಂ । ಸರ್ವಕಾಲಾಯಸಂ ದೀಪ್ತಂ ತಪ್ತಕಾಂಚನಭೂಷಣಂ ॥೧೮॥ ಇಂದ್ರಾಶನಿಸಮಂ ಭೀಮಂ ವಜ್ರಪ್ರತಿಮಗೌರವಂ । ದೇವದಾನವಗಂಧರ್ವಯಕ್ಷಕಿನ್ನರಸೂದನಂ ॥೧೯॥ ರಕ್ತಮಾಲ್ಯಮಹದ್ದಾಮಸ್ವತಶ್ಚೋದ್ಗತಪಾವಕಂ । ಆದಾಯ ನಿಶಿತಂ ಶೂಲಂ ಶತ್ರುಶೋಣಿತರಂಜಿತಂ ॥ ೨೦ ॥ ಕುಂಭಕರ್ಣೋ ಮಹಾತೇಜಾ ರಾವಣಂ ವಾಕ್ಯಮಬ್ರ

ಲ್ಪಟ್ಟ, ಮಹಾಬಲಃ - ಬಹಳ ಬಲಶಾಲಿಯಾದ ಕುಂಭಕರ್ಣನು, ಸಂಹೃಷ್ಟಃ - ಸಂತೋಷಗೊಂಡವನಾಗಿ, ನಿರ್ಜಗಾಮ - ಹೊರಟನು. ॥ ೧೬ ॥ ರಾಜ್ಞಃ - ಅರಸಾದ ರಾವಣನ, ವಾಕ್ಯಂತು - ಮಾತನ್ನಾದರೆ, ಶ್ರುತ್ವಾ - ಕೇಳಿ, ಕುಂಭಕರ್ಣಃ - ಕುಂಭಕರ್ಣನು, ಸಮುತ್ಥಿತಃ - ಯುದ್ಧೋದ್ಯುಕ್ತನಾಗಿ, ನಿಶಿತಂ - ತೀಕ್ಷ್ಣವಾದ, ಶತ್ರು....ಣಂ - ಶತ್ರುಸಂಹಾರಕವಾದ, ಸರ್ವ....ಸಂ- ಸಮಸ್ತವೂ ಕಬ್ಬಿಣದ ವಿಕಾರವಾದ, ದೀಪ್ತಂ - ಹೊಳೆಯುತ್ತಿರುವ, ತಪ್ತ....ಣಂ - ಪುಟಪಾಕಶೋಧಿತವಾದ ಚಿನ್ನದ ಕಟ್ಟುಗಳುಳ್ಳ, ಇಂದ್ರಾ.....ಮಂ - ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ, ಭೀಮಂ - ಭಯಂಕರವಾದ, ವಜ್ರ.....ವಂ - ವಜ್ರದ ಕಲ್ಲಿಗೆ ಸಮಾನವಾದ ಭಾರವುಳ್ಳ, ದೇವ....ನಂ - ದೇವದಾನವ ಯಕ್ಷ ಕಿನ್ನರರನ್ನೂ ಸಂಹರಿಸುತ್ತಿರುವ, ರಕ್ತ......ಮ - ಕೆಂಪು ಹುವ್ವುಗಳ ದೊಡ್ಡ ಸರಗಳ ಕಾಂತಿಯುಳ್ಳ, ಸ್ವತಃ - ತಾನಾಗಿಯೇ, ಉದ್ಗ....ಕಂ - ಹುಟ್ಟುತ್ತಿರುವ ಅಗ್ನಿಜ್ವಾಲೆಗಳುಳ್ಳ, ಶೂಲಂ-ತ್ರಿಶೂಲವನ್ನು, ವೇಗಾತ್-ವೇಗದಿಂದ, ಆದದೇ-ತೆಗೆದುಕೊಂಡನು. ॥ ೧೭-೧೯ ॥ ಮಹಾತೇಜಾಃ - ಬಹಳ ತೇಜೋವಂತನಾದ, ಕುಂಭಕರ್ಣಃ - ಕುಂಭಕರ್ಣನು, ಶತ್ರು....ತಂ - ಶತ್ರುಗಳ ರಕ್ತದಿಂದ ಕೆಂಪಾಗಿ ಮಾಡಲ್ಪಟ್ಟ, ನಿಶಿತಂ - ತೀಕ್ಷ್ಣವಾದ, ಶೂಲಂ - ಶೂಲವನ್ನು, ಆದಾಯ - ತೆಗೆದುಕೊಂಡು, ರಾವಣಂ - ರಾವಣನನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೨೦॥ ಅಹಂ - ನಾನು, ಏಕಾಕೀ - ಒಬ್ಬನೇ, ಗಮಿಷ್ಯಾಮಿ- ಹೋಗುವೆನು, ಮಮ - ನನ್ನ, ಬಲಂ - ಸೈನ್ಯವು, ಇಹ - ಇಲ್ಲಿಯೇ, ತಿಷ್ಠತು - ಇರಲಿ, ಕ್ರುದ್ಧಃ-

ನಿಂತು ನುಡಿಯಲು ಆ ಮಾತುಗಳನ್ನು ಕೇಳಿ ಮಹಾ ಬಲಾಢ್ಯನಾದ ಕುಂಭಕರ್ಣನು ಅತ್ಯಧಿಕ ಸಂತೋಷದಿಂದ ಹೊರಡಲನುವಾಗಿ ಶತ್ರುನಿಗ್ರಹ ಸಮರ್ಥವಾದ ಮಹೋಗ್ರ–ಶೂಲವನ್ನು ಕೈಗೆ ತೆಗೆದುಕೊಂಡನು. ಆ ಶೂಲವಾದರೋ ಸರ್ವ ಕಾಲಾಯಸ ನಿರ್ಮಿತಿಸ್ವರೂಪವಾಗಿ ಮಹೋಗ್ರ ಪ್ರಭೆಯಿಂದ ಪ್ರಜ್ವಲಿಸುತ್ತ ಪುಟಪಾಕಶೋಧಿತವಾದ ಚಿನ್ನದ ಕೆತ್ತನೆಯುಳ್ಳುದಾಗಿ ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾಗಿದ್ದಿತು. ॥೧೫–೧೮॥ ಆ ಶೂಲಾಯುಧವು ದೇವದಾನವಗಂಧರ್ವ ಯಕ್ಷಾದಿಗಳನ್ನು ಸಂಹರಿಸಿರುವುದಾಗಿಯೂ, ರಕ್ತವರ್ಣವಾದ ಮಾಲಿಕೆಗಳಿಂದ ಬೆಳಗುತ್ತಿರುವುದಾಗಿಯೂ, ಪ್ರಜ್ವಲಿಸುತ್ತಿರುವ ಬೆಂಕಿಗೆ ಸಮಾನವಾದುದಾಗಿಯೂ, ಹಗೆಯರ ರಕ್ತದಿಂದ ಕೆಂಪೊಗೆದು ರಂಜಿಸುತ್ತಿರುವುದಾಗಿಯೂ ಇದ್ದಿತು. ಇಂತಹ ಆ ಶೂಲವನ್ನು ಗ್ರಹಿಸಿದ ತರುವಾಯ ಮಹೋತ್ತಮ ತೇಜಸ್ಸಂಪನ್ನವಾದ ಆ ಕುಂಭಕರ್ಣನು ಯುದ್ಧಕ್ಕೆ ಹೊರಡುವವನಾಗಿ ತನ್ನ ಅಣ್ಣನಾದ ರಾವಣಾಸುರನನ್ನು ಕುರಿತು, "ಎಲೈ ರಾಕ್ಷಸರಾಜೋತ್ತಮನೇ! ನಾನೊಬ್ಬನೇ ಇಲ್ಲಿಂದ ಹೊರಟು ಆ ರಾಮನೊಡನೆ ಯುದ್ಧಮಾಡುವೆನು. ನಮ್ಮ ಸೈನ್ಯವೆಲ್ಲವೂ ಇಲ್ಲಿಯೇ ಇರಲಿ. ನಾನು ಮಹಾ

ವೀತ್ । "ಗಮಿಷ್ಯಾಮ್ಯಹಮೇಕಾಕೀ ತಿಷ್ಠತ್ವಿಹ ಬಲಂ ಮಮ ॥೨೧॥ ಅದ್ಯ ತಾನ್ ಕ್ಷುಭಿತಾನ್ ಕ್ರುದ್ಧೋ ಭಕ್ಷಯಿಷ್ಯಾಮಿ ವಾನರಾನ್" । ಕುಂಭಕರ್ಣ ವಚಃಶ್ರುತ್ವಾ ರಾವಣೋ ವಾಕ್ಯಮಬ್ರವೀತ್ ॥ ೨೨ ॥ "ಸೈನ್ಯೈಃ ಪರಿವೃತೋ ಗಚ್ಛ ಶೂಲಮುದ್ಗರ ಪಾಣಿಭಿಃ । ವಾನರಾಹಿ ಮಹಾತ್ಮಾನಃ ಶೀಘ್ರಾಸ್ಸುವ್ಯವಸಾಯಿನಃ ॥೨೩॥ ಏಕಾಕಿನಂ ಪ್ರಮತ್ತಂವಾ ನಯೇಯುರ್ದಶನೈಃ ಕ್ಷಯಂ । ತಸ್ಮಾತ್ಪರಮದುರ್ಧರ್ಷೈಃ ಸೈನ್ಯೈಃ ಪರಿವೃತೋ ವ್ರಜ॥೨೪॥ರಕ್ಷಸಾಮಹಿತಂ ಸರ್ವಂ ಶತ್ರುಪಕ್ಷಂ ನಿಷೂದಯ। ಅಥಾಸನಾತ್ಸಮುತ್ಪತ್ಯಸ್ರಜಂ ಮಣಿಕೃತಾಂತರಾಂ ॥ ೨೫ ॥ ಆಬಬಂಧ ಮಹಾತೇಜಾಃ

ಕೋಪಿಷ್ಠನಾಗಿ, ಅದ್ಯ - ಈಗ, ಕ್ಷುಭಿತಾನ್ - ಕ್ಷೋಭೆಗೊಳಿಸಲ್ಪಟ್ಟ, ತಾನ್‌ವಾನರಾನ್ - ಆ ಕಪಿಗಳನ್ನು, ಭಕ್ಷಯಿಷ್ಯಾಮಿ - ತಿನ್ನುವೆನು. ॥ ೨೧ ॥ ಕುಂಭ....ಚಃ - ಕುಂಭಕರ್ಣನ ಮಾತನ್ನು, ಶ್ರುತ್ವಾ - ಕೇಳಿ, ರಾವಣಃ - ರಾವಣನು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೨೨॥ ಶೂಲ....ಭಿಃ-ಶೂಲಾಯುಧಗಳೂ, ಕಬ್ಬಿಣದ ಕಟ್ಟುಹಾಕಿದ ಕೊಡತಿಗಳೂ ಹಸ್ತದಲ್ಲುಳ್ಳ, ಸೈನ್ಯೈಃ- ಸೈನಿಕರಿಂದ, ಪರಿವೃತಃ - ಸುತ್ತುವರೆಯಲ್ಪಟ್ಟವನಾಗಿ, ಗಚ್ಛ - ಹೋಗು, ಮಹಾತ್ಮನಃ - ಮಹಾ ಶರೀರಗಳುಳ್ಳ, ಶೀಘ್ರಾಃ - ವೇಗವಂತರಾದ, ಸುವ್ಯ....ನಃ - ಬಹಳ ಉದ್ಯೋಗವಂತರಾದ, ವಾನರಾಃ - ಕಪಿಗಳು, ಏಕಾಕಿನಂ - ಒಬ್ಬಂಟಿಗನನ್ನೇ ಆಗಲೀ, ಪ್ರಮತ್ತಂವಾ - ಮೋಸಹೋದವನನ್ನೇ ಆಗಲೀ, ದಶನೈಃ - ಹಲ್ಲುಗಳಿಂದಲೇ, ಕ್ಷಯಂ - ನಾಶವನ್ನು, ನಯೇಯುಃ - ಹೊಂದಿಸುವರು, ತಸ್ಮಾತ್ - ಆ ಕಾರಣದಿಂದ, ಪರ....ರ್ಷೈಃ - ಜಯಿಸಲಸಾಧ್ಯರಾದ, ಸೈನ್ಯೈಃ - ಸೇನಾಜನರಿಂದ, ಪರಿವೃತಃ - ಸುತ್ತುವರೆದವನಾಗಿ, ವ್ರಜ - ಹೋಗು, ರಕ್ಷಸಾಂ - ರಕ್ಕಸರಿಗೆ, ಅಹಿತಂ - ಅಪ್ರಿಯವಾದ, ಸರ್ವಂ - ಸಮಸ್ತವಾದ, ಶತ್ರುಪಕ್ಷಂ - ಶತ್ರುಗಳ ಪಕ್ಷವನ್ನು, ನಿಷೂದಯ - ನಾಶಗೊಳಿಸು. ॥ ೨೩-೨೪ ॥ ಅಥ - ಬಳಿಕ, ಮಹಾತೇಜಾಃ - ಮಹಾ ಪ್ರಭಾವವುಳ್ಳ, ರಾವಣಃ - ರಾವಣನು, ಆಸನಾತ್ - ಸಿಂಹಾಸನದಿಂದ, ಸಮುತ್ಪತ್ಯ - ಮೇಲಕ್ಕೆದ್ದು, ಮಣಿ....ರಾಂ - ರತ್ನಗಳಿಂದ ಮಾಡಲ್ಪಟ್ಟ ಮಧ್ಯಪ್ರದೇಶವುಳ್ಳ, ಸ್ರಜಂ - ಹಾರವನ್ನು, ಆಬಬಂಧ - ಕಟ್ಟಿದನು. ॥೨೫॥ ಮಹಾತ್ಮನಃ - ಮಹಾ ಶರೀರವುಳ್ಳ ಕುಂಭಕರ್ಣನಿಗೆ, ಅಂಗದಾನಿ - ತೋಳ್ಬಂದಿಗಳನ್ನು,

---

ಬಲಾಢ್ಯರಾದ ಆ ವಾನರರೆಲ್ಲರನ್ನೂ ಭಕ್ಷಿಸಿಬಿಡುವೆನು" ಎಂದನು. ॥ ೧೯–೨೧ ॥ ಈ ರೀತಿ ನುಡಿದ ಕುಂಭಕರ್ಣನ ಮಾತುಗಳನ್ನು ಕೇಳಿ ರಾವಣಾಸುರನು, "ಎಲೈ ಕುಂಭಕರ್ಣನೇ! ನೀನೊಬ್ಬನೇ ಹೋಗುವುದು ಅಷ್ಟು ಉಚಿತವಾಗಿ ತೋರುವುದಿಲ್ಲ. ವಾನರರೇನು ಸಾಮಾನ್ಯರಲ್ಲ. ಅವರು ಒಬ್ಬಂಟಿಗನಾಗಿ ಬಂದು ರಣಾಂಗಣದಲ್ಲಿ ಮೈಮರೆತಿರುವವನನ್ನು ಹಲ್ಲುಗಳಿಂದಲೂ ಉಗುರುಗಳಿಂದಲೂ ಕಡಿದು ನಾಶಗೊಳಿಸುವರು. ಆದುದರಿಂದ ಶೂಲಮುದ್ಗರಾದ್ಯಾಯುಧಗಳಿಂದ ಕೂಡಿದ ಯೋಧರ ಸೇನೆಯೊಡಗೂಡಿಯೇ ಹೊರಡು. ಎಲೈ ಸಹೋದರನಾದ ಕುಂಭಕರ್ಣನೇ! ನೀನು ರಣಾಂಗಣದಲ್ಲಿ ನಿನ್ನ ಪರಾಕ್ರಮವನ್ನು ತೋರಿ ಶತ್ರುಗಳೆಲ್ಲವನ್ನೂ ಜಯಿಸುವವನಾಗು" ಎಂದು ಹೇಳಿದನು. ಮಹಾ ತೇಜಸ್ವಿಯಾದ ರಾವಣಾಸುರನೀರೀತಿ ನುಡಿದು ಸಿಂಹಾಸನದಿಂದ ದಿಗ್ಗನೆದ್ದು ಮಹಾ ಮಣಿಗಳಿಂದ ಪೋಣಿಸಿದ ಪುಷ್ಪಮಾಲಿಕೆಗಳಿಂದಲಂಕೃತವಾದ ಅಮೂಲ್ಯ ಹಾರಗಳನ್ನು ಆ ಕುಂಭಕರ್ಣನ ಕೊರಳಿಗೆ ಹಾಕಿದನು. ಮತ್ತೆ ಕೆಲವು ಪುಷ್ಪಹಾರಗಳನ್ನು ಆ ಕುಂಭಕರ್ಣನ ಶಿರಸ್ಸಿನಲ್ಲಿಟ್ಟು

ಕುಂಭಕರ್ಣಸ್ಯ ರಾವಣಃ । ಅಂಗದಾನ್ಯಂಗುಳೀವೇಷ್ಟಾನ್ವರಾಣ್ಯಾಭರಣಾನಿಚ ||೨೬||
ಹಾರಂಚ ಶಶಿಸಂಕಾಶಮಾಬಬಂಧಮಹಾತ್ಮನಃ । ದಿವ್ಯಾನಿಚ ಸುಗಂಧೀನಿ ಮಾಲ್ಯದಾ
ಮಾನಿರಾವಣಃ ||೨೭|| ಶ್ರೋತ್ರೇಚಾಸಂಜಯಾಮಾಸ ಶ್ರೀಮತೀಚಾಸ್ಯ ಕುಂಡಲೇ ।
ಕಾಂಚನಾಂಗದಕೇಯೂರೋ ನಿಷ್ಕಾಭರಣ ಭೂಷಿತಃ || ೨೮ || ಕುಂಭಕರ್ಣೋ
ಬೃಹತ್ಕರ್ಣಸ್ಸುಹುತೋಗ್ನಿರಿವಾಬಭೌ । ಶ್ರೋಣಿಸೂತ್ರೇಣ ಮಹತಾ ಮೇಚಕೇನ
ವ್ಯರಾಜತ ಅಮೃತೋತ್ಪಾದನೇ ನದ್ಧೋ ಭುಜಂಗೇನೇವ ಮಂದರಃ || ೨೯ || ಸ
ಕಾಂಚನಂ ಭಾರಸಹಂ ನಿವಾತಂ ವಿದ್ಯುತ್ಪ್ರಭಂದೀಪ್ತಮಿವಾತ್ಮಭಾಸಾ । ಆಬಧ್ಯಮಾನಃ

ಅಂಗುಳೀವೇಷ್ಟಾ-ಉಂಗುರಂಗಳನ್ನೂ, ವರಾಣಿ-ಶ್ರೇಷ್ಠಗಳಾದ, ಆಭರಣಾನಿಚ-ಒಡವೆಗಳನ್ನೂ, ಶಶಿಸಂಕಾಶಂ - ಚಂದ್ರನಿಗೆ ಸಮಾನವಾದ ಕಾಂತಿಯುಳ್ಳ, ಹಾರಂಚ - ಕಂಠೀಸರವನ್ನು, ಆಬಬಂದ-ಕಟ್ಟಿದನು. ||೨೬|| ರಾವಣಃ - ರಾವಣನು, ಅಸ್ಯ - ಈ ಕುಂಭಕರ್ಣನಿಗೆ, ದಿವ್ಯಾನಿ - ಮನೋಹರಗಳಾದ, ಸುಗಂಧೀನಿ - ಒಳ್ಳೆಯ ವಾಸನೆಯುಳ್ಳ, ಮಾಲ್ಯದಾಮಾನಿ - ಹುವ್ವಿನ ಹಾರಗಳನ್ನು, ಶ್ರೋತ್ರೇಚ - ಕಿವಿಗಳಲ್ಲಿಯೂ, ಶ್ರೀಮತೀ - ಕಾಂತಿಯುಕ್ತಗಳಾದ, ಕುಂಡಲೇ - ಕರ್ಣಾಭರಣಗಳನ್ನು, ಆಸಂಜಯಾಮಾಸ - ತೊಡಸಿದನು. || ೨೭ || ಬೃಹತ್ಕರ್ಣಃ - ದೊಡ್ಡ ಕಿವಿಗಳುಳ್ಳ, ಕುಂಭಕರ್ಣಃ - ಕುಂಭಕರ್ಣನು, ಕಾಂಚ....ರಃ - ಚಿನ್ನದ ತೋಳ್ಬಳೆಗಳೂ ಉಳ್ಳವನಾಗಿ, ನಿಷ್ಕಾ....ತಃ - ಕಂಠಾಭರಣದಿಂದಲಂಕೃತನಾಗಿ, ಸುಹುತಃ - ಚನ್ನಾಗಿ ಜ್ವಾಲೆಯೆಬ್ಬಿಸಿದ, ಅಗ್ನಿರಿವ - ಅಗ್ನಿಯಂತೆ, ಆಬಭೌ - ಹೊಳೆಯುತ್ತಿದ್ದನು. || ೨೮ || ಮಹತಾ - ದೊಡ್ಡದಾದ, ಮೇಚಕೇನ - ಕಪ್ಪುಬಣ್ಣವುಳ್ಳ, ಶ್ರೋಣಿಸೂತ್ರೇಣ - ಉಡುದಾರದಿಂದ, ಅಮೃತೋತ್ಪಾದನೇ - ಅಮೃತಮಥನ ಕಾಲದಲ್ಲಿ, ಭುಜಂಗೇಣ - ಆದಿಶೇಷನಿಂದ, ನದ್ಧಃ - ಕಟ್ಟಲ್ಪಟ್ಟ, ಮಂದರಇವ - ಮಂದರಪರ್ವತದಂತೆ, ವ್ಯರಾಜತ - ಹೊಳೆಯುತ್ತಿದ್ದನು. || ೨೯ || ಸಃ - ಕುಂಭಕರ್ಣನು, ಕಾಂಚನಂ - ಚಿನ್ನದ ವಿಕಾರವಾದ, ಭಾರಸಹಂ - ಆಯುಧಭಾರವನ್ನು ಸಹಿಸುತ್ತಿರುವ, ನಿವಾತಂ - ಛಿದ್ರವಿಲ್ಲದಿರುವ, (ಗೋ) ಗಾಳಿಯನ್ನು ತಡೆಮಾಡುತ್ತಿರುವ, ವಿದ್ಯುತ್ಪ್ರಭಂ - ಮಿಂಚಿನ ಪ್ರಕಾಶದಂತೆ, ಆತ್ಮಭಾಸಾ-ತನ್ನ ಶರೀರಕಾಂತಿಯಿಂದ, ದೀಪ್ತಮಿವ-ಉರಿಯುತ್ತದೆಯೋ

ಅಲಂಕರಿಸಿದನು. ಇದೂ ಅಲ್ಲದೆ ಬಹು ಮನೋಹರವಾದ ಬಾಹುಜಿಗೆಗಳಿಂದಲೂ, ರತ್ನಖಚಿತವಾದ ಅಂಗುಳೀಯಕಗಳಿಂದಲೂ, ಇತರ ಮಹಾರ್ಘಾಭರಣಗಳಿಂದಲೂ ಆ ಕುಂಭಕರ್ಣನನ್ನಲಂಕರಿಸಿದನು. ಸುಗಂಧರಸಭರಿತವಾದ ಪುಷ್ಪಮಾಲಿಕೆಗಳಿಂದ ಅವನನ್ನು ಮತ್ತಷ್ಟು ಶೋಭಾಯಮಾನನನ್ನಾಗಿ ಮಾಡಿದನು. ಇದಾದ ತರುವಾಯ ಆ ರಾವಣಾಸುರನು ತಮ್ಮನಾದ ಕುಂಭಕರ್ಣನ ಕರ್ಣಗಳಿಗೆ ಪ್ರಜ್ವಲಿಸುತ್ತಿರುವ ರತ್ನಖಚಿತ ಕರ್ಣಪೂರಗಳನ್ನಿಟ್ಟು ಶೃಂಗರಿಸಿದನು. ಆ ಸಮಯದಲ್ಲಿ ಬಹು ದೊಡ್ಡ ಕಿವಿಗಳುಳ್ಳ ಆ ಕುಂಭಕರ್ಣನು ಸ್ವರ್ಣಾಂಗದಗಳಿಂದ ವಿಭೂಷಿತನೂ, ವಿವಿಧಾಭರಣ ಪರಿಶೋಭಿತನೂ ಆಗಿ ಚೆನ್ನಾಗಿ ಹುತವಾದ ಅಗ್ನಿಯಂತೆ ಪ್ರಕಾಶಿಸುತ್ತಿದ್ದನು. || ೨೭–೨೮ || ಬಳಿಕ ಆ ಕುಂಭಕರ್ಣನು ಶ್ರೋಣಿಸೂತ್ರವನ್ನು ಧರಿಸಿ, ಸಮುದ್ರಮಥನ ಕಾಲದಲ್ಲಿ ವಾಸುಕಿ ಪರಿವೇಷ್ಟಿತವಾದ ಮಂದರಾಚಲದಂತೆ ಶೋಭಿಸಿದನು. ಸ್ವರ್ಣಖಚಿತವಾಗಿ ವಿವಿಧ ಶಸ್ತ್ರಗಳ ಭಾರವನ್ನು ಹೊರಲು ಸಮರ್ಥವಾಗಿ ಗಾಳಿಯು ತೂರುವುದಕ್ಕೂ ಆಸ್ಪದವಿಲ್ಲದೆ, ಮಿಂಚಿನ

ಕವಚಂ ರರಾಜ ಸಂಧ್ಯಾಭ್ರಸಂವೀತ ಇವಾದ್ರಿರಾಜಃ ॥೩೦॥ ಸರ್ವಾಭರಣ ಸರ್ವಾಂಗ ಶ್ಶೂಲಪಾಣಿಸ್ಸರಾಕ್ಷಸಃ । ತ್ರಿವಿಕ್ರಮಕೃತೋತ್ಸಾಹೋ ನಾರಾಯಣ ಇವಾಬಭೌ ॥೩೧॥ ಭ್ರಾತರಂ ಸಂಪರಿಷ್ವಜ್ಯ ಕೃತ್ವಾಚಾಭಿಪ್ರದಕ್ಷಿಣಂ । ಪ್ರಣಮ್ಯ ಶಿರಸಾ ತಸ್ಮೈ ಸಂಪ್ರತಸ್ಥೇ ಮಹಾಬಲಃ ॥೩೨॥ ನಿಷ್ಪತಂತಂ ಮಹಾಕಾಯಂ ಮಹಾನಾದಂ ಮಹಾಬಲಂ । ತಮಾಶೀರ್ಭಿಃ ಪ್ರಶಸ್ತಾಭಿಃ ಪ್ರೇಷಯಾಮಾಸ ರಾವಣಃ ॥ ೩೩ ॥ ಶಂಖದುಂದುಭಿ ನಿರ್ಘೋಷೈ ಸ್ಸೈನ್ಯೈಶ್ಚಾಪಿ ವರಾಯುಧೈಃ । ತಂ ಗಜೈಶ್ಚ ತುರಂಗೈಶ್ಚ ಸ್ಯಂದನೈ

ಎಂಬಂತಿರುವ, ಕವಚಂ - ಕವಚವನ್ನು, ಆಬಧ್ಯಮಾನಃ - ಕಟ್ಟಲ್ಪಟ್ಟವನಾಗಿ, ಸಂಧ್ಯಾ.....ತಃ - ಸಂಧ್ಯಾಕಾಲದ ಮೇಘದಿಂದ ಸುತ್ತುವರೆದ, ಅದ್ರಿರಾಜ ಇವ - ಹಿಮವತ್ಪರ್ವತದಂತೆ, ರರಾಜ - ಹೊಳೆಯುತ್ತಿದ್ದನು. ॥೩೦॥ ಸರ್ವಾ....ಗಃ - ಸಮಸ್ತಾಭರಣಗಳೂ, ಸಮಸ್ತಾವಯವಗಳಲ್ಲಿಯೂ ಉಳ್ಳ, ಶೂಲಪಾಣಿಃ - ಶೂಲಪಾಣಿಯಾದ, ಸರಾಕ್ಷಸಃ - ಆ ಕುಂಭಕರ್ಣನು, ತ್ರಿವಿ....ಹಃ - ತ್ರಿವಿಕ್ರಮಾವತಾರದಲ್ಲಿ ಮಾಡಲ್ಪಟ್ಟ ಉತ್ಸಾಹವುಳ್ಳ, ನಾರಾಯಣ ಇವ-ಶ್ರೀ ಮಹಾ ವಿಷ್ಣುವಿನಂತೆ, ಆಬಭೌ-ಹೊಳೆಯುತ್ತಿದ್ದನು. ॥ ೩೧ ॥ ಮಹಾಬಲಃ - ಬಹಳ ಬಲಶಾಲಿಯಾದ ಕುಂಭಕರ್ಣನು, ಭ್ರಾತರಂ - ಅಣ್ಣನಾದ ರಾವಣನನ್ನು, ಸಂಪರಿಷ್ವಜ್ಯ - ಅಪ್ಪಿಕೊಂಡು, ಅಭಿಪ್ರದಕ್ಷಿಣಂ - ಸುತ್ತಲೂ ಪ್ರದಕ್ಷಿಣವನ್ನು, ಕೃತ್ವಾ - ಮಾಡಿ, ತಸ್ಮೈ - ಆ ರಾವಣನಿಗೆ, ಶಿರಸಾ - ಮಂಡೆಯಿಂದ, ಪ್ರಣಮ್ಯ - ನಮಸ್ಕರಿಸಿ, ಸಂಪ್ರತಸ್ಥೇ - ಹೊರಟನು. ॥೩೨॥ ರಾವಣಃ - ರಾವಣನು, ನಿಷ್ಪತಂತಂ - ಹೊರಟು ಹೋಗುತ್ತಿರುವ, ಮಹಾಕಾಯಂ - ಮಹಾ ಶರೀರವುಳ್ಳ, ಮಹಾನಾದಂ - ದೊಡ್ಡ ಧ್ವನಿಯುಳ್ಳ, ಮಹಾಬಲಂ - ಮಹಾ ತ್ರಾಣೆಯುಳ್ಳ, ತಂ - ಆ ಕುಂಭಕರ್ಣನನ್ನು, ಪ್ರಶಸ್ತಾಭಿಃ - ಉತ್ತಮವಾದ, ಆಶೀರ್ಭಿಃ - ಆಶೀರ್ವಾದಗಳಿಂದ, ಪ್ರೇಷಯಾಮಾಸ - ಕಳುಹಿಸಿದನು. ॥ ೩೩ ॥ ರಥಿನಃ - ಮಹಾರಥಿಕರು, ಶಂಖ....ಷೈಃ - ಶಂಖಧ್ವನಿಗಳಿಂದಲೂ, ವರಾಯುಧೈಃ - ಶ್ರೇಷ್ಠವಾದ ಆಯುಧಗಳುಳ್ಳ, ಸೈನ್ಯೈಶ್ಚ - ಸೇನಾಜನರಿಂದಲೂ, ಗಜೈಶ್ಚ - ಆನೆಗಳಿಂದಲೂ, ತುರಂಗೈಶ್ಚ - ಕುದುರೆಗಳಿಂದಲೂ, ಅಂಬುದಸ್ವನೈಃ-ಮೇಘಧ್ವನಿಗಳಂತೆ ಧ್ವನಿಗಳುಳ್ಳ, ಸ್ಯಂದನೈಶ್ಚ-ರಥಗಳಿಂದಲೂ, ಮಹಾತ್ಮಾನಂ-

---

ಬಳ್ಳಿಯ ಕಾಂತಿಯೊಡಗೂಡಿ, ತನ್ನ ದೇಹಕಾಂತಿಯಿಂದಲೂ ಪ್ರಕಾಶಿಸುತ್ತಿರುವ ಉತ್ತಮೋತ್ತಮವಾದ ಕವಚವನ್ನು ಧರಿಸಿ ಸಂಧ್ಯಾಕಾಲದಲ್ಲಿ ಮೇಘವ್ಯಾಪ್ತವಾಗಿ ರಂಜಿಸುವ ಪರ್ವತದಂತಿದ್ದ ಆ ಕುಂಭಕರ್ಣನು ನೋಡಲು ಬಹು ಭಯಂಕರನಾಗಿದ್ದನು. ಇಷ್ಟೆಯಲ್ಲದೆ ಆ ಸಮಯದಲ್ಲಿ ಸರ್ವಾಭರಣಭೂಷಿತನಾಗಿ ಸರ್ವಾವಯವಗಳುಳ್ಳವನೂ, ಶೂಲಾಯುಧವನ್ನು ಕೈಯಲ್ಲಿ ಹಿಡಿದಿರುವವನೂ ಆದ ಆ ಕುಂಭಕರ್ಣನು ತ್ರಿವಿಕ್ರಮಾವತಾರದಲ್ಲಿ ವಿಶ್ವರೂಪವನ್ನು ಧರಿಸಿದ ನಾರಾಯಣನಂತೊಪ್ಪುತ್ತಿದ್ದನು. ಆ ಕುಂಭಕರ್ಣನು ಯುದ್ಧಸನ್ನದ್ಧನಾಗಿ ಅಣ್ಣನಾದ ರಾವಣಾಸುರನಿಗೆ ವೀರಾಲಂಗನವನ್ನಿತ್ತು ಆ ತರುವಾಯ ಅವನಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿ ಪ್ರಯಾಣಮಾಡಿದನು. ಆಗ ರಾವಣಾಸುರನು ಯುದ್ಧಕ್ಕಾಗಿ ಪ್ರಯಾಣಮಾಡುತ್ತಿರುವ, ಮಹಾಕಾಯನೂ, ಮೇಘಧ್ವನಿಯಂತೆ ಭಯಂಕರವಾದ ಧ್ವನಿಯನ್ನು ಮಾಡುತ್ತಿರುವವನೂ, ಮಹಾ ಬಲಾಢ್ಯನೂ ಆದ ಆ ಕುಂಭಕರ್ಣನನ್ನು ಪ್ರಶಸ್ತವಾದ ಆಶಿಷಗಳಿಂದ ಹರಿಸಿ ಕಳುಹಿಸಿದನು. ಆ ಸಮಯದಲ್ಲಿ ರಾಕ್ಷಸಯೋಧರು ಶಂಖದುಂದುಭಿಗಳೇ ಮೊದಲಾದ ವಿವಿಧ ವಾದ್ಯಗಳನ್ನು ಮೊಳಗಿಸಿದರು. ಆಗ ಶ್ರೇಷ್ಠವಾದ

ಶ್ಯಾಂಬುದನಿಸ್ವನೈಃ। ಅನುಜಗ್ಮುರ್ಮಹಾತ್ಮಾನಂ ರಥಿನೋ ರಥಿನಾಂ ವರಂ ॥೩೪-೩೫॥ ಸರ್ಪೈ ರುಷ್ಟ್ರೈಃ ಖರೈರಶ್ವೈಸ್ಸಿಂಹದ್ವಿಪಮೃಗದ್ವಿಜೈಃ । ಅನುಜಗ್ಮುಶ್ಚ ತಂ ಘೋರಂ ಕುಂಭಕರ್ಣಂ ಮಹಾಬಲಂ ॥ ೩೬ ॥ ಸಪುಷ್ಪವರ್ಷೈ ರವಕೀರ್ಯಮಾಣೋ ಧೃತಾತಪತ್ರಶ್ಶಿತಶೂಲಪಾಣಿಃ । ಮದೋತ್ಕಟಃ ಶೋಣಿತಗಂಧಮತ್ತೋ ವಿನಿರ್ಯಯೌ ದಾನವದೇವಶತ್ರುಃ ॥ ೩೭ ॥ ಪದಾತಯಶ್ಚ ಬಹವೋ ಮಹಾನಾದಾ ಮಹಾಬಲಾಃ। ಅನ್ವಯುೂ ರಾಕ್ಷಸಾ ಭೀಮಾ ಭೀಮಾಕ್ಷಾಃ ಶಸ್ತ್ರಪಾಣಯಃ ॥ ೩೮ ॥ ರಕ್ತಾಕ್ಷಾಸ್ಸು

ಮಹಾ ಪ್ರಭಾವವಂತನಾದ, ರಥಿನಾಂ - ರಥಿಕರಲ್ಲಿ, ವರಂ - ಶ್ರೇಷ್ಠನಾದ, ಕುಂಭಕರ್ಣಂ - ಕುಂಭಕರ್ಣನನ್ನು, ಅನುಜಗ್ಮುಃ - ಅನುಸರಿಸಿ ಹೊರಟರು. ॥ ೩೪-೩೫ ॥ ಸರ್ಪೈಃ - ಹಾವುಗಳಿಂದಲೂ, ಉಷ್ಟ್ರೈಃ - ಒಂಟೆಗಳಿಂದಲೂ, ಖರೈಃ - ಕತ್ತೆಗಳಿಂದಲೂ, ಅಶ್ವೈಃ - ಕುದುರೆಗಳಿಂದಲೂ, ಸಿಂಹ....ಜೈಃ - ಸಿಂಹ, ಆನೆ, ಪಕ್ಷಿಗಳಿಂದಲೂ, ಮಹಾಬಲಂ - ಬಹಳ ಬಲಶಾಲಿಯಾದ, ಘೋರಂ - ಭಯಂಕರನಾದ, ತಂಕುಂಭಕರ್ಣಂ - ಆ ಕುಂಭಕರ್ಣನನ್ನು, ಅನುಜಗ್ಮುಃ - ಅನುಸರಿಸಿ ತೆರಳಿದರು. ॥ ೩೬ ॥ ದಾನ....ತ್ರುಃ - ದಾನವರಿಗೂ, ದೇವತೆಗಳಿಗೂ ಶತ್ರುವಾದ, ಶೋಣಿ....ತ್ತಃ - ರಕ್ತಗಂಧದಿಂದಲೂ ಮದವೇರಿದ, ಮದೋತ್ಕಟಃ - ಸ್ವಾಭಾವಿಕ ಮದದಿಂದಲೇ ಉದ್ಧತನಾದ, ಶಿತಶೂಲಪಾಣಿಃ - ತೀಕ್ಷ್ಣವಾದ ತ್ರಿಶೂಲವೇ ಹಸ್ತದಲ್ಲುಳ್ಳ, ಸಃ - ಆ ಕುಂಭಕರ್ಣನು, ಧೃತಾತಪತ್ರಃ - ಧರಿಸಲ್ಪಟ್ಟ ಶ್ವೇತಚ್ಛತ್ರವುಳ್ಳವನಾಗಿ, ಪುಷ್ಪವರ್ಷೈಃ - ಪೂಮಳೆಗಳಿಂದ - ಅವಕೀರ್ಯಮಾಣಃ - ಎರಚಲ್ಪಟ್ಟವನಾಗಿ, ವಿನಿರ್ಯಯೌ - ಹೊರಟುಬಂದನು. ॥೩೭॥ ಮಹಾಬಲಾಃ - ಬಹಳ ಬಲವಂತರಾದ, ಮಹಾನಾದಾಃ - ಮಹಾ ಧ್ವನಿಗಳುಳ್ಳ, ಬಹವಃ - ಅನೇಕರಾದ, ಪದಾತಯಶ್ಚ - ಪಾದಚಾರಿಗಳಾದ, ಭೀಮಾಃ - ಭಯಂಕರ ನೇತ್ರಗಳುಳ್ಳ, ರಾಕ್ಷಸಾಃ-ರಕ್ಕಸರು, ಶಸ್ತ್ರಪಾಣಯಃ - ಆಯುಧಪಾಣಿಗಳಾಗಿ, ಅನ್ವಯುಃ - ಅನುಸರಿಸಿ ಬಂದರು, ರಕ್ತಾಕ್ಷಾಃ-ಕೆಂಗಣ್ಣುಗಳುಳ್ಳ, ಸುಮಹಾಕಾಯಾಃ - ಬಹಳ ದೃಢವಾದ ಶರೀರಗಳುಳ್ಳ, ನೀಲಾ....ಮಾಃ -

ಆಯುಧಗಳನ್ನು ಧರಿಸಿರುವ ಯೋಧರೊಡಗೂಡಿದ ಸೇನೆಯೊಡನೆಯೂ, ಗಜತುರಗಗಳಿಂದಲೂ, ಮೇಘಧ್ವನಿಗೆ ಸಮಾನ ಧ್ವನಿಯುಳ್ಳ ರಥಗಳಿಂದಲೂ ಕೂಡಿ ಆ ಕುಂಭಕರ್ಣನು ಯುದ್ಧಭೂಮಿಗೆ ಹೊರಟನು. ॥ ೨೪—೩೫ ॥ ಆ ಕುಂಭಕರ್ಣನನ್ನು ಅನುಸರಿಸಿ ಹೊರಟ ಸೈನಿಕರಾದರೋ ಸರ್ಪಗಳಿಂದಲೂ, ಒಂಟೆಗಳಿಂದಲೂ, ಹೇಸರಕತ್ತೆಗಳಿಂದಲೂ, ಕುದುರೆಗಳಿಂದಲೂ, ಸಿಂಹಗಳಿಂದಲೂ, ಆನೆಗಳಿಂದಲೂ, ಇನ್ನೂ ಇತರ ಮೃಗಪಕ್ಷಿಗಳಿಂದಲೂ ಕೂಡಿದವರಾಗಿ ಪಟಾಟೋಪದಿಂದ ಹೊರಟರು. ಆ ಸಮಯದಲ್ಲಿ ದೇವತೆಗಳಿಗೂ, ದಾನವರಿಗೂ ಶತ್ರುವಾದ ಆ ಕುಂಭಕರ್ಣನು ಪುಷ್ಪವೃಷ್ಟಿಯಿಂದ ವ್ಯಾಪ್ತವಾದ ಶರೀರವುಳ್ಳವನಾಗಿ ಛತ್ರವನ್ನು ಧರಿಸಿ ಬಹು ತೀಕ್ಷ್ಣವಾದ ಶೂಲಾಯುಧವನ್ನು ಕೈಯಲ್ಲಿ ಹಿಡಿದು ಮದ್ಯಪಾನದಿಂದ ಮತ್ತನಾಗಿ ಆಲುತ್ತಲೂ, ರಕ್ತಚಂದನಲೇಪನದಿಂದಶೋಭಿಸುತ್ತಲೂ ಪ್ರಯಾಣಮಾಡಿದನು. ಅದೇ ಸಮಯದಲ್ಲಿಯೇ ಅತ್ಯುಗ್ರವಾದ ಸಿಂಹನಾದಗಳನ್ನು ಮಾಡುವವರೂ, ಮಹಾಬಲಾಢ್ಯರೂ, ಭಯಂಕರಾಕಾರರೂ, ಮಹೋಗ್ರವಾದ ಕಣ್ಣುಗಳುಳ್ಳವರೂ ವಿವಿಧಾಸ್ತ್ರಗಳನ್ನು ಧರಿಸಿರುವವರೂ ಆದ ಆ ಕುಂಭಕರ್ಣನನ್ನು ಹಿಂಬಾಲಿಸಿದರು. ಆ ರಾಕ್ಷಸವೀರರು ಕೆಂಪಾದ ಕಣ್ಣುಗಳುಳ್ಳವರೂ, ಮಹಾಕಾಯರೂ, ಕಾಡಿಗೆಯ ಬೆಟ್ಟಕ್ಕೆ ಸಮಾನವಾದ

ಮಹಾಕಾಯಾ ನೀಲಾಂಜನಚಯೋಪಮಾಃ । ಶೂಲಾನುದ್ಯಮ್ಯ ಖಡ್ಗಾಂಶ್ಚ ನಿಶಿತಾಂಶ್ಚ ಪರಶ್ವಧಾನ್ ॥ ೩೯ ॥ ಬಹುವ್ಯಾಮಾಂಶ್ಚ ಪರಿಘಾನ್ ಗದಾಶ್ಚ ಮುಸಲಾನಿಚ । ತಾಲಸ್ಕಂಧಾಂಶ್ಚ ವಿಪುಲಾನ್ ಕ್ಷೇಪಣೀಯಾನ್ ದುರಾಸದಾನ್ ॥೪೦॥ ಅಥಾನ್ಯದ್ವಪುರಾದಾಯ ದಾರುಣಂ ರೋಮಹರ್ಷಣಂ । ನಿಷ್ಪಪಾತ ಮಹಾತೇಜಾಃ ಕುಂಭಕರ್ಣೋ ಮಹಾಬಲಃ ॥ ೪೧ ॥ ಧನುಶ್ಶತಪರೀಣಾಹಸ್ಸಷಟ್ಛತಸಮುಚ್ಛ್ರಿತಃ । ರೌದ್ರಃ ಶಕಟಚಕ್ರಾಕ್ಷೋ ಮಹಾಪರ್ವತಸನ್ನಿಭಃ ॥ ೪೨ ॥ ಸನ್ನಿಪತ್ಯ ಚ ರಾಕ್ಷಾಂಸಿ ದಗ್ಧಶೈಲೋಪಮೋ ಮಹಾನ್ । ಕುಂಭಕರ್ಣೋ ಮಹಾವಕ್ತ್ರಃ ಪ್ರಹಸನ್ನಿದಮಬ್ರವೀತ್ ॥೪೩॥

ಕಪ್ಪಾದ ಕಾಡಿಗೆಯ ರಾಶಿಗೆ ಸಮಾನರಾದ ರಕ್ಕಸರು, ಶೂಲಾನ್ - ಶೂಲಾಯುಧಗಳನ್ನು, ನಿಶಿತಾನ್ - ತೀಕ್ಷ್ಣಗಳಾದ, ಖಡ್ಗಾಂಶ್ಚ - ಖಡ್ಗಗಳನ್ನೂ, ಪರಶ್ವಧಾನ್ - ಗೊಡ್ಲಿಗಳನ್ನೂ, ಬಹುವ್ಯಾಮಾನ್ - ಬಹಳ ದೀರ್ಘಗಳಾದ, ಪರಿಘಾನ್ - ಕಬ್ಬಿಣದ ಕಟ್ಟುಹಾಕಿದ ದೊಣ್ಣೆಗಳನ್ನೂ, ಗದಾಶ್ಚ - ಗದಾಯುಧಗಳನ್ನೂ, ಮುಸಲಾನಿಚ - ಒನಕೆಗಳನ್ನೂ, ತಾಲಸ್ಕಂಧಾನ್ - ಮರದಿಂದ ಮಾಡಲ್ಪಟ್ಟ ಆಯುಧವಿಶೇಷಗಳನ್ನೂ, ದುರಾಸದಾನ್ - ಹೊಂದಲಸಾಧ್ಯವಾದ, ವಿಪುಲಾನ್ - ವಿಸ್ತಾರಗಳಾದ, ಕ್ಷೇಪಣೀಯಾನ್ - ಎಸೆಯುವ ಆಯುಧವಿಶೇಷಗಳನ್ನೂ, ಉದ್ಯಮ್ಯ - ಎತ್ತಿ ಹಿಡಿದು, ಅನ್ವಯುಃ - ಅನುಸರಿಸಿ ಬಂದರು, ಅಥ - ಬಳಿಕ, ಮಹಾತೇಜಾಃ - ಬಹಳ ತೇಜೋವಂತನಾದ, ಮಹಾಬಲಃ - ಬಹಳ ದೇಹತ್ರಾಣೆಯುಳ್ಳ, ಕುಂಭಕರ್ಣಃ - ಕುಂಭಕರ್ಣನು, ಅನ್ಯತ್ - ಮತ್ತೊಂದಾದ, ದಾರುಣಂ- ಭಯಂಕರವಾದ, ರೋಮಹರ್ಷಣಂ - ರೋಮಾಂಚವನ್ನುಂಟುಮಾಡುತ್ತಿರುವ, ವಪುಃ - ಶರೀರವನ್ನು, ಆದಾಯ - ತೆಗೆದುಕೊಂಡು, ನಿಷ್ಪಪಾತ - ಹೊರಟನು. ॥೩೮-೪೧॥ ಧನು....ಹಃ - ನೂರು ಧನುಸ್ಸುಗಳ ಪ್ರಮಾಣದಷ್ಟು ಅಗಲವುಳ್ಳ, ಷಟ್ಛತ - ಆರುನೂರು ಧನುಸ್ಸುಗಳ ಪ್ರಮಾಣವುಳ್ಳ, ಸಮುಚ್ಛ್ರಿತಃ - ಉದ್ದವಾದ, ರೌದ್ರಃ - ಭಯಂಕರನಾದ, ಶಕ....ಕ್ಷಃ - ಬಂಡಿಯ ಚಕ್ರಗಳಿಗೆ ಸಮಾನವಾದ ಕಣ್ಣುಗಳುಳ್ಳ, ಮಹಾ....ಭಃ - ದೊಡ್ಡ ಬೆಟ್ಟಕ್ಕೆ ಸಮಾನವಾದ, ಮಹಾನ್ - ದೊಡ್ಡವನಾದ, ದಗ್ಧ....ಮಃ - ದಹಿಸಲ್ಪಟ್ಟ ಬೆಟ್ಟಕ್ಕೆ ಸಮಾನನಾದ, ಮಹಾವಕ್ತ್ರಃ - ದೊಡ್ಡ ಬಾಯಿಯುಳ್ಳ, ಸಕುಂಭಕರ್ಣಃ - ಆ ಕುಂಭಕರ್ಣನು, ರಕ್ಷಾಂಸಿ - ರಕ್ಕಸರನ್ನು ಕುರಿತು, ಸಂನಿಪತ್ಯ - ಸಮಿಾಪಕ್ಕೆ ಬಂದು, ಪ್ರಹಸನ್ - ನಗುತ್ತ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೪೨-೪೩ ॥ ಅದ್ಯ - ಈಗ, ಸಂಕ್ರುದ್ಧಃ - ಕೋಪಿಷ್ಠನಾಗಿ, ವಾನ....ನಾಂ - ಮುಖ್ಯರಾದ

ಕಾಂತಿಯುಳ್ಳವರೂ ಆಗಿ ಎಲ್ಲರೂ ಶೂಲಗಳನ್ನೂ, ಬಹು ಮೊನಚಾದ ಖಡ್ಗಗಳನ್ನೂ, ಗಂಡುಗೊಡಲಿಗಳನ್ನೂ ಬಹಳ ಉದ್ದವಾದ ಕಬ್ಬಿಣದ ಹಾರೆಗಳನ್ನೂ, ಗದೆ, ಒನಕೆ, ತಾಲಸ್ಕಂಧ ಇವೇ ಮೊದಲಾದ ಅನೇಕ ವಿಧಗಳಾದ ಆಯುಧಗಳನ್ನು ಧರಿಸಿದ್ದರು. ॥ ೩೬—೪೦ ॥ ಆ ಸಮಯದಲ್ಲಿ ಮಹಾ ಬಲಾಢ್ಯನಾದ ಕುಂಭಕರ್ಣನಾದರೋ ನೂರು ಧನುಸ್ಸುಗಳ ಅಡ್ಡಳತೆಯುಳ್ಳವನಾಗಿಯೂ, ಆರುನೂರು ಧನುಸ್ಸುಗಳ ಉದ್ದಳತೆಯುಳ್ಳವನಾಗಿಯೂ, ಬಹು ಭಯಂಕರನಾಗಿ ತೋರುತ್ತ, ಬಂಡಿಯ ಚಕ್ರಗಳಂತಿರುವ ಕಣ್ಣುಗಳುಳ್ಳವನಾಗಿ ಬಹು ಎತ್ತರವಾದ ಪರ್ವತವನ್ನೇ ಹೋಲುತ್ತ, ಉರಿಯುತ್ತಿರುವ ಬೆಟ್ಟಕ್ಕೆ ಸಮಾನನಾಗಿ ಬಹು ದೊಡ್ಡದಾಗಿ ತೆರೆದಿರುವ ಬಾಯುಳ್ಳವನಾಗಿ ಮುಂಬರಿಯುತ್ತಿದ್ದನು. ಅವನು ರಾಕ್ಷಸವೀರರೆಲ್ಲರನ್ನೂ ನೋಡಿ ಪಕಪಕನೆ ನಗುತ್ತ, " ಓ ರಾಕ್ಷಸರಿರಾ! ಈಗ ನಾನು ಅಗ್ನಿಯು ಶಲಭ

"ಅದ್ಯ ವಾನರಮುಖ್ಯಾನಾಂ ತಾನಿ ಯೂಥಾನಿ ಭಾಗಶಃ। ನಿರ್ದಹಿಷ್ಯಾಮಿ ಸಂಕ್ರುದ್ಧಃ ಶಲಭಾನಿವ ಪಾವಕಃ ॥ ೪೪ ॥ ನಾಪರಾಧ್ಯಂತಿ ಮೇ ಕಾಮಂ ವಾನರಾ ವನಚಾರಿಣಃ। ಜಾತಿರಸ್ಮದ್ವಿಧಾನಾಂ ಸಾ ಪುರೋದ್ಯಾನವಿಭೂಷಣಂ ॥ ೪೫ ॥ ಪುರರೋಧಸ್ಯ ಮೂಲಂತು ರಾಘವಸ್ಸಹಲಕ್ಷ್ಮಣಃ । ಹತೇ ತಸ್ಮಿನ್ ಹತಂ ಸರ್ವಂ ತಂ ವಧಿಷ್ಯಾಮಿ ಸಂಯುಗೇ ॥ ೪೬ ॥ ಏವಂ ತಸ್ಯ ಬ್ರುವಾಣಸ್ಯ ಕುಂಭಕರ್ಣಸ್ಯ ರಾಕ್ಷಸಾಃ । ನಾದಂ ಚಕ್ರುರ್ಮಹಾಘೋರಂ ಕಂಪಯಂತ ಇವಾರ್ಣವಂ ॥೪೭॥ ತಸ್ಯ ನಿಷ್ಪತತಸ್ತೂರ್ಣಂ ಕುಂಭಕರ್ಣಸ್ಯ ಧೀಮತಃ । ಬಭೂವುರ್ಘೋರರೂಪಾಣಿ ನಿಮಿತ್ತಾನಿ ಸಮಂತತಃ

ವಾನರರ, ತಾನಿಯೂಥಾನಿ - ಆ ತಂಡಗಳನ್ನು, ಭಾಗಶಃ - ಭಾಗಮಾಡಿ, ಪಾವಕಃ - ಅಗ್ನಿಯು, ಶಲಭಾನಿವ - ಈಚಲು ಹುಳಗಳನ್ನಂತೆ, ನಿರ್ದಹಿಷ್ಯಾಮಿ - ಸುಡುವೆನು. ॥ ೪೪ ॥ ವನಚಾರಿಣಃ - ವನಚಾರಿಗಳಾದ, ವಾನರಾಃ - ಕಪಿಗಳು, ಮೇ - ನನಗೆ, ಕಾಮಂ - ಬುದ್ಧಿಪೂರ್ವಕವಾಗಿ, ನಾಪ ರಾಧ್ಯಂತಿ - ಅಪರಾಧ ಮಾಡಿದವರಲ್ಲ, ಸಾಜಾತಿಃ - ಆ ವಾನರಜಾತಿಯು, ಅಸ್ಮದ್ವಿಧಾನಾಂ - ನಮ್ಮಂಥವರ, ಪುರೋ....ಣಂ - ಊರಿನಲ್ಲಿ ಹುವ್ವಿನ ತೋಟಗಳಿಗೆ ಅಲಂಕಾರಪ್ರಾಯವು. ॥ ೪೫ ॥ ಪುರರೋಧಸ್ಯ - ಪಟ್ಟಣಕ್ಕೆ ಮುತ್ತಿಗೆ ಹಾಕಲು, ಮೂಲಂ - ಮೂಲಕಾರಣವು, ಸಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿದ, ರಾಘವಃ - ಶ್ರೀರಾಮನು, ತಸ್ಮಿನ್ - ಆ ರಾಮನು, ಹತೇ - ಹತ ನಾಗಲು, ಸರ್ವಂ - ಸಮಸ್ತವೂ, ಹತಂ - ಹತಪ್ರಾಯವು, ತಂ - ಆ ಶ್ರೀರಾಮನನ್ನು, ಸಂಯುಗೇ- ಕಾಳಗದಲ್ಲಿ, ವಧಿಷ್ಯಾಮಿ - ಸಂಹಾರ ಮಾಡುವೆನು. ॥ ೪೬ ॥ ತಸ್ಯಕುಂಭಕರ್ಣಸ್ಯ - ಆ ಕುಂಭ ಕರ್ಣನು, ಏವಂ - ಈ ಪರಿಯಾಗಿ, ಬ್ರುವಾಣಸ್ಯ - ಹೇಳುತ್ತಿರಲು, ರಾಕ್ಷಸಾಃ - ರಕ್ಕಸರು, ಅರ್ಣವಂ - ಕಡಲನ್ನು, ಕಂಪಯಂತಇವ - ಚಲಿಸುತ್ತಿರುವಂತೆ ಮಾಡಿ, ಮಹಾಘೋರಂ - ಅತಿ ಭಯಂಕರವಾದ, ನಾದಂ - ಸಿಂಹನಾದವನ್ನು, ಚಕ್ರುಃ - ಮಾಡಿದರು. ॥ ೪೭ ॥ ತೂರ್ಣಂ - ಜಾಗ್ರತೆಯಾಗಿ, ನಿಷ್ಪತತಃ - ಹೊರಟು ಬರುತ್ತಿರುವ, ಧೀಮತಃ - ಬುದ್ಧಿಶಾಲಿಯಾದ, ತಸ್ಯಕುಂಭ ಕರ್ಣಸ್ಯ - ಆ ಕುಂಭಕರ್ಣನಿಗೆ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಘೋರರೂಪಾಣಿ - ಭಯಂ ಕರಾಕಾರಗಳುಳ್ಳ, ನಿಮಿತ್ತಾನಿ - ಅಪಶಕುನಗಳು, ಬಭೂವುಃ - ಆದವು. ॥೪೮॥ ಮೇಘಾಃ - ಮೇಘ

ಗಳನ್ನೆಂತೋ ಅಂತು ಈ ವಾನರಸೇನೆಯನ್ನೆಲ್ಲ ನಾಶಗೊಳಿಸುವೆನು. ವನಗಳಲ್ಲಿ ಸಂಚರಿ ಸುವ ಈ ವಾನರರು ನನಗೆ ಯಾವ ವಿಧವಾಗಿಯೂ ಅಪರಾಧ ಮಾಡುವಂತಿಲ್ಲ. ನಮ್ಮಂಥವ ರಿಗೆ ಈ ವಾನರರೆಲ್ಲರೂ ನಮ್ಮ ಪುರೋದ್ಯಾನಕ್ಕೆ ಭೂಷಣಪ್ರಾಯರು. ಅಯ್ಯಾ ರಾಕ್ಷಸ ಯೋಧರೇ! ನಮ್ಮ ಲಂಕಾಪಟಣವನ್ನು ಆಕ್ರಮಿಸುವದಕ್ಕೆ ಮೂಲಕಾರಣರು ಆ ರಾಮ ಲಕ್ಷ್ಮಣರು. ಪ್ರಕೃತದಲ್ಲಿ ನಾನು ಆ ರಾಮನನ್ನು ಸಂಹರಿಸುವೆನು. ಅವನೊಬ್ಬನು ಹತ ನಾದರೆ ಎಲ್ಲವೂ ಮುಗಿದಂತೆಯೆ" ಎಂದು ಹೇಳಿದನು. ॥ ೪೧-೪೬ ॥ ಕುಂಭಕರ್ಣನ ಈ ಮಾತುಗಳನ್ನು ಕೇಳುತ್ತಲೇ ಅಲ್ಲಿದ್ದ ರಾಕ್ಷಸವೀರರೆಲ್ಲರೂ ಅದ್ಭುತವಾದ ಸಿಂಹನಾದವನ್ನು ಮಾಡಿದರು. ಆ ಸಿಂಹನಾದವು ಬಹು ಭಯಂಕರವಾಗಿ ಸಮುದ್ರವನ್ನೇ ಕ್ಷೋಭೆಗೊಳಿಸಿ ಬಿಟ್ಟಿತು. ಆ ಬಳಿಕ ಸಮಸ್ತ ರಾಕ್ಷಸವೀರರೊಡಗೂಡಿ ಹೊರಡುತ್ತಿರುವ ಮಹಾ ಬುದ್ಧಿ ವಂತನಾದ ಆ ಕುಂಭಕರ್ಣನು ತನ್ನ ಪ್ರಯಾಣಕಾಲದಲ್ಲಿಯೇ ಅನೇಕ ದುಶ್ಶಕುನ ಗಳನ್ನು ಕಂಡನು. ಭಯಂಕರಾಕಾರಗಳಾದ ನರಿಗಳು ಬೆಂಕಿಯ ಕಿಡಿಗಳನ್ನು ಕಕ್ಕುತ್ತ

|| ೪೮ || ಉಲ್ಕಾಶನಿಯುತಾ ಮೇಘಾ ಬಭೂವುರ್ಗರ್ದಭಾರುಣಾಃ | ಸಸಾಗರವನಾ ಚೈವ ವಸುಧಾ ಸಮಕಂಪತ || ೪೯ || ಘೋರರೂಪಾಃ ಶಿವಾ ನೇದುಸ್ಸಜ್ವಾಲಕಬಳೈರ್ಮುಖೈಃ | ಮಂಡಲಾನ್ಯಪಸವ್ಯಾನಿ ಬಬಂಧುಶ್ಚ ವಿಹಂಗಮಾಃ || ೫೦ || ನಿಷ್ಪಪಾತ ಚ ಮಾಲೇವ ಗೃಧ್ರೋಽಸ್ಯ ಪಥಿ ಗಚ್ಛತಃ | ಪ್ರಾಸ್ಫುರನ್ನಯನಂ ಚಾಸ್ಯ ಸವ್ಯೋ ಬಾಹುಶ್ಚ ಕಂಪತೇ || ೫೧ || ನಿಪಪಾತ ತದಾ ಚೋಲ್ಕಾ ಜ್ವಲಂತೀ ಭೀಮನಿಸ್ವನಾ | ಆದಿತ್ಯೋ ನಿಷ್ಪ್ರಭಶ್ಚಾಸೀನ್ನಪ್ರವಾತಿ ಸುಖೋಽನಿಲಃ || ೫೨ || ಅಚಿಂತಯನ್ಮಹೋತ್ಪಾತಾನುತ್ಥಿತಾನ್ ರೋಮಹರ್ಷಣಾನ್ | ನಿರ್ಯಯೌ ಕುಂಭಕರ್ಣಸ್ತು ಕೃತಾಂತ

ಗಳು, ಉಲ್ಕಾ....ತಾಃ-ಕೊಳ್ಳಿಗಳಿಂದಲೂ ಕೂಡಿ, ಗರ್ದಭಾರುಣಾಃ-ಕತ್ತೆಗಳಂತೆ ಬೂದುಬಣ್ಣವುಳ್ಳವುಗಳಾಗಿ, ಬಭೂವುಃ - ಆದವು, ಸಸಾಗರವನಾ - ಕಡಲಿನಿಂದಲೂ, ಕಾಡಿನಿಂದಲೂ ಕೂಡಿರುವ, ವಸುಧಾ - ಭೂಮಿಯು, ಸಮಕಂಪಕತ - ಗಡಗಡನೆ ನಡುಗಿತು, ಘೋರರೂಪಾಃ - ಭಯಂಕರವಾದ ಆಕಾರವುಳ್ಳ, ಶಿವಾಃ - ನರಿಗಳು, ಸಜ್ವಾಲಕಬಳೈಃ - ಜ್ವಾಲೆಗಳಿಂದ ಕೂಡಿರುವ ಗ್ರಾಸಗಳುಳ್ಳ, ಮುಖೈಃ - ಬಾಯಿಗಳಿಂದ, ನೇದುಃ - ಕೂಗಿಕೊಂಡವು. || ೪೯ || ವಿಹಂಗಮಾಃ - ಹಕ್ಕಿಗಳು, ಅಪಸವ್ಯಾನಿ - ಅಪಸವ್ಯಗಳಾದ, ಮಂಡಲಾನಿ - ಸುತ್ತುಗಳನ್ನು, ಬಬಂಧುಃ - ಕಟ್ಟಿದವು, ಗಚ್ಛತಃ- ಹೋಗುತ್ತಿರುವ, ಅಸ್ಯ - ಈ ಕುಂಭಕರ್ಣನ, ಪಥಿ - ಮಾರ್ಗದಲ್ಲಿ, ಮಾಲೇವ - ಮಾಲಿಕೆಯಂತೆ, ಗೃಧ್ರಾಃ - ಹದ್ದುಗಳು, ನಿಷ್ಪಪಾತ - ಬೀಳುತ್ತಿದ್ದವು. ||೫೦|| ಅಸ್ಯ - ಈ ಕುಂಭಕರ್ಣನ, ನಯನಂ- ಎಡಗಣ್ಣು, ಪ್ರಾಸ್ಫುರತ್ - ಚಲಿಸಿತು, ಸವ್ಯೋಬಾಹುಶ್ಚ - ಎಡಭುಜವೂ, ಕಂಪತೇ - ಅದರಿತು, ತದಾ - ಆ ಕಾಲದಲ್ಲಿ, ಭೀಮನಿಸ್ವನಾ - ಭಯಂಕರ ಧ್ವನಿಯುಳ್ಳ, ಜ್ವಲಂತೀ - ಹೊಳೆಯುತ್ತಿರುವ, ಉಲ್ಕಾ - ಕೊಳ್ಳಿಯು, ನಿಪಪಾತ - ಬೀಳುತ್ತಿತ್ತು, ಆದಿತ್ಯಃ - ಸೂರ್ಯನು, ನಿಷ್ಪ್ರಭಶ್ಚ - ಪ್ರಕಾಶಹೀನನು, ಆಸೀತ್ - ಆದನು, ಸುಖಃ - ಸುಖಕರವಾದ, ಅನಿಲಃ - ಗಾಳಿಯು, ನಪ್ರವಾತಿ - ಬೀಸಲಿಲ್ಲ. || ೫೧-೫೨ || ಕುಂಭಕರ್ಣಸ್ತು - ಕುಂಭಕರ್ಣನಾದರೆ, ಕೃತಾಂ....ತಃ - ಯಮನ ಬಲದಿಂದ ಪ್ರೇರಿತನಾದಕಾರಣ, ಉತ್ಥಿತಾನ್ - ಹುಟ್ಟಿರುವ, ರೋಮ....ಣಾನ್ - ರೋಮಾಂಚವನ್ನು ಹುಟ್ಟಿಸುವ, ಮಹೋತ್ಪಾತಾನ್ - ದುಃಖ ಶಕುನಗಳನ್ನು, ಅಚಿಂತಯನ್ - ಲಕ್ಷ್ಯವಿಡದೆ, ನಿರ್ಯಯೌ - ಹೊರ

ಬಹು ಭಯಂಕರವಾಗಿ ಅರಿಚಿಕೊಂಡುವು. ಮೇಘಗಳು ಹೇಸರಕತ್ತೆಗಳ ಮೈಬಣ್ಣವುಗಳಾಗಿ ಸಿಡಿಲುಗಳನ್ನೂ, ಉಲ್ಕಗಳನ್ನೂ ಮಳೆಗರೆದವು. ಸಮುದ್ರಗಳಿಂದಲೂ, ವನಗಳಿಂದಲೂ ಪರಿವೇಷ್ಟಿತವಾದ ಭೂಮಿಯು ಗಡಗಡನೆ ನಡುಗಿತು. ಬಗೆಬಗೆಯ ಪಕ್ಷಿಸಮೂಹಗಳು ಆ ಕುಂಭಕರ್ಣನಿಗೂ, ಅವನ ಸೇನೆಗೂ ಅಪಸವ್ಯವಾಗಿ ಸುತ್ತುಗಟ್ಟಿ ತಿರುಗಿದುವು. ದಾರಿಯಲ್ಲಿ ಹೋಗುತ್ತಿದ್ದ ಆ ಕುಂಭಕರ್ಣನ ಮತ್ತು ಅವನ ಸೇನೆಯ ಮೇಲ್ಭಾಗದಲ್ಲಿ ಹುದ್ದುಗಳು ಮಾಲಿಕೆಯಂತೆ ತಿರುಗುತ್ತಿದ್ದುವು. ಆ ಕುಂಭಕರ್ಣರಾಕ್ಷಸನ ಎಡಗಣ್ಣೂ ಎಡಭುಜವೂ ಅದರಿದುವು. ಭಯಂಕರವಾದ ಉಲ್ಕಗಳ ಬಿರಸಾದ ಮಳೆಯಾಯಿತು. ಸೂರ್ಯನು ಕಾಂತಿಹೀನನಾದನು. ಗಾಳಿಯು ಬಹು ಕಠಿನವಾಗಿಯೂ, ಭಯಂಕರವಾಗಿಯೂ ಬೀಸತೊಡಗಿತು. ||೪೭–೫೨|| ಈ ರೀತಿ ಮಹಾ ಕ್ರೂರಗಳಾದ ಉತ್ಪಾತಗಳುಂಟಾದರೂ ಯಮಧರ್ಮನಿಂದ ಪ್ರೇರಿತನಾದ ಆ ಕುಂಭಕರ್ಣನು ಲಕ್ಷ್ಯಕ್ಕೆ ತಂದುಕೊಳ್ಳದೆ ಮುನ್ನುಗ್ಗಿ ಹೊರಟನು. ಪರ್ವತಸನ್ನಿಭನಾದ ಆ ರಾಕ್ಷಸನು ಪಾದಚಾರಿ

ಬಲಚೋದಿತಃ ॥ ೫೩ ॥ ಸಲಂಘಯಿತ್ವಾ ಪ್ರಾಕಾರಂ ಪದ್ಭ್ಯಾಂ ಪರ್ವತಸನ್ನಿಭಃ । ದದರ್ಶಾಭ್ರಘನಪ್ರಖ್ಯಂ ವಾನರಾನೀಕಮದ್ಭುತಂ ॥ ೫೪ ॥ ತೇ ದೃಷ್ಟ್ವಾ ರಾಕ್ಷಸ ಶ್ರೇಷ್ಠಂ ವಾನರಾಃ ಪರ್ವತೋಪಮಂ । ವಾಯುನುನ್ನಾ ಇವ ಘನಾ ಯಯುಸ್ಸರ್ವಾ ದಿಶಸ್ತದಾ ॥ ೫೫ ॥ ತದ್ವಾನರಾನೀಕಮತಿಪ್ರಚಂಡಂ ದಿಶೋ ದ್ರವದ್ಭಿನ್ನಮಿವಾಭ್ರ ಜಾಲಂ । ಸಕುಂಭಕರ್ಣಸ್ಸಮವೇಕ್ಷ್ಯ ಹರ್ಷಾನ್ನನಾದ ಭೂಯೋ ಘನವದ್ಘನಾಭಃ ॥ ೫೬ ॥ ತೇ ತಸ್ಯ ಘೋರಂ ನಿನದಂ ನಿಶಮ್ಯ ಯಥಾ ನಿನಾದಂ ದಿವಿ ವಾರಿದಸ್ಯ । ಪೇತುರ್ಧರಣ್ಯಾಂ ಬಹವಃ ಪ್ಲವಂಗಾ ನಿಕೃತ್ತಮೂಲಾ ಇವ ಸಾಲವೃಕ್ಷಾಃ ॥ ೫೭ ॥

ಟನು. ॥ ೫೩ ॥ ಪರ್ವ....ಭಃ - ಬೆಟ್ಟಕ್ಕೆ ಸಮಾನನಾದ, ಸಃ - ಆ ಕುಂಭಕರ್ಣನು, ಪ್ರಾಕಾರಂ - ಕೋಟೆಯನ್ನು, ಪದ್ಭ್ಯಾಂ - ಕಾಲುಗಳಿಂದ, ಲಂಘಯಿತ್ವಾ - ದಾಟಿ, ಅಭ್ರ....ಖ್ಯಂ - ಅಂತರಿಕ್ಷದಲ್ಲಿ ಮೇಘದ ಕಾಂತಿಗೆ ಸಮಾನವಾದ ಕಾಂತಿಯುಳ್ಳ, ಅದ್ಭುತಂ - ಆಶ್ಚರ್ಯಕರವಾದ, ವಾನರಾನೀಕಂ - ವಾನರ ಸೈನ್ಯವನ್ನು, ದದರ್ಶ - ಕಂಡನು. ॥ ೫೪ ॥ ತೇವಾನರಾಃ - ಆ ಕಪಿಗಳು, ಪರ್ವತೋಪಮಂ - ಬೆಟ್ಟಕ್ಕೆ ಸಮಾನನಾದ, ರಾಕ್ಷಸಶ್ರೇಷ್ಠಂ - ರಕ್ಕಸರಲ್ಲಿ ಶ್ರೇಷ್ಠನಾದ ಕುಂಭಕರ್ಣನನ್ನು, ದೃಷ್ಟ್ವಾ - ಕಂಡು, ತದಾ - ಆಗ, ವಾಯುನುನ್ನಾಃ - ಚಂಡಮಾರುತದಿಂದ ತಳ್ಳಿದ, ಘನಾಇವ - ಮೇಘಗಳಂತೆ, ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳನ್ನು ಕುರಿತು, ಯಯುಃ - ತೆರಳಿದರು. ॥ ೫೫ ॥ ಘನಾಭಃ - ಮೇಘದಂತೆ ಹೊಳೆಯುತ್ತಿರುವ, ಸಕುಂಭಕರ್ಣಃ - ಆ ಕುಂಭಕರ್ಣನು, ಭಿನ್ನಂ - ಭೇದಿಸಲ್ಪಟ್ಟ, ಅಭ್ರಜಾಲಮಿವ - ಮೇಘಗಗಳ ತಂಡಗಳಂತೆ, ದಿಶಃ- ದಿಕ್ಕುಗಳಲ್ಲಿ, ದ್ರವತ್ - ಓಡಿಹೋಗುತ್ತಿರುವ, ಅತಿಪ್ರಚಂಡಂ - ಬಹಳ ಕ್ರೂರವಾದ, ತದ್ವಾನರಾನೀಕಂ - ಆ ವಾನರಸೈನ್ಯವನ್ನು, ಸಮವೇಕ್ಷ್ಯ - ಕಂಡು, ಹರ್ಷಾತ್ - ಸಂತೋಷದಿಂದ, ಭೂಯಃ- ಮತ್ತೂ, ಘನವತ್ - ಮೇಘದಂತೆ, ನನಾದ - ಕೋಲಾಹಲಧ್ವನಿ ಮಾಡಿದನು. ॥೫೬॥ ಬಹವಃ - ಅನೇಕರಾದ, ತೇಪ್ಲವಂಗಾಃ - ಆ ಕಪಿಗಳು, ದಿವಿ - ಅಂತರಿಕ್ಷದಲ್ಲಿ, ವಾರಿದಸ್ಯ - ಮೇಘದ, ನಿನಾದಂಯಥಾ - ಧ್ವನಿಯಂತೆ, ಘೋರಂ - ಭಯಂಕರವಾದ, ತಸ್ಯ - ಆ ಕುಂಭಕರ್ಣನ, ನಿನದಂ- ಧ್ವನಿಯನ್ನು, ನಿಶಮ್ಯ - ಕೇಳಿ, ನಿಕೃತ್ತಮೂಲಾಃ - ಕತ್ತರಿಸಲ್ಪಟ್ಟ ಬುಡಗಳುಳ್ಳ, ಸಾಲವೃಕ್ಷಾಇವ- ಮತ್ತೀಗಿಡಗಳಂತೆ, ಧರಣ್ಯಾಂ - ಭೂಮಿಯಲ್ಲಿ, ಪೇತುಃ - ಬಿದ್ದರು. ॥ ೫೭ ॥ ವಿಪು....ರ್ವಾ -

---

ಯಾಗಿಯೇ ಲಂಕಾನಗರದ ಪ್ರಾಕಾರವನ್ನು ದಾಟಿದವನಾಗಿ ಹೊರಬಂದು ಮುಗಿಲುಗಳಿಗೆ ಸಮಾನವಾಗಿ, ಬಹು ಭಯಂಕರವಾಗಿರುವ ವಾನರಸೇನೆಯನ್ನು ಕಂಡನು. ಆ ಸಮಯದಲ್ಲಿ ವಾನರಯೋಧರೂ ಸಹ ಪರ್ವತಸಮಾನನಾದ ಆ ಕುಂಭಕರ್ಣರಾಕ್ಷಸನನ್ನು ನೋಡಿ ವಾಯುದೇವನಿಂದ ಹೊರದೂಡಿದ ಮುಗಿಲುಗಳಂತೆ ಒಂದೆಡೆಯಲ್ಲಿ ನಿಲ್ಲಲಾರದೆ ದಿಕ್ಕುವಿದಿಕ್ಕುಗಳಿಗೂ ಓಡಿಹೋದರು. ಹಾಗೆ ಮಹಾ ಭಯಂಕರವಾಗಿ ಮೇಘ ಸಮೂಹಗಳಂತೆ ಭಿನ್ನಭಿನ್ನವಾಗಿ ಚದುರಿಹೋಗಿರುವ ವಾನರಸೇನೆಯನ್ನು ನೋಡಿ ಆ ಕುಂಭಕರ್ಣನು ಇನ್ನೂ ಸಂತೋಷಗೊಂಡವನಾಗಿ ದೊಡ್ಡ ಮುಗಿಲಿನಂತೆ ಮತ್ತೂ ಗರ್ಜಿಸಿದನು. ಅದನ್ನು ಕೇಳಿದೊಡನೆಯೇ ವಾನರರೆಲ್ಲರೂ ಭೇದಿಸಿದ ವೃಕ್ಷಗಳಂತೆ ಅಲ್ಲಲ್ಲಿಯೇ ಉರುಳಿದರು. ಆಗ ಮಹಾಕಾಯನೂ, ಮಹಾ ಪರಿಘವನ್ನು ಧರಿಸಿರುವವನೂ, ಶತ್ರುನಾಶಕ್ಕೋಸ್ಕರ ಹೊರಟಿರುವವನೂ ಆದ ಕುಂಭಕರ್ಣನು ವಾನರರೆಲ್ಲರಿಗೂ ಮಹಾ ಭಯ

ವಿಪುಲಪರಿಘವಾನ್ಸಕುಂಭಕರ್ಣೋ
ರಿಪುನಿಧನಾಯ ವಿನಿಸ್ಸೃತೋ ಮಹಾತ್ಮಾ ।
ಕಪಿಗಣಭಯಮಾದದತ್ಸುಭೀಮಂ
ಪ್ರಭುರಿವ ಕಿಂಕರದಂಡವಾರ್ಗ ಯುಗಾಂತೇ ॥ ೫೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಷಷ್ಟಿತಮಸ್ಸರ್ಗಃ

ವಿಸ್ತಾರವಾದ ಪರಿಘಾಯುಧವುಳ್ಳ, ಮಹಾತ್ಮಾ - ಮಹಾ ಶರೀರವುಳ್ಳ, ಸಕುಂಭಕರ್ಣಃ - ಆ ಕುಂಭಕರ್ಣನು, ರಿಪುನಿಧನಾಯ - ಶತ್ರುಸಂಹಾರಕ್ಕೋಸುಗ, ವಿನಿಸೃತಃ - ಹೊರಟವನಾಗಿ, ಯುಗಾಂತೇ-ಪ್ರಳಯಕಾಲದಲ್ಲಿ, ಕಿಂಕ....ವಾರ್ಗ - ಏನುಮಾಡಲಿ ಎಂಬ ಯೋಚನೆಯೂ, ಡಂಬವೂ ಉಳ್ಳ, ಪ್ರಭುರಿವ - ಯಮನಂತೆ, ಸುಭೀಮಂ - ಬಹಳ ಭಯಂಕರವಾದ, ಕಪಿಗಣಭಯಂ - ವಾನರ ತಂಡಗಳಿಗೆ ಭಯವನ್ನು, ಆದದತ್ - ಕೊಟ್ಟನು. ॥ ೫೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಷಷ್ಟಿತಮಸ್ಸರ್ಗಃ

ವನ್ನುಂಟುಮಾಡುತ್ತ ಪ್ರಳಯಕಾಲದ ಯಮನಂತೆ ಆ ರಣಭೂಮಿಯಲ್ಲಿ ಸಂಚರಿಸುತ್ತಿದ್ದನು. ॥ ೫೭–೫೮ ॥

ಇಂತಿದು ಕುಂಭಕರ್ಣಾಗಮನವೆಂಬ ಅರುವತ್ತೈದನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಷಟ್ಷಷ್ಠಿತಮಸ್ಸರ್ಗಃ

ಸಲಂಘಯಿತ್ವಾ ಪ್ರಾಕಾರಂ ಗಿರಿಕೂಟೋಪಮೋ ಮಹಾನ್ । ನಿರ್ಯಯೌ ನಗರಾತ್ತೂರ್ಣಂ ಕುಂಭಕರ್ಣೋ ಮಹಾಬಲಃ ॥ ೧ ॥ ಸನನಾದ ಮಹಾನಾದಂ ಸಮುದ್ರಮಭಿನಾದಯನ್ । ಜನಯನ್ನಿವ ನಿರ್ಘಾತಾನ್ ವಿಧಮನ್ನಿವ ಪರ್ವತಾನ್ ॥೨॥ ತಮವಧ್ಯಂ ಮಘವತಾ ಯಮೇನ ವರುಣೇನವಾ । ಪ್ರೇಕ್ಷ್ಯ ಭೀಮಾಕ್ಷಮಾಯಾಂತಂ ವಾನರಾ ವಿಪ್ರದುದ್ರುವುಃ ॥ ೩ ॥ ತಾಂಸ್ತು ವಿಪ್ರದ್ರುತಾನ್ ದೃಷ್ಟ್ವಾ ವಾಲಿ ಪುತ್ರೋಽಂಗದೋಽಬ್ರವೀತ್ । ನಳಂ ನೀಲಂ ಗವಾಕ್ಷಂಚ ಕುಮುದಂಚ ಮಹಾ

ಮಹಾಬಲಃ - ಬಹಳ ಬಲಶಾಲಿಯಾದ, ಗಿರಿಕೂಟೋಪಮಃ - ಬೆಟ್ಟದ ಶಿಖರಕ್ಕೆ ಸಮಾನ ನಾದ, ಮಹಾನ್ - ದೊಡ್ಡವನಾದ, ಸಕುಂಭಕರ್ಣಃ - ಆ ಕುಂಭಕರ್ಣನು, ಪ್ರಾಕಾರಂ - ಕೋಟೆಯನ್ನು, ಲಂಘಯಿತ್ವಾ - ದಾಟಿ, ತೂರ್ಣಂ - ಜಾಗ್ರತೆಯಾಗಿ, ನಗರಾತ್ - ಪಟ್ಟಣದಿಂದ, ನಿರ್ಯಯೌ - ಹೊರಟನು. ॥ ೧ ॥ ಸಃ - ಆ ಕುಂಭಕರ್ಣನು, ಸಮುದ್ರಂ - ಕಡಲನ್ನು, ಅಭಿನಾದಯನ್ - ಧ್ವನಿಗೊಳಿಸುತ್ತ, ಪರ್ವತಾನ್ - ಬೆಟ್ಟಗಳನ್ನು, ವಿಧಮನ್ನಿವ - ದಹಿಸುವನೋ ಎಂಬಂತೆ, ನಿರ್ಘಾತಾನ್ - ಮೇಘಧ್ವನಿಗಳನ್ನು, ಜನಯನ್ನಿವ - ಹುಟ್ಟಿಸುವನಂತೆ, ಮಹಾನಾದಂ - ದೊಡ್ಡ ಧ್ವನಿಯನ್ನು, ನನಾದ - ಮಾಡಿದನು. ॥ ೨ ॥ ವಾನರಾಃ - ಕಪಿಗಳು, ಮಘವತಾ - ದೇವೇಂದ್ರನಿಂದಲೂ, ಯಮೇನ - ಯಮನಿಂದಲೂ, ವರುಣೇನವಾ - ವರುಣನಿಂದಲಾದರೂ, ಅವಧ್ಯಂ - ವಧಿಸಲಸಾಧ್ಯನಾದ, ಭೀಮಾಕ್ಷಂ-ಭಯಂಕರ ನೇತ್ರಗಳುಳ್ಳವನಾಗಿ, ಆಯಾಂತಂ-ಬರುತ್ತಿರುವ, ತಂ - ಆ ಕುಂಭಕರ್ಣನನ್ನು, ಪ್ರೇಕ್ಷ್ಯ - ಕಂಡು, ವಿಪ್ರದುದ್ರುವುಃ - ಓಡಿಹೋದರು. ॥ ೩ ॥ ವಾಲಿಪುತ್ರಃ - ವಾಲಿಯ ಮಗನಾದ, ಅಂಗದಃ - ಅಂಗದನು, ವಿಪ್ರದ್ರುತಾನ್ - ಓಡಿಹೋಗುತ್ತಿರುವ, ನಳಂ - ನಳನನ್ನೂ, ನೀಲಂ - ನೀಲನನ್ನೂ, ಗವಾಕ್ಷಂ - ಗವಾಕ್ಷನನ್ನೂ, ಮಹಾಬಲಂ - ಬಹಳ ಬಲವಂತನಾದ, ಕುಮುದಂಚ - ಕುಮುದನೂ ಎಂಬ, ತಾನ್ಸು - ಆ ವಾನರರನ್ನಾದರೆ, ದೃಷ್ಟ್ವಾ-

---

ಹೀಗೆ ಪರ್ವತಶಿಖರಕ್ಕೆ ಸಮಾನನಾದವನೂ, ಮಹಾ ಬಲಾಢ್ಯನೂ ಆದ ಕುಂಭಕರ್ಣನು ಪಟ್ಟಣದ ಪ್ರಾಕಾರವನ್ನು ದಾಟಿ ರಣಾಂಗಣಕ್ಕೆ ಹೊರಟು ಸಮುದ್ರಗಳೂ ಉಲ್ಲಕಲ್ಲೋಲವಾಗಿ ಧ್ವನಿಗೈಯುವಂತೆ ಮಹತ್ತರವಾದ ಸಿಂಹನಾದವನ್ನು ಮಾಡಿದನು. ಆ ಧ್ವನಿಯು ಅಂತರಿಕ್ಷದಿಂದ ಸಿಡಿಲುಗಳು ಬೀಳುತ್ತಿರುವುವೋ ಎಂಬ ಭಯವನ್ನುಂಟುಮಾಡುತ್ತಿದ್ದಿತು. ಆ ಮಹಾ ಧ್ವನಿಯಿಂದ ಪರ್ವತಗಳೆಲ್ಲವೂ ಸೀಳುತ್ತಿದ್ದುವು. ಹೀಗೆ ಮಹಾ ಧ್ವನಿಯನ್ನು ಮಾಡುತ್ತಿರುವವನೂ ದೇವೇಂದ್ರನಿಂದಲೂ, ಯಮನಿಂದಲೂ, ವರುಣನಿಂದಲೂ ಜಯಿಸಲಸಾಧ್ಯನಾದವನೂ, ಮಹಾ ಭಯಂಕರವಾದ ನೇತ್ರಗಳುಳ್ಳವನೂ ಆದ ಆ ಕುಂಭಕರ್ಣನನ್ನು ನೋಡಿದೊಡನೆಯೇ ಆ ರಣಭೂಮಿಯಲ್ಲಿದ್ದ ವಾನರರೆಲ್ಲರೂ ಭಯದಿಂದ ತತ್ತಳಿಸಿ ಓಡಿಹೋದರು. ಆ ರೀತಿ ಓಡಿಹೋಗುತ್ತಿರುವ ವಾನರರನ್ನು ನೋಡಿ ವಾಲಿಪುತ್ರನಾದ ಅಂಗದನು ಅವರಲ್ಲಿ ಮಹಾ ಬಲಾಢ್ಯರಾದ ನಳ, ನೀಲ, ಗವಾಕ್ಷ, ಕುಮು



ಕುಂಭಕರ್ಣಾಗಮನ

" ನಿರ್ಯಯೌ ನಗರಾತ್ತೂರ್ಣಂ ಕುಂಭಕರ್ಣೋ ಮಹಾಬಲಃ "

ಪು. ೭೯

ಬಲಂ ॥ ೪ ॥ "ಆತ್ಮಾನಮತ್ರ ವಿಸ್ಮೃತ್ಯ ವೀರ್ಯಾಣ್ಯಭಿಜನಾನಿಚ । ಕ್ವ ಗಚ್ಛತ ಭಯತ್ರಸ್ತಾಃ ಪ್ರಾಕೃತಾ ಹರಯೋಯಥಾ ॥ ೫ ॥ ಸಾಧು ಸೌಮ್ಯಾ ! ನಿವರ್ತಧ್ವಂ ಕಿಂ ಪ್ರಾಣಾ ಪರಿರಕ್ಷಥ। ನಾಲಂ ಯುದ್ಧಾಯ ವೈ ರಕ್ಷೋ ಮಹತೀಯಂ ಬಿಭೀಷಿಕಾ ॥ ೬ ॥ ಮಹತೀಮುತ್ಥಿತಾಮೇನಾಂ ರಾಕ್ಷಸಾನಾಂ ಬಿಭೀಷಿಕಾಂ । ವಿಕ್ರಮಾದ್ವಿಧಮಿಷ್ಯಾಮೋ ನಿವರ್ತಧ್ವಂ ಪ್ಲವಂಗಮಾಃ" ॥ ೭ ॥ ಕೃಛ್ರೇಣತು ಸಮಾಶ್ವಸ್ಯ ಸಂಗಮ್ಯ ಚ ತತಸ್ತತಃ । ವೃಕ್ಷಾದ್ರಿಹಸ್ತಾ ಹರಯಸ್ಸಂಪ್ರತಸ್ಥೂ ರಣಾಜಿರಂ ॥ ೮ ॥

ಕಂಡು, ಅಬ್ರವೀತ್ - ನುಡಿದನು. ॥೪॥ ಹೇ ಹರಯಃ - ಎಲೈ ಕಪಿಗಳಿರಾ, ಅತ್ರ - ಈ ರಣರಂಗದಲ್ಲಿ, ಆತ್ಮಾನಂ - ನಿಮ್ಮನ್ನು, ವೀರ್ಯಾಣಿ - ಪರಾಕ್ರಮಗಳನ್ನೂ, ಅಭಿಜನಾನಿಚ - ಸತ್ಕುಲಪ್ರಸೂತತ್ವವನ್ನೂ, ವಿಸ್ಮೃತ್ಯ - ಮರೆತು, ಭಯತ್ರಸ್ತಾಃ - ಭೀತಿಯಿಂದ ಕೂಡಿ, ಪ್ರಾಕೃತಾಯಥಾ - ಪಾಮರರಂತೆ, ಕ್ವ - ಎಲ್ಲಿ, ಗಚ್ಛತ - ಹೋಗುತ್ತೀರಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೫ ॥ ಹೇ ಸೌಮ್ಯಾಃ - ಎಲೈ ಪ್ರಸನ್ನರೇ, ಸಾಧು - ಚನ್ನಾಯಿತು, ನಿವರ್ತಧ್ವಂ - ಹಿಂತಿರುಗಿರಿ, ಪ್ರಾಣಾ-ಪ್ರಾಣಗಳನ್ನು, ಕಿಂಪರಿರಕ್ಷಥ-ಏಕೆ ರಕ್ಷಣೆಮಾಡಿಕೊಳ್ಳುತ್ತೀರಿ, ರಕ್ಷಃವೈ-ರಕ್ಕಸನಾದರೆ, ಯುದ್ಧಾಯ - ಕಾಳಗಕ್ಕೆ, ನಾಲಂ - ಸಮರ್ಥನಲ್ಲ, ಇಯಂ - ಇದು, ಮಹತೀ - ದೊಡ್ಡದಾದ, ಬಿಭೀಷಿಕಾ - ಭಯಜನಕವಾದ ಪುರುಷವೇಷವು. ॥ ೬ ॥ ಹೇ ಪ್ಲವಂಗಮಾಃ - ಎಲೈ ಕಪಿಗಳಿರಾ, ನಿವರ್ತಧ್ವಂ - ಹಿಂತಿರುಗಿರಿ, ಉತ್ಥಿತಾಂ - ಹುಟ್ಟಿರುವ, ಮಹತೀಂ - ದೊಡ್ಡದಾದ, ಏನಾಂ - ಈ, ರಾಕ್ಷಸಾನಾಂ - ರಕ್ಕಸರ, ಬಿಭೀಷಿಕಾಂ - ಭಯವನ್ನುಂಟುಮಾಡುತ್ತಿರುವ ಪುರುಷವೇಷವನ್ನು, ವಿಕ್ರಮಾತ್ - ಪರಾಕ್ರಮದಿಂದ, ವಿಧಮಿಷ್ಯಾಮಃ - ಸಂಹಾರ ಮಾಡೋಣ. ॥ ೭ ॥ ಕೃಛ್ರೇಣ - ಕಷ್ಟದಿಂದ, ಸಮಾಶ್ವಸ್ಯ - ಸಮಾಧಾನಗೊಳಿಸಿಕೊಂಡು, ತತಸ್ತತಃ - ಅಲ್ಲಲ್ಲಿ, ಸಂಗಮ್ಯ - ಸೇರಿ, ಹರಯಃ - ಕಪಿಗಳು, ವೃಕ್ಷಾದ್ರಿಹಸ್ತಾಃ - ಮರಗಳೂ ಬೆಟ್ಟಗಳೂ ಕೈಗಳಲ್ಲಿ ಉಳ್ಳವರಾಗಿ, ರಣಾ

ದರೇ ಮೊದಲಾದವರೊಡನೆ, "ಅಯ್ಯಾ ವಾನರೋತ್ತಮರೇ! ನೀವೆಲ್ಲರೂ ಶ್ರೇಷ್ಠವಾದ ನಿಮ್ಮ ವಂಶಗಳನ್ನೂ, ನಿಮ್ಮ ಪರಾಕ್ರಮಗಳನ್ನೂ ಮರೆತು ಸಾಮಾನ್ಯರಾದ ವಾನರರಂತೆ ಓಡಿಹೋಗುತ್ತಿರುವಿರಲ್ಲವೆ. ॥ ೧–೫ ॥ ಇದು ನಿಮಗೆ ಎಷ್ಟುಮಾತ್ರವೂ ಉಚಿತವಲ್ಲವು. ಆದುದರಿಂದ ಉತ್ತಮ ಸ್ವಭಾವಗಳುಳ್ಳ ಎಲೈ ವಾನರರೇ! ನೀವೆಲ್ಲರೂ ಹಿಂತಿರುಗಿರಿ. ನೀವು ನಿಮ್ಮ ಪೌರುಷ ಪರಾಕ್ರಮಗಳನ್ನು ಮರೆತು, ಯುದ್ಧಮಾಡುವುದನ್ನು ತೊರೆದು, ಸುಮ್ಮನೆ ಪ್ರಾಣಗಳನ್ನು ಸಂರಕ್ಷಿಸಿಕೊಳ್ಳುವಿರೇಕೆ? ಹಾಗೆ ಮಾಡುವುದು ಎಷ್ಟು ಮಾತ್ರಕ್ಕೂ ಉಚಿತವಲ್ಲ. ಈಗ ನೋಡುತ್ತಿರುವ ಈ ವ್ಯಕ್ತಿಯು ರಾಕ್ಷಸನಲ್ಲ. ರಾವಣಾಸುರನು ನಮ್ಮೊಡನೆ ಯುದ್ಧಮಾಡಲು ಹೆದರಿ ನಮ್ಮೆಲ್ಲರಿಗೂ ಭಯವನ್ನುಂಟುಮಾಡುವ ಈ ಯಂತ್ರವನ್ನು ಪುರುಷಾಕಾರವಾಗಿ ನಿರ್ಮಿಸಿ ಕಳುಹಿಸಿರುವನು. ಇದು ಯಂತ್ರವಲ್ಲದೆ ಮತ್ತೇನೂ ಅಲ್ಲ. ನಾವು ಈಗ ನಮ್ಮ ಪರಾಕ್ರಮದಿಂದ ಈ ಯಂತ್ರವನ್ನು ಭೇದಿಸಿಬಿಡೋಣ. ಅಯ್ಯಾ ವಾನರ ವೀರರಿರಾ! ರಣರಂಗದಿಂದ ಪಲಯನರಾಗಬೇಡಿ. ಹಿಂತಿರುಗಿ ಬನ್ನಿರಿ" ಎಂದು ಹೇಳಿದನು. ಈ ರೀತಿ ನುಡಿದ ಅಂಗದ ಕುಮಾರನ ವಾಕ್ಯಗಳನ್ನು ಕೇಳಿ ಆ ವಾನರರೆಲ್ಲರೂ ಬಹು ಕಷ್ಟದಿಂದ ಧೈರ್ಯವನ್ನವಲಂಬಿಸಿ ಒಟ್ಟುಗೂಡಿ ವೃಕ್ಷಗಳನ್ನೂ, ಪರ್ವತಗಳನ್ನೂ ಆಯುಧ

ತೇ ನಿವೃತ್ಯತು ಸಂಕ್ರುದ್ಧಾಃ ಕುಂಭಕರ್ಣಂ ವನೌಕಸಃ । ನಿಜಘ್ನುಃ ಪರಮಕ್ರುದ್ಧಾ ಸ್ಸಮದಾ ಇವಕುಂಜರಾಃ ॥ ೯ ॥ ಪ್ರಾಂಶುಭಿರ್ಗಿರಿಶೃಂಗೈಶ್ಚ ಶಿಲಾಭಿಶ್ಚ ಮಹಾಬಲಃ । ಪಾದಪೈಃ ಪುಷ್ಪಿತಾಗ್ರೈಶ್ಚ ಹನ್ಯಮಾನೋ ನಕಂಪತೇ ॥ ೧೦ ॥ ತಸ್ಯ ಗಾತ್ರೇಷು ಪತಿತಾ ಭಿದ್ಯಂತೇ ಶತಶಃ ಶಿಲಾಃ । ಪಾದಪಾಃ ಪುಷ್ಪಿತಾಗ್ರಾಶ್ಚ ಭಗ್ನಾಃ ಪೇತು ರ್ಮಹೀತಲೇ ॥೧೧॥ ಸೋಽಪಿ ಸೈನ್ಯಾನಿ ಸಂಕ್ರುದ್ಧೋ ವಾನರಾಣಾಂ ಮಹೌಜಸಾಂ। ಮಮಂಥ ಪರಮಾಯತ್ತೋ ವನಾನ್ಯಗ್ನಿರಿವೋತ್ಥಿತಃ ॥ ೧೨ ॥ ಲೋಹಿತಾರ್ದ್ರಾಸ್ತು

ಜಿರಂ - ರಣರಂಗವನ್ನು ಕುರಿತು, ಪ್ರತಸ್ಥುಃ - ಬಂದರು. ॥ ೮ ॥ ಸಂಕ್ರುದ್ಧಾಃ - ಸ್ವಭಾವಸಿದ್ಧವಾದ ಕೋಪವುಳ್ಳ, ತೇವನೌಕಸಃ - ಆ ಕಪಿಗಳು, ಸಮದಾಃ - ಮದವೇರಿದ, ಕುಂಜರಾಇವ-ಆನೆಗಳಂತೆ, ಪರಮಕ್ರುದ್ಧಾಃ - ಬಹಳ ಕ್ರುದ್ಧರಾಗಿ, ನಿವೃತ್ಯ - ಹಿಂತಿರುಗಿ, ಕುಂಭಕರ್ಣಂ - ಕುಂಭಕರ್ಣನನ್ನು, ನಿಜಘ್ನುಃ - ಹೊಡೆದರು. ॥ ೯ ॥ ಮಹಾಬಲಃ - ಬಹಳ ದೇಹತ್ರಾಣೆಯುಳ್ಳ ಕುಂಭಕರ್ಣನು, ಪ್ರಾಂಶುಭಿಃ - ದೀರ್ಘಗಳಾದ, ಗಿರಿಶೃಂಗೈಶ್ಚ - ಬೆಟ್ಟಗಳ ಶಿಖರಗಳಿಂದಲೂ, ಶಿಲಾಭಿಶ್ಚ - ಕಲ್ಲು ಗಳಿಂದಲೂ, ಪುಷ್ಪಿತಾಗ್ರೈಃ - ಹುವ್ವುಬಿಟ್ಟಿರುವ ತುದಿಗಳುಳ್ಳ, ಪಾದಪೈಶ್ಚ - ಗಿಡಗಳಿಂದಲೂ, ಹನ್ಯಮಾನೋಪಿ - ಹೊಡೆಯಲ್ಪಟ್ಟವನಾದರೂ, ನಕಂಪತೇ - ಚಲಿಸಲಿಲ್ಲ. ॥೧೦॥ ತಸ್ಯ - ಆ ಕುಂಭಕರ್ಣನ, ಗಾತ್ರೇಷು - ಅವಯವಗಳಲ್ಲಿ, ಪತಿತಾಃ - ಬಿದ್ದಿರುವ, ಶತಶಃ - ನೂರಾದ, ಶಿಲಾಃ - ಪಾಷಾಣಗಳು, ಬಿದ್ಯಂತೇ - ಭೇದಿಸಲ್ಪಟ್ಟವು, ಪುಷ್ಪಿತಾಗ್ರಾಃ - ಹುವ್ವು ಬಿಟ್ಟಿರುವ ತುದಿಗಳುಳ್ಳ, ಪಾದಪಾಶ್ಚ - ಗಿಡಗಳೂ, ಭಗ್ನಾಃ - ಮುರಿಯಲ್ಪಟ್ಟವುಗಳಾಗಿ, ಮಹೀತಲೇ - ಭೂಪ್ರದೇಶದಲ್ಲಿ, ಪೇತುಃ - ಬಿದ್ದವು. ॥೧೧॥ ಸೋಽಪಿ - ಆ ಕುಂಭಕರ್ಣನೂ ಕೂಡ, ಸಂಕ್ರುದ್ಧಃ - ಕೋಪಗೊಂಡು, ಪರಮಾಯತ್ತಃ - ಬಹು ಯುದ್ಧೋದ್ಯುಕ್ತನಾಗಿ, ಉತ್ಥಿತಃ - ಹುಟ್ಟಿದ, ಅಗ್ನಿಃ - ಅಗ್ನಿಯು, ವನಾ ನೀವ - ವನಗಳನ್ನಂತೆ, ಮಹೌಜಸಾಂ - ಮಹಾ ತೇಜೋವಂತರಾದ, ವಾನರಾಣಾಂ - ಕಪಿಗಳ, ಸೈನ್ಯಾನಿ - ಸೇನೆಗಳನ್ನು, ಮಮಂಥ - ತಡೆದನು. ॥೧೨॥ ಬಹವಃ - ಅನೇಕರಾದ, ವಾನರರ್ಷಭಾಃ- ಕಪಿಶ್ರೇಷ್ಠರು, ಲೋಹಿತಾರ್ದ್ರಾಃ - ರಕ್ತದಿಂದ ತೋಯಿಸಲ್ಪಟ್ಟವರಾಗಿ, ನಿರಸ್ತಾಃ - ಎತ್ತಿಹಾಕಲ್ಪ

ಗಳನ್ನಾಗಿ ಧರಿಸಿ ರಣರಂಗಕ್ಕೆ ಬಂದರು. ಹೀಗೆ ಅವರೆಲ್ಲರೂ ಹಿಂತಿರುಗಿ ಬಂದು ಅತ್ಯುಗ್ರ ವಾದ ಕೋಪಾಟೋಪವುಳ್ಳವರಾಗಿ ಮದದಾನೆಗಳಂತೆ ಆ ಕುಂಭಕರ್ಣನ ಮೇಲೆ ಬಿದ್ದು ಬಲವಾಗಿ ಹೊಡೆದರು ; ದೊಡ್ಡದೊಡ್ಡ ಪರ್ವತಗಳಿಂದಲೂ, ಕೋಡುಗಲ್ಲುಗಳಿಂದಲೂ, ಬಂಡೆಗಳಿಂದಲೂ, ಹೂಕಾಯಿಗಳಿಂದ ತುಂಬಿದ ಹೆಮ್ಮರಗಳಿಂದಲೂ ಆ ಕುಂಭ ಕರ್ಣನನ್ನು ಚೆನ್ನಾಗಿ ಹೊಡೆದು ಮರ್ದಿಸಿದರೂ, ಮಹಾ ಬಲಾಢ್ಯನಾದ ಆತನು ಸ್ವಲ್ಪವೂ ಚಲಿಸಲಿಲ್ಲವು ; ಇಷ್ಟುಮಾತ್ರವಲ್ಲದೆ ಆ ವಾನರರು ಪ್ರಯೋಗಿಸಿದ ಪರ್ವತ ಗಳೂ, ಶಿಲೆಗಳೂ ಆ ಕುಂಭಕರ್ಣನ ಅವಯವಗಳಲ್ಲಿ ಬಿದ್ದು ಪುಡಿಪುಡಿಯಾಗಿ ಹೋದುವು ; ಹೂಮೊಳೆತ ಮರಗಳೆಲ್ಲವೂ ಮುರಿದು ನೆಲಕ್ಕೆ ಬಿದ್ದುವು. ॥ ೬-೧೧ ॥ ಆ ತರುವಾಯ ಮಹಾ ಕ್ರೂರನಾದ ಆ ಕುಂಭಕರ್ಣನೂ ಬಹಳವಾಗಿ ಕನಲಿ ಅತ್ಯಧಿಕ ಬಲಪರಾಕ್ರಮ ಗಳಿಂದ ಮೆರೆಯುತ್ತಿದ್ದ ಆ ವಾನರಸೈನ್ಯವೆಲ್ಲವನ್ನೂ ಅಗ್ನಿದೇವನು ವನವನ್ನು ಸುಟ್ಟು ಹಾಳುಮಾಡುವಂತೆ ವಿಧವಿಧವಾಗಿ ಮರ್ದಿಸಿ ಹಾಳುಮಾಡಲುಪಕ್ರಮಿಸಿದನು. ಇದ ರಿಂದ ಅನೇಕ ವಾನರರು ರಕ್ತಸಿಕ್ತವಾದ ಗಾತ್ರಗಳುಳ್ಳವರಾಗಿ ಭೂಮಿಯಲ್ಲಿ ಬಿದ್ದರು.

ಬಹವಃ ಶೇರತೇ ವಾನರರ್ಷಭಾಃ । ನಿರಸ್ತಾಃ ಪತಿತಾ ಭೂಮೌ ತಾಮ್ರಪುಷ್ಪಾ ಇವ ದ್ರುಮಾಃ ॥ ೧೩ ॥ ಲಂಘಯಂತಃ ಪ್ರಧಾವಂತೋ ವಾನರಾ ನಾಽವಲೋಕಯನ್ । ಕೇಚಿತ್ಸಮುದ್ರೇ ಪತಿತಾಃ ಕೇಚಿದ್ಗಗನಮಾಶ್ರಿತಾಃ ॥ ೧೪ ॥ ವಧ್ಯಮಾನಾಸ್ತು ತೇ ವೀರಾ ರಾಕ್ಷಸೇನ ಬಲೀಯಸಾ । ಸಾಗರಂ ಯೇನ ತೇ ತೀರ್ಣಾಃ ಪಥಾ ತೇನ ಪ್ರದುದ್ರುವುಃ ॥ ೧೫ ॥ ತೇ ಸ್ಥಲಾನಿ ತಥಾ ನಿಮ್ನಂ ವಿಷಣ್ಣವದನಾ ಭಯಾತ್ । ಋಕ್ಷಾ ವೃಕ್ಷಾನ್ ಸಮಾರೂಢಾಃ ಕೇಚಿತ್ಪರ್ವತಮಾಶ್ರಿತಾಃ ॥ ೧೬ ॥ ಮಮಜ್ಜುರರ್ಣವೇ ಕೇಚಿದ್ಗುಹಾಃ ಕೇಚಿತ್ಸಮಾಶ್ರಿತಾಃ । ನಿಷೇದುಃ ಪ್ಲವಗಾಃ ಕೇಚಿತ್ ಕೇಚಿನ್ನೈವಾಽ

ಟ್ಟವರಾಗಿ, ತಾಮ್ರಪುಷ್ಪಾಃ - ಕೆಂಪು ಹುವ್ವುಗಳುಳ್ಳ, ಪತಿತಾಃ - ಬೀಳುತ್ತಿರುವ, ದ್ರುಮಾಇವ - ಮುತ್ತುಗದ ಮರಗಳಂತೆ, ಭೂಮೌ - ನೆಲದಲ್ಲಿ, ಶೇರತೇ - ಮಲಗಿದರು, ಲಂಘಯಂತಃ - ಹಾರುತ್ತ, ಪ್ರಧಾವಂತಃ - ಓಡಿಹೋದ, ವಾನರಾಃ - ಕಪಿಗಳು, ನಾವಲೋಕಯನ್ - ಹಿಂತಿರುಗಿ ನೋಡದೇ ಇರುವವರಾದರು. ॥ ೧೩ ॥ ಕೇಚಿತ್ - ಕೆಲವರು, ವೀರಾಃ - ಶೂರರಾದ, ತೇ - ಆ ಕಪಿಗಳು, ಬಲೀಯಸಾ - ಬಹಳ ಬಲವಂತನಾದ, ರಾಕ್ಷಸೇನ - ಕುಂಭಕರ್ಣನಿಂದ, ವಧ್ಯಮಾನಾಃ - ಹೊಡೆಯಲ್ಪಟ್ಟವರಾಗಿ, ಸಮುದ್ರೇ - ಕಡಲಿನಲ್ಲಿ, ಪತಿತಾಃ - ಬಿದ್ದರು, ಕೇಚಿತ್ - ಕೆಲವರು, ಗಗನಂ - ಅಂತರಿಕ್ಷವನ್ನು, ಆಶ್ರಿತಾಃ - ಹೊಂದಿದರು. ॥ ೧೪ ॥ ತೇ - ಆ ಕಪಿಗಳು, ಏನಪಥಾ - ಯಾವ ಮಾರ್ಗದಿಂದ, ಸಾಗರಂ - ಸಮುದ್ರವನ್ನು, ತೀರ್ಣಾಃ - ದಾಟಿದರೋ, ತೇನಪಥಾ - ಆ ಮಾರ್ಗದಿಂದಲೇ, ಪ್ರದುದ್ರುವುಃ - ಓಡಿಹೋದರು. ॥೧೫॥ ತೇ - ಆ ಕಪಿಗಳು, ಸ್ಥಲಾನಿ - ವಿಸ್ತಾರವಾದ ಸ್ಥಳಗಳನ್ನು, ಆಶ್ರಿತಾಃ - ಹೊಂದಿದರು, ಕೇಚಿತ್ - ಕೆಲವರು, ಭಯಾತ್ - ಭಯದಿಂದ, ವಿಷ......ತ್ - ವಿಷಾದದಿಂದ ಮುಗ್ಗಿಹೋದ ಮುಖವುಳ್ಳವರಾಗಿ, ನಿಮ್ನಂ - ತಗ್ಗಾಗಿರುವ ಪ್ರದೇಶವನ್ನು, ಆಶ್ರಿತಾಃ- ಹೊಂದಿದರು, ಕೇಚಿತ್ - ಕೆಲವು, ಋಕ್ಷಾಃ - ಕರಡಿಗಳು, ವೃಕ್ಷಾನ್ - ಮರಗಳನ್ನು, ಸಮಾರೂಢಾಃ - ಏರಿದವು, ಕೇಚಿತ್ - ಕೆಲವರು, ಪರ್ವತಂ - ಬೆಟ್ಟವನ್ನು, ಆಶ್ರಿತಾಃ - ಆಶ್ರಯಿಸಿದರು. ॥೧೬॥ ಕೇಚಿತ್ - ಕೆಲವರು, ಅರ್ಣವೇ - ಕಡಲಿನಲ್ಲಿ, ಮಮಜ್ಜುಃ - ಮುಳುಗಿದರು, ಕೇಚಿತ್ - ಕೆಲವರು, ಗುಹಾಃ - ಗುಹೆಗಳನ್ನು, ಸಮಾಶ್ರಿತಾಃ - ಹೊಂದಿದರು, ಕೇಚಿತ್ಪ್ಲವಗಾಃ - ಕೆಲಮಂದಿ ವಾನರರು, ನಿಷೇದುಃ - ಕುಳಿತುಕೊಂಡರು, ಕೇಚಿತ್ - ಕೆಲವರು, ನೈವೋಪತಸ್ಥಿರೇ - ನಿಲ್ಲದೆಯೇ ಹೋದರು, ಕೇಚಿತ್ - ಕೆಲವರು, ಭೂಮೌ - ನೆಲದಲ್ಲಿ, ನಿಪತಿತಾಃ - ಬಿದ್ದರು, ಕೇಚಿತ್ - ಕೆಲ

ಮುತ್ತುಗದ ಗಿಡಗಳಂತೆ ಶೋಭಿಸುತ್ತಿದ್ದರು. ಆ ರಾಕ್ಷಸನ ಪರಾಕ್ರಮವನ್ನು ನೋಡಿ ನಿಲ್ಲಲಾರದೆ ಅನೇಕ ವಾನರರು ಅಂತರಿಕ್ಷದಲ್ಲಿ ಹಾರಿ ಹೊರಟುಹೋದರು. ಅನೇಕರು ಸಾಗರದಲ್ಲಿ ಬಿದ್ದುಹೋದರು; ಕೆಲವರು ಅಂತರಿಕ್ಷವನ್ನೇ ಆಶ್ರಯಿಸಿದರು. ಕೆಲವರು ಆ ಕುಂಭಕರ್ಣನಿಂದ ಮರ್ದಿತರಾಗಿ ಭಯದಿಂದ ತತ್ತಳಿಸಿ ಬಂದ ದಾರಿಯನ್ನು ಹಿಡಿದು ಓಡಿಹೋದರು. ಕೆಲವರು ಹಳ್ಳಗಳಲ್ಲಿ ಅವಿತುಕೊಂಡರು. ಕರಡಿಗಳೆಲ್ಲವೂ ವೃಕ್ಷಗಳನ್ನು ಆಶ್ರಯಿಸಿದವು. ಕೆಲವರು ಪರ್ವತಗಳನ್ನೇರಿ ನಿಂತರು. ॥ ೧೨–೧೬ ॥ ಕೆಲವರು ಕಡಲಿನಲ್ಲಿಯೇ ಮುಳುಗಿಹೋದರು. ಕೆಲವರು ಗುಹೆಗಳಲ್ಲಿ ಅಡಗಿದರು. ಕೆಲವರು ಭೂಮಿಯಲ್ಲಿ ಮಲಗಿದವರು ಏಳಲೇ ಇಲ್ಲವು. ಕೆಲವರು ರಣರಂಗದಲ್ಲಿಯೇ ನಿಲ್ಲದೆ ಓಡಿಹೋದರಲ್ಲದೆ ಹಿಂತಿರುಗಿ ನೋಡಲೂ ಹೆದರಿದರು. ಕೆಲವರು ನೆಲಕ್ಕುರುಳಿದರು. ಕೆಲ

ವತಸ್ಥಿರೇ ॥ ೧೭ ॥ (ಕೇಚಿದ್ಭೂಮೌ ನಿಪತಿತಾಃ ಕೇಚಿತ್ ಸುಪ್ತಾ ಮೃತಾಇವ) । ತಾನ್ ಸಮೀಕ್ಷ್ಯಾಂಗದೋ ಭಗ್ನಾನ್ ವಾನರಾನಿದಮಬ್ರವೀತ್ ॥ ೧೮ ॥ "ಅವತಿಷ್ಠತ ಯುಧ್ಯಾಮೋ ನಿವರ್ತಧ್ವಂ ಪ್ಲವಂಗಮಾಃ । ಭಗ್ನಾನಾಂ ವೋ ನಪಶ್ಯಾಮಿ ಪರಿಗಮ್ಯ ಮಹೀಮಿಮಾಂ । ಸ್ಥಾನಂ ಸರ್ವೇ ನಿವರ್ತಧ್ವಂ ಕಿಂ ಪ್ರಾಣಾನ್ ಪರಿರಕ್ಷಥ! ॥೧೯॥ ನಿರಾಯುಧಾನಾಂ ದ್ರವತಾ ಮಸಂಗಗತಿಪೌರುಷಾಃ । ದಾರಾಹ್ಯಪಹಸಿಷ್ಯಂತಿ ಸವೈ ಘಾತಸ್ಸುಜೀವಿನಾಂ ॥ ೨೦ ॥ ಕುಲೇಷು ಜಾತಾಸ್ಸರ್ವೇಸ್ಮ ವಿಸ್ತೀರ್ಣೇಷು ಮಹತ್ಸುಚ । ಕ್ವಗಚ್ಛಥ ಭಯತ್ರಸ್ತಾ ಹರಯಃ! ಪ್ರಾಕೃತಾ ಯಥಾ । ಅನಾರ್ಯಾಃ

ವರು, ಮೃತಾಇವ - ಸತ್ತುಹೋದವರಂತೆ, ಸುಪ್ತಾಃ - ಮಲಗಿದರು. ॥ ೧೭ ॥ ಭಗ್ನಾನ್ - ಯುದ್ಧದಿಂದ ಮುರಿದುಹೋದ, ತಾನ್‌ವಾನರಾನ್ - ಅಂಥಾ ಕಪಿಗಳನ್ನು, ಸಮೀಕ್ಷ್ಯ - ಕಂಡು, ಅಂಗದಃ - ಅಂಗದನು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೮ ॥ ಹೇ ಪ್ಲವಂಗಮಾಃ - ಎಲೈ ಕಪಿಗಳಿರಾ, ಅವತಿಷ್ಠತ - ನಿಲ್ಲಿರಿ, ನಿವರ್ತಧ್ವಂ - ಹಿಂತಿರುಗಿರಿ, ಯುಧ್ಯಾಮಃ - ಯುದ್ಧ ಮಾಡೋಣ, ಭಗ್ನಾನಾಂ - ಮುರಿದುಹೋದ, ವಃ - ನಮಗೆ, ಇಮಾಂಮಹೀಂ - ಈ ನೆಲದಲ್ಲಿ, ಪರಿಗಮ್ಯ - ತಿರುಗಿದರೂ, ಸ್ಥಾನಂ - ಸ್ಥಳವನ್ನು, ನಪಶ್ಯಾಮಿ - ಕಾಣೆನು, ಸರ್ವೇ - ಸಮಸ್ತರೂ, ನಿವರ್ತಧ್ವಂ - ಹಿಂತಿರುಗಿ ಬನ್ನಿರಿ, ಪ್ರಾಣಾನ್ - ಪ್ರಾಣಗಳನ್ನು, ಕಿಂಪರಿರಕ್ಷಥ - ಏತಕ್ಕೆ ಸಂರಕ್ಷಣೆ ಮಾಡಿಕೊಳ್ಳುತ್ತೀರಿ. ॥ ೧೯ ॥ ಹೇ ಅ....ಷಾಃ - ಎಲೈ ಹಿಡಿಯಲಸಾಧ್ಯವಾದ ಗಮನವೂ, ಪರಾಕ್ರಮವೂ ಉಳ್ಳವರೇ, ದ್ರವತಾಂ - ಓಡಿಹೋಗುತ್ತಿರುವ, ನಿರಾಯುಧಾನಾಂ - ಆಯುಧಗಳಿಲ್ಲದೆ, ಸುಜೀವಿನಾಂ - ಚನ್ನಾಗಿ ಬದುಕಿರುವ ನಿಮ್ಮ, ದಾರಾಃ - ಹೆಂಡಂದಿರು, ಅಪಹಸಿಷ್ಯಂತಿ - ಅಪಹಾಸ್ಯ ಮಾಡುತ್ತಾರೆ, ಸವೈ - ಆ ಪರಿಹಾಸ್ಯವೇ, ಘಾತಃ - ಸಂಹಾರವಲ್ಲವೇ. ॥ ೨೦ ॥ ವಿಸ್ತೀರ್ಣೇಷು - ವಿಸ್ತಾರವಾದ, ಮಹತ್ಸು - ಪ್ರಸಿದ್ಧಗಳಾದ, ಕುಲೇಷು - ವಂಶಗಳಲ್ಲಿ, ಸರ್ವೇ - ಸಮಸ್ತರೂ, ಜಾತಾಸ್ಮ - ಹುಟ್ಟಿದವರಷ್ಟೆ, ಹೇ ಹರಯಃ - ಎಲೈ ಕಪಿಗಳಿರಾ, ಭಯತ್ರಸ್ತಾಃ - ಭಯಪೀಡಿತರಾಗಿ, ಪ್ರಾಕೃತಾಯಥಾ - ಪಾಮರರಂತೆ, ಕ್ವಗಚ್ಛಥ - ಎಲ್ಲಿಗೆ ಹೋಗುವಿರಿ,

ವರು ಎಚ್ಚರವಾಗಿದ್ದರೂ ರಾಕ್ಷಸರು ಬಂದು ಹಿಂಸಿಸಿಯಾರೆಂದು ಮೃತರಾದವರಂತೆ ಮಲಗಿದ್ದರು. ಈ ರೀತಿ ಕುಂಭಕರ್ಣನಿಂದ ವಿಧವಿಧವಾಗಿ ಬಾಧೆಗೊಂಡು ಪ್ರಾಣಗಳನ್ನು ರಕ್ಷಿಸಿಕೊಳ್ಳಲು ಓಡಿಹೋಗುತ್ತಿದ್ದ ವಾನರರೆಲ್ಲರನ್ನೂ ನೋಡಿ ಅಂಗದನು ಮತ್ತೊಮ್ಮೆ ಅವರನ್ನು ಕರಿತು, "ಅಯ್ಯಾ ವಾನರರೇ! ಓಡಿಹೋಗಬೇಡಿ; ನಿಲ್ಲಿರಿ. ಭಗ್ನರಾಗಿರುವ ನಿಮಗೆ ರಣರಂಗವೇ ಗತಿಯಲ್ಲದೆ ಭೂಮಂಡಲದಲ್ಲೆಲ್ಲಿ ಸುತ್ತಿದರೂ ಸ್ಥಾನವಿರುವುದಿಲ್ಲವು. ಅಂಜುವಿರೇಕೆ? ಧೈರ್ಯವನ್ನವಲಂಬಿಸಿರಿ. ನಾವೆಲ್ಲರೂ ಒಟ್ಟುಗೂಡಿ ಯುದ್ಧಮಾಡೋಣ. ಹಿಂತಿರುಗಿಬನ್ನಿರಿ. ಪ್ರಾಣರಕ್ಷಣೆಗಾಗಿ ತನುವನ್ನೇಕೆ ತೊರೆಯುವಿರಿ? ಇದು ವೀರರಾದ ನಿಮಗೆ ತಕ್ಕುದಲ್ಲ. ಇತರರಿಂದ ತಿರಸ್ಕರಿಸಲಸದಳವಾದ ಪರಾಕ್ರಮಗಳುಳ್ಳವರಾದರೂ ನೀವುಗಳೆಲ್ಲರೂ ನಿರಾಯುಧರಾಗಿ ರಣಾಂಗಣವನ್ನು ಬಿಟ್ಟು ಓಡಿಹೋದರೆ ನಿಮ್ಮ ಹೆಂಡತಿಯರು ನಿಮ್ಮನ್ನು ನೋಡಿ ನಗುವುದಿಲ್ಲವೆ? ಛೀ! ಛೀ! ಹಾಗೆ ಹೆಂಡತಿಯರಿಂದ ಅಪಹಾಸ್ಯ ಮಾಡಿಸಿಕೊಳ್ಳುವುದಕ್ಕಿಂತ ಸಾಯುವುದೇ ಲೇಸಲ್ಲವೆ. ॥ ೧೭–೨೦ ॥ ಇದೂ ಅಲ್ಲದೆ, ಅಯ್ಯಾ ವಾನರೋತ್ತಮರಿರಾ! ನೀವು ಮಹೋನ್ನತಕೀರ್ತಿಸಂಪನ್ನಗಳಾದ ಕುಲಗಳಲ್ಲಿ ಹುಟ್ಟಿದವ

ಖಲು ಯದ್ಭೀತಾಸ್ತ್ಯಕ್ತ್ವಾ ವೀರ್ಯಂ ಪ್ರಧಾವತ॥೨೧॥ ವಿಕತ್ಥನಾನಿ ವೋ ಯಾನಿ ತದಾ ವೈ ಜನಸಂಸದಿ। ತಾನಿ ವಃ ಕ್ವನುಯಾತಾನಿ ಸೋದಗ್ರಾಣಿ ಮಹಾಂತಿಚ॥೨೨॥ ಭೀರುಪ್ರವಾದಾಃ ಶ್ರೂಯಂತೇ ಯಸ್ತು ಜೀವತಿ ಧಿಕ್ಕೃತಃ । ಮಾರ್ಗಸ್ಸತ್ಪುರುಷೈರ್ಜುಷ್ಟಸ್ಸೇವ್ಯತಾಂ ತ್ಯಜ್ಯತಾಂ ಭಯಂ ॥ ೨೩ ॥ ಶಯಾಮಹೇಽಥ ನಿಹತಾಃ ಪೃಥಿವ್ಯಾಮಲ್ಪಜೀವಿತಾಃ । ದುಷ್ಪ್ರಾಪಂ ಬ್ರಹ್ಮಲೋಕಂ ವಾ ಪ್ರಾಪ್ನುಮೋ ಯುಧಿ ಸೂದಿತಾಃ ॥ ೨೪ ॥ ಸಂಪ್ರಾಪ್ನುಯಾಮಃ ಕೀರ್ತಿಂವಾ ನಿಹತ್ವಾ ಶತ್ರುಮಾಹವೇ ।

ಯತ್ - ಯಾವ ಕಾರಣದಿಂದ, ಭೀತಾಃ - ಭಯಗೊಂಡು, ವೀರ್ಯಂ - ಪರಾಕ್ರಮವನ್ನು, ತ್ಯಕ್ತ್ವಾ-ಬಿಟ್ಟು, ಪ್ರಧಾವತ - ಓಡಿಹೋಗುತ್ತೀರೋ, ತತ್ - ಆ ಕಾರಣದಿಂದ, ಅನಾರ್ಯಾಃಖಲು - ಪೂಜ್ಯರಾಗದೇ ಹೋಗುವಿರಷ್ಟೆ. ॥ ೨೧ ॥ ತದಾ - ಆ ಕಾಲದಲ್ಲಿ, ಜನಸಂಸದಿ - ಜನರ ಗುಂಪಿನಲ್ಲಿ, ವಃ - ನಿಮ್ಮ, ವಿಕತ್ಥನಾನಿ - ಆತ್ಮಶ್ಲಾಘನೆಯ ಮಾತುಗಳು, ಯಾನಿ - ಯಾವವೋ, ಉದಗ್ರಾಣಿ - ಬಹಳವಾದ, ಮಹಾಂತಿ - ಅನೇಕಗಳಾದ, ವಃ - ನಿಮ್ಮ, ತಾನಿ - ಆ ಮಾತುಗಳು, ಕ್ವನುಯಾತಾನಿ - ಎಲ್ಲಿ ಹೋದವು. ॥ ೨೨ ॥ ಧಿಕ್ಕೃತಃ - ತಿರಸ್ಕರಿಸಲ್ಪಟ್ಟವನಾಗಿ, ಯಸ್ತು - ಯಾವ ಪುರುಷನಾದರೆ, ಜೀವತಿ - ಬದುಕಿರುತ್ತಾನೋ, ತದ್ವಿಷಯೇ - ಅವನ ವಿಷಯವಾಗಿ, ಭೀಮಪ್ರವಾದಾಃ - ಓಡಿಹೋದನೆಂಬ ಪ್ರಸಿದ್ಧವಾರ್ತೆಗಳು, ಶ್ರೂಯಂತೇ - ಕೇಳಲ್ಪಡುತ್ತವೆ, ಸತ್ಪುರುಷೈಃ - ವೀರಪುರುಷರಿಂದ, ಜುಷ್ಟಃ - ಹೊಂದಲ್ಪಟ್ಟ, ಮಾರ್ಗಃ - ಮಾರ್ಗವು, ಸೇವತಾಂ - ಅನುಸರಿಸಲ್ಪಡಲಿ, ಭಯಂ - ಭೀತಿಯು, ತ್ಯಜ್ಯತಾಂ - ಬಿಡಲ್ಪಡಲಿ. ॥೨೩॥ ಅಥ - ಬಳಿಕ, ಅಲ್ಪಜೀವಿತಾಃ - ಕೊಂಚ ದಿವಸ ಬದುಕುವವರಾಗಿ, ಪೃಥಿವ್ಯಾಂ - ನೆಲದಲ್ಲಿ, ಹತಾಃ - ಹೊಡೆಯಲ್ಪಟ್ಟವರಾಗಿ, ಶಯಾಮಹೇ - ಮಲಗುತ್ತೇವೆ, ಯುಧಿವಾ - ಕಾಳೆಗದಲ್ಲಾಗಲಿ, ಸೂದಿತಾಃ - ಹೊಡೆಯಲ್ಪಟ್ಟವರಾಗಿ, ದುಷ್ಪ್ರಾಪಂ - ಹೊಂದಲಸಾಧ್ಯವಾದ, ಬ್ರಹ್ಮಲೋಕಂ-ಸತ್ಯಲೋಕವನ್ನು, ಪ್ರಾಪ್ನುಯಾಮೋವಾ - ಹೊಂದಲಾದರೂ ಹೊಂದುತ್ತೇವೆ. ॥ ೨೪ ॥ ಆಹವೇ - ಕಾಳೆಗದಲ್ಲಿ, ಶತ್ರುಂ - ಶತ್ರುವನ್ನು, ಹತ್ವಾ - ಕೊಂದು, ಕೀರ್ತಿಂ - ಯಶಸ್ಸನ್ನು, ಸಂಪ್ರಾ......ವಾ - ಹೊಂದಲಾದರೂ ಹೊಂದುತ್ತೇವೆ,

ರಲ್ಲವೆ? ನೀವು ಈ ವಿಷಯವನ್ನೂ ಮರೆತು ಪ್ರಾಕೃತರಂತೆ ಕೇವಲ ಭಯಗ್ರಸ್ತರಾಗಿ ಓಡುತ್ತಿರುವಿರಲ್ಲ! ಇದೇನಿದು. ಅಯೋಗ್ಯರಂತೆ ನೀವೂ ಸಹ ನಿಮ್ಮ ಪರಾಕ್ರಮಗಳನ್ನು ಬದಗಿಟ್ಟು ಓಡಿಹೋಗುವುದೆ? ಕೂಡದು, ಕೂಡದು. ಎಲೈ ವಾನರವೀರರೇ! ಈವರೆಗಾಗಲೇ ನೀವು ಈ ಸಭೆಯಲ್ಲಿ ವಿಧವಿಧವಾಗಿ ನಿಮ್ಮ ಪೌರುಷಗಳನ್ನು ಹೇಳಿಕೊಂಡಿರುವಿರಿ. ಆ ಮಾತುಗಳೆಲ್ಲವೂ ಈಗೆಲ್ಲಿ ಹೋದುವು. ಅಯ್ಯೋ! ನೀವೆಲ್ಲರೂ ಜೀವಂತರಾಗಿರುವಾಗಲೇ ನಿಮ್ಮ ಮಾತುಗಳೆಲ್ಲವೂ ವ್ಯರ್ಥವಾದುವೆ! ಇದು ನಿಮಗೆ ವ್ಯಥೆಯನ್ನುಂಟುಮಾಡುವುದಿಲ್ಲವೆ? ಅಕಟಕಟಾ! ನೀವು ನಿಮ್ಮ ಮಾತುಗಳು ವ್ಯರ್ಥವಾದುದನ್ನು ನೋಡಿ ಹೇಗೆತಾನೆ ಜೀವಿಸಬಲ್ಲಿರಿ? ಎಲೈ ವಾನರಶ್ರೇಷ್ಠರೇ! ನೀವೆಲ್ಲರೂ ಉತ್ತಮ ಪುರುಷರು ಅನುಸರಿಸುವ ಮಾರ್ಗದಲ್ಲಿಯೇ ಹೋಗಬೇಕಲ್ಲದೆ ಕಾಪುರುಷರ ಮಾರ್ಗವನ್ನು ಅನುಸರಿಸಬೇಡಿರಿ. ಈಗ ನಿಮಗುಂಟಾಗಿರುವ ಭಯವನ್ನು ತೊರೆಯಿರಿ. ಅಯ್ಯಾ ಶೂರರೇ! ಈಗ ನಾವು ಅಲ್ಪವಾದ ನಮ್ಮ ಆಯುಸ್ಸೆಲ್ಲವನ್ನೂ ಯುದ್ಧಭೂಮಿಯಲ್ಲಿಯೇ ಕಳೆಯೋಣ. ಹಾಗೆ ನಾವು ಈ ರಣಭೂಮಿಯಲ್ಲಿ ಪರಾಕ್ರಮಿಸಿ ಮಡಿದುದೇ ಆದರೆ ಯಾರಿಂದಲೂ ಹೊಂದಲಶಕ್ಯವಾದ ಕೀರ್ತಿಯು

ಜೀವಿತಂ ವೀರಲೋಕಸ್ಯ ಮೋಕ್ಷ್ಯಾಮೋ ವಸು ವಾನರಾಃ ॥ ೨೫ ॥ ನಕುಂಭಕರ್ಣಃ ಕಾಕುತ್‌ಸ್ಥಂ ದೃಷ್ಟ್ವಾ ಜೀವನ್ ಗಮಿಷ್ಯತಿ । ದೀಪ್ಯಮಾನಮಿವಾಸಾದ್ಯ ಪತಂಗೋ ಜ್ವಲನಂ ಯಥಾ ॥ ೨೬ ॥ ಪಲಾಯನೇನ ಚೋದ್ದಿಷ್ಟಾಃ ಪ್ರಾಣಾನ್ ರಕ್ಷ್ಯಾಮಹೇ ವಯಂ । ಏಕೇನ ಬಹವೋ ಭಗ್ನಾ ಯಶೋ ನಾಶಂ ಗಮಿಷ್ಯತಿ" ॥ ೨೭ ॥ ಏವಂ ಬ್ರುವಾಣಂ ತಂ ಶೂರಮಂಗದಂ ಕನಕಾಂಗದಂ । ದ್ರವಮಾಣಾಸ್ತತೋ ವಾಕ್ಯ ಮೂಚುಃ ಶೂರವಿಗರ್ಹಿತಂ ॥ ೨೮ ॥ "ಕೃತಂ ನಃ ಕದನಂ ಘೋರಂ ಕುಂಭಕರ್ಣೇನ

ಹೇ ವಾನರಾಃ - ಎಲೈ ಕಪಿಗಳಿರಾ, ವೀರಲೋಕಸ್ಯ - ಶೂರರಿಂದ ಪ್ರಾಪ್ತವಾದ ಲೋಕಕ್ಕೆ, ವಸು - ಮೂಲ್ಯಪ್ರಾಯವಾದ, ಜೀವಿತಂವಾ - ಪ್ರಾಣವನ್ನಾದರೂ, ಮೋಕ್ಷ್ಯಾವಃ - ಬಿಡೋಣ. ॥ ೨೫ ॥ ಕುಂಭಕರ್ಣಃ - ಕುಂಭಕರ್ಣನು, ದೀಪ್ಯಮಾನಂ - ಪ್ರಜ್ವಲಿಸುತ್ತಿರುವ, ಜ್ವಲನಂ - ಅಗ್ನಿಯನ್ನು, ಆಸಾದ್ಯ - ಹೊಂದಿ, ಪತಂಗೋಯಥಾ - ಪತಂಗದ ಹುಳುವು ಹೇಗೋ ಹಾಗೆ, ಕಾಕುತ್‌ಸ್ಥಂ - ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಜೀವನ್ - ಬದುಕಿ, ನಗಮಿಷ್ಯತಿ - ಹೋಗಲಾರನು. ॥೨೬॥ ಏಕೇನ - ಓರ್ವನಾದ ಆ ಕುಂಭಕರ್ಣನಿಂದ, ಭಗ್ನಾಃ - ಭಂಗಪಟ್ಟ, ಬಹವಃ - ಬಹಳಮಂದಿಯಾದ, ವಯಂ - ನಾವು, ಪಲಾಯನೇನ - ಓಡಿಹೋಗೋಣದರಿಂದ, ಉದ್ದಿಷ್ಟಾಃ - ಉದ್ದೇಶಮಾಡಲ್ಪಟ್ಟವರಾಗಿ, ಪ್ರಾಣಾನ್ - ಪ್ರಾಣಗಳನ್ನು, ರಕ್ಷ್ಯಾಮಹೇಯದಿ - ಸಂರಕ್ಷಣೆ ಮಾಡಿಕೊಂಡವರೇ ಆದರೆ, ತತಃ - ಬಳಿಕ, ಯಶಃ - ಕೀರ್ತಿಯು, ನಾಶಂ - ಮಾಲಿನ್ಯವನ್ನು, ಗಮಿಷ್ಯತಿ - ಹೊಂದುವುದು. ॥ ೨೭ ॥ ಏವಂ - ಈ ಪರಿಯಾಗಿ, ಬ್ರುವಾಣಂ - ಹೇಳುತ್ತಿರುವ, ಶೂರಂ - ಶೌರ್ಯವಂತನಾದ, ಕನಕಾಂಗದಂ - ಚಿನ್ನದ ಅಂಗದಗಳುಳ್ಳ, ಅಂಗದಂ - ಅಂಗದನನ್ನು ಕುರಿತು, ತತಃ - ಬಳಿಕ, ದ್ರವಮಾಣಾಃ - ಓಡಿಹೋಗುತ್ತಿರುವ ಕಪಿಗಳು, ಶೂರವಿಗರ್ಹಿತಂ - ಶೂರರಿಂದ ನಿಂದಿಸಲ್ಪಟ್ಟ, ವಾಕ್ಯಂ - ಮಾತನ್ನು, ಊಚುಃ - ಹೇಳಿದರು. ॥ ೨೮ ॥ ರಕ್ಷಸಾ - ರಕ್ಕಸನಾದ, ಕುಂಭಕರ್ಣೇನ - ಕುಂಭಕರ್ಣನೊಡನೆ, ನಃ - ನಮಗೆ, ಘೋರಂ - ಭಯಂಕರವಾದ, ಕದನಂ - ಕದನವು, ಕೃತಂ - ಸಾಕು, ನಃ - ನಮಗೆ, ಜೀವಿತಂ - ಪ್ರಾಣವೇ, ದಯಿತಂಹಿ - ಹೆಚ್ಚಾದುದಷ್ಟೇ, ನಃ - ನಮಗೆ,

---

ನಮಗೆ ದೊರೆಯುತ್ತದೆಯಲ್ಲದೆ ಬ್ರಹ್ಮಲೋಕವಾಸವೂ ಲಭಿಸುತ್ತದೆ. ಅಥವಾ ರಣರಂಗದಲ್ಲಿ ಕಾದಿ, ಶತ್ರುಗಳನ್ನು ಕೊಂದು, ಅಪಾರವಾದ ಯಶಸ್ಸನ್ನು ಹೊಂದೋಣ. ಅಥವಾ ಒಂದು ವೇಳೆ ಕಾದಿ ಮಡಿದರೂ ನಮಗೆ ವೀರಲೋಕಗಳು ದೊರಕುವುದು ಖಂಡಿತವೆಂದು ತಿಳಿಯಿರಿ. ಅಯ್ಯಾ! ಕೇಳಿರಿ: ಈ ಕುಂಭಕರ್ಣನು ನಮ್ಮ ರಘುಪತಿಯ ಕಣ್ಣಿಗೆ ಬಿದ್ದ ಬಳಿಕ ಮರಳಿ ಲಂಕೆಗೆ ಜೀವದಿಂದ ಹಿಂತಿರುಗುವುದೆಂದರೇನು? ಇವನು ಬೆಂಕಿಯಲ್ಲಿ ಬಿದ್ದ ಶಲಭದಂತೆ ನಾಶವಾಗುವುದು ಖಂಡಿತವೇ ಸರಿ. ॥೨೧—೨೬॥ ಎಲೈ ವೀರರೇ! ನಾವಿಷ್ಟುಮಂದಿ ಶೂರರೂ ಒಬ್ಬ ರಾಕ್ಷಸನೊಡನೆ ಯುದ್ಧಮಾಡಲಾರದೆ ಪ್ರಾಣರಕ್ಷಣೆಗಾಗಿ ಯತ್ನಿಸಿದುದೇ ಆದರೆ ನಮ್ಮ ಕೀರ್ತಿಯೆಲ್ಲವೂ ನಾಶವಾಗಿ ಹೋಗುವುದು" ಎಂದು ಹೇಳಿದನು. ಈ ರೀತಿ ನುಡಿದ ಕನಕಾಂಗದನಾದ ಅಂಗದಕುಮಾರನ ಮಾತುಗಳನ್ನು ಕೇಳಿ ಪಲಾಯನವಾಗುತ್ತಿದ್ದ ವಾನರರೆಲ್ಲರೂ ಅವನನ್ನು ಕುರಿತು ಶೂರವಿಗರ್ಹಿತವಾದ ಮಾತುಗಳನ್ನಾಡಬಯಸಿ, "ಅಯ್ಯಾ ವಾನರೋತ್ತಮನೇ! ಅಂಗದನೇ!! ನಾವು ಈವರೆಗೂ ಈ ಕುಂಭಕರ್ಣನೊಡನೆ ಯುದ್ಧಮಾಡಿಯಾಯಿತು.

ರಕ್ಷಸಾ । ನ ಸ್ಥಾನಕಾಲೋ ಗಚ್ಛಾಮೋ ದಯಿತಂ ಜೀವಿತಂ ಹಿ ನಃ'' ॥೨೯॥ ಏತಾವ ದುಕ್ತ್ವಾ ವಚನಂ ಸರ್ವೇ ತೇ ಭೇಜಿರೇ ದಿಶಃ । ಭೀಮಂ ಭೀಮಾಕ್ಷಮಾಯಾಂತಂ ದೃಷ್ಟ್ವಾ ವಾನರಯೂಥಪಾಃ ॥ ೩೦ ॥ ದ್ರವಮಾಣಾಸ್ತು ತೇ ವೀರಾ ಅಂಗದೇನ ವಲೀಮುಖಾಃ । ಸಾಂತ್ವೈಶ್ಚೈವಾನುಮಾನೈಶ್ಚ ತತಸ್ಸರ್ವೇ ನಿವರ್ತಿತಾಃ ॥ ೩೧ ॥ ಪ್ರಹರ್ಷಮುಪನೀತಾಶ್ಚ ವಾಯುಪುತ್ರೇಣ ಧೀಮತಾ । ಆಜ್ಞಾಪ್ರತೀಕ್ಷಾಸ್ತಸ್ಥುಶ್ಚ ಸರ್ವೇ ವಾನರಯೂಥಪಾಃ ॥ ೩೨ ॥

ಸ್ಥಾನಕಾಲಃ - ನಿಲ್ಲುವದಕ್ಕೆ ಸಮಯವು, ನ - ಅಲ್ಲವು, ಗಚ್ಛಾಮಃ - ಹೋಗುತ್ತೇವೆ. ॥ ೨೯ ॥ ಏತಾವತ್ - ಇಂಥಾ, ವಚನಂ - ಮಾತನ್ನು, ಉಕ್ತ್ವಾ - ಹೇಳಿ, ತೇವಾನರಯೂಥಪಾಃ - ಆ ಕಪಿ ಯೂಥಪತಿಗಳು, ಭೀಮಾಕ್ಷಂ - ಭಯಂಕರ ನೇತ್ರಗಳುಳ್ಳ, ಆಯಾಂತಂ - ಬರುತ್ತಿರುವ ಕುಂಭಕರ್ಣನನ್ನು, ದೃಷ್ಟ್ವಾ - ಕಂಡು, ಸರ್ವೇ - ಸಮಸ್ತರೂ, ದಿಶಃ - ದಿಕ್ಕುಗಳನ್ನು, ಭೇಜಿರೇ- ಹೊಂದಿದರು. ॥ ೩೦ ॥ ವೀರಾಃ - ಶೂರರಾದ, ದ್ರವಮಾಣಾಃ - ಓಡಿಹೋಗುತ್ತಿರುವ, ತೇವಲೀ ಮುಖಾಃ - ಆ ವಾನರರು, ಸರ್ವೇ - ಸಮಸ್ತರೂ, ಅಂಗದೇನ - ಅಂಗದನಿಂದ, ಸಾಂತ್ವೈಶ್ಚೈವ - ಸಮಾಧಾನ ವಚನಗಳಿಂದಲೂ, ಅನುಮಾನೈಶ್ಚ - ಸಪ್ತಸಾಲಪ್ರಹರಣವೇ ಮೊದಲಾದ ಸಲಕರಣೆ ಗಳಿಂದಲೂ, ತತಃ - ಬಳಿಕ, ನಿವರ್ತಿತಾಃ - ಹಿಂತಿರುಗಿಸಲ್ಪಟ್ಟರು. ॥೩೧॥ ಧೀಮತಾ - ಬುದ್ಧಿಶಾಲಿ ಯಾದ, ವಾಯುಪುತ್ರೇಣ - ಆಂಜನೇಯನಿಂದಲೂ, ಪ್ರಹರ್ಷಂ - ಸಂತೋಷವನ್ನು, ಉಪನೀತಾಃ- ಹೊಂದಿಸಲ್ಪಟ್ಟವರಾಗಿ, ಸರ್ವೇವಾನರಯೂಥಪಾಃ - ಸಮಸ್ತ ವಾನರಯೂಥಪತಿಗಳೂ, ಆಜ್ಞಾ ಪ್ರತೀಕ್ಷಾಃ - ಅವನ ಆಜ್ಞೆಯನ್ನು ನಿರೀಕ್ಷಣೆ ಮಾಡುವವರಾಗಿ, ತಸ್ಥುಃ - ನಿಂತರು. ॥ ೩೨ ॥ ದ್ವಿವಿ....ಖ್ಯಾಃ-ದ್ವಿವಿದ, ಪನಸ, ಆಂಜನೇಯನೇ ಮುಖ್ಯವಾಗುಳ್ಳ, ಋಷ....ವಾಃ-ಋಷಭ, ಶರಭ, ಮೈಂದ, ಧೂಮ್ರ,ನೀಲರೂ,ಕುಮು....ರಾಃ-ಕುಮುದ,ಸುಷೇಣ,ಗವಾಕ್ಷ,ರಂಭ,ತಾರರೂ (ಇವರೆಲ್ಲರೂ,)

ಇನ್ನು ನಾವು ಅವನೆದುರಿಗೆ ನಿಲ್ಲಲಾರೆವು. ನಮಗೆ ಈ ಘೋರ ಯುದ್ಧಕ್ಕಿಂತಲೂ, ಪ್ರಾಣಗಳೇ ಪರಮ ಪ್ರಿಯಕರಗಳಾಗಿರುವುವು'' ಎಂದು ಹೇಳಿ ಕ್ಷಣಮಾತ್ರವೂ ನಿಲ್ಲದೆ ದಿಕ್ಕುವಿದಿಕ್ಕು ಗಳಿಗೂ ಓಡಿಹೋದರು. ಆ ಸಮಯದಲ್ಲಿ ಭಯಂಕರ ನೇತ್ರಗಳುಳ್ಳವನೂ, ಮಹಾ ಭಯಂ ಕರನೂ, ಯುದ್ಧಕ್ಕಾಗಿ ಬರುತ್ತಿರುವವನೂ ಆದ ಆ ಕುಂಭಕರ್ಣನನ್ನು ಕಂಡೊಡನೆಯೇ ಆ ವಾನರಯೂಥಪತಿಗಳು ಮೊದಲಿಗಿಂತಲೂ ವೇಗವಾಗಿ ಓಡಿಹೋದರು. ಆ ರೀತಿ ಓಡುತ್ತಿರುವ ಆ ವಾನರರನ್ನು ಕಂಡು ಅಂಗದನು ಮೃದುವಚನಗಳನ್ನು ನುಡಿದು ಅವರನ್ನು ಹಿಂತಿರುಗಿಸಲು ಪ್ರಯತ್ನಿಸಿದನು. ಅವುಗಳನ್ನು ಕೇಳಿ ಅವರೆಲ್ಲರೂ ಹಿಂತಿರುಗಿ ವಾಯು ಪುತ್ರನಾದ ಹನುಮಂತನನ್ನು ಮುಂದಿಟ್ಟುಕೊಂಡು ರಣೋತ್ಸಾಹವುಳ್ಳವರಾಗಿ ಆಯುಂಗದನ ಆಜ್ಞೆಯಂತೆ ನಡೆಯಲು ಸಿದ್ಧರಾದರು. ಆಗ ಋಷಭ, ಶರಭ, ಮೈಂದ, ಧೂಮ್ರ, ನೀಲ,

ಋಷಭ ಶರಭ ಮೈಂದ ಧೂಮ್ರ ನೀಲಾಃ
ಕುಮುದ ಸುಷೇಣ ಗವಾಕ್ಷ ರಂಭ ತಾರಾಃ ।
ದ್ವಿವಿದ ಪನಸ ವಾಯುಪುತ್ರಮುಖ್ಯಾ
ಸ್ತ್ವರಿತತರಾಭಿಮುಖಂ ರಣಂ ಪ್ರಯಾತಾಃ ॥ ೩೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ಷಷ್ಟಿತಮಸ್ಸರ್ಗಃ

ತ್ವರಿ....ಖಂ-ಅತಿ ತ್ವರೆಗೊಂಡವರಂತೆ ಅಭಿಮುಖರಾಗಿ, ರಣಂ-ಕಾಳಗವನ್ನು ಕುರಿತು, ಪ್ರಯಾತಾಃ-ಬಂದರು. ॥ ೩೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ಷಷ್ಟಿತಮಸ್ಸರ್ಗಃ.

ಕುಮುದ, ಸುಷೇಣ, ಗವಾಕ್ಷ, ರಂಭ, ತಾರ, ದ್ವಿವಿದ, ಹನುಮಂತನೇ ಮೊದಲಾದ ವಾನರ ವೀರರೆಲ್ಲರೂ ಮಹಾ ತ್ವರೆಯುಳ್ಳವರಾಗಿ ಯುದ್ಧಸನ್ನದ್ಧರಾದರು. ॥ ೨೮–೩೩ ॥

ಇಂತಿದು ಕುಂಭಕರ್ಣದರ್ಶನ ಜನಿತ ವಾನರ ಭಯವಿವರಣೆಯೆಂಬ
ಅರುವತ್ತಾರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತಷಷ್ಠಿತಮಸ್ಸರ್ಗಃ

ತೇ ನಿವೃತ್ತಾ ಮಹಾಕಾಯಾಃ ಶ್ರುತ್ವಾಂಗದವಚಸ್ತದಾ । ನೈಷ್ಠಿಕೀಂ ಬುದ್ಧಿಮಾಸಾದ್ಯ ಸರ್ವೇ ಸಂಗ್ರಾಮಕಾಂಕ್ಷಿಣಃ ॥೧॥ ಸಮುದೀರಿತವೀರ್ಯಾಶ್ಚ ಸಮಾರೋಪಿತವಿಕ್ರಮಾಃ । ಪರ್ಯವಸ್ಥಾಪಿತಾವಾಕ್ಯೈರಂಗದೇನ ವಲೀಮುಖಾಃ ॥೨॥ ಪ್ರಯಾತಾಶ್ಚ ಗತಾ ಹರ್ಷಂ ಮರಣೇ ಕೃತನಿಶ್ಚಯಾಃ । ಚಕ್ರುಸ್ಸುತುಮುಲಂ ಯುದ್ಧಂ ವಾನರಾಸ್ತ್ಯಕ್ತಜೀವಿತಾಃ ॥೩॥ ಅಥ ವೃಕ್ಷಾನ್ಮಹಾಕಾಯಾಸ್ಸಾನೂನಿ ಸುಮಹಾಂತಿಚ। ವಾನರಾಸ್ತೂರ್ಣಮುದ್ಯಮ್ಯ ಕುಂಭಕರ್ಣಮಭಿದ್ರುತಾಃ ॥ ೪ ॥ ಸಕುಂಭಕರ್ಣ

ಮಹಾಕಾಯಾಃ - ಮಹಾ ಶರೀರವುಳ್ಳ, ಪ್ರಯಾತಾಃ - ಹೊರಟುಹೋದ, ತೇವಾನರಾಃ - ಆ ಕಪಿಗಳು, ಅಂಗದವಚಃ - ಅಂಗದನ ಮಾತನ್ನು, ಶ್ರುತ್ವಾ - ಕೇಳಿ, ತದಾ - ಆಗ, ನಿವೃತ್ತಾಃ - ಹಿಂತಿರುಗಿದರು, ನೈಷ್ಠಿಕೀಂ - ನಾಶಸಂಬಂಧವಾದ, ಬುದ್ಧಿಂ - ಮತಿಯನ್ನು, ಆಸಾದ್ಯ - ಹೊಂದಿ, ಸರ್ವೇ - ಎಲ್ಲರೂ, ಸಂಗ್ರಾ......ಣಃ - ಯುದ್ಧಾಪೇಕ್ಷೆಯುಳ್ಳವರಾಗಿ, ಸಮು....ಶ್ಚ - ಹೇಳಲ್ಪಟ್ಟ ಪರಾಕ್ರಮಗಳುಳ್ಳವರಾದರೂ, ಸಮಾ....ಮಾಃ - ಅವಲಂಬಿಸಿದ ಪರಾಕ್ರಮಗಳುಳ್ಳವರಾದರೂ, ಹರ್ಷಂ - ಸಂತೋಷವನ್ನು ಬಿಟ್ಟು, ಗತಾಃ - ಹೊರಟುಹೋದ, ವಲೀಮುಖಾಃ - ವಾನರರು, ಅಂಗದೇನ - ಅಂಗದನಿಂದ, ವಾಕ್ಯೈಃ - ಮಾತುಗಳಿಂದ, ಮರಣೇ - ಮರಣದಲ್ಲಿ, ಕೃತನಿಶ್ಚಯಾಃ - ಮಾಡಲ್ಪಟ್ಟ ನಿಶ್ಚಯವುಳ್ಳವರಾಗಿ, ಪರ್ಯ....ತಾಃ - ನಿಲ್ಲಿಸಿದವರಾದಕಾರಣ, ತ್ಯಕ್ತಜೀವಿತಾಃ - ಬಿಡಲ್ಪಟ್ಟ ಪ್ರಾಣಗಳ ಆಶೆಯುಳ್ಳವರಾಗಿ, ಸುತುಮುಲಂ - ಬಹು ಭಯಂಕರವಾದ, ಯುದ್ಧಂ - ಕಾಳಗವನ್ನು, ಚಕ್ರುಃ - ಮಾಡಿದರು. ॥೧-೩॥ ಅಥ - ಅನಂತರದಲ್ಲಿ, ಮಹಾಕಾಯಾಃ - ದೊಡ್ಡ ಶರೀರಗಳುಳ್ಳ, ವಾನರಾಃ - ಕಪಿಗಳು, ವೃಕ್ಷಾನ್ - ಮರಗಳನ್ನೂ, ಮಹಾಂತಿ - ದೊಡ್ಡದಾದ, ಸಾನೂನಿಚ - ಜರಿಗಳನ್ನೂ, ತೂರ್ಣಂ - ಜಾಗ್ರತೆಯಾಗಿ, ಉದ್ಯಮ್ಯ - ತೆಗೆದುಕೊಂಡು, ಕುಂಭಕರ್ಣಂ - ಕುಂಭಕರ್ಣನಿಗೆ, ಅಭಿದ್ರುತಾಃ - ಎದುರಾಗಿ ಓಡಿಬಂದರು. ॥ ೪ ॥ ಸುಮಹಾಕಾಯಃ - ಮಹಾ ದೊಡ್ಡ ಶರೀರವುಳ್ಳ, ವೀರ್ಯವಾನ್ - ಪರಾಕ್ರಮಿಯಾದ, ಸಕುಂಭಕರ್ಣಃ - ಆ ಕುಂಭ

ಅಂಗದಕುಮಾರನು ನುಡಿದ ಮಾತುಗಳನ್ನು ಕೇಳಿ ಮಹಾಕಾಯರಾದ ಆ ವಾನರರೆಲ್ಲರೂ ಯುದ್ಧಮಾಡಬೇಕೆಂಬ ಕುತೂಹಲವುಳ್ಳವರಾಗಿ ರಣರಂಗದಲ್ಲಿ ಕಾದಿ ಮಡಿಯುವುದೇ ಯೋಗ್ಯವಲ್ಲದೆ ಹೆದರಿ ಓಡಿಹೋಗುವುದು ಕೇವಲ ಅನುಚಿತವೆಂದು ನಿಶ್ಚಯಮಾಡಿಕೊಂಡರು. ಆಮೇಲೆ ಅವರೆಲ್ಲರೂ ಅಂಗದನ ಪ್ರೋತ್ಸಾಹಕ ವಾಕ್ಯಗಳಿಂದ ಪೌರುಷ ಪರಾಕ್ರಮಗಳನ್ನವಲಂಬಿಸಿ ಯುದ್ಧೋನ್ಮುಖರಾಗಿ ನಿಂತರು. ಅವರೆಲ್ಲರೂ ಪ್ರಾಣಗಳನ್ನು ತೊರೆಯುವದಕ್ಕೂ ಸಿದ್ಧರಾಗಿ ಮಹಾ ಸಂಕುಲ ಯುದ್ಧವನ್ನು ಮಾಡಲುಪಕ್ರಮಿಸಿದರು. ಆ ವೀರ ವಾನರರು ಬಹು ದೊಡ್ಡವಾದ ಮರಗಳನ್ನೂ, ಪರ್ವತಗಳನ್ನೂ, ಆಯುಧಗಳನ್ನಾಗಿ ಧರಿಸಿ ಕುಂಭಕರ್ಣನಮೇಲೆ ಅಟ್ಟಿಬಂದರು. ಆಗ ಅತ್ಯುನ್ನತವಾದ ಶರೀರವುಳ್ಳವನೂ, ಮಹಾ ಪರಾಕ್ರಮವುಳ್ಳವನೂ ಆದ ಕುಂಭಕರ್ಣನು ಅತ್ಯಧಿಕ ಕೋಪವುಳ್ಳವನಾಗಿ ಗದಾ

ಸ್ಸಂಕ್ರುದ್ಧೋ ಗದಾಮುದ್ಯಮ್ಯ ವೀರ್ಯವಾನ್ । ಅರ್ದಯನ್ ಸುಮಹಾಕಾಯ ಸ್ಸಮಂತಾದ್ವ್ಯಾಕ್ಷಿಪದ್ರಿಪೂನ್ ॥ ೫ ॥ ಶತಾನಿ ಸಪ್ತ ಚಾಷ್ಟೌಚ ಸಹಸ್ರಾಣಿ ಚ ವಾನರಾಃ । ಪ್ರಕೀರ್ಣಾಃ ಶೇರತೇ ಭೂಮೌ ಕುಂಭಕರ್ಣೇನ ಪೋಥಿತಾಃ ॥ ೬ ॥ ಷೋಡಶಾಷ್ಟೌಚ ದಶಚ ವಿಂಶತ್ತ್ರಿಂಶತ್ತಥೈವಚ । ಪರಿಕ್ಷಿಪ್ಯ ಚ ಬಾಹುಭ್ಯಾಂ ಖಾದನ್ ವಿಪರಿಧಾವತಿ । ಭಕ್ಷಯನ್ ಭೃಶಸಂಕ್ರುದ್ಧೋ ಗರುಡಃ ಪನ್ನಗಾನಿವ ॥ ೭ ॥ ಕೃಚ್ಛ್ರೇಣಚ ಸಮಾಶ್ವಸ್ತಾಸ್ಸಂಗಮ್ಯಚ ತತಸ್ತತಃ । ವೃಕ್ಷಾದ್ರಿಹಸ್ತಾ ಹರಯಸ್ತಸ್ಥು ಸ್ಸಂಗ್ರಾಮಮೂರ್ಧನಿ ॥ ೮ ॥ ತತಃ ಪರ್ವತಮುತ್ಪಾಟ್ಯ ದ್ವಿವಿದಃ ಪ್ಲವಗರ್ಷಭಃ ।

ಕರ್ಣನು, ಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ಗದಾಂ - ಗದೆಯನ್ನು, ಉದ್ಯಮ್ಯ - ಎತ್ತಿಕೊಂಡು, ಅರ್ದಯನ್ - ಹೆದರಿಸುತ್ತಾ, ರಿಪೂನ್ - ಶತ್ರುಗಳನ್ನು, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ವ್ಯಾಕ್ಷಿಪತ್ - ಬೀಳಿಸಿದನು. ॥೫॥ ಕುಂಭಕರ್ಣೇನ - ಕುಂಭಕರ್ಣನಿಂದ, ಪೋಥಿತಾಃ- ಹಿಂಸಿಸಲ್ಪಟ್ಟ, ವಾನರಾಃ - ಕಪಿಗಳು, ಸಪ್ತಚ - ಏಳಾದ, ಅಷ್ಟೌಚ - ಎಂಟಾದ, ಶತಾನಿ - ನೂರುಗಳು, ಸಹಸ್ರಾಣಿಚ - ಸಾವಿರಗಳು, ಪ್ರಕೀರ್ಣಾಃ - ಶಿಥಿಲವಾದ ಅವಯವಗಳುಳ್ಳವರಾಗಿ, ಭೂಮೌ - ನೆಲದಲ್ಲಿ, ಶೇರತೇ - ಮಲಗಿದರು. ॥ ೬ ॥ ಷೋಡಶ - ಹದಿನಾರು ಮಂದಿಯನ್ನೂ, ಅಷ್ಟೌಚ - ಎಂಟುಮಂದಿಯನ್ನೂ, ದಶಚ - ಹತ್ತುಮಂದಿಯನ್ನೂ, ವಿಂಶತ್ - ಇಪ್ಪತ್ತುಮಂದಿಯನ್ನೂ, ತಥೈವಚ - ಹಾಗೆಯೇ, ತ್ರಿಂಶತ್ - ಮುವ್ವತ್ತುಮಂದಿಯನ್ನೂ, ಬಾಹುಭ್ಯಾಂ - ಭುಜಗಳಿಂದ, ಪರಿಕ್ಷಿಪ್ಯ - ಹಿಡಿದುಕೊಂಡು, ಖಾದನ್ - ತಿನ್ನುವವನಾಗಿ, ಪನ್ನಗಾನ್ - ಸರ್ಪಗಳನ್ನು, ಭಕ್ಷಯನ್ - ತಿನ್ನುತ್ತಿರುವ, ಗರುಡಇವ - ಗರುಡನಂತೆ, ಭೃಶಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ವಿಪರಿಧಾವತಿ - ಓಡಿಬರುತ್ತಿರುತ್ತಿದ್ದನು. ॥೭॥ ಸಂಗ್ರಾ.....ನಿ - ರಣರಂಗದಲ್ಲಿ, (ಬಲವತಃ - ಬಲಿಷ್ಠರಾದ,) ಹರಯಶ್ಚ - ವಾನರರು ಸಹ, ಕೃಚ್ಛ್ರೇಣ - ಕಷ್ಟದಿಂದ, ಸಮಾಶ್ವಸ್ತಾಃ - ಸಮಾಧಾನ ಮಾಡಿಕೊಂಡವರಾಗಿ, ಸಂಗಮ್ಯ - ಬಂದು, ತತಸ್ತತಃ - ಅಲ್ಲಲ್ಲಿ, ವೃಕ್ಷಾದ್ರಿಹಸ್ತಾಃ - ವೃಕ್ಷಗಳೂ, ಪರ್ವತಗಳೂ ಹಸ್ತದಲ್ಲಿ ಉಳ್ಳವರಾಗಿ, ತಸ್ಥುಃ - ನಿಂತರು. ॥ ೮ ॥ ತತಃ - ಅನಂತರದಲ್ಲಿ, ಪ್ಲವಗರ್ಷಭಃ - ವಾನರಶ್ರೇಷ್ಠನಾದ, ದ್ವಿವಿದಃ - ದ್ವಿವಿದನು, ವಿಲಂಬಃ - ವಿಶೇಷವಾಗಿ ಜೋಲಾಡುವ, ತೋಯದಇವ - ಮೇಘದಂತೆ, ಗಿರಿಶೃಂಗಾಭಂ - ಮಹಾ ಪರ್ವತಶೃಂಗದಂತೆ ಉನ್ನತವಾದ, ಪರ್ವತಂ - ಬೆಟ್ಟವನ್ನು, ಉತ್ಪಾಟ್ಯ - ಕಿತ್ತುಕೊಂಡು, ಪ್ರದುದ್ರಾವ - ಓಡಿ

ಯುಧವನ್ನು ತೆಗೆದುಕೊಂಡು ಆ ವಾನರರಮೇಲೆ ಗಿರ್ರನೆ ತಿರುಗಿಸಿ ಎಸೆದನು. ಆ ಗದಾಘಾತದಿಂದ ಏಳೆಂಟುಸಾವಿರಮಂದಿ ವಾನರವೀರರು ನಾಶವಾಗಿ ಹೋದರು. ಅವರೆಲ್ಲರೂ ವಿಭಿನ್ನಗಾತ್ರರಾಗಿ ಭೂಮಿಯಲ್ಲಿ ಪವಳಿಸಿದರು. ॥೧-೬॥ ಅಂತಹ ಸಮಯದಲ್ಲಿ ಆ ಕುಂಭಕರ್ಣನು ತನ್ನ ತೋಳುಗಳಿಂದ ಏಳು, ಎಂಟು, ಹತ್ತು, ಇಪ್ಪತ್ತು, ಮೂವತ್ತು ಮಂದಿ ವಾನರರನ್ನೊಂದೇಬಾರಿಗೆ ಹಿಡಿದೆಳೆದುಕೊಂಡು ಹಾಗೆಯೇ ನುಂಗುತ್ತ ಬಂದನು. ಅವನು ಮಹಾ ಕುಪಿತನಾದ ಗರುತ್ಮಂತನು ಸರ್ಪಗಳನ್ನೆಂತೋ ಅಂತು ವಾನರರನ್ನೆಲ್ಲ ಭಕ್ಷಿಸುತ್ತಿದ್ದನು. ಬಳಿಕ ಸ್ವಲ್ಪಹೊತ್ತಿನಮೇಲೆ ಆ ವಾನರರೆಲ್ಲರೂ ಧೈರ್ಯವನ್ನವಲಂಬಿಸಿ ಒಟ್ಟುಗೂಡಿ ವೃಕ್ಷಗಳನ್ನೂ, ಪರ್ವತಗಳನ್ನೂ ಗ್ರಹಿಸಿ ಮತ್ತೆ ರಣರಂಗವನ್ನು ಪ್ರವೇಶಿಸಿದರು. ಆಗ ದ್ವಿವಿದನೆಂಬ ವಾನರಯೂಥಪತಿಯು ಬಹು ದೊಡ್ಡದಾದೊಂದು ಬೆಟ್ಟವನ್ನು ಕೋಡುಗಲ್ಲಿನೊಡನೆಯೇ ಪಳಗಿಸಿ

ದುದ್ರಾವ ಗಿರಿಶೃಂಗಾಭಂ ವಿಲಂಬಇವ ತೋಯದಃ ॥ ೯ ॥ ತಂ ಸಮುತ್ಪತ್ಯ ಚಿಕ್ಷೇಪ ಕುಂಭಕರ್ಣಸ್ಯ ವಾನರಃ । ತಮಪ್ರಾಪ್ತೋ ಮಹಾಕಾಯಂ ತಸ್ಯ ಸೈನ್ಯೇಽಪತತ್ತದಾ ॥೧೦॥ ಮಮರ್ದಾಶ್ವಾನ್ ಗಜಾಂಶ್ಚಾಪಿ ರಥಾಂಶ್ಚೈವ ನಗೋತ್ತಮಃ । ತಾನಿ ಚಾನ್ಯಾನಿ ರಕ್ಷಾಂಸಿ ಪುನಶ್ಚಾನ್ಯದ್ಗಿರೇಃ ಶಿರಃ ॥ ೧೧ ॥ ತಚ್ಛೈಲವೇಗಾಭಿಹಿತಂ ಹತಾಶ್ವಂ ಹತ ಸಾರಥಿಂ । ರಕ್ಷಸಾಂ ರುಧಿರಕ್ಲಿನ್ನಂ ಬಭೂವಾಯೋಧನಂ ಮಹತ್ ॥೧೨॥ ರಥಿನೋ ವಾನರೇಂದ್ರಾಣಾಂ ಶರೈಃ ಕಾಲಾಂತಕೋಪಮೈಃ । ಶಿರಾಂಸಿ ನದತಾಂ ಜಹ್ರುಸ್ಸಹಸಾ ಭೀಮನಿಸ್ವನಾಃ ॥ ೧೩ ॥ ವಾನರಾಶ್ಚ ಮಹಾತ್ಮಾನಸ್ಸಮುತ್ಪಾಟ್ಯ ಮಹಾದ್ರುಮಾನ್ ।

ಬಂದರು. ॥೯॥ ವಾನರಃ - ಕಪಿಯಾದ ದ್ವಿವಿದನು, ಸಮುತ್ಪತ್ಯ - ಹಾರಿ, ತಂ - ಆ ಪರ್ವತವನ್ನು, ಕುಂಭಕರ್ಣಸ್ಯ - ಕುಂಭಕರ್ಣನಿಗಾಗಿ, ಚಿಕ್ಷೇಪ - ಎಸೆದನು, ತದಾ-ಆಗ, (ಅದು) ಮಹಾಕಾಯಂ - ಮಹಾ ಶರೀರವುಳ್ಳ, ತಂ - ಆ ಕುಂಭಕರ್ಣನನ್ನು, ಅಪ್ರಾಪ್ತಃ - ಹೊಂದದೆ, ತಸ್ಯ - ಆ ಕುಂಭ ಕರ್ಣನ, ಸೈನ್ಯೇ - ಸೇನೆಯನ್ನು, ಪಪಾತ - ಬಿದ್ದಿತಪ್ಪೆ. ॥೧೦॥ ನಗೋತ್ತಮಃ - ಪರ್ವತಶ್ರೇಷ್ಠವು, ತಾನಿ - ಪ್ರಸಿದ್ಧರಾದ, ರಕ್ಷಾಂಸಿ - ರಾಕ್ಷಸರನ್ನೂ, ಅಶ್ವಾನ್ - ಕುದುರೆಗಳನ್ನೂ, ಗಜಾಂಶ್ಚಾಪಿ - ಆನೆಗಳನ್ನೂ, ರಥಾಂಶ್ಚಾಪಿ - ತೇರುಗಳನ್ನೂ, ಅನ್ಯಾನಿ - ಇತರರಾದ, ರಕ್ಷಾಂಸಿಚ - ರಕ್ಕಸರನ್ನೂ, ಮಮರ್ದ - ಮರ್ದಿಸಿತು. ॥೧೧॥ ಪುನಶ್ಚ - ಮತ್ತು, ಅನ್ಯತ್ - ಮತ್ತೊಂದು, ಗಿರೇಃ - ಪರ್ವ ತದ, ಶಿಖರಃ - ಶಿಖರವನ್ನು, ಚಿಕ್ಷೇಪ-ಎಸೆದನು, ತಚ್ಛೈ....ತಂ - ಆ ಪರ್ವತಶೃಂಗದಿಂದ ಹೊಡೆಯ ಲ್ಪಟ್ಟ ಸೈನ್ಯವು, ಹತಾಶ್ವಂ - ಮಡಿದ ಕುದುರೆಗಳುಳ್ಳದೂ, ಹತಸಾರಥಿಃ - ಹತರಾದ ಸಾರಥಿಗ ಳುಳ್ಳದೂ, ಬಭೂವ - ಆಯಿತು, ಆಯೋಧನಂ - ಯುದ್ಧವು, ರಕ್ಷಸಾಂ - ರಕ್ಕಸರ, ರುಧಿರಕ್ಲಿನ್ನಂ- ರಕ್ತದಿಂದ ತೊಯಿಸಲ್ಪಟ್ಟದ್ದು, ಬಭೂವ - ಆಯಿತು. ॥ ೧೨ ॥ ಭೀಮನಿಃಸ್ವನಾಃ - ಭಯಂಕರವಾದ ಶಬ್ದವುಳ್ಳ, ರಥಿನಃ - ರಥದಲ್ಲಿ ಕುಳಿತವರು, ನದತಾಂ - ಕೂಗುತ್ತಿರುವ, ವಾನರೇಂದ್ರಾಣಾಂ - ವಾನರಯೂಥಪತಿಗಳ, ಶಿರಾಂಸಿ - ಸಿರಸ್ಸುಗಳನ್ನು, ಕಾಲಾಂ....ಮೈಃ - ಯಮಸದೃಶವಾದ, ಶರೈಃ - ಬಾಣಗಳಿಂದ, ಸಹಸಾ - ಜಾಗ್ರತೆಯಾಗಿ, ಜಹ್ರುಃ - ಅಪಹರಿಸಿದರು. ॥ ೧೩ ॥ ಮಹಾ ತ್ಮಾನಃ - ಮಹಾ ಧೈರ್ಯಶಾಲಿಗಳಾದ, ವಾನರಾಶ್ಚ - ಕಪಿಗಳೂ, ಮಹಾದ್ರುಮಾನ್ - ದೊಡ್ಡ ಗಿಡ ಗಳನ್ನು, ಉತ್ಪಾಟ್ಯ - ಕಿತ್ತುಕೊಂಡು, ರಥಾನ್ - ತೇರುಗಳನ್ನೂ, ಉಷ್ಟ್ರಾನ್ - ಒಂಟೆಗಳನ್ನೂ,

ತಂದು ಮಹಾ ಪರ್ವತಶಿಖರಕ್ಕೆ ಸಮಾನನಾದ ಆ ಕುಂಭಕರ್ಣನಮೇಲೆ ಬೀಳಿಸಿದನು. ಹೀಗೆ ಅವನು ಆ ರಾಕ್ಷಸನಮೇಲೆ ಪರ್ವತವನ್ನು ಹಾಕಿ ಮುಂದೆ ಅವನೊಡನೆ ಯುದ್ಧಮಾಡ ಲಾಗದೆ ರಾಕ್ಷಸಸೇನೆಯೆಲ್ಲವನ್ನೂ ನಾಶಗೊಳಿಸಬಯಸಿ ಆ ಸೇನೆಯಲ್ಲಿದ್ದ ರಾಕ್ಷಸವೀರರ ಕುದುರೆಗಳನ್ನೂ, ಆನೆಗಳನ್ನೂ, ತೇರುಗಳನ್ನೂ ಪುಡಿಗುಟ್ಟಿ ಅನೇಕ ಸಹಸ್ರಮಂದಿ ರಾಕ್ಷಸ ರನ್ನೂ ಮರ್ದಿಸಿದನು. ॥೭–೧೧॥ ಆಮೇಲೆ ಮಹಾ ಶೂರನಾದ ಆ ದ್ವಿವಿದನು ಮತ್ತೊಂದು ಪರ್ವತಶಿಖರದಿಂದ ಪುನಃ ಆ ರಾಕ್ಷಸಸೇನೆಯೆಲ್ಲವನ್ನೂ ಸಂಹರಿಸಿದನು. ಆ ಸಮಯದಲ್ಲಿ ರಥಿಕಶ್ರೇಷ್ಠರಾದ ರಾಕ್ಷಸರು ಅತ್ಯಧಿಕವಾದ ಸಿಂಹನಾದವನ್ನು ಮಾಡುತ್ತ ಪ್ರಳಯ ಯಮ ನಿಗೆ ಸಮಾನವಾದ ಬಾಣಜಾಲಗಳಿಂದ ಭಯಂಕರವಾಗಿ ಗರ್ಜಿಸುತ್ತಿದ್ದ ಆ ವಾನರರ ಶಿರಸ್ಸುಗಳನ್ನು ಹಾರಿಸಿದರು. ಯುದ್ಧವು ಬಹಳ ಬಿರುಸಾಯಿತು. ಮಹಾ ಪರಾಕ್ರಮಿ ಗಳಾದ ವಾನರರೂ ಸಹ ಹೆಮ್ಮರಗಳಿಂದ ರಾಕ್ಷಸಸೇನೆಯಲ್ಲಿದ್ದ ಗಜತುರಗ ರಥಾದಿಗಳನ್ನು

ರಥಾನಶ್ವಾನ್ ಗಜಾನುಷ್ಟ್ರಾನ್ರಾಕ್ಷಸಾನಭ್ಯಸೂದಯನ್ ॥೧೪॥ ಹನುಮಾನ್ ಶೈಲ ಶೃಂಗಾಣಿ ವೃಕ್ಷಾಂಶ್ಚ ವಿವಿಧಾನ್ ಬಹೂನ್ । ವವರ್ಷ ಕುಂಭಕರ್ಣಸ್ಯ ಶಿರಸ್ಯಂಬರಮಾಸ್ಥಿತಃ॥೧೫॥ ತಾನಿ ಪರ್ವತಶೃಂಗಾಣಿ ಶೂಲೇನ ಸಬಿಭೇದಹ । ಬಭಂಜ ವೃಕ್ಷವರ್ಷಂಚ ಕುಂಭಕರ್ಣೋ ಮಹಾಬಲಃ ॥೧೬॥ ತತೋ ಹರೀಣಾಂ ತದನೀಕಮುಗ್ರಂ ದುದ್ರಾವ ಶೂಲಂ ನಿಶಿತಂ ಪ್ರಗೃಹ್ಯ । ತಸ್ಥೌ ತತೋಽಸ್ಯಾಪತತಃ ಪುರಸ್ತಾನ್ಮಹೀಧರಾಗ್ರಂ ಹನುಮಾನ್ ಪ್ರಗೃಹ್ಯ ॥೧೭॥ ಸಕುಂಭಕರ್ಣಂ ಕುಪಿತೋ ಜಘಾನ ವೇಗೇನ ಶೈಲೋತ್ತಮಭೀಮಕಾಯಂ । ಸ ಚುಕ್ಷುಭೇ ತೇನ ತದಾಽಭಿಭೂತೋ ಮೇದಾರ್ದ್ರಗಾತ್ರೋ

ಗಜಾನ್ - ಆನೆಗಳನ್ನೂ, ರಾಕ್ಷಸಾನ್ - ರಾಕ್ಷಸರನ್ನೂ, ಅಭ್ಯಸೂದಯನ್ - ಹೊಡೆದರು. ॥೧೪॥ ಹನೂಮಾನ್ - ಆಂಜನೇಯನು, ಅಂಬರಂ - ಅಂತರಿಕ್ಷವನ್ನು, ಆಸ್ಥಿತಃ - ಹೊಂದಿ, ಶೈಲಶೃಂಗಾಣಿ- ಪರ್ವತಶಿಖರಗಳನ್ನೂ, ವಿವಿಧಾನ್ - ನಾನಾವಿಧವಾದ, ಬಹೂನ್ - ಅನೇಕವಾದ, ವೃಕ್ಷಾಂಶ್ಚ - ವೃಕ್ಷಗಳನ್ನೂ, ಕುಂಭಕರ್ಣಸ್ಯ - ಕುಂಭಕರ್ಣನ, ಶಿರಸಿ - ಶಿರಸ್ಸಿನಲ್ಲಿ, ವವರ್ಷ - ಸುರಿಸಿದನು. ॥೧೫॥ ಮಹಾಬಲಃ - ಬಹು ಬಲನಾದ, ಕುಂಭಕರ್ಣಃ - ಆ ಕುಂಭಕರ್ಣನು, ತಾನಿಪರ್ವತಶೃಂಗಾಣಿ - ಆ ಪರ್ವತದ ಶಿಖರಗಳನ್ನು, ಶೂಲೇನ - ಶೂಲದಿಂದ, ಬಿಭೇದಹ - ಭೇದಿಸಿದನಷ್ಟೆ, ವೃಕ್ಷವರ್ಷಂಚ- ವೃಕ್ಷಗಳ ವರ್ಷವನ್ನೂ, ಬಭಂಜ - ಮುರಿದನು. ॥೧೬॥ ತತಃ - ಅನಂತರದಲ್ಲಿ (ಕುಂಭಕರ್ಣನು), ಉಗ್ರಂ - ಭಯಂಕರವಾದ, ನಿಶಿತಂ - ತೀಕ್ಷ್ಣವಾದ, ಶೂಲಂ - ಶೂಲವನ್ನು, ಪ್ರಗೃಹ್ಯ - ತೆಗೆದುಕೊಂಡು, ಹರೀಣಾಂ - ವಾನರರ, ತದನೀಕಂ - ಆ ಸೈನ್ಯವನ್ನು, ದುದ್ರಾವ - ಓಡಿಸಿದನು, ತತಃ - ಬಳಿಕ, ಆಪತತಃ - ಬರುತ್ತಿರುವ, ತಸ್ಯ - ಆ ಕುಂಭಕರ್ಣನ, ಪುರಸ್ತಾತ್ - ಮುಂದುಗಡೆ, ಹನುಮಾನ್ - ಆಂಜನೇಯನೂ, ಮಹೀಧರಾಗ್ರಂ - ಪರ್ವತಶೃಂಗವನ್ನು, ಪ್ರಗೃಹ್ಯ - ತೆಗೆದುಕೊಂಡು, ತಸ್ಥೌ - ನಿಂತರು. ॥೧೭॥ ಸಃ - ಆ ಹನುಮಂತನು, ಕುಪಿತಃ - ಕೋಪಿಸ್ಠನಾಗಿ, ಶೈಲೋ....ಯಂ- ಪರ್ವತಶ್ರೇಷ್ಠದಂತೆ ಭಯಂಕರವಾದ ಶರೀರವುಳ್ಳ, ಕುಂಭಕರ್ಣಂ - ಕುಂಭಕರ್ಣನನ್ನು, ವೇಗೇನ - ವೇಗದಿಂದ, ಜಘಾನ - ಹೊಡೆದನು, ತೇನ - ಆ ಪರ್ವತಶಿಖರದಿಂದ, ಅಭಿಭೂತಃ - ಹೊಡೆಯಲ್ಪಟ್ಟ, ಸಃ - ಆ ಕುಂಭಕರ್ಣನು, ತದಾ - ಆಗ, ಮೇದಾರ್ದ್ರಗಾತ್ರಃ - ಮೇದಸ್ಸಿನಿಂದ ತೊಯಿಸಲ್ಪಟ್ಟ ಶರೀರವುಳ್ಳವನಾಗಿ, ರುಧಿರಾವಸಿಕ್ತಃ - ರಕ್ತದಿಂದ ತೊಯಿಸಲ್ಪಟ್ಟವನಾಗಿ, ಚುಕ್ಷುಭೇ -

---

ಕೆಡಹಿದರು. ಆಗ ರಾಕ್ಷಸರು, ಮಡಿದ ಸಾರಥಿಗಳುಳ್ಳವರೂ, ಮುರಿದ ರಥಗಳುಳ್ಳವರೂ ಆಗಿ ರಕ್ತವನ್ನುಕಾರುತ್ತ ಭೂಮಿಗೆ ಬಿದ್ದರು. ಅದೇ ಸಮಯದಲ್ಲಿಯೇ ಮಹಾ ಶೂರನಾದ ಮಾರುತಿಯುರಣಾಂಗಣವನ್ನುಪ್ರವೇಶಿಸಿ ಬಹುದೊಡ್ಡದಾದ ಪರ್ವತಶಿಖರಗಳನ್ನೂ,ಹೆಮ್ಮರಗಳನ್ನೂ ಹಿಡಿದು ಯುದ್ಧಮಾಡುತ್ತಿದ್ದ ಕುಂಭಕರ್ಣನ ಮೇಲೆಸೆದನು. ॥ ೧೨–೧೫ ॥ ಮಹಾ ಪರ್ವತದಂತೆ ಮಹಾಕಾಯನಾದ ಕುಂಭಕರ್ಣನು ಕೋಪೋದ್ದೀಪಿತನಾಗಿ ತನ್ನ ಶೂಲಾಯುಧದಿಂದ ಆ ಪರ್ವತಶಿಖರಗಳನ್ನೂ, ಮರಗಳನ್ನೂ ಪುಡಿಗುಟ್ಟಿ ಅದೇ ಶೂಲವನ್ನೇ ಗುಹನು ಕ್ರೌಂಚಪರ್ವತವನ್ನೆಂತೋ ಅಂತು ಆ ಹನುಮಂತನ ವಕ್ಷಸ್ಥಳಕ್ಕೆ ಹೊಡೆದನು. ಆಗ ಮಾರುತಿಯು ಆ ಹೊಡೆತವನ್ನು ತಾಳಲಾರದೆ ರಕ್ತವನ್ನು ಕಕ್ಕುತ್ತ ಪ್ರಳಯಕಾಲದ ಕಾಳಮೇಘದಂತೆ ಗರ್ಜಿಸಿದನು. ಆ ರೀತಿ ರಕ್ತವನ್ನುಕಾರುತ್ತ ಶೂಲಪೀಡಿತನಾಗಿದ್ದ ಅವನನ್ನುಕಂಡು ರಾಕ್ಷಸರೆಲ್ಲರೂ ಬಹಳವಾಗಿ ಸಂತೋಷಿಸಿ ಭಯಂಕರವಾದ ಸಿಂಹನಾದಗಳನ್ನು ಮಾಡಿದರು.

ರುಧಿರಾವಸಿಕ್ತಃ ॥ ೧೮ ॥ ಸಶೂಲಮಾವಿಧ್ಯ ತಟಿತ್ಪ್ರಕಾಶಂ ಗಿರಿಂ ಯಥಾ ಪ್ರಜ್ವಲಿತಾಗ್ರಶೃಂಗಂ। ಬಾಹ್ವಂತರೇ ಮಾರುತಿಮಾಜಘಾನ ಗುಹೋಽಚಲಂ ಕ್ರೌಂಚಮಿವೋಗ್ರಶಕ್ತ್ಯಾ ॥ ೧೯ ॥ ಸಶೂಲನಿರ್ಭಿಣ್ಣಮಹಾಭುಜಾಂತರಃ ಪ್ರವಿಹ್ವಲಃ ಶೋಣಿತಮುದ್ವಮನ್ಮುಖಾತ್ । ನನಾದ ಭೀಮಂ ಹನುಮಾನ್ ಮಹಾಹವೇ ಯುಗಾಂತಮೇಘಸ್ತನಿತಸ್ವನೋಪಮಂ ॥೨೦॥ ತತೋ ವಿನೇದುಸ್ಸಹಸಾ ಪ್ರಹೃಷ್ಟಾ ರಕ್ಷೋಗಣಾಸ್ತಂ ವ್ಯಥಿತಂ ಸಮೀಕ್ಷ್ಯ। ಪ್ಲವಂಗಮಾಸ್ತು ವ್ಯಥಿತಾ ಭಯಾರ್ತಾಃ ಪ್ರದುದ್ರುವುಸ್ಸಂಯತಿ ಕುಂಭಕರ್ಣಾತ್ ॥ ೨೧ ॥ ತತಸ್ತು ನೀಲೋ ಬಲವಾನ್ ಪರ್ಯವಸ್ಥಾಪಯದ್ಬಲಂ। ಪ್ರವಿಚಿಕ್ಷೇಪ ಶೈಲಾಗ್ರಂ ಕುಂಭಕರ್ಣಾಯ ಧೀಮತೇ ॥ ೨೨ ॥ ತಮಾಪತಂತಂ ಸಂಪ್ರೇಕ್ಷ್ಯ ಮುಷ್ಟಿನಾಽಭಿಜಘಾನಹ । ಮುಷ್ಟಿಪ್ರಹಾರಾಭಿಹತಂ ತಚ್ಛೈಲಾಗ್ರಂ

ಕ್ಷೋಭೆಗೊಂಡನು. ॥ ೧೮ ॥ ಸಃ - ಆ ಕುಂಭಕರ್ಣನು, ತಟಿತ್ಪ್ರಕಾಶಂ - ಮಿಂಚಿನಂತೆ ಹೊಳೆವ, ಶೂಲಂ - ಶೂಲವನ್ನು, ಆವಿಧ್ಯ - ತಿರುಗಿಸಿ, ಪ್ರಜ್ವ....ಗಂ - ಉರಿಯುತ್ತಿರುವ ಕೊನೆ ಶಿಖರಗಳುಳ್ಳ, ಗಿರಿಂಯಥಾ - ಬೆಟ್ಟದಂತಿರುವ, ಮಾರುತಿಂ - ಆಂಜನೇಯನನ್ನು, ಗುಹಃ - ಕುಮಾರಸ್ವಾಮಿಯು, ಉಗ್ರಶಕ್ತ್ಯಾ - ಭಯಂಕರವಾದ ಶಕ್ತ್ಯಾಯುಧದಿಂದ, ಕ್ರೌಂಚ....ವ - ಕ್ರೌಂಚಪರ್ವತವನ್ನಂತೆ, ಬಾಹ್ವಂತರೇ - ವಕ್ಷಸ್ಥಲದಲ್ಲಿ, ಆಜಘಾನ - ಹೊಡೆದನು. ॥ ೧೯ ॥ ಶೂಲ....ರಃ - ಶೂಲದಿಂದ ಭೇದಿಸಲ್ಪಟ್ಟ ದೊಡ್ಡ ವಕ್ಷಸ್ಥಲವುಳ್ಳ, ಪ್ರವಿಹ್ವಲಃ - ಮೋಹಾಕ್ರಾಂತನಾದ, ಸಹನುಮಾನ್ - ಆ ಆಂಜನೇಯನು, ಮುಖಾತ್ - ಬಾಯಿಯಿಂದ, ಶೋಣಿತಂ - ರಕ್ತವನ್ನು, ಉದ್ವಮನ್- ಕಕ್ಕುವವನಾಗಿ, ಮಹಾಹವೇ - ದೊಡ್ಡ ಕಾಳಗದಲ್ಲಿ, ಯುಗಾಂ....ಮಂ - ಪ್ರಳಯಕಾಲದ ಮೇಘಗಳ ಗುಡುಗಿಗೆ ಸಮಾನವಾಗಿ, ಭೀಮಂ - ಭಯಂಕರವಾಗಿ, ನನಾದ - ಕೂಗಿದನು. ॥೨೦॥ ತತಃ - ಬಳಿಕ, ರಕ್ಷೋಗಣಾಃ - ರಾಕ್ಷಸಸಮೂಹಗಳು, ತಂ - ಆ ಹನುಮಂತನನ್ನು, ವ್ಯಥಿತಂ - ವ್ಯಸನಗೊಂಡವನನ್ನಾಗಿ, ಸಮೀಕ್ಷ್ಯ - ಕಂಡು, ಸಹಸಾ - ಜಾಗ್ರತೆಯಾಗಿ, ಪ್ರಹೃಷ್ಟಾಃ - ಸಂತೋಷಗೊಂಡು, ವಿನೇದುಃ - ಕೋಲಾಹಲವನ್ನು ಮಾಡಿದರು, ಪ್ಲವಂಗಮಾಸ್ತು - ವಾನರರಾದರೆ, ಸಂಯತಿ-ಕಾಳಗದಲ್ಲಿ, ಕುಂಭಕರ್ಣಾತ್-ಕುಂಭಕರ್ಣನಿಂದ, ಭಯಾರ್ತಾಃ-ಭೀತರಾಗಿ, ವ್ಯಥಿತಾಃ- ದುಃಖಿತರಾಗಿ, ಪ್ರದುದ್ರುವುಃ - ಓಡಿಹೋದರು. ॥ ೨೧ ॥ ತತಃ - ಬಳಿಕ, ಬಲವಾನ್ - ಬಲವಂತನಾದ, ನೀಲಃ - ನೀಲನು, ಬಲಂ - ಸೈನ್ಯವನ್ನು, ಪರ್ಯವಸ್ಥಾಪಯತ್ - ನಿಲ್ಲಿಸಿದನು, ಧೀಮತೇ - ಬುದ್ಧಿವಂತನಾದ, ಕುಂಭಕರ್ಣಾಯ - ಕುಂಭಕರ್ಣನಿಗೆ, ಶೈಲಾಗ್ರಂ - ಪರ್ವತಶೃಂಗವನ್ನು, ಪ್ರವಿಚಿಕ್ಷೇಪ - ಎತ್ತಿಹಾಕಿದನು. ॥೨೨॥ ಆಪತಂತಂ - ಬರುತ್ತಿರುವ, ತಂ - ಆ ಶಿಖರವನ್ನು, ಸಂಪ್ರೇಕ್ಷ್ಯ - ಕಂಡು, ಮುಷ್ಟಿನಾ - ಹಿಡಿಯಿಂದ, ಅಭಿಜಘಾನಹ - ಹೊಡೆದನಷ್ಟೆ, ಮುಷ್ಟಿ....ತಂ - ಮುಷ್ಟಿಪ್ರಹಾರ

ವಾನರರಾದರೋ ಹನುಮಂತನನ್ನು ನೋಡಿ ವ್ಯಥಿತರಾಗಿ ಇನ್ನು ಕುಂಭಕರ್ಣನಿಗೆದುರಾದರೆ ತಮ್ಮ ಪ್ರಾಣಗಳುಳಿಯಲಾರವೆಂದು ಹೆದರಿ ಓಡಿಹೋದರು. ಆಗ ಮಹಾ ವೀರನಾದ ನೀಲನು ವಾನರಸೇನೆಯನ್ನು ತಡೆದು ದೊಡ್ಡ ಕೋಡುಗಲ್ಲೊಂದನ್ನು ಮಹಾ ಬುದ್ಧಿವಂತನಾದ ಆ ಕುಂಭಕರ್ಣನಮೇಲೆ ಬಿಸುಟನು. ॥ ೧೬–೨೨ ॥ ಹೀಗೆ ವಾನರಯೂಥಪತಿಯಾದ ನೀಲನು ಪ್ರಯೋಗಿಸಿದ ಆ ಪರ್ವತವು ಆ ಕುಂಭಕರ್ಣನಿಗಭಿಮುಖವಾಗಿ ಬಂದಿತು. ಆಗ ಮಹಾ ಬಲಾಢ್ಯನಾದ ಕುಂಭಕರ್ಣನು ಆ ಪರ್ವತವನ್ನು ತನ್ನ ಮುಷ್ಟಿಯಿಂದ ಬಲವಾಗಿ

ವ್ಯಶೀರ್ಯತ ॥೨೩॥ ಸವಿಷ್ಫುಲಿಂಗಂ ಸಜ್ವಾಲಂ ನಿಪಪಾತ ಮಹೀತಲೇ । ಋಷಭಃ ಶರಭೋ ನೀಲೋ ಗವಾಕ್ಷೋ ಗಂಧಮಾದನಃ ॥ ೨೪ ॥ ಪಂಚ ವಾನರಶಾರ್ದೂಲಾಃ ಕುಂಭಕರ್ಣಮುಪಾದ್ರವನ್ । ಶೈಲೈರ್ವೃಕ್ಷೈಸ್ತಲೈಃ ಪಾದೈರ್ಮುಷ್ಟಿಭಿಶ್ಚ ಮಹಾಬಲಾಃ ॥ ೨೫ ॥ ಕುಂಭಕರ್ಣಂ ಮಹಾಕಾಯಂ ಸರ್ವತೋಽಭಿಪ್ರದುದ್ರುವುಃ । ಸ್ಪರ್ಶಾನಿವ ಪ್ರಹಾರಾಂಸ್ತಾನ್ ವೇದಯಾನೋ ನವಿವ್ಯಥೇ ॥ ೨೬ ॥ ಋಷಭಂ ತು ಮಹಾವೇಗಂ ಬಾಹುಭ್ಯಾಂ ಪರಿಷಸ್ವಜೇ । ಕುಂಭಕರ್ಣಭುಜಾಭ್ಯಾಂತು ಪೀಡಿತೋ ವಾನರರ್ಷಭಃ ॥ ೨೭ ॥ ನಿಪಪಾತರ್ಷಭೋ ಭೀಮಃ ಪ್ರಮುಖಾದ್ವಾಂತಶೋಣಿತಃ । ಮುಷ್ಟಿನಾ ಶರಭಂ ಹತ್ವಾ ಜಾನುನಾ ನೀಲಮಾಹವೇ ॥ ೨೮ ॥ ಆಜಘಾನ ಗವಾ

ದಿಂದ ಹೊಡೆಯಲ್ಪಟ್ಟ, ತಚ್ಛೈಲಾಗ್ರಂ - ಆ ಪರ್ವತಶೃಂಗವು, ವ್ಯಶೀರ್ಯತ - ಸೀಳಿಹೋಯಿತು, ಸವಿಷ್ಫುಲಿಂಗಂ-ಕಿಡಿಗಳಿಂದೊಡಗೂಡಿದಂತೆಯೂ, ಸಜ್ವಾಲಂ-ಉರಿಯೊಡಗೂಡಿದಂತೆಯೂ, ಮಹೀತಲೇ - ನೆಲದಲ್ಲಿ, ನಿಪಪಾತ - ಬಿದ್ದಿತು. ॥ ೨೩-೨೪ ॥ ಋಷಭಃ - ಋಷಭನು, ಶರಭಃ - ಶರಭನು, ನೀಲಃ-ನೀಲನು, ಗವಾಕ್ಷಃ-ಗವಾಕ್ಷನು, ಗಂಧಮಾದನಃ-ಗಂಧಮಾದನನು, (ಎಂಬ) ಪಂಚ-ಐದು ಸಂಖ್ಯೆಯುಳ್ಳ, ವಾನ....ಲಾಃ - ವಾನರೋತ್ತಮರು, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಉಪಾದ್ರವನ್ - ಓಡಿಬಂದರು. ॥ ೨೫ ॥ ಮಹಾಬಲಾಃ - ಬಹು ಬಲಿಷ್ಠರಾದ ವಾನರರು, ಶೈಲೈರಪಿ - ಪರ್ವತಗಳಿಂದಲೂ, ವೃಕ್ಷೈಃ - ಮರಗಳಿಂದಲೂ, ತಲೈಃ - ಅಂಗೈಗಳಿಂದಲೂ, ಪಾದೈಃ - ಪಾದಗಳಿಂದಲೂ, ಮುಷ್ಟಿಭಿಶ್ಚ - ಹಿಡಿಗಳಿಂದಲೂ, ಮಹಾಕಾಯಂ - ದೊಡ್ಡ ಶರೀರವುಳ್ಳ, ಕುಂಭಕರ್ಣಂ - ಕುಂಭಕರ್ಣನನ್ನು, ಸರ್ವತಃ-ಎಲ್ಲಾ ಕಡೆಗಳಲ್ಲಿಯೂ, ಅಭಿಪ್ರದುದ್ರುವುಃ-ಎದುರೋಡಿ ಬಂದರು. ॥೨೬॥ ತಾನ್‌ಪ್ರಹಾರಾನ್ - ಆ ಹೊಡೆತಗಳನ್ನು, ಸ್ಪರ್ಶಾನಿವ - ಸ್ಪರ್ಶವನ್ನಂತೆ, ವೇದಯಾನಃ - ತಿಳಿದು, ನವಿವ್ಯಥೇ - ವ್ಯಥೆಪಡಲಿಲ್ಲ, ಮಹಾವೇಗಂ - ಬಹು ವೇಗಶಾಲಿಯಾದ, ಋಷಭಂತು - ಋಷಭನನ್ನಾದರೆ, ಬಾಹುಭ್ಯಾಂ - ತೋಳುಗಳಿಂದ, ಪರಿಷಸ್ವಜೇ - ಅಪ್ಪಿಕೊಂಡನು. ॥೨೭॥ ಕುಂಭ.....ಭ್ಯಾಂ - ಕುಂಭಕರ್ಣನ ಭುಜಗಳಿಂದ, ಪೀಡಿತಃ - ಬಾಧೆಗೊಳಿಸಲ್ಪಟ್ಟ, ವಾನರರ್ಷಭಃ - ವಾನರಶ್ರೇಷ್ಠನಾದ, ಭೀಮಃ - ಭಯಂಕರನಾದ, ಋಷಭಃ-ಋಷಭನು, ಮುಖಾತ್ - ಬಾಯಿಯಿಂದ, ವಾಂತಶೋಣಿತಃ - ಕಕ್ಕುತ್ತಿರುವ ರಕ್ತವುಳ್ಳವನಾಗಿ, ನಿಪಪಾತ - ಬಿದ್ದನು. ॥೨೮॥ ತದಾ - ಆ ಕಾಲದಲ್ಲಿ, ಇಂದ್ರರಿಪುಃ - ಕುಂಭಕರ್ಣನು, ಆಹವೇ - ಕಾಳಗದಲ್ಲಿ, ಮುಷ್ಟಿನಾ - ಮುಷ್ಟಿಯಿಂದ, ಶರಭಂ - ಶರಭನನ್ನು,

---

ಗುದ್ದಲು ಅದು ಕಿಡಿಗಳನ್ನು ಕಕ್ಕುತ್ತ ನೆಲದಲ್ಲಿ ಬಿದ್ದಿತು. ಆ ಸಮಯದಲ್ಲಿ ಋಷಭ, ಶರಭ, ನೀಲ, ಗವಾಕ್ಷ, ಗಂಧಮಾದನನೆಂಬ ಐವರೂ ರೋಷಗೊಂಡು ಆ ಕುಂಭಕರ್ಣನಿಗಭಿಮುಖನಾಗಿ ಬಂದರು. ಅವರು ಪರ್ವತಗಳಿಂದಲೂ, ವೃಕ್ಷಗಳಿಂದಲೂ, ಕಾಲುಗಳಿಂದಲೂ ಮಹಾ ಕಾಯನಾದ ಆ ಕುಂಭಕರ್ಣನನ್ನು ಚೆನ್ನಾಗಿ ಮರ್ದಿಸಿದರು. ಆ ಹೊಡೆತಗಳನ್ನೆಲ್ಲ ಆ ರಾಕ್ಷಸನು ಸುಖಸ್ಪರ್ಶಗಳನ್ನಾಗಿ ಭಾವಿಸಿದನಾಗಲಿ ಯಾವ ವಿಧದಲ್ಲಿಯೂ ಸಂತಾಪಗೊಳ್ಳಲಿಲ್ಲವು. ಆ ರಾಕ್ಷಸವೀರನು ಋಷಭನೆಂಬ ವಾನರವೀರನನ್ನು ತನ್ನ ತೋಳುಗಳಿಂದ ಬಲವಾಗಿ ಅಪ್ಪಿಕೊಳ್ಳಲು ಅವನು ರಕ್ತವನ್ನು ಕಕ್ಕುತ್ತ ನೆಲಕ್ಕುರುಳಿದನು. ॥ ೨೩–೨೮ ॥ ಇದಾದ ತರುವಾಯ ಆ ರಾಕ್ಷಸನು ಮುಷ್ಟಿಗಳಿಂದ ಶರಭನನ್ನೂ ನೀಲನನ್ನೂ ಬಲವಾಗಿ ಗುದ್ದಿ, ಕಾಲುಗಳಿಂದ ಗವಾಕ್ಷನನ್ನೊದೆದು ಕೆಡವಿದನು. ಗಂಧ

ಕ್ಷಂತು ತಲೇನೇಂದ್ರರಿಪುಸ್ತದಾ । ಪಾದೇನಾಭ್ಯಹನತ್ಕ್ರುದ್ಧಸ್ತರಸಾ ಗಂಧಮಾದನಂ ॥ ೨೯ ॥ ದತ್ತಪ್ರಹಾರವ್ಯಥಿತಾ ಮುಮುಹುಃ ಶೋಣಿತೋಕ್ಷಿತಾಃ । ನಿಪೇತುಸ್ತೇತು ಮೇದಿನ್ಯಾಂ ನಿಕೃತ್ತಾ ಇವ ಕಿಂಶುಕಾಃ ॥೩೦॥ ತೇಷು ವಾನರಮುಖ್ಯೇಷು ಪತಿತೇಷು ಮಹಾತ್ಮಸು । ವಾನರಾಣಾಂ ಸಹಸ್ರಾಣಿ ಕುಂಭಕರ್ಣಂ ಪ್ರದುದ್ರುವುಃ ॥ ೩೧ ॥ ತಂ ಶೈಲಮಿವ ಶೈಲಾಭಾಸ್ಸರ್ವೇ ತೇ ಪ್ಲವಗರ್ಷಭಾಃ । ಸಮಾರುಹ್ಯ ಸಮುತ್ಪತ್ಯ ದದಂಶುಶ್ಚ ಮಹಾಬಲಾಃ ॥ ೩೨ ॥ ತಂ ನಖೈರ್ದಶನೈಶ್ಚಾಪಿ ಮುಷ್ಟಿಭಿರ್ಜಾನುಭಿಸ್ತದಾ । ಕುಂಭಕರ್ಣಂ ಮಹಾಕಾಯಂ ತೇ ಜಘ್ನುಃ ಪ್ಲವಗರ್ಷಭಾಃ ॥ ೩೩ ॥ ಸವಾನರ ಸಹಸ್ರೈಸ್ತೈರಾಚಿತಃ ಪರ್ವತೋಪಮಃ । ರರಾಜ ರಾಕ್ಷಸವ್ಯಾಘ್ರೋ ಗಿರಿರಾತ್ಮರುಹೈ

ಹತ್ವಾ - ಹೊಡೆದು, ಜಾನುನಾ - ಮೊಣಕಾಲಿನಿಂದ, ನೀಲಂ - ನೀಲನನ್ನು, ಹತ್ವಾ - ಹೊಡೆದು, ಗವಾಕ್ಷಂತು - ಗವಾಕ್ಷನನ್ನಾದರೆ, ತಲೇನ - ಅಂಗೈಯಿಂದ, ಆಜಘಾನ - ಹೊಡೆದನು. ॥ ೨೯ ॥ ಕ್ರುದ್ಧಃ - ಕೋಪಿಷ್ಠನಾಗಿ, ಪಾದೇನ - ಕಾಲಿನಿಂದ, ಗಂಧಮಾದನಂ-ಗಂಧಮಾದನನನ್ನು, ತರಸಾ-ಬಲವಾಗಿ, ಅಭ್ಯಹನತ್ - ಹೊಡೆದನು, ದತ್ತ....ತಾಃ - ಕೊಡಲ್ಪಟ್ಟ ಪೆಟ್ಟುಗಳಿಂದ ವ್ಯಸನಗೊಂಡವರಾಗಿ, ಶೋಣಿತೋಕ್ಷಿತಾಃ - ರಕ್ತದಿಂದ ತೊಯಿಸಲ್ಪಟ್ಟವರಾಗಿ, ತೇ - ಆ ವಾನರರು, ನಿಕೃತ್ತಾಃ - ಕತ್ತರಿಸಲ್ಪಟ್ಟ, ಕಿಂಶುಕಾಇವ - ಮುತ್ತುಗದ ಗಿಡಗಳಂತೆ, ಮೇದಿನ್ಯಾಂ - ನೆಲದಲ್ಲಿ, ನಿಪೇತುಃ - ಬಿದ್ದರು, ಮುಮುಹುಃ - ಮೋಹಾಕ್ರಾಂತರಾದರು. ॥ ೩೦ ॥ ಮಹಾತ್ಮಸು - ಮಹಾ ಪ್ರಭಾವವಂತರಾದ, ತೇಷುವಾನರಮುಖ್ಯೇಷು-ಆ ಮುಖ್ಯರಾದ ಕಪಿಗಳು, ಪತಿತೇತು-ಬಿದ್ದವರಾಗಲು, ವಾನರಾಣಾಂ-ಕಪಿಗಳ, ಸಹಸ್ರಾಣಿ - ಸಾವಿರಗಳು, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಪ್ರದುದ್ರುವುಃ - ಓಡಿಬಂದರು. ॥ ೩೧ ॥ ಶೈಲಾಭಾಃ - ಬೆಟ್ಟಗಳಂತೆ ಹೊಳೆಯುವ, ಮಹಾಬಲಾಃ - ಬಹು ಬಲಶಾಲಿಗಳಾದ, ಸರ್ವೇ - ಸಮಸ್ತರಾದ, ತೇಪ್ಲವಗರ್ಷಭಾಃ - ಆ ವಾನರೋತ್ತಮರು, ಶೈಲಮಿವ - ಬೆಟ್ಟವನ್ನಂತೆ, ತಂ - ಆ ಕುಂಭಕರ್ಣನನ್ನು, ಸಮಾರುಹ್ಯ - ಏರಿ, ಸಮುತ್ಪತ್ಯ - ಕುಣಿದಾಡಿ, ದದಂಶುಶ್ಚ-ಕಚ್ಚಿದರು. ॥ ೩೨ ॥ ತೇಪ್ಲವಗರ್ಷಭಾಃ - ಆ ವಾನರಶ್ರೇಷ್ಠರು, ಮಹಾಕಾಯಂ - ದೊಡ್ಡ ಶರೀರವುಳ್ಳ, ತಂಕುಂಭಕರ್ಣಂ - ಆ ಕುಂಭಕರ್ಣನನ್ನು, ನಖೈಃ - ಉಗುರುಗಳಿಂದಲೂ, ದಶನೈಶ್ಚಾಪಿ - ದಂತಗಳಿಂದಲೂ, ತಥಾ - ಹಾಗೆಯೇ, ಮುಷ್ಟಿಭಿಃ - ಹಿಡಿಗಳಿಂದಲೂ, ಜಾನುಭಿಃ - ಮೊಣಕಾಲುಗಳಿಂದಲೂ, ಜಘ್ನುಃ - ಹೊಡೆದರು. ॥ ೩೩ ॥ ಪರ್ವತೋಪಮಃ - ಪರ್ವತಸದೃಶನಾದ, ಸರಾಕ್ಷಸವ್ಯಾಘ್ರಃ - ಆ ರಾಕ್ಷಸೋತ್ತಮನು, ತೈಃವಾನರಸಹಸ್ರೈಃ - ಆ ವಾನರರನೇಕರಿಂದ, ಆಚಿತಃ -

---

ಮಾದನನೆಂಬ ವಾನರವೀರನನ್ನೂ ಮಹಾ ಕುಪಿತನಾಗಿ ಕಾಲುಗಳಿಂದ ಬಲವಾಗಿ ಒದೆದನು. ಇದಾದ ತರುವಾಯ ಆ ಕುಂಭಕರ್ಣನಿಂದ ಪೆಟ್ಟು ತಿಂದು ಮಲಗಿದ್ದ ವಾನರರೆಲ್ಲರೂ ಒಬ್ಬೊಬ್ಬರಾಗಿ ಕತ್ತರಿಸಿದ ಮರಗಳಂತೆ ನೆಲಕ್ಕುರುಳಿದರು. ಈ ರೀತಿ ಮಹಾನುಭಾವರೂ, ಕಪಿಸೇನೆಯಲ್ಲಿ ಗಣ್ಯರೂ ಆದ ಆ ವಾನರವೀರರು ಕುಂಭಕರ್ಣನಿಂದ ಪೆಟ್ಟುತಿಂದು ನೆಲಕ್ಕುರುಳಿದೊಡನೆಯೇ ಉಳಿದ ವಾನರರೆಲ್ಲರೂ ಒಟ್ಟುಗೂಡಿ ಏಕಕಾಲದಲ್ಲಿಯೇ ಅವನಮೇಲೆ ಬಿದ್ದರು. ಅವನಮೇಲೆ ಹಠಾತ್ತಾಗಿ ಬಿದ್ದ ಆ ವಾನರರು ಅವನನ್ನು ವಿಧವಿಧವಾಗಿ ಕಡಿದರು. ಉಗುರುಗಳಿಂದ ಬಲವಾಗಿ ಪರಚಿದರು. ಮೊಣಕಾಲುಗಳಿಂದ ತಿವಿದರು. ಮುಷ್ಟಿಗಳಿಂದ ಗುದ್ದಿದರು. ಹೀಗೆ ವಾನರರು ಮುತ್ತಿದ ಆ ಕುಂಭಕರ್ಣನು ವೃಕ್ಷಗಳೊಡ

ರಿವ ||೩೪|| ಬಾಹುಭ್ಯಾಂ ವಾನರಾನ್ ಸರ್ವಾನ್ ಪ್ರಗೃಹ್ಯ ಸುಮಹಾಬಲಃ | ಭಕ್ಷಯಾಮಾಸ ಸಂಕ್ರುದ್ಧೋ ಗರುಡಃ ಪನ್ನಗಾನಿವ || ೩೫ || ಪ್ರಕ್ಷಿಪ್ತಾಃ ಕುಂಭಕರ್ಣೇನ ವಕ್ತ್ರೇ ಪಾತಾಳಸನ್ನಿಭೇ|ನಾಸಾಪುಟಾಭ್ಯಾಂ ನಿರ್ಜಗ್ಮುಃ ಕರ್ಣಾಭ್ಯಾಂ ಚೈವ ವಾನರಾಃ || ೩೬ || ಭಕ್ಷಯನ್ ಭೃಶಸಂಕ್ರುದ್ಧೋ ಹರೀನ್ ಪರ್ವತಸನ್ನಿಭಃ | ಬಭಂಜ ವಾನರಾನ್ ಸರ್ವಾನ್ ಸಂಕ್ರುದ್ಧೋ ರಾಕ್ಷಸೋತ್ತಮಃ || ೩೭ || ಮಾಂಸಶೋಣಿತಸಂಕ್ಲೇದಾಂ ಭೂಮಿಂ ಕುರ್ವನ್ ಸ ರಾಕ್ಷಸಃ | ಚಚಾರ ಹರಿಸೈನ್ಯೇಷು ಕಾಲಾಗ್ನಿರಿವ ಮೂರ್ಛಿತಃ || ೩೮ || ವಜ್ರಹಸ್ತೋ ಯಥಾ ಶಕ್ರಃ ಪಾಶಹಸ್ತ ಇವಾಂತಕಃ | ಶೂಲಹಸ್ತೋ

ವ್ಯಾಪ್ತನಾಗಿ, ಆತ್ಮರುಹೈಃ - ತನ್ನಲ್ಲಿ ಹುಟ್ಟಿದ ಮರಗಳಿಂದ, ಗಿರಿರಿವ - ಪರ್ವತದಂತೆ, ರರಾಜ - ಹೊಳೆಯುತ್ತಿದ್ದನು. ||೩೪|| ಸುಮಹಾಬಲಃ - ಬಹಳ ಬಲವಂತನಾದ ಕುಂಭಕರ್ಣನು, ಸಂಕ್ರುದ್ಧಃ- ಕೋಪಿಷ್ಠನಾಗಿ, ಗರುಡಃ - ಗರುಡನು, ಪನ್ನಗಾನಿವ - ಸರ್ಪಗಳನ್ನಂತೆ, ಬಾಹುಭ್ಯಾಂ - ಭುಜಗಳಿಂದ, ಸರ್ವಾನ್ - ಸಮಸ್ತರಾದ, ವಾನರಾನ್ - ಕಪಿಗಳನ್ನು, ಪ್ರಗೃಹ್ಯ - ಹಿಡಿದುಕೊಂಡು, ಭಕ್ಷಯಾಮಾಸ - ತಿಂದುಬಿಟ್ಟನು. || ೩೫ || ಕುಂಭಕರ್ಣೇನ - ಕುಂಭಕರ್ಣನಿಂದ, ಪಾತಾಳಸನ್ನಿಭೇ - ಪಾತಾಳ ಸಮಾನವಾದ, ವಕ್ತ್ರೇ - ಬಾಯಿಯಲ್ಲಿ, ಪ್ರಕ್ಷಿಪ್ತಾಃ - ಹಾಕಿಕೊಳ್ಳಲ್ಪಟ್ಟ, ವಾನರಾಃ - ಕಪಿಗಳು, ನಾಸಾಪುಟಾಭ್ಯಾಂ - ಮೂಗಿನ ಹೊಳ್ಳೆಗಳ ದೆಸೆಯಿಂದಲೂ, ಕರ್ಣಾಭ್ಯಾಂಚ - ಕಿವಿಗಳಿಂದಲೂ, ನಿರ್ಜಗ್ಮುಃ - ಹೊರಟುಬಂದರು. || ೩೬ || ಪರ್ವತಸನ್ನಿಭಃ - ಬೆಟ್ಟಕ್ಕೆ ಸಮಾನನಾದ, ಸಂಕ್ರುದ್ಧಃ - ಸ್ವಭಾವದಿಂದಲೇ ಕೋಪಿಷ್ಠನಾದ, ರಾಕ್ಷಸೋತ್ತಮಃ - ರಾಕ್ಷಸಶ್ರೇಷ್ಠನು, ಭೃಶಸಂಕ್ರುದ್ಧಃ - ಮತ್ತೂ ಕೋಪಗೊಂಡವನಾಗಿ, ಹರೀನ್-ವಾನರರನ್ನು, ಭಕ್ಷಯನ್-ತಿನ್ನುತ್ತಿರುವವನಾಗಿ, ಸರ್ವಾನ್- ಸಮಸ್ತರಾದ, ವಾನರಾನ್ - ಕಪಿಗಳನ್ನು, ಬಭಂಜ - ಮುರಿದನು. || ೩೭ || ಸರಾಕ್ಷಸಃ - ಆ ರಕ್ಕಸನು, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ಮೂರ್ಛಿತಃ - ಕೋಪಾಕ್ರಾಂತನಾಗಿ, ಭೂಮಿಂ - ಭೂಮಿಯನ್ನು, ಮಾಂಸ....ದಾಂ - ಮಾಂಸದಿಂದಲೂ, ರಕ್ತದಿಂದಲೂ ತೊಯಿಸಲ್ಪಟ್ಟದನ್ನಾಗಿ, ಕುರ್ವನ್ - ಮಾಡುವವನಾಗಿ, ಹರಿಸೈನ್ಯೇಷು-ವಾನರಸೈನ್ಯಗಳಲ್ಲಿ, ಚಚಾರ-ಸಂಚರಿಸಿದನು. ||೩೮|| ಮಹಾಬಲಃ - ಬಹು ಬಲವಂತನಾದ, ಕುಂಭಕರ್ಣಃ - ಕುಂಭಕರ್ಣನು, ಶೂಲಹಸ್ತಃ - ಶೂಲಹಸ್ತನಾಗಿ, ಸಂಖ್ಯೇ - ಕಾಳೆಗದಲ್ಲಿ, ವಜ್ರಹಸ್ತಃ - ವಜ್ರಾಯುಧವೇ ಹಸ್ತದಲ್ಲುಳ್ಳ, ಶಕ್ರೋಯಥಾ - ದೇವೇಂದ್ರನಂತೆಯೂ,

---

ಗೂಡಿದ ಬೆಟ್ಟದಂತೆ ಶೋಭಿಸಿದನು. || ೨೯-೩೪ || ಆಮೇಲೆ ಮಹಾ ಬಲಾಢ್ಯನಾದ ಆ ಕುಂಭಕರ್ಣನು ತನ್ನ ತೋಳುಗಳಿಂದ ವಾನರರೆಲ್ಲರನ್ನೂ ಹಿಡಿದೆಳೆದು ಗರುತ್ಮಂತನು ಸರ್ಪಗಳನ್ನು ಹೇಗೋ ಹಾಗೆ ಭಕ್ಷಿಸಲುಪಕ್ರಮಿಸಿದನು. ಆ ರಾಕ್ಷಸನು ಪಾತಾಳಕ್ಕೆ ಸಮಾನವಾದ ತನ್ನಬಾಯಿಯೊಳಕ್ಕೆ ಸಹಸ್ರಾರು ವಾನರರನ್ನು ನುಗ್ಗಿಸಿಕೊಂಡು ನುಂಗುತ್ತಿರಲು ಅವರೆಲ್ಲರೂ ಅವನ ಮೂಗಿನ ಹೊಳ್ಳೆಗಳಿಂದಲೂ, ಕಿವಿಗಳಿಂದಲೂ ಪುನಃ ಹೊರಗೆ ಬರುತ್ತಿದ್ದರು. ಇದನ್ನು ನೋಡಿ ರಾಕ್ಷಸಶ್ರೇಷ್ಠನಾದ ಆ ಕುಂಭಕರ್ಣನು ಮಹಾ ಕುಪಿತನಾಗಿ ಆ ವಾನರರನ್ನು ಮುರಿದು ತಿನ್ನಲುಪಕ್ರಮಿಸಿದನು. ಹೀಗೆ ಅವನು ಪ್ರಳಯಕಾಲಾಗ್ನಿಯಂತೆ ಆ ವಾನರಸೇನೆಯನ್ನು ಪ್ರವೇಶಿಸಿ ವಾನರರೆಲ್ಲರನ್ನೂ ನಾಶಮಾಡುತ್ತಿದ್ದನು. ರಣಾಂಗಣವೆಲ್ಲವೂ ರಕ್ತಮಾಂಸಗಳಿಂದ ಕೆಸರಾಗಿ ಹೋಯಿತು. ಆ ರಣರಂಗದಲ್ಲಿ ಮಹಾ ಬಲನಾದ ಆ ಕುಂಭಕರ್ಣನು ವಜ್ರಾಯುಧಧರನಾದ ದೇವೇಂದ್ರನಂತೆಯೂ, ಪಾಶಹಸ್ತನಾದ ಯಮ

ಬಭೌ ಸಂಖ್ಯೇ ಕುಂಭಕರ್ಣೋ ಮಹಾಬಲಃ ॥ ೩೯ ॥ ಯಥಾ ಶುಷ್ಕಾಣ್ಯರಣ್ಯಾನಿ ಗ್ರೀಷ್ಮೇ ದಹತಿ ಪಾವಕಃ । ತಥಾ ವಾನರಸೈನ್ಯಾನಿ ಕುಂಭಕರ್ಣೋ ವಿನಿರ್ದಹತ್ ॥ ೪೦ ॥ ತತಸ್ತೇ ವಧ್ಯಮಾನಾಸ್ತು ಹತಯೂಥಾ ವಿನಾಯಕಾಃ । ವಾನರಾ ಭಯಸಂವಿಗ್ನಾ ವಿನೇದುರ್ವಿಸ್ವರಂ ಭೃಶಂ ॥ ೪೧ ॥ ಅನೇಕಶೋ ವಧ್ಯಮಾನಾಃ ಕುಂಭಕರ್ಣೇನ ವಾನರಾಃ । ರಾಘವಂ ಶರಣಂ ಜಗ್ಮುರ್ವ್ಯಥಿತಾಃ ಖಿನ್ನಚೇತಸಃ ॥ ೪೨ ॥ ಪ್ರಭಗ್ನಾನ್ ವಾನರಾನ್ ದೃಷ್ಟ್ವಾ ವಜ್ರಹಸ್ತಸುತಾತ್ಮಜಃ । ಅಭ್ಯಧಾವತ ವೇಗೇನ ಕುಂಭಕರ್ಣಂ ಮಹಾಹವೇ ॥ ೪೩ ॥ ಶೈಲಶೃಂಗಂ ಮಹದ್ಗೃಹ್ಯ ವಿನದಂಶ್ಚ ಮುಹುರ್ಮುಹುಃ । ತ್ರಾಸಯನ್ ರಾಕ್ಷಸಾನ್ ಸರ್ವಾನ್ ಕುಂಭಕರ್ಣಪದಾನುಗಾನ್ ॥ ೪೪ ॥

ಪಾಶಹಸ್ತಃ-ಪಾಶಾಯುಧವೇ ಹಸ್ತದಲ್ಲುಳ್ಳ, ಅಂತಕಇವ-ಯಮನಂತೆಯೂ, ಬಭೌ-ಹೊಳೆಯುತ್ತಿದ್ದನು. ॥ ೩೯ ॥ ಗ್ರೀಷ್ಮೇ - ಗ್ರೀಷ್ಮಋತುವಿನಲ್ಲಿ, ಪಾವಕಃ - ಅಗ್ನಿಯು, ಶುಷ್ಕಾಣಿ - ಒಣಗಿದ, ಅರಣ್ಯಾನಿ - ಕಾಡುಗಳನ್ನು, ಯಥಾ - ಹೇಗೆ, ದಹತಿ - ಸುಡುವನೋ, ತಥಾ - ಹಾಗೆ, ಕುಂಭಕರ್ಣಃ - ಕುಂಭಕರ್ಣನು, ವಾನರಸೈನ್ಯಾನಿ - ಕಪಿಸೇನೆಗಳನ್ನು, ವಿನಿರ್ದಹತ್ - ಸುಡುತ್ತಿದ್ದನು. ॥ ೪೦ ॥ ತತಃ - ಬಳಿಕ, ವಧ್ಯಮಾನಾಃ - ಹೊಡೆಯಲ್ಪಡುತ್ತಿರುವ, ತೇ ವಾನರಾಃ - ಆ ಕಪಿಗಳು, ಹತಯೂಥಾಃ - ಹೊಡೆಯಲ್ಪಟ್ಟ ಗುಂಪುಗಳುಳ್ಳವರಾಗಿ, ವಿನಾಯಕಾಃ - ವಿಗತವಾದ ಯೂಥಪತಿಗಳುಳ್ಳವರಾಗಿ, ಭಯಸಂವಿಗ್ನಾಃ - ಭಯದಿಂದ ಹೆದರಿ, ಭೃಶಂ-ಬಹಳವಾಗಿ, ವಿಸ್ವರಂ - ಅಪಸ್ವರವುಳ್ಳಂತೆ, ವಿನೇದುಃ- ಕೂಗಿಕೊಂಡರು. ॥ ೪೧ ॥ ಕುಂಭಕರ್ಣೇನ - ಕುಂಭಕರ್ಣನಿಂದ, ಅನೇಕಶಃ - ಬಗೆಬಗೆಯಾಗಿ, ವಧ್ಯಮಾನಾಃ - ಹೊಡೆಯಲ್ಪಡುತ್ತಿರುವ, ವಾನರಾಃ - ಕಪಿಗಳು, ವ್ಯಥಿತಾಃ - ವ್ಯಸನಗೊಂಡವರಾಗಿ, ಖಿನ್ನಚೇತಸಃ - ದುಃಖಿತವಾದ ಮನಸ್ಸುಳ್ಳವರಾಗಿ, ರಾಘವಂ - ಶ್ರೀರಾಮನನ್ನು, ಶರಣಂಜಗ್ಮುಃ - ರಕ್ಷಕನನ್ನಾಗಿ ಹೊಂದಿದರು. ॥ ೪೨ ॥ ಪ್ರಭಗ್ನಾನ್ - ಮುರಿದುಹೋದ, ವಾನರಾನ್ - ಕಪಿಗಳನ್ನು, ದೃಷ್ಟ್ವಾ - ಕಂಡು, ವಜ್ರ....ಜಃ - ಇಂದ್ರಪುತ್ರನಾದ ವಾಲಿಗೆ ಮಗನಾದ ಅಂಗದನು, ವೇಗೇನ - ವೇಗದಿಂದ, ಮಹಾಹವೇ - ದೊಡ್ಡ ಕಾಳೆಗದಲ್ಲಿ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಅಭ್ಯಧಾವತ - ಓಡಿಬಂದನು. ॥ ೪೩ ॥ ಮಹತ್ - ಮಹತ್ತರವಾದ, ಶೈಲಶೃಂಗಂ - ಪರ್ವತಶಿಖರವನ್ನು, ಗೃಹ್ಯ - ತೆಗೆದುಕೊಂಡು, ಮುಹುರ್ಮುಹುಃ - ಬಾರಿಬಾರಿಗೂ, ನಿನರ್ದ - ಕೂಗುವವನಾಗಿ,

---

ನಂತೆಯೂ, ತ್ರಿಶೂಲಧಾರಿಯಾಗಿ ತೋರುತ್ತಿದ್ದನು. ಅವನು ಗ್ರೀಷ್ಮಋತುವಿನಲ್ಲಿ ಪಾವಕನು ಬತ್ತಿನಿಂತ ಕಾಡನ್ನು ಸುಟ್ಟು ಹಾಳುಮಾಡುವಂತೆ ಆ ವಾನರಸೇನೆಯನ್ನೆಲ್ಲ ನಾಶಗೊಳಿಸುತ್ತಿದ್ದನು. ॥ ೩೫–೪೦ ॥ ಆಗಲಾ ರಾಕ್ಷಸನ ಹೊಡೆತವನ್ನು ತಾಳಲಾರದೆ ಹೋದ ವಾನರರೆಲ್ಲರೂ ತಮ್ಮ ನಾಯಕರೂ ನಾಶ ಹೊಂದಿದುದನ್ನು ಕಂಡು ನಾನಾದಿಕ್ಕುಗಳಿಗೆ ಓಡಿಹೋದರು. ಅವರೆಲ್ಲರೂ ಕುಂಭಕರ್ಣನ ಬಾಧೆಯಿಂದ ದುಃಖಪೀಡಿತರಾಗಿ ಬಹು ಜಾಗ್ರತೆಯಾಗಿಯೇ ಶ್ರೀರಾಮನ ಬಳಿಗೈದಿ ಅವನನ್ನು ಶರಣು ಹೊಕ್ಕು ತಮ್ಮ ದುಃಖೋದಂತವೆಲ್ಲವನ್ನೂ ಅವನಲ್ಲಿ ಹೇಳಿಕೊಂಡರು. ಅದೇ ಸಮಯದಲ್ಲಿಯೇ ವಾಲಿಪುತ್ರನಾದ ಅಂಗದನು ಕುಂಭಕರ್ಣನಿಂದ ಭಂಗ ಹೊಂದಿ ಓಡುತ್ತಿದ್ದ ವಾನರರನ್ನು ನೋಡಿ ಅತಿ ತ್ವರೆಯುಳ್ಳವನಾಗಿ ಆ ರಾಕ್ಷಸನೊಡನೆ ಯುದ್ಧಮಾಡಲು ಹೊರಟನು. ಮಹಾ ರೋಷಾವಿಷ್ಟನಾದ ಆ ಅಂಗದನು ದೊಡ್ಡದೊಂದು ಪರ್ವತವನ್ನು ಕೈಯಲ್ಲಿ ಹಿಡಿದು ಅಡಿಗಡಿಗೂ ಸಿಂಹ

ಚಿಕ್ಷೇಪ ಶೈಲಶಿಖರಂ ಕುಂಭಕರ್ಣಸ್ಯ ಮೂರ್ಧನಿ । ಸತೇಽನಾಭಿಹತೋಽತ್ಯರ್ಥಂ ಗಿರಿಶೃಂಗೇಣ ಮೂರ್ಧನಿ ॥೪೫॥ ಕುಂಭಕರ್ಣಃ ಪ್ರಜಜ್ವಾಲ ಕೋಪೇನ ಮಹತಾ ತದಾ । ಸೋಽಭ್ಯಧಾವತ ವೇಗೇನ ವಾಲಿಪುತ್ರಮಮರ್ಷಣಃ ॥೪೬॥ ಕುಂಭಕರ್ಣೋ ಮಹಾನಾದಸ್ತ್ರಾಸಯನ್ ಸರ್ವವಾನರಾನ್ । ಶೂಲಂ ಸಸರ್ಜ ವೈ ರೋಷಾದಂಗದೇ ಸ ಮಹಾಬಲಃ ॥ ೪೭ ॥ ತಮಾಪತಂತಂ ಬುದ್ಧ್ವಾತು ಯುದ್ಧಮಾರ್ಗವಿಶಾರದಃ । ಲಾಘವಾನ್ಮೋಚಯಾಮಾಸ ಬಲವಾನ್ವಾನರರ್ಷಭಃ ॥ ೪೮ ॥ ಉತ್ಪತ್ಯ ಚೈನಂ ಸಹಸಾ ತಲೇನೋರಸ್ಯತಾಡಯತ್ । ಸತೇನಾಭಿತಃ ಕೋಪಾತ್ಪ್ರಮುಮೋಹಾಚಲೋ

ಕುಂಭ....ರ್ಗಾ - ಕುಂಭಕರ್ಣನಿಗೆ ಹಿಂದೆ ಬರುತ್ತಿರುವ, ಸರ್ವಾನ್ - ಸಮಸ್ತರಾದ, ರಾಕ್ಷಸಾನ್ - ರಕ್ಕಸರನ್ನು, ತ್ರಾಸಯನ್-ಹೆದರಿಸುವವನಾಗಿ, ಶೈಲಶಿಖರಂ-ಪರ್ವತಶೃಂಗವನ್ನು, ಕುಂಭಕರ್ಣಸ್ಯ-ಕುಂಭಕರ್ಣನ, ಮೂರ್ಧನಿ - ಶಿರಸ್ಸಿನಲ್ಲಿ, ಚಿಕ್ಷೇಪ - ಎಸೆದನು. ॥ ೪೪-೪೫ ॥ ಸಕುಂಭಕರ್ಣಃ - ಆ ಕುಂಭಕರ್ಣನು, ತದಾ - ಆ ಕಾಲದಲ್ಲಿ, ತೇನ - ಆ ಅಂಗದನಿಂದ, ಗಿರಿಶೃಂಗೇಣ - ಪರ್ವತಶಿಖರದಿಂದ, ಮೂರ್ಧನಿ - ಶಿರಸ್ಸಿನಲ್ಲಿ, ಅಭಿಹತಃ - ಹೊಡೆಯಲ್ಪಟ್ಟವನಾಗಿ, ಮಹತಾ - ಮಹತ್ತರವಾದ, ಕೋಪೇನ - ಕೋಪದಿಂದ, ಪ್ರಜಜ್ವಾಲ - ಉರಿಯುತ್ತಿದ್ದನು. ॥ ೪೬ ॥ ಸಕುಂಭಕರ್ಣಃ - ಆ ಕುಂಭಕರ್ಣನು, ಅಮರ್ಷಣಃ - ಕೋಪಿಷ್ಠನಾಗಿ, ಮಹಾನಾದಃ - ದೊಡ್ಡದಾಗಿ ಕೂಗುವವನಾಗಿ, ಸರ್ವವಾನರಾನ್ - ಸಮಸ್ತ ಕಪಿಗಳನ್ನೂ, ತ್ರಾಸಯನ್ - ಹೆದರಿಸುತ್ತ, ವೇಗೇನ - ವೇಗದಿಂದ, ವಾಲಿಪುತ್ರಂ - ಅಂಗದನನ್ನು ಕುರಿತು, ಅಭ್ಯಧಾವತ - ಓಡಿಬಂದನು. ॥ ೪೭ ॥ ಮಹಾಬಲಃ - ಬಹುಬಲವಂತನಾದ, ಸಃ - ಆ ಕುಂಭಕರ್ಣನು, ರೋಷಾತ್ - ಕೋಪಾತಿರೇಕದಿಂದ, ಅಂಗದೇ - ಅಂಗದನಲ್ಲಿ, ಶೂಲಂ - ಶೂಲವನ್ನು, ಸಸರ್ಜ - ಬಿಟ್ಟನು, ಯುದ್ಧ....ದಃ - ಕಾಳಗದ ಪದ್ಧತಿಯಲ್ಲಿ ಪಂಡಿತನಾದ, ಬಲವಾನ್ - ಬಲಿಷ್ಠನಾದ, ಸವಾನರರ್ಷಭಃ - ಆ ವಾನರಶ್ರೇಷ್ಠನು, ಆಪತಂತಂ - ಬರುತ್ತಿರುವ, ತಂ - ಆ ಕುಂಭಕರ್ಣನನ್ನು, ಲಾಘವಾತ್ - ಲಘುತ್ವದಿಂದ, ಮೋಚಯಾಮಾಸ - ತಪ್ಪಿಸಿಕೊಂಡನು. ॥ ೪೮ ॥ ಸಹಸಾ - ಜಾಗ್ರತೆಯಾಗಿ, ಉತ್ಪತ್ಯಚ - ಹಾರಿಯೂ, ತಲೇನ - ಅಂಗೈಯಿಂದ, ಏನಂ - ಈ ಕುಂಭಕರ್ಣನನ್ನು, ಉರಸಿ - ವಕ್ಷಸ್ಥಲದಲ್ಲಿ, ಅತಾಡಯತ್ - ಹೊಡೆದನು, ತೇನ - ಆ ಅಂಗದನಿಂದ, ಕೋಪಾತ್ - ಕೋಪದಿಂದ, ಅಭಿಹತಃ - ಹೊಡೆಯಲ್ಪಟ್ಟವನಾಗಿ, ಅಚಲೋಪಮಃ - ಪರ್ವತಸದೃಶನಾದ, ಸಃ - ಆ ಕುಂಭಕರ್ಣನು, ಪ್ರಮುಮೋಹ - ಮೂರ್ಛಿತನಾದನು. ॥ ೪೯ ॥ ಬಲವಾನ್ - ಬಲಿಷ್ಠನಾದ, ಸರಾಕ್ಷಸಃ - ಆ ಕುಂಭಕರ್ಣನು, ಲಬ್ಧಸಂಜ್ಞಃ -

ನಾದವನ್ನು ಮಾಡಿ ರಾಕ್ಷಸರೆಲ್ಲರನ್ನೂ ಭಯಗೊಳಿಸಿ ಕುಂಭಕರ್ಣನ ತಲೆಯಮೇಲೆ ಬಿಸುಟನು. ಆಗ ಕುಂಭಕರ್ಣನು ಮಹಾ ಕುಪಿತನಾಗಿ ಅವನೊಡನೆ ಯುದ್ಧಕ್ಕೆ ನಿಂತ ವಾನರರೆಲ್ಲರಿಗೂ ಭಯವನ್ನುಂಟುಮಾಡಿ ಅವನಮೇಲೆ ಶೂಲಾಯುಧವನ್ನೆಸೆದನು. ॥ ೪೧-೪೭ ॥ ಹೀಗೆ ಆ ಕುಂಭಕರ್ಣನು ಬಿಸುಟ ಶೂಲಾಯುಧವು ಭರದಿಂದ ತನಗೆದುರಾಗಿ ಬರುತ್ತಿರಲು ಯುದ್ಧಪಂಡಿತನಾದ ಅಂಗದನು ಚಮತ್ಕಾರವಾಗಿ ಅದರ ಹೊಡೆತವನ್ನು ತಪ್ಪಿಸಿಕೊಂಡು ಆ ಬಳಿಕ ಜಾಗ್ರತೆಯಾಗಿ ಅವನಮೇಲೆ ನೆಗೆದು ಅವನ ವಕ್ಷಸ್ಥಳಕ್ಕೆ ಬಲವಾಗಿ ಒದೆದನು. ಮಹಾ ಕುಪಿತನಾದ ಆಯಂಗದನ ಒದೆತದಿಂದ ಪರ್ವತಸಮಾನನಾದ ಆ ಕುಂಭಕರ್ಣನು ಕೂಡಲೇ ಮೂರ್ಛೆಗೊಂಡು ಸ್ವಲ್ಪಹೊತ್ತಿನಮೇಲೆ ಎಚ್ಚರಗೊಂಡು ಮುಷ್ಟಿಯಿಂದ ಅವ

ಪಮಃ ॥ ೪೯ ॥ ಸಲಬ್ಧಸಂಜ್ಞೋ ಬಲವಾನ್ ಮುಷ್ಟಿಮಾವರ್ತ್ಯ ರಾಕ್ಷಸಃ । ಅಪಹಸ್ತೇನ ಚಿಕ್ಷೇಪ ವಿಸಂಜ್ಞಸ್ಸ ಪಪಾತಹ ॥ ೫೦ ॥ ತಸ್ಮಿನ್ ಪ್ಲವಗಶಾರ್ದೂಲೇ ವಿಸಂಜ್ಞೇ ಪತಿತೇ ಭುವಿ । ತಚ್ಛೂಲಂ ಸಮುಪಾದಾಯ ಸುಗ್ರೀವಮಭಿದುದ್ರುವೇ ॥೫೧॥ ತಮಾಪತಂತಂ ಸಂಪ್ರೇಕ್ಷ್ಯ ಕುಂಭಕರ್ಣಂ ಮಹಾಬಲಂ । ಉತ್ಪಪಾತ ತದಾ ವೀರಸ್ಸುಗ್ರೀವೋ ವಾನರಾಧಿಪಃ ॥ ೫೨ ॥ ಪರ್ವತಾಗ್ರಂ ಸಮುತ್ಕ್ಷಿಪ್ಯ ಸಮಾವಿಧ್ಯ ಮಹಾಕಪಿಃ । ಅಭಿದುದ್ರಾವ ವೇಗೇನ ಕುಂಭಕರ್ಣಂ ಮಹಾಬಲಂ ॥೫೩॥ ತಮಾಪತಂತಂ ಸಂಪ್ರೇಕ್ಷ್ಯ ಕುಂಭಕರ್ಣಃ ಪ್ಲವಂಗಮಂ । ತಸ್ಥೌ ವಿಕೃತಸರ್ವಾಂಗೋ ವಾನರೇಂದ್ರಸಮುನ್ಮುಖಃ ॥೫೪॥ ಕಪಿಶೋಣಿತದಿಗ್ಧಾಂಗಂ ಭಕ್ಷಯಂತಂ ಪ್ಲವಂಗಮಾನ್ ।

ಹೊಂದಲ್ಪಟ್ಟ ಪ್ರಜ್ಞೆಯುಳ್ಳವನಾಗಿ, ಅಪಹಸ್ತೇನ - ಮುಕುಳಿತವಾದ ಕೈಯಿಂದ, ಮುಷ್ಟಿಂ - ಮುಷ್ಟಿಯನ್ನು, ಆವರ್ತ್ಯ - ತಿರುಗಿಸಿ, ಚಿಕ್ಷೇಪ - ಎತ್ತಿ ಹೊಡೆದನು, ಸಃ - ಆ ಅಂಗದನು, ವಿಸಂಜ್ಞಃ - ಪ್ರಜ್ಞೆಯಿಲ್ಲದವನಾಗಿ, ಪಪಾತಹ - ಬಿದ್ದನು. ॥ ೫೦ ॥ ಪ್ಲವಂ....ಲೇ - ವಾನರೋತ್ತಮನಾದ, ತಸ್ಮಿನ್ - ಆ ಅಂಗದನು, ವಿಸಂಜ್ಞೇ - ಪ್ರಜ್ಞೆಯಿಲ್ಲದವನಾಗಿ, ಭುವಿ - ನೆಲದಲ್ಲಿ, ಪತಿತೇ - ಬಿದ್ದವನಾಗಲು, ತಚ್ಛೂಲಂ - ಆ ಶೂಲವನ್ನು, ಸಮುಪಾದಾಯ - ತೆಗೆದುಕೊಂಡು, ಸುಗ್ರೀವಂ - ಸುಗ್ರೀವನನ್ನು ಕುರಿತು, ಅಭಿದುದ್ರುವೇ - ಎದುರೋಡಿಬಂದನು. ॥ ೫೧ ॥ ತದಾ - ಆ ಕಾಲದಲ್ಲಿ, ವೀರಃ - ಶೂರನಾದ, ವಾನರಾಧಿಪಃ - ವಾನರರಾಜನಾದ, ಸುಗ್ರೀವಃ - ಸುಗ್ರೀವನು, ಆಪತಂತಂ - ಬರುತ್ತಿರುವ, ಮಹಾಬಲಂ - ಬಹು ಬಲವಂತನಾದ, ತಂಕುಂಭಕರ್ಣಂ - ಆ ಕುಂಭಕರ್ಣನನ್ನು, ಸಂಪ್ರೇಕ್ಷ್ಯ - ಕಂಡು, ಉತ್ಪಪಾತ - ಹಾರಿದನು. ॥ ೫೨ ॥ ಮಹಾಕಪಿಃ - ಮಹಾ ವಾನರನಾದ ಸುಗ್ರೀವನು, ಪರ್ವತಾಗ್ರಂ - ಬೆಟ್ಟದ ಕೋಡುಗಲ್ಲನ್ನು, ಸಮುತ್ಕ್ಷಿಪ್ಯ - ಎತ್ತಿ, ವೇಗೇನ - ಜವದಿಂದ, ಮಹಾಬಲಂ - ಬಹು ಬಲವಂತನಾದ, ಕುಂಭಕರ್ಣಂ - ಕುಂಭಕರ್ಣನನ್ನು, ಸಮಾವಿಧ್ಯ - ಹೊಡೆದು, ಅಭಿದುದ್ರಾವ-ಎದುರು ಬಂದನು. ॥ ೫೩ ॥ ಆಪತಂತಂ-ಬರುತ್ತಿರುವ, ತಂಪ್ಲವಂಗಮಂ-ಆ ಸುಗ್ರೀವನನ್ನು, ಸಂಪ್ರೇಕ್ಷ್ಯ - ಕಂಡು, ವಿಕೃ....ಗಃ - ವಕ್ರವಾದ ಸರ್ವಾವಯವಗಳುಳ್ಳ, ಕುಂಭಕರ್ಣಃ - ಕುಂಭಕರ್ಣನು, ವಾನ....ಖಂ - ಸುಗ್ರೀವನಿಗಭಿಮುಖನಾಗಿ, ತಸ್ಥೌ - ನಿಂತನು. ॥ ೫೪ ॥ ಕಪಿ....ಗಂ - ವಾನರರ ರಕ್ತದಿಂದ ಲೇಪನಮಾಡಲ್ಪಟ್ಟ ಶರೀರವುಳ್ಳ, ಪ್ಲವಂಗಮಾನ್ - ವಾನರರನ್ನು, ಭಕ್ಷಯಂತಂ - ತಿನ್ನುತ್ತ, ಸ್ಥಿತಂ - ನಿಂತಿರುವ, ಕುಂಭಕರ್ಣಂ - ಕುಂಭಕರ್ಣನನ್ನು,

---

ನನ್ನು ಬಲವಾಗಿ ಪ್ರಹರಿಸಿದ ಕೂಡಲೇ ಆ ಅಂಗದನು ಜ್ಞಾನ ತಪ್ಪಿ ನೆಲಕ್ಕುರುಳಿದನು. ಕಪಿಶ್ರೇಷ್ಠನಾದ ಅಂಗದನು ನೆಲಕ್ಕೆ ಬೀಳುತ್ತಲೇ ಕುಂಭಕರ್ಣನು ಮತ್ತೆ ಶೂಲಾಯುಧವನ್ನು ಕೈಕೊಂಡು ವಾನರೇಶ್ವರನನ್ನಟ್ಟಿ ಹೋದನು ; ವಾನರಾಧಿಪನಾದ ಆ ಸುಗ್ರೀವನು ತನ್ನಮೇಲೆ ಬರುತ್ತಿರುವ ಆ ರಾಕ್ಷಸನನ್ನು ಕಂಡು ಕೂಡಲೇ ಯುದ್ಧಸನ್ನದ್ಧನಾಗಿ ದೊಡ್ಡದೊಂದು ಬೆಟ್ಟವನ್ನು ಅವನಮೇಲೆಸೆದು ಅಟ್ಟಿಬಂದನು. ॥ ೪೮–೫೩ ॥ ಆ ಮಹಾರಾಕ್ಷಸನು ತನಗೆದುರಾಗಿ ಬರುತ್ತಿರುವ ಸುಗ್ರೀವನನ್ನು ಕಂಡು ಯುದ್ಧಸನ್ನದ್ಧನಾಗಿ ತನ್ನ ದೇಹಾದ್ಯಂತವನ್ನೂ ವಿಕಾರಗೊಳಿಸಿಕೊಂಡು ನಿಂತನು. ಸುಗ್ರೀವನು ಕಪಿಗಳೆಲ್ಲರನ್ನೂ ಭಕ್ಷಿಸುತ್ತ, ಕಪಿಗಳ ರಕ್ತದಿಂದ ಲೇಪಿಸಿದ ಸಮಸ್ತಾವಯವಗಳುಳ್ಳವನಾದ ಆ ಕುಂಭಕರ್ಣನನ್ನು ಕುರಿತು, “ ಅಯ್ಯಾ ಕುಂಭಕರ್ಣನೇ! ನೀನು ಯಾರಿಂದಲೂ ಮಾಡ

ಕುಂಭಕರ್ಣಂ ಸ್ಥಿತಂ ದೃಷ್ಟ್ವಾ ಸುಗ್ರೀವೋ ವಾಕ್ಯಮಬ್ರವೀತ್ ||೫೫|| "ಪಾತಿತಾಶ್ಚ ತ್ವಯಾ ವೀರಾಃ ಕೃತಂ ಕರ್ಮ ಸುದುಷ್ಕರಂ । ಭಕ್ಷಿತಾನಿ ಚ ಸೈನ್ಯಾನಿ ಪ್ರಾಪ್ತಂ ತೇ ಪರಮಂ ಯಶಃ || ೫೬ || ತ್ಯಜ ತದ್ವಾನರಾನೀಕಂ ಪ್ರಾಕೃತೈಃ ಕಿಂ ಕರಿಷ್ಯಸಿ । ಸಹ ಸ್ವೈಕನಿಪಾತಂ ಮೇ ಪರ್ವತಸ್ಯಾಽಸ್ಯ ರಾಕ್ಷಸ!" || ೫೭ || ತದ್ವಾಕ್ಯಂ ಹರಿರಾಜಸ್ಯ ಸತ್ವಧೈರ್ಯಸಮನ್ವಿತಂ । ಶ್ರುತ್ವಾ ರಾಕ್ಷಸಶಾರ್ದೂಲಃ ಕುಂಭಕರ್ಣೋಽಬ್ರವೀದ್ವಚಃ || ೫೮ || "ಪ್ರಜಾಪತೇಸ್ತು ಪೌತ್ರಸ್ತ್ವಂ ತದೇವರ್ಕ್ಷರಜಸ್ಸುತಃ । ಶ್ರುತಪೌರುಷ ಸಂಪನ್ನಃ ಕಸ್ಮಾದ್ಗರ್ಜಸಿ ವಾನರ" || ೫೯ || ಸಕುಂಭಕರ್ಣಸ್ಯ ವಚೋ ನಿಶಮ್ಯ ವ್ಯಾವಿಧ್ಯ ಶೈಲಂ ಸಹಸಾ ಮುಮೋಚ । ತೇನಾಜಘಾನೋರಸಿ ಕುಂಭಕರ್ಣಂ ಶೈಲೇನ

ದೃಷ್ಟ್ವಾ - ಕಂಡು, ಸುಗ್ರೀವಃ - ಸುಗ್ರೀವನು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. || ೫೫ || ಹೇ ರಾಕ್ಷಸ - ಎಲೈ ರಕ್ಕಸನೇ, ತ್ವಯಾ - ನಿನ್ನಿಂದ, ವೀರಾಃ - ಶೂರರು, ಪಾತಿತಾಃ - ಬೀಳಿಸಲ್ಪಟ್ಟರು, ಸುದುಷ್ಕರಂ - ಅಸಾಧ್ಯವಾದ, ಕರ್ಮ - ಕೃತ್ಯವು, ಕೃತಂ - ಮಾಡಲ್ಪಟ್ಟಿತು, ತೇ - ನಿನ್ನಿಂದ, ಸೈನ್ಯಾನಿಚ - ವಾನರಸೈನ್ಯಗಳೂ, ಭಕ್ಷಿತಾನಿ - ಭಕ್ಷಿಸಲ್ಪಟ್ಟವು, ಪರಮಂ - ಬಹಳವಾದ, ಯಶಃ - ಕೀರ್ತಿಯು, ಪ್ರಾಪ್ತಂ - ಹೊಂದಲ್ಪಟ್ಟಿತು. || ೫೬ || ತದ್ವಾ....ಕಂ - ಆ ಕಪಿಸೈನ್ಯವನ್ನು, ತ್ಯಜ-ಬಿಡು, ಪ್ರಾಕೃತೈಃ-ಪಾಮರರಿಂದ, ಕಿಂಕರಿಷ್ಯಸಿ-ಏನುಮಾಡುವೆ, ಮೇ-ನನ್ನ, ಅಸ್ಯಪರ್ವತಸ್ಯ-ಈ ಬೆಟ್ಟದ, ಏಕನಿಪಾತಂ - ಒಂದು ಪೆಟ್ಟನ್ನು, ಸಹಸ್ವ - ಸಹಿಸಿಕೋ. || ೫೭ || ಹರಿರಾಜಸ್ಯ - ಸುಗ್ರೀವನ, ಸತ್ವ....ತಂ-ಬಲದಿಂದಲೂ, ಧೈರ್ಯದಿಂದಲೂ ಕೂಡಿರುವ, ತದ್ವಾಕ್ಯಂ-ಆ ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷ....ಲಃ - ರಾಕ್ಷಸಶ್ರೇಷ್ಠನಾದ, ಕುಂಭಕರ್ಣಃ - ಕುಂಭಕರ್ಣನು, ವಚಃ - ಮಾತನ್ನು, ಅಬ್ರವೀತ್ - ನುಡಿದನು. || ೫೮ || ಹೇ ವಾನರ - ಎಲೈ ಕಪಿಯೇ, ತ್ವಂ - ನೀನು, ಪ್ರಜಾಪತೇಸ್ತು - ಬ್ರಹ್ಮನಿಗಾದರೆ, ಪೌತ್ರಃ - ಮೊಮ್ಮಗನು, ತಥೈವ - ಹಾಗೆಯೇ, ಋಕ್ಷರಜಸ್ಸುತಃ-ಋಕ್ಷರಜಸ್ಸಿನ ಪುತ್ರನು, ಶ್ರುತ....ನ್ನಃ - ಪ್ರಸಿದ್ಧವಾದ ಪರಾಕ್ರಮದಿಂದ ಕೂಡಿದವನು, ಕಸ್ಮಾತ್ - ಏತರ ದೆಶೆಯಿಂದ, ವಿಕತ್ಥಸೇ - ಕೂಗಿಕೊಳ್ಳುವೆ. || ೫೯ || ಸಃ - ಆ ಸುಗ್ರೀವನು, ಕುಂಭಕರ್ಣಸ್ಯ - ಕುಂಭಕರ್ಣನ, ವಚಃ - ಮಾತನ್ನು, ನಿಶಮ್ಯ - ಕೇಳಿ, ಶೈಲಂ - ಬೆಟ್ಟವನ್ನು, ಸಹಸಾ - ಜಾಗ್ರತೆಯಾಗಿ, ವ್ಯಾವಿಧ್ಯ - ತಿರುಗಿಸಿ, ಮುಮೋಚ - ಬಿಟ್ಟನು, ವಜ್ರಾ....ನ - ವಜ್ರಾಯುಧಕ್ಕೂ, ಸಿಡಿಲಿಗೂ

ಲಸಾಧ್ಯವಾದ ದುರಂತಯುದ್ಧವನ್ನು ಮಾಡಿದೆ. ಅನೇಕ ಸಹಸ್ರ ವಾನರರನ್ನು ನೆಲಕ್ಕುರುಳಿಸಿದೆ. ನಮ್ಮ ಸೇನೆಯೆಲ್ಲವನ್ನೂ ನುಂಗಿ ಮಹತ್ತರವಾದ ಕೀರ್ತಿಯನ್ನೂ ಪಡೆದೆ. ಇನ್ನು ಆ ಪ್ರಾಕೃತರಾದ ವಾನರರನ್ನು ಕಟ್ಟಿಕೊಂಡೇನು? ಬಿಡು ಬಿಡು. ಎಲಾ ರಾಕ್ಷಸನೆ! ಇದೊ ನೋಡು ನಿನಗೆ ಸಮಾನನಾದ ನಾನು ನಿನ್ನೊಡನೆ ಯುದ್ಧಕ್ಕೆ ನಿಂತಿದ್ದೇನೆ. ಇದೋ ಈ ಪರ್ವತಪ್ರಹಾರವನ್ನು ಸಹಿಸಿಕೊ" ಎಂದು ಹೇಳಿದನು. || ೫೫–೫೭ || ರಾಕ್ಷಸಶ್ರೇಷ್ಠನಾದ ಕುಂಭಕರ್ಣನು ಪೌರುಷಪರಾಕ್ರಮಗಳಿಂದ ಕೂಡಿದ ಆ ಸುಗ್ರೀವನ ಮಾತುಗಳನ್ನು ಕೇಳಿ ಅವನನ್ನು ಕುರಿತು, "ಎಲೋ ವಾನರನೇ! ನೀನು ಪ್ರಜಾಪತಿಯ ಮೊಮ್ಮಗನಾಗಿ, ಋಕ್ಷರಜಸ್ಸಿನ ಮಗನಾಗಿ, ಪ್ರಸಿದ್ಧವಾದ ಪೌರುಷಪರಾಕ್ರಮಗಳುಳ್ಳವನಾಗಿ ಹೀಗೇಕೆ ನಿಷ್ಪ್ರಯೋಜನವಾಗಿ ಕೂಗುತ್ತಿದ್ದೀಯೆ" ಎಂದು ಹೇಳಿದನು. ಹೀಗೆ ಆ ಕುಂಭಕರ್ಣನು ಹೀಯಾಳಿಸಿ ನುಡಿದ ಮಾತುಗಳನ್ನು ಕೇಳಿ ಸುಗ್ರೀವನು ಮಹಾ ಕುಪಿತನಾಗಿ ಮಹೇಂದ್ರನ

ವಜ್ರಾಶನಿಸನ್ನಿಭೇನ ॥ ೭೦ ॥ ತಚ್ಛೈಲಶೃಂಗಂ ಸಹಸಾ ವಿಕೀರ್ಣಂ ಭುಜಾಂತರೇ ತಸ್ಯ ತದಾ ವಿಶಾಲೇ । ತತೋ ವಿಷೇದುಸ್ಸಹಸಾ ಪ್ಲವಂಗಾ ರಕ್ಷೋಗಣಾಶ್ಚಾಪಿ ಮುದಾ ವಿನೇದುಃ ॥ ೭೧ ॥ ಸಶೈಲಶೃಂಗಾಭಿಹತಶ್ಚುಕೋಪ ನನಾದ ಕೋಪಾಚ್ಚ ವಿವೃತ್ಯ ವಕ್ತ್ರಂ । ವ್ಯಾವಿಧ್ಯ ಶೂಲಂಚ ತಟಿತ್ಪ್ರಕಾಶಂ ಚಿಕ್ಷೇಪ ಹರ್ಯೃಕ್ಷಪತೇರ್ವಧಾಯ ॥೭೨॥ ತತ್ಕುಂಭಕರ್ಣಸ್ಯ ಭುಜಪ್ರವಿದ್ಧಂ ಶೂಲಂ ಶಿತಂ ಕಾಂಚನದಾಮಜುಷ್ಟಂ । ಕ್ಷಿಪ್ರಂ ಸಮುತ್ಪತ್ಯ ನಿಗೃಹ್ಯ ದೋರ್ಭ್ಯಾಂ ಬಭಂಜ ವೇಗೇನ ಸುತೋಽನಿಲಸ್ಯ ॥ ೭೩ ॥ ಕೃತಂ ಭಾರಸಹಸ್ರಸ್ಯ ಶೂಲಂ ಕಾಳಾಯಸಂ ಮಹತ್ । ಬಭಂಜ ಜಾನುನ್ಯಾರೋಪ್ಯ ಪ್ರಹೃಷ್ಟಃ ಪ್ಲವರ್ಷಭಃ ॥ ೭೪ ॥ ಶೂಲಂ ಭಗ್ನಂ ಹನುಮತಾ

ಸಮಾನವಾದ, ತೇನಶೈಲೇನ - ಆ ಬೆಟ್ಟದಿಂದ, ಕುಂಭಕರ್ಣಂ - ಕುಂಭಕರ್ಣನನ್ನು, ಉರಸಿ - ಎದೆಯಲ್ಲಿ, ಜಘಾನ - ಹೊಡೆದನು. ॥ ೭೦ ॥ ತದಾ - ಆ ಕಾಲದಲ್ಲಿ, ವಿಶಾಲೇ - ವಿಸ್ತಾರವಾದ, ತಸ್ಯ-ಆ ಕುಂಭಕರ್ಣನ, ಭುಜಾಂತರೇ-ವಕ್ಷಸ್ಥಲದಲ್ಲಿ, ತಚ್ಛೈ....ಗಂ ಆ ಪರ್ವತವನ್ನು, ವಿಕೀರ್ಣಂ-ಪುಡಿಯಾದುದನ್ನು, ದೃಷ್ಟ್ವಾ - ಕಂಡು, ಪ್ಲವಂಗಾಃ - ವಾನರರು, ತತಃ - ಬಳಿಕ, ಸಹಸಾ - ಜಾಗ್ರತೆಯಾಗಿ, ವಿಷೇದುಃ - ದುಃಖಗೊಂಡರು, ರಾಕ್ಷ....ಪಿ - ರಾಕ್ಷಸತಂಡಗಳೂ ಸಹ, ಮುದಾ - ಸಂತೋಷದಿಂದ, ವಿನೇದುಃ - ಕೋಲಾಹಲಮಾಡಿದರು. ॥ ೭೧ ॥ ಶೈಲ....ತಃ - ಪರ್ವತಶಿಖರದಿಂದ ಹೊಡೆಯಲ್ಪಟ್ಟ, ಸಃ - ಆ ಕುಂಭಕರ್ಣನು, ಚುಕೋಪ - ಕೋಪಗೊಂಡನು, ಕೋಪಾತ್ - ಕೋಪದಿಂದ, ವಕ್ತ್ರಂಚ - ಬಾಯಿಯನ್ನೂ, ವಿವೃತ್ಯ - ತೆರೆದು, ನನಾದ - ಕೂಗಿದನು, ಹರ್ಯೃಕ್ಷಪತೇಃ - ವಾನರರಿಗೂ, ಕರಡಿಗಳಿಗೂ ಅಧಿಪತಿಯಾದ ಸುಗ್ರೀವನ, ವಧಾಯ - ಸಂಹಾರಕ್ಕಾಗಿ, ತಟಿತ್ಪ್ರಕಾಶಂ - ಮಿಂಚಿನಂತೆ ಹೊಳೆಯುವ, ಶೂಲಂ - ಶೂಲವನ್ನು, ವ್ಯಾವಿಧ್ಯ - ತಿರುಗಿಸಿ, ಚಿಕ್ಷೇಪ - ಎಸೆದನು. ॥ ೭೨ ॥ ಕುಂಭಕರ್ಣಸ್ಯ - ಕುಂಭಕರ್ಣನ, ಭುಜಪ್ರವಿದ್ಧಂ - ಭುಜದಿಂದ ಹೊಡೆಯಲ್ಪಟ್ಟ, ಶಿತಂ - ತೀಕ್ಷ್ಣವಾದ, ಕಾಂಚನಧಾಮಜುಷ್ಟಂ - ಚಿನ್ನದ ಕಾಂತಿಯಿಂದ ವ್ಯಾಪ್ತವಾದ, ತಚ್ಛೂಲಂ - ಆ ಶೂಲವನ್ನು, ಅನಿಲಸ್ಯಸುತಃ - ವಾಯುಪುತ್ರನಾದ ಆಂಜನೇಯನು, ಕ್ಷಿಪ್ರಂ - ಜಾಗ್ರತೆಯಾಗಿ, ಸಮುತ್ಪತ್ಯ - ಹಾರಿ, ನಿಗೃಹ್ಯ - ಹಿಡಿದು, ದೂರ್ಭ್ಯಾಂ - ಭುಜಗಳಿಂದ, ವೇಗೇನ - ವೇಗದಿಂದ, ಬಭಂಜ - ಮುರಿದನು. ॥ ೭೩ ॥ ಭಾರ....ಸ್ಯ - ಸಾವಿರಭಾರಗಳಿಂದ, ಕೃತಂ - ಮಾಡಲ್ಪಟ್ಟ, ಕಾಳಾಯಸಂ - ಕಬ್ಬಿಣದ, ಮಹತ್ - ದೊಡ್ಡದಾದ, ಶೂಲಂ - ಶೂಲವನ್ನು, ಜಾನುನಿ - ಮೊಳಕಾಲಿನಲ್ಲಿ, ಆರೋಪ್ಯ-ಏರಿಸಿ, ಪ್ರಹೃಷ್ಟಃ-ಸಂತೋಷಗೊಂಡವನಾಗಿ, ಪ್ಲವಗರ್ಷಭಃ-ವಾನರೋತ್ತಮ

ವಜ್ರಾಯುಧಕ್ಕೆ ಸಮಾನವಾದ ಆ ಪರ್ವತವನ್ನು ಬಹು ವೇಗವಾಗಿ ಆವನ ವಕ್ಷಸ್ಥಳಕ್ಕೆಸೆದನು. ಆ ಪರ್ವತವಾದರೋ ಆ ರಾಕ್ಷಸನೆದೆಗೆ ತಗುಲಿ ಚೂರುಚೂರಾಗಿ ಒಡೆದು ಹೋಯಿತು. ಇದನ್ನು ಕಂಡೊಡನೆಯೇ ಕಪಿಗಳೆಲ್ಲರೂ ದುಃಖಿತರಾಗಿಹೋದರು; ರಾಕ್ಷಸರ ಸಂತೋಷಕೆಂತೂ ಪಾರವಿಲ್ಲದೆಯೇ ಹೋಯಿತು. ಅವರು ಮಹತ್ತರವಾದ ವೀರಗರ್ಜನೆಗಳನ್ನು ಮಾಡಿ ಮೆರೆದರು. ॥ ೫೮—೭೨ ॥ ಆ ತರುವಾಯ ಪರ್ವತಾಹತನಾದ ಆ ಕುಂಭಕರ್ಣನು ಕನಲಿದವನಾಗಿ ಬಾಯನ್ನು ಅಗಲವಾಗಿ ತೆರೆದು ಭಯಂಕರವಾಗಿ ಕೂಗಿಡುತ್ತ ಆ ಸುಗ್ರೀವನನ್ನು ಕೊಲ್ಲುವದಕ್ಕೋಸ್ಕರ ಮಿಂಚಿಗೆ ಸಮಾನವಾದ ಶೂಲಾಯುಧವನ್ನು ಬಹು ಬಲವಾಗಿ ಎಸೆದನು. ಆ ಸಮಯದಲ್ಲಿ ವಾಯುಸುತನಾದ ಆಂಜನೇಯನು ಚಿನ್ನದ ಕಟ್ಟ

ದೃಷ್ಟ್ವಾ ವಾನರವಾಹಿನೀ । ಹೃಷ್ಟಾ ನನಾದ ಬಹುಶಸ್ಸರ್ವತಶ್ಚಾಪಿ ದುದ್ರುವೇ॥೬೫॥ ಸಿಂಹನಾದಂಚ ತೇ ಚಕ್ರುಃ ಪ್ರಹೃಷ್ಟಾ ವನಗೋಚರಾಃ । ಮಾರುತಿಂ ಪೂಜಯಾಂಚಕ್ರುರ್ದೃಷ್ಟ್ವಾ ಶೂಲಂ ತಥಾಗತಂ ॥೬೬॥ ಸತತ್ತದಾ ಭಗ್ನಮವೇಕ್ಷ್ಯ ಶೂಲಂ ಚುಕೋಪ ರಕ್ಷೋಧಿಪತಿರ್ಮಹಾತ್ಮಾ । ಉತ್ಪಾಟ್ಯ ಲಂಕಾ ಮಲಯಾತ್ಸಶೃಂಗಂ ಜಘಾನ ಸುಗ್ರೀವಮುಪೇತ್ಯ ತೇನ ॥೬೭॥ ಸಶೈಲಶೃಂಗಾಭಿಹತೋ ವಿಸಂಜ್ಞಃ ಪಪಾತ ಭೂಮೌ ಯುಧಿ ವಾನರೇಂದ್ರಃ । ತಂ ಪ್ರೇಕ್ಷ್ಯ ಭೂಮೌ ಪತಿತಂ ವಿಸಂಜ್ಞಂ ನೇದುಃ

ನಾದ ಹನುಮಂತನು, ಬಭಂಜ - ಮುರಿದನು. ||೬೪|| ವಾನರವಾಹಿನೀ - ವಾನರಸೈನ್ಯವು, ಶೂಲಂ - ಶೂಲವನ್ನು, ಹನುಮತಾ - ಆಂಜನೇಯನಿಂದ, ಭಗ್ನಂ - ಮುರಿಯಲ್ಪಟ್ಟುದನ್ನಾಗಿ, ದೃಷ್ಟ್ವಾ - ಕಂಡು, ಹೃಷ್ಟಾ - ಸಂತೋಷಗೊಂಡುದಾಗಿ, ಬಹುಶಃ - ಬಹು ಪ್ರಕಾರವಾಗಿ, ನನಾದ - ಕೂಗಿತು, ಸರ್ವತಶ್ಚಾಪಿ - ಸರ್ವದಿಕ್ಕುಗಳಲ್ಲಿಯೂ, ದುದ್ರುವೇ-ಓಡಿಬಂದಿತು. ||೬೫|| ತೇವನಗೋಚರಾಃ - ಆ ವಾನರರು, ಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ಸಿಂಹನಾದಂ - ಸಿಂಹನಾದವನ್ನು, ಚಕ್ರುಃ - ಮಾಡಿದರು, ಶೂಲಂ - ಶೂಲವನ್ನು, ತಥಾಗತಂ - ಅಂಥಾ ಅವಸ್ಥೆಯನ್ನು ಹೊಂದಿದ್ದನ್ನಾಗಿ, ದೃಷ್ಟ್ವಾ - ಕಂಡು, ಮಾರುತಿಂ - ಆಂಜನೇಯನನ್ನು, ಪೂಜಯಾಂಚಕ್ರುಃ - ಪೂಜಿಸಿದರು. ॥ ೬೬ ॥ ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ರಕ್ಷೋಧಿಪತಿಃ - ರಾಕ್ಷಸಾಧಿಪತಿಯಾದ, ಸಃ - ಅವನು, ತದಾ - ಆ ಕಾಲದಲ್ಲಿ, ತಚ್ಛೂಲಂ - ಆ ಶೂಲವನ್ನು, ಭಗ್ನಂ - ಭಗ್ನವಾದುದನ್ನಾಗಿ, ಅವೇಕ್ಷ್ಯ - ಕಂಡು, ಸಃ - ಆ ಕುಂಭಕರ್ಣನು, ಲಂಕಾ....ತ್ - ಲಂಕಾ ಸಮೀಪದಲ್ಲಿರುವ ಮಲಯಪರ್ವತದಿಂದ, ಶೃಂಗಂ - ಶಿಖರವನ್ನು, ಉತ್ಪಾಟ್ಯ - ಕಿತ್ತು, ಉಪೇತ್ಯ - ಬಂದು, ತೇನ - ಆ ಶಿಖರದಿಂದ, ಸುಗ್ರೀವಂ - ಸುಗ್ರೀವನನ್ನು, ಜಘಾನ - ಹೊಡೆದನು. ॥ ೬೭ ॥ ಸವಾನರೇಂದ್ರಃ - ಆ ಸುಗ್ರೀವನು, ಯುಧಿ - ಕಾಳಗದಲ್ಲಿ, ಶೈಲ....ತಃ - ಪರ್ವತದ ಶಿಖರದಿಂದ ಹೊಡೆಯಲ್ಪಟ್ಟವನಾಗಿ, ವಿಸಂಜ್ಞಃ - ಪ್ರಜ್ಞೆ ತಪ್ಪಿ, ಭೂಮೌ - ನೆಲದಲ್ಲಿ, ಪಪಾತ - ಬಿದ್ದನು, ಭೂಮೌ - ನೆಲದಲ್ಲಿ, ವಿಸಂಜ್ಞಂ - ಪ್ರಜ್ಞೆ ತಪ್ಪಿ, ಪತಿತಂ - ಬಿದ್ದಿರುವ, ತಂ - ಆ ಸುಗ್ರೀವನನ್ನು, ಪ್ರೇಕ್ಷ್ಯ - ಕಂಡು, ಅಥ - ಬಳಿಕ, ಯಾತುಧಾನಾಃ - ರಾಕ್ಷಸರು, ಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ನೇದುಃ - ಕೋಲಾಹಲ

ಗಳೊಡಗೂಡಿ ಬಹು ತೀಕ್ಷ್ಣವಾಗಿ ಪ್ರಕಾಶಿಸುತ್ತ ಅತ್ಯಂತ ವೇಗದಿಂದೈತರುತ್ತಿದ್ದ ಆ ಕುಂಭಕರ್ಣನ ಶೂಲಾಯುಧವನ್ನು ಮಾರ್ಗಮಧ್ಯದಲ್ಲಿಯೇ ಹಾರಿ ಹಿಡಿದು ಬಹು ಜಾಗ್ರತೆಯಾಗಿಯೇ ಅದನ್ನು ತನ್ನ ಮೊಣಕಾಲುಗಳ ಮೇಲಿರಿಸಿ ಮುರಿದಿಕ್ಕಿದನು. ಹೀಗೆ ಸರ್ವಕಾಲಾಯಸ ನಿರ್ಮಿತವಾದ ಆ ಶೂಲವನ್ನು ವೀರನಾದ ಹನುಮಂತನು ಮುರಿದುದನ್ನು ನೋಡಿ ವಾನರಸೇನೆಯೆಲ್ಲವೂ ಸಂತೋಷಾಧಿಕ್ಯದಿಂದ ಸಿಂಹಧ್ವನಿಗಳನ್ನು ಮಾಡುತ್ತ ಓಡಿಬಂದು ಅವನನ್ನು ಪೂಜಿಸಿತು. ॥೬೫–೬೬॥ ಮಹಾ ಶರೀರಿಯಾದ ಆ ಕುಂಭಕರ್ಣನು ತಾನು ಪ್ರಯೋಗಿಸಿದ ಶೂಲಾಯುಧವು ವಾಯುನಂದನನಿಂದ ಭಗ್ನವಾದುದನ್ನು ಕಂಡು ಬಹಳವಾಗಿ ಕೋಪಗೊಂಡು ಲಂಕಾನಗರದಲ್ಲಿಯ ಮಲಯಪರ್ವತದ ಕೋಡುಗಲ್ಲನ್ನು ಪೆಳಗಿಸಿಕೊಂಡು ಸುಗ್ರೀವನನ್ನಟ್ಟಿಬಂದು ಅದರಿಂದ ಅವನನ್ನು ಬಲವಾಗಿ ಹೊಡೆದನು. ಆ ಹೊಡೆತವನ್ನು ತಾಳಲಾರದೆ ಸುಗ್ರೀವನು ಮೂರ್ಛಿತನಾಗಿ ನೆಲಕ್ಕೆ ಬಿದ್ದನು. ಆಗ ರಾಕ್ಷಸರೆಲ್ಲರೂ ಸಂತೋಷಗೊಂಡು ಸಿಂಹನಾದಗಳನ್ನು ಮಾಡಿದರು. ಆಮೇಲೆ ಕುಂಭ

ಪ್ರಹೃಷ್ಟಾಸ್ತ್ವಥ ಯಾತುಧಾನಾಃ ॥ ೬೮ ॥ ತಮಭ್ಯುಪೇತ್ಯಾದ್ಭುತಘೋರವೀರ್ಯಂ ಸಕುಂಭಕರ್ಣೋ ಯುಧಿ ವಾನರೇಂದ್ರಂ । ಜಹಾರ ಸುಗ್ರೀವಮಭಿಪ್ರಗೃಹ್ಯ ಯಥಾಽನಿಲೋ ಮೇಘಮತಿಪ್ರಚಂಡಃ ॥ ೬೯ ॥ ಸತಂ ಮಹಾಮೇಘನಿಕಾಶರೂಪಮುತ್ಪಾಟ್ಯ ಗಚ್ಛನ್ ಯುಧಿ ಕುಂಭಕರ್ಣಃ । ರರಾಜ ಮೇರುಪ್ರತಿಮಾನರೂಪೋ ಮೇರುರ್ಯಥಾಽಭ್ಯುಚ್ಛ್ರಿತಘೋರಶೃಂಗಃ ॥ ೭೦ ॥ ತತಸ್ತಮುತ್ಪಾಟ್ಯ ಜಗಾಮ ವೀರಸ್ಸಂಸ್ತೂಯಮಾನೋ ಯುಧಿ ರಾಕ್ಷಸೇಂದ್ರೈಃ । ಶೃಣ್ವನ್ನಿನಾದಂ ತ್ರಿದಶಾಲಯಾನಾಂ ಪ್ಲವಂಗರಾಜಗ್ರಹವಿಸ್ಮಿತಾನಾಂ ॥ ೭೧ ॥ ತತಸ್ತಮಾದಾಯ ತದಾ ಸಮೇನೇ ಹರೀಂದ್ರಮಿಂದ್ರೋಪಮಮಿಂದ್ರವೀರ್ಯಃ । "ಅಸ್ಮಿನ್ ಹೃತೇ ಸರ್ವಮಿದಂ ಹೃತಂ ಸ್ಯಾತ್ಸ

ಧ್ವನಿ ಮಾಡಿದರು. ॥ ೬೮ ॥ ಸಕುಂಭಕರ್ಣಃ - ಆ ಕುಂಭಕರ್ಣನು, ಯುಧಿ - ಕಾಳೆಗದಲ್ಲಿ, ಅಭ್ಯುಪೇತ್ಯ - ಬಂದು, ಅದ್ಭು....ರ್ಯಂ - ಆಶ್ಚರ್ಯಕರವಾದ ಪರಾಕ್ರಮವುಳ್ಳ, ವಾನರೇಂದ್ರಂ - ವಾನರಾಧಿಪತಿಯಾದ, ತಂಸುಗ್ರೀವಂ - ಆ ಸುಗ್ರೀವನನ್ನು, ಅತಿಪ್ರಚಂಡಃ - ಅತಿ ಭಯಂಕರವಾದ, ಅನಿಲಃ - ಚಂಡಮಾರುತವು, ಮೇಘಂಯಥಾ - ಮೇಘವನ್ನಂತೆ, ಅಭಿಪ್ರಗೃಹ್ಯ - ಹಿಡಿದು, ಜಹಾರ - ಅಪಹರಿಸಿದನು. ॥ ೬೯ ॥ ಮೇರು....ಪಃ - ಮೇರುಪರ್ವತಕ್ಕೆ ಸಮಾನವಾದ ಆಕಾರವುಳ್ಳ, ತಂ - ಆ ಸುಗ್ರೀವನನ್ನು, ಉತ್ಪಾಟ್ಯ - ಎತ್ತಿ, ಯುಧಿ - ಯುದ್ಧರಂಗದಲ್ಲಿ, ಗಚ್ಛನ್ - ಹಿಂತಿರುಗಿ ಹೋಗುವವನಾಗಿ, ಅಭ್ಯು....ಗಃ - ಅತ್ಯುನ್ನತವೂ ಭಯಂಕರವೂ ಆದ ಶಿಖರವುಳ್ಳ, ಮೇರುರ್ಯಥಾ - ಮೇರುಪರ್ವತದಂತೆ, ರರಾಜ - ಹೊಳೆಯುತ್ತಿದ್ದನು. ॥ ೭೦ ॥ ತತಃ - ಬಳಿಕ, ಯುಧಿ - ಯುದ್ಧರಂಗದಲ್ಲಿ, ವೀರಃ - ಶೂರನಾದ ಕುಂಭಕರ್ಣನು, ತಂ - ಆ ಸುಗ್ರೀವನನ್ನು, ಉತ್ಪಾಟ್ಯ - ಕಿತ್ತು, ರಾಕ್ಷಸೇಂದ್ರೈಃ - ರಾಕ್ಷಸಶ್ರೇಷ್ಠರಿಂದ, ಸಂಸ್ತೂಯಮಾನಃ - ಸ್ತೋತ್ರ ಮಾಡಲ್ಪಟ್ಟವನಾಗಿ, ಪ್ಲವಂ......ನಾಂ - ವಾನರೇಂದ್ರನಾದ ಸುಗ್ರೀವನ ಗ್ರಹಣದಿಂದ ಆಶ್ಚರ್ಯಯುಕ್ತರಾದ, ತ್ರಿದಶಾಲಯಾನಾಂ - ದೇವತೆಗಳ, ನಿನಾದಂ - ಶಬ್ದವನ್ನು, ಶೃಣ್ವನ್ - ಕೇಳುವವನಾಗಿ, ಜಗಾಮ - ತೆರಳಿದನು. ॥ ೭೧ ॥ ತತಃ - ಬಳಿಕ, ಇಂದ್ರವೀರ್ಯಃ - ಇಂದ್ರಸದೃಶವಾದ ಪರಾಕ್ರಮವುಳ್ಳ, ಇಂದ್ರಶತ್ರುಃ - ದೇವೇಂದ್ರನಿಗೆ ವೈರಿಯಾದ, ಸಃ - ಆ ಕುಂಭಕರ್ಣನು, ಇಂದ್ರೋಪಮಂ - ಇಂದ್ರನಿಗೆ ಸಮಾನನಾದ, ತಂಹರೀಂದ್ರಂ - ಆ ವಾನರಾಧಿಪತಿಯನ್ನು, ಆದಾಯ - ತೆಗೆದುಕೊಂಡು, ಅಸ್ಮಿನ್ - ಇವನು, ಹೃತೇ - ಅಪಹರಿಸಲ್ಪಟ್ಟವನಾಗಲು, ಸರಾಘವಂ - ರಾಮನಿಂದ ಕೂಡಿದ, ಸರ್ವಂ -

---

ಕರ್ಣನು ಅತಿ ಪ್ರಚಂಡಪರಾಕ್ರಮಿಯಾದ ಸುಗ್ರೀವನ ಬಳಿಗೈದಿ ವಾಯುವು ಮೇಘವನ್ನೆಂತೋ ಅಂತು ಅವನನ್ನೆತ್ತಿಕೊಂಡು ಹೊರಟನು. ಹೀಗೆ ಮಹಾ ಮೇಘಕ್ಕೆ ಸಮಾನನಾದ ಆ ವಾನರವೀರನನ್ನೆತ್ತಿಕೊಂಡು ಹೋಗುತ್ತಿದ್ದ ಆ ಕುಂಭಕರ್ಣನು ಭಯಂಕರವಾದ ಶಿಖರವನ್ನೊಳಗೊಂಡ ಮಹಾ ಮೇರುಗಿರಿಯಂತೆ ಪ್ರಕಾಶಿಸುತ್ತಿದ್ದನು. ಹೀಗೆ ಆ ರಾಕ್ಷಸನು ವಾನರೇಶ್ವರನಾದ ಸುಗ್ರೀವನನ್ನೆತ್ತಿಕೊಂಡು ಲಂಕಾಭಿಮುಖನಾಗಿ ರಣಾಂಗಣದಲ್ಲಿ ರಾಕ್ಷಸವೀರರು ಹೊಗಳುತಿರಲು, ಆ ವಾನರೇಶ್ವರನ ಗ್ರಹಣದಿಂದ ವಿಸ್ಮಿತರಾದ ದೇವತೆಗಳ ವಿಷಾದಯುಕ್ತವಾದ ಮಾತುಗಳನ್ನು ಕೇಳುತ್ತ ಹೊರಟನು. ಆ ಸಮಯದಲ್ಲಿ ಮಹೇಂದ್ರಶತ್ರುವಾದ ಆ ರಾಕ್ಷಸನು ತಾನು ಹೊತ್ತುಕೊಂಡುಹೋಗುತ್ತಿರುವ ಆವಾನರೇಶ್ವರನು ಮಹೇಂದ್ರಸಮಾನನಾದ ಪರಾಕ್ರಮವುಳ್ಳವನೆಂದರಿತುಕೊಂಡು, "ಇವನನ್ನು ಅಪಹರಿಸಿದರೆ ರಾಘವನೊಡ

ರಾಘವಂ ಸೈನ್ಯ"ಮಿತೀಂದ್ರಶತ್ರುಃ ॥ ೭೨ ॥ ವಿದ್ರುತಾಂ ವಾಹಿನೀಂ ದೃಷ್ಟ್ವಾ ವಾನ ರಾಣಾಂ ತತಸ್ತತಃ । ಕುಂಭಕರ್ಣೇನ ಸುಗ್ರೀವಂ ಗೃಹೀತಂ ಚಾಪಿ ವಾನರಂ ॥೭೩॥ ಹನುಮಾಂಶ್ಚಿಂತಯಾಮಾಸ ಮತಿಮಾನ್ಮಾರುತಾತ್ಮಜಃ।"ಏವಂ ಗೃಹೀತೇ ಸುಗ್ರೀವೇ ಕಿಂಕರ್ತವ್ಯಂ ಮಯಾ ಭವೇತ್ ॥ ೭೪ ॥ ಯದ್ವೈ ನ್ಯಾಯ್ಯಂ ಮಯಾ ಕರ್ತುಂ ತತ್ಕರಿಷ್ಯಾಮಿ ಸರ್ವಥಾ । ಭೂತ್ವಾ ಪರ್ವತಸಂಕಾಶೋ ನಾಶಯಿಷ್ಯಾಮಿ ರಾಕ್ಷಸಂ ॥೭೫॥ ಮಯಾ ಹತೇ ಸಂಯತಿಕುಂಭಕರ್ಣೇ ಮಹಾಬಲೇ ಮುಷ್ಟಿವಿಕೀರ್ಣದೇಹೇ। ವಿಮೋಚಿತೇ ವಾನರಪಾರ್ಥಿವೇಚ ಭವಂತು ಹೃಷ್ಟಾಃ ಪ್ಲವಗಾಸ್ಸಮಸ್ತಾಃ ॥ ೭೬ ॥

ಸಮಸ್ತವಾದ, ಇದಂಸೈನ್ಯಂ - ಈ ಸೈನ್ಯವು, ಹೃತಂ - ಅಪಹರಿಸಲ್ಪಟ್ಟದು, ಸ್ಯಾತ್ - ಆಗುವದು, ಇತಿ - ಇಂತೆಂದು, ಮೇನೇ - ತಿಳಿದುಕೊಂಡನು. ॥ ೭೨ ॥ ಮತಿಮಾ್ - ಬುದ್ಧಿವಂತನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾ್ - ಹನುಮಂತನು, ತತಸ್ತತಃ - ಅಲ್ಲಲ್ಲಿ, ವಿದ್ರುತಾಂ - ಓಡಿಹೋಗುತ್ತಲಿರುವ, ವಾನರಾಣಾಂ - ವಾನರರ, ವಾಹಿನೀಂ - ಸೈನ್ಯವನ್ನು, ಕುಂಭ ಕರ್ಣೇನ - ಕುಂಭಕರ್ಣನಿಂದ, ಗೃಹೀತಂ - ಹಿಡಿಯಲ್ಪಟ್ಟ, ವಾನರಂ - ಕಪಿಯಾದ, ಸುಗ್ರೀವಂ ಚಾಪಿ - ಸುಗ್ರೀವನನ್ನೂ ಕೂಡ, ದೃಷ್ಟ್ವಾ - ಕಂಡು, ಚಿಂತಯಾಮಾಸ - ಆಲೋಚಿಸಿದನು. ॥೭೪॥ ಏವಂ - ಈ ಪ್ರಕಾರವಾಗಿ, ಸುಗ್ರೀವೇ - ಸುಗ್ರೀವನು, ಗೃಹೀತೇ - ಹಿಡಿಯಲ್ಪಟ್ಟವನಾಗಲು, ಮಯಾ - ನನ್ನಿಂದ, ಕರ್ತವ್ಯಂ - ಮಾಡತಕ್ಕದ್ದು, ಕಿಂಭವೇತ್ - ಏನಾಗುವದು, ಯದ್ವೈ - ಯಾವು ದಾದರೆ, ಮಯಾ - ನನ್ನಿಂದ, ಕರ್ತುಂ - ಮಾಡುವದಕ್ಕೆ, ನ್ಯಾಯಂ - ಯುಕ್ತವೋ, ತತ್-ಆದನ್ನು, ಸರ್ವಥಾ - ಹೇಗಾದರೂ, ಕರಿಷ್ಯಾಮಿ - ಮಾಡುವೆನು. ॥ ೭೫ ॥ ಪರ್ವ....ಶಃ - ಪರ್ವತೋಪಮ ನಾಗಿ, ರಾಕ್ಷಸಂ - ರಾಕ್ಷಸನನ್ನು, ನಾಶಯಿಷ್ಯಾಮಿ - ನಾಶಮಾಡುವೆನು, ಸಂಯತಿ - ಕಾಳಗದಲ್ಲಿ, ಮಹಾಬಲೇ - ಬಹು ಬಲವಂತನಾದ ಕುಂಭಕರ್ಣನು, ಮುಷ್ಟ......ಹೇ - ಮುಷ್ಟಿಯಿಂದ ಪುಡಿಯಾದ ದೇಹವುಳ್ಳವನಾಗಿ, ಮಯಾ - ನನ್ನಿಂದ, ಹತೇ - ಸಂಹೃತನಾಗಲು, ವಾನ....ಚ - ವಾನರಾಧಿಪತಿ ಯಾದ ಸುಗ್ರೀವನು, ವಿಮೋಚತೇ - ಬಿಡಿಸಲ್ಪಟ್ಟವನಾಗಲು, ಸಮಸ್ತಾಃ - ಎಲ್ಲಾ, ಪ್ಲವಗಾಃ - ವಾನರರು, ಹೃಷ್ಟಾಃ - ಸಂತೋಷಗೊಂಡವರು, ಭವಂತು - ಆಗಲಿ. ॥ ೭೬ ॥ ಅಥವಾ - ಹಾಗಲ್ಲ ದಿದ್ದರೆ, ಏಷಪಾರ್ಥಿವಃ - ಈ ರಾಜನು, ಸಾಸುರೋರಗೈಃ - ರಾಕ್ಷಸರಿಂದಲೂ, ಸರ್ಪಗಳಿಂದಲೂ

ಗೂಡಿದ ಸಮಸ್ತ ಸೇನೆಯನ್ನೂ ಹರಣಮಾಡಿದಂತಾಯಿತೆಂದರಿತನು. ॥ ೬೭–೭೨ ॥ ಆಗ ಮಾರುತಾತ್ಮಜನಾದ ಹನುಮಂತನು ತನ್ನ ಸ್ವಾಮಿಯಾದ ಸುಗ್ರೀವನನ್ನು ರಾಕ್ಷಸನು ಕೊಂಡುಹೋಗುತ್ತಿರುವುದನ್ನೂ, ಅದನ್ನು ನೋಡಿ ಕಪಿಸೇನೆಯೆಲ್ಲವೂ ಪಲಾಯನವಾಗು ತ್ತಿರುವುದನ್ನೂ ಕಂಡು, ತನ್ನ ಮನಸ್ಸಿನಲ್ಲಿಯೇ ತಾನು, " ಈಗ ಈ ರಾಕ್ಷಸನು ನಮ್ಮ ಧೊರೆ ಯಾದ ಸುಗ್ರೀವನನ್ನು ಕೊಂಡುಹೋಗುತ್ತಿರುವನು. ಪ್ರಕೃತದಲ್ಲಿ ನಾನು ಮಾಡಬೇಕಾದು ದೇನು ? ಈ ಸಮಯದಲ್ಲಿ ನ್ಯಾಯವಾಗಿ ನಾನಾವ ಕಾರ್ಯವನ್ನು ಮಾಡಬೇಕೋ ಅದನ್ನು ಮಾಡದಿರಬಾರದು. ಈಗ ನಾನು ಪರ್ವತೋಪಮನಾಗಿ ಬೆಳೆದು ಈ ರಾಕ್ಷಸನನ್ನು ಕೊಲ್ಲು ವೆನು. ॥ ೭೩–೭೫ ॥ ನಾನು ಈ ಕಾಳಗದಲ್ಲಿ ಮಹಾ ಬಲಾಢ್ಯನಾದ ಕುಂಭಕರ್ಣನನ್ನು ಗುದ್ದಿ ಕೆಡವಿ ನಮ್ಮ ಮಹಾರಾಜನಾದ ಸುಗ್ರೀವನನ್ನು ಬಿಡಿಸುತ್ತೇನೆ. ನಮ್ಮ ವಾನರ ಪೀಳಗೆವೆಲ್ಲ ಸಂತೋಷಪಡಲಿ. ಅಥವಾ, ನಮ್ಮ ಮಹಾರಾಜನು ತಾನಾಗಿಯೇ ಈ ಕುಂಭ

ಅಥವಾ ಸ್ವಯಮಪ್ಯೇಷ ಮೋಕ್ಷಂ ಪ್ರಾಪ್ಸ್ಯತಿ ಪಾರ್ಥಿವಃ । ಗೃಹೀತೋಽಯಂ ಯದಿ ಭವೇತ್ ತ್ರಿದಶೈಸ್ಸಾಸುರೋರಗೈಃ ॥ ೭೭ ॥ ಮನ್ಯೇ ನತಾವದಾತ್ಮಾನಂ ಬುಧ್ಯತೇ ವಾನರಾಧಿಪಃ । ಶೈಲಪ್ರಹಾರಾಭಿಹತಃ ಕುಂಭಕರ್ಣೇನ ಸಂಯುಗೇ ॥ ೭೮ ॥ ಅಯಂ ಮುಹೂರ್ತಾತ್ಸುಗ್ರೀವೋ ಲಬ್ಧಸಂಜ್ಞೋ ಮಹಾಹವೇ । ಆತ್ಮನೋ ವಾನರಾಣಾಂಚ ಯತ್ಪಥ್ಯಂ ತತ್ಕರಿಷ್ಯತಿ ॥ ೭೯ ॥ ಮಯಾತು ಮೋಕ್ಷಿತ ಸ್ಯಾಽಸ್ಯ ಸುಗ್ರೀವಸ್ಯ ಮಹಾತ್ಮನಃ । ಅಪ್ರೀತಿಶ್ಚ ಭವೇತ್ಕಷ್ಟಾ ಕೀರ್ತಿನಾಶಶ್ಚ ಶಾಶ್ವತಃ ॥ ೮೦ ॥ ತಸ್ಮಾನ್ಮುಹೂರ್ತಂ ಕಾಂಕ್ಷಿಷ್ಯೇ ವಿಕ್ರಮಂ ಪಾರ್ಥಿವಸ್ಯತು । ಭಿನ್ನಂಚ ವಾನರಾನೀಕಂ ತಾವದಾಶ್ವಾಸಯಾಮ್ಯಹಂ" ॥ ೮೧ ॥ ಇತ್ಯೇವಂ ಚಿಂತ

ಕೂಡಿದ, ತ್ರಿದಶೈಃ - ದೇವತೆಗಳಿಂದ, ಗೃಹೀತಃ - ಗ್ರಹಿಸಲ್ಪಟ್ಟವನು, ಭವೇದ್ಯದಿ - ಆದರೂ, ಅಯಂ - ಈತನು, ಮೋಕ್ಷಂ - ಬಿಡುಗಡೆಯನ್ನು, ಸ್ವಯಮೇವ - ತಾನೇ, ಪ್ರಾಪ್ಸ್ಯತಿ - ಹೊಂದುವನು. ॥ ೭೭ ॥ ಸಂಯುಗೇ - ಕಾಳಗದಲ್ಲಿ, ಕುಂಭಕರ್ಣೇನ - ಕುಂಭಕರ್ಣನಿಂದ, ಶೈಲ....ತಃ - ಪರ್ವತಪ್ರಹಾರದಿಂದ ಹೊಡೆಯಲ್ಪಟ್ಟ, ವಾನರಾಧಿಪಃ - ಕಪಿರಾಜನು, ಆತ್ಮಾನಂತಾವತ್ - ತನ್ನನ್ನೇ, ನಬುಧ್ಯತೇ - ತಿಳಿದಿದ್ದಾನೆ, ಅಯಂಸುಗ್ರೀವಃ - ಈ ಸುಗ್ರೀವನು, ಮುಹೂರ್ತಾತ್ - ಮುಹೂರ್ತಮಾತ್ರದಲ್ಲಿ, ಲಬ್ಧಸಂಜ್ಞಃ - ಹೊಂದಲ್ಪಟ್ಟ ಪ್ರಜ್ಞೆಯುಳ್ಳವನಾಗಿ, ಮಹಾಹವೇ - ಮಹತ್ತರವಾದ ಯುದ್ಧದಲ್ಲಿ, ಆತ್ಮನಃ - ತನಗೂ, ವಾನರಾಣಾಂಚ - ಕಪಿಗಳಿಗೂ, ಯತ್ಪಥ್ಯಂ - ಯಾವದು ಇಷ್ಟವೋ, ತತ್ಕರಿಷ್ಯತೀತಿ - ಅದನ್ನು ಮಾಡುವನೆಂದು, ಮನ್ಯೇ - ಎಣಿಸುತ್ತೇನೆ. ॥ ೭೯ ॥ ಮಯಾತು - ನನ್ನಿಂದಾದರೆ, ಮೋಕ್ಷಿತಸ್ಯ - ಬಿಡಿಸಲ್ಪಟ್ಟ, ಮಹಾತ್ಮನಃ - ಮಹಾ ಮನಸ್ವಿಯಾದ, ಅಸ್ಯಸುಗ್ರೀವಸ್ಯ - ಈ ಸುಗ್ರೀವನಿಗೆ, ಕಷ್ಟಾ - ಕಷ್ಟವಾದ, ಅಪ್ರೀತಿಶ್ಚ - ಅವಿಶ್ವಾಸವೂ ಕೂಡ, ಭವೇತ್ - ಆಗುವದು, ಕೀರ್ತಿನಾಶಶ್ಚ - ಯಶೋನಾಶವೂ, ಶಾಶ್ವತಃ - ಸ್ಥಿರವಾಗುವುದು. ॥ ೮೦ ॥ ತಸ್ಮಾತ್ - ಆದ್ದರಿಂದ, ಪಾರ್ಥಿವಸ್ಯ - ರಾಜನ, ವಿಕ್ರಮಂತು - ಪರಾಕ್ರಮವನ್ನಾದರೆ, ಮುಹೂರ್ತಂ- ಕ್ಷಣಮಾತ್ರ, ಕಾಂಕ್ಷಿಷ್ಯೇ - ನಿರೀಕ್ಷಿಸುವೆನು, ತಾವತ್ - ಅಷ್ಟರೊಳಗಾಗಿ, ಅಹಂ - ನಾನು, ಭಿನ್ನಂ - ಚದುರಿಹೋದ, ವಾನರಾನೀಕಂಚ - ವಾನರಸೈನ್ಯವನ್ನು, ಆಶ್ವಾಸಯಾಮಿ - ಸಮಾಧಾನ ಮಾಡು

ಕರ್ಣನ ಹಿಡಿತವನ್ನು ಬಿಡಿಸಿಕೊಳ್ಳಬಹುದೆ. ಅದಕ್ಕೇನು ಸಂದೇಹ? ಆದರೂ ಈಗಲೀತನು ಮೂರ್ಛಿತನಾಗಿದ್ದಾನೆ. ಈತನನ್ನು ದೇವತೆಗಳೂ, ಅಸುರರೊಡಗೂಡಿದ ಪನ್ನಗರೂ ಹೊತ್ತುಕೊಂಡು ಹೋದರೂ ಈತನು ತಿಳಿಯುವಂತಿಲ್ಲ. ಈತನು ಈಗ ಶೈಲಪ್ರಹಾರಗಳಿಂದ ಪೀಡಿತನಾಗಿ ಮೂರ್ಛಿತನಾಗಿದ್ದರೂ ಒಂದು ಮುಹೂರ್ತಕಾಲದಲ್ಲಿಯೇ ಎಚ್ಚರಗೊಳ್ಳುವನು. ಈತನು ಎಚ್ಚತ್ತನೆಂದರೆ ತನ್ನನ್ನು ಬಿಡಿಸಿಕೊಳ್ಳುವುದುಮಾತ್ರವಲ್ಲದೆ ನಮ್ಮಾ ವಾನರಸಮೂಹವೆಲ್ಲವನ್ನೂ ಬಿಡಿಸಿಕೊಳ್ಳುವನು. ಒಂದುವೇಳೆ ಈಗ ನಾನು ಈತನನ್ನು ಬಿಡಿಸಿದುದೇ ಆದರೆ ಮಹಾತ್ಮನಾದ ಈತನಿಗೆ ನನ್ನ ವಿಷಯದಲ್ಲಿ ಪ್ರಬಲವಾದ ಜುಗುಪ್ಸೆಯೂ ಆಗುವುದಲ್ಲದೆ, ಈತನ ಅಪಾರವೂ, ಶಾಶ್ವತವೂ ಆದ ಕೀರ್ತಿಯೂ ಅಳಿದು ಹೋಗುತ್ತದೆ. ॥ ೭೬–೮೦ ॥ ಆದುದರಿಂದ ಒಂದು ಮುಹೂರ್ತಕಾಲ ನಿರೀಕ್ಷಿಸುತ್ತೇನೆ. ಮಹಾರಾಜ ಸುಗ್ರೀವನು ತನ್ನ ಪರಾಕ್ರಮವನ್ನು ಮೆರೆದಾನು. ಈಗ ಅಲ್ಲಲ್ಲಿ ಚದುರಿ ಹೋಗಿರುವ ಈ ವಾನರಸೇನೆಯನ್ನೆಲ್ಲ ಕೂಡಿಸಿ ಸ್ವಲ್ಪ ಸಮಾಧಾನ ಮಾಡುತ್ತೇನೆ" ಎಂದು

ಯಿತ್ವಾತು ಹನೂಮಾನ್ಮಾರುತಾತ್ಮಜಃ । ಭೂಯಸ್ಸಂಸ್ತಂಭಯಾಮಾಸ ವಾನರಾಣಾಂ ಮಹಾಚಮೂಂ ॥ ೮೨ ॥ ಸಕುಂಭಕರ್ಣೋಽಥ ವಿವೇಶ ಲಂಕಾಂ ಸ್ಫುರಂತಮಾದಾಯ ಮಹಾಕಪಿಂ ತಂ । ವಿಮಾನಚರ್ಯಾಗೃಹಗೋಪುರಸ್ಥೈಃ ಪುಷ್ಪಾಗ್ರ್ಯವರ್ಷೈರವಕೀರ್ಯಮಾಣಃ ॥ ೮೩ ॥ ಲಾಜಗಂಧೋದವರ್ಷೈಸ್ತು ಸಿಚ್ಯಮಾನಃ ಶನೈಃಶ್ಶನೈಃ । ರಾಜಮಾರ್ಗಸ್ಯ ಶೀತತ್ವಾತ್ಸಂಜ್ಞಾಮಾಪ ಮಹಾಬಲಃ ॥ ೮೪ ॥ ತತಸ್ಸಸಂಜ್ಞಾಮುಪಾಲಭ್ಯ ಕೃಚ್ಛ್ರಾದ್ಬಲೀಯಸಸ್ತಸ್ಯ ಭುಜಾಂತರಸ್ಥಃ । ಅವೇಕ್ಷಮಾಣಃ ಪುರರಾಜಮಾರ್ಗಂ ವಿಚಿಂತಯಾಮಾಸ ಮುಹುರ್ಮಹಾತ್ಮಾ ॥ ೮೫ ॥

ವೆನು. ॥ ೮೧ ॥ ಇತ್ಯೇವಂ - ಈ ಪ್ರಕಾರವಾಗಿ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾಂತು - ಆಂಜನೇಯನಾದರೆ, ಚಿಂತಯಿತ್ವಾ - ಯೋಚಿಸಿ, ವಾನರಾಣಾಂ - ಕಪಿಗಳ, ಮಹಾಚಮೂಂ - ಮಹತ್ತರವಾದ ಸೇನೆಯನ್ನು, ಭೂಯಃ - ಮತ್ತೂ, ಸಂಸ್ತಂಭಯಾಮಾಸ - ನಿಲ್ಲಿಸಿದನು. ॥ ೮೨ ॥ ಅಥ - ಅನಂತರದಲ್ಲಿ, ಸಕುಂಭಕರ್ಣಃ - ಆ ಕುಂಭಕರ್ಣನು, ಸ್ಫುರಂತಂ - ಹೊಳೆಯುತ್ತಿರುವ, ತಂಮಹಾಕಪಿಂ-ಆ ಮಹಾ ವಾನರನನ್ನು, ಆದಾಯ-ತೆಗೆದುಕೊಂಡು, ವಿಮಾ....ಸ್ಥೈಃ-ವಿಮಾನಗಳಲ್ಲಿಯೂ, ಪಹರೆಮನೆಗಳಲ್ಲಿಯೂ, ಗೋಪುರಗಳಲ್ಲಿಯೂ ಇರುವವರಿಂದ, (ಬಿಡಲ್ಪಟ್ಟ) ಪುಷ್ಪಾಗ್ರ್ಯವರ್ಷೈಃ - ಉತ್ತಮವಾದ ಪುಷ್ಪವರ್ಷಗಳಿಂದ, ಅವಕೀರ್ಯಮಾಣಃ - ಎರಚಲ್ಪಟ್ಟವನಾಗಿ, ಲಂಕಾಂ - ಲಂಕಾಪಟ್ಟಣವನ್ನು, ವಿವೇಶ - ಹೊಕ್ಕನು. ॥ ೮೩ ॥ ಲಾಜ....ಸ್ತು - ಅರಳು, ಗಂಧ, ಜಲ ಇವುಗಳ ವರ್ಷಗಳಿಂದಲಾದರೆ, ಸಿಚ್ಯಮಾನಃ - ತೊಯಿಸಲ್ಪಡುತ್ತಿರುವನಾದಕಾರಣ, ಮಹಾಬಲಃ - ಬಹು ಬಲವಂತನಾದ ಸುಗ್ರೀವನು, ರಾಜಮಾರ್ಗಸ್ಯ - ರಾಜಬೀದಿಯ, ಶೀತತ್ವಾತ್ - ಶೀತಭಾವದಿಂದ, ಶನೈಶ್ಶನೈಃ - ಮೆಲ್ಲಮೆಲ್ಲನೆ, ಸಂಜ್ಞಾಂ - ಪ್ರಜ್ಞೆಯನ್ನು, ಆಪ - ಹೊಂದಿದನು. ॥ ೮೪ ॥ ತತಃ - ಬಳಿಕ, ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ಸಃ - ಆ ಸುಗ್ರೀವನು, ಬಲೀಯಸಃ - ಬಲವಂತನಾದ, ತಸ್ಯ - ಆ ಕುಂಭಕರ್ಣನ, ಭುಜಾಂತರಸ್ಥಃ - ಭುಜಗಳ ಮಧ್ಯಪ್ರದೇಶದಲ್ಲಿರುವವನಾಗಿ, ಕೃಚ್ಛ್ರಾತ್ - ಕಷ್ಟದಿಂದ, ಸಂಜ್ಞಾಂ - ಪ್ರಜ್ಞೆಯನ್ನು, ಉಪಲಭ್ಯ - ಹೊಂದಿ, ಪುರ....ರ್ಗಂ - ಪಟ್ಟಣದ ರಾಜಬೀದಿಯನ್ನು, ಮುಹುರ್ಮುಹುಃ - ಬಾರಿಬಾರಿಗೂ, ಅವೇಕ್ಷಮಾಣಃ - ನೋಡುತ್ತಲಿರುವವನಾಗಿ, ವಿಚಿಂತಯಾಮಾಸ - ಆಲೋಚಿಸಿದನು. ॥ ೮೫ ॥ ಏವಂ - ಈ ಪ್ರಕಾರವಾಗಿ, ಗೃಹೀತೇನ - ಹಿಡಿಯಲ್ಪಟ್ಟ, ಮಯಾ - ನನ್ನಿಂದ, ಅದ್ಯ - ಈಗ, ಸಂಪ್ರತಿ

ಯೋಚಿಸಿದನು. ಇತ್ತ ಕುಂಭಕರ್ಣನಾದರೋ ಮೂರ್ಛೆಗೊಂಡಿದ್ದ ಸುಗ್ರೀವನನ್ನು ಹೊತ್ತು ಲಂಕಾನಗರವನ್ನು ಪ್ರವೇಶಿಸಿದನು. ಆಗ ನಗರದ ಭವನಗಳ ಉಪ್ಪರಿಗೆಗಳಲ್ಲಿದ್ದವರೂ ಗೋಪುರಗಳಮೇಲಿದ್ದವರೂ ಆ ಕುಂಭಕರ್ಣನಮೇಲೆ ಹೂಮಳೆಯನ್ನು ಸುರಿಸಿದರು ; ಅರಳು, ಗಂಧ ಪನ್ನೀರು ಮೊದಲಾದ ಮಂಗಳದ್ರವ್ಯಗಳನ್ನೆರಚಿದರು. ಆಗ ರಾಜಮಾರ್ಗವೆಲ್ಲ ತಣ್ಣಗಾಯಿತು. (ತಂಗಾಳಿಯೂ ಬೀಸಿತು.) ಕೂಡಲೇ ಸುಗ್ರೀವನಿಗೆ ಎಚ್ಚರಿಕೆಯೂ ಆಯಿತು. ಹೀಗೆ ಎಚ್ಚರ ಹೊಂದಿದ ತರುವಾಯ ಆತನು ಮಹಾ ಬಲಾಢ್ಯನಾದ ಆ ಕುಂಭಕರ್ಣನ ಕೊಂಕುಳಲ್ಲಿರುವುದನ್ನೂ, ಅವನು ರಾಜಮಾರ್ಗದಲ್ಲಿ ತನ್ನನ್ನು ರಾಜಮಾರ್ಗದಲ್ಲಿ ಕೊಂಡುಹೋಗುತ್ತಿರುವುದನ್ನೂ ಕಂಡು ಹೀಗೆ ಯೋಚಿಸಿದನು. ॥ ೮೧–೮೫ ॥ " ಈ ರೀತಿ ಈ ಕುಂಭಕರ್ಣನು ನನ್ನನ್ನು ಹಿಡಿದುಕೊಂಡಿರುವಾಗ ನಾನಾವ ರೀತಿ ನನ್ನ ಪೌರುಷವನ್ನು

" ಏವಂ ಗೃಹೀತೇನ ಕಥಂನು ನಾಮ ಶಕ್ಯಂ ಮಯಾ ಸಂಪ್ರತಿ ಕರ್ತುಮದ್ಯ ? । ತಥಾ ಕರಿಷ್ಯಾಮಿ ಯಥಾ ಹರೀಣಾಂ ಭವಿಷ್ಯತೀಷ್ಟಂ ಚ ಹಿತಂಚ ಕಾರ್ಯಂ" ॥೮೬॥ ತತಃ ಕರಾಗ್ರೈಸ್ಸಹಸಾ ಸಮೇತ್ಯ ರಾಜಾ ಹರೀಣಾಮಮರೇಂದ್ರಶತ್ರುಂ । ಶರೈಶ್ಚ ಕರ್ಣೌ ದಶನೈಶ್ಚ ನಾಸಾಂ ದದಂಶ ಪಾರ್ಶ್ವೇಷು ಚ ಕುಂಭಕರ್ಣಂ ॥ ೮೭ ॥ ಸಕುಂಭ ಕರ್ಣೋ ಹೃತಕರ್ಣನಾಸೋ ವಿದಾರಿತಸ್ತೇನ ವಿಮರ್ದಿತಶ್ಚ । ರೋಷಾಭಿಭೂತಃ ಕ್ಷತಜಾರ್ದ್ರಗಾತ್ರಸ್ಸುಗ್ರೀವಮಾವಿಧ್ಯ ಪಿಪೇಷ ಭೂಮೌ ॥ ೮೮ ॥ ಸಭೂತಲೇ ಭೀಮ ಬಲಾಭಿಪಿಷ್ಟಸ್ಸುರಾರಿಭಿಸ್ತೈರಭಿಹನ್ಯಮಾನಃ । ಜಗಾಮ ಖಂ ವೇಗವದಭ್ಯುಪೇತ್ಯ ಪುನಶ್ಚ ರಾಮೇಣ ಸಮಾಜಗಾಮ ॥ ೮೯ ॥ ಕರ್ಣನಾಸಾವಿಹೀನಸ್ತು ಕುಂಭಕರ್ಣೋ

ಕರ್ತುಂ - ಚೆನ್ನಾಗಿ ಪ್ರತೀಕಾರ ಮಾಡುವುದಕ್ಕೆ, ಕಥಂನುನಾಮ - ಹೇಗೆತಾನೆ, ಶಕ್ಯಂ - ಸಾಧ್ಯವು, ಹರೀಣಾಂ - ವಾನರರಿಗೆ, ಇಷ್ಟಂ - ಇಷ್ಟವು, ಯಥಾ - ಹೇಗೆ, ಭವಿಷ್ಯತಿ - ಆಗುವದೋ, ಕಾರ್ಯಂ- ನಮ್ಮ ಕೆಲಸವು, ಹಿತಂ - ಹಿತಕರವಾದದ್ದು, ಯಥಾಭವಿಷ್ಯತಿ - ಹೇಗೆ ಆಗುವದೋ, ತಥಾ - ಹಾಗೆ, ಕರಿಷ್ಯಾಮಿ - ಮಾಡುವೆನು. ॥ ೮೬ ॥ ತತಃ - ಅನಂತರದಲ್ಲಿ, ಹರೀಣಾಂ - ವಾನರರಿಗೆ, ರಾಜಾ - ಒಡೆಯನಾದ ಸುಗ್ರೀವನು, ಅಮ....ತ್ರುಂ - ದೇವೇಂದ್ರನಿಗೆ ಶತ್ರುವಾದ, ಕುಂಭಕರ್ಣಂ - ಕುಂಭಕರ್ಣನನ್ನು, ಸಹಸಾ - ಜಾಗ್ರತೆಯಾಗಿ, ಸಮೇತ್ಯ - ಸೇರಿ, ಖರೈಃ - ತೀಕ್ಷ್ಣವಾದ, ಕರಾಗ್ರೈಃ - ಉಗುರುಗಳಿಂದ, ಕರ್ಣೌ - ಕಿವಿಗಳನ್ನು, ದಶನೈಃ - ಹಲ್ಲುಗಳಿಂದ, ನಾಸಾಂಚ - ಮೂಗನ್ನೂ, ಪಾರ್ಶ್ವೇಷು - ಕೆನ್ನೆಗಳಲ್ಲಿಯೂ, ಭುಜ - ಶಿರಸ್ಸುಗಳಲ್ಲಿಯೂ, (ಉದರದ ಉಭಯ ಪಾರ್ಶ್ವಗಳಲ್ಲಿಯೂ,) ಪಾದಾಭ್ಯಾಂ - ಕಾಲುಗಳಿಂದ, ವಿದದಾರ - ಸೀಳಿದನು. ॥ ೮೭ ॥ ಸಕುಂಭ ಕರ್ಣಃ - ಆ ಕುಂಭಕರ್ಣನು, ತೇನ - ಆ ಸುಗ್ರೀವನಿಂದ, ಹೃತ......ಸಃ - ಅಪಹರಿಸಲ್ಪಟ್ಟ ಮೂಗೂ, ಕಿವಿಗಳೂ ಉಳ್ಳವನಾಗಿ, ವಿದಾರಿತಃ - ಸೀಳಲ್ಪಟ್ಟವನಾದಕಾರಣ, ವಿಮರ್ದಿತಃ - ತುಳಿಯಲ್ಪಟ್ಟ ವನೂ ಆಗಿ, ರೋಷಾಭಿಭೂತಃ - ಬಹಳ ಕೋಪಾಕ್ರಾಂತನಾಗಿ, ಕ್ಷತ....ತ್ರಃ - ರಕ್ತದಿಂದ ತೋಯಿಸಲ್ಪಟ್ಟ ಶರೀರವುಳ್ಳವನಾಗಿ, ಸುಗ್ರೀವಂ - ಸುಗ್ರೀವನನ್ನು, ಆವಿಧ್ಯ - ಹೊಡೆದು, ಭೂಮೌ - ನೆಲದಲ್ಲಿ, ಪಿಪೇಷಹ - ಕಾಲಿನಿಂದ ಅರೆದನಷ್ಟೆ. ॥ ೮೮ ॥ ಸಃ - ಆ ಸುಗ್ರೀವನು, ಭೂತಲೇ - ಭೂಪ್ರದೇಶದಲ್ಲಿ, ಭೀಮ....ಷ್ಟಃ - ಭಯಂಕರನಾದ ಕುಂಭಕರ್ಣನಿಂದ ಅರೆಯಲ್ಪಟ್ಟವನಾಗಿ, ತೈಸ್ಸುರಾರಿಭಿಃ - ಆ ರಕ್ಕಸರಿಂದ, ಅಭಿ....ನಃ - ಹೊಡೆಯಲ್ಪಟ್ಟವನಾಗಿ, ವೇಗವತ್ - ವೇಗವಾಗಿ, ಖಂ - ಅಂತರಿಕ್ಷವನ್ನು ಕುರಿತು, ಜಗಾಮ - ಹಾರಿಹೊರಟು, ಅಭ್ಯುಪೇತ್ಯ - ಬಂದು, ಪುನಶ್ಚ -

---

ಹಿತವೂ, ಪಥ್ಯವೂ ಆಗುವಂತೆ ಏನಾದರೂ ಒಂದು ಕೆಲಸವನ್ನು ಮಾಡಬೇಕು." ವಾನರ ರಾಜನಾದ ಸುಗ್ರೀವನು ಈ ರೀತಿ ಯೋಚಿಸಿ ಆ ಬಳಿಕ ತನ್ನ ಉಗುರುಗಳಿಂದ ಬಹು ಜಾಗ್ರತೆ ಯಾಗಿಯೇ ಕೈಬೆರಳುಗಳಿಂದ ಅಮರೇಂದ್ರಶತ್ರುವಾದ ಆ ಕುಂಭಕರ್ಣನ ಕಿವಿಗಳನ್ನೂ, ತೀಕ್ಷ್ಣವಾದ ಹಲ್ಲುಗಳಿಂದ ಮೂಗನ್ನೂ ಕಡಿದು ಕೆಡವಿದನು. ಕಿವಿಮೂಗುಗಳೆರಡೂ ಕತ್ತರಿಸಿ ಬೀಳಲು ಆ ಕುಂಭಕರ್ಣನು ರಕ್ತಸಿಕ್ತನಾದ ಮೈಯುಳ್ಳವನಾಗಿ ಆ ಸುಗ್ರೀವನನ್ನು ಭೂಮಿಗೆ ಕೆಡವಿ ಚೆನ್ನಾಗಿ ತುಳಿದು ಸವಟಿದನು. ಕುಂಭಕರ್ಣನೂ, ಇತರ ರಾಕ್ಷಸರೂ ಚೆನ್ನಾಗಿ ಮರ್ದಿಸುತ್ತಿರಲು, ಆ ಸುಗ್ರೀವನು ಬಹು ಜಾಗ್ರತೆಯಾಗಿಯೇ ಹೇಗೋ ತಪ್ಪಿಸಿಕೊಂಡು ಆಕಾಶಕ್ಕೆ ಹಾರಿ ಶ್ರೀರಾಮಮೂರ್ತಿಯೊಡನೆ ಸೇರಿದನು. ಇತ್ತ ಕುಂಭಕರ್ಣನಾದರೆ

ಮಹಾಬಲಃ । ರರಾಜ ಶೋಣಿತಸಿಕ್ತೋ ಗಿರಿಃ ಪ್ರಸ್ರವಣೈರಿವ ॥ ೯೦ ॥ ಶೋಣಿತಾರ್ದ್ರೋ ಮಹಾಕಾಯೋ ರಾಕ್ಷಸೋ ಭೀಮವಿಕ್ರಮಃ। ಯುದ್ಧಾಯಾಭಿಮುಖೋ ಭೂಯೋ ಮನಶ್ಚಕ್ರೇ ಮಹಾಬಲಃ ॥ ೯೧ ॥ ಅಮರ್ಷಾಚ್ಛೋಣಿತೋದ್ಗಾರೀ ಶುಶುಭೇ ರಾವಣಾನುಜಃ । ನೀಲಾಂಜನಚಯಪ್ರಖ್ಯಸ್ಸಸಂಧ್ಯ ಇವ ತೋಯದಃ ॥೯೨॥ ಗತೇತು ತಸ್ಮಿನ್ ಸುರರಾಜಶತ್ರುಃ ಕ್ರೋಧಾತ್ಪ್ರದುದ್ರಾವ ರಣಾಯ ಭೂಯಃ । ನಿರಾಯುಧೋಽಸ್ಮೀತಿ ವಿಚಿಂತ್ಯರೌದ್ರೋ ಘೋರಂ ತದಾ ಮುದ್ಗರಮಾಸಸಾದ ॥೯೩॥ ತತಸ್ಸಪುರ್ಯಾಸ್ಸಹಸಾ ಮಹೌಜಾ ನಿಷ್ಕ್ರಮ್ಯ ತದ್ವಾನರಸೈನ್ಯಮುಗ್ರಂ । ಬಭಕ್ಷ

ಮರಳಿಯೂ, ರಾಮೇಣ - ಶ್ರೀರಾಮನೊಡನೆ, ಸಮಾಜಗಾಮ - ಸೇರಿದನು. ॥ ೮೯ ॥ ಕರ್ಣ......ನಃ - ಕಿವಿಗಳಿಂದಲೂ, ಮೂಗಿನಿಂದಲೂ ವಿರಹಿತನಾದ, ಮಹಾಬಲಃ - ಬಹಳ ಬಲಶಾಲಿಯಾದ, ಕುಂಭಕರ್ಣಸ್ತು - ಕುಂಭಕರ್ಣನಾದರೆ, ಶೋಣಿತೈಃ - ರಕ್ತದಿಂದ, ಸಿಕ್ತಃ - ನೆನೆಸಲ್ಪಟ್ಟವನಾಗಿ, ಪ್ರಸ್ರವಣೈಃ - ಪ್ರವಾಹಗಳಿಂದ, ಗಿರಿರಿವ - ಬೆಟ್ಟದಂತೆ, ರರಾಜ - ಹೊಳೆಯುತ್ತಿದ್ದನು. ॥ ೯೦ ॥ ಶೋಣಿತಾರ್ದ್ರಃ - ರಕ್ತದಿಂದ ನೆನೆದ, ಮಹಾಕಾಯಃ - ದೊಡ್ಡ ಶರೀರವುಳ್ಳ, ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ಮಹಾಬಲಃ - ಬಹಳ ಬಲಶಾಲಿಯಾದ, ರಾಕ್ಷಸಃ - ಈ ರಕ್ಕಸನು, ಯುದ್ಧಾಯ - ಕಾಳಗಕ್ಕಾಗಿ, ಅಭಿಮುಖಃ - ಎದುರಾಗಿ ಬರಲು, ಭೂಯಃ - ಮತ್ತೂ, ಮನಃ - ಮನಸ್ಸನ್ನು, ಚಕ್ರೇ - ಮಾಡಿದನು. ॥ ೯೧ ॥ ಅಮರ್ಷಾತ್ - ಕೋಪದಿಂದ, ಶೋಣಿತೋದ್ಗಾರೀ - ರಕ್ತವನ್ನು ಸ್ರವಿಸುತ್ತಿರುವ, ರಾವಣಾನುಜಃ - ಕುಂಭಕರ್ಣನು, ನೀಲಾಂ....ಖ್ಯಃ - ಕಪ್ಪಾಗಿರುವ ಕಾಡಿಗೆಯ ರಾಶಿಗೆ ಸಮಾನವಾದ ಕಾಂತಿಯುಳ್ಳವನಾದಕಾರಣ, ಸಸಂಧ್ಯ ಇವ - ಸಂಧ್ಯಾರಾಗದಿಂದೊಡಗೂಡಿದ, ತೋಯದಇವ - ಮೇಘದಂತೆ, ಶುಶುಭೇ - ಹೊಳೆಯುತ್ತಿದ್ದನು. ॥ ೯೨ ॥ ತಸ್ಮಿನ್ - ಆ ಸುಗ್ರೀವನು, ಗತೇ - ಹೊರಟುಹೋಗಲು, ಸುರ....ತ್ರುಃ - ಇಂದ್ರನಿಗೆ ಶತ್ರುವಾದ ಕುಂಭಕರ್ಣನು, ಕ್ರೋಧಾತ್ - ಕೋಪದಿಂದ, ಭೂಯಃ - ಮತ್ತೂ, ರಣಾಯ - ಕಾಳಗಕ್ಕೆ, ಪ್ರದುದ್ರಾವ - ಓಡಿಬಂದನು, ನಿರಾಯುಧಃ - ಆಯುಧವಿಲ್ಲದವನು, ಅಸ್ಮಿ - ಆಗಿದ್ದೇನೆ, ಇತಿ - ಇಂತೆಂದು, ವಿಚಿಂತ್ಯ - ಆಲೋಚಿಸಿ, ರೌದ್ರಃ - ಮೊದಲೇ ಮಹಾ ಭಯಂಕರನಾದಕಾರಣ, ತದಾ - ತತ್ಕ್ಷಣದಲ್ಲಿಯೇ, ಘೋರಂ - ಭಯಂಕರವಾದ, ಮುದ್ಗರಂ - ಮುದ್ಗರಾಯುಧವನ್ನು, ಆಸಸಾದ - ಹೊಂದಿದನು. ॥ ೯೩ ॥ ತತಃ - ಬಳಿಕ, ಸಃರಕ್ಷಃ - ಆ ರಾಕ್ಷಸನಾದ, ಮಹೌಜಾಃ - ಮಹಾತೇಜೋವಂತನಾದ, ಕುಂಭಕರ್ಣಃ - ಕುಂಭಕರ್ಣನು, ಸಹಸಾ - ಜಾಗ್ರತೆಯಾಗಿ, ಪುರ್ಯಾಃ -

ಕಿವಿಮೂಗುಗಳನ್ನು ಕಳೆದುಕೊಂಡು ರಕ್ತಸಿಕ್ತವಾದ ಗಾತ್ರವುಳ್ಳವನಾಗಿ ಜರಿಗಳೊಡಗೂಡಿದ ಪ್ರಸ್ರವಣಗಿರಿಯಂತೆ ತೋರುತ್ತಿದ್ದನು. ॥೮೬–೯೦॥ ಈ ರೀತಿ ಮಹಾಕಾಯನೂ, ಭಯಂಕರ ಪರಾಕ್ರಮವಂತನೂ ಆದ ಕುಂಭಕರ್ಣನು ರಣಭೂಮಿಯನ್ನು ಪ್ರವೇಶಿಸಿ ಕೂಡಲೇ ಕಾಳಗಮಾಡಬಯಸಿ ಬಹಳವಾಗಿ ಕೆರಳಿ ಸಂಜೆಯ ಕೆಮ್ಮುಗಿಲಿನಂತೆ ಮೆರೆಯುತ್ತಿದ್ದನು. ವಾನರೇಶ್ವರನಾದ ಸುಗ್ರೀವನು ಅಂತರಿಕ್ಷಕ್ಕೆ ಹಾರಿದೊಡನೆಯೇ ಮಹೇಂದ್ರಶತ್ರುವೂ, ರಾವಣಾನುಜನೂ ಆದ ಆ ಕುಂಭಕರ್ಣನು ಯುದ್ಧಾಪೇಕ್ಷೆಯಿಂದ ಓಡಿಬಂದು ತನ್ನಲ್ಲಿ ಯಾವ ಆಯುಧವೂ ಇಲ್ಲದಿರುವುದನ್ನು ಕಂಡು, ಅತ್ಯುಗ್ರವಾದ ಪರಿಘಾಯುಧವನ್ನೇ ಕೈಕೊಂಡು ವಾನರಸೇನೆಯನ್ನು ಪ್ರವೇಶಿಸಿದನು. ಈ ರೀತಿ ವಾನರಸೇನೆಯನ್ನು

ರಕ್ಷೋ ಯುಧಿ ಕುಂಭಕರ್ಣಃ ಪ್ರಜಾ ಯುಗಾಂತಾಗ್ನಿರಿವ ಪ್ರದೀಪ್ತಃ ॥ ೯೪ ॥ ಬುಭುಕ್ಷಿತಶ್ಶೋಣಿತಮಾಂಸಗೃಧ್ನುಃ ಪ್ರವಿಶ್ಯ ತದ್ವಾನರಸೈನ್ಯಮುಗ್ರಂ । ಚಖಾದ ರಕ್ಷಾಂಸಿ ಹರೀನ್ ಪಿಶಾಚಾನೃಕ್ಷಾಂಶ್ಚ ಮೋಹಾದ್ಯುಧಿ ಕುಂಭಕರ್ಣಃ ॥ ೯೫ ॥ ಯಥೈವ ಮೃತ್ಯುರ್ಹರತೇ ಯುಗಾಂತೇ ಸಭಕ್ಷಯಾಮಾಸ ಹರೀಂಶ್ಚ ಮುಖ್ಯಾನ್ । ಏಕಂ ದ್ವೇ ತ್ರೀನ್ ಬಹೂನ್ ಕ್ರುದ್ಧೋ ವಾನರಾನ್ ಸಹರಾಕ್ಷಸೈಃ । ಸಮಾದಾಯೈಕ ಹಸ್ತೇನ ಪ್ರಚಿಕ್ಷೇಪ ತ್ವರನ್ಮುಖೇ ॥ ೯೬-೯೭ ॥ ಸಂಪ್ರಸ್ರವಂಸ್ತದಾ ಮೇದಃ ಶೋಣಿತಂಚ ಮಹಾಬಲಃ । ವಧ್ಯಮಾನೋ ನಗೇಂದ್ರಾಗ್ರೈರ್ಭಕ್ಷಯಾಮಾಸ ವಾನರಾನ್

ಪಟ್ಟಣದಿಂದ, ನಿಷ್ಕ್ರಮ್ಯ - ಹೊರಟುಬಂದು, ಉಗ್ರಂ - ಭಯಂಕರವಾದ, ತದ್ವಾ....ನ್ಯಂ - ಆ ಕಪಿಗಳ ಸೈನ್ಯವನ್ನು, ಪ್ರದೀಪ್ತಃ - ಉರಿಯುತ್ತಿರುವ, ಯುಗಾಂತಾಗ್ನಿಃ - ಪ್ರಳಯಾಗ್ನಿಯು, ಪ್ರಜಾಇವ - ಪ್ರಜೆಗಳನ್ನಂತೆ, ಯುಧಿ - ಕಾಳಿಗದಲ್ಲಿ, ಬಭಕ್ಷ - ಭಕ್ಷಿಸಿದನು. ॥ ೯೪ ॥ ಬುಭುಕ್ಷಿತಃ - ಹಸಿದಿರುವುದರಿಂದ, ಶೋಣಿ....ಧ್ನುಃ - ರಕ್ತದಲ್ಲಿಯೂ, ಮಾಂಸದಲ್ಲಿಯೂ ಅಪೇಕ್ಷೆಯುಳ್ಳ, ಕುಂಭಕರ್ಣಃ - ಕುಂಭಕರ್ಣನು, ಯುಧಿ - ಕಾಳಿಗದಲ್ಲಿ, ಉಗ್ರಂ - ಭಯಂಕರವಾದ, ತದ್ವಾನರಸೈನ್ಯಂ - ಆ ವಾನರಸೈನ್ಯವನ್ನು, ಪ್ರವಿಶ್ಯ - ಹೊಕ್ಕು, ರಕ್ಷಾಂಸಿ - ರಕ್ಕಸರನ್ನೂ, ಹರೀನ್ - ಕಪಿಗಳನ್ನೂ, ಪಿಶಾಚಾನ್ - ಪಿಶಾಚಗಳನ್ನೂ, ಋಕ್ಷಾಂಶ್ಚ - ಕರಡಿಗಳನ್ನೂ, ಮೋಹಾತ್ - ಅಜ್ಞಾನದಿಂದ, ಚಖಾದ - ತಿಂದನು. ॥ ೯೫ ॥ ಯುಗಾಂತೇ - ಪ್ರಳಯಕಾಲದಲ್ಲಿ, ಮೃತ್ಯುಃ - ಯಮಧರ್ಮರಾಯನು, ಯಥಾ - ಹೇಗೆ, ಹರತೇ - ಪ್ರಜೆಗಳನ್ನು ಅಪಹರಿಸುವನೋ, ತಥಾ - ಹಾಗೆಯೇ, ಸಃ - ಆ ಕುಂಭಕರ್ಣನು, ಮುಖ್ಯಾನ್ - ಪ್ರಮುಖರಾದ, ಹರೀಂಶ್ಚ - ಕಪಿಗಳನ್ನೂ, ಭಕ್ಷಯಾಮಾಸ- ತಿಂದನು. ॥ ೯೬ ॥ ಕ್ರುದ್ಧಃ - ಕೋಪಿಷ್ಠನಾಗಿ, ಏಕಂ - ಒಬ್ಬನನ್ನು, ದ್ವೇ - ಇಬ್ಬರನ್ನೂ, ತ್ರೀನ್ - ಮೂವರನ್ನೂ, ಬಹೂನ್-ಅನೇಕರನ್ನೂ, (ಹೀಗೆ) ವಾನರಾನ್ - ಕಪಿಗಳನ್ನೂ, ರಾಕ್ಷಸೈಸ್ಸಹ- ರಾಕ್ಷಸರೊಡಗೂಡಿಯೇ, ಏಕಹಸ್ತೇನ - ಒಂದು ಕೈಯಿಂದ, ಸಮಾದಾಯ - ಹಿಡಿದುಕೊಂಡು, ತ್ವರನ್ - ತ್ವರೆಯುಳ್ಳವನಾಗಿ, ಮುಖೇ - ಬಾಯಿಯಲ್ಲಿ, ಪ್ರಚಿಕ್ಷೇಪ - ಹಾಕಿಕೊಂಡನು. ॥೯೭॥ ಮಹಾಬಲಃ - ಬಹಳ ಬಲಶಾಲಿಯಾದ ಕುಂಭಕರ್ಣನು, ತದಾ - ಆ ಕಾಲದಲ್ಲಿ, ಮೇದಃ - ಆ ವಾನರಸಂಬಂಧವಾದ ಕೊಬ್ಬುನೀರನ್ನು, ಶೋಣಿತಂಚ - ರಕ್ತವನ್ನೂ, ಸಂಪ್ರಸ್ರವನ್ - ಸುರಿಸುತ್ತಿರುವನಾಗಿ, ನಗೇಂದ್ರಾಗ್ರೈಃ - ಬೆಟ್ಟದ ಉನ್ನತವಾದ ಶಿಖರಗಳಿಂದ, ವಧ್ಯಮಾನಃ - ಹೊಡೆಯಲ್ಪಟ್ಟವನಾದರೂ,

---

ಪ್ರವೇಶಿಸಿದೊಡನೆಯೇ ಅವನು ಪ್ರಜ್ವಲಿಸುತ್ತಿರುವ ಅಗ್ನಿಹೋತ್ರನಂತೆ ಮೆರೆಯುತ್ತ ಅತ್ಯುಗ್ರತರವಾದ ರೋಷದಿಂದ ಮೈಮರೆತು ಕೈಗೆ ಸಿಕ್ಕಿಸಿಕ್ಕಿದ ವಾನರರೆಲ್ಲರನ್ನೂ ನುಂಗಲಾರಂಭಿಸಿದನು. ವಾನರರಕ್ತದಿಂದ ವ್ಯಾಪ್ತವಾದ ಶರೀರವುಳ್ಳವನಾದ ಆ ಕುಂಭಕರ್ಣನು ಮತ್ತಷ್ಟು ಜಾಗ್ರತೆಜಾಗ್ರತೆಯಾಗಿ ವಾನರರೆಲ್ಲರನ್ನೂ ನುಂಗುತ್ತ ಬಂದನು. ಇದೂ ಅಲ್ಲದೆ ಕೋಪದಿಂದ ಮೈಮರೆತಿದ್ದ ಆ ರಾಕ್ಷಸನಿಗೆ ಇವರು ವಾನರರು, ಇವರು ರಾಕ್ಷಸರು ಎಂಬ ಪರಿಜ್ಞಾನವೇ ಇಲ್ಲದೇಹೋಯಿತು ; ಎಲ್ಲರನ್ನೂ ನುಂಗುತ್ತಾ ಬಂದನು. ॥ ೯೧-೯೫ ॥ ಆಗಲವನು ಪ್ರಳಯಕಾಲದ ಮೃತ್ಯುದೇವತೆಯಂತೆ ಬಹು ಭಯಂಕರನಾಗಿ ತೋರುತ್ತಿದ್ದನು. ಆ ಸಮಯದಲ್ಲಿ ಆ ರಾಕ್ಷಸನು ಒಂದೊಂದು ಬಾರಿಗೆ ಇಬ್ಬರು, ಮೂವರು, ನಾಲ್ವರು, ಐವರು ವಾನರರನ್ನು ಹಿಡಿದು ತಿನ್ನುತ್ತಿದ್ದನು. ಇದೂ ಅಲ್ಲದೆ ಅವನು ವಾನರರನ್ನು ಹಿಡಿದು ಪರ್ವತ

॥೯೮॥ ತೇ ಭಕ್ಷ್ಯಮಾಣಾ ಹರಯೋ ರಾಮಂ ಜಗ್ಮುಸ್ತದಾ ಗತಿಂ । ಕುಂಭಕರ್ಣೋ ಭೃಶಂ ಕ್ರುದ್ಧಃ ಕಪೀನ್ ಖಾದನ್ ಪ್ರಧಾವತಿ ॥೯೯॥ ಶತಾನಿ ಸಪ್ತ ಚಾಷ್ಟೌಚ ವಿಂಶತ್ತ್ರಿಂಶತ್ತಥೈವಚ । ಸಂಪರಿಷ್ವಜ್ಯ ಬಾಹುಭ್ಯಾಂ ಖಾದನ್ವಿಪರಿಧಾವತಿ ॥೧೦೦॥ ತಸ್ಮಿನ್ ಕಾಲೇ ಸುಮಿತ್ರಾಯಾಃ ಪುತ್ರಃ ಪರಬಲಾರ್ದನಃ । ಚಕಾರ ಲಕ್ಷ್ಮಣಃ ಕ್ರುದ್ಧೋ ಯುದ್ಧಂ ಪರಪುರಂಜಯಃ ॥೧೦೧॥ ಸಕುಂಭಕರ್ಣಸ್ಯ ಶರಾನ್ ಶರೀರೇ ಸಪ್ತ ವೀರ್ಯವಾನ್ । ನಿಚಖಾನಾದದೇ ಬಾಣಾನ್ ವಿಸಸರ್ಜ ಚ ಲಕ್ಷ್ಮಣಃ ॥೧೦೨॥ ಅತಿಕ್ರಮ್ಯ ಚ ಸೌಮಿತ್ರಿಂ ಕುಂಭಕರ್ಣೋ ಮಹಾಬಲಃ । ರಾಮಮೇವಾಭಿ

ವಾನರಾನ್ - ಕಪಿಗಳನ್ನೂ, ಭಕ್ಷಯಾಮಾಸ - ತಿನ್ನುತ್ತಿದ್ದನು. ॥೯೮॥ ಭಕ್ಷ್ಯಮಾಣಾಃ - ತಿನ್ನಲ್ಪಟ್ಟ, ತೇಹರಯಃ - ಆ ವಾನರರು, ತದಾ - ತಕ್ಷಣದಲ್ಲಿಯೆ, ರಾಮಂ - ಶ್ರೀರಾಮನನ್ನು, ಗತಿಂ - ಶರಣನನ್ನಾಗಿ, ಜಗ್ಮುಃ - ತೆರಳಿದರು, ಕುಂಭಕರ್ಣಃ - ಕುಂಭಕರ್ಣನು, ಭೃಶಂ - ಬಹಳವಾಗಿ, ಕ್ರುದ್ಧಃ - ಕೋಪಗೊಂಡು, ಕಪೀನ್ - ವಾನರರನ್ನು, ಖಾದನ್ - ತಿನ್ನುತ್ತ, ಪ್ರಧಾವತಿ - ಓಡಿಬಂದನು. ॥೯೯॥ ಸಪ್ತ-ಏಳಾದ, ಶತಾನಿ-ನೂರುಮಂದಿಯನ್ನು, ಅಷ್ಟೌಚಶತಾನಿ - ಎಂಟುನೂರು ಮಂದಿಯನ್ನು, ವಿಂಶತ್-ಇಪ್ಪತ್ತು ವಾನರರನ್ನೂ, ತಥಾ-ಹಾಗೆಯೇ, ತ್ರಿಂಶಚ್ಚ-ಮುವ್ವತ್ತು ವಾನರರನ್ನು, ಬಾಹುಭ್ಯಾಂ - ಭುಜಗಳಿಂದ, ಸಂಪರಿಷ್ವಜ್ಯ - ಅಪ್ಪಿ, ಖಾದನ್ - ತಿನ್ನುತ್ತ, ವಿಪರಿಧಾವತಿ - ವಿಶೇಷವಾಗಿ ತಿರುಗುತ್ತಿದ್ದನು. ॥೧೦೦॥ ತಸ್ಮಿನ್ಕಾಲೇ - ಆ ಕಾಲದಲ್ಲಿ, ಪರ....ನಃ - ಶತ್ರುಸೈನ್ಯವನ್ನು ಸಂಹರಿಸುವ, ಪರಪುರಂಜಯಃ - ಶತ್ರುಗಳ ಪಟ್ಟಣಗಳನ್ನು ಜಯಿಸುತ್ತಿರುವ, ಸುಮಿತ್ರಾಯಾಃ - ಸುಮಿತ್ರಾದೇವಿಗೆ, ಪುತ್ರಃ - ಮಗನಾದ, ಲಕ್ಷ್ಮಣಃ - ಲಕ್ಷ್ಮಣನು, ಕ್ರುದ್ಧಃ - ಕುಪಿತನಾಗಿ, ಯುದ್ಧಂ - ಕಾಳಗವನ್ನು, ಚಕಾರ - ಮಾಡಿದನು. ॥೧೦೧॥ ಸಲಕ್ಷ್ಮಣಃ - ಆ ಲಕ್ಷ್ಮಣನು, ವೀರ್ಯವಾನ್ - ಪರಾಕ್ರಮಶಾಲಿಯಾದಕಾರಣ, ಕುಂಭಕರ್ಣಸ್ಯ - ಕುಂಭಕರ್ಣನ, ಶರೀರೇ - ದೇಹದಲ್ಲಿ, ಸಪ್ತ - ಏಳಾದ, ಬಾಣಾನ್ - ಬಾಣಗಳನ್ನು, ಆದದೇ - ತೆಗೆದುಕೊಂಡನು, ನಿಚಖಾನ - ನಾಟಿದನು, ವಿಸಸರ್ಜಚ - ಬಿಡಲೂ ಬಿಟ್ಟನು. ॥೧೦೨॥ ಮಹಾಬಲಃ - ಬಹಳ ಬಲಶಾಲಿಯಾದ, ಕುಂಭಕರ್ಣಃ - ಕುಂಭಕರ್ಣನು, ಮೇದಿನೀಂ - ನೆಲವನ್ನು, ದಾರಯನ್ನಿವ - ಸೀಳುವನೋ ಎಂಬಂತೆ, ಸೌಮಿತ್ರಿಂ - ಲಕ್ಷ್ಮಣನನ್ನು, ಅತಿಕ್ರಮ್ಯ - ದಾಟಿ, ರಾಮಮೇವ - ಶ್ರೀರಾಮನನ್ನೇ ಕುರಿತು, ಅಭಿ

ಗಳ ಕೋಡುಗಲ್ಲಿನಮೇಲೆ ಕುಕ್ಕಿ ಅವರ ಮೇದೋ ಮಾಂಸಗಳನ್ನು ಅಗೆದುತಿನ್ನುತ್ತಿದ್ದನು. ಆಗ ವಾನರರೆಲ್ಲರೂ ಬಹಳವಾಗಿ ಭಯಪಟ್ಟು ಶ್ರೀರಾಮನ ಬಳಿಗೆ ಓಡಿಬಂದರು. ಆಗ ಕುಂಭಕರ್ಣನು ಇನ್ನೂ ಕೆರಳಿದವನಾಗಿ ಮೊದಲಿಗಿಂತಲೂ ಜಾಗ್ರತೆಯಾಗಿಯೇ ವಾನರರನ್ನು ನುಂಗುತ್ತಬಂದನು. ಅವನು ತನ್ನ ತೋಳುಗಳಿಂದ ಏಳು, ಎಂಟು, ಮೂವತ್ತು, ನೂರು ಹೀಗೆ ಲೆಕ್ಕವಿಲ್ಲದಷ್ಟುಮಂದಿ ವಾನರರನ್ನು ಹಿಡಿದೆಳದು ತಿನ್ನಲು ಮೊದಲಿಟ್ಟನು. ॥೯೬–೧೦೦॥ ಆಗ ಶತ್ರು ಪುರಮರ್ದನನೂ, ಸುಮಿತ್ರಾನಂದನನೂ, ಶತ್ರುತಾಪನನೂ ಆದ ಲಕ್ಷ್ಮಣನು ಕುಂಭಕರ್ಣನನ್ನೆದುರಿಸಿ ಭಯಂಕರ ಯುದ್ಧವನ್ನು ಮಾಡಿದನು. ಮಹಾ ಪರಾಕ್ರಮಿಯಾದ ಲಕ್ಷ್ಮಣನು ಆ ಕುಂಭಕರ್ಣನಮೇಲೆ ಏಳು ಕೂರಂಬುಗಳನ್ನು ಪ್ರಯೋಗಿಸಿದನು. ಮಹಾಬಲನಾದ ಕುಂಭಕರ್ಣನು ಆ ಲಕ್ಷ್ಮಣನನ್ನೂ, ಅವನ ಬಾಣಗಳನ್ನೂ ಸ್ವಲ್ಪವೂ ಲಕ್ಷ್ಯಕ್ಕೆ ತಂದುಕೊಳ್ಳದೆ ಭೂಮಿಯು ಗಡಗಡನೆ ನಡುಗುವಂತೆ ನಡೆಯುತ್ತ, ಶ್ರೀರಾಮನಿಗೆದುರಾಗಿ ಓಡಿ

ದುದ್ರಾವ ದಾರಯನ್ನಿವ ಮೇದಿನೀಂ ॥ ೧೧೩ ॥ ಅಥ ದಾಶರಥೀ ರಾಮೋ ರೌದ್ರ ಮಸ್ತ್ರಂ ಪ್ರಯೋಜಯನ್ । ಕುಂಭಕರ್ಣಸ್ಯ ಹೃದಯೇ ಸಸರ್ಜ ನಿಶಿತಾಂಚ್ಛರಾನ್ ॥ ೧೧೪ ॥ ತಸ್ಯ ರಾಮೇಣವಿದ್ಧಸ್ಯ ಸಹಸಾಽಭಿಪ್ರಧಾವತಃ । ಅಂಗಾರಮಿಶ್ರಾಃ ಕ್ರುದ್ಧಸ್ಯ ಮುಖಾನ್ನಿಶ್ಚೇರುರರ್ಚಿಷಃ ॥ ೧೧೫ ॥ ರಾಮಾಸ್ತ್ರವಿದ್ಧೋ ಘೋರಂ ವೈ ನರ್ದ ರಾಕ್ಷಸಪುಂಗವಃ । ಅಭ್ಯಧಾವತ ಸಂಕ್ರುದ್ಧೋ ಹರೀನ್ ವಿದ್ರಾವಯನ್ ರಣೇ ॥ ೧೧೬ ॥ ತಸ್ಯೋರಸಿ ನಿಮಗ್ನಾಶ್ಚ ಶರಾ ಬರ್ಹಿಣವಾಸಸಃ । ಹಸ್ತಾಚ್ಚಾಪಿ ಪರಿಭ್ರಷ್ಟಾ ಪಪಾತೋರ್ವ್ಯಾಂ ಮಹಾಗದಾ । ಆಯುಧಾನಿಚ ಸರ್ವಾಣಿ ವಿಪ್ರಾ ಕೀರ್ಯಂತ ಭೂತಲೇ ॥ ೧೧೭ ॥ ಸನಿರಾಯುಧಮಾತ್ಮಾನಂ ಯದಾ ಮೇನೇ ಮಹಾ

ದುದ್ರಾವ - ಎದುರೋಡಿಬಂದನು. ॥೧೧೩॥ ಅಥ - ಅನಂತರದಲ್ಲಿ, ದಾಶರಥಿಃ - ದಶರಥನ ಕುವರನಾದ, ರಾಮಃ - ಶ್ರೀರಾಮನು, ರೌದ್ರಂ - ರುದ್ರದೇವತಾಕವಾದ, ಅಸ್ತ್ರಂ - ಅಸ್ತ್ರವನ್ನು, ಪ್ರಯೋಜಯನ್ - ಪ್ರಯೋಗ ಮಾಡುತ್ತ, ಕುಂಭಕರ್ಣಸ್ಯ - ಕುಂಭಕರ್ಣನ, ಹೃದಯೇ - ವಕ್ಷಸ್ಥಲದಲ್ಲಿ, ನಿಶಿತಾನ್ - ತೀಕ್ಷ್ಣಗಳಾದ, ಶರಾನ್ - ಬಾಣಗಳನ್ನು, ಸಸರ್ಜ - ಬಿಟ್ಟನು. ॥ ೧೧೪ ॥ ರಾಮೇಣ - ಶ್ರೀರಾಮನಿಂದ, ವಿದ್ಧಸ್ಯ - ಹೊಡೆಯಲ್ಪಟ್ಟು, ಸಹಸಾ - ಜಾಗ್ರತೆಯಾಗಿ, ಅಭಿಪ್ರಧಾವತಃ - ಎದುರಾಗಿ ಓಡಿಬರುತ್ತಿರುವ, ಕ್ರುದ್ಧಸ್ಯ - ಕೋಪಿಷ್ಠನಾದ, ತಸ್ಯ - ಆ ಕುಂಭಕರ್ಣನ, ಮುಖಾತ್ - ಬಾಯಿಯಿಂದ, ಅಂಗಾರಮಿಶ್ರಾಃ-ಕಿಡಿಗಳೀ ಸಹಾಯವಾಗುಳ್ಳ, ಅರ್ಚಿಷಃ-ಜ್ವಾಲೆಗಳು, ನಿಶ್ಚೇರುಃ-ಹೊರಟುಬಂದವು. ॥ ೧೧೫ ॥ ರಾಮಾಸ್ತ್ರವಿದ್ಧಃ - ಶ್ರೀರಾಮನ ರೌದ್ರಾಸ್ತ್ರದಿಂದ ಹೊಡೆಯಲ್ಪಟ್ಟ, ಘೋರಂ - ಭಯಂಕರವಾಗಿ, ನರ್ದ - ಧ್ವನಿಮಾಡುತ್ತಿರುವ, ರಾಕ್ಷ.....ವಃ - ರಾಕ್ಷಸಶ್ರೇಷ್ಠನಾದ ಕುಂಭಕರ್ಣನು, ಸಂಕ್ರುದ್ಧಃ - ಮತ್ತೂ ಕುಪಿತನಾಗಿ, ರಣೇ - ಯುದ್ಧರಂಗದಲ್ಲಿ, ಹರೀನ್ - ಕಪಿಗಳನ್ನೂ, ವಿದ್ರಾವಯನ್ - ಓಡಿಸುತ್ತ, ಅಭ್ಯಧಾವತ - ಎದುರಾಗಿ ಬಂದನು. ॥೧೧೬॥ ತಸ್ಯ - ಆ ಕುಂಭಕರ್ಣನ, ಉರಸಿ - ಎದೆಯಲ್ಲಿ, ಬರ್ಹಿ....ಸಃ - ನವಿಲುರೆಕ್ಕೆಗಳು ಕಟ್ಟಿರುವ, ಶರಾಃ - ಬಾಣಗಳು, ನಿಮಗ್ನಾಃ - ಮುಳುಗಿದವು, ಹಸ್ತಾಚ್ಚಾಪಿ - ಕೈಯಿಂದಲೂ, ಮಹಾಗದಾ - ದೊಡ್ಡ ಗದಾಯುಧವು, ಪರಿಭ್ರಷ್ಟಾ - ಜಾರಿ, ಉರ್ವ್ಯಾಂ - ಭೂಮಿಯಲ್ಲಿ, ಪಪಾತ - ಬಿದ್ದಿತು. ॥೧೧೭॥ ಸರ್ವಾಣಿ - ಸಮಸ್ತಗಳಾದ, ಆಯುಧಾನಿಚ - ಆಯುಧಗಳೂ, ಭೂತಲೇ - ನೆಲದಲ್ಲಿ, ವಿಪ್ರಾಕೀರ್ಯಂತ - ವಿಶೇಷವಾಗಿ ಎರಚಲ್ಪಟ್ಟವು, ಮಹಾಬಲಃ - ಮಹಾ ತ್ರಾಣವುಳ್ಳ, ಸಃ - ಆ ಕುಂಭ

ಬಂದನು. ಆಗ ದಶರಥರಾಜಕುಮಾರನಾದ ಶ್ರೀರಾಮಚಂದ್ರನು ರೌದ್ರಾಸ್ತ್ರವನ್ನು ಪ್ರಯೋಗಿಸಿ ಆ ರಾಕ್ಷಸನ ಹೃದಯದಲ್ಲಿ ಬಹಳ ತೀಕ್ಷ್ಣವಾದ ಮತ್ತೂ ಕೆಲವು ಬಾಣಗಳನ್ನು ಪ್ರಯೋಗಿಸಿದನು. ಹಾಗೆ ರಾಮಮೂರ್ತಿಯೆಸದ ಬಾಣಗಳ ಬೇಗೆಯನ್ನು ತಾಳಲಾರದೆ ಆ ಕುಂಭಕರ್ಣನು ಬಾಯಿಯಿಂದ ಜ್ವಾಲೆಗಳನ್ನುಗುಳುತ್ತ ಮತ್ತಷ್ಟು ತೀವ್ರವಾಗಿ ಓಡಿ ಬರಲಾರಂಭಿಸಿದನು. ॥ ೧೧೧–೧೧೫ ॥ ಮಹಾ ಕೋಪೋದ್ದೀಪಿತನಾದ ಆ ಕುಂಭಕರ್ಣನು ಮಹಾದ್ಭುತವಾದ ಸಿಂಹನಾದವನ್ನು ಮಾಡಿ ಅತ್ಯಧಿಕವಾದ ರೋಷದಿಂದ ವಾನರರೆಲ್ಲರನ್ನೂ ಭಕ್ಷಿಸುತ್ತಲೇ ಇದ್ದನು. ಶ್ರೀರಾಮನು ಆ ರಾಕ್ಷಸನ ಕ್ರೂರಕೃತ್ಯವನ್ನು ನೋಡಿ ಬಹಳವಾಗಿ ಕನಲಿ ಅವನೆದೆಗೆ ಬಹಳ ಮೊನಚಾದ ಬಾಣಗಳನ್ನು ಪ್ರಯೋಗಿಸಿದನು. ಆಗ ಆ ಕುಂಭಕರ್ಣನ ಕೈಯಲ್ಲಿದ್ದ ಗದಾಯುಧವು ನೆಲಕ್ಕೆ ಬಿದ್ದುಹೋಯಿತು. ತಾನು ನಿರಾಯುಧನಾದುದನ್ನು ತಿಳಿದು ಆ ರಾಕ್ಷಸನು ಮುಷ್ಟಿಗಳಿಂದಲೂ, ಮೊಣಕಾಲುಗಳಿಂದಲೂ ಭಯಂ

ಬಲಃ । ಮುಷ್ಟಿಭ್ಯಾಂ ಚರಣಾಭ್ಯಾಂಚ ಚಕಾರ ಕದನಂ ಮಹತ್ ॥೧೦೮॥ ಸಬಾಣೈ ರತಿವಿದ್ಧಾಂಗಃ ಕ್ಷತಜೇನ ಸಮುಕ್ಷಿತಃ । ರುಧಿರಂ ಪ್ರತಿಸುಸ್ರಾವ ಗಿರಿಃ ಪ್ರಸ್ರವಣಂ ಯಥಾ ॥೧೦೯॥ ಸತೀವ್ರೇಣಚ ಕೋಪೇನ ರುಧಿರೇಣ ಚ ಮೂರ್ಛಿತಃ । ವಾನರಾನ್ ರಾಕ್ಷಸಾನೃಕ್ಷಾನ್ ಖಾದನ್ ವಿಪರಿಧಾವತಿ ॥೧೧೦॥ ಅಥ ಶೃಂಗಂ ಸಮಾವಿಧ್ಯ ಭೀಮಂ ಭೀಮಪರಾಕ್ರಮಃ । ಚಿಕ್ಷೇಪ ರಾಮಮುದ್ದಿಶ್ಯ ಬಲವಾನಂತಕೋಪಮಃ ॥೧೧೧॥ ಅಪ್ರಾಪ್ತಮಂತರಾ ರಾಮಸ್ಸಪ್ತಭಿಸ್ತೈರಜಿಹ್ಮಗೈಃ । ಶರೈಃ ಕಾಂಚನಚಿತ್ರಾಂಗೈಶ್ಚಿಚ್ಛೇದ ಪುರುಷರ್ಷಭಃ ॥೧೧೨॥ ತನ್ಮೇರುಶಿಖರಾಕಾರಂ ದ್ಯೋತಮಾನಮಿವ ಶ್ರಿಯಾ ।

ಕರ್ಣನು, ಯದಾ - ಯಾವಾಗ, ಆತ್ಮಾನಂ - ತನ್ನನ್ನು, ನಿರಾಯುಧಂ - ಆಯುಧವಿಲ್ಲದವನನ್ನಾಗಿ, ಮೇನೇ - ತಿಳಿದುಕೊಂಡನೋ, ತದಾ - ಆ ಕಾಲದಲ್ಲಿ, ಮುಷ್ಟಿಭ್ಯಾಂ - ಕೈಹಿಡಿಗಳಿಂದಲೂ, ಚರಣಾಭ್ಯಾಂಚ - ಕಾಲುಗಳಿಂದಲೂ, ಮಹತ್ - ದೊಡ್ಡದಾದ, ಕದನಂ - ಕಾಳಗವನ್ನು, ಚಕಾರ - ಮಾಡಿದನು. ॥ ೧೦೮ ॥ ಸಃ - ಆತನು, ಬಾಣೈಃ - ರಾಮಬಾಣಗಳಿಂದ, ಅತಿವಿದ್ಧಾಂಗಃ - ಬಹಳವಾಗಿ ಹೊಡೆಯಲ್ಪಟ್ಟಶರೀರವುಳ್ಳವನಾದಕಾರಣ, ಕ್ಷತಜೇನ - ರಕ್ತದಿಂದ, ಸಮುಕ್ಷಿತಃ - ತೋಯಿಸಲ್ಪಟ್ಟವನಾಗಿ, ಗಿರಿಃ - ಬೆಟ್ಟವು, ಪ್ರಸ್ರವಣಂಯಥಾ - ಪ್ರವಾಹವನ್ನಂತೆ, ರುಧಿರಂ - ರಕ್ತವನ್ನು, ಪ್ರತಿಸುಸ್ರಾವ - ಸುರಿಸುತ್ತಿದ್ದನು. ॥ ೧೦೯ ॥ ಸಃ - ಆ ಕುಂಭಕರ್ಣನು, ತೀವ್ರೇಣ - ಮತ್ತೂ ತೀಕ್ಷ್ಣವಾದ, ಕೋಪೇನ - ಕ್ರೋಧದಿಂದಲೂ, ರುಧಿರೇಣ - ರಕ್ತದಿಂದಲೂ, ಮೂರ್ಛಿತಃ - ಮೈಮರೆತು, ವಾನರಾನ್ - ಕಪಿಗಳನ್ನೂ, ರಾಕ್ಷಸಾನ್ - ರಕ್ಕಸರನ್ನೂ, ಋಕ್ಷಾನ್ - ಕರಡಿಗಳನ್ನೂ, ಖಾದನ್ - ತಿನ್ನುತ್ತ, ವಿಪರಿಧಾವತಿ - ಓಡಿಬರುತ್ತಿದ್ದನು. ॥ ೧೧೦ ॥ ಅಥ - ಬಳಿಕ, ಬಲವಾನ್ - ಬಲಶಾಲಿಯಾದ, ಅಂತಕೋಪಮಃ - ಯಮನಿಗೆ ಸಮಾನನಾದ, ಭೀಮಪರಾಕ್ರಮಃ - ಭಯಂಕರ ಪರಾಕ್ರಮವುಳ್ಳ ಆ ಕುಂಭಕರ್ಣನು, ರಾಮಂ - ಶ್ರೀರಾಮನನ್ನು, ಉದ್ದಿಶ್ಯ - ಗುರಿಯಿಟ್ಟು, ಭೀಮಂ- ಭಯಂಕರವಾದ, ಶೃಂಗಂ - ಬೆಟ್ಟದ ಕೋಡುಗಲ್ಲನ್ನು, ಸಮಾವಿಧ್ಯ - ತಿರುಗಿಸಿ, ಚಿಕ್ಷೇಪ-ಎಸೆದನು. ॥೧೧೧॥ ಪುರುಷರ್ಷಭಃ - ಪುರುಷಶ್ರೇಷ್ಠನಾದ, ರಾಮಃ - ಶ್ರೀರಾಮನು, ಸಪ್ತಭಿಃ - ಏಳು ಸಂಖ್ಯೆಯುಳ್ಳ, ಕಾಂಚ....ಗೈಃ - ಚಿನ್ನದ ರೇಖೆಗಳಿಂದ ಚಿತ್ರವಾದ ಅವಯವಗಳುಳ್ಳ, ಅಜಿಹ್ಮಗೈಃ - ನೇರವಾಗಿ ಹೋಗುತ್ತಿರುವ, ತೈಶ್ಶರೈಃ - ಆ ಬಾಣಗಳಿಂದ, ಅಂತರಾ - ಮಧ್ಯದಲ್ಲಿ, ಅಪ್ರಾಪ್ತಂ - ಬಾರದೆ ಇರುವ ಆ ಬೆಟ್ಟದ ಶಿಖರವನ್ನು, ಚಿಚ್ಛೇದ - ಕತ್ತರಿಸಿದನು. ॥ ೧೧೨ ॥ ಮೇರು....ರಂ - ಮೇರುಪರ್ವತದ ಶಿಖರದಂತೆ ಆಕಾರವುಳ್ಳ, ಶ್ರಿಯಾ - ಕಾಂತಿಯಿಂದ, ದ್ಯೋತಮಾನಮಿವ - ಸುಡು

ಕರವಾದ ಯುದ್ಧವನ್ನು ಮಾಡಿದನು. ಆ ಸಮಯದಲ್ಲಿ ಬಾಣಗಳಿಂದ ಗಾಯಗೊಳಿಸಿದ ಅವಯವಗಳುಳ್ಳವನೂ ರಕ್ತಸಿಕ್ತವಾದ ಮೈಯುಳ್ಳವನೂ ಆದ ಆ ರಾಕ್ಷಸನು ಪ್ರಸ್ರವಣಾದ್ರಿಯನ್ನು ಹೋಲುತ್ತಿದ್ದನು. ಆಗವನು ಮತ್ತಷ್ಟು ರೇಗಿ ವಾನರರನ್ನೂ ರಾಕ್ಷಸರನ್ನೂ ನುಂಗಲಾರಂಭಿಸಿದನು. ॥ ೧೦೭–೧೧೦ ॥ ಆ ತರುವಾಯ ಪ್ರಳಯಕಾಲದ ಯಮನಂತೆ ಕೆರಳಿ ಅಪರಿಮಿತವಾದ ತನ್ನ ಪರಾಕ್ರಮದಿಂದ ಭಯಂಕರವಾದ ಪರ್ವತಶಿಖರವೊಂದನ್ನು ಸೆಳಗಿಸಿಕೊಂಡು ಶ್ರೀರಾಮಮೂರ್ತಿಯಮೇಲೆ ಪ್ರಯೋಗಿಸಿದನು. ಆಗ ಶ್ರೀರಾಮನು ಆ ಕುಂಭಕರ್ಣನು ಪ್ರಯೋಗಿಸಿದ ಪರ್ವತವು ತನ್ನಮೇಲೆ ಬರುವ ಮುಂಚೆಯೇ ಮಹಾ ತೀಕ್ಷ್ಣಗಳೂ, ಸ್ವರ್ಣಭೂಷಿತಗಳೂ ಆದ ಏಳು ಬಾಣಗಳಿಂದ ಭೇದಿಸಿದನು. ಮೇರು

ದ್ವೇ ಶತೇ ವಾನರೇಂದ್ರಾಣಾಂ ಪತಮಾನಮುಪಾತಯತ್ ॥ ೧೧೩ ॥ ತಸ್ಮಿನ್ಕಾಲೇ ಸ ಧರ್ಮಾತ್ಮಾ ಲಕ್ಷ್ಮಣೋ ವಾಕ್ಯಮಬ್ರವೀತ್ । ಕುಂಭಕರ್ಣವಧೇ ಯುಕ್ತೋ ಯೋಗಾನ್ ಪರಿಮೃಶನ್ ಬಹೂನ್ ॥ ೧೧೪ ॥ "ನೈವಾಽಯಂ ವಾನರಾನ್ರಾಜನ್ನಾಪಿ ಜಾನಾತಿ ರಾಕ್ಷಸಾನ್ । ಮತ್ತಃ ಶೋಣಿತಗಂಧೇನ ಸ್ವಾನ್ ಪರಾಂಶ್ಚೈವ ಖಾದತಿ ॥ ೧೧೫ ॥ ಸಾಧ್ವೇನಮಧಿರೋಹಂತು ಸರ್ವೇ ತೇ ವಾನರರ್ಷಭಾಃ । ಯೂಥಪಾಶ್ಚ ಯಥಾ ಮುಖ್ಯಾಸ್ತಿಷ್ಠಂತ್ವಸ್ಯ ಸಮಂತತಃ ॥ ೧೧೬ ॥ ಅಪ್ಯಯಂ ದುರ್ಮತಿಃ ಕಾಲೇ ಗುರುಭಾರಪ್ರಪೀಡಿತಃ । ಪ್ರಪತನ್ ರಾಕ್ಷಸೋ ಭೂಮೌ ನಾನ್ಯಾನ್ ಹನ್ಯಾತ್ ಪ್ಲವಂಗಮಾನ್" ॥ ೧೧೭ ॥ ತಸ್ಯ ತದ್ವಚನಂ ಶ್ರುತ್ವಾ ರಾಜಪುತ್ರಸ್ಯ ಧೀಮತಃ । ತೇ

ತ್ತದೋ ಎಂಬಂತಿರುವ, ತತ್-ಆ ಶಿಖರವು, ಪತಮಾನಂ-ಕೆಳಕ್ಕೆ ಬೀಳುತ್ತ, ವಾನರೇಂದ್ರಾಣಾಂ-ಕಪಿಗಳ, ದ್ವೇಶತೇ - ಇನ್ನೂರನ್ನು, ಅಪಾತಯತ್ - ಕೆಳಕ್ಕೆ ಕೆಡುಹಿತು. ॥೧೧೩॥ ತಸ್ಮಿನ್ಕಾಲೇ - ಆ ಕಾಲದಲ್ಲಿ, ಧರ್ಮಾತ್ಮಾ - ಧರ್ಮಿಷ್ಠನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು, ಕುಂಭಕರ್ಣವಧೇ - ಕುಂಭಕರ್ಣನ ಸಂಹಾರದಲ್ಲಿ, ಯುಕ್ತಃ - ಉದ್ಯುಕ್ತನಾಗಿ, ಬಹೂನ್ಯೋಗಾನ್ - ಅನೇಕ ಉಪಾಯ ಗಳನ್ನು, ಪರಿಮೃಶನ್ - ಆಲೋಚಿಸುತ್ತ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧೧೪॥ ಹೇ ರಾಜನ್ - ಎಲೈ ಅರಸೇ, ಅಯಂ - ಈ ಕುಂಭಕರ್ಣನು, ಮತ್ತಃ - ಮತ್ತನಾಗಿ, ವಾನರಾನ್ - ಕಪಿಗಳನ್ನೂ, ರಾಕ್ಷಸಾನ್ - ರಾಕ್ಷಸರನ್ನೂ, ನಾಪಿಜಾನಾತಿ - ತಿಳಿಯಲಾರನು, ಶೋಣಿತಗಂಧೇನ - ರಕ್ತದ ವಾಸನೆಯಿಂದ, ಸ್ವಾನ್ಪರಾಂಶ್ಚೈವ - ತಮ್ಮವರನ್ನೂ ಇತರರನ್ನೂ, ಖಾದತಿ - ತಿನ್ನು ತ್ತಾನೆ. ॥ ೧೧೫ ॥ ಸರ್ವೇ - ಸಮಸ್ತರಾದ, ತೇವಾನರರ್ಷಭಾಃ - ಆ ಉತ್ತಮರಾದ ಕಪಿಗಳು, ಯೂಥಪಾಶ್ಚ - ಯೂಥಪತಿಗಳೂ, ತಥಾ - ಹಾಗೆಯೇ, ಏನಂ - ಈ ಕುಂಭಕರ್ಣನನ್ನು, ಸಾಧು - ಚೆನ್ನಾಗಿ, ಅಧಿರೋಹಂತು-ಏರಿಕೊಳ್ಳಲಿ, ಅಸ್ಯ-ಇವನ, ಸಮಂತತಃ-ಸುತ್ತುಮುತ್ತಲೂ, ತಿಷ್ಠಂತು-ನಿಂತಿರಲಿ. ॥ ೧೧೬ ॥ ಅಯಂ - ಈ, ದುರ್ಮತಿಃ - ದುಷ್ಟಬುದ್ಧಿಯುಳ್ಳ, ರಾಕ್ಷಸಃ - ರಕ್ಕಸನು, ಕಾಲೇ - ಒಂದು ಕಾಲದಲ್ಲಿ, ಗುರು....ತಃ - ಹೆಚ್ಚಾದ ಭಾರದಿಂದ ಬಾಧಿತನಾಗಿ, ಭೂಮೌ - ನೆಲ ದಲ್ಲಿ, ಪ್ರಪತನ್ - ಬೀಳುತ್ತ, ಅನ್ಯಾನ್ - ಇತರರಾದ, ಪ್ಲವಂಗಮಾನ್ - ಕಪಿಗಳನ್ನು, ನಹನ್ಯಾದಪಿ - ಹೊಡೆಯದಿರುವನೋ ಏನೋ. ॥ ೧೧೭ ॥ ಧೀಮತಃ - ಬುದ್ಧಿಶಾಲಿಯಾದ, ರಾಜಪುತ್ರಸ್ಯ - ರಾಜ

ಶಿಖರಕ್ಕೆ ಸಮಾನವಾಗಿದ್ದ ಆ ಪರ್ವತಶಿಖರವು ಕೂಡಲೇ ಕೆಳಕ್ಕೆ ಬಿದ್ದು ಇನ್ನೂರುಮಂದಿ ವಾನರವೀರರನ್ನು ನುಚ್ಚುನುರಿ ಮಾಡಿತು. ಆ ಸಮಯದಲ್ಲಿ ಲಕ್ಷ್ಮಣನು ಕುಂಭಕರ್ಣನನ್ನು ಸಂಹರಿಸಬಯಸಿದವನಾಗಿ ಅನೇಕ ಉಪಾಯಗಳನ್ನು ಯೋಚಿಸಿ ಅಣ್ಣನಾದ ಶ್ರೀರಾಮನನ್ನು ಕುರಿತು, "ಅಣ್ಣಾ ರಾಮಚಂದ್ರ! ರಕ್ತಪಾನಮಾಡುತ್ತಿರುವುದರಿಂದ ಮದಿಸಿಹೋಗಿರುವ ಈ ಕುಂಭಕರ್ಣನು ತನ್ನವರು, ಇತರರು ಎಂಬ ಪರಿಜ್ಞಾನವೇ ಇಲ್ಲದೆ ಎಲ್ಲರನ್ನೂ ತಿನ್ನುತ್ತಿರು ವನು ॥೧೧೧-೧೧೫॥ ಆದುದರಿಂದ ನಮ್ಮ ವಾನರರೆಲ್ಲರೂ ಪರ್ವತಗಳನ್ನೂ, ವೃಕ್ಷಗಳನ್ನೂ ಏರುವಂತೆ ಇವನ ಮೇಲೇರಿಕೊಳ್ಳಲಿ. ದುರ್ಬುದ್ಧಿಯಾದ ಈ ರಾಕ್ಷಸನು ಆಗಲಾದರೂ ಅವರ ಭಾರವನ್ನು ತಡೆಯಲಾರದೆ ಕೆಳಕ್ಕೆ ಬೀಳುವನು. ಇವನು ಒಂದುಸಲ ಭೂಮಿಗೆ ಬಿದ್ದೊಡನೆ ವಾನರರನ್ನು ಕೊಲ್ಲಲು ಶಕ್ತಿಯಿಲ್ಲದವನಾಗುವನೋ ಏನೋ. ಆಗ ನಾವು ಇವನನ್ನು ಜಯಿ ಸುವ ಉಪಾಯವನ್ನುಮಾಡಬಹುದು" ಎಂದನು. ಮಹಾಬುದ್ಧಿಶಾಲಿಯಾದ ಲಕ್ಷ್ಮಣನಿಂತು

ಸಮಾರುರುಹುರ್ಹೃಷ್ಟಾಃ ಕುಂಭಕರ್ಣಂ ಪ್ಲವಂಗಮಾಃ ॥೧೧೮॥ ಕುಂಭಕರ್ಣಸ್ತು ಸಂಕ್ರುದ್ಧಸ್ಸಮಾರೂಢಃ ಪ್ಲವಂಗಮೈಃ । ವ್ಯಧೂಯತ್ತಾನ್ ವೇಗೇನ ದುಷ್ಟಹಸ್ತೀವ ಹಸ್ತಿಪಾನ್ ॥೧೧೯॥ ತಾನ್ ದೃಷ್ಟ್ವಾ ನಿರ್ಧುತಾನ್ ರಾಮೋ ದುಷ್ಟೋಽಯಮಿತಿ ರಾಕ್ಷಸಃ । ಸಮುತ್ಪಪಾತ ವೇಗೇನ ಧನುರುತ್ತಮಮಾದದೇ ॥೧೨೦॥ ಕ್ರೋಧ ತಾಮ್ರೇಕ್ಷಣೋ ವೀರೋ ನಿರ್ದಹನ್ನಿವ ಚಕ್ಷುಷಾ । ರಾಘವೋ ರಾಕ್ಷಸಂ ರೋಷಾ ದಭಿದುದ್ರಾವ ವೇಗಿತಃ । ಯೂಥಪಾನ್ ಹರ್ಷಯನ್ ಸರ್ವಾನ್ ಕುಂಭಕರ್ಣಭಯಾ ರ್ದಿತಾನ್ ॥೧೨೨॥ ಸ ಚಾಪಮಾದಾಯ ಭುಜಂಗಕಲ್ಪಂ ದೃಢಜ್ಯಮುಗ್ರಂ ತಪನೀಯ

ಪುತ್ರನಾದ, ತಸ್ಯ-ಆ ಲಕ್ಷ್ಮಣನ, ತದ್ವಚನಂ-ಆ ಮಾತನ್ನು, ಶ್ರುತ್ವಾ-ಕೇಳಿ, ತೇಪ್ಲವಂಗಮಾಃ- ಆ ಕಪಿಗಳು, ಹೃಷ್ಟಾಃ-ಸಂತೋಷಗೊಂಡು, ಕುಂಭಕರ್ಣಂ-ಕುಂಭಕರ್ಣನನ್ನು, ಸಮಾರುರುಹುಃ- ಏರಿಕೊಂಡರು. ॥ ೧೧೮ ॥ ಕುಂಭಕರ್ಣಸ್ತು - ಕುಂಭಕರ್ಣನಾದರೆ, ಪ್ಲವಂಗಮೈಃ - ವಾನರ ರಿಂದ, ಸಮಾರೂಢಃ - ಏರಲ್ಪಟ್ಟವನಾಗಿ, ಸಂಕ್ರುದ್ಧಃ - ಕೋಪಗೊಂಡು, ತಾನ್ - ಆ ಕಪಿಗಳನ್ನು, ದುಷ್ಟಹಸ್ತೀ - ಮದವೇರಿದ ತುಂಟಾನೆಯು, ಹಸ್ತಿಪಾನಿವ - ಮಾವಟಿಗರನ್ನಂತೆ, ವೇಗೇನ - ವೇಗ ದಿಂದ, ವ್ಯಧೂನಯತ್ - ಕೊಡಹಿದನು. ॥೧೧೯॥ ರಾಮಃ - ಶ್ರೀರಾಮನು, ತಾನ್ - ಆ ವಾನರರನ್ನು, ನಿರ್ಧುತಾನ್ - ಕೊಡಹಲ್ಪಟ್ಟವರನ್ನಾಗಿ, ದೃಷ್ಟ್ವಾ - ಕಂಡು, ಅಯಂರಾಕ್ಷಸಃ - ಈ ರಾಕ್ಷಸನು, ದುಷ್ಟ ಇತಿ - ದುಷ್ಟನೆಂದು, ವೇಗೇನ - ಜವದಿಂದ, ಉತ್ತಮಂ - ಉತ್ಕೃಷ್ಟವಾದ, ಧನುಃ - ಧನುಸ್ಸನ್ನು, ಆದದೇ - ತೆಗೆದುಕೊಂಡು, ಸಮುತ್ಪಪಾತ - ಹಾರಿಬಂದನು. ॥ ೧೨೦ ॥ ವೀರಃ - ಶೂರನಾದ, ರಾಘವಃ - ಶ್ರೀರಾಮನು, ಕ್ರೋಧತಾಮ್ರೇಕ್ಷಣಃ - ಕೋಪದಿಂದ ಕೆಂಗಣ್ಣು ಗಳುಳ್ಳವನಾಗಿ, ಚಕ್ಷುಷಾ - ನೇತ್ರದಿಂದ, ರಾಕ್ಷಸಂ - ಕುಂಭಕರ್ಣನನ್ನು, ರೋಷಾತ್ - ಕ್ರೋಧಾಗ್ನಿಯಿಂದ, ವೇಗಿತಃ - ವೇಗವುಳ್ಳವನಾಗಿ, ನಿರ್ದಹನ್ನಿವ - ಸುಡುವನೋ ಎಂಬಂತೆ, ಕುಂಭ....ತಾನ್ - ಕುಂಭಕರ್ಣನ ಭಯದಿಂದ ಪೀಡಿತರಾದ, ಸರ್ವಾನ್ - ಸಮಸ್ತರಾದ, ಯೂಥಪಾನ್- ಯೂಥಪತಿಗಳನ್ನು, ಹರ್ಷಯನ್ - ಸಂತೋಷಗೊಳಿಸುತ್ತ, ಅಭಿದುದ್ರಾವ - ಎದುರೋಡಿಬಂದನು. ॥ ೧೨೧-೧೨೨ ॥ ಸರಾಮಃ - ಆ ಶ್ರೀರಾಮನು, ನಿಬ....ಣಃ - ಕಟ್ಟಲ್ಪಟ್ಟ ಉತ್ತಮವಾದ ಬತ್ತಳಿಕೆ ಗಳಲ್ಲಿರುವ ಬಾಣಗಳುಳ್ಳವನಾಗಿ, ಹರೀನ್ - ವಾನರರನ್ನು, ಸಮಾಶ್ವಾಸ್ಯ - ಸಮಾಧಾನಗೊಳಿಸಿ, ತಪ....ತ್ರಂ - ಭಂಗಾರದಿಂದ ಚಿತ್ರವರ್ಣವುಳ್ಳ, ಉಗ್ರಂ - ಭಯಂಕರವಾದ, ದೃಢಜ್ಯಂ -

---

ನುಡಿಯಲು ವಾನರರೆಲ್ಲರೂ ಆ ಕುಂಭಕರ್ಣನ ಮೇಲೇರಿಕೊಂಡರು. ಆ ರಾಕ್ಷಸನಾದರೋ ಮಹಾ ಕೋಪೋದ್ದೀಪಿತನಾಗಿ ಮದಿಸಿದ ತುಂಟಾನೆಯು ತನ್ನಮೇಲೇರಿರುವ ಮಾವ ಟಿಗರನ್ನು ಕೆಳಕ್ಕೆ ಕೆಡಹುವಂತೆ ತನ್ನಮೇಲೇರಿರುವ ಆ ವಾನರರೆಲ್ಲರನ್ನೂ ಕೆಳಕ್ಕೆ ಕೊಡವಿ ರಾಮನನ್ನೇ ಅಟ್ಟಬರಲಾರಂಭಿಸಿದನು. ಶ್ರೀರಾಮನು ಈ ರಾಕ್ಷಸನು ಮಹಾ ದುಷ್ಟನೆಂದು ತಿಳಿದು ಧನುಸ್ಸನ್ನು ತೆಗೆದುಕೊಂಡು ಮಹಾ ತೀಕ್ಷ್ಣಗಳಾದ ಬಾಣಗಳನ್ನು ಸಂಧಿಸಿದನು. ॥ ೧೧೬–೧೨೦ ॥ ಆಗಲಾತನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ತನ್ನ ನೇತ್ರಗಳಿಂದಲೇ ಸಮಸ್ತವನ್ನೂ ದಹಿಸುವನೋ ಎಂಬಂತಿದ್ದನು. ರಘುಕುಲೋದ್ಭವನಾದ ಶ್ರೀರಾಮಚಂದ್ರನು ಅತ್ಯಧಿಕ ಕೋಪದಿಂದ ಆ ಕುಂಭಕರ್ಣನನ್ನಟ್ಟಹೋಗಿ ಆ ರಾಕ್ಷ ಸನ ಭಯದಿಂದ ದಿಕ್ಕುಪಾಲಾಗಿ ಓಡುತ್ತಿದ್ದ ವಾನರರೆಲ್ಲರನ್ನೂ ನೋಡಿ ಸಮಾಧಾನಪಡಿಸಿ

ಚಿತ್ರಂ । ಹರೀನ್ ಸಮಾಶ್ವಾಸ್ಯ ಸಮುತ್ಪಪಾತ ರಾಮೋ ನಿಬದ್ಧೋತ್ತಮತೂಣಬಾಣಃ ॥ ೧೨೩ ॥ ಸವಾನರಗಣೈಸ್ತೈಸ್ತು ವೃತಃ ಪರಮದುರ್ಜಯಃ । ಲಕ್ಷ್ಮಣಾನುಚರೋ ರಾಮಸ್ಸಂಪ್ರತಸ್ಥೇ ಮಹಾಬಲಃ ॥ ೧೨೪ ॥ ಸದದರ್ಶ ಮಹಾತ್ಮಾನಂ ಕಿರೀಟಿನ ಮರಿಂದಮಂ । ಶೋಣಿತಾಪ್ಲುತಸರ್ವಾಂಗಂ ಕುಂಭಕರ್ಣಂ ಮಹಾಬಲಂ ॥೧೨೫॥ ಸರ್ವಾನ್ ಸಮಭಿಧಾವಂತಂ ಯಥಾರುಷ್ಟಂ ದಿಶಾಗಜಂ । ಮಾರ್ಗಮಾಣಂ ಹರೀನ್ ಕ್ರುದ್ಧಂ ರಾಕ್ಷಸೈಃ ಪರಿವಾರಿತಂ ॥ ೧೨೬ ॥ ವಿಂಧ್ಯಮಂದರಸಂಕಾಶಂ ಕಾಂಚನಾಂಗದಭೂಷಣಂ । ಸ್ರವಂತಂ ರುಧಿರಂ ವಕ್ತ್ರಾದ್ವರ್ಷಮೇಘಮಿವೋತ್ಥಿತಂ ॥೧೨೭॥ ಜಿಹ್ವಯಾ ಪರಿಲಿಹ್ಯಂತಂ ಶೋಣಿತಂ ಶೋಣಿತೇಕ್ಷಣಂ । ಮೃಧ್ನಂತಂ ವಾನರಾ

ದೃಢವಾದ ಹೆದೆಯುಳ್ಳ, ಭುಜಂಗಕಲ್ಪಂ-ಸರ್ಪಕ್ಕೆ ಸಮಾನವಾದ, ಚಾಪಂ-ಧನುಸ್ಸನ್ನು, ಆದಾಯ-ತೆಗೆದುಕೊಂಡು, ಸಮುತ್ಪಪಾತ - ಹಾರಿಬಂದನು. ॥೧೨೩॥ ಮಹಾಬಲಃ - ಬಹಳ ಬಲಶಾಲಿಯಾದ, ಪರಮದುರ್ಜಯಃ-ಬಹಳ ಜಯಶೀಲನಾದ, ಲಕ್ಷ್ಮ....ರಃ-ಲಕ್ಷ್ಮಣನೇ ಅನುಚರನಾಗುಳ್ಳ, ಸರಾಮಃ-ಆ ಶ್ರೀರಾಮನು, ತೈರ್ವಾನರಗಣೈಃ - ಆ ಕಪಿತಂಡಗಳಿಂದ, ವೃತಃ - ಸುತ್ತುವರೆದವನಾಗಿ, ಸಂಪ್ರತಸ್ಥೇ - ಹೊರಟುಬಂದನು. ॥ ೧೨೪ ॥ ಸಃ - ಆ ಶ್ರೀರಾಮನು, ಮಹಾತ್ಮಾನಂ - ದೊಡ್ಡ ಶರೀರವುಳ್ಳ, ಕಿರೀಟಿನಂ-ಕಿರೀಟಧಾರಿಯಾದ, ಶೋಣಿ......ಗಂ-ರಕ್ತದಿಂದ ನೆನೆಸಲ್ಪಟ್ಟ ಮೈಯುಳ್ಳ, ಮಹಾಬಲಂ - ಮಹಾ ತ್ರಾಣವುಳ್ಳ, ರುಷ್ಟಂ - ರೋಷಯುಕ್ತವಾದ, ದಿಶಾಗಜಂಯಥಾ - ದಿಗ್ಗಜದಂತೆ, ಸರ್ವಾನ್ - ಸಮಸ್ತರಾದ, ಹರೀನ್ - ವಾನರರನ್ನು ಕುರಿತು, ಸಮಭಿಧಾವಂತಂ - ಓಡಿಬರುತ್ತ, ಮಾರ್ಗಮಾಣಂ - ಹುಡುಕುತ್ತಿರುವ, ಕ್ರುದ್ಧಂ - ಕೋಪಿಷ್ಠನಾದ, ರಾಕ್ಷಸೈಃ - ರಕ್ಕಸರಿಂದ, ಪರಿವಾರಿತಂ - ಸುತ್ತುವರೆದ, ಕುಂಭಕರ್ಣಂ - ಕುಂಭಕರ್ಣನನ್ನು, ದದರ್ಶ - ಕಂಡನು. ॥ ೧೨೫ ೧೨೬ ॥ ಪುರುಷರ್ಷಭಃ - ಪುರುಷೋತ್ತಮನಾದ, ವಿಂಧ್ಯ....ಶಂ - ವಿಂಧ್ಯಪರ್ವತಕ್ಕೂ ಮಂದರಪರ್ವತಕ್ಕೂ ಸಮಾನನಾದ, ಕಾಂಚ....ಣಂ - ಭಂಗಾರದ ತೋಳುಬಂದಿಗಳೆಂಬ ಒಡವೆಗಳುಳ್ಳ, ವಕ್ತ್ರಾತ್ - ಮುಖದಿಂದ, ರುಧಿರಂ - ರಕ್ತವನ್ನು, ಸ್ರವಂತಂ - ಸುರಿಸುತ್ತಿರುವ, ಉತ್ಥಿತಂ-ಆಗತಾನೆ ಎದ್ದಿರುವ, ವರ್ಷಮೇಘಮಿವ - ವರ್ಷಾಕಾಲದ ಮೇಘದಂತಿರುವ, ಜಿಹ್ವಯಾ - ನಾಲಗೆಯಿಂದ, ಶೋಣಿತಂ - ರಕ್ತವನ್ನು, ಪರಿಲಹ್ಯಂತಂ - ನೆಕ್ಕುತ್ತಿರುವ, ಶೋಣಿತೇಕ್ಷಣಂ - ಕೆಂಗಣ್ಣು

ಮಹಾ ವೇಗವುಳ್ಳವನಾಗಿ, ದೃಢವಾದ ನಾರಿಯುಳ್ಳುದಾಗಿಯೂ, ಮಹಾ ಭಯಂಕರವಾದುದಾಗಿಯೂ, ಸ್ವರ್ಣಚಿತ್ರಿತವಾಗಿಯೂ, ಮಹಾ ಕಾಳಸರ್ಪಗಳಿಗೆ ಸಮಾನವಾಗಿಯೂ ಇರುವ ಧನುಸ್ಸನ್ನು ಗ್ರಹಿಸಿ ಮಹೋತ್ತಮವಾದ ಬಾಣಗಳನ್ನದರಲ್ಲಿ ಸಂಧಿಸಿ ಯುದ್ಧಾಭಿಮುಖನಾದನು. ಹೀಗೆ ಯುದ್ಧಾಭಿಮುಖನೂ, ವಾನರಪರಿವೃತನೂ, ಅಜೇಯನೂ, ಮಹಾಬಲನೂ ಆದ ಆ ರಘುಕುಲೋದ್ಭವನು ಲಕ್ಷ್ಮಣನೊಡನೆ ಮುಂದೆ ಬಂದು, ಮಹಾಕಾಯನಾಗಿ, ಕಿರೀಟಧಾರಿಯಾಗಿ, ಶತ್ರುಗಳನ್ನು ಪೀಡಿಸುತ್ತ, ರಕ್ತವ್ಯಾಪ್ತವಾದ ಶರೀರವುಳ್ಳವನಾಗಿ, ಕೋಪದಿಂದ ಕೆರಳಿ ವಾನರರಮೇಲೆ ಅಟ್ಟಿಬರುತ್ತಿರುವ ರಾಕ್ಷಸಪರಿವೃತನೂ, ವಿಂಧ್ಯಮಂದರಪರ್ವತಗಳಿಗೆ ಸಮಾನನಾದವನೂ ಭಂಗಾರದ ತೋಳ್ಬಂದಿಗಳಿಂದ ಅಲಂಕೃತನಾದವನೂ, ಮುಗಿಲಿನಂತೆ ರಕ್ತವನ್ನು ವಮನಮಾಡುತ್ತಿರುವವನೂ, ವಾನರ ರಕ್ತವನ್ನು ನಾಲಗೆಯಿಂದ ನೆಕ್ಕುತ್ತಿರುವವನೂ, ಕೋಪದಿಂದ ಕೆರಳಿದ

ನೀಕಂ ಕಾಲಾಂತಕಯಮೋಪಮಂ ॥ ೧೨೮ ॥ ತಂ ದೃಷ್ಟ್ವಾ ರಾಕ್ಷಸಶ್ರೇಷ್ಠಂ ಪ್ರದೀಪ್ತಾನಲವರ್ಚಸಂ । ವಿಸ್ಫಾರಯಾಮಾಸ ತದಾ ಕಾರ್ಮುಕಂ ಪುರುಷರ್ಷಭಃ ॥ ೧೨೯ ॥ ಸ ತಸ್ಯ ಚಾಪನಿರ್ಘೋಷಾತ್ಕುಪಿತೋ ರಾಕ್ಷಸರ್ಷಭಃ । ಅಮೃಷ್ಯ ಮಾಣಸ್ತಂ ಘೋಷಮಭಿದುದ್ರಾವ ರಾಘವಂ ॥೧೩೦॥ ತತಸ್ತು ವಾತೋದ್ಧತಮೇಘ ಕಲ್ಪಂ ಭುಜಂಗರಾಜೋತ್ತಮಭೋಗಬಾಹುಂ । ತಮಾಪತಂತಂ ಧರಣೀಧರಾಭ ಮುವಾಚ ರಾಮೋ ಯುಧಿ ಕುಂಭಕರ್ಣಂ ॥ ೧೩೧ ॥ " ಆಗಚ್ಛ ರಕ್ಷೋಧಿಪ ! ಮಾ ವಿಷಾದಮವಸ್ಥಿತೋಽಹಂ ಪ್ರಗೃಹೀತಚಾಪಃ । ಅವೇಹಿ ಮಾಂ ಶಕ್ರಸಪತ್ನ !

ಗಳುಳ್ಳ, ವಾನರಾನೀಕಂ - ಕಪಿಸೈನ್ಯವನ್ನು, ಮೃಥ್ನಂತಂ - ಮರ್ದಿಸುತ್ತಿರುವ, ಕಾಲಾಂ....ಮಂ - ಪ್ರಳಯಕಾಲದಲ್ಲಿ ಅಂತಕರನಾದ ಯಮನಿಗೆ ಸಮಾನನಾದ, ಪ್ರದೀ....ಸಂ-ಉರಿಯುತ್ತಿರುವ ಅಗ್ನಿಯ ತೇಜಸ್ಸಿನಂತೆ ತೇಜಸ್ಸುಳ್ಳ, ತಂ - ಆ, ರಾಕ್ಷಸಶ್ರೇಷ್ಠಂ - ರಾಕ್ಷಸೋತ್ತಮನಾದ ಕುಂಭಕರ್ಣನನ್ನು, ದೃಷ್ಟ್ವಾ - ಕಂಡು, ತದಾ - ಆ ಕಾಲದಲ್ಲಿ, ಕಾರ್ಮುಕಂ - ಧನುಸ್ಸನ್ನು, ವಿಸ್ಫಾರಯಾಮಾಸ - ಟಂಕಾರ ಮಾಡಿದನು. ॥೧೨೭-೧೨೯॥ ಸರಾಕ್ಷಸರ್ಷಭಃ - ರಾಕ್ಷಸಶ್ರೇಷ್ಠನು, ತಸ್ಯ - ಆ ಶ್ರೀರಾಮನ, ಚಾಪ....ತ್ - ಧನುಷ್ಟಂಕಾರದಿಂದ, ಕುಪಿತಃ - ಕೋಪಗೊಂಡು, ತಂಘೋಷಂ - ಆ ಟಂಕಾರ ಧ್ವನಿಯನ್ನು. ಅಮೃಷ್ಯಮಾಣಃ - ಸಹಿಸದೆ, ರಾಮಂ - ಶ್ರೀರಾಮನನ್ನು, ಅಭಿದುದ್ರಾವ - ಅಟ್ಟಿ ಕೊಂಡು ಬಂದನು. ॥ ೧೩೦ ॥ ತತಃ - ಬಳಿಕ, ರಾಮಸ್ತು - ಶ್ರೀರಾಮನಾದರೆ, ವಾತೋ....ಲ್ಪಂ - ವಾಯುವಿನಿಂದ ಅಟ್ಟಬರಲಾದ ಮೇಘಕ್ಕೆ ಸಮಾನನಾದ, ಭುಜಂ....ಹುಂ - ಆದಿಶೇಷನ ಉತ್ಕೃಷ್ಟ ವಾದ ಶರೀರದಂತಿರುವ ಭುಜಗಳುಳ್ಳ, ಯುಧಿ-ಕಾಳೆಗಕ್ಕಾಗಿ, ಆಪತಂತಂ-ಬರುತ್ತಿರುವ, ಧರ....ಭಂ- ಬೆಟ್ಟಕ್ಕೆ ಸಮಾನವಾಗಿ ಹೊಳೆಯುತ್ತಿರುವ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಉವಾಚ- ಹೇಳಿದನು. ॥೧೩೧॥ ಹೇ ರಕ್ಷೋಧಿಪ - ಎಲೈ ರಾಕ್ಷಸಾಧಿಪತಿಯೇ, ಆಗಚ್ಛ - ಬಾರಯ್ಯಾ, ಅಹಂ- ನಾನು, ವಿಷಾದಂ-ವ್ಯಸನವನ್ನು, ಮಾವಸ್ಥಿತಃ-ಹೊಂದಿರುವುದಿಲ್ಲವು, ಅಹಂ-ನಾನು, ಪ್ರಗೃ....ಪಃ- ಧರಿಸಲ್ಪಟ್ಟ ಧನುಸ್ಸುಳ್ಳವನಾಗಿ, ಅವಸ್ಥಿತಃ - ನಿಂತಿದ್ದೇನೆ, ಹೇ ಶಕ್ರಸಪತ್ನ - ಎಲೈ ಇಂದ್ರನಿಗೆ

ಕಂಗಳುಳ್ಳವನಾಗಿ ವಾನರಸೈನ್ಯವೆಲ್ಲವನ್ನೂ ಮರ್ದಿಸುತ್ತಿರುವವನೂ, ಯಮೋಪಮನೂ ಆದ ಕುಂಭಕರ್ಣನನ್ನು ನೋಡಿದನು. ॥ ೧೨೧–೧೨೮ ॥ ಹಾಗೆ ಪ್ರಜ್ವಲಿಸುತ್ತಿರುವ ಅಗ್ನಿ ಹೋತ್ರನಂತೆ ಪ್ರಕಾಶಿಸುತ್ತಿರುವವನೂ, ರಾಕ್ಷಸೋತ್ತಮನೂ ಆದ ಆ ಕುಂಭಕರ್ಣನನ್ನು ಕಂಡು ಪುರುಷೋತ್ತಮನಾದ ಶ್ರೀರಾಮನು ತನ್ನ ಧನುಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಟಂಕಾರಧ್ವನಿಯನ್ನು ಮಾಡಿದನು. ಆ ಟಂಕಾರಧ್ವನಿಯನ್ನು ಕೇಳಿದೊಡನೆಯೇ ರಾಕ್ಷಸಶ್ರೇಷ್ಠ ನಾದ ಆ ಕುಂಭಕರ್ಣನು ಕೋಪೋದ್ದೀಪಿತನೂ, ರೋಷಾವಿಷ್ಟನೂ ಆಗಿ ಶ್ರೀರಾಮನನ್ನು ಬಹು ವೇಗವಾಗಿ ಅಟ್ಟಿಬಂದನು. ಆ ಸಮಯದಲ್ಲಿ ವಾಯುವಿನಿಂದ ಹಾರಿಸಲಾದ ಮೇಘಕ್ಕೆ ಸಮಾನನಾಗಿಯೂ, ಆದಿಶೇಷೋಪಮವಾದ ಭುಜಗಳುಳ್ಳವನಾಗಿಯೂ, ಪರ್ವತಗಾತ್ರನಾ ಗಿಯೂ, ಯುದ್ಧಾಭಿಲಾಷಿಯಾಗಿಯೂ ತನಗೆದುರಾಗಿ ಬರುತ್ತಿರುವ ಆ ಕುಂಭಕರ್ಣನನ್ನು ನೋಡಿ ರಘುಕುಲೋದ್ಭವನಾದ ಶ್ರೀರಾಮಚಂದ್ರನು ನಗೆನಗುತ್ತ, "ಅಯ್ಯಾ ರಾಕ್ಷಸಾಧಿಪತಿ ಯೇ! ಬಾ, ಬಾ! ಇದು ಯುದ್ಧರಂಗ. ವ್ಯಸನಪಡಬೇಡ. ನಾನು ಧನುರ್ಧಾರಿಯಾಗಿ ನಿನ್ನೊ ಡನೆ ಯುದ್ಧಮಾಡುವುದಕ್ಕೆ ಸಿದ್ಧನಾಗಿಯೇ ಇದ್ದೇನೆ, ಎಲೈ ಮಹೇಂದ್ರಶತ್ರುವಾದ ಕುಂಭ

ರಾಮಂ ಮಯಾ ಮುಹೂರ್ತಾದ್ಭವಿತಾ ವಿಚೇತಾಃ" ‖ ೧೩೨ ‖ ರಾಮೋಽಯಮಿತಿ ವಿಜ್ಞಾಯ ಜಹಾಸ ವಿಕೃತಸ್ವನಂ। ಅಭ್ಯಧಾವತ ಸಂಕ್ರುದ್ಧೋ ಹರೀನ್ ವಿದ್ರಾವಯನ್ ರಣೇ ‖ ೧೩೩ ‖ ಪಾತಯನ್ನಿವ ಸರ್ವೇಷಾಂ ಹೃದಯಾನಿ ವನೌಕಸಾಂ । ಪ್ರಹಸ್ಯ ವಿಕೃತಂ ಭೀಮಂ ಸಮೇಘಸ್ತನಿತೋಪಮಂ ‖ ೧೩೪ ‖ ಕುಂಭಕರ್ಣೋ ಮಹಾತೇಜಾ ರಾಘವಂ ವಾಕ್ಯಮಬ್ರವೀತ್ । "ನಾಹಂ ವಿರಾಧೋ ವಿಜ್ಞೇಯೋ ನಕಬಂಧಃ ಖರೋ ನಚ । ನವಾಲೀ ನಚ ಮಾರೀಚಃ ಕುಂಭಕರ್ಣೋಽಹಮಾಗತಃ ‖೧೩೫‖

ಶತ್ರುವೇ, ಮಾಂ - ನನ್ನನ್ನು, ರಾಮಂ - ಶ್ರೀರಾಮನನ್ನಾಗಿ, ಅವೇಹಿ - ತಿಳಿದುಕೋ, ಮಯಾ - ನನ್ನಿಂದ, ಮುಹೂರ್ತಾತ್ - ಎರಡು ಘಳಿಗೆ ಕಾಲದಲ್ಲಿ, ವಿಚೇತಾಃ - ಪ್ರಾಣರಹಿತನು, ಭವಿತಾ - ಆಗುವೆ. ‖ ೧೩೨ ‖ ಅಯಂ - ಇವನೇ, ರಾಮಇತಿ - ಶ್ರೀರಾಮನೆಂದು, ವಿಜ್ಞಾಯ - ತಿಳಿದು, ವಿಕೃತಸ್ವನಂ - ವಿಕಾರವಾದ ಧ್ವನಿಯುಳ್ಳವನಾಗಿ, ಜಹಾಸ - ನಕ್ಕು, ಸಂಕ್ರುದ್ಧಃ - ಕೋಪಿಷ್ಠನಾಗಿ, ರಣೇ - ಕಾಳೆಗದಲ್ಲಿ, ಹರೀನ್ - ಕಪಿಗಳನ್ನು, ವಿದ್ರಾವಯನ್ - ಓಡಿಸುತ್ತ, ಸರ್ವೇಷಾಂ - ಸಮಸ್ತರಾದ, ವನೌಕಸಾಂ - ಕಪಿಗಳ, ಹೃದಯಾನಿ - ಎದೆಗಳನ್ನು, ಪಾಟಯನ್ನಿವ - ಭೇದಿಸುವನೋ ಎಂಬಂತೆ, ಅಭ್ಯಧಾವತ - ಓಡಿಬಂದನು. ‖ ೧೩೩ ‖ ಮಹಾತೇಜಾಃ - ಬಹಳ ತೇಜೋವಂತನಾದ, ಸಕುಂಭಕರ್ಣಃ - ಆ ಕುಂಭಕರ್ಣನು, ಪ್ರಹಸ್ಯ - ನಕ್ಕು, ವಿಕೃತಂ - ವಿಕಾರವಾಗಿ, ಭೀಮಂ - ಭಯಂಕರವಾಗಿ, ಮೇಘ......ಮಂ - ಮೇಘಗರ್ಜನೆಗೆ ಸಮಾನವಾದ, ವಾಕ್ಯಂ - ಮಾತನ್ನು, ರಾಘವಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ‖ ೧೩೪ ‖ ಅಹಂ - ನಾನು, ವಿರಾಧಃ - ವಿರಾಧನನ್ನಾಗಿ, ವಿಜ್ಞೇಯಃ - ತಿಳಿಯತಕ್ಕವನು, ನ - ಅಲ್ಲವು, ಕಬಂಧಃ - ಕಬಂಧನೂ, ನ - ಅಲ್ಲವು, ಖರಶ್ಚ - ಖರಾಸುರನೂ, ನ - ಅಲ್ಲವು, ವಾಲೀ - ವಾಲಿಯೂ, ನ - ಅಲ್ಲವು, ಮಾರೀಚಶ್ಚ - ಮಾರೀಚನೂ, ನ - ಅಲ್ಲವು, ಕಿಂತು - ಮತ್ತೇನೆಂದರೆ, ಅಹಂ - ನಾನು, ಕುಂಭಕರ್ಣಃ - ಕುಂಭಕರ್ಣನು, ಆಗತಃ - ಬಂದಿದ್ದೇನೆ. ‖ ೧೩೫ ‖ ಮೇ - ನನ್ನ, ಘೋರಂ - ಭಯಂಕರವಾದ,

ಕರ್ಣನೇ! ನಾನೇ ರಾಮನು. ಇನ್ನು ನೀನು ಒಂದು ಮುಹೂರ್ತಮಾತ್ರದಲ್ಲಿ ಪ್ರಾಣಗಳನ್ನು ತೊರೆಯುವೆ. ಬಾ, ಬಾ!" ಎಂದನು. ‖ ೧೨೯–೧೩೨ ‖ ಈ ಮಾತುಗಳನ್ನು ಕೇಳಿ ಕುಂಭಕರ್ಣನು ತನ್ನೊಡನೆ ಮಾತನಾಡುತ್ತಿರುವವನು ರಾಮನೆಂದೇ ತಿಳಿದು ಬಹಳ ಕಾಲ ಮಹಾ ಧ್ವನಿಯುಂಟಾಗುವಂತೆ ಪಕಪಕನೆ ನಕ್ಕನು. ಆ ಸಮಯದಲ್ಲಿ ಅವನು ಮಹಾ ಕ್ರೋಧೋದ್ದೀಪಿತನಾಗಿ ವಾನರರೆಲ್ಲರನ್ನೂ ಓಡಿಸಿ ಅವರೆಲ್ಲರಿಗೂ ಭಯವನ್ನುಂಟುಮಾಡುವಂತೆ ಭಯಂಕರ ಸಿಂಹನಾದಗಳನ್ನು ಮಾಡುತ್ತಲಿದ್ದನು. ಆ ರಾಕ್ಷಸನ ಆ ಧ್ವನಿಯಿಂದ ವಾನರರೆಲ್ಲರ ಹೃದಯಗಳೂ ಭೇದಿಸಿ ಹೋಗುತ್ತಿದ್ದುವು. ಇದೂ ಅಲ್ಲದೆ, ಅಧಿಕ ಪರಾಕ್ರಮಿಯಾದ ಆ ಕುಂಭಕರ್ಣನು ಮೊದಲಿಗಿಂತಲೂ ಅಧಿಕವಾಗಿ ಮುಗಿಲಿನಂತೆ ಗರ್ಜಿಸುತ್ತ ಸಮಸ್ತ ಭೂತಗಳೂ ಭಯಗೊಳ್ಳುವಂತೆ ನಗುತ್ತ ಶ್ರೀರಾಮನನ್ನು ಕುರಿತು, "ಎಲಾ ರಾಮ! ನಾನು ವಿರಾಧನಲ್ಲ; ಕಬಂಧನೂ ಅಲ್ಲ; ಖರಾಸುರನೂ ಅಲ್ಲ; ವಾಲಿಯು ಮೊದಲೇ ಅಲ್ಲ; ಮಾರೀಚನೂ ಅಲ್ಲ; ನಾನು ಯಾರೆಂದು ತಿಳಿದೆ? ನಾನೇ ಕುಂಭಕರ್ಣನು. ನಿನ್ನೊಡನೆ ಯುದ್ಧಮಾಡಬೇಕೆಂದೇ ಬಂದಿದ್ದೇನೆ. ರಾಮಾ! ಭಯಂಕರವೂ, ಸರ್ವಕಾಲಾಯು

ಪಶ್ಯ ಮೇ ಮುದ್ಗರಂ ಘೋರಂ ಸರ್ವಕಾಲಾಯಸಂ ಮಹತ್ । ಅನೇನ ನಿರ್ಜಿತಾ ದೇವಾ ದಾನವಾಶ್ಚ ಪುರಾ ಮಯಾ ॥ ೧೩೬ ॥ ವಿಕರ್ಣನಾಸ ಇತಿ ಮಾಂ ನಾವ ಜ್ಞಾತುಂ ತ್ವಮರ್ಹಸಿ । ಸ್ವಲ್ಪಾಪಿ ಹಿ ನಮೇ ಪೀಡಾ ಕರ್ಣನಾಸಾ ವಿನಾಶನಾತ್ ॥ ೧೩೭ ॥ ದರ್ಶಯೇಕ್ಷ್ವಾಕುಶಾರ್ದೂಲ! ವೀರ್ಯಂ ಗಾತ್ರೇಷು ಮೇ ಲಘು । ತತಸ್ತ್ವಾಂ ಭಕ್ಷಯಿಷ್ಯಾಮಿ ದೃಷ್ಟಪೌರುಷವಿಕ್ರಮಂ ॥ ೧೩೮ ॥ ಸಕುಂಭಕರ್ಣಸ್ಯ ವಚೋ ನಿಶಮ್ಯ ರಾಮಸ್ಸುಪುಂಖಾ ವಿಸಸರ್ಜ ಬಾಣಾ । ತೈರಾಹತೋ ವಜ್ರ ಸಮಗ್ರವೇಗೈರ್ನಚುಕ್ಷುಭೇ ನವ್ಯಥತೇ ಸುರಾರಿಃ ॥ ೧೩೯ ॥ ಯೈಸ್ಸಾಯಕೈಸ್ಸಾಲ

ಸರ್ವ....ಸಂ-ಸಮಸ್ತವೂ ಕಬ್ಬಿಣದಿಂದಲೇ ಮಾಡಿರುವ, ಮಹತ್-ದೊಡ್ಡದಾದ, ಮುದ್ಗರಂ-ಮುದ್ಗರಾಯುಧವನ್ನು, ಪಶ್ಯ - ನೋಡು, ಅನೇನ - ಈ ಮುದ್ಗರಾಯುಧದಿಂದ, ಪುರಾ - ಪೂರ್ವದಲ್ಲಿ, ಮಯಾ - ನನ್ನಿಂದ, ದೇವಾಃ - ದೇವತೆಗಳೂ, ದಾನವಾಶ್ಚ - ದಾನವರೂ, ನಿರ್ಜಿತಾಃ - ಜಯಿಸಲ್ಪಟ್ಟಿದ್ದಾರೆ. ॥ ೧೩೬ ॥ ತ್ವಂ - ನೀನು, ವಿಕ....ತಿ - ಕಿವಿಗಳೂ, ಮೂಗೂ ಇಲ್ಲದವನೆಂದು, ಅವಜ್ಞಾತುಂ - ತಿರಸ್ಕಾರ ಮಾಡುವುದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ, ಮೇ - ನನಗೆ, ಕರ್ಣ....ತ್ - ಕಿವಿ ಮೂಗುಗಳ ನಾಶದಿಂದ, ಸ್ವಲ್ಪಾಪಿ - ಕೊಂಚವಾದರೂ, ಪೀಡಾ - ವ್ಯಥೆಯು, ನಹಿ - ಇಲ್ಲವಷ್ಟೆ. ॥ ೧೩೭ ॥ ಹೇ ಇಕ್ಷ್ವಾ....ಲ - ಎಲೈ ಇಕ್ಷ್ವಾಕು ರಾಜನ ವಂಶಸ್ಥರಲ್ಲಿ ಉತ್ತಮನೇ, ಮೇ - ನನ್ನ, ಗಾತ್ರೇಷು - ಅವಯವಗಳಲ್ಲಿ, ಲಘು - ಶೀಘ್ರವಾಗಿ, ವೀರ್ಯಂ - ಸಾಮರ್ಥ್ಯವನ್ನು, ದರ್ಶಯ - ತೋರಿಸು, ತತಃ - ಬಳಿಕ, ದೃಷ್ಟ....ಮಂ - ಕಾಣಲ್ಪಟ್ಟ ಪೌರುಷವೂ, ಪರಾಕ್ರಮವೂ ಉಳ್ಳ, ತ್ವಾಂ - ನಿನ್ನನ್ನು, ಭಕ್ಷಯಿಷ್ಯಾಮಿ - ತಿನ್ನುವೆನು. ॥ ೧೩೮ ॥ ಸರಾಮಃ - ಆ ಶ್ರೀರಾಮನು, ಕುಂಭಕರ್ಣಸ್ಯ - ಕುಂಭಕರ್ಣನ, ವಚಃ - ಮಾತನ್ನು, ನಿಶಮ್ಯ - ಕೇಳಿ, ಸುಪುಂಖಾ - ಒಳ್ಳೇ ಗಟ್ಟಿಯಾದ ಕೊಂಕಿಗಳುಳ್ಳ, ಬಾಣಾ - ಬಾಣಗಳನ್ನು, ವಿಸಸರ್ಜ - ಬಿಟ್ಟನು, ವಜ್ರ....ಗೈಃ - ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳ, ತೈಃ - ಆ ಬಾಣಗಳಿಂದ, ಸುರಾರಿಃ - ದೇವಶತ್ರುವಾದ ಕುಂಭಕರ್ಣನು, ಆಹತಃ - ಹೊಡೆಯಲ್ಪಟ್ಟವನಾದರೂ, ನಚುಕ್ಷುಭೇ - ಕ್ಷೋಭೆ ಹೊಂದಲಿಲ್ಲ, ನವ್ಯಥತೇ - ವ್ಯಸನಗೊಂಡವನೂ ಆಗಲಿಲ್ಲ. ॥ ೧೩೯ ॥ ಯೈಸ್ಸಾಯಕೈಃ - ಯಾವ ಬಾಣಗಳಿಂದ, ಸಾಲವರಾಃ - ಉತ್ತಮವಾದ ಏಳು ಸಾಲವೃಕ್ಷಗಳು, ನಿಕೃತ್ತಾಃ-ಕತ್ತರಿಸಲ್ಪಟ್ಟವೋ, ವಾನರಪುಂಗ

ಸವೂ ಆದ ಈ ಮುದ್ಗರಾಯುಧವನ್ನು ನೋಡು. ಹಿಂದೆ ನಾನು ಈ ಆಯುಧದಿಂದಲೇ ದೇವತೆಗಳನ್ನೂ, ದಾನವರನ್ನೂ ಜಯಿಸಿದೆನು. ಈಗ ನಾನು ಕಿವಿಮೂಗುಗಳಿಲ್ಲದವನಾಗಿರುವೆನೆಂದು ಅಪಮಾನಗೊಳಿಸಬೇಡ. ಕಿವಿಮೂಗುಗಳಿಲ್ಲದಿರುವುದರಿಂದ ನನಗಾವ ವಿಧದಲ್ಲಿಯೂ ಕೊರತೆಯಿಲ್ಲವು. ಅಯ್ಯಾ! ನೀನು ಇಕ್ಷ್ವಾಕುವಂಶಜರಲ್ಲಿ ಶ್ರೇಷ್ಠನಾದವನಲ್ಲವೆ? ನನಗೀಗ ನಿನ್ನ ಪರಾಕ್ರಮವನ್ನು ತೋರಿಸು. ಮೊದಲು ನಿನ್ನ ಪರಾಕ್ರಮವನ್ನು ನೋಡಿ ಆ ತರುವಾಯ ನಿನ್ನನ್ನು ಭಕ್ಷಿಸುತ್ತೇನೆ" ಎಂದು ಹೇಳಿದನು. ॥೧೩೬–೧೩೮॥ ಆಗಲಾ ಶ್ರೀರಾಮಮೂರ್ತಿಯು ಕುಂಭಕರ್ಣನ ಮಾತುಗಳನ್ನು ಕೇಳಿ ಸಿಡಿಲಿಗೆ ಸಮಾನಗಳಾದ ಬಾಣಗಳನ್ನು ಅವನಮೇಲೆ ಪ್ರಯೋಗಿಸಿದನು. ಹಾಗೆ ವಜ್ರಾಯುಧೋಪಮಗಳಾದ ಬಾಣಗಳಿಂದ ಹೊಡೆದರೂ ಆ ಕುಂಭಕರ್ಣನು ಯಾವ ಬಾಧೆಯನ್ನೂ ಹೊಂದಲಿಲ್ಲವು. ಆಗ ಶ್ರೀರಾಮನು ಮತ್ತೂ ಕೋಪಗೊಂಡು ಹಿಂದೆ ಯಾವ

ವರಾ ನಿಕೃತ್ತಾ ವಾಲೀ ಹತೋ ವಾನರಪುಂಗವಶ್ಚ । ತೇ ಕುಂಭಕರ್ಣಸ್ಯ ತದಾ
ಶರೀರೇ ವಜ್ರೋಪಮಾ ನವ್ಯಥಯಾಂಪ್ರಚಕ್ರುಃ ॥೧೪೦॥ ಸವಾರಿಧಾರಾಇವ
ಸಾಯಕಾಂಸ್ತಾನ್ ಪಿಬನ್ ಶರೀರೇಣ ಮಹೇಂದ್ರಶತ್ರುಃ । ಜಘಾನ ರಾಮಸ್ಯ ಶರ
ಪ್ರವೇಗಂ ವ್ಯಾವಿಧ್ಯ ತಂ ಮುದ್ಗರಮುಗ್ರವೇಗಂ ॥೧೪೧॥ ತತಸ್ತು ರಕ್ಷಃಕ್ಷತಜಾನು
ಲಿಪ್ತಂ ವಿತ್ರಾಸನಂ ದೇವಮಹಾಚಮೂನಾಂ । ವಿವ್ಯಾಧ ತಂ ಮುದ್ಗರಮುಗ್ರವೇಗಂ
ವಿದ್ರಾವಯಾಮಾಸ ಚಮೂಂ ಹರೀಣಾಂ ॥೧೪೨॥ ವಾಯವ್ಯಮಾದಾಯ ತತೋ
ವರಾಸ್ತ್ರಂ ರಾಮಃ ಪ್ರಚಿಕ್ಷೇಪ ನಿಶಾಚರಾಯ । ಸಮುದ್ಗರಂ ತೇನ ಜಘಾನ ಬಾಹುಂ

ವಶ್ಚ - ವಾನರೋತ್ತಮನಾದ, ವಾಲೀ - ವಾಲಿಯು, ಹತಃ - ಹೊಡೆಯಲ್ಪಟ್ಟನೋ, ವಜ್ರೋಪಮಾಃ - ವಜ್ರಾಯುಧಕ್ಕೆ ಸಮಾನವಾದ, ತೇ - ಆ ಬಾಣಗಳು, ಕುಂಭಕರ್ಣಸ್ಯ - ಕುಂಭಕರ್ಣನ, ಶರೀರೇ - ಶರೀರದಲ್ಲಿ, ನವ್ಯಥಯಾಂಪ್ರಚಕ್ರುಃ - ವ್ಯಥೆಯನ್ನು ಮಾಡದೇಹೋದುವು. ॥ ೧೪೦ ॥ ಮಹೇಂದ್ರ ಶತ್ರುಃ - ದೇವೇಂದ್ರನಿಗೆ ಶತ್ರುವಾದ, ಸಃ - ಆ ಕುಂಭಕರ್ಣನು, ತಾನ್ಸಾಯಕಾನ್ - ಆ ಬಾಣ ಗಳನ್ನು, ವಾರಿಧಾರಾಇವ - ಉದಕಧಾರೆಗಳಂತೆ, ಶರೀರೇಣ - ದೇಹದಿಂದ, ಪಿಬನ್ - ಪಾನಮಾಡು ವವನಾಗಿ, ಉಗ್ರವೇಗಂ - ಭಯಂಕರವಾದ ವೇಗವುಳ್ಳ, ತಂಮುದ್ಗರಂ - ಆ ಮುದ್ಗರಾಯುಧವನ್ನು, ವ್ಯಾವಿಧ್ಯ - ತಿರುಗಿಸಿ, ರಾಮಸ್ಯ - ಶ್ರೀರಾಮನ, ಶರಪ್ರವೇಗಂ - ಬಾಣಗಳ ವೇಗವನ್ನು, ಜಘಾನ - ಹೊಡೆದನು. ॥ ೧೪೧ ॥ ತತಸ್ತು - ಬಳಿಕಾದರೆ, ರಕ್ಷಃ - ಕುಂಭಕರ್ಣನು, ಕ್ಷತ....ಪ್ತಂ - ರಕ್ತದಿಂದ ಲೇಪನ ಮಾಡಲ್ಪಟ್ಟ, ದೇವ....ನಾಂ - ದೇವತೆಗಳ ಮಹಾ ಸೈನ್ಯಗಳಿಗೆ, ವಿತ್ರಾಸನಂ - ಭಯವನ್ನುಂಟುಮಾಡುವ, ಉಗ್ರವೇಗಂ - ಭಯಂಕರವಾದ ವೇಗವುಳ್ಳ, ತಂಮುದ್ಗರಂ - ಆ ಮುದ್ಗ ರಾಯುಧವನ್ನು, ವಿವ್ಯಾಧ - ತಿರುಗಿಸಿದನು, ಹರೀಣಾಂ - ವಾನರರ, ಚಮೂಂ - ಸೇನೆಯನ್ನು, ವಿದ್ರಾವಯಾಮಾಸ - ಓಡಿಸಿದನು. ॥ ೧೪೨ ॥ ತತಃ - ಅನಂತರದಲ್ಲಿ, ರಾಮಃ - ಶ್ರೀರಾಮನು, ವಾಯವ್ಯಂ - ವಾಯುದೇವತಾಕವಾದ, ವರಾಸ್ತ್ರಂ - ಉತ್ತಮವಾದ ಅಸ್ತ್ರವನ್ನು, ಆದಾಯ - ತೆಗೆದು ಕೊಂಡು, ನಿಶಾಚರಾಯ - ರಾಕ್ಷಸನಿಗೋಸ್ಕರ, ಪ್ರಚಿಕ್ಷೇಪ - ಎಸೆದನು, ಸಮುದ್ಗರಂ - ಆ ಮುದ್ಗ ರಾಯುಧದಿಂದೊಡಗೂಡಿದ, ಬಾಹುಂ - ಭುಜವನ್ನು, ತೇನ - ಆ ಅಸ್ತ್ರದಿಂದ, ಜಘಾನ - ಹೊಡೆ ದನು, ಸಃ - ಆ ಕುಂಭಕರ್ಣನು, ನಿಕೃತ್ತಬಾಹುಃ - ಕತ್ತರಿಸಲ್ಪಟ್ಟ ಭುಜವುಳ್ಳವನಾಗಿ, ತುಮುಲಂ - ಘಟ್ಟಿಯಾಗಿ, ನನಾದ - ಕೂಗಿದನು. ॥ ೧೪೩ ॥ ಗಿರಿ....ಲ್ಪಃ - ಬೆಟ್ಟದ ಶಿಖರಕ್ಕೆ ಸಮಾನ

ಬಾಣಗಳಿಂದ ಸಂಹರಿಸಿದ್ದನೋ, ಆ ಬಾಣಗಳನ್ನು ಕುಂಭಕರ್ಣನ ಶರೀರದಲ್ಲಿ ಪ್ರಯೋಗಿ ಸಿದನು. ಆ ಬಾಣಗಳು ವಜ್ರಾಯುಧಕ್ಕೆ ಸಮಾನಗಳಾಗಿದ್ದವು. ಮಹೇಂದ್ರಶತ್ರು ವಾದ ಆ ಕುಂಭಕರ್ಣನು ಆ ಬಾಣವರ್ಷವನ್ನು ಸಹಿಸಿ ಭಯಂಕರ ವೇಗವುಳ್ಳವನಾಗಿ ತನ್ನ ಮುದ್ಗರಾಯುಧವನ್ನು ಗಿರಗಿರನೆ ತಿರುಗಿಸಿ ಶ್ರೀರಾಮನ ಬಾಣವೇಗವನ್ನು ನಾಶಗೊಳಿಸಿ ದನು. ಇದೂ ಅಲ್ಲದೆ ಆ ಸಮಯದಲ್ಲಿ ರಕ್ತದಿಂದ ವ್ಯಾಪ್ತವಾದ ಆ ಮುದ್ಗರಾಯುಧವನ್ನು ಗಿರಗಿರನೆ ತಿರುಗಿಸಿ ದೇವಸೇನೆಗೂ ಭಯವನ್ನುಂಟುಮಾಡುತ್ತ ಆ ಕುಂಭಕರ್ಣನು ಅನೇಕ ವಾನರರನ್ನು ಸಂಹರಿಸಿದನು. ಆಗ ಶ್ರೀರಾಮನು ಬಹಳವಾಗಿ ಕನಲಿ ಅಸ್ತ್ರಗಳಲ್ಲೆಲ್ಲಾ ಉತ್ತಮೋತ್ತಮವಾದ ವಾಯವ್ಯಾಸ್ತ್ರವನ್ನು ಅವನಮೇಲೆ ಪ್ರಯೋಗಿಸಲು ಅದು ಆ ರಾಕ್ಷ ಸನ ಮುದ್ಗರವನ್ನೂ ತೋಳನ್ನೂ ಸಂಹರಿಸಿತು. ॥ ೧೩೯–೧೪೩ ॥ ಆಗಲಾ ಕುಂಭಕರ್ಣನ

ನಿಕೃತ್ತಬಾಹುಸ್ತುಮುಲಂ ನನಾದ ‖ ೧೪೩ ‖ ಸತಸ್ಯ ಬಾಹುರ್ಗಿರಿಶೃಂಗಕಲ್ಪಸ್ಸಮುದ್ಗರೋ ರಾಘವಬಾಣಕೃತ್ತಃ । ಪಪಾತ ತಸ್ಮಿನ್ ಹರಿರಾಜಸೈನ್ಯೇ ಜಘಾನ ತಾಂ ವಾನರವಾಹಿನೀಂಚ ‖೧೪೪‖ ತೇ ವಾನರಾ ಭಗ್ನಹತಾವಶೇಷಾಃ ಪರ್ಯಂತಮಾಶ್ರಿತ್ಯ ತದಾ ವಿಷಣ್ಣಾಃ । ಪ್ರವೇಪಿತಾಂಗಂ ದದೃಶುಸ್ಸುಘೋರಂ ನರೇಂದ್ರರಕ್ಷೋಧಿಪ ಸನ್ನಿಪಾತಂ ‖ ೧೪೫ ‖ ಸಕುಂಭಕರ್ಣೋಽಸ್ತ್ರನಿಕೃತ್ತಬಾಹುರ್ಮಹಾನ್ನಿಕೃತ್ತಾಗ್ರ ಇವಾಚಲೇಂದ್ರಃ । ಉತ್ಪಾಟಯಾಮಾಸ ಕರೇಣ ವೃಕ್ಷಂ ತತೋಽಭಿದುದ್ರಾವ ರಣೇ ನರೇಂದ್ರಂ ‖ ೧೪೬ ‖ ಸತಸ್ಯ ಬಾಹುಂ ಸಹಸಾಲವೃಕ್ಷಂ ಸಮುದ್ಯತಂ ಪನ್ನಗಭೋಗ ಕಲ್ಪಂ । ಐಂದ್ರಾಸ್ತ್ರಯುಕ್ತೇನ ಜಘಾನ ರಾಮೋ ಬಾಣೇನ ಜಾಂಬೂನದಚಿತ್ರಿತೇನ

ವಾದ, ಸಮುದ್ಗರಃ - ಮುದ್ಗರಾಯುಧದಿಂದೊಡಗೂಡಿದ, ತಸ್ಯ - ಆ ಕುಂಭಕರ್ಣನ, ಸಬಾಹುಃ - ಆ ಭುಜವು, ರಾಘ.....ತ್ತಃ - ರಾಮಚಂದ್ರನ ಬಾಣದಿಂದ ಕತ್ತರಿಸಲ್ಪಟ್ಟುದಾಗಿ, ತಸ್ಮಿ....ನ್ಯೇ - ಆ ಕಪಿರಾಜನ ಸೈನ್ಯದಲ್ಲಿ, ಪಪಾತ - ಬಿದ್ದಿತು, ತಾಂ - ಆ, ವಾನ....ಚ - ಕಪಿಸೈನ್ಯವನ್ನೂ ಕೂಡ, ಜಘಾನ - ಹೊಡೆಯಿತು. ‖ ೧೪೪ ‖ ಭಗ್ನ....ಷಾಃ - ಸೋತವರಲ್ಲಿಯೂ ಹತರಾದವರಲ್ಲಿಯೂ ಉಳಿದ, ತೇವಾನರಾಃ - ಆ ವಾನರರು, ಪರ್ಯಂತಂ - ತೀರವನ್ನು, ಆಶ್ರಿತ್ಯ - ಹೊಂದಿ, ವಿಷಣ್ಣಾಃ - ಕುಳಿತು, ತದಾ - ಆ ಕಾಲದಲ್ಲಿ, ಸುಘೋರಂ - ಮಹಾ ಭಯಂಕರವಾದ, ನರೇಂ....ತಂ - ಆ ರಾಮಕುಂಭ ಕರ್ಣರ ದ್ವಂದ್ವಯುದ್ಧವನ್ನು, ಪ್ರವೇಪಿತಾಂಗಂ - ನಡುಗುತ್ತಿರುವ ಶರೀರವುಳ್ಳವನನ್ನಾಗಿ, ದದೃಶುಃ - ಕಂಡರು. ‖ ೧೪೫ ‖ ತತಃ - ಬಳಿಕ, ಸಕುಂಭಕರ್ಣಃ - ಆ ಕುಂಭಕರ್ಣನು, ಅಸ್ತ್ರ....ಹುಃ - ಅಸ್ತ್ರದಿಂದ ಕತ್ತರಿಸಲ್ಪಟ್ಟ ಭುಜವುಳ್ಳವನಾಗಿ, ನಿಕೃತ್ತಾಗ್ರಃ - ಕತ್ತರಿಸಲ್ಪಟ್ಟ ರೆಂಬೆಗಳುಳ್ಳ, ಮಹಾನ್ - ದೊಡ್ಡದಾದ, ಅಚಲೇಂದ್ರಇವ - ಬೆಟ್ಟದಂತೆ, ಕರೇಣ - ಒಂದು ಹಸ್ತದಿಂದ, ವೃಕ್ಷಂ - ಮರವನ್ನು, ಉತ್ಪಾಟಯಾಮಾಸ - ಕಿತ್ತನು, ನರೇಂದ್ರಂ - ಶ್ರೀರಾಮನನ್ನು ಕುರಿತು, ರಣೇ - ಕಾಳಿಗಕ್ಕೋಸ್ಕರ, ಅಭಿದುದ್ರಾವ - ಓಡಿಬಂದನು. ‖ ೧೪೬ ‖ ರಾಮಃ - ಶ್ರೀರಾಮನು, ಜಾಂಬೂ....ನ - ಚಿನ್ನದ ರೇಖೆಗಳಿಂದ ಚಿತ್ರವಾಗಿ ಮಾಡಲ್ಪಟ್ಟ, ಐಂದ್ರಾಸ್ತ್ರಯುಕ್ತೇನ - ಐಂದ್ರಾಸ್ತ್ರದಿಂದ ಕೂಡಿರುವ, ಬಾಣೇನ - ಬಾಣದಿಂದ, ಸಸಾಲವೃಕ್ಷಂ-ಸಾಲವೃಕ್ಷದಿಂದೊಡಗೂಡಿದ, ಸಮುದ್ಯತಂ-ಎತ್ತಲ್ಪಟ್ಟ, ಪನ್ನ....ಲ್ಪಂ- ಸರ್ಪದ ಶರೀರಕ್ಕೆ ಸಮಾನವಾದ, ತಸ್ಯ - ಆ ಕುಂಭಕರ್ಣನ, ಬಾಹುಂ - ಭುಜವನ್ನು, ಜಘಾನ -

---

ಒಂದು ತೋಳು ಆ ರಾಮನ ವಾಯವ್ಯಾಸ್ತ್ರದಿಂದ ಭೇದಿಸಿ ಹೋಗಿ ವಾನರಸೈನ್ಯದಲ್ಲಿ ಬಿದ್ದು ಅನೇಕ ವಾನರರನ್ನು ನಾಶಗೊಳಿಸಿತು. ಕೆಲವರು ವಾನರರ ಬಲವು ಕುಗ್ಗಿ ಆ ತೋಳಿನ ಕೆಳಗೆ ಸಿಕ್ಕಿಕೊಂಡರು. ಆಗ ಭಯಂಕರ ದ್ವಂದ್ವಯುದ್ಧವು ನಡೆಯಿತು. ರಾಮನ ವಾಯವ್ಯಾಸ್ತ್ರದಿಂದ ಭೇದಿಸಿಹೋದ ಭುಜವುಳ್ಳ ಆ ಕುಂಭಕರ್ಣನು ಭೇದಿಸಿಹೋದ ಶಿಖರವುಳ್ಳ ಪರ್ವತದಂತೆ ಶೋಭಿಸುತ್ತ ಮಹಾ ಕ್ರೋಧಾವಿಷ್ಟನಾಗಿ ಉಳಿದೊಂದು ಕೈಯಲ್ಲಿಯೇ ದೊಡ್ಡದೊಂದು ಮರವನ್ನು ಸೆಳಗಿಸಿಕೊಂಡು ಶ್ರೀರಾಮನಮೇಲೆ ಅಟ್ಟಿಬಂದನು. ಆಗ ಶ್ರೀರಾಮನು ಸುವರ್ಣಖಚಿತವಾಗಿ ಶೋಭಿಸುತ್ತಿದ್ದ ಐಂದ್ರಾಸ್ತ್ರದೊಡಗೂಡಿದ ಮಹಾ ಬಾಣದಿಂದ ಸಾಲವೃಕ್ಷದೊಡಗೂಡಿರುವುದೂ, ಮಹಾ ಕಾಳಸರ್ಪದ ಹೆಡೆಗೆ ಸಮಾನವಾಗಿರುವುದೂ, ಮಹಾ ಭಯಂಕರವಾಗಿರುವುದೂ ಆದ ಆ ಕುಂಭಕರ್ಣನ ಎರಡನೆಯ ತೋಳನ್ನು ಖಂಡಿಸಿದನು. ಹೀಗೆ ಶ್ರೀರಾಮನು ಪ್ರಯೋಗಿಸಿದ ಐಂದ್ರಾಸ್ತ್ರದಿಂದ ಭೇದಿಸಿದ ಆ ರಾಕ್ಷ

॥ ೧೪೭ ॥ ಸಕುಂಭಕರ್ಣಸ್ಯ ಭುಜೋ ನಿಕೃತ್ತಃ ಪಪಾತ ಭೂಮೌ ಗಿರಿಸನ್ನಿಕಾಶಃ । ವಿವೇಷ್ಟಮಾನೋಽಭಿಜಘಾನ ವೃಕ್ಷಾನ್ ಶೈಲಾಂಛಿಲಾ ವಾನರರಾಕ್ಷಸಾಂಶ್ಚ ॥೧೪೮॥ ತಂ ಛಿನ್ನಬಾಹುಂ ಸಮವೇಕ್ಷ್ಯ ರಾಮಸ್ಸಮಾಪತಂತಂ ಸಹಸಾ ನದಂತಂ । ದ್ವಾವರ್ಧಚಂದ್ರೌ ನಿಶಿತೌ ಪ್ರಗೃಹ್ಯ ಚಿಚ್ಛೇದಪಾದೌ ಯುಧಿ ರಾಕ್ಷಸಸ್ಯ ॥ ೧೪೯ ॥ ತೌ ತಸ್ಯ ಪಾದೌ ಪ್ರದಿಶೋ ದಿಶಶ್ಚ ಗಿರೀನ್ ಗುಹಾಶ್ಚೈವ ಮಹಾರ್ಣವಂಚ । ಲಂಕಾಂಚ ಸೇನಾಂ ಕಪಿರಾಕ್ಷಸಾನಾಂ ವಿನಾದಯಂತೌ ವಿನಿಪೇತುತುಶ್ಚ ॥ ೧೫೦ ॥ ನಿಕೃತ್ತ ಬಾಹುರ್ವಿನಿಕೃತ್ತಪಾದೋ ವಿದಾರ್ಯ ವಕ್ತ್ರಂ ಬಡಬಾಮುಖಾಭಂ । ದುದ್ರಾವ

ಹೊಡೆದನು. ॥ ೧೪೭ ॥ ಕುಂಭಕರ್ಣಸ್ಯ - ಕುಂಭಕರ್ಣನ, ಭುಜಃ - ಭುಜವು, ನಿಕೃತ್ತಃ - ಕತ್ತರಿಸಲ್ಪಟ್ಟುದಾಗಿ, ಗಿರಿಸನ್ನಿಕಾಶಃ - ಬೆಟ್ಟಕ್ಕೆ ಸಮಾನವಾಗಿ, ಭೂಮೌ - ನೇಲದಲ್ಲಿ, ಪಪಾತ - ಬಿದ್ದು ಹೋಯಿತು, ವಿವೇಷ್ಟಮಾನಃ - ಹೊರಳಾಡುತ್ತ, ವೃಕ್ಷಾನ್ - ಗಿಡಗಳನ್ನೂ, ಶೈಲಾಂಶ್ಚ - ಬೆಟ್ಟಗಳನ್ನೂ, ಶಿಲಾಶ್ಚ - ಬಂಡೆಗಳನ್ನೂ, ವಾನರರಾಕ್ಷಸಾಂಶ್ಚ - ಕಪಿಗಳನ್ನೂ, ರಾಕ್ಷಸರನ್ನೂ, ಜಘಾನ - ಹೊಡೆದನು. ॥ ೧೪೮ ॥ ರಾಮಃ - ಶ್ರೀರಾಮನು, ಛಿನ್ನಬಾಹುಂ - ಕತ್ತರಿಸಲ್ಪಟ್ಟ ಭುಜಗಳುಳ್ಳವನಾದರೂ, ಸಮಾಪತಂತಂ - ಬರುತ್ತಿರುವ, ನದಂತಂ - ಕೂಗುತ್ತಿರುವ, ತಂ - ಆ ಕುಂಭಕರ್ಣನನ್ನು, ಸಮವೇಕ್ಷ್ಯ - ಕಂಡು, ಸಹಸಾ - ಜಾಗ್ರತೆಯಾಗಿ, ನಿಶಿತೌ - ಹದವಾಗುಳ್ಳ, ದ್ವಾವರ್ಧಚಂದ್ರೌ - ಎರಡು ಅರ್ಧಚಂದ್ರಾಯುಧಗಳನ್ನು, ಪ್ರಗೃಹ್ಯ - ತೆಗೆದುಕೊಂಡು, ಯುಧಿ - ಕಾಳಗದಲ್ಲಿ, ರಾಕ್ಷಸಸ್ಯ - ಕುಂಭಕರ್ಣನ, ಪಾದೌ - ಕಾಲುಗಳನ್ನು, ಚಿಚ್ಛೇದ - ಕತ್ತರಿಸಿದನು. ॥೧೪೯॥ ತಸ್ಯ - ಆ ಕುಂಭಕರ್ಣನ, ತೌಪಾದೌ - ಆ ಕಾಲುಗಳು, ಪ್ರದಿಶಃ - ವಿದಿಕ್ಕುಗಳನ್ನೂ, ದಿಶಶ್ಚ - ದಿಕ್ಕುಗಳನ್ನೂ, ಗಿರೀನ್ - ಬೆಟ್ಟಗಳನ್ನೂ, ಗುಹಾಶ್ಚೈವ - ಗುಹೆಗಳನ್ನೂ, ಮಹಾರ್ಣವಂಚ - ದೊಡ್ಡ ಸಮುದ್ರವನ್ನೂ, ಲಂಕಾಂಚ-ಲಂಕಾಪಟ್ಟಣವನ್ನೂ, ಕಪಿರಾಕ್ಷಸಾನಾಂ - ಕಪಿಗಳ ಮತ್ತು ರಾಕ್ಷಸರ, ಸೇನಾಂಚ - ಸೈನ್ಯವನ್ನು, ವಿನಾದಯಂತೌ - ಧ್ವನಿಗೊಳಿಸುತ್ತಿರುವವುಗಳಾಗಿ, ನಿಪೇತತುಃ - ಬಿದ್ದವು. ॥ ೧೫೦ ॥ ನಿಕೃತ್ತಬಾಹುಃ - ಕತ್ತರಿಸಲ್ಪಟ್ಟ ಭುಜಗಳುಳ್ಳ, ನಿಕೃತ್ತಪಾದಃ - ಕತ್ತರಿಸಲ್ಪಟ್ಟ ಪಾದಗಳುಳ್ಳ ಕುಂಭಕರ್ಣನು, ಬಡ....ಭಂ - ಬಡಬಾಗ್ನಿಯ ಮುಖದಂತೆ ಹೊಳೆಯುತ್ತಿರುವ, ವಕ್ತ್ರಂ - ಮುಖವನ್ನು, ವಿದಾರ್ಯ - ತೆರೆದು, ಅಂತರಿಕ್ಷೇ - ಅಂತರಿಕ್ಷದಲ್ಲಿ, ರಾಹುರ್ಯಥಾ -

ಸನ ಎರಡನೆಯ ತೋಳೂ ಸಹ ಮಹಾ ಪರ್ವತದಂತೆ ಕೆಳಕ್ಕೆ ಬಿದ್ದಿತು. ಅದು ಕೆಳಕ್ಕೆ ಬೀಳುವಾಗ ಸಮೀಪದಲ್ಲಿದ್ದ ವಾನರರೆಲ್ಲರೂ, ರಾಕ್ಷಸರೂ, ವೃಕ್ಷಗಳೂ, ಪರ್ವತಗಳೂ ಕೂಡ ಕೆಳಕ್ಕೆ ಬಿದ್ದುಹೋದುವು. ॥೧೪೭–೧೪೮॥ ಆ ಸಮಯದಲ್ಲಿ ಶ್ರೀರಾಮನು ಭೇದಿಸಿದ ಬಾಹುಗಳುಳ್ಳವನಾದರೂ, ತನಗಭಿಮುಖನಾಗಿ ಯುದ್ಧಮಾಡಲು ಬರುತ್ತಿರುವ, ಸರ್ವ ಭೂತಭಯಂಕರನೂ, ಭಯಂಕರವಾಗಿ ಗರ್ಜಿಸುತ್ತಿರುವವನೂ ಆದ ಕುಂಭಕರ್ಣನನ್ನು ನೋಡಿ ಅರ್ಧಚಂದ್ರಾಕಾರಗಳಾದ ಎರಡು ಬಾಣಗಳನ್ನು ಪ್ರಯೋಗಿಸಿ ಆ ಕುಂಭಕರ್ಣನ ಎರಡು ಪಾದಗಳನ್ನೂ ತುಂಡರಿಸಿದನು. ಹೀಗೆ ಶ್ರೀರಾಮಬಾಣಗಳಿಂದ ಭೇದಿಸಲಾದ ಆ ರಾಕ್ಷಸನ ಪಾದಗಳು ದಿಕ್ಕುಗಳನ್ನೂ, ವಿದಿಕ್ಕುಗಳನ್ನೂ, ಪರ್ವತಗಳನ್ನೂ, ಗುಹೆಗಳನ್ನೂ, ಮಹಾ ಸಾಗರವನ್ನೂ, ಲಂಕಾನಗರವನ್ನೂ, ವಾನರರಾಕ್ಷಸರ ಸೈನ್ಯವನ್ನೂ ಪ್ರತಿಧ್ವನಿಗೊಳಿಸುತ್ತ ಕೆಳಕ್ಕೆ ಬಿದ್ದುವು. ಈ ರೀತಿ ಭೇದಿಸಿಹೋದ ಬಾಹುಗಳೂ, ಪಾದಗಳೂ ಉಳ್ಳ

ರಾಮಂ ಸಹಸಾಭಿಗರ್ಜ್ಯ ರಾಹುರ್ಯಥಾ ಚಂದ್ರಮಿವಾಂತರಿಕ್ಷೇ ||೧೫೧|| ಅಪೂರಯತ್ತಸ್ಯ ಮುಖಂ ಶಿತಾಗ್ರೈ ರಾಮಃ ಶರೈರ್ಹೇಮ ಪಿನದ್ಧಪುಂಖೈಃ । ಸಪೂರ್ಣವಕ್ತ್ರೋ ನಶಶಾಕ ವಕ್ತುಂ ಚುಕೂಜ ಕೃಚ್ಛ್ರೇಣ ಮುಮೋಹ ಚಾಪಿ || ೧೫೨ || ಅಥಾದದೇ ಸೂರ್ಯಮರೀಚಿಕಲ್ಪಂ ಸಬ್ರಹ್ಮದಂಡಾಂತಕಕಾಲಕಲ್ಪಂ । ಅರಿಷ್ಟಮೈಂದ್ರಂ ನಿಶಿತಂ ಸುಪುಂಖಂ ರಾಮಃ ಶರಂ ಮಾರುತತುಲ್ಯವೇಗಂ || ೧೫೩ || ತಂ ವಜ್ರಜಾಂಬೂನದಚಾರುಪುಂಖಂ ಪ್ರದೀಪ್ತಸೂರ್ಯಜ್ವಲನಪ್ರಕಾಶಂ । ಮಹೇಂದ್ರವಜ್ರಾಶನಿತುಲ್ಯವೇಗಂ ರಾಮಃ ಪ್ರಚಿಕ್ಷೇಪ ನಿಶಾಚರಾಯ ||೧೫೪|| ಸ ಸಾಯಕೋ

ರಾಹುಗ್ರಹದಂತೆ, ಚಂದ್ರಮಿವ - ಚಂದ್ರನಂತಿರುವ, ರಾಮಂ - ಶ್ರೀರಾಮನನ್ನು ಕುರಿತು, ಸಹಸಾ - ಜಾಗ್ರತೆಯಾಗಿ, ಅಭಿಗರ್ಜ್ಯ - ಗರ್ಜಿಸುತ್ತ, ದುದ್ರಾವ - ಓಡಿಬಂದನು. || ೧೫೧ || ರಾಮಃ - ಶ್ರೀರಾಮನು, ಶಿತಾಗ್ರೈಃ - ತೀಕ್ಷ್ಣವಾದ ತುದಿಗಳುಳ್ಳ, ಹೇಮ....ಖೈಃ - ಚಿನ್ನದ ಕೊಂಕಿಗಳುಳ್ಳ, ಶರೈಃ - ಬಾಣಗಳಿಂದ, ತಸ್ಯ - ಆ ಕುಂಭಕರ್ಣನ, ಮುಖಂ - ಮುಖವನ್ನು, ಅಪೂರಯತ್ - ತುಂಬಿಸಿದನು, ಸಃ - ಆ ಕುಂಭಕರ್ಣನು, ಪೂರ್ಣವಕ್ತ್ರಃ - ಬಾಣಗಳಿಂದ ತುಂಬಿಸಲ್ಪಟ್ಟ ಮುಖವುಳ್ಳವನಾಗಿ, ವಕ್ತುಂ - ಮಾತನಾಡಲು, ನಶಾಶಕ - ಸಮರ್ಥನಾಗದೇಹೋದನು, ಚುಕೂಜ - ಕೂಗಿದನು, ಕೃಚ್ಛ್ರೇಣ - ಕಷ್ಟದಿಂದ, ಮುಮೋಹಚಾಪಿ - ಮೋಹಾಕ್ರಾಂತನಾದನು. || ೧೫೨ || ಅಥ - ಅನಂತರದಲ್ಲಿ, ಸಃರಾಮಃ - ಆ ಶ್ರೀರಾಮನು, ಸೂರ್ಯ....ಲ್ಪಂ - ಸೂರ್ಯನ ಕಿರಣಗಳಿಗೆ ಸಮಾನವಾದ, ಬ್ರಹ್ಮ....ಲ್ಪಂ - ವಸಿಷ್ಠಋಷಿಯ ಬ್ರಹ್ಮದಂಡಕ್ಕೂ, ಮಾರು....ಗಂ - ವಾಯುವಿಗೆ ಸಮಾನವಾದ ವೇಗವುಳ್ಳ, ಸುಪುಂಖಂ - ಸೂಕ್ಷ್ಮವಾದ ಕೊಂಕಿಗಳುಳ್ಳ, ಅರಿಷ್ಟಂ - ಶತ್ರುಗಳಿಗೆ ಅಶುಭಕರವಾದ, ನಿಶಿತಂ - ಹದವಾದ, ಐಂದ್ರಂ - ಐಂದ್ರಾಸ್ತ್ರದಿಂದಭಿಮಂತ್ರಿತವಾದ, ಶರಂ - ಬಾಣವನ್ನು, ಆದದೇ - ತೆಗೆದುಕೊಂಡನು. || ೧೫೩ || ರಾಮಃ - ಶ್ರೀರಾಮನು, ವಜ್ರ....ಖಂ - ವಜ್ರಗಳಿಂದಲೂ, ಚಿನ್ನದಿಂದಲೂ ಮನೋಹರವಾದ ತುದಿಗಳುಳ್ಳ, ಪ್ರದೀ....ಶಂ - ಹೊಳೆಯುತ್ತಿರುವ, ಸೂರ್ಯನ ಮತ್ತು ಅಗ್ನಿಯ ಪ್ರಕಾಶದಂತೆ ಪ್ರಕಾಶವುಳ್ಳ, ಮಹೇಂ....ಗಂ - ದೇವೇಂದ್ರನ ವಜ್ರಾಯುಧಕ್ಕೂ ಸಿಡಿಲಿಗೂ ಸಮಾನವಾದ ವೇಗವುಳ್ಳ, ಶರಂ - ಬಾಣವನ್ನು, ನಿಶಾಚರಾಯ -

---

ಆ ಕುಂಭಕರ್ಣನು ಬಡಬಾಗ್ನಿ ಮುಖಕ್ಕೆ ಸಮಾನವಾದ ತನ್ನ ಬಾಯಿಯನ್ನು ತೆರೆದುಕೊಂಡು ಆಕಾಶದಲ್ಲಿ ಚಂದ್ರನನ್ನು ನುಂಗುವ ರಾಹುಗ್ರಹದಂತೆ ಶ್ರೀರಾಮನನ್ನು ನುಂಗಬಯಸಿ ಮಹಾ ವೇಗದಿಂದೈತರುತ್ತಿದ್ದನು. ಆಗ ಶ್ರೀರಾಮನು ಆಶ್ಚರ್ಯಚಕಿತನೂ, ಕ್ರೋಧಾವಿಷ್ಟನೂ ಆಗಿ ತೀಕ್ಷ್ಣಗಳಾದ ತುದಿಗಳುಳ್ಳವೂ, ಭಂಗಾರದಿಂದ ಮಾಡಿದ ಕೊಂಕಿಗಳುಳ್ಳವೂ ಆದ ಬಾಣಗಳಿಂದ ಆ ರಾಕ್ಷಸನ ಬಾಯಿಯನ್ನು ತುಂಬಿಸಿದನು. ಆಗಲಾ ರಾಕ್ಷಸನು ಯಾವ ಮಾತನ್ನೂ ಆಡಲಾರದವನಾಗಿ ಭಯಂಕರವಾಗಿ ಅರಚಿ ಕೆಳಗೆ ಬಿದ್ದು ಮೂರ್ಛೆಗೊಂಡನು. || ೧೪೯-೧೫೩ || ಆ ತರುವಾಯ ಶ್ರೀರಾಮನು ಸೂರ್ಯಕಾಂತಿಯುಳ್ಳುದೂ, ಬ್ರಹ್ಮದಂಡಕ್ಕೂ, ಪ್ರಳಯಕಾಲ ಯಮನಿಗೂ ಸಮಾನವಾದುದೂ, ಶತ್ರುಗಳಿಗೆ ಅಮಂಗಳಕರವಾದುದೂ, ವಾಯುವೇಗವುಳ್ಳುದೂ, ಮಹಾ ತೀಕ್ಷ್ಣವಾದುದೂ, ಶ್ರೇಷ್ಠವಾದ ಹಿಡಿಯುಳ್ಳ ಐಂದ್ರಾಸ್ತ್ರವನ್ನು ಗ್ರಹಿಸಿದನು. ಚಿನ್ನದಿಂದಲೂ, ಸುಂದರವಾದ ಹಿಡಿಯುಳ್ಳುದಾಗಿ ಹೊಳೆಯುತ್ತಿರುವುದೂ, ದೇವೇಂದ್ರನ ವಜ್ರಾಯುಧಕ್ಕೂ, ಸಿಡಿಲಿಗೂ ಸಮಾನವಾದುದೂ

ರಾಘವಬಾಹುಚೋದಿತೋ ದಿಶಸ್ಸ್ವಭಾಸಾ ದಶ ಸಂಪ್ರಕಾಶಯನ್ । ಸಧೂಮವೈಶ್ವಾನರದೀಪ್ತದರ್ಶನಃ ಜಗಾಮ ಶಕ್ರಾಶನಿವೀರ್ಯವಿಕ್ರಮಃ ॥ ೧೫೫ ॥ ಸತನ್ಮಹಾಪರ್ವತಕೂಟಸನ್ನಿಭಂ ವಿವೃತ್ತದಂಷ್ಟ್ರಂ ಚಲಚಾರುಕುಂಡಲಂ । ಚಕರ್ತ ರಕ್ಷೋಧಿಪತೇಃ ಶಿರಸ್ತಥಾ ಯಥೈವ ವೃತ್ರಸ್ಯ ಪುರಾ ಪುರಂದರಃ ॥ ೧೫೬ ॥ ಕುಂಭಕರ್ಣಶಿರೋ ಭಾತಿ ಕುಂಡಲಾಲಂಕೃತಂ ಮಹತ್ । ಆದಿತ್ಯೇಽಭ್ಯುದಿತೇ(ಽ)ರಾತ್ರೌ ಮಧ್ಯಸ್ಥ

ಕುಂಭಕರ್ಣನ ಮೇಲೆ, ಪ್ರಚಿಕ್ಷೇಪ - ಎಸೆದನು. ॥ ೧೫೪ ॥ ರಾಘ....ತಃ - ಶ್ರೀರಾಮನ ಭುಜದಿಂದ ಪ್ರೇರಿಸಲ್ಪಟ್ಟ, ಸಧೂ....ನಃ - ಹೊಗೆಯೊಡಗೂಡಿದ ಅಗ್ನಿಯಂತೆ ಹೊಳೆಯುತ್ತಿರುವ ನೋಟವುಳ್ಳ, ಸಸಾಯಕಃ - ಆ ಬಾಣವು, ಸ್ವಭಾಸಾ - ತನ್ನ ಕಾಂತಿಯಿಂದ, ದಶದಿಶಃ - ಹತ್ತು ದಿಕ್ಕುಗಳನ್ನೂ, ಸಂಪ್ರಕಾಶಯನ್ - ಪ್ರಕಾಶಿಸುವಂತೆ ಮಾಡುತ್ತಿರುವುದಾಗಿ, ಶಕ್ರಾ....ಮಃ - ವಜ್ರಾಯುಧದ ಮತ್ತು ಸಿಡಿಲಿನ ಸಾಮರ್ಥ್ಯವನ್ನೊಳಕೊಂಡು, ಜಗಾಮ - ತೆರಳಿತು. ॥೧೫೫॥ ಸಃ - ಆ ಬಾಣವು, ಮಹಾ....ಭಂ - ದೊಡ್ಡ ಬೆಟ್ಟದ ಶಿಖರಕ್ಕೆ ಸಮಾನನಾದ, ವಿವೃತ್ತದಂಷ್ಟ್ರಂ - ತೆರೆಯಲ್ಪಟ್ಟ ಕೋರೆಹಲ್ಲುಗಳುಳ್ಳ, ಚಲ....ಚಂ - ಚಲಿಸುತ್ತಿರುವ, ಮನೋಹರನಾದ ಕರ್ಣಾಭರಣಗಳುಳ್ಳ, ರಕ್ಷೋಧಿಪತೇಃ - ರಾಕ್ಷಸಾಧಿಪತಿಯಾದ ಕುಂಭಕರ್ಣನ, ತಚ್ಛಿರಃ - ಆ ಶಿರಸ್ಸನ್ನು, ಪುರಾ - ಪೂರ್ವದಲ್ಲಿ, ಯಥಾ - ಹೇಗೆ, ಪುರಂದರಃ - ದೇವೇಂದ್ರನು, ವೃತ್ರಸ್ಯ - ವೃತ್ರಾಸುರನ, ಶಿರಃ - ಶಿರಸ್ಸನ್ನು, ಚಕರ್ತ - ಕತ್ತರಿಸಿದನೋ, ತಥಾ - ಹಾಗೆಯೇ, ಚಕರ್ತ - ಕತ್ತರಿಸಿದನು. ॥ ೧೫೬ ॥ ಮಹತ್ - ದೊಡ್ಡದಾದ, ಕುಂಭಕರ್ಣಶಿರಃ - ಕುಂಭಕರ್ಣನ ಶಿರಸ್ಸು, ಕುಂಡ....ತಂ - ಕುಂಡಲಗಳಿಂದ ಸಾಕಾಗಿ ಮಾಡಲ್ಪಟ್ಟುದಾಗಿ, (ಅಂದರೆ - ಕುಂಡಲಗಳಿಲ್ಲದುದಾಗಿ,) ಅರಾತ್ರೌ - ಹಗಲಿನಲ್ಲಿ, ಆದಿತ್ಯೇ - ಸೂರ್ಯನು, ಅಭ್ಯುದಿತೇಸತಿ - ಉದಯವಾಗಲೂ, ಮಧ್ಯಸ್ಥ ಇವ - ಅಂತರಿಕ್ಷಮಧ್ಯಗತನಾದ, ಚಂದ್ರಮಾ ಇವ - ಚಂದ್ರನಂತೆ, ಭಾತಿ - ಹೊಳೆಯುತ್ತಿತ್ತು, (ಅಂದರೆ ಕಾಂತಿಹೀನವಾಗಿತ್ತು) (ಗೋ) ಕುಂಡ....ತಂ - ಕುಂಡಲಗಳಿಂದಲಂಕರಿಸಲ್ಪಟ್ಟ, ಮಹತ್ - ದೊಡ್ಡದಾದ, ಕುಂಭಕರ್ಣಶಿರಃ - ಕುಂಭಕರ್ಣನ ಶಿರಸ್ಸು, ಆದಿತ್ಯೇ - ಅದಿತಿದೇವತಾಕ ನಕ್ಷತ್ರಗಳು, (ಪುನರ್ವಸೂ) ಅಭ್ಯುದಿತೇಸತಿ - ಉದಯವಾಗಲು, ಮಧ್ಯಸ್ಥಃ - ಮಧ್ಯವರ್ತಿಯಾದ, ಚಂದ್ರಮಾ ಇವ - ಚಂದ್ರನಂತೆ, ಬಭೌ - ಹೊಳೆಯುತ್ತಿತ್ತು. ॥೧೫೭॥ ರಾಮ....ತಂ-

---

ಆದ ಆ ಐಂದ್ರಾಸ್ತ್ರವನ್ನು ಕುಂಭಕರ್ಣನ ಮೇಲೆಸೆದನು. ಹೀಗೆ ಶ್ರೀರಾಮನಿಂದ ಪ್ರಯುಕ್ತವಾದುದೂ, ಹೊಗೆಯೊಡಗೂಡಿದ ಅಗ್ನಿಜ್ವಾಲೆಯಂತೆ ಹೊಳೆಯುತ್ತಿರುವುದೂ, ತನ್ನ ಕಾಂತಿಯಿಂದ ಎಲ್ಲ ದಿಕ್ಕುಗಳನ್ನೂ ಬೆಳಗಿಸುತ್ತಿರುವುದೂ, ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದುದೂ ಆದ ಆ ಐಂದ್ರಾಸ್ತ್ರವು ಕುಂಭಕರ್ಣನಮೇಲೆ ಹೋಯಿತು. ಆ ಮಹಾಸ್ತ್ರವು ಮಹಾ ವೇಗದಿಂದೈತಂದು, ಪರ್ವತಶಿಖರೋಪಮವಾಗಿ, ತೆರೆದ ಬಾಯಿಯೊಡಗೂಡಿದ ಕೋರೆಹಲ್ಲುಗಳಿಂದ ಭಯಂಕರವಾಗಿ, ಸುಂದರವಾದ ಕರ್ಣಕುಂಡಲಗಳಿಂದ ಕೂಡಿರುವ ಆ ಕುಂಭಕರ್ಣನ ಶಿರಸ್ಸನ್ನು, ಪೂರ್ವದಲ್ಲಿ ದೇವೇಂದ್ರನು ವೃತ್ರಾಸುರನ ಶಿರಸ್ಸನ್ನೆಂತೂ ಅಂತು ಖಂಡಿಸಿತು. ಆಗ ಕುಂಡಲಾಲಂಕೃತವಾಗಿ ಬಹು ದೊಡ್ಡದಾಗಿದ್ದ ಆ ಕುಂಭಕರ್ಣನ ಶಿರಸ್ಸು ರಾತ್ರಿಯಲ್ಲಿ ಪುನರ್ವಸೂ ನಕ್ಷತ್ರ ಮಧ್ಯಗತನಾಗಿ ನಿಸ್ತೇಜಸ್ಕನಾದ ಚಂದ್ರನಂತೆ ವಿರಾಜಿಸುತ್ತಿದ್ದಿತು. ಹೀಗೆ ಆ ಕುಂಭಕರ್ಣನ ಶಿರಸ್ಸು ಶ್ರೀರಾಮ

ಇವ ಚಂದ್ರಮಾಃ ॥ ೧೫೭ ॥ ತದ್ರಾಮಬಾಣಾಭಿಹತಂ ಪಪಾತ ರಕ್ಷಃಶಿರಃ ಪರ್ವತ ಸನ್ನಿಕಾಶಂ । ಬಭಂಜ ಚರ್ಯಾಗೃಹಗೋಪುರಾಣಿ ಪ್ರಾಕಾರಮುಚ್ಚಂ ತಮಪಾತ ಯಚ್ಚ ॥ ೧೫೮ ॥ ನ್ಯಪತತ್ಕುಂಭಕರ್ಣೋಽಥ ಸ್ವಕಾಯೇನ ನಿಪಾತಯನ್ । ಪ್ಲವಂಗ ಮಾನಾಂ ಕೋಟ್ಯಶ್ಚ ಪರಿತಸ್ಸಂಪ್ರಧಾವತಾಂ ॥ ೧೫೯ ॥ ತಚ್ಚಾತಿಕಾಯಂ ಹಿಮವ ತ್ಪ್ರಕಾಶಂ ರಕ್ಷಸ್ತತಸ್ತೋಯನಿಧೌ ಪಪಾತ । ಗ್ರಾಹಾನ್ವರಾನ್ಮೀನವರಾನ್ಭುಜಂಗಾನ್ಮ ಮರ್ದ ಭೂಮಿಂಚ ತದಾ ವಿವೇಶ ॥ ೧೬೦ ॥ ತಸ್ಮಿನ್ ಹತೇ ಬ್ರಾಹ್ಮಣ ದೇವಶತ್ರೌ ಮಹಾಬಲೇ ಸಂಯತಿ ಕುಂಭಕರ್ಣೇ । ಚಚಾಲ ಭೂರ್ಭೂಮಿಧರಾಶ್ಚ ಸರ್ವೇ ಹರ್ಷಾಚ್ಚ ದೇವಾಸ್ತುಮುಲಂ ಪ್ರಣೇದುಃ ॥ ೧೬೧ ॥ ತತಸ್ತು ದೇವರ್ಷಿಮಹರ್ಷಿ

ಶ್ರೀರಾಮನ ಬಾಣದಿಂದ ಹೊಡೆಯಲ್ಪಟ್ಟ, ಪರ್ವ....ಶಂ - ಬೆಟ್ಟಕ್ಕೆ ಸಮಾನನಾದ, ತದ್ರಕ್ಷಶ್ಶಿರಃ - ಆ ಕುಂಭಕರ್ಣನ ಶಿರಸ್ಸು, ಚರ್ಯಾ......ಣಿ - ದೊಡ್ಡ ಮಾರ್ಗದಲ್ಲಿರುವ ಮನೆಗಳನ್ನೂ, ಗೋಪುರ ಗಳನ್ನೂ, ಉಚ್ಚಂ - ಉನ್ನತವಾದ, ತಂಪ್ರಾಕಾರಂ - ಆ ಕೋಟೆ ಗೋಡೆಯನ್ನೂ, ಬಭಂಜ - ಮುರಿಯಿತು, ಅಪಾತಯಚ್ಚ - ಕೆಳಕ್ಕೂ ಕೆಡಹಿತು. ॥ ೧೫೮ ॥ ಅಥ - ಬಳಿಕ, ಕುಂಭಕರ್ಣಃ - ಕುಂಭಕರ್ಣನು, ಸ್ವಕಾಯೇನ - ತನ್ನ ಶರೀರದಿಂದ, ಪರಿತಃ - ಸುತ್ತುಮುತ್ತಲೂ, ಸಂಪ್ರಧಾ ವತಾಂ - ಓಡಿಹೋಗುತ್ತಿರುವ, ಪ್ಲವಂಗಮಾನಾಂ - ಕಪಿಗಳ, ಕೋಟ್ಯಶ್ಚ - ಕೋಟಿಸಂಖ್ಯಾಕ ರನ್ನು, ನಿಪಾತಯನ್ - ಕೆಳಕ್ಕೆ ಕೆಡಹುತ್ತಿರುವದಾಗಿ, ನ್ಯಪತತ್ - ಬಿದ್ದನು. ॥೧೫೯॥ ತತಃ ಬಳಿಕ, ಅತಿಕಾಯಂ-ದೊಡ್ಡದಾದ ಶರೀರವುಳ್ಳ, ಹಿಮವತ್ಪ್ರಕಾಶಂ-ಹಿಮವತ್ಪರ್ವತದಂತೆ ಕಂಗೊಳಿಸುತ್ತಿರುವ, ತದ್ರಕ್ಷಃ - ಆ ರಕ್ಕಸನು, ತೋಯನಿಧೌ-ಸಮುದ್ರದಲ್ಲಿ, ಪಪಾತ-ಬಿದ್ದನು, ವರಾನ್-ಉತ್ತಮವಾದ, ಗ್ರಾಹಾನ್ - ನೆಗಳೆಗಳನ್ನು, ಮೀನವರಾನ್ - ದೊಡ್ಡ ಮೀನುಗಳನ್ನು, ಭುಜಂಗಾನ್ - ಸರ್ಪಗಳನ್ನೂ, ಮಮರ್ದ-ಮರ್ದಿಸಿದನು, ಭೂಮಿಂಚ-ನೆಲವನ್ನೂ, ತತ್-ಆ ರಾಕ್ಷಸನು, ಆವಿವೇಶ-ಹೊಕ್ಕನು.॥೧೬೦॥ ಬ್ರಾಹ್ಮ....ತ್ರೌ - ಬ್ರಾಹ್ಮಣರಿಗೂ ದೇವರ್ಕಳಿಗೂ ಶತ್ರುವಾದ, ಮಹಾಬಲೇ - ಬಹಳ ಬಲಶಾಲಿಯಾದ, ತಸ್ಮಿನ್ಕುಂಭಕರ್ಣೇ - ಆ ಕುಂಭಕರ್ಣನು, ಸಂಯತಿ - ಕಾಳಗದಲ್ಲಿ, ಹತೇಸತಿ - ಸಂಹೃತನಾಗಲು, ಭೂಃ - ಭೂಮಿಯು, ಚಚಾಲ - ನಡುಗಿತು, ಭೂಮಿಧರಾಶ್ಚ - ಬೆಟ್ಟಗಳೂ, ಚೇಲುಃ - ಚಲಿಸಿದವು, ಸರ್ವೇ - ಸಮಸ್ತರಾದ, ದೇವಾಶ್ಚ - ದೇವತೆಗಳೂ, ಹರ್ಷಾತ್ - ಸಂತೋಷದಿಂದ, ತುಮುಲಂ -

---

ಬಾಣಾಹತವಾಗಿ ಪರ್ವತವನ್ನು ಹೋಲುತ್ತ ಕೆಳಕ್ಕೆ ಬಿದ್ದಿತು. ಆ ಶಿರಸ್ಸು ಬಿದ್ದಾಗ ಅದರ ವೇಗದಿಂದ ಲಂಕಾನಗರದ ಉಪ್ಪರಿಗೆಗಳೂ ಪ್ರಾಕಾರಗಳೂ ಮುರಿದುಬಿದ್ದುವು. ॥ ೧೫೭–೧೫೮ ॥ ಹೀಗೆ ಆ ರಾಕ್ಷಸನ ಶಿರಸ್ಸು ಮುರಿದು ಹೋದಮೇಲೆ ಅವನ ಶರೀರವು ಕೆಳಕ್ಕೆ ಬೀಳುವಾಗ ವಾನರರೆಲ್ಲರೂ ಓಡಿಹೋಗುತ್ತಿದ್ದರೂ ಅದರ ವೇಗದಿಂದ ಕೆಳಕ್ಕೆ ಬಿದ್ದರು. ಹಾಗೆ ಮಿತಿಯಿಲ್ಲದ ಆಕಾರವುಳ್ಳವನೂ, ಹಿಮವತ್ಪರ್ವತಕ್ಕೆ ಸಮಾನನಾದ ವನೂ ಆದ ಆ ಕುಂಭಕರ್ಣನು ಮಹಾ ಸಾಗರದಲ್ಲಿ ಬಿದ್ದವನಾಗಿ ಅದರಲ್ಲಿಯ ಮೊಸಳೆ ಗಳನ್ನೂ, ಶ್ರೇಷ್ಠವಾದ ಮೀನುಗಳನ್ನೂ, ಮಹಾ ಸರ್ಪಗಳನ್ನೂ ಮರ್ದಿಸಿದನು. ಹೀಗೆ ಅಗಾಧವಾದ ಯುದ್ಧದಲ್ಲಿ ಬ್ರಾಹ್ಮಣರಿಗೂ, ದೇವತೆಗಳಿಗೂ ಶತ್ರುವಾದ ಕುಂಭ ಕರ್ಣನು ಮಡಿದು ಭೂಮಿಯಲ್ಲಿ ಬಿದ್ದಾಗ ಭೂಮಿಯೂ, ಪರ್ವತಗಳೂ ನಡುಗಿದುವು. ದೇವತೆಗಳೆಲ್ಲರೂ ಒಕ್ಕಡೆ ಸೇರಿ ಸಂತೋಷದಿಂದ ಮಾತನಾಡಿಕೊಳ್ಳುತ್ತಿದ್ದರು. ಇಷ್ಟೆ

ಪನ್ನಗಾಸ್ಸುರಾಶ್ಚ ಭೂತಾನಿ ಸುಪರ್ಣಗುಹ್ಯಕಾಃ । ಸಯಕ್ಷಗಂಧರ್ವಗಣಾ ನಭೋ
ಗತಾಃ ಪ್ರಹರ್ಷಿತಾ ರಾಮಪರಾಕ್ರಮೇಣ ॥ ೧೬೨ ॥ ತತಸ್ತು ತೇ ತಸ್ಯ ವಧೇನ
ಭೂರಿಣಾ ಮನಸ್ವಿನೋ ನೈರ್ಋತರಾಜಬಾಂಧವಾಃ । ವಿನೇದುರುಚ್ಚೈರ್ವ್ಯಥಿತಾ
ರಘೂತ್ತಮಂ ಹರಿಂ ಸಮೀಕ್ಷ್ಯೈವ ಯಥಾ ಸುರಾರ್ದಿತಾಃ ॥ ೧೬೩ ॥ ಸದೇವಲೋ
ಕಸ್ಯ ತಮೋ ನಿಹತ್ಯ ಸೂರ್ಯೋ ಯಥಾ ರಾಹುಮುಖಾದ್ವಿಮುಕ್ತಃ । ತಥಾ
ವ್ಯಭಾಸೀದ್ಭುವಿ ವಾನರೌಘೇ ನಿಹತ್ಯ ರಾಮೋ ಯುಧಿ ಕುಂಭಕರ್ಣಂ ॥೧೬೪॥ ಪ್ರಹ
ರ್ಷಮೀಯುರ್ಬಹವಸ್ತು ವಾನರಾಃ ಪ್ರಬುದ್ಧಪದ್ಮಪ್ರತಿಮೈರಿವಾನನೈಃ । ಅಪೂ
ಜಯನ್ ರಾಘವಮಿಷ್ಟಭಾಗಿನಂ ಹತೇ ರಿಪೌ ಭೀಮಬಲೇ ದುರಾಸದೇ ॥ ೧೬೫ ॥

ಗಟ್ಟಿಯಾಗಿ, ಪ್ರಣೇದುಃ - ಕೋಲಾಹಲಧ್ವನಿ ಮಾಡಿದರು. ॥ ೧೬೧ ॥ ತತಸ್ತು - ಆ ಬಳಿಕಲಾದರೆ, ದೇವ....ಗಾಃ-ದೇವರ್ಷಿಗಳೂ, ಬ್ರಹ್ಮರ್ಷಿಗಳೂ, ಪನ್ನಗರೂ, ಭೂತಾನಿ-ಭೂತಗಳೂ, ಸುಪ....ಕಾಃ - ಗರುಡನೂ, ಗುಹ್ಯಕರೂ, ಸಯ....ಣಾಃ - ಯಕ್ಷಗಂಧರ್ವರ ಗುಂಪುಗಳಿಂದೊಡಗೂಡಿದ, ಸುರಾಶ್ಚ - ದೇವತೆಗಳೂ, ನಭೋಗತಾಃ-ಅಂತರಿಕ್ಷವನ್ನು ಹೊಂದಿ, ರಾಮ....ಣ-ಶ್ರೀರಾಮನ ಪರಾಕ್ರಮದಿಂದ, ಪ್ರಹರ್ಷಿತಾಃ - ಹರ್ಷವುಳ್ಳವರಾದರು. ॥ ೧೬೨ ॥ ತತಸ್ತು - ಆ ಬಳಿಕಾದರೆ, ಮನಸ್ವಿನಃ - ಕಾಳಗದಲ್ಲೇ ಮನವುಳ್ಳ, ತಸ್ಯ - ಆ ಕುಂಭಕರ್ಣನ, ಭೂರಿಣಾ - ಬಹಳವಾದ, ವಧೇನ - ಸಂಹಾರದಿಂದ, ನೈರ್ಋ.....ವಾಃ - ರಾವಣನ ಬಂಧು ಜನರೆಲ್ಲರೂ, ವ್ಯಥಿತಾಃ - ವ್ಯಸನಗೊಂಡು, ರಘೂತ್ತಮಂ - ಶ್ರೀರಾಮನನ್ನು, ಸುರಾರ್ದಿತಾಃ - ದೇವತೆಗಳಿಂದ ಹೊಡೆಯಲ್ಪಟ್ಟ ರಕ್ಕಸರು, ಹರಿಂಯಥಾ - ಶ್ರೀ ಮಹಾ ವಿಷ್ಣುವನ್ನಂತೆ, (ದೇವೇಂದ್ರನಂತೆ) ಸಮೀಕ್ಷ್ಯೈವ-ನೋಡುತ್ತಲೇ, ಉಚ್ಚೈಃ-ಗಟ್ಟಿಯಾಗಿ, ವಿನೇದುಃ-ಕೂಗಿಕೊಂಡರು. ॥೧೬೩॥ ಸರಾಮಃ - ಆ ಶ್ರೀರಾಮನು, ರಾಹುಮುಖಾತ್-ರಾಹುಗ್ರಹದ ಮುಖದಿಂದ, ವಿಮುಕ್ತಃ-ಬಿಡಲ್ಪಟ್ಟ, ಸೂರ್ಯಃ-ಸೂರ್ಯನು, ದೇವಲೋಕಸ್ಯ-ದೇವಲೋಕದ, ತಮಃ - ಗಾಢಾಂಧಕಾರವನ್ನು, ನಿಹತ್ಯ - ಹೋಗಲಾಡಿಸಿ, ಯಥಾ - ಹೇಗೆ, ಭಾತಿ - ಪ್ರಕಾಶಿಸುತ್ತಾನೋ, ತಥಾ - ಹಾಗೆಯೇ, ಯುಧಿ - ಕಾಳೆಗದಲ್ಲಿ, ಕುಂಭಕರ್ಣಂ - ಕುಂಭಕರ್ಣನನ್ನು, ನಿಹತ್ಯ - ಹೊಡೆದು, ಭುವಿ - ಭೂಮಂಡಲದಲ್ಲಿ, ವಾನರೌಘೇ - ಕಪಿಗಳ ಗುಂಪುಗಳಲ್ಲಿ, ವ್ಯಭಾಸೀತ್ - ಹೊಳೆಯುತ್ತಿದ್ದನು. ॥ ೧೬೪ ॥ ಬಹವಃ - ಅನೇಕರಾದ, ವಾನರಾಸ್ತು - ಕಪಿಗಳಾದರೋ, ದುರಾಸದೇ - ಹೊಂದಲಸಾಧ್ಯವಾದ, ಭೀಮಬಲೇ - ಭಯಂಕರ ತ್ರಾಣವುಳ್ಳ, ರಿಪೌ - ಶತ್ರುವಾದ ಕುಂಭಕರ್ಣನು, ಹತೇ - ಸಂಹೃತನಾಗಲು, ಪ್ರಬು....ವ - ಅರಳಿದ ಕಮಲಗಳಿಗೆ ಸಮಾನ

ಯಲ್ಲದೆ ಶ್ರೀರಾಮನ ಪರಾಕ್ರಮದಿಂದ ಹರ್ಷಿತರಾದ ಯಕ್ಷಗಂಧರ್ವರೂ, ದೇವತೆಗಳೂ, ಋಷಿಗಳೂ, ಪನ್ನಗರೂ, ಸುಪರ್ಣಗುಹ್ಯಕರೂ ಎಲ್ಲರೂ ಗಗನಾಂಗಣದಲ್ಲಿದ್ದವರಾಗಿಯೇ ಅಮಂದಾನಂದವನ್ನು ಪಡೆದರು. ॥ ೧೫೯—೧೬೨ ॥ ಇತ್ತ ರಾಕ್ಷಸರೆಲ್ಲರೂ ದೇವತೆಗಳಿಂದ ಪೀಡಿತರಾದ ದಾನವರು ದೇವೇಂದ್ರನನ್ನು ನೋಡಿ ಹೇಗೋ ಹಾಗೆ ಶ್ರೀರಾಮನನ್ನು ನೋಡಿ ಭಯದಿಂದ ತತ್ತಳಿಸಿ ಹೋದರು. ಅವರು ತಮ್ಮ ನಾಯಕನಾದ ಕುಂಭಕರ್ಣನ ವಧೆಯಿಂದ ದುಃಖಿತರಾಗಿ ಪ್ರಲಪಿಸಿದರು. ಶ್ರೀರಾಮನಾದರೋ ಆ ಸಮಯದಲ್ಲಿ ರಾಹುಮುಕ್ತನಾದ ಸೂರ್ಯನಂತೆ ವಿರಾಜಿಸುತ್ತಿದ್ದನು. ಅದರಿಂದ ವಾನರರೆಲ್ಲರೂ ನಿರ್ಭೀಕರಾಗಿ ಹಸನ್ಮುಖಿಗಳಾದರು. ಅವರ ಮುಖಗಳು ಅರಳಿದ ತಾವರೆಗಳಂತೆ ಸಂತೋಷವನ್ನು

ಸಕುಂಭಕರ್ಣಂ ಸುರಸಂಘಮರ್ದನಂ
ಮಹತ್ಸು ಯುದ್ಧೇಷು ಪರಾಜಿತಶ್ರಮಂ ।
ನನಂದ ಹತ್ವಾ ಭರತಾಗ್ರಜೋ ರಣೇ
ಮಹಾಸುರಂ ವೃತ್ರಮಿವಾಽಮರಾಧಿಪಃ ॥ ೧೬೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಷಷ್ಟಿತಮಸ್ಸರ್ಗಃ

ಗಳಂತಿರುವ, ಆನನೈಃ - ಮುಖಗಳಿಂದ, ಇಷ್ಟಭಾಗಿನಂ - ಹಿತವಾದ ಕಾರ್ಯ ಮಾಡಿರುವ, ರಾಘವಂ - ಶ್ರೀರಾಮನನ್ನು, ಅಪೂಜಯನ್ - ಶ್ಲಾಘಿಸಿದರು, ಪ್ರಹರ್ಷಂ - ಸಂತೋಷವನ್ನೂ, ಈಯುಃ - ಹೊಂದಿದರು. ॥ ೧೬೬ ॥ ಸಭರತಾಗ್ರಜಃ - ಆ ಶ್ರೀರಾಮನು, ಮಹತ್ಸು - ಬಹಳವಾದ, ಯುದ್ಧೇಷು - ಕಾಳೆಗದಲ್ಲಿ, ಸುರ....ನಂ - ದೇವತೆಗಳ ಗುಂಪುಗಳನ್ನು ಮರ್ದಿಸುತ್ತಿರುವ, ಪರಾಜಿತ ಶ್ರಮಂ - ವಿಫಲ ಪ್ರಯತ್ನವುಳ್ಳ, ಕುಂಭಕರ್ಣಂ - ಕುಂಭಕರ್ಣನನ್ನು, ರಣೇ - ಕಾಳೆಗದಲ್ಲಿ, ಹತ್ವಾ - ಹೊಡೆದು, ವೃತ್ರಂ - ವೃತ್ರನೆಂಬ, ಮಹಾಸುರಂ - ದೊಡ್ಡ ರಾಕ್ಷಸನನ್ನು, ಹತ್ವಾ - ಹೊಡೆದು, ಅಮರಾಧಿಪಇವ - ದೇವೇಂದ್ರನಂತೆ, ನನಂದ - ಸಂತೋಷಿಸಿದನು. ॥ ೧೬೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಷಷ್ಟಿತಮಸ್ಸರ್ಗಃ.

ಪ್ರಕಟಿಸುತ್ತಿದ್ದುವು. ಶತ್ರುಗಳಿಂದ ಅಜೇಯನಾದವನೂ, ಭಯಂಕರ ಪರಾಕ್ರಮಶಾಲಿ ಯಾದವನೂ, ಕುಂಭಕರ್ಣಸಂಹಾರಕನೂ ಆದ ಶ್ರೀರಾಮಮೂರ್ತಿಯನ್ನು ಆ ವಾನರ ರೆಲ್ಲರೂ ಬಗೆಬಗೆಯಿಂದ ಪೂಜಿಸಿದರು. ಭರತಾಗ್ರಜನಾದ ಶ್ರೀರಾಮನು ದೇವೇಂದ್ರನು ವೃತ್ರಾಸುರನನ್ನು ಹೇಗೋ ಹಾಗೆ ಮಹಾ ಯುದ್ಧದಲ್ಲಿ ದೇವತೆಗಳನ್ನು ಮರ್ದಿಸುವವನೂ, ಅದುವರೆಗೂ ಯಾರಿಂದಲೂ ಅಜೇಯನಾಗಿದ್ದವನೂ ಆದ ಆ ಕುಂಭಕರ್ಣನನ್ನು ಸಂಹರಿಸಿ ಪರಮಾನಂದಭರಿತನಾದನು. ॥ ೧೬೩–೧೬೭ ॥

ಇಂತಿದು ಕುಂಭಕರ್ಣ ಸಂಹಾರವೆಂಬ ಅರುವತ್ತೇಳನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟಷಷ್ಠಿತಮಸ್ಸರ್ಗಃ

ಕುಂಭಕರ್ಣಂ ಹತಂ ದೃಷ್ಟ್ವಾ ರಾಘವೇಣ ಮಹಾತ್ಮನಾ । ರಾಕ್ಷಸಾ ರಾಕ್ಷಸೇಂದ್ರಾಯ ರಾವಣಾಯ ನ್ಯವೇದಯನ್ ॥ ೧ ॥ "ರಾಜನ್! ಸಕಾಲಸಂಕಾಶಸ್ಸಂಯುಕ್ತಃ ಕಾಲಕರ್ಮಣಾ । ವಿದ್ರಾವ್ಯ ವಾನರೀಂ ಸೇನಾಂ ಭಕ್ಷಯಿತ್ವಾಚ ವಾನರಾನ್ ॥ ೨ ॥ ಪ್ರತಪಿತ್ವಾ ಮುಹೂರ್ತಂಚ ಪ್ರಶಾಂತೋ ರಾಮತೇಜಸಾ । ಕಾಯೇನಾರ್ಧಪ್ರವಿಷ್ಟೇನ ಸಮುದ್ರಂ ಭೀಮದರ್ಶನಂ ॥ ೩ ॥ ನಿಕೃತ್ತಕಂಠೋರುಭುಜೋ ವಿಕ್ಷರನ್ ರುಧಿರಂ ಬಹು । ರುಧ್ವಾ ದ್ವಾರಂ ಶರೀರೇಣ ಲಂಕಾಯಾಃ ಪರ್ವತೋಪಮಃ ॥ ೪ ॥

ಮಹಾತ್ಮನಾ - ಮಹಾತ್ಮನಾದ, ರಾಘವೇಣ - ಶ್ರೀರಾಮನಿಂದ, ಕುಂಭಕರ್ಣಂ - ಕುಂಭಕರ್ಣನನ್ನು, ಹತಂ - ಸಂಹರಿಸಲ್ಪಟ್ಟವನನ್ನಾಗಿ, ದೃಷ್ಟ್ವಾ - ಕಂಡು, ರಾಕ್ಷಸಾಃ - ರಕ್ಕಸರು, ರಾಕ್ಷಸೇಂದ್ರಾಯ - ರಕ್ಕಸರೊಡೆಯನಾದ, ರಾವಣಾಯ - ರಾವಣನಿಗೆ, ನ್ಯವೇದಯನ್ - ತಿಳಿಸಿದರು. ॥ ೧ ॥ ಹೇ ರಾಜನ್ - ಎಲೈ ಆರಸೇ, ಕಾಲಸಂಕಾಶಃ - ಯಮನಿಗೆ ಸಮಾನನಾದ, ಸಃ - ಆ ಕುಂಭಕರ್ಣನು, ವಾನರೀಂ - ವಾನರಸಂಬಂಧವಾದ, ಸೇನಾಂ - ಸೈನ್ಯವನ್ನು, ವಿದ್ರಾವ್ಯ - ಓಡಿಸಿ, ವಾನರಾನ್ - ಕಪಿಗಳನ್ನು, ಭಕ್ಷಯಿತ್ವಾಚ - ತಿಂದು, ಕಾಲಕರ್ಮಣಾ - ಕಾಲಕ್ಕೆ ಪ್ರವಾದ ಕರ್ಮದಿಂದ, ಸಂಯುಕ್ತಃ - ಸೇರಿಸಲ್ಪಟ್ಟನು. ॥ ೨ ॥ ಮುಹೂರ್ತಂ - ಎರಡು ಘಳಿಗೆ ಕಾಲ, ಪ್ರತಪಿತ್ವಾ - ವಾನರಸೈನ್ಯವನ್ನು ಉರಿಸಿ, ರಾಮತೇಜಸಾ - ಶ್ರೀರಾಮನ ತೇಜಸ್ಸಿನಿಂದ, ಪ್ರಶಾಂತಃ - ತಣ್ಣಗಾದನು, ಭೀಮದರ್ಶನಂ - ಭಯಂಕರವಾದ ನೋಟವುಳ್ಳ, ಸಮುದ್ರಂ - ಕಡಲನ್ನು, ಅರ್ಧಪ್ರವಿಷ್ಟೇನ - ಅರ್ಧವಾಗಿ ಪ್ರವೇಶಿಸಿರುವ, ಕಾಯೇನ - ಶರೀರದಿಂದಲೂ, ನಿಕೃ....ಜಃ - ಕತ್ತರಿಸಲ್ಪಟ್ಟ ಕಂಠವೂ, ತೊಡೆಗಳೂ, ಭುಜಗಳೂ ಉಳ್ಳವನಾಗಿ, ಬಹು - ಬಹಳವಾದ, ರುಧಿರಂ - ರಕ್ತವನ್ನು, ವಿಕ್ಷರನ್ - ಸುರಿಸುತ್ತ, ಪರ್ವತೋಪಮಃ - ಬೆಟ್ಟಕ್ಕೆ ಸಮಾನನಾದ, ತವ - ನಿನಗೆ, ಭ್ರಾತಾ - ತಮ್ಮನಾದ, ಕುಂಭಕರ್ಣಃ - ಕುಂಭಕರ್ಣನು, ಕಾಕು....ತಃ - ಶ್ರೀರಾಮ ಬಾಣಪೀಡಿತನಾಗಿ, ಲಗಂಡ

ಆ ತರುವಾಯ ರಣಭೂಮಿಯಲ್ಲಿ ಕುಂಭಕರ್ಣನು ರಾಮನಿಂದ ಮೃತಿಯೊಂದಲು ಅಲ್ಲಿದ್ದ ರಾಕ್ಷಸರೆಲ್ಲರೂ ಆ ವೃತ್ತಾಂತವನ್ನು ತಮ್ಮ ಒಡೆಯನಾದ ರಾವಣಾಸುರನಿಗೆ ತಿಳಿಸಿ, "ಎಲೈ ಮಹಾರಾಜನೇ! ಯಮನಿಗೆ ಸಮಾನನಾದ ಕುಂಭಕರ್ಣನು ರಣರಂಗಕ್ಕೆ ನುಗ್ಗಿ ಹೊರಟು ಮೊದಮೊದಲು ವಾನರಸೈನ್ಯವೆಲ್ಲವನ್ನೂ ಹೊಡೆದೋಡಿಸಿದನು. ಅನೇಕ ವಾನರರನ್ನು ಭಕ್ಷಿಸಿದನು. ಹಾಗೆ ಕೆಲ ಕಾಲಶತ್ರುಗಳನ್ನು ಧ್ವಂಸಗೊಳಿಸಿ ಕಟ್ಟಕಡೆಗೆ ಕಾಲಕರ್ಮಸಂಯೋಗದಿಂದ ರಾಮನ ಪೌರುಷಪರಾಕ್ರಮಗಳನ್ನು ಸಹಿಸಲಾರದೆ ಶಾಂತನಾದನು. ಪ್ರಭುವೇ! ನಿನ್ನ ತಮ್ಮನಾದ ಕುಂಭಕರ್ಣಾಸುರನು ರಾಮಬಾಣಗಳಿಂದ ಮಡಿದು, ನೋಡಲೂ ಅಸದಳವಾದ ಕಡಲನ್ನು ಮುಟ್ಟಿ ಬಿದ್ದಿರುವನು. ರಾಮನು ತನ್ನ ಕೂರಂಬುಗಳಿಂದ ಕಂಠವನ್ನೂ, ಹೃದಯವನ್ನೂ, ಭುಜಗಳನ್ನೂ ಕತ್ತರಿಸಿ ಬೀಳಿಸಲು ಬಹಳವಾಗಿ ರಕ್ತವನ್ನು ಕಾರುತ್ತಿರುವನು. ಅವನು ಪ್ರಾಣಗಳನ್ನು ಕಳೆದುಕೊಂಡು ಕಡಲಿಗೂ, ನಮ್ಮ ಲಂಕೆಯ

ಕುಂಭಕರ್ಣಸ್ತವಭ್ರಾತಾ ಕಾಕುತ್ಸ್ಥಶರಪೀಡಿತಃ । ಲಗಂಡಭೂತೋ ವಿಕೃತೋ ದಾವದಗ್ಧ ಇವದ್ರುಮಃ ॥ ೫ ॥ ತಂ ಶ್ರುತ್ವಾ ನಿಹತಂ ಸಂಖ್ಯೇ ಕುಂಭಕರ್ಣಂ ಮಹಾಬಲಂ । ರಾವಣಃ ಶೋಕಸಂತಪ್ತೋ ಮುಮೋಹಚ ಪಪಾತಚ ॥ ೬ ॥ ಪಿತೃವ್ಯಂ ನಿಹತಂ ದೃಷ್ಟ್ವಾ ದೇವಾಂತಕನರಾಂತಕೌ। ತ್ರಿಶಿರಾಶ್ಚಾತಿಕಾಯಶ್ಚ ರುರುದುಃ ಶೋಕಪೀಡಿತಃ ॥೭॥ ಭ್ರಾತರಂ ನಿಹತಂ ದೃಷ್ಟ್ವಾ ರಾಮೇಣಾಽಕ್ಲಿಷ್ಟಕರ್ಮಣಾ । ಮಹೋದರಮಹಾಪಾರ್ಶ್ವೌ ಶೋಕಾಕ್ರಾಂತೌ ಬಭೂವತುಃ ॥ ೮ ॥ ತತಃ ಕೃಚ್ಛ್ರಾತ್ಸಮಾಸಾದ್ಯ ಸಂಜ್ಞಾಂ ರಾಕ್ಷಸಪುಂಗವಃ । ಕುಂಭಕರ್ಣವಧಾದ್ದೀನೋ ವಿಲಲಾಪ ಸರಾ

ಭೂತಃ-ಚೂರ್ಣ ಮಾಡಲ್ಪಟ್ಟವನಾಗಿ, (ಲಗಂಡ-ಅಜಗರ), ವಿಕಾರಃ-ವಿಕಾರಸ್ವರೂಪವುಳ್ಳವನಾಗಿ, ದಾವದಗ್ಧಃ-ದವಾಗ್ನಿಯಿಂದ ಸುಡಲ್ಪಟ್ಟ, ದ್ರುಮ ಇವ-ಮರದಂತೆ, ಶರೀರೇಣ-ಶರೀರದಿಂದ, ಲಂಕಾಯಾಃ-ಲಂಕಾಪಟ್ಟಣದ, ದ್ವಾರಂ - ಬಾಗಿಲನ್ನು, ರುಧ್ವಾ-ತಡೆಮಾಡಿ, ಪತಿತಃ-ಬಿದ್ದನು. ॥ ೩-೫ ॥ ಸಂಖ್ಯೇ - ಕಾಳೆಗದಲ್ಲಿ, ನಿಹತಂ - ಹೊಡೆಯಲ್ಪಟ್ಟ, ಮಹಾಬಲಂ - ಬಹಳ ಬಲಪರಾಕ್ರಮಶಾಲಿಯಾದ, ತಂಕುಂಭಕರ್ಣಂ - ಆ ಕುಂಭಕರ್ಣನನ್ನು, ಶ್ರುತ್ವಾ - ಕೇಳಿ, ರಾವಣಃ - ರಾವಣನು, **ಶೋಕಸಂತಪ್ತಃ** - ವ್ಯಸನದಿಂದ ಸಂಕಟಗೊಂಡವನಾಗಿ, ಮುಮೋಹ - ಮೂರ್ಛೆಗೊಂಡನು, **ಪಪಾತಚ** - ಕೆಳಕ್ಕೆ ಬಿದ್ದನು. ॥ ೬ ॥ ಪಿತೃವ್ಯಂ - ಚಿಕ್ಕತಂದೆಯಾದ ಆ ಕುಂಭಕರ್ಣನನ್ನು, ನಿಹತಂ - ಹೊಡೆಯಲ್ಪಟ್ಟವನನ್ನಾಗಿ, ದೃಷ್ಟ್ವಾ - ಕಂಡು, ದೇವಾಂ....ಕೌ - ದೇವಾಂತಕನೂ, ನರಾಂತಕನೂ, ತ್ರಿಶಿರಾಶ್ಚ - ತ್ರಿಶಿರಸ್ಕನೂ, ಅತಿಕಾಯಶ್ಚ - ಅತಿಕಾಯನೂ, ಶೋಕಪೀಡಿತಾಃ - ವ್ಯಸನಾಕ್ರಾಂತರಾಗಿ, ರುರುದುಃ - ಅಳುತ್ತಿದ್ದರು. ॥ ೭ ॥ ಮಹೋ....ಶ್ವೌ - ಮಹೋದರನೂ, ಮಹಾಪಾರ್ಶ್ವನೂ, ಭ್ರಾತರಂ - ಅಣ್ಣನಾದ ಕುಂಭಕರ್ಣನನ್ನು, ಅಕ್ಲಿ....ಣಾ - ಕ್ಲೇಶವಿಲ್ಲದೆ ಕಾರ್ಯವನ್ನೆಸಗುವ, ರಾಮೇಣ - ಶ್ರೀರಾಮನಿಂದ, ನಿಹತಂ - ಹೊಡೆಯಲ್ಪಟ್ಟವನನ್ನಾಗಿ, **ದೃಷ್ಟ್ವಾ** - ಕಂಡು, ಶೋಕಾಕ್ರಾಂತೌ - ವ್ಯಸನಗೊಂಡವರು, ಬಭೂವತುಃ - ಆದರು. ॥ ೮ ॥ **ತತಃ** - ಬಳಿಕ, ಕೃಚ್ಛ್ರಾತ್ - ಕಷ್ಟದಿಂದ, ಸಂಜ್ಞಾಂ - ಪ್ರಜ್ಞೆಯನ್ನು, ಸಮಾಸಾದ್ಯ - ಹೊಂದಿ, ರಾಕ್ಷಸಪುಂಗವಃ - ರಾಕ್ಷಸರಾಜನಾದ, ರಾವಣಃ - ರಾವಣನು, ಕುಂಭ....ತ್ - ಕುಂಭಕರ್ಣನ ಸಂಹಾರದ ದೆಸೆಯಿಂದ, ದೀನಃ - ಪರಿತಪ್ತನಾಗಿ, ವಿಲಲಾಪ - ಪ್ರಲಾಪ ಮಾಡಿದನು. ॥ ೯ ॥

ಹೆಬ್ಬಾಗಿಲಿಗೂ ಅಡ್ಡವಾಗಿ ಅಜಗರದಂತೆ ಮಲಗಿದ್ದಾನೆ. ಅವನು ಕಾಳ್ಗಿಚ್ಚಿನಿಂದ ಅರೆಸುಟ್ಟ ಹೆಮ್ಮರದಂತೆ ಸಮುದ್ರದಲ್ಲಿ ಬಿದ್ದು ಅರ್ಧಶರೀರದೊಡನೆಮಾತ್ರ ಕಾಣುತ್ತಿರುವನು'' ಎಂದರು. ॥ ೧-೬ ॥ ಹೀಗೆ ಆ ರಾಕ್ಷಸರು ಕುಂಭಕರ್ಣನ ಮರಣ ವೃತ್ತಾಂತವನ್ನು ತಿಳಿಸಿದೊಡನೆಯೇ, ರಾವಣಾಸುರನು ದುಃಖದಿಂದ ಕದಡಿಹೋದವನಾಗಿ ಕೂಡಲೇ ಮೂರ್ಛೆಗೊಂಡು ನೆಲಕ್ಕೆ ಬಿದ್ದನು. ದೇವಾಂತಕ ನರಾಂತಕರೂ, ತ್ರಿಶಿರ ಮತ್ತು ಅತಿಕಾಯರೂ ತಮ್ಮ ಚಿಕ್ಕಪ್ಪನ ಸಾವಿನ ಸುದ್ದಿಯನ್ನುಕೇಳಿ ಬಹಳವಾಗಿ ಮರುಗಿದರು. ಅಸಮಪರಾಕ್ರಮಿಯಾದ ರಾಮನಿಂದ ತಮ್ಮ ತಮ್ಮನಾದ ಕುಂಭಕರ್ಣನು ಮಡಿದುದಾಗಿ ಕೇಳಿ ಮಹೋದರ ಮಹಾಪಾರ್ಶ್ವರೂ ಶೋಕಸಂತಪ್ತರಾಗಿ ಬಹಳವಾಗಿ ಪ್ರಲಪಿಸಿದರು. ರಾಕ್ಷಸೋತ್ತಮನಾದ ರಾವಣಾಸುರನು ಸ್ವಲ್ಪಹೊತ್ತಿನಮೇಲೆ ಕಷ್ಟದಿಂದ ಎಚ್ಚರಗೊಂಡು ಬಹಳ ದೀನನಾಗಿ, "ಅಯ್ಯೋ! ವೀರನೇ! ಶತ್ರುಗಳ ಅದಟನ್ನು ಮುರಿವವನೇ! ಮಹಾಬಲನೇ! ಕುಂಭಕರ್ಣ! ತಮ್ಮ, ನೀನು

ವಣಃ ॥ ೯ ॥ "ಹಾ! ವೀರ!! ರಿಪುದರ್ಪಘ್ನ! ಕುಂಭಕರ್ಣ! ಮಹಾಬಲ! । ತ್ವಂ ಮಾಂ ವಿಹಾಯ ವೈ ದೈವಾದ್ಯಾತೋಽಸಿ ಯಮಸಾದನಂ! ॥೧೦॥ ಮಮ ಶಲ್ಯಮನುದ್ಧೃತ್ಯ ಬಾಂಧವಾನಾಂ ಮಹಾಬಲ! । ಶತ್ರುಸೈನ್ಯಂ ಪ್ರತಾಪ್ಯೈಕಸ್ತ್ವಂ ಮಾಂ ಸಂತ್ಯಜ್ಯ ಗಚ್ಛಸಿ! ॥ ೧೧ ॥ ಇದಾನೀಂ ಖಲ್ವಹಂ ನಾಸ್ಮಿ ಯಸ್ಯ ಮೇ ದಕ್ಷಿಣೋ ಭುಜಃ । ಪತಿತೋಽಯಂ ಸಮಾಶ್ರಿತ್ಯ ನಬಿಭೇಮಿ ಸುರಾಸುರಾ ॥೧೨॥ ಕಥಮೇವಂ ವಿಧೋ ವೀರೋ ದೇವದಾನವದರ್ಪಹಾ । ಕಾಲಾಗ್ನಿರುದ್ರಪ್ರತಿಮೋ ರಣೇ ರಾಮೇಣ ವೈ ಹತಃ ॥ ೧೩ ॥ ಯಸ್ಯ ತೇ ವಜ್ರನಿಷ್ಪೇಷೋ ನಕುರ್ಯಾದ್ವ್ಯಸನಂ ಸದಾ ।

ಹಾ - ಕಷ್ಟವು, ಹೇ ವೀರ - ಎಲೈ ಶೂರನೇ, ರಿಪುದರ್ಪಘ್ನ - ಶತ್ರುಗಳ ಗರ್ವವನ್ನು ಮುರಿಯುವನೇ, ಹೇ ಕುಂಭಕರ್ಣ - ಎಲೈ ಕುಂಭಕರ್ಣನೇ, ಹೇ ಮಹಾಬಲ - ಎಲೈ ಮಹಾ ಬಲನೇ, ತ್ವಂ - ನೀನು, ಮಾಂ - ನನ್ನನ್ನು, ವಿಹಾಯ - ಬಿಟ್ಟು, ದೈವಾತ್ - ದೈವಾಧೀನದಿಂದ, ಯಮಸಾದನಂ - ಯಮನ ಮನೆಯನ್ನು ಕುರಿತು, ಯಾತಃ - ಹೋದವನು, ಅಸಿ - ಆದೆ. ॥ ೧೦ ॥ ಹೇ ಮಹಾಬಲ-ಎಲೈ ಮಹಾ ಬಲಶಾಲಿಯೇ, ಮಮ-ನನ್ನ, (ಮತ್ತು) ಬಾಂಧವಾನಾಂಚ-ಬಂಧುಗಳ, ಶಲ್ಯಂ - ದುಃಖವನ್ನು, ಅನುದ್ಧೃತ್ಯ - ಪರಿಹಾರ ಮಾಡದೆ, ತ್ವಂ - ನೀನು, ಏಕಃ - ಒಬ್ಬನೇ, ಶತ್ರುಸೈನ್ಯಂ - ಶತ್ರುಗಳ ಸೇನೆಯನ್ನು, ಪ್ರತಾಪ್ಯ - ಉರಿಸಿ, ಮಾಂ - ನನ್ನನ್ನು, ಸಂತ್ಯಜ್ಯ - ಬಿಟ್ಟು, ಗಚ್ಛಸಿ - ಹೋದೆ. ॥೧೧॥ ಅಹಂ - ನಾನು, ಇದಾನೀಂ - ಈಗ, ನಾಸ್ಮಿ - ಇಲ್ಲದಂತಾದೆ, ಯಸ್ಯ - ಯಾವ, ಮೇ - ನನ್ನ, ದಕ್ಷಿಣೋಭುಜಃ - ಬಲಭುಜವು, ಪತಿತಃ - ಬಿದ್ದುಹೋಯಿತೋ, ಯಂ - ಯಾವ ಕುಂಭಕರ್ಣನನ್ನು, ಸಮಾಶ್ರಿತ್ಯ - ಆಶ್ರಯಿಸಿ, ಸುರಾಸುರಾ - ದೇವರಾಕ್ಷಸರಿಗೂ, ನಬಿಭೇಮಿ - ಭಯಗೊಳ್ಳಲಿಲ್ಲವೋ. ॥ ೧೨ ॥ ಏವಂವಿಧಃ - ಇಂಥಾ, ವೀರಃ - ಶೂರನಾದ, ದೇವ....ಹಾ - ದೇವರಾಕ್ಷಸರ ಗರ್ವವನ್ನು ಮುರಿಯುವ, ಕಾಲಾ....ಮಃ - ಪ್ರಳಯಕಾಲಾಗ್ನಿಗೂ, ಪ್ರಳಯಕಾಲದ ರುದ್ರನಿಗೂ ಸಮಾನನಾದ ಕುಂಭಕರ್ಣನು, ರಣೇ - ಕಾಳೆಗದಲ್ಲಿ, ರಾಮೇಣ - ಶ್ರೀರಾಮನಿಂದ, ಕಥಂವೈ - ಹೇಗೆತಾನೆ, ಹತಃ - ಹೊಡೆಯಲ್ಪಟ್ಟನೋ. ॥೧೩॥ ಯಸ್ಯತೇ - ಯಾವ ನಿನಗೆ, ವಜ್ರನಿಷ್ಪೇಷಃ - ವಜ್ರಾಯುಧ ಪ್ರಹಾರವು, ಸದಾ - ನಿರಂತರವೂ, ವ್ಯಸನಂ - ವ್ಯಸನವನ್ನು,

ನನ್ನನ್ನು ತೊರೆದು ದುರದೃಷ್ಟವಶದಿಂದ ಯಮಸದನವನ್ನೈದಿದೆಯಾ? ಅಕಟಕಟ! ಕುಂಭಕರ್ಣ! ನೀನು ಅಪರಿಮಿತ ಪರಾಕ್ರಮಿಯಾಗಿಯೂ, ನನ್ನ ಮತ್ತು ನಿನ್ನ ಬಂಧುಗಳ ಸುಖಕ್ಕೆ ನಾಟದ್ದ ಮುಳ್ಳನ್ನು ಕಿತ್ತುಹಾಕದೆಯೆ, ಶತ್ರುಗಳ ಬಲವನ್ನು ಮುರಿದು ಒಂಟಿಯಾಗಿಯೇ ಮಡಿದುಹೋದೆಯಾ! ಎಲೈ ಅನುಜನೇ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ? ॥೭–೧೧॥ ಅಯ್ಯಯ್ಯೋ! ಇದೀಗ ನಾನು ಜೀವಿಸಿದ್ದೂ ಮೃತಿಯೊಂದಿದಂತೆಯೇ ಆಯಿತು. ನನಗೆ ಬಲಭುಜದಂತಿದ್ದ ಕುಂಭಕರ್ಣನು ಮಡಿದಮೇಲೆ ನನಗಿನ್ನೇನಿರುವುದು! ನಾನು ಅವನನ್ನಾಶ್ರಯಿಸಿ ಸುರಾಸುರರಿಗೂ ಹೆದರದಿದ್ದೆನು. ಅಂತಹ ಅಮಿತಪರಾಕ್ರಮಿ ಕುಂಭಕರ್ಣನು ಸತ್ತಮೇಲೆ ನನಗೇನುತಾನೇ ಬೇಕಾಗುವುದು! ಅಯ್ಯೋ! ದೇವದಾನವರ ದರ್ಪವನ್ನು ನಾಶಗೊಳಿಸುವವನೂ, ಪ್ರಳಯಕಾಲನ ದಾವಾನಲನಿಗೆ ಸಮಾನನಾದವನೂ, ಕಾಲಾಗ್ನಿರುದ್ರನಿಗೆ ಸಮಾನನಾದವನೂ ಆದ ಕುಂಭಕರ್ಣನು ಆ ರಾಮನಿಂದ ಹೇಗೆತಾನೇ ಮೃತಿಯೊಂದಿದನೋ! ಇದು ನಂಬಲೂ ಅಸಾಧ್ಯವಾಗಿರುವುದು. ಯಾವನು ಮಹೇಂದ್ರನ ವಜ್ರಾಯುಧದ

ಸಕಥಂ ರಾಮಬಾಣಾರ್ತಃ ಪ್ರಸುಪ್ತೋಽಸಿ ಮಹೀತಲೇ ॥೧೪॥ ಏತೇ ದೇವಗಣಾಸ್ಸಾರ್ಧಮೃಷಿಭಿರ್ಗಗನೇ ಸ್ಥಿತಾಃ । ನಿಹತಂ ತ್ವಾಂ ರಣೇ ದೃಷ್ಟ್ವಾ ನಿನದಂತಿ ಪ್ರಹರ್ಷಿತಾಃ ॥೧೫॥ ಧ್ರುವಮದ್ಯೈವ ಸಂಹೃಷ್ಟಾ ಲಬ್ಧಲಕ್ಷ್ಯಾಃ ಪ್ಲವಂಗಮಾಃ । ಆರೋಕ್ಷ್ಯಂತಿಹಿ ದುರ್ಗಾಣಿ ಲಂಕಾದ್ವಾರಾಣಿ ಸರ್ವಶಃ ॥ ೧೬ ॥ ರಾಜ್ಯೇನ ನಾಸ್ತಿ ಮೇ ಕಾರ್ಯಂ ಕಿಂಕರಿಷ್ಯಾಮಿ ಸೀತಯಾ । ಕುಂಭಕರ್ಣವಿಹೀನಸ್ಯ ಜೀವಿತೇ ನಾಸ್ತಿ ಮೇ ರತಿಃ ॥ ೧೭ ॥ ಯದ್ಯಹಂ ಭ್ರಾತೃಹಂತಾರಂ ನಹನ್ಮಿ ಯುಧಿ ರಾಘವಂ । ನನು ಮೇ ಮರಣಂ ಶ್ರೇಯೋ ನಚೇದಂ ವ್ಯರ್ಥಜೀವಿತಂ ॥೧೮॥ ಅದ್ಯೈವತಂ ಗಮಿಷ್ಯಾಮಿ

ನಕುರ್ಯಾತ್ - ಮಾಡದಂತಿರುವದೋ, ಸಃ - ಅಂಥಾ ನೀನು, ರಾಮಬಾಣಾರ್ತಃ - ಶ್ರೀರಾಮಬಾಣದಿಂದ ಪೀಡಿತನಾಗಿ ಮಹೀತಲೇ - ನೆಲದಲ್ಲಿ, ಕಥಂ - ಹೇಗೆ, ಪ್ರಸುಪ್ತಃ - ಮಲಗಿದವನು, ಅಸಿ - ಆದೆ. ॥೧೪॥ ಏತೇ - ಈ, ದೇವಗಣಾಃ - ದೇವತೆಗಳ ತಂಡಗಳು, ಋಷಿಭಿಸ್ಸಾರ್ಧಂ - ಋಷಿಗಳೊಡಗೂಡಿ, ಗಗನೇ - ಅಂತರಿಕ್ಷದಲ್ಲಿ, ಸ್ಥಿತಾಃ - ನಿಂತು, ತ್ವಾಂ - ನಿನ್ನನ್ನು, ರಣೇ - ಕಾಳೆಗದಲ್ಲಿ, ನಿಹತಂ - ಹೊಡೆಯಲ್ಪಟ್ಟವನನ್ನಾಗಿ, ದೃಷ್ಟ್ವಾ - ಕಂಡು, ಪ್ರಹರ್ಷಿತಾಃ - ಸಂತೋಷಗೊಂಡು, ನಿನದಂತಿ - ಕೋಲಾಹಲಧ್ವನಿ ಮಾಡುತ್ತಾರೆ. ॥೧೫॥ ಅದ್ಯೈವ - ಈಗಲೇ, ಸಂಹೃಷ್ಟಾಃ - ಸಂತೋಷಗೊಂಡು, ಲಬ್ಧಲಕ್ಷ್ಯಾಃ - ಹೊಂದಲ್ಪಟ್ಟ ಸಮಯವುಳ್ಳ, ಪ್ಲವಂಗಮಾಃ - ಕಪಿಗಳು, ದುರ್ಗಾಣಿ - ಪ್ರವೇಶಿಸಲಸಾಧ್ಯಗಳಾದ, ಲಂಕಾದ್ವಾರಾಣಿ - ಲಂಕಾಪಟ್ಟಣದ ಬಾಗಿಲುಗಳನ್ನು, ಸರ್ವಶಃ - ನಾನಾಪ್ರಕಾರದಲ್ಲಿಯೂ, ಆರೋಕ್ಷ್ಯಂತಿಹಿ - ಹತ್ತುತ್ತಾರೆ, ಧ್ರುವಂ - ನಿಶ್ಚಯವು. ॥ ೧೬ ॥ ರಾಜ್ಯೇನ - ರಾಜ್ಯಭಾರದಿಂದ, ಮೇ - ನನಗೆ, ಕಿಂಕಾರ್ಯಂ - ಏನು ಪ್ರಯೋಜನವು, ಸೀತಯಾ - ಸೀತಾದೇವಿಯೊಡನೆ, ಕಿಂಕರಿಷ್ಯಾಮಿ - ಏನು ಮಾಡುವೆನು, ಕುಂಭ....ಸ್ಯ - ಕುಂಭಕರ್ಣನಿಂದ ರಹಿತನಾದ, ಮೇ - ನನಗೆ, ಜೀವಿತೇ - ಪ್ರಾಣದಲ್ಲಿ, ರತಿಃ - ಅಭಿಲಾಷೆಯು, ನಾಸ್ತಿ - ಇಲ್ಲಾ. ॥೧೭॥ ಅಹಂ - ನಾನು, ಯುಧಿ - ಕಾಳೆಗದಲ್ಲಿ, ಭ್ರಾತೃಹಂತಾರಂ - ತಮ್ಮನನ್ನು ಕೊಂದ, ರಾಘವಂ - ಶ್ರೀರಾಮನನ್ನು, ನಹನ್ಮಿಯದಿ - ಹೊಡೆಯದೇ ಹೋದರೆ, ಮೇ - ನನಗೆ, ಮರಣಂ - ಮರಣವು, ಶ್ರೇಯೋನನು - ಶ್ರೇಯಸ್ಕರವಾದ್ದಷ್ಟೆ, ಇದಂವ್ಯರ್ಥಜೀವಿತಂ - ಈ ನಿಷ್ಪ್ರಯೋಜನವಾದ ಬದುಕುವಿಕೆಯು, ನಚಶ್ರೇಯಃ - ಶ್ರೇಯಸ್ಕರವಾದುದಲ್ಲ. ॥ ೧೮ ॥ ಯತ್ರ - ಯಾವ ಸ್ಥಳದಲ್ಲಿ, ಮಮ - ನನ್ನ, ಅನುಜಃ - ಆ ತಮ್ಮನು,

---

ಪೆಟ್ಟನ್ನೂ ಲಕ್ಷ್ಯಮಾಡದಿದ್ದನೋ ಅಂತಹ ಕಡುಗಲಿಯಾದ ಆ ನಮ್ಮ ಕುಂಭಕರ್ಣನು ರಾಮಬಾಣಗಳಿಂದ ಮೃತಿಯೊಂದಿದುದೆಂತೋ! ಅಯ್ಯೋ! ಕುಂಭಕರ್ಣಾ! ಈ ದೇವತೆಗಳು ಋಷಿಗಳೊಡಗೂಡಿ ಗಗನದಲ್ಲಿ ನಿಂದು ರಣರಂಗದಲ್ಲಿ ಮಡಿದುರುಳಿದ ನಿನ್ನನ್ನು ನೋಡಿ ಅಪರಿಮಿತವಾಗಿ ಆನಂದಿಸುತ್ತಿರುವರು! ಅಕಟಾ! ವಾನರರೆಲ್ಲರೂ ಇದೇ ಸಮಯವೆಂದು ನಮ್ಮ ಲಂಕಾನಗರದ ದುರ್ಗಪ್ರದೇಶಗಳೆಲ್ಲವನ್ನೂ ಆಕ್ರಮಿಸಿ ನಿಲ್ಲುವರಲ್ಲವೆ? ಅಕಟಕಟಾ! ಇನ್ನು ನನಗೆ ಈ ರಾಜ್ಯದಿಂದೇನಾಗಬೇಕು? ಆ ಸೀತೆಯಿಂದಾದರೂ ಏನು! ಕುಂಭಕರ್ಣನು ಮಡಿದ ಬಳಿಕ ನನಗೆ ಬದುಕೇ ಬೇಸರವಾಗಿರುವುದು. ॥೧೨–೧೭॥ ನಾನು ನನ್ನ ತಮ್ಮನನ್ನು ವಧಿಸಿದ ಆ ರಾಮನನ್ನು ರಣಾಗ್ರದಲ್ಲಿ ಕೊಲ್ಲದಿದ್ದರೆ ನಾನು ಬದುಕಿಯೂ ಪ್ರಯೋಜನವಿರುವುದಿಲ್ಲ; ನಾನು ಸಾಯುವುದೇ ಲೇಸು. ನಾನೀಗಲೇ ನನ್ನ ತಮ್ಮನಾದ ಕುಂಭಕರ್ಣ

ದೇಶಂ ಯತ್ರಾನುಜೋ ಮಮ । ನಹಿ ಭ್ರಾತೄರ್ನ್ ಸಮುತ್ಸೃಜ್ಯ ಕ್ಷಣಂ ಜೀವಿತು
ಮುತ್ಸಹೇ ॥ ೧೯ ॥ ದೇವಾಹಿ ಮಾಂ ಹಸಿಷ್ಯಂತಿ ದೃಷ್ಟ್ವಾ ಪೂರ್ವಾಪಕಾರಿಣಂ ।
ಕಥಮಿಂದ್ರಂ ಜಯಿಷ್ಯಾಮಿ ಕುಂಭಕರ್ಣ! ಹತೇ ತ್ವಯಿ ॥೨೦॥ ತದಿದಂ ಮಾಮನು
ಪ್ರಾಪ್ತಂ ವಿಭೀಷಣವಚಃ ಶುಭಂ । ಯದಜ್ಞಾನಾನ್ಮಯಾ ತಸ್ಯ ನಗೃಹೀತಂ ಮಹಾ
ತ್ಮನಃ ॥ ೨೧ ॥ ವಿಭೀಷಣವಚೋಯಾವತ್ಕುಂಭಕರ್ಣಪ್ರಹಸ್ತಯೋಃ । ವಿನಾ
ಶೋಽಯಂ ಸಮುತ್ಪನ್ನೋ ಮಾಂ ವ್ರೀಳಯತಿ ದಾರುಣಃ ॥ ೨೨ ॥ ತಸ್ಯಾಽಯಂ
ಕರ್ಮಣಃ ಪ್ರಾಪ್ತೋ ವಿಪಾಕೋ ಮಮ ಶೋಕದಃ । ಯನ್ಮಯಾ ಧಾರ್ಮಿಕಃ
ಶ್ರೀಮಾನ್ ಸನಿರಸ್ತೋ ವಿಭೀಷಣಃ ॥ ೨೩ ॥

ಅಸ್ತಿ - ಇದ್ದಾನೆಯೋ, ಅದ್ಯೈವ - ಈಗಲೇ, ತಂದೇಶಂ - ಆ ಸ್ಥಳವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಭ್ರಾತ್ರೂನ್ - ತಮ್ಮಂದಿರನ್ನು, ಸಮುತ್ಸೃಜ್ಯ - ಬಿಟ್ಟು, ಕ್ಷಣಂ - ಕ್ಷಣಕಾಲವಾದರೂ, ಜೀವಿತುಂ - ಬದುಕುವುದಕ್ಕೆ, ನೋತ್ಸಹೇಹಿ - ಉದ್ಯುಕ್ತನಾಗಲಾರೆನಷ್ಟೆ. ॥ ೧೯ ॥ ಹೇ ಕುಂಭಕರ್ಣ - ಎಲೈ ಕುಂಭಕರ್ಣನೇ, ತ್ವಯಿ - ನೀನು, ಹತೇ - ಸಂಹೃತನಾಗಲು, ಪೂರ್ವಾಪಕಾರಿಣಂ - ಹಿಂದೆ ಅಪಕಾರ ಮಾಡಿದ, ಮಾಂ - ನನ್ನನ್ನು, ದೃಷ್ಟ್ವಾ - ಕಂಡು, ದೇವಾಃ - ದೇವತೆಗಳು, ಹಸಿಷ್ಯಂತಿಹಿ - ಪರಿಹಾಸ್ಯ ಮಾಡುತ್ತಾರೆಯಷ್ಟೆ, ಇಂದ್ರಂ-ದೇವೇಂದ್ರನನ್ನು, ಕಥಂ - ಹೇಗೆ, ಜಯಿಷ್ಯಾಮಿ - ಜಯಿಸುವೆನು. ॥ ೨೦ ॥ ಮಯಾ - ನನ್ನಿಂದ, ಮಹಾತ್ಮನಾ - ಮಹಾ ಶೂರನಾದ, ತಸ್ಯ - ಆ ವಿಭೀಷಣನ, ವಚಃ - ಮಾತು, ಯತ್ - ಯಾವ, ಅಜ್ಞಾನಾತ್ - ಅಜ್ಞಾನದಿಂದ, ನಗೃಹೀತಂ - ಗ್ರಹಿಸಲ್ಪಡಲಿಲ್ಲವೋ, ತದಿದಂ - ಆ ಈ, ಶುಭಂ - ಶುಭಕರವಾದ, ವಿಭೀ....ಚಃ - ವಿಭೀಷಣನ ಮಾತು, ಮಾಂ - ನನ್ನನ್ನು, ಅನುಪ್ರಾಪ್ತಂ - ಅನುಸರಿಸಿ ಬಂದಿತು. ॥ ೨೧ ॥ ಕುಂಭ....ಯೋಃ - ಕುಂಭಕರ್ಣ ಪ್ರಹಸ್ತರೀರ್ವರ, ದಾರುಣಃ - ಕ್ರೂರವಾದ, ಅಯಂವಿನಾಶಃ - ಈ ನಾಶವು, ಯಾವತ್ - ಯಾವ ಕಾಲದಲ್ಲಿ, ಸಮುತ್ಪನ್ನಃ - ಹುಟ್ಟಿತೋ, ತದಾಪ್ರಭೃತಿ - ಆ ಕಾಲ ಮೊದಲ್ಗೊಂಡು, ವಿಭೀಷಣವಚಃ - ವಿಭೀಷಣನ ಮಾತು, ಮಾಂ - ನನ್ನನ್ನು, ವ್ರೀಳಯತಿ - ಲಜ್ಜಾಯುಕ್ತನನ್ನಾಗಿ ಮಾಡುತ್ತದೆ. ॥ ೨೨ ॥ ಧಾರ್ಮಿಕಃ - ಧರ್ಮಿಷ್ಠನಾದ, ಶ್ರೀಮಾನ್ - ಸಂಪದ್ಯುಕ್ತನಾದ, ವಿಭೀಷಣಃ - ಆ ವಿಭೀಷಣನು, ಮಯಾ - ನನ್ನಿಂದ, ನಿರಸ್ತಇತಿ ಯತ್ - ಹೊರಡಿಸಲ್ಪಟ್ಟನೆಂಬದು ಯಾವದೋ, ತಸ್ಯಕರ್ಮಣಃ - ಆ ವ್ಯಾಪಾರಕ್ಕೆ, ವಿಪಾಕಃ -

---

ನಿರುವೆಡೆಗೆ ಹೋಗುವೆನು. ತಮ್ಮಂದಿರನ್ನುಳಿದು ಒಂದು ಗಳಿಗೆಯಾದರೂ ಜೀವಿಸಿರಲು ನನ್ನಿಂದಾಗದು. ಪೂರ್ವದಲ್ಲಿ ನನ್ನಿಂದ ಅಪಕೃತರಾಗಿರುವ ದೇವತೆಗಳೆಲ್ಲರೂ ನನ್ನನ್ನು ನೋಡಿ ಇದೀಗ ಅಪಹಾಸ್ಯ ಮಾಡುತ್ತಾರೆಯಲ್ಲವೆ! ಅಯ್ಯೋ! ಕುಂಭಕರ್ಣಾ! ನೀನು ಮಡಿದ ಬಳಿಕ ನಾನು ಆ ಮಹೇಂದ್ರನನ್ನು ಗೆಲ್ಲುವುದೆಂತು? ಆಹಾ! ಹಿಂದೆ ಅನುಜನಾದ ವಿಭೀಷಣನು ನನಗೆ ಹಿತವನ್ನು ನುಡಿದಾಗ ಅವನನ್ನೂ, ಅವನ ಹಿತಬೋಧೆಯನ್ನೂ ಅಲ್ಲಗಳೆದುದರ ಫಲವಿಂದು ಒದಗಿಬಂದಿತು. ವಿಭೀಷಣ, ಪ್ರಹಸ್ತ, ಕುಂಭಕರ್ಣರ ಮಾತುಗಳನ್ನು ಕೇಳದಿದ್ದುದರಿಂದಲೇ ನನಗೀವಿಪತ್ತು ಅಡಸಿತು. ಇದು ನನಗೆ ಬಹಳ ಭಯಂಕರವಾದ ನಾಚಿಕೆಯನ್ನುಂಟುಮಾಡುತ್ತಿರುವುದು. ॥೧೮-೨೨॥ ಅಯ್ಯೋ! ನಾನು ಧರ್ಮಾತ್ಮನಾದ ವಿಭೀಷಣನನ್ನು ಪಟ್ಟಣದಿಂದ ಓಡಿಸಿದುದರಿಂದಲೇ ನನಗಿಂತಹ ಭಯಂಕರ ದುಃಖವು

ಇತಿ ಬಹುವಿಧಮಾಕುಲಾಂತರಾತ್ಮಾ
ಕೃಪಣಮತೀವ ವಿಲಪ್ಯ ಕುಂಭಕರ್ಣಂ ।
ನ್ಯಪತದಥ ದಶಾನನೋ ಭೃಶಾರ್ತ
ಸ್ತಮನುಜಮಿಂದ್ರರಿಪುಂ ಹತಂ ವಿದಿತ್ವಾ ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಷಷ್ಟಿತಮಸ್ಸರ್ಗಃ.

ಪರಿಪಾಕವು, ಮಮ - ನನಗೆ, ಶೋಕದಃ - ದುಃಖಕರವಾಗಿ, ಪ್ರಾಪ್ತಃ - ಸಂಭವಿಸಿತು. ॥ ೨೩ ॥ ಇತಿ - ಈ ಪರಿಯಾಗಿ, ದಶಾನನಃ - ರಾವಣನು, ಬಹುವಿಧಂ - ಬಹು ಪ್ರಕಾರವಾಗಿ, ಕುಂಭಕರ್ಣಂ - ಕುಂಭಕರ್ಣನನ್ನು ಕುರಿತು, ಅತೀವ - ಬಹಳವಾಗಿ, ಕೃಪಣಂ - ದೈನ್ಯದಿಂದ, ವಿಲಪ್ಯ - ವಿಲಪಿಸಿ, ಆಕು....ತ್ಮಾ - ವ್ಯಾಕುಲಚಿತ್ತನಾಗಿ, ಇಂದ್ರರಿಪುಂ - ಇಂದ್ರನಿಗೆ ಶತ್ರುವಾದ, ಅನುಜಂ - ತಮ್ಮನಾದ ಕುಂಭಕರ್ಣನನ್ನು, ಹತಂ - ಸಂಹೃತನನ್ನಾಗಿ, ವಿದಿತ್ವಾ - ತಿಳಿದು, ಭೃಶಾರ್ತಃ - ಬಹಳ ದುಃಖಿತನಾಗಿ, ಅಥ - ಬಳಿಕ, ನ್ಯಪತತ್ - ಕೆಳಕ್ಕೆ ಬಿದ್ದನು. ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಷಷ್ಟಿತಮಸ್ಸರ್ಗಃ

ಒದಗಿತು" ಎಂದು ಬಹಳವಾಗಿ ರೋದಿಸಿದನು. ಹೀಗೆ ಆ ರಾವಣಾಸುರನು ದೈನ್ಯದಿಂದ ಬಗೆಬಗೆಯಾಗಿ ಪ್ರಲಪಿಸಿ ಮಹೇಂದ್ರರಿಪುವಾದ ಕುಂಭಕರ್ಣನು ಮಡಿದ ವೃತ್ತಾಂತವನ್ನು ಸ್ಮರಿಸಿ, ಸಂತಾಪವನ್ನು ಸೈರಿಸಲಾರದೆ, ಮೂರ್ಛಿತನಾಗಿ ಮತ್ತೆ ನೆಲಕ್ಕೆ ಬಿದ್ದನು. ॥೨೩–೨೪॥

ಇಂತಿದು ರಾವಣಪ್ರಲಾಪವೆಂಬ ಅರವತ್ತೆಂಟನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಏಕೋನಸಪ್ತತಿತಮಸ್ಸರ್ಗಃ

ಏವಂ ವಿಲಪಮಾನಸ್ಯ ರಾವಣಸ್ಯ ದುರಾತ್ಮನಃ । ಶ್ರುತ್ವಾ ಶೋಕಾಭಿತಪ್ತಸ್ಯ ತ್ರಿಶಿರಾ ವಾಕ್ಯಮಬ್ರವೀತ್ ॥ ೧ ॥ "ಏವಮೇವ ಮಹಾವೀರ್ಯೋ ಹತೋ ನಸ್ತಾತ ಮಧ್ಯಮಃ । ನತು ಸತ್ಪುರುಷಾ ರಾಜನ್! ವಿಲಪಂತಿ ಯಥಾ ಭವಾನ್ ॥ ೨ ॥ ನೂನಂ ತ್ರಿಭುವನಸ್ಯಾಪಿ ಪರ್ಯಾಪ್ತಸ್ತ್ವಮಸಿ ಪ್ರಭೋ! । ಸ ಕಸ್ಮಾತ್ಪ್ರಾಕೃತ ಇವ ಶೋಚಸ್ಯಾತ್ಮಾನಮೀದೃಶಂ ॥೩॥ ಬ್ರಹ್ಮದತ್ತಾಽಸ್ತಿ ತೇ ಶಕ್ತಿಃ ಕವಚಸ್ಸಾಯಕೋ ಧನುಃ । ಸಹಸ್ರಖರಸಂಯುಕ್ತೋ ರಥೋ ಮೇಘಸ್ವನೋ ಮಹಾನ್ ॥ ೪ ॥ ತ್ವಯಾ ಸಕೃದ್ವಿ

ಏವಂ - ಈ ಪರಿಯಾಗಿ, ದುರಾತ್ಮನಃ - ದುಷ್ಟಬುದ್ಧಿಯುಳ್ಳ, ರಾವಣಸ್ಯ - ರಾವಣನು, ಶ್ರುತ್ವಾ - ಕುಂಭಕರ್ಣನ ವಧೆಯನ್ನು ಕೇಳಿ, ಶೋಕಾ....ಸ್ಯ - ವ್ಯಸನಸಂತಪ್ತನಾಗಿ, ವಿಲಪಮಾನಸ್ಯ- ವಿಲಾಪ ಮಾಡುತ್ತಿರಲು, ತ್ರಿಶಿರಾಃ-ತಿಶಿರಸ್ಕರನು, ವಾಕ್ಯಂ-ಒಂದು ಮಾತನ್ನು, ಅಬ್ರವೀತ್-ನುಡಿದನು. ॥ ೧ ॥ ಏವಮೇವ - ಈ ಬಗೆಯಾಗಿಯೇ, ಮಹಾವೀರ್ಯಃ - ಮಹಾ ಪರಾಕ್ರಮಶಾಲಿಯಾದ, ನಃ - ನಮ್ಮ, ತಾತಮಧ್ಯಮಃ - ತಂದೆಗಳಲ್ಲಿ ಮಧ್ಯಮನಾದ ತಂದೆಯು, ಹತಃ - ಹತನಾದನು, ಹೇ ರಾಜನ್ - ಎಲೈ ಅರಸೇ, ಭವಾನ್ - ನೀನು, ಯಥಾ - ಹೇಗೆಯೋ, ತಥಾ - ಹಾಗೆಯೇ, ಸತ್ಪುರುಷಾಃ - ಸತ್ಪುರುಷರು, ನವಿಲಪಂತಿ - ಪ್ರಲಪಿಸುವುದಿಲ್ಲ. ॥ ೨ ॥ ಹೇ ಪ್ರಭೋ - ಎಲೈ ಸ್ವಾಮಿಯೇ, ತ್ವಂ - ನೀನು, ತ್ರಿಭು....ಪಿ - ಮೂರು ಲೋಕಗಳಿಗೂ, ಪರ್ಯಾಪ್ತಃ - ಸಾಕಾದವನು, ಅಸಿ - ಆಗಿದ್ದೀಯೆ, ನೂನಂ - ನಿಶ್ಚಯವು, ಸಃ - ಅಂಥಾ ನೀನು, ಪ್ರಾಕೃತಇವ - ಪಾಮರನಂತೆ, ಈದೃಶಂ - ಈ ಪ್ರಕಾರ, ಆತ್ಮಾನಂ - ನಿನ್ನನ್ನು ಕುರಿತು, ಕಸ್ಮಾತ್ - ಏತಕ್ಕಾಗಿ, ಶೋಚಸಿ - ದುಃಖಿಸುತ್ತೀಯೆ. ॥೩॥ ತೇ - ನಿನಗೆ, ಬ್ರಹ್ಮದತ್ತಾ - ಬ್ರಹ್ಮನಿಂದ ಕೊಡಲ್ಪಟ್ಟ, ಶಕ್ತಿಃ - ಶಕ್ತ್ಯಾಯುಧವು, ಅಸ್ತಿ - ಇರುವುದು, ಕವಚಃ - ಕವಚವೂ, ಸಾಯಕಃ - ಬಾಣವೂ, ಧನುಃ - ಬಿಲ್ಲೂ, ಸಹ....ಕ್ತಃ - ಸಾವಿರ ಕತ್ತೆಗಳಿಂದ ಕೂಡಿರುವ, ಮೇಘಸ್ವನಃ - ಮೇಘಘರ್ಜನೆಯಂತೆ ಧ್ವನಿಯುಳ್ಳ, ಮಹಾನ್ - ದೊಡ್ಡದಾದ, ರಥಃ - ರಥವೂ, ಅಸ್ತಿ - ಇರುವುದು, ವಿಶಸ್ತ್ರೇಣ - ಶಸ್ತ್ರಗಳಿಲ್ಲದಿರುವ,

---

ಈ ರೀತಿ ದುರಾತ್ಮನಾದ ದಶಕಂಠನು ಕುಂಭಕರ್ಣನ ವಧೆಯನ್ನು ಕೇಳಿ ವಿಲಪಿಸುತ್ತಿರಲು ತ್ರಿಶಿರಸ್ಕರನೆಂಬವನು, "ಎಲೈ ಮಹಾರಾಜನೇ! ನಮ್ಮ ಚಿಕ್ಕ ತಂದೆಯಾದ ಕುಂಭಕರ್ಣನು ನೀನು ನಿರೂಪಿಸಿದಂತೆ ಮಹಾ ಪರಾಕ್ರಮಶಾಲಿಯೇ ಸರಿ. ಆತನೀಗ ದೈವವಶದಿಂದ ಹತನಾದನು. ಆದರೂ ನಿನ್ನಂತಹ ಶೂರರು ಈ ರೀತಿ ಅಳಬಾರದು. ಎಲೈ ಪ್ರಭುವೆ! ಲೋಕತ್ರಯವನ್ನೂ ನಿರ್ಮೂಲಮಾಡಲು ನೀನೊಬ್ಬನೇ ಸಮರ್ಥನಾಗಿರುವೆ. ಇಂತಹ ನೀನು ಪ್ರಾಕೃತನಂತೆ ಅಳುವುದೇಕೆ? ನಿನಗೆ ಚತುರ್ಮುಖಬ್ರಹ್ಮನಿಂದ ವರವಾಗಿ ಬಂದ ಶಕ್ತಿಯೂ, ಕವಚವೂ, ಬಾಣವೂ, ಧನುಸ್ಸೂ, ಸಜ್ಜವಾಗಿರುವವು. ನಿನ್ನ ರಥವಾದರೋ ಸಾವಿರ ಕತ್ತೆಗಳಿಂದ ಕೂಡಿ, ಮೇಘದಂತೆ ಧ್ವನಿಗೈಯುವುದಾಗಿಯೂ, ಮಹತ್ತರವಾಗಿಯೂ ಇರುವುದು. ನೀನು ನಿರಾಯುಧನಾಗಿದ್ದರೂ ಅನೇಕ ದೇವರಾಕ್ಷಸರನ್ನು ಪರಾ

ಶಸ್ತ್ರೇಣ ವಿಶಸ್ತಾ ದೇವದಾನವಾಃ । ಸ ಸರ್ವಾಯುಧಸಂಪನ್ನೋ ರಾಘವಂ ಶಾಸ್ತುಮರ್ಹಸಿ ॥ ೫ ॥ ಕಾಮಂ ತಿಷ್ಠ ಮಹಾರಾಜ! ನಿರ್ಗಮಿಷ್ಯಾಮ್ಯಹಂ ರಣಂ । ಉದ್ಧರಿಷ್ಯಾಮಿ ತೇ ಶತ್ರೂನ್ ಗರುಡಃ ಪನ್ನಗಾನಿವ ॥೬॥ ¶ ಶಂಬರೋ ದೇವರಾಜೇನ ನರಕೋ ವಿಷ್ಣುನಾ ಯಥಾ । ತಥಾಽದ್ಯ ಶಯಿತಾ ರಾಮೋ ಮಯಾ ಯುಧಿ ನಿಪಾತಿತಃ ॥ ೭ ॥ ಶ್ರುತ್ವಾ ತ್ರಿಶಿರಸೋ ವಾಕ್ಯಂ ರಾವಣೋ ರಾಕ್ಷಸಾಧಿಪಃ । ಪುನರ್ಜಾತಮಿವಾತ್ಮಾನಂ ಮನ್ಯತೇ ಕಾಲಚೋದಿತಃ ॥ ೮ ॥ ಶ್ರುತ್ವಾ ತ್ರಿಶಿರಸೋ ವಾಕ್ಯಂ

ತ್ವಯಾ - ನಿನ್ನಿಂದ, ದೇವದಾನವಾಃ - ದೇವರಾಕ್ಷಸರು, ಸಕೃತ್ - ಒಂದಾವರ್ತಿ, ವಿಶಸ್ತಾಃ - ಹೊಡೆಯಲ್ಪಟ್ಟರು, ಸರ್ವಾ....ನ್ನಃ - ಸಮಸ್ತಾಯುಧಗಳಿಂದ ಕೂಡಿರುವ, ಸಃ - ಅಂಥಾ ನೀನು, ರಾಘವಂ - ಶ್ರೀರಾಮನನ್ನು, ಶಾಸ್ತುಂ - ಶಿಕ್ಷಿಸುವುದಕ್ಕೆ, ಅರ್ಹಸಿ - ಯೋಗ್ಯನಾಗಿರುವೆ. ॥ ೪-೫ ॥ ಹೇ ಮಹಾರಾಜ - ಎಲೈ ಮಹಾರಾಜನೇ, ಕಾಮಂ - ಯಥಾಸುಖವಾಗಿ, ತಿಷ್ಠ - ಇರು, ಅಹಂ - ನಾನು, ರಣಂ - ಕಾಳೆಗವನ್ನು ಕುರಿತು, ನಿರ್ಗಮಿಷ್ಯಾಮಿ - ಹೊರಡುವೆನು, ಗರುಡಃ - ಗರುಡನು, ಪನ್ನಗಾನಿವ - ಸರ್ಪಗಳನ್ನಂತೆ, ತೇ - ನಿನ್ನ, ಶತ್ರೂನ್ - ಶತ್ರುಗಳನ್ನು, ಉದ್ಧರಿಷ್ಯಾಮಿ - ಮೂಲೋತ್ಪಾಟನ ಮಾಡುತ್ತೇನೆ. ॥ ೬ ॥ ದೇವರಾಜೇನ - ದೇವೇಂದ್ರನಿಂದ, ಶಂಬರಃ - ಶಂಬರಾಸುರನು, ಯಥಾ - ಹೇಗೆಯೋ, ವಿಷ್ಣುನಾ - ಶ್ರೀಮಹಾವಿಷ್ಣುವಿನಿಂದ, ನರಕಃ - ನರಕಾಸುರನು, ಯಥಾ - ಹೇಗೆಯೋ, ತಥಾ - ಹಾಗೆಯೇ, ಅದ್ಯ - ಈಗ, ಮಯಾ - ನನ್ನಿಂದ, ಯುಧಿ - ಕಾಳೆಗದಲ್ಲಿ, ರಾಮಃ - ಶ್ರೀರಾಮನು, ನಿಪಾತಿತಃ - ಬೀಳಿಸಲ್ಪಟ್ಟು, ಶಯಿತಾ - ಮಲಗುವವನು. ॥೭॥ ರಾಕ್ಷಸಾಧಿಪಃ - ರಕ್ಕಸರಿಗೆ ಒಡೆಯನಾದ, ರಾವಣಃ - ರಾವಣನು, ಕಾಲಚೋದಿತಃ - ಯಮನಿಂದ ಪ್ರೇರಿತನಾದಕಾರಣ, ತ್ರಿಶಿರಸಃ - ತ್ರಿಶಿರಸ್ಕನ ವಾಕ್ಯಂ - ಮಾತನ್ನು, ಶುತ್ವಾ - ಕೇಳಿ, ಆತ್ಮಾನಂ - ತನ್ನನ್ನು, ಪುನರ್ಜಾತಮಿವ - ತಿರುಗಿ ಹುಟ್ಟಿದವನಂತೆ, ಮನ್ಯತೇಸ್ಮ - ತಿಳಿದುಕೊಂಡನಷ್ಟೆ. ॥ ೮ ॥

ಜಿತರನ್ನಾಗಿಸಬಲ್ಲೆ. ಇಂತಹ ಕಡುಗಲಿಯಾದ ನೀನು ಪ್ರಲಪಿಸುವುದೇಕೆ? ಸಮಸ್ತವಾದ ಆಯುಧಗಳೊಡಗೂಡಿ, ರಾಮನನ್ನು ವಧಿಸು. ಅದಕ್ಕೆ ನೀನು ಅರ್ಹನಾಗಿರುವೆ. ॥ ೧–೫ ॥ ಎಲೈ ಮಹಾರಾಜನೇ! ಅಥವಾ ನೀನೇಕೆ ಯುದ್ಧಕ್ಕೆ ಹೋಗಬೇಕು? ಇಲ್ಲಿಯೇ ಸುಖವಾಗಿರು. ನಾನು ರಣಾಗ್ರಕ್ಕೆ ತೆರಳಿ, ಗರುಡನು ಸರ್ಪಗಳನ್ನು ಹಾರಿಸುವಂತೆ, ನಿನ್ನ ವೈರಿಗಳನ್ನು ಹಾರಿಸಿಬಿಡುವೆನು. ಪೂರ್ವದಲ್ಲಿ ಶಂಬರಾಸುರನು ದೇವೇಂದ್ರನಿಂದಲೂ, ನರಕಾಸುರನು ವಿಷ್ಣುವಿನಿಂದಲೂ ಹತರಾದಂತೆ, ಆ ರಾಮನೂ ಸಹ ರಣರಂಗದಲ್ಲಿ ನನ್ನಿಂದ ಸತ್ತು ಮಲಗುವನು" ಎಂದು ಹೇಳಿದನು. ರಾಕ್ಷಸೇಂದ್ರನಾದ ರಾವಣನು ಆ ತ್ರಿಶಿರಸ್ಕನ ಮಾತುಗಳನ್ನು ಕೇಳಿ ತಾನು ಪುನಃ ಹುಟ್ಟಿದಂತಾಯಿತೆಂದು ತಿಳಿದುಕೊಂಡನು. ॥೬–೮॥ ಆ ತ್ರಿಶಿರಸ್ಕನು ನುಡಿದ ಮಾತುಗಳನ್ನು ಕೇಳಿ,

---

¶ ಇಲ್ಲಿ ವಿಷ್ಣುವು ನರಕಾಸುರನನ್ನು ಕೊಂದ ವಿಚಾರವು ಸೂಚಿತವಾಗಿದೆ. ಈ ನರಕಾಸುರನು ಶ್ರೀಕೃಷ್ಣನಿಂದ ಸಂಹೃತನಾದ ನರಕಾಸುರನಲ್ಲ. ವಿಷ್ಣುವಿನಿಂದ ಸಂಹೃತನಾದ ನರಕಾಸುರನು ಬೇರೆ. ಸಿಂಹಿಕೆಯೆಂಬವಳಲ್ಲಿ ವಿಪ್ರಚಿತ್ತಿಯಿಂದ ಜನಿಸಿದ "ವಾತಾಪಿ, ಇಲ್ವಲ, ನಮುಚಿ, ಸೃಮರ, ಅಂಧಕ, ನರಕ, ಕಾಲನಾಭ" ಎಂಬ ರಾಕ್ಷಸರಲ್ಲಿ ಒಬ್ಬನಾದ ನರಕಾಸುರನೇ ಇಲ್ಲಿ ಸೂಚಿತನಾಗಿರುವನು. ವಿಷ್ಣುಪುರಾಣದಲ್ಲಿ ಈ ವಿಷಯವನ್ನು ನೋಡಬಹುದು. (ಗೋ)

ದೇವಾಂತಕನರಾಂತಕೌ । ಅತಿಕಾಯಶ್ಚ ತೇಜಸ್ವೀ ಬಭೂವುರ್ಯುದ್ಧಹರ್ಷಿತಾಃ ॥ ೯ ॥ ತತೋಽಹಮಹಮಿತ್ಯೇವ ಗರ್ಜಂತೋ ನೈರ್ಋತರ್ಷಭಾಃ । ರಾವಣಸ್ಯ ಸುತಾ ವೀರಾಃ ಶಕ್ರತುಲ್ಯಪರಾಕ್ರಮಾಃ ॥ ೧೦ ॥ ಅಂತರಿಕ್ಷಗತಾಸ್ಸರ್ವೇ ಸರ್ವೇ ಮಾಯಾವಿಶಾರದಾಃ । ಸರ್ವೇ ತ್ರಿದಶದರ್ಪಘ್ನಾಸ್ಸರ್ವೇ ಚ ರಣದುರ್ಜಯಾಃ ॥ ೧೧ ॥ ಸರ್ವೇಚ ಬಲಸಂಪನ್ನಾಸ್ಸರ್ವೇ ವಿಸ್ತೀರ್ಣಕೀರ್ತಯಃ । ಸರ್ವೇ ಸಮರಮಾಸಾದ್ಯ ನಶ್ರೂಯಂತೇ ಪರಾಜಿತಾಃ । ದೇವೈರಪಿ ಸಗಂಧರ್ವೈಸ್ಸಕಿನ್ನರಮಹೋರಗೈಃ ॥ ೧೨ ॥ ಸರ್ವೇಚ ವಿದುಷೋ ವೀರಾಸ್ಸರ್ವೇ ಯುದ್ಧವಿಶಾರದಾಃ । ಸರ್ವೇ ಪ್ರವರವಿಜ್ಞಾನಾಸ್ಸರ್ವೇ ಲಬ್ಧವರಾಸ್ತಥಾ ॥ ೧೩ ॥ ಸತೈಸ್ತದಾ ಭಾಸ್ಕರತುಲ್ಯವರ್ಚಸೈಸ್ಸುತೈರ್ವೃತಃ ಶತ್ರುಬಲಪ್ರಮರ್ದನೈಃ । ರರಾಜ ರಾಜಾ ಮಘವಾ

ತ್ರಿಶಿರಸಃ - ತ್ರಿಶಿರಸ್ಕನ, ವಾಕ್ಯಂ - ಮಾತನ್ನು, ಶ್ರುತ್ವಾ - ಕೇಳಿ, ದೇವಾಂ.....ಕೌ - ದೇವಾಂತಕ ನರಾಂತಕರಿಬ್ಬರೂ, ಅತಿತೇಜಸ್ವಿ - ಬಹಳ ಪರಾಕ್ರಮಿಯಾದ, ಅತಿಕಾಯಶ್ಚ - ಅತಿಕಾಯನೂಕೂಡ, ಯುದ್ಧಹರ್ಷಿತಾಃ - ಕಾಳಗದಲ್ಲಿ ಉತ್ಸಾಹವುಳ್ಳವರು, ಬಭೂವುಃ - ಆದರು, ತತಃ - ಬಳಿಕ, ಅಹಮಹಮಿತ್ಯೇವ - ನಾನು ಮುಂದು ತಾನು ಮುಂದು ಎಂತಲೇ, ಗರ್ಜಂತಃ - ಕೂಗುತ್ತಿರುವ, ನೈಋತರ್ಷಭಾಃ - ರಾಕ್ಷಸಶ್ರೇಷ್ಠರಾದ, ಶಕ್ರ....ಮಾಃ - ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ವೀರಾಃ - ಶೂರರಾದ, ರಾವಣಸ್ಯ - ರಾವಣನ, ಸುತಾಃ - ಮಕ್ಕಳು, ಸರ್ವೇ - ಸಮುಸ್ತರೂ, ಮಾಯಾ....ದಾಃ - ಮಾಯಾ ವಿದ್ಯೆಯಲ್ಲಿ ನಿಪುಣರಾದ, ಸರ್ವೇ - ಸಮುಸ್ತರೂ, ತ್ರಿದ....ಘ್ನಾಃ - ದೇವತೆಗಳ ಗರ್ವವನ್ನು ಮುರಿಯುವವರು, ಸರ್ವೇಚ - ಸಮುಸ್ತರೂ, ರಣದುರ್ಜಯಾಃ - ಕಾಳಗದಲ್ಲಿ ಜಯಿಸಲಸಾಧ್ಯರು. ॥೯-೧೧॥ ಸರ್ವೇ - ಸಮುಸ್ತರೂ, ವಿಸ್ತೀ....ಯಃ - ವಿಸ್ತಾರವಾದ ಕೀರ್ತಿಯುಳ್ಳವರು, ಸರ್ವೇ - ಸಮುಸ್ತರೂ, ಸಗಂಧರ್ವೈಃ - ಗಂಧರ್ವರೊಡಗೂಡಿದ, ಸಕಿ....ಗೈಃ - ಕಿನ್ನರರಿಂದಲೂ, ಮಹಾ ಸರ್ಪಗಳಿಂದಲೂ ಕೂಡಿದ, ದೇವೈರಪಿ - ದೇವತೆಗಳೊಡನೆ, ಸಮರಂ - ಕಾಳಗವನ್ನು, ಆಸಾದ್ಯ - ಹೊಂದಿ, ಪರಾಜಿತಾಃ - ಪರಾಜಿತರಾಗಿ, ನಶ್ರೂಯಂತೇ - ಕೇಳಲ್ಪಡುವುದಿಲ್ಲ. ॥ ೧೨ ॥ ಸರ್ವೇಚ - ಸಮುಸ್ತರೂ, ಪ್ರವ....ನಾಃ - ಶ್ರೇಷ್ಠವಾದ ಶಾಸ್ತ್ರಜ್ಞಾನವುಳ್ಳವರೂ, ಸರ್ವೇ - ಸಮುಸ್ತರೂ, ತಥಾ - ಹಾಗೆಯೇ, ಲಬ್ಧವರಾಃ - ಹೊಂದಲ್ಪಟ್ಟ ವರಗಳುಳ್ಳವರು. ॥ ೧೩ ॥ ತದಾ - ಆ ಕಾಲದಲ್ಲಿ, ಸಃರಾಜಾ - ಆ ರಾವಣನು, ಭಾಸ್ಕ....ಸೈಃ - ಸೂರ್ಯನಿಗೆ ಸಮಾನವಾದ

ಮಹಾ ಪರಾಕ್ರಮಿಗಳಾದ, ದೇವಾಂತಕ, ನರಾಂತಕ, ಅತಿಕಾಯ ಎಂಬ ರಾಜಪುತ್ರರು ಯುದ್ಧಾಭಿಲಾಷಿಗಳಾಗಿ, “ ನಾನು ಮುಂದು ತಾನು ಮುಂದು ” ಎಂದು ಗರ್ಜಿಸಿದರು. ಅವರೆಲ್ಲರೂ ಮಹಾ ಮಾಯಾವಿಗಳಾದವರು ; ಬಹು ಸಮರ್ಥರು ; ದೇವತೆಗಳ ಗರ್ವವನ್ನೂ ಭಂಗಗೊಳಿಸುವಂತಹ ಶೂರರು ; ರಣರಂಗದಲ್ಲಿ ಯಾರಿಂದಲೂ ಜಯಿಸಲಸಾಧ್ಯರು ; ಮಹಾ ಬಲಾಢ್ಯರಾದವರು ; ಪ್ರತಿಯೊಬ್ಬರೂ ವಿಶಾಲವಾದ ಕೀರ್ತಿಯುಳ್ಳವರು, ದೇವತೆಗಳೊಡನೆ ಯುದ್ಧಮಾಡಿದ್ದರೂ ಯಾವಾಗಲೂ ಪರಾಜಯವನ್ನು ಹೊಂದಿದವರಲ್ಲ. ಎಲ್ಲರೂ ಮಹಾ ವಿದ್ಯಾವಂತರಾಗಿಯೂ, ಶೂರರಾಗಿಯೂ, ಕಾಳಗದಲ್ಲಿ ಸಮರ್ಥರಾಗಿಯೂ, ವರಗಳನ್ನು ಪಡೆದವರಾಗಿಯೂ ಇರುವರು. ಮಹಾ ಪರಾಕ್ರಮಶಾಲಿಗಳಾದ ಆ ಮಕ್ಕಳೊಡಗೂಡಿದ ರಾವಣನು, ರಾಕ್ಷಸರ ಗರ್ವವನ್ನು ಮುರಿಯುವ ದೇವತೆಗಳೊಡಗೂಡಿದ

ಯಥಾಽಮರ್ಯೈರ್ವೃತೋ ಮಹಾದಾನವದರ್ಪನಾಶನೈಃ ‖ ೧೪ ‖ ಸಪುತ್ರಾನ್ ಸಂಪರಿಷ್ವಜ್ಯ ಭೂಷಯಿತ್ವಾ ಚ ಭೂಷಣೈಃ । ಆಶೀರ್ಭಿಶ್ಚ ಪ್ರಶಸ್ತಾಭಿಃ ಪ್ರೇಷಯಾಮಾಸ ಸಂಯುಗೇ ‖ ೧೫ ‖ ಯುದ್ಧೋನ್ಮತ್ತಂಚ ಮತ್ತಂಚ ಭ್ರಾತರೌ ಚಾಪಿ ರಾವಣಃ । ರಕ್ಷಣಾರ್ಥಂ ಕುಮಾರಾಣಾಂ ಪ್ರೇಷಯಾಮಾಸ ಸಂಯುಗೇ ‖ ೧೬ ‖ ತೇಽಭಿವಾದ್ಯ ಮಹಾತ್ಮಾನಂ ರಾವಣಂ ರಿಪುರಾವಣಂ । ಕೃತ್ವಾ ಪ್ರದಕ್ಷಿಣಂ ಚೈವ ಮಹಾಕಾಯಾಃ ಪ್ರತಸ್ಥಿರೇ ‖ ೧೭ ‖ ಸರ್ವೌಷಧೀಭಿರ್ಗಂಧೈಶ್ಚ ಸಮಾಲಭ್ಯ ಮಹಾಬಲಾಃ । ನಿರ್ಜಗ್ಮುರ್ನೈರ್ಋತಶ್ರೇಷ್ಠಾಃ ಷಡೇತೇ ಯುದ್ಧಕಾಂಕ್ಷಿಣಃ ‖ ೧೮ ‖ ತ್ರಿಶಿರಾಶ್ಚಾತಿಕಾಯಶ್ಚ ದೇವಾಂತಕನರಾಂತಕೌ । ಮಹೋದರಮಹಾಪಾರ್ಶ್ವೌ ನಿರ್ಜಗ್ಮುಃ ಕಾಲ

ತೇಜಸ್ಸುಳ್ಳವರು, ಶತ್ರು....ನೈಃ - ಶತ್ರುಬಲಸಂಹಾರಕರಾದ, ತೈಸ್ಸುತೈಃ - ಆ ಮಕ್ಕಳೊಡಗೂಡಿ, ಮಹಾ....ನೈಃ - ಮಹಾ ದಾನವರ ಗರ್ವವನ್ನು ನಾಶಗೊಳಿಸುತ್ತಿರುವ, ಅಮರೈಃ - ದೇವತೆಗಳಿಂದ, ವೃತಃ - ಸುತ್ತುವರೆದ, ಮಘವಾಯಥಾ - ದೇವೇಂದ್ರನಂತೆ, ರರಾಜ - ಹೊಳೆಯುತ್ತಿದ್ದನು. ‖೧೪‖ ಸಃ - ಆ ರಾವಣನು, ಪುತ್ರಾನ್ - ಮಕ್ಕಳನ್ನು, ಸಂಪರಿಷ್ವಜ್ಯ - ಅಪ್ಪಿಕೊಂಡು, ಭೂಷಣೈಃ - ಒಡವೆಗಳಿಂದ, ಭೂಷಯಿತ್ವಾ - ಅಲಂಕಾರ ಮಾಡಿಸಿ, ಪ್ರಶಸ್ತಾಭಿಃ - ಪ್ರಶಸ್ತಗಳಾದ, ಆಶೀರ್ಭಿಶ್ಚ - ಆಶೀರ್ವಚನಗಳಿಂದಲೂ, ಸಂಯುಗೇ - ಕಾಳೆಗಕ್ಕೆ, ಪ್ರೇಷಯಾಮಾಸ - ಕಳುಹಿಸಿಕೊಟ್ಟನು. ‖೧೫‖ ರಾವಣಃ - ರಾವಣನು, ಭ್ರಾತರೌ - ತಮ್ಮಂದಿರಾದ, ಯುದ್ಧೋನ್ಮತ್ತಂಚ - ಯುದ್ಧೋನ್ಮತ್ತನನ್ನೂ, ಮತ್ತಂಚ - ಮತ್ತನನ್ನೂ, ಸಂಯುಗೇ - ಕಾಳೆಗದಲ್ಲಿ, ಕುಮಾರಾಣಾಂ - ಮಕ್ಕಳ, ರಕ್ಷಣಾರ್ಥಂ - ಸಂರಕ್ಷಣಾರ್ಥವಾಗಿ, ಪ್ರೇಷಯಾಮಾಸ - ಕಳುಹಿಸಿದನು. ‖೧೬‖ ಮಹಾಕಾಯಾಃ - ದೊಡ್ಡ ಶರೀರಗಳುಳ್ಳ, ತೇ - ಆ ರಕ್ಕಸರು, ರಿಪುರಾವಣಂ - ಶತ್ರುಸಂಹಾರಕನಾದ, ಮಹಾತ್ಮಾನಂ - ಮಹಾಮನಸ್ವಿಯಾದ, ರಾವಣಂ - ರಾವಣಾಸುರನನ್ನು, ಅಭಿವಾದ್ಯ - ನಮಸ್ಕರಿಸಿ, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕೃತ್ವಾಚ - ಮಾಡಿ, ಪ್ರತಸ್ಥಿರೇ - ತೆರಳಿದರು. ‖ ೧೭ ‖ ಮಹಾಬಲಾಃ - ಬಹಳ ಸಾಮರ್ಥ್ಯವಂತರಾದ, ತ್ರಿಶಿರಾಶ್ಚ - ತ್ರಿಶಿರಸ್ಕನೂ, ಅತಿಕಾಯಶ್ಚ - ಅತಿಕಾಯನೂ, ದೇವಾಂ....ಕೌ- ದೇವಾಂತಕನೂ, ನರಾಂತಕನೂ, ಮಹೋ......ಶ್ವೌ - ಮಹೋದರನೂ, ಮಹಾಪಾರ್ಶ್ವನೂ ಎಂಬ, ನೈರ್ಋತಶ್ರೇಷ್ಠಾಃ - ರಾಕ್ಷಸಶ್ರೇಷ್ಠರಾದ, ಷಟ್ - ಆರುಮಂದಿ, ಸರ್ವೌಷಧೀಭಿಃ - ಸಮಸ್ತ ಓಷಧಿಲತೆಗಳಿಂದಲೂ, ಗಂಧೈಶ್ಚ - ಗಂಧಗಳಿಂದಲೂ, ಸಮಾಲಭ್ಯ - ಲೇಪನಮಾಡಿಕೊಂಡು, ಯುದ್ಧ

ಮಹೇಂದ್ರನಂತೆ ಶೋಭಿಸುತ್ತಿದ್ದನು. ‖ ೧೦–೧೪ ‖ ಅನಂತರದಲ್ಲಿ ಆ ರಾವಣನು ಆ ಪುತ್ರರೆಲ್ಲರನ್ನೂ ಅಪ್ಪಿ, ಒಡವೆಗಳಿಂದ ಅವರನ್ನು ಸಿಂಗರಿಸಿ ಉತ್ತಮವಾದ ಆಶೀರ್ವಾದಗಳಿಂದ ಅವರನ್ನು ಹರಿಸಿದನು. ಆ ರಾಕ್ಷಸರಾಜನು ಅವರನ್ನು ಕಾಳೆಗಕ್ಕೆ ಕಳುಹಿಸುವಾಗ, ತನ್ನ ತಮ್ಮಂದಿರಾದ, ಯುದ್ಧೋನ್ಮತ್ತ, ಮತ್ತ ಎಂಬವರನ್ನು ಅವರ ಸಂರಕ್ಷಣೆಗಾಗಿ ಕಳುಹಿಸಿದನು. ‖ ೧೫–೧೬ ‖ ಆ ಬಳಿಕ ಮಹಾ ಶರೀರಗಳುಳ್ಳ ಆ ಕುಮಾರರು, ಮಹಾ ಮನಸ್ವಿಯಾದ ತಮ್ಮ ತಂದೆಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿ ತೆರಳಿದರು. ‖ ೧೭ ‖ ಮಹಾಬಲಾಢ್ಯರಾಗಿಯೂ, ರಾಕ್ಷಸೋತ್ತಮರಾಗಿಯೂ ಇರುವ ತ್ರಿಶಿರಸ್ಕ, ಅತಿಕಾಯ, ದೇವಾಂತಕ, ನರಾಂತಕ, ಮಹಾಪಾರ್ಶ್ವ, ಮಹೋದರ ಎಂಬ ಆ ಆರುಮಂದಿ ರಾಕ್ಷಸೋತ್ತಮರೂ ದಿವ್ಯ ಗಂಧವನ್ನು ಲೇಪಿಸಿಕೊಂಡು, ಯುದ್ಧಾಪೇಕ್ಷೆಯುಳ್ಳವರಾಗಿ ತೆರಳುತ್ತಿರಲು,

ಚೋದಿತಾಃ ‖ ೧೯ ‖ ತತಸ್ಸುದರ್ಶನಂ ನಾಮ ನೀಲಜೀಮೂತಸನ್ನಿಭಂ । ಐರಾವತಕುಲೇ ಜಾತಮಾರುರೋಹ ಮಹೋದರಃ ‖ ೨೦ ‖ ಸರ್ವಾಯುಧಸಮಾಯುಕ್ತಂ ತೂಣೀಭಿಶ್ಚ ಸ್ವಲಂಕೃತಂ । ರರಾಜ ಗಜಮಾಸ್ಥಾಯ ಸವಿತೇವಾಽಸ್ತಮೂರ್ಧನಿ ‖ ೨೧ ‖ ಹಯೋತ್ತಮಸಮಾಯುಕ್ತಂ ಸರ್ವಾಯುಧಸಮಾಕುಲಂ । ಆರುರೋಹ ರಥಶ್ರೇಷ್ಠಂ ತ್ರಿಶಿರಾ ರಾವಣಾತ್ಮಜಃ ‖ ೨೨ ‖ ತ್ರಿಶಿರಾ ರಥಮಾಸ್ಥಾಯ ವಿರರಾಜ ಧನುರ್ಧರಃ । ಸವಿದ್ಯುದುಲ್ಕಶ್ಶೈಲಾಗ್ರೇ ಸೇಂದ್ರಚಾಪ ಇವಾಂಬುದಃ ‖ ೨೩ ‖ ತ್ರಿಭಿಃ ಕಿರೀಟೈಶ್ಶುಶುಭೇ ತ್ರಿಶಿರಾಸ್ಸರಥೋತ್ತಮೇ । ಹಿಮವಾನಿವ ಶೈಲೇಂದ್ರಸ್ತ್ರಿಭಿಃ ಕಾಂಚನಪರ್ವತೈಃ ‖ ೨೪ ‖ ಅತಿಕಾಯೋಽಪಿ ತೇಜಸ್ವೀ ರಾಕ್ಷಸೇಂದ್ರಸುತಸ್ತದಾ ।

ಕಾಂಕ್ಷಿಣಃ - ಕಾಳೆಗದಲ್ಲಿ ಅಪೇಕ್ಷೆಯುಳ್ಳವರಾಗಿ, ಕಾಲಚೋದಿತಾಃ - ಯಮನಿಂದ ಪ್ರೇರಿತರಾಗಿ, ನಿರ್ಜಗ್ಮುಃ-ಹೊರಟರು. ‖ ೧೮-೧೯ ‖ ತತಃ-ಬಳಿಕ, ಮಹೋದರಃ-ಮಹೋದರನು, ನೀಲ....ಶಂ- ಕಾಳಮೇಘಕ್ಕೆ ಸಮಾನವಾದ, ಐರಾವತಕುಲೇ - ಐರಾವತದ ವಂಶದಲ್ಲಿ, ಜಾತಂ - ಹುಟ್ಟಿರುವ, ಸುದರ್ಶನಂನಾಮ - ಸುದರ್ಶನವೆಂದು ಪ್ರಖ್ಯಾತವಾದ, ಸರ್ವಾ....ಕ್ತಂ - ಸಮಸ್ತ ಆಯುಧಗಳಿಂದಲೂ ತುಂಬಿರುವ, ತೂಣೀಭಿಶ್ಚ - ಬತ್ತಳಿಕೆಗಳಿಂದಲೂ, ಸ್ವಲಂಕೃತಂ - ಅಲಂಕರಿಸಲ್ಪಟ್ಟ, ಗಜಂ - ಆನೆಯನ್ನು, ಆರುರೋಹ - ಏರಿದನು. ‖ ೨೦ ‖ ಗಜಂ - ಆನೆಯನ್ನು, ಆಸ್ಥಾಯ - ಏರಿ, ಅಸ್ತಮೂರ್ಧನಿ - ಅಸ್ತಮಯಪರ್ವತಶಿಖರದಲ್ಲಿ, ಸವಿತೇವ - ಸೂರ್ಯನಂತೆ, ರರಾಜ - ಹೊಳೆಯುತ್ತಿದ್ದನು. ‖೨೧‖ ರಾವಣಾತ್ಮಜಃ - ರಾವಣನ ಮಗನಾದ, ತ್ರಿಶಿರಾಃ - ತ್ರಿಶಿರಸ್ಕನು, ಸರ್ವಾ....ಲಂ- ಸಮಸ್ತವಾದ ಆಯುಧಗಳಿಂದಲೂ ತುಂಬಿರುವ, ಹಯೋ....ಕ್ತಂ - ಉತ್ತಮವಾದ ಕುದುರೆಗಳಿಂದ ಕೂಡಿರುವ, ರಥಶ್ರೇಷ್ಠಂ - ಉತ್ತಮ ರಥವನ್ನು, ಆರುರೋಹ - ಹತ್ತಿದನು. ‖ ೨೨ ‖ ಧನುರ್ಧರಃ - ಧನುರ್ಧಾರಿಯಾದ, ತ್ರಿಶಿರಾಃ - ತ್ರಿಶಿರಸ್ಕನು, ರಥಂ - ತೇರನ್ನು, ಆಸ್ಥಾಯ - ಏರಿ, ಸವಿದ್ಯುದುಲ್ಕಃ - ಮಿಂಚಿನಿಂದಲೂ, ಕೊಳ್ಳಿಗಳಿಂದಲೂ ಕೂಡಿದ, ಸೇಂದ್ರಚಾಪಃ - ಇಂದ್ರನ ಧನುಸ್ಸಿನಿಂದೊಡಗೂಡಿದ, ಶೈಲಾಗ್ರೇ - ಪರ್ವತಾಗ್ರದಲ್ಲಿರುವ, ಅಂಬುದಇವ - ಮೇಘದಂತೆ, ರರಾಜ - ಹೊಳೆಯುತ್ತಿದ್ದನು. ‖ ೨೩ ‖ ಸಃತ್ರಿಶಿರಾಃ - ಆ ಮೂರು ತಲೆಯುಳ್ಳ ಆ ತ್ರಿಶಿರಸ್ಕನು, ತ್ರಿಭಿಃ - ಮೂರಾದ, ಕಿರೀಟೈಃ - ಕಿರೀಟಗಳಿಂದ, ರಥೋತ್ತಮೇ - ಉತ್ತಮವಾದ ತೇರಿನಲ್ಲಿ, ತ್ರಿಭಿಃ - ಮೂರಾದ, ಕಾಂಚನಪರ್ವತೈಃ - ಭಂಗಾರದ ಬೆಟ್ಟಗಳಿಂದ, ಹಿಮವಾನ್ - ಹಿಮವತ್ಪರ್ವತವೆಂಬ, ಶೈಲೇಂದ್ರಇವ - ಹಿಮಾಚಲದಂತೆ, ಶುಶುಭೇ - ಹೊಳೆಯುತ್ತಿದ್ದನು. ‖ ೨೪ ‖ ಸರ್ವ....ತಾಂ -

---

ಮಹೋದರನು ಐರಾವತಕುಲದಲ್ಲಿ ಹುಟ್ಟಿದ ಕಾಲಮೇಘಸದೃಶವಾಗಿಯೂ, ಸರ್ವಾಲಂಕಾರಭೂಷಿತವಾಗಿಯೂ ಇರುವ ಸುದರ್ಶನವೆಂಬ ಆನೆಯನ್ನೇರಿ, ಸೂರ್ಯನಂತೆ ಬೆಳಗುತ್ತಿದ್ದನು. ರಾವಣಪುತ್ರನಾದ ತ್ರಿಶಿರಸ್ಕನು, ಸಮಸ್ತರಾದ ಆಯುಧಗಳಿಂದ ತುಂಬಿ ಉತ್ತಮವಾದ ಕುದುರೆಗಳಿಂದ ಕೂಡಿರುವ ರಥದಲ್ಲಿ ಕುಳಿತು, ಮಿಂಚುಗಳಿಂದಲೂ, ಕೊಳ್ಳಿಗಳಿಂದಲೂ, ಇಂದ್ರಧ್ವಜದಿಂದಲೂ ಕೂಡಿದ ಪರ್ವತಾಗ್ರದಲ್ಲಿಯ ಕಾಳಮೇಘದಂತೆ ಹೊಳೆಯುತ್ತಿದ್ದನು. ಇಷ್ಟೆಯಲ್ಲದೆ ಆ ತ್ರಿಶಿರಸ್ಕನು ರಥಾರೂಢನಾಗಿ, ಮೂರು ಚಿನ್ನದ ಬೆಟ್ಟಗಳೊಡಗೂಡಿದ ಹಿಮವತ್ಪರ್ವತದಂತೆ ತಾನು ಧರಿಸಿದ್ದ ಮೂರು ಕಿರೀಟಗಳಿಂದ ಬೆಳಗುತ್ತಿದ್ದನು. ‖ ೧೮—೨೪ ‖ ಅದೇ ಸಮಯದಲ್ಲಿ ಧನುರ್ಧಾರಿಗಳಲ್ಲಿ ಉತ್ತಮನಾಗಿರುವ ಅತಿ

ಆರುರೋಹ ರಥಶ್ರೇಷ್ಠಂ ಶ್ರೇಷ್ಠಸ್ಸರ್ವಧನುಷ್ಮತಾಂ ॥ ೨೫ ॥ ಸುಚಕ್ರಾಕ್ಷಂ ಸುಸಂಯುಕ್ತಂ ಸ್ವನುಕರ್ಷಂ ಸುಕೂಬರಂ । ತೂಣೀಬಾಣಾಸನೈರ್ದೀಪ್ತಂ ಪ್ರಾಸಾಸಿಪರಿಘಾಕುಲಂ ॥ ೨೬ ॥ ಸಕಾಂಚನವಿಚಿತ್ರೇಣ ಮುಕುಟೇನ ವಿರಾಜತಾ । ಭೂಷಣೈಶ್ಚ ಬಭೌ ಮೇರುಃ ಕಿರಣೈರಿವ ಭಾಸಯನ್ ॥ ೨೭ ॥ ಸರರಾಜ ರಥೇ ತಸ್ಮಿನ್ ರಾಜಸೂನುರ್ಮಹಾಬಲಃ । ವೃತೋ ನೈರ್ಋತಶಾರ್ದೂಲೈರ್ವಜ್ರಪಾಣಿರಿವಾಮರೈಃ ॥ ೨೮ ॥ ಹಯಮುಚ್ಚೈಃಶ್ರವಃ ಪ್ರಖ್ಯಂ ಶ್ವೇತಂ ಕನಕಭೂಷಣಂ । ಮನೋಜವಂ ಮಹಾಕಾಯಮಾರುರೋಹ ನರಾಂತಕಃ ॥ ೨೯ ॥ ಗೃಹೀತ್ವಾ ಪ್ರಾಸಮುಲ್ಕಾಭಂ

ಧನುರ್ಧಾರಿಗಳಲ್ಲೆಲ್ಲಾ, ಶ್ರೇಷ್ಠಃ - ಉತ್ತಮನಾದ, ತೇಜಸ್ವೀ - ಪರಾಕ್ರಮಶಾಲಿಯಾದ, ರಾಕ್ಷಸೇಂದ್ರಸುತಃ - ರಾವಣನ ಮಗನಾದ, ಅತಿಕಾಯೋಪಿ - ಅತಿಕಾಯನೂ ಕೂಡ, ತದಾ - ಆ ಕಾಲದಲ್ಲಿ, ಸಚಕ್ರಾಕ್ಷಂ - ಬಂಡಿಯ ಚಕ್ರಗಳೂ, ಬಂಡಿ ಅಚ್ಚೂ ಉಳ್ಳ, ಸುಸಂಯುಕ್ತಂ - ಚನ್ನಾಗಿ ಕೂಡಿಸಿರುವ, ಸ್ವನುಕರ್ಷಂ - ಬಲವಾದ ಕೆಳಮರಗಳುಳ್ಳ, ಸುಕೂಬರಂ - ಬಲವಾದ ಕಾಡೀಮರಕ್ಕೆ ಆಸರೆಯಾದ ಮರಗಳುಳ್ಳ, ತೂಣೀ....ನೈಃ - ಬತ್ತಳಿಕೆಗಳಿಂದಲೂ, ಧನುಸ್ಸುಗಳಿಂದಲೂ, ದೀಪ್ತಂ- ಹೊಳೆಯುತ್ತಿರುವ, ಪ್ರಾಸಾ....ಲಂ - ಈಟಿಗೋಲುಗಳಿಂದಲೂ, ಕತ್ತಿಗಳಿಂದಲೂ, ಪರಿಘಾಯುಧಗಳಿಂದಲೂ ತುಂಬಿರುವ, ರಥಶ್ರೇಷ್ಠಂ - ಉತ್ತಮವಾದ ತೇರನ್ನು, ಆರುರೋಹ - ಏರಿದನು. ॥ ೨೫-೨೬ ॥ ಸಃ-ಆ ಅತಿಕಾಯನು, ಕಾಂಚ....ಣ-ಭಂಗಾರದಿಂದ ಆಶ್ಚರ್ಯಕರವಾಗಿ, ವಿರಾಜತಾ- ಹೊಳೆಯುತ್ತಿರುವ, ಮಕುಟೇನ - ಕಿರೀಟದಿಂದಲೂ, ಭೂಷಣೈಶ್ಚ - ಒಡವೆಗಳಿಂದಲೂ, ಕಿರಣೈಃ- ಕಾಂತಿಗಳಿಂದಲೂ, ಭಾಸಯನ್ - ಹೊಳೆಯುತ್ತಿರುವ, ಮೇರುರಿವ - ಮೇರುಪರ್ವತದಂತೆ, ಬಭೌ - ಹೊಳೆಯುತ್ತಿದ್ದನು. ॥ ೨೭ ॥ ಮಹಾಬಲಃ - ಬಹಳ ಬಲಶಾಲಿಯಾದ, ರಾಜಸೂನುಃ - ಅರಸು ಮಗನಾದ, ಸಃ - ಆ ಅತಿಕಾಯನು, ತಸ್ಮಿನ್‌ರಥೇ - ಆ ತೇರಿನಲ್ಲಿ, ಅಮರೈಃ - ದೇವತೆಗಳೊಡನೆ, ವಜ್ರಪಾಣಿರಿವ - ದೇವೇಂದ್ರನಂತೆ, ನೈರ್ಋ....ಲೈಃ - ರಾಕ್ಷಸಶ್ರೇಷ್ಠರಿಂದ, ವೃತಃ - ಸುತ್ತುವರೆದವನಾಗಿ, ರರಾಜ - ಹೊಳೆಯುತ್ತಿದ್ದನು. ॥೨೮॥ ನರಾಂತಕಃ - ನರಾಂತಕನು, ಉಚ್ಚೈಃ....ಖ್ಯಂ - ಉಚ್ಚೈಃಶ್ರವಸ್ಸೆಂಬ ಇಂದ್ರಾಶ್ವಕ್ಕೆ ಸಮಾನವಾದ ಕಾಂತಿಯುಳ್ಳ, ಕನಕಭೂಷಣಂ - ಭಂಗಾರದ ಕಡಿವಾಣಗಳುಳ್ಳ, ಶ್ವೇತಂ - ಬೆಳ್ಳಗಿರುವ, ಮನೋಜವಂ - ಮನಸ್ಸಿನಂತೆ ವೇಗವುಳ್ಳ, ಮಹಾಕಾಯಂ - ದೊಡ್ಡ ಶರೀರವುಳ್ಳ, ಹಯಂ - ಕುದುರೆಯನ್ನು, ಆರುರೋಹ - ಏರಿದನು. ॥ ೨೯ ॥ ನರಾಂತಕಃ - ನರಾಂತಕನು, ಉಲ್ಕಾಭಂ - ಉರಿಯುತ್ತಿರುವ ಕೊಳ್ಳಿಯಂತೆ ಬೆಳಗುತ್ತಿರುವ, ಪ್ರಾಸಂ - ಪ್ರಾಸಾ

ಕಾಯನೂ ಬಲವಾದ ಚಕ್ರಗಳಿಂದಲೂ, ಅಚ್ಚಿನಿಂದಲೂ, ಕಾಡೀಮರದಿಂದಲೂ, ಅದಕ್ಕೆ ಆಧಾರಭೂತವಾದ ಮರಗಳಿಂದಲೂ ಕೂಡಿ ಪ್ರಾಸಾದ್ಯಾಯುಧಸಂಪನ್ನವಾದ ರಥದಲ್ಲಿ ಕುಳಿತು, ಸುವರ್ಣಕಿರೀಟಗಳಿಂದಲೂ, ಒಡವೆಗಳಿಂದಲೂ, ಸ್ವತೇಜಸ್ಸಿನಿಂದಲೂ, ಮೇರುಪರ್ವತದಂತೆ ವಿರಾಜಿಸುತ್ತ, ದೇವತೆಗಳೊಡಗೂಡಿದ ವಜ್ರಧರನಂತೆ ರಾಕ್ಷಸರಿಂದ ಪರಿವೃತನಾಗಿದ್ದನು. ॥ ೨೫-೨೮ ॥ ನರಾಂತಕನಾದರೋ ಉಚ್ಚೈಃಶ್ರವಸ್ಸಿಗೆ ಸಮಾನವಾದ ಶುಭ್ರವೂ, ಸುವರ್ಣವಿಕಾರವೂ ಆದ ಒಡವೆಗಳುಳ್ಳದ್ದಾಗಿ, ಮನಸ್ಸಿಗಿಂತಲೂ, ವೇಗವಾಗಿ ಹೋಗುವ ದೊಡ್ಡ ದೇಹದ ಕುದುರೆಯೊಂದನ್ನೇರಿ ಕೊಳ್ಳಿಯಂತೆ ಬೆಳಗುವ ಪ್ರಾಸಾಯುಧವನ್ನು ಹಿಡಿದು, ಶಕ್ತ್ಯಾಯುಧಪಾಣಿಯೂ ಆಗಿ, ನವಿಲನ್ನೇರಿದ ಕುಮಾರಸ್ವಾಮಿಯಂತೆ

ವಿರರಾಜ ನರಾಂತಕಃ । ಶಕ್ತಿಮಾದಾಯ ತೇಜಸ್ವೀ ಗುಹಃ ಶಿಖಿಗತೋ ಯಥಾ ॥ ೩೦ ॥ ದೇವಾಂತಕಸ್ಸಮಾದಾಯ ಪರಿಘಂ ವಜ್ರಭೂಷಣಂ । ಪರಿಗೃಹ್ಯ ಗಿರಿಂ ದೋರ್ಭ್ಯಾಂ ವಪುರ್ವಿಷ್ಣೋರ್ವಿಡಂಬಯನ್ ॥ ೩೧ ॥ ಮಹಾಪಾರ್ಶ್ವೋ ಮಹಾಕಾಯೋ ಗದಾಮಾದಾಯ ವೀರ್ಯವಾನ್ । ವಿರರಾಜ ಗದಾಪಾಣಿಃ ಕುಬೇರಇವ ಸಂಯುಗೇ ॥ ೩೨ ॥ ಪ್ರತಸ್ಥಿರೇ ಮಹಾತ್ಮಾನೋ ಬಲೈರಪ್ರತಿಮೈರ್ವೃತಾಃ । ತಾನ್ ಗಜೈಶ್ಚ ತುರಂಗೈಶ್ಚ ರಥೈಶ್ಚಾಂಬುದನಿಸ್ವನೈಃ । ಅನುಜಗ್ಮುರ್ಮಹಾತ್ಮಾನೋ ರಾಕ್ಷಸಾಃ ಪ್ರವರಾಯುಧಾಃ ॥ ೩೩-೩೪ ॥ ತೇ ವಿರೇಜುರ್ಮಹಾತ್ಮಾನಃ ಕುಮಾರಾಸ್ಸೂರ್ಯ

ಯುಧವನ್ನು, ಗೃಹೀತ್ವಾ - ಹಿಡಿದು, ಶಕ್ತಿಂ - ಶಕ್ತ್ಯಾಯುಧವನ್ನು, ಆದಾಯ - ತೆಗೆದುಕೊಂಡು, ಶಿಖಿಗತಃ - ನವಿಲನ್ನೇರಿರುವ, ತೇಜಸ್ವೀ - ತೇಜೋವಂತನಾದ, ಗುಹೋಯಥಾ - ಕುಮಾರಸ್ವಾಮಿಯಂತೆ, ವಿರರಾಜ - ಹೊಳೆಯುತ್ತಿದ್ದನು. ॥೩೦॥ ದೇವಾಂತಕಃ - ದೇವಾಂತಕನು, ವಜ್ರಭೂಷಣಂ - ವಜ್ರದ ವಿಕಾರವಾದ ಒಡವೆಗಳುಳ್ಳ, ಪರಿಘಂ - ಪರಿಘಾಯುಧವನ್ನು, ಸಮಾದಾಯ - ತೆಗೆದುಕೊಂಡು, ದೋರ್ಭ್ಯಾಂ - ಭುಜಗಳಿಂದ, ಗಿರಿಂ - ಬೆಟ್ಟವನ್ನು, ಪರಿಗೃಹ್ಯ - ತೆಗೆದುಕೊಂಡು, ಸ್ಥಿತಸ್ಯ - ಇರುವ, ವಿಷ್ಣೋಃ - ಶ್ರೀಮಹಾವಿಷ್ಣುವಿನ, ವಪುಃ - ಶರೀರವನ್ನು, ವಿಡಂಬಯನ್ - ಅನುಕರಿಸುತ್ತ, ವಿರರಾಜ - ಹೊಳೆಯುತ್ತಿದ್ದನು. ॥೩೧॥ ಮಹಾಕಾಯಃ - ದೊಡ್ಡ ಶರೀರವುಳ್ಳ, ವೀರ್ಯವಾನ್ - ಸಾಮರ್ಥ್ಯವಂತನಾದ, ಮಹಾಪಾರ್ಶ್ವಃ - ಮಹಾಪಾರ್ಶ್ವನು, ಗದಾಂ- ಗದಾಯುಧವನ್ನು, ಆದಾಯ - ತೆಗೆನುಕೊಂಡು, ಸಂಯುಗೇ - ಕಾಳಿಗದಲ್ಲಿ, ಗದಾಪಾಣಿಃ - ಗದಾಯುಧವೇ ಹಸ್ತದಲ್ಲುಳ್ಳ, ಕುಬೇರಇವ - ಕುಬೇರನಂತೆ, ವಿರರಾಜ - ಹೊಳೆಯುತ್ತಿದ್ದನು. ॥ ೩೨ ॥ ಮಹಾತ್ಮಾನಃ - ಮಹಾ ಧೈರ್ಯವಂತರಾದ ಈ ರಕ್ಕಸರು, ಅಪ್ರತಿಮೈಃ - ಸಮಾನವಿಲ್ಲದ, ಬಲೈಃ - ಸೈನ್ಯಗಳೊಡನೆ, ವೃತಾಃ - ಸುತ್ತುವರೆದವರಾಗಿ, ಅಮರಾವತ್ಯಾಃ - ಅಮರಾವತಿಯ, ಅಪ್ರತಿಮೈಃ - ಸಮಾನವಿಲ್ಲದ, ಬಲೈಃ - ಸೈನ್ಯಗಳೊಡನೆ, ವೃತಾಃ - ಸುತ್ತುವರೆದ, ಸುರಾಇವ - ದೇವತೆಗಳಂತೆ, ಪ್ರತಸ್ಥಿರೇ - ಹೊರಟರು. ॥೩೩॥ ಮಹಾತ್ಮಾನಃ - ಮಹಾ ಧೈರ್ಯಶಾಲಿಗಳಾದ, ಪ್ರವರಾಯುಧಾಃ- ಉತ್ತಮವಾದ ಆಯುಧಗಳುಳ್ಳ, ರಾಕ್ಷಸಾಃ - ರಕ್ಕಸರು, ತಾನ್ - ಆ ರಕ್ಕಸರನ್ನು, ಗಜೈಶ್ಚ - ಆನೆಗಳೊಡನೆಯೂ, ತುರಂಗೈಶ್ಚ - ಕುದುರೆಗಳೊಡನೆಯೂ, ಅಂಬು....ನೈಃ - ಮೇಘಧ್ವನಿಯುಳ್ಳ, ರಥೈಶ್ಚ - ತೇರುಗಳಿಂದಲೂ, ಅನುಜಗ್ಮುಃ - ಅನುಸರಿಸಿ ತೆರಳಿದರು. ॥ ೩೪ ॥ ಮಹಾತ್ಮಾನಃ -

---

ಶೋಭಿಸುತ್ತಿದ್ದನು. ॥ ೨೯-೩೦ ॥ ದೇವಾಂತಕನು ವಜ್ರಖಚಿತವಾದ ಪರಿಘಾಯುಧವನ್ನು ಪರಿಗ್ರಹಿಸಿ, ಮಂದರಪರ್ವತವನ್ನೆತ್ತಿ ನಿಂತಿರುವ ಶ್ರೀಮನ್ನಾರಾಯಣನ ಶರೀರವನ್ನು ಅನುಕರಿಸುತ್ತಿದ್ದನು. ॥ ೩೧ ॥ ಮಹಾ ಶರೀರವುಳ್ಳ ಮಹಾಪಾರ್ಶ್ವನೆಂಬವನು ಗದಾಯುಧ ಧಾರಿಯಾಗಿ ಕುಬೇರನನ್ನು ಹೋಲಿ ಹೊಳೆಯುತ್ತಿದ್ದನು. ॥ ೩೨ ॥ ಈ ರೀತಿ ಮಹಾ ಪರಾಕ್ರಮಿಗಳಾದ ಆ ರಾಕ್ಷಸೋತ್ತಮರು, ಅಸದೃಶವಾದ ಸೈನ್ಯಗಳಿಂದ ಪರಿವೃತರಾಗಿ, ದೇವತೆಗಳು ಅಮರಾವತೀಪುರದಿಂದ ಹೊರಡುವಂತೆ ಲಂಕಾಪುರದಿಂದ ಹೊರಟರು. ॥ ೩೩ ॥ ಮಹಾ ಧೈರ್ಯಶಾಲಿಗಳಾಗಿಯೂ, ಉತ್ತಮವಾದ ಒಡವೆಗಳುಳ್ಳವರಾಗಿಯೂ ಇರುವ ರಾಕ್ಷಸರು ಅತಿಕಾಯ ತ್ರಿಶಿರಸ್ಕರೇ ಮೊದಲಾದವರನ್ನು ಅನುಸರಿಸಿ ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ಕೂಡಿ ಬರುತ್ತಿರಲು, ಮಹಾ ಧೈರ್ಯಶಾಲಿಗಳೂ,

ವರ್ಚಸಃ । ಕಿರೀಟಿನಶ್ಶ್ರಿಯಾ ಜುಷ್ಟಾ ಗ್ರಹಾ ದೀಪ್ತಾ ಇವಾಽಂಬರೇ ॥ ೩೫ ॥ ಪ್ರಗೃಹೀತೌ ಬಭೌ ತೇಷಾಂ ಶಸ್ತ್ರಾಣಾಮಾವಳಿಸ್ಸಿತಾ । ಶಾರದಾಭ್ರಪ್ರತೀಕಾಶಾ ಹಂಸಾವಳಿರಿವಾಂಬರೇ ॥ ೩೬ ॥ ಮರಣಂ ವಾಪಿ ನಿಶ್ಚಿತ್ಯ ಶತ್ರೂಣಾಂ ವಾ ಪರಾಜಯಂ । ಇತಿ ಕೃತ್ವಾ ಮತಿಂ ವೀರಾ ನಿರ್ಜಗ್ಮುಸ್ಸಂಯುಗಾರ್ಥಿನಃ ॥ ೩೭ ॥ ಜಗರ್ಜುಶ್ಚ ಪ್ರಣೇದುಶ್ಚ ಚಿಕ್ಷಿಪುಶ್ಚಾಪಿ ಸಾಯಕಾನ್ । ಜಗೃಹುಶ್ಚಾಪಿ ತೇ ವೀರಾ ನಿರ್ಯಾತಾ ಯುದ್ಧದುರ್ಮದಾಃ ॥ ೩೮ ॥ ಕ್ಷ್ವೇಳಿತಾಸ್ಫೋಟನಿನದೈಶ್ಚಚಾಲಚ ವಸುಂಧರಾ । ರಕ್ಷಸಾಂ ಸಿಂಹನಾದೈಶ್ಚ ಪ್ರಸ್ಫೋಟೇವ ತದಾಂಬರಂ ॥ ೩೯ ॥

ಮಹಾ ಧೈರ್ಯಶಾಲಿಗಳಾದ, ಸೂರ್ಯವರ್ಚಸಃ - ಸೂರ್ಯನ ತೇಜಸ್ಸುಳ್ಳ, ಕಿರೀಟನಃ - ಕಿರೀಟ ಧಾರಿಗಳಾದ, ಶ್ರಿಯಾ - ದೇಹಕಾಂತಿಯಿಂದ, ಜುಷ್ಟಾಃ - ವ್ಯಾಪ್ತರಾದ, ತೇಕುಮಾರಾಃ - ಆ ರಾವಣನ ಕುವರರು, ಅಂಬರೇ - ಅಂತರಿಕ್ಷದಲ್ಲಿ, ದೀಪ್ತಾಃ - ಹೊಳೆಯುತ್ತಿರುವ, ಗ್ರಹಾಇವ - ನವಗ್ರಹ ಗಳಂತೆ, ವಿರೇಜುಃ-ಹೊಳೆಯುತ್ತಿದ್ದರು. ॥೩೫॥ ತೇಷಾಂ-ಆ ರಾವಣನ ಮಕ್ಕಳಿಂದ, ಪ್ರಗೃಹೀತಾ-ಹಿಡಿಯಲ್ಪಟ್ಟ, ಸೀತಾ - ಮೊನಚಾಗಿರುವ, ಶಸ್ತ್ರಾಣಾಂ - ಆಯುಧಗಳ, ಆವಳಿಃ - ಪಜ್ತಿಯು ಶಾರ....ಶಾ - ಶರತ್ಕಾಲದ ಮೇಘಗಳಿಗೆ ಸಮಾನವಾದ, ಹಂಸಾವಳಿರಿವ - ಹಂಸಪಕ್ಷಿಗಳ ಪಜ್ತಿಯಂತೆ, ಅಂಬರೇ - ಅಂತರಿಕ್ಷದಲ್ಲಿ, ಬಭೌ - ಹೊಳೆಯುತ್ತಿತ್ತು. ॥೩೬॥ ಮರಣಂವಾಪಿ - ಮರಣವನ್ನೇ ಆಗಲಿ, ಶತ್ರೂಣಾಂ - ಶತ್ರುಗಳ, ಪರಾಜಯಂವಾ - ಪರಾಜಯವನ್ನೇ ಆಗಲಿ, ನಿಶಿತ್ಯ - ನಿಶ್ಚಯಿಸಿ, ಜಗ್ಮುಃ - ಹೊರಟರು, ಇತಿ - ಈ ರೀತಿ, ಮತಿಂ - ಮನಸ್ಸನ್ನು, ಕೃತ್ವಾ - ಮಾಡಿ, ವೀರಾಃ - ಶೂರರಾದ ಆ ರಾವಣನ ಮಕ್ಕಳು, ಸಂಯುಗಾರ್ಥಿನಃ - ಕಾಳೆಗಮಾಡಲಿಚ್ಛೆಯುಳ್ಳವರಾಗಿ, ನಿರ್ಜಗ್ಮುಃ - ಹೊರಟರು. ॥ ೩೭ ॥ ಯುದ್ಧ....ದಾಃ - ಕಾಳೆಗದಲ್ಲಿ ಮದೋದ್ಧತರಾದ, ತೇವೀರಾಃ - ಆ ಶೂರರು, ನಿರ್ಯಾತಾಃ - ಹೊರಟವರಾಗಿ, ಜಗರ್ಜುಃ - ಗರ್ಜನೆ ಮಾಡಿದರು, ಪ್ರಣೇದುಃ - ಕೂಗಾಡಿದರು, ಸಾಯಕಾನ್ - ಬಾಣಗಳನ್ನು, ಚಿಕ್ಷಿಪುಃ - ಎಸೆದರು, ಜಗೃಹುಶ್ಚಾಪಿ - ಆಯುಧಗಳನ್ನು ತೆಗೆದುಕೊಂಡರು. ॥ ೩೮ ॥ ತದಾ - ಆಗ, ವಸುಂಧರಾ - ಭೂಮಿಯು, ಕ್ಷ್ವೇಳಿ....ದೈಃ - ಸಿಂಹನಾದದಿಂದಲೂ, ಭುಜಾಸ್ಫಾಲನದಿಂದಲೂ ಹುಟ್ಟಿದ ಶಬ್ದದಿಂದ, ರಕ್ಷಸಾಂ - ರಕ್ಕಸರ, ಸಿಂಹನಾದೈಶ್ಚ - ಸಿಂಹಧ್ವನಿಗಳಿಂದಲೂ, ಚಚಾಲ - ನಡುಗಿತು, ಅಂಬರಂಚ - ಅಂತರಿಕ್ಷವೂ, ಪ್ರಸ್ಫೋಟೇವ - ಒಡೆದುಹೋಯಿತೋ ಎಂಬಂತಿತ್ತು. ॥ ೩೯ ॥ ಮಹಾಬಲಾಃ - ಮಹಾ ಬಲವಂತರಾದ, ರಾಕ್ಷಸೇಂದ್ರಾಃ - ರಾಕ್ಷಸಾಧಿಪತಿಗಳಾದ, ತೇ - ಆ ರಾಕ್ಷಸರು, ಮುದಿತಾಃ - ಸಂತೋಷಗೊಂಡವ

ಕಿರೀಟಧಾರಿಗಳೂ ಆದ ಆ ರಾವಣಪುತ್ರರು ನವಗ್ರಹಗಳಂತೆ ಹೊಳೆಯುತ್ತಿದ್ದರು. ಅವರು ಹಿಡಿದಿರುವ ಆಯುಧಗಳ ಪಜ್ತಿಯು, ಶರತ್ಕಾಲದ ಮೇಘಪಜ್ತಿಯಂತೆಯೂ, ಶುಭ್ರವಾಗಿ ಗಗನಮಾರ್ಗದಲ್ಲಿ ಹೊಳೆಯುವ ಹಂಸಪಕ್ಷಿಗಳ ಪಜ್ತಿಯಂತೆಯೂ ವಿರಾಜಿಸುತ್ತಿದ್ದಿತು. ॥ ೩೫–೩೬ ॥ ಆ ಸಮಯದಲ್ಲಿ ಮಹಾ ಶೂರರಾದ ಆ ರಾವಣಪುತ್ರರು "ರಣರಂಗದಲ್ಲಿ ಸಾಯಬೇಕು, ಇಲ್ಲವೇ ಹಗೆಗಳನ್ನು ಗೆಲ್ಲಬೇಕು" ಎಂದು ನಿಶ್ಚಯಿಸಿಕೊಂಡು ಧನುರ್ಬಾಣಗಳನ್ನು ಧರಿಸಿ ಗರ್ಜನಮಾಡುತ್ತಾ ಹೊರಟರು. ಆಗ ಭೂಮಿಯು ಅವರ ಸಿಂಹನಾದಗಳಿಂದ ಗುಡುಗಿತು; ಅಂತರಿಕ್ಷವು ಒಡೆದಂತಾಯಿತು. ॥೩೭–೩೯॥ ಈ ರೀತಿ ಆ ರಾಕ್ಷಸರು ರಣೋತ್ಸಾಹದಿಂದ ಹೊರಟು ಬರಲು, ಶಿಲೆಗಳನ್ನೂ, ಪರ್ವತಗಳನ್ನೂ

ತೇಽಭಿನಿಷ್ಕ್ರಮ್ಯ ಮುದಿತಾ ರಾಕ್ಷಸೇಂದ್ರಾ ಮಹಾಬಲಾಃ । ದದೃಶುರ್ವಾನರಾನೀಕಂ ಸಮುದ್ಯತಶಿಲಾನಗಂ ॥ ೪೦ ॥ ಹರಯೋಽಪಿ ಮಹಾತ್ಮಾನೋ ದದೃಶುರ್ನೈರ್ಋತಂ ಬಲಂ । ಹಸ್ತ್ಯಶ್ವರಥಸಂಬಾಧಂ ಕಿಂಕಿಣೀಶತನಾದಿತಂ ॥ ೪೧ ॥ ನೀಲಜೀಮೂತ ಸಂಕಾಶಂ ಸಮುದ್ಯತಮಹಾಯುಧಂ । ದೀಪ್ತಾನಲರವಿಪ್ರಖ್ಯೈಸ್ಸರ್ವತೋ ನೈರ್ಋತೈ ರ್ವೃತಂ ॥ ೪೨ ॥ ತದ್ದೃಷ್ಟ್ವಾ ಬಲಮಾಯಾಂತಂ ಲಬ್ಧಲಕ್ಷಾಃ ಪ್ಲವಂಗಮಾಃ । ಸಮುದ್ಯತಮಹಾಶೈಲಾ ಸ್ಸಂಪ್ರಣೇದುರ್ಮಹಾಬಲಾಃ । ಅಮೃಷ್ಯಮಾಣಾ ರಕ್ಷಾಂಸಿ ಪ್ರತಿನರ್ದಂತಿ ವಾನರಾಃ ॥ ೪೩-೪೪ ॥ ತತಸ್ಸಮುದ್ಘುಷ್ಟರವಂ ನಿಶಮ್ಯ ರಕ್ಷೋ ಗಣಾ ವಾನರಯೂಥಪಾನಾಂ । ಅಮೃಷ್ಯಮಾಣಾಃ ಪರಹರ್ಷಮುಗ್ರಂ ಮಹಾಬಲಾ ಭೀಮತರಂ ವಿನೇದುಃ ॥೪೫॥ ತೇ ರಾಕ್ಷಸಬಲಂ ಘೋರಂ ಪ್ರವಿಶ್ಯ ಹರಿಯೂಥಪಾಃ ।

ರಾಗಿ, ಅಭಿನಿಷ್ಕ್ರಮ್ಯ-ಹೊರಟುಬಂದು, ಸಮು....ಗಂ-ಎತ್ತಿ ಹಿಡಿದ ಕಲ್ಲುಗಳೂ ಮರಗಳೂ ಉಳ್ಳ, ವಾನರಾನೀಕಂ - ಕಪಿಗಳ ಸೈನ್ಯವನ್ನು, ದದೃಶುಃ - ಕಂಡರು. ॥ ೪೦ ॥ ಮಹಾತ್ಮಾನಃ - ಮಹಾ ಬಲವಂತರಾದ, ಹರಯೋಽಪಿ - ವಾನರರೂ, ಹಸ್ತ್ಯ....ಧಂ - ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ತುಂಬಿರುವ, ಕಿಂಕಿ....ತಂ - ನೂರಾರು ಕಿರುಗಂಟೆಗಳ ಧ್ವನಿಯುಳ್ಳ, ನೀಲ....ಶಂ - ನೀಲಮೇಘಗಳಿಗೆ ಸಮಾನವಾದ, ಸಮು....ಧಂ - ಎತ್ತಿಹಿಡಿದ ದೊಡ್ಡದೊಡ್ಡ ಆಯುಧಗಳುಳ್ಳ, ದೀಪ್ತಾ....ಖ್ಯೈಃ - ಹೊಳೆಯುತ್ತಿರುವ ಸೂರ್ಯಾಗ್ನಿಗಳ ಪ್ರಕಾಶವುಳ್ಳ, ನೈಋ....ತೈಃ - ರಕ್ಕಸ ರಿಂದ, ಸರ್ವತಃ - ಎಲ್ಲಾ ದಿಕ್ಕುಗಳಲ್ಲಿಯೂ, ವೃತಂ - ಸುತ್ತುವರೆದ, ನೈರ್ಋತಂಬಲಂ - ರಾಕ್ಷ ಸರ ಸೈನ್ಯವನ್ನು, ದದೃಶುಃ-ಕಂಡರು. ॥ ೪೧-೪೨ ॥ ಪ್ಲವಂಗಮಾಃ-ವಾನರರು, ಆಯಾಂತಂ-ಬರು ತ್ತಿರುವ, ತದ್ಬಲಂ - ಆ ಸೈನ್ಯವನ್ನು, ದೃಷ್ಟ್ವಾ - ಕಂಡು, ಲಬ್ಧಲಕ್ಷಾಃ - ಹೊಂದಲ್ಪಟ್ಟ ಗುರಿಯು ಳ್ಳವರಾಗಿ, ಸಮು....ಲಾಃ - ಮೇಲಕ್ಕೆತ್ತಿದ ದೊಡ್ಡ ಬೆಟ್ಟಗಳುಳ್ಳವರಾಗಿ, ಮಹಾಬಲಾಃ - ಮಹಾ ಬಲವಂತರಾದಕಾರಣ, ಸಂಪ್ರಣೇದುಃ - ಕೋಲಾಹಲಧ್ವನಿ ಮಾಡಿದರು. ॥ ೪೩ ॥ ರಕ್ಷಾಂಸಿ - ರಕ್ಕಸರನ್ನು, ಅಮೃಷ್ಯಮಾಣಾಃ - ಸಹಿಸಲಾರದೆ, ವಾನರಾಃ - ಕಪಿಗಳು, ಪ್ರತಿನರ್ದಂತಿ - ಪ್ರತಿಧ್ವನಿ ಮಾಡಿದರು. ॥ ೪೪ ॥ ತತಃ - ಬಳಿಕ, ರಕ್ಷೋಗಣಾಃ - ರಾಕ್ಷಸರ ತಂಡಗಳು, ವಾನ....ನಾಂ - ಕಪಿಯೂಥಪತಿಗಳ, ಸಮು....ವಂ - ಕೋಲಾಹಲಧ್ವನಿಯನ್ನು, ನಿಶಮ್ಯ - ಕೇಳಿ, ಮಹಾಬಲಾಃ - ಬಲವಂತರಾದಕಾರಣ, ಉಗ್ರಂ - ಕ್ರೂರವಾದ, ಪರಹರ್ಷಂ - ವೈರಿಗಳ ಸಂತೋಷವನ್ನು, ಅಮೃಷ್ಯ ಮಾಣಾಃ - ಸಹಿಸದೆ, ಭೀಮತರಂ - ಇನ್ನೂ ಭಯಂಕರವಾಗಿ, ವಿನೇದುಃ - ಕೂಗಿಕೊಂಡರು. ॥೪೫॥ ತೇಹರಿಯೂಥಪಾಃ - ಆ ವಾನರಯೂಥಪತಿಗಳು, ಘೋರಂ - ಭಯಂಕರವಾದ, ರಾಕ್ಷಸಬಲಂ -

---

ಆಯುಧಗಳನ್ನಾಗಿ ಹಿಡಿದಿರುವ ವಾನರರ ಸೇನೆಯನ್ನು ಕಂಡರು. ಮಹಾ ಬಲಾಢ್ಯರಾದ ಆ ವಾನರರಾದರೋ ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ತುಂಬಿ ಕಾಲ ಮೇಘಸದೃಶವಾಗಿ ಮೇಲಕ್ಕೆತ್ತಲ್ಪಟ್ಟ ಆಯುಧಗಳುಳ್ಳದಾಗಿ ಸೂರ್ಯಾಗ್ನಿಗಳಂತೆ ಬೆಳ ಗುವ ರಾಕ್ಷಸರಿಂದ ನಿಬಿಡೀಕೃತವಾಗಿರುವ ಆ ಸೈನ್ಯವನ್ನು ನೋಡಿ, ತರುಗಿರಿಗಳನ್ನೇ ಗುರಿಯಾಗಿ ಮೇಲಕ್ಕೆತ್ತಿ ಅಪಾರ ಕೋಲಾಹಲವನ್ನು ಮಾಡಿದರು. ॥ ೪೦–೪೪ ॥ ಆಮೇಲೆ ಆ ರಾಕ್ಷಸರ ಗುಂಪು ಆ ವಾನರಯೂಥಪತಿಗಳ ಸಿಂಹಧ್ವನಿಗಳನ್ನು ಕೇಳಿ, ಭಯಂಕರವಾದ ಅವರ ಅಟ್ಟಹಾಸವನ್ನು ಸೈರಿಸಲಾರದೇ ಅವರಿಗಿಂತಲೂ ಭಯಂಕರವಾಗಿ ಗರ್ಜಿಸಿದರು.

ವಿಚೇರುರುದ್ಯತ್ತೈಃ ಶೈಲೈರ್ನಗಾಃ ಶಿಖರಿಣೋ ಯಥಾ ||೪೬|| ಕೇಚಿದಾಕಾಶಮಾವಿಶ್ಯ ಕೇಚಿದುರ್ವ್ಯಾಂ ಪ್ಲವಂಗಮಾಃ । ರಕ್ಷಸ್ಸೈನ್ಯೇಷು ಸಂಕ್ರುದ್ಧಾಶ್ಚೇರುರ್ದ್ರುಮಶಿಲಾಯುಧಾಃ ||೪೭|| ದ್ರುಮಾಂಶ್ಚ ವಿಪುಲಸ್ಕಂಧಾನ್ ಗೃಹ್ಯ ವಾನರಪುಂಗವಾಃ । ತದ್ಯುದ್ಧಮಭವದ್ಘೋರಂ ರಕ್ಷೋವಾನರಸಂಕುಲಂ ||೪೮|| ತೇ ಪಾದಪಶಿಲಾಶೈಲೈಶ್ಚಕ್ರುರ್ವೃಷ್ಟಿಮನುತ್ತಮಾಂ । ಬಾಣೌಘೈರ್ವಾರ್ಯಮಾಣಾಶ್ಚ ಹರಯೋ ಭೀಮವಿಕ್ರಮಾಃ ||೪೯|| ಸಿಂಹನಾದಾನ್ ವಿನೇದುಶ್ಚ ರಣೇ ವಾನರರಾಕ್ಷಸಾಃ । ಶಿಲಾಭಿಶ್ಚೂರ್ಣಯಾಮಾಸುರ್ಯಾತುಧಾನಾನ್ ಪ್ಲವಂಗಮಾಃ ||೫೦|| ನಿಜಘ್ನುಸ್ಸಂಯುಗೇ

ರಕ್ಕಸರ ಸೈನ್ಯವನ್ನು, ಪ್ರವಿಶ್ಯ - ಪ್ರವೇಶಿಸಿ, ಉದ್ಯತ್ತೈಃ - ಉನ್ನತಗಳಾದ, ಶೈಲೈಃ - ಬೆಟ್ಟಗಳಿಂದ, ಶಿಖರಿಣಃ - ಶಿಖರಗಳುಳ್ಳ, ನಗಾಯಥಾ - ಬೆಟ್ಟಗಳಂತೆ, ವಿಚೇರುಃ - ಸಂಚರಿಸಿದರು. ||೪೬|| ಕೇಚಿತ್‍ಪ್ಲವಂಗಮಾಃ - ಕೆಲ ವಾನರರು, ಆಕಾಶಂ - ಆಕಾಶವನ್ನು, ಆವಿಶ್ಯ - ಪ್ರವೇಶಿಸಿ, ಕೇಚಿತ್ - ಕೆಲವರು, ಉರ್ವ್ಯಾಂ - ನೆಲದಲ್ಲಿ, ರಕ್ಷಸ್ಸೈನ್ಯೇಷು - ರಾಕ್ಷಸರ ಸೈನ್ಯಗಳಲ್ಲಿ, ಸಂಕ್ರುದ್ಧಾಃ - ಕುಪಿತರಾಗಿ, ದ್ರುಮ....ಧಾಃ - ಗಿಡಗಳೂ, ಬೆಟ್ಟಗಳೂ ಆಯುಧಗಳಾಗುಳ್ಳವರಾಗಿ, ಕೇಚಿತ್ - ಕೆಲವರು, ವಾನ....ವಾಃ - ವಾನರೋತ್ತಮರು, ವಿಪುಲಸ್ಕಂಧಾನ್ - ವಿಸ್ತಾರವಾದ ಕೊಂಬೆಗಳುಳ್ಳ, ದ್ರುಮಾನ್ - ಮರಗಳನ್ನು, ಗೃಹ್ಯ-ತೆಗೆದುಕೊಂಡು, ಚೇರುಃ-ಸಂಚರಿಸಿದರು. ||೪೭|| ಘೋರಂ-ಭಯಂಕರವಾದ, ತದ್ಯುದ್ಧಂ-ಆ ಯುದ್ಧವು, ರಕ್ಷೋ....ಲಂ-ರಕ್ಕಸರಿಂದಲೂ, ಕಪಿಗಳಿಂದಲೂ ತುಂಬಿದುದು, ಅಭವತ್-ಆಯಿತು, ಬಾಣೌಘೈಃ-ಬಾಣಗಳ ತಂಡಗಳಿಂದ, ವಾರ್ಯಮಾಣಾಃ-ತಡೆದ, ಭೀಮವಿಕ್ರಮಾಃ-ಭಯಂಕರ ಪರಾಕ್ರಮವುಳ್ಳ, ತೇಹರಯಃ - ಆ ಕಪಿಗಳು, ಪಾದ....ಲೈಃ-ಮರಗಳಿಂದಲೂ, ಕಲ್ಲುಗಳಿಂದಲೂ, ಬೆಟ್ಟಗಳಿಂದಲೂ, ಅನುತ್ತಮಾಂ - ಶ್ರೇಷ್ಠವಾದ, ವೃಷ್ಟಿಂ - ಮಳೆಯನ್ನು, ಚಕ್ರುಃ - ಸುರಿಸಿದರು. ||೪೮-೪೯|| ವಾನ....ಸಾಃ - ಆ ಕಪಿಗಳೂ, ರಕ್ಕಸರೂ, ರಣೇ - ಕಾಳಗದಲ್ಲಿ, ಸಿಂಹನಾದಾನ್ - ಸಿಂಹನಾದಗಳನ್ನು, ವಿನೇದುಃ - ಮಾಡಿದರು, ಪ್ಲವಂಗಮಾಃ - ಕಪಿಗಳು, ಶಿಲಾಭಿಃ - ಕಲ್ಲುಗಳಿಂದ, ಯಾತುಧಾನಾನ್ - ರಕ್ಕಸರನ್ನು, ಚೂರ್ಣಯಾಮಾಸುಃ - ಅರೆದು ಪುಡಿಗುಟ್ಟಿದರು. ||೫೦|| ಕೇಚಿತ್ - ಕೆಲವರು, ಪ್ಲವಂಗಮಾಃ - ಕಪಿಗಳು, ಸಂಯುಗೇ - ಕಾಳಗದಲ್ಲಿ, ಕ್ರುದ್ಧಾಃ - ಕುಪಿತರಾಗಿ, ಕವ....ತಾನ್ - ಕವಚಗಳಿಂದಲೂ, ಒಡವೆಗಳಿಂದಲೂ ಸುತ್ತುವರೆಯಲ್ಪಟ್ಟ, ರಥಗತಾನ್ -

---

ಆಗಲಾ ವಾನರಯೂಥಪತಿಗಳು ಬಹು ಭಯಂಕರವಾದ ಆ ರಾಕ್ಷಸಸಮೂಹವನ್ನು ಪ್ರವೇಶಿಸಿ ಮೇಲಕ್ಕೆತ್ತಿದ ಕೋಡುಗಳೊಡಗೂಡಿದ ಬೆಟ್ಟಗಳಂತೆ ದಿಟ್ಟತನದಿಂದ ಸಂಚರಿಸುತ್ತಿದ್ದರು. ಅವರಲ್ಲಿ ಕೆಲವಾನರರು ರಾಕ್ಷಸರಮೇಲೆ ಹಾರಿ ಬಿದ್ದು ಅವರನ್ನು ಬಲವಾಗಿ ಹೊಡೆದರು. ಇನ್ನು ಕೆಲವರು ನೆಲದಲ್ಲಿಯೇ ನಿಂತು ಮಹೋತ್ಸಾಹಪೂರಿತವಾಗಿ ರಾಕ್ಷಸರ ಸೈನ್ಯಗಳಮೇಲೆ ಮರಗಿಡಗಳನ್ನೆಸೆದರು. ಕೆಲವರು ದೊಡ್ಡದೊಡ್ಡ ರೆಂಬೆಗಳುಳ್ಳ ಹೆಮ್ಮರಗಳನ್ನು ತೆಗೆದುಕೊಂಡು ಸಂಚರಿಸಿದರು. ಈ ರೀತಿ ಆ ಯುದ್ಧವು ನಡೆಯಲು ಭೂಮಿಯು ಮಡಿದುರುಳಿದವರೂ,ಕೆಚ್ಚಿನಿಂದ ತಿರುಗುತ್ತಿರುವವರೂ ಆದ ರಾಕ್ಷಸರಿಂದಲೂ,ವಾನರರಿಂದಲೂ, ತುಂಬಿಹೋಯಿತು. ಆ ಸಮಯದಲ್ಲಿ ಮಹಾ ಪರಾಕ್ರಮಿಗಳಾದ ವಾನರರು ರಾಕ್ಷಸಭಟರ ಬಾಣಜಾಲಗಳಿಂದ ನಿವಾರಿತರಾದರೂ ಎದೆಗುಂದದೆ ಕಲ್ಮರಗಳ ಮಳೆಯನ್ನು ಸುರಿಸಿದರು. || ೪೬–೫೦ || ಕೆಲವಾನರರು ಬಹುವಾಗಿ ಕನಲಿ ಭೂಷಣಭೂಷಿತರಾಗಿ ರಥಗಳನ್ನೇರಿರುವ

ಕ್ರುದ್ಧಾಃ ಕವಚಾಭರಣಾವೃತಾನ್ । ಕೇಚಿದ್ರಥಗತಾನ್ ವೀರಾನ್ ಗಜವಾಜಿಗತಾನಪಿ । ॥ ೫೧ ॥ ನಿಜಘ್ನುಸ್ಸಹಸಾಽಪ್ಲುತ್ಯ ಯಾತುಧಾನಾನ್ ಪ್ಲವಂಗಮಾಃ । ಶೈಲಶೃಂಗಾಚಿತಾಂಗಾಶ್ಚ ಮುಷ್ಟಿಭಿರ್ವಾಂತಲೋಚನಾಃ । ಚೇರುಃ ಪೇತುಶ್ಚ ನೇದುಶ್ಚ ತತ್ರ ರಾಕ್ಷಸಪುಂಗವಾಃ ॥ ೫೨ ॥ ರಾಕ್ಷಸಾಶ್ಚ ಶರೈಸ್ತೀಕ್ಷ್ಣೈರ್ಬಿಭಿದುಃ ಕಪಿಕುಂಜರಾನ್ । ಶೂಲಮುದ್ಗರಖಡ್ಗೈಶ್ಚ ಜಘ್ನುಃ ಪ್ರಾಸೈಶ್ಚ ಶಕ್ತಿಭಿಃ ॥೫೩॥ ಅನ್ಯೋನ್ಯಂ ಪಾತಯಾಮಾಸುಃ ಪರಸ್ಪರಜಯೈಷಿಣಃ । ರಿಪುಶೋಣಿತದಿಗ್ಧಾಂಗಾಸ್ತತ್ರ ವಾನರರಾಕ್ಷಸಾಃ ॥ ೫೪ ॥ ತತಃ ಶೈಲೈಶ್ಚ ಖಡ್ಗೈಶ್ಚ ವಿಸೃಷ್ಟೈರ್ಹರಿರಾಕ್ಷಸೈಃ । ಮುಹೂರ್ತೇನಾವೃತಾ ಭೂಮಿರಭವಚ್ಛೋಣಿತಾಪ್ಲುತಾ ॥ ೫೫ ॥ ವಿಕೀರ್ಣಪರ್ವತಾಕಾರೈ ರಕ್ಷೋಭಿರರಿ

ರಥಾರೂಢರಾದ, ವೀರಾನ್ - ಶೂರರಾದ, ಗಜ....ಪಿ - ಆನೆಗಳನ್ನೂ, ಕುದುರೆಗಳನ್ನೂ ಏರಿರುವರಾದರೂ, ಯಾತುಧಾನಾನ್ - ರಕ್ಕಸರನ್ನು, ಸಹಸಾ - ಶೀಘ್ರವಾಗಿ, ಆಪ್ಲುತ್ಯ - ಹಾರಿ, ನಿಜಘ್ನುಃ - ಹೊಡೆದರು. ॥ ೫೧ ॥ ಶೈಲ....ಶ್ಚ - ಬೆಟ್ಟಗಳ ತುದಿಗಳಿಂದ ತಿವಿಯಲ್ಪಟ್ಟ ಶರೀರಗಳುಳ್ಳ, ಮುಷ್ಟಿಭಿಃ - ಹಿಡಿಗಳಿಂದ, ವಾಂತಲೋಚನಾಃ - ರಕ್ತವನ್ನು ಕಾರುತ್ತಿರುವ ಕಣ್ಣುಗಳುಳ್ಳವರಾದ, ರಾಕ್ಷಸಪುಂಗವಾಃ - ರಾಕ್ಷಸೋತ್ತಮರು, ತತ್ರ - ಆ ಕಾಳೆಗದಲ್ಲಿ, ಚೇರುಃ - ಸಂಚರಿಸಿದರು, ಪೇತುಃ - ಬಿದ್ದರು, ನೇದುಶ್ಚ-ಧ್ವನಿಗಳನ್ನೂ ಮಾಡುತ್ತಿದ್ದರು. ॥೫೨॥ ರಾಕ್ಷಸಾಶ್ಚ - ರಕ್ಕಸರೂ, ತೀಕ್ಷ್ಣೈಃ- ಕ್ರೂರಗಳಾದ, ಶರೈಃ - ಬಾಣಗಳಿಂದ, ಕಪಿಕುಂಜರಾನ್ - ವಾನರಶ್ರೇಷ್ಠರನ್ನು, ಬಿಭಿದುಃ - ಭೇದಿಸಿದರು, ಶೂಲ....ಶ್ಚ - ಶೂಲಗಳಿಂದಲೂ, ಮುದ್ಗರಾಯುಧಗಳಿಂದಲೂ, ಶಕ್ತಿಭಿಶ್ಚ - ಶಕ್ತ್ಯಾಯುಧಗಳಿಂದಲೂ, ಜಘ್ನುಃ - ಹೊಡೆದರು. ॥ ೫೩ ॥ ತತ್ರ - ಆ ರಣರಂಗದಲ್ಲಿ, ಪರ....ಣಃ - ಒಬ್ಬರಿಂಗೊಬ್ಬರು ಜಯವನ್ನು ಕೋರುತ್ತಿರುವ, ಶೋಣಿ....ಗಾಃ - ಶತ್ರುಗಳ ರಕ್ತದಿಂದ ಲೇಪನ ಮಾಡಲ್ಪಟ್ಟ ಶರೀರಗಳುಳ್ಳವರಾಗಿ, ವಾನರರಾಕ್ಷಸಾಃ - ಕಪಿರಾಕ್ಷಸರೀರ್ವರೂ, ಅನ್ಯೋನ್ಯಂ - ಪರಸ್ಪರವಾಗಿ, ಪಾತಯಾಮಾಸುಃ - ಕೆಡುಹಿದರು. ॥ ೫೪ ॥ ತತಃ - ಬಳಿಕ, ಭೂಮಿಃ - ನೆಲವು, ಹರಿರಾಕ್ಷಸೈಃ - ಕಪಿಗಳಿಂದಲೂ, ರಕ್ಕಸರಿಂದಲೂ, ವಿಸೃಷ್ಟೈಃ - ಬಿಡಲ್ಪಟ್ಟ, ಶೈಲೈಃ - ಬೆಟ್ಟಗಳಿಂದಲೂ, ಖಡ್ಗೈಶ್ಚ - ಕತ್ತಿಗಳಿಂದಲೂ, ಮುಹೂರ್ತೇನ - ಎರಡು ಘಳಿಗೆ ಕಾಲದಲ್ಲಿ, ಆವೃತಾ - ತುಂಬಿಸಲ್ಪಟ್ಟುದಾಗಿ, ಶೋಣಿತಾಪ್ಲುತಾ - ರಕ್ತದಿಂದ ನೆನೆಸಲ್ಪಟ್ಟುದು, ಅಭವತ್ - ಆಯಿತು. ॥ ೫೫ ॥ ತದಾ - ಆ ಕಾಲದಲ್ಲಿ, ವಸುಮತೀ - ಭೂಮಿಯು, ವಿಕೀ....ರೈಃ - ಪುಡಿಗುಟ್ಟಿದ ಪರ್ವತದಂತೆ ಆಕಾರವುಳ್ಳ,

---

ರಾಕ್ಷಸರನ್ನೂ, ಆನೆಗಳನ್ನೇರಿ ಬರುತ್ತಿರುವ ರಾಕ್ಷಸರನ್ನೂ ನೆಗೆನೆಗೆದು ಹಿಡಿಹಿಡಿದು ಕೆಡವಲು, ಅವರು ಪರ್ವತಶಿಖರಗಳಿಂದ ತಿವಿದ ದೇಹಗಳುಳ್ಳವರಾಗಿಯೂ, ಮುಷ್ಟಿಪ್ರಹಾರಗಳಿಂದ ಹೊಗಹೊರಟ ಕಣ್ಣುಗುಡ್ಡುಗಳುಳ್ಳವರಾಗಿಯೂ ಯುದ್ಧಭೂಮಿಯಲ್ಲಿ ಬಿದ್ದುರುಳಿದರು. ಅವರಲ್ಲಿ ಕೆಲವರು ಮೆಲ್ಲನೆ ಎಚ್ಚತ್ತು ತಿರುಗುತ್ತಿದ್ದರು. ಕೆಲವರು ನೋವನ್ನು ತಡೆಯಲಾರದೆ ಅರಚಿಕೊಂಡರು. ॥ ೫೧–೫೨ ॥ ಕೆಲ ರಾಕ್ಷಸರು ತೀಕ್ಷ್ಣವಾದ ಬಾಣಗಳಿಂದಲೂ, ಶೂಲಮುದ್ಗರಾದ್ಯಾಯುಧಗಳಿಂದಲೂ ವಾನರರನ್ನು ಹೊಡೆದರು. ಮಹಾಬಲಪರಾಕ್ರಮಶಾಲಿಗಳಾದ ಆ ವಾನರರಾಕ್ಷಸರು ಪರಸ್ಪರ ಜಯೇಚ್ಛೆಯುಳ್ಳವರಾಗಿ ಒಬ್ಬರನ್ನೊಬ್ಬರು ನೆಲದಲ್ಲಿ ಕೆಡವಿದರು. ॥ ೫೩–೫೪ ॥ ಆಗ ರಣಭೂಮಿಯು ವಾನರರಾಕ್ಷಸರಿಂದಲೂ, ವೃಕ್ಷ ಪರ್ವತ ಖಡ್ಗಾದಿಗಳಿಂದಲೂ ಕ್ಷಣಮಾತ್ರದಲ್ಲಿ ತುಂಬಿ ರಕ್ತದಿಂದ ತೊಯ್ದುಹೋಯಿತು. ಆ

ಮರ್ದನೈಃ । ಆಸೀದ್ವಸುಮತೀ ಪೂರ್ಣಾ ತದಾ ಯುದ್ಧಮದಾನ್ವಿತೈಃ ॥ ೫೬ ॥ ಆಕ್ಷಿಪ್ತಾಃ ಕ್ಷಿಪ್ಯಮಾಣಾಶ್ಚ ಭಗ್ನಶೂಲಾಶ್ಚ ವಾನರೈಃ । ಪುನರಂಗೈಸ್ತಥಾ ಚಕ್ರುರಾಸನ್ನಾ ಯುದ್ಧಮದ್ಭುತಂ ॥ ೫೭ ॥ ವಾನರಾನ್ ವಾನರೈರೇವ ಜಘ್ನುಸ್ತೇ ರಜನೀಚರಾಃ । ರಾಕ್ಷಸಾನ್ ರಾಕ್ಷಸೈರೇವ ಜಘ್ನುಸ್ತೇ ವಾನರಾ ಅಪಿ ॥ ೫೮ ॥ ಆಕ್ಷಿಪ್ಯಚ ಶಿಲಾಸ್ತೇಷಾಂ ನಿಜಘ್ನೂ ರಾಕ್ಷಸಾ ಹರೀನ್ । ತೇಷಾಂ ಚಾಚ್ಛಿದ್ಯ ಶಸ್ತ್ರಾಣಿ ಜಘ್ನೂ ರಕ್ಷಾಂಸಿ ವಾನರಾಃ ॥ ೫೯ ॥ ನಿಜಘ್ನುಃ ಶೈಲಶೂಲಾಸ್ತ್ರೈರ್ಬಿಭಿದುಶ್ಚ ಪರಸ್ಪರಂ । ಸಿಂಹನಾದಾನ್ವಿನೇದುಶ್ಚ ರಣೇ ವಾನರರಾಕ್ಷಸಾಃ ॥ ೬೦ ॥ ಛಿನ್ನವರ್ಮತನುತ್ರಾಣಾ

ಯುದ್ಧ....ತೈಃ - ಕಾಳಗದ ಕೊಬ್ಬಿನಿಂದ ಕೂಡಿರುವ, ಅರಿಮರ್ದನೈಃ - ಶತ್ರುಸಂಹಾರಕರಾದ, ರಕ್ಷೋಭಿಃ - ರಕ್ಕಸರಿಂದ, ಪೂರ್ಣಾ - ತುಂಬಿದುದು, ಆಸೀತ್ - ಆಯಿತು. ॥ ೫೬ ॥ ವಾನರೈಃ - ಕಪಿಗಳಿಂದ, ಆಕ್ಷಿಪ್ತಾಃ - ಹೊಡೆಯಲ್ಪಟ್ಟವರಾದರೂ, ಕ್ಷಿಪ್ಯಮಾಣಾಶ್ಚ - ಎತ್ತಿಹಾಕಲ್ಪಟ್ಟವರಾದರೂ, ಭಗ್ನಶೂಲಾಶ್ಚ - ಮುರಿಯಲ್ಪಟ್ಟ ಶೂಲಗಳುಳ್ಳವರಾದರೂ, ತಥಾ - ಹಾಗೆಯೇ, ಪುನಃ - ಮತ್ತು, ಆಸನ್ನಾಃ - ಬಳಿಸಾರಿ, ಅಂಗೈಃ - ಕೈಕಾಲುಗಳೇ ಮೊದಲಾದ ಅವಯವಗಳಿಂದ, ಅದ್ಭುತಂ - ಆಶ್ಚರ್ಯಕರವಾದ, ಯುದ್ಧಂ - ಕಾಳಗವನ್ನು, ಚಕ್ರುಃ - ಮಾಡಿದರು. ॥ ೫೭ ॥ ತೇರಜನೀಚರಾಃ - ಆ ರಕ್ಕಸರು, ವಾನರೈರೇವ - ಕಪಿಗಳಿಂದಲೇ, ವಾನರಾನ್ - ಕಪಿಗಳನ್ನು, ಜಘ್ನುಃ - ಹೊಡೆದರು, ವಾನರಾಪಿ - ಕಪಿಗಳಾದ, ತೇ - ಅವರೂ, ರಾಕ್ಷಸೈರೇವ - ರಕ್ಕಸರಿಂದಲೇ, ರಾಕ್ಷಸಾನ್ - ರಕ್ಕಸರನ್ನು, ಜಘ್ನುಃ - ಹೊಡೆದರು. ॥ ೫೮ ॥ ರಾಕ್ಷಸಾಃ - ರಕ್ಕಸರು, ತೇಷಾಂ - ಆ ಕಪಿಗಳ, ಶಿಲಾಃ - ಕಲ್ಲುಗಳನ್ನು, ಆಕ್ಷಿಪ್ಯ - ಕಸೆದುಕೊಂಡು, ಹರೀನ್ - ವಾನರರನ್ನು, ನಿಜಘ್ನುಃ - ಹೊಡೆದರು, ವಾನರಾಅಪಿ - ಕಪಿಗಳೂ, ತೇಷಾಂ - ಆ ರಕ್ಕಸರ, ಶಸ್ತ್ರಾಣಿ - ಆಯುಧಗಳನ್ನು, ಆಚ್ಛಿದ್ಯ - ಕಸೆದುಕೊಂಡು, ರಕ್ಷಾಂಸ್ಯೈವ - ರಾಕ್ಷಸರನ್ನೇ, ಜಘ್ನುಃ - ಹೊಡೆದರು. ॥ ೫೯ ॥ ವಾನರರಾಕ್ಷಸಾಃ - ಕಪಿಗಳೂ, ರಾಕ್ಷಸರೂ, ಶೈಲ....ಸ್ತ್ರೈಃ - ಪರ್ವತಗಳಿಂದಲೂ, ಶೂಲಾಯುಧಗಳಿಂದಲೂ, ಪರಸ್ಪರಂ - ಒಬ್ಬರನ್ನೊಬ್ಬರು, ನಿಜಘ್ನುಃ - ಹೊಡೆದರು, ಬಿಭಿದುಃ - ಸೀಳಿದರು, ಸಿಂಹನಾದಾನ್ - ಕೋಲಾಹಲ ಧ್ವನಿಗಳನ್ನು, ವಿನೇದುಃ - ಮಾಡಿದರು. ॥ ೬೦ ॥ ತತ್ರ - ಆ ಯುದ್ಧರಂಗದಲ್ಲಿ, ಛಿನ್ನ....ಣಾಃ - ಛೇದಿಸಲ್ಪಟ್ಟ ಕವಚರೂಪವಾದ ಅಂಗರಕ್ಷಗಳುಳ್ಳ, ರಾಕ್ಷಸಾಃ - ರಕ್ಕಸರು, ವಾನರೈಃ - ಕಪಿಗಳಿಂದ,

---

ಸಮಯದಲ್ಲಿ ವಾನರರಿಂದ ಪೆಟ್ಟುತಿಂದವರಾದರೂ, ಎತ್ತಿ ಎಸೆಯಲ್ಪಟ್ಟವರಾದರೂ, ಮುರಿದುಬಿದ್ದ ಆಯುಧಗಳುಳ್ಳವರಾದರೂ ಆ ರಾಕ್ಷಸರು ಮತ್ತೆಮತ್ತೆ ಹಾರಿಬಂದು ವಾನರರನ್ನು ಸಮೀಪಿಸಿ ಅತ್ಯಾಶ್ಚರ್ಯವುಂಟಾಗುವಂತೆ ತಮ್ಮ ಅಂಗೈಗಳಿಂದಲೇ ಪ್ರಬಲವಾದ ಯುದ್ಧವನ್ನು ಮಾಡಿದರು. ॥೫೫–೫೭॥ ರಣದುರ್ಮದರಾದ ಆ ರಾಕ್ಷಸರು ತಮಗೆ ಯಾವ ಆಯುಧಗಳೂ ದೊರಕದಿರಲು ವಾನರರನ್ನೇ ಹಿಡಿದು ಅವರಿಂದಲೇ ವಾನರರನ್ನು ಹೊಡೆದರು. ಆ ವಾನರರು ಸಹ ರಾಕ್ಷಸರಿಂದಲೇ ರಾಕ್ಷಸರನ್ನು ಕುಟ್ಟಿದರು. ಆಗಲಾ ರಾಕ್ಷಸರು ವಾನರರ ಕೈಗಳಲ್ಲಿರುವ ಕಲ್ಲುಗಳನ್ನು ಕಸೆದುಕೊಂಡು ಅವರನ್ನೇ ಬಲವಾಗಿ ಹೊಡೆಯುತ್ತಿರಲೂ, ವಾನರರು ಸಹ ರಾಕ್ಷಸರ ಶಸ್ತ್ರಗಳನ್ನು ಸೆಳೆದುಕೊಂಡು ಅವರನ್ನೇ ಹೊಡೆದು ಕೆಡವುತ್ತಿದ್ದರು. ಈ ರೀತಿ ಆ ವಾನರರಾಕ್ಷಸರು ಪರ್ವತ ಶೂಲ ಮಹಾಸ್ತ್ರಗಳೇ ಮೊದಲಾದವುಗಳಿಂದ ಒಬ್ಬರನ್ನೊಬ್ಬರು ಹೊಡೆದು ಕೋಲಾಹಲ ಧ್ವನಿಗಳನ್ನು ಮಾಡಿದರು.

ರಾಕ್ಷಸಾ ವಾನರೈರ್ಹತಾಃ । ರುಧಿರಂ ಪ್ರಸ್ರುತಾಸ್ತತ್ರ ರಸಸಾರಮಿವ ದ್ರುಮಾಃ ॥೬೧॥ ರಥೇನ ಚ ರಥಂ ಚಾಪಿ ವಾರಣೇನೈವ ವಾರಣಂ । ಹಯೇನಚ ಹಯಂ ಕೇಚಿನ್ನಿಜಘ್ನುರ್ವಾನರಾ ರಣೇ ॥ ೬೨ ॥ ಪ್ರಹೃಷ್ಟಮನಸಸ್ಸರ್ವೇ ಪ್ರಗೃಹೀತಮಹಾಶಿಲಾಃ । ಹರಯೋ ರಾಕ್ಷಸಾನ್ ಜಘ್ನುರ್ದ್ರುಮೈಶ್ಚ ಬಹುಶಾಖಿಭಿಃ ॥ ೬೩ ॥ ತದ್ಯುದ್ಧಮಭವದ್ಘೋರಂ ರಕ್ಷೋವಾನರಸಂಕುಲಂ ॥ ೬೪ ॥ ಕ್ಷುರಪ್ರೈರರ್ಧಚಂದ್ರೈಶ್ಚ ಭಲ್ಲೈಶ್ಚ ನಿಶಿತೈಃ ಶರೈಃ । ರಾಕ್ಷಸಾ ವಾನರೇಂದ್ರಾಣಾಂ ಚಿಚ್ಛಿದುಃ ಪಾದಪಾನ್ ಶಿಲಾಃ ॥೬೫॥ ವಿಕೀರ್ಣೈಃ ಪರ್ವತಾಗ್ರೈಶ್ಚ ದ್ರುಮೈಶ್ಛಿನ್ನೈಶ್ಚ ಸಂಯುಗೇ । ಹತೈಶ್ಚ ಕಪಿರಕ್ಷೋಭಿರ್ದುರ್ಗಮಾ ವಸುಧಾಽಭವತ್॥೬೬॥ತೇ ವಾನರಾ ಗರ್ವಿತಹೃಷ್ಟಚೇಷ್ಟಾಸ್ಸಂಗ್ರಾಮ

ಹತಾಃ - ಹೊಡೆಯಲ್ಪಟ್ಟವರಾಗಿ, ದ್ರುಮಾಃ - ಮರಗಳು, ರಸ....ವ - ಬಂಕೆಯನ್ನಂತೆ, ರುಧಿರಂ - ರಕ್ತವನ್ನು, ಪ್ರಸ್ರುತಾಃ - ಸ್ರವಿಸಿದರು. ॥ ೬೧ ॥ ರಣೇ - ಕಾಳೆಗದಲ್ಲಿ, ಕೇಚಿದ್ವಾನರಾಃ - ಕೆಲ ವಾನರರು, ರಥೇನಚ - ರಥದಿಂದಲೇ, ರಥಂಚಾಪಿ - ರಥವನ್ನೂ, ವಾರಣೇನೈವ - ಆನೆಯಿಂದಲೇ, ವಾರಣಂ - ಆನೆಯನ್ನೂ, ಹಯೇನಚ - ಕುದುರೆಯಿಂದಲೇ, ಹಯಂ - ಕುದುರೆಯನ್ನೂ, ನಿಜಘ್ನುಃ - ಹೊಡೆದರು. ॥ ೬೨ ॥ ಪ್ರಗೃ....ಲಾಃ - ತೆಗೆದುಕೊಂಡ ಮಣಿಶಿಲೆಗಳುಳ್ಳ, ಸರ್ವೇ - ಸಮಸ್ತರಾದ, ಹರಯಃ - ಕಪಿಗಳು, ಪ್ರಗೃ....ಸಃ - ಸಂತೋಷಯುಕ್ತವಾದ ಮನಸ್ಸುಳ್ಳವರಾಗಿ, ಬಹುಶಾಖಿಭಿಃ - ಅನೇಕ ರೆಂಬೆಗಳುಳ್ಳ, ದ್ರುಮೈಶ್ಚ - ವೃಕ್ಷಗಳಿಂದಲೂ, ರಾಕ್ಷಸಾನ್ - ರಕ್ಕಸರನ್ನು, ಜಘ್ನುಃ - ಹೊಡೆದರು. ॥ ೬೩ ॥ ರಕ್ಷೋ....ಲಂ - ರಾಕ್ಷಸರಿಂದಲೂ, ವಾನರರಿಂದಲೂ ಸಮ್ಮರ್ದವುಳ್ಳ, ತದ್ಯುದ್ಧಂ - ಆ ಕಾಳೆಗವು, ಘೋರಂ - ಭಯಂಕರವಾದುದು, ಅಭವತ್ - ಆಯಿತು. ॥ ೬೪ ॥ ಕ್ಷುರಪ್ರೈಃ - ಕಿರುಗತ್ತಿಗಳಿಂದಲೂ, ಅರ್ಧಚಂದ್ರೈಃ - ಅರ್ಧಚಂದ್ರಾಕಾರವಾದ ಬಾಣಗಳಿಂದಲೂ, ಭಲ್ಲೈಶ್ಚ - ಭಲ್ಲಾಯುಧಗಳಿಂದಲೂ, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದಲೂ, ರಾಕ್ಷಸಾಃ - ರಕ್ಕಸರು, ವಾನರೇಂದ್ರಾಣಾಂ - ವಾನರಯೂಥಪತಿಗಳ, ಪಾದಪಾನ್ - ವೃಕ್ಷಗಳನ್ನೂ, ಶಿಲಾಃ - ಕಲ್ಲುಗಳನ್ನೂ, ಚಿಚ್ಛಿದುಃ - ಕತ್ತರಿಸಿದರು. ॥ ೬೫ ॥ ಸಂಯುಗೇ - ಕಾಳೆಗದಲ್ಲಿ, ವಸುಧಾ - ಭೂಮಿಯು, ವಿಕೀರ್ಣೈಃ - ಎರಚಲ್ಪಟ್ಟ, ಪರ್ವತಾಗ್ರೈಶ್ಚ - ಪರ್ವತಗಳಿಂದಲೂ, ಛಿನ್ನೈಃ - ಕತ್ತರಿಸಲ್ಪಟ್ಟ, ದ್ರುಮೈಶ್ಚ - ವೃಕ್ಷಗಳಿಂದಲೂ, ಹತೈಃ - ಸಂಹೃತರಾದ, ಕಪಿರಕ್ಷೋಭಿಶ್ಚ - ವಾನರ ರಾಕ್ಷಸರಿಂದಲೂ, ದುರ್ಗಮಾ - ಹೊಗಲಸಾಧ್ಯವಾದದ್ದು, ಅಭವತ್ - ಆಯಿತು. ॥ ೬೬ ॥

॥೫೮-೬೦॥ ಇದೂ ಅಲ್ಲದೆ ಆ ರಣರಂಗದಲ್ಲಿ ಭೇದಿಸಿದ ಕವಚಗಳುಳ್ಳ ಆ ರಾಕ್ಷಸರು ಕಪಿಗಳಿಂದ ಪೆಟ್ಟುತಿಂದು, ವೃಕ್ಷಗಳು ಬಂಕೆಯನ್ನು ಕಾರುವಂತೆ ರಕ್ತವನ್ನು ಕಾರುತ್ತಿದ್ದರು. ಆ ರಣದಲ್ಲಿ ಕೆಲವಾನರರು ರಥಗಳಿಂದ ರಥಗಳನ್ನೂ, ಆನೆಗಳಿಂದ ಆನೆಗಳನ್ನೂ, ಕುದುರೆಗಳಿಂದ ಕುದುರೆಗಳನ್ನೂ ಹೊಡೆದು ಕೆಡವಿದರು. ॥ ೬೧-೬೨ ॥ ಇನ್ನು ಕೆಲವಾನರರು ವೃಕ್ಷಗಳಿಂದಲೇ ರಕ್ಕಸರನ್ನು ಕೊಲ್ಲುತ್ತಿದ್ದರು. ಹೀಗೆ ಆ ಯುದ್ಧವು ವಾನರರಾಕ್ಷಸರಿಂದ ಸಂಕುಲವಾದುದಾಗಲೂ, ರಾಕ್ಷಸರು ಕ್ಷುರಪ್ರ, ಅರ್ಧಚಂದ್ರವೇ ಮೊದಲಾದ ಬಾಣಗಳಿಂದ ಆ ವಾನರಯೂಥಪತಿಗಳ ವೃಕ್ಷಗಳನ್ನೂ, ಕಲ್ಲುಗಳನ್ನೂ ಮುರಿದಿಕ್ಕಿದರು.॥೬೩-೬೫॥ ಆಗ ಪರ್ವತಾಗ್ರಗಳಿಂದಲೂ, ಮುರಿದ ಹೆಮ್ಮರಗಳಿಂದಲೂ ಮಡಿದು ನೆಲಕ್ಕುರುಳಿದ ವಾನರರಾಕ್ಷಸರಿಂದಲೂ ರಣಭೂಮಿಯೆಲ್ಲವೂ ನಿಬಿಡೀಕೃತವಾಗಿ ಹೊಗಲಸದಳವಾಯಿತು.

ಮಾಸಾದ್ಯ ಭಯಂ ವಿಮುಚ್ಯ। ಯುದ್ಧಂತು ಸರ್ವೇ ಸಹರಾಕ್ಷಸೈಸ್ತೈರ್ನಾನಾಯುಧಾಶ್ಚಕ್ರುರದೀನಸತ್ತ್ವಾಃ ॥ ೬೭ ॥ ತಸ್ಮಿನ್ ಪ್ರವೃತ್ತೇ ತುಮುಲೇ ವಿಮರ್ದೇ ಪ್ರಹೃಷ್ಯಮಾಣೇಷು ವಲೀಮುಖೇಷು । ನಿಪಾತ್ಯಮಾನೇಷುಚ ರಾಕ್ಷಸೇಷು ಮಹರ್ಷಯೋ ದೇವಗಣಾಶ್ಚ ನೇದುಃ ॥ ೬೮ ॥ ತತೋ ಹಯಂ ಮಾರುತತುಲ್ಯವೇಗಮಾರುಹ್ಯ ಶಕ್ತಿಂ ನಿಶಿತಾಂ ಪ್ರಗೃಹ್ಯ । ನರಾಂತಕೋ ವಾನರರಾಜಸೈನ್ಯಂ ಮಹಾರ್ಣವಂ ಮೀನ ಇವಾವಿವೇಶ ॥ ೬೯ ॥ ಸವಾನರಾನ್ ಸಪ್ತಶತಾನಿ ವೀರಃ ಪ್ರಾಸೇನ ದೀಪ್ತೇನ ವಿನಿರ್ಬಿಭೇದ । ಏಕಕ್ಷಣೇನೇಂದ್ರರಿಪುರ್ಮಹಾತ್ಮಾ ಜಘಾನ ಸೈನ್ಯಂ ಹರಿಪುಂಗ

ಗರ್ವಿ....ಷ್ಟಾಃ - ಗರ್ವದಿಂದುಬ್ಬಿ ವಿವಿಧ ಚೇಷ್ಟೆಗಳನ್ನು ಮಾಡುತ್ತಿರುವ, ನಾನಾಯುಧಾಃ - ವಿವಿಧಾಯುಧಗಳುಳ್ಳ, ಸರ್ವೇ - ಸಮಸ್ತರಾದ, ಅದೀನಸತ್ತ್ವಾಃ - ಸ್ಥಿರವಾದ ಬಲವುಳ್ಳ, ತೇವಾನರಾಸ್ತು - ಆ ಕಪಿಗಳಾದರೆ, ಭಯಂ - ಭಯವನ್ನು, ವಿಮುಚ್ಯ - ತೊರೆದು, ಸಂಗ್ರಾಮಂ - ಕಾಳಗವನ್ನು, ಆಸಾದ್ಯ - ಹೊಂದಿ, ತೈಃರಾಕ್ಷಸೈಸ್ಸಹ - ಆ ರಾಕ್ಷಸರೊಡನೆ, ಯುದ್ಧಂ - ಕಾಳಗವನ್ನು, ಚಕ್ರುಃ - ಮಾಡಿದರು. ॥ ೬೭ ॥ ತುಮುಲೇ - ಸಂಕುಲವಾದ, ತಸ್ಮಿನ್ವಿಮರ್ದೇ - ಆ ಯುದ್ಧವು, ಪ್ರವೃತ್ತೇ - ಪ್ರಾರಂಭವಾಗಲೂ, ವಲೀಮುಖೇಷು - ವಾನರರು, ಪ್ರಹೃಷ್ಯಮಾಣೇಷು - ಸಂತೋಷಿಸುತ್ತಿರಲು, ರಾಕ್ಷಸೇಷುಚ - ರಕ್ಕಸರೂ ಕೂಡ, ನಿಪಾತ್ಯಮಾನೇಷು - ಬೀಳಿಸಲ್ಪಡುವವರಾಗಲೂ, ಮಹರ್ಷಯಃ - ಮಹರ್ಷಿಗಳೂ, ದೇವಗಣಾಶ್ಚ - ದೇವತೆಗಳ ತಂಡಗಳೂ ಕೂಡ, ನೇದುಃ - ಸಂತೋಷ ಧ್ವನಿಗಳನ್ನು ಮಾಡಿದರು. ॥ ೬೮ ॥ ತತಃ - ಅನಂತರದಲ್ಲಿ, ನರಾಂತಕಃ - ನರಾಂತಕನು, ಮಾರು....ಗಂ - ವಾಯುವಿಗೆ ಸಮಾನವಾದ ವೇಗವುಳ್ಳ, ಹಯಂ - ಕುದುರೆಯನ್ನು, ಆರುಹ್ಯ - ಏರಿ, ನಿಶಿತಾಂ - ತೀಕ್ಷ್ಣವಾದ, ಶಕ್ತಿಂ - ಶಕ್ತ್ಯಾಯುಧವನ್ನು, ಪ್ರಗೃಹ್ಯ - ಹಿಡಿದು, ಮೀನಃ - ಮೀನವು, ಅರ್ಣವಮಿವ - ಸಮುದ್ರವನ್ನಂತೆ, ವಾನ....ನ್ಯಂ - ಸುಗ್ರೀವನ ಸೈನ್ಯವನ್ನು, ಆವಿವೇಶ - ಪ್ರವೇಶ ಮಾಡಿದನು. ॥ ೬೯ ॥ ಇಂದ್ರರಿಪುಃ - ಇಂದ್ರಶತ್ರುವಾದ, ಮಹಾತ್ಮಾ - ಮಹಾ ಮನಸ್ವಿಯಾದ, ವೀರಃ - ಶೂರನಾದ, ಸಃ - ಆ ನರಾಂತಕನು, ದೀಪ್ತೇನ - ಹೊಳೆಯುತ್ತಿರುವ, ಪ್ರಾಸೇನ - ಈಟಿಗೋಲಿನಿಂದ, ಸಪ್ತಶತಾನಿ - ಏಳುನೂರಾದ, ವಾನರಾನ್ - ಕಪಿಗಳನ್ನು, ವಿನಿರ್ಬಿಭೇದ - ಭೇದಿಸಿದನು, ಏಕಕ್ಷಣೇನ - ಒಂದು ಕ್ಷಣದಿಂದ, ಹರಿಪುಂಗವಾನಾಂ - ವಾನರಶ್ರೇಷ್ಠರ, ಸೈನ್ಯಂ - ಸೇನೆಯನ್ನು,

---

ಆ ಸಮಯದಲ್ಲಿ ವಾನರರಾದರೂ ಬಹಳವಾಗಿ ಗರ್ವಿಸಿ, ಪರಾಕ್ರಮದಿಂದುಬ್ಬಿ ಮೆರೆಯುತ್ತ ವಿವಿಧ ಚೇಷ್ಟೆಗಳನ್ನು ಮಾಡುತ್ತ, ಅತಿ ರೌದ್ರವಾದ ಯುದ್ಧಭೂಮಿಯನ್ನುಹೊಕ್ಕು, ವಿವಿಧಾಯುಧಗಳನ್ನು ಧರಿಸಿ ಮಹಾ ಬಲಾಢ್ಯರಾಗಿದ್ದ ರಾಕ್ಷಸವೀರರೊಡನೆ ಘೋರವಾದ ಯುದ್ಧವನ್ನೆಸಗಿದರು. ಆ ಸಂಕುಲಯುದ್ಧದಲ್ಲಿ ವಾನರರೆಲ್ಲರೂ ಉತ್ಸಾಹದಿಂದ ವರ್ಧಿಸುತ್ತಿರುವುದನ್ನೂ, ರಾಕ್ಷಸರು ಅವರ ಪ್ರಹಾರಗಳಿಂದ ಮಡಿದುರುಳುತ್ತಿರುವುದನ್ನೂ ನೋಡಿ ಗಗನದಲ್ಲಿ ನಿಂತು ನೋಡುತ್ತಿದ್ದ ದೇವತೆಗಳೆಲ್ಲರೂ ಪರಮಾನಂದಭರಿತರಾದರು. ಆಗ ನರಾಂತಕನೆಂಬ ರಾಕ್ಷಸೋತ್ತಮನು ವಾಯುವೇಗವುಳ್ಳ ಜಾತ್ಯಶ್ವವನ್ನೇರಿ, ಮಹಾ ತೀಕ್ಷ್ಣವಾದ ಶಕ್ತ್ಯಾಯುಧವನ್ನು ಧರಿಸಿ, ಆ ವಾನರಸೈನ್ಯದ ಮೇಲೆ ವೇಗದಿಂದೈತಂದು ಮಹಾ ಸಮುದ್ರವನ್ನು ಹೊಗುವ ಮಹಾ ಮತ್ಸ್ಯದಂತೊಪ್ಪಿ ಮೆರೆದನು. ಆ ನರಾಂತಕನು ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿರುವ ಪ್ರಾಸಾಯುಧಘಾತದಿಂದ ಒಂದೇ ಬಾರಿಗೆ ಏಳುನೂರು ವಾನರ

ವಾನಾಂ ॥ ೨೦ ॥ ದದೃಶುಶ್ಚ ಮಹಾತ್ಮಾನಂ ಹಯಪೃಷ್ಠೇ ಪ್ರತಿಷ್ಠಿತಂ । ಚರಂತಂ ಹರಿಸೈನ್ಯೇಷು ವಿದ್ಯಾಧರಮಹರ್ಷಯಃ ॥೨೧॥ ಸತಸ್ಯ ದದೃಶೇ ಮಾರ್ಗೋ ಮಾಂಸ ಶೋಣಿತಕರ್ದಮಃ । ಪತಿತೈಃ ಪರ್ವತಾಕಾರೈರ್ವಾನರೈರಭಿಸಂವೃತಃ ॥ ೨೨ ॥ ಯಾವದ್ವಿಕ್ರಮಿತುಂ ಬುದ್ಧಿಂ ಚಕ್ರುಃ ಪ್ಲವಗಪುಂಗವಾಃ । ತಾವದೇತಾನತಿಕ್ರಮ್ಯ ನಿರ್ಬಿಭೇದ ನರಾಂತಕಃ ॥ ೨೩ ॥ ಜ್ವಲಂತಂ ಪ್ರಾಸಮುದ್ಯಮ್ಯ ಸಂಗ್ರಾಮಾಗ್ರೇ ನರಾಂತಕಃ । ದದಾಹ ಹರಿಸೈನ್ಯಾನಿ ವನಾನೀವ ವಿಭಾವಸುಃ ॥ ೨೪ ॥ ಯಾವದು ತ್ಪಾಟಯಾಮಾಸುರ್ವೃಕ್ಷಾನ್ ಶೈಲಾನ್ ವನೌಕಸಃ । ತಾವತ್ಪ್ರಾಸಹತಾಃ ಪೇತುರ್ವಜ್ರ

(ಇತ್ಥಂ - ಈ ಪ್ರಕಾರವಾಗಿ), ಜಘಾನ - ಹೊಡೆದನು. ॥ ೨೦ ॥ ವಿದ್ಯಾ....ಯಃ - ವಿದ್ಯಾಧರರೂ, ಮಹರ್ಷಿಗಳೂ, ಹಯಪೃಷ್ಠೇ - ಕುದುರೆಯ ಬೆನ್ನಮೇಲೆ, ಪ್ರತಿಷ್ಠಿತಂ - ಕುಳಿತಿರುವ, ಹರಿಸೈನ್ಯೇಷು - ವಾನರಸೈನ್ಯಗಳಲ್ಲಿ, ಚರಂತಂ - ಸಂಚರಿಸುವ, ಮಹಾತ್ಮಾನಂ - ಮಹಾ ಧೈರ್ಯಶಾಲಿಯಾದ ನರಾಂತಕನನ್ನು, ದದೃಶುಶ್ಚ - ನೋಡಿದರು. ॥ ೨೧ ॥ ತಸ್ಯ - ಆ ನರಾಂತಕನ, ಸಮಾರ್ಗಃ - ಆ ದಾರಿಯೂ, ಮಾಂಸ....ಮಃ - ಮಾಂಸದಿಂದಲೂ, ರಕ್ತದಿಂದಲೂ ಕೆಸರಾಗಿ, ಪತಿತೈಃ - ಬಿದ್ದಿರುವ, ಪರ್ವತಾಕಾರೈಃ - ಪರ್ವತದಂತೆ ಆಕಾರವುಳ್ಳ, ವಾನರೈಃ - ಕಪಿಗಳಿಂದ, ಅಭಿಸಂವೃತಃ - ತುಂಬಿದು ದಾಗಿ, ದದೃಶೇ - ಕಾಣಿಸುತ್ತಿತ್ತು. ॥೨೨॥ ಪ್ಲವಂ....ವಾಃ - ವಾನರೋತ್ತಮರು, ವಿಕ್ರಮಿತುಂ - ಪರಾಕ್ರಮಿಸುವದಕ್ಕೆ, ಯಾವತ್ - ಎಷ್ಟರೊಳಗಾಗಿ, ಬುದ್ಧಿಂ - ಬುದ್ಧಿಯನ್ನು, ಚಕ್ರುಃ - ಮಾಡಿ ದರೋ, ತಾವತ್ - ಅಷ್ಟರೊಳಗಾಗಿ, ನರಾಂತಕಃ - ನರಾಂತಕನು, ಏತಾನ್ - ಈ ವಾನರರನ್ನು, ಅತಿಕ್ರಮ್ಯ - ಮೀರಿ, ನಿರ್ಬಿಭೇದ - ಭೇದಿಸಿದನು. ॥ ೨೩ ॥ ಸಂಗ್ರಾಮಾಗ್ರೇ - ರಣಾಗ್ರದಲ್ಲಿ, ನರಾಂತಕಃ - ನರಾಂತಕನು, ಜ್ವಲಂತಮಿವಸ್ಥಿತಂ - ಪ್ರಜ್ವಲಿಸುತ್ತದೋ ಎಂಬಂತಿರುವ, ಪ್ರಾಸಂ - ಈಟಿಗೋಲನ್ನು, ಉದ್ಯಮ್ಯ - ಎತ್ತಿಕೊಂಡು, ಹರಿಸೈನ್ಯಾನಿ - ವಾನರಸೈನ್ಯಗಳನ್ನು, ಅರಣ್ಯಾನಿ - ವನಗಳನ್ನು, ವಿಭಾವಸುರಿವ - ಅಗ್ನಿಯಂತೆ, ದದಾಹ - ಸುಟ್ಟನು. ॥೨೪॥ ವನೌಕಸಃ - ವಾನರರು, ಯಾವತ್ - ಎಷ್ಟರೊಳಗಾಗಿ, ವೃಕ್ಷಾನ್ - ಮರಗಳನ್ನೂ, ಶೈಲಾನ್ - ಬೆಟ್ಟಗಳನ್ನೂ, ಉತ್ಪಾಟಯಾ ಮಾಸುಃ - ಕಿತ್ತುಕೊಂಡರೋ, ತಾವತ್ - ಅಷ್ಟರೊಳಗಾಗಿ, ವಜ್ರಕೃತ್ತಾಃ - ವಜ್ರಾಯುಧದಿಂದ

ರನ್ನು ಭೇದಿಸಿ ಕೆಡವಿದನು. ಮಹೇಂದ್ರಶತ್ರುವಾದ ಆ ನರಾಂತಕನೊಬ್ಬನೇ ಈ ರೀತಿ ಕ್ರಮ ವಾಗಿ ವಾನರಸೇನೆಯೆಲ್ಲವನ್ನೂ ಭೇದಿಸಿ ವಧಿಸಿದನು. ಆಗ ಕುದುರೆಯನ್ನೇರಿ ವಾನರಸೇನೆ ಯಲ್ಲಿ ಸಂಚರಿಸುತ್ತಿರುವವನೂ, ಮಹಾಕಾಯನೂ ಆದ ಅವನನ್ನು ನೋಡಿ ವಿದ್ಯಾಧರರೂ, ಮಹರ್ಷಿಗಳೂ ಪರಮಾಶ್ಚರ್ಯಭರಿತರಾಗಿಹೋದರು. ॥೧೬–೨೧॥ ಆ ಕಾಲದಲ್ಲಿ ರಾಕ್ಷಸ ವೀರನಾದ ನರಾಂತಕನು ಎಲ್ಲೆಲ್ಲಿ ಸಂಚರಿಸತೊಡಗಿದನೋ ಆ ಆ ಮಾರ್ಗಗಳೆಲ್ಲವೂ ರಕ್ತ ಮಾಂಸಗಳಿಂದ ಕೆಸರಾಗಿ ಹೋಯಿತು. ಆ ರಾಕ್ಷಸನು ಮುಂದುವರಿಯುತ್ತಿರಲು ವಾನರ ವೀರರೆಲ್ಲರೂ ಅವನನ್ನು ಸುತ್ತುಗಟ್ಟಿ ಅವನಮೇಲೆ ತಮ್ಮ ಪರಾಕ್ರಮವನ್ನು ತೋರಲು ಹವಣಿ ಸುತ್ತಿರುವಷ್ಟರಲ್ಲಿಯೇ ಅವನು ಅವರೆಲ್ಲರನ್ನೂ ಈಟಿಗೋಲಿಂದ ಒಕ್ಕಲಿಕ್ಕಿದನು. ಪ್ರಾಸಾಯುಧ ಧಾರಿಯಾದ ಆ ನರಾಂತಕನು ದಳ್ಳುರಿಯು ಕಾಡನ್ನು ಹೊಕ್ಕು ಹೆಮ್ಮರಗಳೆಲ್ಲವನ್ನೂ ಉರಿಸು ವಂತೆ ಆ ವಾನರಸೇನೆಯನ್ನು ಹೊಕ್ಕು ಅವರೆಲ್ಲರನ್ನೂ ಸುಡಲಾರಂಭಿಸಿದನು. ॥ ೨೨–೨೪ ॥ ವಾನರರಾದರೋ, ಬೆಟ್ಟಗಳನ್ನೂ, ಮರಗಳನ್ನು ಆಯುಧಗಳನ್ನಾಗಿ ಧರಿಸಿ ಪರಾಕ್ರಮಿಸಲು

ಕೃತ್ತಾ ಇವಾಚಲಾಃ ‖ ೭೫ ‖ ದಿಕ್ಷು ಸರ್ವಾಸು ಬಲವಾನ್ ವಿಚಚಾರ ನರಾಂತಕಃ । ಪ್ರಮೃದ್ನನ್ ಸರ್ವತೋ ಯುದ್ಧೇ ಪ್ರಾವೃಟ್ಕಾಲೇ ಯಥಾಽನಿಲಃ ‖ ೭೬ ‖ ನಶೇಕು ರ್ಧಾವಿತುಂ ವೀರಾ ನಸ್ಥಾತುಂ ಸ್ಪಂದಿತುಂ ಭಯಾತ್ । ಉತ್ಪತಂತಂ ಸ್ಥಿತಂ ಯಾಂತಂ ಸರ್ವಾನ್ ವಿವ್ಯಾಧ ವೀರ್ಯವಾನ್ ‖ ೭೭ ‖ ಏಕೇನಾಂತಕಕಲ್ಪೇನ ಪ್ರಾಸೇ ನಾದಿತ್ಯ ತೇಜಸಾ । ಭಿನ್ನಾನಿ ಹರಿಸೈನ್ಯಾನಿ ನಿಪೇತುರ್ಧರಣೀತಲೇ ‖ ೭೮ ‖ ವಜ್ರ ನಿಷ್ಪೇಷಸದೃಶಂ ಪ್ರಾಸಸ್ಯಾಭಿನಿಪಾತನಂ । ನಶೇಕುರ್ವಾನರಾ ಸೋಢುಂ ತೇ ವಿನೇದು ರ್ಮಹಾಸ್ವನಂ ‖ ೭೯ ‖ ಪತತಾಂ ಹರಿವೀರಾಣಾಂ ರೂಪಾಣಿ ಪ್ರಚಕಾಶಿರೇ । ವಜ್ರ

ಕತ್ತರಿಸಲ್ಪಟ್ಟ, ಅಚಲಾಇವ - ಪರ್ವತಗಳಂತೆ, ಪ್ರಾಸಹತಾಃ - ಈಟಿಗೋಲಿನಿಂದ ಹತರಾಗಿ, ಪೇತುಃ- ಬಿದ್ದರು. ‖೭೫‖ ಪ್ರಾವೃಟ್ಕಾಲೇ - ವರ್ಷಾಕಾಲದಲ್ಲಿ, ಅನಿಲೋಯಥಾ - ವಾಯುವಿನಂತೆ, ಯುದ್ಧೇ- ಕಾಳಗದಲ್ಲಿ, ಸುಬಲವಾನ್-ಮಹಾ ಬಲಾಢ್ಯನಾದ, ನರಾಂತಕಃ-ನರಾಂತಕನು, ಸರ್ವತಃ-ಎಲ್ಲಾ ಕಡೆ ಯಲ್ಲಿಯೂ, ಪ್ರಮೃದ್ನನ್ - ಹೊಡೆಯುತ್ತ, ಸರ್ವಾಸುದಿಕ್ಷು - ಎಲ್ಲಾ ದಿಕ್ಕುಗಳಲ್ಲಿಯೂ, ವಿಚಚಾರ- ಸಂಚರಿಸಿದನು. ‖ ೭೬ ‖ ವೀರ್ಯವಾನ್ - ಪರಾಕ್ರಮಶಾಲಿಯಾದ ನರಾಂತಕನು, ಉತ್ಪತಂತಂ - ಹಾರುವವನನ್ನೂ, ಸ್ಥಿತಂ - ನಿಂತಿರುವವನನ್ನೂ, ಯಾಂತಂ - ಹೋಗುತ್ತಿರುವವನನ್ನೂ, ಸರ್ವಾನ್ - ಸಮಸ್ತರನ್ನೂ, ವಿವ್ಯಾಧ - ಹೊಡೆದನು, ವೀರಾಃ - ಶೂರರಾದ ವಾನರರು, ಭಯಾತ್ - ಭೀತಿ ಯಿಂದ, ಧಾವಿತುಂ - ಓಡಲೂ, ನಶೇಕುಃ - ಸಮರ್ಥರಾಗಲಿಲ್ಲ, ಸ್ಥಾತುಂ - ನಿಲ್ಲುವದಕ್ಕೂ, ನಶೇಕುಃ- ಸಮರ್ಥರಾಗಲಿಲ್ಲವು, ಸ್ಪಂದಿತುಂ-ಕದಲುವದಕ್ಕೂ, ನಶೇಕುಃ-ಸಮರ್ಥರಾಗಲಿಲ್ಲ, ಅಂತಕಕಲ್ಪೇನ- ಯಮಸದೃಶನಾದ, ಆದಿತ್ಯತೇಜಸಾ - ಸೂರ್ಯನ ತೇಜಸ್ಸಿನಂತೆ ಬೆಳಗುವ, ಏಕೇನಪ್ರಾಸೇನ - ಒಂದೇ ಒಂದು ಈಟಿಗೋಲಿನಿಂದ, ಹರಿಸೈನ್ಯಾನಿ - ವಾನರರ ಸೈನ್ಯಗಳು, ಭಿನ್ನಾನಿ - ಭೇದಿಸ ಲ್ಪಟ್ಟವುಗಳಾಗಿ, ಧರಣೀತಲೇ - ಭೂಪ್ರದೇಶದಲ್ಲಿ, ನಿಪೇತುಃ - ಬಿದ್ದವು. ‖೭೭-೭೮‖ ವಜ್ರ....ಶಂ- ವಜ್ರಾಯುಧದ ಏಟಿಗೆ ಸಮಾನವಾದ, ಪ್ರಾಸಸ್ಯ-ಪ್ರಾಸಾಯುಧದ, ಅಭಿನಿಪಾತನಂ-ಹೊಡೆತ ವನ್ನು, ಸೋಢುಂ - ಸಹಿಸಲು, ವಾನರಾಃ - ಕಪಿಗಳು, ನಶೇಕುಃ - ಸಮರ್ಥರಾಗಲಿಲ್ಲ, ತೇ - ಅವರು, ಮಹಾಸ್ವನಂ - ಘಟ್ಟಿಯಾಗಿ, ವಿನೇದುಃ - ಕೂಗಿಕೊಂಡರು, ಪತತಾಂ - ಕೆಳಗೆ ಬೀಳು ತ್ತಿರುವ, ಹರಿವೀರಾಣಾಂ - ವಾನರೋತ್ತಮರ, ರೂಪಾಣಿ - ಆಕಾರಗಳು, ವಜ್ರ....ನಾಂ - ವಜ್ರಾ

ಬರುತ್ತಿರುವಂತೆಯೇ ವಜ್ರಾಯುಧದಿಂದ ಮುರಿದ ಪರ್ವತಗಳಂತೆ ಆ ನರಾಂತಕನ ಪ್ರಾಸ ಘಾತದಿಂದ ಉರುಳಿದರು. ಆ ನರಾಂತಕನು ವರ್ಷಾಕಾಲದ ಗಾಳಿಯಂತೆ ನಾಲ್ಕೂಕಡೆ ಬಿರು ಸಾಗಿ ತಿರುಗುತ್ತ ರಣಾಂಗಣದಲ್ಲಿ ಅನೇಕ ವಾನರರನ್ನು ಸಂಹರಿಸಿದನು. ಆ ಸಮಯದಲ್ಲಿ ವಾನರರೆಲ್ಲರೂ ಭಯದಿಂದ ಓಡಲಾರಂಭಿಸಿದರು. ಅನೇಕರು ಓಡುವುದಕ್ಕೂ, ನಿಲ್ಲುವು ದಕ್ಕೂ ದಿಕ್ಕುತೋರದೆ ಸ್ತಂಭಿತರಾಗಿ ಹೋದರು. ಆಗ ಮಹಾ ವೀರನಾದ ನರಾಂತಕನು ಹಾರುತ್ತಲೂ, ಕುಪ್ಪಳಿಸುತ್ತಲೂ ಸಂಚರಿಸುತ್ತಿದ್ದ ಆ ವಾನರಸೇನೆಯನ್ನು ಬಿಡದೆ ಕತ್ತರಿ ಸಲು ಮೊದಲಿಟ್ಟನು. ಹೀಗೆ ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳವನೂ, ಯಮೋಪ ಮನೂ ಆದ ನರಾಂತಕನೊಬ್ಬನೇ ಎಲ್ಲ ವಾನರರನ್ನೂ ಸಂಹರಿಸುತ್ತಿದ್ದನು. ಆಗ ಅನೇಕ ವಾನರರು ಮಡಿದುರುಳಿದರು. ಆ ವಾನರರೆಲ್ಲರೂ ವಜ್ರಾಯುಧಕ್ಕೆ ಸಮಾನವಾದ ಆ ನರಾಂತಕನ ಪ್ರಾಸಾಯುಧ ಘಾತವನ್ನು ಸಹಿಸಲಾರದೆ ಭಯಂಕರವಾಗಿ ಕೂಗಿಕೊಂಡರು.

ಭಿನ್ನಾಗ್ರಕೂಟಾನಾಂ ಶೈಲಾನಾಂ ಪತತಾಮಿವ ॥ ೮೦ ॥ ಯತ್ತು ಪೂರ್ವಂ ಮಹಾತ್ಮಾನಃ ಕುಂಭಕರ್ಣೇನ ಪಾತಿತಾಃ । ತೇ ಸ್ವಸ್ಥಾ ವಾನರಶ್ರೇಷ್ಠಾ ಸ್ಸುಗ್ರೀವಮುಪತಸ್ಥಿರೇ ॥ ೮೧ ॥ ವಿಪ್ರೇಕ್ಷಮಾಣಸ್ಸುಗ್ರೀವೋ ದದರ್ಶ ಹರಿವಾಹಿನೀಂ । ನರಾಂತಕಭಯತ್ರಸ್ತಾಂ ವಿದ್ರವಂತೀಮಿತಸ್ತತಃ ॥ ೮೨ ॥ ವಿದ್ರುತಾಂ ವಾಹಿನೀಂ ದೃಷ್ಟ್ವಾ ಸ ದದರ್ಶ ನರಾಂತಕಂ । ಗೃಹೀತಪ್ರಾಸಮಾಯಾಂತಂ ಹಯಪೃಷ್ಠೇ ಪ್ರತಿಷ್ಠಿತಂ ॥ ೮೩ ॥ ಅಥೋವಾಚ ಮಹಾತೇಜಾಸ್ಸುಗ್ರೀವೋ ವಾನರಾಧಿಪಃ । ಕುಮಾರಮಂಗದಂ ವೀರಂ ಶಕ್ರತುಲ್ಯಪರಾಕ್ರಮಂ ॥ ೮೪ ॥ "ಗಚ್ಛ ತ್ವಂ ರಾಕ್ಷಸಂ ವೀರೋ ಯೋಽಸೌ ತುರಗಮಾಸ್ಥಿತಃ । ಕ್ಷೋಭಯಂತಂ ಹರಿಬಲಂ ಕ್ಷಿಪ್ರಂ ಪ್ರಾಣೈರ್ವಿ

ಯುಧದಿಂದ ಭೇದಿಸಿದ ತುದಿಗಳುಳ್ಳ, ಪತತಾಂ - ಕೆಳಕ್ಕೆ ಬೀಳುತ್ತಿರುವ, ಶೈಲಾನಾಂ - ಪರ್ವತಗಳ, ರೂಪಾಣೀವ - ಆಕಾರಗಳಂತೆ, ಪ್ರಚಕಾಶಿರೇ - ಹೊಳೆಯುತ್ತಿದ್ದವು. ||೭೯-೮೦|| ಪೂರ್ವಂ - ಮೊದಲು, ಮಹಾತ್ಮಾನಃ - ಮಹಾ ಧೈರ್ಯಶಾಲಿಗಳಾದ, ಯೇತು - ಯಾವ ವಾನರರಾದರೆ, ಕುಂಭಕರ್ಣೇನ - ಕುಂಭಕರ್ಣನಿಂದ, ಪಾತಿತಾಃ - ಬೀಳಿಸಲ್ಪಟ್ಟರೋ, ತೇವಾನರಶ್ರೇಷ್ಠಾಃ - ಆ ವಾನರೋತ್ತಮರು, ಸ್ವಸ್ಥಾಃ - ಸ್ವಸ್ಥಚಿತ್ತರಾಗಿ, ಸುಗ್ರೀವಂ - ಸುಗ್ರೀವನಿಗೆ, ಅಭಿತಸ್ಥಿರೇ - ಎದುರಾಗಿ ನಿಂತರು. || ೮೧ || ಸುಗ್ರೀವಃ - ಸುಗ್ರೀವನು, ವಿಪ್ರೇಕ್ಷಮಾಣಃ - ಸುತ್ತುಮುತ್ತಲೂ ನೋಡಿ, ನರಾಂ....ಸ್ತಾಂ - ನರಾಂತಕನ ಭಯದಿಂದ ಹೆದರಿ, ಇತಸ್ತತಃ - ಇಲ್ಲಿ ಅಲ್ಲಿ, ವಿದ್ರವಂತೀಂ - ಓಡುತ್ತಿರುವ, ಹರಿವಾಹಿನೀಂ - ವಾನರಸೈನ್ಯವನ್ನು, ದದರ್ಶ - ಕಂಡನು. ||೮೨|| ಸಃ - ಆ ಸುಗ್ರೀವನು, ವಿದೃತಾಂ - ಓಡಿಹೋಗುತ್ತಿರುವ, ವಾಹಿನೀಂ - ಸೈನ್ಯವನ್ನು, ದೃಷ್ಟ್ವಾ - ಕಂಡು, ಹಯಪೃಷ್ಠೇ - ಕುದುರೆಯ ಬೆನ್ನಿನಮೇಲೆ, ಪ್ರತಿಷ್ಠಿತಂ - ಕುಳಿತಿರುವ, ಗೃಹೀತಪ್ರಾಸಂ - ಹಿಡಿಯಲ್ಪಟ್ಟ ಈಟಿಗೋಲುಳ್ಳವನಾಗಿ, ಆಯಾಂತಂ - ಬರುತ್ತಿರುವ, ನರಾಂತಕಂ - ನರಾಂತಕನನ್ನು, ದದರ್ಶ - ಕಂಡನು. || ೮೩ || ಅಥ - ಅನಂತರದಲ್ಲಿ, ವಾನರಾಧಿಪಃ - ವಾನರರಿಗೆ ಒಡೆಯನಾದ, ಮಹಾತೇಜಾಃ - ಬಹು ತೇಜೋವಂತನಾದ, ಸುಗ್ರೀವಃ - ಸುಗ್ರೀವನು, ಶಕ್ರ....ಮಂ - ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ವೀರಂ - ಶೂರನಾದ, ಕುಮಾರಂ - ಮಗನಾದ, ಅಂಗದಂ - ಅಂಗದನನ್ನು ಕುರಿತು, ಉವಾಚ- ಹೇಳಿದನು. || ೮೪ || ವೀರಃ - ಶೂರನಾದ, ಯೋಽಸೌ - ಯಾವ ಇವನು, ತುರಗಂ - ಕುದುರೆಯ ಮೇಲೆ, ಆಸ್ಥಿತಃ - ಕುಳಿತಿರುವನೋ, ಹರಿಬಲಂ - ವಾನರಸೈನ್ಯವನ್ನು, ಕ್ಷೋಭಯಂತಂ - ಪೀಡಿಸು

ಪ್ರಾಸಾಹತಿಯಿಂದ ಅನೇಕ ವಾನರರು ವಜ್ರಾಯುಧದಿಂದ ಕತ್ತರಿಸಿದ ಪರ್ವತಗಳಂತೆ ಕೆಳಕ್ಕುರುಳಿದರು. ||೭೯-೮೦|| ಆಗ ಆ ಮೊದಲೇ ಕುಂಭಕರ್ಣನಿಂದ ಪೆಟ್ಟುತಿಂದು ಮಲಗಿದ್ದ ವಾನರವೀರರೆಲ್ಲರೂ ಎಚ್ಚೆತ್ತು ಸುಧಾರಿಸಿಕೊಂಡವರಾಗಿ ಸುಗ್ರೀವನಬಳಿಗೈದಿದರು. ಆಗ ಸುಗ್ರೀವನು ನರಾಂತಕನ ಭಯದಿಂದ ಓಡಿಹೋಗುತ್ತಿದ್ದ ತನ್ನ ಸೇನೆಯನ್ನು ನೋಡಿ, ಆ ಸೈನ್ಯವನ್ನು ಅಟ್ಟುತ್ತಿದ್ದ ನರಾಂತಕನನ್ನೂ ಕಂಡನು. ಆ ನರಾಂತಕನಾದರೋ, ಕುದುರೆಯನ್ನೇರಿ ವಾನರಸೇನೆಯನ್ನೆಲ್ಲ ಭಯಗೊಳಿಸುತ್ತಿದ್ದನು. ಅವನನ್ನು ನೋಡಿ ಸುಗ್ರೀವನು ಪರಮಾಶ್ಚರ್ಯಭರಿತನಾಗಿ ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನೂ, ಮಹಾವೀರನೂ ಆದ ಅಂಗದನನ್ನುಕಂಡು, "ವತ್ಸ! ಅಂಗದಾ!! ವೀರನಾದ ನೀನು ಈಗಲೇ ರಣಾಂಗಣವನ್ನು ಪ್ರವೇಶಿಸು. ಕುದುರೆಯನ್ನೇರಿ ನಮ್ಮ ವಾನರ ಸೇನೆಯೆಲ್ಲವನ್ನೂ ಭಯಗೊಳಿಸು

ಯೋಜಯ'' ||೮೫|| ಸ ಭರ್ತುರ್ವಚನಂ ಶ್ರುತ್ವಾ ನಿಷ್ಪಪಾತಾಽಂಗದಸ್ತತಃ । ಅನೀಕಾನ್ಮೇಘಸಂಕಾಶಾನ್ಮೇಘಾನೀಕಾನಿವಾಂಶುಮಾನ್ ||೮೬|| ಶೈಲಸಂಘಾತಸಂಕಾಶೋ ಹರೀಣಾಮುತ್ತಮೋಽಂಗದಃ । ರರಾಜಾಽಂಗದಸನ್ನದ್ಧಸ್ಸಧಾತುರಿವ ಪರ್ವತಃ ||೮೭|| ನಿರಾಯುಧೋ ಮಹಾತೇಜಾಃ ಕೇವಲಂ ನಖದಂಷ್ಟ್ರವಾನ್ । ನರಾಂತಕಮಭಿಕ್ರಮ್ಯ ವಾಲಿಪುತ್ರೋಽಬ್ರವೀದ್ವಚಃ || ೮೮ || " ತಿಷ್ಠ ಕಿಂ ಪ್ರಾಕೃತೈರೇಭಿರ್ಹರಿಭಿಸ್ತ್ವಂ ಕರಿಷ್ಯಸಿ? । ಅಸ್ಮಿನ್ ವಜ್ರಸಮಸ್ಪರ್ಶಂ ಪ್ರಾಸಂ ಕುರು ಮಮೋರಸಿ'' || ೮೯ || ಅಂಗದಸ್ಯ ವಚಃ ಶ್ರುತ್ವಾ ಪ್ರಚುಕ್ರೋಧ ನರಾಂತಕಃ । ಸಂದಶ್ಯ ದಶನೈರೋಷ್ಠಂ ವಿನಿ

ತ್ತಿರುವ, ರಾಕ್ಷಸಂ - ಅಸುರನನ್ನು, ತ್ವಂ - ನೀನು, ಕ್ಷಿಪ್ರಂ - ಜಾಗ್ರುತೆಯಾಗಿ, ಪ್ರಾಣೈಃ - ಪ್ರಾಣಗಳಿಂದ, ವಿಯೋಜಯ - ದೂರಮಾಡು, ಗಚ್ಛ - ಹೋಗು. ||೮೫|| ತತಃ - ಬಳಿಕ, ಸೋಽಂಗದಃ - ಆ ಅಂಗದನು, ಭರ್ತುಃ - ಒಡೆಯನಾದ ಸುಗ್ರೀವನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಮೇಘಸಂಕಾಶಾನ್ - ಮೇಘಸದೃಶಗಳಾದ, ಅನೀಕಾನ್ - ಸೇನೆಗಳನ್ನು, ಮೇಘಾನೀಕಾನ್ - ಮೇಘತಂಡಗಳನ್ನು, ಅಂಶುಮಾನಿವ - ಸೂರ್ಯನಂತೆ, ನಿಷ್ಪಪಾತ - ಹಾರಿಬಂದನು. || ೮೬ || ಶೈಲ....ಶಃ - ಬೆಟ್ಟಗಳ ಸಮೂಹಕ್ಕೆ ಸಮಾನನಾದ, ಹರೀಣಾಂ-ವಾನರರಲ್ಲಿ, ಉತ್ತಮಃ-ಶ್ರೇಷ್ಠನಾದ, ಅಂಗ....ದ್ಧಃ-ಸನ್ನದ್ಧವಾದ ಅಂಗದಗಳುಳ್ಳ, ಅಂಗದಃ - ಅಂಗದನು, ಸಧಾತುಃ - ಗೈರಿಕಾದಿ ಧಾತುಗಳೊಡಗೂಡಿದ, ಪರ್ವತಮಿವ - ಬೆಟ್ಟದಂತೆ, ರರಾಜ - ಹೊಳೆಯುತ್ತಿದ್ದನು. || ೮೭ || ನಿರಾಯುಧಃ - ಆಯುಧವಿಲ್ಲದಿದ್ದರೂ, ಕೇವಲಂ - ವಿಶೇಷವಾಗಿ, ನಖದಂಷ್ಟ್ರಾನ್ - ಉಗುರುಗಳೂ ಕೋರೆದಾಡೆಗಳೂ ಉಳ್ಳವನಾದಕಾರಣ, ಮಹಾತೇಜಾಃ - ಮಹಾ ಪರಾಕ್ರಮಿಯಾದ, ವಾಲಿಪುತ್ರಃ - ಅಂಗದನು, ನರಾಂತಕಂ - ನರಾಂತಕನಿಗೆ, ಅಭಿಕ್ರಮ್ಯ - ಎದುರುಬಂದು, ಉವಾಚ - ಹೇಳಿದನು. || ೮೮ || ತಿಷ್ಠ - ನಿಲ್ಲು, ಪ್ರಾಕೃತೈಃ - ಪಾಮರರಾದ, ಯೇಭಿಃಹರಿಭಿಃ - ಈ ವಾನರರಿಂದ, ತ್ವಂ - ನೀನು, ಕಿಂಕರಿಷ್ಯಸಿ - ಏನುಮಾಡುವೆ, ವಜ್ರ....ರ್ಶಂ - ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ, ಪ್ರಾಸಂ - ಈಟಿಗೋಲನ್ನು, ಅಸ್ಮಿನ್ಮಮೋರಸಿ - ಈ ನನ್ನ ಎದೆಯಲ್ಲಿ, ಕುರು - ಮಾಡು. || ೮೯ || ಅಂಗದಸ್ಯ - ಅಂಗದನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ನರಾಂತಕಃ - ನರಾಂತಕನು,

---

ತ್ತಿರುವ ಈ ನರಾಂತಕನನ್ನು ಸಂಹರಿಸುವವನಾಗು'' ಎಂದು ಹೇಳಿದನು. || ೮೧—೮೫ || ವಾನರೇಶ್ವರನಾದ ಸುಗ್ರೀವನೀರೀತಿ ನುಡಿದ ಕೂಡಲೇ ಅಂಗದಕುಮಾರನು ಪರಮಸಂತುಷ್ಟನಾಗಿ ಮುಗಿಲಗುಂಪಿನಿಂದ ಹೊರಬಂದ ಸೂರ್ಯನಂತೆ ವಾನರಸೈನ್ಯದಿಂದ ಹೊರಬಂದನು. ಪರ್ವತಸಮುದಾಯದೊಡನೆ ಸಮಾನನಾದವನೂ, ವಾನರೋತ್ತಮನೂ ಆದ ಆ ಅಂಗದನು ಧಾತುಗಳೊಡಗೂಡಿದ ಪರ್ವತದಂತೆಯೇ ಪ್ರಕಾಶಿಸುತ್ತಲಿದ್ದನು. ಆಯುಧವಿಹೀನನೂ, ಆದರೂ ದಂತನಖಗಳೇ ಆಯುಧಗಳಾಗುಳ್ಳವನೂ, ವಾಲಿಕುಮಾರನೂ ಆದ ಅಂಗದನು ನರಾಂತಕನನ್ನು ಸಮೀಪಿಸಿ, " ಎಲಾ ರಾಕ್ಷಸಾಧಮನೇ! ನೀನೀಗ ಪಲಾಯನವಾಗದೆ ಸ್ಥಿರವಾಗಿ ನಿಲ್ಲು. ಸಾಮಾನ್ಯರಾದ ಈ ವಾನರರೊಡನೆ ಯುದ್ಧಮಾಡಿ ಏನು ಪ್ರಯೋಜನ? ನೀನು ರಾಕ್ಷಸೋತ್ತಮನಲ್ಲವೆ? ಬಾ ಬಾ!! ವಜ್ರಾಯುಧೋಪಮವಾದ ಈ ನಿನ್ನ ಪ್ರಾಸಾಯುಧವನ್ನು ನನ್ನ ವಕ್ಷಸ್ಥಳಕ್ಕೆ ಪ್ರಯೋಗಿಸು'' ಎಂದನು. ಈ ಮಾತನ್ನು ಕೇಳಿ ನರಾಂತಕನು ಅತ್ಯಧಿಕ ಕೋಪಾವಿಷ್ಟನಾಗಿ ತುಟಿಗಳನ್ನು ಕಡಿದು, ಸರ್ಪದಂತೆ ನಿಟ್ಟು

ಶ್ವಸ್ಯ ಭುಜಂಗವತ್ ॥ ೯೦ ॥ ಅಭಿಗಮ್ಯಾಂಗದಂ ಕ್ರುದ್ಧೋ ವಾಲಿಪುತ್ರಂ ನರಾಂತಕಃ । ಪ್ರಾಸಂ ಸಮಾವಿಧ್ಯ ತದಾಂಗದಾಯ ಸಮುಜ್ಜ್ವಲಂತಂ ಸಹಸೋತ್ಸಸರ್ಜ ॥ ೯೧ ॥ ಸ ವಾಲಿಪುತ್ರೋರಸಿ ವಜ್ರಕಲ್ಪೇ ಬಭೂವ ಭಗ್ನೋ ನ್ಯಪತಚ್ಚ ಭೂಮೌ । ತಂ ಪ್ರಾಸಮಾಲೋಕ್ಯ ತದಾ ವಿಭಗ್ನಂ ಸುಪರ್ಣಕೃತ್ತೋರಗಭೋಗಕಲ್ಪಂ । ತಲಂ ಸಮುದ್ಯಮ್ಯ ಸ ವಾಲಿಪುತ್ರಸ್ತುರಂಗಮಂ ತಸ್ಯ ಜಘಾನ ಮೂರ್ಧ್ನಿ ॥ ೯೨ ॥ ನಿಮಗ್ನತಾಲುಸ್ಸ್ಫುಟಿತಾಕ್ಷಿತಾರೋ ನಿಷ್ಕ್ರಾಂತಜಿಹ್ವೋಽಚಲಸನ್ನಿಕಾಶಃ । ಸ ತಸ್ಯ ವಾಜೀ ನಿಪಪಾತ ಭೂಮೌ ತಲಪ್ರಹಾರೇಣ ವಿಶೀರ್ಣಮೂರ್ಧಾ ॥ ೯೩ ॥ ನರಾಂತಕಃ

ದಶನೈಃ - ದಂತಗಳಿಂದ, ಓಷ್ಠಂ - ತುಟಿಯನ್ನು, ಸಂದಶ್ಯ - ಕಚ್ಚಿ, ಭುಜಂಗವತ್ - ಸರ್ಪದಂತೆ, ವಿನಿಶ್ವಸ್ಯ - ನಿಟ್ಟುಸುರುಬಿಟ್ಟು, ಪ್ರಚುಕ್ರೋಧ - ಕೋಪಗೊಂಡನು. ॥ ೯೦ ॥ ನರಾಂತಕಃ - ನರಾಂತಕನು, ಕ್ರುದ್ಧಃ - ಕುಪಿತನಾಗಿ, ವಾಲಿಪುತ್ರಂ - ವಾಲಿಯ ಮಗನಾದ, ಅಂಗದಂ - ಅಂಗದನಿಗೆ, ಅಭಿಗಮ್ಯ - ಎದುರಾಗಿ ಬಂದು, ಸಮುಜ್ಜ್ವಲಂತಂ - ಪ್ರಜ್ವಲಿಸುತ್ತಿರುವ, ಪ್ರಾಸಂ - ಈಟಿಗೋಲನ್ನು, ಸಮಾವಿಧ್ಯ - ತಿರುವಿ, ತದಾ - ಆಗ, ಅಂಗದಾಯ - ಅಂಗದನಿಗೋಸ್ಕರ, ಉತ್ಸಸರ್ಜ - ಬಿಟ್ಟನು. ॥ ೯೧ ॥ ಸಃ - ಆ ಪ್ರಾಸಾಯುಧವು, ವಜ್ರಕಲ್ಪೇ - ವಜ್ರಮಣಿಗೆ ಸಮಾನವಾದ, ವಾಲಿಪುತ್ರೋರಸಿ - ಅಂಗದನ ಎದೆಯಲ್ಲಿ, ಭಗ್ನಃ - ಮುರಿದುದು, ಬಭೂವ - ಆಯಿತು, ಭೂಮೌಚ - ನೆಲದಲ್ಲಿಯೂ, ನ್ಯಪತಚ್ಚ - ಬಿದ್ದಿತು. ॥ ೯೧ ॥ ತದಾ - ಆಗ, ಸವಾಲಿಪುತ್ರಃ - ವಾಲಿಯ ಮಗನಾದ ಆ ಅಂಗದನು, ವಿಭಗ್ನಂ - ಮುರಿದುಹೋದ, ಸುಪ....ಲ್ಪಂ - ಗರುಡನಿಂದ ಕತ್ತರಿಸಲ್ಪಟ್ಟ ಸರ್ಪಶರೀರಕ್ಕೆ ಸಮಾನವಾದ, ತಂಪ್ರಾಸಂ - ಆ ಪ್ರಾಸಾಯುಧವನ್ನು, ಆಲೋಕ್ಯ - ಕಂಡು, ತಲಂ - ಅಂಗೈಯನ್ನು, ಸಮುದ್ಯಮ್ಯ - ಮೇಲಕ್ಕೆತ್ತಿ, ತಸ್ಯ - ಆ ನರಾಂತಕನ, ತುರಂಗಮಂ - ಕುದುರೆಯನ್ನು, ಮೂರ್ಧ್ನಿ - ಮಂಡೆಯಲ್ಲಿ, ಜಘಾನ - ಹೊಡೆದನು. ॥ ೯೨ ॥ ನಿಮಗ್ನತಾಲುಃ - ಮುಳುಗಿಹೋದ ಅಧರೋಷ್ಠಗಳುಳ್ಳುದಾಗಿ, ಸ್ಫುಟಿ....ರಃ - ಒಡೆದುಹೋದ ಕಣ್ಣುಗುಡ್ಡೆಗಳುಳ್ಳ, ನಿಷ್ಕ್ರಾಂತಜಿಹ್ವಃ - ಈಚೆಗೆ ಹೊರಟುಬಂದ ನಾಲಿಗೆಯುಳ್ಳ, ಅಚ....ಶಃ - ಬೆಟ್ಟಕ್ಕೆ ಸಮಾನವಾದ, ತಸ್ಯ - ಆ ನರಾಂತಕನ, ಸವಾಜೀ - ಆ ಕುದುರೆಯು, ತಲಪ್ರಹಾರೇಣ - ಅಂಗೈಯ ಹೊಡೆತದಿಂದ, ವಿಶೀ....ರ್ಧಾ - ಶೀಳಿಹೋದ ಮಂಡೆಯುಳ್ಳದ್ದಾಗಿ, ಭೂಮೌ - ನೆಲದಲ್ಲಿ, ಪಪಾತ - ಬಿದ್ದಿತು. ॥೯೩॥ ನರಾಂತಕಃ - ನರಾಂತಕನು, ಹತಂ - ಹೊಡೆಯಲ್ಪಟ್ಟ, ತುರಂಗಂ - ಕುದುರೆಯನ್ನು, ಪತಿತಂ -

---

ಬಿದ್ದು ಬಿಟ್ಟು, ಆ ಅಂಗದನ ಬಳಿಸಾರಿ ಬಹಳವಾಗಿ ಹೊಳೆಯುತ್ತಿದ್ದ ತನ್ನ ಪ್ರಾಸಾಯುಧವನ್ನು ಅವನಮೇಲೆ ಪ್ರಯೋಗಿಸಿದನು. ॥ ೮೭—೯೦ ॥ ಹೀಗೆ ನರಾಂತಕನು ಆ ಅಂಗದನ ವಕ್ಷಸ್ಥಳಕ್ಕೆ ಪ್ರಯೋಗಿಸಿದ ಆ ಪ್ರಾಸಾಯುಧವು ಪುಡಿಪುಡಿಯಾಗಿ ಹೋಯಿತು. ಗರುತ್ಮಂತನಿಂದ ಭೇದಿಸಲಾದ ಸರ್ಪಕ್ಕೆ ಸಮಾನವಾಗಿ ಆ ಪ್ರಾಸವು ಚೂರುಚೂರಾದ ತರುವಾಯ ಅಂಗದನು ಪರಮಾನಂದಭರಿತನಾದನು. ಆಮೇಲೆ ವಾನರವೀರನಾದ ಆ ಅಂಗದನು ಬಹಳವಾಗಿ ಕನಲಿ ಆ ನರಾಂತಕನ ಕುದುರೆಯ ಶಿರಸ್ಸು ಚೂರುಚೂರಾಗುವಂತೆ ಬಲವಾಗಿ ಗುದ್ದಿದನು. ಆಗ ಆ ರಾಕ್ಷಸನೇರಿದ್ದ ಕುದುರೆಯು ಮುರಿದ ದವಡೆಗಳೂ, ಈಚೆಗೆ ಹೊರಟುಕೊಂಡ ಕಣ್ಣುಗುಡ್ಡೆಗಳೂ, ಹೊರಹೊರಟ ನಾಲಗೆಯೂ ಉಳ್ಳುದಾಗಿ ತಲೆಯೊಡೆದು ಕೆಳಕ್ಕೆ ಬಿದ್ದಿತು. ಕುದುರೆಯು ನೆಲಕ್ಕುರುಳಲು ನರಾಂತಕನು ಬಹಳವಾಗಿ ಮರುಗಿದನು;

ಕ್ರೋಧವಶಂ ಜಗಾಮ ಹತಂ ತುರಂಗಂ ಪತಿತಂ ನಿರೀಕ್ಷ್ಯ । ಸಮುಷ್ಟಿಮುದ್ಯಮ್ಯ ಮಹಾಪ್ರಭಾವೋ ಜಘಾನ ಶೀರ್ಷೇ ಯುಧಿ ವಾಲಿಪುತ್ರಂ ॥ ೯೪ ॥ ಅಥಾಽಂಗದೋ ಮುಷ್ಟಿವಿಭಿನ್ನಮೂರ್ಧಾ ಸುಸ್ರಾವ ತೀವ್ರಂ ರುಧಿರಂ ಭೃಶೋಷ್ಣಂ । ಮುಹುರ್ವಿಜಜ್ವಾಲ ಮುಮೋಹ ಚಾಪಿ ಸಂಜ್ಞಾಂ ಸಮಾಸಾದ್ಯ ವಿಸಿಸ್ಮಿಯೇಚ ॥೯೫॥ ಅಥಾಽಂಗದೋ ವಜ್ರಸಮಾನವೇಗಂ ಸಂವರ್ತ್ಯ ಮುಷ್ಟಿಂ ಗಿರಿಶೃಂಗಕಲ್ಪಂ । ನಿಪಾತಯಾಮಾಸ ತದಾ ಮಹಾತ್ಮಾ ನರಾಂತಕಸ್ಯೋರಸಿ ವಾಲಿಪುತ್ರಃ ॥ ೯೬ ॥ ಸಮುಷ್ಟಿನಿಷ್ಪಿಷ್ಟವಿಭಿನ್ನವಕ್ಷಾ ಜ್ವಾಲಾನವಮುಚ್ಛೋಣಿತದಿಗ್ಧಗಾತ್ರಃ । ನರಾಂತಕೋ ಭೂಮಿತಲೇ ಪಪಾತ ಯಥಾಚಲೋ ವಜ್ರನಿಪಾತಭಗ್ನಃ ॥೯೭॥ ಅಥಾಽಂತರಿಕ್ಷೇ ತ್ರಿದಶೋ

ಬಿದ್ದುದನ್ನಾಗಿ, ನಿರೀಕ್ಷ್ಯ - ಕಂಡು, ಕ್ರೋಧವಶಂ - ಕೋಪದ ಸ್ವಾಧೀನವನ್ನು, ಜಗಾಮ - ಹೊಂದಿದನು, ಮಹಾಪ್ರಭಾವಃ - ಮಹಾ ಸಾಮರ್ಥ್ಯವಂತನಾದ, ಸಃ - ಆ ನರಾಂತಕನು, ಮುಷ್ಟಿಂ - ಕೈಪಿಡಿಯನ್ನು, ಉದ್ಯಮ್ಯ - ಎತ್ತಿ, ಯುಧಿ - ಕಾಳೆಗದಲ್ಲಿ, ವಾಲಿಪುತ್ರಂ - ಅಂಗದನನ್ನು, ಶೀರ್ಷೇ - ಮಂಡೆಯಲ್ಲಿ, ಜಘಾನ - ಹೊಡೆದನು. ॥ ೯೪ ॥ ಅಥ - ಬಳಿಕ, ಅಂಗದಃ - ಅಂಗದನು, ಮುಷ್ಟಿ....ರ್ಧಾ - ಕೈಪಿಡಿಯಿಂದ ಒಡೆಯಲ್ಪಟ್ಟ ತಲೆಯುಳ್ಳವನಾಗಿ, ತೀವ್ರಂ - ಬಹಳವಾಗಿ, ಭೃಶೋಷ್ಣಂ - ಅತ್ಯುಷ್ಣವಾದ, ರುಧಿರಂ - ರಕ್ತವನ್ನು, ಸುಸ್ರಾವ - ಸುರಿಸಿದನು, ಮುಹುಃ - ಬಾರಿಬಾರಿಗೂ, ವಿಜಜ್ವಾಲ - ಕೋಪದಿಂದುರಿಯುತ್ತಿದ್ದನು, ಮುಮೋಹಚಾಪಿ - ಮೂರ್ಛೆಯನ್ನೂ ಹೊಂದಿದನು, ಸಂಜ್ಞಾಂ - ಪ್ರಜ್ಞೆಯನ್ನು, ಸಮಾಸಾದ್ಯ - ಪಡೆದು, ವಿಸಿಸ್ಮಯೇಚ - ಆಶ್ಚರ್ಯಪಟ್ಟನು. ॥ ೯೫ ॥ ಅಥ-ಬಳಿಕ, ಮಹಾತ್ಮಾ - ಮಹಾ ಧೀರನಾದ, ವಾಲಿಪುತ್ರಃ - ವಾಲಿಯ ಮಗನಾದ, ಅಂಗದಃ - ಅಂಗದನು, ವಜ್ರ....ಗಂ - ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳ, ಗಿರಿ....ಲ್ಪಂ - ಬೆಟ್ಟದ ಶಿಖರಕ್ಕೆ ಸಮಾನವಾದ, ಮುಷ್ಟಿಂ - ಹಿಡಿಯನ್ನು, ಸಂವರ್ತ್ಯ - ತಿರುವಿ, ತದಾ - ಆ ಕಾಲದಲ್ಲಿ, ನರಾಂತಕಸ್ಯ - ನರಾಂತಕನ, ಉರಸಿ - ವಕ್ಷಸ್ಥಲದಲ್ಲಿ, ಪಾತಯಾಮಾಸ - ಕೆಡವಿದನು. ॥ ೯೬ ॥ ಸನರಾಂತಕಃ - ಆ ನರಾಂತಕನು, ಮುಷ್ಟಿ....ಕ್ಷಾಃ - ಕೈಪಿಡಿಯಿಂದ ಅರೆಯಲ್ಪಟ್ಟುದೂ, ಹೊಡೆಯಲ್ಪಟ್ಟುದೂ ಆದ ವಕ್ಷಸ್ಥಲವುಳ್ಳ, ಜ್ವಾಲಾ....ತ್ರಃ - ಜ್ವಾಲೆಯಿಂದಲೂ ಹೊರಟುಬರುತ್ತಿರುವ ರಕ್ತದಿಂದಲೂ ಲೇಪನ ಮಾಡಲ್ಪಟ್ಟ ಶರೀರವುಳ್ಳವನಾಗಿ, ವಜ್ರ....ಗ್ನಃ - ವಜ್ರಾಯುಧಪ್ರಹಾರದಿಂದ ಮುರಿದ, ಅಚಲೋಯಥಾ - ಬೆಟ್ಟದಂತೆ, ಭೂಮಿತಲೇ - ಭೂತಲದಲ್ಲಿ, ಪಪಾತ - ಬಿದ್ದನು. ॥ ೯೭ ॥ ಅಥ -

---

ಅವನು ಕೂಡಲೇ ವಾಲಿಪುತ್ರನ ಶಿರಸ್ಸಿಗೆ ಬಲವಾದ ಪೆಟ್ಟನ್ನು ಕೊಟ್ಟನು. ॥ ೯೧–೯೪ ॥ ಆಗ ಅಂಗದಕುಮಾರನ ಶಿರಸ್ಸಿನಲ್ಲಿ ರಕ್ತವು ಸುರಿಯಲಾರಂಭಿಸಿತು. ಕೂಡಲೇ ಅವನು ಸ್ವಲ್ಪಹೊತ್ತು ಮೂರ್ಛೆಯೊಂದಿದನು. ಆ ತರುವಾಯ ಅವನು ಮೂರ್ಛೆ ತಿಳಿದೆದ್ದು ಪರಮಾಶ್ಚರ್ಯಚಕಿತನಾಗಿ ಉಕ್ಕೇರುತ್ತಿರುವ ಕೋಪರೋಷಗಳಿಂದ ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳದೂ, ಪರ್ವತಶಿಖರಕ್ಕೆಣೆಯಾದುದೂ ಆದ ತನ್ನ ಮುಷ್ಟಿಯನ್ನು ಗಿರಗಿರನೆ ತಿರುಗಿಸುತ್ತ ಆ ನರಾಂತಕನ ಎದೆಗೆ ಬಲವಾಗಿ ಗುದ್ದಿದನು. ಹಾಗೆ ಆ ಅಂಗದನು ಬಲವನ್ನೆಲ್ಲಾ ಪ್ರಯೋಗಿಸಿ ಗುದ್ದಲು, ಆ ನರಾಂತಕನು ಒಡೆದ ಎದೆಯುಳ್ಳವನೂ, ಸ್ರವಿಸುತ್ತಿರುವ ರಕ್ತದಿಂದ ಸಿಕ್ತವಾದ ದೇಹವುಳ್ಳವನೂ ಆಗಿ ವಜ್ರಾಯುಧದಿಂದ ಕತ್ತರಿಸಿ ಉರುಳಿದ ಪರ್ವತದಂತೆ ಕೆಳಕ್ಕೆ ಬಿದ್ದು ಮಡಿದನು. ಆಗ ಆಕಾಶದಲ್ಲಿ ಸಂಚರಿಸುತ್ತಿರುವ

ತ್ತಮಾನಾಂ ವನೌಕಸಾಂ ಚೈವ ಮಹಾಪ್ರಣಾದಃ । ಬಭೂವ ತಸ್ಮಿನ್ನಿಹತೇಽಗ್ರ್ಯ
ವೀರೇ ನರಾಂತಕೇ ವಾಲಿಸುತೇನ ಸಂಖ್ಯೇ ॥ ೯೮ ॥

ಅಥಾಽಂಗದೋ ರಾಮಮನಃ ಪ್ರಹರ್ಷಣಂ
ಸುದುಷ್ಕರಂ ತತ್ಕೃತವಾನ್ ಹಿ ವಿಕ್ರಮಂ ।
ವಿಸಿಸ್ಮಿಯೇ ಸೋಽಪ್ಯತಿವೀರ್ಯ ವಿಕ್ರಮಃ
ಪುನಶ್ಚ ಯುದ್ಧೇ ಸ ಬಭೂವ ಹರ್ಷಿತಃ ॥ ೯೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಸಪ್ತತಿತಮಸ್ಸರ್ಗಃ

ಬಳಿಕ, ವಾಲಿಸುತೇನ - ಅಂಗದನಿಂದ, ಅಗ್ರ್ಯವೀರೇ - ಶೂರಾಗ್ರೇಸರನಾದ, ತಸ್ಮಿನ್ನರಾಂತಕೇ - ಆ ನರಾಂತಕನು, ಸಂಖ್ಯೇ - ಕಾಳೆಗದಲ್ಲಿ, ನಿಹತೇ - ಸಂಹೃತನಾಗಲು, ಅಂತರಿಕ್ಷೇ - ಅಂತರಿಕ್ಷದಲ್ಲಿ, ತ್ರಿದ....ನಾಂ - ದೇವೋತ್ತಮರ, ವನೌಕಸಾಂಚೈವ - ವಾನರರ, ಮಹಾಪ್ರಣಾದಃ - ದೊಡ್ಡ ಕೋಲಾಹಲಧ್ವನಿಯು, ಬಭೂವ - ಆಯಿತು. ॥ ೯೮ ॥ ಅಥ - ಬಳಿಕ, ಅಂಗದಃ - ಅಂಗದನು, ರಾಮ....ಣಂ - ಶ್ರೀರಾಮನ ಮನಸ್ಸಿಗೆ ಸಂತೋಷಕರವಾದ, ಸುದುಷ್ಕರಂ - ಇತರರಿಂದ ಮಾಡಲ ಸಾಧ್ಯವಾದ, ತದ್ವಿಕ್ರಮಂ - ಆ ಪರಾಕ್ರಮವನ್ನು, ಕೃತವಾನ್ - ಮಾಡಿದನು, ಅತಿವೀರ್ಯವಿಕ್ರಮಃ- ಬಹಳವಾದ ಶೌರ್ಯವೂ, ಪರಾಕ್ರಮವೂ ಉಳ್ಳ, ಸೋಪಿ - ಆ ಅಂಗದನೂ, ವಿಸಿಸ್ಮಯೇ - ಆಶ್ಚರ್ಯಪಟ್ಟನು, (ಗೋ) ಸೋಪಿ - ಆ ಶ್ರೀರಾಮನೂ, ವಿಸಿಸ್ಮಯೇ - ಆಶ್ಚರ್ಯಗೊಂಡನು, ಪುನಶ್ಚ - ಮತ್ತೂ, ಯುದ್ಧೇ - ಕಾಳೆಗದಲ್ಲಿ, ಸಃ - ಆ ಅಂಗದನು, ಹರ್ಷಿತಃ - ಸಂತೋಷವುಳ್ಳವನು, ಬಭೂವ - ಆದನು. ॥ ೯೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಸಪ್ತತಿತಮಸ್ಸರ್ಗಃ.

ದೇವತೆಗಳೂ, ಯುದ್ಧಭೂಮಿಯಲ್ಲಿ ಸಂಚರಿಸುತ್ತಿರುವ ವಾನರರೂ ಸಂತೋಷಸಂಭ್ರಮಗಳಿಂದ ಕೋಲಾಹಲಧ್ವನಿಯನ್ನು ಮಾಡಿದರು. ಇದೂ ಅಲ್ಲದೆ ಅದೇ ಸಮಯದಲ್ಲಿಯೇ ವಾನರೋತ್ತಮನಾದ ಅಂಗದನಿಂದ ನರಾಂತಕನು ಮಡಿದುದರಿಂದ ವಾನರರೆಲ್ಲರೂ ಮಹದಾನಂದಭರಿತರಾದರು. ಅಂಗದನಾದರೋ ಅಧಿಕ ಬಲಪರಾಕ್ರಮಗಳುಳ್ಳವನಾಗಿ, ರಣೋತ್ಸಾಹದಿಂದ ಶ್ರೀರಾಮನ ಮನಸ್ಸಿಗೆ ಹರ್ಷವನ್ನುಂಟುಮಾಡಿ, ದುಷ್ಕರ ಕಾರ್ಯವನ್ನು ಮಾಡಿ, ತನ್ನ ಪರಾಕ್ರಮಕ್ಕೆ ತಾನೇ ಸಂತೋಷವನ್ನೂ, ಆಶ್ಚರ್ಯವನ್ನೂ ಹೊಂದುತ್ತಿದ್ದನು. ॥ ೯೫-೯೯ ॥

ಇಂತಿದು ನರಾಂತಕಹನನವೆಂಬ ಅರುವತ್ತೊಂಬತ್ತನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತತಿತಮಸ್ಸರ್ಗಃ

ನರಾಂತಕಂ ಹತಂ ದೃಷ್ಟ್ವಾ ಚುಕ್ರುಶುರ್ನೈರ್ಋತರ್ಷಭಾಃ । ದೇವಾಂತಕ ಸ್ತ್ರಿಮೂರ್ಧಾಚ ಪೌಲಸ್ತ್ಯಶ್ಚ ಮಹೋದರಃ ॥ ೧ ॥ ಆರೂಢೋ ಮೇಘಸಂಕಾಶಂ ವಾರಣೇಂದ್ರಂ ಮಹೋದರಃ । ವಾಲಿಪುತ್ರಂ ಮಹಾವೀರ್ಯಮಭಿದುದ್ರಾವ ವೀರ್ಯವಾನ್ ॥೨॥ ಭ್ರಾತೃವ್ಯಸನಸಂತಪ್ತಸ್ತಥಾ ದೇವಾಂತಕೋ ಬಲೀ । ಆದಾಯ ಪರಿಘಂ ದೀಪ್ತಮಂಗದಂ ಸಮಭಿದ್ರವತ್ ॥ ೩ ॥ ರಥಮಾದಿತ್ಯಸಂಕಾಶಂ ಯುಕ್ತಂ ಪರಮವಾಜಿಭಿಃ । ಆಸ್ಥಾಯ ತ್ರಿಶಿರಾ ವೀರೋ ವಾಲಿಪುತ್ರಮಥಾಽಭ್ಯಯಾತ್ ॥೪॥

ನರಾಂತಕಂ - ನರಾಂತಕನನ್ನು, ಹತಂ - ಮಡಿದವನನ್ನಾಗಿ, ದೃಷ್ಟ್ವಾ - ಕಂಡು, ಪೌಲಸ್ತ್ಯಃ - ರಾವಣನ ಮಗನಾದ, ತ್ರಿಮೂರ್ಧಾಚ - ತ್ರಿಶಿರಸ್ಕನೂ, ದೇವಾಂತಕಃ - ದೇವಾಂತಕನೂ, ಮಹೋದರಶ್ಚ - ಮಹೋದರನೂ ಎಂಬ, ನೈರ್ಋತರ್ಷಭಾಃ - ರಾಕ್ಷಸಶ್ರೇಷ್ಠರು, ಚುಕ್ರುಶುಃ - ಕೋಪಗೊಂಡರು. ॥ ೧ ॥ ವೀರ್ಯವಾನ್ - ಪರಾಕ್ರಮಿಯಾದ, ಮಹೋದರಃ - ಮಹೋದರನು, ಮೇಘಸಂಕಾಶಂ - ಮೇಘಸದೃಶವಾದ, ವಾರಣೇಂದ್ರಂ - ಉತ್ತಮ ಗಜವನ್ನು, ಆರೂಢಃ - ಏರಿ, ಮಹಾವೀರ್ಯಂ - ಮಹಾ ಪರಾಕ್ರಮಿಯಾದ, ವಾಲಿಪುತ್ರಂ - ಅಂಗದನಿಗೆ, ಅಭಿದುದ್ರಾವ - ಎದುರುಬಂದನು. ॥ ೨ ॥ ಭ್ರಾತೃ....ಪ್ತಃ - ಒಡಹುಟ್ಟಿದವನ ವ್ಯಸನದಿಂದ ಸಂತಪಿಸುತ್ತಿರುವ, ಬಲೀ - ಬಲವಂತನಾದ, ದೇವಾಂತಕಃ - ದೇವಾಂತಕನು, ದೀಪ್ತಂ - ಹೊಳೆಯುತ್ತಿರುವ, ಪರಿಘಂ - ಪರಿಘಾಯುಧವನ್ನು, ಆದಾಯ - ತೆಗೆದುಕೊಂಡು, ತಥಾ - ಹಾಗೆಯೇ, ಅಂಗದಂ - ಅಂಗದನನ್ನು ಕುರಿತು, ಸಮಭಿದ್ರವತ್ - ಓಡಿಬಂದನು. ॥ ೩ ॥ ಅಥ - ಅನಂತರದಲ್ಲಿ, ವೀರಃ - ಶೂರನಾದ, ತ್ರಿಶಿರಾಃ - ತ್ರಿಶಿರಸ್ಕನು, ಪರ....ಭಿಃ - ಉತ್ತಮಾಶ್ವಗಳಿಂದ, ಯುಕ್ತಂ - ಕೂಡಿರುವ, ಆದಿ....ಶಂ - ಸೂರ್ಯನಿಗೆ ಸಮಾನವಾದ, ರಥಂ - ತೇರನ್ನು, ಆಸ್ಥಾಯ - ಹೊಂದಿ, ವಾಲಿಪುತ್ರಂ - ಅಂಗದನಿಗೆ, ಅಭ್ಯಯಾತ್ - ಎದುರುಬಂದನು. ॥ ೪ ॥ ದೇವದರ್ಪಘ್ನಃ - ಸುರರ ಗರ್ವವನ್ನು ಮುರಿಯುತ್ತಿರುವ, ತ್ರಿಭಿಃ - ಮೂರು ಮಂದಿಯಾದ, ತೈಃನೈರ್ಋತೇಂದ್ರೈಃ - ಆ

ಆ ಪ್ರಕಾರವಾಗಿ ಅಂಗದನಿಂದ ಮಡಿದುರುಳಿದ ನರಾಂತಕನನ್ನು ನೋಡಿ ರಣಭೂಮಿಯಲ್ಲಿದ್ದ ರಾಕ್ಷಸವೀರರೆಲ್ಲರೂ ಪರಮ ದುಃಖಿತರಾದರು. ಆಗ ದೇವಾಂತಕನೂ, ತ್ರಿಶಿರಸ್ಕನೂ, ಪುಲಸ್ತ್ಯಪುತ್ರನಾದ ಮಹೋದರನೂ ಬಹಳವಾಗಿ ಕೋಪಗೊಂಡರು. ಮಹಾ ವೀರನಾದ ಮಹೋದರನು ಮೇಘೋಪಮವಾದ ಆನೆಯನ್ನೇರಿ ಮಹಾ ಪರಾಕ್ರಮವಂತನಾದ ಅಂಗದನನ್ನಟ್ಟಬಂದನು. ಅಣ್ಣನಾದ ನರಾಂತಕನ ವಧೆಯಿಂದ ಬಹಳವಾಗಿ ವ್ಯಸನಗೊಂಡು ಇಮ್ಮಡಿಸಿದ ಬಲಕೋಪಗಳುಳ್ಳ ದೇವಾಂತಕನೂ ಸಹ ರೋಷಸಮನ್ವಿತನಾಗಿ ಪರಿಘಾಯುಧವನ್ನು ಧರಿಸಿ ಅಂಗದನನ್ನಟ್ಟಬಂದನು. ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ರಥವನ್ನೇರಿ ತ್ರಿಶಿರಸ್ಕನೂ ಅಂಗದನಮೇಲೆ ತುರುಬಿಬಂದನು. ಹೀಗೆ ಆ ರಾಕ್ಷಸರು ಮೂವರೂ ತನ್ನಮೇಲೆ ಬರುತ್ತಿರುವುದನ್ನು ಕಂಡು ಅಂಗದಕುಮಾರನು ದೊಡ್ಡ

ಸ ತ್ರಿಭಿರ್ದೇವದರ್ಪಘ್ನೈರ್ನೈರ್ಋತೇಂದ್ರೈರಭಿದ್ರುತಃ । ವೃಕ್ಷಮುತ್ಪಾಟಯಾಮಾಸ ಮಹಾವಿಟಪಮಂಗದಃ ॥ ೫ ॥ ದೇವಾಂತಕಾಯ ತಂ ವೀರಶ್ಚಿಕ್ಷೇಪ ಸಹಸಾಂಗದಃ । ಮಹಾವೃಕ್ಷಂ ಮಹಾಶಾಖಂ ಶಕ್ರೋ ದೀಪ್ತಮಿವಾಶನಿಂ ॥ ೬ ॥ ತ್ರಿಶಿರಾಸ್ತಂ ಪ್ರಚಿಚ್ಛೇದ ಶರೈರಾಶೀವಿಷೋಪಮೈಃ । ಸವೃಕ್ಷಂ ಕೃತ್ತಮಾಲೋಕ್ಯ ಉತ್ಪಪಾತ ತದಾಽಂಗದಃ ॥ ೭ ॥ ಸ ವವರ್ಷ ತತೋ ವೃಕ್ಷಾನ್ ಶೈಲಾಂಶ್ಚ ಕಪಿಕುಂಜರಃ । ತಾನ್ ಪ್ರಚಿಚ್ಛೇದ ಸಂಕ್ರುದ್ಧಸ್ತ್ರಿಶಿರಾ ನಿಶಿತೈಃ ಶರೈಃ ॥ ೮ ॥ ಪರಿಘಾಗ್ರೇಣ ತಾನ್ ವೃಕ್ಷಾನ್ ಬಭಂಜ ಚ ಸುರಾಂತಕಃ । ತ್ರಿಶಿರಾಶ್ಚಾಽಂಗದಂ ವೀರಮಭಿದುದ್ರಾವ ಸಾಯಕೈಃ ॥ ೯ ॥

ರಾಕ್ಷಸಾಧಿಪತಿಗಳಿಂದ, ಅಭಿದ್ರುತಃ - ಮೇಲ್ವಾಯ್ದು ಬಂದ, ಅಂಗದಃ - ಅಂಗದನು, ಮಹಾವಿಟಪಂ - ದೊಡ್ಡ ಕೊಂಬೆಗಳುಳ್ಳ, ವೃಕ್ಷಂ - ಮರವನ್ನು, ಉತ್ಪಾಟಯಾಮಾಸ - ಕಿತ್ತುಕೊಂಡನು. ॥ ೫ ॥ ವೀರಃ - ಶೂರನಾದ, ಅಂಗದಃ - ಅಂಗದನು, ದೇವಾಂತಕಾಯ - ದೇವಾಂತಕನಿಗಾಗಿ, ಸಹಸಾ - ಜಾಗ್ರತೆಯಾಗಿ, ಮಹಾಶಾಖಂ - ದೊಡ್ಡ ಕೊಂಬೆಗಳುಳ್ಳ, ತಂಮಹಾವೃಕ್ಷಂ - ಆ ಹೆಮ್ಮರವನ್ನು, ಶಕ್ರಃ - ದೇವೇಂದ್ರನು, ದೀಪ್ತಂ - ಹೊಳೆಯುತ್ತಿರುವ, ಅಶನಿಮಿವ - ವಜ್ರಾಯುಧವನ್ನಂತೆ, ಚಿಕ್ಷೇಪ - ಎಸೆದನು. ॥ ೬ ॥ ತ್ರಿಶಿರಾಃ - ತ್ರಿಶಿರಸ್ಕನು, ಆಶೀ....ಮೈಃ - ಸರ್ಪಗಳಿಗೆ ಸಮಾನಗಳಾದ, ಶರೈಃ - ಬಾಣಗಳಿಂದ, ತಂ - ಆ ವೃಕ್ಷವನ್ನು, ಪ್ರಚಿಚ್ಛೇದ - ಕತ್ತರಿಸಿದನು, ಸೋಂಗದಃ - ಆ ಅಂಗದನು, (ಕತ್ತರಿಸಲ್ಪಟ್ಟ) ವೃಕ್ಷಂ - ಮರವನ್ನು, ಆಲೋಕ್ಯ - ಕಂಡು, ತದಾ - ಆಗ, ಉತ್ಪಪಾತ - ಮೇಲಕ್ಕೆ ಹಾರಿದನು. ॥ ೭ ॥ ಕಪಿಕುಂಜರಃ - ವಾನರೋತ್ತಮನಾದ, ಸಃ - ಆ ಅಂಗದನು, ತತಃ - ಬಳಿಕ, ವೃಕ್ಷಾನ್ - ಮರಗಳನ್ನೂ, ಶೈಲಾಂಶ್ಚ - ಪರ್ವತಗಳನ್ನೂ, ವವರ್ಷ - ಸುರಿಸಿದನು, ತ್ರಿಶಿರಾಃ - ತ್ರಿಶಿರಸ್ಕನು, ಸಂಕ್ರುದ್ಧಃ - ಬಹಳ ಕೋಪಗೊಂಡು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ತಾನ್ - ಅವರನ್ನು, ಪ್ರಚಿಚ್ಛೇದ - ಕತ್ತರಿಸಿದನು. ॥ ೮ ॥ ಸುರಾಂತಕಶ್ಚ - ದೇವಾಂತಕನೂ ಕೂಡ, ಪರಿಘಾಗ್ರೇಣ - ಪರಿಘಾಯುಧದ ತುದಿಯಿಂದ, ತಾನ್‌ವೃಕ್ಷಾನ್ - ಆ ಮರಗಳನ್ನು, ಬಭಂಜ - ಮುರಿದನು, ತ್ರಿಶಿರಾಶ್ಚ - ತ್ರಿಶಿರಸ್ಕನೂ, ಸಾಯಕೈಃ - ಬಾಣಗಳಿಂದ, ವೀರಂ - ಶೂರನಾದ, ಅಂಗದಂ - ಅಂಗದನನ್ನು ಕುರಿತು, ಅಭಿದುದ್ರಾವ - ಅಟ್ಟಿಬಂದನು. ॥ ೯ ॥ ಮಹೋದರಃ - ಮಹೋದರನು, ಸಂಕ್ರುದ್ಧಃ - ಕುಪಿತನಾಗಿ, ವಾಲಿಪುತ್ರಂ - ಅಂಗದನನ್ನುಕುರಿತು,

---

ದೊಡ್ಡ ಕೊಂಬೆಗಳೊಡಗೂಡಿದ ಹೆಮ್ಮರವೊಂದನ್ನು ಹಿಡಿದು ಪೆಳಗಿಸಿ ಕೂಡಲೇ ಅದನ್ನು ತನ್ನಮೇಲೆ ಬರುತ್ತಿದ್ದ ದೇವಾಂತಕನ ಮೇಲೆಸೆದನು. ॥ ೧–೬ ॥ ಆಗ ತ್ರಿಶಿರಸ್ಕನು ಬಹುವಾಗಿ ಕೋಪಗೊಂಡು ಮಹಾ ಸರ್ಪಗಳಿಗೆ ಸಮಾನಗಳಾದ ಬಾಣಗಳಿಂದ ಆ ಹೆಮ್ಮರವನ್ನು ತುಂಡರಿಸಿದನು. ಆ ಕೂಡಲೇ ಮಹಾ ಪರಾಕ್ರಮಿಯಾದ ಅಂಗದಕುಮಾರನು ಗಗನಕ್ಕೆ ಹಾರಿ ಕಲ್ಮರಗಳ ಬಿರುಮಳೆಯನ್ನು ಸುರಿಸಿದನು. ಅದೆಲ್ಲವನ್ನೂ ತ್ರಿಶಿರಸ್ಕನು ತೀಕ್ಷ್ಣವಾದ ಬಾಣಪರಂಪರೆಗಳಿಂದಲೇ ಭೇದಿಸಿದನು. ದೇವಾಂತಕನೂ ಕೂಡ ಪರಿಘಾಯುಧದ ಮೊನೆಯಿಂದ ಆಪುಂಗದನು ಪ್ರಯೋಗಿಸಿದ ವೃಕ್ಷವರ್ಷವನ್ನೆಲ್ಲ ಕತ್ತರಿಸಿ ಕೆಡವಿದನು. ತ್ರಿಶಿರಸ್ಕನು ಕೂರಂಬುಗಳನ್ನೂ ಪ್ರಯೋಗಿಸಬಯಸಿ ಅಂಗದನನ್ನಟ್ಟಿಬಂದನು. ಆನೆಯನ್ನೇರಿ ಮಹೋದರನೂ ಆ ವಾಲಿಕುಮಾರನಮೇಲೆ ತುರುಬಿ ಬಂದು ವಜ್ರಾಯುಧಕ್ಕೆ ಸಮಾನವಾದುವೂ, ಮಹಾ ತೀಕ್ಷ್ಣವಾದುವೂ ಆದ ಬಾಣ

ಗಜೇನ ಸಮಭಿದ್ರುತ್ಯ ವಾಲಿಪುತ್ರಂ ಮಹೋದರಃ। ಜಘಾನೋರಸಿ ಸಂಕ್ರುದ್ಧಸ್ತೋಮರೈರ್ವಜ್ರಸನ್ನಿಭೈಃ ॥೧೦॥ ದೇವಾಂತಕಶ್ಚ ಸಂಕ್ರುದ್ಧಃ ಪರಿಘೇಣ ತದಾಽಂಗದಂ । ಉಪಗಮ್ಯಾಽಭಿಹತ್ಯಾಶು ವ್ಯಪಚಕ್ರಾಮ ವೇಗವಾನ್ ॥ ೧೧ ॥ ಸ ತ್ರಿಭಿರ್ನೈರ್ಋತಶ್ರೇಷ್ಠೈರ್ಯುಗಪತ್ಸಮಭಿದ್ರುತಃ । ನವಿವ್ಯಥೇ ಮಹಾತೇಜಾ ವಾಲಿಪುತ್ರಃ ಪ್ರತಾಪವಾನ್ ॥ ೧೨ ॥ ಸವೇಗವಾನ್ಮಹಾವೇಗಂ ಕೃತ್ವಾ ಪರಮದುರ್ಜಯಃ । ತಲೇನ ಭೃಶಮುತ್ಪತ್ಯ ಜಘಾನಾಽಸ್ಯ ಮಹಾಗಜಂ ॥ ೧೩ ॥ ತಸ್ಯ ತೇನ ಪ್ರಹಾರೇಣ ನಾಗರಾಜಸ್ಯ ಸಂಯುಗೇ । ಪೇತತುರ್ಲೋಚನೇ ತಸ್ಯ ವಿನನಾದ ಸವಾರಣಃ ॥ ೧೪ ॥ ವಿಷಾಣಂ ಚಾಽಸ್ಯ ನಿಷ್ಕೃಷ್ಯ ವಾಲಿಪುತ್ರೋ ಮಹಾಬಲಃ । ದೇವಾಂತಕಮಭಿಪ್ಲುತ್ಯ

ಗಜೇನ - ಆನೆಯಿಂದ, ಸಮಭಿದ್ರುತ್ಯ - ಓಡಿಬಂದು, ಉರಸಿ - ಎದೆಯಲ್ಲಿ, ವಜ್ರಸನ್ನಿಭೈಃ - ವಜ್ರಸದೃಶವಾದ, ತೋಮರೈಃ - ತೋಮರಾಯುಧಗಳಿಂದ, ಜಘಾನ - ಹೊಡೆದನು. ॥ ೧೦ ॥ ತದಾ - ಆ ಕಾಲದಲ್ಲಿ, ವೇಗವಾನ್ - ಬಹಳ ವೇಗಶಾಲಿಯಾದ, ದೇವಾಂತಕಶ್ಚ - ದೇವಾಂತಕನೂ, ಸಂಕ್ರುದ್ಧಃ - ಕುಪಿತನಾಗಿ, ಉಪಗಮ್ಯ - ಬಂದು, ಪರಿಘೇಣ - ಪರಿಘಾಯುಧದಿಂದ, ಅಂಗದಂ - ಅಂಗದನನ್ನು, ಅಭಿಹತ್ಯ - ಹೊಡೆದು, ಆಶು - ಜಾಗ್ರತೆಯಾಗಿ, ವ್ಯಪಚಕ್ರಾಮ - ಹಿಂದಕ್ಕೆ ಓಡಿಹೋದನು. ॥ ೧೧ ॥ ಮಹಾತೇಜಾಃ - ಮಹಾ ತೇಜೋವಂತನಾದ, ಪ್ರತಾಪವಾನ್ - ಪರಾಕ್ರಮಶಾಲಿಯಾದ, ಸವಾಲಿಪುತ್ರಃ - ಆ ವಾಲಿಯ ಮಗನು, ತ್ರಿಭಿಃ - ಮೂರು ಮಂದಿಯಾದ, ನೈರ್ಋತಶ್ರೇಷ್ಠೈಃ - ರಾಕ್ಷಸೋತ್ತಮರಿಂದ, ಯುಗಪತ್ - ಏಕಕಾಲದಲ್ಲಿ, ಸಮಭಿದ್ರುತಃ - ಮೇಲೆ ಬಿದ್ದು ಬಂದರೂ, ನವಿವ್ಯಥೇ - ವ್ಯಸನಪಡಲಿಲ್ಲವು. ॥ ೧೨ ॥ ವೇಗವಾನ್ - ವೇಗವಂತನಾದ, ಪರ....ಯಃ - ಜಯಿಸಲಸಾಧ್ಯನಾದ, ಸಃ - ಆ ಅಂಗದನು, ಭೃಶಂ - ಬಹಳವಾಗಿ, ಉತ್ಪತ್ಯ - ಹಾರಿ, ಅಸ್ಯ - ಈ ಮಹೋದರನ, ಮಹಾಗಜಂ - ದೊಡ್ಡ ಆನೆಯನ್ನು, ಮಹಾವೇಗಂ - ಬಹು ವೇಗವನ್ನು, ಕೃತ್ವಾ - ಮಾಡಿ, ತಲೇನ - ಅಂಗೈಯಿಂದ, ಜಘಾನ - ಹೊಡೆದನು. ॥ ೧೩ ॥ ಸಂಯುಗೇ - ಕಾಳಗದಲ್ಲಿ, ತಸ್ಯ - ಆಯಂಗದನ, ತೇನಪ್ರಹಾರೇಣ - ಆ ಹೊಡೆತದಿಂದ, ತಸ್ಯನಾಗರಾಜಸ್ಯ - ಆ ಉತ್ತಮ ಗಜದ, ಲೋಚನೇ - ನೇತ್ರಗಳು, ಪೇತತುಃ - ಬಿದ್ದುವು, ಸವಾರಣಃ - ಆ ಆನೆಯು, ವಿನನಾದ - ಘಟ್ಟಿಯಾಗಿ ಕೂಗಿಕೊಂಡಿತು. ॥೧೪॥ ಮಹಾಬಲಃ - ಬಹು ಬಲಿಷ್ಠನಾದ, ವಾಲಿಪುತ್ರಃ - ವಾಲಿಯ ಮಗನು, ಅಸ್ಯ - ಈ ಆನೆಯ, ವಿಷಾಣಂ - ದಂತವನ್ನು, ನಿಷ್ಕೃಷ್ಯ - ಸೆಳೆದು, ಅಭಿಪ್ಲುತ್ಯ - ಹಾರಿ, ಸಂಯುಗೇ - ಕಾಳಗದಲ್ಲಿ, ದೇವಾಂತಕಂ - ದೇವಾಂತಕನನ್ನು, ತಾಡಯಾಮಾಸ - ಹೊಡೆದನು. ॥೧೫॥

ಗಳನ್ನು ಅವನ ವಕ್ಷಸ್ಥಳವು ಭೇದಿಸಿ ಹೋಗುವಂತೆಸೆದನು. ॥ ೭–೧೦ ॥ ಹೀಗೆ ಆ ಮೂವರು ರಾಕ್ಷಸರೂ ಒಂದೇಸಾರಿ ತನ್ನನ್ನು ಹೊಡೆಯುತ್ತಿರಲು ವಾಲಿಪುತ್ರನೂ, ಪ್ರತಾಪವಂತನೂ ಆದ ಆಯಂಗದನು ಸ್ವಲ್ಪವೂ ಭಯಗ್ರಸ್ತನಾಗದೆ ಮಹಾ ವೇಗವನ್ನವಲಂಬಿಸಿ ಮಹೋದರನೆಂಬ ರಾಕ್ಷಸನೇರಿದ್ದ ಆನೆಯ ಕುಂಭಸ್ಥಳಕ್ಕೆ ಬಲವಾದ ಪೆಟ್ಟನ್ನಿಟ್ಟನು. ಆ ಪೆಟ್ಟಿನಿಂದ ಆಯಾನೆಯ ಕಣ್ಣುಗಳು ಕಳಚಿ ಬಿದ್ದುಹೋದುವು. ಅಷ್ಟರಲ್ಲಿಯೇ ಅದು ಆ ವಾನರವೀರನ ಹೊಡೆತವನ್ನು ತಾಳಲಾರದೆ ಭಯಂಕರವಾದ ಘೀಂಕಾರವನ್ನು ಮಾಡಿತು. ಕೂಡಲೇ ಮಹಾ ಬಲಾಢ್ಯನಾದ ಅಂಗದನು ಅದರ ದಂತವನ್ನು ಕಳಚಿಕೊಂಡು ಅದರಿಂದ ದೇವಾಂತಕನನ್ನು ಬಲವಾಗಿ ಗುದ್ದಿದನು. ॥ ೧೧–೧೫ ॥ ಆ ಗುದ್ದನ್ನು

ತಾಡಯಾಮಾಸ ಸಂಯುಗೇ ॥ ೧೫ ॥ ಸ ವಿಹ್ವಲಿತಸರ್ವಾಂಗೋ ವಾತೋದ್ಧೂತ ಇವ ದ್ರುಮಃ । ಲಾಕ್ಷಾರಸಸವರ್ಣಂಚ ಸುಸ್ರಾವ ರುಧಿರಂ ಮುಖಾತ್ ॥ ೧೬ ॥ ಅಥಾಽಽಶ್ವಾಸ್ಯ ಮಹಾತೇಜಾಃ ಕೃಚ್ಛ್ರಾದ್ದೇವಾಂತಕೋ ಬಲೀ । ಆವಿಧ್ಯ ಪರಿಘಂ ಘೋರಮಾಜಘಾನ ತದಾಂಗದಂ ॥ ೧೭ ॥ ಪರಿಘಾಭಿಹತಶ್ಚಾಪಿ ವಾನರೇಂದ್ರಾತ್ಮಜ ಸ್ತದಾ । ಜಾನುಭ್ಯಾಂ ಪತಿತೋ ಭೂಮೌ ಪುನರೇವೋತ್ಪಪಾತಹ ॥ ೧೮ ॥ ಸಮುತ್ಪ ತಂತಂ ತ್ರಿಶಿರಾಸ್ತ್ರಿಭಿರ್ಬಾಣೈರಜಿಹ್ಮಗೈಃ । ಘೋರೈರ್ಹರಿಪತೇಃ ಪುತ್ರಂ ಲಲಾಟೇಽಭಿ ಜಘಾನಹ ॥ ೧೯ ॥ ತತೋಽಂಗದಂ ಪರಿಕ್ಷಿಪ್ತಂ ತ್ರಿಭಿರ್ನೈರ್ಋತಪುಂಗವೈಃ । ಹನುಮಾನಪಿ ವಿಜ್ಞಾಯ ನೀಲಶ್ಚಾಪಿ ಪ್ರತಸ್ಥತುಃ ॥ ೨೦ ॥ ತತಶ್ಚಿಕ್ಷೇಪ ಶೈಲಾಗ್ರಂ

ಸಃ - ಆ ದೇವಾಂತಕನು, ವಾತೋದ್ಧೂತಃ - ಗಾಳಿಯಿಂದ ಹಾರಿಸಲ್ಪಟ್ಟ, ದ್ರುಮ ಇವ - ವೃಕ್ಷದಂತೆ, ವಿಹ್ವ....ಗಃ - ವ್ಯಾಕುಲವಾದ ಸಮುಸ್ತಾವಯವಗಳುಳ್ಳವನಾಗಿ, ಮುಖಾತ್ - ಬಾಯಿಯಿಂದ, ಲಾಕ್ಷಾ....ಚ - ಅರಗುನೀರಿಗೆ ಸಮಾನವಾದ ಬಣ್ಣವುಳ್ಳ, ರುಧಿರಂ - ರಕ್ತವನ್ನು, ಸುಸ್ರಾವ - ಸುರಿಸಿದನು. ॥ ೧೬ ॥ ಅಥ - ಬಳಿಕ, ಬಲೀ - ಬಲಿಷ್ಠನಾದ, ಮಹಾತೇಜಾಃ - ಬಹು ತೇಜೋ ವಂತನಾದ, ದೇವಾಂತಕಃ - ದೇವಾಂತಕನು, ಕೃಚ್ಛ್ರಾತ್ - ಕಷ್ಟದಿಂದ, ಆಶ್ವಾಸ್ಯ - ಸುಧಾರಿಸಿ ಕೊಂಡು, ಘೋರಂ - ಭಯಂಕರವಾದ, ಪರಿಘಂ - ಕಬ್ಬಿಣದ ಕಟ್ಟುಹಾಕಿದ ಮರದ ದೊಣ್ಣೆಯನ್ನು, ಆವಿಧ್ಯ - ತಿರುವಿ, ತದಾ - ಆ ಕಾಲದಲ್ಲಿ, ಅಂಗದಂ - ಅಂಗದನನ್ನು, ಆಜಘಾನ - ಹೊಡೆದನು. ॥ ೧೭ ॥ ತದಾ - ಆಗ, ವಾನ....ಜಃ - ಕಪೀಂದ್ರನ ಮಗನು, ಪರಿ....ಪಿ - ಪರಿಘಾಯುಧ ದಿಂದ ಹೊಡೆಯಲ್ಪಟ್ಟವನಾದರೂ, ಜಾನುಭ್ಯಾಂ - ಮೊಣಕಾಲುಗಳಿಂದ, ಭೂಮೌ - ನೆಲದಲ್ಲಿ, ಪತಿತಃ - ಬಿದ್ದು, ಪುನರೇವ - ಮತ್ತೂ, ಉತ್ಪಪಾತಹ - ಹಾರಿದನಷ್ಟೆ. ॥ ೧೮ ॥ ಸಮುತ್ಪತಂತಂ - ಹಾರುತ್ತಿರುವ, ಹರಿಪತೇಃ - ವಾಲಿಯ, ಪುತ್ರಂ - ಮಗನನ್ನು, ತ್ರಿಶಿರಾಃ - ತ್ರಿಶಿರಸ್ಕನು, ಅಜಿಹ್ಮಗೈಃ - ಸರಿಯಾಗಿ ಹೋಗುತ್ತಿರುವ, ಘೋರೈಃ - ಭಯಂಕರವಾದ, ತ್ರಿಭಿರ್ಬಾಣೈಃ - ಮೂರು ಬಾಣಗಳಿಂದ, ಲಲಾಟೇ - ಫಾಲಪ್ರದೇಶದಲ್ಲಿ, ಅಭಿಜಘಾನಹ - ಹೊಡೆದನಷ್ಟೆ. ॥೧೯॥ ತತಃ - ಬಳಿಕ, ಹನುಮಾನ್ - ಆಂಜನೇಯನು, ನೀಲಶ್ಚಾಪಿ - ನೀಲನೂ, ಉಭಾವಪಿ - ಇಬ್ಬರೂ ಸಹ, ಅಂಗದಂ - ಅಂಗದನನ್ನು, ತ್ರಿಭಿಃ - ಮೂರು ಮಂದಿಯಾದರೆ, ನೈರ್ಋತಪುಂಗವೈಃ - ರಾಕ್ಷಸಶ್ರೇಷ್ಠರಿಂದ, ಪರಿಕ್ಷಿಪ್ತಂ - ಹೊಡೆ

ಸಹಿಸಲಾರದೆ ಆ ರಾಕ್ಷಸನು ಶಿಥಿಲವಾದ ಸರ್ವಾವಯುವಗಳುಳ್ಳವನಾಗಿ ಗಾಳಿಯ ಹೊಡೆತ ವನ್ನು ಸಹಿಸದ ಮರದಂತೆ ಕೆಳಕ್ಕೆ ಬಿದ್ದನು. ಅವನ ಮೈಯಿಂದ ಲತ್ತಿಗೆಯ ರಸಕ್ಕೆ ಸಮಾನವಾದ ರಕ್ತವು ಪ್ರವಹಿಸಿತು. ಸ್ವಲ್ಪ ಹೊತ್ತಿನಮೇಲೆ ಮಹಾ ತೇಜಸ್ವಿಯೂ, ಅಮಿತ ಪರಾಕ್ರಮಿಯೂ ಆದ ದೇವಾಂತಕನು ತೇರೇರಿ ತನ್ನ ಕೈಲಿದ್ದ ಪರಿಘಾಯುಧವನ್ನು ಗಿರಗಿರನೆ ತಿರುವಿ ಅಂಗದನ ಮೇಲೆ ಪ್ರಯೋಗಿಸಿದನು. ಆಗಲಾ ವಾನರೋತ್ತಮನು ಮೊಣ ಕಾಲೂರಿ ನೆಲಕ್ಕೆ ಬಿದ್ದು ಮೂರ್ಛೆಯೊಂದಿ ಕೆಲಕಾಲದ ತರುವಾಯ ತಿಳಿವಾಂತು ಮೇಲ ಕ್ಕೇಳುತ್ತಿದ್ದನು. ಅಷ್ಟರಲ್ಲಿಯೇ ರಾಕ್ಷಸೋತ್ತಮನಾದ ತ್ರಿಶಿರಸ್ಕನು ಬಹಳ ಮೊನಚಾದ ಮೂರಂಬುಗಳನ್ನು ಅವನಮೇಲೆಚ್ಚನು. ಆಗ ಆ ವಾನರನ ಮುಖವು ಭೇದಿಸಿ ಹೋಯಿತು. ಹೀಗೆ ಆ ಮೂವರು ರಾಕ್ಷಸರೂ ಒಟ್ಟುಗೂಡಿ ಅಂಗದನನ್ನು ಮರ್ದಿಸುತ್ತಿರುವುದನ್ನು ಕಂಡು ಹನುಮಂತನೂ, ನೀಲನೂ ಅವರಮೇಲೆ ಅಟ್ಟಬಂದರು. ॥೧೬–೨೦॥ ಮಹಾ ವಾನರನಾದ

ನೀಲಸ್ತ್ರಿಶಿರಸೇ ತದಾ । ತದ್ರಾವಣಸುತೋ ಧೀಮಾನ್ ಬಿಭೇದ ನಿಶಿತೈಃ ಶರೈಃ ॥೨೧॥ ತದ್ಬಾಣಶತನಿರ್ಭಿಣ್ಣಂ ವಿದಾರಿತಶಿಲಾತಲಂ । ಸವಿಷ್ಫುಲಿಂಗಂ ಸಜ್ವಾಲಂ ನಿಪಪಾತ ಗಿರೇಃ ಶಿರಃ ॥ ೨೨ ॥ ತತೋ ಜೃಂಭಿತಮಾಲೋಕ್ಯ ಹರ್ಷಾದ್ದೇವಾಂತಕಸ್ತದಾ । ಪರಿಘೇಣಾಭಿದುದ್ರಾವ ಮಾರುತಾತ್ಮಜಮಾಹವೇ ॥ ೨೩ ॥ ತಮಾಪತಂತಮುತ್ ಪ್ಲುತ್ಯ ಹನುಮಾನ್ಮಾರುತಾತ್ಮಜಃ । ಆಜಘಾನ ತದಾ ಮೂರ್ಧ್ನಿ ವಜ್ರಕಲ್ಪೇನ ಮುಷ್ಟಿನಾ ॥ ೨೪ ॥ ಶಿರಸಿ ಪ್ರಹರನ್ವೀರಸ್ತದಾ ವಾಯುಸುತೋ ಬಲೀ । ನಾದೇನಾಕಂಪಯಚ್ಚೈವ ರಾಕ್ಷಸಾನ್ ಸ ಮಹಾಕಪಿಃ ॥ ೨೫ ॥ ಸಮುಷ್ಟಿನಿಷ್ಪಿಷ್ಟವಿಕೀರ್ಣ

ಯಲ್ಪಟ್ಟವನನ್ನಾಗಿ, ವಿಜ್ಞಾಯ - ತಿಳಿದು, ಪ್ರತಸ್ಥತುಃ - ಹೊರಟರು. ॥ ೨೦ ॥ ತತಃ - ಬಳಿಕ, ನೀಲಃ - ನೀಲನು, ತದಾ - ಆ ಕಾಲದಲ್ಲಿ, ತ್ರಿಶಿರಸೇ - ತ್ರಿಶಿರಸ್ಕನಿಗಾಗಿ, ಶೈಲಾಗ್ರಂ - ಪರ್ವತ ಶಿಖರವನ್ನು, ಚಿಕ್ಷೇಪ - ಎತ್ತಿಹಾಕಿದನು, ಧೀಮಾನ್ - ಬುದ್ಧಿವಂತನಾದ, ರಾವಣಸುತಃ - ತ್ರಿಶಿರ ಸ್ಕನು, ತತ್ - ಆ ಶಿಖರವನ್ನು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ಬಿಭೇದ - ಭೇದಿಸಿದನು. ॥ ೨೧ ॥ ತದ್ಬಾ....ಣ್ಣಂ - ಆ ತ್ರಿಶಿರಸ್ಕನ ಅನೇಕ ಬಾಣಗಳಿಂದ ಭೇದಿಸಲ್ಪಟ್ಟು, ವಿದಾ....ಲಂ - ಶೀಳಲ್ಪಟ್ಟ ಕಲ್ಲುಗಳುಳ್ಳ, ಗಿರೇಃ - ಪರ್ವತದ, ಶಿರಃ - ಶಿಖರವು, ಸವಿಷ್ಫುಲಿಂಗಂ - ಕಿಡಿಗಳೊಡಗೂಡಿ, ಸಜ್ವಾಲಂ - ಉರಿಗಳೊಡಗೂಡಿ, ನಿಪಪಾತ - ಬಿದ್ದಿತು. ॥೨೨॥ ತತಃ - ಬಳಿಕ, ಜೃಂಭಿತಂ - ಭಗ್ನವಾದದ್ದನ್ನು, ಆಲೋಕ್ಯ - ಕಂಡು, ತದಾ - ಆ ಕಾಲದಲ್ಲಿ, ಹರ್ಷಾತ್ - ಸಂತೋಷದಿಂದ, ದೇವಾಂತಕಃ - ದೇವಾಂತಕನು, ಆಹವೇ - ಕಾಳಗದಲ್ಲಿ, ಮಾರುತಾತ್ಮಜಂ - ಹನುಮಂತನನ್ನು, ಪರಿಘೇಣ - ಪರಿಘಾಯುಧದಿಂದ, ಅಭಿದುದ್ರಾವ - ಅಟ್ಟಿಬಂದನು. ॥ ೨೩ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನೂಮಾನ್ - ಆಂಜನೇಯನು, ಉತ್ಪ್ಲುತ್ಯ - ಹಾರಿ, ತದಾ - ಆ ಕಾಲದಲ್ಲಿ, ವಜ್ರಕಲ್ಪೇನ - ವಜ್ರಾಯುಧಕ್ಕೆ ಸಮಾನವಾದ, ಮುಷ್ಟಿನಾ - ಮುಷ್ಟಿಯಿಂದ, ಆಪತಂತಂ - ಬರುತ್ತಿರುವ, ತಂ - ಆ ದೇವಾಂತಕನನ್ನು, ಮೂರ್ಧ್ನಿ - ಮಂಡೆಯಲ್ಲಿ, ಆಜಘಾನ - ಹೊಡೆದನು. ॥ ೨೪ ॥ ಬಲೀ - ಬಲವಂತನಾದ, ಮಹಾಕಪಿಃ - ಮಹಾ ವಾನರನಾದ, ವೀರಃ - ಶೂರನಾದ, ಸವಾಯುಸುತಃ - ಆ ವಾಯುಪುತ್ರನು, ಶಿರಸಿ - ಮಂಡೆಯಲ್ಲಿ, ಪ್ರಹರನ್ - ಹೊಡೆದವನಾಗಿ, ತದಾ - ಆ ಕಾಲದಲ್ಲಿ, ನಾದೇನ - ಕೂಗಿನಿಂದ, ರಾಕ್ಷಸಾಂಶ್ಚೈವ - ರಕ್ಕಸರನ್ನೂ ಕೂಡ, ಅಕಂಪಯತ್ - ನಡುಗುವಂತೆ ಮಾಡಿದನು. ॥ ೨೫ ॥ ಮುಷ್ಟಿ....ರ್ಣಾ - ಮುಷ್ಟಿಯಿಂದರಿಯಲ್ಪಟ್ಟ

ನೀಲನು ಮಹಾ ಕ್ರೋಧಾವಿಷ್ಟನಾಗಿ ದೊಡ್ಡ ಬೆಟ್ಟವೊಂದನ್ನು ಆ ತ್ರಿಶಿರಸ್ಕನ ಮೇಲಿಟ್ಟನು. ಆ ಪರ್ವತವಾದರೋ ರಾವಣಾಸುರನ ಮಗನಾದ ಆ ತ್ರಿಶಿರಸ್ಕನ ಬಾಣಪ್ರಯೋಗದಿಂದ ನುಚ್ಚುನುರಿಯಾಗಿ ಬಿದ್ದಿತು. ಅನೇಕ ನೂರು ಬಾಣಗಳಿಂದ ಮುರಿದ ಆ ಪರ್ವತವು ಕಿಡಿಗಳನುಗುಳುತ್ತ ಸಮೀಪದಲ್ಲಿದ್ದ ಮತ್ತೊಂದು ಪರ್ವತದಮೇಲೆ ಬಿದ್ದಿತು. ಆ ಸಮಯದಲ್ಲಿ ರಣಾಂಗಣದಲ್ಲಿ ವಿಜೃಂಭಿಸಿದ ಹನುಮಂತನನ್ನು ನೋಡಿ ದೇವಾಂತಕನೂ ಮಹಾ ಕೋಪಾವಿಷ್ಟನಾಗಿ ಪರಿಘವನ್ನು ತಿರುವುತ್ತ ಅವನಮೇಲೆ ಅಟ್ಟಿಬಂದನು. ವಾಯುಪುತ್ರನಾದ ಹನುಮಂತನು ತನ್ನಮೇಲೆ ಬರುತ್ತಿರುವ ದೇವಾಂತಕನನ್ನು ನೋಡಿ ವಜ್ರಾಯುಧಕ್ಕೆ ಸಮಾನವಾದ ಮುಷ್ಟಿಯಿಂದ ಆ ರಾಕ್ಷಸನ ಶಿರಸ್ಸು ಒಡೆದು ಹೋಗುವಂತೆ ಗುದ್ದಿ ಸಿಂಹನಾದವನ್ನು ಮಾಡಿದನು. ॥೨೧-೨೫॥ ಆಗ ಭೂಮಿಯೆಲ್ಲವೂ ಒಣಕಿತು, ಮುಷ್ಟಿಯ ಪೆಟ್ಟು

ಮೂರ್ಧಾ ನಿರ್ಗತದಂತಾಕ್ಷಿವಿಲಂಬಿಜಿಹ್ವಃ । ದೇವಾಂತಕೋ ರಾಕ್ಷಸರಾಜಸೂನು
ರ್ಗತಾಸುರುರ್ವ್ಯಾಂ ಸಹಸಾ ಪಪಾತ ॥ ೨೬ ॥ ತಸ್ಮಿನ್ ಹತೇ ರಾಕ್ಷಸಯೋಧಮುಖ್ಯೇ
ಮಹಾಬಲೇ ಸಂಯತಿ ದೇವಶತ್ರೌ। ಕ್ರುದ್ಧಸ್ತ್ರಿಮೂರ್ಧಾ ನಿಶಿತಾಗ್ರಮುಗ್ರಂ ವವರ್ಷ
ನೀಲೋರಸಿ ಬಾಣವರ್ಷಂ ॥ ೨೭ ॥ ಮಹೋದರಸ್ತು ಸಂಕ್ರುದ್ಧಃ ಕುಂಜರಂ ಪರ್ವ
ತೋಪಮಂ । ಭೂಯಸ್ಸಮಧಿರುಹ್ಯಾಶು ಮಂದರಂ ರಶ್ಮಿಮಾನಿವ ॥ ೨೮ ॥ ತತೋ
ಬಾಣಮಯಂ ವರ್ಷಂ ನೀಲಸ್ಯೋರಸ್ಯಪಾತಯತ್ । ಗಿರೌ ವರ್ಷಂ ತಟಿಚ್ಚಕ್ರ
ಚಾಪವಾನಿವ ತೋಯದಃ ॥೨೯॥ ತತಃ ಶರೌಘೈರಭಿವರ್ಷ್ಯಮಾಣೋ ವಿಭಿನ್ನಗಾತ್ರಃ

ಶಿಥಿಲವಾದ ಶಿರವುಳ್ಳ, ನಿರ್ಗಂ....ಹ್ವಃ - ಹೊರಹೊರಟ ಹಲ್ಲುಗಳೂ, ಕಣ್ಣುಗಳೂ, ಜೋಲಾ ಡುವ ನಾಲಗೆಯೂ ಉಳ್ಳ, ರಾಕ್ಷ....ನುಃ - ರಾವಣನ ಪುತ್ರನಾದ, ಸದೇವಾಂತಕಃ - ಆ ದೇವಾಂ ತಕನು, ಗತಾಸುಃ - ಹೋದ ಪ್ರಾಣಗಳುಳ್ಳವನಾಗಿ, ಉರ್ವ್ಯಾಂ - ಭೂಮಿಯಲ್ಲಿ, ಸಹಸಾ - ಜಾಗ್ರತೆ ಯಾಗಿ, ಪಪಾತ - ಬಿದ್ದನು. ॥ ೨೬ ॥ ರಾಕ್ಷ....ಖ್ಯೇ - ರಾಕ್ಷಸಭಟರಲ್ಲಿ ಮುಖ್ಯನಾದ, ಮಹಾ ಬಲೇ - ಬಹು ಬಲಶಾಲಿಯಾದ, ದೇವಶತ್ರೌ - ದೇವತೆಗಳಿಗೆ ಶತ್ರುವಾದ, ತಸ್ಮಿನ್ - ಆ ದೇವಾಂತಕನು, ಸಂಯತಿ - ಕಾಳಗದಲ್ಲಿ, ಹತೇ - ಹತನಾಗಲು, ಕ್ರುದ್ಧಃ - ಕುಪಿತನಾದ, ತ್ರಿಮೂರ್ಧಾ - ತ್ರಿಶಿರ ಸ್ಕನು, ಉಗ್ರಂ - ಭಯಂಕರವಾದ, ನಿಶಿತಾಗ್ರಂ - ಹದವಾದ ತುದಿಗಳುಳ್ಳ, ಬಾಣವರ್ಷಂ - ಬಾಣದ ಮಳೆಯನ್ನು, ನೀಲೋರಸಿ - ನೀಲನ ಎದೆಯಲ್ಲಿ, ವವರ್ಷ - ಸುರಿಸಿದನು. ॥೨೭॥ ಮಹೋದರಸ್ತು - ಮಹೋದರನಾದರೆ, ಸಂಕ್ರುದ್ಧಃ - ಕೋಪವುಳ್ಳವನಾಗಿ, ಪರ್ವತೋಪಮಾಂ - ಬೆಟ್ಟಕ್ಕೆ ಸಮಾನ ವಾದ, ಕುಂಜರಂ - ಆನೆಯನ್ನು, ರಶ್ಮಿಮಾನ್ - ಸೂರ್ಯನು, ಮಂದರಮಿವ - ಮಂದರಪರ್ವತ ವನ್ನಂತೆ, ಆಶು - ಜಾಗ್ರತೆಯಾಗಿ, ಭೂಯಃ - ಮತ್ತೂ, ಸಮಧಿರುಹ್ಯ - ಏರಿ, ತತಃ - ಬಳಿಕ, ನೀಲಸ್ಯ - ನೀಲನ, ಉರಸಿ - ಎದೆಯಲ್ಲಿ, ಬಾಣಮಯಂ - ಬಾಣಮಯವಾದ, ವರ್ಷಂ - ಮಳೆ ಯನ್ನು, ಗಿರೌ - ಬೆಟ್ಟದಲ್ಲಿ, ತಟಿ....ವಾನ್ - ಮಿಂಚುಗಳೂ, ಇಂದ್ರ ಧನುಸ್ಸೂ ಉಳ್ಳ, ಅಂಬುದಃ - ಮೇಘವು, ವರ್ಷಮಿವ - ವರ್ಷವನ್ನಂತೆ, ಅಪಾತಯತ್ - ಸುರಿಸಿದನು. ॥ ೨೯ ॥ ತತಃ - ಬಳಿಕ, ಶರೌಘೈಃ - ಬಾಣಸಮೂಹಗಳಿಂದ, ಅಭಿವರ್ಷ್ಯಮಾಣಃ - ಸುರಿಸಲ್ಪಡುತ್ತಲಿರುವ, ವಿಭಿನ್ನಗಾತ್ರಃ - ಭೇದಿಸಲ್ಪಟ್ಟ ಶರೀರವುಳ್ಳ, ಕಪಿಸೈನ್ಯಪಾಲಃ - ವಾನರಸೈನ್ಯಾಧಿಪತಿಯಾದ, ನೀಲಃ - ನೀಲನು, ಮಹಾಬಲೇನ - ಬಹು ಬಲವಂತನಾದ, ತೇನ - ಅವನಿಂದ, ನಿಸ್ಸೃಷ್ಟಗಾತ್ರಃ - ಬಾಧಿಸಲ್ಪಟ್ಟ ಶರೀರ

ಬಿದ್ದಕೂಡಲೇ ಆ ದೇವಾಂತಕನು ಹೊರಹೊರಟ ಕಣ್ಣುಗುಡ್ಡೆಗಳೂ, ಹಲ್ಲುಗಳೂ, ನಾಲ ಗೆಯೂ ಉಳ್ಳವನಾಗಿ ನೆಲಕ್ಕುರುಳಿ ಪ್ರಾಣಗಳನ್ನು ತೊರೆದನು. ಹೀಗೆ ದೇವತೆಗಳಿಗೂ, ಋಷಿಗಳಿಗೂ ಶತ್ರುವೂ, ಮಹಾ ಬಲಾಢ್ಯನೂ ಆದ ದೇವಾಂತಕನು ಮಡಿದುದನ್ನು ಕಂಡು ತ್ರಿಶಿರಸ್ಕನು ಕೋಪೋದ್ದೀಪಿತನಾಗಿ ವಾನರಯೂಥಪತಿಯಾದ ನೀಲನೆದೆಗೆ ಬಾಣವರ್ಷ ವನ್ನು ಸುರಿಸಿದನು. ಅದೇ ಸಮಯದಲ್ಲಿ ಮಹೋದರನೂ ಕೂಡ ಬಹಳವಾಗಿ ಕೋಪ ಗೊಂಡು ಸೂರ್ಯನು ಮಂದರಾದ್ರಿಯನ್ನೇರುವ ರೀತಿ ಪರ್ವತೋಪಮವಾದ ಆನೆಯೊಂದ ನ್ನೇರಿದವನಾಗಿ, ಮಿಂಚಿನಿಂದಲೂ, ಇಂದ್ರ ಧನುಸ್ಸಿನಿಂದಲೂ ಕೂಡಿದ ಮುಗಿಲುಗಳು ಪರ್ವ ತದಮೇಲೆ ಮಳೆಗರೆದಂತೆ ಆ ನೀಲನೆದೆಗೆ ಅಂಬಿನ ಮಳೆಗರೆದನು. ಇಂತಹ ಅಂಬಿನ ಮಳೆ ಯಲ್ಲಿ ಮುಳುಗಿದ ಆ ನೀಲನು ವಿಕಲವಾದ ಸರ್ವಾವಯವಗಳುಳ್ಳವನಾಗಿ ಅತ್ತಿತ್ತ ಕದ

ಕಪಿಸೈನ್ಯಪಾಲಃ। ನೀಲೋ ಬಭೂವಾಽಥ ನಿಸೃಷ್ಟಗಾತ್ರೋ ವಿಷ್ಟಂಭಿತಸ್ತೇನ ಮಹಾಬಲೇನ ॥ ೩೦॥ ತತಸ್ತು ನೀಲಃ ಪ್ರತಿಲಭ್ಯ ಸಂಜ್ಞಾಂ ಶೈಲಂ ಸಮುತ್ಪಾಟ್ಯ ಸವೃಕ್ಷಷಂಡಂ । ತತಸ್ಸಮುತ್ಪತ್ಯ ಭೃಶೋಗ್ರವೇಗೋ ಮಹೋದರಂ ತೇನ ಜಘಾನ ಮೂರ್ಧ್ನಿ ॥ ೩೧ ॥ ತತಸ್ಸಶೈಲೇಂದ್ರನಿಪಾತಭಗ್ನೋ ಮಹೋದರಸ್ತೇನ ಮಹಾದ್ವಿಪೇನ । ವಿಪೋಥಿತೋ ಭೂಮಿತಲೇ ಗತಾಸುಃ ಪಪಾತ ವಜ್ರಾಭಿಹತೋ ಯಥಾದ್ರಿಃ ॥ ೩೨ ॥ ಪಿತೃವ್ಯಂ ನಿಹತಂ ದೃಷ್ಟ್ವಾ ತ್ರಿಶಿರಾಶ್ಚಾಪಮಾದದೇ । ಹನುಮಂತಂಚ ಸಂಕ್ರುದ್ಧೋ ವಿವ್ಯಾಧ ನಿಶಿತೈಃ ಶರೈಃ ॥ ೩೩ ॥ ಸವಾಯುಸೂನುಃ ಕುಪಿತಶ್ಚಿಕ್ಷೇಪ ಶಿಖರಂಗಿರೇಃ। ತ್ರಿಶಿರಾಸ್ತಚ್ಛರೈಸ್ತೀಕ್ಷ್ಣೈರ್ಬಿಭೇದ ಬಹುಧಾ ಬಲೀ॥೩೪॥

ವುಳ್ಳವನಾಗಿ, ಅಥ - ಅನಂತರದಲ್ಲಿ, ವಿಷ್ಟಂಭಿತಃ - ಸ್ತಂಭೀಭೂತನು, ಬಭೂವ - ಆದನು. ॥೩೦॥ ತತಃ - ಆ ಬಳಿಕ, ನೀಲಃ - ನೀಲನು, ಸಂಜ್ಞಾಂ - ಪ್ರಜ್ಞೆಯನ್ನು, ಪ್ರತಿಲಭ್ಯ - ಹೊಂದಿ, ಭೃಶೋಗ್ರವೇಗಃ-ಬಹಳ ಭಯಂಕರವಾದ ವೇಗವುಳ್ಳವನಾಗಿ, ತತಃ-ಬಳಿಕ, ಸಮುತ್ಪತ್ಯ-ಹಾರಿ, ಸವೃಕ್ಷಷಂಡಂ - ವೃಕ್ಷಸಮೂಹಗಳಿಂದೊಡಗೂಡಿದ, ಶೈಲಂ - ಪರ್ವತವನ್ನು, ಸಮುತ್ಪಾಟ್ಯ - ಕಿತ್ತು, ತೇನ - ಆದರಿಂದ, ಮಹೋದರಂ - ಮಹೋದರನನ್ನು, ಮೂರ್ಧ್ನಿ - ಮಂಡೆಯಲ್ಲಿ, ಜಘಾನ - ಹೊಡೆದನು. ॥ ೩೧ ॥ ತತಃ - ಅನಂತರದಲ್ಲಿ, ಸಮಹೋದರಃ - ಆ ಮಹೋದರನು, ಶೈಲೇಂ....ಗ್ನಃ - ಪರ್ವತಶ್ರೇಷ್ಠದ ಬೀಳುವಿಕೆಯಿಂದ ಭಗ್ನನಾಗಿ, ತೇನಮಹಾದ್ವಿಪೇನ - ಆ ಆನೆಯೊಡಗೂಡಿ, ವಿಪೋಥಿತಃ - ಹಿಂಸಿಸಲ್ಪಟ್ಟವನಾಗಿ, ಗತಾಸುಃ - ಹೋದ ಪ್ರಾಣಗಳುಳ್ಳವನಾಗಿ, ವಜ್ರಾಭಿಹತಃ - ವಜ್ರಾಯುಧದಿಂದ ಹೊಡೆಯಲಟ್ಟ, ಅದ್ರಿರ್ಯಥಾ - ಪರ್ವತದಂತೆ, ಭೂಮಿತಲೇ - ನೆಲದಲ್ಲಿ, ಪಪಾತ - ಬಿದ್ದನು. ॥೩೨॥ ತ್ರಿಶಿರಾಃ - ತ್ರಿಶಿರಸ್ಕನು, ಪಿತೃವ್ಯಂ - ಚಿಕ್ಕಪ್ಪನು, ನಿಹತಂ - ಹೊಡೆಯಲ್ಪಟ್ಟವನನ್ನಾಗಿ, ದೃಷ್ಟ್ವಾ-ಕಂಡು, ಸಂಕ್ರುದ್ಧಃ-ಕೋಪಿಷ್ಠನಾಗಿ, ಚಾಪಂ-ಬಿಲ್ಲನ್ನು, ಆದದೇ - ತೆಗೆದುಕೊಂಡನು, ಹನೂಮಂತಂಚ - ಆಂಜನೇಯನನ್ನೂ, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು. ॥ ೩೩ ॥ ಸವಾಯುಸೂನುಃ - ಆ ವಾಯುಪುತ್ರನು, ಕುಪಿತಃ - ಕೋಪಿಷ್ಠನಾಗಿ, ಗಿರೇಃ - ಪರ್ವತದ, ಶಿಖರಂ - ಶೃಂಗವನ್ನು, ಚಿಕ್ಷೇಪ - ಎಸೆದನು, ಬಲೀ - ಬಲವಂತನಾದ, ತ್ರಿಶಿರಾಃ - ತ್ರಿಶಿರಸ್ಕನು, ತೀಕ್ಷ್ಣೈಃ - ಕ್ರೂರವಾದ, ಶರೈಃ - ಬಾಣಗಳಿಂದ,

---

ಲಲೂ ಸಮರ್ಥನಾಗದೆ ಹೋದನು. ॥ ೨೬–೩೦ ॥ ಸ್ವಲ್ಪ ಹೊತ್ತಿನ ಮೇಲೆ ಆ ನೀಲನು ಎಚ್ಚೆತ್ತು ಮರಗಳ ಸಾಲನ್ನೇ ಪೆಳಗಿಸಿಕೊಂಡು ಆ ಮಹೋದರನ ತಲೆಯೊಡೆದು ಹೋಗುವಂತೆ ಬಲವಾಗಿ ಎಸೆದನು. ಇಷ್ಟೆಯಲ್ಲದೆ ದೊಡ್ಡದೊಂದು ಬೆಟ್ಟವನ್ನು ತಂದು ಆ ಮಹೋದರನೇರಿದ್ದ ಆನೆಯಮೇಲೆಸೆದು ಅದನ್ನು ಮರ್ದಿಸಿದನು. ಆ ಪೆಟ್ಟನ್ನು ತಾಳಲಾರದೆ ಆ ಮಹೋದರನು ನೆಲಕ್ಕುರುಳಿ ಮಡಿದುಹೋದನು. ಈ ರೀತಿ ವಾನರೋತ್ತಮನಾದ ನೀಲನಿಂದ ತನ್ನ ಚಿಕ್ಕಪ್ಪನಾದ ಮಹೋದರನು ಮಡಿದುರುಳಿದುದನ್ನು ಕಂಡು ರಾಕ್ಷಸೋತ್ತಮನಾದ ತ್ರಿಶಿರಸ್ಕನು ಕ್ರೋಧೋದ್ದೀಪಿತನಾಗಿ ಧನುಸ್ಸನ್ನು ಗ್ರಹಿಸಿ ಸಮೀಪದಲ್ಲಿಯೇ ಇದ್ದ ಹನುಮಂತನಮೇಲೆ ಕೂರಂಬುಗಳನ್ನೆಸೆದನು. ಹನುಮಂತನೂ ಕೂಡ ಮಹಾ ಕುಪಿತನಾಗಿ ಪರ್ವತಶಿಖರವೊಂದನ್ನು ಆ ತ್ರಿಶಿರಸ್ಕನ ಮೇಲೆ ಪ್ರಯೋಗಿಸಿದನು. ಆಗ ಮಹಾ ಬಲಾಢ್ಯನಾದ ತ್ರಿಶಿರಸ್ಕನು ಮಹಾ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ

ತದ್ವ್ಯರ್ಥಂ ಶಿಖರಂ ದೃಷ್ಟ್ವಾ ದ್ರುಮವರ್ಷಂ ಮಹಾಕಪಿಃ । ವಿಸಸರ್ಜ ರಣೇ ತಸ್ಮಿನ್ ರಾವಣಸ್ಯ ಸುತಂ ಪ್ರತಿ॥೩೫॥ತಮಾಪತಂತಮಾಕಾಶೇ ದ್ರುಮವರ್ಷಂ ಪ್ರತಾಪವಾನ್ । ತ್ರಿಶಿರಾ ನಿಶಿತೈರ್ಬಾಣೈಶ್ಚಿಚ್ಛೇದ ಚ ನನಾದಚ ॥ ೩೬ ॥ ತತೋ ಹನೂಮಾನುತ್ಪ್ಲುತ್ಯ ಹಯಾಂಸ್ತ್ರಿಶಿರಸಸ್ತದಾ । ವಿದದಾರ ನಖೈಃ ಕ್ರುದ್ಧೋ ಗಜೇಂದ್ರಂ ಮೃಗ ರಾಡಿವ ॥ ೩೭ ॥ ಅಥ ಶಕ್ತಿಂ ಸಮಾದಾಯ ಕಾಳರಾತ್ರಿಮಿವಾಂತಕಃ । ಚಿಕ್ಷೇಪಾಽನಿಲಪುತ್ರಾಯ ತ್ರಿಶಿರಾ ರಾವಣಾತ್ಮಜಃ ॥ ೩೮ ॥ ದಿವಃ ಕ್ಷಿಪ್ತಾಮಿವೋಲ್ಕಾಂ ತಾಂ ಶಕ್ತಿಂ ಕ್ಷಿಪ್ತಾಮಸಂಗತಾಂ । ಗೃಹೀತ್ವಾ ಹರಿಶಾರ್ದೂಲೋ ಬಭಂಜಚ ನನಾದಚ

ತತ್ - ಆ ಶಿಖರವನ್ನು, ಬಹುಧಾ - ಬಹು ಬಗೆಯಾಗಿ, ಬಿಭೇದ - ಭೇದಿಸಿದನು. ॥ ೩೪ ॥ ಮಹಾಕಪಿಃ - ಮಹಾ ವಾನರನಾದ ಆಂಜನೇಯನನ್ನು, ತಚ್ಛಿಖರಂ - ಆ ಶೃಂಗವನ್ನು, ವ್ಯರ್ಥಂ - ವ್ಯರ್ಥವನ್ನಾಗಿ, ದೃಷ್ಟ್ವಾ - ಕಂಡು, ತಸ್ಮಿನ್ರಣೇ - ಆ ಕಾಳಗದಲ್ಲಿ, ರಾವಣಸ್ಯ - ರಾವಣನ, ಸುತಂಪ್ರತಿ- ಮಗನನ್ನು ಕುರಿತು, ದ್ರುಮವರ್ಷಂ - ಮರಗಳ ಮಳೆಯನ್ನು, ವಿಸಸರ್ಜ - ಬಿಟ್ಟನು. ॥ ೩೫ ॥ ಪ್ರತಾಪವಾನ್ - ಪರಾಕ್ರಮಶಾಲಿಯಾದ, ತ್ರಿಶಿರಾಶ್ಚ - ತ್ರಿಶಿರಸ್ಕನೂ ಕೂಡ, ಆಕಾಶೇ - ಅಂತರಿಕ್ಷದಲ್ಲಿ, ಆಪತಂತಂ - ಬರುತ್ತಿರುವ, ದ್ರುಮವರ್ಷಂ - ಮರಗಳ ಮಳೆಯನ್ನು, ನಿಶಿತೈಃ - ತೀಕ್ಷ್ಣವಾದ, ಬಾಣೈಃ - ಬಾಣಗಳಿಂದ, ಚಿಚ್ಛೇದ - ಕತ್ತರಿಸಿದನು, ನನಾದಚ - ಸಿಂಹನಾದ ಮಾಡಿದನು. ॥ ೩೬ ॥ ತತಃ - ಅನಂತರದಲ್ಲಿ, ಹನೂಮಾನ್ - ಆಂಜನೇಯನು, ಉತ್ಪ್ಲುತ್ಯ - ಹಾರಿ, ತ್ರಿಶಿರಸಃ - ತ್ರಿಶಿರಸ್ಕನ, ಹಯಾನ್ - ಕುದುರೆಗಳನ್ನು, ನಖೈಃ - ಉಗುರುಗಳಿಂದ, ಕ್ರುದ್ಧಃ - ಕೋಪಿಷ್ಠನಾದ, ಮೃಗರಾಟ್ - ಸಿಂಹವು, ಗಜೇಂದ್ರಮಿವ - ಉತ್ತಮವಾದ ಆನೆಯನ್ನಂತೆ, ವಿದದಾರ - ಸೀಳಿದನು. ॥ ೩೭ ॥ ಅಥ - ಅನಂತರದಲ್ಲಿ, ರಾವಣಾತ್ಮಜಃ - ರಾವಣನ ಮಗನಾದ, ತ್ರಿಶಿರಾಃ - ತ್ರಿಶಿರಸ್ಕನು, ಕಾಳರಾತ್ರಿಂ - ಕಾಳರಾತ್ರಿಯಲ್ಲಿ, ಅಂತಕಇವ - ಯಮನಂತೆ, ಶಕ್ತಿಂ - ಶಕ್ತ್ಯಾಯುಧವನ್ನು, ಸಮಾದಾಯ - ತೆಗೆದುಕೊಂಡು, ಚಿಕ್ಷೇಪ - ಎಸೆದನು. ॥೩೮॥ ದಿವಃ - ಅಂತರಿಕ್ಷದಿಂದ, ಕ್ಷಿಪ್ತಾಂ- ಬೀಳಿಸಲ್ಪಟ್ಟ, ಉಲ್ಕಾ....ತಾಂ - ಕೊಳ್ಳಿಯಂತಿರುವ, ಕ್ಷಿಪ್ತಾಂ - ಎತ್ತಿಹಾಕಲ್ಪಟ್ಟ, ಅಸಂಗತಾಂ - ತನ್ನಮೇಲೆ ಬೀಳದಿರುವ, ತಾಂಶಕ್ತಿಂ - ಆ ಶಕ್ತಿಯನ್ನು, ಹರಿಶಾರ್ದೂಲಃ - ಆಂಜನೇಯನು, ಗೃಹೀತ್ವಾ - ಕೈಯಲ್ಲಿ ಹಿಡಿದು, ಬಭಂಜ - ಮುರಿದನು, ನನಾದಚ - ಸಿಂಹನಾದ ಮಾಡಿದನು.

ಆ ಪರ್ವತಶಿಖರವನ್ನು ನುಚ್ಚುನುರಿ ಮಾಡಿದನು. ॥ ೩೧–೩೫ ॥ ಅದನ್ನು ನೋಡಿ ವಾನರೋತ್ತಮನಾದ ಹನುಮಂತನು ಹೆಮ್ಮರಗಳ ಮಳೆಯನ್ನೇ ಆ ತ್ರಿಶಿರಸ್ಕನ ಮೇಲೆ ಸುರಿಸಿದನು. ಮಹಾ ಪ್ರತಾಪಶಾಲಿಯಾದ ತ್ರಿಶಿರಸ್ಕನು ಆ ಮರಗಳ ಮಳೆಯನ್ನು ಬಾಣಗಳಿಂದ ಭೇದಿಸಿ ಮಹತ್ತರವಾದ ಸಿಂಹನಾದವನ್ನು ಮಾಡಿದನು. ಹನುಮಂತನೂ ಸಹ ಮಹಾ ಕ್ರೋಧಾವಿಷ್ಟನಾಗಿ ಆ ತ್ರಿಶಿರಸ್ಕನ ಜಾತ್ಯಶ್ವವನ್ನು ಸಿಂಹವು ತನ್ನ ನಖಾಗ್ರಗಳಿಂದ ಮದಗಜವನ್ನು ಸೀಳುವಂತೆ ಸೀಳಿಹಾಕಿದನು. ರಾವಣಾಸುರನ ಪುತ್ರನಾದ ಆ ತಿಶಿರಸ್ಕನು ಯಮನಂತೆ ಮಹಾ ಕಾಳರಾತ್ರಿಗೆ ಸಮಾನವಾದ ಶಕ್ತ್ಯಾಯುಧವನ್ನು ಗ್ರಹಿಸಿ ಅದನ್ನು ಹನುಮಂತನ ಮೇಲೆಸೆದನು. ಹಾಗೆ ತ್ರಿಶಿರಸ್ಕನು ಪ್ರಯೋಗಿಸಿ ಅಂತರಿಕ್ಷದಿಂದ ಜಾರಿ ಬೀಳುತ್ತಿರುವ ಉಲ್ಕೆಗೆ ಸಮಾನವಾದ ಆ ಶಕ್ತ್ಯಾಯುಧವನ್ನು ಕೈಯಲ್ಲಿ ಹಿಡಿದು ಮಹಾ ವೀರನಾದ ಆ ಹನುಮಂತನು ಅದನ್ನು ಮುರಿದಿಕ್ಕಿ ಸಿಂಹನಾದವನ್ನು ಮಾಡಿದನು. ಹೀಗೆ

||೬೯|| ತಾಂ ದೃಷ್ಟ್ವಾ ಘೋರಸಂಕಾಶಾಂ ಶಕ್ತಿಂ ಭಗ್ನಾಂ ಹನೂಮತಾ । ಪ್ರಹೃಷ್ಟಾ ವಾನರಗಣಾ ವಿನೇದುರ್ಜಲದಾ ಇವ ॥ ೭೦ ॥ ತತಃ ಖಡ್ಗಂ ಸಮುದ್ಯಮ್ಯ ತ್ರಿಶಿರಾ ರಾಕ್ಷಸೋತ್ತಮಃ । ನಿಜಘಾನ ತಥಾ ವ್ಯೂಢೇ ವಾಯುಪುತ್ರಸ್ಯ ವಕ್ಷಸಿ ॥೭೧॥ ಖಡ್ಗ ಪ್ರಹಾರಾಭಿಹತೋ ಹನೂಮಾನ್ ಮಾರುತಾತ್ಮಜಃ । ಆಜಘಾನ ತ್ರಿಶಿರಸಂ ತಲೇನೋರಸಿ ವೀರ್ಯವಾನ್ ॥೭೨॥ ಸ ತಲಾಭಿಹತಸ್ತೇನ ಸ್ರಸ್ತಹಸ್ತಾಯುಧೋ ಭುವಿ। ನಿಪಪಾತ ಮಹಾತೇಜಾಸ್ತ್ರಿಶಿರಾಸ್ತ್ಯಕ್ತಚೇತನಃ ॥ ೭೩ ॥ ಸ ತಸ್ಯ ಪತತಃ ಖಡ್ಗಂ ಸಮಾಚ್ಛಿದ್ಯ ಮಹಾಕಪಿಃ। ನನಾದ ಗಿರಿಸಂಕಾಶಸ್ತ್ರಾಸಯನ್ ಸರ್ವನೈರ್ಋತಾನ್॥೭೪॥

|| ೬೯ || ಘೋರ....ಶಾಂ - ಭಯಂಕರವಾದ, ತಾಂಶಕ್ತಿಂ - ಆ ಶಕ್ತಿಯನ್ನು, ಹನೂಮತಾ - ಆಂಜನೇಯನಿಂದ, ಭಗ್ನಾಂ - ಮುರಿಯಲ್ಪಟ್ಟದನ್ನಾಗಿ, ದೃಷ್ಟ್ವಾ - ಕಂಡು, ಪ್ರಹೃಷ್ಟಾಃ - ಸಂತೋಷಗೊಂಡ, ವಾನರಗಣಾಃ - ಕಪಿಸಮೂಹಗಳು, ಜಲದಾ ಇವ - ಮೇಘಗಳಂತೆ, ವಿನೇದುಃ - ಕೋಲಾಹಲಧ್ವನಿ ಮಾಡಿದರು. || ೭೦ || ತತಃ - ಬಳಿಕ, ರಾಕ್ಷಸೋತ್ತಮಃ - ಉತ್ತಮ ರಾಕ್ಷಸನಾದ, ತ್ರಿಶಿರಾಃ - ತ್ರಿಶಿರಸ್ಕನು, ಖಡ್ಗಂ - ಕತ್ತಿಯನ್ನು, ಸಮುದ್ಯಮ್ಯ - ಎತ್ತಿ, ತದಾ - ಆ ಕಾಲದಲ್ಲಿ, ವ್ಯೂಢೇ - ದೃಢವಾದ, ವಾಯುಪುತ್ರಸ್ಯ - ಆಂಜನೇಯನ, ವಕ್ಷಸಿ - ಎದೆಯಲ್ಲಿ, ನಿಜಘಾನ - ಹೊಡೆದನು. || ೭೧ || ಖಡ್ಗ....ತಃ - ಕತ್ತಿಯಿಂದ ಹೊಡೆಯಲ್ಪಟ್ಟ, ವೀರ್ಯವಾನ್ - ಪರಾಕ್ರಮಿಯಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನೂಮಾನ್ - ಆಂಜನೇಯನು, ತ್ರಿಶಿರಸಂ - ತ್ರಿಶಿರಸ್ಕನನ್ನು, ತಲೇನ - ಅಂಗೈಯಿಂದ, ಉರಸಿ - ಎದೆಯಲ್ಲಿ, ಆಜಘಾನ - ಹೊಡೆದನು. || ೭೨ || ಮಹಾತೇಜಾಃ - ಮಹಾ ಪರಾಕ್ರಮಿಯಾದ, ಸಃತ್ರಿಶಿರಾಃ - ಆ ತ್ರಿಶಿರಸ್ಕನು, ತೇನ - ಆ ಹನುಮಂತನಿಂದ, ತಲಾಭಿಹತಃ - ಅಂಗೈಯಿಂದ ಹೊಡೆಯಲ್ಪಟ್ಟವನಾಗಿ, ಸಸ್ರ....ಧಃ - ಕೆಳಗೆ ಬಿದ್ದ ಹಸ್ತದಲ್ಲಿನ ಆಯುಧವುಳ್ಳವನಾಗಿ, ತ್ಯಕ್ತಚೇತನಃ - ಪ್ರಜ್ಞೆತಪ್ಪಿ, ಭುವಿ - ನೆಲದಲ್ಲಿ, ನಿಪಪಾತ - ಬಿದ್ದನು. || ೭೩ || ಗಿರಿಸಂಕಾಶಃ - ಪರ್ವತೋಪಮನಾದ, ಸಮಹಾಕಪಿಃ - ಆ ಆಂಜನೇಯನು, ಪತತಃ - ಕೆಳಗೆ ಬೀಳುತ್ತಿರುವ, ತಸ್ಯ - ಆ ತ್ರಿಶಿರಸ್ಕನ, ಖಡ್ಗಂ - ಕತ್ತಿಯನ್ನು, ಸಮಾಚ್ಛಿದ್ಯ - ಕಿತ್ತುಕೊಂಡು, ಸರ್ವನೈರ್ಋತಾನ್ - ಸಮಸ್ತ ರಾಕ್ಷಸರನ್ನೂ, ತ್ರಾಸಯನ್ - ಹೆದರಿಸುತ್ತ, ನನಾದ - ಕೂಗಿದನು. || ೭೪ || ತಂಘೋಷಂ - ಆ ಕೂಗನ್ನು, ಅಮೃಷ್ಯಮಾಣಃ - ಸೈರಿಸದೆ, ನಿಶಾಚರಃ - ತ್ರಿಶಿರಸ್ಕನು, ಉತ್ಪಪಾತ - ಹಾರಿ, ಹನೂಮಂತಂ - ಆಂಜನೇಯನನ್ನು,

---

ಮಹಾ ಪರಾಕ್ರಮಿಯಾದ ಹನುಮಂತನು ಆ ಶಕ್ತ್ಯಾಯುಧವನ್ನು ಮುರಿಯಲು ವಾನರರೆಲ್ಲರೂ ಬಹಳವಾಗಿ ಸಂತೋಷಿಸಿ ಒಟ್ಟುಗೂಡಿ ಸಿಂಹಧ್ವನಿ ಮಾಡಿದರು. || ೬೬–೭೦ || ಆಗ ರಾಕ್ಷಸೋತ್ತಮನಾದ ತ್ರಿಶಿರಸ್ಕನು ಖಡ್ಗವನ್ನು ಗ್ರಹಿಸಿ ಹನುಮಂತನ ವಿಶಾಲವಾದ ವಕ್ಷಸ್ಥಳಕ್ಕೆ ಹೊಡೆದನು. ಅದರಿಂದ ಅತ್ಯಧಿಕವಾಗಿ ಕೋಪಗೊಂಡ ಹನುಮಂತನು ತನ್ನ ಹಸ್ತತಲದಿಂದ ಆ ತ್ರಿಶಿರಸ್ಕನನ್ನು ಚೆನ್ನಾಗಿ ಹೊಡೆದು ಮರ್ದಿಸಿದನು. ಆ ಹೊಡೆತವನ್ನು ತಾಳಲಾರದೆ ಆ ರಾಕ್ಷಸನು ಕೈಯಲ್ಲಿದ್ದ ಖಡ್ಗವನ್ನು ಜಾರಿಬಿಟ್ಟು ಕೆಳಕ್ಕೆ ಬಿದ್ದು ಮೂರ್ಛಿತನಾದನು. ಆ ಕೂಡಲೇ ಮಹಾ ವೀರನಾದ ಹನುಮಂತನು ಆ ತ್ರಿಶಿರಸ್ಕನ ಖಡ್ಗವನ್ನು ಗ್ರಹಿಸಿ ಮಹಾ ಸಿಂಹನಾದವನ್ನು ಮಾಡಿದನು. ಅದನ್ನು ಕೇಳಿಯೂ ಖಡ್ಗಧಾರಿಯಾಗಿದ್ದ ಹನುಮಂತನನ್ನೂ ನೋಡಿಯೂ ಅಲ್ಲಿದ್ದ ರಾಕ್ಷಸರೆಲ್ಲರೂ ಭಯದಿಂದ ತತ್ತಳಿಸಿ ಹೋದರು.

ಅನ್ವೃಷ್ಯಮಾಣಸ್ತಂ ಘೋಷಮುತ್ಪಪಾತ ನಿಶಾಚರಃ । ಉತ್ಪತ್ಯಚ ಹನೂಮಂತಂ ತಾಡಯಾಮಾಸ ಮುಷ್ಟಿನಾ ॥ ೪೫ ॥ ತೇನ ಮುಷ್ಟಿಪ್ರಹಾರೇಣ ಸಂಚುಕೋಪ ಮಹಾಕಪಿಃ । ಕುಪಿತಶ್ಚ ನಿಜಗ್ರಾಹ ಕಿರೀಟೇ ರಾಕ್ಷಸರ್ಷಭಂ ॥ ೪೬ ॥ ಸತಸ್ಯ ಶೀರ್ಷಾಣ್ಯಸಿನಾ ಶಿತೇನ ಕಿರೀಟಜುಷ್ಟಾನಿ ಸಕುಂಡಲಾನಿ । ಕ್ರುದ್ಧಃ ಪ್ರಚಿಚ್ಛೇದ ಸುತೋಽನಿಲಸ್ಯ ತ್ವಷ್ಟುಸ್ಸುತಸ್ಯೇವ ಶಿರಾಂಸಿ ಶಕ್ರಃ ॥೪೭॥ ತಾನ್ಯಾಯತಾಕ್ಷಾಣ್ಯಗ ಸನ್ನಿಭಾನಿ ಪ್ರದೀಪ್ತ ವೈಶ್ವಾನರ ಲೋಚನಾನಿ । ಪೇತುಃ ಶಿರಾಂಸೀಂದ್ರರಿಪೋರ್ಧ ರಣ್ಯಾಂ ಜ್ಯೋತೀಂಷಿ ಮುಕ್ತಾನಿ ಯಥಾಽರ್ಕಮಾರ್ಗಾತ್ ॥ ೪೮ ॥ ತಸ್ಮಿನ್ ಹತೇ ದೇವರಿಪೌ ತ್ರಿಶೀರ್ಷೇ ಹನೂಮತಾ ಶಕ್ರಪರಾಕ್ರಮೇಣ । ನೇದುಃ ಪ್ಲವಂಗಾಃ ಪ್ರಚ

ಮುಷ್ಟಿನಾ - ಮುಷ್ಟಿಯಿಂದ, ತಾಡಯಾಮಾಸ - ಹೊಡೆದನು. ॥೪೫॥ ತೇನ....ಣ - ಮುಷ್ಟಿಪ್ರಹಾರ ದಿಂದ, ಮಹಾಕಪಿಃ - ಆಂಜನೇಯನು, ಸಂಚುಕೋಪ - ಕೋಪಗೊಂಡನು, ಕುಪಿತಶ್ಚ - ಕೋಪಿಷ್ಠನಾಗಿ, ರಾಕ್ಷಸರ್ಷಭಂ - ರಾಕ್ಷಸಶ್ರೇಷ್ಠನನ್ನು, ಕಿರೀಟೇ - ಕಿರೀಟಪ್ರದೇಶದಲ್ಲಿ, ನಿಜಗ್ರಾಹ- ಹಿಡಿದುಕೊಂಡನು. ॥೪೬॥ ಅನಿಲಸ್ಯ - ವಾಯುವಿನ, ಸುತಃ - ಮಗನಾದ, ಸಃ - ಆ ಹನುಮಂತನು, ಶಿತೇನ - ತೀಕ್ಷ್ಣವಾದ, ತಸ್ಯ - ಆ ತ್ರಿಶಿರಸ್ಕನ, ಅಸಿನಾ - ಖಡ್ಗದಿಂದ, ತಸ್ಯ - ಆ ತ್ರಿಶಿರ ಸ್ಕನ, ಕಿರೀ....ನಿ - ಕಿರೀಟಗಳಿಂದ ಕೂಡಿರುವ, ಸಕುಂಡಲಾನಿ - ಕುಂಡಲಗಳಿಂದೊಡಗೂಡಿದ, ಶೀರ್ಷಾಣಿ - ತಲೆಗಳನ್ನು, ತ್ವಷ್ಟುಃ - ತ್ವಷ್ಟೃಬ್ರಹ್ಮನಿಗೆ, ಸುತಸ್ಯ - ಕುವರನಾದ ವಿಶ್ವ ರೂಪನ, ಶಿರಾಂಸಿ - ಶಿರಸ್ಸುಗಳನ್ನು, ಶಕ್ರಇವ - ದೇವೇಂದ್ರನಂತೆ, ಪ್ರಚಿಚ್ಛೇದ - ಕತ್ತರಿಸಿದನು. ॥೪೭॥ ಆಯತಾಕ್ಷಾಣಿ - ವಿಸ್ತಾರವಾದ ನೇತ್ರಗಳುಳ್ಳ, ಅಗಸನ್ನಿಭಾನಿ - ಬೆಟ್ಟಗಳಿಗೆ ಸಮಾನವಾದ, ಪ್ರದೀ....ನಿ - ಪ್ರಜ್ವಲಿಸುವ ಅಗ್ನಿಗಳಂತಿರುವ ಕಣ್ಣುಗಳುಳ್ಳ, ಇಂದ್ರರಿಪೋಃ - ಇಂದ್ರಶತ್ರುವಾದ ತ್ರಿಶಿರಸ್ಕನ, ತಾನಿಶಿರಾಂಸಿ ಆ ಶಿರಸ್ಸುಗಳು, ಅರ್ಕಮಾರ್ಗಾತ್-ಸೂರ್ಯನ ಮಾರ್ಗದಿಂದ, (ಅಂತರಿಕ್ಷ ದಿಂದ) ಮುಕ್ತಾನಿ-ಬಿಡಲ್ಪಟ್ಟ, ಜ್ಯೋತೀಂಷಿಯಥಾ-ನಕ್ಷತ್ರಗಳಂತೆ, ಧರಣ್ಯಾಂ-ನೆಲದಲ್ಲಿ, ಪೇತುಃ- ಬಿದ್ದುವು. ॥ ೪೮ ॥ ದೇವರಿಪೌ - ದೇವತೆಗಳಿಗೆ ಶತ್ರುವಾದ, ತಸ್ಮಿನ್‌ತ್ರಿಶೀರ್ಷೇ - ಆ ತ್ರಿಶಿರಸ್ಕನು, ಶಕ್ರ....ಣ - ಇಂದ್ರಪರಾಕ್ರಮವುಳ್ಳ, ಹನೂಮತಾ - ಆ ಆಂಜನೇಯನಿಂದ, ಹತೇ - ಮಡಿಯಲು, ಪ್ಲವಂಗಾಃ - ವಾನರರು, ನೇದುಃ - ಕೋಲಾಹಲ ಧ್ವನಿಯನ್ನು ಮಾಡಿದರು, ಭೂಮಿಃ - ಭೂಮಿಯು

ಆ ತರುವಾಯ ತ್ರಿಶಿರಸ್ಕನು ಆ ಹನುಮಂತನ ಸಿಂಹನಾದವನ್ನು ಕೇಳಿ ಸೈರಿಸಲಾರದೆ ಮೇಲೆದ್ದು ಹಾರಿ ಆ ಹನುಮಂತನನ್ನು ಮುಷ್ಟಿಯಿಂದ ಬಲವಾಗಿ ಪ್ರಹರಿಸಿದನು. ॥೪೧-೪೫॥ ಹನುಮಂತನು ಆ ಮುಷ್ಟಿಪ್ರಹಾರದಿಂದ ಕುಪಿತನಾಗಿ ಆ ತ್ರಿಶಿರಸ್ಕನ ಕಿರೀಟಗಳನ್ನು ಹಿಡಿದು ಕೊಂಡು ಕರ್ಣಕುಂಡಲಗಳಿಂದ ಶೋಭಿಸುತ್ತಿದ್ದ ಅವನ ಶಿರಸ್ಸುಗಳನ್ನು ಆ ಖಡ್ಗದಿಂದ, ಶಕ್ರನು ತ್ವಷ್ಟೃವಿನ ಶಿರಸ್ಸುಗಳನ್ನೆಂತೋ ಅಂತು ಛೇದಿಸಿದನು. ಆಗ ವಿಶಾಲವಾಗಿಯೂ, ಬೆಟ್ಟಕ್ಕೆ ಸಮಾನವಾದವುಗಳಾಗಿಯೂ, ಕೆಂಪಾಗಿಯೂ ಇರುವ ಕಣ್ಣುಗಳೊಡಗೂಡಿದ ಆ ತ್ರಿಶಿರಸ್ಕನ ಮೂರು ತಲೆಗಳೂ ಅಂತರಿಕ್ಷದಿಂದ ಬೀಳುವ ಉಲ್ಕಗಳಂತೆ ನೆಲಕ್ಕೆ ಬಿದ್ದು ಹೋದುವು. ದೇವಶತ್ರುವಾದ ಆ ತ್ರಿಶಿರಸ್ಕನು ದೇವೇಂದ್ರಪರಾಕ್ರಮಿಯಾದ ಹನುಮಂತ ನಿಂದ ಈ ರೀತಿ ಮಡಿಯಲು ವಾನರರೆಲ್ಲರೂ ಸಂತೋಷದಿಂದ ಸಿಂಹನಾದ ಮಾಡಿದರು. ಭೂಮಿಯು ಒಣಕಿತು. ರಾಕ್ಷಸರೆಲ್ಲರೂ ದಿಕ್ಕುವಿದಿಕ್ಕುಗಳಿಗೆ ಓಡಿಹೋದರು. ॥೪೬-೫೯॥

ಚಾಲ ಭೂಮಿಾ ರಕ್ಷಾಂಸ್ಯಥೋ ದುದ್ರುವಿರೇ ಸಮಂತಾತ್ ||೪೯|| ಹತಂ ತ್ರಿಶಿರಸಂ ದೃಷ್ಟ್ವಾ ತಥೈವಚ ಮಹೋದರಂ | ಹತೌ ಪ್ರೇಕ್ಷ್ಯ ದುರಾಧರ್ಷೌ ದೇವಾಂತಕ ನರಾಂತಕೌ ||೫೦|| ಚುಕೋಪ ಪರಮಾಮರ್ಷೀ ಮತ್ತೋ ರಾಕ್ಷಸಪುಂಗವಃ | ಜಗ್ರಾಹಾರ್ಚಿಷ್ಮತೀಂ ಘೋರಾಂ ಗದಾಂ ಸರ್ವಾಯಸೀಂ ಶುಭಾಂ ||೫೧|| ಹೇಮ ಪಟ್ಟಪರಿಕ್ಷಿಪ್ತಾಂ ಮಾಂಸಶೋಣಿತಫೇನಿಲಾಂ | ವಿರಾಜಮಾನಾಂ ವಪುಷಾ ಶತ್ರು ಶೋಣಿತರಂಜಿತಾಂ ||೫೨|| ತೇಜಸಾ ಸಂಪ್ರದೀಪ್ತಾಗ್ರಾಂ ರಕ್ತಮಾಲ್ಯವಿಭೂಷಿತಾಂ | ಐರಾವತಮಹಾಪದ್ಮಸಾರ್ವಭೌಮ ಭಯಾವಹಾಂ ||೫೩|| ಗದಾಮಾದಾಯ ಸಂಕ್ರುದ್ಧೋ ಮತ್ತೋ ರಾಕ್ಷಸಪುಂಗವಃ | ಹರೀನ್ ಸಮಭಿದುದ್ರಾವ ಯುಗಾಂತಾಗ್ನಿ

ಪ್ರಚಚಾಲ - ನಡುಗಿತು, ಅಥ - ಬಳಿಕ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ರಕ್ಷಾಂಸಿ - ರಕ್ಕಸರು, ದುದ್ರುವಿರೇ - ಓಡಿದರು. ||೪೯|| ಹತಂ - ಮಡಿದ, ತ್ರಿಶಿರಸ್ಕಂ - ತ್ರಿಶಿರಸ್ಕನನ್ನೂ, ತಥಾ - ಹಾಗೆಯೇ, ಮಹೋದರಂಚ - ಮಹೋದರನನ್ನೂ, ದೃಷ್ಟ್ವಾ-ಕಂಡು, ದುರಾಧರ್ಷೌ-ತಿರಸ್ಕರಿಸಲಸಾಧ್ಯರಾದ, ದೇವಾಂ....ಕೌ - ದೇವಾಂತಕ ನರಾಂತಕರನ್ನೂ, ಹತೌ - ಸಂಹೃತರಾದವರನ್ನಾಗಿ, ಪ್ರೇಕ್ಷ್ಯ - ಕಂಡು, ಪರಮಾಮರ್ಷೀ - ಬಹು ಕೋಪವಂತನಾದ, ರಾಕ್ಷಸಪುಂಗವಃ-ರಾಕ್ಷಸಶ್ರೇಷ್ಠನಾದ, ಮತ್ತಃ-ಮತ್ತನು, ಚುಕೋಪ-ಕ್ರೋಧಾವಿಷ್ಟನಾದನು. ||೫೦|| ಅರ್ಚಿಷ್ಮತೀಂ-ಜ್ವಾಲೆಗಳುಳ್ಳ, ಘೋರಾಂ - ಭಯಂಕರವಾದ, ಸರ್ವಾಯಸೀಂ - ಕಬ್ಬಿಣದಿಂದಲೇ ಮಾಡಲ್ಪಟ್ಟ, ಶುಭಾಂ-ಮಂಗಳಕರವಾದ, ಹೇಮ....ಪ್ತಾಂ-ಭಂಗಾರದ ಪಟ್ಟಿಗಳಿಂದ ಸುತ್ತಲ್ಪಟ್ಟ, ಮಾಂಸ....ಲಾಂ-ಮಾಂಸದಿಂದಲೂ, ರಕ್ತದಿಂದಲೂ ವ್ಯಾಪ್ತವಾದ, ವಪುಷಾ - ಶರೀರದಿಂದ, ವಿರಾಜಮಾನಾಂ - ಹೊಳೆಯುತ್ತಿರುವ, ಶತ್ರು....ತಾಂ - ಶತ್ರುಗಳ ರಕ್ತದಿಂದ ಕೆಂಪಾಗಿ ಮಾಡಲ್ಪಟ್ಟ, ತೇಜಸಾ - ಬೆಳಕಿನಿಂದ, ಸಂಪ್ರ....ಗ್ರಾಂ - ಹೊಳೆಯುತ್ತಿರುವ ತುದಿಗಳುಳ್ಳ, ರಕ್ತ....ತಾಂ ಕೆಂಪು ಹುವ್ವುಗಳಿಂದಲಂಕೃತವಾದ, ಐರಾ....ಹಾಂ - ಐರಾವತ, ಮಹಾಪದ್ಮ, ಸಾರ್ವಭೌಮ ಎಂಬ ದಿಗ್ಗಜಗಳಿಗೆ ಭಯಂಕರವಾದ, ಗದಾಂ - ಗದೆಯನ್ನು, ಜಗ್ರಾಹ - ತೆಗೆದುಕೊಂಡನು. ||೫೧-೫೩|| ರಾಕ್ಷಸಪುಂಗವಃ - ರಾಕ್ಷಸಶ್ರೇಷ್ಠನಾದ, ಮತ್ತಃ - ಮತ್ತನೆಂದು ನಾಮಾಂತರವುಳ್ಳ ಮಹಾಪಾರ್ಶ್ವನು, ಗದಾಂ - ಗದೆಯನ್ನು, ಆದಾಯ - ತೆಗೆದುಕೊಂಡು, ಸಂಕ್ರುದ್ಧಃ - ಕುಪಿತನಾಗಿ, ಯುಗಾಂ....ವ-ಪ್ರಳಯಾಗ್ನಿಯಂತೆ, ಜ್ವಲನ್ - ಉರಿಯುತ್ತ, ಹರೀನ್ - ವಾನರರನ್ನು ಕುರಿತು, ಸಮಭಿದುದ್ರಾವ -

---

ಈ ರೀತಿ ತ್ರಿಶಿರಸ್ಕನೂ, ಮಹೋದರನೂ, ಮಹಾ ಬಲಾಢ್ಯರಾದ ದೇವಾಂತಕ ನರಾಂತಕರೂ ಮಡಿದುರುಳಿದುದನ್ನು ಕೇಳಿ ಮಹಾಪಾರ್ಶ್ವನೆಂಬ ರಾಕ್ಷಸೋತ್ತಮನು ಅಪರಿಮಿತವಾದ ಕೋಪಾಟೋಪವುಳ್ಳವನಾಗಿ ಪ್ರಜ್ವಲಿಸುತ್ತಿರುವ ಭಯಂಕರವಾದ ಗದಾಯುಧವನ್ನು ಗ್ರಹಿಸಿದನು. ಆ ಗದೆಯಾದರೋ ಚಿನ್ನದ ಕಟ್ಟುಗಳಿಂದಲಂಕೃತವಾಗಿ ರಕ್ತಮಾಂಸಗಳಿಂದ ತೊಯ್ದು, ಶತ್ರುಗಳ ರಕ್ತದಿಂದ ಪ್ರಜ್ವಲಿಸುತ್ತಿದ್ದಿತು; ಅತ್ಯಧಿಕ ತೇಜಸ್ಸಿನಿಂದ ವಿರಾಜಿಸುತ್ತಿದ್ದ ಆ ಗದೆಯು ರಕ್ತಪುಷ್ಪಮಾಲಿಕೆಗಳಿಂದಲಂಕೃತವಾಗಿ, ಐರಾವತ, ಮಹಾಪದ್ಮ, ಸಾರ್ವಭೌಮವೇ ಮೊದಲಾದ ದಿಗ್ಗಜಗಳಿಗೂ ಭಯವನ್ನುಂಟುಮಾಡುವದಾಗಿದ್ದಿತು. ಅಂತಹ ಭಯಂಕರವಾದ ಗದೆಯನ್ನು ಗ್ರಹಿಸಿ ಮಹೋಪಾರ್ಶ್ವನು ಪ್ರಳಯಾಗ್ನಿಯಂತೆ ಪ್ರಜ್ವಲಿಸುತ್ತ ವಾನರಸೇನೆಯನ್ನು ಮುತ್ತಿದನು. ಆಗ ವೃಷಭನೆಂಬ ವಾನರಯೂಥ

ರಿವ ಜ್ವಲನ್ ‖ ೫೪ ‖ ಅಥರ್ಷಭಸ್ಸಮುತ್ಪತ್ಯ ವಾನರೋ ರಾವಣಾನುಜಂ । ಮತ್ತಾನೀಕಮುಪಾಗಮ್ಯ ತಸ್ಥೌ ತಸ್ಯಾಽಗ್ರತೋ ಬಲೀ ‖ ೫೫ ‖ ತಂ ಪುರಸ್ತಾತ್ ಸ್ಥಿತಂ ದೃಷ್ಟ್ವಾ ವಾನರಂ ಪರ್ವತೋಪಮಂ । ಆಜಘಾನೋರಸಿ ಕ್ರುದ್ಧೋ ಗದಯಾ ವಜ್ರಕಲ್ಪಯಾ ‖ ೫೬ ‖ ಸತಯಾಽಭಿಹತಸ್ತೇನ ಗದಯಾ ವಾನರರ್ಷಭಃ । ಭಿನ್ನವಕ್ಷಾಸ್ಸಮಾಧೂತಸ್ಸುಸ್ರಾವ ರುಧಿರಂ ಬಹು ‖ ೫೭ ‖ ಸ ಸಂಪ್ರಾಪ್ಯ ಚಿರಾತ್ಸಂಜ್ಞಾಮೃಷಭೋ ವಾನರರ್ಷಭಃ । ಅಭಿದುದ್ರಾವ ವೇಗೇನ ಗದಾಂ ತಸ್ಯ ಮಹಾತ್ಮನಃ ‖೫೮‖ ಗೃಹೀತ್ವಾ ತಾಂ ಗದಾಂ ಭೀಮಾಮಾವಿಧ್ಯ ಚ ಪುನಃ ಪುನಃ । ಮತ್ತಾನೀಕಂ ಮಹಾತ್ಮಾನಂ ಜಘಾನ ರಣಮೂರ್ಧನಿ ‖೫೯‖ ಸಸ್ವಯಾ ಗದಯಾ ಭಗ್ನೋ ನಿಶೀರ್ಣ

ಓಡಿಬಂದನು. ‖೫೪‖ ಅಥ - ಅನಂತರದಲ್ಲಿ, ಬಲೀ - ಬಲವಂತನಾದ, ಋಷಭಃ - ಋಷಭನೆಂಬ, ವಾನರಃ - ಕಪಿಯು, ಸಮುತ್ಪತ್ಯ - ಹಾರಿ, ರಾವಣಾನುಜಂ - ರಾವಣನ ತಮ್ಮನಾದ, ಮತ್ತಾನೀಕಂ- ಮತ್ತಾನೀಕನೆಂದು ನಾಮಾಂತರವುಳ್ಳ ಮಹಾಪಾರ್ಶ್ವನನ್ನುಕುರಿತು, ಉಪಾಗಮ್ಯ - ಬಂದು, ತಸ್ಯ - ಆ ಮಹಾಪಾರ್ಶ್ವನ, ಅಗ್ರತಃ - ಮುಂದುಗಡೆ, ತಸ್ಥೌ - ನಿಂತನು. ‖೫೫‖ ಪುರಸ್ತಾತ್ - ಮುಂದುಗಡೆಯಲ್ಲಿ, ಸ್ಥಿತಂ - ನಿಂತಿರುವ, ಪರ್ವತೋಪಮಂ ಪರ್ವತಸದೃಶನಾದ, ತಂವಾನರಂ - ಆ ಋಷಭನೆಂಬ ವಾನರನನ್ನು, ದೃಷ್ಟ್ವಾ - ಕಂಡು, ಕ್ರುದ್ಧಃ - ಕೋಪಿಷ್ಠನಾಗಿ, ವಜ್ರಕಲ್ಪಯಾ - ವಜ್ರಾಯುಧಕ್ಕೆ ಸಮಾನವಾದ, ಗದಯಾ - ಗದಾಯುಧದಿಂದ, ಉರಸಿ - ವಕ್ಷಸ್ಥಲದಲ್ಲಿ, ಆಜಘಾನ - ಹೊಡೆದನು. ‖ ೫೬ ‖ ಸವಾ....ಭಃ-ಆ ವಾನರಶ್ರೇಷ್ಠನು, ತೇನ-ಆ ಮತ್ತನಿಂದ, ತಯಾಗದಯಾ-ಆ ಗದಾಯುಧದಿಂದ, ಅಭಿಹತಃ - ಹೊಡೆಯಲ್ಪಟ್ಟವನಾದಕಾರಣ, ಭಿನ್ನವಕ್ಷಾಃ - ಭೇದಿಸಲ್ಪಟ್ಟ ಎದೆಯುಳ್ಳವನಾಗಿ, ಸಮಾಧೂತಃ - ಕೊಡಹಲ್ಪಟ್ಟವನಾಗಿ, ಬಹುರುಧಿರಂ - ವಿಶೇಷವಾಗಿ ರಕ್ತವನ್ನು, ಸುಸ್ರಾವ - ಸ್ರವಿಸಿದನು. ‖ ೫೭ ‖ ವಾನರರ್ಷಭಃ - ವಾನರಶ್ರೇಷ್ಠನಾದ, ಸಋಷಭಃ - ಆ ಋಷಭನು, ಚಿರಾತ್ - ಬಹುಕಾಲಕ್ಕೆ, ಸಂಜ್ಞಾಂ - ಪ್ರಜ್ಞೆಯನ್ನು, ಸಂಪ್ರಾಪ್ಯ - ಹೊಂದಿ, ವೇಗೇನ-ವೇಗದಿಂದ, ಅಭಿದುದ್ರಾವ - ಓಡಿಬಂದನು, ಮಹಾತ್ಮನಃ - ಮಹಾ ಶರೀರವುಳ್ಳ, ತಸ್ಯ - ಆ ಮತ್ತನ, ಗದಾಂ - ಗದಾಯುಧವನ್ನು, ಗೃಹೀತ್ವಾ - ಕಸೆದುಕೊಂಡು, ಭೀಮಾಂ - ಭಯಂಕರವಾದ, ತಾಂಗದಾಂ ಆ ಗದಾಯುಧವನ್ನು, ಪುನಃಪುನಃ-ಬಾರಿಬಾರಿಗೂ, ಆವಿಧ್ಯ-ತಿರುವಿ, ಮಹಾತ್ಮಾನಂ-ದೊಡ್ಡ ಶರೀರವುಳ್ಳ, ಮತ್ತಾನೀಕಂ - ಮತ್ತಾನೀಕನೆಂದು ಪ್ರತಿನಾಮಧೇಯವುಳ್ಳ ಮತ್ತನನ್ನು, ರಣಮೂರ್ಧನಿ - ರಣರಂಗದಲ್ಲಿ, ಜಘಾನ - ಹೊಡೆದನು. ‖ ೫೮-೫೯ ‖ ತತಃ - ಬಳಿಕ, ಸಮತ್ತಃ - ಆ ಮತ್ತನು, ಸ್ವಯಂ - ಸ್ವಕೀಯವಾದ, ಗದಯಾ - ಗದಾಯುಧದಿಂದ, ಭಗ್ನಃ - ಮುರಿಯ

ಪತಿಯು ರಾವಣಾನುಜನಾದ ಮಹಾಪಾರ್ಶ್ವನಿಗೆದುರಾಗಿ ಯುದ್ಧಕ್ಕೆ ನಿಂತನು. ‖೫೦–೫೫‖ ಪರ್ವತಸಮಾನನಾದವನೂ, ತನಗೆದುರಾಗಿ ಬರುತ್ತಿರುವವನೂ ಆದ ಋಷಭನನ್ನು ಕಂಡು ಆ ಮಹಾಪಾರ್ಶ್ವನು ಕೆರಳಿ ಅವನ ವಕ್ಷಸ್ಥಳಕ್ಕೆ ತನ್ನ ಗದೆಯಿಂದ ಬಲವಾಗಿ ಹೊಡೆದನು. ಆಗಲಾ ಋಷಭನು ಆ ಗದಾಘಾತದಿಂದ ಅಧಿಕವಾಗಿ ರಕ್ತವನ್ನು ಸುರಿಸುತ್ತಿದ್ದನು. ಸ್ವಲ್ಪ ಹೊತ್ತಿನಮೇಲೆ ಆ ವಾನರಶ್ರೇಷ್ಠನು ಎಚ್ಚರಗೊಂಡು ಬಹು ವೇಗದಿಂದೋಡಿ ಆ ರಾಕ್ಷಸನ ಕೈಯಲ್ಲಿದ್ದ ಗದೆಯನ್ನು ಕಸೆದುಕೊಂಡು ಅದನ್ನು ಗಿರ್ರನೆ ತಿರುವಿ ಆ ರಾಕ್ಷಸನ ತಲೆಯೊಡೆಯುವಂತೆ ಬಲವಾಗಿ ಹೊಡೆದನು. ಆ ಕೂಡಲೇ ಆ ರಾಕ್ಷಸನು ಕಣ್ಣುಗುಡ್ಡೆಗಳು

ದಶನೇಕ್ಷಣಃ । ನಿಪಪಾತ ತತೋ ಮತ್ತೋ ವಜ್ರಾಹತ ಇವಾಚಲಃ ॥೬೦॥ ವಿಶೀರ್ಣ ನಯನೇ ಭೂಮೌ ಗತಸತ್ವೇ ಗತಾಯುಷಿ । ಪತಿತೇ ರಾಕ್ಷಸೇ ತಸ್ಮಿನ್ ವಿದ್ರುತಂ ರಾಕ್ಷಸಂ ಬಲಂ ॥ ೬೧ ॥ *

ಲ್ಪಟ್ಟವನಾಗಿ, ವಿಶೀ....ಣಃ - ಒಡೆದುಹೋದ ಹಲ್ಲುಗಳೂ, ಕಣ್ಣುಗಳೂ ಉಳ್ಳವನಾಗಿ, ವಜ್ರಾಹತಃ - ವಜ್ರಾಯುಧದಿಂದ ಹೊಡೆಯಲ್ಪಟ್ಟ, ಅಚಲಇವ - ಬೆಟ್ಟದಂತೆ, ನಿಪಪಾತ - ಬಿದ್ದನು. ॥ ೬೦ ॥ ವಿಶೀರ್ಣನಯನೇ - ಶೀಳಿದ ಕಣ್ಣುಗಳುಳ್ಳ, ಗತಸತ್ವೇ - ಹೋದ ಬಲವುಳ್ಳ, ಗತಾಯುಷಿ - ಕಳೆದ ಆಯುಸ್ಸುಳ್ಳ, ತಸ್ಮಿನ್‌ರಾಕ್ಷಸೇ-ಆ ಮಹಾಪಾರ್ಶ್ವನು, ಭೂಮೌ-ನೆಲದಲ್ಲಿ, ಪತಿತೇ-ಬಿದ್ದವನಾಗಲು, ರಾಕ್ಷಸಂ - ರಾಕ್ಷಸಸಂಬಂಧವಾದ, ಬಲಂ - ಸೈನ್ಯವು, ವಿದ್ರುತಂ - ಓಡಿಹೋಯಿತು. ॥ ೬೧ ॥

ಈಚೆಗೆ ಹೊರಟು ವಜ್ರಾಹತವಾದ ಪರ್ವತದಂತೆ ಕೆಳಕ್ಕೆ ಬಿದ್ದನು. ಹೀಗೆ ಮಡಿದು ನೆಲಕ್ಕುರುಳಿದ ರಾವಣಾನುಜನಾದ ಆ ರಾಕ್ಷಸನನ್ನು ನೋಡಿ ಆವನ ರಾಕ್ಷಸಸೇನೆಯೆಲ್ಲವೂ

---

* ಇವು ಅಧಿಕ ಪಾಠಕ್ಕೆ ಸೇರಿದ ಶ್ಲೋಕಗಳು:—ಇಲ್ಲಿ ಉನ್ಮತ್ತನೆಂಬವನು ಗವಾಕ್ಷನಿಂದ ಹತನಾದನೆಂದು ಕಥೆಯಿದೆ. ಹಿಂದೆ, "ಯುದ್ಧೋನ್ಮತ್ತ, ಮತ್ತ, ದೇವಾಂತಕ, ನರಾಂತಕ, ತ್ರಿಶಿರಸ್ಕ, ಅತಿಕಾಯ" ಎಂಬ ಆರು ಮಂದಿ ಹೊರಟರೆಂದು ಹೇಳಿದರೇ ಹೊರ್ತು, ಉನ್ಮತ್ತನೆಂಬ ರಾಕ್ಷಸನು ಹೊರಟನೆಂದು ಹೇಳಿಲ್ಲ.

ಉನ್ಮತ್ತಸ್ತು ತದಾ ದೃಷ್ಟ್ವಾ ಗತಾಸುಂ ಭ್ರಾತರಂ ರಣೇ ।
ಚುಕೋಪ ಪರಮಕ್ರುದ್ಧಃ ಪ್ರಳಯಾಗ್ನಿಸಮದ್ಯುತಿಃ ॥
ತತಸ್ಸಮಾದಾಯ ಗದಾಂ ಸ ವೀರೋ ವಿತ್ರಾಸಯನ್ ವಾನರಸೈನ್ಯಮುಗ್ರಂ ।
ದುದ್ರಾವ ವೇಗೇನತು ಸೈನ್ಯಮಧ್ಯೇ ದಹನ್ ಯಥಾ ವಹ್ನಿರತಿಪ್ರಚಂಡಃ ॥
ಆಪತಂತಂ ತದಾ ದೃಷ್ಟ್ವಾ ರಾಕ್ಷಸಂ ಭೀಮವಿಕ್ರಮಂ ।
ಶೈಲಮಾದಾಯ ದುದ್ರಾವ ಗವಾಕ್ಷಃ ಪರ್ವತೋಪಮಃ ॥
ಜಿಘಾಂಸೂ ರಾಕ್ಷಸಂ ಭೀಮಂ ತಂ ಶೈಲೇನ ಮಹಾಬಲಃ ।
ಆಪತಂತಂ ತದಾ ದೃಷ್ಟ್ವಾ ಉನ್ಮತ್ತೋಪಿ ಮಹಾಗಿರಿಂ ॥
ಚಿಚ್ಛೇದ ಗದಯಾ ವೀರಃ ಶತಧಾ ತತ್ರ ಸಂಯುಗೇ ।
ಚೂರ್ಣೀಕೃತಂ ಗಿರಿಂ ದೃಷ್ಟ್ವಾ ರಕ್ಷಸಾ ಕಪಿಕುಂಜರಃ ॥
ವಿಸ್ಮಿತೋಽಭೂನ್ಮಹಾಬಾಹುರ್ಜಗರ್ಜಚ ಮುಹುರ್ಮುಹುಃ ।
ಉನ್ಮತ್ತಸ್ತು ಸುಸಂಕ್ರುದ್ಧೋ ಜ್ವಲಂತೀಂ ರಾಕ್ಷಸೋತ್ತಮಃ ॥
ಗದಾಮಾದಾಯ ವೇಗೇನ ಕಪೇರ್ವಕ್ಷಸ್ಯತಾಡಯತ್ ।
ಸ ತಯಾ ಗದಯಾ ವೀರಸ್ತಾಡಿತಃ ಕಪಿಕುಂಜರಃ ॥
ಪಪಾತ ಭೂಮೌ ನಿಸ್ಸಂಜ್ಞಃ ಸುಸ್ರಾವ ರುಧಿರಂ ಬಹು ।
ಪುನಸ್ಸಂಜ್ಞಾಮಥಾಸ್ಥಾಯ ವಾನರಸ್ಸಮುತ್ಥಿತಃ ॥
ತಲೇನ ತಾಡಯಾಮಾಸ ತತಸ್ತಸ್ಯ ಶಿರಃ ಕಪಿಃ ।
ತೇನ ಪ್ರತಾಡಿತೋ ವೀರೋ ರಾಕ್ಷಸಃ ಪರ್ವತೋಪಮಃ ॥
ವಿಸ್ರಸ್ತದಂತನಯನೋ ನಿಪಪಾತ ಮಹೀತಲೇ ।
ಸುಸ್ರಾವ ರುಧಿರಂ ಸೋಷ್ಣಂ ಗತಾಸುಶ್ಚ ತತೋಽಭವತ್ ॥

ತಸ್ಮಿನ್ ಹತೇ ಭ್ರಾತರಿ ರಾವಣಸ್ಯ
ತನ್ನೈರ್ಋತಾನಾಂ ಬಲಮರ್ಣವಾಭಂ ।
ತ್ಯಕ್ತ್ವಾಯುಧಂ ಕೇವಲಜೀವಿತಾರ್ಥಂ
ದುದ್ರಾವ ಭಿನ್ನಾರ್ಣವಸನ್ನಿಕಾಶಂ ॥ ೬೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತತಿತಮಸ್ಸರ್ಗಃ.

ರಾವಣಸ್ಯ - ರಾವಣನ, ಭ್ರಾತರಿ - ತಮ್ಮನಾದ, ತಸ್ಮಿನ್ - ಆ ಮಹಾಪಾರ್ಶ್ವನು, ಹತೇ - ಮಡಿಯಲು, ಅರ್ಣವಾಭಂ - ಸಮುದ್ರದಂತೆ ಹೊಳೆವ, ತತ್ - ಆ, ನೈರ್ಋತಾನಾಂ - ರಕ್ಕಸರ, ಬಲಂ - ಸೇನೆಯು, ತ್ಯಕ್ತ್ವಾಯುಧಂ - ಬಿಡಲ್ಪಟ್ಟ ಆಯುಧಗಳುಳ್ಳದಾಗಿ, ಕೇವ....ರ್ಥಂ - ಮುಖ್ಯವಾಗಿ ಬದುಕೇ ಪ್ರಯೋಜನವುಳ್ಳದ್ದಾಗಿ, ಭಿನ್ನಾ....ಶಂ - ಮಿತಿಮೀರಿದ ಕಡಲಿಗೆ ಸಮಾನವಾದ್ದಂತೆ, ದುದ್ರಾವ - ಓಡಿಹೋಯಿತು. ॥ ೬೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತತಿತಮಸ್ಸರ್ಗಃ

ಆಯುಧಗಳನ್ನು ಕೆಳಕ್ಕೆ ಬಿಸುಟು ಪ್ರಳಯಕಾಲದ ಸಮುದ್ರದಂತೆ ಹದ್ದುಬದ್ದಿಲ್ಲದೆ ನಾಲ್ಕು ದಿಕ್ಕುಗಳಿಗೂ ಪಲಾಯನವಾಗಿ ಹೋಯಿತು. ॥ ೫೫-೬೨ ॥

ಇಂತಿದು ದೇವಾಂತಕ, ನರಾಂತಕಾದಿ ರಾಕ್ಷಸವೀರಹನನ ವೃತ್ತಾಂತವೆಂಬ
ಎಪ್ಪತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕಸಪ್ತತಿತಮಸ್ಸರ್ಗಃ

ಸ್ವಬಲಂ ವ್ಯಥಿತಂ ದೃಷ್ಟ್ವಾ ತುಮುಲಂ ರೋಮಹರ್ಷಣಂ । ಭ್ರಾತ್ರೂಂಶ್ಚ ನಿಹತಾನ್ ದೃಷ್ಟ್ವಾ ಶಕ್ರತುಲ್ಯಪರಾಕ್ರಮಾನ್ ॥೧॥ ಪಿತೃವ್ಯೌ ಚಾಪಿ ಸಂದೃಶ್ಯ ಸಮರೇ ಸನ್ನಿಷೂದಿತೌ । ಯುದ್ಧೋನ್ಮತ್ತಂಚ ಮತ್ತಂಚ ಭ್ರಾತರೌ ರಾಕ್ಷಸರ್ಷಭೌ ॥ ೨ ॥ ಚುಕೋಪಚ ಮಹಾತೇಜಾ ಬ್ರಹ್ಮದತ್ತವರೋ ಯುಧಿ । ಅತಿಕಾಯೋಽದ್ರಿ ಸಂಕಾಶೋ ದೇವದಾನವದರ್ಪಹಾ ॥ ೩ ॥ ಸಭಾಸ್ಕರಸಹಸ್ರಸ್ಯ ಸಂಘಾತಮಿವ ಭಾಸ್ವರಂ । ರಥಮಾಸ್ಥಾಯ ಶಕ್ರಾರಿರಭಿದುದ್ರಾವ ವಾನರಾನ್ ॥೪॥ ಸವಿಷ್ಫಾರ್ಯ

ತುಮುಲಂ - ಸಂಕುಲವಾದ, ರೋಮಹರ್ಷಣಂ - ರೋಮಾಂಚನವನ್ನುಂಟುಮಾಡುವ, ಸ್ವಬಲಂ - ತನ್ನ ಸೈನ್ಯವನ್ನು, ವ್ಯಥಿತಂ - ವ್ಯಸನಾಕ್ರಾಂತವನ್ನಾಗಿ, ದೃಷ್ಟ್ವಾ - ಕಂಡು, ಶಕ್ರ....ಮಾನ್ - ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಭ್ರಾತ್ರೂನ್ - ಒಡಹುಟ್ಟಿದವರನ್ನು, ನಿಹತಾನ್ - ಸಂಹರಿಸಲ್ಪಟ್ಟವರನ್ನಾಗಿ, ದೃಷ್ಟ್ವಾ - ಕಂಡು, ಪಿತೃವ್ಯೌಚಾಪಿ - ಚಿಕ್ಕತಂದೆಗಳಾದ, ರಾಕ್ಷಸರ್ಷಭೌ - ರಾಕ್ಷಸಶ್ರೇಷ್ಠರಾದ, ಭ್ರಾತರೌ - ಅಣ್ಣತಮ್ಮಂದಿರಾದ, ಯುದ್ಧೋನ್ಮತ್ತಂಚ - ಯುದ್ಧೋನ್ಮತ್ತನನ್ನೂ, ಮತ್ತಂಚ - ಮತ್ತನನ್ನೂ, ಸಮರೇ - ಕಾಳಗದಲ್ಲಿ, ಸನ್ನಿಷೂದಿತೌ - ಚೆನ್ನಾಗಿ ಹೊಡೆಯಲ್ಪಟ್ಟವರನ್ನಾಗಿ, ಸಂದೃಶ್ಯ - ಕಂಡು, ಮಹಾತೇಜಾಃ - ಬಹಳ ತೇಜಸ್ವಿಯಾದ, ಯುಧಿ - ಕಾಳಗದಲ್ಲಿ, ಬ್ರಹ್ಮದತ್ತವರಃ - ಬ್ರಹ್ಮನಿಂದ ಕೊಡಲ್ಪಟ್ಟ ವರವುಳ್ಳ, ಅದ್ರಿಸಂಕಾಶಃ - ಬೆಟ್ಟಕ್ಕೆ ಸಮಾನನಾದ, ದೇವ....ಹಾ - ದೇವರಾಕ್ಷಸರ ಗರ್ವವನ್ನು ಮುರಿಯುವ, ಅತಿಕಾಯಃ - ಅತಿಕಾಯನು, ಚುಕೋಪಚ - ಕೋಪಾವಿಷ್ಟನಾದನು. ॥ ೧-೩ ॥ ಶಕ್ರಾರಿಃ - ಇಂದ್ರಶತ್ರುವಾದ, ಸಃ - ಆ ಅತಿಕಾಯನು, ಭಾಸ್ಕ.....ಸ್ಯ - ಸಾವಿರ ಸೂರ್ಯರ, ಸಂಘಾತಮಿವ - ರಾಶಿಯಂತೆ, ಭಾಸ್ವರಂ - ಹೊಳೆಯುತ್ತಿರುವ, ರಥಂ - ತೇರಿನಲ್ಲಿ, ಆಸ್ಥಾಯ - ಕುಳಿತು, ವಾನರಾನ್ - ಕಪಿಗಳನ್ನು ಕುರಿತು, ಅಭಿದುದ್ರಾವ - ಎದುರೋಡಿ ಬಂದನು. ॥ ೪ ॥ ಕಿರೀಟೀ - ಕಿರೀಟಧಾರಿಯಾದ, ಮೃಷ್ಟ ಕುಂಡಲಃ - ನಿರ್ಮಲವಾದ ಕರ್ಣಾಭರಣಗಳುಳ್ಳ, ಸಃ - ಆ ಅತಿಕಾಯನು, ಮಹತ್-ದೊಡ್ಡದಾದ,

---

ಈ ಪ್ರಕಾರವಾಗಿ ರಾಕ್ಷಸಬಲವೆಲ್ಲವೂ ಭಯದಿಂದ ತತ್ತಳಿಸಿ ನಾಲ್ಕು ದಿಕ್ಕುಗಳಿಗೂ ಓಡಿಹೋದುದನ್ನೂ, ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ತಮ್ಮಂದಿರೂ, ತನ್ನ ಚಿಕ್ಕತಂದೆಯೂ ಮಡಿದುರುಳಿದುದನ್ನೂ, ರಾಕ್ಷಸವೀರರಾದ ಮಹೋದರ ಮಹಾಪಾರ್ಶ್ವರೂ ಮೃತರಾದುದನ್ನೂ ನೋಡಿ, ಮಹಾ ತೇಜಸ್ವಿಯೂ, ಯುದ್ಧದಲ್ಲಿ ದುರ್ಜಯನಾಗುವಂತೆ ಬ್ರಹ್ಮನಿಂದ ವರವನ್ನು ಪಡೆದಿರುವವನೂ, ದೇವದಾನವರ ಮದವನ್ನಡಗಿಸುವವನೂ ಆದ ಅತಿಕಾಯನೆಂಬ ರಾಕ್ಷಸೋತ್ತಮನು ಮಹಾ ಕ್ರೋಧಾವಿಷ್ಟನಾದನು. ಆಗ ಸಹಸ್ರ ಸೂರ್ಯರ ಕಾಂತಿಗೆ ಸಮಾನವಾದ ಕಾಂತಿಯುಳ್ಳುದೂ, ಬಹು ಮನೋಹರವಾದುದೂ ಆದ ರಥವೇರಿ ಮಹೇಂದ್ರಸಮಾನವಾದ ಪರಾಕ್ರಮವುಳ್ಳ ಆ ಅತಿಕಾಯನು ಕೂಡಲೇ ರಣರಂಗಕ್ಕೆ ನುಗ್ಗಿ ಬಂದು ವಾನರಸೇನೆಯೆಲ್ಲವನ್ನೂ ಅಟ್ಟಿದನು. ಅವನು

ಮಹಚ್ಚಾಪಂ ಕಿರೀಟೀ ಮೃಷ್ಟಕುಂಡಲಃ । ನಾಮ ವಿಶ್ರಾವಯಾಮಾಸ ನನಾದಚ ಮಹಾಸ್ವನಂ ॥ ೫ ॥ ತೇನ ಸಿಂಹಪ್ರಣಾದೇನ ನಾಮ ವಿಶ್ರಾವಣೇನಚ । ಜ್ಯಾಶಬ್ದೇನಚ ಭೀಮೇನ ತ್ರಾಸಯಾಮಾಸ ವಾನರಾನ್ ॥೬॥ ತೇ ದೃಷ್ಟ್ವಾ ದೇಹಮಾಹಾತ್ಮ್ಯಂ ಕುಂಭಕರ್ಣೋಽಯಮುತ್ಥಿತಃ । ಭಯಾರ್ತಾ ವಾನರಾಸ್ಸರ್ವೇ ಸಂಶ್ರಯಂತೇ ಪರಸ್ಪರಂ ॥ ೭ ॥ ತೇ ತಸ್ಯ ರೂಪಮಾಲೋಕ್ಯ ಯಥಾ ವಿಷ್ಣೋಸ್ತ್ರಿವಿಕ್ರಮೇ । ಭಯಾದ್ವಾನರಯೂಥಾಸ್ತೇ ವಿದ್ರವಂತಿ ತತಸ್ತತಃ ॥ ೮ ॥ ತೇಽತಿಕಾಯಂ ಸಮಾಸಾದ್ಯ ವಾನರಾ ಮೂಢಚೇತಸಃ । ಶರಣ್ಯಂ ಶರಣಂ ಜಗ್ಮುರ್ಲಕ್ಷ್ಮಣಾಗ್ರಜಮಾಹವೇ॥೯॥ ತತೋಽತಿಕಾಯಂ ಕಾಕುತ್ಸ್ಥೋ ರಥಸ್ಥಂ ಪರ್ವತೋಪಮಂ । ದದರ್ಶ ಧನ್ವಿನಂ

ಚಾಪಂ - ಧನುಸ್ಸನ್ನು, ವಿಷ್ಫಾರ್ಯ - ಟಂಕಾರಮಾಡಿ, ನಾಮ - ಹೆಸರನ್ನು, ವಿಶ್ರಾವಯಾಮಾಸ-ಕೇಳಿಸಿದನು, ಮಹಾಸ್ವನಂ - ದೊಡ್ಡ ಶಬ್ದವುಳ್ಳಂತೆ, ನನಾದ - ಕೂಗಿದನು. ॥ ೫ ॥ ತೇನ....ನ - ಆ ಕೋಲಾಹಲ ಧ್ವನಿಯಿಂದ, ನಾಮ....ಚ - ಹೆಸರನ್ನು ಕೇಳಿಸುವದರಿಂದಲೂ, ಭೀಮೇನಚ - ಭಯಂಕರವಾದ, ಜ್ಯಾಶಬ್ದೇನಚ - ಹೆದೆಯ ಘೋಷದಿಂದಲೂ, ವಾನರಾನ್ - ಕಪಿಗಳನ್ನು, ತ್ರಾಸಯಾಮಾಸ - ಹೆದರಿಸಿದನು. ॥ ೬ ॥ ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ದೇಹಮಾಹಾತ್ಮ್ಯಂ - ಶರೀರದ ದೈರ್ಘ್ಯವನ್ನು, ದೃಷ್ಟ್ವಾ - ಕಂಡು, ಅಯಂ - ಇವನು, ಉತ್ಥಿತಃ - ಎದ್ದ, ಕುಂಭಕರ್ಣಃ - ಕುಂಭಕರ್ಣನು, ಇತಿ - ಇಂತೆಂದು, ಭಯಾರ್ತಾಃ - ಭೀತಿಗೊಂಡವರಾಗಿ, ಪರಸ್ಪರಂ - ಅನ್ಯೋನ್ಯವಾಗಿ, ಸಂಶ್ರಯಂತೇ - ಆಶ್ರಯ ಮಾಡುತ್ತಿದ್ದನು. ॥೭॥ ತೇ-ಪ್ರಸಿದ್ಧರಾದ, ತೇವಾನರಯೂಥಾಃ - ಆ ವಾನರಯೂಥಗಳು, ವಿಷ್ಣೋಃ - ಶ್ರೀಮಹಾವಿಷ್ಣುವಿನ, ತ್ರಿವಿಕ್ರಮೇ - ತ್ರಿವಿಕ್ರಮಾವತಾರದಲ್ಲಿ, ಯಥಾ - ಹೇಗೋ, ತಥಾ - ಹಾಗೆ, ತಸ್ಯ - ಆ ಅತಿಕಾಯನ, ರೂಪಂ - ಆಕಾರವನ್ನು, ಆಲೋಕ್ಯ - ಕಂಡು, ತತಸ್ತತಃ - ಅಲ್ಲಲ್ಲಿ, ವಿದ್ರವಂತಿ - ಓಡುತ್ತಿದ್ದವು. ॥ ೮ ॥ ತೇವಾನರಾಶ್ಚ - ಆ ಕಪಿಗಳೂ ಸಹ, ಅತಿಕಾಯಂ - ಅತಿಕಾಯನನ್ನು, ಸಮಾಸಾದ್ಯ - ಹೊಂದಿ, ಮೂಢಚೇತಸಃ - ಮೂಢಬುದ್ಧಿಯುಳ್ಳವರಾಗಿ, ಆಹವೇ - ಕಾಳಗದಲ್ಲಿ, ಶರಣ್ಯಂ - ರಕ್ಷಕನಾದ, ಲಕ್ಷ್ಮಣಾಗ್ರಜಂ - ಶ್ರೀರಾಮನನ್ನು, ಶರಣಂ - ರಕ್ಷಕನನ್ನಾಗಿ, ಜಗ್ಮುಃ - ಹೊಂದಿದರು. ॥ ೯ ॥ ತತಃ - ಬಳಿಕ, ಕಾಕುತ್ಸ್ಥಃ - ಶ್ರೀರಾಮನು, ಪರ್ವತೋಪಮಂ - ಬೆಟ್ಟಕ್ಕೆ ಸಮಾನನಾದ,

---

ಧನುಷ್ಟಂಕಾರವನ್ನು ಮಾಡುತ್ತ ಕಿರೀಟದಿಂದಲೂ, ಕರ್ಣಕುಂಡಲಗಳಿಂದಲೂ ಅಲಂಕೃತನಾಗಿ ಸಿಂಹಧ್ವನಿಯಿಂದ ಎಲ್ಲರಿಗೂ ತನ್ನ ಹೆಸರನ್ನು ಕೂಗಿ ಹೇಳಿದನು. ॥ ೧–೫ ॥ ಆಗ ಅವನ ಹೆಸರನ್ನೂ, ಅವನ ಸಿಂಹಧ್ವನಿಯನ್ನೂ ಕೇಳಿ, ಅವನ ಧನುಷ್ಟಂಕಾರವೂ ಕಿವಿಗೆ ಬಿದ್ದ ಕೂಡಲೇ ವಾನರರೆಲ್ಲರೂ ಭಯಭ್ರಾಂತರಾಗಿ ಹೋದರು. ಆ ವಾನರರೆಲ್ಲರೂ ಆ ರಾಕ್ಷಸನ ದೇಹಮಾಹಾತ್ಮ್ಯವನ್ನು ಕಂಡು ಕುಂಭಕರ್ಣನೇ ಮತ್ತೆ ಎದ್ದು ಬಂದನೆಂದು ಭ್ರಾಂತರಾಗಿ ಭಯದಿಂದ ನಲ್ದೆಸೆಗಳಿಗೂ ಓಡಿಹೋದರು. ಆ ಸಮಯದಲ್ಲಿ ರಾಕ್ಷಸವೀರನಾದ ಅತಿಕಾಯನ ಶರೀರವು ತ್ರಿವಿಕ್ರಮಾವತಾರವನ್ನು ತಾಳಿದ ವಿಷ್ಣುವಿನ ದೇಹವನ್ನು ಹೋಲಿದ್ದಿತು. ವಾನರರೆಲ್ಲರೂ ಆ ರಾಕ್ಷಸನ ಅಪರಿಮಿತ ದೇಹವನ್ನು ನೋಡಿ ಭಯದಿಂದ ಏನುಮಾಡಲೂ ತೋರದೆ ಲಕ್ಷ್ಮಣಾಗ್ರಜನಾದ ಶ್ರೀರಾಮನನ್ನು ಶರಣು ಹೊಕ್ಕು ರಕ್ಷಿಸೆಂದು ಮೊರೆಯಿಟ್ಟರು. ಆಗ ಕಕುತ್ಸ್ಥವಂಶಜನಾದ ಶ್ರೀರಾಮಮೂರ್ತಿಯು ರಥದಲ್ಲಿರುವವನೂ, ಪರ್ವತೋಪಮ

ದೂರಾದ್ಗರ್ಜಂತಂ ಕಾಲಮೇಘವತ್ ‖ ೧೦ ‖ ಸತಂ ದೃಷ್ಟ್ವಾ ಮಹಾತ್ಮಾನಂ ರಾಘವಸ್ತು ವಿಸಿಸ್ಮಿಯೇ । ವಾನರಾನ್ ಸಾಂತ್ವಯಿತ್ವಾಽಥ ವಿಭೀಷಣಮುವಾಚಹ ‖ ೧೧ ‖ "ಕೋಽಸೌ ಪರ್ವತಸಂಕಾಶೋ ಧನುಷ್ಮಾನ್ ಹರಿಲೋಚನಃ । ಯುಕ್ತೇ ಹಯಸಹಸ್ರೇಣ ವಿಶಾಲೇ ಸ್ಯಂದನೇ ಸ್ಥಿತಃ ‖ ೧೨ ‖ ಯಏಷ ನಿಶಿತೈಃ ಶೂಲೈಸ್ಸುತೀಕ್ಷ್ಣೈಃ ಪ್ರಾಸತೋಮರೈಃ । ಅರ್ಚಿಷ್ಮದ್ಭಿರ್ವೃತೋ ಭಾತಿ ಭೂತೈರಿವ ಮಹೇಶ್ವರಃ ‖ ೧೩ ‖ ಕಾಲಜಿಹ್ವಪ್ರಕಾಶಾಭಿರ್ಯ ಏಷೋತಿ ವಿರಾಜತೇ । ಆವೃತೋ ರಥಶಕ್ತಿಭಿರ್ವಿದ್ಯು

ರಥಸ್ಥಂ - ರಥಾರೂಢನಾದ, ಧನ್ವಿನಂ - ಧನುರ್ಧಾರಿಯಾದ, ಕಾಲಮೇಘವತ್ - ಕಪ್ಪು ಮೋಡದಂತೆ ಗರ್ಜಿಸುವ, ಅತಿಕಾಯಂ - ದೊಡ್ಡ ದೇಹವುಳ್ಳ ಅತಿಕಾಯನನ್ನು, ದೂರಾತ್ - ದೂರದಿಂದ, ದದರ್ಶ - ಕಂಡನು. ‖ ೧೦ ‖ ರಾಘವಸ್ತು - ಶ್ರೀರಾಮನಾದರೆ, ಮಹಾತ್ಮಾನಂ - ಮಹಾ ಧೈರ್ಯಶಾಲಿಯಾದ, ತಂ - ಆ ಅತಿಕಾಯನನ್ನು, ದೃಷ್ಟ್ವಾ - ಕಂಡು, ವಿಸಿಸ್ಮಯೇ - ಆಶ್ಚರ್ಯಗೊಂಡನು, ಅಥ - ಬಳಿಕ, ವಾನರಾನ್ - ಕಪಿಗಳನ್ನು, ಸಾಂತ್ವಯಿತ್ವಾ - ಸಮಾಧಾನಗೊಳಿಸಿ, ವಿಭೀಷಣಂ - ವಿಭೀಷಣನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ‖೧೧‖ ಪರ್ವ....ಶಃ - ಪರ್ವತೋಪಮನಾದ, ಧನುಷ್ಮಾನ್ - ಧನುರ್ಧಾರಿಯಾದ, ಹರಿಲೋಚನಃ - ಪಿಂಗಾಕ್ಷನಾದ, ಹಯ....ಣ - ಸಾವಿರ ಕುದರೆಗಳಿಂದ ಕೂಡಿದ, ವಿಶಾಲೇ - ವಿಸ್ತಾರವಾದ, ಸ್ಯಂದನೇ - ರಥದಲ್ಲಿ, ಸ್ಥಿತಃ - ಕುಳಿತಿರುವ, ಅಸೌ - ಇವನು, ಕಃ - ಯಾವನು, ಯಏಷಃ - ಯಾವ ಇವನು, ನಿಶಿತೈಃ - ತೀಕ್ಷ್ಣವಾದ, ಶೂಲೈಃ- ಶೂಲಗಳಿಂದ, ಸುತೀಕ್ಷ್ಣೈಃ - ಬಹಳ ಹದವಾದ, ಪ್ರಾಸತೋಮರೈಃ - ಈಟಿಗೋಲುಗಳಿಂದಲೂ, ತೋಮರಾಯುಧಗಳಿಂದಲೂ, ಅರ್ಚಿಷ್ಮದ್ಭಿಃ - ತೇಜೋವಂತರಾದ, ಭೂತೈಃ - ಭೂತಗಳಿಂದ, ವೃತಃ - ಸುತ್ತುವರೆಯಲ್ಪಟ್ಟ, ಮಹೇಶ್ವರಇವ - ಪರಮೇಶ್ವರನಂತೆ, ಭಾತಿ - ಹೊಳೆಯುತ್ತಿದ್ದಾನೆ, ಕಾಲ....ಭಿಃ - ಯಮನ ನಾಲಿಗೆಗಳಂತೆ ಹೊಳೆಯುವ, ರಥಶಕ್ತಿಭಿಃ - ರಥದಲ್ಲಿರುವ ಶಕ್ತ್ಯಾಯುಧಗಳಿಂದ, ಆವೃತಃ - ಪರಿವೃತನಾದ, ಯಏಷಃ - ಯಾವ ಈತನು, ವಿದ್ಯುದ್ಭಿಃ - ಮಿಂಚುಗಳೊಡಗೂಡಿದ, ತೋಯದಇವ - ಮೇಘದಂತೆ, ಅತಿವಿರಾಜತೇ - ಬಹಳವಾಗಿ ಹೊಳೆಯುತ್ತಿದ್ದಾನೆ. ‖ ೧೨-೧೪ ‖ ಸರ್ವತಃ ಸರ್ವಪ್ರಕಾರದಲ್ಲಿಯೂ, ಹೇಮಪೃಷ್ಠಾನಿ-ಭಂಗಾರದಿಂದ ಮಾಡಿದ ಹಿಮ್ಮೊಗ

ನಾಗಿ ಧನುಸ್ಸನ್ನು ಧರಿಸಿ ಕಾರ್ಮುಗಿಲಂತೆ ದೂರದಲ್ಲಿಯೇ ಸಿಂಹಧ್ವನಿ ಮಾಡುತ್ತಿರುವವನೂ, ಮಹಾನುಭಾವನೂ ಆದ ಆ ರಾಕ್ಷಸಶ್ರೇಷ್ಠನನ್ನು ನೋಡಿ ಪರಮಾಶ್ಚರ್ಯಭರಿತನಾದನು. ‖ ೬–೧೦ ‖ ಆ ತರುವಾಯ ವಾನರರೆಲ್ಲರನ್ನೂ ಸಮಾಧಾನಗೊಳಿಸಿ ಸಮೀಪದಲ್ಲಿಯೇ ಇದ್ದ ವಿಭೀಷಣನನ್ನು ಕುರಿತು ಆ ರಘುಶ್ರೇಷ್ಠನು, "ಮಿತ್ರ, ವಿಭೀಷಣಾ! ಪರ್ವತಸಮಾನನೂ, ಧನುರ್ಧಾರಿಯೂ, ಹಳದಿಯ ಬಣ್ಣದ ಕಣ್ಣುಗಳುಳ್ಳವನೂ, ಸಹಸ್ರಾಶ್ವಗಳು ಹೂಡಿದ ತೇರೇರಿರುವವನೂ, ಬಹುತೀಕ್ಷ್ಣಗಳಾದಶೂಲಾಯುಧಗಳೊಡನೆಯೂ, ಮೊನಚಾದ ಪ್ರಾಸಾಯುಧಗಳೊಡನೆಯೂ, ತೋಮರವೇ ಮೊದಲಾದ ಇತರ ಆಯುಧಗಳೊಡನೆಯೂ ಕೂಡಿ ಮಹೇಶ್ವರನಂತೆ ಪ್ರಕಾಶಿಸುತ್ತಿರುವ ಈ ರಾಕ್ಷಸೋತ್ತಮನಾರು? ಅಯ್ಯಾ ರಾಕ್ಷಸೋತ್ತಮನೇ! ಈ ರಾಕ್ಷಸನ ಆಯುಧಗಳೆಲ್ಲವೂ ಯಮನ ನಾಲಗೆಯನ್ನು ಹೋಲಿ ಹೊಳೆಯುತ್ತಿರುವುದು. ತೇರಿನಿಂದಲೂ, ಶಕ್ತ್ಯಾಯುಧಗಳಿಂದಲೂ ಕೂಡಿರುವ ಈ ರಾಕ್ಷಸೋತ್ತಮನು ಮಿಂಚಿನ ಬಳ್ಳಿಯೊಡಗೂಡಿದ ಮುಗಿಲಿನಂತೆ ಮೆರೆಯುತ್ತಿರುವನು. ವಿಭೀಷಣಾ! ಸ್ವರ್ಣ

ದ್ಭಿರಿವ ತೋಯದಃ ||೧೪|| ಧನೂಂಷಿ ಚಾಽಸ್ಯ ಸಜ್ಯಾನಿ ಹೇಮಪೃಷ್ಠಾನಿ ಸರ್ವಶಃ |
ಶೋಭಯಂತಿ ರಥಶ್ರೇಷ್ಠಂ ಶಕ್ರಚಾಪ ಇವಾಂಬರಂ || ೧೫ || ಕ ಏಷ ರಕ್ಷಃ
ಶಾರ್ದೂಲೋ ರಣಭೂಮಿಂ ವಿರಾಜಯನ್ | ಅಭ್ಯೇತಿ ರಥಿನಾಂ ಶ್ರೇಷ್ಠೋ ರಥೇನಾಽ
ದಿತ್ಯತೇಜಸಾ ||೧೬|| ಧ್ವಜಶೃಂಗಪ್ರತಿಷ್ಠೇನ ರಾಹುಣಾಽಭಿವಿರಾಜತೇ | ಸೂರ್ಯ
ರಶ್ಮಿನಿಭೈರ್ಬಾಣೈರ್ದಿಶೋ ದಶ ವಿರಾಜಯನ್ || ೧೭ || ತ್ರಿಣತಂ ಮೇಘನಿರ್ಹ್ರಾದಂ
ಹೇಮಪೃಷ್ಠಮಲಂಕೃತಂ | ಶತಕ್ರತುಧನುಃ ಪ್ರಖ್ಯಂ ಧನುಶ್ಚಾಸ್ಯ ವಿರಾಜತೇ ||೧೮||
ಸಧ್ವಜಸ್ಸಪತಾಕಶ್ಚ ಸಾನುಕರ್ಷೋ ಮಹಾರಥಃ | ಚತುಸ್ಸಾದಿ ಸಮಾಯುಕ್ತೋ

ಗಳುಳ್ಳ, ಸಜ್ಯಾನಿ - ಹೆದೆಗಳಿಂದ ಕೂಡಿದ, ಧನೂಂಷಿ - ಧನುಸ್ಸುಗಳು, ಶಕ್ರಚಾಪಃ - ಇಂದ್ರ ಧನುಸ್ಸು, ಅಂಬರಮಿವ - ಅಂತರಿಕ್ಷವನ್ನಂತೆ, ಅಸ್ಯ - ಇವನ, ರಥಶ್ರೇಷ್ಠಂ - ಉತ್ತಮವಾದ ತೇರನ್ನು, ಶೋಭಯಂತಿ - ಕಂಗೊಳಿಸುತ್ತಿವೆ. || ೧೫ || ರಕ್ಷಶ್ಶಾರ್ದೂಲಃ - ರಾಕ್ಷಸಶ್ರೇಷ್ಠನಾದ, ರಥಿನಾಂ - ರಥಿಕರಲ್ಲಿ, ಶ್ರೇಷ್ಠಃ - ಉತ್ತಮನಾದ, ಏಷಃ - ಇವನು, ಆದಿತ್ಯತೇಜಸಾ - ಸೂರ್ಯನ ತೇಜಸ್ಸುಳ್ಳ, ರಥೇನ - ತೇರಿನಿಂದ, ರಣಭೂಮಿಂ - ಯುದ್ಧಭೂಮಿಯನ್ನು, ವಿರಾಜಯನ್ - ಹೊಳೆಯುವಂತೆ ಮಾಡುತ್ತ, ಅಭ್ಯೇತಿ - ಬರುತ್ತಿದ್ದಾನೆ. || ೧೬ || ಧ್ವಜ....ನ - ಧ್ವಜಾಗ್ರದಲ್ಲಿರುವ, ರಾಹುಣಾ - ರಾಹುವಿನಿಂದಲೂ, ಸೂರ್ಯ....ಭೈಃ - ಸೂರ್ಯಕಿರಣಗಳಿಗೆ ಸಮಾನಗಳಾದ, ಬಾಣೈಃ- ಬಾಣಗಳಿಂದಲೂ, ದಶದಿಶಃ - ಹತ್ತುದಿಕ್ಕುಗಳನ್ನೂ, ವಿರಾಜಯನ್ - ಕಂಗೊಳಿಸುತ್ತ, ವಿರಾಜತೇ - ಬೆಳಗುತ್ತಿದ್ದಾನೆ. || ೧೭ || ತ್ರಿಣತಂ - ಮೂರು ಪ್ರದೇಶಗಳಲ್ಲಿ ಬೊಗ್ಗಿರುವ, ಮೇಘನಿರ್ಹ್ರಾದಂ - ಮೇಘದ ಧ್ವನಿಯಂತೆ ಧ್ವನಿಯುಳ್ಳ, ಹೇಮಪೃಷ್ಠಂ - ಸ್ವರ್ಣವಿಕಾರವಾದ ಹಿಂಭಾಗವುಳ್ಳ, ಅಲಂಕೃತಂ - ಭೂಷಿಸಲ್ಪಟ್ಟ, ಶತ.. ಖ್ಯಂ - ದೇವೇಂದ್ರನ ಧನುಸ್ಸಿಗೆ ಸಮಾನವಾದ, ಅಸ್ಯ - ಇವನ, ಧನುಃ - ಬಿಲ್ಲು, ವಿರಾಜತೇ - ಹೊಳೆಯುತ್ತಿದೆ. || ೧೮ || ಸಧ್ವಜಃ - ಧ್ವಜದಿಂದೊಡಗೂಡಿದ, ಸಪತಾಕಶ್ಚ - ಚಿಕ್ಕಚಿಕ್ಕ ನಿಶಾನಿಗಳಿಂದೊಡಗೂಡಿದ, ಸಾನುಕರ್ಷಃ - ಮೂಕೀಮರಗಳಿಂದೊಡಗೂಡಿದ, ಚತು....ಕ್ತಃ - ನಾಲ್ಕುಮಂದಿ ಸಾರಥಿಗಳಿಂದ ಕೂಡಿದ, ಮಹಾರಥಃ - ದೊಡ್ಡ ರಥವು, ಮೇಘ....ನಃ - ಮೇಘಧ್ವನಿಯಂತೆ ಧ್ವನಿಯುಳ್ಳದಾಗಿದೆ. || ೧೯ || ವಿಂಶತಿಃ - ಇಪ್ಪತ್ತಾದ,

---

ಅಲಂಕೃತವಾದ ಹಿಂಭಾಗಗಳುಳ್ಳವೂ, ಸರ್ವಸಿದ್ಧವಾಗಿರುವುವೂ ಆದ ಉತ್ತಮೋತ್ತಮವಾದ ಧನುಸ್ಸುಗಳು ಅವನೇರಿರುವ ತೇರನ್ನೂ, ರಣಭೂಮಿಯನ್ನೂ ಇಂದ್ರ ಧನುಸ್ಸು ಗಗನಾಂಗಣವನ್ನು ಎಂತೋ ಅಂತು ಬೆಳಗಿಸುತ್ತಿರುವುವು. ||೧೧-೧೫|| ಅಯ್ಯಾ ರಾಕ್ಷಸಶ್ರೇಷ್ಠನೇ! ರಣಭೂಮಿಯೆಲ್ಲವನ್ನೂ ಪ್ರಕಾಶಗೊಳಿಸುತ್ತಿರುವವನೂ, ರಥಿಕರಲ್ಲಿ ಶ್ರೇಷ್ಠನಾದವನೂ ಆದ ಈ ರಾಕ್ಷಸನು ಸೂರ್ಯನ ತೇಜಸ್ಸುಳ್ಳವನಾಗಿ ತೇರೇರಿ ಬರುತ್ತಿರುವವನು; ಈತನಾರು? ರಣರಂಗಕ್ಕೆ ನುಗ್ಗಿ ಬರುತ್ತಿರುವ ಈ ರಾಕ್ಷಸೋತ್ತಮನು ರಾಹುಧ್ವಜದಿಂದಲೂ, ಸೂರ್ಯಕಾಂತಿಯನ್ನು ತಳೆದು ವಿರಾಜಿಸುತ್ತಿರುವ ಬಾಣಗಳಿಂದಲೂ ದಶದಿಶೆಗಳನ್ನೂ ಬೆಳಗಿಸುತ್ತಿರುವನು! ಆದಿಮಧ್ಯಾಂತಗಳಲ್ಲಿ ಸ್ವಲ್ಪ ಬೊಗ್ಗಿ, ಮುಗಿಲ ದನಿಯುಳ್ಳುದಾಗಿ ಸ್ವರ್ಣಾಲಂಕೃತವಾದ ಹಿಮ್ಮೊಗವುಳ್ಳ ಈತನ ಧನುಸ್ಸು ದೇವೇಂದ್ರನ ಧನುಸ್ಸಿನಂತೆ ಕಂಗೊಳಿಸುತ್ತಿರುವುದು. ಧ್ವಜಪತಾಕಾಲಂಕೃತವಾಗಿ, ಬಲವಾದ ಕಾಡೀಮರದಿಂದ ಕೂಡಿ ನಾಲ್ವರು ಸಾರಥಿಗಳೊಡಗೂಡಿದ ಈತನ ರಥವು ಮೇಘಧ್ವನಿಯನ್ನೊಳಗೊಂಡು ಪ್ರಕಾಶಿಸುತ್ತಿದೆ. ವಿಭೀಷಣಾ!

ಮೇಘಸ್ತನಿತನಿಸ್ಸ್ವನಃ ॥ ೧೯ ॥ ವಿಂಶತಿರ್ದಶ ಚಾಷ್ಟೌಚ ತೂಣ್ಯೋಽಸ್ಯ ರಥಮಾಸ್ಥಿತಾಃ । ಕಾರ್ಮುಕಾನಿ ಚ ಭೀಮಾನಿ ಜ್ಯಾಶ್ಚ ಕಾಂಚನಪಿಂಗಳಾಃ ॥ ೨೦ ॥ ದ್ವೌಚ ಖಡ್ಗೌ ರಥಗತೌ ಪಾರ್ಶ್ವಸ್ಥೌ ಪಾರ್ಶ್ವಶೋಭಿತೌ । ಚತುರ್ಹಸ್ತತ್ಸರುಯುತೌ ವ್ಯಕ್ತಹಸ್ತದಶಾಯತೌ ॥೨೧॥ ರಕ್ತಕಂಠಗುಣೋ ಧೀರೋ ಮಹಾಪರ್ವತಸನ್ನಿಭಃ । ಕಾಳಃ ಕಾಲಮಹಾವಕ್ತ್ರೋ ಮೇಘಸ್ಥ ಇವಭಾಸ್ಕರಃ ॥ ೨೨ ॥ ಕಾಂಚನಾಂಗದನದ್ಧಾಭ್ಯಾಂ ಭುಜಾಭ್ಯಾಮೇಷ ಶೋಭತೇ । ಶೃಂಗಾಭ್ಯಾಮಿವ ತುಂಗಾಭ್ಯಾಂ ಹಿಮವಾನ್ ಪರ್ವತೋತ್ತಮಃ ॥ ೨೩ ॥ ಕುಂಡಲಾಭ್ಯಾಂತು ಯಸ್ಯೈತದ್ಭಾತಿ ವಕ್ತ್ರಂ ಶುಭೇಕ್ಷಣಂ । ಪುನರ್ವಸ್ವಂತರಗತಂ ಪೂರ್ಣಂ ಬಿಂಬಮಿವೈಂದವಂ ॥ ೨೪ ॥ ಆಚಕ್ಷ್ವ ಮೇ ಮಹಾ

ದಶಚ - ಹತ್ತಾದ, ಅಷ್ಟೌಚ - ಎಂಟಾದ, ತೂಣ್ಯ - ಬತ್ತಳಿಕೆಗಳು, ಅಸ್ಯ - ಇವನ, ರಥಂ - ರಥದಲ್ಲಿ, ಅಸ್ಥಿತಾಃ - ಇವೆ, ಕಾರ್ಮುಕಾನಿ - ಬಿಲ್ಲುಗಳು, ಭೀಮಾನಿ - ಭಯಂಕರವಾಗಿವೆ, ಜ್ಯಾಶ್ಚ- ಹೆದೆಗಳೂ ಸಹ, ಕಾಂಚ....ಲಾಃ - ಬಂಗಾರದಂತೆ ಹಳದಿ ಬಣ್ಣವಾಗಿವೆ. ॥ ೨೦ ॥ ಪಾರ್ಶ್ವಸ್ಥೌ - ಉಭಯಪಾರ್ಶ್ವಗಳಲ್ಲಿರುವ, ದ್ವೌಖಡ್ಗೌಚ - ಎರಡು ಕತ್ತಿಗಳೂ, ಪಾರ್ಶ್ವಶೋಭಿತೌ - ಪಾರ್ಶ್ವಗಳಲ್ಲಿ ಹೊಳೆಯುವುವಾಗಿ, ಚತು....ತೌ - ನಾಲ್ಕು ಹಸ್ತಪ್ರಮಾಣವಾದ ಹಿಡಿಗಳಿಂದೊಡಗೂಡಿ, ವ್ಯಕ್ತ....ತೌ - ಅಭಿವ್ಯಕ್ತಗಳಾದ ಹಸ್ತಪ್ರಮಾಣವಾದ ಉದ್ದವುಳ್ಳವುಗಳಾಗಿವೆ. ॥೨೧॥ ರಕ್ತ....ಣಃ- ಕೆಂಪಾದ ಪೂದಂಡೆಗಳಿಂದ ಕೂಡಿದ ಕಂಠವುಳ್ಳ, ಧೀರಃ - ಶೂರನಾದ, ಮಹಾ....ಭಃ - ದೊಡ್ಡ ಬೆಟ್ಟಕ್ಕೆ ಸಮಾನನಾದ, ಕಾಳಃ - ಕಪ್ಪಾಗಿರುವ, ಕಾಲ....ಕ್ತ್ರಃ - ಯಮನಂತೆ ದೊಡ್ಡ ಮುಖವುಳ್ಳ ಇವನು, ಮೇಘಸ್ಥಃ - ಮೇಘಗಳ ಮಧ್ಯದಲ್ಲಿರುವ, ಭಾಸ್ಕರಇವ - ಸೂರ್ಯನಂತೆ, ಭಾತಿ - ಹೊಳೆಯುತ್ತಿದ್ದಾನೆ, ಕಾಂಚ....ಭ್ಯಾಂ-ಬಂಗಾರದ ತೋಳುಬಂದಿಗಳಿಂದ ಕಟ್ಟಲ್ಪಟ್ಟ, ಭುಜಾಭ್ಯಾಂ- ಭುಜಗಳಿಂದ, ಏಷಃ - ಈತನು, ತುಂಗಾಭ್ಯಾಂ - ಉನ್ನತವಾದ, ಶೃಂಗಾಭ್ಯಾಂ - ಶಿಖರಗಳಿಂದ, ಪರ್ವತೋತ್ತಮಃ - ಪರ್ವತಶ್ರೇಷ್ಠವಾದ, ಹಿಮವಾನಿವ - ಹಿಮವತ್ಪರ್ವತದಂತೆ, ಶೋಭತೇ - ಹೊಳೆಯುತ್ತಿದ್ದಾನೆ, ಯಸ್ಯ - ಯಾವ ಇವನ, ಶುಭೇಕ್ಷಣಂ - ಶುಭಕರವಾದ ಕಣ್ಣುಗಳುಳ್ಳ, ಏತದ್ವಕ್ತ್ರಂ - ಈ ಮುಖವು, ಕುಂಡಲಾಭ್ಯಾಂ - ಕುಂಡಲಗಳಿಂದ, ಪುನ....ತಂ - ಪುನರ್ವಸೂ ನಕ್ಷತ್ರಗಳ ಮಧ್ಯದಲ್ಲಿರುವ, ಪೂರ್ಣಂ - ಸಂಪೂರ್ಣವಾದ, ಐಂದವಂ - ಚಂದ್ರಸಂಬಂಧ

ಈತನ ರಥದಲ್ಲಿ ಮುವ್ವತ್ತೆರಡು ಬಗೆಯ ಬತ್ತಳಿಕೆಗಳು ಶೋಭಿಸುತ್ತಿವೆ. ಹಾಗೆಯೇ ಭಯಂಕರವಾದುವೂ, ಸ್ವರ್ಣಾಲಂಕೃತವಾದುವೂ ಆಗಿರುವ ಬಿಲ್ಲುಗಳೂ ಅನೇಕವಾಗಿರುವುವು. ಇದೂ ಅಲ್ಲದೆ ಈತನ ರಥದ ಎರಡೂ ಪಕ್ಕಗಳಲ್ಲಿ ನಾಲ್ಕು ಹಿಡಿಗಳಷ್ಟು ಉದ್ದವಾದ ಕೈಪಿಡಿಗಳನ್ನೊಳಗೊಂಡು, ಹತ್ತು ಕೈಗಳಷ್ಟು ಉದ್ದವಾಗಿರುವ ಖಡ್ಗಗಳಿರುವುವು. ॥ ೧೬-೨೦ ॥ ಅಯ್ಯಾ ವಿಭೀಷಣನೇ! ಕೆಂಪಾದ ಕಂಠವುಳ್ಳವನೂ, ಧೀರನೂ, ಮಹಾ ಪರ್ವತಸಮಾನನೂ, ಬಹು ವಿಶಾಲನಾದ ಬಾಯಿಯುಳ್ಳವನೂ ಆದ ಈ ರಾಕ್ಷಸೋತ್ತಮನು ರಥಾರೂಢನಾಗಿ ಮೇಘಾರೂಢನಾದ ದಿನಕರನಂತೆ ಪ್ರಕಾಶಿಸುತ್ತಿರುವನು. ಈತನು ಸ್ವರ್ಣಾಂಗದ ವಿಭೂಷಿತವಾದ ಭುಜಗಳಿಂದ ಮಹೋನ್ನತವಾದ ಶಿಖರಗಳಿಂದ ಶೋಭಿಸುತ್ತಿರುವ ಹಿಮವತ್ಪರ್ವತದಂತೆ ತೋರುತ್ತಿರುವನು. ಶುಭನೇತ್ರನಾದ ಈ ರಾಕ್ಷಸೋತ್ತಮನ ಮುಖವು ಪುನರ್ವಸೂನಕ್ಷತ್ರ ಮಧ್ಯಗತನಾದ ಚಂದ್ರನಂತೆ ಪ್ರಕಾಶಿಸುತ್ತಿರುವುದು. ರಾಕ್ಷ

ಬಾಹೋ! ತ್ವಮೇನಂ ರಾಕ್ಷಸೋತ್ತಮಂ । ಯಂ ದೃಷ್ಟ್ವಾ ವಾನರಾಸ್ಸರ್ವೇ ಭಯಾರ್ತಾ ವಿದ್ರುತಾ ದಿಶಃ" ॥೨೫॥ ಸ ಪೃಷ್ಟೋ ರಾಜಪುತ್ರೇಣ ರಾಮೇಣಾಽಮಿತ ತೇಜಸಾ । ಆಚಚಕ್ಷೇ ಮಹಾತೇಜಾ ರಾಘವಾಯ ವಿಭೀಷಣಃ ॥೨೬॥ "ದಶಗ್ರೀವೋ ಮಹಾತೇಜಾ ರಾಜಾ ವೈಶ್ರವಣಾನುಜಃ । ಭೀಮಕರ್ಮಾ ಮಹೋತ್ಸಾಹೋ ರಾವಣೋ ರಾಕ್ಷಸಾಧಿಪಃ ॥ ೨೭ ॥ ತಸ್ಯಾಸೀದ್ವೀರ್ಯವಾನ್ ಪುತ್ರೋ ರಾವಣ ಪ್ರತಿಮೋ ರಣೇ । ವೃದ್ಧಸೇವೀ ಶ್ರುತಿಧರಸ್ಸರ್ವಾಸ್ತ್ರವಿದುಷಾಂ ವರಃ ॥ ೨೮ ॥ ಅಶ್ವ ಪೃಷ್ಠೇ ರಥೇ ನಾಗೇ ಖಡ್ಗೇ ಧನುಷಿ ಕರ್ಷಣೇ । ಭೇದೇ ಸಾಂತ್ವೇಚ ದಾನೇಚ

ವಾದ, ಬಿಂಬಮಿವ - ಬಿಂಬದಂತೆ, ಭಾತಿ - ಹೊಳೆವುದೋ, ಹೇ ಮಹಾಬಾಹೋ - ಎಲೈ ಮಹಾ ಭುಜಬಲಪರಾಕ್ರಮಿಯೇ, ಯಂ - ಯಾವನನ್ನು, ದೃಷ್ಟ್ವಾ-ಕಂಡು, ಸರ್ವೇವಾನರಾಃ-ಸಮಸ್ತ ಕಪಿ ಗಳೂ, ಭಯಾರ್ತಾಃ - ಭಯಗೊಂಡವರಾಗಿ, ದಿಶಃ - ದಿಕ್ಕುಗಳಲ್ಲಿ, ವಿದ್ರುತಾಃ - ಓಡಿಹೋದರೋ, ಏನಂ - ಈ, ರಾಕ್ಷಸೋತ್ತಮಂ - ರಾಕ್ಷಸಶ್ರೇಷ್ಠನನ್ನು, ತ್ವಂ - ನೀನು, ಮೇ - ನನಗೆ, ಆಚಕ್ಷ್ವ - ಹೇಳು. ॥೨೨-೨೫॥ ಮಹಾತೇಜಾಃ - ಬಹು ತೇಜೋವಂತನಾದ, ಸವಿಭೀಷಣಃ - ಆ ವಿಭೀಷಣನು, ಅಮಿತತೇಜಸಾ - ಬಹು ಪರಾಕ್ರಮಿಯಾದ, ರಾಜಪುತ್ರೇಣ - ರಾಜಪುತ್ರನಾದ, ರಾಮೇಣ - ಶ್ರೀರಾಮನಿಂದ, ಪೃಷ್ಟಃ - ಕೇಳಲ್ಪಟ್ಟವನಾಗಿ, ರಾಘವಾಯ - ಶ್ರೀರಾಮನಿಗಾಗಿ, ಆಚಚಕ್ಷೇ - ವಿಜ್ಞಾಪಿಸಿದನು. ॥೨೬॥ ಮಹಾತೇಜಾಃ - ಬಹು ಸಾಮರ್ಥ್ಯವಂತನಾದ, ವೈಶ್ರ....ಜಃ - ಕುಬೇರನ ತಮ್ಮನಾದ, ದಶಗ್ರೀವಃ - ಹತ್ತು ಕಂಠಗಳುಳ್ಳ, ರಾಜಾ - ಅರಸಾದ, ಭೀಮಕರ್ಮಾ - ಭಯಂಕರ ವಾದ ಕೃತ್ಯಗಳುಳ್ಳ, ಮಹೋತ್ಸಾಹಃ - ಮಹೋತ್ಸಾಹಿಯಾದ, ರಾವಣಃ-ರಾವಣನು, ರಾಕ್ಷಸಾಧಿಪಃ- ರಾಕ್ಷಸಾಧಿಪತಿಯಾಗಿದ್ದಾನಷ್ಟೆ. ॥ ೨೭ ॥ ತಸ್ಯ - ಅವನಿಗೆ, ವೀರ್ಯವಾನ್ - ಪರಾಕ್ರಮಶಾಲಿಯಾದ, ಪುತ್ರಃ - ಮಗನು, ಆಸೀತ್ - ಆಗಿದ್ದಾನೆ, ರಣೇ - ಕಾಳಗದಲ್ಲಿ, ರಾವಣಪ್ರತಿಮಃ - ರಾವಣನಿಗೆ ಸಮಾನನು, ವೃದ್ಧಸೇವೀ-ಮುದುಕರನ್ನು ಸೇವಿಸುವವನು, ಶೃತಿಧರಃ-ವೇದಜ್ಞನು, ಸರ್ವಾ....ಷಾಂ- ಅಸ್ತ್ರಜ್ಞರೆಲ್ಲರಲ್ಲಿಯೂ ಉತ್ತಮನು, ಅಶ್ವಪೃಷ್ಠೇ - ಕುದುರೆಯನ್ನೇರುವದರಲ್ಲಿಯೂ, ರಥೇ - ರಥಾ

ಸೋತ್ತಮನಾದ ವಿಭೀಷಣನೇ! ಇಂತಹ ಮಹಾತ್ಮನಾದ ಈ ರಾಕ್ಷಸೋತ್ತಮನನ್ನು ನೋಡಿ ಈ ವಾನರಸೇನೆಯೆಲ್ಲವೂ ಹೆದರಿ ಓಡಿಹೋಗುತ್ತಿರುವುದು. ನೀನು ಈತನ ವಿಷಯ ವೆಲ್ಲವನ್ನೂ ನನಗೆ ಸಮಗ್ರವಾಗಿ ತಿಳಿಸುವವನಾಗು" ಎಂದು ಹೇಳಿದನು. ॥ ೨೧—೨೫ ॥ ಮಹಾ ತೇಜಸ್ವಿಯೂ, ರಾಜಪುತ್ರನೂ ಆದ ಶ್ರೀರಾಮಮೂರ್ತಿಯು ಈ ರೀತಿ ಕೇಳಲು ಮಹಾ ತೇಜಸ್ವಿಯಾದ ವಿಭೀಷಣನು ಆ ರಾಕ್ಷಸನ ವೃತ್ತಾಂತವನ್ನು ಆತನಿಗೆ ತಿಳಿಸು ವವನಾಗಿ ಆತನನ್ನು ಕುರಿತು, "ರಘುಕುಲೋತ್ತಮಾ! ಅತ್ಯಧಿಕ ತೇಜಸ್ಸಂಪನ್ನನೂ, ಕುಬೇರಾನುಜನೂ, ಭಯಂಕರವಾಗಿ ಯುದ್ಧಮಾಡುವವನೂ, ಮಹೋತ್ಸಾಹವಂತನೂ, ರಕ್ಕಸರೊಡೆಯನೂ, ದಶಕಂಠನೂ ಆದ ರಾವಣಾಸುರನಿಗೆ ಈ ವೀರರಾಕ್ಷಸನು ಪುತ್ರನು. ಯುದ್ಧದಲ್ಲಿ ಈತನು ತಂದೆಗೆ ಸಮಾನನಾದವನು. ಈತನು ಅರಿತನುರಿತ ವಯೋವೃದ್ಧ ರನ್ನು ಸೇವಿಸಿರುವನು; ವೇದಶಾಸ್ತ್ರಜ್ಞಾನವುಳ್ಳವನು; ಸಕಲ ಶಸ್ತ್ರಾಸ್ತ್ರ ಶಾಸ್ತ್ರ ಗಳಲ್ಲಿಯೂ ಮೇಲಾದವನು. ಓ ರಾಮಚಂದ್ರ! ಮಹಾ ವೀರನಾದ ಈತನು ಆನೆ, ಕುದುರೆ, ತೇರು ಮೊದಲಾದವುಗಳನ್ನೇರಿ ಕಾಳಗ ಮಾಡುವುದರಲ್ಲಿ ಬಹಳ ನೈಪುಣ್ಯವುಳ್ಳವನು.

ನಯೇ ಮಂತ್ರೇಚ ಸಮ್ಮತಃ ॥ ೨೯ ॥ ಯಸ್ಯ ಬಾಹೂ ಸಮಾಶ್ರಿತ್ಯ ಲಂಕಾ ವಸತಿ ನಿರ್ಭಯಾ । ತನಯಂ ಧಾನ್ಯಮಾಲಿನ್ಯಾ ಅತಿಕಾಯಮಿಮಂ ವಿದುಃ ॥೩೦॥ ಏತೇನಾರಾಧಿತೋ ಬ್ರಹ್ಮಾ ತಪಸಾ ಭಾವಿತಾತ್ಮನಾ । ಅಸ್ತ್ರಾಣಿ ಚಾಪ್ಯವಾಪ್ತಾನಿ ರಿಪವಶ್ಚ ಪರಾಜಿತಾಃ ॥ ೩೧ ॥ ಸುರಾಸುರೈರವಧ್ಯತ್ವಂ ದತ್ತಮಸ್ಮೈ ಸ್ವಯಂಭುವಾ । ಏತಚ್ಚ ಕವಚಂ ದಿವ್ಯಂ ರಥಶ್ಚೈಷೋಽರ್ಕಭಾಸ್ವರಃ ॥೩೨॥ ಏತೇನ ಶತಶೋ ದೇವಾ ದಾನವಾಶ್ಚ ಪರಾಜಿತಾಃ । ರಕ್ಷಿತಾನಿ ಚ ರಕ್ಷಾಂಸಿ ಯಕ್ಷಾಶ್ಚಾಪಿ ನಿಷೂದಿತಾಃ ॥ ೩೩ ॥

ರೋಹಣದಲ್ಲಿಯೂ, ಖಡ್ಗೇ - ಖಡ್ಗಗಳಿಂದ ಯುದ್ಧಮಾಡುವುದರಲ್ಲಿಯೂ, ಧನುಷಿ - ಧನುರ್ವಿದ್ಯೆಯಲ್ಲಿಯೂ, ಕರ್ಷಣೇ - ಪಾಶಕರ್ಷಣದಲ್ಲಿಯೂ, ಭೇದೇ - ಭೇದೋಪಾಯದಲ್ಲಿಯೂ, ಸಾಂತ್ವೇಚ-ಸಾಮೋಪಾಯದಲ್ಲಿಯೂ, ನಯೇ - ನೀತಿಯಲ್ಲಿಯೂ, ಸಮ್ಮತಃ - ಎಲ್ಲರಿಗೂ ಸಮ್ಮತನಾದವನು. ॥ ೨೮-೨೯ ॥ ಯಸ್ಯ - ಯಾವನ, ಬಾಹೂ - ಭುಜಗಳನ್ನು, ಸಮಾಶ್ರಿತ್ಯ - ಆಶ್ರಯಿಸಿ, ಲಂಕಾ - ಲಂಕಾಪಟ್ಟಣವು, ನಿರ್ಭಯಾ - ಭಯರಹಿತವಾಗಿ, ವಸತಿ - ಇರುತ್ತದೋ, ಇಮಂ - ಇವನನ್ನು, ಧಾನ್ಯಮಾಲಿನ್ಯಾಃ - ಧಾನ್ಯಮಾಲಿಯೆಂಬ ರಾವಣನ ಕಿರಿಹೆಂಡತಿಯ, ತನಯಂ - ಮಗನಾದ, ಅತಿಕಾಯಂ - ಅತಿಕಾಯನೆಂಬ ಹೆಸರುಳ್ಳವನನ್ನಾಗಿ, ವಿದುಃ - ತಿಳಿಯುತ್ತಾರೆ. ॥ ೩೦ ॥ ತಪಸಾ - ತಪಸ್ಸಿನಿಂದ, ಭಾವಿತಾತ್ಮನಾ - ಧ್ಯಾನಿಸಲ್ಪಟ್ಟ ಪರಮಾತ್ಮನುಳ್ಳ, ಏತೇನ - ಈ ಅತಿಕಾಯನಿಂದ, ಬ್ರಹ್ಮಾ - ಚತುರ್ಮುಖಬ್ರಹ್ಮನು, ಆರಾಧಿತಃ - ಪೂಜಿಸಲ್ಪಟ್ಟನು, ಅಸ್ತ್ರಾಣಿಚ - ಅಸ್ತ್ರಗಳೂ, ಅವಾಪ್ತಾನಿ - ಹೊಂದಲ್ಪಟ್ಟವು, ರಿಪವಶ್ಚ - ಶತ್ರುಗಳೂ, ಪರಾಜಿತಾಃ - ಜಯಿಸಲ್ಪಟ್ಟರು. ॥ ೩೧ ॥ ಸ್ವಯಂಭುವಾ - ಬ್ರಹ್ಮದೇವರಿಂದ, ಅಸ್ಮೈ - ಈ ಅತಿಕಾಯನಿಗೆ, ಸುರಾಸುರೈಃ - ದೇವರಾಕ್ಷಸರಿಂದ, ಅವಧ್ಯತ್ವಂ - ಸಂಹರಿಸಲಸಾಧ್ಯತ್ವವು, ದತ್ತಂ - ಕೊಡಲ್ಪಟ್ಟಿತು, ದಿವ್ಯಂ - ದೇವತಾಸಂಬಂಧವಾದ, ಏತತ್ಕವಚಂಚ - ಈ ಕವಚವೂ, ದತ್ತಂ - ಕೊಡಲ್ಪಟ್ಟಿತು, ಏಷಃ - ಈ, ಅರ್ಕಭಾಸ್ವರಃ - ಸೂರ್ಯನಂತೆ ಪ್ರಕಾಶಮಾನವಾದ, ರಥಶ್ಚ - ರಥವೂ, ದತ್ತಃ - ಕೊಡಲ್ಪಟ್ಟಿತು. ॥೩೨॥ ಏತೇನ - ಈತನಿಂದ, ಶತಶಃ-ನೂರಾರಾವರ್ತಿ, ದೇವಾಃ-ದೇವತೆಗಳೂ, ದಾನವಾಶ್ಚ-ದಾನವರೂ, ಪರಾಜಿತಾಃ-ಜಯಿಸಲ್ಪಟ್ಟರು, ರಕ್ಷಾಂಸಿ - ರಕ್ಕಸರು, ರಕ್ಷಿತಾನಿ - ಸಂರಕ್ಷಿಸಲ್ಪಟ್ಟರು, ಯಕ್ಷಾಶ್ಚಾಪಿ - ಯಕ್ಷರೂ,

---

ಈತನು ಸಾಮದಾನ, ಭೇದ, ದಂಡಾದಿ ಚತುರೋಪಾಯಗಳಲ್ಲಿಯೂ ಜಾಣ್ಮೆಯುಳ್ಳವನು. ನೀತಿಯಲ್ಲಿಯೂ, ಮಂತ್ರಾಲೋಚನೆಯಲ್ಲಿಯೂ ಮಹಾ ಸಾಮರ್ಥ್ಯವುಳ್ಳವನು. ಲಂಕಾ ರಾಜ್ಯವೆಲ್ಲವೂ ಈತನ ಅಪರಿಮಿತ ಭುಜಬಲವನ್ನವಲಂಬಿಸಿ ನಿರ್ಭಯವಾಗಿರುವುದು. ಎಲೈ ರಘುಕುಲೋದ್ಭವನೇ! ಈ ವೀರನು ಧಾನ್ಯಮಾಲಿಯಲ್ಲಿ ರಾವಣಾಸುರನಿಗೆ ಜನಿಸಿದವನು. ॥ ೨೬–೩೦ ॥ ಈತನ ನಾಮಧೇಯವು ಅತಿಕಾಯನೆಂದು. ಮಹಾನುಭಾವನಾದ ಈತನು ಘೋರತರವಾದ ತಪಸ್ಸನ್ನು ಮಾಡಿ ಬ್ರಹ್ಮದೇವನನ್ನು ಸಂತೋಷಪಡಿಸಿ ಆತನಿಂದ ಅನೇಕ ವರಗಳನ್ನೂ, ಅಸ್ತ್ರಗಳನ್ನೂ ಪಡೆದನು. ಈತನು ಅನೇಕ ಯುದ್ಧಗಳಲ್ಲಿ ಶತ್ರುಗಳನ್ನೂ ಪರಾಜಯಗೊಳಿಸಿರುವನು. ಇದೂ ಅಲ್ಲದೆ ಈ ರಾಕ್ಷಸೋತ್ತಮನು ದೇವದಾನವರಾರಿಂದಲೂ ಜಯಿಸಲಸಾಧ್ಯನಾಗುವಂತೆ ಬ್ರಹ್ಮದೇವನಿಂದ ವರವನ್ನು ಪಡೆದಿರುವನು. ಈತನ ರಥ ಮತ್ತು ಕವಚಗಳೆರಡೂ ದಿವ್ಯವಾದುವು. ಈತನ ರಥವು ಸೂರ್ಯನಂತೆ ಪ್ರಕಾಶಿಸುತ್ತಿರುವುದು. ಈತನು ಇದೇ ರಥವನ್ನೇರಿಯೇ ಅನೇಕ ಮಂದಿ ದೇವತೆಗಳನ್ನು ಜಯಿಸಿ

ವಜ್ರಂ ವಿಷ್ಟಂಭಿತಂ ಯೇನ ಬಾಣೈರಿಂದ್ರಸ್ಯ ಧೀಮತಃ । ಪಾಶಸ್ಸಲಿಲರಾಜಸ್ಯ ರಣೇ ಪ್ರತಿಹತಸ್ತಥಾ ॥ ೩೪ ॥ ಏಷೋಽತಿಕಾಯೋ ಬಲವಾನ್ ರಾಕ್ಷಸಾನಾಮಥರ್ಷಭಃ । ರಾವಣಸ್ಯ ಸುತೋ ಧೀಮಾನ್ ದೇವದಾನವ ದರ್ಪಹಾ ॥ ೩೫ ॥ ತದಸ್ಮಿನ್ ಕ್ರಿಯತಾಂ ಯತ್ನಃ ಕ್ಷಿಪ್ರಂ ಪುರುಷಪುಂಗವ! । ಪುರಾ ವಾನರಸೈನ್ಯಾನಿ ಕ್ಷಯಂ ನಯತಿ ಸಾಯಕೈಃ" ॥ ೩೬ ॥ ತತೋಽತಿಕಾಯೋ ಬಲವಾನ್ ಪ್ರವಿಶ್ಯ ಹರಿವಾಹಿನೀಂ । ವಿಷ್ಫಾರಯಾಮಾಸ ಧನುರ್ನನಾದ ಚ ಪುನಃಪುನಃ ॥ ೩೭ ॥ ತಂ ಭೀಮವಪುಷಂ ದೃಷ್ಟ್ವಾ ರಥಸ್ಥಂ ರಥಿನಾಂ ವರಂ । ಅಭಿಪೇತುರ್ಮಹಾತ್ಮಾನೋ ಯೇ ಪ್ರಧಾನಾ

ನಿಷೂದಿತಾಃ - ಸಂಹರಿಸಲ್ಪಟ್ಟರು. ॥೩೩॥ ರಣೇ - ಕಾಳೆಗದಲ್ಲಿ, ಯೇನ - ಯಾವನಿಂದ, ಧೀಮತಃ- ಬುದ್ಧಿಶಾಲಿಯಾದ, ಇಂದ್ರಸ್ಯ - ಇಂದ್ರನ, ವಜ್ರಂ - ವಜ್ರಾಯುಧವು, ಬಾಣೈಃ - ಬಾಣಗಳಿಂದ, ವಿಷ್ಟಂಭಿತಂ - ಸ್ತಂಭಿಸಲ್ಪಟ್ಟಿತೋ, ತಥಾ - ಹಾಗೆಯೇ, ಸಲಿಲರಾಜಸ್ಯ - ವರುಣನ, ಪಾಶಃ - ಪಾಶವು, ಪ್ರತಿಹತಃ - ಮುರಿಯಲ್ಪಟ್ಟಿತೋ, ಅಥ - ಬಳಿಕ, ಏಷಃ - ಈ, ಅತಿಕಾಯಃ - ಅತಿಕಾಯನು, ಬಲವಾನ್ - ಬಲವಂತನು, ರಾಕ್ಷಸಾನಾಂ - ರಕ್ಕಸರಲ್ಲಿ, ಋಷಭಃ - ಶ್ರೇಷ್ಠನು, ರಾವಣಸ್ಯ - ರಾವಣನ, ಸುತಃ - ಕುವರನು, ಧೀಮಾನ್ - ಬುದ್ಧಿವಂತನು, ದೇವ....ಹಾ - ದೇವರಾಕ್ಷಸರ ಗರ್ವಭಂಜಕನು, ಹೇ ಪುರುಷಪುಂಗವ - ಎಲೈ ಪುರುಷಶ್ರೇಷ್ಠನೇ, ತತ್ - ಆ ಕಾರಣ, ಅಸ್ಮಿನ್- ಈ ಅತಿಕಾಯನ ವಿಷಯವಾಗಿ, ಕ್ಷಿಪ್ರಂ-ಜಾಗ್ರತೆಯಾಗಿ, ಯತ್ನಃ-ಪ್ರಯತ್ನವು, ಕ್ರಿಯತಾಂ-ಮಾಡಲ್ಪಡಲಿ, ಪುರಾ - ಮೊದಲು, ವಾನರಸೈನ್ಯಾನಿ - ಕಪಿಸೈನ್ಯಗಳನ್ನು, ಸಾಯಕೈಃ - ಬಾಣಗಳಿಂದ, ಕ್ಷಯಂ- ನಾಶವನ್ನು, ನಯತಿ - ಹೊಂದಿಸುವನು, ತತಃ - ಬಳಿಕ, ಬಲವಾನ್-ಬಲಿಷ್ಠನಾದ, ಅತಿಕಾಯಃ - ಅತಿಕಾಯನು, ಹರಿವಾಹಿನೀಂ - ಕಪಿಸೈನ್ಯವನ್ನು, ಪ್ರವಿಶ್ಯ - ಹೊಕ್ಕು, ಧನುಃ - ಬಿಲ್ಲನ್ನು, ವಿಷ್ಫಾರಯಾಮಾಸ - ಟಂಕಾರ ಮಾಡಿದನು, ಪುನಃಪುನಃ - ಬಾರಿಬಾರಿಗೂ, ನನಾದಚ - ಸಿಂಹನಾದ ಮಾಡಿದನು. ॥ ೩೪-೩೭ ॥ ಭೀಮವಪುಷಂ - ಭಯಂಕರ ಶರೀರವುಳ್ಳ, ರಥಸ್ಥಂ - ರಥಾರೂಢನಾದ, ರಥಿನಾಂ - ರಥಿಕರಲ್ಲಿ, ವರಂ - ಶ್ರೇಷ್ಠನಾದ, ತಂ - ಆ ಅತಿಕಾಯನನ್ನು ಕುರಿತು, ಮಹಾತ್ಮಾನಃ -

---

ಅನೇಕ ಸಹಸ್ರಮಂದಿ ರಾಕ್ಷಸರನ್ನು ಕಾಪಾಡಿದನಲ್ಲದೆ, ಅನೇಕ ಸಹಸ್ರಮಂದಿ ಯಕ್ಷರನ್ನು ಸಂಹರಿಸಿರುವನು. ಮಹಾ ಬುದ್ಧಿಶಾಲಿಯಾದ ಮಹೇಂದ್ರನ ವಜ್ರಾಯುಧವನ್ನು ಈ ಅತಿಕಾಯನು ಅನೇಕಸಲ ಭಂಗಪಡಿಸಿರುವನು. ಈತನು ಅನೇಕಸಲ ವರುಣನ ನಾಗಪಾಶವನ್ನೂ ಮುರಿದಿಕ್ಕಿರುವನು. ಈತನು ರಾಕ್ಷಸರೆಲ್ಲರಲ್ಲಿಯೂ ಉತ್ತಮೋತ್ತಮನಾದವನು. ರಾವಣಪುತ್ರನಾದ ಈ ಅತಿಕಾಯನು ದಾನವರೆಲ್ಲರ ದರ್ಪವನ್ನೂ ದಮನ ಮಾಡುವವನು. ॥ ೩೧-೩೫ ॥ ಆದುದರಿಂದೆಲೈ ಪುರುಷೋತ್ತಮನಾದ ಶ್ರೀರಾಮಮೂರ್ತಿಯೇ! ಈತನೊಡನೆ ಯುದ್ಧಮಾಡಲು ದೃಢವಾದ ಪ್ರತಿಜ್ಞೆಯನ್ನು ಮಾಡಬೇಕು. ಈತನು ತನ್ನ ಬಾಣಗಳಿಂದ ವಾನರಸೇನೆಯನ್ನು ನಾಶಗೊಳಿಸುವುದರೊಳಗಾಗಿ ನೀನು ಇವನೊಡನೆ ಯುದ್ಧಮಾಡಿ ಇವನನ್ನು ಗೆಲ್ಲಬೇಕು?" ಎಂದು ಹೇಳಿದನು. ಮಹಾತ್ಮನಾದ ವಿಭೀಷಣ ನೀರೀತಿ ನುಡಿಯುತ್ತಿರಲು ಮಹಾ ಬಲಾಢ್ಯನಾದ ಆ ಅತಿಕಾಯನು ವಾನರಸೇನೆಯನ್ನು ಪ್ರವೇಶಿಸಿ ಧನುಷ್ಟಂಕಾರಪೂರ್ವಕವಾಗಿ ಸಿಂಹನಾದವನ್ನು ಮಾಡಿದನು. ಹೀಗೆ ಧನುಷ್ಟಂಕಾರ ಮತ್ತು ಸಿಂಹನಾದಗಳನ್ನು ಮಾಡುತ್ತಿರುವವನೂ ರಥಿಕಶ್ರೇಷ್ಠನೂ, ತೇರೇರಿರುವನೂ ಆದ ಆ ಅತಿಕಾಯನನ್ನು ನೋಡಿ, ಮಹಾನುಭಾವರೂ, ವಾನರೋತ್ತ

ವನೌಕಸಃ ॥ ೩೮ ॥ ಕುಮುದೋ ದ್ವಿವಿದೋ ಮೈಂದೋ ನೀಲಃ ಶರಭ ಏವಚ । ಪಾದಪೈರ್ಗಿರಿಶೃಂಗೈಶ್ಚ ಯುಗಪತ್ಸಮಭಿದ್ರವನ್ ॥ ೩೯ ॥ ತೇಷಾಂ ವೃಕ್ಷಾಂಶ್ಚ ಶೈಲಾಂಶ್ಚ ಶರೈಃ ಕಾಂಚನಭೂಷಣೈಃ । ಅತಿಕಾಯೋ ಮಹಾತೇಜಾಶ್ಚಿಚ್ಛೇದಾಸ್ತ್ರ ವಿದಾಂ ವರಃ ॥ ೪೦ ॥ ತಾಂಶ್ಚೈವ ಸರ್ವಾನ್ ಸಹರೀನ್ ಶರೈಸ್ಸರ್ವಾಯಸೈರ್ಬಲೀ । ವಿವ್ಯಾಧಾಭಿಮುಖಸ್ಸಂಖ್ಯೇ ಭೀಮಕಾಯೋ ನಿಶಾಚರಃ ॥ ೪೧ ॥ ತೇಽರ್ದಿತಾ ಬಾಣ ವರ್ಷೇಣ ಭಗ್ನಗಾತ್ರಾಃ ಪ್ಲವಂಗಮಾಃ । ನಶೇಕುರತಿಕಾಯಸ್ಯ ಪ್ರತಿಕರ್ತುಂ ಮಹಾ ರಣೇ ॥ ೪೨ ॥ ತತ್ಸೈನ್ಯಂ ಹರಿವೀರಾಣಾಂ ತ್ರಾಸಯಾಮಾಸ ರಾಕ್ಷಸಃ । ಮೃಗೆ

ಮಹಾ ಶರೀರಗಳುಳ್ಳ, ಪ್ರಧಾನಾಃ - ಮುಖ್ಯರಾದ, ವನೌಕಸಃ - ಕಪಿಗಳು, ಯೇ - ಯಾರೋ, ತೇ - ಅವರು, ಅಭಿಪೇತುಃ - ಎದುರು ಬಂದರು. ॥ ೩೮ ॥ ಕುಮುದಃ - ಕುಮುದನು, ದ್ವಿವಿದಃ - ದ್ವಿವಿದನು, ಮೈಂದಃ - ಮೈಂದನು, ನೀಲಃ - ನೀಲನು, ಶರಭಏವಚ - ಶರಭನೂ, ಏತೇ - ಈ ವಾನರರು, ಪಾದಪೈಃ - ಮರಗಳಿಂದಲೂ, ಗಿರಿಶೃಂಗೈಶ್ಚ - ಬೆಟ್ಟದ ಕೋಡುಗಳಿಂದಲೂ ಕೂಡಿ, ಯುಗಪತ್ - ಏಕಕಾಲದಲ್ಲಿ, ಸಮಭಿದ್ರವನ್ - ಓಡಿಬಂದರು. ॥ ೩೯ ॥ ಮಹಾತೇಜಾಃ - ಬಹಳ ಪ್ರತಾಪಶಾಲಿಯಾದ, ಅಸ್ತ್ರವಿದಾಂ - ಅಸ್ತ್ರವೇತೃಗಳಲ್ಲಿ, ವರಃ - ಶ್ರೇಷ್ಠನಾದ, ಅತಿಕಾಯಃ - ಅತಿಕಾಯನು, ಕಾಂಚ....ಣೈಃ - ಸ್ವರ್ಣಾಲಂಕೃತವಾದ, ಶರೈಃ - ಬಾಣಗಳಿಂದ, ತೇಷಾಂ - ಆ ಕಪಿಗಳ, ವೃಕ್ಷಾಂಶ್ಚ - ಗಿಡಗಳನ್ನೂ, ಶೈಲಾಂಶ್ಚ - ಬೆಟ್ಟಗಳನ್ನೂ, ಚಿಚ್ಛೇದ - ಕತ್ತರಿಸಿದನು. ॥೪೦॥ ಸಂಖ್ಯೇ - ಕಾಳೆಗದಲ್ಲಿ, ಭೀಮಕಾಯಃ - ಭಯಂಕರ ಶರೀರವುಳ್ಳ, ಬಲೀ - ಬಲವಂತನಾದ, ಸನಿಶಾಚರಃ - ಆ ರಕ್ಕಸನು, ಸರ್ವಾಯುಧೈಃ - ಸಮಸ್ತಾಯುಧಗಳುಳ್ಳ, ಶರೈಃ - ಬಾಣಗಳಿಂದ, ಸರ್ವಾನ್ - ಸಮಸ್ತರಾದ, ತಾನ್‌ಹರೀಂಶ್ಚೈವ - ಆ ವಾನರರನ್ನು, ಅಭಿಮುಖಃ - ಎದುರಾಗಿ ನಿಂತು, ವಿವ್ಯಾಧ-ಹೊಡೆದನು. ॥ ೪೧ ॥ ಬಾಣವರ್ಷೇಣ-ಬಾಣಗಳ ಮಳೆಯಿಂದ, ಭಗ್ನಗಾತ್ರಾಃ-ಮುರಿದು ಹೋದ ಶರೀರಗಳುಳ್ಳ, ತೇಪ್ಲವಂಗಮಾಃ - ಆ ಕಪಿಗಳು, ಮಹಾರಣೇ - ದೊಡ್ಡ ಕಾಳೆಗದಲ್ಲಿ, ಅತಿಕಾಯಸ್ಯ - ಅತಿಕಾಯನಿಗೆ, ಪ್ರತಿಕರ್ತುಂ - ಪ್ರತಿಕ್ರಿಯೆ ಮಾಡುವದಕ್ಕೆ, ನಶೇಕುಃ - ಸಮರ್ಥ ರಾಗದೇ ಹೋದರು. ॥ ೪೨ ॥ ಯೌವ....ತಃ - ಯೌವನದಿಂದ ಗರ್ವಿತವಾಗಿ, ಕ್ರುದ್ಧಃ - ಕೋಪ

ಮರೂ ಆದ ಕುಮುದ, ದ್ವಿವಿದ, ಮೈಂದ, ನೀಲ, ಶರಭ ಇವರೇ ಮೊದಲಾದ ಯೂಥಪತಿಗಳೆಲ್ಲರೂ ವೃಕ್ಷಗಳನ್ನೂ, ಪರ್ವತಶಿಖರಗಳನ್ನೂ ಆಯುಧಗಳನ್ನಾಗಿ ಧರಿಸಿ ಏಕಕಾಲದಲ್ಲಿಯೇ ಆ ಅತಿಕಾಯನನ್ನಮುರಿದರು. ಆ ಸಮಯದಲ್ಲಿ ಮಹಾಸ್ತ್ರವೇತ್ತರಾದವ ರಲ್ಲಿ ಉತ್ತಮೋತ್ತಮನಾದ ಆ ಅತಿಕಾಯನು ಸ್ವರ್ಣಾಲಂಕೃತವಾದ ಬಾಣಗಳಿಂದ ಆ ವಾನರರು ಪ್ರಯೋಗಿಸಿದ ವೃಕ್ಷಗಳನ್ನೂ ಪರ್ವತಶಿಖರಗಳನ್ನೂ ನಿರ್ಮೂಲಗೊಳಿಸಿದನು. ॥೩೭–೪೦॥ ಮಹಾ ಭಯಂಕರಶರೀರಿಯೂ, ಮಹಾ ಬಲಾಢ್ಯನೂ ಆದ ಆ ಅತಿಕಾಯನು ಈ ರೀತಿ ವಾನರವೀರರ ಆಯುಧಗಳೆಲ್ಲವನ್ನೂ ಧ್ವಂಸಮಾಡಿದುದೂ ಅಲ್ಲದೆ ಆ ವಾನರರನ್ನೂ ತನ್ನ ಕೂರಂಬುಗಳಿಂದ ಬಲವಾಗಿ ಮರ್ದಿಸಿದನು. ಈ ಪ್ರಕಾರ ಆ ಅತಿಕಾಯನ ಬಾಣ ವರ್ಷದಿಂದ ಭಗ್ನವಾದ ಅವಯವಗಳುಳ್ಳ ಆ ವಾನರರೆಲ್ಲರೂ ಅವನೊಡನೆ ಕಾಳೆಗಮಾಡ ಲಸಮರ್ಥರಾಗಿ ಹೋದರು. ಆ ತರುವಾಯ ರಾಕ್ಷಸಾಧಿಪತಿಯಾದ ಆ ಅತಿಕಾಯನು ವಾನರಸೇನೆಯೆಲ್ಲವನ್ನೂ,ಯೌವನದಿಂದ ಮದಿಸಿ ಕೆರಳಿದ ಸಿಂಹವು ಜಿಂಕೆಗಳ ಗುಂಪನ್ನೆಂತೋ

ಯೂಥಮಿವ ಕ್ರುದ್ಧೋ ಹರಿರ್ಯೌವನದರ್ಪಿತಃ ‖ ೪೩ ‖ ಸರಾಕ್ಷಸೇಂದ್ರೋ ಹರಿ
ಸೈನ್ಯಮಧ್ಯೇನಾಯುಧ್ಯಮಾನಂ ನಿಜಘಾನ ಕಂಚಿತ್ । ಉಪೇತ್ಯ ರಾಮಂ ಸಧನುಃ
ಕಲಾಪೀ ಸಗರ್ವಿತಂ ವಾಕ್ಯಮಿದಂ ಬಭಾಷೇ ‖೪೪‖ "ರಥೇ ಸ್ಥಿತೋಽಹಂ ಶರಚಾಪ
ಪಾಣಿರ್ನಪ್ರಾಕೃತಂ ಕಂಚನ ಯೋಧಯಾಮಿ । ಯಶ್ಚಾಸ್ತಿ ಕಶ್ಚಿದ್ವ್ಯವಸಾಯ
ಯುಕ್ತೋ ದದಾತು ಮೇ ಕ್ಷಿಪ್ರಮಿಹಾದ್ಯ ಯುದ್ಧಂ" ‖ ೪೫ ‖ ತತ್ತಸ್ಯ ವಾಕ್ಯಂ
ಬ್ರುವತೋ ನಿಶಮ್ಯ ಚುಕೋಪ ಸೌಮಿತ್ರಿರಮಿತ್ರಹಂತಾ । ಅಮೃಷ್ಯಮಾಣಶ್ಚ ಸಮುತ್ಪ

ಗೊಂಡ, ಹರಿಃ - ಸಿಂಹವು, ಮೃಗ....ವ - ಜಿಂಕೆಗಳ ತಂಡವನ್ನಂತೆ, ರಾಕ್ಷಸಃ - ಅತಿಕಾಯನು, ಹರಿವೀರಾಣಾಂ - ಶೂರರಾದ ವಾನರರ, ತತ್ಸೈನ್ಯಂ - ಆ ದಂಡನ್ನು, ತ್ರಾಸಯಾಮಾಸ - ಹೆದರಿಸಿದನು. ‖ ೪೩ ‖ ಸರಾಕ್ಷಸೇಂದ್ರಃ - ಆ ರಕ್ಕಸರೊಡೆಯನಾದ ಅತಿಕಾಯನು, ಕಲಾಪೀ - ಬತ್ತಳಿಕೆಗಳುಳ್ಳವನಾಗಿ, ಸಧನುಃ - ಧನುಸ್ಸಿನಿಂದೊಡಗೂಡಿ, ಹರಿಸೈನ್ಯಮಧ್ಯೇ - ಕಪಿಸೈನ್ಯ ಮಧ್ಯದಲ್ಲಿ, ಅಯುಧ್ಯಮಾನಂ - ಯುದ್ಧಮಾಡದಿರುವ, ಕಂಚಿತ್ - ಒಬ್ಬನನ್ನಾದರೂ, ನನಿಜಘಾನ - ಹೊಡೆಯಲಿಲ್ಲ, ರಾಮಂ - ಶ್ರೀರಾಮನನ್ನು, ಉಪೇತ್ಯ - ಹೊಂದಿ, ಸಗರ್ವಿತಂ - ಗರ್ವದಿಂದ, ಇದಂವಾಕ್ಯಂ - ಈ ಮಾತನ್ನು, ಬಭಾಷೇ - ಮಾತನಾಡಿದನು. ‖ ೪೪ ‖ ಶರ....ಣಿಃ - ಧನುರ್ಬಾಣಗಳೇ ಹಸ್ತದಲ್ಲುಳ್ಳವನಾಗಿ, ಅಹಂ - ನಾನು, ರಥೇಸ್ಥಿತಃ - ರಥದಲ್ಲಿದ್ದೇನೆ, ಪ್ರಾಕೃತಂ - ಸಾಧಾರಣನನ್ನು ಕುರಿತು, ನಯೋಧಯಾಮಿ - ಯುದ್ಧಮಾಡುವನಲ್ಲ, ವ್ಯವಸಾಯಯುಕ್ತಃ - ಯುದ್ಧಸನ್ನದ್ಧನಾದ, ಯಃಕಶ್ಚಿತ್ - ಯಾವನಾದರೂ, ಅಸ್ತಿ - ಇದ್ದರೆ, ಸಃ - ಅವನು, ಇಹ - ಈ ಪ್ರದೇಶದಲ್ಲಿ, ಕ್ಷಿಪ್ರಂ - ಜಾಗ್ರತೆಯಾಗಿ, ಅದ್ಯ - ಈಗಲೇ, ಮೇ - ನನಗೆ, ಯುದ್ಧಂ - ಕಾಳೆಗವನ್ನು, ದದಾತು - ಕೊಡಲಿ. ‖ ೪೫ ‖ ಅಮಿತ್ರಹಂತಾ - ಶತ್ರುಸಂಹಾರಕನಾದ, ಸೌಮಿತ್ರಿಃ - ಲಕ್ಷ್ಮಣನು, ಬ್ರುವತಃ - ಮಾತನಾಡುತ್ತಿರುವ, ತಸ್ಯ - ಆ ಅತಿಕಾಯನ, ತದ್ವಾಕ್ಯಂ - ಆ ಮಾತನ್ನು, ನಿಶಮ್ಯ - ಕೇಳಿ, ಅಮೃಷ್ಯಮಾಣಃ - ಸಹಿಸದೆ, ಚುಕೋಪ - ಕ್ರೋಧಾವಿಷ್ಟನಾದನು,

---

ಅಂತು ಭಯಗೊಳಿಸಿದನು. ಆಗ ವಾನರರೆಲ್ಲರೂ ರಣರಂಗದಲ್ಲಿ ನಿಲ್ಲಲಾರದೆ ಓಡಿಹೋದರು. ಆ ರಣರಂಗದಲ್ಲಿ ಯಾರೂ ಆ ಅತಿಕಾಯನೊಡನೆ ಯುದ್ಧಕ್ಕೆ ನಿಲ್ಲದೆ ಹೋದರು. ಆದರೂ ಆ ರಾಕ್ಷಸೋತ್ತಮನು ಯುದ್ಧಕ್ಕೆ ನಿಲ್ಲದ ಯಾವ ವಾನರನನ್ನೂ ಗಾಸಿಪಡಿಸಲಿಲ್ಲವು. ಆ ತರುವಾಯ ಅತಿಕಾಯನು ಧನುಸ್ಸಿನಿಂದಲೂ, ದಿವ್ಯಾಭರಣಗಳಿಂದಲೂ ಅಲಂಕೃತನಾಗಿ ಶ್ರೀರಾಮನಬಳಿಗೈದಿ ಆತನನ್ನು ಕುರಿತು, ಮಹಾ ಗರ್ವದಿಂದ "ಎಲೈ ರಾಮನೇ! ನಾನು ಅತಿಕಾಯನೆಂಬ ನಾಮಧೇಯವುಳ್ಳ ರಾಕ್ಷಸನು. ನಾನು ನಿನ್ನೊಡನೆ ಕಾಳೆಗ ಮಾಡಲು ಬಂದಿದ್ದೇನೆ. ನಾನು ಧನುರ್ಧಾರಿಯಾಗಿ ಸಾಮಾನ್ಯರಾದವರೊಡನೆ ಯುದ್ಧಮಾಡೆನು. ನಿನ್ನ ಬಳಿ ಮಹಾ ಸಮರ್ಥನಾದ ಯೋಧನಾವನಾದರೂ ಇದ್ದಲ್ಲಿ ನನ್ನೊಡನೆ ಯುದ್ಧಕ್ಕೆ ನಿಲ್ಲಲಿ. (ಹಾಗಿಲ್ಲದಿದ್ದರೆ ನೀನೇ ನನ್ನೊಡನೆ ಯುದ್ಧಕ್ಕೆ ಬರುವವನಾಗು)" ಎಂದು ಹೇಳಿದನು. ‖ ೪೧–೪೫ ‖ ಹೀಗೆ ಅತಿಕಾಯನು ಗರ್ವದಿಂದ ನುಡಿಯಲು ಅದನ್ನು ಕೇಳಿ ಶತ್ರುನಾಶಕನಾದ ಲಕ್ಷ್ಮಣಸ್ವಾಮಿಯು ಕೋಪದಿಂದ ಕೆರಳಿಹೋದನು. ಆ ತರುವಾಯ ಆ ಅತಿಕಾಯನ ಮಾತುಗಳನ್ನು ಸಹಿಸದೆ ಲಕ್ಷ್ಮಣನು ಧನುರ್ಧಾರಿಯಾಗಿ ಮಹಾ ವೇಗ

ಪಾತ ಜಗ್ರಾಹ ಚಾಪಂ ಚ ತತಃ ಸ್ಮಯಿತ್ವಾ ॥ ೪೬ ॥ ಕ್ರುದ್ಧಸ್ಸೌಮಿತ್ರಿರುತ್ಪತ್ಯ ತೂಣಾದಾಕ್ಷಿಪ್ಯ ಸಾಯಕಂ । ಪುರಸ್ತಾದತಿಕಾಯಸ್ಯ ವಿಚಕರ್ಷ ಮಹದ್ಧನುಃ॥೪೭॥ ಪೂರಯನ್ ಸ ಮಹೀಂ ಶೈಲಾನಾಕಾಶಂ ಸಾಗರಂ ದಿಶಃ। ಜ್ಯಾಶಬ್ದೋ ಲಕ್ಷ್ಮಣಸ್ಯೋಗ್ರಸ್ತ್ರಾಸಯನ್ ರಜನೀಚರಾನ್ ॥ ೪೮ ॥ ಸೌಮಿತ್ರೇಶ್ಚಾಪನಿರ್ಘೋಷಂ ಶ್ರುತ್ವಾ ಪ್ರತಿಭಯಂ ತದಾ । ವಿಸಿಸ್ಮಿಯೇ ಮಹಾತೇಜಾ ರಾಕ್ಷಸೇಂದ್ರಾತ್ಮಜೋ ಬಲೀ ॥ ೪೯ ॥ ಅಥಾತಿಕಾಯಃ ಕುಪಿತೋ ದೃಷ್ಟ್ವಾ ಲಕ್ಷ್ಮಣಮುತ್ಥಿತಂ । ಆದಾಯ ನಿಶಿತಂ ಬಾಣಮಿದಂ ವಚನಮಬ್ರವೀತ್ ॥ ೫೦ ॥ "ಬಾಲಸ್ತ್ವಮಸಿ ಸೌಮಿತ್ರೇ! ವಿಕ್ರಮೇಷ್ವವಿಚ

ಸಮುತ್ಪಾತ - ಹಾರಿದನು, ತತಃ - ಬಳಿಕ, ಸ್ಮಯಿತ್ವಾ - ಮುಗುಳುನಗೆ ನಕ್ಕು, ಚಾಪಂಚ - ಬಿಲ್ಲನ್ನು, ಜಗ್ರಾಹ ಗ್ರಹಿಸಿದನು. ॥ ೪೬ ॥ ಕ್ರುದ್ಧಃ-ಕೋಪಿಷ್ಠನಾದ, ಸೌಮಿತ್ರಿಃ-ಲಕ್ಷ್ಮಣನು, ಉತ್ಪ್ಲುತ್ಯ-ಹಾರಿ, ತೂಣಾತ್ - ಬತ್ತಳಿಕೆಯಿಂದ, ಸಾಯಕಂ - ಬಾಣವನ್ನು, ಆಕ್ಷಿಪ್ಯ - ಸೆಳೆದು, ಅತಿಕಾಯಸ್ಯ-ಅತಿಕಾಯನ, ಪುರಸ್ತಾತ್ - ಮುಂದುಗಡೆ, ಮಹತ್ - ದೊಡ್ಡದಾದ, ಧನುಃ - ಧನುಸ್ಸನ್ನು, ವಿಚಕರ್ಷ - ಸೆಳೆದನು. ॥ ೪೭ ॥ ಲಕ್ಷ್ಮಣಶ್ಚ - ಲಕ್ಷ್ಮಣನ, ಉಗ್ರಃ - ಭಯಂಕರವಾದ, ಸಃಜ್ಯಾಶಬ್ದಃ - ಆ ಹೆದೆಯಧ್ವನಿಯು, ಮಹೀಂ - ಭೂಮಿಯನ್ನೂ, ಶೈಲಾನ್ - ಬೆಟ್ಟಗಳನ್ನೂ, ಆಕಾಶಂಚ - ಅಂತರಿಕ್ಷವನ್ನೂ, ಸಾಗರಂಚ - ಕಡಲನ್ನೂ, ದಿಶಶ್ಚ - ದಿಕ್ಕುಗಳನ್ನೂ, ಪೂರಯನ್ - ತುಂಬಿಸಿ, ರಜನೀಚರಾನ್ - ರಕ್ಕಸರನ್ನು, ತ್ರಾಸಯನ್ - ಹೆದರಿಸುತ್ತಿರುವದಾಗಿ, ಅಭೂತ್ - ಆಯಿತು, ಸೌಮಿತ್ರೇಃ-ಲಕ್ಷ್ಮಣನ, ಪ್ರತಿಭಯಂ - ಭಯಂಕರವಾದ, ಚಾಪನಿರ್ಘೋಷಂ - ಧನುಷ್ಟಂಕಾರವನ್ನು, ಶ್ರುತ್ವಾ-ಕೇಳಿ, ತದಾ - ಆ ಕಾಲದಲ್ಲಿ, ಮಹಾತೇಜಾಃ - ಮಹಾ ಪರಾಕ್ರಮಿಯಾದ, ರಾಕ್ಷ....ಜಃ - ರಾವಣನ ಮಗನಾದ, ಬಲೀ - ಬಲಿಷ್ಠನಾದ ಅತಿಕಾಯನು, ವಿಸಿಸ್ಮಯೇ - ಆಶ್ಚರ್ಯಗೊಂಡನು. ॥ ೪೮-೪೯ ॥ ಅಥ - ಬಳಿಕ, ಅತಿಕಾಯಃ - ಅತಿಕಾಯನು, ಕುಪಿತಃ - ಕೋಪಿಷ್ಠನಾಗಿ, ಉತ್ಥಿತಂ - ಬಂದಿರುವ, ಲಕ್ಷ್ಮಣಂ - ಲಕ್ಷ್ಮಣನನ್ನು, ದೃಷ್ಟ್ವಾ - ಕಂಡು, ನಿಶಿತಂ - ತೀಕ್ಷ್ಣವಾದ, ಬಾಣಂ - ಬಾಣವನ್ನು, ಆದಾಯ - ತೆಗೆದುಕೊಂಡು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೫೦॥ ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ತ್ವಂ - ನೀನು, ಬಾಲಃ - ಹುಡುಗನಾದಕಾರಣ, ವಿಕ್ರಮೇಷು - ಪರಾಕ್ರಮಗಳಲ್ಲಿ, ಅವಿಚಕ್ಷಣಃ - ತಿಳಿವಳಿಕೆ ಇಲ್ಲದವನು, ಅಸಿ - ಆಗಿದ್ದೀಯೆ, ಕಾಲಸದೃಶಂ-ಯಮನಿಗೆ ಸಮಾನನಾದ, ಮಾಂ-ನನ್ನನ್ನು ಕುರಿತು, ಯೋಧಯಿತುಂ-ಯುದ್ಧ ಮಾಡುವು

ದಿಂದ ಮುಂದೆ ಬಂದನು. ಈ ರೀತಿ ರಾಮಾನುಜನಾದ ಲಕ್ಷ್ಮಣಸ್ವಾಮಿಯು ಕುಪಿತನಾಗಿ ತನ್ನ ಬತ್ತಳಿಕೆಯಿಂದ ಬಾಣವೊಂದನ್ನು ಈಚೆಗೆ ಸೆಳೆದುಕೊಂಡು ಭೂಮಿ, ಭೂಧರ, ಸಾಗರ ಮತ್ತು ದಿಶೆಗಳು ಎಲ್ಲವೂ ತುಂಬಿಹೋಗುವಂತೆ ಮಹತ್ತರವಾದ ಧನುಷ್ಟಂಕಾರವನ್ನೂ ಮಾಡಿದನು. ಆಗ ರಾವಣಾಸುರನ ಕುಮಾರನೂ, ಮಹಾ ಬಲಾಢ್ಯನೂ ಆದ ಆ ಅತಿಕಾಯನು ಲಕ್ಷ್ಮಣನ ಭಯಂಕರ ಧನುಷ್ಟಂಕಾರವನ್ನು ಕೇಳಿ ಪರಮಾಶ್ಚರ್ಯ ಭರಿತನಾದನು. ॥ ೪೬–೪೯ ॥ ಆಗಲಾ ರಾಕ್ಷಸನು ಬಹಳವಾಗಿ ಕೋಪಗೊಂಡು ತನ ಗೆದುರಾದ ಆ ಲಕ್ಷ್ಮಣನನ್ನು ನೋಡಿ ಮಹಾ ತೀಕ್ಷ್ಣಗಳಾದ ಬಾಣಗಳನ್ನು ಬಿಲ್ಲಿನಲ್ಲಿ ಸಂಧಿಸಿ ಅವನನ್ನು ಕುರಿತು, "ಎಲಾ ಸುಮಿತ್ರಾನಂದನನೇ ಲಕ್ಷ್ಮಣಾ, ಪಾಪ! ಪಾಪ! ನೀನಿನ್ನೂ ಕೇವಲ ಬಾಲಕನು. ಪರಾಕ್ರಮದಲ್ಲಿ ಕೌಶಲವಿಲ್ಲದವನು. ಸುಮ್ಮನೆ ಪ್ರಾಣ

ಕ್ಷಣಃ । ಗಚ್ಛ ಕಿಂ ಕಾಲಸದೃಶಂ ಮಾಂ ಯೋಧಯಿತುಮಿಚ್ಛಸಿ॥೫೧॥ನಹಿ ಮದ್ಬಾಹು ಸೃಷ್ಟಾನಾಮಸ್ತ್ರಾಣಾಂ ಹಿಮವಾನಪಿ । ಸೋಢುಮುತ್ಸಹತೇ ವೇಗಮಂತರಿಕ್ಷಮಥೋ ಮಹೀ ॥೫೨॥ ಸುಖಪ್ರಸುಪ್ತಂ ಕಾಲಾಗ್ನಿಂ ನಿಬೋಧಯಿತುಮಿಚ್ಛಸಿ । ನ್ಯಸ್ಯ ಚಾಪಂ ನಿವರ್ತಸ್ವ ಮಾ ಪ್ರಾಣಾನ್ ಜಹಿ ಮದ್ಗತಃ ॥ ೫೩ ॥ ಅಥವಾ ತ್ವಂ ಪ್ರತಿಷ್ಟಬ್ಧೋ ನ ನಿವರ್ತಿತುಮಿಚ್ಛಸಿ । ತಿಷ್ಠ ಪ್ರಾಣಾನ್ ಪರಿತ್ಯಜ್ಯ ಗಮಿಷ್ಯಸಿ ಯಮಕ್ಷಯಂ ॥೫೪॥ ಪಶ್ಯ ಮೇ ನಿಶಿತಾನ್ ಬಾಣಾನರಿದರ್ಪನಿಷೂದನಾನ್ । ಈಶ್ವರಾಯುಧ ಸಂಕಾಶಾಂಸ್ತಪ್ತ ಕಾಂಚನ ಭೂಷಣಾನ್॥೫೫॥ಏಷ ತೇ ಸರ್ಪಸಂಕಾಶೋ ಬಾಣಃ ಪಾಸ್ಯತಿ ಶೋಣಿತಂ।

ದಕ್ಕೆ, ಕಿಮಿಚ್ಛಸಿ - ಏಕೆ ಅಪೇಕ್ಷಿಸುವೆ, ಗಚ್ಛ - ಹೋಗು. ॥ ೫೧ ॥ ಹಿ - ಯಾವ ಕಾರಣದಿಂದ, ಮದ್ಬಾ....ನಾಂ - ನನ್ನ ಭುಜದಿಂದ ಬಿಡಲ್ಪಟ್ಟ, ಅಸ್ತ್ರಾಣಾಂ - ಅಸ್ತ್ರಗಳ, ವೇಗಂ - ವೇಗವನ್ನು, ಹಿಮವಾನಪಿ - ಹಿಮವತ್ಪರ್ವತವೂ, ಸೋಢುಂ - ಸಹಿಸುವದಕ್ಕೆ, ನೋತ್ಸಹತೇ - ಉದ್ಯುಕ್ತವಾಗ ಲಾರದೋ, ಅಂತರಿಕ್ಷಂ - ಅಂತರಿಕ್ಷವು, ನ - ಸಮರ್ಥವಾಗಲಾರದೋ, ಅಥ - ಬಳಿಕ, ಮಹೀ - ಭೂಮಿಯೂ, ನೋತ್ಸಹತೇ - ಉದ್ಯುಕ್ತವಾಗಲಾರದೋ, ಸುಖಸುಪ್ತಂ - ಸುಖವಾಗಿ ಮಲಗಿರುವ, ಕಾಲಾಗ್ನಿಂ - ಪ್ರಳಯಾಗ್ನಿಯನ್ನು, ನಿಬೋಧಯಿತುಂ - ಎಬ್ಬಿಸಿ ಪ್ರಜ್ವಲಿಸುವುದಕ್ಕಾಗಿ, ಇಚ್ಛಸಿ - ಅಪೇಕ್ಷಿಸುವೆ, ಚಾಪಂ - ಧನುಸ್ಸನ್ನು, ನ್ಯಸ್ಯ - ಇಟ್ಟು, ನಿವರ್ತಸ್ವ - ಹೊರಟುಹೋಗು, ಮದ್ಗತಃ- ನನ್ನನ್ನು ಹೊಂದಿ, ಪ್ರಾಣಾನ್ - ಪ್ರಾಣಗಳನ್ನು, ಮಾಜಹಿ ಬಿಡಬೇಡ. ॥ ೫೨-೫೩ ॥ ಅಥವಾ - ಹಾಗಲ್ಲದಿದ್ದರೆ, ತ್ವಂ - ನೀನು, ಪ್ರತಿಷ್ಟಬ್ಧಃ - ಪ್ರತಿಭಟನಾಗಿಯೂ, ನಿವರ್ತಿತುಂ - ಓಡಿಹೋಗುವು ದಕ್ಕಾಗಿ, ನೇಚ್ಛಸಿ - ಇಚ್ಛಿಸಬೇಡ, ಪ್ರಾಣಾನ್ - ಪ್ರಾಣಗಳನ್ನು, ಪರಿತ್ಯಜ್ಯ - ಬಿಟ್ಟು, ಯಮಕ್ಷಯಂ- ಯಮನ ಮನೆಯನ್ನು ಕುರಿತು, ಗಮಿಷ್ಯಸಿ-ಹೋಗುವೆಯಂತೆ, ತಿಷ್ಠ-ನಿಲ್ಲು. ॥೫೪॥ ಮೇ-ನನ್ನ, ಅರಿ....ನಾನ್ - ಶತ್ರುಗಳ ಗರ್ವವನ್ನು ಮುರಿಯುವ, ಈಶ್ವ....ಣಾನ್ - ಪರಮೇಶ್ವರನ ಆಯುಧಕ್ಕೆ ಸಮಾನಗಳಾದ, ತಪ್ತ....ಣಾನ್ - ಅಪರಂಜಿಯ ರೇಖೆಗಳಿಂದಲಂಕೃತವಾದ, ನಿಶಿತಾನ್ - ತೀಕ್ಷ್ಣ ಗಳಾದ, ಬಾಣಾನ್ - ಬಾಣಗಳನ್ನು, ಪಶ್ಯ - ನೋಡು. ॥೫೫॥ ಸರ್ಪಸಂಕಾಶಃ - ಸರ್ಪಕ್ಕೆ ಸಮಾನ ವಾದ, ಏಷಬಾಣಃ - ಈ ಬಾಣವು, ತೇ - ನಿನ್ನ, ಶೋಣಿತಂ - ರಕ್ತವನ್ನು, ಕ್ರುದ್ಧಃ - ಕುಪಿತ

ಗಳನ್ನೇಕೆ ತೊರೆಯುವೆ. ಹೊರಟುಹೋಗು. ಯಮನಿಗೆ ಸಮಾನನಾದ ನನ್ನೊಡನೆ ಯುದ್ಧಮಾಡಲು ನೀನು ಅರ್ಹನಲ್ಲವು. ನನ್ನ ಬಾಹುಬಲದಿಂದ ಮುಕ್ತವಾದ ಬಾಣಗಳ ಬೇಗೆ ಯನ್ನು ಹಿಮವಂತನೂ ಸಹಿಸಲಾರನು. ಅಷ್ಟೇಕೆ? ಭೂಮ್ಯಾಕಾಶಗಳೂ ಸಹಿಸಲಾರವು. ಇಂತಿರುವಲ್ಲಿ ನೀನು ಸಹಿಸಬಲ್ಲೆಯಾ? ಪಾಪ, ಪಾಪ! ನೀನು ಕೇವಲ ಬಾಲ್ಯಚಾಪಲ್ಯ ದಿಂದ ಸುಖವಾಗಿ ನಿದ್ರಿಸುತ್ತಿರುವ ಕಾಲಾಗ್ನಿಯನ್ನು ಕೆರಳಿಸುತ್ತಿರುವೆ. ಧನುಸ್ಸನ್ನು ಕೆಳ ಗಿಟ್ಟು ಹೊರಟುಹೋಗು. ನನ್ನೊಡನೆ ಯುದ್ಧಮಾಡಿ ಪ್ರಾಣಗಳನ್ನು ತೊರೆಯಬೇಡ. ನನ್ನ ಮಾತುಗಳನ್ನು ಕೇಳದೆ ಯುದ್ಧಕ್ಕೇ ಪ್ರಯತ್ನಿಸುವುದಾದರೆ ನಿಲ್ಲು. ಪ್ರಾಣಗಳನ್ನು ತೊರೆದು ಯಮನಾಲಯವನ್ನು ಸೇರುವೆಯಂತೆ. ಲಕ್ಷ್ಮಣಾ! ಶತ್ರುಗಳ ಮದವನ್ನಡಗಿಸುವ ಈ ಕೂರಂಬುಗಳನ್ನು ನೋಡು. ॥ ೫೦–೫೪ ॥ ಕಾಂಚನಭೂಷಣಗಳಾದ ಈ ಮಹಾಸ್ತ್ರ ಗಳೆಲ್ಲ ಮಹೇಶ್ವರನ ಮಹಾಸ್ತ್ರಗಳಿಗೆ ಸಮಾನವಾದುವು. ಇದೋ, ಈ ಬಾಣವು ನಾಗ(ಆನೆ) ರಾಜನ ಶೋಣಿತವನ್ನು ಮೃಗರಾಜನೆಂತೋ ಅಂತು ನಿನ್ನ ರಕ್ತವನ್ನು ಪಾನಮಾಡುತ್ತದೆ»

ಮೃಗರಾಜಇವ ಕ್ರುದ್ಧೋ ನಾಗರಾಜಸ್ಯ ಶೋಣಿತಂ" ॥ ೫೭ ॥ ಇತ್ಯೇವ ಮುಕ್ತ್ವಾ ಸಂಕ್ರುದ್ಧಃ ಶರಂ ಧನುಷಿ ಸಂದಧೇ । ಶ್ರುತ್ವಾಽತಿಕಾಯಸ್ಯ ವಚಸ್ಸರೋಷಂ ಸಗರ್ವಿತಂ ಸಂಯತಿ ರಾಜಪುತ್ರಃ ॥ ೫೭ ॥ ಸ ಸಂಚುಕೋಪಾಽತಿಬಲೋ ಬೃಹಚ್ಛ್ರೀರುವಾಚ ವಾಕ್ಯಂ ಚ ತತೋ ಮಹಾರ್ಥಂ । "ನ ವಾಕ್ಯಮಾತ್ರೇಣ ಭವಾನ್ ಪ್ರಧಾನೋ ನಕತ್ಥನಾತ್ಸತ್ಪುರುಷಾ ಭವಂತಿ ॥೫೮॥ ಮಯಿಸ್ಥಿತೇ ಧನ್ವಿನಿ ಬಾಣಪಾಣೌ ನಿದರ್ಶಯಸ್ವಾಽತ್ಮಬಲಂ ದುರಾತ್ಮನ್ ! । ಕರ್ಮಣಾ ಸೂಚಯಾತ್ಮಾನಂ ನವಿಕತ್ಥಿತುಮರ್ಹಸಿ

ನಾದ, ಮೃಗರಾಜಃ - ಸಿಂಹವು, ನಾಗರಾಜಸ್ಯ - ದೊಡ್ಡಾನೆಯ, ಶೋಣಿತಮಿವ - ರಕ್ತವನ್ನಂತೋ ಅಂತು, ಪಾಸ್ಯತಿ - ಪಾನಮಾಡುತ್ತದೆ, ಇತ್ಯೇವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಕ್ರುದ್ಧಃ - ಕೋಪಿಷ್ಠನಾಗಿ, ಶರಂ - ಬಾಣವನ್ನು, ಧನುಷಿ - ಧನುಸ್ಸಿನಲ್ಲಿ, ಸಂದಧೇ - ಸಂಧಾನ ಮಾಡಿದನು. ॥ ೫೭ ॥ ರಾಜಪುತ್ರಃ - ರಾಜನ ಮಗನಾದ, ಅತಿಬಲಃ - ಬಹಳ ಬಲಶಾಲಿಯಾದ, ಬೃಹಚ್ಛ್ರೀಃ - ವೀರ್ಯೈಶ್ವರ್ಯವಂತನಾದ, ಸಃ - ಆ ಲಕ್ಷ್ಮಣನು, ಸಂಯುಗೇ - ಕಾಳಗದಲ್ಲಿ, ಅತಿಕಾಯಸ್ಯ - ಅತಿಕಾಯನ, ಸಗರ್ವಿತಂ - ಗರ್ವದಿಂದೊಡಗೂಡಿದ, ಸರೋಷಂ - ಕ್ರೋಧದಿಂದೊಡಗೂಡಿದ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಸಂಚುಕೋಪ - ಬಹಳವಾಗಿ ಕೋಪಗೊಂಡು, ತತಃ - ಬಳಿಕ, ಮಹಾರ್ಥಂ - ಅರ್ಥದಿಂದ ಗಂಭೀರವಾದ, ವಾಕ್ಯಂಚ - ವಚನವನ್ನು, ಉವಾಚ - ಹೇಳಿದನು. ॥ ೫೭ ॥ ಭವಾನ್ - ನೀನು, ವಾಕ್ಯಮಾತ್ರೇಣ - ವಚನಮಾತ್ರದಿಂದ, ಪ್ರಧಾನಃ - ಬುದ್ಧಿವಂತನು, ನ - ಅಲ್ಲ, ಕತ್ಥನಾತ್ - ಆತ್ಮಶ್ಲಾಘನೆಯಿಂದ, ಸತ್ಪುರುಷಃ - ಸತ್ಪುರುಷರು, ನಭವಂತಿ- ಆಗಲಾರರು. ಹೇ ದುರಾತ್ಮನ್ - ಎಲೈ ದುರಾತ್ಮನೇ, ಧನ್ವಿನಿ - ಧನುರ್ಧಾರಿಯಾದ, ಬಾಣಪಾಣೌ - ಬಾಣವೇ ಕೈಯಲ್ಲಿ ಉಳ್ಳವನಾಗಿ, ಸ್ಥಿತೇ - ಇರುವ, ಮಯಿ - ನನ್ನಲ್ಲಿ, ಆತ್ಮಬಲಂ - ನಿನ್ನ ತ್ರಾಣವನ್ನು, ದರ್ಶಯಸ್ವ - ತೋರಿಸು. ॥ ೫೮ ॥ ಕರ್ಮಣಾ - ಕೃತ್ಯದಿಂದ, ಆತ್ಮಾನಂ - ನಿನ್ನನ್ನು, ಸೂಚಯ - ತೋರಿಸಿಕೊ, ವಿಕತ್ಥಿತುಂ-ಶ್ಲಾಘನೆಮಾಡಿಕೊಳ್ಳುವದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ, ಯಃ - ಯಾವನು, ಪೌರುಷೇಣ - ಪರಾಕ್ರಮದಿಂದ, ಯುಕ್ತಃ - ಕೂಡಿದವನೋ, ಸತು - ಅವನಾದರೆ, ಶೂರಇತಿ - ಶೂರನೆಂದು, ಸ್ಮೃತಃ - ಹೇಳಲ್ಪಡುತ್ತಾನೆ. ॥ ೫೯ ॥ ಸರ್ವಾ....ಕ್ತಃ - ಸಮಸ್ತಾಯುಧಗಳಿಂದ ಕೂಡಿರುವ, ಧನ್ವೀ - ಧನುರ್ಧಾರಿಯಾದ, ತ್ವಂ - ನೀನು, ರಥಂ - ತೇರನ್ನು,

---

ಎಂದು ಹೇಳಿದನು. ಆ ಅತಿಕಾಯನು ಹೀಗೆ ನುಡಿದು ಕೋಪದಿಂದ ಕೆರಳಿ ಧನುಸ್ಸಿನಲ್ಲಿ ಬಾಣವನ್ನು ಸಂಧಿಸಿದನು. ಮಹಾ ತೇಜಸ್ವಿಯೂ, ಮಹಾ ಬಲಾಢ್ಯನೂ ರಾಜಪುತ್ರನೂ ಆದ ಲಕ್ಷ್ಮಣಸ್ವಾಮಿಯು ಆ ರಾಕ್ಷಸನ ಕೆಚ್ಚಿನ ನುಡಿಗಳನ್ನು ಕೇಳಿ ಕೋಪಾವಿಷ್ಟನಾಗಿ ಮಹಾರ್ಥಗರ್ಭಿತವಾದ ಮಾತುಗಳನ್ನಾಡುವವನಾಗಿ, "ಎಲಾ ದುರಾತ್ಮನೇ! ನಿನ್ನಂತೆ ಮಾತಿನ ಮಲ್ಲರಾದವರೆಂದಿಗಾದರೂ ಸತ್ಪುರುಷರಾಗುವರೇ—ಇಲ್ಲ. ಧನುರ್ಬಾಣಗಳನ್ನು ಹಿಡಿದು ನಾನು ಯುದ್ಧಸನ್ನದ್ಧನಾಗಿ ನಿಂತಿದ್ದೇನೆ. ಈಗ ನೀನು ನಿನ್ನ ಪೌರುಷಪರಾಕ್ರಮಗಳನ್ನು ನನ್ನಲ್ಲಿ ತೋರಿಸು. ಸುಮ್ಮನೆ ಕೂಗಾಡಬೇಡ. ಕೆಲಸದಲ್ಲಿ ನಿನ್ನ ಪರಾಕ್ರಮವನ್ನು ತೋರಿಸು. ಯಾವನು ಪೌರುಷದಿಂದ ಕೂಡಿ ಪರಾಕ್ರಮಿಸುವನೋ ಅವನೇ ಶೂರನೆನಿಸುತ್ತಾನೆಯಲ್ಲವೆ? ರಾಕ್ಷಸ! ನೀನು ಸರ್ವಾಯುಧಸಂಪನ್ನನಾಗಿರುವೆ. ಶ್ರೇಷ್ಠವಾದ ರಥವನ್ನೇರಿರುವೆ. ಬಾಣಗಳಿಂದಾಗಲಿ, ಅಸ್ತ್ರಗಳಿಂದಾಗಲಿ ನಿನ್ನ ಪರಾಕ್ರಮವನ್ನು ತೋರಿಸು

॥ ೫೯ ॥ ಪೌರುಷೇಣತು ಯೋ ಯುಕ್ತಸ್ಸತು ಶೂರಇತಿ ಸ್ಮೃತಃ । ಸರ್ವಾಯುಧ ಸಮಾಯುಕ್ತೋ ಧನ್ವೀ ತ್ವಂ ರಥಮಾಸ್ಥಿತಃ ॥ ೬೦ ॥ ಶರೈರ್ವಾ ಯದಿ ವಾಪ್ಯಸ್ತ್ರೈ ರ್ದರ್ಶಯಸ್ವ ಪರಾಕ್ರಮಂ । ತತಃ ಶಿರಸ್ತೇ ನಿಶಿತೈಃ ಪಾತಯಿಷ್ಯಾಮ್ಯಹಂ ಶರೈಃ ॥೬೧॥ ಮಾರುತಃ ಕಾಲಸಂಪಕ್ವಂ ವೃಂತಾತ್ತಾಳಫಲಂ ಯಥಾ । ಅದ್ಯ ತೇ ಮಾಮಕಾ ಬಾಣಾಸ್ತಪ್ತಕಾಂಚನಭೂಷಣಾಃ ॥ ೬೨ ॥ ಪಾಸ್ಯಂತಿ ರುಧಿರಂ ಗಾತ್ರಾದ್ಬಾಣಶಲ್ಯಾಂತರೋತ್ಥಿತಂ । ಬಾಲೋಽಯಮಿತಿ ವಿಜ್ಞಾಯ ನ ಮಾಽವಜ್ಞಾತುಮರ್ಹಸಿ ॥೬೩॥ ಬಾಲೋ ವಾ ಯದಿ ವಾ ವೃದ್ಧೋ ಮೃತ್ಯುಂ ಜಾನೀಹಿ ಸಂಯುಗೇ । ಬಾಲೇನ ವಿಷ್ಣುನಾ ಲೋಕಾಸ್ತ್ರಯಃ ಕ್ರಾಂತಾಸ್ತ್ರಿಭಿಃ ಕ್ರಮೈಃ" ॥ ೬೪ ॥ ಲಕ್ಷ್ಮಣಸ್ಯ ವಚಃ

ಆಸ್ಥಿತಃ - ಕುಳಿತು, ಶರೈರ್ವಾ - ಬಾಣಗಳಿಂದಲೇ ಆಗಲಿ, ಯದಿವಾ - ಹಾಗಲ್ಲದಿದ್ದರೆ, ಅಸ್ತ್ರೈರಪಿ - ಅಸ್ತ್ರಗಳಿಂದಲಾದರೂ, ಪರಾಕ್ರಮಂ - ಶೌರ್ಯವನ್ನು, ದರ್ಶಯಸ್ವ - ತೋರಿಸು. ॥ ೬೦ ॥ ತತಃ - ಬಳಿಕ, ಅಹಂ - ನಾನು, ನಿಶಿತೈಃ - ಹದವಾದ, ಶರೈಃ - ಬಾಣಗಳಿಂದ, ಮಾರುತಃ - ಗಾಳಿಯು, ವೃಂತಾತ್ - ತೊಟ್ಟಿನಿಂದ, ಕಾಲಸಂಪಕ್ವ - ಪರಿಣಾಮ ಕಾಲದಿಂದ ಪಕ್ವವಾದ, ತಾಳಫಲಂಯಥಾ - ತಾಳೆಯ ಹಣ್ಣಿನಂತೆ, ತೇ - ನಿನ್ನ, ಶಿರಃ - ಶಿರಸ್ಸನ್ನು, ಪಾತಯಿಷ್ಯಾಮಿ - ಕೆಡಹುವೆನು. ॥ ೬೧ ॥ ಅದ್ಯ - ಈಗ, ತಪ್ತ....ಣಾಃ - ಪುಟಪಾಕಶೋಧಿತವಾದ ಚಿನ್ನದ ಒಡವೆಗಳುಳ್ಳ, ಮಾಮಕಾಃ - ನನ್ನ ಸಂಬಂಧಿಗಳಾದ, ಬಾಣಾಃ - ಬಾಣಗಳು, ತೇ - ನಿನ್ನ, ಗಾತ್ರಾತ್ - ಶರೀರದಿಂದ, ಬಾಣ....ತಂ - ಬಾಣಗಳ ಕೊಂಕಿಗಳಿಂದ ಮಾಡಲ್ಪಟ್ಟ ರಂಧ್ರಗಳಿಂದ ಹುಟ್ಟಿದ, ರುಧಿರಂ - ರಕ್ತವನ್ನು, ಪಾಸ್ಯಂತಿ - ಪಾನಮಾಡುತ್ತವೆ. ॥ ೬೨ ॥ ಅಯಂ - ಇವನು, ಬಾಲಇತಿ - ಹುಡುಗನೆಂದು, ವಿಜ್ಞಾಯ - ತಿಳಿದು, ಮಾಂ - ನನ್ನನ್ನು, ಅವಜ್ಞಾತುಂ - ತಿರಸ್ಕರಿಸುವದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ, ಬಾಲೋವಾ - ಹುಡುಗನೇ ಆಗಲೀ, ಯದಿವಾ - ಅಥವಾ, ವೃದ್ಧೋವಾ - ಮುದುಕನೇ ಆಗಲೀ, ಸಂಯುಗೇ - ಕಾಳೆಗದಲ್ಲಿ, ಮೃತ್ಯುಂ - ಯಮನನ್ನಾಗಿ, ಜಾನೀಹಿ - ತಿಳಿದುಕೋ, ಬಾಲೇನ - ಹುಡುಗನಾದ, ವಿಷ್ಣುನಾ - ಶ್ರೀಮಹಾವಿಷ್ಣುವಿನಿಂದ, ತ್ರಯೋಲೋಕಾಃ - ಮೂರು ಲೋಕಗಳೂ, ತ್ರಿಭಿಃಕ್ರಮೈಃ - ಮೂರೇ ಹೆಜ್ಜೆಗಳಿಂದ, ಕ್ರಾಂತಾಃ - ಆಕ್ರಮಿಸಲ್ಪಟ್ಟವು. ॥ ೬೩-೬೪ ॥ ಲಕ್ಷ್ಮಣಸ್ಯ - ಲಕ್ಷ್ಮಣನ, ಹೇತುಮತ್ - ಹೇತುಗರ್ಭಿತವಾದ, ಪರಮಾರ್ಥವತ್ -

---

ವುದನ್ನು ಬಿಟ್ಟು ಹೀಗೇಕೆ ಸುಮ್ಮನೆ ಕೂಗಿಡುವೆ. ॥ ೫೫-೬೦ ॥ ನೀನು ಆ ನಿನ್ನ ಪರಾಕ್ರಮ ಪ್ರದರ್ಶನವನ್ನು ಮಾಡಿದಮೇಲೆ ನಾನು ಈ ನನ್ನ ಬಾಣಗಳಿಂದ, ಮಾರುತನು ಕಾಲಾನುಗುಣವಾಗಿ ಕಳಿತಿರುವ ತಾಳೆಯ ಹಣ್ಣನ್ನು ತೊಟ್ಟಿನಿಂದಲೇ ಕೆಡಹುವಂತೆ ನಿನ್ನ ತಲೆಯನ್ನು ನೆಲಕ್ಕುರುಳಿಸುತ್ತೇನೆ. ಎಲೆವೊ ರಾಕ್ಷಸಾಧಮನೇ! ಈ ನನ್ನ ಬಾಣಗಳು ಪುಟಪಾಕಶೋಧಿತವಾದ ಬಂಗಾರದಿಂದ ಶೋಭಿಸುತ್ತಿರುವುವು. ಇವು ಈಗಲೇ ಮದ್ಬಾಹುವಿಮುಕ್ತಗಳಾಗಿ ನಿನ್ನ ಶರೀರದಿಂದ ಮೇಲಕ್ಕೆ ಚಿಮ್ಮುವ ರಕ್ತವನ್ನು ಪಾನಮಾಡುತ್ತವೆ. "ಇವನು ಕೇವಲ ಬಾಲಕನು ಇವನೊಡನೆ ನನಗೇನು" ಎಂದು ನನ್ನನ್ನು ತಿರಸ್ಕರಿಸಬೇಡ. ಬಾಲನೋ, ವೃದ್ಧನೋ ಯಾರಾದರೆ ನಿನಗೇನು? ಅಂತೂ ನಾನು ನಿನ್ನ ಪಾಲಿನ ಮೃತ್ಯುವೆಂದೇ ತಿಳಿ. ಎಲೆವೊ ಅವಿವೇಕಿ! ಕೇವಲ ಬಾಲಕನಾದ ಶ್ರೀ ಮಹಾವಿಷ್ಣುವು ಮೂರೇ ಅಡಿಗಳಿಂದ ಮೂರು ಲೋಕಗಳನ್ನೇ ಆಕ್ರಮಿಸಲಿಲ್ಲವೆ?" ಎಂದನು. ಈ ಪ್ರಕಾರವಾಗಿ ಹೇತುಗರ್ಭಿತವಾಗಿಯೂ,

ಶ್ರುತ್ವಾ ಹೇತುಮತ್ಪರಮಾರ್ಥವತ್ । ಅತಿಕಾಯಃ ಪ್ರಚುಕ್ರೋಧ ಬಾಣಂಚೋತ್ತಮಮಾದದೇ ॥೬೫॥ (ತತೋ ವಿದ್ಯಾಧರಾ ಭೂತಾ ದೇವಾದೈತ್ಯಾ ಮಹರ್ಷಯಃ । ಗುಹ್ಯಕಾಶ್ಚ ಮಹಾತ್ಮಾನಸ್ತದ್ಯುದ್ಧಂ ದ್ರಷ್ಟುಮಾಗಮನ್) ॥೬೬॥ ತತೋಽತಿಕಾಯಃ ಕುಪಿತಶ್ಚಾಪಮಾರೋಪ್ಯ ಸಾಯಕಂ । ಲಕ್ಷ್ಮಣಾಯ ಪ್ರಚಿಕ್ಷೇಪ ಸಂಕ್ಷಿಪನ್ನಿವ ಚಾಂಬರಂ ॥ ೬೭ ॥ ತಮಾಪತಂತಂ ನಿಶಿತಂ ಶರಮಾಶೀವಿಷೋಪಮಂ । ಅರ್ಧಚಂದ್ರೇಣ ಚಿಚ್ಛೇದ ಲಕ್ಷ್ಮಣಃ ಪರವೀರಹಾ ॥ ೬೮ ॥ ತಂ ನಿಕೃತ್ತಂ ಶರಂ ದೃಷ್ಟ್ವಾ ಕೃತ್ತಭೋಗಮಿವೋರಗಂ । ಅತಿಕಾಯೋ ಭೃಶಂ ಕ್ರುದ್ಧಃ ಪಂಚಬಾಣಾನ್ ಸಮಾ

ಪರಮಾರ್ಥಯುಕ್ತವಾದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅತಿಕಾಯಃ - ಅತಿಕಾಯನು, ಚುಕ್ರೋಧ - ಕೋಪಗೊಂಡನು, ಉತ್ತಮಂ - ಸರ್ವೋತ್ತಮವಾದ, ಬಾಣಂಚ - ಬಾಣವನ್ನೂ, ಆದದೇ - ತೆಗೆದುಕೊಂಡನು. ॥ ೬೫ ॥ (ತತಃ - ಬಳಿಕ, ವಿದ್ಯಾಧರಾಃ - ವಿದ್ಯಾಧರರೂ, ಭೂತಾಃ - ಭೂತಗಳೂ, ದೇವಾಃ - ದೇವತೆಗಳೂ, ದೈತ್ಯಾಃ - ರಕ್ಕಸರೂ, ಮಹರ್ಷಯಃ - ಋಷಿಗಳೂ, ಗುಹ್ಯಕಾಶ್ಚ - ಗುಹ್ಯಕರೂ, ಮಹಾತ್ಮನಃ - ದೊಡ್ಡ ಮನಸ್ಸುಳ್ಳವರಾಗಿ, ತದ್ಯುದ್ಧಂ - ಆ ಕಾಳಗವನ್ನು, ದ್ರಷ್ಟುಂ - ನೋಡುವುದಕ್ಕೆ, ಆಗಮನ್ - ಬಂದರು.) ॥ ೬೬ ॥ ತತಃ - ಬಳಿಕ, ಅತಿಕಾಯಃ - ಅತಿಕಾಯನು, ಕುಪಿತಃ - ಕೋಪಿಷ್ಠನಾಗಿ, ಚಾಪಂ - ಬಿಲ್ಲನ್ನು, ಆರೋಪ್ಯ - ಏರಿಸಿ, ಸಾಯಕಂ - ಬಾಣವನ್ನು, ಲಕ್ಷ್ಮಣಾಯ - ಲಕ್ಷ್ಮಣನಿಗೋಸ್ಕರ, ಅಂಬರೇ - ಅಂತರಿಕ್ಷವನ್ನು, ಸಂಭಕ್ಷನ್ನಿವ - ನುಂಗುತ್ತಾನೋ ಎಂಬಂತೆ, ಪ್ರಚಿಕ್ಷೇಪ - ಎಸೆದನು. ॥ ೬೭ ॥ ಪರವೀರಹಾ - ಶತ್ರುಸಂಹಾರಕನಾದ, ಲಕ್ಷ್ಮಣಃ - ಲಕ್ಷ್ಮಣನು, ನಿಶಿತಂ - ತೀಕ್ಷ್ಣವಾಗಿ, ಆಪತಂತಂ - ಬರುತ್ತಿರುವ, ಆಶೀವಿಷೋಪಮಂ - ಸರ್ಪಕ್ಕೆ ಸಮಾನವಾದ, ತಂಶರಂ - ಆ ಬಾಣವನ್ನು, ಅರ್ಧಚಂದ್ರೇಣ - ಅರ್ಧಚಂದ್ರಾಕಾರವಾದ ಬಾಣದಿಂದ, ಚಿಚ್ಛೇದ - ಕತ್ತರಿಸಿದನು. ॥೬೮॥ ಅತಿಕಾಯಃ- ಅತಿಕಾಯನು, ಕೃತ್ತಭೋಗಂ - ಕತ್ತರಿಸಲ್ಪಟ್ಟ ಹೆಡೆಯುಳ್ಳ, ಉರಗಮಿವ - ಸರ್ಪವನ್ನಂತೆ, ತಂಶರಂ - ಆ ಬಾಣವನ್ನು, ನಿಕೃತ್ತಂ-ಕತ್ತರಿಸಲ್ಪಟ್ಟುದನ್ನಾಗಿ, ದೃಷ್ಟ್ವಾ - ಕಂಡು, ಭೃಶಂಕ್ರುದ್ಧಃ- ಬಹಳ ಕುಪಿತನಾಗಿ, ಪಂಚಬಾಣಾನ್ - ಐದು ಬಾಣಗಳನ್ನು, ಸಮಾದದೇ - ತೆಗೆದುಕೊಂಡನು. ॥ ೬೯ ॥ ನಿಶಾಚರಃ - ಅತಿಕಾಯನು, ಶರಾನ್ - ಐದು ಬಾಣಗಳನ್ನು, ಲಕ್ಷ್ಮಣಾಯ - ಲಕ್ಷ್ಮಣನಿ

ಮಹಾರ್ಥಯುಕ್ತವಾಗಿಯೂ ನುಡಿದ ಲಕ್ಷ್ಮಣಸ್ವಾಮಿಯ ಮಾತುಗಳನ್ನು ಕೇಳಿ ಆ ಅತಿಕಾಯನು ಕ್ರೋಧಾವಿಷ್ಟನಾಗಿ ಬಿಲ್ಲಿನಲ್ಲಿ ಬಾಣವನ್ನು ಸಂಧಿಸಿದನು. ॥೬೧–೬೫॥ (ಆಗ ವಿದ್ಯಾಧರರೂ, ಭೂತಗಣಗಳೂ, ದೇವತೆಗಳೂ, ದೈತ್ಯರೂ, ಮಹರ್ಷಿಗಳೂ, ಮಹಾತ್ಮರಾದ ಗುಹ್ಯಕರೂ ಆ ಲಕ್ಷ್ಮಣಾತಿಕಾಯರ ಯುದ್ಧವನ್ನು ನೋಡಲು ಬಂದು ನೆರೆದರು). ಆ ಸಮಯದಲ್ಲಿ ಅತಿಕಾಯನು ಮಹಾ ಕುಪಿತನಾಗಿ ತಾನು ಮೊದಲೇ ಬಿಲ್ಲಿನಲ್ಲಿ ಹೂಡಿದ್ದ ಬಾಣವನ್ನು ಲಕ್ಷ್ಮಣನಮೇಲೆ ಪ್ರಯೋಗಿಸಿದನು. ಆ ಬಾಣವು ಆಕಾಶವನ್ನೇ ನುಂಗುವಂತ್ತಿದ್ದಿತು. ಆ ಬಾಣವು ತನ್ನಮೇಲೆ ಬರುತ್ತಿರುವುದನ್ನು ಕಂಡು ಲಕ್ಷ್ಮಣಸ್ವಾಮಿಯು ಅರ್ಧಚಂದ್ರಾಕಾರವಾದ ಬಾಣಗಳನ್ನು ಪ್ರಯೋಗಿಸಿ ಅದನ್ನು ಕತ್ತರಿಸಿದನು. ಹೆಡೆ ಮುರಿದ ಹಾವಿನಂತೆ ಮುರಿದು ಕೆಳಕ್ಕೆ ಬಿದ್ದ ಆ ಬಾಣವನ್ನು ಕಂಡು ಅತಿಕಾಯನು ಮಹಾ ಕ್ರುದ್ಧನಾಗಿ ಐದು ಬಾಣಗಳನ್ನು ಬಿಲ್ಲಿನಲ್ಲಿ ಹೂಡಿ ಲಕ್ಷ್ಮಣನ ಮೇಲೆಚ್ಚನು. ಅವು ತನ್ನಮೇಲೆ ಬರುವುದರೊಳ

ದದೇ ॥೯೯॥ ತಾನ್ ಶರಾನ್ ಸಂಪ್ರಚಿಕ್ಷೇಪ ಲಕ್ಷ್ಮಣಾಯ ನಿಶಾಚರಃ । ತಾನ ಪ್ರಾಪ್ತಾನ್ ಶರೈಸ್ತೀಕ್ಷ್ಣೈಶ್ಚಿಚ್ಛೇದ ಭರತಾನುಜಃ ॥೭೦॥ ಸತಾಂಶ್ಛಿತ್ವಾ ಶರೈಸ್ತೀಕ್ಷ್ಣೈರ್ಲಕ್ಷ್ಮಣಃ ಪರವೀರಹಾ । ಆದದೇ ನಿಶಿತಂ ಬಾಣಂ ಜ್ವಲಂತಮಿವ ತೇಜಸಾ ॥೭೧॥ ತಮಾದಾಯ ಧನುಃಶ್ರೇಷ್ಠೇ ಯೋಜಯಾಮಾಸ ಲಕ್ಷ್ಮಣಃ । ವಿಚಕರ್ಷಚ ವೇಗೇನ ವಿಸಸರ್ಜ ಚ ವೀರ್ಯವಾನ್ ॥೭೨॥ ಪೂರ್ಣಾಯತವಿಸೃಷ್ಟೇನ ಶರೇಣ ನತಪರ್ವಣಾ । ಲಲಾಟೇ ರಾಕ್ಷಸಶ್ರೇಷ್ಠಮಾಜಘಾನ ಸವೀರ್ಯವಾನ್ ॥೭೩॥ ಸಲಲಾಟೇ ಶರೋ ಮಗ್ನಸ್ತಸ್ಯ ಭೀಮಸ್ಯ ರಕ್ಷಸಃ । ದದೃಶೇ ಶೋಣಿತೇನಾಕ್ತಃ ಪನ್ನಗೇಂದ್ರ ಇವಾಚಲೇ ॥೭೪॥ ರಾಕ್ಷಸಃ ಪ್ರಚಕಂಪೇಚ ಲಕ್ಷ್ಮಣೇಷು ಪ್ರಪೀಡಿತಃ । ರುದ್ರ

ಗೋಸುಗ, ಸಂಪ್ರಚಿಕ್ಷೇಪ - ಎಸೆದನು, ಭರತಾನುಜಃ - ಲಕ್ಷ್ಮಣನು, ತೀಕ್ಷ್ಣೈಃ - ಹದವಾದ, ಶರೈಃ - ಬಾಣಗಳಿಂದ, ಅಪ್ರಾಪ್ತಾನ್ - ಬಂದೂ ಬಾರದಿರುವ, ತಾನ್ - ಆ ಬಾಣಗಳನ್ನು, ಚಿಚ್ಛೇದ- ಕತ್ತರಿಸಿದನು. ॥ ೭೦ ॥ ಪರವೀರಹಾ - ಶತ್ರುಸಂಹಾರಕನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು, ತೀಕ್ಷ್ಣೈಃ - ಕ್ರೂರಗಳಾದ, ಶರೈಃ - ಬಾಣಗಳಿಂದ, ತಾನ್ - ಆ ಐದು ಬಾಣಗಳನ್ನು, ಛಿತ್ವಾ - ಛೇದಿಸಿ, ತೇಜಸಾ - ತೇಜಸ್ಸಿನಿಂದ, ಜ್ವಲಂತಮಿವ - ಉರಿಯುವದೋ ಎಂಬಂತಿರುವ, ನಿಶಿತಂ - ತೀಕ್ಷ್ಣವಾದ, ಬಾಣಂ - ಬಾಣವನ್ನು, ಆದದೇ - ತೆಗೆದುಕೊಂಡನು. ॥ ೭೧ ॥ ವೀರ್ಯವಾನ್ - ಪರಾಕ್ರಮಿಯಾದ, ಲಕ್ಷ್ಮಣಃ - ಲಕ್ಷ್ಮಣನು, ತಂ - ಆ ಬಾಣವನ್ನು, ಆದಾಯ - ತೆಗೆದುಕೊಂಡು, ಧನುಶ್ರೇಷ್ಠೇ - ಉತ್ತಮವಾದ ಬಿಲ್ಲಿನಲ್ಲಿ, ಯೋಜಯಾಮಾಸ - ಸೇರಿಸಿದನು, ವಿಚಕರ್ಷ - ಸೆಳದನು, ವೇಗೇನ - ವೇಗದಿಂದ, ವಿಸಸರ್ಜ - ಬಿಡಲೂ ಬಿಟ್ಟನು. ॥೭೨॥ ಪೂರ್ಣಾ...ನಾ - ಸಂಪೂರ್ಣವಾಗಿ ಸೆಳದುಬಿಟ್ಟ, ನತಪರ್ವಣಾ - ಬೊಗ್ಗಿದ ಕೊಂಕಿಗಳುಳ್ಳ, ಶರೇಣ - ಬಾಣದಿಂದ, ವೀರ್ಯವಾನ್ - ಸಾಮರ್ಥ್ಯವಂತನಾದ, ಸಃ - ಆ ಲಕ್ಷ್ಮಣನು, ರಾಕ್ಷಸಶ್ರೇಷ್ಠಂ - ರಾಕ್ಷಸೋತ್ತಮನಾದ ಅತಿಕಾಯನನ್ನು, ಲಲಾಟೇ - ಹಣೆಯಲ್ಲಿ, ಆಜಘಾನ - ಹೊಡೆದನು. ॥೭೩॥ ಸಶರಃ - ಆ ಬಾಣವು, ಭೀಮಸ್ಯ- ಭಯಂಕರನಾದ, ತಸ್ಯರಾಕ್ಷಸಃ - ಆ ರಕ್ಕಸನ, ಲಲಾಟೇ - ಹಣೆಯಲ್ಲಿ, ಮಗ್ನಃ - ಮುಳುಗಿ, ಶೋಣಿತೇನ - ರಕ್ತದಿಂದ, ಅಕ್ತಃ - ತೋಯಿಸಲ್ಪಟ್ಟುದಾಗಿ, ಅಚಲೇ - ಬೆಟ್ಟದಲ್ಲಿ, ಪನ್ನಗೇಂದ್ರ ಇವ - ದೊಡ್ಡ ಹಾವಿನಂತೆ, ದದೃಶೇ - ಕಾಣಿಸಿತು. ॥ ೭೪ ॥ ರಾಕ್ಷಸಃ - ರಕ್ಕಸನು, ಲಕ್ಷ್ಮ....ತಃ - ಲಕ್ಷ್ಮಣನ ಬಾಣದಿಂದ ಹೊಡೆಯಲ್ಪಟ್ಟವನಾಗಿ, ರುದ್ರ....ತಂ - ಪರಮೇಶ್ವರನ ಬಾಣದಿಂದ ಹೊಡೆಯಲ್ಪಟ್ಟ, ಘೋರಂ - ಭಯಂಕರವಾದ, ತ್ರಿಪು....ಥಾ - ತ್ರಿಪುರಾಸುರನ ಊರುಬಾಗಿಲಂತೆ,

---

ಗಾಗಿಯೇ ಆ ಭರತಾನುಜನು ತೀಕ್ಷ್ಣಗಳಾದ ಬಾಣಗಳಿಂದ ತುಂಡಿರಿಸಿದನು. ॥ ೬೯–೭೦॥ ಈ ರೀತಿ ಆ ಬಾಣಗಳನ್ನು ಖಂಡಿಸಿದ ಬಳಿಕ ಶತ್ರುಮರ್ದನನಾದ ಆ ಲಕ್ಷ್ಮಣನು ಪ್ರಜ್ವಲಿಸುತ್ತಿರುವ ತೀಕ್ಷ್ಣವಾದೊಂದು ಬಾಣವನ್ನು ಕೈಗೆ ತೆಗೆದುಕೊಂಡನು. ಆ ಬಾಣವನ್ನು ಬಿಲ್ಲಿನಲ್ಲಿ ಹೂಡಿ ಕಿವಿವರೆಗೆ ಸೆಳೆದು ಆ ರಾಕ್ಷಸನಮೇಲೆ ಬಿಟ್ಟನು. ಪೂರ್ಣವಾಗಿ ಸೆಳೆದು ಬಿಟ್ಟುದರಿಂದ ಅತಿ ವೇಗದಿಂದೈತಂದ ಆ ಬಾಣವು ಆ ರಾಕ್ಷಸನ ಹಣೆಗೆ ನಾಟಿತು. ಆಗಲಾಬಾಣವು ಆ ರಾಕ್ಷಸನ ಹಣೆಯಲ್ಲಿ ನಾಟಿ ರಕ್ತದಿಂದ ತೊಯ್ದು ಪರ್ವತದಲ್ಲಿ ನಿಂತ ಪನ್ನಗೇಂದ್ರನಂತೆ ತೋರುತ್ತಿದ್ದಿತು. ಲಕ್ಷ್ಮಣನೆಚ್ಚ ಬಾಣದಿಂದ ಪೀಡಿತನಾದ ಆ ಅತಿಕಾಯನು ರುದ್ರಬಾಣಪೀಡಿತನಾದ ತ್ರಿಪುರಗೋಪುರದಂತೆ ನುಡುಗಿಹೋದನು. ॥೭೧–೭೫॥

ಬಾಣಹತಂ ಘೋರಂ ಯಥಾ ತ್ರಿಪುರಗೋಪುರಂ ||೭೫|| ಚಿಂತಯಾಮಾಸ ಚಾಶ್ವಸ್ಯ ವಿಮೃಶ್ಯಚ ಮಹಾಬಲಃ । "ಸಾಧು ಬಾಣನಿಪಾತೇನ ಶ್ಲಾಘನೀಯೋಽಸಿ ಮೇ ರಿಪುಃ" ||೭೬|| ವಿಧಾಯೈವಂ ವಿನಮ್ಯಾಸ್ಯಂ ನಿಯಮ್ಯಚ ಭುಜಾವುಭೌ । ಸರಥೋಪಸ್ಥಮಾಸ್ಥಾಯ ರಥೇನ ಪ್ರಚಚಾರಹ ||೭೭|| ಏಕಂ ತ್ರೀನ್ ಪಂಚ ಸಪ್ತೇತಿ ಸಾಯಕಾನ್ ರಾಕ್ಷಸರ್ಷಭಃ । ಆದದೇ ಸಂದಧೇ ಚಾಪಿ ವಿಚಕರ್ಷೋತ್ಸಸರ್ಜಚ ||೭೮|| ತೇ ಬಾಣಾಃ ಕಾಲಸಂಕಾಶಾ ರಾಕ್ಷಸೇಂದ್ರಧನುಶ್ಚ್ಯುತಾಃ । ಹೇಮಪುಂಖಾ ರವಿಪ್ರಖ್ಯಾಶ್ಚಕ್ರುರ್ದೀಪ್ತಮಿವಾಂಬರಂ ||೭೯|| ತತಸ್ತಾನ್ ರಾಕ್ಷಸೋತ್ಸೃಷ್ಟಾನ್ ಶರೌಘಾನ್ ರಾಘವಾ

ಪ್ರಚಕಂಪೇ - ನಡುಗಿದನು. || ೭೫ || ಮಹಾಬಲಃ - ಮಹಾ ಬಲಶಾಲಿಯಾದ ಆ ಅತಿಕಾಯನು, ಆಶ್ವಸ್ಯ - ಸಮಾಧಾನಗೊಂಡು, ವಿಮೃಶ್ಯಚ - ವಿಮರ್ಶೆಮಾಡಿ, ಚಿಂತಯಾಮಾಸ - ಆಲೋಚಿಸಿದನು, ಸಾಧು - ಚನ್ನಾಯಿತು, ಬಾಣನಿಪಾತೇನ - ಬಾಣವು ಬೀಳೋಣದರಿಂದ, ಮೇ - ನನಗೆ, ಶ್ಲಾಘನೀಯಃ - ಸ್ತೋತ್ರಾರ್ಹನಾದ, ರಿಪುಃ - ಶತ್ರುವು, ಅಸಿ - ಆಗಿದ್ದೀಯೆ. || ೭೬ || ಏವಂ - ಈ ಪರಿಯಾಗಿ, ವಿಧಾಯ - ಹೇಳಿ, ಆಸ್ಯಂ - ಮುಖವನ್ನು, ವಿನಮ್ಯ - ಬೊಗ್ಗಿಸಿ, ಉಭೌ - ಎರಡಾದ, ಭುಜೌ - ಭುಜಗಳನ್ನು, ನಿಯಮ್ಯಚ - ಸ್ವಾಧೀನಗೊಳಿಸಿಕೊಂಡು, ಸಃ - ಆ ಅತಿಕಾಯನು, ರಥೋಪಸ್ಥಂ - ರಥಮಧ್ಯದಲ್ಲಿಯೇ, ಆಸ್ಥಾಯ - ಕುಳಿತು, ರಥೇನ - ರಥದಿಂದ, ಪ್ರಚಚಾರಹ - ಸಂಚರಿಸಿದನು. || ೭೭ || ರಾಕ್ಷಸರ್ಷಭಃ - ಆ ರಾಕ್ಷಸೋತ್ತಮನು, ಏಕಂ - ಒಂದು ಬಾಣವನ್ನು, ತ್ರೀನ್ - ಮೂರನ್ನು, ಪಂಚ - ಐದನ್ನೂ, ಸಪ್ತ - ಏಳಾದ, ಸಾಯಕಾನ್ - ಬಾಣಗಳನ್ನೂ, ಇತಿ - ಈ ಪರಿಯಾಗಿ, ಆದದೇ - ತೆಗೆದುಕೊಂಡನು, ಸಂದಧೇಚ - ಸಂಧಾನ ಮಾಡಿದನು, ವಿಚಕರ್ಷಾಪಿ - ಸೆಳೆದು, ಉತ್ಸಸರ್ಜಚ - ಬಿಡಲೂ ಬಿಟ್ಟನು. || ೭೮ || ಕಾಲಸಂಕಾಶಾಃ - ಯಮನಿಗೆ ಸಮಾನಗಳಾದ, ರಾಕ್ಷ....ತಾಃ-ರಾವಣನ ಮಗನಾದ ಅತಿಕಾಯನ ಬಿಲ್ಲಿನಿಂದ ಬಿಡಲ್ಪಟ್ಟ, ಹೇಮಪುಂಖಾಃ - ಬಂಗಾರದ ಕೊಂಕಿಗಳುಳ್ಳ, ರವಿಪ್ರಖ್ಯಾಃ - ಸೂರ್ಯನಂತೆ ಪ್ರಕಾಶವುಳ್ಳ, ತೇಬಾಣಾಃ - ಆ ಬಾಣಗಳು, ಅಂಬರಂ - ಅಂತರಿಕ್ಷವನ್ನು, ದೀಪ್ತಮಿವ - ಪ್ರಕಾಶವಾದ್ದಂತೆ, ಚಕ್ರುಃ - ಮಾಡಿದುವು. || ೭೯ || ತತಃ - ಬಳಿಕ, ರಾಘವಾನುಜಃ - ಲಕ್ಷ್ಮಣನು, ಅಸಂಭ್ರಾಂತಃ - ಭಯವಿಲ್ಲದಿರುವನಾಗಿ, ರಾಕ್ಷ....ಷ್ಟಾನ್ - ಅತಿಕಾಯನಿಂದ ಬಿಡಲ್ಪಟ್ಟ, ತಾನ್‌ಶರೌಘಾನ್ - ಆ ಬಾಣತಂಡಗಳನ್ನು,

ಆ ಬಳಿಕ ಮಹಾ ಬಲಾಢ್ಯನಾದ ಆ ಅತಿಕಾಯನು ಸ್ವಲ್ಪಹೊತ್ತು ಚೆನ್ನಾಗಿ ಆಲೋಚಿಸಿ ತಾನು ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿಕೊಂಡು ಆ ಲಕ್ಷ್ಮಣನನ್ನು ಕುರಿತು, "ಎಲೆವೊ ಲಕ್ಷ್ಮಣನೇ! ಭಾಪು, ಭಾಪು! ನೀನು ತೀಕ್ಷ್ಣವಾದ ಬಾಣವನ್ನೇ ಪ್ರಯೋಗಿಸಿ ನನ್ನನ್ನು ನೋಯಿಸಿ ನನಗೆ ಶ್ಲಾಘ್ಯನಾದ ಹಗೆಯನೇ ಎನಿಸಿದೆ" ಎಂದು ಹೇಳಿದನು. ಆಮೇಲೆ ಆ ರಾಕ್ಷಸನು ಆಯಾಸವನ್ನು ತೀರಿಸಿಕೊಂಡು ಎರಡೂ ಭುಜಗಳನ್ನು ಕೊಂಕಿಸಿ ಸಮೀಪದಲ್ಲಿಯೇ ಇದ್ದ ಲಕ್ಷ್ಮಣನ ಬಳಿಗೆ ತನ್ನ ತೇರನ್ನು ನಡೆಯಿಸಿದನು. ತರುವಾಯ ಅವನು ತನ್ನ ಧನುಸ್ಸನ್ನು ಬಲವಾಗಿ ಆಕರ್ಷಿಸಿ ಒಂದೇ ತಡವೆಗೆ ಮೂರು ಐದು ಏಳು ಹೀಗೆ ಅನೇಕ ಬಾಣಗಳನ್ನು ಜೋಡಿಸಿ ಲಕ್ಷ್ಮಣನಮೇಲೆ ಪ್ರಯೋಗಿಸಿದನು. ಆ ರಾಕ್ಷಸೋತ್ತಮನು ಪ್ರಯೋಗಿಸಿದ ಯಮೋಪಮವೂ, ಬಂಗಾರದ ಹಿಡಿಗಳುಳ್ಳುವಾಗಿ, ಸೂರ್ಯಸಮಾನವಾದ ತೇಜಸ್ಸನ್ನೊಳಗೊಂಡು ವೇಗದಿಂದೈತರುತ್ತಿರುವುವೂ ಆದ ಆ ಐದು ಬಾಣಗಳನ್ನೂ ವೀರಾಗ್ರಣಿ

ನುಜಃ । ಅಸಂಭ್ರಾಂತಃ ಪ್ರಚಿಚ್ಛೇದ ನಿಶಿತೈರ್ಬಹುಭಿಃ ಶರೈಃ ॥೮೦॥ ತಾನ್ ಶರಾನ್ ಯುಧಿಸಂಪ್ರೇಕ್ಷ್ಯ ನಿಕೃತ್ತಾನ್ ರಾವಣಾತ್ಮಜಃ । ಚುಕೋಪ ತ್ರಿದಶೇಂದ್ರಾರಿರ್ಜಗ್ರಾಹ ನಿಶಿತಂ ಶರಂ ॥೮೧॥ ಸ ಸಂಧಾಯ ಮಹಾತೇಜಾಸ್ತಂ ಬಾಣಂ ಸಹಸೋತ್ಸೃಜತ್ । ತತ ಸ್ಸೌಮಿತ್ರಿಮಾಯಾಂತಮಾಜಘಾನ ಸ್ತನಾಂತರೇ ॥೮೨॥ ಅತಿಕಾಯೇನ ಸೌಮಿತ್ರಿ ಸ್ತಾಡಿತೋ ಯುಧಿ ವಕ್ಷಸಿ । ಸುಸ್ರಾವ ರುಧಿರಂ ತೀವ್ರಂ ಮದಂ ಮತ್ತಇವ ದ್ವಿಪಃ ॥೮೩॥ ಸಚಕಾರ ತದಾತ್ಮಾನಂ ವಿಶಲ್ಯಂ ಸಹಸಾ ವಿಭುಃ । ಜಗ್ರಾಹ ಚ ಶರಂ ತೀಕ್ಷ್ಣಮಸ್ತ್ರೇಣಾಪಿಚ ಸಂದಧೇ ॥ ೮೪ ॥ ಆಗ್ನೇಯೇನ ತದಾಸ್ತ್ರೇಣ ಯೋಜಯಾ ಮಾಸ ಸಾಯಕಂ । ಸಜಜ್ವಾಲ ತದಾ ಬಾಣೋ ಧನುಷ್ಯಸ್ಯ ಮಹಾತ್ಮನಃ ॥ ೮೫ ॥

ನಿಶಿತೈಃ - ತೀಕ್ಷ್ಣಗಳಾದ, ಬಹುಭಿಃ - ಅನೇಕಗಳಾದ, ಶರೈಃ - ಬಾಣಗಳಿಂದ, ಪ್ರಚಿಚ್ಛೇದ - ಮುರಿದನು, ತ್ರಿದಶೇಂದ್ರಾರಿಃ-ದೇವೇಂದ್ರನಿಗೆ ಶತ್ರುವಾದ, ರಾವಣಾತ್ಮಜಃ-ರಾವಣನ ಕುಮಾರನು, ಯುಧಿ - ಕಾಳೆಗದಲ್ಲಿ, ನಿಕೃತ್ತಾನ್ - ಕತ್ತರಿಸಲ್ಪಟ್ಟ, ತಾನ್‌ಶರಾನ್ - ಆ ಬಾಣಗಳನ್ನು, ಸಂಪ್ರೇಕ್ಷ್ಯ - ಕಂಡು, ಚುಕೋಪ - ಕೋಪಿಸಿದನು, ನಿಶಿತಂ - ತೀಕ್ಷ್ಣವಾದ, ಶರಂ - ಬಾಣವನ್ನು, ಜಗ್ರಾಹ - ತೆಗೆದುಕೊಂಡನು. ॥ ೮೦ ೮೧ ॥ ಮಹಾತೇಜಾಃ-ಬಹಳ ತೇಜೋವಂತನಾದ, ಸಃ-ಆ ಅತಿಕಾಯನು, ಸಂಧಾಯ - ಸಂಧಾನಮಾಡಿ, ತಂಬಾಣಂ - ಆ ಬಾಣವನ್ನು, ಸಹಸಾ - ಜಾಗ್ರತೆಯಾಗಿ, ಉತ್ಸೃಜತ್ - ಬಿಟ್ಟನು, ತತಃ - ಬಳಿಕ, ಆಯಾಂತಂ - ಬರುತ್ತಿರುವ, ಸೌಮಿತ್ರಿಂ - ಲಕ್ಷ್ಮಣನನ್ನು, ಸ್ತನಾಂತರೇ - ಎದೆಯಮೇಲೆ, ಆಜಘಾನ - ಹೊಡೆದನು. ॥೮೨॥ ಅತಿಕಾಯೇನ - ಅತಿಕಾಯನಿಂದ, ಯುಧಿ - ಕಾಳೆಗದಲ್ಲಿ, ವಕ್ಷಸಿ - ವಕ್ಷಸ್ಥಳದಲ್ಲಿ, ತಾಡಿತಃ - ಹೊಡೆಯಲ್ಪಟ್ಟ, ಸೌಮಿತ್ರಿಃ - ಲಕ್ಷ್ಮಣನು, ಮತ್ತಃ - ಮದವೇರಿದ, ದ್ವಿಪಃ - ಆನೆಯು, ಮದಮಿವ - ಮದೋದಕವನ್ನಂತೆ, ತೀವ್ರಂ - ಜಾಗ್ರತೆಯಾಗಿ, ರುಧಿರಂ - ರಕ್ತವನ್ನು, ಸುಸ್ರಾವ - ಸ್ರವಿಸುತ್ತಿದ್ದನು. ॥ ೮೩ ॥ ವಿಭುಃ - ಸಮರ್ಥನಾದ, ಸಃ - ಆ ಲಕ್ಷ್ಮಣನು, ಆತ್ಮಾನಂ - ತನ್ನನ್ನು, ತದಾ - ಆ ಕಾಲದಲ್ಲಿ, ಸಹಸಾ - ಜಾಗ್ರತೆಯಾಗಿ, ವಿಶಲ್ಯಂ - ಬಾಣದ ಘಾಯವಿಲ್ಲದವನನ್ನಾಗಿ, ಚಕಾರ - ಮಾಡಿಕೊಂಡನು, ತೀಕ್ಷ್ಣಂ - ಹದವಾದ, ಶರಂ-ಬಾಣವನ್ನು, ಜಗ್ರಾಹಚ-ತೆಗೆದುಕೊಂಡನು, ಅಸ್ತ್ರೇಣಾಪಿ-ಆಗ್ನೇಯಾಸ್ತ್ರದಿಂದಲೂ ಕೂಡ, ಸಂದಧೇಚ - ಸಂಧಾನ ಮಾಡಿದನು. ॥ ೮೪ ॥ ತದಾ - ಆ ಕಾಲದಲ್ಲಿ, ಸಾಯಕಂ - ಬಾಣವನ್ನು, ಆಗ್ನೇಯೇನಾಸ್ತ್ರೇಣ - ಆಗ್ನೇಯಾಸ್ತ್ರದಿಂದ, ಯೋಜಯಾಮಾಸ-ಸೇರಿಸಿದನು, ಸಬಾಣಃ-

---

ಯಾದ ಆ ಲಕ್ಷ್ಮಣನು ತೀಕ್ಷ್ಣವಾದ ಬಾಣಗಳಿಂದ ಅಸಂಭ್ರಾಂತನಾಗಿ ಭೇದಿಸಿ ಕೆಡವಿದನು. ॥ ೭೫–೮೦ ॥ ರಾವಣಕುಮಾರನಾದ ಅತಿಕಾಯನು ತನ್ನ ಬಾಣಗಳೆಲ್ಲವೂ ಭಗ್ನವಾದುದನ್ನು ಕಂಡು ಕೋಪಗೊಂಡು ಮಹಾ ತೀಕ್ಷ್ಣವಾದ ಮತ್ತೊಂದು ಬಾಣವನ್ನು ಬಿಲ್ಲಿನಲ್ಲಿ ಹೂಡಿ ಲಕ್ಷ್ಮಣನ ಮೇಲೆಸೆದನು. ಆ ಬಾಣವು ಮಹಾ ವೇಗದಿಂದೈತಂದು ಲಕ್ಷ್ಮಣನ ಸ್ತನಮಧ್ಯಪ್ರದೇಶದಲ್ಲಿ ಬಿದ್ದಿತು. ಆ ಕೂಡಲೇ ಆತನು ಬಹಳವಾಗಿ ವ್ಯಥೆಗೊಂಡನಲ್ಲದೆ ಆತನ ದೇಹದಿಂದ ರಕ್ತವು ಬಹಳವಾಗಿ ಕಾರಿತು. ಸ್ವಲ್ಪ ಹೊತ್ತಾದ ಬಳಿಕ ಆತನು ಚೇತರಿಸಿಕೊಂಡು ಮಹಾ ತೀಕ್ಷ್ಣವಾದೊಂದು ಬಾಣವನ್ನು ಬಿಲ್ಲಿನಲ್ಲಿ ಹೂಡಿ ಅದರೊಡನೆ ಆಗ್ನೇಯಾಸ್ತ್ರವನ್ನೂ ಜೋಡಿಸಿದನು. ಲಕ್ಷ್ಮಣಸ್ವಾಮಿಯು ಆ ಬಾಣದೊಡನೆ ಆಗ್ನೇಯಾಸ್ತ್ರವನ್ನು ಜೋಡಿಸಲು ಅದು ಆ ಧನುಸ್ಸಿನಲ್ಲಿ ಮಹತ್ತರವಾಗಿ ಪ್ರಜ್ವಲಿಸುತ್ತಿದ್ದಿತು.

ಅತಿಕಾಯೋಽಪಿ ತೇಜಸ್ವೀ ಸೌರಮಸ್ತ್ರಂ ಸಮಾದಧೇ । ತೇನ ಬಾಣಂ ಭುಜಂಗಾಭಂ ಹೇಮಪುಂಖಮಯೋಜಯತ್ ॥ ೮೬ ॥ ತದಸ್ತ್ರಂ ಜ್ವಲಿತಂ ಘೋರಂ ಲಕ್ಷ್ಮಣಃ ಶರಮಾಹಿತಂ । ಅತಿಕಾಯಾಯ ಚಿಕ್ಷೇಪ ಕಾಲದಂಡಮಿವಾಂತಕಃ ॥ ೮೭ ॥ ಆಗ್ನೇಯೇನಾಭಿಸಂಯುಕ್ತಂ ದೃಷ್ಟ್ವಾ ಬಾಣಂ ನಿಶಾಚರಃ । ಉತ್ಸಸರ್ಜ ತದಾ ಬಾಣಂ ದೀಪ್ತಂ ಸೂರ್ಯಾಸ್ತ್ರಯೋಜಿತಂ ॥೮೮॥ ತಾವುಭಾವಂಬರೇ ಬಾಣಾವನ್ಯೋನ್ಯಮಭಿಜಘ್ನತುಃ । ತೇಜಸಾ ಸಂಪ್ರದೀಪ್ತಾಗ್ರೌ ಕ್ರುದ್ಧಾವಿವ ಭುಜಂಗಮೌ ॥೮೯॥ ತಾವನ್ಯೋನ್ಯಂ ವಿನಿರ್ದಹ್ಯ ಪೇತತುಃ ಪೃಥಿವೀತಲೇ । ನಿರರ್ಚಿಷೌ ಭಸ್ಮಕೃತೌ

ಆ ಬಾಣವು, ಮಹಾತ್ಮನಃ - ಮಹಾನುಭಾವನಾದ, ಅಸ್ಯ - ಈ ಲಕ್ಷ್ಮಣನ, ಧನುಷಿ - ಧನುಸ್ಸಿನಲ್ಲಿ, ಜಜ್ವಾಲ - ಹೊಳೆಯುತ್ತಿತ್ತು. ॥ ೮೫ ॥ ತೇಜಸ್ವೀ - ಸಾಮರ್ಥ್ಯವಂತನಾದ, ಅತಿಕಾಯೋಽಪಿ - ಅತಿಕಾಯನೂ, ಸೌರಂ - ಸೂರ್ಯಸಂಬಂಧವಾದ, ಅಸ್ತ್ರಂ - ಅಸ್ತ್ರವನ್ನು, ಸಮಾದದೇ - ತೆಗೆದುಕೊಂಡನು, ತೇನ-ಆ ಸೌರಾಸ್ತ್ರದೊಡನೆ, ಹೇಮಪುಂಖಂ-ಬಂಗಾರದ ಕೊಂಕಿಗಳುಳ್ಳ, ಭುಜಂಗಾಭಂ-ಸರ್ಪದಂತೆ ಹೊಳೆಯುತ್ತಿರುವ, ಬಾಣಂ - ಬಾಣವನ್ನು, ಅಯೋಜಯತ್ - ಸಂಧಾನಮಾಡಿದನು. ॥ ೮೬ ॥ ಲಕ್ಷ್ಮಣಃ - ಲಕ್ಷ್ಮಣನು, ಘೋರಂ - ಭಯಂಕರವಾಗಿ, ಜ್ವಲಿತಂ - ಪ್ರಜ್ವಲಿಸುತ್ತಿರುವ, ತದಸ್ತ್ರಂ-ಆ ಆಗ್ನೇಯಾಸ್ತ್ರವನ್ನು, ಆಹಿತಂ-ಸಂಧಾನಮಾಡಲ್ಪಟ್ಟ, ಶರಂ-ಬಾಣವನ್ನು, ಅಂತಕಃ-ಯಮನು, ಕಾಲದಂಡಮಿವ - ಯಮದಂಡವನ್ನಂತೆ, ಅತಿಕಾಯಾಯ - ಅತಿಕಾಯನಿಗೋಸ್ಕರ, ಚಿಕ್ಷೇಪ - ಎಸೆದನು. ॥ ೮೭ ॥ ಆಗ್ನೇಯೇನ - ಆಗ್ನೇಯಾಸ್ತ್ರದಿಂದ, ಅಭಿಸಂಯುಕ್ತಂ - ಸಂಧಾನಮಾಡಲ್ಪಟ್ಟ, ಬಾಣಂ - ಬಾಣವನ್ನು, ದೃಷ್ಟ್ವಾ - ಕಂಡು, ನಿಶಾಚರಃ - ಅತಿಕಾಯನು, ತದಾ - ಆ ಕಾಲದಲ್ಲಿ, ದೀಪ್ತಂ - ಹೊಳೆಯುತ್ತಿರುವ, ಸೂರ್ಯಾ....ತಂ - ಸೂರ್ಯಾಸ್ತ್ರದಿಂದ ಸಂಯೋಜನಮಾಡಲ್ಪಟ್ಟ, ಬಾಣಂ - ಬಾಣವನ್ನು, ಉತ್ಸಸರ್ಜ - ಬಿಟ್ಟನು. ॥ ೮೮ ॥ ತೇಜಸಾ - ತೇಜಸ್ಸಿನಿಂದ, ಸಂಪ್ರ....ಗ್ರೌ - ಹೊಳೆಯುತ್ತಿರುವ ತುದಿಗಳುಳ್ಳ, ತಾವುಭೌಬಾಣೌ - ಆ ಎರಡು ಬಾಣಗಳೂ, ಅಂಬರೇ - ಅಂತರಿಕ್ಷದಲ್ಲಿ, ಕ್ರುದ್ಧೌ - ಕುಪಿತಗಳಾದ, ಭುಜಂಗಾವಿವ - ಸರ್ಪಗಳಂತೆ, ಅನ್ಯೋನ್ಯಂ-ಪರಸ್ಪರವಾಗಿ, ಅಭಿಜಘ್ನತುಃ - ಹೊಡೆಯುತ್ತಿದ್ದವು. ॥ ೮೯ ॥ ತೌಶರೋತ್ತಮೌ - ಆ ಉತ್ತಮ ಬಾಣಗಳು, ಅನ್ಯೋನ್ಯಂ - ಪರಸ್ಪರವಾಗಿ, ವಿನಿರ್ದಹ್ಯ - ಸುಟ್ಟು, ಪೃಥಿವೀತಲೇ - ಭೂತಳದಲ್ಲಿ, ಪೇತತುಃ - ಬಿದ್ದುವು, ಭಸ್ಮಕೃತೌ - ಬೂದಿಯಾಗಿ ಮಾಡಲ್ಪಟ್ಟ, ನಿರರ್ಚಿಷೌ - ಹೋದಂಥಾ ಉರಿ

॥೮೧–೮೫॥ ಅದೇ ಸಮಯದಲ್ಲಿ ತೇಜಸ್ವಿಯಾದ ಅತಿಕಾಯನೂ ಸಹ ಧನುಸ್ಸಿನಲ್ಲಿ ಸೌರಾಸ್ತ್ರವನ್ನು ಹೂಡಿ ಅದರೊಡನೆ ಮಹಾ ಸರ್ಪಸಮಾನವೂ, ಸ್ವರ್ಣಪುಂಖಿತವೂ ಆದ ಬಾಣವನ್ನು ಸೇರಿಸಿದನು. ಇತ್ತ ಲಕ್ಷ್ಮಣಸ್ವಾಮಿಯು ತಾನು ಹೂಡಿ ಜಾಜ್ವಲ್ಯಮಾನವಾಗಿ ಹೊಳೆಯುತ್ತ, ಕಾಲದಂಡೋಪಮವಾದ ಆ ಆಗ್ನೇಯಾಸ್ತ್ರವನ್ನು ಅತಿಕಾಯನಮೇಲೆ ಪ್ರಯೋಗಿಸಿದನು. ಆಗಲಾ ರಾಕ್ಷಸನು ಲಕ್ಷ್ಮಣನೆಸೆದ ಬಾಣದೊಡನೆ ಆಗ್ನೇಯಾಸ್ತ್ರವು ಪ್ರಜ್ವಲಿಸುತ್ತ ಬರುತ್ತಿರುವುದನ್ನು ಕಂಡು ತಾನು ಹೂಡಿದ್ದ ಸೌರಾಸ್ತ್ರಯುಕ್ತವಾದ ಬಾಣವನ್ನು ಅವನಮೇಲೆ ಪ್ರಯೋಗಿಸಿದನು. ಆ ಎರಡೂ ಅಸ್ತ್ರಗಳು ಗಗನಾಂಗಣದಲ್ಲಿ ಕೋಪದಿಂದ ಕೆರಳಿದ ಎರಡು ನಾಗಸರ್ಪಗಳಂತೆ ಒಂದರೊಡನೊಂದು ಹೊಡೆದಾಡಿ ಒಂದನ್ನೊಂದು ಸುಟ್ಟು ಕೆಳಕ್ಕೆ ಬಿದ್ದು ಬೂದಿಯಾಗಿ ಹೋದುವು. ॥ ೮೬–೯೦ ॥ ಆ ಬಳಿಕ ಅತಿಕಾಯನು ಮಹಾ

ನಭ್ರಾಜೇತೇ ಶರೋತ್ತಮೌ ॥ ೯೦ ॥ ತತೋಽತಿಕಾಯಸ್ಸಂಕ್ರುದ್ಧಸ್ತ್ವಸ್ತ್ರಮೈಷೀಕಮುತ್ಸೃಜತ್ । ತತ್ಪ್ರಚಿಚ್ಛೇದ ಸೌಮಿತ್ರಿರಸ್ತ್ರೇಣೈಂದ್ರೇಣ ವೀರ್ಯವಾನ್ ॥ ೯೧ ॥ ಐಷೀಕಂ ನಿಹತಂ ದೃಷ್ಟ್ವಾ ರುಷಿತೋ ರಾವಣಾತ್ಮಜಃ । ಯಾಮ್ಯೇನಾಸ್ತ್ರೇಣ ಸಂಕ್ರುದ್ಧೋ ಯೋಜಯಾಮಾಸ ಸಾಯಕಂ ॥ ೯೨ ॥ ತತಸ್ತದಸ್ತ್ರಂ ಚಿಕ್ಷೇಪ ಲಕ್ಷ್ಮಣಾಯ ನಿಶಾಚರಃ । ವಾಯವ್ಯೇನ ತದಸ್ತ್ರೇಣ ನಿಜಘಾನ ಸಲಕ್ಷ್ಮಣಃ ॥೯೩॥ ಅಥೈನಂ ಶರಧಾರಾಭಿರ್ಧಾರಾಭಿರಿವ ತೋಯದಃ । ಅಭ್ಯವರ್ಷತ್ಸುಸಂಕ್ರುದ್ಧೋ ಲಕ್ಷ್ಮಣೋ ರಾವಣಾತ್ಮಜಂ ॥ ೯೪ ॥ ತೇಽತಿಕಾಯಂ ಸಮಾಸಾದ್ಯ ಕವಚೇ ವಜ್ರಭೂಷಿತೇ । ಭಗ್ನಾಗ್ರಶಲ್ಯಾಸ್ಸಹಸಾ ಪೇತುರ್ಬಾಣಾ ಮಹೀತಲೇ ॥ ೯೫ ॥ ತಾನ್

ಯುಳ್ಳವುಗಳಾಗಿ, ನಭ್ರಾಜೇತೇ - ತಣ್ಣಗಾದವು. ||೯೦|| ತತಃ - ಬಳಿಕ, ಅತಿಕಾಯಃ - ಅತಿಕಾಯನು, ಸಂಕ್ರುದ್ಧಃ - ಕೋಪಿಷ್ಠನಾಗಿ, ಐಷೀಕಮಸ್ತ್ರಂ - ಇಷೀಕಾಸ್ತ್ರವನ್ನು, ಉತ್ಸೃಜತ್ - ಬಿಟ್ಟನು, ವೀರ್ಯವಾನ್ - ಪರಾಕ್ರಮಿಯಾದ, ಸೌಮಿತ್ರಿಃ - ಲಕ್ಷ್ಮಣನು, ಐಂದ್ರೇಣಾಸ್ತ್ರೇಣ - ಐಂದಾಸ್ತ್ರದಿಂದ, ತತ್ - ಆ ಅಸ್ತ್ರವನ್ನು, ಪ್ರಚಿಚ್ಛೇದ - ಕತ್ತರಿಸಿದನು. || ೯೧ || ರಾವಣಾತ್ಮಜಃ - ಅತಿಕಾಯನು, ರುಷಿತಃ - ಸ್ವಭಾವಸಿದ್ಧವಾಗಿ ಕೋಪಿಷ್ಠನಾದಕಾರಣ, ಐಷೀಕಂ - ಐಷೀಕಾಸ್ತ್ರವನ್ನು, ನಿಹತಂ - ಹೊಡೆಯಲ್ಪಟ್ಟುದನ್ನಾಗಿ ಕಂಡು, ಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ಯಾಮ್ಯೇನ-ಯಮದೇವತಾಕವಾದ, ಅಸ್ತ್ರೇಣ - ಅಸ್ತ್ರದಿಂದ, ಸಾಯಕಂ - ಬಾಣವನ್ನು, ಯೋಜಯಾಮಾಸ · ಸೇರಿಸಿದನು. ||೯೨|| ತತಃ - ಬಳಿಕ, ನಿಶಾಚರಃ-ಅತಿಕಾಯನು, ತದಸ್ತ್ರಂ - ಆ ಯಾಮ್ಯಾಸ್ತ್ರವನ್ನು, ಲಕ್ಷ್ಮಣಾಯ-ಲಕ್ಷ್ಮಣನಿಗಾಗಿ, ಚಿಕ್ಷೇಪ - ಎಸೆದನು, ಸಲಕ್ಷ್ಮಣಃ - ಆ ಲಕ್ಷ್ಮಣನು, ವಾಯವ್ಯೇನ - ವಾಯುದೇವತಾಕವಾದ, ಅಸ್ತ್ರೇಣ - ಅಸ್ತ್ರದಿಂದ, ತತ್ - ಆ ಯಾಮ್ಯಾಸ್ತ್ರವನ್ನು, ನಿಜಘಾನ - ಹೊಡೆದನು. || ೯೩ || ಅಥ - ಬಳಿಕ, ಸುಸಂಕ್ರುದ್ಧಃ - ಬಹು ಕುಪಿತನಾದ, ಲಕ್ಷ್ಮಣಃ - ಲಕ್ಷ್ಮಣನು, ಧಾರಾಭಿಃ - ಉದಕಧಾರೆಗಳಿಂದ, ತೋಯದಇವ - ಮೇಘದಂತೆ, ಶರಧಾರಾಭಿಃ - ಬಾಣವರ್ಷಗಳಿಂದ, ಏನಂರಾವಣಾತ್ಮಜಂ-ಈ ಅತಿಕಾಯನನ್ನು ಕುರಿತು, ಅಭ್ಯವರ್ಷತ್-ಸುರಿಸಿದನು. ||೯೪|| ತೇಬಾಣಾಃ - ಆ ಬಾಣಗಳು, ಅತಿಕಾಯಂ - ಅತಿಕಾಯನನ್ನು, ಸಮಾಸಾದ್ಯ - ಹೊಂದಿ, ವಜ್ರಭೂಷಿತೇ - ವಜ್ರಗಳಿಂದಲಂಕೃತವಾದ, ಕವಚೇ - ಕವಚದಲ್ಲಿ, ಭಗ್ನಾಗ್ರಶಲ್ಯಾಃ - ಮುರಿದ ಮುಂಭಾಗದ ಕೊಂಕಿಗಳುಳ್ಳವುಗಳಾಗಿ, ಸಹಸಾ - ಜಾಗ್ರತೆಯಾಗಿ, ಮಹೀತಲೇ - ನೆಲದಲ್ಲಿ, ಪೇತುಃ - ಬಿದ್ದುವು. ||೯೫|| ಪರವೀರಹಾ - ಶತ್ರುಸಂಹಾರಕನಾದ, ಮಹಾಯಶಾಃ - ಬಹು ಕೀರ್ತಿವಂತನಾದ, ಲಕ್ಷ್ಮಣಃ -

---

ಕ್ರುದ್ಧನಾಗಿ ಲಕ್ಷ್ಮಣನಮೇಲೆ ಐಷೀಕಾಸ್ತ್ರವನ್ನು ಪ್ರಯೋಗಿಸಲು ಆತನದನ್ನು ಐಂದ್ರಾಸ್ತ್ರದಿಂದ ಮುರಿದು ಕೆಡವಿದನು. ಹೀಗೆ ತಾನು ಪ್ರಯೋಗಿಸಿದ ಐಷೀಕಾಸ್ತ್ರವು ಲಕ್ಷ್ಮಣನಿಂದ ನಾಶವಾಗಲು, ರಾಕ್ಷಸೋತ್ತಮನಾದ ಅತಿಕಾಯನು ಯಾಮ್ಯಾಸ್ತ್ರವನ್ನು ಬಿಲ್ಲಿನಲ್ಲಿ ಹೂಡಿ ಆ ಲಕ್ಷ್ಮಣನಮೇಲೆಸೆದನು. ಆಗ ಲಕ್ಷ್ಮಣನು ಆ ಯಾಮ್ಯಾಸ್ತ್ರವನ್ನು ವಾಯವ್ಯಾಸ್ತ್ರದಿಂದ ಖಂಡಿಸಿದನು. ಆ ತರುವಾಯ ಆ ಲಕ್ಷ್ಮಣಸ್ವಾಮಿಯು ಮುಗಿಲು ಮಳೆಯನ್ನೆಂತೋ ಅಂತು ಆ ಅತಿಕಾಯನಮೇಲೆ ಬಾಣದ ಮಳೆಯನ್ನು ಸುರಿಸಿದನು. ಆ ಬಾಣಗಳೆಲ್ಲವೂ ಆ ರಾಕ್ಷಸನ ವಜ್ರಸಮಾನವಾದ ಕವಚಕ್ಕೆ ತಾಕಿ ತುದಿಮುರಿದು ಕೆಳಕ್ಕೆ ಬಿದ್ದು ಹೋದುವು. ‖ ೯೧–೯೫ ‖ ಶತ್ರುಮರ್ದನನಾದ ಲಕ್ಷ್ಮಣನು ಹೀಗೆ ತನ್ನ ಬಾಣಗಳೆಲ್ಲವೂ

ಮೋಘಾನಭಿಸಂಪ್ರೇಕ್ಷ್ಯ ಲಕ್ಷ್ಮಣಃ ಪರವೀರಹಾ । ಅಭ್ಯವರ್ಷನ್ಮಹೇಷೂಣಾಂ ಸಹಸ್ರೇಣ ಮಹಾಯಶಾಃ ॥ ೯೬ ॥ ಸವೃಷ್ಯಮಾಣೋ ಬಾಣೌಘೈರತಿಕಾಯೋ ಮಹಾಬಲಃ । ಅವಧ್ಯಕವಚಸ್ಸಂಖ್ಯೇ ರಾಕ್ಷಸೋ ನೈವ ವಿವ್ಯಥೇ ॥ (ಶರಂ ಚಾಶೀವಿಷಾಕಾರಂ ಲಕ್ಷ್ಮಣಾಯ ವ್ಯಪಾಸೃಜತ್ । ಸತೇನ ವಿದ್ಧಸ್ಸೌಮಿತ್ರಿರ್ಮರ್ಮದೇಶೇ ಶರೇಣಹ ॥ ಮುಹೂರ್ತಮಾತ್ರಂ ನಿಸ್ಸಂಜ್ಞೋ ಹ್ಯಭವಚ್ಛತ್ರುತಾಪನಃ । ತತಸ್ಸಂಜ್ಞಾಮುಪಾಲಭ್ಯ ಚತುರ್ಭಿಸ್ಸಾಯಕೋತ್ತಮೈಃ ॥ ನಿಜಘಾನ ಹಯಾನ್ ಸಂಖ್ಯೇ ಸಾರಥಿಂ ಚ ಮಹಾಬಲಃ । ಧ್ವಜಸ್ಯೋನ್ಮಥನಂ ಕೃತ್ವಾ ಶರವರ್ಷೈರರಿಂದಮಃ ॥ ಅಸಂಭ್ರಾಂತಸ್ಸಸೌಮಿತ್ರಿಸ್ತಾನ್ ಶರಾನಭಿಲಕ್ಷಿತಾನ್ । ಮುಮೋಚ ಲಕ್ಷ್ಮಣೋ ಬಾಣಾನ್ವಧಾರ್ಥಂ ತಸ್ಯ ರಕ್ಷಸಃ) ॥ ನಶಶಾಕ ರುಜಂ ಕರ್ತುಂಯುಧಿ ತಸ್ಯ ಶರೋತ್ತಮಃ ॥೯೭॥ ಅಥೈನಮಭ್ಯುಪಾಗಮ್ಯ ವಾಯುರ್ವಾಕ್ಯಮುವಾಚಹ । ಬ್ರಹ್ಮದತ್ತವರೋಹ್ಯೇಷ ಅವಧ್ಯ

ಲಕ್ಷ್ಮಣನು, ತಾನ್ - ಆ ಬಾಣಗಳನ್ನು, ಮೋಘಾನ್ - ವ್ಯರ್ಥಗಳನ್ನಾಗಿ, ಅಭಿಸಂಪ್ರೇಕ್ಷ್ಯ - ಕಂಡು, ಮಹೇಷೂಣಾಂ - ಮಹಾ ಬಾಣಗಳ, ಸಹಸ್ರೇಣ - ಸಾವಿರದಿಂದ, ಅಭ್ಯವರ್ಷತ್ - ಸುರಿಸಿದನು. ||೯೬|| ಮಹಾಬಲಃ - ಬಹು ಬಲವಂತನಾದ, ರಾಕ್ಷಸಃ - ರಾಕ್ಷಸನಾದ, ಸಃಅತಿಕಾಯಃ - ಆ ಅತಿಕಾಯನು, ಅವಧ್ಯಕವಚಃ - ಹೋಗಲಾಡಿಸಲಸಾಧ್ಯವಾದ ಕವಚವುಳ್ಳವನಾದಕಾರಣ, ಸಂಖ್ಯೇ - ಕಾಳಗದಲ್ಲಿ, ಬಾಣೌಘೈಃ - ಬಾಣಸಮೂಹಗಳಿಂದ, ವರ್ಷ್ಯಮಾಣೋಪಿ - ವರ್ಷಿಸಲ್ಪಟ್ಟವನಾದರೂ, ನವಿವ್ಯಥೇಏವ - ವ್ಯಸನಗೊಳ್ಳಲೇ ಇಲ್ಲವು, ನರೋತ್ತಮಃ - ಮನುಷ್ಯಶ್ರೇಷ್ಠನಾದ ಲಕ್ಷ್ಮಣನು, ಯುಧಿ - ಕಾಳಗದಲ್ಲಿ, ತಸ್ಯ - ಆ ಅತಿಕಾಯನಿಗೆ, ರುಜಂ - ಬಾಧೆಯನ್ನು, ಕರ್ತುಂ - ಮಾಡುವುದಕ್ಕೆ, ನಶಶಾಕ - ಸಮರ್ಥನಾಗಲಿಲ್ಲವು. || ೯೭ || ಅಥ - ಅನಂತರದಲ್ಲಿ, ವಾಯುಃ - ವಾಯುವು, ಏನಂ - ಈ ಲಕ್ಷ್ಮಣನನ್ನು ಕುರಿತು, ಅಭ್ಯುಪಾಗಮ್ಯ - ಬಂದು, ಏಷಃ - ಇವನು, ಅವ....ತಃ - ವಧಿಸಲಸಾಧ್ಯವಾದ ಕವಚದಿಂದ ಆವೃತನು, ಬ್ರಹ್ಮ....ಹಿ - ಬ್ರಹ್ಮನಿಂದ ಕೊಡಲ್ಪಟ್ಟ ವರವುಳ್ಳವನಷ್ಟೆ, ಕವಚೀ - ಕವಚಧಾರಿಯಾದ, ಬಲೀ - ಬಲವಂತನಾದ, ಏಷಃ - ಇವನು, ಹಿ - ಯಾವ

ವ್ಯರ್ಥವಾದುದನ್ನು ಕಂಡು ಸಹಸ್ರಾರು ಮಹಾ ಬಾಣಗಳನ್ನು ಆ ರಾಕ್ಷಸನಮೇಲೆ ಮಳೆಗರೆದನು. ಹೀಗೆ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟರೂ ಆ ರಾಕ್ಷಸನು ಅವಧ್ಯಕವಚನಾದುದರಿಂದ ಸ್ವಲ್ಪಮಾತ್ರವೂ ವ್ಯಥೆಯನ್ನು ಹೊಂದಲಿಲ್ಲವು. (ಆ ಬಳಿಕ ಅತಿಕಾಯನು ಮಹಾ ಸರ್ಪಸಮಾನವಾದೊಂದು ಬಾಣವನ್ನು ಲಕ್ಷ್ಮಣನಮೇಲೆ ಪ್ರಯೋಗಿಸಲು, ಆ ಬಾಣವು ಆತನ ಮರ್ಮಪ್ರದೇಶದಲ್ಲಿ ಬಿದ್ದಿತು. ಅದರಿಂದ ಶತ್ರುತಾಪನನಾದ ಆ ಲಕ್ಷ್ಮಣನು ಒಂದು ಮುಹೂರ್ತಕಾಲ ಪ್ರಜ್ಞೆತಪ್ಪಿದ್ದು ಮುಹೂರ್ತಕಾಲದಲ್ಲಿಯೇ ಎಚ್ಚೆತ್ತುಕೊಂಡು ಹಗೆಯನ್ನೆದುರಿಸಲು ಸಿದ್ಧನಾಗಿ ನಾಲ್ಕು ಉತ್ತಮ ಬಾಣಗಳನ್ನು ಧನುಸ್ಸಿನಲ್ಲಿ ಹೂಡಿ ಪೂರ್ತಿಯಾಗಿ ಸೆಳೆದು ಬಿಟ್ಟು ಅತಿಕಾಯ ರಾಕ್ಷಸನ ತೇರಿನ ಕುದುರೆಗಳನ್ನೂ ಸಾರಥಿಯನ್ನೂ ಹೊಡೆದು ಕೆಡವಿದನು. ಆಮೇಲೆ ಆ ರಾಜಪುತ್ರನು ಬಾಣಗಳ ಮಳೆಯನ್ನು ಸುರಿಸಿ ಆ ರಾಕ್ಷಸನ ರಥದ ಧ್ವಜಸ್ತಂಭವನ್ನು ಮುರಿದಿಕ್ಕಿ ಅವನ ಸಾವಿಗಾಗಿ ಮೂರು ಬಾಣಗಳನ್ನು ಚೆನ್ನಾಗಿ ಗುರಿಯಿಟ್ಟು ಪ್ರಯೋಗಿಸಿದನು) ಆ ಬಾಣವು ಆ ರಾಕ್ಷಸನನ್ನೆಷ್ಟು ಮಾತ್ರವೂ ಪೀಡಿಸಲಿಲ್ಲವು. ಆಗ ವಾಯುದೇವನೇ ಲಕ್ಷ್ಮಣನ ಬಳಿಗೈತಂದು, "ಅಯ್ಯಾ

ಕವಚಾವೃತಃ ॥ ೯೮ ॥ ಬ್ರಾಹ್ಮೇಣಾಸ್ತ್ರೇಣ ಛಿಂಧ್ಯೇನಮೇಷ ವಧ್ಯೋಹಿ ನಾನ್ಯಥಾ ।
ಅವಧ್ಯ ಏಷ ಹ್ಯನ್ಯೇಷಾಮಸ್ತ್ರಾಣಾಂ ಕವಚೀ ಬಲೀ" ॥೯೯॥ ತತಸ್ತು ವಾಯೋರ್ವ
ಚನಂ ನಿಶಮ್ಯ ಸೌಮಿತ್ರಿರಿಂದ್ರಪ್ರತಿಮಾನವೀರ್ಯಃ । ಸಮಾದಧೇ ಬಾಣಮ
ಮೋಘವೇಗಂ ತದ್ಬ್ರಾಹ್ಮಮಸ್ತ್ರಂ ಸಹಸಾ ನಿಯೋಜ್ಯ ॥ ೧೦೦ ॥ ತಸ್ಮಿನ್ ಮಹಾ
ಸ್ತ್ರೇತು ನಿಯೋಜ್ಯಮಾನೇ ಸೌಮಿತ್ರಿಣಾ ಬಾಣವರೇ ಶಿತಾಗ್ರೇ । ದಿಶಶ್ಚ ಚಂದ್ರಾರ್ಕ
ಮಹಾಗ್ರಹಾಶ್ಚ ನಭಶ್ಚ ತತ್ರಾಸ ಚಚಾಲ ಚೋರ್ವೀ ॥ ೧೦೧ ॥ ತಂ ಬ್ರಹ್ಮಣೋಽ
ಸ್ತ್ರೇಣ ನಿಯೋಜ್ಯ ಚಾಪೇ ಶರಂ ಸುಪುಂಖಂ ಯಮದೂತಕಲ್ಪಂ । ಸೌಮಿತ್ರಿರಿಂದ್ರಾ

ಕಾರಣದಿಂದ, ಅನ್ಯೇಷಾಂ - ಇತರ, ಅಸ್ತ್ರಾಣಾಂ - ಅಸ್ತ್ರಗಳಿಗೆ, ಅವಧ್ಯಃ - ವಧಿಸಲಸಾಧ್ಯನೋ, ತತ್ - ಆ ಕಾರಣದಿಂದ, ಏನಂ - ಇವನನ್ನು, ಬ್ರಾಹ್ಮೇಣಾಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಛಿಂಧಿ - ಕತ್ತರಿಸು, ಅನ್ಯಥಾ - ಮತ್ತೊಂದು ರೀತಿಯಾಗಿ, ಏಷಃ - ಇವನು, ವಧ್ಯೋನಹಿ - ವಧ್ಯನಲ್ಲನಷ್ಟೆ, (ಇತಿ - ಇಂತೆಂದು), ವಾಕ್ಯಂ - ಮಾತನ್ನು, ಉವಾಚಹ - ಹೇಳಿದನಷ್ಟೆ. ॥ ೯೮-೯೯ ॥ ತತಸ್ತು - ಆ ಬಳಿಕಲಾದರೆ, ಇಂದ್ರ....ರ್ಯಃ - ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಸೌಮಿತ್ರಿಃ - ಲಕ್ಷ್ಮಣನು, ವಾಯೋಃ - ವಾಯುವಿನ, ವಚನಂತು - ಮಾತನ್ನಾದರೆ, ನಿಶಮ್ಯ - ಕೇಳಿ, ಅಮೋಘ ವೇಗಂ - ವ್ಯರ್ಥವಾಗದ ವೇಗವುಳ್ಳ, ತದ್ಬ್ರಾ....ಸ್ತ್ರಂ - ಆ ಬ್ರಹ್ಮಾಸ್ತ್ರವನ್ನು, ಸಹಸಾ - ಜಾಗ್ರತೆ ಯಾಗಿ, ನಿಯೋಜ್ಯ - ಸೇರಿಸಿ, ಬಾಣಂ - ಬಾಣವನ್ನು, ಸಮಾದಧೇ - ಸಂಧಾನ ಮಾಡಿದನು. ॥ ೧೦೦ ॥ ಸೌಮಿತ್ರಿಣಾ - ಲಕ್ಷ್ಮಣನಿಂದ, ಶಿತಾಗ್ರೇ - ತೀಕ್ಷ್ಣವಾದ ತುದಿಯುಳ್ಳ, ಬಾಣವರೇ - ಉತ್ತಮ ಬಾಣದಲ್ಲಿ, ತಸ್ಮಿನ್ಮಹಾಸ್ತ್ರೇ - ಆ ಬ್ರಹ್ಮಾಸ್ತ್ರವು, ನಿಯುಜ್ಯಮಾನೇ - ಸಂಧಾನ ಮಾಡಲ್ಪಟ್ಟಿದ್ದಾಗಲೂ, ದಿಶಶ್ಚ - ದಿಕ್ಕುಗಳೂ, ಚಂದ್ರಾ....ಶ್ಚ - ಚಂದ್ರಸೂರ್ಯರೂ ಇತರ ಗ್ರಹಗಳೂ, ತತ್ರಸುಃ - ನಡುಗಿದವು, ನಭಶ್ಚ - ಗಗನವೂ, ತತ್ರಾಸ - ಹೆದರಿತು, ಉರ್ವೀಚ - ಭೂಮಿಯು ಕೂಡ, ಚಚಾಲ - ಕದಲಿತು. ॥ ೧೦೧ ॥ ಸೌಮಿತ್ರಿಃ - ಲಕ್ಷ್ಮಣನು, ಚಾಪೇ - ಧನುಸ್ಸಿನಲ್ಲಿ, ಬ್ರಹ್ಮಣಃಅಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಯಮ....ಲ್ಪಂ - ಯಮದೂತನಿಗೆ ಸಮಾನವಾದ, ಸುಪುಂಖಂ - ಒಳ್ಳೆಯ ಕೊನೆಯುಳ್ಳ, ತಂಶರಂ - ಆ ಬಾಣವನ್ನು, ನಿಯೋಜ್ಯ - ಸಂಧಾನಮಾಡಿ, ಯುಧಿ - ಕಾಳಗದಲ್ಲಿ, ವಜ್ರಕಲ್ಪಂ - ವಜ್ರಾಯುಧಕ್ಕೆ ಸಮಾನವಾದ, ಬಾಣಂ - ಬಾಣವನ್ನು,

---

ಲಕ್ಷ್ಮಣನೇ ! ಇವನಿಗೆ ಬ್ರಹ್ಮನು ವರಗಳನ್ನಿತ್ತಿರುವನು. ಇವನು ಅಭೇದ್ಯವಾದ ಕವಚವುಳ್ಳವನು. ಇವನನ್ನು ಬ್ರಹ್ಮಾಸ್ತ್ರದಿಂದಲೇ ಹೊಡೆದು ಕೆಡಹು. ಇತರ ಅಸ್ತ್ರಗಳಿಂದ ಇವನನ್ನು ಕೊಲ್ಲಲು ಸಾಧ್ಯವಾಗುವುದಿಲ್ಲವು. ಇವನು ಅವಧ್ಯಕವಚನಾದುದರಿಂದಲೂ, ಮಹಾ ಬಲಾಢ್ಯನಾದುದರಿಂದಲೂ ಇವನನ್ನು ಬ್ರಹ್ಮಾಸ್ತ್ರದಿಂದಲೇ ಸಂಹರಿಸಬೇಕು" ಎಂದು ಹೇಳಿದನು. ಮಹೇಂದ್ರಪರಾಕ್ರಮಿಯಾದ ಲಕ್ಷ್ಮಣನು ವಾಯುದೇವನ ಮಾತುಗಳನ್ನು ಕೇಳಿ ಬ್ರಹ್ಮಾಸ್ತ್ರದೊಡನೆ ಬಾಣವನ್ನು ಬಿಲ್ಲಿನಲ್ಲಿ ಸಂಧಾನ ಮಾಡಿದನು. ಆ ಮಹಾಸ್ತ್ರವನ್ನು ಹೂಡುವ ಸಮಯದಲ್ಲಿ ಚಂದ್ರಸೂರ್ಯಾದಿ ಗ್ರಹಗಳೂ, ಅಂತರಿಕ್ಷವೂ, ಭೂಮಿಯೂ ಭಯದಿಂದ ಗಡಗಡನೆ ನಡುಗಿಹೋದುವು. ॥ ೯೭-೧೦೦ ॥ ತರುವಾಯ ಆ ರಾಕ್ಷಸನು ಲಕ್ಷ್ಮಣನು ಪ್ರಯೋಗಿಸಿದ ಬ್ರಹ್ಮಾಸ್ತ್ರವನ್ನು ನೋಡಿ ಬಹು ಜಾಗ್ರತೆಯಾಗಿ ತೀಕ್ಷ್ಣವಾದ ಅನೇಕ ಬಾಣಗಳನ್ನು ಅದರಮೇಲೆ ಪ್ರಯೋಗಿಸಿದನು. ಆದರೂ ಗರುಡ

ರಿಸುತಸ್ಯ ತಸ್ಯ ಸಸರ್ಜ ಬಾಣಂ ಯುಧಿ ವಜ್ರಕಲ್ಪಂ ॥ ೧೦೨ ॥ ತಂ ಲಕ್ಷ್ಮಣೋ
ತ್ಸೃಷ್ಟಮಮೋಘವೇಗಂ ಸಮಾಪತಂತಂ ಜ್ವಲನಪ್ರಕಾಶಂ । ಸುವರ್ಣವಜ್ರೋ
ತ್ತಮಚಿತ್ರಪುಂಖಂ ತದಾತಿಕಾಯಸ್ಸಮರೇ ದದರ್ಶ ॥ ೧೦೩ ॥ ತಂ ಪ್ರೇಕ್ಷಮಾಣ
ಸ್ಸಹಸಾಽತಿಕಾಯೋ ಜಘಾನಬಾಣೈರ್ನಿಶಿತೈರನೇಕೈಃ । ಸಸಾಯಕಸ್ತಸ್ಯ ಸುಪರ್ಣ
ವೇಗಸ್ತದಾತಿಕಾಯಸ್ಯ ಜಗಾಮ ಪಾರ್ಶ್ವಂ ॥೧೦೪॥ ತಮಾಗತಂ ಪ್ರೇಕ್ಷ್ಯ ತದಾಽತಿ
ಕಾಯೋ ಬಾಣಂ ಪ್ರದೀಪ್ತಾಂತಕಕಾಲಕಲ್ಪಂ । ಜಘಾನ ಶಕ್ತ್ಯೃಷ್ಟಿಗದಾಕುಠಾರೈಃ
ಶೂಲೈರ್ಹುಳೈಶ್ಚಾಪ್ಯವಿಪನ್ನಚೇತಾಃ ॥ ೧೦೫ ॥ ತಾನ್ಯಾಯುಧಾನ್ಯದ್ಭುತವಿಗ್ರಹಾಣಿ
ಮೋಘಾನಿ ಕೃತ್ವಾ ಸ ಶರೋಗ್ನಿದೀಪ್ತಃ । ಪ್ರಗೃಹ್ಯ ತಸ್ಯೈವ ಕಿರೀಟಜುಷ್ಟಂ
ತತೋಽತಿಕಾಯಸ್ಯ ಶಿರೋ ಜಹಾರ ॥ ೧೦೬ ॥ ತಚ್ಛಿರಸ್ಸಶಿರಸ್ತ್ರಾಣಂ ಲಕ್ಷ್ಮಣೇಷು

ಇಂದ್ರಾ....ಸ್ಯ - ರಾವಣನಿಗೆ ಮಗನಾದ, ತಸ್ಯ - ಆ ಅತಿಕಾಯನಿಗಾಗಿ, ಸಸರ್ಜ - ಬಿಟ್ಟನು. ॥೧೦೨॥ ತದಾ - ಆ ಕಾಲದಲ್ಲಿ, ಅತಿಕಾಯಃ - ಅತಿಕಾಯನು, ಸಮರೇ - ಕಾಳೆಗದಲ್ಲಿ, ಲಕ್ಷ್ಮಣೋತ್ಸೃಷ್ಟಂ - ಲಕ್ಷ್ಮಣನಿಂದ ಬಿಡಲ್ಪಟ್ಟ, ಅಮೋಘವೇಗಂ - ವ್ಯರ್ಥವಾಗದ ವೇಗವುಳ್ಳುದಾಗಿ, ಸಮಾಪತಂತಂ - ಬರುತ್ತಿರುವ, ಜ್ವಲ....ಶಂ - ಅಗ್ನಿಗೆ ಸಮಾನವಾದ ಪ್ರಕಾಶವುಳ್ಳ, ಸುವ....ಖಂ - ಸುವರ್ಣದಿಂದಲೂ ಉತ್ತಮ ವಜ್ರದಿಂದಲೂ ಆಶ್ಚರ್ಯಕರವಾದ ಕೊಂಕಿಗಳುಳ್ಳ, ತಂ - ಆ ಬಾಣವನ್ನು, ದದರ್ಶ - ಕಂಡನು. ॥೧೦೩॥ ಅತಿಕಾಯಃ - ಅತಿಕಾಯನು, ತಂ - ಆ ಬಾಣವನ್ನು, ಪ್ರೇಕ್ಷಮಾಣಃ - ನೋಡುತ್ತ, ನಿಶಿತೈಃ - ತೀಕ್ಷ್ಣವಾದ, ಅನೇಕೈರ್ಬಾಣೈಃ - ಬಹು ಬಾಣಗಳಿಂದ, ಸಹಸಾ - ಜಾಗ್ರತೆಯಾಗಿ, ಜಘಾನ - ಹೊಡೆದನು, ತದಾ - ಆ ಕಾಲದಲ್ಲಿ, ಸುಪರ್ಣವೇಗಃ - ಗರುಡನ ವೇಗವುಳ್ಳ, ಸಸಾಯಕಃ - ಆ ಬಾಣವು, ತಸ್ಯ - ಆ ಅತಿಕಾಯನ, ಪಾರ್ಶ್ವಂ - ಪಾರ್ಶ್ವವನ್ನು ಕುರಿತು, ಜಗಾಮ - ತೆರಳಿತು. ॥ ೧೦೪ ॥ ತದಾ - ಆಗ, ಅತಿಕಾಯಃ - ಅತಿಕಾಯನು, ಅವಿ....ತಾಃ - ವಿಪತ್ತನ್ನು ಹೊಂದಿದ ಮನಸ್ಸುಳ್ಳವನಾಗಿ, ಪ್ರದೀ....ಲ್ಪಂ - ಪ್ರಜ್ವಲಿಸುತ್ತಿರುವ ಯಮನಿಗೆ ಸಮಾನನಾಗಿ, ಆಗತಂ - ಬಂದ, ಬಾಣಂ - ಬಾಣವನ್ನು, ಪ್ರೇಕ್ಷ್ಯ - ಕಂಡು, ಶಕ್ತ್ಯ....ರೈಃ - ಶಕ್ತ್ಯಾಯುಧದಿಂದಲೂ, ದೊಣ್ಣೆಗಳಿಂದಲೂ, ಗದಾಯುಧದಿಂದಲೂ, ಕೊಡಲಿಗಳಿಂದಲೂ, ಶೂಲೈಃ - ಶೂಲಾಯುಧಗಳಿಂದಲೂ, ಹುಳೈಶ್ಚಾಪಿ - ಎರಡು ರೆಕ್ಕೆಗಳೂ, ಕೊನೆಗಳೂ ಉಳ್ಳ ಆಯುಧವಿಶೇಷಗಳಿಂದಲೂ, ಜಘಾನ - ಹೊಡೆದನು. ॥೧೦೫॥ ಅಗ್ನಿದೀಪ್ತಃ - ಬೆಂಕಿಯಂತೆ ಹೊಳೆವ, ಸಶರಃ - ಆ ಬಾಣವು, ಅದ್ಭು....ಣಿ - ಆಶ್ಚರ್ಯಕರವಾದ ಆಕಾರಗಳುಳ್ಳ, ತಾನ್ಯಾಯುಧಾನಿ - ಆ ಆಯುಧಗಳನ್ನು, ಮೋಘಾನಿ - ವ್ಯರ್ಥಗಳನ್ನಾಗಿ, ಕೃತ್ವಾ - ಮಾಡಿ, ತತಃ - ಬಳಿಕ, ತಸ್ಯಅತಿಕಾಯಸ್ಯ - ಆ ಅತಿಕಾಯನ, ಕಿರೀಟಜುಷ್ಟಂ - ಕಿರೀಟದಿಂದ ಯುಕ್ತವಾದ, ಶಿರಃ - ಶಿರ

ವೇಗವುಳ್ಳ ಆ ಬ್ರಹ್ಮಾಸ್ತ್ರವು ಆ ರಾಕ್ಷಸನ ಪಾರ್ಶ್ವಕ್ಕೆ ಬಂದಿತು. ಪ್ರಜ್ವಲಿಸುತ್ತ ಯಮನಿಗೆ ಸಮಾನವಾಗಿರುವ ಆ ಬಾಣವು ತನ್ನ ಪಾರ್ಶ್ವಕ್ಕೆ ಬಂದುದನ್ನು ಕಂಡು ಆ ಅತಿಕಾಯನು ಕೂಡಲೇ ಮತಿಗೆಟ್ಟು, ಶಕ್ತ್ಯಾಯುಧದಿಂದಲೂ, ಕೋಲುಗಳಿಂದಲೂ, ದೊಣ್ಣೆಗಳಿಂದಲೂ, ಕುಠಾರಗಳಿಂದಲೂ, ಇನ್ನೂ ಉಗ್ರವಾದ ಬಾಣಗಳಿಂದಲೂ ಅದನ್ನು ಹೊಡೆದನು. ॥೧೦೧–೧೦೫॥ ಅಗ್ನಿಯಂತೆ ಪ್ರಜ್ವಲಿಸುತ್ತಿರುವ ಆ ಬ್ರಹ್ಮಾಸ್ತ್ರಸಮನ್ವಿತವಾದ ಬಾಣವು ಮಹಾದ್ಭುತಾಕಾರಗಳಾದ ಆ ಆಯುಧಗಳೆಲ್ಲವನ್ನೂ ನಿಷ್ಫಲಗಳನ್ನಾಗಿ ಮಾಡಿ ಕಿರೀಟದಿಂದ ಕೂಡಿದ

ಪ್ರಪೀಡಿತಂ । ಪಪಾತ ಸಹಸಾ ಭೂಮೌ ಶೃಂಗಂ ಹಿಮವತೋ ಯಥಾ ॥ ೧೦೭ ॥ ತಂ ತು ಭೂಮೌ ನಿಪತಿತಂ ದೃಷ್ಟ್ವಾ ವಿಕ್ಷಿಪ್ತಭೂಷಣಂ । ಬಭೂವುರ್ವ್ಯಥಿತಾಸ್ಸರ್ವೇ ಹತಶೇಷಾ ನಿಶಾಚರಾಃ ॥ ೧೦೮ ॥ ತೇ ವಿಷಣ್ಣಮುಖಾ ದೀನಾಃ ಪ್ರಹಾರಜನಿತಶ್ರಮಾಃ । ವಿನೇದುರುಚ್ಚೈರ್ಬಹವಃ ಸಹಸಾ ವಿಸ್ವರೈಸ್ಸ್ವರೈಃ ॥೧೦೯॥ ತತಸ್ತೇ ತ್ವರಿತಂ ಯಾತಾ ನಿರಪೇಕ್ಷಾ ನಿಶಾಚರಾಃ । ಪುರೀಮಭಿಮುಖಾ ಭೀತಾ ದ್ರವಂತೋ ನಾಯಕೇ ಹತೇ ॥ ೧೧೦ ॥ ಪ್ರಹರ್ಷಯುಕ್ತಾ ಬಹವಸ್ತು ವಾನರಾಃ ಪ್ರಬುದ್ಧಪದ್ಮಪ್ರತಿಮಾನನಾಸ್ತದಾ । ಅಪೂಜಯನ್ ಲಕ್ಷ್ಮಣಮಿಷ್ಟಭಾಗಿನಂ ಹತೇ ರಿಪೌ ಭೀಮಬಲೇ ದುರಾಸದೇ ॥ ೧೧೧ ॥

ಸ್ಸನ್ನು, ಪ್ರಗೃಹ್ಯೈವ - ಹಿಡಿದೇ, ಜಹಾರ - ಅಪಹರಿಸಿತು. ॥ ೧೦೬ ॥ ಸಶಿರಸ್ತ್ರಾಣಂ - ಕಿರೀಟದಿಂದೊಡಗೂಡಿದ, ತಚ್ಛಿರಃ - ಆ ಅತಿಕಾಯನ ಶಿರಸ್ಸು, ಲಕ್ಷ್ಮ....ತಂ - ಲಕ್ಷ್ಮಣನ ಬಾಣದಿಂದ ಕತ್ತರಿಸಲ್ಪಟ್ಟುದಾಗಿ, ಹಿಮವತಃ - ಹಿಮವತ್ಪರ್ವತದ, ಶೃಂಗಂಯಥಾ - ಶಿಖರದಂತೆ, ಸಹಸಾ - ಜಾಗ್ರತೆಯಾಗಿ, ಭೂಮೌ - ನೆಲದಲ್ಲಿ, ಪಪಾತ - ಬಿದ್ದಿತು. ॥ ೧೦೭ ॥ ಭೂಮೌ - ನೆಲದಲ್ಲಿ, ವಿಕ್ಷಿ....ಣಃ - ಎರಚಲ್ಪಟ್ಟ ಒಡವೆಗಳುಳ್ಳ, ತಂತು - ಆ ಅತಿಕಾಯನನ್ನಾದರೆ, ಪತಿತಂ - ಬಿದ್ದವನನ್ನಾಗಿ, ದೃಷ್ಟ್ವಾ - ಕಂಡು, ಹತಶೇಷಾಃ - ಮಡಿದವರಲ್ಲಿ ಉಳಿದ, ಸರ್ವೇ - ಸಮಸ್ತರಾದ, ನಿಶಾಚರಾಃ-ರಾಕ್ಷಸರು, ವ್ಯಥಿತಾಃ-ವ್ಯಥೆಯುಳ್ಳವರು, ಬಭೂವುಃ-ಆದರು. ॥ ೧೦೮ ॥ ಪ್ರಹಾ....ಮಾಃ-ಹೊಡೆತದಿಂದ ಹುಟ್ಟಿದ ಆಯಾಸವುಳ್ಳ, ವಿಷಣ್ಣಮುಖಾಃ - ದೀನಮುಖಗಳುಳ್ಳ, ದೀನಾಃ - ಪರಿತಪ್ತರಾದ, ಬಹವಃ - ಅನೇಕರಾದ, ತೇ - ಆ ರಕ್ಕಸರು,' ವಿಸ್ವರೈಃ - ಗದ್ಗದವಾದ, ಸ್ವರೈಃ - ಸ್ವರಗಳಿಂದ, ಸಹಸಾ - ಜಾಗ್ರತೆಯಾಗಿ, ಉಚ್ಚೈಃ - ಗಟ್ಟಿಯಾಗಿ, ವಿನೇದುಃ - ಕೂಗಿದರು. ॥ ೧೦೯ ॥ ತತಃ - ಬಳಿಕ, ನಾಯಕೇ - ಸೇನಾನಾಯಕನು, ಹತೇ - ಸಂಹೃತನಾಗಲೂ, ನಿರಪೇಕ್ಷಾಃ - ಯುದ್ಧದಲ್ಲಿ ಅಪೇಕ್ಷೆಯಿಲ್ಲದವರಾಗಿ, ಭೀತಾಃ - ಭಯಗೊಂಡ, ತೇನಿಶಾಚರಾಃ - ಆ ರಕ್ಕಸರು, ತ್ವರಿತಂ - ಜಾಗ್ರತೆಯಾಗಿ, ದ್ರವಂತಃ - ಓಡಿ, ಪುರೀಂ - ಲಂಕಾಪಟ್ಟಣಕ್ಕೆ, ಅಭಿಮುಖಾಃ - ಅಭಿಮುಖರಾಗಿ, ಯಾತಾಃ - ಹೋದರು. ॥ ೧೧೦ ॥ ಭೀಮಬಲೇ - ಭಯಂಕರ ಸಾಮರ್ಥ್ಯವುಳ್ಳ, ದುರಾಸದೇ - ಹೊಂದಲಸಾಧ್ಯನಾದ, ರಿಪೌ-ಶತ್ರುವಾದ ಅತಿಕಾಯನು, ಹತೇ-ಮಡಿಯಲು, ಪ್ರಹರ್ಷಯುಕ್ತಾಃ-ಸಂತೋಷದಿಂದ ಕೂಡಿರುವ, ಪ್ರಬು....ನಾಃ - ಅರಳಿದ ಕಮಲಗಳಿಗೆ ಸಮಾನವಾದ ಮುಖಗಳುಳ್ಳ,

---

ಆ ರಾಕ್ಷಸನ ತಲೆಯನ್ನು ಅಪಹರಿಸಿಕೊಂಡೇ ಹೋಯಿತು. ಲಕ್ಷ್ಮಣನು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಪೀಡಿತವಾಗಿ ಕಿರೀಟದಿಂದ ವಿರಾಜಿಸುತ್ತಿದ್ದ ಆ ಅತಿಕಾಯನ ಶಿರಸ್ಸು ಹಿಮವತ್ಪರ್ವತದ ಶಿಖರದಂತೆ ಭೂಮಿಗೆ ಬಿದ್ದಿತು. ಕೂಡಲೇ ಆ ರಾಕ್ಷಸನು ನೆಲಕ್ಕುರುಳಿದನು. ಅವನ ಭೂಷಣಗಳೆಲ್ಲವೂ ಅತ್ತಿತ್ತ ಚದುರಿ ನೆಲಕ್ಕೆ ಬಿದ್ದುವು. ನಿಶಾಚರರೆಲ್ಲರೂ ಅವನನ್ನು ನೋಡಿ ಬಹಳವಾಗಿ ವ್ಯಸನಗೊಂಡರು. ಹೊಡೆದಾಟದಿಂದ ಮೊದಲೇ ಬೇಸತ್ತಿದ್ದ ಆ ರಾಕ್ಷಸರು ತಮ್ಮ ನಾಯಕನಾದ ಅತಿಕಾಯನೂ ಮಡಿಯಲು ದೀನಮುಖರಾಗಿ ವಿಕಾರವಾಗಿ ಅರಚಿದರು. ಆ ತರುವಾಯ ಅವರೆಲ್ಲರೂ ತಮ್ಮ ಸೇನಾಪತಿಯು ಮಡಿಯಲು ಯುದ್ಧದಲ್ಲಿ ನಿರಪೇಕ್ಷರಾಗಿ ಭಯದಿಂದ ತತ್ತಳಿಸಿ ಜಾಗ್ರತೆಯಾಗಿ ಲಂಕಾಭಿಮುಖವಾಗಿ ಹೊರಟುಹೋದರು. ಹೀಗೆ ದುಸ್ಸಾಧ್ಯನಾದ ಆ ರಾಕ್ಷಸನು ಮಡಿಯಲು ಅರಳಿದ ಕಮಲ

(ಅತಿಬಲಮತಿಕಾಯಮಭ್ರಕಲ್ಪಂ
ಯುಧಿ ವಿನಿಪಾತ್ಯ ಸ ಲಕ್ಷ್ಮಣಃ ಪ್ರಹೃಷ್ಟಃ ।
ತ್ವರಿತಮಥ ತದಾ ಸರಾಮಪಾರ್ಶ್ವಂ
ಕಪಿನಿವಹೈಶ್ಚ ಸುಪೂಜಿತೋ ಜಗಾಮ) ॥ ೧೧೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಸಪ್ತತಿತಮಸ್ಸರ್ಗಃ.

ಬಹವಃವಾನರಾಸ್ತು - ಅನೇಕ ಕಪಿಗಳಾದರೆ, ತದಾ - ಆಗ, ಇಷ್ಟಭಾಗಿನಂ - (ಪ್ರೀತಿಪಾತ್ರನಾದ) ಜಯವನ್ನು ಹೊಂದಿದ, ಲಕ್ಷ್ಮಣಂ - ಲಕ್ಷ್ಮಣನನ್ನು, ಅಪೂಜಯರ್ - ಬಹುಮಾನಿಸಿದರು. ॥೧೧೧॥ ಅಥ - ಆ ತರುವಾಯ, ಸಲಕ್ಷ್ಮಣಃ - ಆ ಲಕ್ಷ್ಮಣನು, ಅತಿಬಲಂ - ಮಹಾ ಬಲಾಢ್ಯನಾದ, ಅಭ್ರಕಲ್ಪಂ - ಮುಗಿಲಿಗೆ ಸಮಾನನಾದ, ಅತಿಕಾಯಂ - ಅತಿಕಾಯನನ್ನು, ಯುಧಿ - ಕಾಳೆಗದಲ್ಲಿ, ವಿನಿಪಾತ್ಯ - ಸಂಹರಿಸಿ, ಪ್ರಹೃಷ್ಟಃ - ಸಂತೋಷಗೊಂಡವನಾಗಿ, ತದಾ - ಆಗ, ತ್ವರಿತಂ - ಬೇಗನೆ, ರಾಮಪಾರ್ಶ್ವಂ - ಶ್ರೀರಾಮನ ಬಳಿಗೆ, ಜಗಾಮ - ಹೋದನು, ಚ - ಮತ್ತು, ಕಪಿನಿವಹೈಃ - ಕಪಿಸಮೂಹದಿಂದ, ಸುಪೂಜಿತಃ - ಪೂಜಿಸಲ್ಪಟ್ಟನು. ॥ ೧೧೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಸಪ್ತತಿತಮಸ್ಸರ್ಗಃ

ಗಳಂತೆ ಹರ್ಷಯುಕ್ತವಾದ ನೇತ್ರಗಳುಳ್ಳ ವಾನರರೆಲ್ಲರೂ ಪ್ರಿಯಕರನಾದ ಲಕ್ಷ್ಮಣಸ್ವಾಮಿಯನ್ನು ಪೂಜಿಸಿದರು. (ಲಕ್ಷ್ಮಣನೂ ಸಹ ಮೇಘೋಪಮನಾಗಿಯೂ, ಮಹಾ ಬಲಾಢ್ಯನಾಗಿಯೂ ಇರುವ ಆ ಅತಿಕಾಯ ರಾಕ್ಷಸನನ್ನು ಸಂಹರಿಸಿ ಸಂತೋಷಗೊಂಡು ಕಪಿವರರಿಂದ ಪೂಜೆಯನ್ನು ಕೈಕೊಳ್ಳುತ್ತ ಅಗ್ರಜನಾದ ಶ್ರೀರಾಮನ ಬಳಿಗೈದಿದನು). ॥೧೦೬–೧೧೨॥

ಇಂತಿದು ಅತಿಕಾಯ ಸಂಹಾರವೆಂಬ ಎಪ್ಪತ್ತೊಂದನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ದ್ವಿಸಪ್ತತಿತಮಸ್ಸರ್ಗಃ

ಅತಿಕಾಯಂ ಹತಂ ಶ್ರುತ್ವಾ ಲಕ್ಷ್ಮಣೇನ ಮಹೌಜಸಾ । ಉದ್ವೇಗಮಗಮ ದ್ರಾಜಾ ವಚನಂ ಚೇದಮಬ್ರವೀತ್ ॥ ೧ ॥ "ಧೂಮ್ರಾಕ್ಷಃ ಪರಮಾಮರ್ಷೀ ಧನ್ವೀ ಶಸ್ತ್ರಭೃತಾಂ ವರಃ । ಅಕಂಪನಃ ಪ್ರಹಸ್ತಶ್ಚ ಕುಂಭಕರ್ಣಸ್ತಥೈವಚ ॥ ೨ ॥ ಏತೇ ಮಹಾಬಲಾ ವೀರಾ ರಾಕ್ಷಸಾ ಯುದ್ಧಕಾಂಕ್ಷಿಣಃ । ಜೇತಾರಃ ಪರಸೈನ್ಯಾನಾಂ ಪರೈರ್ನಿತ್ಯಾಽಪರಾಜಿತಾಃ॥೩॥ ನಿಹತಾಸ್ತೇ ಮಹಾವೀರ್ಯಾ ರಾಮೇಣಾಕ್ಲಿಷ್ಟಕರ್ಮಣಾ। ರಾಕ್ಷಸಾಸ್ಸುಮಹಾಕಾಯಾ ನಾನಾಶಸ್ತ್ರವಿಶಾರದಾಃ ॥೪॥ ಅನ್ಯೇಚ ಬಹವಃ ಶೂರಾ

ರಾಜಾ - ರಾವಣನು, ಅತಿಕಾಯಂ - ಅತಿಕಾಯನನ್ನು, ಮಹೌಜಸಾ - ಮಹಾ ಪರಾಕ್ರಮಿಯಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಹತಂ - ಸಂಹೃತನನ್ನಾಗಿ, ಶ್ರುತ್ವಾ - ಕೇಳಿ, ಉದ್ವೇಗಂ - ಭಯಕಂಪವನ್ನು, ಅಗಮತ್ - ಹೊಂದಿದನು, ಇದಂವಚನಂಚ - ಈ ಮಾತನ್ನೂ ಕೂಡ, ಅಬ್ರವೀತ್ - ನುಡಿದನು. ॥ ೧ ॥ ಪರಮಾಮರ್ಷೀ - ಬಹಳ ಕೋಪವುಳ್ಳ, ಧನ್ವೀ - ಧನುರ್ಧಾರಿಯಾದ, ಶಸ್ತ್ರಭೃತಾಂ-ಶಸ್ತ್ರಧಾರಿಗಳಲ್ಲಿ, ವರಃ-ಉತ್ತಮನಾದ, ಧೂಮ್ರಾಕ್ಷಃ-ಧೂಮ್ರಾಕ್ಷನು, ಅಕಂಪನಃ-ಅಕಂಪನನು, ಪ್ರಹಸ್ತಶ್ಚ - ಪ್ರಹಸ್ತನೂ, ತಥೈವ - ಹಾಗೆಯೇ, ಕುಂಭಕರ್ಣಶ್ಚ - ಕುಂಭಕರ್ಣನೂ, ಮಹಾಬಲಾಃ - ಮಹಾ ಸಾಮರ್ಥ್ಯವಂತರಾದ, ಏತೇರಾಕ್ಷಸಾಃ - ಈ ರಕ್ಕಸರು, ವೀರಾಃ - ಶೂರರು, ಯುದ್ಧಕಾಂಕ್ಷಿಣಃ-ಯುದ್ಧದಲ್ಲಿ ಅಪೇಕ್ಷೆಯುಳ್ಳವರು, ಪರಸೈನ್ಯಾನಾಂ-ಶತ್ರುಸೈನ್ಯಗಳಿಗೆ, ಜೇತಾರಃ-ಜಯಶೀಲರು, ಪರೈಃ - ಶತ್ರುಗಳಿಂದ, ನಿತ್ಯಾ....ತಾಃ - ನಿರಂತರವೂ ಪರಾಜಿತರಲ್ಲದಿರುವರು, ಮಹಾವೀರ್ಯಾಃ-ಮಹಾ ಸಾಮರ್ಥ್ಯವಂತರಾದ, ಸುಮಹಾಕಾಯಾಃ-ಮಹಾ ಶರೀರಗಳುಳ್ಳ, ನಾನಾ....ದಾಃ_ ನಾನಾವಿಧವಾದ ಶಸ್ತ್ರಗಳ ಪ್ರಯೋಗಗಳಲ್ಲಿ ಸಮರ್ಥರಾದ, ತೇರಾಕ್ಷಸಾಃ-ಆ ರಕ್ಕಸರು, ಅಕ್ಲಿ....ಣಾ-ಕ್ಲೇಶವಿಲ್ಲದ ವ್ಯಾಪಾರವುಳ್ಳ, ರಾಮೇಣ - ಶ್ರೀರಾಮನಿಂದ, ನಿಹತಾಃ - ಹೊಡೆಯಲ್ಪಟ್ಟ, ಬಹವಃ - ಅನೇಕರಾದ, ಅನ್ಯೇ - ಮತ್ತೆ ಕೆಲವರಾದ, ಮಹಾತ್ಮಾನಃ - ಮಹಾ ಪ್ರಭಾವವಂತರಾದ, ಶೂರಾಃ - ಶೂರರು, ನಿಪಾತಿತಾಃ - ಬೀಳಿಸಲ್ಪಟ್ಟರು. ॥ ೩-೪ ॥ ಪ್ರಖ್ಯಾ....ಣ - ಪ್ರಸಿದ್ಧವಾದ ಸಾಮರ್ಥ್ಯವೂ,

---

ರಾಕ್ಷಸರಾಜನಾದ ರಾವಣನು ಮಹಾ ಪರಾಕ್ರಮಶಾಲಿಯಾದ ಲಕ್ಷ್ಮಣಸ್ವಾಮಿಯಿಂದ ಅತಿಕಾಯನು ಹತನಾದ ವರ್ತಮಾನವನ್ನು ಕೇಳಿ ಬಹಳವಾಗಿ ಉದ್ವೇಗವನ್ನು ಹೊಂದಿ, "ಅಕ್ಕಟಾ ! ನಮ್ಮ ಧೂಮ್ರಾಕ್ಷರಾಕ್ಷಸನು ಮಹಾ ರೋಷವುಳ್ಳವನು ಮಾತ್ರವಲ್ಲದೆ ಧಾನುಷ್ಕರಲ್ಲಿ ಉತ್ತಮೋತ್ತಮನಾದವನು. ಇವನಂತೆಯೇ ಅಕಂಪನ, ಪ್ರಹಸ್ತ, ಕುಂಭಕರ್ಣ ಇವರೇ ಮೊದಲಾದ ರಾಕ್ಷಸವೀರರೂ ಮಹಾ ಬಲಾಢ್ಯರಾದವರು ; ಎಲ್ಲರೂ ಯುದ್ಧಾಪೇಕ್ಷೆಯುಳ್ಳವರು ; ಎಲ್ಲರೂ ಹಗೆಗಳನ್ನು ಸದೆಬಡಿಯುವ ಸಾಮರ್ಥ್ಯವುಳ್ಳವರು ; ಎಂದಿಗೂ ಸೋಲನ್ನು ಪಡೆದವರಲ್ಲವು. ಇಂಥವರು ಕ್ಲೇಶವಿಲ್ಲದೆ ಸಮಸ್ತ ಕಾರ್ಯಗಳನ್ನೂ ಕೈಗೂಡಿಸಿಕೊಳ್ಳುವ ಆ ರಾಮನಿಂದ ಸೋತು ಹತರಾಗಿಹೋದರು. ಮಹಾಕಾಯರೂ, ನಾನಾ ಶಸ್ತ್ರವಿಶಾರದರೂ, ಮಹಾ ಶೂರರೂ ಆದ ಅನೇಕ ಇತರ ರಾಕ್ಷಸರೂ ಅಂತೆಯೇ

ಮಹಾತ್ಮಾನೋ ನಿಪಾತಿತಾಃ । ಪ್ರಖ್ಯಾತಬಲವೀರ್ಯೇಣ ಪುತ್ರೇಣೇಂದ್ರಜಿತಾ ಮಮ ॥೫॥ ಯೌಹಿ ತೌ ಭ್ರಾತರೌ ವೀರೌ ಬದ್ಧೌ ದತ್ತವರೈಃ ಶರೈಃ । ಯನ್ನಶಕ್ಯಂ ಸುರೈ ಸ್ಸರ್ವೈರಸುರೈರ್ವಾಮಹಾಬಲೈಃ ॥ ೬ ॥ ಮೋಕ್ತುಂ ತದ್ಬಂಧನಂ ಘೋರಂ ಯಕ್ಷ ಗಂಧರ್ವಕಿನ್ನರೈಃ । ತನ್ನಜಾನೇ ಪ್ರಭಾವೈರ್ವಾ ಮಾಯಯಾ ಮೋಹನೇನ ವಾ ॥ ೭ ॥ ಶರಬಂಧಾದ್ವಿಮುಕ್ತೌ ತೌ ಭ್ರಾತರೌ ರಾಮಲಕ್ಷ್ಮಣೌ । ಯೇ ಯೋಧಾ ನಿರ್ಗತಾಃ ಶೂರಾ ರಾಕ್ಷಸಾ ಮಮ ಶಾಸನಾತ್ ॥೮॥ ತೇ ಸರ್ವೇ ನಿಹತಾ ಯುದ್ಧೇ ವಾನರೈಸ್ಸುಮಹಾಬಲೈಃ । ತಂ ನಪಶಾಮ್ಯಹಂ ಯುದ್ಧೇ ಯೋಽದ್ಯ ರಾಮಂ

ಪರಾಕ್ರಮವೂ ಉಳ್ಳ, ಮಮ - ನನ್ನ, ಪುತ್ರೇಣ - ಮಗನಾದ, ಇಂದ್ರಜಿತಾ - ಇಂದ್ರಜಿತ್ತುವಿನಿಂದ, ವೀರೌ - ಶೂರರಾದ, ಭ್ರಾತರೌ - ಅಣ್ಣತಮ್ಮಂದಿರಾದ, ಯೌತೌ - ಯಾವ ಆ ರಾಮಲಕ್ಷ್ಮಣರು, ದತ್ತವರೈಃ - ಕೊಡಲ್ಪಟ್ಟ ವರವುಳ್ಳ, ಶರೈಃ - ಬಾಣಗಳಿಂದ, ಬದ್ಧೌ - ಕಟ್ಟಿದರು, ಸರ್ವೈಃ-ಸಮಸ್ತ ರಾದ, ಸುರೈಃ - ದೇವತೆಗಳಿಂದಾಗಲಿ, ಮಹಾಬಲೈಃ - ಬಹು ಬಲವಂತರಾದ, ಅಸುರೈರ್ವಾ - ರಕ್ಕಸ ರಿಂದಲಾಗಲಿ, ಯತ್ - ಯಾವ ಬಂಧನವು, ಮೋಕ್ತುಂ - ಬಿಡಿಸುವುದಕ್ಕೆ, ನಶಕ್ಯಂ - ಸಾಧ್ಯ ವಲ್ಲವೋ, ಘೋರಂ ಭಯಂಕರವಾದ, ತದ್ಬಂಧನಂ-ಆ ಬಂಧನವು, ಯಕ್ಷ....ರೈಃ-ಯಕ್ಷರಿಂದಲೂ ಗಂಧರ್ವರಿಂದಲೂ, ಮೋಕ್ತುಂ - ಬಿಡಿಸುವುದಕ್ಕಾಗಿ, ನಶಕ್ಯಂ - ಸಾಧ್ಯವಲ್ಲವು, ಭ್ರಾತರೌ - ಅಣ್ಣ ತಮ್ಮಂದಿರಾದ, ತೌರಾಮಲಕ್ಷ್ಮಣೌ-ಆ ರಾಮಲಕ್ಷ್ಮಣರು, ತಸ್ಮಾ....ತ್-ಆ ಬಾಣ ಬಂಧನದಿಂದ, ವಿಮು....ತ್ - ಬಿಡಲ್ಪಟ್ಟರೆಂಬದಾವದೋ, ತತ್ - ಅದನ್ನು, ಪ್ರಭಾವೈರ್ವಾ - ತಮ್ಮ ಸಾಮರ್ಥ್ಯ ದಿಂದಲೋ, ಮಾಯಯಾವಾ-ಮಾಯೆಯಿಂದಲೋ, ಮೋಹನೇನವಾ - ಮೋಹನ ಶಕ್ತಿಯಿಂದಲೋ, ನಜಾನೇ - ತಿಳಿಯಲಾರೆನು. ॥ ೬-೭ ॥ ಮಮ - ನನ್ನ, ಶಾಸನಾತ್ - ಆಜ್ಞೆಯಿಂದ, ಶೂರಾಃ - ವೀರರಾದ, ಯೇಯೋಧಾಃ - ಯಾವ ಭಟರು, ನಿರ್ಗತಾಃ - ಹೊರಟರೋ, ತೇಸರ್ವೇ - ಅವರೆಲ್ಲರೂ, ಯುದ್ಧೇ - ಕಾಳೆಗದಲ್ಲಿ, ಸುಮಹಾಬಲೈಃ - ಬಹಳ ಬಲವಂತರಾದ, ವಾನರೈಃ - ಕಪಿಗಳಿಂದ, ನಿಹತಾಃ - ಹೊಡೆಯಲ್ಪಟ್ಟರು. ॥ ೮ ॥ ಅದ್ಯ - ಈಗ, ಯಃ - ಯಾವ ಪುರುಷನು, ಸಲಕ್ಷ್ಮಣಂ - ಲಕ್ಷ್ಮಣ ನಿಂದೊಡಗೂಡಿದ, ಸಸು....ಣಂ - ಸುಗ್ರೀವ ವಿಭೀಷಣರಿಂದೊಡಗೂಡಿದ, ಸಬಲಂ - ಸೈನ್ಯಸಮೇತ ನಾದ, ವೀರಂ - ಶೂರನಾದ, ರಾಮಂ - ಶ್ರೀರಾಮನನ್ನು, ಯುದ್ಧೇ - ಕಾಳೆಗದಲ್ಲಿ, ಶಾಸಯೇತ್ - ಶಿಕ್ಷಿಸುವನೋ, ತಂ - ಅಂಥವನನ್ನು, ಅಹಂ - ನಾನು, ನಪಶ್ಯಾಮಿ - ಕಾಣೆನು. ॥ ೯ ॥ ರಾಮಃ -

ಮಹಾ ಪರಾಕ್ರಮಿಯಾದ ಆ ರಾಮನಿಂದ ಸಂಹೃತರಾಗಿ ಹೋದರು. ॥ ೧-೪ ॥ ಅಣ್ಣ ತಮ್ಮಂದಿರಾದ ಆ ರಾಮಲಕ್ಷ್ಮಣರನ್ನು ನನ್ನ ಕುಮಾರನಾದ, ಸುಪ್ರಸಿದ್ಧವಾದ ಬಲಪರಾ ಕ್ರಮಗಳುಳ್ಳ ಇಂದ್ರಜಿತ್ತುವು ಸರ್ಪಾಸ್ತ್ರದಿಂದ ಬಂಧಿಸಿದನು. ಆ ಬಂಧನವನ್ನು ಬಿಡಿಸಲು ಮಹಾ ಬಲಾಢ್ಯರಾದ ದೇವಾಸುರರಿಂದಾಗಲಿ, ಯಕ್ಷಗಂಧರ್ವ ಕಿನ್ನರರಿಂದಾಗಲಿ ಶಕ್ಯ ವಿಲ್ಲವು. ಅದಾವ ಪ್ರಭಾವದಿಂದಲೋ, ಅದಾವ ಮೋಹನ ಶಕ್ತಿಯಿಂದಲೋ, ಅದಾವ ಮಾಯಾಬಲದಿಂದಲೋ ಆ ರಾಜಪುತ್ರರೀರ್ವರೂ ಆ ಶರಬಂಧದಿಂದ ಬಿಡುಗಡೆಯಾದರು. ಇದು ನನಗೆ ಪರಮಾಶ್ಚರ್ಯಕರವಾಗಿರುವುದು. ನಾನು ಕಳುಹಿಸಿದ ಮಹಾ ಬಲಪರಾಕ್ರಮಿ ಗಳಾದ ರಾಕ್ಷಸರೆಲ್ಲರೂ ಆ ವಾನರರಿಂದ ಹತರಾಗಿಹೋದರು. ಇನ್ನು ಆ ರಾಮಲಕ್ಷ್ಮಣ ರನ್ನೂ, ವಿಭೀಷಣ ಸುಗ್ರೀವ ಸಹಿತವಾದ ವಾನರಸೈನ್ಯವನ್ನೂ ಶಾಸನಮಾಡುವಹರಾರನ್ನೂ

ಸಲಕ್ಷ್ಮಣಂ ॥೯॥ ಶಾಸಯೇತ್ಸಬಲಂ ವೀರಂ ಸಸುಗ್ರೀವವಿಭೀಷಣಂ । ಅಹೋನು! ಬಲವಾನ್ ರಾಮೋ ಮಹದಸ್ತ್ರಬಲಂಚ ವೈ ॥೧೦॥ ಯಸ್ಯ ವಿಕ್ರಮಮಾಸಾದ್ಯ ರಾಕ್ಷಸಾ ನಿಧನಂಗತಾಃ । ತಂ ಮನ್ಯೇ ರಾಘವಂ ವೀರಂ ನಾರಾಯಣಮನಾಮಯಂ ॥೧೧॥ ತದ್ಭಯಾದ್ಧಿ ಪುರೀ ಲಂಕಾ ಪಿಹಿತದ್ವಾರತೋರಣಾ । ಅಪ್ರಮತ್ತೈಶ್ಚ ಸರ್ವತ್ರ ಗುಪ್ತೈ ರಕ್ಷ್ಯಾ ಪುರೀತ್ವಿಯಂ ॥೧೨॥ ಅಶೋಕವನಿಕಾಯಾಂಚ ಯತ್ರ ಸೀತಾಽಭಿರಕ್ಷ್ಯತೇ । ನಿಷ್ಕ್ರಾಮೋವಾ ಪ್ರವೇಶೋವಾ ಜ್ಞಾತವ್ಯಸ್ಸರ್ವಥೈವ ನಃ ॥೧೩॥ ಯತ್ರ ಯತ್ರ ಭವೇದ್ಗುಲ್ಮಸ್ತತ್ರ ತತ್ರ ಪುನಃಪುನಃ । ಸರ್ವತಶ್ಚಾಪಿ ತಿಷ್ಠಧ್ವಂ

ಶ್ರೀರಾಮನು, ಬಲವಾನ್ - ಬಲವಂತನು, ಅಹೋ - ಆಶ್ಚರ್ಯವು, ಅಸ್ತ್ರಬಲಂಚ - ಅಸ್ತ್ರಬಲವೂ ಕೂಡ, ಮಹತ್‌ವೈ - ದೊಡ್ಡದಾಗಿರುವುದಷ್ಟೆ, ಯಸ್ಯ - ಯಾವ ಶ್ರೀರಾಮನ, ವಿಕ್ರಮಂ - ಪರಾಕ್ರಮವನ್ನು, ಆಸಾದ್ಯ-ಹೊಂದಿ, ರಾಕ್ಷಸಾಃ ರಕ್ಕಸರು, ನಿಧನಂ - ಸಂಹಾರವನ್ನು, ಗತಾಃ-ಹೊಂದಿದರೋ, ವೀರಂ-ಶೂರನಾದ, ತಂರಾಘವಂ-ಆ ಶ್ರೀರಾಮನನ್ನು, ಅನಾಮಯಂ-ಸಕಲ ಬಾಧಾರಹಿತನಾದ, ನಾರಾಯಣಂ - ಶ್ರೀ ಮಹಾ ವಿಷ್ಣುವನ್ನಾಗಿ, ಮನ್ಯೇ - ತಿಳಿಯುತ್ತೇನೆ, ತದ್ಭಯಾತ್-ಆ ಶ್ರೀರಾಮನ ಭಯದಿಂದ, ಲಂಕಾಪುರೀ - ಲಂಕಾಪಟ್ಟಣವು, ಪಿಹಿ... ಣಾಃ - ಮುಚ್ಚಿದ ಒಳಬಾಗಿಲುಗಳೂ, ಹೊರಬಾಗಿಲುಗಳೂ ಉಳ್ಳುದಾಗಿರುವುದಷ್ಟೆ. ॥೧೦-೧೧॥ ಇಯಂಪುರೀ - ಈ ಲಂಕಾಪಟ್ಟಣವು, ಸರ್ವತ್ರ - ಎಲ್ಲ ಸ್ಥಳಗಳಲ್ಲಿಯೂ, ಗುಪ್ತೈಃ - ಸಂರಕ್ಷಣೆಯಲ್ಲಿ ಸಮರ್ಥರಾದ, ಅಪ್ರಮತ್ತೈಶ್ಚ - ಪ್ರಮಾದವನ್ನು ಹೊಂದದಿರುವ ರಾಕ್ಷಸರಿಂದ, ರಕ್ಷ್ಯಾ - ಸಂರಕ್ಷಿಸತಕ್ಕುದು. ॥೧೨॥ ಯತ್ರ ಅಶೋಕವನಿಯಾಂ-ಯಾವ ಅಶೋಕವನದಲ್ಲಿ, ಸೀತಾ-ಸೀತಾದೇವಿಯು, ಅಭಿರಕ್ಷ್ಯತೇ-ರಕ್ಷಿಸಲ್ಪಡುತ್ತಿರುವಳೋ, ತತ್ರ - ಅಲ್ಲಿ, ನಿಷ್ಕ್ರಾಮೋವಾ - ಜನರ ನಿರ್ಗಮನವಾಗಲಿ, ಪ್ರವೇಶೋವಾ - ಪ್ರವೇಶಿಸುವುದಾಗಲಿ, ಸರ್ವಥಾ - ಸರ್ವ ಪ್ರಕಾರದಲ್ಲೂ, ನಃ - ನಮಗೆ, ಜ್ಞಾತವ್ಯಃ - ತಿಳಿಸತಕ್ಕುದು. ॥೧೩॥ ಯತ್ರಯತ್ರ - ಯಾವ ಯಾವ ಸ್ಥಳದಲ್ಲಿ, ಗುಲ್ಮಃ - ಸೈನ್ಯವಿರುವುದೋ, ತತ್ರತತ್ರ - ಆಯಾ ಪ್ರದೇಶಗಳಲ್ಲಿ, ಪುನಃಪುನಃ - ಬಾರಿಬಾರಿಗೂ, ಸರ್ವತಃ - ಎಲ್ಲ ದಿಕ್ಕುಗಳಲ್ಲಿಯೂ, ಸ್ವೈಃಸ್ವೈಃ - ತಮ್ಮ ತಮ್ಮ, ಬಲೈಃ-ಸೈನ್ಯಗಳಿಂದ, ಪರಿವೃತಾಃ-ಸುತ್ತುವರೆಯಲ್ಪಟ್ಟವರಾಗಿ, ತಿಷ್ಠಧ್ವಂ-ಇರುವವರಾಗಿರಿ. ॥೧೪॥

ಕಾಣೆನು. ಆಹ! ಆಶ್ಚರ್ಯ ಆಶ್ಚರ್ಯ!! ರಾಮನು ಮಹಾ ಬಲಾಢ್ಯನು; ಆತನ ಅಸ್ತ್ರಬಲವೂ ಪರಮಾಶ್ಚರ್ಯಕರವಾದುದು! ಅವನ ಪರಾಕ್ರಮಕ್ಕೆ ತುತ್ತಾಗಿಯಲ್ಲವೆ ನಮ್ಮ ರಾಕ್ಷಸರನೇಕರು ಮಡಿದುರುಳಿದುದು! ಆ ರಾಮನು ಅನಾಮಯನಾದ ನಾರಾಯಣನೆಂದೇ ನಾನು ಎಣಿಸುತ್ತೇನೆ. ಆತನ ಭಯದಿಂದಲೇ ನಮ್ಮ ಲಂಕಾನಗರದ ತೋರಣದೊಡಗೂಡಿದ ಹೆಬ್ಬಾಗಿಲು ಮುಚ್ಚಲಾಗಿದೆ. ಆದುದರಿಂದ ಈಗ ಎಲ್ಲೆಡೆಯಲ್ಲಿಯೂ ರಕ್ಷಣೆಯನ್ನಿಟ್ಟು ನಮ್ಮ ಪಟ್ಟಣವನ್ನು ಸಂರಕ್ಷಿಸಬೇಕಾಗಿರುವುದು. ॥೫-೧೨॥ ಎಲೈ ರಾಕ್ಷಸರೇ! ಸೀತೆಯನ್ನು ಕೂಡಿ ಕಾಯುತ್ತಿರುವ ಅಶೋಕವನಕ್ಕೆ ಯಾವೊಬ್ಬನ ಬರುವಿಕೆಯೂ, ಹೋಗುವಿಕೆಯೂ ಸರ್ವ ಪ್ರಕಾರದಿಂದಲೂ ತಿಳಿಯತಕ್ಕುದು. ಎಲ್ಲೆಲ್ಲಿ ಸೇನಾಶಿಬಿರಗಳಿರುವುವೋ ಅಲ್ಲೆಲ್ಲಾ ಸೇನೆಗಳೊಡಗೂಡಿ ನೀವುಗಳು ರಕ್ಷಿಸುತ್ತಿರಬೇಕು. ಅಯ್ಯಾ ರಾಕ್ಷಸರೇ!

ಸ್ವೈಃ ಸ್ವೈಃ ಪರಿವೃತಾ ಬಲೈಃ ||೧೪|| ದ್ರಷ್ಟವ್ಯಂ ಚ ಪದಂ ತೇಷಾಂ ವಾನರಾಣಾಂ ನಿಶಾಚರಾಃ । ಪ್ರದೋಷೇ ವಾಽರ್ಧರಾತ್ರೇ ವಾ ಪ್ರತ್ಯೂಷೇ ವಾಪಿ ಸರ್ವಥಾ ||೧೫|| ನಾಽವಜ್ಞಾ ತತ್ರ ಕರ್ತವ್ಯಾ ವಾನರೇಷು ಕದಾಚನ । ದ್ವಿಷತಾಂ ಬಲಮುದ್ಯುಕ್ತಮಾಪತತ್ ಕಿಂ ಸ್ಥಿತಂ ಸದಾ" || ೧೬ || ತತಸ್ತೇ ರಾಕ್ಷಸಾಸ್ಸರ್ವೇ ಶ್ರುತ್ವಾ ಲಂಕಾಧಿಪಸ್ಯ ತತ್ । ವಚನಂ ಸರ್ವಮಾತಿಷ್ಠನ್ ಯಥಾವತ್ತು ಮಹಾಬಲಾಃ || ೧೭ || ಸ ತಾನ್ ಸರ್ವಾನ್ ಸಮಾದಿಶ್ಯ ರಾವಣೋ ರಾಕ್ಷಸಾಧಿಪಃ । ಮನ್ಯುಶಲ್ಯಂ ವಹನ್ ದೀನಃ ಪ್ರವಿವೇಶ ಸ್ವಮಾಲಯಂ || ೧೮ ||

ಹೇ ನಿಶಾಚರಾಃ - ಎಲೈ ರಕ್ಕಸರೇ, ತೇಷಾಂವಾನರಾಣಾಂ - ಆ ಕಪಿಗಳ, ಪದಂ - ವ್ಯವಸಾಯವು, ಪ್ರದೋಷೇವಾ-ಪ್ರದೋಷಕಾಲದಲ್ಲಾಗಲಿ, ಅರ್ಧರಾತ್ರೇವಾ-ಅರ್ಧರಾತ್ರಿಯಕಾಲದಲ್ಲಿಯಾಗಲಿ, ಪ್ರತ್ಯೂಷೇವಾ-ಪ್ರ...ಃಕಾಲದಲ್ಲಾಗಲಿ, ಸರ್ವಥಾ-ಸರ್ವ ಪ್ರಕಾರದಲ್ಲಿಯೂ, ದ್ರಷ್ಟವ್ಯಂ-ನೋಡತಕ್ಕುದು, ತತ್ರವಾನರೇಷು - ಆ ಕಪಿಗಳಲ್ಲಿ, ಕದಾಚನ - ಯಾವ ಕಾಲದಲ್ಲಿಯೂ, ಅವಜ್ಞಾ - ಉಪೇಕ್ಷೆಯು, ನಕರ್ತವ್ಯಾ - ಮಾಡತಕ್ಕುದಲ್ಲ, ದ್ವಿಷತಾಂ - ಶತ್ರುಗಳ, ಬಲಂ - ಸೈನ್ಯವು, ಕಿಮುದ್ಯುಕ್ತಂ - ಏನು ಮಾಡುವುದಕ್ಕೆ ಉದ್ಯುಕ್ತವಾಗಿದೆಯೋ, ಕಿಮಾಪತತ್ - ಎಷ್ಟು ಬಂದಿದೆಯೋ, ಕಿಂಸ್ಥಿತಂ - ಎಷ್ಟಿದೆಯೋ, ಸದಾ-ನಿರಂತರವು, ತತ್-ಅದು, ದ್ರಷ್ಟವ್ಯಂ-ನೋಡತಕ್ಕುದು. ||೧೫-೧೬|| ತತಃ-ಬಳಿಕ, ಮಹಾಬಲಾಃ - ಬಹು ಬಲವಂತರಾದ, ಸರ್ವೇ - ಸಮಸ್ತರಾದ, ತೇರಾಕ್ಷಸಾಃ - ಆ ರಾಕ್ಷಸರು, ಲಂಕಾಧಿಪಸ್ಯ - ರಾವಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಸರ್ವಂ - ಸಮಸ್ತವನ್ನೂ, ಯಥಾವತ್ತು - ಅಪ್ಪಣೆಯಾದಂತೆ, ಆತಿಷ್ಠನ್ - ನಡೆಸಿದರು. || ೧೭ || ರಾಕ್ಷಸಾಧಿಪಃ - ರಾಕ್ಷಸಾಧಿಪತಿಯಾದ, ಸರಾವಣಃ - ಆ ರಾವಣನು, ಸರ್ವಾನ್ - ಸಮಸ್ತರಾದ, ತಾನ್ - ಆ ರಕ್ಕಸರನ್ನು, ಸಮಾದಿಶ್ಯ - ಆಜ್ಞಾಪಿಸಿ, ದೀನಃ - ಸಂತಾಪಗೊಂಡವನಾಗಿ, ಮನ್ಯುಶಲ್ಯಂ - ದುಃಖಶಲ್ಯವನ್ನು, ವಹನ್ - ಹೊತ್ತು, ಸ್ವಂ - ತನ್ನ, ಆಲಯಂ - ಮನೆಯನ್ನು, ಪ್ರವಿವೇಶ - ಹೊಕ್ಕನು. ||೧೮|| ತತಃ - ಬಳಿಕ, ಸಂದೀ....ಪ್ತಃ - ಪ್ರಜ್ವಲಿಸಿದ ಕೋಪವೆಂಬ ಅಗ್ನಿಯುಳ್ಳ, ಮಹಾಬಲಃ - ಬಹು ಸಮರ್ಥನಾದ, ನಿಶಾಚರಾಣಾಂ - ರಕ್ಕಸರಿಗೆ, ಅಧಿಪಃ - ಪ್ರಭುವಾದ, ಸಃ - ಆ ರಾವಣನು,

ಪ್ರದೋಷದಲ್ಲಿಯಾಗಲಿ, ಅರ್ಧರಾತ್ರಿಯಲ್ಲಿಯಾಗಲಿ ಬೆಳಗಿನ ಹೊತ್ತಾಗಲಿ ಸರ್ವಕಾಲಗಳಲ್ಲಿಯೂ ವಾನರರೇನು ಮಾಡುವರೆಂಬುದನ್ನು ನೀವು ಜಾಗರೂಕರಾಗಿ ನಿರೀಕ್ಷಿಸಿ ತಿಳಿಯತಕ್ಕುದು. ಯಾವಾಗಲೇ ಆಗಲಿ ವಾನರರ ವಿಚಾರದಲ್ಲಿ ಉಪೇಕ್ಷೆ ಮಾಡತಕ್ಕುದಲ್ಲವು. ಶತ್ರುಬಲವು ಯಾವ ಕಾರ್ಯದಲ್ಲಿ ತೊಡಗಿದೆ, ಏನುಮಾಡುತ್ತಿದೆ ಎಂಬುದನ್ನು ಯಾವಾಗಲೂ ತಿಳಿಯುತ್ತಿರಬೇಕು" ಎಂದನು. || ೧೪–೧೬ || ಮಹಾ ಬಲಾಢ್ಯರಾದ ಆ ರಾಕ್ಷಸರೆಲ್ಲರೂ ಲಂಕಾಧಿಪತಿಯಾದ ರಾವಣನ ಆಜ್ಞೆಯಂತೆ ಸಮಸ್ತ ಕಾರ್ಯಗಳನ್ನೂ ಮಾಡಿದರು. ರಾಕ್ಷಸೇಶ್ವರನಾದ ರಾವಣನೂ ಸಹ ಲಂಕಾಪಟ್ಟಣವನ್ನು ಸಂರಕ್ಷಣೆ ಮಾಡಲೋಸುಗ ಸಕಲ ಸನ್ನಾಹಗಳನ್ನೂ ಮಾಡಿ, ಮಹಾ ವೀರರಾದ ರಕ್ಕಸರ ಮತ್ತು ತನ್ನ ಪುತ್ರರ ಮರಣದಿಂದ ಹೃದಯವೇದನೆಯುಳ್ಳವನಾಗಿ ದೈನ್ಯವನ್ನು ಹೊಂದಿ ತನ್ನ ಮನೆಯನ್ನು ಪ್ರವೇಶಿಸಿದನು.

ತತಸ್ಸ ಸಂದೀಪಿತಕೋಪವಹ್ನಿ
ರ್ನಿಶಾಚರಾಣಾಮಧಿಪೋ ಮಹಾಬಲಃ ।
ತದೇವ ಪುತ್ರವ್ಯಸನಂ ವಿಚಿಂತಯನ್
ಮುಹುರ್ಮುಹುಶ್ಚೈವ ತದಾ ವ್ಯನಿಶ್ವಸತ್ ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಸಪ್ತತಿತಮಸ್ಸರ್ಗಃ.

ತತ್ಪು....ವ-ಆ ಮಕ್ಕಳ ವಿಷಯವಾದ ವ್ಯಸನವನ್ನೇ, ವಿಚಿಂತಯನ್-ಆಲೋಚಿಸುತ್ತ, ಮುಹು....ವ-ಬಾರಿಬಾರಿಗೂ, ತದಾ - ಆ ಕಾಲದಲ್ಲಿ, ವ್ಯನಿಶ್ವಸತ್ - ನಿಟ್ಟುಸುರಿಟ್ಟನು. ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿಸಪ್ತತಿತಮಸ್ಸರ್ಗಃ.

ಆಗಲಾ ರಾವಣನಿಗೆ ಕೋಪಜ್ವಾಲೆಯು ಉಕ್ಕೇರಿತಲ್ಲದೆ, ಅವನು ಪುತ್ರವ್ಯಸನದಿಂದ ಬಾರಿಬಾರಿಗೂ ಉದ್ದುದ್ದವಾಗಿ ನಿಟ್ಟುಸಿರ್ಗರೆಯುತ್ತಿದ್ದನು. ॥ ೧೭–೧೯ ॥

ಇಂತಿದು ರಾವಣ ಪ್ರಲಾಪವೆಂಬ ಎಪ್ಪತ್ತೆರಡನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ತ್ರಿಸಪ್ತತಿತಮಸ್ಸರ್ಗಃ

ತತೋ ಹತಾನ್ ರಾಕ್ಷಸಪುಂಗವಾಂಸ್ತಾನ್ ದೇವಾಂತಕಾದಿ ತ್ರಿಶಿರೋಽತಿಕಾಯಾನ್ । ರಕ್ಷೋಗಣಾಸ್ತತ್ರ ಹತಾವಶಿಷ್ಟಾಸ್ತೇ ರಾವಣಾಯ ತ್ವರಿತಂ ಶಶಂಸುಃ ॥೧॥ ತತೋ ಹತಾಂಸ್ತಾನ್ಸಹಸಾ ನಿಶಮ್ಯ ರಾಜಾ ಮುಮೋಹಾಶ್ರು ಪರಿಪ್ಲುತಾಕ್ಷಃ । ಪುತ್ರಕ್ಷಯಂ ಭ್ರಾತೃವಧಂ ಚ ಘೋರಂ ವಿಚಿಂತ್ಯ ರಾಜಾ ವಿಪುಲಂ ಪ್ರದಧ್ಯೌ ॥ ೨ ॥ ತತಸ್ತು ರಾಜಾನಮುದೀಕ್ಷ್ಯ ದೀನಂ ಶೋಕಾರ್ಣವೇ ಸಂಪರಿಪುಪ್ಲುವಾನಂ । ರಥರ್ಷಭೋ ರಾಕ್ಷಸರಾಜಸೂನು ಸ್ತಮಿಂದ್ರಜಿದ್ವಾಕ್ಯಮಿದಂ ಬಭಾಷೇ ॥೩॥ "ನ ತಾತ! ಮೋಹಂ ಪ್ರತಿಗಂತುಮರ್ಹಸಿ ಯತ್ರೇಂದ್ರಜಿಜ್ಜೀವತಿ ರಾಕ್ಷಸೇಂದ್ರ! । ನೇಂದ್ರಾರಿ

ತತಃ - ಅನಂತರದಲ್ಲಿ, ತತ್ರ - ಆ ರಣರಂಗದಲ್ಲಿ, ಹತಾವಶಿಷ್ಟಾಃ - ಮಡಿದುಳಿದ, ತೇರಕ್ಷೋಗಣಾಃ - ಆ ರಾಕ್ಷಸರ ತಂಡಗಳು, ಹತಾನ್ - ಹತರಾದ, ರಾಕ್ಷ....ವಾನ್ - ರಾಕ್ಷಸಶ್ರೇಷ್ಠರಾದ, ತಾನ್ - ಆ, ದೇವಾಂ....ಯಾನ್ - ದೇವಾಂತಕನೇ ಮೊದಲಾಗಿ ತ್ರಿಶಿರಸ್ಕ ಅತಿಕಾಯರನ್ನು, ರಾವಣಾಯ - ರಾವಣನಿಗೆ, ತ್ವರಿತಂ - ಜಾಗ್ರತೆಯಾಗಿ, ಶಶಂಸುಃ - ಹೇಳಿದರು. ॥ ೧ ॥ ರಾಜಾ - ರಾವಣನು, ತತಃ - ಬಳಿಕ, ತಾನ್ - ಅವರನ್ನು, ಹತಾನ್ - ಮೃತರನ್ನಾಗಿ, ನಿಶಮ್ಯ - ಕೇಳಿ, ಸಹಸಾ-ಜಾಗ್ರತೆಯಾಗಿ, ಅಶ್ರು....ಕ್ಷಃ-ಕಂಬನಿಗಳಿಂದ ತೋಯಿಸಲ್ಪಟ್ಟ ಕಣ್ಣುಗಳುಳ್ಳವನಾಗಿ, ಮುಮೋಹ-ಮೂರ್ಛೆಗೊಂಡನು, ರಾಜಾ - ಅರಸಾದ ರಾವಣನು, ಘೋರಂ - ಭಯಂಕರವಾದ, ಪುತ್ರಕ್ಷಯಂ - ಮಕ್ಕಳ ಮರಣವನ್ನೂ, ಭ್ರಾತೃವಧಂಚ - ಒಡಹುಟ್ಟಿದವರ ಸಂಹಾರವನ್ನೂ, ವಿಚಿಂತ್ಯ - ಆಲೋಚಿಸಿ, ವಿಪುಲಂ - ಬಹಳ ಹೊತ್ತು, ಪ್ರದಧ್ಯೌ - ಆಲೋಚಿಸಿದನು. ॥೨॥ ತತಸ್ತು - ಆ ಬಳಿಕಲಾದರೆ, ದೀನಂ - ಪರಿತಪ್ತನಾಗಿ, ಶೋಕಾರ್ಣವೇ - ಶೋಕಸಮುದ್ರದಲ್ಲಿ, ಸಂಪ....ನಂ - ಮುಳುಗಿ ತೇಲಾಡುತ್ತಿರುವ, ರಾಜಾನಂ - ಒಡೆಯನನ್ನು, ಉದೀಕ್ಷ್ಯ - ನೋಡಿ, ರಥರ್ಷಭಃ - ರಥಿಕಶ್ರೇಷ್ಠನಾದ, ರಾಕ್ಷ....ನುಃ - ರಾಕ್ಷಸಾಧಿಪತಿಯ ಪುತ್ರನಾದ, ಇಂದ್ರಜಿತ್ - ಇಂದ್ರಜಿತ್ತುವು, ತಂ - ಆ ರಾವಣನನ್ನು ಕುರಿತು, ಇದಂವಾಕ್ಯಂ - ಈ ಮಾತನ್ನು, ಬಭಾಷೇ - ಹೇಳಿದನು. ॥ ೩ ॥ ಹೇ ತಾತ - ಎಲೈ ತಂದೆಯೇ, ಹೇ ರಾಕ್ಷಸೇಂದ್ರ - ಎಲೈ ರಾಕ್ಷಸಾಧಿಪತಿಯೇ, ಯತ್ರ - ಎಲ್ಲಿ, ಇಂದ್ರಜಿತ್ - ಇಂದ್ರಜಿತ್ತುವು, ಜೀವತಿ - ಬದುಕಿದ್ದಾನೋ, ತತ್ರ - ಅಲ್ಲಿ, ಇಂದ್ರಾ....ತಃ - ಇಂದ್ರಶತ್ರುವಾದ ನನ್ನ

ರಾಕ್ಷಸೋತ್ತಮನಾದ ದೇವಾಂತಕ ನರಾಂತಕರೇ ಮೊದಲಾದವರೂ, ವೀರಶ್ರೇಷ್ಠನಾದ ತ್ರಿಶಿರಸ್ಕನೂ, ಅಪಾರವಾದ ರಾಕ್ಷಸಸೇನೆಯೂ ನಾಶವಾದುದನ್ನು ಮಡಿದುಳಿದ ರಾಕ್ಷಸಯೋಧರಿಂದ ಕೇಳಿ ರಾಕ್ಷಸಾಧಿಪತಿಯಾದ ರಾವಣಾಸುರನು ದುಃಖದಿಂದ ಕದಡಿದ ಕಣ್ಣುಗಳುಳ್ಳವನಾಗಿ ಅತಿ ಘೋರವಾದ ಪುತ್ರರ ನಾಶವನ್ನೂ, ಭ್ರಾತೃವಧೆಯನ್ನೂ ನೆನೆಸಿಕೊಂಡು ಮೂರ್ಛೆಯೊಂದಿದನು. ಹೀಗೆ ರಾಕ್ಷಸರಾಜನೂ, ತನ್ನ ಜನಕನೂ ಆದ ರಾವಣಾಸುರನು ದುಃಖ ಮಹಾ ಸಮುದ್ರದಲ್ಲಿ ಮುಳುಗಿರುವುದನ್ನು ನೋಡಿ ಮಹಾ ರಥಿಕನಾದ ಇಂದ್ರಜಿತ್ತುವು ಆತನನ್ನು ಕುರಿತು, "ತಂದೆಯೇ! ಮಹೇಂದ್ರನನ್ನು ಜಯಿಸಿರುವ ಈ ಇಂದ್ರಜಿತ್ತುವು

ಬಾಣಾಭಿಹತೋಽಹಿ ಕಶ್ಚಿತ್‌ಪ್ರಾಣಾನ್ ಸಮರ್ಥಃ ಸ್ಸಮರೇಭಿಪಾತುಂ ॥ ೪ ॥ ಪಶ್ಯಾದ್ಯ ರಾಮಂ ಸಹಲಕ್ಷ್ಮಣೇನ ಮದ್ಬಾಣ ನಿರ್ಭಿಣ್ಣ ವಿಕೀರ್ಣದೇಹಂ । ಗತಾಯುಷಂ ಭೂಮಿತಲೇ ಶಯಾನಂ ಶಿತೈಃ ಶರೈರಾಚಿತ ಸರ್ವ ಗಾತ್ರಂ ॥೫॥ ಇಮಾಂ ಪ್ರತಿಜ್ಞಾಂ ಶೃಣು ಶಕ್ರಶತ್ರೋಸ್ಸುನಿಶ್ಚಿತಾಂ ಪೌರುಷದೈವಯುಕ್ತಾಂ । ಅದ್ಯೈವ ರಾಮಂ ಸಹ ಲಕ್ಷ್ಮಣೇನ ಸಂತರ್ಪಯಿಷ್ಯಾಮಿ ಶರೈರಮೋಘೈಃ ॥೬॥ ಅದ್ಯೇಂದ್ರ ವೈವಸ್ವತ ವಿಷ್ಣು ಮಿತ್ರ ಸಾಧ್ಯಾಶ್ವಿ ವೈಶ್ವಾನರ ಚಂದ್ರ ಸೂರ್ಯಾಃ । ದ್ರಕ್ಷ್ಯಂತು ಮೇ ವಿಕ್ರಮಮಪ್ರ ಮೇಯಂ ವಿಷ್ಣೋರಿವೋಗ್ರಂ ಬಲಿಯಜ್ಞವಾಟೇ'' ॥ ೭ ॥ ಸ ಏವಮುಕ್ತ್ವಾ

ಬಾಣಗಳಿಂದ ಹೊಡೆಯಲ್ಪಟ್ಟ, ಕಶ್ಚಿತ್ - ಯಾವನೂ, ಸಮರೇ - ಕಾಳಗದಲ್ಲಿ, ಪ್ರಾಣಾನ್ - ಪ್ರಾಣಗಳನ್ನು, ಅಭಿಪಾತುಂ - ಪಾಲಿಸಿಕೊಳ್ಳುವುದಕ್ಕೆ, ನಸಮರ್ಥೋಽಹಿ - ಅಶಕ್ತನಷ್ಟೆ, ಮೋಹಂ - ಭ್ರಾಂತಿಯನ್ನು, ಪ್ರತಿಗಂತುಂ - ಹೊಂದುವುದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ. ॥೪॥ ಅದ್ಯ - ಈಗ, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ಮದ್ಬಾ....ಹಂ - ನನ್ನ ಬಾಣಗಳಿಂದ ಭೇದಿಸಲ್ಪಟ್ಟ ಶಿಥಿಲವಾದ ಶರೀರವುಳ್ಳ, ಗತಾಯುಷಂ - ತೀರಿದ ಆಯುಸ್ಸುಳ್ಳ, ಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ಆಚಿ....ತ್ರಂ - ತುಂಬಿದ ಸರ್ವಾವಯವಗಳುಳ್ಳ, ರಾಮಂ - ಶ್ರೀರಾಮನನ್ನು, ಭೂಮಿತಲೇ - ಭೂಪ್ರದೇಶದಲ್ಲಿ, ಶಯಾನಂ - ಮಲಗಿದವನನ್ನಾಗಿ, ಪಶ್ಯ - ನೋಡು. ॥ ೫ ॥ ಶಕ್ರಶತ್ರೋಃ - ಇಂದ್ರಜಿತ್ತುವಿನ, ಸುನಿಶ್ಚಿತಾಂ - ಚೆನ್ನಾಗಿ ನಿಶ್ಚಯಿಸಲ್ಪಟ್ಟ, ಪೌರು....ಕ್ತಾಂ - ಪುರುಷಬಲ ದೈವಬಲಗಳಿಂದ ಕೂಡಿದ, ಇಮಾಂಪ್ರತಿಜ್ಞಾಂ - ಈ ಪ್ರತಿಜ್ಞೆಯನ್ನು, ಶೃಣು - ಕೇಳು, ಅದ್ಯೈವ - ಈಗಲೇ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ರಾಮಂ - ರಾಮನನ್ನು, ಅಮೋಘೈಃ- ವ್ಯರ್ಥವಾಗದಿರುವ, ಶರೈಃ - ಬಾಣಗಳಿಂದ, ಸಂತರ್ಪಯಿಷ್ಯಾಮಿ - ತುಂಬಿಸುವೆನು. ॥೬॥ ಅದ್ಯ - ಈಗ, ಇಂದ್ರ....ರ್ಯಾ- ಇಂದ್ರ, ಯಮ, ವಿಷ್ಣುಮಿತ್ರನಾದ ವರುಣ, ಸಾಧ್ಯ, ಅಶ್ವಿನೀ ದೇವತೆಗಳು, ಅಗ್ನಿ ಚಂದ್ರ ಸೂರ್ಯನು ಇವರೆಲ್ಲರೂ, ಮೇ - ನನ್ನ, ಅಪ್ರಮೇಯಂ - ಚಿಂತಿಸಲಸಾಧ್ಯವಾದ, ವಿಕ್ರಮಂ-ಪರಾಕ್ರಮವನ್ನು, ಬಲಿಯಜ್ಞವಾಟೇ-ಬಲಿಚಕ್ರವರ್ತಿಯ ಯಾಗಶಾಲೆಯಲ್ಲಿ, ವಿಷ್ಣೋಃ- ಶ್ರೀ ಮಹಾವಿಷ್ಣುವಿನ, ಉಗ್ರಂ ಭಯಂಕರವಾದ, ವಿಕ್ರಮಮಿವ-ಪರಾಕ್ರಮವನ್ನಂತೆ, ದ್ರಕ್ಷ್ಯಂತು- ನೋಡಲಿ. ॥ ೭ ॥ ಅದೀನಸತ್ವಃ - ದೈನ್ಯವಿಲ್ಲದಿರುವ ಸಾಮರ್ಥ್ಯವುಳ್ಳ, ಸತ್ರಿ....ತ್ರುಃ - ಆ ಇಂದ್ರ

ಜೀವಂತನಾಗಿರುವಲ್ಲಿ ನೀನೇಕೆ ಈ ರೀತಿ ದುಃಖಿತನಾಗುವೆ. ನನ್ನ ಬಾಣಹತಿಗೆ ತುತ್ತಾಗಿ ಯಾರೇ ಆದರೂ ರಣಾಂಗಣದಲ್ಲಿ ಪ್ರಾಣಗಳನ್ನುಳಿಸಿಕೊಳ್ಳಲಾರನು. ರಾಕ್ಷಸೇಂದ್ರಾ! ಲಕ್ಷ್ಮಣನೊಡಗೂಡಿದ ಆ ರಾಮನು ನನ್ನ ಬಾಣಗಳಿಂದ ಭೇದಿಸಿ ಅತ್ತಿತ್ತ ಹರಡಿದ ದೇಹವುಳ್ಳವನಾಗಿ, ನನ್ನ ಬಾಣಗಳಿಂದಲೇ ತುಂಬಿ ಆಯುಸ್ಸು ಕಳೆದು ನೆಲಕ್ಕುರುಳುವುದನ್ನು ನೀನೇ ನೋಡುವೆ. ॥೧-೫॥ ಎಲೈ ಇಂದ್ರಾರಿಯೇ! ಪೌರುಷದಿಂದಲೂ, ದೈವಬಲದಿಂದಲೂ ಚೆನ್ನಾಗಿ ನಿರ್ಧರಿಸಲ್ಪಟ್ಟ ಈ ನನ್ನ ಪ್ರತಿಜ್ಞೆಯನ್ನಾದರೂ ಕೇಳು. ಇದೋ, ಈಗಲೇ ಆ ರಾಮಲಕ್ಷ್ಮಣರನ್ನು ನನ್ನ ಅಮೋಘವಾದ ಬಾಣಗಳಿಂದ ತೃಪ್ತಿಗೊಳಿಸುತ್ತೇನೆ. ತಂದೆಯೇ! ಈಗಣ ಯುದ್ಧದಲ್ಲಿ ಇಂದ್ರ, ಯಮ, ರುದ್ರ, ಸಾಧ್ಯರೂ, ಅಶ್ವಿನೀದೇವತೆಗಳೂ, ಅಗ್ನಿಯೂ, ಚಂದ್ರ, ಸೂರ್ಯರೂ, ಬಲಿಯ ಯಜ್ಞಶಾಲೆಯಲ್ಲಿ ವಿಷ್ಣುವು ಮೆರೆದ ಅನುಪಮವಾದ ಪರಾಕ್ರಮವನ್ನು ಸರಿಹೋಲುವ ನನ್ನ ಪೌರುಷ ಪರಾಕ್ರಮಗಳನ್ನು ನೋಡಲಿ'' ಎಂದು ಹೇಳಿದನು.

ತ್ರಿದಶೇಂದ್ರಶತ್ರೂರಾಪೃಚ್ಛ್ಯ ರಾಜಾನಮದೀನಸತ್ವಃ । ಸಮಾರುರೋಹಾನಿಲತುಲ್ಯ ವೇಗಂ ರಥಂ ಖರಶ್ರೇಷ್ಠಸಮಾಧಿಯುಕ್ತಂ ॥೮॥ ತಮಾಸ್ಥಾಯ ಮಹಾತೇಜಾ ರಥಂ ಹರಿರಥೋಪಮಂ । ಜಗಾಮ ಸಹಸಾ ತತ್ರ ಯತ್ರ ಯುದ್ಧಮರಿಂದಮಃ ॥೯॥ ತಂ ಪ್ರಸ್ಥಿತಂ ಮಹಾತ್ಮಾನಮನುಜಗ್ಮುರ್ಮಹಾಬಲಾಃ । ಸಂಹರ್ಷಮಾಣಾ ಬಹವೋ ಧನುಷ್ಪ್ರವರಪಾಣಯಃ ॥೧೦॥ ಗಜಸ್ಕಂಧಗತಾಃ ಕೇಚಿತ್ ಪ್ರವರವಾಜಿಭಿಃ । (ವ್ಯಾಘ್ರ ವೃಶ್ಚಿಕ ಮಾರ್ಜಾರೈಃ ಖರೋಷ್ಟ್ರೈಶ್ಚ ಭುಜಂಗಮೈಃ । ವರಾಹ ಶ್ವಾಪದೈರ್ಜಂಬುಕೈಃ ಪರ್ವತೋಪಮೈಃ । ಶಶ ಹಂಸ ಮಯೂರೈಶ್ಚ ರಾಕ್ಷಸಾ ಭೀಮವಿಕ್ರಮಾಃ) । ಪ್ರಾಸ ಮುದ್ಗರ ನಿಸ್ತ್ರಿಂಶ ಪರಶ್ವಧ ಗದಾಧರಾಃ ॥ ೧೧ ॥ ಸಶಂಖನಿನದೈಃ ಪೂರ್ಣೈರ್ಭೇ

ಜಿತ್ತುವು, ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ರಾಜಾನಂ - ಅರಸನನ್ನು, ಆಪೃಚ್ಛ್ಯ - ಬೀಳ್ಕೊಂಡು, ಅನಿ....ನಂ - ವಾಯುವಿಗೆ ಸಮಾನವಾದ ವೇಗವುಳ್ಳ, ಖರ....ಕ್ತಂ - ಉತ್ತಮ ವಾದ ಕತ್ತೆಗಳು ಹೂಡಿರುವ, ರಥಂ - ತೇರನ್ನು, ಸಮಾರುರೋಹ - ಏರಿದನು. ॥೮॥ ಮಹಾತೇಜಾಃ- ಬಹು ತೇಜೋವಂತನಾದ, ಅರಿಂದಮಃ - ಶತ್ರುಸಂಹಾರಕನಾದ ಇಂದ್ರಜಿತ್ತುವು, ಹರಿ....ಮಂ - ಸೂರ್ಯರಥಕ್ಕೆ ಸಮಾನವಾದ, ತಂರಥಂ - ಆ ತೇರನ್ನು, ಆಸ್ಥಾಯ - ಏರಿ, ಯತ್ರ - ಎಲ್ಲಿ, ಯುದ್ಧಂ - ಯುದ್ಧವೋ, ತತ್ರ - ಅಲ್ಲಿಗೆ, ಸಹಸಾ - ಬೇಗ, ಜಗಾಮ - ತೆರಳಿದನು. ॥ ೯ ॥ ಪ್ರಸ್ಥಿತಂ - ಪ್ರಯಾಣಮಾಡಿದ, ಮಹಾತ್ಮಾನಂ - ಮಹಾ ಧೈರ್ಯವಂತನಾದ, ತಂ - ಆ ಇಂದ್ರ ಜಿತ್ತುವನ್ನು, ಮಹಾಬಲಾಃ - ಬಹು ಬಲವಂತರಾದ, ಧನು....ಯಃ - ಉತ್ತಮ ಧನುಸ್ಸುಗಳೇ ಹಸ್ತ ದಲ್ಲುಳ್ಳ, ಬಹವಃ - ಬಹುಮಂದಿ ರಾಕ್ಷಸರು, ಸಂಹ....ಣಾಃ - ಸಂತೋಷಿಸುತ್ತ, ಅನುಜಗ್ಮುಃ - ಅನುಸರಿಸಿ ತೆರಳಿದರು. ॥೧೦॥ ಕೇಚಿತ್ - ಕೆಲವರು, ಗಜ... ತಾಃ - ಗಜದ ಭುಜಗಳನ್ನು ಹೊಂದಿ ದವರು, ಕೇಚಿತ್ - ಕೆಲವರು, ಪ್ರಾಸ....ತಾಃ - ಈಟಿಗೋಲುಗಳನ್ನೂ, ಮುದ್ಗರಾಯುಧಗಳನ್ನೂ, ಪರಶ್ವಧಗಳನ್ನೂ, ಗದಾಯುಧಗಳನ್ನು ಧರಿಸಿ, ಪ್ರವ....ಭಿಃ - ಉತ್ತಮಾಶ್ವಗಳಿಂದ, ಅನುಜಗ್ಮುಃ -

---

ಮಹೇಂದ್ರಶತ್ರುವಾದ ಆ ಇಂದ್ರಜಿತ್ತುವು ಈ ರೀತಿ ನುಡಿದು ತಂದೆಯಾದ ಆ ರಾಕ್ಷಸ ರಾಜನ ಆಜ್ಞೆಯನ್ನು ಪಡೆದು ಅಧಿಕವಾದ ಪರಾಕ್ರಮವುಳ್ಳವನಾಗಿ ಉತ್ತಮವಾದ ಹೇಸರ ಕತ್ತೆಗಳು ಹೂಡಿದ ಶ್ರೇಷ್ಠನಾದ ತೇರನ್ನೇರಿದನು. ಮಹೇಂದ್ರನು ರಥಕ್ಕೆ ಸಮಾನವಾದ ಆ ರಥವನ್ನೇರಿದ ತರುವಾಯ ಆ ರಾಕ್ಷಸರಾಜಕುಮಾರನಾದ ಇಂದ್ರಜಿತ್ತುವು ಯುದ್ಧವು ನಡೆಯುತ್ತಿದ್ದ ಕಡೆಗೆ ವೇಗದಿಂದೈತಂದನು. ಹೀಗೆ ಯುದ್ಧಕ್ಕಾಗಿ ಪ್ರಯಾಣಮಾಡಿದ ಆ ಇಂದ್ರಜಿತ್ತುವನ್ನು ಅನೇಕಮಂದಿ ರಾಕ್ಷಸರು ಧನುಷ್ಪಾಣಿಗಳಾಗಿ ಆತನನ್ನು ಸಂತೋಷ ಗೊಳಿಸುತ್ತ ಹಿಂಬಾಲಿಸಿದರು. ಅವರಲ್ಲಿ ಕೆಲವರು ಆನೆಗಳನ್ನೇರಿಯೂ, ಕೆಲವರು ಉತ್ತ ಮಾಶ್ವಗಳನ್ನೇರಿಯೂ (ಕೆಲವರು ಹುಲಿಗಳನ್ನೂ, ಕೆಲವರು ದೊಡ್ಡದೊಡ್ಡ ಮಾರ್ಜಾಲ ಗಳನ್ನೂ, ಕೆಲವರು ಹೇಸರಕತ್ತೆಗಳನ್ನೂ, ಕೆಲವರು ಒಂಟೆಗಳನ್ನೂ, ಕೆಲವರು ಮಹಾ ಸರ್ಪ ಗಳನ್ನೂ, ಕೆಲವರು ಹಂದಿಗಳನ್ನೂ, ಕೆಲವರು ನಾಯಿಗಳನ್ನೂ, ಕೆಲವರು ಸಿಂಹಗಳನ್ನೂ, ಕೆಲವರು ನರಿಗಳನ್ನೂ, ಕೆಲವರು ಬೆಟ್ಟಕ್ಕೆ ಸಮಾನಗಳಾದ ಮೊಲ, ನವಿಲು ಮೊದಲಾದು ವುನ್ನೂ ಏರಿಯೂ) ಪ್ರಾಸ, ಮುದ್ಗರ, ಶೂಲ, ಪರಶ್ವಧ, ಗದೆಯೇ ಮೊದಲಾದ ಆಯುಧ ಗಳನ್ನೂ ಧರಿಸಿ ಹೊರಟರು. ॥ ೬-೧೧ ॥ ಆ ಸಮಯದಲ್ಲಿ ಇಂದ್ರಜಿತ್ತುವು ಶಂಖಧ್ವನಿ

ರೀಣಾಂ ಚಾಪಿ ನಿಸ್ವನೈಃ । ಜಗಾಮ ತ್ರಿದಶೇಂದ್ರಾರಿ ಸ್ತೂಯಮಾನೋ ನಿಶಾಚರೈಃ ॥೧೨॥ ಸ ಶಂಖ ಶಶಿ ವರ್ಣೇನ ಛತ್ರೇಣ ರಿಪುಸೂದನಃ । ರರಾಜ ಪ್ರತಿಪೂರ್ಣೇನ ನಭ ಶ್ಚಂದ್ರಮಸಾಯಥಾ ॥ ೧೩ ॥ ಅವೀಜ್ಯತ ತತೋ ವೀರೋ ಹೈಮೈರ್ಹೇಮವಿಭೂಷಿತೈಃ । ಚಾರು ಚಾಮರಮುಖ್ಯೈಶ್ಚ ಮುಖ್ಯಸ್ಸರ್ವಧನುಷ್ಮತಾಂ ॥ ೧೪ ॥ (ಸತು ದೃಷ್ಟ್ವಾ ವಿನಿರ್ಯಾಂತಂ ಬಲೇನ ಮಹತಾವೃತಂ । ರಾಕ್ಷಸಾಧಿಪತಿಃ ಶ್ರೀಮಾ ರಾವಣಃ ಪುತ್ರಮಬ್ರವೀತ್ । "ತ್ವಮಪ್ರತಿರಥಃ ಪುತ್ರ! ತ್ವಯಾ ವೈ ವಾಸವೋ ಜಿತಃ । ಕಿಂ ಪುನರ್ಮಾನುಷಂ ಧೃಷ್ಯಂ ನಿಹನಿಷ್ಯಸಿ ರಾಘವಂ" । ತಥೋಕ್ತೋ ರಾಕ್ಷಸೇಂದ್ರೇಣ ಪ್ರತ್ಯಗೃಹ್ಣಾನ್ಮಹಾಶಿಷಃ) ॥ ತತಸ್ತ್ವಿಂದ್ರಜಿತಾ ಲಂಕಾ ಸೂರ್ಯಪ್ರತಿಮ

ಅನುಸರಿಸಿದರು. ॥೧೧॥ ಸತ್ರಿ....ರೀ - ಆ ಇಂದ್ರಜಿತ್ತುವು, ಪೂರ್ಣೈಃ - ತುಂಬಿರುವ, ಶಂಖನಿನದೈಃ-ಶಂಖಧ್ವನಿಗಳಿಂದಲೂ, ಭೇರಿಣಾಂ - ಭೇರಿಗಳ, ನಿಸ್ವನೈಶ್ಚಾಪಿ - ಶಬ್ದಗಳಿಂದಲೂ ಕೂಡಿ, ನಿಶಾಚರೈಃ - ರಕ್ಕಸರಿಂದ, ಸಂಸ್ತು....ನಃ - ಸ್ತುತಿಸಲ್ಪಟ್ಟವನಾಗಿ, ಜಗಾಮ - ತೆರಳಿದನು. ॥ ೧೨ ॥ ಶಂಖ....ನ - ಶಂಖಚಕ್ರದ ವರ್ಣವುಳ್ಳ, ಛತ್ರೇಣ - ಶ್ವೇತಛತ್ರದಿಂದ, ರಿಪುಸೂದನಃ - ಶತ್ರುಮಾರಕನಾದ, ಸಃ - ಆ ಇಂದ್ರಜಿತ್ತುವು, ಪರಿಪೂರ್ಣೇನ - ಸಂಪೂರ್ಣಚಂದ್ರನಿಂದ, ನಭೋಯಥಾ-ಅಂತರಿಕ್ಷದಂತೆ, ರರಾಜ - ಹೊಳೆಯುತ್ತಿದ್ದನು. ॥ ೧೩ ॥ ಸರ್ವ....ತಾಂ - ಸಮಸ್ತ ಧನುರ್ಧಾರಿಗಳಲ್ಲಿಯೂ, ಮುಖ್ಯಃ - ಮುಖಂಡನಾದ, ವೀರಃ - ಶೂರನಾದ ಇಂದ್ರಜಿತ್ತುವು, ತತಃ - ಬಳಿಕ, ಹೈಮೈಃ - ಸುವರ್ಣದಂಡಗಳುಳ್ಳ, ಹೇಮವಿಭೂಷಿತೈಃ - ಬಂಗಾರದ ಸಲಾಕೆಗಳಿಂದ ಯುಕ್ತವಾದ, ಚಾರು....ಶ್ಚ - ಮನೋಹರವಾದ ಉತ್ತಮ ಚಾಮರಗಳಿಂದಲೂ, ಅವೀಜ್ಯತ - ಬೀಸಲ್ಪಟ್ಟನು. ॥೧೪॥ ತತಃ-ಅನಂತರದಲ್ಲಿ, ಸೂರ್ಯ....ಸಾ-ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳ, ಅಪ್ರ....ಣ-ಪ್ರತಿಶೂರರಿಲ್ಲದಿರುವ, ಇಂದ್ರಜಿತಾ - ಇಂದ್ರಜಿತ್ತುವಿನಿಂದ, ಲಂಕಾತು - ಲಂಕಾಪಟ್ಟಣವಾದರೆ,

---

ಗಳಿಂದಲೂ, ಭೇರೀಭಾಂಕಾರದಿಂದಲೂ, ರಾಕ್ಷಸರ ಸ್ತುತಿವಚನಗಳಿಂದಲೂ ಪ್ರೋತ್ಸಾಹಿತನಾಗಿ ಯುದ್ಧಕ್ಕೆ ಹೊರಟನು. ಆಗ ಶತ್ರುಮರ್ದನನಾದ ಆ ರಾಕ್ಷಸರಾಜಕುಮಾರನು ಶಂಖವರ್ಣಕ್ಕೆ ಸಮಾನವಾದ ವರ್ಣವುಳ್ಳ ಶ್ವೇತಛತ್ರದಿಂದೊಡಗೂಡಿ ಪೂರ್ಣಚಂದ್ರನೊಡಗೂಡಿದ ಗಗನದಂತೆ ಶೋಭಿಸುತ್ತಿದ್ದನು. ಧನುರ್ಧಾರಿಗಳಲ್ಲಿ ಅಗ್ರಣಿಯನಾದ ಆ ಇಂದ್ರಜಿತ್ತುವು ಮುಂದುವರಿಯುತ್ತಿರಲು ರಾಕ್ಷಸವೀರರು ಚಿನ್ನದ ಕಟ್ಟುಗಳಿಂದಲಂಕೃತವಾದ ಚಾಮರಗಳಿಂದ ಆತನ ಉಭಯಪಾರ್ಶ್ವಗಳಲ್ಲಿಯೂ ಬೀಸುತ್ತಿದ್ದರು. (ಹೀಗೆ ಯುದ್ಧೋನ್ಮುಖನಾಗಿ ಹೊರಟಿರುವ ದೊಡ್ಡ ಸೇನೆಯೊಡಗೂಡಿದ ಇಂದ್ರಜಿತ್ತುವನ್ನು ನೋಡಿ, ಮಹಾತೇಜಸ್ವಿಯಾದ ರಾವಣನು ಅವನನ್ನು ಕುರಿತು, "ಮಗನೇ! ನೀನು ಎದುರಿಲ್ಲದ ರಥಿಕಶ್ರೇಷ್ಠನು. ನೀನು ಮಹೇಂದ್ರನನ್ನೇ ಗೆದ್ದಿರುವೆ. ಹೀಗಿರುವಲ್ಲಿ ಮಾನವನಾದ ಆ ರಾಮನನ್ನು ವಧಿಸುವೆಯೆಂದು ಹೇಳಬೇಕಾದುದೇ ಇಲ್ಲವು" ಎಂದನು. ತನ್ನ ತಂದೆಯಾದ ಆ ರಾವಣನಿಂತು ನುಡಿಯಲು ಆ ಇಂದ್ರಜಿತ್ತುವು ಆ ಹರಕೆಯನ್ನು ನಮಸ್ಕಾರಪೂರ್ವಕವಾಗಿ ಸ್ವೀಕರಿಸಿದನು). ಆ ತರುವಾಯ ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳ ಆ ಇಂದ್ರಜಿತ್ತುವಿನೊಡಗೂಡಿ ಲಂಕಾನಗರವು, ಪ್ರಜ್ವಲಿಸುತ್ತಿರುವ ಸೂರ್ಯನೊಡಗೂಡಿದ ಆಕಾಶ

ತೇಜಸಾ । ರರಾಜ ಪ್ರತಿವೀರೇಣ ದ್ಯೌರಿವಾರ್ಕೇಣ ಭಾಸ್ವತಾ ॥೧೫॥ ಸ ಸಂಪ್ರಾಪ್ಯ ಮಹಾತೇಜಾ ಯುದ್ಧಭೂಮಿಮರಿಂದಮಃ । ಸ್ಥಾಪಯಾಮಾಸ ರಕ್ಷಾಂಸಿ ರಥಂ ಪ್ರತಿ ಸಮಂತತಃ ॥ ೧೬ ॥ ತತಸ್ತು ಹುತಭೋಕ್ತಾರಂ ಹುತಭುಕ್ಸದೃಶಪ್ರಭಃ । ಜುಹಾವ ರಾಕ್ಷಸಶ್ರೇಷ್ಠೋ ಮಂತ್ರವದ್ವಿಧಿವತ್ತದಾ ॥ ೧೭ ॥ ಸಹವಿರ್ಲಾಜಸಂಸ್ಕಾರೈರ್ಮಾಲ್ಯ ಗಂಧ ಪುರಸ್ಕೃತೈಃ । ಜುಹುವೇ ಪಾವಕಂ ತತ್ರ ರಾಕ್ಷಸೇಂದ್ರಃ ಪ್ರತಾಪವಾನ್ ॥೧೮॥ ಶಸ್ತ್ರಾಣಿ ಶರಪತ್ರಾಣಿ ಸಮಿಧೋಥ ವಿಭೀತಕಾಃ । ಲೋಹಿತಾನಿ ಚ ವಾಸಾಂಸಿ ಸ್ರುವಂ ಕಾರ್ಷ್ಣಾಯಸಂ ತಥಾ ॥೧೯॥ ಸತತ್ರಾಗ್ನಿಂ ಸಮಾಸ್ತೀರ್ಯ ಶರಪತ್ರೈ

ಭಾಸ್ವತಾ-ಬೆಳಗುತ್ತಿರುವ, ಅರ್ಕೇಣ-ಸೂರ್ಯನಿಂದ, ದ್ಯೌರಿವ-ಅಂತರಿಕ್ಷದಂತೆ, ರರಾಜ-ಹೊಳೆಯುತ್ತಿತ್ತು. ॥೧೫॥ ಮಹಾತೇಜಾಃ-ಮಹಾ ತೇಜಸ್ವಿಯಾದ, ಅರಿಂದಮಃ-ಶತ್ರುಸಂಹಾರಕನಾದ, ಸಃ-ಆ ಇಂದ್ರಜಿತ್ತುವು, ಯುದ್ಧಭೂಮಿಂ - ರಣರಂಗವನ್ನು, ಸಂಪ್ರಾಪ್ಯ - ಹೊಂದಿ, ರಥಂಪ್ರತಿ - ತೇರನ್ನು ಕುರಿತು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ರಕ್ಷಾಂಸಿ - ರಕ್ಕಸರನ್ನು, ಸ್ಥಾಪಯಾಮಾಸ - ನಿಲ್ಲಿಸಿದನು. ॥ ೧೬ ॥ ತತಸ್ತು - ಆ ಬಳಿಕ, ಹುತ....ಭಃ - ಅಗ್ನಿಗೆ ಸಮಾನವಾದ ಕಾಂತಿಯುಳ್ಳ, ರಾಕ್ಷಸಶ್ರೇಷ್ಠಃ - ರಾಕ್ಷಸಶ್ರೇಷ್ಠನಾದ ಮೇಘನಾದನು, ಹುತಭೋಕ್ತಾರಂ - ಅಗ್ನಿಯನ್ನು, ಮಂತ್ರವತ್ - ಯಥಾಶಾಸ್ತ್ರವಾಗಿ, ತದಾ - ಆಗ, ಜುಹಾವ - ಹೋಮ ಮಾಡಿದನು. ॥೧೭॥ ತತ್ರ-ಅಲ್ಲಿ, ಪ್ರತಾಪವಾನ್ - ಪರಾಕ್ರಮಿಯಾದ, ರಾಕ್ಷಸೇಂದ್ರಃ - ರಾಕ್ಷಸಾಧಿಪತಿಯಾದ, ಸಃ - ಆ ಇಂದ್ರಾರಿಯು, ಮಾಲ್ಯ....ತೈಃ - ಪೂದಂಡೆಗಳಿಂದ ಪುರಸ್ಕಾರ ಮಾಡಲ್ಪಟ್ಟ, ಹವಿ....ರೈಃ - ಸಂಸ್ಕೃತವಾದ ಪುರೋಡಾಶಗಳಿಂದಲೂ, ಲಾಜಗಳಿಂದಲೂ, ಪಾವಕಂ - ಅಗ್ನಿಯನ್ನು ಕುರಿತು, ಜುಹುವೇ - ಹೋಮ ಮಾಡಿದನು. ॥ ೧೮ ॥ ಅಥ - ಅನಂತರದಲ್ಲಿ, ಶಸ್ತ್ರಾಣಿ - ಆಯುಧಗಳೂ, ಶರಪತ್ರಾಣಿ - ಜಂಡುಹುಲ್ಲಿನ, ಸಮಿಧಃ - ಸಮಿತ್ತುಗಳು, ವಿಭೀತಕಾಃ - ತಾರೇಗಿಡದ ವಿಕಾರವೂ, (ಅಥವಾ-ಶಸ್ತ್ರಾಣಿ - ತೋಮರಾದ್ಯಾಯುಧಗಳು, ಶರಪತ್ರಾಣಿ - ಸರಳುಬತ್ತಳಿಕೆಗಳೂ, ಬರ್ಹಿಸ್ಸುಗಳಾದವು,) ವಾಸಾಂಸಿ - ವಸ್ತ್ರಗಳೂ, ಲೋಹಿತಾನಿ - ಕೆಂಪಾಗಿ ಮಾಡಲ್ಪಟ್ಟವು, ತಥಾ - ಹಾಗೆಯೇ, ಸ್ರುವಂ - ಸ್ರುವವು, ಕಾರ್ಷ್ಣಾಯಸಂ - ಕಬ್ಬಿಣದ ಸಂಬಂಧವಾಗಿ, ಕೃತಂ - ಮಾಡಲ್ಪಟ್ಟಿತು. ॥೧೯॥ ಸಃ - ಆ ಇಂದ್ರಜಿತ್ತುವು, ತತ್ರ - ಆ ಯುದ್ಧಭೂಮಿಯಲ್ಲಿ, ತೋಮರೈಃ - ತೋಮರಾಯುಧಗಳಿಂದಲೂ, ಶರಪತ್ರೈಃ - ಸರಳು ಬತ್ತಳಿಕೆಗಳಿಂದ, ಅಗ್ನಿಂ - ಅಗ್ನಿಯನ್ನು, ಸಮಾಸ್ತೀರ್ಯ - ಪರಿಸ್ತರಿಸಿ,

---

ದಂತೆ ಬಹಳವಾಗಿ ಪ್ರಕಾಶಿಸಿತು. ॥೧೨–೧೫॥ ಆ ಇಂದ್ರಾರಿಯು ಯುದ್ಧಭೂಮಿಗೈತಂದು ತನ್ನ ಬಳಿಯಿದ್ದ ರಾಕ್ಷಸವೀರರನ್ನೂ, ತನ್ನ ರಥಶ್ರೇಷ್ಠವನ್ನೂ ಉಚಿತ ಪ್ರದೇಶದಲ್ಲಿ ನಿಲ್ಲಿಸಿ, ಅಲ್ಲಿಯೇ ವಿಧಿಪೂರ್ವಕವಾಗಿಯೂ, ಮಂತ್ರವತ್ತಾಗಿಯೂ, ಯಜ್ಞೇಶ್ವರನಲ್ಲಿ ಹೋಮಕರ್ಮವನ್ನು ಮಾಡಿದನು. ಆ ರಾಕ್ಷಸೇಂದ್ರ ಕುಮಾರನು ಅರಳುಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ಸುಗಂಧದಿಂದಲೂ ಅಗ್ನಿಯನ್ನರ್ಚಿಸಿ ಹೋಮ ಮಾಡಿದನು. ಶಸ್ತ್ರಗಳೂ, ಬಾಣಗಳೂ ಆ ಹೋಮಕರ್ಮಕ್ಕೆ ಸಮಿತ್ತುಗಳಾದುವು. ಶಸ್ತ್ರಾಸ್ತ್ರಗಳು ದರ್ಭೆಗಳಾದುವು. ಕಾರ್ಷ್ಣ್ಯಾಯಸವೆಂಬ ಬಾಣವು ಸ್ರುವವಾಯಿತು. ಇದಲ್ಲದೆ ಆ ಇಂದ್ರಜಿತ್ತುವು ಆಯಾ ಆಯುಧಗಳನ್ನು ಆಯಾ ಹೋಮಸಾಧನಗಳನ್ನಾಗಿ ಮಾಡಿ ಕಪ್ಪು ಮೇಕೆಯೊಂದನ್ನು ಹಿಡಿದು ತಂದು ಹೊಗೆಯಿಲ್ಲದೆ ಉರಿಯುತ್ತಿರುವ ಅಗ್ನಿಯಲ್ಲಿಟ್ಟು ಕೈಯಿಂದಲೇ ಅದರ ಕುತ್ತಿಗೆ

ಸ್ಸತೋಽಮರ್ಶೈಃ । ಛಾಗಸ್ಯ ಕೃಷ್ಣವರ್ಣಸ್ಯ ಗಳಂ ಜಗ್ರಾಹ ಜೀವಿತಃ ॥ ೨೦ ॥ ಸಕೃದೇವ ಸಮಿದ್ಧಸ್ಯ ವಿಧೂಮಸ್ಯ ಮಹಾರ್ಚಿಷಃ । ಬಭೂವುಸ್ತಾನಿ ಲಿಂಗಾನಿ ವಿಜಯಂ ಯಾನ್ಯದರ್ಶಯನ್ ॥೨೧॥ ಪ್ರದಕ್ಷಿಣಾವರ್ತಶಿಖಸ್ತಪ್ತಕಾಂಚನಭೂಷಣಃ । ಹವಿಸ್ತತ್ಪ್ರತಿಜಗ್ರಾಹ ಪಾವಕಸ್ಸ್ವಯಮಾಸ್ಥಿತಃ ॥ ೨೨ ॥ ಸೋಽಸ್ತ್ರಮಾಹಾರಯಾಮಾಸ ಬ್ರಾಹ್ಮಮಿಂದ್ರರಿಪುಸ್ತದಾ । ಧನುಶ್ಚಾತ್ಮರಥಂಚೈವ ಸರ್ವಂ ತತ್ರಾಭ್ಯಮಂತ್ರಯತ್ ॥ ೨೩ ॥ ತಸ್ಮಿನ್ನಾಹೂಯಮಾನೇಽಸ್ತ್ರೇ ಹೂಯಮಾನೇಚ ಪಾವಕೇ । ಸಾರ್ಧಂ ಗ್ರಹೇಂದುನಕ್ಷತ್ರೈರ್ವಿತತ್ರಾಸ ನಭಸ್ಥಲಂ ॥೨೪॥ ಸಪಾವಕಂ ಪಾವಕದೀಪ್ತತೇಜಾ ಹುತ್ವಾ ಮಹೇಂದ್ರಪ್ರತಿಮ ಪ್ರಭಾವಃ । ಸಚಾಪ ಬಾಣಾಸಿ ರಥಾಶ್ವ ಸೂತಃ ಖೇಂಽ

ಜೀವತಃ - ಬದುಕಿರುವ, ಕೃಷ್ಣವರ್ಣಸ್ಯ - ಕಪ್ಪುಬಣ್ಣವುಳ್ಳ, ಛಾಗಸ್ಯ - ಆಡಿನ, ಗಳಂ - ಕೊರಳನ್ನು, ಜಗ್ರಾಹ - ಹಿಡಿದನು. ॥ ೨೦ ॥ ಸಕೃದೇವ - ಒಂದಾವರ್ತಿಯೇ, ಸಮಿದ್ಧಸ್ಯ - ಪ್ರಜ್ವಲಿಸಲ್ಪಟ್ಟ, ವಿಧೂಮಸ್ಯ - ಹೊಗೆಯಿಲ್ಲದಿರುವ, ಮಹಾರ್ಚಿಷಃ - ಮಹಾ ಜ್ವಾಲೆಗಳುಳ್ಳ ಅಗ್ನಿಯು, ಯಾನಿ ಲಿಂಗಾನಿ - ಯಾವ ಗುರ್ತುಗಳು, ವಿಜಯಂ - ಜಯವನ್ನು, ಅದರ್ಶಯತ್ - ತೋರಿಸಿದವೋ, ತಾನಿಲಿಂಗಾನಿ - ಆ ಗುರ್ತುಗಳು, ಬಭೂವುಃ - ಆದವು. ॥ ೨೧ ॥ ಪ್ರದ....ಖಃ - ಪ್ರದಕ್ಷಿಣಾಕಾರವಾಗಿ ತಿರುಗುವ ಜ್ವಾಲೆಗಳುಳ್ಳ, ತಪ್ತ....ಣಃ - ಶೋಧಿಸಿದ ಬಂಗಾರದ ಒಡವೆಗಳುಳ್ಳ, ಪಾವಕಃ - ಅಗ್ನಿಯು, ಸ್ವಯಂ - ತಾನೇ, ಆಸ್ಥಿತಃ - ಪ್ರತ್ಯಕ್ಷವಾಗಿ, ತದ್ಧವಿಃ - ಆ ಹವಿಸ್ಸನ್ನು, ಪ್ರತಿಜಗ್ರಾಹ - ಪರಿಗ್ರಹಿಸಿದನು. ॥ ೨೨ ॥ ಸಃಇಂದ್ರರಿಪುಃ - ಆ ಶಕ್ರಾರಿಯು, ಬ್ರಾಹ್ಮಂ - ಬ್ರಹ್ಮಸಂಬಂಧವಾದ, ಅಸ್ತ್ರಂ - ಅಸ್ತ್ರವನ್ನು, ಆಹಾರಯಾಮಾಸ - ಕರೆಯಿಸಿದನು, ತದಾ - ಆ ಕಾಲದಲ್ಲಿ, ಧನುಶ್ಚ-ಬಿಲ್ಲನ್ನು, ಆತ್ಮರಥಂಚೈವ-ತನ್ನ ರಥವನ್ನೂ ಕೂಡ, ಸರ್ವಂ-ಸಮಸ್ತವನ್ನೂ, ತತ್ರ-ಆ ರಣರಂಗದಲ್ಲಿ, ಅಭ್ಯಮಂತ್ರಯತ್-ಅಭಿಮಂತ್ರಿಸಿದನು. ॥ ೨೩ ॥ ತಸ್ಮಿನ್ನಸ್ತ್ರೇ-ಆ ಬ್ರಹ್ಮಾಸ್ತ್ರವು, ಹೂಯಮಾನೇ - ಕರೆಯಿಸಲ್ಪಟ್ಟುದಾಗಲೂ, ಪಾವಕೇಚ - ಅಗ್ನಿಯೂ, ಹೂಯಮಾನೇ - ಹೋಮಮಾಡಲ್ಪಟ್ಟುದಾಗಲೂ, ಗ್ರಹೇಂ....ರ್ಧಂ-ನವಗ್ರಹಗಳೂ, ಚಂದ್ರನೂ, ನಕ್ಷತ್ರಗಳೂ ಇವುಗಳೊಡಗೂಡಿದ, ನಭಸ್ಥಲಂ-ಅಂತರಿಕ್ಷವು, ವಿತತ್ರಾಸ-ಚಲಿಸಿದವು. ॥೨೪॥ ಮಹೇಂ....ವಃ-ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಪಾವ....ಜಾಃ-ಅಗ್ನಿಯ ಜ್ವಾಲೆಯಂತೆ ತೇಜಸ್ಸುಳ್ಳ, ಅಚಿಂ....ಪಃ-ಚಿಂತಿಸಲಸಾಧ್ಯವಾದ ಮಂತ್ರಶಕ್ತಿಯುಳ್ಳ, ಸಃ - ಆ ಇಂದ್ರಜಿತ್ತುವು, ಪಾವಕಂ - ಅಗ್ನಿಯಲ್ಲಿ, ಹುತ್ವಾ - ಹೋಮಮಾಡಿ, ಸಚಾ....ತಃ-ಧನುರ್ಬಾಣಗಳೂ, ಖಡ್ಗಗಳೂ, ರಥವೂ, ಕುದುರೆಗಳೂ, ಸಾರಥಿಯೂ

ಯನ್ನು ಮುರಿದು ಹೋಮ ಮಾಡಿದನು. ॥ ೧೭–೨೦ ॥ ಆ ಸಮಯದಲ್ಲಿ ಯಜ್ಞೇಶ್ವರನು ಪ್ರದಕ್ಷಿಣಾಕಾರವಾಗಿ ತಿರುಗುತ್ತಿರುವ ಜ್ವಾಲೆಗಳೊಡಗೂಡಿ ಪುಟಪಾಕಶೋಧಿತವಾದ ಸ್ವರ್ಣಾಭರಣವಿರಾಜಿತನಾಗಿ ಆವಿರ್ಭವಿಸಿ ಆ ಇಂದ್ರಜಿತ್ತುವಿತ್ತ ಹೋಮದ್ರವ್ಯಗಳನ್ನು ಸ್ವೀಕರಿಸಿದನು. ಇಷ್ಟೆಯಲ್ಲದೆ ಪ್ರಸನ್ನನಾದ ಅಗ್ನಿಯು ಬ್ರಹ್ಮಾಸ್ತ್ರವೇ ಮೊದಲಾದ ಮಹಾಸ್ತ್ರಗಳನ್ನು ಆ ರಾಕ್ಷಸರಾಜಕುಮಾರನಿಗೆ ತಂದುಕೊಟ್ಟನು. ಹೀಗೆ ಇಂದ್ರಜಿತ್ತುವು ಹೋಮ ಮಾಡುತ್ತಿರುವ ಸಮಯದಲ್ಲಿ ಸೂರ್ಯಚಂದ್ರನಕ್ಷತ್ರಾದಿಗಳೊಡಗೂಡಿದ ಅಂತರಿಕ್ಷವೆಲ್ಲಾ ಗಡಗಡನೆ ನಡುಗಿತು. ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನೂ, ಯಜ್ಞೇಶ್ವರನಿಗೆ ಸಮಾನವಾದ ತೇಜಸ್ಸುಳ್ಳವನೂ ಆದ ಆ ಇಂದ್ರ

ತರ್ದಧೇऽತ್ಮಾನಮಚಿಂತ್ಯರೂಪಃ ॥೨೫॥ ತತೋಹಯರಥಾಕೀರ್ಣಂ ಪತಾಕಾಧ್ವಜ ಶೋಭಿತಂ । ನಿರ್ಯಯೌ ರಾಕ್ಷಸಬಲಂ ನರ್ದಮಾನಂ ಯುಯುತ್ಸಯಾ ॥ ೨೬ ॥ ತೇ ಶರೈರ್ಬಹುಭಿಶ್ಚಿತ್ರೈಸ್ತೀಕ್ಷ್ಣವೇಗೈರಲಂಕೃತೈಃ । ತೋಮರೈರಂಕುಶೈಶ್ಚಾಪಿ ವಾನರಾನ್ ಜಘ್ನುರಾಹವೇ ॥ ೨೭ ॥ ರಾವಣಿಸ್ತು ತತಃ ಕ್ರುದ್ಧಸ್ತಾನ್ನಿರೀಕ್ಷ್ಯ ನಿಶಾಚರಾನ್ । "ಹೃಷ್ಟಾ ಭವಂತೋ ಯುಧ್ಯಂತು ವಾನರಾಣಾಂ ಜಿಘಾಂಸಯಾ ॥ ೨೮ ॥ ತತಸ್ತೇ ರಾಕ್ಷಸಾಸ್ಸರ್ವೇ ನರ್ದಂತೋ ಜಯಕಾಂಕ್ಷಿಣಃ । ಅಭ್ಯವರ್ಷಂಸ್ತತೋ

ಎಂಬಿವುಗಳಿಂದೊಡಗೂಡಿ, ಖೇ - ಅಂತರಿಕ್ಷದಲ್ಲಿ, ಆತ್ಮಾನಂ - ತನ್ನನ್ನು, (ಅಂದರೆ - ಪೂರ್ವದ ರೂಪವನ್ನು), ಅಂತರ್ದಧೇ - ಅಂತರ್ಧಾನ ಮಾಡಿಕೊಂಡನು. ॥ ೨೫ ॥ ತತಃ - ಅನಂತರದಲ್ಲಿ, ಹಯ....ರ್ಣಂ-ಕುದುರೆಗಳಿಂದಲೂ, ರಥಗಳಿಂದಲೂ ವ್ಯಾಪ್ತವಾದ, ಪತಾ.....ತಂ-ನಿಶಾನಿಗಳಿಂದಲೂ ಧ್ವಜಪಟಗಳಿಂದಲೂ ಪ್ರಕಾಶಿಸುವ, ರಾಕ್ಷಸಬಲಂ-ರಾಕ್ಷಸಸೈನ್ಯವು, ಯುಯುತ್ಸಯಾ-ಯುದ್ಧೇಚ್ಛೆಯಿಂದ, ನರ್ದಮಾನಂ - ಕೂಗುತ್ತಾ, ನಿರ್ಯಯೌ - ಹೊರಟಿತು. ॥ ೨೬ ॥ ತೇ - ಆ ರಾಕ್ಷಸರು, ಆಹವೇ - ಯುದ್ಧದಲ್ಲಿ, ತೀಕ್ಷ್ಣವೇಗೈಃ - ಬಹು ವೇಗವುಳ್ಳ, ಅಲಂಕೃತೈಃ - ಅಲಂಕರಿಸಲ್ಪಟ್ಟ, ಬಹುಭಿಃ - ಅನೇಕವಾದ, ಶರೈಃ - ಬಾಣಗಳಿಂದಲೂ, ತೋಮರೈಃ - ತೋಮರಾಯುಧಗಳಿಂದಲೂ, ಅಂಕುಶೈಃ - ಅಂಕುಶಾಯುಧಗಳಿಂದಲೂ, ವಾನರಾನ್ - ಕಪಿಗಳನ್ನು, ಜಘ್ನುಃ - ಹೊಡೆದರು. ॥ ೨೭ ॥ ತತಃ - ಅನಂತರದಲ್ಲಿ, ಕ್ರುದ್ಧಃ - ಕುಪಿತನಾದ, ರಾವಣಿಸ್ತು - ರಾವಣನ ಮಗನಾದರೆ, ತಾನ್‌ನಿಶಾಚರಾನ್ - ಆ ರಾಕ್ಷಸರನ್ನು, ನಿರೀಕ್ಷ್ಯ - ಕಂಡು, ಭವಂತಃ - ನೀವುಗಳು, ಹೃಷ್ಟಾಃ - ಸಂತೋಷಚಿತ್ತರಾಗಿ, ವಾನರಾಣಾಂ-ಕಪಿಗಳನ್ನು, ಜಿಘಾಂಸಯಾ-ಜಯಿಸಲಿಚ್ಛೆಯಿಂದ, ಯುಧ್ಯಂತು-ಯುದ್ಧಮಾಡಿ, (ಇತಿ - ಇಂತೆಂದು), ಉವಾಚ - ಹೇಳಿದನು. ॥ ೨೮ ॥ ತತಃ - ಬಳಿಕ, ಜಯಕಾಂಕ್ಷಿಣಃ - ಜಯವನ್ನಿಚ್ಛಿಸುತ್ತಿರುವ, ಸರ್ವೇ - ಸಮಸ್ತರಾದ, ತೇರಾಕ್ಷಸಾಃ - ಆ ರಾಕ್ಷಸರು, ತತಃ - ಆ ಇಂದ್ರಜಿತ್ತುವಿನ ಮಾತಿನಿಂದ, ನರ್ದಂತಃ - ಕೂಗುವವರಾಗಿ, ಘೋರಾನ್ - ಭಯಂಕರ

ಜಿತ್ತುವು ಯಜ್ಞೇಶ್ವರನನ್ನರ್ಚಿಸಿ ಆತನಿತ್ತ ಧನುರ್ಬಾಣಗಳನ್ನು ಕೈಕೊಂಡು ಕೂಡಲೇ ಅಂತರಿಕ್ಷಕ್ಕೆ ಹಾರಿದನು. ಯಜ್ಞೇಶ್ವರನೂ ಕೂಡ ಆ ಇಂದ್ರಜಿತ್ತುವಿಗೆ ಧನುರ್ಬಾಣಾದಿಗಳನ್ನು ಕೊಟ್ಟು ಅಂತರ್ಧಾನವಾದನು. ಆ ಸಮಯದಲ್ಲಿ ಕುದುರೆಗಳೂ, ರಥಗಳೂ ಇವೇ ಮೊದಲಾದವುಗಳಿಂದ ಪ್ರಕಾಶಿಸುತ್ತಿರುವುದೂ, ಯುದ್ಧಮಾಡಬೇಕೆಂದು ಕುತೂಹಲದಿಂದ ಕೂಡಿರುವುದೂ ಆದ ರಾಕ್ಷಸಸೇನೆಯು ಹೊರಟಿತು. ಹೀಗೆ ಮಹೋತ್ಸಾಹದಿಂದ ಮುನ್ನುಗ್ಗಿದ ಆ ವೀರರಾಕ್ಷಸರೆಲ್ಲರೂ ಮಹಾ ಕೋಪೋದ್ದೀಪಿತರಾಗಿ ನಾನಾವಿಧಗಳಾದ ಬಾಣಗಳಿಂದಲೂ, ಆಯುಧಗಳಿಂದಲೂ, ಅಂಕುಶಗಳಿಂದಲೂ ರಭಸದಿಂದ ವಾನರಸೇನೆಯನ್ನು ಪ್ರಹರಿಸಿದರು. ॥ ೨೧–೨೭ ॥ ಆಗ ಇಂದ್ರಜಿತ್ತುವೂ ಕೂಡ ಮಹಾ ಕೋಪೋದ್ದೀಪಿತನಾಗಿ ವಾನರರೊಡನೆ ಯುದ್ಧ ಮಾಡುತ್ತಿದ್ದ ರಾಕ್ಷಸರೆಲ್ಲರನ್ನೂ ಪ್ರೋತ್ಸಾಹಿಸಿ, "ಎಲೈ ರಾಕ್ಷಸೋತ್ತಮರೇ! ನೀವೆಲ್ಲರೂ ಸಂತೋಷಚಿತ್ತರಾಗಿಯೂ, ನಿರಾತಂಕವಾಗಿಯೂ ಯುದ್ಧ ಮಾಡಿರಿ. ಹೆದರಬೇಕಾದುದಿಲ್ಲ" ಎಂದು ಹೇಳಿದನು. ಆಗ ಯುದ್ಧಾಪೇಕ್ಷೆಯುಳ್ಳ ವೀರರಾಕ್ಷಸರೆಲ್ಲರೂ ಮತ್ತಷ್ಟು ಉಬ್ಬಿ ಭಯಂಕರ ಸಿಂಹನಾದಗಳನ್ನು ಮಾಡುತ್ತ ವಾನರರಮೇಲೆ ಮಹತ್ತರ

ಘೋರಾಂ ವಾನರಾಂ ಶರವೃಷ್ಟಿಭಿಃ ॥ ೨೯ ॥ ಸತು ನಾಳೀಕನಾರಾಚೈರ್ಗದಾಭಿ ರ್ಮುಸಲೈರಪಿ । ರಕ್ಷೋಭಿಸ್ಸಂವೃತಸ್ಸಂಖ್ಯೇ ವಾನರಾನ್ವಿಚಕರ್ತಹ ॥ ೩೦ ॥ ತೇ ವಧ್ಯಮಾನಾಸ್ಸಮರೇ ವಾನರಾಃ ಪಾದಪಾಯುಧಾಃ । ಅಭ್ಯದ್ರವಂತ ಸಹಿತಾ ರಾವಣಿಂ ರಣಕರ್ಕಶಂ ॥೩೧॥ ಇಂದ್ರಜಿತ್ತು ತತಃ ಕ್ರುದ್ಧೋ ಮಹಾತೇಜಾ ಮಹಾ ಬಲಃ । ವಾನರಾಣಾಂ ಶರೀರಾಣಿ ವ್ಯಥಮದ್ರಾವಣಾತ್ಮಜಃ ॥ ೩೨ ॥ ಶರೇಣೈಕೇನಚ ಹರೀನ್ನವ ಪಂಚಚ ಸಪ್ತಚ । ಚಿಚ್ಛೇದ ಸಮರೇ ಕ್ರುದ್ಧೋ ರಾಕ್ಷಸಾನ್ ಸಂಪ್ರ ಹರ್ಷಯನ್ ॥೩೩॥ ಸಶರೈಸ್ಸೂರ್ಯಸಂಕಾಶೈಃ ಶಾತಕುಂಭವಿಭೂಷಿತೈಃ । ವಾನರಾನ್

ರಾದ, ವಾನರಾನ್ - ಕಪಿಗಳನ್ನು, ಶರವೃಷ್ಟಿಭಿಃ - ಬಾಣವರ್ಷಗಳಿಂದ, ಅಭ್ಯವರ್ಷಂತ - ಸುರಿಸಿದರು. ॥೨೯॥ ರಕ್ಷೋಭಿಃ-ರಕ್ಕಸರಿಂದ, ಸಂವೃತಃ-ಸುತ್ತುವರೆಯಲ್ಪಟ್ಟ, ಸತು-ಆ ರಾವಣನ ಮಗನಾದರೆ, ಸಂಖ್ಯೇ - ಕಾಳಗದಲ್ಲಿ, ನಾಳೀ....ಚೈಃ - ದಪ್ಪವಾಗಿರುವ ಕೊನೆಗಳುಳ್ಳ ಬಾಣಗಳಿಂದಲೂ, ನಿಡಿ ಗೋಲುಗಳಿಂದಲೂ, ಗದಾಭಿಃ-ಗದಾಯುಧಗಳಿಂದಲೂ, ಮುಸಲೈರಪಿ-ಮುಸಲಾಯುಧಗಳಿಂದಲೂ, ವಾನರಾನ್ - ಕಪಿಗಳನ್ನು, ವಿಚಕರ್ತಹ - ಕತ್ತರಿಸಿದನಷ್ಟೆ. ॥೩೦॥ ಸಮರೇ - ಕಾಳೆಗದಲ್ಲಿ, ವಧ್ಯ ಮಾನಾಃ - ಹೊಡೆಯಲ್ಪಡುತ್ತಿರುವ, ತೇವಾನರಾಃ - ಆ ಕಪಿಗಳು, ಪಾದ....ತಃ - ಗಿಡಗಳೇ ಆಯುಧ ಗಳಾಗುಳ್ಳವರಾಗಿ, ಸಹಿತಾಃ - ಗುಂಪುಸೇರಿ, ರಣಕರ್ಕಶಂ - ಕಾಳೆಗದಲ್ಲಿ ಕಠಿನನಾದ, ರಾವಣಿಂ - ಮೇಘನಾದನನ್ನು ಕುರಿತು, ಅಭ್ಯದ್ರವಂತ - ಓಡಿಬಂದರು. ॥ ೩೧ ॥ ಕ್ರುದ್ಧಃ - ಕೋಪಿಷ್ಟನಾದ, ಮಹಾತೇಜಾಃ-ಮಹಾ ತೇಜೋವಂತನಾದ, ಮಹಾಬಲಃ-ಬಹಳ ದೇಹತ್ರಾಣವುಳ್ಳ, ರಾವಣಾತ್ಮಜಃ- ರಾವಣನಿಗೆ ಕುಮಾರನಾದ, ಇಂದ್ರಜಿತ್ತು-ಇಂದ್ರಜಿತ್ತುವಾದರೆ, ವಾನರಾಣಾಂ-ಕಪಿಗಳ, ಶರೀರಾಣಿ- ಶರೀರಗಳನ್ನು, ವ್ಯಥಮತ್ - ಹೊಡೆದುಹಾಕಿದನು ॥ ೩೨ ॥ ಸಮರೇ - ಕಾಳೆಗದಲ್ಲಿ, ಕ್ರುದ್ಧಃ - ಕೋಪಿಷ್ಟನಾಗಿ, ರಾಕ್ಷಸಾನ್ - ರಕ್ಕಸರನ್ನು, ಸಂಪ್ರಹರ್ಷಯನ್ - ಸಂತೋಷಗೊಳಿಸುತ್ತ, ಏಕೇನ ಶರೇಣ - ಒಂದು ಬಾಣದಿಂದ, ಪಂಚ - ಐದು ಜನಗಳನ್ನು, ನವ - ಒಂಭತ್ತು ಮಂದಿಯನ್ನು, ಸಪ್ತ - ಏಳು ಮಂದಿಯನ್ನು ಹೀಗೆ, ಹರೀನ್ - ವಾನರರನ್ನು, ಚಿಚ್ಛೇದ - ಕತ್ತರಿಸಿದನು. ॥ ೩೩ ॥ ಸುದುರ್ಜಯಃ - ಜಯಿಸಲಸಾಧ್ಯನಾದ, ವೀರಃ - ಶೂರನಾದ, ಸಃ - ಆ ಇಂದ್ರಜಿತ್ತುವು, ಸೂರ್ಯ ಸಂಕಾಶೈಃ - ಸೂರ್ಯನಿಗೆ ಸಮಾನಗಳಾದ, ಶಾತ....ತೈಃ - ಬಂಗಾರದ ರೇಖೆಗಳಿಂದಲಂಕೃತವಾದ,

ವಾದ ಅಂಬಿನ ಮಳೆಯನ್ನು ಸುರಿಸಿದರು. ಅದೇ ಸಮಯದಲ್ಲಿಯೇ ಇಂದ್ರಜಿತ್ತುವೂ ಕೂಡ ವಿಶಾಲವಾದ ಅಗ್ರಭಾಗಗಳುಳ್ಳ ಗದೆಗಳಿಂದಲೂ, ಮುಸಲಗಳಿಂದಲೂ, ಅನೇಕಾ ನೇಕ ವಾನರರನ್ನು ಬಹು ಭಯಂಕರವಾಗಿ ಖಂಡಿಸಿದನು. ಹೀಗೆ ಮಹಾ ಕೋಪ ದಿಂದ ಯುದ್ಧ ಮಾಡುತ್ತಿರುವ ಆ ಇಂದ್ರಜಿತ್ತುವನ್ನು ನೋಡಿ ವಾನರರೆಲ್ಲರೂ ವೃಕ್ಷಗಳನ್ನೇ ಆಯುಧಗಳನ್ನಾಗಿ ಧರಿಸಿದವರಾಗಿ ಅವನ ಮೇಲೆ ಬಿದ್ದರು. ಮಹಾ ಬಲಾಢ್ಯನೂ, ಮಹಾ ತೇಜಸ್ವಿಯೂ ಆದ ಇಂದ್ರಜಿತ್ತುವು ಕೂಡಲೇ ಕೋಪಾವಿಷ್ಟನಾಗಿ ವಿವಿಧ ಬಾಣಜಾಲಗಳಿಂದ ಆ ವಾನರರನ್ನೆಲ್ಲ ವಿಧವಿಧವಾಗಿ ಛೇದಿಸಿ ಕೆಡವಿದನು. ಆ ರಾಕ್ಷಸರಾಜ ಕುಮಾರನು ಒಂದೊಂದು ಬಾರಿಗೆ ಒಂದೊಂದೇ ಬಾಣದಿಂದ ಐದುಮಂದಿ, ಏಳುಮಂದಿ, ಒಂಬತ್ತು ಮಂದಿ ಹೀಗೆ ಅನೇಕ ಮಂದಿ ವಾನರರನ್ನು ಕೊಂದನು. ॥ ೨೮–೩೩ ॥ ಈ ಪ್ರಕಾರವಾಗಿ ಆ ಇಂದ್ರಜಿತ್ತುವು ಪ್ರಯೋಗಿಸಿದ ಬಾಣಗಳಿಂದ ವ್ಯಾಪ್ತವಾದ ಸಮಸ್ತಾವಯವಗಳುಳ್ಳವ

ಸಮರೇ ವೀರಃ ಪ್ರಮಮಾಥ ಸುದುರ್ಜಯಃ ॥ ೩೪ ॥ ತೇ ಭಿನ್ನಗಾತ್ರಾಸ್ಸಮರೇ ವಾನರಾಃ ಶರಪೀಡಿತಾಃ । ಪೇತುರ್ಮಥಿತಸಂಕಲ್ಪಾ ಸ್ಸುರೈರಿವ ಮಹಾಸುರಾಃ ॥೩೫॥ ತಂ ತಪಂತಮಿವಾದಿತ್ಯಂ ಘೋರೈರ್ಬಾಣಗಭಸ್ತಿಭಿಃ । ಅಭ್ಯಧಾವಂತ ಸಂಕ್ರುದ್ಧಾ ಸ್ಸಂಯುಗೇ ವಾನರರ್ಷಭಾಃ ॥ ೩೬ ॥ ತತಸ್ತು ವಾನರಾಸ್ಸರ್ವೇ ಭಿನ್ನದೇಹಾ ವಿಚೇತಸಃ । ವ್ಯಥಿತಾ ವಿದ್ರವಂತಿಸ್ಮ ರುಧಿರೇಣ ಸಮುಕ್ಷಿತಾಃ ॥ ೩೭ ॥ ರಾಮಸ್ಯಾರ್ಥೇ ಪರಾಕ್ರಮ್ಯ ವಾನರಾಸ್ತ್ಯಕ್ತಜೀವಿತಾಃ । ನರ್ದಂತಸ್ತೇಽಭಿವೃತ್ತಾಸ್ತು ಸಮರೇ ಸಶಿಲಾಯುಧಾಃ ॥೩೮॥ ತೇ ದ್ರುಮೈಃ ಪರ್ವತಾಗ್ರೈಶ್ಚ ಶಿಲಾಭಿಶ್ಚ ಪ್ಲವಂಗಮಾಃ । ಅಭ್ಯವರ್ಷಂತ ಸಮರೇ ರಾವಣಿಂ ಪರ್ಯವಸ್ಥಿತಾಃ ॥ ೩೯ ॥ ತದ್ದ್ರುಮಾಣಾಂ ಶಿಲಾ

ಶರೈಃ - ಬಾಣಗಳಿಂದ, ವಾನರಾನ್ - ಕಪಿಗಳನ್ನು, ಪ್ರಮಮಾಥ - ಮಥಿಸಿದನು. ॥೩೪॥ ಸಮರೇ - ಕಾಳೆಗದಲ್ಲಿ, ಭಿನ್ನಗಾತ್ರಾಃ - ಭೇದಿಸಲ್ಪಟ್ಟ ಶರೀರಗಳುಳ್ಳ, ಶರಪೀಡಿತಾಃ - ಬಾಣಗಳಿಂದ ಪೀಡಿಸಲ್ಪಟ್ಟ, ತೇವಾನರಾಃ - ಆ ಕಪಿಗಳು, ಮಥಿ....ಲ್ಪಾಃ - ನಾಶಗೊಳಿಸಿದ ಮನೋರಥಗಳುಳ್ಳವರಾಗಿ, ಸುರೈಃ - ದೇವತೆಗಳಿಂದ, ಮಹಾಸುರಾಇವ - ದೊಡ್ಡ ದೈತ್ಯರಂತೆ, ಪೇತುಃ - ಬಿದ್ದರು. ॥ ೩೫ ॥ ಘೋರೈಃ - ಭಯಂಕರವಾದ, ಬಾಣಗಭಸ್ತಿಭಿಃ - ಬಾಣಗಳೆಂಬ ಕಿರಣಗಳಿಂದ, ತಪಂತಂ - ತಪಿಸುತ್ತಿರುವ, ಆದಿ....ತಂ-ಸೂರ್ಯನೋ ಎಂಬಂತಿರುವ, ತಂ-ಆ ಇಂದ್ರಜಿತ್ತುವನ್ನು, ವಾನರರ್ಷಭಾಃ-ಕಪಿಶ್ರೇಷ್ಠರು, ಸಂಯುಗೇ - ಕಾಳೆಗದಲ್ಲಿ, ಸಂಕ್ರುದ್ಧಾಃ - ಕೋಪಗೊಂಡವರಾಗಿ, ಅಭ್ಯಧಾವಂತ - ಓಡಿಬಂದರು. ॥೩೬॥ ತತಸ್ತು-ಆ ಬಳಿಕ, ಸರ್ವೇವಾನರಾಃ-ಸಮಸ್ತರಾದ ಕಪಿಗಳೂ, ಭಿನ್ನದೇಹಾಃ - ಕತ್ತರಿಸಿದ ಮೈಯುಳ್ಳವರಾಗಿ, ವಿಚೇತಸಃ - ಯುದ್ಧದಲ್ಲಿ ಹೋಗಲಾಡಿಸಲ್ಪಟ್ಟ ಮನಸ್ಸುಗಳುಳ್ಳವರಾಗಿ, ವ್ಯಥಿತಾಃ - ವ್ಯಸನಗೊಂಡು, ರುಧಿರೇಣ - ರಕ್ತದಿಂದ, ಸಮುಕ್ಷಿತಾಃ - ತೊಯಿಸಲ್ಪಟ್ಟವರಾಗಿ, ವಿದ್ರವಂತಿಸ್ಮ - ಓಡಿಹೋದರಷ್ಟೆ. ॥ ೩೭ ॥ ರಾಮಸ್ಯಾರ್ಥೇ - ಶ್ರೀರಾಮನ ನಿಮಿತ್ತವಾಗಿ, ಪರಾಕ್ರಮ್ಯ - ಕಾಳೆಗಮಾಡಿ, ತ್ಯಕ್ತಜೀವಿತಾಃ - ತೊರೆದ ಪ್ರಾಣಗಳುಳ್ಳ, ತೇವಾನರಾಃ - ಆ ಕಪಿಗಳು, ಅಭಿವೃತ್ತಾಃ - ಎದುರಾಗಿ ಬರುತ್ತ, ನರ್ದಂತಃ - ಕೂಗುತ್ತಿರುವವರಾಗಿ, ಸಮರೇ - ಕಾಳೆಗದಲ್ಲಿ, ಸಶಿಲಾಯುಧಾಃ - ಕಲ್ಲುಗಳಿಂದಲೂ, ಆಯುಧಗಳಿಂದಲೂ ಕೂಡಿದವರು, ಅಭೂವನ್ - ಆದರು. ॥ ೩೮ ॥ ಸಮರೇ - ಕಾಳೆಗದಲ್ಲಿ, ತೇಪ್ಲವಂಗಮಾಃ - ಆ ಕಪಿಗಳು, ಪರ್ಯವಸ್ಥಿತಾಃ - ಸುತ್ತುಮುತ್ತಲೂ ಇರುವವರಾಗಿ, ದ್ರುಮೈಃ - ಮರಗಳಿಂದಲೂ, ಪರ್ವತಾಗ್ರೈಶ್ಚ - ಬೆಟ್ಟಗಳ ತುದಿಗಳಿಂದಲೂ, ಶಿಲಾಭಿಶ್ಚ - ಪಾಷಾಣಗಳಿಂದಲೂ, ರಾವಣಿಂ - ಇಂದ್ರಜಿತ್ತುವನ್ನು, ಅಭ್ಯವರ್ಷಂತ - ಸುರಿಸಿದರು. ॥ ೩೯ ॥ ಸಮಿತಿಂಜಯಃ - ಕಾಳೆಗದಲ್ಲಿ ಜಯಶೀಲನಾದ, ಮಹಾತೇಜಾಃ - ಬಹಳ ಸಾಮರ್ಥ್ಯವಂತನಾದ, ರಾವಣಿಃ - ಮೇಘನಾದನು, ಪ್ರಾಣಹರಂ - ಪ್ರಾಣಾಪಹಾರಕವಾದ,

---

ರಾದ ವಾನರರೆಲ್ಲರೂ ಮಹಾ ವ್ಯಸನಪೀಡಿತರಾಗಿ ನೆಲಕ್ಕುರುಳಿಹೋದರು. ಅನೇಕ ವಾನರರು ಶ್ರೀರಾಮಮೂರ್ತಿಗಾಗಿ ಪರಾಕ್ರಮವನ್ನು ಮೆರೆದು ಪ್ರಾಣಗಳನ್ನು ತೊರೆದರು. ಕೆಲವರು ವಾನರರು ಕಲ್ಮರಗಳನ್ನೇ ಆಯುಧಗಳನ್ನಾಗಿ ಧರಿಸಿ ಆ ಇಂದ್ರಜಿತ್ತುವಿನ ಮೇಲೆ ಪ್ರಯೋಗಿಸಿದರು. ಇನ್ನು ಕೆಲವರು ವಾನರರು ಪರ್ವತಾಗ್ರಗಳನ್ನೂ, ಮರಗಳನ್ನೂ, ಕಲ್ಲುಗಳನ್ನೂ ಆ ರಾಕ್ಷಸರಾಜ ಕುಮಾರನ ಮೇಲೆ ಮಳೆಗರೆದರು. ಆಗ ಮಹಾ ತೇಜಸ್ವಿಯಾದ ಇಂದ್ರಜಿತ್ತುವು ಆ ವಾನರವೀರರು ಪ್ರಯೋಗಿಸಿದ ಪ್ರಾಣಾಪಹಾರಕವಾದ ಶಿಖರಗಳು, ಮರಗಳು,

ನಾಂಚ ವರ್ಷಂ ಪ್ರಾಣಹರಂ ಮಹತ್ । ವ್ಯಪೋಹತ ಮಹಾತೇಜಾ ರಾವಣಿಸ್ಸಮಿತಿಂಜಯಃ ॥೪೦॥ ತತಃ ಪಾವಕಸಂಕಾಶೈಃ ಶರೈರಾಶೀವಿಷೋಪಮೈಃ । ವಾನರಾಣಾಮನೀಕಾನಿ ಬಿಭೇದ ಸಮರೇ ಪ್ರಭುಃ ॥ ೪೧ ॥ ಅಷ್ಟಾದಶ ಶರೈಸ್ತೀಕ್ಷ್ಣೈಸ್ಸವಿಧ್ವಾ ಗಂಧಮಾದನಂ । ವಿವ್ಯಾಥ ನವಭಿಶ್ಚೈವ ನಳಂ ದೂರಾದವಸ್ಥಿತಂ ॥೪೨॥ ಸಪ್ತಭಿಸ್ತು ಮಹಾವೀರ್ಯೋ ಮೈಂದಂ ಮರ್ಮವಿದಾರಣೈಃ । ಪಂಚಭಿರ್ವಿಶಿಖೈಶ್ಚೈವ ಗಜಂ ವಿವ್ಯಾಥ ಸಂಯುಗೇ ॥ ೪೩ ॥ ಜಾಂಬವಂತಂತು ದಶಭಿರ್ನೀಲಂ ತ್ರಿಂಶದ್ಭಿರೇವಚ । ಸುಗ್ರೀವಮೃಷಭಂಚೈವ ಸೋಂಽಗದಂ ದ್ವಿವಿದಂ ತಥಾ। ಘೋರೈರ್ದತ್ತವರೈ ಸ್ತೀಕ್ಷ್ಣೈ

ಮಹತ್ - ದೊಡ್ಡದಾದ, ದ್ರುಮಾಣಾಂ - ಮರಗಳ, ಶಿಲಾನಾಂ - ಕಲ್ಲುಗಳ, ತದ್ವರ್ಷಂ - ಆ ಮಳೆಯನ್ನು, ವ್ಯಪೋಹತ - ತಡೆದನು. ॥ ೪೦ ॥ ತತಃ - ಬಳಿಕ, ಸಮರೇ - ಕಾಳಗದಲ್ಲಿ, ಪ್ರಭುಃ- ಸಮರ್ಥನಾದ ಆ ಇಂದ್ರಜಿತ್ತುವು, ಪಾವ....ಶೈಃ - ಅಗ್ನಿಗೆ ಸಮಾನಗಳಾದ, ಆಶೀ....ಮೈಃ - ಸರ್ಪಗಳಿಗೆ ಸಮಾನವಾದ, ಶರೈಃ - ಬಾಣಗಳಿಂದ, ವಾನರಾಣಾಂ - ಕಪಿಗಳ, ಅನೀಕಾನಿ - ಸೈನ್ಯಗಳನ್ನು, ಬಿಭೇದ-ಭೇದಿಸಿದನು. ॥ ೪೧ ॥ ಸಃ-ಆ ಇಂದ್ರಜಿತ್ತುವು, ತೀಕ್ಷ್ಣೈಃ-ಹದವಾದ, ಅಷ್ಟಾ....ರೈಃ- ಹದಿನೆಂಟು ಬಾಣಗಳಿಂದ, ಗಂಧಮಾದನಂ - ಗಂಧಮಾದನನ್ನು, ವಿಧ್ವಾ ಹೊಡೆದು, ದೂರಾತ್ - ದೂರವಾಗಿ, ಅವಸ್ಥಿತಂ - ನಿಂತಿದ್ದ, ನಳಂ - ನಳನನ್ನು, ನವಭಿಶ್ಚೈವ - ಒಂಬತ್ತು ಬಾಣಗಳಿಂದ, ವಿವ್ಯಾಥ - ಹೊಡೆದನು. ॥ ೪೨ ॥ ಮಹಾವೀರ್ಯಃ - ಮಹಾ ಪರಾಕ್ರಮಿಯಾದ ಇಂದ್ರಜಿತ್ತುವು, ಸಂಯುಗೇ - ಕಾಳಗದಲ್ಲಿ, ಮರ್ಮ....ಣೈಃ - ಮರ್ಮಸ್ಥಾನಗಳನ್ನು ಭೇದಿಸುತ್ತಿರುವ, ಸಪ್ತ....ಖೈಃ- ಏಳು ಬಾಣಗಳಿಂದ, ಸಂಯುಗೇ - ಕಾಳಗದಲ್ಲಿ, ಮೈಂದಂ - ಮೈಂದನನ್ನು, ಪಂಚಭಿಃವಿಶಿಖೈಶ್ಚೈವ- ಐದು ಬಾಣಗಳಿಂದ, ಗಜಂ - ಗಜನನ್ನು, ವಿವ್ಯಾಥ - ಹೊಡೆದನು. ॥ ೪೩ ॥ ಜಾಂಬವಂತಂತು - ಜಾಂಬವಂತನನ್ನಾದರೆ, ದಶಭಿಃ - ಹತ್ತುಬಾಣಗಳಿಂದಲೂ, ತ್ರಿಂಶದ್ಭಿಃ - ಮುವ್ವತ್ತು ಬಾಣಗಳಿಂದ, ನೀಲಮೇವಚ - ನೀಲನನ್ನೂ, ಸುಗ್ರೀವಂ - ಸುಗ್ರೀವನನ್ನೂ, ಋಷಭಂಚೈವ - ಋಷಭನನ್ನೂ, ಅಂಗದಂ - ಅಂಗದನನ್ನೂ, ತಥಾ - ಹಾಗೆಯೇ, ದ್ವಿವಿದಂ - ದ್ವಿವಿದನನ್ನೂ, ಏತಾನ್ - ಇವರುಗಳನ್ನೂ, ಸಃ - ಆ ಇಂದ್ರಜಿತ್ತುವು, ತದಾ - ಆ ಕಾಲದಲ್ಲಿ, ಘೋರೈಃ - ಭಯಂಕರಗಳಾದ, ದತ್ತವರೈಃ - ಕೊಡಲ್ಪಟ್ಟ ವರಗಳುಳ್ಳ, ತೀಕ್ಷ್ಣೈಃ - ಹದವಾದ ಬಾಣಗಳಿಂದ, ನಿಷ್ಪ್ರಾಣಾನ್ - ಪ್ರಾಣ

ಕಲ್ಲುಗಳು ಇವೇ ಮೊದಲಾದವುಗಳ ಸುರಿಮಳೆಯನ್ನು ತನ್ನ ಬಾಣಗಳಿಂದಲೇ ನಾಶಗೊಳಿಸಿದನು. ॥೩೪–೪೦॥ ರಣಾಂಗಣದಲ್ಲಿ ಮಹಾ ಸಮರ್ಥನಾದ ಆ ಇಂದ್ರಜಿತ್ತುವು, ಅಗ್ನಿಸಮಾನವಾದವುಗಳೂ, ಸರ್ಪಸಮಾನವಾದವುಗಳೂ ಆದ ಬಾಣಗಳಿಂದ ವಾನರಸೇನೆಯನ್ನೆಲ್ಲ ಅತ್ತಿತ್ತ ಚದುರಿಸಿದನು. ಆ ತರುವಾಯ ಆ ವೀರರಾಕ್ಷಸನು ಹದಿನೆಂಟು ಬಾಣಗಳಿಂದ ಗಂಧಮಾದನನನ್ನು ಹೊಡೆದು ಕೆಡವಿದನು; ಒಂಬತ್ತು ಬಾಣಗಳಿಂದ ನಳನನ್ನು ಹೊಡೆದನು; ಆ ಬಳಿಕ ಮರ್ಮವನ್ನು ಭೇದಿಸಿಬಿಡುವ ಏಳು ಬಾಣಗಳನ್ನು ತೆಗೆದುಕೊಂಡು ಬಿಲ್ಲಿನಲ್ಲಿ ಹೂಡಿ ಮೈಂದನೆಂಬ ವಾನರಯೂಥಪತಿಯನ್ನು ಪ್ರಹರಿಸಿದನು; ಮತ್ತೈದು ಬಾಣಗಳಿಂದ ಗಜನನ್ನೂ, ಜಾಂಬವಂತನನ್ನು ಮೂವತ್ತು ಬಾಣಗಳಿಂದಲೂ, ವರಪ್ರಸಾದಾಸಾಧಿತವಾದ ಮತ್ತೆ ಮೂವತ್ತು ಬಾಣಗಳಿಂದ ನೀಲನೆಂಬ ವಾನರೋತ್ತಮನನ್ನೂ ಪ್ರಹರಿಸಿದನು. ಹೀಗೆಯೇ ಅಮಿತಪರಾಕ್ರಮಿಯಾದ ಆ ರಾಕ್ಷಸರಾಜ ಕುಮಾರನು ಋಷಭ ಸುಗ್ರೀವಾಂಗದ

ನಿಃಷ್ಪ್ರಾಣಾನಕರೋತ್ತದಾ ||೪೪|| ಅನ್ಯಾನಪಿ ತದಾ ಮುಖ್ಯಾನ್ ವಾನರಾನ್ ಬಹುಭಿಃ ಶರೈಃ । ಅರ್ದಯಾಮಾಸ ಸಂಕ್ರುದ್ಧಃ ಕಾಲಾಗ್ನಿರಿವ ಮೂರ್ಛಿತಃ || ೪೫ || ಸಶರೈ ಸ್ಸೂರ್ಯಸಂಕಾಶೈ ಸ್ಸುಮುಕ್ತೈಃ ಶೀಘ್ರಗಾಮಿಭಿಃ । ವಾನರಾಣಾಮನೀಕಾನಿ ನಿರ್ಮ ಮಂಥ ಮಹಾರಣೇ ||೪೬|| ಅಕುಲಾಂ ವಾನರೀಂ ಸೇನಾಂ ಶರಜಾಲೇನ ಮೋಹಿತಾಂ। ಹೃಷ್ಟಸ್ಸ ಪರಯಾ ಪ್ರೀತ್ಯಾ ದದರ್ಶ ಕ್ಷತಜೋಕ್ಷಿತಾಂ || ೪೭ || ಪುನರೇವ ಮಹಾ ತೇಜಾ ರಾಕ್ಷಸೇಂದ್ರಾತ್ಮಜೋ ಬಲೀ । ಸಂಸೃಜ್ಯ ಬಾಣವರ್ಷಂಚ ಶಸ್ತ್ರವರ್ಷಂಚ ದಾರುಣಂ । ಮಮರ್ದ ವಾನರಾನೀಕಮಿಂದ್ರಜಿತ್ತ್ವರಿತೋ ಬಲೀ || ೪೮-೪೯ ||

ಶಕ್ತಿಯಿಂದ ರಹಿತರನ್ನಾಗಿ, ಅಕರೋತ್-ಮಾಡಿದನು. || ೪೪ || ತದಾ-ಆ ಕಾಲದಲ್ಲಿ, ಮೂರ್ಛಿತಃ-ಅಭಿವೃದ್ಧಿಗೊಳಿಸಲ್ಪಟ್ಟ, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ಸಂಕ್ರುದ್ಧಃ - ಕುಪಿತನಾಗಿ, ತದಾ - ಆ ಕಾಲದಲ್ಲಿ, ಮುಖ್ಯಾನ್ - ಮುಖಂಡರಾದ, ಅನ್ಯಾನ್‌ವಾನರಾನಪಿ - ಮತ್ತೂ ಇತರರಾದ ವಾನರರನ್ನು, ಬಹುಭಿಃ - ಅನೇಕಗಳಾದ, ಶರೈಃ - ಬಾಣಗಳಿಂದ, ಅರ್ದಯಾಮಾಸ - ಹೊಡೆದನು. ||೪೫|| ಸಃ - ಆ ಮೇಘನಾದನು, ಮಹಾರಣೇ - ದೊಡ್ಡ ಕಾಳಗದಲ್ಲಿ, ಸೂರ್ಯಸಂಕಾಶೈಃ - ಸೂರ್ಯನ ಕಾಂತಿಗೆ ಸಮಾನವಾದ ಪ್ರಕಾಶವುಳ್ಳ, ಸುಮುಕ್ತೈಃ - ಚೆನ್ನಾಗಿ ಬಿಡಲ್ಪಟ್ಟ, ಶೀಘ್ರಗಾಮಿಭಿಃ - ತ್ವರೆಯಾಗಿ ಹೋಗುತ್ತಿರುವ, ಶರೈಃ - ಬಾಣಗಳಿಂದ, ವಾನರಾಣಾಂ - ಕಪಿಗಳ, ಅನೀಕಾನಿ - ಸೇನೆಗಳನ್ನು, ನಿರ್ಮಮಂಥ - ಹೊಡೆದನು. || ೪೬ || ಸಃ - ಆ ಇಂದ್ರಜಿತ್ತುವು, ಹೃಷ್ಟಃ - ಸಂತೋಷಗೊಂಡವನಾಗಿ, ಪರಯಾಪ್ರೀತ್ಯಾ - ಬಹಳ ವಿಶ್ವಾಸದಿಂದ, ಶರಜಾಲೇನ - ಬಾಣಗಳ ತಂಡಗಳಿಂದ, ಮೋಹಿತಾಂ - ಭ್ರಾಂತಿಗೊಳಿಸಲ್ಪಟ್ಟ, ಆಕುಲಾಂ - ವ್ಯಾಕುಲವಾದ, ವಾನರೀಂ - ವಾನರಸಂಬಂಧಿಯಾದ, ಸೇನಾಂ-ಸೈನ್ಯವನ್ನು, ಕ್ಷತಜೋಕ್ಷಿತಾಂ-ರಕ್ತದಿಂದ ತೋಯಿಸಲ್ಪಟ್ಟುದನ್ನಾಗಿ, ದದರ್ಶ-ಕಂಡನು. ||೪೭|| ಪುನರೇವ - ತಿರುಗಿ, ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ, ಬಲೀ - ಬಲವಂತನಾದ, ರಾಕ್ಷ....ಜಃ - ರಾವಣನ ಕುವರನಾದ ಇಂದ್ರಜಿತ್ತುವು, ಧಾರುಣಂ - ಭಯಂಕರವಾದ, ಬಾಣವರ್ಷಂಚ - ಬಾಣವೃಷ್ಟಿಯನ್ನೂ, ಶಸ್ತ್ರವರ್ಷಂಚ - ಶಸ್ತ್ರಗಳ ವರ್ಷವನ್ನೂ, ಸಂಸೃಜ್ಯ-ಸೃಷ್ಟಿಮಾಡಿ. ||೪೮|| ಬಲೀ - ಬಲವಂತನಾದ, ತ್ವರಿತಃ - ಜಾಗ್ರತೆಯುಳ್ಳ, ಇಂದ್ರಜಿತ್ತು - ಇಂದ್ರಜಿತ್ತುವು, ವಾನರಾನೀಕಂ - ಕಪಿಗಳ ಸೈನ್ಯವನ್ನು, ಮಮರ್ದ - ಹೊಡೆದನು. ||೪೯|| ಸ್ವಸೈನ್ಯಂ -

---

ವಿಭೀಷಣರ ಮೇಲೂ ಮೂವತ್ತು ಮೂವತ್ತು ಬಾಣಗಳನ್ನು ಪ್ರಯೋಗಿಸಿದನು. ಇಷ್ಟೆಯಲ್ಲದೆ ಮಹಾ ತೀಕ್ಷ್ಣವಾದುವೂ, ವರವಾಗಿ ಬಂದುವೂ ಆದ ಅನೇಕ ಸಹಸ್ರ ಬಾಣಗಳಿಂದ ಅನೇಕ ಸಹಸ್ರ ವಾನರರನ್ನು ಸಂಹರಿಸಿದನು. ಈ ಪ್ರಕಾರವಾಗಿ ವಿವಿಧ ಬಾಣಗಳನ್ನು ಪ್ರಯೋಗಿಸುತ್ತ ಆ ಇಂದ್ರಜಿತ್ತುವು ಮತ್ತೂ ಕ್ರೋಧಾವಿಷ್ಟನಾಗಿ ಕಾಲಾಗ್ನಿಯಂತೆ ಪ್ರಜ್ವಲಿಸುತ್ತಿದ್ದನು. || ೪೧–೪೫ || ಈ ಪ್ರಕಾರವಾಗಿ ಆ ರಣಾಂಗಣದಲ್ಲಿ ಆ ಇಂದ್ರಜಿತ್ತುವು ಸೂರ್ಯಸಮಾನಗಳಾದ ಬಾಣಗಳಿಂದ ವಾನರಸೇನೆಯನ್ನೆಲ್ಲ ಮರ್ದಿಸಿದನು. ಆ ಸಮಯದಲ್ಲಿ ಬಾಣಸಮುದಾಯದಿಂದ ಮೋಹಗೊಂಡುದೂ, ಅತಿಯಾಗಿ ವ್ಯಾಕುಲಗೊಂಡಿರುವುದೂ, ರಕ್ತದಿಂದ ವ್ಯಾಪ್ತವಾಗಿರುವುದೂ ಆದ ಆ ವಾನರಸೇನೆಯನ್ನು ನೋಡಿ ಇಂದ್ರಜಿತ್ತುವು ಪರಮಾನಂದಭರಿತನಾದನು. ಆ ಬಳಿಕ ಮಹಾ ತೇಜಸ್ವಿಯೂ, ರಾವಣಾಸುರನ ಕುಮಾರನೂ ಆದ ಆ ಇಂದ್ರಜಿತ್ತುವು ಮತ್ತೂ ಭಯಂಕರವಾದ ಬಾಣವರ್ಷವನ್ನು ಸುರಿಸಿದನು. ಇಷ್ಟು

ಸ್ವಸೈನ್ಯಮುತ್ಸೃಜ್ಯ ಸಮೇತ್ಯ ತೂರ್ಣಂ ಮಹಾರಣೇ ವಾನರವಾಹಿನೀಷು । ಅದೃಶ್ಯಮಾನಃ ಶರಜಾಲಮುಗ್ರಂ ವವರ್ಷ ನೀಲಾಂಬುಧರೋ ಯಥಾಂಬು ॥೫೦॥ ತೇ ಶಕ್ರಜಿದ್ಬಾಣವಿಶೀರ್ಣದೇಹಾ ಮಾಯಾಹತಾ ವಿಸ್ವರಮುನ್ನದಂತಃ । ರಣೇ ನಿಪೇತುರ್ಹರಯೋಽದ್ರಿಕಲ್ಪಾ ಯಥೇಂದ್ರವಜ್ರಾಭಿಹತಾ ನಗೇಂದ್ರಾಃ ॥೫೧॥ ತೇ ಕೇವಲಂ ಸಂದದೃಶುಃ ಶಿತಾಗ್ರಾನ್ ಬಾಣಾನ್ ರಣೇ ವಾನರವಾಹಿನೀಷು । ಮಾಯಾನಿಗೂಢಂ ತು ಸುರೇಂದ್ರಶತ್ರುಂ ನಚಾವೃತಂ ರಾಕ್ಷಸಮಭ್ಯಪಶ್ಯನ್ ॥೫೨॥ ತತಸ್ಸರಕ್ಷೋಧಿಪತಿರ್ಮಹಾತ್ಮಾ ಸರ್ವಾದಿಶೋ ಬಾಣಗಣೈಃ ಶಿತಾಗ್ರೈಃ । ಪ್ರಚ್ಛಾದಯಾಮಾಸ ರವಿ

ತನ್ನ ಸೈನ್ಯವನ್ನು, ಉತ್ಸೃಜ್ಯ - ಬಿಟ್ಟು, ವಾನ....ಷು - ಕಪಿಗಳ ಸೈನ್ಯಗಳಲ್ಲಿ, ತೂರ್ಣಂ - ಜಾಗ್ರತೆಯಾಗಿ, ಸಮೇತ್ಯ - ಬಂದು, ಅದೃಶ್ಯಮಾನಃ - ಕಾಣದೆ, ಮಹಾರಣೇ - ದೊಡ್ಡ ಕಾಳಗದಲ್ಲಿ, ನೀಲಾಂ....ರಃ - ಕಾಲಮೇಘವು, ಅಂಬುಯಥಾ - ನೀರನ್ನೆಂತೋ ಅಂತು, ಉಗ್ರಂ - ಭಯಂಕರವಾದ, ಶರಜಾಲಂ - ಬಾಣವರ್ಷವನ್ನು, ವವರ್ಷ - ಸುರಿಸಿದನು. ||೫೦|| ಅದ್ರಿಕಲ್ಪಾಃ - ಬೆಟ್ಟಗಳಿಗೆ ಸಮಾನರಾದ, ತೇಹರಯಃ - ಆ ಕಪಿಗಳು, ಶಕ್ರ....ಹಾಃ - ಇಂದ್ರಜಿತ್ತುವಿನ ಬಾಣಗಳಿಂದ ಸುಲಿಯಲ್ಪಟ್ಟ ದೇಹಗಳುಳ್ಳವರಾಗಿ, ಮಾಯಾಹತಾಃ - ಮಾಯೆಯಿಂದ ಹೊಡೆಯಲ್ಪಟ್ಟವರಾಗಿ, ವಿಸ್ವರಂ - ಅಪಸ್ವರವಾಗಿ, ಉನ್ನದಂತಃ - ಧ್ವನಿಮಾಡುತ್ತ, ಇಂದ್ರ....ತಾಃ - ದೇವೇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ, ನಗೇಂದ್ರಾಯಥಾ-ಬೆಟ್ಟಗಳಂತೆ, ರಣೇ-ಕಾಳಗದಲ್ಲಿ, ನಿಪೇತುಃ-ಬಿದ್ದರು, ತೇ - ಆ ವಾನರರು, ಶಿತಾಗ್ರಾನ್ - ಹದವಾದ ತುದಿಗಳುಳ್ಳ, ಬಾಣಾನ್ಕೇವಲಂ - ಬಾಣಗಳನ್ನು ಮಾತ್ರವೇ, ವಾನ....ಷು - ಕಪಿಸೈನ್ಯಗಳಲ್ಲಿ, ಸಂದದೃಶುಃ - ಕಂಡರು, ರಣೇ - ಕಾಳಗದಲ್ಲಿ, ಮಾಯಾನಿಗೂಢಂ-ಮಾಯೆಯಿಂದ ಗುಪ್ತನಾದ, ಸುರೇಂದ್ರಶತ್ರುಂ-ಇಂದ್ರಶತ್ರುವಾದ, ಆವೃತಂ-ಆಚ್ಛಾದಿತನಾದ, ರಾಕ್ಷಸಂ - ರಕ್ಕಸನನ್ನು, ನಾಭ್ಯಪಶ್ಯನ್ - ನೋಡಲಿಲ್ಲವು. || ೫೧ ೫೨ || ತತಃ - ಬಳಿಕ, ಮಹಾತ್ಮಾ - ಮಹಾನುಭಾವನಾದ, ಸರಕ್ಷೋಧಿಪತಿಃ - ರಾಕ್ಷಸಾಧಿಪತಿಯಾದ ಆ ಇಂದ್ರಜಿತ್ತುವು, ಶಿತಾಗ್ರೈಃ - ಹದವಾದ ತುದಿಗಳುಳ್ಳ, ರವಿಪ್ರಕಾಶೈಃ - ಸೂರ್ಯನಂತೆ ಹೊಳೆಯುತ್ತಿರುವ, ಬಾಣಗಣೈಃ - ಬಾಣಗಳ ತಂಡಗಳಿಂದ, ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳನ್ನು, ಪ್ರಚ್ಛಾದಯಾಮಾಸ - ಮುಚ್ಚಿಸಿದನು, ವಾನರೇಂದ್ರಾಂಶ್ಚ - ವಾನರರನ್ನೂ, ವಿಷಾ....ಸ - ವ್ಯಸನಗೊಳಿಸಿ

ಮಾತ್ರವೇ ಅಲ್ಲದೆ ಮಹಾದ್ಭುತವಾದ ಆ ಯುದ್ಧದಲ್ಲಿ ಆ ರಾಕ್ಷಸವೀರನು ತನ್ನ ಸೇನೆಯನ್ನು ಬಿಟ್ಟು ಕೂಡಲೇ ಗಗನಾಂಗಣಕ್ಕೆ ಹಾರಿ ನಿಂತು ಕೃಷ್ಣಮೇಘವು ಮಳೆಗರವಂತೆ ಆ ವಾನರ ಸೇನೆಯ ಮೇಲೆ ಬಾಣದ ಮಳೆಯನ್ನು ಕರೆದನು. ॥ ೪೬–೫೦ ॥ ಆಗ ವಾನರವೀರರೆಲ್ಲರೂ ಇಂದ್ರಜಿತ್ತುವು ಸುರಿಸಿದ ಬಾಣದ ಮಳೆಯಿಂದ ಭೇದಿಸಿಹೋದ ಶರೀರವುಳ್ಳವರಾಗಿಯೂ, ಆ ರಾಕ್ಷಸನ ಮಾಯಾಯುದ್ಧದಿಂದ ದಿಗ್ಭ್ರಾಂತರಾಗಿಯೂ ಆಗಿ ವಿಕಾರಸ್ವರದಿಂದ ರೋದನ ಮಾಡುತ್ತ ಮಹೇಂದ್ರನ ವಜ್ರಾಯುಧದಿಂದುರುಳಿದ ಪರ್ವತಗಳಂತೆ ಭೂಮಿಗೆ ಬಿದ್ದುಹೋದರು. ಆ ವಾನರವೀರರೆಲ್ಲರೂ ಆ ರಾಕ್ಷಸನು ಪ್ರಯೋಗಿಸುತ್ತಿದ್ದ ಬಾಣಗಳನ್ನು ಕಾಣುತ್ತಿದ್ದರಲ್ಲದೆ ಅವನನ್ನು ಮಾತ್ರ ಕಾಣಲಿಲ್ಲ. ಮಾಯೆಯಿಂದ ಅಡಗಿಕೊಂಡಿರುವವನೂ, ದೇವಶತ್ರುವೂ, ಮಹಾನುಭಾವನೂ, ರಾಕ್ಷಸಾಧಿಪತಿಯೂ ಆದ ಆ ಇಂದ್ರಜಿತ್ತುವು ಮಹಾ ತೀಕ್ಷ್ಣಗಳಾದ ತುದಿಭಾಗಗಳುಳ್ಳ ಬಾಣಗಳ ಸಮುದಾಯಗಳಿಂದ ವಾನರ

ಪ್ರಕಾಶೈರ್ನಿಷಾದಯಾಮಾಸಚ ವಾನರೇಂದ್ರಾನ್ ॥ ೫೩ ॥ ಸಶೂಲ ನಿಸ್ತ್ರಿಂಶ ಪರಶ್ವಧಾನಿ ವ್ಯಾವಿದ್ಧ್ಯ ದೀಪ್ತಾನಲಸನ್ನಿಭಾನಿ । ಸವಿಸ್ಫುಲಿಂಗೋಜ್ಜ್ವಲಪಾವಕಾನಿ ವವರ್ಷ ತೀವ್ರಂ ಪ್ಲವಗೇಂದ್ರಸೈನ್ಯೇ ॥ ೫೪ ॥ ತತೋ ಜ್ವಲನಸಂಕಾಶೈಃ ಶರೈರ್ವಾನರಯೂಥಪಾಃ । ತಾಡಿತಾಃ ಶಕ್ರಜಿದ್ಬಾಣೈ ಪ್ರಫುಲ್ಲಾ ಇವ ಕಿಂಶುಕಾಃ ॥೫೫॥ ತೇಽನ್ಯೋನ್ಯಮಭಿಸರ್ಪಂತೋ ನಿನದಂತಶ್ಚ ವಿಸ್ವರಂ । ರಾಕ್ಷಸೇಂದ್ರಾಸ್ತ್ರನಿರ್ಭಿನ್ನಾ ನಿಪೇತುರ್ವಾನರರ್ಷಭಾಃ ॥ ೫೬ ॥ ಉದೀಕ್ಷಮಾಣಾ ಗಗನಂ ಕೇಚಿನ್ನೇತ್ರೇಷು ತಾಡಿತಾಃ । ಶರೈರ್ವಿವಿಶುರನ್ಯೋನ್ಯಂ ಪೇತುಶ್ಚ ಜಗತೀತಲೇ ॥ ೫೭ ॥ ಹನುಮಂತಂಚ ಸುಗ್ರೀವ

ದನು. ॥ ೫೩ ॥ ಸಃ - ಆ ಇಂದ್ರಜಿತ್ತುವು, ದೀಪ್ತಾ....ನಿ - ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನಗಳಾದ, ಸವಿ....ನಿ - ಕಣಗಳಿಂದ ಪ್ರಜ್ವಲಿಸುತ್ತಿರುವ ಅಗ್ನಿಯಿಂದೊಡಗೂಡಿದ, ಶೂಲ....ನಿ - ಶೂಲಾಯುಧಗಳನ್ನೂ, ಕತ್ತಿಗಳನ್ನೂ, ಕೊಳ್ಳಿಗಳನ್ನೂ, ಪ್ಲವ....ನ್ಯೇ - ವಾನರಸೈನ್ಯದಲ್ಲಿ, ತೀವ್ರಂ - ಶೀಘ್ರವಾಗಿ, ವವರ್ಷ - ಸುರಿಸಿದನು. ॥ ೫೪ ॥ ತತಃ - ಬಳಿಕ, ವಾನ....ಪಾಃ - ವಾನರಯೂಥಪತಿಗಳು, ಜ್ವಲ....ಶೈಃ - ಅಗ್ನಿಗೆ ಸಮಾನಗಳಾದ, ಶಿತೈಃ - ತೀಕ್ಷ್ಣಗಳಾದ, ಶಕ್ರಜಿದ್ಬಾಣೈಃ - ಇಂದ್ರಜಿತ್ತುವಿನ ಬಾಣಗಳಿಂದ, ತಾಡಿತಾಃ - ಹೊಡೆಯಲ್ಪಟ್ಟವರಾಗಿ, ಪ್ರಫುಲ್ಲಾಃ - ಅರಳಿದ, ಕಿಂಶುಕಾ ಇವ - ಮುತ್ತುಗದ ಗಿಡಗಳಂತೆ, ಬಭೂವುಃ - ಆದರು. ॥ ೫೫ ॥ ರಾಕ್ಷ....ನ್ನಾಃ - ಇಂದ್ರಜಿತ್ತುವಿನ ಭೇದಿಸಲ್ಪಟ್ಟ, ತೇವಾನರರ್ಷಭಾಃ - ಆ ವಾನರೋತ್ತಮರು, ಅನ್ಯೋನ್ಯಂ - ಪರಸ್ಪರವಾಗಿ, ಅಭಿಸರ್ಪಂತಃ - ಹೋಗುತ್ತಿರುವವರಾಗಿ, ವಿಸ್ವರಂ - ಅಪಸ್ವರವಾಗಿ, ನಿನದಂತಃ - ಧ್ವನಿಮಾಡುತ್ತ, ನಿಪೇತುಃ - ಬಿದ್ದರು. ॥ ೫೬ ॥ ಗಗನಂ - ಅಂತರಿಕ್ಷವನ್ನು, ಉದ್ವೀಕ್ಷಮಾಣಾಃ - ನೋಡುತ್ತಿರುವ, ಕೇಚಿತ್ - ಕೆಲವಾನರರು, ನೇತ್ರೇಷು - ಕಣ್ಣುಗಳಲ್ಲಿ, ಶರೈಃ - ಬಾಣಗಳಿಂದ, ತಾಡಿತಾಃ - ಹೊಡೆಯಲ್ಪಟ್ಟವರಾಗಿ, ಅನ್ಯೋನ್ಯಂ - ಪರಸ್ಪರವಾಗಿ, ವಿವಿಶುಃ - ಅವಿತುಕೊಂಡರು, ಜಗತೀತಲೇ - ಭೂತಲದಲ್ಲಿ, ಪೇತುಶ್ಚ - ಬಿದ್ದವರಾದರು. ॥ ೫೭ ॥ ಹನೂಮಂತಂಚ - ಹನುಮಂತ

ರೆಲ್ಲರನ್ನೂ ಬಹಳವಾಗಿ ನೋಯಿಸಿದನು. ಆ ರಾಕ್ಷಸನು ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನವಾದವುಗಳೂ, ಕಿಡಿಯುಗುಳುತ್ತಿರುವ ಜ್ವಾಲೆಗಳೊಡಗೂಡಿರುವುವೂ ಆದ ಶೂಲ, ಖಡ್ಗ, ಗಂಡುಗೊಡಲಿಯೇ ಮೊದಲಾದ ಆಯುಧಗಳನ್ನು ಆ ವಾನರಸೇನೆಯ ಮೇಲೆ ಪ್ರಯೋಗಿಸಿದನು. ಹೀಗೆ ಆ ಇಂದ್ರಜಿತ್ತುವು ಪ್ರಯೋಗಿಸಿದ ಅಗ್ನಿಸಮಾನಗಳಾದ ಮಹಾಸ್ತ್ರಗಳಿಂದ ವ್ಯಾಪ್ತರಾದ ಆ ವಾನರರು ಪರಸ್ಪರವಾಗಿ ತಮ್ಮ ವಿಪತ್ತುಗಳನ್ನು ಹೇಳಿಕೊಳ್ಳುತ್ತಿದ್ದರಲ್ಲದೆ, ವಿಕಾರಧ್ವನಿಯಿಂದ ಕಿರಚಿಕೊಳ್ಳುತ್ತ ಶರೀರಗಳು ಭೇದಿಸಿಹೋಗಿ ನೆಲಕ್ಕುರುಳುತ್ತಿದ್ದರು. ಇದೂ ಅಲ್ಲದೆ ಆ ರಾಕ್ಷಸವೀರನು, ತನ್ನ ಇರುವನ್ನು ತಿಳಿಯಲೋಸುಗ ನೋಡುತ್ತಿರುವ ವಾನರರಮೇಲೆ ಬಾಣಗಳನ್ನು ಸುರಿಸಿದನು. ಆ ಬಾಣಗಳಿಂದ ವ್ಯಾಪ್ತಗಳಾದ ಶರೀರಗಳುಳ್ಳ ಆ ವಾನರರು ಹೂಬಿಟ್ಟ ಮುತ್ತುಗದ ಗಿಡಗಳಂತೆ ಶೋಭಿಸುತ್ತಿದ್ದರು. ॥೫೧–೫೫॥ ಅದೇ ಸಮಯದಲ್ಲಿಯೇ ರಾಕ್ಷಸೋತ್ತಮನು ಪ್ರಾಸಗಳಿಂದಲೂ, ಬಹಳ ತೀಕ್ಷ್ಣವಾದ ಶೂಲಗಳಿಂದಲೂ, ಆಯುಧಗಳಿಂದಲೂ ಒಡಗೂಡಿದ ಮಹಾಸ್ತ್ರಗಳಿಂದ ವಾನರೋತ್ತಮರಾದ ಹನುಮಂತ, ಸುಗ್ರೀವ, ಅಂಗದ, ಗಂಧಮಾದನ, ಜಾಂಬ

ಮಂಗದಂ ಗಂಧಮಾದನಂ। ಜಾಂಬವಂತಂ ಸುಷೇಣಂಚ ವೇಗದರ್ಶಿನಮೇವಚ ॥೫೮॥ ಮೈಂದಂ ಚ ದ್ವಿವಿದಂ ನೀಲಂ ಗವಾಕ್ಷಂ ಗಜಗೋಮುಖೌ । ಕೇಸರಿಂ ಹರಿಲೋಮಾನಂ ವಿದ್ಯುದ್ದಂಷ್ಟ್ರಂ ಚ ವಾನರಂ ॥ ೫೯ ॥ ಸೂರ್ಯಾನನಂ ಜ್ಯೋತಿಮುಖಂ ತಥಾ ದಧಿಮುಖಂ ಹರಿಂ । ಪಾವಕಾಕ್ಷಂ ನಳಂ ಚೈವ ಕುಮುದಂ ಚೈವ ವಾನರಂ ॥೬೦॥ ಪ್ರಾಸೈಃ ಶೂಲೈಃ ಶಿತೈರ್ಬಾಣೈರಿಂದ್ರಜಿನ್ಮಂತ್ರಸಂಹಿತೈಃ । ವಿವ್ಯಾಧ ಹರಿಶಾರ್ದೂಲಾನ್ ಸರ್ವಾಂಸ್ತಾನ್ ರಾಕ್ಷಸೋತ್ತಮಃ ॥ ೬೧ ॥ ಸವೈ ಗದಾಭಿರ್ಹರಿಯೂಥಮುಖ್ಯಾನ್ನಿರ್ಭಿದ್ಯ ಬಾಣೈಸ್ತಪನೀಯಪುಂಖೈಃ । ವವರ್ಷ ರಾಮಂ ಶರವೃಷ್ಟಿಜಾಲೈ ಸಲಕ್ಷ್ಮಣಂ ಭಾಸ್ಕರರಶ್ಮಿಕಲ್ಪೈಃ ॥೬೨॥ ಸಬಾಣವರ್ಷೈರಭಿವರ್ಷ್ಯಮಾಣೋ ಧಾರಾ

ನನ್ನೂ, ಸುಗ್ರೀವಂ - ಸುಗ್ರೀವನನ್ನೂ, ಅಂಗದಂಚ - ಅಂಗದನನ್ನೂ, ಗಂಧಮಾದನಂಚ - ಗಂಧಮಾದನನನ್ನೂ, ಜಾಂಬವಂತಂಚ - ಜಾಂಬವಂತನನ್ನೂ, ಸುಷೇಣಂಚ - ಸುಷೇಣನನ್ನೂ, ವೇಗದರ್ಶಿನಂ - ವೇಗದರ್ಶೀ ಎಂಬವನನ್ನೂ, ಮೈಂದಂಚ - ಮೈಂದನನ್ನೂ, ದ್ವಿವಿದಂಚ - ದ್ವಿವಿದನನ್ನೂ, ನೀಲಂ - ನೀಲನನ್ನೂ, ಗವಾಕ್ಷಂ - ಗವಾಕ್ಷನನ್ನೂ, ಗಜಗೌಮುಖೌ - ಗಜಗೋಮುಖರೆಂಬೀರ್ವರನ್ನೂ, ಕೇಸರಿಂ - ಕೇಸರಿ ಎಂಬವನನ್ನೂ, ಹರಿಲೋಮಾನಂ - ಹರಿಲೋಮನೆಂಬವನನ್ನೂ, ವಾನರಂ - ಕಪಿಯಾದ, ವಿದ್ಯುದ್ದಂಷ್ಟ್ರಂ - ವಿದ್ಯುದ್ದಂಷ್ಟ್ರನನ್ನೂ, ಸೂರ್ಯಾನನಂ - ಸೂರ್ಯಾನನನನ್ನೂ, ಜ್ಯೋತಿಮುಖಂ - ಜ್ಯೋತಿಮುಖನನ್ನೂ, ತಥಾ - ಹಾಗೆಯೇ, ದಧಿಮುಖಂ - ದಧಿಮುಖನೆಂಬ, ಕಪಿಂ - ವಾನರನನ್ನೂ, ಪಾವಕಾಕ್ಷಂಚ - ಪಾವಕಾಕ್ಷನನ್ನೂ, ನಳಂಚೈವ - ನಳನನ್ನೂ, ಕುಮುದಂ - ಕುಮುದನೆಂಬ, ವಾನರಂಚೈವ - ಕಪಿಯನ್ನೂ, ರಾಕ್ಷಸೋತ್ತಮಃ - ರಾಕ್ಷಸಶ್ರೇಷ್ಠನಾದ, ಇಂದ್ರಜಿತ್ - ಇಂದ್ರಜಿತ್ತುವು. ಪ್ರಾಸೈಃ - ಈಟಿಗೋಲುಗಳಿಂದಲೂ, ಶೂಲೈಃ- ಶೂಲಗಳಿಂದಲೂ, ಮಂತ್ರಸಹಿತೈಃ - ಮಂತ್ರಗಳಿಂದ ಸಂಧಾನಮಾಡಲ್ಪಟ್ಟ, ಶಿತೈಃ - ತೀಕ್ಷ್ಣಗಳಾದ ಬಾಣಗಳಿಂದ, ಸರ್ವಾನ್ - ಸಮಸ್ತರಾದ, ತಾನ್‌ಹರಿಶಾರ್ದೂಲಾನ್ - ಆ ವಾನರೋತ್ತಮರನ್ನು, ವಿವ್ಯಾಧ - ಹೊಡೆದನು. ॥ ೫೮-೬೧ ॥ ಸವೈ - ಆ ಇಂದ್ರಜಿತ್ತುವಾದರೆ, ಹರಿ....ಖ್ಯಾನ್ - ವಾನರಯೂಥಮುಖ್ಯರನ್ನು, ಗದಾಭಿಃ - ಗದಾಯುಧಗಳಿಂದಲೂ, ತಪ....ಖೈಃ - ಭಂಗಾರದ ಕೊಂಕಿಗಳುಳ್ಳ, ಬಾಣೈಶ್ಚ - ಬಾಣಗಳಿಂದಲೂ, ನಿರ್ಭಿದ್ಯ - ಭೇದಿಸಿ, ಭಾಸ್ಕ....ಲ್ಪೈಃ - ಸೂರ್ಯನ ಕಿರಣಗಳಿಗೆ ಸಮಾನವಾದ, ಶರ....ಲೈಃ - ಬಾಣವರ್ಷಗಳ ಸಮೂಹಗಳಿಂದ, ಸಲಕ್ಷ್ಮಣಂ - ಲಕ್ಷ್ಮಣಸಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ವವರ್ಷ - ವರ್ಷಿಸಿದನು. ॥೬೨॥ ಬಾಣವರ್ಷೈಃ - ಬಾಣವೃಷ್ಟಿಗಳಿಂದ, ಅಭಿ....ಣಃ - ವರ್ಷಿಸಲ್ಪಡುತ್ತಿರುವ, ಪರಮಾದ್ಭುತಶ್ರೀಃ - ಅತ್ಯಂತಾಶ್ಚರ್ಯ

ವಂತ, ಮಹಾ ವೇಗಶಾಲಿಯಾದ ಸುಷೇಣ, ಮೈಂದ, ದ್ವಿವಿದ, ನೀಲ, ಗವಾಕ್ಷ, ಗಜ, ಗೋಮುಖ, ಕೇಸರಿ, ವಿದ್ಯುದ್ದಂಷ್ಟ್ರ, ಸೂರ್ಯವದನ, ಜ್ಯೋತಿಮುಖ, ದಧಿಮುಖ, ಪಾವಕಾಕ್ಷ, ಕುಮುದ ಮೊದಲಾದ ವಾನರವೀರರೆಲ್ಲರನ್ನೂ ಬಲವಾಗಿ ಮರ್ದಿಸಿದನು. ॥ ೫೭-೬೧ ॥ ಇದೂ ಅಲ್ಲದೆ ಆ ಇಂದ್ರಜಿತ್ತುವು ಗದೆಗಳಿಂದಲೂ, ಚಿನ್ನದ ಕೊಂಕಿಗಳುಳ್ಳ ಬಾಣಗಳಿಂದಲೂ ಅನೇಕ ವಾನರವೀರರನ್ನು ಮರ್ದಿಸಿ ಸೂರ್ಯಕಿರಣಗಳಿಗೆ ಸಮಾನಗಳಾದ ಬಾಣಪರಂಪರೆಗಳಿಂದ ಶ್ರೀರಾಮಲಕ್ಷ್ಮಣರ ಮೇಲೆಯೂ ಮಳೆಗರೆದನು. ಹೀಗೆ ಆ ಬಾಣವರ್ಷವು ಪ್ರಬಲವಾಗುತ್ತಿರಲು ಶ್ರೀರಾಮಮೂರ್ತಿಯು ಪರಮಾಶ್ಚರ್ಯಭರಿತನಾಗಿ ತನ್ನ

ನಿಪಾತಾನಿವ ತಾನಚಿಂತ್ಯ । ಸಮೀಕ್ಷಮಾಣಃ ಪರಮಾದ್ಭುತಶ್ರೀ ರಾಮಸ್ತದಾ ಲಕ್ಷ್ಮಣಮಿತ್ಯುವಾಚ ॥೬೩॥ "ಅಸೌ ಪುನರ್ಲಕ್ಷ್ಮಣ! ರಾಕ್ಷಸೇಂದ್ರೋ ಬ್ರಹ್ಮಾಸ್ತ್ರಮಾಶ್ರಿತ್ಯ ಸುರೇಂದ್ರಶತ್ರುಃ । ನಿಪಾತಯಿತ್ವಾ ಹರಿಸೈನ್ಯಮುಗ್ರಮಸ್ಮಾಂಚ್ಛರೈರರ್ದಯತಿ ಪ್ರಸಕ್ತಃ ॥೬೪॥ ಸ್ವಯಂಭುವಾ ದತ್ತವರೋ ಮಹಾತ್ಮಾ ಖಮಾಸ್ಥಿತೋಽಂತರ್ಹಿತಭೀಮಕಾಯಃ । ಕಥನ್ನು ಶಕ್ಯೋ ಯುಧಿ ನಷ್ಟದೇಹೋ ನಿಹಂತುಮದ್ಯೇಂದ್ರಜಿದುದ್ಯತಾಸ್ತ್ರಃ ॥೬೫॥ ಮನ್ಯೇ ಸ್ವಯಂಭೂರ್ಭಗವಾನಚಿಂತ್ಯೋ ಯಸ್ಯೈ

ಕರವಾದ ಧೈರ್ಯಸಂಪತ್ತುಳ್ಳ, ಸರಾಮಃ - ಆ ಶ್ರೀರಾಮನು, ಧಾರಾ....ವ - ವರ್ಷಧಾರೆಗಳ ಸಂಪಾತಗಳನ್ನಂತೆ, ತಾನ್ - ಆ ಬಾಣ ಪ್ರಹಾರಗಳನ್ನು, ಅಚಿಂತ್ಯ - ಲಕ್ಷ್ಯವಿಡದೆ, ತದಾ - ಆ ಕಾಲದಲ್ಲಿ, ಲಕ್ಷ್ಮಣಂ - ಲಕ್ಷ್ಮಣನನ್ನು, ಸಮೀಕ್ಷಮಾಣಃ - ನೋಡುತ್ತಲಿರುವವನಾಗಿ, ಇತಿ - ಈ ಪರಿ, ಉವಾಚ - ಹೇಳಿದನು. ||೬೩|| ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಸುರೇಂದ್ರಶತ್ರುಃ - ದೇವೇಂದ್ರವೈರಿಯಾದ, ಅಸೌರಾಕ್ಷಸೇಂದ್ರಃ- ಈ ರಾಕ್ಷಸಾಧಿಪತಿಯಾದರೆ, ಪುನಃ-ಮತ್ತೆ, ಬ್ರಹ್ಮಾಸ್ತ್ರಂ-ಬ್ರಹ್ಮಾಸ್ತ್ರವನ್ನು, ಆಶ್ರಿತ್ಯ - ಆಶ್ರಯಿಸಿ, ಉಗ್ರಂ - ಭಯಂಕರವಾದ, ಹರಿಸೈನ್ಯಂ - ವಾನರಸೈನ್ಯವನ್ನು, ನಿಪಾತಯಿತ್ವಾ ಬೀಳಿಸಲು, ಪ್ರಸಕ್ತಃ-ಉದ್ಯುಕ್ತನಾಗಿ, ಶರೈಃ-ಬಾಣಗಳಿಂದ, ಅಸ್ಮಾನ್-ನಮ್ಮನ್ನು, ಅರ್ದಯತಿ - ಹೊಡೆಯುತ್ತಾನೆ. ||೬೪|| ಸ್ವಯಂಭುವಾ - ಬ್ರಹ್ಮನಿಂದ, ದತ್ತವರಃ - ಕೊಡಲ್ಪಟ್ಟ ವರವುಳ್ಳ, ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ಖಮಾಸ್ಥಿತಃ - ಅಂತರಿಕ್ಷವನ್ನಾಶ್ರಯಿಸಿದ, ಅಂತ....ಯಃ - ಅಂತರ್ಧಾನವನ್ನು ಹೊಂದಿಸಲ್ಪಟ್ಟ ಭಯಂಕರ ಶರೀರವುಳ್ಳ, ಉದ್ಯತಾಸ್ತ್ರಃ - ಎತ್ತಿಹಿಡಿಯಲ್ಪಟ್ಟ ಅಸ್ತ್ರಗಳುಳ್ಳ, ಇಂದ್ರಜಿತ್ - ಇಂದ್ರಜಿತ್ತುವು, ಯುಧಿ - ಕಾಳಗದಲ್ಲಿ, ನಷ್ಟದೇಹಃ - ಕಾಣದಿರುವ ಶರೀರವುಳ್ಳವನಾದಕಾರಣ, ಅದ್ಯ - ಈಗ, ಹಂತುಂ ಹೊಡೆಯುವದಕ್ಕೆ, ಕಥಂನು - ಹೇಗೆತಾನೆ, ಶಕ್ಯಃ - ಸಾಧ್ಯವಾಗುವನು. ||೬೫|| ಹೇ ಧೀಮನ್ - ಎಲೈ ಮತಿವಂತನೇ, ಏತದಸ್ತ್ರಂ- ಈ ಅಸ್ತ್ರವು, ಯಸ್ಯ - ಯಾವ ಬ್ರಹ್ಮನ ಸಂಬಂಧವೋ, ಯಃ - ಯಾವ ಬ್ರಹ್ಮನು, ಪ್ರಭವಶ್ಚ - ಉತ್ಪತ್ತಿಸ್ಥಾನವಾಗಿದ್ದಾನೋ, ಭಗವಾನ್-ಪೂಜ್ಯನಾದ, ಸಃಸ್ವಯಂಭೂಃ ಆ ಬ್ರಹ್ಮನು, ಅಚಿಂತ್ಯಃ-

---

ತಮ್ಮನಾದ ಲಕ್ಷ್ಮಣಸ್ವಾಮಿಯನ್ನು ಕುರಿತು, "ತಮ್ಮ ಲಕ್ಷ್ಮಣಾ! ರಾಕ್ಷಸೋತ್ತಮನೂ, ದೇವೇಂದ್ರನಿಗೆ ಶತ್ರುವೂ ಆದ ಈ ಇಂದ್ರಜಿತ್ತುವು, ತೀಕ್ಷ್ಣವಾದ ಬಾಣಗಳಿಂದ ಮಹಾ ಭಯಂಕರವಾದ ನಮ್ಮ ವಾನರಸೈನ್ಯವನ್ನು ಮರ್ದಿಸಿದನು. ಈಗಲಿವನು ಬ್ರಹ್ಮಾಸ್ತ್ರವನ್ನಾಶ್ರಯಿಸಿ ನಮ್ಮನ್ನು ಹೊಡೆಯುತ್ತಿರುವನು. ಎಲೈ ಸಹೋದರನೇ! ಬ್ರಹ್ಮನಿಂದ ವರಗಳನ್ನು ಪಡೆದಿರುವವನೂ, ಮಹಾನುಭಾವನೂ, ಮರೆಮಾಡಿಕೊಂಡ ಮಹಾ ಶರೀರವುಳ್ಳವನೂ, ಅಸ್ತ್ರಗಳನ್ನು ಪ್ರಯೋಗಿಸಲಾರಂಭಿಸಿರುವವನೂ ಆದ ಈ ಇಂದ್ರಜಿತ್ತುವು, ಯುದ್ಧದಲ್ಲಿ ಪರಾಜಿತನಾಗುವುದಿಲ್ಲವೆಂದೇ ನನಗೆ ತೋರುತ್ತಿರುವುದು. ಎಲೈ ಮೇಧಾವಿಯೇ! ಲಕ್ಷ್ಮಣಾ! ಈತನಿಗಿಂತಹ ಮಹಾಸ್ತ್ರವನ್ನಿತ್ತುದರಿಂದ ಬ್ರಹ್ಮನು ಅಚಿಂತ್ಯ ಪ್ರಭಾವವುಳ್ಳವನೆಂದು ತಿಳಿಯುತ್ತೇನೆ. (ಈ ಅಸ್ತ್ರಪ್ರಭಾವವೇ ಇಷ್ಟು ಅದ್ಭುತವಾಗಿರುವಾಗ ಇನ್ನು ಆ ಬ್ರಹ್ಮನು ಅಚಿಂತ್ಯ ಪ್ರಭಾವವುಳ್ಳವನೆಂದು ಬೇರೆ ಹೇಳಲೇನಿರುವುದು.) ಲಕ್ಷ್ಮಣಾ! ಈಗ ನೀನು ಈ ಮಹೇಂದ್ರ ಶತ್ರುವು ಪ್ರಯೋಗಿಸುವ ಮಹಾಸ್ತ್ರವನ್ನು ನನ್ನೊಡನೆ ಧೈರ್ಯವಾಗಿ

ತದಸ್ತ್ರಪ್ರಭವಶ್ಚ ಯೋಽದ್ಯ । ಬಾಣಾನಪಾತಾಂಸ್ತ್ವಮಿಹಾಽದ್ಯ ಧೀರ್ಮ ಮಯಾ
ಪಹಾಽವ್ಯಗ್ರಮನಾಸ್ಸಹಸ್ವ ॥೬೬॥ ಪ್ರಚ್ಛಾದಯತ್ಯೇಷಹಿ ರಾಕ್ಷಸೇಂದ್ರ ಸ್ಸರ್ವಾದಿಶ
ಸ್ಸಾಯಕವೃಷ್ಟಿಜಾಲೈಃ । ಏತಚ್ಚ ಸರ್ವಂ ಪತಿತಾಗ್ರ್ಯಶೂರಂ ನಭ್ರಾಜತೇ ವಾನರ
ರಾಜಸೈನ್ಯಂ ॥ ೬೭ ॥ ಆವಾಂತು ದೃಷ್ಟ್ವಾ ಪತಿತೌ ವಿಸಂಜ್ಞೌ ನಿವೃತ್ತಯುದ್ಧೌ ಗತ
ರೋಷಹರ್ಷೌ । ಧ್ರುವಂ ಪ್ರವೇಕ್ಷ್ಯತ್ಯಮರಾರಿವಾಸಮಸೌ ಸಮಾದಾಯ ರಣಾಗ್ರ
ಲಕ್ಷ್ಮೀಂ"॥೬೮॥ತತಸ್ತು ತಾವಿಂದ್ರಜಿದಸ್ತ್ರಜಾಲೈ ರ್ಬಭೂವತು ಸ್ತತ್ರ ತಥಾ ವಿಶಸ್ತೌ ।
ಸಚಾಪಿ ತೌ ತತ್ರ ವಿದರ್ಶಯಿತ್ವಾ ನನಾದ ಹರ್ಷಾದ್ಯುಧಿ ರಾಕ್ಷಸೇಂದ್ರಃ ॥ ೬೯ ॥

ಚಿಂತಿಸಲಸಾಧ್ಯನು, ಮಯಾಸಹ - ನನ್ನೊಡನೆ, ಇಹ - ಈ ಯುದ್ಧರಂಗದಲ್ಲಿ, ಅದ್ಯ - ಈಗ, ಅವ್ಯಗ್ರಮನಾಃ - ಸಾವಧಾನಮನಸ್ಕನಾಗಿ, ಬಾಣಾವಪಾತಾನ್ - ಬಾಣಪ್ರಹಾರಗಳನ್ನು, ಸಹಸ್ವ - ಸಹಿಸಿಕೋ. || ೬೬ || ಏಷಃರಾಕ್ಷಸೇಂದ್ರಃ - ರಾಕ್ಷಸಶ್ರೇಷ್ಠನು, ಸಾಯ....ಲೈಃ - ಬಾಣವರ್ಷಗಳ ಸಮೂಹಗಳಿಂದ, ಸರ್ವಾಃ - ಸಮಸ್ತವಾದ, ದಿಶಃ - ದಿಕ್ಕುಗಳನ್ನು, ಪ್ರಚ್ಛಾದಯತಿ - ಮುಚ್ಚುವನು, ಸರ್ವಂ-ಸಮಸ್ತವಾದ, ಏತತ್-ಈ, ವಾನ....ನ್ಯಂ-ಸುಗ್ರೀವನ ಸೇನೆಯು, ಪತಿ....ರಂ-ಬಿದ್ದ ಶೂರ ಶ್ರೇಷ್ಠರುಳ್ಳದ್ದಾಗಿ, ನಭ್ರಾಜತೇ-ಬೆಳಗುವದಿಲ್ಲ. ||೬೭|| ಅಸೌ-ಆ ಇಂದ್ರಜಿತ್ತುವು, ವಿಸಂಜ್ಞೌ-ಪ್ರಜ್ಞೆಯಿಲ್ಲದ, ನಿವೃತ್ತಯುದ್ಧೌ - ಬಿಡಲ್ಪಟ್ಟ ಯುದ್ಧವುಳ್ಳ, ಗತ....ರ್ಷೌ - ಕಳೆದ ರೋಮಾಂಚವುಳ್ಳ, ಪತಿತೌ - ಕೆಳಗೆ ಬಿದ್ದ, ಆವಾಂ - ನಮ್ಮನ್ನು, ದೃಷ್ಟ್ವಾ - ಕಂಡು, ರಣಾಗ್ರಲಕ್ಷ್ಮೀಂ - ರಣಾಗ್ರದಲ್ಲಿ ವಿಜಯಲಕ್ಷ್ಮಿಯನ್ನು, ಸಮಾದಾಯ - ತೆಗೆದುಕೊಂಡು, ಅಮ....ಸಂ - ರಾಕ್ಷಸಭೂಯಿಷ್ಠವಾದ ಲಂಕಾಪಟ್ಟಣವನ್ನು, ಪ್ರವೇಕ್ಷ್ಯತಿ - ಹೊಗುವನು, ಧ್ರುವಂ-ನಿಶ್ಚಯವು. ||೬೮|| ತತಸ್ತು - ಬಳಿಕ, ಇಂದ್ರ....ಲೈಃ - ಇಂದ್ರಾರಿಯ ಬಾಣತಂಡಗಳಿಂದ, ತತ್ರ - ಆ ರಣರಂಗದಲ್ಲಿ, ತಥಾ - ಹಾಗೆಯೇ, ತೌ - ಆ ರಾಮಲಕ್ಷ್ಮಣರು, ವಿಶಸ್ತೌ - ಹೊಡೆಯಲ್ಪಟ್ಟರು, ಸಚಾ....ಪಿ - ಆ ರಾಕ್ಷಸಶ್ರೇಷ್ಠನೂ ಕೂಡಾ, ತೌ - ಆ ರಾಮಲಕ್ಷ್ಮಣರನ್ನು, ತತ್ರ - ಆ ಯುದ್ಧದಲ್ಲಿ, ವಿದರ್ಶಯಿತ್ವಾ - ನೋಡಿ, ಹರ್ಷಾತ್-ಸಂತೋಷದಿಂದ, ಯುಧಿ - ಕಾಳೆಗದಲ್ಲಿ, ನನಾದ-ಕೋಲಾಹಲಧ್ವನಿ ಮಾಡಿದನು. ||೬೯|| ಸಃ - ಆ ಇಂದ್ರಜಿತ್ತುವು, ತದಾ - ಆ ಕಾಲದಲ್ಲಿ, ವಾನರಸೈನ್ಯಂ - ಕಪಿಸೇನೆಯನ್ನೂ, ರಾಮಂಚ -

---

ಸಹಿಸುವವನಾಗು. ‖ ೬೨–೬೬ ‖ ಅಯ್ಯಾ, ಈ ರಾಕ್ಷಸೋತ್ತಮನು ಬಾಣವರ್ಷದಿಂದ ದಿಕ್ಕುಗಳೇ ತಿಳಿಯದಂತೆ ಮಾಡುತ್ತಿರುವನು. ಈತನ ಬಾಣವರ್ಷದಲ್ಲಿಯೇ ಮುಳುಗಿ ಹೋಗಿರುವ ವಾನರಸೇನೆಯು ಕಾಣದೆಯೇ ಹೋಗಿರುವುದು. ಈಗಿನ ಸ್ಥಿತಿಯನ್ನು ನೋಡಿದರೆ ಈ ಇಂದ್ರಜಿತ್ತುವು ಮಹಾ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿ ನಮ್ಮನ್ನು ಈ ರಣಾಂಗಣದಲ್ಲಿ ಮೂರ್ಛೆಯೊಂದಿಸಿ ಆ ತರುವಾಯ ಸಮಸ್ತ ಸಂಪತ್ಸಮೃದ್ಧವಾದ ಲಂಕಾ ನಗರಕ್ಕೆ ಹಿಂತಿರುಗುವನೆಂದು ತೋರುತ್ತದೆ" ಎಂದು ಹೇಳಿದನು. ಶ್ರೀರಾಮಮೂರ್ತಿಯು ಈ ರೀತಿ ನುಡಿಯುತ್ತಿರುವಂತೆಯೇ ರಾಕ್ಷಸೋತ್ತಮನಾದ ಇಂದ್ರಜಿತ್ತುವು ಮಹಾ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಘಾತದಿಂದ ಶ್ರೀರಾಮಲಕ್ಷ್ಮಣರೀರ್ವರೂ ಪರವಶರಾಗಿ ಭೂಮಿಗೆ ಬಿದ್ದರು. ಈ ಪ್ರಕಾರವಾಗಿ ಇಂದ್ರಜಿತ್ತುವು ಶ್ರೀರಾಮಲಕ್ಷ್ಮಣರಿಬ್ಬರೂ ಮೂರ್ಛೆಯೊಂದಿದುದನ್ನು ಕಂಡು ಮಹಾನಂದದಿಂದ ಸಿಂಹನಾದ ಮಾಡಿ

ತತಸ್ತದಾ ವಾನರಸೈನ್ಯಮೇವಂ
ರಾಮಂಚ ಸಂಖ್ಯೇ ಸಹಲಕ್ಷ್ಮಣೇನ ।
ವಿಷಾದಯಿತ್ವಾ ಸಹಸಾ ವಿವೇಶ
ಪುರೀಂ ದಶಗ್ರೀವಭುಜಾಭಿಗುಪ್ತಾಂ ॥ ೭೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಸಪ್ತತಿತಮಸ್ಸರ್ಗಃ

ಶ್ರೀರಾಮನನ್ನೂ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ಸಂಖ್ಯೇ - ಕಾಳಗದಲ್ಲಿ, ವಿಷಾದಯಿತ್ವಾ - ಸಂಕಟಪಡಿಸಿ, ದಶ....ಪ್ತಾಂ - ರಾವಣನ ಭುಜಗಳಿಂದ ಪರಿಪಾಲಿತವಾದ, ಪುರೀಂ - ಲಂಕಾಪಟ್ಟಣವನ್ನು, ಸಹಸಾ - ಜಾಗ್ರತೆಯಾಗಿ, ವಿವೇಶ - ಹೊಕ್ಕನು. ॥ ೭೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಸಪ್ತತಿತಮಸ್ಸರ್ಗಃ

ದನು. ಆ ಬಳಿಕ ರಾಕ್ಷಸರಾಜಕುಮಾರನಾದ ಆ ಇಂದ್ರಜಿತ್ತುವು ವಾನರಸೇನೆಯನ್ನೂ, ಶ್ರೀರಾಮಲಕ್ಷ್ಮಣರನ್ನೂ ಮೂರ್ಛೆಗೊಳಿಸಿ ರಾವಣಾಸುರ ಪರಿಪಾಲಿತವಾದ ಲಂಕಾನಗರಕ್ಕೆ ಬಹು ವೇಗವಾಗಿ ಹೊರಟುಹೋದನು. ॥ ೬೭–೭೦ ॥

ಇಂತಿದು ಇಂದ್ರಜಿದ್ಯುದ್ಧ ಮತ್ತು ಶ್ರೀರಾಮಲಕ್ಷ್ಮಣರ ಮೂರ್ಛೆ ಎಂಬ
ಎಪ್ಪತ್ಮೂರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಚತುಸ್ಸಪ್ತತಿತಮಸ್ಸರ್ಗಃ

ತಯೋಸ್ತದಾಽಸಾದಿತಯೋಃ ರಣಾಗ್ರೇ ಮುಮೋಹ ಸೈನ್ಯಂ ಹರಿಪುಂಗವಾನಾಂ । ಸುಗ್ರೀವ ನೀಲಾಂಗದಜಾಂಬವಂತೋ ನಚಾಪಿ ಕಿಂಚಿತ್ಪ್ರತಿಪೇದಿರೇ ತೇ ॥೧॥ ತತೋ ವಿಷಣ್ಣಂ ಸಮವೇಕ್ಷ್ಯ ಸೈನ್ಯಂ ವಿಭೀಷಣೋ ಬುದ್ಧಿಮತಾಂ ವರಿಷ್ಠಃ । ಉವಾಚ ಶಾಖಾಮೃಗರಾಜವೀರಾನಾಶ್ವಾಸಯನ್ನಪ್ರತಿಮೈರ್ವಚೋಭಿಃ ॥ ೨ ॥ "ಮಾಭೈಷ್ಟ! ನಾಸ್ತ್ಯತ್ರ ವಿಷಾದಕಾಲೋ ಯದಾರ್ಯಪುತ್ರೌ ಹ್ಯವಶೌ ವಿಷಣ್ಣೌ। ಸ್ವಯಂಭುವೋ ವಾಕ್ಯಮಥೋದ್ವಹಂತೌ ಯತ್ಸಾದಿತಾವಿಂದ್ರಜಿದಸ್ತ್ರಜಾಲೈಃ ॥ ೩ ॥

ತದಾ - ಆ ಕಾಲದಲ್ಲಿ, ತಯೋಃ - ಆ ರಾಮಲಕ್ಷ್ಮಣರು, ರಣಾಗ್ರೇ - ಯುದ್ಧರಂಗದಲ್ಲಿ, ಸಾದಿತಯೋಃ - ಹೊಡೆಯಲ್ಪಡಲು, ಹರಿ....ನಾಂ - ವಾನರಶ್ರೇಷ್ಠರ, ಸೈನ್ಯಂ - ಸೇನೆಯು, ಮುಮೋಹ - ಭ್ರಾಂತವಾಯಿತು, ತೇ - ಆ, ಸುಗ್ರೀ....ಪಿ - ಸುಗ್ರೀವನೂ, ನೀಲನೂ, ಜಾಂಬವಂತನೂ ಇವರೆಲ್ಲರೂ, ಕಿಂಚಿತ್ - ಸ್ವಲ್ಪವಾದರೂ, ನಪ್ರತಿಪೇದಿರೇ - ತಿಳುವಳಿಕೆಯನ್ನು ಉಂಟಾದವರಾಗಲಿಲ್ಲ. ॥೧॥ ತತಃ - ಬಳಿಕ, ಬುದ್ಧಿಮತಾಂ - ಮತಿಮಂತರಲ್ಲಿ, ವರಿಷ್ಠಃ - ಶ್ರೇಷ್ಠನಾದ, ವಿಭೀಷಣಃ - ವಿಭೀಷಣನು, ವಿಷಣ್ಣಂ - ವಿಷಾದಯುಕ್ತವಾದ, ಸೈನ್ಯಂ - ಸೇನೆಯನ್ನು, ಸಮವೇಕ್ಷ್ಯ - ಕಂಡು, ಶಾಖಾ....ರಾನ್ - ಶೂರರಾದ ವಾನರಯೂಥಪತಿಗಳನ್ನು, ಅಪ್ರತಿಮೈಃ - ಅಸದೃಶವಾದ, ವಚೋಭಿಃ - ಮಾತುಗಳಿಂದ, ಆಶ್ವಾಸಯನ್ - ಸಮಾಧಾನಗೊಳಿಸುವವನಾಗಿ, ಉವಾಚ - ಹೇಳಿದನು. ॥ ೨ ॥ ಆರ್ಯಪುತ್ರೌ - ರಾಜಪುತ್ರರಾದ ರಾಮಲಕ್ಷ್ಮಣರು, ವಿಷಣ್ಣಾವಿತಿಯತ್ - ವಿಷಾದಯುಕ್ತರಾಗಿದ್ದಾರೆಂಬದಾವದೋ, ಅಥ - ಬಳಿಕ, ಸ್ವಯಂಭುವಃ - ಬ್ರಹ್ಮನ, ವಾಕ್ಯಂ - ಮಾತನ್ನು, ಉದ್ವಹಂತೌ - ಶಿರಸಾವಹಿಸಿ, (ಅಂದರೆ - ಪೂಜಿಸಿ), ಇಂದ್ರ....ಲೈಃ - ಇಂದ್ರಜಿತ್ತುವಿನ ಬಾಣಸಮೂಹಗಳಿಂದ, ಸಾದಿತಾವಿತಿಯತ್ - ಹೊಡೆಯಲ್ಪಟ್ಟರೆಂಬದಾವದೋ, ಅತ್ರ - ಈ ವಿಷಯದಲ್ಲಿ, ಮಾಭೈಷ್ಟ - ಭಯಪಡಬೇಡಿರಿ, ವಿಷಾದಕಾಲಃ - ದುಃಖಿಸತಕ್ಕ ಕಾಲವು, ನ - ಅಲ್ಲ. ॥೩॥ ಸ್ವಯಂ

ಹೀಗೆ ರಾಕ್ಷಸರಾಜ ಕುಮಾರನಾದ ಇಂದ್ರಜಿತ್ತುವು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಶ್ರೀರಾಮಲಕ್ಷ್ಮಣರಿಬ್ಬರೂ ಪ್ರಜ್ಞೆ ತಪ್ಪಿ ಬಿದ್ದುಹೋದ ತರುವಾಯ ವಾನರ ಸೈನ್ಯವೆಲ್ಲವೂ ದುಃಖಪೀಡಿತವಾಗಿ ಹೋಯಿತು. ಸುಗ್ರೀವ, ನೀಲ, ಜಾಂಬವಂತರು ಕೂಡ ಆ ಇಂದ್ರಾರಿಯ ಬಾಣದಿಂದ ಪೀಡಿತರಾಗಿ ಅತ್ತಿತ್ತ ಕದಲಲೂ ಆರದೆ ನೆಲದಮೇಲೆ ಪವಳಿಸಿ ಯಾವ ಸಂಗತಿಯನ್ನೂ ತಿಳಿಯದವರಾಗಿದ್ದರು. ಹೀಗೆ ಮಹಾ ದುಃಖಸಾಗರದಲ್ಲಿ ಮುಳುಗಿರುವ ವಾನರಸೇನೆಯನ್ನು ನೋಡುತ್ತಲೇ ಮಹಾ ಬುದ್ಧಿಶಾಲಿಯಾದ ವಿಭೀಷಣನು ವಾನರವೀರರೆಲ್ಲರನ್ನೂ ಸಮಾಧಾನಗೊಳಿಸಬಯಸಿದವನಾಗಿ ಧೈರ್ಯೋತ್ಪಾದಕವಾಗಿಯೂ, ನಿರುಪಮಾನವಾಗಿಯೂ ಇರುವ ಮಾತುಗಳಿಂದ, ಅವರೆಲ್ಲರನ್ನೂ ಸಂಬೋಧಿಸಿ, "ಅಯ್ಯಾ ವಾನರೋತ್ತಮರೇ, ನೀವು ವ್ಯಸನವನ್ನು ಹೊಂದಕೂಡದು. ರಾಜಪುತ್ರರಾದ ಈ ಶ್ರೀರಾಮಲಕ್ಷ್ಮಣರಿಬ್ಬರೂ ಬ್ರಹ್ಮದೇವನ ವರವನ್ನು ಸುಳ್ಳಾಗಿಸಬಾರದೆಂದು ಸಂಕಲ್ಪಿಸಿ ಇಂದ್ರ

ತಸ್ಮೈ ತು ದತ್ತಂ ಪರಮಾಸ್ತ್ರಮೇತತ್ ಸ್ವಯಂಭುವಾ ಬ್ರಾಹ್ಮಮಮೋಘವೇಗಂ ।
ತನ್ಮಾನಯಂತೌ ಯುಧಿ ರಾಜಪುತ್ರೌ ನಿಪಾತಿತೌ ಕೋಽತ್ರ ವಿಷಾದಕಾಲಃ" ॥ ೪ ॥
ಬ್ರಾಹ್ಮಮಸ್ತ್ರಂ ತತೋ ಧೀಮಾನ್ಮಾನಯಿತ್ವಾ ತು ಮಾರುತಿಃ । ವಿಭೀಷಣವಚಃ ಶ್ರುತ್ವಾ
ಹನುಮಾಂಸ್ತಮಥಾಽಬ್ರವೀತ್ ॥ ೫ ॥ "ಏತಸ್ಮಿನ್ನಿಹತೇ ಸೈನ್ಯೇ ವಾನರಾಣಾಂ ತರ
ಸ್ವಿನಾಂ । ಯೋಯೋ ಧಾರಯತೇ ಪ್ರಾಣಾಂಸ್ತಂ ತಮಾಶ್ವಾಸಯಾವಹೈ" ॥ ೬ ॥
ತಾವುಭೌ ಯುಗಪದ್ವೀರೌ ಹನುಮದ್ರಾಕ್ಷಸೋತ್ತಮೌ । ಉಲ್ಕಾಹಸ್ತೌ ತದಾ
ರಾತ್ರೌ ರಣಶೀರ್ಷೇ ವಿಚೇರತುಃ ॥ ೭ ॥ ಭಿನ್ನಲಾಂಗೂಲ ಹಸ್ತೋರು ಪಾದಾಂಗುಳಿ

ಭುವಾ - ಬ್ರಹ್ಮನಿಂದ, ತಸ್ಮೈ - ಆ ಇಂದ್ರಜಿತ್ತುವಿಗೆ, ಅಮೋಘವೇಗಂ - ಸಫಲವಾದ ವೇಗವುಳ್ಳ, ಬ್ರಾಹ್ಮಂ - ಬ್ರಹ್ಮಸಂಬಂಧವಾದ, ಏತತ್ಪರಮಾಸ್ತ್ರಂ - ಈ ಉತ್ತಮಾಸ್ತ್ರವು, ದತ್ತಂ - ಕೊಡಲ್ಪಟ್ಟಿತು, ತತ್-ಅದನ್ನು, ಯುಧಿ-ಕಾಳಗದಲ್ಲಿ, ಮಾನಯಂತೌ-ಪೂಜಿಸುವವರಾಗಿ, ರಾಜಪುತ್ರೌ-ರಾಮಲಕ್ಷ್ಮಣರು, ನಿಪಾತಿತೌ - ಕೆಳಗೆ ಬೀಳಿಸಲ್ಪಟ್ಟರು, ಅತ್ರ - ಈ ವಿಷಯದಲ್ಲಿ ವಿಷಾದಕಾಲಃ-ದುಃಖಕಾಲವು, ಕಃ - ಏನು? ॥ ೪ ॥ ತತಃ - ಬಳಿಕ, ಧೀಮಾನ್ - ಬುದ್ಧಿಶಾಲಿಯಾದ, ಮಾರುತಿಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಬ್ರಾಹ್ಮಮಸ್ತ್ರಂ - ಬ್ರಹ್ಮಾಸ್ತ್ರವನ್ನು, ಮಾನಯಿತ್ವಾ - ಪೂಜಿಸಿ, ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ಅಥ - ಬಳಿಕ, ತಂ - ಆ ವಿಭೀಷಣನನ್ನು ಕುರಿತು, ಅಬ್ರವೀತ್ - ನುಡಿದನು. ॥ ೫ ॥ ನಿಹತೇ - ಹೊಡೆಯಲ್ಪಟ್ಟ, ತರಸ್ವಿನಾಂ - ಬಲವಂತರಾದ, ವಾನರಾಣಾಂ - ಕಪಿಗಳ, ಏತಸ್ಮಿನ್ಸೈನ್ಯೇ - ಈ ಸೇನೆಯಲ್ಲಿ, ಯೋಯಃ - ಯಾವ ಯಾವ ವಾನರನು, ಪ್ರಾಣಾನ್ - ಪ್ರಾಣಗಳನ್ನು, ಧಾರಯತೇ - ಧರಿಸಿರುವನೋ, ತಂತಂ - ಅವನವನನ್ನು, ಆಶ್ವಾಸಯಾವಹೈ - ಸಮಾಧಾನ ಮಾಡೋಣ. ॥ ೬ ॥ ವೀರೌ - ಶೂರರಾದ, ಹನು....ಮೌ - ಹನುಮದ್ವಿಭೀಷಣರೆಂಬ, ತಾವುಭೌ - ಆವರೀರ್ವರು, ತದಾರಾತ್ರೌ - ಆ ರಾತ್ರಿಯಲ್ಲಿ, ಉಲ್ಕಾಹಸ್ತೌ - ಕೊಳ್ಳಿಗಳನ್ನು ಹಿಡಿದು, ರಣಶೀರ್ಷೇ - ಯುದ್ಧರಂಗದಲ್ಲಿ, ವಿಚೇರತುಃ-ಸಂಚರಿಸಿದರು. ॥ ೭ ॥ ಭಿನ್ನ....ರೈಃ - ಭೇದಿಸಲ್ಪಟ್ಟ ಬಾಲಗಳೂ, ತೊಡೆಗಳೂ, ಕೈಕಾಲುಗಳೂ,

---

ಜಿತ್ತುವು ಪ್ರಯೋಗಿಸಿದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ಭೂಮಿಯಲ್ಲಿ ಪವಳಿಸಿರುವರು. ನೀವು ಯೋಚಿಸುವಂತೆ ಅವರು ವಿವಶರಾಗಿರುವುದಿಲ್ಲ. ನೀವು ವ್ಯಸನಪಡಕೂಡದು; ಇದು ವ್ಯಸನಕ್ಕೆ ಕಾಲವಲ್ಲವು; ಪ್ರತೀಕಾರಕ್ಕೆ ತಕ್ಕ ಸಮಯ" ಎಂದು ಹೇಳಿದನು. ಆಗ ಮಹಾ ಬುದ್ಧಿಶಾಲಿಯೂ, ವಾಯುಪುತ್ರನೂ ಆದ ಹನುಮಂತನು ಬ್ರಹ್ಮದೇವನ ವಾಕ್ಯಗಳನ್ನು ವ್ಯರ್ಥಗೊಳಿಸಬಾರದೆಂಬ ಸಂಕಲ್ಪವುಳ್ಳವನಾಗಿ ಸ್ವಲ್ಪ ಹೊತ್ತು ಆ ಬ್ರಹ್ಮಾಸ್ತ್ರದಿಂದ ಬದ್ಧನಾದವನಂತೆಯೇ ಸ್ತಬ್ಧನಾಗಿದ್ದು ಆ ತರುವಾಯ ಎಚ್ಚೆತ್ತುಕೊಂಡು ವಿಭೀಷಣನನ್ನು ಕುರಿತು, "ಅಯ್ಯಾ ರಾಕ್ಷಸೋತ್ತಮನಾದ ವಿಭೀಷಣನೇ! ಈ ರೀತಿಯಾದ ಇಂದ್ರಜಿತ್ತುವಿನ ಯುದ್ಧದಿಂದ ಗಾಯಗೊಂಡು ಬಿದ್ದಿರುವ ಈ ನಮ್ಮ ಸೇನೆಯಲ್ಲಿ ಯಾರಾರು ಜೀವದಿಂದಿರುವರೆಂಬುದನ್ನು ನೋಡಿ ತಿಳಿದುಕೊಳ್ಳೋಣ. ಮೊದಲು ಹಾಗೆ ಜೀವದಿಂದಿರುವ ವಾನರರೆಲ್ಲರನ್ನೂ ಸಮಾಧಾನಗೊಳಿಸೋಣ" ಎಂದು ಹೇಳಿದನು. ॥ ೧–೬ ॥ ಆ ತರುವಾಯ ವಾನರೋತ್ತಮನಾದ ಆ ಹನುಮಂತನೂ, ರಾಕ್ಷಸೋತ್ತಮನಾದ ಆ ವಿಭೀಷಣನೂ ಇಬ್ಬರೂ ಪೊಂಜುಗಳನ್ನು ಹೊತ್ತಿಸಿಕೊಂಡು ಆ ರಣಭೂಮಿಯಲ್ಲಿ ಸಂಚರಿಸತೊಡಗಿದರು. ಆ

ಶಿರೋಧರೈಃ । ಸ್ರವದ್ಭಿಃ ಕ್ಷತಜಂ ಗಾತ್ರೈಃ ಪ್ರಸ್ರವದ್ಭಿಸ್ತತಸ್ತತಃ ॥ ೮ ॥ ಪತಿತೈಃ ಪರ್ವತಾಕಾರೈರ್ವಾನರೈರಭಿಸಂಕುಲಾಂ । ಶಸ್ತ್ರೈಶ್ಚ ಪತಿತೈರ್ದೀಪ್ತೈರ್ದದೃಶಾತೇ ವಸುಂಧರಾಂ ॥ ೯ ॥ ಸುಗ್ರೀವಮಂಗದಂ ನೀಲಂ ಶರಭಂ ಗಂಧಮಾದನಂ । ಗವಾಕ್ಷಂಚ ಸುಷೇಣಂಚ ವೇಗದರ್ಶಿನಮಾಹುಕಂ ॥೧೦॥ ಮೈಂದಂ ನಳಂ ಜ್ಯೋತಿಮುಖಂ ದ್ವಿವಿದಂ ಪನಸಂ ತಥಾ । ಏತಾಂಶ್ಚಾನ್ಯಾಂ ಸ್ತತೋ ವೀರೌ ದದೃಶಾತೇ ಹತಾನ್ ರಣೇ ॥ ೧೧ ॥ ಸಪ್ತಷಷ್ಟಿರ್ಹತಾಃ ಕೋಟ್ಯೋ ವಾನರಾಣಾಂ ತರಸ್ವಿನಾಂ । ಅಹ್ನಃಪಂಚ

ಬೆರಳುಗಳೂ, ಕಂಠಗಳೂ ಉಳ್ಳವರಾಗಿ, ಕ್ಷತಜಂ - ರಕ್ತವನ್ನು, ಸ್ರವದ್ಭಿಃ - ಸುರಿಸುತ್ತ, ತತಸ್ತತಃ - ಅಲ್ಲಲ್ಲಿ, ಪ್ರಸ್ರವದ್ಭಿಃ - ಹೊರಳಾಡುತ್ತ ಮೂತ್ರಗಳನ್ನು ಬಿಡುತ್ತಿರುವ, ಗಾತ್ರೈಃ - ಶರೀರಗಳಿಂದಲೂ, ಪತಿತೈಃ - ಬಿದ್ದಿರುವ, ಪರ್ವತಾಕಾರೈಃ - ಬೆಟ್ಟದಂತೆ ಆಕಾರಗಳುಳ್ಳ, ವಾನರೈಃ - ಕಪಿಗಳಿಂದ, ಅಭಿಸಂಕುಲಾಂ - ತುಂಬಿರುವ, ಪತಿತೈಃ - ಕೆಳಗೆ ಬಿದ್ದಿರುವ, ದೀಪ್ತೈಃ - ಹೊಳೆಯುತ್ತಿರುವ, ಶಸ್ತ್ರೈಶ್ಚ - ಶಸ್ತ್ರಗಳಿಂದಲೂ, ಅಭಿಸಂಕುಲಾಂ - ತುಂಬಿರುವ, ವಸುಂಧರಾಂ - ನೆಲವನ್ನು, ದದೃಶಾತೇ - ನೋಡಿದನು. ॥೮-೯॥ ವೀರೌ - ಶೂರರಾದ ಹನುಮದ್ವಿಭೀಷಣರೀರ್ವರು, ಸುಗ್ರೀವಂ- ಸುಗ್ರೀವನನ್ನೂ, ಅಂಗದಂ - ಅಂಗದನನ್ನೂ, ನೀಲಂ - ನೀಲನನ್ನೂ, ಶರಭಂ - ಶರಭನನ್ನೂ, ಗಂಧಮಾದನಂ - ಗಂಧಮಾದನನನ್ನೂ, ಗವಾಕ್ಷಂಚ - ಗವಾಕ್ಷನನ್ನೂ, ಸುಷೇಣಂಚ - ಸುಷೇಣನನ್ನೂ, ವೇಗದರ್ಶಿನಂ-ವೇಗದರ್ಶೀ ಎಂಬವನನ್ನೂ, ಆಹುಕಂ-ಆಹುಕನೆಂಬವನನ್ನೂ, ಮೈಂದಂ- ಮೈಂದನನ್ನೂ, ನಳಂ - ನಳನನ್ನೂ, ಜ್ಯೋತಿಮುಖಂ - ಜ್ಯೋತಿಮುಖನನ್ನೂ, ದ್ವಿವಿದಂ - ದ್ವಿವಿದನನ್ನೂ, ತಥಾ - ಹಾಗೆಯೇ, ಪನಸಂಚ - ಪನಸನನ್ನೂ, ತತಃ - ಬಳಿಕ, ಅನ್ಯಾಂಶ್ಚ - ಮತ್ತೆ ಕೆಲ ವಾನರರನ್ನೂ, ಏತಾಂಶ್ಚ - ಈ ಕಪಿಗಳನ್ನೂ, ರಣೇ - ಕಾಳಗದಲ್ಲಿ, ಹತಾನ್ - ಹೊಡೆಯಲ್ಪಟ್ಟವರನ್ನಾಗಿ, ದದೃಶಾತೇ - ನೋಡಿದರು. ॥ ೧೦-೧೧ ॥ ಅಹ್ನಃ - ಹಗಲಿನ, ಪಂಚಮಶೇಷೇಣ - ಪಂಚಮಭಾಗದ ಕಾಲದಲ್ಲಿ, (ಸಾಯಾಹ್ನಕಾಲಸ್ವರೂಪವಾದ ಆರುಗಳಿಗೆಯ ಕಾಲದಲ್ಲಿ,) ಸ್ವಯಂ

ಸಮಯದಲ್ಲಿ ಪರ್ವತಾಕಾರರಾದ ಅನೇಕಮಂದಿ ವಾನರವೀರರು ಭಿನ್ನವಾದ ಬಾಲಗಳುಳ್ಳವರಾಗಿಯೂ, ಒಡೆದ ಕಾಲುಗಳುಳ್ಳವರಾಗಿಯೂ, ಮುರಿದ ಬೆರಳುಗಳುಳ್ಳವರಾಗಿಯೂ, ಅರೆ ಕತ್ತರಿಸಿದ ಕತ್ತುಳ್ಳವರಾಗಿಯೂ, ಸರ್ವಾವಯವಗಳಿಂದಲೂ ಸುರಿಯುತ್ತಿರುವ ರಕ್ತಪ್ರವಾಹಗಳುಳ್ಳವರಾಗಿಯೂ ಭೂಮಿಯಲ್ಲಿ ಬಿದ್ದಿದ್ದರು. ಆ ಯುದ್ಧಭೂಮಿಯಾದರೋ ಹೀಗೆ ಮಡಿದುರುಳಿದ ಮತ್ತು ಗಾಯಗೊಂಡು ನರಳುತ್ತಿರುವ ವಾನರರಿಂದಲೂ, ಮುರಿದು ಬಿದ್ದಿರುವ ಮಹಾ ಪ್ರಕಾಶಮಾನವಾದ ವಿವಿಧಾಸ್ತ್ರಗಳಿಂದಲೂ ಮಹಾ ಭಯಂಕರವಾಗಿ ತೋರುತ್ತಿದ್ದಿತು. ಈ ಭಯಂಕರ ದೃಶ್ಯವನ್ನು ನೋಡುತ್ತ ಬದುಕಿರುವ ವಾನರರಾರೆಂದು ಹುಡುಕುತ್ತ ಮುಂದುವರಿಯುತ್ತಿರುವ ಆ ವಾನರೋತ್ತಮ ರಾಕ್ಷಸೋತ್ತಮರೀರ್ವರೂ ಪೆಟ್ಟು ತಿಂದು ಕೆಳಗೆ ಬಿದ್ದಿರುವ ಮಹಾ ವೀರವಾನರರಾದ ಸುಗ್ರೀವ, ಅಂಗದ, ನೀಲ, ಶರಭ, ಗಂಧಮಾದನ, ಗವಾಕ್ಷ ಇವರೇ ಮೊದಲಾದವರೆಲ್ಲರನ್ನೂ ಕಂಡರು. ಇವರು ಮಾತ್ರವೇ ಅಲ್ಲದೆ ವೇಗದರ್ಶಿ, ಆಹುಕ, ಮೈಂದ, ನಳ, ಜ್ಯೋತಿಮುಖ, ದ್ವಿವಿದ, ಪನಸ ಇವರೇ ಮೊದಲಾದ ವಾನರೋತ್ತಮರೂ ಹತರಾಗಿ ಬಿದ್ದಿರುವುದನ್ನೂ ಕಂಡರು. ಆ ಇಂದ್ರಜಿದ್ಯುದ್ಧದಲ್ಲಿ ಎಪ್ಪತ್ತಾರು ಕೋಟಿ ಸಂಖ್ಯಾತರಾದ ವಾನರವೀರರು ಮಡಿದುರುಳಿ

ಮಶೇಷೇಣ ವಲ್ಲಭೇನ ಸ್ವಯಂಭುವಃ ‖ ೧೨ ‖ ಸಾಗರೌಘನಿಭಂ ಭೀಮಂ ದೃಷ್ಟ್ವಾ ಬಾಣಾರ್ದಿತಂ ಬಲಂ । ಮಾರ್ಗತೇ ಜಾಂಬವಂತಂ ಸ ಹನುಮಾನ್ಸವಿಭೀಷಣಃ ‖೧೩‖ ಸ್ವಭಾವಜರಯಾ ಯುಕ್ತಂ ವೃದ್ಧಂ ಶರಶತೈಶ್ಚಿತಂ । ಪ್ರಜಾಪತಿಸುತಂ ವೀರಂ ಶಾಮ್ಯಂತಮಿವ ಪಾವಕಂ ‖ ೧೪ ‖ ದೃಷ್ಟ್ವಾ ಸಮುಪಸಂಗಮ್ಯ ಪೌಲಸ್ತ್ಯೋ ವಾಕ್ಯಮಬ್ರವೀತ್ । "ಕಚ್ಚಿದಾರ್ಯ ! ಶರೈಸ್ತೀಕ್ಷ್ಣೈಃ ಪ್ರಾಣಾ ನಧ್ವಂಸಿತಾಸ್ತವ?" ‖೧೫‖ ವಿಭೀಷಣವಚಃ ಶ್ರುತ್ವಾ ಜಾಂಬವಾನೃಕ್ಷಪುಂಗವಃ । ಕೃಚ್ಛ್ರಾದಭ್ಯುದ್ಗಿರನ್ ವಾಕ್ಯಮಿದಂ

ಭುವಃ - ಬ್ರಹ್ಮದೇವನ, ವಲ್ಲಭೇನ - ಪ್ರೀತಿಪಾತ್ರನಾದ ಇಂದ್ರಜಿತ್ತುವಿನಿಂದ, (ಗೋ) ಪ್ರೀತಿಪಾತ್ರವಾದ ಬ್ರಹ್ಮಾಸ್ತ್ರದಿಂದ, ತರಸ್ವಿನಾಂ - ವೇಗವಂತರಾದ, ವಾನರಾಣಾಂ - ಕಪಿಗಳ, ಸಪ್ತಷಷ್ಟಿಃ ಕೋಟ್ಯಃ - ಅರುವತ್ತೇಳು ಕೋಟಿಗಳು, ಹತಾಃ - ಹೊಡೆಯಲ್ಪಟ್ಟರು. ‖ ೧೨ ‖ ಸಹನುಮಾನ್ - ಆ ಆಂಜನೇಯನು, ಸವಿಭೀಷಣಃ-ವಿಭೀಷಣಸಹಿತನಾಗಿ, ಭೀಮಂ-ಭಯಂಕರವಾದ, ಬಾಣಾರ್ದಿತಂ-ಬಾಣಗಳಿಂದ ಹೊಡೆಯಲ್ಪಟ್ಟ, ಸಾಗ....ಭಂ - ಸಮುದ್ರದ ಪ್ರವಾಹಕ್ಕೆ ಸಮಾನರಾದ, ಬಲಂ - ಸೇನೆಯನ್ನು, ದೃಷ್ಟ್ವಾ - ಕಂಡು, ಜಾಂಬವಂತಂ - ಜಾಂಬವಂತನನ್ನು ಕುರಿತು, ಮಾರ್ಗತೇ - ಹುಡುಕಿದನಷ್ಟೆ. ‖ ೧೩ ‖ ಸ್ವಭಾವಜರಯಾ - ಸ್ವಾಭಾವಿಕವಾದ ವಾರ್ಧಕ್ಯದಿಂದ, ಯುಕ್ತಂ - ಕೂಡಿರುವ, ವೃದ್ಧಂ - ಮುದುಕನಾದ, ಶರಶತೈಃ - ಬಾಣಗಳ ನೂರರಿಂದ, ಚಿತಂ - ವ್ಯಾಪ್ತನಾದ, ಶಾಂತಂ - ತಣ್ಣಗಾದ, ಪಾವಕಮಿವ - ಅಗ್ನಿಯಂತಿರುವ, ವೀರಂ - ಶೂರನಾದ, ಪ್ರಜಾ....ತಂ - ಬ್ರಹ್ಮನ ಮಗನಾದ ಜಾಂಬವಂತನನ್ನು, ದೃಷ್ಟ್ವಾ - ಕಂಡು, ತಂ - ಆ ಜಾಂಬವಂತನನ್ನು ಕುರಿತು, ಉಪಸಂಗಮ್ಯ - ಸಮೀಪಕ್ಕೆ ಬಂದು, ಪೌಲಸ್ತ್ಯಃ - ವಿಭೀಷಣನು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ‖೧೪‖ ಹೇ ಆರ್ಯ - ಎಲೈ ಪೂಜ್ಯನೇ, ತವ - ನಿನ್ನ, ಪ್ರಾಣಾಃ - ಪ್ರಾಣಗಳು, ತೀಕ್ಷ್ಣೈಃ - ಹರಿತವಾದ, ಶರೈಃ - ಬಾಣಗಳಿಂದ, ನಧ್ವಂಸಿತಾಃಕಚ್ಚಿತ್ - ನಾಶಗೊಳಿಸಲ್ಪಡಲಿಲ್ಲವಷ್ಟೆ. ‖೧೫‖ ವಿಭೀ....ಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ಋಕ್ಷಪುಂಗವಃ - ಋಕ್ಷಗಳಲ್ಲಿ ಶ್ರೇಷ್ಠನಾದ, ಜಾಂಬವಾನ್-ಜಾಂಬವಂತನು, ಕೃಚ್ಛ್ರಾತ್-ಕಷ್ಟದಿಂದ, ವಾಕ್ಯಂ-ಮಾತಿಗೆ ಉಪಯುಕ್ತವಾದ ಸ್ವರವನ್ನು ಮಾಡಿಕೊಂಡು, ಅಭ್ಯುದ್ಗಿರನ್-ಮಾತನಾಡುವವನಾಗಿ, ಇದಂವಚನಂ-

---

ದ್ದರು. ಹೀಗೆ ಸಂಜೆಯೊಳಗಾಗಿ ಮಹಾ ಸಾಗರೋಪಮವಾದ ಆ ವಾನರಸೇನೆಯು ಇಂದ್ರಜಿತ್ತುವು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಮುರಿದು ಬಿದ್ದುಹೋಗಿದ್ದಿತು. ‖೭–೧೨‖ ಇದೆಲ್ಲವನ್ನೂ ನೋಡುತ್ತ ನೋಡುತ್ತ ಮುಂದುವರಿದು ಆ ವಿಭೀಷಣ ಹನುಮಂತರೀರ್ವರೂ ಮಹಾತ್ಮನಾದ ಜಾಂಬವಂತನನ್ನು ಹುಡುಕಲಾರಂಭಿಸಿದರು. ಸ್ವಲ್ಪ ಹೊತ್ತಿನ ತರುವಾಯ ಸ್ವಭಾವದಿಂದಲೇ ಜರಾಯುಕ್ತನಾಗಿಯೂ, ಕೇವಲ ವೃದ್ಧನಾಗಿಯೂ, ಬಾಣಪೀಡಿತನಾಗಿಯೂ, ಭೂಮಿಯಲ್ಲಿ ಪವಳಿಸಿರುವವನಾಗಿಯೂ ಇರುವ ಬ್ರಹ್ಮಪುತ್ರನೂ, ಮಹಾವೀರಾಧಿವೀರನೂ ಆದ ಆ ಜಾಂಬವಂತನನ್ನು ಆ ವಾನರ ರಾಕ್ಷಸರೀರ್ವರೂ ಕಂಡರು. ಆತನನ್ನು ಕಂಡ ಕೂಡಲೇ ಪುಲಸ್ತ್ಯವಂಶೋತ್ಪನ್ನನಾದ ವಿಭೀಷಣನು, "ಪೂಜ್ಯನೇ ! ಜಾಂಬವಂತನೇ !! ಬದುಕಿರುವೆಯಷ್ಟೆ? ಕೂರಂಬುಗಳು ನಿನ್ನ ಪ್ರಾಣಗಳನ್ನು ಧ್ವಂಸಮಾಡಲಿಲ್ಲವಷ್ಟೆ ? (ಅದೃಷ್ಟವಶದಿಂದ ನಿನ್ನನ್ನು ಜೀವಂತನನ್ನಾಗಿ ಕಂಡೆನು)" ಎಂದನು. ವಿಭೀಷಣನ ಈ ಮಾತುಗಳನ್ನು ಕೇಳಿ ಋಕ್ಷಪುಂಗವನಾದ ಆ ಜಾಂಬವಂತನು ಬಹು ಕಷ್ಟ

ವಚನಮಬ್ರವೀತ್ ॥೧೬॥ "ನೈರ್ಋತೇಂದ್ರ! ಮಹಾವೀರ್ಯ! ಸ್ವರೇಣ ತ್ವಾಽಭಿ
ಲಕ್ಷಯೇ । ಪೀಡ್ಯಮಾನಃ ಶಿತೈರ್ಬಾಣೈರ್ನತ್ವಾಂ ಪಶ್ಯಾಮಿ ಚಕ್ಷುಷಾ ॥ ೧೭ ॥
ಅಂಜನಾ ಸುಪ್ರಜಾ ಯೇನ ಮಾತರಿಶ್ವಾ ಚ ನೈರ್ಋತ! । ಹನುಮಾನ್ವಾನರಶ್ರೇಷ್ಠಃ
ಪ್ರಾಣಾನ್ ಧಾರಯತೇ ಕ್ವಚಿತ್" ॥ ೧೮ ॥ ಶ್ರುತ್ವಾ ಜಾಂಬವತೋ ವಾಕ್ಯಮುವಾ
ಚೇದಂ ವಿಭೀಷಣಃ । "ಆರ್ಯಪುತ್ರಾವತಿಕ್ರಮ್ಯ ಕಸ್ಮಾತ್ಪೃಚ್ಛಸಿ ಮಾರುತಿಂ ॥೧೯॥
ನೈವ ರಾಜನಿ ಸುಗ್ರೀವೇ ನಾಽಂಗದೇ ನಾಪಿ ರಾಘವೇ। ಆರ್ಯ! ಸಂದರ್ಶಿತಸ್ನೇಹೋ
ಯಥಾ ವಾಯುಸುತೇ ಪರಃ" ॥ ೨೦ ॥ ವಿಭೀಷಣವಚಃ ಶ್ರುತ್ವಾ ಜಾಂಬವಾನ್ವಾಕ್ಯ

ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೬ ॥ ಹೇ ನೈರ್ಋತೇಂದ್ರ - ಎಲೈ ರಾಕ್ಷಸರಾಜನೇ, ಹೇ ಮಹಾವೀರ್ಯ - ಎಲೈ ಮಹಾ ಪರಾಕ್ರಮಶಾಲಿಯೇ, ತ್ವಾ - ನಿನ್ನನ್ನು, ಸ್ವರೇಣ - ಸ್ವರದಿಂದ, ಅಭಿಲಕ್ಷಯೇ - ಕಾಣುತ್ತೇನೆ, ಶಿತೈಃ - ತೀಕ್ಷ್ಣಗಳಾದ, ಬಾಣೈಃ - ಬಾಣಗಳಿಂದ, ಪೀಡ್ಯಮಾನಃ - ಬಾಧಿಸಲ್ಪಟ್ಟವನಾದಕಾರಣ, ತ್ವಾಂ - ನಿನ್ನನ್ನು, ಚಕ್ಷುಷಾ - ಕಣ್ಣಿನಿಂದ, ನಪಶ್ಯಾಮಿ - ನೋಡ ಲಾರೆನು. ॥೧೭॥ ಹೇ ನೈರ್ಋತ-ಎಲೈ ರಾಕ್ಷಸನೇ, ಯೇನ-ಯಾವ ಆಂಜನೇಯನಿಂದ ಅಂಜನಾ-ಅಂಜನಾದೇವಿಯು, ಮಾತರಿಶ್ವಾಚ - ವಾಯುವೂ, ಸುಪ್ರಜಾಃ - ಒಳ್ಳೇ ಮಗನುಳ್ಳವರೋ, ವಾನರ ಶ್ರೇಷ್ಠಃ - ವಾನರಾಧಿಪತಿಯಾದ, ಸಹನುಮಾನ್ - ಆ ಆಂಜನೇಯನು, ಕ್ವಚಿತ್ - ಎಲ್ಲಾದರೂ, ಪ್ರಾಣಾನ್ - ಪ್ರಾಣಗಳನ್ನೂ, ಧಾರಯತೇ - ಧರಿಸಿದ್ದಾನೆಯೇ. ॥ ೧೮ ॥ ಜಾಂಬವತಃ - ಜಾಂಬ ವಂತನ, ವಾಕ್ಯಂ - ಮಾತನ್ನು, ಶ್ರುತ್ವಾ - ಕೇಳಿ, ವಿಭೀಷಣಃ - ವಿಭೀಷಣನು, ಇದಂವಾಕ್ಯಂ - ಈ ಮಾತನ್ನು, ಉವಾಚ - ಹೇಳಿದನು, ಆರ್ಯಪುತ್ರೌ - ರಾಜಪುತ್ರರಾಧ ರಾಮಲಕ್ಷ್ಮಣರನ್ನು, ಅತಿಕ್ರಮ್ಯ - ಬಿಟ್ಟು, ಮಾರುತಿಂ - ಆಂಜನೇಯನನ್ನು, ಕಸ್ಮಾತ್ - ಏತಕ್ಕಾಗಿ, ಪೃಚ್ಛಸಿ - ಕೇಳು ತ್ತೀಯೆ, ಹೇ ಆರ್ಯ - ಎಲೈ ಪೂಜ್ಯನೇ, ವಾಯುಸುತೇ - ಆಂಜನೇಯನಲ್ಲಿ, ಯಥಾ - ಹೇಗೆ, ಸ್ನೇಹಃ - ಸ್ನೇಹವು, ಸಂದರ್ಶಿತಃ - ತೋರಿಸಲಟ್ಟಿತೋ, (ತಥಾ - ಹಾಗೆಯೇ,) ರಾಜನಿ ಅರಸಾದ, ಸುಗ್ರೀವೇ - ಸುಗ್ರೀವನಲ್ಲಿ, (ಅಸಂದರ್ಶಿತಃ - ತೋರಿಸಲ್ಪಡಲಿಲ್ಲ,) ಅಂಗದೇ-ಅಂಗದನಲ್ಲಿ, ನ - ಇಲ್ಲ, ರಾಘವೇಚಾಪಿ - ಶ್ರೀರಾಮನಲ್ಲಿಯೂ, ನ - ಇಲ್ಲವು. ॥ ೧೯-೨೦ ॥ ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ಜಾಂಬವಾನ್ - ಜಾಂಬವಂತನು, ವಾಕ್ಯಂ - ಮಾತನ್ನು, ಅಬ್ರವೀತ್-

---

ದಿಂದ ಮಾತನಾಡುವವನಾಗಿ, "ಅಪ್ಪಾ, ರಾಕ್ಷಸೇಂದ್ರನೇ! ವಿಭೀಷಣಾ! ಮಹಾ ವೀರನಾದ ನಿನ್ನನ್ನು ಕಂಠಸ್ವರದಿಂದ ತಿಳಿದೆನಾಗಲಿ ಕಣ್ಣಿನಿಂದ ನೋಡಲೂ ಆಗದವನಾಗಿರುವೆನು! ಶರಶತ ಪೀಡಿತನಾದ ನಾನು ನಿನ್ನನ್ನು ಕಣ್ಣಿನಿಂದ ನೋಡಲಾರದವನಾಗಿದ್ದೇನೆ! ವಿಭೀಷಣಾ! ಅಂಜ ನೆಯ ಭಾಗ್ಯದಿಂದುದಿಸಿದ ವಾಯುಸೂನುವಾದ ಆ ಹನುಮಂತನು ಜೀವದಿಂದಿರುವನೇ!" ಎಂದು ಕೇಳಿದನು. ॥ ೧೬-೧೮ ॥ ಹೀಗೆ ನುಡಿದ ಜಾಂಬವಂತನ ಮಾತುಗಳನ್ನು ಕೇಳಿ ವಿಭೀಷಣನು, "ಆರ್ಯ! ರಾಜಪುತ್ರರೂ, ಪೂಜ್ಯರೂ ಆದ ಶ್ರೀರಾಮಲಕ್ಷ್ಮಣರನ್ನು ಕೇಳದೆ, ಕಡೆಗೆ ವಾನರೇಶ್ವರನಾದ ಸುಗ್ರೀವನನ್ನೂ ವಿಚಾರಿಸದೆ, ಯುವರಾಜನಾದ ಅಂಗದ ಕುಮಾರನನ್ನೂ ಪ್ರಶ್ನಿಸದೆ ಮಾರುತಿಯನ್ನೇ ಏತಕ್ಕಾಗಿ ಕೇಳುತ್ತಿರುವೆ? ಜಾಂಬವಂತಾ! ಭಾಪು, ಭಾಪು!! ನೀನು ಹೀಗೆ ಕೇಳಿದುದರಿಂದ ನಿನಗೆ ಆ ಮಾರುತಿಯಲ್ಲಿರುವ ಅನ್ಯಾದೃಶ ವಾದ ವಾತ್ಸಲ್ಯವನ್ನು ಪ್ರಕಟಗೊಳಿಸಿದಂತಾಯಿತು. ಭಾಪು, ಭಾಪು!" ಎಂದನು. ಆಗ

ಮಬ್ರವೀತ್ । "ಶೃಣು ನೈರ್ಋತಶಾರ್ದೂಲ! ಯಸ್ಮಾತ್ಪೃಚ್ಛಾಮಿ ಮಾರುತಿಂ॥೨೧॥ ತಸ್ಮಿನ್ ಜೀವತಿ ವೀರೇತು ಹತಮಪ್ಯಹತಂ ಬಲಂ । ಹನುಮತ್ಯುಜ್ಝಿತಪ್ರಾಣೇ ಜೀವಂತೋಽಪಿ ವಯಂ ಹತಾಃ ॥೨೨॥ ಧರತೇ ಮಾರುತಿಸ್ತಾತ! ಮಾರುತಪ್ರತಿಮೋ ಯದಿ। ವೈಶ್ವಾನರಸಮೋ ವೀರ್ಯೇ ಜೀವಿತಾಶಾ ತತೋ ಭವೇತ್" ॥೨೩॥ ತತೋ ವೃದ್ಧಮುಪಾಗಮ್ಯ ನಿಯಮೇನಾಽಭ್ಯವಾದಯತ್ । ಗೃಹ್ಯ ಜಾಂಬವತಃ ಪಾದೌ ಹನುಮಾನ್ಮಾರುತಾತ್ಮಜಃ ॥ ೨೪ ॥ * ಶ್ರುತ್ವಾ ಹನುಮತೋ ವಾಕ್ಯಂ ತಥಾಪಿ ವ್ಯಥಿತೇಂ

ನುಡಿದನು. ॥೨೧॥ ಹೇ ನೈ....ಲ - ಎಲೈ ರಾಕ್ಷಸಾಧಿಪತಿಯೇ, ಯಸ್ಮಾತ್ - ಯಾವ ಕಾರಣದಿಂದ, ಮಾರುತಿಂ - ಆಂಜನೇಯನನ್ನು, ಪೃಚ್ಛಾಮಿ - ಕೇಳುವನೋ, ತತ್ - ಅದನ್ನು, ಶೃಣು - ಕೇಳು, ವೀರೇ - ಶೂರನಾದ, ತಸ್ಮಿನ್ಹನೂಮತಿ - ಆ ಆಂಜನೇಯನು, ಜೀವತಿ - ಬದುಕಿರುವವನೇ ಆದರೆ, ಹತಮಪಿ - ಹತವಾದರೂ, ಬಲಂ - ಸೈನ್ಯವು, ಅಹತಂ - ಹತವಾದದ್ದಲ್ಲ, ತಸ್ಮಿನ್ - ಆ ಆಂಜನೇಯನು, ಉಜ್ಝಿತಪ್ರಾಣೇ - ಬಿಡಲ್ಪಟ್ಟ ಪ್ರಾಣಗಳುಳ್ಳವನಾಗಲು, ಜೀವಂತೋಽಪಿ - ಬದುಕಿರುವರಾದರೂ, ವಯಂ - ನಾವು, ಹತಾಃ - ಹತಪ್ರಾಯರು, ಹೇ ತಾತ - ಎಲೈ ತಂದೆಯೇ, ಮಾರುತಪ್ರತಿಮಃ - ವಾಯುವಿಗೆ ಸಮಾನನಾದ, ಮಾರುತಿಃ - ಆಂಜನೇಯನು, ಧರತೇಯದಿ - ಪ್ರಾಣಗಳನ್ನುದ್ಧರಿಸಿದವನೇ ಆದರೆ, ವೀರ್ಯೇ - ಸಾಮರ್ಥ್ಯದಲ್ಲಿ, ವೈಶ್ವಾನರಸಮಃ - ಅಗ್ನಿಗೆ ಸಮಾನನಾದವನು, ತತಃ - ಆ ಕಾರಣದಿಂದ, ಜೀವಿತಾಶಾ - ಪ್ರಾಣದಲ್ಲಿ ಆಶೆಯು, ಭವೇತ್ - ಆಗುವುದು. ॥ ೨೨-೨೩ ॥ ತತಃ - ಬಳಿಕ, ಮಾರುತಾತ್ಮಜಃ - ವಾಯುಪುತ್ರನಾದ, ಆಂಜನೇಯಃ - ಆಂಜನೇಯನು, ವೃದ್ಧಂ - ಮುದುಕನಾದ ಜಾಂಬವಂತನನ್ನು ಕುರಿತು, ಉಪಾಗಮ್ಯ - ಬಂದು, ನಿಯಮೇನ-ಪ್ರಣಾಮ ನಿಯಮದಿಂದ, ಜಾಂಬವತಃ - ಜಾಂಬವಂತನ, ಪಾದೌ - ಚರಣಗಳನ್ನು, ಗೃಹ್ಯ - ಹಿಡಿದುಕೊಂಡು, ಅಭ್ಯವಾದಯತ್ - ವಂದನೆ ಮಾಡಿದನು. ॥ ೨೪ ॥ ತಥಾ - ಹಾಗೆ, ವ್ಯಥಿತೇಂದ್ರಿಯೋಽಪಿ - ಶಿಥಿಲವಾದ ಇಂದ್ರಿಯಗಳುಳ್ಳವನಾದರೂ, ಋಕ್ಷಪುಂಗವಃ - ಜಾಂಬವಂತನು,

ಜಾಂಬವಂತನು, "ಅಯ್ಯಾ ವಿಭೀಷಣನೇ! ನಾನು ಏತಕ್ಕಾಗಿ ಆಂಜನೇಯನ ಕುಶಲೋದಂತವನ್ನು ಕುರಿತು ಪ್ರಶ್ನಿಸಿದನೆಂಬುದಕ್ಕೆ ಕಾರಣವನ್ನು ಹೇಳುವೆನು, ಕೇಳು. ಮಹಾವೀರನಾದ ಆ ಮಾರುತಿಯು ಜೀವವನ್ನು ಧರಿಸಿದ್ದರೆ ಈ ಮಹಾ ವಾನರಸೇನೆಯು ಹತವಾಗಿ ಹೋಗಿದ್ದರೂ ಜೀವಿಸಿದ್ದಂತೆಯೇ! ಆತನೊಬ್ಬನು ಪ್ರಾಣಗಳನ್ನು ತೊರೆದಿದ್ದರೆ ಈ ಬಲವೆಲ್ಲವೂ ಹತವಾಗಿ ಹೋದಂತೆಯೇ ಎಂದು ತಿಳಿದುಕೊ. ರಾಕ್ಷಸೇಂದ್ರಾ! ಹನುಮಂತನೊಬ್ಬನು ಮಡಿದುದೇ ಆದರೆ ನಾವುಗಳೆಲ್ಲರೂ ಮಡಿದಂತೆಯೇ! ಅಪ್ಪಾ ವಿಭೀಷಣಾ! ಮಾರುತಸಮಾನನೂ, ವೈಶ್ವಾನರೋಪಮನೂ ಆದ ಆ ಮಾರುತಿಯೊಬ್ಬನುಳಿದಿದ್ದರೆ ನಮ್ಮೆಲ್ಲರಿಗೂ ಬದುಕಿನಾಸೆಯಿರುತ್ತದೆ. ಇಲ್ಲವಾದರೆ ನಾವುಗಳೆಲ್ಲರೂ ಆಗಿಹೋದಂತೆಯೇ" ಎಂದು ಹೇಳಿದನು. ಆಗ ಸಮೀಪದಲ್ಲಿಯೇ ಇದ್ದು, ಪೂಜ್ಯನಾದ ಜಾಂಬವಂತನಾಡಿದ ಮಾತುಗಳೆಲ್ಲವನ್ನೂ ಕೇಳುತ್ತಲೇ ಇದ್ದ ಹನುಮಂತನು ಕೂಡಲೇ ವೃದ್ಧನಾದ ಆತನ ಪಾದಗಳನ್ನು ಹಿಡಿದು, ವಿಧಿಪೂರ್ವಕವಾಗಿ ತನ್ನ ಹೆಸರನ್ನು ಹೇಳಿಕೊಂಡು ನಮಸ್ಕಾರ ಮಾಡಿದನು. ಆ ಸಮಯದಲ್ಲಿ ಮಹಾತ್ಮನಾದ ಆ ಜಾಂಬವಂತನು ಕೇವಲ ವ್ಯಥಿತೇಂದ್ರಿಯನಾಗಿದ್ದರೂ

* ಇಲ್ಲಿ ಗ್ರಂಥಶೈಥಿಲ್ಯವಿರುವಂತೆ ತೋರುತ್ತದೆ.

ದ್ರಿಯಃ । ಪುನರ್ಜಾತಮಿವಾತ್ಮಾನಂ ಮನ್ಯತೇಸ್ಮ ಋಕ್ಷಪುಂಗವಃ ॥ ೨೫ ॥ ತತೋಽಬ್ರವೀನ್ಮಹಾತೇಜಾಃ ಹನುಮಂತಂ ಸಜಾಂಬವಾನ್ । “ಆಗಚ್ಛ ಹರಿಶಾರ್ದೂಲ! ವಾನರಾಂಸ್ತ್ರಾತುಮರ್ಹಸಿ॥೨೬॥ ನಾನ್ಯೋ ವಿಕ್ರಮಪರ್ಯಾಪ್ತಸ್ತ್ವದೇಷಾಂ ಪರಮಸ್ಸಖಾ । ತ್ವತ್ಪರಾಕ್ರಮಕಾಲೋಽಯಂ ನಾನ್ಯಂ ಪಶ್ಯಾಮಿ ಕಂಚನ ॥ ೨೭ ॥ ಋಕ್ಷವಾನರವೀರಾಣಾಮನೀಕಾನಿ ಪ್ರಹರ್ಷಯ । ವಿಶಲ್ಯೌ ಕುರುಚಾಪ್ಯೇತೌ ಸಾದಿತೌ ರಾಮಲಕ್ಷ್ಮಣೌ ॥೨೮॥ ಗತ್ವಾ ಪರಮಮಧ್ವಾನಮುಪರ್ಯುಪರಿ ಸಾಗರಂ । ಹಿಮ

ಹನುಮತಃ - ಆಂಜನೇಯನ, ವಾಕ್ಯಂ - ಮಾತನ್ನು, ಶ್ರುತ್ವಾ - ಕೇಳಿ, ಆತ್ಮಾನಂ - ತನ್ನನ್ನು, ಪುನರ್ಜಾತಮಿವ - ತಿರುಗಿ ಹುಟ್ಟಿದವನನ್ನಂತೆ, ಮನ್ಯತೇಸ್ಮ - ತಿಳಿದನಷ್ಟೆ, ತತಃ - ಬಳಿಕ, ಮಹಾತೇಜಾಃ - ಬಹಳ ತೇಜೋವಂತನಾದ, ಸಜಾಂಬವಾನ್ - ಆ ಜಾಂಬವಂತನು, ಹನುಮಂತಂ - ಆಂಜನೇಯನನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೫ ॥ ಹೇ ಹರಿಶಾರ್ದೂಲ - ಎಲೈ ವಾನರೋತ್ತಮನೇ, ಆಗಚ್ಛ - ಬಾರಯ್ಯ, ವಾನರಾನ್ - ಕಪಿಗಳನ್ನು, ತ್ರಾತುಂ - ರಕ್ಷಿಸುವದಕ್ಕೆ, ಅರ್ಹಸಿ - ಯೋಗ್ಯನಾಗು, ಅನ್ಯಃ - ಮತ್ತೊಬ್ಬನು, ವಿಕ್ರಮಪರ್ಯಾಪ್ತಃ - ಪರಾಕ್ರಮದಲ್ಲಿ ಮೇಲಾದವನು, ನ - ಇಲ್ಲವು, ತ್ವಂ - ನೀನು, ಏಷಾಂ - ಯಾವ ಈ ಕಪಿಗಳಿಗೆ, ಪರಮಃ - ಉತ್ಕೃಷ್ಟನಾದ, ಸಖಾ - ಸ್ನೇಹಿತನು. ॥೨೬॥ ಅಯಂ - ಇದು, ತತ್ಪ....ಲಃ - ನಿನ್ನ ಪರಾಕ್ರಮಕ್ಕೆ ಕಾಲವು, ಅನ್ಯಂ- ಮತ್ತೊಬ್ಬನನ್ನು, ಕಂಚನ - ಯಾವನನ್ನೂ, ನಪಶ್ಯಾಮಿ - ಕಾಣೆನು, ಋಕ್ಷ....ಣಾಂ - ಕರಡಿಗಳಲ್ಲಿಯೂ ಕಪಿಗಳಲ್ಲಿಯೂ ಶೂರರಾದವರ, ಅನೀಕಾನಿ - ಸೈನ್ಯಗಳನ್ನು, ಪ್ರಹರ್ಷಯ - ಸಂತೋಷಗೊಳಿಸು, ಸಾದಿತೌ - ಬಾಣಗಳಿಂದ ಹೊಡೆಯಲ್ಪಟ್ಟ, ಏತೌರಾಮಲಕ್ಷ್ಮಣೌ - ಈ ರಾಮಲಕ್ಷ್ಮಣರನ್ನೂ, ವಿಶಲ್ಯೌ - ಬಾಣಶಲ್ಯಗಳಿಲ್ಲದವರನ್ನಾಗಿ, ಕುರು - ಮಾಡು. ॥ ೨೭-೨೮ ॥ ಹೇ ಹನುಮನ್ - ಎಲೈ ಆಂಜನೇಯನೇ, ಸಾಗರಂಉಪರ್ಯುಪರಿ - ಸಮುದ್ರದ ಮೇಲ್ಭಾಗಗಳಲ್ಲಿ, ಪರಮಂ - ಬಹಳವಾದ, ಅಧ್ವಾನಂ - ಮಾರ್ಗವನ್ನು, ಗತ್ವಾ - ಹೋಗಿ, ನಗಶ್ರೇಷ್ಠಂ - ಪರ್ವತೋತ್ತಮವಾದ, ಹಿಮವಂತಂ - ಹಿಮವಂತವನ್ನು ಕುರಿತು, ಗಂತುಂ - ಹೋಗುವದಕ್ಕೆ, ಅರ್ಹಸಿ-

---

ಹನುಮಂತನ ಧ್ವನಿಯನ್ನು (ಮಾತನ್ನು) ಕೇಳಿ ತಾನು ಬದುಕಿದಂತಾಯಿತೆಂದು (ಮರಳಿ ಹುಟ್ಟಿದಂತಾಯಿತೆಂದು) ಭಾವಿಸಿದನು. ॥ ೧೯—೨೫ ॥ ಆ ಬಳಿಕ ಮಹಾ ತೇಜಸ್ವಿಯಾದ ಜಾಂಬವಂತನು ಆ ಹನುಮಂತನನ್ನು ಕುರಿತು, “ಅಯ್ಯಾ ವಾನರೋತ್ತಮನೇ! ಬಾ, ಬಾ! ಈಗ ನೀನೇ ಈ ವಾನರರೆಲ್ಲರನ್ನೂ ರಕ್ಷಿಸಬೇಕು. ನಿನ್ನನ್ನುಳಿದು ಇವರನ್ನು ರಕ್ಷಿಸಲು ಸಮರ್ಥನಾದ ಪರಾಕ್ರಮಸಂಪನ್ನನಾದ ಮಿತ್ರನು ಯಾವನೂ ಇರುವುದಿಲ್ಲ. ಬಾ, ಬಾ! ಇದೀಗ ನೀನು ನಿನ್ನ ಪರಾಕ್ರಮವನ್ನು ಮೆರೆಯಬೇಕಾದ ಕಾಲವು. ನಿನ್ನನ್ನುಳಿದು ಅಂಥಾ ಪರಾಕ್ರಮವನ್ನು ತೋರಬಲ್ಲ ವೀರನಾವನನ್ನೂ ಕಾಣೆನು. ನೀನೇ ಈ ಸಮಯದಲ್ಲಿ ಮಹತ್ಕಾರ್ಯವನ್ನು ಮಾಡಬೇಕು. ಅಯ್ಯಾ ವೀರನೇ! ಈಗ ನೀನು ಋಕ್ಷವಾನರವೀರರೆಲ್ಲರಿಗೂ ಆನಂದವನ್ನುಂಟುಮಾಡಬೇಕು. ಈ ಬ್ರಹ್ಮಾಸ್ತ್ರ ಬಂಧಿತರಾಗಿರುವ ಶ್ರೀರಾಮಲಕ್ಷ್ಮಣರನ್ನು ವಿಶಲ್ಯರನ್ನಾಗಿ ಮಾಡುವವನಾಗು. ಅಯ್ಯಾ ಹನುಮಂತನೇ! ಇದೀಗ ನೀನು ಸಾಗರದ ಮೇಲೆ ಬಹು ದೂರ ಮಾರ್ಗವನ್ನು ಅತಿಕ್ರಮಿಸಿ ಹೋಗಿ ಹಿಮವತ್ಪರ್ವತಕ್ಕೆ ಹೋಗುವವ

ವಂತಂ ನಗಶ್ರೇಷ್ಠಂ ಹನುಮನ್! ಗಂತುಮರ್ಹಸಿ ॥ ೨೯ ॥ ತತಃ ಕಾಂಚನಮತ್ಯುಚ್ಚ
ಮೃಷಭಂ ಪರ್ವತೋತ್ತಮಂ। ಕೈಲಾಸಶಿಖರಂ ಚಾಪಿ ದ್ರಕ್ಷ್ಯಸ್ಯರಿನಿಷೂದನ! ॥೩೦॥
ತಯೋಃ ಶಿಖರಯೋರ್ಮಧ್ಯೇ ಪ್ರದೀಪ್ತಮತುಲಪ್ರಭಂ। ಸರ್ವೌಷಧಿಯುತಂ ವೀರ!
ದ್ರಕ್ಷ್ಯಸ್ಯೋಷಧಿಪರ್ವತಂ ॥ ೩೧ ॥ ತಸ್ಯ ವಾನರಶಾರ್ದೂಲ! ಚತಸ್ರೋ ಮೂರ್ಧ್ನಿ
ಸಂಭವಾಃ । ದ್ರಕ್ಷ್ಯಸ್ಯೋಷಧಯೋ ದೀಪ್ತಾ ದೀಪಯಂತೋ ದಿಶೋ ದಶ ॥ ೩೨ ॥
ಮೃತಸಂಜೀವಿನೀಂ ಚೈವ ವಿಶಲ್ಯಕರಣೀಮಪಿ । ಸಾವರ್ಣ್ಯ ಕರಣೀಂ ಚೈವ ಸಂಧಾನ
ಕರಣೀಂ ತಥಾ ॥೩೩॥ ತಾಸ್ಸರ್ವಾ ಹನುಮನ್! ಗೃಹ್ಯ ಕ್ಷಿಪ್ರಮಾಗಂತುಮರ್ಹಸಿ ।
ಆಶ್ವಾಸಯ ಹರೀನ್ ಪ್ರಾಣೈರ್ಯೋಜ್ಯ ಗಂಧವಹಾತ್ಮಜ! ॥ ೩೪ ॥ ಶ್ರುತ್ವಾ ಜಾಂಬ

ಯೋಗ್ಯನಾಗು. ॥೨೯॥ ಹೇ ಅರಿನಿಷೂದನ - ಎಲೈ ಶತ್ರುಸಂಹಾರಕನೇ, ತತಃ - ಬಳಿಕ, ಅತ್ಯುಚ್ಚಂ- ಬಹಳ ಉನ್ನತವಾದ, ಕಾಂಚನಂ - ಬಂಗಾರದ, ಋಷಭಂ - ಋಷಭವೆಂಬ, ಪರ್ವತೋತ್ತಮಂ - ಉತ್ತಮವಾದ ಬೆಟ್ಟವನ್ನು, ಕೈಲಾ....ಪಿ - ಕೈಲಾಸಶಿಖರವನ್ನೂ ಕೂಡ, ದ್ರಕ್ಷ್ಯಸಿ - ನೋಡುವೆ. ॥ ೩೦ ॥ ಹೇ ವೀರ - ಎಲೈ ಶೂರನೇ, ತತಃ - ಬಳಿಕ, ತಯೋಃ - ಆ ಕೈಲಾಸವೃಷಭಪರ್ವತಗಳ, ಶಿಖರಯೋಃ - ತುದಿಗಳ, ಮಧ್ಯೇ - ಮಧ್ಯಭಾಗದಲ್ಲಿ, ಪ್ರದೀಪ್ತಂ - ಹೊಳೆಯುತ್ತಿರುವ, ಅತುಲ ಪ್ರಭಂ-ಸಮಾನವಿಲ್ಲದ ಕಾಂತಿಯುಳ್ಳ, ಸರ್ವೌಷಧಿಯುತಂ ಸಮಸ್ತ ಓಷಧಿಲತೆಗಳಿಂದ ಕೂಡಿರುವ, ಓಷಧಿಪರ್ವತಂ - ಓಷಧಿಪರ್ವತವನ್ನು, ದ್ರಕ್ಷ್ಯಸಿ - ನೋಡುವೆ. ॥ ೩೧ ॥ ಹೇ ವಾನರಶಾರ್ದೂಲ - ಎಲೈ ಕಪಿಶ್ರೇಷ್ಠನೇ, ತಸ್ಯ - ಆ ಪರ್ವತದ, ಮೂರ್ಧ್ನಿ - ತುದಿಯಲ್ಲಿ, ಸಂಭವಾಃ - ಹುಟ್ಟಿರುವ, ದೀಪ್ತಾಃ - ಹೊಳೆಯುತ್ತಿರುವ, ಚತಸ್ರಃ - ನಾಲ್ಕಾದ, ಓಷಧಯಃ - ಓಷದಿಗಳು, ದಿಶೋದಶ - ಹತ್ತು ದಿಕ್ಕುಗಳನ್ನೂ, ದೀಪಯಂತಃ - ಕಂಗೊಳಿಸುವಂತೆ ಮಾಡುತ್ತಿರುವವರನ್ನು, ದ್ರಕ್ಷ್ಯಸಿ - ನೋಡುವೆ. ॥ ೩೨ ॥ ಹೇ ಹನುಮನ್ - ಎಲೈ ಆಂಜನೇಯನೇ, ಮೃತಸಂಜೀವಿನೀಂ - ಮೃತಸಂಜೀವಿನೀ ಎಂಬ ಲತೆಯನ್ನೂ, (ಗಾಯಗಳನ್ನು ಮಾಯಿಸುವದು), ಸಾವರ್ಣ್ಯಕರಣೀಂಚೈವ - ಕಾಂತಿ ಕೆಟ್ಟುಹೋಗಿದ್ದರೆ ಅದನ್ನು ಸೆಟ್ಟಗೆ ಮಾಡಿ ಸಮರೂಪವನ್ನಾಗಿ ಮಾಡುತ್ತಿರುವ ಮೂಲಿಕೆಯನ್ನೂ, ತಥಾ - ಹಾಗೆಯೇ, ಸಂಧಾನಕರಣೀಂಚೈವ - ಎಲುವು ಮುರಿದಿದ್ದರೆ ಅದನ್ನು ಕೂಡಿಸುವಂಥಾ ಸಾಮರ್ಥ್ಯವುಳ್ಳ ಸಂಧಾನಕರಣೀ ಎಂಬ, ಸರ್ವಾಃ - ಸಮಸ್ತವಾದ, ತಾಃ - ಆ ಮೂಲಿಕೆಗಳನ್ನು, ಗೃಹ್ಯ - ತೆಗೆದುಕೊಂಡು, ಕ್ಷಿಪ್ರಂ - ಜಾಗ್ರತೆಯಾಗಿ, ಆಗಂತುಂ - ಬರುವದಕ್ಕೆ, ಅರ್ಹಸಿ - ಯೋಗ್ಯನಾಗು, ಹೇ ಗಂಧವಹಾತ್ಮಜ - ಎಲೈ ವಾಯುಪುತ್ರನೇ, ಪ್ರಾಣೈಃ - ಪ್ರಾಣಗಳಿಂದ, ಯೋಜ್ಯ-

---

ನಾಗು. ಅಲ್ಲಿ ಅತ್ಯುನ್ನತವಾಗಿರುವ ಋಷಭವೆಂಬ ಕಾಂಚನಪರ್ವತೋತ್ತಮವನ್ನೂ, ಕೈಲಾಸ ಪರ್ವತ ಶಿಖರವನ್ನೂ ಕಾಣುವೆ. ಆ ಎರಡು ಪರ್ವತಗಳ ಶಿಖರಗಳ ನಡುವೆ ಮಹಾ ಪ್ರಕಾಶಮಾನವಾಗಿ ಬೆಳಗುತ್ತಿರುವುದೂ, ಸರ್ವೌಷಧಿಯುಕ್ತವಾಗಿರುವುದೂ ಆದ ಓಷಧಿ ಪರ್ವತವನ್ನು ಕಾಣುವೆ. ॥ ೨೯–೩೧ ॥ ಆ ಓಷಧಿ ಪರ್ವತ ಶಿಖರದಲ್ಲಿ ದಶದಿಶೆಗಳನ್ನೂ ಬೆಳಗುತ್ತಿರುವ ನಾಲ್ಕು ಮೂಲಿಕೆಗಳನ್ನೂ ನೋಡುವೆ. ಅವುಗಳೇ ಮೃತಸಂಜೀವಿನಿ, ವಿಶಲ್ಯ ಕರಣಿ, ಸಾವರ್ಣ ಕರಣಿ. ಸಂಧಾನ ಕರಣಿ ಎಂಬ ಮೂಲಿಕೆಗಳು. ಅಯ್ಯಾ ವಾನರೋತ್ತ ಮನೇ! ನೀನು ಆ ನಾಲ್ಕು ಮೂಲಿಕೆಗಳನ್ನೂ ಜಾಗ್ರತೆಯಾಗಿ ತೆಗೆದುಕೊಂಡು ಬರುವವ ನಾಗು. ಎಲೈ ಗಂಧವಹಾತ್ಮಜನೇ! ಈ ವಾನರರೆಲ್ಲರನ್ನೂ ಪ್ರಾಣಗಳಿಂದುಳಿಸು" ಎಂದು

ವತೋ ವಾಕ್ಯಂ ಹನುಮಾನ್ ಹರಿಪುಂಗವಃ। ಆಪೂರ್ಯತ ಬಲೋದ್ಧರ್ಷೈಸ್ತೋಯವೇ ಗೈರಿವಾರ್ಣವಃ ॥ ೩೫ ॥ ಸಪರ್ವತ ತಟಾಗ್ರಸ್ಥಃ ಪೀಡಯನ್ ಪರ್ವತೋತ್ತಮಂ। ಹನುಮಾನ್ ದೃಶ್ಯತೇ ವೀರೋ ದ್ವಿತೀಯ ಇವಪರ್ವತಃ ॥ ೩೬ ॥ ಹರಿಪಾದವಿನಿ ರ್ಭಗ್ನೋ ನಿಷಸಾದ ಸಪರ್ವತಃ। ನಶಶಾಕ ತದಾತ್ಮಾನಂ ಸೋಢುಂ ಭೃಶನಿಪೀಡಿತಃ ॥೩೭॥ ತಸ್ಯ ಪೇತುರ್ನಗಾ ಭೂಮೌ ಹರಿವೇಗಾಚ್ಚ ಜಜ್ವಲುಃ। ಶೃಂಗಾಣಿ ಚ ವಶೀ ರ್ಯಂತ ಪೀಡಿತಸ್ಯ ಹನೂಮತಾ ॥ ೩೮ ॥ ತಸ್ಮಿನ್ ಸಂಪೀಡ್ಯಮಾನೇತು ಭಗ್ನದ್ರುಮ ಶಿಲಾತಲೇ। ನಶೇಕುರ್ವಾನರಾ ಸ್ಥಾತುಂ ಘೂರ್ಣಮಾನೇ ನಗೋತ್ತಮೇ ॥ ೩೯ ॥

ಕೂಡಿಸಿ, ಹರೀನ್ - ಕಪಿಗಳನ್ನು, ಆಶ್ವಾಸಯ - ಸಮಾಧಾನಗೊಳಿಸು. ॥ ೩೩-೩೪ ॥ ಜಾಂಬವತಃ - ಜಾಂಬವಂತನ, ವಾಕ್ಯಂ - ಮಾತನ್ನು, ಶ್ರುತ್ವಾ - ಕೇಳಿ, ಹರಿಪುಂಗವಃ - ವಾನರೋತ್ತಮನಾದ, ಹನುಮಾನ್ - ಆಂಜನೇಯನು, ತೋಯವೇಗೈಃ - ಉದಕ ವೇಗಗಳಿಂದ, ಅರ್ಣವಇವ - ಕಡಲಂತೆ, ಬಲೋದ್ಧರ್ಷೈಃ - ಬಲಾಧಿಕ್ಯಗಳಿಂದ, ಆಪೂರ್ಯತ - ತುಂಬಿಸಲ್ಪಟ್ಟನು. ॥ ೩೫ ॥ ಪರ್ವ....ಸ್ಥಃ - ತ್ರಿಕೂಟಪರ್ವತದ ತುದಿಯಲ್ಲಿ ನಿಂತಿರುವ, ವೀರಃ - ಶೂರನಾದ, ಸಹನುಮಾನ್ - ಆ ಆಂಜನೇಯನು, ಪರ್ವತೋತ್ತಮಂ - ಉತ್ತಮವಾದ ಆ ತ್ರಿಕೂಟವನ್ನು, ಪೀಡಯನ್ - ಬಾಧಿಸುತ್ತ, ದ್ವಿತೀಯಃ - ಎರಡನೆಯದಾದ, ಪರ್ವತಇವ - ಬೆಟ್ಟದಂತೆ, ದೃಶ್ಯತೇ - ಕಾಣಲ್ಪಟ್ಟನು. ॥ ೩೬ ॥ ಹರಿ....ಗ್ನಃ - ಆಂಜನೇಯನ ಪಾದಗಳಿಂದ ಮುರಿಯಲ್ಪಟ್ಟುದಾದ, ಸಪರ್ವತಃ - ಆ ಪರ್ವತವು, ನಿಷಸಾದ - ಕೆಳಕ್ಕೆ ಕುಳಿತುಕೊಂಡಿತು, ಭೃಶನಿಪೀಡಿತಃ - ಬಹಳವಾಗಿ ಬಾಧೆಗೊಳಿಸಲ್ಪಟ್ಟದ್ದಾಗಿ, ತದಾ - ಆ ಕಾಲದಲ್ಲಿ, ಆತ್ಮಾನಂ - ತನ್ನನ್ನು, ಸೋಢುಂ - ಸಹಿಸುವದಕ್ಕಾಗಿ, ನಶಶಾಕ - ಸಮರ್ಥ ವಾಗಲಿಲ್ಲ ॥ ೩೭ ॥ ಹನೂಮತಾ - ಆಂಜನೇಯನಿಂದ, ಪೀಡಿತಶ್ಚ - ಬಾಧಿಸಲ್ಪಟ್ಟ, ತಸ್ಯ - ಆ ತ್ರಿಕೂಟಪರ್ವತದ, ನಗಾಃ - ಬೆಟ್ಟಗಳೂ (ಗಿಡಗಳೂ,) ಹರಿವೇಗಾತ್ - ಆಂಜನೇಯನ ವೇಗದ ದೆಸೆಯಿಂದ, ಭೂಮೌ - ನೆಲದಲ್ಲಿ, ಪೇತುಃ - ಬಿದ್ದುವು, ಜಜ್ವಲುಶ್ಚ - ಸುಟ್ಟುಹೋದವು, ಶೃಂಗಾಣಿಚ - ಶಿಖರಗಳೂ, ವಿಶೀರ್ಯಂತ - ಸೀಳಿದವು. ॥ ೩೮ ॥ ಸಂಪೀಡ್ಯಮಾನೇ - ಬಾಧೆಗೊಳಿಸಲ್ಪಟ್ಟ, ಭಗ್ನ....ಲೇ - ಮುರಿದುಹೋದ ಗಿಡಗಳೂ, ಪಾಷಾಣಗಳ ಪ್ರದೇಶಗಳೂ ಉಳ್ಳ, ತಸ್ಮಿನ್ನಗೋತ್ತಮೇ- ಆ ಪರ್ವತಶ್ರೇಷ್ಠವು, ಘೂರ್ಣಮಾನೇ - ತಿರುಗುತ್ತಿರಲು, ವಾನರಾಃ - ಕಪಿಗಳು, ಸ್ಥಾತುಂ - ನಿಲ್ಲುವ ದಕ್ಕೆ, ನಶೇಕುಃ - ಸಮರ್ಥರಾಗಲಿಲ್ಲ. ॥ ೩೯ ॥ ಘೂರ್ಣಿ....ರಾ - ತಿರುಗಿಸಲ್ಪಟ್ಟ ದೊಡ್ಡ ಊರು

ಹೇಳಿದನು. ವಾನರಶ್ರೇಷ್ಠನಾದ ಹನುಮಂತನು ಜಾಂಬವಂತನ ಮಾತುಗಳನ್ನು ಕೇಳಿ ದೊಡನೆಯೇ ತ್ರಿಕೂಟಾಚಲದ ಮೇಲೆ ನಿಂತು ತೋಯವೇಗದಿಂದ ಮಹಾರ್ಣವವೆಂತೋ ಅಂತು ಪರಾಕ್ರಮವನ್ನು ಮೆರೆದು ತುಂಬಿಕೊಂಡನು. ॥ ೩೨-೩೫ ॥ ಆ ತ್ರಿಕೂಟಪರ್ವತವ ನ್ನೊತ್ತಿ ನಿಂತ ಆ ವಾನರವೀರನು ಎರಡನೆಯ ತ್ರಿಕೂಟಪರ್ವತವೋ ಎಂಬಂತೆ ಶೋಭಿಸಿ ದನು. ಆ ಕಪಿವೀರನಿಂದ ನಿರ್ಭಗ್ನನಾದ ಆ ಅಚಲವು ಸ್ಥಿರವಾಗಿ ನಿಲ್ಲಲಾರದೆ ಭೂಮಿಗೆ ಕುಸಿದುಹೋಯಿತು. ಹನುಮತ್ಪೀಡಿತವಾದ ಆ ಪರ್ವತದ ಮಹಾವೃಕ್ಷಗಳೂ, ಶಿಖರ ಗಳೂ ಸೀಳಿ ಒಡೆದು ಭೂಮಿಗೆ ಬಿದ್ದುಹೋದುವು. ಆ ವೀರನು ಬಲದಿಂದೊತ್ತಿದಾಗ ಮರಮರಗಳೇ ಉರುಳಿ, ಶಿಖರಗಳೊಡೆದು ಆ ಪರ್ವತವೂ ಅಲುತ್ತಿರಲು ಆ ರಣಭೂಮಿ ಯಲ್ಲಿ ಅಳಿದುಳಿದಿದ್ದ ವಾನರರೆಲ್ಲರೂ ಅಲ್ಲಿರಲು ಹೆದರಿಹೋದರು. ಆ ಸಮಯದಲ್ಲಿ

ಸಾಘೂರ್ಣಿತ ಮಹಾದ್ವಾರಾ ಪ್ರಭಗ್ನಗೃಹಗೋ। ಪುರಾಲಂಕಾ ತ್ರಾಸಾಕುಲಾ ರಾತ್ರೌ ಪ್ರನೃತ್ತೇವಾಭವತ್ತದಾ ॥ ೪೦ ॥ ಪೃಥಿವೀಧರಸಂಕಾಶೋ ನಿಪೀಡ್ಯ ಧರಣೀಧರಂ । ಪೃಥಿವೀಂ ಕ್ಷೋಭಯಾಮಾಸ ಸಾರ್ಣವಾಂ ಮಾರುತಾತ್ಮಜಃ ॥ ೪೧ ॥ ಆರುರೋಹ ತದಾ ತಸ್ಮಾದ್ಧರಿರ್ಮಲಯಪರ್ವತಂ । ಮೇರುಮಂದರಸಂಕಾಶಂ ನಾನಾಪ್ರಸ್ರವಣಾಕುಲಂ ॥ ೪೨ ॥ ನಾನಾದ್ರುಮಲತಾಕೀರ್ಣಂ ವಿಕಾಸಿ ಕಮಲೋತ್ಪಲಂ । ಸೇವಿತಂ ದೇವಗಂಧರ್ವೈಃ ಷಷ್ಟಿಯೋಜನಮುಚ್ಛ್ರಿತಂ ॥ ೪೩ ॥ ವಿದ್ಯಾಧರೈರ್ಮುನಿಗಣೈರಪ್ಸರೋಭಿರ್ನಿಷೇವಿತಂ । ನಾನಾಮೃಗಗಣಾಕೀರ್ಣಂ ಬಹುಕಂದರಶೋಭಿತಂ ॥೪೪॥

ಬಾಗಿಲುಗಳುಳ್ಳ, ಪ್ರಭ....ರಾ - ಮುರಿಯಲ್ಪಟ್ಟ ಮನೆಗಳೂ, ಗೋಪುರಗಳೂ ಉಳ್ಳ, ತ್ರಾಸಾಕುಲಾ - ಭಯದಿಂದ ವ್ಯಾಕುಲವಾದ, ಸಾಲಂಕಾ - ಆ ಲಂಕಾಪಟ್ಟಣವು, ತದಾರಾತ್ರೌ - ಆ ರಾತ್ರಿಕಾಲದಲ್ಲಿ, ಪ್ರನೃತ್ತೇವ - ಪ್ರಗಲ್ಭವಾದ ನರ್ತನವುಳ್ಳದ್ದಂತೆ, ಅಭವತ್ - ಆಯಿತು. ॥ ೪೦ ॥ ಪೃಥಿ....ಶಃ - ಬೆಟ್ಟಕ್ಕೆ ಸಮಾನನಾದ, ಮಾರುತಾತ್ಮಜಃ-ವಾಯುಪುತ್ರನು, ಧರಣೀಧರಂ-ಬೆಟ್ಟವನ್ನು, ನಿಪೀಡ್ಯ-ಬಾಧೆಗೊಳಿಸಿ, ಸಾರ್ಣವಾಂ-ಕಡಲುಗಳಿಂದೊಡಗೂಡಿದ, ಪೃಥಿವೀಂ-ಭೂಮಿಯನ್ನು, ಕ್ಷೋಭಯಾಮಾಸ - ಕ್ಷೋಭೆಗೊಳಿಸಿದನು. ॥೪೧॥ ತದಾ - ಆ ಕಾಲದಲ್ಲಿ, ಹರಿಃ - ಆಂಜನೇಯನು, ತಸ್ಮಾತ್-ಆ ತ್ರಿಕೂಟಪರ್ವತದ ದೆಶೆಯಿಂದ, ಮೇರುಮಂದರಸಂಕಾಶಂ - ಮೇರುಪರ್ವತಕ್ಕೂ ಮಂದರಪರ್ವತಕ್ಕೂ ಸಮಾನನಾದ, ನಾನಾ....ಲಂ - ಅನೇಕ ಬಗೆಯಾದ ಪ್ರವಾಹಗಳಿಂದ ತುಂಬಿರುವ, ನಾನಾ....ರ್ಣಂ - ಅನೇಕ ಮರಗಳಿಂದಲೂ ಬಳ್ಳಿಗಳಿಂದಲೂ ತುಂಬಿರುವ, ವಿಕಾ....ಲಂ - ಅರಳಿದ ಕಮಲಗಳೂ, ನೈದಿಲೆಗಳೂ ಉಳ್ಳ, ದೇವಗಂಧರ್ವೈಃ - ದೇವತೆಗಳಿಂದಲೂ ಗಂಧರ್ವರಿಂದಲೂ, ಸೇವಿತಂ - ಸೇವಿಸಲ್ಪಟ್ಟ, ಷಷ್ಟಿಯೋಜನಂ - ಅರುವತ್ತುಗಾವುದ, ಉಚ್ಛ್ರಿತಂ - ಉನ್ನತವಾದ, ವಿದ್ಯಾಧರೈಃ - ವಿದ್ಯಾಧರರಿಂದಲೂ, ಮುನಿಗಣೈಃ - ಋಷಿಗಳ ತಂಡಗಳಿಂದಲೂ, ಅಪ್ಸರೋಭಿಃ - ಅಪ್ಸರಸ್ತ್ರೀಯರುಗಳಿಂದಲೂ, ನಿಷೇವಿತಂ - ಸೇವಿಸಲ್ಪಟ್ಟ, ನಾನಾ....ರ್ಣಂ - ಅನೇಕ ವಿಧವಾದ ಮೃಗತಂಡಗಳಿಂದ ತುಂಬಿರುವ, ಬಹು....ತಂ - ಅನೇಕ ಗುಹೆಗಳಿಂದ ಶೋಭಾಯಮಾನವಾದ, ಮಲಯಪರ್ವತಂ - ಮಲಯಪರ್ವತವನ್ನು, ಆರುರೋಹ - ಏರಿದನು. ॥ ೪೧-೪೪ ॥ ತತ್ರ - ಆ ಮಲಯಪರ್ವತದಲ್ಲಿ, ಸರ್ವಾನ್ - ಸಮಸ್ತರಾದ, ಗಂಧ....ರಾನ್ - ಗಂಧರ್ವರನ್ನೂ ಕಿನ್ನರರನ್ನೂ,

ಆ ಪರ್ವತಾಗ್ರದಲ್ಲಿ ಸುಪ್ರತಿಷ್ಠಿತವಾಗಿದ್ದ ಲಂಕಾನಗರವೂ ಸಹ ಅಲ್ಲಾಡಿಹೋದ ಮಹಾ ದ್ವಾರಗಳೂ, ಒಡೆದುರುಳಿದ ಪ್ರಾಕಾರಗಳೂ, ಮನೆಗಳೂ ಉಳ್ಳುದಾಗಿ ಭಯದಿಂದ ತತ್ತಳಿಸಿ ಹೋಗಿ ಕುಣಿದಾಡುತ್ತಿರುವುದೋ ಎಂಬಂತಾಯಿತು. ॥೩೬-೪೦॥ ಮಹಾ ಪರ್ವತಸನ್ನಿಭನಾದ ಆ ಕಪಿಶಾರ್ದೂಲನು ಆ ತರುವಾಯ ತ್ರಿಕೂಟಾಚಲವನ್ನು ಪೀಡಿಸಿ ಅರ್ಣವ ಸಮೇತವಾದ ಭೂಮಿಯನ್ನೇ ಕ್ಷೋಭೆಗೊಳಿಸಿ ಅಲ್ಲಿಂದಲೇ ಮಲಯಪರ್ವತವನ್ನೇರಿದನು. ಆ ಮಲಯಪರ್ವತವಾದರೋ ಮೇರುಮಂದರ ಪರ್ವತಗಳಿಗೆ ಸಮಾನವಾಗಿ ಅರುವತ್ತು ಯೋಜನಗಳಷ್ಟು ಎತ್ತರವಾಗಿದ್ದಿತಲ್ಲದೆ, ವಿವಿಧ ವೃಕ್ಷಲತೆಗಳಿಂದಲೂ, ಜರಿಗಳಿಂದಲೂ, ಅಲ್ಲಿಯೇ ಪೂತಿರುವ ಕಮಲದ ಬಳ್ಳಿಗಳಿಂದಲೂ ಕೂಡಿದುದಾಗಿ, ದೇವಗಂಧರ್ವರು, ವಿದ್ಯಾಧರರು, ಮುನಿಗಣಗಳು ಇವರಿಂದ ಸೇವಿತವಾಗಿ ಮೃಗಗಳಡಗಿರುವ ಅನೇಕ ಗುಹೆಗಳಿಂದಲೂ ಕೂಡಿದ್ದಿತು. ಆ ಕಪಿವೀರನು ಆ ಪರ್ವತದಲ್ಲಿರುವ ಯಕ್ಷ ಗಂಧರ್ವ ಕಿನ್ನರರೆಲ್ಲ

ಪನ್ನಗಾನಾಂ ಕುಲಯುಂಸ್ತತ್ರ ಯಕ್ಷಗಂಧರ್ವಕಿನ್ನರಾಃ । ಹನುಮಾನ್ಮೇಘ ಸಂಕಾಶೋ ವವೃಧೇ ಮಾರುತಾತ್ಮಜಃ ॥ ೪೫ ॥ ಪದ್ಭ್ಯಾಂತು ಶೈಲಮಾಪೀಡ್ಯ ಬಡಬಾ ಮುಖ ವನ್ಮುಖಂ । ವಿವೃತ್ಯೋಗ್ರ ನನಾದೋಚ್ಚೈ ಸ್ತ್ರಾಸಯನ್ನಿವ ರಾಕ್ಷಸಾನ್ ॥೪೬॥ ತಸ್ಯ ನಾನದ್ಯಮಾನಸ್ಯ ಶ್ರುತ್ವಾ ನಿನದಮದ್ಭುತಂ । ಲಂಕಾಸ್ಥಾ ರಾಕ್ಷಸಾಸ್ಸರ್ವೇ ನಶೇಕು ಸ್ಸ್ಪಂದಿತುಂ ಭಯಾತ್ ॥ ೪೭ ॥ ನಮಸ್ಕೃತ್ವಾಥ ರಾಮಾಯ ಮಾರುತಿರ್ಭೀಮ ವಿಕ್ರಮಃ । ರಾಘವಾರ್ಥಂ ಪರಂಕರ್ಮ ಸಮೈಹತ ಪರಂತಪಃ ॥ ೪೮ ॥ ಸಪುಚ್ಛ ಮುದ್ಯಮ್ಯ ಭುಜಂಗಕಲ್ಪಂ ವಿನಮ್ಯಪೃಷ್ಠಂ ಶ್ರವಣೇ ನಿಕುಂಚ್ಯ । ವಿವೃತ್ಯವಕ್ತ್ರಂ

ಆಕುಲರ್ಯು - ವ್ಯಾಕುಲಚಿತ್ತರನ್ನಾಗಿ ಮಾಡುತ್ತಿರುವ, ಮೇಘಸಂಕಾಶಃ - ಕಾಲಮೇಘಕ್ಕೆ ಸಮಾನ ನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ವವೃಧೇ - ವೃದ್ಧಿ ಗೊಂಡನು. ॥೪೫॥ ಪದ್ಭ್ಯಾಂತು - ಕಾಲುಗಳಿಂದಲಾದರೆ, ಶೈಲಂ - ಬೆಟ್ಟವನ್ನು, ಆಪೀಡ್ಯ - ಬಾಧೆ ಗೊಳಿಸಿ, ಬಡಬಾಮುಖವತ್ - ಬಡಬಾ ಎಂಬ ಕಡಲಿನಲ್ಲಿರುವ ಕುದುರೆಯ ಮುಖದಂತೆ, ಮುಖಂ - ಮುಖವನ್ನು, ವಿವೃತ್ಯ - ತೆರೆದು, ಉಗ್ರಂ - ಭಯಂಕರವಾಗಿ, ರಾಕ್ಷಸಾನ್ - ರಕ್ಕಸರನ್ನು, ತ್ರಾಸ ಯನ್ನಿವ - ಹೆದರಿಸುವನೋ ಎಂಬಂತೆ, ಉಚ್ಚೈಃ - ಗಟ್ಟಿಯಾಗಿ, ನನಾದ - ಕೂಗಿದನು. ॥ ೪೬ ॥ ನಾನದ್ಯಮಾನಸ್ಯ - ಗಟ್ಟಿಯಾಗಿ ಕೂಗುತ್ತಿರುವ, ತಸ್ಯ - ಆ ಆಂಜನೇಯನ, ಅದ್ಭುತಂ - ಆಶ್ಚರ್ಯ ಕರವಾದ, ನಿನದಂ - ಧ್ವನಿಯನ್ನು, ಶ್ರುತ್ವಾ - ಕೇಳಿ, ಲಂಕಾಸ್ಥಾಃ - ಲಂಕಾಪುರವಾಸಿಗಳಾದ, ಸರ್ವೇ - ಸಮಸ್ತರಾದ, ರಾಕ್ಷಸಾಃ - ರಕ್ಕಸರು, ಭಯಾತ್ - ಭಯದಿಂದ, ಕಂಪಿತುಂ - ಕದಲುವು ದಕ್ಕೂ, ನಶೇಕುಃ - ಸಮರ್ಥರಾಗದೇ ಹೋದರು. ॥ ೪೭ ॥ ಅಥ - ಬಳಿಕ, ಭೀಮಪರಾಕ್ರಮಃ - ಭಯಂಕರವಾದ ಪರಾಕ್ರಮವುಳ್ಳ, ಪರಂತಪಃ - ಶತ್ರುಸಂಹಾರಕನಾದ, ಮಾರುತಿಃ - ಆಂಜನೇ ಯನು, ರಾಮಾಯ - ಶ್ರೀರಾಮನಿಗೋಸುಗ, ನಮಸ್ಕೃತಾಃ - ಪ್ರಣಾಮಮಾಡಿ, ರಾಘವಾರ್ಥೇ - ಶ್ರೀರಾಮನ ನಿಮಿತ್ತವಾಗಿ, ಪರಂ - ಉತ್ಕೃಷ್ಟವಾದ, ಕರ್ಮ - ವ್ಯಾಪಾರವನ್ನು, ಸಮೈಹತ - ಮಾಡಲಿಚ್ಛಿಸಿದನು. ॥ ೪೮ ॥ ಚಂಡವೇಗಃ - ಕ್ರೂರವಾದ ವೇಗವುಳ್ಳ, ಸಃ - ಆ ಆಂಜನೇಯನು, ಭುಜಂಗಕಲ್ಪಂ - ಸರ್ಪಕ್ಕೆ ಸಮಾನವಾದ, ಪುಚ್ಛಂ - ಬಾಲವನ್ನು, ಉದ್ಯಮ್ಯ - ಎತ್ತಿ, ಪೃಷ್ಠಂ - ಹಿಂಭಾಗವನ್ನು, ವಿನಮ್ಯ - ಬೊಗ್ಗಿಸಿ, ಶ್ರವಣೇ - ಕಿವಿಗಳನ್ನು, ನಿಕುಂಚ್ಯ - ಮುಚ್ಚಿಕೊಂಡು, ಬಡಬಾಮುಖಾಭಂ - ಬಡಬಾಗ್ನಿಯ ಮುಖಕ್ಕೆ ಸಮಾನವಾದ, ವಕ್ತ್ರಂ - ಮುಖವನ್ನು, ವಿವೃತ್ಯ -

ರನ್ನೂ ಹೆದರಿಸುತ್ತ ಮಹದಾಕಾರವಾಗಿ ಬೆಳೆಯಲಾರಂಭಿಸಿದನು. ಆತನು ಕಾಲುಗಳಿಂದ ಆ ಶೈಲವನ್ನೊತ್ತಿ ಬಡಬಾಮುಖಕ್ಕೆ ಸಮಾನವಾದ ತನ್ನ ಬಾಯನ್ನು ಅಗಲವಾಗಿ ತೆರೆದು ರಾಕ್ಷಸರೆಲ್ಲರನ್ನೂ ಭಯಗೊಳಿಸಲೋಸುಗ ಅತ್ಯುಗ್ರವಾದ ಸಿಂಹನಾದವನ್ನು ಮಾಡಿದನು. ಆ ಮಹಾ ಧ್ವನಿಯನ್ನು ಕೇಳುತ್ತಲೇ ಲಂಕಾನಗರದಲ್ಲಿದ್ದ ರಾಕ್ಷಸರೆಲ್ಲರೂ ಅತ್ತಿತ್ತ ಕದಲಲೂ ಆರದೆ ಭಯದಿಂದ ಸ್ತಬ್ಧರಾಗಿಹೋದರು. ॥ ೪೧—೪೭ ॥ ಆ ತರುವಾಯ ಮಹಾತ್ಮನಾದ ಆ ವಾನರೋತ್ತಮನು ಶ್ರೀರಾಮಮೂರ್ತಿಗೆ ನಮಸ್ಕಾರ ಮಾಡಿ ಆತನಿಗಾಗಿಯೇ ಮಹಾ ಕಾರ್ಯವನ್ನು ಮಾಡಲು ತೊಡಗಿದನು. ಆತನು ಮಹಾ ಭುಜಂಗಸಮಾನವಾದ ತನ್ನ ಬಾಲವನ್ನು ಮೇಲೆತ್ತಿ ಪೃಷ್ಠವನ್ನು ಬೊಗ್ಗಿಸಿ ಕಿವಿಗಳನ್ನು ಕೊಂಕಿಸಿ ಬಡಬಾಮುಖಾಭವಾದ ಬಾಯಿಯನ್ನು ಅಗಲವಾಗಿ ತೆರೆದು ಮಹಾ ಪ್ರಚಂಡ ವೇಗದಿಂದ ಅಂತರಿಕ್ಷಕ್ಕೆ ಹಾರಿದನು.

ಬಡಬಾಮುಖಾಭಮಾಪುಪ್ಲುವೇ ವ್ಯೋಮನಿ ಚಂಡವೇಗಃ ॥ ೪೯ ॥ ಸವೃಕ್ಷಷಂಡಾಂ
ಸ್ತರಸಾ ಜಹಾರ ಶೈಲಾನ್ ಶಿಲಾಃ ಪ್ರಾಕೃತವಾನರಾಂಶ್ಚ । ಬಾಹೂರುವೇಗೋದ್ಧತ
ಸಂಪ್ರಣುನ್ನಾಸ್ತೇ ಕ್ಷೀಣವೇಗಾಸ್ಸಲಿಲೇ ನಿಪೇತುಃ ॥ ೫೦ ॥ ಸತೌ ಪ್ರಸಾರ್ಯೋರಗ
ಭೋಗಕಲ್ಪೌ ಭುಜೌ ಭುಜಂಗಾರಿನಿಕಾಶವೀರ್ಯಃ । ಜಗಾಮ ಮೇರುಂ ನಗರಾಜ
ಮಗ್ರ್ಯಂ ದಿಶಃ ಪ್ರಕರ್ಷನ್ನಿವ ವಾಯುಸೂನುಃ ॥ ೫೧ ॥ ಸಸಾಗರಂ ಘೂರ್ಣಿತ
ವೀಚಿಮಾಲಂ ತದಾ ಭೃಶಂ ಭ್ರಾಮಿತ ಸರ್ವಸತ್ತ್ವಂ। ಸಮೀಕ್ಷಮಾಣಸ್ಸಹಸಾ ಜಗಾಮ
ಚಕ್ರಂ ಯಥಾವಿಷ್ಣುಕರಾಗ್ರಮುಕ್ತಂ ॥ ೫೨ ॥ ಸಪರ್ವತಾನ್ ವೃಕ್ಷಗಣಾನ್ಸರಾಂಸಿ

ತೆರೆದು, ವ್ಯೋಮನಿ - ಅಂತರಿಕ್ಷದಲ್ಲಿ, ಪುಪ್ಲುವೇ - ಹಾರಿದನು. ॥ ೪೯ ॥ ಸಃ - ಆ ಆಂಜನೇಯನು, ವೃಕ್ಷಷಂಡಾನ್ - ಗಿಡಗಳ ತಂಡಗಳನ್ನೂ, ಶೈಲಾನ್ - ಬೆಟ್ಟಗಳನ್ನೂ, ಶಿಲಾನ್ - ಪಾಷಾಣಗಳನ್ನೂ, ಪ್ರಾಕೃ....ಶ್ಚ - ಸಾಧಾರಣ ವಾನರರನ್ನೂ, ತರಸಾ - ಬಲದಿಂದ, ಆಜಹಾರ - ಅಪಹರಿಸಿದನು, ಬಾಹೂ....ನ್ನಾಃ - ಬಾಹುಗಳ ಊರುಗಳ ವೇಗದಿಂದ ಹಾರಿಸಲ್ಪಟ್ಟು ತಳ್ಳಲ್ಪಟ್ಟ, ತೇ - ಆ ಶೈಲಶೃಂಗಾದಿಗಳೂ, ಕ್ಷೀಣವೇಗಾಃ - ನಶಿಸಿಹೋದ ವೇಗವುಳ್ಳವರಾಗಿ, ಸಲಿಲೇ - ನೀರಿನಲ್ಲಿ, ನಿಪೇತುಃ - ಬಿದ್ದರು. ॥ ೫೦ ॥ ಸವಾಯುಸೂನುಃ - ಆ ವಾಯುಪುತ್ರನಾದ ಆಂಜನೇಯನು, ಉರ....ಲ್ಪೌ - ಸರ್ಪಶರೀರಕ್ಕೆ ಸಮಾನಗಳಾದ, ತೌಭುಜೌ - ಆ ಭುಜಗಳನ್ನು, ಪ್ರಸಾರ್ಯ - ಚಾಚಿ, ಭುಜ....ರ್ಯಃ - ಗರುಡನಿಗೆ ಸಮಾನವಾದ ಸಾಮರ್ಥ್ಯವುಳ್ಳವನಾಗಿ, ದಿಶಃ - ದಿಕ್ಕುಗಳನ್ನು, ಪ್ರಕರ್ಷನ್ನಿವ - ಸೆಳೆಯುತ್ತಾನೋ ಎಂಬಂತಿರುವನಾಗಿ, ಅಗ್ರ್ಯಂ - ಶ್ರೇಷ್ಠವಾದ, ನಗರಾಜಂ - ಪರ್ವತರಾಜನಾದ, ಮೇರುಂ - ಮೇರುಪರ್ವತವನ್ನು ಕುರಿತು, ಜಗಾಮ - ತೆರಳಿದನು. ॥ ೫೧ ॥ ಸಃ - ಆ ಆಂಜನೇಯನು, ತದಾ - ಆ ಕಾಲದಲ್ಲಿ, ಭೃಶಂ - ಬಹಳವಾಗಿ, ಭ್ರಾಮಿ....ತ್ವಂ - ತಿರುಗಿಸಲ್ಪಟ್ಟ ಸಮಸ್ತ ಜಂತುಗಳುಳ್ಳ, ಘೂರ್ಣಿ....ಲಂ ತಿರುಗಿಸಲ್ಪಟ್ಟ ತೆರೆಗಳ ಪಂಕ್ತಿಗಳುಳ್ಳ, ಸಾಗರಂ - ಕಡಲನ್ನು, ವಿಷ್ಣು....ಕ್ತಂ - ವಿಷ್ಣುವಿನ ಹಸ್ತಾಗ್ರದಿಂದ ಬಿಡಲ್ಪಟ್ಟ, ಚಕ್ರಂಯಥಾ - ಸುದರ್ಶನವನ್ನಂತೆ, ಸಮೀಕ್ಷಮಾಣಃ - ನೋಡುತ್ತಿರುವವನಾಗಿ, ಸಹಸಾ - ಜಾಗ್ರತೆಯಾಗಿ, ಜಗಾಮ - ತೆರಳಿದನು. ॥ ೫೨ ॥ ಪಿತೃ....ಗಃ - ತಂದೆಗೆ ಸಮಾನವಾದ ವೇಗವುಳ್ಳ, ಸಃ - ಆ ಹನುಮಂತನು, ಪರ್ವತಾನ್ - ಬೆಟ್ಟಗಳನ್ನೂ, ವೃಕ್ಷಗಣಾನ್ - ಮರಗಳ ತಂಡಗಳನ್ನೂ, ಸರಾಂಸಿ - ನದಿಗಳನ್ನೂ,

---

ಆಗಲಾತನ ಪ್ಲವನವೇಗದಿಂದ ಆ ಪರ್ವತದಲ್ಲಿದ್ದ ಮಹಾವೃಕ್ಷನಿವಹಗಳೂ, ಅದರ ಸಮೀಪದಲ್ಲಿದ್ದ ಸಾಮಾನ್ಯ ವಾನರವೃಂದಗಳೂ, ಸೆಳೆಯಲ್ಪಟ್ಟವುಗಳಾಗಿ ಸ್ವಲ್ಪದರಲ್ಲಿಯೇ ಕುಗ್ಗಿದ ವೇಗವೂ ಉಳ್ಳವಾಗಿ ಸಾಗರದಲ್ಲಿ ಬಿದ್ದುಹೋದುವು. ॥ ೪೮–೫೦ ॥ ಆ ವೀರ ವಾನರನಾದ ಹನುಮಂತನಾದರೋ ಮಹಾಸರ್ಪಗಳ ಹೆಡೆಗಳಿಗೆ ಸಮಾನಗಳಾದ ತನ್ನ ಬಾಹುಗಳನ್ನು ಮುಂದಕ್ಕೆ ಪಸರಿಸಿ ದಿಕ್ಕುಗಳನ್ನೇ ಸೆಳೆಯುವನೋ ಎಂಬಂತೆ ಪರ್ವತೋತ್ತಮವಾದ ಮೇರುಪರ್ವತವನ್ನು ಕುರಿತು ಹೊರಟನು. ಆತನು ತರಂಗಮಾಲೆಯಿಂದ ಕ್ಷೋಭೆಗೊಂಡು ಮೊರೆಯುತ್ತಿರುವುದೂ, ತಿತ್ತಿರುಗಿದ ತನ್ನಲ್ಲಿನ ಮಹಾಸತ್ವಗಳುಳ್ಳುದೂ ಆದ ಮಹಾಸಾಗರವನ್ನೂ ನೋಡುತ್ತ ವಿಷ್ಣುಕರಾಗ್ರಯುಕ್ತವಾದ ಚಕ್ರಾಯುಧದಂತೆ ಹೊರಟನು. ಆ ಮಹಾತ್ಮನು, ವಾಯುಸಮಾನವಾದ ವೇಗವುಳ್ಳವನಾಗಿ ಪರ್ವತಗಳನ್ನೂ, ಮಹಾವೃಕ್ಷಗಳನ್ನೂ, ಸರಸ್ಸುಗಳನ್ನೂ, ನದೀತಟಾಕಗಳನ್ನೂ, ಶ್ರೇಷ್ಠವಾದ ಪಟ್ಟಣಗಳನ್ನೂ,

ನದೀಸ್ತಟಾಕಾನಿ ಪುರೋತ್ತಮಾನಿ । ಸ್ಫೀತಾನ್ ಜನಾಂತಾನಪಿ ಸಂಪ್ರವೇಕ್ಷ್ಯ ಜಗಾಮ ವೇಗಾತ್ಪಿತೃತುಲ್ಯವೇಗಃ ॥ ೫೩ ॥ ಆದಿತ್ಯಪಥಮಾಶ್ರಿತ್ಯ ಜಗಾಮ ಸ ಗತಕ್ಲಮಃ । ಹನುಮಾಂಸ್ತ್ವರಿತೋ ವೀರಃ ಪಿತೃತುಲ್ಯಪರಾಕ್ರಮಃ ॥ ೫೪ ॥ ಜವೇನ ಮಹತಾ ಯುಕ್ತೋ ಮಾರುತಿರ್ಮಾರುತೋ ಯಥಾ । ಜಗಾಮ ಹರಿಶಾರ್ದೂಲೋ ದಿಶಃ ಶಬ್ದೇನ ಪೂರಯನ್ ॥೫೫॥ ಸ್ಮರನ್ ಜಾಂಬವತೋ ವಾಕ್ಯಂ ಮಾರುತಿರ್ವಾತರಂಹಸಾ । ದದರ್ಶ ಸಹಸಾ ಚಾಪಿ ಹಿಮವಂತಂ ಮಹಾಕಪಿಃ ॥ ೫೬ ॥ ನಾನಾಪ್ರಸ್ರವಣೋಪೇತಂ ಬಹುಕಂದರನಿರ್ಝರಂ । ಶ್ವೇತಾಭ್ರಚಯಸಂಕಾಶೈಃ ಶಿಖರೈಶ್ಚಾರುದರ್ಶನೈಃ । ಶೋಭಿತಂ ವಿವಿಧೈರ್ವೃಕ್ಷೈರಗಮತ್ಪರ್ವತೋತ್ತಮಂ ॥ ೫೭ ॥ ಸತಂ ಸಮಾಸಾದ್ಯ

ನದೀಃ - ಹೊಳೆಗಳನ್ನೂ, ತಟಾಕಾನಿ - ಕೆರೆಗಳನ್ನೂ, ಪುರೋತ್ತಮಾನಿ - ಉತ್ತಮ ಪಟ್ಟಣಗಳನ್ನೂ, ಸ್ಫೀತಾನ್ - ಸಮೃದ್ಧಗಳಾದ, ಜನಾಂತಾನಪಿ - ದೇಶಗಳನ್ನೂ, ಸಂಪ್ರವೇಕ್ಷ್ಯ - ಕಂಡು, ವೇಗಾತ್ - ವೇಗದಿಂದ, ಜಗಾಮ - ತೆರಳಿದನು. ॥ ೫೩ ॥ ಪಿತೃ....ಮಃ - ತಂದೆಗೆ ಸಮಾನವಾದ ಪರಾಕ್ರಮವುಳ್ಳ, ವೀರಃ - ಶೂರನಾದ, ಗತಕ್ಲಮಃ - ಕಳೆದುಹೋದ ಆಯಾಸವುಳ್ಳ, ಸಹನೂಮಾನ್ - ಆ ಹನುಮಂತನು, ಆದಿತ್ಯಪಥಂ - ಅಂತರಿಕ್ಷವನ್ನು, ಆಶ್ರಿತ್ಯ - ಆಶ್ರಯಿಸಿ, ತ್ವರಿತಃ - ತ್ವರೆಯುಳ್ಳವನಾಗಿ, ಜಗಾಮ - ತೆರಳಿದನು. ॥೫೪॥ ಹರಿಶಾರ್ದೂಲಃ - ವಾನರಶ್ರೇಷ್ಠನಾದ, ಮಾರುತಿಃ - ಹನುಮಂತನು, ಮಾರುತೋಯಥಾ - ವಾಯುವಿನಂತೆ, ಮಹತಾಜವೇನ - ಬಹು ವೇಗದಿಂದ, ಯುಕ್ತಃ- ಕೂಡಿ, ಶಬ್ದೇನ - ಧ್ವನಿಯಿಂದ, ದಿಶಃ - ದಿಕ್ಕುಗಳನ್ನು, ಪೂರಯನ್ - ತುಂಬಿಸುತ್ತ, ಜಗಾಮ - ತೆರಳಿದನು. ॥೫೫॥ ಮಹಾಕಪಿಃ - ಮಹಾ ವಾನರನಾದ, ಮಾರುತಿಃ - ವಾಯುಪುತ್ರನು, ಜಾಂಬವತಃ - ಜಾಂಬವಂತನ, ವಾಕ್ಯಂ - ಮಾತನ್ನು, ಸ್ಮರನ್ - ಸ್ಮರಿಸಿ, ವಾತರಂಹಸಾ - ವಾಯುವೇಗದಿಂದ, ಸಹಸಾ-ಜಾಗ್ರತೆಯಾಗಿ, ಹಿಮವಂತಂಚಾಪಿ-ಹಿಮವತ್ಪರ್ವತವನ್ನೂ, ದದರ್ಶ-ಕಂಡನು. ॥ ೫೬ ॥ ನಾನಾ....ತಂ - ಅನೇಕ ಪ್ರವಾಹಗಳಿಂದ ಕೂಡಿದ, ಬಹು....ರಂ - ಅನೇಕ ಗುಹೆಗಳೂ, ಹೊಳೆಗಳೂ ಉಳ್ಳ, ಶ್ವೇತಾ....ಶೈಃ - ಶುಭ್ರವಾದ ಮೇಘಪಟಲಕ್ಕೆ ಸಮಾನವಾದ ಮನೋಹರ ನೋಟಗಳುಳ್ಳ, ಶಿಖರೈಃ - ಶಿಖರಗಳಿಂದಲೂ, ಶೋಭಿತಂ - ಹೊಳೆವ, ಪರ್ವತೋತ್ತಮಂ - ಪರ್ವತಶ್ರೇಷ್ಠವನ್ನು, ಅಗಮತ್ - ಹೊಂದಿದನು. ॥ ೫೭ ॥ ಸಃ - ಆ ಹನುಮಂತನು, ಅತಿ....ಗಂ - ಅತ್ಯುನ್ನತವೂ, ಉತ್ತಮವೂ, ಭಯಂಕರವೂ ಆದ ಶಿಖರಗಳುಳ್ಳ, ತಂಮಹಾನಗೇಂದ್ರಂ ಆ ಹಿಮವತ್ಪರ್ವತ

ಸಂತೋಷಯುಕ್ತರಾದ ಜನಗಳನ್ನೂ ನೋಡುತ್ತ ಹೊರಟನು. ಪಿತೃತುಲ್ಯ ಪರಾಕ್ರಮಿಯಾದ ಆ ಕಪಿಸತ್ತಮನು ಸೂರ್ಯನು ಸಂಚರಿಸುವ ಮಾರ್ಗವನ್ನಾಶ್ರಯಿಸಿದವನಾಗಿ ಏನೊಂದೂ ಆಯಾಸವಿಲ್ಲದೆ ಮಹಾ ವೇಗದಿಂದ ವಿಜೃಂಭಿಸಿ ದಶದಿಶೆಗಳನ್ನೂ ತನ್ನ ಮಹಾ ಧ್ವನಿಯಿಂದ ತುಂಬುತ್ತ, ಮಹಾತ್ಮನಾದ ಜಾಂಬವಂತನು, "ವತ್ಸ ಆಂಜನೇಯ! ಇದೀಗ ನಿನ್ನ ಪರಾಕ್ರಮವನ್ನು ಮೆರೆದು ವಾನರವೀರರನ್ನೂ, ಶ್ರೀರಾಮಲಕ್ಷ್ಮಣರನ್ನೂ ಸಂರಕ್ಷಿಸು" ಎಂದು ನುಡಿದ ಮಾತುಗಳನ್ನು ಸ್ಮರಿಸುತ್ತ ಮುಂಬರಿದು ಬಹು ಬೇಗನೆಯೇ ನಾನಾನಿರ್ಝರಗಳಿಂದಲೂ, ಅನೇಕ ಗುಹೆಗಳಿಂದಲೂ ಕೂಡಿ, ಬಿಳುಮೋಡಗಳಿಗೆ ಸಮಾನವಾದ ಶಿಖರಗಳಿಂದಲೂ, ವಿವಿಧ ವೃಕ್ಷಗಳಿಂದಲೂ ಸೊಗಸೊಗೆಯುತ್ತಿರುವ ಹಿಮವತ್ಪರ್ವತವನ್ನು ಕಂಡನು. ಆ ಕಪಿಯೂಥಪಾಗ್ರಗಣ್ಯನು ಅತ್ಯುನ್ನತ ಶಿಖರಗಳಿಂದ ಶೋಭಿಸುತ್ತಿರುವ

ಮಹಾನಗೇಂದ್ರಮತಿಪ್ರವೃದ್ಧೋತ್ತಮಘೋರಶೃಂಗಂ । ದದರ್ಶ ಪುಣ್ಯಾನಿ ಮಹಾಶ್ರಮಾಣಿ ಸುರರ್ಷಿಸಂಘೋತ್ತಮಸೇವಿತಾನಿ ॥೫೮॥ ಸಬ್ರಹ್ಮಕೋಶಂ ರಜತಾಲಯಂಚ ಶಕ್ರಾಲಯಂ ರುದ್ರಶರಪ್ರಮೋಕ್ಷಂ । ಹಯಾನನಂ ಬ್ರಹ್ಮಶಿರಶ್ಚ ದೀಪ್ತಂ ದದರ್ಶ ವೈವಸ್ವತಕಿಂಕರಾಂಶ್ಚ ॥೫೯॥ ವಜ್ರಾಲಯಂ ವೈಶ್ರವಣಾಲಯಂಚ ಸೂರ್ಯಪ್ರಭಂ ಸೂರ್ಯನಿಬಂಧನಂಚ । ಬ್ರಹ್ಮಾಸನಂ ಶಂಕರಕಾರ್ಮುಕಂಚ ದದರ್ಶ ನಾಭಿಂ ಚ ವಸುಂಧರಾಯಾಃ ॥೬೦॥ ಕೈಲಾಸಮಗ್ರ್ಯಂ ಹಿಮವಚ್ಛಿಲಾಂಚ ತಥರ್ಷಭಂ ಕಾಂಚನಶೈಲಮಗ್ರ್ಯಂ । ಸಂದೀಪ್ತ ಸರ್ವೌಷಧಿಸಂಪ್ರದೀಪ್ತಂ ದದರ್ಶ ಸರ್ವೌಷಧಿ

ವನ್ನು, ಆಸಾದ್ಯ - ಹೊಂದಿ, ಸುರ....ನಿ - ದೇವರ್ಷಿಗಳ ಉತ್ತಮವಾದ ಸಮೂಹಗಳಿಂದ ಸೇವಿಸಲ್ಪಟ್ಟ, ಪುಣ್ಯಾನಿ - ಪುಣ್ಯಕರಗಳಾದ, ಮಹಾಶ್ರಮಾಣಿ - ದೊಡ್ಡ ಆಶ್ರಮಗಳನ್ನು, ದದರ್ಶ - ಕಂಡನು ||೫೮|| ಸಃ - ಆ ಹನುಮಂತನು, ಬ್ರಹ್ಮಕೋಶಂಚ - ಬ್ರಹ್ಮನ ಶಿರಶ್ಛೇದನವಾದ ಸ್ಥಳವನ್ನೂ, ರಜತಾಲಯಂ - ಕೈಲಾಸಪರ್ವತವನ್ನೂ, ಶಕ್ರಾಲಯಂ - ಇಂದ್ರನ ಮನೆಯನ್ನೂ, ರುದ್ರ....ಕ್ಷಂ - ಪರಮೇಶ್ವರನ ಬಾಣವಿಮೋಚನ ಸ್ಥಳವನ್ನೂ, ಹಯಾನನಂ - ಹಯಗ್ರೀವಾವತಾರ ಸ್ಥಳವನ್ನೂ, ದೀಪ್ತಂ - ಹೊಳೆಯುವ, ಬ್ರಹ್ಮಶಿರಶ್ಚ - ಬ್ರಹ್ಮಕಪಾಲವನ್ನೂ, ವೈವ....ಶ್ಚ - ಸೂರ್ಯನ ಸಂಬಂಧಿಗಳಾದ ಪರಿಚಾರಕರನ್ನೂ, ದದರ್ಶ - ನೋಡಿದನು. ||೫೯|| ವಜ್ರಾಲಯಂ - ವಜ್ರಾಯುಧಪ್ರದಾನ ಸ್ಥಳವನ್ನೂ, ಸೂರ್ಯಪ್ರಭಂ - ಸೂರ್ಯನಂತೆ ಬೆಳಗುವ, ವೈಶ್ರವಣಾಲಯಂಚ - ಕುಬೇರನ ಮನೆಯನ್ನೂ, ಸೂರ್ಯನಿಬಂಧನಂಚ - ಛಾಯಾದೇವಿಯ ಪ್ರೀತಿಗಾಗಿ ಸೂರ್ಯನ ಘರ್ಷಣಸ್ಥಾನವನ್ನೂ, ಬ್ರಹ್ಮಾಸನಂ ಬ್ರಹ್ಮನ ಸಿಂಹಾಸನವನ್ನೂ, ಶಂಕರಕಾರ್ಮುಕಂ - ಶಿವಧನುಸ್ಸಿರತಕ್ಕ ಸ್ಥಳವನ್ನೂ, ವಸುಧಾಯಾಃ - ಭೂಮಿಯ, ನಾಭಿಂಚ - ಪಾತಾಳಪ್ರವೇಶಕ್ಕೆ ಸಾಧಕವಾದ ನಾಭಿಪ್ರದೇಶವನ್ನೂ, ದದರ್ಶ - ಕಂಡನು. ||೬೦|| ಅಗ್ರ್ಯಂ - ಶ್ರೇಷ್ಠವಾದ, ಕೈಲಾಸಂ - ಕೈಲಾಸವನ್ನೂ, ತಥಾ - ಹಾಗೆಯೇ, ಅಗ್ರ್ಯಂ - ಮುಂದಿರುವ, ಕಾಂಚನಶೈಲಂ - ಸುವರ್ಣಪರ್ವತವಾದ, ಋಷಭಂ - ಋಷಭಪರ್ವತವನ್ನೂ, ಹಿಮವಚ್ಛಿಲಾಂಚ - ಹಿಮವತ್ಪರ್ವತದ

ಆ ಹಿಮಾದ್ರಿಯನ್ನು ಹೊಂದಿ ಅಲ್ಲಿ ಅನೇಕ ಮಹರ್ಷಿಗಳಿಂದ ಸೇವಿತವಾದ ಪುಣ್ಯಾಶ್ರಮಗಳನ್ನು ಕಂಡವನಾದನು. ||೫೭–೫೮|| ಆ ಮಹಾತ್ಮನು ಅಲ್ಲಿಯೇ ಬ್ರಹ್ಮಗೃಹವನ್ನೂ, ರಜತಾಲಯವಾದ ಕೈಲಾಸವನ್ನೂ, ಶಕ್ರಾಲಯವನ್ನೂ, ಲೀಲೆಗಾಗಿ ರುದ್ರನು ಶರಗಳನ್ನು ಬಿಟ್ಟೆಡೆಯನ್ನೂ, ಹಯಗ್ರೀವಾರಾಧನ ಸ್ಥಾನವನ್ನೂ, ಮಹಾ ಪ್ರಕಾಶಮಾನವಾದ ರುದ್ರನಿಕೃತ್ತವಾಗಿ ಬಿದ್ದ ಬ್ರಹ್ಮಶಿರಸ್ಥಾನವನ್ನೂ, ಸೂರ್ಯಕಿಂಕರರು ತಂಗುವೆಡೆಯನ್ನೂ, ಬ್ರಹ್ಮನು ಮಹೇಂದ್ರನಿಗೆ ವಜ್ರಾಯುಧವನ್ನಿತ್ತ ಪ್ರದೇಶವನ್ನೂ, ವೈಶ್ರವಣಾಲಯವನ್ನೂ, ಛಾಯಾದೇವಿಯ ಪ್ರೀತ್ಯರ್ಥವಾಗಿ ವಿಶ್ವಕರ್ಮನು ರಚಿಸಿದ ಸೂರ್ಯನಿಬಂಧನ ಸ್ಥಾನವನ್ನೂ, ದೇವಗಣಗಳು ಸಂದರ್ಶಿಸಲೋಸುಗ ನಿರ್ಮಿಸಿದ ಬ್ರಹ್ಮಸಿಂಹಾಸನವನ್ನೂ, ಶಂಕರನ ಬಿಲ್ಲಿರುವ ಪ್ರದೇಶವನ್ನೂ, ಪಾತಾಳವನ್ನು ಪ್ರವೇಶಿಸುವ ಸ್ಥಳವಾದ ಭೂದೇವಿಯ ನಾಭಿಪ್ರದೇಶವನ್ನೂ ಕಂಡನು. ||೫೯–೬೦|| ಇದಾದ ತರುವಾಯ ಆ ಹನುಮಂತನು, ಶ್ರೇಷ್ಠವಾದ ಕೈಲಾಸಾದ್ರಿಯನ್ನೂ, ಹಿಮವತ್ಪರ್ವತದ ಮಹಾ ಶಿಲೆಗಳನ್ನೂ, ಮನೋಹರವಾದ ಕಾಂಚನಪರ್ವತ

ಪರ್ವತೇಂದ್ರಂ ॥ ೬೧ ॥ ಸ ತಂ ಸಮೀಕ್ಷ್ಯಾನಲರಶ್ಮಿದೀಪ್ತಂ ವಿಸಿಸ್ಮಿಯೇ ವಾಸವ ದೂತಸೂನುಃ । ಆವೃತ್ಯ ತಂ ಚೌಷಧಿಪರ್ವತೇಂದ್ರಂ ತತ್ರೌಷಧೀನಾಂ ವಿಚಯಂ ಚಕಾರ ॥ ೬೨ ॥ ಸಯೋಜನಸಹಸ್ರಾಣಿ ಸಮತೀತ್ಯ ಮಹಾಕಪಿಃ । ದಿವ್ಯೌಷಧಿಧರಂ ಶೈಲಂ ವ್ಯಚರನ್ಮಾರುತಾತ್ಮಜಃ ॥ ೬೩ ॥ ಮಹೌಷಧ್ಯಸ್ತತಸ್ಸರ್ವಾಸ್ತಸ್ಮಿನ್ ಪರ್ವತ ಸತ್ತಮೇ । ವಿಜ್ಞಾಯಾರ್ಥಿನಮಾಯಾಂತಂ ತತೋ ಜಗ್ಮುರದರ್ಶನಂ ॥ ೬೪ ॥ ಸ ತಾನ್ಮಹಾತ್ಮಾ ಹನುಮಾನಪಶ್ಯನ್ ಚುಕೋಪ ಕೋಪಾಚ್ಚ ಭೃಶಂ ನನಾದ । ಅಮೃಷ್ಯಮಾಣೋಽಗ್ನಿನಿಕಾಶಚಕ್ಷುರ್ಮಹೀಧರೇಂದ್ರಂ ತಮುವಾಚ ವಾಕ್ಯಂ ॥೬೫॥

ದೊಡ್ಡಕಲ್ಲನ್ನೂ, ಸಂದೀ....ಪ್ತಂ - ಹೊಳೆಯುವ ಸಮಸ್ತ ಓಷಧಿಗಳಿಂದ ಎಸೆವ, ಸರ್ವೌಷಧಿಪರ್ವತೇಂದ್ರಂ - ಸಮಸ್ತ ಓಷಧಿಗಳುಳ್ಳ ಪರ್ವತಶ್ರೇಷ್ಠವನ್ನೂ - ದದರ್ಶ - ಕಂಡನು. ॥ ೬೧ ॥ ಸಃವಾಸವ ದೂತಸೂನುಃ - ಆ ವಾಯುಪುತ್ರನು, ಅನಲರಶ್ಮಿದೀಪ್ತಂ - ಅಗ್ನಿಕಿರಣಗಳಂತೆ ಬೆಳಗುವ, ತಂ - ಆ ಬೆಟ್ಟವನ್ನು, ಸಮೀಕ್ಷ್ಯ - ಕಂಡು, ತಂ - ಉತ್ತಮವಾದ ಆ ಓಷಧಿಪರ್ವತವನ್ನು, ಆವೃತ್ಯ - ತಿರುಗಿ, ತತ್ರ - ಅಲ್ಲಿ, ಓಷಧೀನಾಂ - ಮೂಲಿಕೆಗಳ, ವಿಚಯಂ - ಹುಡುಕುವಿಕೆಯನ್ನು, ಚಕಾರ - ಮಾಡಿದನು. ॥ ೬೨ ॥ ಮಹಾಕಪಿಃ - ಮಹಾ ವಾನರನಾದ, ಹನುಮಾರುತಾತ್ಮಜಃ - ಆ ವಾಯು ಪುತ್ರನು, ಯೋಜನಸಹಸ್ರಾಣಿ - ಅನೇಕ ಸಹಸ್ರಯೋಜನಗಳನ್ನು, ಸಮತೀತ್ಯ - ದಾಟಿ, ದಿವ್ಯೌಷಧಿ ಧರಂ - ದೇವತಾಸಂಬಂಧವಾದ ಓಷಧಿಗಳನ್ನು ಧರಿಸಿರುವ, ಶೈಲಂ - ಬೆಟ್ಟದಲ್ಲಿ, ವ್ಯಚರತ್ - ತಿರುಗಿ ದನು. ॥ ೬೩ ॥ ತತಃ - ಬಳಿಕ, ಸರ್ವಾಃ - ಸಮಸ್ತವಾದ ಮಹೌಷಧ್ಯಃ - ಮಹಾ ಮೂಲಿಕೆಗಳು, ತಸ್ಮಿನ್‌ಪರ್ವತಸತ್ತಮೇ - ಆ ಪರ್ವತಶ್ರೇಷ್ಠದಲ್ಲಿ, ಅರ್ಥಿನಂ - ಯಾಚಕನಾಗಿ, ಆಯಾಂತಂ - ಬರುತ್ತಲಿರುವ ಆಂಜನೇಯನನ್ನು, ವಿಜ್ಞಾಯ - ತಿಳಿದು, ತತಃ - ತಕ್ಷಣದಲ್ಲಿ, ಅದರ್ಶನಂ - ಅಂತರ್ಧಾನವನ್ನು, ಜಗ್ಮುಃ - ಹೊಂದಿದವು. ॥ ೬೪ ॥ ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ಸಹನುಮಾನ್ - ಆ ಹನುಮಂತನು, ತಾಃ - ಆ ಮೂಲಿಕೆಗಳನ್ನು, ಅಪಶ್ಯನ್ - ನೋಡದೆ, ಚುಕೋಪ- ಕೋಪಗೊಂಡನು, ಕೋಪಾಚ್ಚ - ರೋಷದಿಂದ, ಭೃಶಂ - ವಿಶೇಷವಾಗಿ, ನನಾದ - ಕೂಗಿದನು, ಅಮೃಷ್ಯಮಾಣಃ - ಸೈರಿಸದವನಾಗಿ, ಅಗ್ನಿ....ಕ್ಷುಃ - ಅಗ್ನಿಗೆ ಸಮಾನವಾದ ಕಣ್ಣುಗಳುಳ್ಳವನಾಗಿ, ತಂಮಹೀಧರೇಂದ್ರಂ - ಆ ಓಷಧಿಪರ್ವತವನ್ನು ಕುರಿತು, ವಾಕ್ಯಂ - ಮಾತನ್ನು, ಉವಾಚ - ನುಡಿ ದನು. ॥೬೫॥ ಹೇ ನಗೇಂದ್ರ - ಎಲೈ ಪರ್ವತಶ್ರೇಷ್ಠವೇ, ಯತ್ - ಯಾವ ಕಾರಣದಿಂದ, ರಾಘವೇ- ಶ್ರೀರಾಮನ ವಿಷಯದಲ್ಲಿ, ಕೃತಾನುಕಂಪಃ-ಮಾಡಲ್ಪಟ್ಟ ದಯೆಯುಳ್ಳವನು, ನಾಸಿ-ಆಗದಿರುವೆಯೋ,

---

ವಾದ ಋಷಭವನ್ನೂ ಅವುಗಳ ನಡುವೆ ಇರುವ ಸರ್ವೌಷಧಿಗಳಿಂದ ವಿರಾಜಿಸುತ್ತಿರುವ ಮಹೌಷಧಿಪರ್ವತವನ್ನೂ ಕಂಡನು. ಅಗ್ನಿಕಿರಣಗಳಿಂದ ಬೆಳಗುತ್ತಿರುವ ಆ ಪರ್ವತವನ್ನು ಕಂಡೊಡನೆಯೇ ಆ ಹನುಮಂತನು ಆಶ್ಚರ್ಯಭರಿತನಾದನು. ಆತನು ಆ ಪರ್ವತದಲ್ಲಿ ಜಾಂಬ ವಂತನು ಹೇಳಿದ ಮೂಲಿಕೆಗಳನ್ನು ಹುಡುಕಲಾರಂಭಿಸಿದನು. ಅಲ್ಲಿದ್ದ ಆ ಮಹೌಷಧಿ ಗಳೆಲ್ಲವೂ ಅರ್ಥಿಯಾಗಿ ಬಂದಿರುವ ಆ ಹನುಮಂತನ ಉದ್ದೇಶವನ್ನರಿತು ಕೂಡಲೇ ಅದೃಶ್ಯ ಗಳಾಗಿಹೋದುವು. ಮಹಾತ್ಮನಾದ ಆ ಹನುಮಂತನಾದರೋ ಆ ಮೂಲಿಕೆಗಳನ್ನು ಕಾಣದೆ ಬಹಳವಾಗಿ ಕೋಪಗೊಂಡು ಮಹಾದ್ಭುತವಾಗಿ ಗರ್ಜಿಸಿ ಸಹಿಸಲಾರದೆ ಕೆರಳಿದ ಕಣ್ಣು ಗಳುಳ್ಳವನಾಗಿ ಆ ಪರ್ವತವನ್ನು ಕುರಿತು, "ಅಯ್ಯಾ! ಪರ್ವತನೇ! ಇದೇನಿದು? ನೀನು

"ಕಿಮೇತದೇವಂ ಸುವಿನಿಶ್ಚಿತಂ ತೇ ಯದ್ರಾಘವೇ ನಾಸಿ ಕೃತಾನುಕಂಪಃ । ಪಶ್ಯಾದ್ಯ ಮದ್ಬಾಹುಬಲಾಭಿಭೂತೋ ವಿಕೀರ್ಣಮಾತ್ಮಾನಮಥೋ ನಗೇಂದ್ರ!" ॥೬೬॥ ಸತಸ್ಯ ಶೃಂಗಂ ಸನಗಂ ಸನಾಗಂ ಸಕಾಂಚನಂ ಧಾತುಸಹಸ್ರಜುಷ್ಟಂ। ವಿಕೀರ್ಣಕೂಟಂ ಜ್ವಲಿತಾಗ್ರಸಾನುಂ ಪ್ರಗೃಹ್ಯ ವೇಗಾತ್ಸಹಸೋನ್ಮಮಾಥ ॥೬೭॥ ಸತಂ ಸಮುತ್ಪಾಟ್ಯ ಖಮುತ್ಪಪಾತ ವಿತ್ರಾಸ್ಯ ಲೋಕಾನ್ ಸಸುರಾಸುರೇಂದ್ರಾನ್ । ಸಂಸ್ತೂಯಮಾನಃ ಖಚರೈರನೇಕೈರ್ಜಗಾಮ ವೇಗಾದ್ಗರುಡೋಗ್ರವೇಗಃ॥೬೮॥ ಸಭಾಸ್ಕರಾಧ್ವಾನಮನುಪ್ರಪನ್ನಸ್ತಂ ಭಾಸ್ಕರಾಭಂ ಶಿಖರಂ ಪ್ರಗೃಹ್ಯ । ಶುಭೌ ತದಾ ಭಾಸ್ಕರಸನ್ನಿಕಾಶೋ

ತಸ್ಮಾತ್ - ಆ ಕಾರಣದಿಂದ, ಏವಂ - ಈ ರೀತಿ, ಏತತ್ - ಈ ಮೂಲಿಕೆಗಳನ್ನು ತೋರಿಸದಿರೋಣವು, ಸುವಿನಿಶ್ಚಿತಂಕಿಂ - ನಿಶ್ಚಯಿಸಲ್ಪಟ್ಟಿತೋ, ಅದ್ಯ - ಈಗ, ಮದ್ಬಾ....ತಃ - ನನ್ನ ಭುಜಬಲ ಪರಾಕ್ರಮದಿಂದ ತಿರಸ್ಕೃತನಾಗಿ, ಅಥ - ಬಳಿಕ, ಆತ್ಮಾನಂ - ನಿನ್ನನ್ನು, ವಿಕೀರ್ಣಂ - ಎರಚಲ್ಪಟ್ಟುದನ್ನಾಗಿ, ಪಶ್ಯ - ನೋಡು. ॥೬೬॥ ಸಃ - ಆ ಆಂಜನೇಯನು, ತಸ್ಯ - ಆ ಪರ್ವತದ, ಸನಗಂ - ಗಿಡಗಳಿಂದೊಡಗೂಡಿದ, ಸನಾಗಂ - ಆನೆಗಳಿಂದೊಡಗೂಡಿದ, ಸಕಾಂಚನಂ - ಭಂಗಾರದಿಂದ ಕೂಡಿದ, ಧಾತು....ಷ್ಟಂ - ಅನೇಕ ಗೈರಿಕಾದಿ ಧಾತುಗಳಿಂದ ವ್ಯಾಪ್ತವಾದ ವಿಕೀರ್ಣಕೂಟಂ - ಎರಚಲ್ಪಟ್ಟ ತುದಿಗಳುಳ್ಳ, ಜ್ವಲಿ....ನುಂ - ಉರಿಯುತ್ತಿರುವ ಮುಂದಣ ತಪ್ಪಲುಗಳುಳ್ಳ, ಶೃಂಗಂ - ಶಿಖರವನ್ನು, ಪ್ರಗೃಹ್ಯ - ಹಿಡಿದುಕೊಂಡು, ಸಹಸಾ - ಜಾಗ್ರತೆಯಾಗಿ, ವೇಗಾತ್ - ವೇಗದಿಂದ, ಉನ್ಮಮಾಥ - ಕಿತ್ತನು. ॥೬೭॥ ಗರುಡೋಗ್ರವೇಗಃ - ಗರುಡನಂತೆ ಭಯಂಕರ ವೇಗವುಳ್ಳ, ಸಃ - ಆ ಹನುಮಂತನು, ತಂ - ಬೆಟ್ಟವನ್ನು, ಸಮುತ್ಪಾಟ್ಯ - ಕಿತ್ತು, ಸಸು....ದ್ರಾನ್ - ದೇವರಾಕ್ಷಸೋತ್ತಮರಿಂದೊಡಗೂಡಿದ, ಲೋಕಾನ್-ಲೋಕಗಳನ್ನು, ವಿತ್ರಾಸ್ಯ - ಹೆದರಿಸಿ, ಖಂ - ಅಂತರಿಕ್ಷವನ್ನು ಕುರಿತು, ಉತ್ಪಪಾತ-ಹಾರಿದನು, ಅನಕೈಃ-ಅನೇಕರಾದ, ಖಚರೈಃ-ದೇವತೆಗಳಿಂದ, ಸಂಸ್ತೂಯಮಾನಃ - ಸ್ತುತಿಸಲ್ಪಟ್ಟವನಾಗಿ, ವೇಗಾತ್ - ವೇಗದಿಂದ, ಜಗಾಮ - ತೆರಳಿದನು. ॥೬೮॥ ತದಾ - ಆ ಕಾಲದಲ್ಲಿ, ರವೇಃ - ಸೂರ್ಯನ, ಸಮೀಪೇ - ಸಮೀಪದಲ್ಲಿ, ಪ್ರತಿ....ಭಃ - ಪ್ರತಿಸೂರ್ಯನಂತೆ ಬೆಳಗುವ, ಸಃ - ಆ ಹನುಮಂತನು, ಭಾಸ್ಕರಾಧ್ವಾನಂ - ಸೂರ್ಯಮಾರ್ಗವನ್ನು, ಅನುಪ್ರಪನ್ನಃ - ಹೊಂದಿ, ಭಾಸ್ಕರಾಭಂ - ಸೂರ್ಯನಂತೆ ಹೊಳೆಯುತ್ತಿರುವ, ತಂಶಿಖರಂ - ಆ ಶೃಂಗವನ್ನು,

---

ಮಾಡಿಕೊಂಡಿರುವ ಸಂಕಲ್ಪವಾದರೂ ಏನು? ನಿನಗೆ ಶ್ರೀರಾಮಮೂರ್ತಿಯಲ್ಲಿ ಸ್ವಲ್ಪವಾದರೂ ದಯೆಯಿಲ್ಲವೆ? ನೋಡು ನೋಡು! ಈಗಲೇ ನನ್ನ ಬಾಹುಗಳಿಂದ ನೀನು ಪುಡಿಪುಡಿಯಾಗಿ ಹೋಗುವೆ" ಎಂದು ನುಡಿದನು. ॥೬೦-೬೬॥ ಆಮೇಲೆ ಆತನು ಮಹಾ ವೃಕ್ಷಗಳಿಂದಲೂ, ಮಹಾ ಗಜಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ಕೂಡಿದ ಆ ಪರ್ವತದ ಶಿಖರವನ್ನೊಡೆದು, ಉರಿಯುತ್ತಿರುವ ತಪ್ಪಲುಗಳುಳ್ಳದನ್ನಾಗಿ ಮಾಡಿ ಆ ಶಿಖರವನ್ನು ಹಿಡಿದೆತ್ತಿ ಮಥಿಸಿಬಿಟ್ಟನು. ಆ ಕೂಡಲೇ ಮಹಾತ್ಮನಾದ ಆ ಹನುಮಂತನು ಶಿಖರ ಸಹಿತವಾದ ಆ ಓಷಧಿಪರ್ವತವನ್ನು ಕೈಯಲ್ಲಿ ಹಿಡಿದೇ ರಾಕ್ಷಸರಿಂದಲೂ, ಅಸುರರಿಂದಲೂ ಕೂಡಿದ ಜಗತ್ತನ್ನೇ ಭೀತಿಗೊಳಿಸುತ್ತಲೂ, ದೇವಗಂಧರ್ವರು ಸ್ತೋತ್ರ ಮಾಡುತ್ತಿರಲು ಮಹೋಗ್ರವಾದ ಗರುಡನ ವೇಗದಿಂದ ಅಂತರಿಕ್ಷಕ್ಕೆ ಹಾರಿ ಹೊರಟನು. ಆಗಲಾ ಹನುಮಂತನು ಸೂರ್ಯಮಾರ್ಗವನ್ನು ಹೊಂದಿ ಸೂರ್ಯಸಮಾನವಾಗಿ ಹೊಳೆ

ರವೇಸ್ಸಮೀಪೇ ಪ್ರತಿಭಾಸ್ಕರಾಭಃ ॥ ೬೯ ॥ ಸತೇನ ಶೈಲೇನ ಭೃಶಂ ರರಾಜ ಶೈಲೋಪಮೋ ಗಂಧವಹಾತ್ಮಜಸ್ತು । ಸಹಸ್ರಧಾರೇಣ ಸಪಾವಕೇನ ಚಕ್ರೇಣ ಖೇ ವಿಷ್ಣುರಿವಾರ್ಪಿತೇನ ॥ ೭೦ ॥ ತಂ ವಾನರಾಃ ಪ್ರೇಕ್ಷ್ಯ ವಿನೇದುರುಚ್ಚೈಸ್ಸತಾನಪಿ ಪ್ರೇಕ್ಷ್ಯ ಮುದಾ ನನಾದ । ತೇಷಾಂ ಸಮುದ್ಘುಷ್ಟರವಂ ನಿಶಮ್ಯ ಲಂಕಾಲಯಾ ಭೀಮತರಂ ವಿನೇದುಃ ॥೭೧॥ ತತೋ ಮಹಾತ್ಮಾ ನಿಪಪಾತ ತಸ್ಮಿನ್ ಶೈಲೋತ್ತಮೇ ವಾನರಸೈನ್ಯಮಧ್ಯೇ। ಹರ್ಯುತ್ತಮೇಭ್ಯಃ ಶಿರಸಾಽಭಿವಾದ್ಯ ವಿಭೀಷಣಂ ತತ್ರ ನಿಷಸ್ವಜೇಚ ॥೭೨॥

ಪ್ರಗೃಹ್ಯ - ತೆಗೆದುಕೊಂಡು, ಭಾಸ್ಕ....ಶಃ - ಸೂರ್ಯನಿಗೆ ಸಮಾನನಾಗಿ, ಬಭೌ - ಹೊಳೆಯುತ್ತಿದ್ದನು ॥ ೬೯ ॥ ಶೈಲೋಪಮಃ - ಪರ್ವತೋಪಮನಾದ, ಗಂಧವಹಾತ್ಮಜಃ - ವಾಯುಪುತ್ರನಾದ, ಸತು - ಆ ಹನುಮಂತನಾದರೆ, ತೇನಶೈಲೇನ - ಆ ಪರ್ವತದಿಂದ, ಖೇ - ಅಂತರಿಕ್ಷದಲ್ಲಿ, ಅರ್ಪಿತೇನ-ಹಿಡಿಯಲ್ಪಟ್ಟ, ಸಹಸ್ರಧಾರೇಣ - ಸಾವಿರ ಕೊನೆಗಳುಳ್ಳ, ಸಪಾವಕೇನ - ಅಗ್ನಿಜ್ವಾಲೆಗಳಿಂದೊಡಗೂಡಿದ, ಚಕ್ರೇಣ - ಚಕ್ರದಿಂದ, ವಿಷ್ಣುರಿವ - ಶ್ರೀಮಹಾವಿಷ್ಣುವಂತೆ, ಭೃಶಂ - ಬಹಳವಾಗಿ, ರರಾಜ - ಹೊಳೆಯುತ್ತಿದ್ದನು. ॥೭೦॥ ವಾನರಾಃ - ಕಪಿಗಳು, ತಂ - ಆ ಹನುಮಂತನನ್ನು, ಪ್ರೇಕ್ಷ್ಯ - ಕಂಡು, ವಿನೇದುಃ - ಕೂಗಿದರು, ಸಃ - ಆ ಹನುಮಂತನು, ತಾನಪಿ - ಅವರನ್ನೂ, ಪ್ರೇಕ್ಷ್ಯ - ಕಂಡು, ಮುದಾ - ಸಂತೋಷದಿಂದ, ಉಚ್ಚೈಃ - ಗಟ್ಟಿಯಾಗಿ, ನನಾದ - ಧ್ವನಿಮಾಡಿದನು, ತೇಷಾಂ - ಆ ವಾನರರ, ಸಮು....ವಂ - ಕೋಲಾಹಲಶಬ್ದವನ್ನು, ನಿಶಮ್ಯ - ಕೇಳಿ, ಲಂಕಾನಿಲಯಾಃ - ಲಂಕಾವಾಸಿಗಳು, ಭೀಮತರಂ ಮಹಾ ಭಯಂಕರವಾಗಿ, ವಿನೇದುಃ - ಕೂಗಿದರು. ॥ ೭೧ ॥ ತತಃ - ಬಳಿಕ, ಮಹಾತ್ಮಾ - ಮಹಾನುಭಾವನಾದ, ಸಃ - ಆ ಹನುಮಂತನು, ತಸ್ಮಿನ್ಶೈಲೋತ್ತಮೇ - ಆ ತ್ರಿಕೂಟಪರ್ವತದಲ್ಲಿ, ವಾನ....ಧ್ಯೇ - ಕಪಿಸೇನೆಯ ಮಧ್ಯದಲ್ಲಿ, ನಿಷಸ್ವಜೇಚ - ಅಪ್ಪಿಕೊಂಡನು. ॥ ೭೨ ॥ ಮಾನು......ತ್ರೌ - ನರಪತಿಯಾದ ದಶರಥರಾಯನಿಗೆ

ಯುತ್ತಿರುವ ಆ ಓಷಧಿಪರ್ವತ ಶಿಖರವನ್ನು ಕೈಯಲ್ಲಿ ಹಿಡಿದು ಸೂರ್ಯಸಮೀಪದಲ್ಲಿರುವ ಮತ್ತೊಬ್ಬ ಸೂರ್ಯನೋ ಎಂಬಂತೆ ಪ್ರಕಾಶಿಸಿದನು. ಗಂಧವಹಾತ್ಮಜನಾದ ಆ ಮಾರುತಿಯು ಆ ಓಷಧಿಪರ್ವತ ಸಹಿತನಾಗಿ ಪರ್ವತೋಪಮನಾಗಿಯೂ, ಅಂತರಿಕ್ಷದಲ್ಲಿ ಅಗ್ನಿಯೊಡಗೂಡಿದ ಸಹಸ್ರ ಧಾರೆಗಳುಳ್ಳ ಚಕ್ರಸಮನ್ವಿತನಾದ ವಿಷ್ಣುವಿನಂತೆಯೂ ವಿರಾಜಿಸುತ್ತಿದ್ದನು. ॥ ೬೨–೭೦ ॥ ಹೀಗೆ ಮಹಾವೇಗದಿಂದ ಪರ್ವತದೊಡನೈದಿ ಬರುತ್ತಿರುವ ಆ ಮಹಾತ್ಮನನ್ನು ಕಂಡು ವಾನರರೆಲ್ಲರೂ ಸಂತೋಷದಿಂದ ಸಿಂಹನಾದ ಮಾಡಿದರು. ಆತನೂ ಸಹ ಅವರನ್ನು ಕಂಡು ಮಹದಾನಂದಭರಿತನಾಗಿ ಸಿಂಹನಾದ ಮಾಡಿದನು. ಆ ವಾನರರ ಮತ್ತು ವಾನರೋತ್ತಮನಾದ ಹನುಮಂತನ ಸಿಂಹನಾದಗಳನ್ನು ಕೇಳಿ ಲಂಕಾನಿವಾಸಿಗಳಾದ ರಾಕ್ಷಸರೆಲ್ಲರೂ ಹೆದರಿ ಬಹು ಭಯಂಕರವಾಗಿ ಅರಚಿಕೊಂಡರು. ಆ ತರುವಾಯ ಮಹಾತ್ಮನಾದ ಹನುಮಂತನು ಆ ಪರ್ವತದೊಡನೆಯೇ ಆ ತ್ರಿಕೂಟಾಚಲದಲ್ಲಿ

ತಾವಪ್ಯುಭೌ ಮಾನುಷರಾಜಪುತ್ರೌ ತಂ ಗಂಧಮಾಘ್ರಾಯ ಮಹೌಷಧೀನಾಂ । ಬಭೂವತುಸ್ತತ್ರ ತದಾ ವಿಶಲ್ಯಾವುತ್ತಸ್ಥುರನ್ಯೇಚ ಹರಿಪ್ರವೀರಾಃ ॥ ೭೩ ॥ ಸರ್ವೇ ವಿಶಲ್ಯಾ ವಿರುಜಃ ಕ್ಷಣೇನ ಹರಿಪ್ರವೀರಾ ನಿಹತಾಶ್ಚ ಯೇಸ್ಯುಃ । ಗಂಧೇನ ತಾಸಾಂ ಪ್ರವರೌಷಧೀನಾಂ ಸುಪ್ತಾ ನಿಶಾಂತೇಷ್ವಿವ ಸಂಪ್ರಬುದ್ಧಾಃ ॥೭೪॥ ಯದಾ ಪ್ರಭೃತಿ ಲಂಕಾಯಾಂ ಯುದ್ಧ್ಯಂತೇ ಕಪಿರಾಕ್ಷಸಾಃ । ತದಾಪ್ರಭೃತಿ ಮಾನಾರ್ಥಮಾಜ್ಞಯಾ ರಾವಣಸ್ಯಚ ॥೭೫॥ ಯೇ ಹನ್ಯಂತೇ ರಣೇ ತತ್ರ ರಾಕ್ಷಸಾಃ ಕಪಿಕುಂಜರೈಃ । ಹತಾ ಹತಾಸ್ತು ಕ್ಷಿಪ್ಯಂತೇ ಸರ್ವ ಏವತು ಸಾಗರೇ ॥ ೭೬ ॥

ಕುವರರಾದ, ತಾವುಭಾವಪಿ ಆ ಶ್ರೀರಾಮಲಕ್ಷ್ಮಣರಿಬ್ಬರೂ, ಮಹೌಷಧೀನಾಂ-ಮಹಾ ಮೂಲಿಕೆಗಳ, ತಂಗಂಧಂ - ಆ ವಾಸನೆಯನ್ನು, ಆಘ್ರಾಯ - ಮೂಸಿನೋಡಿ, ತತ್ರ - ಆ ರಣರಂಗದಲ್ಲಿ, ತದಾ - ತತ್‌ಕ್ಷಣದಲ್ಲಿ, ವಿಶಲ್ಯೌ - ಪ್ರಣರಹಿತರು, ಬಭೂವತುಃ - ಆದರು, ಅನ್ಯೇ ಇತರರಾದ, ಹರಿವೀರಾಶ್ಚ - ಇತರ ವಾನರೋತ್ತಮರೂ, ಉತ್ತಸ್ಥತುಃ - ಎದ್ದರು. ॥ ೭೩ ॥ (ತತ್ರ - ಆ ರಣರಂಗದಲ್ಲಿ,) ಯೇ ಹರಿಪ್ರವೀರಾಃ - ಯಾವ ವಾನರೋತ್ತಮರು, ನಿಹತಾಃ - ಸಂಹೃತರು, ಸ್ಯುಃ - ಆಗಿದ್ದರೋ, ತೇಸರ್ವೇ - ಅವರೆಲ್ಲರೂ, ತಾಸಾಂ - ಆ, ಪ್ರವ......ನಾಂ - ಉತ್ತಮವಾದ ಮೂಲಿಕೆಗಳ, ಗಂಧೇನ - ವಾಸನೆಯಿಂದ, ವಿರುಜಃ - ರೋಗರಹಿತರಾಗಿ, ವಿಶಲ್ಯಾಃ - ಶಲ್ಯರಹಿತರಾಗಿ, ನಿಶಾಂತೇಷು - ಪ್ರಾತಃಕಾಲದಲ್ಲಿ, ಸುಪ್ತಾಃ - ಮಲಗಿದವರಂತೆ, ಸಂಪ್ರಬುದ್ಧಾ ಇವಃ - ಎಚ್ಚರಗೊಂಡರು. ॥ ೭೪ ॥ ಯದಾಪ್ರಭೃತಿ - ಯಾವ ಕಾಲ ಮೊದಲ್ಗೊಂಡು, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಯೇ ಕಪಿರಾಕ್ಷಸಾಃ - ಯಾವ ವಾನರ ರಾಕ್ಷಸರು, ಯುದ್ಧ್ಯಂತೇ - ಕಾಳಗ ಮಾಡಿದರೋ, ತದಾಪ್ರಭೃತಿ - ಅದು ಮೊದಲ್ಗೊಂಡು, ರಾವಣಸ್ಯ - ರಾವಣನ, ಆಜ್ಞಯಾ - ಅಪ್ಪಣೆಯಿಂದ, ಮಾನಾರ್ಥಂ - ಲೆಖ್ಖಮಾಡಿಯಾರೆಂಬ ಕಾರಣದಿಂದ, ತತ್ರ - ಆ ಸೇನೆಯಲ್ಲಿ, ರಣೇ - ಕಾಳಗದಲ್ಲಿ, ಯೇ ರಾಕ್ಷಸಾಃ- ಯಾವ ಅಸುರರು, ಕಪಿಕುಂಜರೈಃ - ವಾನರೋತ್ತಮರಿಂದ, ಹನ್ಯಂತೇ - ಹೊಡೆಯಲ್ಪಡುತ್ತಾರೋ, ಹತಾಹತಾಸ್ತು - ಹೊಡೆಯಲ್ಪಟ್ಟ, ಸರ್ವಏವ - ಸಮಸ್ತರೂ, ಸಾಗರೇ - ಸಮುದ್ರದಲ್ಲಿ, ಕ್ಷಿಪ್ಯಂತೇ-

ಧುಮ್ಮಿಕ್ಕಿ ಹಿರಿಯರಾದ ವಾನರೋತ್ತಮರಿಗೆ ನಮಸ್ಕಾರಮಾಡಿ, ವಿಭೀಷಣನನ್ನು ಆಲಿಂಗಿಸಿಕೊಂಡನು. ಆಗ ರಾಜಪುತ್ರರಾದ ಶ್ರೀರಾಮಲಕ್ಷ್ಮಣರೀರ್ವರೂ ಆ ವನೌಷಧಿಗಳ ಗಂಧವನ್ನಾಘ್ರಾಣಿಸಿ ವಿಶಲ್ಯರಾಗಿ ಮೇಲಕ್ಕೆದ್ದರು. ವಾನರವೀರರೆಲ್ಲರೂ ಎಚ್ಚೆತ್ತರು. ಉತ್ತಮಗಳಾದ ಆ ಮೂಲಿಕೆಗಳ ಪ್ರಭಾವದಿಂದ ಎಲ್ಲರೂ ಏನೊಂದು ಬಾಧೆಯೂ ಇಲ್ಲದವರಾಗಿ ನಿದ್ರೆಯಿಂದೆಚ್ಚತ್ತವರಂತೆ ಸ್ವಸ್ಥರಾಗಿ ಎದ್ದು ನಿಂತರು. ಇಷ್ಟು ಮಾತ್ರವಲ್ಲದೆ ರಾಕ್ಷಸರೊಡನೆ ಯುದ್ಧಮಾಡಲಾರಂಭಿಸಿದಂದಿನಿಂದ ಮೊದಲ್ಗೊಂಡು ಮಡಿದ ವಾನರರೂ ಬದುಕಿ ಮೊದಲಿನಂತೆಯೇ ಬಲಪರಾಕ್ರಮಗಳುಳ್ಳವರಾದರು. ಅದುವರೆಗೆ ಮಡಿದ ರಾಕ್ಷಸರೆಲ್ಲರನ್ನೂ, ಶತ್ರುಪಕ್ಷದವರಿಗೆ ಲೆಕ್ಕ ಸಿಕ್ಕೀತೆಂದು ಶಂಕಿಸಿ, ರಾವಣಾಜ್ಞೆಯಿಂದ ಅಲ್ಲಿದ್ದ

ತತೋ ಹರಿರ್ಗಂಧವಹಾತ್ಮಜಸ್ತು
ತಮೋಷಧೀಶೈಲ ಮುದಗ್ರವೀರ್ಯಃ ।
ನಿನಾಯ ವೇಗಾದ್ಧಿಮವಂತಮೇವ
ಪುನಶ್ಚ ರಾಮೇಣ ಸಮಾಜಗಾಮ ॥ ೭೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಸ್ಸಪ್ತತಿತಮಸ್ಸರ್ಗಃ.

ಎತ್ತಿಹಾಕಲ್ಪಡುತ್ತಿದ್ದರು. ॥ ೭೫-೭೬ ॥ ತತಃ - ಬಳಿಕ, ಉದಗ್ರವೀರ್ಯಃ - ಉತ್ತಮ ಪರಾಕ್ರಮವುಳ್ಳ, ಗಂಧವಹಾತ್ಮಜಃ - ವಾಯುಪುತ್ರನಾದ, ಹರಿಃ - ಆಂಜನೇಯನು, ತಮೋಷಧೀಶೈಲಂ - ಆ ಮಹೌಷಧಿಪರ್ವತವನ್ನು, ತಂಹಿಮವಂತಮೇವ - ಆ ಹಿಮವಂತವನ್ನೆ, ನಿನಾಯ - ಹೊಂದಿಸಿದನು, ಪುನಶ್ಚ - ಮತ್ತೂ. ರಾಮೇಣ - ಶ್ರೀರಾಮನೊಡನೆ, ಸಮಾಜಗಾಮ - ಸೇರಿದನು. ॥ ೭೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುಸ್ಸಪ್ತತಿತಮಸ್ಸರ್ಗಃ.

ರಾಕ್ಷಸಭಟರು ಸಮುದ್ರದಲ್ಲೆತ್ತಿಹಾಕಿಬಿಟ್ಟದ್ದರು. ಅದರಿಂದ ಅವರು ಬದುಕಲಿಲ್ಲ. ಆಗ ವಾಯುಪುತ್ರನೂ, ಅಪರಿಮಿತ ಬಲಪರಾಕ್ರಮಗಳುಳ್ಳವನೂ ಆದ ಆ ಹನುಮಂತನಾದರೋ ಆ ಮಹೌಷಧಿ ಪರ್ವತವನ್ನು ಪುನಃ ಹಿಮವತ್ಪರ್ವತದಲ್ಲಿರಿಸಿ ಹಿಂತಿರುಗಿ ಬಂದನು. ॥ ೭೦-೭೭ ॥

ಇಂತಿದು ಓಷಧಿಪರ್ವತಾನಯನ, ಶ್ರೀರಾಮಲಕ್ಷ್ಮಣ ಸಹಿತ ವಾನರಸೇನಾ ಸಂಜೀವನವೆಂಬ ಎಪ್ಪತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚಸಪ್ತತಿತಮಸ್ಸರ್ಗಃ

ತತೋಽಬ್ರವೀನ್ಮಹಾತೇಜಾ ಸುಗ್ರೀವೋ ವಾನರಾಧಿಪಃ । ಅರ್ಥ್ಯಂ ವಿಜ್ಞಾಪಯಂಶ್ಚಾಪಿ ಹನುಮಂತಮಿದಂ ವಚಃ ॥ ೧ ॥ "ಯತೋ ಹತಃ ಕುಂಭಕರ್ಣಃ ಕುಮಾರಾಶ್ಚ ನಿಷೂದಿತಾಃ । ನೇದಾನೀಮುಪನಿರ್ಹಾರಂ ರಾವಣೋ ದಾತುಮರ್ಹತಿ ॥ ೨ ॥ ಯೇ ಯೇ ಮಹಾಬಲಾಸ್ಸಂತಿ ಲಘವಶ್ಚ ಪ್ಲವಂಗಮಾಃ । ಲಂಕಾಮಭ್ಯುತ್ಪತಂತ್ವಾಂಶು ಗೃಹ್ಯೋಲ್ಕಾಃ ಪ್ಲವಗರ್ಷಭಾಃ । (ಹರಯೋ ಹರಿಸಂಕಾಶಃ ಪ್ರದಗ್ಧುಂ ರಾವಣಾಲಯಂ)" ॥ ೩ ॥ ತತೋಽಸ್ತಂಗತ ಆದಿತ್ಯೇ ರೌದ್ರೇ ತಸ್ಮಿನ್ನಿಶಾಮುಖೇ । ಲಂಕಾಮಭಿಮುಖಾ ಸ್ಸೋಲ್ಕಾ ಜಗ್ಮುಸ್ತೇ ಪ್ಲವಗರ್ಷಭಾಃ ॥ ೪ ॥ ಉಲ್ಕಾಹಸ್ತೈ

ತತಃ - ಬಳಿಕ, ಮಹಾತೇಜಾಃ - ಮಹಾ ತೇಜೋವಂತನಾದ, ವಾನರಾಧಿಪಃ - ಕಪಿರಾಜನಾದ, ಸುಗ್ರೀವಃ - ಸುಗ್ರೀವನು, ವಿಜ್ಞಾಪಯನ್ - ಶ್ರೀರಾಮನಿಗೆ ವಿಜ್ಞಾಪಿಸಿ, ಹನೂಮಂತಂ - ಹನುಮಂತನನ್ನು ಕುರಿತು, ಅರ್ಥ್ಯಂ - ಅರ್ಥಯುಕ್ತವಾದ, ಇದಂವಚಃ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಯತಃ - ಯಾವ ಕಾರಣದಿಂದ, ಕುಂಭಕರ್ಣಃ - ಕುಂಭಕರ್ಣನು, ಹತಃ - ಸಂಹೃತನಾದನೋ, ಕುಮಾರಾಶ್ಚ - ಮಕ್ಕಳೂ ಸಹಾ, ನಿಷೂದಿತಾಃ - ಹೊಡೆಯಲ್ಪಟ್ಟರೋ, ತಸ್ಮಾತ್ - ಆ ಕಾರಣದಿಂದ, ಇದಾನೀಂ - ಈಗ, ರಾವಣಃ - ರಾವಣನು, ಉಪನಿರ್ಹಾರಂ - ಹೊರಗೆ ಬಂದು ಕಾಳಗವನ್ನು (ಗೋ) ಗ್ರಾಮಸಂರಕ್ಷಣೆಯನ್ನು, ದಾತುಂ-ಕೊಡುವದಕ್ಕೆ, ನಾರ್ಹತಿ-ಯೋಗ್ಯನಾಗಲಾರನು. ॥ ೨ ॥ ಮಹಾಬಲಾಃ - ಒಹು ಬಲವಂತರಾದ, ಲಘವಃ - ಕರಚರಣಾದಿ ಲಾಘವವುಳ್ಳ, ಯೇಯೇಪ್ಲವಂಗಮಾಃ - ಯಾವ ಯಾವ ಕಪಿಗಳು, ಸಂತಿ - ಇರುವರೋ, ತೇಪ್ಲವಗರ್ಷಭಾಃ - ಆ ವಾನರೋತ್ತಮರು, ಉಲ್ಕಾಃ - ಕೊಳ್ಳಿಗಳನ್ನು, ಗೃಹ್ಯ - ತೆಗೆದುಕೊಂಡು, ಆಶು - ಜಾಗ್ರುತೆಯಾಗಿ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಅಭ್ಯುತ್ಪತಂತು - ಅಭಿಮುಖವಾಗಿ ಹಾರಿಹೋಗಲಿ. ॥೩॥ ತತಃ - ಬಳಿಕ, ಆದಿತ್ಯೇ - ಸೂರ್ಯನು, ಅಸ್ತಂಗತೇ - ಅಸ್ತಮಯಪನ್ನೈದಿದವನಾಗಲು, ರೌದ್ರೇ ಭಯಂಕರವಾದ, ತಸ್ಮಿನ್ನಿಶಾಮುಖೇ-ಆ ರಾತ್ರಿಕಾಲದಲ್ಲಿ, ತೇಪ್ಲವಗರ್ಷಭಾಃ-ಆ ವಾನರಶ್ರೇಷ್ಠರು, ಸೋಲ್ಕಾಃ-ಕೊಳ್ಳಿಗಳಿಂದೊಡಗೂಡಿ, ಲಂಕಾಂ-ಲಂಕಾಪುರಿಗೆ, ಅಭಿಮುಖಾಃ-ಅಭಿಮುಖವಾಗಿ, ಜಗ್ಮುಃ - ತೆರಳಿದರು. ॥ ೪ ॥ ಉಲ್ಕಾಹಸ್ತೈಃ - ಕೊಳ್ಳಿಗಳೇ ಹಸ್ತಗಳಲ್ಲುಳ್ಳ,

---

ಆ ತರುವಾಯ ಮಹಾ ತೇಜಸ್ವಿಯಾದ ಸುಗ್ರೀವನು ಶ್ರೀರಾಮಮೂರ್ತಿಗೆ ಮಹಾರ್ಥಗರ್ಭಿತವಾದ ಮಾತುಗಳನ್ನು ವಿಜ್ಞಾಪಿಸಿ, ಹನುಮಂತನನ್ನು ಕುರಿತು, "ಅಯ್ಯಾ ಕಪಿಶ್ರೇಷ್ಠನೇ! ತಮ್ಮನಾದ ಕುಂಭಕರ್ಣನೂ, ಮಕ್ಕಳೂ ರಣರಂಗದಲ್ಲಿ ಮಡಿದಿರುವುದರಿಂದ ಆ ರಾವಣನು ಪಟ್ಟಣದಿಂದ ಹೊರಗೆ ಬಂದು ನಮ್ಮೊಡನೆ ಯುದ್ಧಮಾಡಲಾರನು. ಆದುದರಿಂದ ಈಗ ಒಳ್ಳೆಯ ಪಟುಗಳಾದ ವಾನರರೆಲ್ಲರೂ ಕೊಳ್ಳಿಗಳನ್ನು ತೆಗೆದುಕೊಂಡು (ಲಂಕಾನಗರವನ್ನೇ ಸುಡಲು) ಹೊರಡಲಿ" ಎಂದು ಹೇಳಿದನು. ಕೂಡಲೇ ಆ ಸಂಜೆಯಲ್ಲಿ ಕಪಿಗಳೆಲ್ಲರೂ ಉಲ್ಕಾಹಸ್ತರಾಗಿ ಲಂಕೆಗೆ ಹೊರಟರು. ॥ ೧–೪ ॥ ಹೀಗೆ ಆ ವಾನರರ

ಹರಿಗಣೈಸ್ಸರ್ವತಸ್ಸಮಭಿದ್ರುತಾಃ । ಆರಕ್ಷಸ್ಥಾ ವಿರೂಪಾಕ್ಷಾಸ್ಸಹಸಾ ವಿಪ್ರ ದುದ್ರುವುಃ ॥೫॥ ಗೋಪುರಾಟ್ಟಪ್ರತೋಳೀಷು ಚರ್ಯಾಸು ವಿವಿಧಾಸುಚ । ಪ್ರಾಸಾದೇಷುಚ ಸಂಹೃಷ್ಟಾಸ್ಸಸೃಜುಸ್ತೇ ಹುತಾಶನಂ । ತೇಷಾಂ ಗೃಹಸಹಸ್ರಾಣಿ ದದಾಹ ಹುತಭುಕ್ತದಾ ॥೬॥ ಪ್ರಾಸಾದಾಃ ಪರ್ವತಾಕಾರಾಃ ಪತಂತಿ ಧರಣೀತಲೇ । ಅಗರುರ್ದಹ್ಯತೇ ತತ್ರ ಪರಂಚ ಹರಿಚಂದನಂ ॥ ೭ ॥ ಮೌಕ್ತಿಕಾಮಣಯಃ ಸ್ನಿಗ್ಧಾ ವಜ್ರಂ ಚಾಪಿ ಪ್ರವಾಳಕಂ । ಕ್ಷೌಮಂ ಚ ದಹ್ಯತೇ ತತ್ರ ಕೌಶೇಯಂ ಚಾಪಿ ಶೋಭನಂ ॥೮॥

ಹರಿಗಣೈಃ - ವಾನರಸಮೂಹಗಳಿಂದ, ಸರ್ವತಃ - ಸರ್ವಪ್ರಕಾರದಲ್ಲಿಯೂ, ಸಮಭಿದ್ರುತಾಃ - ಅಟ್ಟಿ ಬರಲ್ಪಟ್ಟ, ಆರಕ್ಷಸ್ಥಾಃ - ಸೇನಾನಿವೇಶಸ್ಥಾನದಲ್ಲಿರುವ, ವಿರೂಪಾಕ್ಷಾಃ - ವಿಕಾರವಾದ ಕಣ್ಣು ಗಳುಳ್ಳ ರಾಕ್ಷಸರು, ಸಹಸಾ - ಜಾಗ್ರತೆಯಾಗಿ, ವಿಪ್ರದುದ್ರುವುಃ - ಓಡಿದರು. ॥ ೫ ॥ ತೇ - ಆ ವಾನರರು, ಸಂಹೃಷ್ಟಾಃ - ಸಂತೋಷಗೊಂಡವರಾಗಿ, ಗೋಪು....ಷು - ಊರೂಬಾಗಿಲುಗಳ ಮೇಲೆಯೂ, ಕೋಟೆಯಮೇಲೆ ಯುದ್ಧ ಮಾಡತಕ್ಕವರು ನಿಲ್ಲುವ ಪ್ರದೇಶಗಳಲ್ಲಿಯೂ, ಬೀದಿಗಳಲ್ಲಿಯೂ, ವಿವಿಧಾಸು - ನಾನಾಬಗೆಗಳಾದ, ಚರ್ಯಾಸು - ಸಂದಿಗಳಲ್ಲಿಯೂ, ಪ್ರಾಸಾದೇಷುಚ - ಉಪ್ಪರಿಗೆ ಗಳಲ್ಲಿಯೂ, ಹುತಾಶನಂ - ಅಗ್ನಿಯನ್ನು, ಸಸೃಜುಃ - ಬಿಟ್ಟರು, ತದಾ - ಆ ಕಾಲದಲ್ಲಿ, ಹುತಭುಕ್ ಅಗ್ನಿಯು, ತೇಷಾಂ - ಆ ರಕ್ಕಸರ, ಗೃಹಸಹಸ್ರಾಣಿ - ಸಾವಿರಾರು ಮನೆಗಳನ್ನು, ದದಾಹ - ದಹಿಸಿದನು. ॥೬॥ ಪರ್ವತಾಕಾರಾಃ - ಪರ್ವತಾಕಾರಗಳಾದ, ಪ್ರಾಸಾದಾಃ - ಆ ಉಪ್ಪರಿಗೆ ಗಳು, ಧರಣೀತಲೇ - ಭೂಪ್ರದೇಶದಲ್ಲಿ, ಪತಂತಿ - ಬೀಳುತ್ತಿದ್ದವು, ತತ್ರ - ಆ ಪಟ್ಟಣದಲ್ಲಿ, ಅಗರುಃ - ಕೃಷ್ಣಾಗರುವು, ಪರಂ - ಉತ್ತಮವಾದ, ಹರಿಚಂದನಂಚ - ಶ್ರೀಗಂಧವೂ, ದಹ್ಯತೇ - ದಹಿಸಲ್ಪಡುತ್ತಿತ್ತು. ॥೭॥ ಮೌಕ್ತಿಕಾಃ - ಮುತ್ತುಗಳೂ, ಸ್ನಿಗ್ಧಾಃ - ಮನೋಹರವಾದ, ಮಣಯಶ್ಚ- ರತ್ನಗಳೂ, ವಜ್ರಂಚಾಪಿ - ವಜ್ರಗಳೂ, ಪ್ರವಾಳಕಂಚಾಪಿ - ಹವಳಗಳೂ, ಕ್ಷೌಮಂ - ದುಕೂಲ ಗಳೂ, ಶೋಭನಂ - ಮನೋಹರವಾದ, ಕೌಶೇಯಂಚಾಪಿ - ಪಟ್ಟುವಸ್ತ್ರಗಳನ್ನೂ, ತತ್ರ - ಆ ಲಂಕಾ ಪಟ್ಟಣದಲ್ಲಿ, ದಹ್ಯತೇ - ದಹಿಸಲ್ಪಡುತ್ತಿದ್ದಿತು, ವಿವಿಧಂ - ನಾನಾವಿಧವಾದ, ಆವಿಕಂ - ಆಡಿನ ಬಂಡದಿಂದ ನಿರ್ಮಿತವಾದ ಕಂಬಳಿಯೂ, ಶೌರ್ಣಂ - ಮೇಷಾದಿಗಳ ರೋಮಗಳಿಂದ ಮಾಡಲ್ಪಟ್ಟ

ಗುಂಪುಗಳು ಕೊಳ್ಳಿಗಳನ್ನು ಹಿಡಿದು ಲಂಕೆಗೆ ನುಗ್ಗಿ ಅಲ್ಲಿ ಕಾವಲಿದ್ದ ವಿಕಾರಸ್ವರೂಪರಾದ ರಾಕ್ಷಸರೆಲ್ಲರನ್ನೂ ಅಟ್ಟಿಬರಲು ಅವರೆಲ್ಲರೂ ದಿಕ್ಕೆಟ್ಟು ಓಡಿಹೋದರು. ಆ ತರುವಾಯ ಆ ವಾನರರೆಲ್ಲರೂ, ಗೋಪುರಗಳಲ್ಲಿಯೂ, ಬೀದಿಗಳಲ್ಲಿಯೂ, ನಾನಾವಿಧಗಳಾದ ರಕ್ಷಾಸ್ಥಾನ ಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ ಬೆಂಕಿಯನ್ನಿಟ್ಟರು. ಆ ಬೆಂಕಿಯು ರಾಕ್ಷಸರ ಮನೆಗಳೆಲ್ಲವನ್ನೂ ಸುಡಲಾರಂಭಿಸಿತು. ಆ ಸಮಯದಲ್ಲಿ ಪರ್ವತಕ್ಕೆ ಸಮಾನವಾದ ಗೃಹಗಳೆಲ್ಲವೂ ಸುಟ್ಟು ಕೆಳಕ್ಕೆ ಬಿದ್ದುವು. ಆ ಮನೆಗಳಲ್ಲಿದ್ದ ಅಗರು ಚಂದನಗಳೇ ಮೊದ ಲಾದವೂ ಸುಟ್ಟುಹೋದುವು. ಆ ಪಟ್ಟಣದಲ್ಲಿದ್ದ ಮುತ್ತುಗಳೂ, ಮೃದುಮಣಿಗಳೂ, ವಜ್ರ ಗಳೂ. ಹವಳಗಳೂ, ಪಟ್ಟು ವಸ್ತ್ರಗಳೂ, ಬಹು ಶುಭಕರಗಳಾದ ಕೌಶೇಯಗಳೂ, ನಾನಾ ವಿಧಗಳಾದ ಕಂಬಳಿಗಳೂ, ವಿವಿಧ ಭೂಷಣ ಭಾಂಡಗಳೂ, ವಿವಿಧ ಸ್ಥಳಗಳೂ ಗಜಶ್ರೇಷ್ಠ ಗಳ ಕಂಠಾಭರಣಗಳೂ, ರಥಗಳೂ ಎಲ್ಲವೂ ಸುಟ್ಟು ಬೂದಿಯಾಗಿ ಹೋದುವು. ಇಷ್ಟೆ ಯಲ್ಲದೆ, ಅದೇ ಸಮಯದಲ್ಲಿಯೇ ಯೋಧರ ಕವಚಗಳೂ, ಖಡ್ಗಗಳೂ, ಧನುಸ್ಸುಗಳೂ,

ಆವಿಕಂ ವಿವಿಧಂ ಶೌರ್ಣಂ ಕಾಂಚನಂ ಭಾಂಡಮಾಯುಧಂ । ನಾನಾವಿಕೃತಸಂಸ್ಥಾನಂ ವಾಜಿಭಾಂಡಪರಿಚ್ಛದಂ ॥೯॥ ಗಜಗ್ರೈವೇಯ ಕಕ್ಷ್ಯಾಶ್ಚ ರಥಭಾಂಡಾಶ್ಚ ಸಂಸ್ಕೃತಾಃ। ತನುತ್ರಾಣಿಚ ಯೋಧಾನಾಂ ಹಸ್ತ್ಯಶ್ವಾನಾಂಚ ವರ್ಮಚ ॥೧೦॥ ಖಡ್ಗಾ ಧನೂಂಷಿ ಜ್ಯಾಬಾಣಾ ಸ್ತೋಮರಾಂಕುಶಶಕ್ತಯಃ। ರೋಮಜಂ ವಾಲಜಂ ಚರ್ಮ ವ್ಯಾಘ್ರಜಂ ಭಾಂಡಜಂ ಬಹು ॥೧೧॥ ಮುಕ್ತಾಮಣಿವಿಚಿತ್ರಾಂಶ್ಚ ಪ್ರಾಸಾದಾಂಶ್ಚ ಸಮಂತತಃ । ವಿವಿಧಾನಸ್ತ್ರಸಂಯೋಗಾನಗ್ನಿರ್ದಹತಿ ತತ್ರ ವೈ ॥೧೨॥ ನಾನಾವಿಧಾ ನ್ ಗೃಹಚ್ಛಂದಾನ್ ದದಾಹ ಹುತಭುಕ್ತದಾ । ಆವಾಸಾನ್ ರಾಕ್ಷಸಾನಾಂಚ ಸರ್ವೇಷಾಂ ಗೃಹಗರ್ಧಿನಾಂ ॥ ೧೩ ॥ ಹೇಮಚಿತ್ರತನುತ್ರಾಣಾಂ ಸ್ರಗ್ದಾಮಾಂಬರಧಾರಿಣಾಂ । ಶೀಧುಪಾನಚ

ಕಂಬಳಿ ಮೊದಲಾದದ್ದು, ಕಾಂಚನಂ - ಸುವರ್ಣವಿಕಾರವಾದ, ನಾನಾ....ನಂ - ಅನೇಕ ಬಗೆಗಳಾದ ವಿಚಿತ್ರ ವಿನ್ಯಾಸಗಳುಳ್ಳ, ಭಾಂಡಂ - ಉಪಕರಣ ಸಾಮಗ್ರಿಯು, ವಾಜಿ....ದಂ - ಕುದುರೆಗಳ ಒಡವೆಗಳೂ, ಲಗಾಮುಗಳೇ ಮೊದಲಾದ ಸಾಮಗ್ರಿಯೂ, ಸಂಸ್ಕೃತಾಃ - ಚನ್ನಾಗಿ ಕಟ್ಟಲ್ಪಟ್ಟ, ಗಜಾ....ಶ್ಚ - ಆನೆಗಳ ಕಂಠಾಭರಣಗಳೂ, ತಂಗುಗಳೂ, ರಥಭಾಂಡಾಶ್ಚ - ರಥೋಪಕರಣಗಳೂ, ಯೋಧಾನಾಂ - ಭಟರ, ತನುತ್ರಾಣಿಚ - ಕವಚಗಳೂ, ಹಸ್ತ್ಯಶ್ವಾನಾಂಚ - ಆನೆಗಳ ಮತ್ತು ಕುದುರೆಗಳ, ವರ್ಮಚ - ಕವಚಗಳೂ, ಖಡ್ಗಾಃ - ಕತ್ತಿಗಳೂ, ಧನೂಂಷಿ - ಬಿಲ್ಲುಗಳೂ, ಜ್ಯಾಃ - ಹೆದೆಗಳೂ, ಬಾಣಾಃ - ಬಾಣಗಳೂ, ತೋಮ....ಯಃ - ಈಟಿಗೋಲುಗಳೂ, ಅಂಕುಶಾಯುಧಗಳೂ ಶಕ್ತ್ಯಾಯುಧಗಳೂ, ರೋಮಜಂ - ರೋಮಗಳಿಂದ ಮಾಡಿದ ಥಾವಳಿ ಮುಂತಾದ್ದು, ವಾಲಜಂ - ಚಾಮರಗಳು ಮೊದಲಾದ್ದು, ವ್ಯಾಘ್ರಜಂ - ಹುಲಿಗಳಿಂದ ಹುಟ್ಟಿದ, ಚರ್ಮ - ತೊಗಲು, ಬಹು - ಅನೇಕ ಬಗೆಯಾದ, ಅಂಗಜಂ - ಮೃಗಾದಿಗಳಿಂದ ಹುಟ್ಟಿದ ಕತ್ತುರಿ ಮೊದಲಾದ ದ್ರವ್ಯಗಳು, ದಹ್ಯತೇ - ದಹಿಸಲ್ಪಡುತ್ತಿದ್ದವು. ॥ ೮-೧೧ ॥ ತತ್ರ ವೈ - ಲಂಕಾಪಟ್ಟಣದಲ್ಲಿಯಾದರೆ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಅಗ್ನಿಃ - ಅಗ್ನಿಯು, ಮುಕ್ತಾ....ಶ್ಚ - ಮುತ್ತುಗಳಿಂದಲೂ, ರತ್ನಗಳಿಂದಲೂ ಚಿತ್ರವರ್ಣವುಳ್ಳ, ಪ್ರಾಸಾದಾಂಶ್ಚ - ಉಪ್ಪರಿಗೆಗಳನ್ನೂ, ವಿವಿಧಾನ್ - ನಾನಾಬಗೆಗಳಾದ, ಅಸ್ತ್ರಸಂಯೋಗಾನ್ - ಅಸ್ತ್ರಸಮೂಹಗಳನ್ನೂ, ದಹತಿ - ದಹಿಸಿದನು. ॥೧೨॥ ತದಾ - ಆ ಕಾಲದಲ್ಲಿ, ಹುತಭುಕ್ - ಅಗ್ನಿಯು, ನಾನಾವಿಧಾನ್ - ಅನೇಕ ವಿಧಗಳಾದ, ಗೃಹಚ್ಛಂದಾನ್ - ಸ್ವಸ್ತಿಕಾದ್ಯಾಕಾರಗಳುಳ್ಳ ಮನೆಗಳನ್ನು, ದದಾಹ - ದಹಿಸಿದನು, ಹೇಮ....ಣಾಂ - ಬಂಗಾರದ ರೇಖೆಗಳಿಂದಾಶ್ಚರ್ಯಕರವಾದ ಕವಚಗಳುಳ್ಳ, ಸ್ರಗ್ದಾ....ಣಾಂ - ರುವ್ವಿನ ಸರಗಳೂ, ಮುತ್ತಿನ ಸರಗಳೂ ಇವ್ರಗಳನ್ನು ಧರಿಸಿರುವ, ಶೀಧು....ಣಾಂ -

ಬಾಣಗಳೊಡಗೂಡಿದ ಬತ್ತಳಿಕೆಗಳೂ, ತೋಮರಾಂಕುಶ ಕಂಬಳಿಗಳೇ ಮೊದಲಾದವುಗಳೂ, ಚಮರಾದಿಗಳೂ, ವ್ಯಾಘ್ರಾಜಿನಗಳೂ, ಕಸ್ತೂರಿಯೇ ಮೊದಲಾದ ಪರಿಮಳ ದ್ರವ್ಯಗಳೂ, ಮುತ್ತುರತ್ನಗಳ ಉಪ್ಪರಿಗೆಗಳೂ ಸುಟ್ಟು ಬೂದಿಯಾಗಿ ಹೋದುವು. ॥ ೫-೧೦ ॥ ಆ ವಾನರರು ಹೊತ್ತಿಸಿದ ಬೆಂಕಿಯು ಲಂಕಾನಗರದಲ್ಲಿನ ಭವ್ಯಭವನಗಳಲ್ಲೆಲ್ಲ ವ್ಯಾಪಿಸಿತಲ್ಲದೆ, ಸ್ವಸ್ತಿಕಾದಿ ವಿನ್ಯಾಸಗಳುಳ್ಳ ಅವುಗಳೆಲ್ಲವನ್ನೂ ಸುಟ್ಟಿತು. ಅನೇಕ ರಾಕ್ಷಸಗೃಹಸ್ಥರ ಮನೆಗಳೆಲ್ಲವೂ ಸುಟ್ಟು ನೆಲಸಮವಾದುವು. ಸ್ವರ್ಣಮಯಗಳೂ, ಚಿತ್ರವಿಚಿತ್ರಗಳೂ ಆದ ಕವಚಗಳನ್ನು ತೊಟ್ಟು ಪುಷ್ಪಮಾಲಿಕೆಗಳನ್ನೂ, ದಿವ್ಯತರವಾದ ವಸ್ತ್ರಗಳನ್ನೂಧರಿಸಿ ಮದ್ಯಪಾನದಿಂದ ಆಲುತ್ತಿರುವ ಕಣ್ಣುಗಳುಳ್ಳವರಾಗಿ ಮತ್ತಿನಿಂದಲೂ, ಮಂದಗಮನದಿಂದಲೂ ನಡೆಯು

ಲಾಕ್ಷಾಣಾ ಮದವಿಹ್ವಲಗಾಮಿನಾಂ ||೧೪|| ಕಾಂತಾಲಂಬಿತವಸ್ತ್ರಾಣಾಂ ಶತ್ರುಸಂಜಾತ ಮನ್ಯುನಾಂ | ಗದಾಶೂಲಾಸಿಹಸ್ತಾನಾಂ ಖಾದತಾಂ ಪಿಬತಾಮಪಿ || ೧೫ || ಶಯ ನೇಷು ಮಹಾರ್ಹೇಷು ಪ್ರಸುಪ್ತಾನಾಂ ಪ್ರಿಯೈಸ್ಸಹ | ತ್ರಸ್ತಾನಾಂ ಗಚ್ಛತಾಂ ತೂರ್ಣಂ ಪುತ್ರಾನಾದಾಯ ಸರ್ವತಃ ||೧೬|| ತೇಷಾಂ ಶತಸಹಸ್ರಾಣಿ ತದಾ ಲಂಕಾ ನಿವಾಸಿನಾಂ | ಅದಹತ್ಪಾವಕಸ್ತತ್ರ ಜಜ್ವಾಲಚ ಪುನಃಪುನಃ || ೧೭ || ಸಾರವಂತಿ ಮಹಾರ್ಹಾಣಿ ಗಂಭೀರಗುಣವಂತಿಚ | ಹೇಮಚಂದ್ರಾರ್ಧಚಂದ್ರಾಣಿ ಚಂದ್ರಶಾಲೋ ನ್ನತಾನಿಚ || ೧೮ || ರತ್ನಚಿತ್ರಗವಾಕ್ಷಾಣಿ ಸಾಧಿಷ್ಠಾನಾನಿ ಸರ್ವಶಃ | ಮಣಿವಿದ್ರುಮ ಚಿತ್ರಾಣಿ ಸ್ಪೃಶಂತೀವ ದಿವಾಕರಂ || ೧೯ || ಕ್ರೌಂಚಬರ್ಹಿಣವೀಣಾನಾಂ ಭೂಷ

ಮದ್ಯಪಾನದಿಂದ ಚಂಚಲವಾದ ನೇತ್ರಗಳುಳ್ಳ, ಮದ....ನಾಂ - ಮತ್ತತೆಯಿಂದ ವಕ್ರವಾಗಿ ನಡೆವ, ಕಾಂತಾ......ಣಾಂ - ಹೆಂಡತಿಯರಿಂದ ಹಿಡಿದುಕೊಳ್ಳಲ್ಪಟ್ಟ ವಸ್ತ್ರಗಳುಳ್ಳ, ಶತ್ರು.....ನಾಂ - ಶತ್ರುಗಳಲ್ಲಿ ಹುಟ್ಟಿದ ಕೋಪಗಳುಳ್ಳ, ಗದಾ....ನಾಂ - ಗದಾಯುಧಗಳೂ, ಶೂಲಗಳೂ, ಕತ್ತಿಗಳೂ, ಕೈಗಳಲ್ಲಿ ಉಳ್ಳ, ಖಾದತಾಂ - ಬೇಕಾದ ಪದಾರ್ಥಗಳನ್ನು ತಿನ್ನುತ್ತಿರುವ, ಪಿಬತಾಂ - ಪಾನಮಾಡುತ್ತಿರುವ, ಮಹಾರ್ಹೇಷು - ಅಮೂಲ್ಯವಾದ, ಶಯನೇಷು - ಹಾಸಿಗೆಗಳಲ್ಲಿ, ಪ್ರಿಯೈಸ್ಸಹ ಪತ್ನಿಯರೊಡನೆ, ಪ್ರಸುಪ್ತಾನಾಂ-ಮಲಗಿರುವ, ತ್ರಸ್ತಾನಾಂ - ಹೆದರಿದ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಪುತ್ರಾನ್ - ಮಕ್ಕಳನ್ನು, ಆದಾಯ - ಎತ್ತಿಕೊಂಡು, ತೂರ್ಣಂ-ಜಾಗ್ರತೆಯಾಗಿ, ಗಚ್ಛತಾಂ - ಹೋಗುತ್ತಿರುವ, ಲಂಕಾ....ನಾಂ-ಲಂಕಾಪಟ್ಟಣದಲ್ಲಿ ವಾಸಿಸುವ, ಗೃಹಗರ್ಧಿನಾಂ-ಗೃಹಸ್ಥರಾದ, ಸರ್ವೇಷಾಂ-ಸಮಸ್ತ ರಾದ, ರಾಕ್ಷಸಾನಾಂ-ರಕ್ಕಸರ, ಶತಸಹಸ್ರಾಣಿಚ ಲಕ್ಷಗಳಾದ, ಆವಾಸಾನ್-ಮನೆಗಳನ್ನು, ತದಾ- ಆ ಕಾಲದಲ್ಲಿ, ಪಾವಕಃ - ಅಗ್ನಿಯು, ಅದಹತ್ - ದಹಿಸಿದನು, ತತ್ರ - ಆ ಲಂಕಾಪಟ್ಟಣದಲ್ಲಿ, ಪುನಃಪುನಃ - ಬಾರಿಬಾರಿಗೂ, ಜಜ್ವಾಲಚ - ಉರಿಯುತ್ತಿತ್ತು. || ೧೩-೧೭ || ಸಃಅಗ್ನಿಃ - ಆ ಅಗ್ನಿಯು, ಸಾರವಂತಿ - ದೃಢವಾದ, ಮಹಾರ್ಹಾಣಿ - ಅಮೂಲ್ಯವಾದ, ಗಂಭೀ....ಚ - ಗಂಭೀರ ವಾದ ಸೌಂದರ್ಯಾದಿ ಗುಣಗಳುಳ್ಳ, ಹೇಮ....ಣಿ-ಬಂಗಾರದ ವಿಕಾರವಾದ ಚಂದ್ರಾಕಾರಗಳೂ ಅರ್ಧ ಚಂದ್ರಾಕಾರಗಳೂ ಆದ, ಚಂದ್ರ....ಚ - ಉಪ್ಪರಿಗೆಗಳಿಂದ ಅತ್ಯುನ್ನತವಾದ, ಸಾಧಿಷ್ಠಾನಾನಿ - ಹಾಸಿಗೆ ಮೊದಲಾದವುಗಳಿಂದ ಕೂಡಿದ, ರತ್ನ....ಣಿ-ರತ್ನಗಳಿಂದ ಆಶ್ಚರ್ಯಕರವಾದ ಗವಾಕ್ಷಿಗಳುಳ್ಳ, ಮಣಿ....ಣಿ - ರತ್ನಗಳಿಂದಲೂ, ಹವಳಗಳಿಂದಲೂ ಆಶ್ಚರ್ಯಕರವಾದ, ದಿವಾಕರಂ - ಸೂರ್ಯನನ್ನು, ಸ್ಪೃಶಂತೀವ - ಸ್ಪರ್ಶಿಸುವಂತಿರುವ, ಕ್ರೌಂಚ....ನಾಂ-ಕ್ರೌಂಚಪಕ್ಷಿಗಳೂ, ನವಿಲುಗಳೂ, ವೀಣೆಗಳೂ

ತ್ತಿರುವವರೂ ಸುರತಾಸಕ್ತರಾಗಿರುವವರೂ, ಶತ್ರುಗಳಲ್ಲಿ ಅಧಿಕ ಕೋಪನರೂ, ಗದೆ, ಶೂಲ ಮತ್ತು ಖಡ್ಗಗಳನ್ನು ಧರಿಸಿ ಮಹೋತ್ತಮ ಶಯ್ಯೆಗಳಲ್ಲಿ ಪ್ರಿಯ ಸತಿಯರೊಡನೆ ಪವಳಿಸಿರು ವವರೂ, ಭೀತಚಿತ್ತರಾಗಿ ಮಕ್ಕಳನ್ನೆತ್ತಿಕೊಂಡು ದಿಕ್ಕೆಟ್ಟು ಓಡುತ್ತಿರುವವರೂ ಆದ ಲಂಕಾ ನಿವಾಸಿಗಳೆಲ್ಲರೂ ಆ ಸಮಯದಲ್ಲಿ ಸುಟ್ಟುಹೋದರು. ||೧೧–೧೭|| ಇಷ್ಟುಮಾತ್ರವೇ ಅಲ್ಲದೆ, ಆ ಸಮಯದಲ್ಲಿಯೇ ಬಹು ಸಾರಭರಿತವಾಗಿಯೂ, ಅಮೂಲ್ಯವಾಗಿಯೂ, ಗಂಭೀರಗುಣ ಸಂಪನ್ನಗಳಾಗಿಯೂ, ರತ್ನಗಳಿಂದ ಚಿತ್ರಿತವಾದ ಗವಾಕ್ಷಗಳುಳ್ಳವಾಗಿಯೂ, ಮಣಿಪ್ರವಾಳ ಗಳಿಂದ ಮನೋಹರವಾಗಿ ಶೋಭಿಸುತ್ತಿರುವುವಾಗಿಯೂ, ಸೂರ್ಯಮಂಡಲದವರೆಗೂ ವ್ಯಾಪಿಸಿರುವುವಾಗಿಯೂ, ಕ್ರೌಂಚ ಸಾರಸ ಮಯೂರಾದಿ ಪಕ್ಷಿಗಳ ಧ್ವನಿಗಳಿಂದಲೂ, ವೀಣೆ

ಣಾನಾಂಚ ನಿಸ್ವನೈಃ । ನಾದಿತಾನ್ಯಚಲಾಭಾನಿ ವೇಶ್ಮಾನ್ಯಗ್ನಿರ್ದದಾಹ ಸಃ ॥ ೨೦ ॥ ಜ್ವಲನೇನ ಪರೀತಾನಿ ತೋರಣಾನಿ ಚಕಾಶಿರೇ । ವಿದ್ಯುದ್ಭಿರಿವ ನದ್ಧಾನಿ ಮೇಘ ಜಾಲಾನಿ ಘರ್ಮಗೇ ॥ ೨೧ ॥ ಜ್ವಲನೇನ ಪರೀತಾನಿ ನಿಪೇತುರ್ಭವನಾನ್ಯಥ । ವಜ್ರಿ ವಜ್ರಹತಾನೀವ ಶಿಖರಾಣಿ ಮಹಾಗಿರೇಃ ॥ ೨೨ ॥ ವಿಮಾನೇಷು ಪ್ರಸುಪ್ತಾಶ್ಚ ದಹ್ಯ ಮಾನಾನಿ ದೂರತಃ । ಹಿಮವಚ್ಛಿಖರಾಣೀವ ದೀಪ್ತೌಷಧಿವನಾನಿಚ ॥ ೨೪ ॥ ಹರ್ಮ್ಯಾಗ್ರೈರ್ದಹ್ಯಮಾನೈಶ್ಚ ಜ್ವಾಲಾಪ್ರಜ್ವಲಿತೈರಪಿ। ರಾತ್ರೌ ಸಾ ದೃಶ್ಯತೇ ಲಂಕಾ

ಎಂಬಿವುಗಳ, ಭೂಷಣಾನಾಂಚ - ಒಡವೆಗಳ, ನಿಸ್ವನೈಃ - ಶಬ್ದಗಳಿಂದ, ನಾದಿತಾನಿ - ಶಬ್ದಾಯ ಮಾನವಾದ, ಅಚಲಾಭಾನಿ - ಬೆಟ್ಟಗಳಂತೆ ಹೊಳೆವ, ವೇಶ್ಮಾನಿ - ಮನೆಗಳನ್ನು, ದದಾಹ - ದಹಿಸಿ ದನು. ॥೧೮-೨೦॥ ಜ್ವಲನೇನ - ಅಗ್ನಿಯಿಂದ, ಪರೀತಾನಿ - ವ್ಯಾಪ್ತವಾದ, ತೋರಣಾನಿ - ಊರು ಬಾಗಿಲುಗಳು, ಘರ್ಮಗೇ - ಗ್ರೀಷ್ಮಕಾಲದಲ್ಲಿ, (ಗೋ) - ವರ್ಷಋತುವಿನ ಆದಿಭಾಗದಲ್ಲಿ, ವಿದ್ಯುದ್ಭಿಃ- ಮಿಂಚುಗಳಿಂದ, ಸನ್ನದ್ಧಾನಿ - ಕಟ್ಟಲ್ಪಟ್ಟ, ಮೇಘಜಾಲಾನೀವ - ಮೇಘಗಳ ತಂಡಗಳಂತೆ, ಚಕಾಶಿರೇ - - ಹೊಳೆಯುತ್ತಿದ್ದವು. ॥೨೧॥ ಅಥ - ಬಳಿಕ, ಜ್ವಲನೇನ - ಅಗ್ನಿಯಿಂದ, ಪರೀತಾನಿ- ವ್ಯಾಪ್ತಗಳಾದ, ಭವನಾನಿ - ಮನೆಗಳು, ವಜ್ರಿ....ನಿ - ಇಂದ್ರನ ವಜ್ರಾಯುಧದಿಂದ ಹೊಡೆಯ ಲ್ಪಟ್ಟ, ಮಹಾಗಿರೇಃ - ಮಹಾಪರ್ವತದ, ಶಿಖರಾಣೀವ - ಶೃಂಗಗಳಂತೆ, ನಿಪೇತುಃ - ಬಿದ್ದವು. ॥೨೨॥ ವಿಮಾನೇಷು - ಉಪರಿಗೆಗಳ ಮೇಲೆ, ಪ್ರಸುಪ್ತಾಃ - ಮಲಗಿದವರಾದಕಾರಣ, ದಹ್ಯಮಾನಾಃ - ದಹಿಸಲ್ಪಡುತ್ತಿರುವ, ವರಾಂಗನಾಃ - ಉತ್ತಮ ಸ್ತ್ರೀಯರು, ತ್ಯಕ್ತಾ....ಗಾಃ - ಬಿಡಲ್ಪಟ್ಟ ಒಡವೆ ಗಳುಳ್ಳ ಸಮಸ್ತ ಅವಯವಗಳುಳ್ಳವರಾಗಿ, ಹಾಹೇತಿ - ಹಾ ಹಾ ಎಂದು, ಉಚ್ಚೈಃ - ಗಟ್ಟಿಯಾಗಿ, ವಿಚುಕ್ರುಶುಃ - ಕೂಗಿದರು. ॥೨೩॥ ನಿರ್ದಹ್ಯಮಾನಾನಿ - ವಿಶೇಷವಾಗಿ ದಹಿಸಲ್ಪಡುತ್ತಿರುವ, ತಾನಿ - ಆ ಮನೆಗಳು, ದೂರತಃ - ದೂರದಲ್ಲಿ, ದೀಪ್ತೌ....ಚ - ಹೊಳೆಯುತ್ತಿರುವ ಜ್ಯೋತಿರ್ಲತೆಗಳ ವನ ಗಳುಳ್ಳ, ಹಿಮ....ವ - ಹಿಮವತ್ಪರ್ವತದ ಶಿಖರಗಳಂತೆ, ಪ್ರಚಕಾಶಿರೇ - ಹೊಳೆಯುತ್ತಿದ್ದವು. ॥೨೪॥ ರಾತ್ರೌ - ರಾತ್ರಿಯ ಕಾಲದಲ್ಲಿ, ಸಾಲಂಕಾ-ಆ ಲಂಕಾಪಟ್ಟಣವು, ದಹ್ಯಮಾನೈಃ-ಸುಡಲ್ಪಡುತ್ತಿರುವ, ಜ್ವಾಲಾ....ತೈಃ - ಅಗ್ನಿಜ್ವಾಲೆಗಳಿಂದ ಉರಿಯುವ, ಹರ್ಮ್ಯಾಗ್ರೈರಪಿ - ಪ್ರಾಸಾದಗಳ ತುದಿ

ಮತ್ತು ಆಭರಣಗಳ ಧ್ವನಿಗಳಿಂದಲೂ ತುಂಬಿರುವುವಾಗಿಯೂ, ಪರ್ವತಸಮಾನಗಳಾಗಿಯೂ ಇರುವ ಮನೆಗಳೆಲ್ಲವೂ ಸುಟ್ಟು ಬೂದಿಯಾಗಿ ಹೋದುವು. ಆ ಪಟ್ಟಣದ ಹೊರಬಾಗಿಲು ಗಳೇ ಮೊದಲಾದುವು ಅಗ್ನಿವ್ಯಾಪ್ತಗಳಾದುವು. ಆ ಸಮಯದಲ್ಲಿ ಮನೆಗಳ ಉಪ್ಪರಿಗೆ ಗಳೆಲ್ಲವೂ ಬೆಂಕಿ ಹೊತ್ತಿ ಉರಿಯುತ್ತಿರಲು ಅವು ಮಿಂಚಿನ ಬಳ್ಳಿಗಳೊಡಗೂಡಿದ ಮುಗಿಲು ಗಳಂತೆ ಕಾಣುತ್ತಿದ್ದವು. ಅನೇಕ ಮನೆಗಳು ಉರಿತಗುಲಿ ನೆಲಕ್ಕುರುಳುತ್ತಿದ್ದುವು. ಅವು ಹಾಗೆ ನೆಲಕ್ಕೆ ಬೀಳುವಾಗ ದೇವೇಂದ್ರನ ವಜ್ರಾಯುಧದ ಪೆಟ್ಟಿನಿಂದುರುಳಿದ ಬೆಟ್ಟಗಳನ್ನೇ ಹೋಲು ತ್ತಿದ್ದುವು. ಆಗ ವಿಮಾನಾಗ್ರಗಳಲ್ಲಿ ಸುಖವಾಗಿ ಮಲಗಿ ನಿದ್ರಿಸುತ್ತಿದ್ದವರೂ, ಪ್ರಿಯರೊಡ ಗೂಡಿರುವವರೂ, ಗಳಿತವಾದ ಸರ್ವಾವಯವಗಳುಳ್ಳವರೂ ಆದ ಸ್ತ್ರೀಯರೆಲ್ಲರೂ ಹಾಹಾ ಕಾರಗಳನ್ನು ಮಾಡುತ್ತಿದ್ದರು. ॥ ೧೮–೨೩ ॥ ಹೀಗೆ ಬೆಂಕಿ ತಗುಲಿದ ಮನೆಗಳೂ, ಪ್ರಜ್ವಲಿ ಸುತ್ತಿರುವ ಓಷಧಿಲತೆಗಳೊಡಗೂಡಿದ ಹಿಮವತ್ಪರ್ವತದಂತೆ ಪ್ರಕಾಶಿಸುತ್ತಿದ್ದುವು. ಆ ರಾತ್ರಿಯ ಕಾಲದಲ್ಲಿ ವಾನರರ ಕೊಳ್ಳಿಗಳಿಂದ ಪ್ರಜ್ವಲಿಸಿದ ಆ ಲಂಕಾನಗರದಲ್ಲಿಯ ಭವನ

ಪುಷ್ಪಿತೈರಿವ ಕಿಂಶುಕೈಃ ||೨೫|| ಹಸ್ತ್ಯಧ್ಯಕ್ಷೈರ್ಗಜೈರ್ಮುಕ್ತೈರ್ಮುಕ್ತೈಶ್ಚ ತುರಗೈರಪಿ| ಬಭೂವ ಲಂಕಾ ಲೋಕಾಂತೇ ಭ್ರಾಂತಗ್ರಾಹ ಇವಾರ್ಣವಃ||೨೬|| ಅಶ್ವಂ ಮುಕ್ತಂ ಗಜಃ ದೃಷ್ಟ್ವಾ ಕ್ವಚಿದ್ಭೀತೋಽಪಸರ್ಪತಿ | ಭೀತೋ ಭೀತಂ ಗಜಂ ದೃಷ್ಟ್ವಾ ಕ್ವಚಿದಶ್ವೋ ನಿವರ್ತತೇ || ೨೭ || ಲಂಕಾಯಾಂ ದಹ್ಯಮಾನಾಯಾಂ ಶುಶುಭೇ ಸಮಹಾರ್ಣವಃ | ಛಾಯಾಸಂಸಕ್ತಸಲಿಲೋ ಲೋಹಿತೋದ ಇವಾರ್ಣವಃ || ೨೮ || ಸಾ ಬಭೂವ ಮುಹೂರ್ತೇನ ಹರಿಭಿರ್ದೀಪಿತಾ ಪುರೀ | ಲೋಕಸ್ಯಾಸ್ಯ ಕ್ಷಯೇ ಘೋರೇ ಪ್ರದೀಪ್ತೇವ ವಸುಂಧರಾ ||೨೯|| ವಾರಿಜಸ್ಯಚ ಧೂಮೇನ ವ್ಯಾಪ್ತಸ್ಯೋಚ್ಚೈರ್ವಿನೇ

ಗಳಿಂದಲೂ, ಪುಷ್ಪಿತೈಃ - ಹುವ್ವು ಬಿಟ್ಟಿರುವ, ಕಿಂಶುಕೈರಿವ - ಮುತ್ತುಗದ ಗಿಡಗಳಿಂದಲಂತೆ, ದೃಶ್ಯತೇ - ಕಾಣಲ್ಪಡುತ್ತಿತ್ತು. || ೨೫ || ಹಸ್ತ್ಯಧ್ಯಕ್ಷೈಃ - ಆನೆಯ ಮಾವುತರಿಂದ, ಮುಕ್ತೈಃ - ಬಿಡಲ್ಪಟ್ಟ, ಗಜೈಃ - ಆನೆಗಳಿಂದಲೂ, ಮುಕ್ತೈಃ - ಬಿಡಲ್ಪಟ್ಟ, ತುರಗೈರಪಿ - ಕುದುರೆಗಳಿಂದಲೂ, ಲಂಕಾ - ಲಂಕಾಪಟ್ಟಣವು, ಲೋಕಾಂತೇ - ಪ್ರಳಯಕಾಲದಲ್ಲಿ, ಭ್ರಾಂತಗ್ರಾಹಃ - ತಿರುಗುತ್ತಿರುವ ನೆಗಳುಗಳುಳ್ಳ, ಅರ್ಣವ ಇವ - ಕಡಲಿನಂತೆ, ಬಭೂವ - ಆಯಿತು. || ೨೬ || ಕ್ವಚಿತ್ - ಒಂದು ಕಡೆಯಲ್ಲಿ, ಗಜಃ - ಆನೆಯು, ಮುಕ್ತಂ-ಬಿಡಲ್ಪಟ್ಟ, ಅಶ್ವಂ - ಕುದುರೆಯನ್ನು, ದೃಷ್ಟ್ವಾ - ನೋಡಿ, ಭೀತಃ - ಭಯಪಟ್ಟು, ಅಪಸರ್ಪತಿ - ಓಡಿಹೋಗುತ್ತಿತ್ತು, ಕ್ವಚಿತ್ - ಒಂದುಕಡೆ, ಅಶ್ವಃ - ಕುದುರೆಯು, ಭೀತಃ - ಹೆದರಿ, ಭೀತಂ - ಹೆದರಿದ, ಗಜಂ - ಆನೆಯನ್ನು, ದೃಷ್ಟ್ವಾ - ಕಂಡು, ನಿವರ್ತತೇ - ಹಿಂತಿರುಗಿತು, || ೨೭ || ಲಂಕಾಯಾಂ - ಲಂಕಾಪಟ್ಟಣವು, ದಹ್ಯಮಾನಾಯಾಂ - ದಹಿಸಲ್ಪಡುತ್ತಿರಲು, ಸಮಹಾರ್ಣವಃ - ಆ ದೊಡ್ಡ ಕಡಲು, ಛಾಯಾ....ಲಃ - ನೆರಳಿನಿಂದ ವ್ಯಾಪಿಸಲ್ಪಟ್ಟ ನೀರುಳ್ಳುದಾಗಿ, ಲೋಹಿತೋದಇವ - ರಕ್ತೋದಕವುಳ್ಳ, ಅರ್ಣವಇವ - ಸಮುದ್ರದಂತೆ, ಶುಶುಭೇ - ಹೊಳೆಯುತ್ತಿತ್ತು. || ೨೮ || ಹರಿಭಿಃ - ವಾನರರಿಂದ, ಮುಹೂರ್ತೇನ - ಮುಹೂರ್ತಕಾಲದಲ್ಲಿ, ದೀಪಿತಾ - ದಹಿಸಲ್ಪಟ್ಟ, ಸಾಪುರೀ - ಆ ಲಂಕಾಪಟ್ಟಣವು, ಅಸ್ಯಲೋಕಸ್ಯ - ಈ ಲೋಕದ, ಘೋರೇ - ಭಯಂಕರವಾದ, ಕ್ಷಯೇ - ನಾಶಕಾಲದಲ್ಲಿ, ಪ್ರದೀಪ್ತಾ - ಉರಿಯುತ್ತಿರುವ, ವಸುಂಧರೇವ - ಭೂಮಿಯಂತೆ, ಬಭೂವ - ಆಯಿತು. || ೨೯ || ಧೂಮೇನ - ಹೊಗೆಯಿಂದ, ವ್ಯಾಪ್ತಸ್ಯ - ವ್ಯಾಪಿಸಲ್ಪಟ್ಟ, ಜ್ವಲನತಪ್ತಸ್ಯ - ಅಗ್ನಿಯಿಂದ ಸುಡಲ್ಪಟ್ಟ, ಉಚ್ಚೈಃ - ಗಟ್ಟಿಯಾಗಿ,

---

ಗಳ ಉಪ್ಪರಿಗೆಗಳ ಅಗ್ರಭಾಗಗಳೆಲ್ಲವೂ ಹೂಮೊಳೆತ ಮುತ್ತುಗದ ಗಿಡಗಳನ್ನು ಹೋಲುತ್ತಿದ್ದುವು. ಆ ಸಮಯದಲ್ಲಿ ಮಾವುತರಿಂದ ಬಿಡಲಾದ ಆನೆಗಳು, ರಾವುತರಿಂದ ಬಿಡಲಾದ ಕುದುರೆಗಳೂ, ಆ ಲಂಕಾಪಟ್ಟಣದಲ್ಲಿ ತಾವೇ ತಾವಾಗಿ ಸಂಚರಿಸುತ್ತ ಪ್ರಳಯಕಾಲದಲ್ಲಿ ಮಹಾ ಸಮುದ್ರದಲ್ಲಿ ತಿತ್ತಿರುಗುವ ಮೊಸಳೆಗಳೇ ಮೊದಲಾದ ಜಲಸತ್ವಗಳಂತೆ ತೋರುತ್ತಿದ್ದವು. ಅದೇ ಸಮಯದಲ್ಲಿಯೇ ಮುನ್ನುಗ್ಗಿ ಬರುತ್ತಿರುವ ಆನೆಗಳನ್ನು ನೋಡಿ ಕುದುರೆಗಳೂ, ಕುದುರೆಗಳನ್ನು ನೋಡಿ ಆನೆಗಳೂ ಬಹಳವಾಗಿ ಹೆದರಿ ಓಡುತ್ತಿದ್ದವು. ಈ ರೀತಿ ಲಂಕಾನಗರವೆಲ್ಲವೂ ಉರಿಯುತ್ತಿರಲು ಆ ಉರಿಯು ಮಹಾ ಸಾಗರದಲ್ಲಿ ಪ್ರತಿಬಿಂಬಿಸಿ ಕೆಂಪು ಸಮುದ್ರದಂತಿದ್ದಿತು. ವಾನರರು ಕೊಳ್ಳಿಯಿಟ್ಟು ಉರಿಸಿದ ಆ ಪಟ್ಟಣವು ಪ್ರಳಯಕಾಲದಲ್ಲಿ ಧಗಧಗನುರಿಯುತ್ತಿರುವ ಭೂಮಂಡಲವನ್ನೇ ಹೋಲಿದ್ದಿತು. ಇಷ್ಟೆಯಲ್ಲದೆ ಆ ಸಮಯದಲ್ಲಿ ಲಂಕೆಯಲ್ಲಿನ ಜನಗಳೆಲ್ಲರೂ ಹೊಗೆಯ

ದುಷಃ । ಸ್ವನೋ ಜ್ವಲನದಗ್ಧಸ್ಯ ಶುಶ್ರುವೇ ದಶಯೋಜನಂ ॥೩೦॥ ಪ್ರದಗ್ಧಕಾಯಾ ನಪರಾನ್ ರಾಕ್ಷಸಾನ್ನಿರ್ಗತಾನ್ ಬಹಿಃ । ಸಹಸಾಽಭ್ಯುತ್ಪತಂತಿಸ್ಮ ಹರಯೋಽಥ ಯುಯುತ್ಸವಃ॥೩೧॥ಉದ್ಘುಷ್ಟಂ ವಾನರಾಣಾಂಚ ರಾಕ್ಷಸಾನಾಂಚ ನಿಸ್ವನಃ। ದಿಶೋ ದಶ ಸಮುದ್ರಂಚ ಪೃಥಿವೀಂ ಚಾಽನ್ವನಾದಯತ್ ॥೩೨॥ ವಿಶಲ್ಯೌತು ಮಹಾತ್ಮಾನೌ ತಾವುಭೌ ರಾಮಲಕ್ಷ್ಮಣೌ । ಅಸಂಭ್ರಾಂತೌ ಜಗೃಹತುಸ್ತಥೋಭೇ ಧನುಷೀ ವರೇ ॥ ೩೩ ॥ ತತೋ ವಿಷ್ಫಾರಯಾನಸ್ಯ ರಾಮಸ್ಯ ಧನುರುತ್ತಮಂ । ಬಭೂವ ತುಮುಲಃ ಶಬ್ದೋ ರಾಕ್ಷಸಾನಾಂ ಭಯಾವಹಃ ॥ ೩೪ ॥ ಅಶೋಭತ ತದಾ ರಾಮೋ ಧನುರ್ವಿ

ವಿನೇದುಷಃ - ಧ್ವನಿಮಾಡುವ, ನಾರೀಜನಸ್ಯ - ಹೆಂಗುಸರ, ಸ್ವನಃ - ಧ್ವನಿಯು, ದಶಯೋಜನಂ- ಹತ್ತುಗಾವುದದೂರ, ಶುಶ್ರುವೇ - ಕೇಳಲ್ಪಡುತ್ತಿತ್ತು. ॥ ೩೦ ॥ ಪ್ರದಗ್ಧಕಾಯಾನ್ - ದಹಿಸಲ್ಪಟ್ಟ ಶರೀರಗಳುಳ್ಳವರಾದಕಾರಣ, ಬಹಿಃ - ಹೊರಗೆ, ನಿರ್ಗತಾನ್ - ಹೊರಟ, ಅಪರಾನ್‌ರಾಕ್ಷಸಾನ್ - ಇತರ ರಕ್ಕಸರನ್ನು ಕುರಿತು, ಅಥ - ಬಳಿಕ, ಹರಯಃ - ಕಪಿಗಳು, ಯುಯುತ್ಸವಃ - ಕಾಳೆಗ ಮಾಡಲಿಚ್ಛೆಯುಳ್ಳವರಾಗಿ, ಸಹಸಾ - ಜಾಗ್ರತೆಯಾಗಿ, ಅಭ್ಯುತ್ಪತಂತಿಸ್ಮ - ಅಭಿಮುಖವಾಗಿ ಹಾರಿಬಂದರಷ್ಟೆ. ॥ ೩೧ ॥ ವಾನರಾಣಾಂ - ಕಪಿಗಳ, ಉದ್ಘುಷ್ಟಂಚ - ಉದ್ಘೋಷವೂ, ರಾಕ್ಷಸಾನಾಂ - ರಕ್ಕಸರ, ನಿಸ್ವನಶ್ಚ - ಧ್ವನಿಯೂ, ದಶದಿಶಃ - ಹತ್ತು ದಿಕ್ಕುಗಳನ್ನೂ, ಸಮುದ್ರಂಚ - ಸಮುದ್ರಗಳನ್ನೂ, ಪೃಥಿವೀಂಚ - ಭೂಮಿಯನ್ನೂ, ಅನ್ವನಾದಯತ್ - ಪ್ರತಿಧ್ವನಿಗೊಳಿಸಿತು. ॥ ೩೨ ॥ ತದಾ - ಆಗ, ವಿಶಲ್ಯೌ-ವ್ರಣರಹಿತರಾದ, ಮಹಾತ್ಮಾನೌ-ಮಹಾ ಧೈರ್ಯಶಾಲಿಗಳಾದ, ತೌರಾಮಲಕ್ಷ್ಮಣಾವುಭೌ- ಆ ರಾಮಲಕ್ಷ್ಮಣರಿಬ್ಬರೂ, ಅಸಂಭ್ರಾಂತೌ - ಜಾಗರೂಕರಾಗಿ, ಉಭೇ - ಎರಡಾದ, ವರೇ - ಶ್ರೇಷ್ಠಗಳಾದ, ಧನುಷೀ - ಬಿಲ್ಲುಗಳನ್ನು, ಜಗೃಹತುಃ - ತೆಗೆದುಕೊಂಡರು. ॥೩೩॥ ತತಃ - ಬಳಿಕೆ, ಉತ್ತಮಂ - ಶ್ರೇಷ್ಠವಾದ, ಧನುಃ - ಬಿಲ್ಲನ್ನು, ವಿಷ್ಫಾರಯಾನಸ್ಯ - ಟಂಕಾರ ಮಾಡುತ್ತಿರುವ, ರಾಮಸ್ಯ - ಶ್ರೀರಾಮನ, ತುಮುಲಂ - ಸಂಕುಲವಾದ, ಶಬ್ದಃ - ಶಬ್ದವು, ರಾಕ್ಷಸಾನಾಂ - ರಕ್ಕಸರಿಗೆ, ಭಯಾವಹಃ-ಭಯವನ್ನುಂಟುಮಾಡುವುದಾಗಿ, ಬಭೂವ-ಆಯಿತು. ॥ ೩೪ ॥ ತದಾ ಆ ಕಾಲದಲ್ಲಿ, ಮಹತ್ - ದೊಡ್ಡದಾದ, ಧನುಃ - ಬಿಲ್ಲನ್ನು, ವಿಷ್ಫಾರಯನ್ - ಟಂಕಾರ ಮಾಡುತ್ತಿರುವ,

ಬಾಧೆಯನ್ನು ತಾಳಲಾರದೆ ಬಹಳವಾಗಿ ರೋದಿಸುತ್ತಿದ್ದರು. ಆ ರೋದನ ಧ್ವನಿಯು ಹತ್ತುಗಾವುದ ದೂರಕ್ಕೆ ಕೇಳಿಸುತ್ತಿದ್ದಿತು. ॥ ೨೪–೩೦ ॥ ಆಗ ಕೆಲವರು ರಾಕ್ಷಸರು ಮರಣಭೀತಿಯಿಂದ ಬಯಲುಗಳಿಗೆ ಓಡಿಬರುತ್ತಿದ್ದರು. ಹೀಗೆ ಓಡಿಬರುತ್ತಿರುವ ಆ ರಾಕ್ಷಸರನ್ನು ಅಲ್ಲಿದ್ದ ವಾನರರು ಹಿಡಿದು ಹಿಡಿದು ಮಹಾ ಸಾಹಸದಿಂದ ಬೆಂಕಿಯಲ್ಲಿ ಹಾಕುತ್ತಿದ್ದರು. ಆಗ ವಾನರರ ಮತ್ತು ರಾಕ್ಷಸರ ಧ್ವನಿಗಳು ದಶದಿಶೆಗಳಿಗೂ ವ್ಯಾಪಿಸಿತಲ್ಲದೆ ಮಹಾ ಸಾಗರವನ್ನೂ, ಭೂವ್ಯಾಕಾಶಗಳನ್ನೂ ಹೊಕ್ಕು ಪ್ರತಿಧ್ವನಿತವಾಗುತ್ತಿದ್ದುವು. ಆ ಸಮಯದಲ್ಲಿ ಅವ್ರಣರಾದ ಶ್ರೀರಾಮಲಕ್ಷ್ಮಣರೂ ಕೂಡ ಮಹಾ ಧೈರ್ಯಸ್ಥೈರ್ಯಗಳನ್ನವಲಂಬಿಸಿದವರಾಗಿ ತಮ್ಮ ಧನುಸ್ಸುಗಳನ್ನು ಗ್ರಹಿಸಿದರು. ಶ್ರೀರಾಮನು ತನ್ನ ಧನುಸ್ಸಿನ ನಾರಿಯನ್ನು ಬಲವಾಗಿ ಆಕರ್ಷಿಸಿ ಟಂಕಾರ ಮಾಡಿದನು. ರಾಕ್ಷಸರಿಗೆ ಮಹಾ ಭಯಂಕರವಾದ ಆ ಟಂಕಾರ ಧ್ವನಿಯು ಕೇಳಿಸಿದೊಡನೆಯೇ ಅವರೆಲ್ಲರೂ ಬಹಳ ವ್ಯಾಕುಲರಾದರು. ಹೀಗೆ ಧನುಷ್ಟಂಕಾರವನ್ನು ಮಾಡುತ್ತಿರುವ ಆ ಶ್ರೀರಾಮಮೂರ್ತಿಯು

ಷ್ಫಾರಯರ್ಞ್ಮಹತ್ । ಭಗವಾನಿವ ಸಂಕ್ರುದ್ಧೋ ಭವೋ ವೇದಮಯಂ ಧನುಃ॥೩೫॥ ಉದ್ಘುಷ್ಟಂ ವಾನರಾಣಾಂಚ ರಾಕ್ಷಸಾನಾಂಚ ನಿಸ್ವನಂ । ಜ್ಯಾಶಬ್ದಸ್ತಾವುಭೌ ಶಬ್ದಾವತಿ ರಾಮಸ್ಯ ಶುಶ್ರುವೇ॥೩೬॥ವಾನರೋದ್ಘುಷ್ಟಘೋಷಶ್ಚ ರಾಕ್ಷಸಾನಾಂಚ ನಿಸ್ವನಃ। ಜ್ಯಾಶಬ್ದಶ್ಚಾಪಿ ರಾಮಸ್ಯ ತ್ರಯಂ ವ್ಯಾಪ್ತಂ ದಿಶೋ ದಶ ॥ ೩೭ ॥ ತಸ್ಯ ಕಾರ್ಮುಕಮುಕ್ತೈಶ್ಚ ಶರೈಸ್ತತ್ಪುರಗೋಪುರಂ । ಕೈಲಾಸಶೃಂಗಪ್ರತಿಮಂ ವಿಕೀರ್ಣಮಪತದ್ಭುವಿ॥೩೮॥ತತೋ ರಾಮಶರಾನ್ ದೃಷ್ಟ್ವಾ ವಿಮಾನೇಷು ಗೃಹೇಷುಚ। ಸನ್ನಾಹೋ ರಾಕ್ಷಸೇಂದ್ರಾಣಾಂ ತುಮುಲಸ್ಸಮಪದ್ಯತ ॥ ೩೯ ॥ ತೇಷಾಂ ಸನ್ನಹ್ಯಮಾನಾನಾಂ ಸಿಂಹನಾದಂಚ ಕುರ್ವತಾಂ । ಶರ್ವರೀ ರಾಕ್ಷಸೇಂದ್ರಾಣಾಂ ರೌದ್ರೀವ ಸಮಪದ್ಯತ

ರಾಮಃ - ಶ್ರೀರಾಮನು, ವೇದಮಯಂ - ಶಬ್ದಬ್ರಹ್ಮಾತ್ಮಕವಾದ, ಧನುಃ - ಧನುಸ್ಸನ್ನು, ವಿಷ್ಫಾರಯನ್ - ಟಂಕಾರ ಮಾಡುತ್ತಿರುವ, ಸಂಕ್ರುದ್ಧಃ - ಕೋಪಿಷ್ಠನಾದ, ಭಗವಾನ್ - ಪೂಜ್ಯನಾದ, ಭವಇವ - ಕಾಲರುದ್ರನಂತೆ, ಅಶೋಭತ - ಹೊಳೆಯುತ್ತಿದ್ದನು. ॥ ೩೫ ॥ ರಾಮಸ್ಯ - ಶ್ರೀರಾಮನ, ಜ್ಯಾಶಬ್ದಃ - ಧನುಷ್ಟಂಕಾರವು, ವಾನರಾಣಾಂ - ಕಪಿಗಳ, ಉದ್ಘುಷ್ಟಂ - ಘೋಷವನ್ನೂ, ರಾಕ್ಷಸಾನಾಂ - ರಕ್ಕಸರ, ನಿಸ್ವನಂಚ - ಧ್ವನಿಯನ್ನೂ, ತಾವುಭೌ - ಆ ಎರಡು ಶಬ್ದಗಳನ್ನೂ, ಅತಿಕ್ರಮ್ಯ - ಮೀರಿ, ಶುಶ್ರುವೇ - ಕೇಳಲ್ಪಡುತ್ತಿತ್ತು. ॥ ೩೬ ॥ ವಾನ....ಶ - ಕಪಿಗಳ ಕೋಲಾಹಲ ಧ್ವನಿಯೂ, ರಾಕ್ಷಸಾನಾಂ - ರಕ್ಕಸರ, ನಿಸ್ವನಶ್ಚ - ಧ್ವನಿಯೂ, ರಾಮಸ್ಯ - ಶ್ರೀರಾಮನ, ಜ್ಯಾಶಬ್ದಶ್ಚಾಪಿ - ಹೆದೆಯ ಧ್ವನಿಯೂ, ತ್ರಯಂ - ಈ ಮೂರೂ, ದಶದಿಶಃ - ಹತ್ತು ದಿಕ್ಕುಗಳನ್ನೂ, ವ್ಯಾಪ್ತಂ - ವ್ಯಾಪಿಸಿತು. ॥೩೭॥ ತಸ್ಯ - ಆ ಶ್ರೀರಾಮನ, ಕಾರ್ಮುಕಮುಕ್ತೈಶ್ಚ - ಧನುಸ್ಸಿನಿಂದ ಬಿಡಲ್ಪಟ್ಟ, ಶರೈಃ - ಬಾಣಗಳಿಂದ, ಕೈಲಾ....ಮಂ - ಕೈಲಾಸಶಿಖರಕ್ಕೆ ಸಮಾನವಾದ, ತತ್ಪು....ರಂ - ಆ ಲಂಕಾಪಟ್ಟಣದ ಊರುಬಾಗಿಲು, ವಿಕೀರ್ಣಂ - ಸೀಳಿ, ಭುವಿ - ನೆಲದಲ್ಲಿ, ಅಪತತ್ - ಬಿದ್ದರು. ॥ ೩೮ ॥ ತತಃ - ಬಳಿಕ, ರಾಮಶರಾನ್ - ಶ್ರೀರಾಮಬಾಣಗಳನ್ನು, ದೃಷ್ಟ್ವಾ - ಕಂಡು, ವಿಮಾನೇಷು - ವಿಮಾನಗಳಲ್ಲಿಯೂ, ಗೃಹೇಷುಚ - ಸಾಧಾರಣರ ಮನೆಗಳಲ್ಲಿಯೂ, ರಾಕ್ಷಸೇಂದ್ರಾಣಾಂ - ರಾಕ್ಷಸೋತ್ತಮರ, ಸನ್ನಾಹಃ - ಯುದ್ಧಪ್ರಯತ್ನವೂ, ತುಮುಲಂ - ಸಂಕುಲವಾಗಿ, ಸಮಪದ್ಯತ - ಹುಟ್ಟಿತು. ॥೩೯॥ ಸನ್ನ....ನಾಂ - ಸನ್ನಾಹ ಮಾಡುತ್ತಿರುವ, ಸಿಂಹನಾದಂ- ಕೋಲಾಹಲವನ್ನು, ಕುರ್ವತಾಂ - ಮಾಡುತ್ತಿರುವ, ತೇಷಾಂರಾಕ್ಷಸೇಂದ್ರಾಣಾಂ - ಆ ರಾಕ್ಷಸೋ

ವೇದಮಯವಾದ ಧನುಸ್ಸನ್ನು ಹಿಡಿದು ಟಂಕಾರ ಮಾಡುತ್ತಿರುವ ಕಾಲರುದ್ರನನ್ನು ಹೋಲುತ್ತಿದ್ದನು. ॥ ೩೧–೩೫ ॥ ಶ್ರೀರಾಮನೆಸಗಿದ ಧನುಷ್ಟಂಕಾರವು ಆ ವಾನರರಾಕ್ಷಸರ ಕೋಲಾಹಲ ಧ್ವನಿಯನ್ನೂ ಮೀರಿ ಕೇಳಿ ಬರುತ್ತಿದ್ದಿತು. ಇದಾದ ತರುವಾಯ ಮಹಾ ಕೋಪೋದ್ದೀಪಿತನಾದ ಶ್ರೀರಾಮನು ಕೈಲಾಸಪರ್ವತ ಶಿಖರಕ್ಕೆ ಸಮಾನವಾದ ಆ ಲಂಕಾಪಟ್ಟಣದಲ್ಲೆಲ್ಲಾ ತನ್ನ ಬಾಣಗಳು ವ್ಯಾಪಿಸುವಂತೆ ಪ್ರಯೋಗ ಮಾಡಿದನು. ಆ ಬಾಣಗಳಿಂದ ಆ ಪಟ್ಟಣದ ಗೋಪುರಗಳೆಲ್ಲವೂ ಮುರಿದು ಬಿದ್ದು ಹೋದುವು. ಆ ಸಮಯದಲ್ಲಿ ಶ್ರೀರಾಮನ ಬಾಣಗಳನ್ನು ನೋಡಿ ವಿಮಾನಗಳಲ್ಲಿಯೂ, ಗೃಹಗಳಲ್ಲಿಯೂ ವಾಸಿಸುತ್ತಿದ್ದ ರಾಕ್ಷಸರು ಯುದ್ಧಸನ್ನದ್ಧರಾಗಿ ಬಹು ಭಯಂಕರವಾದ ಸಿಂಹನಾದಗಳನ್ನು ಮಾಡಿದರು. ಹೀಗೆ ಯುದ್ಧಸನ್ನದ್ಧರಾಗಿ ಸಿಂಹನಾದಗಳನ್ನು ಮಾಡುತ್ತಿದ್ದ ಆ ರಾಕ್ಷಸರಿಗೆ

॥ ೪೦ ॥ ಆದಿಷ್ಟಾ ವಾನರೇಂದ್ರಾಸ್ತು ಸುಗ್ರೀವೇಣ ಮಹಾತ್ಮನಾ । "ಆಸನ್ನದ್ವಾರಮಾಸಾದ್ಯ ಯುಧ್ಯಧ್ವಂ ಪ್ಲವಗರ್ಷಭಾಃ! ॥ ೪೧ ॥ ಯಶ್ಚ ವೋ ವಿತಥಂ ಕುರ್ಯಾತ್ತತ್ರ ತತ್ರ ವ್ಯವಸ್ಥಿತಃ । ಸ ಹಂತವ್ಯೋಹಿ ಸಂಪ್ಲುತ್ಯ ರಾಜಶಾಸನದೂಷಕಃ" ॥೪೨॥ ತೇಷು ವಾನರಮುಖ್ಯೇಷು ದೀಪ್ತೋಲ್ಕೋಜ್ಜ್ವಲಪಾಣಿಷು । ಸ್ಥಿತೇಷು ದ್ವಾರಮಾಸಾದ್ಯ ರಾವಣಂ ಮನ್ಯುರಾವಿಶತ್ ॥ ೪೩ ॥ ತಸ್ಯ ಜೃಂಭಿತವಿಕ್ಷೇಭಾದ್ವ್ಯಾಮಿಶ್ರಾ ವೈ ದಿಶೋ ದಶ । ರೂಪವಾನಿವ ರುದ್ರಸ್ಯ ಮನ್ಯುರ್ಗಾತ್ರೇಷ್ವದೃಶ್ಯತ ॥ ೪೪ ॥

ತ್ತಮರಿಗೆ, ಶರ್ವರೀ - ರಾತ್ರಿಯು, ರೌದ್ರೀವ - ಪ್ರಳಯಕಾಲದ ರಾತ್ರಿಯಂತೆ, ಸಮಪದ್ಯತ - ಆಯಿತು. ॥೪೦॥ ಹೇ ಪ್ಲವಗರ್ಷಭಾಃ - ಎಲೈ ವಾನರಶ್ರೇಷ್ಠರೇ, ಆಸನ್ನದ್ವಾರಂ - ಸಮೀಪದಲ್ಲಿರುವ ಬಾಗಿಲನ್ನು, ಆಸಾದ್ಯ - ಹೊಂದಿ, ಯುಧ್ಯಧ್ವಂ ಯುದ್ಧ ಮಾಡಿರಿ, ಯಃ - ಯಾವನು, ತತ್ರ ತತ್ರ - ಅಲ್ಲಲ್ಲಿ, ವ್ಯವಸ್ಥಿತಃ - ನಿಂತು, ವಃ - ನಿಮ್ಮಲ್ಲಿ, ಮಚ್ಛಾಸನಂ - ನನ್ನಾಜ್ಞೆಯನ್ನು, ವಿತಥಂ- ವ್ಯರ್ಥವನ್ನಾಗಿ, ಕುರ್ಯಾತ್ - ಮಾಡುವನೋ, ರಾಜ....ಕಃ - ರಾಜಾಜ್ಞೆಯನ್ನು ಭಂಗಪಡಿಸಿದ, ಸಃ - ಅವನು, ಸಂಪ್ಲುತ್ಯ - ಹಾರಿ ಹಂತವ್ಯೋಹಿ - ಸಂಹರಿಸಲ್ಪಡತಕ್ಕವನಷ್ಟೆ, ಇತಿ - ಇಂತೆಂದು, ವಾನರೇಂದ್ರಾಸ್ತು - ವಾನರೋತ್ತಮರಾದರೆ, ಮಹಾತ್ಮನಾ - ಮಹಾನುಭಾವನಾದ, ಸುಗ್ರೀವೇಣ - ಸುಗ್ರೀವನಿಂದ, ಆದಿಷ್ಟಾಃ - ಆಜ್ಞಾಪಿಸಲ್ಪಟ್ಟರು. ॥೪೧ ೪೨॥ ತೇಷುವಾನರಮುಖ್ಯೇಷು - ಆ ವಾನರೋತ್ತಮರು, ದೀಪ್ತೋ.....ಷು - ಉರಿಯುತ್ತಿರುವ ಕೊಳ್ಳಿಗಳಿಂದ ಹೊಳೆಯುತ್ತಿರುವ ಕೈಗಳುಳ್ಳವರಾಗಿ, ದ್ವಾರಂ - ಬಾಗಿಲನ್ನು, ಆಸಾದ್ಯ - ಹೊಂದಿ, ಸ್ಥಿತೇಷು - ನಿಲ್ಲಲು, ರಾವಣಂ - ರಾವಣನನ್ನು, ಮನ್ಯುಃ - ಕ್ರೋಧವು, ಆವಿಶತ್ - ಹೊಕ್ಕಿತು. ॥ ೪೩ ॥ ತಸ್ಯ - ಆ ರಾವಣನ, ಜೃಂಭಿ....ತ್ - ಆಕಳಿಸಿ ಮೈಮುರಿಯೋಣದರ ದೆಸೆಯಿಂದ, ದಶದಿಶಃ - ಹತ್ತುದಿಕ್ಕುಗಳೂ, ವ್ಯಾಮಿಶ್ರಾಃ - ವ್ಯಾಕುಲಗಳು, ಅಭವನ್ - ಆದವು, ರೂಪವಾನ್ - ದೇಹಧಾರಿಯಾದ, ರುದ್ರಸ್ಯ - ಕಾಲಾಗ್ನಿ ರುದ್ರನ, ಮನ್ಯುರಿವ - ಕೋಪದಂತೆ, ಗಾತ್ರೇಷು - ಅವಯಗಳಲ್ಲಿ, ಅದೃಶ್ಯತ - ಕಾಣಲ್ಪಟ್ಟನು. ॥ ೪೪ ॥ ಸಃ - ಆ ರಾವಣನು, ಸಂಕ್ರುದ್ಧಃ - ಕುಪಿತನಾಗಿ, ಬಹುಭಿಃ - ಅನೇಕರಾದ,

ಆ ರಾತ್ರಿಯು ಕಾಳರಾತ್ರಿಯಂತೆ ಬಹು ಭಯಂಕರವಾಗಿ ತೋರುತ್ತಿದ್ದಿತು. ॥ ೩೬–೪೦ ॥ ಅದೇ ಸಮಯದಲ್ಲಿ ಮಹಾತ್ಮನಾದ ಸುಗ್ರೀವನಿಂದ ಯುದ್ಧವ್ಯಾಪಾರದಲ್ಲಿ ನಿಯುಕ್ತರಾದ ವಾನರ ವೀರರೆಲ್ಲರೂ ಆತನ ಬಳಿಗೈದಿ ಮಣಿದು ನಿಂತರು. ಆಗಲಾ ಕಪಿಸಾರ್ವಭೌಮನು ಅವರನ್ನು ಕುರಿತು, "ಎಲೈ ವಾನರೋತ್ತಮರೇ! ನೀವೆಲ್ಲರೂ ಈಗಲೇ ಹೊರಟು ಸಮೀಪದಲ್ಲಿರುವ ಬಾಗಿಲುಗಳನ್ನೆಲ್ಲ ತಡೆದು ನಿಲ್ಲಿರಿ. ನಿಮ್ಮ ಈ ಪ್ರಯತ್ನಕ್ಕೆ ಯಾವ ರಾಕ್ಷಸನು ಅಡ್ಡಿಬಂದರೂ ಅವನನ್ನು ಕೊಲ್ಲಿರಿ. ಈ ನನ್ನ ಆಜ್ಞೆಯನ್ನು ಅತಿಕ್ರಮಿಸುವವನು ಸರ್ವಥಾ ವಧ್ಯನೆಂದರಿಯಿರಿ" ಎಂದು ಹೇಳಿದನು. ಆಗ ವಾನರರೆಲ್ಲರೂ ಉರಿಯುತ್ತಿರುವ ಕೊಳ್ಳಿಗಳನ್ನು ಕೈಯಲ್ಲಿ ಹಿಡಿದುಕೊಂಡು ಲಂಕಾನಗರದ ದ್ವಾರಗಳಲ್ಲಿ ಪ್ರವೇಶಿಸಿದರು, ಹೀಗೆ ಲಂಕಾಪಟ್ಟಣದಲ್ಲೆಲ್ಲಿಯೂ ವಾನರರೇ ಆವರಿಸಿ ನಿಲ್ಲಲು, ರಾವಣಾಸುರನು ಅಪರಿಮಿತವಾಗಿ ಕೋಪಗೊಂಡು ಮಹತ್ತರವಾಗಿ ವಿಜೃಂಭಿಸಿದನು. ಆಗಲಾತನು ದಶದಿಶಗಳನ್ನೂ ತುಂಬುವಂತೆ ತೋರುತ್ತ ಮೂರ್ತೀಭವಿಸಿದ ಪ್ರಳಯರುದ್ರನನ್ನೇ ಹೋಲುತ್ತಿದ್ದನು. ಆಗ ರಾಕ್ಷಸೋತ್ತಮನಾದ ಆ ರಾವಣಾಸುರನು ಅದೇ ಕೋಪಾಟೋಪದಲ್ಲಿಯೇ ತನ್ನ ಬಳಿಯಿದ್ದ ಕುಂಭ

ಸನಿಕುಂಭಂಚ ಕುಂಭಂಚ ಕುಂಭಕರ್ಣಾತ್ಮಜಾವುಭೌ।ಪ್ರೇಷಯಾಮಾಸ ಸಂಕ್ರುದ್ಧೋ ರಾಕ್ಷಸೈ ರ್ಬಹುಭಿಸ್ಸಹ ॥ ೪೫ ॥ ಯೂಪಾಕ್ಷಃ ಶೋಣಿತಾಕ್ಷಶ್ಚ ಪ್ರಜಂಘಃ ಕಂಪನಸ್ತಥಾ । ನಿರ್ಯಯುಃ ಕೌಂಭಕರ್ಣಿಭ್ಯಾಂ ಸಹ ರಾವಣಶಾಸನಾತ್ ॥೪೬॥ ಶಶಾಸ ನಾದಯನ್ ಸರ್ವಾನ್ ರಾಕ್ಷಸಾನ್ ಸುಮಹಾಬಲಾನ್।"ರಾಕ್ಷಸಾಗಚ್ಛತಾದ್ಯೈವ ಜಯಧ್ವಂ ಶೀಘ್ರಮೇವಚ" ॥ ೪೭ ॥ ತತಸ್ತು ಚೋದಿತಾಸ್ತೇನ ರಾಕ್ಷಸಾ ಜ್ವಲಿತಾಯುಧಾಃ । ಲಂಕಾಯಾ ನಿರ್ಯಯುರ್ವೀರಾಃ ಪ್ರಣದಂತಃ ಪುನಃ ಪುನಃ ॥ ೪೮ ॥ ರಕ್ಷಸಾಂ ಭೂಷಣಸ್ಥಾಭಿ ರ್ಭಾಭಿಸ್ಸ್ವಾಭಿಶ್ಚ ಸರ್ವಶಃ । ಚಕ್ರುಸ್ತೇ ಸಪ್ರಭಂ ವ್ಯೋಮ ಹರಯಶ್ಚಾಗ್ನಿಭಿಸ್ಸಹ ॥೪೯॥ ತತ್ರ ತಾರಾಧಿಪಸ್ಯಾಥ ತಾರಾಣಾಂಚ ತಥೈವಚ । ತಯೋರಾ

ರಾಕ್ಷಸೈಸ್ಸಹ - ರಕ್ಕಸರೊಡಗೂಡಿ, ಕುಂಭಕರ್ಣಾತ್ಮಜೌ - ಕುಂಭಕರ್ಣನ ಮಕ್ಕಳಾದ, ನಿಕುಂಭಂಚ - ನಿಕುಂಭ, ಕುಂಭಂಚ - ಕುಂಭ ಎಂಬ, ಉಭೌ - ಇಬ್ಬರನ್ನು, ಪ್ರೇಷಯಾಮಾಸ - ಕಳುಹಿಸಿಕೊಟ್ಟನು. ॥೪೫॥ ಯೂಪಾಕ್ಷಃ-ಯೂಪಾಕ್ಷನೂ, ಶೋಣಿತಾಕ್ಷಶ್ಚ-ಶೋಣಿತಾಕ್ಷನೂ, ಪ್ರಜಂಘಃ-ಪ್ರಜಂಘನೂ, ಕಂಪನಶ್ಚ - ಕಂಪನನೂ ಸಹಾ, ಕೌಂಭಕರ್ಣಿಭ್ಯಾಂಸಹ - ಕುಂಭಕರ್ಣನ ಮಕ್ಕಳೊಡಗೂಡಿ, ರಾವ....ತ್ - ರಾವಣನ ಆಜ್ಞೆಯಿಂದ, ನಿರ್ಯಯುಃ - ಹೊರಟರು. ॥ ೪೬ ॥ ಸುಮಹಾಬಲಾನ್ - ಬಹು ಬಲಿಷ್ಠರಾದ, ಸರ್ವಾನ್ - ಸಮಸ್ತರಾದ, ರಾಕ್ಷಸಾನ್ - ರಕ್ಕಸರನ್ನೂ ಕುರಿತು, ನಾದಯನ್ - ಧ್ವನಿಮಾಡಿ, ಹೇ ರಾಕ್ಷಸಾಃ - ಎಲೈ ರಕ್ಕಸರೇ, ಅದ್ಯೈವ - ಈಗಲೇ, ಗಚ್ಛತ - ಹೊರಡಿರಿ, ಶೀಘ್ರಮೇವ - ಬೇಗನೆಯೇ, ಜಯಧ್ವಂ - ಜಯಿಸಿರಿ, ಇತಿ - ಇಂತೆಂದು, ಶಶಾಸ - ಆಜ್ಞಾಪಿಸಿದನು. ॥೪೭॥ ತತಸ್ತು - ಬಳಿಕಾದರೆ, ತೇನ - ಆ ರಾವಣನಿಂದ, ಚೋದಿತಾಃ - ಪ್ರೇರಿಸಲ್ಪಟ್ಟ, ವೀರಾಃ - ಶೂರರಾದ, ತೇರಾಕ್ಷಸಾಃ - ಆ ರಕ್ಕಸರು, ಜ್ವಲಿತಾಯುಧಾಃ - ಹೊಳೆಯುತ್ತಿರುವ ಆಯುಧಗಳುಳ್ಳವರಾಗಿ, ಪುನಃಪುನಃ - ಬಾರಿಬಾರಿಗೂ, ಪ್ರಣದಂತಃ - ಕೂಗುವವರಾಗಿ, ಲಂಕಾಯಾಃ - ಲಂಕಾಪಟ್ಟಣದಿಂದ, ನಿರ್ಯಯುಃ - ಹೊರಟರು. ॥ ೪೮ ॥ ತೇ - ಆ ರಕ್ಕಸರು, ರಕ್ಷಸಾಂ - ಅಸುರರ, ಭೂಷಣಸ್ಥಾಭಿಃ - ಒಡವೆಗಳಲ್ಲಿರುವ, ಸ್ವಾಭಿಃ - ತಮ್ಮ, ಭಾಭಿಃ - ಕಾಂತಿಗಳಿಂದ, ಸರ್ವಶಃ - ಸರ್ವಪ್ರಕಾರದಲ್ಲಿಯೂ, ವ್ಯೋಮ - ಅಂತರಿಕ್ಷವನ್ನು, ಸಪ್ರಭಂ - ಕಾಂತಿಯಿಂದೊಡಗೂಡಿದ್ದನ್ನಾಗಿ, ಚಕ್ರುಃ - ಮಾಡಿದರು, ಹರಯಶ್ಚ - ಕಪಿಗಳೂ ಸಹಾ, ಅಗ್ನಿಭಿಸ್ಸಹ - ಬೆಂಕಿಗಳೊಡನೆ, ವ್ಯೋಮ - ಅಂತರಿಕ್ಷವನ್ನು, ಸಪ್ರಭಂ - ಬೆಂಕಿಯಿಂದೊಡಗೂಡಿದ್ದನ್ನಾಗಿ, ಚಕ್ರುಃ - ಮಾಡಿದರು. ॥ ೪೯ ॥ ತತ್ರ - ಆ ರಣರಂಗದಲ್ಲಿ, ತಾರಾಧಿಪಸ್ಯ - ಚಂದ್ರನ, ಆಭಾ -

---

ಕರ್ಣನ ಮಕ್ಕಳಾದ ಕುಂಭ ನಿಕುಂಭರೆಂಬವರನ್ನು ರಣಾಂಗಣಕ್ಕಟ್ಟಿದನು. ॥ ೪೧–೪೫ ॥ ಅವರೊಡನೆ ಯೂಪಾಕ್ಷ, ವಿರೂಪಾಕ್ಷ, ಪ್ರಜಂಘ, ಕಂಪನರೆಂಬ ನಾಲ್ವರು ರಾಕ್ಷಸವೀರರೂ ಹೊರಟರು. ಆಗಲಾ ರಾಕ್ಷಸೇಶ್ವರನು ಸೇನೆಯವರೆಲ್ಲರನ್ನೂ ನೋಡಿ, "ಎಲೈ ರಾಕ್ಷಸೋತ್ತಮರಿರಾ! ಜಾಗ್ರತೆಯಾಗಿ ಯುದ್ಧಕ್ಕೆ ಹೊರಡಿರಿ. ವಾನರರನ್ನು ಜಯಿಸಿರಿ; ಸ್ವಲ್ಪವೂ ಸಾವಕಾಶ ಮಾಡಬೇಡಿರಿ" ಎಂದು ಆಜ್ಞಾಪಿಸಿದನು. ಆಗಲಾ ರಾಕ್ಷಸರೆಲ್ಲರೂ ಯುದ್ಧಸನ್ನದ್ಧರಾಗಿ ಸಿಂಹನಾದಗಳನ್ನು ಮಾಡುತ್ತ ಲಂಕಾಪಟ್ಟಣದಿಂದ ಹೊರಹೊರಟರು. ಆ ಸಮಯದಲ್ಲಿ ಆ ರಾಕ್ಷಸರ ಆಭರಣಗಳ ಕಾಂತಿಯಿಂದಲೂ, ವಾನರರ ಕೊಳ್ಳಿಗಳ ಕಾಂತಿಯಿಂದಲೂ ಆಕಾಶವು ಚೆನ್ನಾಗಿ ಪ್ರಕಾಶಿಸುತ್ತಿದ್ದಿತು. ಇದು ಮಾತ್ರವಲ್ಲದೆ ಆ ಸಮಯದಲ್ಲಿ

ಭರಣಸ್ಯಾ ಚ ಬಲಯೋರ್ದ್ಯಾಮಭಾಸಯತ್ ‖ ೫೦ ‖ ಚಂದ್ರಾಭಾ ಭೂಷಣಾಭಾಚ ಗೃಹಾಣಾಂ ಜ್ವಲತಾಂ ಚ ಭಾ । ಹರಿರಾಕ್ಷಸಸೈನ್ಯಾನಿ ಭ್ರಾಜಯಾಮಾಸ ಸರ್ವತಃ ‖ ೫೧ ‖ ತತ್ರ ಚೋರ್ಧ್ವಂ ಪ್ರದೀಪ್ತಾನಾಂ ಗೃಹಾಣಾಂ ಸಾಗರಃ ಪುನಃ । ಭಾಭಿಸ್ಸಂಸಕ್ತಪಾತಾಳಶ್ಚಲೋರ್ಮಿಃ ಶುಶುಭೇಽಧಿಕಂ । ಪತಾಕಾ ಧ್ವಜಸಂಸಕ್ತಮುತ್ತಮಾಸಿ ಪರಶ್ವಧಂ ‖೫೨-೫೩‖ ಭೀಮಾಶ್ವರಥಮಾತಂಗಂ ನಾನಾಪತ್ತಿ ಸಮಾಕುಲಂ । ದೀಪ್ತ ಶೂಲ ಗದಾಖಡ್ಗ ಪ್ರಾಸತೋಮರ ಕಾರ್ಮುಕಂ ‖ ೫೪ ‖ ತದ್ರಾಕ್ಷಸಬಲಂ ಘೋರಂ ಭೀಮವಿಕ್ರಮಪೌರುಷಂ । ದದೃಶೇ ಜ್ವಲಿತಪ್ರಾಸಂ ಕಿಂಕಿಣೀಶತನಾದಿತಂ ‖ ೫೫ ‖

ಕಾಂತಿಯು, ತಥೈವ - ಹಾಗೆಯೇ, ತಾರಾಣಾಂ - ನಕ್ಷತ್ರಗಳ, ಆಭಾಚ - ಕಾಂತಿಯೂ, ತಯೋಃ ಬಲಯೋಃ - ಆ ಸೈನ್ಯಗಳಲ್ಲಿರುವ, ಆಭಾಚ-ಕಾಂತಿಯೂ, ದ್ಯಾಂ - ಅಂತರಿಕ್ಷವನ್ನು, ಅಭಾಸಯತ್-ಕಂಗೊಳಿಸುವಂತೆ ಮಾಡಿತು. ‖ ೫೦ ‖ ಚಂದ್ರಾಭಾ - ಚಂದ್ರಕಾಂತಿಯು, ಭೂಷಣಾಭಾಚ - ಒಡವೆಗಳ ಹೊಳಪೂ, ಜ್ವಲತಾಂ - ಉರಿಯುವ, ಗೃಹಾಣಾಂ - ಮನೆಗಳ, ಭಾಚ - ಕಾಂತಿಯೂ, ಹರಿರಾಕ್ಷಸ ಸೈನ್ಯಾನಿ - ವಾನರ ರಾಕ್ಷಸರ ಸೇನೆಗಳನ್ನು, ಸರ್ವತಃ - ಎಲ್ಲೆಡೆಗಳಲ್ಲಿಯೂ, ಭ್ರಾಜಯಾಮಾಸ - ಕಂಗೊಳಿಸುವಂತೆ ಮಾಡಿತು. ‖ ೫೧ ‖ ತತ್ರ - ಆ ಸಮಯದಲ್ಲಿ, ಊರ್ಧ್ವಂ - ಮೇಲ್ಗಡೆಯಲ್ಲಿ, ಪ್ರದೀಪ್ತಾನಾಂ-ಉರಿಯುತ್ತಿರುವ, ಗೃಹಾಣಾಂ-ಮನೆಗಳ, ಭಾಭಿಃ-ಕಾಂತಿಗಳಿಂದ, ಸಂಸ....ಳಃ-ಸಂಬಂಧಿಸಿದ ಪಾತಾಳಲೋಕವುಳ್ಳ, ಸಾಗರಃಪುನಃ - ಸಮುದ್ರವಾದರೆ, ಚಲೋರ್ಮಿಃ - ಚಂಚಲವಾದ ತೆರೆಗಳುಳ್ಳದ್ದಾಗಿ, ಅಧಿಕಂ - ಹೆಚ್ಚಾಗಿ, ಶುಶುಭೇ - ಹೊಳೆಯುತ್ತಿತ್ತು. ‖೫೨‖ ಪತಾ....ಕ್ತಂ-ಧ್ವಜಪಟಗಳಿಂದಲೂ, ನಿಶಾನಿಗಳಿಂದಲೂ ಕೂಡಿದ, ಉತ್ತ....ಧಂ - ಉತ್ತಮವಾದ ಕತ್ತಿಗಳೂ ಕೊಡಲಿಗಳೂ ಉಳ್ಳ, ಭೀಮಾ....ಗಂ - ಭಯಂಕರವಾದ ಕುದುರೆಗಳೂ ಉಳ್ಳ, ನಾನಾ....ಲಂ - ಅನೇಕ ಕಾಲಾಳುಗಳಿಂದ ವ್ಯಾಪ್ತವಾದ, ದೀಪ್ತ....ಕಂ - ಹೊಳೆಯುವ ಶೂಲಾಯುಧಗಳೂ, ಗದಾಯುಧಗಳೂ, ಕತ್ತಿಗಳೂ, ಈಟಿಗೋಲುಗಳೂ, ದೊಣ್ಣೆಗಳೂ, ಬಿಲ್ಲುಗಳೂ ಉಳ್ಳ, ಘೋರಂ - ಭಯಂಕರವಾದ, ಭೀಮ....ಷಂ - ಭಯಂಕರವಾದ ಪರಾಕ್ರಮಗಳೂ ಪುರುಷಪ್ರಯತ್ನಗಳೂ ಉಳ್ಳ, ಜ್ವಲಿತಪ್ರಾಸಂ-ಹೊಳೆಯುವ ಈಟಿಗೋಲುಗಳುಳ್ಳ, ಕಿಂ....ತಂ-ಅನೇಕ ಕಿರುಘಂಟೆಗಳಿಂದ ಶಬ್ದಾಯಮಾನವಾದ, ತದ್ರಾಕ್ಷಸಬಲಂ - ಆ ರಾಕ್ಷಸಸೇನೆಯು, ದದೃಶೇ - ಕಾಣಲ್ಪಟ್ಟಿತು, ಹೇಮ....ಜಂ -

---

ಚಂದ್ರನ ಮತ್ತು ನಕ್ಷತ್ರಗಳ ಕಾಂತಿಯಿಂದಲೂ, ಆ ರಾಕ್ಷಸವೀರರು ಧರಿಸಿದ್ದ ದಿವ್ಯಾಭರಣಗಳ ಕಾಂತಿಯಿಂದಲೂ ರಣಾಂಗಣವು ಬಹು ಮನೋಹರವಾಗಿ ಪ್ರಕಾಶಿಸುತ್ತಿದ್ದಿತು. ‖೪೬–೫೦‖ ಇದೂ ಅಲ್ಲದೆ ಚಂದ್ರನ ಕಾಂತಿಯೂ, ಭೂಷಣಗಳ ಕಾಂತಿಯೂ, ಧಗಧಗನುರಿಯುತ್ತಿರುವ ಲಂಕಾನಗರದ ಭವ್ಯಭವನಗಳ ಕಾಂತಿಯೂ ವಾನರರಾಕ್ಷಸರ ಕಾಂತಿಯೂ ಸೇನೆಗಳೆಲ್ಲವನ್ನೂ ಮಹಾ ಪ್ರಕಾಶಮಾನವಾಗಿ ಮಾಡಿದ್ದಿತು. ಈ ಕಾಂತಿಯಿಂದ ಸಮುದ್ರಪ್ರದೇಶದ ಕಾಂತಿಯೂ ಬಹು ಸೊಗಸಾಗಿದ್ದಿತು. ಆಗ ರಾಕ್ಷಸಸೇನೆಯು ಬಹು ಭಯಂಕರವಾದ ರಥ ಗಜ ತುರಗ ಪದಾತಿಗಳನ್ನೊಳಗೊಂಡುದೂ, ಪ್ರಕಾಶಿಸುತ್ತಿರುವ ಶೂಲ ಗದಾ ಖಡ್ಗ ಪ್ರಾಸ ತೋಮರ ಕಾರ್ಮುಕಗಳನ್ನುಳ್ಳುದೂ, ಭಯಂಕರ ಪೌರುಷ ಪರಾಕ್ರಮಗಳುಳ್ಳುದೂ, ಅನೇಕ ಸಹಸ್ರ ಸಂಖ್ಯಾತಗಳಾದ ಕಿರುಘಂಟೆಗಳುಳ್ಳುದೂ, ಅವುಗಳ ಧ್ವನಿಗಳಿಂದ ತುಂಬಿರುವುದೂ, ಬಂಗಾರದ ಹಗ್ಗಗಳಿಂದ ಪ್ರಕಾಶಿಸುತ್ತಿರುವ ಭುಜಗಳುಳ್ಳುದೂ,

ಹೇಮಜಾಲಾಚಿತಭುಜಂ ವ್ಯಾಮಿಶ್ರಿತ ಪರಶ್ವಧಂ। ವ್ಯಾಘೂರ್ಣಿತ ಮಹಾಶಸ್ತ್ರಂ ಬಾಣ ಸಂಸಕ್ತ ಕಾರ್ಮುಕಂ ॥ ೫೬ ॥ ಗಂಧಮಾಲ್ಯಮಧೂತ್ಸೇಕ ಸಮ್ಮೋದಿತ ಮಹಾನಿಲಂ । ಘೋರಂ ಶೂರಜನಾಕೀರ್ಣಂ ಮಹಾಂಬುಧರ ನಿಸ್ವನಂ ॥ ೫೭ ॥ ತದ್ದೃಷ್ಟ್ವಾ ಬಲ ಮಾಯಾಂತಂ ರಾಕ್ಷಸಾನಾಂ ಸುದಾರುಣಂ।ಸಂಚಚಾಲ ಪ್ಲವಂಗಾನಾಂ ಬಲಮುಚ್ಚೈ ರ್ನನಾದಚ ॥೫೮॥ ಜವೇನಾಪ್ಲುತ್ಯ ಚ ಪುನಸ್ತದ್ಬಲಂ ರಕ್ಷಸಾಂ ಮಹತ್ । ಅಭ್ಯಯಾ ತ್ಪ್ರತ್ಯರಿಬಲಂ ಪತಂಗಾ ಇವ ಪಾವಕಂ ॥೫೯॥ ತೇಷಾಂ ಭುಜಪರಾಮರ್ಶ ವ್ಯಾಮೃಷ್ಟ ಪರಿಘಾಶನಿ । ರಾಕ್ಷಸಾನಾಂ ಬಲಂ ಶ್ರೇಷ್ಠಂ ಭೂಯಸ್ತರಮಶೋಭತ ॥ ೬೦ ॥

ಬಂಗಾರದ ಒಡವೆಗಳ ತಂಡಗಳಿಂದ ವ್ಯಾಪ್ತವಾದ ಭುಜಗಳುಳ್ಳ, ವ್ಯಾಮಿ....ಧಂ ಯುಕ್ತವಾದ ಕೊಡಲಿ ಗಳುಳ್ಳ, ವ್ಯಾಘೂ....ಸ್ತ್ರಂ-ತಿರಸ್ಕರಿಸಲ್ಪಟ್ಟ ಶಸ್ತ್ರಗಳುಳ್ಳ, ಬಾಣ....ಕಂ-ಬಾಣಗಳಿಂದ ಕೂಡಿದ ಬಿಲ್ಲು ಗಳುಳ್ಳ, ಗಂಧ....ಲಂ - ಗಂಧದಿಂದಲೂ, ಪೂದಂಡೆಗಳ ಮಕರಂದರಸಾಧಿಕ್ಯದಿಂದ ವಾಸನೆ ಕಟ್ಟ ಲ್ಪಟ್ಟ ಬಿರುಗಾಳಿಯುಳ್ಳ, ಘೋರಂ - ಭಯಂಕರವಾದ, ಶೂರ....ರ್ಣಂ - ವೀರ ಜನರಿಂದ ತುಂಬಿದ, ಮಹಾ....ನಂ-ದೊಡ್ಡ ಮೇಘಧ್ವನಿಯನ್ನು ಹೋಲುವ ಕಂಠಧ್ವನಿಗಳುಳ್ಳ, ಸ.ದಾರುಣಂ - ಬಹು ಭಯಂಕರವಾದ, ಆಯಾಂತಂ - ಬರುತ್ತಿರುವ, ರಾಕ್ಷಸಾನಾಂ - ರಕ್ಕಸರ, ತದ್ಬಲಂ - ಆ ಬಲವನ್ನು, ದೃಷ್ಟ್ವಾ - ಕಂಡು, ಪ್ಲವಂಗಾನಾಂ - ಕಪಿಗಳ, ಬಲಂ - ಸೈನ್ಯವು, ಸಂಚಚಾಲ - ಜರುಗಿತು, ಉಚ್ಚೈಃ - ಘಟ್ಟಿಯಾಗಿ, ನನಾದಚ - ಕೂಗಿತು. ॥೫೩-೫೮॥ ರಕ್ಷಸಾಂ - ರಕ್ಕಸರ, ಮಹತೀಂ - ದೊಡ್ಡದಾದ, ತದ್ಬಲಂ - ಆ ಸೇನೆಯು, ಜವೇನ - ವೇಗದಿಂದ, ಆಪ್ಲುತ್ಯ - ಹಾರಿ, ಅರಿಬಲಂಪ್ರತಿ - ಶತ್ರುಬಲವನ್ನು ಕುರಿತು, ಪತಂಗಾಃ - ಈಚಲು ಹುಳಗಳು, ಪಾವಕಮಿವ- ಅಗ್ನಿಯನ್ನಂತೆ, ಅಭ್ಯಯಾತ್ - ಅಭಿಮುಖವಾಗಿ ಬಂದಿತು. ॥ ೫೯ ॥ ತೇಷಾಂರಾಕ್ಷಸಾನಾಂ - ಆ ರಕ್ಕಸರ, ಭುಜ....ನೀ - ಭುಜಸ್ಪರ್ಶದಿಂದ ಸಾಣೆ ಹಿಡಿದು ಸಿಡಿಲಿನಂತಿರುವ ಪರಿಘಾಯುಧ ಗಳುಳ್ಳ, ಶ್ರೇಷ್ಠಂ - ಉತ್ತಮವಾದ, ಬಲಂ - ಸೈನ್ಯವು, ಭೂಯಸ್ತರಂ - ಬಹುವಾಗಿ, ಅಶೋಭತ - ಹೊಳೆಯುತ್ತಿತ್ತು. ॥೬೦॥ ಅಥ - ಬಳಿಕ, ಯುಯುತ್ಸವಃ - ಯುದ್ಧೇಚ್ಛೆಯುಳ್ಳ, ಅರಯಃ - ಕಪಿ

ಪ್ರಕಾಶಿಸುತ್ತಿರುವ ಗಂಡುಗೊಡಲಿಗಳುಳ್ಳುದೂ ಆಗಿದ್ದಿತು. ಇಷ್ಟೆಯಲ್ಲದೆ ಪ್ರಬಲವಾದ ಆ ರಾಕ್ಷಸಸೇನೆಯು ಅತ್ಯಧಿಕವಾಗಿ ಹೊಳೆಯುತ್ತಿರುವ ದೊಡ್ಡದೊಡ್ಡ ಆಯುಧಗಳಿಂದಲೂ, ಬಾಣಗಳಿಂದ ಮೆರೆಯುತ್ತಿರುವ ಧನುಸ್ಸುಗಳಿಂದಲೂ, ಗಂಧಪುಷ್ಪಮಾಲ್ಯಾದಿಗಳಿಂದಲೂ, ಮದ್ಯಾದಿಗಳಿಂದಲೂ, ಅವುಗಳ ವಾಸನೆಯನ್ನು ಹೊತ್ತು ಬೀಸುತ್ತಿದ್ದ ಗಾಳಿಯಿಂದಲೂ ಭಯಂಕರವಾಗಿ, ಶೂರಾಗ್ರಣಿಗಳಿಂದ ತುಂಬಿ ಬಹು ದೊಡ್ಡ ಮುಗಿಲಿನ ಧ್ವನಿಯುಳ್ಳದಾಗಿ ಅಬ್ಬರಿಸುತ್ತಿದ್ದಿತು. ॥ ೫೧–೫೭ ॥ ಈ ರೀತಿ ಭಯಂಕರವಾಗಿ ತೋರುತ್ತ ಯುದ್ಧಮಾಡ ಬೇಕೆಂಬ ಕುತೂಹಲದಿಂದ ಬರುತ್ತಿರುವ ಆ ರಾಕ್ಷಸಸೇನೆಯನ್ನು ನೋಡಿ ವಾನರಸೇನೆ ಯೆಲ್ಲವೂ ಬಹಳ ಚಂಚಲವಾಗಿ ಸಿಂಹನಾದಗಳನ್ನು ಮಾಡಿತು. ಆ ಸಮಯದಲ್ಲಿಯೇ ಆ ರಾಕ್ಷಸಸೇನೆಯೆಲ್ಲವೂ ವಾನರಸೇನೆಯ ಮೇಲೆ, ಅಗ್ನಿಯ ಮೇಲೆ ಹಾರುವ ಶಲಭಗಳಂತೆ ಹಾರಿ ಹೊರಟರು. ಆಗ ಭುಜಗಳ ಸಮ್ಮರ್ದದಿಂದ ಮೊಳಗುತ್ತಿದ್ದ ಪರಿಘಗಳೂ, ಅಶನಿ ಗಳು ಇವೇ ಮೊದಲಾದ ಆಯುಧಗಳುಳ್ಳುದೂ, ಮಹಾ ಶ್ರೇಷ್ಠವಾದುದೂ, ಆದ ಆ ರಾಕ್ಷಸ ಬಲವು ಬಹಳವಾಗಿ ಶೋಭಿಸುತ್ತಿದ್ದಿತು. ಆಗ ವಾನರರೆಲ್ಲರೂ ಯುದ್ಧಾಸಕ್ತರಾಗಿ ಮುಟಿಸಿ

ತತ್ರೋನ್ಮತ್ತಾ ಇವೋತ್ಪೇತುರ್ಹರಯೋಽಥಯುಯುತ್ಸವಃ। ತರುಶೈಲೈರಭಿಘ್ನಂತೋ ಮುಷ್ಟಿಭಿಶ್ಚ ನಿಶಾಚರಾನ್ ॥೬೧॥ ತಥೈವಾಪತತಾಂ ತೇಷಾಂ ಕಪೀನಾಮಸಿಭಿಃ ಶಿತೈಃ। ಶಿರಾಂಸಿ ಸಹಸಾ ಜಹ್ರೂ ರಾಕ್ಷಸಾ ಭೀಮದರ್ಶನಾಃ ॥೬೨॥ ದಶನೈರ್ಹೃತ ಕರ್ಣಾಶ್ಚ ಮುಷ್ಟಿ ನಿಷ್ಪೀಡಿತಮಸ್ತಕಾಃ । ಶಿಲಾಪ್ರಹಾರಭಗ್ನಾಂಗಾ ವಿಚೇರುಸ್ತತ್ರ ರಾಕ್ಷಸಾಃ ॥೬೩॥ ತಥೈವಾಪ್ಯಪರೇ ತೇಷಾಂ ಕಪೀನಾಮಭಿಲಕ್ಷಿತಾಃ। ಪ್ರವೀರಾ ನಭಿತೋ ಜಘ್ನೂ ರಾಕ್ಷಸಾನಾಂ ತರಸ್ವಿನಾಂ ॥೬೪॥ ತಥೈವಾಪ್ಯಪರೇ ತೇಷಾಂ ಕಪೀನಾಮಸಿಭಿಃ ಶಿತೈಃ । ಹರಿವೀರಾನ್ನಿಜಘ್ನುಶ್ಚ ಘೋರರೂಪಾ ನಿಶಾಚರಾಃ॥೬೫॥ ಘ್ನಂತಮನ್ಯಂ ಜಘಾನಾನ್ಯಂ ಪಾತಯಂತ ಮಪಾತಯತ್ । ಗರ್ಹಮಾಣಂ ಜಗ

ಗಳು, ತತ್ರ - ಆ ಯುದ್ಧದಲ್ಲಿ, ಉನ್ಮತ್ತಾ ಇವ - ಹುಚ್ಚರಂತೆ, ತರುಶೈಲೈಃ - ವೃಕ್ಷಗಳಿಂದಲೂ, ಬೆಟ್ಟಗಳಿಂದಲೂ, ಮುಷ್ಟಿಭಿಶ್ಚ - ಹಿಡಿಗಳಿಂದಲೂ, ನಿಶಾಚರಾನ್ - ರಾಕ್ಷಸರನ್ನು, ಅಭಿಘ್ನಂತಃ - ಹೊಡೆಯುವವರಾಗಿ, ಉತ್ಪೇತುಃ - ಹಾರಿಬಂದರು. ॥೬೧॥ ತಥೈವ - ಹಾಗೆಯೇ, ಭೀಮದರ್ಶನಾಃ- ಭಯಂಕರವಾದ ದೃಷ್ಟಿಗಳುಳ್ಳ, ರಾಕ್ಷಸಾಃ - ರಕ್ಕಸರು, ಆಪತತಾಂ - ಬರುತ್ತಿರುವ, ತೇಷಾಂ ಕಪೀನಾಂ - ಆ ವಾನರರ, ಶಿರಾಂಸಿ - ಶಿರಸ್ಸುಗಳನ್ನು, ಶಿತೈಃ - ತೀಕ್ಷ್ಣವಾದ, ಅಸಿಭಿಃ - ಕತ್ತಿಗಳಿಂದ, ಸಹಸಾ - ಜಾಗ್ರತೆಯಾಗಿ, ಜಹ್ರುಃ - ಅಪಹರಿಸಿದರು. ॥೬೨॥ ತತ್ರ - ಆ ಯುದ್ಧದಲ್ಲಿ, ರಾಕ್ಷಸಾಃ - ರಕ್ಕಸರೂ, ದಶನೈಃ - ದಂತಗಳಿಂದ, ಹೃತಕರ್ಣಾಶ್ಚ - ಅಪಹರಿಸಲ್ಪಟ್ಟ ಕಿವಿಗಳುಳ್ಳವರಾಗಿ, ಮುಷ್ಟಿ....ಕಾಃ - ಮುಷ್ಟಿಗಳಿಂದ ಎರಚಲ್ಪಟ್ಟ ಶಿರಸ್ಸುಗಳುಳ್ಳವರಾಗಿ, ಶಿಲಾ....ಗಾಃ - ಪಾಷಾಣ ಪ್ರಹಾರಗಳಿಂದ ಭಗ್ನಶರೀರಗಳುಳ್ಳವರಾಗಿ, ವಿಚೇರುಃ ಸಂಚರಿಸಿದರು. ॥೬೩॥ ತಥೈವ-ಹಾಗೆಯೇ, ಅಪರೇಪಿ - ಮತ್ತೆ ಕೆಲವರಾದ, ತೇಷಾಂಕಪೀನಾಂ - ಆ ವಾನರರಲ್ಲಿ, ಅಭಿಲಕ್ಷಿತಾಃ - ಪ್ರಸಿದ್ಧರು, ಅಭಿತಃ - ಎಲ್ಲಾ ಕಡೆಯಲ್ಲಿಯೂ, ತರಸ್ವಿನಾಂ - ಬಲವಂತರಾದ, ರಾಕ್ಷಸಾನಾಂ - ರಾಕ್ಷಸರಲ್ಲಿ, ಪ್ರವೀರಾನ್ - ಶೂರರನ್ನು, ಜಘ್ನುಃ - ಹೊಡೆದರು. ॥೬೪॥ ತಥೈವ - ಅದರಂತೆಯೇ, ಅಪರೇ - ಮತ್ತೆ ಕೆಲವರಾದ, ಘೋರರೂಪಾಃ - ಭಯಂಕರಾಕಾರಗಳುಳ್ಳ, ನಿಶಾಚರಾಃ - ರಕ್ಕಸರು, ಶಿತೈಃ - ತೀಕ್ಷ್ಣವಾದ, ಅಸಿಭಿಃ - ಕತ್ತಿಗಳಿಂದ, ತೇಷಾಂಕಪೀನಾಂ - ಆ ವಾನರರಲ್ಲಿ, ಹರಿವೀರಾನ್ - ಶೂರರಾದ ಕಪಿಗಳನ್ನು, ನಿಜಘ್ನುಃ - ಹೊಡೆದರು. ॥೬೫॥ ಘ್ನಂತಂ - ಹೊಡೆಯುತ್ತಿರುವ, ಅನ್ಯಂ- ಮತ್ತೊಬ್ಬನನ್ನು, ಅನ್ಯಃ - ಇನ್ನೊಬ್ಬನು, ಜಘಾನ - ಹೊಡೆದನು, ಪಾತಯಂತಂ - ಕೆಳಗೆ ಬೀಳಿಸುವವನನ್ನು, ಅಪಾತಯತ್ - ಕೆಡವಿದನು, ಅನ್ಯಃ - ಮತ್ತೊಬ್ಬನು, ಗರ್ಹಮಾಣಂ - ನಿಂದಿಸುವವನನ್ನು, ಜಗರ್ಹೇ - ನಿಂದಿಸಿದನು, ದಶಂತಂ - ಕಚ್ಚುತ್ತಿರುವವನನ್ನು, ಅನ್ಯಃ - ಮತ್ತೊಬ್ಬನು,

---

ಹಾರಿ ಕುಪ್ಪಳಿಸುತ್ತಿದ್ದರು. ವೃಕ್ಷಗಳಿಂದಲೂ, ಶಿಲೆಗಳಿಂದಲೂ, ಆ ವಾನರರು ಪರಾಕ್ರಮಿಸಿದವರಾಗಿ ರಾಕ್ಷಸರನ್ನು ಉನ್ಮತ್ತರಂತೆ ಹೊಡೆಯಲಾರಂಭಿಸಿದರು. ಈ ರೀತಿ ಹೊಡೆಯುತ್ತ ಮಹಾ ವೇಗದಿಂದೈತರುತ್ತಿರುವ ಆ ವಾನರರನ್ನು ನೋಡಿ ಮಹಾ ಭಯಂಕರಾಕಾರರಾದ ಆ ರಾಕ್ಷಸರು ಅವರ ತಲೆಗಳನ್ನು ಚೂಪಾದ ಖಡ್ಗಗಳಿಂದ ತರಿದರು. ॥ ೫೮–೬೫ ॥ ಆಗ ಒಬ್ಬನೊಡನೆ ಯುದ್ಧ ಮಾಡುತ್ತಿದ್ದ ಯೋಧನನ್ನು ಮತ್ತೊಬ್ಬನು ಬಂದು ಮರ್ದಿಸುತ್ತಿದ್ದನು. ಒಬ್ಬರನ್ನೊಬ್ಬರು ಕೆಳಕ್ಕೆಕೆಡವುತ್ತಿರಲು ಅವನನ್ನು ಮತ್ತೊಬ್ಬನು ಮೇಲೆರಗಿ ಕಡಿಯುತ್ತಿರಲು ಅವನ ಮೇಲೆ ಮತ್ತೊಬ್ಬನೆರಗಿ ಕಡಿಯುತ್ತಿದ್ದನು. ಒಬ್ಬನು ಮತ್ತೊಬ್ಬ ಯೋಧನನ್ನು

ಹೇಽನ್ಯೋಽದಶಂತಮಪರೋಽದಶತ್ ||೬೬|| ದೇಹೀತ್ಯನ್ಯೋ ದದಾತ್ಯನ್ಯೋ ದದಾಮೀತ್ಯಪರಃ ಪುನಃ | ಕಿಂಕ್ಲೇಶಯಸಿ ತಿಷ್ಠೇತಿ ತತ್ರಾನ್ಯೋನ್ಯಂ ಬಭಾಷಿರೇ || ೬೭ || ವಿಪ್ರಲಂಬಿತವಸ್ತ್ರಂಚ ವಿಮುಕ್ತ ಕವಚಾಯುಧಂ | ಸಮುದ್ಯತ ಮಹಾಪ್ರಾಸಂ ಯಷ್ಟಿ ಶೂಲಾಸಿ ಸಂಕುಲಂ | ಪ್ರಾವರ್ತತ ಮಹಾರೌದ್ರಂ ಯುದ್ಧಂ ವಾನರರಕ್ಷಸಾಂ ||೬೮|| ವಾನರಾನ್ ದಶಸಪ್ತೇತಿ ರಾಕ್ಷಸಾ ಜಘ್ನುರಾಹವೇ | ರಾಕ್ಷಸಾನ್ ದಶಸಪ್ತೇತಿ ವಾನರಾಶ್ಚಾಭ್ಯಪಾತಯನ್ || ೬೯ ||

ಅದಶತ್ - ಕಚ್ಚಿದನು. || ೬೬ || ದೇಹೀತಿ - ಕೊಡೆಂದು, ಅನ್ಯಃ - ಮತ್ತೊಬ್ಬನು, ದದಾತೀತಿ - ಕೊಡುತ್ತಾನೆಂದು, ಅನ್ಯಃ - ಮತ್ತೊಬ್ಬನೂ, ದದಾಮೀತಿ - ಕೊಡುತ್ತೇನೆಂದು, ಅಪರಃಪುನಃ - ಮತ್ತೊಬ್ಬನಾದರೆ, ಕಿಂಕ್ಲೇಶಯಸಿ - ಏಕೆ ಗೋಳಾಡಿಸುವೆ, ತಿಷ್ಠೇತಿ - ಇರೆಂದು, ತತ್ರ - ಆ ಯುದ್ಧದಲ್ಲಿ, ಅನ್ಯೋನ್ಯಂ - ಪರಸ್ಪರವಾಗಿ, ಬಭಾಷಿರೇ - ಮಾತಾಡುತ್ತಿದ್ದರು. || ೬೭ || ವಾನರ ರಕ್ಷಸಾಂ - ಕಪಿರಾಕ್ಷಸರಿಗೆ, ವಿಪ್ರಲಂಬಿತವಸ್ತ್ರಂಚ - ಜೋಲಾಡುತ್ತಿರುವ ವಸ್ತ್ರಗಳುಳ್ಳಂತೆಯೂ, ವಿಮು....ಧಂ - ಬಿಡಲ್ಪಟ್ಟ ಕವಚಗಳೂ, ಆಯುಧಗಳೂ ಉಳ್ಳಂತೆಯೂ, ಸಮು....ಸಂ - ಎತ್ತಿ ಹಿಡಿಯಲ್ಪಟ್ಟ ದೊಡ್ಡ ಈಟಿಗೋಲುಗಳುಳ್ಳಂತೆಯೂ, ಯಷ್ಟಿ....ಲಂ - ದೊಣ್ಣೆಗಳಿಂದಲೂ, ಶೂಲಗಳಿಂದಲೂ, ಕತ್ತಿಗಳಿಂದಲೂ ವ್ಯಾಪ್ತವಾದಂತೆ, ಮಹಾರೌದ್ರಂ-ಮಹಾ ಭಯಂಕರವಾದ, ಯುದ್ಧಂ-ಕಾಳೆಗವು, ಪ್ರಾವರ್ತತ - ಆರಂಭವಾಯಿತು. ||೬೮|| ಆಹವೇ - ಕಾಳೆಗದಲ್ಲಿ, ರಾಕ್ಷಸಾಃ - ರಕ್ಕಸರು, ದಶಸಪ್ತೇತಿ - ಹತ್ತು ಏಳು ಎಂದು, ಜಘ್ನುಃ - ಹೊಡೆದರು, ವಾನರಾಶ್ಚ - ಕಪಿಗಳೂ ಸಹಾ, ರಾಕ್ಷಸಾನ್ - ರಕ್ಕಸರನ್ನು, ದಶಸಪ್ತೇತಿ - ಹತ್ತು ಏಳು ಎಂದು, ಅಭ್ಯಪಾತಯನ್ - ಕೆಡವಿದರು. ||೬೯|| ವಾನರಾಃ - ಕಪಿಗಳು, ವಿಶ್ರ....ನಂ - ಜಾರಿದ ಕೇಶಗಳೂ, ವಸ್ತ್ರಗಳೂ ಉಳ್ಳ, ವಿಧ್ವ....ಜಂ-

---

ಕುರಿತು ತನಗೆ ಯುದ್ಧವೀಯಬೇಕೆಂದು ಕರೆಯುತ್ತಿರಲು ಅವನನ್ನು ಮತ್ತೊಬ್ಬನೂ ಅಂತೆಯೇ ಕರೆಯುತ್ತಿದ್ದನು. ಒಬ್ಬನು ಇನ್ನೊಬ್ಬನನ್ನು ನಿಲ್ಲುನಿಲ್ಲೆನ್ನುತ್ತಿರಲು ಅವನನ್ನು ಮತ್ತೊಬ್ಬನು ನಿಲ್ಲುನಿಲ್ಲೆಂದು ಅಟ್ಟಿ ಬರುತ್ತಿದ್ದನು. ಹೀಗೆ ರಾಕ್ಷಸರೂ, ವಾನರರೂ ಮಹಾ ಭಯಂಕರವಾಗಿ ಯುದ್ಧ ಮಾಡುತ್ತಿದ್ದರು. ಆ ಸಮಯದಲ್ಲಿ ಆ ವಾನರ ರಾಕ್ಷಸರ ಯುದ್ಧ ಭೂಮಿಯು ಜೋಲಾಡುತ್ತಿರುವ ವಸ್ತ್ರಗಳುಳ್ಳದಾಗಿಯೂ, ಕೊಲ್ಲಲೆತ್ತಿದ ದೊಡ್ಡ ದೊಡ್ಡ ಖಡ್ಗಗಳುಳ್ಳದಾಗಿಯೂ, ಅನೇಕ ವಿಧವಾದ ಕಬ್ಬಿಣದ ಕೋಲುಗಳೂ, ಶೂಲಗಳೂ, ಗಂಡು ಗೊಡಲಿಗಳೂ ಉಳ್ಳದಾಗಿಯೂ ಇದ್ದಿತು. ಅಲ್ಲದೆ ಆ ಸಮಯದಲ್ಲಿ ರಾಕ್ಷಸಯೋಧರು ಒಂದೊಂದೇ ಏಟಿಗೆ ಹತ್ತು ಮಂದಿ ಏಳು ಮಂದಿ ವಾನರರನ್ನು ಕೊಂದು ಕೆಡವುತ್ತಿದ್ದರು. ವಾನರವೀರರೂ ಹಾಗೆಯೇ ಹತ್ತು ಮಂದಿ, ಏಳು ಮಂದಿ ರಾಕ್ಷಸರನ್ನು ಕೊಂದು ಕೆಡುವುತ್ತಿದ್ದರು. ಆ ಸಮಯದಲ್ಲಿ ವಾನರರೆಲ್ಲರೂ ಚದುರಿಹೋದ ವಸ್ತ್ರಗಳೂ, ತಲೆ

ವಿಸ್ರಸ್ತ ಕೇಶ ವಸನಂ ವಿಧ್ವಸ್ತ ಕವಚಧ್ವಜಂ ।
ಬಲಂ ರಾಕ್ಷಸಮಾಲಂಬ್ಯ ವಾನರಾಃ ಪರ್ಯವಾರಯನ್ ॥ ೭೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಸಪ್ತತಿತಮಸ್ಸರ್ಗಃ

ನಾಶಗೊಳಿಸಲ್ಪಟ್ಟ ಕವಚಗಳೂ, ಧ್ವಜಗಳೂ ಉಳ್ಳ, ರಾಕ್ಷಸಂ - ರಾಕ್ಷಸರ ಸಂಬಂಧವಾದ, ಬಲಂ-ಸೈನ್ಯವನ್ನು, ಆಲಂಬ್ಯ - ಹಿಡಿದು, ಪರ್ಯವಾರಯನ್ - ಸುತ್ತಿಕೊಂಡರು. ॥ ೭೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಸಪ್ತತಿತಮಸ್ಸರ್ಗಃ.

ಗೂದಲೂ ಮುರಿದುಹೋದ ಕವಚಗಳೂ ಉಳ್ಳ, ಆ ರಾಕ್ಷಸಸೇನೆಯಲ್ಲೆಲ್ಲಾ ವ್ಯಾಪಿಸಿದರು. ॥ ೬೬-೭೦ ॥

ಇಂತಿದು ವಾನರ ರಾಕ್ಷಸರ ರಾತ್ರಿಯುದ್ಧ ವರ್ಣನವೆಂಬ ಎಪ್ಪತ್ತೈದನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಷಟ್ಸಪ್ತತಿತಮಸ್ಸರ್ಗಃ

ಪ್ರವೃತ್ತೇ ಸಂಕುಲೇ ತಸ್ಮಿನ್ ಘೋರೇ ವೀರಜನಕ್ಷಯೇ । ಅಂಗದಃ ಕಂಪನಂ ವೀರ ಮಾಸಸಾದ ರಣೋತ್ಸುಕಃ ॥೧॥ ಆಹೂಯ ಸೋಽಂಗದಂ ಕೋಪಾ ತ್ತಾಡಯಾ ಮಾಸ ವೇಗಿತಃ । ಗದಯಾ ಕಂಪನಃ ಪೂರ್ವಂ ಸ ಚಚಾಲ ಭೃಶಾಹತಃ ॥ ೨ ॥ ಸಂಜ್ಞಾಂ ಪ್ರಾಪ್ಯ ಸ ತೇಜಸ್ವೀ ಚಿಕ್ಷೇಪ ಶಿಖರಂ ಗಿರೇಃ । ಅರ್ದಿತಶ್ಚ ಪ್ರಹಾರೇಣ ಕಂಪನಃ ಪತಿತೋ ಭುವಿ ॥೩॥ ತತಸ್ತು ಕಂಪನಂ ದೃಷ್ಟ್ವಾ ಶೋಣಿತಾಕ್ಷೋ ಹತಂ ರಣೇ । ರಥೇನಾಭ್ಯ ಪತತ್ ಕ್ಷಿಪ್ರಂ ತತ್ರಾಂಗದ ಮಭೀತವತ್ ॥ ೪ ॥ ಸೋಽಂಗದಂ

ಘೋರೇ - ಭಯಂಕರವಾದ, ವೀರಜನಕ್ಷಯೇ - ವಿಶೇಷವಾಗಿ ವೀರಜನರನ್ನು ನಾಶ ಗೊಳಿಸುತ್ತಿರುವ, ಸಂಕುಲೇ - ಸಮ್ಮರ್ದವಾದ, ತಸ್ಮಿನ್ - ಆ ಕಾಳೆಗವು, ಪ್ರವೃತ್ತೇ - ನಡೆಯಲು, ರಣೋತ್ಸುಕಃ - ಯುದ್ಧದಲ್ಲಿ ಉತ್ಕಂಠೆಯುಳ್ಳ, ಅಂಗದಃ - ಅಂಗದನು, ವೀರಂ - ಶೂರನಾದ, ಕಂಪನಂ - ಕಂಪನನನ್ನು, ಆಸಸಾದ - ಹೊಂದಿದನು. ॥೧॥ ಸಕಂಪನಃ - ಆ ಕಂಪನನು, ವೇಗತಃ- ವೇಗವುಳ್ಳವನಾಗಿ, ಕೋಪಾತ್ - ಕ್ರೋಧದಿಂದ, ಅಂಗದಂ - ಅಂಗದನನ್ನು, ಆಹೂಯ - ಕರೆದು, ಪೂರ್ವಂ - ಮೊದಲು, ಗದಯಾ - ಗದೆಯಿಂದ, ತಾಡಯಾಮಾಸ - ಹೊಡೆದನು, ಸಃ - ಆ ಅಂಗ ದನು, ಭೃಶಾಹತಃ - ವಿಶೇಷವಾಗಿ ಹೊಡೆಯಲ್ಪಟ್ಟವನಾಗಿ, ಚಚಾಲ - ನಡುಗಿದನು. ॥ ೨ ॥ ತೇಜಸ್ವೀ - ಸಾಮರ್ಥ್ಯವಂತನಾದ, ಸಃ - ಆ ಅಂಗದನು, ಸಂಜ್ಞಾಂ - ಪ್ರಜ್ಞೆಯನ್ನು, ಪ್ರಾಪ್ಯ - ಹೊಂದಿ, ಗಿರೇಃ - ಪರ್ವತದ, ಶಿಖರಂ - ಶೃಂಗವನ್ನು, ಚಿಕ್ಷೇಪ - ಎಸೆದನು, ಪ್ರಹಾರೇಣ - ಶಿಖರ ಪ್ರಹಾರದಿಂದ, ಅರ್ದಿತಃ - ಹೊಡೆಯಲ್ಪಟ್ಟವನಾಗಿ, ಭುವಿ - ನೆಲದಲ್ಲಿ, ಪತಿತಃ - ಬಿದ್ದನು. ॥ ೩ ॥ ತತಃ - ಬಳಿಕ, ಶೋಣಿತಾಕ್ಷಸ್ತು - ಶೋಣಿತಾಕ್ಷನಾದರೆ, ರಣೇ - ಕಾಳೆಗದಲ್ಲಿ, ಹತಂ - ಹೊಡೆಯ ಲ್ಪಟ್ಟ, ಕಂಪನಂ - ಕಂಪನನನ್ನು, ದೃಷ್ಟ್ವಾ - ಕಂಡು, ತತ್ರ - ಆ ರಣದಲ್ಲಿ, ಅಂಗದಂ - ಅಂಗದ ನನ್ನು ಕುರಿತು, ಅಭೀತವತ್ - ನಿರ್ಭಯವಾಗಿ, ಕ್ಷಿಪ್ರಂ - ಜಾಗ್ರತೆಯಾಗಿ, ರಥೇನ - ತೇರಿನಿಂದ,

---

ಈ ರೀತಿ ವಾನರರಿಗೂ, ರಾಕ್ಷಸರಿಗೂ ಮಹಾ ವೀರರೆಲ್ಲರೂ ನಾಶವಾಗುವಂತಹ ಘೋರವಾದ ಸಂಕುಲಯುದ್ಧವು ನಡೆಯುತ್ತಿರಲು, ಯುದ್ಧಾಸಕ್ತನಾದ ಅಂಗದಕುಮಾ ರನು ಮಹಾ ವೀರನಾದ ಅಕಂಪನನೆಂಬ ರಾಕ್ಷಸನನ್ನೆದುರಿಸಿ ನಿಂತನು. ಆಗ ಅಕಂಪನನೂ ಆಯಂಗದನನ್ನು ಯುದ್ಧಕ್ಕೆ ಬಾರೆಂದು ಕರೆದು ಕೋಪದಿಂದ ಬಹುವಾಗಿ ಕೆರಳಿ ಮಹಾ ವೇಗವನ್ನವಲಂಬಿಸಿ ತನ್ನ ಗದಾಯುಧದಿಂದ ಅವನನ್ನು ಬಲವಾಗಿ ಹೊಡೆದನು. ಅಂಗದನ ಆ ಹೊಡೆತವನ್ನು ತಡೆಯಲಾರದೆ ತಾನಿದ್ದೆಡೆಯಿಂದ ಚಲಿಸಿಹೋದನು. ಸ್ವಲ್ಪ ಹೊತ್ತಾದ ತರುವಾಯ ಮಹಾ ತೇಜಸ್ವಿಯಾದ ಆ ಕಪಿಶ್ರೇಷ್ಠನು ಎಚ್ಚೆತ್ತುಕೊಂಡು ಪರ್ವತಶಿಖರ ವೊಂದನ್ನೆತ್ತಿ ಅಕಂಪನನ ಮೇಲೆಸೆದನು. ಆ ಶಿಖರಪ್ರಹಾರದಿಂದ ಆ ರಾಕ್ಷಸನು ನುಚ್ಚುನುರಿಯಾಗಿ ನೆಲಕ್ಕುರುಳಿ ಬಿದ್ದನು. ಹೀಗೆ ಅಕಂಪನನು ಮಡಿದುರುಳಿದುದನ್ನು ಕಂಡು ಶೋಣಿತಾಕ್ಷನೆಂಬ ರಾಕ್ಷಸೋತ್ತಮನು ರಥಾರೂಢನಾಗಿ ಏನೊಂದು ಹೆದರಿಕೆಯೂ

ನಿಶಿತೈರ್ಬಾಣೈಸ್ತದಾ ವಿವ್ಯಾಧ ವೇಗಿತಃ । ಶರೀರ ದಾರಣೈಸ್ತೀಕ್ಷ್ಣೈಃ ಕಾಲಾಗ್ನಿಸಮ ವಿಗ್ರಹೈಃ ॥೫॥ ಕ್ಷುರಪ್ರೈ ರರ್ಧನಾರಾಚೈರ್ವತ್ಸದಂತೈಃ ಶಿಲೀಮುಖೈಃ । ಕರ್ಣಿ ಶಲ್ಯ ವಿಪಾಠೈಶ್ಚ ಬಹುಭಿರ್ನಿಶಿತೈಃ ಶರೈಃ ॥೬॥ ಅಂಗದಃ ಪ್ರತಿವಿದ್ಧಾಂಗೋ ವಾಲಿಪುತ್ರಃ ಪ್ರತಾಪವಾನ್ । ಧನುರಗ್ರ್ಯಂ ರಥಂ ಬಾಣಾನ್ ಮಮರ್ದ ತರಸಾ ಬಲೀ ॥೭॥ ಶೋಣಿತಾಕ್ಷಸ್ತತಃ ಕ್ಷಿಪ್ರಮಸಿಚರ್ಮ ಸಮಾದದೇ । ಉತ್ಪಪಾತ ದಿವಂ ಕ್ರುದ್ಧೋ ವೇಗವಾನವಿಚಾರಯನ್ ॥೮॥ ತಂ ಕ್ಷಿಪ್ರತರಮಾಪ್ಲುತ್ಯ ಪರಾಮೃಶ್ಯಾಽಂಗದೋ ಬಲೀ ।

ಅಭ್ಯಪತತ್ - ಬಂದನು. ॥೪॥ ಸಃ - ಆ ಶೋಣಿತಾಕ್ಷನು, ವೇಗಿತಃ - ವೇಗವುಳ್ಳವನಾಗಿ, ನಿಶಿತೈಃ-ತೀಕ್ಷ್ಣಗಳಾದ, ಬಾಣೈಃ - ಬಾಣಗಳಿಂದ, ಅಂಗದಂ - ಅಂಗದನನ್ನು, ವಿವ್ಯಾಧ - ಹೊಡೆದನು, ಶರೀರದಾರಣೈಃ - ಶರೀರವನ್ನು ಸೀಳುತ್ತಿರುವ, ತೀಕ್ಷ್ಣೈಃ - ಹದವಾದ, ಕಾಲಾ....ಹೈಃ - ಪ್ರಳಯಾಗ್ನಿಗೆ ಸಮಾನವಾದ ಆಕಾರಗಳುಳ್ಳ, ಕ್ಷುರಪ್ರೈಃ - ಅರ್ಧಚಂದ್ರಾಕಾರವಾಗಿರುವ ಬಾಣಗಳಿಂದಲೂ, ನಾರಾಚೈಃ - ನಿಡಿಗೋಲುಗಳಿಂದಲೂ, ವತ್ಸದಂತೈಃ - ಕರುವಿನ ಹಲ್ಲುಗಳಂತೆ ಹದವಾಗಿರುವ ಬಾಣಗಳಿಂದಲೂ, ಕರ್ಣಿ....ಶ್ಚ - ಕಿವಿಗಳುಳ್ಳ ಬಾಣಗಳಿಂದಲೂ, ಅರ್ಧನಾರಾಚಗಳೆಂಬ ಬಾಣಗಳಿಂದಲೂ, ಬಹುಭಿಃ - ಅನೇಕವಾದ, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದಲೂ, ಪ್ರತಿವಿದ್ಧಾಂಗಃ - ಹೊಡೆಯಲ್ಪಟ್ಟ ಅವಯವಗಳುಳ್ಳ, ವಾಲಿಪುತ್ರಃ - ವಾಲಿಯ ಮಗನಾದ, ಪ್ರತಾಪವಾನ್ - ಪರಾಕ್ರಮಿಯಾದ, ಬಲೀ - ಬಲವಂತನಾದ, ಅಂಗದಃ - ಅಂಗದನು, ತರಸಾ - ಬಲದಿಂದ, ಅಗ್ರ್ಯಂ - ಶ್ರೇಷ್ಠವಾದ, ಧನುಃ - ಬಿಲ್ಲನ್ನೂ, ರಥಂ - ತೇರನ್ನೂ, ಮಮರ್ದ - ಹೊಡೆದನು. ॥೫-೭॥ ತತಃ - ಬಳಿಕ, ಶೋಣಿತಾಕ್ಷಃ - ಶೋಣಿತಾಕ್ಷನು, ಕ್ಷಿಪ್ರಂ - ಜಾಗ್ರತೆಯಾಗಿ, ಅಸಿಚರ್ಮ - ಖಡ್ಗಖೇಡ್ಯಗಳನ್ನು, ಸಮಾದದೇ - ತೆಗೆದುಕೊಂಡನು, ವೇಗವಾನ್ - ವೇಗವುಳ್ಳವನಾಗಿ, ಕ್ರುದ್ಧಃ - ಕುಪಿತನಾಗಿ, ಅವಿಚಾರಯನ್ - ವಿಮರ್ಶಿಸದಿರುವವನಾಗಿ, ದಿವಂ - ಅಂತರಿಕ್ಷವನ್ನು ಕುರಿತು, ಉತ್ಪಪಾತ - ಹಾರಿದನು. ॥೮॥ ಬಲೀ - ಬಲಿಷ್ಠನಾದ, ಅಂಗದಃ - ಅಂಗದನು, ಪರಾಮೃಶ್ಯ - ಆಲೋಚಿಸಿ, ತಂ - ಆ ಶೋಣಿತಾಕ್ಷನನ್ನು ಕುರಿತು, ಕ್ಷಿಪ್ರತರಂ - ಅತಿ ಜಾಗ್ರತೆಯಾಗಿ, ಆಪ್ಲುತ್ಯ - ಹಾರಿ, ಕರೇಣ - ಹಸ್ತದಿಂದ, ತಸ್ಯ - ಆ ಶೋಣಿತಾಕ್ಷನ, ತಂಖಡ್ಗಂ - ಆ ಕತ್ತಿಯನ್ನು,

ಇಲ್ಲದೆ ಆಯಂಗದನ ಮೇಲಟ್ಟಿಬಂದನು. ಅವನು ಮಹಾ ವೇಗವುಳ್ಳವನಾಗಿ ಅನೇಕ ಬಾಣಗಳನ್ನು ಬಿಲ್ಲಿನಲ್ಲಿ ಹೂಡಿ ಅಂಗದನನ್ನು ಹೊಡೆದನು. ಆ ಬಾಣಗಳಾದರೋ ಶರೀರವನ್ನೇ ಸೀಳುವವುಗಳಾಗಿಯೂ, ಪ್ರಳಯಕಾಲಾಗ್ನಿಗೆ ಸಮಾನಗಳಾಗಿಯೂ ಇದ್ದುವು. ॥೧-೫॥ ಆ ಶೋಣಿತಾಕ್ಷನು ಇಷ್ಟಕ್ಕೇ ಬಿಡದೆ ಕಿರುಗತ್ತಿಗಳಿಂದಲೂ, ಅರ್ಧಚಂದ್ರಾಕಾರಗಳಾದ ಬಾಣಗಳಿಂದಲೂ, ದೀರ್ಘ ಬಾಣಗಳಿಂದಲೂ, ವತ್ಸದಂತಾಕಾರಗಳಾದ ಬಾಣಗಳಿಂದಲೂ, ರೆಕ್ಕೆಗಳಿರುವ ಕೂರಂಬುಗಳಿಂದಲೂ, ಎರಡೂ ಪಕ್ಕಗಳಲ್ಲಿ ಕಿವಿಗಳುಳ್ಳ ಬಾಣಗಳಿಂದಲೂ, ಶಲ್ಯವಿಪಾಠಗಳೆಂಬ ತೀಕ್ಷ್ಣಗಳಾದ ಬಾಣಗಳಿಂದ ಆ ಕಪಿವೀರರನ್ನು ನೋಯಿಸಿದನು. ವಾಲಿಪುತ್ರನೂ, ಮಹಾ ಪ್ರತಾಪನನೂ ಆದ ಅಂಗದಕುಮಾರನು ಆ ರಾಕ್ಷಸನ ರಥಕ್ಕೆ ಹಾರಿ ಅತ್ಯಲ್ಪ ಕಾಲದಲ್ಲಿಯೇ ಆ ರಥವನ್ನೂ, ಆ ರಾಕ್ಷಸನು ಹಿಡಿದಿದ್ದ ಬಿಲ್ಲುಬಾಣಗಳನ್ನೂ ಮುರಿದಿಕ್ಕಿದನು. ಆಗಲಾ ಶೋಣಿತಾಕ್ಷನೂ ಅಸಿ ಚರ್ಮವನ್ನು ತೆಗೆದುಕೊಂಡು ಕೂಡಲೇ ಗಗನಕ್ಕೆ ಹಾರಿದನು. ಅಂಗದನೂ ಕೂಡಲೇ ಹಾರಿ ಆ ರಾಕ್ಷಸನ ಕೈಯಲ್ಲಿದ್ದ

ಕರೇಣ ತಸ್ಯ ತಂ ಖಡ್ಗಂ ಸಮಾಚ್ಛಿದ್ಯ ನನಾದಚ ||೯|| ತಸ್ಯಾಂ ಸಫಲಕೇ ಖಡ್ಗಂ ನಿಜಘಾನ ತತೋಽಂಗದಃ | ಯಜ್ಞೋಪವೀತವಚ್ಚೈನಂ ಚಿಚ್ಛೇದ ಕಪಿಕುಂಜರಃ ||೧೦|| ತಂ ಪ್ರಗೃಹ್ಯ ಮಹಾಖಡ್ಗಂ ವಿನದ್ಯಚ ಪುನಃಪುನಃ | ವಾಲಿಪುತ್ರೋಽಭಿದುದ್ರಾವ ರಣಶೀರ್ಷೇ ಪರಾನರೀನ್ || ೧೧ || ಆಯಸೀಂತು ಗದಾಂ ವೀರಃ ಪ್ರಗೃಹ್ಯ ಕನಕಾಂಗದಃ | ಶೋಣಿತಾಕ್ಷಸ್ಸಮಾವಿಧ್ಯ ತಮೇವಾನುಪಪಾತಹ ||೧೨|| ಪ್ರಜಂಘಸಹಿತೋ ವೀರೋ ಯೂಪಾಕ್ಷಸ್ತು ತತೋ ಬಲೀ | ರಥೇನಾಽಭಿಯಯೌ ಕ್ರುದ್ಧೋ ವಾಲಿಪುತ್ರಂ ಮಹಾಬಂ || ೧೩ || ತಯೋರ್ಮಧ್ಯೇ ಕಪಿಶ್ರೇಷ್ಠಃ ಶೋಣಿತಾಕ್ಷಪ್ರಜಂ

ಸಮಾಚ್ಛಿದ್ಯ - ಕಿತ್ತುಕೊಂಡು, ನನಾದಚ - ಧ್ವನಿಮಾಡಿದನು. ||೯|| ತತಃ - ಬಳಿಕ, ಕಪಿಕುಂಜರಃ- ವಾನರೋತ್ತಮನಾದ, ಅಂಗದಃ - ಅಂಗದನು, ತಸ್ಯ - ಆ ಶೋಣಿತಾಕ್ಷನ, ಅಂಸಫಲಕೇ - ಹಲಿಗೆಯಂತಿರುವ ಹೆಗಲಿನೆಲ್ಲಿ, ಖಡ್ಗಂ - ಕತ್ತಿಯನ್ನು, ನಿಜಘಾನ - ಹೊಡದನು, ಏನಂ - ಈ ಶೋಣಿತಾಕ್ಷನನ್ನು, ಯಜ್ಞೋಪವೀತವತ್ - ಯಜ್ಞೋಪವೀತವನ್ನಂತೆ, ಚಿಚ್ಛೇದ - ಕತ್ತರಿಸಿದನು. ||೧೦|| ವಾಲಿಪುತ್ರಃ - ಅಂಗದನು, ತಂಮಹಾಖಡ್ಗಂ - ಆ ಮಹತ್ತರವಾದ ಖಡ್ಗವನ್ನು, ಪ್ರಗೃಹ್ಯ - ಹಿಡಿದು ಪುನಃಪುನಃ - ಬಾರಿಬಾರಿಗೂ, ವಿನದ್ಯ - ಕೂಗಿ, ರಣಶೀರ್ಷೇ - ರಣಾಗ್ರದಲ್ಲಿ, ಪರಾ೯ - ಇತರರಾದ, ಅರೀ೯ - ಶತ್ರುಗಳನ್ನು ಕುರಿತು, ಅಭಿದುದ್ರಾವ - ಓಡಿಬಂದನು. ||೧೧|| ಕನಕಾಂಗದಃ- ಚಿನ್ನದ ತೋಳುಬಂದಿಗಳುಳ್ಳ, ವೀರಃ - ಶೂರನಾದ, ಶೋಕ್ಷಿತಾಕ್ಷಃ - ಶೋಣಿತಾಕ್ಷನು,ಆಯಸೀಂ - ಕಬ್ಬಿಣದ, ಗದಾಂ - ಗದೆಯನ್ನು, ಪ್ರಗೃಹ್ಯ - ಹಿಡಿದು, ತಮೇವ - ಆ ಅಂಗದನನ್ನೇ, ಸಮಾವಿಧ್ಯ - ಹೊಡದು, ಅನುಪಪಾತಹ - ಅನುಸರಿಸಿ ಬಂದನು. || ೧೨ || ತತಃ - ಬಳಿಕ, ಬಲೀ - ಬಲಶಾಲಿಯಾದ, ವೀರಃ - ಶೂರನಾದ, ಪ್ರಜಂಘಸಹಿತಃ - ಪ್ರಜಂಘನೊಡಗೂಡಿದ, ಯೂಪಾಕ್ಷಸ್ತು - ಯೂಪಾಕ್ಷನಾದರೆ, ಕ್ರುದ್ಧಃ - ಕೋಪಗೊಂಡು, ರಥೇನ - ರಥದಿಂದ, ಮಹಾಬಲಂ - ಬಹು ಬಲವುಳ್ಳ, ವಾಲಿಪುತ್ರಂ - ಅಂಗದನನ್ನು ಕುರಿತು, ಅಭಿಯಯೌ - ಎದುರಿಗೆ ಬಂದನು. || ೧೩ || ಶೋಣಿ....ಯೋಃ - ಶೋಣಿತಾಕ್ಷ ಪ್ರಜಂಘರೆಂಬ, ತಯೋಃ - ಅವರಿಬ್ಬರ, ಮಧ್ಯೇ - ಮಧ್ಯಪ್ರದೇಶದಲ್ಲಿ, ಕಪಿಶ್ರೇಷ್ಠಃ - ವಾನರೋತ್ತಮನಾದ ಅಂಗದನು, ವಿಶಾಖಯೋಃ - ವಿಶಾಖಾನಕ್ಷತ್ರಗಳ, ಮಧ್ಯಗತಃ - ಮಧ್ಯದಲ್ಲಿರುವ, ಪೂರ್ಣಚಂದ್ರಇವ - ಪೂರ್ಣಚಂದ್ರನಂತೆ,

---

ಖಡ್ಗವನ್ನು ಸೆಳೆದುಕೊಂಡು ದೊಡ್ಡದಾಗಿ ಸಿಂಹಧ್ವನಿ ಮಾಡಿದನು. ಇಷ್ಟುಮಾತ್ರವಲ್ಲದೆ ಆ ಕಪಿಶ್ರೇಷ್ಠನು ಅದೇ ಖಡ್ಗದಿಂದಲೇ ಆ ರಾಕ್ಷಸನ ಹಣೆಗೆ ಹೊಡೆದದೂ ಅಲ್ಲದೆ ಅವನನ್ನು ಯಜ್ಞೋಪವೀತವನ್ನೆಂತೋ ಅಂತು ಕತ್ತರಿಸಿ ಕೆಡವಿದನು. || ೬–೧೦ || ಇದಾದ ತರುವಾಯ ಮಹಾ ವೀರನಾದ ಆಯಂಗದನು ಅದೇ ಖಡ್ಗವನ್ನು ಹಿಡಿದೇ ಇತರ ಶತ್ರುಗಳನ್ನು ಎದುರಿಸಲೋಸುಗ ರಣರಂಗಕ್ಕಿಳಿದನು. ಆಗ ಯೂಪಾಕ್ಷನೆಂಬ ಮಹಾ ಬಲಿಷ್ಠನಾದ ರಾಕ್ಷಸೋತ್ತಮನು ಪ್ರಜಂಘಾಸುರನೊಡಗೂಡಿ ರಥಾರೂಢನಾಗಿ ಅಂಗದನ ಮೇಲೆ ತುರುಬಿ ಬಂದನು. ಕನಕಾಂಗದನಾದ ಶೋಣಿತಾಕ್ಷನೂ ಸಹ ಈ ವೇಳೆಗೆ ಚೇತರಿಸಿಕೊಂಡು ಕಬ್ಬಿಣದ ಗದೆಯನ್ನೆತ್ತಿಕೊಂಡು ಅಂಗದನನ್ನೇ ಅಟ್ಟಬಂದನು. ಪ್ರಜಂಘನೂ ಯೂಪಾಕ್ಷನೊಡಗೂಡಿ ರಥಾರೂಢನಾಗಿ ಮಹಾ ಕೋಪಾಟೋಪದಿಂದ ಅಂಗದನನ್ನಟ್ಟಿ ಬಂದನು. ಈ ಶೋಣಿತಾಕ್ಷ ಪ್ರಜಂಘರ ನಡುವೆ ಯುದ್ಧ ಮಾಡುತ್ತಿದ್ದ ಆ ಅಂಗದನು ವಿಶಾಖಾ ನಕ್ಷತ್ರ

ಘಯೋಃ । ವಿಶಾಖಯೋರ್ಮಧ್ಯಗತಃ ಪೂರ್ಣಚಂದ್ರ ಇವಾಭವತ್ ॥ ೧೪ ॥
ಅಂಗದಂ ಪರಿರಕ್ಷಂತೌ ಮೈಂದೋ ದ್ವಿವಿದವಿವಚ । ತಸ್ಯ ತಸ್ಥತುರಭ್ಯಾಶೇ ಪರಸ್ಪರ
ದಿದೃಕ್ಷಯಾ ॥ ೧೫ ॥ ಅಭಿಪೇತುರ್ಮಹಾಕಾಯಾಃ ಪ್ರತಿಯತ್ತಾ ಮಹಾಬಲಾಃ ।
ರಾಕ್ಷಸಾ ವಾನರಾನ್ ರೋಷಾದಸಿಚರ್ಮಗದಾಧರಾಃ ॥ ೧೬ ॥ ತ್ರಯಾಣಾಂ ವಾನ
ರೇಂದ್ರಾಣಾಂ ತ್ರಿಭೀ ರಾಕ್ಷಸಪುಂಗವೈಃ । ಸಂಸಕ್ತಾನಾಂ ಮಹದ್ಯುದ್ಧ ಮಭವದ್ರೋ
ಮಹರ್ಷಣಂ ॥ ೧೭ ॥ ತೇತು ವೃಕ್ಷಾನ್ ಸಮಾದಾಯ ಸಂಪ್ರಚಿಕ್ಷಿಪು ರಾಹವೇ ।
ಖಡ್ಗೇನ ಪ್ರತಿಚಿಚ್ಛೇದ ತಾನ್ ಪ್ರಜಂಘೋ ಮಹಾಬಲಃ॥೧೮॥ ರಥಾ ನಶ್ವಾನ್ ದ್ರುಮೈಃ
ಸ್ತೈಶ್ಶೈಲೈ ಪ್ರಚಿಕ್ಷಿಪುರಾಹವೇ । ಶರೌಘೈಃ ಪ್ರತಿಚಿಚ್ಛೇದ ತಾನ್ ಯೂಪಾಕ್ಷೋ

ಅಭವತ್ - ಆದನು. ॥ ೧೪ ॥ ಅಂಗದಂ - ಅಂಗದನನ್ನು, ಪರಿರಕ್ಷಂತೌ - ಸಂರಕ್ಷಿಸುತ್ತಿರುವ, ಮೈಂದಃ - ಮೈಂದನೂ, ದ್ವಿವಿದವಿವಚ - ದ್ವಿವಿದನೂ ಸಹಾ, ತಸ್ಯ - ಆ ಅಂಗದನ, ಅಭ್ಯಾಶೇ - ಸಮೀಪದಲ್ಲಿ, ಪರ....ಯಾ - ಒಬ್ಬೊಬ್ಬರನ್ನೊಬ್ಬರು ನೋಡಲಿಚ್ಛೆಯಿಂದ, ತಸ್ಥತುಃ - ನಿಂತರು. ॥೧೫॥ ಮಹಾಕಾಯಾಃ - ದೊಡ್ಡ ಶರೀರಗಳುಳ್ಳ, ಪ್ರತಿಯತ್ತಾಃ - ಪ್ರತಿಕ್ರಿಯೆ ಮಾಡುವದರಲ್ಲಿ ಪ್ರಯತ್ನವುಳ್ಳ. ಮಹಾಬಲಾಃ - ಬಹು ಬಲವಂತರಾದ, ರಾಕ್ಷಸಾಃ - ರಕ್ಕಸರು, ಅಸಿ....ರಾಃ - ಖಡ್ಗಗಳನ್ನೂ, ಖೇಡ್ಯ ಗಳನ್ನೂ, ಗದೆಗಳನ್ನೂ ಧರಿಸಿದವರಾಗಿ, ರೋಷಾತ್ - ಕೋಪದಿಂದ, ವಾನರಾನ್ - ಕಪಿಗಳಿಗೆ, ಅಭಿ ಪೇತುಃ - ಎದುರಿಗೆ ಬಂದರು. ॥ ೧೬ ॥ ತ್ರಿಭಿಃ - ಮೂವರಾದ, ರಾಕ್ಷ....ವೈಃ - ರಾಕ್ಷಸಶ್ರೇಷ್ಠ ರೊಡನೆ, ಸಂಸಕ್ತಾನಾಂ - ಸೇರಿದ, ತ್ರಯಾಣಾಂ - ಮೂರುಮಂದಿ, ವಾನರೇಂದ್ರಾಣಾಂ - ವಾನರೋತ್ತಮರಾದ ಮೈಂದ ದ್ವಿವಿದ ಮತ್ತು ಅಂಗದರಿಗೆ, ರೋಮಹರ್ಷಣಂ-ರೋಮಾಂಚಕರವಾದ, ಮಹದ್ಯುದ್ಧಂ - ಮಹತ್ತರವಾದ ಕಾಳೆಗವು ಅಭವತ್ - ಆಯಿತು. ॥ ೧೭ ॥ ತೇತು - ಆ ವಾನರ ರಾದರೆ, ವೃಕ್ಷಾನ್ - ಮರಗಳನ್ನು, ಸಮಾದಾಯ - ತೆಗದುಕೊಂಡು, ಆಹವೇ - ಕಾಳೆಗದಲ್ಲಿ, ಸಂಪ್ರ ಚಿಕ್ಷಿಪುಃ - ಎಸೆದರು, ಮಹಾಬಲಃ - ಬಹು ಬಲಿಷ್ಠನಾದ, ಪ್ರಜಂಘಃ - ಪ್ರಜಂಘನು, ಖಡ್ಗೇನ - ಕತ್ತಿಯಿಂದ, ತಾನ್ - ಆ ಮರಗಳನ್ನು, ಪ್ರತಿಚಿಚ್ಛೇದ - ಕತ್ತರಿಸಿದನು. ॥ ೧೮ ॥ ತೇ - ಆ ಮೂರು ಮಂದಿ ವಾನರರೂ, ಆಹವೇ - ಕಾಳೆಗದಲ್ಲಿ, ದ್ರುಮೈ - ಮರಗಳಿಂದಲೂ, ಶೈಲೈಃ - ಬೆಟ್ಟಗಳಿಂದಲೂ, ರಥಾನ್-ತೇರುಗಳನ್ನೂ, ಅಶ್ವಾನ್-ಕುದುರೆಗಳನ್ನೂ ಕುರಿತು, ಪ್ರತಿಚಿಕ್ಷಿಪುಃ-ಹಾರಿಸಿದರು, ಯೂಪಾಕ್ಷಃ- ಯೂಪಾಕ್ಷನೆಂಬ, ನಿಶಾಚರಃ - ರಾಕ್ಷಸನು, ಶರೌಘೈಃ - ಬಾಣಸಮೂಹಗಳಿಂದ, ತಾನ್ - ಆ ಮರ

ಗಳ ಮಧ್ಯಗತನಾದ ಚಂದ್ರನಂತೆ ಶೋಭಿಸುತ್ತಿದ್ದನು. ಈ ಮಧ್ಯೆ ಅಂಗದನನ್ನು ಸಂರಕ್ಷಿಸಲೋಸುಗ ಮಹಾ ವೀರರಾದ ಮೈಂದ ದ್ವಿವಿದರು ಪರಸ್ಪರ ನೋಡಲಪೇಕ್ಷೆಯುಳ್ಳವ ರಾಗಿ ಅವನ ಸಮೀಪದಲ್ಲಿಯೇ ನಿಂತರು. ॥ ೧೧–೧೫ ॥ ಕತ್ತಿ ಬಿಲ್ಲು ಬಾಣಗಳನ್ನು ಧರಿಸಿ ಮಹಾ ಬಲಶಾಲಿಗಳಾದ ರಾಕ್ಷಸರೂ ಸಹ ಆ ಸಮಯದಲ್ಲಿ ವಾನರರನ್ನಟ್ಟಿ ಬಂದರು. ಅಂಗದ, ಮೈಂದ, ದ್ವಿವಿದರೆಂಬ ಮೂವರು ವಾನರವೀರರಿಗೂ, ಶೋಣಿತಾಕ್ಷ, ಪ್ರಜಂಘ ಯೂಪಾಕ್ಷರೆಂಬ ಮೂವರು ರಾಕ್ಷಸವೀರರಿಗೂ ದೊಡ್ಡ ಕಾಳೆಗವು ಮೊದಲಾಯಿತು. ಆ ಕಪಿಸತ್ತಮರಾದರೋ ಹೆಮ್ಮರಗಳನ್ನು ತಂದು ಆ ರಾಕ್ಷಸರ ಮೇಲೆ ವೇಗವಾಗಿ ಎಸೆದರು. ಪ್ರಜಂಘಾಸುರನು ಅವುಗಳನ್ನು ತನ್ನ ಖಡ್ಗದಿಂದಲೇ ಕತ್ತರಿಸಿ ಕೆಡವಿದನು. ಆ ಕಪಿವೀರರು ರಣರಂಗದಲ್ಲಿದ್ದ ರಥಗಳನ್ನೂ, ದೊಡ್ಡ ದೊಡ್ಡ ಮರಗಳನ್ನೂ, ಪರ್ವತಗಳನ್ನೂ ಆ

ನಿಶಾಚರಃ ॥೧೯॥ ಸೃಷ್ಟಾನ್ ದ್ವಿವಿದಮೈಂದಾಭ್ಯಾಂ ದ್ರುಮಾನುತ್ಪಾಟ್ಯ ವೀರ್ಯವಾನ್। ಬಭಂಜ ಗದಯಾ ಮಧ್ಯೇ ಶೋಣಿತಾಕ್ಷಃ ಪ್ರತಾಪವಾನ್ ॥೨೦॥ ಉದ್ಯಮ್ಯ ವಿಪುಲಂ ಖಡ್ಗಂ ಪರಮರ್ಮನಿಕೃಂತನಂ । ಪ್ರಜಂಘೋ ವಾಲಿಪುತ್ರಾಯ ಅಭಿದುದ್ರಾವ ವೇಗಿತಃ ॥ ೨೧ ॥ ತಮಭ್ಯಾಶಗತಂ ದೃಷ್ಟ್ವಾ ವಾನರೇಂದ್ರೋ ಮಹಾಬಲಃ । ಆಜಘಾನಾಽಶ್ವಕರ್ಣೇನ ದ್ರುಮೇಣಾಽತಿಬಲಸ್ತದಾ ॥ ೨೨ ॥ ಬಾಹುಂ ಚಾಸ್ಯ ಸನಿಸ್ತ್ರಿಂಶ ಮಾಜಘಾನ ಸಮುಷ್ಟಿನಾ । ವಾಲಿಪುತ್ರಸ್ಯ ಘಾತೇನ ಸಪಪಾತ ಕ್ಷಿತಾವಸಿಃ ॥ ೨೩ ॥ ತಂ ದೃಷ್ಟ್ವಾ ಪತಿತಂ ಭೂಮೌ ಖಡ್ಗಮುತ್ಪಲಸನ್ನಿಭಂ । ಮುಷ್ಟಿಂ ಸಂವರ್ತಯಾ

ಗಳನ್ನು, ಪ್ರತಿಚಿಚ್ಛೇದ-ಛೇದಿಸಿದನು. ॥೧೯॥ ವೀರ್ಯವಾನ್-ಸಾಮರ್ಥ್ಯವಂತನಾದ, ಪ್ರತಾಪವಾನ್-ಪರಾಭಿಭವಸಾಮರ್ಥ್ಯವುಳ್ಳ, ಶೋಣಿತಾಕ್ಷನು, ದ್ವಿವಿ....ಭ್ಯಾಂ - ದ್ವಿವಿದನಿಂದಲೂ ಮೈಂದ ನಿಂದಲೂ, ಸೃಷ್ಟಾನ್ - ಬಿಡಲ್ಪಟ್ಟ, ದ್ರುಮಾನ್ - ವೃಕ್ಷಗಳನ್ನು, ಉತ್ಪಾಟ್ಯ - ಕಿತ್ತು, ಮಧ್ಯೆ - ಮಧ್ಯಪ್ರದೇಶದಲ್ಲಿ, ಗದಯಾ - ಗದಾಯುಧದಿಂದ, ಬಭಂಜ - ಮುರಿದನು. ॥ ೨೦ ॥ ಪ್ರಜಂಘಃ - ಪ್ರಜಂಘನು, ವೇಗಿತಃ - ವೇಗವುಳ್ಳವನಾಗಿ, ವಿಪುಲಂ - ವಿಸ್ತಾರವಾದ, ವರ....ನಂ - ಶತ್ರುಗಳ ಮರ್ಮಗಳನ್ನು ಭೇದಿಸುವ, ಖಡ್ಗಂ - ಕತ್ತಿಯನ್ನು, ಉದ್ಯಮ್ಯ - ಎತ್ತಿಕೊಂಡು, ವಾಲಿಪುತ್ರಾಯ-ಅಂಗದನಿಗಾಗಿ, ಅಭಿದುದ್ರಾವ - ಎದುರೋಡಿ ಬಂದನು. ॥ ೨೧ ॥ ತದಾ - ಆ ಕಾಲದಲ್ಲಿ, ಮಹಾಬಲಃ - ಬಹು ಬಲಿಷ್ಠನಾದ, ವಾನರೇಂದ್ರಃ - ಅಂಗದನು, ಅಭ್ಯಾಶಗತಂ - ಸಮೀಪವನ್ನು ಹೊಂದಿದ, ತಂ - ಆ ಪ್ರಜಂಘನನ್ನು, ದೃಷ್ಟ್ವಾ - ಕಂಡು, ಅತಿಬಲಃ - ಬಹು ಸಾಮರ್ಥ್ಯವುಳ್ಳವನಾಗಿ, ಅಶ್ವ....ಣ - ಬಿಳೀ ಮತ್ತೀಮರದಿಂದ, ಆಜಘಾನ - ಹೊಡೆದನು. ॥ ೨೨ ॥ ಸಃ - ಆ ಅಂಗದನು, ಮುಷ್ಟಿನಾ - ಮುಷ್ಟಿಯಿಂದ, ಸನಿಸ್ತ್ರಿಂಶಂ - ಖಡ್ಗದಿಂದೊಡಗೂಡಿದ, ಅಸ್ಯ - ಈ ಪ್ರಜಂಘನ, ಭಾಹುಂಚ-ಭುಜವನ್ನು, ಆಜಘಾನ-ಹೊಡದನು, ಸೋಽಸಿಃ-ಆ ಖಡ್ಗವು, ವಾಲಿಪುತ್ರಸ್ಯ-ಅಂಗದನ, ಘಾತೇನ - ಹೊಡತದಿಂದ, ಕ್ಷಿತೌ - ನೆಲದಲ್ಲಿ, ಪಪಾತ - ಬಿತ್ತು. ॥೨೩॥ ಮಹಾಬಲಃ-ಬಹು ಸಾಮರ್ಥ್ಯವಂತನಾದ ಪ್ರಜಂಘನು, ಭೂಮೌ - ನೆಲದಲ್ಲಿ, ಪತಿತಂ - ಬಿದ್ದಿರುವ, ಉತ್ಪಲ ಸನ್ನಿಭಂ - ಕನ್ನೈದಿಲೆಯಂತೆಸೆವ, ತಂಖಡ್ಗಂ - ಆ ಕತ್ತಿಯನ್ನು, ದೃಷ್ಟ್ವಾ - ಕಂಡು, ವಜ್ರಕಲ್ಪಂ-ವಜ್ರಾಯುದಕ್ಕೆ ಸಮಾನವಾದ, ಮುಷ್ಟಿಂ-ಮುಷ್ಟಿಯನ್ನು, ಸಂವರ್ತಯಾಮಾಸ ಹಿಡಿದನು. ॥ ೨೪ ॥

ರಾಕ್ಷಸರ ಮೇಲೆ ಬಿಸುಡುತ್ತಿರಲು ಅವರಲ್ಲಿ ಒಬ್ಬನಾದ ಯೂಪಾಕ್ಷನು ತನ್ನ ನಿಡಿಗೋಲುಗಳಿಂದವುಗಳನ್ನು ನುಚ್ಚುನುರಿ ಮಾಡುತ್ತಿದ್ದನು. ಮೈಂದ ದ್ವಿವಿದರು ಪ್ರಯೋಗಿಸಿದ ಹೆಮ್ಮರಗಳನ್ನು ಶೋಣಿತಾಕ್ಷರಾಕ್ಷಸನು ತನ್ನ ಗದೆಯಿಂದ ಕುಟ್ಟಿ ಕೆಡವುತ್ತಿದ್ದನು. ಈ ಮಧ್ಯದಲ್ಲಿ ಪ್ರಜಂಘಾಸುರನು ಶತ್ರುಗಳ ಮರ್ಮಸ್ಥಾನಗಳನ್ನು ಭೇದಿಸುವ ಭಯಂಕರವಾದ ತನ್ನ ಖಡ್ಗವನ್ನೆತ್ತಿಕೊಂಡು ಅಂಗದನನ್ನಟ್ಟಿ ಬಂದನು. ॥೧೬-೨೦॥ ಆಗ ಮಹಾ ಬಲಾಢ್ಯನಾದ ಆ ವಾನರಶ್ರೇಷ್ಠನು ಅಶ್ವಕರ್ಣವೃಕ್ಷವನ್ನೆತ್ತಿ ಬಳಿ ಸಾರಿದ ಆ ರಾಕ್ಷಸನನ್ನು ಬಲವಾಗಿ ಪ್ರಹರಿಸಿದನು. ಇಷ್ಟೆಯಲ್ಲದೆ ಆಯುಂಗದಕುಮಾರನು ಖಡ್ಗಸಮೇತವಾದ ಆ ಪ್ರಜಂಘಾಸುರನ ತೋಳಿಗೆ ತನ್ನ ಮುಷ್ಟಿಯಿಂದಲೇ ಬಲವಾದ ಪೆಟ್ಟನ್ನಿಟ್ಟನು. ಹೀಗೆ ಹೊಡೆಯುತ್ತಲೇ ಆ ರಾಕ್ಷಸನ ಕೈಲಿದ್ದ ಖಡ್ಗವು ಭೂಮಿಗೆ ಬಿದ್ದು ಹೋಯಿತು. ಹೀಗೆ ತನ್ನ ಕೈಲಿದ್ದ ಖಡ್ಗವು ಕೆಳಕ್ಕೆ ಬಿದ್ದುಹೋದೊಡನೆಯೇ ಅವನು ವಜ್ರಕಲ್ಪವಾದ ತನ್ನ ಮುಷ್ಟಿಯನ್ನು

ಮಾಸ ವಜ್ರಕಲ್ಪಂ ಮಹಾಬಲಃ ॥ ೨೪ ॥ ಲಲಾಟೇ ಸಮಹಾವೀರ್ಯಮಂಗದಂ ವಾನರರ್ಷಭಂ । ಆಜಘಾನ ಮಹಾತೇಜಾ ಸ್ಸಮುಹೂರ್ತಂ ಚಚಾಲಹ ॥ ೨೫ ॥ ಸಸಂಜ್ಞಾಂ ಪ್ರಾಪ್ಯ ತೇಜಸ್ವೀ ವಾಲಿಪುತ್ರಃ ಪ್ರತಾಪವಾನ್। ಪ್ರಜಂಘಸ್ಯ ಶಿರಃ ಕಾಯಾತ್ಖಡ್ಗೇನಾಽಪಾತಯತ್ ಕ್ಷಿತೌ ॥೨೬॥ ಸಯೂಪಾಕ್ಷೋಽಶ್ರುಪೂರ್ಣಾಕ್ಷಃ ಪಿತೃವ್ಯೇ ನಿಹತೇ ರಣೇ। ಅವರುಹ್ಯ ರಥಾತ್ ಕ್ಷಿಪ್ರಂ ಕ್ಷೀಣೇಷುಃ ಖಡ್ಗಮಾದದೇ ॥೨೭॥ ತಮಾಪತಂತಂ ಸಂಪ್ರೇಕ್ಷ್ಯ ಯೂಪಾಕ್ಷಂ ದ್ವಿವಿದಸ್ತ್ವರ್ನ । ಆಜಘಾನೋರಸಿ ಕ್ರುದ್ಧೋ ಜಗ್ರಾಹಚ ಬಲಾದ್ಬಲೀ ॥ ೨೮ ॥ ಗೃಹೀತಂ ಭ್ರಾತರಂ ದೃಷ್ಟ್ವಾ ಶೋಣಿತಾಕ್ಷೋ ಮಹಾಬಲಃ। ಆಜಘಾನ ಗದಾಗ್ರೇಣ ವಕ್ಷಸಿ ದ್ವಿವಿದಂ ತತಃ ॥ ೨೯ ॥ ಸಗದಾಭಿಹತ

ಮಹಾತೇಜಾಃ - ಬಹು ತೇಜೋವಂತನಾದ, ಸಃ - ಆ ಪ್ರಜಂಘನು, ವಾನರರ್ಷಭಂ - ವಾನರಶ್ರೇಷ್ಠನಾದ, ಮಹಾವೀರ್ಯಂ - ಬಹು ಸಮರ್ಥನಾದ, ಅಂಗದಂ - ಅಂಗದನನ್ನು, ಲಲಾಟೇ - ಹಣೆಯಲ್ಲಿ, ಆಜಘಾನ - ಹೆಡೆದನು, ಸಃ - ಆ ಅಂಗದನು, ಮುಹೂರ್ತಂ - ಸ್ವಲ್ಪಕಾಲ, ಚಚಾಲಹ - ಕದಲಿದನಷ್ಟೆ. ॥೨೫॥ ತೇಜಸ್ವೀ - ಅಂತಸ್ಸಾರವುಳ್ಳ, ಪ್ರತಾಪವಾನ್ - ಪರಾಕ್ರಮಿಯಾದ, ಸವಾಲಿಪುತ್ರಃ - ಆ ಅಂಗದನು, ಸಂಜ್ಞಾಂ - ಪ್ರಜ್ಞೆಯನ್ನು, ಪ್ರಾಪ್ಯ - ಹೊಂದಿ, ಖಡ್ಗೇನ - ಕತ್ತಿಯಿಂದ, ಪ್ರಜಂಘಸ್ಯ - ಪ್ರಜಂಘನ, ಶಿರಃ - ಶಿರವನ್ನು, ಕಯಾತ್ - ಶರೀರದಿಂದ, ಕ್ಷಿತೌ - ನೆಲದಲ್ಲಿ, ಅಪಾತಯತ್ - ಕೆಡವಿದನು. ॥೨೬॥ ಸಯೂಪಾಕ್ಷಃ - ಆ ಯೂಪಾಕ್ಷನು, ರಣೇ - ಕಾಳೆಗದಲ್ಲಿ, ಪಿತೃವ್ಯೇ - ಚಿಕ್ಕಪ್ಪನಾದ ಪ್ರಜಂಘನು, ನಿಹತೇ - ಸಂಹೃತನಾಗಲು, ಅಶ್ರುಪೂರ್ಣಾಕ್ಷಃ - ಕಂಬನಿದುಂಬಿದ ನೇತ್ರಗಳುಳ್ಳವನಾಗಿ, ರಥಾತ್ - ತೇರಿನದೆಸೆಯಿಂದ, ಅವರುಹ್ಯ - ಇಳಿದು, ಕ್ಷೀಣೇಷುಃ - ಕ್ಷೀಣವಾದ ಬಾಣಗಳುಳ್ಳವನಾದಕಾರಣ, ಕ್ಷಿಪ್ರಂ - ಜಾಗ್ರತೆಯಾಗಿ, ಕಡ್ಗಂ - ಕತ್ತಿಯನ್ನು, ಆದದೇ - ತೆಗದುಕೊಂಡನು. ॥ ೨೭ ॥ ಬಲೀ - ಬಲಿಷ್ಠನಾದ, ದ್ವಿವಿದಃ - ದ್ವಿವಿದನು, ಆಪತಂತಂ - ಬರುತ್ತಿರುವ, ತಂಯೂಪಾಕ್ಷಂ - ಆ ಯೂಪಾಕ್ಷನನ್ನು, ಸಂಪ್ರೇಕ್ಷ್ಯ - ಕಂಡು, ತ್ವರ್ನ - ಜಾಗ್ರತೆಯುಳ್ಳವನಾಗಿ, ಕ್ರುದ್ಧಃ - ಕುಪಿತನಾಗಿ, ಉರಸಿ - ಎದೆಯಲ್ಲಿ, ಆಜಘಾನ - ಹೊಡದನು, ಜಗ್ರಾಹಚ - ಹಿಡಿದುಕೊಂಡನು. ॥ ೨೮ ॥ ಮಹಾಬಲಃ - ಮಹಾ ಬಲನಾದ, ಶೋಣಿತಾಕ್ಷಃ - ಶೋಣಿತಾಕ್ಷನು, ತತಃ - ಬಳಿಕ, ಭ್ರಾತರಂ - ಒಡಹುಟ್ಟಿದ ಯೂಪಾಕ್ಷನನ್ನು, ಗೃಹೀತಂ - ಹಿಡಿಯಲಾದುದನ್ನು, ದೃಷ್ಟ್ವಾ - ಕಂಡು, ದ್ವಿವಿದಂ - ದ್ವಿವಿದನನ್ನು, ವಕ್ಷಸಿ - ಎದೆಯಲ್ಲಿ, ಗದಾಗ್ರೇಣ -

---

ಹಿಡಿದು ಆ ವಾನರೋತ್ತಮನ ಹಣೆಗೆ ಹೊಡದನು. ಆ ಪೆಟ್ಟಿನಿಂದವನು ಒಂದು ಮುಹೂರ್ತಕಾಲ ನಡುಗಿಹೋದನು. ಆ ತರುವಾಯ ಮಹಾ ತೇಜಸ್ವಿಯೂ, ಮಹಾ ಪರಾಕ್ರಮಶಾಲಿಯೂ ಆದ ಆಯಂಗದನು ಭೂಮಿಯಲ್ಲಿ ಬಿದ್ದಿದ್ದ ಖಡ್ಗವನ್ನು ಲಾಘವದಿಂದೆತ್ತಿಕೊಂಡು ಆ ಪ್ರಜಂಘನ ಶರೀರದಿಂದ ಶಿರಸ್ಸನ್ನು ಕತ್ತರಿಸಿ ಕೆಡವಿದನು. ॥ ೨೧–೨೬ ॥ ಚಿಕ್ಕ ತಂದೆಯಾದ ಪ್ರಜಂಘನು ಮಡಿದುರುಳುತ್ತಲೇ ಯೂಪಾಕ್ಷನು ಅಶ್ರುಪೂರ್ಣಮುಖನಾಗಿ ಒಂದು ಕ್ಷಣಕಾಲದಲ್ಲಿಯೇ ರಥದಿಂದಿಳಿದು ಖಡ್ಗಪಾಣಿಯಾಗಿ ಅಂಗದನ ಮೇಲೆ ವೇಗದಿಂದೈತಂದನು. ಹೀಗೆ ಬರುತ್ತಿರುವ ಆ ಯೂಪಾಕ್ಷನನ್ನು ಕಂಡು ದ್ವಿವಿದನು ಬಹು ಜಾಗ್ರತೆಯಾಗಿ ಅವನನ್ನಮುರಿ ಬಲವಾಗಿ ಎದೆಗೆ ಗುದ್ದಿ ಅವನನ್ನು ಬಲವಾಗಿ ಹಿಡಿದನು. ಮಹಾ ಬಲಾಢ್ಯನಾದ ಶೋಣಿತಾಕ್ಷನು ತನ್ನ ತಮ್ಮನನ್ನು ದ್ವಿವಿದನಾರೀತಿ ಹಿಡಿದಿರುವು

ಸ್ತೇನ ಚಚಾಲ ಚ ಮಹಾಬಲಃ । ಉದ್ಯತಾಂಚ ಪುನಸ್ತಸ್ಯ ಜಹಾರ ದ್ವಿವಿದೋ ಗದಾಂ ॥ ೩೦ ॥ ಏತಸ್ಮಿನ್ನಂತರೇ ವೀರೋ ಮೈಂದೋ ವಾನರಯೂಥಪಃ । ಯೂಪಾಕ್ಷಂ ತಾಡಯಾಮಾಸ ತಲೇನೋರಸಿ ವೀರ್ಯವಾನ್ ॥ ೩೧ ॥ ತೌ ಶೋಣಿ ತಾಕ್ಷಯೂಪಾಕ್ಷೌ ಪ್ಲವಂಗಾಭ್ಯಾಂ ತರಸ್ವಿನೌ । ಚಕ್ರತುಸ್ಸಮರೇ ತೀವ್ರಮಾಕರ್ಷೋ ತ್ಪಾಟನಂ ಭೃಶಂ ॥ ೩೨ ॥ ದ್ವಿವಿದಃ ಶೋಣಿತಾಕ್ಷಂತು ವಿದದಾರ ನಖೈರ್ಮುಖೇ । ನಿಷ್ಪಿಪೇಷಚ ವೇಗೇನ ಕ್ಷಿತಾವಾವಿಧ್ಯ ವೀರ್ಯವಾನ್ ॥ ೩೩ ॥ ಯೂಪಾಕ್ಷಮಪಿ ಸಂಕ್ರುದ್ಧೋ ಮೈಂದೋ ವಾನರ ಯೂಥಪಃ । ಪೀಡಯಾಮಾಸ ಬಾಹುಭ್ಯಾಂ ಸ

ಗದೆಯ ತುದಿಯಿಂದ, ಆಜಘಾನ - ಹೊಡದನು. ॥ ೨೯ ॥ ತೇನ - ಆ ಶೋಣಿತಾಕ್ಷನಿಂದ, ಗದಾಭಿಹತಃ - ಗದೆಯಿಂದ ಹೊಡೆಯಲ್ಪಟ್ಟ, ಸಃದ್ವಿವಿದಃ - ಆ ದ್ವಿವಿದನು, ಚಚಾಲ - ನಡುಗಿದನು, ಪುನಃ- ಮತ್ತು, ದ್ವಿವಿದಃ - ದ್ವಿವಿದನು, ಉದ್ಯತಂ - ಎತ್ತಲ್ಪಟ್ಟ, ತಸ್ಯ - ಆ ಶೋಣಿತಾಕ್ಷನ, ಗದಾಂ - ಗದೆಯನ್ನು, ಜಹಾರ - ಕಿತ್ತುಕೊಂಡನು. ॥ ೩೦ ॥ ಏತಸ್ಮಿನಂತರೇ - ಇಷ್ಟರಲ್ಲಿ, ವೀರ್ಯವಾನ್ - ಸಾಮರ್ಥ್ಯವಂತನಾದ, ವಾನರಯೂಥಪಃ - ಕಪಿಸೈನ್ಯಾಧಿಪತಿಯಾದ, ವೀರಃ - ಶೂರನಾದ, ಮೈಂದಃ- ಮೈಂದನು, ಯೂಪಾಕ್ಷಂ - ಯೂಪಾಕ್ಷನನ್ನು, ತಲೇನ - ಅಂಗೈಯಿಂದ, ಉರಸಿ - ಎದೆ ಯಲ್ಲಿ, ತಾಡಯಾಮಾಸ - ಹೊಡದನು. ॥ ೩೧ ॥ ತರಸ್ವಿನೌ - ಬಲವಂತರಾದ, ತೌಶೋಣಿ ತಾಕ್ಷಯೂಪಾಕ್ಷೌ - ಆ ಶೋಣಿತಾಕ್ಷಯೂಪಾಕ್ಷರಿಬ್ಬರೂ, ಪ್ಲವಂಗಾಭ್ಯಾಂ - ಮೈಂದ ದ್ವಿವಿದರೆಂಬ ವಾನರರೊಡನೆ, ಸಮರೇ - ಕಾಳೆಗದಲ್ಲಿ, ತೀವ್ರಂ - ತೀಕ್ಷ್ಣವಾಗಿ, ಆಕರ್ಷೋತ್ಪಾಟನಂ - ಸೆಳೆದು ಹೊಡೆಯುವಿಕೆಯನ್ನು, ಭೃಶಂ - ಬಹಳವಾಗಿ, ಚಕ್ರತುಃ - ಮಾಡಿದರು. ॥ ೩೨ ॥ ವೀರ್ಯವಾನ್ - ಪರಾಕ್ರಮಿಯಾದ, ದ್ವಿವಿದಃ - ದ್ವಿವಿದನು, ಶೋಣಿತಾಕ್ಷಂ - ಶೋಣಿತಾಕ್ಷನನ್ನು, ಮುಖೇ - ಮುಖ ದಲ್ಲಿ, ನಖೈಃ - ಉಗುರುಗಳಿಂದ, ವಿದದಾರ - ಸೀಳಿದನು, ವೇಗೇನ - ವೇಗದಿಂದ, ಆವಿಧ್ಯ - ಕೆಡವಿ ಹೊಡೆದು, ಕ್ಷಿತೌ - ನೆಲದಲ್ಲಿ, ನಿಷ್ಪಿಪೇಷಚ - ಅರೆದನು. ॥ ೩೩ ॥ ಸಂಕ್ರುದ್ಧಃ - ಕೋಪಿಷ್ಠನಾದ, ವಾನ....ಪಃ - ವಾನರಯೂಥಪತಿಯಾದ, ಮೈಂದಃ - ಮೈಂದನು, ಬಾಹುಭ್ಯಾಂ - ಭುಜಗಳಿಂದ, ಯೂಪಾಕ್ಷಮಪಿ - ಯೂಪಾಕ್ಷನನ್ನೂ, ಪೀಡಯಾಮಾಸ - ಹಿಡಿದುಕೊಂಡನು, ಸಃ - ಆ ಯೂಪಾ ಕ್ಷನು, ಹತಃ - ಹೊಡೆಯಲ್ಪಟ್ಟವನಾಗಿ, ಕ್ಷಿತೌ - ನೆಲದಲ್ಲಿ, ಪಪಾತ - ಬಿದ್ದನು. ॥ ೩೪ ॥ ಹತ

ದನ್ನು ಕಂಡು ಗದಾಯುಧದಿಂದ ಆ ವಾನರನ ವಕ್ಷಸ್ಥಳಕ್ಕೆ ಬಲವಾಗಿ ಹೊಡೆದನು. ಮಹಾ ಪರಾಕ್ರಮಿಯಾದ ಆ ದ್ವಿವಿದನು ಆ ಪೆಟ್ಟಿನಿಂದ ಸ್ವಲ್ಪ ಹೊತ್ತು ಚಲಿಸಿದವನಾಗಿ ಆ ತರುವಾಯ ಚೇತರಿಸಿಕೊಂಡು ಆ ರಾಕ್ಷಸನ ಕೈಲಿದ್ದ ಗದೆಯನ್ನು ಕಸೆದುಕೊಂಡನು. ಇದೇ ಸಮಯದಲ್ಲಿಯೇ ಕಪಿಶ್ರೇಷ್ಠನಾದ ಮೈಂದನು ದ್ವಿವಿದನ ಬಳಿ ನಿಂತು ತಲಪ್ರದೇಶ ದಿಂದ ಅವನನ್ನುಮರಿದ್ದ ಯೂಪಾಕ್ಷನೆದೆಗೆ ಬಲವಾಗಿ ಹೊಡೆದನು. ॥ ೨೭–೩೧ ॥ ಆಗಲಾ ಶೋಣಿತಾಕ್ಷ ಯೂಪಾಕ್ಷರಿಬ್ಬರೂ, ಮೈಂದ ದ್ವಿವಿದರೊಡನೆ ಮಹಾ ತೀವ್ರವಾದ ದ್ವಂದ್ವ ಯುದ್ಧವನ್ನು ಮಾಡಿ ಪರಸ್ಪರವಾಗಿ ಎತ್ತಿ ಒಗೆಯುತ್ತಿದ್ದರು. ಸ್ವಲ್ಪ ಹೊತ್ತಾದ ಬಳಿಕ ದ್ವಿವಿದನು ಶೋಣಿತಾಕ್ಷನ ಮುಖವನ್ನು ತನ್ನ ಉಗುರುಗಳಿಂದ ಸೀಳಿ ಅವನನ್ನು ನೆಲಕ್ಕೆ ಕೆಡವಿ ಚೆನ್ನಾಗಿ ಮರ್ದಿಸಿದನು. ಮೈಂದನಾದರೋ ಮಹಾ ಕೋಪಸಮನ್ವಿತನಾದ ಯೂಪಾಕ್ಷನನ್ನು ತನ್ನೆರಡೂ ತೋಳುಗಳಿಂದ ಬಲವಾಗಿ ಹಿಡಿದು ಹಿಂಡಿ ನೆಲಕ್ಕೆ ಕೆಡವಲು

ಪಪಾತ ಹತಃ ಕ್ಷಿತೌ ॥ ೩೪ ॥ ಹತಪ್ರವೀರಾ ವ್ಯಥಿತಾ ರಾಕ್ಷಸೇಂದ್ರಚಮೂಸ್ತದಾ । ಜಗಾಮಾಽಭಿಮುಖೀ ಸಾತು ಕುಂಭಕರ್ಣಸುತೋ ಯತಃ ॥ ೩೫ ॥ ಆಪತಂತೀಂ ಚ ವೇಗೇನ ಕುಂಭಸ್ತಾಂ ಸಾಂತ್ವಯಚ್ಚಮೂಂ । ಅಥೋತ್ಕೃಷ್ಟಮಹಾವೀರ್ಯೈರ್ಲಬ್ಧಲಕ್ಷ್ಯೈಃ ಪ್ಲವಂಗಮೈಃ ॥೩೬॥ ನಿಪಾತಿತಮಹಾವೀರಾಂ ದೃಷ್ಟ್ವಾ ರಕ್ಷಶ್ಚಮೂಂ ತತಃ । ಕುಂಭಃ ಪ್ರಚಕ್ರೇ ತೇಜಸ್ವೀ ರಣೇ ಕರ್ಮ ಸುದುಷ್ಕರಂ ॥ ೩೭ ॥ ಸಧನುರ್ಧನ್ವಿನಾಂ ಶ್ರೇಷ್ಠಃ ಪ್ರಗೃಹ್ಯ ಸುಸಮಾಹಿತಃ । ಮುಮೋಚಾಶೀವಿಷಪ್ರಖ್ಯಾನ್ ಶರಾನ್ ದೇಹವಿದಾರಣಾನ್ ॥ ೩೮ ॥ ತಸ್ಯ ತಚ್ಛುಶುಭೇ ಭೂಯಸ್ಸಶರಂ ಧನುರುತ್ತಮಂ । ವಿದ್ಯುದೈರಾವತಾರ್ಚಿಷ್ಮದ್ದ್ವಿತೀಯೇಂದ್ರಧನುರ್ಯಥಾ ॥ ೩೯ ॥ ಆಕರ್ಣಾಕೃಷ್ಟ

ಪ್ರವೀರಾ - ಹತರಾದ ಶೂರರುಳ್ಳ, ವ್ಯಥಿತಾ - ವ್ಯಸನಗೊಂಡ, ಸಾರಾ....ಮೂಃ - ಆ ರಾವಣನ ಸೇನೆಯು, ಕುಂಭಕರ್ಣಸುತಃ - ಕುಂಭಕರ್ಣನ ಮಗನಾದ ಕುಂಭನು, ಯತಃ - ಎಲ್ಲಿಯೋ, ತತಃ-ತತಃ - ಅಲ್ಲಿಗೆ, ಅಭಿಮುಖೀ - ಎದುರಾಗಿ, ಜಗಾಮ - ತೆರಳಿತು. ॥ ೩೫ ॥ ತತಃ - ಬಳಿಕ, ವೇಗೇನ ಜವದಿಂದ, ಆಪತಂತೀಂ - ಬರುತ್ತಿರುವ, ತಾಂಚಮೂಂ - ಆ ಸೈನ್ಯವನ್ನು, ಕುಂಭಃ - ಕುಂಭನು, ಸಾಂತ್ವಯಚ್ಚ - ಸಮಾಧಾನ ಮಾಡಿದನು, ಅಥ - ಬಳಿಕ, ತೇಜಸ್ವೀ - ಸಾಮರ್ಥ್ಯವಂತನಾದ, ಉತ್ಕೃಷ್ಟಂರಕ್ಷಂ - ಉತ್ತಮ ರಾಕ್ಷಸನಾದ, ಕುಂಭಃ - ಕುಂಭನು, ಮಹಾವೀರ್ಯೈಃ-ಮಹಾ ಸಾಮರ್ಥ್ಯವಂತರಾದ, ಲಬ್ಧಲಕ್ಷ್ಯೈಃ - ಹೊಂದಿದ ಗುರಿಯುಳ್ಳ, ಪ್ಲವಂಗಮೈಃ - ವಾನರರಿಂದ, ನಿಪಾ...ರಾಂ - ಬೀಳಿಸಲ್ಪಟ್ಟ ಬಹು ಶೂರರುಳ್ಳ, ಚಮೂಂ - ಸೈನ್ಯವನ್ನು, ದೃಷ್ಟ್ವಾ - ಕಂಡು, ತತಃ - ಬಳಿಕ, ರಣೇ - ಕಾಳೆಗದಲ್ಲಿ, ಸುದುಷ್ಕರಂ - ಯಾರಿಂದಲೂ ಮಾಡಲಸಾಧ್ಯವಾದ, ಕರ್ಮ - ವ್ಯಾಪಾರವನ್ನು, ಪ್ರಚಕ್ರೇ - ಮಾಡಲು ಆರಂಬಿಸಿದನು. ॥೩೬-೩೭॥ ಧನ್ವಿನಾಂ - ಧನುರ್ಧಾರಿಗಳಲ್ಲಿ, ಶ್ರೇಷ್ಠಃ - ಉತ್ತಮನಾದ, ಸಃ - ಆ ಕುಂಭನು, ಸುಸಮಾಹಿತಃ - ಸಮಾಧಾನಚಿತ್ತನಾಗಿ, ಧನುಃ - ಬಿಲ್ಲನ್ನು, ಪ್ರಗೃಹ್ಯ - ಹಿಡಿದು, ಆಶೀ....ಖ್ಯಾನ್ - ಸರ್ಪಗಳಿಗೆ ಸಮಾನವಾದ, ದೇಹ....ಣಾನ್ - ಶರೀರಗಳನ್ನು ಸೀಳುವ, ಶರಾನ್ - ಬಾಣಗಳನ್ನು, ಮುಮೋಚ - ಬಿಟ್ಟನು. ॥ ೩೮ ॥ ತಸ್ಯ - ಆ ಕುಂಭನ, ಸಶರಂ - ಬಾಣದೊಡಗೂಡಿದ, ಉತ್ತಮಂ - ಉತ್ಕೃಷ್ಟವಾದ, ತದ್ಧನುಃ - ಆ ಬಿಲ್ಲು, ವಿದ್ಯು....ತ್ - ಮಿಂಚಿನಿಂದಲೂ, ಋಜುವಾದ ಮತ್ತೂ ಕೆಂಪಾದ ಇಂದ್ರಧನುಸ್ಸಿನಿಂದ ಬೆಳಗುವ,

---

ಅವನು ಮಡಿದು ನೆಲಕ್ಕುರುಳಿದನು. ಮಹಾ ವೀರನಾದ ಶೋಣಿತಾಕ್ಷ ಯೂಪಾಕ್ಷರೀರ್ವರೂ ಮಡಿಯಲು ರಾಕ್ಷಸಸೇನೆಯೆಲ್ಲವೂ ದಿಕ್ಕೆಟ್ಟು ಕುಂಭಕರ್ಣನ ಮಗನಾದ ಕುಂಭನ ಬಳಿಗೆ ಓಡಿಬಂದಿತು. ॥ ೩೨-೩೫ ॥ ಆಗಲಾ ಕುಂಭನು ಭಯದಿಂದೋಡಿ ಬಂದ ರಾಕ್ಷಸಸೇನೆಯನ್ನು ಸಮಾಧಾನಗೊಳಿಸಿ, ಪ್ಲವಗಶ್ರೇಷ್ಠರಿಂದ ಮಡಿದುರುಳಿದ ರಾಕ್ಷಸಸೇನೆಯನ್ನು ಕಂಡು, ಮಹಾ ಕುಪಿತನಾಗಿ ರಣಾಂಗಣದಲ್ಲಿ ಭಯಂಕರವಾದ ಯುದ್ಧವನ್ನು ಮಾಡಲುಪಕ್ರಮಿಸಿದನು. ಧನುರ್ಧಾರಿಗಳಲ್ಲಿ ಮಹಾ ಶ್ರೇಷ್ಠನಾದ ಆ ಕುಂಭನು ತನ್ನ ಧನುಸ್ಸನ್ನು ಹಿಡಿದು ಸತ್ವಸಂಪನ್ನನೂ, ಸಮಾಧಾನಚಿತ್ತನೂ ಆಗಿ ನಿಂತು ವಿಷದಿಗ್ಧಗಳೂ, ಮಹಾ ಸರ್ಪಸಮಾನಗಳೂ, ಶರೀರವನ್ನೇ ಸೀಳುವವುಗಳೂ ಆದ ಬಾಣಗಳನ್ನು ವಾನರಸೇನೆಯಮೇಲೆ ಪ್ರಯೋಗಿಸಲಾರಂಭಿಸಿದನು. ಆಗ ರಾಕ್ಷಸಶ್ರೇಷ್ಠನಾದ ಆ ಕುಂಭನ ಧನುಸ್ಸು, ವಿದ್ಯುತ್ತಿನಿಂದಲೂ, ಐರಾವತವೆಂದು ಹೆಸರಾದ ದೀರ್ಘ ಧನುಸ್ಸಿನಂತೆ ಮಹಾ

ಮುಕ್ತೇನ ಜಘಾನ ದ್ವಿವಿದಂ ತದಾ । ತೇನ ಹಾಟಕಪುಂಖೇನ ಪತ್ರಿಣಾ ಪತ್ರವಾಸಸಾ ॥೪೦॥ ಸಹಸಾಽಭಿಹತಸ್ತೇನ ವಿಪ್ರಮುಕ್ತಪದಸ್ಫುರನ್ । ನಿಪಪಾತಾಽದ್ರಿಕೂಟಾಭೋ ವಿಹ್ವಲಃ ಪ್ಲವಗೋತ್ತಮಃ ॥ ೪೧ ॥ ಮೈಂದಸ್ತು ಭ್ರಾತರಂ ದೃಷ್ಟ್ವಾ ಭಗ್ನಂ ತತ್ರ ಮಹಾಹವೇ । ಅಭಿದುದ್ರಾವ ವೇಗೇನ ಪ್ರಗೃಹ್ಯ ಮಹತೀಂ ಶಿಲಾಂ ॥ ೪೨ ॥ ತಾಂ ಶಿಲಾಂ ತು ಪ್ರಚಿಕ್ಷೇಪ ರಾಕ್ಷಸಾಯ ಮಹಾಬಲಃ । ಬಿಭೇದ ತಾಂ ಶಿಲಾಂ ಕುಂಭಃ ಪ್ರಸನ್ನೈಃ ಪಂಚಭಿಃ ಶರೈಃ ॥ ೪೩ ॥ ಸಂಧಾಯ ಚಾನ್ಯಂ ಸುಮುಖಂ ಶರ ಮಾಶೀ

ದ್ವಿತೀ....ಥಾ - ಎರಡನೆಯ ಇಂದ್ರ ಧನುಸ್ಸಿನಂತೆ, ಭೂಯಃ - ಮತ್ತು, ಶುಶುಭೇ - ಹೊಳೆಯು ತ್ತಿದ್ದಿತು. ||೩೯|| ತದಾ - ಆ ಕಾಲದಲ್ಲಿ, ಆಕ....ನ - ಕಿವಿವರೆಗೆ ಸೆಳೆದು ಬಿಟ್ಟ, ಹಾಟಕಪುಂಖೇನ - ಚಿನ್ನದ ಕೊನೆಯುಳ್ಳ, ಪತ್ರವಾಸಸಾ - ಗರಿಯನ್ನು ಕಟ್ಟಿರುವ, ತೇನಪತ್ರಿಣಾ - ಆ ಬಾಣ ದಿಂದ, ದ್ವಿವಿದಂ - ದ್ವಿವಿದನನ್ನು, ಜಘಾನ-ಹೊಡದನು. ||೪೦|| ಸಹಸಾ - ಜಾಗ್ರತೆಯಾಗಿ, ತೇನ- ಆ ಬಾಣದಿಂದ, ಅಭಿಹತಃ - ಹೊಡೆಯಲ್ಪಟ್ಟವನಾದಕಾರಣ, ವಿಪ ....ರಃ - ಬಿಡಲ್ಪಟ್ಟ ಪಾದನ್ಯಾಸ ವುಳ್ಳವನಾಗಿ, ಸ್ಫುರನ್ - ಚಲಿಸುತ್ತ, ಅದ್ರಿಕೂಟಾಭಃ - ಪರ್ವತಶಿಖರದಂತೆ ಕಾಂತಿಯಿಂದ ಹೊಳೆ ಯುತ್ತಿರುವ, ಪ್ಲವಗೋತ್ತಮಃ - ವಾನರಶ್ರೇಷ್ಠನು, ವಿಹ್ವಲಃ - ಚಪಲಚಿತ್ತನಾಗಿ, ನಿಪಪಾತ - ಬಿದ್ದನು. || ೪೧ || ಮೈಂದಸ್ತು - ಮೈಂದನಾದರೆ, ತತ್ರಮಹಾಹವೇ - ಆ ದೊಡ್ಡ ಕಾಳಗದಲ್ಲಿ, ಭ್ರಾತರಂ - ಅಣ್ಣನಾದ ದ್ವಿವಿದನನ್ನು, ಭಗ್ನಂ - ಮುರಿದವನನ್ನಾಗಿ, ದೃಷ್ಟ್ವಾ - ಕಂಡು, ವೇಗೇನ - ಜವದಿಂದ, ಮಹತೀಂಶಿಲಾಂ - ದೊಡ್ಡ ಬಂಡೆಯನ್ನು, ಪ್ರಗೃಹ್ಯ - ತೆಗೆದುಕೊಂಡು, ಅಭಿದುದ್ರಾವ - ಓಡಿಬಂದನು. || ೪೨ || ಮಹಾಬಲಃ - ಬಹಳ ಬಲಶಾಲಿಯಾದ ಮೈಂದನು, ತಾಂಶಿಲಾಂತು - ಆ ಕಲ್ಲನ್ನಾದರೆ, ರಾಕ್ಷಸಾಯ - ರಕ್ಕಸನಿಗಾಗಿ, ಪ್ರಚಿಕ್ಷೇಪ - ಎತ್ತಿಹಾಕಿದನು, ಕುಂಭಃ - ಕುಂಭನು, ಪ್ರಸನ್ನೈಃ - ಸುಮುಖಗಳಾದ, ಪಂಚಭಿಃ - ಐದಾದ, ನಾರಾಚೈಃ - ಬಾಣಗಳಿಂದ, ತಾಂಶಿಲಾಂ - ಆ ಪಾಷಾಣವನ್ನು, ಬಿಭೇದ - ಭೇದಿಸಿದನು. || ೪೩ || ಮಹಾತೇಜಾಃ - ಮಹಾ ಸಾಮರ್ಥ್ಯವಂತ ನಾದ ಕುಂಭನು, ಆಶೀವಿಷೋಪಮಂ - ಸರ್ಪಕ್ಕೆ ಸಮಾನವಾದ, ಸುಮುಖಂ - ಒಳ್ಳೇ ಹದವಾದ ತುದಿಯುಳ್ಳ, ಅನ್ಯಂಶರಂ - ಮತ್ತೊಂದು ಬಾಣವನ್ನು, ಸಂಧಾಯ - ಸಂಧಾನಮಾಡಿ, ದ್ವಿವಿ

ಕಾಂತಿಯಿಂದಲೂ ಕೂಡಿದುದಾಗಿ ಎರಡನೆಯ ಮಹೇಂದ್ರ ಧನುಸ್ಸೋ ಎಂಬಂತೆ ಹೊಳೆಯು ತ್ತಿದ್ದಿತು. ಕುಂಭರಾಕ್ಷಸನು ಅಂತಹ ಧನುಸ್ಸಿನಲ್ಲಿ ರೆಕ್ಕೆಗಳಿಂದಲೂ, ಚಿನ್ನದ ಕೊಂಕಿ ಗಳಿಂದಲೂ ಕೂಡಿರುವ ಕೂರಂಬುಗಳನ್ನು ಸಂಧಿಸಿ ಕಿವಿವರೆಗೆ ಸೆಳೆದು ದ್ವಿವಿದನಮೇಲೆ ಪ್ರಯೋಗಿಸಿದನು. ಆ ಬಾಣಾಘಾತದಿಂದ ಪರ್ವತಶಿಖರೋಪಮನಾದ ಆ ದ್ವಿವಿದನು ನಿಂತಿದ್ದೆಡೆಯಿಂದ ತಟ್ಟನೆ ನೆಲಕ್ಕುರುಳಿ ಮೂರ್ಛೆಗೊಂಡನು. ||೩೬—೪೧|| ಹೀಗೆ ತನ್ನ ತಮ್ಮ ನಾದ ದ್ವಿವಿದನು ರಣಾಂಗಣದಲ್ಲಿ ಭಂಗಪಟ್ಟುದನ್ನು ಕಂಡು ಮೈಂದನೆಂಬ ವಾನರೋ ತ್ತಮನು ದೊಡ್ಡದೊಂದು ಬಂಡೆಯನ್ನು ತೆಗೆದುಕೊಂಡು ಆ ಕುಂಭನ ಮೇಲಟ್ಟಿಬಂದನು. ಹೀಗೆ ಅಟ್ಟಿಬಂದು ಅವನಾ ಬಂಡೆಯನ್ನು ಕುಂಭನ ಮೇಲೆಸೆಯಲು, ಅವನು ಮಹಾ ತೀಕ್ಷ್ಣವಾದ ಐದು ಬಾಣಗಳಿಂದ ಅದನ್ನು ತುಂಡರಿಸಿದನು. ಇದಾದ ತರುವಾಯ ಆ ರಾಕ್ಷಸನು ಮಹೋನ್ನತವಾದ ತನ್ನ ಧನುಸ್ಸಿನಲ್ಲಿ ವಿಷದಿಗ್ಧವಾದ ಮಹಾ ಸರ್ಪಗಳಿಗೆ ಸಮಾನವಾದುವೂ ಸುಮುಖವೂ ಆದ ಒಂದು ಬಾಣವನ್ನು ಸಂಧಿಸಿ ದ್ವಿವಿದಾಗ್ರಜನಾದ ಆ

ವಿಷೋಪಮಂ । ಆಜಘಾನ ಮಹಾತೇಜಾ ವಕ್ಷಸಿ ದ್ವಿವಿದಾಗ್ರಜಂ ॥೪೪॥ ಸತು ತೇನ ಪ್ರಹಾರೇಣ ಮೈಂದೋ ವಾನರಯೂಥಪಃ । ಮರ್ಮಣ್ಯಭಿಹತಸ್ತೇನ ಪಪಾತ ಭುವಿ ಮೂರ್ಛಿತಃ ॥ ೪೫ ॥ ಅಂಗದೋ ಮಾತುಲೌ ದೃಷ್ಟ್ವಾ ಪತಿತೌ ತು ಮಹಾಬಲೌ । ಅಭಿದುದ್ರಾವ ವೇಗೇನ ಕುಂಭಮುದ್ಯತ ಕಾರ್ಮುಕಂ ॥೪೬॥ ತಮಾಪತಂತಂ ವಿವ್ಯಾಧ ಕುಂಭಃ ಪಂಚಭಿರಾಯಸೈಃ । ತ್ರಿಭಿಶ್ಚಾನ್ಯೈಃ ಶಿತೈರ್ಬಾಣೈ ರ್ಮಾತಂಗಮಿವ ತೋಮರೈಃ ॥ ೪೭ ॥ ಸೋಂಽಗದಂ ವಿವಿಧೈರ್ಬಾಣೈಃ ಕುಂಭೋ ವಿವ್ಯಾಧ ವೀರ್ಯವಾನ್ । ಅಕುಂಠಧಾರೈ ರ್ನಿಶಿತೈಸ್ತೀಕ್ಷ್ಣೈಃ ಕನಕಭೂಷಣೈಃ॥೪೮॥ ಅಂಗದಃ ಪ್ರತಿವಿದ್ಧಾಂಗೋ ವಾಲಿಪುತ್ರೋ ನಕಂಪತೇ। ಶಿಲಾಪಾದಪ ವರ್ಷಾಣಿ ತಸ್ಯ ಮೂರ್ಧ್ನಿ

ದ್ವಿವಿದಾಗ್ರಜಂ - ಮೈಂದನನ್ನು, ವಕ್ಷಸಿ - ಎದೆಯಲ್ಲಿ, ಆಜಘಾನ - ಹೊಡದನು. ॥೪೪॥ ವಾನ....ಪಃ - ವಾನರಯೂಥಪತಿಯಾದ, ಸಮೈಂದಸ್ತು - ಆ ಮೈಂದನಾದರೆ, ತೇನ - ಆ ಕುಂಭನಿಂದ, ತೇನ ಪ್ರಹಾರೇಣ - ಆ ಬಾಣದ ಹೊಡತದಿಂದ, ಮರ್ಮಣಿ - ಮರ್ಮಸ್ಥಾನದಲ್ಲಿ, ಅಭಿಹತಃ - ಹೊಡೆಯಲ್ಪಟ್ಟವನಾಗಿ, ಮೂರ್ಛಿತಃ - ಮೂರ್ಛೆಗೊಂಡು, ಭುವಿ - ನೆಲದಲ್ಲಿ, ಪಪಾತ - ಬಿದ್ದನು. ॥ ೪೫ ॥ ಮಹಾಬಲೌ - ಮಹಾ ಬಲಶಾಲಿಗಳಾದ, ಮಾತುಲೌ - ಸೋದರಮಾವಂದಿರನ್ನು, ಪತಿತೌ - ಕೆಳಗೆ ಬಿದ್ದವರನ್ನಾಗಿ, ದೃಷ್ಟ್ವಾ - ಕಂಡು, ವೇಗೇನ - ವೇಗದಿಂದ, ಉದ್ಯ....ಕಂ - ಎತ್ತಲ್ಪಟ್ಟ ಧನುಸ್ಸುಳ್ಳ, ಕುಂಭಂ - ಕುಂಭನನ್ನು ಕುರಿತು, ಅಭಿದುದ್ರಾವ - ಓಡಿಬಂದನು. ॥ ೪೬ ॥ ಆಪತಂತಂ - ಬರುತ್ತಿರುವ, ತಂ - ಆ ಅಂಗದನನ್ನು, ಕುಂಭಃ - ಕುಂಭನು, ಪಂಚಭಿಃ - ಐದಾದ, ಆಯಸೈಃ - ಕಬ್ಬಿಣದ, ಅನ್ಯೈಃ - ಮತ್ತು ಕೆಲವಾದ, ಶಿತೈಃ - ಹದವಾದ, ತ್ರಿಭಿಃಬಾಣೈಃ - ಮೂರು ಬಾಣಗಳಿಂದ, ತೋಮರೈಃ - ತೋಮರಾಯುಧಗಳಿಂದ, ಮಾತಂಗಮಿವ - ಆನೆಯನ್ನಂತೆ, ವಿವ್ಯಾಧ - ಹೊಡದನು. ॥ ೪೭ ॥ ವೀರ್ಯವಾನ್-ಪರಾಕ್ರಮಿಯಾದ, ಸಕುಂಭಃ-ಆ ಕುಂಭನು, ಅಕುಂಠದಾರೈಃ-ಭಗ್ನವಾಗದಿರುವ ಧಾರೆಗಳುಳ್ಳ, ನಿಶಿತೈಃ - ಹದವಾದ, ತೀಕ್ಷ್ಣೈಃ - ಕ್ರೂರಗಳಾದ, ಕನ....ಣೈಃ - ಭಂಗಾರದ ಹಿಡಿಗಳುಳ್ಳ, ವಿವಿಧೈಃ-ನಾನಾಬಗೆಗಳಾದ, ಬಾಣೈ-ಬಾಣಗಳಿಂದ, ಅಂಗದಂ-ಅಂಗದನನ್ನು, ವಿವ್ಯಾಧ-ಹೊಡದನು. ॥೪೮॥ ಪ್ರತಿವಿದ್ಧಾಂಗಃ-ಹೊಡೆಯಲ್ಪಟ್ಟ ಸಮಸ್ತಾವಯವಗಳುಳ್ಳ, ವಾಲಿಪುತ್ರಃ-ವಾಲಿಗೆ ಮಗನಾದ, ಅಂಗದಃ - ಅಂಗದನು, ನಕಂಪತೇ - ಚಲಿಸಲಿಲ್ಲ, ತಸ್ಯ - ಆ ಕುಂಭನ,

---

ಮೈಂದನ ವಕ್ಷಸ್ಥಳಕ್ಕೆ ಪ್ರಯೋಗಿಸಿದನು. ಹೀಗೆ ಆ ರಾಕ್ಷಸನ ಬಾಣಪ್ರಯೋಗದಿಂದ ಮರ್ಮಸ್ಥಾನದಲ್ಲಿ ಗಾಯಗೊಂಡು ಮೈಂದನು ನೆಲಕ್ಕೆ ಬಿದ್ದು ಮೂರ್ಛೆಹೋದನು. ॥೪೨–೪೫॥ ಹೀಗೆ ತನ್ನ ಸೋದರ ಮಾವಂದಿರಾದ ಮೈಂದ ದ್ವಿವಿದರೀರ್ವರೂ ಮೂರ್ಛಿತರಾದುದನ್ನು ಕಂಡು ಮಹಾ ವೀರನಾದ ಅಂಗದಕುಮಾರನು ಧನುಸ್ಸನ್ನೆತ್ತಿ ಹಿಡಿದು ನಿಂತಿರುವ ಆ ಕುಂಭನ ಮೇಲೆ ಅಟ್ಟಿ ಬಂದನು. ಈ ರೀತಿ ತನ್ನಮೇಲೆ ಬರುತ್ತಿರುವ ಆಯಂಗದನನ್ನು ಕಂಡು ಕುಂಭನು ಆನೆಯನ್ನು ಅಂಕುಶಗಳಿಂದ ಎಂತೋ ಅಂತು ಮೊದಲೈದು ಬಾಣಗಳಿಂದಲೂ, ಆಮೇಲೆ ತೀಕ್ಷ್ಣವಾದ ಮತ್ತೆ ಮೂರು ಬಾಣಗಳಿಂದಲೂ ಗಾಸಿಪಡಿಸಿದನು. ಆ ರಾಕ್ಷಸನು ಅಲ್ಲಿಗೂ ಬಿಡದೆ ಮತ್ತೂ ತೀಕ್ಷ್ಣವಾದವೂ, ಚಿನ್ನದ ಕೋಂಕಿಗಳುಳ್ಳವೂ ಆದ ಅನೇಕ ಬಾಣಗಳನ್ನು ಅವನ ಮೇಲೆಸೆದನು. ಇಷ್ಟಾದರೂ ಮಹಾ ಪ್ರರಾಕ್ರಮಿಯಾದ ಅಂಗದನು ಸ್ವಲ್ಪವೂ ಅತ್ತಿತ್ತ ಚಲಿಸಲಿಲ್ಲವಲ್ಲದೆ ಆ ರಾಕ್ಷಸನ ಶಿರಸ್ಸಿನಮೇಲೆ ಕಲ್ಮರಗಳ

ವವರ್ಷಹ ||೪೯|| ಸಪ್ರಚಿಚ್ಛೇದ ತಾಗ್ ಸರ್ವಾಗ್ ಬಿಭೇದಚ ಪುನಃ ಶಿಲಾಃ । ಕುಂಭ ಕರ್ಣಾತ್ಮಜಃ ಶ್ರೀಮಾನ್ ವಾಲಿಪುತ್ರ ಸಮಿರಿತಾನ್ ||೫೦|| ಆಪತಂತಂ ಚ ಸಂಪ್ರೇಕ್ಷ್ಯ ಕುಂಭೋ ವಾನರಯೂಥಪಂ । ಭ್ರುವೋರ್ವಿವ್ಯಾಧ ಬಾಣಾಭ್ಯಾಮುಲ್ಕಾಭ್ಯಾಮಿವ ಕುಂಜರಂ ||೫೧|| ತಸ್ಯ ಸುಸ್ರಾವ ರುಧಿರಂ ಪಿಹಿತೇ ಚಾಽಸ್ಯ ಲೋಚನೇ । ಅಂಗದಃ ಪಾಣಿನಾ ನೇತ್ರೇ ಪಿಧಾಯ ರುಧಿರೋಕ್ಷಿತೇ || ೫೨ || ಸಾಲಮಾಸನ್ನಮೇಕೇನ ಪರಿಜ ಗ್ರಾಹ ಪಾಣಿನಾ । ಸಂಪೀಡ್ಯಚೋರಸಾ ಸ್ಕಂಧಂ ಕರೇಣಾಭಿನಿವೇಶ್ಯಚ ||೫೩|| ಕಿಂಚಿ ದಭ್ಯವನಮ್ಯೈನ ಮುನ್ಮಮಾಥ ಯಥಾಗಜಃ । ತಮಿಂದ್ರಕೇತುಪ್ರತಿಮಂ ವೃಕ್ಷಂ

ಮೂರ್ಧ್ನಿ - ಮಂಡೆಯಲ್ಲಿ, ಶಿಲಾ....ಣಿ - ಕಲ್ಲುಗಳ ಮತ್ತು ಮರಗಳ ಮಳೆಯನ್ನು, ವವರ್ಷಹ - ಸುರಿಸಿದನಷ್ಟೆ. || ೪೯ || ಶ್ರೀಮಾನ್-ಸಂಪದ್ಯುಕ್ತನಾದ, ಸಕುಂ....ಜಃ-ಆ ಕುಂಭನು, ವಾಲಿ....ತಾನ್-ವಾಲಿಯ ಮಗನಿಂದ ಬಿಡಲ್ಪಟ್ಟ, ತಾನ್‌ಸರ್ವಾನ್ - ಆ ಗಿಡಗಳನ್ನೂ, ಶಿಲಾಶ್ಚ - ಕಲ್ಲುಗಳನ್ನೂ, ಪುನಃ - ಮತ್ತೂ, ಪ್ರಚಿಚ್ಛೇದ - ಕತ್ತರಿಸಿದನು, ಬಿಭೇದಚ - ಭೇದಿಸಿದನು. || ೫೦ || ಕುಂಭಃ - ಕುಂಭನು, ಆಪತಂತಂ - ಬರುತ್ತಿರುವ, ವಾನರಯೂಥಪಂ - ಕಪಿಯೂಥಪತಿಯಾದ ಅಂಗದನನ್ನು, ಸಂಪ್ರೇಕ್ಷ್ಯ - ಕಂಡು, ಅಥ - ಬಳಿಕ, ಭ್ರುವೋಃ - ಹುಬ್ಬುಗಳ ಮಧ್ಯಪ್ರದೇಶದಲ್ಲಿ, ಬಾಣಾಭ್ಯಾಂ - ಎರಡು ಬಾಣಗಳಿಂದ, ಕುಂಜರಂ - ಆನೆಯನ್ನು, ಉಲ್ಕಾಭ್ಯಾಮಿವ - ಉರಿಯುತ್ತಿರುವ ಕೊಳ್ಳಿ ಗಳಿಂದಲಂತೆ, ವಿವ್ಯಾಧ - ಹೊಡೆದನು, ತಸ್ಯ - ಆ ಅಂಗದನಿಗೆ, ರುಧಿರಂ - ರಕ್ತವು, ಸುಸ್ರಾವ - ಸೋರಿತು, ಅಸ್ಯ - ಈ ಅಂಗದನ, ಲೋಚನೇ - ನೇತ್ರಗಳು, ಪಿಹಿತೇ - ಮುಚ್ಚಲ್ಪಟ್ಟವು. || ೫೧ || ಅಂಗದಃ - ಅಂಗದನು, ರುಧಿರೋಕ್ಷಿತೇ - ರಕ್ತದಿಂದ ತೋಯಿಸಲ್ಪಟ್ಟ, ನೇತ್ರೇ - ಕಣ್ಣುಗಳನ್ನು, ಪಾಣಿನಾ - ಹಸ್ತದಿಂದ, ಪಿಧಾಯ - ಮುಚ್ಚಿಕೊಂಡು, ಏಕೇನಪಾಣಿನಾ - ಮತ್ತೊಂದು ಕೈಯಿಂದ, ಆಸನ್ನಂ - ಸಮೀಪವರ್ತಿಯಾದ, ಸಾಲಂ - ಸಾಲವೃಕ್ಷವನ್ನು, ಪರಿಜಗ್ರಾಹ - ಹಿಡಿದುಕೊಂಡನು. || ೫೨ || ಉರಸಾ - ಎದೆಯಿಂದ, ಸ್ಕಂಧಂ - ದೊಡ್ಡ ರಂಬೆಯನ್ನು, ಸಂಪೀಡ್ಯ - ಒತ್ತಿ, ಕರೇಣ - ಹಸ್ತದಿಂದ, ಅಭಿವೇಶ್ಯ - ಭದ್ರವಾಗಿ ಹಿಡಿದು, ಕಿಂಚಿತ್ - ಸ್ವಲ್ಪ, ಅವ ನಮ್ಯ - ಬೊಗ್ಗಿಸಿ, ಗಜೋಯಥಾ - ಆನೆಯಂತೆ, ಏನಂ - ಈ ಕುಂಭನನ್ನು, ಉನ್ಮಮಾಥ - ಹೊಡೆದನು. || ೫೩ || ಸಃ - ಆ ಕುಂಭನು, ಸರ್ವರಕ್ಷಸಾಂ - ಸಮಸ್ತ ರಕ್ಕಸರೂ, ಪಶ್ಯತಾಂ - ನೋಡುತ್ತಿರುವಂತೆಯೇ, ಇಂದ್ರ....ಮಂ - ಇಂದ್ರಧ್ವಜಕ್ಕೆ ಸಮಾನವಾದ, ವೃಕ್ಷಂ - ಗಿಡವನ್ನು,

ಮಳೆಯನ್ನು ಸುರಿಸಿದನು. ಕುಂಭಕರ್ಣನ ಮಗನಾದ ಆ ಕುಂಭನು, ವಾಲಿಪುತ್ರನು ಪ್ರಯೋಗಿಸಿದ ಆ ಕಲ್ಮರಗಳಿಂದಲೇ ಪುಡಿಗುಟ್ಟಿದನು. ||೪೬–೫೦|| ವಾನರಯೂಥಪನಾದ ಅಂಗದನು ಅಲ್ಲಿಗೂ ಬಿಡದೆ ತನ್ನಮೇಲೆ ಬರುತ್ತಿರುವುದನ್ನು ಕಂಡು ಅವನ ಹಣೆಗೆ ಬಾಣ ಪ್ರಯೋಗ ಮಾಡಿ ಭೇದಿಸಿದನು. ಆಗಲಾತನ ಹಣೆಯಿಂದ ರಕ್ತಪ್ರವಾಹವು ಹೊರಟಿತು ; ಕಣ್ಣುಗಳು ಮುಚ್ಚಿಹೋದುವು. ಮಹಾ ವೀರನಾದ ಆ ಅಂಗದಕುಮಾರನು ಕಣ್ಣುಗಳ ಮೇಲೆ ರಕ್ತಪ್ರವಾಹವು ಬಾರದಿರಲೆಂದು ಕೈಗಳಿಂದ ಕಣ್ಣುಗಳನ್ನು ಮುಚ್ಚಿ ಸಮೀಪ ದಲ್ಲಿಯೇ ಇದ್ದ ಸಾಲವೃಕ್ಷವೊಂದನ್ನು ಮತ್ತೊಂದು ಕೈಯಿಂದ ಹಿಡಿದನು. ಆ ತರುವಾಯ ಬುಡಕ್ಕೆ ಎದೆಗೊಟ್ಟು ಅದನ್ನು ಸ್ವಲ್ಪ ಬೊಗ್ಗಿಸಿ ಆನೆಯಂತೆ ಅದನ್ನು ಕಿತ್ತೆಳೆದನು. ಮಹೇಂದ್ರಧ್ವಜಕ್ಕೆ ಸಮಾನವಾಗಿಯೂ, ಮಂದರಪರ್ವತೋಪಮವಾಗಿಯೂ ಇದ್ದ ಆ

ಮಂದರಸನ್ನಿಭಂ ॥ ೫೪ ॥ ಸಮುತ್ಸೃಜಂತಂ ವೇಗೇನ, ಪಶ್ಯತಾಂ ಸರ್ವರಕ್ಷಸಾಂ । ಸ ಬಿಭೇದ ಶಿತೈರ್ಬಾಣೈ ಸ್ಸಪ್ತಭಿಃ ಕಾಯಭೇದನೈಃ । ಅಂಗದೋ ವಿವ್ಯಥೇಽಭೀಕ್ಷ್ಣಂ ನನಾದಚ ಮುಮೋಹಚ ॥೫೫॥ ಅಂಗದಂ ವ್ಯಥಿತಂ ದೃಷ್ಟ್ವಾ ಸೀದಂತಮಿವ ಸಾಗರೇ। ದುರಾಸದಂ ಹರಿಶ್ರೇಷ್ಠಂ ರಾಮಾಯಾಽನ್ಯೇ ನ್ಯವೇದಯನ್ ॥ ೫೬ ॥ ರಾಮಸ್ತು ವ್ಯಥಿತಂ ಶ್ರುತ್ವಾ ವಾಲಿಪುತ್ರಂ ರಣಾಜಿರೇ । ವ್ಯಾದಿದೇಶ ಹರಿಶ್ರೇಷ್ಠಾನ್ ಜಾಂಬವತ್ಪ್ರಮುಖಾಂಸ್ತತಃ ॥ ೫೭ ॥ ತೇತು ವಾನರಶಾರ್ದೂಲಾಃ ಶ್ರುತ್ವಾ ರಾಮಸ್ಯ ಶಾಸನಂ । ಅಭಿಪೇತು ಸ್ಸುಸಂಕ್ರುದ್ಧಾಃ ಕುಂಭಮುದ್ಯತ ಕಾರ್ಮುಕಂ ॥ ೫೮ ॥ ತತೋ ದ್ರುಮ

ವೇಗೇನ - ಜವದಿಂದ, ಸಮುತ್ಸೃಜಂತಂ - ಬಿಡುತ್ತಿರುವ, ಮಂದರಸನ್ನಿಭಂ - ಮಂದರಪರ್ವತಕ್ಕೆ ಸಮಾನನಾದ, ತಂ - ಆ ಅಂಗದನನ್ನು, ನಿಶಿತೈಃ - ತೀಕ್ಷ್ಣಗಳಾದ, ಕಾಯಭೇದನೈಃ - ಶರೀರವನ್ನು ಭೇದಿಸುತ್ತಿರುವ, ಸಪ್ತಭಿಃ - ಏಳಾದ, ಬಾಣೈಃ - ಬಾಣಗಳಿಂದ, ಬಿಭೇದ - ಭೇದಿಸಿದನು. ॥ ೫೪ ॥ ಅಂಗದಃ - ಅಂಗದನು, ವಿವ್ಯಥೇ - ವ್ಯಥೆಗೊಂಡನು, ಅಭೀಕ್ಷ್ಣಂ - ಬಹಳವಾಗಿ, ನನಾದಚ - ಕೂಗಿದನು, ಮುಮೋಹಚ - ಮೂರ್ಛೆ ಹೊಂದಿದನು. ॥ ೫೫ ॥ ಅನ್ಯೇ - ಮತ್ತೆ ಕೆಲ ವಾನರರು, ಸಾಗರೇ - ಕಡಲಿನಲ್ಲಿ, ಸೀದಂತಮಿವ - ಮುಳುಗಿದಂತೆ, ವ್ಯಥಿತಂ - ವ್ಯಥೆಗೊಂಡ, ದುರಾಸದಂ- ತಿರಸ್ಕರಿಸಲಸಾಧ್ಯನಾದ, ಹರಿಶ್ರೇಷ್ಠಂ - ವಾನರಶ್ರೇಷ್ಠನಾದ, ಅಂಗದಂ - ಅಂಗದನನ್ನು, ದೃಷ್ಟ್ವಾ- ಕಂಡು, ರಾಮಾಯ - ಶ್ರೀರಾಮನಿಗೆ, ನ್ಯವೇದಯನ್ - ತಿಳಿಸಿದರು. ॥ ೫೬ ॥ ತತಃ - ಬಳಿಕ, ರಾಮಸ್ತು - ಶ್ರೀರಾಮನಾದರೆ, ರಣಾಜಿರೇ - ಯುದ್ಧಭೂಮಿಯಲ್ಲಿ, ವಾಲಿಪುತ್ರಂ - ಅಂಗದನನ್ನು, ವ್ಯಥಿತಂ - ಹೊಡೆಯಲ್ಪಟ್ಟವನನ್ನಾಗಿ, ಶ್ರುತ್ವಾ - ಕೇಳಿ, ಜಾಂಬ....ಖಾನ್ - ಜಾಂಬವಂತನೇ ಮೊದಲಾದ, ಹರಿಶ್ರೇಷ್ಠಾನ್-ವಾನರೋತ್ತಮರನ್ನು, ವ್ಯಾದಿದೇಶ-ಆಜ್ಞಾಪಿಸಿದನು. ॥ ೫೭ ॥ ವಾನ....ಲಾಃ- ಕಪಿಶ್ರೇಷ್ಠರಾದ, ತೇ - ಆ ಜಾಂಬವಂತನೇ ಮೊದಲಾದವರು, ರಾಮಸ್ಯ - ಶ್ರೀರಾಮನ, ಶಾಸನಂ - ಆಜ್ಞೆಯನ್ನು, ಶ್ರುತ್ವಾ - ಕೇಳಿ, ಸುಸಂಕ್ರುದ್ಧಾಃ - ಬಹಳ ಕೋಪಿಷ್ಠರಾಗಿ, ಉದ್ಯ.....ಕಂ - ಎತ್ತಲ್ಪಟ್ಟ ಧನುರ್ಬಾಣಗಳುಳ್ಳ, ಕುಂಭಂ - ಕುಂಭನನ್ನು ಕುರಿತು, ಅಭಿಪೇತುಃ - ಓಡಿಬಂದನು. ॥ ೫೮ ॥ ತತಃ - ಬಳಿಕ, ದ್ರುಮ.....ಸ್ತಾಃ - ಗಿಡಗಳೂ, ಕಲ್ಲುಗಳೂ ಕೈಗಳಲ್ಲುಳ್ಳ, ಕ್ರೋಧ..... ನಾಃ-

---

ಸಾಲವೃಕ್ಷವನ್ನೀರೀತಿ ಕಿತ್ತೆಳೆದುಕೊಂಡು ರಣಭೂಮಿಯಲ್ಲಿದ್ದ ರಾಕ್ಷಸರೆಲ್ಲರೂ ನೋಡುತ್ತಿರುವಂತೆಯೇ ಅದನ್ನು ಆ ರಾಕ್ಷಸನ ಮೇಲೆಸೆದನು. ಆ ಸಮಯದಲ್ಲಿ ಕುಂಭನಾದರೋ, ಮಹಾ ತೀಕ್ಷ್ಣವೂ, ಶರೀರಭೇದಕವೂ ಆದ ಬಾಣಗಳಿಂದ ಆ ಸಾಲವೃಕ್ಷವನ್ನು ಭೇದಿಸಿ ಬಿಟ್ಟನು. ಅದನ್ನು ಕಂಡು ಅಂಗದನು ಬಹಳವಾಗಿ ವಿಷಾದಪಟ್ಟುದೂ ಅಲ್ಲದೆ ಅಡಿಗಡಿಗೂ ಸಿಂಹನಾದ ಮಾಡಿ ದಿಗ್ಭ್ರಾಂತನಾಗಿ ಹೋದನು. ॥೫೧–೫೫॥ ಮಹಾ ಸಾಗರದಲ್ಲಿ ಮುಳುಗಿಹೋಗುವವನಂತೆ ಬಹಳವಾಗಿ ವ್ಯಥೆಗೊಂಡ ಆ ಅಂಗದಕುಮಾರನನ್ನು ಕಂಡು ಕೂಡಲೇ ಅಲ್ಲಿದ್ದ ವಾನರರು ಶ್ರೀರಾಮನಿಗೆ ಆ ವಿಷಯವನ್ನು ಅರಿಕೆ ಮಾಡಿದರು. ರಣರಂಗದಲ್ಲಿ ವಾಲಿಕುಮಾರನಾದ ಆ ಕಪಿಶ್ರೇಷ್ಠನು ವ್ಯಥಿತನಾದ ವರ್ತಮಾನವನ್ನು ಕೇಳಿ ಶ್ರೀರಾಮನು ತಕ್ಷಣದಲ್ಲಿಯೇ ಜಾಂಬವಂತನೇ ಮೊದಲಾದ ಕಡುಗಲಿಗಳನ್ನು ಹೊರಡಿರೆಂದು ಆಜ್ಞಾಪಿಸಿದನು. ಶ್ರೀರಾಮಮೂರ್ತಿಯ ಆಜ್ಞೆಯನ್ನು ಕೇಳಿದೊಡನೆಯೇ ಆ ವಾನರವೀರರು ಬಿಲ್ಲನ್ನು ಹಿಡಿದು ನಿಂತಿರುವ ಕುಂಭನನ್ನೆದುರಿಸಲು ಮಹಾ ಕೋಪರೋಷಸಮನ್ವಿತರಾಗಿ ಹೊರಟರು. ಆ

ಶಿಲಾಹಸ್ತಾಃ ಕೋಪಸಂರಕ್ತಲೋಚನಾಃ । ರಿರಕ್ಷಿಷಂತೋಽಭ್ಯಪತನ್ನಂಗದಂ ವಾನ
ರರ್ಷಭಾಃ ॥ ೫೯ ॥ ಜಾಂಬವಾಂಶ್ಚ ಸುಷೇಣಶ್ಚ ವೇಗದರ್ಶೀಚ ವಾನರಃ । ಕುಂಭ
ಕರ್ಣಾತ್ಮಜಂ ವೀರಂ ಕ್ರುದ್ಧಾ ಸ್ಸಮಭಿದುದ್ರುವುಃ ॥೬೦॥ ಸಮೀಕ್ಷ್ಯಾಪತತಸ್ತಾಂಸ್ತು
ವಾನರೇಂದ್ರಾನ್ಮಹಾಬಲಾನ್ । ಆವವಾರ ಶರೌಘೇಣ ನಗೇನೇವ ಜಲಾಶಯಂ ॥೬೧॥
ತಸ್ಯ ಬಾಣಪಥಂ ಪ್ರಾಪ್ಯ ನಶೇಕುರತಿವರ್ತಿತುಂ । ವಾನರೇಂದ್ರಾ ಮಹಾತ್ಮಾನೋ
ವೇಲಾಮಿವ ಮಹೋದಧಿಃ ॥ ೬೨ ॥ ತಾಂಸ್ತು ದೃಷ್ಟ್ವಾ ಹರಿಗಣಾನ್ ಶರವೃಷ್ಟಿಭಿರ
ರ್ದಿತಾನ್ । ಅಂಗದಂ ಪೃಷ್ಠತಃ ಕೃತ್ವಾ ಭ್ರಾತೃಜಂ ಪ್ಲವಗೇಶ್ವರಃ ॥ ೬೩ ॥ ಅಭಿ

ಕೋಪದಿಂದ ಕೆಂಪಾದ ಕಣ್ಣುಗಳುಳ್ಳವರಾಗಿ, ವಾನರರ್ಷಭಾಃ - ವಾನರೋತ್ತಮರು, ಅಂಗದಂ - ಅಂಗದನನ್ನು, ರಿರಕ್ಷಿಷಂತಃ - ಸಂರಕ್ಷಿಸಲಿಚ್ಛೆಯುಳ್ಳವರಾಗಿ, ಅಭ್ಯಪತನ್ - ಬಂದರು. ॥ ೫೯ ॥ ಜಾಂಬವಾಂಶ್ಚ - ಜಾಂಬವಂತನು, ಸುಷೇಣಶ್ಚ - ಸುಷೇಣನೂ, ವಾನರಃ - ಕಪಿಯಾದ, ವೇಗ ದರ್ಶೀಚ - ವೇಗದರ್ಶೀ ಎಂಬುವನು, ಏತೇ - ಈ ಮೂವರೂ, ಕ್ರುದ್ಧಾಃ - ಕುಪಿತರಾಗಿ, ವೀರಂ - ಶೂರನಾದ, ಕುಂಭ....ಜಂ - ಕುಂಭನನ್ನು ಕುರಿತು, ಸಮಭಿದುದ್ರುವುಃ - ಓಡಿಬಂದರು. ॥ ೬೦ ॥ ಆಪತತಃ - ಬರುತ್ತಿರುವ, ಮಹಾಬಲಾನ್ - ಮಹಾ ಬಲಶಾಲಿಗಳಾದ, ತಾನ್‌ವಾನರೇಂದ್ರಾನ್ - ಆ ವಾನ ರೋತ್ತಮರನ್ನು, ಸಮೀಕ್ಷ್ಯ - ಕಂಡು, ಜಲಾಶಯಂ - ಜಲಪ್ರವಾಹವನ್ನು, ನಗೇನೇವ - ಪರ್ವತ ದಿಂದಲಂತೆ, ಶರೌಘೇಣ - ಬಾಣಗಳ ವೃಷ್ಟಿಯಿಂದ, ಆವವಾರ - ತಡೆದನು. ॥೬೧॥ ಮಹಾತ್ಮಾನಃ- ಮಹಾ ಧೈರ್ಯವಂತರಾದ, ವಾನರೇಂದ್ರಾಃ - ವಾನರೋತ್ತಮರಾದ ಜಾಂಬವಾದಿಗಳು, ತಸ್ಯ - ಆ ಕುಂಭನ, ಬಾಣಪಥಂ - ಬಾಣಗಳಿಗೆ ಗುರಿಯನ್ನು, ಪ್ರಾಪ್ಯ - ಹೊಂದಿ, ಮಹೋದಧಿಃ - ಕಡಲು, ವೇಲಾಮಿವ - ದಡವನ್ನಂತೆ, ಅತಿವರ್ತಿತುಂ - ಹಿಂತಿರುಗುವದಕ್ಕೂ, ನಶೇಕುಃ - ಸಮರ್ಥರಾಗ ಲಿಲ್ಲವು. ॥ ೬೨ ॥ ತಾನ್‌ಹರಿಗಣಾನ್ - ಆ ಕಪಿಗಳ ಸಮೂಹಗಳನ್ನು, ಶರವೃಷ್ಟಿಭಿಃ - ಬಾಣಗಳ ಮಳೆ ಗಳಿಂದ, ಅರ್ದಿತಾನ್ - ಹೊಡೆಯಲ್ಪಟ್ಟವರನ್ನಾಗಿ, ದೃಷ್ಟ್ವಾ - ಕಂಡು, ಪ್ಲವಗೇಶ್ವರಃ - ವಾನರ ರಾಜನಾದ, ಸುಗ್ರೀವಃ - ಸುಗ್ರೀವನು, ಭ್ರಾತೃಜಂ - ಅಣ್ಣನ ಮಗನಾದ, ಅಂಗದಂ - ಅಂಗದ ನನ್ನು, ಪೃಷ್ಠತಃ - ಹಿಂದುಗಡೆ, ಕೃತ್ವಾ - ಮಾಡಿ, ಆಹವೇ - ಕಾಳೆಗದಲ್ಲಿ, ವೇಗೇನ - ವೇಗದಿಂದ, ಶೈಲ....ತಂ - ಬೆಟ್ಟದ ಜರಿಗಳಲ್ಲಿ ಸಂಚರಿಸುತ್ತಿರುವ, ನಾಗಂ - ಆನೆಯನ್ನು, ವೇಗವಾನ್ - ಶೀಘ್ರ

ಕಪಿಶೂರರು ಕಲ್ಮರಗಳನ್ನೇ ಆಯುಧಗಳನ್ನಾಗಿ ಹಿಡಿದವರಾಗಿ ಯುವರಾಜನಾದ ಅಂಗದ ನನ್ನು ರಕ್ಷಿಸಲೋಸುಗ ರಣರಂಗಕ್ಕಿಳಿದರು. ಜಾಂಬವಂತ, ಸುಷೇಣ, ವೇಗದರ್ಶಿ ಎಂಬ ಮೂವರು ವೀರರು ಬಹಳವಾದ ಕೋಪಾಟೋಪದಿಂದ ಕುಂಭಕರ್ಣನ ಮಗನಾದ ಆ ಕುಂಭ ನನ್ನಟ್ಟಿ ಬಂದರು. ॥೫೬–೬೦॥ ಈ ರೀತಿ ತನ್ನನ್ನಟ್ಟಿ ಬರುತ್ತಿರುವ ಮಹಾ ಬಲಾಢ್ಯರಾದ ಆ ವಾನರೋತ್ತಮರನ್ನು ಕಂಡು ಕುಂಭನು ಗಿರಿಯಿಂದ ಪ್ರವಾಹವನ್ನೆಂತೋ ಅಂತು ತನ್ನ ಬಾಣತಂಡಗಳಿಂದ ಅವರನ್ನು ತಡೆದನು. ಮಹಾತ್ಮರಾದ ಆ ವಾನರಶ್ರೇಷ್ಠರು, ಸಮುದ್ರವು ದಡವನ್ನೆಂತೋ ಅಂತು ಆ ರಾಕ್ಷಸನ ಬಾಣಮಾರ್ಗದಲ್ಲಿ ಮುಂದಕ್ಕೆ ಹೆಜ್ಜೆಯಿಡಲಾರದೆ ಹೋದರು. ಹೀಗೆ ಅವರೆಲ್ಲರೂ ಆ ರಾಕ್ಷಸನ ಬಾಣಗಳಿಂದ ಪೀಡಿತರಾಗಿರುವುದನ್ನು ಕಂಡು ಪ್ಲವಗೇಶ್ವರನಾದ ಸುಗ್ರೀವನು ಅಂಗದಕುಮಾರನನ್ನು ಹಿಂದಿಟ್ಟುಕೊಂಡು ಸಿಂಹವು ಮಹಾ ಬಲಿಷ್ಠವಾದ ಮದಗಜದ ಮೇಲೆರಗುವಂತೆ ಮಹಾ ವೇಗದಿಂದ ಆ ರಾಕ್ಷಸನ ಮೇಲೆ

ದುದ್ರಾವ ವೇಗೇನ ಸುಗ್ರೀವಃ ಕುಂಭಮಾಹವೇ । ಶೈಲಸಾನುಚರಂ ನಾಗಂ ವೇಗವಾನಿವ ಕೇಸರೀ ॥ ೬೪ ॥ ಉತ್ಪಾಟ್ಯ ಚ ಮಹಾಶೈಲಾನಶ್ವಕರ್ಣಾನ್ ಧವಾನ್ ಬಹೂನ್ । ಅನ್ಯಾಂಶ್ಚ ವಿವಿಧಾನ್ ವೃಕ್ಷಾಂಶ್ಚಿಕ್ಷೇಪ ಚ ಮಹಾಬಲಃ ॥ ೬೫ ॥ ತಾಂ ಛಾದಯಂತೀಮಾಕಾಶಂ ವೃಕ್ಷವೃಷ್ಟಿಂ ದುರಾಸದಾಂ । ಕುಂಭಕರ್ಣಾತ್ಮಜಃ ಶೀಘ್ರಂ ಚಿಚ್ಛೇದ ನಿಶಿತೈಃ ಶರೈಃ ॥ ೬೬ ॥ ಅಭಿಲಕ್ಷ್ಯೇಣ ತೀವ್ರೇಣ ಕುಂಭೇನ ನಿಶಿತೈಃ ಶರೈಃ । ಆಚಿತಾಸ್ತೇ ದ್ರುಮಾ ರೇಜುರ್ಯಥಾ ಘೋರಾಃ ಶತಘ್ನಯಃ ॥೬೭॥ ದ್ರುಮವರ್ಷಂತು ತಚ್ಛಿನ್ನಂ ದೃಷ್ಟ್ವಾ ಕುಂಭೇನ ವೀರ್ಯವಾನ್ । ವಾನರಾಧಿಪತಿಃ ಶ್ರೀಮಾನ್ ಮಹಾಸತ್ತ್ವೋ ನವಿವ್ಯಥೇ ॥ ೬೮ ॥ ನಿರ್ಭಿದ್ಯಮಾನಸ್ಸಹಸಾ ಸಹಮಾನಶ್ಚ ತಾನ್ ಶರಾನ್ ।

ಗಾಮಿಯಾದ, ಕೇಸರೀವ - ಸಿಂಹದಂತೆ, ಕುಂಭಂ - ಕುಂಭನನ್ನು ಕುರಿತು, ಅಭಿದುದ್ರಾವ - ಓಡಿಬಂದನು, ಮಹಾಬಲಃ - ಬಹಳ ಬಲವಂತನಾದ ಸುಗ್ರೀವನು, ಮಹಾಶೈಲಾನ್ - ದೊಡ್ಡ ಬೆಟ್ಟಗಳನ್ನು, ಅಶ್ವಕರ್ಣಾನ್ - ಬಿಳೀ ಮತ್ತೀಗಿಡಗಳನ್ನೂ, ಬಹೂನ್ - ಅನೇಕಗಳಾದ, ಧವಾನ್ - ಕಗ್ಗಲೀ ಗಿಡಗಳನ್ನೂ, ಅನ್ಯಾಂಶ್ಚ - ಮತ್ತೆ ಕೆಲವಾದ, ವಿವಿಧಾನ್ - ನಾನಾಬಗೆಗಳಾದ, ವೃಕ್ಷಾನ್ - ಮರಗಳನ್ನು, ಉತ್ಪಾಟ್ಯ - ಕಿತ್ತು, ಚಿಕ್ಷೇಪಚ - ಎಸೆದನು. |!೬೪-೬೫|| ಕುಂಭಕರ್ಣಾತ್ಮಜಃ - ಕುಂಭಕರ್ಣನ ಮಗನಾದ ಕುಂಭನು, ಆಕಾಶಂ - ಅಂತರಿಕ್ಷವನ್ನು, ಛಾದಯಂತೀಂ - ಮುಚ್ಚುತ್ತಿರುವ, ದುರಾಸದಾಂ - ಹೊಂದಲಸಾಧ್ಯವಾದ, ತಾಂವೃಕ್ಷವೃಷ್ಟಿಂ - ಆ ಗಿಡಗಳ ಮಳೆಯನ್ನು, ನಿಶಿತೈಃ - ತೀಕ್ಷ್ಣಗಳಾದ, ಶರೈಃ - ಬಾಣಗಳಿಂದ, ಶೀಘ್ರಂ - ಜಾಗ್ರತೆಯಾಗಿ, ಚಿಚ್ಛೇದ - ಕತ್ತರಿಸಿದನು. ||೬೬|| ಅಭಿಲಕ್ಷ್ಯೇಣ-ಹೊಂದಲ್ಪಟ್ಟ ಗುರಿಯುಳ್ಳ, ತೀವ್ರೇಣ - ತೀಕ್ಷ್ಣಕೋಪನನಾದ, ಕುಂಭೇನ-ಕುಂಭನಿಂದ, ತೇದ್ರುಮಾಃ - ಆ ಗಿಡಗಳು, ನಿಶಿತೈಃ - ಹದವಾದ, ಶರೈಃ - ಬಾಣಗಳಿಂದ, ಆಚಿತಾಃ-ಎರಚಲ್ಪಟ್ಟವುಗಳಾಗಿ, ಘೋರಾಃ - ಭಯಂಕರಗಳಾದ, ಶತಘ್ನ್ಯೋಯಥಾ - ಪಿರಂಗಿ ಗುಂಡುಗಳಂತೆ, ರೇಜುಃ - ಹೊಳೆಯುತ್ತಿದ್ದವು. ||೬೭|| ವೀರ್ಯವಾನ್ - ಸಾಮರ್ಥ್ಯವಂತನಾದ, ಶ್ರೀಮಾನ್-ಸಂಪದ್ಯುಕ್ತನಾದ, ಮಹಾಸತ್ವಃ - ಬಹಳ ಬಲಶಾಲಿಯಾದ, ವಾನರಾಧಿಪತಿಃ - ಸುಗ್ರೀವನು, ತತ್ ದ್ರುಮವರ್ಷಂ - ಆ ಮರಗಳ ಮಳೆಯನ್ನು, ಕುಂಭೇನ - ಕುಂಭನಿಂದ, ಛಿನ್ನಂ - ಕತ್ತರಿಸಲ್ಪಟ್ಟುದನ್ನಾಗಿ, ದೃಷ್ಟ್ವಾ - ಕಂಡು, ನವಿವ್ಯಥೇ - ವ್ಯಥೆಪಡಲಿಲ್ಲವು. || ೬೮ || ನಿರ್ಭಿದ್ಯಮಾನಃ - ಭೇದಿಸಲ್ಪಡುತ್ತಿರುವ, ತಾನ್‌ಶರಾನ್ - ಆ ಬಾಣಗಳನ್ನು, ಸಹಮಾನಶ್ಚ - ಸಹಿಸುತ್ತಿರುವ ಸುಗ್ರೀವನು,

---

ನುಗ್ಗಿದನು. ಆಗಲಾ ಕಪೀಶ್ವರನು ಪರಾಕ್ರಮಿಸಿ ದೊಡ್ಡ ದೊಡ್ಡ ಬೆಟ್ಟಗಳನ್ನೂ, ಅಶ್ವಕರ್ಣ, ಧವ ಮೊದಲಾದ ಅನೇಕಾನೇಕ ಮಹಾ ವೃಕ್ಷಗಳನ್ನು ಕಿತ್ತು ಆ ರಾಕ್ಷಸನ ಮೇಲೆ ಪ್ರಯೋಗಿಸಿದನು. ||೬೧–೬೫|| ಗಗನಾಂಗಣವನ್ನೇ ಕವಿದು ಮಹಾ ದುರಾಸದವಾಗಿ ತನ್ನ ಮೇಲೆ ಬೀಳುವುದರಲ್ಲಿದ್ದ ಆ ಕಲ್ಮರಗಳ ಮಳೆಯನ್ನು ಕುಂಭಕರ್ಣಾತ್ಮಜನಾದ ಕುಂಭನು ಬಹು ಜಾಗ್ರತೆಯಾಗಿಯೇ ತನ್ನ ಕೂರಂಬುಗಳಿಂದ ಭೇದಿಸಿ ಕೆಡವಿದನು. ಮಹಾ ತೀಕ್ಷ್ಣವಾದುದೂ, ಮಹಾ ವೇಗವಾಗಿಯೂ, ಸರಿಯಾದ ಗುರಿಯುಳ್ಳವಾಗಿಯೂ ಇರುವ ಬಾಣಗಳಿಂದ ಭಗ್ನವಾದ ಆ ಕಲ್ಮರಗಳು ಶತಘ್ನಿಗಳಂತೆ ವಿರಾಜಿಸುತ್ತಿದ್ದುವು. ಮಹಾ ಪರಾಕ್ರಮಶಾಲಿಯೂ, ವಾನರೇಶ್ವರನೂ ಆದ ಆ ಸುಗ್ರೀವನು ತಾನು ಪ್ರಯೋಗಿಸಿದ ಕಲ್ಮರಗಳ ವೃಷ್ಟಿಯನ್ನು ಭೇದಿಸಿ ಆ ಕುಂಭರಾಕ್ಷಸನು ಸಂತತವಾಗಿ ಬಾಣಗಳ ಮಳೆಯನ್ನೇ ಕರೆಯುತ್ತಿದ್ದರೂ

ಕುಂಭಸ್ಯ ಧನುರಾಕ್ಷಿಪ್ಯ ಬಭಂಜೇಂದ್ರಧನುಃಪ್ರಭಂ ॥೬೯॥ ಅವಪ್ಲುತ್ಯ ತತಃ ಶೀಘ್ರಂ ಕೃತ್ವಾ ಕರ್ಮ ಸುದುಷ್ಕರಂ । ಅಬ್ರವೀತ್ಕುಪಿತಃ ಕುಂಭಂ ಭಗ್ನಶೃಂಗಮಿವ ದ್ವಿಪಂ ॥೭೦॥ "ನಿಕುಂಭಾಗ್ರಜ! ವೀರ್ಯಂ ತೇ ಬಾಣವೇಗವದದ್ಭುತಂ । ಸನ್ನತಿಶ್ಚ ಪ್ರಭಾವಶ್ಚ ತವ ವಾ ರಾವಣಸ್ಯವಾ ॥ ೭೧ ॥ ಪ್ರಹ್ಲಾದ ಬಲಿ ವೃತ್ರಘ್ನ ಕುಬೇರ ವರುಣೋಪಮ! । ಏಕಸ್ತ್ವಮನುಜಾತೋಽಸಿ ಪಿತರಂ ಬಲವೃತ್ತತಃ ॥ ೭೨ ॥ ತ್ವಾಮೇವೈಕಂ ಮಹಾಬಾಹುಂ ಚಾಪಹಸ್ತಮರಿಂದಮಂ । ತ್ರಿದಶಾ ನಾತಿವರ್ತಂತೇ ಜಿತೇಂದ್ರಿಯಮಿವಾಽಽಧಯಃ ॥ ೭೩ ॥ ವಿಕ್ರಮಸ್ವ ಮಹಾಬುದ್ಧೇ! ಕರ್ಮಾಣಿ ಮಮ ಪಶ್ಯತಃ ।

ಇಂದ್ರ....ಭಃ - ಇಂದ್ರನ ಧನುಸ್ಸಿಗೆ ಸಮಾನವಾದ, ಕುಂಭಸ್ಯ - ಕುಂಭನ, ಧನುಃ - ಬಿಲ್ಲನ್ನು, ಸಹಸಾ - ಜಾಗ್ರತೆಯಾಗಿ, ಆಕ್ಷಿಪ್ಯ - ಕಿತ್ತುಕೊಂಡು, ಬಭಂಜ - ಮುರಿದನು, ತತಃ - ಬಳಿಕ, ಶೀಘ್ರಂ - ಜಾಗ್ರತೆಯಾಗಿ, ಅವಪ್ಲುತ್ಯ - ಹಾರಿ, ಸುದುಷ್ಕರಂ - ಇತರರಿಂದ ಮಾಡಲಸಾಧ್ಯವಾದ, ಕರ್ಮ - ಕಾರ್ಯವನ್ನು, ಕೃತ್ವಾ - ಮಾಡಿ, ಕುಪಿತಃ - ಕೋಪಿಷ್ಠನಾಗಿ, ಭಗ್ನಶೃಂಗಂ - ಮುರಿಯಲ್ಪಟ್ಟ ದಂತಗಳುಳ್ಳ, ದ್ವಿಪಮಿವ - ಆನೆಯಂತಿರುವ, ಕುಂಭಂ - ಕುಂಭನನ್ನು ಕುರಿತು, ಅಬ್ರವೀತ್-ನುಡಿದನು. ||೬೯-೭೦|| ಹೇ ನಿಕುಂಭಾಗ್ರಜ - ಎಲೈ ನಿಕುಂಭನಿಗೆ ಅಣ್ಣನೇ, ತೇ - ನಿನ್ನ, ಬಾಣವೇಗವತ್ - ಬಾಣಗಳ ವೇಗದಂತೆ, ವೀರ್ಯಂ - ಸಾಮರ್ಥ್ಯವು, ಅದ್ಭುತಂ-ಆಶ್ಚರ್ಯಕರವಾದದ್ದು, ತವ - ನಿನ್ನ, ಸನ್ನತಿಶ್ಚ - ನಮ್ರಭಾವವೂ, ಪ್ರಭಾವಶ್ಚವಾ - ಪ್ರಭಾವವೂ, ರಾವಣಸ್ಯವಾ - ರಾವಣನಿಗಾದರೂ ಸಮಾನವಾಗಿದೆ. ||೭೧|| ಹೇ ಪ್ರ......ಮ - ಎಲೈ ಪ್ರಹ್ಲಾದನನ್ನೂ, ಬಲಿಚಕ್ರವರ್ತಿಯನ್ನೂ, ವೃತ್ರಾಸುರನನ್ನೂ ಹೊಡೆದಿರುವ ವಿಷ್ಣು ದೇವೇಂದ್ರನಿಗೆ ಸಮಾನನಾದವನೇ, ತ್ವಂ - ನೀನು, ಏಕಃ - ಒಬ್ಬನು, ಬಲವೃತ್ತತಃ - ಸಾಮರ್ಥ್ಯದಿಂದಲೂ, ಚರಿತ್ರೆಯಿಂದಲೂ, ಪಿತರಂ - ತಂದೆಯನ್ನು, ಅನುಜಾತಃ - ಅನುಸರಿಸಿ ಹುಟ್ಟಿದವನು, ಅಸಿ - ಆಗಿದ್ದೀಯೆ. ||೭೨|| ಮಹಾಬಾಹುಂ - ಮಹಾ ಪರಾಕ್ರಮಶಾಲಿಯಾದ, ಚಾಪಹಸ್ತಂ - ಬಿಲ್ಲೇ ಕೈಯಲ್ಲಿ ಉಳ್ಳ, ಅರಿಂದಮಂ - ಶತ್ರುಸಂಹಾರಕನಾದ, ತ್ವಾಮೇವೈಕಂ - ನಿನ್ನೊಬ್ಬನನ್ನು ಮಾತ್ರವೇ, ತ್ರಿದಶಾಃ - ದೇವತೆಗಳು, ಜಿತೇಂದ್ರಿಯಂ - ಇಂದ್ರಿಯನಿಗ್ರಹ ಮಾಡಿದವನನ್ನು, ಆಧಯ ಇವ-ರೋಗಗಳಂತೆ, ನಾತಿವರ್ತಂತೇ-ಅತಿಕ್ರಮಿಸಲಾರರು. ||೭೩|| ಹೇ ಮಹಾಬುದ್ಧೇ - ಎಲೈ ಮಹಾ ಬುದ್ಧಿಶಾಲಿಯೇ, ಮಮ -

---

ಆ ಕಪಿವೀರನು ಹಾರಿ ಹೊರಟು ಇಂದ್ರಧನುಸ್ಸಿಗೆ ಸಮಾನವಾದ ಕಾಂತಿಯನ್ನೊಳಗೊಂಡಿದ್ದ ಆತನ ಕೈಲಿದ್ದ ಧನುಸ್ಸನ್ನು ಕಸೆದು ಮುರಿದಿಕ್ಕಿದನು. ಈ ರೀತಿ ಮಹಾ ದುಷ್ಕರವಾದ ಕಾರ್ಯವನ್ನು ಮಾಡಿದ ಬಳಿಕ ಆ ಸುಗ್ರೀವನು ಹಿಂದಕ್ಕೆ ಹಾರಿ ನಿಂತು ದಂತ ಮುರಿದ ಮದ್ದಾನೆಯಂತಿರುವ ಆ ಕುಂಭನನ್ನು ಕುರಿತು ಮಹಾ ಕೋಪಸಮನ್ವಿತನಾಗಿ ಹೀಗೆಂದನು. ॥ ೬೬-೭೦ ॥ "ಎಲೈ ಕುಂಭನೇ! ಭಲೆಭಲೇ !! ನಿನ್ನಪರಾಕ್ರಮವೂ, ಪೌರುಷವೂ ನಿನ್ನ ದೊಡ್ಡಪ್ಪನಾದ ರಾವಣನೊಡನೆ ಸಮಸಮವಾಗಿ ತೂಗತಕ್ಕುವುಗಳು. ಎಲೈ ಶೂರನೇ! ನೀನು, ಪ್ರಹ್ಲಾದ, ಬಲಿ, ಇಂದ್ರ, ಕುಬೇರ, ವರುಣ ಮೊದಲಾದ ಮಹಾ ಶೂರಾಗ್ರಣಿಗಳನ್ನು ಗೆದ್ದ ಹರಿಸುರೇಶರಿಗೆ ಸಮಾನನಾದವನು. ಪರಾಕ್ರಮ ಮತ್ತು ಕಾರ್ಯಕರಣ ಸಾಮರ್ಥ್ಯಗಳಲ್ಲಿ ನೀನೊಬ್ಬನೇ ನಿನ್ನ ತಂದೆಯಾದ ಆ ಕುಂಭಕರ್ಣನನ್ನು ಹೋಲುತ್ತಿರುವೆ. ನೀನೇ ಆತನಿಗೆ ಸರಿಯಾದ ಮಗನೆಂಬುದರಲ್ಲಿ ಸಂದೇಹವಿಲ್ಲವು. ಜಿತೇಂದ್ರಿಯನಾದವನನ್ನು ವ್ಯಾಧಿಗಳಂತೋ

ವರದಾನಾತ್ಪಿತೃವ್ಯಸ್ತೇ ಸಹತೇ ದೇವದಾನವಾ‌ನ್ | ಕುಂಭಕರ್ಣಸ್ತು ವೀರ್ಯೇಣ ಸಹತೇಚ ಸುರಾಸುರಾ‌ನ್ ||೨೪-೨೫|| ಧನುಷೀಂದ್ರಜಿತಸ್ತುಲ್ಯಃ ಪ್ರತಾಪೇ ರಾವಣಸ್ಯಚ | ತ್ವಮದ್ಯ ರಕ್ಷಸಾಂ ಲೋಕೇ ಶ್ರೇಷ್ಠೋಽಸಿ ಬಲವೀರ್ಯತಃ ||೨೬|| ಮಹಾವಿಮರ್ದಂ ಸಮರೇ ಮಯಾಸಹ ತವಾದ್ಭುತಂ | ಅದ್ಯ ಭೂತಾನಿ ಪಶ್ಯಂತು ಶಕ್ರಶಂಬರಯೋರಿವ||೨೭||ಕೃತಮಪ್ರತಿಮಂ ಕರ್ಮ ದರ್ಶಿತಂ ಚಾಸ್ತ್ರಕೌಶಲಂ | ಪಾತಿತಾ ಹರಿವೀರಾಶ್ಚ ತ್ವಯಾ ವೈ ಭೀಮವಿಕ್ರಮಾಃ || ೨೮ || ಉಪಾಲಂಭ ಭಯಾಚ್ಚಾಪಿ

ನಾನು, ಪಶ್ಯತಃ - ನೋಡುತ್ತಿರಲು, ಕರ್ಮಾಣಿ - ವ್ಯಾಪಾರಗಳನ್ನು, ವಿಕ್ರಮಸ್ವ - ನಡೆಸು. || ೨೪ || ತೇ - ನನ್ನ, ಪಿತೃವ್ಯಃ - ದೊಡ್ಡ ತಂದೆಯಾದ ರಾವಣನು, ವರದಾನಾತ್ - ವರಪ್ರದಾನ ಪ್ರಭಾವದಿಂದ, ದೇವದಾನವಾ‌ನ್ - ದೇವರಾಕ್ಷಸರನ್ನು, ಸಹತೇ - ಸಹಿಸುತ್ತಾನೆ, ಕುಂಭಕರ್ಣಸ್ತು- ಕುಂಭಕರ್ಣನಾದರೆ, ವೀರ್ಯೇಣ - ಸ್ವಸಾಮರ್ಥ್ಯದಿಂದ, ಸುರಾಸುರಾ‌ನ್ - ದೇವರಾಕ್ಷಸರನ್ನು, ಸಹತೇಚ - ಸಹಿಸುತ್ತಿದ್ದನು. ||೨೫|| ಧನುಷಿ - ಧನುರ್ವ್ಯಾಪಾರದಲ್ಲಿ, ಇಂದ್ರಜಿತಃ - ಇಂದ್ರಜಿತ್ತುವಿಗೆ, ತುಲ್ಯಃ - ಸಮಾನನಾದವನು, ಪ್ರತಾಪೇ - ಪರಾಕ್ರಮದಲ್ಲಿ, ರಾವಣಸ್ಯಚ - ರಾವಣನಿಗೂ, ತುಲ್ಯಃ - ಸಮಾನನಾದ, ತ್ವಂ - ನೀನು, ಅದ್ಯ - ಈಗ, ರಕ್ಷಸಾಂ - ರಕ್ಕಸರ, ಲೋಕೇ - ಸಮುದಾಯದಲ್ಲಿ, ಬಲವೀರ್ಯತಃ - ಬಲದಿಂದಲೂ, ಸಾಮರ್ಥ್ಯದಿಂದಲೂ, ಶ್ರೇಷ್ಠಃ - ದೊಡ್ಡವನು, ಅಸಿ - ಆಗಿದ್ದೀಯೆ. || ೨೬ || ಸಮರೇ - ಕಾಳಗದಲ್ಲಿ, ಮಯಾಸಹ - ನನ್ನೊಡನೆ, ಅದ್ಭುತಂ - ಆಶ್ಚರ್ಯಕರವಾದ, ತವ - ನಿನ್ನ, ಮಹಾವಿಮರ್ದಂ - ದೊಡ್ಡ ಯುದ್ಧವನ್ನು, ಅದ್ಯ - ಈಗ, ಭೂತಾನಿ - ಭೂತಗಳು, ಶಕ್ರ....ವ - ದೇವೇಂದ್ರ ಶಂಬರಾಸುರಗಳ ಯುದ್ಧವನ್ನಂತೆ, ಪಶ್ಯಂತು - ನೋಡಲಿ. || ೨೭ || ಅಪ್ರತಿಮಂ - ಸಮಾನವಿಲ್ಲದಿರುವ, ಕರ್ಮ - ವ್ಯಾಪಾರವು, ಕೃತಂ - ಮಾಡಲ್ಪಟ್ಟಿತು, ಅಸ್ತ್ರಕೌಶಲಂ - ಅಸ್ತ್ರಗಳಲ್ಲಿ ಚಾತುರ್ಯವು, ದರ್ಶಿತಂ - ತೋರಿಸಲ್ಪಟ್ಟಿತು, ಭೀಮವಿಕ್ರಮಾಃ - ಭಯಂಕರವಾದ ಸಾಮರ್ಥ್ಯವುಳ್ಳ, ಹರಿವೀರಾಃ - ಶೂರರಾದ ಕಪಿಗಳು, ತ್ವಯಾ - ನಿನ್ನಿಂದ, ಪಾತಿತಾಶ್ಚ - ಕೆಡಹಲ್ಪಟ್ಟರು. || ೨೮ || ಹೇ ವೀರ - ಎಲೈ ಶೂರನೇ, ಉಪಾ....ಪಿ - ನಿಂದನೆಯ ದೆಸೆಯಿಂದಲಾದರೆ, ಮಯಾ - ನನ್ನಿಂದ, ಹತಃ - ಹೊಡೆಯಲ್ಪಟ್ಟವನು, ನಾಸಿ -

---

ಅಂತು ಮಹಾ ಪರಾಕ್ರಮಿಯಾದ ನಿನ್ನೊಬ್ಬನನ್ನು ಮಾತ್ರ ದೇವತೆಗಳಾರೂ ಎದುರಿಸಲಾರರು. ಶತ್ರುಮರ್ದನನಾದ ನಿನ್ನನ್ನು ಬಳಿಸಾರಲು ಅವರಾರಿಂದಲೂ ಶಕ್ಯವಲ್ಲವು. ಎಲೈ ಮಹಾ ಬುದ್ಧಿಯೇ! ಅಂತಹ ನೀನು ಈಗ ನನ್ನೆದುರಿಗೆ ವಿಕ್ರಮಿಸು. ನಿನ್ನ ದೊಡ್ಡಪ್ಪನು ವರದಾನದ ದೆಸೆಯಿಂದ ದೇವದಾನವರನ್ನೆದುರಿಸುವನಲ್ಲವೆ. ನಿನ್ನ ತಂದೆಯಾದ ಆ ಕುಂಭಕರ್ಣನೂ ಸುರಾಸುರರನ್ನೆದುರಿಸಿದ್ದಾಯಿತು. ||೨೧–೨೫|| ನೀನೇನು ಸಾಮಾನ್ಯನೇ ! ಧನುರ್ವಿದ್ಯೆಯಲ್ಲಿ ಇಂದ್ರಜಿತ್ತುವಿಗೆ ಸಮಾನನಾಗಿರುವೆ. ಪರಾಕ್ರಮದಲ್ಲಿ ರಾವಣನಿಗೆ ಸಮನು. ಇಂತಹ ನೀನು ಬಲಪರಾಕ್ರಮಗಳಲ್ಲಿ ಲೋಕದಲ್ಲಿರುವ ರಾಕ್ಷಸವೀರರಲ್ಲೆಲ್ಲ ಉತ್ತಮೋತ್ತಮನಾಗಿದ್ದೀಯೆ. ಅಯ್ಯಾ ರಾಕ್ಷಸನೇ ! ಹಿಂದೆ ಶಕ್ರನಿಗೂ, ಶಂಬರನಿಗೂ ಆದ ಯುದ್ಧದಂತೆ, ಈಗ ನನಗೂ, ನಿನಗೂ ನಡೆಯುವ ಮಹಾ ಯುದ್ಧವನ್ನು ಸಮಸ್ತ ಭೂತಗಳೂ ನೋಡಲಿ. ಅಯ್ಯಾ ಶೂರನೇ ! ನೀನಿದುವರೆಗೆ ಅನುಪಮವಾದ ಪರಾಕ್ರಮವನ್ನು ಮೆರೆದೆ ; ಅಸ್ತ್ರಕೌಶಲವನ್ನು ತೋರಿದೆ ; ಮಹಾ ಪರಾಕ್ರಮಶಾಲಿಗಳಾದ ವಾನರವೀರರನ್ನೂ ಕೆಡವಿದೆ.

ನಾಸಿ ವೀರ! ಮಯಾ ಹತಃ । ಕೃತಕರ್ಮಾ ಪರಿಶ್ರಾಂತೋ ವಿಶ್ರಾಂತಃ ಪಶ್ಯ ಮೇ ಬಲಂ" ॥ ೭೯ ॥ ತೇನ ಸುಗ್ರೀವವಾಕ್ಯೇನ ಸಾವಮಾನೇನ ಮಾನಿತಃ । ಅಗ್ನೇರಾಜ್ಯಾಹುತಸ್ಯೇವ ತೇಜಸ್ತಸ್ಯಾಭ್ಯವರ್ಧತ ॥ ೮೦ ॥ ತತಃ ಕುಂಭಸ್ತು ಸುಗ್ರೀವಂ ಬಾಹುಭ್ಯಾಂ ಜಗೃಹೇ ತದಾ । ಗಜಾವಿವಾಹಿತಮದೌ ನಿಃಶ್ವಸಂತೌ ಮುಹುರ್ಮುಹುಃ ॥೮೧॥ ಅನ್ಯೋನ್ಯಗಾತ್ರಗ್ರಥಿತೌ ಕರ್ಷಂತಾವಿತರೇತರಂ । ಸಧೂಮಾಂ ಮುಖತೋ ಜ್ವಾಲಾಂ ವಿಸೃಜಂತೌ ಪರಿಶ್ರಮಾತ್ ॥ ೮೨ ॥ ತಯೋಃ ಪಾದಾಭಿಘಾತಾಚ್ಚ ನಿಮಗ್ನಾ ಚಾಽಭವನ್ಮಹೀ । ವ್ಯಾಘೂರ್ಣಿತತರಂಗಶ್ಚ ಚುಕ್ಷುಭೇ ವರುಣಾಲಯಃ ॥೮೩॥

ಆಗಲಿಲ್ಲ, ಕೃತಕರ್ಮಾ - ಮಾಡಲ್ಪಟ್ಟ ಕಾರ್ಯವುಳ್ಳವನಾಗಿ, ಪರಿಶ್ರಾಂತಃ - ಬಳಲಿದೆ, ವಿಶ್ರಾಂತಃ-ಶ್ರಮವಿಲ್ಲದೆ, ಮೇ - ನನ್ನ, ಬಲಂ - ಸಾಮರ್ಥ್ಯವನ್ನು, ಪಶ್ಯ - ನೋಡು. ॥ ೭೯ ॥ ಹೀಗೆ ಸಾವಮಾನೇನ - ಅವಮಾನದಿಂದೊಡಗೂಡಿದ, ಸುಗ್ರೀವವಾಕ್ಯೇನ - ಆ ಸುಗ್ರೀವನ ವಚನದಿಂದ, ಮಾನಿತಃ - ಶ್ಲಾಘಿಸಲ್ಪಟ್ಟ, ತಸ್ಯ - ಆ ಕುಂಭನಿಗೆ, ಆಜ್ಯಾಹುತಸ್ಯ - ತುಪ್ಪದಿಂದ ಹೋಮ ಮಾಡಲ್ಪಟ್ಟ, ಅಗ್ನಿರಿವ - ಅಗ್ನಿಯಂತೆ, ತೇಜಃ - ತೇಜಸ್ಸು, ಅಭ್ಯವರ್ಧತ - ವೃದ್ಧಿಗೊಂಡಿತು. ॥೮೦॥ ತತಃ - ಬಳಿಕ, ಕುಂಭಸ್ತು - ಕುಂಭನಾದರೆ, ಸುಗ್ರೀವಂ - ಸುಗ್ರೀವನನ್ನು, ಬಾಹುಭ್ಯಾಂ-ಭುಜಗಳಿಂದ, ತದಾ - ತತ್ಕ್ಷಣದಲ್ಲಿ, ಜಗೃಹೇ - ಹಿಡಿದುಕೊಂಡನು, ಅಹಿತಮದೌ - ಹುಟ್ಟಿದ ಮದವುಳ್ಳ, ಗಜಾವಿವ - ಆನೆಗಳಂತೆ, ಮುಹುರ್ಮುಹುಃ - ಬಾರಿಬಾರಿಗೂ, ನಿಶ್ವಸಂತೌ - ನಿಟ್ಟುಸಿರನ್ನು ಬಿಡುತ್ತಿರುವ, ಅನ್ಯೋ....ತೌ - ಪರಸ್ಪರವಾಗಿ ಶರೀರಗಳಿಂದ ಹಿಡಿದುಕೊಳ್ಳಲ್ಪಟ್ಟ, ತೌ - ಅವರೀರ್ವರೂ, ಇತರೇತರಂ - ಒಬ್ಬರನ್ನೊಬ್ಬರು, ಕರ್ಷಂತೌ - ಸೆಳೆಯುತ್ತ, ಪರಿಶ್ರಮಾತ್ - ಆಯಾಸದ ಸಲುವಾಗಿ, ಮುಖತಃ-ಬಾಯಿಯಿಂದ, ಸಧೂಮಾಂ - ಹೊಗೆಯೊಡಗೂಡಿದ, ಜ್ವಾಲಾಂ - ಜ್ವಾಲೆಯನ್ನು, ವಿಸೃಜಂತೌ - ಬಿಡುತ್ತಿದ್ದರು. ॥ ೮೧-೮೨ ॥ ತಯೋಃ - ಆ ಸುಗ್ರೀವ ಕುಂಭರ, ಪಾದಾ....ಶ್ಚ - ಕಾಲುಗಳ ಹೊಡೆತದಿಂದ, ಮಹೀ - ನೆಲವು, ನಿಮ್ನಾಚ - ಕುಗ್ಗಿದ್ದು, ಅಭವತ್ - ಆಯಿತು, ವರುಣಾಲಯಶ್ಚ - ಕಡಲೂ, ವ್ಯಾಘೂ....ಗಃ - ತಿರುಗಿದ ತೆರೆಗಳುಳ್ಳದಾಗಿ, ಚುಕ್ಷುಭೇ - ಕ್ಷೋಭೆಗೊಂಡಿತು. ॥ ೮೩ ॥ ತತಃ - ಬಳಿಕ, ಸುಗ್ರೀವಃ - ಸುಗ್ರೀವನು,

ಇಂತಹ ನಿನಗೆ ಬಹಳ ಮಂದಿ ಶೂರರೊಡನೆ ಯುದ್ಧ ಮಾಡಿ ಬೇಸತ್ತು ಮಡಿದನೆಂಬ ಅಪವಾದವು ಬರಬಾರದೆಂದು ನಾನು ನಿನ್ನನ್ನು ಕೊಲ್ಲಲಿಲ್ಲವು. ಮಹತ್ಕಾರ್ಯವನ್ನು ಮಾಡಿ ದಣಿದಿರುವ ನೀನು ಸುಧಾರಿಸಿಕೊಂಡು ನನ್ನ ಪರಾಕ್ರಮವನ್ನಾದರೂ ನೋಡು." ॥೭೬-೭೯॥ ಹೀಗೆ ಸುಗ್ರೀವನು ಅವಮಾನಕರವಾದರೂ ಮನ್ನಣೆಯೊಡಗೂಡಿದ ಮಾತುಗಳನ್ನಾಡಲು ಆ ಕುಂಭನ ತೇಜಸ್ಸು, ಬೆಂಕಿಗೆ ತುಪ್ಪವನ್ನು ಸುರಿದರೆ ಹೇಗೋ ಹಾಗೆ ಬಹಳವಾಗಿ ವರ್ಧಿಸಿತು. ಆ ಕೂಡಲೇ ಅವನು ತನ್ನ ತೋಳುಗಳಿಂದ ಆ ಕಪಿಸಾರ್ವಭೌಮನನ್ನು ಬಿಗಿಯಾಗಿ ಹಿಡಿದನು. ಆ ಸಮಯದಲ್ಲಿ ಕುಂಭ ಸುಗ್ರೀವರಿಬ್ಬರೂ ಕೊಬ್ಬಿ ಸೆಣಸುತ್ತಿರುವ ಮದ್ದಾನೆಗಳಂತೆ ಅಡಿಗಡಿಗೂ ದೀರ್ಘನಿಶ್ವಾಸಗಳನ್ನು ಬಿಡುತ್ತ, ಒಬ್ಬರನ್ನೊಬ್ಬರು ತಮ್ಮ ತೋಳುಗಳಿಂದ ಬಿಗಿದು ಕಟ್ಟುತ್ತ, ಒಬ್ಬರನ್ನೊಬ್ಬರು ಸೆಳೆದಾಡುತ್ತ ಆಯಾಸದಿಂದ ಹೊಗೆಯೊಡಗೂಡಿದ ಬೆಂಕಿಯನ್ನು ಬಾಯಿಯಿಂದುಗುಳುತ್ತಿದ್ದರು. ಅವರು ಬಿದ್ದೇಳುವುದರಿಂದಲೂ ಅವರ ಬಲವಾದ ಪಟ್ಟುಗಳಿಂದಲೂ ರಣಭೂಮಿಯು ಕುಗ್ಗಿಹೋಯಿತು. ಸಾಗರವು ಉಲ್ಲಕಲ್ಲೋಲ

ತತಃ ಕುಂಭಂ ಸಮುತ್ಕ್ಷಿಪ್ಯ ಸುಗ್ರೀವೋ ಲವಣಾಂಭಸಿ । ಪಾತಯಾಮಾಸ ವೇಗೇನ ದರ್ಶಯನ್ನುದಧೇಸ್ತಲಂ ॥ ೮೪ ॥ ತತಃ ಕುಂಭನಿಪಾತೇನ ಜಲರಾಶಿಸ್ಸಮುತ್ಥಿತಃ । ವಿಂಧ್ಯಮಂದರಸಂಕಾಶೋ ವಿಸಸರ್ಪ ಸಮಂತತಃ ॥ ೮೫ ॥ ತತಃ ಕುಂಭಸ್ಸಮುತ್ಪತ್ಯ ಸುಗ್ರೀವಮಭಿಪದ್ಯಚ । ಆಜಘಾನೋರಸಿ ಕ್ರುದ್ಧೋ ವಜ್ರವೇಗೇನ ಮುಷ್ಟಿನಾ ॥ ೮೬ ॥ ತಸ್ಯ ಚರ್ಮಚ ಪುಸ್ಫೋಟ ಬಹು ಸುಸ್ರಾವ ಶೋಣಿತಂ । ಸಚ ಮುಷ್ಟಿರ್ಮಹಾವೇಗಃ ಪ್ರತಿಜಘ್ನೇಽಸ್ಥಿಮಂಡಲೇ ॥ ೮೭ ॥ ತದಾ ವೇಗೇನ ತತ್ರಾಸೀತ್ತೇಜಃ ಪ್ರಜ್ವಲಿತಂ ಮುಹುಃ । ವಜ್ರನಿಷ್ಪೇಷಸಂಜಾತಾ ಜ್ವಾಲಾ ಮೇರೌ ಯಥಾ ಗಿರೌ ॥೮೮॥ ಸತತ್ರಾಭಿಹತಸ್ತೇನ ಸುಗ್ರೀವೋ ವಾನರರ್ಷಭಃ । ಮುಷ್ಟಿಂ ಸಂವರ್ತಯಾ

ವೇಗೇನ - ಜವದಿಂದ, ಉದಧೇಃ - ಕಡಲಿನ, ಸ್ಥಲಂ - ಪ್ರದೇಶವನ್ನು, ದರ್ಶಯನ್ - ತೋರಿಸುತ್ತ, ಕುಂಭಂ - ಕುಂಭನನ್ನು, ಸಮುತ್ಕ್ಷಿಪ್ಯ - ಎತ್ತಿ, ಲವಣಾಂಬುಧೌ - ಉಪ್ಪು ಕಡಲಿನಲ್ಲಿ, ಪಾತಯಾಮಾಸ - ಕೆಡಹಿದನು. ॥ ೮೪ ॥ ತತಃ - ಬಳಿಕ, ಕುಂಭನಿಪಾತೇನ - ಕುಂಭನ ಕೆಡಹುವಿಕೆಯಿಂದ, ಜಲರಾಶಿಃ - ಕಡಲು, ವಿಂಧ್ಯ ....ಶಃ - ವಿಂಧ್ಯಪರ್ವತಕ್ಕೂ ಮಂದರಪರ್ವತಕ್ಕೂ ಸಮಾನವಾದದ್ದಾಗಿ, ಸಮುತ್ಥಿತಃ - ಮೇಲಕ್ಕೆ ಉಕ್ಕಿ, ಸಮಂತತಃ - ಎಲ್ಲೆಡೆಯಲ್ಲಿಯೂ, ವಿಸಸರ್ಪ - ಪ್ರವಹಿಸಿತು. ॥೮೫॥ ತತಃ-ಬಳಿಕ, ಕುಂಭಃ-ಕುಂಭನು, ಸಮುತ್ಪತ್ಯ-ಹಾರಿ, ಕ್ರುದ್ಧಃ-ಕೋಪಿಸ್ಠನಾಗಿ, ಸುಗ್ರೀವಂ-ಸುಗ್ರೀವನನ್ನು, ಅಭಿಪದ್ಯ - ಹೊಂದಿ, ವಜ್ರವೇಗೇನ - ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳ, ಮುಷ್ಟಿನಾ - ಕೈಹಿಡಿಯಿಂದ, ಉರಸಿ - ಎದೆಯಲ್ಲಿ, ಆಜಘಾನ - ಹೊಡೆದರು. ॥ ೮೬ ॥ ತಸ್ಯ - ಆ ಸುಗ್ರೀವನ, ಚರ್ಮಚ - ಚರ್ಮವೂ, ಪುಸ್ಫೋಟ - ಒಡೆಯಿತು, ಬಹು - ಬಹಳವಾದ, ಶೋಣಿತಂ-ರಕ್ತವು, ಸುಸ್ರಾವ - ಸೋರಿತು, ಮಹಾವೇಗಃ - ಬಹಳ ವೇಗವುಳ್ಳ, ಸಮುಷ್ಟಿಶ್ಚ - ಆ ಮುಷ್ಟಿಯೂ, ಅಸ್ಥಿಮಂಡಲೇ - ಎಲುವುಗಳ ತಂಡದಲ್ಲಿ, ಪ್ರಜಘ್ನೇ - ಹೊಡೆಯಲ್ಪಟ್ಟಿತು. ॥೮೭॥ ತದಾ - ಆ ಕಾಲದಲ್ಲಿ, ವೇಗೇನ - ಶೀಘ್ರದಿಂದ, ತತ್ರ - ಆ ಸುಗ್ರೀವನ ವಕ್ಷಸ್ಥಳದಲ್ಲಿ, ತೇಜಃ - ತೇಜಸ್ಸು, ವಜ್ರ....ತಾ - ವಜ್ರಪ್ರಹಾರದಿಂದ ಹುಟ್ಟಿರುವ, ಮೇರೌಗಿರೌ - ಮೇರುಪರ್ವತದಲ್ಲಿ, ಜ್ವಾಲಾಯಥಾ-ಉರಿಯಂತೆ, ಪ್ರಜ್ವಲಿತಂ - ಪ್ರಜ್ವಲಿತವಾಗಿ, ಆಸೀತ್ - ಆಯಿತು. ॥ ೮೮ ॥ ತತ್ರ - ಆ ಎದೆಯಲ್ಲಿ, ತೇನ - ಆ ಕುಂಭದಿಂದ, ಅಭಿಹತಃ - ಹೊಡೆಯಲ್ಪಟ್ಟ, ವಾನರರ್ಷಭಃ - ಕಪಿರಾಜನಾದ,

---

ವಾಯಿತು. ಆ ತರುವಾಯ ಸುಗ್ರೀವನು ಆ ಕುಂಭನನ್ನು ಹಾಗೆಯೇ ಎತ್ತಿ ಮಹಾ ಸಾಗರದಲ್ಲಿ ಕೆಡವಿ ಪಾತಾಳವನ್ನು ಮುಟ್ಟಿಸಿದನು. ಆ ರಾಕ್ಷಸನು ಬಿದ್ದೊಡನೆಯೇ ಆ ಮಹಾ ಸಾಗರದಲ್ಲಿ ವಿಂಧ್ಯಮಂದರ ಪರ್ವತಗಳಿಗೆ ಸಮಾನವಾದ ಜಲರಾಶಿಯು ಮೇಲಕ್ಕೆದ್ದು ಅತ್ತಿತ್ತ ಹರಿಯಿತು. ॥೮೦–೮೫॥ ಆ ತರುವಾಯ ಕುಂಭನು ಸಮುದ್ರದಿಂದೆದ್ದು ಬಂದು ಸುಗ್ರೀವನ ಬಳಿ ಸಾರಿ ವಜ್ರಸಮಾನವಾದ ತನ್ನ ಮುಷ್ಟಿಯಿಂದ ಅವನೆದೆಗೆ ಬಲವಾಗಿ ಗುದ್ದಿದನು. ಆಗಲಾ ಸುಗ್ರೀವನೆದೆಯ ಚರ್ಮವು ಸುಲಿದುದಲ್ಲದೆ ಬಹಳವಾಗಿ ರಕ್ತವೂ ಸುರಿಯಿತು. ಇದೂ ಅಲ್ಲದೆ ಆ ಕುಂಭನ ವಜ್ರಮುಷ್ಟಿಯು ಆ ಸುಗ್ರೀವನ ಅಸ್ಥಿಮಂಡಲದಲ್ಲಿ ಬಿದ್ದು ವ್ಯರ್ಥವಾಗಿ ಹೋಯಿತು. ಆಗಲಾ ಸುಗ್ರೀವನ ವಕ್ಷಸ್ಥಳದಲ್ಲಿ ಆ ಮುಷ್ಟಿಘಾತದಿಂದ ಇಂದ್ರನೆಸಗಿದ ಪರ್ವತಪಕ್ಷಚ್ಛೇದನ ಕಾಲದಲ್ಲಿ ಅವುಗಳಲ್ಲಿ ಹುಟ್ಟಿದ ತೇಜಸ್ಸಿಗೆ ಸಮಾನವಾದ ತೇಜಸ್ಸು ಉತ್ಪನ್ನವಾಯಿತು. ಈ ರೀತಿ ಆ ಕುಂಭರಾಕ್ಷಸನಿಂದ ಅಭಿಹತನಾದ ಸುಗ್ರೀವನು ಕೂಡಲೇ

ಮಾಸ ವಜ್ರಕಲ್ಪಂ ಮಹಾಬಲಃ ॥ ೮೯ ॥ ಅರ್ಚಿಸ್ಸಹಸ್ರವಿಕಚಂ ರವಿಮಂಡಲ ಸಪ್ರಭಂ । ಸಮುಷ್ಟಿಂ ಪಾತಯಾಮಾಸ ಕುಂಭಸ್ಯೋರಸಿ ವೀರ್ಯವಾನ್ ॥ ೯೦ ॥ ಸತು ತೇನ ಪ್ರಹಾರೇಣ ವಿಹ್ವಲೋ ಭೃಶತಾಡಿತಃ । ನಿಪಪಾತ ತದಾ ಕುಂಭೋ ಗತಾರ್ಚಿರಿವ ಪಾವಕಃ ॥ ೯೧ ॥ ಮುಷ್ಟಿನಾಽಭಿಹತಸ್ತೇನ ನಿಪಪಾತಾಶು ರಾಕ್ಷಸಃ । ಲೋಹಿತಾಂಗ ಇವಾಕಾಶಾದ್ದೀಪ್ತರಶ್ಮಿರ್ಯದೃಚ್ಛಯಾ ॥೯೨॥ ಕುಂಭಸ್ಯ ಪತತೋ ರೂಪಂ ಭಗ್ನಸ್ಯೋರಸಿ ಮುಷ್ಟಿನಾ । ಬಭೌ ರುದ್ರಾಭಿಪನ್ನಸ್ಯ ಯಥಾ ರೂಪಂ ಗವಾಂಪತೇಃ ॥ ೯೩ ॥

ಮಹಾಬಲಃ - ಬಹಳ ಬಲಶಾಲಿಯಾದ, ಸುಗ್ರೀವಃ - ಸುಗ್ರೀವನು, ವಜ್ರಕಲ್ಪಂ - ವಜ್ರಾಯುಧಕ್ಕೆ ಸಮಾನವಾದ, ಮುಷ್ಟಿಂ - ಹಿಡಿಯನ್ನು, ಸಂವರ್ತಯಾಮಾಸ - ಹಿಡಿದನು. ॥೮೯॥ ವೀರ್ಯವಾನ್ - ಪರಾಕ್ರಮಶಾಲಿಯಾದ, ಸಃ - ಆ ಸುಗ್ರೀವನು, ಅರ್ಚಿ....ಚಂ - ಜ್ವಾಲೆಗಳ ಸಾವಿರಾರುಗಳಿಂದ ವಿಸ್ತಾರವಾದ, ರವಿ....ಭಂ - ಸೂರ್ಯಮಂಡಲಕ್ಕೆ ಸಮಾನವಾದ ಕಾಂತಿಯುಳ್ಳ, ಮುಷ್ಟಿಂ - ಮುಷ್ಟಿಯನ್ನು, ಕುಂಭಸ್ಯ - ಕುಂಭನ, ಉರಸಿ - ವಕ್ಷಸ್ಥಳದಲ್ಲಿ, ಪಾತಯಾಮಾಸ - ಬೀಳಿಸಿದನು. ॥೯೦॥ ಸಕುಂಭಸ್ತು - ಆ ಕುಂಭನಾದರೆ, ತೇನಪ್ರಹಾರೇಣ - ಆ ಮುಷ್ಟಿಪ್ರಹಾರದಿಂದ, ಭೃಶತಾಡಿತಃ - ಬಹಳವಾಗಿ ಹೊಡೆಯಲ್ಪಟ್ಟು, ವಿಹ್ವಲಃ - ಚಪಲಚಿತ್ತನಾಗಿ, ಗತಾರ್ಚಿಃ - ಹೋದ ಜ್ವಾಲೆಗಳುಳ್ಳ, ಪಾವಕಇವ - ಅಗ್ನಿಯಂತೆ, ತದಾ - ತತ್‌ಕ್ಷಣದಲ್ಲಿ, ನಿಪಪಾತ - ಬಿದ್ದನು. ॥೯೧॥ ತೇನಮುಷ್ಟಿನಾ- ಆ ಮುಷ್ಟಿಯಿಂದ, ಅಭಿಹತಃ - ಹೊಡೆಯಲ್ಪಟ್ಟ, ರಾಕ್ಷಸಃ - ಕುಂಭನು, ಯದೃಚ್ಛಯಾ - ದೈವ ಗತಿಯಿಂದ, ಆಕಾಶಾತ್ - ಅಂತರಿಕ್ಷದ ದೆಸೆಯಿಂದ, ದೀಪ್ತರಶ್ಮಿಃ - ಹೊಳೆಯುತ್ತಿರುವ ಕಾಂತಿ ಗಳುಳ್ಳ, ಲೋಹಿತಾಂಗಇವ - ಅಂಗಾರಕನಂತೆ, ಆಶು - ಜಾಗ್ರತೆಯಾಗಿ, ನಿಪಪಾತ - ಬಿದ್ದನು. ॥ ೯೨ ॥ ಮುಷ್ಟಿನಾ - ಮುಷ್ಟಿಯಿಂದ, ಉರಸಿ - ವಕ್ಷಸ್ಥಳದಲ್ಲಿ, ಭಗ್ನಸ್ಯ - ಭಂಗಿತನಾಗಿ, ಪತತಃ - ಬೀಳುತ್ತಿರುವ, ಕುಂಭಸ್ಯ - ಕುಂಭನ, ರೂಪಂ - ಆಕಾರವು, ರುದ್ರಾ....ಸ್ಯ - ವೀರಭದ್ರನಿಂದ ಹೊಡೆಯಲ್ಪಟ್ಟ, ಗವಾಂಪತೇಃ - ಸೂರ್ಯನ, ರೂಪಂಯಥಾ - ರೂಪದಂತೆ, ಬಭೌ - ಹೊಳೆಯುತ್ತಿತ್ತು. ॥ ೯೩ ॥ ಯುದ್ಧೇ - ಕಾಳೆಗದಲ್ಲಿ, ಭೀಮ....ಣ - ಭಯಂಕರ ಪರಾಕ್ರಮವುಳ್ಳ,

---

ವಜ್ರಸಮಾನವಾದ ತನ್ನ ಮುಷ್ಟಿಯನ್ನು ಬಲವಾಗಿ ಹಿಡಿದನು. ಆ ಸುಗ್ರೀವನು ಸಹಸ್ರ ಕಿರಣಗಳಿಂದುದಿಸಿರುವ ಸೂರ್ಯಮಂಡಲದಂತಿರುವ ಆ ತನ್ನ ಮುಷ್ಟಿಯನ್ನು ಆ ಕುಂಭನ ವಕ್ಷಸ್ಥಳದಲ್ಲಿ ಬೀಳಿಸಿದನು. ॥ ೮೯–೯೦ ॥ ಆಗಲಾ ಮುಷ್ಟಿಘಾತದಿಂದ ಕುಂಭ ರಾಕ್ಷಸನು ಉರಿಯುಡುಗಿದ ಬೆಂಕಿಯಂತಾಗಿ ನೆಲಕ್ಕುರುಳಿ ಪ್ರಾಣ ಬಿಟ್ಟನು. ಹೀಗೆ ಆ ಕುಂಭರಾಕ್ಷಸನು ಸುಗ್ರೀವನ ಮುಷ್ಟಿಪ್ರಹಾರದಿಂದ, ದೈವಯೋಗದ ದೆಸೆಯಿಂದ ಅಂಗಾರಕಗ್ರಹದಂತೆ ನೆಲಕ್ಕುರುಳಿದನು. ಭೂಮಿಗೆ ಬೀಳುತ್ತಿರುವಾಗ ಆ ಕುಂಭನ ರೂಪವು ಪ್ರಳಯರುದ್ರನಿಂದ ಹೊಡೆಯಲ್ಪಟ್ಟ ಸೂರ್ಯನಂತೆ ಪ್ರಕಾಶಿಸುತ್ತಿದ್ದಿತು. ಮಹಾ

ತಸ್ಮಿನ್ ಹತೇ ಭೀಮಪರಾಕ್ರಮೇಣ
ಪ್ಲವಂಗಮಾನಾಮೃಷಭೇಣಯುದ್ಧೇ ।
ಮಹೀ ಸಶೈಲಾ ಚ ವನಾ ಚಚಾಲ
ಭಯಂಚ ರಕ್ಷಾಂಸ್ಯಧಿಕಂ ವಿವೇಶ ॥ ೯೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ಸಪ್ತತಿತಮಸ್ಸರ್ಗಃ.

ಪ್ಲವಂಗಮಾನಾಂ - ಕಪಿಗಳಿಗೆ, ಋಷಭೇಣ - ಶ್ರೇಷ್ಠನಾದ ಸುಗ್ರೀವನಿಂದ, ತಸ್ಮಿನ್ - ಆ ಕುಂಭನು, ಹತೇ-ಸಂಹಾರ ಮಾಡಲ್ಪಟ್ಟವನಾಗಲು, ಸಶೈಲಾ-ಬೆಟ್ಟಗಳಿಂದೊಡಗೂಡಿದ, ಮಹೀ-ಭೂಮಿಯು, ಚಚಾಲ - ನಡುಗಿತು, ಭಯಂಚ - ಭೀತಿಯು, ರಕ್ಷಾಂಸಿ - ರಕ್ಕಸರನ್ನು, ಅಧಿಕಂ - ಹೆಚ್ಚಾಗಿ, ವಿವೇಶ - ಹೊಕ್ಕಿತು. ॥ ೯೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಟ್ಸಪ್ತತಿತಮಸ್ಸರ್ಗಃ.

ಭಯಂಕರ ಪರಾಕ್ರಮಿಯೂ, ಕಪಿಶ್ರೇಷ್ಠನೂ ಆದ ಸುಗ್ರೀವನಿಂದ ಕುಂಭನಿಂತು ಮಡಿದು ಬಿದ್ದೊಡನೆಯೇ ಪರ್ವತಗಳೊಡಗೂಡಿದ ಭೂಮಿಯೆಲ್ಲವೂ ಗಡಗಡನೆ ನಡುಗಿಹೋಯಿತು. ರಾಕ್ಷಸರಿಗೆಲ್ಲ ಭಯವಡಸಿತು. ॥ ೯೧-೯೪ ॥

ಇಂತಿದು ಸುಗ್ರೀವಕೃತ ಕುಂಭಹನನ ವೃತ್ತಾಂತನಿರೂಪಣವೆಂಬ ಎಪ್ಪತ್ತಾರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತಸಪ್ತತಿತಮಸ್ಸರ್ಗಃ

ನಿಕುಂಭೋ ಭ್ರಾತರಂ ದೃಷ್ಟ್ವಾ ಸುಗ್ರೀವೇಣ ನಿಪಾತಿತಂ । ಪ್ರದಹನ್ನಿವ ಕೋಪೇನ ವಾನರೇಂದ್ರ ಮವೈಕ್ಷತ ॥ ೧ ॥ ತತಸ್ಸ್ರಗ್ದಾಮಸನ್ನದ್ಧಂ ದತ್ತಪಂಚಾಂಗುಳಂ ಶುಭಂ । ಆದದೇ ಪರಿಘಂ ವೀರೋ ನಗೇಂದ್ರಶಿಖರೋಪಮಂ ॥೨॥ ಹೇಮಪಟ್ಟಪರಿಕ್ಷಿಪ್ತಂ ವಜ್ರವಿದ್ರುಮಭೂಷಿತಂ । ಯಮದಂಡೋಪಮಂ ಭೀಮಂ ರಕ್ಷಸಾಂ ಭಯನಾಶನಂ ॥ ೩ ॥ ತಮಾವಿಧ್ಯ ಮಹಾತೇಜಾ ಶ್ಶಕ್ರಧ್ವಜಸಮಂ ತದಾ । ವಿನನಾದ ವಿವೃತ್ತಾಸ್ಯೋ ನಿಕುಂಭೋ ಭೀಮವಿಕ್ರಮಃ ॥ ೪ ॥ ಉರೋಗತೇನ ನಿಷ್ಕೇಣ

ನಿಕುಂಭಃ - ನಿಕುಂಭನು, ಭ್ರಾತರಂ - ಅಣ್ಣನನ್ನು, ಸುಗ್ರೀವೇಣ - ಸುಗ್ರೀವನಿಂದ, ನಿಪಾತಿತಂ - ಬೀಳಿಸಲ್ಪಟ್ಟವನನ್ನಾಗಿ, ದೃಷ್ಟ್ವಾ - ಕಂಡು, ಕೋಪೇನ - ಕೋಪದಿಂದ, ಪ್ರದಹನ್ನಿವ - ದಹಿಸುವನೋ ಎಂಬಂತೆ, ವಾನರೇಂದ್ರಂ - ಕಪಿಶ್ರೇಷ್ಠನಾದ ಸುಗ್ರೀವನನ್ನು, ಅವೈಕ್ಷತ - ನೋಡಿದನು. ||೧|| ತತಃ - ಬಳಿಕ, ಸ್ರಕ್....ದ್ಧಂ - ಹುವ್ವಿನ ಸರಗಳಿಂದ ಕಟ್ಟಲ್ಪಟ್ಟ, ದತ್ತ....ಳಂ- ಕೊಡಲ್ಪಟ್ಟ ಐದು ಬೆರಳುಗಳ ರೇಖೆಗಳುಳ್ಳ, ಶುಭಂ - ಶುಭಕರವಾದ, ನಗೇಂ....ಮಂ - ಬೆಟ್ಟದ ಶಿಖರಕ್ಕೆ ಸಮಾನವಾದ, ಪರಿಘಂ - ಪರಿಘಾಯುಧವನ್ನು, ವೀರಃ - ಶೂರನಾದ ನಿಕುಂಭನು, ಆದದೇ - ತೆಗೆದುಕೊಂಡನು. ॥ ೨ ॥ ಮಹಾತೇಜಾಃ - ಬಹಳ ತೇಜೋವಂತನಾದ, ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ನಿಕುಂಭಃ - ನಿಕುಂಭನು, ವಿವೃತ್ತಾಸ್ಯಃ - ತೆರೆದ ಮುಖವುಳ್ಳವನಾಗಿ, ಹೇಮ....ಪ್ತಂ - ಬಂಗಾರದ ಪಟ್ಟಿಗಳಿಂದ ಕಟ್ಟಿದ, ವಜ್ರ.....ತಂ - ವಜ್ರಗಳಿಂದಲೂ, ಹವಳಗಳಿಂದಲೂ ಅಲಂಕೃತವಾದ, ಯಮ.....ಮಂ - ಯಮನ ದಂಡಕ್ಕೆ ಸಮಾನವಾದ, ಭೀಮಂ - ಭಯಂಕರವಾದ, ರಕ್ಷಸಾಂ - ರಕ್ಕಸರಿಗೆ, ಭಯನಾಶನಂ - ಭಯವನ್ನು ಹೋಗಲಾಡಿಸುವ, ಶಕ್ರಧ್ವಜಸಮಂ- ಇಂದ್ರಧ್ವಜಕ್ಕೆ ಸಮಾನವಾದ, ತಂ - ಆ ಪರಿಘಾಯುಧವನ್ನು, ಆವಿಧ್ಯ - ತೆಗೆದುಕೊಂಡು, ವಿನನಾದ - ಧ್ವನಿಮಾಡಿದನು. ||೩ ೪|| ನಿಕುಂಭಃ - ನಿಕುಂಭನು; ಉರೋಗತೇನ - ವಕ್ಷಸ್ಥಲವನ್ನು ಹೊಂದಿರುವ, ನಿಷ್ಕೇಣ - ಕಂಠಾಭರಣದಿಂದಲೂ, ಭುಜಸ್ಥೈಃ - ಭುಜಗಳಲ್ಲಿರುವ,

---

ವಾನರೇಶ್ವರನಾದ ಸುಗ್ರೀವನಿಂದ ಮಡಿದುರುಳಿದ ಕುಂಭನನ್ನು ನೋಡಿ ಅವನ ಅಗ್ರಜನಾದ ನಿಕುಂಭನು ಕೋಪದಿಂದ ಸುಡುವನೋ ಎಂಬಂತೆ ಆ ಸುಗ್ರೀವನನ್ನು ದುರುದುರನೆ ನೋಡಿದನು. ಆಗಲಾ ರಾಕ್ಷಸನು ಪುಷ್ಪಮಾಲಿಕೆಗಳಿಂದಲಂಕೃತವಾಗಿ ಹಿಮವತ್ಪರ್ವತದ ಶಿಖರಕ್ಕೆ ಸಮಾನವಾಗಿದ್ದ ಪರಿಘಾಯುಧವನ್ನು ತನ್ನ ಐದೂ ಬೆರಳುಗಳ ಹಿಡಿತದಿಂದೆತ್ತಿಕೊಂಡು ನಿಂತನು. ಮಹೋಗ್ರವಾದ ಆ ಪರಿಘವು ಚಿನ್ನದ ಕಟ್ಟುಗಳಿಂದಲೂ, ವಜ್ರಪ್ರವಾಳಗಳ ಅಡಕದಿಂದಲೂ ವಿರಾಜಿಸುತ್ತ ಯಮದಂಡೋಪಮವಾಗಿಯೂ, ರಾಕ್ಷಸರ ಭಯವನ್ನು ನಿವಾರಿಸುವುದಾಗಿಯೂ ಇದ್ದಿತು. ಆ ನಿಕುಂಭನು ಶಕ್ರಧ್ವಜಕ್ಕೆ ಸಮಾನವಾಗಿದ್ದ ಆ ಪರಿಘಾಯುಧವನ್ನು ಕೈಯಲ್ಲಿ ಹಿಡಿದೆತ್ತಿ ಬಾಯನ್ನಗಲವಾಗಿ ತೆರೆದು ಭಯಂಕರವಾಗಿ ಸಿಂಹನಾದ ಮಾಡಿದನು. ಅವನಾಸಮಯದಲ್ಲಿ ಉರೋಗತವಾದ ನಿಷ್ಕದಿಂದಲೂ,

ಭುಜಸ್ಥೈರಂಗದೈರಪಿ । ಕುಂಡಲಾಭ್ಯಾಂಚ ಚಿತ್ರಾಭ್ಯಾಂ ಮಾಲಯಾಚ ವಿಚಿತ್ರಯಾ ॥ ೫ ॥ ನಿಕುಂಭೋ ಭೂಷಣೈರ್ಭಾತಿ ತೇನ ಸ್ಮ ಪರಿಘೇಣಚ । ಯಥೇಂದ್ರಧನುಷಾ ಮೇಘಸ್ಸವಿದ್ಯುತ್ ಸ್ತನಯಿತ್ನುಮಾನ್ ॥ ೬ ॥ ಪರಿಘಾಗ್ರೇಣ ಪುಸ್ಫೋಟ ವಾತಗ್ರಂಥಿರ್ಮಹಾತ್ಮನಃ । ಪ್ರಜಜ್ವಾಲ ಸಘೋಷಶ್ಚ ವಿಧೂಮ ಇವ ಪಾವಕಃ ॥ ೭ ॥ ನಗರ್ಯಾ ವಿಟಪಾವತ್ಯಾ ಗಂಧರ್ವಭವನೋತ್ತಮೈಃ । ಸಹಚೈವಾಮರಾವತ್ಯಾ ಸರ್ವೈಶ್ಚ ಭುವನೈಸ್ಸಹ ॥ ೮ ॥ ಸತಾರಗ್ರಹನಕ್ಷತ್ರಂ ಸಚಂದ್ರಂ ಸಮಹಾಗ್ರಹಂ । ನಿಕುಂಭಪರಿಘಾಘೂರ್ಣಂ ಭ್ರಮತೀವ ನಭಸ್ಥಲಂ ॥ ೯ ॥ ದುರಾಸದಶ್ಚ ಸಂಜಜ್ಞೇ

ಅಂಗದೈರಪಿ - ತೋಳುಬಂದಿಗಳಿಂದಲೂ, ಚಿತ್ರಾಭ್ಯಾಂ - ವಿವಿಧ ವರ್ಣಗಳುಳ್ಳ, ಕುಂಡಲಾಭ್ಯಾಂ - ಕರ್ಣಭೂಷಣಗಳಿಂದಲೂ, ವಿಚಿತ್ರಯಾ - ಆಶ್ಚರ್ಯಕರವಾದ, ಮಾಲಯಾ - ಹಾರದಿಂದಲೂ, ಭೂಷಣೈಃ - ಒಡವೆಗಳಿಂದಲೂ, ತೇನಪರಿಘೇಣಚ - ಆ ಪರಿಘಾಯುಧದಿಂದಲೂ, ಇಂದ್ರಧನುಷಾ - ದೇವೇಂದ್ರನ ಧನುಸ್ಸಿನಿಂದಲೂ, ಉಪಲಕ್ಷಿತಃ - ಕೂಡಿರುವ, ಸವಿದ್ಯು......ಮಾನ್ - ಮಿಂಚುಗಳೂ, ಗುಡುಗೂ ಉಳ್ಳ, ಮೇಘೋಯಥಾ - ಮುಗಿಲಂತೆ, ಭಾತಿಸ್ಮ - ಹೊಳೆಯುತ್ತಿದ್ದನಷ್ಟೆ. ॥ ೫-೬ ॥ ಮಹಾತ್ಮನಃ - ಮಹಾ ಶರೀರವುಳ್ಳ ಆ ನಿಕುಂಭನ, ಪರಿಘಾಗ್ರೇಣ - ಪರಿಘಾಯುಧದ ತುದಿಯಿಂದ, ವಾತಗ್ರಂಥಿಃ - ಸಪ್ತವಾಯುಗಳ ಸಂಧಿಯು, ಪುಸ್ಫೋಟ - ಒಡೆದುಹೋಯಿತು, ಸಘೋಷಶ್ಚ - ಧ್ವನಿಯೊಡಗೂಡಿದ ಆ ಪರಿಘಾಯುಧವು, ವಿಧೂಮಃ - ಹೊಗೆಯಿಲ್ಲದ, ಪಾವಕ ಇವ - ಅಗ್ನಿಯಂತೆ, ಪ್ರಜಜ್ವಾಲ - ಉರಿಯುತ್ತಿತ್ತು. ॥ ೭ ॥ ವಿಟಪಾವತ್ಯಾ - ವಿಟಪಾವತೀ ಎಂಬ ಪ್ರತಿನಾಮಧೇಯವುಳ್ಳ, ನಗರ್ಯಾ - ಅಲಕಾವತೀ ಪಟ್ಟಣದಿಂದಲೂ, ಗಂಧ....ಮೈಃ - ಗಂಧರ್ವರ ಉತ್ತಮ ಭವನಗಳೊಡನೆಯೂ, ಅಮರಾವತ್ಯಾಚಸಹ-ಅಮರಾವತೀಪಟ್ಟಣದೊಡನೆಯೂ, ಸರ್ವೈಃ-ಸಮಸ್ತಗಳಾದ, ಭುವನೈಸ್ಸಹ - ಲೋಕಗಳೊಡನೆಯೂ, ಸತಾ......ತ್ರಂ - ಅಂಗಾರಕಾದಿ ಗ್ರಹಗಳಿಂದಲೂ ಇತರ ನಕ್ಷತ್ರಗಳಿಂದಲೂ ಒಡಗೂಡಿದ, ಸಚಂದ್ರಂ - ಚಂದ್ರನಿಂದೊಡಗೂಡಿದ, ಸಮಹಾಗ್ರಹಂ - ಶುಕ್ರಾದಿ ಮಹಾ ಗ್ರಹಗಳೊಡಗೂಡಿದ, ನಭಸ್ಥಲಂ - ಅಂತರಿಕ್ಷವು, ನಿಕುಂ......ರ್ಣಂ - ನಿಕುಂಭನ ಪರಿಘಾಯುಧದಿಂದ ತಿರುಗಿಸಲ್ಪಟ್ಟುದಾಗಿ, ಭ್ರಮತೀವ-ತಿರುಗುತ್ತದೆಯೋ ಎಂಬಂತಿತ್ತು.

ಭುಜಗಳಲ್ಲಿದ್ದ ಅಂಗದಗಳಿಂದಲೂ, ಕಿವಿಗಳಲ್ಲಿ ಶೋಭಿಸುತ್ತಿದ್ದ ಕುಂಡಲಗಳಿಂದಲೂ, ವಿಚಿತ್ರವಾದ ಪುಷ್ಪಮಾಲಿಗಳಿಂದಲೂ, ವಿವಿಧ ಭೂಷಣಗಳಿಂದಲೂ ಕೈಯಲ್ಲಿ ಹಿಡಿದಿರುವ ಭಯಂಕರ ಪರಿಘಾಯುಧದಿಂದಲೂ ಕೂಡಿದವನಾಗಿ ಕಾಮನ ಬಿಲ್ಲೊಡಗೂಡಿ, ಗುಡುಗು ಮಿಂಚುಗಳಿಂದ ಬೆಳಗುತ್ತಿರುವ ಕಾರ್ಮೋಡದಂತೆ ಶೋಭಿಸುತ್ತಿದ್ದನು. ॥ ೧-೬ ॥ ಆಗಲಾ ಪರಿಘಾಗ್ರದಿಂದ ಅವಹಪ್ರವಹಾದಿ ಸಪ್ತವಾಯುಗ್ರಂಥಿಗಳೊಡೆದು, ಆ ಶಬ್ದದೊಡನೆ ರಾಕ್ಷಸನ ಸಿಂಹಘೋಷವೂ ಬೆರೆತು ಬಂದ ಭೀಕರಧ್ವನಿಯೊಡಗೂಡಿದ್ದಾಯಿತಲ್ಲದೆ ಆ ಆಯುಧವೂ ಹೊಗೆಯಿಲ್ಲದೆ ಬೆಂಕಿಯಂತೆ ಪ್ರಜ್ವಲಿಸಿತು. ವಿಟಪಾವತೀ ನಗರದಿಂದಲೂ, ಮಹೋತ್ತಮವಾದ ಗಂಧರ್ವ ಭವನಗಳಿಂದೂ, ಸಮಸ್ತವು ಭವನಗಳೊಡಗೂಡಿದ ಅಮರಾವತಿಯಿಂದಲೂ, ಸಮಸ್ತಲೋಕಗಳಿಂದಲೂ, ತಾರಗೆಯಿಂದಲೂ, ಅಶ್ವಿನ್ಯಾದಿ ನಕ್ಷತ್ರಗಳಿಂದಲೂ, ಶುಕ್ರಾದಿ ಗ್ರಹಗಳಿಂದಲೂ, * ಚಂದ್ರನಿಂದಲೂ ಕೂಡಿದ ಗಗನಮಂಡಲವೆಲ್ಲವೂ ಆ ಪರಿಘಾ

* ಇದು ರಾತ್ರಿ ಯುದ್ಧವಾದುದರಿಂದ ಇಲ್ಲಿ ಸೂರ್ಯ ಗ್ರಹವನ್ನು ಹೇಳಿಲ್ಲವೆಂದು ತಿಳಿಯತಕ್ಕದ್ದು.

ಪರಿಘಾಭರಣಪ್ರಭಃ । ಕಪೀನಾಂ ಸನಿಕುಂಭಾಗ್ನಿರ್ಯುಗಾಂತಾಗ್ನಿರಿವೋತ್ಥಿತಃ ॥೧೦॥ ರಾಕ್ಷಸಾ ವಾನರಾಶ್ಚಾಪಿ ನಶೇಕುಸ್ಸ್ಪಂದಿತುಂ ಭಯಾತ್ । ಹನುಮಾಂಸ್ತು ವಿವೃತ್ಯೋರಸ್ತಸ್ಥೌ ತಸ್ಯಾಗ್ರತೋ ಬಲೀ ॥೧೧॥ ಪರಿಘೋಪಮಬಾಹುಸ್ತು ಪರಿಘಂ ಭಾಸ್ಕರಪ್ರಭಂ । ಬಲೀ ಬಲವತಸ್ತಸ್ಯ ಪಾತಯಾಮಾಸ ವಕ್ಷಸಿ ॥೧೨॥ ಸ್ಥಿರೇ ತಸ್ಯೋರಸಿ ವ್ಯೂಢೇ ಪರಿಘಶ್ಶತಧಾ ಕೃತಃ । ವಿಶೀರ್ಯಮಾಣಸ್ಸಹಸಾ ಉಲ್ಕಾಶತಮಿವಾಂಬರೇ ॥೧೩॥ ಸತು ತೇನ ಪ್ರಹಾರೇಣ ವಿಚಚಾಲ ಮಹಾಕಪಿಃ । ಪರಿಘೇಣ ಸಮಾಧೂತೋ ಯಥಾ ಭೂಮಿಚಲೇಽಚಲಃ ॥೧೪॥ ಸತದಾಭಿಹತಸ್ತೇನ

॥೮-೯॥ ಪರಿ.....ಭಃ-ಪರಿಘಾಯುಧದಿಂದಲೂ, ಒಡವೆಗಳಿಂದಲೂ ಹೊಳೆವ, ಸಃ-ಆ, ನಿಕುಂಭಾಗ್ನಿಃ-ನಿಕುಂಭನೆಂಬ ಅಗ್ನಿಯು, ಉತ್ಥಿತಃ - ಹುಟ್ಟಿರುವ, ಯುಗಾ....ವ - ಪ್ರಳಯಕಾಲದ ಅಗ್ನಿಯಂತೆ, ಕಪೀನಾಂ - ವಾನರರಿಗೆ, ದುರಾಸದಶ್ಚ - ಹೊಂದಲಸಾಧ್ಯವಾದದ್ದಾಗಿ, ಸಂಜಜ್ಞೇ - ಆಯಿತು. ॥೧೦॥ ರಾಕ್ಷಸಾಃ - ರಕ್ಕಸರು, ವಾನರಾಶ್ಚಾಪಿ - ವಾನರರೂ, ಭಯಾತ್ - ಭೀತಿಯಿಂದ, ಸ್ಪಂದಿತುಮಪಿ-ಕದಲುವದಕ್ಕೂ, ನಶೇಕುಃ-ಸಮರ್ಥರಾಗಲಿಲ್ಲವು, ಬಲೀ-ಬಲಾಢ್ಯನಾದ, ಹನೂಮಾಂಸ್ತು-ಹನುಮಂತನಾದರೋ, ತಸ್ಯ - ಆ ನಿಕುಂಭನ, ಅಗ್ರತಃ - ಮುಂದುಗಡೆ, ಉರಃ - ಎದೆಯನ್ನು, ವಿವೃತ್ಯ - ವಿಸ್ತರಿಸಿಕೊಂಡು, ತಸ್ಥೌ - ನಿಂತನು. ॥೧೧॥ ಪರಿ.....ಹುಃ - ಲಾಲುಂಡಿಗೆಗೆ ಸಮಾನವಾದ ಭುಜಗಳುಳ್ಳ, ಬಲೀ - ಬಲಿಷ್ಠನಾದ ಕುಂಭನು, ಭಾಸ್ಕರಪ್ರಭಂ - ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ, ಪರಿಘಂ-ಪರಿಘಾಯುಧವನ್ನು, ಬಲವತಃ-ಬಲಾಢ್ಯನಾದ, ತಸ್ಯ - ಆ ಆಂಜನೇಯನ, ವಕ್ಷಸಿ - ಎದೆಯಲ್ಲಿ, ಪಾತಯಾಮಾಸ - ಬೀಳಿಸಿದನು. ॥೧೨॥ ಸ್ಥಿರೇ - ಶಾಶ್ವತವಾದ, ವ್ಯೂಢೇ - ದೃಢವಾದ, ತಸ್ಯ - ಆ ಆಂಜನೇಯನ, ಉರಸಿ - ಎದೆಯಲ್ಲಿ, ಶತಧಾ - ನೂರು ಭಾಗವಾಗಿ, ವಿಶೀರ್ಯಮಾಣಃ - ಸೀಳಿದಂಥಾದ್ದಾಗಿ, ಕೃತಃ - ಮಾಡಲ್ಪಟ್ಟ, ಪರಿಘಃ - ಪರಿಘಾಯುಧವು, ಅಂಬರೇ - ಅಂತರಿಕ್ಷದಲ್ಲಿ, ಉಲ್ಕಾ....ವ - ನೂರಾರು ಕೊಳ್ಳಿಗಳಂತೆ, ಸಹಸಾ - ಜಾಗ್ರತೆಯಾಗಿ, ಬಭೌ - ಹೊಳೆಯುತ್ತಿತ್ತು. ॥೧೩॥ ಸಮಹಾಕಪಿಸ್ತು - ಆ ಮಹಾ ವಾನರರಾದರೆ, ತೇನಪ್ರಹಾರೇಣ - ಆ ಹೊಡೆತದಿಂದ, ಪರಿಘೇಣ - ಪರಿಘಾಯುಧದ ಮೂಲಕ, ಸಮಾಧೂತಃ - ಕೊಡಹಲ್ಪಟ್ಟವನಾಗಿ, ಭೂಮಿಚಲೇ - ಭೂಕಂಪಕಾಲದಲ್ಲಿ, ಅಚಲೋಯಥಾ - ಬೆಟ್ಟದಂತೆ, ವಿಚಚಾಲ - ನಡುಗಿದನು. ॥೧೪॥

ಯುಧದ ದೆಸೆಯಿಂದ ತಿತ್ತಿರುಗಿದಂತಾಯಿತು. ಆ ನಿಕುಂಭನ ಪರಿಘಾಯುಧ ಪ್ರಭೆಯು ಯಾರಿಂದಲೂ ತಡೆಯಲಸದಳವಾಗಿ ಹುಟ್ಟಿತು. ಆ ನಿಕುಂಭಾಗ್ನಿಯೆಂಬುದು, ವಾನರಸಮೂಹಕ್ಕೆಲ್ಲ ಪ್ರಳಯಾಗ್ನಿಗೆ ಸಮಾನವಾದುದಾಗಿ ಪರಿಣಮಿಸಿತು. ॥ ೭–೧೦ ॥ ಆ ಸಮಯದಲ್ಲಿ ವಾನರರಾಗಲಿ, ರಾಕ್ಷಸರಾಗಲಿ ಯಾರೊಬ್ಬರೂ ಅತ್ತಿತ್ತ ಅಲುಗಾಡಲು ಸಾಮರ್ಥ್ಯವಿಲ್ಲದೆ ಹೋಯಿತು. ಅವರೆಲ್ಲರಿಗೂ ಎಲ್ಲಿಲ್ಲದ ಭಯವೂ ಅಡಸಿತು. ಆದರೆ ಮಹಾ ಸಮರ್ಥನೂ, ಬಲಾಢ್ಯನೂ ಆದ ಹನುಮಂತನು ಅದೇ ಸಮಯದಲ್ಲಿ ತನ್ನೆದೆಯನ್ನು ಅಗಲವಾಗಿಸಿಕೊಂಡು ಮುಂದೆ ನಿಂತನು. ಆಗ ಪರಿಘಾಯುಧಕ್ಕೆ ಸಮಾನವಾದ ತೋಳುಗಳುಳ್ಳವನೂ, ಮಹಾ ಬಲಾಢ್ಯನಾದವನೂ ಆದ ಆ ನಿಕುಂಭಾಸುರನು ಆ ಪರಿಘಾಯುಧವನ್ನು ಮಹಾ ಪರಾಕ್ರಮಿಯಾದ ಆ ವಾನರಶ್ರೇಷ್ಠನ ವಕ್ಷಸ್ಥಳದಲ್ಲಿ ಬೀಳಿಸಿದನು. ಆ ಪರಿಘವು ಹನುಮಂತನ ಉಬ್ಬಿದೆದೆಯಲ್ಲಿ ಬಿದ್ದು ಗಗನಾಂಗಣದಿಂದ ಬೀಳುವ ನೂರಾರು ಉಲ್ಕೆ

ಹನುಮಾನ್ ಪ್ಲವಗೋತ್ತಮಃ । ಮುಷ್ಟಿಂ ಸಂವರ್ತಯಾಮಾಸ ಬಲೇನಾತಿಮಹಾಬಲಃ ॥ ೧೩ ॥ ತಮುದ್ಯಮ್ಯ ಮಹಾತೇಜಾ ನಿಕುಂಭೋರಸಿ ವೀರ್ಯವಾನ್ । ಅಭಿಚಿಕ್ಷೇಪ ವೇಗೇನ ವೇಗವಾನ್ ವಾಯುವಿಕ್ರಮಃ ॥ ೧೪ ॥ ತತಃ ಪುಸ್ಫೋಟ ಚರ್ಮಾಽಸ್ಯ ಪ್ರಸುಸ್ರಾವ ಚ ಶೋಣಿತಂ । ಮುಷ್ಟಿನಾ ತೇನ ಸಂಜಜ್ಞೇ ಜ್ವಾಲಾ ವಿದ್ಯುದಿವೋತ್ಥಿತಾ ॥೧೫॥ ಸತು ತೇನ ಪ್ರಹಾರೇಣ ನಿಕುಂಭೋ ವಿಚಚಾಲಹ । ಸ್ವಸ್ಥಶ್ಚಾಪಿ ನಿಜಗ್ರಾಹ ಹನುಮಂತಂ ಮಹಾಬಲಂ ॥ ೧೬ ॥ ವಿಚುಕ್ರುಶುಸ್ತದಾ ಸಂಖ್ಯೇ ಭೀಮಂ ಲಂಕಾನಿವಾಸಿನಃ । ನಿಕುಂಭೇನೋದ್ಯತಂ ದೃಷ್ಟ್ವಾ ಹನುಮಂತಂ ಮಹಾ

ತದಾ - ಆಗ, ಅತಿಮಹಾಬಲಃ - ಮಹಾ ಬಲವುಳ್ಳ, ಪ್ಲವಗೋತ್ತಮಃ - ವಾನರೋತ್ತಮನಾದ, ಸಹನುಮಾನ್ - ಆ ಆಂಜನೇಯನು, ತದಾ - ಆ ಕಾಲದಲ್ಲಿ, ತೇನ - ಆ ನಿಕುಂಭನಿಂದ, ಅಭಿಹತಃ- ಹೊಡೆಯಲ್ಪಟ್ಟವನಾಗಿ, ಬಲೇನ - ಸಾಮರ್ಥ್ಯದಿಂದ, ಮುಷ್ಟಿಂ - ಮುಷ್ಟಿಯನ್ನು, ಸಂವರ್ತಯಾಮಾಸ - ಹಿಡಿದನು. ॥೧೩॥ ಮಹಾತೇಜಾಃ - ಬಹು ತೇಜೋವಂತನಾದ, ವೀರ್ಯವಾನ್ - ಸಾಮರ್ಥ್ಯವಂತನಾದ, ವಾಯುವಿಕ್ರಮಃ - ವಾಯುವಿನ ಪರಾಕ್ರಮವುಳ್ಳ, ವೇಗವಾನ್ - ವೇಗಶಾಲಿಯಾದ ಹನುಮಂತನು, ತಂ - ಆ ಮುಷ್ಟಿಯನ್ನು, ಉದ್ಯಮ್ಯ - ಎತ್ತಿ, ನಿಕುಂಭೋರಸಿ - ನಿಕುಂಭನ ಎದೆಯಲ್ಲಿ, ಅಭಿಚಿಕ್ಷೇಪ - ಎತ್ತಿಹಾಕಿದನು. ॥ ೧೪ ॥ ತತಃ - ಬಳಿಕ, ತೇನಮುಷ್ಟಿನಾ - ಆ ಮುಷ್ಟಿಯಿಂದ, ಅಸ್ಯ - ಈ ನಿಕುಂಭನ, ಚರ್ಮ - ತೊಗಲು, ಪುಸ್ಫೋಟ - ಒಡೆದುಹೋಯಿತು, ಶೋಣಿತಂಚ - ರಕ್ತವೂ, ಪ್ರಸುಸ್ರಾವ - ಕಾರಿತು, ವಿದ್ಯುದಿವ - ಮಿಂಚಿನಂತೆ, ಜ್ವಾಲಾ - ಉರಿಯು, ಉತ್ಥಿತಾ - ಎದ್ದದ್ದು, ಸಂಜಜ್ಞೇ - ಆಯಿತು. ॥ ೧೫ ॥ ಸನಿಕುಂಭಸ್ತು - ಆ ನಿಕುಂಭನಾದರೆ, ತೇನ ಪ್ರಹಾರೇಣ - ಆ ಮುಷ್ಟಿಪ್ರಹಾರದಿಂದ, ವಿಚಚಾಲಹ - ಚಲಿಸಿದನು, ಸ್ವಸ್ಥಶ್ಚಾಪಿ - ಸ್ವಸ್ಥಚಿತ್ತನಾಗಿ, ಮಹಾಬಲಂ - ಬಹು ಬಲಿಷ್ಠನಾದ, ಹನುಮಂತಂ - ಹನುಮಂತನನ್ನು, ನಿಜಗ್ರಾಹ - ಹಿಡಿದುಕೊಂಡನು. ॥ ೧೬ ॥ ತದಾ - ಆಗ, ಲಂಕಾ......ನಃ - ಲಂಕಾವಾಸಿಗಳು, ಸಂಖ್ಯೇ - ಕಾಳಗದಲ್ಲಿ, ನಿಕುಂಭೇನ - ನಿಕುಂಭನಿಂದ, ಉದ್ಯತಂ - ಎತ್ತಿಕೊಳ್ಳಲ್ಪಟ್ಟ, ಮಹಾಬಲಂ - ಮಹಾ ಸಾಮರ್ಥ್ಯವಂತನಾದ, ಹನುಮಂತಂ - ಹನುಮಂತನನ್ನು, ದೃಷ್ಟ್ವಾ - ಕಂಡು, ಭೀಮಂ - ಭಯಂಕರವಾಗಿ, ವಿಚುಕ್ರುಶುಃ - ಕೂಗಿದರು. ॥ ೧೭ ॥ ತದಾ - ಆ ಕಾಲದಲ್ಲಿ, ಕುಂಭಕರ್ಣಾತ್ಮ

ಗಳಂತೆ ಒಡೆದು ಚೂರುಚೂರುಗಳಾದುವು. ಆ ಪರಿಘಾಯುಧಘಾತದಿಂದ ಮಹಾ ಕಪಿಯಾದ ಆ ಹನುಮಂತನೂ ಭೂಕಂಪಕಾಲದಲ್ಲಿ ಅಚಲವೆಂತೋ ಅಂತು ನಡುಗಿ ಹೋದನು. ಆ ತರುವಾಯ ಪ್ಲವಗೋತ್ತಮನಾದ ಆ ಹನುಮಂತನು ಮಹಾ ಬಲಿಷ್ಠವಾದ ತನ್ನ ಮುಷ್ಟಿಯನ್ನು ಬಲವಾಗಿ ಹಿಡಿದನು. ॥ ೧೧–೧೩ ॥ ವಾಯುಸಮಾನ ಪರಾಕ್ರಮವುಳ್ಳ ಆ ಕಪೀಶ್ವರನು ಆ ತನ್ನ ಬಲಿಷ್ಠವಾದ ಮುಷ್ಟಿಯನ್ನು ಮಹಾ ವೇಗದಿಂದ ನಿಕುಂಭನ ವಕ್ಷಸ್ಥಳದಲ್ಲಿ ಬೀಳಿಸಿದನು. ಆಗಲಾ ರಾಕ್ಷಸನೆದೆಯ ಚರ್ಮವು ಒಡೆದುಹೋಯಿತು. ರಕ್ತಪ್ರವಾಹವು ಹೊರಹೊರಟಿತು. ಆ ಮುಷ್ಟಿಘಾತದಿಂದ ಬಲವತ್ತರವಾದ ಜ್ವಾಲೆಯೆದ್ದಿತು. ಆ ಪ್ರಹಾರದಿಂದ ಮಹಾ ಪರಾಕ್ರಮಿಯಾದ ಆ ನಿಕುಂಭಾಸುರನು ನಡುಗಿ ಕೊಂಚ ಹೊತ್ತಾದ ತರುವಾಯ ಚೇತರಿಸಿಕೊಂಡು ಮಹಾ ಪರಾಕ್ರಮಶಾಲಿಯಾದ ಹನುಮಂತನನ್ನು ಹಿಡಿದನು. ಆ ಸಮಯದಲ್ಲಿ ಲಂಕಾನಿವಾಸಿಗಳಾದ ರಾಕ್ಷಸರೆಲ್ಲರೂ ಭಯಂಕರ ಸಿಂಹ

ಬಲಂ ॥ ೧೯ ॥ ಸತದಾ ಹ್ರಿಯಮಾಣೋಪಿ ಕುಂಭಕರ್ಣಾತ್ಮಜೇನಹ । ಆಜಘಾನಾ ನಿಲಸುತೋ ವಜ್ರಕಲ್ಪೇನ ಮುಷ್ಟಿನಾ ॥ ೨೦ ॥ ಆತ್ಮಾನಂ ಮೋಚಯಿತ್ವಾಥ ಕ್ಷಿತಾವ ಭ್ಯವಪದ್ಯತ । ಹನುಮಾನುನ್ಮಮಾಥಾಶು ನಿಕುಂಭಂ ಮಾರುತಾತ್ಮಜಃ ॥ ೨೧ ॥ ನಿಕ್ಷಿಪ್ಯ ಪರಮಾಯತ್ತೋ ನಿಕುಂಭಂ ನಿಷ್ಪಿಪೇಷಹ । ಉತ್ಪತ್ಯಚಾಸ್ಯ ವೇಗೇನ ಪಪಾತೋರಸಿ ವೀರ್ಯವಾನ್ ॥ ೨೨ ॥ ಪರಿಗೃಹ್ಯಚ ಬಾಹುಭ್ಯಾಂ ಪರಿವೃತ್ಯ ಶಿರೋ ಧರಾಂ । ಉತ್ಪಾಟಯಾಮಾಸ ಶಿರೋ ಭೈರವಂ ನದತೋ ಮಹತ್ ॥ ೨೩ ॥ ಅಥ ವಿನದತಿ ಸಾದಿತೇ ನಿಕುಂಭೇ ಪವನಸುತೇನ ರಣೇ ಬಭೂವ ಯುದ್ಧಂ । ದಶರಥ ಸುತರಾಕ್ಷಸೇಂದ್ರಸೂನ್ವೋ ರ್ಭೃಶತರಮಾಗತರೋಷಯೋಸ್ಸುಭೀಮಂ ॥ ೨೪ ॥

ಜೇನ - ನಿಕುಂಭನಿಂದ, ಹ್ರಿಯಮಾಣೋಪಿ - ಅಪಹರಿಸಲ್ಪಟ್ಟವನಾದರೂ, ಸಃಅನಿಲಸುತಃ - ಆ ವಾಯುಪುತ್ರನು, ವಜ್ರಕಲ್ಪೇನ - ವಜ್ರಸಮಾನವಾದ, ಮುಷ್ಟಿನಾ - ಹಿಡಿಯಿಂದ, ಆಜಘಾನ - ಹೊಡೆದನು. ॥ ೨೦ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಆತ್ಮಾನಂ - ತನ್ನನ್ನು, ಮೋಚಯಿತ್ವಾ - ಬಿಡಿಸಿಕೊಂಡು, ಅಥ - ಬಳಿಕ, ಕ್ಷಿತೌ - ನೆಲದಲ್ಲಿ, ಅಭ್ಯವಪದ್ಯತ - ನಿಂತನು, ಆಶು - ಜಾಗ್ರತೆಯಾಗಿ, ನಿಕುಂಭಂ - ನಿಕುಂಭನನ್ನು, ಉನ್ಮಮಾಥ - ಹೊಡೆದನು. ॥ ೨೧ ॥ ವೀರ್ಯವಾನ್ - ಪರಾಕ್ರಮಿಯಾದ ಹನುಮಂತನು, ಪರಮಾಯತ್ತಃ - ಅತಿ ಪ್ರಯತ್ನಪರನಾಗಿ, ನಿಕುಂಭಂ - ನಿಕುಂಭನನ್ನು, ನಿಕ್ಷಿಪ್ಯ - ಕೆಡವಿ, ನಿಷ್ಪಿಪೇಷಹ - ಅರೆದನು, ಉತ್ಪತ್ಯ - ಹಾರಿ, ಅಸ್ಯ - ಈ ನಿಕುಂಭನ, ಉರಸಿ - ಎದೆಯಲ್ಲಿ, ವೇಗೇನ - ವೇಗದಿಂದ, ಪಪಾತ - ಬಿದ್ದನು. ॥೨೨॥ ಬಾಹುಭ್ಯಾಂ - ಭುಜಗಳಿಂದ, ಶಿರೋಧರಾಂ - ಕೂದಲನ್ನು, ಪರಿಗೃಹ್ಯ - ಹಿಡಿದು, ಪರಿವೃತ್ಯ - ತಿರುವಿ, ಭೈರವಂ - ಭಯಂಕರವಾಗಿ, ನದತಃ - ಕೂಗುವ ಆ ನಿಕುಂಭನ, ಮಹತ್ - ದೊಡ್ಡದಾದ, ಶಿರಃ - ಮಂಡೆಯನ್ನು, ಉತ್ಪಾಟಯಾಮಾಸ - ಕಿತ್ತನು. ॥ ೨೩ ॥ ಅಥ - ಅನಂತರ ದಲ್ಲಿ, ವಿನದತಿ - ಗರ್ಜಿಸುತ್ತಿರುವ, ನಿಕುಂಭೇ - ನಿಕುಂಭನು, ಪವನಸುತೇನ - ವಾಯುಪುತ್ರ ನಿಂದ, ಸಾದಿತೇ - ಹೊಡೆಯಲ್ಪಟ್ಟವನಾಗಲೂ, ಭೃಶತರಂ - ಬಹಳವಾಗಿ, ಆಗತರೋಷಯೋಃ - ಹುಟ್ಟಿದ ಕೋಪವುಳ್ಳ, ದಶ.....ಸ್ನ್ವೋಃ - ದಶರಥಪುತ್ರನಾದ ರಾಮಚಂದ್ರನಿಗೂ, ರಾಕ್ಷಸೇಂದ್ರನಾದ ಖರನ ಮಗನಾದ ಮಕರಾಕ್ಷನಿಗೂ, ಸುಭೀಮಂ - ಭಯಂಕರವಾದ, ಯುದ್ಧಂ - ಕಾಳೆಗವು,

---

ನಾದ ಮಾಡಿದರು. ಆಗ ಅವರೆಲ್ಲರೂ ನಿಕುಂಭನೊಡನೆ ದ್ವಂದ್ವಯುದ್ಧಕ್ಕೆ ನಿಂತ ಹನು ಮಂತನನ್ನು ಕಂಡರು. ಆಗ ನಿಕುಂಭನು ತನ್ನನ್ನು ಹಿಡಿದಿದ್ದರೂ ಲಕ್ಷಿಸದೆ ಆ ವಾಯು ನಂದನನು ವಜ್ರಸಮಾನವಾದ ತನ್ನ ಮುಷ್ಟಿಯಿಂದವನನ್ನು ಬಲವಾಗಿ ಗುದ್ದಿದನು. ಇದಾದ ಬಳಿಕ ಆ ಹನುಮಂತನು ಆ ರಾಕ್ಷಸನ ಹಿಡಿತದಿಂದ ತಪ್ಪಿಸಿಕೊಂಡು ಅವನನ್ನಮರಿ ಬಲ ವಾಗಿ ಮಥಿಸಿಬಿಟ್ಟನು. ॥ ೧೬-೨೧ ॥ ಆಮೇಲೆ ಮಹಾ ವೀರ್ಯವಂತನಾದ ಆ ಮಾರು ತಿಯು ಆ ರಾಕ್ಷಸನನ್ನು ಕೆಳಕ್ಕೆ ಹಾಕಿ ಚೆನ್ನಾಗಿ ತೀಡಿ ಮೇಲಕ್ಕೆ ಹಾರಿ ಅವನೆದೆಯಲ್ಲಿ ಬಿದ್ದನು. ಇಷ್ಟುಮಾತ್ರವಲ್ಲದೆ ಮಹಾ ಭಯಂಕರವಾದ ಸಿಂಹನಾದವನ್ನು ಮಾಡುತ್ತ ತಲೆಗೂದಲನ್ನು ತಿರುವಿ ಅವನ ತಲೆಯನ್ನು ಕಿತ್ತೆಳೆದು ಹಾಕಿದನು. ಹೀಗೆ ಮಾರುತಿಯು ಆ ನಿಕುಂಭನನ್ನು ಕೊಲ್ಲುತ್ತಿರುವಾಗ ಆ ರಾಕ್ಷಸನು ಬೊಬ್ಬೆಯಿಡುತ್ತಿರಲು ಅತ್ತ ಮಹಾ ರೋಷಸಮನ್ವಿತನಾದ ಶ್ರೀರಾಮಮೂರ್ತಿಗೂ, ಮಕರಾಕ್ಷ ರಾಕ್ಷಸನಿಗೂ ಭಯಂಕರ

ವ್ಯಪೇಽೇತು ಜೀವೇ ನಿಕುಂಭಸ್ಯ ಹೃಷ್ಟಾ
ವಿನೇದುಃ ಪ್ಲವಂಗಾ ದಿಶಸ್ಸಸ್ವನುಶ್ಚ ।
ಚಚಾಲೇವ ಚೋರ್ವೀ ಪಫಾಲೇವ ಚ ದ್ಯೌ
ರ್ಭಯಂ ರಾಕ್ಷಸಾನಾಂ ಬಲಂ ಚಾವಿವೇಶ ॥ ೨೫ ॥ *

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಸಪ್ತತಿತಮಸ್ಸರ್ಗಃ.

ಆಯಿತು. ॥ ೨೪ ॥ ನಿಕುಂಭಸ್ಯ - ನಿಕುಂಭನ, ಜೀವೇ - ಜೀವವು, ವ್ಯಪೇತೇ - ಹೋದದಾಗಲು, ಪ್ಲವಂಗಾಃ - ವಾನರರು, ಹೃಷ್ಟಾಃ - ಸಂತೋಷಚಿತ್ತರಾಗಿ, ವಿನೇದುಃ - ಕೂಗಿದರು, ದಿಶಶ್ಚ - ದಿಕ್ಕುಗಳೂ, ಸಸ್ವನುಃ - ಪ್ರತಿಧ್ವನಿ ಮಾಡಿದುವು, ಉರ್ವೀ - ನೆಲವು, ಚಚಾಲೇವ - ಕದಲಿದಂತಿತ್ತು, ದ್ಯೌಃ - ಅಂತರಿಕ್ಷವು, ಪಫಾಲೇವ - ಒಡೆದುಹೋದಂತಿತ್ತು, ಭಯಂಚ - ಭೀತಿಯೂ, ರಾಕ್ಷಸಾನಾಂ - ರಕ್ಕಸರ, ಬಲಂ - ಸೈನ್ಯವನ್ನು, ಆವಿವೇಶ - ಹೊಕ್ಕಿತು. ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಸಪ್ತತಿತಮಸ್ಸರ್ಗಃ.

ಯುದ್ಧವು ಮೊದಲಾಯಿತು. ನಿಕುಂಭನು ಮಡಿಯುತ್ತಲೇ ವಾನರರೆಲ್ಲರೂ ಮಹದಾನಂದ ಭರಿತರಾಗಿ ಕೋಲಾಹಧ್ವನಿ ಮಾಡಿದರು. ಅದೇ ಸಮಯದಲ್ಲಿಯೇ ಭೂಮಿಯು ಬಿರಿಯುವಂತಾಯಿತು. ಅಂತರಿಕ್ಷವು ಸೀಳುವಂತಾಯಿತು. ರಾಕ್ಷಸಸೇನೆಗೆಲ್ಲ ಮಹತ್ತರವಾದ ಭಯವುಂಟಾಯಿತು. ॥ ೨೨–೨೫ ॥

ಇಂತಿದು ನಿಕುಂಭಹನನವೆಂಬ ಎಪ್ಪತ್ತೇಳನೆಯ ಸರ್ಗವು
ಸಮಾಪ್ತವಾದುದು.

* ಇಲ್ಲಿನ ಎರಡು ಶ್ಲೋಕಗಳಲ್ಲಿ ಒಂದು ಪುಷ್ಪಿತಾಗ್ರವೃತ್ತ, ಇನ್ನೊಂದು ಭುಜಂಗಪ್ರಯಾವೃತ್ತ. ಈ ಶ್ಲೋಕಗಳಿಂದ ಮುಂದೆ ಶ್ರೀರಾಮ ಮಕರಾಕ್ಷರ ಯುದ್ಧವನ್ನು ವರ್ಣಿಸಿರುವ ಎರಡು ಸರ್ಗಗಳ ತಾತ್ಪರ್ಯವನ್ನೂ, ಈಗ ನಿಕುಂಭಹನನದಿಂದ ವಾನರರ ಹರ್ಷವನ್ನೂ ಕವಿ ಸೂಚಿಸುತ್ತಾನೆ. ಮೊದಲನೆಯದು ಪುಷ್ಪಿತಾಗ್ರವೃತ್ತ ; ಇದು ಮುಂದೆ ನಡೆಯುವ ರಾಮ ಮಕರಾಕ್ಷರ ಯುದ್ಧ ಸೂಚನೆಯನ್ನು ಕೊಡುವುದು. ಎರಡನೆಯದು ಭುಜಂಗಪ್ರಯಾತ, ನಿಕುಂಭಹನನ ಮತ್ತು ವಾನರರ ಹರ್ಷಗಳನ್ನು ವಿವರಿಸುವುದು.

ಯುದ್ಧಕಾಂಡೇ ಅಷ್ಟಸಪ್ತತಿತಮಸ್ಸರ್ಗಃ

¶ ನಿಕುಂಭಂ ನಿಹತಂ ಶ್ರುತ್ವಾ ಕುಂಭಂಚ ವಿನಿಪಾತಿತಂ । ರಾವಣಃ ಪರಮಾಮರ್ಷೀ ಪ್ರಜಜ್ವಾಲಾನಲೋ ಯಥಾ ॥ ೧ ॥ ನೈರ್ಋತಃ ಕ್ರೋಧಶೋಕಾಭ್ಯಾಂ ದ್ವಾಭ್ಯಾಂ ತು ಪರಿಮೂರ್ಛಿತಃ । ಖರಪುತ್ರಂ ವಿಶಾಲಾಕ್ಷಂ ಮಕರಾಕ್ಷಮಚೋದಯತ್ ॥೨॥ ೪ "ಗಚ್ಛ ಪುತ್ರ! ಮಯಾಜ್ಞಪ್ತೋ ಬಲೇನಾಭಿಸಮನ್ವಿತಃ । ರಾಘವಂ ಲಕ್ಷ್ಮಣಂಚೈವ ಜಹಿ ತಾಂಶ್ಚ ವನೌಕಸಃ" ॥ ೩ ॥ ರಾವಣಸ್ಯ ವಚಃ ಶ್ರುತ್ವಾ ಶೂರಮಾನೀ ಖರಾತ್ಮಜಃ । ಬಾಢಮಿತ್ಯಬ್ರವೀದ್ಧೃಷ್ಟೋ ಮಕರಾಕ್ಷೋ ನಿಶಾಚರಃ ॥೪॥

ನಿಕುಂಭಶ್ಚ - ನಿಕುಂಭನೂ, ಹತಂ - ಮಡಿದವನನ್ನಾಗಿಯೂ, ಕುಂಭಂಚ - ಕುಂಭನನ್ನೂ, ವಿನಿಪಾತಿತಂ - ಬೀಳಿಸಲ್ಪಟ್ಟವನನ್ನಾಗಿಯೂ, ಶ್ರುತ್ವಾ - ಕೇಳಿ, ರಾವಣಃ - ರಾವಣನು, ಪರಮಾಮರ್ಷೀ - ಬಹಳ ಕೋಪವುಳ್ಳವನಾಗಿ, ಅನಲೋಯಥಾ - ಅಗ್ನಿಯಂತೆ, ಪ್ರಜಜ್ವಾಲ - ಉರಿದನು. ॥ ೧ ॥ ನೈರ್ಋತಃ - ರಾಕ್ಷಸನಾದ ರಾವಣನು, ದ್ವಾಭ್ಯಾಂ - ಎರಡಾದ, ಕ್ರೋಧಶೋಕಾಭ್ಯಾಂ - ಕೋಪ ದುಃಖಗಳಿಂದಲೂ, ಪರಿಮೂರ್ಛಿತಃ - ವ್ಯಾಪ್ತನಾಗಿ, ಖರಪುತ್ರಂ - ಖರನ ಮಗನಾದ ಮಕರಾಕ್ಷನನ್ನು, ಅಚೋದಯತ್ - ಪ್ರೇರಿಸಿದನು. ॥ ೨ ॥ ಹೇ ಪುತ್ರ - ಎಲೈ ಮಗನೇ, ಮಯಾ - ನನ್ನಿಂದ, ಆಜ್ಞಪ್ತಃ - ಆಜ್ಞಾಪಿಸಲ್ಪಟ್ಟವನಾಗಿ, ಬಲೇನ - ಸೈನ್ಯದಿಂದ, ಅಭಿಸಮನ್ವಿತಃ - ಕೂಡಿ, ಗಚ್ಛ - ಹೋಗು, ರಾಘವಂ - ಶ್ರೀರಾಮನನ್ನು, ಲಕ್ಷ್ಮಣಂಚೈವ - ಲಕ್ಷ್ಮಣನನ್ನೂ, ತಾನ್ವನೌಕಸಶ್ಚೈವ - ಆ ವಾನರರನ್ನೂ, ಜಹಿ - ಹೊಡೆ. ॥೩॥ ಶೂರಮಾನೀ - ನಾನೇ ಶೂರನೆಂಬ ಅಹಂಕಾರವುಳ್ಳ, ಖರಾತ್ಮಜಃ - ಖರ ಪುತ್ರನಾದ, ನಿಶಾಚರಃ - ರಕ್ಕಸನಾದ, ಮಕರಾಕ್ಷಃ - ಮಕರಾಕ್ಷನು, ರಾವಣಸ್ಯ - ರಾವಣನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಹೃಷ್ಟಃ - ಸಂತೋಷ

ಕುಂಭ ನಿಕುಂಭರು ರಣಾಂಗಣದಲ್ಲಿ ಮಡಿದ ವೃತ್ತಾಂತವನ್ನು ಕೇಳಿದೊಡನೆಯೇ ರಾಕ್ಷಸೇಶ್ವರನಾದ ರಾವಣಾಸುರನು ಬೆಂಕಿಯಂತುರಿದುಬಿದ್ದನು. ಕೋಪ ಶೋಕಗಳಿಂದ ಪರಿಮೂರ್ಛಿತನಾದ ಆ ರಾಕ್ಷಸರಾಜನು ವಿಶಾಲಾಕ್ಷನಾದ ಮಕರಾಕ್ಷನೆಂಬ ಖರಾಸುರನ ಮಗನನ್ನು ಕುರಿತು, "ವತ್ಸ, ಮಕರಾಕ್ಷ! ನನ್ನಿಂದಾಜ್ಞಪ್ತನಾಗಿ ನೀನೀಗಲೇ ಸೇನೆಯೊಡಗೂಡಿ ರಣರಂಗಕ್ಕೆ ಹೋಗು. ರಾಮಲಕ್ಷ್ಮಣರನ್ನೂ, ವನವಾಸಿಗಳಾದ ಆ ವಾನರರನ್ನೂ ಒಕ್ಕಲಿಕ್ಕಿ ಬರುವವನಾಗು" ಎಂದು ಹೇಳಿದನು. ತಾನೇ ಶೂರನೆಂಬ ಗರ್ವದಿಂದ ಬೀಗಿದವನೂ, ಕೇವಲ ದುರಹಂಕಾರಿಯೂ ಆದ ಮಕರಾಕ್ಷ ರಾಕ್ಷಸನು

¶ ಪ್ರಥಮ ಪಕ್ಷದಲ್ಲಿ ಈಗ ನಡೆಯುಲಿರುವ ಯುದ್ಧವು ದಶಮಿಯ ದಿನ ಪ್ರಾಪ್ತವಾದದ್ದು. ದ್ವಿತೀಯ ಪಕ್ಷದಲ್ಲಿ ದಶಮಿಯಲ್ಲಿ ಬೆಳಿಗ್ಗೆ ಮೊದಲಾಗಿ ಸಂಜೆವರೆಗೆ ಅಕಂಪನ ವಧ, ಪ್ರಹಸ್ತ ವಧ, ರಾವಣಮುಕುಟ ಭಂಗ, ಕುಂಭಕರ್ಣ ಪ್ರಬೋಧನ ಮತ್ತು ಅವನ ವಧ ಮೊದಲಾದುವು ನಡೆದದ್ದು. ಅಪರಾಹ್ಣದಲ್ಲಿ ಬ್ರಹ್ಮಾಸ್ತ್ರಬಂಧ, ರಾತ್ರಿಯಲ್ಲಿ ಬಂಧ ವಿಮೋಚನ, ಲಂಕಾದಹನ, ಕುಂಭ ನಿಕುಂಭಹನನ, ಯೂಪಾಕ್ಷ, ಶೋಣಿತಾಕ್ಷ, ಪ್ರಜಂಘ, ಕಂಪನ, ಮಕರಾಕ್ಷರ ವಧಗಳು ನಡೆದವೆಂದರಿಯಬೇಕು.

೪ ಶ್ರೀರಾಮಲಕ್ಷ್ಮಣರನ್ನು ಬಿಟ್ಟು, ಮಿಕ್ಕೆಲ್ಲರನ್ನೂ ಕೊಂದು ಬಾರೆಂಬುದು ಇಲ್ಲಿನ ವಾಸ್ತವಿಕಾರ್ಥ.

ಸೋಽಭಿವಾದ್ಯ ದಶಗ್ರೀವಂ ಕೃತ್ವಾ ಚಾಪಿ ಪ್ರದಕ್ಷಿಣಂ । ನಿರ್ಜಗಾಮ ಗೃಹಾಚ್ಛುಭ್ರಾದ್ರಾವಣಸ್ಯಾಜ್ಞಯಾ ಬಲೀ ॥ ೫ ॥ ಸಮೀಪಸ್ಥಂ ಬಲಾಧ್ಯಕ್ಷಂ ಖರಪುತ್ರೋಽಬ್ರವೀದಿದಂ । "ರಥಶ್ಚಾನೀಯತಾಂ ಶೀಘ್ರಂ ಸೈನ್ಯಂಚಾಹೂಯತಾಂ ತ್ವರಾತ್" ॥ ೬ ॥ ತಸ್ಯ ತದ್ವಚನಂ ಶ್ರುತ್ವಾ ಬಲಾಧ್ಯಕ್ಷೋ ನಿಶಾಚರಃ । ಸ್ಯಂದನಂ ಚ ಬಲಂಚೈವ ಸಮೀಪಂ ಪ್ರತ್ಯಪಾದಯತ್ ॥ ೭ ॥ ಪ್ರದಕ್ಷಿಣಂ ರಥಂ ಕೃತ್ವಾ ಆರುರೋಹ ನಿಶಾಚರಃ । ಸೂತಂ ಸಂಚೋದಯಾಮಾಸ 'ಶೀಘ್ರಂ ಮೇ ರಥಮಾವಹ' ॥ ೮ ॥ ಅಥ ತಾನ್ ರಾಕ್ಷಸಾನ್ ಸರ್ವಾನ್ ಮಕರಾಕ್ಷೋಽಬ್ರವೀದಿದಂ । " ಯೂಯಂ

ಚಿತ್ತನಾಗಿ, ಬಾಢಮಿತಿ - ಹಾಗೆಯೇ ಆಗಲೆಂದು, ಅಬ್ರವೀತ್ - ನುಡಿದನು. ॥೪॥ ಬಲೀ - ಬಲಿಷ್ಠನಾದ, ಸಃ - ಆ ಮಕರಾಕ್ಷನು, ರಾವಣಸ್ಯ - ರಾವಣನ, ಆಜ್ಞಯಾ - ಆಜ್ಞೆಯಿಂದ, ದಶಗ್ರೀವಂ - ರಾವಣನನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ಪ್ರದಕ್ಷಿಣಂಚಾಪಿ - ಪ್ರದಕ್ಷಿಣವನ್ನೂ, ಕೃತ್ವಾ-ಮಾಡಿ, ಶುಭ್ರಾತ್ - ಬೆಳ್ಳಗಿರುವ, ಗೃಹಾತ್ - ಮನೆಯಿಂದ, ನಿರ್ಜಗಾಮ - ಹೊರಟನು. ॥ ೫ ॥ ಖರಪುತ್ರಃ - ಮಕರಾಕ್ಷನು, ಸಮೀಪಸ್ಥಂ - ಸಮೀಪದಲ್ಲಿರುವ, ಬಲಾಧ್ಯಕ್ಷಂ - ಸೈನ್ಯಾಧಿಪತಿಯನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ರಥಶ್ಚ - ರಥವು, ಶೀಘ್ರಂ - ಜಾಗ್ರತೆಯಾಗಿ, ಆನೀಯತಾಂ - ತರಿಸಲ್ಪಡಲಿ, ಸೈನ್ಯಂಚ - ಸೇನೆಯೂ, ತ್ವರಾತ್ - ತ್ವರೆಯಿಂದ, ಆಹೂಯತಾಂ - ಕರೆಯಿಲಿಸಲ್ಪಡಲಿ. ॥೬॥ ತಸ್ಯ - ಆ ಮಕರಾಕ್ಷನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಬಲಾಧ್ಯಕ್ಷಃ - ಸೈನ್ಯಾಧಿಪತಿಯಾದ, ನಿಶಾಚರಃ - ರಾಕ್ಷಸನು, ಸ್ಯಂದನಂಚ - ರಥವನ್ನೂ, ಬಲಂಚೈವ - ಸೈನ್ಯವನ್ನೂ, ಸಮೀಪಂ - ಸಮೀಪವನ್ನು, ಆಪಾದಯತ್ - ಹೊಂದಿಸಿದನು. ॥ ೭ ॥ ನಿಶಾಚರಃ - ಮಕರಾಕ್ಷನು, ರಥಂ - ತೇರನ್ನು ಕುರಿತು, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕೃತ್ವಾ - ಮಾಡಿ, ಆರುರೋಹ - ಏರಿದನು, ಶೀಘ್ರಂ - ಜಾಗ್ರತೆಯಾಗಿ, ಮೇ - ನನ್ನ, ರಥಂ - ತೇರನ್ನು, ಆವಹ - ನಡಸು, ಇತಿ - ಇಂತೆಂದು, ಸೂತಂ - ಸಾರಥಿಯನ್ನು, ಸಂಚೋದಯಾಮಾಸ - ಪ್ರೇರಿಸಿದನು. ॥ ೮ ॥ ಅಥ - ಬಳಿಕ, ಮಕರಾಕ್ಷಃ - ಮಕರಾಕ್ಷನು, ಸರ್ವಾನ್ - ಸಮಸ್ತರಾದ, ತಾನ್‌ರಾಕ್ಷಸಾನ್ - ಆ ರಕ್ಕಸರನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು, ಹೇ ರಾಕ್ಷಸಾಃ - ಎಲೈ ರಕ್ಕಸರೇ, ಮಮ - ನನ್ನ, ಪುರಸ್ತಾತ್ - ಮುಂದುಗಡೆ, ಸರ್ವೇ-ಸಮಸ್ತರಾದ, ಯೂಯಂ-ನೀವು, ಯುಧ್ಯಧ್ವಂ-ಯುದ್ಧಮಾಡಿರಿ, ಅಹಂ ನಾನು, ಮಹಾತ್ಮನಾ-

"ಹಾಗೆಯೇ ಆಗಲೆಂ"ದು ಹೇಳಿ ರಾವಣನಿಗೆ ಪ್ರದಕ್ಷಿಣಪೂರ್ವಕವಾಗಿ ನಮಸ್ಕಾರ ಮಾಡಿ ಆತನಾಣತಿಯನ್ನು ಪಡೆದು ಶುಭ್ರವಾದ ಆ ಭವನದಿಂದ ಹೊರಹೊರಟನು. ॥೧-೫॥ ಆ ತರುವಾಯ ತನ್ನ ಬಳಿಯಿದ್ದ ಸೇನಾಧಿಪತಿಯನ್ನು ಕುರಿತು, "ಅಯ್ಯಾ! ಜಾಗ್ರತೆಯಾಗಿ ಸೇನೆಯನ್ನು ಬರಮಾಡು. ನನ್ನ ರಥವನ್ನೂ ಬೇಗನೆ ತೆಗೆದುಕೊಂಡು ಬರುವವನಾಗು" ಎಂದು ಹೇಳಿದನು. ಬಲಾಧ್ಯಕ್ಷನು ಅವನ ಮಾತುಗಳನ್ನು ಕೇಳಿ ರಥವನ್ನೂ, ಸೇನೆಯನ್ನೂ ಜಾಗ್ರತೆಯಾಗಿ ಅವನ ಬಳಿಗೆ ಕರೆತಂದನು. ಮಕರಾಕ್ಷನು ರಥಕ್ಕೆ ಪ್ರದಕ್ಷಿಣ ಮಾಡಿ ಅದನ್ನೇರಿ ಸೂತನನ್ನು ಕುರಿತು, "ಎಲೈ ಸಾರಥಿಯೇ! ರಥವನ್ನು ಜಾಗ್ರತೆಯಾಗಿ ನಡಸು" ಎಂದು ಅಪ್ಪಣೆ ಮಾಡಿದನು. ಆ ಬಳಿಕ ಮಕರಾಕ್ಷನು ರಾಕ್ಷಸರೆಲ್ಲರನ್ನೂ ಕುರಿತು, "ಎಲೈ ರಾಕ್ಷಸರೇ! ನೀವೆಲ್ಲರೂ ನನ್ನ ಮುಂಗಡೆಯೇ ಈ ವಾನರರೊಡನೆ ಯುದ್ಧ ಮಾಡಿರಿ. ನಾನು

ಸರ್ವೇ ಪ್ರಯುಧ್ಯಧ್ವಂ ಪುರಸ್ತಾನ್ಮಮ ರಾಕ್ಷಸಾಃ! ‖೯‖ * ಅಹಂ ರಾಕ್ಷಸರಾಜೇನ ರಾವಣೇನ ಮಹಾತ್ಮನಾ । ಆಜ್ಞಪ್ತಸ್ಸಮರೇ ಹಂತುಂ ತಾವುಭೌ ರಾಮಲಕ್ಷ್ಮಣೌ ‖೧೦‖ "ಅದ್ಯ ರಾಮಂ ವಧಿಷ್ಯಾಮಿ ಲಕ್ಷ್ಮಣಂ ಚ ನಿಶಾಚರಾಃ! । ಶಾಖಾಮೃಗಂಚ ಸುಗ್ರೀವಂ ವಾನರಾಂಶ್ಚ ಶರೋತ್ತಮೈಃ ‖೧೧‖ ಅದ್ಯ ಶೂಲನಿಪಾತೈಶ್ಚ ವಾನರಾಣಾಂ ಮಹಾಚಮೂಂ । ಪ್ರದಹಿಷ್ಯಾಮಿ ಸಂಪ್ರಾಪ್ತಃ ಶುಷ್ಕೇಂಧನಮಿವಾನಲಃ" ‖ ೧೨ ‖ ಮಕರಾಕ್ಷಸ್ಯ ತಚ್ಛ್ರುತ್ವಾ ವಚನಂ ತೇ ನಿಶಾಚರಾಃ । ಸರ್ವೇ ನಾನಾಯುಧೋಪೇತಾ ಬಲವಂತಸ್ಸಮಾಗತಾಃ ‖ ೧೩ ‖ ತೇ ಕಾಮರೂಪಿಣಸ್ಸರ್ವೇ ದಂಷ್ಟ್ರಿಣಃ ಪಿಂಗಳೇ

ಮಹಾನುಭಾವನಾದ, ರಾಕ್ಷಸರಾಜೇನ - ರಾಕ್ಷಸಾಧಿಪತಿಯಾದ, ರಾವಣೇನ - ರಾವಣನಿಂದ, ಉಭೌ - ಇಬ್ಬರಾದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರನ್ನು, ಸಮರೇ - ಕಾಳಗದಲ್ಲಿ, ಹಂತುಂ-ಹೊಡೆಯುವುದಕ್ಕಾಗಿ, ಆಜ್ಞಪ್ತಃ-ಆಜ್ಞಾಪಿಸಲ್ಪಟ್ಟಿದ್ದೇನೆ, ಹೇ ನಿಶಾಚರಾಃ-ರಾಕ್ಷಸರೇ, ಅದ್ಯ - ಈಗ, ರಾಮಂ - ಶ್ರೀರಾಮನನ್ನು, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ಶಾಖಾಮೃಗಂ - ವಾನರನಾದ, ಸುಗ್ರೀವಂಚ - ಸುಗ್ರೀವನನ್ನೂ, ವಾನರಾಂಶ್ಚ - ಇತರ ಕಪಿಗಳೂ, ಶರೋತ್ತಮೈಃ - ಉತ್ತಮವಾದ ಬಾಣಗಳಿಂದ, ವಧಿಷ್ಯಾಮಿ - ಸಂಹಾರ ಮಾಡುತ್ತೇನೆ, ಅದ್ಯ - ಈಗ, ಶೂಲನಿಪಾತೈಶ್ಚ - ಶೂಲಪ್ರಹಾರಗಳಿಂದ, ವಾನರಾಣಾಂ - ಕಪಿಗಳ, ಮಹಾಚಮೂಂ - ಮಹತ್ತರವಾದ ಸೈನ್ಯವನ್ನು, ಶುಷ್ಕೇಂಧನಂ - ಒಣ ಕಟ್ಟಿಗೆಯನ್ನು, ಸಂಪ್ರಾಪ್ತಃ - ಹೊಂದಿದ, ಅನಲಇವ - ಅಗ್ನಿಯಂತೆ, ಪ್ರದಹಿಷ್ಯಾಮಿ - ದಹಿಸುವೆನು. ‖೯-೧೨‖ ಬಲವಂತಃ - ಬಲಿಷ್ಠರಾದ, ಸರ್ವೇ - ಸಮಸ್ತರಾದ, ತೇನಿಶಾಚರಾಃ - ಆ ರಾಕ್ಷಸರು, ಮಕರಾಕ್ಷಸ್ಯ - ಮಕರಾಕ್ಷನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ನಾನಾ....ತಾಃ - ಅನೇಕ ಆಯುಧಗಳಿಂದ ಕೂಡಿ, ಸಮಾಗತಾಃ - ಬಂದರು. ‖೧೩‖ ಕಾಮರೂಪಿಣಃ - ಕಾಮರೂಪಿಗಳಾದ, ದಂಷ್ಟ್ರಿಣಃ - ಕೋರೆಹಲ್ಲುಗಳುಳ್ಳ, ಪಿಂಗಳೇಕ್ಷಣಾಃ- ಹಚ್ಚಗಿರುವ ಕಣ್ಣುಗಳುಳ್ಳ, ಧ್ವಸ್ತಕೇಶಾಃ - ಕೊಡಹಲ್ಪಟ್ಟ ಕೂದಲುಗಳುಳ್ಳ, ಭಯಾನಕಾಃ -

---

ರಣಾಂಗಣದಲ್ಲಿ ರಾಮಲಕ್ಷ್ಮಣರನ್ನು ಕೊಲ್ಲಬೇಕೆಂದು ಮಹಾತ್ಮನಾದ ರಾವಣಾಸುರನಿಂದ ಆಜ್ಞಪ್ತನಾಗಿರುವೆನಾದುದರಿಂದ ಅವರೊಡನೆಯೇ ಯುದ್ಧ ಮಾಡುತ್ತೇನೆ. ಅಯ್ಯಾ ನಿಶಾಚರರೇ! ಇಂದು ನಾನು ಆ ರಾಮಲಕ್ಷ್ಮಣರನ್ನೂ, ಶಾಖಾಮೃಗವಾದ ಸುಗ್ರೀವನನ್ನೂ ಉತ್ತಮೋತ್ತಮವಾದ ಬಾಣಗಳಿಂದ ಕೊಲ್ಲುತ್ತೇನೆ. ಇಂದೇ ನಾನು ಈ ವಾನರರ ಮಹಾಸೇನೆಯನ್ನು, ಬೆಂಕಿಯು ತರಗೆಲೆಯನ್ನೆಂತೋ ಅಂತು ಈ ಶೂಲಗಳಿಂದಲೇ ದಹಿಸಿಬಿಡುತ್ತೇನೆ" ಎಂದು ಹೇಳಿದನು. ‖ ೬–೧೨ ‖ ಮಕರಾಕ್ಷನ ಈ ಮಾತುಗಳನ್ನು ಕೇಳುತ್ತಲೇ ಮಹಾ ಬಲಾಢ್ಯರಾದ ಆ ರಾಕ್ಷಸ ವೀರರೆಲ್ಲರೂ ವಿವಿಧಾಯುಧಗಳನ್ನು ಧರಿಸಿದವರಾಗಿ ನುಗ್ಗಿ ಹೊರಟರು. ಕಾಮರೂಪರೂ, ಕೋರೆಹಲ್ಲುಗಳನ್ನೊಳಗೊಂಡವರೂ, ಪಿಂಗಳೇಕ್ಷಣರೂ, ಬಿರಿಬಿಚ್ಚಿದ ತಲೆಗೂದಲುಗಳುಳ್ಳವರೂ ಆದ ಆ ರಾಕ್ಷಸ

---

* ಇಲ್ಲಿಯೂ "ರಾವಣನು ಶ್ರೀರಾಮಲಕ್ಷ್ಮಣರನ್ನು ಕೊಂದು ಬಾರೆಂದು ಆಜ್ಞಾಪಿಸಿದ್ದರೂ, ನಾನು ಅವರನ್ನು ಬಿಟ್ಟು ವಾನರರೆಲ್ಲರನ್ನೂ ಕೊಂದು ಅತನಿಗೆ ಆನಂದವನ್ನುಂಟುಮಾಡುತ್ತೇನೆ" ಎಂದು ಮಕರಾಕ್ಷ ವಾಕ್ಯದ ವಾಸ್ತವಿಕಾರ್ಥ.

ಕ್ಷಣಾಃ । ಮಾತಂಗಾ ಇವ ನರ್ದಂತೋ ಧ್ವಸ್ತಕೇಶಾ ಭಯಾವಹಾಃ ॥ ೧೪ ॥ ಪರಿವಾರ್ಯ ಮಹಾಕಾಯಂ ಮಕರಾಕ್ಷಂ ಖರಾತ್ಮಜಂ । ಅಭಿಜಗ್ಮುಸ್ತತೋ ಹೃಷ್ಟಾ ಶ್ಚಾಲಯಂತೋ ವಸುಂಧರಾಂ ॥ ೧೫ ॥ ಶಂಖಭೇರೀಸಹಸ್ರಾಣಾಮಾಹತಾನಾಂ ಸಮಂತತಃ । ಕ್ಷ್ವೇಳಿತಾಸ್ಫೋಟಿತಾನಾಂಚ ತತಃ ಶಬ್ದೋ ಮಹಾನಭೂತ್ ॥೧೬॥ ಪ್ರಭ್ರಷ್ಟೋಽಥ ಕರಾತ್ತಸ್ಯ ಪ್ರತೋದಸ್ಸಾರಥೇಸ್ತದಾ । ಪಪಾತ ಸಹಸಾಚೈವ ಧ್ವಜಸ್ತಸ್ಯ ಚ ರಕ್ಷಸಃ ॥ ೧೭ ॥ ತಸ್ಯ ತೇ ರಥಯುಕ್ತಾಶ್ಚ ಹಯಾ ವಿಕ್ರಮವರ್ಜಿತಾಃ । ಚರಣೈರಾಕುಲೈರ್ಗತ್ವಾ ದೀನಾಸ್ಸಾಸ್ರಮುಖಾ ಯಯುಃ ॥ ೧೮ ॥ ಪ್ರವಾತಿ ಪವನಸ್ತಸ್ಮಿನ್ ಸಪಾಂಸುಃ ಖರದಾರುಣಃ । ನಿರ್ಯಾಣೇ ತಸ್ಯ ರೌದ್ರಸ್ಯ ಮಕರಾಕ್ಷಸ್ಯ

ಭಯಂಕರರಾದ, ಮಹಾಕಾಯಾಃ - ಮಹಾ ಶರೀರಗಳುಳ್ಳ, ತೇಸರ್ವೇ - ಅವರೆಲ್ಲ, ಮಾತಂಗಾಇವ - ಆನೆಗಳಂತೆ, ನರ್ದಂತಃ - ಕೂಗುವವರಾಗಿ, ಮಹಾಕಾಯಂ - ದೊಡ್ಡ ಶರೀರವುಳ್ಳ, ಖರಾತ್ಮಜಂ - ಮಕರಾಕ್ಷನನ್ನು, ಪರಿವಾರ್ಯ - ಸುತ್ತಿಕೊಂಡು, ತತಃ - ಬಳಿಕ, ಹೃಷ್ಟಾಃ - ಸಂತೋಷಚಿತ್ತರಾಗಿ, ವಸುಂಧರಾಂ - ಭೂಮಿಯನ್ನು, ಚಾಲಯಂತಃ - ನಡುಗಿಸುವವರಾಗಿ, ಅಭಿಜಗ್ಮುಃ - ತೆರಳಿದರು. ॥ ೧೪-೧೫ ॥ ತತಃ-ಬಳಿಕ, ಸಮಂತತಃ-ಎಲ್ಲೆಡೆಯಲ್ಲಿಯೂ, ಆಹತಾನಾಂ-ಹೊಡೆಯಲ್ಪಡುತ್ತಿರುವ, ಶಂಖ....ಣಾಂ - ಅನೇಕ ಶಂಖಗಳ ಮತ್ತು ಭೇರಿಗಳ, ಕ್ಷ್ವೇಳಿ....ಚ - ಸಿಂಹನಾದಗಳ ಮತ್ತು ಭುಜಾಸ್ಫಾಲನಗಳ, ಮಹಾನ್-ಮಹತ್ತರವಾದ, ಶಬ್ದಃ-ಘೋಷವು, ಅಭೂತ್-ಆಯಿತು. ॥ ೧೬ ॥ ತದಾ - ಆಗ, ತಸ್ಯ - ಆ ಮಕರಾಕ್ಷನ, ಸಾರಥೇಃ - ಸಾರಥಿಯು, ಕರಾತ್ - ಕೈಯಿಂದ, ಪ್ರತೋದಃ - ಕೊರಡೆಯು, ಪ್ರಭ್ರಷ್ಟಃ - ಜಾರಿತು, ತಸ್ಯರಕ್ಷಸಃ - ಆ ಮಕರಾಕ್ಷನ, ಧ್ವಜಶ್ಚೈವ-ನಿಶಾನಿಯೂ, ಸಹಸಾ - ಜಾಗ್ರತೆಯಾಗಿ, ಪಪಾತ - ಬಿದ್ದಿತು. ॥ ೧೭ ॥ ತಸ್ಯ - ಆ ಮಕರಾಕ್ಷನ, ರಥಯುಕ್ತಾಃ-ರಥಕ್ಕೆ ಕಟ್ಟಿದ, ತೇಹಯಾಃ-ಆ ಕುದುರೆಗಳು, ವಿಕ್ರ....ತಾಃ-ಸಂಚಾರ ಸಾಮರ್ಥ್ಯದಿಂದ ಬಿಡಲ್ಪಟ್ಟವುಗಳಾಗಿ, ಆಕುಲೈಃ - ವ್ಯಾಕುಲವಾದ, ಚರಣೈಃ - ಪಾದಗಳಿಂದ, ಗತ್ವಾ - ಹೋಗಿ, ದೀನಾಃ - ಬಳಲಿ, ಸಾಸ್ರಮುಖಾಃ - ಕಂಬನಿಗಳಿಂದ ಕೂಡಿದ ಮುಖಗಳುಳ್ಳವುಗಳಾಗಿ, ಯಯುಃ - ತೆರಳಿದವು. ॥ ೧೮ ॥ ದುರ್ಮತೇಃ - ದುರ್ಬುದ್ಧಿಯುಳ್ಳ, ರೌದ್ರಸ್ಯ - ಕ್ರೂರನಾದ, ತಸ್ಯ....ಸ್ಯ - ಆ ಮಕರಾಕ್ಷನ, ತಸ್ಮಿನ್ನಿರ್ಯಾಣೇ - ಆ ಪ್ರಯಾಣ ಕಾಲದಲ್ಲಿ, ಸಪಾಂಸುಃ - ಧೂಳಿಯೊಡಗೂಡಿದ, ಖರದಾರುಣಃ - ಕ್ರೂರವಾಗಿಯೂ, ಭಯಂಕರವಾಗಿಯೂ ಇರುವ, ಪವನಃ - ವಾಯುವು,

---

ರೆಲ್ಲರೂ ಮದ್ದಾನೆಗಳಂತೆ ಸಿಂಹನಾದಗಳನ್ನು ಮಾಡುತ್ತ ಖರವುತ್ರನಾದ ಮಕರಾಕ್ಷನನ್ನು ಸುತ್ತುವರೆದು ಭೂಮಿಯನ್ನೇ ನಡುಗಿಸುತ್ತ ಹೊರಟರು. ಸಾವಿರಾರು ಶಂಖಗಳ ಮತ್ತು ಭೇರಿಗಳ ಧ್ವನಿಗಳಿಂದಲೂ, ಆ ರಾಕ್ಷಸರ ಸಿಂಹನಾದಗಳಿಂದಲೂ ಭಯಂಕರವಾದ ಶಬ್ದವು ಹುಟ್ಟಿ ಎಲ್ಲೆಲ್ಲಿಯೂ ಪ್ರತಿಧ್ವನಿತವಾಯಿತು. ಆಗಲಾ ಮಕರಾಕ್ಷನಿಗೆ ಕೆಲವು ದುಶ್ಶಕುನಗಳಾದುವು. ಅವನ ಸಾರಥಿಯ ಕೈಯಲ್ಲಿದ್ದ ಕೋರಡೆಯು ಇದ್ದಕ್ಕಿದ್ದಂತೆಯೇ ಕೆಳಕ್ಕೆ ಬಿದ್ದುಹೋಯಿತು ; ರಥದ ಧ್ವಜವೂ ಮುರಿದು ನೆಲಕ್ಕುರುಳಿತು ; ರಥಾಶ್ವಗಳು ಪರಾಕ್ರಮವಿಲ್ಲದವುಗಳಾಗಿ ಬಲ ಕುಗ್ಗಿ ಬಹು ಕಷ್ಟದಿಂದ ಕಾಲಿಡುತ್ತ ಕಣ್ಣೀರಿಟ್ಟು ಮುಂದೆ ಹೊರಟವು. ॥ ೧೪–೧೮ ॥ ಧೂಳಿಯೊಡಗೂಡಿದ ಗಾಳಿಯೆದ್ದು ಭಯಂಕರವಾಗಿ ಬೀಸತೊಡಗಿತು. ಮಹಾ ದುರಾತ್ಮನಾದ ಆ ಮಕರಾಕ್ಷನು ರಣರಂಗಕ್ಕೆ ಹೊರಡುವಾಗ ಇಷ್ಟು ಅಪ

ದುರ್ಮತೇಃ ॥ ೧೯ ॥ ತಾನಿ ದೃಷ್ಟ್ವಾ ನಿಮಿತ್ತಾನಿ ರಾಕ್ಷಸಾ ವೀರ್ಯವತ್ತಮಾಃ ।
ಅಚಿಂತ್ಯ ನಿರ್ಗತಾಸ್ಸರ್ವೇ ಯತ್ರ ತೌ ರಾಮಲಕ್ಷ್ಮಣೌ ॥ ೨೦ ॥

ಘನಗಜ ಮಹಿಷಾಂಗತುಲ್ಯವರ್ಣಾ
ಸ್ಸಮರಮುಖೇಷ್ವಸಕೃದ್ಗದಾಸಿಭಿನ್ನಾಃ ।
ಅಹಮಹಮಿತಿಯುದ್ಧಕೌಶಲಾಸ್ತೇ
ರಜನಿಚರಾಃ ಪರಿತಸ್ಸಮುನ್ನದಂತಃ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಸಪ್ತತಿತಮಸ್ಸರ್ಗಃ

ಪ್ರವಾತಿ - ಬೀಸಿತು. ॥ ೧೯ ॥ ವೀರ್ಯವತ್ತಮಾಃ - ಬಹು ಪರಾಕ್ರಮವಂತರಾದ, ರಾಕ್ಷಸಾಃ - ರಕ್ಕಸರು, ತಾನಿನಿಮಿತ್ತಾನಿ - ಆ ದುರ್ನಿಮಿತ್ತಗಳನ್ನು, ದೃಷ್ಟ್ವಾ - ಕಂಡು, ಅಚಿಂತ್ಯ - ಆಲೋಚಿಸದೆ, ಸರ್ವೇ - ಎಲ್ಲರೂ, ಯತ್ರ - ಎಲ್ಲಿ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರೋ, ತತ್ರ - ಅಲ್ಲಿ, ನಿರ್ಗತಾಃ - ಹೊರಟರು. ॥೨೦॥ ಘನ......ರ್ಣಾಃ - ಮೇಘ, ಆನೆ, ಕೋಣಗಳ ಶರೀರಗಳಿಗೆ ಸಮಾನವಾದ ಬಣ್ಣವುಳ್ಳ, ಸಮರಮುಖೇಷು - ಯುದ್ಧರಂಗಗಳಲ್ಲಿ, ಅಸಕೃತ್ - ಬಾರಿಬಾರಿಗೂ, ಗದಾಸಿಭಿನ್ನಾಃ - ಗದೆಗಳಿಂದಲೂ, ಖಡ್ಗಗಳಿಂದಲೂ ಭೇದಿಸಲ್ಪಟ್ಟ, ಅಹಮಹಮತಿ - ನಾನು ಮುಂದು ತಾನು ಮುಂದೆಂದು, ಯುದ್ಧಕೌಶಲಾಃ - ಕಾಳೆಗಗಳಲ್ಲಿ ಚಾತುರ್ಯವುಳ್ಳ, ತೇರಜನಿಚರಾಃ - ಆ ರಕ್ಕಸರು, ಪರಿತಃ - ಎಲ್ಲಾ ಕಡೆಯಲ್ಲಿಯೂ, ಸಮುನ್ನದಂತಃ - ಕೋಲಾಹಲಧ್ವನಿಯನ್ನು ಮಾಡುವವರಾಗಿ, ನಿರ್ಗತಾಃ - ಹೊರಟರು. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಸಪ್ತತಿತಮಸ್ಸರ್ಗಃ.

ಶಕುನಗಳಾದುವು. ಆದರೂ ಮಹಾ ಬಲಾಢ್ಯರಾದ ಆ ರಾಕ್ಷಸರೆಲ್ಲರೂ ಅವನ್ನು ಲೆಕ್ಕಿಸದೆ ಶ್ರೀರಾಮಲಕ್ಷ್ಮಣರಿದ್ದೆಡೆಗೆ ನುಗ್ಗಿ ಹೊರಟರು. ಮುಗಿಲಿಗೂ, ಎಮ್ಮೆಗಳಿಗೂ, ಆನೆಗಳಿಗೂ ಸಮಾನವಾದ ವರ್ಣಗಳೂ, ದೇಹಗಳೂ ಉಳ್ಳವರಾಗಿಯೂ, ಅಡಿಗಡಿಗೂ ಗದಾಯುಧಗಳನ್ನೂ, ಖಡ್ಗಗಳನ್ನೂ ಝಳಪಿಸುವವರಾಗಿಯೂ ಇರುವ ಆ ರಾಕ್ಷಸ ವೀರರೆಲ್ಲರೂ ನಾನು ತಾನೆಂದು ಮುನ್ನುಗ್ಗಿ ಕೂಗಿಡುತ್ತ ಯುದ್ಧಕ್ಕೆ ಹೊರಟರು. ॥ ೧೯–೨೧ ॥

ಇಂತಿದು ಮಕರಾಕ್ಷನ ರಣರಂಗ ಪ್ರಯಾಣವೆಂಬ ಎಪ್ಪತ್ತಾರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕೋನಾಶೀತಿತಮಸ್ಸರ್ಗಃ

ನಿರ್ಗತಂ ಮಕರಾಕ್ಷಂ ತೇ ದೃಷ್ಟ್ವಾ ವಾನರಯೂಥಪಾಃ । ಅಪ್ಲುತ್ಯ ಸಹಸಾ ಸರ್ವೇ ಯೋದ್ಧುಕಾಮಾ ವ್ಯವಸ್ಥಿತಾಃ ॥ ೧ ॥ ತತಃ ಪ್ರವೃತ್ತಂ ಸುಮಹತ್ತದ್ಯುದ್ಧಂ ರೋಮಹರ್ಷಣಂ । ನಿಶಾಚರೈಃ ಪ್ಲವಂಗಾನಾಂ ದೇವಾನಾಂ ದಾನವೈರಿವ ॥ ೨ ॥ ವೃಕ್ಷಶೂಲನಿಪಾತೈಶ್ಚ ಶಿಲಾಪರಿಘಪಾತನೈಃ । ಅನ್ಯೋನ್ಯಂ ಮರ್ದಯಂತಿಸ್ಮ ತದಾ ಕಪಿ ನಿಶಾಚರಾಃ ॥ ೩ ॥ ಶಕ್ತಿ ಖಡ್ಗ ಗದಾ ಕುಂತೈ ಸ್ತೋಮರೈಶ್ಚ ನಿಶಾಚರಾಃ । ಪಟ್ಟಸೈರ್ಭಿಂಡಿಪಾಲೈಶ್ಚ ನಿರ್ಘಾತೈಶ್ಚ ಸಮಂತತಃ ॥ ೪ ॥ ಪಾಶಮುದ್ಗರದಂಡೈಶ್ಚ ನಿಖಾತೈಶ್ಚಾಪರೇ ತದಾ । ಕದನಂ ಕಪಿವೀರಾಣಾಂ ಚಕ್ರುಸ್ತೇ ರಜನೀಚರಾಃ ॥ ೫ ॥

ನಿರ್ಗತಂ - ಹೊರಟು ಬರುತ್ತಿರುವ, ಮಕರಾಕ್ಷಂ - ಮಕರಾಕ್ಷನನ್ನು, ದೃಷ್ಟ್ವಾ - ಕಂಡು, ಸರ್ವೇ - ಸಮಸ್ತರಾದ, ತೇವಾ....ಪಾಃ - ಆ ಕಪಿಯೂಥಪತಿಗಳು, ಸಹಸಾ - ಜಾಗ್ರತೆಯಾಗಿ, ಅಪ್ಲುತ್ಯ - ಹಾರಿ, ಯೋದ್ಧುಕಾಮಾಃ - ಕಾಳಗ ಮಾಡುವ ಕೋರಿಕೆಯುಳ್ಳವರಾಗಿ, ವ್ಯವಸ್ಥಿತಾಃ - ನಿಂತರು. ॥ ೧ ॥ ತತಃ - ಬಳಿಕ, ಪ್ಲವಂಗಾನಾಂ - ಕಪಿಗಳಿಗೆ, ನಿಶಾಚರೈಃ - ರಕ್ಕಸರೊಡನೆ, ದೇವಾನಾಂ - ದೇವತೆಗಳಿಗೆ, ದಾನವೈರಿವ - ದಾನವರಿಂದಲಂತೆ, ರೋಮಹರ್ಷಣಂ - ಅತಿ ಭಯಂಕರವಾದ, ಸುಮಹತ್ - ಬಹಳ ದೊಡ್ಡದಾದ, ತದ್ಯುದ್ಧಂ - ಆ ಕಾಳೆಗವು, ಪ್ರವೃತ್ತಂ - ಆರಂಭವಾಯಿತು. ॥೨॥ ತದಾ - ಆ ಕಾಲದಲ್ಲಿ, ಕಪಿ....ರಾಃ - ವಾನರರಾಕ್ಷಸರು, ವೃಕ್ಷ....ಶ್ಚ - ಗಿಡಗಳ ಮತ್ತು ಶೂಲಗಳ ಪ್ರಹಾರಗಳಿಂದ, ಶಿಲಾ....ನೈಃ - ಶಿಲಾಪ್ರಹಾರ ಪರಿಘಪ್ರಹಾರಗಳಿಂದಲೂ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ಮರ್ದಯಂತಿಸ್ಮ - ಹೊಡೆದರಷ್ಟೆ. ॥೩॥ ನಿಶಾಚರಾಃ - ರಕ್ಕಸರು, ಶಕ್ತಿ....ತೈಃ - ಶಕ್ತ್ಯಾಯುಧಗಳಿಂದಲೂ, ಗದಾಯುಧದಿಂದಲೂ, ಖಡ್ಗಾಯುಧಗಳಿಂದಲೂ, ಕುಂತಾಯುಧಗಳಿಂದಲೂ, ತೋಮರೈಃ - ಮರದಿಂದ ಮಾಡಿದ ಆಯುಧವಿಶೇಷಗಳಿಂದಲೂ, ಪಟ್ಟಸೈಃ - ಪಟ್ಟಾಕತ್ತಿಗಳಿಂದಲೂ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ನಿರ್ಘಾತೈಶ್ಚ - ವಜ್ರಾಯುಧಗಳಿಂದಲೂ, ಪಾಶ....ಶ್ಚ - ಪಾಶಗಳಿಂದಲೂ, ಮುದ್ಗರಾಯುಧಗಳಿಂದಲೂ, ಕೋಲುಗಳಿಂದಲೂ, ನಿಖಾತೈಶ್ಚ - ನಿಖಾತಗಳೆಂಬ ಆಯುಧಗಳಿಂದಲೂ, ಅಪರೇ - ಮತ್ತೆ ಕೆಲವರಾದ, ತೇರಜನೀಚರಾಃ-

---

ಮಕರಾಕ್ಷನು ಯುದ್ಧಭೂಮಿಗೆ ಬಂದುದನ್ನು ನೋಡಿದೊಡನೆಯೇ ವಾನರಯೂಥಪತಿಗಳೆಲ್ಲರೂ ಯುದ್ಧ ಮಾಡಬೇಕೆಂಬ ಉತ್ಸಾಹವುಳ್ಳವರಾಗಿ ಹಾರಲು ಮೊದಲಿಟ್ಟರು. ಆ ತರುವಾಯ ದೇವದಾನವರಿಗಂತೋ ಅಂತು, ಆ ವಾನರರಾಕ್ಷಸರಿಗೆ ರೋಮಾಂಚವನ್ನುಂಟುಮಾಡುವಂತಹ ಭಯಂಕರ ಯುದ್ಧವು ಪ್ರಾರಂಭವಾಯಿತು. ಆಗಲಾ ವಾನರರಾಕ್ಷಸರೀರ್ವರೂ ಕಲ್ಮರಗಳಿಂದಲೂ, ಶೂಲ ಪರಿಘಗಳಿಂದಲೂ ಪರಸ್ಪರವಾಗಿ ಮರ್ದಿಸುತ್ತಿದ್ದರು. ಶಕ್ತ್ಯಾಯುಧಗಳಿಂದಲೂ, ತೋಮರಗಳಿಂದಲೂ, ಪಟ್ಟಸಗಳಿಂದಲೂ, ಕುಂತಾಯುಧಗಳಿಂದಲೂ, ಪಾಶ, ಮುದ್ಗರ, ದಂಡಗಳಿಂದಲೂ ಸುತ್ತಮುತ್ತಲಿರುವ ವಾನರರೆಲ್ಲರನ್ನೂ ಪ್ರಹರಿಸುತ್ತ ಆ ರಾಕ್ಷಸರು ಮಹಾ ಭಯಂಕರ ಯುದ್ಧವನ್ನು ಮಾಡಿದರು. ॥೧-೫॥

ಬಾಣೌಘೈರರ್ದಿತಾಶ್ಚಾಪಿ ಖರಪುತ್ರೇಣ ವಾನರಾಃ । ಸಂಭ್ರಾಂತಮನಸಸ್ಸರ್ವೇ ದುದ್ರುವುರ್ಭಯಪೀಡಿತಾಃ ॥ ೬ ॥ ತಾನ್ ದೃಷ್ಟ್ವಾ ರಾಕ್ಷಸಾಸ್ಸರ್ವೇ ದ್ರವಮಾಣಾನ್ ವಲೀಮುಖಾನ್ । ನೇದುಸ್ತೇ ಸಿಂಹವದ್ಧೃಷ್ಟಾಃ ರಾಕ್ಷಸಾ ಜಿತಕಾಶಿನಃ ॥ ೭ ॥ ವಿದ್ರವತ್ಸು ತದಾ ತೇಷು ವಾನರೇಷು ಸಮಂತತಃ । ರಾಮಸ್ತಾನ್ವಾರಯಾಮಾಸ ಶರವರ್ಷೇಣ ರಾಕ್ಷಸಾನ್ ॥ ೮ ॥ ವಾರಿತಾನ್ ರಾಕ್ಷಸಾನ್ ದೃಷ್ಟ್ವಾ ಮಕರಾಕ್ಷೋ ನಿಶಾಚರಃ । ಕ್ರೋಧಾನಲಸಮಾವಿಷ್ಟೋ ವಚನಂ ಚೇದಮಬ್ರವೀತ್ ॥ ೯ ॥ §"ತಿಷ್ಠ ರಾಮ! ಮಯಾ ಸಾರ್ಧಂ ದ್ವಂದ್ವಯುದ್ಧಂ ದದಾಮಿ ತೇ । ತ್ಯಾಜಯಿಷ್ಯಾಮಿ

ಆ ರಕ್ಕಸರು, ಕಪಿವೀರಾಣಾಂ - ಶೂರರಾದ ಕಪಿಗಳೊಡನೆ, ಕದನಂ - ಸಂಗರವನ್ನು, ಚಕ್ರುಃ- ಮಾಡಿದರು. ॥ ೪-೫ ॥ ಬಾಣೌಘೈಃ - ಬಾಣತಂಡಗಳಿಂದ, ಖರಪುತ್ರೇಣ - ಮಕರಾಕ್ಷನಿಂದ, ಅರ್ದಿತಾಃ - ಹೊಡೆಯಲ್ಪಟ್ಟ, ಸರ್ವೇವಾನರಾಃ - ಸಮಸ್ತ ಕಪಿಗಳೂ, ಭಯಪೀಡಿತಾಃ - ಭಯದಿಂದ ಬಾಧಿಸಲ್ಪಟ್ಟವರಾಗಿ, ಸಂಭ್ರಾಂತಮನಸಃ - ಭ್ರಾಂತಿಯುಕ್ತವಾದ ಮನವುಳ್ಳವರಾಗಿ, ದುದ್ರುವುಃ - ಓಡಿದರು. ॥ ೬ ॥ ಸರ್ವೇ - ಸಮಸ್ತರಾದ, ರಾಕ್ಷಸಾಃ - ರಕ್ಕಸರು, ದ್ರವಮಾಣಾನ್ - ಓಡಿಹೋಗುತ್ತಿರುವ, ತಾನ್‌ವಲೀಮುಖಾನ್ - ಆ ಶಿವಂಗಿಗಳನ್ನು, ದೃಷ್ಟ್ವಾ - ಕಂಡು, ಹೃಷ್ಟಾಃ - ಸಂತೋಷಗೊಂಡವರಾಗಿ, ಸಿಂಹವತ್ - ಸಿಂಹದಂತೆ, ನೇದುಃ - ಧ್ವನಿಮಾಡಿದರು. ॥೭॥ ತೇಷುವಾನರೇಷು- ಆ ಕಪಿಗಳು, ತದಾ - ಆ ಕಾಲದಲ್ಲಿ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ವಿದ್ರವತ್ಸು - ಓಡಿಹೋಗುತ್ತಿರಲು, ತೇರಾಕ್ಷಸಾಃ-ಆ ರಕ್ಕಸರು, ಜಿತಕಾಶಿನಃ-ಜಯದಿಂದ ಪ್ರಕಾಶಿಸುತ್ತಾ ಬಂದರು, ರಾಮಃ - ಶ್ರೀರಾಮನು, ತಾನ್‌ರಾಕ್ಷಸಾನ್ - ಆ ರಕ್ಕಸರನ್ನು, ಶರವರ್ಷೇಣ - ಬಾಣವೃಷ್ಟಿಯಿಂದ, ವಾರಯಾಮಾಸ - ತಡೆದನು. ॥ ೮ ॥ ವಾರಿತಾನ್ - ನಿವಾರಿಸಲ್ಪಟ್ಟ, ರಾಕ್ಷಸಾನ್ - ರಕ್ಕಸರನ್ನು, ದೃಷ್ಟ್ವಾ - ಕಂಡು, ನಿಶಾಚರಃ - ರಕ್ಕಸನಾದ, ಮಕರಾಕ್ಷಃ - ಮಕರಾಕ್ಷನು, ಕ್ರೋಧಾ....ಷ್ಟಃ - ಕೋಪಾಗ್ನಿಯಿಂದ ಕೂಡಿ, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೯ ॥ ಹೇ ರಾಮ - ಎಲೈ ಶ್ರೀರಾಮನೇ, ಮಯಾಸಾರ್ಧಂ - ನನ್ನೊಡನೆ, ತೇ - ನಿನಗೆ, ದ್ವಂದ್ವಯುದ್ಧಂ-

---

ಅದೇ ಸಮಯದಲ್ಲಿ ಖರಪುತ್ರನಾದ ಮಕರಾಕ್ಷನೂ ಸಹ ವಾನರಸೇನೆಯ ಮೇಲೆ ಬಲವತ್ತರವಾದ ಬಾಣದ ಮಳೆಗರೆದನು. ರಾಕ್ಷಸವೀರರ ಆಯುಧಪ್ರಹಾರಗಳಿಂದಲೂ, ಮಕರಾಕ್ಷನ ಬಾಣಪ್ರಯೋಗದಿಂದಲೂ ಬಹಳವಾಗಿ ನೊಂದು ವಾನರರೆಲ್ಲರೂ ಭಯದಿಂದ ತತ್ತಳಿಸುತ್ತ ನಲ್ದಿಕ್ಕುಗಳಿಗೂ ಓಡಿಹೋದರು. ಮಹಾ ಪರಾಕ್ರಮಿಗಳಾದ ರಾಕ್ಷಸರಾದರೋ ಈ ರೀತಿ ಓಡುತ್ತಿರುವ ವಾನರರನ್ನು ಕಂಡು ಸಂತೋಷಾಧಿಕ್ಯದಿಂದಲೂ, ಅಹಂಕಾರದಿಂದಲೂ ಸಿಂಹನಾದಗಳನ್ನು ಮಾಡಿದರು. ಹೀಗೆ ವಾನರರು ಓಡುತ್ತಿರಲು, ರಾಕ್ಷಸರು ಜಯಶಾಲಿಗಳಾಗಿ ನುಗ್ಗಿ ಬರುತ್ತಿರುವುದನ್ನು ಕಂಡು ಶ್ರೀರಾಮಮೂರ್ತಿಯು ಕೂಡಲೇ ಅಮೋಘವಾದ ತನ್ನ ಬಾಣಗಳಿಂದ ಅವರನ್ನು ತಡೆದು ನಿಲ್ಲಿಸಿದನು. ಆತನು ರಾಕ್ಷಸಸೇನೆಯನ್ನೀರೀತಿ ತಡೆದುದನ್ನು ಕಂಡು ಖರಪುತ್ರನಾದ ಮಕರಾಕ್ಷನು ಬಹಳವಾಗಿ ಮುನಿದು ಆತನನ್ನು ಕುರಿತು, "ರಾಮ ! ನಿಲ್ಲು ; ನಿಲ್ಲು. ನನ್ನೊಡನೆ ಯುದ್ಧಕ್ಕೆ ನಿಲ್ಲು. ನಾನು ನಿನಗೆ ದ್ವಂದ್ವ

---

§ ಇಲ್ಲಿ ಮಕರಾಕ್ಷ ಭಾಷಣದ ವಾಸ್ತವಿಕಾರ್ಥ.

ಎಲೈ, ಶ್ರೀರಾಮಮೂರ್ತಿಯೇ! ಈಗ ನನಗೂ, ನಿನಗೂ ನಡೆಯುವ ದ್ವಂದ್ವಯುದ್ಧದಲ್ಲಿ, ನೀನು ನಿನ್ನ

ತೇ ಪ್ರಾಣಾನ್ ಧನುರ್ಮುಕ್ತೈಃ ಶಿತೈಃ ಶರೈಃ ॥೧೦॥ ಯತ್ತದಾ ದಂಡಕಾರಣ್ಯೇ ಪಿತರಂ ಹತವಾನ್ ಮಮ । ಮದಗ್ರತಸ್ಸ್ವಕರ್ಮಸ್ಥಂ ದೃಷ್ಟ್ವಾ ರೋಷೋಽಭಿವರ್ಧತೇ ॥೧೧॥ ದಹ್ಯಂತೇ ಭೃಶಮಂಗಾನಿ ದುರಾತ್ಮನ್! ಮಮ ರಾಘವ! । ಯನ್ಮಯಾಽಸಿ ನದೃಷ್ಟಸ್ತ್ವಂ ತಸ್ಮಿನ್ ಕಾಲೇ ಮಹಾವನೇ ॥೧೨॥ ದಿಷ್ಟ್ಯಾಸಿ ದರ್ಶನಂ ರಾಮ! ಮಮ ತ್ವಂ ಪ್ರಾಪ್ತವಾನಿಹ । ಕಾಂಕ್ಷಿತೋಽಸಿ ಕ್ಷುಧಾರ್ತಸ್ಯ ಸಿಂಹಸ್ಯೇವೇ

ದ್ವಂದ್ವಯುದ್ಧವನ್ನು, ದದಾಮಿ - ಕೊಡುತ್ತೇನೆ, ತಿಷ್ಠ - ನಿಲ್ಲು, ಧನುರ್ಮುಕ್ತೈಃ - ಬಿಲ್ಲಿನಿಂದ ಬಿಡಲ್ಪಟ್ಟ, ಶಿತೈಃ - ಹದವಾದ, ಶರೈಃ - ಬಾಣಗಳಿಂದ, ತೇ - ನಿನ್ನ, ಪ್ರಾಣಾನ್ - ಪ್ರಾಣಗಳನ್ನು, ತ್ಯಾಜಯಿಷ್ಯಾಮಿ - ಬಿಡಿಸುತ್ತೇನೆ. ॥೧೦॥ ಯತ್ - ಯಾವ ಕಾರಣದಿಂದ, ತದಾ - ಆ ಕಾಲದಲ್ಲಿ, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ಮಮ - ನನ್ನ, ಪಿತರಂ - ತಂದೆಯನ್ನು, ಹತವಾನ್ - ಹೊಡೆದೆಯೋ, ಮದಗ್ರತಃ - ನನ್ನ ಮುಂದೆ, ಸ್ವಕರ್ಮಸ್ಥಂ - ತನ್ನ ವ್ಯಾಪಾರದಲ್ಲಿರುವ, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ರೋಷಃ - ಕೋಪವು, ಅಭಿವರ್ಧತೇ - ವೃದ್ಧಿ ಹೊಂದುತ್ತಿದೆ. ॥೧೧॥ ಹೇ ದುರಾತ್ಮನ್ - ಎಲೈ ದುಷ್ಟ ಸ್ವಭಾವವುಳ್ಳವನೇ, ಹೇ ರಾಘವ - ಎಲೈ ಶ್ರೀರಾಮನೇ, ಯತ್ - ಯಾವ ಕಾರಣದಿಂದ, ತಸ್ಮಿನ್‌ಕಾಲೇ - ಆ ಕಾಲದಲ್ಲಿ, ತ್ವಂ - ನೀನು, ಮಹಾವನೇ - ದೊಡ್ಡಡವಿಯಲ್ಲಿ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟವನು, ನಾಸಿ - ಆಗದೆ ಹೋದೆಯೋ, ತಸ್ಮಾತ್- ಆ ಕಾರಣದಿಂದ, ಮಮ - ನನ್ನ, ಅಂಗಾನಿ - ಅವಯವಗಳು, ಭೃಶಂ - ಬಹಳವಾಗಿ, ದಹ್ಯಂತೇ - ಸುಡುತ್ತಲಿವೆ. ॥೧೨॥ ಹೇ ರಾಮ - ಎಲೈ ಶ್ರೀರಾಮನೇ, ತ್ವಂ - ನೀನು, ದಿಷ್ಟ್ಯಾ - ದೈವಾಧೀನದಿಂದ, ಮಮ - ನನ್ನ, ದರ್ಶನಂ - ದೃಷ್ಟಿಯನ್ನು, ಇಹ - ಈಗ, ಪ್ರಾಪ್ತವಾನ್ - ಹೊಂದಿದವನು, ಅಸಿ - ಆಗಿದ್ದೀಯೆ, ಕ್ಷುಧಾರ್ತಸ್ಯ - ಹಸಿವಿನಿಂದ ಬಾಧಿಸಲ್ಪಟ್ಟ, ಸಿಂಹಸ್ಯ - ಸಿಂಹಕ್ಕೆ, ಇತರಮೃಗಇವ -

---

ಯುದ್ಧವನ್ನು ನೀಡುತ್ತೇನೆ. ಇದೋ ಈ ನನ್ನ ಕೂರಂಬುಗಳಿಂದ ನಿನ್ನ ಪ್ರಾಣಗಳನ್ನು ನಿನ್ನ ಶರೀರದಿಂದಲೇ ಹೊರಹೊರಡಿಸುತ್ತೇನೆ. ॥೬--೧೦॥ ಹಿಂದೆ ನೀನು ದಂಡಕಾರಣ್ಯದಲ್ಲಿ ನಮ್ಮ ತಂದೆಯಾದ ಖರಾಸುರನನ್ನು ಕೊಂದೆಯಲ್ಲವೆ? ಅಂತಹ ನೀನು ಇದೀಗ ನನ್ನ ಮುಂಗಡೆ ಯುದ್ಧಕ್ಕೆ ನಿಂತಿರುವುದನ್ನು ಕಂಡು ನನಗೆ ರೋಷವು ಇಮ್ಮಡಿಸುತ್ತಿದೆ. ಎಲೆವೋ ದುರಾತ್ಮನಾದ ರಾಘವನೇ! ನನ್ನ ಅಂಗಾಂಗಗಳೆಲ್ಲವೂ ಉರಿಯುತ್ತಿವೆ. ಅಹಹ! ನಾನು ಆ ಕಾಲದಲ್ಲಿ ನಿನ್ನನ್ನು ನೋಡಲಿಲ್ಲ. ಆದರೇನು? ಈಗ ಭಾಗ್ಯವಶದಿಂದ ನನ್ನ ಕಣ್ಣಿಗೆ ಬಿದ್ದವನಾದೆಯಷ್ಟೆ! ಹಸಿದ ಸಿಂಹವು ಯಾವುದಾದರೂ ಮೃಗವನ್ನು ಬಯಸುವಂತೆ ನಾನಿದುವರೆಗೆ

ಬಾಣಗಳಿಂದ ನನ್ನನ್ನು ಕೊಲ್ಲುವ ಅನುಗ್ರಹವನ್ನು ತೋರು. ಎಲೈ, ನೀನು ದುಷ್ಟರಲ್ಲಿಯೂ ಕೇವಲ ದಯಾರಸವುಳ್ಳವನು. ರಾಘವ! ಹಿಂದೆ ನೀನು ಕೇವಲ ದುಷ್ಕರ್ಮಿಯಾದ ನನ್ನ ತಂದೆ ಖರನನ್ನು ಸಂಹರಿಸಿದೆ. ಆಗಲೇ ನಾನೂ ನಿನ್ನ ಕಣ್ಣಿಗೆ ಬಿದ್ದಿದ್ದರೆ ನಿನ್ನ ಬಾಣಗಳಿಂದ ಮೃತನಾಗಿ ಜನ್ಮಸಾರ್ಥಕ್ಯವನ್ನು ಪಡೆಯುತ್ತಿದ್ದೆನು. ಅದು ಆಗಲೇ ಲಭಿಸಲಿಲ್ಲವಲ್ಲಾ ಎಂದು ನನಗೆ ಚಿಂತೆ. ಅದರಿಂದೇ ಈಗ ನಿನ್ನನ್ನು ನೋಡಿದ ಕೂಡಲೇ ನನ್ನ ಮೈಯೆಲ್ಲವೂ ಸುಡುತ್ತಲಿದೆ. ಸಿಂಹಸದೃಶವಾದ ಪರಾಕ್ರಮವುಳ್ಳವನೂ, ಬ್ರಹ್ಮಾದಿಗಳಿಂದಲೂ ಧ್ಯೇಯನಾದ ಸರ್ವೇಶ್ವರನೂ ಆದ ನಿನ್ನ ದರ್ಶನವು ಯಾವಾಗ ದೊರೆಯುತ್ತದೆಯೋ ಎಂದು ನಾನು ಹಸಿದ ಜಿಂಕೆಯಂತೆ ಹಂಬಲಿಸುತ್ತಿದ್ದೆನು. ನನ್ನ ಭಾಗ್ಯವಶದಿಂದ ಇಂದು ನೀನು ನನಗೆ ದರ್ಶನವಿತ್ತೆ. ಇದರಿಂದ ನಾನು ಕೃತಾರ್ಥನಾದೆನು. ಈಗ ನೀನು ನನ್ನನ್ನು ಕೊಂದು ನಿನ್ನ ಮಿತ್ರರಾದ ಸುಗ್ರೀವಾದಿಗಳೊಡಗೂಡಿ ಸುಖವಾಗಿರು. ಈಗ ನೀನು, ನಿನಗೆ ಸುಕರವಾದ ಆಯುಧವಾವುದೋ ಅದರಿಂದಲೇ ನನ್ನನ್ನು ವಧಿಸು.

ತರೋ ಮೃಗಃ ॥೧೩॥ ಅದ್ಯ ಮದ್ಬಾಣವೇಗೇನ ಪ್ರೇತರಾಡ್ವಿಷಯಂಗತಃ । ಯೇ ತ್ವಯಾ ನಿಹತಾ ವೀರಾಸ್ಸಹ ತೈಶ್ಚ ಸಮೇಷ್ಯಸಿ ॥೧೪॥ ಬಹುನಾಽತ್ರ ಕಿಮುಕ್ತೇನ ಶೃಣು ರಾಮ! ವಚೋ ಮಮ । ಪಶ್ಯಂತು ಸಕಲಾ ಲೋಕಾಽಸ್ತ್ವಾಂ ಮಾಂ ಚೈವ ರಣಾಜಿರೇ ॥೧೫॥ ಅಸ್ತ್ರೈರ್ವಾ ಗದಯಾ ವಾಪಿ ಬಾಹುಭ್ಯಾಂ ವಾ ಮಹಾಹವೇ । ಅಭ್ಯಸ್ತಂ ಯೇನ ವಾ ರಾಮ! ತೇನೈವ ಯುಧಿ ವರ್ತತಾಂ" ॥೧೬॥ ಮಕರಾಕ್ಷವಚಃ ಶ್ರುತ್ವಾ ರಾಮೋ ದಶರಥಾತ್ಮಜಃ । ಅಬ್ರವೀತ್ ಪ್ರಹಸನ್ವಾಕ್ಯಮುತ್ತರೋತ್ತರವಾದಿನಂ ॥೧೭॥ "ಕತ್ಥಸೇ ಕಿಂ ವೃಥಾ ರಕ್ಷೋ! ಬಹೂನ್ಯಸದೃಶಾನಿತು । ನ ರಣೇ ಶಕ್ಯತೇ ಜೇತುಂ ವಿನಾಯುದ್ಧೇನ ವಾಗ್ಬಲಾತ್ ॥೧೮॥ ಚತು

ಇತರ ಮೃಗದಂತೆ, ಕಾಂಕ್ಷಿತಃ - ಅಪೇಕ್ಷಿಸಲ್ಪಟ್ಟವನು, ಅಸಿ - ಆದೆ. ॥೧೩॥ ಅದ್ಯ - ಈಗ, ಮದ್ಬಾ....ನ - ನನ್ನ ಬಾಣಗಳ ವೇಗದಿಂದ, ಪ್ರೇತ....ಯಂ - ಯಮನಾಲಯವನ್ನು, ಗತಃ - ಹೊಂದಿ, ಯೇವೀರಾಃ - ಯಾವ ಶೂರರು, ತ್ವಯಾ - ನಿನ್ನಿಂದ, ನಿಹತಾಃ - ಹೊಡೆಯಲ್ಪಟ್ಟರೋ, ತೈಸ್ಸಹ - ಅವರೊಡನೆ, ಸಮೇಷ್ಯಸಿ - ಸೇರುವೆ. ॥೧೪॥ ಹೇ ರಾಮ - ಎಲೈ ಶ್ರೀರಾಮನೇ, ಅತ್ರ - ಈ ಅರ್ಥದಲ್ಲಿ, ಬಹುನಾಉಕ್ತೇನ - ಬಹಳ ಮಾತುಗಳಿಂದ, ಕಿಂ - ಏನು ಪ್ರಯೋಜನವು, ಮಮ - ನನ್ನ, ವಚಃ - ಮಾತನ್ನು, ಶೃಣು - ಕೇಳು, ಸಕಲಾಃ - ಸಮಸ್ತವಾದ, ಲೋಕಾಃ - ಜನರು, ರಣಾಜಿರೇ - ಯುದ್ಧರಂಗದಲ್ಲಿ, ತ್ವಾಂ - ನಿನ್ನನ್ನೂ, ಮಾಂಚೈವ - ನನ್ನನ್ನೂ, ಪಶ್ಯಂತು - ನೋಡಲಿ. ॥೧೫॥ ಹೇ ರಾಮ - ಎಲೈ ಶ್ರೀರಾಮನೇ, ಅಸ್ತ್ರೈರ್ವಾ - ಬಾಣಗಳಿಂದಲೇ ಆಗಲಿ, ಗದಯಾವಾಪಿ - ಗದಾಯುಧದಿಂದಲೇ ಆಗಲಿ, ಬಾಹುಭ್ಯಾಂವಾ - ಭುಜಗಳಿಂದಲೇ ಆಗಲಿ, ಮಹಾಹವೇ - ದೊಡ್ಡ ಕಾಳೆಗದಲ್ಲಿ, ಯೇನವಾ - ಯಾವ ಆಯುಧದಿಂದ, ಅಭ್ಯಸ್ತಂ - ಅಭ್ಯಾಸ ಮಾಡಲ್ಪಟ್ಟಿದೆಯೋ, ತೇನೈವ - ಅದರಿಂದಲೇ, ಯುಧಿ - ಕಾಳೆಗದಲ್ಲಿ, ವರ್ತತಾಂ - ನಿಲ್ಲಿಸಲ್ಪಡಲಿ. ॥೧೬॥ ದಶರಥಾತ್ಮಜಃ - ದಶರಥನ ಮಗನಾದ, ರಾಮಃ - ರಾಮನು, ಮಕರಾಕ್ಷವಚಃ - ಮಕರಾಕ್ಷನ ಮಾತನ್ನು, ಶ್ರುತ್ವಾ - ಕೇಳಿ, ಪ್ರಹಸನ್ - ನಗುತ್ತ, ಉತ್ತ....ನಂ - ಹೆಚ್ಚೆಚ್ಚಾಗಿ ಮಾತನಾಡುತ್ತಿರುವ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧೭॥ ಹೇ ರಕ್ಷಃ - ಎಲೈ ರಾಕ್ಷಸನೇ, ವೃಥಾ - ವ್ಯರ್ಥವಾಗಿ, ಅಸದೃಶಾನಿ - ಅಯೋಗ್ಯಗಳಾದ, ಬಹೂನಿ - ಬಹಳವಾದ ಮಾತುಗಳನ್ನು, ಕಿಂಕತ್ಥಸೇ - ಏಕೆ ಬೊಗುಳುತ್ತೀಯೆ, ಯುದ್ಧೇನವಿನಾ - ಕಾಳೆಗದಿಂದ ಹೊರ್ತು, ವಾಗ್ಬಲಾತ್ - ಮಾತುಗಳ ಬಲದಿಂದ, ರಣೇ - ಕಾಳೆಗದಲ್ಲಿ, ಜೇತುಂ - ಜಯಿಸುವುದಕ್ಕೆ, ನಶಕ್ಯತೇ-

ನಿನ್ನ ಆಗಮನವನ್ನೇ ಬಯಸಿದ್ದೆ. ಈಗ ನೀನು ನನ್ನ ಬಾಣಗಳ ವೇಗದಿಂದಲೇ ಯಮನಾಲಯವನ್ನು ಹೊಕ್ಕು, ಹಿಂದೆ ನೀನು ಕೊಂದ ರಾಕ್ಷಸವೀರರೊಡನೆ ಸೇರುವೆ. ಹೆಚ್ಚಾಗಿ ಮಾತನಾಡುವುದರಿಂದೇನು. ಎಲೋ ರಾಘವನೇ! ಕೇಳು; ಇಂದಿನ ದಿನ ಸಮಸ್ತ ಲೋಕಗಳೂ, ನನ್ನನ್ನೂ, ನಿನ್ನನ್ನೂ ರಣಾಂಗಣದಲ್ಲಿ ನೋಡಲಿ. ರಾಮಾ! ಅಸ್ತ್ರಗಳಿಂದಾಗಲಿ, ಗದೆಯಿಂದಾಗಲಿ, ತೋಳ್ಗಳಿಂದಾಗಲಿ, ಅಷ್ಟೇಕೆ ನಿನಗೆ ಅಭ್ಯಾಸವಾಗಿರುವ ಯಾವುದೇ ಆಯುಧದಿಂದಾಗಲಿ ಯುದ್ಧವು ನಡೆಯುಬಹುದು" ಎಂದು ಹೇಳಿದನು. ॥೧೧-೧೬॥ ಮಕರಾಕ್ಷನಾಡಿದ ಈ ಮಾತುಗಳನ್ನು ಕೇಳಿ ಶ್ರೀರಾಮನು ನಸುನಕ್ಕು ಅವನನ್ನು ಕುರಿತು, "ಎಲವೋ ರಾಕ್ಷಸನೇ! ನೀನು ನಿಷ್ಪ್ರಯೋಜನವಾದ ಮಾತುಗಳನ್ನು ಬಹಳವಾಗಿ ಆಡುತ್ತಿರುವೆ. ರಣರಂಗದಲ್ಲಿ ಯುದ್ಧ ಮಾಡಿದ ಹೊರ್ತು ಶತ್ರುವನ್ನು ಗೆಲ್ಲುವುದಕ್ಕಾಗುವುದಿಲ್ಲವಲ್ಲವೆ? ಇದನ್ನು ತಿಳಿದೂ

**ರ್ದಶಸಹಸ್ರಾಣಿ ರಕ್ಷಸಾಂ ತ್ವತ್ಪಿತಾ ಚ ಯಃ । ತ್ರಿಶಿರಾ ದೂಷಣಶ್ಚೈವ ದಂಡಕೇ
ನಿಹತಾ ಮಯಾ ॥೧೯॥ ಸ್ವಾಶಿತಾಸ್ತವಮಾಂಸೇನ ಗೃಧ್ರಗೋಮಾಯುವಾಯಸಾಃ ।
ಭವಿಷ್ಯಂತ್ಯದ್ಯ ವೈ ಪಾಪ! ತೀಕ್ಷ್ಣತುಂಡನಖಾಂಕುರಾಃ ॥೨೦॥ ರಾಘವೇಣೈವ
ಮುಕ್ತಸ್ತು ಖರಪುತ್ರೋ ನಿಶಾಚರಃ । ಬಾಣೌಘಾನಮುಂಚತ್ತಸ್ಮೈ ರಾಘವಾಯ
ರಣಾಜಿರೇ ॥೨೧॥ ತಾನ್ ಶರಾನ್ ಶರವರ್ಷೇಣ ರಾಮಶ್ಚಿಚ್ಛೇದ ನೈಕಧಾ । ನಿಪೇತು
ರ್ಭುವಿ ತೇ ಛಿನ್ನಾ ರುಕ್ಮಪುಂಖಾ ಸ್ಸಹಸ್ರಶಃ ॥೨೨॥ ತದ್ಯುದ್ಧಮಭವತ್ತತ್ರ
ಸಮೇತ್ಯಾನ್ಯೋನ್ಯಮೋಜಸಾ । ರಕ್ಷಸಃ ಖರಪುತ್ರಸ್ಯ ಸೂನೋರ್ದಶರಥಸ್ಯ ಚ ॥೨೩॥**

ಆಗಲಾರದು. ॥೧೮॥ ದಂಡಕೇ - ದಂಡಕಾರಣ್ಯದಲ್ಲಿ, ಮಯಾ - ನನ್ನಿಂದ, ರಕ್ಷಸಾಂ - ರಕ್ಕಸರ, ಚತು....ಣಿ ಹದಿನಾಲ್ಕು ಸಾವಿರಗಳು, ತ್ವತ್ಪಿತಾಚ-ನಿನ್ನ ತಂದೆಯಾದವನು, ಯಃ-ಯಾವವನೋ, ಸಃ - ಅವನೂ, ತ್ರಿಶಿರಸ್ಕನೂ, ದೂಷಣಶ್ಚೈವ - ದೂಷಣನೂ, ತೇಸರ್ವೇ - ಅವರೆಲ್ಲರೂ, ಮಯಾ - ನನ್ನಿಂದ, ನಿಹತಾಃ - ಹೊಡೆಯಲ್ಪಟ್ಟರು. ॥೧೯॥ ಹೇ ಪಾಪ - ಎಲೈ ಪಾಪಿಷ್ಠನೇ, ಅದ್ಯ - ಈಗ, ತೀಕ್ಷ್ಣ....ರಾಃ - ಹದವಾದ ಮೂಗುಗಳೂ, ಅಂಕುಶಂದೋಪಾದಿಯಲ್ಲಿರುವ ಉಗುರುಗಳೂ ಉಳ್ಳ, ಗೃಧ್ರ....ಸಾಃ - ಹದ್ದುಗಳೂ, ನರಿಗಳೂ, ಕಾಗೆಗಳೂ, ತವ - ನಿನ್ನ, ಮಾಂಸೇನ - ಮಾಂಸದಿಂದ, ಸ್ವಾಶಿತಾಃ - ಸುಖಕರವಾದ ಅಶನವುಳ್ಳವುಗಳಾಗಿ, ಭವಿಷ್ಯಂತಿ - ಆಗುವವು. ॥೨೦॥ ರಣಾಜಿರೇ - ಯುದ್ಧರಂಗದಲ್ಲಿ, ರಾಘವೇಣ - ಶ್ರೀರಾಮನಿಂದ, ಏವಂ - ಈ ಪ್ರಕಾರವಾಗಿ, ಉಕ್ತಃ - ಹೇಳಲ್ಪಟ್ಟ, ನಿಶಾಚರಃ - ರಾಕ್ಷಸನಾದ, ಖರಪುತ್ರಸ್ತು - ಮಕರಾಕ್ಷನಾದರೆ, ತಸ್ಮೈರಾಘವಾಯ - ಆ ಶ್ರೀರಾಮನಿಗಾಗಿ, ಬಾಣೌಘಾನ್ - ಬಾಣಸಮುದಾಯಗಳನ್ನು, ಅಮುಂಚತ್ - ಬಿಟ್ಟನು. ॥೨೧॥ ರಾಮಃ - ಶ್ರೀರಾಮನು, ತಾನ್‌ಶರಾನ್ - ಆ ಬಾಣಗಳನ್ನು, ಶರವರ್ಷೇಣ - ಬಾಣವೃಷ್ಟಿಯಿಂದ, ನೈಕಧಾ - ಅನೇಕ ಪ್ರಕಾರವಾಗಿ, ಚಿಚ್ಛೇದ - ಕತ್ತರಿಸಿದನು, ರುಕ್ಮಪುಂಖಾಃ - ಬಂಗಾರದ ಕೊಂಕಿಗಳುಳ್ಳ, ತೇ - ಆ ಬಾಣಗಳು, ಸಹಸ್ರಶಃ - ಸಾವಿರಾರು ತುಂಡುಗಳಾಗಿ, ಛಿನ್ನಾಃ - ಕತ್ತರಿಸಲ್ಪಟ್ಟವುಗಳಾಗಿ, ಭೂಮೌ - ನೆಲದಲ್ಲಿ, ನಿಪೇತುಃ - ಬಿದ್ದವು. ॥೨೨॥ ತತ್ರ - ಆ ಯುದ್ಧರಂಗದಲ್ಲಿ, ಅನ್ಯೋನ್ಯಂ - ಪರಸ್ಪರವಾಗಿ, ಸಮೇತ್ಯ - ಸೇರಿ, ರಕ್ಷಸಃ - ರಕ್ಕಸನಾದ, ಖರಪುತ್ರಸ್ಯ - ಮಕರಾಕ್ಷನಿಗೂ, ದಶರಥಸ್ಯ - ದಶರಥನ, ಸೂನೋಃ - ಮಗನಾದ ಶ್ರೀರಾಮನಿಗೂ, ತದ್ಯುದ್ಧಂ - ಆ ಕಾಳಗವು,

---

ಅತಿಯಾಗಿ ಮಾತನಾಡಿ ಪ್ರಯೋಜನವೇನು ? ನೀನು ದಂಡಕಾರಣ್ಯದ ಸುದ್ದಿಯನ್ನು ಹೇಳಿದೆ. ನಾನು ಅಲ್ಲಿ ಕೊಂದ ರಾಕ್ಷಸರ ಸಂಖ್ಯೆ ಹದಿನಾಲ್ಕುಸಾವಿರ. ಅದರಲ್ಲಿ ನಿಮ್ಮ ತಂದೆ ಆ ಖರನೂ ಒಬ್ಬನು. ಅವನೊಬ್ಬನೇ ಅಲ್ಲದೆ ದೂಷಣನೂ, ತ್ರಿಶಿರಸ್ಕನೂ ಅಲ್ಲಿಯೇ ಮಡಿದರು. ಎಲೆವೋ ಪಾಪಿಷ್ಠನೇ! ಈಗಲೇ ನಿನ್ನ ಶರೀರದ ಮಾಂಸವನ್ನು ಮೊನಚಾದ ಉಗುರುಗಳೂ, ಕೊಕ್ಕುಗಳೂ ಉಳ್ಳ ಗೃಧ್ರಗಳೂ, ನರಿಗಳೂ, ಕಾಗೆಗಳೂ ತಿನ್ನುತ್ತವೆಯೆಂದು ತಿಳಿ" ಎಂದು ಹೇಳಿದನು. ॥೧೮-೨೦॥ ಶ್ರೀರಾಮನೀರೀತಿ ನುಡಿಯುತ್ತಲೇ ಮಕರಾಕ್ಷನು ಆತನ ಮೇಲೆ ಬಾಣತಂಡಗಳನ್ನು ಪ್ರಯೋಗಿಸಿದನು. ಆ ಬಾಣಗಳೆಲ್ಲವನ್ನೂ ಶ್ರೀರಾಮನು ತನ್ನ ಶರವೃಷ್ಟಿಯಿಂದ ತುಂಡರಿಸಿದನು. ಅವು ಸಾವಿರಾರು ಚೂರುಗಳಾಗಿ ಬಂಗಾರದ ಕಟ್ಟುಗಳೊಡನೆ ನೆಲಕ್ಕೆ ಬಿದ್ದುಹೋದುವು. ಆಗ ಖರ ಪುತ್ರನಾದ ಮಕರಾಕ್ಷನಿಗೂ ದಶರಥರಾಜ ಕುಮಾರನಾದ ಶ್ರೀರಾಮನಿಗೂ ಪರಸ್ಪರವಾದ ದ್ವಂದ್ವ

ಜೀಮೂತಯೋರಿವಾಕಾಶೇ ಶಬ್ದೋ ಜ್ಯಾತಲಯೋಸ್ತದಾ । ಧನುರ್ಮುಕ್ತಸ್ಸ್ವನೋತ್ಕೃಷ್ಟಶ್ಶ್ರೂಯತೇಚ ರಣಾಜಿರೇ ॥ ೨೪ ॥ ದೇವದಾನವಗಂಧರ್ವಾಃ ಕಿನ್ನರಾಶ್ಚ ಮಹೋರಗಾಃ । ಅಂತರಿಕ್ಷಗತಾಸ್ಸರ್ವೇ ದ್ರಷ್ಟುಕಾಮಾಸ್ತದದ್ಭುತಂ ॥ ೨೫ ॥ ವಿದ್ಧಮನ್ಯೋನ್ಯಗಾತ್ರೇಷು ದ್ವಿಗುಣಂ ವರ್ಧತೇ ಪರಂ । ಕೃತಪ್ರತಿಕೃತಾನ್ಯೋನ್ಯಂ ಕುರುತಾಂ ತೌ ರಣಾಜಿರೇ ॥ ೨೬ ॥ ರಾಮಮುಕ್ತಾಂಸ್ತು ಬಾಣೌಘಾನ್ರಾಕ್ಷಸಸ್ತ್ವಚ್ಛಿನದ್ರಣೇ । ರಕ್ಷೋಮುಕ್ತಾಂಸ್ತು ರಾಮೋ ವೈ ನೈಕಧಾ ಪ್ರಾಚ್ಛಿನಚ್ಛರೈಃ ॥ ೨೭ ॥ ಬಾಣೌಘೈರ್ವಿತತಾಸ್ಸರ್ವಾ ದಿಶಶ್ಚ ಪ್ರದಿಶಸ್ತಥಾ । ಸಂಛನ್ನಾ ವಸುಧಾ

ಅಭವತ್ - ಆಯಿತು. ॥ ೨೩ ॥ ಕಿಂಚ - ಇಷ್ಟುಮಾತ್ರವಲ್ಲದೆ, ತದಾ - ಆ ಕಾಲದಲ್ಲಿ, ಆಕಾಶೇ - ಅಂತರಿಕ್ಷದಲ್ಲಿ, ಜೀಮೂತಯೋಃ - ಮೇಘಗಳ, ಶಬ್ದ ಇವ - ಘೋಷದಂತೆ, ರಣಾಜಿರೇ - ಯುದ್ಧರಂಗದಲ್ಲಿ, ಜ್ಯಾತಲಜಾಃ - ಹೆದೆಗಳ ಸಂಘರ್ಷಣದಿಂದ ಹುಟ್ಟಿದ, ಧನು....ನಃ - ಧನುಸ್ಸುಗಳಿಂದ ಬಿಡಲ್ಪಟ್ಟ ಜ್ಯಾಶಬ್ದವು, ಶ್ರೂಯತೇ - ಕೇಳಲ್ಪಡುತ್ತಿತ್ತು. ॥ ೨೪ ॥ ತದದ್ಭುತಂ - ಆ ಆಶ್ಚರ್ಯವನ್ನು, ದ್ರಷ್ಟುಕಾಮಾಃ - ನೋಡಲಿಚ್ಛೆಯುಳ್ಳವನಾಗಿ, ಸರ್ವೇ - ಸಮಸ್ತರಾದ, ದೇವ....ರ್ವಾಃ - ದೇವತೆಗಳೂ, ರಾಕ್ಷಸರೂ, ಗಂಧರ್ವರೂ, ಕಿನ್ನರಾಶ್ಚ - ಕಿನ್ನರರೂ, ಮಹೋರಗಾಃ - ಮಹಾಸರ್ಪಗಳೂ, ಅಂತರಿಕ್ಷಗತಾಃ - ಅಂತರಿಕ್ಷವನ್ನು ಹೊಂದಿದರು. ॥ ೨೫ ॥ ಅನ್ಯೋನ್ಯಗಾತ್ರೇಷು - ಪರಸ್ಪರ ಶರೀರಗಳಲ್ಲಿ, ಪರಂ - ವಿಶೇಷವಾಗಿ, ವಿದ್ಧಂ - ಹೊಡೆಯುವಿಕೆಯು, ದ್ವಿಗುಣಂ - ಎರಡರಷ್ಟು, ವರ್ಧತೇ - ವೃದ್ಧಿಹೊಂದಿತು, ರಣಾಜಿರೇ - ಯುದ್ಧದಲ್ಲಿ, ತೌ - ಆ ರಾಮ ಮಕರಾಕ್ಷರೀರ್ವರೂ, ಕೃತ....ನ್ಯಂ - ಮಾಡಿದ್ದಕ್ಕೆ ಪ್ರತಿಮಾಡುತ್ತ, ಯುದ್ಧಂ - ಕಾಳಗವನ್ನು, ಕುರುತಾಂ - ಮಾಡಿದರು. ॥ ೨೬ ॥ ರಣೇ - ಕಾಳಗದಲ್ಲಿ, ರಾಮಮುಕ್ತಾನ್ - ಶ್ರೀರಾಮನಿಂದ ಬಿಡಲ್ಪಟ್ಟ, ಬಾಣೌಘಾಂಸ್ತು - ಬಾಣಸಮೂಹಗಳನ್ನಾದರೆ, ರಾಕ್ಷಸಃ - ರಕ್ಕಸನು, ಅಚ್ಛಿನತ್ - ಕತ್ತರಿಸಿದನು, ರಾಮೋವೈ - ರಾಮನಾದರೆ, ರಕ್ಷೋಮುಕ್ತಾನ್ - ರಕ್ಕಸನಿಂದ ಬಿಡಲ್ಪಟ್ಟ, ಬಾಣೌಘಾಂಸ್ತು - ಬಾಣಗಳ ಸಮೂಹಗಳನ್ನಾದರೆ, ಶರೈಃ - ಬಾಣಗಳಿಂದ, ನೈಕಧಾ - ಅನೇಕ ವಿಧವಾಗಿ, ಪ್ರಾಚ್ಛಿನತ್ - ಛೇದಿಸಿದನು. ॥ ೨೭ ॥ ಬಾಣೌಘೈಃ - ಬಾಣಸಮೂಹಗಳಿಂದ, ವಿತತಾಃ - ತುಂಬಿರುವ, ಸರ್ವಾಃ - ಸಮಸ್ತವಾದ, ದಿಶಶ್ಚ - ದಿಕ್ಕುಗಳೂ, ತಥಾ - ಹಾಗೆಯೇ, ಪ್ರದಿಶಶ್ಚ - ವಿದಿಕ್ಕುಗಳೂ,

---

ಯುದ್ಧವು ಬಹು ಭಯಂಕರವಾಗಿ ನಡೆಯಿತು. ಆ ಸಮಯದಲ್ಲಿ ರಾಮ ಮಕರಾಕ್ಷರ ಧನುಸ್ಸುಗಳಿಂದ ಬಿಡಲಾದ ಬಾಣಗಳು ಒಂದರೊಡನೊಂದು ಸೇರಿ ಮುಗಿಲುಗಳೆರಡು ಸೇರಿದಂತೆ ಶಬ್ದಮಾಡುತ್ತಿದ್ದುವು. ಈ ಅದ್ಭುತವನ್ನು ನೋಡಲು ದೇವದಾನವ ಗಂಧರ್ವ ಕಿನ್ನರೋರಗರೆಲ್ಲರೂ ಅಂತರಿಕ್ಷದಲ್ಲಿ ಬಂದು ನಿಂತರು. ಇಬ್ಬರೂ ಪರಸ್ಪರವಾಗಿ ಹೊಡೆದಾಡಿದರೂ ಇನ್ನೂ ಅತಿಶಯವಾಗಿ ವಿಜೃಂಭಿಸುತ್ತಿದ್ದರು. ಇಬ್ಬರೂ ಅಸ್ತ್ರಪ್ರಯೋಗಕ್ಕೆ ಪರಸ್ಪರವಾಗಿ ಪ್ರತೀಕಾರ ಮಾಡುತ್ತಿದ್ದರು. ಶ್ರೀರಾಮನು ಪ್ರಯೋಗಿಸುತ್ತಿದ್ದ ಬಾಣಗಳನ್ನು ಮಕರಾಕ್ಷನೂ, ಮಕರಾಕ್ಷನು ಪ್ರಯೋಗಿಸುತ್ತಿದ್ದ ಬಾಣಗಳನ್ನು ಶ್ರೀರಾಮನೂ ಖಂಡಿಸಿ ಕೆಡವುತ್ತಿದ್ದರು. ॥ ೨೧–೨೭ ॥ ಆಗಲಾ ಶೂರರೀರ್ವರೂ ಪ್ರಯೋಗಿಸಿದ ಬಾಣಗಳಿಂದ ದಿಕ್ಕುಗಳೆಲ್ಲವೂ ತುಂಬಿದುವು. ಇಷ್ಟುಮಾತ್ರವಲ್ಲದೆ ನೋಡುವವರಿಗೆ ಯಾವ ದಿಕ್ಕು ಯಾವುದೆಂಬುದೇ ತಿಳಿಯದೇ ಹೋಯಿತು. ಭೂಮಿಯೂ ಕೂಡ ಬಾಣಗಳಿಂದ ವ್ಯಾಪ್ತ

ಚ್ಚೈವ ಸಮಂತಾನ್ನ ಪ್ರಕಾಶತೇ ॥ ೨೮ ॥ ತತಃ ಕ್ರುದ್ಧೋ ಮಹಾಬಾಹುರ್ಧನುಶ್ಚಿ
ಚ್ಛೇದ ರಕ್ಷಸಃ । ಅಷ್ಟಾಭಿರಥ ನಾರಾಚೈಸ್ಸೂತಂ ವಿವ್ಯಾಧ ರಾಘವಃ ॥ ೨೯ ॥
ಭಿತ್ವಾ ಶರೈ ರಥಂ ರಾಮೋ ರಥಾಶ್ವಾನ್ ಸಮಪಾತಯತ್ । ವಿರಥೋ ವಸುಧಾಂ
ತಿಷ್ಠನ್ಮಕರಾಕ್ಷೋ ನಿಶಾಚರಃ ॥ ೩೦ ॥ ತತ್ತಿಷ್ಠದ್ವಸುಧಾಂ ರಕ್ಷಃ ಶೂಲಂ ಜಗ್ರಾಹ
ಪಾಣಿನಾ । ತ್ರಾಸನಂ ಸರ್ವಭೂತಾನಾಂ ಯುಗಾಂತಾಗ್ನಿಸಮಪ್ರಭಂ ॥ ೩೧ ॥
ವಿಭ್ರಾಮ್ಯತು ಮಹಚ್ಛೂಲಂ ಪ್ರಜ್ವಲತ್ತನ್ನಿಶಾಚರಃ । ಸಕ್ರೋಧಾತ್ಪ್ರಾಹಿಣೋತ್ತಸ್ಮೈ
ರಾಘವಾಯ ಮಹಾಹವೇ ॥೩೨॥ ತಮಾಪತಂತಂ ಜ್ವಲಿತಂ ಖರಪುತ್ರಕರಾಚ್ಚ್ಯುತಂ ।

ಸಂಛನ್ನಾ - ವ್ಯಾಪ್ತವಾದ, ವಸುಧಾಚ್ಚೈವ - ಭೂಮಿಯೂ, ನಪ್ರಕಾಶತೇ - ಹೊಳೆಯಲಿಲ್ಲವು. ॥೨೮॥ ತತಃ - ಬಳಿಕ, ಮಹಾಬಾಹುಃ - ಮಹಾ ಭುಜಪರಾಕ್ರಮಿಯಾದ, ರಾಘವಃ - ಶ್ರೀರಾಮನು, ಕ್ರುದ್ಧಃ - ಕುಪಿತನಾಗಿ, ರಕ್ಷಸಃ - ರಕ್ಕಸನ, ಧನುಃ - ಬಾಣವನ್ನು, ಚಿಚ್ಛೇದ - ಕತ್ತರಿಸಿದನು, ಅಥ - ಅನಂತರದಲ್ಲಿ, ಅಷ್ಟಾಭಿಃನಾರಾಚೈಃ - ಎಂಟು ಬಾಣಗಳಿಂದ, ಸೂತಂ - ಸಾರಥಿಯನ್ನು, ವಿವ್ಯಾಧ - ಹೊಡೆದನು. ॥೨೯॥ ರಾಮಃ - ಶ್ರೀರಾಮನು, ಶರೈಃ - ಬಾಣಗಳಿಂದ, ರಥಂ - ತೇರನ್ನು, ಭಿತ್ವಾ - ಭೇದಿಸಿ, ರಥಾಶ್ವಾನ್ - ರಥದ ಕುದುರೆಗಳನ್ನು, ಸಮಪಾತಯತ್ - ಕೆಡವಿದನು, ನಿಶಾಚರಃ - ರಾಕ್ಷಸನಾದ, ಮಕರಾಕ್ಷಃ - ಮಕರಾಕ್ಷನು, ವಿರಥಃ - ಮುರಿದ ರಥವುಳ್ಳವನಾಗಿ, ವಸುಧಾಂ- ಭೂಮಿಯಲ್ಲಿ, ತಿಷ್ಠತ್ - ನಿಂತನು. ॥ ೩೦ ॥ ವಸುಧಾಂ - ಭೂಮಿಯಲ್ಲಿ, ತಿಷ್ಠತ್ - ನಿಂತಿರುವ, ತದ್ರಕ್ಷಃ - ಆ ರಾಕ್ಷಸನು, ಸರ್ವಭೂತಾನಾಂ - ಸರ್ವ ಪ್ರಾಣಿಗಳಿಗೂ, ತ್ರಾಸನಂ - ಭಯಂಕರ ವಾದ, ಯುಗಾಂ....ಭಂ - ಪ್ರಳಯಾಗ್ನಿಗೆ ಸಮಾನವಾದ ಕಾಂತಿಯುಳ್ಳ, ಶೂಲಂ - ಶೂಲವನ್ನು, ಪಾಣಿನಾ - ಹಸ್ತದಿಂದ, ಜಗ್ರಾಹ - ಹಿಡಿದನು. ॥ ೩೧ ॥ ಮಹಾಹವೇ - ಮಹಾ ಯುದ್ಧದಲ್ಲಿ, ಸನಿಶಾಚರಃ - ಆ ಮಕರಾಕ್ಷನು, ಪ್ರಜ್ವಲತ್ - ಉರಿಯುತ್ತಿರುವ, ತನ್ಮಹಚ್ಛೂಲಂತು - ಆ ಮಹಾ ಶೂಲವನ್ನಾದರೆ, ಪ್ರಭ್ರಾಮ್ಯ - ತಿರುವಿ, ಕ್ರೋಧಾತ್ - ಕೋಪದಿಂದ, ತಸ್ಮೈರಾಘವಾಯ - ಆ ಶ್ರೀರಾಮನಿಗಾಗಿ, ಪ್ರಾಹಿಣೋತ್ - ಕಳುಹಿಸಿದನು. ॥ ೩೨ ॥ ಖರಪುತ್ರಕರಾತ್ - ಮಕರಾಕ್ಷನ ಕೈಯಿಂದ, ಚ್ಯುತಂ - ಜಾರಿ, ಆಪತಂತಂ - ಬರುತ್ತಿರುವ, ಜ್ವಲಿತಂ - ಪ್ರಜ್ವಲಿಸುತ್ತಿರುವ,

---

ವಾಗಿ ಹೋಯಿತು. ಆಗ ಮಹಾ ಭುಜಬಲಪರಾಕ್ರಮಿಯಾದ ಶ್ರೀರಾಮಮೂರ್ತಿಯು ಮಕರಾಕ್ಷನ ಧನುಸ್ಸನ್ನು ಖಂಡಿಸಿ ಕೆಡವಿದನು. ರಘುಕುಲೋದ್ಭವನಾದ ಆ ರಾಮನು ಎಂಟು ಬಾಣಗಳಿಂದ ಆ ರಾಕ್ಷಸನ ರಥಸಾರಥಿಯನ್ನೂ, ರಥವನ್ನೂ ಭಂಗಗೊಳಿಸಿದನು. ಆ ತರುವಾಯ ಕೂರಂಬುಗಳನ್ನೆಸೆದು ಆ ರಥಕ್ಕೆ ಹೂಡಿದ್ದ ಕುದುರೆಗಳನ್ನೂ ಕೊಂದ ಕೆಡವಿ ದನು. ಆ ಸಮಯದಲ್ಲಿ ಮಕರಾಕ್ಷನು ಗತ್ಯಂತರವಿಲ್ಲದೆ ಭೂಮಿಯಲ್ಲಿ ನಿಂತನು. ॥೨೮–೩೦॥ ಹೀಗೆ ನಿಂತೊಡನೆಯೇ ಅವನು ಮಹಾ ಭಯಂಕರವಾದ ಶೂಲಾಯುಧವನ್ನು ಧರಿಸಿದನು. ಆ ಶೂಲವು ಪ್ರಳಯಕಾಲಾಗ್ನಿಗೆ ಸಮಾನವಾದುದಾಗಿ ನೋಡುವವರಿಗೆಲ್ಲ ಮಹಾ ಭಯ ವನ್ನುಂಟುಮಾಡುತ್ತಿದ್ದಿತು. ಮಕರಾಕ್ಷನು ಆ ಶೂಲವನ್ನು ಕೈಯಲ್ಲಿ ಹಿಡಿದು ಗಿರಗಿರನೆ ತಿರುಗಿಸಿ ಬಹಳವಾಗಿ ಶೋಭಿಸುತ್ತಿದ್ದನು. ಆ ತರುವಾಯ ಅವನು ಮಹಾ ಕೋಪೋ ದ್ದೀಪಿತನಾಗಿ ಆ ಶೂಲವನ್ನು ರಘುಕುಲೋದ್ಭವನಾದ ಶ್ರೀರಾಮನಮೇಲೆಸೆದನು. ಈ ರೀತಿ ಖರಕುಮಾರನಾದ ಮಕರಾಕ್ಷನೆಸೆದ ಮಹಾ ಜಾಜ್ವಲ್ಯಮಾನವಾದ ಆ ಶೂಲಾಯುಧ

ಬಾಣೈಸ್ತು ತ್ರಿಭಿರಾಕಾಶೇ ಶೂಲಂ ಚಿಚ್ಛೇದ ರಾಘವಃ ॥ ೩೩ ॥ ಸಭಿನ್ನೋ ನೈಕಧಾ ಶೂಲೋ ದಿವ್ಯಹಾಟಕಮಂಡಿತಃ । ವ್ಯಶೀರ್ಯತ ಮಹೋಲ್ಕೇವ ರಾಮಬಾಣಾರ್ದಿತೋ ಭುವಿ ॥ ೩೪ ॥ ತಚ್ಛೂಲಂ ನಿಹತಂ ದೃಷ್ಟ್ವಾ ರಾಮೇಣಾಕ್ಲಿಷ್ಟಕರ್ಮಣಾ । 'ಸಾಧು ಸಾಧ್ವಿ'ತಿ ಭೂತಾನಿ ವ್ಯಾಹರಂತಿ ನಭೋಗತಾಃ ॥೩೫॥ ತಂ ದೃಷ್ಟ್ವಾ ನಿಹತಂ ಶೂಲಂ ಮಕರಾಕ್ಷೋ ನಿಶಾಚರಃ । ಮುಷ್ಟಿಮುದ್ಯಮ್ಯ ಕಾಕುತ್‌ಸ್ಥಂ 'ತಿಷ್ಠ ತಿಷ್ಠೇ'ತಿ ಚಾಬ್ರವೀತ್ ॥ ೩೬ ॥ ಸತಂ ದೃಷ್ಟ್ವಾ ಪತಂತಂ ವೈ ಪ್ರಹಸ್ಯ ರಘುನಂದನಃ । ಪಾವಕಾಸ್ತ್ರಂ ತತೋ ರಾಮಸ್ಸಂದಧೇತು ಶರಾಸನೇ ॥ ೩೭ ॥ ತೇನಾಸ್ತ್ರೇಣ ಹತಂ ರಕ್ಷಃ

ತಚ್ಛೂಲಂ - ಆ ಶೂಲವನ್ನು, ಆಕಾಶೇ - ಅಂತರಿಕ್ಷ ಮಾರ್ಗದಲ್ಲಿ, ರಾಘವಃ - ಶ್ರೀರಾಮನು, ತ್ರಿಭಿಃ- ಮೂರಾದ, ಬಾಣೈಃ - ಬಾಣಗಳಿಂದ, ಚಿಚ್ಛೇದ - ಕತ್ತರಿಸಿದನು. ॥೩೩॥ ದಿವ್ಯ....ತಂ - ಅಪರಂಜಿಯಿಂದಲಂಕೃತವಾದ, ನೈಕಧಾ - ಅನೇಕ ವಿಧವಾಗಿ, ಭಿನ್ನಃ - ಕತ್ತರಿಸಲ್ಪಟ್ಟ, ಸಶೂಲಃ - ಆ ಶೂಲವು, ರಾಮ....ತಃ - ರಾಮನ ಬಾಣದಿಂದ ಹೊಡೆಯಲ್ಪಟ್ಟುದಾಗಿ, ಭುವಿ - ನೆಲದಲ್ಲಿ, ಮಹೋಲ್ಕೇವ - ದೊಡ್ಡ ಕೊಳ್ಳಿಯಂತೆ, ವ್ಯಶೀರ್ಯತ - ಸೀಳಿಬಿದ್ದಿತು. ॥೩೪॥ ಅಕ್ಲಿ.... ಣಾ - ಕ್ಲೇಶವಿಲ್ಲದೆ ಕಾರ್ಯವನ್ನು ಮಾಡುವ, ರಾಮೇಣ - ಶ್ರೀರಾಮನಿಂದ, ನಿಹತಂ - ಹೊಡೆಯಲ್ಪಟ್ಟ, ತಚ್ಛೂಲಂ - ಆ ಶೂಲವನ್ನು, ದೃಷ್ಟ್ವಾ - ನೋಡಿ, ನಭೋಗತಾಃ - ಅಂತರಿಕ್ಷದಲ್ಲಿದ್ದ, ಭೂತಾನಿ - ಭೂತಗಳು, ಸಾಧುಸಾಧ್ವಿತಿ - ಚನ್ನಾಯಿತೆಂದು ಚನ್ನಾಯಿತೆಂದು, ವ್ಯಾಹರಂತಿ - ಹೇಳಿದವಷ್ಟೆ. ॥ ೩೫ ॥ ನಿಶಾಚರಃ - ರಾಕ್ಷಸನಾದ, ಮಕರಾಕ್ಷಃ - ಮಕರಾಕ್ಷನು, ನಿಹತಂ - ಹೊಡೆಯಲ್ಪಟ್ಟ, ತಂಶೂಲಂ - ಆ ಶೂಲವನ್ನು, ದೃಷ್ಟ್ವಾ - ನೋಡಿ, ಮುಷ್ಟಿಂ - ಮುಷ್ಟಿಯನ್ನು, ಉದ್ಯಮ್ಯ - ಎತ್ತಿ, ಕಾಕುತ್‌ಸ್ಥಂಚ - ಶ್ರೀರಾಮನನ್ನು ಕುರಿತು, ತಿಷ್ಠತಿಷ್ಠೇತಿ - ನಿಲ್ಲುನಿಲ್ಲೆಂದು, ಅಬ್ರವೀತ್ - ನುಡಿದನು. ॥ ೩೬ ॥ ತತಃ-ಬಳಿಕ, ರಘುನಂದನಃ ರಘುಕುಲೋತ್ಪನ್ನನಾದ, ಸರಾಮಃ-ಆ ಶ್ರೀರಾಮನು, ಆಪತಂತಂ - ಬರುತ್ತಿರುವ, ತಂತು - ಆ ಮಕರಾಕ್ಷನನ್ನಾದರೆ, ದೃಷ್ಟ್ವಾ - ಕಂಡು, ಪ್ರಹಸ್ಯ - ನಕ್ಕು, ಪಾವಕಾಸ್ತ್ರಂ - ಆಗ್ನೇಯಾಸ್ತ್ರವನ್ನು, ಶರಾಸನೇ - ಕೋದಂಡದಲ್ಲಿ, ಸಂದದೇ - ಸಂಧಾನ ಮಾಡಿದನು. ॥೩೭॥ ತದಾ - ಆಗ, ರಣೇ - ಕಾಳೆಗದಲ್ಲಿ, ಕಾಕುತ್‌ಸ್ಥೇನ - ಶ್ರೀರಾಮನಿಂದ, ತೇನಾಸ್ತ್ರೇಣ - ಆ ಅಸ್ತ್ರದಿಂದ, ರಕ್ಷಃ-ರಕ್ಕಸನು, ಹತಂ-ಹೊಡೆಯಲ್ಪಟ್ಟನು, ತತ್ರ-ಅಲ್ಲಿ, ಸಂಭಿ....ಯಂ-

---

ವನ್ನು ಶ್ರೀರಾಮನು ಮೂರು ಭಾಣಗಳನ್ನು ಪ್ರಯೋಗಿಸಿ ಭೇದಿಸಿದನು. ಶ್ರೀರಾಮನು ಭೇದಿಸಿದ ಆ ಆಯುಧವು ಮಹೋಲ್ಕದಂತೆ ಚೂರುಚೂರಾಗಿ ಒಡೆದುಹೋಯಿತು. ಈ ರೀತಿ ಅನಾಯಾಸವಾಗಿ ಶ್ರೀರಾಮನಿಂದ ಚೂರ್ಣವಾಗಿ ಹೋದ ಆ ಶೂಲವನ್ನು ಕಂಡು ಸಮಸ್ತ ಭೂತಗಳೂ " ಭಲೆ ಭಲೆ !! " ಎಂದು ಪ್ರಶಂಸಿಸಿದುವು. ಆಕಾಶದಲ್ಲಿ ನಿಂತು ನೋಡುತ್ತಿದ್ದ ದೇವತೆಗಳೂ ಈ ಆಶ್ಚರ್ಯವನ್ನು ನೋಡಿ ಭಾಪು ಭಾಪೆಂದು ಹೊಗಳಿದರು. ॥೩೧-೩೫॥ ಈ ಪ್ರಕಾರ ತನ್ನ ಶೂಲಾಯುಧವು ವ್ಯರ್ಥವಾದುದನ್ನು ಕಂಡು ರಾಕ್ಷಸೋತ್ತಮನಾದ ಆ ಮಕರಾಕ್ಷನು ಮುಷ್ಟಿಯನ್ನು ದೃಢವಾಗಿ ಹಿಡಿದು ಶ್ರೀರಾಮನನ್ನುಕುರಿತು, "ನಿಲ್ಲು ನಿಲ್ಲು" ಎಂದು ಹೇಳುತ್ತ ಮುನ್ನುಗ್ಗಿದನು. ಹೀಗೆ ಮುಷ್ಟಿಯೆತ್ತಿ ತನ್ನ ಮೇಲೆ ಬರುತ್ತಿರುವ ಆ ರಾಕ್ಷಸನನ್ನು ನೋಡಿ ಶ್ರೀರಾಮಮೂರ್ತಿಯು ನಕ್ಕು ತನ್ನ ಧನುಸ್ಸಿನಲ್ಲಿ ಆಗ್ನೇಯಾಸ್ತ್ರವನ್ನು ಸಂಧಾನಮಾಡಿ ಅವನ ಮೇಲೆಸೆದನು. ಶ್ರೀರಾಮಮೂರ್ತಿಯು ಪ್ರಯೋಗಿಸಿದ ಆ ಆಗ್ನೇಯಾಸ್ತ್ರವು ಕೂಡಲೇ

ಕಾಕುತ್ಸ್ಥೇನ ತದಾ ರಣೇ । ಸಂಭಿನ್ನಹೃದಯಂ ತತ್ರ ಸಪಾತಚ ಮಮಾರಚ ॥೩೮॥
ದೃಷ್ಟ್ವಾ ತೇ ರಾಕ್ಷಸಾಸ್ಸರ್ವೇ ಮಕರಾಕ್ಷಸ್ಯ ಪಾತನಂ । ಲಂಕಾಮೇವಾಭ್ಯಧಾವಂತ
ರಾಮಬಾಣಾರ್ದಿತಾಸ್ತದಾ ॥ ೩೯ ॥

ದಶರಥ ನೃಪಪುತ್ರಬಾಣವೇಗೈ
ರಜನಿಚರಂ ನಿಹತಂ ಖರಾತ್ಮಜಂ ।
ದದೃಶುರಥ ಸುರಾ ಭೃಶಂ ಪ್ರಹೃಷ್ಟಾ
ಗಿರಿಮಿವ ವಜ್ರಹತಂ ಯಥಾವಿಕೀರ್ಣಂ ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಾಶೀತಿತಮಸ್ಸರ್ಗಃ.

ಚ್ಛೇದಿಸಲ್ಪಟ್ಟ ಎದೆಯುಳ್ಳವನಾಗಿ, ಪಪಾತಚ - ಕೆಳಗೂ ಬಿದ್ದನು, ಮಮಾರಚ - ಮರಣವನ್ನೂ ಹೊಂದಿದನು. ॥ ೩೮ ॥ ಸರ್ವೇ - ಸಮಸ್ತರಾದ, ತೇರಾಕ್ಷಸಾಃ - ಆ ರಕ್ಕಸರು, ಮಕರಾಕ್ಷಸ್ಯ - ಮಕರಾಕ್ಷನ, ಪಾತನಂ - ಬೀಳುವಿಕೆಯನ್ನು, ದೃಷ್ಟ್ವಾ - ಕಂಡು, ತದಾ - ಆಗ, ರಾಮಬಾಣಾರ್ದಿತಾಃ - ಶ್ರೀರಾಮನ ಬಾಣಗಳಿಂದ ಹೊಡೆಯಲ್ಪಟ್ಟವರಾಗಿ, ಲಂಕಾಮೇವ - ಲಂಕಾಪಟ್ಟಣವನ್ನೇ ಕುರಿತು, ಅಭ್ಯಧಾವಂತ - ಓಡಿಹೋದರು. ॥ ೩೯ ॥ ಅಥ - ಅನಂತರದಲ್ಲಿ, ಸುರಾಃ - ದೇವತೆಗಳು, ದಶ....ಗೈಃ - ದಶರಥರಾಜನ ಮಗನಾದ ಶ್ರೀರಾಮನ ಬಾಣವೇಗದಿಂದ, ಹತಂ - ಹೊಡೆಯಲ್ಪಟ್ಟ, ನಿಶಾಚರಂ - ರಾಕ್ಷಸನಾದ, ಖರಾತ್ಮಜಂ - ಮಕರಾಕ್ಷನನ್ನು, ವಜ್ರಹತಂ - ವಜ್ರದಿಂದ ಹೊಡೆಯಲ್ಪಟ್ಟ, ವಿಕೀರ್ಣಂ - ಎರಚಲ್ಪಟ್ಟ, ಗಿರಿಂಯಥಾ - ಪರ್ವತವನ್ನಂತೆ, ಭೃಶಂ - ವಿಶೇಷವಾಗಿ, ಪ್ರಹೃಷ್ಟಾಃ - ಸಂತೋಷಗೊಂಡು, ದದೃಶುಃ - ಕಂಡರು. ॥ ೪೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಾಶೀತಿತಮಸ್ಸರ್ಗಃ.

ಆ ರಾಕ್ಷಸನೆದೆಯನ್ನು ಸೀಳಿತು. ಕೂಡಲೇ ಅವನು ಕೆಳಕ್ಕೆ ಬಿದ್ದು ಹೊರಳಾಡಿ ಮಡಿದು ಬಿದ್ದನು. ಈ ರೀತಿ ಮಡಿದುರುಳಿದ ಆ ಮಕರಾಕ್ಷನನ್ನು ನೋಡಿ ರಾಕ್ಷಸರೆಲ್ಲರೂ ರಾಮಬಾಣಪೀಡಿತರಾಗಿ ಎಲ್ಲಿಯೂ ನಿಲ್ಲಲಾರದೆ ಲಂಕಾಭಿಮುಖರಾಗಿ ಓಡಿಹೋದರು. ಖರಪುತ್ರನಾದ ಮಕರಾಕ್ಷನು, ದಶರಥರಾಜಕುಮಾರನಾದ ಶ್ರೀರಾಮನು ಪ್ರಯೋಗಿಸಿದ ಆಗ್ನೇಯಾಸ್ತ್ರದಿಂದ, ವಜ್ರಾಹತವಾದ ಪರ್ವತದಂತೆ ಮಡಿದು ಬಿದ್ದುದನ್ನು ಕಂಡು ಗಗನದಲ್ಲಿದ್ದ ದೇವತೆಗಳೆಲ್ಲರೂ ಪರಮಾನಂದವನ್ನು ಹೊಂದಿದರು. ॥ ೩೬–೪೦ ॥

ಇಂತಿದು ಶ್ರೀರಾಮಕೃತ ಮಕರಾಕ್ಷಸಂಹಾರ ವೃತ್ತಾಂತವೆಂಬ
ಎಪ್ಪತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಶೀತಿತಮಸ್ಸರ್ಗಃ

ಮಕರಾಕ್ಷಂ ಹತಂ ಶ್ರುತ್ವಾ ರಾವಣಸ್ಸಮಿತಿಂಜಯಃ । ಕ್ರೋಧೇನ ಮಹತಾಽವಿಷ್ಟೋ ದಂತಾನ್ ಕಟಕಟಾಪಯನ್ ॥ ೧ ॥ ¶ ಕುಪಿತಶ್ಚ ತದಾ ತತ್ರ ಕಿಂಕಾರ್ಯಮಿತಿ ಚಿಂತಯನ್ । ಆದಿದೇಶಾಥ ಸಂಕ್ರುದ್ಧೋ ರಣಾಯೇಂದ್ರಜಿತಂ ಸುತಂ ॥ ೨ ॥ "ಜಹಿ ವೀರ! ಮಹಾವೀರ್ಯೌ ಭ್ರಾತರೌ ರಾಮಲಕ್ಷ್ಮಣೌ । ಅದೃಶ್ಯೋ ದೃಶ್ಯಮಾನೋವಾ ಸರ್ವಥಾ ತ್ವಂ ಬಲಾಧಿಕಃ ॥ ೩ ॥ ತ್ವಮಪ್ರತಿಮ

ಸಮಿತಿಂಜಯಃ - ಯುದ್ಧದಲ್ಲಿ ಶತ್ರುಗಳನ್ನು ಜಯಿಸತಕ್ಕ, ರಾವಣಃ - ರಾವಣನು, ಹತಂ- ಸಂಹೃತನಾದ, ಮಕರಾಕ್ಷಂ - ಮಕರಾಕ್ಷನನ್ನು, ಶ್ರುತ್ವಾ - ಕೇಳಿ, ದಂತಾನ್ - ಹಲ್ಲುಗಳನ್ನು, ಕಟಕಟಾಪಯನ್ - ಕಟಕಟಯೆಂದು ಕಡಿದು, ಮಹತಾ - ಮಹತ್ತರವಾದ, ಕ್ರೋಧೇನ - ಕೋಪದಿಂದ, ಆವಿಷ್ಟಃ - ವ್ಯಾಪ್ತನು; (ಅಭೂತ್ - ಆದನು). ॥ ೧ ॥ ತದಾ - ಆಗ, ತತ್ರ - ಅಲ್ಲಿ, ಕುಪಿತಶ್ಚ - ಕೋಪಿಷ್ಠನೂ ಆಗಿ, ಕಿಂಕಾರ್ಯಮಿತಿ - ಏನು ಮಾಡತಕ್ಕದೆಂದು, ಚಿಂತಯನ್ - ಆಲೋಚಿಸಿ, ಅಥ - ಅನಂತರದಲ್ಲಿ, ಕ್ರುದ್ಧಃ - ಕುಪಿತನಾಗಿ, ರಣಾಯ - ಯುದ್ಧಕ್ಕಾಗಿ, ಸುತಂ - ಮಗನಾದ, ಇಂದ್ರಜಿತಂ - ಇಂದ್ರಜಿತುವನ್ನು ಕುರಿತು, ಆದಿದೇಶ - ಆಜ್ಞಾಪಿಸಿದನು. ॥ ೨ ॥ ಹೇ ವೀರ - ಎಲೈ ಶೂರನೇ, ಮಹಾವೀರ್ಯೌ - ಮಹಾ ಪರಾಕ್ರಮಿಗಳಾದ, ಭ್ರಾತರೌ - ಅಣ್ಣತಮ್ಮಂದಿರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರನ್ನು, ಜಹಿ - ಹೊಡೆ, ತ್ವಂ - ನೀನು, ಅದೃಶ್ಯಃ- ಕಾಣದೆಯೋ, ದೃಶ್ಯಮಾನೋವಾ - ಕಾಣಿಸಿಕೊಂಡೋ. ಸರ್ವದಾ - ಹೇಗಾದರೂ, ಬಲಾಧಿಕಃ - ಬಲದಿಂದ ಹೆಚ್ಚಾದವನು, ತ್ವಂ ಪುನಃ - ನೀನಾದರೆ, ಸಂಯುಗೇ - ಕಾಳಗದಲ್ಲಿ, ಅಪ್ರ....ಣಂ - ಅಸ

ಹೀಗೆ ಮಕರಾಕ್ಷ ರಾಕ್ಷಸನೂ ಶ್ರೀರಾಮಮೂರ್ತಿಯಿಂದ ಮಡಿದು ಹೋದ ಸುದ್ದಿಯನ್ನು ಕೇಳುತ್ತಲೇ ಶತ್ರುಮರ್ದನನಾದ ರಾವಣಾಸುರನು ಮಹಾ ಕುಪಿತನಾಗಿ ಕಟಕಟನೆ ಹಲ್ಲುಗಳನ್ನು ಕಡಿಯುತ್ತ ಈಗ ಮಾಡತಕ್ಕುದೇನೆಂದು ಸ್ವಲ್ಪಹೊತ್ತು ಆಲೋಚಿಸಿದನು. ಆ ತರುವಾಯ ಆ ರಾಕ್ಷಸಪ್ರಭುವು ತನ್ನ ಮಗನಾದ ಮೇಘನಾದನನ್ನು ಬಳಿಗೆ ಕರೆದು ಅವನನ್ನು ಕುರಿತು, "ವತ್ಸ! ನೀನು ಮಹಾ ವೀರನು. ಸಾಕ್ಷಾದ್ದೇವೇಂದ್ರನನ್ನೇ ಗೆದ್ದಿರುವೆ. ಇಂಥ ನೀನು ಕೇವಲ ಮಾನವರಾದ ಆ ರಾಮಲಕ್ಷ್ಮಣರನ್ನು ಕೊಲ್ಲಲಾರೆಯಾ! ನೀನು ಅವರೀರ್ವರನ್ನೂ ಕೊಲ್ಲುವುದಕ್ಕೆ ಸಮರ್ಥನಾಗಿಯೇ ಇರುವೆ. ಆದುದರಿಂದ ನೀನೀಗಲೇ ರಣರಂಗಕ್ಕೆ ಹೊರಟು, ಕಾಣಿಸಿಕೊಂಡೋ, ಕಾಣಿಸಿಕೊಳ್ಳದೆಯೋ ಹೇಗಾದರೂ ಸರಿಯೇ, ಆ ರಾಮಲಕ್ಷ್ಮಣರನ್ನು

¶ ಇಲ್ಲಿ, "ಅಂಥ ಇಂದ್ರನನ್ನೇ ಗೆದ್ದಿರುವ ನಾನು, ಕೇವಲ ಮಾನುಷರಾದ ರಾಮಲಕ್ಷ್ಮಣರನ್ನು ಗೆಲ್ಲುವುದೇನು ಕಷ್ಟ" ಎಂದು ಅಹಂಕಾರದಿಂದ ಮೆರೆಯುತ್ತಿರುವ ಇಂದ್ರಜಿತುವನ್ನು ಕುರಿತು ರಾವಣನು, "ಮಗನೇ! ಮಹಾ ಬಲಾಢ್ಯನಾದ ನೀನು ಕಾಣಿಸಿಕೊಂಡೋ, ಕಾಣಿಸಿಕೊಳ್ಳದೆಯೋ ಇಂದ್ರನನ್ನು ಕೊಲ್ಲುವೆಯೆಂಬುದು ನಿಜ. ಆದರೂ ಶ್ರೀರಾಮಲಕ್ಷ್ಮಣರು ಕೇವಲ ಮಾನವರಾದರೂ ಅವರನ್ನು ಕೊಲ್ಲುವೆನೆಂಬ ಭ್ರಾಂತಿಯನ್ನೇ ಇಟ್ಟುಕೊಳ್ಳಬೇಡ. ಅವರಗೊಡವೆಯನ್ನೇ ಬಿಟ್ಟುಬಿಡು" ಎಂಬುದು ವಾಸ್ತವಿಕಾರ್ಥ.

ಕರ್ಮಾಣಮಿಂದ್ರಂ ಜಯಸಿ ಸಂಯುಗೇ । ಕಿಂಪುನರ್ಮಾನುಷೌ ದೃಷ್ಟ್ವಾ ನವಧಿಷ್ಯಸಿ ಸಂಯುಗೇ ॥ ೪ ॥ ತಥೋಕ್ತೋ ರಾಕ್ಷಸೇಂದ್ರೇಣ ಪ್ರತಿಗೃಹ್ಯ ಪಿತುರ್ವಚಃ । ಯಜ್ಞಭೂಮೌ ಸವಿಧಿವತ್ಪಾವಕಂ ಜುಹುವೇಂದ್ರಜಿತ್ ॥ ೫ ॥ ಜುಹ್ವತಶ್ಚಾಪಿ ತತ್ರಾಗ್ನಿಂ ರಕ್ತೋಷ್ಣೀಷಧರಾಃ ಸ್ತ್ರಿಯಃ । ಆಜಗ್ಮುಸ್ತತ್ರ ಸಂಭ್ರಾಂತಾ ರಾಕ್ಷಸ್ಯೋ ಯತ್ರ ರಾವಣಿಃ ॥ ೬ ॥ ಶಸ್ತ್ರಾಣಿ ಶರಪತ್ರಾಣಿ ಸಮಿಧೋಥ ವಿಭೀತಕಾಃ । ಲೋಹಿತಾನಿ ಚ ವಾಸಾಂಸಿ ಸ್ರುವಂ ಕಾರ್ಷ್ಣಾಯಸಂ ತಥಾ ॥ ೭ ॥ ಸರ್ವತೋಗ್ನಿಂ ಸಮಾಸ್ತೀರ್ಯ ಶರಪತ್ರೈಸ್ಸತೋಮರೈಃ । ಛಾಗಸ್ಯ ಕೃಷ್ಣವರ್ಣಸ್ಯ ಗಳಂ ಜಗ್ರಾಹ ಜೀವತಃ ॥ ೮ ॥ ಸಕೃದೇವ ಸಮಿದ್ಧಸ್ಯ ವಿಧೂಮಸ್ಯ ಮಹಾರ್ಚಿಷಃ । ಬಭೂವುಸ್ತಾನಿ ಲಿಂಗಾನಿ ೱ ವಿಜಯಂ ದರ್ಶಯಂತಿ ಚ ॥ ೯ ॥ ಪ್ರದಕ್ಷಿಣಾವರ್ತಶಿಖಸ್ತಪ್ತಹಾಟಕ

ದೃಶವಾದ ವ್ಯಾಪಾರವುಳ್ಳ, ಇಂದ್ರಂ - ಇಂದ್ರನನ್ನು, ಜಯಸಿ - ಜಯಿಸಿದವನು, ಸಂಯುಗೇ - ಕಾಳೆಗದಲ್ಲಿ, ಮಾನುಷೌ - ಮನುಷ್ಯರನ್ನು, ದೃಷ್ಟ್ವಾ - ನೋಡಿ, ನವಧಿಷ್ಯಸಿಕಿಂ - ವಧಿಸಲಾರೆಯ. ॥೪॥ ತಥಾ - ಆ ಪ್ರಕಾರವಾಗಿ, ರಾಕ್ಷಸೇಂದ್ರೇಣ - ರಾವಣನಿಂದ, ಉಕ್ತಃ - ಹೇಳಲ್ಪಟ್ಟ, ಸಇಂದ್ರಜಿತ್ - ಆ ಇಂದ್ರಜಿತುವು, ಪಿತುಃ - ತಂದೆಯ, ವಚಃ - ಮಾತನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಯಜ್ಞಭೂಮೌ-ಯಾಗಶಾಲೆಯಲ್ಲಿ, ವಿಧಿವತ್-ವಿಧ್ಯುಕ್ತವಾಗಿ, ಪಾವಕಂ-ಅಗ್ನಿಯಲ್ಲಿ, ಜುಹುವೇ-ಹೋಮ ಮಾಡಿದನು. ॥ ೫ ॥ ತತ್ರ - ಅಲ್ಲಿ, ಅಗ್ನಿಂ - ಅಗ್ನಿಯಲ್ಲಿ, ಜುಹ್ವತಶ್ಚಾಪಿ - ಹೋಮ ಮಾಡುತ್ತಿರುವಾಗಲೇ, ರಕ್ತೋಷ್ಣೀಷಧರಾಃ - ಕೆಂಪು ಪಾಗುಗಳನ್ನು ಧರಿಸಿದ, ಸ್ತ್ರಿಯಃ - ಹೆಂಗುಸರಾದ, ರಾಕ್ಷಸ್ಯಃ - ರಕ್ಕಸರು, ಸಂಭ್ರಾಂತಾಃ - ತ್ವರೆಯುಳ್ಳವರಾಗಿರಲು, ಯತ್ರ - ಎಲ್ಲಿ, ರಾವಣಿಃ - ಇಂದ್ರಜಿತುವಿದ್ದನೋ, ತತ್ರ - ಅಲ್ಲಿ, ಆಜಗ್ಮುಃ - ಬಂದರು ॥ ೬ ॥

ವಧಿಸಿ ಬರುವವನಾಗು. ನಿನಗಿಂತಲೂ ಬಲಾಢ್ಯನಾದವನಾವನಿರುವನು?" ಎಂದು ಹೇಳಿದನು. ॥೧–೪॥ ರಾವಣಾಸುರನೀರೀತಿ ನುಡಿದೊಡನೆಯೇ ಇಂದ್ರಜಿತುವು ಆತನಾಣತಿಯನ್ನು ಕೈಕೊಂಡು ಕೂಡಲೇ ಯಜನಭೂಮಿಗೈತಂದು ಯಜ್ಞೇಶ್ವರನಲ್ಲಿ ಹೋಮ ಮಾಡಿದನು. ಆ ಸಮಯದಲ್ಲಿ ಅಗ್ನಿಕುಂಡದ ದೆಸೆಯಿಂದ ಕೆಂಪು ಬಟ್ಟೆಯ ಮುಂಡಾಸುಗಳನ್ನು ಧರಿಸಿರುವ ಅನೇಕ ಸ್ತ್ರೀಯರು ಹೊರಟುಬಂದು ಆ ಇಂದ್ರಜಿತುವಿನ ಬಳಿಸಾರಿದರು. ಅವರನ್ನು ಕಂಡು ರಾಕ್ಷಸರೆಲ್ಲರೂ ಪರಮಾಶ್ಚರ್ಯಚಕಿತರಾದರು. ಆ ರೀತಿ ಅಗ್ನಿಕುಂಡದಿಂದ ಹೊರಟುಬಂದ ಸ್ತ್ರೀಯರು ಶಸ್ತ್ರಗಳನ್ನೂ, ಶರಪತ್ರಗಳನ್ನೂ, ರಕ್ತ ವಸ್ತ್ರಗಳನ್ನೂ, ಕಾರ್ಷ್ಣಾಯಸವನ್ನೂ ಇನ್ನೂ ವಿವಿಧಾಯುಧಗಳನ್ನೂ ಆ ಇಂದ್ರಜಿತುವಿಗೆ ಸಮರ್ಪಿಸಿದರು. ಆಗಲಾ ರಾಕ್ಷಸರಾಜಕುಮಾರನು ತೋಮರಗಳನ್ನೂ, ಶರಪತ್ರಗಳನ್ನೂ ಸಮಿತ್ತುಗಳನ್ನಾಗಿ ಮಾಡಿ ಅಗ್ನಿಕುಂಡದ ಸುತ್ತಲೂ ಹಾಸಿ ಕಪ್ಪು ಬಣ್ಣದ ಮೇಕೆಯೊಂದರ ಕೊರಳನ್ನು ಹಿಡಿದು ಅದನ್ನು ಕೊಂದು ಅಗ್ನಿಕುಂಡದಲ್ಲಿ ಹೋಮ ಮಾಡಿದನು. ಆ ತರುವಾಯ ಬಹಳವಾಗಿ ವಿಜೃಂಭಿಸಿದವನೂ, ಬಹು ದೊಡ್ಡ ಜ್ವಾಲೆಗಳುಳ್ಳವನೂ, ಧೂಮರಹಿತನೂ ಆದ ಯಜ್ಞೇ

ೱ ಇಲ್ಲಿ, "ವಿಜಯಂ ದರ್ಶಯಂತಿ" ಎಂದರೆ ಜೀವಂತನಾಗಿ ಲಂಕೆಗೆ ಹಿಂತಿರುಗುವಷ್ಟುಮಟ್ಟಿನ ಜಯವನ್ನು ಮಾತ್ರ ಸೂಚಿಸಿದುವೆಂದು ತಿಳಿಯಬೇಕು.

ಸನ್ನಿಭಃ । ಹವಿಸ್ತತ್ಪ್ರತಿಜಗ್ರಾಹ ಪಾವಕಸ್ಸ್ವಯಮುತ್ಥಿತಃ ॥ ೧೦ ॥ ಹುತಾಗ್ನಿಂ ತರ್ಪಯಿತ್ವಾಚ ದೇವದಾನವ ರಾಕ್ಷಸಾನ್ । ಆರುರೋಹ ರಥಶ್ರೇಷ್ಠಮಂತರ್ಧಾನ ಗತಂ ಶುಭಂ ॥ ೧೧ ॥ ಸ ವಾಜಿಭಿಶ್ಚತುರ್ಭಿಶ್ಚ ಬಾಣೈಶ್ಚ ನಿಶಿತೈರ್ಯುತಃ । ಆರೋಪಿತ ಮಹಾಚಾಪಃ ಶುಶುಭೇ ಸ್ಯಂದನೋತ್ತಮಃ ॥ ೧೨ ॥ ಜಾಜ್ವಲ್ಯಮಾನೋ ವಪುಷಾ ತಪನೀಯಪರಿಚ್ಛದಃ । ಮೃಗೈಶ್ಚಂದ್ರಾರ್ಧಚಂದ್ರೈಶ್ಚ ಸರಥಸ್ಸಮಲಂಕೃತಃ ॥ ೧೩ ॥ ಜಾಂಬೂನದ ಮಹಾಕಂಬು ರ್ದೀಪ್ತ ಪಾವಕ ಸನ್ನಿಭಃ । ಬಭೂವೇಂದ್ರಜಿತಃ ಕೇತುರ್ವೈಡೂರ್ಯಸಮಲಂಕೃತಃ ॥೧೪॥ ತೇನ ಚಾಽದಿತ್ಯ ಕಲ್ಪೇನ ಬ್ರಹ್ಮಾಸ್ತ್ರೇಣಚ ಪಾಲಿತಃ । ಸ ಬಭೂವ ದುರಾಧರ್ಷೋ ರಾವಣಿಸ್ಸುಮಹಾಬಲಃ ॥ ೧೫ ॥ ಸೋಽಭಿ

ಅಗ್ನಿಂ - ಅಗ್ನಿಯಲ್ಲಿ, ಹುತ್ವಾ - ಹೋಮ ಮಾಡಿ, ದೇವ....ಸಾನ್ - ದೇವತೆಗಳನ್ನೂ, ದಾನವರನ್ನೂ, ರಾಕ್ಷಸರನ್ನೂ, ತರ್ಪಯಿತ್ವಾ - ತೃಪ್ತಿಗೊಳಿಸಿ, ಅಂತ....ತಂ - ಅಂತರ್ಧಾನ ಶಕ್ತಿಯುಕ್ತವಾದ, ರಥಶ್ರೇಷ್ಠಂ - ಉತ್ತಮ ರಥವನ್ನು, ಆರುರೋಹ - ಏರಿದನು. ॥ ೬-೧೧ ॥ ಚತುರ್ಭಿಃ - ನಾಲ್ಕಾದ, ವಾಜಿಭಿಶ್ಚ - ಕುದುರೆಗಳಿಂದಲೂ, ನಿಶಿತೈಃ - ತೀಕ್ಷ್ಣವಾದ, ಬಾಣೈಶ್ಚ - ಬಾಣಗಳಿಂದಲೂ, ಯುತಃ - ಕೂಡಿರುವ, ಆರೋ....ಪಃ - ಏರಿಸಲ್ಪಟ್ಟ ದೊಡ್ಡ ಬಿಲ್ಲುಗಳುಳ್ಳ, ಸಃಸ್ಯಂದನೋತ್ತಮಃ - ಆ ರಥಶ್ರೇಷ್ಠವು, ಶುಶುಭೇ - ಹೊಳೆಯುತ್ತಿತ್ತು. ॥ ೧೨ ॥ ವಪುಷಾ - ಆಕಾರದಿಂದ, ಜಾಜ್ವಲ್ಯಮಾನಃ-ಬೆಳಗುತ್ತಿರುವ, ತಪ....ದಃ-ಅಪರಂಜಿಯ ಬಾರುಕಿಯುಳ್ಳ, ಮೃಗೈಃ-ಮೃಗಾಕಾರ ಪ್ರತಿಮೆಗಳಿಂದಲೂ, ಚಂದ್ರಾ....ಶ್ಚ - ಚಂದ್ರಾಕಾರವಾಗಿಯೂ, ಅರ್ಧಚಂದ್ರಾಕಾರವಾಗಿಯೂ ಇರುವ ರಚನಾ ವಿಶೇಷದಿಂದಲೂ, ಸರಥಃ - ಆ ರಥವು, ಸಮಲಂಕೃತಃ - ಅಲಂಕರಿಸಲ್ಪಟ್ಟಿತ್ತು. ॥ ೧೩ ॥ ಜಾಂಬೂ....ಬುಃ - ಸುವರ್ಣವಿಕಾರವಾದ ಕಡಗಗಳುಳ್ಳ, ದೀಪ್ತ....ಭಃ - ಪ್ರಜ್ವಲಿತಾಗ್ನಿಗೆ ಸಮಾನವಾದ, ಇಂದ್ರಜಿತಃ - ಇಂದ್ರಜಿತುವಿನ, ಕೇತುಃ - ಧ್ವಜವು, ವೈಡೂ......ತಃ - ವೈಡೂರ್ಯ ಮಣಿಗಳಿಂದ ಅಲಂಕರಿಸಲ್ಪಟ್ಟದು, ಬಭೂವ - ಆಯಿತು. ॥ ೧೪ ॥ ಆದಿ....ನ - ಸೂರ್ಯಸದೃಶವಾದ ತೇನಚ - ಆ ರಥದಿಂದಲೂ, ಬ್ರಹ್ಮಾಸ್ತ್ರೇಣಚ - ಬ್ರಹ್ಮಾಸ್ತ್ರದಿಂದಲೂ, ಪಾಲಿತಃ - ಪಾಲಿಸಲ್ಪಟ್ಟ, ಸುಮಹಾಬಲಃ - ಮಹಾ ಬಲಾಢ್ಯನಾದ, ಸರಾವಣಿಃ - ಆ ಇಂದ್ರಜಿತುವು, ದುರಾಧರ್ಷಃ - ತಿರಸ್ಕರಿಸಲಸಾಧ್ಯನು, ಬಭೂವ - ಆದನು. ॥೧೫॥ ಸಮಿತಿಂಜಯಃ - ಯುದ್ಧದಲ್ಲಿ ಜಯಶೀಲನಾದ,

---

ಶ್ವರನು ಪ್ರದಕ್ಷಿಣಾಕಾರವಾದ ಜ್ವಾಲೆಗಳೊಡಗೂಡಿ, ಪುಟಪಾಕಶೋಧಿತವಾದ ದೇಹಕಾಂತಿಯಿಂದ ಶೋಭಿಸುತ್ತ ಪ್ರತ್ಯಕ್ಷನಾಗಿ ತಾನಾಗಿಯೇ ಆ ಹವಿಸ್ಸನ್ನು ಸ್ವೀಕರಿಸಿದನು. ॥೫-೧೦॥ ಆ ಬಳಿಕ ಇಂದ್ರಜಿತುವು ಅಗ್ನಿಯಲ್ಲಿ ಹೋಮ ಮಾಡಿ ದೇವತೆಗಳನ್ನೂ, ದಾನವರನ್ನೂ ತೃಪ್ತಿಗೊಳಿಸಿ ಅಂತರ್ಧಾನವಾಗಿ ಸಂಚರಿಸಬಲ್ಲ ಶಕ್ತಿಯುಳ್ಳ ಮಂಗಳಕರವಾದ ರಥವನ್ನೇರಿದನು. ಆ ರಥಶ್ರೇಷ್ಠವು ನಾಲ್ಕುಕುದುರೆಗಳಿಂದ ಕಂಗೊಳಿಸುತ್ತ, ರಾಕ್ಷಸರಾಜಕುಮಾರನಾದ ಇಂದ್ರಜಿತುವೇರಿ ಕುಳಿತಿರಲು, ಮಹಾ ತೀಕ್ಷ್ಣವಾದ ಬಾಣಗಳೊಡಗೂಡಿ ಬಹು ಮನೋಹರವಾಗಿ ಪ್ರಕಾಶಿಸುತ್ತಿದ್ದಿತು. ಇಷ್ಟೆಯಲ್ಲದೆ ಸುಮನೋಹರವಾದ ಅಪರಂಜಿಯ ಬಣ್ಣದಿಂದ ಕಂಗೊಳಿಸಿ, ಮೃಗಾಕಾರವಾದ ರಚನಾವಿಶೇಷಗಳನ್ನೊಳಗೊಂಡು ವಿರಾಜಿಸುತ್ತಿದ್ದ ಆ ರಥವು ಬಹಳ ಸೊಗಸೊಗೆಯುತ್ತಿದ್ದಿತು. ಆ ತರುವಾಯ ಬ್ರಹ್ಮಾಸ್ತ್ರಸಮನ್ವಿತನಾಗಿಯೂ, ಮಹಾಬಲನಾಗಿಯೂ ಇರುವ ಆ ಇಂದ್ರಜಿತುವು ಶತ್ರುಗಳಿಗೆ ಅಜೇಯನಾಗಿ ಶೋಭಿಸುತ್ತಿದ್ದನು.

ನಿರ್ಯಾಯ ನಗರಾದಿಂದ್ರಜಿತ್ಸಮಿತಿಂಜಯಃ । ಹುತ್ವಾಗ್ನಿಂ ರಾಕ್ಷಸೈರ್ಮಂತ್ರೈರಂತರ್ಧಾನಗತೋಽಬ್ರವೀತ್ ॥ ೧೬ ॥ " ಅದ್ಯ ಹತ್ವಾ ರಣೇ ಯೌ ತೌ ಮಿಥ್ಯಾಪ್ರವ್ರಾಜಿತೌ ವನೇ । ಜಯಂ ಪಿತ್ರೇ ಪ್ರದಾಸ್ಯಾಮಿ ರಾವಣಾಯ ರಣಾರ್ಜಿತಂ ॥೧೭॥ § ಅದ್ಯ ನಿರ್ವಾನರಾಮುರ್ವೀಂ ಹತ್ವಾ ರಾಮಂ ಸಲಕ್ಷ್ಮಣಂ । ಕರಿಷ್ಯೇ ಪರಮಪ್ರೀತಿಮಿತ್ಯುಕ್ತ್ವಾಂತರಧೀಯತ ॥ ೧೮ ॥ ಆಪಪಾತಾಽಥ ಸಂಕ್ರುದ್ಧೋ ದಶಗ್ರೀವೇಣ ಚೋದಿತಃ । ತೀಕ್ಷ್ಣಕಾರ್ಮುಕನಾರಾಚೈಸ್ತೀಕ್ಷ್ಣಸ್ತ್ವಿಂದ್ರರಿಪೂ ರಣೇ ॥ ೧೯ ॥

ಸ ಇಂದ್ರಜಿತ್ - ಆ ಇಂದ್ರಜಿತುವು, ನಗರಾತ್ - ಪಟ್ಟಣದಿಂದ, ಅಭಿನಿರ್ಯಾಯ - ಯುದ್ಧಾರ್ಥವಾಗಿ ಹೊರಗೆ ಬಂದು, ರಾಕ್ಷಸೈಃ-ನಿರ್ಋತಿದೇವತಾಕವಾದ, ಮಂತ್ರೈಃ ಮಂತ್ರಗಳಿಂದ, ಹುತ್ವಾ-ಹೋಮ ಮಾಡಿ, ಅಂತ....ತಃ - ಅಂತರ್ಧಾನ ಶಕ್ತಿಯನ್ನು ಹೊಂದಿ, ಅಬ್ರವೀತ್ - ನುಡಿದನು. ॥ ೧೬ ॥ ಯೌ - ಯಾವ ರಾಮಲಕ್ಷ್ಮಣರು, ವನೇ - ಅರಣ್ಯದಲ್ಲಿ, ಮಿಥ್ಯಾ....ತೌ - ಅಸತ್ಯವಾಗಿ ಹೊರಡಿಸಲ್ಪಟ್ಟರೋ, ತೌ - ಅವರೀರ್ವರನ್ನೂ, ಅದ್ಯ - ಈಗ, ರಣೇ - ಕಾಳಗದಲ್ಲಿ, ಹತ್ವಾ - ಕೊಂದು, ರಣಾರ್ಜಿತಂ - ಯುದ್ಧದಿಂದ ಸಂಪಾದಿಸಲ್ಪಟ್ಟ, ಜಯಂ - ವಿಜಯವನ್ನು, ಪಿತ್ರೇ - ತಂದೆಯಾದ, ರಾವಣಾಯ - ರಾವಣನಿಗೆ, ಪ್ರದಾಸ್ಯಾಮಿ - ಕೊಡುವೆನು, ಪರಮಪ್ರೀತಿಂ - ತಂದೆಗೆ ಅತ್ಯಂತ ಪ್ರೀತಿಯನ್ನುದ್ದೇಶಿಸಿ, ಸಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ಅದ್ಯ - ಈಗ, ಹತ್ವಾ - ಕೊಂದು, ಉರ್ವೀಂ - ಭೂಮಿಯನ್ನು, ನಿರ್ವಾನರಾಂ - ವಾನರರಹಿತವನ್ನಾಗಿ, ಕರಿಷ್ಯೇ - ಮಾಡುವೆನು, ಇತಿ - ಇಂತೆಂದು, ಉಕ್ತ್ವಾ - ಹೇಳಿ, ಅಂತರಧೀಯತ - ಅಂತರ್ಧಾನವನ್ನು ಹೊಂದಿದನು. ॥ ೧೭-೧೮ ॥ ಅಥ - ಬಳಿಕ, ದಶಗ್ರೀವೇಣ - ರಾವಣನಿಂದ, ಚೋದಿತಃ - ಪ್ರೇರಿತನಾದ, ತೀಕ್ಷ್ಣಃ - ಕ್ರೂರನಾದ, ಇಂದ್ರರಿಪುಸ್ತು - ಇಂದ್ರಜಿತುವಾದರೆ, ರಣೇ - ಕಾಳಗದಲ್ಲಿ, ಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ತೀಕ್ಷ್ಣ....ಚೈಃ - ತೀಕ್ಷ್ಣವಾದ ಧನುರ್ಬಾಣಗಳೊಡಗೂಡಿ, ಆಪಪಾತ - ಬಂದನು. ॥ ೧೯ ॥ ಸಃ - ಆ ಇಂದ್ರಜಿತುವು, ತ್ರಿಶಿರಸೌ -

ರಣಭೂಮಿಯಲ್ಲಿ ಜಯಶಾಲಿಯಾದ ಆ ಇಂದ್ರಜಿತುವು ಮಂತ್ರಗಳಿಂದ ಯಜ್ಞೇಶ್ವರನನ್ನು ಚೆನ್ನಾಗಿ ಆರಾಧಿಸಿದ ತರುವಾಯ ರಾಕ್ಷಸರೊಡಗೂಡಿ ಅಂತರ್ಧಾನನಾಗಿ ಗಗನವನ್ನು ಸೇರಿ ರಾಕ್ಷಸರೆಲ್ಲರನ್ನೂ ಕುರಿತು, " ಎಲೈ ರಾಕ್ಷಸವೀರರೇ ! ನಾನೀಗಲೇ ಹೊರಟು ಅಸತ್ಯವಾಗಿ ರಾಜ್ಯದಿಂದ ಹೊರಡಿಸಲಾದ ಆ ರಾಮಲಕ್ಷ್ಮಣರನ್ನು ಜಯಿಸಿ ನಮ್ಮ ತಂದೆಯಾದ ರಾವಣಾಸುರನಿಗೆ ವಿಜಯವನ್ನುಂಟುಮಾಡುವೆನು. ಇಷ್ಟುಮಾತ್ರವೇ ಅಲ್ಲದೆ ಆ ರಾಮಲಕ್ಷ್ಮಣರೊಡನೆ ಸಮಸ್ತ ವಾನರರನ್ನೂ ಕೊಂದು ಜಗತ್ತಿನಲ್ಲಿ ವಾನರರ ಹೆಸರೇ ಇಲ್ಲದಂತೆ ಮಾಡುತ್ತೇನೆ. ಇದರಿಂದ ನಾನು ನಮ್ಮ ತಂದೆಗೆ ಪರಮಪ್ರೀತಿಯನ್ನುಂಟುಮಾಡುವೆನು " ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು. ॥೧೧–೧೮॥ ಆ ಬಳಿಕ ರಾವಣಾಸುರನಿಂದ ಆಜ್ಞಪ್ತನಾದ ಇಂದ್ರಜಿತುವು ಮಹಾ ಕುಪಿತನಾಗಿ ಬಹು ತೀಕ್ಷ್ಣವಾದ ಬಾಣಗಳೊಡನೆ ರಣರಂಗಕ್ಕೆ ಹೊರಟನು. ಹೀಗೆ ಆ ರಾಕ್ಷಸರಾಜಕುಮಾರನು ರಣರಂಗಕ್ಕೆ ಬಂದು

§ " ಮಿಥ್ಯಾಪ್ರವ್ರಜಿತರಾದ ಶ್ರೀರಾಮಲಕ್ಷ್ಮಣರನ್ನು ಬಿಟ್ಟು, ಜಗತ್ತಿನಲ್ಲಿಯೇ ವಾನರರಿಲ್ಲದಂತೆ ಮಾಡಿ ತನ್ಮೂಲಕ ನಮ್ಮ ತಂದೆಗೆ ಪ್ರಿಯವನ್ನುಂಟುಮಾಡುತ್ತೇನೆ" ಎಂದು ಇಲ್ಲಿನ ವಾಸ್ತವಿಕಾರ್ಥ.

ಸ ದದರ್ಶ ಮಹಾವೀರ್ಯೌ ನಾಗೌ ತ್ರಿಶಿರಸಾವಿವ । ಸೃಜಂತಾವಿಷುಜಾಲಾನಿ ವೀರೌ ವಾನರಮಧ್ಯಗೌ ॥ ೨೦ ॥ ಇಮೌ ತಾವಿತಿ ಸಂಚಿಂತ್ಯ ಸಜ್ಯಂ ಕೃತ್ವಾಚ ಕಾರ್ಮುಕಂ । ಸಂತತಾನೇಷುಧಾರಾಭಿಃ ಪರ್ಜನ್ಯ ಇವ ವೃಷ್ಟಿಮಾನ್ ॥ ೨೧ ॥ ಸತು ವೈಹಾಯಸಂ ಪ್ರಾಪ್ಯ ಸರಥೋ ರಾಮಲಕ್ಷ್ಮಣೌ । ಅಚಕ್ಷುರ್ವಿಷಯೇ ತಿಷ್ಠನ್ ವಿವ್ಯಾಧ ನಿಶಿತೈಃ ಶರೈಃ ॥ ೨೨ ॥ ತೌ ತಸ್ಯ ಶರವೇಗೇನ ಪರೀತೌ ರಾಮಲಕ್ಷ್ಮಣೌ । ಧನುಷೀ ಸಶರೇ ಕೃತ್ವಾ ದಿವ್ಯಮಸ್ತ್ರಂ ಪ್ರಚಕ್ರತುಃ ॥ ೨೩ ॥ ಪ್ರಚ್ಛಾದಯಂತೌ ಗಗನಂ ಶರಜಾಲೈರ್ಮಹಾಬಲೌ । ತಮಸ್ತ್ರೈಸ್ಸೂರ್ಯಸಂಕಾಶೈರ್ನೈವ ಪಸ್ಪರ್ಶತುಃ ಶರೈಃ ॥ ೨೪ ॥

ಮೂರು ಹೆಡೆಗಳುಳ್ಳ, ನಾಗಾವಿವಸ್ಥಿತೌ - ಸರ್ಪಗಳಂತಿರುವ, ಇಷುಜಾಲಾನಿ - ಬಾಣಸಮೂಹಗಳನ್ನು, ಸೃಜಂತೌ - ಸೃಜಿಸುತ್ತಿರುವ, ವಾನ....ಗೌ - ಕಪಿಗಳ ಮಧ್ಯದಲ್ಲಿರುವ, ವೀರೌ - ಶೂರರಾದ ರಾಮಲಕ್ಷ್ಮಣರನ್ನು, ದದರ್ಶ - ಕಂಡನು. ॥ ೨೦ ॥ ಇಮೌ - ಇವರಿಬ್ಬರು, ತಾವಿತಿ - ಅವರೇ ಎಂದು, ಸಂಚಿತ್ಯ - ಆಲೋಚಿಸಿ, ಕಾರ್ಮುಕಂಚ - ಧನುಸ್ಸನ್ನೂ, ಸಜ್ಯಂ - ಜ್ಯಾಸಹಿತವನ್ನಾಗಿ, ಕೃತ್ವಾ - ಮಾಡಿ, ಸಂತ....ಭಿಃ - ನಿರಂತರವಾದ ಬಾಣಧಾರೆಗಳಿಂದ, ವೃಷ್ಟಿಮಾನ್ - ವರ್ಷಿಸುವ, ಪರ್ಜನ್ಯಇವ - ವರ್ಷದಂತೆ, ವವರ್ಷ - ವರ್ಷಿಸಿದನು. ॥ ೨೧ ॥ ಸತು - ಆ ಇಂದ್ರಜಿತುವಾದರೆ, ಸರಥಃ - ರಥದಿಂದೊಡಗೂಡಿ, ವೈಹಾಯಸಂ - ಗಗನವನ್ನು, ಪ್ರಾಪ್ಯ - ಹೊಂದಿ, ಅಚಕ್ಷುರ್ವಿಷಯೇ - ಕಣ್ಣಿಗೆ ಗೋಚರವಲ್ಲದ ಪ್ರದೇಶದಲ್ಲಿ, ತಿಷ್ಠನ್ - ನಿಂತು, ರಾಮಲಕ್ಷ್ಮಣೌ - ರಾಮಲಕ್ಷ್ಮಣರನ್ನು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು. ॥ ೨೨ ॥ ತಸ್ಯ - ಆ ಇಂದ್ರಜಿತುವಿನ, ಶರವೇಗೇನ - ಬಾಣವೇಗದಿಂದ, ಪರೀತೌ - ವ್ಯಾಪ್ತರಾದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ಧನುಷೀ - ಬಿಲ್ಲುಗಳನ್ನು, ಸಶರೇ - ಬಾಣಸಹಿತಗಳನ್ನಾಗಿ, ಕೃತ್ವಾ - ಮಾಡಿ, ದಿವ್ಯಂ - ಉತ್ತಮವಾದ, ಅಸ್ತ್ರಂ - ಅಸ್ತ್ರವನ್ನು, ಪ್ರಚಕ್ರತುಃ - ಮಾಡಿದರು. ॥ ೨೩ ॥ ಮಹಾಬಲೌ - ಬಹು ಬಲಾಢ್ಯರಾದ ರಾಮಲಕ್ಷ್ಮಣರು, ಗಗನಂ - ಅಂತರಿಕ್ಷವನ್ನು, ಶರಜಾಲೈಃ - ಬಾಣಸಮೂಹಗಳಿಂದ, ಪ್ರಚ್ಛಾದಯಂತೌ - ಮುಚ್ಚುತ್ತಿದ್ದರೂ, ಸೂರ್ಯಸಂಕಾಶೈಃ - ಸೂರ್ಯಸದೃಶವಾದ, ಶರೈಃ - ಬಾಣಗಳಿಂದಲೂ, ಅಸ್ತ್ರೈಃ - ಅಸ್ತ್ರಗಳಿಂದಲೂ, ತಂ - ಆ ಇಂದ್ರಜಿತುವನ್ನು, ನೈವಪಸ್ಪರ್ಶತುಃ - ಸ್ಪರ್ಶಿಸಲೇ ಇಲ್ಲವು. ॥ ೨೪ ॥ ಶ್ರೀಮಾನ್ - ಜಯಲಕ್ಷ್ಮೀ

ಮಹಾ ಬಲಿಷ್ಠವಾದ ಮೂರು ಹೆಡೆಗಳುಳ್ಳ ಸರ್ಪಗಳಂತೆ ಪ್ರಕಾಶಿಸುತ್ತಿರುವವರೂ, ಅಪರಿಮಿತವಾದ ಬಾಣಗಳನ್ನು ಪ್ರಯೋಗಿಸುತ್ತಿರುವವರೂ ಆದ ಶ್ರೀರಾಮಲಕ್ಷ್ಮಣರನ್ನು ನೋಡಿದನು; ಕೂಡಲೇ ಅವನು ಇವರೇ ರಾಮಲಕ್ಷ್ಮಣರೆಂದು ನಿರ್ಧರಿಸಿ ತನ್ನ ಧನುಸ್ಸನ್ನು ಸಿದ್ಧಪಡಿಸಿಕೊಂಡು ವರ್ಷಾಕಾಲದ ಮೇಘದಂತೆ ಅವರಿಬ್ಬರ ಮೇಲೂ ಬಾಣವರ್ಷವನ್ನು ಸುರಿಸಿದನು. ಇಷ್ಟೆಯಲ್ಲದೆ ರಥ ಸಹಿತನಾಗಿ ಗಗನಾಂಗಣದಲ್ಲಿ ಅಂತರ್ಹಿತನಾಗಿದ್ದ ಆ ರಾಕ್ಷಸನು, ಮಹಾ ತೀಕ್ಷ್ಣವಾದ ಬಾಣಗಳಿಂದ ರಾಜಪುತ್ರರಾದ ಆ ರಾಮಲಕ್ಷ್ಮಣರೀರ್ವರನ್ನೂ ಬಹಳವಾಗಿ ಮರ್ದಿಸಿದನು. ಆಗ ಅವರೀರ್ವರೂ ಮಹಾ ಕೋಪೋದ್ದೀಪಿತರೂ ಶರವೇಗಸಮನ್ವಿತರೂ ಆಗಿ ಧನುಸ್ಸುಗಳಲ್ಲಿ ಮಹಾ ಬಾಣಗಳನ್ನು ಸಂಧಿಸಿ ಪ್ರಯೋಗಿಸಲು ಪ್ರಾರಂಭಿಸಿ ಅಂತರಿಕ್ಷವನ್ನೇ ಬಾಣಗಳಿಂದ ಮುಚ್ಚಿದರು. ॥ ೧೯-೨೪ ॥ ಆದರೆ ಆ ಬಾಣಗಳಾವುವೂ ಇಂದ್ರಜಿತುವಿಗೆ

ಸಹಿ ಧೂಮಾಂಧಕಾರಂಚ ಚಕ್ರೇ ಪ್ರಚ್ಛಾದಯನ್ನಭಃ । ದಿಶಶ್ಚಾಂತರ್ದಧೇ ಶ್ರೀಮಾನ್ನೀಹಾರತಮಸಾವೃತಃ ॥ ೨೫ ॥ ನೈವ ಜ್ಯಾತಲನಿರ್ಘೋಷೋ ನಚ ನೇಮಿಖುರಸ್ವನಃ । ಶುಶ್ರುವೇಚ ರತಸ್ತಸ್ಯ ನಚ ರೂಪಂ ಪ್ರಕಾಶತೇ ॥ ೨೬ ॥ ಘನಾಂಧಕಾರೇ ತಿಮಿರೇ ಶರವರ್ಷಮಿವಾದ್ಭುತಂ। ಸ ವವರ್ಷ ಮಹಾಬಾಹು ರ್ನಾರಾಚ ಶರವೃಷ್ಟಿಭಿಃ ॥೨೭॥ ಸರಾಮಂ ಸೂರ್ಯಸಂಕಾಶೈಃ ಶರೈರ್ದತ್ತವರೋ ಭೃಶಂ । ವಿವ್ಯಾಧ ಸಮರೇ ಕ್ರುದ್ಧಸ್ಸರ್ವಗಾತ್ರೇಷು ರಾವಣಿಃ ॥ ೨೮ ॥ ತೌ ಹನ್ಯಮಾನೌ ನಾರಾಚೈರ್ಧಾರಾಭಿರಿವ ಪರ್ವತೌ । ಹೇಮಪುಂಖಾನ್ನರವ್ಯಾಘ್ರೌ ತಿಗ್ಮಾನ್ ಮುಮುಚತುಃ ಶರಾನ್ ॥ ೨೯ ॥

ಸಂಪನ್ನನಾದ, ಸಹಿ - ಆ ಇಂದ್ರಜಿತುವಾದರೆ, ನಭಃ - ಅಂತರಿಕ್ಷವನ್ನು, ಪ್ರಚ್ಛಾದಯನ್ - ಮುಚ್ಚುವವನಾಗಿ, ಧೂಮಾಂಧಕಾರಂ - ಹೊಗೆಯಿಂದ ಕತ್ತಲುಳ್ಳದ್ದನ್ನಾಗಿ, ಚಕ್ರೇ - ಮಾಡಿದನು, ದಿಶಃ - ದಿಕ್ಕುಗಳನ್ನು, ನೀಹಾ....ಸಾ - ಮಂಜೆಂಬ ಅಂಧಕಾರದಿಂದ, ಆವೃತಃ - ಆಚ್ಛಾದಿತಗಳನ್ನಾಗಿ, ಅಂತರ್ದಧೇ - ಮುಚ್ಚಿದನು. ॥ ೨೫ ॥ ಚರತಃ - ತಿರುಗುತ್ತಿರುವ, ತಸ್ಯ - ಆ ಇಂದ್ರಜಿತುವಿನ, ಜ್ಯಾತ......ವ - ಹೆದೆಯ ಘೋಷವು, ನಶುಶ್ರುವೇ - ಕೇಳಲ್ಪಡಲಿಲ್ಲ, ನಮಿ....ನಃ - ಅಂಚುಗಳ ಗೊರಸುಗಳ ಶಬ್ದವು, ನಚ - ಕೇಳಲ್ಪಡಲೇ ಇಲ್ಲ, ರೂಪಂ - ಆಕಾರವು, ನಪ್ರಕಾಶತೇಚ - ಕಂಡು ಬರಲೇ ಇಲ್ಲ. ॥ ೨೬ ॥ ಮಹಾಬಾಹುಃ - ಮಹಾಭುಜನಾದ, ಸಃ - ಆ ಇಂದ್ರಜಿತುವು, ಘನಾಂಧಕಾರೇ - ದಟ್ಟವಾದ ಕತ್ತಲುಳ್ಳ ಅಂಧಕಾರದಲ್ಲಿ, ಅದ್ಭುತಂ - ಆಶ್ಚರ್ಯಕರವಾದ, ಶರವರ್ಷಮಿವ - ಉದಕವರ್ಷವನ್ನಂತೆ, ನಾರಾ... ಭಿಃ - ನಾರಾಚ ಎಂಬ ಬಾಣವಿಶೇಷಗಳ ವರ್ಷಗಳಿಂದ, ವವರ್ಷ - ಸುರಿಸಿದನು, ಸರಾವಣಿಃ - ಆ ರಾವಣಪುತ್ರನು, ಸಮರೇ - ಕಾಳಗದಲ್ಲಿ, ಕ್ರುದ್ಧಃ - ಕುಪಿತನಾಗಿ, ರಾಮಂ - ಶ್ರೀರಾಮನನ್ನು, ಸೂರ್ಯಸಂಕಾಶೈಃ - ಸೂರ್ಯಸದೃಶವಾದ, ಶರೈಃ - ಬಾಣಗಳಿಂದ, ಸರ್ವಗಾತ್ರೇಷು - ಸಮಸ್ತಾವಯವಗಳಲ್ಲಿಯೂ, ಭೃಶಂ - ಬಹಳವಾಗಿ, ವಿವ್ಯಾಧ - ಹೊಡೆದನು. ॥ ೨೭-೨೮ ॥ ಧಾರಾಭಿಃ - ಉದಕಧಾರೆಗಳಿಂದ, ಪರ್ವತಾವಿವ ಬೆಟ್ಟಗಳಂತೆ, ನಾರಾಚಃ - ಬಾಣಗಳಿಂದ, ಹನ್ಯಮಾನೌ - ಹೊಡೆಯಲ್ಪಡುತ್ತಿರುವ, ತೌನರವ್ಯಾಘ್ರೌ - ಆ ನರಶ್ರೇಷ್ಠರು, ಹೇಮಪುಂಖಾನ್ - ಬಂಗಾರದ ಮುಳ್ಳುಗಳುಳ್ಳ, ತಿಗ್ಮಾನ್ - ತೀಕ್ಷ್ಣವಾದ, ಶರಾನ್ - ಬಾಣಗಳನ್ನು, ಮುಮುಚತುಃ - ಬಿಟ್ಟರು. ॥ ೨೯ ॥ ತೇಕಂಕಪತ್ರಿಣಃ - ಆ ಬಾಣಗಳು, ಪತಗಾಃ - ಪಕ್ಷಿಗಳಂತೆ ವೇಗ

ತಗಲಲಿಲ್ಲವು. ಅಲ್ಲದೆ ಆ ಸಮಯದಲ್ಲಿ ರಾಕ್ಷಸರಾಜಕುಮಾರನು ಗಗನಮಂಡಲವನ್ನೆಲ್ಲ ಧೂಮಾಂಧಕಾರದಿಂದ ಮುಚ್ಚಿದನು. ಆಗ ಯುದ್ಧ ಮಾಡುತ್ತಿದ್ದ ಅವನ ಧನುಷ್ಟಂಕಾರವು ಮಾತ್ರ ಕೇಳಿಸುತ್ತಿದ್ದಿತಾಗಲಿ ಅವನ ರಥಧ್ವನಿಯಾಗಲಿ, ಅವನ ರೂಪವಾಗಲಿ ಕಾಣಿಸಲೇ ಇಲ್ಲವು. ಆ ರಾಕ್ಷಸನೀರೀತಿ ಅಂತರಿಕ್ಷದಲ್ಲಡಗಿ ತನ್ನ ಬಾಣವೃಷ್ಟಿಯಿಂದ ಎಲ್ಲೆಲ್ಲಿಯೂ ಕತ್ತಲು ಕವಿಸಿದನು. ಹೀಗೆ ಬ್ರಹ್ಮದೇವನಿಂದ ವರಪ್ರಸಾದವನ್ನು ಪಡೆದಿದ್ದನಾದುದರಿಂದ ಆ ಇಂದ್ರಜಿತುವು, ಸೂರ್ಯಸಮಾನವಾದ ತೇಜಸ್ಸುಳ್ಳ ಶ್ರೀರಾಮಲಕ್ಷ್ಮಣರ ಸರ್ವಾವಯವಗಳಲ್ಲಿಯೂ ಬಾಣಗಳನ್ನು ಪ್ರಯೋಗಿಸಿ ಬಾಧೆಗೊಳಿಸಿದನು. ಈ ರೀತಿ ಮಹಾ ತೀಕ್ಷ್ಣಗಳಾದ ಬಾಣಗಳಿಂದ ಪೀಡಿತರಾದ ಶ್ರೀರಾಮಲಕ್ಷ್ಮಣರು ಮಹಾ ಕೋಪೋದ್ದೀಪಿತರಾಗಿ ಮತ್ತೂ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿದರು. ಆ ಬಾಣಗಳೆಲ್ಲವೂ ಅಂತರಿಕ್ಷವನ್ನಡರಿ, ಅಲ್ಲಿ ನಿಂತು ಯುದ್ಧ ಮಾಡು

ಅಂತರಿಕ್ಷೇ ಸಮಾಸಾದ್ಯ ರಾವಣಿಂ ಕಂಕಪತ್ರಿಣಃ । ನಿಕೃತ್ಯ ಪತಗಾ ಭೂಮೌ
ಪೇತುಸ್ತೇ ಶೋಣಿತೋಕ್ಷಿತಾಃ ॥ ೩೦ ॥ ಅತಿಮಾತ್ರಂ ಶರೌಘೇಣ ಪೀಡ್ಯಮಾನೌ
ನರೋತ್ತಮೌ । ತಾನಿಷೂನ್ ಪತತೋ ಭಲ್ಲೈರನೇಕೈರ್ನಿಚಕೃಂತತುಃ ॥ ೩೧ ॥
ಯತೋ ಹಿ ದದೃಶಾತೇ ತೌ ಶರಾನ್ನಿಪತತಃ ಶಿತಾನ್ । ತತಸ್ತು ತೌ ದಾಶರಥೀ ಸಸೃ
ಜಾತೇಽಸ್ತ್ರಮುತ್ತಮಂ ॥ ೩೨ ॥ ರಾವಣಿಸ್ತು ದಿಶಸ್ಸರ್ವಾ ರಥೇನಾಽತಿರಥಃ ಪತನ್ ।
ವಿವ್ಯಾಧ ತೌ ದಾಶರಥೀ ಲಘ್ವಸ್ತ್ರೋ ನಿಶಿತೈಃ ಶರೈಃ ॥ ೩೩ ॥ ತೇನಾತಿವಿದ್ಧೌ ತೌ
ವೀರೌ ರುಕ್ಮಪುಂಖೈಸ್ಸುಸಂಹಿತೈಃ । ಬಭೂವತುರ್ದಾಶರಥೀ ಪುಷ್ಪಿತಾವಿವ ಕಿಂಶುಕೌ
॥ ೩೪ ॥ ನಾಽಸ್ಯ ವೇದ ಗತಿಂ ಕಶ್ಚಿನ್ನ ಚ ರೂಪಂ ಧನುಃ ಶರಾನ್ । ನ ಚಾನ್ಯದ್ವಿದಿತಂ

ವುಳ್ಳವುಗಳಾಗಿ, ಅಂತರಿಕ್ಷೇ - ಗಗನದಲ್ಲಿ, ರಾವಣಿಂ - ಇಂದ್ರಜಿತುವನ್ನು, ಸಮಾಸಾದ್ಯ - ಹೊಂದಿ, ನಿಕೃತ್ಯ - ಕತ್ತರಿಸಿ, ಶೋಣಿತೋಕ್ಷಿತಾಃ - ರಕ್ತದಿಂದ ತೋಯಿಸಲ್ಪಟ್ಟವುಗಳಾಗಿ, ಭೂಮೌ - ನೆಲದಲ್ಲಿ, ನಿಪೇತುಃ - ಬಿದ್ದವು. ॥೩೦॥ ಅತಿಮಾತ್ರಂ - ವಿಶೇಷವಾಗಿ, ಶರೌಘೇಣ - ಬಾಣಸಮೂಹ ದಿಂದ, ನರೋತ್ತಮೌ - ರಾಮಲಕ್ಷ್ಮಣರು, ಪೀಡ್ಯಮಾನೌ - ಬಾಧಿಸಲ್ಪಟ್ಟವರಾಗಿ, ಪತತಃ - ಬೀಳುತ್ತಿರುವ, ತಾನಿಷೂನ್ - ಆ ಬಾಣಗಳನ್ನು, ಅನೇಕೈಃ - ಅನೇಕವಾದ, ಭಲ್ಲೈಃ - ಭಲ್ಲಾಯುಧ ಗಳಿಂದ, ನಿಚಕೃಂತತುಃ - ಕತ್ತರಿಸಿದರು. ॥ ೩೧ ॥ ಯತೋ ಹಿ - ಎತ್ತಕಡೆಯಲ್ಲಾದರೆ, ತೌ - ಆ ರಾಮಲಕ್ಷ್ಮಣರು, ನಿಪತತಃ - ಬೀಳುತ್ತಿರುವ, ಶಿತಾನ್ - ತೀಕ್ಷ್ಣವಾದ, ಶರಾನ್ - ಬಾಣಗಳನ್ನು, ದದೃಶಾತೇ - ಕಂಡರೋ, ತತಸ್ತು - ಅಲ್ಲಾದರೆ, ತೌ ದಾಶರಥೀ - ಆ ರಾಮಲಕ್ಷ್ಮಣರು, ಉತ್ತಮಂ- ಶ್ರೇಷ್ಠವಾದ, ಅಸ್ತ್ರಂ - ಅಸ್ತ್ರಗಳನ್ನು, ಸಸೃಜಾತೇ - ಬಿಟ್ಟರು. ॥ ೩೨ ॥ ಅತಿರಥಃ - ಅತಿರಥನಾದ, ಲಘ್ವಸ್ತ್ರಃ - ವೇಗವತ್ತಾದ ಅಸ್ತ್ರವುಳ್ಳ, ರಾವಣಿಸ್ತು - ರಾವಣಿಯಾದರೆ, ರಥೇನ - ರಥದಿಂದ, ಸರ್ವಾಃ - ಸಮಸ್ತವಾದ, ದಿಶಃ - ದಿಕ್ಕುಗಳಲ್ಲಿ, ಪತನ್ - ಬೀಳುತ್ತಿರುವವನಾಗಿ, ತೌ ದಾಶರಥೀ - ಆ ರಾಮಲಕ್ಷ್ಮಣರನ್ನು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು. ॥ ೩೩ ॥ ತೇನ - ಆ ಇಂದ್ರಜಿತುವಿನಿಂದ, ಸುಸಂಹಿತೈಃ - ಚೆನ್ನಾಗಿ ಕಟ್ಟಲ್ಪಟ್ಟ, ರುಕ್ಮಪುಂಖೈಃ - ಬಂಗಾರದ ಕೊಂಕಿಗಳುಳ್ಳ ಬಾಣಗಳಿಂದ, ಅತಿವಿದ್ಧೌ - ವಿಶೇಷವಾಗಿ ಹೊಡೆಯಲ್ಪಟ್ಟ, ತೌ ವೀರೌ - ಶೂರರಾದ, ದಾಶರಥೀ - ಆ ರಾಮಲಕ್ಷ್ಮಣರು, ಪುಷ್ಪಿತೌ - ಹುವ್ವುಬಿಟ್ಟಿರುವ, ಕಿಂಶುಕಾವಿವ - ಮುತ್ತುಗದ ಗಿಡಗಳಂತೆ, ಬಭೂವತುಃ - ಆದರು. ॥ ೩೪ ॥ ಅಭ್ರಸಂಪ್ಲವೇ - ಮೇಘಾವರಣದಲ್ಲಿ, ಸೂರ್ಯಸ್ಯ - ಸೂರ್ಯನ, ಗತಿರಿವ - ಗಮನವನ್ನಂತೆ, ಕಶ್ಚಿತ್ - ಯಾವನೂ, ನವೇದ - ತಿಳಿ

ತ್ತಿದ್ದ ಇಂದ್ರಜಿತುವನ್ನು ತಾಕಿ ರಕ್ತಸಿಕ್ತಗಳಾಗಿ ಭೂಮಿಗೆ ಬಿದ್ದುವು. ॥೨೯–೩೦॥ ಶ್ರೀರಾಮ ಲಕ್ಷ್ಮಣರು ಅದೇ ಸಮಯದಲ್ಲಿ ಆ ರಾಕ್ಷಸನು ಪ್ರಯೋಗಿಸಿದ ಬಾಣಗಳಿಂದ ಪೀಡಿತ ರಾದರೂ, ಅನೇಕ ಭಲ್ಲಾಯುಧಗಳನ್ನು ಪ್ರಯೋಗಿಸಿ ಅವನೆಸೆದ ಬಾಣಗಳನ್ನೆಲ್ಲವನ್ನೂ ಖಂಡಿಸುತ್ತಿದ್ದರು. ಆ ರಾಕ್ಷಸನು ಯಾವ ದಿಕ್ಕಿನಲ್ಲಿ ನಿಂತು ಯುದ್ಧ ಮಾಡುತ್ತಿದ್ದನೋ ಆ ದಿಕ್ಕಿಗೂ ಅನೇಕ ಬಾಣಗಳನ್ನು ಪ್ರಯೋಗಿಸಿದರು. ಆಗಲಾ ಮೇಘನಾದನು ದಶರಥರಾಜ ಪುತ್ರರಾದ ಆ ರಾಮಲಕ್ಷ್ಮಣರ ಮೇಲೆ ಮತ್ತೂ ತೀಕ್ಷ್ಣವಾದ ಬಾಣಗಳನ್ನೆಸೆದನು. ಬಂಗಾ ರದ ಹಿಡಿಗಳುಳ್ಳವೂ, ಮಹಾ ತೀಕ್ಷ್ಣವೂ ಆದ ಆ ಬಾಣಗಳಿಂದ ಬಹಳವಾಗಿ ತಾಡಿತರಾದ ಆ ರಾಜಪುತ್ರರೀರ್ವರೂ ಹೂ ಮೊಳೆತ ಮುತ್ತುಗದ ಗಿಡಗಳಂತೆ ಶೋಭಿಸುತ್ತಿದ್ದರು. ಇಷ್ಟಾ

ಕಿಂಚಿತ್ಸೂರ್ಯಸ್ಯೇವಾಭ್ರಸಂಪ್ಲವೇ ॥೩೫॥ ತೇನ ವಿದ್ಧಾಶ್ಚ ಹರಯೋ ನಿಹತಾಶ್ಚ ಗತಾಸವಃ । ಬಭೂವುಃ ಶತಶಸ್ತತ್ರ ಪತಿತಾ ಧರಣೀತಲೇ ॥ ೩೬ ॥ ಲಕ್ಷ್ಮಣಸ್ತು ಸುಸಂಕ್ರುದ್ಧೋ ಭ್ರಾತರಂ ವಾಕ್ಯಮಬ್ರವೀತ್ । "ಬ್ರಾಹ್ಮಮಸ್ತ್ರಂ ಪ್ರಯೋಕ್ಷ್ಯಾಮಿ ವಧಾರ್ಥಂ ಸರ್ವರಕ್ಷಸಾಂ" ॥ ೩೭ ॥ ತಮುವಾಚ ತತೋ ರಾಮೋ ಲಕ್ಷ್ಮಣಂ ಶುಭಲಕ್ಷಣಂ । "ನೈಕಸ್ಯ ಹೇತೋ ರಕ್ಷಾಂಸಿ ಪೃಥಿವ್ಯಾಂ ಹಂತುಮರ್ಹಸಿ ॥ ೩೮ ॥ ಅಯುಧ್ಯಮಾನಂ ಪ್ರಚ್ಛನ್ನಂ ಪ್ರಾಂಜಲಿಂ ಶರಣಾಗತಂ । ಪಲಾಯಂತಂ ಪ್ರಮತ್ತಂ

ಯನು, ರೂಪಂ - ಆಕಾರವನ್ನೂ, ಧನುಃ - ಧನುಸ್ಸನ್ನೂ, ಶರಾ - ಬಾಣಗಳನ್ನೂ, ನ - ತಿಳಿಯಲಾರನು, ಕಿಂಚಿತ್ - ಸ್ವಲ್ಪವಾದ, ಅನ್ಯಚ್ಚ - ಮತ್ತೊಂದೂ, ನವಿದಿತಂ - ತಿಳಿಯಲ್ಪಡಲಿಲ್ಲ. ॥೩೫॥ ತತ್ರ - ಆ ಯುದ್ಧರಂಗದಲ್ಲಿ, ಧರಣೀತಲೇ - ಭೂಪ್ರದೇಶದಲ್ಲಿ, ತೇನ - ಆ ಇಂದ್ರಜಿತುವಿನಿಂದ, ವಿದ್ಧಾಶ್ಚ - ಹೊಡೆಯಲ್ಪಟ್ಟವರೂ ಆಗಿ, ಹತಾಃ - ನಿಹತರಾದ, ಗತಾಸವಶ್ಚ - ಹೋದ ಪ್ರಾಣಗಳುಳ್ಳ, ಶತಶಃ - ಅನೇಕರಾದ, ಹರಯಃ - ವಾನರರು, ಪತಿತಾಃ - ಬಿದ್ದವರು, ಬಭೂವುಃ - ಆದರು. ॥ ೩೬ ॥ ಲಕ್ಷ್ಮಣಸ್ತು - ಲಕ್ಷ್ಮಣನಾದರೆ, ಸುಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ಸರ್ವರಕ್ಷಸಾಂ - ಸಮಸ್ತ ರಾಕ್ಷಸರ, ವಧಾರ್ಥಂ - ಸಂಹಾರಾರ್ಥವಾಗಿ, ಬ್ರಾಹ್ಮಮಸ್ತ್ರಂ - ಬ್ರಹ್ಮಾಸ್ತ್ರವನ್ನು, ಪ್ರಯೋಕ್ಷ್ಯಾಮಿ - ಬಿಡುವೆನು, ಇತಿ - ಇಂತೆಂದು, ಭ್ರಾತರಂ - ಅಗ್ರಜನನ್ನು ಕುರಿತು, ಅಬ್ರವೀತ್ - ನುಡಿದನು, ತತಃ - ಅನಂತರದಲ್ಲಿ, ರಾಮಃ - ಶ್ರೀರಾಮನು, ಪುಣ್ಯಲಕ್ಷಣಂ - ಪುಣ್ಯಕರವಾದ ಗುರ್ತುಗಳುಳ್ಳ, ತಂಲಕ್ಷ್ಮಣಂ ಆ ಲಕ್ಷ್ಮಣನನ್ನು ಕುರಿತು, ಉವಾಚ- ಹೇಳಿದನು. ॥ ೩೭ ॥ ಏಕಸ್ಯಹೇತೋಃ - ಒಬ್ಬನ ನಿಮಿತ್ತವಾಗಿ, ಪೃಥಿವ್ಯಾಂ - ಭೂಮಿಯಲ್ಲಿರುವ, ರಕ್ಷಾಂಸಿ - ರಕ್ಕಸರೆಲ್ಲರನ್ನೂ, ಹಂತುಂ - ಹೊಡೆಯಲು, ನಾರ್ಹಸಿ - ಯೋಗ್ಯನಾಗಬೇಡ. ಇಹ - ಈಗ, ತ್ವಂ - ನೀನು, ಅಯುಧ್ಯಮಾನಂ - ಯುದ್ಧಮಾಡದಿರುವವನನ್ನು, ಪ್ರಚ್ಛನಂ - ಅವಿತುಕೊಂಡವನನ್ನೂ, ಪ್ರಾಂಜಲಿಂ - ಕೈಮುಗಿದವನನ್ನೂ, ಶರಣಾಗತಂ - ನೀನೇ ಗತಿಯೆಂದು ನಂಬಿದವನನ್ನೂ, ಪಲಾಯಂತಂ - ಓಡಿಹೋಗುವವನನ್ನೂ, ಪ್ರಮತ್ತಂವಾ - ಮದ್ಯಪಾನ

ದರೂ ಆ ರಾಕ್ಷಸನು ಮೇಘಾವೃತನಾದ ದಿನಕರನಂತೆ, ಮಾಯಾಚ್ಛಾದಿತನಾಗಿ ಕಣ್ಣಿಗೆ ಕಾಣಿಸಿಕೊಳ್ಳದೆಯೇ ಇದ್ದನು. ॥ ೩೧–೩೫ ॥ ಅದೇ ಸಮಯದಲ್ಲಿಯೇ ವಾನರರೆಲ್ಲರೂ ಆ ರಾಕ್ಷಸನ ಬಾಣಗಳಿಂದ ಬಹಳವಾಗಿ ನೊಂದರು. ಅನೇಕರು ಅವನ ಬಾಣಗಳಿಂದ ಭೇದಿಸಿ ಹೋದ ಶರೀರಗಳುಳ್ಳವರಾಗಿ ಭೂಮಿಗೆ ಬಿದ್ದುಹೋದರು. ಆಗ ಮಹಾ ತೇಜಸ್ವಿಯಾದ ಲಕ್ಷ್ಮಣಸ್ವಾಮಿಯು ಬಹಳವಾಗಿ ಮುನಿದು, ಅಣ್ಣನಾದ ಶ್ರೀರಾಮಮೂರ್ತಿಯನ್ನು ಕುರಿತು, "ರಘುಕುಲೋತ್ತಮ! ಈ ರಾಕ್ಷಸರೆಲ್ಲರನ್ನೂ ನಿರ್ಮೂಲಗೊಳಿಸಲು ಇದೋ ನಾನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತೇನೆ. ಅಪ್ಪಣೆಯನ್ನು ಕೊಡು" ಎಂದನು. ಈ ರೀತಿ ನುಡಿದ ಲಕ್ಷ್ಮಣನ ಮಾತುಗಳನ್ನು ಕೇಳಿ ಶ್ರೀರಾಮನು "ತಮ್ಮಾ ಲಕ್ಷ್ಮಣಾ! ಒಬ್ಬನಿಗೋಸ್ಕರ ಅನೇಕ ಸಹಸ್ರ ಮಂದಿ ರಾಕ್ಷಸರನ್ನು ಕೊಲ್ಲುವುದು ನ್ಯಾಯವಲ್ಲವು. ಇದಕ್ಕಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಬಾರದು. ಇದೂ ಅಲ್ಲದೆ ನೀನೊಂದುವೇಳೆ ಈ ಮಹಾಸ್ತ್ರವನ್ನು ಪ್ರಯೋಗಿಸಿದ್ದಾದರೆ, ಯುದ್ಧಮಾಡದಿರುವವರೂ, ಹೆದರಿ ಅವಿತುಕೊಂಡಿರುವವರೂ, ಶರಣಾಗತರಾದವರೂ, ಪಲಾಯನವಾಗುತ್ತಿರುವವರೂ, ಮದಮತ್ತರಾದವರೂ

ವಾ ನತ್ವಂ ಹಂತುಮಿಹಾರ್ಹಸಿ ॥ ೩೯ ॥ ಅಸ್ಯೈವತು ವಧೇ ಯತ್ನಂ ಕರಿಷ್ಯಾವೋ ಮಹಾಬಲ! । ಆದೇಕ್ಷ್ಯಾವೋ ಮಹಾವೇಗಾನಸ್ತ್ರಾನಾಶೀವಿಷೋಪಮಾರ್ ॥ ೪೦ ॥ ತಮೇನಂ ಮಾಯಿನಂ ಕ್ಷುದ್ರಮಂತರ್ಹಿತರಥಂ ಬಲಾತ್ । ರಾಕ್ಷಸಂ ನಿಹನಿಷ್ಯಂತಿ ದೃಷ್ಟ್ವಾ ವಾನರಯೂಥಪಾಃ ॥ ೪೧ ॥ ಯದ್ಯೇಷ ಭೂಮಿಂ ವಿಶತೇ ದಿವಂ ವಾ ರಸಾತಲಂ ವಾಪಿ ನಭಸ್ಸ್ಥಲಂ ವಾ । ಏವಂ ನಿಗೂಢೋಽಪಿ ಮಮಾಸ್ತ್ರದಗ್ಧಃ ಪತಿಷ್ಯತೇ ಭೂಮಿತಲೇ ಗತಾಸುಃ" ॥ ೪೨ ॥

ಗಳಿಂದ ಮದವೇರಿದವನನ್ನಾಗಲಿ, ಹಂತುಂ - ಹೊಡೆಯುವುದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ. ॥ ೩೮-೩೯ ॥ ಹೇ ಮಹಾಬಲ - ಎಲೈ ಮಹಾಬಲನೇ, ಕಿಂತು - ಮತ್ತೇನೆಂದರೆ, ಅಸ್ಯ - ಇವನ, ವಧಏವ-ಸಂಹಾರದಲ್ಲಿಯೇ, ಯತ್ನಂ-ಪ್ರಯತ್ನವನ್ನು, ಕರಿಷ್ಯಾವಃ-ಮಾಡೋಣ, ಆಶೀ.....ಮಾರ್-ಸರ್ಪಸದೃಶವಾದ, ಮಹಾವೇಗಾರ್ - ಬಹು ವೇಗವುಳ್ಳ, ಅಸ್ತ್ರಾರ್ - ಅಸ್ತ್ರಗಳನ್ನು, ಆದೇಕ್ಷ್ಯಾವಃ - ಪ್ರಯೋಗ ಮಾಡೋಣ. ॥ ೪೦ ॥ ವಾನ.....ಪಾಃ - ಕಪಿಯೂಥಪತಿಗಳು, ಮಾಯಿನಂ - ಮಾಯೆಗಳುಳ್ಳ, ಕ್ಷುದ್ರಂ - ನೀಚನಾದ, ಅಂತ....ಥಂ - ತಿರೋಹಿತವಾದ ರಥವುಳ್ಳ, ತಮೇನಂರಾಕ್ಷಸಂ - ಆ ಈ ರಕ್ಕಸನನ್ನು, ದೃಷ್ಟ್ವಾ - ಕಂಡು, ನಿಹನಿಷ್ಯಂತಿ - ಹೊಡೆವರು. ॥ ೪೧ ॥ ಏಷಃ - ಇವನು, ಭೂಮಿಂ - ಭೂಮಿಯನ್ನಾಗಲೀ, ದಿವಂವಾ - ಸ್ವರ್ಗವನ್ನಾಗಲೀ, ರಸಾತಲಂವಾ - ಪಾತಾಳವನ್ನಾಗಲೀ, ನಭಸ್ಥಲಂವಾಪಿ - ಅಂತರಿಕ್ಷವನ್ನಾಗಲೀ, ವಿಶತೇಯದಿ - ಪ್ರವೇಶ ಮಾಡಿದರೂ, ಏವಂ - ಈ ಪ್ರಕಾರವಾಗಿ, ನಿಗೂಢೋಽಪಿ - ಆಚ್ಛಾದಿತನಾದರೂ, ಮಮ - ನನ್ನ, ಅಸ್ತ್ರದಗ್ಧಃ - ಅಸ್ತ್ರದಿಂದ ಸುಡಲ್ಪಟ್ಟವನಾಗಿ, ಗತಾಸುಃ - ಗತವಾದ ಪ್ರಾಣಗಳುಳ್ಳವನಾಗಿ, ಭೂಮಿತಲೇ - ಭೂಪ್ರದೇಶದಲ್ಲಿ, ಪತಿಷ್ಯತೇ - ಬೀಳುವನು. ॥ ೪೨ ॥ ಮಹಾತ್ಮಾ - ಮಹಾ ಬುದ್ಧಿಮಂತನಾದ, ರಘುಪ್ರವೀರಃ -

ಎಲ್ಲರೂ ನಾಶವಾಗಿ ಹೋಗುತ್ತಾರೆ. ಇದು ಬಹಳ ಪಾಪಕರವಾದದ್ದು. ಆದುದರಿಂದ ನಾವು ಇತರ ರಾಕ್ಷಸರ ವಧೆಯಲ್ಲಿ ತೊಡಗದೆ ಈ ಇಂದ್ರಜಿತುವಿನ ವಧೆಗಾಗಿಯೇ ಪ್ರಯತ್ನ ಮಾಡೋಣ ॥ ೩೭-೪೦ ॥ ಎಲೈ ಮಹಾ ಬಲನೇ! ಮಹಾ ವೇಗವತ್ತುಗಳಾಗಿಯೂ, ಸರ್ಪಸಮಾನಗಳಾಗಿಯೂ ಇರುವ ಬಾಣಗಳನ್ನೇ ಪ್ರಯೋಗಿಸೋಣ. ಮಹಾ ಮಾಯಾವಿಯಾದ ಈ ರಾಕ್ಷಸನ ಮಾಯೆಯನ್ನು ಭೇದಿಸೋಣ. ನಾವು ಇವನ ಮಾಯೆಯನ್ನು ಭೇದಿಸಿದರೆ ನಮ್ಮ ವಾನರಸೇನೆಯು ಈ ರಾಕ್ಷಸರೆಲ್ಲರನ್ನೂ ಸಂಹರಿಸಲು ಸಮರ್ಥರಾಗುವರು" ಎಂದು ಹೇಳಿದನು. ಶ್ರೀರಾಮಮೂರ್ತಿಯು ಈ ರೀತಿ ನುಡಿದು ಧನುಸ್ಸಿನಲ್ಲಿ ಬಾಣವನ್ನು ಹೂಡಿ, "ಲಕ್ಷ್ಮಣಾ! ನಾವು ಈ ಬಾಣಗಳನ್ನು ಸಂತತವೂ ಪ್ರಯೋಗಿಸುತ್ತಿದ್ದರೆ ನಮ್ಮ ಶತ್ರುವಾದ ಈ ರಾಕ್ಷಸನು ಭೂವಿವರವನ್ನು ಪ್ರವೇಶಿಸಿದರೂ, ಸ್ವರ್ಗವನ್ನಡರಿದರೂ, ರಸಾತಲವನ್ನು ಸೇರಿದರೂ, ನಭಸ್ಥಳದಲ್ಲಿಯೇ ಅವಿತಿದ್ದರೂ ಎಲ್ಲಿಯೇ ಇದ್ದರೂ ಮಡಿದು ಬೀಳುತ್ತಾನೆ" ಎಂದು ಹೇಳಿದನು. ಈ ರೀತಿ ನುಡಿದು ಮಹಾನುಭಾವನೂ, ರಘು

ಇತ್ಯೇವಮುಕ್ತ್ವಾ ವಚನಂ ಮಹಾತ್ಮಾ
ರಘುಪ್ರವೀರಃ ಪ್ಲವಗರ್ಷಭೈರ್ವೃತಃ ।
ವಧಾಯ ರೌದ್ರಸ್ಯ ನೃಶಂಸಕರ್ಮಣ
ಸ್ತದಾ ಮಹಾತ್ಮಾ ತ್ವರಿತಂ ನಿರೀಕ್ಷತೇ ॥ ೪೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಶೀತಿತಮಸ್ಸರ್ಗಃ.

ರಘುವಂಶಸ್ಥರಲ್ಲಿ ಬಹು ಶೂರನಾದ ಶ್ರೀರಾಮನು, ಇತ್ಯೇವಂ - ಈ ಪ್ರಕಾರವಾಗಿ, ಉಕ್ತ್ವಾ - ಹೇಳಿ, ಪ್ಲವಗರ್ಷಭೈಃ - ವಾನರಶ್ರೇಷ್ಠರಿಂದ, ವೃತಃ - ಪರಿವೃತನಾಗಿ, ಮಹಾತ್ಮಾ - ಮಹಾ ಧೈರ್ಯಶಾಲಿಯಾಗಿ, ನೃಶಂ....ಣಃ - ಘಾತಕ ವ್ಯಾಪಾರಿಯಾದ, ರೌದ್ರಸ್ಯ - ಕ್ರೂರನಾದ ಇಂದ್ರಜಿತುವಿನ, ವಧಾಯ-ಸಂಹಾರಕ್ಕಾಗಿ, ತದಾ-ಆಗ, ನಿರೀಕ್ಷತೇ ಉಪಾಯವನ್ನು ಯೋಚಿಸುತ್ತಿದ್ದನು. ॥ ೪೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಶೀತಿತಮಸ್ಸರ್ಗಃ.

ಕುಲೋತ್ತಮನೂ, ವಾನರವೀರಪರಿವೃತನೂ, ಮಹಾತ್ಮನೂ ಆದ ಶ್ರೀರಾಮನು, ಮಹಾ ಭಯಂಕರವಾದ ಯುದ್ಧವನ್ನು ಮಾಡುತ್ತಿದ್ದ ಆ ಮೇಘನಾದನನ್ನು ವಧಿಸಲು ಸಂಕಲ್ಪಿಸಿ ನಿರೀಕ್ಷಿಸುತ್ತಿದ್ದನು. ॥ ೪೧–೪೩ ॥

ಇಂತಿದು ಇಂದ್ರಜಿತ್ಕೃತ ಮಾಯಾ ಯುದ್ಧ ವೃತ್ತಾಂತವೆಂಬ
ಎಂಬತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕಾಶೀತಿತಮಸ್ಸರ್ಗಃ

¶ ವಿಜ್ಞಾಯತು ಮನಸ್ತಸ್ಯ ರಾಘವಸ್ಯ ಮಹಾತ್ಮನಃ । ಸನ್ನಿವೃತ್ತ್ಯಾಹವಾತ್ತಸ್ಮಾತ್ಸಂವಿವೇಶ ಪುರಂ ತತಃ ॥ ೧ ॥ ♆ ಸೋಽನುಸ್ಮೃತ್ಯ ವಧಂ ತೇಷಾಂ ರಾಕ್ಷಸಾನಾಂ ತರಸ್ವಿನಾಂ। ಕ್ರೋಧತಾಮ್ರೇಕ್ಷಣಃ ಶೂರೋ ನಿರ್ಜಗಾಮ ಮಹಾದ್ಯುತಿಃ॥ ೨॥ ಸಪಶ್ಚಿಮೇನ ದ್ವಾರೇಣ ನಿರ್ಯಯೌ ರಾಕ್ಷಸೈರ್ವೃತಃ । ಇಂದ್ರಜಿತ್ತು ಮಹಾವೀರ್ಯಃ ಪೌಲಸ್ತ್ಯೋ ದೇವಕಂಟಕಃ ॥ ೩ ॥ ಇಂದ್ರಜಿತ್ತು ತತೋ ದೃಷ್ಟ್ವಾ

ತತಃ - ಬಳಿಕ, ಮಹಾತ್ಮನಃ - ಮಹಾ ಮನಸ್ವಿಯಾದ, ತಸ್ಯರಾಘವಸ್ಯ - ಆ ಶ್ರೀರಾಮನ, ಮನಃ - ಮನವನ್ನು, ವಿಜ್ಞಾಯ - ತಿಳಿದು, ತಸ್ಮಾದಾಹವಾತ್ - ಆ ಯುದ್ಧದಿಂದ, ಸನ್ನಿವರ್ತ್ಯ - ಹಿಂತಿರುಗಿ, ಪುರಂ - ಪಟ್ಟಣವನ್ನು, ಸಂವಿವೇಶ - ಪ್ರವೇಶ ಮಾಡಿದನು. ॥ ೧ ॥ ಮಹಾದ್ಯುತಿಃ - ಮಹಾ ತೇಜಸ್ವಿಯಾದ, ಶೂರಃ - ಶೌರ್ಯವಂತನಾದ, ಸಃ - ಆ ಇಂದ್ರಜಿತುವು, ತರಸ್ವಿನಾಂ - ಬಲವಂತರಾದ, ತೇಷಾಂರಾಕ್ಷಸಾನಾಂ - ಆ ಕುಂಭಕರ್ಣಾದಿ ರಕ್ಕಸರ, ವಧಂ - ಸಂಹಾರವನ್ನು, ಅನುಸ್ಮೃತ್ಯ-ಸ್ಮರಿಸಿಕೊಂಡು, ಕ್ರೋಧತಾಮ್ರೇಕ್ಷಣಃ-ಕ್ರೋಧದಿಂದ ಕೆರಳಿದ ಕಣ್ಣುಗಳುಳ್ಳವನಾಗಿ, ನಿರ್ಜಗಾಮ - ಹೊರಟುಹೋದರು. ॥ ೨ ॥ ದೇವಕಂಟಕಃ - ದೇವಶತ್ರುವಾದ, ಪೌಲಸ್ತ್ಯಃ - ಪುಲಸ್ತ್ಯವಂಶೋತ್ಪನ್ನನಾದ, ಮಹಾವೀರ್ಯಃ - ಮಹಾ ಸಾಮರ್ಥ್ಯವಂತನಾದ, ಸಃ ಇಂದ್ರಜಿತ್ - ಈ ಇಂದ್ರಜಿತುವು, ರಾಕ್ಷಸೈಃ - ರಕ್ಕಸರೊಡನೆ, ವೃತಃ - ಸುತ್ತುವರೆಯಲ್ಪಟ್ಟವನಾಗಿ, ಪಶ್ಚಿಮೇನ - ಪಡವಲಾದ, ದ್ವಾರೇಣ - ಊರುಬಾಗಿಲಿನಿಂದ, ನಿರ್ಯಯೌ - ಹೊರಟುಬಂದನು. ॥ ೩ ॥ ತತಃ - ಬಳಿಕ, ಇಂದ್ರಜಿತ್ - ಇಂದ್ರಜಿತುವು, ಭ್ರಾತರೌ - ಅಣ್ಣತಮ್ಮಂದಿರಾದ, ವೀರೌ - ಶೂರ

ಮಹಾನುಭಾವನಾದ ಶ್ರೀರಾಮಮೂರ್ತಿಯು ನುಡಿದ ಈ ಮಾತುಗಳ ಭಾವವನ್ನು ತಿಳಿದು ಇಂದ್ರಜಿತುವು ಭಯಚಕಿತನಾಗಿ ಯುದ್ಧವನ್ನು ತೊರೆದು ಲಂಕಾನಗರಕ್ಕೆ ಹೋದನು. ಆ ತರುವಾಯ ಅವನು ಕುಂಭಕರ್ಣನೇ ಮೊದಲಾದ ರಾಕ್ಷಸವೀರರ ಮರಣ ವೃತ್ತಾಂತವೆಲ್ಲವನ್ನೂ ಸ್ಮರಿಸಿಕೊಂಡು ಮಹಾ ಕ್ರುದ್ಧನಾಗಿ ಕಣ್ಣುಗಳನ್ನು ಕೆರಳಿಸಿಕೊಂಡು ಮಹಾ ತೇಜಸ್ವಿಯಾಗಿ ಪುನಃ ರಣಾಂಗಣಕ್ಕೆ ಹೊರಟನು. ಆಗ ಅನೇಕ ಸಹಸ್ರ ರಾಕ್ಷಸವೀರರು ಅವನನ್ನು ಹಿಂಬಾಲಿಸಲು ಅವನು ನಗರದ ಪಶ್ಚಿಮ ದ್ವಾರದಿಂದ ಹೊರಟುಬಂದನು. ರಾವಣನ

¶ "ವಿಜ್ಞಾಯ" ಎಂಬ ಪದದ ಮೂರನೆಯ ಅಕ್ಷರವಾದ "ಯ"ಕಾರವು ಗಾಯತ್ರಿಯ ಹತ್ತೊಂಬತ್ತನೆಯ ಅಕ್ಷರವು. ಇಲ್ಲಿಗೆ ಹದಿನೆಂಟುಸಾವಿರ ಶ್ಲೋಕಗಳು ಮುಗಿದು ಹತ್ತೊಂಬತ್ತನೆಯ ಸಾವಿರವು ಮೊದಲಾಗುತ್ತದೆ.

(ಗೋ+ತಿ+ಮ)

♆ ಶ್ರೀರಾಮಲಕ್ಷ್ಮಣರನ್ನು ಜಯಿಸಲು ನಿಕುಂಭಿಲಾ ಯಾಗವನ್ನು ಮಾಡಿ ಅತುಲ ಶಕ್ತಿಯನ್ನು ಸಂಪಾದಿಸಬೇಕೆಂಬ ಉದ್ದಿಶ್ಯದಿಂದ, ಇಂದ್ರಜಿತುವು, ತಾನು ಮಾಡಹೋಗುವ ಯಾಗವು ಮುಗಿಯುವವರೆಗೂ ಶ್ರೀರಾಮಲಕ್ಷ್ಮಣರು ಯುದ್ಧದಿಂದ ನಿವೃತ್ತರಾಗಿರುವುದಕ್ಕಾಗಿ ಮಾಯಾ ಸೀತೆಯನ್ನು ಇಲ್ಲಿ ವಧಿಸಿ ತನ್ಮೂಲಕ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ಬಯಸುತ್ತಾನೆ.

ಭ್ರಾತರೌ ರಾಮಲಕ್ಷ್ಮಣೌ । ರಣಾಯಾಽಭ್ಯುದ್ಯತೌ ವೀರೌ ಮಾಯಾಂ ಪ್ರಾದು ಷ್ಕರೋತ್ತದಾ ॥೪॥ ಇಂದ್ರಜಿತ್ತು ರಥೇ ಸ್ಥಾಪ್ಯ ಸೀತಾಂ ಮಾಯಾಮಯೀಂ ತತಃ । ಬಲೇನ ಮಹತಾವೃತ್ಯ ತಸ್ಯಾ ವಧಮರೋಚಯತ್ ॥ ೫ ॥ ಮೋಹನಾರ್ಥಂತು ಸರ್ವೇಷಾಂ ಬುದ್ಧಿಂ ಕೃತ್ವಾ ಸುದುರ್ಮತಿಃ । ಹಂತುಂ ಸೀತಾಂ ವ್ಯವಸಿತೋ ವಾನ ರಾಭಿಮುಖೋ ಯಯೌ ॥ ೬ ॥ ತಂ ದೃಷ್ಟ್ವಾ ತ್ವಭಿನಿರ್ಯಾಂತಂ ನಗರ್ಯಾಃ ಕಾನನೌಕಸಃ । ಉತ್ಪೇತುರಭಿಸಂಕ್ರುದ್ಧಾಃ ಶಿಲಾಹಸ್ತಾ ಯುಯುತ್ಸವಃ ॥ ೭ ॥ ಹನುಮಾನ್ ಪುರತಸ್ತೇಷಾಂ ಜಗಾಮ ಕಪಿಕುಂಜರಃ । ಪ್ರಗೃಹ್ಯ ಸುಮಹಚ್ಛೃಂಗಂ

ರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರನ್ನು, ರಣಾಯ - ಕಾಳಗಕ್ಕೆ, ಅಭ್ಯುದ್ಯತೌ - ಉದ್ಯುಕ್ತ ರಾದವರನ್ನಾಗಿ, ದೃಷ್ಟ್ವಾ - ಕಂಡು, ತದಾ - ತತ್ಕ್ಷಣದಲ್ಲಿ, ಮಾಯಾಂ - ಮಾಯೆ ಯನ್ನು, ಪ್ರಾದುಷ್ಕರೋತ್ - ಸೃಷ್ಟಿಮಾಡಿದನು. ॥೪॥ ತತಃ - ಬಳಿಕ, ಇಂದ್ರಜಿತ್ - ಇಂದ್ರ ಜಿತುವಾದರೆ, ರಥೇ - ತೇರಿನಲ್ಲಿ, ಮಾಯಾಮಯೀಂ - ಮಾಯಾವಿಕಾರಳಾದ, ಸೀತಾಂ - ಸೀತಾ ದೇವಿಯನ್ನು, ಸ್ಥಾಪ್ಯ - ಕುಳ್ಳಿರಿಸಿಕೊಂಡು, ಮಹತಾ - ಬಹಳವಾದ, ಬಲೇನ - ಸೇನೆಯಿಂದ, ಆವೃತ್ಯ - ಸುತ್ತಿಕೊಂಡು, ತಸ್ಯಾಃ - ಆ ಮಾಯಾ ಸೀತೆಯ, ವಧಂ - ಸಂಹಾರವನ್ನು, ಅರೋಚಯತ್ - ಮಾಡಬಯಸಿದನು. ॥೫॥ ಸುದುರ್ಮತಿಃ - ಬಹಳ ದುರ್ಬುದ್ಧಿಯುಳ್ಳ ಆ ಇಂದ್ರ ಜಿತುವು, ಸರ್ವೇಷಾಂ - ಸಮಸ್ತ ವಾನರರಿಗೂ, ಮೋಹನಾರ್ಥಂ - ವಂಚಿಸುವ ನಿಮಿತ್ತವಾಗಿ, ಬುದ್ಧಿಂ - ಮತಿಯನ್ನು, ಕೃತ್ವಾ - ಮಾಡಿ, ಸೀತಾಂ - ಆ ಮಾಯಾ ಸೀತೆಯನ್ನು, ಹಂತುಂ - ಹೊಡೆಯಲು, ವ್ಯವಸಿತಃ - ಯತ್ನಿಸಿ, ವಾನ....ಖಃ - ಕಪಿಗಳಿಗೆದುರಾಗಿ, ಯಯೌ - ಬಂದನು. ॥ ೬ ॥ ಕಾನನೌಕಸಃ - ಕಪಿಗಳು, ನಗರ್ಯಾಃ - ಲಂಕೆಯಿಂದ, ಅಭಿನಿರ್ಯಾಂತಂ - ಹೊರಟು ಬರುತ್ತಿರುವ, ತಂ - ಆ ಇಂದ್ರಜಿತುವನ್ನು, ದೃಷ್ಟ್ವಾ - ಕಂಡು, ಅಭಿಸಂಕ್ರುದ್ಧಾಃ - ಕೋಪ ವುಳ್ಳವರಾಗಿ, ಯುಯುತ್ಸವಃ-ಕಾಳಗ ಮಾಡಬಯಸಿ, ಶಿಲಾಹಸ್ತಾಃ-ಕಲ್ಲುಗಳೇ ಕೈಗಳಲ್ಲುಳ್ಳವರಾಗಿ, ಉತ್ಪೇತಃ - ಮೇಲಕ್ಕೆ ಹಾರಿದರು. ॥೭॥ ಕಪಿಕುಂಜರಃ - ವಾನರಶ್ರೇಷ್ಠನಾದ, ಹನುಮಾನ್ - ಆಂಜ ನೇಯನು, ತೇಷಾಂ - ಆ ಕಪಿಗಳ, ಪುರತಃ - ಮುಂದುಗಡೆ, ಪರ್ವತಸ್ಯ - ಬೆಟ್ಟದ, ಸುಮಹತ್ - ಬಹಳ ದೊಡ್ಡದಾದ, ದುರಾಸದಂ - ಹಿಡಿಯಲಸಾಧ್ಯವಾದ, ಶೃಂಗಂ - ಶಿಖರವನ್ನು, ಪ್ರಗೃಹ್ಯ - ಹಿಡಿದು, ಜಗಾಮ - ತೆರಳಿದನು. ॥೮॥ ಸಃ - ಆ ಆಂಜನೇಯನು, ಗತಾನಂದಾಂ - ಹೋಗಲಾಡಿಸ

ಮಗನೂ, ಲೋಕಕಂಟಕನೂ, ಮಹಾ ಪರಾಕ್ರಮಶಾಲಿಯೂ ಆದ ಆ ಇಂದ್ರಜಿತುವು ಯುದ್ಧಭೂಮಿಯಲ್ಲಿ ಸಂಚರಿಸುತ್ತಿರುವ ರಾಜಪುತ್ರರಾದ ಶ್ರೀರಾಮಲಕ್ಷ್ಮಣರೀರ್ವರನ್ನೂ ನೋಡಿ ಇತರರಿಗೆ ದಿಗ್ಭ್ರಾಂತಿಯನ್ನುಂಟುಮಾಡುವಂತೆ ಸೀತಾದೇವಿಯ ಆಕಾರವನ್ನು ನಿರ್ಮಿಸಿದನು. ಈ ರೀತಿ ಮಾಯಾ ಸೀತೆಯನ್ನು ನಿರ್ಮಿಸಿದ ತರುವಾಯ ಆಕೆಯನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ವಾನರರೆದುರಿನಲ್ಲಿಯೇ ಆಕೆಯನ್ನು ವಧಿಸಲುದ್ಯುಕ್ತನಾದನು. ॥ ೧–೫ ॥ ಈ ರೀತಿ ಲಂಕಾಪಟ್ಟಣದಿಂದ ಬರುತ್ತಿರುವ ಆ ರಾಕ್ಷಸನನ್ನು ಕಂಡು ವಾನರ ರೆಲ್ಲರೂ ಯುದ್ಧ ಮಾಡಬೇಕೆಂಬ ಅಹಮಹಮಿಕೆಯಿಂದ ಶಿಲೆಗಳನ್ನೇ ಆಯುಧಗಳನ್ನಾಗಿ ಧರಿಸಿ ಮಹಾ ಕೋಪೋದ್ದೀಪಿತರಾಗಿ ಸನ್ನದ್ಧರಾದರು. ಆ ವಾನರಸೇನೆಯ ಮುಂಗಡೆ ಇದ್ದ ಹನುಮಂತನು ಮಹೋನ್ನತವಾದ ಪರ್ವತಶಿಖರವನ್ನು ಹಿಡಿದು ಮುನ್ನುಗ್ಗಿದನು.

ಪರ್ವತಸ್ಯ ದುರಾಸದಂ ||೮|| ಸ ದದರ್ಶ ಹತಾನಂದಾಂ ಸೀತಾಮಿಂದ್ರಜಿತೋ ರಥೇ ।
ಏಕವೇಣೀಧರಾಂ ದೀನಾಮುಪವಾಸಕೃಶಾನನಾಂ || ೯ || ಪರಿಕ್ಲಿಷ್ಟೈಕವಸನಾ
ಮಮೃಜಾಂ ರಾಘವಪ್ರಿಯಾಂ । ರಜೋಮಲಾಭ್ಯಾಮಾಲಿಪ್ತೈಸ್ಸರ್ವಗಾತ್ರೈರ್ವರ
ಸ್ತ್ರಿಯಂ || ೧೦ || ತಾಂ ನಿರೀಕ್ಷ್ಯ ಮುಹೂರ್ತಂ ತು ಮೈಥಿಲೀತ್ಯಧ್ಯವಸ್ಯ ತು ।
ಬಭೂವಾಚಿರದೃಷ್ಟಾಹಿ ತೇನ ಸಾ ಜನಕಾತ್ಮಜಾ || ೧೧ || ತಾಂ ದೀನಾಂ ಮಲದಿ
ಗ್ಧಾಂಗೀಂ ರಥಸ್ಥಾಂ ದೃಶ್ಯ ಮೈಥಿಲೀಂ । ಬಾಷ್ಪಪರ್ಯಾಕುಲಮುಖೋ ಹನುಮಾ
ನ್ವ್ಯಥಿತೋಽಭವತ್ || ೧೨ || ಅಬ್ರವೀತ್ತಾಂತು ಶೋಕಾರ್ತಾಂ ನಿರಾನಂದಾಂ ತಪ

ಲ್ಪಟ್ಟ ಸಂತೋಷವುಳ್ಳ, ಏಕವೇಣೀಧರಾಂ - ಒಂದೇ ಜಡೆಯನ್ನು ಧರಿಸಿರುವ, ದೀನಾಂ - ದೀನ ಳಾದ, ಉಪ...ನಾಂ - ಉಪವಾಸದಿಂದ ಕುಗ್ಗಿದ ಮುಖವುಳ್ಳ, ಪರಿ....ನಾಂ - ಮಾಸಿದ ಒಂದೇ ಒಂದು ವಸ್ತ್ರವುಳ್ಳ, ಅಮೃಜಾಂ - ಸ್ನಾನವಿಲ್ಲದೆ ಅರಶಿನ ಮುಂತಾದ ಲೇಪನಗಳಿಲ್ಲದಿರುವ, ರಜೋ ಮಲಾಭ್ಯಾಂ - ಧೂಳಿಗಳಿಂದಲೂ, ಮಾಲಿನ್ಯದಿಂದಲೂ, ಆಲಿಪ್ತೈಃ - ವ್ಯಾಪ್ತಗಳಾದ, ಸರ್ವಗಾತ್ರೈಃ- ಸಮಸ್ತಾವಯವಗಳಿಂದಲೂ, ಉಪಲಕ್ಷಿತಾಂ - ಕೂಡಿರುವ, ವರಸ್ತ್ರಿಯಂ - ಉತ್ತಮ ಸ್ತ್ರೀಯಾದ, ರಾಘವಪ್ರಿಯಾಂ - ಶ್ರೀರಾಮನ ನಲ್ಲೆಯಾದ, ಸೀತಾಂ - ಸೀತಾದೇವಿಯನ್ನು, ಇಂದ್ರಜಿತಃ - ಇಂದ್ರ ಜಿತುವಿನ, ರಥೇ - ತೇರಿನಲ್ಲಿ, ದದರ್ಶ - ಕಂಡನು. || ೯-೧೦ || ತೇನ - ಆ ಆಂಜನೇಯನಿಂದ, ಸಾಜನಕಾತ್ಮಜಾ - ಆ ಸೀತಾದೇವಿಯು, ಹಿ - ಯಾವ ಕಾರಣದಿಂದ, ಅಚಿರದೃಷ್ಟಾ - ವಿಲಂಬವಿಲ್ಲದ ಕಾಲದಲ್ಲಿಯೋ, ದೃಷ್ಟಾತ್ವ - ನೋಡಲ್ಪಟ್ಟಳೋ, ತಸ್ಮಾತ್ - ಆ ಕಾರಣದಿಂದ, ತಾಂ - ಆ ಸೀತಾ ದೇವಿಯನ್ನು, ಮುಹೂರ್ತಂ - ಎರಡು ಘಳಿಗೆ ಕಾಲ, ನಿರೀಕ್ಷ್ಯ - ನೋಡಿ, ಮೈಥಿಲೀತಿ - ಸೀತಾ ದೇವಿಯೆಂದು, ಅಧ್ಯವಶ್ಯತು - ನಿಶ್ಚಯಿಸಿ, ವಿಷಣ್ಣಃ - ವ್ಯಸನಗೊಂಡವನು, ಬಭೂವ - ಆದನು. || ೧೧ || ಹನುಮಾನ್ - ಆಂಜನೇಯನು, ಮಲದಿಗ್ಧಾಂಗೀಂ - ಮಾಲಿನ್ಯದಿಂದ ವ್ಯಾಪ್ತವಾದ ಶರೀರ ವುಳ್ಳ, ದೀನಾಂ - ದೀನಳಾದ, ತಾಂಮೈಥಿಲೀಂ - ಆ ಸೀತಾದೇವಿಯನ್ನು, ರಥಸ್ಥಾಂ - ಇಂದ್ರಜಿತು ವಿನ ತೇರಿನಲ್ಲಿ ಇರುವವಳನ್ನಾಗಿ, ದೃಶ್ಯ - ಕಂಡು, ಬಾಷ್ಪ......ಖಃ - ಕಂಬನಿಯಿಂದ ವ್ಯಾಕುಲವಾದ ಮುಖವುಳ್ಳವನಾಗಿ, ವ್ಯಥಿತಃ - ವಿಷಾದಗೊಂಡವನು, ಅಭವತ್ - ಆದನು. ||೧೨|| ಸಮುಹಾಕಪಿಃ -

---

ಆಗಲಾ ವಾಯುನಂದನನು ಇಂದ್ರಜಿತುವಿನ ರಥದಲ್ಲಿದ್ದ ಮಾಯಾ ಸೀತೆಯನ್ನು ಕಂಡನು. ಆಕೆಯು ನಿರಾನಂದೆಯಾಗಿಯೂ, ಏಕವೇಣೀಧರೆಯಾಗಿಯೂ, ಉಪವಾಸದಿಂದ ಕೃಶಿಸಿರು ವವಳಾಗಿಯೂ, ಬಹಳವಾಗಿ ಮಾಸಿಹೋಗಿರುವ ವಸ್ತ್ರವನ್ನು ಧರಿಸಿರುವವಳಾಗಿಯೂ, ಬಹಳವಾಗಿ ವ್ಯಸನಗೊಂಡವಳಾಗಿಯೂ ಇದ್ದಳು. ಶ್ರೀರಾಮಚಂದ್ರನಿಗೆ ಅತ್ಯಂತ ಪ್ರಿಯ ಪಾತ್ರಳಾಗಿಯೂ, ಧೂಳಿಯಿಂದ ವ್ಯಾಪ್ತವಾದ ಶರೀರವುಳ್ಳವಳಾಗಿಯೂ, ಸ್ತ್ರೀರತ್ನ ವಾಗಿಯೂ ಇದ್ದ ಸೀತಾದೇವಿಯಂತೆಯೇ ಇದ್ದ ಆ ಮಾಯಾಕಾರವನ್ನು ನೋಡಿ ಆಂಜನೇ ಯನು ಆಕೆಯೇ ಸೀತಾದೇವಿಯೆಂದು ತಿಳಿದನು. ಆತನು ಆಕೆಯನ್ನು ನೋಡಿ ಬಹಳ ಕಾಲ ವಾಗಿದ್ದುದರಿಂದ ಬೇಗನೆ ಗುರ್ತರಿಯದೆ ಸ್ವಲ್ಪ ಹೊತ್ತು ಚೆನ್ನಾಗಿ ಕಣ್ಣಿಟ್ಟು ನೋಡಿ ಈಕೆಯೇ ಸೀತೆಯೆಂದು ತಿಳಿದನು. ||೬-೧೧|| ಆಗಲಾ ಹನುಮಂತನು ಧೂಳಿಯಿಂದ ವ್ಯಾಪ್ತವಾದ ಶರೀರ ವುಳ್ಳವಳೂ, ಮೇಘನಾದನ ರಥದಲ್ಲಿ ಕುಳಿತಿರುವವಳೂ ಆದ ಆ ಸೀತಾದೇವಿಯನ್ನು ಕಂಡು ಕಣ್ಣೀರಿನಿಂದ ವ್ಯಾಪ್ತವಾದ ಮುಖವುಳ್ಳವನಾದನು. ಆ ತರುವಾಯ ಆತನು ದುಃಖಿಸಿ

ಸ್ವಿನೀಂ । ಸೀತಾಂ ರಥಸ್ಥಿತಾಂ ದೃಷ್ಟ್ವಾ ರಾಕ್ಷಸೇಂದ್ರಸುತಾಶ್ರಿತಾಂ ॥ ೧೩ ॥ ಕಿಂ ಸಮರ್ಥಿತಮಸ್ಯೇತಿ ಚಿಂತಯನ್ ಸಮಹಾಕಪಿಃ । ಸಹ ತೈರ್ವಾನರಶ್ರೇಷ್ಠೈ ರಭ್ಯಧಾವತ ರಾವಣಿಂ ॥ ೧೪ ॥ ತದ್ವಾನರಬಲಂ ದೃಷ್ಟ್ವಾ ರಾವಣಿಃ ಕ್ರೋಧಮೂರ್ಛಿತಃ । ಕೃತ್ವಾ ವಿಕೋಶಂ ನಿಸ್ತ್ರಿಂಶಂ ಮೂರ್ಧ್ನಿ ಸೀತಾಂ ಪರಾಮೃಶತ್ ॥ ೧೫ ॥ ತಾಂ ಸ್ತ್ರಿಯಂ ಪಶ್ಯತಾಂ ತೇಷಾಂ ತಾಡಯಾಮಾಸ ರಾವಣಿಃ । ಕ್ರೋಶಂತೀಂ ರಾಮ ರಾಮೇತಿ ಮಾಯಯಾ ಯೋಜಿತಾಂ ರಥೇ ॥೧೬॥ ಗೃಹೀತಮೂರ್ಧಜಾಂ ದೃಷ್ಟ್ವಾ ಹನುಮಾನ್ ದೈನ್ಯಮಾಗತಃ । ಶೋಕಜಂ ವಾರಿ ನೇತ್ರಾಭ್ಯಾ ಮಸೃಜನ್ಮಾರುತಾತ್ಮಜಃ

ಆ ಆಂಜನೇಯನು, ಶೋಕಾರ್ತಾಂ - ವ್ಯಸನಗೊಂಡ, ನಿರಾನಂದಾಂ - ಸಂತೋಷವಿಲ್ಲದಿರುವ, ತಪಸ್ವಿನೀಂ - ದೈನ್ಯವುಳ್ಳ, ರಥಸ್ಥಿತಾಂ - ತೇರಿನಲ್ಲಿ ಕುಳಿತಿರುವ, ಸೀತಾಂ - ಸೀತಾದೇವಿಯನ್ನು, ರಾಕ್ಷ.....ತಾಂ - ರಾವಣನ ಮಗನಾದ ಇಂದ್ರಜಿತುವಿಂದ ಆಶ್ರಯಿಸಲ್ಪಟ್ಟವಳನ್ನಾಗಿ, ದೃಷ್ಟ್ವಾ - ಕಂಡು, ಅಸ್ಯ - ಈ ಇಂದ್ರಜಿತುವಿಂದ, ಕಿಂಸಮರ್ಥಿತಂ-ಏನು ಸಾಧನ ಮಾಡಲ್ಪಡುವುದೋ, ಇತಿ - ಇಂತೆಂದು, ಚಿಂತಯನ್ - ಆಲೋಚಿಸುತ್ತ, ಅಬ್ರವೀತ್ - ಮನದಲ್ಲಿಯೇ ನುಡಿದನು. ॥ ೧೩ ॥ ತೈರ್ವಾನರಶ್ರೇಷ್ಠೈಸ್ಸಹ - ಆ ವಾನರೋತ್ತಮರೊಡಗೂಡಿ, ರಾವಣಿಂ - ಮೇಘನಾದನನ್ನು ಕುರಿತು, ಅಭ್ಯಧಾವತ - ಅಟ್ಟಿಬಂದನು, ತದ್ವಾನರಬಲಂ - ಆ ಕಪಿಸೈನ್ಯವನ್ನು, ದೃಷ್ಟ್ವಾ - ಕಂಡು, ರಾವಣಿಃ - ಮೇಘನಾದನು, ಕ್ರೋಧಮೂರ್ಛಿತಃ - ಕೋಪದಿಂದ ವ್ಯಾಪ್ತನಾಗಿ, ನಿಸ್ತ್ರಿಶಂ - ಕತ್ತಿಯನ್ನು, ವಿಕೋಶಂ - ಒರೆಯಿಲ್ಲದ್ದನ್ನಾಗಿ, ಕೃತ್ವಾ - ಮಾಡಿ, ಸೀತಾಂ - ಮಾಯಾ ಸೀತೆಯನ್ನು, ಮೂರ್ಧ್ನಿ - ಮಂಡೆಯಲ್ಲಿ, ಪರಾಮೃಶತ್ - ಹಿಡಿದುಕೊಂಡನು. ॥ ೧೪-೧೫ ॥ ರಾವಣಿಃ - ಇಂದ್ರಜಿತುವು, ತೇಷಾಂ - ಆ ಹನುಮಂತನೇ ಮೊದಲಾದ ಕಪಿಗಳು, ಪಶ್ಯತಾಂ - ನೋಡುತ್ತಿರಲು, ರಥೇ - ತೇರಿನಲ್ಲಿ, ಮಾಯಯಾ - ಮಾಯೆಯಿಂದ, ಯೋಜಿತಾಂ - ನಿರ್ಮಿಸಲ್ಪಟ್ಟ, ರಾಮರಾಮೇತಿ- ರಾಮರಾಮ ಎಂದು, ಕ್ರೋಶಂತೀಂ - ಕೂಗುತ್ತಿರುವ, ತಾಂಸ್ತ್ರಿಯಂ - ಆ ಹೆಣ್ಣನ್ನು, ತಾಡಯಾಮಾಸ - ಹೊಡೆದನು. ॥ ೧೬ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಗೃಹೀ....ಜಾಂ - ಹಿಡಿಯಲ್ಪಟ್ಟ ಕೂದಲುಗಳುಳ್ಳವಳನ್ನಾಗಿ, ದೃಷ್ಟ್ವಾ - ಕಂಡು, ದೈನ್ಯಂ - ವ್ಯಸನವನ್ನು, ಆಗತಃ - ಹೊಂದಿ, ನೇತ್ರಾಭ್ಯಾಂ - ಕಣ್ಣುಗಳಿಂದ, ಶೋಕಜಂ - ದುಃಖದಿಂದ ಹುಟ್ಟಿದ, ವಾರಿ - ನೀರಿನನ್ನು, ಅಸೃಜತ್ - ಬಿಟ್ಟನು. ॥ ೧೭ ॥ ಚಾರುಸರ್ವಾಂಗೀಂ - ಮನೋಹರ

ತೆಯೂ, ಸಂತೋಷರಹಿತೆಯೂ, ತಪಸ್ವಿನಿಯೂ, ಆಕೆಯನ್ನು ರಥದಲ್ಲಿ ಇಂದ್ರಜಿತುವಿನಿಂದ ಆಕ್ರಮಿಸಲಾದವಳನ್ನಾಗಿ ಕಂಡು, "ದೇವಿಯನ್ನು ಈ ರೀತಿ ರಥದಲ್ಲಿರಿಸಿಕೊಂಡು ಬಂದಿರುವುದರಲ್ಲಿ ಈ ದುರ್ಮಾರ್ಗನ ಅಭಿಪ್ರಾಯವೇನಿರಬಹುದೋ" ಎಂದು ತನ್ನಲ್ಲಿಯೇ ಆಲೋಚಿಸಿಕೊಂಡು ವಾನರರೊಡಗೂಡಿ ಆ ರಾಕ್ಷಸನಿಗೆದುರಾಗಿ ನುಗ್ಗಿ ಹೊರಟನು. ಆಗ ಮಹಾಬಲಾಢ್ಯನಾದ ಇಂದ್ರಜಿತುವು ತನಗಭಿಮುಖನಾಗಿ ನುಗ್ಗಿ ಬರುತ್ತಿದ್ದ ವೀರವಾನರ ಬಲವನ್ನು ನೋಡಿ ಕೂಡಲೇ ಒರೆಯಿಂದ ಕತ್ತಿಯನ್ನು ಹಿರಿದು ಆ ಮಾಯಾ ಸೀತೆಯ ಕೇಶರಾಶಿಯನ್ನು ಹಿಡಿದನು. ಇಷ್ಟೆಯಲ್ಲದೆ ಈ ರೀತಿ ದುಃಸ್ಥಿತಿಯಲ್ಲಿದ್ದ ಆ ದೇವಿಯನ್ನು ನೋಡಿ ದುಃಖಪೀಡಿತರಾಗಿದ್ದ ಆ ವಾನರರ ಮೇಲೆಲ್ಲ ಅವನು ತೀಕ್ಷ್ಣವಾದ ಬಾಣದ ಮಳೆಯನ್ನು ಸುರಿಸಿದನು. ಅದೇ ಸಮಯದಲ್ಲಿಯೇ ಆ ಮಾಯಾ ಸೀತೆಯಾದರೋ, "ರಾಮ ! ರಾಮಾ !!"

॥೧೭॥ ತಾಂ ದೃಷ್ಟ್ವಾ ಚಾರುಸರ್ವಾಂಗೀಂ ರಾಮಸ್ಯ ಮಹಿಷೀಂ ಪ್ರಿಯಾಂ ।
ಅಬ್ರವೀತ್ಪರುಷಂ ವಾಕ್ಯಂ ಕ್ರೋಧಾದ್ರಕ್ಷೋಧಿಪಾತ್ಮಜಂ ॥೧೮॥ "ದುರಾತ್ಮನ್ನಾತ್ಮ
ನಾಶಾಯ ಕೇಶಪಕ್ಷೇ ಪರಾಮೃಶಃ । ಬ್ರಹ್ಮರ್ಷೀಣಾಂ ಕುಲೇ ಜಾತೋ ರಾಕ್ಷಸೀಂ
ಯೋನಿಮಾಶ್ರಿತಃ। ಧಿಕ್ತ್ವಾಂ! ಪಾಪಸಮಾಚಾರಂ ಯಸ್ಯ ತೇ ಮತಿರೀದೃಶೀ! ॥೧೯॥
ನೃಶಂಸಾನಾರ್ಯದುರ್ವೃತ್ತ! ಕ್ಷುದ್ರ! ಪಾಪಪರಾಕ್ರಮ! । ಅನಾರ್ಯಸ್ಯೇದೃಶಂ
ಕರ್ಮ ಘೃಣಾ ತೇನಾಸ್ತಿ ನಿರ್ಘೃಣ! ॥ ೨೦ ॥ ಚ್ಯುತಾ ಗೃಹಾಚ್ಚ ರಾಜ್ಯಾಚ್ಚ ರಾಮ

ವಾದ ಸಮಸ್ತಾವಯಗಳುಳ್ಳ, ರಾಮಸ್ಯ - ಶ್ರೀರಾಮನ, ಪ್ರಿಯಾಂ - ಇಷ್ಟಳಾದ, ಮಹಿಷೀಂ - ಪಟ್ಟದ ರಾಣಿಯಾದ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಕ್ರೋಧಾತ್ - ಕೋಪ ದಿಂದ, ರಕ್ಷೋ....ಜಂ- ಇಂದ್ರಜಿತುವನ್ನು ಕುರಿತು, ಪರುಷಂ-ಕ್ರೂರವಾದ, ವಾಕ್ಯಂ-ಮಾತನ್ನು, ಅಬ್ರವೀತ್ - ನುಡಿದನು. ॥೧೮॥ ಹೇ ದುರಾತ್ಮನ್ - ಎಲೈ ದುಷ್ಟಮನವುಳ್ಳವನೇ, ಬ್ರಹ್ಮರ್ಷೀಣಾಂ - ಬ್ರಹ್ಮರ್ಷಿಗಳ, ಕುಲೇ - ವಂಶದಲ್ಲಿ, ಜಾತಃ - ಹುಟ್ಟಿ, ರಾಕ್ಷಸೀಂಯೋನಿಂ - ರಾಕ್ಷಸ ಸ್ತ್ರೀಯಲ್ಲಿ ಜನ್ಮಿಸಿ, ಆತ್ಮನಾಶಾಯ - ನಿನ್ನ ನಾಶಕ್ಕೋಸುಗ, ಕೇಶಪಕ್ಷೇ - ಕೇಶಗಳ ಸಮೂಹದಲ್ಲಿ, ಪರಾ ಮೃಶಃ - ಮುಟ್ಟಿದ್ದೀಯೆ, ಯಸ್ಯ - ಯಾವ, ತೇ - ನಿನಗೆ, ಈದೃಶೀಬುದ್ಧಿಃ - ಇಂಥಾ ಬುದ್ಧಿಯು, ಪಾಪ....ರಂ - ಪಾಪಕರವಾದ ಕರ್ಮವುಳ್ಳ, ತ್ವಾಂ - ನಿನ್ನನ್ನು, ಧಿಕ್ - ನಿಂದಿಸು. ॥ ೧೯ ॥ ಹೇ ನೃಶಂಸ - ಎಲೈ ಘಾತುಕನೇ, ಹೇ ಅನಾರ್ಯ - ಎಲೈ ದುಷ್ಟನೇ, ಹೇ ದುರ್ವೃತ್ತ - ಎಲೈ ದುರಾ ಚಾರನೇ, ಹೇ ಕ್ಷುದ್ರ - ಎಲೈ ಅಲ್ಪ ಬುದ್ಧಿಯುಳ್ಳವನೇ, ಹೇ ಪಾಪಪರಾಕ್ರಮ - ಎಲೈ ಪಾಪಕರ ವಾದ ಪರಾಕ್ರಮವುಳ್ಳ, ಹೇ ನಿರ್ಘೃಣ - ಎಲೈ ದಯಾಹೀನನೇ, ಅನಾರ್ಯಸ್ಯ - ನೀಚನು ಮಾಡ ತಕ್ಕ, ಕರ್ಮ - ವ್ಯಾಪಾರವು, ಈದೃಶಂ - ಇಂಥಾದ್ದು, ತೇ - ನಿನಗೆ, ಘೃಣಾ - ದಯಾರಸವು, ನಾಸ್ತಿ - ಇಲ್ಲವು. ॥ ೨೦ ॥ ಯತ್ - ಯಾವ ಕಾರಣದಿಂದ, ಏನಾಂ - ಈ ಸೀತಾದೇವಿಯನ್ನು, ಹಂತುಂ - ಹೊಡೆಯುವದಕ್ಕೆ, ಇಚ್ಛಸಿ - ಅಪೇಕ್ಷಿಸುತ್ತೀಯೋ, ತಸ್ಮಾತ್ - ಆ ಕಾರಣದಿಂದ,

ಎಂದು ದುಃಖಭರದಿಂದ ಕೂಗಿಡುತ್ತಿದ್ದಳು. ಇಂತಹ ಆಕೆಯನ್ನು ಇಂದ್ರಜಿತುವು ಕೇಶ ರಾಶಿಯಲ್ಲಿ ಹಿಡಿದನು. ॥ ೧೨–೧೫ ॥ ಈ ರೀತಿ ಸೆಳೆಯಲಾದ ಆಕೆಯನ್ನು ಆ ಕ್ರೂರಕೃತ್ಯ ವನ್ನು ಮಾಡಿದ ಆ ರಾಕ್ಷಸನನ್ನೂ ಕಂಡು ಮಾರುತಿಯು ಬಹಳವಾಗಿ ಕಂಬನಿಗರೆದು ದುಃಖಿಸಿದನಲ್ಲದೆ, ಸುಂದರವಾದ ಸರ್ವಾವಯವಗಳುಳ್ಳ ಶ್ರೀರಾಮಮೂರ್ತಿಯ ಪ್ರಿಯೆ ಸೀತೆಯನ್ನು ಆ ಸ್ಥಿತಿಯಲ್ಲಿ ಕಂಡು ಮಹಾ ಕೋಪಸಮನ್ವಿತನಾಗಿ, ರಾವಣಕುಮಾರನಾದ ಆ ಇಂದ್ರಜಿತುವನ್ನು ಕುರಿತು, ಅತಿ ಕಠಿನವಾದ ಮಾತುಗಳಿಂದ, "ಎಲೆವೊ ದುರ್ಮಾರ್ಗನೇ! ನೀನು ಆತ್ಮನಾಶಕ್ಕಾಗಿಯೇ ಸೀತಾಮಾತೆಯ ಕೇಶಗಳನ್ನು ಹಿಡಿದೆಳೆದೆ. ಎಲೆವೋ ನೀಚನೆ, ನೀನು ಬ್ರಹ್ಮರ್ಷಿಯ ವಂಶದಲ್ಲಿ ಜನಿಸಿಯೂ ರಾಕ್ಷಸಯೋನಿಯನ್ನಾಶ್ರಯಿಸಿದೆ. ನಿನ್ನ ಪಾಪವು ಮಿತಿಮೀರಿಹೋಯಿತು. ಎಲಾ ಅನಾರ್ಯನೇ, ದುರಾಚಾರನೇ, ನೀಚಾತಿ ನೀಚನೇ! ಛೀ ಛೀ, ಪಾಪೀ, ನಿನ್ನ ಪರಾಕ್ರಮವೆಲ್ಲವೂ ಈ ರೀತಿ ದುಷ್ಕರ್ಮಗಳನ್ನು ಮಾಡುವುದರಲ್ಲಿ ಪರಿಣಾಮಗೊಂಡಿತೇ! ನಿಜಗೃಹದಿಂದಲೂ, ರಾಜ್ಯದಿಂದಲೂ, ಶ್ರೀರಾಮ ಹಸ್ತದಿಂದಲೂ ಅಗಲಿರುವ ಈಕೆಯು ನಿನಗಾವ ಅಪರಾಧ ಮಾಡಿದಳೆಂದು ಈಕೆಯನ್ನು ಕೊಲ್ಲುವೆ? ॥ ೧೬–೨೦ ॥ ನೀನಿಂತಹ ಕೆಲಸವನ್ನು ಮಾಡಬಹುದೇ? ಅಯ್ಯೋ! ನಿನಗೆ

ಹಸ್ತಾಚ್ಚ ಮೈಥಿಲೀ । ಕಿಂ ತವೈಷಾಪರದ್ಧಾಹಿ ಯದೇನಾಂ ಹಂತುಮಿಚ್ಛಸಿ ॥ ೨೧ ॥ ಸೀತಾಂ ಚ ಹತ್ವಾ ನಚಿರಂ ಜೀವಿಷ್ಯಸಿ ಕಥಂಚನ । ವಧಾರ್ಹಕರ್ಮಣಾಽನೇನ ಮಮ ಹಸ್ತಗತೋಽಹ್ಯಸಿ ॥೨೨॥ ಯೇಚ ಸ್ತ್ರೀಘಾತಿನಾಂ ಲೋಕಾ ಲೋಕವಧ್ಯೇಷು ಕುತ್ಸಿತಾಃ । ಇಹ ಜೀವಿತಮುತ್ಸೃಜ್ಯ ಪ್ರೇತ್ಯ ತಾರ್ನ ಪ್ರತಿಪತ್ಸ್ಯಸೇ" ॥ ೨೩ ॥ ಇತಿ ಬ್ರುವಾಣೋ ಹನುಮಾರ್ನ ಸಾಯುಧೈರ್ಹರಿಭಿರ್ವೃತಃ । ಅಭ್ಯಧಾವತ ಸಂಕ್ರುದ್ಧೋ ರಾಕ್ಷಸೇಂದ್ರಸುತಂ ಪ್ರತಿ ॥ ೨೪ ॥ ಆಪತಂತಂ ಮಹಾವೀರ್ಯಂ ತದನೀಕಂ ವನೌಕಸಾಂ । ರಕ್ಷಸಾಂ ಭೀಮವೇಗಾನಾಮನೀಕಂತು ನ್ಯವಾರಯತ್ ॥ ೨೫ ॥ ಸತಾಂ

ತವ - ನಿನಗೆ, ಏಷಾ - ಈ ಸೀತಾದೇವಿಯು, ಕಿಂಅಪರದ್ಧಾ - ಯಾವ ಅಪರಾಧವನ್ನು ಮಾಡಿದ್ದಾಳೆ, ಮೈಥಿಲೀ-ಸೀತಾದೇವಿಯು, ಗೃಹಾಚ್ಚ-ಮನೆಯಿಂದಲೂ, ರಾಜ್ಯಾಚ್ಚ-ರಾಜ್ಯದಿಂದಲೂ, ರಾಮಹಸ್ತಾಚ್ಚ-ಶ್ರೀರಾಮನ ಕೈಯಿಂದಲೂ, ಚ್ಯುತಾ - ತಪ್ಪಿದ್ದಾಳೆ. ॥ ೨೧ ॥ ಸೀತಾಂಚ - ಸೀತಾದೇವಿಯನ್ನು, ಹತ್ವಾ - ಹೊಡೆದು, ಕಥಂಚನ - ಹೇಗಾದರೂ, ಚಿರಂ - ಬಲುಕಾಲ, ನಜೀವಿಷ್ಯಸಿ - ನೀನು ಬದುಕಲಾರೆ, ಹೇ ವಧಾರ್ಹ - ಎಲೈ ಸಂಹಾರಕ್ಕೆ ಯೋಗ್ಯನೇ, ಅನೇನಕರ್ಮಣಾ - ಈ ದುರ್ವ್ಯಾಪಾರದಿಂದ, ಮಮ-ನನ್ನ, ಹಸ್ತಗತಃ-ಕೈಗೆ ಸಿಕ್ಕಿದವನು, ಅಸಿಹಿ-ಆಗಿದ್ದೀಯಷ್ಟೆ. ॥ ೨೨ ॥ ಹೇ ಲೋಕವಧ್ಯ-ಎಲೈ ಸಮಸ್ತ ಲೋಕಗಳಲ್ಲಿಯೂ ವಧಾರ್ಹನೇ, ತೇಷು-ಈ ಹದಿನಾಲ್ಕು ಲೋಕಗಳಲ್ಲಿಯೂ, ಕುತ್ಸಿತಾಃ - ನಿಂದಿತಗಳಾದ, ಯೇಲೋಕಾಃ - ಯಾವ ಲೋಕಗಳು, ಸ್ತ್ರೀಘಾತಿನಾಂ - ಸ್ತ್ರೀಹತ್ಯೆ ಮಾಡಿದವರಿಗೆ, ಸ್ಯುಃ - ಉಂಟಾಗುವವೋ, ಇಹ - ಈಗ, ಜೀವಿತಂ - ಪ್ರಾಣವನ್ನು, ಉತ್ಸೃಜ್ಯ - ಬಿಟ್ಟು, ಪ್ರೇತ್ಯ - ಮರಣವನ್ನು ಹೊಂದಿ, ತಾರ್ನ - ಆ ಲೋಕಗಳನ್ನು, ಪ್ರತಿಪತ್ಸ್ಯಸೇ - ಹೊಂದುವೆ, ಇತಿ - ಈ ಪರಿಯಾಗಿ, ಬ್ರುವಾಣಃ - ಹೇಳುತ್ತಿರುವ, ಸಂಕ್ರುದ್ಧಃ - ಕೋಪಿಷ್ಠನಾದ, ಹನುಮಾರ್ನ - ಆಂಜನೇಯನು, ಸಾಯುಧೈಃ - ಆಯುಧಗಳಿಂದೊಡಗೂಡಿದ, ಹರಿಭಿಃ - ವಾನರರಿಂದ, ವೃತಃ - ಪರಿವೃತನಾಗಿ, ರಾಕ್ಷ......ತಿ - ಇಂದ್ರಜಿತುವನ್ನು ಕುರಿತು, ಅಭ್ಯಧಾವತ - ಓಡಿಬಂದನು. ॥ ೨೪ ॥ ಮಹಾವೀರ್ಯಂ - ಬಹಳ ಸಾಮರ್ಥ್ಯವುಳ್ಳದ್ದಾಗಿ, ಆಪತಂತಂ - ಬರುತ್ತಿರುವ, ವನೌಕಸಾಂ - ವಾನರರ, ತದನೀಕಂ - ಆ ಸೇನೆಯನ್ನು, ಭೀಮವೇಗಾನಾಂ - ಭಯಂಕರವಾದ ವೇಗವುಳ್ಳ, ರಕ್ಷಸಾಂ - ರಕ್ಕಸರ, ಅನೀಕಂತು - ಸೇನೆಯಾದರೆ, ನ್ಯವಾರಯತ್ - ತಡೆಯಿತು.

ದಯೆಯೆಂಬುದೇ ಇಲ್ಲದೆ ಹೋಯಿತೇ? ನೀನು ಯಾವ ನಿಮಿತ್ತದಿಂದ ಈ ದೇವಿಯನ್ನು ಕೊಲ್ಲುವೆ? ನೀನೀಕೆಯನ್ನು ಕೊಂದ ಬಳಿಕ ಒಂದು ಕ್ಷಣವೂ ಬದುಕಲಾರೆ. ನೀನಿಂತಹ ಪಾಪಕಾರ್ಯವನ್ನು ಮಾಡಿದೆಯಾದುದರಿಂದ ಕೇವಲ ವಧಾರ್ಹನಾದೆ. ಇಂತಹ ಪಾಪ ಸಮಾಚಾರನಾದ ನೀನು ಇದೀಗ ನನ್ನ ಕೈಗೆ ಸಿಕ್ಕಿದೆ. ಇನ್ನು ನೀನು ಜೀವಿಸಲಾರೆ. ಇದೋ ಈಗಲೇ ನನ್ನಿಂದ ಮಡಿಯುವ ನೀನು ಸ್ತ್ರೀಘಾತುಕರಾದವರೂ, ಲೋಕಕ್ಕೇ ವಧಾರ್ಹರಾದವರೂ ಹೊಂದುವ ಕೇವಲ ಕುತ್ಸಿತ ಲೋಕಗಳನ್ನು ಹೊಂದುವೆ" ಎಂದು ಹೇಳಿ ಆಯುಧಪಾಣಿಗಳಾದ ವಾನರವೀರರೊಡಗೂಡಿ ಮಹಾ ಕೋಪಸಮನ್ವಿತನಾಗಿ ಆ ರಾಕ್ಷಸನನ್ನಟ್ಟಿ ಬಂದನು. ಈ ರೀತಿ ಮುನ್ನುಗ್ಗಿ ಬರುತ್ತಿರುವ ಮಹಾ ಬಲಾಢ್ಯವಾದ ಆ ವಾನರಸೇನೆಯನ್ನು ಕಂಡು ಇಂದ್ರಜಿತುವು ತನ್ನ ಸೈನ್ಯವೆಲ್ಲವನ್ನೂ ಹಿಂದಕ್ಕೆ ನಿಲ್ಲಿಸಿ ವಾನರಸೇನೆಯನ್ನು ತನ್ನ ಬಾಣಪ್ರಯೋಗದಿಂದ ಬಗೆಬಗೆಯಾಗಿ ಬಾಧಿಸಿದನು. ॥ ೨೧–೨೫ ॥ ಆ ತರುವಾಯ

ಬಾಣಸಹಸ್ರೇಣ ವಿಕ್ಷೋಭ್ಯ ಹರಿವಾಹಿನೀಂ । ಹರಿಶ್ರೇಷ್ಠಂ ಹನೂಮಂತಮಿಂದ್ರಜಿತ್ಪ್ರತ್ಯುವಾಚಹ ॥೨೬॥ "ಸುಗ್ರೀವಂ ಸ್ತ್ವಂಚ ರಾಮಶ್ಚ ಯನ್ನಿಮಿತ್ತಮಿಹಾಗತಾಃ । ತಾಂ ಹನಿಷ್ಯಾಮಿ ವೈದೇಹೀಮದ್ಯೈವ ತವ ಪಶ್ಯತಃ ॥೨೭॥ ಇಮಾಂ ಹತ್ವಾ ತತೋ ರಾಮಂ ಲಕ್ಷ್ಮಣಂ ತ್ವಾಂಚ ವಾನರ! । ಸುಗ್ರೀವಂಚ ವಧಿಷ್ಯಾಮಿ ತಂ ಚಾನಾರ್ಯಂ ವಿಭೀಷಣಂ ॥ ೨೮ ॥ ನಹಂತವ್ಯಾಃ ಸ್ತ್ರಿಯಶ್ಚೇತಿ ಯದ್ಬ್ರವೀಷಿ ಪ್ಲವಂಗಮ! । ಪೀಡಾಕರಮಮಿತ್ರಾಣಾಂ ಯತ್ಸ್ಯಾತ್ಕರ್ತವ್ಯಮೇವ ತತ್" ॥ ೨೯ ॥ ತಮೇವಮುಕ್ತ್ವಾ ರುದತೀಂ ಸೀತಾಂ ಮಾಯಾಮಯೀಂ ತದಾ । ಶಿತಧಾರೇಣ ಖಡ್ಗೇನ

॥೨೬॥ ಸಇಂದ್ರಜಿತ್ - ಆ ಇಂದ್ರಜಿತುವು, ತಾಂಹರಿವಾಹಿನೀಂ - ಆ ಕಪಿಸೇನೆಯನ್ನು, ಬಾಣಸಹಸ್ರೇಣ - ಸಾವಿರ ಬಾಣಗಳಿಂದ, ವಿಕ್ಷೋಭ್ಯ - ಕ್ಷೋಭೆಗೊಳಿಸಿ, ಹರಿಶ್ರೇಷ್ಠಂ - ವಾನರೋತ್ತಮನಾದ, ಹನುಮಂತಂ - ಹನುಮಂತನನ್ನು ಕುರಿತು, ಪ್ರತ್ಯುವಾಚಹ - ಪ್ರತ್ಯುತ್ತರ ಕೊಟ್ಟನಷ್ಟೆ. ॥೨೭॥ ಸುಗ್ರೀವಃ - ಸುಗ್ರೀವನು, ತ್ವಂಚ - ನೀನು, ಶ್ರೀರಾಮಶ್ಚ - ರಾಮನೂ, ಯನ್ನಿಮಿತ್ತಂ-ಯಾವ ಸೀತಾ ನಿಮಿತ್ತವಾಗಿ, ಇಹ - ಇಲ್ಲಿ, ಆಗತಾಃ - ಬಂದಿದ್ದೀರೋ, ತಾಂವೈದೇಹೀಂ - ಆ ಸೀತಾದೇವಿಯನ್ನು, ಅದ್ಯೈವ - ಈಗಲೇ, ತವ - ನೀನು, ಪಶ್ಯತಃ ನೋಡುತ್ತಿರುವಂತೆಯೇ, ಹನಿಷ್ಯಾಮಿ-ಕೊಲ್ಲುವೆನು. ॥ ೨೮ ॥ ಹೇ ವಾನರ - ಎಲೈ ಕಪಿಯೇ, ಇಮಾಂ - ಈ ಸೀತಾದೇವಿಯನ್ನು, ಹತ್ವಾ-ಕೊಂದು, ತತಃ - ಬಳಿಕ, ರಾಮಂ - ಶ್ರೀರಾಮನನ್ನು, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ತ್ವಾಂಚ-ನಿನ್ನನ್ನೂ, ಸುಗ್ರೀವಂ - ಸುಗ್ರೀವನನ್ನೂ, ತಮನಾರ್ಯಂ - ಆ ದುಷ್ಟನಾದ, ವಿಭೀಷಣಂಚ - ವಿಭೀಷಣನನ್ನೂ, ವಧಿಷ್ಯಾಮಿ - ಸಂಹಾರ ಮಾಡುವೆನು. ॥೨೯॥ ಹೇ ಪ್ಲವಂಗಮ - ಎಲೈ ಕಪಿಯೇ, ಸ್ತ್ರಿಯಃ - ಹೆಂಗಳು, ನಹಂತವ್ಯಾಃ - ಹೊಡೆಯತಕ್ಕವರಲ್ಲವೆಂದು, ಯತ್ - ಯಾವ ಮಾತನ್ನು, ಬ್ರವೀಷಿ - ಹೇಳಿದೆಯೋ, ಅಮಿತ್ರಾಣಾಂ - ಶತ್ರುಗಳಿಗೆ, ಯತ್-ಯಾವದು, ಪೀಡಾಕರಂ - ದುಃಖಕರವಾದದ್ದೋ, ತತ್ - ಆ ಕಾರ್ಯವು, ಕರ್ತವ್ಯಮೇವ - ಮಾಡತಕ್ಕುದೇ ಸರಿ. ॥೨೯॥ ಇಂದ್ರಜಿತ್-ಇಂದ್ರಜಿತುವು, ತಂ - ಆ ಆಂಜನೇಯನನ್ನು ಕುರಿತು, ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ರುದತೀಂ - ರೋದಿಸುತ್ತಿರುವ, ಮಾಯಾಮಯೀಂ - ಮಾಯಾಸ್ವರೂಪಳಾದ, ಸೀತಾಂ - ಸೀತಾದೇವಿಯನ್ನು, ಶಿತಧಾರೇಣ - ತೀಕ್ಷ್ಣವಾದ ಹದವುಳ್ಳ, ಖಡ್ಗೇನ - ಖಡ್ಗದಿಂದ, ಸ್ವಯಂ - ತಾನೇ, ನಿಜಘಾನ - ಹೊಡೆದನು. ॥೩೦॥ ಯಜ್ಞೋ....ಣ - ಯಜ್ಞೋಪವೀತಧಾರಣ ರೀತಿಯಿಂದ, ತೇನ -

ಆ ರಾಕ್ಷಸನು ಹನುಮಂತನನ್ನು ಕುರಿತು, "ಎಲಾ ವಾನರನೇ! ಸುಗ್ರೀವನೂ, ನೀನೂ, ಆ ರಾಮಲಕ್ಷ್ಮಣರೂ ಸೀತೆಗಾಗಿಯಲ್ಲವೆ ಬಂದುದು? ಇದೋ ಈಗ ಆ ಸೀತೆಯನ್ನೇ ಮೊದಲು ವಧಿಸಿ ಆಮೇಲೆ ರಾಮಲಕ್ಷ್ಮಣರನ್ನು ವಧಿಸುತ್ತೇನೆ. ಆ ತರುವಾಯ ನಿನ್ನನ್ನೂ ಸುಗ್ರೀವನನ್ನೂ ಕೊಲ್ಲುತ್ತೇನೆ. ಎಲೆವೋ ಹನುಮಂತಾ! ನಿಮ್ಮೆಲ್ಲರನ್ನೂ ಕೊಂದಾದ ಬಳಿಕ ನಿಮಗೆ ಸಹಾಯ ಮಾಡಲು ಬಂದ ಆ ವಿಭೀಷಣನನ್ನೂ ಕೊಲ್ಲುತ್ತೇನೆ. ನೀನು ಸ್ತ್ರೀವಧೆ ಮಾಡಕೂಡದೆಂದು ಹೇಳಿದೆಯಲ್ಲವೆ? ಅದು ತಪ್ಪು; ಶತ್ರುಗಳಿಗೆ ಯಾವುದರಿಂದ ವ್ಯಸನವಾಗಬಹುದೋ ಆ ಕಾರ್ಯವನ್ನು ಮಾಡಿಯೇ ತೀರತಕ್ಕುದು. ಇದು ನಿನಗೆ ತಾನೆ ತಿಳಿಯದೆ?" ಎಂದು ಹೇಳಿದನು. ಆ ರಾಕ್ಷಸನಿಂತು ನುಡಿದು ವ್ಯಸನಾಕ್ರಾಂತಳಾಗುತ್ತಿದ್ದ ಆ ಮಾಯಾ ಸೀತೆಯನ್ನು ತೀಕ್ಷ್ಣವಾದ ಅಲಗುಳ್ಳ ಕತ್ತಿಯಿಂದ ಯಜ್ಞೋಪವೀತ

ನಿಜಘಾನೇಂದ್ರಜಿತ್ಸ್ವಯಂ ‖ ೩೦ ‖ ಯಜ್ಞೋಪವೀತಮಾರ್ಗೇಣ ಭಿನ್ನಾ ತೇನ ತಪಸ್ವಿನೀ । ಸಾ ಪೃಥಿವ್ಯಾಂ ಪೃಥುಶ್ರೋಣೀ ಪಪಾತ ಪ್ರಿಯದರ್ಶನಾ । ತಾಮಿಂದ್ರಜಿತ್ಸ್ವಯಂ ಹತ್ವಾ ಹನುಮಂತಮುವಾಚಹ ‖ ೩೧-೩೨ ‖ "ಮಯಾ ರಾಮಸ್ಯ ಪಶ್ಯೇಮಾಂ ಕೋಪೇನಚ ನಿಷೂದಿತಾಂ । ಏಷಾ ವಿಶಸ್ತಾ ವೈದೇಹೀ ವಿಫಲೋ ವಃ ಪರಿಶ್ರಮಃ" ‖೩೩‖ ತತಃ ಖಡ್ಗೇನ ಮಹತಾ ಹತ್ವಾ ತಾಮಿಂದ್ರಜಿತ್ಸ್ವಯಂ । ಹೃಷ್ಟಸ್ಸರಥಮಾಸ್ಥಾಯ ವಿನನಾದ ಮಹಾಸ್ವನಂ ‖ ೩೪ ‖ ವಾನರಾಃ ಶುಶ್ರುವುಃ ಶಬ್ದಮದೂರೇ ಪ್ರತ್ಯವಸ್ಥಿತಾಃ । ವ್ಯಾದಿತಾಸ್ಯಸ್ಯ ನದತಸ್ತದ್ದುರ್ಗಂ ಸಂಶ್ರಿತಸ್ಯಚ ‖ ೩೫ ‖

ಆ ಇಂದ್ರಜಿತುವಿನಿಂದ, ಭಿನ್ನಾ - ಕತ್ತರಿಸಲ್ಪಟ್ಟ, ತಪಸ್ವಿನೀ - ದೀನಳಾದ, ಪ್ರಿಯದರ್ಶನಾ - ಇಷ್ಟವಾದ ನೋಟವುಳ್ಳ, ಪೃಥುಶ್ರೋಣೀ - ವಿಸ್ತಾರವಾದ ಶ್ರೋಣೀಪ್ರದೇಶಗಳುಳ್ಳ, ಸಾ - ಆ ಮಾಯಾ ಸೀತೆಯು, ಪೃಥಿವ್ಯಾಂ - ನೆಲದಲ್ಲಿ, ಪಪಾತ - ಬಿದ್ದುಹೋದಳು. ‖ ೩೧ ‖ ಇಂದ್ರಜಿತ್ - ಇಂದ್ರಜಿತುವು, ಸ್ವಯಂ - ತಾನೇ, ತಾಂ - ಆ ಮಾಯಾ ಸೀತೆಯನ್ನು, ಹತ್ವಾ - ಕೊಂದು, ಹನುಮಂತಂ - ಆಂಜನೇಯನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ‖ ೩೨ ‖ ಮಯಾ - ನನ್ನಿಂದ, ಕೋಪೇನ - ಕ್ರೋಧದಿಂದ, ನಿಷೂದಿತಾಂ - ಹೊಡೆಯಲ್ಪಟ್ಟ, ರಾಮಸ್ಯ - ಶ್ರೀರಾಮನ ಹೆಂಡತಿಯಾದ, ಇಮಾಂ - ಈಕೆಯನ್ನು, ಪಶ್ಯ - ನೋಡು, ಏಷಾವೈದೇಹಿ - ಈ ಸೀತಾದೇವಿಯು, ವಿಶಸ್ತಾ - ಸಂಹೃತಳಾದಳು, ವಃ - ನಿಮ್ಮ, ಪರಿಶ್ರಮಃ - ಆಯಾಸವು, ವಿಫಲಃ - ವ್ಯರ್ಥವಾಯಿತು. ‖೩೩‖ ತತಃ - ಬಳಿಕ, ಸಇಂದ್ರಜಿತ್ - ಆ ಮೇಘನಾದನು, ಸ್ವಯಂ - ತಾನು, ಮಹಾಖಡ್ಗೇನ-ದೊಡ್ಡ ಕತ್ತಿಯಿಂದ, ತಾಂ - ಆ ಮಾಯಾ ಸೀತೆಯನ್ನು, ಹತ್ವಾ - ಕೊಂದು, ಹೃಷ್ಟಃ - ಸಂತೋಷಗೊಂಡವನಾಗಿ, ರಥಂ - ರಥದಲ್ಲಿ, ಆಸ್ಥಾಯ - ಕುಳಿತು, ಮಹಾಸ್ವನಂ - ದೊಡ್ಡ ಧ್ವನಿಯುಳ್ಳವನಂತೆ, ನನಾದ - ಕೂಗಿದನು. ‖ ೩೪ ‖ ಅದೂರೇ - ಸಮೀಪದಲ್ಲಿ, ಪ್ರತ್ಯುಪಸ್ಥಿತಾಃ - ಇರುವ, ವಾನರಾಃ - ಕಪಿಗಳು, ವ್ಯಾದಿತಾಸ್ಯಸ್ಯ - ತೆರೆಯಲ್ಪಟ್ಟ ಬಾಯಿಯುಳ್ಳವನಾಗಿ, ನದತಃ - ಕೂಗುತ್ತಿರುವ, ತದ್ದುರ್ಗಂ - ಆ ರಾಕ್ಷಸವ್ಯೂಹರೂಪವಾದ ದುರ್ಗಸ್ಥಾನವನ್ನು, ಸಂಶ್ರಿತ್ಯ - ಆಶ್ರಯಿಸಿರುವ ಇಂದ್ರಜಿತುವಿನ, ಶಬ್ದಂ - ಕೋಲಾಹಲ ಧ್ವನಿಯನ್ನು, ಶಶ್ರುವುಃ - ಕೇಳಿದರು. ‖೩೫‖ ದುರ್ಮತಿಃ-

---

ಮಾರ್ಗವಾಗಿ ಕಡಿದು ಹಾಕಿದನು. ‖ ೨೭-೩೦ ‖ ಆಗ ಪ್ರಿಯದರ್ಶನೆಯಾದ ಆ ಮಾಯಾ ಸೀತೆಯು ನೆಲಕ್ಕೆ ಬಿದ್ದುಹೋದಳು. ಈ ರೀತಿ ಮಾಯಾ ಸೀತೆಯನ್ನು ಘೋರವಾಗಿ ಕತ್ತರಿಸಿ ಕೆಡವಿದ ಬಳಿಕ ಹನುಮಂತನನ್ನು ಕುರಿತು, "ಎಲೈ ವಾನರನೇ! ಇದೋ ನಾನು ಕೋಪಾವೇಶದಿಂದ ರಾಮಪತ್ನಿಯಾದ ಈ ಸೀತೆಯನ್ನು ಕಡಿದುಹಾಕಿದ್ದೇನೆ. ಇನ್ನು ನಿಮ್ಮ ಶ್ರಮವೆಲ್ಲವೂ ವ್ಯರ್ಥವಾಯಿತು. ಇನ್ನು ನೀವೇನುತಾನೇ ಮಾಡಬಲ್ಲಿರಿ?" ಎಂದು ಹೇಳಿ ಮಹದಾನಂದಭರಿತನಾಗಿ ಸಿಂಹನಾದ ಮಾಡಿದನು. ಆ ರಾಕ್ಷಸನ ಸಿಂಹನಾದವನ್ನು ಕೇಳಿ ಸಮೀಪದಲ್ಲಿದ್ದ ವಾನರರೆಲ್ಲರೂ ಭಯದಿಂದ ತತ್ತಳಿಸಿಹೋದರು. ಆಗಲಾ ಇಂದ್ರ

ತಥಾತು ಸೀತಾಂ ವಿನಿಹತ್ಯ ದುರ್ಮತಿಃ
ಪ್ರಹೃಷ್ಟಚೇತಾ ಸ್ಸ ಬಭೂವ ರಾವಣಿಃ ।
ತಂ ಹೃಷ್ಟರೂಪಂ ಸಮುದೀಕ್ಷ್ಯ ವಾನರಾ
ವಿಷಣ್ಣರೂಪಾ ಸ್ಸಹಸಾ ಪ್ರದುದ್ರುವುಃ ॥ ೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಾಶೀತಿತಮಸ್ಸರ್ಗಃ

ದುರ್ಬುದ್ಧಿಯುಳ್ಳ, ಸರಾವಣಿಃ - ಆ ಇಂದ್ರಜಿತುವು, ತಥಾತು - ಆ ಪರಿಯಾಗಿ, ಸೀತಾಂ - ಸೀತಾದೇವಿಯನ್ನು, ವಿನಿಹತ್ಯ - ಕೊಂದು, ಪ್ರಹೃಷ್ಟಚೇತಾಃ - ಸಂತೋಷಗೊಂಡ ಮನಸ್ಸುಳ್ಳವನು, ಬಭೂವ - ಆದನು, ಹೃಷ್ಟರೂಪಂ - ಸಂತೋಷಗೊಂಡ ಆಕಾರವುಳ್ಳ, ತಂ - ಆ ಮೇಘನಾದನನ್ನು, ಸಮುದೀಕ್ಷ್ಯ - ಕಂಡು, ವಾನರಾಃ - ಕಪಿಗಳು, ವಿಷಣ್ಣರೂಪಾಃ - ವ್ಯಸನಗೊಂಡ ಆಕಾರಗಳುಳ್ಳವರಾಗಿ, ಸಹಸಾ - ಜಾಗ್ರತೆಯಾಗಿ, ಪ್ರದುದ್ರುವುಃ - ಓಡಿಹೋದರು. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಾಶೀತಿತಮಸ್ಸರ್ಗಃ.

ಜಿತುವು ಮಹಾ ಸಂತೋಷದಿಂದುಬ್ಬಿ ತನ್ನ ರಥವನ್ನೇರಿ ಬಾರಿಬಾರಿಗೂ ಸಿಂಹನಾದಗಳನ್ನು ಮಾಡುತ್ತಿದ್ದನು. ವಾನರರಾದರೋ ಭಯಗ್ರಸ್ತರಾಗಿ ದಿಕ್ಕುದಿಕ್ಕುಗಳಿಗೂ ಓಡಿಹೋದರು. ॥ ೩೧–೩೬ ॥

ಇಂತಿದು ಇಂದ್ರಜಿತ್ಕೃತ ಮಾಯಾಸೀತಾ ವಧೆಯೆಂಬ ಎಂಬತ್ತೊಂದನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ದ್ವಿಶೀತಿತಮಸ್ಸರ್ಗಃ

ಶ್ರುತ್ವಾತು ಭೀಮನಿರ್ಹ್ರಾದಂ ಶಕ್ರಾಶನಿಸಮಸ್ವನಂ । ವೀಕ್ಷಮಾಣಾ ದಿಶ ಸ್ಸರ್ವಾ ದುದ್ರುವುರ್ವಾನರರ್ಷಭಾಃ ॥ ೧ ॥ ತಾನುವಾಚ ತತಸ್ಸರ್ವಾ ಹನುಮಾ ನ್ಮಾರುತಾತ್ಮಜಃ । ವಿಷಣ್ಣವದನಾ ದೀನಾಂಸ್ತ್ರಸ್ತಾ ವಿದ್ರವತಃ ಪೃಥಕ್ ॥ ೨ ॥ ಕಸ್ಮಾದ್ವಿಷಣ್ಣವದನಾ ವಿದ್ರವಧ್ವೇ ಪ್ಲವಂಗಮಾಃ । ತ್ಯಕ್ತಯುದ್ಧಸಮುತ್ಸಾಹಾಃ ಶೂರತ್ವಂ ಕ್ವನು ವೋಗತಂ? ॥೩॥ ಪೃಷ್ಠತೋಽನುವ್ರಜಧ್ವಂ ಮಾಮಗ್ರತೋ ಯಾಂತ ಮಾಹವೇ । ಶೂರೈರಭಿಜನೋಪೇತೈರಯುಕ್ತಂ ವಿನಿವರ್ತಿತುಂ ॥೪॥ ಏವಮುಕ್ತಾ

ವಾನರರ್ಷಭಾಃ - ವಾನರೋತ್ತಮರು, ಶಕ್ರಾ....ನಂ - ವಜ್ರಾಯುಧಕ್ಕೆ ಸಮಾನವಾದ ಧ್ವನಿಯುಳ್ಳ, ಭೀಮ....ದಂ - ಭಯಂಕರವಾದ ಕೋಲಾಹಲ ಧ್ವನಿಯನ್ನು, ಶ್ರುತ್ವಾ - ಕೇಳಿ, ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳನ್ನು, ವೀಕ್ಷಮಾಣಾಃ - ನೋಡುತ್ತ, ದುದ್ರುವುಃ - ಓಡಿದರು. ॥ ೧ ॥ ತತಃ - ಬಳಿಕ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾ - ಆಂಜನೇಯನು, ವಿಷಣ್ಣವದನಾ-ಶೋಕಾಕ್ರಾಂತವಾದ ಮುಖಗಳುಳ್ಳ, ದೀನಾ-ದೀನರಾಗಿರುವ, ತ್ರಸ್ತಾ-ಹೆದರಿರುವ, ಪೃಥಕ್ - ಬೇರೆಬೇರೆ, ವಿದ್ರವತಃ - ಓಡಿಹೋಗುತ್ತಿರುವ, ಸರ್ವಾ - ಸಮಸ್ತರಾದ, ತಾ - ಆ ಕಪಿಗಳನ್ನು ಕುರಿತು, ಉವಾಚ - ಹೇಳಿದನು. ॥ ೨ ॥ ಹೇ ಪ್ಲವಂಗಮಾಃ - ಎಲೈ ಕಪಿಗಳಿರಾ, ವಿಷಣ್ಣವದನಾಃ - ಬತ್ತಿದ ಮುಖಗಳುಳ್ಳವರಾಗಿ, ತ್ಯಕ್ತ....ಹಾಃ - ಬಿಡಲ್ಪಟ್ಟ ಯುದ್ಧೋದ್ಯೋಗವುಳ್ಳವರಾಗಿ, ಕಸ್ಮಾತ್ - ಯಾವ ನಿಮಿತ್ತವಾಗಿ, ವಿದ್ರವಧ್ವೇ - ಓಡಿಹೋಗುತ್ತೀರಿ, ವಃ - ನಿಮ್ಮ, ಶೂರತ್ವಂ - ಶೌರ್ಯವು, ಕ್ವನುಗತಂ - ಎಲ್ಲಿ ಹೋಯಿತು. ॥ ೩ ॥ ಆಹವೇ - ಕಾಳಗದಲ್ಲಿ, ಅಗ್ರತಃ - ಮುಂಗಡೆ, ಯಾಂತಂ - ಹೋಗುತ್ತಿರುವ, ಮಾಂ - ನನ್ನನ್ನು, ಪೃಷ್ಠತಃ - ಹಿಂಭಾಗದಲ್ಲಿ, ಅನುವ್ರಜಧ್ವಂ - ಅನುಸರಿಸಿ ಬನ್ನಿರಿ, ಅಭಿ....ತೈಃ - ಸತ್ಕುಲಪ್ರಸೂತತ್ವದಿಂದ ಕೂಡಿದ, ಶೂರೈಃ - ಶೂರರಿಂದ, ನಿವರ್ತಿತುಂ - ಹಿಂತಿರುಗುವದಕ್ಕೆ, ನಯುಕ್ತಂ - ಯೋಗ್ಯವಲ್ಲವು. ॥ ೪ ॥

ಆ ತರುವಾಯ ಮಹಾ ಭಯಂಕರವಾದ ಧ್ವನಿಯುಳ್ಳದೂ, ವಜ್ರಾಯುಧದ ಶಬ್ದವನ್ನು ಹೋಲುತ್ತಿರುವುದೂ ಆದ ಆ ಇಂದ್ರಜಿತುವಿನ ಮಹಾ ವೀರಗರ್ಜನೆಯನ್ನು ಕೇಳಿ ವಾನರರೆಲ್ಲರೂ ಭಯಾಕ್ರಾಂತರಾಗಿ ನಾಲ್ಕೂದಿಕ್ಕುಗಳಿಗೆ ಓಡಿಹೋಗುತ್ತಿರಲು, ಮಹಾ ವೀರನಾದ ಹನುಮಂತನು ದೀನಮುಖರೂ, ಭಯಪೀಡಿತರೂ, ಬೇರೆಬೇರೆಯಾಗಿ ಓಡಿಹೋಗುತ್ತಿರುವವರೂ ಆದ ಅವರೆಲ್ಲರನ್ನು ಕುರಿತು, “ ಎಲೈ ವಾನರವೀರರೇ! ನೀವೆಲ್ಲರೂ ವ್ಯಸನಾಕ್ರಾಂತಮುಖರಾಗಿ ಎಲ್ಲಿಗೆ ಓಡುವಿರಿ. ಯುದ್ಧಪರಾಙ್ಮುಖರಾಗಿ ಪಲಾಯನ ಮಾಡುವುದು ಯೋಗ್ಯವೆ? ನಿಮ್ಮ ಶೂರತ್ವವೇನಾಯಿತು? ಬನ್ನಿರಿ; ಹಿಂತಿರುಗಿರಿ. ಇದೋ ನಾನು ರಣಾಂಗಣದಲ್ಲಿ ಮುನ್ನುಗ್ಗುವೆನು. ಶೂರರಾಗಿಯೂ, ಶ್ರೇಷ್ಠವಾದ ಕುಲಗಳಲ್ಲಿ ಜನಿಸಿದವರೂ ಆದ ನೀವು ಹೀಗೆ ರಣಭೂಮಿಯನ್ನು ತೊರೆದು ಓಡಿಹೋಗುವುದು ಎಷ್ಟುಮಾತ್ರವೂ ಯುಕ್ತವಲ್ಲವು” ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ವಾನರರೆಲ್ಲರೂ ಸಂತೋಷ

ಸ್ಸುಸಂಹೃಷ್ಟಾ ವಾಯುಪುತ್ರೇಣ ವಾನರಾಃ । ಶೈಲಶೃಂಗಾಣ್ಯಗಾಂಶ್ಚೈವ ಜಗೃಹು ರ್ಹೃಷ್ಟಮಾನಸಾಃ ॥ ೫ ॥ ಅಭಿಪೇತುಶ್ಚ ಗರ್ಜಂತೋ ರಾಕ್ಷಸಾ‌ನ್ ವಾನರರ್ಷಭಾಃ । ಪರಿವಾರ್ಯ ಹನೂಮಂತ ಮನ್ವಯುಶ್ಚ ಮಹಾಹವೇ ॥೬॥ ಸ ತೈರ್ವಾನರಮುಖ್ಯೈಶ್ಚ ಹನುಮಾನ್ ಸರ್ವತೋ ವೃತಃ । ಹುತಾಶನ ಇವಾರ್ಚಿಷ್ಮಾನದಹ ಚ್ಛತ್ರುವಾಹಿನೀಂ ॥ ೭ ॥ ಸ ರಾಕ್ಷಸಾನಾಂ ಕದನಂ ಚಕಾರ ಸುಮಹಾಕಪಿಃ । ವೃತೋ ವಾನರಸೈನ್ಯೇನ ಕಾಲಾಂತಕ ಯಮೋಪಮಃ ॥ ೮ ॥ ಸತು ಕೋಪೇನ ಚಾವಿಷ್ಟಃ ಶೋಕೇನಚ ಮಹಾ ಕಪಿಃ । ಹನುಮಾನ್ ರಾವಣಿರಥೇ ಪಾತಯನ್ಮಹತೀಂ ಶಿಲಾಂ ॥ ೯ ॥ ತಾಮಾಪ ತಂತೀಂ ದೃಷ್ಟ್ವೈವ ರಥಸ್ಸಾರಥಿನಾ ತದಾ । ವಿಧೇಯಾಶ್ವಸಮಾಯುಕ್ತ ಸ್ಸುದೂರ

ಏವಂ - ಈ ಪರಿಯಾಗಿ, ವಾಯುಪುತ್ರೇಣ - ಆಂಜನೇಯನಿಂದ, ಉಕ್ತಾಃ - ಹೇಳಲ್ಪಟ್ಟ, ವಾನರಾಃ- ಕಪಿಗಳು, ಸುಸಂಹೃಷ್ಟಾಃ - ಬಹಳ ಉತ್ಸಾಹವುಳ್ಳವರಾಗಿ, ಹೃಷ್ಟಮಾನಸಾಃ - ಸಂತೋಷಗೊಂಡ ಮನಸ್ಸುಳ್ಳವರಾಗಿ, ಶೈಲಶೃಂಗಾಣಿ - ಬೆಟ್ಟಗಳ ಶಿಖರಗಳನ್ನೂ, ಅಗಾಂಶ್ಚೈವ - ಮರಗಳನ್ನೂ, ಜಗೃಹುಃ - ಹಿಡಿದರು. ॥೫॥ ವಾನರರ್ಷಭಾಃ - ಕಪಿಶ್ರೇಷ್ಠರು, ಗರ್ಜಂತಃ - ಕೂಗುತ್ತ, ರಾಕ್ಷಸಾ‌ನ್- ರಕ್ಕಸರನ್ನು ಕುರಿತು, ಅಭಿಗರ್ಜಂತಃ - ಎದುರಾಗಿ ಕೂಗುತ್ತ ಬಂದರು, ಮಹಾಹವೇ - ದೊಡ್ಡ ಕಾಳಗದಲ್ಲಿ, ಹನೂಮಂತಂ - ಆಂಜನೇಯನನ್ನು, ಪರಿವಾರ್ಯ - ಸುತ್ತಿಕೊಂಡು, ಅನ್ವಯುಶ್ಚ - ಅನುಸರಿಸಿ ಬಂದರು. ॥ ೬ ॥ ತೈರ್ವಾನರಮುಖ್ಯೈಃ - ಆ ವಾನರೋತ್ತಮರಿಂದ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ವೃತಃ-ಸುತ್ತಿಕೊಳ್ಳಲ್ಪಟ್ಟ, ಸಹನುಮಾನ್-ಆ ಆಂಜನೇಯನು, ಅರ್ಚಿಷ್ಮಾನ್-ಜ್ವಾಲೆ ಗಳುಳ್ಳ, ಹುತಾಶನಇವ - ಅಗ್ನಿಯಂತೆ, ಶತ್ರುವಾಹಿನೀಂ - ಶತ್ರುಗಳ ಸೈನ್ಯವನ್ನು, ಅದಹತ್ - ಸುಟ್ಟುಬಿಟ್ಟನು. ॥೭॥ ಕಾಲಾಂ....ಮಃ - ಪ್ರಳಯಕಾಲದಲ್ಲಿ ಅಂತಕರನಾದ ಯಮನಿಗೆ ಸಮಾನನಾದ, ಸುಮಹಾಕಪಿಃ - ವಾನರಶ್ರೇಷ್ಠನಾದ, ಸಃ - ಆ ಆಂಜನೇಯನು, ವಾನರಸೈನ್ಯೇನ - ಕಪಿಸೈನ್ಯದಿಂದ, ವೃತಃ - ಸುತ್ತುವರೆದು, ರಾಕ್ಷಸಾನಾಂ - ರಕ್ಕಸರ, ಕದನಂ - ಸಂಹಾರವನ್ನು, ಚಕಾರ - ಮಾಡಿ ದನು. ॥ ೮ ॥ ಸಮಹಾಕಪಿಃ - ಆ ವಾನರೋತ್ತಮನಾದ, ಹನುಮಾನ್ - ಆಂಜನೇಯನು, ಕೋಪೇ ನಚ - ಕೋಪದಿಂದಲೂ, ಶೋಕೇನಚ - ದುಃಖದಿಂದಲೂ, ಆವಿಷ್ಟಃ - ಕೂಡಿ, ರಾವಣಿರಥೇ - ಇಂದ್ರಜಿತುವಿನ ತೇರಿನಲ್ಲಿ, ಮಹತೀಂ - ದೊಡ್ಡದಾದ, ಶಿಲಾಂ - ಪಾಷಾಣವನ್ನು, ಅಪಾತಯತ್ - ಕೆಡುಹಿದನು. ॥ ೯ ॥ ಆಪತಂತೀಂ - ಬರುತ್ತಿರುವ, ತಾಂ - ಆ ಕಲ್ಲನ್ನು, ದೃಷ್ಟ್ವೈವ - ನೋಡು ತ್ತಲೇ, ಸಾರಥಿನಾ - ಸಾರಥಿಯಿಂದ, ತದಾ - ಆ ಕಾಲದಲ್ಲಿ, ವಿಧೇಯಾಶ್ವಸಮಾಯುಕ್ತಃ - ಹೇಳಿದ

ಪಟ್ಟು ಕಾಳಗ ಮಾಡಬೇಕೆಂಬ ಉತ್ಸಾಹವುಳ್ಳವರಾಗಿ ಪರ್ವತಶಿಖರಗಳನ್ನೂ, ಮಹಾ ವೃಕ್ಷ ಗಳನ್ನೂ ಆಯುಧಗಳನ್ನಾಗಿ ಗ್ರಹಿಸಿ ಹನುಮಂತನನ್ನು ಸುತ್ತುವರೆದು ಸಂಚರಿಸುತ್ತಿದ್ದರು. ॥ ೧–೫ ॥ ಹೀಗೆ ಸಮಸ್ತ ವಾನರವೀರರೊಡಗೂಡಿ ಬರುತ್ತಿರುವ ಹನುಮಂತನನ್ನು ನೋಡಿ ದಳ್ಳುರಿಯು ಕಾಡನ್ನು ಸುಡುವಂತೆ ರಾಕ್ಷಸರೆಲ್ಲರನ್ನೂ ತನ್ನ ಕೋಪಾಗ್ನಿಯಿಂದ ಸುಡುತ್ತ ಬಂದನು. ಇದೂ ಅಲ್ಲದೆ ಅದೇ ಸಮಯದಲ್ಲಿ ವೀರ ಹನುಮಂತನು ರಾಕ್ಷಸರೊಡನೆ ಮಹಾ ಭಯಂಕರವಾದ ಯುದ್ಧವನ್ನೂ ಮಾಡುತ್ತ ಕಾಲಯಮನಂತೆ ಶೋಭಿಸುತ್ತಿ ದ್ದನು. ಅವನು ಮಹಾ ಕೋಪಾಟೋಪವುಳ್ಳವನಾಗಿ ಇಂದ್ರಜಿತುವಿನ ರಥದ ಮೇಲೆ ಮಹಾ ಶಿಲೆಯೊಂದನ್ನೆಸೆದನು. ಆ ರಥವನ್ನು ನಡೆಯಿಸುತ್ತಿದ್ದ ಸಾರಥಿಯು ಮಹಾ

ಮಪವಾಹಿತಃ ॥೧೦॥ ತಮಿಂದ್ರಜಿತಮಪ್ರಾಪ್ಯ ರಥಸ್ಥಂ ಸಹಸಾರಥಿಂ । ವಿವೇಶ ಧರಣೀಂ ಭಿತ್ವಾ ಸಾ ಶಿಲಾ ವ್ಯರ್ಥಮುದ್ಯತಾ ॥೧೧॥ ಪಾತಿತಾಯಾಂ ಶಿಲಾಯಾಂತು ರಕ್ಷಸಾಂ ವ್ಯಥಿತಾ ಚಮೂಃ । ನಿಪತಂತ್ಯಾಚ ಶಿಲಯಾ ರಾಕ್ಷಸಾ ಮಥಿತಾ ಭೃಶಂ ॥೧೨॥ ತಮಭ್ಯಧಾವಂಛತಶೋ ನದಂತಃ ಕಾನನೌಕಸಃ । ತೇ ದ್ರುಮಾಂಶ್ಚ ಮಹಾವೀರ್ಯಾ ಗಿರಿಶೃಂಗಾಣಿ ಚೋದ್ಯತಾಃ । ಕ್ಷಿಪಂತೀಂದ್ರಜಿತಸ್ಸಂಖ್ಯೇ ವಾನರಾ ಭೀಮವಿಕ್ರಮಾಃ ॥೧೩॥ ವೃಕ್ಷಶೈಲಮಹಾವರ್ಷಂ ವಿಸೃಜಂತಃ ಪ್ಲವಂಗಮಾಃ । ಶತ್ರೂಣಾಂ ಕದನಂ ಚಕ್ರುರ್ನೇದುಶ್ಚ ವಿವಿಧೈಸ್ಸ್ವರೈಃ ॥೧೪॥ ವಾನರೈಸ್ತೈರ್ಮಹಾವೀರ್ಯೈರ್ಘೋರರೂಪಾ ನಿಶಾಚರಾಃ । ವೀರ್ಯಾದಭಿಹತಾ ವೃಕ್ಷೈರ್ವ್ಯವೇ

ಹಾಗೆ ಕೇಳತಕ್ಕ ಕುದುರೆಗಳಿಂದ ಕೂಡಿದ, ರಥಃ - ತೇರು, ದೂರಂ - ಬಹಳ ದೂರಕ್ಕೆ, ಅಪವಾಹಿತಃ - ತಿರುಗಿಸಲ್ಪಟ್ಟಿತು. ॥೧೦॥ ಉದ್ಯತಾ - ಎತ್ತಿದ, ಸಾಶಿಲಾ - ಆ ಪಾಷಾಣವು, ರಥಸ್ಥಂ - ರಥಾರೂಢನಾದ, ಸಹಸಾರಥಿಂ - ಸಾರಥಿಯಿಂದೊಡಗೂಡಿದ, ತಮಿಂದ್ರಜಿತಂ - ಆ ಇಂದ್ರಜಿತುವನ್ನು, ಅಪ್ರಾಪ್ಯ - ಹೊಂದದೆಯೇ, ಧರಣೀಂ - ಭೂಮಿಯನ್ನು, ಭಿತ್ವಾ - ಭೇದಿಸಿ, ವ್ಯರ್ಥಂ - ನಿಷ್ಪ್ರಯೋಜನನಾಗಿ, ವಿವೇಶ ಹೊಕ್ಕಿತು. ॥೧೧॥ ಶಿಲಾಯಾಂತು-ಪಾಷಾಣವಾದರೆ, ಪಾತಿತಾಯಾಂ- ಬೀಳಲು, ರಕ್ಷಸಾಂ - ರಕ್ಕಸರ, ಚಮೂಃ - ಸೈನ್ಯವು, ವ್ಯಥಿತಾಃ - ವ್ಯಸನಗೊಂಡಿತು, ನಿಪತಂತ್ಯಾ- ಬೀಳುತ್ತಿರುವ, ಶಿಲಯಾಚ - ಪಾಷಾಣದಿಂದ, ರಾಕ್ಷಸಾಃ - ರಕ್ಕಸರು, ಭೃಶಂ - ಬಹಳವಾಗಿ, ಮಥಿತಾಃ - ಹೊಡೆಯಲ್ಪಟ್ಟರು. ಶತಶಃ - ನೂರಾರುಮಂದಿಯಾದ, ಕಾನನೌಕಸಃ - ಕಪಿಗಳು, ನದಂತಃ - ಕೂಗುತ್ತ, ತಂ - ಆ ಇಂದ್ರಜಿತುವನ್ನು ಕುರಿತು, ಅಭ್ಯಧಾವ೯ - ಎದುರಾಗಿ ಬಂದನು. ॥೧೨॥ ಮಹಾವೀರ್ಯಾಃ - ಮಹಾ ಸಾಮರ್ಥ್ಯವಂತರಾದ, ಭೀಮವಿಕ್ರಮಾಃ - ಭಯಂಕರ ಪರಾಕ್ರಮವುಳ್ಳ, ತೇವಾನರಾಃ - ಆ ಕಪಿಗಳು, ಇಂದ್ರಜಿತಃ - ಇಂದ್ರಜಿತುವನ್ನು ಕುರಿತು, ಸಂಖ್ಯೇ - ಕಾಳಗದಲ್ಲಿ, ದ್ರುಮಾಂಶ್ಚ - ಗಿಡಗಳನ್ನೂ, ಗಿರಿಶೃಂಗಾಣಿಚ - ಬೆಟ್ಟದ ಶಿಖರಗಳನ್ನೂ, ಉದ್ಯತಾಃ - ಎತ್ತಿದವರಾಗಿ, ಕ್ಷಿಪಂತಿ - ಎರಚಿದರು. ॥೧೩॥ ಪ್ಲವಂಗಮಾಃ - ಕಪಿಗಳು, ವೃಕ್ಷ....ರ್ಷಂ - ವೃಕ್ಷಗಳ ಮತ್ತು ಕಲ್ಲುಗಳ ಮಹಾ ವೃಷ್ಟಿಯನ್ನು, ವಿಸೃಜಂತಃ - ಸುರಿಸುತ್ತಿರುವವರಾಗಿ, ಶತ್ರೂಣಾಂ - ಶತ್ರುಗಳ, ಕದನಂ - ಸಂಹಾರವನ್ನು, ಚಕ್ರುಃ - ಮಾಡಿದರು. ॥೧೪॥ ಘೋರರೂಪಾಃ - ಭಯಂಕರಾಕಾರಗಳುಳ್ಳ, ನಿಶಾಚರಾಃ - ರಕ್ಕಸರು, ಮಹಾವೀರ್ಯೈಃ - ಮಹಾ ಸಾಮರ್ಥ್ಯವಂತರಾದ, ತೈರ್ವಾ

ಮೇಧಾವಿಯಾದುದರಿಂದ ಎದುರು ಬರುತ್ತಿದ್ದ ಆ ಶಿಲೆಯನ್ನು ಕಂಡು ತನ್ನ ರಥವನ್ನದರಿಂದ ತಪ್ಪಿಸಿ ಬಹಳ ದೂರ ತುರುಬಿದನು. ॥ ೬–೧೦ ॥ ಇದರಿಂದ ಆ ಶಿಲೆಯು ವ್ಯರ್ಥವಾಗಿ ನೆಲಕ್ಕೆ ಬಿದ್ದು ಭೂಮಿಯನ್ನು ನಡುಗಿಸಿತು. ಆ ಶಿಲೆಯು ಬೀಳುವಾಗ ರಾಕ್ಷಸಸೇನೆಯೆಲ್ಲವೂ ಬಹಳವಾಗಿ ತತ್ತಳಿಸಿಹೋಯಿತು ; ಅನೇಕ ಸಹಸ್ರಮಂದಿ ರಾಕ್ಷಸರು ಮಡಿದೂ ಹೋದರು. ಆ ಸಮಯದಲ್ಲಿ ವಾನರವೀರರೆಲ್ಲರೂ ಅತಿ ಭಯಂಕರವಾಗಿ ಗರ್ಜಿಸುತ್ತ ಹನುಮಂತನೊಡಗೂಡಿ ಯುದ್ಧ ಮಾಡುತ್ತಿದ್ದರು. ಮಹಾ ಪರಾಕ್ರಮಿಗಳಾದ ಆ ವಾನರರು ಬಂಡೆಗಳನ್ನೂ, ಮರಗಳನ್ನೂ, ಕೋಡುಗಲ್ಲುಗಳನ್ನೂ, ಪರ್ವತಗಳನ್ನೂ ಹಗೆಯನಾದ ಇಂದ್ರಜಿತುವಿನ ಮೇಲೆ ಪ್ರಯೋಗಿಸಿದರು ; ಕೆಲವರು ಕಲ್ಮರಗಳ ಬಿರುಮಳೆಯನ್ನೇ ಸುರಿಸಿದರು. ಉಭಯಪಕ್ಷದವರಿಗೂ ಘೋರ ಸಂಗ್ರಾಮವಾಯಿತು. ಆಗ ವಾನರವೀರರು ಅನೇಕ

ಷ್ಟಂತ ರಣಾಜಿರೇ ॥ ೧೫ ॥ ಸ್ವಸೈನ್ಯಮಭಿವೀಕ್ಷ್ಯಾಥ ವಾನರಾರ್ದಿತಮಿಂದ್ರಜಿತ್ । ಪ್ರಗೃಹೀತಾಯುಧಃ ಕ್ರುದ್ಧಃ ಪರಾನಭಿಮುಖೋ ಯಯೌ ॥ ೧೬ ॥ ಸಶರೌಘಾ ನ್ವ್ಯಸೃಜತ್ ಸ್ವಸೈನ್ಯೇನಾಽಭಿಸಂವೃತಃ । ಜಘಾನ ಕಪಿಶಾರ್ದೂಲಾನ್ ಸುಬಹೂನ್ ದೃಷ್ಟವಿಕ್ರಮಃ ॥ ೧೭ ॥ ಶೂಲೈರಶನಿಭಿಃ ಖಡ್ಗೈಃ ಪಟ್ಟಸೈಃ ಕೂಟಮುದ್ಗರೈಃ । ತೇಚಾಪ್ಯನುಚರಾಸ್ತಸ್ಯ ವಾನರಾನ್ ಜಘ್ನುರೋಜಸಾ ॥ ೧೮ ॥ ಸಸ್ಕಂಧವಿಟಪೈ ಸ್ಸಾಲೈಃ ಶಿಲಾಭಿಶ್ಚ ಮಹಾಬಲಃ । ಹನುಮಾನ್ ಕದನಂ ಚಕ್ರೇ ರಕ್ಷಸಾಂ ಭೀಮ ಕರ್ಮಣಾಂ ॥ ೧೯ ॥ ಸ ನಿವಾರ್ಯ ಪರಾನೀಕಮಬ್ರವೀತ್ತಾನ್ವನೌಕಸಃ । ಹನುಮಾನ್

ನರೈಃ - ಆ ಕಪಿಗಳಿಂದ, ವೀರ್ಯಾತ್ - ಸಾಮರ್ಥ್ಯದಿಂದ, ವೃಕ್ಷೈಃ ಮರಗಳಿಂದ, ಅಭಿಹತಾಃ - ಹೊಡೆಯಲ್ಪಟ್ಟವರಾಗಿ, ರಣಾಜಿರೇ - ಯುದ್ಧರಂಗದಲ್ಲಿಯೇ, ವ್ಯವೇಷ್ಟಂತ - ಹೊರಳಾಡಿದರು ||೧೫|| ಅಥ - ಬಳಿಕ, ಇಂದ್ರಜಿತ್ - ಇಂದ್ರಜಿತುವು, ವಾನರಾರ್ದಿತಂ - ಕಪಿಗಳಿಂದ ಹೊಡೆಯಲ್ಪಟ್ಟ, ಸ್ವಸೈನ್ಯಂ - ತನ್ನ ಸೇನೆಯನ್ನು, ನಿರೀಕ್ಷ್ಯ - ಕಂಡು, ಕ್ರುದ್ಧಃ - ಕುಪಿತನಾಗಿ, ಪ್ರಗೃ.....ಧಃ - ಹಿಡಿಯಲ್ಪಟ್ಟ ಆಯುಧಗಳುಳ್ಳವನಾಗಿ, ಪರಾನ್ - ಶತ್ರುಗಳನ್ನು ಕುರಿತು, ಅಭಿಮುಖಃ - ಎದುರಾಗಿ, ಯಯೌ - ತೆರಳಿದನು. ॥ ೧೬ ॥ ದೃಷ್ಟವಿಕ್ರಮಃ - ಕಾಣಲ್ಪಟ್ಟ ಪರಾಕ್ರಮವುಳ್ಳ, ಸಃ - ಆ ಇಂದ್ರ ಜಿತುವು, ಸ್ವಸೈನ್ಯೇನ - ತನ್ನ ಸೇನೆಯಿಂದ, ಅಭಿವೃತಃ-ಸುತ್ತುವರೆನವನಾಗಿ, ಶರೌಘಾನ್-ಬಾಣತಂಡ ಗಳನ್ನು, ವ್ಯಸೃಜತ್ - ಬಿಡುತ್ತ, ಸುಬಹೂನ್ - ಬಹಳಮಂದಿ, ಕಪಿಶಾರ್ದೂಲಾನ್ - ವಾನರಶ್ರೇಷ್ಠ ರನ್ನು, ಶೂಲೈಃ - ಶೂಲಗಳಿಂದಲೂ, ಅಶನಿಭಿಃ - ಸಿಡಿಲುಗಳಿಂದಲೂ, ಖಡ್ಗೈಃ - ಕಿರುಗತ್ತಿಗಳಿಂದಲೂ, ಪಟ್ಟಸೈಃ-ಪಟ್ಟಾಕತ್ತಿಗಳಿಂದಲೂ, ಕೂಟಮುದ್ಗರೈಃ-ಕಬ್ಬಿಣದ ಕೊಡತಿಗಳಿಂದಲೂ, ಜಘಾನ-ಹೊಡೆ ದನು, ತಸ್ಯ - ಆ ಇಂದ್ರಜಿತುವಿನ, ತೇಅನುಚರಾಶ್ಚಾಪಿ - ಅನುಚರರಾಗಿ ಬಂದಿರುವ ರಕ್ಕಸರೂ, ಓಜಸಾ - ಸಾಮರ್ಥ್ಯದಿಂದ, ವಾನರಾನ್ - ಕಪಿಗಳನ್ನು, ಜಘ್ನುಃ - ಹೊಡೆದರು. ||೧೭-೧೮|| ಮಹಾ ಬಲಃ - ಬಹಳ ಬಲಶಾಲಿಯಾದ, ಹನುಮಾನ್ - ಆಂಜನೇಯನು, ಸಸ್ಕಂ....ಪೈಃ - ದೊಡ್ಡ ಚಿಕ್ಕ ಕೊಂಬೆಗಳಿಂದ ಕೂಡಿರುವ, ಸಾಲೈಃ - ಸಾಲವೃಕ್ಷಗಳಿಂದಲೂ, ಶಿಲಾಭಿಶ್ಚ - ಪಾಷಾಣಗಳಿಂದಲೂ, ಭೀಮಕರ್ಮಣಾಂ - ಭಯಂಕರ ವ್ಯಾಪಾರಿಗಳಾದ, ರಕ್ಷಸಾಂ - ರಕ್ಕಸರ, ಕದನಂ - ಸಂಹಾರವನ್ನು, ಚಕ್ರೇ - ಮಾಡಿದನು. ॥ ೧೯ ॥ ಸಹನುಮಾನ್ - ಆ ಆಂಜನೇಯನು, ಪರಾನೀಕಂ - ಶತ್ರುಸೇನೆ ಯನ್ನು, ನಿವಾರ್ಯ - ತಡೆದು, ತಾನ್ವನೌಕಸಾನ್ - ಆ ಕಪಿಗಳನ್ನು ಕುರಿತು, ಅಬ್ರವೀತ್ - ನುಡಿ

ರಾಕ್ಷಸರನ್ನು ಕೊಂದು ಕೆಡವಿದರು. ॥ ೧೧–೧೫ ॥ ಹೀಗೆ ತನ್ನ ಸೇನೆಯೆಲ್ಲವೂ ವಾನರರಿಂದ ತಳಮಳಗೊಂಡಿರುವುದನ್ನು ಕಂಡೊಡನೆಯೇ ಆ ಇಂದ್ರಜಿತುವು ಬಹಳವಾಗಿ ಕನಲಿ ಶತ್ರು ಗಳಿಗಭಿಮುಖವಾಗಿ ಹೊರಟು ತನ್ನ ಸೇನೆಯೊಡಗೂಡಿ ಶತ್ರುಗಳ ಮೇಲೆ ಸಹಸ್ರಾರು ಬಾಣ ಗಳನ್ನು ಪ್ರಯೋಗ ಮಾಡಿದನು. ಅವನು ತನ್ನ ಬಾಣಪ್ರಯೋಗದಿಂದ ಅನೇಕ ವೀರ ವಾನರರನ್ನು ನಾಶಗೊಳಿಸುತ್ತಿದ್ದನು. ಅವನ ಸೇನೆಯವರೆಲ್ಲ ಖಡ್ಗಗಳಿಂದಲೂ, ಶೂಲ ಗಳಿಂದಲೂ, ಪಟ್ಟಾಕತ್ತಿಗಳಿಂದಲೂ, ಮುದ್ಗರಾಯುಧಗಳಿಂದಲೂ ಅನೇಕ ಸಹಸ್ರ ಮಂದಿ ವಾನರರನ್ನು ಕೊಂದು ಕೆಡವಿದರು. ಆಗ ಮಹಾಬಲನಾದ ಹನುಮಂತನು ವೃಕ್ಷ ವರ್ಷವನ್ನೂ, ಶಿಲಾವರ್ಷವನ್ನೂ ರಾಕ್ಷಸಸೇನೆಯ ಮೇಲೆ ವರ್ಷಿಸಿ ಭಯಂಕರ ಯುದ್ಧ ವನ್ನು ಮಾಡಿದನು. ॥ ೧೬–೧೯ ॥ ಹೀಗೆ ಮಹಾ ಯುದ್ಧವನ್ನು ಮಾಡಿ ಆ ಸೇನೆಯನ್ನೆಲ್ಲ

"ಸನ್ನಿವರ್ತಧ್ವಂ ನ ನಸ್ಸಾಧ್ಯಮಿದಂ ಬಲಂ ||೨೦|| ತ್ಯಕ್ತ್ವಾ ಪ್ರಾಣಾನ್ ವಿವೇಷ್ಟಂತೋ ರಾಮಪ್ರಿಯಚಿಕೀರ್ಷವಃ | ಯನ್ನಿಮಿತ್ತಂ ಹಿ ಯುಧ್ಯಾಮೋ ಹತಾ ಸಾ ಜನಕಾತ್ಮಜಾ || ೨೧ || ಇಮಮರ್ಥಂ ಹಿ ವಿಜ್ಞಾಪ್ಯ ರಾಮಂ ಸುಗ್ರೀವಮೇವಚ | ತೌ ಯತ್ಪ್ರತಿವಿಧಾಸ್ಯೇತೇ ತತ್ಕರಿಷ್ಯಾಮಹೇ ವಯಂ" ||೨೨|| ಇತ್ಯುಕ್ತ್ವಾ ವಾನರಶ್ರೇಷ್ಠೋ ವಾರಯನ್ ಸರ್ವವಾನರಾನ್ | ಶನೈಃ ಶನೈರಸಂತ್ರಸ್ತ ಸ್ಸಬಲಸ್ಸನ್ನ್ಯವರ್ತತ || ೨೩ || ತತಃ ಪ್ರೇಕ್ಷ್ಯ ಹನೂಮಂತಂ ವ್ರಜಂತಂ ಯತ್ರ ರಾಘವಃ | ಸ ಹೋತುಕಾಮೋ ದುಷ್ಟಾತ್ಮಾ ಗತಶ್ಚೈತ್ಯ ನಿಕುಂಭಿಲಾಂ | ನಿಕುಂಭಿಲಾಮಧಿಷ್ಠಾಯ ಪಾವಕಂ ಜುಹ

ದನು. ||೨೦|| ನಃ - ನಮಗೆ, ಇದಂಬಲಂ - ಈ ರಾಕ್ಷಸ ಸೇನೆಯು, ಸಾಧ್ಯಂ - ಸಾಧ್ಯವಾದದ್ದು, ನ - ಅಲ್ಲವು, ಸನ್ನಿವರ್ತಧ್ವಂ - ಹಿಂತಿರುಗಿ, ರಾಮ....ವಃ - ಶ್ರೀರಾಮನಿಗೆ ಹಿತವನ್ನು ಮಾಡಲಿಚ್ಛೆಯುಳ್ಳವರಾಗಿ, ಪ್ರಾಣಾನ್ - ಪ್ರಾಣಗಳನ್ನು, ತ್ಯಕ್ತ್ವಾ - ಬಿಟ್ಟು, ವಿವೇಷ್ಟಂತಃ - ಹೊರಳಾಡುತ್ತ, ಯನ್ನಿಮಿತ್ತಂ - ಯಾವ ಸೀತಾ ನಿಮಿತ್ತವಾಗಿ, ಯುಧ್ಯಾಮಃ - ಯುದ್ಧ ಮಾಡುತ್ತೇವೆಯೋ, ಸಾಜನಕಾತ್ಮಜಾ - ಆ ಸೀತಾದೇವಿಯು, ಹತಾ - ಮಡಿದನಷ್ಟೇ, ಇಮಮರ್ಥಂ - ಈ ಅರ್ಥವನ್ನು, ರಾಮಂ - ಶ್ರೀರಾಮನನ್ನೂ, ಸುಗ್ರೀವಂ - ಸುಗ್ರೀವನನ್ನೂ, ವಿಜ್ಞಾಪ್ಯ - ಅರಿಕೆ ಮಾಡಿ, ತೌ - ಆ ಶ್ರೀರಾಮ ಸುಗ್ರೀವರು, ಯತ್ - ಯಾವ ಮಾತನ್ನು, ಪ್ರತಿವಿಧಾಸ್ಯೇತೇ - ಆಜ್ಞಾಪಿಸುತ್ತಾರೋ, ತತ್ - ಅದನ್ನು, ವಯಂ - ನಾವು, ಕರಿಷ್ಯಾಮಹೇ - ಮಾಡುವೆವು. || ೨೧-೨೨ || ವಾನರಶ್ರೇಷ್ಠಃ - ವಾನರೋತ್ತಮನಾದ ಆಂಜನೇಯನು, ಇತಿ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಸರ್ವವಾನರಾನ್- ಸಮಸ್ತ ಕಪಿಗಳನ್ನೂ, ವಾರಯನ್ - ತಡೆದು, ಶನೈಶ್ಶನೈಃ - ಮೆಲ್ಲಮೆಲ್ಲಗೆ, ಸಬಲಃ - ಸೇನೆಯೊಡಗೂಡಿ, ಸನ್ನ್ಯವರ್ತತ - ಹಿಂತಿರುಗಿದನು. ||೨೩|| ತತಃ - ಅನಂತರದಲ್ಲಿ, ರಾಘವಃ - ಶ್ರೀರಾಮನು, ಯತ್ರ-ಯಾವ ಸ್ಥಳದಲ್ಲಿಯೋ, ತತ್ರ - ಅಲ್ಲಿ, ವ್ರಜಂತಂ - ಹೋಗುತ್ತಿರುವ, ಹನೂಮಂತಂ - ಆಂಜನೇಯನನ್ನು, ಪ್ರೇಕ್ಷ್ಯ - ಕಂಡು, ದುಷ್ಟಾತ್ಮಾ - ದುಷ್ಟಬುದ್ಧಿಯುಳ್ಳ, ಸಃ - ಆ ಇಂದ್ರಜಿತುವು, ಹೋತುಕಾಮಃ-ಹೋಮ ಮಾಡಲಿಚ್ಛೆಯುಳ್ಳವನಾಗಿ, ಚೈತ್ಯನಿಕುಂಭಿಲಾಂ-ನಿಕುಂಭಿಲಾಖ್ಯ ದೇವತೆಯ ಆಲಯವನ್ನು ಕುರಿತು, ಗತಃ-ಹೊರಟನು || ೨೪ || ಇಂದ್ರಜಿತ್-ಇಂದ್ರಜಿತುವು, ನಿಕುಂಭಿಲಾಂ -

---

ಹಿಮ್ಮೆಟ್ಟಿಸಿ ತನ್ನವರನ್ನು ಕುರಿತು, "ಎಲೈ ವಾನರವೀರರೇ! ಇನ್ನು ಯುದ್ಧರಂಗದಿಂದ ಹಿಂತಿರುಗಿರಿ. ನಾವು ಈ ರಾಕ್ಷಸಸೇನೆಯನ್ನು ಸಂಹರಿಸಲಾರೆವು. ನಾವೆಲ್ಲರೂ ಶ್ರೀರಾಮಚಂದ್ರನಿಗೆ ಪ್ರಿಯವನ್ನುಂಟುಮಾಡುವ ಬಯಕೆಯಿಂದ ಪ್ರಾಣಗಳ ಮೇಲಣ ಆಶೆಯನ್ನೂ ತೊರೆದು ಯುದ್ಧ ಮಾಡಿದೆವು. ಅಯ್ಯಾ ವೀರರೇ! ನಾವು ಯಾವ ಸೀತಾಮಾತೆಯ ನಿಮಿತ್ತವಾಗಿ ಯುದ್ಧ ಮಾಡುತ್ತಿದ್ದೆವೋ ಆಕೆ ಈಗ ಮೃತಿಯೊಂದಿದಳಲ್ಲವೆ? ಇನ್ನು ನಾವು ಯುದ್ಧ ಮಾಡಿಯಾದರೂ ಆಗುವ ಪ್ರಯೋಜನವೇನು? ಆದುದರಿಂದ ನಾವಿಲ್ಲಿಂದ ಹೋಗಿ ಈ ವೃತ್ತಾಂತವೆಲ್ಲವನ್ನೂ ಶ್ರೀರಾಮ ಸುಗ್ರೀವರಿಗೆ ಅರಿಕೆ ಮಾಡೋಣ. ಆಮೇಲೆ ಪ್ರಭುಗಳು ಹೇಗೆ ಹೇಳಿದರೆ ಹಾಗೆ ಮಾಡೋಣ" ಎಂದು ಹೇಳಿ ಸೇನೆಯನ್ನೆಲ್ಲ ಹಿಂತಿರುಗಿಸಿದನು. ಆ ತರುವಾಯ ಆತನು ನಿರ್ಭಯನಾಗಿ ಮೆಲ್ಲಮೆಲ್ಲಗೆ ಹಿಂದುಹಿಂದಕ್ಕೆ ಸರಿದನು. ||೨೦—೨೩|| ಹೀಗೆ ಆ ಕಪಿಯೂಥನಾಥನು ಹಿಮ್ಮೆಟ್ಟುತ್ತಿರುವುದನ್ನು ಕಂಡು ಇಂದ್ರಜಿತುವು, ಅವನು ಶ್ರೀರಾಮಮೂರ್ತಿಯ ಬಳಿಗೆ ಹೋಗುವನೆಂದರಿತು ತಾನು ಹೋಮ ವಿಧಿಯನ್ನಾಚರಿಸಲು

ನೇಂದ್ರಜಿತ್ ॥ ೨೪-೨೫ ॥ ಯಜ್ಞಭೂಮ್ಯಾಂ ತು ವಿಧಿವತ್ಪಾವಕಸ್ತೇನ ರಕ್ಷಸಾ । ಹೂಯಮಾನಃ ಪ್ರಜಜ್ವಾಲ ಮಾಂಸಶೋಣಿತಭುಕ್ತದಾ ॥ ೨೬ ॥ ಸೋಽರ್ಚಿಃ ಪಿನದ್ಧೋ ದದೃಶೇ ಹೋಮಶೋಣಿತತರ್ಪಿತಃ । ಸಂಧ್ಯಾಗತ ಇವಾದಿತ್ಯಸ್ಸುತೀವ್ರೋಽಗ್ನಿಸ್ಸಮುತ್ಥಿತಃ ॥ ೨೭ ॥

ಅಥೇಂದ್ರಜಿದ್ರಾಕ್ಷಸಭೂತಯೇತು
ಜುಹಾವ ಹವ್ಯಂ ವಿಧಿನಾ ವಿಧಾನವಿತ್ ।
ದೃಷ್ಟ್ವಾ ವ್ಯತಿಷ್ಠಂತ ಚ ರಾಕ್ಷಸಾಸ್ತೇ
ಮಹಾಸಮೂಹೇಷು ನಯಾನಯಜ್ಞಾಃ ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವ್ಯಶೀತಿತಮಸ್ಸರ್ಗಃ.

ನಿಕುಂಭಿಳಾ ಎಂಬ ದೇವತಾಸ್ಥಾನದಲ್ಲಿ, ಅಧಿಷ್ಠಾಯ - ಕುಳಿತು, ಪಾವಕಂ - ಅಗ್ನಿಯಲ್ಲಿ, ಜುಹುವೇ - ಹೋಮ ಮಾಡಿದನು. ॥ ೨೫ ॥ ಯಜ್ಞಭೂಮ್ಯಾಂ - ಯಾಗಸ್ಥಲದಲ್ಲಿ, ತೇನರಕ್ಷಸಾ - ಆ ಇಂದ್ರಜಿತುವಿಂದ, ವಿಧಿವತ್ - ಯಥಾಶಾಸ್ತ್ರವಾಗಿ, ಹೂಯಮಾನಃ - ಹೋಮ ಮಾಡಲ್ಪಟ್ಟ, ಪಾವಕಃ - ಅಗ್ನಿಯು, ತದಾ - ಆ ಕಾಲದಲ್ಲಿ, ಮಾಂಸ....ಕ್ - ಮಾಂಸವನ್ನೂ, ರಕ್ತವನ್ನೂ ಭಕ್ಷಿಸುತ್ತ, ಪ್ರಜಜ್ವಾಲ - ಉರಿಯುತ್ತಿದ್ದನು. ॥ ೨೬ ॥ ಅರ್ಚಿಃಪಿನದ್ಧಃ - ಜ್ವಾಲೆಗಳಿಂದ ವ್ಯಾಪ್ತನಾದ, ಹೋಮ....ತಃ - ಹೋಮದಿಂದಲೂ, ರಕ್ತದಿಂದಲೂ ತೃಪ್ತಿಗೊಳಿಸಲ್ಪಟ್ಟ, ಸುತೀವ್ರಃ - ಬಹಳ ತೀಕ್ಷ್ಣವಾಗಿ, ಸಮುತ್ಥಿತಃ - ಚನ್ನಾಗಿ ಪ್ರಜ್ವಲಿಸಿದ, ಸಃಅಗ್ನಿಃ - ಆ ಅಗ್ನಿಯು, ಸಂಧ್ಯಾಗತಃ - ಸಂಧ್ಯಾರಾಗವನ್ನು ಹೊಂದಿದ, ಆದಿತ್ಯಇವ - ಸೂರ್ಯನಂತೆ, ದದೃಶೇ - ಕಾಣಿಸಿದನು. ॥ ೨೭ ॥ ಅಥ ಬಳಿಕ, ವಿಧಾನವಿತ್ - ಯಾಗವಿಧಾನವನ್ನು ತಿಳಿದಿರುವ, ಇಂದ್ರಜಿತ್ - ಇಂದ್ರಜಿತುವು, ರಾಕ್ಷ....ಯೇ - ರಾಕ್ಷಸರ ಅಭಿವೃದ್ಧಿಗಾಗಿ, ವಿಧಿನಾ - ಶಾಸ್ತ್ರವಿಧಾನದಿಂದ, ಹವ್ಯಂ - ಹವಿರ್ಭಾಗವನ್ನು, ಜುಹಾವ - ಹೋಮ ಮಾಡಿದನು, ಮಹಾ....ಷು - ದೊಡ್ಡ ಸಂಘಗಳಲ್ಲಿ ನಯಾನಯಜ್ಞಾಃ - ಶಾಸ್ತ್ರವಿಧಿಯನ್ನೂ, ನಿಷೇಧವನ್ನೂ ತಿಳಿದಿರುವ, ತೇರಾಕ್ಷಸಾಃ - ಆ ರಕ್ಕಸರು, ದೃಷ್ಟ್ವಾ - ನೋಡಿ, ವ್ಯತಿಷ್ಠಂತ - ನಿಂತುಕೊಂಡಿದ್ದರು. ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವ್ಯಶೀತಿತಮಸ್ಸರ್ಗಃ.

ಚೈತ್ಯ ನಿಕುಂಭಿಳವೆಂಬ ದೇವಸ್ಥಾನಕ್ಕೆ ಹೋದನು. ಅಲ್ಲಿಗೆ ಹೋದ ತರುವಾಯ ಅವನು ಹೋಮವನ್ನುಪಕ್ರಮಿಸಿದನು. ಆ ರಾಕ್ಷಸರಾಜ ಕುಮಾರನೀರೀತಿ ಶಾಸ್ತ್ರವಿಧಿಯಿಂದ ಹೋಮ ಮಾಡುತ್ತಿರಲು ಅಗ್ನಿಹೋತ್ರನು ರಕ್ತಮಾಂಸಗಳನ್ನು ಭುಜಿಸಿ ಅಪರಿಮಿತವಾಗಿ ಪ್ರಜ್ವಲಿಸುತ್ತಿದ್ದನು. ಇಷ್ಟೆಯಲ್ಲದೆ ಹೀಗೆ ರಕ್ತಮಾಂಸಗಳಿಂದ ತೃಪ್ತಿಹೊಂದಿದ ಆ ಯಜ್ಞೇಶ್ವರನು ಸಂಧ್ಯಾಕಾಲದ ಬೆಂಕಿಯಂತೆ ಪ್ರಕಾಶಿಸುತ್ತಿದ್ದನು. ಆಗ ಇಂದ್ರಜಿತುವು ಶಾಸ್ತ್ರೋಕ್ತವಾಗಿ ಅಗ್ನಿಯಲ್ಲಿ ಹವಿಸ್ಸನ್ನರ್ಪಿಸಿದನು. ವಿಧಿಜ್ಞರಾದ ರಾಕ್ಷಸರೆಲ್ಲರೂ ಆ ಹೋಮವನ್ನು ನೋಡುತ್ತ ನಿಂತಿದ್ದರು. ॥ ೨೪–೨೮ ॥

ಇಂತಿದು ಇಂದ್ರಜಿತ್ಕೃತ ನಿಕುಂಭಿಲಾರಂಭ ವೃತ್ತಾಂತವೆಂಬ
ಎಂಬತ್ತೆರಡನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ತ್ರ್ಯಶೀತಿತಮಸ್ಸರ್ಗಃ

ರಾಘವಶ್ಚಾಪಿ ವಿಪುಲಂ ತಂ ರಾಕ್ಷಸವನೌಕಸಾಂ । ಶ್ರುತ್ವಾ ಸಂಗ್ರಾಮ ನಿರ್ಘೋಷಂ ಜಾಂಬವಂತಮುವಾಚಹ ॥ ೧ ॥ "ಸೌಮ್ಯ! ನೂನಂ ಹನುಮತಾ ಕ್ರಿಯತೇ ಕರ್ಮ ದುಷ್ಕರಂ । ಶ್ರೂಯತೇಹಿ ಯಥಾ ಭೀಮಸ್ಸುಮಹಾ ನಾಯುಧ ಸ್ವನಃ ॥೨॥ ತದ್ಗಚ್ಛ ಕುರುಸಾಹಾಯ್ಯಂ ಸ್ವಬಲೇನಾಭಿಸಂವೃತಃ । ಕ್ಷಿಪ್ರಮೃಕ್ಷಪತೇ! ತಸ್ಯ ಕಪಿಶ್ರೇಷ್ಠಸ್ಯ ಯುಧ್ಯತಃ" ॥ ೩ ॥ ಋಕ್ಷರಾಜಸ್ತಥೋಕ್ತಸ್ತು ಸ್ವೇನಾನೀಕೇನ ಸಂವೃತಃ । ಆಗಚ್ಛತ್ಪಶ್ಚಿಮದ್ವಾರಂ ಹನುಮಾನ್ ಯತ್ರ ವಾನರಃ ॥ ೪ ॥ ಅಥಾ ಯಾಂತಂ ಹನೂಮಂತಂ ದದರ್ಶರ್ಕ್ಷ್ಯಪತಿಃ ಪಥಿ । ವಾನರೈಃ ಕೃತಸಂಗ್ರಾಮೈಃ ಶ್ವಸದ್ಭಿ

ರಾಘವಶ್ಚಾಪಿ - ಶ್ರೀರಾಮನೂ ಕೂಡ, ರಾಕ್ಷ....ಸಾಂ - ರಕ್ಕಸರ ಮತ್ತು ಕಪಿಗಳ, ವಿಪುಲಂ - ವಿಸ್ತಾರವಾದ, ಸಂಗ್ರಾ....ಷಂ - ಕಾಳಗದ ಧ್ವನಿಯನ್ನು, ಶ್ರುತ್ವಾ - ಕೇಳಿ, ಜಾಂಬವಂತಂ - ಜಾಂಬ ವಂತನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ॥ ೧ ॥ ಹೇ ಸೌಮ್ಯ - ಎಲೈ ಪ್ರಸನ್ನನೇ, ಹನು ಮತಾ - ಆಂಜನೇಯನಿಂದ, ದುಷ್ಕರಂ - ಮಾಡಲಸಾಧ್ಯವಾದ, ಕರ್ಮ - ಕಾರ್ಯವು, ಕ್ರಿಯತೇ - ಮಾಡಲ್ಪಡುತ್ತದೆ, ಯಥಾ - ಯಾವ ಕಾರಣದಿಂದ, ಸುಮಹಾನ್ - ಬಹಳವಾದ, ಆಯುಧಸ್ವನಃ - ಆಯುಧಗಳ ಶಬ್ದವು, ಶ್ರೂಯತೇ-ಕೇಳಲ್ಪಡುತ್ತದೆಯೋ, ನೂನಂಹಿ-ನಿಶ್ಚಯವಷ್ಟೆ. ॥೨॥ ಹೇ ಋಕ್ಷ ಪತೇ - ಎಲೈ ಋಕ್ಷರಾಜನೇ, ತತ್ - ಆ ಕಾರಣದಿಂದ, ಸ್ವಬಲೇನ - ನಿನ್ನ ಸೇನೆಯಿಂದ, ಅಭಿ ಸಂವೃತಃ - ಕೂಡಿ, ಯುಧ್ಯತಃ - ಕಾಳಗವನ್ನು ನಡೆಸುತ್ತಿರುವ, ಕಪಿಶ್ರೇಷ್ಠಸ್ಯ - ವಾನರೋತ್ತಮ ನಾದ, ತಸ್ಯ - ಆ ಹನುಮಂತನಿಗೆ, ಸಾಹಾಯ್ಯಂ - ಸಹಾಯವನ್ನು, ಕುರು - ಮಾಡು, ಗಚ್ಛ - ಹೋಗು. ॥ ೩ ॥ ತಥಾ - ಆ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಋಕ್ಷರಾಜಸ್ತು - ಜಾಂಬವಂತ ನಾದರೆ, ಸ್ವೇನ - ತನ್ನ, ಅನೀಕೇನ - ಸೇನೆಯಿಂದ, ವೃತಃ - ಪರಿವೃತನಾಗಿ, ವಾನರಃ - ಕಪಿಯಾದ, ಹನುಮಾನ್ - ಆಂಜನೇಯನು, ಯತ್ರ - ಎಲ್ಲಿಯೋ, ತತ್ಪಶ್ಚಿಮದ್ವಾರಂ - ಆ ಪಡವಲು ಬಾಗಿಲನ್ನು ಕುರಿತು, ಆಗಚ್ಛತ್ - ಹೊರಟುಬಂದನು. ॥ ೪ ॥ ಅಥ-ಬಳಿಕ, ಋಕ್ಷಪತಿಃ - ಜಾಂಬವಂತನು, ಪಥಿ - ಮಾರ್ಗದಲ್ಲಿ, ಆಯಾಂತಂ - ಬರುತ್ತಿರುವ, ಕೃತ....ಮೈಃ - ಮಾಡಲ್ಪಟ್ಟ ಕಾಳಗವುಳ್ಳ,

---

ಇದೇ ಸಮಯದಲ್ಲಿ ಶ್ರೀರಾಮಮೂರ್ತಿಯೂ ಸಹ ರಾಕ್ಷಸ ವಾನರರ ಯುದ್ಧ ಕೋಲಾಹಲವನ್ನು ಕೇಳಿ, ಜಾಂಬವಂತನನ್ನು ಕುರಿತು, "ಎಲೈ ಋಕ್ಷರಾಜನೇ! ಹನು ಮಂತನು ಅಸಾಧ್ಯವಾದ ಯುದ್ಧವನ್ನು ಮಾಡುತ್ತಿರುವಂತೆ ತೋರುತ್ತಿದೆ. ಮಹಾ ಭಯಂಕರ ವಾದ ಆಯುಧ ಧ್ವನಿಯು ಕೇಳಿಬರುತ್ತಿದೆಯಲ್ಲವೆ. ಆದುದರಿಂದ ನೀನೀಗಲೇ ನಿನ್ನ ಸೇನೆಯೊಡಗೂಡಿ ಭಯಂಕರ ಯುದ್ಧ ಮಾಡುತ್ತಿರುವ ಆ ಹನುಮಂತನಿಗೆ ಸಹಾಯವನ್ನು ಮಾಡು. ಜಾಗ್ರತೆಯಾಗಿ ಹೊರಡು" ಎಂದು ಹೇಳಿದನು. ಶ್ರೀರಾಮಚಂದ್ರನೀರೀತಿ ನುಡಿಯುತ್ತಲೇ ಋಕ್ಷಪತಿಯಾದ ಆ ಜಾಂಬವಂತನು ಹನುಮಂತನು ಯುದ್ಧ ಮಾಡು ತ್ತಿದ್ದ ಲಂಕಾನಗರದ ಪಡುವಲ ಬಾಗಿಲನ್ನು ಕುರಿತು ಹೊರಟು ಬಂದನು. ಹೀಗೆ ಬರು ತ್ತಿರುವಾಗ ಆತನು ಯುದ್ಧವನ್ನು ಬಿಟ್ಟು ದೀನಮುಖರಾಗಿ ನಿಟ್ಟುಸಿರು ಬಿಡು

ರಭಿಸಂವೃತಂ ॥ ೫ ॥ ದೃಷ್ಟ್ವಾ ಪಥಿ ಹನೂಮಾಂಶ್ಚ ತದೃಕ್ಷಬಲಮುದ್ಯತಂ । ನೀಲಮೇಘನಿಭಂ ಭೀಮಂ ಸನ್ನಿವಾರ್ಯ ನ್ಯವರ್ತತ ॥ ೬ ॥ ಸ ತೇನ ಹರಿಸೈನ್ಯೇನ ಸನ್ನಿಕರ್ಷಂ ಮಹಾಯಶಾಃ । ಶೀಘ್ರಮಾಗಮ್ಯ ರಾಮಾಯ ದುಃಖಿತೋ ವಾಕ್ಯಮಬ್ರವೀತ್ ॥೭॥ "ಸಮರೇ ಯುಧ್ಯಮಾನಾನಾಮಸ್ಮಾಕಂ ಪ್ರೇಕ್ಷತಾಂ ಪುರಃ । ಜಘಾನ ರುದತೀಂ ಸೀತಾಮಿಂದ್ರಜಿದ್ರಾವಣಾತ್ಮಜಃ ॥೮॥ ಉದ್ಭ್ರಾಂತಚಿತ್ತಸ್ತಾಂ ದೃಷ್ಟ್ವಾ ವಿಷಣ್ಣೋಽಹಮರಿಂದಮ ! । ತದಹಂ ಭವತೋ ವೃತ್ತಂ ವಿಜ್ಞಾಪಯಿತುಮಾಗತಃ" ॥ ೯ ॥ ತಸ್ಯ ತದ್ವಚನಂ ಶ್ರುತ್ವಾ ರಾಘವಶ್ಶೋಕಮೂರ್ಛಿತಃ । ನಿಪಪಾತ ತದಾ

ಶ್ವಸದ್ಭಿಃ - ನಿಟ್ಟುಸಿರು ಬಿಡುತ್ತಿರುವ, ವಾನರೈಃ - ಕಪಿಗಳಿಂದ, ಅಭಿಸಂವೃತಂ - ಸುತ್ತುವರೆದ, ಹನುಮಂತಂ - ಆಂಜನೇಯನನ್ನು, ದದರ್ಶ - ಕಂಡನು. ॥ ೫ ॥ ಹನುಮಾಂಶ್ಚ - ಆಂಜನೇಯನೂ, ಪಥಿ - ಮಾರ್ಗದಲ್ಲಿ, ಉದ್ಯತಂ - ಯುದ್ಧಕ್ಕೋಸ್ಕರ ಬರುತ್ತಿರುವ, ನೀಲಮೇಘನಿಭಂ - ಕಪ್ಪಾದ ಮೇಘಕ್ಕೆ ಸಮಾನವಾದ, ಭೀಮಂ - ಭಯಂಕರವಾದ, ತದೃಕ್ಷಬಲಂ - ಆ ಕರಡಿಗಳ ಸೇನೆಯನ್ನು, ದೃಷ್ಟ್ವಾ-ಕಂಡು, ಸನ್ನಿವಾರ್ಯ-ತಡೆದು, ನ್ಯವರ್ತತ ಹಿಂತಿರುಗಿಸಿದನು. ॥ ೬ ॥ ಮಹಾಯಶಾಃ-ಮಹಾ ಕೀರ್ತಿವಂತನಾದ, ಸಃ - ಆ ಆಂಜನೇಯನು, ತೇನಹರಿಸೈನ್ಯೇನಸಹ - ಆ ವಾನರಸೇನೆಯೊಡನೆ, ಸನ್ನಿಕರ್ಷಂ - ಬಳಿಗೆ, ಶೀಘ್ರಂ - ಜಾಗ್ರತೆಯಾಗಿ, ಆಗಮ್ಯ - ಬಂದು, ರಾಮಾಯ - ಶ್ರೀರಾಮನಿಗೆ, ದುಃಖಿತಃ - ವ್ಯಸನಗೊಂಡವನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೭॥ ಸಮರೇ - ಕಾಳಗದಲ್ಲಿ, ಯುಧ್ಯಮಾನಾನಾಂ - ಕಾಳಗ ಮಾಡುತ್ತಿರುವ, ಪ್ರೇಕ್ಷತಾಂ - ನೋಡುತ್ತಿರುವ, ಅಸ್ಮಾಕಂ - ನಮ್ಮ, ಪುರಃ - ಮುಂದೆ, ರಾವಣಾತ್ಮಜಃ - ಇಂದ್ರಜಿತುವು, ರುದತೀಂ - ಅಳುತ್ತಿರುವ, ಸೀತಾಂ - ಸೀತಾದೇವಿಯನ್ನು, ಜಘಾನ - ಹೊಡೆದನು. ॥ ೮ ॥ ಹೇ ಅರಿಂದಮ - ಎಲೈ ಶತ್ರುಸಂಹಾರಕನೇ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ವಿಷಣ್ಣಃ - ದುಃಖಗೊಂಡ, ಅಹಂ - ನಾನು, ಉದ್ಭ್ರಾಂತಚಿತ್ತಃ - ವಿಕಲವಾದ ಚಿತ್ತವುಳ್ಳವನಾದೆನು, ತತ್ - ಆ ಕಾರಣದಿಂದ, ಅಹಂ - ನಾನು, ಭವತಃ - ನಿನಗೆ, ವೃತ್ತಂ - ನಡೆದಿರುವ ಕಾರ್ಯವನ್ನು, ವಿಜ್ಞಾಪಯಿತುಂ - ವಿಜ್ಞಾಪನೆ ಮಾಡುವುದಕ್ಕೆ, ಆಗತಃ - ಬಂದೆನು. ॥ ೯ ॥ ತಸ್ಯ - ಆ ಹನುಮಂತನ, ತದ್ವಚಃ - ಆ ಮಾತನ್ನು, ಶ್ರುತ್ವಾ - ಕೇಳಿ, ಶೋಕಮೂರ್ಛಿತಃ - ವ್ಯಸನದಿಂದ ಮೂರ್ಛಾಕ್ರಾಂತನಾದ, ರಾಘವಃ- ಶ್ರೀರಾಮನು, ತದಾ - ಆ ಕಾಲದಲ್ಲಿ, ಛಿನ್ನಮೂಲಃ - ಕತ್ತರಿಸಿದ ಬುಡವುಳ್ಳ, ದ್ರುಮ ಇವ - ಮರ

ತ್ತಿರುವ ವಾನರರೊಡಗೂಡಿ ಹಿಂತಿರುಗುತ್ತಿರುವ ಹನುಮಂತನನ್ನು ಕಂಡನು. ॥ ೧–೫ ॥ ಹನುಮಂತನೂ ಸಹ ನೀಲಮೇಘೋಪಮವಾದ ಆ ಋಕ್ಷಸೇನೆಯನ್ನೂ, ಋಕ್ಷರಾಜನಾದ ಜಾಂಬವಂತನನ್ನೂ ಕಂಡು ಅವರೆಲ್ಲರನ್ನೂ ಹಿಂತಿರುಗಿಸಿಕೊಂಡು, ಕಪಿಸೇನೆಯೊಡಗೂಡಿ ಜಾಗ್ರತೆಯಾಗಿ ಶ್ರೀರಾಮಮೂರ್ತಿಯ ಬಳಿಗೈದಿ ಮಹಾ ದುಃಖಸಮನ್ವಿತನಾಗಿ, " ಶ್ರೀರಾಮಚಂದ್ರಾ ! ರಾವಣನ ಮಗನಾದ ಇಂದ್ರಜಿತುವು ನಾವೆಲ್ಲರೂ ಯುದ್ಧ ಮಾಡುತ್ತಿರುವಾಗ ನಮ್ಮೆದುರಿನಲ್ಲಿಯೇ, ರೋದಿಸುತ್ತಿರುವ ಆ ಜಾನಕಿಯನ್ನು ಕಡಿದುಹಾಕಿದನು. ಎಲೈ ಶತ್ರುಮರ್ದನನೇ ! ನಾನು ಆ ಭಯಂಕರ ಕೃತ್ಯವನ್ನು ನೋಡಿ ದುಃಖದಿಂದ ಉದ್ಭ್ರಾಂತಚಿತ್ತನಾಗಿ ಆ ವಿಚಾರವೆಲ್ಲವನ್ನೂ ನಿನಗೆ ಅರಿಕೆ ಮಾಡಲು ನಿನ್ನ ಬಳಿಗೆ ಬಂದೆನು" ಎಂದು ಹೇಳಿದನು. ಶ್ರೀರಾಮನು ಹನುಮಂತನಾಡಿದ ಮಾತುಗಳನ್ನು ಕೇಳಿ ಶೋಕಮೂರ್ಛಿತನಾಗಿ

ಭೂಮೌ ಭಿನ್ನಮೂಲಇವ ದ್ರುಮಃ ‖ ೧೦ ‖ ತಂ ಭೂಮೌ ದೇವಸಂಕಾಶಂ ಪತಿತಂ ಪ್ರೇಕ್ಷ್ಯರಾಘವಮ್ । ಅಭಿಪೇತುಸ್ಸಮುತ್ಪತ್ಯ ಸರ್ವತಃ ಕಪಿಸತ್ತಮಾಃ ‖ ೧೧ ‖ ಅಸಿಂಚನ್ ಸಲಿಲೈಶ್ಚೈನಂ ಪದ್ಮೋತ್ಪಲಸುಗಂಧಿಭಿಃ । ಪ್ರದಹಂತಮನಾಸಾದ್ಯಂ ಸಹಸಾಽಗ್ನಿಮಿವೋಚ್ಛಿಖಂ ‖ ೧೨ ‖ ತಂ ಲಕ್ಷ್ಮಣೋಽಥ ಬಾಹುಭ್ಯಾಂ ಪರಿಷ್ವಜ್ಯ ಸುದುಃಖಿತಃ । ಉವಾಚ ರಾಮಮಸ್ವಸ್ಥಂ ವಾಕ್ಯಂ ಹೇತ್ವರ್ಥ ಸಂಯುತಂ ‖ ೧೩ ‖

¶ “ ಶುಭೇ ವರ್ತ್ಮನಿ ತಿಷ್ಠಂತಂ ತ್ವಾಮಾರ್ಯ! ವಿಜಿತೇಂದ್ರಿಯಂ ।
ಅನರ್ಥೇಭ್ಯೋ ನಶಕ್ನೋತಿ ತ್ರಾತುಂ ಧರ್ಮೋ ನಿರರ್ಥಕಃ ‖ ೧೪ ‖

ದಂತೆ, ಭೂಮೌ - ನೆಲದಲ್ಲಿ, ಪತಿತಂ - ಬಿದ್ದಿರುವ, ದೇವಸಂಕಾಶಂ - ದೇವಸಮಾನನಾದ, ತಂರಾಘವಂ - ಆ ಶ್ರೀರಾಮನನ್ನು, ಕಪಿಸತ್ತಮಾಃ - ಕಪಿಶ್ರೇಷ್ಠರು, ಪ್ರೇಕ್ಷ್ಯ - ಕಂಡು, ಸರ್ವತಃ - ಎಲ್ಲಾ ಕಡೆಯಿಂದಲೂ, ಸಮುತ್ಪತ್ಯ - ಹಾರಿ, ಅಭಿಪೇತುಃ - ಬಂದರು. ‖ ೧೦ ೧೧ ‖ ಅನಾಸಾದ್ಯಂ - ಹೊಂದಲಸಾಧ್ಯನಾದ, ಪ್ರದಹಂತಂ - ದಹಿಸುತ್ತಿರುವ, ಉಚ್ಛಿಖಂ - ಮೇಲಿದ್ದ ಜ್ವಾಲೆಗಳುಳ್ಳ, ಅಗ್ನಿಮಿವ - ಅಗ್ನಿಯಂತಿರುವ, ಏನಂ - ಈ ಶ್ರೀರಾಮನನ್ನು, ಪದ್ಮೋ....ಭಿಃ - ಕಮಲ ಮತ್ತು ನೈದಿಲೇ ಹುವ್ವುಗಳ ಗಂಧವುಳ್ಳ, ಸಲಿಲೈಃ - ಉದಕಗಳಿಂದ, ಅಸಿಂಚನ್ - ನೆನಸಿದರು. ‖ ೧೨ ‖ ಅಥ - ಬಳಿಕ, ಸುದುಃಖಿತಃ - ಬಹಳ ವ್ಯಸನಗೊಂಡ, ಲಕ್ಷ್ಮಣಃ - ಲಕ್ಷ್ಮಣನು, ಅಸ್ವಸ್ಥಂ - ವ್ಯಥೆಪಡುತ್ತಿರುವ, ತಂರಾಮಂ - ಆ ಶ್ರೀರಾಮನನ್ನು, ಬಾಹುಭ್ಯಾಂ - ಭುಜಗಳಿಂದ, ಪರಿಷ್ವಜ್ಯ - ಅಪ್ಪಿಕೊಂಡು, ಹೇತ್ವರ್ಥಸಂಯುತಂ - ಹೇತುಗರ್ಭಿತವಾದ ಅರ್ಥದಿಂದ ಕೂಡಿದ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ‖೧೩‖ ಹೇ ಆರ್ಯ - ಎಲೈ ಪೂಜ್ಯನೇ, ಶುಭೇವರ್ತ್ಮನಿತಿಷ್ಠಂತಂ - ಶುಭಕರವಾದ ಮಾರ್ಗದಲ್ಲಿರುವ, ವಿಜಿತೇಂದ್ರಿಯಂ - ಜಯಿಸಿದ ಇಂದ್ರಿಯಗಳುಳ್ಳ, ತ್ವಾಂ - ನಿನ್ನನ್ನು, ಧರ್ಮಃ - ಧರ್ಮವು, ನಿರರ್ಥಕಃ - ಪ್ರಯೋಜನವಿಲ್ಲದ್ದಾಗಿ, ಅನರ್ಥೇಭ್ಯಃ - ವ್ಯಸನಗಳ ದೆಶೆಯಿಂದ, ತ್ರಾತುಂ - ಸಂರಕ್ಷಣೆ ಮಾಡುವುದಕ್ಕೆ, ನಶಕ್ನೋತಿ - ಸಮರ್ಥವಾಗದೇ ಹೋಯಿತು. ‖೧೪‖ ಭೂತಾನಾಂ - ವಿದ್ಯಮಾನಗಳಾದ, ಸ್ಥಾವರಾಣಾಂ - ಜಂಗಮಾನಾಂಚ - ಸ್ಥಾವರ ಜಂಗಮಗಳೆಂಬ ಪದಾರ್ಥಗಳ, ದರ್ಶನಂ - ನೋಟವು, ಯಥಾ - ಹೇಗೆ, ಅಸ್ತಿ - ಇದೆಯೋ, ತಥಾ-

ಬುಡ ಮುರಿದ ಮರದಂತೆ ನೆಲಕ್ಕೆ ಬಿದ್ದುಹೋದನು. ಹೀಗೆ ದೇವೋಪಮನಾದ ಶ್ರೀರಾಮನು ನೆಲಕ್ಕೆ ಬಿದ್ದುದನ್ನು ಕಂಡೊಡನೆಯೇ ಎಲ್ಲೆಲ್ಲಿದ್ದ ಕಪಿಶ್ರೇಷ್ಠರೂ ಅಲ್ಲಿಗೆ ಓಡಿಬಂದರು. ‖೬–೧೧‖ ಅವರೆಲ್ಲರೂ ಕಮಲಕನ್ನೈದಿಲೆಗಳ ಸುಗಂಧೋದಕವನ್ನು ಆತನ ಮೇಲೆ ಚಿಮುಕಿಸಿದರು. ಆಗ ಲಕ್ಷ್ಮಣಸ್ವಾಮಿಯು ಮಹಾ ದುಃಖಿತನಾಗಿ ಅಣ್ಣನನ್ನು ತನ್ನೆರಡೂ ತೋಳುಗಳಿಂದ ಬಿಗಿದಪ್ಪಿ ಅಸ್ವಸ್ಥನಾಗಿದ್ದ ಆತನನ್ನು ಕುರಿತು ಹೇತ್ವರ್ಥಗರ್ಭಿತವಾದ ಮಾತುಗಳನ್ನಾಡುವವನಾಗಿ ಹೀಗೆಂದನು. “ ಪೂಜ್ಯನೇ! ನೀನು ಮಂಗಳಕರವಾದ ಮಾರ್ಗದಲ್ಲಿ ನಡೆಯುವಾತನು. ಜಿತೇಂದ್ರಿಯನು. ಇಂಥಾ ನಿನ್ನನ್ನು ಧರ್ಮವೆಂಬುದು ಅನರ್ಥಗಳಿಂದ ಸಂರಕ್ಷಿಸದೇ ಹೋಯಿತು. ಇದರಿಂದ ಆ ಧರ್ಮವಿದ್ದೂ ನಿರರ್ಥಕವೇ ಆಗಿಹೋಯಿತು.

¶ ಸೀತಾ ವಧೆಯನ್ನು ಕೇಳಿದುದರಿಂದ ಅಧೈರ್ಯವನ್ನವಲಂಬಿಸಿರುವ ಶ್ರೀರಾಮಮೂರ್ತಿಯನ್ನು ಸಮಾಧಾನಗೊಳಿಸಿ ಉತ್ಸಾಹಪೂರಿತನನ್ನಾಗಿ ಮಾಡಲೋಸುಗ, ಲಕ್ಷ್ಮಣನು, ಹೇತ್ವರ್ಥಗರ್ಭಿತವಾದ ಮಾತುಗಳಿಂದ ಧರ್ಮಾಧರ್ಮ

* ಭೂತಾನಾಂ ಸ್ಥಾವರಾಣಾಂಚ ಜಂಗಮಾನಾಂಚ ದರ್ಶನಂ ।
ಯಥಾಸ್ತಿ ನತಥಾ ಧರ್ಮಸ್ತೇನ ನಾಸ್ತೀತಿ ಮೇ ಮತಿಃ ॥ ೧೫ ॥

ಹಾಗೆ, ಧರ್ಮಾಧರ್ಮಯೋಃ - ಧರ್ಮಾಧರ್ಮಗಳ, ದರ್ಶನಂ - ನೋಟವು, ನಾಸ್ತಿ - ಇಲ್ಲವು, ತೇನ- ಆದರಿಂದ, ಧರ್ಮಃ - ಧರ್ಮವು, ನಾಸ್ತೀತಿ - ಇಲ್ಲವೆಂದೇ, ಮೇ - ನನ್ನ, ಮತಿಃ - ಬುದ್ಧಿಯು. ||೧೪|| ಯಥಾ - ಹೇಗೆ, ಸ್ಥಾವರಂ - ಸ್ಥಿರವಾದ ಪದಾರ್ಥಗಳು, ವ್ಯಕ್ತಂ - ಪ್ರತ್ಯಕ್ಷಸಿದ್ಧವಾಗಿವೆಯೋ,

---

ಜಂಗಮಸ್ಥಾವರಭೂತಗಳಂತೆ ಆ ಧರ್ಮವು ಪ್ರತ್ಯಕ್ಷವಾದುದಲ್ಲವಾದುದರಿಂದ ಅದು ಇಲ್ಲವೆಂದೇ ನನಗೆ ತೋರುತ್ತದೆ. ||೧೨-೧೫|| ಒಂದುವೇಳೆ ಸ್ಥಾವರಜಂಗಮಗಳಂತೆ ಈ ಧರ್ಮ

ಗಳ ಸ್ವರೂಪವನ್ನೇ ಖಂಡಿಸುತ್ತ ರಾಜನೀತಿ ಶಾಸ್ತ್ರಪ್ರಕಾರ ಬಲವನ್ನೇ ಮುಖ್ಯವಾಗಿ ಅವಲಂಬಿಸತಕ್ಕದ್ದೆಂದು ಹೇಳಲುಪಕ್ರಮಿಸುವನು. (ಗೋ)

ಇಲ್ಲಿ, ಲಕ್ಷ್ಮಣಸ್ವಾಮಿಗೆ ಧರ್ಮಾಧರ್ಮಗಳ ಮೂಲಕವಾಗಿ ಹಿತಾಹಿತಗಳನ್ನು ಸಾಧಿಸುವ ಕ್ರಮವು ತಿಳಿದಿದ್ದರೂ, ಸೀತಾಹನನ ವೃತ್ತಾಂತ ಶ್ರವಣದಿಂದ ಹುಟ್ಟಿದ ದುಃಖದಿಂದ ವ್ಯಾಪ್ತವಾದ ಮನಸ್ಸುಳ್ಳವನಾಗಿ, ಅನವರತವೂ ಧರ್ಮವನ್ನೇ ಅವಲಂಬಿಸಿರುವ ಶ್ರೀರಾಮನು, ತಾನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ರಾಕ್ಷಸರೆಲ್ಲರನ್ನೂ ನಿರ್ಮೂಲಗೊಳಿಸುವನೆಂದು ಹೇಳಿದಾಗ ಅದು ಅಧರ್ಮವೆಂದು ತಡೆದುದಕ್ಕೆ ಕ್ರೋಧಸಮನ್ವಿತನಾಗಿ ಧರ್ಮಾಧರ್ಮಗಳ ಅರ್ಥಾನರ್ಥ ಹೇತುತ್ವವನ್ನೇ ಇಲ್ಲಿ ನಿರಾಕರಿಸಲಾರಂಭಿಸುವನು. (ಮಹೇಶ್ವರ ತೀರ್ಥರು)

(೧) ಶುಭೇ ವರ್ತ್ಮನಿ ತಿಷ್ಠಂತಂ, (೨) ವಿಜಿತೇಂದ್ರಿಯಂ.

(೧) ಕೈಗೆ ಬಂದಿದ್ದ ರಾಜ್ಯವನ್ನು ತೊರೆದು ಪಿತೃವಾಕ್ಯ ಪರಿಪಾಲನ ಧರ್ಮವನ್ನು ಪಾಲಿಸಿದವನು.

(೨) ಯೌವರಾಜ್ಯಾಭಿಷೇಕವನ್ನು ತಪ್ಪಿಸಿ ವನವಾಸಕ್ಕೆ ಕಳುಹಿದ ಕೈಕೇಯಿದಶರಥರ ವಿಷಯದಲ್ಲಿ ಏನೊಂದು ಮನಃಕಾಲುಷ್ಯವನ್ನೂ ಹೊಂದದಿದ್ದುದು ಮಾತ್ರವಲ್ಲದೆ, ಕೈಕೇಯಿಯನ್ನು ಕುರಿತು,

"ನಾಹಮರ್ಥಪರೋ ದೇವಿ ! ಲೋಕಮಾವಸ್ತುಮುತ್ಸಹೇ ।
ವಿದ್ಧಿ ಮಾಂ ಋಷಿಭಿಸ್ತುಲ್ಯಂ ಕೇವಲಂ ಧರ್ಮಮಾಶ್ರಿತಃ ॥"

ಎಂಬ ಮಾತನ್ನೂ ಹೇಳಿ, ಜಿತೇಂದ್ರಿಯತ್ವವನ್ನು ಪ್ರಕಟಗೊಳಿಸಿದ್ದಲ್ಲದೆ ಕೇವಲ ಧರ್ಮೈಕ ಪ್ರವಣನೂ ಆದವನು.

ಅಂತಹ ನಿನ್ನನ್ನು ಧರ್ಮವೆಂಬುದು ಅನರ್ಥಗಳಿಂದ ಕಾಪಾಡದೇ ಹೋಯಿತು. ಅಭ್ಯುದಯದ್ಯೋತಕವಾದ ಫಲವನ್ನು ಕೊಡುವುದರಿಂದ ಅನುಮೇಯಿಸಲಶಕ್ಯವಾದುದರಿಂದ ಆ ಧರ್ಮವೆಂಬುದು ನಿರರ್ಥಕವೇ ಸರಿ. ಎಂಬುದು ಈ ಶ್ಲೋಕದ ಅಭಿಪ್ರಾಯ.

* "ಪ್ರಾಮಾಣಿಕವಾದ ಧರ್ಮವು ಅನುಪಾದೇಯವೆಂದು ಹೇಳುವುದು ಹೇಗೆ ?" ಎಂಬ ಪ್ರಶ್ನೆಯನ್ನು ಶಂಕಿಸಿ ಆದಕ್ಕೆ ಉತ್ತರರೂಪವಾಗಿ ಈ ಶ್ಲೋಕದಿಂದ ಧರ್ಮವೆಂಬುದೊಂದಿದ್ದರೆ,—ಪ್ರಮಾಣಸಿದ್ಧವಾದುದಾದರೆ—ಆದು ಪ್ರತ್ಯಕ್ಷ ಪ್ರಮಾಣದಿಂದಲೇ, ಅನುಮಾನದಿಂದಲೇ ಎಂಬದಾಗಿ ಎರಡು ಭಾಗವಾಗಿ ವಿಕಲ್ಪಿಸುತ್ತ ಎರಡೂ ಪ್ರಮಾಣಗಳಿಂದಲೂ ಧರ್ಮದ ಅಸ್ತಿತ್ವವೇ ಸಿದ್ಧಿಸುವುದಿಲ್ಲ ಎಂದು ತರ್ಕಬಲದಿಂದ ನಿರೂಪಿಸುವನು.

"ಧರ್ಮೋಽಸ್ತಿ ಫಲದರ್ಶನಾತ್" ಎಂದಿದೆ. ಫಲವೇ ಕಾಣುವುದಿಲ್ಲವಾದುದರಿಂದ ಅನುಮಾನದಿಂದಾದರೂ ಅದು ಸಿದ್ಧಿಸುವುದೆಂತು ಎಂಬುದಾಗಿ ಹಿಂದಿನ ಶ್ಲೋಕದಲ್ಲಿಯೇ ಅನುಮಾನ ಪ್ರಮಾಣವನ್ನು ತಳ್ಳಿಹಾಕಿ, ಇದೀಗ ಪ್ರತ್ಯಕ್ಷ ಪ್ರಮಾಣವನ್ನೂ, ಸ್ಥಾವರಜಂಗಮ ಭೂತಗಳಂತೆ ಧರ್ಮವು ಕಣ್ಣಿಗೆ ಕಾಣುವುದಿಲ್ಲವಾದ್ದರಿಂದ ಅದು ಇದೆಯೆಂದು ಹೇಳುವುದು ಹೇಗೆ ಎಂದು ಹೇಳಿ ನಿರಾಕರಿಸುವನು.

§ ಯಥೈವ ಸ್ಥಾವರಂ ವ್ಯಕ್ತಂ ಜಂಗಮಂ ಚ ತಥಾವಿಧಂ । ನಾಯಮರ್ಥಸ್ತಥಾ ಯುಕ್ತಸ್ತ್ವದ್ವಿಧೋ ನ ವಿಪದ್ಯತೇ ॥ ೧೬ ॥ § ಯದ್ಯ ಧರ್ಮೋ ಭವೇದ್ಭೂತೋ ರಾವಣೋ ನರಕಂ ವ್ರಜೇತ್ । ಭವಾಂಶ್ಚ ಧರ್ಮಯುಕ್ತೋ ವೈ ನೈವಂ ವ್ಯಸನಮಾಪ್ನುಯಾತ್॥೧೭॥¶ ತಸ್ಯ ಚ ವ್ಯಸನಾಭಾವಾದ್ವ್ಯಸನಂ ಚ ಗತೇ ತ್ವಯಿ । ಧರ್ಮೋ ಭವತ್ಯಧರ್ಮಶ್ಚ ಪರಸ್ಪರವಿರೋಧಿನೌ ॥ ೧೮ ॥ ಧರ್ಮೇಣೋಪಲಭೇದ್ಧರ್ಮಮ

ಜಂಗಮಂಚ - ಜಂಗಮವೂ, ತಥಾವಿಧಂ - ಹಾಗೆ ಪ್ರತ್ಯಕ್ಷಸಿದ್ಧವಾದದ್ದು, ಭವತಿ - ಆಗುತ್ತದೆ, ಅಯಮರ್ಥಃ - ಈ ಧರ್ಮಾಧರ್ಮರೂಪ ಪುರುಷಾರ್ಥವಾದರೆ, ತಥಾ - ಹಾಗೆ, ಯುಕ್ತಃ - ಪ್ರತ್ಯಕ್ಷ ಸಿದ್ಧವಾದದ್ದು, ನ - ಅಲ್ಲ, (ಒಂದುವೇಳೆ ಧರ್ಮಾಧರ್ಮಗಳೇ ಇದ್ದ ಪಕ್ಷದಲ್ಲಿ,) ತ್ವದ್ವಿಧಃ - ನಿನ್ನಂಥಾ ಧರ್ಮಿಷ್ಠನು, ನವಿಪದ್ಯತೇ - ವಿಪತ್ತನ್ನು ಹೊಂದದಿರುವನು. ॥ ೧೬ ॥ ಅಧರ್ಮಃ - ಅಧರ್ಮವು, ಭೂತಃ - ಸಿದ್ಧವಾದದ್ದು, ಭವೇದ್ಯದಿ - ಆದದ್ದೇ ಆದರೆ, ರಾವಣಃ - ರಾವಣನು, ನರಕಂ - ನರಕವನ್ನು, ವ್ರಜೇತ್ - ಹೊಂದಿಯಾನು, ಧರ್ಮಯುಕ್ತಃ - ಧರ್ಮದಿಂದಿರುವ, ಭವಾನ್ - ನೀನು, ಏವಂ- ಈ ಪರಿಯಾಗಿ, ವ್ಯಸನಂ-ದುಃಖವನ್ನು, ನೈವಾಪ್ನುಯಾತ್-ಹೊಂದದೆಯೇ ಇರಬೇಕು. ॥೧೭॥ ತಸ್ಯ- ಆ ರಾವಣಾಸುರನಿಗೆ, ವ್ಯಸನಾಭಾವಾತ್ - ದುಃಖವಿಲ್ಲದಿರುವುದರಿಂದ, ತ್ವಯಿ - ನೀನು, ವ್ಯಸನಂ - ದುಃಖವನ್ನು, ಗತೇಚ-ಹೊಂದಿರಲು, ಧರ್ಮಃ-ಧರ್ಮವು, ಅಧರ್ಮಶ್ಚ-ಅಧರ್ಮ ಫಲವನ್ನು ಕೊಡುವುದು, ಭವತಿ - ಆಗುತ್ತದೆ, ಚ - ಮತ್ತು, ಅಧರ್ಮಃ-ಅಧರ್ಮವು, ಧರ್ಮಃ - ಧರ್ಮಫಲಪ್ರದಾಯಕವು, ಭವತಿ- ಆಗುತ್ತದೆ, (ಇವೆರಡೂ) ಪರ....ನೌ - ಪರಸ್ಪರ ವಿರೋಧ ಫಲಗಳನ್ನು ಕೊಡುತ್ತವೆ.

ವೆಂಬುದು ಪ್ರತ್ಯಕ್ಷವಾಗಿದ್ದುದೇ ಆದರೆ ನಿನ್ನಂಥ ಸತ್ಪುರುಷನು ಈ ರೀತಿ ವಿಪತ್ತಿಗೆ ಗುರಿಯಾಗುತ್ತಿರಲಿಲ್ಲ. ಧರ್ಮವೇ ಇಲ್ಲವೆಂದ ಬಳಿಕ ಇನ್ನು ಅಧರ್ಮವೆಲ್ಲಿ ಬಂದಿತು. ಒಂದುವೇಳೆ ಅವೆರಡೂ ಇದ್ದದ್ದೇ ಆದರೆ ಅಧರ್ಮವು ಆ ದುರುಳ ರಾವಣನನ್ನು ನರಕಕ್ಕೊಯ್ಯುತ್ತಿದ್ದಿತಲ್ಲದೆ, ಧರ್ಮಾತ್ಮನಾಗಿ ಧರ್ಮವನ್ನೇ ಅವಲಂಬಿಸಿರುವ ನೀನೂ ಸಹ ಇಂತಹ ವ್ಯಸನಕ್ಕೆ ತುತ್ತಾಗುತ್ತಿರಲಿಲ್ಲವಷ್ಟೆ. ಇದರಿಂದ ಧರ್ಮವು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧಿಸುವಂತಿಲ್ಲ. ಅನುಮಾನ ಪ್ರಮಾಣದಿಂದಾದರೂ ಸಿದ್ಧಿಸುವುದೇ ಎಂದರೆ ಅದೂ ಇಲ್ಲ ಏಕೆಂದರೆ,—ಇಷ್ಟು ಪಾಪಕಾರ್ಯಗಳನ್ನು ಮಾಡಿರುವ ಆ ರಾವಣನು ಯಾವ ವಿಪತ್ತನ್ನೂ ಪಡೆದಿರುವುದಿಲ್ಲವಲ್ಲದೆ ವರ್ಧಿಸುತ್ತಲೂ ಇದ್ದಾನೆ. ಇದರಿಂದ ಧರ್ಮವೇ ಅಧರ್ಮವಾಗಿರುತ್ತದೆ; ಅಧರ್ಮವೇ ಧರ್ಮವಾಗಿದೆ. ಒಟ್ಟಿನಮೇಲೆ ಈ ಧರ್ಮಾಧರ್ಮಗಳು ಪರಸ್ಪರವಾಗಿ ವಿರುದ್ಧ ಫಲಗಳನ್ನೇ ಕೊಡುತ್ತಿರುವುವು. ಧರ್ಮಕಾರ್ಯಗಳನ್ನು ಮಾಡು

---

§ ಧರ್ಮವು ಪ್ರತ್ಯಕ್ಷವಲ್ಲದಿದ್ದರೂ, ಅತೀಂದ್ರಿಯ ಪದಾರ್ಥಗಳಂತೆ ಅದೂ ಒಂದಾದುದರಿಂದ, ಇಲ್ಲವೆಂದು ಹೇಳಬಾರದು : ಎಂದರೆ ಅತೀಂದ್ರಿಯವಾಗಿಯಾದರೂ ಇದ್ದಿದ್ದರೆ ನಿನ್ನಂತಹನು ಈ ರೀತಿ ವಿಪತ್ತಿಗೇಕೆ ಗುರಿಯಾಗುತ್ತಿದ್ದನು ? ಆದುದರಿಂದ ಅದು ಅತೀಂದ್ರಿಯವೂ ಅಲ್ಲವೆಂದು ಬಾಧಕ ತರ್ಕದಿಂದ ಸಮರ್ಥಿಸಿರುವನು.

§ ಈವರೆಗೆ ಧರ್ಮವಿರುವುದೆಂಬ ಪಕ್ಷದಲ್ಲಿ ಬಾಧಕವನ್ನು ಹೇಳಿ ಇಲ್ಲಿಂದ ಧರ್ಮಾಧರ್ಮಗಳೆರಡೂ ಇರುವುವಾದರೆ ಬಾಧಕಗಳೇನೇನೆಂಬುದನ್ನು ಹೇಳತೊಡಗುವನು.

¶ ಧರ್ಮಾಧರ್ಮಗಳು ನಿಯತವಾದ ಫಲಗಳನ್ನೇ ಕೊಡುವುದಿಲ್ಲವಾದ್ದರಿಂದ ಅವೆರಡೂ ಇಲ್ಲವೇ ಇಲ್ಲವೆಂದು ಈ ಶ್ಲೋಕದಿಂದ ಹೇಳುವನು.

ಧರ್ಮಂ ಚಾಽಪ್ಯಧರ್ಮತಃ । ಯದ್ಯಧರ್ಮೇಣ ಯುಜ್ಯೇಯುರ್ಯೇಷ್ವಧರ್ಮಃ ಪ್ರತಿಷ್ಠಿತಃ ॥ ೧೯ ॥ ಯದಿ ಧರ್ಮೇಣ ಯುಜ್ಯೇರನ್ನಾಧರ್ಮರುಚಯೋ ಜನಾಃ । ಧರ್ಮೇಣ ಚರತಾಂ ಧರ್ಮಸ್ತಥಾ ಚೈಷಾಂ ಫಲಂ ಭವೇತ್ ॥೨೦॥ ಯಸ್ಮಾದರ್ಥಾ ವಿವರ್ಧಂತೇ ಯೇಷ್ವಧರ್ಮಃ ಪ್ರತಿಷ್ಠಿತಃ । ಕ್ಲಿಶ್ಯಂತೇ ಧರ್ಮಶೀಲಾಶ್ಚ ತಸ್ಮಾದೇತೌ ನಿರರ್ಥಕೌ ॥೨೧॥ * ವಧ್ಯಂತೇ ಪಾಪಕರ್ಮಾಣೋ ಯದ್ಯಧರ್ಮೇಣ ರಾಘವ! ।

॥ ೧೮ ॥ ಧರ್ಮೇಣ - ಧರ್ಮಾನುಷ್ಠಾನದಿಂದ, ಧರ್ಮಂ - ಧರ್ಮಫಲವನ್ನು, ಉಪಲಭೇತ್ - ಹೊಂದುತ್ತಾನೆಯೋ, ಅಧರ್ಮತಃ - ಅಧರ್ಮಾನುಷ್ಠಾನದಿಂದ, ಅಧರ್ಮಂಚ - ಅಧರ್ಮವನ್ನು, ಉಪಲಭೇತ್ - ಹೊಂದುವನೇ, ಯೇಷು - ಯಾರಲ್ಲಿ, ಅಧರ್ಮಃ - ಅಧರ್ಮವೇ, ಪ್ರತಿಷ್ಠಿತಃ - ಇರುತ್ತದೋ, ತೇ - ಅವರು, ಅಧರ್ಮೇಣ - ಅಧರ್ಮದಿಂದ, ಯುಜ್ಯೇಯುರ್ಯದಿ - ಸಂಬಂಧಿಸಿದವರೇ ಆದರೆ, ನಾಧರ್ಮರುಚಯಃ-ಧರ್ಮದಲ್ಲೇ ಅಭಿರುಚಿಯುಳ್ಳ, ಜನಾಃ-ಜನರು, ಧರ್ಮೇಣ-ಧರ್ಮಫಲರೂಪವಾದ ಸುಖದಿಂದ, ಯುಜ್ಯೇಯುರ್ಯದಿ-ಕೂಡಿದವರೇ ಆದರೆ, ಧರ್ಮೇಣ-ಧರ್ಮದಿಂದ, ಚರತಾಂ-ನಡೆಯುತ್ತಿರುವ, ಯೇಷಾಂ - ಈ ಜನರಿಗೆ, ಧರ್ಮಃ-ಧರ್ಮವು, ತಥಾ-ಹಾಗೆಯೇ, ಫಲಂಚ - ಧರ್ಮಫಲವೂ, ಭವೇತ್ - ಆಗುವುದು, ಯಸ್ಮಾತ್ - ಯಾವ ಕಾರಣದಿಂದ, ಯೇಷು - ಯಾರಲ್ಲಿ, ಅಧರ್ಮಃ - ಅಧರ್ಮವೇ, ಪ್ರತಿಷ್ಠಿತಃ - ಸ್ಥಿರವಾಗಿರುತ್ತದೆಯೋ, ತೇಷಾಂ - ಅವರಿಗೆ, ಅರ್ಥಾಃ - ಪ್ರಯೋಜನಗಳು, ವಿವರ್ಧಂತೇ - ವೃದ್ಧಿಯಾಗುತ್ತವೆ, ಧರ್ಮಶೀಲಾಃಶ್ಚ - ಧರ್ಮವೇ ಸ್ವಭಾವವಾಗಿರುವವರು, ಕ್ಲಿಶ್ಯಂತೇ - ಕ್ಲೇಶವನ್ನು ಪಡೆಯುತ್ತಾರೋ, ತಸ್ಮಾತ್ - ಆ ಕಾರಣದಿಂದ, ಏತೌ - ಈ ಧರ್ಮಾಧರ್ಮಗಳು, ನಿರರ್ಥಕೌ - ನಿಷ್ಪ್ರಯೋಜನಗಳಾದುವು. ॥೧೯-೨೧॥ ಹೇ ರಾಘವ-ಎಲೈ ಶ್ರೀರಾಮನೇ, ಪಾಪಕರ್ಮಾಣಃ - ಪಾಪಕೃತ್ಯವನ್ನು ಮಾಡಿದವರು, ಅಧರ್ಮೇಣ - ಅಧರ್ಮಕೃತ್ಯದಿಂದ, ವಧ್ಯಂತೇಯದಿ - ಹೊಡೆಯಲ್ಪಟ್ಟವರೇ ಆದರೆ, ವಧಕರ್ಮ - ವಧಕರ್ಮರೂಪವಾದ, ಅಧರ್ಮಃ - ಅಧರ್ಮವು, ಹತಃ - ಮರುಕ್ಷಣದಲ್ಲಿಯೇ ನಷ್ಟವಾಗುತ್ತದೆ, ಹತಃ - ನಶ್ವರವಾದ, ಸಃ -

---

ವುದರಿಂದ ಧರ್ಮಫಲವೂ, ಅಧರ್ಮ ಕಾರ್ಯಗಳನ್ನು ಮಾಡುವುದರಿಂದ ಅಧರ್ಮಫಲವೂ ದೊರಕುತ್ತದೆಯೆಂದು ತಿಳಿದಿರುವೆಯೇನು? ಹಾಗಿರುವುದಿಲ್ಲ. ಅಧರ್ಮವನ್ನಾಚರಿಸುವುದರಿಂದ ಅಧರ್ಮಫಲವೇ ದೊರಕುವುದು ನಿಜವಾಗಿದ್ದರೆ ಜನಗಳಾರೂ ಧರ್ಮವನ್ನು ಬಿಡುತ್ತಿರಲಿಲ್ಲ. ॥ ೧೬-೨೧ ॥ ಹಾಗಿಲ್ಲ. ಅಧರ್ಮಿಯಾದ ರಾವಣನಿಗೆ ಯಾವ ಕೇಡೂ ಉಂಟಾಗಿಲ್ಲ. ಆದುದರಿಂದಲೇ ಎಲ್ಲರಿಗೂ ಧರ್ಮಾಧರ್ಮಗಳಲ್ಲಿ ಸಂದೇಹವುಂಟಾಗಿರುವುದು. ಹಾಗೆಯೇ ಧರ್ಮವನ್ನೇ ಅವಲಂಬಿಸಿರುವವರಿಗೂ ಧರ್ಮಫಲವೇ ಉಂಟಾಗಬೇಕು. ಹಾಗೂ ಆಗುತ್ತಿಲ್ಲ. ಆದುದರಿಂದ ಈ ಸಂದೇಹಾಸ್ಪದವಾದ ಧರ್ಮಾಧರ್ಮಗಳೆರಡೂ ನಿರರ್ಥಕಗಳೇ. ರಘುಕುಲೋದ್ಭವಾ! ಪಾಪಕರ್ಮಿಗಳಾದವರನ್ನು ಕೊಂದರೂ ಅದು ಅಧರ್ಮವನ್ನು ಕೊಂದಂತಾಗುವುದರಿಂದ, ಮಡಿದುಹೋದ ಆ ಅಧರ್ಮವು ಮುಂದೆ ಏನು

---

* ಧರ್ಮಾಧರ್ಮಗಳ ಅಸ್ತಿತ್ವಕ್ಕೆ ಶಬ್ದಪ್ರಮಾಣವೂ ಇರುವುದಿಲ್ಲವೆಂಬಂಶವನ್ನು ಇಲ್ಲಿ ಸೂಚಿಸುತ್ತಾನೆ. (ಗೋ) ಧರ್ಮಾಧರ್ಮಗಳು ಕರ್ಮಸ್ವರೂಪವಾದುವೇ ಅಥವಾ ಕರ್ಮದಿಂದ ಜನಿಸಿದ ಅತಿಶಯವುಳ್ಳವುಗಳೇ ಎಂಬುದಾಗಿ ವಿಕಲ್ಪಿಸಿ ಮುಂದಣ ಎರಡು ಶ್ಲೋಕಗಳಿಂದ ಮೊದಲ ಪಕ್ಷವನ್ನು ಖಂಡಿಸುವನು. (ಮಹೇಶ್ವರ ತೀರ್ಥರು)

ವಧಕರ್ಮಹತೋ ಧರ್ಮಸ್ಸ ಹತ�ః ಕಾಂ ವಧಿಷ್ಯತಿ?॥೨೨॥ ಅಥವಾ ವಿಹಿತೇನಾಽಯಂ ಹನ್ಯತೇ ಹಂತಿ ನಾಪರಂ । ವಿಧಿರಾಲಿಪ್ಯತೇ ತೇನ ನ ಸ ಪಾಪೇನ ಕರ್ಮಣಾ ॥ ೨೩ ॥ $ ಅದೃಷ್ಟಪ್ರತಿಕಾರೇಣ ತ್ವವ್ಯಕ್ತೇನಾಽಸತಾಸತಾ । ಕಥಂ ಶಕ್ಯಂ ಪರಂ ಪ್ರಾಪ್ತುಂ ಧರ್ಮೇಣಾರಿವಿಕರ್ಶನ! ॥ ೨೪ ॥ ಯದಿ ಸತ್ಸ್ಯಾತ್ಸತಾಂ ಮುಖ್ಯ! ನಾಸತ್ಸ್ಯಾತ್ತವ ಕಿಂಚನ । ತ್ವಯಾ ಯದೀದೃಶಂ ಪ್ರಾಪ್ತಂ ತಸ್ಮಾತ್ಸನ್ನೋಪಪದ್ಯತೇ ॥ ೨೫ ॥

ಆ ಅಧರ್ಮವು, ಕಿಂವಧಿಷ್ಯತಿ - ಏನು ಕೆಡಿಸುತ್ತದೆ. ॥೨೨॥ ಅಥವಾ - ಹಾಗಲ್ಲದಿದ್ದರೆ, ವಿಹಿತೇನ - ವಿಧಿರೂಪವಾದ ದೇವತೆಯಿಂದ, ಅಯಂ - ಈ ಪುರುಷನು, ಹನ್ಯತೇ - ಹೊಡೆಯಲ್ಪಡುತ್ತಾನೆಯೋ, ಪರಂ - ಮತ್ತೊಬ್ಬನನ್ನು, ಹಂತಿ - ಹೊಡೆಯುತ್ತಾನೆಯೋ, ಏವಂಯದಿ - ಹೀಗಾದರೆ, ವಿಧಿಃ - ಆ ದೇವತೆಯು, ತೇನಪಾಪೇನ - ಆ ಪಾಪದಿಂದ, ಕರ್ಮಣಾ - ಆ ಪಾಪಫಲಕರ್ಮದಿಂದಲೂ, ಆಲಿಪ್ಯತೇ - ಸಂಬಂಧಿಸಲ್ಪಡುತ್ತದೆ, ಸಃ - ಆ ಪುರುಷನು, ನಲಿಪ್ಯತೇ - ಲೇಪ ಹೊಂದುವುದಿಲ್ಲ. ॥೨೩॥ ಹೇ ಅರಿವಿಕರ್ಶನ - ಎಲೈ ಶತ್ರುಸಂಹಾರಕನೇ, ಅದೃ....ಣ - ಕಾಣಲ್ಪಡದಿರುವ ಗುರುತುಳ್ಳ, ಅವ್ಯಕ್ತೇನ - ಅದೃಷ್ಟವಾದ ಅನುಮಾನರೂಪ ಪ್ರಮಾಣವುಳ್ಳ, ಅವ್ಯಕ್ತೇನ - ಅಪ್ರತ್ಯಕ್ಷವಾದ, ಅಸತಾ - ಅವಿದ್ಯಮಾನವಾದ್ದಂತೆ, ಸತಾ - ಇರುತ್ತಿರುವ, ಧರ್ಮೇಣ - ಧರ್ಮದಿಂದ, ಪರಂ - ಶ್ರೇಯಸ್ಸನ್ನು, ಪ್ರಾಪ್ತುಂ - ಹೊಂದುವದಕ್ಕೆ, ಕಥಂ - ಹೇಗೆ, ಶಕ್ಯಂ - ಸಾಧ್ಯವಾಗುವದು. ॥೨೪॥ ಹೇ ಸತಾಂಮುಖ್ಯ - ಎಲೈ ಸತ್ಪುರುಷಶ್ರೇಷ್ಠನೇ, ಧರ್ಮಾಖ್ಯಂವಸ್ತು - ಧರ್ಮಸ್ವರೂಪವಾದ ವಸ್ತುವು, ಸತ್‌ಸ್ಯಾತ್ - ಸತ್ಯವಾದದ್ದೇ ಆದರೆ, ತವ - ನಿನಗೆ, ಅಸತ್ - ಅಧರ್ಮರೂಪವಾದ ವಸ್ತುವು, ಕಿಂಚನ - ಸ್ವಲ್ಪವಾದರೂ, ನಸ್ಯಾತ್ - ಇಲ್ಲದಿರುವದು, ಯತ್ - ಯಾವ ಕಾರಣದಿಂದ, ತ್ವಯಾ - ನಿನ್ನಿಂದ, ಈದೃಶಂ - ಇಂಥಾ ವ್ಯಸನವು, ಪ್ರಾಪ್ತಂ - ಹೊಂದಲ್ಪಟ್ಟಿತೋ, ತಸ್ಮಾತ್ - ಆ ಕಾರಣದಿಂದ, ಸತ್ - ಸದ್ರೂಪವಾದ ವಸ್ತುವು, ನೋಪಪದ್ಯತೇ - ಇರುವದಿಲ್ಲ. ॥೨೫॥ ಅಥವಾ - ಹಾಗಲ್ಲದಿದ್ದರೂ, ದುರ್ಬಲಃ - ಬಲರಹಿತವಾದ, ಕ್ಲೀಬಃ - ಸ್ವತಸ್ಸಾಮರ್ಥ್ಯರಹಿತ

ತಾನೇ ಅನಾಹುತ ಮಾಡೀತು? ಇದಲ್ಲದೆ ಪಾಪಪುಣ್ಯಗಳೆರಡೂ ಸಂದೇಹಾಸ್ಪದಗಳಾದುದರಿಂದ ಅವೇನುತಾನೆ ಮಾಡಿಯಾವು? ಹಾಗಲ್ಲದೆ ಅಧರ್ಮವೆಂಬುದು ಕೊಲ್ಲುವುದೇ ನಿಜವಾದರೆ ಅದು ದೈವಯೋಗವೇ ಹೊರ್ತು ಮತ್ತೇನೂ ಅಲ್ಲವಾದುದರಿಂದ ಹಾಗೆ ಕೊಂದರೂ ಅದರಿಂದ ಯಾವ ದೋಷವೂ ಘಟಿಸದು. ಎಲೈ ಶತ್ರುಮರ್ದನನೇ! ಪ್ರತ್ಯಕ್ಷವಾಗದ ಪ್ರತಿಕ್ರಿಯೆಯುಳ್ಳುದೂ, ಸದಸತ್ಸ್ವರೂಪವಾದುದೂ ಆದ ಧರ್ಮದಿಂದ ಪರವನ್ನು ಹೊಂದುವುದು ತಾನೆ ಹೇಗೆ ಸಾಧ್ಯವಾಗುತ್ತದೆ? ಧರ್ಮವೆಂಬುದು ವಾಸ್ತವವಾಗಿ ಇರುವುದೇ ಆದರೆ ಧರ್ಮವಾಗಿಯೇ ನಡೆಯುತ್ತಿರುವ ನಿನಗೆ ಇಂತಹ ಕಷ್ಟವು ಬರುತ್ತಿದ್ದಿತೆ? ॥ ೨೨–೨೫ ॥ ಅಣ್ಣಾ! ನಿನ್ನಂತಹನು ಇಂತಹ ಕಷ್ಟಗಳನ್ನು ಹೊಂದುತ್ತಿರುವುದರಿಂದ ಧರ್ಮವೆಂಬು

$ "ಕರ್ಮಜನ್ಯಾತಿಶಯೋ ಧರ್ಮಃ ಶ್ರೇಯಸ್ಸಾಧನಃ—ಕರ್ಮದಿಂದ ಜನಿಸಿದ ಅತಿಶಯವುಳ್ಳ ಧರ್ಮವು ಶ್ರೇಯಸ್ಸಿಗೆ ಸಾಧನಭೂತವಾಗುತ್ತದೆ" ಎಂಬ ಎರಡನೆಯ ಪಕ್ಷವನ್ನು ಹಿಡಿದು ಅದರಲ್ಲಿಯೂ, ಅದು ಸ್ವತಂತ್ರವಾಗಿಯೇ ಶ್ರೇಯಸ್ಸನ್ನುಂಟುಮಾಡುತ್ತದೆಯೇ, ಅಥವಾ ಪರಾಪೇಕ್ಷೆಯಿಂದಲೋ ಎಂದು ವಿಕಲ್ಪಿಸಿ ಮೊದಲ ಪಕ್ಷವನ್ನು ಖಂಡಿಸುತ್ತಾನೆ.

§ ಅಥವಾ ದುರ್ಬಲಃ ಕ್ಲೀಬೋ ಬಲಂ ಧರ್ಮೋಽನುವರ್ತತೇ । ದುರ್ಬಲೋ ಹೃತಮರ್ಯಾದೋ ನ ಸೇವ್ಯ ಇತಿ ಮೇ ಮತಿಃ ॥೨೬॥ ‡ ಬಲಸ್ಯ ಯದಿ ಚೇದ್ಧರ್ಮೋ ಗುಣಭೂತಃ ಪರಾಕ್ರಮೇ । ಧರ್ಮಮುತ್ಸೃಜ್ಯ ವರ್ತಸ್ವ ಯಥಾ ಧರ್ಮೇ ತಥಾ ಬಲೇ ॥೨೭॥ * ಅಥ ಚೇತ್ಸತ್ಯವಚನಂ ಧರ್ಮಃ ಕಿಲ ಪರಂತಪ! । ಅನೃತಸ್ತ್ವಯ್ಯಕರುಣಃ

ವಾದ, ಧರ್ಮಃ - ಧರ್ಮವು, ಬಲಂ - ಪುರುಷಪ್ರಯತ್ನರೂಪವಾದ ಸಹಕಾರಿಯನ್ನು, ಅನುವರ್ತತೇ- ಅನುಸರಿಸುತ್ತದೆಯೋ, ದುರ್ಬಲಃ-ಬಲಹೀನವಾದ, ಹೃತಮರ್ಯಾದಃ-ಹೋಗಲಾಡಿಸಲ್ಪಟ್ಟ ಸ್ವತಂತ್ರ ಫಲಪ್ರದಾನ ಸಾಮರ್ಥ್ಯವುಳ್ಳ ಆ ಧರ್ಮವು, ನಸೇವ್ಯಃ - ಸೇವಿಸತಕ್ಕದ್ದಲ್ಲ, ಇತಿ - ಇಂತೆಂದು, ಮೇ - ನನ್ನ, ಮತಿಃ - ಬುದ್ಧಿಯು. ॥ ೨೬ ॥ ಬಲಸ್ಯ - ಪುರುಷ ಬಲಕ್ಕೆ, ಪರಾಕ್ರಮೇ - ಕಾರ್ಯಸಾಧನ ವಿಷಯದಲ್ಲಿ, ಧರ್ಮಃ - ಧರ್ಮವು, ಗುಣ....ತ್ - ಉಪಸರ್ಜನ ಭೂತವಾದದ್ದಾದರೆ, ತದಾ - ಆ ಕಾಲದಲ್ಲಿ, ಧರ್ಮಂ - ಧರ್ಮವನ್ನು, ಉತ್ಸೃಜ್ಯ - ಬಿಟ್ಟು, ಯಥಾ - ಹೇಗೆ, ಧರ್ಮೇ - ಧರ್ಮದಲ್ಲಿ ಇದ್ದೀ, ತಥಾ - ಹಾಗೆಯೇ, ಬಲೇ - ಪುರುಷ ಪ್ರಯತ್ನದಲ್ಲಿ, ವರ್ತಸ್ವ - ಇರು. ॥ ೨೭ ॥ ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಅಥ - ಬಳಿಕ, ಸತ್ಯವಚನಂ - ಯಥಾರ್ಥ ವಚನವೇ, ಧರ್ಮಃಕಿಲ - ಧರ್ಮವಷ್ಟೆ, ಇತಿಚೇತ್ - ಹೀಗಾದರೆ, ಅನೃತಃ - ಸಟೆಮಾತನ್ನು ಹೇಳಿರುವ, ತ್ವಯಿ - ನಿನ್ನಲ್ಲಿ, ಅಕರುಣಃ - ದಯಾಹೀನನಾದ, ಪಿತಾ - ತಂದೆಯು, ತ್ವಯಾ - ನಿನ್ನಿಂದ, ಕಿನ್ನಬದ್ಧಃ -

---

ದಿಲ್ಲವೇ ಇಲ್ಲವೆಂದು ನನಗೆ ತೋರುತ್ತಿದೆ. ತೋರುವುದು ಮಾತ್ರವಲ್ಲ; ದೃಢವಾಗಿದೆ. ಹಾಗಿಲ್ಲದೆ ಧರ್ಮವೆಂಬುದು ಬಲರಹಿತವಾಗಿರುವುದರಿಂದ ಯಾವ ಕಾರ್ಯವನ್ನೂ ಮಾಡಲಾರದೆಂದು ತೋರುತ್ತದೆ. ಆದುದರಿಂದ ದುರ್ಬಲವಾದುದೂ, ನಿಯತವಾದ ಫಲವನ್ನು ಕೊಡಲಾರದುದೂ ಆಗಿರುವುದರಿಂದ ಧರ್ಮವೆಂಬುದನ್ನು ಸೇವಿಸಬಾರದೆಂದು ಹೇಳಬೇಕಾಗಿದೆ. ಧರ್ಮಕ್ಕಿಂತಲೂ, ಪರಾಕ್ರಮವನ್ನೂ, ಸಾಮರ್ಥ್ಯವನ್ನೂ ಹೊಂದಿದ್ದ ಪಕ್ಷದಲ್ಲಿ ಧರ್ಮವನ್ನು ತೊರೆದು ಅವುಗಳನ್ನೇ ಆಶ್ರಯಿಸಬಹುದು. ಹಾಗೆ ಮಾಡು. ನೀನೇನು ಸಾಮಾನ್ಯನೇ? ಶತ್ರುಗಳನ್ನು ಸದೆಬಡಿವ ಸಾಮರ್ಥ್ಯವು ನಿನ್ನಲ್ಲಿರುವುದು. ರಾಘವಾ! ಸತ್ಯವೇ ಧರ್ಮವಾಗಿದ್ದ ಪಕ್ಷದಲ್ಲಿ ನಿನ್ನ ತಂದೆಯಾದ ದಶರಥರಾಯನು ನಿನಗೆ ಪಟ್ಟಾಭಿಷೇಕ ಮಾಡುವೆನೆಂದು ಮಾತು ಕೊಟ್ಟು ಅದಕ್ಕೆ ತಪ್ಪಿ ನಿನ್ನನ್ನು ಈ ರೀತಿ ಅರಣ್ಯಕ್ಕೇಕೆ

---

§ "ಧರ್ಮವೆಂಬುದು ಪೌರುಷವನ್ನಾಶ್ರಯಿಸಿಯೇ ಫಲವನ್ನು ಕೊಡುತ್ತದೆ" ಎಂಬ ಪಕ್ಷವನ್ನು ಆಶಂಕಿಸಿ ಅದನ್ನಿಲ್ಲಿ ಪರಿಹರಿಸುತ್ತಾನೆ. "ಸ್ವತಃ ದುರ್ಬಲವಾಗಿ ಮರ್ಯಾದೆಯನ್ನು ಕಳೆದುಕೊಂಡ ಧರ್ಮವು ಏನನ್ನು ತಾನೆ ಮಾಡಬಲ್ಲುದು? ಇಂತಹ ಧರ್ಮವನ್ನು ಸೇವಿಸಲೇಬಾರದೆಂದು ನನ್ನ ಮತ" ಎಂದು ಲಕ್ಷ್ಮಣ ವಾಕ್ಯಾಭಿಪ್ರಾಯ.

‡ ಉಪಸರ್ಜನಭೂತವಾದ ಧರ್ಮವನ್ನು ತೊರೆದು ಪ್ರಧಾನಭೂತವಾದ ಪರಾಕ್ರಮವನ್ನೇ ಆಶ್ರಯಿಸಬೇಕೆಂದು ಈ ಶ್ಲೋಕದಿಂದ ಹೇಳುವನು.

* "ಎಲ್ಲವೂ ಧರ್ಮವಾಗುವುದಿಲ್ಲ. ಅದರೆ ಏಕದೇಶವಾದ ಸತ್ಯವು ಮಾತ್ರ ಧರ್ಮವಾಗುತ್ತದೆಯಲ್ಲವೆ. ನಾನು ಕಾಡಿನಲ್ಲಿರುತ್ತೇನೆಂದು ತಂದೆಯ ಬಳಿ ಪ್ರತಿಜ್ಞೆ ಮಾಡಿದೆನು. ಆ ಸತ್ಯ ವಚನವನ್ನು ನಡೆಯಿಸತಕ್ಕದ್ದಷ್ಟೆ. ಅದಕ್ಕಾಗಿಯೇ ಈ ರೀತಿ ದುಃಖವನ್ನನುಭವಿಸಿದುದಾಯಿತು" ಎಂಬ ಭಾವವನ್ನಿಟ್ಟುಕೊಂಡು ಸತ್ಯಾಭಿನಿವೇಶವುಳ್ಳ ಶ್ರೀರಾಮನನ್ನು ಕುರಿತು (ಧರ್ಮಸಾಧರ್ಮ್ಯವುಳ್ಳ) ಸತ್ಯಕ್ಕಾದರೂ ಸಾರ್ಥಕ್ಯವಿದೆಯೇ ಎಂದು ಅದನ್ನೂ ನಿರಾಕರಿಸುತ್ತಾನೆ.

ಕಿಂ ನಬದ್ಧಸ್ತ್ವಯಾ ಪಿತಾ॥೨೮॥ ¶ ಯದಿ ಧರ್ಮೋ ಭವೇದ್ಭೂತೋ ಅಧರ್ಮೋವಾ ಪರಂತಪ! । ನಸ್ಮ ಹತ್ವಾ ಮುನಿಂ ವಜ್ರೀ ಕುರ್ಯಾದಿಜ್ಯಾಂ ಶತಕ್ರತುಃ ॥ ೨೯ ॥ § ಅಧರ್ಮಸಂಶ್ರಿತೋ ಧರ್ಮೋ ವಿನಾಶಯತಿ ರಾಘವ! । ಸರ್ವಮೇತದ್ಯಥಾಕಾಮಂ ಕಾಕುತ್ಸ್ಥ ಕುರುತೇ ನರಃ ॥೩೦॥ ☫ ಮಮ ಚೇದಂ ಮತಂ ತಾತ! ಧರ್ಮೋಯ

ಏಕೆ ನಿಯಮಿಸಲಿಲ್ಲ. ॥೨೮॥ ಹೇ ಪರಂತಪ - ಎಲೈ ಶತ್ರುಸಂಹಾರಕನೇ, ಧರ್ಮಃ - ಧರ್ಮವು, ಭೂತಃ - ಸಿದ್ಧವಾದದ್ದು, ಭವೇದ್ಯದಿ - ಆದದ್ದೇ ಆದರೆ, ವಜ್ರೀ - ವಜ್ರಾಯುಧಧಾರಿಯಾದ, ಶತಕ್ರತುಃ - ದೇವೇಂದ್ರನು, ಮುನಿಂ - ವಿಶ್ವರೂಪವನ್ನು, ಹತ್ವಾ - ಕೊಂದು, ಇಜ್ಯಾಂನಕುರ್ಯಾತ್- ಮಾಡದಿರುವನು, ಅಧರ್ಮೋವಾ - ಅಧರ್ಮವಾದರೂ, ಭವೇದ್ಯದಿ - ಇದ್ದದ್ದೇ ಆದರೆ, ವಜ್ರೀ - ದೇವೇಂದ್ರನು, ಮುನಿಂ - ವಿಶ್ವರೂಪವನ್ನು, ಹತ್ವಾ - ಹೊಡೆದು, ಇಜ್ಯಾಮೇವಕುರ್ಯಾತ್ - ಯಜ್ಞವನ್ನು ಮಾಡದಿರುವನು. ॥೨೯॥ ಹೇ ರಾಘವ - ಎಲೈ ಶ್ರೀರಾಮನೇ, ಹೇ ಕಾಕುತ್ಸ್ಥ - ಎಲೈ ಕಕುತ್ಸ್ಥವಂಶೋತ್ಪನ್ನನೇ, ಅಧರ್ಮಸಂಶ್ರಿತಃ - ಅಧರ್ಮದಿಂದ ಕೂಡಿರುವ, ಧರ್ಮಃ - ಧರ್ಮವು. ಕರ್ತಾರಂ - ಮಾಡಿದ ಪುರುಷನನ್ನು, ವಿನಾಶಯತಿ - ನಾಶಗೊಳಿಸುತ್ತದೆ, ಏವಂ - ಈ ಪರಿಯಾಗಿಯೇ, ಧರ್ಮಸಹಿತವಾಗಿರುವ ಅಧರ್ಮವು ಕರ್ತೃಭೂತನಾದ ಪುರುಷನನ್ನು, ವಿನಾಶಯತಿ - ನಾಶಗೊಳಿಸುತ್ತದೆ, ಏತತ್ಸರ್ವಂ - ಈ ಧರ್ಮಾಧರ್ಮ ಸಮಷ್ಟಿರೂಪವಾದ ಕರ್ಮವನ್ನು, ನರಃ - ಮನುಷ್ಯನು, ಯಥಾಕಾಮಂ - ಕಾಲಾನುಗುಣ್ಯವಾಗಿ, ಕುರುತೇ - ಮಾಡುತ್ತಾನೆ. ॥೩೦॥ ಹೇ ತಾತ- ಎಲೈ ದಯನೀಯನೇ, ಹೇ ರಾಘವ-ಎಲೈ ಶ್ರೀರಾಮನೇ, ಅಯಂ-ಇದು, ಧರ್ಮಇತಿ ಧರ್ಮವೂ

ಕಳುಹಿಸುತ್ತಿದ್ದನು. ಹಾಗೆ ಮಾತಿಗೆ ತಪ್ಪಿ ನುಡಿದ ಆತನನ್ನು ನೀನೇಕೆ ನಿಯಮಿಸಲಿಲ್ಲ? ॥ ೨೬–೨೮ ॥ ರಘುಕುಲೋತ್ತಮಾ! ಧರ್ಮಾಧರ್ಮಗಳು ವಾಸ್ತವವಾಗಿದ್ದಪಕ್ಷದಲ್ಲಿ ದೇವೇಂದ್ರನು ಪುರೋಹಿತನನ್ನು ಕೊಂದು ಯಜ್ಞವನ್ನು ಪರಿಸಮಾಪ್ತಿಗೊಳಿಸದೆ ಹೋಗುತ್ತಿದ್ದನು. ಆದುದರಿಂದ ಅವೆರಡೂ ಅಸತ್ಯವೆಂದೇ ತೋರುವುದು. ಇದೂ ಅಲ್ಲದೆ ಎಲೈ ರಘುಕುಲೋತ್ತಮನೇ! ಅಧರ್ಮವನ್ನೊಳಗೊಂಡ ಧರ್ಮವು ಎಲ್ಲವನ್ನೂ ನಾಶಗೊಳಿಸದಿರುತ್ತದೆಯೆ? ಹಾಗೂ ಇಲ್ಲದಿರುವುದರಿಂದ ಅವೆರಡೂ ಇಲ್ಲವೆಂದೇ ದೃಢವಾಗಿ ತೋರುವುದು. ನನಗಂತೂ ಹಾಗೆಯೇ ತೋರುವುದು. ಆದುದರಿಂದಲೇ ಜಗತ್ತಿನಲ್ಲಿ ಜನಗಳೆಲ್ಲರೂ ಧರ್ಮಾಧರ್ಮಾತ್ಮಕವಾದ ಕರ್ಮಗಳೆಲ್ಲವನ್ನೂ ಆಯಾ ಕಾಲಕ್ಕೆ ಅನುಗುಣವಾಗಿ ಮನಬಂದಂತೆ ಮಾಡುತ್ತಾರೆ ಈ ವಿಷಯದಲ್ಲಿ ನನಗೆ ಸಂದೇಹವೇ ಇರುವುದಿಲ್ಲವು.

¶ ಧರ್ಮಾಧರ್ಮಗಳಿರುವುವೆಂದೇ ತಿಳಿಯೋಣ ; ನಂಬೋಣ. ಆದರೆ ರಾಜನಾದವನು ಯಾವಾಗಲೂ ಧರ್ಮವನ್ನೇ ನೆಚ್ಚಿ ಕುಳಿತಿರಬಾರದು. ಆಯಾ ಕಾಲಕ್ಕನುಗುಣವಾಗಿ ಪ್ರಯೋಜನಾಪೇಕ್ಷೆಯಿಂದ ಧರ್ಮಾಧರ್ಮಗಳೆರಡನ್ನೂ ಅವಲಂಬಿಸತಕ್ಕದ್ದು ಶಿಷ್ಟಾಚಾರವಾಗಿದೆ ಎಂಬ ವಿಷಯವನ್ನು ದೃಷ್ಟಾಂತಪೂರ್ವಕವಾಗಿ ಹೇಳಲುಪಕ್ರಮಿಸುವನು.

§ "ಧರ್ಮಾಧರ್ಮಗಳಲ್ಲಿ ಯಾವುದಾದರೂ ಒಂದನ್ನೇ ಆಶ್ರಯಿಸಿದ್ದಾದರೆ ಅದು ಕರ್ತನನ್ನೇ ನಾಶಗೊಳಿಸುತ್ತದೆ. ಆದುದರಿಂದ ಸಮಯಾನುಸಾರ ಎರಡನ್ನೂ ಅನುಷ್ಠಿಸಬೇಕು" ಎಂದು ಹೇಳುವನು.

☫ "ನನ್ನ ಸಿದ್ಧಾಂತವೇನೆಂದರೆ ಕರ್ಮಾನುಗುಣವಾಗಿ ಯಾವುದು ಅವಶ್ಯವೂ ಆಚರಣೀಯವೋ ಅದೇ ಧರ್ಮವು" ಲಕ್ಷ್ಮಣಸ್ವಾಮಿಯು ಈ ಸಿದ್ಧಾಂತವನ್ನು ಮಾಡುವ ಮೊದಲು ಧರ್ಮವೇ ಅಪ್ರಾಮಾಣಿಕವಾದುದೆಂದೂ,

ಮಿತಿ ರಾಘವ! । ಧರ್ಮಮೂಲಂ ತ್ವಯಾ ಛಿನ್ನಂ ರಾಜ್ಯಮುತ್ಸೃಜತಾ ತದಾ ॥ ೩೧ ॥ ಅರ್ಥೇಭ್ಯೋಹಿ ವಿವೃದ್ಧೇಭ್ಯಸ್ಸಂವೃತ್ತೇಭ್ಯಸ್ತತಸ್ತತಃ । ಕ್ರಿಯಾಸ್ಸರ್ವಾಃ ಪ್ರವರ್ತಂತೇ ಪರ್ವತೇಭ್ಯ ಇವಾಪಗಾಃ ॥೩೨॥ ¶ ಅರ್ಥೇನ ಹಿ ವಿಯುಕ್ತಸ್ಯ ಪುರುಷಸ್ಯಾಽಲ್ಪತೇಜಸಃ । ವ್ಯುಚ್ಛಿದ್ಯಂತೇ ಕ್ರಿಯಾಸ್ಸರ್ವಾ ಗ್ರೀಷ್ಮೇ ಕುಸರಿತೋ ಯಥಾ ॥ ೩೩ ॥ ಸೋಽಯಮರ್ಥಂ ಪರಿತ್ಯಜ್ಯ ಸುಖಕಾಮಸ್ಸುಖೈಧಿತಃ । ಪಾಪಮಾರಭತೇ ಕರ್ತುಂ ತತೋ ದೋಷಃ ಪ್ರವರ್ತತೇ ॥ ೩೪ ॥ ಯಸ್ಯಾರ್ಥಾಸ್ತಸ್ಯ ಮಿತ್ರಾಣಿ

ಎಂದು, ಇದಂ - ಇದು, ಮಮ - ನನಗೆ, ಮತಂ - ಸಮ್ಮತವು, ತದಾ - ಆ ಕಾಲದಲ್ಲಿ, ರಾಜ್ಯಂ - ರಾಜ್ಯವನ್ನು, ಉತ್ಸೃಜತಾ - ಬಿಡುತ್ತಿರುವ, ತ್ವಯಾ - ನಿನ್ನಿಂದ, ಧರ್ಮಮೂಲಂ - ಧರ್ಮಕ್ಕೆ ಮೂಲಕಾರಣವು, ಛಿನ್ನಂ - ಕತ್ತರಿಸಲ್ಪಟ್ಟಿತು. ॥ ೩೧ ॥ ತತಸ್ತತಃ - ಅವರವರಿಂದ, ಸಂವೃತ್ತೇಭ್ಯಃ - ಪ್ರಾಪ್ತವಾದ, ವಿವೃದ್ಧೇಭ್ಯಃ - ಕ್ರಮವಾಗಿ ವೃದ್ಧಿ ಪಡೆದಿರುವ, ಅರ್ಥೇಭ್ಯಃ - ಅರ್ಥಗಳಿಂದ, ಸರ್ವಾಃಕ್ರಿಯಾಃ - ಸಮಸ್ತ ಕರ್ಮಗಳೂ, ಪರ್ವತೇಭ್ಯಃ - ಬೆಟ್ಟಗಳಿಂದ, ಆಪಗಾ ಇವ - ನದಿಗಳಂತೆ, ಪ್ರವರ್ತಂತೇ - ಉತ್ಪನ್ನಗಳಾಗುತ್ತವೆ. ॥ ೩೨ ॥ ಅರ್ಥೇನ - ಅರ್ಥದಿಂದ, ವಿಯುಕ್ತಸ್ಯ - ಬಿಡಲ್ಪಟ್ಟ, ಅಲ್ಪತೇಜಸಃ - ಸ್ವಲ್ಪ ತೇಜಸ್ಸುಳ್ಳ, ಪುರುಷಸ್ಯ - ಪುರುಷನಿಗೆ, ಸರ್ವಾಃ ಕ್ರಿಯಾಃ - ಸಮಸ್ತ ಕರ್ಮಗಳೂ, ಗ್ರೀಷ್ಮೇ - ಗ್ರೀಷ್ಮಋತುವಿನಲ್ಲಿ, ಕುಸರಿತೋಯಥಾ - ಅಲ್ಪ ನದಿಗಳಂತೆ, ವ್ಯುಚ್ಛಿದ್ಯಂತೇ - ವಿಚ್ಛಿನ್ನಗಳಾಗುತ್ತವೆ. ॥೩೩॥ ಸುಖೈಧಿತಃ - ಸುಖದಿಂದ ಪೂರ್ವದಲ್ಲಿ ವೃದ್ಧಿಗೊಳಿಸಲ್ಪಟ್ಟ, ಸೋಽಯಂ - ಆ ಈ ಅರ್ಥವನ್ನು ಪರಿತ್ಯಾಗ ಮಾಡಿದವನು, ಅರ್ಥಂ - ದ್ರವ್ಯವನ್ನು, ಪರಿತ್ಯಜ್ಯ - ಬಿಟ್ಟು, ಸುಖಕಾಮಃ - ಸುಖಾಪೇಕ್ಷೆಯುಳ್ಳವನಾಗಿ, ಪಾಪಂ - ಪಾಪವನ್ನು, ಕರ್ತುಂ - ಮಾಡುವದಕ್ಕೆ, ಆರಭತೇ - ಆರಂಭಿಸುತ್ತಾನೆ, ತತಃ - ಅದರಿಂದ, ದೋಷಃ - ದೋಷವು, ಪ್ರವರ್ತತೇ - ಸಂಭವಿಸುತ್ತದೆ. ॥೩೪॥ ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳು, ಸಂತಿ - ಇರು

ರಘುಕುಲೋತ್ತಮಾ! ನೀನು ರಾಜ್ಯವನ್ನು ತೊರೆದಾಗಲೇ ಧರ್ಮಕ್ಕೆ ಮೂಲಕಾರಣವಾದ ಅರ್ಥವನ್ನು ತೊರೆದಂತಾಯಿತು. ಅರ್ಥಗಳು ಅಪರಿಮಿತವಾಗಿದ್ದರೆ, ಅವು ವೃದ್ಧಿ ಹೊಂದುತ್ತಲೇ ಇದ್ದರೆ ಎಲ್ಲ ಕಾರ್ಯಗಳನ್ನೂ, ಸುಕರವಾಗಿಯೂ, ಶೀಘ್ರವಾಗಿಯೂ ಸಾಧಿಸಿಕೊಳ್ಳಬಹುದು. ಅರ್ಥವಿಲ್ಲದವನು ತೇಜೋಹೀನನೆನಿಸುತ್ತಾನೆ. ಅರ್ಥಹೀನನಾದವನ ಕಾರ್ಯಗಳೆಲ್ಲವೂ ಗ್ರೀಷ್ಮಕಾಲದ ಸಣ್ಣ ಪುಟ್ಟ ಮಡುಗಳಂತೆ ಬತ್ತಿಹೋಗುತ್ತವೆ. ಆದುದರಿಂದ ಅರ್ಥಹೀನನಾದವನು ಸುಖವನ್ನು ಬಯಸಿದ್ದಾದರೆ ಪಾಪಕಾರ್ಯಗಳನ್ನು ಮಾಡಲೇ ಬೇಕಾಗುತ್ತದೆ. ಅಂತಹನು ಪಾಪವನ್ನು ಮಾಡಲು ಯತ್ನಿಸುತ್ತಾನೆಯಲ್ಲವೆ. ಧನವಿದ್ದವರಿಗೆ ಮಿತ್ರರು ದೊರಕುತ್ತಾರೆ. ಧನವಿರುವವನೇ

ಆಮೇಲೆ ಅತಿ ಪ್ರಯಾಸದಿಂದ ಪ್ರಾಮಾಣಿಕತ್ವವು ಸಿದ್ಧಿಸಿದರೂ ಅದಷ್ಟು ಮುಖ್ಯವಲ್ಲವೆಂದೂ ಹೇಳಿರುವನು. ಇದೀಗ ಧರ್ಮವು ಅಪ್ರಾಧಾನ್ಯವಾಗಿ ಸಿದ್ಧಿಸಿದರೂ ಅದು ನಿನಗೆ ದೊರಕುವಂತಿಲ್ಲ: ಏಕೆಂದರೆ ನೀನು ಧರ್ಮಕ್ಕೆ ಮೂಲಭೂತವಾದ ಅರ್ಥವನ್ನೇ ತೊರೆದಿರುವೆ. ಇನ್ನು ಧರ್ಮಸಂಪಾದನೆಯಾಗುವುದು ಹೇಗೆ— ಎಂಬುದಾಗಿ ಅರ್ಥವೇ ಸರ್ವಕ್ಕೂ ಮೂಲವೆಂಬಂಶವನ್ನು ಮುಂದಿನ ಶ್ಲೋಕಗಳಿಂದ ಪ್ರತಿಪಾದಿಸುತ್ತಾನೆ. (ಗೋ+ಮ)

¶ ಅರ್ಥಪರಿತ್ಯಾಗದಿಂದ ಧರ್ಮಸಂಭವವಿಲ್ಲದಿರುವುದೊಂದೇ ಅಲ್ಲದೆ ದೋಷವೂ ಘಟಿಸುತ್ತದೆಯೆಂಬುದನ್ನು ಈ ಶ್ಲೋಕದಿಂದ ನಿರೂಪಿಸುತ್ತಾನೆ.

ಯಸ್ಯಾರ್ಥಾಸ್ತಸ್ಯ ಬಾಂಧವಾಃ । ಯಸ್ಯಾರ್ಥಾಸ್ಸಪುಮಾನ್ ಲೋಕೇ ಯಸ್ಯಾರ್ಥಾಸ್ಸಚ ಪಂಡಿತಃ ॥ ೩೫ ॥ ಯಸ್ಯಾರ್ಥಾಸ್ಸಚ ವಿಕ್ರಾಂತೋ ಯಸ್ಯಾರ್ಥಾಸ್ಸಚ ಬುದ್ಧಿಮಾನ್ । ಯಸ್ಯಾರ್ಥಾಸ್ಸಮಹಾಭಾಗೋ ಯಸ್ಯಾರ್ಥಾಸ್ಸಮಹಾಗುಣಃ ॥೩೬॥ ಅರ್ಥಸ್ಯೈತೇ ಪರಿತ್ಯಾಗೇ ದೋಷಾಃ ಪ್ರವ್ಯಾಹೃತಾ ಮಯಾ । ರಾಜ್ಯಮುತ್ಸೃಜತಾ ವೀರ! ಯೇನ ಬುದ್ಧಿಃ ತ್ವಯಾ ಕೃತಾ ॥ ೩೭ ॥ ಯಸ್ಯಾರ್ಥೋ ಧರ್ಮಕಾಮಾರ್ಥಾಸ್ತಸ್ಯ ಸರ್ವಂ ಪ್ರದಕ್ಷಿಣಂ । ಅಧನೇನಾರ್ಥಕಾಮೇನ ನಾರ್ಥಶ್ಶಕ್ಯೋ ವಿಚಿನ್ವತಾ ॥ ೩೮ ॥ ಹರ್ಷಃ ಕಾಮಶ್ಚ ದರ್ಪಶ್ಚ ಧರ್ಮಃ ಕ್ರೋಧಶ್ಶಮೋ ದಮಃ ।

ತ್ತವೋ, ತಸ್ಯ - ಅವನಿಗೆ, ಮಿತ್ರಾಣಿ - ಮಿತ್ರರು, ಸಂತಿ - ಇರುತ್ತಾರೆ, ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳೋ, ಸಃ - ಅವನು, ಲೋಕೇ - ಲೋಕದಲ್ಲಿ, ಪುಮಾನ್ - ಪುಂಸ್ತ್ವವುಳ್ಳವನು, ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳೋ, ಸಃ - ಅವನು, ಪಂಡಿತಃ - ಪಂಡಿತನು. ॥ ೩೫ ॥ ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳೋ, ಸಚ - ಅವನೇ, ವಿಕ್ರಾಂತಃ - ಪರಾಕ್ರಮವುಳ್ಳವನು, ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳೋ, ಸಃ - ಅವನೇ, ಬುದ್ಧಿಮಾನ್ - ಬುದ್ಧಿವಂತನು, ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳೋ, ಸಃ - ಅವನು, ಮಹಾಭಾಗಃ - ಮಹಾಪುಣ್ಯವಂತನು, ಯಸ್ಯ - ಯಾವನಿಗೆ, ಅರ್ಥಾಃ - ಅರ್ಥಗಳು, ಸಂತಿ - ಇರುತ್ತವೋ, ಸಃ - ಅವನು, ಮಹಾಗುಣಃ - ಮಹಾ ಗುಣವಂತನು, ಏತೇ - ಈ, ದೋಷಾಃ - ದೋಷಗಳು, ಅರ್ಥಸ್ಯ - ಅರ್ಥದ, ಪರಿತ್ಯಾಗೇ - ಬಿಡುವುದರಲ್ಲಿ, ಮಯಾ - ನನ್ನಿಂದ, ಪ್ರವ್ಯಾಹೃತಾಃ - ಹೇಳಲ್ಪಟ್ಟವು, ಹೇ ವೀರ - ಎಲೈ ಶೂರನೇ, ರಾಜ್ಯಂ - ರಾಜ್ಯವನ್ನು, ಉತ್ಸೃಜತಾ - ಬಿಡುತ್ತಿರುವ, ತ್ವಯಾ - ನಿನ್ನಿಂದ, ಯೇನ - ಯಾವ ಗುಣದಿಂದ, ಬುದ್ಧಿಃ-ಅರ್ಥಪರಿತ್ಯಾಗ ಬುದ್ಧಿಯು, ಕೃತಾ-ಮಾಡಲ್ಪಟ್ಟಿತೋ, ತಂ-ಅದನ್ನು, ನಜಾನೇ - ನಾನು ಅರಿಯನು. ॥೩೬-೩೭॥ ಯಸ್ಯ-ಯಾವನಿಗೆ, ಅರ್ಥಃ-ದ್ರವ್ಯವು, ಅಸ್ತಿ-ಇದೆಯೋ, ತಸ್ಯ - ಅವನಿಗೆ, ಧರ್ಮಕಾಮಾರ್ಥಾಃ - ಧರ್ಮ ಕಾಮ ಅರ್ಥ ಎಂಬ ಇವು ಮೂರೂ ದೊರಕುತ್ತವೆ, ತಸ್ಯ - ಧನವುಳ್ಳ ಅವನಿಗೆ, ಸರ್ವಂ - ಸಮಸ್ತವೂ, ಪ್ರದಕ್ಷಿಣಂ - ಅನುಕೂಲವು, ಅಧನೇನ - ಧನರಹಿತನಾದ, ಅರ್ಥಕಾಮೇನ - ಅರ್ಥವನ್ನು ಅಪೇಕ್ಷಿಸುತ್ತಿರುವ, ವಿಚಿನ್ವತಾ - ಹುಡುಕುತ್ತಿರುವ ಪುರುಷನಿಂದ, ಅರ್ಥಃ - ಅರ್ಥವು, ಶಕ್ಯಃ - ಸಾಧ್ಯವು, ನ - ಅಲ್ಲ. ॥ ೩೮ ॥ ಹೇ ನರಾಧಿಪ - ಎಲೈ

ಲೋಕದಲ್ಲಿ ಗಂಡಸೆನಿಸುತ್ತಾನೆ. ಧನವಿರುವವನೇ ಪಂಡಿತನೆಂದೂ ಕರೆಯಿಸಿಕೊಳ್ಳುವನು. ॥ ೨೯—೩೫ ॥ ಧನವಿದ್ದವನೇ ಬಲಾಢ್ಯನೆನಿಸುತ್ತಾನೆ. ಧನವಿದ್ದವನೇ ಬುದ್ಧಿಶಾಲಿಯೆನಿಸುತ್ತಾನೆ. ಯಾವನಿಗೆ ಧನವಿರುವುದೋ ಅವನೇ ಮಹಾ ಭಾಗ್ಯಶಾಲಿಯೆನಿಸುವನು ; ಗುಣವಂತನೆನಿಸುವಾತನೂ ಅವನೇ. ಹೀಗೆ ಧನದವೊಂದಿದ್ದರೆ ಉಂಟಾಗುವ ಪ್ರಯೋಜನಗಳು ಅಪಾರವಾಗಿವೆ. ಅದೊಂದಿಲ್ಲದಿದ್ದರೆ ಉಂಟಾಗುವ ದೋಷಗಳನ್ನೂ ಹಿಂದೆಯೇ ಹೇಳಿದೆನು. ಎಲೈ ವೀರನೇ! ನೀನು ಅರ್ಥಸ್ವರೂಪವಾದ ರಾಜ್ಯವನ್ನು ತೊರೆದು ಅದರಿಂದಾಗುತ್ತಿದ್ದ ಪ್ರಯೋಜನಗಳೆಲ್ಲವನ್ನೂ ಕಳೆದುಕೊಂಡೆ. ಅರ್ಥವಂತನಿಗೆ ಧರ್ಮಕಾಮಾರ್ಥಗಳೆಲ್ಲವೂ ಉಂಟು. ಅಷ್ಟೆಯಲ್ಲದೆ ಆತನಿಗೆ ಸರ್ವವೂ ಅನುಕೂಲವಾಗಿಯೇ ಪರಿಣಮಿಸುವುದು. ಧನವಿಲ್ಲದಿದ್ದರೆ ಧನಾರ್ಜನೆಯನ್ನು ಮಾಡಬೇಕೆಂಬ ಬಯಕೆಯಿದ್ದರೂ ಅದರಿಂದ ಶ್ರೇಯಸ್ಸು ದೊರೆಯುವುದು ಬಹಳ ಕಷ್ಟ; ದೊರಕುವುದಿಲ್ಲ. ಎಲೈ ನರಾಧಿಪನೇ! ಸಂತೋಷ,

ಅರ್ಥಾದೇತಾನಿ ಸರ್ವಾಣಿ ಪ್ರವರ್ತಂತೇ ನರಾಧಿಪ! ॥೩೯॥ ಯೇಷಾಂ ನಶ್ಯತ್ಯಯಂ ಲೋಕಶ್ಚರತಾಂ ಧರ್ಮಚಾರಿಣಾಂ । ತೇಽರ್ಥಾಸ್ತ್ವಯಿ ನ ದೃಶ್ಯಂತೇ ದುರ್ದಿನೇಷು ಯಥಾ ಗ್ರಹಾ ॥ ೪೦ ॥ ತ್ವಯಿ ಪ್ರವ್ರಾಜಿತೇ ವೀರ! ಗುರೋಶ್ಚ ವಚನೇ ಸ್ಥಿತೇ । ರಕ್ಷಸಾಪಹೃತಾ ಭಾರ್ಯಾ ಪ್ರಾಣೈಃ ಪ್ರಿಯತರಾ ತವ ॥ ೪೧ ॥ ತದದ್ಯ ವಿಪುಲಂ ವೀರ! ದುಃಖಮಿಂದ್ರಜಿತಾ ಕೃತಂ । ಕರ್ಮಣಾ ವ್ಯಪನೇಷ್ಯಾಮಿ ತಸ್ಮಾದುತ್ತಿಷ್ಠ

ಅರಸೇ, ಅರ್ಥಾತ್ - ಅರ್ಥದಿಂದ, ಹರ್ಷಃ - ಸಂತೋಷವು, ಕಾಮಶ್ಚ - ಕಾಮವು, ಧರ್ಮಶ್ಚ - ಧರ್ಮವೂ, ಕ್ರೋಧಶ್ಚ - ಕ್ರೋಧವೂ, ಶಮಃ - ಅಂತರಿಂದ್ರಿಯನಿಗ್ರಹವೂ, ದಮಃ - ಬಹಿರಂದ್ರಿಯ ನಿಗ್ರಹವೂ, ಏತಾನಿಸರ್ವಾಣಿ - ಈ ಸಮಸ್ತ ಗುಣಗಳೂ, ಪ್ರವರ್ತಂತೇ - ಸಂಭವಿಸುತ್ತವೆ. ॥೩೯॥ ಯೇಷಾಂ - ಅರ್ಥಗಳನ್ನು ಅನಾದರಣೆ ಮಾಡಿ, ಚರತಾಂ - ಸಂಚರಿಸುತ್ತಿರುವ, ಧರ್ಮ ಚಾರಿಣಾಂ - ಧರ್ಮಾಚರಣ ಮಾಡುವವರಿಗೆ, ಅಯಂಲೋಕಃ - ಈ ಲೋಕದಲ್ಲಿ ಹುಟ್ಟಿದ ಸುಖವು, ನಶ್ಯತಿ - ಕ್ಷಯಿಸಿಹೋಗುವದೋ, ತೇ - ಅಂಥಾ ಸುಖಸಾಧಕವಾದ, ಅರ್ಥಾಃ - ಅರ್ಥಗಳು, ತ್ವಯಿ - ನಿನ್ನಲ್ಲಿ, ದುರ್ದಿನೇಷು - ಮುಗಿಲು ಮುಚ್ಚಿದ ದಿನಗಳಲ್ಲಿ, ಗ್ರಹಾಯಥಾ - ಸೂರ್ಯಾದಿ ಗ್ರಹಗಳಂತೆ, ನದೃಶ್ಯಂತೇ - ಕಾಣಲ್ಪಡುವುದಿಲ್ಲ. ॥೪೦॥ ಹೇ ವೀರ - ಎಲೈ ಶೂರನೇ, ಗುರೋಃ - ತಂದೆಯ, ವಚನೇ - ಮಾತಿನಲ್ಲಿ, ಸ್ಥಿತೇ - ಇರುವ, ತ್ವಯಿ - ನೀನು, ಪ್ರವ್ರಾಜಿತೇ - ವನಪ್ರವೇಶ ಮಾಡಿಸಲ್ಪಡಲು, ತವ - ನಿನಗೆ, ಪ್ರಾಣೈಃ - ಪ್ರಾಣಗಳಿಗಿಂತಲೂ, ಪ್ರಿಯತರಾ - ಇಷ್ಟಳಾದ, ಭಾರ್ಯಾ - ಹೆಂಡತಿಯು, ರಕ್ಷಸಾ - ರಕ್ಕಸನಿಂದ, ಅಪಹೃತಾ - ಅಪಹರಿಸಲ್ಪಟ್ಟಳು. ॥೪೧॥ ಹೇ ವೀರ - ಎಲೈ ಶೂರನೇ, ಅದ್ಯ - ಈಗ, ತತ್ - ಆ ಕಾರಣದಿಂದ, ಅದ್ಯ - ಈಗ, ದುಃಖಂ - ದುಃಖವು, ಇಂದ್ರಜಿತಾ - ಇಂದ್ರಜಿತುವಿಂದ, ವಿಪುಲಂ - ವಿಸ್ತಾರವಾಗಿ, ಕೃತಂ - ಮಾಡ ಲ್ಪಟ್ಟಿತು, ರಾಘವ - ಶ್ರೀರಾಮನೇ, ತಸ್ಮಾತ್ - ಆ ಕಾರಣದಿಂದ, ಉತ್ತಿಷ್ಠ - ಮೇಲಕ್ಕೇಳು, ಕರ್ಮಣಾ - ನನ್ನ ವ್ಯಾಪಾರದಿಂದ, ತತ್ - ಆ ದುಃಖವನ್ನು, ವ್ಯಪನೇಷ್ಯಾಮಿ - ಹೋಗಲಾಡಿಸು ತ್ತೇನೆ. ॥೪೨॥ ನರಶಾರ್ದೂಲ - ಪುರುಷಶ್ರೇಷ್ಠನೇ, ದೀರ್ಘಬಾಹೋ - ಉದ್ದವಾದ ಬಾಹುಗಳುಳ್ಳ ವನೇ, ದೃಢವ್ರತ - ನಿಶ್ಚಲವಾದ ನಿಯಮವುಳ್ಳವನೇ, ಉತ್ತಿಷ್ಠ - ಮೇಲಕ್ಕೇಳು, ಆತ್ಮಾನಂ - ಮಹಾ

ಬಯಕೆ, ದರ್ಪ, ಧರ್ಮ, ಶಾಂತಿ, ದಾಂತಿ ಇವುಗಳೆಲ್ಲವೂ ಅರ್ಥದಿಂದಲೇ ಪ್ರವರ್ತಿಸುತ್ತವೆ. ಕೇವಲ ಧರ್ಮವನ್ನೇ ಆಚರಿಸುವವರಿಗೆ ಐಹಿಕ ಸುಖಸಾಧನವು ನಶಿಸುತ್ತದೆ. ಹಾಗೆಯೇ ಧರ್ಮವನ್ನೇ ಅನುಷ್ಠಿಸುತ್ತಿರುವ ನಿನ್ನಲ್ಲಿ ಆ ಅರ್ಥಗಳೆಂಬುದು ಮುಗಿಲು ಮುಚ್ಚಿದ ದಿನ ಗಳಲ್ಲಿ ಚಂದ್ರಸೂರ್ಯಾದಿ ಗ್ರಹಗಳಂತೋ ಅಂತು ಕಾಣದೆ ಹೋಗಿವೆ. ॥೩೬-೪೦॥ ಎಲೈ ವೀರನೇ! ನೀನು ಪ್ರವ್ರಾಜಿತನಾಗಿ ಬಂದು, ತಂದೆಯ ವಚನವನ್ನು ನಡೆಯಿಸಲೇ ಬೇಕೆಂಬ ಧರ್ಮಕ್ಕೆ ಸಿಲುಕಿದೆಯಾದುದರಿಂದ ಐಹಿಕ ಸುಖಸಾಧನಭೂತಳಾಗಿ ಅತ್ಯಂತ ಪ್ರಿಯ ತಮೆಯೂ ಆಗಿದ್ದ ನಿನ್ನ ಭಾರ್ಯೆ ಆ ಸೀತಾದೇವಿಯನ್ನು ರಾಕ್ಷಸನು ಅಪಹರಿಸುವಂತಾ ಯಿತು. ಆದುದರಿಂದೆಲೈ ವೀರನಾದ ರಾಘವನೇ! ಈಗ ನಾನು ಇಂದ್ರಜಿತ್ತುವು ಸೀತೆ ಯನ್ನು ವಧಿಸಿದುದರಿಂದ ನಿನ್ನಲ್ಲಿ ಹುಟ್ಟಿರುವ ಈ ದುಃಖವನ್ನು ರಣವ್ಯಾಪಾರದಿಂದ ಹೋಗ ಲಾಡಿಸುತ್ತೇನೆ. ಮೇಲಕ್ಕೇಳು. ಈ ದುಃಖವನ್ನು ತೊರೆ. ಎಲೈ ಪುರುಷೋತ್ತಮನೇ!

ರಾಘವ! ॥ ೪೨ ॥ ಉತ್ತಿಷ್ಠ ನರಶಾರ್ದೂಲ! ದೀರ್ಘಬಾಹೋ ದೃಢವ್ರತ! ।
ಕಿಮಾತ್ಮಾನಂ ಮಹಾತ್ಮಾನಮಾತ್ಮಾನಂ ನಾವಬುಧ್ಯಸೇ? ॥ ೪೩ ॥

ಅಯಮನಘ! ತವೋದಿತಃ ಪ್ರಿಯಾರ್ಥಂ
ಜನಕಸುತಾನಿಧನಂ ನಿರೀಕ್ಷ್ಯ ರುಷ್ಟಃ ।
ಸಹಯಗಜರಥಾಂ ಸರಾಕ್ಷಸೇಂದ್ರಾಂ
ಭೃಶಮಿಷುಭಿರ್ವಿನಿಪಾತಯಾಮಿ ಲಂಕಾಂ" ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರ್ಯಶೀತಿತಮಸ್ಸರ್ಗಃ

ಮನಸ್ವಿಯಾದ ನಿನ್ನನ್ನು, ಆತ್ಮಾನಂ - ಸಕಲ ಭೂತಗಳಲ್ಲಿಯೂ ವ್ಯಾಪಿಸಿರುವ, ಮಹಾತ್ಮಾನಂ - ಪರಮಾತ್ಮನನ್ನಾಗಿ, ನಾವಬುಧ್ಯಸೇಕಿಂ - ತಿಳಿಯಲಿಲ್ಲವೇ. ॥ ೪೩ ॥ ಅನಘ - ಎಲೈ ನಿರ್ದುಷ್ಟನೆ, ತವ - ನಿನಗೆ, ಪ್ರಿಯಾರ್ಥಂ - ಇಷ್ಟವನ್ನು ಮಾಡುವ ನಿಮಿತ್ತವಾಗಿ, ಉದಿತಃ - ಪ್ರೇರೇಪಿಸಲ್ಪಟ್ಟ, ಅಯಂ- ಈ ನಾನು, ಜನ....ನಂ - ಸೀತಾದೇವಿಯ ಸಂಹಾರವನ್ನು, ನಿರೀಕ್ಷ್ಯ - ಕಂಡು, ರುಷ್ಟಃ - ರೋಷವುಳ್ಳವನಾಗಿ, ಸಹ....ಥಾಂ - ಕುದುರೆ, ಆನೆ, ರಥಗಳಿಂದೊಡಗೂಡಿದ, ಸರಾಕ್ಷಸೇಂದ್ರಾಂ - ರಾವಣಾಸುರನೊಡಗೂಡಿದ, ಲಂಕಾಂ - ಲಂಕಾಪಟ್ಟಣವನ್ನು, ಇಷುಭಿಃ - ಬಾಣಗಳಿಂದ, ಭೃಶಂ - ಬಹಳವಾಗಿ, ವಿನಿಪಾತಯಾಮಿ - ಧ್ವಂಸ ಮಾಡುತ್ತೇನೆ. ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರ್ಯಶೀತಿತಮಸ್ಸರ್ಗಃ.

ದೀರ್ಘಬಾಹುವೂ, ದೃಢವ್ರತನೂ ಆದ ಶ್ರೀರಾಮಮೂರ್ತಿಯೇ!! ಏಳು. ನೀನು ಪರಮಾತ್ಮನೆಂಬುದನ್ನು ನೀನೇ ತಿಳಿಯದೆ ಹೋದೆಯಾ! ಎಲೈ ನಿರ್ದುಷ್ಟನೇ! ಮಹಾಮಹಿಮೆಯುಳ್ಳ ನಿನ್ನ ಆತ್ಮವನ್ನು ನೀನೇ ತಿಳಿಯೆಯಾ? ನಿನಗೆ ಈ ದುಃಖವೆಲ್ಲಿಂದ ಬಂದಿತು? ಏಳು. ಅಣ್ಣಾ! ಸೀತಾದೇವಿಯ ಮರಣವನ್ನು ನೋಡಿ ನಾನು ಮಹಾ ರೋಷಸಮನ್ವಿತನಾಗಿ ನಿನಗೆ ಪ್ರಿಯವನ್ನುಂಟುಮಾಡಲೋಸುಗ ಆ ರೀತಿ ನುಡಿದೆನು. ನಾನೀಗಲೇ ಮಹಾತೀಕ್ಷ್ಣವಾದ ಬಾಣಗಳಿಂದ ಆನೆ, ಕುದುರೆ, ರಥ, ಕಾಲ್ಬಲಗಳೆಂಬ ಆ ರಾಕ್ಷಸನ ಚತುರಂಗಬಲವನ್ನೂ ನಾಶಗೊಳಿಸಿ ರಾವಣಾಸುರನೊಡಗೂಡಿದ ಲಂಕಾಪಟ್ಟಣವೆಲ್ಲವನ್ನೂ ಧ್ವಂಸ ಮಾಡುವೆನು" ಎಂದು ಹೇಳಿದನು. ॥ ೪೧–೪೪ ॥

ಇಂತಿದು ಲಕ್ಷ್ಮಣಕೃತ ರಾಮಸಾಂತ್ವನವೆಂಬ ಎಂಬತ್ತಮೂರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಚತುರಶೀತಿತಮಸ್ಸರ್ಗಃ

ರಾಮಮಾಶ್ವಾಸಯಾನೇತು ಲಕ್ಷ್ಮಣೇ ಭ್ರಾತೃವತ್ಸಲೇ । ನಿಕ್ಷಿಪ್ಯ ಗುಲ್ಮಾನ್ ಸ್ವಸ್ಥಾನೇ ತತ್ರಾಗಚ್ಛದ್ವಿಭೀಷಣಃ ॥ ೧ ॥ ನಾನಾಪ್ರಹರಣೈರ್ವೀರೈಶ್ಚತುರ್ಭಿಸ್ಸಚಿವೈರ್ವೃತಃ । ನೀಲಾಂಜನಚಯಾಕಾರೈರ್ಮಾತಂಗೈರಿವ ಯೂಥಪಃ ॥ ೨ ॥ ಸೋಽಭಿಗಮ್ಯ ಮಹಾತ್ಮಾನಂ ರಾಘವಂ ಶೋಕಲಾಲಸಂ । ವಾನರಾಂಶ್ಚೈವ ದದೃಶೇ ಬಾಷ್ಪಪರ್ಯಾಕುಲೇಕ್ಷಣಾನ್ ॥೩॥ ರಾಘವಂ ಚ ಮಹಾತ್ಮಾನಮಿಕ್ಷ್ವಾಕುಕುಲನಂದನಂ । ದದರ್ಶ ಮೋಹಮಾಪನ್ನಂ ಲಕ್ಷ್ಮಣಸ್ಯಾಂಕಮಾಶ್ರಿತಂ ॥ ೪ ॥ ವ್ರೀಳಿತಂ ಶೋಕ

ಭ್ರಾತೃವತ್ಸಲೇ - ಅಣ್ಣನಲ್ಲಿ ಭಕ್ತಿಭಾವವುಳ್ಳ, ಲಕ್ಷ್ಮಣೇ - ಲಕ್ಷ್ಮಣನು, ರಾಮಃ - ಶ್ರೀರಾಮನನ್ನು, ಆಶ್ವಾಸಯಾನೇತು - ಸಮಾಧಾನಗೊಳಿಸುತ್ತಿರಲು, ವಿಭೀಷಣಃ - ವಿಭೀಷಣನು, ಗುಲ್ಮಾನ್ - ವಾನರಸೇನೆಗಳನ್ನು, ಸ್ವಸ್ಥಾನೇ - ಸ್ವಸ್ವಕಾರ್ಯಾರ್ಥವಾಗಿ, ನಿಕ್ಷಿಪ್ಯ - ಇರಿಸಿ, ತತ್ರ - ಅಲ್ಲಿ, ನಾನಾ....ಣೈಃ - ಅನೇಕ ಆಯುಧಗಳುಳ್ಳ, ವೀರೈಃ - ಶೂರರಾದ, ಚತುರ್ಭಿಃ - ನಾಲ್ವರಾದ, ಮಂತ್ರಿಭಿಃ - ಮಂತ್ರಿಗಳಿಂದ, ನಿಲಾಂ....ರೈಃ - ಕಾಡಿಗೆಯ ಬೆಟ್ಟಕ್ಕೆ ಸಮಾನವಾದ ಆಕಾರಗಳುಳ್ಳ, ಮಾತಂಗೈಃ - ಆನೆಗಳಿಂದ, ಯೂಥಪಇವ - ಯೂಥಪತಿಯಾದ ಗಂಡಾನೆಯಂತೆ, ವೃತಃ - ಸುತ್ತುವರೆಯಲ್ಪಟ್ಟವನಾಗಿ, ಅಗಚ್ಛತ್ - ಬಂದನು. ॥ ೧-೨ ॥ ಸಃ - ಆ ವಿಭೀಷಣನು, ಅಭಿಗಮ್ಯ - ಬಂದು, ಮಹಾತ್ಮಾನಂ - ಮಹಾ ಮಾಹಾತ್ಮ್ಯವುಳ್ಳ, ಶೋಕಲಾಲಸಂ - ವ್ಯಸನಗೊಂಡಿರುವ, ರಾಘವಂ - ಶ್ರೀರಾಮನನ್ನು, ಬಾಷ್ಪ.....ಣಾನ್ - ಕಂಬನಿಗಳಿಂದ ವ್ಯಾಪ್ತವಾದ ನೇತ್ರಗಳುಳ್ಳ, ವಾನರಾಂಶ್ಚೈವ - ಕಪಿಗಳನ್ನೂ, ದದೃಶೇ - ಕಂಡನು. ॥ ೩ ॥ ಮಹಾತ್ಮಾನಂ - ಮಹಾ ಮನಸ್ವಿಯಾದ, ಇಕ್ಷ್ವಾ....ನಂ - ಇಕ್ಷ್ವಾಕು ವಂಶಕ್ಕೆ ಆನಂದಕರನಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ಅಂಕಂ - ತೊಡೆಯನ್ನು, ಆಶ್ರಿತಂ - ಹೊಂದಿರುವ, ಮೋಹಂ - ಭ್ರಾಂತಿಯನ್ನು, ಆಪನ್ನಂ - ಹೊಂದಿರುವ, ರಾಘವಂ - ಶ್ರೀರಾಮನನ್ನು, ದದರ್ಶ - ಕಂಡನು. ॥ ೪ ॥ ಸವಿಭೀಷಣಃ - ಆ ವಿಭೀಷಣನು, ವ್ರೀಳಿತಂ - ನಾಚಿಕೆಗೊಂಡಿರುವ, ಶೋಕಸಂತಪ್ತಂ - ದುಃಖದಿಂದ

ಲಕ್ಷ್ಮಣಸ್ವಾಮಿಯು ಈ ಪ್ರಕಾರವಾಗಿ ಶ್ರೀರಾಮಚಂದ್ರನನ್ನು ಸಮಾಧಾನಪಡಿಸುತ್ತಿರಲು, ವಿಭೀಷಣನು ರಣಭೂಮಿಯಲ್ಲಿ ವಾನರಸೇನೆಗಳೆಲ್ಲವನ್ನೂ ಅವವುಗಳ ಸ್ಥಾನಗಳಲ್ಲಿ ನಿಲ್ಲಿಸಿ ಅಲ್ಲಿಗೆ ಬಂದನು. ಆತನೊಡನೆ ಆಯುಧಪಾಣಿಗಳಾದ ಆತನ ನಾಲ್ವರು ಮಂತ್ರಿಗಳೂ ಇದ್ದರು. ಆ ಸಮಯದಲ್ಲಿ ರಾಕ್ಷಸೋತ್ತಮನಾದ ವಿಭೀಷಣನು ಕಾಡಿಗೆಯ ಬೆಟ್ಟವನ್ನು ಹೋಲುವ ನಾಲ್ಕು ಆನೆಗಳೊಡಗೂಡಿದ ಸಲಗದಂತೆ ಶೋಭಿಸುತ್ತಿದ್ದನು. ಆತನು ದುಃಖವನ್ನು ಹೊಂದುತ್ತಿದ್ದ ಶ್ರೀರಾಮಮೂರ್ತಿಯನ್ನೂ, ಕಂಬನಿಗರೆಯುತ್ತಿದ್ದ ವಾನರರನ್ನೂ ನೋಡಿದನು. ಇದೂ ಅಲ್ಲದೆ ಆ ಸಮಯದಲ್ಲಿ ಶ್ರೀರಾಮಮೂರ್ತಿಯು ನಾಚಿ, ದುಃಖದಿಂದ ಬಹಳವಾಗಿ ಪರಿತಪಿಸುತ್ತ ಲಕ್ಷ್ಮಣನ ತೊಡೆಯಮೇಲೆ ಮೂರ್ಛಿತನಾಗಿರುವುದನ್ನೂ ಕಂಡನು. ವಿಭೀಷಣನು ಇಕ್ಷ್ವಾಕುವಂಶಾನಂದಕರನಾದ ಶ್ರೀರಾಮಮೂರ್ತಿಯು ಆ ರೀತಿ

ಸಂತಪ್ತಂ ದೃಷ್ಟ್ವಾ ರಾಮಂ ವಿಭೀಷಣಃ । ಅಂತರ್ದುಃಖೇನ ದೀನಾತ್ಮಾ ಕಿಮೇತದಿತಿ ಸೋಽಬ್ರವೀತ್ ॥೫॥ ವಿಭೀಷಣಮುಖಂ ದೃಷ್ಟ್ವಾ ಸುಗ್ರೀವಂ ತಾಂಶ್ಚ ವಾನರಾನ್ । ಲಕ್ಷ್ಮಣೋವಾಚ ಮಂದಾರ್ಥಮಿದಂ ಬಾಷ್ಪಪರಿಪ್ಲುತಃ ॥ ೬ ॥ "ಹತಾಮಿಂದ್ರಜಿತಾ ಸೀತಾಮಿಹ ಶ್ರುತ್ವೈವ ರಾಘವಃ । ಹನುಮದ್ವಚನಾತ್ಸೌಮ್ಯ! ತತೋ ಮೋಹಮುಪಾಗತಃ" ॥ ೭ ॥ ಕಥಯಂತಂ ತು ಸೌಮಿತ್ರಿಂ ಸನ್ನಿವಾರ್ಯ ವಿಭೀಷಣಃ । "ಮನುಜೇಂದ್ರಾರ್ತರೂಪೇಣ ಯದುಕ್ತಂ ಚ ಹನೂಮತಾ । ತದಯುಕ್ತಮಹಂ ಮನ್ಯೇ ಸಾಗರಸ್ಯೇವ ಶೋಷಣಂ ॥ ೮ ॥ ಅಭಿಪ್ರಾಯಂತು ಜಾನಾಮಿ ರಾವಣಸ್ಯ

ಪರಿತಪಿಸುತ್ತಿರುವ, ರಾಮಂ - ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಅಂತಃ - ಹೃದಯದಲ್ಲಿ, (ಅಂತರಂಗದಲ್ಲಿ), ದುಃಖೇನ - ದುಃಖದಿಂದ, ದೀನಾತ್ಮಾ - ಸಂಕಟಗೊಂಡ ಮನವುಳ್ಳವನಾಗಿ, ಏತತ್ - ಇದು, ಕಿಮಿತಿ - ಏನೆಂದು, ಅಬ್ರವೀತ್ - ನುಡಿದನು. ॥ ೫ ॥ ಲಕ್ಷ್ಮಣಃ - ಲಕ್ಷ್ಮಣನು, ಬಾಷ್ಪ....ತಃ - ಕಣ್ಣೀರಿನಿಂದ ತೊಯಿಸಲ್ಪಟ್ಟವನಾಗಿ, ವಿಭೀ....ಖಂ - ವಿಭೀಷಣನ ಮುಖವನ್ನು, ಸುಗ್ರೀವಂಚ - ಸುಗ್ರೀವನನ್ನೂ, ತಾನ್‌ವಾನರಾಂಶ್ಚ - ಆ ಕಪಿಗಳನ್ನೂ, ದೃಷ್ಟ್ವಾ - ಕಂಡು, ಮಂದಾರ್ಥಂ - ಸಂಕ್ಷೇಪವಾದ ಅರ್ಥವುಳ್ಳ, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥೬॥ ಸೌಮ್ಯ - ಪ್ರಸನ್ನನೇ, ರಾಘವಃ - ಶ್ರೀರಾಮನು, ಹನುಮದ್ವಚನಾತ್ - ಆಂಜನೇಯನ ಮಾತಿನ ದೆಶೆಯಿಂದ, ಸೀತಾಂ - ಸೀತಾದೇವಿಯನ್ನು, ಇಂದ್ರಜಿತಾ - ಇಂದ್ರಜಿತುವಿಂದ, ಹತಾಂ - ಹೊಡೆಯಲ್ಪಟ್ಟವಳನ್ನಾಗಿ, ಇಹ - ಈಗ, ಶ್ರುತ್ವೈವ - ಕೇಳುತ್ತಲೇ, ತತಃ - ಆದರಿಂದ, ಮೋಹಂ - ವ್ಯಸನದಿಂದ ಭ್ರಾಂತಿಯನ್ನು, ಉಪಾಗತಃ - ಹೊಂದಿದನು, ವಿಭೀಷಣಃ - ವಿಭೀಷಣನು, ಕಥಯಂತಂ - ಹೇಳುತ್ತಿರುವ, ಸೌಮಿತ್ರಿಂ - ಲಕ್ಷ್ಮಣನನ್ನು, ಸನ್ನಿವಾರ್ಯ - ತಡೆದು, ಉವಾಚ - ಹೇಳಿದನು. ॥ ೭ ॥ ಮನುಜೇಂದ್ರ - ರಾಜನೇ, ಹನೂಮತಾ - ಆಂಜನೇಯನಿಂದ, ಯತ್ - ಯಾವ ಮಾತು, ಆರ್ತರೂಪೇಣ - ವಾಸ್ತವಿಕಾರ್ಥವೆಂಬ ಭ್ರಾಂತಿಯಿಂದ, ಉಕ್ತಂ - ಹೇಳಲ್ಪಟ್ಟಿತೋ, ಅಹಂ - ನಾನು, ತತ್ - ಆ ಮಾತನ್ನು, ಸಾಗರಸ್ಯ - ಕಡಲಿನ, ಶೋಷಣಮಿವ - ಬತ್ತಿಹೋಗುವಿಕೆಯಂತೆ, ಅಯುಕ್ತಂ - ಅಯೋಗ್ಯವನ್ನಾಗಿ, ಮನ್ಯೇ - ಎಣಿಸುತ್ತೇನೆ. ॥೮॥ ಮಹಾಬಾಹೋ - ಮಹಾ ಭುಜಬಲಶಾಲಿಯೇ, ದುರಾತ್ಮನಃ - ದುಷ್ಟಬುದ್ಧಿಯುಳ್ಳ, ರಾವಣಸ್ಯ - ರಾವಣನ, ಅಭಿಪ್ರಾಯಂತು - ಭಾವ

ಇರುವುದನ್ನು ಕಂಡು ಅಂತಸ್ಸಂತಾಪವುಳ್ಳವನಾಗಿ, ಹೊರಗೆ ತನ್ನ ದುಃಖವನ್ನು ತೋರಿಸಿಕೊಳ್ಳದೆ ಏನು ಸಮಾಚಾರವೆಂದು ಕೇಳಿದನು. ಲಕ್ಷ್ಮಣನು ಕಣ್ಣೀರಿನಿಂದ ತೊಯ್ದ ಮುಖವುಳ್ಳವನಾಗಿ ವಿಭೀಷಣ ಸುಗ್ರೀವರನ್ನೂ, ವಾನರರನ್ನೂ ನೋಡಿ ಮಂದಾರ್ಥವುಳ್ಳ ಮಾತುಗಳಿಂದ, "ಅಯ್ಯಾ ಸೌಮ್ಯನೇ ! ಹನುಮಂತನು, ಇಂದ್ರಜಿತುವು ಸೀತೆಯನ್ನು ಕೊಂದನೆಂದು ಹೇಳಿದ ವಾರ್ತೆಯನ್ನು ಕೇಳಿ ಶ್ರೀರಾಮನೀರೀತಿ ಮೂರ್ಛಿತನಾಗಿರುವನು" ಎಂದನು. ಅದನ್ನು ಕೇಳಿ ವಿಭೀಷಣನು ಆತನನ್ನು ತಡೆದು, "ಓ ರಘುಕುಲೋತ್ತಮಾ ! ಹನುಮಂತನು ಹೇಳಿದ ಸುದ್ದಿಯು ದಿಟವಲ್ಲವು. ಆತನು ರಾಕ್ಷಸರ ಮಾಯೆಯನ್ನರಿಯದೆ ಈ ರೀತಿ ಹೇಳಿರುವನೆಂದು ತೋರುತ್ತದೆ. ಸಮುದ್ರವನ್ನು ಬತ್ತಿಸುವುದು ಹೇಗೆ ಸಾಧ್ಯವಲ್ಲವೋ ಹಾಗೆ ಸೀತೆಯನ್ನು ವಧಿಸುವುದೂ ಸಾಧ್ಯವಲ್ಲವೆಂದು ತಿಳಿ. ಎಲೈ ಮಹಾ ಭುಜಬಲಪರಾಕ್ರಮಶಾಲಿಯೇ ! ದುಷ್ಟಾತ್ಮನಾದ ಆ ರಾವಣನ ಅಭಿಪ್ರಾಯವನ್ನು ನಾನು ಬಹಳ ಚೆನ್ನಾಗಿ

ದುರಾತ್ಮನಃ । ಸೀತಾಂ ಪ್ರತಿ ಮಹಾಬಾಹೋ! ನಚ ಘಾತಂ ಕರಿಷ್ಯತಿ ॥ ೯ ॥ ಯಾಚ್ಯಮಾನಸ್ತು ಬಹುಶೋ ಮಯಾ ಹಿತಚಿಕೀರ್ಷುಣಾ । ವೈದೇಹೀಮುತ್ಸೃಜಸ್ವೇತಿ ನಚ ತತ್ಕೃತವಾನ್ ವಚಃ ॥ ೧೦ ॥ ನೈವ ಸಾಮ್ನಾ ನದಾನೇನ ನಭೇದೇನ ಕುತೋ ಯುಧಾ । ಸಾ ದ್ರಷ್ಟುಮಪಿ ಶಕ್ಯೇತ ನೈವ ಚಾನ್ಯೇನ ಕೇನಚಿತ್ ॥ ೧೧ ॥ ವಾನರಾನ್ಮೋಹಯಿತ್ವಾತು ಪ್ರತಿಯಾತಸ್ಸರಾಕ್ಷಸಃ । ಚೈತ್ಯಂ ನಿಕುಂಭಿಲಾಂ ನಾಮ ಯತ್ರ ಹೋಮಂ ಕರಿಷ್ಯತಿ ॥ ೧೨ ॥ ಹುತವಾನುಪಯಾತೋಹಿ ದೇವೈರಪಿ ಸವಾಸವೈಃ । ದುರಾಧರ್ಷೋ ಭವತ್ಯೇವ ಸಂಗ್ರಾಮೇ ರಾವಣಾತ್ಮಜಃ ॥ ೧೩ ॥ ತೇನ

ವನ್ನಾದರೆ, ಜಾನಾಮಿ - ತಿಳಿದಿದ್ದೇನೆ, ರಾವಣಃ - ರಾವಣನು, ಸೀತಾಂಪ್ರತಿ - ಸೀತಾದೇವಿಯನ್ನಾದರೆ, ಘಾತಂ - ಸಂಹಾರವನ್ನು, ನಕರಿಷ್ಯತಿಚ - ಮಾಡಿಸಲಾರನು. ॥ ೯ ॥ ಹಿತಚಿಕೀರ್ಷುಣಾ - ತನಗೆ ಶ್ರೇಯಸ್ಸನ್ನೇ ಮಾಡಲಿಚ್ಛೆಯುಳ್ಳ, ಮಯಾ - ನನ್ನಿಂದ, ವೈದೇಹಿಂ - ಸೀತಾದೇವಿಯನ್ನು, ಉತ್ಸೃಜಸ್ವೇತಿ - ಬಿಟ್ಟುಬಿಡು ಎಂದು, ಬಹುಶಃ - ಅನೇಕಾವರ್ತಿಗಳು, ಯಾಚ್ಯಮಾನಸ್ತು - ಪ್ರಾರ್ಥಿಸಲ್ಪಟ್ಟವನಾದರೂ, ತದ್ವಚಃ - ಆ ನನ್ನ ಮಾತನ್ನು, ನಚಕೃತವಾನ್ - ಮಾಡದೇ ಹೋದನು. ॥೧೦॥ ಸಾ - ಆ ಸೀತಾದೇವಿಯು, ಸಾಮ್ನಾ - ಸಾಮೋಪಾಯದಿಂದಲೂ, ನೈವಶಕ್ಯೇತ - ಸಾಧ್ಯಳಾಗಲಾರಳು, ದಾನೇನ - ಅರ್ಥಪ್ರದಾನದಿಂದ, ನ - ಸಾಧ್ಯಳಲ್ಲವು, ಭೇದೇನ - ಭೇದೋಪಾಯದಿಂದ, ನ - ಸಾಧ್ಯಳಲ್ಲವು, ಯುಧಾ - ಯುದ್ಧದಿಂದ, ಕುತಃ - ಎಲ್ಲಿ ಬಂದಿತು, ಅನ್ಯೇನ - ಮತ್ತೊಬ್ಬನಾದ, ಕೇನಚಿತ್ - ಯಾವನೋ ಮಾಯಾವಿಯಿಂದಲೂ, ದ್ರಷ್ಟುಮಪಿ - ನೋಡುವುದಕ್ಕೂ ಕೂಡ, ನೈವಶಕ್ಯೇತ - ಸಾಧ್ಯಳಲ್ಲವೇ ಅಲ್ಲ. ॥ ೧೧ ॥ ಸರಾಕ್ಷಸಃ - ಆ ರಾಕ್ಷಸನು, ವಾನರಾಂಸ್ತು - ಕಪಿಗಳನ್ನಾದರೆ, ಮೋಹಯಿತ್ವಾ - ವಂಚಿಸಿ, ಯತ್ರ - ಯಾವ ಸ್ಥಳದಲ್ಲಿ, ಹೋಮಂ - ಹೋಮವನ್ನು, ಕರಿಷ್ಯತಿ - ಮಾಡುವನೋ, ನಿಕುಂಭಿಲಾಂ - ನಿಕುಂಭಿಲಾನಾಮಕವಾದ, ತಚ್ಚೈತ್ಯಂ - ಅಂಥಾ ದೇವತಾಯತನವನ್ನು ಕುರಿತು, ಪ್ರತಿಯಾತಃ - ಹೊರಟುಹೋದನು. ॥ ೧೨ ॥ ಹುತವಾನ್ - ಹೋಮ ಮಾಡಿ, ಉಪಯಾತಃ - ಬರುತ್ತಿರುವ, ರಾವಣಾತ್ಮಜಃ - ಇಂದ್ರಜಿತುವು, ಸವಾಸವೈಃ - ದೇವೇಂದ್ರನಿಂದೊಡಗೂಡಿದ, ದೇವೈರಪಿ - ದೇವತೆಗಳಿಂದಲೂ, ಸಂಗ್ರಾಮೇ - ಕಾಳೆಗದಲ್ಲಿ, ದುರಾಧರ್ಷಃ - ತಿರಸ್ಕರಿಸಲಾಸಾಧ್ಯನು, ಭವತ್ಯೇವಹಿ - ಆಗುವನಷ್ಟೆ. ॥೧೩॥ ತತ್ರ - ಆ ಯಜ್ಞದ

ತಿಳಿದಿರುವೆನು. ಆತನಿಗೆ ಸೀತಾದೇವಿಯನ್ನು ಕೊಲ್ಲುವುದರಲ್ಲಿ ಸ್ವಲ್ಪಮಾತ್ರವೂ ಮನಸ್ಸಿಲ್ಲವು. ಆದುದರಿಂದ ಅವನು ಆಕೆಯನ್ನು ಕೊಲ್ಲಲು ಆಸ್ಪದ ಕೊಟ್ಟಿರಲಾರನು. ರಾಮಾ! ಹಿಂದೆ ನಾನು ಸೀತೆಯನ್ನು ಬಿಟ್ಟುಬಿಡೆಂದು ಅನೇಕ ವಿಧವಾಗಿ ಆತನನ್ನು ಪ್ರಾರ್ಥಿಸಿದೆನು. ಆದರೂ ದುಷ್ಟಾತ್ಮನಾದ ಆ ರಾವಣನು ಆಕೆಯನ್ನು ಬಿಡೆನೆಂದಾಗಲಿ, ಕೊಲ್ಲುವೆನೆಂದಾಗಲಿ ನುಡಿಯಲಿಲ್ಲ. ಆ ಸೀತೆಯಾದರೋ ಸಾಮದಾನಭೇದ ದಂಡಗಳೆಂಬ ಚತುರೋಪಾಯಗಳಿಂದಲೂ ನೋಡಲು ಯಾರಿಗೂ ಸಾಧ್ಯಳಾಗುವವಳಲ್ಲವು. ಎಂದಮೇಲೆ ಯುದ್ಧದಿಂದ ವಶಳಾಗುವಳೆ? ಈಗ ಇಂದ್ರಜಿತುವು ತನ್ನ ಮಾಯೆಯಿಂದ ವಾನರರೆಲ್ಲರನ್ನೂ ಮೋಸಗೊಳಿಸಿ ಲಂಕಾಪಟ್ಟಣಕ್ಕೆ ಹಿಂತಿರುಗಿ ಹೊರಟುಹೋದನು. ಅವನು ಈಗ ನಿಕುಂಭಿಲಾ ಎಂಬ ದೇವಾಯತನದಲ್ಲಿ ಯಾಗವನ್ನು ಮಾಡಿ ದೇವದಾನವರಿಗೂ ಅಜೇಯನಾಗುವಂತೆ, ಪ್ರಸಾದವನ್ನು ಪಡೆದು ಮತ್ತೆ ರಣಾಂಗಣಕ್ಕೆ ಬರಬೇಕೆಂದು ಯೋಚಿಸಿದ್ದಾನೆ. ಅವನು ಮಾಡುವ

ಮೋಹಯತಾ ನೂನಮೇಷಾ ಮಾಯಾ ಪ್ರಯೋಜಿತಾ । ವಿಘ್ನಮನ್ವಿಚ್ಛತಾ ತತ್ರ ವಾನರಾಣಾಂ ಪರಾಕ್ರಮೇ ॥ ೧೪ ॥ ಸಸೈನ್ಯಾಸ್ತತ್ರ ಗಚ್ಛಾಮೋ ಯಾವತ್ತನ್ನಸಮಾಪ್ಯತೇ । ತ್ಯಜೇಮಂ ನರಶಾರ್ದೂಲ! ಮಿಥ್ಯಾಸಂತಾಪಮಾಗತಂ । ಸೀದತೇಹಿ ಬಲಂ ಸರ್ವಂ ದೃಷ್ಟ್ವಾ ತ್ವಾಂ ಶೋಕಕರ್ಶಿತಂ ॥ ೧೫-೧೬ ॥ ಇಹ ತ್ವಂ ಸ್ವಸ್ಥಹೃದಯಸ್ತಿಷ್ಠ ಸತ್ವಸಮುಚ್ಛ್ರಿತಃ । ಲಕ್ಷ್ಮಣಂ ಪ್ರೇಷಯಾಸ್ಮಾಭಿಸ್ಸಹಸೈನ್ಯಾನುಕರ್ಷಿಭಿಃ ॥ ೧೭ ॥ ಏಷ ತಂ ನರಶಾರ್ದೂಲೋ ರಾವಣಿಂ ನಿಶಿತೈಶ್ಶರೈಃ । ತ್ಯಾಜಯಿಷ್ಯತಿ

ವಿಷಯದಲ್ಲಿ, ವಾನರಾಣಾಂ - ಕಪಿಗಳಿಗೆ, ಪರಾಕ್ರಮೇ - ಶೌರ್ಯದಲ್ಲಿ, ವಿಘ್ನಂ - ವಿಘ್ನವನ್ನು, ಅನ್ವಿಚ್ಛತಾ - ಹುಡುಕುತ್ತಿರುವ, ಮೋಹಯತಾ - ಭ್ರಾಂತಿಯನ್ನು ಹುಟ್ಟಿಸುತ್ತಿರುವ, ತೇನ - ಆ ಇಂದ್ರಜಿತುವಿಂದ, ಏಷಾಮಾಯಾ - ಈ ಸೀತಾಸಂಹಾರರೂಪ ಮಾಯೆಯು, ಪ್ರಯೋಜಿತಾ - ಪ್ರಯೋಗ ಮಾಡಲ್ಪಟ್ಟದೆ, ನೂನಂ - ನಿಶ್ಚಯವು. ॥ ೧೪ ॥ ಯಾವತ್ - ಎಷ್ಟರೊಳಗಾಗಿ, ತತ್ - ಆ ನಿಕುಂಭಿಲಾ ಯಾಗರೂಪಕಾರ್ಯವು, ನಸಮಾಪ್ಯತೇ - ಪೂರ್ತಿಯಾಗುವುದಿಲ್ಲವೋ, ತಾವತ್ - ಅಷ್ಟರೊಳಗೆ, ಸಸೈನ್ಯಾಃ - ಸೇನಾಸಮೇತರಾಗಿ, ತತ್ರ - ಅಲ್ಲಿ, ಗಚ್ಛಾಮಃ - ಹೋಗೋಣ, ಹೇ ನರಶಾರ್ದೂಲ - ಎಲೈ ಪುರುಷವ್ಯಾಘ್ರನೇ, ಆಗತಂ - ಪ್ರಾಪ್ತವಾದ, ಇಮಂ - ಈ, ಮಿಥ್ಯಾಸಂತಾಪಂ- ಸುಳ್ಳು ಸಂಕಟವನ್ನು, ತ್ಯಜ - ಬಿಟ್ಟುಬಿಡು, ತ್ವಾಂ - ನಿನ್ನನ್ನು, ಶೋಕಕರ್ಶಿತಂ - ವ್ಯಸನದಿಂದ ಕೃಶೀಭೂತನನ್ನಾಗಿ, ದೃಷ್ಟ್ವಾ - ಕಂಡು, ಸರ್ವಂಬಲಂ - ಸಮಸ್ತ ಸೇನೆಯೂ, ಸೀದತೇಹಿ - ದುಃಖಗೊಂಡಿದೆಯಷ್ಟೆ. ॥೧೫ ೧೬॥ ತ್ವಂ - ನೀನು, ಸ್ವಸ್ಥಹೃದಯಃ - ಸ್ವಸ್ಥಚಿತ್ತನಾಗಿ, ಸತ್ವಮುಚ್ಛ್ರಿತಃ- ಸ್ವಭಾವದಿಂದ ವೃದ್ಧಿ ಹೊಂದುವವನಾಗಿ, ಇಹ - ಇಲ್ಲಿ, ತಿಷ್ಠ - ಇರು, ಅಸ್ಮಾಭಿಃ - ನಮ್ಮಿಂದಲೂ, ಸೈನ್ಯಾ....ಹ - ಸೇನಾಧಿಪತಿಗಳೊಡಗೂಡಿಯೂ, ಲಕ್ಷ್ಮಣಂ - ಲಕ್ಷ್ಮಣನನ್ನು, ಪ್ರೇಷಯ - ಕಳುಹು. ॥ ೧೭ ॥ ಏಷನರಶಾರ್ದೂಲಃ - ಈ ಪುರುಷವ್ಯಾಘ್ರನಾದ ಲಕ್ಷ್ಮಣನು, ತಂರಾವಣಿಂ - ಆ ಇಂದ್ರ

ಯಾಗವು ಶಾಸ್ತ್ರೋಕ್ತವಾಗಿ ಪೂರ್ಣವಾದುದೇ ಆದರೆ ರಾವಣಾಸುರನ ಕುಮಾರನಾದ ಆ ರಾಕ್ಷಸನನ್ನು ಗೆಲ್ಲುವುದು ಯಾರಿಗೂ ಸಾಧ್ಯವಾಗದೆ ಹೋಗುವುದು. ಆದುದರಿಂದಲೇ ಆತನು ತನ್ನ ಕಾರ್ಯವು ನಿರ್ವಿಘ್ನವಾಗಿ ನೆರವೇರಲೋಸುಗವೇ ನಮ್ಮೆಲ್ಲರನ್ನೂ ಮಾಯೆಯಿಂದ ಮೋಸಗೊಳಿಸಿದನು. ಆದುದರಿಂದೆಲೈ ರಾಘವನೇ! ಈಗ ಆ ರಾಕ್ಷಸರಾಜಕುಮಾರನೆಸಗುವ ಹೋಮಕ್ಕೆ ವಿಘ್ನವನ್ನುಂಟುಮಾಡಲು ಸಮಸ್ತ ವಾನರಸೇನೆಗಳೊಡನೆ ನಾವೆಲ್ಲರೂ ಹೊರಡುವುದಕ್ಕೆ ಅನುಮತಿಯನ್ನು ನೀಡುವವನಾಗು. ನಾವು ಆತನ ಹೋಮವನ್ನು ಕೆಡಿಸುತ್ತೇವೆ. ಎಲೈ ಮಾನವೋತ್ತಮನೇ! ಶ್ರೀರಾಮಾ! ನೀನು ಈಗ ಇಲ್ಲದ ಸಲ್ಲದ ವ್ಯಸನಗಳನ್ನೆಲ್ಲ ಆರೋಪಿಸಿಕೊಂಡು ಪರಿತಪಿಸಬೇಡ. ನೀನು ವ್ಯಸನಪಡುತ್ತಿದ್ದರೆ ಈ ವಾನರರೆಲ್ಲರೂ ಪರಿತಪಿಸುವರು. ಅದರಿಂದ ನಮಗೆ ಅನರ್ಥವುಂಟಾಗಬಹುದು. ಆದುದರಿಂದ ನೀನು ಈ ಮಿಥ್ಯಾವ್ಯಸನವನ್ನು ದೂರ ಮಾಡುವವನಾಗು. ನೀನು ಸಮಾಧಾನಚಿತ್ತನಾಗಬೇಕು. ಸಮಸ್ತ ವಾನರಸೇನೆಗಳನ್ನೂ ಹಿಂದಿಟ್ಟುಕೊಂಡು ಶುಭಲಕ್ಷಣನಾದ ನಮ್ಮ ಲಕ್ಷ್ಮಣಸ್ವಾಮಿಯು ಬಂದುದೇ ಆದರೆ ನಾವು ಎಲ್ಲ ಕಾರ್ಯಗಳನ್ನೂ ನಿರ್ವಿಘ್ನವಾಗಿ ಮಾಡುವೆವು. ಮಾನವೋತ್ತಮನಾದ ಈ ಲಕ್ಷ್ಮಣಸ್ವಾಮಿಯು ಮಹಾ ತೀಕ್ಷ್ಣವಾದ ತನ್ನ ಬಾಣಗಳಿಂದ

ತತ್ಕರ್ಮ ತತೋ ವಧ್ಯೋ ಭವಿಷ್ಯತಿ ॥ ೧೮ ॥ ತಸ್ಯೈತೇ ನಿಶಿತಾಸ್ತೀಕ್ಷ್ಣಾಃ ಪ್ರತಿ ಪತ್ರಾಂಗವಾಜಿನಃ । ಪತತ್ರಿಣ ಇವಾಸೌಮ್ಯಾಃ ಶರಾಃ ಪಾಸ್ಯಂತಿ ಶೋಣಿತಂ ॥೧೯॥ ತಂ ಸಂದಿಶ ಮಹಾಬಾಹೋ! ಲಕ್ಷ್ಮಣಂ ಶುಭಲಕ್ಷಣಂ । ರಾಕ್ಷಸಸ್ಯ ವಿನಾಶಾಯ ವಜ್ರಂ ವಜ್ರಧರೋ ಯಥಾ ॥೨೦॥ ಮನುಜವರ! ನಕಾಲವಿಪ್ರಕರ್ಷೋ ರಿಪುನಿಧನಂ ಪ್ರತಿ ಯತ್ ಕ್ಷಮೋಽದ್ಯ ಕರ್ತುಂ । ತ್ವಮತಿಸೃಜ ರಿಪೋರ್ವಧಾಯ ವಾಣೀಮಮ ರರಿಪೋರ್ಮಥನೇ ಯಥಾ ಮಹೇಂದ್ರಃ ॥ ೨೧ ॥

ಜಿತುವನ್ನು, ನಿಶಿತೈಃ-ಹದವಾದ, ಶರೈಃ-ಬಾಣಗಳಿಂದ, ತತ್ಕರ್ಮ-ಆ ನಿಕುಂಭಿಲಾಯಾಗರೂಪಕಾರ್ಯ ವನ್ನು, ತ್ಯಾಜಯಿಷ್ಯತಿ-ಬಿಡುಸುವನು, ತತಃ ಬಳಿಕ, (ಇಂದ್ರಜಿತುವು) ವಧ್ಯಃ-ವಧಾರ್ಹನು, ಭವಿಷ್ಯತಿ-ಆಗುವನು. ॥ ೧೮ ॥ ಪತ್ರಿ....ನಃ - ಹಕ್ಕಿಗಳ ರೆಕ್ಕೆಗಳೆಂಬ ಅವಯವಗಳಂತೆ ವೇಗವುಳ್ಳ, ತೀಕ್ಷ್ಣಾಃ-ಕ್ರೂರಗಳಾದ, ನಿಶಿತಾಃ - ಹದವುಳ್ಳ, ಏತೇಶರಾಃ - ಈ ಬಾಣಗಳು, ಅಸೌಮ್ಯಾಃ - ಕ್ರೂರಗಳಾದ, ಪತತ್ರಿಣಇವ - ಹಕ್ಕಿಗಳಂತೆ, ತಸ್ಯ - ಆ ಇಂದ್ರಜಿತುವಿನ, ಶೋಣಿತಂ - ರಕ್ತವನ್ನು, ಪಾಸ್ಯಂತಿ - ಕುಡಿಯುತ್ತವೆ. ॥ ೧೯ ॥ ಮಹಾಬಾಹೋ - ಮಹಾ ಭುಜನೇ, ಶುಭಲಕ್ಷಣಂ - ಒಳ್ಳೆಯ ಲಕ್ಷಣ ಗಳುಳ್ಳ, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು, ರಾಕ್ಷಸಸ್ಯ - ರಕ್ಕಸನ, ವಿನಾಶಾಯ - ನಾಶಕ್ಕೋ ಸ್ಕರ, ವಜ್ರಧರಃ - ದೇವೇಂದ್ರನು, ವಜ್ರಂಯಥಾ - ವಜ್ರಾಯುಧವನ್ನಂತೆ, ಸಂದಿಶ - ಆಜ್ಞಾಪಿಸು. ॥೨೦॥ ಮನುಜವರ - ಮನುಷ್ಯಶ್ರೇಷ್ಠನೇ, ಯತ್ - ಯಾವ ಕಾರಣದಿಂದ, ಅದ್ಯ - ಈಗ, ರಿಪು....ತಿ-ಶತ್ರುಸಂಹಾರವನ್ನು ಕುರಿತು, ಕಾಲ....ರ್ಷಃ - ಕಾಲವಿಲಂಬವು, ಕರ್ತುಂ - ಮಾಡುವದಕ್ಕೆ, ನಕ್ಷಮಃ - ಯೋಗ್ಯವಲ್ಲವೋ, ತತ್ - ಆ ಕಾರಣದಿಂದ, ಅಮರರಿಪೋಃ - ದೇವಶತ್ರುವಿನ, ಮಥನೇ-ಸಂಹಾರ ವಿಷಯದಲ್ಲಿ, ಮಹೇಂದ್ರೋಯಥಾ - ದೇವೇಂದ್ರನಂತೆ, ರಿಪೋಃ - ಶತ್ರುವಿನ, ವಧಾಯ-ಸಂಹಾರಕ್ಕಾಗಿ, ತ್ವಂ - ನೀನು, ವಾಣೀಂ - ಮಾತನ್ನು, ಅತಿಸೃಜ - ಆಜ್ಞಾಪಿಸು. ॥ ೨೧ ॥ ಸಮಾಪ್ತಕರ್ಮಾ - ಪೂರ್ತಿ ಮಾಡಲ್ಪಟ್ಟ ನಿಕುಂಭಿಲಾಯಾಗವುಳ್ಳ, ಸರಾಕ್ಷಸಾಧಿಪಃ - ಆ ರಾಕ್ಷಸಾಧಿ ಪತಿಯು, ಸಮರೇ - ಕಾಳಗದಲ್ಲಿ, ಸುರಾಸುರೈಃ - ದೇವರಾಕ್ಷಸರಿಂದಲೂ, ಅದೃಶ್ಯಃ - ನೋಡಲು

ಇಂದ್ರಜಿತುವನ್ನು ಸಂಹರಿಸಬಲ್ಲನು. ಈತನು ಆ ರಾಕ್ಷಸನನ್ನು ತನ್ನ ಬಾಣಗಳಿಂದ ಬಾಧಿಸಿದಲ್ಲಿ ಅವನು ತಾನು ಮಾಡುವ ಹೋಮವನ್ನು ಬಿಟ್ಟು ಯುದ್ಧಕ್ಕೆ ಬರುವನು. ಎಲೈ ರಘುನಾಥನೇ! ಮಹಾ ತೀಕ್ಷ್ಣಗಳಾದುವೂ, ಮಹಾ ವೇಗವತ್ತುಗಳಾದುವೂ, ರೆಕ್ಕೆ ಗಳುಳ್ಳವೂ ಆದ ಈ ಲಕ್ಷ್ಮಣನ ಬಾಣಗಳು ಆ ಇಂದ್ರಜಿತುವಿನ ರಕ್ತವನ್ನು ಪಾನಮಾಡ ಬಲ್ಲುವು. ಇದರಲ್ಲಿ ಸ್ವಲ್ಪವೂ ಸಂದೇಹವಿರುವುದಿಲ್ಲವು. ಆದುದರಿಂದೆಲೈ ಮಹಾ ಬಲನಾದ ಶ್ರೀರಾಮಚಂದ್ರನೇ! ಈಗ ನೀನು ಶುಭಲಕ್ಷಣಲಕ್ಷಿತನಾದ ಲಕ್ಷ್ಮಣನನ್ನು ಇಂದ್ರಜಿತುವಿನ ವಧೆಗಾಗಿ ಕಳುಹಿಸು. ರಾಮಾ! ವಜ್ರಧರನಾದ ದೇವೇಂದ್ರನು ರಾಕ್ಷಸರನ್ನೆಂತೋ ಅಂತು ಈ ಲಕ್ಷ್ಮಣನು ಇಂದ್ರಜಿತುವನ್ನು ನಾಶಗೊಳಿಸಬಲ್ಲನು. ಎಲೈ ಮಾನವೋತ್ತಮನೇ! ಶತ್ರುಗಳನ್ನು ನಾಶಗೊಳಿಸುವ ವಿಷಯದಲ್ಲಿ ಆಲಸ್ಯ ಮಾಡಬೇಡ. ಈಗ ಮಾಡಬೇಕಾದ ಕಾರ್ಯವನ್ನು ವಿಳಂಬವಿಲ್ಲದೆ ಮಾಡಬೇಕು. ಶತ್ರುನಾಶಕ್ಕಾಗಿ ದೇವೇಂದ್ರನಂತೆ ನೀನು ಆಜ್ಞೆ ಮಾಡುವವನಾಗು. ಇಂದ್ರಜಿತುವು ಮಾಡುತ್ತಿರುವ ನಿಕುಂಭಿಲಾ ಯಾಗವು ಪೂರ್ತಿ ಯಾದುದಾದರೆ ಅವನು ದೇವದಾನವರಿಗೂ ಅಜೇಯನಾಗುತ್ತಾನೆ. ಆತನನ್ನು ಜಯಿಸಲು

ಸಮಾಪ್ತಕರ್ಮಾಹಿ ಸರಾಕ್ಷಸಾಧಿಪೋ
ಭವತ್ಯದೃಶ್ಯಸ್ಸಮರೇ ಸುರಾಸುರೈಃ ।
ಯುಯುತ್ಸತಾ ತೇನ ಸಮಾಪ್ತಕರ್ಮಣಾ
ಭವೇತ್ಸುರಾಣಾಮಪಿ ಸಂಶಯೋ ಮಹಾ‌ನ್ ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರಶೀತಿತಮಸ್ಸರ್ಗಃ.

ಅಸಾಧ್ಯನು, ಭವತಿಹಿ - ಆಗುತ್ತಾನಷ್ಟೆ, ಸಮಾ....ಣಾ - ಪೂರ್ತಿ ಮಾಡಲಿಚ್ಛೆಯುಳ್ಳ, ತೇನ - ಆ ಇಂದ್ರಜಿತುವಿಂದ, ಸುರಾಣಾಮಪಿ - ದೇವತೆಗಳಿಗೂ, ಮಹಾ‌ನ್ - ದೊಡ್ಡದಾದ, ಸಂಶಯಃ - ಸಂಶಯವು, ಭವೇತ್ - ಆಗುವದು. ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರಶೀತಿತಮಸ್ಸರ್ಗಃ.

ಯಾರೂ ಸಮರ್ಥರಾಗಲಾರರು. ಅವನನ್ನು ಕಂಡು ದೇವತೆಗಳು ಮೊದಲ್ಗೊಂಡ ಎಲ್ಲರೂ ಭಯದಿಂದ ತತ್ತಳಿಸಿ ಹೋಗುತ್ತಾರೆ" ಎಂದನು. ॥ ೧–೨೨ ॥

ಇಂತಿದು ವಿಭೀಷಣಕೃತ ರಾಮ ಪ್ರೋತ್ಸಾಹನವೆಂಬ ಎಂಬತ್ತನಾಲ್ಕನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚಾಶೀತಿತಮಸ್ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ರಾಘವಃ ಶೋಕಕರ್ಶಿತಃ । ನೋಪಧಾರಯತೇ ವ್ಯಕ್ತಂ ಯದುಕ್ತಂ ತೇನ ರಕ್ಷಸಾ ॥ ೧ ॥ ತತೋ ಧೈರ್ಯಮವಷ್ಟಭ್ಯ ರಾಮಃ ಪರಪುರಂಜಯಃ । ವಿಭೀಷಣಮುಪಾಸೀನಮುವಾಚ ಕಪಿಸನ್ನಿಧೌ ॥ ೨॥ "ನೈರ್ಋತಾಧಿಪತೇರ್ವಾಕ್ಯಂ ಯದುಕ್ತಂ ತೇ ವಿಭೀಷಣ! । ಭೂಯಸ್ತಚ್ಛ್ರೋತುಮಿಚ್ಛಾಮಿ ಬ್ರೂಹಿ ಯತ್ತೇ ವಿವಕ್ಷಿತಂ" ॥ ೩ ॥ ರಾಘವಸ್ಯ ವಚಃ ಶ್ರುತ್ವಾ ವಾಕ್ಯಂ ವಾಕ್ಯವಿಶಾರದಃ । ಯತ್ತತ್ಪುನರಿದಂ ವಾಕ್ಯಂ ಬಭಾಷೇ ಸ ವಿಭೀಷಣಃ ॥ ೪ ॥ "ಯಥಾ

ಶೋಕಕರ್ಶಿತಃ - ಶೋಕಾಕ್ರಾಂತನಾದ, ರಾಘವಃ - ಶ್ರೀರಾಮನು, ತಸ್ಯ - ಆ ವಿಭೀಷಣನ, ತದ್ವಚನಂ - ಆ ಮಾತನ್ನು, ಶೃತ್ವಾ - ಕೇಳಿ, ತೇನರಕ್ಷಸಾ - ಆ ವಿಭೀಷಣನಿಂದ, ಯತ್ - ಯಾವುದು, ಉಕ್ತಂ - ಹೇಳಲ್ಪಟ್ಟಿತೋ, ತತ್ - ಅದನ್ನು, ವ್ಯಕ್ತಂ - ಸ್ಪಷ್ಟವಾಗಿ, ನೋಪಧಾರಯತೇ - ಮನಸ್ಸಿಗೆ ತಂದುಕೊಳ್ಳಲಿಲ್ಲವು. ॥ ೧ ॥ ತತಃ - ಬಳಿಕ, ಪರ....ಯಃ - ಶತ್ರುಪುರಗಳನ್ನು ಜಯಿಸುವ, ರಾಮಃ - ಶ್ರೀರಾಮನು, ಧೈರ್ಯಂ - ಧೀರತೆಯನ್ನು, ಅವಷ್ಟಭ್ಯ - ಹೊಂದಿ, ಉಪಾಸೀನಂ - ಸಮೀಪವರ್ತಿಯಾದ, ವಿಭೀಷಣಂ - ವಿಭೀಷಣನನ್ನು ಕುರಿತು, ಕಪಿಸನ್ನಿಧೌ - ವಾನರಸೇನೆಯ ಸಮೀಪದಲ್ಲಿ, ಉವಾಚ - ಹೇಳಿದನು. ॥ ೨ ॥ ನೈರ್ಋ....ತೇ - ರಾಕ್ಷಸರಿಗೆ ಅಧಿಪತಿಯೇ, ವಿಭೀಷಣ - ವಿಭೀಷಣನೇ, ತೇ - ನಿನ್ನಿಂದ, ಯದ್ವಾಕ್ಯಂ - ಯಾವ ಮಾತು, ಉಕ್ತಂ - ಹೇಳಲ್ಪಟ್ಟಿತೋ, ತದ್ವಾಕ್ಯಂ - ಆ ಮಾತನ್ನು, ಭೂಯಃ - ಮತ್ತೂ, ಶ್ರೋತುಂ - ಕೇಳುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥೩॥ ತೇ - ನಿನ್ನ, ವಿವಕ್ಷಿತಂ - ಅಭಿಪ್ರಾಯವು, ಯತ್ - ಯಾವುದೋ, ತತ್ - ಅದನ್ನು, ಬ್ರೂಹಿ - ಹೇಳು, ವಾಕ್ಯ....ದಃ - ಮಾತುಗಾರರಲ್ಲಿ ಸಮರ್ಥನಾದ, ಸವಿಭೀಷಣಃ - ವಿಭೀಷಣನು, ರಾಘವಸ್ಯ - ಶ್ರೀರಾಮನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಯದ್ವಾಕ್ಯಂ - ಯಾವ ಮಾತನ್ನು, ಪೂರ್ವಂ - ಪೂರ್ವದಲ್ಲಿ, ಉಕ್ತವಾ - ಹೇಳಿದ್ದನೋ, ತದಿದಂ ವಾಕ್ಯಂ - ಆ ಈ ಮಾತನ್ನು, ಪುನಃ - ಮತ್ತೂ, ಬಭಾಷೇ - ಹೇಳಿದನು. ॥ ೪ ॥ ಮಹಾಬಾಹೋ - ಮಹಾ ಭುಜಬಲಶಾಲಿಯೇ, ವೀರ - ಶೂರನೇ, ತ್ವಯಾ - ನಿನ್ನಿಂದ, ಗುಲ್ಮ....ನಂ - ಸೇನಾನಿವೇಶ

ವಿಭೀಷಣನು ಈ ಪ್ರಕಾರವಾಗಿ ಹೇಳುತ್ತಿದ್ದರೂ ಶ್ರೀರಾಮಮೂರ್ತಿಯು ಕೇವಲ ದುಃಖಾಕ್ರಾಂತನಾಗಿದ್ದುದರಿಂದ ಆ ಮಾತುಗಳನ್ನು ಸರಿಯಾಗಿ ಮನಸ್ಸಿಗೆ ತಂದುಕೊಳ್ಳದೆ ಮತ್ತೊಮ್ಮೆ ಕೇಳಬಯಸಿದನು. ಸ್ವಲ್ಪ ಹೊತ್ತಾದ ತರುವಾಯ ಶತ್ರುತಾಪನನಾದ ಆತನು ಧೈರ್ಯವನ್ನವಲಂಬಿಸಿ ವಾನರರ ನಡುವೆ ಕುಳಿತಿದ್ದ ವಿಭೀಷಣನನ್ನುಕುರಿತು, "ಎಲೈ ರಾಕ್ಷಸ ಪ್ರಭುವಾದ ವಿಭೀಷಣನೇ! ನಾನು ನಿನ್ನಮಾತುಗಳನ್ನು ಚೆನ್ನಾಗಿ ಕೇಳಲಿಲ್ಲವು. ಆದುದರಿಂದ ಇನ್ನೊಮ್ಮೆ ಕೇಳಬೇಕೆಂಬ ಕೋರಿಕೆ. ಹೇಳು" ಎಂದನು. ಆಗ ಮಾತನಾಡುವುದರಲ್ಲಿ ಬಹಳ ಬುದ್ಧಿವಂತನಾದ ವಿಭೀಷಣನು ತಾನು ಮೊದಲಾಡಿದ ಮಾತುಗಳನ್ನೇ ಮತ್ತಷ್ಟು ಸ್ಪಷ್ಟವಾಗಿ ಹೇಳುವವನಾಗಿ, "ಎಲೈ ಮಹಾ ಭುಜನೇ! ನೀನು ಅಜ್ಞಾಪಿಸಿದಂತೆ, ಕೂಡಲೇ

ಜ್ಞಪ್ತಂ ಮಹಾಬಾಹೋ! ತ್ವಯಾ ಗುಲ್ಮನಿವೇಶನಂ । ತತ್ತಥಾನುಷ್ಠಿತಂ ವೀರ! ತ್ವದ್ವಾಕ್ಯಸಮನಂತರಂ ॥ ೫ ॥ ತಾನ್ಯನೀಕಾನಿ ಸರ್ವಾಣಿ ವಿಭಕ್ತಾನಿ ಸಮಂತತಃ । ವಿನ್ಯಸ್ತಾ ಯೂಥಪಾಶ್ಚೈವ ಯಥಾನ್ಯಾಯಂ ವಿಭಾಗಶಃ । ಭೂಯಸ್ತು ಮಮ ವಿಜ್ಞಾಪ್ಯಂ ತಚ್ಛೃಣುಷ್ವ ಮಹಾಯಶಃ ॥ ೬ ॥ ತ್ವಯ್ಯಕಾರಣಸಂತಪ್ತೇ ಸಂತಪ್ತ ಹೃದಯಾ ವಯಂ । ತ್ಯಜ ರಾಜನ್ನಿಮಂ ಶೋಕಂ ಮಿಥ್ಯಾಸಂತಾಪಮಾಗತಂ ॥ ೭ ॥ ತದಿಯಂ ತ್ಯಜ್ಯತಾಂ ಚಿಂತಾ ಶತ್ರುಹರ್ಷವಿವರ್ಧನೀ । ಉದ್ಯಮಃ ಕ್ರಿಯತಾಂ ವೀರ! ಹರ್ಷಸ್ಸಮುಪಸೇವ್ಯತಾಂ ॥ ೮ ॥ ಪ್ರಾಪ್ತವ್ಯಾ ಯದಿ ತೇ ಸೀತಾ ಹಂತವ್ಯಾಶ್ಚ ನಿಶಾಚರಾಃ । ರಘುನಂದನ! ವಕ್ಷ್ಯಾಮಿ ಶ್ರೂಯತಾಂ ಮೇ ಹಿತಂ ವಚಃ ॥ ೯ ॥

ನವು, ಯಥಾ - ಹೇಗೆ, ಆಜ್ಞಪ್ತಂ - ಆಜ್ಞಾಪಿಸಲ್ಪಟ್ಟಿತೋ, ತ್ವದ್ವಾ....ರಂ - ನಿನ್ನ ಮಾತು ಹೊರಟ ಬಳಿಕ, ತತ್ - ಆ ಸೇನಾನಿವೇಶನವು, ತಥಾ - ಹಾಗೆಯೇ, ಅನುಷ್ಠಿತಂ - ಮಾಡಲ್ಪಟ್ಟಿತು. ॥ ೫ ॥ ಸರ್ವಾಣಿ - ಸಮಸ್ತಗಳಾದ, ತಾನ್ಯನೀಕಾನಿ - ಆ ಸೇನೆಗಳನ್ನು, ಸಮಂತತಃ - ಎಲ್ಲ ಕಡೆಯಲ್ಲಿಯೂ, ವಿಭಕ್ತಾನಿ - ವಿಭಾಗ ಮಾಡಲ್ಪಟ್ಟವು, ಯೂಥಪಾಶ್ಚೈವ - ಯೂಥಪತಿಗಳೂ, ಯಥಾನ್ಯಾಯಂ - ನ್ಯಾಯಪ್ರಕಾರವಾಗಿ, ವಿನ್ಯಸ್ತಾಃ - ಇರಿಸಲ್ಪಟ್ಟರು, ಮಹಾಯಶಃ - ಮಹಾ ಯಶನೇ, ಭೂಯಃ - ಮತ್ತೂ, ಮಮ - ನನ್ನ, ತದ್ವಿಜ್ಞಾಪ್ಯಂ - ಆ ವಿಜ್ಞಾಪನೀಯ ವಚನವನ್ನು, ಶೃಣುಷ್ವ - ಕೇಳು. ॥ ೬ ॥ ತ್ವಯಿ - ನೀನು, ಅಕಾರಣಸಂತಪ್ತೇ - ನಿಷ್ಕಾರಣವಾಗಿ ಸಂಕಟಗೊಂಡರೆ, ವಯಂ - ನಾವು, ಸಂತಪ್ತಹೃದಯಾಃ - ಸಂತಾಪಗೊಂಡ ಮನಸ್ಸುಗಳುಳ್ಳವರಾಗುತ್ತೇವೆ, ರಾಜನ್ - ಅರಸೇ, ಆಗತಂ - ಪ್ರಾಪ್ತವಾದ, ಮಿಥ್ಯಾಸಂತಾಪಂ - ಈ ಸುಳ್ಳು ಸಂಕಟವನ್ನು, ಇಮಂಮಿಥ್ಯಾಶೋಕಂ - ಈ ಸುಳ್ಳು ವ್ಯಸನವನ್ನೂ, ತ್ಯಜ - ಬಿಡು. ॥ ೭ ॥ ತತ್ - ಆ ಕಾರಣದಿಂದ, ಶತ್ರು....ನೀ - ಶತ್ರುಗಳಿಗೆ ಸಂತೋಷವನ್ನು ಹೆಚ್ಚಿಸುತ್ತಿರುವ, ಇಯಂಚಿಂತಾ - ಈ ಆಲೋಚನೆಯು, ತ್ಯಜ್ಯತಾಂ - ಬಿಡಲ್ಪಡಲಿ, ವೀರ - ಶೂರನೇ, ಉದ್ಯಮಃ - ಪ್ರಯತ್ನವು, ಕ್ರಿಯತಾಂ - ಮಾಡಲ್ಪಡಲಿ, ಹರ್ಷಃ - ಸಂತೋಷವು, ಸಮುಪಸೇವ್ಯತಾಂ - ಸೇವಿಸಲ್ಪಡಲಿ. ॥ ೮ ॥ ಸೀತಾ - ಸೀತಾದೇವಿಯು, ತೇ - ನಿನ್ನಿಂದ, ಪ್ರಾಪ್ತವ್ಯಾಯದಿ-ಹೊಂದತಕ್ಕವಳೇ ಆದರೆ, ನಿಶಾಚರಾಃ-ರಕ್ಕಸರು, ಹಂತವ್ಯಾಶ್ಚಯದಿ-ಹೊಡೆಯತಕ್ಕವರೇ ಆದರೆ, ರಘುನಂದನ - ರಘುಕುಲಾನಂದಕರನೇ, ಮೇ - ನನ್ನ, ಹಿತಂ -

---

ಸೇನೆಗಳನ್ನೆಲ್ಲ ಅವವುಗಳ ಸ್ಥಾನಗಳಲ್ಲಿ ನಿಲ್ಲಿಸಿದುದಾಯಿತು. ಸೇನೆಗಳನ್ನೆಲ್ಲ ವಿಭಾಗಿಸಿ ಉಚಿತವರಿತು ಯೂಥಪತಿಗಳೆಲ್ಲರನ್ನು ಅವರವರ ಕಾರ್ಯಗಳಲ್ಲಿ ತೊಡಗಿಸಿದುದೂ ಆಯಿತು. ॥ ೧–೬ ॥ ಎಲೈ ಮಹಾಯಶನೇ! ಈಗ ನಾನು ವಿಜ್ಞಾಪಿಸುವುದನ್ನು ಸಾವಧಾನದಿಂದ ಲಾಲಿಸುವವನಾಗು. ನೀನು ಈ ರೀತಿ ಕಾರಣವಿಲ್ಲದೆಯೇ ವ್ಯಸನಪಡುತ್ತಿದ್ದರೆ ನಾವೆಲ್ಲರೂ ಪರಮ ದುಃಖಿತರಾಗುವೆವು. ಆದುದರಿಂದ ಕಾರಣವಿಲ್ಲಸೆಯೇ ಉಂಟಾಗಿರುವ ಈ ಸುಳ್ಳು ದುಃಖವನ್ನೂ, ಸಂತಾಪವನ್ನೂ ತೊರೆಯುವವನಾಗು. ನೀನು ಹೀಗೆ ದುಃಖಿಸುತ್ತಿದ್ದರೆ ಶತ್ರುಗಳಿಗೆ ಹರ್ಷವಾಗುವುದಿಲ್ಲವೆ? ಬೇಡ. ದುಃಖಿಸಬೇಡ. ಈ ಮಿಥ್ಯಾಸಂತಾಪವನ್ನು ಸಂಪೂರ್ಣವಾಗಿ ತೊರೆಯುವವನಾಗು. ರಣೋದ್ಯಮವನ್ನು ಕೈಕೊಳ್ಳು; ಉತ್ಸಾಹವನ್ನು ವರ್ಧಿಸುವ ಹರ್ಷವನ್ನು ಸೇವಿಸು. ಎಲೈ ರಾಮಮೂರ್ತಿಯೇ ನೀನು ಸೀತಾದೇವಿಯನ್ನು ಪಡೆಯಬೇಕಾದರೆ, ಈ ರಾಕ್ಷಸರೆಲ್ಲರನ್ನು ನಾಶಗೊಳಿಸಬೇಕಾದರೆ ಈಗ ನನ್ನ ಮಾತುಗಳನ್ನು

ಸಾಧ್ವಯಂ ಯಾತು ಸೌಮಿತ್ರಿರ್ಬಲೇನ ಮಹತಾವೃತಃ । ನಿಕುಂಭಿಲಾಯಾಂ ಸಂಪ್ರಾಪ್ಯ ಹಂತುಂ ರಾವಣಿಮಾಹವೇ ॥ ೧೦ ॥ ಧನುರ್ಮಂಡಲನಿರ್ಮುಕ್ತೈ ರಾಶೀವಿಷವಿಷೋಪಮೈಃ । ಶರೈರ್ಹಂತುಂ ಮಹೇಷ್ವಾಸೋ ರಾವಣಿಂ ಸಮಿತಿಂಜಯಃ ॥ ೧೧ ॥ ತೇನ ವೀರೇಣ ತಪಸಾ ವರದಾನಾತ್ಸ್ವಯಂಭುವಃ । ಅಸ್ತ್ರಂ ಬ್ರಹ್ಮಶಿರಃ ಪ್ರಾಪ್ತಂ ಕಾಮಗಾಶ್ಚ ತುರಂಗಮಾಃ ॥ ೧೨ ॥ ಸ ಏಷ ಸಹಸೈನ್ಯೇನ ಪ್ರಾಪ್ತಃ ಕಿಲ ನಿಕುಂಭಿಲಾಂ । ಯದ್ಯುತ್ತಿಷ್ಠೇತ್ಕೃತಂ ಕರ್ಮ ಹತಾನ್ ಸರ್ವಾಂಶ್ಚ ವಿದ್ಧಿ ನಃ ॥೧೩॥

ಮುಂದೆ ಶ್ರೇಯಸ್ಕರವಾದ, ವಚಃ - ಮಾತನ್ನು, ವಕ್ಷ್ಯಾಮಿ - ಹೇಳುವೆನು, ಶ್ರೂಯತಾಂ - ಕೇಳಲ್ಪಡಲಿ. ॥ ೯ ॥ ಅಯಂಸೌಮಿತ್ರಿಃ - ಈ ಲಕ್ಷ್ಮಣನು, ಮಹತಾ - ಬಹಳವಾದ, ಬಲೇನ - ಸೇನೆಯಿಂದ, ವೃತಃ - ಪರಿವೃತನಾಗಿ, ಸಾಧು - ಚನ್ನಾಗಿ, ಆಹವೇ - ಕಾಳೆಗದಲ್ಲಿ, ರಾವಣಿಂ - ಮೇಘನಾದನನ್ನು, ನಿಕುಂಭಿಲಾಯಾಂ - ನಿಕುಂಭಿಲಾ ದೇವಾಲಯದಲ್ಲಿ, ಸಂಪ್ರಾಪ್ಯ - ಹೊಂದಿ, ಹಂತುಂ- ಹೊಡೆಯುವದಕ್ಕೆ, ಯಾತು - ಹೊರಡಲಿ. ॥ ೧೦ ॥ ಧನು....ಕ್ತೈಃ - ಮಂಡಲಾಕಾರವಾದ ಧನುಸ್ಸಿನಿಂದ ಬಿಡಲ್ಪಟ್ಟ, ಆಶೀ....ಮೈಃ - ಸರ್ಪಗಳ ವಿಷಕ್ಕೆ ಸಮಾನಗಳಾದ, ಶರೈಃ - ಬಾಣಗಳಿಂದ, ರಾವಣಿಂ - ಮೇಘನಾದನನ್ನು, ಹಂತುಂ - ಹೊಡೆಯುವದಕ್ಕೆ, ಮಹೇಷ್ವಾಸಃ - ದೊಡ್ಡ ಧನುಸ್ಸುಳ್ಳ, ಸಮಿತಿಂಜಯಃ - ಕಾಳೆಗದಲ್ಲಿ ಜಯಶೀಲನಾದ ಲಕ್ಷ್ಮಣನು, ಯಾತು - ಹೋಗಲಿ. ॥ ೧೧ ॥ ತೇನವೀರೇಣ - ಆ ಶೂರನಾದ ಮೇಘನಾದನಿಂದ, ತಪಸಾ - ತಪಸ್ಸಿನಿಂದ, ಸ್ವಯಂಭುವಃ - ಬ್ರಹ್ಮನ, ವರದಾನಾತ್ - ವರದಾನದಿಂದ, ಬ್ರಹ್ಮಶಿರಃ - ಬ್ರಹ್ಮಶಿರೋನಾಮಕವಾದ, ಅಸ್ತ್ರಂ - ಬ್ರಹ್ಮಾಸ್ತ್ರವು, ಪ್ರಾಪ್ತಂ - ಹೊಂದಲ್ಪಟ್ಟಿತು, ಕಾಮಗಾಃ - ಸ್ವೇಚ್ಛಾಗಾಮಿಗಳಾದ, ತುರಂಗಮಾಶ್ಚ- ಕುದುರೆಗಳೂ ರಥವೂ, ಪ್ರಾಪ್ತಾಃ - ಹೊಂದಲ್ಪಟ್ಟವು. ॥ ೧೨ ॥ ಸಏಷಃ - ಆ ಈ ಇಂದ್ರಜಿತುವು, ಸೈನ್ಯೇನಸಹ - ಸೇನೆಯೊಡಗೂಡಿ, ನಿಕುಂಭಿಲಾಂ - ನಿಕುಂಭಿಲಾ ಎಂಬ ದೇವತಾಯತನವನ್ನು, ಪ್ರಾಪ್ತಃ - ಹೊಂದಿದನು, ಕರ್ಮ - ನಿಕುಂಭಿಲಾಯಾಗರೂಪವಾದ ಕೃತ್ಯವು, ಕೃತಂಯದಿ - ಮಾಡಲ್ಪಟ್ಟದ್ದೇ ಆದರೆ, ಉತ್ತಿಷ್ಠೇದ್ಯದಿ - ಅವನು ಎದ್ದವನೇ ಆದರೆ, ಸರ್ವಾನ್ - ಸಮಸ್ತರಾದ, ನಃ - ನಮ್ಮನ್ನು, ಹತಾನ್ - ಹತರನ್ನಾಗಿ, ವಿದ್ಧಿ - ತಿಳಿದುಕೋ ॥ ೧೩ ॥ ನಿಕುಂಭಿಲಾಂ - ನಿಕುಂಭಿಲಾ ಎಂಬ ಹೆಸರುಳ್ಳ ವಟವೃಕ್ಷದ ಮೂಲಸ್ಥಾನವನ್ನು, ಅಸಂಪ್ರಾಪ್ತಂ - ಹೊಂದದಿರುವ, ಅಹುತಾಗ್ನಿಂ-

---

ಲಾಲಿಸು. ಈಗಲೇ ಲಕ್ಷ್ಮಣಸ್ವಾಮಿಯು ಸೇನಾಸಮೇತನಾಗಿ ಇಂದ್ರಜಿತುವನ್ನು ವಧಿಸಲು ನಿಕುಂಭಿಲಾ ಯಾಗವು ನಡೆಯುತ್ತಿರುವ ಪ್ರದೇಶಕ್ಕೆ ಹೊರಡಲಿ. ॥ ೭–೧೦ ॥ ಈ ಲಕ್ಷ್ಮಣನ ಧನುರ್ಮಂಡಲದಿಂದ ಹೊರಟ ಮಹಾಕಾಳ ಸರ್ಪಗಳಿಗೆ ಸಮಾನವಾದ ಬಾಣಗಳು ಇಂದ್ರಜಿತುವನ್ನು ವಧಿಸುವವು. ಶ್ರೀರಾಮಾ! ಇಂದ್ರಜಿತುವು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಬ್ರಹ್ಮಶಿರವೆಂಬ ಮಹಾಸ್ತ್ರವನ್ನೂ, ಕಾಮಸಂಚಾರಿಗಳಾದ ಅಶ್ವಗಳನ್ನೂ ವರವಾಗಿ ಪಡೆದಿರುವನು. ಈಗಲಾತನು ಹೋಮವಿಧಿಯನ್ನಾಚರಿಸಲು ನಿಕುಂಭಿಲಾ ಎಂಬ ಪ್ರದೇಶಕ್ಕೆ ಸೈನ್ಯಸಮೇತನಾಗಿ ಹೋಗಿರುವನು. ಅವನು ಆ ಹೋಮವನ್ನು ಪೂರ್ಣಗೊಳಿಸಿದುದೇ ಆದರೆ ನಾವೆಲ್ಲರೂ ಸತ್ತಂತೆಯೇ. ಅವನು ನಮ್ಮೆಲ್ಲರನ್ನೂ ನಿಸ್ಸಂಶಯವಾಗಿಯೂ ಕೊಲ್ಲುವನು. ಅದುದರಿಂದಲೈ ರಾಮಚಂದ್ರನೇ! ದೇವೇಂದ್ರಶತ್ರುವಾದ ಆ ಇಂದ್ರಜಿತುತುವು ನಿಕುಂಭಿಲೆಯನ್ನು ತೊರೆಯುವಂತೆಯೂ, ಹೋಮವನ್ನು ತ್ಯಜಿಸು

ನಿಕುಂಭಿಲಾಮಸಂಪ್ರಾಪ್ತಮಹುತಾಗ್ನಿಂಚ ಯೋ ರಿಪುಃ । ತ್ವಾಮಾತತಾಯಿನಂ ಹನ್ಯಾದಿಂದ್ರಶತ್ರೋಸ್ಸತೇ ವಧಃ ॥೧೪॥ ವರೋ ದತ್ತೋ ಮಹಾಬಾಹೋ! ಸರ್ವಲೋಕೇಶ್ವರೇಣ ವೈ । ಇತ್ಯೇವಂ ವಿಹಿತೋ ರಾಜನ್ವಧಸ್ತಸ್ಯೈಷ ಧೀಮತಃ ॥೧೫॥ ವಧಾಯೇಂದ್ರಜಿತೋ ರಾಮ! ಸಂದಿಶಸ್ವ ಮಹಾಬಲ । ಹತೇ ತಸ್ಮಿನ್ ಹತಂ ವಿದ್ಧಿ ರಾವಣಂ ಸಸುಹೃಜ್ಜನಂ" ॥೧೬॥ ವಿಭೀಷಣವಚಃ ಶ್ರುತ್ವಾ ರಾಘವೋ ವಾಕ್ಯಮಬ್ರವೀತ್ । "ಜಾನಾಮಿ ತಸ್ಯ ರೌದ್ರಸ್ಯ ಮಾಯಾಂ ಸತ್ಯಪರಾಕ್ರಮ! ॥೧೭॥ ಸಹಿ ಬ್ರಹ್ಮಾಸ್ತ್ರವಿತ್ಪ್ರಾಜ್ಞೋ ಮಹಾಮಾಯೋ ಮಹಾಬಲಃ । ಕರೋತ್ಯಸಂಜ್ಞಾನ್

ಹೋಮ ಮಾಡಲ್ಪಡದಿರುವ ಅಗ್ನಿಯುಳ್ಳ, ಆತತಾಯಿನಂ - ವಧೋದ್ಯುಕ್ತನಾದ, ತ್ವಾಂ - ನಿನ್ನನ್ನು, ಯಃರಿಪುಃ - ಯಾವ ಶತ್ರುವು, ಹನ್ಯಾತ್ - ಹೊಡೆಯುವನೋ, ಇಂದ್ರಶತ್ರೋಃ - ದೇವೇಂದ್ರನಿಗೆ ಶತ್ರುವಾದ, ತೇ - ನಿನಗೆ, ಸಃ - ಆ ಶತ್ರುವೇ, ವಧಃ - ಮಾರಕನು, ಮಹಾಬಾಹೋ - ಮಹಾ ಭುಜ ಬಲಶಾಲಿಯೇ, ಇತಿ - ಇಂತೆಂದು, ಸರ್ವ....ಣ - ಸಮಸ್ತ ಲೋಕಗಳಿಗೂ ಸೃಷ್ಟಿಕರ್ತನಾದ ಬ್ರಹ್ಮನಿಂದ, ವರಃ - ವರವು, ದತ್ತೋವೈ - ಕೊಡಲ್ಪಟ್ಟಿತು. ॥ ೧೪ ೧೫ ॥ ರಾಜನ್ - ಅರಸೇ, ಇತ್ಯೇವಂ - ಈ ಪರಿಯಾಗಿ, ತಸ್ಯ - ಆ ಇಂದ್ರಜಿತುವಿಗೆ, ವಧಃ - ಸಂಹಾರವು, ವಿಹಿತಃ - ಆಜ್ಞಾಪಿಸಲ್ಪಟ್ಟಿದೆ, ಮಹಾಬಲ-ಮಹಾ ಬಲಶಾಲಿಯೇ, ರಾಮ-ಶ್ರೀರಾಮನೇ, ಇಂದ್ರಜಿತಃ-ಇಂದ್ರಜಿತುವಿನ, ವಧಾಯ-ಸಂಹಾರಕ್ಕೆ, ಸಂದಿಶಸ್ವ - ಆಜ್ಞಾಪಿಸು, ತಸ್ಮಿನ್ - ಅವನು, ಹತೇ - ಸಂಹೃತನಾಗಲು, ಸಸುಹೃಜ್ಜನಂ - ಸ್ನೇಹಿತನೊಡಗೂಡಿದ, ರಾವಣಂ - ರಾವಣನನ್ನು, ಹತಂ - ಸಂಹೃತನನ್ನಾಗಿ, ವಿದ್ಧಿ - ತಿಳಿದುಕೋ. ॥ ೧೬ ॥ ರಾಘವಃ - ಶ್ರೀರಾಮನು, ವಿಭೀ....ಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು, ಸತ್ಯಪರಾಕ್ರಮ - ಸತ್ಯದಿಂದಲೇ ಶತ್ರುಗಳನ್ನು ಸಂಹಾರಮಾಡುವನೇ, ರೌದ್ರಸ್ಯ - ಕ್ರೂರನಾದ, ತಸ್ಯ - ಆ ಇಂದ್ರಜಿತುವಿನ, ಮಾಯಾಂ - ಮಾಯೆಯನ್ನು, ಜಾನಾಮಿ - ತಿಳಿದಿದ್ದೇನೆ, ಮಹಾಬಲಃ - ಬಹಳ ಬಲಶಾಲಿಯಾದ, ಸಃ - ಆ ಇಂದ್ರಜಿತುವು, ಬ್ರಹ್ಮಾಸ್ತ್ರವಿತ್ - ಬ್ರಹ್ಮಾಸ್ತ್ರವನ್ನು ತಿಳಿದಿರುವನು, ಪ್ರಾಜ್ಞಃ - ಧನುರ್ವಿದ್ಯೆಯಲ್ಲಿ ಪಂಡಿತನು, ಮಹಾಮಾಯಃ - ಮಹಾಮಾಯೆಗಳುಳ್ಳವನು, ಸಂಗ್ರಾಮೇ - ಕಾಳೆಗದಲ್ಲಿ, ಸವರುಣಾನಪಿ - ವರುಣನೊಡಗೂಡಿದ, ದೇವಾನ್ - ದೇವತೆಗಳನ್ನು, ಅಸಂಜ್ಞಾನ್ - ಪ್ರಜ್ಞೆಯಿಲ್ಲದವ

ವಂತೆಯೂ ಮಾಡಿದರೆ ಅವನು ವಧ್ಯನಾಗುವನಾಗಲಿ ಮತ್ತಾವ ವಿಧದಿಂದಲೂ ಅವನನ್ನು ವಧಿಸಲು ಸಾಧ್ಯವಾಗುವುದಿಲ್ಲವು. ಅವನು ಬ್ರಹ್ಮನಿಂದಲೂ ಹೀಗೆಯೇ ವರವನ್ನು ಪಡೆದಿರುವನು. ಆದುದರಿಂದ ಶತ್ರುವಾದ ಅವನನ್ನೀಗ ವಧಿಸುವುದು ಕರ್ತವ್ಯವಲ್ಲವೆ? ರಾಮಾ! ಇಂದ್ರಜಿತುವನ್ನು ವಧಿಸಲು ಅಪ್ಪಣೆ ಮಾಡು. ಆತನು ಮಡಿದರೆ ಮಿತ್ರಸಮೇತನಾದ ರಾವಣನೂ ಮಡಿದಂತೆಯೇ ಎಂದು ತಿಳಿ" ಎಂದು ಹೇಳಿದನು. ॥ ೧೧–೧೬ ॥ ವಿಭೀಷಣನ ಮಾತುಗಳನ್ನು ಕೇಳಿದ ತರುವಾಯ ರಘುಕುಲೋದ್ಭವನಾದ ಶ್ರೀರಾಮನು ಆತನನ್ನು ಕುರಿತು, "ಎಲೈ ಸತ್ಯಪರಾಕ್ರಮಿಯಾದ ವಿಭೀಷಣನೇ! ಭಯಂಕರನಾದ ಆ ಇಂದ್ರಜಿತುವಿನ ಮಾಯೆಯನ್ನು ನಾನು ಬಲ್ಲೆನು. ಮಹಾ ಮಾಯಾವಿಯೂ ಮಹಾ ಬಲಾಢ್ಯನೂ, ರಣಪಂಡಿತನೂ ಆದ ಆ ರಾಕ್ಷಸನು ಬ್ರಹ್ಮಾಸ್ತ್ರವನ್ನು ತಿಳಿದವನಾಗಿರುವನೆಂಬುದನ್ನೂ ನಾನರಿತಿರುವೆನು. ಆತನು ರಣರಂಗದಲ್ಲಿ ನಿಂತು ವರುಣನಾದಿಯಾಗಿ ಸಮಸ್ತ

ಸಂಗ್ರಾಮೇ ದೇವಾನ್ ಸವರುಣಾನಪಿ ॥ ೧೮ ॥ ತಸ್ಯಾಂತರಿಕ್ಷೇ ಚರತಸ್ಸರಥಸ್ಯ ಮಹಾಯಶಃ । ನಗತಿರ್ಜ್ಞಾಯತೇ ವೀರ! ಸೂರ್ಯಸ್ಯೇವಾಽಭ್ರಸಂಪ್ಲವೇ” ॥ ೧೯ ॥ ರಾಘವಸ್ತು ರಿಪೋರ್ಜ್ಞಾತ್ವಾ ಮಾಯಾವೀರ್ಯಂ ದುರಾತ್ಮನಃ । ಲಕ್ಷ್ಮಣಂ ಕೀರ್ತಿಸಂಪನ್ನಮಿದಂ ವಚನಮಬ್ರವೀತ್ ॥ ೨೦ ॥ “ಯದ್ವಾನರೇಂದ್ರಸ್ಯ ಬಲಂ ತೇನ ಸರ್ವೇಣ ಸಂವೃತಃ । ಹನೂಮತ್ಪ್ರಮುಖೈಶ್ಚೈವ ಯೂಥಪೈಸ್ಸಹ ಲಕ್ಷ್ಮಣ! ॥೨೧॥ ಜಾಂಬವೇನರ್‍ಕ್ಷಪತಿನಾ ಸಹಸೈನ್ಯೇನ ಸಂವೃತಃ । ಜಹಿ ತಂ ರಾಕ್ಷಸಸುತಂ ಮಾಯಾಬಲವಿಶಾರದಂ ॥ ೨೨ ॥ ಅಯಂ ತ್ವಾಂ ಸಚಿವೈಸ್ಸಾರ್ಧಂ ಮಹಾತ್ಮಾ ರಜನೀಚರಃ । ಅಭಿಜ್ಞಸ್ತಸ್ಯ ದೇಶಸ್ಯ ಪೃಷ್ಠತೋಽನುಗಮಿಷ್ಯತಿ” ॥೨೩॥ ರಾಘವಸ್ಯ

ರನ್ನಾಗಿ, ಕರೋತಿ - ಮಾಡುವನು. ॥ ೧೭-೧೮ ॥ ಮಹಾಯಶಃ - ಬಹಳ ಯಶೋವಂತನೇ, ಅಂತರಿಕ್ಷೇ - ಅಂತರಿಕ್ಷದಲ್ಲಿ, ಚರತಃ - ಸಂಚರಿಸುತ್ತಿರುವ, ತಸ್ಯ - ಆ ಇಂದ್ರಜಿತುವು, ರಥಸ್ಥಸ್ಯ - ತೇರಿನಲ್ಲಿ ಕುಳಿತಿರಲು, ಅಭ್ರಸಂಪ್ಲವೇ - ಮೇಘಾವರಣಕಾಲದಲ್ಲಿ, ಸೂರ್ಯಸ್ಯ - ಸೂರ್ಯನ, ಗತಿರಿವ - ಗಮನದಂತೆ, ತಸ್ಯ-ಆ ಇಂದ್ರಜಿತುವಿನ, ಗತಿಃ-ಗಮನವು, ನಜ್ಞಾಯತೇ-ತಿಳಿಯುವುದಿಲ್ಲ. ॥ ೧೯ ॥ ರಾಘವಸ್ತು - ಶ್ರೀರಾಮನಾದರೆ, ದುರಾತ್ಮನಃ - ದುರ್ಬುದ್ಧಿಯುಳ್ಳ, ರಿಪುಃ - ಶತ್ರುವಿನ, ಮಾಯಾವೀರ್ಯಂ - ಮಾಯಾಸಾಮರ್ಥ್ಯವನ್ನು, ಜ್ಞಾತ್ವಾ - ತಿಳಿದು, ಕೀರ್ತಿಸಂಪನ್ನಂ - ಕೀರ್ತಿಲಕ್ಷ್ಮೀಸಮೇತನಾದ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೦ ॥ ಲಕ್ಷ್ಮಣ - ಲಕ್ಷ್ಮಣನೇ, ವಾನರೇಂದ್ರಸ್ಯ - ಕಪಿರಾಜನಾದ ಸುಗ್ರೀವನ, ಯದ್ಬಲಂ ಯಾವ ಸೇನೆಯುಂಟೋ, ಸರ್ವೇಣತೇನಬಲೇನ-ಆ ಸಮಸ್ತ ಬಲದಿಂದಲೂ, ಸಂವೃತಃ- ಕೂಡಿ, ಹನು....ಹ - ಹನುಮಂತನೇ ಮೊದಲಾದವರೊಡನೆಯೂ, ಯೂಥಪೈಸ್ಸಹ - ಯೂಥಪತಿಗಳೊಡನೆಯೂ, ಋಕ್ಷಪತಿನಾ - ಕರಡಿಗಳಿಗೆ ಅಧಿಪತಿಯಾದ, ಸಸೈನ್ಯೇನ - ಸೇನೆಯೊಡಗೂಡಿದ, ಜಾಂಬವೇನ - ಜಾಂಬವಂತನೊಡನೆಯೂ, ಸಂವೃತಃ - ಕೂಡಿದವನಾಗಿ, ಮಾಯಾ....ದಂ - ಮಾಯೆಗಳ ನಿರ್ಮಾಣದಲ್ಲಿ, ಸಮರ್ಥನಾದ, ತಂರಾಕ್ಷಸಸುತಂ - ಆ ರಾವಣನ ಮಗನನ್ನು, ಜಹಿ - ಹೊಡೆ, ಮಹಾತ್ಮಾ - ಮಹಾ ಮನಸ್ವಿಯಾದ, ಅಯಂರಜನೀಚರಃ - ಈ ವಿಭೀಷಣನು, ತಸ್ಯ ದೇಶಸ್ಯ - ಆ ನಿಕುಂಭಿಲಾಯಾಗ ಸ್ಥಳವನ್ನು, ಅಭಿಜ್ಞಃ - ತಿಳಿದವನಾದಕಾರಣ, ಸಚಿವೈಸ್ಸಾರ್ಧಂ - ಮಂತ್ರಿಗಳೊಡನೆ, ತ್ವಾಂ - ನಿನ್ನನ್ನು, ಪೃಷ್ಠತಃ - ಹಿಂದುಗಡೆ, ಅನುಗಮಿಷ್ಯತಿ - ಅನುಸರಿಸಿ ಬರು

ದೇವತೆಗಳನ್ನೂ, ಅಲ್ಲದೆ ಇತರರನ್ನೂ ಜಯಿಸಬಲ್ಲನು. ಅವನು ರಥಾರೂಢನಾಗಿ ಗಗನದಲ್ಲಿಯೇ ಸಂಚರಿಸುತ್ತ ಮುಗಿಲು ಮುಚ್ಚಿದ ದಿನಕರನಂತೆ ಮಾಯೆಯಿಂದ ಯಾರಿಗೂ ಕಾಣಿಸಿಕೊಳ್ಳದೆಯೇ ಇರುತ್ತಾನೆ. ಇದೆಲ್ಲವನ್ನೂ ನಾನು ಬಲ್ಲೆನು” ಎಂದು ಹೇಳಿ ಮರಳಿಯೂ ಮಹಾಕೀರ್ತಿಸಂಪನ್ನನಾದ ಲಕ್ಷ್ಮಣಸ್ವಾಮಿಯನ್ನು ಕುರಿತು ಹೀಗೆಂದನು. ॥ ೧೭–೨೦ ॥ “ವತ್ಸ ಲಕ್ಷ್ಮಣಾ! ಸಮಸ್ತ ವಾನರಸೇನೆಯೊಡನೆಯೂ, ಹನುಮಂತನೇ ಮೊದಲಾದ ವಾನರವೀರರೊಡನೆಯೂ, ಈ ಜಾಂಬವಂತನೊಡನೆಯೂ ಕೂಡಿದವನಾಗಿ ನೀನು ಈಗಲೇ ಯುದ್ಧಕ್ಕೆ ಹೊರಟು ಮಾಯಾವಿಶಾರದನಾದ ಆ ಇಂದ್ರಜಿತುವನ್ನು ಜಯಿಸು. ಮಹಾತ್ಮನಾದ ಈ ವಿಭೀಷಣನು ಆ ರಾಕ್ಷಸರಾಜ ಕುಮಾರನಾದ ಇಂದ್ರಜಿತುವಿರುವ ಪ್ರದೇಶವನ್ನು ತಿಳಿದಿರುವನು. ಆದುದರಿಂದ ಈ ಮಹಾನುಭಾವನು ನಿನ್ನೊಡನೆ ಬರುವನು. ಆದುದರಿಂದ ನೀನು ಅಮಿತ

ವಚಃ ಶ್ರುತ್ವಾ ಲಕ್ಷ್ಮಣಸ್ಸವಿಭೀಷಣಃ । ಜಗ್ರಾಹ ಕಾರ್ಮುಕಶ್ರೇಷ್ಠಮತ್ಯದ್ಭುತಪರಾಕ್ರಮಃ ॥ ೨೪ ॥ ಸನ್ನದ್ಧಃ ಕವಚೀ ಖಡ್ಗೀ ಸಶರೋ ಹೇಮಚಾಪಧೃತ್ । ರಾಮಪಾದಾವುಪಸ್ಪೃಶ್ಯ ಹೃಷ್ಟಸ್ಸೌಮಿತ್ರಿರಬ್ರವೀತ್ ॥ ೨೫ ॥ "ಅದ್ಯ ಮತ್ಕಾರ್ಮುಕೋನ್ಮುಕ್ತಾಃ ಶರಾ ನಿರ್ಭಿದ್ಯ ರಾವಣಿಂ । ಲಂಕಾಮಭಿಪತಿಷ್ಯಂತಿ ಹಂಸಾಃ ಪುಷ್ಕರಿಣೀಮಿವ ॥ ೨೬ ॥ ಅದ್ಯೈವ ತಸ್ಯ ರೌದ್ರಸ್ಯ ಶರೀರಂ ಮಾಮಕಾಃ ಶರಾಃ । ವಿಧಮಿಷ್ಯಂತಿ ಭಿತ್ವಾ ತಂ ಮಮ ಚಾಪಗುಣಾಚ್ಚ್ಯುತಾಃ" ॥ ೨೭ ॥ ಸ ಏವಮುಕ್ತ್ವಾ ದ್ಯುತಿಮಾನ್ ವಚನಂ ಭ್ರಾತುರಗ್ರತಃ । ಸರಾವಣಿವಧಾಕಾಂಕ್ಷೀ ಲಕ್ಷ್ಮಣಸ್ತ್ವರಿತೋ

ವನು. ॥೨೨ ೨೩॥ ಅತ್ಯ....ಮಃ - ಅತ್ಯಾಶ್ಚರ್ಯಕರವಾದ ಪರಾಕ್ರಮವುಳ್ಳ, ಲಕ್ಷ್ಮಣಃ - ಲಕ್ಷ್ಮಣನು, ಸವಿಭೀಷಣಃ - ವಿಭೀಷಣನೊಡನೆ, ರಾಘವಸ್ಯ - ಶ್ರೀರಾಮನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಕಾರ್ಮುಕಶ್ರೇಷ್ಠಂ - ಉತ್ತಮವಾದ ಬಿಲ್ಲನ್ನು, ಜಗ್ರಾಹ - ತೆಗೆದುಕೊಂಡನು. ॥ ೨೪ ॥ ಸನ್ನದ್ಧಃ - ಯುದ್ಧಸನ್ನಾಹವುಳ್ಳ, ಕವಚೀ - ಕವಚಧಾರಿಯಾದ, ಖಡ್ಗೀ - ಖಡ್ಗವನ್ನು ಧರಿಸಿರುವ, ಸಶರಃ - ಬಾಣಗಳಿಂದ ಕೂಡಿದ, ಹೇಮ....ತ್ - ಬಂಗಾರದ ಬಿಲ್ಲನ್ನು ಧರಿಸಿರುವ, ಸೌಮಿತ್ರಿಃ - ಲಕ್ಷ್ಮಣಸ್ವಾಮಿಯು, ರಾಮಪಾದೌ - ಶ್ರೀರಾಮನ ಪಾದಗಳನ್ನು, ಉಪಸ್ಪೃಶ್ಯ - ವಂದಿಸಿ, ಹೃಷ್ಟಃ - ಸಂತೋಷಗೊಂಡವನಾಗಿ, ಅಬ್ರವೀತ್ - ನುಡಿದನು. ॥ ೨೫ ॥ ಅದ್ಯ - ಈಗ, ಮತ್ಕಾ....ಕ್ತಾಃ - ನನ್ನ ಧನುಸ್ಸಿನಿಂದ ಬಿಡಲ್ಪಟ್ಟ, ಶರಾಃ - ಬಾಣಗಳು, ರಾವಣಿಂ - ಇಂದ್ರಜಿತುವನ್ನು, ನಿರ್ಭಿದ್ಯ - ಭೇದಿಸಿ, ಹಂಸಾಃ - ಹಂಸಪಕ್ಷಿಗಳು, ಪುಷ್ಕರಿಣೀಮಿವ - ಸರೋವರವನ್ನಂತೆ, ಲಂಕಾಂ - ಲಂಕಾ ಪಟ್ಟಣವನ್ನು ಕುರಿತು, ಅಭಿಪತಿಷ್ಯಂತಿ - ಎಲ್ಲಾ ಕಡೆಯಲ್ಲಿಯೂ ಬೀಳುವವು. ॥ ೨೬ ॥ ಮಮ - ನನ್ನ, ಚಾಪಗುಣಾತ್ - ಬಿಲ್ಲಿನ ಹೆದೆಯಿಂದ, ಚ್ಯುತಾಃ - ಜಾರುತ್ತಿರುವ, ಮಾಮಕಾಃ - ನನ್ನ ಸಂಬಂಧಿಗಳಾದ, ಶರಾಃ - ಬಾಣಗಳು, ರೌದ್ರಸ್ಯ - ಕ್ರೂರನಾದ, ತಸ್ಯ - ಆ ಇಂದ್ರಜಿತುವಿನ, ಶರೀರಂ- ಗಾತ್ರವನ್ನು, ಅದ್ಯೈವ - ಈಗಲೇ, ಭಿತ್ವಾ - ಭೇದಿಸಿ, ತಂ - ಅವನನ್ನು, ವಿಧಮಿಷ್ಯಂತಿ - ಸಂಹರಿಸುತ್ತವೆ. ॥ ೨೭ ॥ ದ್ಯುತಿಮಾನ್ - ಕಾಂತಿಮಂತನಾದ, ಸಃ - ಪ್ರಸಿದ್ಧನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು, ಭ್ರಾತುಃ - ಅಣ್ಣನ, ಅಗ್ರೇ - ಮುಂದೆ, ಏವಂ - ಈ ರೀತಿ, ವಚನಂ - ಮಾತನ್ನು,

---

ಧೈರ್ಯವನ್ನವಲಂಬಿಸಿ, ಹೋಗಿ ಬಾ." ರಘುಕುಲೋದ್ಭವನಾದ ಶ್ರೀರಾಮನು ಈ ರೀತಿ ನುಡಿದ ಮಾತುಗಳನ್ನು ಕೇಳಿ ಲಕ್ಷ್ಮಣಸ್ವಾಮಿಯು ವಿಭೀಷಣನೊಡಗೂಡಿದವನಾಗಿ ಸರ್ವೋತ್ತಮವಾದ ಧನುಸ್ಸನ್ನು ಗ್ರಹಿಸಿದನು. ಮಹಾದ್ಭುತಪರಾಕ್ರಮಿಯಾದ ಲಕ್ಷ್ಮಣಸ್ವಾಮಿಯು ಯುದ್ಧಸನ್ನದ್ಧನಾಗಿ ಕವಚಧಾರಿಯೂ, ಖಡ್ಗಧಾರಿಯೂ, ಧನುರ್ಬಾಣಧಾರಿಯಾಗಿಯೂ ಆಗಿ ಹೊರಡಲನುವಾದನು. ಆಗ ಸುಮಿತ್ರಾನಂದಕರನಾದ ಆತನು ಮಹಾನಂದಭರಿತನಾಗಿ ಅಣ್ಣನಾದ ಶ್ರೀರಾಮನ ಪಾದಗಳನ್ನು ಮುಟ್ಟಿ ಸಾಷ್ಟಾಂಗಪ್ರಣಾಮವನ್ನು ಮಾಡಿದನು. ॥೨೧-೨೬॥ ಮಹಾತ್ಮನಾದ ಲಕ್ಷ್ಮಣನು ಅಗ್ರಜನಿಗೆ ಶಿರಸಾ ನಮಸ್ಕರಿಸಿ, "ರಘುಕುಲೋದ್ಭವಾ! ಈಗ ನನ್ನ ಧನುಸ್ಸಿನಿಂದ ಹೊರಹೊರಡುವ ಕೂರಂಬುಗಳು ರಾವಣಾಸುರನ ಪುತ್ರನಾದ ಆ ಇಂದ್ರಜಿತುವನ್ನು ಕೊಂದು ಲಂಕಾಪಟ್ಟಣವನ್ನೂ ಒಳಹೊಗುತ್ತವೆ. ನನ್ನ ಬಾಣಗಳು ಮಹಾ ಭಯಂಕರನಾದ ಆ ಇಂದ್ರಜಿತುವಿನ ಶರೀರವನ್ನು ನಾಶಗೊಳಿಸುವುವು" ಎಂದು ಹೇಳಿದನು. ಮಹಾ ತೇಜಸ್ವಿಯಾದ ಲಕ್ಷ್ಮಣಸ್ವಾಮಿಯು ಅಣ್ಣನಿಗೆ ಈ ರೀತಿ

ಯಯೌ ॥ ೨೮ ॥ ಸೋಽಭಿವಾದ್ಯ ಗುರೋಃ ಪಾದೌ ಕೃತ್ವಾಚಾಪಿ ಪ್ರದಕ್ಷಿಣಂ । ನಿಕುಂಭಿಲಾಮಭಿಯಯೌ ಚೈತ್ಯಂ ರಾವಣಿಪಾಲಿತಂ ॥೨೯॥ ವಿಭೀಷಣೇನ ಸಹಿತೋ ರಾಜಪುತ್ರಃ ಪ್ರತಾಪವಾನ್ । ಕೃತಸ್ವಸ್ತ್ಯಯನೋ ಭ್ರಾತ್ರಾ ಲಕ್ಷ್ಮಣಸ್ತ್ವರಿತೋ ಯಯೌ ॥ ೩೦ ॥ ವಾನರಾಣಾಂ ಸಹಸ್ರೈಸ್ತು ಹನೂಮಾನ್ ಬಹುಭಿರ್ವೃತಃ । ವಿಭೀಷಣಶ್ಚ ಸಾಮಾತ್ಯಸ್ತದಾ ಲಕ್ಷ್ಮಣಮನ್ವಗಾತ್ ॥ ೩೧ ॥ ಮಹತಾ ಹರಿಸೈನ್ಯೇನ ಸವೇಗಮಭಿಸಂವೃತಃ । ಋಕ್ಷರಾಜಬಲಂ ಚೈವ ದದರ್ಶ ಪಥಿ ವಿಷ್ಠಿತಂ ॥ ೩೨ ॥ ಸಗತ್ವಾ ದೂರಮಧ್ವಾನಂ ಸೌಮಿತ್ರಿರ್ಮಿತ್ರನಂದನಃ । ರಾಕ್ಷಸೇಂದ್ರಬಲಂ ದೂರಾದ

ಉಕ್ತ್ವಾ - ಹೇಳಿ, ರಾವ....ಕ್ಷೀ - ಇಂದ್ರಜಿತುವಿನ ಸಂಹಾರದಲ್ಲಿ ಅಪೇಕ್ಷೆಯುಳ್ಳವನಾಗಿ, ತ್ವರಿತಃ - ಜಾಗ್ರತೆಯಾಗಿ, ಯಯೌ - ತೆರಳಿದನು. ॥ ೨೮ ॥ ಸಃ - ಆ ಲಕ್ಷ್ಮಣನು, ಗುರೋಃ - ಅಣ್ಣನಾದ ಶ್ರೀರಾಮನ, ಪಾದೌ - ಪಾದಗಳನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ಪ್ರದಕ್ಷಿಣಂಚಾಪಿ - ಪ್ರದಕ್ಷಿಣವನ್ನೂ, ಕೃತ್ವಾ-ಮಾಡಿ, ರಾವ....ತಂ ಮೇಘನಾದನಿಂದ ರಕ್ಷಿಸಲ್ಪಟ್ಟ, ನಿಕುಂಭಿಲಾಂ- ನಿಕುಂಭಿಲೆಯೆಂದು ಪ್ರಸಿದ್ಧವಾದ, ಚೈತ್ಯಂ - ದೇವತಾಯತನವನ್ನು ಕುರಿತು, ಅಭಿಯಯೌ - ಎದುರಾಗಿ ಹೊರಟನು. ॥ ೨೯ ॥ ವಿಭೀಷಣೇನ-ವಿಭೀಷಣನೊಡನೆ, ಸಹಿತಃ-ಕೂಡಿದ, ಪ್ರತಾಪವಾನ್- ಪರಾಕ್ರಮಶಾಲಿಯಾದ, ರಾಜಪುತ್ರಃ - ಅರಸು ಮಗನಾದ, ಲಕ್ಷ್ಮಣಃ - ಲಕ್ಷ್ಮಣನು, ಭ್ರಾತ್ರಾ - ಅಣ್ಣನಿಂದ, ಕೃತ....ನಃ - ಮಾಡಿದ ಹರಕೆಗಳುಳ್ಳವನಾಗಿ, ತ್ವರಿತಃ - ತ್ವರೆಯುಳ್ಳವನಾಗಿ, ಯಯೌ - ತೆರಳಿದನು. ॥ ೩೦ ॥ ವಾನರಾಣಾಂ - ಕಪಿಗಳ, ಬಹುಭಿಃ - ಅನೇಕಗಳಾದ, ಸಹಸ್ರೈಃ - ಸಾವಿರಗಳಿಂದ, ವೃತಃ - ಸುತ್ತುವರೆಯಲ್ಪಟ್ಟ, ಹನೂಮಾನ್ - ಆಂಜನೇಯನು, ಸಾಮಾತ್ಯಃ - ಮಂತ್ರಿ ಗಳೊಡನೆಯೂ, ವಿಭೀಷಣಶ್ಚ - ವಿಭೀಷಣನೂ, ತದಾ - ಆ ಕಾಲದಲ್ಲಿ, ಲಕ್ಷ್ಮಣಂ - ಲಕ್ಷ್ಮಣ ನನ್ನು, ಅನುಗಾತ್ - ಅನುಸರಿಸಿ ಹೊರಟರು. ॥ ೩೧ ॥ ಮಹತಾ - ಬಹಳವಾದ, ಹರಿಸೈನ್ಯೇನ - ವಾನರಸೇನೆಯಿಂದ, ಅಭಿಸಂವೃತಃ - ಸುತ್ತುವರೆದವನಾಗಿ, ಸವೇಗಂ - ವೇಗದಿಂದೊಡಗೂಡಿ, ಪಥಿ - ಮಾರ್ಗದಲ್ಲಿ, ವಿಷ್ಠಿತಂ - ಇರುವ, ಋಕ್ಷ....ವ - ಜಾಂಬವಂತನ ಸೇನೆಯನ್ನು, ದದರ್ಶ - ಕಂಡನು. ॥ ೩೨ ॥ ಮಿತ್ರ....ನಃ - ಸೂರ್ಯಕುಲಾನಂದಕರನಾದ, ಸಸೌಮಿತ್ರಿಃ - ಆ ಲಕ್ಷ್ಮಣನು, ದೂರಮಧ್ವಾನಂ - ದೂರಮಾರ್ಗವನ್ನು, ಗತ್ವಾ - ಹೋಗಿ, ದೂರಾತ್ - ದೂರದಿಂದಲೇ, ವ್ಯೂಹಂ -

ಹೇಳಿ ಇಂದ್ರಜಿತುವನ್ನು ವಧಿಸಲಪೇಕ್ಷಿಸಿ ಬಹಳ ಜಾಗ್ರತೆಯಾಗಿ ಹೊರಟನು. ಹೀಗೆ ಹೊರಡುವ ಮುಂಚೆ ಆತನು ಮತ್ತೊಮ್ಮೆ ರಾಮಪಾದಗಳಿಗೆ ಮಣಿದು ಪ್ರದಕ್ಷಿಣ ಮಾಡಿ ಇಂದ್ರಜಿತುವು ಸಂರಕ್ಷಿಸುತ್ತಿರುವ ನಿಕುಂಭಿಲಾ ಪ್ರದೇಶವನ್ನು ಕುರಿತು ಹೊರಟನು. ಮಹಾ ಪ್ರತಾಪವಂತನೂ, ರಾಜಪುತ್ರನೂ ಆದ ಲಕ್ಷ್ಮಣನು ವಿಭೀಷಣನೊಡನೆ ಹೊರ ಟನು. ॥ ೨೭–೩೦ ॥ ಆಗ ಶ್ರೀರಾಮನು ಆತನನ್ನು ಅನೇಕ ವಿಧವಾಗಿ ಆಶೀರ್ವದಿಸಿದ ತರುವಾಯ ಅನೇಕ ಸಹಸ್ರ ವಾನರರೊಡಗೂಡಿ ಹನುಮಂತನೂ, ಮಂತ್ರಿಗಳೊಡ ಗೂಡಿ ವಿಭೀಷಣನೂ ಲಕ್ಷ್ಮಣನನ್ನು ಹಿಂಬಾಲಿಸಿ ಹೊರಟರು. ಆಗ ಲಕ್ಷ್ಮಣನು ಅನೇಕ ಸಹಸ್ರ ವಾನರವೀರರೊಡನೆ, ಋಕ್ಷಸೇನೆಯೂ ತನ್ನನ್ನು ಹಿಂಬಾಲಿಸಿ ಬರು ತ್ತಿರಲು ಬಹಳ ತ್ವರೆಯುಳ್ಳವನಾಗಿ ಹೊರಟು ಬಹುದೂರ ಹೋಗಿ ಅಲ್ಲಿ ತನಗೆ ಬಹು ಸಮಿಪದಲ್ಲಿಯೇ ವ್ಯೂಹಾಕಾರವಾಗಿ ನಿಂತಿದ್ದ ರಾಕ್ಷಸಸೇನೆಯನ್ನು ಕಂಡನು. ಆಗ ಶತ್ರು

ಪಶ್ಯದ್ವ್ಯೂಹಮಾಸ್ಥಿತಂ ॥ ೧೩ ॥ ಸತಂ ಪ್ರಾಪ್ಯ ಧನುಷ್ಪಾಣಿರ್ಮಾಯಾಯೋಗಮರಿಂದಮಃ । ತಸ್ಥೌ ಬ್ರಹ್ಮವಿಧಾನೇನ ವಿಜೇತುಂ ರಘುನಂದನಃ ॥ ೧೪ ॥ ವಿಭೀಷಣೇನ ಸಹಿತೋ ರಾಜಪುತ್ರಃ ಪ್ರತಾಪವಾನ್ । ಅಂಗದೇನ ಚ ವೀರೇಣ ತಥಾಽನಿಲಸುತೇನಚ ॥ ೧೫ ॥

ವಿವಿಧಮಮಲಶಸ್ತ್ರಭಾಸ್ವರಂ ತ
ದ್ಧ್ವಜಗಹನಂ ವಿಪುಲಂ ಮಹಾರಥೈಶ್ಚ
ಪ್ರತಿಭಯತಮಮಪ್ರಮೇಯವೇಗಂ
ತಿಮಿರಮಿವ ದ್ವಿಷತಾಂ ಬಲಂ ವಿವೇಶ ॥ ೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಾಶೀತಿತಮಸ್ಸರ್ಗಃ

ವ್ಯೂಹಾಕಾರವಾಗಿ, ಆಸ್ಥಿತಂ - ನಿಂತಿರುವ, ರಾಕ್ಷ....ಲಂ - ರಾವಣನ ಸೇನೆಯನ್ನು, ಅಪಶ್ಯತ್ - ಕಂಡನು, ಅರಿಂದಮಃ - ಶತ್ರುಸಂಹಾರಕನಾದ, ಸರಘುನಂದನಃ - ಆ ಲಕ್ಷ್ಮಣನು, ಧನುಷ್ಪಾಣಿಃ - ಬಿಲ್ಲೇ ಕೈಯಲ್ಲುಳ್ಳವನಾಗಿ, ಮಾಯಾಯೋಗಂ - ಮಾಯಾಕುಶಲನಾದ, ತಂ - ಇಂದ್ರಜಿತುವನ್ನು, ಪ್ರಾಪ್ಯ - ಹೊಂದಿ, ಬ್ರಹ್ಮವಿಧಾನೇನ - ಬ್ರಹ್ಮವರದಂತೆ, ವಿಜೇತುಂ - ಜಯಿಸುವುದಕ್ಕೆ, ತಸ್ಥೌ - ನಿಂತನು. ॥ ೧೩ ೧೪ ॥ ವಿಭೀಷಣೇನ - ವಿಭೀಷಣನೊಡನೆ, ಸಹಿತಃ - ಕೂಡಿರುವ, ರಾಜಪುತ್ರಃ - ಅರಸುಮಗನಾದ, ಪ್ರತಾಪವಾನ್ - ಶತ್ರುತಿರಸ್ಕಾರದಲ್ಲಿ ಸಮರ್ಥನಾದ ಲಕ್ಷ್ಮಣನು, ವೀರೇಣ - ಶೂರನಾದ, ಅಂಗದೇನಚ - ಅಂಗದನೊಡನೆ, ತಥಾ - ಹಾಗೆಯೇ, ಅನಿ....ಚ - ವಾಯುಪುತ್ರನಾದ ಆಂಜನೇಯನೊಡಗೂಡಿ, ತಸ್ಥೌ - ನಿಂತನು. ॥ ೧೫ ॥ ವಿವಿಧಂ - ನಾನಾಬಗೆಗಳಾದ, ಅಮ....ರಂ - ನಿರ್ಮಲವಾದ ಶಸ್ತ್ರಗಳಿಂದ ಹೊಳೆಯುತ್ತಿರುವ, ಧ್ವಜಗಹನಂ - ಧ್ವಜಪಟಗಳಿಂದ ಪ್ರವೇಶಿಸಲಸಾಧ್ಯವಾದ, ಮಹಾರಥೈಶ್ಚ - ಮಹಾರಥಿಕರಿಂದಲೂ, ಪ್ರತಿಭಯತಮಂ - ಅತಿಭಯಂಕರವಾದ, ಅಪ್ರ....ಗಂ - ಅಪರಿಮಿತವಾದ ವೇಗವುಳ್ಳ, ದ್ವಿಷತಾಂ - ಶತ್ರುಗಳ, ಬಲಂ - ಸೈನ್ಯವನ್ನು, ತಿಮಿರಮಿವ - ಗಾಢಾಂಧಕಾರದಂತೆ, ವಿವೇಶ - ಪ್ರವೇಶ ಮಾಡಿದನು. ॥ ೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚಾಶೀತಿತಮಸ್ಸರ್ಗಃ.

ತಾಪನನನಾದ ಆ ರಾಜಪುತ್ರನು ಮಾಯಾಯೋಗವುಳ್ಳ ಇಂದ್ರಜಿತುವನ್ನು ಬ್ರಹ್ಮನ ವರದಾನದಂತೆಯೇ ಗೆಲ್ಲಬೇಕೆಂದು, ಹನುಮಂತ ಅಂಗದ ಇವರೇ ಮೊದಲಾದ ವಾನರವೀರರೊಡನೆ, ನಾನಾವಿಧಗಳೂ, ನಿರ್ಮಲಗಳೂ ಆದ ಮಹಾಸ್ತ್ರಗಳಿಂದ ಪ್ರಕಾಶಿಸುತ್ತಿರುವುದೂ, ಅನೇಕ ಧ್ವಜಗಳುಳ್ಳುದೂ, ಅನೇಕ ರಥಸಮನ್ವಿತವಾದುದೂ, ಮದದಾನೆಗಳುಳ್ಳುದೂ, ಶತ್ರುಗಳಿಗೆ ಭಯಂಕರವಾದುದೂ ಆದ ಆ ರಾಕ್ಷಸಸೇನೆಯನ್ನು ಕಂಡನು. ॥ ೧೧-೧೬ ॥

ಇಂತಿದು ಲಕ್ಷ್ಮಣಕೃತ ರಣಪ್ರಯಾಣ ವೃತ್ತಾಂತವೆಂಬ ಎಂಬತ್ತೈದನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಷಡಶೀತಿತಮಸ್ಸರ್ಗಃ

ಅಥ ತಸ್ಯಾಮವಸ್ಥಾಯಾಂ ಲಕ್ಷ್ಮಣಂ ರಾವಣಾನುಜಃ । ಪರೇಷಾಮಹಿತಂ ವಾಕ್ಯಮರ್ಥಸಾಧಕಮಬ್ರವೀತ್ ॥೧॥ "ಯದೇತದ್ರಾಕ್ಷಸಾನೀಕಂ ಮೇಘಶ್ಯಾಮಂ ವಿಲೋಕ್ಯತೇ । ಏತದಾಯೋಧ್ಯತಾಂ ಶೀಘ್ರಂ ಕಪಿಭಿಃ ಪಾದಪಾಯುಧೈಃ ॥ ೨ ॥ ಅಸ್ಯಾನೀಕಸ್ಯ ಮಹತೋ ಭೇದನೇ ಯತ ಲಕ್ಷ್ಮಣ! । ರಾಕ್ಷಸೇಂದ್ರಸುತೋಽಪ್ಯತ್ರ ಭಿನ್ನೇ ದೃಶ್ಯೋ ಭವಿಷ್ಯತಿ ॥ ೩ ॥ ತತ್ವಮಿಂದ್ರಾಶನಿಪ್ರಖ್ಯೈಃ ಶರೈರವಕಿರ ಪರಾನ್ । ಅಭಿದ್ರವಾಶು ಯಾವದ್ವೈ ನೈತತ್ಕರ್ಮ ಸಮಾಪ್ಯತೇ ॥ ೪ ॥ ಜಹಿ ವೀರ! ದುರಾ

ಅಥ - ಬಳಿಕ, ತಸ್ಯಾಮವಸ್ಥಾಯಾಂ - ಆ ಕಾಲದಲ್ಲಿ, ರಾವಣಾನುಜಃ - ವಿಭೀಷಣನು, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಪರೇಷಾಂ - ಶತ್ರುಗಳಿಗೆ, ಅಹಿತಂ - ಅನಿಷ್ಟಕರವಾದ, ಅರ್ಥ ಸಾಧಕಂ - ಲಕ್ಷ್ಮಣನಿಗೆ ಪ್ರಯೋಜನಕಾರಿಯಾದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧ ॥ ಮೇಘಶ್ಯಾಮಂ - ಮುಗಿಲುಗಳಂತೆ ಕಪ್ಪಗಿರುವ, ಯದೇತತ್ - ಯಾವ ಈ, ರಾಕ್ಷಸಾನೀಕಂ - ರಕ್ಕಸರ ಸೇನೆಯು, ವಿಲೋಕ್ಯತೇ - ಕಾಣುತ್ತದೆಯೋ, ಏತತ್ - ಈ ಸೇನೆಯು, ಶೀಘ್ರಂ - ಜಾಗ್ರತೆಯಾಗಿ, ಪಾದಪಾಯುಧೈಃ - ಮರಗಳೇ ಆಯುಧಗಳಾಗುಳ್ಳ, ಕಪಿಭಿಃ - ಕಪಿಗಳೊಡನೆ, ಆಯೋಧ್ಯತಾಂ - ಯುದ್ಧಮಾಡಲ್ಪಡಲಿ. ॥ ೨ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಮಹತಃ - ದೊಡ್ಡದಾದ, ಅಸ್ಯಾನೀಕಸ್ಯ - ಈ ಸೈನ್ಯದ, ಭೇದನೇ - ಭೇದಿಸುವ ವಿಷಯದಲ್ಲಿ, ಯತ - ಪ್ರಯತ್ನಮಾಡು, ಅತ್ರ - ಈ ಸೇನೆಯು, ಭಿನ್ನೇ - ಭೇದಿಸಿದರೆ, ರಾಕ್ಷ....ಪಿ - ಇಂದ್ರಜಿತುವು, ದೃಶ್ಯಃ - ಕಾಣಿಸತಕ್ಕವನು, ಭವಿಷ್ಯತಿ - ಆಗುವನು. ॥ ೩ ॥ ಸತ್ವಂ - ಆ ನೀನು, ಇಂದ್ರಾ.... ಖ್ಯೈಃ - ಇಂದ್ರನ ವಜ್ರಾಯುಧಕ್ಕೆ ಸಮಾನಗಳಾದ, ಶರೈಃ - ಬಾಣಗಳಿಂದ, ಪರಾನ್ - ಶತ್ರುಗಳನ್ನು, ಅವಿಕಿರ - ಎರಚುತ್ತ, ಯಾವತ್ - ಎಷ್ಟರಲ್ಲಿ, ಏತತ್ಕರ್ಮ - ಈ ನಿಕುಂಭಿಲಾ ಯಾಗರೂಪವಾದ ಕರ್ಮವು, ನಸಮಾಪ್ಯತೇ - ಪೂರ್ತಿಯಾಗುವುದಿಲ್ಲವೋ, ತಾವತ್ - ಅಷ್ಟರಲ್ಲಿ, ಆಶು - ಜಾಗ್ರತೆ

ಬಳಿಕ ರಾವಣಾನುಜನಾದ ವಿಭೀಷಣನು ಆ ಸಮಯದಲ್ಲಿ ಶತ್ರುಗಳಿಗೆ ಹಾನಿ ಕರವಾಗಿಯೂ, ಶ್ರೀರಾಮನಿಗೆ ಶ್ರೇಯಸ್ಕರವಾಗಿಯೂ ಇರುವ ಮಾತುಗಳನ್ನು ಹೇಳುವವ ನಾಗಿ ಲಕ್ಷ್ಮಣಸ್ವಾಮಿಯನ್ನು ಕುರಿತು, "ರಘುಕುಲೋತ್ತಮಾ! ಮುಗಿಲುಗಳಂತೆ ಬಹಳ ಕಪ್ಪಾಗಿ ಕಾಣುವ ಈ ರಾಕ್ಷಸಸೇನೆಯೊಡನೆ ಗಿಡಮರಗಳೇ ಆಯುಧಗಳಾಗಿವುಳ್ಳ ನಮ್ಮ ವಾನರಸೇನೆಯು ಕಾಳಗ ಮಾಡುವಂತೆ ಆಜ್ಞಾಪಿಸು. ಮಹತ್ತರವಾದ ಈ ರಾಕ್ಷಸಸೇನೆ ಯನ್ನು ಭೇದಿಸಲು ಪ್ರಯತ್ನಿಸಬೇಕು. ಈ ಸೇನೆಯೆಲ್ಲವೂ ಚದುರಿದ ತರುವಾಯ ರಾಕ್ಷಸ ರಾಜಕುಮಾರನಾದ ಇಂದ್ರಜಿತುವು ನಮಗೆ ಗೋಚರನಾಗುವನು. ಆದುದರಿಂದೆಲೈ ಲಕ್ಷ್ಮಣನೇ! ಈಗ ನೀನು ವಜ್ರಾಯುಧಸಮಾನಗಳಾದ ಬಾಣಗಳನ್ನು ಈ ರಾಕ್ಷಸಸೇನೆಯ ಮೇಲೆ ಪ್ರಯೋಗಿಸು. ಈಗ ಇಂದ್ರಜಿತುವು ಮಾಡುತ್ತಿರುವ ಈ ನಿಕುಂಭಿಲಾಯಾಗವು ಮುಗಿಯದಂತೆ ನಿನ್ನ ಬಾಣಗಳಿಂದ ತಡೆಗಟ್ಟಬೇಕು. ಮಾಯೆಗಳನ್ನು ಕಲ್ಪಿಸುವುದರಲ್ಲಿ

ತ್ಮಾನಂ ಮಾಯಾಪರಮಧಾರ್ಮಿಕಂ । ರಾವಣಿಂ ಕ್ರೂರಕರ್ಮಾಣಂ ಸರ್ವಲೋಕ ಭಯಾವಹಂ" ‖ ೫ ‖ ವಿಭೀಷಣವಚಃ ಶ್ರುತ್ವಾ ಲಕ್ಷ್ಮಣಃ ಶುಭಲಕ್ಷಣಃ । ವವರ್ಷ ಶರವರ್ಷಾಣಿ ರಾಕ್ಷಸೇಂದ್ರಸುತಂ ಪ್ರತಿ ‖ ೭ ‖ ಋಕ್ಷಾಃ ಶಾಖಾಮೃಗಾಶ್ಚಾಪಿ ದ್ರುಮಾದ್ರಿನಖಯೋಧಿನಃ । ಅಭ್ಯಧಾವಂತ ಸಹಿತಾಸ್ತದನೀಕಮವಸ್ಥಿತಂ ‖ ೭ ‖ ರಾಕ್ಷಸಾಶ್ಚ ಶಿತೈರ್ಬಾಣೈರಸಿಭಿಃ ಶಕ್ತಿತೋಮರೈಃ । ಉದ್ಯತೈಸ್ಸಮವರ್ತಂತ ಕಪಿ ಸೈನ್ಯಜಿಘಾಂಸವಃ ‖ ೮ ‖ ಸ ಸಂಪ್ರಹಾರಸ್ತುಮುಲಸ್ಸಂಜಜ್ಞೇ ಕಪಿರಕ್ಷಸಾಂ । ಶಬ್ದೇನ ಮಹತಾ ಲಂಕಾಂ ನಾದಯನ್ವೈ ಸಮಂತತಃ ‖ ೯ ‖ ಶಸ್ತ್ರೈಶ್ಚ ಬಹುಧಾ

ಯಾಗಿ, ಅಭಿಪ್ರವ - ಅಟ್ಟಿಹೋಗು. ‖ ೪ ‖ ವೀರ - ಶೂರನೇ, ದುರಾತ್ಮಾನಂ - ದುರ್ಬುದ್ಧಿಯಾದ, ಮಾಯಾ....ಕಂ - ಮಾಯೆಯೇ ಮುಖ್ಯ ಧರ್ಮವಾಗುಳ್ಳ, ಕ್ರೂರ....ಣಂ - ಕ್ರೂರವ್ಯಾಪಾರಿಯಾದ, ಸರ್ವ....ಹಂ - ಸರ್ವಜನರಿಗೂ ಭಯಂಕರನಾದ, ರಾವಣಿಂ - ಇಂದ್ರಜಿತುವನ್ನು, ಜಹಿ - ಹೊಡೆ. ‖ ೫ ‖ ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ಶುಭಲಕ್ಷಣಃ - ಶುಭಕರವಾದ ರಾಜಲಕ್ಷಣಗಳುಳ್ಳ, ಲಕ್ಷ್ಮಣಃ - ಲಕ್ಷ್ಮಣನು, ರಾಕ್ಷ.....ತಿ - ಇಂದ್ರಜಿತುವನ್ನು ಕುರಿತು, ಶರ ವರ್ಷಾಣಿ - ಬಾಣಗಳ ಮಳೆಯನ್ನು, ಅಸೃಜತ್ - ಸುರಿಸಿದನು. ‖ ೬ ‖ ಋಕ್ಷಾಃ - ಕರಡಿಗಳೂ, ಶಾಖಾಮೃಗಾಶ್ಚಾಪಿ - ವಾನರರೂ, ದ್ರುಮಾ....ನಃ - ಗಿಡಗಳಿಂದಲೂ, ಬೆಟ್ಟಗಳಿಂದಲೂ, ಉಗುರು ಗಳಿಂದಲೂ, ಕಾಳಗ ಮಾಡುವವರಾಗಿ, ಸಹಿತಾಃ - ಗುಂಪುಸೇರಿ, ಅವಸ್ಥಿತಂ - ನಿಂತಿರುವ, ತದ ನೀಕಂ - ಆ ರಾಕ್ಷಸಸೇನೆಯನ್ನು ಕುರಿತು, ಅಭ್ಯಧಾವಂತ - ಓಡಿಬಂದರು. ‖ ೭ ‖ ರಾಕ್ಷಸಾಶ್ಚ - ರಕ್ಕಸರೂ, ಶಿತೈಃ - ಹದವಾದ, ಬಾಣೈಃ - ಬಾಣಗಳಿಂದಲೂ, ಅಸಿಭಿಃ - ಕತ್ತಿಗಳಿಂದಲೂ, ಉದ್ಯತೈಃ - ಎತ್ತಿದ, ಶಕ್ತಿತೋಮರೈಃ - ಶಕ್ತ್ಯಾಯುಧಗಳಿಂದಲೂ, ತೋಮರಾಯುಧಗಳಿಂದಲೂ, ಕಪಿ....ವಃ - ವಾನರಸೇನೆಯನ್ನು ಹೊಡೆಯಲಿಚ್ಛೆಯುಳ್ಳವರಾಗಿ, ಸಮವರ್ತಂತ - ನಿಂತರು. ‖ ೮ ‖ ಕಪಿರಕ್ಷಸಾಂ - ವಾನರರಾಕ್ಷಸರಿಗೂ, ತುಮುಲಃ - ಸಂಕುಲವಾದ, ಸಸಂಪ್ರಹಾರಃ - ಆ ಯುದ್ಧವು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಮಹತಾ - ದೊಡ್ಡದಾದ, ಶಬ್ದೇನ - ಕೋಲಾಹಲಧ್ವನಿ

ಮಹಾ ಸಮರ್ಥನೂ, ಧರ್ಮಬಾಹಿರನೂ, ದುರಾತ್ಮನೂ ಆದ ಈ ಇಂದ್ರಜಿತುವನ್ನು ಜಯಿಸು. ಇವನು ಮಹಾ ಕ್ರೂರಕರ್ಮಗಳನ್ನು ಮಾಡುವಾತನು; ಚತುರ್ದಶಭುವನ ಗಳಿಗೂ ಭಯವನ್ನುಂಟುಮಾಡುವುದಕ್ಕೆ ಶಕ್ತನಾದವನು. ಆದುದರಿಂದ ಇವನನ್ನು ಜಯಿಸಲು ನೀನು ಈಗಲೇ ಪ್ರಯತ್ನಿಸಬೇಕು" ಎಂದು ಹೇಳಿದನು. ‖ ೧-೫ ‖ ಈ ರೀತಿ ನುಡಿದ ವಿಭೀಷಣನ ಮಾತುಗಳನ್ನು ಕೇಳಿ ಶುಭಲಕ್ಷಣಲಕ್ಷಿತನಾದ ಲಕ್ಷ್ಮಣಸ್ವಾಮಿಯು ರಾವಣಾಸುರನ ಕುಮಾರನಾದ ಇಂದ್ರಜಿತುವಿನಮೇಲೆ ಅನೇಕ ವಿಧವಾದ ಬಾಣಗಳನ್ನು ಮಳೆಗರೆದನು. ಆಗ ರಾಕ್ಷಸರೆಲ್ಲರೂ ವಾನರಸೈನ್ಯದೊಡನೆ ವಧಾಪೇಕ್ಷೆಯುಳ್ಳವರಾಗಿ, ಯುದ್ಧಮಾಡುತ್ತಾ ತೀಕ್ಷ್ಣಗಳಾದ ಬಾಣಗಳನ್ನೂ, ಖಡ್ಗತೋಮರಾದ್ಯಾಯುಧಗಳನ್ನೂ, ಇನ್ನೂ ಇತರ ಆಯುಧಗಳನ್ನೂ ಬಹಳ ತೀವ್ರವಾಗಿ ಪ್ರಯೋಗಿಸಿದರು. ಆಗ ವಾನ ರರೂ ಸಹ ಮಹಾ ಕೋಪಾಟೋಪವುಳ್ಳವರಾಗಿ ಅನೇಕ ಹೆಮ್ಮರಗಳನ್ನು ರಾಕ್ಷಸರ ಮೇಲೆಸೆದರು. ಉಭಯ ಪಕ್ಷದವರಿಗೂ ಮಹಾ ಭಯಂಕರ ಯುದ್ಧಕ್ಕೆ ಮೊದಲಾಯಿತು. ಆ ಯುದ್ಧದಲ್ಲಿ ಹುಟ್ಟಿದ ಧ್ವನಿಯು ಲಂಕಾಪಟ್ಟಣವೆಲ್ಲವನ್ನೂ ವ್ಯಾಪಿಸಿತು. ಉಭಯ

ಕಾರೈಃ ಶಿತೈರ್ಬಾಣೈಶ್ಚ ಪಾದಪೈಃ । ಉದ್ಯತೈರ್ಗಿರಿಶೃಂಗೈಶ್ಚ ಘೋರೈರಾಕಾಶ ಮಾವೃತಂ ॥ ೧೦ ॥ ತೇ ರಾಕ್ಷಸಾ ವಾನರೇಷು ವಿಕೃತಾನನಬಾಹವಃ । ನಿವೇಶ ಯಂತಃ ಶಸ್ತ್ರಾಣಿ ಚಕ್ರುಸ್ತೇ ಸುಮಹದ್ಭಯಂ ॥ ೧೧ ॥ ತಥೈವ ಸಕಲೈರ್ವೃಕ್ಷೈ ಗಿರಿಶೃಂಗೈಶ್ಚ ವಾನರಾಃ । ಅಭಿಜಘ್ನುರ್ನಿಜಘ್ನುಶ್ಚ ಸಮರೇ ರಾಕ್ಷಸರ್ಷಭಾನ್ ॥ ೧೨ ॥ ಋಕ್ಷವಾನರಮುಖ್ಯೈಶ್ಚ ಮಹಾಕಾಯೈರ್ಮಹಾಬಲೈಃ । ರಕ್ಷಸಾಂ ವಧ್ಯ ಮಾನಾನಾಂ ಮಹದ್ಭಯಮಜಾಯತ ॥ ೧೩ ॥ ಸ್ವಮನೀಕಂ ವಿಷಣ್ಣಂತು ಶ್ರುತ್ವಾ

ಯಿಂದ, ಲಂಕಾಂ - ಲಂಕಾಪಟ್ಟಣವನ್ನು, ನಾದರ್ಯ - ಧ್ವನಿಗೊಳಿಸುತ್ತಿರುವುದು, ಸಂಜಜ್ಞೇ - ಆಯಿತು. ॥ ೯ ॥ ಬಹುಧಾಕಾರೈಃ - ಅನೇಕಬಗೆಗಳಾದ ಆಕಾರಗಳುಳ್ಳ, ಶಸ್ತ್ರೈಶ್ಚ - ಶಸ್ತ್ರಗಳಿಂದಲೂ, ಶಿತೈಃ - ತೀಕ್ಷ್ಣಗಳಾದ, ಬಾಣೈಶ್ಚ - ಬಾಣಗಳಿಂದಲೂ, ಪಾದಪೈಶ್ಚ - ಮರಗಳಿಂದಲೂ, ಉದ್ಯತೈಃ - ಎತ್ತಿದ, ಘೋರೈಃ - ಭಯಂಕರಗಳಾದ, ಗಿರಿಶೃಂಗೈಶ್ಚ - ಬೆಟ್ಟದ ಶಿಖರಗಳಿಂದಲೂ, ಆಕಾಶಂ - ಅಂತರಿಕ್ಷವು, ಆವೃತಂ - ಮರೆಯಾಯಿತು. ॥ ೧೦ ॥ ವಿಕೃ....ವಃ - ವಿಕಾರವಾದ ಮುಖಗಳೂ, ಭುಜಗಳೂ ಉಳ್ಳ, ತೇ - ಪ್ರಸಿದ್ಧರಾದ, ತೇರಾಕ್ಷಸಾಃ - ಆ ರಾಕ್ಷಸರು, ವಾನರೇಷು - ಕಪಿಗಳಲ್ಲಿ, ಶಸ್ತ್ರಾಣಿ - ಶಸ್ತ್ರಗಳನ್ನು, ನಿವೇಶಯಂತಃ - ಪ್ರವೇಶ ಮಾಡಿಸುತ್ತ, ಸುಮಹದ್ಭಯಂ - ಬಹಳ ಭಯ ವನ್ನು, ಚಕ್ರುಃ - ಉಂಟುಮಾಡಿದರು. ॥ ೧೧ ॥ ತಥೈವ - ಹಾಗೆಯೇ, ವಾನರಾಶ್ಚ - ಕಪಿಗಳೂ, ರಾಕ್ಷಸರ್ಷಭಾನ್-ದೊಡ್ಡದೊಡ್ಡ ರಕ್ಕಸರನ್ನು, ಸಕಲೈಃ-ಸಮಸ್ತಗಳಾದ, ವೃಕ್ಷೈಃ-ಮರಗಳಿಂದಲೂ, ಗಿರಿಶೃಂಗೈಶ್ಚ - ಪರ್ವತದ ತುದಿಗಳಿಂದಲೂ, ಸಮರೇ - ಕಾಳಗದಲ್ಲಿ, ಅಭಿಜಘ್ನುಃ - ಹೊಡೆದರು, ನಿಜಘ್ನುಶ್ಚ - ಬಹಳವಾಗಿ ಹೊಡೆದರು. ॥ ೧೨ ॥ ಮಹಾಕಾಯೈಃ - ಮಹಾ ಶರೀರಗಳುಳ್ಳ, ಮಹಾಬಲೈಃ - ಬಹಳ ಬಲಶಾಲಿಗಳಾದ, ಋಕ್ಷ....ಶ್ಚ - ಕರಡಿಗಳಿಂದಲೂ, ಮಹಾ ಕಪಿಗಳಿಂದಲೂ, ವಧ್ಯಮಾನಾನಾಂ - ಹೊಡೆಯಲ್ಪಡುತ್ತಿರುವ, ರಕ್ಷಸಾಂ - ರಕ್ಕಸರಿಗೆ, ಮಹತ್ - ಬಹಳವಾದ, ಭಯಂ - ಭೀತಿಯು, ಅಜಾಯತ - ಹುಟ್ಟಿತು. ॥ ೧೩ ॥ ಶತ್ರುಭಿಃ - ಶತ್ರುಗಳಿಂದ, ಅರ್ದಿತಂ - ಹೊಡೆಯಲ್ಪಟ್ಟ, ಸ್ವಂ - ತನ್ನ, ಅನೀಕಂ - ಸೇನೆಯನ್ನು, ವಿಷಣ್ಣಂತು - ವ್ಯಥೆಪಟ್ಟುದನ್ನಾಗಿ, ಶ್ರುತ್ವಾ-

ಪಕ್ಷದವರೂ ನಾನಾವಿಧಗಳಾದ ಅಸ್ತ್ರಗಳನ್ನೂ, ತೀಕ್ಷ್ಣಗಳಾದ ಬಾಣಗಳನ್ನೂ, ದೊಡ್ಡ ದೊಡ್ಡ ಮರಗಳನ್ನೂ, ದೊಡ್ಡ ದೊಡ್ಡ ಬೆಟ್ಟದ ಕೋಡುಗಲ್ಲುಗಳನ್ನೂ ಪರಸ್ಪರವಾಗಿ ಪ್ರಯೋಗಿಸಿ ಭೀಕರ ಯುದ್ಧವನ್ನು ಮಾಡುತ್ತಿದ್ದರು. ಅವರು ಪ್ರಯೋಗಿಸುತ್ತಿದ್ದ ಆಯುಧ ಗಳಿಂದ ಆಕಾಶವೇ ಕಾಣದಾಯಿತು. ಆ ಸಮಯದಲ್ಲಿ ವಿಕಾರವಾದ ಮುಖಗಳೂ, ಭುಜ ಗಳೂ ಉಳ್ಳ ರಾಕ್ಷಸರೆಲ್ಲರೂ ನಾನಾವಿಧಗಳಾದ ಅಸ್ತ್ರಗಳನ್ನು ಪ್ರಯೋಗಿಸಿ ಬಹಳ ಭಯ ವನ್ನುಂಟುಮಾಡಿದರು. ॥ ೬–೧೦ ॥ ಹಾಗೆಯೇ ವಾನರರೂ ಸಹ ದೊಡ್ಡ ದೊಡ್ಡ ಪರ್ವತ ಶಿಖರಗಳನ್ನೂ, ಹೆಮ್ಮರಗಳನ್ನೂ ಪ್ರಯೋಗಿಸಿ ರಾಕ್ಷಸವೀರರನ್ನು ಬಹಳವಾಗಿ ಹೊಡೆದು ಬಾಧಿಸಿದರು. ರಾಕ್ಷಸವೀರರು ಭಲ್ಲೂಕಾಧಿಪತಿಗಳನ್ನೂ, ವಾನರಯೂಥಪತಿಗಳನ್ನೂ ಹೊಡೆದು ಕೆಡವುತ್ತಿರಲು, ವಾನರರೂ ನಾನಾವಿಧ ರಾಕ್ಷಸರನ್ನೂ ಕೊಂದುರುಳಿಸುತ್ತಿದ್ದರು. ಹೀಗೆ ವಾನರರಿಂದ ಬಹಳ ತೊಂದರೆಗೊಳಗಾಗಿ ಪರಿತಪಿಸುತ್ತಿರುವ ತನ್ನ ಸೇನೆಯನ್ನು ನೋಡಿ ಶತ್ರುಗಳಿಂದ ಕುಗ್ಗಿಸಲಸದಳವಾದ ಪರಾಕ್ರಮವುಳ್ಳ ಇಂದ್ರಜಿತುವು ತನ್ನ ಯಾಗವು

ಶತ್ರುಭಿರರ್ದಿತಂ । ಉದತಿಷ್ಠತ ದುರ್ಧರ್ಷಸ್ತತ್ಕರ್ಮಣ್ಯನನುಷ್ಠಿತೇ ॥೧೪॥ ವೃಕ್ಷಾಂಧಕಾರಾನ್ನಿರ್ಗತ್ಯ ಜಾತಕ್ರೋಧಸ್ಸರಾವಣಿಃ । ಆರುರೋಹ ರಥಂ ಸಜ್ಜಂ ಪೂರ್ವಯುಕ್ತಂ ಸ ರಾಕ್ಷಸಃ ॥ ೧೫ ॥ ಸಭೀಮಕಾರ್ಮುಕಧರಃ ಕಾಳಮೇಘಸಮಪ್ರಭಃ । ರಕ್ತಾಸ್ಯನಯನಃ ಕ್ರುದ್ಧೋ ಬಭೌ ಮೃತ್ಯುರಿವಾಂತಕಃ ॥೧೬॥ ದೃಷ್ಟ್ವೈವ ತು ರಥಸ್ಥಂ ತಂ ಪರ್ಯವರ್ತತ ತದ್ಬಲಂ । ರಕ್ಷಸಾಂ ಭೀಮವೇಗಾನಾಂ ಲಕ್ಷ್ಮಣೇನ ಯುಯುತ್ಸತಾಂ ॥ ೧೭ ॥ ತಸ್ಮಿನ್ಕಾಲೇತು ಹನುಮಾನುದ್ಯಮ್ಯ ಸುದುರಾಸದಂ । ಧರಣೀಧರಸಂಕಾಶೋ ಮಹಾವೃಕ್ಷಮರಿಂದಮಃ ॥೧೮॥ ಸರಾಕ್ಷಸಾನಾಂ ತತ್ಸೈನ್ಯಂ

ಕೇಳಿ, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ ಇಂದ್ರಜಿತುವು, ತತ್ಕರ್ಮಣಿ - ಆ ನಿಕುಂಭಿಲಾಯಾಗಕರ್ಮವು, ಅನನುಷ್ಠಿತೇ - ಪೂರ್ತಿಮಾಡಲ್ಪಡದಿದ್ದರೂ, ಉದತಿಷ್ಠತ - ಮೇಲಕ್ಕೆದ್ದನು. ॥ ೧೪ ॥ ಸರಾವಣಿಃ - ಆ ರಾವಣನ ಮಗನು, ಸರಾಕ್ಷಸಃ - ರಾಕ್ಷಸರಿಂದೊಡಗೂಡಿ, ಜಾತಕ್ರೋಧಃ - ಹುಟ್ಟಿದ ಕೋಪವುಳ್ಳವನಾಗಿ, ವೃಕ್ಷಾ....ತ್ - ವೃಕ್ಷಗಳ ಅಂಧಕಾರದಿಂದ, ನಿರ್ಗತ್ಯ - ಹೊರಟುಬಂದು, ಪೂರ್ವಯುಕ್ತಂ - ಮೊದಲೇ ಕುದುರೆಗಳಿಂದ ಕೂಡಿರುವ, ಸಜ್ಜಂ - ಸನ್ನದ್ಧವಾದ, ರಥಂ - ತೇರನ್ನು, ಆರುರೋಹ - ಏರಿದನು. ॥ ೧೫ ॥ ಭೀಮ....ರಃ - ಭಯಂಕರವಾದ ಧನುಸ್ಸನ್ನು ಧರಿಸಿರುವ, ಕಾಲ....ಭಃ-ಕಾಲಮೇಘಕ್ಕೆ ಸಮಾನದ ಕಾಂತಿಯುಳ್ಳ, ಸಃ-ಆ ಇಂದ್ರಜಿತುವು, ರಕ್ತಾ....ನಃ-ಕೆಂಪಾದ ಮುಖವೂ, ಕಣ್ಣುಗಳೂ ಉಳ್ಳವನಾದಕಾರಣ, ಕ್ರುದ್ಧಃ - ಕೋಪಿಷ್ಠನಾದ, ಅಂತಕಃ - ನಾಶಕರನಾದ, ಮೃತ್ಯುರಿವ - ಯಮನಂತೆ, ಬಭೌ - ಹೊಳೆಯುತ್ತಿದ್ದನು. ॥ ೧೬ ॥ ರಥಸ್ಥಂ - ರಥಾರೂಢನಾದ, ತಂ - ಆ ಮೇಘನಾದನನ್ನು, ದೃಷ್ಟ್ವೈವತು - ಕಂಡು, ಭೀಮವೇಗಾನಾಂ - ಭಯಂಕರ ವೇಗವುಳ್ಳ, ಲಕ್ಷ್ಮಣೇನ ಲಕ್ಷ್ಮಣನೊಡನೆ, ಯುಯುತ್ಸತಾಂ - ಯುದ್ಧೇಚ್ಛೆಯುಳ್ಳ, ರಕ್ಷಸಾಂ - ರಕ್ಕಸರ, ತದ್ಬಲಂ - ಆ ಸೇನೆಯು, ಪರ್ಯವರ್ತತ - ಸುತ್ತುವರೆದು ನಿಂತಿತು. ॥ ೧೭ ॥ ತಸ್ಮಿನ್ಕಾಲೇ - ಆ ಕಾಲದಲ್ಲಿ, ಧರ....ಶಃ - ಬೆಟ್ಟಕ್ಕೆ ಸಮಾನನಾದ, ಅರಿಂದಮಃ - ಶತ್ರುಸಂಹಾರಕನಾದ, ವಾನರಃ - ಕಪಿಯಾದ, ಸಹನುಮಾನ್ - ಆ ಆಂಜನೇಯನು, ಸುದುರಾಸದಂ - ಹೊಂದಲಸಾಧ್ಯವಾದ, ಮಹಾವೃಕ್ಷಂ - ದೊಡ್ಡ ಮರವನ್ನು, ಉದ್ಯಮ್ಯ - ಎತ್ತಿ, ರಾಕ್ಷಸಾನಾಂ - ರಕ್ಕಸರ, ತತ್ಸೈನ್ಯಂ - ಆ ಸೇನೆಯನ್ನು, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ಬಹುಭಿಃ - ಅನೇಕ

ಪೂರ್ಣವಾಗದಿದ್ದರೂ ಮೇಲಕ್ಕೆದ್ದನು. ಅವನು ಕೂಡಲೇ ವೃಕ್ಷಾಂಧಕಾರದಿಂದ ಹೊರಬಂದು ಸಿದ್ಧವಾಗಿದ್ದ ತನ್ನ ರಥವನ್ನೇರಿದನು. ॥ ೧೧-೧೫ ॥ ಆ ಸಮಯದಲ್ಲಿ ಮಹಾಭಯಂಕರವಾದ ಧನುಸ್ಸನ್ನ ಧರಿಸಿರುವವನೂ, ಕಪ್ಪು ಮೋಡಕ್ಕೆ ಸಮಾನವಾದ ಮೈಬಣ್ಣವುಳ್ಳವನೂ, ಕೋಪದಿಂದ ಕೆರಳಿದ ಮುಖವೂ, ಕಣ್ಣುಗಳೂ ಉಳ್ಳವನೂ ಆದ ಇಂದ್ರಜಿತುವು ಪ್ರಳಯಕಾಲದ ಯಮನಂತೆ ತೋರುತ್ತಿದ್ದನು. ಆ ರಾಕ್ಷಸನೀರೀತಿ ಯಾಗವನ್ನು ತೊರೆದು ಬಂದು ರಥವೇರಿರುವುದನ್ನು ನೋಡಿ ರಾಕ್ಷಸಸೇನೆಯೆಲ್ಲವೂ ಮತ್ತೆ ಧೈರ್ಯವನ್ನವಲಂಬಿಸಿ ಯುದ್ಧಸನ್ನದ್ಧವಾಗಿ ಸುತ್ತುವರೆದು ನಿಂತಿತು. ಆಗ ರಾಕ್ಷಸರೆಲ್ಲರೂ ಲಕ್ಷ್ಮಣನೊಡನೆ ಮಹಾ ಭಯಂಕರವಾದ ಯುದ್ಧವನ್ನು ಮಾಡತೊಡಗಿದರು. ಆ ಸಮಯದಲ್ಲಿ ಪರ್ವತೋಪಮನೂ, ಶತ್ರುತಾಪನನೂ ಆದ ವೀರಹನುಮಂತನು ಯಾರಿಂದಲೂ ಹೊಂದಲಸದಳವಾದ ಮಹಾ ವೃಕ್ಷವೊಂದನ್ನು ಗ್ರಹಿಸಿ ಪ್ರಳಯಕಾಲದ ಬೆಂಕಿಯಂತೆ ರಾಕ್ಷಸ

ಕಾಲಾಗ್ನಿರಿವ ನಿರ್ದಹನ್ । ಚಕಾರ ಬಹುಭಿರ್ವೃಕ್ಷೈರ್ನಿಸ್ಸಂಜ್ಞಂ ಯುಧಿ ವಾನರಃ ॥ ೧೯ ॥ ವಿಧ್ವಂಸಯಂತಂ ತರಸಾ ದೃಷ್ಟ್ವೈವ ಪವನಾತ್ಮಜಂ । ರಾಕ್ಷಸಾನಾಂ ಸಹಸ್ರಾಣಿ ಹನುಮಂತಮವಾಕಿರನ್ ॥ ೨೦ ॥ ಶಿತಶೂಲಧರಾಃ ಶೂಲೈರಸಿಭಿಶ್ಚಾಸಿಪಾಣಯಃ । ಶಕ್ತಿಭಿಃ ಶಕ್ತಿಹಸ್ತಾಶ್ಚ ಪಟ್ಟಸೈಃ ಪಟ್ಟಸಾಯುಧಾಃ ॥ ೨೧ ॥ ಪರಿಘೈಶ್ಚ ಗದಾಭಿಶ್ಚ ಚಕ್ರೈಶ್ಚ ಶುಭದರ್ಶನೈಃ । ಶತಶಶ್ಚ ಶತಘ್ನೀಭಿರಾಯಸೈರಪಿ ಮುದ್ಗರೈಃ ॥ ೨೨ ॥ ಘೋರೈಃ ಪರಶ್ವಧೈಶ್ಚೈವ ಭಿಂಡಿವಾಲೈಶ್ಚ ರಾಕ್ಷಸಾಃ । ಮುಷ್ಟಿಭಿರ್ವಜ್ರಕಲ್ಪೈಶ್ಚ ತಲೈರಶನಿಸನ್ನಿಭೈಃ ॥ ೨೩ ॥ ಅಭಿಜಘ್ನುಸ್ಸಮಾಸಾದ್ಯ ಸಮಂತಾತ್ಪರ್ವ

ಗಳಾದ, ವೃಕ್ಷೈಃ - ಮರಗಳಿಂದ, ಯುಧಿ - ಕಾಳಗದಲ್ಲಿ, ನಿಸ್ಸಂಜ್ಞಂ - ಪ್ರಜ್ಞೆಯಿಲ್ಲದಂತೆ, ಚಕಾರ - ಮಾಡಿದನು. ॥ ೧೮-೧೯ ॥ ರಾಕ್ಷಸಾನಾಂ - ರಕ್ಕಸರ, ಸಹಸ್ರಾಣಿ - ಸಾವಿರಗಳನ್ನು, ತರಸಾ - ಬಲದಿಂದ, ವಿಧ್ವಂಸಯಂತಂ - ಧ್ವಂಸಗೊಳಿಸುತ್ತಿರುವ, ಪವನಾತ್ಮಜಂ - ವಾಯುಪುತ್ರನಾದ, ಹನುಮಂತಂ - ಆಂಜನೇಯನನ್ನು, ಶಿತ....ರಾಃ - ತೀಕ್ಷ್ಣವಾದ ಶೂಲಗಳನ್ನು ಧರಿಸಿರುವರು, ಶೂಲೈಃ - ಶೂಲಗಳಿಂದಲೂ, ಅಸಿಪಾಣಯಃ - ಖಡ್ಗಪಾಣಿಗಳೂ ಅಸಿಭಿಶ್ಚ - ಕತ್ತಿಗಳಿಂದಲೂ, ಶಕ್ತಿಹಸ್ತಾಶ್ಚ- ಶಕ್ತ್ಯಾಯುಧಪಾಣಿಗಳು, ಶಕ್ತಿಭಿಃ - ಶಕ್ತ್ಯಾಯುಧಗಳಿಂದಲೂ, ಪಟ್ಟಸಾಯುಧಾಃ - ಪಟ್ಟಾಕತ್ತಿಗಳೇ ಆಯುಧಗಳಾಗುಳ್ಳವರು, ಪಟ್ಟಸೈಃ - ಪಟ್ಟಾಕತ್ತಿಗಳಿಂದಲೂ, ಅವಾಕಿರನ್ - ಎರಚಿದರು. ॥ ೨೦-೨೧ ॥ ರಾಕ್ಷಸಾಃ - ರಕ್ಕಸರು, ಶತಶಃ - ನೂರಾರಾದ, ಶತಘ್ನೀಭಿಃ - ಪಿರಂಗಿಗಳಿಂದಲೂ, ಆಯಸೈಃ - ಕಬ್ಬಿಣದ, ಮುದ್ಗರೈಃ - ಕೊಡತಿಗಳಿಂದಲೂ ಘೋರೈಃ - ಭಯಂಕರಗಳಾದ, ಪರಶ್ವಧೈಶ್ಚೈವ - ಕೊಡಲಿಗಳಿಂದಲೂ, ಭಿಂಡಿವಾಲೈಶ್ಚ - ಭಿಂಡಿವಾಲಗಳಿಂದಲೂ, ವಜ್ರಕಲ್ಪೈಃ - ವಜ್ರಾಯುಧಕ್ಕೆ ಸಮಾನವಾದ, ಮುಷ್ಟಿಭಿಃ - ಕೈಹಿಡಿಗಳಿಂದಲೂ, ಅಶ....ಭೈಃ - ಸಿಡಿಲಿಗೆ ಸಮಾನವಾದ, ತಲೈಃ - ಅಂಗೈಗಳಿಂದಲೂ, ಸಮಾಸಾದ್ಯ - ಹೊಂದಿ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಪರ್ವತೋಪಮಂ - ಬೆಟ್ಟಕ್ಕೆ ಸಮಾನನಾದ ಆಂಜನೇಯನನ್ನು, ಅಭಿಜಘ್ನುಃ - ಹೊಡೆದರು. ॥ ೨೨-೨೩ ॥ ಸಂಕ್ರುದ್ಧಃ - ಕೋಪಿಷ್ಠನಾದ, ಹನುಮಾನ್ ಆಂಜನೇಯನು, ಮಹತ್ - ದೊಡ್ಡ

ಸೇನೆಯೆಲ್ಲವನ್ನೂ ನಾಶಗೊಳಿಸಲಾರಂಭಿಸಿದನು. ಇಷ್ಟುಮಾತ್ರವಲ್ಲದೆ ಹಲವು ಹೆಮ್ಮರಗಳನ್ನೆಸೆದು ರಾಕ್ಷಸಸೇನೆಯೆಲ್ಲವನ್ನೂ ಮೂರ್ಛೆಗೊಳಿಸಿದನು. ಹೀಗೆ ಮಹಾ ವೇಗದಿಂದ ತನ್ನ ಸೇನೆಯೆಲ್ಲವನ್ನೂ ಮರ್ದಿಸುತ್ತಿರುವ, ಮಹಾ ಕೋಪೋದ್ದೀಪಿತನಾದ ಹನುಮಂತನನ್ನು ನೋಡಿ ಇಂದ್ರಜಿತುವು ಬಹಳವಾಗಿ ಕೆರಳಿಹೋದನು. ಆ ಸಮಯದಲ್ಲಿ ಯಾದರೋ ರಾಕ್ಷಸವೀರರೆಲ್ಲರೂ ಮಹಾ ತೀಕ್ಷ್ಣಗಳಾದ ಶೂಲಗಳನ್ನೂ, ಖಡ್ಗಗಳನ್ನೂ, ಶಕ್ತಿ ಪಟ್ಟಸ ಪರಶು ಭಿಂಡಿವಾಲಗಳನ್ನೂ, ಮಹಾ ಭಯಂಕರವಾದ ಮುದ್ಗರಗಳನ್ನೂ ಗ್ರಹಿಸಿ ಹನುಮಂತನಮೇಲೆ ಅಟ್ಟಿಬಂದರು. ಅವರೆಲ್ಲರೂ ಒಂದೇ ಸಮನೆ ತಮ್ಮ ಆಯುಧಗಳಿಂದ ಆ ಕಪಿವೀರನನ್ನು ಪ್ರಹರಿಸಿದರು. ॥ ೧೬–೨೯ ॥ ಆಗ ಹನುಮಂತನಿಗೂ, ರಾಕ್ಷಸವೀರರಿಗೂ ಭಯಂಕರ ಯುದ್ಧವು ನಡೆಯಿತು. ರಾಕ್ಷಸರಾಜಕುಮಾರನಾದ ಇಂದ್ರಜಿತುವು ಪರ್ವತದಂತೆ ಪ್ರಕಾಶಿಸುತ್ತಿರುವವನೂ, ರಾಕ್ಷಸಸೇನೆಯೆಲ್ಲವನ್ನೂ ನಾಶಗೊಳಿಸುತ್ತಿರುವವನೂ ಆದ ಹನುಮಂತನನ್ನು ನೋಡಿ ತನ್ನ ಸಾರಥಿಯನ್ನು ಕುರಿತು “ ಅಯ್ಯಾ

ತೋಪಮಂ । ತೇಷಾಮಪಿಚ ಸಂಕ್ರುದ್ಧಶ್ಚಕಾರ ಕದನಂ ಮಹತ್ ||೨೪|| ಸ ದದರ್ಶ ಕಪಿಶ್ರೇಷ್ಠಮಚಲೋಪಮ ಮಿಂದ್ರಜಿತ್ । ಸೂದಯಂತ ಮಮಿತ್ರಘ್ನಮಮಿತ್ರಾನ್ ಪವನಾತ್ಮಜಂ || ೨೫ || ಸಸಾರಥಿಮುವಾಚೇದಂ " ಯಾಹಿ ಯತ್ರೈಷ ವಾನರಃ । ಕ್ಷಯಮೇಷಹಿ ನಃ ಕುರ್ಯಾದ್ರಾಕ್ಷಸಾನಾ ಮುಪೇಕ್ಷಿತಃ" ||೨೬|| ಇತ್ಯುಕ್ತಸ್ಸಾರಥಿಸ್ತೇನ ಯಯೌ ಯತ್ರ ಸಮಾರುತಿಃ । ವಹನ್ ಪರಮ ದುರ್ಧರ್ಷಂ ಸ್ಥಿತಮಿಂದ್ರಜಿತಂ ರಥೇ || ೨೭ || ಸೋಽಭ್ಯುಪೇತ್ಯ ಶರಾನ್ ಖಡ್ಗಾನ್ ಪಟ್ಟಸಾಂಶ್ಚ ಪರಶ್ವಧಾನ್ । ಅಭ್ಯವರ್ಷತ ದುರ್ಧರ್ಷಃ ಕಪಿಮೂರ್ಧ್ನಿ ಸರಾಕ್ಷಸಃ || ೨೮ || ತಾನಿ ಶಸ್ತ್ರಾಣಿ ಘೋರಾಣಿ ಪ್ರತಿಗೃಹ್ಯ ಸಮಾರುತಿಃ । ರೋಷೇಣ ಮಹತಾವಿಷ್ಟೋ ವಾಕ್ಯಂಚೇದಮುವಾಚಹ

ದಾದ, ತೇಷಾಮಪಿ - ಆ ರಕ್ಕಸರ, ಕದನಂ - ಕಾಳೆಗವನ್ನು, ಚಕಾರ - ಮಾಡಿದನು, ಸಇಂದ್ರಜಿತ್ - ಆ ಇಂದ್ರಜಿತುವಾದರೆ, ಅಮಿತ್ರಘ್ನಂ - ಶತ್ರುಸಂಹಾರಕನಾದ, ಅಮಿತ್ರಾನ್ - ಶತ್ರುಗಳನ್ನು, ಸೂದಯಂತಂ - ಸಂಹಾರ ಮಾಡುತ್ತಿರುವ, ಅಚಲೋಪಮಂ - ಬೆಟ್ಟಕ್ಕೆ ಸಮಾನವಾದ, ಪವನಾತ್ಮಜಂ - ವಾಯುಪುತ್ರನಾದ, ಕಪಿಶ್ರೇಷ್ಠಂ - ಆಂಜನೇಯನನ್ನು, ದದರ್ಶ - ಕಂಡನು. || ೨೪-೨೫ || ಏಷ ವಾನರಃ - ಈ ಕಪಿಯು, ಯತ್ರ - ಎಲ್ಲಿದ್ದಾನೆಯೋ, ಏಷಃ - ಈ ಆಂಜನೇಯನು, ಉಪೇಕ್ಷಿತಃ - ಉಪೇಕ್ಷೆ ಮಾಡಲ್ಪಟ್ಟವನಾದರೆ, ರಾಕ್ಷಸಾನಾಂ - ರಕ್ಕಸರಿಗೆ, ಕ್ಷಯಂ - ನಾಶವನ್ನು, ಕುರ್ಯಾದ್ಧಿ - ಮಾಡುವನಷ್ಟೆ, ತತ್ರ - ಅಲ್ಲಿ, ಯಾಹಿ - ಹೋಗು, ಇತಿ - ಇಂತೆಂದು, ಇದಂ - ಈ ವಚನವನ್ನು, ಸಾರಥಿಂ - ಸಾರಥಿಯನ್ನು ಕುರಿತು, ಸಃ - ಆ ಇಂದ್ರಜಿತುವು, ಉವಾಚ - ಹೇಳಿದನು, ಇತಿ - ಈ ಪರಿಯಾಗಿ, ತೇನ - ಆ ಇಂದ್ರಜಿತುವಿನಿಂದ, ಉಕ್ತಃ - ಹೇಳಲ್ಪಟ್ಟ, ಸಾರಥಿಃ - ಸಾರಥಿಯು, ಸಮಾರುತಿಃ - ಆ ಆಂಜನೇಯನು, ಯತ್ರ - ಎಲ್ಲಿಯೋ, ರಥೇ - ರಥದಲ್ಲಿ, ಸ್ಥಿತಂ - ಇರುವ, ಪರ....ಷಂ - ತಿರಸ್ಕರಿಸಲಸಾಧ್ಯನಾದ, ಇಂದ್ರಜಿತಂ - ಇಂದ್ರಜಿತುವನ್ನು, ವಹನ್ - ವಹಿಸುತ್ತ, ತತ್ರ - ಅಲ್ಲಿ, ಯಯೌ - ಹೊರಟುಹೋದನು. || ೨೬-೨೭ || ಸಃ - ಪ್ರಸಿದ್ಧನಾದ, ಸಃರಾಕ್ಷಸಃ - ಆ ರಾಕ್ಷಸನಾದ ಇಂದ್ರಜಿತುವು, ಅಭ್ಯುಪೇತ್ಯ - ಬಂದು, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾಗಿ, ಶರಾನ್ - ಬಾಣಗಳನ್ನು, ಖಡ್ಗಾನ್ - ಕತ್ತಿಗಳನ್ನೂ, ಪಟ್ಟಸಾನ್ - ದೊಡ್ಡ ಕತ್ತಿಗಳನ್ನೂ, ಪರಶ್ವಧಾನ್ - ಗಂಡುಗೊಡಲಿಗಳನ್ನೂ, ಕಪಿಮೂರ್ಧ್ನಿ - ಆಂಜನೇಯನ ಶಿರಸ್ಸಿನಲ್ಲಿ, ಅಭ್ಯವರ್ಷತ - ಸುರಿಸಿದನು. || ೨೮ || ಸಮಾರುತಿಃ - ಆ ಆಂಜನೇಯನು, ಘೋರಾಣಿ - ಭಯಂಕರಗಳಾದ, ತಾನಿಶಸ್ತ್ರಾಣಿ - ಆ ಆಯುಧಗಳನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಮಹತಾ - ದೊಡ್ಡದಾದ, ರೋಷೇಣ - ಕೋಪದಿಂದ, ಆವಿಷ್ಟಃ - ವ್ಯಾಪಿಸಲ್ಪಟ್ಟವನಾಗಿ, ಇದಂವಾಕ್ಯಂಚ - ಈ ವಾಕ್ಯವನ್ನೂ ಕೂಡ, ಉವಾಚಹ - ಹೇಳಿದನಷ್ಟೆ.

ಸಾರಥಿಯೇ! ನೀನು ಕೂಡಲೇ ಹನುಮಂತನಿರುವೆಡೆಗೆ ರಥವನ್ನು ತುರುಬು. ಉಪೇಕ್ಷೆ ಮಾಡಿದುದಾದರೆ ಇವನು ರಾಕ್ಷಸರೆಲ್ಲರನ್ನೂ ನಿಶ್ಶೇಷವಾಗಿ ಕೊಂದುರುಳಿಸುವೆನು" ಎಂದು ಹೇಳಿದನು. ಸಾರಥಿಯು ಒಡೆಯನಪ್ಪಣೆಯಂತೆ ರಥವನ್ನು ಆ ಕಪಿವೀರನಿದ್ದೆಡೆಗೆ ತಂದನು. ||೨೧–೨೫|| ಆಗ ರಣರಂಗದಲ್ಲಿ ಶತ್ರುಗಳಾರಿಂದಲೂ ಜಯಿಸಲಸದಳನಾದ ಇಂದ್ರಜಿತುವು ಮಹಾ ತೀಕ್ಷ್ಣಗಳಾದ ಬಾಣಗಳನ್ನೂ, ಖಡ್ಗಗಳನ್ನೂ, ಗಂಡುಗೊಡಲಿಗಳನ್ನೂ ಹನುಮಂತನಮೇಲೆಸೆದನು. ಆಗ ವಾಯುನಂದನನಾದ ಹನುಮಂತನು ಆ ಶಸ್ತ್ರಗಳೆಲ್ಲವನ್ನೂ ಸಹಿಸಿ ಬಹಳವಾಗಿ ಕೆರಳಿ, "ಎಲಾ ದುರಾತ್ಮನೇ, ರಾವಣನ ಮಗನೇ! ನೀನು ಅಂಥ

|| ೨೯ || " ಯುಧ್ಯಸ್ವ ಯದಿ ಶೂರೋಽಸಿ ರಾವಣಾತ್ಮಜ! ದುರ್ಮತೇ! । ವಾಯು ಪುತ್ರಂ ಸಮಾಸಾದ್ಯ ಜೀವನ್ನಪ್ರತಿಯಾಸ್ಯತಿ || ೩೦ || ಬಾಹುಭ್ಯಾಂ ಪ್ರತಿಯುಧ್ಯಸ್ವ ಯದಿ ಮೇ ದ್ವಂದ್ವಮಾಹವೇ । ವೇಗಂ ಸಹಸ್ವ ದುರ್ಬುದ್ಧೇ! ತತಸ್ತ್ವಂ ರಕ್ಷಸಾಂ ವರಃ" ||೩೧|| ಹನುಮಂತಂ ಜಿಘಾಂಸಂತಂ ಸಮುದ್ಯತಶರಾಸನಂ । ರಾವಣಾತ್ಮಜ ಮಾಚಷ್ಟೇ ಲಕ್ಷ್ಮಣಾಯ ವಿಭೀಷಣಃ || ೩೨ || " ಯಸ್ಸವಾಸವನಿರ್ಜೇತಾ ರಾವಣ ಸ್ಯಾತ್ಮಸಂಭವಃ । ಸ ಏಷ ರಥಮಾಸ್ಥಾಯ ಹನುಮಂತಂ ಜಿಘಾಂಸತಿ || ೩೩ || ತಮಪ್ರತಿಮಸಂಸ್ಥಾನೈಃ ಶರೈಃ ಶತ್ರುವಿದಾರಣೈಃ । ಜೀವಿತಾಂತಕರೈ ರ್ಘೋರೈ ಸ್ಸೌಮಿತ್ರೇ! ರಾವಣಿಂ ಜಹಿ" || ೩೪ ||

|| ೨೯ || ಹೇ ರಾವಣಾತ್ಮಜ - ಎಲೈ ರಾವಣಿಯೆ, ದುರ್ಮತೇ - ದುರ್ಬುದ್ಧಿಯುಳ್ಳವನೇ, ಶೂರಃ - ಶೂರನು, ಅಸಿಯದಿ-ಆದವನೇ ಆದರೆ, ಯುಧ್ಯಸ್ವ-ಯುದ್ಧ ಮಾಡು, ವಾಯುಪುತ್ರಂ-ಆಂಜನೇಯ ನನ್ನು, ಸಮಾಸಾದ್ಯ - ಹೊಂದಿ, ಜೀವನ್ - ಬದುಕಿ, ನಪ್ರತಿಯಾಸ್ಯಸಿ - ಹಿಂತಿರುಗಿ ಹೋಗಲಾರೆ. || ೩೦ || ದುರ್ಬುದ್ಧೇ - ದುರ್ಮತಿಯುಳ್ಳವನೇ, ಆಹವೇ - ಕಾಳಗದಲ್ಲಿ, ಮೇ - ನನಗೆ, ದ್ವಂದ್ವಂ - ದ್ವಂದ್ವಯುದ್ಧವನ್ನು, ದಾಸ್ಯಸಿ ಕೊಟ್ಟವನೇ ಆದರೆ, ಬಾಹುಭ್ಯಾಂ ಭುಜಗಳಿಂದ, ಪ್ರತಿಯುಧ್ಯಸ್ವ-ಪ್ರತಿಭಟಿಸಿ ಕಾಳಗವನ್ನು ಮಾಡು, ಮೇ - ನನ್ನ, ವೇಗಂ - ವೇಗವನ್ನು, ಸಹಸ್ವ - ಸಹಿಸಿಕೋ, ತತಃ - ಬಳಿಕ, ತ್ವಂ - ನೀನು, ರಕ್ಷಸಾಂ - ರಕ್ಕಸರಲ್ಲಿ, ವರಃ - ಶ್ರೇಷ್ಠನೇ ಸರಿ. ||೩೧|| ವಿಭೀಷಣಃ - ವಿಭೀಷಣನು, ಹನೂಮಂತಂ - ಆಂಜನೇಯನನ್ನು, ಜಿಘಾಂಸಂತಂ - ಹೊಡೆಯಬಿಚ್ಛೆಯುಳ್ಳ, ಸಮು....ನಂ - ಮೇಲಕ್ಕೆತ್ತಿದ ಧನುಸ್ಸುಳ್ಳ, ರಾವಣಾತ್ಮಜಂ - ಇಂದ್ರಜಿತುವನ್ನು, ಲಕ್ಷ್ಮಣಾಯ - ಲಕ್ಷ್ಮಣನಿಗೆ, ಆಚಷ್ಟೇ - ಹೇಳಿದನು. || ೩೨ || ರಾವಣಸ್ಯ - ರಾವಣನ, ಆತ್ಮಸಂಭವಃ - ಕುವರ ನಾದ, ಯಃ - ಯಾವನು, ವಾಸವನಿರ್ಜೇತಾ - ದೇವೇಂದ್ರನನ್ನು ಜಯಿಸಿದ್ದಾನೋ, ಸಏಷಃ - ಆ ಇಂದ್ರಜಿತುವು, ರಥಂ - ತೇರಿನಲ್ಲಿ, ಆಸ್ಥಾಯ - ಕುಳಿತು, ಹನುಮಂತಂ - ಆಂಜನೇಯನನ್ನು, ಜಿಘಾಂಸತಿ - ಹೊಡೆಯುತಲಿದ್ದಾನೆ. || ೩೩ || ಸೌಮಿತ್ರೇ - ಲಕ್ಷ್ಮಣಾ, ಅಪ್ರ....ನೈಃ - ಸಮಾನ ವಿಲ್ಲದ ಸ್ಥಿತಿಯುಳ್ಳ, ಶತ್ರು....ಣೈಃ - ಶತ್ರುನಾಶಕಗಳಾದ, ಜೀವಿ....ರೈಃ - ಪ್ರಾಣಾಂತಕವಾದ, ಘೋರೈಃ - ಭಯಂಕರಗಳಾದ, ಶರೈಃ - ಬಾಣಗಳಿಂದ, ತಂರಾವಣಿಂ - ಆ ಮೇಘನಾದನನ್ನು, ಜಹಿ - ಹೊಡೆ. || ೩೪ || ಇತ್ಯೇವಂ ಹೀಗೆ, ತದಾ-ಆ ಕಾಲದಲ್ಲಿ, ಮಹಾತ್ಮಾ-ಮಹಾತ್ಮನಾದ ಲಕ್ಷ್ಮಣನು,

ಶೂರನೇ! ಆದರೆ ಸರಿಯಾಗಿ ನಿಂತು ಯುದ್ಧಮಾಡು. ವಾಯುನಂದನನಾದ ನನ್ನನ್ನು ಎದು ರಿಸಿದಮೇಲೆ ಯಾರುತಾನೆ ಜೀವದಿಂದುಳಿದು ಹಿಂತಿರುಗಿಯಾರು ? ಎಲಾ ರಾಕ್ಷಸಾಧಮನೇ! ನೀನು ಸಮರ್ಥನೇ ಆದರೆ ಬಾಹು ಯುದ್ಧವನ್ನು ಮಾಡು. ಹಾಗೆ ನೀನು ನನ್ನೊಡನೆ ಬಾಹು ಯುದ್ಧವನ್ನು ಮಾಡಿದರೆ ರಾಕ್ಷಸವೀರನೇ ಸರಿ" ಎಂದು ಹೇಳಿದನು. || ೨೯=೩೧ || ಹೀಗೆ ಹನುಮಂತನು ನುಡಿಯುತ್ತಿರಲು ಇಂದ್ರಜಿತುವು ಅವನ್ನು ವಧಿಸಲು ಹವಣಿಸುತ್ತಿರುವುದನ್ನು ಕಂಡು ವಿಭೀಷನು ಲಕ್ಷ್ಮಣನನ್ನು ಕುರಿತು, " ಎಲೈ ರಾಘವಶ್ರೇಷ್ಠನೇ! ಮಹೇಂದ್ರನನ್ನು ಜಯಿಸಿದವನೂ ರಾವಣನ ಮಗನೂ ಆದ ಈ ಇಂದ್ರಜಿತುವು ರಥಾರೂಢನಾಗಿ ಹನುಮಂತ ನನ್ನು ಕೊಲ್ಲಬಯಸಿರುವನು. ಆದುದರಿಂದ ನೀನೀಗಲೇ ಅನುಪಮಾನಗಳಾದುವೂ, ಶತ್ರು ಹೃದಯಗಳನ್ನು ಭೇದಿಸುವುವೂ, ಪ್ರಾಣನಾಶಕಗಳೂ ಆದ ಬಾಣಗಳನ್ನು ಪ್ರಯೋಗಿಸಿ

ಇತ್ಯೇವಮುಕ್ತಸ್ತು ತದಾ ಮಹಾತ್ಮಾ
ವಿಭೀಷಣೇನಾರಿವಿಭೀಷಣೇನ ।
ದದರ್ಶ ತಂ ಪರ್ವತಸನ್ನಿಕಾಶಂ
ರಣೇ ಸ್ಥಿತಂ ಭೀಮಬಲಂ ನದಂತಂ ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡಶೀತಿತಮಸ್ಸರ್ಗಃ.

ಅರಿ....ನ - ಶತ್ರುಗಳಿಗೆ ಭಯಂಕರನಾದ, ವಿಭೀಷಣೇನ - ವಿಭೀಷಣನಿಂದ, ಉಕ್ತಃ - ಹೇಳಲ್ಪಟ್ಟವನಾಗಿ, ಪರ್ವ....ಶಂ - ಬೆಟ್ಟಕ್ಕೆ ಸಮಾನನಾದ, ರಣೇ - ಕಾಳೆಗದಲ್ಲಿ, ಸ್ಥಿತಂ - ಇರುವ, ಭೀಮಬಲಂ - ಭಯಂಕರ ಸೇನೆಯುಳ್ಳ, ನದಂತಂ - ಗರ್ಜಿಸುತ್ತಿರುವ, ತಂ - ಆ ಇಂದ್ರಜಿತುವನ್ನು, ದದರ್ಶ - ಕಂಡನು. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡಶೀತಿತಮಸ್ಸರ್ಗಃ.

ಈ ಇಂದ್ರಜಿತುವನ್ನು ವಧಿಸು" ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಮಹಾನುಭಾವನಾದ ಲಕ್ಷ್ಮಣನು ಮಹಾ ಭಯಂಕರವಾದ ಆಕಾರವುಳ್ಳವನೂ, ಪರ್ವತೋಪಮನೂ ಆಗಿ ಬಹು ಗಂಭೀರವಾಗಿ ಸಿಂಹನಾದ ಮಾಡುತ್ತಿದ್ದ ಆ ಇಂದ್ರಜಿತುವನ್ನು ನೋಡಿದನು. ॥ ೩೨–೩೫ ॥

ಇಂತಿದು ಇಂದ್ರಜಿದ್ಯುದ್ಧಾರಂಭವೆಂಬ ಎಂಬತ್ತಾರನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತಾಶೀತಿತಮಸ್ಸರ್ಗಃ

ಏವಮುಕ್ತ್ವಾತು ಸೌಮಿತ್ರಿಂ ಜಾತಹರ್ಷೋ ವಿಭೀಷಣಃ । ಧನುಷ್ಪಾಣಿನ ಮಾದಾಯ ತ್ವರಮಾಣೋ ಜಗಾಮ ಸಃ ॥೧॥ ಅವಿದೂರಂ ತತೋ ಗತ್ವಾ ಪ್ರವಿಶ್ಯಚ ಮಹದ್ವನಂ । ದರ್ಶಯಾಮಾಸ ತತ್ಕರ್ಮ ಲಕ್ಷ್ಮಣಾಯ ನ್ಯವೇದಯತ್ ॥ ೩ ॥ "ಇಹೋಪಹಾರಂ ಭೂತಾನಾಂ ಬಲವಾ ರಾವಣಾತ್ಮಜಃ । ಉಪಾಹೃತ್ಯ ತತಃ ಪಶ್ಚಾತ್ಸಂಗ್ರಾಮಮಭಿವರ್ತತೇ ॥ ೪ ॥ ಅದೃಶ್ಯಸ್ಸರ್ವಭೂತಾನಾಂ ತತೋ ಭವತಿ ರಾಕ್ಷಸಃ । ನಿಹಂತಿ ಸಮರೇ ಶತ್ರೂ ಬಧ್ನಾತಿ ಚ ಶರೋತ್ತಮೈಃ ॥ ೫ ॥ ತಮ

ಏವಂ- ಈ ಪರಿಯಾಗಿ, ಧನುಷ್ಪಾಣಿನಂ-ಧನುರ್ಧಾರಿಯಾದ, ಸೌಮಿತ್ರಿಂ-ಲಕ್ಷ್ಮಣನನ್ನು ಕುರಿತು, ಉಕ್ತ್ವಾ - ಹೇಳಿ, ಜಾತಹರ್ಷಃ - ಹುಟ್ಟಿದ ಹರ್ಷವುಳ್ಳ, ಸವಿಭೀಷಣಃ - ಆ ವಿಭೀಷಣನು, ಆದಾಯ - ಕರೆದುಕೊಂಡು, ತ್ವರಮಾಣಃ - ಜಾಗ್ರತೆ ಮಾಡುವನಾಗಿ, ಜಗಾಮ - ತೆರಳಿದನು. ॥೧॥ ತತಃ - ಬಳಿಕ, ವಿಭೀಷಣಃ - ವಿಭೀಷಣನು, ಅವಿದೂರಂ - ಸಮೀಪದಲ್ಲಿ, ಗತ್ವಾ - ಬಂದು, ಮಹದ್ವನಂ - ಮಹತ್ತರವಾದ ಕಾಡನ್ನು, ಪ್ರವಿಶ್ಯ - ಹೊಕ್ಕು, ಲಕ್ಷ್ಮಣಾಯ - ಲಕ್ಷ್ಮಣನಿಗೆ, ತತ್ಕರ್ಮ - ಆ ನಿಕುಂಭಿಲಾಯಾಗರೂಪಕರ್ಮವನ್ನು, ದರ್ಶಯಾಮಾಸ - ತೋರಿಸಿದನು. ॥ ೨ ॥ ತೇಜಸ್ವೀ - ಬಹಳ ತೇಜಸ್ವಿಯಾದ, ರಾವಣಭ್ರಾತಾ - ರಾವಣಾಸುರನಿಗೆ ತಮ್ಮನಾದ ವಿಭೀಷಣನು, ನೀಲ....ಶಂ - ನೀಲಮೇಘಕ್ಕೆ ಸಮಾನವಾದ, ಭೀಮದರ್ಶನಂ - ಭಯಂಕರವಾದ ನೋಟವುಳ್ಳ, ನ್ಯಗ್ರೋಧಂ - ವಟವೃಕ್ಷವನ್ನು, ಲಕ್ಷ್ಮಣಾಯ - ಲಕ್ಷ್ಮಣನಿಗೆ, ನ್ಯವೇದಯತ್ - ತೋರಿಸಿದನು. ॥ ೩ ॥ ಇಹ - ಈ ಸ್ಥಳದಲ್ಲಿ, ಬಲವಾ - ಬಲಶಾಲಿಯಾದ, ರಾವಣಾತ್ಮಜಃ - ಇಂದ್ರಜಿತುವು, ಭೂತಾನಾಂ - ಭೂತಗಳಿಗೆ, ಉಪಹಾರಂ - ಬಲಿಯನ್ನು, ಉಪಹೃತ್ಯ - ಸಮರ್ಪಿಸಿ, ತತಃಪಶ್ಚಾತ್ - ಆ ಬಳಿಕ ಸಂಗ್ರಾಮಂ - ಕಾಳಗವನ್ನು ಕುರಿತು, ಅಭಿವರ್ತತೇ - ಬರುತ್ತಾನೆ. ॥ ೪ ॥ ತತಃ - ಬಳಿಕ, ರಾಕ್ಷಸಃ- ರಕ್ಷಸನಾದ ಇಂದ್ರಜಿತುವು, ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ಅದೃಶ್ಯಃ - ಕಾಣಿಸದವನು, ಭವತಿ - ಆಗುತ್ತಾನೆ, ಸಮರೇ - ಕಾಳಗದಲ್ಲಿ, ಶತ್ರೂ - ಶತ್ರುಗಳನ್ನು, ನಿಹಂತಿ - ಹೊಡೆಯುತ್ತಾನೆ,

---

ವಿಭೀಷಣನು ಈ ಪ್ರಕಾರವಾಗಿ ಹೇಳಿ ಪರಮ ಸಂತೋಷವುಳ್ಳವನಾಗಿ ಧನುರ್ಧಾರಿಯಾದ ಲಕ್ಷ್ಮಣಸ್ವಾಮಿಯನ್ನು ಕರೆದುಕೊಂಡು ಬಹಳ ಜಾಗ್ರತೆಯಾಗಿ ಹೊರಟನು. ಹೀಗೆ ಸ್ವಲ್ಪದೂರ ಹೋಗಿ ದೊಡ್ಡದೊಂದು ಅರಣ್ಯವನ್ನು ಪ್ರವೇಶಿಸಿ ಇಂದ್ರಜಿತುವು ಮಾಡುತ್ತಿದ್ದ ಮಹಾ ಭಯಂಕರವಾದ ಆ ನಿಕುಂಭಿಲಾ ಯಾಗವನ್ನು ಲಕ್ಷ್ಮಣನಿಗೆ ತೋರಿಸಿದನು. ಇಷ್ಟೆಯಲ್ಲದೆ ಆ ರಾವಣಾನುಜನು ನೀಲಮೇಘೋಪಮನಾಗಿ ನೋಡಲು ಅತ್ಯಂತ ಭಯಂಕರವಾದ ಒಂದು ದೊಡ್ಡ ಆಲದ ಮರವನ್ನು ರಾಮಾನುಜನಿಗೆ ತೋರಿ ಆತನನ್ನು ಕುರಿತು, "ಇಂದ್ರಜಿತುವು ಈ ಪ್ರದೇಶದಲ್ಲಿ ಭೂತಬಲಿಯನ್ನು ಮಾಡಿದ ತರುವಾಯ ರಣರಂಗಕ್ಕೆ ಬರಬೇಕೆಂದು ಬಯಸಿದ್ದಾನೆ. ಈತನು ಈ ಯಾಗವನ್ನು ಮುಗಿಸಿ ಬಂದನೆಂದರೆ ಸಮಸ್ತ ಭೂತಗಳಿಗೂ ಅದೃಶ್ಯನಾಗುತ್ತಾನೆ. ಹಾಗೆ ಅದೃಶ್ಯನಾಗಿ ಶತ್ರುಗಳನ್ನು ಸಂಹರಿಸಲು

ಪ್ರವಿಷ್ಟನ್ಯಗ್ರೋಧಂ ಬಲಿನಂ ರಾವಣಾತ್ಮಜಂ । ವಿಧ್ವಂಸಯ ಶರೈಸ್ತೀಕ್ಷ್ಣೈಃ ಸ್ಸರಥಂ ಸಾಶ್ವಸಾರಥಿಂ" ॥ ೬ ॥ ತಥೇತ್ಯುಕ್ತ್ವಾ ಮಹಾತೇಜಾ ಸ್ಸೌಮಿತ್ರಿರ್ಮಿತ್ರನಂದನಃ । ಬಭೂವಾವಸ್ಥಿತ ಸ್ತತ್ರ ಚಿತ್ರಂ ವಿಸ್ಫಾರಯನ್ಧನುಃ ॥ ೭ ॥ ಸರಥೇನಾಗ್ನಿವರ್ಣೇನ ಬಲವಾನ್ ರಾವಣಾತ್ಮಜಃ । ಇಂದ್ರಜಿತ್ಕವಚೀ ಧನ್ವೀ ಸಧ್ವಜಃ ಪ್ರತ್ಯದೃಶ್ಯತ ॥ ೮ ॥ ತಮುವಾಚ ಮಹಾತೇಜಾಃ ಪೌಲಸ್ತ್ಯಮಪರಾಜಿತಂ । "ಸಮಾಹ್ವಯೇ ತ್ವಾಂ ಸಮರೇ ಸಮ್ಯಗ್ಯುದ್ಧಂ ಪ್ರಯಚ್ಛಮೇ" ॥ ೯ ॥ ಏವಮುಕ್ತೋ ಮಹಾತೇಜಾ ಮನಸ್ವೀ

ಶರೋತ್ತಮೈಃ-ಉತ್ತಮ ಬಾಣಗಳಿಂದ, ಬಧ್ನಾತಿ-ಕಟ್ಟುತ್ತಾನೆ. ॥೫॥ ಅಪ್ರ....ಧಂ-ಪ್ರವೇಶಿಸಲ್ಪಡದಿರುವ ವಟವೃಕ್ಷವುಳ್ಳ, ಬಲಿನಂ-ಬಲವಂತನಾದ, ಸರಥಂ-ರಥದಿಂದೊಡಗೂಡಿದ, ಸಾಶ್ವಸಾರಥಿಂ-ಕುದುರೆಗಳಿಂದಲೂ ಸಾರಥಿಯಿಂದಲೂ ಕೂಡಿದ, ತಂ ರಾವಣಾತ್ಮಜಂ - ಆ ಇಂದ್ರಜಿತುವನ್ನು, ತೀಕ್ಷ್ಣೈಃ - ಕ್ರೂರಗಳಾದ, ಶರೈಃ - ಬಾಣಗಳಿಂದ, ವಿಧ್ವಂಸಯ - ನಾಶಗೊಳಿಸು. ॥ ೬ ॥ ತಥೇತಿ - ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಮಹಾತೇಜಾಃ - ಮಹಾ ತೇಜೋವಂತನಾದ, ಮಿತ್ರನಂದನಃ - ಸೂರ್ಯಕುಲಾನಂದಕರನಾದ, ಸೌಮಿತ್ರಿಃ - ಲಕ್ಷ್ಮಣನು, ಚಿತ್ರಂ - ಆಶ್ಚರ್ಯಕರವಾದ, ಧನುಃ - ಬಿಲ್ಲನ್ನು, ವಿಸ್ಫಾರಯನ್ - ಟಂಕಾರ ಮಾಡುತ್ತ, ತತ್ರ - ಆ ಸ್ಥಳದಲ್ಲಿ, ಸ್ಥಿತಃ - ಇರುವವನು, ಬಭೂವ - ಆದನು. ॥ ೭ ॥ ಬಲವಾನ್ - ಬಲಶಾಲಿಯಾದ, ರಾವಣಾತ್ಮಜಃ - ರಾವಣನ ಕುವರನಾದ, ಸ ಇಂದ್ರಜಿತ್ - ಆ ಇಂದ್ರಜಿತುವು, ಅಗ್ನಿವರ್ಣೇನ - ಅಗ್ನಿಯ ಬಣ್ಣವುಳ್ಳ, ರಥೇನ - ರಥದೊಡನೆ, ಕವಚೀ - ಕವಚಧಾರಿಯಾಗಿ, ಧನ್ವೀ - ಧನುರ್ಧಾರಿಯಾಗಿ, ಸಧ್ವಜಃ - ಧ್ವಜದಿಂದೊಡಗೂಡಿ, ಪ್ರತ್ಯದೃಶ್ಯತ - ಕಾಣಿಸಿದನು. ॥ ೮ ॥ ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ ಲಕ್ಷ್ಮಣನು, ಪೌಲಸ್ತ್ಯಂ - ಪೌಲಸ್ತ್ಯಬ್ರಹ್ಮನ ವಂಶೋತ್ಪನ್ನನಾದ, ಅಪರಾಜಿತಂ - ಎಂದಿಗೂ ಪರಾಜಿತನಾಗದಿರುವ, ತಂ - ಆ ಇಂದ್ರಜಿತುವನ್ನು ಕುರಿತು, ಸಮರೇ - ಕಾಳಗದಲ್ಲಿ, ತ್ವಾಂ - ನಿನ್ನನ್ನು, ಸಮಾಹ್ವಯೇ - ಕರೆಯುತ್ತೇನೆ, ಸಮ್ಯಕ್ - ಚೆನ್ನಾಗಿ, ಮೇ - ನನಗೆ, ಯುದ್ಧಂ - ಕಾಳಗವನ್ನು, ಪ್ರಯಚ್ಛ - ಕೊಡು, ಇತಿ - ಇಂತೆಂದು, ಉವಾಚ - ಹೇಳಿದನು. ॥ ೯ ॥ ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಮಹಾತೇಜಾಃ - ಬಹಳ ಸಾಮರ್ಥ್ಯವಂತನಾದ,

---

ಸರ್ವಸಮರ್ಥನಾಗುವನು. ಆದುದರಿಂದ ಆತನು ಹಿಂತಿರುಗಿ ಬಂದು ಈಯಾಲದ ಮರದ ಕೆಳಗೆ ಕುಳಿತು ಹೋಮವನ್ನು ಮಾಡಿ ಮುಗಿಸುವುದರೊಳಗಾಗಿ ನೀನು ಮಹಾ ತೀಕ್ಷ್ಣವಾದ ಬಾಣಗಳಿಂದ ಆತನನ್ನು ಸಂಹರಿಸುವವನಾಗು" ಎಂದು ಹೇಳಿದನು. ॥೧–೬॥ ಆಗ ಮಹಾ ತೇಜಸ್ವಿಯಾದ ಸೌಮಿತ್ರಿಯು ಹಾಗೆಯೇ ಆಗಲೆಂದು ಹೇಳಿ ಧನುಷ್ಟಂಕಾರ ಮಾಡುತ್ತ ಆ ಪ್ರದೇಶದಲ್ಲಿಯೇ ನಿಂತು ಇಂದ್ರಜಿತುವನ್ನು ನಿರೀಕ್ಷಿಸುತ್ತಿದ್ದನು. ಅಷ್ಟರಲ್ಲಿ ಮಹಾ ಬಲನೂ, ರಣದುರ್ಮದನೆಂದು ಪ್ರಖ್ಯಾತನೂ, ರಾವಣಕುಮಾರನೂ ಆದ ಇಂದ್ರಜಿತುವು ಕವಚಧಾರಿಯೂ, ಧನುರ್ಧಾರಿಯೂ ಆಗಿ ಅಗ್ನಿಯಂತೆ ಪ್ರಕಾಶಿಸುತ್ತಿರುವ ರಥವನ್ನೇರಿ ಆ ಪ್ರದೇಶಕ್ಕೆ ಬಂದನು. ಹೀಗೆ ಸಮೀಪಕ್ಕೆ ಬಂದ, ಶತ್ರುಗಳಿಗೆ ಅಜೇಯನೂ, ಪುಲಸ್ತ್ಯವಂಶೋತ್ಪನ್ನನೂ ಆದ ಆ ಮೇಘನಾದನನ್ನು ನೋಡಿ ಲಕ್ಷ್ಮಣನು ಅವನನ್ನು ಕುರಿತು, "ಎಲಾ ರಾಕ್ಷಸನೇ! ನಾನು ನಿನ್ನನ್ನೇ ನಿರೀಕ್ಷಿಸುತ್ತ ಯುದ್ಧಸನ್ನದ್ಧನಾಗಿರುವೆನು. ನನಗೆ ಯುದ್ಧವನ್ನು ಕೊಡು" ಎಂದು ಕೂಗಿ ಹೇಳಿದನು. ಈ ರೀತಿ ನುಡಿದ ಲಕ್ಷ್ಮಣನ ಮಾತು

ರಾವಣಾತ್ಮಜಃ । ಅಬ್ರವೀತ್ಪರುಷಂ ವಾಕ್ಯಂ ತತ್ರ ದೃಷ್ಟ್ವಾ ವಿಭೀಷಣಂ ॥೧೦॥ "ಇಹ ತ್ವಂ ಜಾತಸಂವೃದ್ಧಸ್ಸಾಕ್ಷಾದ್ಭ್ರಾತಾ ಪಿತುರ್ಮಮ । ಕಥಂ ದ್ರುಹ್ಯಸಿ ಪುತ್ರಸ್ಯ ಪಿತೃವ್ಯೋ ಮಮ ರಾಕ್ಷಸ! ॥ ೧೧ ॥ ನಜ್ಞಾತಿತ್ವಂ ನಸೌಹಾರ್ದಂ ನಜಾತಿಸ್ತವ ದುರ್ಮತೇ! । ಪ್ರಮಾಣಂ ನಚ ಸೋದರ್ಯಂ ನಧರ್ಮೋ ಧರ್ಮದೂಷಣ! ॥೧೨॥ ಶೋಚ್ಯಸ್ತ್ವಮಸಿ ದುರ್ಬುದ್ಧೇ! ನಿಂದನೀಯಶ್ಚ ಸಾಧುಭಿಃ । ಯಸ್ತ್ವಂ ಸ್ವಜನಮುತ್ಸೃಜ್ಯ ಪರಭೃತ್ಯತ್ವಮಾಗತಃ ॥ ೧೩ ॥ ನೈತಚ್ಛಿಥಿಲಯಾ ಬುದ್ಧ್ಯಾ ತ್ವಂ ವೇತ್ಸಿ ಮಹದಂತರಂ । ಕ್ವಚ ಸ್ವಜನಸಂವಾಸಃ ಕ್ವಚ ನೀಚಪರಾಶ್ರಯಃ? ॥ ೧೪ ॥

ಮನಸ್ವೀ - ಧೈರ್ಯಶಾಲಿಯಾದ, ರಾವಣಾತ್ಮಜಃ - ಇಂದ್ರಜಿತ್ತುವು, ತತ್ರ - ಅಲ್ಲಿ, ವಿಭೀಷಣಂ - ವಿಭೀಷಣನನ್ನು, ದೃಷ್ಟ್ವಾ - ಕಂಡು, ಪರುಷಂ ಕ್ರೂರವಾದ, ವಾಕ್ಯಂ - ಮಾತನ್ನು, ಅಬ್ರವೀತ್- ನುಡಿದನು. ॥ ೧೦ ॥ ಹೇ ರಾಕ್ಷಸ - ಎಲೈ ರಾಕ್ಷಸನೇ, ಇಹ - ಈ ವಂಶದಲ್ಲಿ, ತ್ವಂ - ನೀನು, ಜಾತಸಂವೃದ್ಧಃ - ಹುಟ್ಟಿ ಬೆಳೆದವನಾಗಿ, ಮಮ - ನನ್ನ, ಪಿತುಃ - ತಂದೆಗೆ, ಸಾಕ್ಷಾದ್ಭ್ರಾತಾ - ತಮ್ಮನಾಗಿ, ಪುತ್ರಸ್ಯ - ಮಗನಾದ, ಮಮ - ನನಗೆ, ಪಿತೃವ್ಯಃ - ಚಿಕ್ಕಪ್ಪನಾಗಿ, ಕಥಂ - ಹೇಗೆ, ದೃಹ್ಯಸಿ - ದ್ರೋಹವನ್ನು ಮಾಡುತ್ತೀಯೆ. ॥ ೧೧ ॥ ದುರ್ಮತೇ - ದುರ್ಬುದ್ಧಿಯುಳ್ಳವನೇ, ಧರ್ಮದೂಷಣ - ಕುಲಧರ್ಮಕ್ಕೆ ದೂಷಕನೇ, ತವ - ನಿನಗೆ, ಜ್ಞಾತಿತ್ವಂ - ಬಂಧುತ್ವವು, ನ - ಇಲ್ಲವೆ, ಸೌಹಾರ್ದಂ - ಸ್ನೇಹಭಾವವು, ನ - ಇಲ್ಲವೆ, ಜಾತಿಃ - ಜಾತಿಯು, ನ - ಇಲ್ಲವೆ, ಪ್ರಮಾಣಂ - ಪ್ರಮಾಣವು ಮರ್ಯಾದೆಯೂ, ನ - ಇಲ್ಲವೆ, ಸೋದರ್ಯಂ - ಭ್ರಾತೃತ್ವವೂ, ನ - ಇಲ್ಲವೆ, ಧರ್ಮಃ - ಧರ್ಮವು, ನ - ಇಲ್ಲವೆ. ॥ ೧೨ ॥ ದುರ್ಬುದ್ಧೇ - ಕೆಟ್ಟಬುದ್ಧಿಯವನೇ, ತ್ವಂ - ನೀನು, ಶೋಚ್ಯಃ - ದುಃಖಿಸತಕ್ಕವನು, ಅಸಿ - ಆಗಿರುವೆ, ಸಾಧುಭಿಃ - ಸತ್ಪುರುಷರಿಂದ, ನಿಂದನೀಯಶ್ಚ - ನಿಂದನೆ ಮಾಡತಕ್ಕವನು, ಅಸಿ - ಆಗಿರುವೆ, ಯಸ್ತ್ವಂ - ಯಾವ ನೀನು, ಸ್ವಜನಂ - ತನ್ನ ಜನವನ್ನು, ಉತ್ಸೃಜ್ಯ - ಬಿಟ್ಟು, ಪರಭೃತ್ಯತ್ವಂ - ಶತ್ರುಗಳಿಗೆ ಆಳ್ತನವನ್ನು, ಆಗತಃ - ಹೊಂದಿದೆಯೋ. ॥೧೩॥ ತ್ವಂ - ನೀನು, ಶಿಥಿಲಯಾ - ತುಚ್ಛವಾಗಿರುವ, ಬುಧ್ಯಾ - ಬುದ್ಧಿಯಿಂದ, ಮಹತ್ - ದೊಡ್ಡದಾದ, ಏತದಂತರಂ - ಈ ತಾರತಮ್ಯವನ್ನು, ನವೇತ್ಸಿ - ತಿಳಿಯದೇ ಹೋದೆ, ಸ್ವಜ....ಸಃ - ಸ್ವಜನರ ಸಹವಾಸವು, ಕ್ವ - ಎಲ್ಲಿ, ನೀಚ....ಯಃ - ನೀಚರಾದ ಶತ್ರುಗಳ ಆಶ್ರಯವು, ಕ್ವ - ಎಲ್ಲಿ. ॥ ೧೪ ॥

ಗಳನ್ನು ಕೇಳಿ ಸ್ಥಿರಚಿತ್ತನೂ, ಮಹಾ ತೇಜಸ್ವಿಯೂ ಆದ ಆ ರಾವಣಾತ್ಮಜನು ಲಕ್ಷ್ಮಣನ ಸಮೀಪದಲ್ಲಿಯೇ ನಿಂತಿದ್ದ ತನ್ನ ಚಿಕ್ಕ ತಂದೆಯಾದ ವಿಭೀಷಣನನ್ನು ಕಂಡನು. ॥೭–೧೦॥ ಆತನನ್ನುಕಂಡೊಡನೆಯೇ ಇಂದ್ರಜಿತುವು ಆತನನ್ನುಕುರಿತು, ಬಹು ಕಠಿನವಾಗಿ "ವಿಭೀಷಣಾ! ನೀನು ನನಗೆ ಹಿರಿಯನಾದವನು. ನನ್ನತಂದೆಯಾದ ರಾವಣಾಸುರನಿಗೆ ತಮ್ಮನಾದವನು. ಆದರಿಂದ ನೀನು ನನಗೆ ಚಿಕ್ಕ ತಂದೆಯಾದೆ. ಇಂತಹ ನೀನು ನಿನಗೆ ಮಗನಾಗಿರುವ ನನ್ನಲ್ಲಿಯೇ ದ್ರೋಹವನ್ನು ಮಾಡಬಹುದೇ! ಎಲೈ ಧರ್ಮಬಾಹಿರನೇ, ದುರ್ಬುದ್ಧಿಯೇ! ನಿನಗೆ ಬಂಧುತ್ವ, ಸ್ನೇಹ, ಕುಲ, ಸೋದರ ವಾತ್ಸಲ್ಯ, ಧರ್ಮಪ್ರಮಾಣ ಯಾವುದೂ ಇಲ್ಲವಾಯಿತೇ! ಎಲೈ ದುರುಳನೇ, ವಿಭೀಷಣಾ! ನೀನು ಕೇವಲ ನಿಂದನೀಯನು. ಸತ್ಪುರುಷರು ನಿನ್ನನ್ನು ತಿರಸ್ಕರಿಸಲು ಯೋಗ್ಯನಾಗಿದ್ದೀಯೆ? ಅಯ್ಯೋ! ನಿನಗೆ ಹುಟ್ಟಿರುವ ಈ ಬುದ್ಧಿಗೇನೆಂದು ಹೇಳಬೇಕು? ಸ್ವಜನವನ್ನು ತೊರೆದು ಶತ್ರುಗಳಿಗೆ ಸೇವಕನಾಗಿರುವೆಯಲ್ಲವೆ! ಎಲಾ ರಾಕ್ಷಸನೇ! ನೀನು

ಗುಣವಾನ್ ವಾ ಪರಜನಸ್ಸ್ವಜನೋ ನಿರ್ಗುಣೋಽಪಿ ವಾ । ನಿರ್ಗುಣಸ್ಸ್ವಜನಃ ಶ್ರೇಯಾನ್ ಯಃ ಪರಃ ಪರ ಏವ ಸಃ ॥ ೧೫ ॥ ಯಸ್ಸ್ವಪಕ್ಷಂ ಪರಿತ್ಯಜ್ಯ ಪರಪಕ್ಷಂ ನಿಷೇವತೇ । ಸ ಸ್ವಪಕ್ಷೇ ಕ್ಷಯಂ ಪ್ರಾಪ್ತೇ ಪಶ್ಚಾತ್ತೈರೇವ ಹನ್ಯತೇ ॥ ೧೬ ॥ ನಿರನುಕ್ರೋಶತಾ ಚೇಯಂ ಯಾದೃಶೀ ತೇ ನಿಶಾಚರ! । ಸ್ವಜನೇನ ತ್ವಯಾ ಶಕ್ಯಂ ಪರುಷಂ ರಾವಣಾನುಜ । ಇತ್ಯುಕ್ತೋ ಭ್ರಾತೃಪುತ್ರೇಣ ಪ್ರತ್ಯುವಾಚ ವಿಭೀಷಣಃ

ಪರಜನಃ - ಪರಕೀಯರಾದ ಶತ್ರುಜನವು, ಗುಣವಾನ್ವಾ - ಗುಣವಂತರೇ ಆಗಲಿ, ಸ್ವಜನಃ - ತನ್ನ ಜನವು, ನಿರ್ಗುಣೋಽಪಿವಾ - ಗುಣಹೀನರೇ ಆಗಲಿ, ನಿರ್ಗುಣಃ - ಗುಣಹೀನರಾದ, ಸ್ವಜನಃ - ಸ್ವಜನರು, ಶ್ರೇಯಾನ್ - ಉತ್ತಮರು, ಯಃಪರಃ - ಶತ್ರುಗಳು ಯಾರೋ, ಸಃ - ಅವರು, ಪರಏವ - ಶತ್ರುಗಳೇ. ॥೧೫॥ ಯಃ - ಯಾವ ಪುರುಷನು, ಸ್ವಪಕ್ಷಂ - ತನ್ನ ಪಕ್ಷವನ್ನು, ಪರಿತ್ಯಜ್ಯ - ಬಿಟ್ಟು, ಪರಪಕ್ಷಂ - ಶತ್ರುಗಳ ಪಕ್ಷವನ್ನು, ನಿಷೇವತೇ - ಸೇವಿಸುತ್ತಾನೆಯೋ, ಸ್ವಪಕ್ಷೇ - ತನ್ನ ಪಕ್ಷದ ಜನವು, ಕ್ಷಯಂ - ನಾಶವನ್ನು, ಪ್ರಾಪ್ತೇ - ಹೊಂದಿದರೆ, ಸಃ - ಅವನು, ಪಶ್ಚಾತ್ - ಬಳಿಕ, ತೈರೇವ - ಆ ಶತ್ರುಗಳಿಂದಲೇ, ಹನ್ಯತೇ - ಹೊಡೆಯಲ್ಪಡುತ್ತಾನೆ. ॥ ೧೬ ॥ ನಿಶಾಚರ - ರಕ್ಕಸನೇ, ಇಯಂನಿರನುಕ್ರೋಶತಾಚ - ಇಂಥಾ ದಯಾಹೀನತೆಯು, ತೇ - ನಿನಗೆ, ಯಾದೃಶೀ - ಎಂಥದೋ, ರಾವಣಾನುಜ - ರಾವಣನಿಗೆ ತಮ್ಮನಾದವನೇ, ಸ್ವಜನೇನ - ಸ್ವಕೀಯಜನವಾದ, ತ್ವಯಾ - ನಿನ್ನಿಂದ, ಪರುಷಂ - ಕ್ರೂರವಾದ ಇಂಥಾ ಕಾರ್ಯವು, ಶಕ್ಯಂ - ಸಾಧ್ಯವು. ॥ ೧೭ ॥ ಭ್ರಾತೃಪುತ್ರೇಣ - ಅಣ್ಣನ ಮಗನಿಂದ, ಇತ್ಯುಕ್ತಃ - ಈ ಪರಿಯಾಗಿ ಹೇಳಲ್ಪಟ್ಟ, ವಿಭೀಷಣಃ ವಿಭೀಷಣನು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು, ರಾಕ್ಷಸ - ರಕ್ಕಸನೇ, ಮಚ್ಛೀಲಂ - ನನ್ನ ಸ್ವಭಾವವನ್ನು,

ನಿನ್ನ ದುರ್ಬುದ್ಧಿಯಿಂದ ವಾನರರಾಕ್ಷಸರಿಗಿರುವ ತಾರತಮ್ಯವನ್ನೂ ತಿಳಿಯದವನಾದೆ. ಬಂಧುಗಳೊಡನೆ ಕಲೆತು ಮಲೆತಿರುವುದೆತ್ತ? ನೀಚಾಶ್ರಯವೆತ್ತ? ಇವೆರಡಕ್ಕೂ ವ್ಯತ್ಯಾಸವೇ ಇಲ್ಲದೆ ಹೋಯಿತೇ? ತನ್ನವರು ಗುಣಹೀನರಾದರೂ, ಗುಣವಂತರಾದ ಶತ್ರುಗಳಿಗಿಂತಲೂ ಶ್ರೇಯಸ್ಸನ್ನೇ ಉಂಟುಮಾಡುವವರಲ್ಲವೇ? ॥ ೧೧-೧೫ ॥ ಪರರು ಎಷ್ಟೇ ಒಳ್ಳೆಯವರಾದರೂ ಪರರೆನಿಸಿಕೊಳ್ಳುವರಾಗಲಿ ಮತ್ತೆ ಬೇರೆಯಲ್ಲವು. ಆದುದರಿಂದೆಲೈ ವಿಭೀಷಣನೇ! ಪರರ ಕೈಹಿಡಿದು ತನ್ನವರ ಕೈಬಿಡುವುದು ಎಷ್ಟುಮಾತ್ರಕ್ಕೂ ಯುಕ್ತವಲ್ಲವು. ಅಯ್ಯಾ ವಿಭೀಷಣನೇ! ಲೋಕದಲ್ಲಿ ಯಾವಾತನು ತನ್ನವರನ್ನು ತೊರೆದು ಪರರನ್ನಾಶ್ರಯಿಸುವನೋ ಅವನು ತನ್ನವರೆಲ್ಲರೂ ಮಡಿದ ತರುವಾಯ ಆ ಪರರಿಂದಲೇ ಮೃತಿಯೊಂದುತ್ತಾನೆ. ಆದುದರಿಂದ ತನ್ನವರನ್ನು ತಿರಸ್ಕರಿಸಿ ಪರರನ್ನಾಶ್ರಯಿಸುವುದು ಕೇವಲ ಹೀನಕರವಾದ ಕಾರ್ಯವೆಂಬುದನ್ನರಿಯೆಯಾ? ಇದೂ ಅಲ್ಲದೆ ಎಲೈ ವಿಭೀಷಣನೇ! ನಮ್ಮ ಕಾರ್ಯಕ್ಕೆ ವಿಘ್ನಮಾಡಿ ಹಾನಿಯನ್ನುಂಟುಮಾಡುವ ಸಾಮರ್ಥ್ಯವು ನಮ್ಮ ಬಂಧುವಾದ ನಿನಗಲ್ಲದೆ ಮತ್ತಾರಿಗೂ ಇರಲಾರದು. ಬಂಧುವಾದ ನೀನೇ ಈ ರೀತಿ ಕ್ರೂರಕರ್ಮವನ್ನು ಮಾಡಬಹುದೇ? ಹಾಗೆ ಮಾಡಬೇಡ. ನಿನಗೆ ದಯೆಯೆಂಬುದು ಸ್ವಲ್ಪವೂ ಇಲ್ಲವಾಯಿತೇ? ಛೀ! ಛೀ!" ಎಂದು ಹೇಳಿದನು. ॥೧೬-೧೭॥ ಅಣ್ಣನ ಮಗನಾದ ಆ ಇಂದ್ರಜಿತುವು ಈ ರೀತಿ ನುಡಿಯಲು ವಿಭೀಷಣನು ಅವನನ್ನು ಕುರಿತು, "ಎಲವೋ ದುರಾತ್ಮ

||೧೭|| "ಅಜಾನನ್ನಿವ ಮಚ್ಛೀಲಂ ಕಿಂ ರಾಕ್ಷಸ! ವಿಕತ್ಥಸೇ । ರಾಕ್ಷಸೇಂದ್ರಸುತಾಽಸಾಧೋ! ಪಾರುಷ್ಯಂ ತ್ಯಜ ಗೌರವಾತ್ ||೧೮|| ಕುಲೇ ಯದ್ಯಪ್ಯಹಂ ಜಾತೋ ರಕ್ಷಸಾಂ ಕ್ರೂರಕರ್ಮಣಾಂ । ಗುಣೋಽಯಂ ಪ್ರಥಮೋ ನೄಣಾಂ ತನ್ಮೇ ಶೀಲಮರಾಕ್ಷಸಂ ||೧೯|| ನರಮೇ ದಾರುಣೇನಾಹಂ ನಚಾಧರ್ಮೇಣ ವೈ ರಮೇ । ಭ್ರಾತ್ರಾ ವಿಷಮಶೀಲೇನ ಕಥಂ ಭ್ರಾತಾ ನಿರಸ್ಯತೇ ||೨೦|| ಧರ್ಮಾತ್ಪ್ರಚ್ಯುತಶೀಲಂ ಹಿ ಪುರುಷಂ ಪಾಪನಿಶ್ಚಯಂ । ತ್ಯಕ್ತ್ವಾ ಸುಖಮವಾಪ್ನೋತಿ ಹಸ್ತಾದಾಶೀವಿಷಂ ಯಥಾ

ಅಜಾನನ್ನಿವ - ತಿಳಿಯದವನಂತೆ, ಕಿಂವಿಕತ್ಥಸೇ - ಏಕೆ ಕೂಗುತ್ತೀಯೆ, ರಾಕ್ಷಸೇಂದ್ರಸುತ - ರಾವಣಾಸುರನ ಮಗನೇ, ಗೌರವಾತ್ - ಪಿತೃಭ್ರಾತೃತ್ವಪ್ರಯುಕ್ತವಾದ ಗೌರವದಿಂದ, ಪಾರುಷ್ಯಂ - ಕಠಿನೋಕ್ತಿಯನ್ನು, ತ್ಯಜ - ಬಿಡು. ||೧೮|| ಯದ್ಯಪಿ - ಹೇಗಾದರೂ, ಅಹಂ - ನಾನು, ಕ್ರೂರ.... ಣಾಂ - ಕ್ರೂರವ್ಯಾಪಾರವುಳ್ಳ, ರಕ್ಷಸಾಂ - ರಕ್ಕಸರ, ಕುಲೇ - ವಂಶದಲ್ಲಿ, ಜಾತಃ - ಹುಟ್ಟಿದ್ದೇನೆ, ತಥಾಪಿ - ಹಾಗಾದರೂ, ಮೇ - ನನ್ನ, ಶೀಲಂ - ಸ್ವಭಾವವು, ಅರಾಕ್ಷಸಂ - ರಾಕ್ಷಸಸಂಬಂಧವಾದದ್ದಲ್ಲ, ಅಯಂ - ಇದು, ನೄಣಾಂ - ಸತ್ಪುರುಷರಿಗೆ, ಪ್ರಥಮಃ - ಮೊದಲನೆಯದಾದ, ಗುಣಃ - ಗುಣವು. ||೧೯|| ಅಹಂ - ನಾನು, ದಾರುಣೇನ - ಕ್ರೂರವ್ಯಾಪಾರದಿಂದ, ನರಮೇ - ಇರಲಾರೆ, ಅಧರ್ಮೇಣಚ - ಅಧರ್ಮದಿಂದಲೂ, ನರಮೇ - ಇರಲಾರೆನು, ವಿಷಮಶೀಲೇನ - ವಕ್ರಸ್ವಭಾವದವನಾದ, ಭ್ರಾತ್ರಾ - ಅಣ್ಣನಿಂದ, ಭ್ರಾತಾ - ತಮ್ಮನು, ಕಥಂನಿರಸ್ಯತೇ - ಹೇಗೆ ಅವಮಾನ ಮಾಡಿಸಲ್ಪಡುತ್ತಾನೆ. ||೨೦|| ಜನಃ - ಜನವು, ಧರ್ಮಾತ್ - ಧರ್ಮದಿಂದ, ಪ್ರಚ್ಯುತಶೀಲಂ - ಭ್ರಷ್ಟವಾದ ಶೀಲವುಳ್ಳ, ಪಾಪನಿಶ್ಚಯಂ - ಪಾಪದಲ್ಲಿಯೇ ದೃಢವಾದ ಬುದ್ಧಿಯುಳ್ಳ, ಪುರುಷಂ - ಪುರುಷನನ್ನು, ಹಸ್ತಾತ್ - ಕೈಯಿಂದ, ಆಶೀವಿಷಂಯಥಾ - ಸರ್ಪವನ್ನಂತೆ, ತ್ಯಕ್ತ್ವಾ - ಬಿಟ್ಟು, ಸುಖಂ - ಸುಖವನ್ನು, ಅವಾಪ್ನೋತಿ - ಹೊಂದುತ್ತದೆ. ||೨೧|| ಹಿಂಸಾ....ಣೇ - ಹಿಂಸಾಕರ್ಮವು, ಪರದ್ರವ್ಯಾಪಹರಣವು,

---

ನಾದ ಇಂದ್ರಜಿತುವೇ! ನೀನು ಯುಕ್ತಾಯುಕ್ತಗಳನ್ನರಿಯದೆ, ನನ್ನ ಅಭಿಪ್ರಾಯವನ್ನು ತಿಳಿದು ತಿಳಿದೂ ಈ ರೀತಿ ಹೇಳುತ್ತಿರುವೆಯೇಕೆ? ನಿಷ್ಕಾರಣವಾಗಿ ನನ್ನನ್ನು ನಿಂದಿಸುವುದು ತರವಲ್ಲವು. ನನಗೆ ನಿಂದೆಯೂ ಬೇಕಿಲ್ಲ; ನಿನ್ನ ಸ್ತೋತ್ರವೂ ಬೇಕಿಲ್ಲ. ನೀನು ರಾವಣಾಸುರನ ಮಗನಲ್ಲವೆ? ನೀನಾಡುತ್ತಿರುವ ಕ್ರೂರ ವಾಕ್ಕುಗಳು ನಿನ್ನ ಯೋಗ್ಯತೆಗೆ ತಕ್ಕವುಗಳೇ! ಬೇಡ; ಹೀಗೆ ಕಠಿನ ವಾಕ್ಕುಗಳನ್ನಾಡಬೇಡ. ವಿಚಾರ ಮಾಡಿದಲ್ಲಿ ನಾನು ಕ್ರೂರಕರ್ಮಿಗಳಾದ ರಾಕ್ಷಸರ ವಂಶದಲ್ಲಿಯೇ ಹುಟ್ಟಿದವನೆಂಬುದು ನಿಜವೇ! ಆದರೆ ನನ್ನ ಸ್ವಭಾವವು ಮಾತ್ರ ರಾಕ್ಷಸ ಸ್ವಭಾವವಲ್ಲವು. ಹಾಗಾಗದಿರುವುದು ಸಮಸ್ತ ಭೂತಗಳಿಗೂ ಶ್ರೇಯಸ್ಕರವೇ ಅಲ್ಲವೆ? ಎಲಾ ರಾಕ್ಷಸಾಧಮನೇ! ಇಂದ್ರಜಿತುವೆ, ನನ್ನ ಮನಸ್ಸು ದಾರುಣವಾದ ಅಧರ್ಮದಲ್ಲಿ ಎಂದಿಗೂ ಪ್ರವೇಶಿಸುವುದಿಲ್ಲವು. ಕಠಿನ ಸ್ವಭಾವದವನಾದ ಅಣ್ಣನಿಂದ ತಮ್ಮನಾದವನು ಹಿಂಸೆಗೆ ಗುರಿಯಾಗದಿರುತ್ತಾನೆಯೆ? ||೧೮–೨೦|| ಅದರಲ್ಲಿಯೂ ನನ್ನಂತಹನು ಅಂತಹ ಕ್ರೂರ ಸ್ವಭಾವಿಯಾದ ಅಣ್ಣನ ಬಳಿಯಲ್ಲಿ ಸುಖವಾಗಿರುವುದು ಹೇಗೆ ಸಾಧ್ಯವಾದೀತು? ಇದೂ ಅಲ್ಲದೆ ಕೇವಲ ಅಧರ್ಮ ಸ್ವಭಾವವುಳ್ಳವನೂ, ಪಾಪಕರ್ಮಗಳನ್ನೇ ಮಾಡುವವನೂ ಆದ ಪುರುಷನನ್ನು ತೊರೆದರೆ ಮಾನವನು ಕೈಯಲ್ಲಿದ್ದುದೆಲ್ಲವನ್ನೂ

॥ ೨೧ ॥ ಹಿಂಸಾ ಪರಸ್ವಹರಣೇ ಪರದಾರಾಭಿಮರ್ಶನಂ । ತ್ಯಾಜ್ಯಮಾಹುರ್ದುರಾಚಾರಂ ವೇಶ್ಮ ಪ್ರಜ್ವಲಿತಂ ಯಥಾ ॥ ೨೨ ॥ ಪರಸ್ವಾನಾಂಚ ಹರಣಂ ಪರದಾರಾಭಿಮರ್ಶನಂ । ಸುಹೃದಾಮತಿಶಂಕಾಚ ತ್ರಯೋ ದೋಷಾಃ ಕ್ಷಯಾವಹಾಃ ॥ ೨೩ ॥ ಮಹರ್ಷೀಣಾಂ ವಧೋ ಘೋರಸ್ಸರ್ವದೇವೈಶ್ಚ ವಿಗ್ರಹಃ । ಅಭಿಮಾನಶ್ಚ ಕೋಪಶ್ಚ ವೈರಿತ್ವಂ ಪ್ರತಿಕೂಲತಾ ॥ ೨೪ ॥ ಏತೇ ದೋಷಾ ಮಮ ಭ್ರಾತುರ್ಜೀವಿತೈಶ್ವರ್ಯನಾಶನಾಃ । ಗುಣಾನ್ ಪ್ರಚ್ಛಾದಯಾಮಾಸುಃ ಪರ್ವತಾನಿವ ತೋಯದಾಃ । ದೋಷೈರೇತೈಃ ಪರಿತ್ಯಕ್ತೋ ಮಯಾ ಭ್ರಾತಾ ಪಿತಾ ತವ ॥ ೨೫-೨೬ ॥ ನೇಯಮಸ್ತಿ ಪುರೀ

ಪರ....ನಂ - ಪರದಾರಪರಿಗ್ರಹಣವೂ, ಈ ಮೂರೂ, ದುರಾಚಾರಂ - ದುಷ್ಕೃತ್ಯವನ್ನು, ಪ್ರಜ್ವಲಿತಂ - ಉರಿಯುತ್ತಿರುವ, ವೇಶ್ಮಯಥಾ - ಮನೆಯಂತೆ, ತ್ಯಾಜ್ಯಂ - ಬಿಡತಕ್ಕದ್ದನ್ನಾಗಿ, ಆಹುಃ - ದೊಡ್ಡವರು ಹೇಳುತ್ತಾರೆ. ॥ ೨೨ ॥ ಪರಸ್ವಾನಾಂಚ - ಪರದ್ರವ್ಯಗಳ, ಹರಣಂಚ - ಅಪಹರಣವೂ, ಪರ....ನಂ - ಹೆರರ ಹೆಂಡತಿಯರನ್ನು ಕೆಡಸುವಿಕೆಯೂ, ಸುಹೃದಾಂ - ಸ್ನೇಹಿತರ ವಿಷಯದಲ್ಲಿ, ಅತಿಶಂಕಾಚ - ಅವಿಶ್ವಾಸವೂ, ತ್ರಯೋದೋಷಾಃ - ಈ ಮೂರು ದೋಷಗಳು, ಕ್ಷಯಾವಹಾಃ - ನಾಶವನ್ನುಂಟುಮಾಡುತ್ತವೆ. ॥ ೨೩ ॥ ಘೋರಃ - ಭಯಂಕರವಾದ, ಮಹರ್ಷೀಣಾಂ - ಬ್ರಹ್ಮರ್ಷಿಗಳ, ವಧಃ - ಸಂಹಾರವು, ಸರ್ವದೇವೈಶ್ಚ - ಸಮಸ್ತ ದೇವತೆಗಳೊಡಗೂಡಿ, ವಿಗ್ರಹಶ್ಚ - ಕಲಹವೂ, ಅಭಿಮಾನಶ್ಚ - ಗರ್ವವೂ, ಕೋಪಶ್ಚ - ಕೋಪವೂ, ವೈರತ್ವಂ - ಶತ್ರುತ್ವವೂ, ಪ್ರತಿಕೂಲಂಚ - ಪ್ರಾತಿಕೂಲ್ಯವು, ಏತೇದೋಷಾಃ - ಈ ದೋಷಗಳು, ಮಮ - ನನ್ನ, ಭ್ರಾತುಃ - ಅಣ್ಣನಾದ ರಾವಣನಿಗೆ, ಜೀವಿ....ನಾಃ - ಪ್ರಾಣವನ್ನೂ, ಐಶ್ವರ್ಯವನ್ನೂ ನಾಶಗೊಳಿಸುವವುಗಳಾಗಿ, ಪರ್ವತಾನ್ - ಬೆಟ್ಟಗಳನ್ನು, ತೋಯದಾಇವ - ಮೇಘಗಳಂತೆ, ಗುಣಾನ್ - ಸದ್ಗುಣಗಳನ್ನು, ಪ್ರಚ್ಛಾ....ಸುಃ - ಆವರಿಸಿಕೊಂಡವು, ಏತೈರ್ದೋಷೈಃ - ಈ ದೋಷಗಳಿಂದ, ತವ - ನಿನ್ನ, ಪಿತಾ - ತಂದೆಯಾದ, ಭ್ರಾತಾ - ನನಗೆ ಅಣ್ಣನಾದ ರಾವಣನು, ಮಯಾ-ನನ್ನಿಂದ, ಪರಿತ್ಯಕ್ತಃ-ಬಿಡಲ್ಪಟ್ಟನು. ॥೨೪-೨೬॥ ರಾಕ್ಷಸ -

ತೊರೆದವನಂತೆ ಸರ್ವ ವಿಧದಲ್ಲಿಯೂ ಶ್ರೇಯಸ್ಸನ್ನು ಪಡೆಯಬಲ್ಲನಾಗಲಿ ಬೇರೆಯಲ್ಲವು. ಎಲೈ ರಾಕ್ಷಸಾಧಮನೇ! ಕೇಳು; ಹಿಂಸೆ, ಪರದ್ರವ್ಯಾಪಹರಣ, ಪರದಾರಾಭಿಮರ್ಶನ, ಮಿತ್ರದ್ರೋಹ, ಮನೆಗೆ ಬೆಂಕಿಯಿಡುವುದೂ ಇವೇ ಮೊದಲಾದುವು ಕೇವಲ ಪಾಪಕರ್ಮಗಳೆಂದೂ ಅವುಗಳನ್ನು ಮಾಡಕೂಡದೆಂದೂ ತಿಳಿದವರು ಹೇಳುತ್ತಾರೆ. ಇದೂ ಅಲ್ಲದೆ ಪರದ್ರವ್ಯಾಪಹರಣವೂ, ಪರಭಾರ್ಯೆಯರನ್ನು ಅಪಹರಿಸುವಿಕೆಯೂ, ಸ್ನೇಹಿತರಲ್ಲಿ ಅಪನಂಬಿಕೆ ಪಡುವುದೂ ಇವು ಮೂರೂ ಮನುಷ್ಯನನ್ನು ನಾಶಗೊಳಿಸುತ್ತವೆ. ಅಯ್ಯಾ ಇಂದ್ರಜಿತುವೇ! ಮಹರ್ಷಿಗಳ ಘೋರವಧೆ, ದೇವತೆಗಳೆಲ್ಲರೊಡನೆಯೂ ಕಾಳಗ, ದುರಹಂಕಾರ, ಕೋಪ, ವೈಷಮ್ಯ, ಯಾವಾಗಲೂ ಹಿರಿಯರೂ, ಜ್ಞಾನಿಗಳೂ ಹೇಳಿದ್ದಕ್ಕೆ ಪ್ರತಿಕೂಲವಾಗಿ ನಡೆಯುವಿಕೆ ಎಂಬಿವುಗಳು ನಮ್ಮಣ್ಣನಾದ ರಾವಣನ ಬಾಳನ್ನೂ ಐಶ್ವರ್ಯವನ್ನೂ ನಾಶಗೊಳಿಸಿದುವೆಂದು ತಿಳಿ. ಇವು ಆತನಲ್ಲಿರುವ ಸದ್ಗುಣಗಳೆಲ್ಲವನ್ನೂ ಮುಗಿಲುಗಳು ಬೆಟ್ಟಗಳನ್ನೆಂತೋ ಅಂತು ಮರೆಯಿಸಿತು. ಈ ಎಲ್ಲ ದೋಷಗಳಿದ್ದುದರಿಂದಲೇ ನಿನಗೆ ತಂದೆಯೂ, ನನಗೆ ಅಣ್ಣನೂ ಆದ ಆತನನ್ನು ನಾನು ತೊರೆದು ಬರಬೇಕಾಯಿತು. ॥ ೨೧-೨೬ ॥ ಈಗ

ಲಂಕಾ ನಚ ತ್ವಂ ನಚ ತೇ ಪಿತಾ । ಅತಿಮಾನೀಚ ಬಾಲಶ್ಚ ದುರ್ವಿನೀತಶ್ಚ ರಾಕ್ಷಸ! ॥೨೭॥ ಬದ್ಧಸ್ತ್ವಂ ಕಾಲಪಾಶೇನ ಬ್ರೂಹಿ ಮಾಂ ಯದ್ಯದಿಚ್ಛಸಿ । ಅದ್ಯ ತೇ ವ್ಯಸನಂ ಪ್ರಾಪ್ತಂ ಕಿಂ ಮಾಂ ತ್ವಮಿಹ ವಕ್ಷ್ಯಸಿ ॥ ೨೮ ॥ ಪ್ರವೇಷ್ಟುಂ ನತ್ವಯಾ ಶಕ್ಯೋ ನ್ಯಗ್ರೋಧೋ ರಾಕ್ಷಸಾಧಮ! । ಧರ್ಷಯಿತ್ವಾ ಚ ಕಾಕುತ್ಸ್ಥೌ ನಶಕ್ಯಂ ಜೀವಿತುಂ ತ್ವಯಾ ॥ ೨೯ ॥ ಯುಧ್ಯಸ್ವ ನರದೇವೇನ ಲಕ್ಷ್ಮಣೇನ ರಣೇ ಸಹ । ಹತಸ್ತ್ವಂ ದೇವತಾಕಾರ್ಯಂ ಕರಿಷ್ಯಸಿ ಯಮಕ್ಷಯೇ ॥ ೩೦ ॥

ರಾಕ್ಷಸನೇ, ಇಯಂಲಂಕಾಪುರೀ - ಈ ಲಂಕಾಪಟ್ಟಣವು, ನಾಸ್ತಿ - ಇರುವದಿಲ್ಲ, ಅತಿಮಾನೀ - ಅತಿ ಗರ್ವಿಷ್ಠನಾದ, ಬಾಲಶ್ಚ-ಹುಡುಗನೂ ಆದ, ದುರ್ವಿನೀತಶ್ಚ-ದುಷ್ಟಬುದ್ಧಿಯಾದ, ತ್ವಂಚ-ನೀನೂ, ತೇ - ನಿನ್ನ, ಪಿತಾಚ - ತಂದೆಯಾದ ರಾವಣನೂ ಸಹ, ನಾಸ್ತಿ - ಇರುವದಿಲ್ಲವು. ॥ ೨೭ ॥ ಕಾಲ ಪಾಶೇನ - ಯಮಪಾಶದಿಂದ, ಬದ್ಧಃ - ಕಟ್ಟಲ್ಪಟ್ಟ, ತ್ವಂ - ನೀನು, ಮಾಂ - ನನ್ನನ್ನು ಕುರಿತು, ಯದ್ಯದಿಚ್ಛಸಿ - ಏನೇನು ಬಯಸುತ್ತೀಯೋ, ತತ್ತತ್ - ಆ ಮಾತುಗಳನ್ನೆಲ್ಲಾ, ಬ್ರೂಹಿ - ಹೇಳು, ಇಹ - ಈಗ, ತ್ವಂ - ನೀನು, ಮಾಂ - ನನ್ನನ್ನು ಕುರಿತು, ಕಿಂವಕ್ಷ್ಯಸಿ - ಏನು ಹೇಳುತ್ತೀಯೆ, ತೇ - ನಿನಗೆ, ಅದ್ಯ - ಈಗ, ವ್ಯಸನಂ - ವ್ಯಸನವು, ಪ್ರಾಪ್ತಂ - ಪ್ರಾಪ್ತವಾಯಿತು. ॥೨೮॥ ರಾಕ್ಷಸಾ ಧಮ - ನೀಚನಾದ ರಕ್ಕಸನೇ, ತ್ವಯಾ - ನಿನ್ನಿಂದ, ನ್ಯಗ್ರೋಧಃ - ವಟವೃಕ್ಷವು, ಪ್ರವೇಷ್ಟುಂ - ಪ್ರವೇಶಿಸಲೂ, ನಶಕ್ಯಃ - ಸಾಧ್ಯವಲ್ಲ, ತ್ವಯಾ - ನಿನ್ನಿಂದ, ಕಾಕುತ್ಸ್ಥೌ - ರಾಮಲಕ್ಷ್ಮಣರನ್ನು, ಧರ್ಷಯಿತ್ವಾ - ತಿರಸ್ಕರಿಸಿ, ಜೀವಿತುಂ - ಬದುಕುವದಕ್ಕೆ, ನಶಕ್ಯಂ - ಸಾಧ್ಯನಲ್ಲ, ರಣೇ - ಕಾಳೆಗ ದಲ್ಲಿ, ನರದೇವೇನ - ಮನುಷ್ಯ ರಾಜನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ಯುಧ್ಯಸ್ವ - ಕಾಳೆಗ ಮಾಡು, ತ್ವಂ - ನೀನು, ಹತಃ - ಕೊಲ್ಲಲ್ಪಟ್ಟವನಾಗಿ, ಯಮಕ್ಷಯೇ - ಯಮನ ಮನೆಯಲ್ಲಿ, ದೇವತಾಕಾರ್ಯಂ - ದೇವತೆಗಳ ಕಾರ್ಯವನ್ನು, (ಅಂದರೆ - ನರಕಾನುಭವರೂಪವಾದ ದೇವತೆಗಳ ಕಾರ್ಯವನ್ನು) ಕರಿಷ್ಯಸಿ - ಮಾಡುವೆ. ॥೨೯॥ ಆತ್ಮಬಲಂ - ನಿನ್ನ ಪೌರುಷವನ್ನು, ನಿದರ್ಶಯಸ್ವ - ತೋರಿಸು, ಸಮುದ್ಯತಂ - ಎತ್ತಲ್ಪಟ್ಟ, ಸರ್ವ... ಯಂ - ಸಮಸ್ತಾಯುಧಗಳ ಮತ್ತು ಬಾಣಗಳ ವಿನಿಯೋಗವನ್ನು, ಕುರುಷ್ವ - ಮಾಡು, ತ್ವಂ - ನೀನು, ಸಬಲಃ - ಸೇನಾಸಮೇತನಾಗಿ, ಲಕ್ಷ್ಮ

ನನಗೆ ಈ ಲಂಕಾಪಟ್ಟಣವಾಗಲಿ, ನೀನಾಗಲಿ, ನಿನ್ನ ತಂದೆಯಾಗಲಿ ಯಾರೂ ಇಲ್ಲವೆಂದೇ ಅರಿತುಕೊ. ಎಲೆವೊ, ಇಂದ್ರಜಿತುವೇ! ನೀನು ಕೇವಲ ಬಾಲಕನು; ಮಹಾ ಗರ್ವಿಷ್ಠನು; ದುರ್ವಿನೀತನು. ನೀನೀಗ ಯಮಪಾಶಕ್ಕೆ ತುತ್ತಾಗಿದ್ದೀಯೆ. ಆದುದರಿಂದಲೇ ಈ ರೀತಿ ಮಾತನಾಡುತ್ತಿರುವೆ. ಈಗ ನೀನು ಏನು ಬೇಕಾದರೂ ಮಾತನಾಡು. ಈಗ ನಿನಗೆ ಸಂಕಟ ಕಾಲವು ಒದಗಿಬಂದಿದೆ. ಸುಮ್ಮನೆ ಮಾತನಾಡುವೆಯೇಕೆ? ಎಲಾ ರಾಕ್ಷಸಾಧಮನೇ! ನೀನು ಹೇಗಾದರೂ ಈ ಆಲದಮರದೆಡೆಯನ್ನು ಸೇರಲಾರೆ. ಕಕುತ್ಸ್ಥವಂಶೋತ್ಪನ್ನರಾದ ಶ್ರೀರಾಮಲಕ್ಷ್ಮಣರನ್ನು ಕೆಣಕಿ ನೀನು ಬದುಕಲಾರೆ. ನರದೇವನಾದ ಲಕ್ಷ್ಮಣಸ್ವಾಮಿಯು ನಿನ್ನನ್ನು ಯುದ್ಧಕ್ಕೆ ಕರೆಯುತ್ತಿರುವನಲ್ಲವೆ! ಈತನೊಡನೆ ಯುದ್ಧಮಾಡು. ಯುದ್ಧದಲ್ಲಿ ಮಡಿದ ತರುವಾಯ ನೀನು ಯಮನಾಲಯದಲ್ಲಿ ದೇವಕಾರ್ಯವನ್ನು ಮಾಡುವೆಯಂತೆ. ಈಗ ನೀನು ನಿನ್ನ ಪೌರುಷವನ್ನೆಲ್ಲ ಪ್ರದರ್ಶಿಸು. ನಿನ್ನಲ್ಲಿರುವ ಆಯುಧಗಳೆಲ್ಲವನ್ನೂ ವಿನಿ

ನಿದರ್ಶಯಸ್ವಾತ್ಕೃತ್ಮಬಲಂ ಸಮುದ್ಯತಂ
ಕುರುಷ್ವ ಸರ್ವಾಯುಧಸಾಯಕವ್ಯಯಂ ।
ನಲಕ್ಷ್ಮಣಸ್ಯೇತ್ಯಹಿ ಬಾಣಗೋಚರಂ
ತ್ವಮದ್ಯ ಜೀವನ್ ಸಬಲೋ ಗಮಿಷ್ಯಸಿ ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಾಶೀತಿತಮಸ್ಸರ್ಗಃ.

ಣಸ್ಯ - ಲಕ್ಷ್ಮಣನ, ಬಾಣಗೋಚರಂ - ಬಾಣಗಳ ಗುರಿಯನ್ನು, ಏತ್ಯ - ಹೊಂದಿ, ಅದ್ಯ - ಈಗ, ಜೀವನ್ - ಬದುಕಿ, ನಗಮಿಷ್ಯಸಿಹಿ - ಹೋಗಲಾರೆಯಷ್ಟೆ. ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತಾಶೀತಿತಮಸ್ಸರ್ಗಃ.

ಯೋಗಿಸಿ ಯುದ್ಧ ಮಾಡು. ನೀನು ಏನೇ ಮಾಡಿದರೂ ನಮ್ಮ ಲಕ್ಷ್ಮಣಸ್ವಾಮಿಯ ಬಾಣಗಳಿಂದ ತಪ್ಪಿಸಿಕೊಂಡು ಬದುಕಿ ಹೋಗಲಾರೆ” ಎಂದು ಹೇಳಿದನು. ॥ ೨೬–೩೧ ॥

ಇಂತಿದು ಇಂದ್ರಜಿದ್ವಿಭೀಷಣ ಸಂವಾದವೆಂಬ ಎಂಬತ್ತೇಳನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟಾಶೀತಿತಮಸ್ಸರ್ಗಃ

ವಿಭೀಷಣವಚಃ ಶ್ರುತ್ವಾ ರಾವಣಿಃ ಕ್ರೋಧಮೂರ್ಛಿತಃ । ಅಬ್ರವೀತ್ಪರುಷಂ ವಾಕ್ಯಂ ವೇಗೇನಾಭ್ಯುತ್ಪಪಾತಹ ॥ ೧ ॥ ಉದ್ಯತಾಯುಧನಿಸ್ತ್ರಿಂಶೋ ರಥೇ ಸುಸಮಲಂಕೃತೇ । ಕಾಳಾಶ್ವಯುಕ್ತೇ ಮಹತಿ ಸ್ಥಿತಃ ಕಾಲಾಂತಕೋಪಮಃ ॥ ೨ ॥ ಮಹಾಪ್ರಮಾಣಮುದ್ಯಮ್ಯ ವಿಪುಲಂ ವೇಗವದ್ದೃಢಂ । ಧನುರ್ಭೀಮಂ ಪರಾಮೃಶ್ಯ ಶರಾಂಶ್ಚಾಽಮಿತ್ರಶಾತನಾನ್ ॥ ೩ ॥ ತಂ ದದರ್ಶ ಮಹೇಷ್ವಾಸೋ ರಥೇ ಸುಸಮಲಂಕೃತಃ । ಅಲಂಕೃತಮಮಿತ್ರಘ್ನಂ ರಾಘವಸ್ಯಾನುಜಂ ಬಲೀ । ಹನುಮತ್ಪೃಷ್ಠಮಾಸೀನಮುದಯಸ್ಥರವಿಪ್ರಭಂ ॥ ೪ ॥ ಉವಾಚೈವಂ ಸಮಾರಬ್ಧಃ ಸೌಮಿತ್ರಿಂ

ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ರಾವಣಿಃ - ಇಂದ್ರಜಿತುವು, **ಕ್ರೋಧಮೂರ್ಛಿತಃ** - ಕ್ರೋಧದಿಂದ ವ್ಯಾಪ್ತನಾಗಿ, ಪರುಷಂ - ಕ್ರೂರವಾದ, ವಾಕ್ಯಂ - ಮಾತನ್ನು, **ಅಬ್ರವೀತ್** - ನುಡಿದನು, ವೇಗೇನ - ಜವದಿಂದ, ಅಭ್ಯುತ್ಪಪಾತಹ - ಹಾರಿಬಂದನಪ್ಪೆ. ॥ ೧ ॥ **ಉದ್ಯ....ಶಃ** - ಎತ್ತಿದ ಆಯುಧಗಳೂ, ಶಕ್ತಿಗಳೂ ಉಳ್ಳ, ಕಾಲಾಂ....ಮಃ - ಅಂತಕಾಲದಲ್ಲಿ ನಾಶಕರನಾದ ಯಮನಿಗೆ ಸಮಾನನಾದ ಇಂದ್ರಜಿತುವು, ಕಾಳಾಶ್ವಯುಕ್ತೇ - ಕಪ್ಪಾಗಿರುವ ಕುದುರೆಗಳಿಂದ **ಕೂಡಿರುವ**, ಮಹತೀ - ದೊಡ್ಡದಾದ, ಸುಸಮಲಂಕೃತೇ - ಚನ್ನಾಗಿ ಅಲಂಕರಿಸಲ್ಪಟ್ಟ, ರಥೇ - ರಥದಲ್ಲಿ, ಸ್ಥಿತಃ - ಕುಳಿತು, ಮಹೇಷ್ವಾಸಃ - ದೊಡ್ಡ ಧನುಸ್ಸುಳ್ಳ, ಬಲೀ - ಬಲವಂತನಾದ ಅಲಂಕರಿಸಲ್ಪಟ್ಟವನಾಗಿ, ಮಹಾಪ್ರಮಾಣಂ - ಬಹಳ ದೀರ್ಘವಾದ, ವಿಪುಲಂ - ವಿಸ್ತಾರವಾದ, ವೇಗವತ್ - **ವೇಗವುಳ್ಳ**, ದೃಢಂ - ಶಿಥಿಲವಾಗದಿರುವ, ಭೀಮಂ - ಭಯಂಕರವಾದ, ಧನುಃ - ಬಿಲ್ಲನ್ನು, ಅಮಿತ್ರಶಾತನಾನ್ - ಶತ್ರುಸಂಹಾರಕಗಳಾದ, ಶರಾಂಶ್ಚ - ಬಾಣಗಳನ್ನೂ, ಪರಾಮೃಶ್ಯ - ಹಿಡಿದು, ರಥೇ - **ತೇರಿನಲ್ಲಿ**, ಸ್ಥಿತಃ - ಕುಳಿತು, ಅಮಿತ್ರಘ್ನಂ - ಶತ್ರುಸಂಹಾರಕನಾದ, ಅಲಂಕೃತಂ - ಅಲಂಕರಿಸಲ್ಪಟ್ಟ, **ಉದ....ಭಂ** - ಉದಯಪರ್ವತದಲ್ಲಿರುವ ಸೂರ್ಯನಂತೆ ಹೊಳೆಯುತ್ತಿರುವ, ಹನುಮತ್ಪೃಷ್ಠಂ - **ಹನುಮಂತನ** ಬೆನ್ನಿನಲ್ಲಿ, ಆಸೀನಂ - ಕುಳಿತಿರುವ, ರಾಘವಸ್ಯ - ಶ್ರೀರಾಮನಿಗೆ, ಅನುಜಂ - ತಮ್ಮನಾದ ಲಕ್ಷ್ಮಣನನ್ನು, ದದರ್ಶ - ಕಂಡನು. ॥ ೨-೪ ॥ ಸಮಾರಬ್ಧಃ - ಕುಪಿತನಾಗಿ, ಸವಿಭೀಷಣಂ -

---

ಈ ರೀತಿ ವಿಭೀಷಣನಾಡಿದ ಮಾತುಗಳನ್ನು ಕೇಳಿದ ತರುವಾಯ ಇಂದ್ರಜಿತುವು ಮಹಾ ಕ್ರೋಧಸಮನ್ವಿತನಾಗಿ ಅವನನ್ನು ಕಠಿನವಾಗಿ ಬೈದು ಮುನ್ನುಗ್ಗಿ ಬಂದನು. ಆವನು ಸಮಸ್ತ ಶಸ್ತ್ರಾಸ್ತ್ರಗಳನ್ನೂ ಸಿದ್ಧಪಡಿಸಿಕೊಂಡು, ಬಹು ಮನೋಹರವಾಗಿ ಅಲಂಕರಿಸಿದ್ದ, ಕಪ್ಪು ಕುದುರೆಗಳು ಹೂಡಿದ ಮಹಾ ರಥವನ್ನೇರಿ, ಪ್ರಳಯಮನಿಗೆ ಸಮಾನನಾಗಿ ಶೋಭಿಸುತ್ತಿದ್ದನು. ಆಮೇಲೆ ಅಧಿಕ ಪ್ರಮಾಣವುಳ್ಳದಾಗಿಯೂ ಬಹು ವಿಸ್ತಾರವಾದುದಾಗಿಯೂ, ದೃಢವಾದುದಾಗಿಯೂ, ಭಯಂಕರವಾದುದಾಗಿಯೂ ಇರುವ ತನ್ನ ಧನುಸ್ಸಿನಲ್ಲಿ ಮಹಾ ತೀಕ್ಷ್ಣವಾದ ಬಾಣಗಳನ್ನು ಸಂಧಿಸಿದನು. ಆ ತರುವಾಯ ಮಹಾ ಧನುರ್ಧಾರಿಯಾಗಿ ಸಮಲಂಕೃತವಾದ ರಥವೇರಿರುವ ಆ ಮೇಘನಾದನು, ಶತ್ರುಮರ್ದನನೂ, ಶ್ರೀರಾಮಾನು

ಸವಿಭೀಷಣಂ । ತಾಂಶ್ಚ ವಾನರಶಾರ್ದೂಲಾನ್ ಪಶ್ಯಧ್ವಂ ಮೇ ಪರಾಕ್ರಮಂ ॥ ೫ ॥ ಅದ್ಯ ಮತ್ಕಾರ್ಮುಕೋತ್ಸೃಷ್ಟಂ ಶರವರ್ಷಂ ದುರಾಸದಂ । ಮುಕ್ತವರ್ಷಮಿವಾಕಾಶೇ ವಾರಯಿಷ್ಯಥ ಸಂಯುಗೇ ॥ ೬ ॥ ಅದ್ಯ ವೋ ಮಾಮಕಾ ಬಾಣಾ ಮಹಾಕಾರ್ಮುಕನಿಸ್ಸೃತಾಃ । ವಿಧಮಿಷ್ಯಂತಿ ಗಾತ್ರಾಣಿ ತೂಲರಾಶಿಮಿವಾನಲಃ ॥೭॥ ತೀಕ್ಷ್ಣಸಾಯಕನಿರ್ಭಿನ್ನಾನ್ ಶೂಲಶಕ್ತ್ಯೃಷ್ಟಿತೋಮರೈಃ । ಅದ್ಯ ವೋ ಗಮಯಿಷ್ಯಾಮಿ ಸರ್ವಾನೇವ ಯಮಕ್ಷಯಂ ॥೮॥ ಕ್ಷಿಪತಃ ಶರವರ್ಷಾಣಿ ಕ್ಷಿಪ್ರಹಸ್ತಸ್ಯ ಮೇ ಯುಧಿ । ಜೀಮೂತಸ್ಯೇವ ನದತಃ ಕಸ್ಸ್ಥಾಸ್ಯತಿ ಮಮಾಗ್ರತಃ ॥ ೯ ॥ ರಾತ್ರಿಯುದ್ಧೇ ಮಯಾ ಪೂರ್ವಂ

ವಿಭೀಷಣನೊಡಗೂಡಿದ, ಏನಂಸೌಮಿತ್ರಿಂ - ಈ ಲಕ್ಷ್ಮಣನನ್ನು, ತಾನ್ವಾ....ಲಾನ್ - ಆ ಕಪಿಯೂಥಪತಿಗಳನ್ನು ಕುರಿತು, ಉವಾಚ - ಹೇಳಿದನು, ಮೇ - ನನ್ನ, ಪರಾಕ್ರಮಂ - ಶೌರ್ಯವನ್ನು, ಪಶ್ಯಧ್ವಂ - ನೋಡಿರಿ. ॥ ೫ ॥ ಅದ್ಯ - ಈಗ, ಮತ್ಕಾ....ಷ್ಟಂ - ನನ್ನ ಧನುಸ್ಸಿನಿಂದ ಬಿಡಲ್ಪಡುತ್ತಿರುವ, ದುರಾಸದಂ - ಹೊಂದಲಸಾಧ್ಯವಾದ, ಶರವರ್ಷಂ - ಬಾಣವೃಷ್ಟಿಯನ್ನು, ಆಕಾಶೇ - ಅಂತರಿಕ್ಷದಲ್ಲಿ, ಮುಕ್ತವರ್ಷಮಿವ - ಬಿಡಲ್ಪಟ್ಟ ಮಳೆಯನ್ನಂತೆ, ಸಂಯುಗೇ - ಕಾಳಗದಲ್ಲಿ, ವಾರಯಿಷ್ಯಥ - ತಡೆಯಿರಿ. ॥೬॥ ಅದ್ಯ - ಈಗ, ಮಹಾ....ತಾಃ - ದೊಡ್ಡಬಿಲ್ಲಿನಿಂದ ಹೊರಡುತ್ತಿರುವ, ಮಾಮಕಾಃ - ನನ್ನಸಂಬಂಧಗಳಾದ, ಬಾಣಾಃ - ಬಾಣಗಳು, ವಃ - ನಿಮ್ಮ, ಗಾತ್ರಾಣಿ - ಅವಯವಗಳನ್ನು, ತೂಲರಾಶಿಂ - ಹತ್ತಿಯ ರಾಶಿಯನ್ನು, ಅನಲಇವ - ಅಗ್ನಿಯಂತೆ, ವಿಧಮಿಷ್ಯಂತಿ - ಸುಡುತ್ತವೆ. ॥ ೭ ॥ ಅದ್ಯ - ಈಗ, ಶೂಲ....ರೈಃ - ಶೂಲಗಳಿಂದಲೂ, ದಂಡಗಳಿಂದಲೂ, ತೋಮರಾಯುಧಗಳಿಂದಲೂ, ತೀಕ್ಷ್ಣ....ನ್ನಾನ್ - ಹದವಾದ ಬಾಣಗಳಿಂದ ಕತ್ತರಿಸಲ್ಪಟ್ಟ, ವಃ - ನಿಮ್ಮನ್ನು, ಸರ್ವಾನೇವ - ಎಲ್ಲರನ್ನೂ, ಯಮಕ್ಷಯಂ - ಯಮನ ಮನೆಯನ್ನು, ಗಮಿಷ್ಯಾಮಿ - ಹೊಂದಿಸುವೆನು. ॥೮॥ ಯುಧಿ - ಕಾಳಗದಲ್ಲಿ, ಶರವರ್ಷಾಣಿ - ಬಾಣವರ್ಷಗಳನ್ನು, ಕ್ಷಿಪತಃ - ಎರಚುತ್ತಿರುವ, ಕ್ಷಿಪ್ರಹಸ್ತಸ್ಯ - ವೇಗಯುಕ್ತವಾದ ಹಸ್ತವುಳ್ಳ, ಜೀಮೂತಸ್ಯೇವ - ಮೇಘದಂತೆ, ನದತಃ - ಗರ್ಜಿಸುತ್ತಿರುವ, ಮೇ - ನನ್ನ, ಯುಧಿ - ಕಾಳಗದಲ್ಲಿ, ಮಮ - ನನ್ನ, ಅಗ್ರತಃ - ಮುಂದುಗಡೆ, ಕಃ - ಯಾವನು, ಸ್ಥಾಸ್ಯತಿ - ನಿಲ್ಲುವನು. ॥ ೯ ॥ ಪೂರ್ವಂ - ಮೊದಲು, ರಾತ್ರಿಯುದ್ಧೇ - ರಾತ್ರಿಯುದ್ಧದಲ್ಲಿ, ವಜ್ರಾ....ಭೈಃ -

---

ಜನೂ ಆದ ಲಕ್ಷ್ಮಣನನ್ನು ಕಂಡು ಮಹಾ ಸಂರಂಭವುಳ್ಳವನಾಗಿ ವಿಭೀಷಣನೊಡನಿರುವ ಆತನನ್ನು ಕುರಿತು, "ಎಲೆವೊ ಲಕ್ಷ್ಮಣನೇ! ನೀನು ನಿನ್ನ ವಾನರವೀರರೂ ಇದೀಗ ನನ್ನ ಪರಾಕ್ರಮವನ್ನು ನೋಡಿರಿ. ಈಗ ನನ್ನ ಧನುಸ್ಸಿನಿಂದ ಹೊರಹೊರಡುವ, ಬಾಣದ ಮಳೆಯನ್ನು ನಿನ್ನ ಕೈಲಾದರೆ ತಡೆದುಕೊ. ಈಗ ನನ್ನ ಮಹಾ ಧನುಸ್ಸಿನಿಂದ ಹೊರಟು ಬರುವ ಈ ಬಾಣಗಳು ಬೆಂಕಿಯು ಹತ್ತಿಯ ರಾಶಿಯನ್ನೆಂತೋ ಅಂತು ನಿನ್ನ ಅವಯವಗಳೆಲ್ಲವನ್ನೂ ಸುಡುತ್ತವೆ. ॥೧-೭॥ ಎಲೆವೊ, ನಿಮ್ಮೆಲ್ಲರನ್ನೂ ಶೂಲ, ಶಕ್ತಿ, ನಿಡಿಗೋಲುಗಳು, ತೋಮರಗಳು ಇವೇ ಮೊದಲಾದ ಆಯುಧಗಳಿಂದ ಶರೀರಗಳೆಲ್ಲ ಭೇಧಿಸಿ ಹೋಗುವಂತೆ ಮಾಡಿ ಯಮನಾಲಯಕ್ಕೆ ಕಳುಹಿಸುವೆನು. ಯುದ್ಧಭೂಮಿಯಲ್ಲಿ ಅಪರಿಮಿತವಾದ ಕರಕೌಶಲವುಳ್ಳವನೂ, ಸಂತತವಾಗಿ ಬಾಣವರ್ಷವನ್ನು ಸುರಿಸುತ್ತಿರುವವನೂ, ಮೇಘಧ್ವನಿಯಂತೆ ಮಹಾದ್ಭುತ ಸಿಂಹನಾದವುಳ್ಳವನೂ ಆದ ನನ್ನ ಮುಂಗಡೆ ಯಾವನು ತಾನೆ ನಿಲ್ಲಬಲ್ಲನು? ಲಕ್ಷ್ಮಣಾ! ಹಿಂದೊಮ್ಮೆ ರಾತ್ರಿ ಯುದ್ಧದಲ್ಲಿ ಮಹಾ ತೀಕ್ಷ್ಣವಾದ ಬಾಣಗಳನ್ನು ಪ್ರಯೋ

ವಜ್ರಾಶನಿಸನ್ನೈಃ ಶರೈಃ । ಶಾಯಿತೌ ಸ್ಥೋ ಮಯಾ ಭೂಮೌ ವಿಸಂಜ್ಞೌ ಸಪುರಸ್ಸರೌ ॥ ೧೦ ॥ ಸ್ಮೃತಿರ್ನತೇಽಸ್ತಿ ವಾ ಮನ್ಯೇ ವ್ಯಕ್ತಂ ವಾ ಯಮಸಾದನಂ । ಆಶೀವಿಷಮಿವ ಕ್ರುದ್ಧಂ ಯನ್ಮಾಂ ಯೋದ್ಧುಂ ವ್ಯವಸ್ಥಿತಃ ॥ ೧೧ ॥ ತಚ್ಛ್ರುತ್ವಾ ರಾಕ್ಷಸೇಂದ್ರಸ್ಯ ಗರ್ಜಿತಂ ಲಕ್ಷ್ಮಣಸ್ತದಾ । ಅಭೀತವದನಃ ಕ್ರುದ್ಧೋ ರಾವಣಿಂ ವಾಕ್ಯಮಬ್ರವೀತ್ ॥೧೨॥ "ಉಕ್ತಶ್ಚ ದುರ್ಗಮಃ ಪಾರಃ ಕಾರ್ಯಾಣಾಂ ರಾಕ್ಷಸ! ತ್ವಯಾ । ಕಾರ್ಯಾಣಾಂ ಕರ್ಮಣಾ ಪಾರಂ ಯೋ ಗಚ್ಛತಿ ಸ ಬುದ್ಧಿಮಾನ್ ॥ ೧೩ ॥ ಸತ್ವ

ವಜ್ರಾಯುಧಕ್ಕೂ ಸಿಡಿಲಿಗೂ ಸಮಾನಗಳಾದ, ಮಯಾ - ನನ್ನಿಂದ, ವಿಸಂಜ್ಞೌ - ಪ್ರಜ್ಞೆಯಿಲ್ಲದ, ಸಪುರಸ್ಸರೌ ಸಹಾಯಕ ಜನರಿಂದೊಡಗೂಡಿದ, ಯುವಾಂ - ನೀವು, ಮಯಾ - ನನ್ನಿಂದ, ಭೂಮೌ - ನೆಲದಲ್ಲಿ, ಶಾಯಿತೌ - ಮಲಗಿಸಲ್ಪಟ್ಟವರು, ಸ್ಥಃ - ಆದಿರಿ. ॥ ೧೦ ॥ ಯತ್ - ಯಾವ ಕಾರಣದಿಂದ, ಆಶೀವಿಷಮಿವ - ಸರ್ಪದಂತೆ, ಕ್ರುದ್ಧಂ - ಕುಪಿತನಾದ, ಮಾಂ - ನನ್ನನ್ನು ಕುರಿತು, ಯೋದ್ಧುಂ - ಯುದ್ಧ ಮಾಡುವದಕ್ಕೆ, ವ್ಯವಸ್ಥಿತಃ - ನಿಂತವನಾದೆಯೋ, ತತ್ - ಆ ಕಾರಣದಿಂದ, ತೇ - ನಿನಗೆ, ಯಮಸಾದನಂ - ಯಮನ ಮನೆಯು, ವ್ಯಕ್ತಂ - ನಿಶ್ಚಯವಾಗಿದೆಯೆಂದು, ಸ್ಮೃತಿಃ - ಸ್ಮರಣೆಯು, ನಾಸ್ತಿವಾ - ಇಲ್ಲವೋ ಏನೋ. ॥ ೧೧ ॥ ತದಾ - ಆ ಕಾಲದಲ್ಲಿ, ಲಕ್ಷ್ಮಣಃ - ಲಕ್ಷ್ಮಣನು, ರಾಕ್ಷಸೇಂದ್ರಸ್ಯ - ಇಂದ್ರಜಿತುವಿನ, ಗರ್ಜಿತಂ - ಗರ್ಜನರೂಪವಾದ, ತತ್ - ಆ ಮಾತನ್ನು, ಶ್ರುತ್ವಾ - ಕೇಳಿ, ಅಭೀತವದನಃ - ಭಯವಿಲ್ಲದ ಮುಖವುಳ್ಳವನಾಗಿ, ಕ್ರುದ್ಧಃ - ಕೋಪಿಷ್ಠನಾಗಿ, ರಾವಣಿಂ - ಇಂದ್ರಜಿತುವನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧೨॥ ರಾಕ್ಷಸಃ - ರಕ್ಕಸನೇ, ತ್ವಯಾ - ನಿನ್ನಿಂದ, ಕಾರ್ಯಾಣಾಂ - ಯಮಲೋಕ ಪ್ರಾಪಣಾದಿ ಕಾರ್ಯಗಳ, ದುರ್ಗಮಃ - ದುರ್ಲಭವಾದ, ಪಾರಃ - ತುದಿಯು, ಉಕ್ತಃ - ಹೇಳಲ್ಪಟ್ಟಿತು, ಯಃ - ಯಾವನು, ಕರ್ಮಣಾ - ಕೆಲಸದಿಂದ, ಕಾರ್ಯಾಣಾಂ - ಹೇಳಲ್ಪಟ್ಟ ಕಾರ್ಯಗಳ, ಪಾರಂ - ನಿರ್ವಾಹವನ್ನು, ಗಚ್ಛತಿ - ಹೊಂದುತ್ತಾನೋ, ಸಃ - ಅವನು, ಬುದ್ಧಿಮಾನ್ - ಬುದ್ಧಿವಂತನು. ॥೧೩॥ ದುರ್ಮತೇ - ದುರ್ಬುದ್ಧಿಯುಳ್ಳವನೇ, ಕೇನಚಿತ್ - ಯಾವನಿಂದಲೂ, ದುರವಾಪಸ್ಯ - ಹೊಂದಲಸಾಧ್ಯವಾದ, ಅರ್ಥಸ್ಯ -

ಗಿಸಿ ಅಣ್ಣತಮ್ಮಂದಿರಾದ ನಿಮ್ಮಿಬ್ಬರನ್ನೂ ಬೀಳಿಸಿದೆನಲ್ಲವೆ? ಆಗ ನೀವಿಬ್ಬರೂ ಪ್ರಜ್ಞೆತಪ್ಪಿ ಬಿದ್ದಿರಿ. ನಾನು ನೀವಿಬ್ಬರೂ ಯಮನಾಲಯವನ್ನು ಸೇರಿದರೆಂದು ಸುಮ್ಮನಾದೆನು. ಆದರೆ ನೀವಿನ್ನೂ ಬದುಕಿಯೇ ಇರುವಿರಲ್ಲವೆ? ಇದೀಗ ನೋಡೋಣ. ಕೋಪೋದ್ದೀಪಿತವಾದ ಕಾಳಸರ್ಪಗಳಿಗೆ ಸಮಾನಗಳಾದ ಬಾಣಗಳೊಡಗೂಡಿದ ನನ್ನೊಡನೆ ಅದಾವ ವೀರನು ತಾನೆ ನಿಂತಾನು!" ಎಂದು ಹೇಳಿದನು. ॥೮–೧೧॥ ಇಂದ್ರಜಿತುವು ಈ ರೀತಿ ನುಡಿಯಲು ಮಹಾ ವೀರನಾದ ಲಕ್ಷ್ಮಣನು ಸ್ವಲ್ಪವೂ ಭಯಪಡದೆ ಮಹಾ ಕ್ರುದ್ಧನಾಗಿ ಅವನನ್ನು ಕುರಿತು, "ಎಲೈ ರಾಕ್ಷಸನೇ! ನೀನು ಕಾರ್ಯಗಳ ಅಂತವನ್ನು ಪಡೆದವನಾದೆ. ನಿನ್ನ ಕಾಲವು ಸಮೀಪಿಸಿ ಬಂದಿತು. ಸುಮ್ಮನೆ ಮಾತನಾಡಿ ಪ್ರಯೋಜನವೇನು? ಲೋಕದಲ್ಲಿ ಯಾರು ಕಾರ್ಯಗಳನ್ನು ಮಾಡಿ ಮುಗಿಸುವನೋ ಅವನೇ ಬುದ್ಧಿವಂತನೆನಿಸುವನು. ನೀನು ಯಾವ ಕಾರ್ಯಗಳನ್ನು ಯಾವ ರೀತಿ ಮಾಡಬೇಕೆಂಬ ವಿಷಯವನ್ನೇ ತಿಳಿಯದವನು. ನೀನು ಹೀನಾರ್ಥನಾದುದರಿಂದ ಮಾಡಲಸದಳವಾದ ಕಾರ್ಯವನ್ನು ಮಾಡಿದೆನೆಂದು ಬಾಯಿಯಲ್ಲಿ ಹೇಳುವೆ. ಹೀಗೆ ಹೇಳುವುದರಿಂದ ಯಾವ ಪ್ರಯೋಜನವಿರುವುದು? ಬಾಯಿಯಲ್ಲಿ

ಮರ್ಥಸ್ಯ ಹೀನಾರ್ಥೋ ದುರವಾಪ್ಯಸ್ಯ ಕೇನಚಿತ್ । ವಚೋ ವ್ಯಾಹೃತ್ಯ ಜಾನೀಷೇ ಕೃತಾರ್ಥೋಽಸ್ಮೀತಿ ದುರ್ಮತೇ! ॥ ೧೪ ॥ ಅಂತರ್ಧಾನಗತೇನಾಜೌ ಯಸ್ತ್ವಯಾ ಚರಿತಸ್ತದಾ । ತಸ್ಕರಾಚರಿತೋ ಮಾರ್ಗೋ ನೈಷ ವೀರನಿಷೇವಿತಃ ॥೧೫॥ ಯಥಾ ಬಾಣಪಥಂ ಪ್ರಾಪ್ಯ ಸ್ಥಿತೋಽಹಂ ತವ ರಾಕ್ಷಸ! । ದರ್ಶಯಸ್ವಾದ್ಯ ತತ್ತೇಜೋ ವಾಚಾ ತ್ವಂ ಕಿಂ ವಿಕತ್ಥಸೇ" ॥ ೧೬ ॥ ಏವಮುಕ್ತೋ ಧನುರ್ಭೀಮಂ ಪರಾಮೃಶ್ಯ ಮಹಾಬಲಃ । ಸಸರ್ಜ ನಿಶಿತಾನ್ ಬಾಣಾನಿಂದ್ರಜಿತ್ಸಮಿತಿಂಜಯಃ ॥ ೧೭ ॥ ತೇ

ಪ್ರಯೋಜನಾರ್ಥವಾಗಿ, ಹೀನಾರ್ಥಃ - ಪ್ರಯೋಜನಹೀನನಾದ, ಸತ್ವಂ - ಆ ಈ ನೀನು, ವಚಃ - ಮಾತನ್ನು, ವ್ಯಾಹೃತ್ಯ - ಹೇಳಿ, ಕೃತಾರ್ಥಃ - ನಿರ್ವಾಹ ಮಾಡಲ್ಪಟ್ಟ ಪ್ರಯೋಜನವುಳ್ಳವನು, ಅಸ್ಮೀತಿ - ಆದೆನೆಂದು, ಜಾನೀಷೇ - ತಿಳಿದಿದ್ದೀಯೆ. ॥ ೧೪ ॥ ಆಜೌ - ಕಾಳಗದಲ್ಲಿ, ಅಂತ....ನ - ಅಂತರ್ಧಾನವನ್ನು ಹೊಂದಿರುವ, ತ್ವಯಾ - ನಿನ್ನಿಂದ, ತದಾ - ಆ ಕಾಲದಲ್ಲಿ, ಯಃ - ಯಾವ ಯುದ್ಧ ಮಾರ್ಗವು, ಆಚರಿತಃ - ಅನುಷ್ಠಾನ ಮಾಡಲ್ಪಟ್ಟಿತೋ, ಏಷಮಾರ್ಗಃ - ಈ ಪದ್ಧತಿಯು, ತಸ್ಕರಾಚರಿತಃ - ಕಳ್ಳರಿಂದ ಮಾಡಲ್ಪಟ್ಟದ್ದು, ವೀರನಿಷೇವಿತಃ - ಶೂರರಿಂದ ಸೇವಿಸಲ್ಪಟ್ಟದ್ದು, ನ - ಅಲ್ಲವು. ॥ ೧೫ ॥ ರಾಕ್ಷಸ - ರಕ್ಕಸನೇ, ಅಹಂ - ನಾನು, ಯಥಾ - ಹೇಗೆ, ತವ - ನಿನ್ನ, ಬಾಣಪಥಂ - ಬಾಣದ ಮಾರ್ಗವನ್ನು, ಪ್ರಾಪ್ಯ - ಹೊಂದಿ, ಸ್ಥಿತಃ - ನಿಂತಿದ್ದೇನೆಯೋ, ತಥಾ - ಹಾಗೆಯೇ, ಅದ್ಯ - ಈಗ, ತತ್ತೇಜಃ - ಅದೇ ಸಾಮರ್ಥ್ಯವನ್ನೇ, ದರ್ಶಯ - ತೋರಿಸು, ವಾಚಾ - ಮಾತಿನಿಂದ, ತ್ವಂ - ನೀನು, ಕಿಂವಿಕತ್ಥಸೇ - ಏಕೆ ಮಾತನಾಡುತ್ತೀಯೆ. ॥ ೧೬ ॥ ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಮಹಾಬಲಃ - ಬಹಳ ಬಲಶಾಲಿಯಾದ, ಸಮಿತಿಂಜಯಃ - ಯುದ್ಧದಲ್ಲಿ ಜಯಶೀಲನಾದ, ಇಂದ್ರಜಿತ್ - ಇಂದ್ರಜಿತುವು, ಭೀಮಂ - ಭಯಂಕರವಾದ, ಧನುಃ - ಧನುಸ್ಸನ್ನು, ಪರಾಮೃಶ್ಯ - ಹಿಡಿದು, ನಿಶಿತಾನ್ - ಹದಗಳಾದ, ಬಾಣಾನ್ - ಬಾಣಗಳನ್ನು, ಸಸರ್ಜ - ಬಿಟ್ಟನು. ॥೧೭॥ ನಿಸೃಷ್ಟಾಃ - ಬಿಡಲ್ಪಟ್ಟ, ಮಹಾವೇಗಾಃ - ಬಹಳ ವೇಗಶಾಲಿಗಳಾದ, ಸರ್ಪವಿಷೋಪಮಾಃ -

---

ನಿರರ್ಥಕವಾದ ಮಾತುಗಳನ್ನು ಹೇಳಿದ ಮಾತ್ರದಿಂದಲೇ ಕೃತಾರ್ಥನಾದೆನೆಂದು ತಿಳಿದು ಕೊಂಡಿರುವ ನಿನ್ನ ಬುದ್ಧಿಗೇನೆಂದು ಹೇಳಬೇಕು. ನೀನು ಹಿಂದೆ ಯುದ್ಧಮಾಡಿ ನಮ್ಮನ್ನು ಜಯಿಸಿದೆನೆಂದು ಹೇಳಿಕೊಳ್ಳುತ್ತಿರುವೆಯಲ್ಲವೆ. ಅಂದಿನ ರಾತ್ರಿಯುದ್ಧದಲ್ಲಿ ನೀನು ನಮಗೆ ಅಗೋಚರನಾಗಿ ನಿಂತು ಕಾಳಗ ಮಾಡಿದೆ. ಹಾಗೆ ಮಾಡುವುದು ಕಳ್ಳರಿಗೆ ಯೋಗ್ಯ ವಾದುದೇ ಹೊರತು ನಿನ್ನಂತಹ ವೀರನಿಗೆ ತಕ್ಕುದಲ್ಲ. ಹೀಗಿರುವಾಗ ಅದೊಂದು ಹೆಮ್ಮೆಯ ವಿಷಯವೆಂದೇಕೆ ಹೇಳಿಕೊಳ್ಳುವೆ? ಅದೆಲ್ಲವೂ ಹಾಗಿರಲಿ; ಎಲಾ ರಾಕ್ಷಸ! ಇದೋ ನೋಡು; ನೀನೀಗ ನನ್ನ ಕೂರಂಬುಗಳಿಗೆ ತುತ್ತಾಗುವೆ. ಈಗ ನಿನ್ನ ಪರಾಕ್ರಮವನ್ನು ತೋರು. ವ್ಯರ್ಥವಾಗಿ ನಿನ್ನನ್ನು ನೀನೇ ಹೊಗಳಿಕೊಳ್ಳುವೆಯೇಕೆ? ಸಾಕು. ನಿಲ್ಲಿಸು" ಎಂದು ಕಠಿನವಾಗಿ ನುಡಿದನು. ॥ ೧೨–೧೬ ॥ ಲಕ್ಷ್ಮಣನಿಂತು ನುಡಿಯಲು ರಣರಂಗದಲ್ಲಿ ಅಜೇಯನಾದ ಆ ಇಂದ್ರಜಿತುವು ಕೋಪದಿಂದ ಕೆರಳಿ ಮಹಾ ಭಯಂಕರವಾದ ಧನುಸ್ಸನ್ನು ಕೈಯಲ್ಲಿ ಹಿಡಿದೆತ್ತಿ ಮಹಾ ತೀಕ್ಷ್ಣವಾದ ಅಂಬಿನ ಮಳೆಯನ್ನು ಸುರಿಸಿದನು. ಹೀಗೆ ಆ ರಾಕ್ಷಸನು ಪ್ರಯೋಗಿಸಿದ ಮಹಾ ವೇಗವತ್ತುಗಳೂ, ಮಹಾ ವಿಷಸರ್ಪಗಳಿಗೆ ಸಮಾನವಾ

ನಿಸೃಷ್ಟಾ ಮಹಾವೇಗಾಃ ಶರಾಸ್ಸರ್ಪವಿಷೋಪಮಾಃ । ಸಂಪ್ರಾಪ್ಯ ಲಕ್ಷ್ಮಣಂ ಪೇತುಃ
ಶ್ವಸಂತಇವ ಪನ್ನಗಾಃ ॥ ೧೮ ॥ ಶರೈರತಿಮಹಾವೇಗೈರ್ವೇಗವಾನ್ ರಾವಣಾತ್ಮಜಃ ।
ಸೌಮಿತ್ರಿಮಿಂದ್ರಜಿದ್ಯುದ್ಧೇ ವಿವ್ಯಾಧ ಶುಭಲಕ್ಷಣಂ ॥ ೧೯ ॥ ಸಶರೈರತಿವಿದ್ಧಾಂಗೋ
ರುಧಿರೇಣ ಸಮುಕ್ಷಿತಃ । ಶುಶುಭೇ ಲಕ್ಷ್ಮಣಃ ಶ್ರೀಮಾನ್ ವಿಧೂಮಇವ ಪಾವಕಃ
॥೨೦॥ ಇಂದ್ರಜಿತ್ತ್ವಾತ್ಮನಃ ಕರ್ಮ ಪ್ರಸಮೀಕ್ಷ್ಯಾಽಧಿಗಮ್ಯಚ । ವಿನದ್ಯ ಸುಮಹಾ
ನಾದಮಿದಂ ವಚನಮಬ್ರವೀತ್ ॥ ೨೧ ॥ "ಪತ್ರಿಣಃ ಶಿತಧಾರಾಸ್ತೇ ಶರಾ ಮತ್ಕಾ
ರ್ಮುಕಚ್ಯುತಾಃ । ಆದಾಸ್ಯಂತೇಽದ್ಯಸೌಮಿತ್ರೇ! ಜೀವಿತಂ ಜೀವಿತಾಂತಕಾಃ ॥೨೨॥
ಅದ್ಯ ಗೋಮಾಯುಸಂಘಾಶ್ಚ ಶ್ಯೇನಸಂಘಾಶ್ಚ ಲಕ್ಷ್ಮಣ! । ಗೃಧ್ರಾಶ್ಚ ನಿಪತಂತು

ಹಾವುಗಳ ವಿಷಕ್ಕೆ ಸಮಾನಗಳಾದ, ತೇಶರಾಃ - ಆ ಬಾಣಗಳು, ಲಕ್ಷ್ಮಣಂ - ಲಕ್ಷ್ಮಣನನ್ನು,
ಸಂಪ್ರಾಪ್ಯ - ಹೊಂದಿ, ಶ್ವಸಂತಃ - ಉಸುರು ಬಿಡುತ್ತಿರುವ, ಪನ್ನಗಾಇವ - ಸರ್ಪಗಳಂತೆ,
ಪೇತುಃ - ಬಿದ್ದುವು. ॥೧೮॥ ವೇಗವಾನ್ - ವೇಗವುಳ್ಳ, ರಾವಣಾತ್ಮಜಃ - ರಾವಣನ ಮಗ
ನಾದ, ಇಂದ್ರಜಿತ್ - ಇಂದ್ರಜಿತುವು, ಯುದ್ಧೇ - ಕಾಳಗದಲ್ಲಿ, ಅತಿ....ಗೈಃ - ಅತ್ಯಂತ
ವೇಗವುಳ್ಳ, ಶರೈಃ - ಬಾಣಗಳಿಂದ, ಶುಭಲಕ್ಷಣಂ - ಶುಭಕರವಾದ ರಾಜಲಕ್ಷಣಗಳುಳ್ಳ,
ಲಕ್ಷ್ಮಣಂ - ಲಕ್ಷ್ಮಣನನ್ನು, ವಿವ್ಯಾಧ - ಹೊಡೆದನು. ॥ ೧೯ ॥ ಶರೈಃ - ಬಾಣಗಳಿಂದ, ಅತಿ
ವಿದ್ಧಾಂಗಃ - ಬಹಳವಾಗಿ ಪೆಟ್ಟು ತಗಲಿದ ಅವಯವಗಳುಳ್ಳವನಾದಕಾರಣ, ರುಧಿರೇಣ - ರಕ್ತದಿಂದ,
ಸಮುಕ್ಷಿತಃ - ತೋಯಿಸಲ್ಪಟ್ಟ, ಶ್ರೀಮಾನ್ - ಸಂಪದ್ಯುಕ್ತನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು,
ವಿಧೂಮಃ - ಹೊಗೆಯಿಲ್ಲದ, ಪಾವಕಇವ - ಅಗ್ನಿಯಂತೆ, ಶುಶುಭೇ - ಹೊಳೆಯುತ್ತಿದ್ದನು. ॥೨೦॥
ಇಂದ್ರಜಿತ್ತು - ಇಂದ್ರಜಿತುವಾದರೆ, ಆತ್ಮನಃ - ತನ್ನ, ಕರ್ಮ - ಕೃತ್ಯವನ್ನು, ಪ್ರಸಮೀಕ್ಷ್ಯ -
ಕಂಡು, ಅಧಿಗಮ್ಯಚ - ತಿಳಿದು, ಸುಮಹಾನಾದಂ - ಬಹಳ ಧ್ವನಿಯುಳ್ಳದ್ದಂತೆ, ವಿನದ್ಯ - ಕೂಗಿ,
ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೧ ॥ ಸೌಮಿತ್ರೇ - ಲಕ್ಷ್ಮಣನೇ,
ಅದ್ಯ - ಈಗ, ಮತ್ಕಾ....ತಾಃ - ನನ್ನ ಧನುಸ್ಸಿನಿಂದ ಜಾರುತ್ತಿರುವ, ಶಿತಧಾರಾಃ - ಹದವಾದ ಧಾರೆ
ಗಳುಳ್ಳ, ಜೀವಿ....ಕಾಃ - ಪ್ರಾಣಾಂತವನ್ನುಂಟುಮಾಡುತ್ತಿರುವ, ಪತ್ರಿಣಃ - ರಕ್ಕೆಗಳುಳ್ಳ, ಶರಾಃ -
ಬಾಣಗಳು, ತೇ - ನಿನ್ನ, ಜೀವಿತಂ - ಪ್ರಾಣವನ್ನು, ಆದಾಸ್ಯಂತೇ - ಗ್ರಹಿಸುತ್ತವೆ. ॥ ೨೨ ॥
ಲಕ್ಷ್ಮಣ - ಲಕ್ಷ್ಮಣನೇ, ಅದ್ಯ - ಈಗ, ಮಯಾ - ನನ್ನಿಂದ, ನಿಹತಂ - ಹೊಡೆಯಲ್ಪಟ್ಟ, ಗತಾಸುಂ -

ದವುಗಳೂ ಆದ ಬಾಣಗಳು ನಿಟ್ಟುಸಿರ್ಗರೆವ ನಾಗಸರ್ಪಗಳಂತೆ ಲಕ್ಷ್ಮಣನಮೇಲೆ ಬಿದ್ದುವು.
ರಾವಣಿಯು ಪುನಃ ಬಾಣಗಳನ್ನೆಸೆದು ರಾಜಪುತ್ರನಾದ ಲಕ್ಷ್ಮಣನನ್ನು ಬಹಳವಾಗಿ ಬಾಧಿಸಿ
ದನು. ಹೀಗೆ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟವನೂ, ರಕ್ತಸಿಕ್ತವಾದ ಶರೀರ
ವುಳ್ಳವನೂ ಮಹಾ ತೇಜಸ್ಸಂಪನ್ನನೂ ಆದ ಲಕ್ಷ್ಮಣನು ಹೊಗೆಯಿಲ್ಲದ ಅಗ್ನಿಜ್ವಾಲೆಯಂತೆ
ಪ್ರಕಾಶಿಸುತ್ತಿದ್ದನು. ॥೧೭–೨೦॥ ಆ ಸಮಯದಲ್ಲಿ ಇಂದ್ರಜಿತುವು ತನ್ನ ಕಾರ್ಯವು ಮಹಾ
ದ್ಭುತವಾದುದೆಂದು ತಾನೇ ತಿಳಿದು ಹಿಗ್ಗುತ್ತ ಮಹಾ ಭಯಂಕರವಾಗಿ ಸಿಂಹನಾದವನ್ನು
ಮಾಡಿ, "ಎಲೆವೊ ಸುಮಿತ್ರಾನಂದನನೇ! ಬಹು ತೀಕ್ಷ್ಣವಾದ ಅಂಚುಗಳುಳ್ಳವೂ, ನನ್ನ
ಧನುಸ್ಸಿನಿಂದ ಜಾರಿದವೂ ಆದ ಈ ಬಾಣಗಳು ನಿನ್ನ ಪ್ರಾಣಗಳನ್ನು ಸಂಹರಿಸುವುವು.
ಲಕ್ಷ್ಮಣಾ! ನಾನು ನಿನ್ನನ್ನು ಈ ಬಾಣಗಳಿಂದ ಕೊಂದ ಬಳಿಕ ಕೆಳಕ್ಕುರುಳುವ ನಿನ್ನ ದೇಹ

ತ್ವಾಂ ಗತಾಸುಂ ನಿಹತಂ ಮಯಾ ಹತಂ ॥ ೨೩ ॥ ಕ್ಷತ್ರಬಂಧುಂ ಸದಾನಾರ್ಯಂ ರಾಮಃ ಪರಮದುರ್ಮತಿಃ । ಭಕ್ತಂ ಭ್ರಾತರಮದ್ಯೈವ ತ್ವಾಂ ದ್ರಕ್ಷ್ಯತಿ ಮಯಾ ಹತಂ ॥ ೨೪ ॥ ವಿಶಸ್ತಕವಚಂ ಭೂಮೌ ವ್ಯಪವಿದ್ಧಶರಾಸನಂ । ಹೃತೋತ್ತಮಾಂಗಂ ಸೌಮಿತ್ರೇ! । ತ್ವಾಮದ್ಯ ನಿಹತಂ ಮಯಾ" ॥ ೨೫ ॥ ಇತಿ ಬ್ರುವಾಣಂ ಸಂರಬ್ಧಂ ಪರುಷಂ ರಾವಣಾತ್ಮಜಂ । ಹೇತುಮದ್ವಾಕ್ಯಮತ್ಯರ್ಥಂ ಲಕ್ಷ್ಮಣಃ ಪ್ರತ್ಯುವಾಚಹ ॥ ೨೬ ॥ "ವಾಗ್ಬಲಂ ತ್ಯಜ ದುರ್ಬುದ್ಧೇ! ಕ್ರೂರಕರ್ಮಾಸಿ ರಾಕ್ಷಸ! । ಅಥ ಕಸ್ಮಾದ್ವದಸ್ಯೇತತ್ಸಂಪಾದಯ ಸುಕರ್ಮಣಾ ॥ ೨೭ ॥ ಅಕೃತ್ವಾ ಕತ್ಥಸೇ ಕರ್ಮ ಕಿಮರ್ಥ

ಹೋದ ಪ್ರಾಣಗಳುಳ್ಳ, ತ್ವಾಂ - ನಿನ್ನನ್ನು ಕುರಿತು, ಗೋಮಾ....ಶ್ಚ - ನರಿಗಳ ತಂಡಗಳು, ಶ್ಯೇನಸಂಘಾಶ್ಚ - ಗಿಡಗನ ಹಕ್ಕಿಗಳ ತಂಡಗಳೂ, ಗೃಧ್ರಾಶ್ಚ - ಹದ್ದುಗಳೂ, ನಿಪತಂತು - ಬೀಳಲಿ. ॥೨೩॥ ಪರ....ತಿಃ - ಬಹಳ ದುರ್ಬುದ್ಧಿಯುಳ್ಳ, ರಾಮಃ - ಶ್ರೀರಾಮನು, ಮಯಾ - ನನ್ನಿಂದ, ಅದ್ಯೈವ - ಈಗಲೇ, ಹತಂ - ಹೊಡೆಯಲ್ಪಟ್ಟ, ಭ್ರಾತರಂ - ತಮ್ಮನಾದ, ಭಕ್ತಂ - ಭಕ್ತನಾದ, ಸದಾ - ನಿರಂತರವೂ, ಅನಾರ್ಯಂ - ಅಪೂಜ್ಯನಾದ, ಕ್ಷತ್ರಬಂಧುಂ - ನೀಚ ಕ್ಷತ್ರಿಯನಾದ, ತ್ವಾಂ - ನಿನ್ನನ್ನು, ದ್ರಕ್ಷ್ಯತಿ - ನೋಡಲಿ. ॥ ೨೪ ॥ ಸೌಮಿತ್ರೇ - ಲಕ್ಷ್ಮಣನೇ, ಮಯಾ - ನನ್ನಿಂದ, ಅದ್ಯ - ಈಗ, ನಿಹತಂ - ಹೊಡೆಯಲ್ಪಟ್ಟ, ವಿಶಸ್ತಕವಚಂ - ಹೋಗಲಾಡಿಸಲ್ಪಟ್ಟ ಕವಚವುಳ್ಳ, ವ್ಯಪ....ನಂ - ಬೀಳಲ್ಪಟ್ಟ ಧನುಸ್ಸುಳ್ಳ, ಹೃತೋತ್ತಮಾಂಗಂ - ಅಪಹರಿಸಲ್ಪಟ್ಟ ಶರೀರವುಳ್ಳ, ತ್ವಾಂ - ನಿನ್ನನ್ನು, ಭೂಮೌ - ನೆಲದಲ್ಲಿ, ದ್ರಕ್ಷ್ಯತಿ - ನೋಡಲಿ. ॥೨೫॥ ಇತಿ - ಈ ಪರಿಯಾಗಿ, ಬ್ರುವಾಣಂ - ಹೇಳುತ್ತಿರುವ, ಸಂರಬ್ಧಂ - ಕೋಪಿಷ್ಠನಾದ, ಪರುಷಂ - ಕ್ರೂರನಾದ, ರಾವಣಾತ್ಮಜಂ - ರಾವಣನ ಮಗನನ್ನು ಕುರಿತು, ಲಕ್ಷ್ಮಣಃ - ಲಕ್ಷ್ಮಣನು, ಅತ್ಯರ್ಥಂ - ಬಹಳವಾಗಿ, ಹೇತುಮತ್ - ಹೇತು ಗರ್ಭಿತವಾದ, ವಾಕ್ಯಂ - ಮಾತನ್ನು, ಪ್ರತ್ಯುವಾಚಹ - ಪ್ರತ್ಯುತ್ತರ ಹೇಳಿದನು. ॥ ೨೬ ॥ ರಾಕ್ಷಸ - ರಕ್ಕಸನೇ, ದುರ್ಬುದ್ಧೇ - ದುಷ್ಟಬುದ್ಧಿಯುಳ್ಳವನೇ, ಕ್ರೂರಕರ್ಮ - ಕ್ರೂರವ್ಯಾಪಾರಿಯಾದ, ತ್ವಂ - ನೀನು, ವಾಗ್ಬಲಂ - ಮಾತುಗಳ ಬಲವನ್ನು, ತ್ಯಜ - ಬಿಡು, ಕಸ್ಮಾತ್ - ಏತರ ದೆಸೆಯಿಂದ, ಏತತ್ - ಈ ಮಾತುಗಳನ್ನು, ವದಸಿ - ಹೇಳುತ್ತೀಯೆ, ಅಥ - ಬಳಿಕ, ಸುಕರ್ಮಣಾ - ಕಾರ್ಯದಿಂದ ಚೆನ್ನಾಗಿ, ಸಂಪಾದಯ - ಸಾಧಿಸು. ॥ ೨೭ ॥ ರಾಕ್ಷಸ - ರಕ್ಕಸನೇ, ಇಹ - ಈಗ, ಕರ್ಮ - ಕೃತ್ಯ

ವನ್ನು ನರಿಗಳೂ, ರಣಹದ್ದುಗಳೂ, ಡೇಗೆಗಳೂ ಕಡಿದು ತಿನ್ನುವುವು. ಎಲೈ ದಾನಸ್ವಭಾವವುಳ್ಳ ಲಕ್ಷ್ಮಣನೇ! ಸರ್ವಕಾಲದಲ್ಲಿಯೂ ಪೂಜ್ಯನಾದವನೂ, ರಾಮನಿಗೆ ಬಂಧುವಾದವನೂ, ಆದ ನೀನು ನನ್ನಿಂದ ಮಡಿದಮೇಲೆ ಕೆಳಕ್ಕುರುಳುವ ನಿನ್ನನ್ನು ದುಷ್ಟರಲ್ಲಿಯೂ ಅನುಗ್ರಹ ಬುದ್ಧಿಯುಳ್ಳ ಆ ರಾಮನು ನೋಡುವನಲ್ಲವೆ. ಇಷ್ಟೆಯಲ್ಲದೆ ಕವಚವು ಭೇದಿಸಿಹೋಗಿ, ಭೂಮಿಯಲ್ಲಿ ಬೀಳಿಸಿದ ಧನುರ್ಬಾಣಗಳುಳ್ಳವನೂ, ಅಪಹರಿಸಲ್ಪಟ್ಟ ಶಿರಸ್ಸುಳ್ಳವನೂ ಆದ ನಿನ್ನನ್ನು ನೋಡಿ ಆ ರಾಮನು ವ್ಯಸನಪಡುವನು" ಎಂದು ಹೇಳಿದನು. ॥೨೧-೨೫॥ ಆ ತರುವಾಯ ಆ ರಾಕ್ಷಸನು ಮಹಾ ಸಂರಂಭವುಳ್ಳವನಾಗಿ ನುಡಿದ ಮಾತುಗಳನ್ನು ಕೇಳಿ, "ಎಲಾ ದುಷ್ಟಬುದ್ಧಿಯುವನೇ! ಈ ವಾಗ್ಬಲವನ್ನು ತೊರೆದು ಬಿಡು. ವ್ಯರ್ಥವಾಗಿ ಮಾತನಾಡಿ ಪ್ರಯೋಜನವೇನು? ನಿನ್ನ ಯೋಗ್ಯತೆಗೆ ತಕ್ಕಂತೆ ಯುದ್ಧಮಾಡಿ ನಿನ್ನ ಪರಾಕ್ರಮವನ್ನು ತೋರಿಸು. ರಾಕ್ಷಸಾಧಮಾ! ಯಾವ ಕಾರ್ಯವನ್ನೂ ಮಾಡದೆಯೇ ನಿರ್ನಿಮಿತ್ತ

ಮಿಹ ರಾಕ್ಷಸ! । ಕುರು ತತ್ಕರ್ಮ ಯೇನಾಹಂ ಶ್ರದ್ದಧ್ಯಾಂ ತವ ಕತ್ಥನಂ ॥ ೨೮ ॥ ಅನುಕ್ತ್ವಾ ಪರುಷಂ ವಾಕ್ಯಂ ಕಿಂಚಿದಪ್ಯನವಕ್ಷಿಪನ್ । ಅವಿಕತ್ಥನ್ ವಧಿಷ್ಯಾಮಿ ತ್ವಾಂ ಪಶ್ಯ ಪುರುಷಾಧಮ!" ॥ ೨೯ ॥ ಇತ್ಯುಕ್ತ್ವಾ ಪಂಚನಾರಾಚಾನಾಕರ್ಣಾಪೂರಿತಾನ್ ಶಿತಾನ್ । ನಿಜಘಾನ ಮಹಾವೇಗಾನ್ ಲಕ್ಷ್ಮಣೋ ರಾಕ್ಷಸೋರಸಿ ॥ ೩೦ ॥ ಸುಪತ್ರವಾಜಿತಾ ಬಾಣಾ ಜ್ವಲಿತಾ ಇವ ಪನ್ನಗಾಃ । ನೈರ್ಋತೋರಸ್ಯಭಾಸಂತ ಸವಿತೋ ರಶ್ಮಯೋ ಯಥಾ ॥ ೩೧ ॥ ಸಶರೈರಾಹತಸ್ತೇನ ಸರೋಷೋ ರಾವಣಾತ್ಮಜಃ । ಸುಪ್ರಯುಕ್ತೈಸ್ತ್ರಿಭಿರ್ಬಾಣೈಃ ಪ್ರತಿವಿವ್ಯಾಧ ಲಕ್ಷ್ಮಣಂ ॥ ೩೨ ॥ ಸಬಭೂವ ತದಾ

ವನ್ನು, ಅಕೃತ್ವಾ - ಮಾಡದೆ, ಕಿಮರ್ಥಂ - ಏತಕ್ಕೋಸ್ಕರ, ಕತ್ಥಸೇ - ಆತ್ಮಶ್ಲಾಘನೆ ಮಾಡಿಕೊಳ್ಳುತ್ತೀಯೆ, ಅಹಂ - ನಾನು, ಯೇನ - ಯಾವ ಕಾರ್ಯದಿಂದ, ತವ - ನಿನ್ನ, ಕತ್ಥನಂ - ಆತ್ಮಶ್ಲಾಘನೆಯನ್ನು, ಶ್ರದ್ದಧ್ಯಾಂ - ನಂಬುವೆನೋ, ತತ್ಕರ್ಮ - ಅಂಥಾ ಕಾರ್ಯವನ್ನು, ಕುರು - ಮಾಡು. ॥೨೮॥ ಪುರುಷಾಧಮ - ನೀಚಪುರುಷನೇ, ಪರುಷಂ - ಕ್ರೂರವಾದ, ವಾಕ್ಯಂ - ಮಾತನ್ನು, ಅನುಕ್ತ್ವಾ - ಹೇಳದೆ, ಕಿಂಚಿತ್ - ಸ್ವಲ್ಪವಾದರೂ, ಅನವಕ್ಷಿಪನ್ - ಆಕ್ಷೇಪಣೆಮಾಡದೇ, ಅವಿಕತ್ಥನ್-ಆತ್ಮಶ್ಲಾಘನೆ ಮಾಡಿಕೊಳ್ಳದೆ, ತ್ವಾಂ - ನಿನ್ನನ್ನು, ವಧಿಷ್ಯಾಮಿ - ಸಂಹಾರ ಮಾಡುವೆನು, ಪಶ್ಯ - ನೋಡು. ॥ ೨೯ ॥ ಇತಿ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಲಕ್ಷ್ಮಣಃ - ಲಕ್ಷ್ಮಣನು, ಆಕ....ತಾನ್ - ಕಿವಿವರೆಗೆ ಸೆಳೆಯಲ್ಪಟ್ಟ, ಶಿತಾನ್ - ತೀಕ್ಷ್ಣಗಳಾದ, ಮಹಾವೇಗಾನ್ - ಬಹಳ ವೇಗವುಳ್ಳ, ಪಂಚನಾರಾಚಾನ್ - ಐದು ಬಾಣಗಳನ್ನು, ರಾಕ್ಷಸೋರಸಿ - ಆ ರಕ್ಕಸನ ಎದೆಯಲ್ಲಿ, ನಿಜಘಾನ - ಹೊಡೆದನು. ॥ ೩೦ ॥ ಸುಪ....ತಾಃ - ಒಳ್ಳೆಯ ರೆಕ್ಕೆಗಳ ವೇಗವುಳ್ಳ, ಜ್ವಲಿತಾಃ - ಪ್ರಜ್ವಲಿಸುತ್ತಿರುವ, ಪನ್ನಗಾಇವ-ಸರ್ಪಗಳಂತಿರುವ, ಬಾಣಾಃ-ಬಾಣಗಳು, ಸವಿತುಃ-ಸೂರ್ಯನ, ರಶ್ಮಯೋಯಥಾ - ಕಿರಣಗಳಂತೆ, ನೈರ್ಋತೋರಸಿ - ರಕ್ಕಸನ ಎದೆಯಲ್ಲಿ, ಅಭಾಸಂತ - ಹೊಳೆಯುತ್ತಿದ್ದವು. ॥ ೩೧ ॥ ತೇನ - ಆ ಲಕ್ಷ್ಮಣನಿಂದ, ಶರೈಃ - ಬಾಣಗಳಿಂದ, ಆಹತಃ - ಹೊಡೆಯಲ್ಪಟ್ಟ, ಸರೋಷಃ - ಕ್ರೋಧದಿಂದೊಡಗೂಡಿದ, ಸರಾವಣಾತ್ಮಜಃ - ಆ ಇಂದ್ರಜಿತುವು, ಸುಪ್ರಯುಕ್ತೈಃ - ಚೆನ್ನಾಗಿ ಪ್ರಯೋಗ ಮಾಡಲ್ಪಟ್ಟ, ತ್ರಿಭಿರ್ಬಾಣೈಃ - ಮೂರು ಬಾಣಗಳಿಂದ, ಲಕ್ಷ್ಮಣಂಪ್ರತಿ - ಲಕ್ಷ್ಮಣ

ವಾಗಿ ನಿನ್ನನ್ನು ನೀನೇ ಹೊಗಳಿಕೊಳ್ಳುವೆಯಲ್ಲವೆ! ಇದು ನಿನಗೆ ತರವಲ್ಲವು. ಮೊದಲು ನೀನು ಮಾಡಬೇಕಾದ ಕಾರ್ಯವನ್ನು ಮಾಡಿ ಆಮೇಲೆ ಬೇಕಾದಹಾಗೆ ನಿನ್ನನ್ನು ನೀನು ಹೊಗಳಿಕೊ. ಆಗ ನಾನು ನಿಜವಾಗಿಯು ಭಲೆ ಎಂದು ಸಂತೋಷಿಸುವೆನು. ಎಲಾ ರಾಕ್ಷಸಾಧಮನೇ! ನಾನು ಸ್ವಲ್ಪವಾದರೂ ಕಠಿನ ವಾಕ್ಕುಗಳನ್ನಾಡದೆ, ಅವಮಾನವನ್ನೂ ಮಾನವನ್ನೂ ಮಾಡದೆ ನನ್ನನ್ನು ನಾನು ಹೊಗಳಿಕೊಳ್ಳದೆ ನಿನ್ನನ್ನು ವಧಿಸುವೆನು ನೋಡು" ಎಂದು ಹೇಳಿದನು. ॥೨೬–೨೯॥ ಲಕ್ಷ್ಮಣನಿಂತು ನುಡಿದು ಮಹಾ ತೀಕ್ಷ್ಣವಾದ ಐದು ಬಾಣಗಳನ್ನು ಸಂಧಿಸಿ ಧನುಸ್ಸಿನ ನಾರಿಯನ್ನು ಕಿವಿವರೆಗೆಳೆದು ಆ ರಾಕ್ಷಸನಮೇಲೆಸೆದನು. ಸೊಗಸಾದ ರೆಕ್ಕೆಗಳುಳ್ಳವೂ, ಸರ್ಪಗಳಂತೆ ಪ್ರಜ್ವಲಿಸುತ್ತಿರುವುವೂ ಬಹಳ ವೇಗವಾಗಿ ಹೋಗುವುವೂ ಆದ ಲಕ್ಷ್ಮಣನೆಸೆದ ಆ ಬಾಣಗಳು ಸೂರ್ಯಕಿರಣಗಳಂತೆ ಪ್ರಕಾಶಿಸುತ್ತ ಆ ಇಂದ್ರಜಿತುವಿನ ಹೃದಯದಲ್ಲಿ ನಾಟಿದುವು. ಹೀಗೆ ಆ ಬಾಣಗಳಿಂದ ಹೊಡೆಯಲಾದವನೂ, ರಾವಣಕುಮಾರನೂ ಆದ ಇಂದ್ರಜಿತುವು ಮಹಾ ತೀಕ್ಷ್ಣವಾದ ಅನೇಕ ಬಾಣಗಳನ್ನು ಲಕ್ಷ್ಮಣನಮೇಲೆ

ಭೀಮೋ ನರರಾಕ್ಷಸಸಿಂಹಯೋಃ । ವಿಮರ್ದಸ್ತುಮುಲೋ ಯುದ್ಧೇ ಪರಸ್ಪರ ಜಯೈಷಿಣೋಃ ॥ ೩೩ ॥ ಉಭೌ ಹಿ ಬಲಸಂಪನ್ನಾವುಭೌ ವಿಕ್ರಮಶಾಲಿನೌ । ಉಭಾವಪಿ ಸುವಿಕ್ರಾಂತೌ ಸರ್ವಶಸ್ತ್ರಾಸ್ತ್ರಕೋವಿದೌ ॥ ೩೪ ॥ ಉಭೌ ಪರಮದುರ್ಜೇಯಾವತುಲ್ಯಬಲತೇಜಸೌ । ಯುಯುಧಾತೇ ತದಾ ವೀರೌ ಗ್ರಹಾವಿವ ನಭೋಗತೌ ॥ ೩೫ ॥ ಬಲವೃತ್ರಾವಿವಾಭೀತೌ ಯುಧಿ ತೌ ದುಷ್ಪ್ರಧರ್ಷಣೌ । ಯುಯುಧಾತೇ ಮಹಾತ್ಮಾನೌ ತದಾ ಕೇಸರಿಣಾವಿವ ॥ ೩೬ ॥ ಬಹೂನವಸೃಜಂತೌ ಹಿ ಮಾರ್ಗಣೌಘಾನವಸ್ಥಿತೌ । ನರರಾಕ್ಷಸಸಿಂಹೌ ತೌ ಪ್ರಹೃಷ್ಟಾವಭ್ಯಯುಧ್ಯತಾಂ ॥ ೩೭ ॥

ನನ್ನು ಕುರಿತು, ವಿವ್ಯಾಧ - ಹೊಡೆದನು. ॥ ೩೨ ॥ ತದಾ - ಆ ಕಾಲದಲ್ಲಿ, ಯುದ್ಧೇ - ಕಾಳೆಗದಲ್ಲಿ, ಪರ....ಣೋಃ - ಅನ್ಯೋನ್ಯವಾಗಿ ಜಯಿಸಲಿಚ್ಛೆಯುಳ್ಳ, ನರ....ಯೋಃ - ಮನುಷ್ಯಶ್ರೇಷ್ಠ ರಾಕ್ಷಸ ಶ್ರೇಷ್ಠರಾದ ಲಕ್ಷ್ಮಣೇಂದ್ರಜಿತ್ತುಗಳೀರ್ವರಿಗೂ, ಭೀಮಃ - ಭಯಂಕರವಾದ, ತುಮುಲಃ - ಸಂಕುಲವಾದ, ಸವಿಮರ್ದಃ - ಆ ಕಾಳೆಗವು, ಬಭೂವ - ನಡೆಯಿತು. ॥ ೩೩ ॥ ಉಭೌ - ಈರ್ವರೂ, ಬಲಸಂಪನ್ನೌ - ಬಹಳ ಸೇನೆಯಿಂದ ಕೂಡಿರುವರು, ಉಭೌ - ಈರ್ವರೂ, ವಿಕ್ರ....ನೌ - ಪರಾಕ್ರಮದಿಂದ ಒಪ್ಪುತ್ತಿರುವರು, ಉಭಾವಪಿ - ಈರ್ವರೂ, ಸುವಿಕ್ರಾಂತೌ - ಬಹಳ ಸಾಮರ್ಥ್ಯವಂತರು, ಸರ್ವ..... ದೌ - ಸಮಸ್ತ ಶಸ್ತ್ರಾಸ್ತ್ರವಿದ್ಯೆಗಳಲ್ಲಿಯೂ ಪಂಡಿತರು, ಉಭಾವಪಿ - ಈರ್ವರೂ, ಪರ....ಯೌ- ಬಹಳವಾಗಿ ಜಯಿಸಲಸಾಧ್ಯರು, ಉಭೌ - ಈರ್ವರೂ, ಅತು....ಸೌ - ಸಮಾನವಿಲ್ಲದ, ದೇಹತ್ರಾಣವೂ ಶತ್ರುಗಳ ನಿಗ್ರಹ ಸಾಮರ್ಥ್ಯವೂ ಉಳ್ಳವರು. ॥ ೩೪-೩೫ ॥ ತದಾ - ಆ ಕಾಲದಲ್ಲಿ, ವೀರೌ - ಶೂರರಾದ ಆ ಇಂದ್ರಜಿಲ್ಲಕ್ಷ್ಮಣರೀರ್ವರೂ, ನಭೋಗತೌ - ಅಂತರಿಕ್ಷವನ್ನು ಹೊಂದಿರುವ, ಗ್ರಹಾಇವ - ಗ್ರಹಗಳಂತೆ, ಯುಯುಧಾತೇ - ಯುದ್ಧ ಮಾಡಿದರು, ಯುಧಿ - ಕಾಳೆಗದಲ್ಲಿ, ಬಲವೃತ್ರಾವಿವ - ದೇವೇಂದ್ರ ವೃತ್ರಾಸುರರಂತೆ, ಅಭೀತೌ - ಭಯರಹಿತರಾದ, ದುಷ್ಪ್ರಧರ್ಷಣೌ - ಪರಾಭವಿಸಲಶಕ್ಯರಾದ, ಮಹಾತ್ಮಾನೌ - ಮಹಾ ಧೈರ್ಯವಂತರಾದ, ತೌ - ಅವರೀರ್ವರೂ, ತದಾ - ಆ ಕಾಲದಲ್ಲಿ, ಕೇಸರಿಣಾವಿವ - ಸಿಂಹಗಳಂತೆ, ಯುಯುಧಾತೇ - ಯುದ್ಧ ಮಾಡಿದರು. ॥ ೩೬ ॥ ಬಹೂ - ಅನೇಕ ಬಗೆಗಳಾದ, ಮಾರ್ಗಣೌಘಾ - ಬಾಣಗಳ ತಂಡಗಳನ್ನು, ಅವಸೃಜಂತೌ - ಬಿಡುತ್ತಿರುವ, ಅವಸ್ಥಿತೌ - ನಿಂತಿರುವ, ನರರಾಕ್ಷಸಸಿಂಹೌ - ನರೋತ್ತಮ ರಾಕ್ಷಸೋತ್ತಮರಾದ, ತೌ - ಆ ಲಕ್ಷ್ಮಣೇಂದ್ರಜಿತ್ತು

ಪ್ರಯೋಗಿಸಿದನು. ಆ ಸಮಯದಲ್ಲಿ ಆ ಲಕ್ಷ್ಮಣೇಂದ್ರಜಿತುಗಳಿಗೆ ಮಹಾ ಭಯಂಕರವಾದ ಯುದ್ಧವು ನಡೆಯಿತು. ಇಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಕೋರಿಕೆಯಿಂದ ಪರಾಕ್ರಮವನ್ನು ಮೆರೆದು ವಿಜೃಂಭಿಸುತ್ತಿದ್ದರು. ಹೀಗೆ ಮಹಾ ಭಯಂಕರವಾದ ಸಂಕುಲ ಯುದ್ಧವು ಮೊದಲಾಯಿತು. ಇದೂ ಅಲ್ಲದೆ ಇಬ್ಬರೂ ಶಸ್ತ್ರಾಸ್ತ್ರಗಳನ್ನು ಚೆನ್ನಾಗಿ ತಿಳಿದವರಾಗಿದ್ದರು. ಇಬ್ಬರೂ ಪರಸ್ಪರವಾಗಿ ಅಜೇಯರಾಗಿದ್ದರು. ನಿರುಪಮಾನವಾದ ಪರಾಕ್ರಮವುಳ್ಳ ವೀರಶ್ರೇಷ್ಠರಾದ ಆ ಇಂದ್ರಜಿತು ಮತ್ತು ಲಕ್ಷ್ಮಣರಿಗೆ ಆಕಾಶದಲ್ಲಿನ ಮಹಾ ಗ್ರಹಗಳಿಗೆಂತೋ ಅಂತು ಮಹಾ ಭಯಂಕರ ಯುದ್ಧಕ್ಕೆ ಮೊದಲಾಯಿತು. ॥ ೩೦–೩೫ ॥ ಅವರೀರ್ವರೂ ಇಂದ್ರ ವೃತ್ರಾಸುರರಂತೆಯೂ, ಮಹಾ ಬಲಿಷ್ಠವಾದ ಸಿಂಹಗಳಂತೆಯೂ ಸೆಣಸಿ ಯುದ್ಧಮಾಡಲಾರಂಭಿಸಿದರು. ಇಷ್ಟೆಯಲ್ಲದೆ ಅವರೀರ್ವರೂ ಅಪರಿಮಿತವಾಗಿ ಬಾಣವರ್ಷವನ್ನು ಸುರಿಸಿದರು. ನರರಾಕ್ಷಸಸಿಂಹ

ಸುಸಂಪ್ರಹೃಷ್ಟೌ ನರರಾಕ್ಷಸೋತ್ತಮೌ ಜಯೈಷಿಣೌ ಮಾರ್ಗಣಚಾಪಧಾರಿಣೌ ।
ಪರಸ್ಪರಂ ತೌ ಪ್ರವವರ್ಷತುರ್ಭೃಶಂ ಶರೌಘವರ್ಷೇಣ ವಲಾಹಕಾವಿವ ॥ ೩೮ ॥

ಅಭಿಪ್ರವೃದ್ಧೌ ಯುಧಿ ಯುದ್ಧಕೋವಿದೌ
ಶರಾಸಿಚಂಡೌ ಶಿತಶಸ್ತ್ರಧಾರಿಣೌ ।
ಅಭೀಕ್ಷ್ಣಮಾವಿವ್ಯಧತುರ್ಮಹಾಬಲೌ
ಮಹಾಹವೇ ಶಂಬರವಾಸವಾವಿವ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾಶೀತಿತಮಸ್ಸರ್ಗಃ

ಗಳು, ಪ್ರಹೃಷ್ಟೌ - ಸಂತೋಷಗೊಂಡವರಾಗಿ, ಅಭ್ಯಯುಧ್ಯತಾಂ - ಎದುರೆದುರಾಗಿ ಯುದ್ಧ ಮಾಡಿದರು. ॥ ೩೭ ॥ ಸುಸಂಪ್ರಹೃಷ್ಟೌ - ಬಹಳ ಸಂತೋಷಗೊಂಡವರಾದ, ಜಯೈಷಿಣೌ - ಜಯವನ್ನೇ ಅಪೇಕ್ಷಿಸುತ್ತಿರುವ, ಮಾರ್ಗ......ಣೌ - ಧನುರ್ಬಾಣಗಳನ್ನು ಧರಿಸಿರುವ, ನರ......ಮೌ - ಆ ಮನುಷ್ಯ ರಾಕ್ಷಸರೀರ್ವರೂ, ಬಲಾಹಕಾವಿವ - ಮೇಘಗಳಂತೆ, ಪರಸ್ಪರಂ - ಅನ್ಯೋನ್ಯವಾಗಿ, ಶರೌಘವರ್ಷೇಣ - ಬಾಣಗಳೆಂಬ ಉದಕವೃಷ್ಟಿಯಿಂದ, ಪ್ರವವರ್ಷತುಃ - ಸುರಿಸಿದರು. ॥ ೩೮ ॥ ಯುಧಿ-ಕಾಳಗದಲ್ಲಿ, ಅಭಿಪ್ರವೃದ್ಧೌ - ಮತ್ತೂ ವೃದ್ಧಿಯನ್ನೇ ಹೊಂದುತ್ತಿರುವ, ಯುದ್ಧಕೋವಿದೌ-ಕಾಳಗದಲ್ಲಿ ಸಮರ್ಥರಾದ, ಶರಾಸಿಚಂಡೌ - ಬಾಣಗಳಿಂದಲೂ, ಕತ್ತಿಗಳಿಂದಲೂ ಭಯಂಕರರಾದ, ಶಿತ....ಣೌ - ತೀಕ್ಷ್ಣಗಳಾದ ಆಯುಧಗಳನ್ನು ಧರಿಸಿರುವ, ಮಹಾಬಲೌ - ಬಹಳ ಬಲವಂತರಾದ ಅವರೀರ್ವರೂ, ಶಂಬ....ವ - ಶಂಬರಾಸುರ ದೇವೇಂದ್ರರಂತೆ, ಮಹಾಹವೇ - ದೊಡ್ಡ ಕಾಳಗದಲ್ಲಿ, ಅಭೀಕ್ಷ್ಣಂ - ಬಹಳವಾಗಿ, ಆವಿವ್ಯಧತುಃ - ಹೊಡೆದಾಡಿದರು. ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾಶೀತಿತಮಸ್ಸರ್ಗಃ.

ಗಳೆನಿಸಿದ ಅವರೀರ್ವರೂ ಮಹತ್ತರವಾದ ಯುದ್ಧವನ್ನು ಮಾಡಿದರು. ಇಬ್ಬರೂ ಮಹಾ ಸಂತೋಷವುಳ್ಳವರಾಗಿ ಜಯವನ್ನಪೇಕ್ಷಿಸಿ ಧನುರ್ಬಾಣಗಳನ್ನು ಧರಿಸಿ ಮೇಘಗಳು ಉದಕ ವರ್ಷವನ್ನೆಂತೋ ಅಂತು ಬಾಣವರ್ಷವನ್ನು ಸುರಿಸಿದರು. ರಣಪಂಡಿತರಾದ ಅವರೀರ್ವರೂ ಅತ್ಯಧಿಕವಾಗಿ ವೃದ್ಧಿಗೊಂಡು, ಧನುಸ್ಸುಗಳಿಂದಲೂ, ಖಡ್ಗಗಳಿಂದಲೂ, ಭಯಂಕರವಾದ ಶಸ್ತ್ರಾಸ್ತ್ರಗಳಿಂದಲೂ ಮಹಾ ಪೌರುಷವನ್ನವಲಂಬಿಸಿ ಶಂಬರಾಸುರ ದೇವೇಂದ್ರರಂತೆ ಯುದ್ಧವನ್ನು ಮಾಡುತ್ತಿದ್ದರು. ॥ ೩೬-೩೯ ॥

ಇಂತಿದು ಲಕ್ಷ್ಮಣೇಂದ್ರಜಿದ್ಯುದ್ಧಾರಂಭವೆಂಬ ಎಂಬತ್ತೆಂಟನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಏಕೋನನವತಿತಮಸ್ಸರ್ಗಃ

ತತಃ ಶರಂ ದಾಶರಥಿಸ್ಸಂಧಾಯಾಽಮಿತ್ರಕರ್ಶನಃ । ಸಸರ್ಜ ರಾಕ್ಷಸೇಂದ್ರಾಯ ಕ್ರುದ್ಧಸ್ಸರ್ಪ ಇವ ಶ್ವಸನ್ ॥ ೧ ॥ ತಸ್ಯ ಜ್ಯಾತಲನಿರ್ಘೋಷಂ ಸಶ್ರುತ್ವಾ ರಾವಣಾತ್ಮಜಃ । ವಿವರ್ಣವದನೋ ಭೂತ್ವಾ ಲಕ್ಷ್ಮಣಂ ಸಮುದೈಕ್ಷತ ॥ ೨ ॥ ತಂ ವಿವರ್ಣಮುಖಂ ದೃಷ್ಟ್ವಾ ರಾಕ್ಷಸಂ ರಾವಣಾತ್ಮಜಂ । ಸೌಮಿತ್ರಿಂ ಯುದ್ಧಸಂಯುಕ್ತಂ ಪ್ರತ್ಯುವಾಚ ವಿಭೀಷಣಃ ॥ ೩ ॥ "ನಿಮಿತ್ತಾನ್ಯನುಪಶ್ಯಾಮಿ ಯಾನ್ಯಸ್ಮಿನ್ ರಾವಣಾತ್ಮಜೇ । ತ್ವರ ತೇನ ಮಹಾಬಾಹೋ! ಭಗ್ನ ಏಷ ನಸಂಶಯಃ" ॥ ೪ ॥ ತತಸ್ಸಂ

ತತಃ - ಬಳಿಕ, ಅಮಿತ್ರಕರ್ಶನಃ - ಶತ್ರುಸಂಹಾರಕನಾದ, ದಾಶರಥಿಃ - ಲಕ್ಷ್ಮಣನು, ಕ್ರುದ್ಧಃ - ಕುಪಿತನಾಗಿ, ಶರಂ - ಸರಳನ್ನು, ಸಂಧಾಯ - ಸಂಧಾನ ಮಾಡಿ, ಸರ್ಪಇವ - ಹಾವಿನಂತೆ, ಶ್ವಸನ್ - ನಿಟ್ಟುಸಿರು ಬಿಡುವವನಾಗಿ, ರಾಕ್ಷಸೇಂದ್ರಾಯ - ರಾಕ್ಷಸಾಧಿಪತಿಯಾದ ಇಂದ್ರಜಿತುವಿಗಾಗಿ, ಸಸರ್ಜ - ಬಿಟ್ಟನು. ॥ ೧ ॥ ಸರಾವಣಾತ್ಮಜಃ - ಆ ರಾವಣನ ಪುತ್ರನು, ತಸ್ಯ - ಆ ಲಕ್ಷ್ಮಣನ, ಚಾಪನಿರ್ಘೋಷಂ - ಧನುಷ್ಟಂಕಾರವನ್ನು, ಶ್ರುತ್ವಾ - ಕೇಳಿ, ವಿವರ್ಣವದನಂ - ಕಂಗೆಟ್ಟ ಮುಖವುಳ್ಳವನು, ಭೂತ್ವಾ - ಆಗಿ, ಲಕ್ಷ್ಮಣಂ - ಲಕ್ಷ್ಮಣನನ್ನು, ಸಮುದೈಕ್ಷತ - ನೋಡಿದನು. ॥ ೨ ॥ ವಿಭೀಷಣಃ - ವಿಭೀಷಣನು, ವಿವರ್ಣಮುಖಂ - ಕಂಗೆಟ್ಟ ಮುಖವುಳ್ಳ, ರಾಕ್ಷಸಂ - ರಕ್ಕಸನಾದ, ತಂರಾವಣಾತ್ಮಜಂ-ಆ ದಶಗ್ರೀವ ಪುತ್ರನನ್ನು, ದೃಷ್ಟ್ವಾ-ಕಂಡು, ಯುದ್ಧಸಂಯುಕ್ತಂ - ಯುದ್ಧಜನಕವಾದ ಸಂತೋಷದಿಂದ ಕೂಡಿದ, ಸೌಮಿತ್ರಿಂಪ್ರತಿ - ಲಕ್ಷ್ಮಣನನ್ನುಕುರಿತು, ಉವಾಚ - ಹೇಳಿದನು. ॥ ೩ ॥ ಅಸ್ಮಿನ್ರಾವಣಾತ್ಮಜೇ - ಈ ರಾವಣನ ಮಗನಲ್ಲಿ, ಯಾನಿ - ಯಾವ ಮುಖವೈವರ್ಣ್ಯ ಮೊದಲಾದ, ನಿಮಿತ್ತಾನಿ - ಅಪಶಕುನಗಳನ್ನು, ಅನುಪಶ್ಯಾಮಿ - ಕಾಣುತ್ತಲಿದ್ದೇನೋ, (ತೈಃ-ಆ ನಿಮಿತ್ತಗಳಿಂದ,) ಏಷಃ - ಇವನು, ಭಗ್ನಏವ - ಭಗ್ನನೇ ಸರಿ, (ಇತಿ-ಇಂತೆಂದು, ಜಾನೇ-ತಿಳಿಯುತ್ತೇನೆ,) ಹೇ ಮಹಾಬಾಹೋ-ಎಲೈ ಮಹಾ ಭುಜಬಲಪರಾಕ್ರಮಿಯೇ, ತೇನ-ಆ ಕಾರಣದಿಂದ, ತ್ವರ - ತ್ವರೆ ಮಾಡು. ॥ ೪ ॥ ತತಃ - ಬಳಿಕ, ಸೌಮಿತ್ರಿಃ - ಲಕ್ಷ್ಮಣನು, ಅಗ್ನಿಶಿಖೋಪಮಾನ್ -

---

ಆ ತರುವಾಯ ಹಗೆಯರನ್ನು ಅಪರಿಮಿತವಾಗಿ ಬಾಧೆಗೊಳಿಸುವ ಮಹಾಸಾಮರ್ಥ್ಯವುಳ್ಳ ಲಕ್ಷ್ಮಣಸ್ವಾಮಿಯು ಕ್ರೋಧೋದ್ದೀಪಿತವಾದ ಕಾಳಸರ್ಪದಂತೆ ನಿಟ್ಟುಸಿರುಗಳನ್ನು ಬಿಡುತ್ತ ಧನುಸ್ಸಂಧಾನಮಾಡಿ ರಾಕ್ಷಸೇಂದ್ರನಾದ ಇಂದ್ರಜಿತುವಿನಮೇಲೆ ತೀಕ್ಷ್ಣವಾದ ಶರಗಳನ್ನು ಬಿಟ್ಟನು. ಆಗಲಾ ರಾವಣಿಯು ಲಕ್ಷ್ಮಣನ ಧನುಷ್ಟಂಕಾರವನ್ನು ಕೇಳಿ ಬಣ್ಣಗೆಟ್ಟ ಮುಖವುಳ್ಳವನಾಗಿ ಅವನನ್ನು ನೆಟ್ಟನೆ ನೋಡಿದನು. ಹೀಗೆ ರಾವಣಾತ್ಮಜನು ಮುಖಗೆಟ್ಟುದನ್ನು ಕಂಡೊಡನೆಯೇ ವಿಭೀಷಣನು, ಯುದ್ಧದಲ್ಲಿ ತೊಡಗಿದ್ದ ಲಕ್ಷ್ಮಣನನ್ನು ಕಂಡು ತತ್ಕಾಲೋಚಿತವಾಗಿ, "ಲಕ್ಷ್ಮಣಾ! ಈಗಲೀ ಇಂದ್ರಜಿತುವಿನಲ್ಲಿ ಅನೇಕ ಅಪಶಕುನಗಳು ಕಾಣಬರುತ್ತಿವೆ. (ಈಗ ಇವನಿಗೆ ಕೊನೆಗಾಲವು ಸಮೀಪಿಸಿರುವುದೆಂದೂ ತೋರುತ್ತದೆ.) ಇನ್ನು ಇವನು ಮುರಿದು ಬಿದ್ದಂತೆಯೇ ಎಂದು ತಿಳಿಯುತ್ತೇನೆ. ಆದುದರಿಂದ

ಧಾಯ ಸೌಮಿತ್ರಿರ್ಬಾಣಾನಗ್ನಿಶಿಖೋಪಮಾನ್ । ಮುಮೋಚ ನಿಶಿತಾಂಸ್ತಸ್ಮಿನ್ ಸರ್ಪಾನಿವ ಮಹಾವಿಷಾನ್ ॥ ೫ ॥ ಶಕ್ರಾಶನಿಸಮಸ್ಪರ್ಶೈರ್ಲಕ್ಷ್ಮಣೇನಾಹತಶ್ಶರೈಃ । ಮುಹೂರ್ತಮಭವನ್ಮೂಢಸ್ಸರ್ವಸಂಲುಪ್ತಭಿತೇಂದ್ರಿಯಃ ॥೬॥ ಉಪಲಭ್ಯ ಮುಹೂರ್ತೇನ ಸಂಜ್ಞಾಂ ಪ್ರತ್ಯಾಗತೇಂದ್ರಿಯಃ । ದದರ್ಶಾವಸ್ಥಿತಂ ವೀರಂ ವೀರೋ ದಶರಥಾತ್ಮಜಂ ॥ ೭ ॥ ಸೋಽಭಿಚಕ್ರಾಮ ಸೌಮಿತ್ರಿಂ ರೋಷಾತ್ಸಂರಕ್ತಲೋಚನಃ । ಅಬ್ರವೀಚ್ಚೈನಮಾಸಾದ್ಯ ಪುನಸ್ಸಪರುಷಂ ವಚಃ ॥ ೮ ॥ "ಕಿಂ ನಸ್ಮರಸಿ ತದ್ಯುದ್ಧೇ ಪ್ರಥಮೇ ಮತ್ಪರಾಕ್ರಮಂ । ನಿಬದ್ಧಸ್ತ್ವಂ ಸಹಭ್ರಾತ್ರಾ ಯಥಾ ಭುವಿ ವಿವೇಷ್ಟಸೇ

ಅಗ್ನಿಜ್ವಾಲೆಗಳಿಗೆ ಸಮಾನವಾದ, ಶರಾನ್ - ಬಾಣಗಳನ್ನು, ಸಂಧಾಯ - ಸಂಧಾನಮಾಡಿ, ಮಹಾವಿಷಾನ್ - ಬಹು ವಿಷವುಳ್ಳ, ಸರ್ಪಾನಿವಸ್ಥಿತಾನ್ - ಹಾವುಗಳಂತಿರುವ, ನಿಶಿತಾನ್ - ತೀಕ್ಷ್ಣವಾದ ಬಾಣಗಳನ್ನು, ತಸ್ಮಿನ್ - ಆ ಇಂದ್ರಜಿತುವಿನಲ್ಲಿ, ಮುಮೋಚ - ಬಿಟ್ಟನು. ॥ ೫ ॥ ಶಕ್ರಾ....ರ್ಶೈಃ - ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ, ಶರೈಃ - ಬಾಣಗಳಿಂದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಆಹತಃ - ಹೊಡೆಯಲ್ಪಟ್ಟ ಇಂದ್ರಜಿತುವು, ಸರ್ವ.....ಯಃ - ಕಲಕಿಹೋದ ಸರ್ವೇಂದ್ರಿಯಗಳುಳ್ಳವನಾಗಿ, ಮುಹೂರ್ತಂ-ಸ್ವಲ್ಪಕಾಲ, ಮೂಢಃ-ಪ್ರಜ್ಞೆ ತಪ್ಪಿದವನು, ಅಭವತ್-ಆದನು. ॥೬॥ ವೀರಃ - ಶೂರನಾದ ಇಂದ್ರಜಿತುವು, ಮುಹೂರ್ತೇನ - ಎರಡು ಘಳಿಗೆ ಕಾಲದಲ್ಲಿಯೇ, ಸಂಜ್ಞಾಂ - ಪ್ರಜ್ಞೆಯನ್ನು, ಉಪಲಭ್ಯ - ಹೊಂದಿ, ಪ್ರತ್ಯಾ....ಯಃ - ಹಿಂತಿರುಗಿದ ಇಂದ್ರಿಯಪಾಟವವುಗಳುಳ್ಳವನಾಗಿ, ಅವಸ್ಥಿತಂ - ನಿಂತಿರುವ, ವೀರಂ - ಶೂರನಾದ, ದಶರಥಾತ್ಮಜಂ - ದಶರಥಪುತ್ರನನ್ನು, ದದರ್ಶ - ಕಂಡನು. ॥೭॥ ಸಃ - ಆ ಇಂದ್ರಜಿತುವು, ರೋಷಾತ್ - ಕೋಪದಿಂದ, ಸಂರಕ್ತಲೋಚನಃ - ಬಹು ಕೆಂಪಾಗಿರುವ ಕಣ್ಣುಗಳುಳ್ಳವನಾಗಿ, ಸೌಮಿತ್ರಿಂ - ಸುಮಿತ್ರಾ ಪುತ್ರನಿಗೆ, ಅಭಿಚಕ್ರಾಮ - ಎದುರಿಗೆ ಬಂದನು, ಸಃ - ಆ ಇಂದ್ರಾರಿಯು, ಪುನಃ - ಮತ್ತು, ಏನಂ - ಈ ಲಕ್ಷ್ಮಣನನ್ನು, ಆಸಾದ್ಯ - ಹೊಂದಿ, ಪರುಷಂ - ಕ್ರೂರವಾದ, ವಚಃ - ಮಾತನ್ನು, ಅಬ್ರವೀಚ್ಚ - ನುಡಿಯಲೂ ನುಡಿದನು. ॥ ೮ ॥ ಯದಾ - ಯಾವಾಗ, ಭುವಿ - ನೆಲದಲ್ಲಿ, ವಿವೇಷ್ಟಸೇ - ಹೊರಳಾಡುತ್ತಿದ್ದೆಯೋ, ಪ್ರಥಮೇ - ಮೊದಲನೆಯದಾದ, ತದ್ಯುದ್ಧೇ - ಆ ಕಾಳೆಗದಲ್ಲಿ, ತ್ವಂ - ನೀನು, ಭ್ರಾತ್ರಾಸಹ - ಒಡಹುಟ್ಟಿದವನಾದ ರಾಮನೊಡನೆ, ನಿಬದ್ಧ ಇತಿಯತ್ - ಕಟ್ಟಲ್ಪಟ್ಟವನಾದೆ ಎಂಬುವದಾವದೋ, ತತ್ -

---

ನೀನು ಜಾಗ್ರತೆ ಮಾಡು. (ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸು)" ಎಂದು ಹೇಳಿದನು. ಲಕ್ಷ್ಮಣನು ವಿಭೀಷಣನಾಡಿದ ಮಾತುಗಳನ್ನು ಕೇಳಿ ಅಗ್ನಿಜ್ವಾಲೋಪಮವೂ ತೀಕ್ಷ್ಣವೂ ಆದ ಬಾಣಗಳನ್ನು ಧನುಸ್ಸಿನಲ್ಲಿ ಸಂಧಿಸಿ ಮಹಾ ವಿಷಸರ್ಪಗಳಂತಿರುವ ಅವುಗಳನ್ನು ಇಂದ್ರಜಿತುವಿನಮೇಲೆ ಪ್ರಯೋಗಿಸಿದನು. ॥ ೧–೫ ॥ ಹೀಗೆ ಲಕ್ಷ್ಮಣನು ಪ್ರಯೋಗಿಸಿದ ವಜ್ರಾಯುಧಕ್ಕೆ ಸಮಾನವಾದ ಆ ಬಾಣಗಳು ಸೋಕಿದೊಡನೆಯೇ ಆ ಇಂದ್ರಜಿತುವು ಇಂದ್ರಿಯಗಳೆಲ್ಲವೂ ಕಲಕಿಹೋಗಿ ಒಂದು ಮುಹೂರ್ತಕಾಲ ಪ್ರಜ್ಞೆಯಿಲ್ಲದವನಾದನು. ಆಮೇಲೆ ಎಚ್ಚೆತ್ತುಕೊಂಡು ರಣರಂಗದಲ್ಲಿ ವೀರನಾಗಿ ನಿಂತಿರುವ ದಶರಥ ರಾಜಕುಮಾರನಾದ ಆ ಲಕ್ಷ್ಮಣಸ್ವಾಮಿಯನ್ನು ಕಂಡನು. ಕೂಡಲೇ ಆ ರಾಕ್ಷಸನು ಆತನನ್ನು ಅಟ್ಟಿಹೋಗಿ ಕೋಪದಿಂದ ಕೆಂಪೊಗೆದ ಕಣ್ಣುಗಳುಳ್ಳವನಾಗಿ ಆತನನ್ನು ಕುರಿತು; "ಎಲಾ ಲಕ್ಷ್ಮಣನೇ! ಮೊದಲ ಯುದ್ಧದಲ್ಲಿ ನಾನು ತೋರಿದ ಅತುಳ ಪರಾ

॥ ೯ ॥ ಯುವಾಂ ಖಲು ಮಯಾ ಯುದ್ಧೇ ಶಕ್ರಾಶನಿ ಸಮೈಶ್ಶರೈಃ । ಶಾಯಿತೌ
ಪ್ರಥಮಂ ಭೂಮೌ ವಿಸಂಜ್ಞೌ ಸಪುರಸ್ಸರೌ ॥ ೧೦ ॥ ಸ್ಮೃತಿರ್ವಾ ನಾಸ್ತಿ ತೇ ಮನ್ಯೇ
ವ್ಯಕ್ತಂ ವಾ ಯಮಸಾದನಂ । ಗಂತುಮಿಚ್ಛಸಿ ಯಸ್ಮಾತ್ತ್ವಂ ಮಾಂ ಧರ್ಷಯಿತು
ಮಿಚ್ಛಸಿ ॥ ೧೧ ॥ ಯದಿ ತೇ ಪ್ರಥಮೇ ಯುದ್ಧೇ ನದೃಷ್ಟೋ ಮತ್ಪರಾಕ್ರಮಃ ।
ಅದ್ಯ ತೇ ದರ್ಶಯಿಷ್ಯಾಮಿ ತಿಷ್ಠೇದಾನೀಂ ವ್ಯವಸ್ಥಿತಃ ” ॥೧೨॥ ಇತ್ಯುಕ್ತ್ವಾ ಸಪ್ತಭಿ
ರ್ಬಾಣೈರಭಿವಿವ್ಯಾಧ ಲಕ್ಷ್ಮಣಂ । ದಶಭಿಸ್ತು ಹನೂಮಂತಂ ತೀಕ್ಷ್ಣಧಾರೈಃ ಶರೋ
ತ್ತಮೈಃ ॥ ೧೩ ॥ ತತಃ ಶರಶತೇನೈವ ಸುಪ್ರಯುಕ್ತೇನ ವೀರ್ಯವಾನ್ । ಕ್ರೋಧಾ
ದ್ದ್ವಿಗುಣಸಂರಬ್ಧೋ ನಿರ್ಬಿಭೇದ ವಿಭೀಷಣಂ ॥ ೧೪ ॥ ತದ್ದೃಷ್ಟ್ವೇಂದ್ರಜಿತಾ ಕರ್ಮ

ಅಂಥಾ, ಮತ್ಪರಾಕ್ರಮಂ - ನನ್ನ ಸಾಮರ್ಥ್ಯವನ್ನು, ನಸ್ಮರಸಿಕಿಂ - ಸ್ಮರಿಸಲಿಲ್ಲವೇನೋ. ॥ ೯ ॥
ಯುವಾಂ - ನೀವುಗಳು, ಪ್ರಥಮಂ - ಮೊದಲ, ಯುದ್ಧೇ - ಕಾಳಗದಲ್ಲಿ, ಶಕ್ರಾ....ಮೈಃ - ಇಂದ್ರನ
ವಜ್ರಾಯುಧಕ್ಕೆ ಸಮಾನವಾದ, ಶರೈಃ - ಬಾಣಗಳಿಂದ, ವಿಸಂಜ್ಞೌ - ಪ್ರಜ್ಞೆಯಿಲ್ಲದವರಾಗಿ, ಸಪುರ
ಸ್ಸರೌ - ಸೇನಾಸಮೇತರಾಗಿ, ಮಯಾ - ನನ್ನಿಂದ, ಭೂಮೌ - ನೆಲದಲ್ಲಿ, ಶಾಯಿತೌಖಲು - ಮಲ
ಗಿಸಲ್ಪಟ್ಟಿದ್ದರಷ್ಟೆ. ॥ ೧೦ ॥ ಯಸ್ಮಾತ್ - ಯಾವ ಕಾರಣದಿಂದ, ಮಾಂ - ನನ್ನನ್ನು, ಧರ್ಷಯಿತುಂ -
ತಿರಸ್ಕರಿಸುವುದಕ್ಕೆ, ಇಚ್ಛಸಿ - ಅಪೇಕ್ಷಿಸುವೆಯೋ, ತಸ್ಮಾತ್ - ಆ ಕಾರಣದಿಂದ, ತೇ - ನಿನಗೆ,
ಯಮಸಾದನಂ - ಯಮಲೋಕ ಮಾರ್ಗವು, ವ್ಯಕ್ತಂ - ನಿಶ್ಚಯವಾಗಿರುವದೆಂಬದು, ಸ್ಮೃತಿಃ - ಸ್ಮರ
ಣೆಯು, ನವಾ - ಇಲ್ಲವೋ ಏನೋ, ಗಂತುಂ - ಹೋಗುವುದಕ್ಕೆ, ಇಚ್ಛಸಿ - ಅಪೇಕ್ಷಿಸುವೆ, ವ್ಯಕ್ತಂ -
ನಿಶ್ಚಯವು. ॥ ೧೧ ॥ ಮೇ - ನನ್ನ, ಪ್ರಥಮೇಯುದ್ಧೇ - ಮೊದಲ ಯುದ್ಧದಲ್ಲಿ, ಮತ್ಪರಾಕ್ರಮಃ -
ನನ್ನ ಪರಾಕ್ರಮವು, ತೇ - ನಿನ್ನಿಂದ, ನದೃಷ್ಟೋಯದಿ - ನೋಡಲ್ಪಡದಿದ್ದರೆ, ಅದ್ಯ - ಈಗ,
ವ್ಯವಸ್ಥಿತಃ - ನಿಂತು, ತೇ - ನಿನಗೆ, ದರ್ಶಯಿಷ್ಯಾಮಿ - ತೋರಿಸುವೆನು, ಇದಾನೀಂ - ಈಗ, ತಿಷ್ಠ -
ನಿಲ್ಲು. ॥೧೨॥ ಇತಿ - ಈ ಪ್ರಕಾರವಾಗಿ, ಉಕ್ತ್ವಾ - ಹೇಳಿ, ಸಪ್ತಭಿಃ - ಏಳಾದ, ಬಾಣೈಃ - ಸರಳು
ಗಳಿಂದ, ಲಕ್ಷ್ಮಣಂ - ಲಕ್ಷ್ಮಣನನ್ನು, ಅಭಿವಿವ್ಯಾಧ - ಎದುರಿಗೆ ಹೊಡೆದನು, ತೀಕ್ಷ್ಣಧಾರೈಃ -
ತೀಕ್ಷ್ಣವಾದ ಕೊನೆಗಳುಳ್ಳ, ದಶಭಿಃ - ಹತ್ತಾದ, ಶರೋತ್ತಮೈಸ್ತು - ಉತ್ತಮ ಬಾಣಗಳಿಂದ
ಲಾದರೆ, ಹನುಮಂತಂ - ಹನುಮಂತನನ್ನು, ವಿವ್ಯಾಧ - ಹೊಡೆದನು. ॥ ೧೩ ॥ ತತಃ - ಬಳಿಕ,
ವೀರ್ಯವಾನ್ - ಪರಾಕ್ರಮಿಯಾದ ಇಂದ್ರಜಿತುವು, ಕ್ರೋಧಾತ್ - ಕೋಪದಿಂದ, ದ್ವಿಗು....ಬ್ಧಃ -
ಎರಡರಷ್ಟು ತ್ವರೆಯುಳ್ಳವನಾಗಿ, ಸುಪ್ರಯುಕ್ತೇನ - ಚನ್ನಾಗಿ ಬಿಡಲ್ಪಟ್ಟ, ಶರಶತೇನೈವ - ನೂರು
ಬಾಣಗಳಿಂದಲೇ, ವಿಭೀಷಣಂ - ವಿಭೀಷಣನನ್ನು, ನಿರ್ಬಿಭೇದ - ಭೇದಿಸಿದನು. ॥ ೧೪ ॥ ನರ

ಕ್ರಮವನ್ನು ಈಗಾಗಲೇ ಮರೆತುಹೋದೆಯಾ! ಆಗ ನಾನು ನಿನ್ನನ್ನೂ, ನಿಮ್ಮಣ್ಣನನ್ನೂ
ನನ್ನ ಬಾಣಗಳಿಂದ ಬಂಧಿಸಿದೆನಲ್ಲವೆ? ಆಗ ನೀವೀರ್ವರೂ ಮೂರ್ಛೆಹೊಂದಿ ಬಿದ್ದಿದ್ದಿ
ರಲ್ಲವೆ? ನೀವು ಹಾಗೆ ಬಿದ್ದಿರುವುದನ್ನು ನೋಡಿ ನೀವು ಮಡಿದರೆಂದರಿತಿದ್ದೆನು. ಆದ
ರಿಂದಲೇ ನಾನು ಸುಮ್ಮನಾದೆನು. ನಾನು ಆಗ ನಿಮ್ಮಿಬ್ಬರನ್ನೂ ಜೀವದಿಂದುಳಿಸಿದುದರಿಂ
ದಲೇ ನೀನೀಗ ನನ್ನೊಡನೆ ಪುನಃ ಯುದ್ಧಮಾಡುವಂತಾದೆ. ಈಗ ನಿನಗೆ ಯಮನಾಲಯವೇ
ಗತಿಯೆಂದು ಸ್ಪಷ್ಟವಾಯಿತು. ಒಂದುವೇಳೆ ನೀನು ಅಂದಿನ ಯುದ್ಧದಲ್ಲಿ ನನ್ನ ಅತುಳ
ಪರಾಕ್ರಮವನ್ನು ಚೆನ್ನಾಗಿ ನೋಡದಿದ್ದರೂ ಇದೀಗ ಸ್ಥಿರವಾಗಿ ನಿಂತು ನೋಡುವೆಯಂತೆ”
ಎಂದು ಹೇಳಿ ಮಹಾ ತೀಕ್ಷ್ಣಗಳಾದ ಏಳು ಬಾಣಗಳನ್ನು ಪ್ರಯೋಗಿಸಿ ಲಕ್ಷ್ಮಣನನ್ನು

ಕೃತಂ ರಾಮಾನುಜಸ್ತದಾ । ಅಚಿಂತಯಿತ್ವಾ ಪ್ರಹರ್ಸ ನ್ನೈತತ್ಕಿಂಚಿದಿತಿ ಬ್ರುವನ್ ॥೧೫॥ ಮುಮೋಚ ಸಶರಾನ್ ಘೋರಾನ್ ಸಂಗೃಹ್ಯ ನರಪುಂಗವಃ । ಅಭೀತವದನಃ ಕ್ರುದ್ಧೋ ರಾವಣಿಂ ಲಕ್ಷ್ಮಣೋ ಯುಧಿ ॥ ೧೬ ॥ "ನೈವಂ ರಣಗತಾಃ ಶೂರಾಃ ಪ್ರಹರಂತಿ ನಿಶಾಚರ! । ಲಘುವಶ್ಚಾಲ್ಪವೀರ್ಯಾಶ್ಚ ಸುಖಾಹೀಮೇ ಶರಾಸ್ತವ ॥ ೧೭ ॥ ನೈವಂ ಶೂರಾಸ್ತು ಯುಧ್ಯಂತೇ ಸಮರೇ ಜಯಕಾಂಕ್ಷಿಣಃ" । ಇತ್ಯೇವಂ ತಂ ಬ್ರುವಾಣಸ್ತು ಶರವರ್ಷೈರವಾಕಿರತ್ ॥೧೮॥ ತಸ್ಯ ಬಾಣೈಸ್ಸುವಿಧ್ವಸ್ತಂ ಕವಚಂ

ಪುಂಗವಃ - ಪುರುಷಶ್ರೇಷ್ಠನಾದ, ಸರಾಮಾನುಜಃ - ಆ ಲಕ್ಷ್ಮಣನು, ಇಂದ್ರಜಿತಾ - ಇಂದ್ರಜಿತುವಿನಿಂದ, ಕೃತಂ - ಮಾಡಲ್ಪಟ್ಟ, ತತ್ಕರ್ಮ - ಆ ವ್ಯಾಪಾರವನ್ನು, ದೃಷ್ಟ್ವಾ - ಕಂಡು, ತದಾ - ಆಗ, ಅಚಿಂತಯಿತ್ವಾ - ಯೋಚಿಸದೇ, ಪ್ರಹರ್ಸ - ನಗುತ್ತ, ನೈತತ್ಕಿಂಚಿದಿತಿ - ಇದು ಅಕಿಂಚಿತ್ಕರವೆಂದು, ಬ್ರುವನ್ - ಹೇಳುವವನಾಗಿ, ಘೋರಾನ್ - ಭಯಂಕರವಾದ, ಶರಾನ್ - ಬಾಣಗಳನ್ನು, ಸಂಗೃಹ್ಯ - ತೆಗೆದುಕೊಂಡು, ಮುಮೋಚ - ಬಿಟ್ಟನು. ॥ ೧೫ ॥ ಯುಧಿ - ಕಾಳಗದಲ್ಲಿ, ಅಭೀ....ನಃ - ಭಯಪಡದಿರುವ ಮುಖವುಳ್ಳವನಾದ, ಲಕ್ಷ್ಮಣಃ - ಲಕ್ಷ್ಮಣನು, ಕ್ರುದ್ಧಃ - ಕುಪಿತನಾಗಿ, ರಾವಣಿಂ - ಇಂದ್ರಜಿತುವನ್ನು ಕುರಿತು, ಹೇ ನಿಶಾಚರ - ಎಲೈ ರಕ್ಕಸನೇ, ರಣಗತಾಃ - ಯುದ್ಧವನ್ನು ಹೊಂದಿದ, ಶೂರಾಃ - ವೀರರು, ಏವಂ - ಇಷ್ಟು ಸುಲಭವಾಗಿ, ನಪ್ರಹರಂತಿ - ಹೊಡೆವುದಿಲ್ಲ, ಇಮೇ - ಈ, ತವ - ನಿನ್ನ, ಶರಾಃ - ಬಾಣಗಳು, ಮೇ - ನನಗೆ, ಲಘವಃ - ಹೂದಂಡೆಯಂತೆ ಲಘುವಾಗಿವೆ, ಅಲ್ಪವೀರ್ಯಾಶ್ಚ - ಸ್ವಲ್ಪ ಸಾಮರ್ಥ್ಯವುಳ್ಳವುಗಳಾಗಿವೆ, ಸಮರೇ - ಕಾಳೆಗದಲ್ಲಿ, ಜಯಕಾಂಕ್ಷಿಣಃ - ಜಯಾಪೇಕ್ಷೆಯುಳ್ಳ, ಶೂರಾಸ್ತು - ಶೂರರಾದರೆ, ಏವಂ - ಈ ರೀತಿ, ನಯುಧ್ಯಂತೇ - ಯುದ್ಧಮಾಡುವುದಿಲ್ಲ, ಇತಿ - ಇಂತೆಂದು, ಏವಂ - ಈ ಪ್ರಕಾರವಾಗಿ, ತಂತು - ಆ ಇಂದ್ರಜಿತುವನ್ನು ಕುರಿತಾದರೆ, ಬ್ರುವಾಣಃ - ಹೇಳುವವನಾಗಿ, ಶರವರ್ಷೈಃ - ಬಾಣವೃಷ್ಟಿಗಳಿಂದ, ಅವಾಕಿರತ್ - ಎರಚಿದನು. ॥ ೧೬-೧೮ ॥ ತಸ್ಯ - ಅವನ, ಬಾಣೈಃ - ಬಾಣಗಳಿಂದ, ಸುವಿಧ್ವಸ್ತಂ - ಹೊಡೆಯ

ಹೊಡೆದನು. ಇಷ್ಟೆಯಲ್ಲದೆ ಮತ್ತೂ ತೀಕ್ಷ್ಣವಾದ ಹತ್ತು ಬಾಣಗಳನ್ನು ಹನುಮಂತನ ಮೇಲೆಯೂ ಪ್ರಯೋಗಿಸಿದನು. ಇದೂ ಅಲ್ಲದೆ ಒಂದುನೂರು ಬಾಣಗಳಿಂದ ವಿಭೀಷಣನನ್ನೂ ಬಲವಾಗಿ ಘಾತಿಸಿದನು. ॥ ೬-೧೪ ॥ ಇಂದ್ರಜಿತುವು ಈ ರೀತಿ ವಿಭೀಷಣನ ಮೇಲೆ ಬಾಣಪ್ರಯೋಗ ಮಾಡುತ್ತಿದ್ದುದನ್ನು ನೋಡಿ ರಾಮಾನುಜನಾದ ಲಕ್ಷ್ಮಣಸ್ವಾಮಿಯು ನಸುನಕ್ಕು ಯಾವ ಮಾತನ್ನೂ ಆಡದೆ ಮಹಾ ತೀಕ್ಷ್ಣವಾದ ಬಾಣಗಳನ್ನು ಧನುಸ್ಸಿನಲ್ಲಿ ಸಂಧಿಸಿ ಅವನಮೇಲೆ ಪ್ರಯೋಗಿಸಿದನು. ಹೀಗೆ ಮಾಡಿದ ಬಳಿಕ ಲಕ್ಷ್ಮಣನು ಮಹಾ ಕೋಪೋದ್ದೀಪಿತನಾಗಿ, ಏನೊಂದು ಭಯವೂ ಇಲ್ಲದೆ ಮತ್ತೂ ಅನೇಕ ಬಾಣಗಳನ್ನು ಆ ರಾಕ್ಷಸನ ಮೇಲೆಸೆದು ಅವನನ್ನು ಕುರಿತು, "ಎಲೆವೊ ರಾಕ್ಷಸನೇ! ಯುದ್ಧಕ್ಕೆ ಬಂದು ನಿಂತ ವೀರರು ಈ ರೀತಿ ಕೇವಲ ದುರ್ಬಲಗಳೂ, ಸ್ವಲ್ಪಗಳೂ ಆದ ಬಾಣಗಳನ್ನು ಪ್ರಯೋಗಿಸುವುದಿಲ್ಲ. ನಿನ್ನ ಬಾಣಗಳು ನನ್ನ ಶರೀರಕ್ಕೆ ಸುಖಸ್ಪರ್ಶಗಳಾಗಿವೆಯಾಗಲಿ ಯಾವ ಬಾಧೆಯನ್ನೂ ಉಂಟುಮಾಡಿರುವುದಿಲ್ಲ. ಇದೂ ಅಲ್ಲದೆ ಯುದ್ಧದಲ್ಲಿ ವಿಜಯವನ್ನು ಬಯಸುವ ಯಾರಾದರೂ ಹೀಗೆ ದುರ್ಬಲವಾಗಿ ಯುದ್ಧಮಾಡುತ್ತಾರೆಯೆ? ಬಿಡು ಬಿಡು!" ಎಂದು ಹೇಳಿ ಮತ್ತೂ ತೀಕ್ಷ್ಣವಾದ ಬಾಣಗಳನ್ನು ಅಸಂಖ್ಯಾತವಾಗಿ ಅವನಮೇಲೆ ಪ್ರಯೋಗಿಸಿ

ಹೇಮಭೂಷಿತಂ । ವ್ಯಶೀರ್ಯತ ರಥೋಪಸ್ಥೇ ತಾರಾಜಾಲಮಿವಾಂಬರಾತ್ ॥೧೯॥ ವಿಧೂತವರ್ಮಾ ನಾರಾಚೈರ್ಬಭೂವ ಸ ಕೃತವ್ರಣಃ । ಇಂದ್ರಜಿತ್ಸಮರೇ ವೀರಃ ಪ್ರರೂಢ ಇವ ಸಾನುಮಾನ್ ॥ ೨೦ ॥ ತತಃ ಶರಸಹಸ್ರೇಣ ಸಂಕ್ರುದ್ಧೋ ರಾವಣಾತ್ಮಜಃ । ಬಿಭೇದ ಸಮರೇ ವೀರಂ ಲಕ್ಷ್ಮಣಂ ಭೀಮವಿಕ್ರಮಃ ॥ ೨೧ ॥ ವ್ಯಶೀರ್ಯತ ಮಹದ್ದಿವ್ಯಂ ಕವಚಂ ಲಕ್ಷ್ಮಣಸ್ಯಚ । ಕೃತಪ್ರತಿಕೃತಾನ್ಯೋನ್ಯಂ ಬಭೂವತು ರಭಿದ್ರುತೌ ॥ ೨೨ ॥ ಅಭೀಕ್ಷ್ಣಂ ನಿಶ್ವಸಂತೌ ತೌ ಯುಧ್ಯೇತಾಂ ತುಮುಲಂ ಯುಧಿ ।

ಲ್ಪಟ್ಟ, ಹೇಮಭೂಷಿತಂ - ಸುವರ್ಣದಿಂದಲಂಕೃತವಾದ, ಕವಚಂ - ಕವಚವು, ತಾರಾಜಾಲಂ - ನಕ್ಷತ್ರಸಮೂಹವು, ಅಂಬರಾದಿವ - ಅಂತರಿಕ್ಷದಿಂದ ಬೀಳುವಂತೆ, ರಥೋಪಸ್ಥೇ - ರಥದ ಸಮೀಪದಲ್ಲಿ, ವ್ಯಶೀರ್ಯತ - ಸೀಳಿಬಿದ್ದಿತು. ॥ ೧೯ ॥ ಸಮರೇ - ಕಾಳಗದಲ್ಲಿ, ವಿಧೂತವರ್ಮಾ - ಕೊಡಹಲ್ಪಟ್ಟ ಕವಚವುಳ್ಳ, ವೀರಃ - ಶೂರನಾದ, ಸಃ ಇಂದ್ರಜಿತ್ - ಆ ಇಂದ್ರಜಿತುವು, ನಾರಾಚೈಃ - ಬಾಣಗಳಿಂದ, ಕೃತವ್ರಣಃ - ಮಾಡಲ್ಪಟ್ಟ ಗಾಯಗಳುಳ್ಳವನಾಗಿ, ಸಾನುಮಾನಿವ - ಪರ್ವತದಂತೆ, ರೂಢಃ - ಕಂಪಿಸದಿರುವವನು, ಬಭೂವ - ಆದನು. ॥ ೨೦ ॥ ತತಃ - ಬಳಿಕ, ಭೀಮವಿಕ್ರಮಃ - ಭಯಂಕರವಾದ ಪರಾಕ್ರಮವುಳ್ಳ, ರಾವಣಾತ್ಮಜಃ - ರಾವಣನ ಪುತ್ರನು, ಸಮರೇ - ಕಾಳಗದಲ್ಲಿ, ಸಂಕ್ರುದ್ಧಃ - ಬಹು ಕೋಪವುಳ್ಳವನಾಗಿ, ಶರಸಹಸ್ರೇಣ - ಬಾಣಸಹಸ್ರದಿಂದ, ವೀರಂ - ಶೂರನಾದ, ಲಕ್ಷ್ಮಣಂ - ಲಕ್ಷ್ಮಣನನ್ನು, ಬಿಭೇದ - ಭೇದಿಸಿದನು. ॥ ೨೧ ॥ ದಿವ್ಯಂ - ಉತ್ತಮವಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ಕವಚಂಚ - ಕವಚವೂ ಕೂಡ, ವ್ಯಶೀರ್ಯತ - ಸೀಳಿತು, ಅಭಿದ್ರುತೌ - ಮೇಲ್ವಾಯ್ದು ಬರುತ್ತಿರುವ ಅವರಿಬ್ಬರೂ, ಕೃತ....ನ್ಯಂ - ಮಾಡಿದ್ದಕ್ಕೆ ಪ್ರತಿಕ್ರಿಯೆ ಮಾಡುತ್ತ, ಅಭಿದ್ರುತೌ - ತ್ವರೆಯುಳ್ಳವನು, ಬಭೂವತುಃ - ಆದರು. ॥ ೨೨ ॥ ಅಭೀಕ್ಷ್ಣಂ - ವಿಶೇಷವಾಗಿ, ನಿಃಶ್ವಸಂತೌ - ಉಸಿರು ಬಿಡುತ್ತಿರುವ, ತೌ - ಆ ಲಕ್ಷ್ಮಣ ಇಂದ್ರಜಿತ್ತುಗಳಿಬ್ಬರೂ, ಯುಧಿ - ಕಾಳಗದಲ್ಲಿ, ಶರ....ಗೌ - ಬಾಣಗಳಿಂದ ಕತ್ತರಿಸಲ್ಪಟ್ಟ ಸರ್ವಾವಯವಗಳುಳ್ಳ,

---

ದನು. ಆ ಬಾಣಗಳಿಂದ ಇಂದ್ರಜಿತುವಿನ ಕವಚವು ಭೇದಿಸಿ ಹೋಯಿತು. ಈ ರೀತಿ ಭೇದಿಸಿ ಹೋದ ಆ ಇಂದ್ರಜಿತುವಿನ ಕವಚವು ಆಕಾಶದಿಂದ ಜಾರಿಬೀಳುವ ನಕ್ಷತ್ರಗಳಂತೆ ಅವನ ರಥದ ತುಂಬ ಚೂರುಚೂರಾಗಿ ಬಿದ್ದಿತು. ಈ ರೀತಿ ಲಕ್ಷ್ಮಣನ ಬಾಣಗಳಿಂದ ಹೊಡೆಯಲ್ಪಟ್ಟವನೂ, ಆ ಹೊಡೆತಗಳಿಂದ ಶರೀರದಲ್ಲೆಲ್ಲಾ ಗಾಯಗಳನ್ನೊಡಗೊಂಡವನೂ ಆದ ಇಂದ್ರಜಿತುವು ಜರಿಗಳುಳ್ಳ ಪರ್ವತವನ್ನು ಹೋಲುತ್ತಿದ್ದನು. ॥ ೧೯-೨೦ ॥ ಆ ತರುವಾಯ ರಾವಣಾಸುರನ ಕುಮಾರನಾದ ಆ ಇಂದ್ರಜಿತುವು ಮಹಾ ಕುಪಿತನಾಗಿ ಆ ರಣಾಂಗಣದಲ್ಲಿ ಅನೇಕ ಬಾಣಗಳನ್ನು ಪ್ರಯೋಗಿಸಿ ಲಕ್ಷ್ಮಣನನ್ನು ಚೆನ್ನಾಗಿ ಮರ್ದಿಸಿದನಲ್ಲದೆ ಅವನ ಕವಚವನ್ನು ಭೇದಿಸಿ ಕೆಡವಿದನು. ಹೀಗೆ ಅವರಿಬ್ಬರೂ ಸಮಸಮವಾಗಿ ಪ್ರತೀಕಾರಗಳನ್ನು ಮಾಡುತ್ತ ಮಹಾ ಭಯಂಕರವಾದ ಯುದ್ಧವನ್ನು ಮಾಡುತ್ತಿದ್ದರು. ಇಬ್ಬರೂ ಸಂಕುಲ ಯುದ್ಧವನ್ನು ಮಾಡುತ್ತ ಮಹಾ ವಿಷಸರ್ಪಗಳಂತೆ ನಿಟ್ಟುಸಿರನ್ನು ಬಿಡುತ್ತಿದ್ದರು. ಪರಸ್ಪರವಾಗಿ ಬಾಣಪ್ರಯೋಗಮಾಡಿ ಒಬ್ಬರಿಗೊಬ್ಬರು ವ್ರಣಗಳನ್ನುಂಟುಮಾಡುತ್ತಿದ್ದರು. ಇಷ್ಟೆಯಲ್ಲದೆ ರಕ್ತಸಿಕ್ತವಾದ ಅವಯವಗಳುಳ್ಳವರಾಗಿ ಘೋರತರವಾಗಿ ಯುದ್ಧವನ್ನು

ಶರಸಂಕೃತ್ತಸರ್ವಾಂಗೌ ಸರ್ವತೋ ರುಧಿರೋಕ್ಷಿತೌ ॥ ೨೩ ॥ ಸುದೀರ್ಘಕಾಲಂ ತೌ ವೀರಾವನ್ಯೋನ್ಯಂ ನಿಶಿತೈಃ ಶರೈಃ । ತತಕ್ಷತುರ್ಮಹಾತ್ಮಾನೌ ರಣಕರ್ಮವಿಶಾರದೌ ॥ ೨೪ ॥ ಬಭೂವತುಶ್ಚಾತ್ಮಜಯೇ ಯತ್ತೌ ಭೀಮಪರಾಕ್ರಮೌ । ತೌ ಶರೌಘೈಸ್ತದಾಕೀರ್ಣೌ ನಿಕೃತ್ತಕವಚಧ್ವಜೌ । ಸ್ರವಂತೌ ರುಧಿರಂ ಚೋಷ್ಣಂ ಜಲಂ ಪ್ರಸ್ರವಣಾವಿವ ॥ ೨೫ ॥ ಶರವರ್ಷಂ ತತೋ ಘೋರಂ ಮುಂಚತೋರ್ಭೀಮನಿಸ್ವನಂ । ಸಾಸಾರಯೋರಿವಾಕಾಶೇ ನೀಲಯೋಃ ಕಾಲಮೇಘಯೋಃ ॥ ೨೬ ॥ ತಯೋರಥ ಮಹಾನ್ ಕಾಲೋ ವ್ಯತ್ಯಯಾದ್ಯುಧ್ಯಮಾನಯೋಃ । ನಚ ತೌ ಯುದ್ಧವೈಮುಖ್ಯಂ ಶ್ರಮಂ ವಾಪ್ಯುಪಜಗ್ಮತುಃ ॥ ೨೭ ॥ ಅಸ್ತ್ರಾಣ್ಯಸ್ತ್ರವಿದಾಂ ಶ್ರೇಷ್ಠೌ

ಸರ್ವತಃ ಎಲ್ಲಾ ಕಡೆಯಲ್ಲಿಯೂ, ರುಧಿರೋಕ್ಷಿತೌ-ರಕ್ತದಿಂದ ತೊಯಿಸಲ್ಪಟ್ಟವರಾಗಿ, ಯುಧ್ಯೇತಾಂ-ಯುದ್ಧ ಮಾಡುತ್ತಿದ್ದರು. ॥೨೩॥ ಸುದೀರ್ಘಕಾಲಂ - ಬಹು ಕಾಲ, ರಣ....ದೌ - ಯುದ್ಧವ್ಯಾಪಾರದಲ್ಲಿ ಪಂಡಿತರಾದ, ಮಹಾತ್ಮಾನೌ - ಬಹು ಧೈರ್ಯವಂತರಾದ, ವೀರೌ - ಶೂರರಾದ, ತೌ - ಲಕ್ಷ್ಮಣೇಂದ್ರಜಿತ್ತುಗಳಿಬ್ಬರೂ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ತತಕ್ಷತುಃ - ಮುರಿದರು. ॥ ೨೪ ॥ ಭೀಮ.....ಮೌ - ಭಯಂಕರ ಪರಾಕ್ರಮವುಳ್ಳ, ತೌ - ಅವರಿಬ್ಬರೂ, ಶರೌಘೈಃ - ಬಾಣಸಮೂಹಗಳಿಂದ, ನಿಕೃ....ಜೌ - ಕತ್ತರಿಸಲ್ಪಟ್ಟ ಕವಚವೂ, ಧ್ವಜವೂ ಉಳ್ಳವರಾಗಿ, ತದಾ-ಆ ಕಾಲದಲ್ಲಿ, ಆತ್ಮಜಯೇ-ತಂತಮ್ಮ ಜಯದಲ್ಲಿ, ಯತ್ತೌ-ಪ್ರಯತ್ನವುಳ್ಳವರಾಗಿ, ಉಷ್ಣಂ - ಬಿಸಿಯಾಗಿರುವ, ರುಧಿರಂ - ರಕ್ತವನ್ನು, ಜಲಂ - ನೀರನ್ನು, ಪ್ರಸ್ರವಣಾವಿವ - ಜೌಗುಭೂಮಿಗಳಂತೆ, ಸ್ರವಂತೌ - ಸುರಿಸುತ್ತಿರುವವರು, ಬಭೂವತುಃ - ಆದರು. ॥ ೨೫ ॥ ತತಃ - ಬಳಿಕ, ಘೋರಂ - ಭಯಂಕರವಾದ, ಭೀಮನಿಸ್ವನಂ - ಭಯಂಕರ ಧ್ವನಿಯುಳ್ಳಂತೆ, ಶರವರ್ಷಂ - ಬಾಣವೃಷ್ಟಿಯನ್ನು, ಮುಂಚತೋಃ - ಬಿಡುತ್ತಿರುವ, ಆಕಾಶೇ - ಅಂತರಿಕ್ಷಮಾರ್ಗದಲ್ಲಿ, ಸಾಸಾರಯೋಃ - ಉದಕಧಾರೆಗಳಿಂದೊಡಗೂಡಿದ, ನೀಲಯೋಃ - ಕಪ್ಪಾಗಿರುವ, ಕಾಲ.....ಯೋಃ - ಕಾಲಮೇಘಗಳಂತಿರುವ, ತಯೋಃ - ಅವರಿಬ್ಬರೂ, ಯುಧ್ಯಮಾನಯೋಃ - ಕಾಳೆಗವನ್ನು ಮಾಡುವವರಾಗಲೂ, ಮಹಾನ್ - ಮಹತ್ತರವಾದ, ಕಾಲಃ - ವೇಳೆಯು, ವ್ಯತ್ಯಯಾತ್ - ಕಳೆದುಹೋಯಿತು, ತೌಚ - ಅವರಿಬ್ಬರೂ, ಯುದ್ಧವೈಮುಖ್ಯಂ - ಕಾಳೆಗದಲ್ಲಿ ಪರಾಙ್ಮುಖತ್ವವನ್ನಾಗಲಿ, ಶ್ರಮಂವಾಪಿ - ಆಯಾಸವನ್ನಾಗಲಿ, ನೋಪಜಗ್ಮತುಃ - ಹೊಂದಲಿಲ್ಲವು. ॥ ೨೬-೨೭ ॥ ಅಸ್ತ್ರವಿದಾಂ - ಅಸ್ತ್ರವೇತ್ತ

ಮಾಡುತ್ತಿದ್ದರು. ಇಬ್ಬರೂ ಮಹಾ ತೀಕ್ಷ್ಣವಾದ ವಿವಿಧ ಬಾಣಗಳನ್ನು ಪ್ರಯೋಗಿಸುತ್ತ ಬಹುಕಾಲ ಘೋರ ಸಂಗ್ರಾಮವನ್ನು ಮಾಡಿದರು. ಮಹಾನುಭಾವರೂ, ಯುದ್ಧಕಲಾಕೋವಿದರೂ, ಭಯಂಕರ ಪರಾಕ್ರಮವಂತರೂ, ಪರಸ್ಪರ ವಧಾಪೇಕ್ಷೆಯುಳ್ಳವರೂ ಆದ ಇಂದ್ರಜಿತು ಮತ್ತು ಲಕ್ಷ್ಮಣರೀರ್ವರೂ ಶರೀರಗಳಲ್ಲಿ ರಕ್ತಪ್ರವಾಹವು ಹೊರಹೊರಡುತ್ತಿದ್ದರೂ ಲೆಕ್ಕಿಸದೆ ಪ್ರಸ್ರವಣಾದ್ರಿಯನ್ನು ಹೋಲುತ್ತ ಯುದ್ಧಮಾಡುತ್ತಲೇ ಇದ್ದರು. ॥ ೨೧-೨೫ ॥ ಆ ಸಮಯದಲ್ಲಿ ಬಾಣವರ್ಷವನ್ನು ವರ್ಷಿಸುತ್ತ ಸಿಂಹನಾದವನ್ನೂ ಮಾಡುತ್ತಿದ್ದ ಅವರೀರ್ವರೂ ಅಪರಿಮಿತವಾಗಿ ವರ್ಷಿಸುವ ಮಳೆಗಾಲದ ಮುಗಿಲನ್ನು ಹೋಲುತ್ತಿದ್ದರು. ಹೀಗೆ ಅವರೀರ್ವರೂ ಬಹಳಕಾಲ ಯುದ್ಧಮಾಡಿದರೂ ಯಾರೂ ಆಯಾಸಗೊಳ್ಳಲಿಲ್ಲ. ಯಾರೂ ಯುದ್ಧವನ್ನು ಸಾಕುಮಾಡಲಿಲ್ಲ. ಶಸ್ತ್ರಾಸ್ತ್ರಕೋವಿದರಾದ ಆವ

ದರ್ಶಯಂತೌ ಪುನಃಪುನಃ । ಶರಾನುಚ್ಚಾವಚಾಕಾರಾನಂತರಿಕ್ಷೇ ಬಬಂಧತುಃ ॥೨೮॥
ವ್ಯಪೇತದೋಷಮಸ್ಯಂತೌ ಲಘು ಚಿತ್ರಂ ಚ ಸುಷ್ಠು ಚ । ಉಭೌ ತೌ ತುಮುಲಂ
ಘೋರಂ ಚಕ್ರತುರ್ನರರಾಕ್ಷಸೌ ॥೨೯॥ ತಯೋಃ ಪೃಥಕ್ ಪೃಥಗ್ಭೀಮಃ ಶುಶ್ರುವೇ
ತಲನಿಸ್ಸ್ವನಃ । ಪ್ರಕಂಪಯರ್ಜನಂ ಘೋರೋ ನಿರ್ಘಾತ ಇವ ದಾರುಣಃ ॥ ೩೦ ॥
ಸತಯೋರ್ಭ್ರಾಜತೇ ಶಬ್ದಸ್ತದಾ ಸಮರಸಕ್ತಯೋಃ । ಸುಘೋರಯೋರ್ನಿಷ್ಟನತೋ
ರ್ಗಗನೇ ಮೇಘಯೋರ್ಯಥಾ ॥ ೩೧ ॥ ಸುವರ್ಣಪುಂಖೈರ್ನಾರಾಚೈರ್ಬಲವಂತೌ
ಕೃತವ್ರಣೌ । ಪ್ರಸುಸ್ರುವಾತೇ ರುಧಿರಂ ಕೀರ್ತಿಮಂತೌ ಜಯೋಧೃತೌ ॥ ೩೨ ॥

ರೊಳಗೆ, ಶ್ರೇಷ್ಠೌ - ಉತ್ತಮರಾದ, ತೌ - ಅವರಿಬ್ಬರು, ಪುನಃಪುನಃ - ಬಾರಿಬಾರಿಗೂ, ಅಸ್ತ್ರಾಣಿ - ಅಸ್ತ್ರಗಳನ್ನು, ದರ್ಶಯಂತೌ - ತೋರಿಸುವವರಾಗಿ, ಉಚ್ಚಾ....ರಾನ್ - ಅನೇಕ ಆಕಾರಗಳುಳ್ಳ, ಶರಾನ್ - ಬಾಣಗಳನ್ನು, ಅಂತರಿಕ್ಷೇ - ಗಗನದಲ್ಲಿ, ಬಬಂಧತುಃ - ಕಟ್ಟಿದರು. ॥ ೨೮ ॥ ತೌ - ಆ, ನರ....ಸೌ - ನರರಾಕ್ಷಸರಿಬ್ಬರೂ, ವ್ಯಪೇತದೋಷಂ - ಹೋಗಲಾಡಿಸಲ್ಪಟ್ಟ ದೋಷವುಳ್ಳಂತೆ, ಲಘು - ಲಘುವಾಗಿ, ಚಿತ್ರಂ-ಆಶ್ಚರ್ಯಕರವಾಗಿಯೂ, ಸುಷ್ಠು ಚ-ಚನ್ನಾಗಿಯೂ, ಅಸ್ಯಂತೌ ಸರಳುಗಳನ್ನು ಬಿಡುವವರಾಗಿ, ಘೋರಂ - ಭಯಂಕರವಾದ, ತುಮುಲಂ - ಸಂಕುಲ ಯುದ್ಧವನ್ನು, ಚಕ್ರತುಃ - ಮಾಡಿದರು. ॥೨೯॥ ಭೀಮಃ - ಭಯಂಕರವಾದ, ಘೋರಃ - ಕ್ರೂರವಾದ, ತಯೋಃ - ಅವರಿಬ್ಬರ, ಪೃಥಕ್ಪೃಥಕ್ - ಬೇರೆಬೇರೆಯಾದ, ತಲನಿಸ್ವನಃ - ಅಂಗೈಗಳ ಧ್ವನಿಯು, ದಾರುಣಃ - ಕ್ರೂರವಾದ, ನಿರ್ಘಾತಇವ - ಮೇಘಧ್ವನಿಯಂತೆ, ಜನಂ - ಜನವನ್ನು, ಪ್ರಕಂಪಯನ್ - ಕಂಪಿಸುವುದಾಗಿ, ಶುಶ್ರುವೇ - ಕೇಳಿಸಿತು. ॥ ೩೦ ॥ ತದಾ - ಆಗ, ಸಮರಸಕ್ತಯೋಃ - ಯುದ್ಧದಲ್ಲಿ ಸೇರಿದ, ತಯೋಃ - ಅವರಿಬ್ಬರ, ಸಶಬ್ದಃ - ಆ ಕೋಲಾಹಲಧ್ವನಿಯು, ಗಗನೇ - ಅಂತರಿಕ್ಷದಲ್ಲ, ಸುಘೋರಯೋಃ - ಬಹು ಭಯಂಕರವಾದ, ನಿಷ್ಟನತೋಃ - ಧ್ವನಿಗೊಳಿಸುತ್ತಿರುವ, ಮೇಘಯೋಃ - ಮೇಘಗಳ, ಶಬ್ದೋಯಥಾ - ಗರ್ಜಿತದಂತೆ, ಭ್ರಾಜತೇ - ಹೊಳೆಯುತ್ತಿತ್ತು. ॥೩೧॥ ಕೀರ್ತಿಮಂತೌ - ಯಶೋವಂತರಾದ, ಜಯೇ - ಜಯದಲ್ಲಿ, ಧೃತೌ - ನಿಶ್ಚಯವುಳ್ಳ, ಬಲವಂತೌ - ಬಲಿಷ್ಠರಾದ ಅವರಿಬ್ಬರೂ, ಸುವ......ಖೈಃ - ಚಿನ್ನದ ಕೊಂಕಿಗಳುಳ್ಳ ನಾರಾಚೈಃ - ಬಾಣವಿಶೇಷಗಳಿಂದ, ಕೃತವ್ರಣೌ - ಮಾಡ

ರೀರ್ವರೂ ಪರಸ್ಪರವಾಗಿ ತಂತಮ್ಮ ಶಸ್ತ್ರಾಸ್ತ್ರಕೌಶಲವನ್ನು ಮೆರೆಯುತ್ತಿದ್ದರು. ಇಷ್ಟು ಮಾತ್ರವಲ್ಲದೆ ಅನೇಕ ಬಗೆಯ ನಿಮ್ನೋನ್ನತಗಳಾದ ಬಾಣಗಳನ್ನು ಪ್ರಯೋಗಿಸಿ ಆ ವೀರರಿಬ್ಬರೂ ಅಂತರಿಕ್ಷವೆಲ್ಲವನ್ನೂ ಮುಚ್ಚಿಬಿಟ್ಟರು. ಬಗೆಬಗೆಯಾದ ಯುದ್ಧಸಂವಿಧಾನಗಳನ್ನು ಮೆರೆದರು. ಮಹಾ ಶೂರರಾದ ಆ ಲಕ್ಷ್ಮಣೇಂದ್ರಜಿತುಗಳೀರ್ವರೂ ಮಹಾ ಸಂಕುಲವಾದ ಯುದ್ಧವನ್ನು ಮಾಡುತ್ತಿದ್ದಾಗ ಅವರೀರ್ವರ ಪಾದತಲಾದಿ ಧ್ವನಿಗಳು ಪ್ರತ್ಯೇಕ ಪ್ರತ್ಯೇಕವಾಗಿ ಕೇಳಿಬರುತ್ತಿದ್ದವು. ಆ ಧ್ವನಿಯು ಎಲ್ಲರಿಗೂ ಭಯವನ್ನುಂಟು ಮಾಡುವುದಾಗಿಯೂ, ಬಹಳ ಅದ್ಭುತವಾಗಿಯೂ ಇದ್ದಿತು. ಅವರಿಬ್ಬರ ಪಾದಘಟ್ಟನ ಧ್ವನಿಗಳು ಎರಡು ಮುಗಿಲುಗಳು ಸೇರಿದಾಗಣ ಧ್ವನಿಯನ್ನುಹೋಲುತ್ತಿದ್ದುವು. ॥೨೬–೩೦॥ ಇಬ್ಬರೂ ಚಿನ್ನದ ಕಟ್ಟುಗಳುಳ್ಳ ಬಾಣಗಳನ್ನು ಪ್ರಯೋಗಿಸಿ ಪರಸ್ಪರವಾಗಿ ಘಾತಿಸಿ ಗಾಯಗೊಳಿಸುತ್ತಿದ್ದರು ; ಒಬ್ಬರನ್ನೊಬ್ಬರು ಜಯಿಸಿ ಕೀರ್ತಿಯನ್ನು ಪಡೆಯಬೇಕೆಂಬ ಅಪೇಕ್ಷೆಯುಳ್ಳವರಾಗಿ ಶರೀರದಿಂದ ರಕ್ತವು ಹೊರಹೊಮ್ಮುವಂತೆ ಬಾಣಗಳಿಂದ ಹೊಡೆದಾಡಿದರು.

ತೇ ಗಾತ್ರಯೋರ್ನಿಪತಿತಾ ರುಕ್ಮಪುಂಖಾಃ ಶರಾ ಯುಧಿ । ಅಸೃಙ್ನಿದ್ಧಾ ವಿನಿಷ್ಪತ್ಯ ವಿವಿಶುರ್ಧರಣೀತಲಂ ॥ ೩೩ ॥ ಅನ್ಯೇ ಸುನಿಶಿತೈಃ ಶಸ್ತ್ರೈರಾಕಾಶೇ ಸಂಜಘಟ್ಟಿರೇ । ಬಭಂಜುಶ್ಚಿಚ್ಛಿದುಶ್ಚಾನ್ಯೇ ತಯೋರ್ಬಾಣಾಸ್ಸಹಸ್ರಶಃ ॥ ೩೪ ॥ ಸಬಭೂವ ರಣೋ ಘೋರಸ್ತಯೋರ್ಬಾಣಮಯಶ್ಚ ಯಃ । ಅಗ್ನಿಭ್ಯಾಮಿವ ದೀಪ್ತಾಭ್ಯಾಂ ಸತ್ರೇ ಕುಶಮಯಶ್ಚ ಯಃ ॥ ೩೫ ॥ ತಯೋಃ ಕೃತವ್ರಣೌ ದೇಹೌ ಶುಶುಭಾತೇ ಮಹಾತ್ಮನೋಃ । ಸಪುಷ್ಪಾವಿವ ನಿಷ್ಪತ್ರೌ ವನೇ ಶಾಲ್ಮಲಿಕಿಂಶುಕೌ ॥ ೩೬ ॥ ಚಕ್ರತುಸ್ತುಮುಲಂ ಘೋರಂ ಸನ್ನಿಪಾತಂ ಮುಹುರ್ಮುಹುಃ । ಇಂದ್ರಜಿಲ್ಲಕ್ಷ್ಮಣಶ್ಚೈವ

ಲ್ಪಟ್ಟ ಗಾಯಗಳುಳ್ಳವರಾಗಿ, ರುಧಿರಂ - ರಕ್ತವನ್ನು, ಪ್ರಸುಸ್ರುವಾತೇ - ಸ್ರವಿಸುತ್ತಿದ್ದರು. ॥ ೩೨ ॥ ಯುಧಿ - ಕಾಳಗದಲ್ಲಿ, ಗಾತ್ರಯೋಃ - ಶರೀರಗಳಲ್ಲಿ, ನಿಪತಿತಾಃ - ಬಿದ್ದ, ರುಕ್ಮಪುಂಖಾಃ - ಬಂಗಾರದ ಕೊಂಕಿಗಳುಳ್ಳ, ತೇಶರಾಃ - ಆ ಬಾಣಗಳು, ಅಸೃಗ್ದಿಗ್ಧಾಃ - ರಕ್ತದಿಂದ ನೆನೆಸಲ್ಪಟ್ಟವುಗಳಾಗಿ, ನಿಷ್ಪತ್ಯ - ಹಾರಿ, ಧರಣೀತಲಂ - ಭೂಪ್ರದೇಶವನ್ನು, ವಿವಿಶುಃ - ಹೊಕ್ಕವು. ॥ ೩೩ ॥ ಅನ್ಯೇ - ಮತ್ತೂ ಕೆಲ ಸರಳುಗಳು, ಸುನಿಶಿತೈಃ - ಬಹಳ ಹದವಾದ ಶಸ್ತ್ರೈಃ - ಶಸ್ತ್ರಗಳಿಂದ, ಆಕಾಶೇ - ಗಗನದಲ್ಲಿ, ಸಂಜಘಟ್ಟಿರೇ - ಒಂದಕ್ಕೊಂದು ಸೇರಿದವು, ತಯೋಃ - ಅವರ, ಅನ್ಯೇ - ಇತರವಾದ, ಸಹಸ್ರಶಃ - ಅನೇಕ, ಬಾಣಾಃ - ಸರಳುಗಳು, ಬಭಂಜುಃ - ಮುರಿದವು, ಚಿಚ್ಛಿದುಶ್ಚ - ಛೇದಿಸಿದವು. ॥ ೩೪ ॥ ಸರಣಃ - ಆ ಯುದ್ಧವು, ಘೋರಃ - ಭಯಂಕರವಾದುದು, ಬಭೂವ - ಆಯಿತು, ಯಸ್ಮಿನ್ - ಯಾವ ಕಾಳಗದಲ್ಲಿ, ತಯೋಃ - ಅವರಿಬ್ಬರಿಗೆ, ಬಾಣಮಯಃ - ಬಾಣವಿಕಾರವಾದ, ಚಮೂಃ - ಸಮೂಹವೋ, ಸತ್ರೇ - ಯಾಗದಲ್ಲಿ, ದೀಪ್ತಾಭ್ಯಾಂ - ಪ್ರಜ್ವಲಿಸುತ್ತಿರುವ, ಅಗ್ನಿಭ್ಯಾಂ - ಗಾರ್ಹಪತ್ಯ ಆಹವನೀಯವೆಂಬ ಅಗ್ನಿಗಳಿಂದ, (ಯುಕ್ತಃ - ಕೂಡಿದ,) ಕುಶಮಯಃ - ದರ್ಭೆಗಳ ವಿಕಾರವಾದ, ಚಯಇವ - ಸಮೂಹದಂತೆ, ಆಸ್ತೇ - ಇದ್ದಿತು. ॥ ೩೫ ॥ ಮಹಾತ್ಮನೋಃ - ಮಹಾಧೈರ್ಯಶಾಲಿಗಳಾದ, ತಯೋಃ - ಅವರಿಬ್ಬರ, ದೇಹೌ - ಶರೀರಗಳು, ಕೃತವ್ರಣೌ - ಮಾಡಲ್ಪಟ್ಟ ಗಾಯಗಳುಳ್ಳವುಗಳಾಗಿ, ವನೇ - ಅರಣ್ಯದಲ್ಲಿ, ನಿಷ್ಪತ್ರೌ - ಎಲೆಗಳಿಲ್ಲದ, ಸಪುಷ್ಪೌ - ಹುವ್ವುಗಳಿಂದ ಕೂಡಿದ, ಶಾಲ್ಮ......ವ - ಬೂರಗದ ಮರ ಮುತ್ತುಗದ ಮರಗಳಂತೆ, ಶುಶುಭಾತೇ - ಹೊಳೆಯುತ್ತಿದ್ದುವು. ॥ ೩೬ ॥ ಪರ....ಣೌ - ಅನ್ಯೋನ್ಯವಾಗಿ ಹೊಡೆಯಲಿಚ್ಛೆಯುಳ್ಳ, ಇಂದ್ರಜಿತ್ - ಇಂದ್ರಜಿತುವು, ಲಕ್ಷ್ಮಣಶ್ಚ - ಲಕ್ಷ್ಮಣನೂ, (ಎಂಬ ಇಬ್ಬರೂ) ತುಮುಲಂ - ಸಂಕುಲವಾದ, ಘೋರಂ -

---

ಆಗ ಅವರೀರ್ವರೂ ಜರಿಗಳೊಡಗೂಡಿದ ಪ್ರಸ್ರವಣಗಿರಿಯನ್ನು ಹೋಲುತ್ತಿದ್ದರು. ಮಹಾ ಕೀರ್ತಿಶಾಲಿಗಳಾದ ಅವರಿಬ್ಬರ ಶರೀರಗಳಿಂದಲೂ ಬಹಳವಾಗಿ ರಕ್ತವು ಕಾರುತ್ತಿದ್ದಿತು. ವೀರರಾದ ಅವರಿಬ್ಬರ ಶರೀರಗಳಿಂದಲೂ ರತ್ನದ ಹಿಡಿಗಳುಳ್ಳ ಬಾಣಗಳು ತಾಕಿ ಕೆಳಕ್ಕೆ ಬೀಳುತ್ತಿದ್ದವು. ಮತ್ತೆ ಕೆಲವು ಬಾಣಗಳು ಅವರ ಶರೀರವನ್ನು ತಾಕಿ ಅಂತರಿಕ್ಷವನ್ನಡರುತ್ತಿದ್ದವು. ಕೆಲವು ಬಾಣಗಳನ್ನು ಇಬ್ಬರೂ ಮಧ್ಯಮಾರ್ಗದಲ್ಲಿಯೇ ಖಂಡಿಸಿ ಕೆಡವುತ್ತಿದ್ದರು. ಬಾಣಮಯವಾದ ಅವರೀರ್ವರ ಯುದ್ಧವು ಮಹಾ ಭಯವನ್ನುಂಟುಮಾಡುತ್ತಿದ್ದಿತು. ಆ ಬಾಣಗಳಾದರೋ ಸತ್ರಯಾಗದಲ್ಲಿಯ ಅಗ್ನಿಗಳನ್ನು ಹೋಲುತ್ತಿದ್ದವು. ॥ ೩೧–೩೫ ॥ ವ್ರಣಗಳೊಡಗೂಡಿದ ಶರೀರಗಳುಳ್ಳ ಅವರಿಬ್ಬರೂ ಹೂವೊಳೆತ ಬೂರಗದ ಮತ್ತು ಮುತ್ತುಗದ ಗಿಡಗಳನ್ನು ಹೋಲುತ್ತಿದ್ದರು. ಅಲ್ಲಿಗೂ ಬಿಡದೆ ಅವರಿಬ್ಬರೂ ಮಹಾ ಸಂಕುಲವಾದುದೂ,

ಪರಸ್ಪರ ವಧೈಷಿಣೌ ॥ ೩೭ ॥ ಲಕ್ಷ್ಮಣೋ ರಾವಣಿಂ ಯುದ್ಧೇ ರಾವಣಿಶ್ಚಾಪಿ ಲಕ್ಷ್ಮಣಂ । ಅನ್ಯೋನ್ಯಂ ತಾವಭಿಘ್ನಂತೌ ನಶ್ರಮಂ ಪ್ರತ್ಯಪದ್ಯತಾಂ ॥ ೩೮ ॥ ಬಾಣಜಾಲೈಶ್ಶರೀರಸ್ಥೈರವಗಾಢೈಸ್ತರಸ್ವಿನೌ । ಶುಶುಭಾತೇ ಮಹಾವೀರ್ಯೌ ಪ್ರರೂಢಾವಿವ ಪರ್ವತೌ ॥೩೯॥ ತಯೋರ್ರುಧಿರಸಿಕ್ತಾನಿ ಸಂವೃತಾನಿ ಶರೈರ್ಭೃಶಂ । ಬಭ್ರಾಜುಸ್ಸರ್ವಗಾತ್ರಾಣಿ ಜ್ವಲಂತ ಇವ ಪಾವಕಾಃ ॥ ೪೦ ॥ ತಯೋರಥ ಮಹಾನ್ ಕಾಲೋ ವ್ಯತ್ಯಯಾದ್ಯುಧ್ಯಮಾನಯೋಃ । ನಚ ತೌ ಯುದ್ಧವೈಮುಖ್ಯಂ ಶ್ರಮಂ ವಾಪ್ಯುಪಜಗ್ಮತುಃ ॥ ೪೧ ॥

ಭಯಂಕರವಾದ, ಸನ್ನಿಪಾತಂ - ಯುದ್ಧವನ್ನು, ಮುಹುರ್ಮುಹುಃ - ಬಾರಿಬಾರಿಗೂ, ಚಕ್ರತುಃ - ಮಾಡಿದರು. ॥ ೩೭ ॥ ಯುದ್ಧೇ - ಕಾಳೆಗದಲ್ಲಿ, ಲಕ್ಷ್ಮಣಶ್ಚ - ಲಕ್ಷ್ಮಣನೂ, ರಾವಣಿಂ - ಇಂದ್ರಜಿತುವನ್ನೂ, ರಾವಣಿಶ್ಚಾಪಿ - ಇಂದ್ರಜಿತುವೂ ಕೂಡ, ಲಕ್ಷ್ಮಣಂ - ಲಕ್ಷ್ಮಣನನ್ನೂ, ಅನ್ಯೋನ್ಯಂ - ಪರಸ್ಪರವಾಗಿ, ಅಭಿಜಘ್ನಂತೌ - ಹೊಡೆಯುತ್ತಿದ್ದರು, ತೌ- ಅವರಿಬ್ಬರೂ, ಶ್ರಮಂ - ಆಯಾಸವನ್ನು, ನಪ್ರ....ತಾಂ - ಹೊಂದಲಿಲ್ಲವು. ॥ ೩೮ ॥ ಅವಗಾಢೈಃ - ದೃಢವಾಗಿ ಮುಳುಗಿರುವ, ಶರೀರಸ್ಥೈಃ - ದೇಹದಲ್ಲಿರುವ, ಬಾಣಜಾಲೈಃ-ಬಾಣತಂಡಗಳಿಂದ, ತರಸ್ವಿನೌ-ಬಲವಂತರಾದ, ಮಹಾವೀರ್ಯೌ- ಬಹು ಪರಾಕ್ರಮಿಗಳಾದ ಅವರಿಬ್ಬರೂ, ಪ್ರರೂಢೌ - ಚೆನ್ನಾಗಿ ಬೆಳೆದ ವೃಕ್ಷಗಳುಳ್ಳ, ಪರ್ವತಾವಿವ - ಬೆಟ್ಟಗಳಂತೆ, ಶುಶುಭಾತೇ - ಹೊಳೆಯುತ್ತಿದ್ದರು. ॥ ೩೯ ॥ ಶರೈಃ - ಬಾಣಗಳಿಂದ, ಭೃಶಂ - ವಿಶೇಷವಾಗಿ, ಸಂವೃತಾನಿ - ವ್ಯಾಪ್ತವಾದಕಾರಣ, ರುಧಿ....ನಿ - ರಕ್ತದಿಂದ ತೊಯಿಸಲ್ಪಟ್ಟ, ತಯೋಃ - ಅವರಿಬ್ಬರ, ಸರ್ವಗಾತ್ರಾಣಿ - ಸರ್ವಾವಯವಗಳೂ, ಜ್ವಲಂತಃ - ಪ್ರಜ್ವಲಿಸುತ್ತಿರುವ, ಪಾವಕಾಇವ- ಅಗ್ನಿಗಳಂತೆ, ಬಭ್ರಾಜುಃ - ಹೊಳೆಯುತ್ತಿದ್ದವು. ॥ ೪೦ ॥ ಅಥ - ಬಳಿಕ, ಯುಧ್ಯಮಾನಯೋಃ - ಯುದ್ಧ ಮಾಡುತ್ತಿರುವ, ತಯೋಃ - ಅವರಿಬ್ಬರಿಗೆ, ಮಹಾನ್ - ಮಹತ್ತರವಾದ, ಕಾಲಃ - ಕಾಲವು, ವ್ಯತ್ಯಯಾತ್ - ಕಳೆದುಹೋಯಿತು, ತೌ - ಅವರು, ಯುದ್ಧವೈಮುಖ್ಯಂ - ಕಾಳೆಗದಲ್ಲಿ ಪರಾಙ್ಮುಖತ್ವವನ್ನಾಗಲೀ, ಶ್ರಮಂವಾಪಿ - ಆಯಾಸವನ್ನಾಗಲೀ, ನೋಪಜಗ್ಮತುಃ - ಹೊಂದಲಿಲ್ಲವು. ॥ ೪೧ ॥ ಅಥ - ಬಳಿಕ, ಸಮ....ಮಂ - ಕಾಳೆಗದಲ್ಲಿ ಚಳಲಿದ ಇಂದ್ರಜಿತುವನ್ನು, ನಿಹಂತುಂ - ಹೊಡೆಯುವುದಕ್ಕೆ, ಮಹೌಜಾಃ - ಮಹಾ ತೇಜೋವಂತನಾದ, ವಿಭೀಷಣಃ - ವಿಭೀಷಣನು, ಸಮರಮುಖ್ಯೇಷು -

---

ಭಯಂಕರವಾದುದೂ ಆದ ಯುದ್ಧವನ್ನು ಮಾಡುತ್ತಲೇ ಇದ್ದರು. ಮಹಾ ಪರಾಕ್ರಮಶಾಲಿಗಳಾದ ಆ ಇಂದ್ರಜಿಲ್ಲಕ್ಷ್ಮಣರೀರ್ವರೂ ಪರಸ್ಪರ ಜಯಕಾಂಕ್ಷಿಗಳಾಗಿ ಮಹಾ ತೀಕ್ಷ್ಣಗಳಾದ ಬಾಣಗಳನ್ನು ಪರಸ್ಪರವಾಗಿ ಪ್ರಯೋಗಿಸುತ್ತಿದ್ದರು. ಇಷ್ಟಾದರೂ ಯಾರೊಬ್ಬರೂ ಆಯಾಸಗೊಳ್ಳಲೇ ಇಲ್ಲವು. ಅವರಿಬ್ಬರ ಶರೀರಗಳೂ, ರಕ್ತದಿಂದ ತೊಯ್ದು, ಬಾಣಗಳಿಂದ ತುಂಬಿ ಪ್ರಜ್ವಲಿಸುತ್ತಿರುವ ಬೆಂಕಿಯಂತೆ ಕಂಗೊಳಿಸುತ್ತಿದ್ದವು. ಹೀಗೆ ಯುದ್ಧವು ಬಹಳ ಕಾಲ ನಡೆಯಿತು. ಆದರೂ ಯಾರೂ ಆಯಾಸಗೊಂಡು ವಿಶ್ರಮಿಸಿಕೊಳ್ಳಲಿಲ್ಲವು. ಆಗ

ಅಥ ಸಮರಪರಿಶ್ರಮಂ ನಿಹಂತುಂ
ಸಮರಮುಖೇಷ್ವಜಿತಸ್ಯ ಲಕ್ಷ್ಮಣಸ್ಯ ।
ಪ್ರಿಯಹಿತ ಮುಪಪಾದಯ ನ್ಮಹೌಜಾಃ
ಸಮರಮುಪೇತ್ಯ ವಿಭೀಷಣೋಽವತಸ್ಥೇ ॥ ೮೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನ ನವತಿತಮಸ್ಸರ್ಗಃ.

ಸೇನಾಮುಖಗಳಲ್ಲಿ, ಅಜಿತಸ್ಯ - ಜಯಿಸಲ್ಪಡದವನಾದ, ಲಕ್ಷ್ಮಣಸ್ಯ - ಲಕ್ಷ್ಮಣನಿಗೆ, ಪ್ರಿಯಂ - ತತ್ಕಾಲದಲ್ಲಿ ಹಿತಕರವಾದ, ಹಿತಂ - ಉತ್ತರೋತ್ತರ ಒಳ್ಳೆಯದಾಗುವ ಮಾತನ್ನು, ಉಪಪಾದಯನ್ - ಹೇಳುವವನಾಗಿ, ಸಮರಂ - ಕಾಳಿಗವನ್ನು ಕುರಿತು, ಉಪೇತ್ಯ - ಸಮೀಪಕ್ಕೆ ಬಂದು, ಅವತಸ್ಥೇ - ನಿಂತನು. ॥ ೮೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನ ನವತಿತಮಸ್ಸರ್ಗಃ.

ಯುದ್ಧಗಳಲ್ಲಿ ಬಹಳ ಪರಿಚಿತನಾದ ಇಂದ್ರಜಿತುವನ್ನು ಜಯಿಸಲಪೇಕ್ಷಿಸಿ ಯುದ್ಧಮಾಡುತ್ತಿರುವ ಲಕ್ಷ್ಮಣನಿಗೆ ಪ್ರಿಯವನ್ನೂ, ಹಿತವನ್ನೂ ಮಾಡಬೇಕೆಂಬ ಕೋರಿಕೆಯುಳ್ಳವನಾದ ಮಹಾ ಪರಾಕ್ರಮಿಯಾದ ವಿಭೀಷಣನು ಆತನ ಬಳಿಯಲ್ಲಿ ನಿಂತನು. ॥ ೩೬–೮೨ ॥

ಇಂತಿದು ಇಂದ್ರಜಿಲ್ಲಕ್ಷ್ಮಣ ಯುದ್ಧವೆಂಬ ಎಂಬತೊಂಬತ್ತನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ನವತಿತಮಸ್ಸರ್ಗಃ

ಯುಧ್ಯಮಾನೌ ತು ತೌ ದೃಷ್ಟ್ವಾ ಪ್ರಸಕ್ತೌ ನರರಾಕ್ಷಸೌ । ಪ್ರಭಿನ್ನಾವಿವ ಮಾತಂಗೌ ಪರಸ್ಪರ ವಧೈಷಿಣೌ ॥ ೧ ॥ ತೌ ದ್ರಷ್ಟುಕಾಮಸ್ಸಂಗ್ರಾಮೇ ಪರಸ್ಪರ ಗತೌ ಬಲೀ । ಶೂರಸ್ಸರಾವಣಭ್ರಾತಾ ತಸ್ಥೌ ಸಂಗ್ರಾಮಮೂರ್ಧನಿ ॥ ೨ ॥ ತತೋ ವಿಷ್ಫಾರಯಾಮಾಸ ಮಹದ್ಧನುರವಸ್ಥಿತಃ । ಉತ್ಸಸರ್ಜ ಚ ತೀಕ್ಷ್ಣಾಗ್ರಾನ್ ರಾಕ್ಷಸೇಷು ಮಹಾಶರಾನ್ ॥ ೩ ॥ ತೇ ಶರಾಃ ಶಿಖಿಸಂಕಾಶಾ ನಿಪತಂತಸ್ಸಮಾಹಿತಾಃ । ರಾಕ್ಷಸಾನ್ ದಾರಯಾಮಾಸುರ್ವಜ್ರಾಣೀವ ಮಹಾಗಿರೀನ್ ॥ ೪ ॥ ವಿಭೀಷಣಸ್ಯಾನುಚರಾಸ್ತೇಽಪಿ ಶೂಲಾಸಿಪಟ್ಟಸೈಃ । ಚಿಚ್ಛಿದುಸ್ಸಮರೇ ವೀರಾನ್ ರಾಕ್ಷಸಾನ್ ರಾಕ್ಷಸೋ

ಪ್ರಭಿನ್ನೌ - ಮದವೇರಿದ, ಮಾತಂಗಾವಿವ - ಆನೆಗಳಂತೆ, ಪರ....ಣೌ - ಅನ್ಯೋನ್ಯವಾಗಿ ಸಂಹಾರವನ್ನು ಮಾಡಲಿಚ್ಛಿಸಿ, ಸಂಗ್ರಾಮೇ - ಕಾಳಗದಲ್ಲಿ, ಪರಸ್ಪರಗತೌ - ಅನ್ಯೋನ್ಯವಾಗಿ ಕಾಳಗಕ್ಕೆ ಸೇರಿದ, ಬಲೀ - ಬಲವಂತರಾದ, ತೌ - ಅವರಿಬ್ಬರನ್ನೂ, ದ್ರಷ್ಟುಕಾಮಃ - ನೋಡಲಿಚ್ಛೆಯುಳ್ಳ, ಶೂರಃ - ವೀರನಾದ, ಸರಾವಣಭ್ರಾತಾ - ಆ ರಾವಣನಿಗೆ ತಮ್ಮನಾದ, ಸಃ - ಆ ವಿಭೀಷಣನು, ಪ್ರಸಕ್ತೌ - ಸೇರಿ, ಯುಧ್ಯಮಾನೌ - ಯುದ್ಧಮಾಡುತ್ತಿರುವ, ತೌನರರಾಕ್ಷಸೌತು - ಆ ಲಕ್ಷ್ಮಣೇಂದ್ರಜಿತುಗಳನ್ನು, ದೃಷ್ಟ್ವಾ - ಕಂಡು, ಸಂಗ್ರಾ....ನಿ - ಯುದ್ಧರಂಗದಲ್ಲಿ, ತಸ್ಥೌ - ಕಾಳಗ ಮಾಡುವುದಕ್ಕೆ ನಿಂತರು. ॥ ೧ ೨ ॥ ತತಃ - ಬಳಿಕ, ಅವಸ್ಥಿತಃ - ನಿಂತವನಾಗಿ, ಮಹತ್ - ಮಹತ್ತರವಾದ, ಧನುಃ - ಕೋದಂಡವನ್ನು, ವಿಷ್ಫಾರಯಾಮಾಸ - ಟಂಕಾರ ಮಾಡಿದನು, ತೀಕ್ಷ್ಣಾಗ್ರಾನ್ - ಹದವಾದ ಕೊನೆಗಳುಳ್ಳ, ಮಹಾಶರಾಂಶ್ಚ - ಮಹತ್ತರವಾದ ಸರಳುಗಳನ್ನು ಕೂಡಾ, ರಾಕ್ಷಸೇಷು - ರಕ್ಕಸರಲ್ಲಿ, ಉತ್ಸಸರ್ಜ - ಬಿಟ್ಟನು. ॥ ೩ ॥ ಶಿಖಿಸಂಕಾಶಾಃ - ಅಗ್ನಿಗೆ ಸಮಾನವಾದ, ಸಮಾಹಿತಾಃ - ಗುಂಪಾಗಿ ಸೇರಿದ, ತೇಶರಾಃ - ಆ ಸರಳುಗಳು, ನಿಪತಂತಃ - ಬಿದ್ದು, ಮಹಾಗಿರೀನ್ - ದೊಡ್ಡ ಪರ್ವತಗಳನ್ನು, ವಜ್ರಾಣೀವ - ಸಿಡಿಲುಗಳಂತೆ, ರಕ್ಷಸಾನ್ - ರಕ್ಕಸರನ್ನು, ದಾರಯಾಮಾಸುಃ - ಸೀಳಿದವು. ॥ ೪ ॥ ವಿಭೀಷಣಸ್ಯ - ವಿಭೀಷಣನ, ಅನುಚರಾಃ - ಹಿಂದೆ ಬಂದ, ತೇರಾಕ್ಷಸೋತ್ತಮಾಅಪಿ - ಆ ರಾಕ್ಷಸಶ್ರೇಷ್ಠರೂ ಕೂಡಾ, ಶೂಲಾ....ಸೈಃ - ಶೂಲ, ಖಡ್ಗ, ಪಟ್ಟಸಗಳೆಂಬ ಆಯುಧಗಳಿಂದ,

---

ಈ ರೀತಿ ಮದದಾನೆಗಳಂತೆ ಪರಸ್ಪರ ಜಯಕಾಂಕ್ಷಿಗಳಾಗಿ ಯುದ್ಧಮಾಡುತ್ತ ಒಬ್ಬರನ್ನೊಬ್ಬರು ದೃಷ್ಟಿಸಿ ನೋಡುತ್ತಿರುವ ಲಕ್ಷ್ಮಣೇಂದ್ರಜಿತುಗಳನ್ನುನೋಡಿ ರಾವಣಾನುಜನಾದ ವಿಭೀಷಣನು ರಣರಂಗದ ಮುಂಗಡೆ ನಿಂತು ಮಹತ್ತರವಾದ ತನ್ನಧನುಸ್ಸನ್ನು ಮಹೋನ್ನತವಾಗಿ ಟಂಕಾರ ಮಾಡಿ ರಾಕ್ಷಸರಮೇಲೆ ಮಹಾ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಹೀಗೆ ಆ ರಾಕ್ಷಸೋತ್ತಮನು ಪ್ರಯೋಗಿಸಿದ ಅಗ್ನಿಜ್ವಾಲೆಗಳಿಗೆ ಸಮಾನವಾದ ಆ ಬಾಣಗಳು ವಜ್ರಾಯುಧವು ಪರ್ವತಗಳನ್ನೇ ಭೇದಿಸುವಂತೆ ಆ ರಾಕ್ಷಸರ ದೇಹಗಳನ್ನು ಭೇದಿಸಿದುವು. ಶೂಲ ಪಟ್ಟಸ ಖಡ್ಗಾದಿಗಳನ್ನು ಧರಿಸಿದ್ದ ವಿಭೀಷಣಾನುಚರರೂ ಸಹ ವೀರರಾದ ರಾಕ್ಷಸರನ್ನೆಲ್ಲ ಕಡಿದುಹಾಕುತ್ತ ಬಂದರು. ॥ ೧–೫ ॥ ಅನುಚರರಾದ ರಾಕ್ಷಸ

ತ್ತಮಾಃ ॥೫॥ ರಾಕ್ಷಸೈಸ್ತೈಃ ಪರಿವೃತಸ್ಸತದಾತು ವಿಭೀಷಣಃ । ಬಭೌ ಮಧ್ಯೇ ಪ್ರಹೃಷ್ಟಾನಾಂ ಕಲಭಾನಾಮಿವ ದ್ವಿಪಃ ॥೬॥ ತತಸ್ಸಂಚೋದಯಾನೋ ವೈ ಹರೀನ್ ರಕ್ಷೋ ರಣಪ್ರಿಯಾನ್ । ಉವಾಚ ವಚನಂ ಕಾಲೇ ಕಾಲಜ್ಞೋ ರಕ್ಷಸಾಂ ವರಃ ॥೭॥ "ಏಕೋಽಯಂ ರಾಕ್ಷಸೇಂದ್ರಸ್ಯ ಪರಾಯಣಮಿವ ಸ್ಥಿತಃ । ಏತಚ್ಛೇಷಂ ಬಲಂ ತಸ್ಯ ಕಿಂ ತಿಷ್ಠತ ಹರೀಶ್ವರಾಃ! ॥೮॥ ಅಸ್ಮಿನ್ ವಿನಿಹತೇ ಪಾಪೇ ರಾಕ್ಷಸೇ ರಣಮೂರ್ಧನಿ । ರಾವಣಂ ವರ್ಜಯಿತ್ವಾ ತು ಶೇಷಮಸ್ಯ ಹತಂ ಬಲಂ ॥೯॥ ಪ್ರಹಸ್ತೋ ನಿಹತೋ ವೀರೋ ನಿಕುಂಭಶ್ಚ ಮಹಾಬಲಃ । ಕುಂಭಕರ್ಣಶ್ಚ ಕುಂಭಶ್ಚ ಧೂಮ್ರಾಕ್ಷಶ್ಚ ನಿಶಾಚರಃ ॥೧೦॥ ಜಂಬುಮಾಲೀ ಮಹಾಮಾಲೀ ತೀಕ್ಷ್ಣವೇಗೋಽಶನಿಪ್ರಭಃ ।

ಸಮರೇ - ಕಾಳೆಗದಲ್ಲಿ, ವೀರಾನ್ - ಶೂರರಾದ, ರಾಕ್ಷಸಾನ್ - ರಕ್ಕಸರನ್ನು, ಚಿಚ್ಛಿದುಃ - ಛೇದಿಸಿದರು. ॥೫॥ ತೈಃರಾಕ್ಷಸೈಃ - ಆ ರಕ್ಕಸರಿಂದ, ಪರಿವೃತಃ - ಪರಿವೃತನಾದ, ಸವಿಭೀಷಣಸ್ತು - ಆ ವಿಭೀಷಣನಾದರೆ, ತದಾ - ಆ ಕಾಲದಲ್ಲಿ, ಪ್ರಹೃಷ್ಟಾನಾಂ - ಸಂತೋಷಚಿತ್ತವಾಗಿರುವ, ಕಲಭಾನಾಂ - ಆನೆಯ ಮರಿಗಳ, ಮಧ್ಯೇ - ನಡುವೆ, ದ್ವಿಪಇವ - ಆನೆಯಂತೆ, ಬಭೌ - ಹೊಳೆಯುತ್ತಿದ್ದನು. ॥೬॥ ತತಃ - ಬಳಿಕ, ಕಾಲಜ್ಞಃ - ಸಮಯವನ್ನು ತಿಳಿದ, ರಕ್ಷಸಾಂ - ರಕ್ಕಸರೊಳಗೆ, ವರಃ - ಉತ್ತಮನಾದ ವಿಭೀಷಣನು, ರಕ್ಷೋರಣಪ್ರಿಯಾನ್ - ರಾಕ್ಷಸರ ಸಂಗಡ ಕಾಳೆಗದಲ್ಲಿ ಪ್ರೀತಿಯುಳ್ಳ, ಹರೀನ್ - ವಾನರರನ್ನು, ಸಂಚೋದಯಾನೋವೈ - ಪ್ರೇರಿಸುವನಾಗಿಯೇ, ವಚನಂ - ಮಾತನ್ನು, ಉವಾಚ - ಹೇಳಿದನು. ॥೭॥ ಹರೀಶ್ವರಾಃ - ವಾನರಶ್ರೇಷ್ಠರರೇ, ರಾಕ್ಷಸೇಂದ್ರಸ್ಯ - ರಾಕ್ಷಸಾಧಿಪತಿಗೆ, ಅಯಮೇಕಃ - ಇವನೊಬ್ಬನು, ಪರಾಯಣಮಿವ - ಗತಿಯಂತೆ, ಸ್ಥಿತಃ - ನಿಂತಿದ್ದಾನೆ, ತಸ್ಯ - ಅವನ, ಏತದ್ಬಲಂಚ - ಈ ಸೇನೆಯೂ ಸಹ, ಸ್ಥಿತಂ - ನಿಂತಿದೆ, ಕಿಂತಿಷ್ಠತ - ಏಕೆ ನಿಂತು ಕೊಂಡಿರಿ. ॥೮॥ ರಣಮೂರ್ಧನಿ - ಕಾಳೆಗದಲ್ಲಿ, ಪಾಪೇ - ಪಾಪಿಷ್ಠನಾದ, ಅಸ್ಮಿನ್‌ರಾಕ್ಷಸೇ - ಈ ಅಸುರನು, ವಿನಿಹತೇ - ಹೊಡೆಯಲ್ಪಟ್ಟವನಾಗಲೂ, ರಾವಣಂ - ದಶಕಂಠನನ್ನು, ವರ್ಜಯಿತ್ವಾ - ಬಿಟ್ಟು, ಅಸ್ಯ - ಇವನ, ಶೇಷಂ - ಉಳಿದ, ಬಲಂ - ಸೇನೆಯು, ಹತಂ - ಸಂಹೃತವಾಯಿತು. ॥೯॥ ವೀರಃ - ಶೂರನಾದ, ಪ್ರಹಸ್ತಃ - ಪ್ರಹಸ್ತನು, ನಿಹತಃ - ಹೊಡೆಯಲ್ಪಟ್ಟನು, ಮಹಾಬಲಃ - ಬಹು ಬಲವಂತನಾದ, ನಿಕುಂಭಶ್ಚ - ನಿಕುಂಭನೂ, ಕುಂಭಕರ್ಣಶ್ಚ - ಕುಂಭಕರ್ಣನೂ, ಕುಂಭಶ್ಚ - ಕುಂಭನೂ, ನಿಶಾಚರಃ - ರಾಕ್ಷಸನಾದ, ಧೂಮ್ರಾಕ್ಷಶ್ಚ - ಧೂಮ್ರಾಕ್ಷನೂ, ಜಂಬುಮಾಲೀ - ಜಂಬುಮಾಲಿಯೂ, ಮಹಾಮಾಲೀ-ಮಹಾಮಾಲಿಯೂ, ತೀಕ್ಷ್ಣವೇಗಃ-ತೀಕ್ಷ್ಣವೇಗನೂ, ಅಶನಿಪ್ರಭಃ-ಅಶನಿ

ವೀರರು ಸುತ್ತುವರೆದು ನಿಂತಿರಲು ಆ ವಿಭೀಷಣನು ಹಿಂಡಿನ ನಡುವಣ ಸಲಗದಂತೆ ಶೋಭಿಸುತ್ತಿದ್ದನು. ಆಗಲಾತನು ಕಪಿಸೇನೆಗಳನ್ನೆಲ್ಲ ಹುರಿದುಂಬಿಸುವವನಾಗಿ ಅವರೆಲ್ಲರನ್ನೂ ಕುರಿತು, "ಅಯ್ಯಾ ವಾನರವೀರರೇ! ರಾವಣಾಸುರನಿಗೆ ಬೆಂಬಲವಾಗಿ ಈ ಇಂದ್ರಜಿತುವೊಬ್ಬನೇ ಉಳಿದಿರುವನು. ಆದುದರಿಂದ ನೀವೆಲ್ಲರೂ ಇವನ ಸಂಹಾರದಲ್ಲಿ ಸ್ಥಿರಚಿತ್ತರಾಗಿ ಯುದ್ಧ ಮಾಡಿರಿ. ಭಯದಿಂದೋಡಬೇಡಿರಿ. ಈ ರಾಕ್ಷಸನೊಬ್ಬನು ಮಡಿದರೆ ರಾವಣಾಸುರನೊಬ್ಬನನ್ನುಳಿದು ಮಿಕ್ಕ ರಾಕ್ಷಸಸೇನೆಯೆಲ್ಲವೂ ನಾಶವಾಯಿತೆಂದು ತಿಳಿಯಿರಿ. ॥ ೬-೯ ॥ ಇದೂ ಅಲ್ಲದೆ, ಎಲೈ ವಾನರೋತ್ತಮರೇ! ಈವರೆಗೆ ವೀರನಾದ ಪ್ರಹಸ್ತ, ಮಹಾ ಬಲಾಢ್ಯನಾದ ನಿಕುಂಭ, ಕುಂಭಕರ್ಣ, ಕುಂಭ, ಧೂಮ್ರಾಕ್ಷ, ಜಂಬುಮಾಲಿ, ಮಹಾಮಾಲಿ, ಮಹಾವೇಗ

ಸುಪ್ತಘ್ನೋ ಯಜ್ಞಕೋಪಶ್ಚ ವಜ್ರದಂಷ್ಟ್ರಶ್ಚ ರಾಕ್ಷಸಃ ॥ ೧೧ ॥ ಸಂಹ್ರಾದೀ
ವಿಕಟೋ ನಿಘ್ನಸ್ತಪನೋ ದಮ ಏವಚ । ಪ್ರಘಾಸಃ ಪ್ರಘಸಶ್ಚೈವ ಪ್ರಜಂಘೋ
ಜಂಘ ಏವಚ ॥ ೧೨ ॥ ಅಗ್ನಿಕೇತುಶ್ಚ ದುರ್ಧರ್ಷೋ ರಶ್ಮಿಕೇತುಶ್ಚ ವೀರ್ಯವಾನ್ ।
ವಿದ್ಯುಜ್ಜಿಹ್ವೋ ದ್ವಿಜಿಹ್ವಶ್ಚ ಸೂರ್ಯಶತ್ರುಶ್ಚ ರಾಕ್ಷಸಃ ॥೧೩॥ ಅಕಂಪನಸ್ಸುಪಾರ್ಶ್ವಶ್ಚ
ಚಕ್ರಮಾಲೀಚ ರಾಕ್ಷಸಃ । ಕಂಪನಸ್ಸತ್ವವಂತೌ ತೌ ದೇವಾಂತಕ ನರಾಂತಕೌ ॥ ೧೪ ॥
ಏತಾನ್ನಿಹತ್ಯಾಽತಿಬಲಾನ್ ಬಹೂನ್ ರಾಕ್ಷಸಸತ್ತಮಾನ್ । ಬಾಹುಭ್ಯಾಂ ಸಾಗರಂ
ತೀರ್ತ್ವಾ ಲಂಘ್ಯತಾಂ ಗೋಷ್ಪದಂ ಲಘು ॥ ೧೫ ॥ ಏತಾವದೇವ ಶೇಷಂ ವೋ
ಜೇತವ್ಯಮಿಹ ವಾನರಾಃ । ಹತಾಸ್ಸರ್ವೇ ಸಮಾಗಮ್ಯ ರಾಕ್ಷಸಾ ಬಲದರ್ಪಿತಾಃ ॥೧೬॥

ಪ್ರಭನೂ, ಸುಪ್ತಘ್ನಃ-ಸುಪ್ತಘ್ನನೂ, ಯಜ್ಞಕೋಪಶ್ಚ-ಯಜ್ಞಕೋಪನೂ, ರಾಕ್ಷಸಃ-ರಕ್ಕಸನಾದ, ವಜ್ರಧಂಷ್ಟ್ರಶ್ಚ ವಜ್ರದಂಷ್ಟ್ರನೂ, ಸಂಹ್ರಾದೀ-ಸಂಹಾ ದಿಯೂ, ವಿಕಟಃ ವಿಕಟನೂ, ನಿಘ್ನಃ ನಿಘ್ನನೂ, ತಪನಃ-ತಪನನೂ, ದಮ ಏವಚ ದಮನೆಂಬವನೂ, ಪ್ರಘಾಸಃ ಪ್ರಘಾಸನೂ, ಪ್ರಘಸಶ್ಚೈವ-ಪ್ರಘಸನೂ, ಪ್ರಜಂಘಃ - ಪ್ರಜಂಘನೂ, ಜಂಘ ಏವಚ - ಜಂಘನೆಂಬವನೂ, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ, ಅಗ್ನಿಕೇತುಶ್ಚ - ಅಗ್ನಿಕೇತುವೂ, ವೀರ್ಯವಾನ್ - ಸಾಮರ್ಥ್ಯವಂತನಾದ, ರಶ್ಮಿಕೇತುಶ್ಚ - ರಶ್ಮಿಕೇತುವೂ, ವಿದ್ಯುಜ್ಜಿಹ್ವಃ - ವಿದ್ಯುಜ್ಜಿಹ್ವನೂ, ದ್ವಿಜಿಹ್ವಶ್ಚ - ದ್ವಿಜಿಹ್ವನೂ, ರಾಕ್ಷಸಃ - ರಕ್ಕಸನಾದ, ಸೂರ್ಯಶತ್ರುಶ್ಚ-ಸೂರ್ಯಶತ್ರುವೂ, ಕಂಪನಃ-ಕಂಪನನೂ, (ಹತಾಃ-ಹೊಡೆಯಲ್ಪಟ್ಟರು,) ಸತ್ವವಂತೌ - ಬಲವಂತರಾದ, ತೌದೇ....ಕೌ - ಆ ದೇವಾಂತಕ ನರಾಂತಕರೂ, (ಹತೌ - ಸಂಹರಿಸಲ್ಪಟ್ಟರು.) ॥ ೧೪ ॥ ಅತಿಬಲಾನ್ - ಬಹುಬಲವಂತರಾದ, ಬಹೂನ್ - ಅನೇಕರಾದ, ಏತಾನ್‌ರಾಕ್ಷಸಸತ್ತಮಾನ್ - ಈ ರಾಕ್ಷಸಶ್ರೇಷ್ಠರನ್ನು, ನಿಹತ್ಯ - ಹೊಡೆದು, (ಇರುವ ನಿಮಗೆ ಇಂದ್ರಜಿತುವಿನ ಸಂಹಾರವು) ಬಾಹುಭ್ಯಾಂ - ಭುಜಗಳಿಂದ, ಸಾಗರಂ - ಸಮುದ್ರವನ್ನು, ತೀರ್ತ್ವಾ - ದಾಟಿ, (ಇರುವವನಿಗೆ ಗೋಷ್ಪಾದವನ್ನು ಲಂಘಿಸುವುದು ಸುಕರವಾದಂತೆ ಸುಲಭವು) (ಗೋ - ನಿಮ್ಮಿಂದ) ಗೋಷ್ಪದಂ - ಗೋಷ್ಪಾದವು, ಲಂಘ್ಯತಾಂ - ಲಂಘಿಸಲ್ಪಡಲಿ. ॥ ೧೫ ॥ ವಾನರಾಃ - ಕಪಿಗಳೇ, ಇಹ - ಈ ಕಾಳಗದಲ್ಲಿ, ವಃ - ನಿಮಗೆ, ಜೇತವ್ಯಂ - ಜಯಿಸತಕ್ಕದ್ದು, ಏತಾವದೇವ - ಇಷ್ಟುಮಾತ್ರವೆ, ಶೇಷಂ - ಉಳಿದಿದೆ, ಬಲದರ್ಪಿತಾಃ - ಬಲದಿಂದ ಕೊಬ್ಬಿದ, ಸರ್ವೇ - ಸಮಸ್ತರಾದ, ರಾಕ್ಷಸಾಃ - ರಕ್ಕಸರು, ಸಮಾಗಮ್ಯ - ಬಂದು, ಹತಾಃ - ಹತರಾದರು. ॥ ೧೬ ॥

ವಂತನಾದ ಅಶನಿಪ್ರಭ, ಸುಪ್ತಘ್ನ, ಯಜ್ಞಕೋಪ, ವಜ್ರದಂಷ್ಟ್ರ, ಸಂಹ್ರಾದಿ, ವಿಕಟ, ನಿಘ್ನ, ತಪನ, ದಮ, ಪ್ರಘಾಸ, ಪ್ರಘಸ, ಪ್ರಜಂಘ, ಜಂಘ, ಅಗ್ನಿಕೇತು, ದುರ್ಧರ್ಷನಾದ ರಶ್ಮಿಕೇತು, ವಿದ್ಯುಜ್ಜಿಹ್ವ, ದ್ವಿಜಿಹ್ವ, ಸೂರ್ಯಶತ್ರು, ಅಕಂಪನ, ಸುಪಾರ್ಶ್ವ ಚಕ್ರಮಾಲಿ, ಅಕಂಪನ, ಮಹಾ ಪರಾಕ್ರಮಿಯಾದ ದೇವಾಂತಕ, ನರಾಂತಕ ಇವರೇ ಮೊದಲಾದವರೆಲ್ಲರೂ ನಿಮ್ಮಿಂದ ಮಡಿದುಹೋದರು. ಅಯ್ಯಾ! ಇನ್ನು ಉಳಿದಿರುವ ಶತ್ರುಬಲವೆಷ್ಟು; ಅತ್ಯಲ್ಪವಲ್ಲವೆ? ಬಾಹುಗಳಿಂದಲೇ ಮಹಾ ಸಾಗರವನ್ನು ಗೋಷ್ಪಾದಪ್ರಾಯವಾಗಿ ದಾಟಿದಿರಿ. ಇನ್ನು ಉಳಿದಿರುವುದೂ ಗೋಷ್ಪಾದದಷ್ಟೆ? ಏಕೆ ತಡಮಾಡುವಿರಿ. ಉಳಿದಿರುವವನು ಈ ಇಂದ್ರಜಿತುವೊಬ್ಬನೇ! ॥ ೧೦–೧೫ ॥ ಎಲೈ ವಾನರೋತ್ತಮರೇ! ಕೇಳಿ ಕೇಳಿ; ಬಲಗರ್ವದರ್ಪಿತರೂ ಮಹಾ ವೀರರೂ ಆದ ರಾಕ್ಷಸರೆಲ್ಲರನ್ನೂ ಸಂಹರಿಸಿದಿರಿ. ಇನ್ನು ಉಳಿ

ಅಯುಕ್ತಂ ನಿಧನಂ ಕರ್ತುಂ ಪುತ್ರಸ್ಯ ಜನಿತುರ್ಮಮ । ಘೃಣಾಮಪಾಸ್ಯ ರಾಮಾರ್ಥೇ
ನಿಹನ್ಯಾಂ ಭ್ರಾತುರಾತ್ಮಜಂ ॥ ೧೭ ॥ ಹಂತುಕಾಮಸ್ಯ ಮೇ ಬಾಷ್ಪಂ ಚಕ್ಷುಶ್ಚೈವ
ನಿರುಧ್ಯತಿ । ತಮೇವೈಷ ಮಹಾಬಾಹುರ್ಲಕ್ಷ್ಮಣಶ್ಶಮಯಿಷ್ಯತಿ । ವಾನರಾ! ಘ್ನತ
ಸಂಭೂಯ ಭೃತ್ಯಾನಸ್ಯ ಸಮೀಪಗಾನ್" ॥ ೧೮ ॥ ಇತಿ ತೇನಾತಿಯಶಸಾ ರಾಕ್ಷ
ಸೇನಾಭಿಚೋದಿತಾಃ । ವಾನರೇಂದ್ರಾ ಜಹೃಷಿರೇ ಲಾಂಗೂಲಾನಿ ಚ ವಿವ್ಯಧುಃ ॥೧೯॥
ತತಸ್ತೇ ಕಪಿಶಾರ್ದೂಲಾಃ ಕ್ಷ್ವೇಳಂತಶ್ಚ ಮುಹುರ್ಮುಹುಃ । ಮುಮುಚುರ್ವಿವಿಧಾ
ನ್ನಾದಾನ್ ಮೇಘಾನ್ ದೃಷ್ಟ್ವೇವ ಬರ್ಹಿಣಃ ॥ ೨೦ ॥ ಜಾಂಬವಾನಪಿ ತೈಸ್ಸರ್ವೈ

ಮಮ-ನನಗೆ, ಪುತ್ರಸ್ಯ-ಮಗನ, ನಿಧನಂ-ಸಂಹಾರವನ್ನು, ಕರ್ತುಂ-ಮಾಡುವುದಕ್ಕೆ, ನಯುಕ್ತಂ-ಯೋಗ್ಯವಲ್ಲ, ರಾಮಾರ್ಥೇ - ರಾಮನ ನಿಮಿತ್ತವಾಗಿ, ಘೃಣಾಂ - ದಯೆಯನ್ನು, ಅಪಾಸ್ಯ - ಬಿಟ್ಟು, ಭ್ರಾತುಃ - ಅಣ್ಣನ, ಆತ್ಮಜಂ - ಕುಮಾರನನ್ನು, ಕಥಂಹನ್ಯಾಂ - ಹೇಗೆ ಹೊಡೆಯಲಿ. ॥ ೧೭ ॥
ಹಂತುಕಾಮಸ್ಯ - ಹೊಡೆಯಲಿಚ್ಛಿಸುವ, ಮೇ - ನನ್ನ, ಚಕ್ಷುಶ್ಚೈವ - ನೇತ್ರವನ್ನೇ, ಬಾಷ್ಪಂ - ಕಂಬನಿಯು, ನಿರುಧ್ಯತಿ - ತಡೆ ಮಾಡುತ್ತದೆ, ತಂ - ಆ ಇಂದ್ರಜಿತುವನ್ನು, ಮಹಾಬಾಹುಃ - ಮಹಾ ಭುಜಬಲಪರಾಕ್ರಮಿಯಾದ, ಏಷಲಕ್ಷ್ಮಣಏವ - ಈ ಲಕ್ಷ್ಮಣನೇ, ಶಮಯಿಷ್ಯತಿ - ಶಾಂತಿಹೊಂದಿಸುವನು, ವಾನರಾಃ - ಕಪಿಗಳೆ, ಸಂಭೂಯ - ಸೇರಿ, ಅಸ್ಯ - ಇವನ, ಸಮೀಪಗಾನ್ - ಸಮೀಪದಲ್ಲಿರುವ, ಭೃತ್ಯಾನ್ - ಭೃತ್ಯರನ್ನು, ಘ್ನತ - ಹೊಡೆಯಿರಿ. ॥ ೧೮ ॥ ಇತಿ - ಇಂತೆಂದು, ಅತಿಯಶಸಾ - ಮಹಾ ಕೀರ್ತಿಯುಳ್ಳ, ರಾಕ್ಷಸೇಂದ್ರೇಣ - ರಾಕ್ಷಸಾಧಿಪತಿಯಾದ, ತೇನ - ಆ ವಿಭೀಷಣನಿಂದ, ಚೋದಿತಾಃ - ಪ್ರೇರಿಸಲ್ಪಟ್ಟ, ವಾನರೇಂದ್ರಾಃ - ಕಪಿಯೂಥಪತಿಗಳು, ಜಹೃಷಿರೇ - ಸಂತೋಷಗೊಂಡರು, ಲಾಂಗೂಲಾನಿಚ - ಬಾಲಗಳನ್ನೂ ಕೂಡ, ವಿವ್ಯಧುಃ - ಕೊಡವಿದರು. ॥ ೧೯ ॥ ತತಃ - ಬಳಿಕ, ತೇಕ....ಶ್ಚ - ಆ ವಾನರಶ್ರೇಷ್ಠರಾದರೆ, ಮುಹುರ್ಮುಹುಃ - ಬಾರಿಬಾರಿಗೂ, ಕ್ಷ್ವೇಳಂತಃ - ಅಟ್ಟಹಾಸವನ್ನು ಮಾಡುವವರಾಗಿ, ಮೇಘಾನ್ - ಮೇಘಗಳನ್ನು, ದೃಷ್ಟ್ವಾ - ಕಂಡು, ಬರ್ಹಿಣಇವ - ನವಿಲುಗಳಂತೆ, ವಿವಿಧಾನ್ - ನಾನಾವಿಧವಾದ, ನಾದಾನ್ - ಶಬ್ದಗಳನ್ನು, ಮುಮುಚುಃ - ಮಾಡಿದರು.

ದಿರುವ ಈ ಇಂದ್ರಜಿತುವೊಬ್ಬನನ್ನು ಸಂಹರಿಸಲು ಪ್ರಯತ್ನಿಸಿರಿ. ನಾನೇ ಇವನನ್ನು ಸಂಹರಿಸಬಲ್ಲೆನು. ಆದರೆ ಇವನು ನಮ್ಮಣ್ಣನ ಮಗನಾಗಿರುವುದರಿಂದ ಕೊಲ್ಲುವುದಕ್ಕೆ ಮನಸ್ಸು ಬಾರದಿದೆ. ನಾನು ಶ್ರೀರಾಮಮೂರ್ತಿಗೋಸುಗ ನನ್ನವರಲ್ಲಿ ದಯೆಯನ್ನು ತೊರೆಯಲು ಉದ್ಯುಕ್ತನಾದೆನು. ಆದರೂ ಕಂಬನಿಯು ನನ್ನನ್ನು ತಡೆಯುತ್ತಿರುವುದು. ಆದುದರಿಂದಲೇ ನಾನೀತನನ್ನು ವಧಿಸದೆ ಸುಮ್ಮನಿರುವೆನು. ಲಕ್ಷ್ಮಣಸ್ವಾಮಿಯೇ ಇವನನ್ನು ಕೊಲ್ಲುವನು ಇದರಲ್ಲಿ ಸಂಶಯವಿರುವುದಿಲ್ಲವು. ನೀವೆಲ್ಲರೂ ಒಟ್ಟಾಗಿ ಸೇರಿ ಈ ರಾಕ್ಷಸನ ಸಮೀಪದಲ್ಲಿ ನಿಂತು ನಮ್ಮೊಡನೆ ಯುದ್ಧಮಾಡುತ್ತಿರುವ ಈ ರಾಕ್ಷಸವೀರರೆಲ್ಲರನ್ನೂ ವಧಿಸಿರಿ. ಜಾಗ್ರತೆಯಾಗಿ ಜಯವು ಕೈಸೇರುವುದು" ಎಂದು ಹೇಳಿದನು. ಮಹಾ ಬಲಾಢ್ಯನೂ, ಕೀರ್ತಿಸಂಪನ್ನನೂ ಆದ ವಿಭೀಷಣನಿಂತು ನುಡಿದೊಡನೆಯೇ ವಾನರರೆಲ್ಲರೂ ಅಪರಿಮಿತಾನಂದಭರಿತರಾಗಿ ಆ ರಾಕ್ಷಸರನ್ನು ಕೊಲ್ಲಬೇಕೆಂಬ ಹುರುಪಿನಿಂದ ರೋಷಗೊಂಡು ತಂತಮ್ಮ ಬಾಲಗಳನ್ನು ನೆಲಕ್ಕೆ ಅಪ್ಪಳಿಸಿ ಹೊಡೆದರು. ॥ ೧೭-೨೦ ॥ ಆ ಬಳಿಕ ವಾನರವೀರರೆಲ್ಲರೂ ಅಡಿಗಡಿಗೂ ಭಯಂಕರ ಸಿಂಹನಾದಗಳನ್ನು ಮಾಡುತ್ತ ಮುಗಿಲುಗಳನ್ನು

ಸ್ಸ್ವಯೂಥ್ಯೈರಪಿ ಸಂವೃತಃ । ಅಶ್ಮಭಿಸ್ತಾಡಯಾಮಾಸ ನಖೈರ್ದಂತೈಶ್ಚ ರಾಕ್ಷಸಾನ್ ॥ ೨೧ ॥ ನಿಘ್ನಂತಮೃಕ್ಷಾಧಿಪತಿಂ ರಾಕ್ಷಸಾಸ್ತೇ ಮಹಾಬಲಾಃ । ಪರಿವವ್ರುರ್ಭಯಂ ತ್ಯಕ್ತ್ವಾ ತಮನೇಕ ವಿಧಾಯುಧಾಃ ॥ ೨೨ ॥ ಶರೈಃ ಪರಶುಭಿಸ್ತೀಕ್ಷ್ಣೈಃ ಪಟ್ಟಸೈರ್ಯಷ್ಟಿತೋಮರೈಃ । ಜಾಂಬವಂತಂ ಮೃಧೇ ಜಘ್ನುರ್ನಿಘ್ನಂತಂ ರಾಕ್ಷಸೀಂ ಚಮೂಂ ॥ ೨೩ ॥ ಸಸಂಪ್ರಹಾರಸ್ತುಮುಲಸ್ಸಂಜಜ್ಞೇ ಕಪಿರಕ್ಷಸಾಂ । ದೇವಾಸುರಾಣಾಂ ಕ್ರುದ್ಧಾನಾಂ ಯಥಾ ಭೀಮೋ ಮಹಾಸ್ವನಃ ॥ ೨೪ ॥ ಹನುಮಾನಪಿ

॥ ೨೦ ॥ ಜಾಂಬವಾನಪಿ ಜಾಂಬವಂತನೂ ಕೂಡ, ತೈಸ್ಸರ್ವೈಃ ಸಮಸ್ತರಾದ ಆ ವಾನರರಿಂದಲೂ, ಸ್ವಯೂಥ್ಯೈರಪಿ - ತನ್ನ ಕರಡಿಗಳ ಗುಂಪುಗಳಿಂದಲೂ, ಸಂವೃತಃ - ಪರಿವೃತನಾಗಿ, ರಾಕ್ಷಸಾನ್ - ರಕ್ಕಸರನ್ನು, ನಖೈಃ ಉಗುರುಗಳಿಂದಲೂ, ದಂತೈಶ್ಚ - ಹಲ್ಲುಗಳಿಂದಲೂ, (ವಿದದಾರ - ಸೀಳಿದನು,) ಅಶ್ಮಭಿಃ - ಕಲ್ಲುಗಳಿಂದ, ತಾಡಯಾಮಾಸ - ಹೊಡೆದನು. ॥ ೨೧ ॥ ಅನೇಕವಿಧಾಯುಧಾಃ - ನಾನಾ ವಿಧವಾದ ಆಯುಧಗಳುಳ್ಳ, ಮಹಾಬಲಾಃ - ಬಹು ಬಲವಂತರಾದ, ತೇರಾಕ್ಷಸಾಃ - ಆ ರಕ್ಕಸರೂ, ನಿಘ್ನಂತಂ - ಹೊಡೆಯುತ್ತಿರುವ, ಋಕ್ಷಾಧಿಪತಿಂ - ಕರಡಿಗಳಿಗೆ ಅಧಿಪತಿಯಾದ, ತಂ - ಆ ಜಾಂಬವಂತನನ್ನು, ಭಯಂ - ಭೀತಿಯನ್ನು, ತ್ಯಕ್ತ್ವಾ - ಬಿಟ್ಟು, ಪರಿವವ್ರುಃ - ಸುತ್ತುವರೆದರು. ॥ ೨೨ ॥ ಮೃಧೇ - ಕಾಳಗದಲ್ಲಿ, ರಾಕ್ಷಸೀಂ - ರಕ್ಕಸರ ಸಂಬಂಧವಾದ, ಚಮೂಂ - ಸೇನೆಯನ್ನು, ನಿಘ್ನಂತಂ - ಹೊಡೆಯುತ್ತಿರುವ, ಜಾಂಬವಂತಂ - ಜಾಂಬವಂತನನ್ನು, ಶರೈಃ - ಸರಳುಗಳಿಂದಲೂ, ಪರಶುಭಿಃ - ಕೊಡಲಿಗಳಿಂದಲೂ, ತೀಕ್ಷ್ಣೈಃ - ಹದವಾದ, ಪಟ್ಟಸೈಃ - ಕತ್ತಿಗಳಿಂದಲೂ, ಯಷ್ಟಿತೋಮರೈಃ - ದೊಣ್ಣೆಗಳಿಂದಲೂ, ತೋಮರಾಯುಧಗಳಿಂದಲೂ, ಜಘ್ನುಃ - ಹೊಡೆದರು. ॥೨೩॥ ಕ್ರುದ್ಧಾನಾಂ - ಕುಪಿತರಾದ, ದೇವಾಸುರಾಣಾಂ - ದೇವರಾಕ್ಷಸರ, ಭೀಮಃ - ಭಯಂಕರವಾದ, ಮಹಾಸ್ವನಃ - ದೊಡ್ಡ ಘೋಷವು, ಯಥಾ - ಹೇಗೋ, ತಥಾ - ಹಾಗೆ, ಕಪಿರಕ್ಷಸಾಂ - ವಾನರರಾಕ್ಷಸರಿಗೆ, ತುಮುಲಃ - ಸಂಕುಲವಾದ, ಸಸಂಪ್ರಹಾರಃ - ಆ ಕಾಳಗವು, ಸಂಜಜ್ಞೇ - ಹುಟ್ಟಿತು. ॥ ೨೪ ॥ ವೀರ್ಯವಾನ್ - ಪರಾಕ್ರಮಿಯಾದ, ಹನುಮಾನಪಿ - ಹನುಮಂತನೂ ಕೂಡ, ಸಂಕ್ರುದ್ಧಃ - ಕುಪಿತ

ಕಂಡು ಕೂಗಿ ನರ್ತಿಸುವ ನವಿಲುಗಳಂತೆ ಬಗೆಬಗೆಯ ಧ್ವನಿಗಳನ್ನು ಮಾಡುತ್ತಿದ್ದರು. ಆಗ ಜಾಂಬವಂತನು ತನ್ನಸೇವೆಯಿಂದಲೂ ವಾನರಸೇನೆಯಿಂದಲೂ ಕೂಡಿ ಉಗುರುಗಳಿಂದಲೂ, ದಂತಗಳಿಂದಲೂ, ಶಿಲೆಗಳಿಂದಲೂ, ವೃಕ್ಷಗಳಿಂದಲೂ ರಾಕ್ಷಸರೆಲ್ಲರನ್ನೂ ಹೊಡೆದು ಕೆಡವಿದನು. ವಿವಿಧಾಯುಧಗಳಿಂದ ರಾಕ್ಷಸರೂ ಸಹ ನಿರ್ಭಯರಾಗಿ ಭಲ್ಲೂಕಾಧಿಪತಿಯಾದ ಜಾಂಬವಂತನನ್ನು ಬಗೆಬಗೆಯಾಗಿ ಪ್ರಹರಿಸಿದರು. ಇಷ್ಟೆಯಲ್ಲದೆ ಮಹಾ ಭಯಂಕರರಾದ ಆ ರಾಕ್ಷಸರು ಬಾಣಗಳಿಂದಲೂ, ಖಡ್ಗಗಳಿಂದಲೂ, ಮಹಾ ತೀಕ್ಷ್ಣವಾದ ಪಟ್ಟಸಾಯುಧಗಳಿಂದಲೂ, ನಿಡಿಗೋಲುಗಳಿಂದಲೂ, ತೋಮರಗಳಿಂದಲೂ ಆ ಜಾಂಬವಂತನನ್ನೂ ಅವನ ಅಪಾರ ಸೇನೆಯನ್ನೂ ಹೊಡೆದರು. ಆ ಸಮಯದಲ್ಲಿ ವಾನರರಿಗೂ, ರಾಕ್ಷಸರಿಗೂ ಸಂಕುಲ ಯುದ್ಧಕ್ಕೆ ಮೊದಲಾಯಿತು. ಆ ಯುದ್ಧವು ದೇವಾಸುರ ಯುದ್ಧದಂತೆ ಬಹು ಭಯಂಕರವಾಗಿದ್ದಿತು. ಆ ಯುದ್ಧದಲ್ಲಿ ಹುಟ್ಟಿದ ಕೋಲಾಹಲ ಧ್ವನಿಯು ಬಹು ಅದ್ಭುತವಾಗಿದ್ದಿತು. ಆಗ ಮಹಾ ಪರಾಕ್ರಮಿಯಾದ ಹನುಮಂತನೂ ಕೂಡ ದೊಡ್ಡದೊಂದು ಸಾಲವೃಕ್ಷವನ್ನು ಬುಡಸಹಿತ ಪೆಳಗಿಸಿಕೊಂಡು ಒಂದೊಂದು ಹೊಡತಕ್ಕೆ ಸಾವಿರಾರು

ಸಂಕ್ರುದ್ಧಸ್ಸಾಲಮುತ್ಪಾಟ್ಯ ವೀರ್ಯವಾನ್ । ರಕ್ಷಸಾಂ ಕದನಂ ಚಕ್ರೇ ಸಮಾಸಾದ್ಯ ಸಹಸ್ರಶಃ ॥೨೫॥ ಸದತ್ವಾ ತುಮುಲಂ ಯುದ್ಧಂ ಪಿತೃವ್ಯಸ್ಯೇಂದ್ರಜಿದ್ಯುಧಿ । ಲಕ್ಷ್ಮಣಂ ಪರವೀರಘ್ನಂ ಪುನರೇವಾಽಭ್ಯಧಾವತ ॥೨೬॥ ತೌ ಪ್ರಯುದ್ಧೌ ತದಾ ವೀರೌ ಮೃಧೇ ಲಕ್ಷ್ಮಣರಾಕ್ಷಸೌ । ಶರೌಘಾನಭಿವರ್ಷಂತೌ ಜಘ್ನತುಸ್ತೌ ಪರಸ್ಪರಂ ॥ ೨೭ ॥ ಅಭೀಕ್ಷ್ಣಮಂತರ್ದಧತುಃ ಶರಜಾಲೈರ್ಮಹಾಬಲೌ । ಚಂದ್ರಾದಿತ್ಯಾವಿವೋಷ್ಣಾಂತೇ ಯಥಾ ಮೇಘೈಸ್ತರಸ್ವಿನೌ ॥ ೨೮ ॥ ನ ಹ್ಯಾದಾನಂ ನ ಸಂಧಾನಂ ಧನುಷೋ ವಾ ಪರಿಗ್ರಹಃ । ನವಿಪ್ರಮೋಕ್ಷೋ ಬಾಣಾನಾಂ ನವಿಕರ್ಷೋ ನ ವಿಗ್ರಹಃ ॥೨೯॥ ನ ಮುಷ್ಟಿಪ್ರತಿಸಂಧಾನಂ ನ ಲಕ್ಷ್ಯಪ್ರತಿಪಾದನಂ । ಅದೃಶ್ಯತ ತಯೋಸ್ತತ್ರ

ನಾಗಿ, ಸಾಲಂ - ಸಾಲವೃಕ್ಷವನ್ನು, ಉತ್ಪಾಟ್ಯ - ಕಿತ್ತು, ಸಹಸ್ರಶಃ - ಸಾವಿರ ಬಗೆಯಾಗಿ, ಸಮಾಸಾದ್ಯ - ಹೊಂದಿ, ರಕ್ಷಸಾಂ - ರಕ್ಕಸರ, ಕದನಂ - ಸಂಹಾರವನ್ನು, ಚಕ್ರೇ - ಮಾಡಿದನು. ॥೨೫॥ ಸಇಂದ್ರಜಿತ್ - ಆ ಇಂದ್ರಜಿತುವು, ಯುಧಿ - ಕಾಳೆಗದಲ್ಲಿ, ತುಮುಲಂ - ಸಂಕುಲವಾದ, ಯುದ್ಧಂ - ಕಾಳೆಗವನ್ನು, ಪಿತೃವ್ಯಸ್ಯ - ಚಿಕ್ಕಪ್ಪನಿಗೆ, ದತ್ವಾ - ಕೊಟ್ಟು, ಪರವೀರಘ್ನಂ - ಶತ್ರುಶೂರರನ್ನು ಹೊಡೆಯುತ್ತಿರುವ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಪುನರೇವ - ಮತ್ತೂ, ಅಭ್ಯಧಾವತ - ಓಡಿಬಂದನು ॥ ೨೬ ॥ ತದಾ - ಆಗ, ಮೃಧೇ - ಕಾಳೆಗದಲ್ಲಿ, ವೀರೌ - ಶೂರರಾದ, ತೌಲಕ್ಷ್ಮಣರಾಕ್ಷಸೌ - ಆ ಲಕ್ಷ್ಮಣ ರಕ್ಕಸರು, ಪ್ರಯುದ್ಧೌ - ಕಾಳೆಗ ಮಾಡಲಾರಂಭಿಸಿ, ಶರೌಘಾನ್ - ಸರಳುಮಳೆಯನ್ನು, ಅಭಿವರ್ಷಂತೌ - ವರ್ಷಿಸುವವರಾಗಿ, ತೌ - ಅವರಿಬ್ಬರೂ, ಪರಸ್ಪರಂ - ಅನ್ಯೋನ್ಯವಾಗಿ, ಜಘ್ನತುಃ - ಹೊಡೆದರು. ॥ ೨೭ ॥ ಉಷ್ಣಾಂತೇ - ವರ್ಷಾಕಾಲದ ಆದಿಭಾಗದಲ್ಲಿ, ಚಂದ್ರಾದಿತ್ಯಾವಿವಸ್ಥಿತೌ - ಚಂದ್ರಸೂರ್ಯರಂತಿರುವ, ಮಹಾಬಲೌ - ಬಹು ಬಲವಂತರಾದ, ತರಸ್ವಿನೌ - ಶಕ್ತಿವಂತರಾದ ಅವರೀರ್ವರೂ, ಮೇಘೈರ್ಯಥಾ - ಮೇಘಗಳಿಂದಲಂತೆ, ಶರಜಾಲೈಃ - ಸರಳುಗಳ ಸಮೂಹಗಳಿಂದ, ಅಭೀಕ್ಷ್ಣಂ - ಬಾರಿಬಾರಿಗೂ, ಅಂತರ್ದಧತುಃ - ಅದೃಶ್ಯರಾದರು. ॥ ೨೮ ॥ ತತ್ರ - ಆ ಕಾಳೆಗದಲ್ಲಿ, ಯುಧ್ಯತೋಃ - ಕಾಳೆಗ ಮಾಡುತ್ತಿರುವ, ತಯೋಃ - ಆ ಲಕ್ಷ್ಮಣೇಂದ್ರಜಿತುಗಳ, ಪಾಣಿ....ತ್ - ಕರಲಾಘವದ ದೆಶೆಯಿಂದ, ಆದಾನಂ - ಸರಳುಗಳನ್ನು ಬತ್ತಳಿಕೆಗಳಿಂದ ತೆಗೆಯೋಣವೂ, ನಾದೃಶ್ಯತ - ಕಾಣಲ್ಪಡಲಿಲ್ಲ, ಸಂಧಾನಂ - ಧನುಸ್ಸಿನಲ್ಲಿ ಸೇರಿಸೋಣವೂ, ನ - ಕಾಣಲ್ಪಡಲಿಲ್ಲ, ಧನುಷಃ - ಧನುಸ್ಸಿನ, ಪರಿಗ್ರಹೋವಾ - ಗ್ರಹಣವಾದರೂ, ನ - ಕಾಣಿಸಲಿಲ್ಲ, ಬಾಣಾನಾಂ - ಸರಳುಗಳ, ವಿಪ್ರಮೋಕ್ಷಃ - ಬಿಡೋಣವು, ನಾದೃಶ್ಯತ - ಕಾಣಲ್ಪಡಲಿಲ್ಲ, ವಿಕರ್ಷಃ - ಸೆಳೆಯುವಿಕೆಯು, ನಾದೃಶ್ಯತ -

---

ಬಗೆಗಳಿಂದ ರಾಕ್ಷಸರನ್ನು ಮರ್ದಿಸಿ ಕೆಡವಿದನು. ॥ ೨೧--೨೫ ॥ ಪರಾಕ್ರಮಿಯಾದ ಇಂದ್ರಜಿತುವೂ ಚಿಕ್ಕಪ್ಪನಾದ ವಿಭೀಷಣನೊಡನೆ ಪ್ರಬಲವಾದ ಯುದ್ಧವನ್ನು ಮಾಡಿ, ಶತ್ರುತಾಪನನಾದ ಲಕ್ಷ್ಮಣನನ್ನು ಅಟ್ಟಬಂದನು. ಆಗ ಆ ರಾಕ್ಷಸಮಾನವರಾದ ಇಂದ್ರಜಿತ್‌ಲಕ್ಷ್ಮಣರೀರ್ವರೂ ಬಾಣತಂಡಗಳಿಂದ ಒಬ್ಬರನ್ನೊಬ್ಬರು ಹೊಡೆಯುತ್ತ ಕಾಳೆಗ ಮಾಡಿದರು. ಅವರೀರ್ವರೂ ಬೇಸಗೆ ಕಳೆದು ಮಳೆಗಾಲ ಬಂದ ಬಳಿಕ ಮುಗಿಲುಗಳ ನಡುವೆ ಮರೆಯಾದ ಸೂರ್ಯಚಂದ್ರರಂತೆ ಅಡಿಗಡಿಗೂ ಬಾಣವೃಷ್ಟಿಯಲ್ಲಿ ಮರೆಯಾಗುತ್ತಿದ್ದರು. ಅವರೀರ್ವರ ಕರಕೌಶಲವು ಅತ್ಯಾಶ್ಚರ್ಯಕರವಾಗಿದ್ದಿತು. ಅವರು ಬತ್ತಳಿಕೆಗಳಿಂದ ಬಾಣಗಳನ್ನು ತೆಗೆದುಕೊಳ್ಳುವುದಾಗಲಿ, ಬಿಲ್ಲಿನಲ್ಲಿ ಸಂಧಿಸುವುದಾಗಲಿ, ಧನುಸ್ಸನ್ನು ಹಿಡಿಯುವು

ಯುಧ್ಯತೋಃ ಪಾಣಿಲಾಘವಾತ್ ‖ ೩೦ ‖ ಚಾಪವೇಗವಿನಿರ್ಮುಕ್ತಬಾಣಜಾಲೈ ಸ್ಸಮಂತತಃ । ಅಂತರಿಕ್ಷೇಹಿ ಸಂಛನ್ನೇ ನರೂಪಾಣಿ ಚಕಾಶಿರೇ ‖ ೩೧ ‖ ಲಕ್ಷ್ಮಣೋ ರಾವಣಿಂ ಪ್ರಾಪ್ಯ ರಾವಣಿಶ್ಚಾಪಿ ಲಕ್ಷ್ಮಣಂ । ಅವ್ಯವಸ್ಥಾ ಭವತ್ಯುಗ್ರಾ ತಾಭ್ಯಾಮ ನ್ಯೋನ್ಯವಿಗ್ರಹೇ ‖೩೨‖ ತಾಭ್ಯಾಮುಭಾಭ್ಯಾಂ ತರಸಾ ವಿಸೃಷ್ಟೈರ್ವಿಶಿಖೈಃ ಶಿತೈಃ । ನಿರಂತರಮಿವಾಕಾಶಂ ಬಭೂವ ತಮಸಾವೃತಂ ‖ ೩೩ ‖ ತೈಃ ಪತದ್ಭಿಶ್ಚ ಬಹುಭಿ ಸ್ತಯೋಃ ಶರಶತೈಃ ಶಿತೈಃ । ದಿಶಶ್ಚ ಪ್ರದಿಶಶ್ಚೈವ ಬಭೂವುಃ ಶರಸಂಕುಲಾಃ ‖೩೪‖

ಕಾಣಲ್ಪಡಲಿಲ್ಲ, ವಿಗ್ರಹಃ - ವೀರಮಂಡಿ ಹಾಕಿಕೊಂಡು ಕೂಡೋಣವು, ನಾದೃಶ್ಯತ - ಕಾಣಲ್ಪಡಲಿಲ್ಲ, ಮುಷ್ಟಿ....ನಂ - ಮುಷ್ಟಿಗಳ ಹಿಡಿಯುವಿಕೆಯು, ನ - ಕಾಣಲ್ಪಡಲಿಲ್ಲ. ‖ ೨೯-೩೦ ‖ ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಅಂತರಿಕ್ಷೇ - ಅಂತರಿಕ್ಷವು, ಚಾಪ....ಲೈಃ - ಧನುರ್ವೇಗದಿಂದ ಬಿಟ್ಟ ಬಾಣ ಗಳ ತಂಡಗಳಿಂದ, ಸಂಛನ್ನೇ - ಮುಚ್ಚಲ್ಪಟ್ಟದಾಗಲೂ, ರೂಪಾಣಿ - ಆಕಾರಗಳು, ನಚಕಾಶಿರೇ - ಕಾಣಿಸಲಿಲ್ಲ. ‖ ೩೧ ‖ ಲಕ್ಷ್ಮಣಃ - ಲಕ್ಷ್ಮಣನು, ರಾವಣಿಂ - ಮೇಘನಾದನನ್ನು, ಪ್ರಾಪ್ಯ - ಹೊಂದಿ ಯೂ, ರಾವಣಿಶ್ಚಾಪಿ - ಇಂದ್ರಜಿತುವೂ ಕೂಡ, ಲಕ್ಷ್ಮಣಂ - ಲಕ್ಷ್ಮಣನನ್ನು, ಪ್ರಾಪ್ಯ - ಹೊಂದಿಯೂ, ತಾಭ್ಯಾಂ - ಅವರಿಬ್ಬರಿಂದಲೂ, ಅನ್ಯೋ....ಹೇ - ಪರಸ್ಪರ ಯುದ್ಧದಲ್ಲಿ, ಉಗ್ರಾ - ಭಯಂಕರವಾದ, ಅವ್ಯವಸ್ಥಾ - ಇವನು ಗೆಲ್ಲುವನು, ಇವನು ಗೆಲ್ಲುವುದಿಲ್ಲವೆಂಬ ನಿಯಮವಿಲ್ಲದ್ದು, ಭವತಿ - ಆಯಿತು, ತಾಭ್ಯಾಂಉಭಾಭ್ಯಾಂ - ಅವರಿಬ್ಬರಿಂದಲೂ, ತರಸಾ - ಬಲದಿಂದ, ವಿಸೃಷ್ಟೈಃ - ಬಿಡಲ್ಪಟ್ಟ, ನಿಶಿತೈಃ - ತೀಕ್ಷ್ಣಗಳಾದ, ಬಾಣೈಃ - ಬಾಣಗಳಿಂದ, ನಿರಂತರಂ - ತುಂಬಿರುವ, ಆಕಾಶಂ - ಆಕಾಶವು, ತಮಸಾ - ಅಂಧಕಾರದಿಂದ, ಆವೃತಂ - ಸುತ್ತುವರೆದುದು, ಬಭೂವ - ಆಯಿತು. ‖ ೩೨-೩೩ ‖ ಪತದ್ಭಿಃ - ಬೀಳುತ್ತಿರುವ, ಬಹುಭಿಃ - ಅನೇಕಗಳಾದ, ಶಿತೈಃ - ಹದಗಳಾದ, ತಯೋಃ - ಅವ ರೀರ್ವರ, ತೈಶ್ಶರಶತೈಃ - ಆ ನೂರಾರು ಬಾಣಗಳಿಂದ, ದಿಶಶ್ಚ - ದಿಕ್ಕುಗಳೂ, ಪ್ರದಿಶಶ್ಚೈವ - ವಿದಿಕ್ಕುಗಳೂ, ಶರಸಂಕುಲಾಃ - ಬಾಣಗಳಿಂದ ತುಂಬಿದುವುಗಳು, ಬಭೂವುಃ - ಆದವು, ತಮಸಾ - ಗಾಢಾಂಧಕಾರದಿಂದ, ವ್ಯಾವೃತಂ - ವ್ಯಾಪ್ತವಾದ, ಸರ್ವಂ - ಸಮಸ್ತವೂ, ಮಹತ್ - ಬಹಳ

ದಾಗಲಿ, ಬಾಣಪ್ರಯೋಗ ಮಾಡುವುದಾಗಲಿ, ಸವ್ಯಾಪಸವ್ಯ ಮಾರ್ಗಗಳಿಂದ ಧನುಸ್ಸನ್ನು ಹಿಡಿಯುವುದಾಗಲಿ, ಆಕರ್ಣಾಂತವೂ ಸೆಳೆದು ಪೂರಿಸುವುದಾಗಲಿ, ಆಲೀಢಾದಿ ಅವಸ್ಥಾ ವಿಶೇಷಗಳಾಗಲಿ, ಮುಷ್ಟಿಬಂಧನ, ಲಕ್ಷ್ಯಪ್ರತೀಪಾದನಗಳಾಗಲಿ ಯಾವುದೂ ಗೋಚರ ವಾಗಲಿಲ್ಲವು. ‖ ೨೬–೩೧ ‖ ಆ ಲಕ್ಷ್ಮಣೇಂದ್ರಜಿತುಗಳ ಬಾಣವೇಗದಿಂದ ಅಂತರಿಕ್ಷವೇ ಮುಚ್ಚಿಹೋಗಿ ಯಾವ ವಸ್ತುಗಳೂ ಕಾಣದಾದುವು. ಲಕ್ಷ್ಮಣನು ಇಂದ್ರಜಿತುವನ್ನೂ, ಇಂದ್ರಜಿತುವು ಲಕ್ಷ್ಮಣನನ್ನೂ ಹೊಂದಿ ಮಹೋಗ್ರವಾದ ಕಾಳೆಗವನ್ನು ಮಾಡಿದರು. ಭಯಂಕರವಾದ ಅವರೀರ್ವರ ಕಾಳೆಗದಲ್ಲಿ ಎಲ್ಲೆಲ್ಲಿಯೂ ತಳಮಳವು ತಲೆದೋರಿತು. ಅವರೀರ್ವರೂ ಏಕಕಾಲದಲ್ಲಿಯೇ ಪ್ರಯೋಗ ಮಾಡಿದ ಸರಳುಗಳಿಂದ ಅಂತರಿಕ್ಷವೇ ತುಂಬಿ ಹೋದಂತಾಗಿ ಎಲ್ಲೆಲ್ಲಿಯೂ ಅಂಧಕಾರವೇ ವ್ಯಾಪಿಸಿತು. ಮಹಾ ತೀಕ್ಷ್ಣಗಳಾದ ಆ ಬಾಣಗಳು ಎಲ್ಲೆಲ್ಲಿಯೂ ಬೀಳುತ್ತಿರಲು ದಿಕ್ಕುವಿದಿಕ್ಕುಗಳೆಲ್ಲವೂ ಆ ಬಾಣಗಳಿಂದಲೇ ತುಂಬಿಹೋಗಿ, ಬಹು ಭಯಂಕರವಾಗಿ ತೋರುತ್ತಿದ್ದುವು. ಸೂರ್ಯನು ಮುಳುಗಿ ಹೋದ ತರುವಾಯ ಭಯಂಕರವಾದ ಕತ್ತಲು ಕವಿದು ಎಲ್ಲೆಲ್ಲಿಯೂ ಭೀತಿಯು

ತಮಸಾ ಸಂವೃತಂ ಸರ್ವಮಾಸೀದ್ಭೀಮತರಂ ಮಹತ್ । ಅಸ್ತಂಗತೇ ಸಹಸ್ರಾಂಶೌ ಸಂವೃತಂ ತಮಸೇವಹಿ ॥ ೩೫ ॥ ರುಧಿರೌಘಮಹಾನದ್ಯಃ ಪ್ರಾವರ್ತಂತ ಸಹಸ್ರಶಃ । ಕ್ರವ್ಯಾದಾ ದಾರುಣಾ ವಾಗ್ಭಿಶ್ಚಿಕ್ಷಿಪುರ್ಭೀಮನಿಸ್ವನಂ ॥ ೩೬ ॥ ನ ತದಾನೀಂ ವವೌ ವಾಯುರ್ನಚ ಜಜ್ವಾಲ ಪಾವಕಃ । ಸ್ವಸ್ತ್ಯಸ್ತು ಲೋಕೇಭ್ಯ ಇತಿ ಜಜಲ್ಪುಶ್ಚ ಮಹರ್ಷಯಃ । ಸಂಪೇತುಶ್ಚಾತ್ರ ಸಂಪ್ರಾಪ್ತಾ ಗಂಧರ್ವಾಸ್ಸಹಚಾರಣೈಃ ॥ ೩೭-೩೮ ॥ ಅಥ ರಾಕ್ಷಸಸಿಂಹಸ್ಯ ಕೃಷ್ಣಾನ್ ಕನಕಭೂಷಣಾನ್ । ಶರೈಶ್ಚತುರ್ಭಿಸ್ಸೌಮಿತ್ರಿರ್ವಿವ್ಯಾಧ ಚತುರೋ ಹಯಾನ್ ॥ ೩೯ ॥ ತತೋ ಪರೇಣ ಭಲ್ಲೇನ ಸಿತೇನ ನಿಶಿತೇನಚ । ಸಂಪೂರ್ಣಾಯತಮುಕ್ತೇನ ಸುಪತ್ರೇಣ ಸುವರ್ಚಸಾ ॥ ೪೦ ॥ ಮಹೇಂದ್ರಾಶನಿ

ವಾಗಿ, ಸಹಸ್ರಾಂಶುಃ - ಸೂರ್ಯನು, ಅಸ್ತಂಗತೇ - ಅಸ್ತಮಯವಾಗಲು, ತಮಸಾ - ಅಂಧಕಾರದಿಂದ, ಸಂವೃತಮಿವ - ಮುಚ್ಚಿದಂತೆ, ಭೀಮತರಂ - ಅತಿ ಭಯಂಕರವಾಗಿ, ಆಸೀತ್ - ಆಯಿತು. ॥ ೩೪-೩೫ ॥ ರುಧಿ....ದ್ಯಃ - ರಕ್ತಪ್ರವಾಹಗಳ ಮಹಾ ನದಿಗಳು, ಸಹಸ್ರಶಃ - ಸಾವಿರಾರುಗಳು, ಪ್ರಾವರ್ತಂತ - ಪ್ರವರ್ತಿಸಿದವು, ದಾರುಣಾಃ - ಭಯಂಕರಗಳಾದ, ಕ್ರವ್ಯಾದಾಃ - ಮಾಂಸವನ್ನು ತಿನ್ನುವ ಜಂತುಗಳು, ಭೀಮನಿಸ್ವನಂ - ಭಯಂಕರ ಧ್ವನಿಯನ್ನು, ಚಿಕ್ಷಿಪುಃ - ಹುಟ್ಟಿಸಿದವು. ॥ ೩೬ ॥ ತದಾನೀಂ - ಆ ಕಾಲದಲ್ಲಿ, ವಾಯುಃ - ಗಾಳಿಯು, ನವವೌ - ಬೀಸಲಿಲ್ಲ, ಪಾವಕಶ್ಚ - ಅಗ್ನಿಯೂ, ನಜಜ್ವಾಲ - ಪ್ರಜ್ವಲಿಸಲಿಲ್ಲ, ಲೋಕೇಭ್ಯಃ - ಲೋಕಗಳಿಗೆ, ಸ್ವಸ್ತಿ - ಶುಭವು, ಅಸ್ತು - ಆಗಲಿ, ಇತಿ - ಎಂದು, ಮಹರ್ಷಯಃ - ಬ್ರಹ್ಮರ್ಷಿಗಳು, ಜಜಲ್ಪುಶ್ಚ - ಹೇಳಿದರು, ಅತ್ರ - ಈ ಯುದ್ಧಭೂಮಿಯಲ್ಲಿ, ಸಂಪ್ರಾಪ್ತಾಃ - ಬಂದಿರುವ, ಗಂಧರ್ವಾಃ - ಗಂಧರ್ವರು, ಚಾರಣೈಸ್ಸಹ - ಚಾರಣರೊಡಗೂಡಿ, ಸಂಪೇತುಶ್ಚ - ಸೇರಿದರು. ॥ ೩೭-೩೮ ॥ ಅಥ - ಬಳಿಕ, ಸೌಮಿತ್ರಿಃ - ಲಕ್ಷ್ಮಣನು, ರಾಕ್ಷಸಸಿಂಹಸ್ಯ - ರಾಕ್ಷಸೋತ್ತಮನಾದ ಇಂದ್ರಜಿತುವಿನ, ಕೃಷ್ಣಾನ್ - ಕಪ್ಪುಬಣ್ಣದ, ಕನಕಭೂಷಣಾನ್ - ಚಿನ್ನದ ಒಡವೆಗಳುಳ್ಳ, ಚತುರಃ - ನಾಲ್ಕಾದ, ಹಯಾನ್ - ಕುದುರೆಗಳನ್ನು, ಚತುರ್ಭಿಃ - ನಾಲ್ಕಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು. ॥೩೯॥ ತತಃ - ಬಳಿಕ, ವರೇಣ - ಉತ್ತಮವಾದ, ಸಿತೇನ - ಬೆಳ್ಳಗಿರುವ, ನಿಶಿತೇನ - ತೀಕ್ಷ್ಣವಾದ, ಸಂಪೂ....ನ - ಸಂಪೂರ್ಣವಾಗಿ ಸೆಳೆದುಬಿಟ್ಟ, ಸುಪತ್ರೇಣ - ಒಳ್ಳೆಯ ರೆಕ್ಕೆಗಳುಳ್ಳ, ಸುವರ್ಚಸಾ -

---

ವರಿಸಿದಂತೆ ಆ ಯುದ್ಧದಲ್ಲಿ ಬಾಣಘಾತದಿಂದ ಕತ್ತಲು ಕವಿದು ಭಯಂಕರವಾಗಿ ತೋರುತ್ತಿದ್ದಿತು. ॥೩೨—೩೫॥ ಆ ಮಹಾ ಯುದ್ಧದಲ್ಲಿ ರಕ್ತದ ಹೊಳೆಗಳು ಸಾವಿರಾರುಗಳಾಗಿ ಹರಿದುವು. ರಣಹದ್ದುಗಳು ಭಯಂಕರವಾಗಿ ಚೀರಿಡುತ್ತಿದ್ದುವು. ಆಗ ಗಾಳಿಯು ಬೀಸದೆಯೂ, ಬೆಂಕಿಯು ಉರಿಯದೆಯೂ, ಬಹು ಭಯಂಕರವಾಯಿತು. ಮಹರ್ಷಿಗಳೆಲ್ಲರೂ ಲೋಕಕ್ಕೆ ಕಲ್ಯಾಣವಾಗಲೆಂದು ಹರಿಸಿ ನುಡಿದರು. ಗಂಧರ್ವರೂ, ಚಾರಣರೂ, ಆ ಅದ್ಭುತ ಯುದ್ಧವನ್ನು ನೋಡಬಯಸಿ ಗಗನದಲ್ಲಿ ಬಂದು ಸೇರಿದರು. ಆ ತರುವಾಯ ಸುಮಿತ್ರಾನಂದವರ್ಧನನಾದ ಲಕ್ಷ್ಮಣಸ್ವಾಮಿಯು ನಾಲ್ಕು ಬಾಣಗಳನ್ನು ಪ್ರಯೋಗಿಸಿ ರಾಕ್ಷಸರಾಜಕುಮಾರನಾದ ಆ ಮೇಘನಾದನ ರಥಕ್ಕೆ ಹೂಡಿದ್ದ ಕನಕಭೂಷಣಭೂಷಿತಗಳಾದ ಕೃಷ್ಣಾಶ್ವಗಳು ನಾಲ್ಕನ್ನೂ ನಾಲ್ಕು ಕೂರಂಬುಗಳನ್ನೆಸೆದು ಘಾತಿಸಿದನು. ಇಷ್ಟೆಯಲ್ಲದೆ ಬಹು ಶುಭ್ರವಾಗಿಯೂ, ಬಹು ಮೊನಚಾಗಿಯೂ, ಒಳ್ಳೆಯ ರೆಕ್ಕೆಗಳೊಡಗೂಡಿರುವ

ಕಲ್ಲೇನ ಸೂತಸ್ಯ ವಿಚರಿಷ್ಯತಃ । ಸತೇನ ಬಾಣಾಶನಿನಾ ತಲಶಬ್ದಾನುನಾದಿನಾ ॥೪೦॥ ಲಾಘವಾದ್ರಾಘವಃ ಶ್ರೀಮಾನ್ ಶಿರಃ ಕಾಯಾದಪಾಹರತ್ । ಸಯಂತರಿ ಮಹಾ ತೇಜಾ ಹತೇ ಮಂಡೋದರೀ ಸುತಃ ॥ ೪೧ ॥ ಸ್ವಯಂ ಸಾರಥ್ಯಮಕರೋತ್ಪುನಶ್ಚ ಧನುರಸ್ಪೃಶತ್ । ತದದ್ಭುತಮಭೂತ್ತತ್ರ ಸಾಮರ್ಥ್ಯಂ ಪಶ್ಯತಾಂ ಯುಧಿ ॥ ೪೩ ॥ ಹಯೇಷು ವ್ಯಗ್ರಹಸ್ತಂ ತಂ ವಿವ್ಯಾಧ ನಿಶಿತೈಃ ಶರೈಃ । ಧನುಷ್ಯಥ ಪುನರ್ವ್ಯಗ್ರೇ ಹಯೇಷು ಮುಮುಚೇ ಶರಾನ್ ॥ ೪೪ ॥ ಛಿದ್ರೇಷು ತೇಷು ಬಾಣೇಷು ಸೌಮಿತ್ರಿಃ

ಒಳ್ಳೆಯ ತೇಜಸ್ಸುಳ್ಳ, ಮಹೇಂ....ನ - ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ, ಭಲ್ಲೇನ - ಭಲ್ಲಾಯುಧದಿಂದ, ವಿಚರಿಷ್ಯತಃ - ಸಂಚರಿಸುತ್ತಿರುವ, ಸೂತಸ್ಯ - ಸಾರಥಿಯ, ಶಿರಃ - ಶಿರಸ್ಸನ್ನು, ಶ್ರೀಮಾನ್ - ಸಂಪದ್ಯುಕ್ತನಾದ, ರಾಘವಃ - ಆ ಲಕ್ಷ್ಮಣನು, ತಲ....ನಾ - ತಲಶಬ್ದವನ್ನು ಅನುಸರಿಸಿ ಶಬ್ದ ಮಾಡುತ್ತಿರುವ, ತೇನಬಾಣಾಶನಿನಾ - ಆ ವಜ್ರಾಯುಧಕ್ಕೆ ಸಮಾನವಾದ ಬಾಣದಿಂದ, ಕಾಯಾತ್ - ಶರೀರದಿಂದ, ಅಪಾಹರತ್ - ಅಪಹರಿಸಿದನು. ॥ ೪೦-೪೧ ॥ ಮಹಾತೇಜಾಃ - ಬಹಳ ತೇಜೋವಂತನಾದ, ಮಂಡೋದರೀಸುತಃ - ಮಂಡೋದರಿಯ ಮಗನಾದ ಆ ಇಂದ್ರಜಿತುವು, ಯಂತರಿ - ಸಾರಥಿಯು, ಹತೇ - ಹೊಡೆಯಲ್ಪಡಲು, ಸ್ವಯಂ - ತಾನೇ, ಸಾರಥ್ಯಂ - ಸಾರಥ್ಯವನ್ನು, ಅಕರೋತ್ - ಮಾಡಿದನು, ಪುನಶ್ಚ - ಮತ್ತೂ, ಧನುಃ - ಬಿಲ್ಲನ್ನು, ಅಸ್ಪೃಶತ್ - ತೆಗೆದುಕೊಂಡನು, ತತ್ರಯುಧಿ - ಆ ಕಾಳಗದಲ್ಲಿ, ಪಶ್ಯತಾಂ - ನೋಡುತ್ತಿರುವ ಜನರಿಗೆ, ತತ್ಸಾಮರ್ಥ್ಯಂ - ಆ ಸಾಮರ್ಥ್ಯವು, ಅದ್ಭುತಂ - ಆಶ್ಚರ್ಯಕರವಾದದ್ದು, ಅಭೂತ್ - ಆಯಿತು. ॥ ೪೨-೪೩ ॥ ಹಯೇಷು - ಕುದುರೆಗಳಲ್ಲಿ, ವ್ಯಗ್ರಹಸ್ತಂ - ತ್ವರೆಗೊಂಡ ಹಸ್ತಗಳುಳ್ಳ, ತಂ - ಆ ಇಂದ್ರಜಿತುವನ್ನು, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು, ಅಥ - ಬಳಿಕ, ಧನುಷಿ ಪುನಃ - ಧನುಸ್ಸಿನಲ್ಲಾದರೆ, ವ್ಯಗ್ರೇ - ಜಾಗರೂಕನಾಗಲೂ, ಹಯೇಷು - ಕುದುರೆಗಳಲ್ಲಿ, ಶರಾನ್ - ಬಾಣಗಳನ್ನು, ಮುಮುಚೇ - ಬಿಟ್ಟನು. ॥ ೪೪ ॥ ಶೀಘ್ರವಿಕ್ರಮಃ - ವೇಗದಿಂದ ಕೂಡಿದ ಪರಾಕ್ರಮವುಳ್ಳ, ಸೌಮಿತ್ರಿಃ - ಲಕ್ಷ್ಮಣನು, ತೇಷುಬಾಣೇಷು - ಆ ಬಾಣಪ್ರಯೋಗಗಳು, ಛಿದ್ರೇಷು -

ವಾಗಿಯೂ, ಮಹೇಂದ್ರನ ವಜ್ರಾಯುಧಕ್ಕೆ ಸಮಾನವಾಗಿಯೂ ಇರುವ ಭಲ್ಲಾಯುಧವನ್ನು ಪ್ರಯೋಗಿಸಿ ಆ ರಾಕ್ಷಸನ ರಥವನ್ನು ನಡೆಸುತ್ತಿದ್ದ ಸಾರಥಿಯನ್ನು ಹೊಡೆದು, ತಲಶಬ್ದವನ್ನು ಹೋಲುವ ಬಾಣವೊಂದರಿಂದ ಅವನ ತಲೆಯನ್ನು ಬಹು ಕೌಶಲದಿಂದ ಕತ್ತರಿಸಿ ಕೆಡವಿದನು. ॥ ೩೬–೪೧ ॥ ಮಹಾ ತೇಜಸ್ವಿಯಾದ ಆ ಮಂಡೋದರಿಯ ಮಗನು ತನ್ನ ರಥಸಾರಥಿಯು ಲಕ್ಷ್ಮಣನ ಬಾಣಘಾತದಿಂದ ಮಡಿದು ಬೀಳಲು ತಾನೇ ಸಾರಥ್ಯವನ್ನು ಮಾಡತೊಡಗಿದನಲ್ಲದೆ ಧನುಸ್ಸನ್ನೂ ಹಿಡಿದು ಬಾಣಪ್ರಯೋಗ ಮಾಡಲೂ ಉಪಕ್ರಮಿಸಿದನು. ಈ ರೀತಿ ಅದ್ಭುತ ಪರಾಕ್ರಮವನ್ನು ಮೆರೆದ ಆ ಇಂದ್ರಜಿತುವನ್ನು ನೋಡಿ ಎಲ್ಲರೂ ಬೆರಗಾಗಿ ಹೋದರು. ಆಗ ಲಕ್ಷ್ಮಣನಾದರೋ ಆ ರಾಕ್ಷಸನು ಕುದುರೆಗಳನ್ನು ತುರುಬುವುದರಲ್ಲಿರಲು ಅವನ ಮೇಲೆಯೇ ಬಾಣಪ್ರಯೋಗ ಮಾಡುತ್ತಲೂ, ಅವನು ಧನುಸ್ಸನ್ನು ಹಿಡಿದು ಬಾಣಗಳನ್ನು ಬಿಡುವುದರಲ್ಲಿರಲು ಅವನ ರಥಾಶ್ವಗಳ ಮೇಲೆ ಬಾಣಗಳನ್ನು ಪ್ರಯೋಗಿಸಿ ಘಾತಿಸುತ್ತಲೂ ಬಹಳವಾಗಿ ಬಾಧೆಗೊಳಿಸಿದನು. ಇಂದ್ರಜಿತುವು ಆ ಬಾಣಗಳನ್ನು ಕತ್ತರಿಸುತ್ತಿರಲು ಲಕ್ಷ್ಮಣನು ತಾನೇತಾನಾಗಿ ರಣರಂಗದಲ್ಲಿ ಸಂಚರಿಸು

ಶೀಘ್ರವಿಕ್ರಮಃ । ಅರ್ದಯಾಮಾಸ ಬಾಣೌಘೈ ರ್ವಿಚರಂತಮಭೀತವತ್ ॥ ೪೫ ॥
ನಿಹತಂ ಸಾರಥಿಂ ದೃಷ್ಟ್ವಾ ಸಮರೇ ರಾವಣಾತ್ಮಜಃ । ಪ್ರಜಹೌ ಸಮರೋದ್ಧರ್ಷಂ
ವಿಷಣ್ಣಸ್ಸಬಭೂವಹ ॥ ೪೬ ॥ ವಿಷಣ್ಣವದನಂ ದೃಷ್ಟ್ವಾ ರಾಕ್ಷಸಂ ಹರಿಯೂಥಪಾಃ ।
ತತಃ ಪರಮಸಂಹೃಷ್ಟಾ ಲಕ್ಷ್ಮಣಂ ಚಾಭ್ಯಪೂಜಯನ್ ॥ ೪೭ ॥ ತತಃ ಪ್ರಮಾಥೀ
ಶರಭೋ ರಭಸೋ ಗಂಧಮಾದನಃ । ಅಮೃಷ್ಯಮಾಣಾ ಶ್ಚತ್ವಾರ ಶ್ಚಕ್ರುರ್ವೇಗಂ
ಹರೀಶ್ವರಾಃ ॥೪೮॥ ತೇ ಚಾಸ್ಯ ಹಯಮುಖ್ಯೇಷು ತೂರ್ಣಮುತ್ಪ್ಲುತ್ಯ ವಾನರಾಃ ।
ಚತುರ್ಷು ಸ ಮಹಾವೀರ್ಯಾ ನಿಪೇತುರ್ಭೀಮವಿಕ್ರಮಾಃ ॥೪೯॥ ತೇಷಾಮಧಿಷ್ಠಿ
ತಾನಾಂ ತೈರ್ವಾನರೈಃ ಪರ್ವತೋಪಮೈಃ । ಮುಖೇಭ್ಯೋ ರುಧಿರಂ ರಕ್ತಂ

ಸಾವಕಾಶಗಳಾಗಲಾಗಿ, ಬಾಣೌಘೈಃ - ಸರಳುಗಳ ತಂಡಗಳಿಂದ, ಅಭೀತವತ್ - ನಿರ್ಭಯವಾಗಿ, ವಿಚರಂತಂ - ಸಂಚರಿಸುತ್ತಿರುವ ಆ ಇಂದ್ರಜಿತುವನ್ನು, ಅರ್ದಯಾಮಾಸ - ಹೊಡೆದನು. ॥ ೪೫ ॥ ಸಮರೇ - ಕಾಳೆಗದಲ್ಲಿ, ರಾವಣಾತ್ಮಜಃ - ರಾವಣನ ಮಗನಾದ, ಸಃ - ಆ ಇಂದ್ರಜಿತುವು, ನಿಹತಂ - ಹೊಡೆಯಲ್ಪಟ್ಟ, ಸಾರಥಿಂ - ಸಾರಥಿಯನ್ನು, ದೃಷ್ಟ್ವಾ - ಕಂಡು, ವಿಷಣ್ಣಃ - ವಿಷಾದಯುಕ್ತನಾಗಿ, ಸಮರೋದ್ಧರ್ಷಂ-ರಣೋತ್ಸಾಹವನ್ನು, ಪ್ರಜಹೌ-ಬಿಟ್ಟನು. ॥ ೪೬ ॥ ಹರಿಯೂಥಪಾಃ-ಕಪಿಯೂಥಪತಿಗಳು, ವಿಷಣ್ಣವದನಂ-ದೀನವಾಗಿರುವ ಮುಖವುಳ್ಳ, ರಾಕ್ಷಸಂ ರಕ್ಕಸನನ್ನು, ದೃಷ್ಟ್ವಾ-ಕಂಡು, ತತಃ - ಬಳಿಕ, ಪರ....ಷ್ಟಾಃ - ಬಹಳ ಸಂತೋಷಗೊಂಡವರಾಗಿ, ಲಕ್ಷ್ಮಣಂ - ಲಕ್ಷ್ಮಣನನ್ನು, ಅಭ್ಯಪೂಜಯನ್ ಶ್ಲಾಘಿಸಿದರು. ॥ ೪೭ ॥ ತತಃ - ಬಳಿಕ, ಪ್ರಮಾಥೀ - ಪ್ರಮಾಥೀ ಎಂಬವನು, ಶರಭಃ - ಶರಭನು, ರಭಸಃ - ರಭಸನು, ಗಂಧಮಾದನಃ - ಗಂಧಮಾದನನು ಎಂಬ, ಚತ್ವಾರಃ - ನಾಲ್ವರಾದ, ಹರೀಶ್ವರಾಃ - ಕಪಿನಾಯಕರು, ಅಮೃಷ್ಯಮಾಣಾಃ - ಸಹನೆಯಿಲ್ಲದವರಾಗಿ, ವೇಗಂ - ವೇಗವನ್ನು, ಚಕ್ರುಃ - ಮಾಡಿದರು, ಸುಮಹಾವೀರ್ಯಾಃ - ಬಹಳ ಸಾಮರ್ಥ್ಯವಂತರಾದ, ಭೀಮವಿಕ್ರಮಾಃ - ಭಯಂಕರವಾದ ಪರಾಕ್ರಮವುಳ್ಳ, ತೇ ವಾನರಾಃ - ಆ ನಾಲ್ವರು ಕಪಿಗಳು, ತೂರ್ಣಂ - ಜಾಗ್ರತೆಯಾಗಿ, ಚತುರ್ಷು - ನಾಲ್ಕಾದ, ಅಸ್ಯ - ಈ ಮೇಘನಾದ, ಹಯಮುಖ್ಯೇಷು - ಉತ್ತಮವಾದ ಕುದುರೆಗಳಲ್ಲಿ, ಉತ್ಪ್ಲುತ್ಯ - ಹಾರಿ, ನಿಪೇತುಃ - ಬಿದ್ದರು. ॥೪೮-೪೯॥ ಪರ್ವತೋಪಮೈಃ - ಬೆಟ್ಟಗಳಿಗೆ ಸಮಾನರಾದ, ತೈರ್ವಾನರೈಃ - ಆ ಕಪಿಗಳಿಂದ, ಅಧಿಷ್ಠಿತಾನಾಂ - ಕೊಡಲ್ಪಟ್ಟ, ತೇಷಾಂ ಹಯಾನಾಂ - ಆ ಕುದುರೆಗಳು, ಮುಖೇಭ್ಯಃ - ಬಾಯಿಗಳ ದೆಸೆಯಿಂದ, ರಕ್ತಂ - ಕೆಂಪಾದ,

---

ತ್ತಿರುವ ಅವನನ್ನು ನಿರ್ಭೀಕನಾಗಿ ಕೂರಂಬುಗಳಿಂದ ಘಾತಿಸುತ್ತಿದ್ದನು. ॥ ೪೨–೪೫ ॥ ಆ ತರುವಾಯ ಇಂದ್ರಜಿತುವು ತನ್ನ ಸಾರಥಿಯು ಮಡಿಯಲಾಗಿ ರಣಗರ್ವವನ್ನು ತೊರೆದು ವಿಷಣ್ಣವದನನಾಗಿ ನಿಂತನು. ಈ ರೀತಿ ಆ ರಾಕ್ಷಸನು ಮುಖಕಾಂತಿಗುಂದಿರಲು ಅವನನ್ನು ನೋಡಿ ವಾನರರೆಲ್ಲರೂ ಆಮಂದಾನಂದಭರಿತರಾಗಿ ಲಕ್ಷ್ಮಣನನ್ನು ಸತ್ಕರಿಸಿದರು. ಆ ತರುವಾಯ ಕಪಿಯೂಥಪತಿಗಳಾದ ಪ್ರಮಾಥೀ, ಶರಭ, ರಭಸ, ಗಂಧಮಾದನ ಎಂಬ ನಾಲ್ವರೂ ಮಹಾ ರೋಷಾವಿಷ್ಟರಾಗಿ ಮಹಾ ವೇಗವನ್ನವಲಂಬಿಸಿದರು. ಭಯಂಕರ ಪರಾಕ್ರಮಿಗಳಾದ ಅವರು ನಾಲ್ವರೂ ರಭಸವಾಗಿ ಹಾರಿ ಆ ರಾಕ್ಷಸನ ರಥಾಶ್ವಗಳ ಮೇಲೆ ಬಿದ್ದರು. ಪರ್ವತೋಪಮರಾದ ಆ ನಾಲ್ವರೂ ವೇಗದಿಂದ ಹಾರಿ ಬೀಳಲು ಆ ನಾಲ್ಕು ಕುದುರೆಗಳೂ ಅವರ ಭಾರವನ್ನು ಸಹಿಸಲಾರದೆ ಬಾಯಿ ಮೂಗುಗಳಲ್ಲಿ ರಕ್ತವನ್ನು ಕಾರಿ ಆ ವಾನರರಿಂದ

ಹಯಾನಾಂ ಸಮವರ್ತತ ॥೫೦॥ ತೇ ಹಯಾ ಮಥಿತಾ ಭಗ್ನಾ ವ್ಯಸವೋ ಧರಣೀಂ ಗತಾಃ । ತೇ ನಿಹತ್ಯ ಹಯಾಂಸ್ತಸ್ಯ ಪ್ರಮಥ್ಯ ಚ ಮಹಾರಥಂ ॥ ೫೧ ॥ ಪುನರುತ್ಪತ್ಯ ವೇಗೇನ ತಸ್ಥುರ್ಲಕ್ಷ್ಮಣಪಾರ್ಶ್ವತಃ ॥ ೫೧ ॥ ಸ ಹತಾಶ್ವಾದವಪ್ಲುತ್ಯ ರಥಾನ್ಮಥಿತ ಸಾರಥೇಃ । ಶರವರ್ಷೇಣ ಸೌಮಿತ್ರಿಮಭ್ಯಧಾವತ ರಾವಣಿಃ ॥ ೫೨ ॥

ತತೋ ಮಹೇಂದ್ರಪ್ರತಿಮಸ್ಸಲಕ್ಷ್ಮಣಃ
ಪದಾತಿನಂ ತಂ ನಿಶಿತೈಃ ಶರೋತ್ತಮೈಃ ।
ಸೃಜಂತಮಾಜೌ ನಿಶಿತಾನ್ ಶರೋತ್ತಮಾನ್
ಭೃಶಂ ತದಾ ಬಾಣಗಣೈರ್ನ್ಯವಾರಯತ್ ॥ ೫೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ನವತಿತಮಸ್ಸರ್ಗಃ.

ರುಧಿರಂ - ರಕ್ತವು, ಸಮವರ್ತತ - ಪ್ರವಹಿಸಿತು. ॥ ೫೦ ॥ ತೇಹಯಾಃ - ಆ ಕುದುರೆಗಳು, ವ್ಯಥಿತಾಃ - ಹೊಡೆಯಲ್ಪಟ್ಟವುಗಳಾಗಿ, ಭಗ್ನಾಃ - ಮುರಿಯಲ್ಪಟ್ಟವುಗಳಾಗಿ, ವ್ಯಸವಃ - ಪ್ರಾಣರಹಿತ ಗಳಾಗಿ, ಧರಣೀಂ - ನೆಲವನ್ನು, ಗತಾಃ - ಹೊಂದಿದವು, ತೇ - ಆ ನಾಲ್ಕು ಮಂದಿ ಕಪಿಗಳು, ತಸ್ಯ - ಆ ಇಂದ್ರಜಿತುವಿನ, ಹಯಾನ್ - ಕುದುರೆಗಳನ್ನು, ನಿಹತ್ಯ - ಹೊಡೆದು, ಮಹಾರಥಂಚ - ದೊಡ್ಡ ರಥವನ್ನು, ಪ್ರಮಥ್ಯ - ಮುರಿದು, ಪುನಃ - ಮತ್ತು, ಉತ್ಪತ್ಯ - ಹಾರಿ, ವೇಗೇನ - ಜವದಿಂದ, ಲಕ್ಷ್ಮ....ತಃ - ಲಕ್ಷ್ಮಣನ ಉಭಯಪಾರ್ಶ್ವಗಳಲ್ಲಿ, ತಸ್ಥುಃ - ನಿಂತರು. ॥ ೫೧ ॥ ಸರಾವಣಿಃ - ಆ ಇಂದ್ರಜಿತುವು, ಹತಾಶ್ವಾತ್ - ಹೊಡೆಯಲ್ಪಟ್ಟ ಕುದುರೆಗಳುಳ್ಳ, ಮಥಿತಸಾರಥೇಃ - ಸಂಹರಿಸಲ್ಪಟ್ಟ ಸಾರಥಿಯುಳ್ಳ, ರಥಾತ್ - ರಥದಿಂದ, ಅವಪ್ಲುತ್ಯ - ಹಾರಿ ಬಿದ್ದು, ಸೌಮಿತ್ರಿಂ - ಲಕ್ಷ್ಮಣನನ್ನು, ಶರವರ್ಷೇಣ - ಬಾಣವರ್ಷಗಳಿಂದ, ಅಭ್ಯಧಾವತ - ಎದುರಾಗಿ ಓಡಿಬಂದನು. ॥ ೫೨ ॥ ತತಃ - ಬಳಿಕ, ಮಹೇಂದ್ರಪ್ರತಿಮಃ - ದೇವೇಂದ್ರನಿಗೆ ಸಮಾನನಾದ, ಸಲಕ್ಷ್ಮಣಃ - ಆ ಲಕ್ಷ್ಮಣನು, ಪದಾತಿನಂ - ಪಾದಚಾರಿಯಾದ, ತಂ - ಆ ಇಂದ್ರಜಿತುವನ್ನು, ಆಜೌ - ಕಾಳಗದಲ್ಲಿ, ನಿಶಿತೈಃ - ತೀಕ್ಷ್ಣಗಳಾದ, ಶರೋತ್ತಮೈಃ - ಉತ್ತಮವಾದ ಬಾಣಗಳಿಂದ, ನ್ಯವಾರಯತ್ - ತಡೆದನು, ನಿಶಿತಾನ್ - ತೀಕ್ಷ್ಣ ಗಳಾದ, ಶರೋತ್ತಮಾನ್ - ಉತ್ತಮ ಬಾಣಗಳನ್ನು, ಸೃಜಂತಂ - ಬಿಡುತ್ತಿರುವವನನ್ನು, ಭೃಶಂ - ಬಹಳವಾಗಿ, ತದಾ - ತತ್ಕ್ಷಣದಲ್ಲಿ, ಬಾಣಗಣೈಃ - ಬಾಣಗಳ ತಂಡಗಳಿಂದ, ನ್ಯವಾರಯತ್ - ತಡೆದನು. ॥ ೫೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ನವತಿತಮಸ್ಸರ್ಗಃ.

ಮರ್ದಿತಗಳಾಗಿ ಪ್ರಾಣಗಳನ್ನು ತೊರೆದು ನೆಲಕ್ಕುರುಳಿದುವು. ಆ ನಾಲ್ವರು ಕಪಿವೀರ ರಾದರೋ ಈ ರೀತಿ ಕುದುರೆಗಳನ್ನು ಕೊಂದು ರಥವನ್ನು ಮುರಿದಿಕ್ಕಿ ಪುನಃ ಲಕ್ಷ್ಮಣನ ಬಳಿಗೈತಂದರು. ಇಂದ್ರಜಿತುವಾದರೋ ತನ್ನ ಕುದುರೆಗಳೂ, ಸಾರಥಿಯೂ, ರಥವೂ ಮುರಿದು ಬೀಳಲು ಕೆಳಕ್ಕೆ ಧುಮ್ಮಿಕ್ಕಿ ನಿಂತು ಬಾಣವರ್ಷಗಳಿಂದ ಲಕ್ಷ್ಮಣನನ್ನಟ್ಟಿ ಬಂದನು. ಆಗ ಮಹೇಂದ್ರಸಮಾನ ಪರಾಕ್ರಮಿಯಾದ ಲಕ್ಷ್ಮಣಸ್ವಾಮಿಯು ಪದಾತಿಯಾಗಿ ಸರಳು ಮಳೆಗರೆಯುತ್ತ ತನ್ನ ಮೇಲ್ವಾಯ್ದು ಬರುತ್ತಿರುವ ಆ ಇಂದ್ರಜಿತುವನ್ನು ಉತ್ತಮ ಶರ ಜಾಲಗಳಿಂದ ತಡೆಯುತ್ತಿದ್ದನು. ॥ ೪೬-೫೩ ॥

ಇಂತಿದು ಇಂದ್ರಜಿದ್ರಥಭಂಗವೆಂಬ ತೊಂಬತ್ತನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಏಕನವತಿತಮಸ್ಸರ್ಗಃ

ಸಹತಾಶ್ವೋ ಮಹಾತೇಜಾ ಭೂಮೌ ತಿಷ್ಠನ್ನಿಶಾಚರಃ । ಇಂದ್ರಜಿತ್ಸಮರೇ ಕ್ರುದ್ಧಸ್ಸಂಪ್ರಜಜ್ವಾಲ ತೇಜಸಾ ॥ ೧ ॥ ತೌ ಧನ್ವಿನೌ ಜಿಘಾಂಸಂತಾವನ್ಯೋನ್ಯ ಮಿಷುಭಿರ್ಭೃಶಂ । ವಿಜಯೇನಾಭಿನಿಷ್ಕ್ರಾಂತೌ ವನೇ ಗಜವೃಷಾವಿವ ॥ ೨ ॥ ನಿಬರ್ಹಯಂತಶ್ಚಾನ್ಯೋನ್ಯಂ ತೇ ರಾಕ್ಷಸವನೌಕಸಃ । ಭರ್ತಾರಂ ನಜಹುರ್ಯುದ್ಧೇ ಸಂಪತಂತಸ್ತತಸ್ತತಃ ॥ ೩ ॥ ತತಸ್ತಾನ್ ರಾಕ್ಷಸಾನ್ ಸರ್ವಾನ್ ಹರ್ಷಯನ್ ರಾವಣಾತ್ಮಜಃ । ಸ್ತುವಾನೋ ಹರ್ಷಮಾಣಶ್ಚ ಇದಂ ವಚನಮಬ್ರವೀತ್ ॥ ೪ ॥ " ತಮಸಾ ಬಹುಳೇನೇಮಾಸ್ಸಂಸಕ್ತಾಸ್ಸರ್ವತೋ ದಿಶಃ । ನೇಹ ವಿಜ್ಞಾಯತೇ ಸ್ವೋವಾ

ಹತಾಶ್ವಃ - ಹೊಡೆಯಲ್ಪಟ್ಟ ಕುದುರೆಗಳುಳ್ಳ, ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ, ನಿಶಾಚರಃ - ರಕ್ಕಸನಾದ, ಸಇಂದ್ರಜಿತ್ - ಆ ಇಂದ್ರಜಿತುವು, ಭೂಮೌ - ನೆಲದಲ್ಲಿ, ತಿಷ್ಠನ್ - ನಿಂತು, ಪರಮಕ್ರುದ್ಧಃ - ಬಹಳ ಕೋಪಿಷ್ಠನಾಗಿ, ತೇಜಸಾ - ತೇಜಸ್ಸಿನಿಂದ, ಸಂಪ್ರಜಜ್ವಾಲ - ಉರಿಯುತ್ತಿದ್ದನು. ॥೧॥ ಧನ್ವಿನೌ - ಧನುರ್ಧಾರಿಗಳಾದ, ಅನ್ಯೋನ್ಯಂ - ಒಬ್ಬರನ್ನೊಬ್ಬರನ್ನು, ಇಷುಭಿಃ - ಬಾಣಗಳಿಂದ, ಭೃಶಂ - ಬಹಳವಾಗಿ, ಜಿಘಾಂಸಂತೌ - ಹೊಡೆಯಲಿಚ್ಛೆಯುಳ್ಳ, ತೌ - ಆ ಇಂದ್ರಜಿಲ್ಲಕ್ಷ್ಮಣರು, ವನೇ - ಕಾಡಿನಲ್ಲಿ, ಗಜವೃಷಾವಿವ - ಗಜವೃಷಭಗಳಂತೆ, ವಿಜಯೇನ - ವಿಜಯಾರ್ಥವಾಗಿ, ಅಭಿನಿಷ್ಕ್ರಾಂತೌ - ಹೊರಗೆ ಹೊರಟರು. ॥ ೨ ॥ ಅನ್ಯೋನ್ಯಂ - ಪರಸ್ಪರವಾಗಿ, ನಿಬರ್ಹಯಂತಃ - ಸಂಹಾರ ಮಾಡುತ್ತಿರುವ, ತೇರಾಕ್ಷಸವನೌಕಸಃ - ಆ ರಾಕ್ಷಸರೂ, ವಾನರರೂ, ತತಸ್ತತಃ - ಅಲ್ಲಲ್ಲಿ, ಸಂಪಂತತಃ - ಬರುತ್ತಿರುವವರಾಗಿ, ಯುದ್ಧೇ - ಕಾಳೆಗದಲ್ಲಿ, ಭರ್ತಾರಂ - ಸ್ವಾಮಿಯನ್ನು, ನಜಹುಃ - ಬಿಡಲಿಲ್ಲವು. ॥ ೩ ॥ ತತಃ - ಬಳಿಕ, ರಾವಣಾತ್ಮಜಃ - ರಾವಣನ ಮಗನಾದ ಇಂದ್ರಜಿತುವು, ಸರ್ವಾನ್ - ಸಮಸ್ತರಾದ, ತಾನ್‌ರಾಕ್ಷಸಾನ್ - ಆ ರಕ್ಕಸರನ್ನು, ಹರ್ಷಯನ್ - ಸಂತೋಷಗೊಳಿಸುವವನಾಗಿ, ಸ್ತುವಾನಃ - ಸ್ತೋತ್ರ ಮಾಡುತ್ತ, ಹರ್ಷಮಾಣಶ್ಚ - ನಗುತ್ತ, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೪ ॥ ಹೇ ರಾಕ್ಷಸೋತ್ತಮಾಃ - ಎಲೈ ರಾಕ್ಷಸೋತ್ತಮರೇ. ಸರ್ವತಃ - ಎಲ್ಲೆಡೆಗಳಲ್ಲಿಯೂ, ಇಮಾಃದಿಶಃ - ಈ ದಿಕ್ಕುಗಳು, ಬಹು

ಆ ತರುವಾಯ ಮಹಾ ತೇಜಸ್ಸಂಪನ್ನನಾದ ಇಂದ್ರಜಿತುವು, ತನ್ನ ರಥಾಶ್ವಗಳು ಮಡಿದುರುಳಲು ಭೂಮಿಯಲ್ಲಿ ನಿಂತು ಬಹಳವಾಗಿ ಕನಲಿ ಸ್ವತೇಜಸ್ಸಿನಿಂದಲೇ ಬಹಳವಾಗಿ ಪ್ರಜ್ವಲಿಸಿದನು. ಆ ಲಕ್ಷ್ಮಣೇಂದ್ರಜಿತುಗಳಿಬ್ಬರೂ ಒಬ್ಬರನ್ನೊಬ್ಬರು ಬಾಣಗಳಿಂದ ಬಹಳವಾಗಿ ಘಾತಿಸುತ್ತ ಕಾಡಿನಲ್ಲಿ ಸೆಣಸಿ ಸೇರಿದ ಗಜ ವೃಷಭಗಳಂತೆ ಪರಸ್ಪರವಾಗಿ ಜಯಿಸಬಯಸಿ ಭಯಂಕರ ಯುದ್ಧಮಾಡತೊಡಗಿದರು. ರಾಕ್ಷಸವಾನರವೀರರೂ ಸಹ ಪರಸ್ಪರ ಸಂಕುಲ ಯುದ್ಧದಲ್ಲಿ ತೊಡಗಿ ತಂತಮ್ಮ ಒಡೆಯರನ್ನು ತೊರೆಯುದೆ ಅಪರಿಮಿತ ಪರಾಕ್ರಮವನ್ನು ಮೆರೆಯುತ್ತಿದ್ದರು. ಆ ಸಮಯದಲ್ಲಿ ರಾವಣಾತ್ಮಜನು ರಾಕ್ಷಸರೆಲ್ಲರನ್ನೂ ಪ್ರೋತ್ಸಾಹಿಸಿ ಸಂತೋಷಗೊಳಿಸುತ್ತ, " ಅಯ್ಯಾ ರಾಕ್ಷಸರೇ! ಈಗ ದಿಕ್ಕು

ಪರೋವಾ ರಾಕ್ಷಸೋತ್ತಮಾಃ! ॥೫॥ ಧೃಷ್ಟಂ ಭವಂತೋ ಯುಧ್ಯಂತು ಹರೀಣಾಂ ಮೋಹನಾಯ ವೈ । ಅಹಂತು ರಥಮಾಸ್ಥಾಯ ಆಗಮಿಷ್ಯಾಮಿ ಸಂಯುಗಂ ॥೬॥ ತಥಾ ಭವಂತಃ ಕುರ್ವಂತು ಯಥೇಮೇ ಕಾನನೌಕಸಃ । ನಯುಧ್ಯೇಯು ದುರಾತ್ಮಾನಃ ಪ್ರವಿಷ್ಟೇ ನಗರಂ ಮಯಿ" ॥೭॥ ಇತ್ಯುಕ್ತ್ವಾ ರಾವಣಸುತೋ ವಂಚಯಿತ್ವಾ ವನೌಕಸಃ । ಪ್ರವಿವೇಶ ಪುರೀಂ ಲಂಕಾಂ ರಥಹೇತೋರಮಿತ್ರಹಾ ॥೮॥ ಸರಥಂ ಭೂಷಯಿತ್ವಾತು ರುಚಿರಂ ಹೇಮಭೂಷಿತಂ । ಪ್ರಾಸಾಸಿಶತಸಂಪೂರ್ಣಂ ಯುಕ್ತಂ ಪರಮವಾಜಿಭಿಃ ॥೯॥ ಅಧಿಷ್ಠಿತಂ ಹಯಜ್ಞೇನ ಸೂತೇನಾಪ್ತೋಪದೇಶಿನಾ । ಆರು

ಳೇನ - ಬಹಳವಾದ, ತಮಸಾ - ಕತ್ತಲಿನಿಂದ, ಸಂಸಕ್ತಾಃ - ಸಂಬಂಧಿಸಲ್ಪಟ್ಟ, ಇಹ - ಇಲ್ಲಿ, ಸ್ವೋವಾ - ತನ್ನ ಜನವೇ ಆಗಲಿ, ಪರೋವಾ - ಶತ್ರು ಜನವೇ ಆಗಲಿ, ನವಿಜ್ಞಾಯತೇ - ತಿಳಿಯಲ್ಪಡುವುದಿಲ್ಲವು. ॥೫॥ ಭವಂತಃ - ನೀವುಗಳು, ಹರೀಣಾಂ - ಕಪಿಗಳಿಗೆ, ಮೋಹನಾಯವೈ - ಮೋಹನಾರ್ಥವಾಗಿ, ಧೃಷ್ಟಂ - ಧೈರ್ಯವಾಗಿ, ಯುಧ್ಯಂತು - ಯುದ್ಧ ಮಾಡಿರಿ, ಅಹಂತು - ನಾನಾದರೆ, ರಥಂ - ರಥದಲ್ಲ, ಆಸ್ಥಾಯ - ಕುಳಿತು, ಸಂಯುಗಂ - ಕಾಳಿಗವನ್ನು ಕುರಿತು, ಆಗಮಿಷ್ಯಾಮಿ - ಬರುವೆನು. ॥೬॥ ಮಯಿ - ನಾನು, ನಗರಂ - ಪಟ್ಟಣವನ್ನು, ಪ್ರವಿಷ್ಟೇ - ಹೊಗಲು, ದುರಾತ್ಮಾನಃ-ದುಷ್ಟರಾದ, ಇಮೇಕಾನನೌಕಸಃ - ಈ ಕಪಿಗಳು, ಯಥಾ-ಹೇಗೆ, ನಯುಧ್ಯೇಯುಃ - ಯುದ್ಧ ಮಾಡದಿರುವರೋ, ತಥಾ - ಹಾಗೆಯೇ, ಭವಂತಃ - ನೀವುಗಳು, ಕುರ್ವಂತು - ಮಾಡಿರಿ. ॥೭॥ ಇತಿ - ಈ ಪರಿಯಾಗಿ, ಉಕ್ತ್ವಾ - ಹೇಳಿ, ರಾವಣಸುತಃ - ಇಂದ್ರಜಿತ್ತು, ವನೌಕಸಃ - ಕಪಿಗಳನ್ನು, ವಂಚಯಿತ್ವಾ - ಮೋಸಗೊಳಿಸಿ, ಅಮಿತ್ರಹಾ - ಶತ್ರುಸಂಹಾರ ಮಾಡುವವನಾಗಿ, ರಥಹೇತೋಃ - ರಥ ನಿಮಿತ್ತವಾಗಿ, ಲಂಕಾಪುರೀಂ - ಲಂಕಾಪಟ್ಟಣವನ್ನು, ಪ್ರವಿವೇಶ - ಪ್ರವೇಶ ಮಾಡಿದನು. ॥೮॥ ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ, ಸಮಿತಿಂಜಯಃ - ಅನೇಕ ಕಾಳಗಗಳಲ್ಲಿ ಜಯಶೀಲನಾದ, ಸರಾವಣಿಃ - ಆ ಮೇಘನಾದನು, ಪ್ರಾಸಾ....ರ್ಣಂ - ನೂರಾರು ಈಟಿಗೋಲುಗಳಿಂದಲೂ, ಕತ್ತಿಗಳಿಂದಲೂ ತುಂಬಿದ, ಪರಮವಾಜಿಭಿಃ - ಉತ್ತಮಾಶ್ವಗಳಿಂದ, ಯುಕ್ತಂ - ಕೂಡಿರುವ, ಹಯಜ್ಞೇನ - ಅಶ್ವ ಹೃದಯವನ್ನು ತಿಳಿದಿರುವ, ಆಪ್ತೋ....ನಾ - ಆಪ್ತನಾಗಿಯೂ, ಗುರೂಪದೇಶವುಳ್ಳವನಾಗಿಯೂ ಇರುವ, ಸೂತೇನ - ಸಾರಥಿಯಿಂದ, ಅಧಿ

ವಿದಿಕ್ಕುಗಳೆಲ್ಲವೂ ಕತ್ತಲಿನಿಂದ ಕವಿದಿದೆ. ಈ ಸಮಯದಲ್ಲಿ ತನ್ನವರಾರು, ಇತರರಾರು ಎಂಬುದೇ ಯಾರಿಗೂ ತಿಳಿಯುವಂತಿಲ್ಲ. ॥೧-೫॥ ಈಗ ನೀವೆಲ್ಲರೂ ಈ ವಾನರರನ್ನು ಭ್ರಾಂತಿಗೊಳಿಸುವುದಕ್ಕಾಗಿ ಸ್ಥಿರವಾಗಿ ನಿಂತು ಭಯಂಕರ ಯುದ್ಧವನ್ನು ಮಾಡುತ್ತಿರಿ. ನಾನು ಲಂಕೆಗೆ ಹೋಗಿ ಬೇರೊಂದು ರಥವನ್ನೇರಿ ಜಾಗ್ರತೆಯಾಗಿ ಬಂದುಬಿಡುವೆನು. ನಾನು ಪಟ್ಟಣಕ್ಕೆ ಹೋಗುವ ವಿಚಾರವು ಈ ವಾನರರಿಗೆ ತಿಳಿಯಕೂಡದು. ಆ ರೀತಿ ನೀವೆಲ್ಲರೂ ಈ ವಾನರರನ್ನು ಯುದ್ಧದಲ್ಲಿ ತೊಡಗಿಸಬೇಕು. ದುರಾತ್ಮರಾದ ಈ ವಾನರರಿಗೆ ಈ ವಿಚಾರವು ತಿಳಿದರೆ ಪ್ರಮಾದವಾಗುವುದು" ಎಂದು ಹೇಳಿದನು. ರಾವಣಾತ್ಮಜನು ಹೀಗೆ ನುಡಿದು ರಥನಿಮಿತ್ತವಾಗಿ ಪಟ್ಟಣಕ್ಕೆ ಹೋದನು. ಶತ್ರುಮರ್ದನನಾದ ಆ ರಾಕ್ಷಸನು ಬಹು ಬೇಗನೆಯೇ ಹೇಮಭೂಷಿತವೂ, ಮನೋಹರವೂ, ಪ್ರಾಸಖಡ್ಗ ಬಾಣಗಳೇ ಮೊದಲಾದವುಗಳಿಂದ ಪೂರ್ಣವೂ, ಶ್ರೇಷ್ಠವಾದ ಜಾತ್ಯಶ್ವಯೋಜಿತವೂ, ಅಶ್ವಹೃದಯಜ್ಞನಾಗಿ, ಹಿರಿಯರಿಂದ

ರೋಹ ಮಹಾತೇಜಾ ರಾವಣಿಸ್ಸಮಿತಿಂಜಯಃ ॥ ೧೦ ॥ ಸರಾಕ್ಷಸಗಣೈರ್ಮುಖ್ಯೈ ರ್ವೃತೋ ಮಂದೋದರೀಸುತಃ । ನಿರ್ಯಯೌ ನಗರಾತ್ತೂರ್ಣಂ ಕೃತಾಂತಬಲ ಚೋದಿತಃ ॥ ೧೧ ॥ ಸೋಽಭಿನಿಷ್ಕ್ರಮ್ಯ ನಗರಾದಿಂದ್ರಜಿತ್ಪರವೀರಹಾ । ಅಭ್ಯಯಾ ಜ್ಜವನೈರಶ್ವೈರ್ಲಕ್ಷ್ಮಣಂ ಸವಿಭೀಷಣಂ ॥ ೧೨ ॥ ತತೋ ರಥಸ್ಥಮಾಲೋಕ್ಯ ಸೌಮಿತ್ರೀ ರಾವಣಾತ್ಮಜಂ । ವಾನರಾಶ್ಚ ಮಹಾವೀರ್ಯಾ ರಾಕ್ಷಸಶ್ಚ ವಿಭೀಷಣಃ । ವಿಸ್ಮಯಂ ಪರಮಂ ಜಗ್ಮುರ್ಲಾಘವಾತ್ತಸ್ಯ ಧೀಮತಃ ॥ ೧೩ ॥ ರಾವಣಶ್ಚಾಪಿ ಸಂಕ್ರುದ್ಧೋ ರಣೇ ವಾನರಯೂಥಪಾ । ಪಾತಯಾಮಾಸ ಬಾಣೌಘೈಃ ಶತಶೋಥ ಸಹಸ್ರಶಃ ॥ ೧೪ ॥ ಸಮಂಡಲೀಕೃತಧನೂ ರಾವಣಿಸ್ಸಮಿತಿಂಜಯಃ । ಹರೀನಭ್ಯ

ಷ್ಠಿತಂ - ಕುಳಿತುಕೊಳ್ಳಲ್ಪಟ್ಟ, ಹೇಮಭೂಷಿತಂ - ಬಂಗಾರದ ಕಲಶದಿಂದಲಂಕೃತವಾದ, ರುಚಿರಂ - ಮನೋಹರವಾದ, ರಥಂ - ತೇರನ್ನು, ಭೂಷಯಿತ್ವಾ - ಅಲಂಕರಿಸಿ, ಆರುರೋಹ - ಏರಿದನು. ॥ ೯-೧೧ ॥ ಮುಖ್ಯೈಃ - ಪ್ರಧಾನರಾದ, ರಾಕ್ಷಸಗಣೈಃ - ರಕ್ಕಸರ ತಂಡಗಳಿಂದ, ವೃತಃ - ಸುತ್ತುವರೆದ, ಮಂದೋದರೀಸುತಃ - ಮಂದೋದರೀ ಪುತ್ರನಾದ, ಸಃ - ಆ ಇಂದ್ರಜಿತುವು, ಕೃತಾಂ....ತಃ - ಯಮನ ಬಲದಿಂದ ಪ್ರೇರಿತನಾಗಿ, ತೂರ್ಣಂ - ಜಾಗ್ರತೆಯಾಗಿ, ನಗರಾತ್ - ಪಟ್ಟಣದಿಂದ, ನಿರ್ಯಯೌ - ಹೊರಟನು. ॥ ೧೧ ॥ ಪರವೀರಹಾ - ಶತ್ರುಸಂಹಾರಕನಾದ, ಸಇಂದ್ರಜಿತ್ - ಆ ಮೇಘನಾದನು, ನಗರಾತ್ - ಪಟ್ಟಣದಿಂದ, ಅಭಿನಿಷ್ಕ್ರಮ್ಯ - ಹೊರಟು, ಜವನೈಃ - ವೇಗವತ್ತುಗಳಾದ, ಅಶ್ವೈಃ - ಕುದುರೆಗಳಿಂದ, ಸವಿಭೀಷಣಂ - ವಿಭೀಷಣನೊಡಗೂಡಿದ, ಲಕ್ಷ್ಮಣಂ - ಲಕ್ಷ್ಮಣನನ್ನು, ಅಭ್ಯಯಾತ್ - ಎದುರಾಗಿ ಬಂದನು. ॥ ೧೨ ॥ ತತಃ - ಬಳಿಕ, ರಥಸ್ಥಂ - ರಥದಲ್ಲಿ ಕುಳಿತಿರುವ, ರಾವಣಾತ್ಮಜಂ - ರಾವಣನ ಮಗನನ್ನು, ಆಲೋಕ್ಯ - ಕಂಡು, ಸೌಮಿತ್ರಿಃ - ಸೌಮಿತ್ರಿಯು, ಮಹಾವೀರ್ಯಾಃ - ಮಹಾ ಸಾಮರ್ಥ್ಯವಂತರಾದ, ವಾನರಾಶ್ಚ - ಕಪಿಗಳೂ, ರಾಕ್ಷಸಃ - ರಕ್ಕಸನಾದ, ವಿಭೀಷಣಶ್ಚ - ವಿಭೀಷಣನು, ಧೀಮತಃ - ಬುದ್ಧಿಶಾಲಿಯಾದ, ತಸ್ಯ - ಆತನ, ಲಾಘವಾತ್ - ಚಮತ್ಕಾರದಿಂದ, ಪರಮಂ - ಬಹಳವಾದ, ವಿಸ್ಮಯಂ - ಆಶ್ಚರ್ಯವನ್ನು, ಜಗ್ಮುಃ - ಪಡೆದರು. ॥ ೧೩ ॥ ರಾವಣಿಶ್ಚಾಪಿ - ಮೇಘನಾದನೂ, ಸಂಕ್ರುದ್ಧಃ - ಕುಪಿತನಾಗಿ, ರಣೇ - ಕಾಳೆಗದಲ್ಲಿ, ಬಾಣೌಘೈಃ - ಸರಳುಗಳ ತಂಡಗಳಿಂದ, ಶತಶಃ - ನೂರಾರಾಗಿ, ಅಥ - ಬಳಿಕ, ಸಹಸ್ರಶಃ - ಸಾವಿರಾರಾಗಿರುವ, ವಾನರಯೂಥಪಾ - ಕಪಿಯೂಥಪತಿಗಳನ್ನು, ಪಾತಯಾಮಾಸ - ಕೆಡುಹಿದನು. ॥ ೧೪ ॥ ಮಂಡ....ನುಃ - ಮಂಡಲಾಕಾರವಾಗಿ ಮಾಡಲ್ಪಟ್ಟ ಕೋದಂಡವುಳ್ಳ,

---

ಉಪದೇಶ ಪಡೆದವನಾದ ಸಾರಥಿಯಿಂದಧಿಷ್ಠಿತವೂ ಆದ ರಥದಲ್ಲಿ ಕುಳಿತು ಹೊರಟನು. ಆಗಲಾತನು ಕೃತಾಂತ ಬಲಚೋದಿತನಾಗಿ ರಾಕ್ಷಸ ಮುಖ್ಯರೊಡಗೂಡಿ ಬಹು ಜಾಗ್ರತೆಯಾಗಿ ಪಟ್ಟಣದಿಂದ ಹೊರಹೊರಟನು. ಈ ರೀತಿ ಅವನು ಹಗೆಯರನ್ನೊಕ್ಕಲಿಕ್ಕುವವನಾಗಿ ಪಟ್ಟಣದಿಂದ ಹೊರಟು ವಿಭೀಷಣನೊಡಗೂಡಿದ ಲಕ್ಷ್ಮಣನಿದ್ದೆಡೆಗೆ ಬಂದನು. ॥ ೯-೧೨ ॥ ಸುಮಿತ್ರಾ ಪುತ್ರನಾದ ಲಕ್ಷ್ಮಣನೂ, ವಾನರವೀರರೂ, ವಿಭೀಷಣನೂ ರಾವಣಾತ್ಮಜನಾದ ಇಂದ್ರಜಿತುವು ರಥವೇರಿ ಬಂದುದನ್ನು ಕಂಡು ಆತನ ಸಾಮರ್ಥ್ಯಕ್ಕಾಗಿ ಬಹಳವಾಗಿ ಆಶ್ಚರ್ಯಪಟ್ಟರು. ಇಂದ್ರಜಿತುವಾದರೋ ಬಹಳವಾಗಿ ಮುನಿದು ಬಾಣತಂಡಗಳಿಂದ ಆ ರಣರಂಗದಲ್ಲಿದ್ದ ವಾನರರನ್ನು ಸಹಸ್ರಾರುಗಳಂತೆ ನೆಲಕ್ಕುರುಳಿಸುತ್ತ ಬಂದನು. ಸಮಿತಿಂ

ಹನತ್ ಕ್ರುದ್ಧಃ ಪರಂ ಲಾಘವಮಾಸ್ಥಿತಃ ॥೧೫॥ ತೇ ವಧ್ಯಮಾನಾ ಹರಯೋ ನಾರಾಚೈರ್ಭೀಮವಿಕ್ರಮಾಃ । ಸೌಮಿತ್ರಿಂ ಶರಣಂ ಪ್ರಾಪ್ತಾಃ ಪ್ರಜಾಪತಿಮಿವ ಪ್ರಜಾಃ ॥೧೬॥ ತತಸ್ಸಮರಕೋಪೇನ ಜ್ವಲಿತೋ ರಘುನಂದನಃ । ಚಿಚ್ಛೇದ ಕಾರ್ಮುಕಂ ತಸ್ಯ ದರ್ಶಯನ್ ಪಾಣಿಲಾಘವಂ ॥೧೭॥ ಸೋಽನ್ಯತ್ಕಾರ್ಮುಕಮಾದಾಯ ಸಜ್ಯಂ ಚಕ್ರೇ ತ್ವರನ್ನಿವ । ತದಪ್ಯಸ್ಯ ತ್ರಿಭಿರ್ಬಾಣೈರ್ಲಕ್ಷ್ಮಣೋ ನಿರಕೃಂತತ ॥೧೮॥ ಅಥೈನಂ ಛಿನ್ನಧನ್ವಾನಮಾಶೀವಿಷವಿಷೋಪಮೈಃ । ವಿವ್ಯಾಧೋರಸಿ ಸೌಮಿತ್ರೀ ರಾವಣಿಂ ಪಂಚಭಿಃ ಶರೈಃ ॥೧೯॥ ತೇ ತಸ್ಯ ಕಾಯಂ ನಿರ್ಭಿದ್ಯ ಮಹಾ

ಸಮಿತಿಂಜಯಃ - ಯುದ್ಧದಲ್ಲಿ ಜಯಶೀಲನಾದ, ಸರಾವಣಿಃ - ಆ ರಾವಣನ ಮಗನು, ಕ್ರುದ್ಧಃ - ಕುಪಿತನಾಗಿ, ಪರಂಲಾಘವಂ - ಮತ್ತೂ ಹಸ್ತಲಾಘವವನ್ನು, ಆಸ್ಥಿತಃ - ಹೊಂದಿ, ಹರೀಃ - ಕಪಿಗಳನ್ನು, ಅಭ್ಯಹನತ್ - ಹೊಡೆದನು. ॥೧೫॥ ನಾರಾಚೈಃ - ಸರಳುಗಳಿಂದ, ವಧ್ಯಮಾನಾಃ - ಹೊಡೆಯಲ್ಪಡುತ್ತಿರುವ, ಭೀಮವಿಕ್ರಮಾಃ - ಭಯಂಕರ ಪರಾಕ್ರಮವುಳ್ಳ, ತೇಹರಯಃ - ಆ ಕಪಿಗಳು, ಪ್ರಜಾಪತಿಂ - ಬ್ರಹ್ಮನನ್ನು, ಪ್ರಜಾಇವ - ಪ್ರಜೆಗಳಂತೆ, ಸೌಮಿತ್ರಿಂ - ಲಕ್ಷ್ಮಣನನ್ನು, ಶರಣಂ - ರಕ್ಷಕನನ್ನಾಗಿ, ಪ್ರಾಪ್ತಾಃ - ಹೊಂದಿದರು. ॥೧೬॥ ತತಃ - ಬಳಿಕ, ಸಮರಕೋಪೇನ - ಕಾಳೆಗದಲ್ಲಿ ಕೋಪದಿಂದ, ಜ್ವಲತಃ - ಉರಿಯುತ್ತಿರುವ, ರಘುನಂದನಃ - ಲಕ್ಷ್ಮಣನು, ಪಾಣಿಲಾಘವಂ - ಕರಲಾಘವನ್ನು, ದರ್ಶಯನ್ - ತೋರಿಸುತ್ತ, ತಸ್ಯ - ಆ ಮೇಘನಾದನ, ಕಾರ್ಮುಕಂ - ಬಿಲ್ಲನ್ನು, ಚಿಚ್ಛೇದ - ಕತ್ತರಿಸಿದನು. ॥೧೭॥ ಸಃ - ಆ ಮೇಘನಾದನು, ಅನ್ಯತ್ಕಾರ್ಮುಕಂ - ಮತ್ತೊಂದು ಬಿಲ್ಲನ್ನು, ಆದಾಯ - ತೆಗೆದುಕೊಂಡು, ತ್ವರನ್ನಿವ - ತ್ವರೆಯುಳ್ಳವನಂತೆ, ಸಜ್ಯಂ - ಹೆದೆಯಿಂದ ಕೂಡಿದ್ದನ್ನಾಗಿ, ಚಕ್ರೇ - ಮಾಡಿದನು, ಲಕ್ಷ್ಮಣಃ - ಲಕ್ಷ್ಮಣನು, ಅಸ್ಯ - ಈತನ, ತದಪಿ - ಆ ಧನುವನ್ನೂ, ತ್ರಿಭಿರ್ಬಾಣೈಃ - ಮೂರು ಬಾಣಗಳಿಂದ, ನಿರಕೃಂತತ - ಕತ್ತರಿಸಿದನು. ॥೧೮॥ ಅಥ - ಬಳಿಕ, ಸೌಮಿತ್ರಿಃ - ಲಕ್ಷ್ಮಣನು, ಛಿನ್ನಧನ್ವಾನಂ - ಛೇದಿಸಲ್ಪಟ್ಟ ಬಿಲ್ಲುಳ್ಳ, ಏನಂರಾವಣಿಂ - ಈ ಮೇಘನಾದನನ್ನು, ಆಶೀ....ಮೈಃ - ಸರ್ಪಗಳಿಗೆ ಸಮಾನಗಳಾದ, ಪಂಚಭಿಃ - ಐದಾದ, ಶರೈಃ-ಬಾಣಗಳಿಂದ, ಉರಸಿ-ಎದೆಯಲ್ಲಿ, ವಿವ್ಯಾಧ-ಹೊಡೆದನು. ॥೧೯॥ ಮಹಾ....ತಾಃ - ದೊಡ್ಡ ಧನುಸ್ಸಿನಿಂದ ಹೊರಬರುತ್ತಿರುವ, ತೇಬಾಣಾಃ - ಆ ಬಾಣಗಳು, ತಸ್ಯ - ಆ ಮೇಘನಾದನ,

---

ಜಯನಾದ ಆ ರಾವಣಿಯು ತನ್ನ ಧನುಸ್ಸನ್ನು ಮಂಡಲಾಕಾರವಾಗಿ ಮಾಡಿಕೊಂಡು ಮತ್ತೂ ಕನಲಿ ಅಮೋಘವಾದ ಕರಕೌಶಲವನ್ನು ತೋರಿ ವಾನರಯೂಥಪತಿಗಳನ್ನು ಘಾತಿಸಿದನು. ಈ ರೀತಿ ಆ ರಾಕ್ಷಸನ ಬಾಣಗಳಿಂದ ಘಾತಿಸಲಾದ ವಾನರರೆಲ್ಲರೂ ಭಯಭ್ರಾಂತರಾಗಿ, ಪ್ರಜೆಗಳು ಬ್ರಹ್ಮನನ್ನೆಂತೋ ಅಂತು ಲಕ್ಷ್ಮಣಸ್ವಾಮಿಯನ್ನು ಮೊರೆಹೊಕ್ಕರು. ಆಗ ರಘುನಂದನನಾದ ಲಕ್ಷ್ಮಣನು ರಣಕೋಪಾಟೋಪವುಳ್ಳವನಾಗಿ ಕರಲಾಘವವನ್ನು ತೋರಿ ಬಹು ಶೀಘ್ರವಾಗಿಯೇ ಆ ರಾಕ್ಷಸನ ಧನುಸ್ಸನ್ನು ತನ್ನ ಬಾಣದಿಂದ ಕತ್ತರಿಸಿದನು. ಇಂದ್ರಜಿತುವು ಬೇರೊಂದು ಧನುಸ್ಸನ್ನು ತೆಗೆದುಕೊಂಡು ಬಹು ಜಾಗ್ರತೆಯಾಗಿಯೇ ಅದನ್ನು ಸಜ್ಯವನ್ನಾಗಿ ಮಾಡಿದನು. ಲಕ್ಷ್ಮಣನು ಅದನ್ನೂ ಮೂರು ಬಾಣಗಳಿಂದ ಕತ್ತರಿಸಿ ಕೆಡವಿದನು. ಆ ತರುವಾಯ ಮಹಾ ವಿಷಸರ್ಪಗಳಿಗೆ ಸಮಾನವಾದ ಐದು ಬಾಣಗಳನ್ನು ಆ ಮೇಘನಾದನೆದೆಗೆಸೆದನು. ಆ ಬಾಣಗಳನ್ನು ಲಕ್ಷ್ಮಣನ ಬಿಲ್ಲಿನಿಂದ ಹೊರಹೊರಟು ಆ ರಾಕ್ಷಸ

ಕಾರ್ಮುಕನಿಸ್ಸೃತಾಃ । ನಿಪೇತುರ್ಧರಣೀಂ ಬಾಣಾ ರಕ್ತಾ ಇವ ಮಹೋರಗಾಃ ॥೨೦॥ ಸಭಿನ್ನವರ್ಮಾ ರುಧಿರಂ ವರ್ಮ ವಕ್ತ್ರೇಣ ರಾವಣಿಃ । ಜಗ್ರಾಹ ಕಾರ್ಮುಕಶ್ರೇಷ್ಠಂ ದೃಢಜ್ಯಂ ಬಲವತ್ತರಂ ॥ ೨೧ ॥ ಸಲಕ್ಷ್ಮಣಂ ಸಮುದ್ದಿಶ್ಯ ಪರಂ ಲಾಘವಮಾಸ್ಥಿತಃ । ವವರ್ಷ ಶರವರ್ಷಾಣಿ ವರ್ಷಾಣೀವ ಪುರಂದರಃ ॥ ೨೨ ॥ ಮುಕ್ತಮಿಂದ್ರಜಿತಾ ತತ್ತು ಶರವರ್ಷಮರಿಂದಮಃ । ಅವಾರಯದಸಂಭ್ರಾಂತೋ ಲಕ್ಷ್ಮಣಸ್ಸುದುರಾಸದಂ ॥೨೩॥ ದರ್ಶಯಾಮಾಸ ಚ ತದಾ ರಾವಣಿಂ ರಘುನಂದನಃ । ಅಸಂಭ್ರಾಂತೋ ಮಹಾತೇಜಾಸ್ತದದ್ಭುತಮಿವಾಭವತ್ । ತತಸ್ತಾನ್ ರಾಕ್ಷಸಾನ್ ಸರ್ವಾಂಸ್ತ್ರಿಭಿರೇಕೈಕಮಾಹವೇ

ಕಾಯಂ - ಶರೀರವನ್ನು, ನಿರ್ಭಿದ್ಯ - ಭೇದಿಸಿ, ರಕ್ತಾಃ - ಕೆಂಪಾಗಿರುವ, ಮಹೋರಗಾಇವ - ದೊಡ್ಡ ಹಾವುಗಳಂತೆ, ಧರಣೀಂ - ನೆಲದಲ್ಲಿ, ನಿಪೇತುಃ - ಬಿದ್ದವು. ॥ ೨೦ ॥ ಭಿನ್ನವರ್ಮಾ - ಭೇದಿಸಲ್ಪಟ್ಟ ಕವಚವುಳ್ಳ, ಸರಾವಣಿಃ - ಆ ರಾವಣನ ಮಗನು, ವಕ್ತ್ರೇಣ - ಮುಖದಿಂದ, ರುಧಿರಂ - ರಕ್ತವನ್ನು, ವರ್ಮ - ಕಾರುತ್ತ, ದೃಢಜ್ಯಂ - ದೃಢವಾದ ಹೆದೆಯುಳ್ಳ, ಬಲವತ್ತರಂ - ಬಹಳ ದೃಢವಾದ, ಕಾರ್ಮುಕಶ್ರೇಷ್ಠಂ - ಉತ್ತಮ ಧನುಸ್ಸನ್ನು, ಜಗ್ರಾಹ - ತೆಗೆದುಕೊಂಡನು. ॥ ೨೧ ॥ ಸಃ - ಆ ಇಂದ್ರಜಿತುವು, ಲಕ್ಷ್ಮಣಂ - ಲಕ್ಷ್ಮಣನನ್ನು, ಸಮುದ್ದಿಶ್ಯ - ಗುರಿಮಾಡಿ, ಪರಂ - ಬಹಳವಾಗಿ, ಲಾಘವಂ - ಕರಲಾಘವವನ್ನು, ಆಸ್ಥಿತಃ - ಹೊಂದಿ, ವರ್ಷಾಣಿ - ಉದಕವರ್ಷಗಳನ್ನು, ಪುರಂದರ ಇವ - ದೇವೇಂದ್ರನಂತೆ, ಶರವರ್ಷಾಣಿ - ಬಾಣವರ್ಷಗಳನ್ನು, ವವರ್ಷ - ಸುರಿಸಿದನು. ॥ ೨೨ ॥ ಅರಿಂದಮಃ - ಶತ್ರುಸಂಹಾರಕನಾದ ಲಕ್ಷ್ಮಣನು, ಅಸಂಭ್ರಾಂತಃ - ಗಾಬರಿ ಬೀಳದೆ, ಇಂದ್ರಜಿತಾ - ಇಂದ್ರಜಿತುವಿನಿಂದ, ಮುಕ್ತಂ - ಬಿಡಲ್ಪಟ್ಟ, ಸುದುರಾಸದಂ - ಹೊಂದಲಸಾಧ್ಯವಾದ, ತಚ್ಛರವರ್ಷಂತು - ಆ ಬಾಣವರ್ಷವನ್ನಾದರೆ, ಅವಾರಯತ್ - ತಡೆದನು. ॥ ೨೩ ॥ ತದಾ - ಆ ಕಾಲದಲ್ಲಿ, ರಘುನಂದನಃ - ರಘುಕುಲಾನಂದಕರನಾದ, ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ ಲಕ್ಷ್ಮಣನು, ಅಸಂಭ್ರಾಂತಃ - ತ್ವರೆಗೊಳ್ಳದೆ, ರಾವಣಿಂ - ಮೇಘನಾದನನ್ನು ಕುರಿತು, ಪರಾಕ್ರಮಂ - ಶೌರ್ಯವನ್ನು, ದರ್ಶಯಾಮಾಸ - ತೋರಿಸಿದನು, ತತ್ - ಅದು, ಅದ್ಭುತಮಿವ - ಆಶ್ಚರ್ಯಕರವಾದ್ದಂತೆ, ಅಭವತ್ - ಆಯಿತು. ॥ ೨೪ ॥ ತತಃ - ಬಳಿಕ, ಪರಮಕ್ರುದ್ಧಃ - ಬಹಳ ಕ್ರುದ್ಧನಾಗಿ, ಆಹವೇ - ಕಾಳೆಗದಲ್ಲಿ, ಶೀಘ್ರಾಸ್ತ್ರಂ - ವೇಗವತ್ತಾದ ಅಸ್ತ್ರಗಳನ್ನು, ಸಂಪ್ರದರ್ಶಯನ್ - ತೋರಿಸುತ್ತ, ಸರ್ವಾನ್ - ಸಮಸ್ತರಾದ, ತಾನ್‌ರಾಕ್ಷಸಾನ್ - ಆ ರಕ್ಕಸರನ್ನು, ತ್ರಿಭಿಃ - ಮೂರು ಬಾಣಗಳಿಂದ,

ನೆದೆಯನ್ನು ಭೇದಿಸಿ ರಕ್ತಸಿಕ್ತಗಳಾಗಿ ಮಹಾ ಸರ್ಪಗಳಂತೆಯೇ ಭೂಮಿಗೆ ಬಿದ್ದುಹೋದುವು. ॥೧೩-೨೦॥ ಆಗ ಇಂದ್ರಜಿತುವು ಭೇದಿಸಿದ ಕವಚವುಳ್ಳವನಾಗಿ ಬಾಯಿಯಿಂದ ರಕ್ತವನ್ನು ಕಕ್ಕುತ್ತ ಬಹಳವಾಗಿ ಕೆರಳಿದವನೂ ಆಗಿ ದೃಢವಾದ ನಾರಿಯುಳ್ಳ ಮತ್ತೊಂದು ಧನುಸ್ಸನ್ನು ಕೈಕೊಂಡನು. ಆ ಕೂಡಲೇ ಅವನು ಲಕ್ಷ್ಮಣಸ್ವಾಮಿಯನ್ನುದ್ದೇಶಿಸಿ ಉತ್ತಮವಾದ ಕರಕೌಶಲವನ್ನು ಪ್ರದರ್ಶಿಸಲು ಮೊದಲು ಮಾಡಿದನು; ಮಹೇಂದ್ರನು ವೃಷ್ಟಿಯನ್ನು ವರ್ಷಿಸುವಂತೆ ಬಾಣವೃಷ್ಟಿಯನ್ನು ವರ್ಷಿಸಿದನು. ಆಗ ಶತ್ರುಗಳನ್ನು ಜಯಿಸುವ ಮಹಾ ಸಾಮರ್ಥ್ಯಸಂಪನ್ನನಾದ ಲಕ್ಷ್ಮಣನು ಸ್ವಲ್ಪವೂ ಭಯವನ್ನು ಹೊಂದದೆ ಇಂದ್ರಜಿತುವಿನ ಬಾಣವರ್ಷವನ್ನು ನಿವಾರಿಸಿದನು. ಅದನ್ನು ನೋಡಿ ಆ ರಾಕ್ಷಸನು ಪರಮಾಶ್ಚರ್ಯಭರಿತನಾದನು. ಆ ಸಮಯದಲ್ಲಿಯೇ ಲಕ್ಷ್ಮಣನು ಮೂರು ಮೂರು ಬಾಣಗಳಿಂದ

॥ ೨೪-೨೫ ॥ ಅವಿಧ್ಯತ್ಪರಮಕ್ರುದ್ಧಃ ಶೀಘ್ರಾಸ್ತ್ರಂ ಸಂಪ್ರದರ್ಶಯನ್ । ರಾಕ್ಷಸೇಂದ್ರಸುತಂ ಚಾಪಿ ಬಾಣೌಘೈಸ್ಸಮತಾಡಯತ್ ॥ ೨೬ ॥ ಸೋಽತಿವಿದ್ಧೋ ಬಲವತಾ ಶತ್ರುಣಾ ಶತ್ರುಘಾತಿನಾ । ಅಸಕ್ತಂ ಪ್ರೇಷಯಾಮಾಸ ಲಕ್ಷ್ಮಣಾಯ ಬಹೂನ್ ಶರಾನ್ ॥ ೨೭ ॥ ತಾನಪ್ರಾಪ್ತಾನ್ ಶಿತೈರ್ಬಾಣೈಶ್ಚಿಚ್ಛೇದ ರಘುನಂದನಃ । ಸಾರಥೇರಸ್ಯ ಚ ರಣೇ ರಥಿನೋ ರಥಿಸತ್ತಮಃ । ಶಿರೋ ಜಹಾರ ಧರ್ಮಾತ್ಮಾ ಭಲ್ಲೇನಾನತಪರ್ವಣಾ ॥೨೮॥ ಅಸೂತಾಸ್ತೇ ಹಯಾಸ್ತತ್ರ ರಥಮೂಹುರವಿಕ್ಲಬಾಃ । ಮಂಡಲಾನ್ಯಭಿಧಾವಂತಸ್ತದದ್ಭುತಮಿವಾಭವತ್ ॥ ೨೯ ॥ ಅಮರ್ಷವಶಮಾಪನ್ನಸ್ಸೌಮಿತ್ರಿ

ಏಕೈಕಂ - ಒಬ್ಬೊಬ್ಬನನ್ನಾಗಿ, ಅವಿಧ್ಯತ್ - ಹೊಡೆದನು, ರಾಕ್ಷಸೇಂದ್ರಸುತಂಚಾಪಿ - ಮೇಘನಾದನನ್ನೂ ಕೂಡ, ಬಾಣೌಘೈಃ - ಸರಳುಗಳ ವೃಷ್ಟಿಗಳಿಂದ, ಸಮತಾಡಯತ್ - ಹೊಡೆದನು, ಬಲವತಾ - ಬಲವಂತನಾದ, ಶತ್ರುಘಾತಿನಾ - ಶತ್ರುಸಂಹಾರಕನಾದ, ಶತ್ರುಣಾ - ಶತ್ರುವಿನಿಂದ, ಅತಿವಿದ್ಧಃ - ಬಹಳವಾಗಿ ಹೊಡೆಯಲ್ಪಟ್ಟ, ಸಃ - ಆ ಇಂದ್ರಜಿತುವು, ಅಸಕ್ತಂ - ಸಂಬಂಧವಿಲ್ಲದೆಯೇ, ಬಹೂನ್ ಶರಾನ್ - ಅನೇಕ ಬಾಣಗಳನ್ನು, ಲಕ್ಷ್ಮಣಾಯ - ಲಕ್ಷ್ಮಣನಿಗೋಸುಗ, ಪ್ರೇಷಯಾಮಾಸ - ಕಳುಹಿದನು. ॥೨೫-೨೭॥ ರಥಿಕಸತ್ತಮಃ - ರಥಿಕಶ್ರೇಷ್ಠನಾದ, ಧರ್ಮಾತ್ಮಾ - ಧರ್ಮದಲ್ಲೇ ಮನವುಳ್ಳ, ರಘುನಂದನಃ - ಲಕ್ಷ್ಮಣನು, ಅಪ್ರಾಪ್ತಾನ್ - ಬಾರದಿರುವ, ತಾನ್ - ಆ ಬಾಣಗಳನ್ನು, ಶಿತೈಃ - ಹದವಾದ, ಬಾಣೈಃ - ಸರಳುಗಳಿಂದ, ಚಿಚ್ಛೇದ - ಕತ್ತರಿಸಿದನು, ರಣೇ - ಕಾಳೆಗದಲ್ಲಿ, ಅಸ್ಯ - ಈ ಇಂದ್ರಜಿತುವಿನ, ಸಾರಥೇಃ - ಸಾರಥಿಯ, ಶಿರಃ - ಮಂಡೆಯನ್ನು, ಆನತಪರ್ವಣಾ - ಬೊಗ್ಗಿರುವ ತುದಿಗಳುಳ್ಳ, ಭಲ್ಲೇನ - ಭಲ್ಲಾಯುಧದಿಂದ, ಜಹಾರ - ಅಪಹರಿಸಿದನು. ॥ ೨೮ ॥ ತತ್ರ - ಆ ಕಾಳೆಗದಲ್ಲಿ, ಅಸೂತಾಃ - ಸಾರಥಿಯಿಲ್ಲದ, ತೇಹಯಾಃ - ಆ ಕುದುರೆಗಳು, ಅವಿಕ್ಲಬಾಃ - ಗಾಬರಿಯಿಲ್ಲದವುಗಳಾಗಿ, ಮಂಡಲಾನಿ - ಮಂಡಲಾಕಾರ ಗಮನಗಳನ್ನು, ಅಭಿಧಾವಂತಃ - ಓಡುತ್ತಿರುವವುಗಳಾಗಿ, ರಥಂ - ರಥವನ್ನು, ಊಹುಃ - ವಹಿಸಿದವು, ತತ್ - ಅದು, ಅದ್ಭುತಮಿವ - ಆಶ್ಚರ್ಯಕರವಾಗಿ, ಅಭವತ್ - ಆಯಿತು. ॥ ೨೯ ॥ ಅಮರ್ಷವಶಂ - ಕ್ರೋಧವಶವನ್ನು, ಆಪನ್ನಃ - ಹೊಂದಿದ, ದೃಢವಿಕ್ರಮಃ - ದೃಢವಾದ ಪರಾಕ್ರಮವುಳ್ಳ, ಸೌಮಿತ್ರಿಃ - ಲಕ್ಷ್ಮಣನು, ತಸ್ಯ - ಆ ಮೇಘನಾದನ,

---

ಒಬ್ಬೊಬ್ಬ ರಾಕ್ಷಸನನ್ನಂತೆ ಕೊಂದು ಕೆಡವುತ್ತಿದ್ದುದು ಮಾತ್ರವಲ್ಲದೆ ಮಹಾ ತೀಕ್ಷ್ಣವಾದ ಬಾಣಗಳನ್ನು ಇಂದ್ರಜಿತುವಿನ ಮೇಲೆಯೂ ಪ್ರಯೋಗಿಸುತ್ತಿದ್ದನು. ॥೨೧—೨೬॥ ಈ ರೀತಿ ಶತ್ರುಸಂಹಾರಕನಾಗಿ ಮಹಾ ಪರಾಕ್ರಮವನ್ನು ಮೆರೆಯುತ್ತಿದ್ದ ಲಕ್ಷ್ಮಣನನ್ನು ನೋಡಿ ಇಂದ್ರಜಿತುವು ಅವನ ಮೇಲೆ ಸಾವಿರಾರು ಬಾಣಗಳನ್ನು ಒಂದೇ ತಡವೆಯೇ ಪ್ರಯೋಗಿಸಿದನು. ಲಕ್ಷ್ಮಣನು ಆ ಬಾಣಗಳು ತನ್ನ ಸಮೀಪಕ್ಕೆ ಬರುವ ಮೊದಲೇ ಅವುಗಳನ್ನು ತೀಕ್ಷ್ಣಗಳಾದ ಶರಜಾಲದಿಂದ ಭೇದಿಸಿದನು. ಇಷ್ಟೆಯಲ್ಲದೆ ಧರ್ಮಾತ್ಮನಾದ ಆ ರಘುನಂದನನು ಅತ್ಯುತ್ತಮವಾದ ಬಾಣಗಳನ್ನು ಪ್ರಯೋಗಿಸಿ ರಥಿಕಶ್ರೇಷ್ಠನಾದ ಆ ಇಂದ್ರಜಿತುವಿನ ಸಾರಥಿಯ ಶಿರವನ್ನು ಹಾರಿಸಿದನು. ಆಗ ಸಾರಥಿಯು ಮಡಿದುದರಿಂದ ರಥಾಶ್ವಗಳು ಮೇರೆಮೀರಿ ರಥವನ್ನು ಅತ್ತಿತ್ತ ಎಳೆದಾಡಲುಪಕ್ರಮಿಸಿದವು. ಆಗಲಾ ರಾಕ್ಷಸೋತ್ತಮನು ತಾನೇ ಸಾರಥಿಯಾಗಿ ತನ್ನ ರಥವನ್ನು ಮಂಡಲಾಕಾರವಾಗಿ ನಡೆಯಿಸುತ್ತ ಮಹಾ ಭಯಂಕರವಾಗಿ ಯುದ್ಧ ಮಾಡಿದನು. ಆಗ ಲಕ್ಷ್ಮಣನು ಮತ್ತೂ ಅಧಿಕವಾಗಿ ಮುನಿದು

ರ್ದೃಢವಿಕ್ರಮಃ । ಪ್ರತ್ಯವಿದ್ಯದ್ಧಯಾಂಸ್ತಸ್ಯ ಶರೈರ್ವಿತ್ರಾಸಯನ್ ರಣೇ ॥ ೩೦ ॥
ಅಮೃಷ್ಯಮಾಣಸ್ತತ್ಕರ್ಮ ರಾವಣಸ್ಯ ಸುತೋ ಬಲೀ । ವಿವ್ಯಾಧ ದಶಭಿರ್ಬಾಣೈ
ಸ್ಸೌಮಿತ್ರಿಂ ತಮಮರ್ಷಣಂ ॥ ೩೧ ॥ ತೇ ತಸ್ಯ ವಜ್ರಪ್ರತಿಮಾಃ ಶರಾಸ್ಸರ್ಪವಿಷೋ
ಪಮಾಃ । ವಿಲಯಂ ಜಗ್ಮುರಾಹತ್ಯ ಕವಚಂ ಕಾಂಚನಪ್ರಭಂ ॥ ೩೨ ॥ ಅಭೇದ್ಯ
ಕವಚಂ ಮತ್ವಾ ಲಕ್ಷ್ಮಣಂ ರಾವಣಾತ್ಮಜಃ । ಲಲಾಟೇ ಲಕ್ಷ್ಮಣಂ ಬಾಣೈಸ್ಸುಪುಂಖೈ
ಸ್ತ್ರಿಭಿರಿಂದ್ರಜಿತ್ । ಅವಿಧ್ಯತ್ಪರಮಕ್ರುದ್ಧಃ ಶೀಘ್ರಾಸ್ತ್ರಂ ಚ ಪ್ರದರ್ಶಯನ್ ॥೩೩-೩೪॥
ತೈಃ ಪೃಷತ್ಕೈರ್ಲಲಾಟಸ್ಥೈಃ ಶುಶುಭೇ ರಘುನಂದನಃ । ರಣಾಗ್ರೇ ಸಮರಶ್ಲಾಘೀ

ಹಯಾನ್ - ಕುದುರೆಗಳನ್ನು, ಶರೈಃ - ಸರಳುಗಳಿಂದ, ರಣೇ ಕಾಳಗದಲ್ಲಿ, ವಿತ್ರಾಸಯನ್ - ಹೆದರಿಸುತ್ತ, ಪ್ರತ್ಯವಿಧ್ಯತ್ - ಹೊಡೆದನು. ॥ ೩೦ ॥ ತತ್ಕರ್ಮ - ಆ ಅಶ್ವಭಂಗರೂಪ ಕಾರ್ಯವನ್ನು, ಅಮೃಷ್ಯ ಮಾಣಃ - ಸಹಿಸದೆ, ಬಲೀ - ಬಲವಂತನಾದ, ರಾವಣಸ್ಯ - ದಶಕಂಠನ, ಸುತಃ - ಮಗನು, ದಶಭಿಃ ಬಾಣೈಃ - ಹತ್ತು ಸರಳುಗಳಿಂದ, ಅಮರ್ಷಣಂ - ಕುಪಿತನಾದ, ತಂ ಸೌಮಿತ್ರಿಂ - ಆ ಸೌಮಿತ್ರಿ ಯನ್ನು, ವಿವ್ಯಾಧ - ಹೊಡೆದನು. ॥ ೩೧ ॥ ತಸ್ಯ - ಆ ಇಂದ್ರಜಿತುವಿನ, ವಜ್ರಪ್ರತಿಮಾಃ - ವಜ್ರಾ ಯುಧಕ್ಕೆ ಸಮಾನಗಳಾದ, ಸರ್ಪ....ಮಾಃ - ಸರ್ಪಗಳ ವಿಷದಂತೆ ಉಗ್ರಗಳಾದ, ತೇಶರಾಃ - ಆ ಸರಳು ಗಳು, ಕಾಂಚನಪ್ರಭಂ - ಚಿನ್ನದ ಕಾಂತಿಯಂತೆ ಕಾಂತಿಯುಳ್ಳ ಕವಚವನ್ನು, ಆಹತ್ಯ - ಹೊಡೆದು, ವಿಲಯಂ - ನಾಶವನ್ನು, ಜಗ್ಮುಃ - ಪಡೆದವು. ॥ ೩೨ ॥ ರಾವಣಾತ್ಮಜಃ - ದಶಕಂಠನ ಮಗನಾದ, ಇಂದ್ರಜಿತ್ - ಇಂದ್ರಜಿತುವು, ಲಕ್ಷ್ಮಣಂ - ರಾಮಾನುಜನನ್ನು, ಅಭೇದ್ಯಕವಚಂ - ಭೇದಿಸಲ ಸಾಧ್ಯವಾದ ಕವಚವುಳ್ಳವನನ್ನಾಗಿ, ಮತ್ವಾ - ತಿಳಿದು, ಪರಮಕ್ರುದ್ಧಃ - ಬಹಳ ಕೋಪಿಷ್ಠನಾಗಿ, ಶೀಘ್ರಾಸ್ತ್ರಂ - ತನ್ನ ಅಸ್ತ್ರವೇಗವನ್ನು, ಪ್ರದರ್ಶಯನ್ - ತೋರಿಸುತ್ತ, ಸುಪುಂಖೈಃ - ಒಳ್ಳೆಯ ಕೊಂಕಿಗಳುಳ್ಳ, ತ್ರಿಭಿರ್ಬಾಣೈಃ - ಮೂರು ಸರಳುಗಳಿಂದ, ಲಕ್ಷ್ಮಣಂ - ರಾಮಾನುಜನನ್ನು, ಲಲಾಟೇ - ಹಣೆಯಲ್ಲಿ, ಅವಿಧ್ಯತ್ - ಹೊಡೆದನು. ॥ ೩೪ ॥ ಸಮರಶ್ಲಾಘೀ - ಕಾಳಗದಲ್ಲಿ ಶ್ರೇಷ್ಠನಾದ, ರಘು ನಂದನಃ - ರಾಮಾನುಜನು, ಲಲಾಟಸ್ಥೈಃ - ಹಣೆಯಲ್ಲಿ ನಾಟಿರುವ, ತೈಃಪೃಷತ್ಕೈಃ - ಆ ಬಾಣ ಗಳಿಂದ, ರಣಾಗ್ರೇ - ಯುದ್ಧಭೂಮಿಯಲ್ಲಿ, ತ್ರಿಶೃಂಗಃ - ಮೂರು ಶಿಖರಗಳುಳ್ಳ, ಪರ್ವತಇವ - ಬೆಟ್ಟದಂತೆ, ಶುಶುಭೇ - ಹೊಳೆಯುತ್ತಿದ್ದನು. ॥ ೩೫ ॥ ಮಹಾಮೃಧೇ - ದೊಡ್ಡ ಕಾಳಗದಲ್ಲಿ, ರಾಕ್ಷ

ಮಹಾ ತೀಕ್ಷ್ಣಗಳಾದ ಬಾಣಗಳಿಂದ ಆ ಇಂದ್ರಜಿತುವಿನ ರಥಾಶ್ವಗಳನ್ನು ವಧಿಸಿದನು. ॥೨೬–೩೦॥ ಇಂದ್ರಜಿತುವೂ ಸಹ ಬಹಳ ರೋಷಾವಿಷ್ಟನಾಗಿ ಲಕ್ಷ್ಮಣನ ಮೇಲೆ ಹತ್ತು ಬಾಣಗಳನ್ನು ಏಕಕಾಲದಲ್ಲಿಯೇ ಪ್ರಯೋಗಿಸಿದನು. ವಜ್ರಾಯುಧಕ್ಕೆ ಸಮಾನವಾದುವೂ, ಮಹಾ ವಿಷಸರ್ಪಗಳಿಗೆ ಸಮಾನವಾದುವೂ ಆದ ಆ ಹತ್ತು ಬಾಣಗಳೂ ಕಾಂಚನವರ್ಣ ವಿರಾಜಿತವಾದ ಲಕ್ಷ್ಮಣನ ಕವಚವಲ್ಲಿ ಬಿದ್ದು ಕೆಳಕ್ಕೆ ಬಿದ್ದುಹೋದುವು. ರಾವಣಾತ್ಮಜ ನಾದ ಆ ಇಂದ್ರಜಿತುವು ಲಕ್ಷ್ಮಣನು ಅಭೇದ್ಯ ಕವಚನೆಂದರಿತವನಾಗಿ ಅಪರಿಮಿತವಾದ ಕೋಪವನ್ನು ತಾಳಿ ಆತನ ಫಾಲಪ್ರದೇಶಕ್ಕೆ ಮೂರು ಕೂರಂಬುಗಳನ್ನೆಸೆದನು. ಹೀಗೆ ಆ ಮೂರು ಬಾಣಗಳಿಂದ ಹೊಡೆಯಲಾಗಲು ಅಪರಿಮಿತ ಕೋಪಾಟೋಪವುಳ್ಳವನಾದ ಆ ಲಕ್ಷ್ಮಣನ ಫಾಲಪ್ರದೇಶದಲ್ಲಿ ಆ ಬಾಣಗಳು ನಾಟಿ ಬಹು ವಿಚಿತ್ರವಾಗಿ ಶೋಭಿಸಿದುವು. ಲಕ್ಷ್ಮಣನು ಆ ಮೂರು ಬಾಣಗಳಿಂದ, ಮೂರು ಶಿಖರಗಳಿಂದ ಕೂಡಿದ ಮಹಾ ಪರ್ವತ

ತ್ರಿಶೃಂಗ ಇವ ಪರ್ವತಃ ॥ ೩೫ ॥ ಸ ತಥಾ ಹ್ಯರ್ದಿತೋ ಬಾಣೈ ರಾಕ್ಷಸೇನ ಮಹಾ
ಮೃಧೇ । ತಮಾಶುಪ್ರತಿವಿವ್ಯಾಧ ಲಕ್ಷ್ಮಣಃ ಪಂಚಭಿಃ ಶರೈಃ । ವಿಕೃಷ್ಯೇಂದ್ರಜಿತೋ
ಯುದ್ಧೇ ವದನೇ ಶುಭಕುಂಡಲೇ ॥ ೩೬ ॥ ಲಕ್ಷ್ಮಣೇಂದ್ರಜಿತೌ ವೀರೌ ಮಹಾಬಲ
ಶರಾಸನೌ । ಅನ್ಯೋನ್ಯಂ ಜಘ್ನತು ರ್ಬಾಣೈ ರ್ವಿಶಿಖೈರ್ಭೀಮವಿಕ್ರಮೌ ॥ ೩೭ ॥
ತತಃ ಶೋಣಿತದಿಗ್ಧಾಂಗೌ ಲಕ್ಷ್ಮಣೇಂದ್ರಜಿತಾವುಭೌ । ರಣೇ ತೌ ರೇಜತುರ್ವೀರೌ
ಪುಷ್ಪಿತಾವಿವ ಕಿಂಶುಕೌ ॥ ೩೮ ॥ ತೌ ಪರಸ್ಪರಮಭ್ಯೇತ್ಯ ಸರ್ವಗಾತ್ರೇಷು ಧನ್ವಿನೌ ।
ಘೋರೈರ್ವಿವ್ಯಧತುರ್ಬಾಣೈಃ ಕೃತಭಾವಾವುಭೌ ಜಯೇ ॥ ೩೯ ॥ ತತಸ್ಸಮರ
ಕೋಪೇನ ಸಂಯುಕ್ತೋ ರಾವಣಾತ್ಮಜಃ । ವಿಭೀಷಣಂ ತ್ರಿಭಿರ್ಬಾಣೈರ್ವಿವ್ಯಾಧ

ಸೇನ - ರಕ್ಕಸನಿಂದ, ಬಾಣೈಃ - ಸರಳುಗಳಿಂದ, ತಥಾ - ಆ ಪರಿಯಾಗಿ, ಅರ್ದಿತಃ - ಹೊಡೆಯಲ್ಪಟ್ಟ,
ಸಲಕ್ಷ್ಮಣಃ - ಆ ಸೌಮಿತ್ರಿಯು, ಪಂಚಭಿಃ - ಐದಾದ, ಶರೈಃ - ಸರಳುಗಳಿಂದ, ಯುದ್ಧೇ - ಕಾಳೆಗ
ದಲ್ಲಿ, ಇಂದ್ರಜಿತಃ - ಇಂದ್ರಜಿತುವಿನ, ಶುಭಕುಂಡಲೇ - ಶುಭಕರವಾದ ಕರ್ಣಭೂಷಣಗಳುಳ್ಳ,
ವದನೇ - ಮುಖದಲ್ಲಿ, ಆಶು - ಜಾಗ್ರತೆಯಾಗಿ, ವಿಕೃಷ್ಯ - ಸೆಳೆದು, ತಂ - ಆ ಇಂದ್ರಜಿತುವನ್ನು,
ಪ್ರತಿವಿವ್ಯಾಧ - ಬದಲಾಗಿ ಹೊಡೆದನು. ॥ ೩೬ ॥ ಭೀಮವಿಕ್ರಮೌ - ಭಯಂಕರ ಪರಾಕ್ರಮವುಳ್ಳ,
ಮಹಾ....ನೌ - ಬಹಳ ದೃಢವಾದ ಬಿಲ್ಲುಗಳುಳ್ಳ, ವೀರೌ - ಶೂರರಾದ, ಲಕ್ಷ್ಮಣೇಂದ್ರಜಿತೌ -
ಲಕ್ಷ್ಮಣೇಂದ್ರಜಿತ್ತುಗಳೀರ್ವರೂ, ವಿಶಿಖೈಃ - ನಾನಾಬಗೆಗಳಾದ ತುದಿಗಳುಳ್ಳ, ಬಾಣೈಃ - ಬಾಣ
ಗಳಿಂದ, ಅನ್ಯೋನ್ಯಂ - ಪರಸ್ಪರವಾಗಿ, ಜಘ್ನತುಃ - ಹೊಡೆದಾಡಿದರು. ॥ ೩೭ ॥ ತತಃ - ಬಳಿಕ,
ಶೋಣಿ....ಗೌ - ರಕ್ತದಿಂದ ವ್ಯಾಪಿಸಲ್ಪಟ್ಟ ಶರೀರಗಳುಳ್ಳ, ತೌಲಕ್ಷ್ಮಣೇಂದ್ರಜಿತಾವುಭೌ - ಆ ಲಕ್ಷ್ಮ
ಣೇಂದ್ರಜಿತುಗಳೆಂಬೀರ್ವರೂ, ರಣೇ - ಕಾಳೆಗದಲ್ಲಿ, ವೀರೌ - ಶೂರರಾದಕಾರಣ, ಪುಷ್ಪಿತೌ - ಹೂ
ಬಿಟ್ಟ, ಕಿಂಶುಕಾವಿವ - ಮುತ್ತುಗದ ಗಿಡಗಳಂತೆ, ರೇಜತುಃ - ಹೊಳೆಯುತ್ತಿದ್ದರು. ॥೩೮॥ ಧನ್ವಿನೌ -
ಧನುರ್ಧಾರಿಗಳಾದ, ತೌಉಭೌ - ಅವರೀರ್ವರೂ, ಜಯೇ - ಜಯದಲ್ಲಿ, ಕೃತಭಾವೌ - ಇಡಲ್ಪಟ್ಟ
ಅಭಿಪ್ರಾಯಗಳುಳ್ಳವರಾಗಿ, ಪರಸ್ಪರಂ - ಅನ್ಯೋನ್ಯವಾಗಿ, ಅಭ್ಯೇತ್ಯ - ಬಂದು, ಸರ್ವಗಾತ್ರೇಷು -
ಸಮಸ್ತ ಅವಯವಗಳಲ್ಲಿ, ಘೋರೈಃ - ಭಯಂಕರವಾದ, ಬಾಣೈಃ - ಸರಳುಗಳಿಂದ, ವಿವ್ಯಧತುಃ -
ಹೊಡೆದರು. ॥ ೩೯ ॥ ತತಃ - ಬಳಿಕ, ರಾವಣಾತ್ಮಜಃ - ಇಂದ್ರಜಿತುವು, ಸಮರಕೋಪೇನ - ಕಾಳೆಗ
ದಲ್ಲಿ ಕೋಪದಿಂದ, ಸಂಯುಕ್ತಃ - ಕೂಡಿ, ತ್ರಿಭಿಃಬಾಣೈಃ - ಮೂರು ಬಾಣಗಳಿಂದ, ವಿಭೀಷಣಂ -

---

ದಂತೆ ವಿರಾಜಿಸುತ್ತಿದ್ದನು. ॥೩೨–೩೫॥ ಈ ರೀತಿ ಆ ರಣರಂಗದಲ್ಲಿ ಇಂದ್ರಜಿತುವಿನ ಬಾಣ
ಗಳಿಂದ ಘಾತಿತನಾದ ಲಕ್ಷ್ಮಣಸ್ವಾಮಿಯು ಮಹಾ ಕುಪಿತನಾಗಿ ಐದು ಬಾಣಗಳನ್ನು ಆ
ರಾಕ್ಷಸನ ಲಲಾಟಪ್ರದೇಶದಲ್ಲಿ ಪ್ರಯೋಗಿಸಿದನು. ಅದರಿಂದ ಅವನು ಬಹಳವಾಗಿ ಸಂತ
ಪಿಸಿ ಹೋದನು. ಆ ತರುವಾಯ ಅಧಿಕ ಬಲಸಂಪನ್ನರೂ, ಮಹಾರ್ಹ ಧನುಸ್ಸಂಪನ್ನರೂ ಆದ
ಆ ಲಕ್ಷ್ಮಣೇಂದ್ರಜಿತುಗಳೀರ್ವರೂ ರಕ್ತವ್ಯಾಪ್ತವಾದ ಶರೀರಗಳುಳ್ಳವರಾಗಿ ಹೂನೊಳೆತ
ಮುತ್ತುಗದ ಮರಗಳಂತೆ ವಿರಾಜಿಸುತ್ತಿದ್ದರು. ಇಬ್ಬರೂ ಪರಸ್ಪರ ಜಯಾಪೇಕ್ಷೆಯುಳ್ಳವ
ರಾಗಿ ಅಪಾರವಾದ ಬಾಣಯುದ್ಧವನ್ನು ಮಾಡುತ್ತಿದ್ದರು. ಮಹಾ ಭಯಂಕರವಾದ ಬಾಣ
ಗಳಿಂದ ಒಬ್ಬರ ಶರೀರವನ್ನೊಬ್ಬರು ಭೇದಿಸುತ್ತಿದ್ದರು. ಆ ಸಮಯದಲ್ಲಿ ರಾವಣ ಕುಮಾರ
ನಾದ ಇಂದ್ರಜಿತುವು ಕೋಪಾಟೋಪವುಳ್ಳವನಾಗಿ ಮೂರು ಭಾಣಗಳಿಂದ ವಿಭೀಷಣನ

ವದನೇ ಶುಭೇ ॥ ೪೦ ॥ ಅಯೋಮುಖೈಸ್ತ್ರಿಭಿರ್ವಿಧ್ವಾ ರಾಕ್ಷಸೇಂದ್ರಂ ವಿಭೀಷಣಂ । ಏಕೈಕೇನಾಭಿವಿವ್ಯಾಧ ತಾನ್ ಸರ್ವಾನ್ ಹರಿಯೂಥಪಾನ್ ॥ ೪೧ ॥ ತಸ್ಮೈ ದೃಢತರಂ ಕ್ರುದ್ಧೋ ಜಘಾನ ಗದಯಾ ಹಯಾನ್ । ವಿಭೀಷಣೋ ಮಹಾತೇಜಾ ರಾವಣೇಃ ಸ್ಸದುರಾತ್ಮನಃ ॥ ೪೨ ॥ ಸಹತಾಶ್ವಾದವಪ್ಲುತ್ಯ ರಥಾನ್ನಿಹತಸಾರಥೇಃ । ರಥಶಕ್ತಿಂ ಮಹಾತೇಜಾಃ ಪಿತೃವ್ಯಾಯ ಮುಮೋಚಹ ॥ ೪೩ ॥ ತಾಮಾಪತಂತೀಂ ಸಂಪ್ರೇಕ್ಷ್ಯ ಸುಮಿತ್ರಾನಂದವರ್ಧನಃ । ಚಿಚ್ಛೇದ ನಿಶಿತೈ ರ್ಬಾಣೈರ್ದಶಧಾ ಸಾಪತದ್ಭುವಿ ॥೪೪॥ ತಸ್ಮೈ ದೃಢಧನುಃ ಕ್ರುದ್ಧೋ ಹತಾಶ್ವಾಯ ವಿಭೀಷಣಃ । ವಜ್ರಸ್ಪರ್ಶಸಮಾನ್

ವಿಭೀಷಣನನ್ನು, ಶುಭೇ - ಶುಭಕರವಾದ, ವದನೇ - ಮುಖದಲ್ಲಿ, ವಿವ್ಯಾಧ - ಹೊಡೆದನು. ॥೪೦॥ ಅಯೋಮುಖೈಃ - ಕಬ್ಬಿಣದ ತುದಿಗಳುಳ್ಳ, ತ್ರಿಭಿಃ - ಮೂರು ಬಾಣಗಳಿಂದ, ರಾಕ್ಷಸೇಂದ್ರಂ - ರಾಕ್ಷಸಶ್ರೇಷ್ಠನಾದ, ವಿಭೀಷಣಂ - ವಿಭೀಷಣನನ್ನು, ವಿಧ್ವಾ - ಹೊಡೆದು, ಏಕೈಕೇನ - ಒಂದೊಂದು ಬಾಣದಿಂದ, ಸರ್ವಾನ್ - ಸಮಸ್ತರಾದ, ತಾನ್‌ಹರಿಯೂಥಪಾನ್ - ಆ ಕಪಿಯೂಥಪತಿಗಳನ್ನು, ಅಭಿ ವಿವ್ಯಾಧ - ಹೊಡೆದನು. ॥ ೪೧ ॥ ಮಹಾತೇಜಾಃ - ಬಹಳ ತೇಜೋವಂತನಾದ ವಿಭೀಷಣನು, ತಸ್ಮೈ - ಆ ಇಂದ್ರಜಿತುವಿನ ವಿಷಯದಲ್ಲಿ, ಕ್ರುದ್ಧಃ - ಕೋಪಿಷ್ಠನಾಗಿ, ಗದಯಾ - ಗದಾಯುಧದಿಂದ, ಸುದುರಾತ್ಮನಃ - ಬಹಳ ದುಷ್ಟನಾದ, ರಾವಣೇಃ - ಇಂದ್ರಜಿತುವಿನ, ಹಯಾನ್ - ಕುದುರೆಗಳನ್ನು, ದೃಢತರಂ - ಗಟ್ಟಿಯಾಗಿ, ಜಘಾನ - ಹೊಡೆದನು. ॥ ೪೨ ॥ ಮಹಾತೇಜಾಃ - ಮಹಾ ಸಾಮರ್ಥ್ಯ ವಂತನಾದ, ಸಃ - ಆ ಇಂದ್ರಜಿತುವು, ಹತಾಶ್ವಾತ್ - ಹೊಡೆಯಲ್ಪಟ್ಟ ಕುದುರೆಗಳುಳ್ಳ, ಹತಸಾರಥೇಃ - ಹೊಡೆಯಲ್ಪಟ್ಟ ಸಾರಥಿಯುಳ್ಳ, ರಥಾತ್ - ರಥದಿಂದ, ಅವಪ್ಲುತ್ಯ - ಇಳಿದು, ಪಿತೃವ್ಯಾಯ - ಚಿಕ್ಕಪ್ಪನಿಗೆ, ರಥಶಕ್ತಿಂ - ರಥದಲ್ಲಿರುವ ಶಕ್ತ್ಯಾಯುಧವನ್ನು, ಮುಮೋಚಹ - ಬಿಟ್ಟನಷ್ಟೆ. ॥೪೩॥ ಸುಮಿ....ನಃ - ಸುಮಿತ್ರಾದೇವಿಗೆ ಆನಂದವನ್ನು ವೃದ್ಧಿಗೊಳಿಸುವ ಲಕ್ಷ್ಮಣನು, ಆಪತಂತೀಂ - ಬರುತ್ತಿರುವ, ತಾಂ - ಆ ಶಕ್ತ್ಯಾಯುಧವನ್ನು, ಸಂಪ್ರೇಕ್ಷ್ಯ - ಕಂಡು, ನಿಶಿತೈಃ - ತೀಕ್ಷ್ಣಗಳಾದ, ಬಾಣೈಃ - ಬಾಣಗಳಿಂದ, ದಶಧಾ - ಹತ್ತು ಬಗೆಗಳಾಗಿ, ಚಿಚ್ಛೇದ - ಕತ್ತರಿಸಿದನು. ॥ ೪೪ ॥ ಸಾ - ಆ ಶಕ್ತ್ಯಾಯುಧವು, ಭುವಿ - ನೆಲದಲ್ಲಿ, ಅಪತತ್ - ಬಿದ್ದಿತು, ಹತಾಶ್ವಾಯ - ಹೊಡೆಯಲ್ಪಟ್ಟ

ಮುಖಕ್ಕೆ ಬಲವಾಗಿ ಹೊಡೆದನು. ಕಬ್ಬಿಣದ ತುದಿಗಳುಳ್ಳ ಆ ಮೂರು ಬಾಣಗಳಿಂದ ಈ ರೀತಿ ವಿಭೀಷಣನನ್ನು ಘಾತಿಸಿ ಒಂದೊಂದು ಬಾಣದಿಂದಲೇ ಸಹಸ್ರಾರು ವಾನರರನ್ನು ಘಾತಿಸುತ್ತ ಬಂದನು. ॥ ೩೬-೪೧ ॥ ಆಗ ಮಹಾ ತೇಜಸ್ವಿಯಾದ ವಿಭೀಷಣನು ಬಹಳ ವಾಗಿ ಕೋಪಗೊಂಡು ತನ್ನ ಗದಾಯುಧದಿಂದ ದುರಾತ್ಮನಾದ ಆ ಇಂದ್ರಜಿತುವಿನ ರಥಾಶ್ವ ಗಳನ್ನು ಬಲವಾಗಿ ಹೊಡೆದನು. ಆ ಕೂಡಲೇ ಅವು ಮಡಿದು ನೆಲಕ್ಕುರುಳಿದುವು. ಹೀಗೆ ವಿಭೀಷಣನಿಂದ ಕುದುರೆಗಳು ಮಡಿದು ಬಿದ್ದಮೇಲೆ ಆ ಮೇಘನಾದನು ವಿರಥನಾಗಿ ನೆಲದಮೇಲೆ ನಿಂತು ರಥಶಕ್ತಿಯೆಂಬ ಮಹಾಸ್ತ್ರವನ್ನು ತನ್ನ ಚಿಕ್ಕ ತಂದೆಯಾದ ಆ ವಿಭೀಷಣನ ಮೇಲೆ ಪ್ರಯೋಗಿಸಿದನು. ಮಹಾ ಭಯಂಕರಾಕಾರವಾಗಿ ವಿಭೀಷಣನ ಮೇಲೆ ಬರುತ್ತಿದ್ದ ಆ ಶಕ್ತಿಯನ್ನು ನೋಡಿ ಸುಮಿತ್ರಾತನಯನಾದ ಲಕ್ಷ್ಮಣನು ಮಹಾ ತೀಕ್ಷ್ಣ ವಾದ ಬಾಣಗಳನ್ನು ಪ್ರಯೋಗಿಸಿ ಅದನ್ನು ಹತ್ತು ಹೋಳುಗಳಾಗಿ ತುಂಡರಿಸಿದನು. ಆಗಲಾ ರಥಶಕ್ತಿಯು ಚೂರುಚೂರುಗಳಾಗಿ ಭೂಮಿಗೆ ಬಿದ್ದುಹೋಯಿತು. ಆ ಸಮಯದಲ್ಲಿ ವಿಭೀ

ಪಂಚ ಸಸರ್ಜೋರಸಿ ಮಾರ್ಗಣಾನ್ ॥ ೪೫ ॥ ತೇ ತಸ್ಯ ಕಾಯಂ ನಿರ್ಭಿದ್ಯ ರುಕ್ಮಪುಂಖಾ ನಿಮಿತ್ತಗಾಃ । ಬಭೂವುರ್ಲೋಹಿತಾ ದಿಗ್ಧಾ ರಕ್ತಾ ಇವ ಮಹೋರಗಾಃ ॥ ೪೬ ॥ ಸಪಿತೃವ್ಯಾಯ ಸಂಕ್ರುದ್ಧ ಇಂದ್ರಜಿಚ್ಛರಮಾದದೇ । ಉತ್ತಮಂ ರಕ್ಷಸಾಂ ಮಧ್ಯೇ ಯಮದತ್ತಂ ಮಹಾಬಲಃ ॥೪೭॥ ತಂ ಸಮೀಕ್ಷ್ಯ ಮಹಾತೇಜಾ ಮಹೇಷುಂ ತೇನ ಸಂಹಿತಂ । ಲಕ್ಷ್ಮಣೋಽಪ್ಯಾದದೇ ಬಾಣಮನ್ಯಂ ಭೀಮಪರಾಕ್ರಮಃ ॥ ೪೮ ॥ ಕುಬೇರೇಣ ಸ್ವಯಂ ಸ್ವಪ್ನೇ ಸ್ವಸ್ಮೈ ದತ್ತಂ ಮಹಾತ್ಮನಾ । ದುರ್ಜಯಂ ದುರ್ವಿಷ

ಕುದುರೆಗಳುಳ್ಳ, ತಸ್ಮೈ - ಆ ಇಂದ್ರಜಿತುವಿಗೋಸುಗ, ಕ್ರುದ್ಧಃ - ಕೋಪಿಷ್ಠನಾದ, ದೃಢಧನುಃ - ದೃಢವಾದ ಧನುಸ್ಸುಳ್ಳ, ವಿಭೀಷಣಃ ವಿಭೀಷಣನು, ವಜ್ರಸ್ಪರ್ಶಸಮಾನ್ - ವಜ್ರಾಯುಧದ ಸ್ಪರ್ಶಕ್ಕೆ ಸಮಾನವಾದ, ಪಂಚಮಾರ್ಗಣಾನ್ - ಐದು ಬಾಣಗಳನ್ನು, ಉರಸಿ - ಎದೆಯಲ್ಲಿ, ಸಸರ್ಜ - ಬಿಟ್ಟನು. ॥ ೪೫ ॥ ರುಕ್ಮಪುಂಖಾಃ - ಬಂಗಾರದ ಕೊಂಕಿಗಳುಳ್ಳ, ನಿಮಿತ್ತಗಾಃ - ಲಕ್ಷ್ಯವನ್ನು ಭೇದಿಸುತ್ತಿರುವ, ತೇ - ಆ ಬಾಣಗಳು, ತಸ್ಯ - ಆ ಇಂದ್ರಜಿತುವಿನ, ಕಾಯಂ - ಶರೀರವನ್ನು, ನಿರ್ಭಿದ್ಯ - ಭೇದಿಸಿ, ಲೋಹಿತಾದಿಗ್ಧಾಃ - ರಕ್ತದಿಂದ ಲೇಪನ ಮಾಡಲ್ಪಟ್ಟವುಗಳಾಗಿ, ರಕ್ತಾಃ - ಕೆಂಪಾಗಿರುವ, ಮಹೋರಗಾಇವ - ದೊಡ್ಡ ಹಾವುಗಳಂತೆ, ಬಭೂವುಃ - ಶೋಭಿಸಿದುವು. ॥ ೪೬ ॥ ಮಹಾಬಲಃ - ಬಹಳ ಸಾಮರ್ಥ್ಯವಂತನಾದ, ಸಇಂದ್ರಜಿತ್ - ಆ ಇಂದ್ರಜಿತುವು, ಪಿತೃವ್ಯಾಯ - ಚಿಕ್ಕ ತಂದೆಯಾದ ವಿಭೀಷಣನಿಗೋಸುಗ, ಸಂಕ್ರುದ್ಧಃ - ಕುಪಿತನಾಗಿ, ರಕ್ಷಸಾಂ - ರಕ್ಕಸರ, ಮಧ್ಯೇ - ಮಧ್ಯದಲ್ಲಿ, ಯಮದತ್ತಂ - ಯಮನಿಂದ ಕೊಡಲ್ಪಟ್ಟ, ಉತ್ತಮಂ - ಉತ್ಕೃಷ್ಟವಾದ, ಶರಂ - ಬಾಣವನ್ನು, ಆದದೇ - ತೆಗೆದುಕೊಂಡನು. ॥ ೪೭ ॥ ಮಹಾತೇಜಾಃ - ಶತ್ರುನಿಗ್ರಹದಲ್ಲಿ ಸಾಮರ್ಥ್ಯವಂತನಾದ, ಭೀಮಪರಾಕ್ರಮಃ - ಭಯಂಕರವಾದ ಪರಾಕ್ರಮವುಳ್ಳ. ಲಕ್ಷ್ಮಣೋಪಿ - ಲಕ್ಷ್ಮಣನೂ, ತೇನ - ಆ ಇಂದ್ರಜಿತುವಿನಿಂದ, ಸಂಹಿತಂ - ಸಂಧಾನ ಮಾಡಲ್ಪಟ್ಟ, ತಂಮಹೇಷುಂ - ಆ ದೊಡ್ಡ ಸರಳನ್ನು, ಸಮೀಕ್ಷ್ಯ - ಕಂಡು, ಅನ್ಯಂ - ಮತ್ತೊಂದಾದ, ಸ್ವಪ್ನೇ - ಸ್ವಪ್ನದಲ್ಲಿ, ಸ್ವಸ್ಮೈ - ತನಗೋಸುಗ, ಮಹಾತ್ಮನಾ - ಮಹಾ ಬುದ್ಧಿಯುಳ್ಳ, ಕುಬೇರೇಣ - ಕುಬೇರನಿಂದ, ಸ್ವಯಂ - ತಾನೇ, ದತ್ತಂ - ಕೊಡಲ್ಪಟ್ಟ, ಸೇಂದ್ರೈಃ - ಇಂದ್ರನಿಂದೊಡಗೂಡಿದ, ಸುರಾಸುರೈರಪಿ - ದೇವರಾಕ್ಷಸರಿಂದಲೂ, ದುರ್ಜಯಂ - ಜಯಿಸಲಸಾಧ್ಯವಾದ, ದುರ್ವಿಷಹ್ಯಂ - ಸಹಿಸಲಸಾಧ್ಯವಾದ, ಬಾಣಂ - ಬಾಣ

ಷಣನು ದೃಢತರವಾದ ಧನುಸ್ಸುಳ್ಳವನೂ, ಮಹಾ ಕೋಪಾಟೋಪವುಳ್ಳವನೂ ಆಗಿ ವಜ್ರಾಯುಧಕ್ಕೆ ಸಮಾನಗಳಾದ ಐದು ಬಾಣಗಳನ್ನು ಇಂದ್ರಜಿತುವಿನ ಹೃದಯಕ್ಕೆ ಗುರಿಯಿಟ್ಟೆಸೆದನು. ಸುವರ್ಣದ ಹಿಡಿಗಳುಳ್ಳವೂ, ವಜ್ರೋಪಮವೂ ಆದ ಆ ಬಾಣಗಳು ಆ ರಾಕ್ಷಸನೆದೆಯನ್ನು ಕೊರೆದುಕೊಂಡು ಹೊರಬಂದವು. ಅವು ರಕ್ತಸಿಕ್ತಗಳಾಗಿ ಮಹಾ ಭಯಂಕರವಾದ ಸರ್ಪಗಳಂತೆ ತೋರುತ್ತಿದ್ದುವು. ॥ ೪೫–೪೬ ॥ ಆಗ ಇಂದ್ರಜಿತುವು ಬಹಳವಾಗಿ ಕೆರಳಿ ಯಮನು ಕೊಟ್ಟದ್ದ ಮಹಾಸ್ತ್ರವನ್ನು ರಾಕ್ಷಸೋತ್ತಮನಾದ ವಿಭೀಷಣನ ಮೇಲೆ ಪ್ರಯೋಗಿಸಿದನು. ಆ ಮಹಾಸ್ತ್ರವನ್ನು ನೋಡಿದೊಡನೆಯೇ ಮಹಾ ಪರಾಕ್ರಮಶಾಲಿಯಾದ ಲಕ್ಷ್ಮಣನು ಕುಬೇರನು ಒಂದಾನೊಂದು ದಿನ ಸ್ವಪ್ನದಲ್ಲಿ ತನಗೆ ಕೊಟ್ಟದ್ದ, ಯಾರಿಂದಲೂ ಅಜೇಯವಾಗಿ ದೇವದಾನವರಿಗೂ ಸಹಿಸಲಸಾಧ್ಯವಾದ ಪರಾಕ್ರಮವುಳ್ಳದಾಗಿರುವ ಮಹಾಸ್ತ್ರವನ್ನು ಪ್ರತಿಯಾಗಿ ಪ್ರಯೋಗಿಸಿದನು. ಆ ಸಮಯದಲ್ಲಿ ಆ ಲಕ್ಷ್ಮಣೇಂದ್ರಜಿತು

ಹ್ಯಂಚ ಸೇಂದ್ರೈರಪಿ ಸುರಾಸುರೈಃ ॥೪೯॥ ತಯೋಸ್ತೇ ಧನುಷೀ ಶ್ರೇಷ್ಠೇ ಬಾಹುಭಿಃ ಪರಿಘೋಪಮೈಃ । ವಿಕೃಷ್ಯಮಾಣೇ ಬಲವತ್ ಕ್ರೌಂಚಾವಿವ ಚುಕೂಜತುಃ ॥೫೦॥ ತಾಭ್ಯಾಂ ತೌ ಧನುಷೀ ಶ್ರೇಷ್ಠೇ ಸಂಹಿತೌ ಸಾಯಕೋತ್ತಮೌ । ವಿಕೃಷ್ಯಮಾಣೌ ವೀರಾಭ್ಯಾಂ ಭೃಶಂ ಜಜ್ವಲತುಃ ಶ್ರಿಯಾ ॥ ೫೧ ॥ ತೌ ಭಾಸಯಂತಾವಾಕಾಶಂ ಧನುರ್ಭ್ಯಾಂ ವಿಶಿಖೌ ಚ್ಯುತೌ । ಮುಖೇನ ಮುಖಮಾಹತ್ಯ ಸನ್ನಿಪೇತತುರೋಜಸಾ ॥ ೫೨ ॥ ಸನ್ನಿಪಾತಸ್ತಯೋರಾಸೀಚ್ಛರಯೋರ್ಘೋರರೂಪಯೋಃ । ಸಧೂಮ ಷ್ಫುಲಿಂಗಶ್ಚ ತಜ್ಜೋಽಗ್ನಿರ್ದಾರುಣೋಽಭವತ್ ॥ ೫೩ ॥ ತೌ ಮಹಾಗ್ರಹಸಂಕಾಶಾ ವನ್ಯೋನ್ಯಂ ಸನ್ನಿಪತ್ಯ ಚ । ಸಂಗ್ರಾಮೇ ಶತಧಾ ಯಾಂತೌ ಮೇದಿನ್ಯಾಂ ವಿನಿಪೇತತುಃ

ವನ್ನು, ಆದದೇ - ತೆಗೆದುಕೊಂಡನು. ॥ ೪೮-೪೯ ॥ ಶ್ರೇಷ್ಠೇ - ಉತ್ತಮಗಳಾದ, ತೇಧನುಷೀ - ಆ ಧನುಸ್ಸುಗಳೆರಡೂ, ಪರಿಘೋಪಮೈಃ - ಊರುಬಾಗಿಲಿಗೆ ಹಾಕತಕ್ಕ ಲಾಲವುಂಡಿಗೆಗಳಿಗೆ ಸಮಾನ ಗಳಾದ, ತಯೋಃ - ಆ ಇಂದ್ರಜಿಲ್ಲಕ್ಷ್ಮಣರ, ಬಾಹುಭಿಃ - ಭುಜಗಳಿಂದ, ಬಲವತ್ - ಬಲವಾಗಿ, ವಿಕೃಷ್ಯಮಾಣೇ - ಸೆಳೆಯಲ್ಪಟ್ಟವುಗಳಾಗಿ, ಕ್ರೌಂಚಾವಿವ - ಕ್ರೌಂಚಪಕ್ಷಿಗಳಂತೆ, ಚುಕೂಜತುಃ - ಧ್ವನಿಮಾಡುತ್ತಿದ್ದವು. ॥ ೫೦ ॥ ವೀರಾಭ್ಯಾಂ - ಶೂರರಾದ, ತಾಭ್ಯಾಂ - ಅವರೀರ್ವರಿಂದ, ಶ್ರೇಷ್ಠೇ - ಶ್ರೇಷ್ಠವಾದ, ಧನುಷೀ - ಧನುಸ್ಸುಗಳಲ್ಲಿ, ಸಂಹಿತೌ - ಸಂಧಾನ ಮಾಡಲ್ಪಟ್ಟ, ಭೃಶಂ - ಬಹಳವಾಗಿ, ವಿಕೃಷ್ಯಮಾಣೌ - ಸೆಳೆಯಲ್ಪಟ್ಟ, ತೌಸಾಯಕೋತ್ತಮೌ - ಆ ಉತ್ತಮವಾದ ಬಾಣಗಳು, ಶ್ರಿಯಾ - ಕಾಂತಿಯಿಂದ, ಜಜ್ವಲತುಃ - ಪ್ರಜ್ವಲಿಸಿದವು. ॥ ೫೧ ॥ ಧನುರ್ಭ್ಯಾಂ - ಧನುಸ್ಸುಗಳಿಂದ, ಚ್ಯುತೌ - ಜಾರುತ್ತಿರುವ, ಆಕಾಶಂ - ಅಂತರಿಕ್ಷವನ್ನು, ಭಾಸಯಂತೌ - ಕಂಗೊಳಿಸುವಂತೆ ಮಾಡುತ್ತಿರುವ, ತೌವಿಶಿಖೌ - ಆ ಬಾಣಗಳು, ಮುಖೇನ - ಬಾಣಗಳ ತುದಿಯಿಂದ, ಮುಖಂ - ಬಾಣದ ತುದಿಯನ್ನು, ಆಹತ್ಯ - ಹೊಡೆದು, ಓಜಸಾ - ಸಾಮರ್ಥ್ಯದಿಂದ, ಸನ್ನಿಪೇತುಃ - ಒಂದರಮೇಲೊಂದು ಬಿದ್ದವು. ॥ ೫೨ ॥ ಘೋರರೂಪಯೋಃ - ಭಯಂಕರವಾದ ಆಕಾರಗಳುಳ್ಳ, ತಯೋಃಶರಯೋಃ - ಆ ಬಾಣ ಗಳೆರಡಕ್ಕೂ, ಸನ್ನಿಪಾತಃ - ಸಂಘರ್ಷಣವು, ಆಸೀತ್ - ಆಯಿತು, ತಜ್ಜಃ - ಆ ಸಂಘರ್ಷಣದಿಂದ ಹುಟ್ಟಿದ, ದಾರುಣಃ - ಕ್ರೂರವಾದ, ಅಗ್ನಿಃ - ಅಗ್ನಿಯು, ಸಧೂ....ಶ್ಚ - ಹೊಗೆಯಿಂದಲೂ, ಕೆಂಡ ಗಳಿಂದಲೂ ಒಡಗೂಡಿದ್ದಾಗಿ, ಅಭವತ್ - ಆಯಿತು. ॥ ೫೩ ॥ ಮಹಾ....ಶೌ - ದೊಡ್ಡ ಗ್ರಹಗಳಿಗೆ ಸಮಾನಗಳಾದ, ತೌ - ಆ ಬಾಣಗಳೆರಡೂ, ಸಂಗ್ರಾಮೇ - ಕಾಳಗದಲ್ಲಿ, ಅನ್ಯೋನ್ಯಂ - ಪರಸ್ಪರ ವಾಗಿ, ಸಂನಿಪತ್ಯ - ಬಿದ್ದು, ಶತಧಾ - ನೂರಾರು ಭಾಗಗಳನ್ನು, ಯಾಂತೌ - ಹೊಂದುತ್ತಿರುವವು ಗಳಾಗಿ, ಮೇದಿನ್ಯಾಂ - ನೆಲದಲ್ಲಿ, ವಿನಿಪೇತತುಃ - ಬಿದ್ದವು. ॥ ೫೪ ॥ ತದಾ - ಆ ಕಾಲದಲ್ಲಿ,

---

ಗಳೀರ್ವರ ಪರಿಘೋಪಮವಾದ ಭುಜಗಳಲ್ಲಿಯ ಧನುಸ್ಸುಗಳು ಸಂಧಾನ ಮಾಡಲಾಗುತ್ತಿದ್ದು ಪಕ್ಷಿಗಳಂತೆ ಧ್ವನಿಗೈಯುತ್ತಿದ್ದುವು. ಅವರಿಬ್ಬರೂ ಕಿವಿವರೆಗೆ ಸೆಳೆದು ಬಿಟ್ಟ ಮಹಾ ಶ್ರೇಷ್ಠ ವಾದ ಆ ಬಾಣಗಳೆರಡೂ ಮಹಾ ಭಯಂಕರವಾಗಿ ಪ್ರಕಾಶಿಸುತಿದ್ದಿತಲ್ಲದೆ ಗಗನಾಂಗಣ ವನ್ನೇ ಪ್ರಕಾಶಗೊಳಿಸುತ್ತಿದ್ದುವು. ಆ ಬಾಣಗಳು ಈ ರೀತಿ ಪ್ರಜ್ವಲಿಸುತ್ತ ಒಂದರೊಡ ನೊಂದು ಸೇರಿದುವಾಗಿ ಬೆಂಕಿಯ ಕಿಡಿಗಳನ್ನುಗುಳುತ್ತ ಮತ್ತಷ್ಟು ಭಯಂಕರವಾಗಿ ಪ್ರಜ್ವ ಲಿಸಿ ಕೆಲಕಾಲ ಒಂದರೊಡನೊಂದು ಸೆಣಸಿ ಶಾಂತವಾಗಿ ನೆಲಕ್ಕೆ ಬಿದ್ದುಹೋದುವು. ॥೪೭-೫೪॥ ಅವು ಈ ರೀತಿ ವ್ಯರ್ಥವಾದುದನ್ನು ಕಂಡು, ವೀರವಾದ ಲಕ್ಷ್ಮಣೇಂದ್ರಜಿತು

॥ ೫೪ ॥ ಶರೌ ಪ್ರತಿಹತೌ ದೃಷ್ಟ್ವಾ ತಾವುಭೌ ರಣಮೂರ್ಧನಿ । ವ್ರೀಳಿತೌ ಜಾತರೋಷೌಚ ಲಕ್ಷ್ಮಣೇಂದ್ರಜಿತೌ ತದಾ ॥ ೫೫ ॥ ಸುಸಂರಬ್ಧಸ್ತು ಸೌಮಿತ್ರಿರಸ್ತ್ರಂ ವಾರುಣಮಾದದೇ । ರೌದ್ರಂ ಮಹೇಂದ್ರಜಿದ್ಯುದ್ಧೇ ವ್ಯಸೃಜದ್ಯುಧಿ ನಿಷ್ಠಿತಃ । ತೇನ ತದ್ವಿಹತಂ ತ್ವಸ್ತ್ರಂ ವಾರುಣಂ ಪರಮಾದ್ಭುತಂ ॥ ೫೬-೫೭ ॥ ತತಃ ಕ್ರುದ್ಧೋ ಮಹಾತೇಜಾ ಇಂದ್ರಜಿತ್ಸಮಿತಿಂಜಯಃ । ಆಗ್ನೇಯಂ ಸಂದಧೇ ದೀಪ್ತಂ ಸಲೋಕಂ ಸಂಕ್ಷಿಪನ್ನಿವ । ಸೌರ್ಯೇಣಾಸ್ತ್ರೇಣ ತದ್ವೀರೋ ಲಕ್ಷ್ಮಣಃ ಪತ್ಯವಾರಯತ್ ॥೫೮॥ ಅಸ್ತ್ರಂ ನಿವಾರಿತಂ ದೃಷ್ಟ್ವಾ ರಾವಣಿಃ ಕ್ರೋಧಮೂರ್ಛಿತಃ । ಆಸುರಂ ಶತ್ರುನಾಶಾಯ

ತೌಲಕ್ಷ್ಮಣೇಂದ್ರಜಿತಾವುಭೌ - ಆ ಲಕ್ಷ್ಮಣನೂ, ಇಂದ್ರಜಿತು ಇವರೀರ್ವರೂ, ರಣಮೂರ್ಧನಿ - ರಣಾಗ್ರದಲ್ಲಿ, ಶರೌ - ಬಾಣಗಳನ್ನು, ಪ್ರತಿಹತೌ - ಹೊಡೆಯಲ್ಪಟ್ಟವುಗಳನ್ನಾಗಿ, ದೃಷ್ಟ್ವಾ - ಕಂಡು, ವ್ರೀಳಿತೌ - ನಾಚಿಗೆಗೊಂಡವರಾಗಿ, ಜಾತರೋಷೌಚ - ಹುಟ್ಟಿದ ಕ್ರೋಧವುಳ್ಳವರೂ ಆದರು. ॥೫೫॥ ಸುಸಂರಬ್ಧಃ - ಬಹಳ ಕೋಪಿಷ್ಠನಾಗಿ, ಸೌಮಿತ್ರಿಃ - ಲಕ್ಷ್ಮಣನು, ವಾರುಣಮಸ್ತ್ರಂ - ವಾರುಣಾಸ್ತ್ರವನ್ನು, ಆದದೇ - ತೆಗೆದುಕೊಂಡನು, ಯುಧಿ - ಕಾಳೆಗದಲ್ಲಿ, ನಿಷ್ಠಿತಃ - ಸ್ಥಿರವಾದ, ಮಹೇಂದ್ರಜಿತ್ - ಮೇಘನಾದನು, ರೌದ್ರಂ - ರುದ್ರಸಂಬಂಧವಾದ ಅಸ್ತ್ರವನ್ನು, ವ್ಯಸೃಜತ್ - ಬಿಟ್ಟನು, ತೇನ - ಆ ರೌದ್ರಾಸ್ತ್ರದಿಂದ, ವಾರುಣಂ - ವರುಣದೇವತಾಕವಾದ, ಪರಮಾದ್ಭುತಂ - ಅತ್ಯಾಶ್ಚರ್ಯಕರವಾದ, ತದಸ್ತ್ರಂ - ಆ ಅಸ್ತ್ರವು, ನಿಹಿತಂ - ಹೊಡೆಯಲ್ಪಟ್ಟಿತು. ॥ ೫೬-೫೭ ॥ ತತಃ - ಬಳಿಕ, ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ, ಕ್ರುದ್ಧಃ - ಕುಪಿತನಾದ, ಸಮಿತಿಂಜಯಃ - ಯುದ್ಧದಲ್ಲಿ ಜಯಶೀಲನಾದ, ಸಃಇಂದ್ರಜಿತ್ - ಆ ಇಂದ್ರಜಿತುವು, ಲೋಕಂ - ಲೋಕವನ್ನು, ಸಂಕ್ಷಿಪನ್ನಿವ - ದಹಿಸುವನೋ ಎಂಬಂತೆ, ದೀಪ್ತಂ-ಜ್ವಲಿಸುತ್ತಿರುವ, ಆಗ್ನೇಯಂ - ಆಗ್ನೇಯಾಸ್ತ್ರವನ್ನು, ಸಂದಧೇ- ತೆಗೆದುಕೊಂಡನು, ವೀರಃ - ಶೂರನಾದ, ಲಕ್ಷ್ಮಣಃ - ಲಕ್ಷ್ಮಣನು, ಸೌರೇಣಾಸ್ತ್ರೇಣ - ಸೌರಾಸ್ತ್ರದಿಂದ, ತತ್ - ಆ ಆಗ್ನೇಯಾಸ್ತ್ರವನ್ನು, ಪ್ರತ್ಯವಾರಯತ್ - ನಿವಾರಿಸಿದನು. ॥ ೫೮ ॥ ಅಸ್ತ್ರಂ - ಆಗ್ನೇಯಾಸ್ತ್ರವನ್ನು, ನಿವಾರಿತಂ - ತಣ್ಣಗೆ ಮಾಡಲ್ಪಟ್ಟುದನ್ನಾಗಿ, ದೃಷ್ಟ್ವಾ - ಕಂಡು, ಕ್ರೋಧಮೂರ್ಛಿತಃ - ಕೋಪಾಕ್ರಾಂತನಾದ, ಸಃ - ಆ ಇಂದ್ರಜಿತುವು, ಶತ್ರುನಾಶಾಯ - ಶತ್ರುವಿನ ನಾಶಕ್ಕಾಗಿ, ಘೋರಂ - ಭಯಂಕರವಾದ, ಆಸುರಂಅಸ್ತ್ರಂ - ಆ ಸುರದೇವತಾಕವಾದ ಅಸ್ತ್ರವನ್ನು, ಸಮಾ

ಗಳೀರ್ವರೂ ನಾಚಿದರು. ಆಗ ಲಕ್ಷ್ಮಣನು ಮಹಾ ಸಂರಂಭವುಳ್ಳವನಾಗಿ ವಾರುಣಾಸ್ತ್ರವನ್ನು ಇಂದ್ರಜಿತುವಿನ ಮೇಲೆ ಪ್ರಯೋಗಿಸಿದನು. ಇಂದ್ರಜಿತುವು ರೌದ್ರಾಸ್ತ್ರವನ್ನು ಪ್ರಯೋಗಿಸಿ ಅದನ್ನು ನಾಶಗೊಳಿಸಿದನು. ಆಮೇಲೆ ಅಧಿಕ ತೇಜಸ್ಸಂಪನ್ನನಾದವನೂ, ಯುದ್ಧದಲ್ಲಿ ಅಜೇಯನೂ ಆದ ಇಂದ್ರಜಿತುವು ಮಹಾ ಭಯಂಕರವಾದುದೂ, ಜಗತ್ತನ್ನೇ ನಡುಗಿಸುವಂಥದೂ ಆದ ಆಗ್ನೇಯಾಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನ ಮಾಡಿ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಮಹಾ ಶೂರನಾದ ಲಕ್ಷ್ಮಣನಾದರೋ ಸೌರಾಸ್ತ್ರದಿಂದ ಆ ಅಸ್ತ್ರವನ್ನು ನಿವಾರಿಸಿದನು. ಲಕ್ಷ್ಮಣನು ತಾನು ಪ್ರಯೋಗಿಸಿದ ಆಗ್ನೇಯಾಸ್ತ್ರವನ್ನು ನಿವಾರಿಸಿದುದನ್ನು ಕಂಡು ಇಂದ್ರಜಿತುವು ಮಹಾ ಕೋಪಾಟೋಪವುಳ್ಳವನಾಗಿ ಹಗೆಯನಾದ ಅವನನ್ನು ಕೊನೆಗಾಣಿಸಬಯಸಿ ಮಹಾ ಭಯಂಕರವಾದ ಆಸುರವೆಂಬ ಮಹಾಸ್ತ್ರವನ್ನು ಅವನ ಮೇಲೆ ಪ್ರಯೋಗಿಸಿದನು. ಆ ಮಹಾಸ್ತ್ರವು ಪ್ರಜ್ವಲಿಸುತ್ತಿರುವ, ಕೂಟಗಳು,

ಘೋರಮಸ್ತ್ರಂ ಸಮಾದದೇ ‖ ೫೯ ‖ ತಸ್ಮಾಚ್ಚಾಪಾದ್ವಿನಿಷ್ಪೇತುರ್ಭಾಸ್ವರಾಃ ಕೂಟ ಮುದ್ಗರಾಃ । ಶೂಲಾನಿಚ ಮುಸುಂಠ್ಯಶ್ಚ ಗದಾಃ ಖಡ್ಗಾಃ ಪರಶ್ವಥಾಃ ‖ ೬೦ ‖ ತದ್ದೃಷ್ಟ್ವಾ ಲಕ್ಷ್ಮಣಸ್ಸಂಖ್ಯೇ ಘೋರಮಸ್ತ್ರಮಥಾಸುರಂ । ಅವಾರ್ಯಂ ಸರ್ವ ಭೂತಾನಾಂ ಸರ್ವಶತ್ರುವಿನಾಶನಂ । ಮಾಹೇಶ್ವರೇಣ ದ್ಯುತಿಮಾಂಸ್ತದಸ್ತ್ರಂ ಪ್ರತ್ಯ ವಾರಯತ್ ‖ ೬೧-೬೨ ‖ ತಯೋಃ ಸ್ಸುತುಮುಲಂ ಯುದ್ಧಂ ಸಂಬಭೂವಾದ್ಭುತೋ ಪಮಂ । ಗಗನಸ್ಥಾನಿ ಭೂತಾನಿ ಲಕ್ಷ್ಮಣಂ ಪರಿವಾರಯನ್ ‖ ೬೩ ‖ ಭೈರವಾಭಿರುತೇ ಭೀಮೇ ಯುದ್ಧೇ ವಾನರರಕ್ಷಸಾಂ । ಭೂತೈರ್ಬಹುಭಿರಾಕಾಶಂ ವಿಸ್ಮಿತೈರಾವೃತಂ

ದದೇ - ತೆಗೆದುಕೊಂಡನು. ‖ ೫೯ ‖ ತಸ್ಮಾತ್ ಚಾಪಾತ್ - ಆ ಬಿಲ್ಲಿನ ದೆಸೆಯಿಂದ, ಭಾಸ್ವರಾಃ - ಹೊಳೆಯುತ್ತಿರುವ, ಕೂಟಮುದ್ಗರಾಃ - ಕಬ್ಬಿಣದ ಕೊಡತಿಗಳೂ, ಶೂಲಾನಿಚ - ತ್ರಿಶೂಲಗಳೂ, ಮುಸಂಠ್ಯಶ್ಚ - ಮುಸಂಠೀ ಎಂಬ ಆಯುಧಗಳೂ, ಗದಾಃ - ಗದಾಯುಧಗಳೂ, ಖಡ್ಗಾಃ - ಕತ್ತಿಗಳೂ, ಪರಶ್ವಥಾಶ್ಚ-ಗಂಡುಗೊಡಲಿಗಳೂ, ವಿನಿಷ್ಪೇತುಃ-ಹುಟ್ಟಿದವು. ‖ ೬೦ ‖ ಲಕ್ಷ್ಮಣಃ-ಸೌಮಿತ್ರಿಯು, ಸಂಖ್ಯೇ - ಕಾಳಿಗದಲ್ಲಿ, ಘೋರಂ - ಭಯಂಕರವಾದ, ತದಾ....ಸ್ತ್ರಂ - ಆ ಅಸುರಾಸ್ತ್ರವನ್ನು, ದೃಷ್ಟ್ವಾ- ಕಂಡು, ಅಥ - ಬಳಿಕ, ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ಅವಾರ್ಯಂ - ನಿವಾರಿಸಲ ಸಾಧ್ಯವಾದ, ಸರ್ವ....ನಂ - ಸಮಸ್ತ ಶತ್ರುಗಳಿಗೂ ನಾಶಕರವಾದ, ತದಸ್ತ್ರಂ - ಆ ಅಸುರಾಸ್ತ್ರವನ್ನು, ದ್ಯುತಿಮಾ - ಸಾಮರ್ಥ್ಯವಂತನಾದಕಾರಣ, ಮಾಹೇಶ್ವರೇಣ - ಮಹೇಶ್ವರ ಸಂಬಂಧವಾದ ಅಸ್ತ್ರ ದಿಂದ, ಪ್ರತ್ಯವಾರಯತ್ - ತಡೆದನು. ‖ ೬೧-೬೨ ‖ ತಯೋಃ - ಅವರೀರ್ವರಿಗೂ, ಸುತುಮುಲಂ - ಬಹಳ ಸಂಕುಲವಾದ, ಯುದ್ಧಂ - ಕಾಳಿಗವು, ಅದ್ಭುತೋಪಮಂ - ಆಶ್ಚರ್ಯಕರವಾದದ್ದು, ಸಂಬ ಭೂವ - ಆಯಿತು, ಗಗನಸ್ಥಾನೇ - ಅಂತರಿಕ್ಷದಲ್ಲಿರುವ, ಭೂತಾನಿ - ಪ್ರಾಣಿಗಳು, ಲಕ್ಷ್ಮಣಂ - ಲಕ್ಷ್ಮಣನನ್ನು, ಪರ್ಯವಾರಯನ್ - ಸುತ್ತುವರೆದು. ‖ ೬೩ ‖ ಭೈರವಾಭಿರುತೇ - ಭಯಂಕರವಾದ ಶಬ್ದವುಳ್ಳ, ಭೀಮೇ - ಭಯಂಕರವಾದ, ವಾನರರಕ್ಷಸಾಂ - ಕಪಿರಾಕ್ಷಸರ, ಯುದ್ಧೇ - ಕಾಳಿಗದಲ್ಲಿ, ಆಕಾಶಂ - ಅಂತರಿಕ್ಷವು, ಬಹುಭಿಃ - ಅನೇಕಗಳಾದ, ವಿಸ್ಮಿತೈಃ - ಆಶ್ಚರ್ಯಗೊಂಡಿರುವ, ಭೂತೈಃ - ಪ್ರಾಣಿಗಳಿಂದ, ಆವೃತಂ - ಸುತ್ತುವರೆದ, ಬಭೌ - ಹೊಳೆಯುತ್ತಿದ್ದಿತು. ‖ ೬೪ ‖ ಋಷಯಃ - ಋಷಿಗಳೂ, ಪಿತರಃ - ಪಿತೃದೇವತೆಗಳೂ, ದೇವಾಃ - ದೇವತೆಗಳೂ, ಗಂಧರ್ವಾಃ - ಗಂಧರ್ವರೂ,

---

ಮುದ್ಗರಗಳು, ಶೂಲಗಳು, ಮುಸಲಗಳು, ಖಡ್ಗಗಳು, ಗಂಡುಗೊಡಲಿಗಳು ಇವೇ ಮೊದಲಾದ ಆಯುಧಗಳನ್ನು ಅಪರಿಮಿತವಾಗಿ ವರ್ಷಿಸಿತು. ‖೫೫–೬೦‖ ಹೀಗೆ ಇಂದ್ರಜಿತುವು ಪ್ರಯೋಗಿ ಸಿದ, ಸಮಸ್ತ ಭೂತಗಳಿಗೂ ತಡೆಯಲಸಾಧ್ಯವಾದುದೂ, ಶತ್ರುಗಳನ್ನು ನಾಶಗೊಳಿಸುವುದೂ ಆದ ಆ ಸುರಾಸ್ತ್ರವನ್ನು ಮಹಾ ಪರಾಕ್ರಮಿಯಾದ ಲಕ್ಷ್ಮಣಸ್ವಾಮಿಯು ಮಹೇಶ್ವರಾಸ್ತ್ರ ದಿಂದ ನಿವಾರಿಸಿ ಬಿಟ್ಟನು. ಆಗ ಆ ಎರಡು ಮಹಾಸ್ತ್ರಗಳೂ ಮಹಾ ಭಯಂಕರವಾಗಿ ಕಾಳಿಗ ಮಾಡಿದುವು. ಆ ಮಹಾ ಯುದ್ಧವನ್ನು ಕಂಡು ಗಗನದಲ್ಲಿ ನಿಂತಿದ್ದ ಸಮಸ್ತ ಭೂತಗಳೂ ಬೆದರಿ ಹೋದುವು. ಅದೇ ಸಮಯದಲ್ಲಿ ವಾನರರಿಗೂ ರಾಕ್ಷಸರಿಗೂ ಬಹು ಘೋರವಾದ ಯುದ್ಧವು ನಡೆಯಿತು. ಆ ಘೋರ ಯುದ್ಧದಲ್ಲಿ ಹುಟ್ಟಿದ ನಾದವು ಮಹಾ ಘೋರವಾಗಿದ್ದಿತು. ಆ ಸಮಯದಲ್ಲಿ ನಾನಾವಿಧಗಳಾದ ಭೂತಗಳೆಲ್ಲವೂ ಗಗನದಲ್ಲಿ ಬಂದು ನಿಂತುವು. ಪಿತೃದೇವತೆಗಳೂ, ದೇವತೆಗಳೂ, ಗಂಧರ್ವರೂ, ಗರುಡರು, ಮಹೋರ

ಬಭೌ ॥ ೬೪ ॥ ಋಷಯಃ ಪಿತರೋ ದೇವಾ ಗಂಧರ್ವಾ ಗುರುಡೋರಗಾಃ । ಶತಕ್ರತುಂ ಪುರಸ್ಕೃತ್ಯ ರರಕ್ಷುರ್ಲಕ್ಷ್ಮಣಂ ರಣೇ ॥೬೫॥ ಅಥಾನ್ಯಂ ಮಾರ್ಗಣಶ್ರೇಷ್ಠಂ ಸಂದಧೇ ರಾಘವಾನುಜಃ । ಹುತಾಶನಸಮಸ್ಪರ್ಶಂ ರಾವಣಾತ್ಮಜದಾರಣಂ ॥ ೬೬ ॥ ಸುಪತ್ರಮನುವೃತ್ತಾಂಗಂ ಸುಪರ್ವಾಣಂ ಸುಸಂಸ್ಥಿತಂ । ಸುವರ್ಣವಿಕೃತಂ ವೀರಃ ಶರೀರಾಂತಕರಂ ಶರಂ ॥ ೬೭ ॥ ದುರಾವಾರಂ ದುರ್ವಿಷಹಂ ರಾಕ್ಷಸಾನಾಂ ಭಯಾವಹಂ । ಆಶೀವಿಷವಿಷಪ್ರಖ್ಯಂ ದೇವಸಂಘೈಸ್ಸಮರ್ಚಿತಂ ॥ ೬೮ ॥ ಯೇನ ಶಕ್ರೋ ಮಹಾತೇಜಾ ದಾನವಾ ನಜಯತ್ಪ್ರಭುಃ । ಪುರಾ ದೈವಾಸುರೇ ಯುದ್ಧೇ ವೀರ್ಯವಾನ್

ಗರುಡೋರಗಾಃ - ಗರುಡರೂ ಸರ್ಪಗಳೂ, ಶತಕ್ರತುಂ - ದೇವೇಂದ್ರನನ್ನು, ಪುರಸ್ಕೃತ್ಯ - ಮುಖ್ಯನನ್ನಾಗಿ ಮಾಡಿಕೊಂಡು, ರಣೇ - ಕಾಳಗದಲ್ಲಿ, ಲಕ್ಷ್ಮಣಂ - ರಾಮಾನುಜನನ್ನು, ರರಕ್ಷುಃ - ಪಾಲಿಸಿದರು, (ಗೋ) - ಜಯಜಯ ಎಂಬ ಶಬ್ದಗಳಿಂದ ಆಶೀರ್ವಾದ ಮಾಡಿದರು. ॥ ೬೫ ॥ ಅಥ- ಬಳಿಕ, ರಾಘವಾನುಜಃ-ಶ್ರೀರಾಮನ ತಮ್ಮನಾದ ಸೌಮಿತ್ರಿಯು, ಹುತಾ....ರ್ಶಂ-ಅಗ್ನಿಗೆ ಸಮಾನವಾದ ಸ್ಪರ್ಶವುಳ್ಳ, ರಾವ...ಣಂ-ಇಂದ್ರಜಿತುವಿಗೆ ಮಾರಕವಾದ, ಅನ್ಯಂಮಾರ್ಗಣಶ್ರೇಷ್ಠಂ-ಮತ್ತೊಂದು ಉತ್ತಮವಾದ ಸರಳನ್ನು, ಸಂದಧೇ - ಸಂಧಾನ ಮಾಡಿದನು. ॥ ೬೬ ॥ ಸುಪತ್ರಂ - ಒಳ್ಳೆಯ ರೆಕ್ಕೆಗಳುಳ್ಳ, ಅನುವೃತ್ತಾಂಗಂ-ವರ್ತುಲಾಕಾರವುಳ್ಳ, ಸುಪರ್ವಾಣಂ-ಒಳ್ಳೆಯ ಸಂಧಿಯುಳ್ಳ, ಸುಸಂಸ್ಥಿತಂ- ಚೆನ್ನಾಗಿರುವ, ಸುವ....ತಂ - ಚಿನ್ನದ, ಶರೀರಾಂತಕರಂ - ಶರೀರವನ್ನು ನಾಶಮಾಡುತ್ತಿರುವ, ದುರಾವಾರಂ - ನಿವಾರಿಸಲಸಾಧ್ಯವಾದ, ದುರ್ವಿಷಹಂ - ಸಹಿಸಲಸಾಧ್ಯವಾದ, ರಾಕ್ಷಸಾನಾಂ - ರಕ್ಕಸರಿಗೆ, ಭಯಾವಹಂ - ಭಯಂಕರವಾದ, ಆಶೀ....ಖ್ಯಂ - ಸರ್ಪದ ವಿಷದಂತೆ ಕ್ರೂರವಾದ, ದೇವಸಂಘೈಃ - ದೇವತೆಗಳ ತಂಡಗಳಿಂದ, ಸಮರ್ಚಿತಂ - ಪೂಜಿಸಲ್ಪಟ್ಟ, ಶರಂ - ಸರಳನ್ನು, ವೀರಃ - ಶೂರನಾದ ರಾಮಾನುಜನು, ಸಂದಧೇ - ಸಂಧಾನ ಮಾಡಿದನು, ಮಹಾತೇಜಾಃ-ಬಹಳ ಜಯಶೀಲನಾದ, ಪ್ರಭುಃ- ಮೂರುಲೋಕಗಳಿಗೂ ಒಡೆಯನಾದ, ವೀರ್ಯವಾನ್ - ಸಾಮರ್ಥ್ಯವಂತನಾದ, ಹರಿವಾಹನಃ - ಹಚ್ಚಗಿರುವ ಅಶ್ವಗಳುಳ್ಳ, ದೇವೇಂದ್ರನು, ಪುರಾ - ಪೂರ್ವದಲ್ಲಿ, ದೈವಾಸುರೇ - ದೇವರಾಕ್ಷಸರಿಗೆ ನಡೆದ, ಯುದ್ಧೇ - ಕಾಳಗದಲ್ಲಿ, ಯೇನ - ಯಾವ ಐಂದ್ರಾಸ್ತ್ರದಿಂದ, ದಾನವಾನ್ - ರಕ್ಕಸರನ್ನು, ಅಜಯತ್ - ಜಯಿಸಿದನೋ, ತತ್ - ಅಂಥಾ, ಸಂಯುಗೇಷು - ಕಾಳಗದಲ್ಲಿ, ಅಪರಾಜಿತಂ - ಜಯಿಸಲ್ಪಡದಿರುವ,

---

ಗರೂ ಇವರೇ ಮೊದಲಾದವರೆಲ್ಲರೂ ದೇವೇಂದ್ರನನ್ನು ಮುಂದಿಟ್ಟುಕೊಂಡ ಲಕ್ಷ್ಮಣನನ್ನು ರಕ್ಷಿಸಿದರು. ಆಗ ಲಕ್ಷ್ಮಣನು ಮತ್ತೊಂದು ಬಾಣಶ್ರೇಷ್ಠವನ್ನು ಧನುಸ್ಸಿನಲ್ಲಿ ಸಂಧಿಸಿದನು. ॥ ೬೧—೬೫ ॥ ಆ ಬಾಣವು ಅಗ್ನಿಗೆ ಸಮಾನವಾಗಿಯೂ, ಇಂದ್ರಜಿತುವನ್ನು ಜಯಿಸುವ ಸಾಮರ್ಥ್ಯವುಳ್ಳುದಾಗಿಯೂ ಇದ್ದಿತು. ಇಷ್ಟೆಯಲ್ಲದೆ ಆ ಬಾಣವು ಉತ್ತಮವಾದ ರೆಕ್ಕೆಗಳುಳ್ಳುದಾಗಿಯೂ, ಗುಂಡಾದ ಅವಯವವುಳ್ಳುದಾಗಿಯೂ, ಚಿನ್ನದ ಅಲಂಕಾರವುಳ್ಳುದಾಗಿಯೂ, ದೇಹನಾಶ ಮಾಡುವ ಮಹಾ ಸಾಮರ್ಥ್ಯವುಳ್ಳುದಾಗಿಯೂ, ಯಾರಿಂದಲೂ ತಡೆಯಲಸಾಧ್ಯವಾಗಿಯೂ, ದೇವತೆಗಳಿಗೂ, ರಾಕ್ಷಸರಿಗೂ ಭಯವನ್ನುಂಟುಮಾಡುವುದಾಗಿಯೂ, ಮಹಾ ಕಾಳಸರ್ಪಗಳಂತೆ ಮಹಾ ಭಯಂಕರವಾಗಿಯೂ, ದೇವಸಮುದಾಯದಿಂದ ಪೂಜೆಯನ್ನು ಕೈಕೊಂಡುದಾಗಿಯೂ ಇದ್ದಿತು. ಪೂರ್ವದಲ್ಲಿ ಮಹೇಂದ್ರನು ಅದೇ ಅಸ್ತ್ರದಿಂದಲೇ ರಾಕ್ಷಸರನ್ನು ಜಯಿಸಿದ್ದನು. ಆ ಅಸ್ತ್ರದಿಂದಲೇ ದೇವೇಂದ್ರನು ದೇವಾಸುರ

ಹರಿವಾಹನಃ ॥ ೧೯ ॥ ತದ್ಯೈಂದ್ರಮಸ್ತ್ರಂ ಸೌಮಿತ್ರಿಸ್ಸಂಯುಗೇಷ್ವಪರಾಜಿತಂ । ಶರಶ್ರೇಷ್ಠಂ ಧನುಃ ಶ್ರೇಷ್ಠೇ ನರಶ್ರೇಷ್ಠೋಽಭಿಸಂದಧೇ ॥ ೨೦ ॥ ಸಂಧಾಯಾಮಿತ್ರದಳನಂ ವಿಚಕರ್ಷ ಶರಾಸನಂ । ಸಜ್ಯಮಾಯಮ್ಯ ದುರ್ಧರ್ಷಂ ಕಾಲೋ ಲೋಕಕ್ಷಯೇ ಯಥಾ ॥ ೨೧ ॥ ಸಂಧಾಯ ಧನುಷಿ ಶ್ರೇಷ್ಠೇ ವಿಕರ್ಷನ್ನಿದಮಬ್ರವೀತ್ । ಲಕ್ಷ್ಮೀವಾನ್ ಲಕ್ಷ್ಮಣೋ ವಾಕ್ಯಮರ್ಥಸಾಧಕಮಾತ್ಮನಃ ॥ ೨೨ ॥ "ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ । ಪೌರುಷೇ ಚಾಪ್ರತಿದ್ವಂದ್ವಃ ಶರೈನಂ ಜಹಿ ರಾವಣಿಂ" ॥ ೨೩ ॥ ಇತ್ಯುಕ್ತ್ವಾ ಬಾಣಮಾಕರ್ಣಂ ವಿಕೃಷ್ಯ ತಮಜಿಹ್ಮಗಂ ।

ಐಂದ್ರಂ - ಇಂದ್ರದೇವತಾಕವಾದ, ಅಸ್ತ್ರಂ - ಅಸ್ತ್ರಮಂತ್ರದಿಂದ ಅಭಿಮಂತ್ರಿತವಾದ, ಶರಶ್ರೇಷ್ಠಂ - ಉತ್ತಮವಾದ ಸರಳನ್ನು, ನರಶ್ರೇಷ್ಠಃ - ಮನುಷ್ಯಶ್ರೇಷ್ಠನಾದ, ಸೌಮಿತ್ರಿಃ - ಸೌಮಿತ್ರಿಯು, ಧನುಶ್ಶ್ರೇಷ್ಠೇ - ಉತ್ತಮವಾದ ಬಿಲ್ಲಿನಲ್ಲಿ, ಅಭಿಸಂದಧೇ - ಸಂಧಾನ ಮಾಡಿದನು. ॥ ೧೯-೨೦ ॥ ಲೋಕಕ್ಷಯೇ - ಲೋಕಗಳ ನಾಶಕಾಲದಲ್ಲಿ, ಕಾಲೋಯಥಾ - ಯಮನಂತೆ, ಅಮಿತ್ರದಳನಂ - ಶತ್ರುಭೇದಕವಾದ, ದುರ್ಧರ್ಷಂ - ತಿರಸ್ಕರಿಸಲಸಾಧ್ಯವಾದ ಸರಳನ್ನು, ಸಂಧಾಯ - ಸಂಧಾನ ಮಾಡಿ, ಶರಾಸನಂ- ಧನುಸ್ಸನ್ನು, ಸಜ್ಯಂ - ಹೆದೆಯಿಂದೊಡಗೂಡಿದ್ದನ್ನಾಗಿ, ಆಯಮ್ಯ - ಬಿಗಿದು, ವಿಚಕರ್ಷ - ಸೆಳೆದನು, ಲಕ್ಷ್ಮೀವಾನ್ - ವಿಜಯಲಕ್ಷ್ಮಿಯಿಂದ ಕೂಡಿರುವ, ಲಕ್ಷ್ಮಣಃ - ಸೌಮಿತ್ರಿಯು, ಶ್ರೇಷ್ಠೇ - ಉತ್ತಮವಾದ, ಧನುಷಿ - ಬಿಲ್ಲಿನಲ್ಲಿ, ಸಂಧಾಯ - ಸಂಧಾನ ಮಾಡಿ, ವಿಕರ್ಷನ್ - ಸೆಳೆಯುವವನಾಗಿ, ಆತ್ಮನಃ - ತನಗೆ, ಅರ್ಥಸಾಧಕಂ - ಪ್ರಯೋಜನಕಾರಿಯಾದ, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೧-೨೨ ॥ ಹೇ ಶರ - ಎಲೈ ಬಾಣವೇ, ಧರ್ಮಾತ್ಮಾ - ಧರ್ಮಿಷ್ಠನಾದ, ದಾಶರಥಿಃ - ದಶರಥರಾಯನ ಮಗನಾದ, ರಾಮಃ - ಶ್ರೀರಾಮನು, ಸತ್ಯಸಂಧೋಯದಿ - ಸಫಲವಾದ ಪ್ರತಿಜ್ಞೆಯುಳ್ಳವನು, ಪೌರುಷೇಚ - ಪರಾಕ್ರಮದಲ್ಲಿಯೂ, ಅಪ್ರತಿದ್ವಂದ್ವೋಯದಿ - ಸಮಾನವಿಲ್ಲದವನೇ ಆದರೆ, ಏನಂರಾವಣಿಂ - ಈ ಇಂದ್ರಜಿತುವನ್ನು, ಜಹಿ - ಹೊಡೆ. ॥ ೨೩ ॥ ಇತಿ - ಈ ಪರಿಯಾಗಿ, ಉಕ್ತ್ವಾ - ಹೇಳಿ, ವೀರಃ - ಶೂರನಾದ, ಸಮರೇ - ಕಾಳಗದಲ್ಲಿ, ಲಕ್ಷ್ಮಣಃ - ಶುಭಲಕ್ಷಣಗಳುಳ್ಳ, ಪರವೀರಹಾ - ಶತ್ರುಸಂಹಾರಕನಾದ, ಲಕ್ಷ್ಮಣಃ - ಸೌಮಿತ್ರಿಯು, ಐಂದ್ರಾಸ್ತ್ರೇಣ - ಇಂದ್ರದೇವತಾಕ

ಯುದ್ಧದಲ್ಲಿ ವಿಜಯವನ್ನು ಪಡೆದಿದ್ದನು. ಹಾಗೆ ದೇವೇಂದ್ರನಿಂದಲೂ ಪ್ರಯೋಗಿಸಲ್ಪಟ್ಟಿದ್ದ ಐಂದ್ರಾಸ್ತ್ರವೆಂದು ಪ್ರಸಿದ್ಧಿಯನ್ನು ಪಡೆದಿದ್ದ ಆ ಮಹಾಸ್ತ್ರವನ್ನು ಮಾನವೋತ್ತಮನಾದ ಲಕ್ಷ್ಮಣಸ್ವಾಮಿಯು ಧನುಸ್ಸಿನಲ್ಲಿ ಸಂಧಾನ ಮಾಡಿದನು. ॥೧೯-೨೦॥ ಹೀಗೆ ಮಹಾತೇಜಸ್ಸಂಪನ್ನನಾದ ಆ ಲಕ್ಷ್ಮಣನು ಪ್ರಳಯಕಾಲದಲ್ಲಿ ಯಮನಂತೆ ಶತ್ರುಗಳ ಶರೀರವನ್ನು ಭೇದಿಸುವಂತಹ ಆ ಬಾಣವನ್ನು ದೃಢವಾದ ನಾರಿಯುಳ್ಳ ತನ್ನ ಧನುಸ್ಸಿನಲ್ಲಿ ಸಂಧಾನ ಮಾಡಿದನು. ಅಜೇಯವಾದಾ ಬಾಣವನ್ನು ಸಂಧಾನ ಮಾಡಿದ ತರುವಾಯ ಲಕ್ಷ್ಮೀವಂತನಾದ ಆ ಲಕ್ಷ್ಮಣನು ತನ್ನ ಕಾರ್ಯವನ್ನು ನೆರವೇರಿಸಿಕೊಳ್ಳಲುಚಿತವಾಗಿ, "ಎಲೈ ಬಾಣಶ್ರೇಷ್ಠವೇ! ದಶರಥರಾಜನಂದನನಾದ ಶ್ರೀರಾಮಮೂರ್ತಿಯು ವಾಸ್ತವವಾಗಿಯೂ, ಧರ್ಮಾತ್ಮನೂ, ಸತ್ಯಸಂಧನೂ, ಪೌರುಷದಲ್ಲಿ ನಿರುಪಮಾನನೂ ಆಗಿರುವುದೇ ನಿಜವಾದರೆ ನೀನು ಈ ರಾವಣನ ಪುತ್ರನಾದ ಇಂದ್ರಜಿತುವನ್ನು ವಧಿಸು" ಎಂದು ಹೇಳಿ ನಾರಿಯನ್ನು ಕಿವಿವರೆಗೆಳೆದು, ಕಠಿಣವಾದುದೂ, ಶತ್ರುಗಳನ್ನು ಸದೆಬಡಿವುದೂ ಆದ

ಲಕ್ಷ್ಮಣಸ್ಸಮರೇ ವೀರಸ್ಸಸರ್ಜೇಂದ್ರಜಿತಂ ಪ್ರತಿ । ಐಂದ್ರಾಸ್ತ್ರೇಣ ಸಮಾಯೋಜ್ಯ ಲಕ್ಷ್ಮಣಃ ಪರವೀರಹಾ ॥ ೭೪ ॥ ಸಶಿರಸ್ಸಶಿರಸ್ತ್ರಾಣಂ ಶ್ರೀಮಜ್ಜ್ವಲಿತಕುಂಡಲಂ । ಪ್ರಮಥ್ಯೇಂದ್ರಜಿತಃ ಕಾಯಾತ್ಪಾತಯಾಮಾಸ ಭೂತಲೇ ॥ ೭೫ ॥ ತದ್ರಾಕ್ಷಸತನೂಜಸ್ಯ ಛಿನ್ನಸ್ಕಂಧಂ ಶಿರೋ ಮಹತ್ । ತಪನೀಯನಿಭಂ ಭೂಮೌ ದದೃಶೇ ರುಧಿರೋಕ್ಷಿತಂ ॥ ೭೬ ॥ ಹತಸ್ತು ನಿಪಪಾತಾಶು ಧರಣ್ಯಾಂ ರಾವಣಾತ್ಮಜಃ । ಕವಚೀ ಸಶಿರಸ್ತ್ರಾಣೋ ವಿಧ್ವಸ್ತಸ್ಸಶರಾಸನಃ ॥೭೭॥ ಚುಕ್ರುಶುಸ್ತೇ ತತಸ್ಸರ್ವೇ ವಾನರಾಸ್ಸವಿಭೀಷಣಾಃ । ಹೃಷ್ಯಂತೋ ನಿಹತೇ ತಸ್ಮಿನ್ ದೇವಾ ವೃತ್ರವಧೇ ಯಥಾ ॥ ೭೮ ॥ ಅಥಾಂತರಿಕ್ಷೇ ದೇವಾನಾಮೃಷೀಣಾಂಚ ಮಹಾತ್ಮನಾಂ । ಅಭಿಜಜ್ಞೇ ಚ ಸನ್ನಾದೋ

ವಾದ ಮಂತ್ರದಿಂದ, ಸಮಾಯೋಜ್ಯ-ಸೇರಿಸಿ, ಅಜಿಹ್ಮಗಂ ಸರಿಯಾಗಿ ಹೋಗುತ್ತಿರುವ, ತಂಬಾಣಂ-ಆ ಸರಳನ್ನು, ಆಕರ್ಣಂ - ಕರ್ಣಾಂತಪರ್ಯಂತಲೂ, ವಿಕೃಷ್ಯ - ಸೆಳೆದು, ಇಂದ್ರಜಿತಂಪ್ರತಿ - ಇಂದ್ರಜಿತುವನ್ನು ಕುರಿತು, ಸಸರ್ಜ - ಬಿಟ್ಟನು. ॥ ೭೪ ॥ ಸಃ - ಆ ಬಾಣವು, ಸಶಿರಸ್ತ್ರಾಣಂ - ಕಿರೀಟದಿಂದೊಡಗೂಡಿದ, ಶ್ರೀಮತ್ - ಕಾಂತಿಯುಕ್ತನಾದ, ಜ್ವಲಿತಕುಂಡಲಂ - ಪ್ರಜ್ವಲಿಸುತ್ತಿರುವ ಕರ್ಣಕುಂಡಲಗಳುಳ್ಳ, ಇಂದ್ರಜಿತಃ-ಇಂದ್ರಜಿತುವಿನ, ಶಿರಃ-ಮಂಡೆಯನ್ನು, ಪ್ರಮಥ್ಯ-ಕತ್ತರಿಸಿ, ಕಾಯಾತ್ - ಶರೀರದ ದೆಸೆಯಿಂದ, ಭೂತಲೇ - ಭೂಪ್ರದೇಶದಲ್ಲಿ, ಪಾತಯಾಮಾಸ - ಕೆಡಹಿತು, ರಾಕ್ಷ....ಸ್ಯ - ರಾಕ್ಷಸನ ಮಗನಾದ ಇಂದ್ರಜಿತುವಿನ, ಛಿನ್ನಸ್ಕಂಧಂ - ಕತ್ತರಿಸಲ್ಪಟ್ಟ ಕಂಠವುಳ್ಳ, ಮಹತ್ - ದೊಡ್ಡದಾದ, ರುಧಿರೋಕ್ಷಿತಂ - ರಕ್ತದಿಂದ ತೋಯಿಸಲ್ಪಟ್ಟ, ಶಿರಃ - ಮಂಡೆಯು, ಭೂಮೌ - ನೆಲದಲ್ಲಿ, ತಪನೀಯನಿಭಂ - ಬಂಗಾರದ ಪಿಂಡಕ್ಕೆ ಸಮಾನವಾದುದಾಗಿ, ದದೃಶೇ - ಕಾಣಿಸಿತು. ॥ ೭೫-೭೬ ॥ ಕವಚೀ - ಕವಚವುಳ್ಳ, ಸಶಿರಸ್ತ್ರಾಣಃ - ಕಿರೀಟದಿಂದೊಡಗೂಡಿದ, ಸಶರಾಸನಃ - ಧನುರ್ಬಾಣಗಳಿಂದೊಡಗೂಡಿದ, ರಾವಣಾತ್ಮಜಃ - ಇಂದ್ರಜಿತುವು, ಹತಃ - ಹೊಡೆಯಲ್ಪಟ್ಟವನಾಗಿ, ವಿಧ್ವಸ್ತಃ - ಧ್ವಂಸಗೊಳಿಸಲ್ಪಟ್ಟವನಾಗಿ, ಆಶು - ಜಾಗ್ರತೆಯಾಗಿ, ಧರಣ್ಯಾಂ - ನೆಲದಲ್ಲಿ, ನಿಪಪಾತ - ಬಿದ್ದನು. ॥೭೭॥ ತತಃ - ಬಳಿಕ, ತಸ್ಮಿನ್ - ಆ ಇಂದ್ರಜಿತುವು, ನಿಹತೇ - ಸಂಹರಿಸಲ್ಪಟ್ಟವನಾಗಲು, ವೃತ್ರವಧೇ - ವೃತ್ರಾಸುರಸಂಹಾರವಾಗಲೂ, ದೇವಾಯಥಾ - ದೇವತೆಗಳಂತೆ, ಹೃಷ್ಯಂತಃ - ಸಂತೋಷಿಸುತ್ತಿರುವ, ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ಸವಿಭೀಷಣಾಃ - ವಿಭೀಷಣನಿಂದೊಡಗೂಡಿದವರಾಗಿ, ಚುಕ್ರುಶುಃ - ಕೋಲಾಹಲಧ್ವನಿ ಮಾಡಿದರು, ಅಥ - ಬಳಿಕ, ಅಂತರಿಕ್ಷೇ

ಆ ಐಂದ್ರಾಸ್ತ್ರವನ್ನು ಆ ಇಂದ್ರಜಿತುವಿನ ವಧೆಗಾಗಿ ಪ್ರಯೋಗಿಸಿದನು. ಆಗಲಾ ಅಸ್ತ್ರವು ಪ್ರಜ್ವಲಿಸುತ್ತಿರುವ ಕರ್ಣಕುಂಡಲವುಳ್ಳುದಾಗಿಯೂ, ಶಿರಸ್ತ್ರಾಣವುಳ್ಳುದಾಗಿಯೂ ಇರುವ ಇಂದ್ರಜಿತುವಿನ ಶಿರಸ್ಸು ಕತ್ತರಿಸಿ ಕೆಳಕ್ಕೆ ಕೆಡವಿಬಿಟ್ಟಿತು. ॥ ೭೧-೭೫ ॥ ಹೀಗೆ ಕೆಳಕ್ಕೆ ಬಿದ್ದುದೂ, ಬಹು ದೊಡ್ಡದಾದುದೂ ಆದ ಆ ಶಿರಸ್ಸು ಅಗ್ನಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದಿತು. ಕವಚಧಾರಿಯೂ, ಕತ್ತರಿಸಿ ಬಿದ್ದ ಶಿರಸ್ಸುಳ್ಳವನಾಗಿಯೂ, ಬಿದ್ದು ಹೋದ ಕಿರೀಟವುಳ್ಳವನಾಗಿಯೂ ಇರುವ ಆ ರಾವಣನ ಮಗನ ಶರೀರವೂ ನೆಲಕ್ಕುರುಳಿತು. ಆಗ ವಿಭೀಷಣನೊಡಗೂಡಿದ ವಾನರರೆಲ್ಲರೂ ಇಂದ್ರಜಿತುವು ಮಡಿದುದರಿಂದ ಅಪರಿಮಿತಾನಂದಭರಿತರಾಗಿ ಸಿಂಹನಾದಗಳನ್ನು ಮಾಡತೊಡಗಿದರು. ಆ ಸಮಯದಲ್ಲಿ ಗಗನದಲ್ಲಿ ನಿಂತಿದ್ದ ದೇವತೆಗಳೂ, ಮಹಾನುಭಾವರಾದ ಋಷಿಗಳೂ, ಗಂಧರ್ವರೂ, ಅಪ್ಸರ

ಗಂಧರ್ವಾಪ್ಸರಸಾಮಪಿ ॥ ೭೯ ॥ ಪತಿತಂ ತಮಭಿಜ್ಞಾಯ ರಾಕ್ಷಸೀ ಸಾ ಮಹಾ ಚಮೂಃ । ವಧ್ಯಮಾನಾ ದಿಶೋ ಭೇಜೇ ಹರಿಭಿರ್ಜಿತಕಾಶಿಭಿಃ ॥ ೮೦ ॥ ವಾನರೈ ರ್ವಧ್ಯಮಾನಾಸ್ತೇ ಶಸ್ತ್ರಾಣ್ಯುತ್ಸೃಜ್ಯ ರಾಕ್ಷಸಾಃ । ಲಂಕಾಮಭಿಮುಖಾಸ್ಸಸ್ರುರ್ನಷ್ಟ ಸಂಜ್ಞಾಃ ಪ್ರಧಾವಿತಾಃ ॥ ೮೧ ॥ ದುದ್ರುವುರ್ಬಹುಧಾ ಭೀತಾ ರಾಕ್ಷಸಾಃ ಶತಶೋ ದಿಶಃ । ತ್ಯಕ್ತ್ವಾ ಪ್ರಹರಣಾನ್ ಸರ್ವೇ ಪಟ್ಟಸಾಸಿಪರಶ್ವಧಾನ್ ॥ ೮೨ ॥ ಕೇಚಿಲ್ಲಂಕಾಂ ಪರಿತ್ರಸ್ತಾಃ ಪ್ರವಿಷ್ಟಾ ವಾನರಾರ್ದಿತಾಃ । ಸಮುದ್ರೇ ಪತಿತಾಃ ಕೇಚಿತ್ಕೇಚಿತ್ಪರ್ವತ

ಅಂತರಿಕ್ಷದಲ್ಲಿ, ಮಹಾತ್ಮನಾಂ - ಮಹಾ ಪ್ರಭಾವವಂತರಾದ, ದೇವಾನಾಂ - ದೇವತೆಗಳ, ಋಷೀ ಣಾಂಚ - ಋಷಿಗಳ, ಗಂಧ....ಪಿ - ಗಂಧರ್ವರ ಮತ್ತು ಅಪ್ಸರಸ್ತ್ರೀಯರುಗಳ, ಸನ್ನಾದಃ ಧ್ವನಿಯು, ಅಭಿಜಜ್ಞೇ - ಹುಟ್ಟಿತು. ||೭೮-೭೯|| ಜಿತಕಾಶಿಭಿಃ - ಜಯಶೀಲರಾದ, ಹರಿಭಿಃ - ಕಪಿಗಳಿಂದ, ವಧ್ಯ ಮಾನಾ - ಹೊಡೆಯಲ್ಪಡುತ್ತಿರುವ, ರಾಕ್ಷಸೀ - ರಾಕ್ಷಸರ ಸಂಬಂಧವಾದ, ಸಾಮಹಾಚಮೂಃ - ಆ ದೊಡ್ಡ ಸೈನ್ಯವು, ತಂ - ಆ ಇಂದ್ರಜಿತುವನ್ನು, ಪತಿತಂ - ಬಿದ್ದವನನ್ನಾಗಿ, ಅಭಿಜ್ಞಾಯ - ತಿಳಿದು, ದಿಶಃ - ದಿಕ್ಕುಗಳನ್ನು, ಭೇಜೇ - ಹೊಂದಿತು, ವಾನರೈಃ - ಕಪಿಗಳಿಂದ, ವಧ್ಯಮಾನಾಃ - ಹೊಡೆಯ ಲ್ಪಡುತ್ತಿರುವ, ತೇರಾಕ್ಷಸಾಃ - ಆ ರಕ್ಕಸರು, ಶಸ್ತ್ರಾಣಿ - ಆಯುಧಗಳನ್ನು, ಉತ್ಸೃಜ್ಯ - ಬಿಟ್ಟು, ನಷ್ಟಸಂಜ್ಞಾಃ - ಹೋದ ಪ್ರಜ್ಞೆಯುಳ್ಳವರಾಗಿ, ಪ್ರಧಾವಿತಾಃ - ಓಡಿಸಲ್ಪಡುತ್ತಿರುವವರಾಗಿ, ಲಂಕಾಂ- ಲಂಕಾಪಟ್ಟಣಕ್ಕೆ, ಅಭಿಮುಖಾಃ ಎದುರಾಗಿ, ಸಸ್ರುಃ-ಸಾಗಿಹೋದರು. ||೮೦-೮೧|| ಸರ್ವೇ ಸಮಸ್ತ ರಾದ, ಶತಶಃ-ನೂರಾರು ಸಂಖ್ಯೆಯುಳ್ಳ, ರಾಕ್ಷಸಾಃ-ರಕ್ಕಸರ , ಬಹುಧಾ-ಬಹು ಬಗೆಯಾಗಿ, ಭೀತಾಃ- ಭಯಗೊಂಡು, ಪಟ್ಟ....ಧಾನ್ - ದೊಡ್ಡಕತ್ತಿಗಳನ್ನೂ, ಚಿಕ್ಕಕತ್ತಿಗಳನ್ನೂ, ಗೊಡ್ಲಿಗಳನ್ನೂ, ಪ್ರಹ ರಣಾನ್-ಮತ್ತು ಕೆಲ ಆಯುಧಗಳನ್ನೂ, ತ್ಯಕ್ತ್ವಾ-ಬಿಟ್ಟು, ದಿಶಃ-ದಿಕ್ಕುಗಳನ್ನು ಕುರಿತು, ದುದ್ರುವುಃ - ಓಡಿದರು. ॥ ೮೨ ॥ ಕೇಚಿತ್ - ಕೆಲ ರಾಕ್ಷಸರು, ವಾನರಾರ್ದಿತಾಃ - ಕಪಿಗಳಿಂದ ಹೊಡೆಯಲ್ಪಟ್ಟವ ರಾಗಿ, ಪರಿತ್ರಸ್ತಾಃ - ಭೀತರಾಗಿ, ಲಂಕಾಂ - ಲಂಕಾಪಟ್ಟಣವನ್ನು, ಪ್ರವಿಷ್ಟಾಃ - ಹೊಕ್ಕರು, ಕೇಚಿತ್ - ಕೆಲವರು, ಸಮುದ್ರೇ - ಕಡಲಿನಲ್ಲಿ, ಪತಿತಾಃ - ಬಿದ್ದರು, ಕೇಚಿತ್ - ಕೆಲವರು, ಪರ್ವತಂ - ಬೆಟ್ಟ ವನ್ನು, ಆಶ್ರಿತಾಃ - ಹೊಂದಿದರು. ॥ ೮೩ ॥ ಹತಂ - ಹೊಡೆಯಲ್ಪಟ್ಟ, ಇಂದ್ರಜಿತಂ - ಇಂದ್ರಜಿತು

ಸ್ತ್ರೀಯರೂ ಸಂತೋಷಸೂಚಕವಾಗಿ ಜಯಜಯಕಾರಗಳನ್ನು ಮಾಡಿದರು. ॥ ೭೬-೮೦ ॥ ಇದೂ ಅಲ್ಲದೆ ಅದೇ ಸಮಯದಲ್ಲಿಯೇ, ಇಂದ್ರಜಿತುವು ಮಡಿದ ವಿಷಯವನ್ನು ತಿಳಿದು ವಾನರರಿಂದ ಬಲವಾಗಿ ಬಾಧಿಸಲಾದ ರಾಕ್ಷಸಸೇನೆಯೆಲ್ಲವೂ ಒಡೆಯನಿಲ್ಲದೆ ದಿಕ್ಕೆಟ್ಟು ದಿಕ್ಕು ವಿದಿಕ್ಕುಗಳಿಗೂ ಪಲಾಯನವಾಯಿತು. ರಾಕ್ಷಸರೆಲ್ಲರೂ ವಾನರರ ಹೊಡೆತಗಳನ್ನು ತಾಳಲಾ ರದೆ ಅಸ್ತ್ರಶಸ್ತ್ರಗಳನ್ನು ಬಿಸುಟು ಲಂಕಾಭಿಮುಖರಾಗಿ ಓಡಿಹೋದರು. ಕೆಲವರು ರಾಕ್ಷಸರು ನೆಲಕ್ಕೆ ಬಿದ್ದು ಮೂರ್ಛೆ ಹೊಂದಿದರು. ಕೆಲವರು ಭೀತಚಿತ್ತರಾಗಿ ನಾಲ್ಕೂ ದಿಕ್ಕುಗಳಿಗೆ ಓಡಿಹೋದರು. ಆ ಸಮಯದಲ್ಲಿ ರಾಕ್ಷಸರೆಲ್ಲರೂ ಕತ್ತಿಗಳನ್ನೂ, ಕಿರುಗತ್ತಿಗಳನ್ನೂ, ಗಂಡುಗೊಡಲಿಗಳನ್ನೂ ಬಿಸುಟು ಓಡಿದರು. ಕೆಲವರು ರಾಕ್ಷಸರು ವಾನರರಿಗೆ ಬಹಳವಾಗಿ ಹೆದರಿ ಅವರಿಂದ ಬಹಳವಾಗಿ ಪೀಡಿಸಲ್ಪಟ್ಟವರಾಗಿ ಲಂಕಾಭಿಮುಖರಾಗಿ ತೆರಳಿದರು. ಕೆಲ ವರು ಬಾಧೆಯನ್ನು ತಾಳಲಾರದೆ ಸಮುದ್ರದಲ್ಲಿ ಬಿದ್ದುಹೋದರು. ಕೆಲವರು ಪರ್ವತ

ಮಾಶ್ರಿತಾಃ || ೮೩ || ಹತಮಿಂದ್ರಜಿತಂ ದೃಷ್ಟ್ವಾ ಶಯಾನಂ ಸಮರಕ್ಷಿತೌ | ರಾಕ್ಷಸಾನಾಂ ಸಹಸ್ರೇಷು ನಕಶ್ಚಿತ್ಪ್ರತ್ಯದೃಶ್ಯತ || ೮೪ || ಯಥಾಸ್ತಂಗತ ಆದಿತ್ಯೇ ನಾವತಿಷ್ಠಂತಿ ರಶ್ಮಯಃ | ತಥಾ ತಸ್ಮಿನ್ನಿಪತಿತೇ ರಾಕ್ಷಸಾಸ್ತೇ ಗತಾ ದಿಶಃ || ೮೫ || ಶಾಂತರಶ್ಮಿರಿವಾದಿತ್ಯೋ ನಿರ್ವಾಣ ಇವ ಪಾವಕಃ | ಸಬಭೂವ ಮಹಾತೇಜಾ ವ್ಯಪಾಸ್ತ ಗತಜೀವಿತಃ || ೮೬ || ಪ್ರಶಾಂತಪೀಡಾಬಹುಳೋ ನಷ್ಟಾರಿಷ್ಟಃ ಪ್ರತಾಪವಾನ್ | ಬಭೂವ ಲೋಕಃ ಪತಿತೇ ರಾಕ್ಷಸೇಂದ್ರಸುತೇ ತದಾ || ೮೭ || ಹರ್ಷಂಚ ಶಕ್ರೋ ಭಗವಾನ್ ಸಹಸರ್ವೈಸ್ಸುರರ್ಷಭೈಃ | ಜಗಾಮ ನಿಹತೇ ತಸ್ಮಿನ್ ರಾಕ್ಷಸೇ

ವನ್ನು, ಸಮರಕ್ಷಿತೌ - ರಣಭೂಮಿಯಲ್ಲಿ, ಶಯಾನಂ - ಮಲಗಿರುವುದನ್ನು, ದೃಷ್ಟ್ವಾ - ಕಂಡು, ರಾಕ್ಷಸಾನಾಂ - ರಕ್ಕಸರ, ಸಹಸ್ರೇಷು - ಸಾವಿರಾರುಗಳಲ್ಲಿ, ಕಶ್ಚಿತ್ - ಯಾವ ರಕ್ಕಸನೂ, ನಪ್ರತ್ಯದೃಶ್ಯತ - ಕಾಣಿಸಲಿಲ್ಲ. || ೮೪ || ಆದಿತ್ಯೇ - ಸೂರ್ಯನು, ಅಸ್ತಂಗತೇ - ಅಸ್ತಮಯವಾಗಲು, ಯಥಾ - ಹೇಗೆ, ರಶ್ಮಯಃ - ಕಿರಣಗಳು, ನಾವತಿಸ್ಠಂತಿ - ಇರುವದಿಲ್ಲವೋ, ತಥಾ - ಹಾಗೆಯೇ, ತಸ್ಮಿನ್ - ಆ ಇಂದ್ರಜಿತುವು, ನಿಪತಿತೇ - ಬಿದ್ದವನಾಗಲು, ತೇರಾಕ್ಷಸಾಃ - ಆ ರಕ್ಕಸರು, ದಿಶಃ - ದಿಕ್ಕುಗಳನ್ನು, ಗತಾಃ - ಹೊಂದಿದರು. || ೮೫ || ಮಹಾತೇಜಾಃ - ಬಹಳ ತೇಜೋವಂತನಾದ, ವ್ಯಪಾ....ತಃ - ಭೇದಿಸಿದ ಶರೀರವುಳ್ಳ ಮತ್ತು ಗತಪ್ರಾಣನಾದ, ಸಃ - ಆ ಇಂದ್ರಜಿತುವು, ಶಾಂತರಶ್ಮಿಃ - ಉಪಶಾಂತವಾದ ಕಿರಣಗಳುಳ್ಳ, ಆದಿತ್ಯಇವ - ಸೂರ್ಯನಂತೆ, ನಿರ್ವಾಣಃ - ತಣ್ಣಗಾದ, ಪಾವಕಇವ - ಅಗ್ನಿಯಂತೆ, ಬಭೂವ - ಆದನು. || ೮೬ || ತದಾ - ಆ ಕಾಲದಲ್ಲಿ, ರಾಕ್ಷಸೇಂದ್ರಸುತೇ - ರಾವಣನ ಮಗನು, ಪತಿತೇ - ಬಿದ್ದವನಾಗಲು, ಲೋಕಃ - ಜನವು, ಪ್ರಶಾಂ....ಳಃ - ಉಪಶಾಂತವಾದ ವಿವಿಧ ದುಃಖಗಳುಳ್ಳದ್ದು, ನಷ್ಟಾರಿಷ್ಟಃ - ನಷ್ಟವಾದ ಅಶುಭಗಳುಳ್ಳದ್ದು, ಪ್ರತಾಪವಾನ್ - ಸೂರ್ಯಪ್ರಕಾಶವುಳ್ಳದ್ದು, ಬಭೂವ - ಆಯಿತು. || ೮೭ || ಪಾಪಕರ್ಮಣಿ - ಪಾಪವ್ಯಾಪಾರಿಯಾದ, ತಸ್ಮಿನ್ರಾಕ್ಷಸೇ - ಆ ಇಂದ್ರಜಿತುವು, ನಿಹತೇ - ಸಂಹೃತನಾಗಲು, ಭಗವಾನ್ - ಪೂಜ್ಯನಾದ, ಶಕ್ರಃ - ದೇವೇಂದ್ರನು, ಸರ್ವೈಃ-ಸಮಸ್ತರಾದ, ಸುರರ್ಷಭೈಸ್ಸಹ-ದೇವತಾಶ್ರೇಷ್ಠರೊಡಗೂಡಿ, ಹರ್ಷಂಚ-ಸಂತೋಷವನ್ನೂ, ಜಗಾಮ - ಹೊಂದಿದನು, ಆಕಾಶೇ - ಆಕಾಶದಲ್ಲಿ, ದೇವಾನಾಂ - ದೇವತೆ

ಗಳನ್ನೇರಿದರು. ಹೀಗೆ ಇಂದ್ರಜಿತುವು ಮಡಿದ ತರುವಾಯ ಆ ರಣರಂಗದಲ್ಲಿ ಒಬ್ಬ ರಾಕ್ಷಸನೂ ನಿಲ್ಲಲಾರದೆ ಹೋದನು. ಅವರೆಲ್ಲರೂ ಸೂರ್ಯನಸ್ತಮಿಸಿದ ತರುವಾಯ ಸೂರ್ಯಕಿರಣಗಳೋಪಾದಿಯಲ್ಲಿ ಆ ಇಂದ್ರಜಿತುವನ್ನು ತೊರೆದು ಹೊರಟುಹೋದರು. ಹೀಗೆ ರಾಕ್ಷಸೋತ್ತಮನಾದ ಆ ಮೇಘನಾದನು ಮಡಿಯುತ್ತಲೇ ರಾಕ್ಷಸರೆಲ್ಲರೂ ನಾಲ್ಕೂ ದಿಕ್ಕುಗಳಿಗೆ ಓಡಿಹೋದರು. || ೮೧-೮೬ || ಆ ಸಮಯದಲ್ಲಿ ಇಂದ್ರಜಿತುವಾದರೋ ಪ್ರಶಾಂತವಾದ ಕಿರಣಗಳುಳ್ಳ ಸೂರ್ಯನಂತೆಯೂ, ತಣ್ಣಗಾದ ಅಗ್ನಿಯಂತೆಯೂ ತೋರುತ್ತಿದ್ದನು. ಹೀಗೆ ಅವನು ಮಡಿದು ಹೋಗುತ್ತಲೇ ಲೋಕಗಳಿಗೆ ಅವನಿಂದಾಗುತ್ತಿದ್ದ ಪೀಡೆಗಳೂ, ಅನರ್ಥಗಳೂ ತೊಲಗಿಹೋದುವು. ಲೋಕವೆಲ್ಲವೂ ಸಂತೋಷವನ್ನು ಹೊಂದಿತು. ಭಗವಂತನಾದ ದೇವೇಂದ್ರನು ಸಮಸ್ತ ದೇವತೆಗಳೊಡಗೂಡಿ ಅಮಿತಾನಂದಭರಿತನಾದನು. ಮಹಾ ಪಾಪಿಷ್ಠನಾದ ಆ ಇಂದ್ರಜಿತುವು ಮಡಿದುದನ್ನು ನೋಡಿ ದೇವತೆಗಳೆಲ್ಲರೂ ಆನಂದ

ಪಾಪಕರ್ಮಣಿ ॥ ೮೮ ॥ ಆಕಾಶೇಚಾಪಿ ದೇವಾನಾಂ ಶುಶ್ರುವೇ ದುಂದುಭಿಸ್ವನಃ ।
ನೃತ್ಯದ್ಭಿರಪ್ಸರೋಭಿಶ್ಚ ಗಂಧರ್ವೈಶ್ಚ ಮಹಾತ್ಮಭಿಃ ॥ ೮೯ ॥ ವವೃಷುಃ ಪುಷ್ಪವರ್ಷಾಣಿ
ತದದ್ಭುತಮಭೂತ್ತದಾ । ಪ್ರಶಶಂಸುರ್ಹತೇ ತಸ್ಮಿನ್ ರಾಕ್ಷಸೇ ಕ್ರೂರಕರ್ಮಣಿ ॥೯೦॥
ಶುದ್ಧಾ ಆಪೋ ದಿಶಶ್ಚೈವ ಜಹೃಷುರ್ದೈತ್ಯದಾನವಾಃ । ಆಜಗ್ಮುಃ ಪತಿತೇ ತಸ್ಮಿನ್
ಸರ್ವಲೋಕಭಯಾವಹೇ ॥ ೯೧ ॥ ಊಚುಶ್ಚ ಸಹಿತಾಸ್ಸರ್ವೇ ದೇವಗಂಧರ್ವ
ದಾನವಾಃ । ವಿಜ್ವರಾಃ ಶಾಂತಕಲುಷಾ ಬ್ರಾಹ್ಮಣಾ ವಿಚರಂತ್ವಿತಿ ॥೯೨॥ ತತೋಽಭ್ಯ
ನಂದನ್ ಸಂಹೃಷ್ಟಾಸ್ಸಮರೇ ಹರಿಯೂಥಪಾಃ । ತಮಪ್ರತಿಬಲಂ ದೃಷ್ಟ್ವಾ ಹತಂ

ಗಳ, ದುಂದುಭಿಸ್ವನಶ್ಚಾಪಿ - ಜಯಶಬ್ದವನ್ನೂ, ಶುಶ್ರುವೇ - ಕೇಳಿಸಿತು, ನೃತ್ಯದ್ಭಿಃ - ನರ್ತನ ಮಾಡುತ್ತಿರುವ, ಅಪ್ಸರೋಭಿಶ್ಚ - ಅಪ್ಸರಸ್ತ್ರೀಯರುಗಳಿಂದಲೂ, ಮಹಾತ್ಮಭಿಃ - ಮಹಾತ್ಮರಾದ, ಗಂಧರ್ವೈಶ್ಚ - ಗಂಧರ್ವರಿಂದಲೂ, ಸ್ವನಃ - ಜಯಧ್ವನಿಯು, ಶುಶ್ರುವೇ - ಕೇಳಿಸಿತು. ॥ ೮೮-೮೯ ॥ ತದಾ - ಆ ಕಾಲದಲ್ಲಿ, ದೇವಾಃ - ದೇವತೆಗಳು, ಪುಷ್ಪವರ್ಷಾಣಿ - ಪುಷ್ಪವೃಷ್ಟಿಗಳನ್ನು, ವವರ್ಷುಃ - ಸುರಿಸಿದರು, ಕ್ರೂರಕರ್ಮಣಿ - ಕ್ರೂರವ್ಯಾಪಾರಿಯಾದ, ತಸ್ಮಿನ್ರಾಕ್ಷಸೇ - ಆ ರಕ್ಕಸನು, ಹತೇ - ಸಂಹೃತನಾಗಲು, ಪ್ರಶಶಂಸುಃ - ಶ್ಲಾಘನೆ ಮಾಡಿದರು, ತತ್ - ಅದು, ಅದ್ಭುತಂ - ಆಶ್ಚರ್ಯಕರ ವಾದದ್ದು, ಅಭೂತ್ - ಆಯಿತು, ಆಪಃ - ಉದಕಗಳೂ, ದಿಶಶ್ಚೈವ - ದಿಕ್ಕುಗಳೂ, ಶುದ್ಧಾಃ - ಪರಿಶುದ್ಧಗಳಾದವು, ದೈತ್ಯದಾನವಾಃ - ದೈತ್ಯರೂ ದಾನವರೆಂಬ ರಾಕ್ಷಸಭೇದಗಳೂ, ಜಹೃಷುಃ - ಸಂತೋಷಗೊಂಡರು. ॥ ೯೦-೯೧ ॥ ಸರ್ವ....ಹೇ - ಸಮಸ್ತ ಲೋಕಗಳಿಗೂ ಭಯಂಕರನಾದ, ತಸ್ಮಿನ್ - ಆ ಇಂದ್ರಜಿತುವು, ಪತಿತೇ - ಕೆಳಗೆ ಬೀಳಲು, ಸರ್ವೇ - ಸಮಸ್ತರಾದ, ದೇವ....ವಾಃ - ದೇವ ಗಂಧರ್ವ ದಾನವರೂ, ಸಹಿತಾಃ - ಗುಂಪು ಸೇರಿ, ಆಜಗ್ಮುಃ - ಬಂದರು, ಬ್ರಾಹ್ಮಣಾಃ - ಬ್ರಾಹ್ಮಣರು, ವಿಜ್ವರಾಃ - ತಾಪರಹಿತರಾಗಿ, ಶಾಂತಕಲುಷಾಃ - ಉಪಶಾಂತವಾದ ಪಾಪಕೃತ್ಯಗಳುಳ್ಳವರಾಗಿ, ವಿಚರಂತ್ವಿತಿ - ಸಂಚರಿಸಲೆಂದು, ಊಚುಶ್ಚ - ಹೇಳಿದರು. ॥ ೯೨ ॥ ಸಮರೇ - ಕಾಳೆಗದಲ್ಲಿ, ತತಃ - ಬಳಿಕ, ಹರಿಯೂಥಪಾಃ - ವಾನರಯೂಥಪತಿಗಳು, ಅಪ್ರತಿಬಲಂ - ಸಮಾನವಿಲ್ಲದ ಬಲವುಳ್ಳ, ತಂನೈರ್ಋತಪುಂಗವಂ - ಆ ರಾಕ್ಷಸೋತ್ತಮನನ್ನು, ಹತಂ-ಸಂಹೃತನನ್ನಾಗಿ, ದೃಷ್ಟ್ವಾ-ಕಂಡು, ಸಂಹೃಷ್ಟಾಃ - ಸಂತೋಷಗೊಂಡು, ಅಭ್ಯನಂದನ್ - ಆನಂದಪಟ್ಟರು. ॥ ೯೩ ॥ ವಿಭೀಷಣಃ -

---

ಭರಿತರಾಗಿ ಅಂತರಿಕ್ಷದಲ್ಲಿ ನಿಂತು ದೇವದುಂದುಭಿಗಳನ್ನು ಮೊಳಗಿಸಿದರು. ಅಪ್ಸರ ಕನ್ನಿಕೆಯರು ನಾಟ್ಯವಾಡಿದರು. ಮಹಾತ್ಮರಾದ ಗಂಧರ್ವರು ಗಾಯನ ಮಾಡಿದರು. ಅವರೆಲ್ಲರೂ ಅಪರಿಮಿತ ಸಂತೋಷದಿಂದ ಕೂಡಿದವರಾಗಿ ಪುಷ್ಪವೃಷ್ಟಿಯನ್ನೂ ಮಾಡಿದರು. ಮಹಾ ಕಠೋರಹೃದಯನಾದ ಇಂದ್ರಜಿತುವು ಮಡಿದುದನ್ನು ಕಂಡು ಅವರೆಲ್ಲರೂ ವೀರನಾದ ಲಕ್ಷ್ಮಣಸ್ವಾಮಿಯನ್ನು ಪ್ರಶಂಸಿಸಿದರು. ನದಿಗಳೂ, ದಿಕ್ಕುಗಳೂ ಪ್ರಸನ್ನಗಳಾದುವು. ದೈತ್ಯದಾನವರೆಲ್ಲರೂ ಸಂತೋಷಪಟ್ಟರು. "ಬ್ರಾಹ್ಮಣರೆಲ್ಲರೂ ಭಯರಹಿತರೂ, ನಿರ್ಮಲ ಮನಸ್ಕರೂ ಆಗಿ ಸಂಚರಿಸಲಿ" ಎಂದು ಗಂಧರ್ವಾಪ್ಸರಗಣಗಳೆಲ್ಲವೂ ಕೂಗಿ ಹೇಳಿದರು. ॥ ೮೮-೯೨ ॥ ಆಗ ವಾನರಯೂಥನಾಥರೆಲ್ಲರೂ ಪರಮಾನಂದಭರಿತರಾದರು. ಇಷ್ಟೆಯಲ್ಲದೆ, ಅನುಪಮವಾದ ಬಲಪರಾಕ್ರಮಸಂಪನ್ನನೂ, ಮೃತಿಯೊಂದಿ ನೆಲದಮೇಲೆ

ನೈರ್ಋತಪುಂಗವಂ ॥ ೯೩ ॥ ವಿಭೀಷಣೋ ಹನೂಮಾಂಶ್ಚ ಜಾಂಬವಾಂಶ್ಚರ್ಕ್ಷಯೂಥಪಃ । ವಿಜಯೇನಾಭಿನಂದಂತ ಸ್ತುಷ್ಟುವುಶ್ಚಾಪಿ ಲಕ್ಷ್ಮಣಂ ॥ ೯೪ ॥ ಕ್ಷ್ವೇಳಂತಶ್ಚ ನದಂತಶ್ಚ ಗರ್ಜಂತಶ್ಚ ಪ್ಲವಂಗಮಾಃ । ಲಬ್ಧಲಕ್ಷಾ ರಘುಸುತಂ ಪರಿವಾರ್ಯೋಪತಸ್ಥಿರೇ ॥ ೯೫ ॥ ಲಾಂಗೂಲಾನಿ ಪ್ರವಿಧ್ಯಂತ ಸ್ಫೋಟಯಂತಶ್ಚ ವಾನರಾಃ । ಲಕ್ಷ್ಮಣೋ ಜಯತೀತ್ಯೇವಂ ವಾಕ್ಯಂ ವಿಶ್ರಾವಯಂಸ್ತದಾ ॥ ೯೬ ॥ ಅನ್ಯೋನ್ಯಂ ಚ ಸಮಾಶ್ಲಿಷ್ಯ ಕಪಯೋ ಹೃಷ್ಟಮಾನಸಾಃ । ಚಕ್ರುರುಚ್ಚಾವಚಗುಣಾ ರಾಘವಾಶ್ರಯಜಾಃ ಕಥಾಃ ॥ ೯೭ ॥

ವಿಭೀಷಣನೂ, ಹನುಮಾಂಶ್ಚ-ಆಂಜನೇಯನೂ, ಋಕ್ಷಯೂಥಪಃ-ಕರಡಿಗಳ ತಂಡಗಳಿಗಧಿಪತಿಯಾದ, ಜಾಂಬವಾಂಶ್ಚ - ಜಾಂಬವಂತನೂ, ವಿಜಯೇನ - ಶತ್ರುಜಯದಿಂದ, ಅಭಿನಂದಂತಃ - ಸಂತೋಷಗೊಂಡವರಾಗಿ, ಲಕ್ಷ್ಮಣಂಚಾಪಿ-ಲಕ್ಷ್ಮಣನನ್ನು, ತುಷ್ಟುವುಃ-ಸುತ್ತಿಸಿ ಸಂತೋಷಗೊಳಿಸಿದರು. ॥೯೪॥ ಪ್ಲವಂಗಮಾಃ - ಕಪಿಗಳು, ಲಬ್ಧಲಕ್ಷಾಃ - ಹೊಂದಲ್ಪಟ್ಟ ಲಕ್ಷ್ಯವುಳ್ಳವರಾಗಿ, ಕ್ಷ್ವೇಳಂತಃ - ಕೋಲಾಹಲಧ್ವನಿ ಮಾಡುವವರಾಗಿ, ನದಂತಶ್ಚ - ಕೂಗುತ್ತ, ಗರ್ಜಂತಶ್ಚ - ಗರ್ಜಿಸುತ್ತ, ರಘುಸುತಂ - ಲಕ್ಷ್ಮಣನನ್ನು, ಪರಿವಾರ್ಯ - ಸುತ್ತಿಕೊಂಡು, ಉಪತಸ್ಥಿರೇ - ನಿಂತರು. ॥ ೯೫ ॥ ವಾನರಾಃ - ಕಪಿಗಳು, ಲಾಂಗೂಲಾನಿ - ಬಾಲಗಳನ್ನು, ಪ್ರವಿಧ್ಯಂತಃ - ಕೊಡಹುತ್ತಿರುವವರಾಗಿ, ಸ್ಫೋಟಯಂತಶ್ಚ - ಧ್ವನಿಗೊಳಿಸುತ್ತಿರುವವರಾಗಿಯೂ, ತದಾ - ಆ ಕಾಲದಲ್ಲಿ, ಲಕ್ಷ್ಮಣಃ - ಸೌಮಿತ್ರಿಯು, ಜಯತೀತ್ಯೇವ - ಜಯಿಸಿದನೆಂಬುದಾಗಿ, ವಾಕ್ಯಂ - ಮಾತನ್ನು, ವಿಶ್ರಾವಯ್ - ಕೇಳಿಸಿದರು. ॥೯೬॥ ಕಪಯಃ - ವಾನರರು, ಹೃಷ್ಟಮಾನಸಾಃ - ಸಂತೋಷಗೊಂಡ ಮನಸ್ಸುಗಳುಳ್ಳವರಾಗಿ, ಅನ್ಯೋನ್ಯಂ - ಪರಸ್ಪರವಾಗಿ, ಸಮಾಶ್ಲಿಷ್ಯ - ಅಪ್ಪಿಕೊಂಡು, ಉಚ್ಚಾ....ಣಾಃ - ಅನೇಕ ಕಲ್ಯಾಣ ಗುಣಗಳುಳ್ಳ, ರಾಘ....ಜಾಃ - ಶ್ರೀರಾಮನಾಶ್ರಯದಿಂದ ಹುಟ್ಟಿರುವ, ಕಥಾಃ - ಇತಿಹಾಸಗಳನ್ನು, ಚಕ್ರುಃ - ಮಾಡಿದರು. ॥ ೯೭ ॥ ಅಸುಕರಂ - ಇತರರಿಂದ ಮಾಡಲಸಾಧ್ಯವಾದ, ಲಕ್ಷ್ಮಣಸ್ಯ - ಲಕ್ಷ್ಮಣನ, ಕರ್ಮ - ಕೃತ್ಯವನ್ನು, ಯುಧಿ - ಕಾಳಗದಲ್ಲಿ, ಅಭಿವೀಕ್ಷ್ಯ - ಕಂಡು, ಅಥ - ಬಳಿಕ, ಸುಹೃದಃ -

---

ಬಿದ್ದಿರುವವನೂ ಆದ ಇಂದ್ರಜಿತುವನ್ನು ನೋಡಿ ವಿಭೀಷಣ, ಜಾಂಬವಂತ, ಹನುಮಂತರೇ ಮೊದಲಾದ ವೀರವರರೆಲ್ಲರೂ ವಿಜಯ ಸಂತೋಷದಿಂದ ಕೂಡಿದವರಾಗಿ ಲಕ್ಷ್ಮಣನನ್ನು ಅನೇಕ ವಿಧಗಳಾದ ಸ್ತುತಿವಚನಗಳಿಂದ ಪೂಜಿಸಿದರು. ಆ ವಾನರವೀರರೆಲ್ಲರೂ ಆನಂದಾಧಿಕ್ಯದಿಂದ ವಿವಿಧ ಧ್ವನಿಗಳನ್ನು ಮಾಡಿದರು. ಲಕ್ಷ್ಮಣನನ್ನು ಅನೇಕ ವಿಧದಿಂದ ಸ್ತುತಿಸುತ್ತ ಆತನನ್ನು ಸುತ್ತುವರೆದು ನಿಂತರು. ಆಗ ಕೆಲವರು ಸಂತೋಷದಿಂದ ತಮ್ಮ ಬಾಲಗಳನ್ನು ಬಗೆಬಗೆಯಾಗಿ ಆಡಿಸಿದರು. ಕೆಲವರು ಬಾಲಗಳನ್ನು ನೆಲಕ್ಕೆ ಅಪ್ಪಳಿಸಿ ಹೊಡೆದರು. ಲಕ್ಷ್ಮಣಸ್ವಾಮಿಯು ವಿಜಯಿಯಾದನೆಂದು ಕೂಗಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುತ್ತಿದ್ದರು. ಆ ಸಮಯದಲ್ಲಿಯೇ ದೇವತೆಗಳೂ ಕೂಡ ಇಂದ್ರಜಿತುವು ಮಡಿದ

ತದಸುಕರಮಥಾಭಿವೀಕ್ಷ್ಯ ಹೃಷ್ಟಾಃ
ಪ್ರಿಯಸುಹೃದೋ ಯುಧಿ ಲಕ್ಷ್ಮಣಸ್ಯ ಕರ್ಮ ।
ಪರಮಮುಪಲಭ್ಯ ಮನಃ ಪ್ರಹರ್ಷಂ
ವಿನಿಹತಮಿಂದ್ರರಿಪುಂ ನಿಶಮ್ಯ ದೇವಾಃ ॥ ೯೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕನವತಿತಮಸ್ಸರ್ಗಃ.

ಇಷ್ಟರಾಗಿರುವ ಸ್ನೇಹಿತರು, ಹೃಷ್ಟಾಃ - ಸಂತೋಷಗೊಂಡರು, ದೇವಾಃ - ದೇವತೆಗಳು, ಇಂದ್ರರಿಪುಂ - ಇಂದ್ರಜಿತುವನ್ನು, ವಿನಿಹತಂ - ಹತನನ್ನಾಗಿ, ನಿಶಮ್ಯ - ಕೇಳಿ, ಪರಮಂ - ಬಹಳವಾದ, ಮನಃಪ್ರಹರ್ಷಂ - ಮನಸ್ಸಂತೋಷವನ್ನು, ಉಪಲಭ್ಯ - ಹೊಂದಿದರು. ॥ ೯೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕನವತಿತಮಸ್ಸರ್ಗಃ.

ವಾರ್ತೆಯನ್ನು ಕೇಳಿ ಎಲ್ಲ ಲೋಕದವರಿಗೂ ದುಷ್ಕರವಾದ ಕಾರ್ಯವನ್ನು ಮಾಡಿದ ಲಕ್ಷ್ಮಣನನ್ನು ಮಹದಾನಂದದಿಂದ ಅನೇಕ ವಿಧವಾಗಿ ಪ್ರಶಂಸಿಸಿದರು. ॥ ೯೩–೯೮ ॥

ಇಂತಿದು ಇಂದ್ರಜಿದ್ವಧ ವೃತ್ತಾಂತವೆಂಬ ತೊಂಬತ್ತೊಂದನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ದ್ವಿನವತಿತಮಸ್ಸರ್ಗಃ

ರುಧಿರಕ್ಲಿನ್ನಗಾತ್ರಸ್ತು ಲಕ್ಷ್ಮಣಃ ಶುಭಲಕ್ಷಣಃ । ಬಭೂವ ಹೃಷ್ಟಸ್ತಂ ಹತ್ವಾ ಶಕ್ರಜೇತಾರಮಾಹವೇ ॥೧॥ ತತಸ್ಸಜಾಂಬವಂತಂಚ ಹನುಮಂತಂಚ ವೀರ್ಯವಾನ್ । ಸನ್ನಿಹತ್ಯ ಮಹಾತೇಜಾ ಸ್ತಾಂಶ್ಚ ಸರ್ವಾನ್ ವನೌಕಸಃ ॥೨॥ ಆಜಗಾಮ ತತಸ್ತೀವ್ರಂ ಯತ್ರ ಸುಗ್ರೀವರಾಘವೌ । ವಿಭೀಷಣಮವಷ್ಟಭ್ಯ ಹನುಮಂತಂಚ ಲಕ್ಷ್ಮಣಃ ॥೩॥ ತತೋ ರಾಮಮಭಿಕ್ರಮ್ಯ ಸೌಮಿತ್ರಿರಭಿವಾದ್ಯಚ । ತಸ್ಥೌ ಭ್ರಾತೃಸಮೀಪಸ್ಥ ಇಂದ್ರಸ್ಯೇವ ಬೃಹಸ್ಪತಿಃ ॥೪॥ ನಿಷ್ಟನನ್ನಿವ ಚಾಗಮ್ಯ ರಾಘವಾಯ ಮಹಾತ್ಮನೇ ।

ಶುಭಲಕ್ಷಣಃ - ಶುಭಕರವಾದ ಲಕ್ಷಣಗಳುಳ್ಳ, ಲಕ್ಷ್ಮಣಸ್ತು - ಸೌಮಿತ್ರಿಯಾದರೆ, ರುಧಿ....ತ್ರಃ-ರಕ್ತದಿಂದ ತೋಯಿಸಿದ ಶರೀರವುಳ್ಳವನಾಗಿ, ಆಹವೇ-ಕಾಳಗದಲ್ಲಿ, ತಂಶಕ್ರಜೇತಾರಂ-ಆ ಇಂದ್ರಜಿತುವನ್ನು, ಹತ್ವಾ-ಕೊಂದು, ಹೃಷ್ಟಃ - ಸಂತೋಷಗೊಂಡವನು, ಬಭೂವ - ಆದನು. ॥ ೧ ॥ ತತಃ - ಬಳಿಕ, ವೀರ್ಯವಾನ್ - ಪರಾಕ್ರಮಿಯಾದ, ಮಹಾತೇಜಾಃ - ಬಹು ತೇಜೋವಂತನಾದ, ಸಃ - ಆ ಸೌಮಿತ್ರಿಯು, ಜಾಂಬವಂತಂ - ಜಾಂಬವಂತನನ್ನು, ಹನೂಮಂತಂಚ - ಹನುಮಂತನನ್ನೂ, ಸರ್ವಾನ್ - ಸಮಸ್ತರಾದ, ತಾನ್‌ವನೌಕಸಶ್ಚ - ಆ ವಾನರರನ್ನೂ, ಸನ್ನಿಹೃತ್ಯ - ಸೇರಿಸಿ, ತತಃ - ಬಳಿಕ, ಯತ್ರ - ಎಲ್ಲಿ, ಸುಗ್ರೀವರಾಘವೌ - ಸುಗ್ರೀವ ರಾಮರಿರುವರೋ, ತತ್ರ - ಅಲ್ಲಿ, ತೀವ್ರಂ - ಜಾಗ್ರತೆಯಾಗಿ, ಸೌಮಿತ್ರಿಃ - ಸುಮಿತ್ರಾ ಪುತ್ರನಾದ, ಲಕ್ಷ್ಮಣಃ - ರಾಮಾನುಜನು, ವಿಭೀಷಣಂ - ವಿಭೀಷಣನನ್ನು, ಹನೂಮಂತಂಚ - ಆಂಜನೇಯನನ್ನೂ, ಅವಷ್ಟಭ್ಯ - ಅವಲಂಬಿಸಿಕೊಂಡು, ಆಜಗಾಮ - ಬಂದನು. ॥ ೨-೩ ॥ ತತಃ - ಬಳಿಕ, ರಾಮಂ - ಶ್ರೀರಾಮನನ್ನು ಕುರಿತು, ಅಭಿಕ್ರಮ್ಯ - ಬಂದು, ಅಭಿವಾದ್ಯಚ - ನಮಸ್ಕಾರ ಮಾಡಿ, ಇಂದ್ರಸ್ಯ - ಇಂದ್ರನ ಸಮೀಪದಲ್ಲಿ, ಬೃಹಸ್ಪತಿರಿವ - ಬೃಹಸ್ಪತಿಯಂತೆ, ಭ್ರಾತೃ....ಸ್ಥಃ - ಅಗ್ರಜನ ಸಮೀಪವರ್ತಿಯಾಗಿ, ತಸ್ಥೌ - ನಿಂತುಕೊಂಡನು. ॥ ೪ ॥ ನಿಷ್ಟನನ್ನಿವ - ಸ್ಪಷ್ಟವಾಗದಿರುವ ಅಕ್ಷರಗಳುಳ್ಳಂತೆ ಮಾತನಾಡುವವನಾಗಿ, ಆಗಮ್ಯ - ಬಂದು, ವೀರಃ - ಶೂರನಾದ ಲಕ್ಷ್ಮಣನು, ಮಹಾತ್ಮನೇ - ಮಹಾಮನಸ್ವಿಯಾದ, ರಾಘವಾಯ - ಶ್ರೀರಾಮನಿಗಾಗಿ, ಘೋರಂ - ಭಯಂಕರವಾದ, ಇಂದ್ರಜಿತಃ -

---

ಆ ಮಹಾ ಯುದ್ಧದಲ್ಲಿ ರಕ್ತವ್ಯಾಪ್ತವಾದ ಶರೀರವುಳ್ಳವನೂ ಶುಭಲಕ್ಷಣ ಸಂಪನ್ನನೂ ಆದ ಲಕ್ಷ್ಮಣನು ರಾಕ್ಷಸರಾಜಕುಮಾರನಾದ ಇಂದ್ರಜಿತುವನ್ನು ಸಂಹರಿಸಿ ಪರಮಾನಂದಭರಿತನಾದನು. ಆಗಲಾತನು ಜಾಂಬವಂತ ಹನುಮಂತರೇ ಮೊದಲಾದ ವಾನರ ಯೂಥನಾಥರೊಡಗೂಡಿ ಬಹು ಜಾಗ್ರತೆಯಾಗಿಯೇ ಶ್ರೀರಾಮ ಸುಗ್ರೀವರಿದ್ದೆಡೆಗೈತಂದನು. ಲಕ್ಷ್ಮಣನು ವಿಭೀಷಣನನ್ನು ಮುಂದಿಟ್ಟುಕೊಂಡು ಅಣ್ಣನಾದ ಶ್ರೀರಾಮನ ಬಳಿಗೈದು ಆತನಿಗೆ ದಂಡಪ್ರಣಾಮ ಮಾಡಿ ದೇವೇಂದ್ರನ ಬಳಿ ಬ್ರುಹಸ್ಪತಿಯಂತೆ ಆತನ ಸಮೀಪದಲ್ಲಿ ಕುಳಿತುಕೊಂಡನು. ಮಹಾತ್ಮನಾದ ಲಕ್ಷ್ಮಣಸ್ವಾಮಿಯು ಇಂದ್ರಜಿತ್ಸಂಹಾರದ ವೃತ್ತಾಂತವನ್ನು ಅಣ್ಣನಿಗೆ ಅರಿಕೆ ಮಾಡಿದನು. ಆಗ ವಿಭೀಷಣನೂ ಮಹದಾನಂದಭರಿತನಾಗಿ ಮಹಾತ್ಮ

ಆಚಚಕ್ಷೇ ತದಾ ವೀರೋ ಘೋರಮಿಂದ್ರಜಿತೋ ವಧಂ ॥ ೫ ॥ ರಾವಣೇಸ್ತು ಶಿರಶ್ಛಿನ್ನಂ ಲಕ್ಷ್ಮಣೇನ ಮಹಾತ್ಮನಾ । ನ್ಯವೇದಯತ ರಾಮಾಯ ತದಾ ಹೃಷ್ಟೋ ವಿಭೀಷಣಃ ॥೬॥ ಶ್ರುತ್ವೈತತ್ತು ಮಹಾವೀರ್ಯೋ ಲಕ್ಷ್ಮಣೇನೇಂದ್ರಜಿದ್ವಧಂ । ಪ್ರಹರ್ಷಮತುಲಂ ಲೇಭೇ ರಾಮೋ ವಾಕ್ಯಮುವಾಚಹ ॥ ೭ ॥ "ಸಾಧು! ಲಕ್ಷ್ಮಣ! ತುಷ್ಟೋಽಸ್ಮಿ ಕರ್ಮಣಾ ಸುಕೃತಂ ಕೃತಂ । ರಾವಣೇರ್ಹಿ ವಿನಾಶೇನ ಜಿತಮಿತ್ಯುಪಧಾರಯ" ॥ ೮ ॥ ಸತಂ ಶಿರಸ್ಯುಪಾಘ್ರಾಯ ಲಕ್ಷ್ಮಣಂ ಲಕ್ಷ್ಮಿವರ್ಧನಂ । ಲಜ್ಜಮಾನಂ ಬಲಾತ್ಸ್ನೇಹಾದಂಕಮಾರೋಪ್ಯ ವೀರ್ಯವಾನ್ ॥ ೯ ॥ ಉಪವೇಶ್ಯ ತಮುತ್ಸಂಗೇ ಪರಿಷ್ವಜ್ಯಾವಪೀಡಿತಂ । ಭ್ರಾತರಂ ಲಕ್ಷ್ಮಣಂ ಸ್ನಿಗ್ಧಂ ಪುನಃ ಪುನರುದೈಕ್ಷತ

ಇಂದ್ರಜಿತುವಿನ, ವಧಂ - ಸಂಹಾರವನ್ನು, ತದಾ - ತತ್ಕ್ಷಣದಲ್ಲಿ, ಆಚಚಕ್ಷೇ - ಹೇಳಿದನು. ॥ ೫ ॥ ತದಾ - ಆ ಕಾಲದಲ್ಲಿ, ಹೃಷ್ಟಃ - ಸಂತೋಷಗೊಂಡವನಾಗಿ, ವಿಭೀಷಣಃ - ವಿಭೀಷಣನು, ಮಹಾತ್ಮನಾ - ಮಹಾ ಧೈರ್ಯಶಾಲಿಯಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಶಿರಸ್ತು - ಶಿರಸ್ಸಾದರೆ, ಛಿನ್ನಂ - ಛೇದಿಸಲ್ಪಟ್ಟಿತೆಂದು, ರಾಮಾಯ - ಶ್ರೀರಾಮನಿಗೆ, ನ್ಯವೇದಯತ - ಅರಿಕೆ ಮಾಡಿದನು. ॥೬॥ ಮಹಾವೀರ್ಯಃ - ಮಹಾ ಪರಾಕ್ರಮಿಯಾದ, ರಾಮಃ - ಶ್ರೀರಾಮನು, ಲಕ್ಷ್ಮಣೇನ - ಸೌಮಿತ್ರಿಯಿಂದ, ತದಿಂದ್ರಜಿದ್ವಧಂ - ಆ ಇಂದ್ರಜಿತುವಿನ ಸಂಹಾರವನ್ನು, ಶ್ರುತ್ವಾ - ಕೇಳಿ, ಅತುಲಂ - ಅಸದೃಶವಾದ, ಪ್ರಹರ್ಷಂ - ಸಂತೋಷವನ್ನು, ಲೇಭೇ - ಹೊಂದಿದನು, ವಾಕ್ಯಂ - ಮಾತನ್ನು, ಉವಾಚಹ - ಹೇಳಿದನಷ್ಟೆ. ॥ ೭ ॥ ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೇ, ಸಾಧು - ಚನ್ನಾಗಿ, ಕರ್ಮಣಾ - ಈ ರಣಕರ್ಮದಿಂದ, ತುಷ್ಟಃ - ಸಂತೋಷಗೊಂಡವನು, ಅಸ್ಮಿ - ಆಗಿದ್ದೇನೆ, ಸುಕೃತಂ - ಕರ್ತವ್ಯ ಕಾರ್ಯವು, ಕೃತಂ - ಮಾಡಲ್ಪಟ್ಟಿತು, ರಾವಣೇಃ - ಇಂದ್ರಜಿತುವಿನ, ವಿನಾಶೇನಹಿ - ಸಂಹಾರದಿಂದ, ಸರ್ವಂ - ಸಮಸ್ತವೂ, ಜಿತಮಿತಿ - ಜಯಿಸಲ್ಪಟ್ಟಿತೆಂದು, 'ಉಪಧಾರಯ - ತಿಳಿದುಕೋ. ॥ ೮ ॥ ವೀರ್ಯವಾನ್ - ಪರಾಕ್ರಮಿಯಾದ, ಸಃ - ಆ ಶ್ರೀರಾಮನು, ಲಜ್ಜಮಾನಂ - ನಾಚಿಕೆಗೊಂಡಿರುವ, ಲಕ್ಷ್ಮಿವರ್ಧನಂ - ಜಯಲಕ್ಷ್ಮೀಸಂಪನ್ನನಾದ, ತಂಲಕ್ಷ್ಮಣಂ - ಆ ಸೌಮಿತ್ರಿಯನ್ನು, ಶಿರಸಿ - ಮಂಡೆಯಲ್ಲಿ, ಉಪಾಘ್ರಾಯ - ಆಘ್ರಾಣ ಮಾಡಿ, ಬಲಾತ್ - ಬಲಾತ್ಕಾರದಿಂದಲೂ, ಸ್ನೇಹಾಚ್ಚ - ತಮ್ಮನೆಂಬ ಪ್ರೇಮದಿಂದಲೂ, ಅಂಕಂ - ತೊಡೆಯನ್ನು, ಆರೋಪ್ಯ - ಏರಿಸಿ, ಭ್ರಾತರಂ - ತಮ್ಮನಾದ, ಸ್ನಿಗ್ಧಂ - ಸ್ನೇಹಿತನಾದ, ತಂಲಕ್ಷ್ಮಣಂ - ಆ ಲಕ್ಷ್ಮಣನನ್ನು ಉತ್ಸಂಗೇ - ತೊಡೆಯಲ್ಲಿ, ಉಪನಿವೇಶ್ಯ - ಕುಳ್ಳಿರಿಸಿಕೊಂಡು, ಅವಪೀಡಿತಂ - ಶರಗಳಿಂದ ಬಾಧಿತನಾದವನನ್ನು,

---

ನಾದ ಲಕ್ಷ್ಮಣನು ರಾವಣಿಯನ್ನು ಸಂಹರಿಸಿದ ವೃತ್ತಾಂತವೆಲ್ಲವನ್ನೂ ವಿಶದವಾಗಿ ತಿಳಿಸಿದನು. ॥ ೧–೫ ॥ ಮಹಾ ಪರಾಕ್ರಮಿಯಾದ ಶ್ರೀರಾಮಮೂರ್ತಿಯು ಅದೆಲ್ಲವನ್ನೂ ಕೇಳಿ ಮಹಾ ಸಂತೋಷದಿಂದ, "ವತ್ಸ ಲಕ್ಷ್ಮಣಾ! ನೀನು ಮಾಡಿದ ಇಂದ್ರಜಿತ್ಸಂಹಾರದಿಂದ ನಾನು ಸಂತುಷ್ಟನಾದೆನು. ನೀನು ಬಹು ದುಸ್ತರವಾದ ಕಾರ್ಯವನ್ನೆಸಗಿದೆ. ಇಂದ್ರಜಿತುವು ಶಾಂತನಾದುದರಿಂದ ನಮಗೆ ಜಯಲಾಭವಾಗುವುದರಲ್ಲಿ ಸಂದೇಹವೇ ಇರುವುದಿಲ್ಲವು" ಎಂದು ಹೇಳಿದನು. ಆ ರಘುನಾಥನು ಈ ರೀತಿ ನುಡಿದು ತಮ್ಮನಾದ ಆ ಲಕ್ಷ್ಮಣನ ಶಿರಸ್ಸನ್ನಾಘ್ರಾಣಿಸಿ ಲಕ್ಷ್ಮೀವರ್ಧಕನಾದ ಆತನನ್ನು ನಾಚುತ್ತಿದ್ದರೂ ಸ್ನೇಹಾತಿಶಯದಿಂದ ಬಲಾತ್ಕಾರವಾಗಿ ಎತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಪ್ರೀತ್ಯಾದರಗಳಿಂದ ಅವ

॥ ೧೦ ॥ ಶಲ್ಯಸಂಪೀಡಿತಂ ಶಸ್ತಂ ನಿಶ್ವಸಂತಂ ತು ಲಕ್ಷ್ಮಣಂ । ರಾಮಸ್ತು ದುಃಖ ಸಂತಪ್ತಸ್ತದಾ ನಿಶ್ವಸಿತೋ ಭೃಶಂ ॥ ೧೧ ॥ ಮೂರ್ಧ್ನಿ ಚೈನಮುಪಾಘ್ರಾಯ ಭೂಯಸ್ಸಂಸ್ಪೃಶ್ಯ ಚ ತ್ವರ್‍ಗ । ಉವಾಚ ಲಕ್ಷ್ಮಣಂ ವಾಕ್ಯಮಾಶ್ವಾಸ್ಯ ಪುರುಷರ್ಷಭಃ ॥೧೨ ॥ "ಕೃತಂ ಪರಮಕಲ್ಯಾಣಂ ಕರ್ಮ ದುಷ್ಕರಕರ್ಮಣಾ । ಅದ್ಯ ಮನ್ಯೇ ಹತೇ ಪುತ್ರೇ ರಾವಣಂ ನಿಹತಂ ಯುಧಿ । ಅದ್ಯಾಽಹಂ ವಿಜಯೀ ಶತ್ರೌ ಹತೇ ತಸ್ಮಿನ್ ದುರಾತ್ಮನಿ ॥ ೧೩ ॥ ರಾವಣಸ್ಯ ನೃಶಂಸಸ್ಯ ದಿಷ್ಟ್ಯಾ ವೀರ! ತ್ವಯಾ ರಣೇ । ಭಿನ್ನೋಹಿ ದಕ್ಷಿಣೋ ಬಾಹುಸ್ಸಹಿತಸ್ಯ ವ್ಯಪಾಶ್ರಯಃ ॥ ೧೪ ॥ ವಿಭೀಷಣ ಹನೂ

ವಿನಿಷ್ವಜ್ಯ - ಅಪ್ಪಿಕೊಂಡು, ಪುನಃಪುನಃ - ಬಾರಿಬಾರಿಗೂ, ಉದೈಕ್ಷತ - ನೋಡಿದನು. ॥ ೯-೧೦ ॥ ಪುರುಷರ್ಷಭಃ - ಪುರುಷಶ್ರೇಷ್ಠನಾದ, ರಾಮಸ್ತು - ಶ್ರೀರಾಮನಾದರೆ, ಶಲ್ಯಸಂಪೀಡಿತಂ - ಗಾಯಗಳಿಂದ ಬಾಧಿತನಾದ, ಸ್ರಸ್ತಂ - ಹೊಡೆಯಲ್ಪಟ್ಟವನಾದಕಾರಣ, ನಿಶ್ವಸಂತಂ - ನಿಟ್ಟುಸಿರು ಬಿಡುತ್ತಿರುವ, ಲಕ್ಷ್ಮಣಂತು - ಸೌಮಿತ್ರಿಯನ್ನಾದರೆ, ಮೂರ್ಧ್ನಿ - ಮಂಡೆಯಲ್ಲಿ, ಭೂಯಃ - ಮತ್ತೂ, ಉಪಾಘ್ರಾಯ - ಆಘ್ರಾಣ ಮಾಡಿ, ಏನಂ - ಈ ಲಕ್ಷ್ಮಣನನ್ನು, ಸಂಸ್ಪೃಶ್ಯಚ - ಸ್ಪೃಶಿಸಿ, ತ್ವರ್‍ಗ - ತ್ವರೆಯುಳ್ಳವನಾಗಿ, ತದಾ - ಆ ಕಾಲದಲ್ಲಿ, ದುಃಖಸಂತಪ್ತಃ - ದುಃಖದಿಂದ ಸಂಕಟಗೊಂಡವನಾಗಿ, ಭೃಶಂ - ಬಹಳವಾಗಿ, ನಿಶ್ವಸಿತಃ - ನಿಟ್ಟುಸಿರನ್ನು ಬಿಡುತ್ತ, ಲಕ್ಷ್ಮಣಂ - ಅನುಜನನ್ನು, ಆಶ್ವಾಸ್ಯ - ಸಮಾಧಾನಗೊಳಿಸಿ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೧೧-೧೨ ॥ ದುಷ್ಕರ್ಮಣಾ - ಅಸಾಧ್ಯವಾದ ವ್ಯಾಪಾರವುಳ್ಳ, ತ್ವಯಾ - ನಿನ್ನಿಂದ, ಪರಮಕಲ್ಯಾಣಂ - ಬಹಳ ಶುಭಕರವಾದ, ಕರ್ಮ - ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಪುತ್ರೇ - ಮಗನಾದ ಇಂದ್ರಜಿತುವು, ಹತೇ - ಹತನಾಗಲು, ರಾವಣಂ - ರಾವಣನನ್ನು, ಅದ್ಯ - ಈಗ, ಯುಧಿ - ಕಾಳೆಗದಲ್ಲಿ, ನಿಹತಂ - ಹತನನ್ನಾಗಿ, ಮನ್ಯೇ - ಎಣಿಸುತ್ತೇನೆ. ॥ ೧೩ ॥ ದುರಾತ್ಮನಿ - ದುರ್ಬುದ್ಧಿಯುಳ್ಳ, ತಸ್ಮಿನ್‌ಶತ್ರೌ - ಆ ಶತ್ರುವಾದ ಇಂದ್ರಜಿತುವು, ಹತೇ - ಹತನಾಗಲೂ, ಅದ್ಯ - ಈಗ, ಅಹಂ - ನಾನು, ವಿಜಯೀ - ಜಯವಂತನಾದೆನು, ಹೇ ವೀರ - ಎಲೈ ಶೂರನೇ, ನೃಶಂಸಸ್ಯ - ಘಾತುಕನಾದ, ರಾವಣಸ್ಯ - ದಶಕಂಠನ, ದಕ್ಷಿಣೋಬಾಹುಃ - ಬಲಭುಜವು, ದಿಷ್ಟ್ಯಾ - ದೈವಾಧೀನದಿಂದ, ರಣೇ - ಕಾಳೆಗದಲ್ಲಿ, ತ್ವಯಾ - ನಿನ್ನಿಂದ, ಭಿನ್ನೋಹಿ - ಕತ್ತರಿಸಲ್ಪಟ್ಟಿತಷ್ಟೆ, ಸಃ - ಆ ಮೇಘನಾದನು, ತಸ್ಯ - ಆ ರಾವಣನಿಗೆ, ವ್ಯಪಾಶ್ರಯಃ - ಆಧಾರವು. ॥೧೪॥ ರಣೇ - ಕಾಳೆಗದಲ್ಲಿ, ವಿಭೀ....ದ್ಭ್ಯಾಂ - ವಿಭೀಷಣ ಮತ್ತು ಹನು

ನನ್ನು ಅಡಿಗಡಿಗೂ ಕಣ್ಣಿಟ್ಟುನೋಡಿದನು. ॥೬-೧೦॥ ಆಗಲಾತನು ಬಾಣಪೀಡಿತವಾದ ಶರೀರವುಳ್ಳವನಾಗಿ ನಿಟ್ಟುಸಿರುಗಳನ್ನು ಬಿಡುತ್ತಿದ್ದುದನ್ನು ನೋಡಿ ಬಹಳವಾಗಿ ವ್ಯಸನಗೊಂಡು ತಾನೂ ನಿಟ್ಟುಸಿರಿಡುತ್ತ ಪುನಃ ಅವನ ಶಿರಸ್ಸನ್ನಾಘ್ರಾಣಿಸಿ, "ತಮ್ಮಾ! ನೀನು ಮಹಾ ದುಷ್ಕರವಾದುದೂ, ಅನೇಕ ಮಂಗಳಕಾರ್ಯಗಳ ಸಾಧನೆಗೆ ಮೂಲಕಾರಣವಾದುದೂ ಆದ ಅದ್ಭುತ ಕಾರ್ಯವನ್ನು ಮಾಡಿದೆ. ನೀನು ಇಂದ್ರಜಿತುವನ್ನು ಸಂಹರಿಸಿದುದರಿಂದ ಇನ್ನು ರಾವಣಾಸುರನು ಯುದ್ಧದಲ್ಲಿ ಸಂಹೃತನಾದನೆಂದೇ ನಿಶ್ಚಯಿಸು. ಲಕ್ಷ್ಮಣಾ! ನಮಗೆ ಶತ್ರುವೂ, ದುರಾತ್ಮನೂ ಆದ ಇಂದ್ರಜಿತುವು ಮೃತಿಯೊಂದಿದುದರಿಂದ ಈಗ ನಾನು ವಿಜಯವಾಂತೆನು. ಅಯ್ಯಾ ವೀರಶ್ರೇಷ್ಠನೇ! ನೀನು ಯುದ್ಧದಲ್ಲಿ ಮಹಾ ಘಾತುಕನಾದ ರಾವಣಾಸುರನ ದಕ್ಷಿಣ ಭುಜವನ್ನೇ ಖಂಡಿಸಿದೆ. ಯುದ್ಧದಲ್ಲಿ ಹನುಮಂತನ ಮತ್ತು ವಿಭೀಷಣನ ಸಹಾಯ

ಮದ್ಭಾಗ್ಯಂ ಕೃತಂ ಕರ್ಮ ಮಹದ್ರಣೇ । ಅಹೋರಾತ್ರೈಸ್ತ್ರಿಭಿರ್ವೀರಃ ಕಥಂಚಿದ್ವಿನಿಪಾತಿತಃ ॥೧೫॥ ನಿರಮಿತ್ರಃ ಕೃತೋಽಸ್ಮ್ಯದ್ಯ ನಿರ್ಯಾಸ್ಯತಿ ಹಿ ರಾವಣಃ । ಬಲವ್ಯೂಹೇನ ಮಹತಾ ಶ್ರುತ್ವಾ ಪುತ್ರಂ ನಿಪಾತಿತಂ ॥೧೬॥ ತಂ ಪುತ್ರವಧಸಂತಪ್ತಂ ನಿರ್ಯಾಂತಂ ರಾಕ್ಷಸಾಧಿಪಂ । ಬಲೇನಾವೃತ್ಯ ಮಹತಾ ನಿಹನಿಷ್ಯಾಮಿ ದುರ್ಜಯಂ ॥೧೭॥ ತ್ವಯಾ ಲಕ್ಷ್ಮಣ! ನಾಥೇನ ಸೀತಾಚ ಪೃಥಿವೀಚ ಮೇ । ನದುಷ್ಪ್ರಾಪಾ ಹತೇ ತ್ವದ್ಯ ಶಕ್ರಜೇತರಿ ಚಾಹವೇ" ॥೧೮॥ ಸತಂ ಭ್ರಾತರಮಾಶ್ವಾಸ್ಯ ಪರಿಷ್ವಜ್ಯಚ

ಮಂತರಿಂದ, ಮಹತ್ - ಮಹತ್ಕಾರ್ಯವು, ಕೃತಂ - ಮಾಡಲ್ಪಟ್ಟಿತು, ತ್ರಿಭಿಃ - ಮೂರಾದ, ಅಹೋರಾತ್ರೈಃ-ಹಗಲು ರಾತ್ರಿಗಳಿಂದ, ವೀರಃ-ಶೂರನಾದ ಇಂದ್ರಜಿತುವು, ಕಥಂಚಿತ್-ಅತಿ ಪ್ರಯಾಸದಿಂದ, ವಿನಿಪಾತಿತಃ ಬೀಳಿಸಲ್ಪಟ್ಟನು. ॥ ೧೫ ॥ ಅದ್ಯ-ಈಗ, ನಿರಮಿತ್ರಃ-ಶತ್ರುರಹಿತನಾಗಿ, ಕೃತಃ - ಮಾಡಲ್ಪಟ್ಟವನು, ಅಸ್ಮಿ-ಆದೆನು, ರಾವಣಃ-ರಾವಣನು, ಪುತ್ರಂ-ಮಗನನ್ನು, ನಿಪಾತಿತಂ-ಬೀಳಿಸಲ್ಪಟ್ಟವನನ್ನಾಗಿ, ಶ್ರುತ್ವಾ-ಕೇಳಿ, ಮಹತಾ-ಮಹತ್ತರವಾದ, ಬಲವ್ಯೂಹೇನ ಸೇನೆಗಳ ಗುಂಪಿನಿಂದ, ರಾವಣಃ-ದಶಕಂಠನು, ನಿರ್ಯಾಸ್ಯತಿಹಿ ಹೊರಟುಬರುವನಷ್ಟೆ, ಪುತ್ರ....ಪ್ತಂ-ಪುತ್ರಮರಣ ವ್ಯಸನದಿಂದ ಸಂತಪಿಸುವ, ನಿರ್ಯಾಂತಂ - ಹೊರಟುಬರುವ, ದುರ್ಜಯಂ - ಜಯಿಸಲಸಾಧ್ಯನಾದ, ರಾಕ್ಷಸಾಧಿಪಂ - ರಾವಣನನ್ನು, ಮಹತಾ - ಮಹತ್ತರವಾದ, ಬಲೇನ - ಕಪಿಸೇನೆಯಿಂದ, ಆವೃತ್ಯ - ಸುತ್ತಿಕೊಂಡು, ನಿಹನಿಷ್ಯಾಮಿ - ಸಂಹಾರ ಮಾಡುವೆನು. ॥ ೧೬-೧೭ ॥ ಹೇ ಲಕ್ಷ್ಮಣ - ಎಲೈ ಸೌಮಿತ್ರಿಯೇ, ಶಕ್ರಜೇತರಿ - ಇಂದ್ರಜಿತುವು, ಆಹವೇ - ಕಾಳೆಗದಲ್ಲಿ, ಹತೇ - ಹೊಡೆಯಲ್ಪಟ್ಟವನಾಗಲೂ, ನಾಥೇನ - ಯಾಚಿಸುತ್ತಿರುವ, (ಪ್ರಾರ್ಥಿಸುವ) ತ್ವಯಾ - ನಿನ್ನಿಂದ, ಸೀತಾಚ - ಸೀತಾದೇವಿಯೂ, ಪೃಥಿವೀಚ - ಭೂಮಿಯೂ, ಮೇ - ನನಗೆ, ದುಷ್ಪ್ರಾಪಾ - ಹೊಂದಲಸಾಧ್ಯಳು, ನ - ಅಲ್ಲ. ॥ ೧೮ ॥ ರಾಘವಃ - ರಘುವಂಶೋತ್ಪನ್ನನಾದ, ಸರಾಮಃ - ಆ ಶ್ರೀರಾಮನು, ತಂಭ್ರಾತರಂ - ಆ ತಮ್ಮನನ್ನು, ಆಶ್ವಾಸ್ಯ -

---

ದಿಂದ ಮಹಾ ಭಯಂಕರವೂ, ಆತ್ಯಾಶ್ಚರ್ಯಕರವೂ ಆದ ಕಾರ್ಯವನ್ನು ಮಾಡಿ ಜಯವನ್ನು ಪಡೆದೆ. ಮೂರು ದಿನಗಳು ಹಗಲಿರುಳೂ ಘೋರ ಯುದ್ಧವನ್ನು ಮಾಡಿ ಕಡೆಗೆ ಆ ವೀರನಾದ ಇಂದ್ರಜಿತುವನ್ನು ಗೆದ್ದೆ; ಅವನನ್ನು ಸಂಹರಿಸಿದೆ. ॥ ೧೧–೧೫ ॥ ಆದರಿಂದ ನಾನೀಗ ಶತ್ರುರಹಿತನಾದೆ. ವತ್ಸ ಲಕ್ಷ್ಮಣಾ! ಬಹು ದೊಡ್ಡದಾದ ಸೈನ್ಯದಿಂದೊಡಗೂಡಿ ತನ್ನ ಮಗನಾದ ಇಂದ್ರಜಿತುವು ನಿನ್ನಿಂದ ಮಡಿದನೆಂಬ ಸುದ್ದಿಯನ್ನು ಕೇಳಿ ಆ ರಾವಣಾಸುರನು ಅಪಾರವಾದ ವ್ಯಸನವನ್ನು ಹೊಂದುವನು. ಹೀಗೆ ಮಹಾ ವ್ಯಸನಸಂತಪ್ತನಾಗಿ ಯುದ್ಧಕ್ಕೆ ಹೊರಟುಬರುವ ರಾಕ್ಷಸಾಧಿಪತಿಯಾದ ಆ ರಾವಣಾಸುರನನ್ನು ನಾನು ಈ ನಮ್ಮ ವಾನರ ಮಹಾ ಸೇನೆಯೊಡಗೂಡಿ ಜಯಿಸಿ ಬಿಡುವೆನು. ವತ್ಸ ಲಕ್ಷ್ಮಣಾ! ನೀನು ಈಗ ಯುದ್ಧದಲ್ಲಿ ಇಂದ್ರಜಿತುವನ್ನು ಸಂಹರಿಸಿ ಸೀತಾದೇವಿಯನ್ನೂ, ಭೂಮಿಯನ್ನೂ ನನಗೆ ಕೊಟ್ಟವನಾದೆ. ಇದರಿಂದ ನಾನು ಬಹಳ ಉಪಕೃತನಾದೆನು" ಎಂದು ಹೇಳಿ ಪ್ರಶಂಸಿಸಿದನು. ಆ ತರುವಾಯ ಆ ರಘು-ಕುಲೋದ್ಭವನು ಸಂತೋಷಭರಿತನಾಗಿ ಸುಷೇಣನೆಂಬ ವಾನ

ರಾಘವಃ । ರಾಮಸ್ಸುಷೇಣಂ ಮುದಿತಸ್ಸಮಾಭಾಷ್ಯೇದಮಬ್ರವೀತ್ ॥ ೧೯ ॥ ಸಶಲ್ಯೋಽಯಂ ಮಹಾಪ್ರಾಜ್ಞ! ಸೌಮಿತ್ರಿರ್ಮಿತ್ರವತ್ಸಲಃ । ಯಥಾ ಭವತಿ ಸುಸ್ವಸ್ಥಸ್ತಥಾ ತ್ವಂ ಸಮುಪಾಚರ ॥ ೨೦ ॥ ವಿಶಲ್ಯಃ ಕ್ರಿಯತಾಂ ಕ್ಷಿಪ್ರಂ ಸೌಮಿತ್ರಿಸ್ಸವಿಭೀಷಣಃ । ಋಕ್ಷವಾನರಸೈನ್ಯಾನಾಂ ಶೂರಾಣಾಂ ದ್ರುಮಯೋಧಿನಾಂ ॥ ೨೧ ॥ ಯೇಚಾಪ್ಯನ್ಯೇಽತ್ರ ಯುಧ್ಯಂತಿ ಸಶಲ್ಯಾ ವ್ರಣಿನಸ್ತಥಾ । ತೇಽಪಿ ಸರ್ವೇ ಪ್ರಯತ್ನೇನ ಕ್ರಿಯತಾಂ ಸುಖಿನಸ್ತ್ವಯಾ ” ॥ ೨೨ ॥ ಏವಮುಕ್ತಸ್ತು ರಾಮೇಣ ಮಹಾತ್ಮಾ ಹರಿಯೂಥಪಃ । ಲಕ್ಷ್ಮಣಾಯ ದದೌ ನ್ಯಸ್ತಸ್ಸುಷೇಣಃ ಪರಮೌಷಧೀಂ ॥ ೨೩ ॥ ಸತಸ್ಯಾ

ಸಮಾಧಾನ ಮಾಡಿ, ಪರಿಷ್ವಜ್ಯ - ಅಪ್ಪಿಕೊಂಡು, ಮುದಿತಃ - ಸಂತೋಷಗೊಂಡವನಾಗಿ, ಸುಷೇಣಂ - ಸುಷೇಣನನ್ನು, ಸಮಾಭಾಷ್ಯ - ಕರೆದು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೯ ॥ ಮಹಾಪ್ರಾಜ್ಞ - ಮಹಾ ಬುದ್ಧಿಶಾಲಿಯೇ, ಮಿತ್ರವತ್ಸಲಃ - ಸ್ನೇಹಿತರಲ್ಲಿ ವಿಶ್ವಾಸವುಳ್ಳ, ಅಯಂ ಸೌಮಿತ್ರಿಃ - ಈ ಸೌಮಿತ್ರಿಯು, ಸಶಲ್ಯಃ - ಬಾಣಗಳಿಂದ ಕೂಡಿದ್ದಾನೆ, ಸುಸ್ವಸ್ಥಃ - ಸ್ವಸ್ಥಚಿತ್ತನು, ಯಥಾ - ಹೇಗೆ, ಭವತಿ - ಆಗುವನೋ, ತಥಾ - ಹಾಗೆ, ತ್ವಂ - ನೀನು, ಸಮುಪಾಚರ - ಉಪಚರಿಸು. ॥ ೨೦ ॥ ಸವಿಭೀಷಣಃ - ವಿಭೀಷಣನಿಂದೊಡಗೂಡಿದ, ಸೌಮಿತ್ರಿಃ - ಲಕ್ಷ್ಮಣನು, ವಿಶಲ್ಯಃ - ಗಾಯಗಳಿಲ್ಲದವನಾಗಿ, ಕ್ರಿಯತಾಂ - ಮಾಡಲ್ಪಡಲಿ, ಋಕ್ಷ... ನಾಂ - ಕರಡಿಗಳ ಮತ್ತು ಕಪಿಗಳ ಸೇನೆಯಲ್ಲಿ ಸೇರಿದ, ದ್ರುಮಯೋಧಿನಾಂ-ಮರಗಳಿಂದ ಕಾಳಗ ಮಾಡುತ್ತಿರುವ, ಶೂರಾಣಾಂ - ವೀರರೊಳಗೆ, ಅನ್ಯೇ-ಮತ್ತೂ ಕೆಲವರು, ಸಶಲ್ಯಾಃ-ಬಾಣದ ಕೊಂಕಿಗಳಿಂದ ಒಡಗೂಡಿ, ತಥಾ-ಹಾಗೆ, ವ್ರಣಿನಃ - ಗಾಯಗಳುಳ್ಳವರಾಗಿ, ಅತ್ರ - ಈ ಗುಂಪಿನಲ್ಲಿ, ಯುಧ್ಯಂತಿ - ಯುದ್ಧ ಮಾಡುತ್ತಾರೋ, ತೇಸರ್ವೇಽಪಿ - ಅವರೆಲ್ಲರೂ, ಪ್ರಯತ್ನೇನ - ಪ್ರಯತ್ನದಿಂದ, ತ್ವಯಾ - ನಿನ್ನಿಂದ, ಸುಖಿನಃ - ಸುಖವಂತರಾಗಿ, ಕ್ರಿಯತಾಂ-ಮಾಡಲ್ಪಡಲಿ. ॥ ೨೧-೨೨ ॥ ಏವಂ - ಈ ಪರಿಯಾಗಿ, ರಾಮೇಣ-ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ಮಹಾತ್ಮಾ - ಮಹಾ ಮನಸ್ವಿಯಾದ, ಹರಿಯೂಥಪಃ - ವಾನರಯೂಥಪತಿಯಾದ, ಸುಷೇಣಃ - ಸುಷೇಣನು, ಲಕ್ಷ್ಮಣಾಯ-ಲಕ್ಷ್ಮಣನಿಗೆ, ನ್ಯಸ್ತಃ ನ್ಯಸ್ತಚಿತ್ತನಾಗಿ, ಪರಮೌಷಧೀಂ - ಮಹಾ ಮೂಲಿಕೆಯನ್ನು, ದದೌ - ಕೊಟ್ಟನು. ॥ ೨೩ ॥ ಸಃ - ಆ ಲಕ್ಷ್ಮಣನು,

---

ರೋತ್ತಮನನ್ನು ಬಳಿಗೆ ಕರೆದು, “ ಎಲೈ ವಾನರೋತ್ತಮನಾದ ಸುಷೇಣನೇ! ಮಿತ್ರರಲ್ಲಿ ದಯೆಯುಳ್ಳವನಾದ ನಮ್ಮ ಲಕ್ಷ್ಮಣನು, ಶರೀರದಲ್ಲಿ ನಾಟಿರುವ ಬಾಣಗಳಿಂದ ಬಹಳವಾಗಿ ಬಾಧೆಯನ್ನು ಅನುಭವಿಸುತ್ತಿರುವನು. ಆದುದರಿಂದ ಇವನು ಮೊದಲಿನಂತೆ ಅಕ್ಷತ ಶರೀರಿಯಾಗುವಂತೆ ಮಾಡುವವನಾಗು. ॥೧೯-೨೦॥ ಅಂತೆಯೇ ಈ ವಿಭೀಷಣನನ್ನೂ ಗುಣಪಡಿಸಿ ಉಪಕರಿಸು. ಎಲೈ ವಾನರೋತ್ತಮನೇ! ಈ ಯುದ್ಧದಲ್ಲಿ ಪೆಟ್ಟುತಿಂದು ಬಂದಿರುವ ಸಮಸ್ತ ವಾನರರನ್ನೂ ವ್ರಣರಹಿತರನ್ನಾಗಿ ಮಾಡುವವನಾಗು ” ಎಂದು ಹೇಳಿದನು. ಆ ಮಾತುಗಳನ್ನು ಕೇಳಿದೊಡನೆಯೇ ವಾನರೋತ್ತಮನಾದ ಸುಷೇಣನು ಲಕ್ಷ್ಮಣನಿಗೆ ಸರ್ವೋತ್ತಮವಾದ ಓಷಧಿಗಳನ್ನು ಕೊಟ್ಟನು. ಆ ಓಷಧಿಗಳ ಗಂಧವನ್ನು ಆಘ್ರಾಣಿಸಿ

ಗಂಧಮಾಘ್ರಾಯ ವಿಶಲ್ಯಸ್ಸಮುಪದ್ಯತ । ತಥಾ ನಿರ್ವೇದನಶ್ಚೈವ ಸಂರೂಢವ್ರಣ ಏವಚ ॥ ೨೪ ॥ ವಿಭೀಷಣಮುಖಾನಾಂಚ ಸುಹೃದಾಂ ರಾಘವಾಜ್ಞಯಾ । ಸರ್ವ ವಾನರಮುಖ್ಯಾನಾಂ ಚಿಕಿತ್ಸಾಂ ಸ ತದಾಕರೋತ್ ॥೨೫॥ ತತಃ ಪ್ರಕೃತಿಮಾಪನ್ನೋ ಹೃತಶಲ್ಯೋ ಗತವ್ಯಥಃ । ಸೌಮಿತ್ರಿರ್ಮುದಿತಸ್ತತ್ರ ಕ್ಷಣೇನ ವಿಗತಜ್ವರಃ ॥ ೨೬ ॥ ತಥೈವ ರಾಮಃ ಪ್ಲವಗಾಧಿಪಸ್ತದಾ ವಿಭೀಷಣಶ್ಚರ್ಕ್ಷಪತಿಶ್ಚ ಜಾಂಬವಾನ್ । ಅವೇಕ್ಷ್ಯ ಸೌಮಿತ್ರಿಮರೋಗಮುತ್ಥಿತಂ ಮುದಾ ಸಸೈನ್ಯಾಸ್ಸುಚಿರಂ ಜಹರ್ಷಿರೇ ॥ ೨೭ ॥

ತಸ್ಯಾಃ - ಆ ಮೂಲಿಕೆಯ, ಗಂಧಂ - ವಾಸನೆಯನ್ನು, ಆಘ್ರಾಯ - ಮೂಸಿನೋಡಿ, ವಿಶಲ್ಯಃ - ಗಾಯಗಳಿಲ್ಲದವನು, ಸಮುಪದ್ಯತ - ಆದನು, ತಥಾ - ಹಾಗೆಯೇ, ನಿರ್ವೇದನಶ್ಚೈವ - ವೇದನೆಯಿಲ್ಲ ದವನೂ, ಸಂರೂಢವ್ರಣಏವಚ - ಮಾದುಹೋದ ಗಾಯುಗಳುಳ್ಳವನೂ ಸಹ, ಸಮುಪದ್ಯತ - ಆದನು. ॥೨೪॥ ಸಃ - ಆ ಸುಷೇಣನು, ತದಾ - ಆ ಕಾಲದಲ್ಲಿ, ರಾಘವಾಜ್ಞಯಾ - ಶ್ರೀರಾಮನ ಆಜ್ಞೆ ಯಿಂದ, ವಿಭೀ....ನಾಂ - ವಿಭೀಷಣನೇ ಮೊದಲಾದ, ಸುಹೃದಾಂ - ಸೇಹಿತರಿಂದ, ಸರ್ವವಾನರ ಮುಖ್ಯಾನಾಂ - ಸಮಸ್ತ ವಾನರಶ್ರೇಷ್ಠರಿಗೆ, ಚಿಕಿತ್ಸಾಂ - ರೋಗಪರಿಹಾರಕವಾದ ವೈದ್ಯವನ್ನು, ಅಕರೋತ್ - ಮಾಡಿದನು. ॥ ೨೫ ॥ ತತಃ - ಬಳಿಕ, ಪ್ರಕೃತಿಂ - ಸ್ವಭಾವವನ್ನು, ಆಪನ್ನಃ - ಹೊಂದಿದ, ಹೃತಶಲ್ಯಃ - ಅಪಹರಿಸಲ್ಪಟ್ಟ ಬಾಣಗಳುಳ್ಳವನಾಗಿ, ಗತವ್ಯಥಃ - ಕಳೆದ ವ್ಯಸನವುಳ್ಳ, ಸೌಮಿತ್ರಿಃ - ಲಕ್ಷ್ಮಣನು, ತತ್ರ - ಆ ರಣರಂಗದಲ್ಲಿ, ಕ್ಷಣೇನ - ಕ್ಷಣಮಾತ್ರದಿಂದಲೇ, ವಿಗತ ಜ್ವರಃ - ಹೋದ ಸಂತಾಪವುಳ್ಳವನಾಗಿ, ಮುದಿತಃ - ಸಂತೋಷಗೊಂಡವನು, ಬಭೂವ - ಆದನು. ॥ ೨೬ ॥ ತದಾ - ಆ ಕಾಲದಲ್ಲಿ, ತಥೈವ - ಹಾಗೆಯೇ, ರಾಮಃ - ಶ್ರೀರಾಮನು, ಪ್ಲವಗಾಧಿಪಃ - ಸುಗ್ರೀವನೂ, ವಿಭೀಷಣಶ್ಚ - ವಿಭೀಷಣನೂ, ಋಕ್ಷಪತಿಃ - ಕರಡಿಗಳೊಡೆಯನಾದ, ಜಾಂಬವಾಂಶ್ಚ - ಜಾಂಬವಂತನೂ, (ಇವರೆಲ್ಲರೂ) ಆರೋಗ್ಯಂ - ರೋಗವಿಲ್ಲದೆ, ಉತ್ಥಿತಂ - ಮೇಲಕ್ಕೆದ್ದ, ಸೌಮಿತ್ರಿಂ - ರಾಮಾನುಜನನ್ನು, ಅವೇಕ್ಷ್ಯ - ಕಂಡು, ಮುದಾ - ಸಂತೋಷದಿಂದ, ಸಸೈನ್ಯಾಃ - ಸೇನಾಸಮೇತ ರಾಗಿ, ಸುಚಿರಂ - ಬಹು ಕಾಲ, ಜಹರ್ಷಿರೇ - ಸಂತೋಷಗೊಂಡರು. ॥೨೭॥ ದಾಶರಥಿಃ - ದಶರಥ ಪುತ್ರನಾದ, ಮಹಾತ್ಮಾ - ಮಹಾ ಮನಸ್ವಿಯಾದ, ಸಃ - ಆ ಶ್ರೀರಾಮನು, ಲಕ್ಷ್ಮಣಸ್ಯ - ಸೌಮಿ

ದೊಡನೆಯೇ ಅವನು ಅಕ್ಷತಗಾತ್ರನಾಗಿ ಸ್ವಸ್ಥಚಿತ್ತನಾದನು. ಅವನ ಶರೀರದಲ್ಲಿ ನಾಟಿದ್ದ ಬಾಣಗಳೆಲ್ಲವೂ ತಾವಾಗಿಯೇ ಕಳಚಿ ಬಿದ್ದುಹೋದುವು. ಹೀಗೆಯೇ ವಿಭೀಷಣಾದಿಗಳು ಕೂಡ ಸ್ವಸ್ಥಚಿತ್ತರೂ, ವ್ರಣರಹಿತರೂ ಆದರು. ॥ ೨೧–೨೫ ॥ ಅಂತೆಯೇ ಮಹಾ ಮೇಧಾವಿ ಯಾದ ಸುಷೇಣನು ಮಾಡಿದ ಚಿಕಿತ್ಸೆಯಿಂದ ಲಕ್ಷ್ಮಣನೇ ಮೊದಲಾದವರೆಲ್ಲರೂ ಏನೊಂದು ಬಾಧೆಯೂ ಇಲ್ಲದೆ ಮೊದಲಿನಂತೆಯೇ ಸುಖವನ್ನು ಹೊಂದಿದವರಾದರು. ಆಗ ಶ್ರೀರಾಮ ಮೂರ್ತಿಯೂ, ವಾನರೇಶ್ವರನಾದ ಸುಗ್ರೀವನೂ, ವಿಭೀಷಣನೂ, ಭಲ್ಲೂಕಾದಿಪತಿಯಾದ ಜಾಂಬವಂತನೂ, ರಾಮಾನುಜನಾದ ಲಕ್ಷ್ಮಣಸ್ವಾಮಿಯು ವ್ರಣರಹಿತನಾದುದನ್ನು ಕಂಡು ಪರಮ ಸಂತುಷ್ಟರಾದರು. ಆ ಸಮಯದಲ್ಲಿಯೇ ದಶರಥರಾಜಕುಮಾರನಾದ ಶ್ರೀರಾಮನು

ಅಪೂಜಯತ್ಕರ್ಮ ಸಲಕ್ಷ್ಮಣಸ್ಯ
ಸುದುಷ್ಕರಂ ದಾಶರಥಿರ್ಮಹಾತ್ಮಾ ।
ಹೃಷ್ಟಾ ಬಭೂವುರ್ಯುಧಿ ಯೂಥಪೇಂದ್ರಾ
ನಿಪಾತಿತಂ ಶಕ್ರಜಿತಂ ನಿಶಮ್ಯ ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿನವತಿತಮಸ್ಸರ್ಗಃ

ತ್ರಿಯು, ಸುದುಷ್ಕರಂ - ಮಾಡಲಸಾಧ್ಯವಾದ, ಕರ್ಮ - ಇಂದ್ರಜಿದ್ವಧ ರೂಪವಾದ ಕರ್ಮವನ್ನು, ಅಪೂಜಯತ್ - ಶ್ಲಾಘಿಸಿದನು, ಯೂಥಪೇಂದ್ರಾಃ - ವಾನರಯೂಥಪತಿಗಳು, ಯುಧಿ - ಕಾಳಗದಲ್ಲಿ, ಶಕ್ರಜಿತಂ - ಇಂದ್ರಜಿತುವನ್ನು, ನಿಪಾತಿತಂ - ಬೀಳಿಸಲ್ಪಟ್ಟವನನ್ನಾಗಿ, ಶ್ರುತ್ವಾ - ಕೇಳಿ, ಹೃಷ್ಟಾಃ - ಸಂತೋಷಗೊಂಡವರು, ಬಭೂವುಃ - ಆದರು. ॥ ೨೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಿನವತಿತಮಸ್ಸರ್ಗಃ.

ಲಕ್ಷ್ಮಣನೆಸಗಿದ ಯುದ್ಧವನ್ನು ಅನೇಕ ವಿಧವಾಗಿ ಪ್ರಶಂಸಿಸಿದನು. ಅದನ್ನು ಕೇಳಿ ವಾನರ ವೀರರೆಲ್ಲರೂ ಅಪರಿಮಿತಾನಂದವನ್ನು ಹೊಂದಿ ಅಧಿಕವಾಗಿ ಸಿಂಹನಾದಗಳನ್ನು ಮಾಡುತ್ತಿದ್ದರು. ॥ ೨೭–೨೮ ॥

ಇಂತಿದು ಶ್ರೀರಾಮಕೃತ ಲಕ್ಷ್ಮಣ ಶ್ಲಾಘನ ವೃತ್ತಾಂತವೆಂಬ ತೊಂಬತ್ತೆರಡನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ತ್ರಿನವತಿತಮಸ್ಸರ್ಗಃ

ತತಃ ಪೌಲಸ್ತ್ಯಸಚಿವಾಃ ಶ್ರುತ್ವಾ ಚೇಂದ್ರಜಿತಂ ಹತಂ । ಆಚಚಕ್ಷುರಭಿಜ್ಞಾಯ ದಶಗ್ರೀವಾಯ ಸವ್ಯಥಾಃ ॥ ೧ ॥ "ಯುದ್ಧೇ ಹತೋ ಮಹಾರಾಜ! ಲಕ್ಷ್ಮಣೇನ ತವಾತ್ಮಜಃ । ವಿಭೀಷಣ ಸಹಾಯೇನ ಮಿಷತಾಂ ನೋ ಮಹಾದ್ಯುತಿಃ ॥ ೨ ॥ ಶೂರಶ್ಶೂರೇಣ ಸಂಗಮ್ಯ ಸಂಯುಗೇಷ್ವಪರಾಜಿತಃ । ಲಕ್ಷ್ಮಣೇನ ಹತಃ ಶೂರಃ ಪುತ್ರಸ್ತು ವಿಬುಧೇಂದ್ರಜಿತ್ ॥ ೩ ॥ ಗತಸ್ಸಪರಮಾ್ ಲೋಕಾನ್ ಶರೈಸ್ಸಂತಾಪ್ಯ ಲಕ್ಷ್ಮಣಂ । ಸತಂ ಪ್ರತಿಭಯಂ ಶ್ರುತ್ವಾ ವಧಂ ಪುತ್ರಸ್ಯ ದಾರುಣಂ ॥ ೪ ॥

ತತಃ - ಬಳಿಕ, ಪೌಲಸ್ತ್ಯಸಚಿವಾಃ - ರಾವಣನ ಮಂತ್ರಿಗಳು, ಇಂದ್ರಜಿತಂ - ಇಂದ್ರಜಿತುವನ್ನು, ಹತಂ - ಸಂಹೃತನನ್ನಾಗಿ, ಶ್ರುತ್ವಾ - ಕೇಳಿ, ಅಭಿಜ್ಞಾಯ - ತಿಳಿದು, ಸವ್ಯಥಾಃ - ವ್ಯಸನದಿಂದೊಡಗೂಡಿದವರಾಗಿ, ದಶಗ್ರೀವಾಯ - ದಶಕಂಠನಿಗೆ, ಆಚಚಕ್ಷುಃ - ಹೇಳಿದರು. ॥೧॥ ಮಹಾರಾಜ- ಮಹಾರಾಜನೇ, ಮಹಾದ್ಯುತಿಃ - ಮಹಾ ತೇಜಸ್ವಿಯಾದ, ತವ - ನಿನ್ನ, ಆತ್ಮಜಃ - ಕುವರನು, ನಃ - ನಾವುಗಳು, ಮಿಷತಾಂ - ನೋಡುತ್ತಿರುವಂತೆಯೇ, ವಿಭೀ....ನ - ವಿಭೀಷಣನೇ ಸಹಾಯವಾಗುಳ್ಳ, ಲಕ್ಷ್ಮಣೇನ - ರಾಮಾನುಜನಿಂದ, ಯುದ್ಧೇ - ಕಾಳಗದಲ್ಲಿ, ಹತಃ - ಹೊಡೆಯಲ್ಪಟ್ಟನು. ॥ ೨ ॥ ಶೂರಃ - ಶೂರನಾದ, ಸಂಯುಗೇಷು - ಕಾಳಗಗಳಲ್ಲಿ, ಅಪರಾಜಿತಃ - ಎಂದಿಗೂ ಪರಾಜಿತನಾಗದಿರುವ, ಪುತ್ರಃ - ಮಗನಾದ, ವಿಬುಧೇಂದ್ರಜಿತ್ - ಇಂದ್ರಜಿತುವು, ಶೂರೇಣ - ಶೌರ್ಯವಂತನಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಹತಃ - ಸಂಹೃತನಾದನು. ॥ ೩ ॥ ಸಃ - ಆ ಇಂದ್ರಜಿತುವು, ಶರೈಃ - ಸರಳುಗಳಿಂದ, ಲಕ್ಷ್ಮಣಂ - ಸೌಮಿತ್ರಿಯನ್ನು, ಸಂತಾಪ್ಯ - ಸಂಕಟಗೊಳಿಸಿ, ಪರಮಾಂ - ಉತ್ಕೃಷ್ಟವಾದ, ಲೋಕಾನ್ - ವೀರಸ್ವರ್ಗಗಳನ್ನು, ಗತಃ - ಹೊಂದಿದನು, ಸಃ - ಆ ದಶಕಂಠನು, ಪ್ರತಿಭಯಂ - ಭಯಂಕರವಾದ, ದಾರುಣಂ - ಕಠೋರವಾದ, ಪುತ್ರಸ್ಯ - ಮಗನಾದ, ಇಂದ್ರಜಿತಃ -

---

ಆ ತರುವಾಯ ಇತ್ತಲಾಗಿ ರಾವಣಾಸುರನ ಮಂತ್ರಿಗಳೆಲ್ಲರೂ ಇಂದ್ರಜಿತುವಿನ ಮರಣವಾರ್ತೆಯನ್ನು ಕೇಳಿ ಆ ವೃತ್ತಾಂತವೆಲ್ಲವನ್ನೂ ಒಡೆಯನಾದ ರಾವಣಾಸುರನಿಗೆ ಅರಿಕೆ ಮಾಡಿ, "ರಾಕ್ಷಸರಾಜ! ನಿನ್ನ ಪುತ್ರನಾದ ಇಂದ್ರಜಿತುವು, ವಿಭೀಷಣನ ಸಹಾಯವನ್ನು ಹೊಂದಿದ ಲಕ್ಷ್ಮಣನಿಂದ ನಾವೆಲ್ಲರೂ ನೋಡುತ್ತಿರುವಂತೆಯೇ ಸಂಹೃತನಾದನು. ಮಹಾ ಶೂರನಾದ ನಿನ್ನ ಪುತ್ರನು ಶೂರನಾದ ಲಕ್ಷ್ಮಣನೊಡನೆ ಚಿರಕಾಲ ಯುದ್ಧಮಾಡಿ ಕಡೆಗೆ ಕಾಲಾಧೀನನಾದನು. ಆ ಶೂರನು ತಾನು ಮೃತಿಯೊಂದುವುದಕ್ಕೆ ಮೊದಲು ಮಹಾ ತೀಕ್ಷ್ಣಗಳಾದ ಬಾಣಗಳಿಂದ ಲಕ್ಷ್ಮಣನನ್ನು ಬಹಳವಾಗಿ ಬಾಧಿಸಿದನು. ಅನೇಕ ಸಹಸ್ರ ವಾನರವೀರರನ್ನು ವಿಧವಿಧವಾಗಿ ಬಾಧೆಗೊಳಿಸಿದನು. ಹೀಗೆ ಆತನು ಮಹಾ ಭಯಂಕರವಾದ ಯುದ್ಧವನ್ನು ಮಾಡಿ ಕಡೆಗೂ ಆ ಲಕ್ಷ್ಮಣನ ದೆಸೆಯಿಂದ ಮೃತಿಯೊಂದಿದನು" ಎಂದು ಹೇಳಿದರು. ಮಂತ್ರಿಗಳೀರೀತಿ ಮಹಾ ಭಯಂಕರವಾದ ಇಂದ್ರಜಿತುವಿನ ವಧವೃತ್ತಾಂತವನ್ನು ಹೇಳಿದೊಡನೆಯೇ ಆ ರಾವಣಾಸುರನು ಬಹಳವಾದ ದುಃಖಕ್ಕೀಡಾದನು.

ಘೋರಮಿಂದ್ರಜಿತಸ್ಸಂಖ್ಯೇ ಕಶ್ಮಲಂ ಚಾವಿಶನ್ಮಹತ್" । ಉಪಲಭ್ಯ ಚಿರಾತ್ಸಂಜ್ಞಾಂ ರಾಜಾ ರಾಕ್ಷಸಪುಂಗವಃ । ಪುತ್ರಶೋಕಾರ್ದಿತೋ ದೀನೋ ವಿಲಲಾಪಾಕುಲೇಂದ್ರಿಯಃ ॥ ೫ ॥ ಹಾ! ರಾಕ್ಷಸಚಮೂಮುಖ್ಯ! ಮಮ ವತ್ಸ! ಮಹಾರಥ! ಜಿತ್ವೇಂದ್ರಂ ಕಥಮದ್ಯ ತ್ವಂ ಲಕ್ಷ್ಮಣಸ್ಯ ವಶಂ ಗತಃ ॥ ೬ ॥ ನನು ತ್ವಮಿಷುಭಿಃ ಕ್ರುದ್ಧೋ ಭಿಂದ್ಯಾಃ ಕಾಲಾಂತಕಾವಪಿ । ಮಂದರಸ್ಯಾಪಿ ಶೃಂಗಾಣಿ ಕಿಂಪುನರ್ಲಕ್ಷ್ಮಣಂ ಯುಧಿ ॥ ೭ ॥ ಅದ್ಯ ವೈವಸ್ವತೋ ರಾಜಾ ಭೂಯೋ ಬಹುಮತೋ ಮಮ । ಯೇನಾದ್ಯ ತ್ವಂ ಮಹಾಬಾಹೋ ಸಂಯುಕ್ತಃ ಕಾಲಕರ್ಮಣಾ ॥ ೮ ॥ ಏಷ ಪಂಥಾ

ಇಂದ್ರಜಿತುವಿನ, ಸಂಖ್ಯೇ - ಕಾಳೆಗದಲ್ಲಿ, ಘೋರಂ - ಕೇಳಲಸಾಧ್ಯವಾದ, ತಂವಧಂ - ಆ ಮರಣವನ್ನು, ಶ್ರುತ್ವಾ - ಕೇಳಿ, ಮಹತ್ - ಬಹಳವಾದ, ಕಶ್ಮಲಂ - ಮೂರ್ಛೆಯನ್ನು, ಆವಿಶತ್ - ಪ್ರವೇಶಿಸಿದನು. ॥ ೪ ॥ ರಾಕ್ಷ....ವಃ - ರಾಕ್ಷಸಶ್ರೇಷ್ಠನಾದ, ರಾಜಾ - ಅರಸು, ಚಿರಾತ್ - ಬಹಳ ಕಾಲಕ್ಕೆ, ಸಂಜ್ಞಾಂ - ಪ್ರಜ್ಞೆಯನ್ನು, ಉಪಲಭ್ಯ - ಹೊಂದಿ, ಪುತ್ರ....ತಃ - ಪುತ್ರವ್ಯಸನದಿಂದ ಬಾಧಿತನಾಗಿ, ದೀನಃ - ದೀನನಾಗಿ, ಆಕುಲೇಂದ್ರಿಯಃ - ವ್ಯಾಕುಲವಾದ ಚಕ್ಷುರಾದೀಂದ್ರಿಯಗಳುಳ್ಳವನಾಗಿ, ವಿಲಲಾಪ - ವಿಲಪಿಸಿದನು. ॥ ೫ ॥ ಹಾ - ಕಷ್ಟವು, ಹೇ ರಾಕ್ಷ....ಖ್ಯ - ಎಲೈ ರಾಕ್ಷಸ ಸೈನ್ಯಕ್ಕೆಲ್ಲಾ ಮುಖಂಡನೇ, ಮಮ - ನನ್ನ, ವತ್ಸ - ಬಾಲನೇ, ಮಹಾರಥ - ಮಹಾ ರಥಿಕನೇ, ಇಂದ್ರಂ - ದೇವೇಂದ್ರನನ್ನು, ಜಿತ್ವಾ - ಜಯಿಸಿ, ಅದ್ಯ - ಈಗ, ತ್ವಂ - ನೀನು, ಲಕ್ಷ್ಮಣಸ್ಯ - ಸೌಮಿತ್ರಿಗೆ, ವಶಂ - ಸ್ವಾಧೀನವನ್ನು, ಕಥಂಗತಃ - ಹೇಗೆ ಹೊಂದಿದೆ, ತ್ವಂ - ನೀನು, ಕ್ರುದ್ಧಂ - ಕೋಪಿಷ್ಠನಾಗಿ, ಇಷುಭಿಃ - ಸರಳುಗಳಿಂದ, ಕಾಲಾಂತಕಾವಪಿ - ಕಾಲಪುರುಷನನ್ನೂ, ಯಮನನ್ನೂ ಕೂಡ, ಭಿಂದ್ಯಾನ್ನನು - ಭೇದಿಸುವವನಷ್ಟೆ, ಮಂದರಸ್ಯ-ಮಂದರಪರ್ವತದ, ಶೃಂಗಾಣ್ಯಪಿ - ಶಿಖರಗಳನ್ನೂ, ಭಿಂದ್ಯಾಃ - ಭೇದಿಸುವನಷ್ಟೆ, ಯುಧಿ - ಕಾಳೆಗದಲ್ಲಿ, ಲಕ್ಷ್ಮಣಂಪುನಃ - ಸೌಮಿತ್ರಿಯನ್ನು ಭೇದಿಸುವ ವಿಷಯದಲ್ಲಾದರೆ, ಕಿಂ - ಏನು ಹೇಳತಕ್ಕದ್ದು. ॥ ೬-೭ ॥ ಅದ್ಯ - ಈಗ, ವೈವಸ್ವತೋರಾಜಾ - ಸೂರ್ಯಪುತ್ರನಾದ ಯಮಧರ್ಮರಾಯನು, ಭೂಯಃ - ಬಹಳವಾಗಿ, ಮಮ - ನನಗೆ, ಬಹುಮತಃ - ಸಮ್ಮತನಾದನು, ಹೇ ಮಹಾಬಾಹೋ - ಎಲೈ ಭುಜಬಲಶಾಲಿಯೇ, ಯೇನ - ಯಾವ ಯಮನಿಂದ,

---

ಆ ದುಃಖಭರವನ್ನು ತಾಳಲಾರದೆ ಮೂರ್ಛೆಯೊಂದಿದನು. ಸ್ವಲ್ಪ ಹೊತ್ತಾದ ತರುವಾಯ ಆ ರಾವಣಾಸುರನು ಪುತ್ರನ ಮರಣದಿಂದುಂಟಾದ ಶೋಕದಿಂದ ಪೀಡಿತನಾಗಿ, ದೀನನೂ, ಕದಡಿಹೋದ ಸರ್ವೇಂದ್ರಿಯಗಳುಳ್ಳವನೂ ಆಗಿ ಮತ್ತೂ ಹೆಚ್ಚಾಗಿ ದುಃಖಿಸಿದನು. ॥೧-೫॥ ಅಂತೆಯೇ ದುಃಖಿಸುತ್ತ "ಅಕಟಕಟಾ! ರಾಕ್ಷಸಸೇನಾ ಮುಖಂಡನೇ! ಮಹಾ ರಥಿಕನೂ, ರಣಧೀರನೂ, ನನ್ನ ವತ್ಸನೂ ಆದ ಇಂದ್ರಜಿತುವೇ! ಮಹೇಂದ್ರನನ್ನೇ ಜಯಿಸಿದ ನೀನು ಈಗ ಲಕ್ಷ್ಮಣನಿಗೆ ಸೋತು ಮಡಿದು ಹೋದೆಯಾ! ಮಗನೇ, ಇಂದ್ರಜಿತುವೇ! ನೀನು ನಿನ್ನ ಕೂರಂಬುಗಳಿಂದ ಕಾಲಪುರುಷನನ್ನೂ ಯಮನನ್ನೂ ಜಯಿಸಿ ವಧಿಸಬಲ್ಲ ಧೀರನಲ್ಲವೇ! ನೀನು ಮಂದರಾದ್ರಿಯ ಶಿಖರಗಳನ್ನೂ ಪುಡಿಗುಟ್ಟಬಲ್ಲೆಯಲ್ಲವೇ? ಇಂತಹ ಪರಾಕ್ರಮಿಯಾದ ನೀನು ರಾಮಾನುಜನಾದ ಲಕ್ಷ್ಮಣನನ್ನು ಗೆಲ್ಲಲಾರದೆ ಹೋದುದು ಪರಮಾಶ್ಚರ್ಯಕರವಾಗಿರುವುದು. ಅಯ್ಯೋ! ಈಗ ನಿನ್ನ ಮರಣವಾರ್ತೆಯನ್ನು ಕೇಳಿದ ತರುವಾಯ ನನಗೆ ಯಮನು ಅತ್ಯಂತ ಪ್ರಿಯಂಕರನಾದನು. ಆ ಯಮನು ನಿನ್ನನ್ನೀಗ ತನ್ನ ಲೋಕಕ್ಕೆ

ಸ್ಸುಯೋಧಾನಾಂ ಸರ್ವಾಮರಗಣೇಷ್ವಪಿ । ಯಃ ಕೃತೇ ಹನ್ಯತೇ ಭರ್ತುಸ್ಸಪುಮಾನ್
ಸ್ವರ್ಗಮೃಚ್ಛತಿ ॥ ೯ ॥ ಅದ್ಯ ದೇವಗಣಾಸ್ಸರ್ವೇ ಲೋಕಪಾಲಾಸ್ತಥರ್ಷಯಃ ।
ಹತಮಿಂದ್ರಜಿತಂ ಶ್ರುತ್ವಾ ಸುಖಂ ಸ್ವಪ್ಸ್ಯಂತಿ ನಿರ್ಭಯಾಃ ॥ ೧೦ ॥ ಅದ್ಯ ಲೋಕಾ
ಸ್ತ್ರಯಃ ಕೃತ್ಸ್ನಾ ಪೃಥಿವೀಚ ಸಕಾನನಾ । ಏಕೇನೇಂದ್ರಜಿತಾ ಹೀನಾ ಶೂನ್ಯೇವ
ಪ್ರತಿಭಾತಿ ಮೇ ॥ ೧೧ ॥ ಅದ್ಯ ನೈರ್ಋತಕನ್ಯಾನಾಂ ಶ್ರೋಷ್ಯಾಮ್ಯಂತಃಪುರೇ ರವಂ ।
ಕರೇಣುಸಂಘಸ್ಯ ಯಥಾ ನಿನಾದಂ ಗಿರಿಗಹ್ವರೇ ॥೧೨॥ ಯೌವರಾಜ್ಯಂಚ ಲಂಕಾಂಚ

ತ್ವಂ - ನೀನು, ಅದ್ಯ - ಈಗ, ಕಾಲಧರ್ಮಣಾ - ಮರಣ ಧರ್ಮದಿಂದ, ಸಂಯುಕ್ತಃ - ಸೇರಿಸಲ್ಪಟ್ಟಿಯೋ, ಏಷಪಂಥಾಃ - ಇದು, ಸರ್ವಾ....ಪಿ - ಸಮಸ್ತ ದೇವತೆಗಳ ತಂಡಗಳಲ್ಲಿಯೂ, ಸುಯೋಧಾನಾಂ - ಬಹಳ ಶೂರರಾದ ಪುರುಷರಿಗೆ, ಪಂಥಾಃ - ಮಾರ್ಗವು. ॥ ೯ ॥ ಯಃ - ಯಾವ ಪುರುಷನು, ಭರ್ತುಃಕೃತೇ - ತನ್ನ ಪೋಷಣಕರ್ತನ ನಿಮಿತ್ತವಾಗಿ, ಹನ್ಯತೇ - ಹೊಡೆಯಲ್ಪಡುವನೋ, ಸಪುಮಾನ್ - ಆ ಪುರುಷನು, ಸ್ವರ್ಗಂ - ಸ್ವರ್ಗವನ್ನು, ಗಚ್ಛತಿ - ಹೊಂದುತ್ತಾನೆ, ಅದ್ಯ - ಈಗ, ದೇವಗಣಾಃ - ದೇವತೆಗಳ ತಂಡಗಳು, ಸರ್ವೇ - ಸಮಸ್ತರಾದ, ಲೋಕಪಾಲಾಃ - ದಿಕ್ಪಾಲಕರೂ, ತಥಾ - ಹಾಗೆಯೇ, ಋಷಯಃ - ಋಷಿಗಳೂ, ಅದ್ಯ - ಈಗ, ಇಂದ್ರಜಿತಂ - ಇಂದ್ರಜಿತುವನ್ನು, ಹತಂ - ಹೊಡೆಯಲ್ಪಟ್ಟವನನ್ನಾಗಿ, ಶ್ರುತ್ವಾ - ಕೇಳಿ, ನಿರ್ಭಯಾಃ - ಭಯವಿಲ್ಲದೆ, ಸುಖಂ - ಸುಖವಾಗಿ, ಸ್ವಪ್ಸ್ಯಂತಿ - ಮಲಗುತ್ತಾರೆ. ॥ ೧೦ ॥ ಅದ್ಯ - ಈಗ, ತ್ರಯೋಲೋಕಾಃ - ಮೂರು ಲೋಕಗಳು, ಕೃತ್ಸ್ನಾ - ಸಮಸ್ತವಾದ, ಸಕಾನನಾ - ಕಾಡುಗಳಿಂದೊಡಗೂಡಿದ, ಪೃಥಿವೀ - ಭೂಮಿಯೂ, ಹೀನಾ - ರಹಿತವಾದಕಾರಣ, ಮೇ - ನನಗೆ, ಶೂನ್ಯೇವ - ದಿಕ್ಕಿಲ್ಲದಂತೆ, ಪ್ರತಿಭಾತಿ - ತೋರುತ್ತದೆ. ॥ ೧೧ ॥ ಅದ್ಯ - ಈಗ, ಅಂತಃಪುರೇ - ಅಂತಃಪುರದಲ್ಲಿ, ನೈರ್ಋತಕನಾನ್ಯಾಂ - ರಕ್ಕಸರ ಹೆಂಗಳ, ರವಂ - ಧ್ವನಿಯನ್ನು, ಗಿರಿಗಹ್ವರೇ - ಬೆಟ್ಟದ ಗುಹೆಗಳಲ್ಲಿ, ಕರೇಣುಸಂಘಸ್ಯ - ಆನೆಗಳ ಸಮೂಹದ, ನಿನದಂಯಥಾ - ಧ್ವನಿಯನ್ನಂತೆ, ಶ್ರೋಷ್ಯಾಮಿ - ಕೇಳುವೆನು. ॥ ೧೨ ॥ ಹೇ ಪರಂತಪ - ಎಲೈ

ಒಯ್ದಿರುವನಲ್ಲವೆ? ನಾನಿನ್ನು ಇಲ್ಲಿದ್ದೂ ವ್ಯರ್ಥವೇ ಸರಿ. ಅಕಟಾ ಮಗನೇ! ಲೋಕದಲ್ಲಿ ಯೋಧರಾದವರಿಗೆ ರಣರಂಗದಲ್ಲಿ ಉಂಟಾಗುವ ಮರಣವನ್ನು ದೇವತೆಗಳೆಲ್ಲರೂ ಕೊಂಡಾಡುವರು. ಯಜಮಾನನ ನಿಮಿತ್ತವಾಗಿ ಮರಣ ಹೊಂದುವುದು ಬಹಳ ಶ್ರೇಷ್ಠವು. ಆ ರೀತಿ ಮೃತಿಯೊಂದಿದ ಭೃತ್ಯನು ಸ್ವರ್ಗಾದಿ ಲೋಕಗಳನ್ನು ಹೊಂದುವನು. ಎಲೈ ಮಗನೇ! ನೀನೀಗ ಸ್ವರ್ಗಲೋಕಕ್ಕೆ ಹೋಗುವೆ! ಅಕ್ಕಟಾ! ಇದೀಗ ಇಂದ್ರಜಿತುವೆಂದು ಪ್ರಖ್ಯಾತನಾದ ನಿನ್ನ ಮರಣವಾರ್ತೆಯನ್ನು ಕೇಳಿ ದೇವತೆಗಳೂ, ಲೋಕಪಾಲಕರೂ, ಋಷಿಗಳೂ ನಿರ್ಭಯರಾಗಿ ಸಂತೋಷದಿಂದ ಪರಿಹಾಸ್ಯ ಮಾಡಿಕೊಳ್ಳುವರಲ್ಲವೆ! ॥ ೬–೧೦ ॥ ಆಹ! ಇಂದ್ರಜಿತುವೊಬ್ಬನು ಮೃತಿಯೊಂದಿದುದರಿಂದ ಸಮುದ್ರ, ಪರ್ವತ, ನದೀನದಾರಣ್ಯಗಳಿಂದ ತುಂಬಿ ತುಳುಕುತ್ತಿರುವ ಈ ಮೂರು ಲೋಕಗಳೂ ನನಗೆ ಶೂನ್ಯವಾಗಿ ಹೋಯಿತು. ಹಾಗೆಯೇ ತೋರುತ್ತಿದೆ. ಅಯ್ಯೋ ಪುತ್ರನೇ! ಈಗ ಅಂತಃಪುರದಲ್ಲಿ ರಾಕ್ಷಸಸ್ತ್ರೀಯರ ರೋದನಧ್ವನಿಯನ್ನು ಕೇಳುವೆನಷ್ಟೆ. ಆ ರೋದನಧ್ವನಿಯು ಪರ್ವತಗಳ ಗುಹೆಗಳಲ್ಲಿ ಅಡಗಿರುವ ಹೆಣ್ಣಾನೆಗಳ ಧ್ವನಿಗಳನ್ನು ಹೋಲಿರುತ್ತವೆ! ಎಲೈ ಇಂದ್ರಜಿತುವೇ! ಈಗ

ರಕ್ಷಾಂಸಿ ಚ ಪರಂತಪ! । ಮಾತರಂ ಮಾಂಚ ಭಾರ್ಯಾಂಚ ಕ್ವಗತೋಽಸಿ ವಿಹಾಯ ನಃ ॥ ೧೩ ॥ ಮಮ ನಾಮ ತ್ವಯಾ ವೀರ! ಗತಸ್ಯ ಯಮಸಾದನಂ । ಪ್ರೇತ ಕಾರ್ಯಾಣಿ ಕಾರ್ಯಾಣಿ ವಿಪರೀತೇಹಿ ವರ್ತಸೇ ॥೧೪॥ ಸತ್ವಂ ಜೀವತಿ ಸುಗ್ರೀವೇ ಲಕ್ಷ್ಮಣೇಚ ಸರಾಘವೇ । ಮಮ ಶಲ್ಯಮನುದ್ಧೃತ್ಯ ಕ್ವಗತೋಽಸಿ ವಿಹಾಯ ನಃ" ॥ ೧೫ ॥ ಏವಮಾದಿ ವಿಲಾಪಾರ್ತಂ ರಾವಣಂ ರಾಕ್ಷಸಾಧಿಪಂ । ಆವಿವೇಶ ಮಹಾ ಕೋಪಃ ಪುತ್ರವ್ಯಸನಸಂಭವಃ ॥ ೧೬ ॥ ಪ್ರಕೃತ್ಯಾ ಕೋಪನಂ ಹ್ಯೇನಂ ಪುತ್ರಸ್ಯ

ಶತ್ರುಸಂಹಾರಕನೇ, ಯೌವರಾಜ್ಯಂಚ - ಯೌವರಾಜ್ಯವನ್ನೂ, ಲಂಕಾಂಚ - ಲಂಕಾಪಟ್ಟಣವನ್ನೂ, ರಕ್ಷಾಂಸಿಚ - ರಕ್ಕಸರನ್ನೂ, ಮಾತರಂ - ತಾಯಿಯನ್ನೂ, ಮಾಂಚ - ನನ್ನನ್ನೂ, ಭಾರ್ಯಾಂಚ - ಹೆಂಡತಿಯನ್ನೂ, ನಃ - ನಮ್ಮನ್ನು, ವಿಹಾಯ - ಬಿಟ್ಟು, ಕ್ವ-ಎಲ್ಲಿ, ಗತಃ - ಹೋದವನು, ಅಸಿ-ಆದೆ. ॥ ೧೩ ॥ ಹೇ ವೀರ - ಎಲೈ ಶೂರನೇ, ತ್ವಯಾ - ನಿನ್ನಿಂದ, ಯಮಸಾದನಂ - ಯಮನ ಮನೆಯನ್ನು ಕುರಿತು, ಗತಸ್ಯ - ಹೋದಂಥಾ, ಮಮನಾಮ - ನನಗಾದರೆ, ಪ್ರೇತಕಾರ್ಯಾಣಿ - ಪ್ರೇತ ಕರ್ಮಗಳು, ಕಾರ್ಯಾಣಿ - ಮಾಡತಕ್ಕದ್ದು, ವಿಪರೀತೇ - ವ್ಯತ್ಯಸ್ತವಾದ ಕಾರ್ಯದಲ್ಲಿ, ವರ್ತಸೇಹಿ - ನಿಂತುಕೊಂಡೆಯಷ್ಟೆ. ॥ ೧೪ ॥ ಸತ್ವಂ - ಆ ಈ ನೀನು, ಸುಗ್ರೀವೇ - ಸುಗ್ರೀವನು, ಸರಾಘವೇ - ರಾಮನಿಂದೊಡಗೂಡಿದ, ಲಕ್ಷ್ಮಣೇಚ - ಲಕ್ಷ್ಮಣನೂ, ಜೀವತಿ - ಬದುಕಿರಲು, ಮಮ - ನನ್ನ, ಶಲ್ಯಂ - ಮನಶ್ಶಲ್ಯವನ್ನು, ಅನುಧೃತ್ಯ - ತೆಗೆಯದೆ, ನಃ - ನಮ್ಮನ್ನು, ವಿಹಾಯ - ಬಿಟ್ಟು, ಕ್ವ - ಎಲ್ಲಿ, ಗತಃ - ಹೋದವನು, ಅಸಿ - ಆದೆ. ॥ ೧೫ ॥ ಏವಮಾದಿ - ಈ ಮೊದಲಾಗಿ, ವಿಲಾಪಾರ್ತಂ - ವಿಲಾಪ ದಿಂದ ಸಂಕಟಗೊಂಡಿರುವ, ರಾಕ್ಷಸಾಧಿಪಂ - ರಾಕ್ಷಸಾಧಿಪತಿಯಾದ, ರಾವಣಂ - ರಾವಣನನ್ನು, ಪುತ್ರ....ವಃ - ಮಗನ ವಿಷಯವಾದ ವ್ಯಸನದಿಂದ ಹುಟ್ಟಿದ, ಮಹಾಕೋಪಃ - ಮಹಾ ಕೋಪವು, ಆವಿವೇಶ - ಹೊಕ್ಕಿತು. ॥ ೧೬ ॥ ಪ್ರಕೃತ್ಯಾ - ಸ್ವಭಾವದಿಂದಲೇ, ಕೋಪನಂ - ಕೋಪಿಷ್ಠನಾದ, ಏನಂ - ಈ ರಾವಣನನ್ನು, ಪುತ್ರಸ್ಯ - ಪುತ್ರ ವಿಷಯಕವಾದ, ಆಧಯಃ - ಮನೋವ್ಯಥೆಗಳು, ಘರ್ಮೇ - ಗ್ರೀಷ್ಮಕಾಲದಲ್ಲಿ, ದೀಪ್ತಂ - ಉರಿಯುತ್ತಿರುವ, ಅರ್ಕಂ - ಸೂರ್ಯನನ್ನು, ರಶ್ಮಯ

ಈಗ ನೀನು ಯೌವರಾಜ್ಯವನ್ನೂ, ಲಂಕಾನಗರವನ್ನೂ, ರಾಕ್ಷಸರನ್ನೂ, ನಿನ್ನ ತಾಯಿಯಾದ ಮಂಡೋದರಿಯನ್ನೂ, ತಂದೆಯಾದ ನನ್ನನ್ನೂ ತೊರೆದು ಎಲ್ಲಿಗೆ ಹೋದೆ? ಮಗನೇ! ಮಗನೇ!! ನಾನು ಮೃತಿಯೊಂದಿದ ತರುವಾಯ ನೀನು ನನಗೆ ಪಿತೃಕಾರ್ಯಗಳನ್ನು ಮಾಡುವೆಯೆಂದರಿತಿದ್ದೆನಲ್ಲವೆ! ದೈನಯೋಗವು ವಿಪರೀತವಾಗಿ ಪರಿಣಮಿಸಿದುದರಿಂದ ನಾನೇ ನಿನ್ನ ಪ್ರೇತಕಾರ್ಯಗಳನ್ನು ಮಾಡಬೇಕಾಗಿಬಂದಿತಲ್ಲವೆ? ಅಯ್ಯೋಯ್ಯೋ! ಈ ದುಃಖ ವನ್ನು ಹೇಗೆ ಭರಿಸಲಿ! ಏನು ಮಾಡಲಿ! ಮಗನೇ, ಇಂದ್ರಜಿತುವೆ! ರಾಮಲಕ್ಷ್ಮಣರೂ, ವಾನರರಾಜನಾದ ಸುಗ್ರೀವನೂ ಇನ್ನೂ ಬದುಕಿರುವಂತೆಯೇ ನೀನು ಮಡಿದು ಹೋದೆಯಾ! ನಿನ್ನಮನಶ್ಶಲ್ಯವನ್ನು ಕಳಚಿಹಾಕದೆ ಪರಲೋಕವನ್ನು ಸೇರಿದೆಯಾ!" ಎಂದು ಬಹಳವಾಗಿ ವಿಲಪಿಸಿದನು. ॥೧೨—೧೫॥ ಈ ಪ್ರಕಾರವಾಗಿ ಅತ್ಯಧಿಕ ವಿಲಾಪದಿಂದ ಸಂಕಟಪಡುತ್ತಿರುವ ರಾಕ್ಷಸೇಶ್ವರನಾದ ರಾವಣಾಸುರನಿಗೆ ಪುತ್ರ ಮರಣದಿಂದುಟಾದ ದುಃಖವು ಅಪರಿಮಿತ ವಾಯಿತು. ಆ ಸಮಯದಲ್ಲಿ ಮೊದಲೇ ಕೋಪಸ್ವಭಾವವುಳ್ಳ ಆ ರಾವಣಾಸುರನಿಗೆ ಪುತ್ರ ಮರಣದಿಂದುದಿಸಿದ ಮನೋವ್ಯಥೆಯು ಗ್ರೀಷ್ಮಋತುವಿನಲ್ಲಿ ಕಿರಣಗಳು ಸೂರ್ಯನನ್ನು ವೃದ್ಧಿ

ಪುನರಾಧಯಃ । ದೀಪ್ತಂ ಸಂದೀಪಯಾಮಾಸುರ್ಘರ್ನೇಽರ್ಕನಿವ ರಶ್ಮಯಃ ॥ ೧೭ ॥ ಲಲಾಟೇ ಭ್ರುಕುಟೀಭಿಶ್ಚ ಸಂಗತಾಭಿರ್ವ್ಯರೋಚತ । ಯುಗಾಂತೇ ಸಹನಕ್ರೈಸ್ತು ಮಹೋರ್ಮಿಭಿರಿವೋದಧಿಃ ॥ ೧೮ ॥ ಕೋಪಾದ್ವಿಜೃಂಭಮಾಣಸ್ಯ ವಕ್ತ್ರಾದ್ವ್ಯಕ್ತಮಭಿಜ್ವಲನ್ । ಉತ್ಪಪಾತ ಸಧೂಮೋಽಗ್ನಿರ್ವೃತ್ರಸ್ಯ ವದನಾದಿವ ॥ ೧೯ ॥ ಸಪುತ್ರವಧಸಂತಪ್ತಃ ಶೂರಃ ಕ್ರೋಧವಶಂಗತಃ । ಸಮೀಕ್ಷ್ಯ ರಾವಣೋ ಬುಧ್ಯಾ ವೈದೇಹ್ಯಾ ರೋಚಯದ್ವಧಂ ॥ ೨೦ ॥ ತಸ್ಯ ಪ್ರಕೃತ್ಯಾ ರಕ್ತೇ ಚ ರಕ್ತೇ ಕ್ರೋಧಾಗ್ನಿನಾಪಿ ಚ । ರಾವಣಸ್ಯ ಮಹಾಘೋರೇ ದೀಪ್ತೇ ನೇತ್ರೇ ಬಭೂವತುಃ ॥ ೨೧ ॥ ಘೋರಂ ಪ್ರಕೃತ್ಯಾ ರೂಪಂ ತತ್ತಸ್ಯ ಕ್ರೋಧಾಗ್ನಿಮೂರ್ಛಿತಂ । ಬಭೂವ ರೂಪಂ

ಇವ - ಕಿರಣಗಳಂತೆ, ಪುನಃ - ಮತ್ತು ಸಂದೀ....ಸುಃ - ಪ್ರಜ್ವಲಗೊಳಿಸಿದುವು. ॥ ೧೭ ॥ ಲಲಾಟೇ - ಹಣೆಯಲ್ಲಿ, ಸಂಗತಾಭಿಃ - ಸೇರಿರುವ, ಭೃಕುಟೀಭಿಃ - ಕಣ್ಣುಬ್ಬು ಗಂಟುಗಳಿಂದ, ಯುಗಾಂತೇ - ಪ್ರಳಯಕಾಲದಲ್ಲಿ, ಸಹನಕ್ರೈಃ - ನೆಗಳುಗಳಿಂದೊಡಗೂಡಿದ, ಮಹೋರ್ಮಿಭಿಃ - ದೊಡ್ಡ ತರಂಗಗಳಿಂದ, ಉದಧಿರಿವ - ಕಡಲಿನಂತೆ, ವ್ಯರೋಚತ - ಹೊಳೆಯುತ್ತಿದ್ದನು. ॥ ೧೮ ॥ ಕೋಪಾತ್ - ಕ್ರೋಧದ ದೆಸೆಯಿಂದ, ವಿಜೃಂ....ಸ್ಯ - ಆಕಳಿಸುತ್ತಿರುವ ರಾವಣನ, ವಕ್ತ್ರಾತ್ - ಮುಖದ ದೆಸೆಯಿಂದ, ವ್ಯಕ್ತಂ - ಸ್ಪಷ್ಟವಾಗಿ, ಅಭಿಜ್ವಲನ್ - ಉರಿಯುತ್ತಿರುವ, ಸಧೂಮಃ - ಹೊಗೆಯೊಡಗೂಡಿದ, ಅಗ್ನಿಃ - ಬೆಂಕಿಯು, ವೃತ್ರಸ್ಯ - ವೃತ್ರಾಸುರನ, ವದನಾದಿವ - ಮುಖದಿಂದಲಂತೆ, ಉತ್ಪಪಾತ - ಹಾರಿದನು. ॥ ೧೯ ॥ ಪುತ್ರ....ಪ್ತಃ - ಪುತ್ರಸಂಹಾರದಿಂದ ಸಂಕಟಗೊಂಡಿರುವ, ಶೂರಃ - ಶೂರನಾದ, ಕ್ರೋಧವಶಂ - ಕೋಪದ ಸ್ವಾಧೀನವನ್ನು, ಗತಃ - ಹೊಂದಿರುವ, ರಾವಣಃ - ರಾವಣನು, ಸಮೀಕ್ಷ್ಯ - ಆಲೋಚಿಸಿ, ವೈದೇಹ್ಯಾಃ - ಸೀತಾದೇವಿಯ, ವಧಂ - ಸಂಹಾರವನ್ನು, ಅರೋಚಯತ್ - ಸಮ್ಮತಿಸಿದನು. ॥ ೨೦ ॥ ತಸ್ಯರಾವಣಸ್ಯ - ಆ ರಾವಣನ, ಪ್ರಕೃತ್ಯಾ - ಸ್ವಭಾವದಿಂದಲೇ, ರಕ್ತೇ - ಕೆಂಪಾಗಿರುವ, ಮಹಾಘೋರೇ - ಮಹಾ ಭಯಂಕರಗಳಾದ, ದೀಪ್ತೇ - ಹೊಳೆಯುತ್ತಿರುವ, ನೇತ್ರೇ - ಕಣ್ಣುಗಳು, ಕ್ರೋಧಾಗ್ನಿನಾಪಿ - ಕೋಪವೆಂಬ ಅಗ್ನಿಯಿಂದಲೂ, ರಕ್ತೇಚ - ಕೆಂಪು ಬಣ್ಣವುಳ್ಳವುಗಳು, ಬಭೂವತುಃ - ಆದವು. ॥ ೨೧ ॥ ಪ್ರಕೃತ್ಯಾ - ಸ್ವಭಾವದಿಂದಲೇ, ಘೋರಂ - ಭಯಂಕರವಾದ, ಕ್ರೋಧಾ....ತಂ - ಕೋಪವೆಂಬ ಅಗ್ನಿಯಿಂದ ವ್ಯಾಪಿಸಲ್ಪಟ್ಟ,

---

ಹೊಂದಿಸಿದಂತೆ ಅವನನ್ನು ಬಹಳವಾಗಿ ವೃದ್ಧಿ ಹೊಂದಿಸಿತು. ಆ ಕೋಪದ ತೀಕ್ಷ್ಣತೆಯಿಂದ ಆ ರಾವಣನ ಲಲಾಟದಲ್ಲಿ ಹುಬ್ಬು ಗಂಟಿಕ್ಕಿರುವುದು ಸ್ಪಷ್ಟವಾಗಿ ಕಾಣುತ್ತಿದ್ದಿತು. ಆಗಲವನ ಮುಖವು ಪ್ರಳಯಕಾಲದಲ್ಲಿ ನೆಗಳುಗಳಿಂದಲೂ, ಮಹಾ ತರಂಗಗಳಿಂದಲೂ ಮೊರೆಯುವ ಸಮುದ್ರದಂತೆ ಶೋಭಿಸುತ್ತಿದ್ದಿತು. ಕ್ರೋಧಾವೇಗದಿಂದ ಅತ್ಯಧಿಕವಾಗಿ ವೃದ್ಧಿ ಹೊಂದುತ್ತಿದ್ದ ಆ ರಾಕ್ಷಸನ ಮುಖದಿಂದ, ವೃತ್ರಾಸುರನ ಮುಖದಿಂದೆಂತೋ ಅಂತು ಹೊಗೆಯೊಡಗೂಡಿದ ಬೆಂಕಿಯು ಹೊರಬೀಳುತ್ತಿದ್ದಿತು. ಆ ಸಮಯದಲ್ಲಿ ಮಹಾ ಶೂರನಾದ ಆ ರಾವಣಾಸುರನು ಪುತ್ರವಧಪೀಡಿತನಾಗಿ ಸಂಕಟವನ್ನು ಸಹಿಸಲಾರದೆ ಬಹಳವಾಗಿ ಕೋಪಿಸಿ ದುರದುರನೆ ನಾಲ್ಕೂ ದಿಕ್ಕುಗಳನ್ನು ದೃಷ್ಟಿಸಿ ನೋಡಿ ಸೀತಾದೇವಿಯನ್ನು ವಧಿಸಬಯಸಿದನು. ॥ ೧೭-೨೦ ॥ ಸ್ವಭಾವದಿಂದಲೇ ಕೆಂಪಗಿರುವ ಆ ರಾವಣಾಸುರನ ಕಣ್ಣುಗಳು ಕೋಪಾಗ್ನಿಯಿಂದ ಇನ್ನೂ ಹೆಚ್ಚಾಗಿ ಕೆಂಪೊಗೆದು ಬಹು ಭಯಂಕರವಾಗಿ ಪ್ರಜ್ವಲಿಸುತ್ತಿದ್ದುವು. ಕೋಪಾಗ್ನಿಯಿಂದ ವ್ಯಾಪ್ತವಾಗಿ, ಸಹಜ ಭಯಂ

ಕ್ರುದ್ಧಸ್ಯ ರುದ್ರಸ್ಯೇವ ದುರಾಸದಂ ॥ ೨೨ ॥ ತಸ್ಯ ಕ್ರುದ್ಧಸ್ಯ ನೇತ್ರಾಭ್ಯಾಂ ಪ್ರಾಪತ ನ್ನಾಸ್ರಬಿಂದವಃ । ದೀಪ್ತಾಭ್ಯಾಮಿವ ದೀಪಾಭ್ಯಾಂ ಸಾರ್ಚಿಷಸ್ಸ್ನೇಹಬಿಂದವಃ ॥೨೩॥ ದಂತಾನ್ವಿದಶತಸ್ತಸ್ಯ ಶ್ರೂಯತೇ ದಶನಸ್ವನಃ । ಯಂತ್ರಸ್ಯಾವೇಷ್ಟ್ಯಮಾನಸ್ಯ ಮಹತೋ ದಾನವೈರಿವ ॥ ೨೪ ॥ ಕಾಲಾಗ್ನಿರಿವ ಸಂಕ್ರುದ್ಧೋ ಯಾಂ ಯಾಂ ದಿಶಮ ವೈಕ್ಷತ । ತಸ್ಯಾಂ ತಸ್ಯಾಂ ಭಯತ್ರಸ್ತಾ ರಾಕ್ಷಸಾಸ್ಸಂವಿಲಿಲ್ಯಿರೇ ॥ ೨೫ ॥ ತಮಂ ತಕಮಿವ ಕ್ರುದ್ಧಂ ಚರಾಚರಚಿಖಾದಿಷುಮ್ । ವೀಕ್ಷಮಾಣಂ ದಿಶಸ್ಸರ್ವಾ ರಾಕ್ಷಸಾ ನೋಪಚಕ್ರಮುಃ ॥ ೨೬ ॥ ತತಃ ಪರಮಸಂಕ್ರುದ್ಧೋ ರಾವಣೋ ರಾಕ್ಷಸಾಧಿಪಃ ।

ತಸ್ಯ - ಆ ರಾವಣನ, ತದ್ರೂಪಂ - ಆ ರೂಪವೂ, ಕ್ರುದ್ಧಸ್ಯ - ಕೆರಳಿದ, ರುದ್ರಸ್ಯ - ಪ್ರಳಯ ರುದ್ರನ, ರೂಪಮಿವ - ಆಕಾರದಂತೆ, ದುರಾಸದಂ - ನೋಡಲಸಾಧ್ಯವು, ಬಭೂವ - ಆಯಿತು. ॥ ೨೨ ॥ ಕ್ರುದ್ಧಸ್ಯ - ಕೆರಳಿದ, ತಸ್ಯ - ಆ ರಾವಣನ, ನೇತ್ರಾಭ್ಯಾಂ - ಕಣ್ಣುಗಳಿಂದ, ಅಸ್ರ ಬಿಂದವಃ - ರಕ್ತದ ತೊಟ್ಟುಗಳು, ದೀಪ್ತಾಭ್ಯಾಂ - ಉರಿಯುತ್ತಿರುವ, ದೀಪಾಭ್ಯಾಂ - ದೀಪ ಗಳ ದೆಸೆಯಿಂದ, ಸಾರ್ಚಿಷಃ - ಜ್ವಾಲೆಗಳಿಂದೊಡಗೂಡಿದ, ಸ್ನೇಹಬಿಂದವಇವ - ಎಣ್ಣೆಯ ತೊಟ್ಟುಗಳಂತೆ, ಪ್ರಾಪತನ್ - ಬಿದ್ದುವು, ದಂತಾನ್ - ಹಲ್ಲುಗಳನ್ನು, ವಿದಶತಃ - ಕಡಿಯುತ್ತಿರುವ, ತಸ್ಯ - ಆ ರಾವಣನ, ದಶನಸ್ವನಃ - ದಂತಗಳ ಧ್ವನಿಯು, ದಾನವೈಃ - ರಕ್ಕಸರಿಂದ, ಆವೇಷ್ಟ್ಯ ಮಾನಸ್ಯ - ತಿರುಗಿಸಲ್ಪಟ್ಟ, ಮಹತಃ - ದೊಡ್ಡದಾದ, ಯಂತ್ರಸ್ಯ - ಗಾಣದ, ಸ್ವನಇವ - ಧ್ವನಿ ಯಂತೆ, ಶ್ರೂಯತೇ-ಕೇಳಿಸುತ್ತಿದ್ದಿತು. ॥೨೩-೨೪॥ ಕಾಲಾಗ್ನಿರಿವ-ಪ್ರಳಯಾಗ್ನಿಯಂತೆ, ಸಂಕ್ರುದ್ಧಃ- ಕೋಪಿಷ್ಠನಾಗಿ, ಯಾಂಯಾಂದಿಶಂ - ಯಾವ ಯಾವ ದಿಕ್ಕನ್ನು, ಅವೈಕ್ಷತ - ನೋಡಿದನೋ, ತಸ್ಯಾಂತಸ್ಯಾಂ - ಆ ಆ ದಿಕ್ಕಿನಲ್ಲಿ, ಭಯತ್ರಸ್ತಾಃ - ಭಯದಿಂದ ಹೆದರಿದ, ರಾಕ್ಷಸಾಃ - ರಕ್ಕಸರು, ಸಂವಿಲಿಲ್ಯಿರೇ - ಅವಿತುಕೊಂಡರು. ॥ ೨೫ ॥ ಅಂತಕಮಿವ - ಯಮನಂತೆ, ಕ್ರುದ್ಧಂ - ಕುಪಿತನಾದ, ಚರಾ....ಷುಂ - ಸ್ಥಾವರಜಂಗಮಗಳನ್ನೆಲ್ಲಾ ತಿನ್ನಬಯಸುತ್ತಿರುವ, ಸರ್ವಾಃದಿಶಃ - ಸಮಸ್ತ ದಿಕ್ಕು ಗಳನ್ನೂ, ವೀಕ್ಷಮಾಣಂ - ನೋಡುತ್ತಿರುವ, ತಂ - ಆ ರಾವಣನನ್ನು ಕುರಿತು, ರಾಕ್ಷಸಾಃ - ರಕ್ಕ ಸರು, ನೋಪಚಕ್ರಮುಃ - ಸಮೀಪಕ್ಕೆ ಬಾರದೇ ಹೋದರು. ॥ ೨೬ ॥ ತತಃ - ಬಳಿಕ, ಪರಮ ಸಂಕ್ರುದ್ಧಃ - ಬಹಳ ಕೋಪಗೊಂಡಿರುವ, ರಾಕ್ಷಸಾಧಿಪಃ - ರಕ್ಕಸರಿಗೆಲ್ಲಾ ಒಡೆಯನಾದ, ರಾವಣಃ-

---

ಕರನಾದ ಆ ರಾಕ್ಷಸನ ರೂಪವು ಪ್ರಳಯಕಾಲದ ರುದ್ರನ ರೂಪದಂತೆ ಬಹಳ ರೌದ್ರವಾಗಿ ದ್ದಿತು. ಹೀಗೆ ಕ್ರೋಧೋದ್ದೀಪಿತನಾದ ಆ ರಾವಣಾಸುರನ ಕಣ್ಣುಗಳಿಂದ ಕಂಬನಿಗಳು ಪ್ರಜ್ವಲಿಸುತ್ತಿರುವ ದೀಪಗಳಿಂದ ತೈಲಬಿಂದುಗಳಂತೆ ಉದುರುತ್ತಿದ್ದುವು. ರಾಕ್ಷಸ ರಿಂದ ತಿರುಗಿಸಲ್ಪಡುವ ಘಟಯಂತ್ರದ ಧ್ವನಿಯನ್ನು ಹೋಲುವ ಆ ರಾವಣನ ದಂತಗಳ ಕಟಕಟಧ್ವನಿಯು ಬಹು ಭಯಂಕರವಾಗಿ ಕೇಳಿಸುತ್ತಿದ್ದಿತು. ಅದನ್ನು ಕೇಳಿ ರಾಕ್ಷಸ ರೆಲ್ಲರೂ ಪರಮಾಶ್ಚರ್ಯಭರಿತರಾದರು. ಆಗ ರಾವಣನು ಅದೇ ಕೋಪದಿಂದಲೇ ದಿಕ್ಕು ದಿಕ್ಕುಗಳನ್ನೂ ನೋಡುತ್ತಿರಲು ಅಲ್ಲಲ್ಲಿರುವ ರಾಕ್ಷಸರೆಲ್ಲರೂ ಭಯದಿಂದ ತತ್ತಳಿಸಿಹೋದರು. ॥೨೧-೨೫॥ ಚರಾಚರಾತ್ಮಕವಾದ ಪ್ರಪಂಚವೆಲ್ಲವನ್ನೂ ಕಬಳಿಸಲು ಹವಣಿಸುತ್ತಿದ್ದವನಂತೆ ತೋರುತ್ತಿದ್ದ ಆ ರಾಕ್ಷಸರಾಜನು ಆ ಸಮಯದಲ್ಲಿ ಯಮನನ್ನೇ ಹೋಲುತ್ತಿದ್ದನು. ಅವನನ್ನು ಕಂಡು ಯಾವ ರಾಕ್ಷಸನೂ ಬಳಿಸಾರುವ ಧೈರ್ಯವನ್ನು ವಹಿಸಲಿಲ್ಲವು. ಎಲ್ಲರೂ ದಿಕ್ಕು

ಅಬ್ರವೀದ್ರಕ್ಷಸಾಂ ಮಧ್ಯೇ ಸಂಸ್ತಂಭಯಿಷುರಾಹವೇ ॥ ೨೭ ॥ "ಮಯಾ ವರ್ಷ ಸಹಸ್ರಾಣಿ ಚರಿತ್ವಾ ದುಶ್ಚರಂ ತಪಃ । ತೇಷು ತೇಷ್ವವಕಾಶೇಷು ಸ್ವಯಂಭೂಃ ಪರಿತೋಷಿತಃ ॥ ೨೮ ॥ ತಸ್ಯೈವ ತಪಸೋವ್ಯುಷ್ಟ್ಯಾ ಪ್ರಸಾದಾಚ್ಚ ಸ್ವಯಂಭುವಃ । ನಾಸುರೇಭ್ಯೋ ನದೇವೇಭ್ಯೋ ಭಯಂ ಮಮ ಕದಾಚನ ॥ ೨೯ ॥ ಕವಚಂ ಬ್ರಹ್ಮ ದತ್ತಂ ಮೇ ಯದಾದಿತ್ಯಸಮಪ್ರಭಂ । ದೇವಾಸುರವಿಮರ್ದೇಷು ನಭಿನ್ನಂ ವಜ್ರ ಶಕ್ತಿಭಿಃ ॥ ೩೦ ॥ ತೇನ ಮಾಮದ್ಯ ಸಂಯುಕ್ತಂ ರಥಸ್ಥಮಿಹ ಸಂಯುಗೇ । ಪ್ರತೀ ಯಾತೋದ್ಯ ಮಾಮಾಜೌ ಸಾಕ್ಷಾದಪಿ ಪುರಂದರಃ ॥ ೩೧ ॥ ಯತ್ತದಾಭಿಪ್ರಸನ್ನೇನ

ರಾವಣನು, ರಕ್ಷಸಾಂ - ರಕ್ಕಸರ, ಮಧ್ಯೇ - ನಡುವೆ, ಆಹವೇ - ಕಾಳೆಗದಲ್ಲಿ, ಸಂಸ್ತಂಭಯಿಷುಃ- ಸ್ಥಾಪನೆ ಮಾಡಲಿಚ್ಛೆಯುಳ್ಳವನಾಗಿ, ಅಬ್ರವೀತ್ - ನುಡಿದನು. ॥೨೭॥ ಮಯಾ - ನನ್ನಿಂದ, ತೇಷು ತೇಷ್ವವಕಾಶೇಷು - ಆ ಆ ಸ್ಥಳಗಳಲ್ಲಿ, ವರ್ಷಸಹಸ್ರಾಣಿ - ಅನೇಕ ವರ್ಷಗಳು, ದುಶ್ಚರಂ - ಮಾಡ ಲಸಾಧ್ಯವಾದ, ತಪಃ - ತಪವನ್ನು, ಚರಿತ್ವಾ - ಮಾಡಿ, ಸ್ವಯಂಭೂಃ - ಚತುರ್ಮುಖ ಬ್ರಹ್ಮನು, ಪರಿತೋಷಿತಃ - ಸಂತೋಷಗೊಳಿಸಲ್ಪಟ್ಟನು. ॥೨೮॥ ತಸ್ಯೈವತಪಸಃ - ಅದೇ ತಪಸ್ಸಿನ, ವ್ಯುಷ್ಟ್ಯಾ- ಸಮೃದ್ಧಿಯಿಂದ, ಸ್ವಯಂಭುವಃ - ಬ್ರಹ್ಮನ, ಪ್ರಸಾದಾಚ್ಚ - ಅನುಗ್ರಹದ ದೆಸೆಯಿಂದಲೂ, ಅಸು ರೇಭ್ಯಃ - ರಾಕ್ಷಸರ ದೆಸೆಯಿಂದಲೂ, ಮಮ - ನನಗೆ, ಭಯಂ - ಭಯವು, ನ - ಇಲ್ಲ, ದೇವೇಭ್ಯಃ - ದೇವತೆಗಳ ದೆಸೆಯಿಂದ, ಮಮ - ನನಗೆ, ಕದಾಚನ - ಎಂದಿಗೂ, ಭಯಂ - ಭೀತಿಯು, ನ - ಇಲ್ಲ. ॥ ೨೯ ॥ ಮೇ - ನನಗೆ, ಬ್ರಹ್ಮದತ್ತಂ - ಬ್ರಹ್ಮನಿಂದ ಕೊಡಲ್ಪಟ್ಟ, ಆದಿ....ಭಂ - ಸೂರ್ಯನ ತೇಜ ಸ್ಸಿಗೆ ಸಮಾನವಾದ ಪ್ರಕಾಶವುಳ್ಳ, ಯತ್ಕವಚಂ - ಯಾವ ಕವಚವು, ದೇವಾ......ಷು - ದೇವಾಸುರರ ಕಾಳೆಗಗಳಲ್ಲಿಯೂ, ವಜ್ರಶಕ್ತಿಭಿಃ - ವಜ್ರಾಯುಧದಿಂದಲೂ, ಶಕ್ತಿಗಳಿಂದಲೂ, ನಭಿನ್ನಂ - ಭೇದಿಸ ಲ್ಪಡಲಿಲ್ಲವೋ. ॥ ೩೦ ॥ ತೇನ - ಅಂಥಾ ಕವಚದಿಂದ, ಅದ್ಯ - ಈಗ, ಸಂಯುಕ್ತಂ - ಕೂಡಿರುವ, ರಥಸ್ಥಂ - ರಥದಲ್ಲಿರುವ, ಮಾಂ - ನನ್ನನ್ನು, ಸಂಯುಗೇ - ಕಾಳೆಗದಲ್ಲಿ, ಕಃ - ಯಾವನು ತಾನೆ, ಪ್ರತೀಯಾತ್ - ಪ್ರತಿಭಟಿಸಿ ಬಂದಾನು, ಆಜೌ - ಕಾಳೆಗದಲ್ಲಿ, ಅದ್ಯ - ಈಗ, ಸಾಕ್ಷಾತ್ - ಪ್ರತ್ಯಕ್ಷ ವಾಗಿ, ಪುರಂದರೋಪಿ - ದೇವೇಂದ್ರನೂ ಕೂಡ, ಮಾಂ - ನನ್ನನ್ನು, ನಪ್ರತಿಯಾತ್ - ಪ್ರತಿಭಟಿಸಿ

ದಿಕ್ಕುಗಳಿಗೂ ಪಲಾಯನವಾಗಿ ಹೋದರು. ಆಗಲಾ ರಾಕ್ಷಸಾಧಿಪತಿಯು ಮಹತ್ತರವಾದ ಕೋಪದಿಂದ ಕೆರಳಿ ರಣರಂಗವಲ್ಲಿ ಯುದ್ಧಭೀತರಾದ ರಾಕ್ಷಸರೆಲ್ಲರನ್ನೂ ಉತ್ಸಾಹವಂತ ರನ್ನಾಗಿ ಮಾಡಲುಜ್ಜುಗಿಸಿ, "ಎಲೈ ರಾಕ್ಷಸರೇ! ಪೂರ್ವದಲ್ಲಿ ನಾನು ಬ್ರಹ್ಮನನ್ನುದ್ದೇಶಿಸಿ ಸಾವಿರ ವರ್ಷಗಳು ಕೆಲಕೆಲ ಕ್ಷೇತ್ರಗಳಲ್ಲಿ ತಪಸ್ಸು ಮಾಡಿದೆನು. ಆ ತಪಸ್ಸಿನಿಂದ ಬ್ರಹ್ಮನನ್ನು ಅನೇಕಸಲ ಸಂತೋಷಗೊಳಿಸಿದೆನು. ಆತನು ನನ್ನ ಭಯಂಕರ ತಪಸ್ಸಿಗೆ ಮೆಚ್ಚಿ ದೇವದಾನವ ರಲ್ಲಿ ಯಾರಿಂದಲೂ ನನಗೆ ಯಾವ ವಿಧವಾದ ಭಯವೂ ಉಂಟಾಗದಂತೆ ವರವನ್ನು ಕರುಣಿಸಿ ದನು. ಇಷ್ಟೆಯಲ್ಲದೆ ಆತನು ಮಹಾ ಶ್ರೇಷ್ಠವಾದ ಅಭೇದ್ಯ ಕವಚವನ್ನು ನನಗೆ ಅನುಗ್ರಹಿ ಸಿದನು. ಅದರಿಂದ ನನ್ನ ಕವಚವು ಪೂರ್ವದಲ್ಲಿ ನಡೆದ ದೇವಾಸುರ ಯುದ್ಧದಲ್ಲಿ ಮಹೇಂ ದ್ರನ ವಜ್ರಾಯುಧದಿಂದಲೂ ಭೇದಿಸಲಸಾಧ್ಯವಾಯಿತು. ॥ ೨೭-೩೦ ॥ ಅಂತಹ ದಿವ್ಯಾ ಯುಧಗಳುಳ್ಳ ನಾನು ರಥಾರೂಢನಾಗಿ ರಣಾಂಗಣದಲ್ಲಿ ನಿಂತೆನೆಂದರೆ ಅದಾವನುತಾನೆ ನನಗೆ ಎದುರಾಳಿಯಾಗಿ ನಿಂತು ಯುದ್ಧಮಾಡಿಯಾನು. ಮಹೇಂದ್ರನೇ ಬಂದು ಕಾಳೆಗ

ಸಶರಂ ಕಾರ್ಮುಕಂ ಮಹತ್ । ದೇವಾಸುರವಿಮರ್ದೇಷು ಮಮ ದತ್ತಂ ಸ್ವಯಂ ಭುವಾ ॥೩೨॥ ¶ ಅದ್ಯ ತೂರ್ಯಶತೈರ್ಭೀಮಂ ಧನುರುತ್ಥಾಪ್ಯತಾಂ ಮಮ । ರಾಮ ಲಕ್ಷ್ಮಣಯೋರೇವ ವಧಾಯ ಪರಮಾಹವೇ " ॥ ೩೩ ॥ ☤ ಸಪುತ್ರವಧಸಂತಪ್ತಃ ಶೂರಃ ಕ್ರೋಧವಶಂಗತಃ । ಸಮೀಕ್ಷ್ಯ ರಾವಣೋ ಬುದ್ಧ್ಯಾ ಸೀತಾಂ ಹಂತುಂ ವ್ಯವಸ್ಯತ ॥ ೩೪ ॥ ಪ್ರತ್ಯವೇಕ್ಷ್ಯ ತು ತಾಮ್ರಾಕ್ಷಸ್ಸುಘೋರೋ ಘೋರದರ್ಶನಃ । ದೀನೋ ದೀನಸ್ವರಾನ್ ಸರ್ವಾಂಸ್ತಾನುವಾಚ ನಿಶಾಚರಾನ್ ॥ ೩೫ ॥ " ಮಾಯಯಾ

ಬರಲಾರನು, ತದಾ - ಆ ಕಾಲದಲ್ಲಿ, ಅಭಿಪ್ರಸನ್ನೇನ - ಬಹಳ ಪ್ರಸನ್ನನಾದ, ಸ್ವಯಂಭುವಾ - ಬ್ರಹ್ಮನಿಂದ, ದೇವಾ....ಷು - ದೇವಾಸುರಯುದ್ಧಗಳಲ್ಲಿ, ಮಮ - ನನಗೆ, ಮಹತ್ - ದೊಡ್ಡದಾದ, ಸಶರಂ - ಬಾಣಗಳಿಂದೊಡಗೂಡಿದ, ಯತ್ಕಾರ್ಮುಕಂ-ಯಾವ ಧನುಸ್ಸು, ದತ್ತಂ-ಕೊಡಲ್ಪಟ್ಟಿತೋ. ॥ ೩೨ ॥ ಅದ್ಯ - ಈಗ, ತೂರ್ಯಶತೈಃ - ತುತ್ತೂರಿಗಳ ಧ್ವನಿಗಳಿಂದ, ಮಮ - ನನ್ನ, ತದ್ಧನುಃ - ಆ ಬಿಲ್ಲು, ಆಹವೇ - ಕಾಳಗದಲ್ಲಿ, ರಾಮಲಕ್ಷ್ಮಣಯೋಃ - ರಾಮಲಕ್ಷ್ಮಣರ, ವಧಾಯೈವ - ಸಂಹಾರಕ್ಕಾಗಿಯೇ, ಪರಂ - ಬಹಳವಾಗಿ, ಉತ್ಥಾಪ್ಯತಾಂ - ತೆಗೆಯಲ್ಪಡಲಿ, ಶೂರಃ - ಶೂರನಾದ, ಸಃರಾವಣಃ - ಆ ರಾವಣನು, ಪುತ್ರ....ಪ್ತಃ - ಮಗನ ಸಂಹಾರದಿಂದ ಸಂಕಟಗೊಂಡು, ಕ್ರೋಧವಶಂಗತಃ - ಕೋಪಕ್ಕೆ ತುತ್ತಾಗಿ, ಬುಧ್ಯಾ - ಬುದ್ಧಿಯಿಂದ, ಸೀತಾಂ - ಸೀತಾದೇವಿಯನ್ನು, ಹಂತುಂ - ಕೊಲ್ಲಲು, ಸಮೀಕ್ಷ್ಯ - ಆಲೋಚಿಸಿ, ವ್ಯವಸ್ಯತ - ಉದ್ಯೋಗಿಸಿದನು. ॥ ೩೩-೩೪ ॥ ಧೂಮ್ರಾಕ್ಷಃ - ಕೆಂಗಣ್ಣುಗಳುಳ್ಳ, ಸುಘೋರಃ - ಬಹಳ ಭಯಂಕರನಾದ, ಘೋರದರ್ಶನಃ - ಭಯಂಕರವಾದ ನೋಟವುಳ್ಳ, ದೀನಃ - ದೀನನಾದ ರಾವಣನು, ದೀನಸ್ವರಾನ್ - ದೀನವಾದ ಧ್ವನಿಗಳುಳ್ಳ, ಸರ್ವಾನ್ - ಸಮಸ್ತರಾದ, ತಾನ್ನಿಶಾಚರಾನ್ - ಆ ರಕ್ಕಸರನ್ನು, ಪ್ರತ್ಯವೇಕ್ಷ್ಯ - ಕಂಡು, ಉವಾಚ - ಹೇಳಿದನು.

ಮಾಡಿದರೂ ನನ್ನನ್ನು ಜಯಿಸಲಾರನು. ಅಯ್ಯಾ ರಾಕ್ಷಸರೇ! ದೇವಾಸುರರೊಡನೆ ಯುದ್ಧ ಮಾಡುವ ಸಮಯದಲ್ಲಿ ಕಮಲಾಸನನು ನನಗೆ ಶರಶರಾಸನಗಳನ್ನು ಅನುಗ್ರಹಿಸಿರುವನಷ್ಟೆ? ಆದುದರಿಂದ ಈ ಎಲ್ಲ ಸಲಕರಣಗಳಿಂದಲೂ ನಾನು ಯುದ್ಧದಲ್ಲಿ ಜಯಶಾಲಿಯಾಗುವೆನು. ಆದಕಾರಣ ನೀವೆಲ್ಲರೂ ಈಗಲೇ ಬ್ರಹ್ಮದತ್ತವಾದ ಆ ನನ್ನ ಧನುಸ್ಸನ್ನು ಯುದ್ಧಕ್ಕೆ ಸಿದ್ಧಪಡಿಸಿರಿ. ಆ ಧನುಸ್ಸನ್ನು ಧರಿಸಿ ಈಗಲೇ ಆ ರಾಮಲಕ್ಷ್ಮಣರನ್ನು ಸಂಹರಿಸಲು ರಣಾಂಗಣಕ್ಕೆ ಹೊರಡುವೆನು" ಎಂದು ಹೇಳಿದನು. ಆ ತರುವಾಯ ಪುತ್ರವಧೆಯಿಂದ ಅಪರಿಮಿತವಾದ ಪರಿತಾಪವುಳ್ಳ ಆ ರಾವಣನು ಅತ್ಯಂತ ಕ್ರೋಧಸಮನ್ವಿತನಾಗಿ ಸ್ವಲ್ಪಹೊತ್ತು ಆಲೋಚಿಸಿ ಕಡೆಗೆ ಸೀತೆಯನ್ನು ಮೊದಲು ಕೊಲ್ಲಬೇಕೆಂದು ನಿಶ್ಚಯಿಸಿಕೊಂಡನು. ॥ ೩೧–೩೪ ॥ ಕೆಂಪೊಗೆದ ಕಣ್ಣುಗಳುಳ್ಳವನೂ, ನೋಡಲು ಮಹಾ ಭಯಂಕರನೂ, ಪುತ್ರವಿಯೋಗದಿಂದುಂಟಾದ ವ್ಯಸನದಿಂದ ದೀನದೀನನೂ ಆದ ಆ ರಾವಣನು ದೀನಧ್ವನಿಯುಳ್ಳ ರಾಕ್ಷಸರೆಲ್ಲ

¶ " ಶ್ರೀರಾಮ ಲಕ್ಷ್ಮಣರೊಡನೆ ನಾನು ಮಾಡುವ ಕಾಳಗದಲ್ಲಿ ವಾನರರೆಲ್ಲರನ್ನೂ ಸಂಹರಿಸಲೋಸುಗ ಬ್ರಹ್ಮದತ್ತವಾದ ಆ ದಿವ್ಯ ಧನುಸ್ಸನ್ನು ತೆಗೆದುಕೊಂಡು ಬನ್ನಿರಿ" ಎಂದು ಈ ಶ್ಲೋಕದ ತತ್ವಾರ್ಥ.

☤ " ಪುತ್ರಶೋಕಸಂತಪ್ತನಾದ ಆ ರಾವಣನು ತನ್ನ ಕ್ರೋಧವನ್ನೂ ಶೋಕವನ್ನೂ ಜಗನ್ಮಾತೆಯಾದ ಸೀತಾದೇವಿಯ ಸಂದರ್ಶನದಿಂದಾದರೂ ಶಾಂತಗೊಳಿಸಿಕೊಳ್ಳಬಯಸಿ ಆಕೆಯ ಬಳಿಗೈದಲು ಮನಸ್ಸು ಮಾಡಿದನು" ಎಂದು ವಾಸ್ತವಿಕಾರ್ಥ.

ಮಮ ವತ್ಸೇನ ವಂಚನಾರ್ಥಂ ವನೌಕಸಾಂ । ಕಿಂಚಿದೇವ ಹತಂ ತತ್ರ ಸೀತೇಯಮಿತಿ ದರ್ಶಿತಂ ॥ ೩೬ ॥ ತದಿದಂ ತಥ್ಯಮೇವಾಹಂ ಕರಿಷ್ಯೇ ಪ್ರಿಯಮಾತ್ಮನಃ । ವೈದೇಹೀಂ ನಾಶಯಿಷ್ಯಾಮಿ ಕ್ಷತ್ರಬಂಧುಮನುವ್ರತಾಂ" । ಇತ್ಯೇವಮುಕ್ತ್ವಾ ಸಚಿವಾನ್ ಖಡ್ಗಮಾಶು ಪರಾಮೃಶತ್ ॥ ೩೭-೩೮ ॥ ಉದ್ಧೃತ್ಯ ಗುಣಸಂಪನ್ನಂ ವಿಮಲಾಂಬರವರ್ಚಸಂ । ನಿಷ್ಪಪಾತ ಸವೇಗೇನ ಸಭಾರ್ಯಸ್ಸಚಿವೈರ್ವೃತಃ ॥ ೩೯ ॥

॥ ೩೫ ॥ ಮಾಯಯಾ - ಮಾಯೆಯಿಂದ, ಮಮ - ನನ್ನ, ವತ್ಸೇನ - ಮಗನಿಂದ, ವನೌಕಸಾಂ - ಕಪಿಗಳಿಗೆ, ವಂಚನಾರ್ಥಂ - ಮೋಸಗೊಳಿಸುವ ನಿಮಿತ್ತವಾಗಿ, ತತ್ರ - ಆ ಕಾಳೆಗದಲ್ಲಿ, ಇಯಂ ಸೀತೇತಿ - ಇವಳೇ ಸೀತೆಯೆಂದು, ದರ್ಶಿತಂ - ತೋರಿಸಲ್ಪಟ್ಟ, ಕಿಂಚಿದೇವ - ಯಾವುದೋ ಒಂದು ಪದಾರ್ಥವು, ಹತಂ - ಹೊಡೆಯಲ್ಪಟ್ಟಿತು. ॥ ೩೬ ॥ ತದಿದಂ - ಆ ಮಾಯಾಸೀತೆಯ ಕೊಲ್ಲುವಿಕೆಯನ್ನು, ತಥ್ಯಂ - ಯಥಾರ್ಥವನ್ನಾಗಿ, ಅಹಂ - ನಾನು, ಆತ್ಮನಃ - ನನಗೆ, ಪ್ರಿಯಂ - ಇಷ್ಟವಾದ್ದನ್ನಾಗಿ, ಕರಿಷ್ಯೇ - ಮಾಡುವೆನು, ಕ್ಷತ್ರಬಂಧುಂ - ಕ್ಷತ್ರಿಯಬಂಧುವಾದ ರಾಮನನ್ನು, ಅನುವ್ರತಾಂ - ಅನುಸರಿಸಿ ನಿಯಮವುಳ್ಳ, ವೈದೇಹೀಂ - ಸೀತಾದೇವಿಯನ್ನು, ನಾಶಯಿಷ್ಯಾಮಿ - ನಾಶಗೊಳಿಸುವೆನು. ॥೩೭॥ ಇತ್ಯೇವಂ - ಈ ಪರಿಯಾಗಿ, ಸಚಿವಾನ್ - ಮಂತ್ರಿಗಳನ್ನು ಕುರಿತು, ಉಕ್ತ್ವಾ - ಹೇಳಿ, ಆಶು - ಜಾಗ್ರತೆಯಾಗಿ, ಖಡ್ಗಂ - ಕತ್ತಿಯನ್ನು, ಪರಾಮೃಶತ್ - ತೆಗೆದುಕೊಂಡನು, ಪುತ್ರಶೋಕೇನ - ಪುತ್ರವ್ಯಸನದಿಂದ, ಭೃಶಂ - ಬಹಳವಾಗಿ, ಆಕುಲಚೇತನಃ - ವ್ಯಾಕುಲವಾದ ಮನವುಳ್ಳ, ಸಭಾರ್ಯಃ - ಹೆಂಡತಿಯೊಡಗೂಡಿದ, ಸರಾವಣಃ - ಆ ರಾವಣನು, ಸಚಿವೈಃ - ಮಂತ್ರಿಗಳಿಂದ, ವೃತಃ - ಸುತ್ತುವರೆದು, ಗುಣಸಂಪನ್ನಂ - ಪುಷ್ಪಮಾಲಿಕೆಗಳಿಂದಲಂಕೃತವಾದ, ವಿಮ....ಸಂ - ನಿರ್ಮಲವಾದ ಅಂತರಿಕ್ಷಕ್ಕೆ ಸಮಾನವಾದ ತೇಜಸ್ಸುಳ್ಳ, ಖಡ್ಗಂ - ಕತ್ತಿಯನ್ನು, ಉದ್ಧೃತ್ಯ - ಒರೆಯಿಂದ ತೆಗೆದು, ಆದಾಯ ತೆಗೆದುಕೊಂಡು, ಯತ್ರ - ಯಾವ ಸ್ಥಳದಲ್ಲಿ, ಮೈಥಿಲೀ - ಸೀತಾದೇವಿಯು,

---

ರನ್ನೂ ಕುರಿತು, "ಎಲೈ ರಾಕ್ಷಸೋತ್ತಮರೇ ! ವಾನರರನ್ನು ಮೋಸಗೊಳಿಸಲೋಸುಗ ನನ್ನ ಮಗನಾದ ಇಂದ್ರಜಿತುವು ತನ್ನ ಮಾಯೆಯಿಂದ ಕಲ್ಪಿಸಿದ ಸೀತೆಯೆಂಬೊಂದು ಪದಾರ್ಥವನ್ನು ಯುದ್ಧಭೂಮಿಯಲ್ಲಿ ಕಡಿದುಹಾಕಿದನು. ಅಷ್ಟುಮಾತ್ರದಿಂದಲೇ ಅವನ ಅಭೀಷ್ಟವು ನೆರವೇರಿತು. ಈಗ ನಾನು ಯಥಾರ್ಥವಾಗಿಯೂ ಸೀತೆಯನ್ನೇ ವಧಿಸಿ ಸಂತೋಷಪಡುವೆನು. ನನ್ನ ಮಾತುಗಳನ್ನು ನಂಬಿರಿ. ಕ್ಷತ್ರಿಯರೆಲ್ಲರಿಗೂ ಪರಮಾಪ್ತನಾದ ಆ ರಾಮನ ಭಾರ್ಯೆಯೂ, ಪತಿವ್ರತೆಯೂ ಆದ ಸೀತೆಯನ್ನು ಕೊಂದು ರಾಮನಿಗೆ ನಿಜವಾಗಿಯೂ ದುಃಖವನ್ನುಂಟುಮಾಡುವೆನು" ಎಂದು ಹೇಳಿದನು. ಆ ಬಳಿಕಲಾ ರಾಕ್ಷಸನು ಖಡ್ಗವನ್ನು ತನ್ನಿರೆಂದು ಮಂತ್ರಿಗಳಿಗೆ ಆಜ್ಞಾಪಿಸಿದನು. ಮಂತ್ರಿಗಳು ಕೂಡಲೇ ಆ ಕಾರ್ಯವನ್ನೆಸಗಲು,

---

§ ಇಲ್ಲಿನ ವಾಸ್ತವಿಕಾರ್ಥ:—ನನ್ನ ಮಗನಾದ ಇಂದ್ರಜಿತುವು ವಾನರರನ್ನು ವಂಚಿಸಲೋಸುಗ ಇವಳೇ ಸೀತೆಯೆಂದು ಯಾವುದೋ ಒಂದು ಮಾಯಾ ವ್ಯಕ್ತಿಯನ್ನು ತೋರಿಸಿದನು. ನಾನು ಕ್ಷತ್ರಿಯರಿಗೆಲ್ಲ ಪರಮಾಪ್ತನಾದ ಶ್ರೀರಾಮನಲ್ಲಿಯೇ ನ್ಯಸ್ತಚಿತ್ತಳಾದ ವೈದೇಹಿಯನ್ನು ನಿಜವಾಗಿಯೂ ನಾಶಗೊಳಿಸಿದ್ದಾದರೆ ಅದರಿಂದ ನನಗೆ ಅಶ್ರೇಯಸ್ಸೇ ಉಂಟಾಗುತ್ತದೆ. ಸೀತಾ ವಧವು ಇತರ ರಾಕ್ಷಸರಿಗೆ ಸಂತೋಷಕರವಾದರೂ ನಾನು ಆ ಕಾರ್ಯವನ್ನು ಮಾಡುವೆನೇ ? ಮಾಡುವುದಿಲ್ಲವು.

ರಾವಣಃ ಪುತ್ರಶೋಕೇನ ಭೃಶಮಾಕುಲಚೇತನಃ । ಸಂಕ್ರುದ್ಧಃ ಖಡ್ಗಮಾದಾಯ ಸಹಸಾ ಯತ್ರ ಮೈಥಿಲೀ ॥ ೪೦ ॥ ವ್ರಜಂತಂ ರಾಕ್ಷಸಂ ಪ್ರೇಕ್ಷ್ಯ ಸಿಂಹನಾದಂ ಪ್ರಚುಕ್ರುಶುಃ । ಊಚುಶ್ಚಾನ್ಯೋನ್ಯಮಾಶ್ಲಿಷ್ಯ ಸಂಕ್ರುದ್ಧಂ ಪ್ರೇಕ್ಷ್ಯ ರಾಕ್ಷಸಾಃ ॥ ೪೧ ॥ "ಅದ್ಯೈನಂ ತಾವುಭೌ ದೃಷ್ಟ್ವಾ ಭ್ರಾತರೌ ಪ್ರವ್ಯಥಿಷ್ಯತಃ । ಲೋಕಪಾಲಾಹಿ ಚತ್ವಾರಃ ಕ್ರುದ್ಧೇನಾನೇನ ನಿರ್ಜಿತಾಃ । ಬಹವಃ ಶತ್ರವಶ್ಚಾನ್ಯೇ ಸಂಯುಗೇಷು ನಿಪಾತಿತಾಃ ॥ ೪೨ ॥ ತ್ರಿಷು ಲೋಕೇಷು ರತ್ನಾನಿ ಭುಙ್ಕ್ತೇ ಚಾಹೃತ್ಯ ರಾವಣಃ । ವಿಕ್ರಮೇಚ ಬಲೇಚೈವ ನಾಸ್ತ್ಯಸ್ಯ ಸದೃಶೋ ಭುವಿ" ॥ ೪೩ ॥ ತೇಷಾಂ ಸಂಜಲ್ಪ

ಅಸ್ತಿ - ಇರುವಳೋ, ತತ್ರ - ಅಲ್ಲಿ, ವೇಗೇನ - ಜವದಿಂದ, ಸಹಸಾ - ಜಾಗ್ರತೆಯಾಗಿ, ಸಂಕ್ರುದ್ಧಃ - ಕುಪಿತನಾಗಿ, ನಿಷ್ಪಪಾತ - ಹೊರಟುಬಂದನು. ॥ ೩೯-೪೦ ॥ ರಾಕ್ಷಸಾಃ - ರಕ್ಕಸರು, ವ್ರಜಂತಂ - ಹೋಗುತ್ತಿರುವ, ಸಂಕ್ರುದ್ಧಂ-ಕೋಪಿಷ್ಠನಾದ, ರಾಕ್ಷಸಂ-ರಾವಣಾಸುರನನ್ನು, ಪ್ರೇಕ್ಷ್ಯ-ಕಂಡು, ಅನ್ಯೋನ್ಯಂ - ಪರಸ್ಪರವಾಗಿ, ಆಶ್ಲಿಷ್ಯ - ಅಪ್ಪಿಕೊಂಡು, ಪ್ರೇಕ್ಷ್ಯ - ಕಂಡು, ಸಿಂಹನಾದಂ - ಸಿಂಹನಾದವನ್ನು, ಪ್ರಚುಕ್ರುಶುಃ - ಕೂಗಿದರು, ಊಚುಶ್ಚ - ಮಾತನಾಡಿಕೊಂಡರು. ॥ ೪೧ ॥ ಅದ್ಯ - ಈಗ, ತಾವುಭೌ ಭ್ರಾತರೌ - ಆ ಅಣ್ಣತಮ್ಮಂದರೀರ್ವರೂ, ಏನಂ - ಈ ರಾವಣನನ್ನು, ದೃಷ್ಟ್ವಾ - ಕಂಡು, ವ್ಯಥಿಷ್ಯತಃ - ವ್ಯಥೆ ಪಡುವರು, ಕ್ರುದ್ಧೇನ - ಕೋಪಿಷ್ಠನಾದ, ಅನೇನ - ಈ ರಾವಣನಿಂದ, ಚತ್ವಾರಃ - ನಾಲ್ವರಾದ, ಲೋಕಪಾಲಾಃ - ದಿಕ್ಪಾಲಕರು, ನಿರ್ಜಿತಾಹಿ - ಜಯಿಸಲ್ಪಟ್ಟರಷ್ಟೆ, ಅನ್ಯೇಚ - ಮತ್ತೂ ಇತರರಾದ, ಬಹವಃ - ಬಹಳ ಮಂದಿಯಾದ, ಶತುವಃ - ಶತ್ರುಗಳು, ಸಂಯುಗೇಷು - ಕಾಳಗಗಳಲ್ಲಿ, ನಿಪಾತಿತಾಃ - ಬೀಳಿಸಲ್ಪಟ್ಟಿದ್ದಾರೆ. ॥ ೪೨ ॥ ತ್ರಿಷುಲೋಕೇಷು - ಮೂರು ಲೋಕಗಳಲ್ಲಿಯೂ, ರಾವಣಃ - ರಾವಣನು, ರತ್ನಾನಿ - ಶ್ರೇಷ್ಠವಾದ ವಸ್ತುಗಳನ್ನು, ಆಹೃತ್ಯ - ತಂದು, ಭುಙ್ಕ್ತೇಚ - ಅನುಭವಿಸುತ್ತಾನೆ, ವಿಕ್ರಮೇಚ - ಪರಾಕ್ರಮದಲ್ಲಿಯೂ, ಅಸ್ಯ - ಈತನಿಗೆ, ಸದೃಶಃ - ಸಮಾನನು, ಭುವಿ - ಭೂಮಂಡಲದಲ್ಲಿ, ನಾಸ್ತ್ಯೇವ - ಇಲ್ಲವೇ ಇಲ್ಲ, ಇತಿ - ಇಂತೆಂದು, ತೇಷಾಂ -

---

ಮಹಾ ತೀಕ್ಷ್ಣವೂ, ಸ್ವಚ್ಛವೂ, ಅನೇಕ ಗುಣಸಹಿತವೂ ಆದ ಆ ಖಡ್ಗವನ್ನು ಹಿಡಿದು ಮಹಾ ಭಯಂಕರನಾದ ಆ ರಾವಣಾಸುರನು ರಾಮಭಾರ್ಯೆಯಾದ ಸೀತಾದೇವಿಯಿರುವ ಅಶೋಕ ವನಕ್ಕೈತಂದನು. ॥೩೬-೪೦॥ ಅವನು ಪುತ್ರಮರಣ ಶೋಕದಿಂದ ಬಹಳವಾಗಿ ಸಂತಪಿಸುತ್ತಿದ್ದನು. ಅವನಿಗೆ ಕೋಪವೆಂಬುದು ಮಿತಿಮೀರಿ ಹೋಗಿದ್ದಿತು. ಅವನನ್ನು ನೋಡಿ ಇನ್ನು ಸೀತೆಯು ಇಲ್ಲವಾಗುವಳೆಂದು ರಾಕ್ಷಸರೆಲ್ಲರೂ ಸಂತೋಷದಿಂದುಬ್ಬಿ ಸಿಂಹನಾದಗಳನ್ನು ಮಾಡುತ್ತಿದ್ದರು. ಒಬ್ಬರನ್ನೊಬ್ಬರು ಆಲಿಂಗಿಸಿಕೊಳ್ಳುತ್ತ ಅನೇಕ ವಿಧಗಳಾದ ನೃತ್ಯಗಳನ್ನು ಮಾಡತೊಡಗಿದರು. ಅವರು, "ಆಹಾ! ಈಗಲೀ ರಾವಣಾಸುರನನ್ನು ನೋಡಿ ಅಣ್ಣತಮ್ಮಂದಿರಾದ ಆ ರಾಮಲಕ್ಷ್ಮಣರು ಕೇವಲ ದುಃಖಿತರಾಗುವರು. ನಮ್ಮ ರಾವಣಾಸುರನೇನು ಸಾಮಾನ್ಯನೇ! ಮಹಾ ಕ್ರುದ್ಧನಾದ ಈತನು ಲೋಕಪಾಲಕರೆಲ್ಲರನ್ನೂ ಗೆದ್ದಿದ್ದಾನೆ. ಹಿಂದೆ ಅನೇಕಸಲ ಈ ರಾಕ್ಷಸ ಪ್ರಭುವು ಶತ್ರುಗಳನೇಕರನ್ನು ಸಂಹರಿಸಿರುವನು. ಈತನಿಗೆ ಯಾವ ಹಾನಿಯೂ ಉಂಟಾಗಲಾರದು. ಈತನು ಮೂರು ಲೋಕಗಳಲ್ಲಿರುವ ಮಹಾ ರತ್ನಗಳೆಲ್ಲವನ್ನೂ ತಂದು ತಾನೇ ಅನುಭವಿಸುತ್ತಿರುವನಲ್ಲವೆ! ಆದುದರಿಂದ ಈತನಂತಹ ಪರಾಕ್ರಮಿಯೂ, ಬಲಾಢ್ಯನೂ ಮೂರು ಲೋಕಗಳಲ್ಲಿಯೂ ಇರುವು

ಮಾನಾನಾಮಶೋಕವನಿಕಾಂ ಗತಾಂ । ಅಭಿದುದ್ರಾವ ವೈದೇಹೀಂ ರಾವಣಃ ಕ್ರೋಧಮೂರ್ಛಿತಃ ॥ ೪೪ ॥ ವಾರ್ಯಮಾಣಸ್ಸುಸಂಕ್ರುದ್ಧಃ ಸುಹೃದ್ಭಿರ್ಹಿತಬುದ್ಧಿಭಿಃ । ಅಭ್ಯಧಾವತ ಸಂಕ್ರುದ್ಧಃ ಖೇ ಗ್ರಹೋ ರೋಹಿಣೀಮಿವ ॥ ೪೫ ॥ ಮೈಥಿಲೀ ರಕ್ಷ್ಯಮಾಣಾತು ರಾಕ್ಷಸೀಭಿರನಿಂದಿತಾ । ದದರ್ಶ ರಾಕ್ಷಸಂ ಕ್ರುದ್ಧಂ ನಿಸ್ತ್ರಿಂಶವರಧಾರಿಣಂ ॥ ೪೬ ॥ ತಂ ನಿಶಾಮ್ಯ ಸನಿಸ್ತ್ರಿಂಶಂ ವ್ಯಥಿತಾ ಜನಕಾತ್ಮಜಾ । ನಿವಾರ್ಯಮಾಣಂ ಬಹುಶಸ್ಸುಹೃದ್ಭಿರನಿವರ್ತಿನಂ । ಸೀತಾ ದುಃಖಸಮಾವಿಷ್ಟಾ ವಿಲಪಂತೀದಮಬ್ರ

ಆ ಮಂತ್ರಿಗಳು, ಸಂಜ....ನಾಂ - ಹೇಳುತ್ತಿರಲು, ರಾವಣಃ - ರಾವಣನು, ಕ್ರೋಧಮೂರ್ಛಿತಃ - ಕೋಪದಿಂದ ವ್ಯಾಪ್ತನಾಗಿ, ಅಶೋಕವನಂ-ಅಶೋಕವನವನ್ನು, ಗತಾಂ-ಹೊಂದಿರುವ, ವೈದೇಹೀಂ-ಸೀತಾದೇವಿಯನ್ನು ಕುರಿತು, ಅಭಿದುದ್ರಾವ - ಓಡಿಬಂದನು. ||೪೩-೪೪|| ಸುಸಂಕ್ರುದ್ಧಃ - ಮೊದಲೇ ಬಹಳ ಕೋಪಿಷ್ಠನಾದ, ಹಿತಬುದ್ಧಿಭಿಃ - ಒಳ್ಳೇ ಬುದ್ಧಿಯುಳ್ಳ, ಸುಹೃದ್ಭಿಃ - ಸ್ನೇಹಿತರಿಂದ, ವಾರ್ಯಮಾಣಃ - ತಡೆಯಲ್ಪಟ್ಟವನಾದರೂ, ಖೇ - ಅಂತರಿಕ್ಷದಲ್ಲಿ, ಗ್ರಹೇ - ಅಂಗಾರಕ ಗ್ರಹವು, ರೋಹಿಣೀಮಿವ - ರೋಹಿಣೀನಕ್ಷತ್ರವನ್ನಂತೆ, ಸಂಕ್ರುದ್ಧಃ - ಕುಪಿತನಾಗಿ, ಅಭ್ಯಧಾವತ - ಓಡಿಬಂದನು. || ೪೫ || ರಾಕ್ಷಸೀಭಿಃ - ದಾನವಸ್ತ್ರೀಯರಿಂದ, ರಕ್ಷ್ಯಮಾಣಾಂ - ಸಂರಕ್ಷಿಸಲ್ಪಡುತ್ತಿರುವ, ಅನಿಂದಿತಾ - ನಿರ್ದೋಷಗಳಾದ, ಮೈಥಿಲೀ - ಸೀತಾದೇವಿಯು, ನಿಸ್ತ್ರಿಂ....ಣಂ - ಶ್ರೇಷ್ಠವಾದ ಕತ್ತಿಯನ್ನು ಧರಿಸಿರುವ, ಕ್ರುದ್ಧಂ - ಕೋಪಿಷ್ಠನಾದ, ರಾಕ್ಷಸಂ - ರಕ್ಕಸನನ್ನು, ದದರ್ಶ - ಕಂಡಳು, ಜನಕಾತ್ಮಜಾ - ಜನಕರಾಯನ ಮಗಳಾದ, ಸೀತಾ - ಸೀತಾದೇವಿಯು, ಸನಿಸ್ತ್ರಿಂಶಂ - ಖಡ್ಗದಿಂದೊಡಗೂಡಿದ, ಬಹುಶಃ - ಬಹಳ ಪ್ರಕಾರವಾಗಿ, ಸುಹೃದ್ಭಿಃ - ಸ್ನೇಹಿತರಿಂದ, ನಿವಾರ್ಯಮಾಣಂ - ತಡೆಮಾಡಲ್ಪಡುತ್ತಿರುವ, ಅನುವರ್ತಿನಂ - ತನ್ನನ್ನು ಅನುಸರಿಸಿ ಬರುತ್ತಿರುವ, ತಂ - ಆ ರಾವಣನನ್ನು, ನಿಶಮ್ಯ - ಕಂಡು, ದುಃಖ....ಷ್ಟಾ - ದುಃಖದಿಂದ ಕೂಡಿ, ವಿಲಪಂತೀ - ಅಳುತ್ತ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದಳು. || ೪೬-೪೮ || ಅಯಂ - ಈ ರಾವಣನು, ಯಥಾ - ಹೇಗೆ,

ದಿಲ್ಲವು ” ಎಂದು ತಂತಮ್ಮಲ್ಲಿಯೇ ಮಾತನಾಡಿಕೊಂಡರು. ರಾಕ್ಷಸರೆಲ್ಲರೂ ಈ ರೀತಿ ಮಾತನಾಡಿಕೊಳ್ಳುತ್ತಿರುವಂತೆಯೇ ರಾವಣನು ಅಶೋಕವನಕ್ಕೆ ಹೋದನು. ಕ್ರೋಧಮೂರ್ಛಿತನಾದ ಅವನು ಸೀತಾದೇವಿಯ ಬಳಿಸಾರಲೋಸುಗ ಮಹಾ ವೇಗದಿಂದ ಹೋಗುತ್ತಿದ್ದನು. ಅವನ ಸುತ್ತಲೂ ಮಂತ್ರಿಗಳು ಓಡುತ್ತಿದ್ದರು. ಆ ಮಂತ್ರಿಗಳಾರೂ ಅಕಾರ್ಯಕ್ಕೆ ತೊಡಗಿದ್ದ ತಮ್ಮ ಒಡೆಯನನ್ನು ಸಮಾಧಾನಗೊಳಿಸಲಾರದೆ ಹೋದರು. ಅವರೆಷ್ಟು ನಿವಾರಿಸುತ್ತಿದ್ದರೂ ಆ ರಾಕ್ಷಸನು ಹಿಂದಿರುಗದೆ ಆಕಾಶದಲ್ಲಿ ರೋಹಿಣಿಯ ಮೇಲ್ವಾಯ್ದು ಬರುವ ದುಷ್ಟಗ್ರಹದಂತೆ ಸೀತಾದೇವಿಯ ಬಳಿಗೋಡುತ್ತಿದ್ದನು. ||೪೩–೪೫|| ಆ ಸಮಯದಲ್ಲಿ ರಾಕ್ಷಸಿಯರಿಂದ ಕಾಪಾಡಲ್ಪಡುತ್ತಿದ್ದ ಮಹಾ ಪತಿವ್ರತೆಯಾದ ಸೀತಾದೇವಿಯು, ಖಡ್ಗವನ್ನು ದರಿಸಿ, ಮಹಾ ಕ್ರುದ್ಧನಾಗಿ ತನ್ನ ಬಳಿಗೆ ಬರುತ್ತಿದ್ದ ಆ ರಾವಣಾಸುರನನ್ನು ನೋಡಿ ಅಪರಿಮಿತ ದುಃಖಸಂತಪ್ತೆಯಾದಳು. ಆಕೆಯು, ಅನೇಕಸಲ ಮಂತ್ರಿಗಳು ನಿವಾರಿಸಿದರೂ ಹಿಂತಿರುಗದೆ ಮಿತ್ರರೊಡಗೂಡಿ ಖಡ್ಗಧಾರಿಯಾಗಿ ತನ್ನ ಬಳಿಗೈದುತ್ತಿರುವ ಆ ರಾವಣನನ್ನು ನೋಡಿ ಬಹಳವಾಗಿ ರೋದಿಸಿದಳು. || ೪೬–೪೮||

ವೀತ್ ॥ ೪೮ ॥ "ಯಥಾಽಯಮಭಿಸಂಕ್ರುದ್ಧಸ್ಸಮಭಿದ್ರವತಿ ಸ್ವಯಂ । ವಧಿಷ್ಯತಿ ಸನಾಥಾಂ ಮಾಮನಾಥಾಮಿವ ದುರ್ಮತಿಃ ॥ ೪೯ ॥ ಬಹುಶಶ್ಚೋದಯಾಮಾಸ ಭರ್ತಾರಂ ಮಾಮನುವ್ರತಾಂ । ಭಾರ್ಯಾ ಭವ ರಮಸ್ವೇತಿ ಪ್ರತ್ಯಾಖ್ಯಾತೋ ಧ್ರುವಂ ಮಯಾ ॥ ೫೦ ॥ ಸೋಽಯಂ ಮಮಾನುಪಸ್ಥಾನೇ ವ್ಯಕ್ತಂ ನೈರಾಶ್ಯಮಾಗತಃ । ಕ್ರೋಧಮೋಹಸಮಾವಿಷ್ಟೋ ನಿಹಂತುಂ ಮಾಂ ಸಮುದ್ಯತಃ ॥ ೫೧ ॥ ಅಥವಾ ತೌ ನರವ್ಯಾಘ್ರೌ ಭ್ರಾತರೌ ರಾಮಲಕ್ಷ್ಮಣೌ । ಮನ್ನಿಮಿತ್ತಮನಾರ್ಯೇಣ ಸಮರೇಽದ್ಯ ನಿಪಾತಿತೌ । ಅಹೋ! ಧಿಙ್ಮನ್ನಿಮಿತ್ತೋಽಯಂ ವಿನಾಶೋ ರಾಜಪುತ್ರಯೋಃ

ಅಭಿಕ್ರುದ್ಧಃ - ಕೋಪಿಷ್ಠನಾಗಿ, ಸ್ವಯಂ - ತಾನು, ಮಾಂ - ನನ್ನನ್ನು ಕುರಿತು, ಸಮಭಿದ್ರವತಿ - ಓಡಿಬರುತ್ತಾನೋ, ತಥಾ - ಹಾಗೆಯೇ, ದುರ್ಮತಿಃ - ದುರ್ಬುದ್ಧಿಯುಳ್ಳವನಾಗಿ, ಸನಾಥಾಂ - ಗಂಡನಿಂದೊಡಗೂಡಿದ, ಮಾಂ - ನನ್ನನ್ನು, ಅನಾಥಾಮಿವ - ದಿಕ್ಕಿಲ್ಲದವಳನ್ನಂತೆ, ವಧಿಷ್ಯತಿ - ಕೊಲ್ಲುವನು. ॥ ೪೯ ॥ ಭರ್ತಾರಂ - ಗಂಡನಾದ ಶ್ರೀರಾಮನನ್ನು, ಅನುವ್ರತಾಂ - ಅನುಸರಿಸಿ ನಿಯಮದಿಂದಿರುವ, ಮಾಂ - ನನ್ನನ್ನು, ಭಾರ್ಯಾ - ಹೆಂಡತಿಯು, ಭವ - ಆಗು, ರಮಸ್ವೇತಿ - ರಮಿಸೆಂದು, ಬಹುಶಃ - ಅನೇಕ ಬಗೆಯಾಗಿ, ಚೋದಯಾಮಾಸ - ಪ್ರೇರಿಸಿದನು, ಮಯಾ - ನನ್ನಿಂದ, ಧ್ರುವಂ - ನಿಶ್ಚಯವಾಗಿ, ಪ್ರತ್ಯಾಖ್ಯಾತಃ - ನಿರಾಕರಿಸಲ್ಪಟ್ಟನು, ಸೋಽಯಂ - ಆ ಈ ರಾವಣನು, ಮಮ - ನನ್ನ, ಅನುಪಸ್ಥಾನೇ - ಸಮೀಪಕ್ಕೆ ಬಾರದಿರುವಿಕೆಯಿಂದ, ನೈರಾಶ್ಯಂ - ನಿರಾಶೆಯನ್ನು, ಆಗತಃ - ಹೊಂದಿ, ವ್ಯಕ್ತಂ - ಸ್ಪಷ್ಟವಾಗಿ, ಕ್ರೋಧ.....ಷ್ಟಃ - ಕ್ರೋಧದಿಂದಲೂ ಮೋಹದಿಂದಲೂ ಕೂಡಿ, ಮಾಂ - ನನ್ನನ್ನು, ಹಂತುಂ - ಹೊಡೆಯುವುದಕ್ಕೆ, ಸಮುದ್ಯತಃ - ಉದ್ಯುಕ್ತನಾಗಿದ್ದಾನೆ. ॥ ೫೦-೫೧ ॥ ಅಥವಾ - ನರವ್ಯಾಘ್ರೌ - ಪುರುಷಶ್ರೇಷ್ಠರಾದ, ಭ್ರಾತರೌ - ಅಣ್ಣತಮ್ಮಂದಿರಾದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ಮನ್ನಿಮಿತ್ತಂ - ನನ್ನ ನಿಮಿತ್ತವಾಗಿ, ಅನಾರ್ಯೇಣ - ನೀಚನಾದ ಇವನಿಂದ, ಸಮರೇ - ಕಾಳಗದಲ್ಲಿ, ಅದ್ಯ - ಈಗ, ನಿಪಾತಿತೌ - ಬೀಳಿಸಲ್ಪಟ್ಟರೋ, ಅಹೋ - ಆಶ್ಚರ್ಯವು, ರಾಜಪುತ್ರಯೋಃ - ಅರಸು ಮಕ್ಕಳಾದ ಆ ರಾಮಲಕ್ಷ್ಮಣರಿಗೆ, ಅಯಂವಿನಾಶಃ - ಈ ನಾಶವು, ಮನ್ನಿಮಿತ್ತಃ - ನಾನೇ ನಿಮಿತ್ತವಾಗುಳ್ಳದ್ದು, ಧಿಕ್ - ನಿಂದಿಸು.

ಆ ದೇವಿಯು ಅದೇ ದುಃಖದಿಂದಲೇ, "ಅಕ್ಕಟಾ! ನಾನೇನು ಮಾಡಲಿ! ದುರ್ಮಾರ್ಗನಾದ ಈ ರಾವಣಾಸುರನು ಕೋಪೋದ್ದೀಪಿತನಾಗಿ ನನ್ನ ಬಳಿಗೈದುತ್ತಿರುವನು. ಇವನು ಕೇವಲ ದುಷ್ಟನು. ಸನಾಥಳಾದ ನನ್ನನ್ನು ಅನಾಥಳಂತೆ ಭಾವಿಸಿ ಇವನು ನನ್ನನ್ನು ವಧಿಸುವನು. ಇವನು ಹಿಂದೆ ಅನೇಕ ಬಾರಿ, "ಸೀತೆ! ನನಗೆ ಭಾರ್ಯೆಯಾಗು! ವಿಹರಿಸು" ಎಂದು ನನ್ನನ್ನು ಪೀಡಿಸಿ ಕೇಳಿದನು. ಆ ಮಾತುಗಳನ್ನು ಕೇಳಿ ನಾನು, "ಎಲಾ! ನೀನೀ ರೀತಿ ನನ್ನನ್ನು ಕುರಿತು ಅನುಚಿತವಾದ ಮಾತುಗಳನ್ನಾಡಬೇಡ" ಎಂದು ತಿರಸ್ಕರಿಸಿ ಕಳುಹಿದೆನು. ಅದರಿಂದ ಇವನು ನಿರಾಶನಾಗಿ ಈಗ ಕ್ರೋಧೋದ್ದೀಪಿತನಾಗಿ ನನ್ನನ್ನು ವಧಿಸುವುದಕ್ಕಾಗಿಯೇ ಬರುತ್ತಿರುವನೆಂದು ತೋರುತ್ತಿದೆ. ಅಥವಾ, ಈ ದುರಾತ್ಮನು ಮಾನವೋತ್ತಮರಾದ ಶ್ರೀರಾಮಲಕ್ಷ್ಮಣರೀರ್ವರನ್ನೂ ನನ್ನ ನಿಮಿತ್ತವಾಗಿ ರಣರಂಗದಲ್ಲಿ ಕೊಂದು ನನ್ನ ಬಳಿಗೈದುತ್ತಿರುವನೋ? ಅಕಟಕಟ! ಹಾಗೆ ಇವನು ಅವರನ್ನು ಕೊಂದೇ ಬಂದಿರುವುದಾದರೆ ನಾನು ಕೆಟ್ಟೆನು. ಅಯ್ಯೋ! ಈಗ ನಾನೇನು ಮಾಡಲಿ. ನನಗೋಸುಗ

॥ ೫೨ ॥ ಅಥವಾ ಪುತ್ರಶೋಕೇನ ಅಹತ್ವಾ ರಾಮಲಕ್ಷ್ಮಣೌ । ವಿಧಮಿಷ್ಯತಿ ಮಾಂ ರೌದ್ರೋ ರಾಕ್ಷಸಃ ಪಾಪನಿಶ್ಚಯಃ । ಹನೂಮತೋಽಪಿ ಯದ್ವಾಕ್ಯಂ ನಕೃತಂ ಕ್ಷುದ್ರಯಾ ಮಯಾ ॥ ೫೩-೫೪ ॥ ಯದ್ಯಹಂ ತಸ್ಯ ಪೃಷ್ಠೇನ ತದಾ ಯಾಯಾಮನಿಂದಿತಾ । ನಾದ್ಯೈವಮನುಶೋಚೇಯಂ ಭರ್ತುರಂಕಗತಾ ಸತೀ ॥೫೫॥ ಮನ್ಯೇತು ಹೃದಯಂ ತಸ್ಯಾಃ ಕೌಸಲ್ಯಾಯಾಃ ಫಲಿಷ್ಯತಿ । ಏಕಪುತ್ರಾ ಯದಾ ಪುತ್ರಂ ವಿನಷ್ಟಂ ಶ್ರೋಷ್ಯತೇ ಯುಧಿ ॥ ೫೬ ॥ ಸಾಹಿ ಜನ್ಮಚ ಬಾಲ್ಯಂಚ ಯೌವನಂಚ ಮಹಾತ್ಮನಃ ।

॥ ೫೨ ॥ ಅಥವಾ, ರೌದ್ರಃ ಕ್ರೂರನಾದ, ಪಾಪನಿಶ್ಚಯಃ-ಪಾಪದಲ್ಲಿಯೇ ಬುದ್ಧಿಯುಳ್ಳ, ರಾಕ್ಷಸಃ-ರಕ್ಕಸನು, ಪುತ್ರಶೋಕೇನ ಮಗನ ಮರಣದಿಂದುಂಟಾದ ವ್ಯಸನದಿಂದ, ರಾಮಲಕ್ಷ್ಮಣೌ-ರಾಮಲಕ್ಷ್ಮಣರನ್ನು, ಅಹತ್ವಾ-ಹೊಡೆಯದೆ, ಮಾಂ ನನ್ನನ್ನು, ವಿಧಮಿಷ್ಯತಿ-ಹೊಡೆಯುವನು, ಹನೂಮತಃ-ಆಂಜನೇಯನ, ವಾಕ್ಯಂ-ಮಾತು, ಯತ್-ಯಾವುದೋ, ತದಪಿ-ಆ ಮಾತೂ, ಕ್ಷುದ್ರಯಾ-ನೀಚಳಾದ, ಮಯಾ - ನನ್ನಿಂದ, ನಕೃತಂ - ಮಾಡಲ್ಪಡದೇ ಹೋಯಿತು. ॥ ೫೩-೫೪ ॥ ಅಹಂ - ನಾನು, ತಸ್ಯ - ಆ ಹನುಮಂತನ, ಪೃಷ್ಠೇನ - ಬೆನ್ನಿನಿಂದ, ತದಾ - ಆ ಕಾಲದಲ್ಲಿ, ಯಾಯಾಂಯದಿ - ಹೋದವಳೇ ಆಗಿದ್ದರೆ, ಅನಿಂದಿತಾ - ನಿಂದಾರಹಿತಳಾಗಿ, ಭರ್ತುಃ - ಗಂಡನ, ಅಂಕಗತಾ - ತೊಡೆಯನ್ನು ಹೊಂದಿ, ಅದ್ಯ - ಈಗ, ಏವಂ - ಈ ಪರಿಯಾಗಿ, ನಾನುಶೋಚೇಯಂ - ಸಂಕಟಪಡದಿರುತ್ತಿದ್ದನು, ತಸ್ಯಾಃಕೌಸಲ್ಯಾಯಾಃ - ಆ ಕೌಸಲ್ಯಾದೇವಿಯ, ಹೃದಯಂತು - ಹೃದಯವಾದರೆ, ಫಲಿಷ್ಯತಿ - ಒಡೆದುಹೋಗುವುದು, ಏಕಪುತ್ರಾ - ಒಬ್ಬನೇ ಮಗನುಳ್ಳ ಆ ಕೌಸಲ್ಯೆಯು, ಯದಾ - ಯಾವಾಗ, ಪುತ್ರಂ - ಮಗನನ್ನು, ಯುಧಿ - ಕಾಳಿಗದಲ್ಲ, ವಿನಷ್ಟಂ - ನಷ್ಟನನ್ನಾಗಿ, ಶ್ರೋಷ್ಯತೇ - ಕೇಳುವಳೋ, ತದಾ - ಆ ಕಾಲದಲ್ಲಿ, (ಕೌಸಲ್ಯಾದೇವಿಯ ಹೃದಯವು ಒಡೆದುಹೋಗುತ್ತದೆ) ಇತಿ - ಇಂತೆಂದು, ಮನ್ಯೇ - ತಿಳಿದಿದ್ದೇನೆ ॥ ೫೫-೫೬ ॥ ಸಾ - ಆ ಕೌಸಲ್ಯಾದೇವಿಯು, ಮಹಾತ್ಮನಃ -

---

ರಾಜಪುತ್ರರಾದ ಆ ರಾಮಲಕ್ಷ್ಮಣರು ಮೃತಿಯೊಂದಿದರೋ ಏನೋ" ಎಂದು ಚಿಂತಿಸಿದಳು ॥೪೮-೫೨॥ ಆ ದೇವಿಯು ಇಂತೇ ಸ್ವಲ್ಪಕಾಲ ದುಃಖಿಸಿ ಮತ್ತೂ "ಅಥವಾ ಮಹಾ ಭಯಂಕರನೂ, ಪಾಪಕಾರ್ಯವನ್ನು ಮಾಡುವುದರಲ್ಲಿಯೇ ನಿಶ್ಚಯವುಳ್ಳವನೂ ಆದ ಈ ದುರಾತ್ಮನು ಪುತ್ರಶೋಕಪರಿಪೀಡಿತನಾಗಿ ಶ್ರೀರಾಮಲಕ್ಷ್ಮಣರನ್ನು ಜಯಿಸಲಾರದೆಯೇ ಮೊದಲು ನನ್ನನ್ನು ಕೊಂದು ಕೋಪವನ್ನು ತೀರಿಸಿಕೊಳ್ಳಬಯಸಿ ಬಂದಿರುವನೋ ಏನೋ! ಆಹಾ! ನಾನೆಷ್ಟು ಮತಿಹೀನೆ. ಹಿಂದೆ ಹನುಮಂತನು ನನ್ನನ್ನು ತನ್ನ ಬೆನ್ನಮೇಲೆ ಕೂಡಿಸಿಕೊಂಡು ಹೋಗಿ ಶ್ರೀರಾಮನ ಬಳಿಗೆ ಸೇರಿಸುವುದಾಗಿ ಹೇಳಿದನು. ಹಾಗೆಮಾಡುವುದು ಅನುಚಿತವೆಂದು ಅವನ ಮಾತುಗಳನ್ನು ನಾನು ಕೇಳದೇ ಹೋದೆನು. ಅದರಿಂದಲೇ ಈಗ ಕೇವಲ ಬುದ್ಧಿಹೀನೆಯಾದ ನಾನು ಈ ವಿಧವಾದ ಅನರ್ಥಗಳನ್ನು ಹೊಂದಿದೆನು. ॥ ೫೩-೫೫ ॥ ನಾನು ಹನುಮಂತನ ಮಾತುಗಳನ್ನು ಕೇಳಿ ಆಗಲೇ ಶ್ರೀರಾಮನ ಬಳಿಗೆ ಹೊರಟು ಹೋಗಿದ್ದದ್ದೇ ಆದರೆ ಈಗಣ ವಿಪತ್ತು ಸಂಭವಿಸುತ್ತಲೇ ಇರಲಿಲ್ಲವಷ್ಟೆ. ಅಯ್ಯೋ! ಈಗ ನಾನೇನು ಮಾಡಲಿ! ನನ್ನ ಮಾತು ಹಾಗಿರಲಿ. ಏಕಪುತ್ರಳಾದ ಕೌಸಲ್ಯಾದೇವಿಯು ಪುತ್ರ ಮರಣವಾರ್ತೆಯನ್ನು ಕೇಳಿದೊಡನೆಯೇ ಎದೆಯೊಡೆದು ಪ್ರಾಣ ಬಿಡುವಳು. ಅಲ್ಲದೆ

ಧರ್ಮಕಾರ್ಯಾನುರೂಪಂಚ ರುದಂತೀ ಸಂಸ್ಮರಿಷ್ಯತಿ ‖ ೫೭ ‖ ನಿರಾಶಾನಿಹತೇ ಪುತ್ರೇ ದತ್ವಾ ಶ್ರಾದ್ಧಮಚೇತನಾ । ಅಗ್ನಿಮಾರೋಕ್ಷ್ಯತೇ ನೂನಮಪೋವಾಪಿ ಪ್ರವೇಕ್ಷ್ಯತಿ ‖ ೫೮ ‖ ಧಿಗಸ್ತು ಕುಬ್ಜಾಮಸತೀಂ ಮಂಥರಾಂ ಪಾಪನಿಶ್ಚಯಾಂ । ಯನ್ನಿಮಿತ್ತಮಿದಂ ದುಃಖಂ ಕೌಸಲ್ಯಾ ಪ್ರತಿಪತ್ಸ್ಯತೇ" ‖ ೫೯ ‖ ಇತ್ಯೇವಂ ಮೈಥಿಲೀಂ ದೃಷ್ಟ್ವಾ ವಿಲಪಂತೀಂ ತಪಸ್ವಿನೀಂ । ರೋಹಿಣೀಮಿವ ಚಂದ್ರೇಣ ವಿನಾ ಗ್ರಹವಶಂ ಗತಾಂ ‖ ೬೦ ‖ ಏತಸ್ಮಿನ್ನಂತರೇ ತಸ್ಯ ಅಮಾತ್ಯೋ ಬುದ್ಧಿಮಾನ್ ಶುಚಿಃ । ಸುಪಾರ್ಶ್ವೋ ನಾಮ ಮೇಧಾವೀ ರಾಕ್ಷಸೋ ರಾಕ್ಷಸೇಶ್ವರಂ । ನಿವಾರ್ಯಮಾಣಂ

ಮಹಾತ್ಮನಾದ ಶ್ರೀರಾಮನ, ಜನ್ಮಚ - ಉತ್ಪತ್ತಿಯನ್ನೂ, ಬಾಲ್ಯಂಚ - ಬಾಲ್ಯಾವಸ್ಥೆಯನ್ನೂ, ಯೌವನಂಚ - ಯೌವನಾವಸ್ಥೆಯನ್ನೂ, ಧರ್ಮಕಾರ್ಯಾಣಿಚ - ಧರ್ಮಪ್ರಧಾನವಾದ ಕಾರ್ಯಗಳನ್ನೂ, ರೂಪಂಚ - ಸೌಂದರ್ಯವನ್ನೂ, ರುದಂತೀ - ರೋದನೆ ಮಾಡುತ್ತ, ಸಂಸ್ಮರಿಷ್ಯತಿಹಿ - ಸ್ಮರಿಸುವಳಷ್ಟೆ. ‖೫೭‖ ಪುತ್ರೇ - ಮಗನು, ನಿಹತೇ - ಮಡಿಯಲು, ನಿರಾಶಾ - ಆಶಾರಹಿತಳಾಗಿ, ಅಚೇತನಾ- ಮುಂದುಗಾಣದೆ, ಅಗ್ನಿಂ - ಅಗ್ನಿಯನ್ನು, ಆರೋಕ್ಷ್ಯತೇ - ಏರುತ್ತಾಳೆ, ಅಪೋವಾಪಿ - ನೀರನ್ನಾದರೂ, ಪ್ರವೇಕ್ಷ್ಯತಿ - ಹೊಗುತ್ತಾಳೆ, ಕೌಸಲ್ಯಾ - ಕೌಸಲ್ಯಾದೇವಿಯು, ಯನ್ನಿಮಿತ್ತಂ - ಯಾವ ಮಂಥರೆಯೇ ನಿಮಿತ್ತವಾಗುಳ್ಳ, ಇದಂದುಃಖಂ - ಈ ವ್ಯಸನವನ್ನು, ಪ್ರತಿಪತ್ಸ್ಯತೇ - ಹೊಂದುತ್ತಾಳೆಯೋ, ತಾಂ - ಅಂಥಾ, ಪಾಪನಿಶ್ಚಯಾಂ - ಪಾಪದಲ್ಲಿಯೇ ಬುದ್ಧಿಯುಳ್ಳ, ಅಸತೀಂ - ದುಷ್ಟಳಾದ, ಕುಬ್ಜಾಂ - ಮೋಟಿಯಾದ, ತಾಂಮಂಥರಾಂ - ಆ ಮಂಥರಾದೇವಿಯನ್ನು, ಧಿಕ್ - ನಿಂದಿಸು, ಅಸ್ತು - ಆಗಲಿ. ‖ ೫೮-೫೯ ‖ ಇತ್ಯೇವಂ - ಈ ಪರಿಯಾಗಿ, ವಿಲಪಂತೀಂ - ವಿಲಾಪ ಮಾಡುತ್ತಿರುವ, ತಪಸ್ವಿನೀಂ - ದೀನಳಾದ, ಚಂದ್ರೇಣವಿನಾ - ಚಂದ್ರನನ್ನು ವಿನಾಯಿಸಿ, ಗ್ರಹವಶಂ - ಅಂಗಾರಕ ಗ್ರಹದ ಸ್ವಾಧೀನವನ್ನು, ಗತಾಂ - ಹೊಂದುತ್ತಿರುವ, ರೋಹಿಣೀಮಿವ - ರೋಹಿಣೀನಕ್ಷತ್ರದಂತಿರುವ, ಮೈಥಿಲೀಂ - ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಏತಸ್ಮಿನ್ನಂತರೇ - ಈ ಮಧ್ಯಕಾಲದಲ್ಲಿ, ತಸ್ಯ - ಆ ರಾವಣನಿಗೆ, ಅಮಾತ್ಯಃ - ಮಂತ್ರಿಯಾದ, ಬುದ್ಧಿಮಾನ್ - ಬುದ್ಧಿಶಾಲಿಯಾದ, ಶುಚಿಃ - ಪರಿಶುದ್ಧನಾದ, ಸುಪಾರ್ಶ್ವೋನಾಮ - ಸುಪಾರ್ಶ್ವನೆಂದು ಪ್ರಸಿದ್ಧನಾದ, ಮೇಧಾವೀ - ಭವಿಷ್ಯದ್‌ಜ್ಞಾನವುಳ್ಳ, ರಾಕ್ಷಸಃ - ರಕ್ಕಸನು, ಸಚಿವೈಃ - ಮಂತ್ರಿಗಳಿಂದ, ನಿವಾರ್ಯಮಾಣಂ - ತಡೆ ಮಾಡಲ್ಪಡುತ್ತಿರುವ, ರಾಕ್ಷಸೇಶ್ವರಂ - ರಾವಣನನ್ನು ಕುರಿತು, ಇದಂವಚನಂ - ಈ ಮಾತನ್ನು,

---

ಆ ದೇವಿಯು ಮಹಾತ್ಮನಾದ ಶ್ರೀರಾಮನ ಬಾಲ್ಯವನ್ನೂ, ಯೌವನವನ್ನೂ, ಸೌಂದರ್ಯವನ್ನೂ, ಸದ್ಗುಣಗಳನ್ನೂ, ಧರ್ಮಕಾರ್ಯಗಳನ್ನೂ ಸ್ಮರಿಸಿ ಬಹಳವಾಗಿ ದುಃಖಿಸುವಳು. ಅಯ್ಯೋ! ದುಷ್ಟಸ್ವಭಾವಗಳುಳ್ಳ ಕೈಕೇಯಿ ಮಂಥರೆಯರ ದೆಸೆಯಿಂದಲೂ, ನನ್ನಿಂದಲೂ ಮಹಾನುಭಾವಳಾದ ಕೌಸಲ್ಯಾದೇವಿಗೆ ಈ ವಿಧವಾದ ಅಪರಿಮಿತವಾದ ದುಃಖವುಂಟಾಯಿತು!" ಎಂದು ಬಹಳವಾಗಿ ವಿಲಪಿಸುತ್ತಿದ್ದಳು. ‖ ೫೭-೬೦ ‖ ಈ ರೀತಿ ವ್ಯಸನವನ್ನು ಹೊಂದುತ್ತಿರುವವಳೂ, ಬಹಳ ದೀನೆಯಾಗಿರುವವಳೂ, ಜನಕಚಕ್ರವರ್ತಿಯ ಮಗಳೂ, ಚಂದ್ರನನ್ನು ತೊರೆದು ಅನ್ಯಗ್ರಹದ ಕೈಗೆ ಸಿಕ್ಕಿದ ರೋಹಿಣಿಯನ್ನು ಹೋಲಿರುವವಳೂ ಆದ ಸೀತಾದೇವಿಯನ್ನು ನೋಡಿ ಮಹಾ ಬುದ್ಧಿವಂತನೂ, ಮಂತ್ರಿಗಳಲ್ಲಿ ಶ್ರೇಷ್ಠನೂ, ಪರಿಶುದ್ಧ ಸ್ವಭಾವದವನೂ ಆದ ಸೌಪಾರ್ಶ್ವನೆಂಬಾತನು ರಾವಣಾಸುರನನ್ನು ಕುರಿತು,

ಸಚಿವೈರಿದಂ ವಚನಮಬ್ರವೀತ್ ॥ ೬೧ ॥ "ಕಥಂ ನಾಮ ದಶಗ್ರೀವ! ಸಾಕ್ಷಾದ್ವೈಶ್ರವಣಾನುಜ! । ಹಂತುಮಿಚ್ಛಸಿ ವೈದೇಹೀಂ ಕ್ರೋಧಾದ್ಧರ್ಮಮಪಾಸ್ಯಹಿ ॥೬೨॥ ವೇದವಿದ್ಯಾವ್ರತಸ್ನಾತಸ್ಸ್ವಕರ್ಮನಿರತಸ್ಸದಾ। ಸ್ತ್ರಿಯಾಃ ಕಸ್ಮಾದ್ವಧಂ ವೀರ! ಮನ್ಯಸೇ ರಾಕ್ಷಸೇಶ್ವರ! ॥ ೬೩ ॥ ಮೈಥಿಲೀಂ ರೂಪಸಂಪನ್ನಾಂ ಪ್ರತ್ಯವೇಕ್ಷಸ್ವ ಪಾರ್ಥಿವ! । ತ್ವಮೇವತು ಸಹಾಸ್ಮಾಭೀ ರಾಘವೇ ಕ್ರೋಧಮುತ್ಸೃಜ! ॥ ೬೪ ॥ $ ಅಭ್ಯುತ್ಥಾನಂ ತ್ವಮದ್ಯೈವ ಕೃಷ್ಣಪಕ್ಷಚತುರ್ದಶೀಂ । ಕೃತ್ವಾ ನಿರ್ಯಾಹ್ಯಮಾವಾಸ್ಯಾಂ ವಿಜ

ಅಬ್ರವೀತ್ - ನುಡಿದನು. ॥ ೬೦-೬೧ ॥ ದಶಗ್ರೀವ - ಎಲೈ ರಾವಣನೇ, ವೈಶ್ರವಣಾನುಜ - ಕುಬೇರನ ತಮ್ಮನೇ, ಸಾಕ್ಷಾತ್ - ಪ್ರತ್ಯಕ್ಷವಾಗಿ, ಕ್ರೋಧಾತ್ - ಕೋಪದಿಂದ, ಧರ್ಮಂ - ಧರ್ಮವನ್ನು, ಅಪಾಸ್ಯ - ಬಿಟ್ಟು, ವೈದೇಹೀಂ - ಸೀತಾದೇವಿಯನ್ನು, ಹಂತುಂ - ಹೊಡೆಯುವುದಕ್ಕೆ, ಇಚ್ಛಸಿ - ಅಪೇಕ್ಷಿಸುತ್ತೀಯೆ. ॥ ೬೨ ॥ ವೀರ - ಶೂರನೇ, ರಾಕ್ಷಸೇಶ್ವರ - ರಕ್ಕಸರೊಡೆಯನೇ, ವೇದ....ತಃ - ವೇದಾಭ್ಯಾಸ ಮಾಡಿ ವೇದಸ್ನಾತಕ ವ್ರತಗಳನ್ನು ಮಾಡಿದ, ಸದಾ-ನಿರಂತರವೂ, ಸ್ವಕ....ತಃ-ತನ್ನ ಸ್ವಜಾತ್ಯುಕ್ತ ಕರ್ಮದಲ್ಲಿ ಆಸಕ್ತನಾದವನು, ತ್ವಂ - ನೀನು, ಕಸ್ಮಾತ್ - ಯಾವ ನಿಮಿತ್ತವಾಗಿ, ಸ್ತ್ರಿಯಾಃ - ಹೆಂಗುಸಿನ, ವಧಂ - ಸಂಹಾರವನ್ನು, ಮನ್ಯಸೇ - ನೆನೆಸುತ್ತೀಯೆ, ಪಾರ್ಥಿವ - ರಾಕ್ಷಸನೇ, ರೂಪಸಂಪನ್ನಾಂ - ಸೌಂದರ್ಯದಿಂದ ಕೂಡಿರುವ, ಮೈಥಿಲೀಂ - ಸೀತಾದೇವಿಯನ್ನು, ಪ್ರತೀಕ್ಷಸ್ವ - ನಿರೀಕ್ಷಿಸಿ ನೋಡು, ತ್ವಂ - ನೀನು, ಅಸ್ಮಾಭಿಸ್ಸಹ - ನಮ್ಮೊಡಗೂಡಿ, ರಾಘವೇ - ಶ್ರೀರಾಮನಲ್ಲಿಯೇ, ಕ್ರೋಧಂ - ಕ್ರೋಧವನ್ನು, ಉತ್ಸೃಜ - ಬಿಡು. ॥ ೬೩-೬೪ ॥ ಅದ್ಯೈವ - ಈಗಲೇ, ವಿಜಯಾಯ - ಜಯಕ್ಕಾಗಿ, ಬಲೈಃ - ಸೇನೆಗಳಿಂದ, ವೃತಃ - ಪರಿವೃತನಾಗಿ, ಕೃಷ್ಣ....ಶೀಂ - ಕೃಷ್ಣಪಕ್ಷದ ಚತುರ್ದಶೀ ದಿನದಲ್ಲಿ, ಅಭ್ಯುತ್ಥಾನಂ - ಪ್ರಯಾಣವನ್ನು, ಕೃತ್ವಾ - ಮಾಡಿ,

---

"ಪ್ರಭುವೇ! ನೀನು ಕುಬೇರಾನುಜನು. ಧರ್ಮಾತ್ಮನು. ಇಂತಹ ನೀನು ಕೋಪಾವೇಶದಿಂದ ಧರ್ಮವನ್ನು ತೊರೆದು ಈ ಸೀತೆಯನ್ನು ಕೊಂದು ಸ್ತ್ರೀಹತ್ಯೆಯನ್ನು ಕಟ್ಟಿಕೊಳ್ಳಬಹುದೇ? ರಾಕ್ಷಸೇಂದ್ರಾ! ನೀನೇನು ಸಾಮಾನ್ಯನೇ! ನೀನು ವೇದವ್ರತಸ್ನಾತನಾಗಿದ್ದೀಯೆ. ಮಹಾ ಕರ್ಮಠನೂ ಆಗಿರುವೆ. ಇಂತಹ ನೀನು ಪಾಪಪುಣ್ಯಗಳ ವಿವೇಕ ವಿವೇಚನೆಗಳೇ ಇಲ್ಲದೆ ಸ್ತ್ರೀವಧೆಯನ್ನು ಯೋಚಿಸಿದ್ದಾದರೂ ಹೇಗೆ? ಕೂಡದು ಕೂಡದು. ಹಾಗೆ ಮಾಡಬೇಡ. ನಿನಗೆ ಮಿತಿಮೀರಿ ಬಂದಿರುವ ಈ ಕ್ರೋಧೋದ್ವೇಗವನ್ನು ಆ ರಾಮನಲ್ಲಿ ತೋರಿಸು. ಇಂದಿನ ದಿನ ಕೃಷ್ಣಪಕ್ಷ ಚತುರ್ದಶಿ. ಈ ದಿನವೇ ನೀನು ಯುದ್ಧಸನ್ನದ್ಧನಾಗಿ

$ ಈ ಶ್ಲೋಕದಿಂದ ರಾವಣನು ಚತುರ್ದಶಿಯ ದಿನ ಯುದ್ಧಭೂಮಿಗೆ ಪ್ರಯಾಣ ಮಾಡಿದನೆಂದು ತಿಳಿದು ಬರುತ್ತದೆ. ಅಲ್ಲಿಗೆ ರಾಮರಾವಣರ ಯುದ್ಧವು ಮೊದಲಾಗಿ ಹದಿಮೂರು ದಿನಗಳು ಕಳೆದುವೆಂದು ಗೊತ್ತಾಗುತ್ತದೆ. ಅಂತು, "ತತೋಽಸ್ತ ಮಗಮತ್ಸೂರ್ಯಸ್ಸಂಧ್ಯಯಾ ಪ್ರತಿರಂಜಿತಃ । ಪೂರ್ಣಚಂದ್ರ ಪ್ರದೀಪಾಚ ಕ್ಷಪಾ ಸಮಭಿವರ್ತತ" ಎಂದು ಹೇಳಿರುವುದರಿಂದ ಪೌರ್ಣಮಾಸ್ಯೆಯಲ್ಲಿ ಸುವೇಲಾರೋಹಣ, ಕೃಷ್ಣಪಕ್ಷ ಪಾಡ್ಯದ ದಿನ ಯುದ್ಧಾರಂಭ, ಆದೇ ದಿನ ರಾತ್ರಿ ನಾಗಪಾಶಬಂಧ ಮತ್ತು ಮೋಕ್ಷ, ಬಿದಿಗೆಯ ದಿನ ಧೂಮ್ರಾಕ್ಷ ವಧೆ, ತದಿಗೆಯ ದಿನ ವಜ್ರದಂಷ್ಟ್ರನ ವಧೆ, ಚೌತಿಯ ದಿನ ಅಕಂಪನ ವಧೆ, ಪಂಚಮಿಯ ದಿನ ಪ್ರಹಸ್ತನ ವಧೆ, ಷಷ್ಠಿಯ ದಿನ ರಾವಣ ಮಕುಟಭಂಗ, ಸಪ್ತಮಿಯ ದಿನ ಕುಂಭಕರ್ಣ ವಧೆ, ಅಷ್ಟಮಿಯ ದಿನ ಅತಿಕಾಯಾದಿಗಳ ಹನನ, ನವಮಿಯ ದಿನ ಮತ್ತೆ ಇಂದ್ರಜಿದ್ಯುದ್ಧ, ಆದೇ ರಾತ್ರಿ ಕುಂಭ ನಿಕುಂಭ ವಧೆ, ದಶಮಿಯ ದಿನ ಮಕರಾಕ್ಷ ವಧೆ, ಏಕಾದಶೀ, ದ್ವಾದಶೀ, ತ್ರಯೋದಶೀ ದಿನಗಳಲ್ಲಿ ಇಂದ್ರಜಿದ್ಯುದ್ಧ ಮತ್ತು ಅವನ ವಧೆ ಎಂದು ತಿಳಿಯಬೇಕು. ಮತ್ತು ನವಮಿಯಲ್ಲಿ ಇಂದ್ರಜಿದ್ಯುದ್ಧವಾರಂಭವಾಗಿ ಅಲ್ಲಿಂದ ಎರಡು ದಿನಗಳೊಳಗಾಗಿ ರಾವಣನ ಮೂಲಬಲವನ್ನುಳಿದು ಮಿಕ್ಕೆಲ್ಲ ರಾಕ್ಷಸರ ಸಂಹಾರವೆಂದೂ, ಏಕಾ

ಯಾಯು ಬಲೈರ್ವೃತಃ ॥ ೬೫ ॥ ಶೂರೋ ಧೀಮಾನ್ ರಥೀ ಖಡ್ಗೀ ರಥಪ್ರವರಮಾಸ್ಥಿತಃ । ಹತ್ವಾ ದಾಶರಥಿಂ ರಾಮಂ ಭವಾನ್ ಪ್ರಾಪ್ಸ್ಯತಿ ಮೈಥಿಲೀಂ ॥ ೬೬ ॥

ಸತದ್ದುರಾತ್ಮಾ ಸುಹೃದಾ ನಿವೇದಿತಂ
ವಚಸ್ಸುಧರ್ಮ್ಯಂ ಪ್ರತಿಗೃಹ್ಯ ರಾವಣಃ ।
ಗೃಹಂ ಜಗಾಮಾಥ ತತಶ್ಚ ವೀರ್ಯವಾನ್
ಪುನಸ್ಸಭಾಂಚ ಪ್ರಯಯೌ ಸುಹೃದ್ವೃತಃ ॥ ೬೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಣವತಿತಮಸ್ಸರ್ಗಃ.

ಅಮಾವಾಸ್ಯಾಂ-ಅಮಾವಾಸ್ಯೆಯ ದಿವಸದಲ್ಲಿ, ನಿರ್ಯಾಹಿ-ಹೊರಡು. ॥ ೬೫ ॥ ಶೂರಃ-ಶೂರನಾದ, ಧೀಮಾನ್ - ಬುದ್ಧಿಶಾಲಿಯಾದ, ಭವಾನ್ - ನೀನು, ರಥೀ - ರಥಾರೂಢನಾದಕಾರಣ, ರಥಪ್ರವರಂ - ಉತ್ತಮವಾದ ತೇರಿನಲ್ಲಿ, ಆಸ್ಥಿತಃ - ಕುಳಿತು, ಖಡ್ಗೀ - ಖಡ್ಗಧಾರಿಯಾಗಿ, ದಾಶರಥೀಂ - ದಶರಥನ ಮಗನಾದ, ರಾಮಂ - ಶ್ರೀರಾಮನನ್ನು, ಹತ್ವಾ - ಕೊಂದು, ಮೈಥಿಲೀಂ - ಸೀತಾದೇವಿಯನ್ನು, ಪ್ರಾಪ್ಸ್ಯತಿ - ಹೊಂದುವೆ. ॥ ೬೬ ॥ ದುರಾತ್ಮಾ - ದುಷ್ಟಬುದ್ಧಿಯುಳ್ಳ, ಸರಾವಣಃ - ಆ ರಾವಣನು, ಸುಹೃದಾ-ಸ್ನೇಹಿತನಿಂದ, ನಿವೇದಿತಂ-ತಿಳಿಸಲ್ಪಟ್ಟ, ಸುಧರ್ಮ್ಯಂ-ಧರ್ಮಪ್ರದಾನವಾದ, ತದ್ವಚಃ-ಆ ಮಾತನ್ನು, ಪ್ರತಿಗೃಹ್ಯ - ಪರಿಗ್ರಹಿಸಿ, ಅಥ - ಬಳಿಕ, ತತಃ - ಆ ಪ್ರದೇಶದಿಂದ, ಗೃಹಂ - ಮನೆಯನ್ನು ಕುರಿತು, ಜಗಾಮ - ಹೊರಟುಬಂದನು, ವೀರ್ಯವಾನ್ - ಸಾಮರ್ಥ್ಯವಂತನಾದ ರಾವಣನು, ಸುಹೃದ್ವೃತಃ - ಸ್ನೇಹಿತರಿಂದ ಪರಿವೃತನಾಗಿ, ಪುನಃ - ಮತ್ತೆ, ಸಭಾಂಚ - ಆಸ್ಥಾನವನ್ನು ಕುರಿತು, ಪ್ರಯಯೌ - ತೆರಳಿ ಬಂದನು. ॥ ೬೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಣವತಿತಮಸ್ಸರ್ಗಃ.

ಪ್ರಯಾಣ ಮಾಡು. ನಾಳೆ ಅಮಾವಾಸ್ಯೆ. ನಾಳೆಯೇ ನೀನು ಜಯವನ್ನು ಹೊಂದುವೆ. ಆದುದರಿಂದ ನೀನು ಈ ಸ್ತ್ರೀವಧೆಯನ್ನು ತೊರೆದು ಈ ಕೂಡಲೇ ಯುದ್ಧಕ್ಕೆ ಹೊರಡು. ಇದೂ ಅಲ್ಲದೆ ಎಲೈ ರಾಕ್ಷಸೋತ್ತಮನೇ! ಶೂರನೂ, ಧೀರನೂ, ಧೀಮಂತನೂ, ಮಹಾರಥಿಕೋತ್ತಮನೂ, ಆದ ನೀನು ರಥಾರೂಢನಾಗಿ ಯುದ್ಧಕ್ಕೆ ಹೋದುದಾದರೆ ನಿಜವಾಗಿಯೂ ಆ ರಾಮನನ್ನು ಜಯಿಸಿ ಸಂಹರಿಸುವೆ. ಆಮೇಲೆ ಈ ಸೀತೆಯನ್ನು ಹೊಂದಿಯೇ ಹೊಂದುವೆ. ಈಗ ನನ್ನ ಮಾತನ್ನು ಕೇಳು ” ಎಂದು ಹೇಳಿದನು. ಹೀಗೆ ಮಂತ್ರಿಪುಂಗವನಾದ ಸುಪಾರ್ಶ್ವನು ನುಡಿಯಲು ಅದನ್ನು ಕೇಳಿ ದುರಾತ್ಮನಾದ ರಾವಣಾಸುರನು ಮರಳಿಯೂ ಮನೆಗೆ ಬಂದು ಸಭೆಯನ್ನು ಪ್ರವೇಶಿಸಿದನು. ॥ ೬೧–೬೭ ॥

ಇಂತಿದು ಸೀತಾವಧೋದ್ಯೋಗ ಪರ್ಯಂತ ರಾವಣ ಕ್ರೋಧೋದ್ವೇಗಪೂರಿತ ಪುತ್ರಶೋಕಾತಿಶಯ ವೃತ್ತಾಂತವೆಂಬ ತೊಂಬತ್ತಮೂರನೆಯ ಸರ್ಗವು ಸಮಾಪ್ತವಾದುದು.

ದಶೀ. ದ್ವಾದಶೀ, ತ್ರಯೋದಶೀ ದಿನಗಳಲ್ಲಿ ಪುನಃ ಇಂದ್ರಜಿದ್ಯುದ್ಧ ಮತ್ತು ಅವನ ವಧೆ, ಚತುರ್ದಶಿಯಲ್ಲಿ ರಾವಣಾಭ್ಯುತ್ಥಾನವೆಂದೂ ಸ್ಪಷ್ಟವು. (ಗೋವಿಂದರಾಜರು)

ಈ ಶ್ಲೋಕದ ವಾಸ್ತವೀಕಾರ್ಥ :—“ ಅಯ್ಯಾ ರಾವಣನೇ ! ನೀನು ಚತುರ್ದಶಿಯಾದ ಈ ದಿನದಲ್ಲಿ ಯುದ್ಧ ಭೂಮಿಗೆ ಹೊರಟು ಅಮಾವಾಸ್ಯೆಯಾದ ನಾಳೆಯೇ ರಾಮನಿಂದ ಮೃತಿಯೊಂದಿ ಆ ತರುವಾಯ ವೈಕುಂಠದಲ್ಲಿ ಎಂದಿನಂತೆ ಲಕ್ಷ್ಮೀನಾರಾಯಣರ ಪಾರ್ಷದತ್ವವನ್ನು ಹೊಂದುವೆ.” (ಮ)

ಯುದ್ಧಕಾಂಡೇ ಚತುರ್ನವತಿತಮಸ್ಸರ್ಗಃ

ಸಪ್ರವಿಶ್ಯ ಸಭಾಂ ರಾಜಾ ದೀನಃ ಪರಮದುಃಖಿತಃ । ನಿಷಸಾದಾಸನೇ ಮುಖ್ಯೇ ಸಿಂಹಃ ಕ್ರುದ್ಧ ಇವ ಶ್ವಸನ್ ॥ ೧ ॥ ಅಬ್ರವೀಚ್ಚ ಸ ತಾನ್ ಸರ್ವಾನ್ ಬಲಮುಖ್ಯಾನ್ ಮಹಾಬಲಃ । ರಾವಣಃ ಪ್ರಾಂಜಲಿರ್ವಾಕ್ಯಂ ಪುತ್ರವ್ಯಸನಕರ್ಶಿತಃ ॥ ೨ ॥ "ಸರ್ವೇ ಭವಂತಸ್ಸಮರೇ ಹಸ್ತ್ಯಶ್ವೇನ ಸಮಾವೃತಾಃ । ನಿರ್ಯಾಂತು ರಥಸಂಘೈಶ್ಚ ಪಾದಾತೈರುಪಶೋಭಿತಾಃ ॥೩॥ ಏಕಂ ರಾಮಂ ಪರಿಕ್ಷಿಪ್ಯ ಸಮರೇ ಹಂತುಮರ್ಹಥ । ವರ್ಷಂತಃ ಶರವರ್ಷೇಣ ಪ್ರಾವೃಟ್ಕಾಲ ಇವಾಂಬುದಾಃ ॥ ೪ ॥ ಅಥವಾಽಹಂ ಶರೈ

ಸರಾಜಾ - ರಾಕ್ಷಸರಾಜನಾದ ಆ ರಾವಣಾಸುರನು, ಸಭಾಂ - ಸಭಾಸ್ಥಾನವನ್ನು, ಪ್ರವಿಶ್ಯ - ಪ್ರವೇಶಿಸಿ, ದೀನಃ - ಪರಿತಪ್ತನಾಗಿ, ಪರ....ತಃ - ಬಹಳ ದುಃಖಗೊಂಡವನಾಗಿ, ಮುಖ್ಯೇ - ಪ್ರಧಾನವಾದ, ಆಸನೇ - ಸಿಂಹಾಸನದಲ್ಲಿ, ಕ್ರುದ್ಧಃ - ಕುಪಿತವಾದ, ಸಿಂಹಇವ - ಸಿಂಹದಂತೆ, ಶ್ವಸನ್ - ನಿಟ್ಟುಸಿರು ಬಿಡುತ್ತ, ನಿಷಸಾದ - ಕುಳಿತನು. ॥ ೧ ॥ ಮಹಾಬಲಃ - ಬಹಳ ಬಲಶಾಲಿಯಾದ, ಸರಾವಣಃ - ಆ ರಾವಣಾಸುರನು, ಪುತ್ರ....ತಃ - ಮಗನ ವ್ಯಸನದಿಂದ ಕೃಶನಾಗಿ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ಸರ್ವಾನ್ - ಸಮಸ್ತರಾದ, ತಾನ್‌ಬಲಮುಖ್ಯಾನ್ - ಆ ಸೇನಾಧಿಪತಿಗಳನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೨ ॥ ಭವಂತಸ್ಸರ್ವೇ - ನೀವೆಲ್ಲರೂ, ಸರ್ವೇಣ - ಸಮಸ್ತವಾದ, ಹಸ್ತ್ಯಶ್ವೇನ - ಆನೆ ಕುದುರೆಗಳಿಂದಲೂ, ಸಮಾವೃತಾಃ - ಸುತ್ತುವರೆದ, ರಥಸಂಘೈಶ್ಚ - ರಥಗಳ ಸಮೂಹಗಳಿಂದಲೂ, ಪಾದಾತೈಃ - ಕಾಲಾಳುಗಳಿಂದಲೂ, ಉಪಶೋಭಿತಾಃ - ಹೊಳೆಯುತ್ತಿರುವವರಾಗಿ, ನಿರ್ಯಾಂತು - ಹೊರಡಿರಿ. ॥ ೩ ॥ ಏಕಂ - ಒಬ್ಬನಾದ, ರಾಮಂ - ಶ್ರೀರಾಮನನ್ನು, ಪರಿಕ್ಷಿಪ್ಯ - ಸುತ್ತಿಕೊಂಡು, ಸಮರೇ - ಕಾಳಗದಲ್ಲಿ, ಪ್ರಾವೃಟ್ಕಾಲೇ - ವರ್ಷಾಕಾಲದಲ್ಲಿ, ಅಂಬುದಾಇವ - ಮೇಘಗಳಂತೆ, ಶರವರ್ಷೇಣ - ಬಾಣಗಳ ಮಳೆಯಿಂದ, ವರ್ಷಂತಃ - ವರ್ಷಿಸುವವರಾಗಿ, ಹಂತುಂ - ಹೊಡೆಯುವುದಕ್ಕೆ, ಅರ್ಹಥ - ಯೋಗ್ಯರಾಗಿರಿ. ॥ ೪ ॥ ಅಥವಾ,

---

ಆ ಬಳಿಕ ರಾಕ್ಷಸರಾಜನಾದ ರಾವಣಾಸುರನು ದೀನನೂ, ಪರಮ ದುಃಖಿತನೂ ಆಗಿ ಸಭಾಭವನವನ್ನು ಪ್ರವೇಶಿಸಿ ಸಿಂಹಾಸನವನ್ನೇರಿ ಕುಳಿತು ಕೆರಳಿದ ಸಿಂಹದಂತೆ ನಿಟ್ಟುಸಿಗರೆಯುತ್ತಿದ್ದನು. ಆತನು ಪುತ್ರವ್ಯಸನಪೀಡಿತನಾಗಿ, ಸಭೆಯಲ್ಲಿದ್ದ ಬಲಾಧ್ಯಕ್ಷರೇ ಮೊದಲಾದ ಸಮಸ್ತ ರಾಕ್ಷಸೋತ್ತಮರನ್ನೂ, ಕುರಿತು ಕೈಜೋಡಿಸಿಕೊಂಡು "ಎಲೈ ರಾಕ್ಷಸೋತ್ತಮರೇ! ನೀವೆಲ್ಲರೂ ಈಗಲೇ ಚತುರಂಗಬಲಸಮೇತರಾಗಿ ಯುದ್ಧಭೂಮಿಗೆ ಹೊರಡಿರಿ. ನೀವೆಲ್ಲರೂ ಒಕ್ಕೂಡಿ ಒಬ್ಬಂಟಿಗನಾದ ಆ ರಾಮನನ್ನು ಸಂಹರಿಸಬಲ್ಲಿರಿ. ನೀವೆಲ್ಲರೂ ವರ್ಷಾಕಾಲದ ಮೇಘಗಳು ಮಳೆಗರೆಯುವ ರೀತಿಯಲ್ಲಿ ಆ ರಾಮನಮೇಲೂ, ವಾನರಸೇನೆಯಮೇಲೂ ಅಮೋಘವಾದ ಅಂಬು ಮಳೆಯನ್ನು ಸುರಿಸಲು ಸಮರ್ಥರಾಗಿರುವಿರಿ. ಒಂದುವೇಳೆ ನೀವು ಶತ್ರುಗಳಲ್ಲಿ ಮುಖ್ಯನಾದ ಆ ರಾಮನನ್ನು ವಧಿಸದೆ ಹೋದರೂ ಅವನನ್ನು ಬಹಳವಾಗಿ ಘಾತಿಸಬಲ್ಲಿರಿ. ನೀವು ಅವನನ್ನು ಸಂಹರಿಸಲಾರದೆ ಹೋದರೆ ನಾನು

ಸ್ತೀಕ್ಷ್ಣೈರ್ಭಿನ್ನಗಾತ್ರಂ ಮಹಾರಣೇ । ಭವದ್ಭಿಃ ಶ್ವೋ ನಿಹಂತಾಸ್ಮಿ ರಾಮಂ ಲೋಕಸ್ಯ ಪಶ್ಯತಃ” ||೫|| ಇತ್ಯೇತದ್ರಾಕ್ಷಸೇಂದ್ರಸ್ಯ ವಾಕ್ಯಮಾದಾಯ ರಾಕ್ಷಸಾಃ । ನಿರ್ಯಯುಸ್ತೇ ರಥೈಃ ಶೀಘ್ರೈರ್ನಾನಾನೀಕೈಸ್ಸುಸಂವೃತಾಃ ||೬|| ಪರಿಘಾನ್ ಪಟ್ಟಿಸಾಂಶ್ಚೈವ ಶರಖಡ್ಗಪರಶ್ವಧಾನ್ । ಶರೀರಾಂತಕರಾನ್ ಸರ್ವೇ ಚಿಕ್ಷಿಪುರ್ವಾನರಾನ್ ಪ್ರತಿ ||೭|| ವಾನರಾಶ್ಚ ದ್ರುಮಾನ್ ಶೈಲಾನ್ ರಾಕ್ಷಸಾನ್ ಪ್ರತಿಚಿಕ್ಷಿಪುಃ । ಸ ಸಂಗ್ರಾಮೋ ಮಹಾನ್ ಭೀಮಸ್ಸೂರ್ಯಸ್ಯೋದಯನಂ ಪ್ರತಿ ||೮|| ರಕ್ಷಸಾಂ ವಾನರಾಣಾಂಚ ತುಮುಲಸ್ಸಮಪದ್ಯತ । ತೇ ಗದಾಭಿರ್ವಿಚಿತ್ರಾಭಿಃ ಪ್ರಾಸೈಃ ಖಡ್ಗೈಃ

ಭವದ್ಭಿಃ - ನಿಮ್ಮಿಂದ, ಮಹಾರಣೇ - ದೊಡ್ಡ ಕಾಳಗದಲ್ಲಿ, ತೀಕ್ಷ್ಣೈಃ - ಹದವಾದ, ಶರೈಃ - ಬಾಣಗಳಿಂದ, ಭಿನ್ನಗಾತ್ರಂ - ಭೇದಿಸಲ್ಪಟ್ಟ ಶರೀರವುಳ್ಳ, ರಾಮಂ - ಶ್ರೀರಾಮನನ್ನು, ಲೋಕಸ್ಯ - ಜನವು, ಪಶ್ಯತಃ - ನೋಡುತ್ತಿರಲು, ಅಹಂ - ನಾನು, ಶ್ವಃ - ನಾಳೆ, ನಿಹಂತಾಸ್ಮಿ - ಹೊಡೆಯುವೆನು. ||೫|| ಇತಿ - ಈ ಪರಿಯಾಗಿ, ಏತತ್ - ಈ, ರಾಕ್ಷಸೇಂದ್ರಸ್ಯ - ರಾವಣನ, ವಾಕ್ಯಂ - ಮಾತನ್ನು, ಆದಾಯ - ಗ್ರಹಿಸಿ, ತೇರಾಕ್ಷಸಾಃ - ಆ ರಕ್ಕಸರು, ಶೀಘ್ರೈಃ - ವೇಗವುಳ್ಳ, ರಥೈಃ - ರಥಗಳಿಂದ, ನಾನೀಕೈಃ - ಚತುರಂಗ ಸೇನೆಗಳಿಂದಲೂ, ಸುಸಂವೃತಾಃ - ಪರಿವೃತರಾಗಿ, ನಿರ್ಯಯುಃ - ಹೊರಟರು. ||೬|| ಸರ್ವೇ - ಸಮಸ್ತ ರಕ್ಕಸರೂ, ವಾನರಾನ್‌ಪ್ರತಿ - ಕಪಿಗಳನ್ನು ಕುರಿತು, ಪರಿಘಾನ್ - ಕಬ್ಬಿಣದ ದೊಣ್ಣೆಗಳನ್ನೂ, ಪಟ್ಟಿಸಾಂಶ್ಚೈವ - ಪಟ್ಟಾಕತ್ತಿಗಳನ್ನೂ, ಶರೀ....ರಾನ್ - ಶರೀರವನ್ನೂ ನಾಶಗೊಳಿಸುತ್ತಿರುವ, ಶರ.....ಧಾನ್ - ಬಾಣಗಳನ್ನೂ ಕತ್ತಿಗಳನ್ನೂ ಗೊಡ್ಲಿಗಳನ್ನೂ, ಚಿಕ್ಷಿಪುಃ - ಎಸೆದರು, ವಾನರಾಶ್ಚ - ಕಪಿಗಳೂ, ರಾಕ್ಷಸಾನ್‌ಪ್ರತಿ - ರಕ್ಕಸರನ್ನು ಕುರಿತು, ದ್ರುಮಾನ್ - ಗಿಡಗಳನ್ನು, ಶೈಲಾನ್ - ಬೆಟ್ಟಗಳನ್ನೂ, ಚಿಕ್ಷಿಪುಃ - ಎಸೆದರು. ||೭|| ರಕ್ಷಸಾಂ - ರಕ್ಕಸರಿಗೂ, ವಾನರಾಣಾಂಚ - ಕಪಿಗಳಿಗೂ, ಸೂರ್ಯಸ್ಯ - ಸೂರ್ಯನ, ಉದಯನಂಪ್ರತಿ - ಉದಯಕಾಲ ಮೊದಲುಗೊಂಡು, ಭೀಮಂ - ಭಯಂಕರವಾದ, ತುಮುಲಃ - ಸಂಕುಲವಾದ, ಸಸಂಗ್ರಾಮಃ - ಆ ಕಾಳಗವು, ಸಮಪದ್ಯತ - ಆಯಿತು, ತದಾ - ಆ ಕಾಲದಲ್ಲಿ, ತೇವಾನರರಾಕ್ಷಸಾಃ - ಆ ಕಪಿಗಳೂ ರಾಕ್ಷಸರೂ, ವಿಚಿತ್ರಾಭಿಃ - ಆಶ್ಚರ್ಯಕರಗಳಾದ, ಗದಾಭಿಃ-ಗದಾಯುಧಗಳಿಂದಲೂ, ಪ್ರಾಸೈಃ-ಈಟಿಗೋಲುಗಳಿಂದಲೂ, ಖಡ್ಗೈಃ-ಕತ್ತಿಗಳಿಂದಲೂ,

---

ನಾಳೆಯದಿನ ರಣಾಂಗಣದಲ್ಲಿ ನಿಮ್ಮೆಲ್ಲರೊಡಗೂಡಿ ಮಹಾ ತೀಕ್ಷ್ಣವಾದ ಬಾಣಗಳಿಂದ ಎಲ್ಲರೂ ನೋಡುತ್ತಿರುವಂತೆಯೇ ಅವನನ್ನು ಸಂಹರಿಸುತ್ತೇನೆ” ಎಂದು ಹೇಳಿದನು. ||೧-೫|| ರಾಕ್ಷಸೇಂದ್ರನಾದ ರಾವಣನು ಹೇಳಿದ ಮಾತುಗಳನ್ನು ಕೇಳಿ ಆ ರಾಕ್ಷಸರೆಲ್ಲರೂ ಬಹು ಜಾಗ್ರತೆಯಾಗಿಯೇ ಸಹಸ್ರಾರು ರಥಗಳೊಡನೆಯೂ, ಅನೇಕ ಸಹಸ್ರ ಗಜತುರಗಾದಿಗಳೊಡನೆಯೂ ಯುದ್ಧಕ್ಕೆ ಹೊರಟರು. ಅವರೆಲ್ಲರೂ ಯುದ್ಧಭೂಮಿಯನ್ನು ಪ್ರವೇಶಿಸಿದೊಡನೆಯೇ ಅಲ್ಲಿದ್ದ ವಾನರವೀರರೆಲ್ಲರನ್ನೂ ಸಂಹರಿಸಬಯಸಿ ಪರಿಘ, ಪಟ್ಟಿಸ, ಬಾಣ, ಖಡ್ಗ, ಪರಶುವೇ ಮೊದಲಾದ ಆಯುಧಗಳನ್ನು ಪ್ರಯೋಗಿಸಿದರು. ಆ ಸಮಯದಲ್ಲಿ ವಾನರರೂ ಕೋಪಾವೇಶದಿಂದ ವಿಜೃಂಭಿಸಿ ರಾಕ್ಷಸರಮೇಲೆ ಕಲ್ಮರಗಳ ಮಳೆಗರೆದರು. ಹೀಗೆ ಸೂರ್ಯನುದಿಸುತ್ತಲೇ ರಾಕ್ಷಸರಿಗೂ, ವಾನರರಿಗೂ ಭಯಂಕರವಾದ ಯುದ್ಧವು ಮೊದಲಾಯಿತು. ಆ ಮಹಾ ಯುದ್ಧದಲ್ಲಿ ವಾನರರಾಕ್ಷಸರೀರ್ವರೂ ಪರಸ್ಪರವಾದ ವಿಚಿತ್ರವಾದ ಗದಾಯುಧಗಳಿಂದಲೂ, ಪ್ರಾಸಗಳಿಂದಲೂ, ಶೂಲಾಯುಧಗಳಿಂದಲೂ, ಗಂಡು

ಪರಶ್ವಧೈಃ । ಅನ್ಯೋನ್ಯಂ ಸಮರೇ ಜಘ್ನುಸ್ತದಾ ವಾನರರಾಕ್ಷಸಾಃ ॥ ೯ ॥ ಏವಂ ಪ್ರವೃತ್ತೇ ಸಂಗ್ರಾಮೇ ಹ್ಯುದ್ಭೂತಂ ಸುಮಹದ್ರಜಃ । ರಕ್ಷಸಾಂ ವಾನರಾಣಾಂಚ ಶಾಂತಂ ಶೋಣಿತವಿಸ್ರವೈಃ ॥ ೧೦ ॥ ಮಾತಂಗರಥಕೂಲಶ್ಚ ವಾಜಿಮತ್ಸ್ಯಧ್ವಜ ದ್ರುಮಾಃ । ಶರೀರಸಂಘಾಟವಹಾ ಪ್ರಸಸ್ರುಶ್ಶೋಣಿತಾಪಗಾಃ ॥ ೧೧ ॥ ತತಸ್ತೇ ವಾನರಾಃ ಸ್ಸರ್ವೇ ಶೋಣಿತೌಘಪರಿಪ್ಲುತಾಃ । ಧ್ವಜವರ್ಮರಥಾನಶ್ವಾನ್ನಾನಾ ಪ್ರಹರಣಾನಿಚ । ಆಪ್ಲುತ್ಯಾಪ್ಲುತ್ಯ ಸಮರೇ ರಾಕ್ಷಸಾನಾಂ ಬಭಂಜಿರೇ ॥೧೨-೧೩॥ ಕೇಶಾನ್ ಕರ್ಣಲಲಾಟಾಂಶ್ಚ ನಾಸಿಕಾಶ್ಚ ಪ್ಲವಂಗಮಾಃ । ರಕ್ಷಸಾಂ ದಶನೈಸ್ತೀಕ್ಷ್ಣೈ ರ್ನಖೈಶ್ಚಾಪಿ ವ್ಯಕರ್ತಯನ್ ॥ ೧೪ ॥ ಏಕೈಕಂ ರಾಕ್ಷಸಂ ಸಂಖ್ಯೇ ಶ್ವೇತಂ ವಾನರ

ಪರಶ್ವಧೈಃ - ಗೊಡ್ಡಲಿಗಳಿಂದಲೂ, ಸಮರೇ - ಕಾಳಗದಲ್ಲಿ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ಜಘ್ನುಃ-ಹೊಡೆದರು. ॥ ೮ ॥ ಏವಂ ಈ ಪರಿಯಾಗಿ, ಪ್ರವೃತ್ತೇ-ನಡೆಯುತ್ತಿರುವ, ಸಂಗ್ರಾಮೇ-ಕಾಳಗದಲ್ಲಿ, ಉದ್ಭೂತಂ - ಹುಟ್ಟಿರುವ, ಸುಮಹತ್ - ಬಹಳ ದೊಡ್ಡದಾದ, ರಜಃ - ಧೂಳಿಯು, ರಕ್ಷಸಾಂ-ರಕ್ಕಸರ, ವಾನರಾಣಾಂಚ-ಕಪಿಗಳ, ಶೋಣಿತವಿಸ್ರವೈಃ ರಕ್ತಪ್ರವಾಹಗಳಿಂದ, ಶಾಂತಂ-ಉಪಶಾಂತವಾಯಿತು, ಮಾತಂ....ಲಾಃ - ಆನೆಗಳೂ ರಥಗಳೇ ದಡಗಳಾಗುಳ್ಳ, ವಾಜಿಮತ್ಸ್ಯಾಃ - ಕುದುರೆಗಳೇ ಮತ್ಸ್ಯಗಳಾಗುಳ್ಳ, ಧ್ವಜದ್ರುಮಾಃ - ಧ್ವಜಗಳೇ ಗಿಡಗಳಾಗುಳ್ಳ, ಶರೀ......ಹಾಃ - ಶರೀರಗಳೆಂಬ ತೆಪ್ಪಗಳನ್ನು ವಹಿಸಿರುವ, ಶೋಣಿತಾಪಗಾಃ - ರಕ್ತವೆಂಬ ನದಿಗಳು, ಪ್ರಸಸೃಃ - ಪ್ರವಹಿಸಿದವು. ॥ ೧೦-೧೧ ॥ ತತಃ - ಬಳಿಕ, ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ಶೋಣಿ....ತಾಃ ರಕ್ತಪ್ರವಾಹಗಳಲ್ಲಿ ತೇಲಿಕೊಂಡು ಹೋಗುತ್ತ, ಸಮರೇ-ಕಾಳಗದಲ್ಲಿ, ಆಪ್ಲು....ತ್ಯ - ಹಾರಿ ಹಾರಿ, ರಾಕ್ಷಸಾನಾಂ - ರಕ್ಕಸರ, ಧ್ವಜ....ರ್ಥಾ - ನಿಶಾನಿಗಳನ್ನೂ, ಕವಚಗಳನ್ನೂ, ರಥಗಳನ್ನೂ, ಅಶ್ವಾನ್ - ಕುದುರೆಗಳನ್ನೂ, ಪ್ರಹರಣಾನಿಚ - ಆಯುಧಗಳನ್ನೂ, ಬಭಂಜಿರೇ - ಮುರಿದರು. ॥ ೧೨-೧೩ ॥ ಪ್ಲವಂಗಮಾಃ - ಕಪಿಗಳು, ತೀಕ್ಷ್ಣೈಃ - ಹದವಾಗಿರುವ, ದಶನೈಃ - ದಂತಗಳಿಂದಲೂ, ನಖೈಶ್ಚಾಪಿ-ಉಗುರುಗಳಿಂದಲೂ, ರಕ್ಷಸಾಂ ರಕ್ಕಸರ, ಕೇಶಾನ್-ಕೂದಲುಗಳನ್ನೂ, ಕರ್ಣ....ಶ್ಚ - ಕಿವಿ ಹಣೆಗಳನ್ನೂ, ನಾಸಿಕಾಶ್ಚ - ಮೂಗುಗಳನ್ನೂ, ವ್ಯಕರ್ತಯನ್ - ಕತ್ತರಿಸಿದರು, ಸಂಖ್ಯೇ - ಯುದ್ಧದಲ್ಲಿ, ಏಕೈಕಂರಾಕ್ಷಸಂ - ಒಬ್ಬೊಬ್ಬ ರಕ್ಕಸನನ್ನೂ, ಶತಂವಾನರಪುಂಗವಾಃ - ನೂರುಮಂದಿ ವಾನ

ಗೊಡಲಿಗಳಿಂದಲೂ ಪ್ರಹರಿಸುತ್ತಿದ್ದರು. ಆ ಸಮಯದಲ್ಲಿ ಯುದ್ಧಭೂಮಿಯಲ್ಲೆಲ್ಲ ಬಹಳವಾಗಿ ಧೂಳೆದ್ದಿತು. ಆ ಧೂಳು ವಾನರರಾಕ್ಷಸರ ರಕ್ತಪ್ರವಾಹಗಳಿಂದ ಅಡಗುತ್ತಿದ್ದಿತು. ॥೬-೧೦॥ ರಕ್ತ ನದಿಯು ಭಯಂಕರವಾಗಿ ಪ್ರವಹಿಸಲಾರಂಭಿಸಿತು. ಆ ನದಿಗೆ ವಾನರ ರಾಕ್ಷಸರ ಕಳೇಬರಗಳೇ ದಡಗಳಾದವು. ಕುದುರೆಗಳೇ ಮತ್ಸ್ಯಗಳಾದುವು. ಆ ಕಳೇಬರಗಳೇ ಓಡೆಗಳನ್ನು ಹೋಲುತ್ತಿದ್ದುವು. ವಾನರವೀರರೆಲ್ಲರೂ ರಕ್ತಸಿಕ್ತವಾದ ಗಾತ್ರಗಳುಳ್ಳವರಾಗಿ ಮೇಲಕ್ಕೆ ಹಾರಿಹಾರಿ ರಾಕ್ಷಸರೆದೆಗಳನ್ನೂ, ಆನೆಗಳನ್ನೂ, ಮುರಿದು ಕೆಡವುತ್ತಿದ್ದರಲ್ಲದೆ ರಾಕ್ಷಸರು ಧರಿಸಿದ್ದ ಆಯುಧಗಳೆಲ್ಲವನ್ನು ಪುಡಿಗುಟ್ಟಿದರು. ಇಷ್ಟುಮಾತ್ರವಲ್ಲದೆ ಆ ವೀರ ವಾನರರೆಲ್ಲರೂ ಬಹಳ ಮೊನಚಾದ ತಮ್ಮ ಉಗುರುಗಳಿಂದಲೂ, ಹಲ್ಲುಗಳಿಂದಲೂ ರಾಕ್ಷಸರ ತಲೆಗೂದಲುಗಳನ್ನೂ, ಕಿವಿಗಳನ್ನೂ, ಹಣೆಯನ್ನೂ, ಮೂಗುಗಳನ್ನೂ ವಿಧವಿಧವಾಗಿ ಎಳೆದು ಕಚ್ಚಿ ಸಿಗಿದುಹಾಕಿದರು. ಹಕ್ಕಿಗಳು ಹಣ್ಣುಬಿಟ್ಟ ಮರವನ್ನು ಕುರಿತೋಡುವಂತೆ ಒಬ್ಬೊಬ್ಬ

ಪುಂಗವಾಃ । ಅಭ್ಯಧಾವಂತ ಫಲಿನಂ ವೃಕ್ಷಂ ಶಕುನಯೋ ಯಥಾ ॥ ೧೫ ॥ ತಥಾ ಗದಾಭಿರ್ಗುರ್ವೀಭಿಃ ಪ್ರಾಸೈಃ ಖಡ್ಗೈಃ ಪರಶ್ವಧೈಃ । ನಿಜಘ್ನುರ್ವಾನರಾನ್ ಘೋರಾನ್ ರಾಕ್ಷಸಾಃ ಪರ್ವತೋಪಮಾಃ ॥ ೧೬ ॥ ರಾಕ್ಷಸೈರ್ವಧ್ಯಮಾನಾನಾಂ ವಾನರಾಣಾಂ ಮಹಾಚಮೂಃ । ಶರಣ್ಯಂ ಶರಣಂ ಯಾತಾ ರಾಮಂ ದಶರಥಾತ್ಮಜಂ ॥ ೧೭ ॥ ತತೋ ರಾಮೋ ಮಹಾತೇಜಾ ಧನುರಾದಾಯ ವೀರ್ಯವಾನ್ । ಪ್ರವಿಶ್ಯ ರಾಕ್ಷಸಂ ಸೈನ್ಯಂ ಶರವರ್ಷಂ ವವರ್ಷಹ ॥ ೧೮ ॥ ಪ್ರವಿಷ್ಟಂತು ತದಾ ರಾಮಂ ಮೇಘಾಃಸೂರ್ಯಮಿವಾಂಬರೇ । ನಾಭಿಜಗ್ಮುರ್ಮಹಾಘೋರಂ ನಿರ್ದಹಂತಂ ಶರಾಗ್ನಿನಾ ॥ ೧೯ ॥

ರೋತ್ತಮರು, ಫಲಿನಂ - ಹಣ್ಣು ಬಿಟ್ಟಿರುವ, ವೃಕ್ಷಂ - ಮರವನ್ನು, ಶಕುನಯೋಯಥಾ - ಪಕ್ಷಿಗಳಂತೆ, ಅಭ್ಯಧಾವಂತ - ಓಡಿದರು. ॥ ೧೪-೧೫ ॥ ತಥಾ - ಹಾಗೆಯೇ, ಪರ್ವತೋಪಮಾಃ - ಬೆಟ್ಟಕ್ಕೆ ಸಮಾನರಾದ, ರಾಕ್ಷಸಾಃ - ರಕ್ಕಸರು, ಗುರ್ವೀಭಿಃ - ದೊಡ್ಡವಾದ, ಗದಾಭಿಃ - ಗದಾಯುಧಗಳಿಂದಲೂ, ಪ್ರಾಸೈಃ - ಪ್ರಾಸಾಯುಧಗಳಿಂದಲೂ, ಘೋರಾನ್ - ಭಯಂಕರರಾದ, ವಾನರಾನ್ - ಕಪಿಗಳನ್ನು, ನಿಜಘ್ನುಃ - ಹೊಡೆದರು, ರಾಕ್ಷಸೈಃ - ರಕ್ಕಸರಿಂದ, ವಧ್ಯಮಾನಾನಾಂ - ಹೊಡೆಯಲ್ಪಡುತ್ತಿರುವ, ವಾನರಾಣಾಂ - ಕಪಿಗಳ, ಮಹಾಚಮೂಃ - ದೊಡ್ಡ ಸೈನ್ಯವು, ದಶರಥಾತ್ಮಜಂ - ದಶರಥನ ಮಗನಾದ, ಶರಣ್ಯಂ - ಸಂರಕ್ಷಕನಾದ, ರಾಮಂ - ಶ್ರೀರಾಮನನ್ನು, ಶರಣಂ - ರಕ್ಷಕನನ್ನಾಗಿ, ಯಾತಾ - ಹೊಂದಿತು. ॥ ೧೬-೧೭ ॥ ತತಃ - ಬಳಿಕ, ಮಹಾತೇಜಾಃ - ಮಹಾ ತೇಜೋವಂತನಾದ, ವೀರ್ಯವಾನ್ - ಸಾಮರ್ಥ್ಯವಂತನಾದ, ರಾಮಃ - ಶ್ರೀರಾಮನು, ಧನುಃ - ಧನುಸ್ಸನ್ನು, ಆದಾಯ - ತೆಗೆದುಕೊಂಡು, ರಾಕ್ಷಸಂ - ರಕ್ಕಸರ ಸಂಬಂಧವಾದ, ಸೈನ್ಯಂ - ಸೈನ್ಯವನ್ನು, ಪ್ರವಿಶ್ಯ - ಪ್ರವೇಶಿಸಿ, ಶರವರ್ಷಂ - ಬಾಣವೃಷ್ಟಿಯನ್ನು, ವವರ್ಷಹ - ಸುರಿಸಿದನಷ್ಟೆ. ॥ ೧೮ ॥ ತದಾ - ಆ ಕಾಲದಲ್ಲಿ, ಪ್ರವಿಷ್ಟಂ - ಪ್ರವೇಶ ಮಾಡಿದ, ಮಹಾಘೋರಂ - ಬಹಳ ಭಯಂಕರನಾದ, ಶರಾಗ್ನಿನಾ - ಬಾಣವೆಂಬ ಅಗ್ನಿಯಿಂದ, ನಿರ್ದಹಂತಂ - ಸುಡುತ್ತಿರುವ, ರಾಮಂ - ಶ್ರೀರಾಮನನ್ನು ಕುರಿತು, ಅಂಬರೇ - ಅಂತರಿಕ್ಷದಲ್ಲಿ, ಸೂರ್ಯಂ - ಸೂರ್ಯನನ್ನು, ಮೇಘಾಇವ - ಮೇಘಗಳಂತೆ, ರಾಕ್ಷಸಾಃ - ರಕ್ಕಸರು, ನಾಭಿಜಗ್ಮುಃ - ಎದುರು ಬಾರದೇಹೋದರು. ॥ ೧೯ ॥ ರಜನೀಚರಾಃ - ರಕ್ಕಸರು, ಸುಘೋರಾಣಿ -

---

ರಾಕ್ಷಸನಮೇಲೂ ನೂರುನೂರು ವಾನರರು ಅಟ್ಟಿಹೋದರು. ॥೧೧-೧೫॥ ರಾಕ್ಷಸಸೇನೆಯು ಮೇಲೆರಗಿ ಬರುತ್ತಿರುವ ವಾನರರನ್ನು ಕಂಡು ಪರ್ವತೋಪಮರಾದ ರಾಕ್ಷಸರೆಲ್ಲರೂ ಕೂಡ ದೊಡ್ಡ ದೊಡ್ಡ ಗದೆಗಳಿಂದಲೂ, ಈಟಿಗೋಲುಗಳಿಂದಲೂ, ಖಡ್ಗಗಳಿಂದಲೂ, ಗಂಡುಗೊಡಲಿಗಳಿಂದಲೂ ಇತರ ಅನೇಕ ವಿಧಗಳಾದ ಆಯುಧಗಳಿಂದಲೂ ಬಹು ಭಯಂಕರವಾಗಿ ವಾನರರನ್ನು ಹೊಡೆದರು. ಆ ರೀತಿ ರಾಕ್ಷಸರಿಂದ ಘಾತಿಸಲಾದ ವಾನರಸೇನೆಯು ರಣಭೂಮಿಯಲ್ಲಿ ನಿಲ್ಲಲಾರದೆ ಸಕಲ ಲೋಕರಕ್ಷಕನಾದ ದಾಶರಥಿಯನ್ನು ಮೊರೆಹೊಕ್ಕು ಕಾಪಾಡಬೇಕೆಂದು ಬೇಡಿಕೊಂಡರು. ಆಗ ಮಹಾ ತೇಜಸ್ವಿಯೂ, ವೀರ್ಯವಂತನೂ ಆದ ಶ್ರೀರಾಮನು ಸರ್ವೋತ್ತಮವಾದ ಧನುಸ್ಸನ್ನು ಹಿಡಿದು ರಾಕ್ಷಸಸೇನೆಯನ್ನು ಪ್ರವೇಶಿಸಿ ಮಹಾ ಭಯಂಕರವಾದ ಬಾಣವರ್ಷವನ್ನು ಸುರಿಸಿದನು. ಯುದ್ಧರಂಗದಲ್ಲಿ ಪ್ರವೇಶಿಸಿ ಮಹಾ ಭಯಂಕರನಾಗಿ ಬಾಣಾಗ್ನಿಯಿಂದ ಎಲ್ಲರನ್ನೂ ಸುಡುತ್ತಿರುವ ಹಾಗಿರುವ ಆ ಶ್ರೀರಾಮಮೂರ್ತಿಯ ಸುತ್ತ, ಸೂರ್ಯನ ಸುತ್ತಲೂ ನಿಲ್ಲಲಾರದೆ ಹೋದ ಮುಗಿಲು

ಕೃತಾನ್ಯೇವ ಸುಘೋರಾಣಿ ರಾಮೇಣ ರಜನೀಚರಾಃ । ರಣೇ ರಾಮಸ್ಯ ದದೃಶುಃ ಕರ್ಮಾಣ್ಯಸುಕರಾಣಿಚ ॥ ೨೦ ॥ ಚಾಲಯಂತಂ ಮಹಾನೀಕಂ ವಿಧಮಂತಂ ಮಹಾರಥಾನ್ । ದದೃಶುಸ್ತೇನ ವೈ ರಾಮಂ ವಾತಂ ವನಗತಂ ಯಥಾ ॥ ೨೧ ॥ ಛಿನ್ನಂ ಭಿನ್ನಂ ಶರೈರ್ದಗ್ಧಂ ಪ್ರಭಗ್ನಂ ಶಸ್ತ್ರಪೀಡಿತಂ । ಬಲಂ ರಾಮೇಣ ದದೃಶುರ್ನ ರಾಮಂ ಶೀಘ್ರಕಾರಿಣಂ ॥೨೨॥ ಪ್ರಹರಂತಂ ಶರೀರೇಷು ನ ತೇ ಪಶ್ಯಂತಿ ರಾಘವಂ । ¶ ಇಂದ್ರಿ

ಭಯಂಕರಗಳಾದ, ರಾಮೇಣ - ಶ್ರೀರಾಮನಿಂದ, ಕೃತಾನ್ಯೇವ - ಮಾಡಲ್ಪಡುತ್ತಿರುವವುಗಳನ್ನೇ, ಅಸುಕರಾಣಿ - ಇತರರಿಂದ ಮಾಡಲಸಾಧ್ಯವಾದ, ರಾಮಸ್ಯ - ಶ್ರೀರಾಮನ, ಕರ್ಮಾಣಿ - ಕಾರ್ಯಗಳನ್ನು, ರಣೇ - ಕಾಳಗದಲ್ಲಿ, ದದೃಶುಃ - ಕಂಡರು, ತೇ - ಆ ರಾಕ್ಷಸರು, ಮಹಾನೀಕಂ - ದೊಡ್ಡ ಸೇನೆಯನ್ನು, ಚಾಲಯಂತಂ - ಸಾಗಿಸುತ್ತಿರುವ, ಮಹಾರಥಾನ್ - ಮಹಾರಥಿಕರನ್ನೂ, ವಿಧಮಂತಂ - ಹೊಡೆಯುತ್ತಿರುವ, ರಾಮಂ - ಶ್ರೀರಾಮನನ್ನು, ವನಗತಂ - ಕಾಡಿನಲ್ಲಿರುವ, ವಾತಂಯಥಾ - ಬಿರುಗಾಳಿಯನ್ನಂತೆ, ನದದೃಶುಃ-ಕಾಣದೇ ಹೋದರು. ॥ ೨೦-೨೧ ॥ ರಾಮೇಣ-ಶ್ರೀರಾಮನಿಂದ, ಬಲಂ - ಸೇನೆಯನ್ನು, ಛಿನ್ನಂ - ಕತ್ತರಿಸಲ್ಪಟ್ಟುದನ್ನಾಗಿಯೂ, ಶರೈಃ - ಬಾಣಗಳಿಂದ, ಭಿನ್ನಂ - ಭೇದಿಸಲ್ಪಟ್ಟುದನ್ನಾಗಿಯೂ, ಶಸ್ತ್ರಪೀಡಿತಂ - ಶಸ್ತ್ರಗಳಿಂದ ಹೊಡೆಯಲ್ಪಟ್ಟುದನ್ನಾಗಿಯೂ, ದದೃಶುಃ - ಕಂಡರು, ಶೀಘ್ರಕಾರಿಣಂ - ಕರಲಾಘವನ್ನು ತೋರುತ್ತಿರುವ, ರಾಮಂ - ಶ್ರೀರಾಮನನ್ನು, ನದದೃಶುಃ - ಕಾಣದೇ ಹೋದರು. ॥ ೨೨ ॥ ತೇ - ಆ ರಕ್ಕಸರು, ಶರೀರೇಷು - ತಮ್ಮ ತಮ್ಮ ಶರೀರಗಳಲ್ಲಿ, ಪ್ರಹರಂತಂ - ಹೊಡೆಯುತ್ತಿರುವ, ರಾಘವಂ - ಶ್ರೀರಾಮನನ್ನು, ಇಂದ್ರಿಯಾರ್ಥೇಷು - ಇಂದ್ರಿಯವಿಷಯಗಳಲ್ಲಿ, ತಿಷ್ಠಂತಂ - ಪ್ರೇರಕನಾಗಿರುವ, ಭೂತಾತ್ಮಾನಂ - ಪರಮಾತ್ಮನನ್ನು, ಪ್ರಜಾಇವ - ಪ್ರಜೆಗಳಂತೆ, ನಪಶ್ಯಂತಿ - ಕಾಣದೇ ಹೋದರು, ತಥಾ - ಹಾಗೆಯೇ, ಶರೀರೇಷು - ಶರೀರಗಳಲ್ಲಿ, ಪ್ರಹ

ಗಳಂತೆ ಆ ರಾಕ್ಷಸರೆಲ್ಲರೂ ಚದುರಿಹೋದರು. ಇಷ್ಟೆಯಲ್ಲದೆ ಆ ಸಮಯದಲ್ಲಿ ಶ್ರೀರಾಮನು ಶತ್ರುಗಳಿಗೆ ಪ್ರಾಣಾಂತಕರವಾದ ಭಯಂಕರ ಯುದ್ಧವನ್ನು ಮಾಡುತ್ತಿದ್ದನು. ಆಗ ರಾಕ್ಷಸರೆಲ್ಲರೂ ಆತನ ಬೀಕರ ಕಾರ್ಯಜಾಲವನ್ನು ಕಂಡು ಆತನನ್ನು ನೋಡಲು ಆಗದೆ ಭಯದಿಂದ ನಡುಗಿಹೋದರು. ॥ ೧೬–೨೦ ॥ ಶ್ರೀರಾಮನಾದರೋ ಕಾನನವನ್ನು ಹೊಕ್ಕ ಮಹಾವಾತದಂತೆ ಬಹು ಭಯಂಕರವಾದ ರಾಕ್ಷಸಸೇನಾರಣ್ಯವನ್ನು ಹೊಕ್ಕು ಅದನ್ನು ನಾಶಗೊಳಿಸುತ್ತಿದ್ದನು. ಮಹಾ ಪರಾಕ್ರಮಿಯಾದ ಆತನು ರಾಕ್ಷಸಸೇನೆಯಲ್ಲಿದ್ದ ರಥಗಳೆಲ್ಲವನ್ನೂ ಮುರಿದು ಕೆಡವಿದನು. ಆಗ ಆತನ ತೀಕ್ಷ್ಣಾಸ್ತ್ರಗಳಿಂದ ಭೇದಿಸಿ ಧ್ವಂಸವಾಗಿ, ಸುಟ್ಟುಹೋಗುತ್ತಿರುವುದೂ, ಮಹಾ ಶಸ್ತ್ರಸಂಪೀಡಿತವೂ ಆದ ರಾಕ್ಷಸಸೇನೆಯು ಕಾಣುತ್ತಿದ್ದಿತಾಗಲಿ ಕರಕೌಶಲವನ್ನು ಅದ್ಭುತವಾಗಿ ಮೆರೆಯುತ್ತಿದ್ದ ಶ್ರೀರಾಮಮೂರ್ತಿಯು ಮಾತ್ರ ಕಾಣಿಸಲಿಲ್ಲವು. ರಾಕ್ಷಸರೆಲ್ಲರೂ ತಮ್ಮ ಶರೀರಗಳಲ್ಲಿ ತೀಕ್ಷ್ಣವಾದ ಬಾಣಗಳನ್ನು ಪ್ರಯೋ

¶ ಇಲ್ಲಿ ತೋರುವ ಮತ್ತೊಂದರ್ಥ:—ಪಂಚೇಂದ್ರಿಯಗಳಿಂದಾಗುವ ಸಕಲ ಪ್ರಯೋಜನಗಳನ್ನೂ ಅನುಭವಿಸುತ್ತಿರುವ-ಅನುಭವದಿಂದ ಅನುಮೇಯಿಸತಕ್ಕವನಾದ-(ಭೂತ) ಪಾಂಚಭೌತಿಕ ದೇಹಕ್ಕೆ (ಆತ್ಮಾನಂ) ಜೀವಾತ್ಮನನ್ನು ಪ್ರಜೆಗಳು ಹೇಗೆ ನೋಡಲಾರರೋ ಹಾಗೆ, ಅಥವಾ: ಶಬ್ದಾದಿ ವಿಷಯುಗಳಲ್ಲಿ ಅಧಿಷ್ಠಿಸಿರುವ ಪರಮಾತ್ಮನು ಸರ್ವವ್ಯಾಪಿಯಾದ್ದರಿಂದ ಆ ವಿಷಯುಗಳಲ್ಲಿಯೂ ಉಪಾದಾನ ಚೈತನ್ಯರೂಪದಿಂದ ಅಧಿಷ್ಠಿಸಿದ್ದು ಅವುಗಳಿಗಿಂತ ಬೇರೆಯೇ ಆಗಿರುವುದರಿಂದ ಪ್ರಜೆಗಳು ಆತನನ್ನು ಹೇಗೆ ನೋಡಲಾರರೋ ಹಾಗೆ ಆ ರಾಕ್ಷಸರು ತಮ್ಮ ಶರೀರಗಳಲ್ಲಿ ಪ್ರಹರಿಸುತ್ತಿರುವ ಶ್ರೀರಾಮನನ್ನು ಕಾಣದೇ ಹೋದರು.

ಯಾರ್ಥೇಷು ತಿಷ್ಠಂತಂ ಭೂತಾತ್ಮಾನಮಿವ ಪ್ರಜಾಃ ॥ ೨೩ ॥ "ಏಷ ಹಂತಿ ಗಜಾನೀಕಮೇಷ ಹಂತಿ ಮಹಾರಥಾನ್ । ಏಷ ಹಂತಿ ಶರೈಸ್ತೀಕ್ಷ್ಣೈಃ ಪದಾತೀನ್ವಾಜಿಭಿಸ್ಸಹ" ॥೨೪॥ ಇತಿ ತೇ ರಾಕ್ಷಸಾಸ್ಸರ್ವೇ ರಾಮಸ್ಯ ಸದೃಶಾನ್ ರಣೇ । ಅನ್ಯೋನ್ಯಂ ಕುಪಿತಾ ಜಘ್ನುಸ್ಸಾದೃಶ್ಯಾದ್ರಾಘವಸ್ಯ ತೇ ॥೨೫॥ ನತೇ ದದೃಶಿರೇ ರಾಮಂ ದಹಂತಮರಿವಾಹಿನೀಂ । ಮೋಹಿತಾಃ ಪರಮಾಸ್ತ್ರೇಣ ಗಾಂಧರ್ವೇಣ ಮಹಾತ್ಮನಾ ॥ ೨೬ ॥ ತೇತು ರಾಮಸಹಸ್ರಾಣಿ ರಣೇ ಪಶ್ಯಂತಿ ರಾಕ್ಷಸಾಃ । ಪುನಃ ಪಶ್ಯಂತಿ ಕಾಕುತ್ಸ್ಥ

ರಂತಂ - ಹೊಡೆಯುತ್ತಿರುವ, ರಾಘವಂ - ಶ್ರೀರಾಮನನ್ನು, ತೇ - ಆ ರಕ್ಕಸರು, ನಪಶ್ಯಂತಿ - ಕಾಣದೇ ಹೋದರು. ॥ ೨೩ ॥ ಏಷಃ - ಈತನು, ಗಜಾನೀಕಂ - ಆನೆಗಳ ಗುಂಪನ್ನು, ಹಂತಿ - ಹೊಡೆಯುತ್ತಾನೆ, ಏಷಃ - ಈತನೇ, ಮಹಾರಥಾನ್ - ದೊಡ್ಡ ರಥಗಳನ್ನು, ಹಂತಿ - ಹೊಡೆಯುತ್ತಾನೆ, ಏಷಃ - ಈತನು, ತೀಕ್ಷ್ಣೈಃ - ಹದವಾಗಿರುವ, ಶರೈಃ - ಬಾಣಗಳಿಂದ, ವಾಜಿಭಿಸ್ಸಹ - ಕುದುರೆಗಳೊಡಗೂಡಿದ, ಪದಾತೀನ್ - ಕಾಲಾಳುಗಳನ್ನು, ಹಂತಿ - ಹೊಡೆಯುತ್ತಾನೆ, ಇತಿ - ಇಂತೆಂದು, ಅನ್ಯೋನ್ಯಂ - ಪರಸ್ಪರವಾಗಿ, ಕುಪಿತಃ - ಕೋಪಿಷ್ಠರಾದ, ಸರ್ವೇ - ಸಮಸ್ತರಾದ, ತೇರಾಕ್ಷಸಾಃ - ಆ ರಕ್ಕಸರು, ರಣೇ - ಕಾಳಗದಲ್ಲಿ, ರಾಮಸ್ಯ - ಶ್ರೀರಾಮನ, ಸದೃಶಾನ್ - ಸಮಾನರಾದವರನ್ನು, ಜಘ್ನುಃ - ಹೊಡೆದರು, ತೇ - ಆ ರಕ್ಕಸರು, ರಾಘವಸ್ಯ - ಶ್ರೀರಾಮನ, ಸಾದೃಶ್ಯಾತ್ - ಸಾಮ್ಯದಿಂದ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ಜಘ್ನುಃ - ಹೊಡೆದರು. ॥ ೨೪-೨೫ ॥ ಮಹಾತ್ಮನಾ - ಮಹಾ ಪ್ರಭಾವವಂತನಾದ ಶ್ರೀರಾಮನಿಂದ, ಗಾಂಧರ್ವೇಣ-ಗಂಧರ್ವದೇವತಾಕವಾದ, ಪರಮಾಸ್ತ್ರೇಣ-ಉತ್ತಮವಾದ ಅಸ್ತ್ರದಿಂದ, ಮೋಹಿತಾಃ - ಮೋಹಿತರಾಗಿ, ತೇ - ಆ ರಕ್ಕಸರು, ಅರಿವಾಹಿನೀಂ - ಶತ್ರುಸೇನೆಯನ್ನು, ದಹಂತಂ - ದಹಿಸುತ್ತಿರುವ, ರಾಮಂ - ಶ್ರೀರಾಮನನ್ನು, ನದದೃಶಿರೇ - ಕಾಣದೇ ಹೋದರು. ॥ ೨೬ ॥ ತೇರಾಕ್ಷಸಾಸ್ತು - ಆ ರಕ್ಕಸರಾದರೆ, ರಣೇ - ಕಾಳಗದಲ್ಲಿ, ರಾಮ...ಣಿ - ಶ್ರೀರಾಮನ ಸಾವಿರಾರು ರೂಪಗಳನ್ನು, ಪಶ್ಯಂತಿ - ಕಾಣುತ್ತಾರೆ, ಮಹಾಹವೇ - ದೊಡ್ಡ ಕಾಳಗದಲ್ಲಿ, ಪುನಃ - ಮತ್ತು, ಕಾಕುತ್ಸ್ಥಂ - ಶ್ರೀರಾಮನನ್ನು, ಏಕಮೇವ - ಒಬ್ಬನನ್ನಾಗಿಯೇ, ಪಶ್ಯಂತಿ -

ಗಿಸುತ್ತಿರುವ ಶ್ರೀರಾಮನನ್ನು, ಇಂದ್ರಿಯಾರ್ಥಗಳಲ್ಲಿ ಪ್ರೇರಕನಾಗಿ ವಾಸಮಾಡುತ್ತಿರುವ ಪರಮಾತ್ಮನನ್ನು ಪ್ರಜೆಗಳು ಹೇಗೋ ಹಾಗೆ ನೋಡಲಾರದೇ ಹೋದರು. ಅವರೆಲ್ಲರೂ, ಈ ಶ್ರೀರಾಮನು ಆನೆಗಳ ಹಿಂಡುಗಳನ್ನೇ ಕೊಲ್ಲುತ್ತಿರುವನೆಂದೂ, ದೊಡ್ಡ ದೊಡ್ಡ ತೇರುಗಳನ್ನೇ ಮುರಿದಿಕ್ಕುತ್ತಿರುವನೆಂದೂ, ಮಹಾ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಪದಾತಿಗಳನ್ನೂ, ಅಶ್ವ ಅಶ್ವಾರೋಹಿಗಳನ್ನೂ ನಾಶಗೊಳಿಸುತ್ತಿರುವನೆಂದೂ ಪರಸ್ಪರವಾಗಿ ಕೂಗಿಡುತ್ತಿದ್ದರು. ಹೀಗೆ ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದ ಆ ರಾಕ್ಷಸರೆಲ್ಲರೂ ಆ ಭಯಂಕರ ಯುದ್ಧದಲ್ಲಿ ಭ್ರಾಂತಿಯಿಂದ ತಂತಮ್ಮವರನ್ನೇ ಶ್ರೀರಾಮನನ್ನಾಗಿ ಭಾವಿಸಿ ಭಯಪೀಡಿತರಾಗಿ ಆಯುಧಗಳಿಂದ ಹೊಡೆದಾಡುತ್ತಿದ್ದರು. ॥ ೨೮-೨೫ ॥ ಆ ಸಮಯದಲ್ಲಿ ಮಹಾತ್ಮನಾದ ಶ್ರೀರಾಮನು ಪ್ರಯೋಗಿಸಿದ ಸರ್ವೋತ್ತಮವಾದ ಗಾಂಧರ್ವಾಸ್ತ್ರದಿಂದ ಮೋಹಿತರಾದ ರಾಕ್ಷಸರೆಲ್ಲರೂ ಶತ್ರುಸೈನ್ಯವೆಲ್ಲವನ್ನೂ ನಾಶಗೊಳಿಸುತ್ತಿರುವ ಆತನನ್ನು ನೋಡಲೂ ಆರದೇ ಹೋದರು. ಇಷ್ಟೆಯಲ್ಲದೆ ಒಂದೊಂದು ತಡವೆಗೇ ಅನೇಕ ಸಹಸ್ರ ರಾಮಮೂರ್ತಿಗಳನ್ನು ನೋಡಿದಂತೆ ಭಾವಿಸಿ ಭಯದಿಂದ ತತ್ತಳಿಸಿ ಹೋಗುತ್ತಿದ್ದರು. ಒಂದೊಂದುವೇಳೆ ಮಾತ್ರ ಅದೇ ರಾಮನು ಒಬ್ಬೊಂಟಿಗನಾಗಿ ನಿಂತು

ನೇಕಮೇವ ಮಹಾಹವೇ ‖ ೨೭ ‖ ಭ್ರಮಂತೀಂ ಕಾಂಚನೀಂ ಕೋಟಿಂ ಕಾರ್ಮುಕಸ್ಯ ಮಹಾತ್ಮನಃ । ಅಲಾತಚಕ್ರಪ್ರತಿಮಾಂ ದದೃಶುಸ್ತೇ ನ ರಾಘವಂ ‖ ೨೮ ‖ ಶರೀರನಾಭಿಸತ್ವಾರ್ಚಿಃ ಶರಾರಂ ನೇಮಿಕಾರ್ಮುಕಂ । ಜ್ಯಾಘೋಷತಲನಿರ್ಘೋಷಂ ತೇಜೋಬುದ್ಧಿಗುಣಪ್ರಭಂ ‖ ೨೯ ‖ ದಿವ್ಯಾಸ್ತ್ರಗುಣಪರ್ಯಂತಂ ನಿಘ್ನಂತಂ ಯುಧಿ ರಾಕ್ಷಸಾನ್ । ದದೃಶೂ ರಾಮಚಕ್ರಂ ತತ್ಕಾಲಚಕ್ರಮಿವ ಪ್ರಜಾಃ ‖ ೩೦ ‖ ¶ ಅನೀಕಂ ದಶಸಾಹಸ್ರಂ ರಥಾನಾಂ ವಾತರಂಹಸಾಂ । ಅಷ್ಟಾದಶಸಹಸ್ರಾಣಿ ಕುಂಜ

ಕಾಣುತ್ತಿದ್ದರು, ಮಹಾತ್ಮನಃ - ಮಹಾತ್ಮನಾದ ಶ್ರೀರಾಮನ, ಕಾರ್ಮುಕಸ್ಯ - ಬಿಲ್ಲಿನ, ಕಾಂಚನೀಂ - ಬಂಗಾರದ ವಿಕಾರವಾದ, ಭ್ರಮಂತೀಂ - ತಿರುಗುತ್ತಿರುವ, ಕೋಟಿಂ - ತುದಿಯನ್ನು, ಅಲಾ.... ಮಾಂ - ಮಂಡಲಾಕಾರವಾಗಿ ತಿರುಗುತ್ತಿರುವ ಕೊಳ್ಳಿಯ ಚಕ್ರದಂತೆ, ತೇ - ಆ ರಕ್ಕಸರು, ದದೃಶುಃ - ಕಂಡರು, ರಾಘವಂ - ಶ್ರೀರಾಮನನ್ನು, ನದದೃಶುಃ - ಕಾಣಲೇ ಇಲ್ಲವು. ‖ ೨೭-೨೮ ‖ ಶರೀರನಾಭಿಃ - ಶರೀರವೇ ಮಧ್ಯಭಾಗವಾಗುಳ್ಳ, ಸತ್ವಾರ್ಚಿಃ - ಬಲವೇ ಜ್ವಾಲೆಗಳಾಗುಳ್ಳ, ಶರಾಂ - ಬಾಣಗಳೆಂಬ ಅಂಚುಗಳುಳ್ಳ, ನೇಮಿ....ಕಂ - ಧನುಸ್ಸೆಂಬ ಚಕ್ರದ ಕೊನೆಗಳುಳ್ಳ, ಜ್ಯಾಘೋ....ಷಂ- ಹೆದೆಯ ಧ್ವನಿ ಮತ್ತು ಆ ಹೆದೆಯನ್ನು ಸವರುವ ಹೆಬ್ಬೆರಳ ಧ್ವನಿಗಳೇ ಟಂಕಾರವಾಗುಳ್ಳ, ತೇಜೋ......ಭಂ - ತೇಜಃ - ಪರಾಕ್ರಮವೇ ಆಧಾರವಾಗಿರುವ ದಾರು ವಿಶೇಷವುಳ್ಳ, ಶರೀರಕಾಂತಿಯೇ ಪ್ರಕಾಶವಾಗುಳ್ಳ, ದಿವ್ಯಾ....ತಂ - ದೇವತಾಸಂಬಂಧವಾದ ಅಸ್ತ್ರಗಳ ಗುಣಗಳೇ ಪ್ರಾಂತಪ್ರದೇಶಗಳಾಗಿರುವ, ಯುಧಿ - ಕಾಳಿಗದಲ್ಲಿ, ರಾಕ್ಷಸಾನ್ - ರಕ್ಕಸರನ್ನು, ನಿಘ್ನಂತಂ - ಹೊಡೆಯುತ್ತಿರುವ, ರಾಮಚಕ್ರಂ-ಶ್ರೀರಾಮನೆಂಬ $ ಸುದರ್ಶನಚಕ್ರವನ್ನು, ತತ್ - ಆ ಪ್ರಸಿದ್ಧವಾದ, ಕಾಲಚಕ್ರಂ-ಕಾಲವೆಂಬ ಚಕ್ರವನ್ನು, ಪ್ರಜಾ ಇವ - ಪ್ರಜೆಗಳಂತೆ, ತೇ - ಆ ರಕ್ಕಸರು, ದದೃಶುಃ - ಕಂಡರು. ‖ ೩೦ ‖ ವಾತರಂಹಸಾಂ - ವಾಯುವೇಗದಂತೆ ವೇಗವುಳ್ಳ, ರಥಾನಾಂ - ರಥಗಳ, ದಶಸಾಹಸ್ರಂ - ಹತ್ತು

ಯುದ್ಧಮಾಡುತ್ತಿರುವುದನ್ನೂ ಕಾಣುತ್ತಿದ್ದರು. ರಾಕ್ಷಸರೆಲ್ಲರೂ ಮಹಾನುಭಾವನಾದ ಶ್ರೀರಾಮನ ಬಂಗಾರದ ಅಂಚುಗಳುಳ್ಳ ಧನುಷ್ಕೋಟಿಗಳನ್ನು ಕಂಡು ಇದು ಬೆಂಕಿಯ ಕೊಳ್ಳಿಗಳನ್ನು ಹೋಲುತ್ತಿರುವುದಾಗಿ ಭಾವಿಸಿ ಭಯಭ್ರಾಂತರಾಗುತ್ತಿದ್ದರಾಗಲಿ ಹಾಗೆ ಬಾಣವೃಷ್ಟಿಯನ್ನು ಸುರಿಸುತ್ತಿರುವ ಶ್ರೀರಾಮನೆಲ್ಲಿರುವನೆಂಬುದನ್ನು ಮಾತ್ರ ಕಂಡುಹಿಡಿಯಲಾರದೆ ಹೋದರು. ಇದು ಮಾತ್ರವಲ್ಲದೆ ಭಯಂಕರವಾದ ಆ ಯುದ್ಧಸಮಯದಲ್ಲಿ ರಾಕ್ಷಸರೆಲ್ಲರೂ, ಶರೀರವೆಂಬ ನಾಭಿಯುಳ್ಳದೂ, ಬಲವೆಂಬ ಜ್ವಾಲೆಗಳುಳ್ಳದೂ, ಬಾಣಗಳೆಂಬ ಅಂಚುಗಳುಳ್ಳದೂ,ಧನುಸ್ಸೆಂಬ ಕಾಡೀಮರವುಳ್ಳದೂ,ಧನುಷ್ಟಂಕಾರವೆಂಬ ತಲನಿರ್ಘೋಷವುಳ್ಳದೂ, ತೇಜೋಬುದ್ಧಿಗುಣಗಳೆಂಬ ಕಾಂತಿಯುಳ್ಳದೂ ಆದ ಶ್ರೀರಾಮನೆಂಬ ಸುದರ್ಶನ ಚಕ್ರವನ್ನು ಪ್ರಜೆಗಳು ಪ್ರಳಯಕಾಲದ ಚಕ್ರವನ್ನು ಹೇಗೋ ಹಾಗೆ ಕಂಡವರಾಗಿ ನಿಲ್ಲಲಾರದೆ ಹೋದರು .‖೨೯-೩೦‖ ಅಂದಿನದಿನ ರಣಾಂಗಣದಲ್ಲಿ ಹತ್ತುಸಾವಿರ ಅನೀಕಗಳಷ್ಟು ವಾಯು

$ "ಜ್ವಾಲಾನೇಮ್ಯರನಾಭ್ಯಕ್ಷ ಪುರುಷಾಂಗಂ ಸುದರ್ಶನಂ ‖ " ಎಂದು ಸುದರ್ಶನ ಚಕ್ರಲಕ್ಷಣವು.

¶ ಎಂದರೆ - ಅನೀಕ ೧ಕ್ಕೆ ೭೨೯೦-ಏಳುಸಾವಿರದ ಇನ್ನೂರುತೊಂಬತ್ತು-ಸಂಖ್ಯೆ, ಅದಕ್ಕೆ ಲೆಕ್ಕ ಹೇಗಂದರೆ - ಒಂದಾನೆ, ಒಂದು ರಥ, ಮೂರು ಕುದುರೆಗಳು, ಐದು ಕಾಲಾಳುಗಳು ಸೇರಿದರೆ, ಒಂದು ಪತ್ತಿ, ಅದಕ್ಕೆ ತ್ರಿಗುಣವಾಗಿ ಸಂಖ್ಯೆ ಮಾಡುತ್ತಾ ಬಂದರೆ ಒಂದು ಸೇನಾಮುಖ, ಸೇನಾಮುಖ ತ್ರಿಗುಣವಾದರೆ ಒಂದು ಗುಲ್ಮ, ಆ ಗುಲ್ಮಗಳು ಮೂರಾದರೆ ಒಂದು ಗಣ, ಆ ಗಣಗಳು ಮೂರಾದರೆ ಒಂದು ವಾಹಿನೀ, ಆ ವಾಹಿನೀ ತ್ರಿಗುಣವಾದರೆ - ಒಂದು ಪೃತನಾ, ಆ ಪೃತನಾ ಮೂರಾದರೆ - ಒಂದು ಚಮೂ ಆ ಚಮೂ ತ್ರಿಗುಣವಾದರೆ - ಅನೀಕ ಎಂದು, ತಿಳಿಯಬೇಕು.

ರಾಣಾಂ ತರಸ್ವಿನಾಂ ॥೩೧॥ ಚತುರ್ದಶ ಸಹಸ್ರಾಣಿ ಸಾರೋಹಾಣಾಂಚ ವಾಜಿನಾಂ । ಪೂರ್ಣೇ ಶತಸಹಸ್ರೇ ದ್ವೇ ರಾಕ್ಷಸಾನಾಂ ಪದಾತಿನಾಂ ॥ ೩೨ ॥ ದಿವಸಸ್ಯಾಷ್ಟಮೇ ಭಾಗೇ ಶರೈರಗ್ನಿಶಿಖೋಪಮೈಃ । ಹತಾನ್ಯೇಕೇನ ರಾಮೇಣ ರಕ್ಷಸಾಂ ಕಾಮರೂಪಿಣಾಂ ॥೩೩॥ ತೇ ಹತಾಶ್ವಾ ಹತರಥಾಃ ಶಾಂತಾ ವಿಮಥಿತ ಧ್ವಜಾಃ । ಅಭಿಪೇತುಃ ಪುರೀಂ ಲಂಕಾಂ ಹತಶೇಷಾ ನಿಶಾಚರಾಃ ॥೩೪॥ ಹತೈರ್ಗಜಪದಾತಾಶ್ವೈಸ್ತದ್ಬಭೂವ ರಣಾಜಿರಂ । ಆಕ್ರೀಡಮಿವ ರುದ್ರಸ್ಯ ಕ್ರುದ್ಧಸ್ಯ ಸುಮಹಾತ್ಮನಃ ॥ ೩೫ ॥ ತತೋ

ಸಾವಿರ, ಅನೀಕಂ-ಸೇನೆಗಳು, ತರಸ್ವಿನಾಂ-ಬಲಿಷ್ಠಗಳಾದ, ಕುಂಜರಾಣಾಂ-ಆನೆಗಳ, ಅಷ್ಟಾ....ನಿ - ಹದಿನೆಂಟುಸಾವಿರ ಆನೀಕಗಳೂ ಸಾರೋಹಣಾಂ - ಸವಾರರಿಂದೊಡಗೂಡಿದ, ವಾಜಿನಾಂ - ಕುದುರೆಗಳ, ಚತು......ಣಿ-ಹದಿನಾಲ್ಕುಸಾವಿರ ಅನೀಕಗಳೂ, ಪದಾತಿನಾಂ - ಕಾಲಾಳುಗಳಾದ, ರಾಕ್ಷಸಾನಾಂ-ರಕ್ಕಸರ, ಪೂರ್ಣೇ - ಸಂಪೂರ್ಣವಾದ, ದ್ವೇಶ......ಸ್ರೇ - ಇನ್ನೂರು ಸಹಸ್ರ ಅನೀಕಗಳೂ, ಕಾಮರೂಪಿಣಾಂ - ಕಾಮರೂಪಿಗಳಾದ, ರಕ್ಷಸಾಂ - ರಕ್ಕಸರ ರಥ ಆನೆ ಕುದುರೆ ಕಾಲಾಳುಗಳೆಂಬ ಸೇನೆಗಳೂ, ಏಕೇನ - ಒಬ್ಬನಾದ, ರಾಮೇಣ - ಶ್ರೀರಾಮನಿಂದ, ಅಗ್ನಿ......ಮೈಃ - ಅಗ್ನಿಜ್ವಾಲೆಗೆ ಸಮಾನಗಳಾದ, ಶರೈಃ - ಬಾಣಗಳಿಂದ, ದಿವಸಸ್ಯ - ಹಗಲಿನ, ಅಷ್ಟಮೇಭಾಗೇ - ಎಂಟನೆಯ ಒಂದು ಭಾಗವಾದ ಮೂರುಮುಕ್ಕಾಲು ಘಳಿಗೆಯಲ್ಲಿ, ಹತಾನಿ - ಸಂಹಾರ ಮಾಡಲ್ಪಟ್ಟವು. ॥ ೩೧-೩೩ ॥ ಹತಶೇಷಾಃ - ಮಡಿದುಳಿದ ತೇನಿಶಾಚರಾಃ - ಆ ರಕ್ಕಸರು, ಹತಾಶ್ವಾಃ-ಹೊಡೆಯಲ್ಪಟ್ಟ ಕುದುರೆಗಳುಳ್ಳವರಾಗಿ, ಹತರಥಾಃ - ಮುರಿದ ರಥಗಳುಳ್ಳವರಾಗಿಯೂ, ಶಾಂತಾಃ - ಬಲವುಡುಗಿದವರಾಗಿಯೂ, ವಿಮ.....ಜಾಃ - ಮುರಿಯಲ್ಪಟ್ಟ ಧ್ವಜಗಳುಳ್ಳವರಾಗಿಯೂ, ಲಂಕಾಪುರೀಂ - ಲಂಕಾಪಟ್ಟಣವನ್ನು ಕುರಿತು, ಅಭಿಪೇತುಃ - ಓಡಿದರು. ॥ ೩೪ ॥ ಹತೈಃ - ಹೊಡೆಯಲ್ಪಟ್ಟ, ಗಜ....ಶ್ವೈಃ - ಆನೆಗಳಿಂದಲೂ, ಕಾಲ್ಬಲಗಳಿಂದಲೂ, ಕುದುರೆಗಳಿಂದಲೂ, ತದ್ರಣಾಜಿರಂ - ಆ ರಣಭೂಮಿಯು, ಸುಮಹಾತ್ಮನಃ - ಬಹಳ ಪ್ರಭಾವವುಳ್ಳ, ಕ್ರುದ್ಧಸ್ಯ - ಕುಪಿತನಾದ, ರುದ್ರಸ್ಯ - ಪ್ರಳಯರುದ್ರನ, ಆಕ್ರೀಡಮಿವ - ವಿಹಾರಸ್ಥಳದಂತೆ, ಬಭೂವ - ಆಯಿತು. ॥ ೩೫ ॥ ತತಃ - ಬಳಿಕ, ಸಗಂಧರ್ವಾಃ - ಗಂಧರ್ವರಿಂದೊಡಗೂಡಿದ, ದೇವಾಃ - ದೇವತೆಗಳು, ಸಿದ್ಧಾಶ್ಚ-ಸಿದ್ಧರೂ, ಪರಮರ್ಷಯಃ-ಬ್ರಹ್ಮರ್ಷಿ

ವೇಗವುಳ್ಳ ರಥಗಳೂ, ಹದಿನೆಂಟುಸಾವಿರ ಅನೀಕಗಳಷ್ಟು ಮಹಾ ಬಲಾಢ್ಯವಾದ ಗಜಗಳೂ, ಹದಿನಾಲ್ಕುಸಾವಿರ ಅನೀಕಗಳಷ್ಟು ಸವಾರರೊಡಗೂಡಿದ ಕುದುರೆಗಳೂ, ಸಂಪೂರ್ಣವಾಗಿ ಎರಡು ಲಕ್ಷ ಅನೀಕಗಳಷ್ಟು ಪದಾತಿಗಳಾದ ರಾಕ್ಷಸರೂ ಅಂತು ಒಟ್ಟು ೭ ಕೋಟಿ, ೨೯ ಲಕ್ಷ ರಥಗಳು—೧೩ ಕೋಟಿ ೧೨ ಲಕ್ಷ ೨೦ ಸಾವಿರ ಗಜಗಳು—೧೦ ಕೋಟಿ ೨೦ ಲಕ್ಷ ೬೦ ಸಾವಿರ ತುರಗಗಳು—೧೪೫ ಕೋಟಿ ೮೦ ಲಕ್ಷ ಪದಾತಿಗಳು, ಹೀಗೆ ೧೭೬ ಕೋಟಿ ೪೧ ಲಕ್ಷ ೮೦ ಸಾವಿರ ಸಂಖ್ಯೆಯುಳ್ಳ ರಾಕ್ಷಸಸೇನೆಯು ದಿನದ ಎಂಟನೆಯ ಭಾಗವೂ ಮುಗಿಯುವ ಮೊದಲೇ ಶ್ರೀರಾಮಮೂರ್ತಿಯೊಬ್ಬನಿಂದಲೇ ನಾಶವಾಗಿ ಹೋಯಿತು. ಶ್ರೀರಾಮನೊಬ್ಬನೇ ಕಾಮರೂಪಿಗಳಾದ ರಾಕ್ಷಸರೆಲ್ಲರನ್ನೂ ಕೊಂದುದಾದ ಬಳಿಕ ಉಳಿದ ರಾಕ್ಷಸರೆಲ್ಲರೂ ಮಹಾ ಭಯಗ್ರಸ್ತರಾಗಿ ಲಂಕಾಪಟ್ಟಣಕ್ಕೆ ಓಡಿಹೋದರು. ಹೀಗೆ ಶ್ರೀರಾಮನಿಂದ ನಾಶವಾದ ರಾಕ್ಷಸರ ಚತುರಂಗಬಲಸಮನ್ವಿತವಾದ ಆ ರಣಭೂಮಿಯು ಪ್ರಳಯರುದ್ರನ ಕ್ರೀಡಾಸ್ಥಾನದಂತೆ ಘೋರವಾಗಿ ಪ್ರಜ್ವಲಿಸುತ್ತಿದ್ದಿತು. ॥ ೩೧–೩೫ ॥ ಆಗ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹಾ ಶ್ರೇಷ್ಠರಾದ ಬ್ರಹ್ಮರ್ಷಿಗಳೂ, ಶ್ರೀರಾಮ

ದೇವಾಸ್ಸಗಂಧರ್ವಾಸ್ಸಿದ್ಧಾಶ್ಚ ಪರಮರ್ಷಯಃ । ಸಾಧುಸಾಧ್ವಿತಿ ರಾಮಸ್ಯ ತತ್ಕರ್ಮ ಸಮಪೂಜಯನ್ ॥ ೩೬ ॥ ಅಬ್ರವೀಚ್ಚ ತದಾ ರಾಮಸ್ಸುಗ್ರೀವಂ ಪ್ರತ್ಯನಂತರಂ । ವಿಭೀಷಣಂಚ ಧರ್ಮಾತ್ಮಾ ಹನೂಮಂತಂಚ ವಾನರಂ ॥ ೩೭ ॥ ಜಾಂಬವಂತಂ ಹರಿಶ್ರೇಷ್ಠಂ ಮೈಂದಂ ದ್ವಿವಿದಮೇವಚ । "ಏತದಸ್ತ್ರಬಲಂ ದಿವ್ಯಂ ಮಮ ವಾ ತ್ರ್ಯಂಬಕಸ್ಯವಾ" ॥ ೩೮ ॥

ನಿಹತ್ಯ ತಾಂ ರಾಕ್ಷಸವಾಹಿನೀಂ ತು
ರಾಮಸ್ತದಾ ಶಕ್ರಸಮೋ ಮಹಾತ್ಮಾ ।
ಅಸ್ತ್ರೇಷು ಶಸ್ತ್ರೇಷು ಜಿತಕ್ಲಮಶ್ಚ
ಸಂಸ್ತೂಯತೇ ದೇವಗಣೈಃ ಪ್ರಹೃಷ್ಟೈಃ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ನವತಿತಮಸ್ಸರ್ಗಃ.

ಗಳೂ, ರಾಮಸ್ಯ - ಶ್ರೀರಾಮನ, ತತ್ಕರ್ಮ - ಆ ರಾಕ್ಷಸವಧರೂಪ ಕಾರ್ಯವನ್ನು, ಸಾಧುಸಾಧ್ವಿತಿ - ಭಾಪುಭಾಪೆಂದು, ಸಮಪೂಜಯನ್ - ಶ್ಲಾಘಿಸಿದರು. ॥ ೩೬ ॥ ತದಾ - ಆ ಕಾಲದಲ್ಲಿ, ಧರ್ಮಾತ್ಮಾ - ಧರ್ಮಿಷ್ಠನಾದ, ರಾಮಶ್ಚ - ಶ್ರೀರಾಮನೂ, ಪ್ರತ್ಯನಂತರಂ - ಬಳಿಯಲ್ಲಿರುವ, ಸುಗ್ರೀವಂ - ಸುಗ್ರೀವನನ್ನೂ, ವಿಭೀಷಣಂಚ - ವಿಭೀಷಣನನ್ನೂ, ವಾನರಂ - ವಾನರನಾದ, ಹನುಮಂತಂಚ - ಹನುಮಂತನನ್ನೂ, ಜಾಂಬವಂತಂ - ಜಾಂಬವಂತನನ್ನೂ, ಹರಿಶ್ರೇಷ್ಠಂ - ವಾನರರಲ್ಲಿ ಉತ್ತಮನಾದ, ಮೈಂದಂ - ಮೈಂದನನ್ನೂ ಕುರಿತು, ದಿವ್ಯಂ - ಮನೋಹರವಾದ, ಏತದಸ್ತ್ರಂ - ಈ ಅಸ್ತ್ರಗಳ ಪ್ರಯೋಗದಲ್ಲಿ ಶಕ್ತಿಯು, ಮಮವಾ - ನನಗೋ, ತ್ರ್ಯಂಬಕಸ್ಯವಾ - ಈಶ್ವರನಿಗೋ, ಅಸ್ತಿ - ಇರುವುದು, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೩೭-೩೮ ॥ ತದಾ - ಆ ಕಾಲದಲ್ಲಿ, ಶಕ್ರಸಮಃ - ದೇವೇಂದ್ರನಿಗೆ ಸಮಾನನಾದ, ಮಹಾತ್ಮಾ - ಮಹಾಪ್ರಭಾವವಂತನಾದ, ರಾಮಃ - ಶ್ರೀರಾಮನು, ತಾಂರಾ....ನೀಂ - ಆ ರಕ್ಕಸರ ಸೇನೆಯನ್ನು, ನಿಹತ್ಯ - ಸಂಹರಿಸಿ, ಅಸ್ತ್ರೇಷು - ಅಸ್ತ್ರಗಳಲ್ಲಿಯೂ, ಜಿತಕ್ಲಮಃ-ಜಯಿಸಲ್ಪಟ್ಟ ಆಯಾಸವುಳ್ಳವನಾಗಿ, ಪ್ರಹೃಷ್ಟೈಃ-ಸಂತೋಷಗೊಂಡಿರುವ, ದೇವಗಣೈಃ - ದೇವತಾತಂಡಗಳಿಂದ, ಸಂಸ್ತೂಯತೇಸ್ಮ - ಸ್ತುತಿಮಾಡಲ್ಪಟ್ಟನು. ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ನವತಿತಮಸ್ಸರ್ಗಃ.

ಚಂದ್ರನ ಪರಾಕ್ರಮವನ್ನು ಕೊಂಡಾಡಿ ಭಾಪುಭಾಪೆಂದರು. ಇದಾದ ತರುವಾಯ ಶ್ರೀರಾಮಮೂರ್ತಿಯು ತನ್ನ ಸಮೀಪದಲ್ಲಿರುವ, ವಿಭೀಷಣ, ಹನುಮಂತ, ಜಾಂಬವಂತ, ಮೈಂದ, ದ್ವಿವಿದರೇ ಮೊದಲಾದವರನ್ನು ಕುರಿತು, "ಎಲೈ ವೀರಶ್ರೇಷ್ಠರೇ! ಇಂಥ ಸಾಮರ್ಥ್ಯವುಳ್ಳ ಗಾಂಧರ್ವಾಸ್ತ್ರವು ಪರಮೇಶ್ವರನೊಬ್ಬನಲ್ಲಿಯೂ, ನನ್ನೊಬ್ಬನಲ್ಲಿಯೂ ಇರುವುದಲ್ಲದೆ ಮತ್ತಾರಲ್ಲಿಯೂ ಇರುವುದಿಲ್ಲವು" ಎಂದು ಹೇಳಿದನು. ಈ ಪ್ರಕಾರವಾಗಿ ರಾಕ್ಷಸರೆಲ್ಲರನ್ನೂ ವಧಿಸಿದ ವೃತ್ತಾಂತವನ್ನು ತಿಳಿಸಿ ಮಹಾನುಭಾವನೂ, ಮಹೇಂದ್ರೋಪಮನೂ ಆದ ಶ್ರೀರಾಮನು ಅಸ್ತ್ರಶಸ್ತ್ರಗಳಲ್ಲಿ ಏನೊಂದು ಶ್ರಮವೂ ಇಲ್ಲದೆ ದೇವತೆಗಳಿಂದ ಸ್ತುತಿಸಲ್ಪಟ್ಟವನೂ ಆಗಿ ಸಂತೋಷದಿಂದಿದ್ದನು. ॥ ೩೬-೩೯ ॥

ಇಂತಿದು ಶ್ರೀರಾಮಕೃತ ಮೂಲಬಲ ವಿಧ್ವಂಸನ ವೃತ್ತಾಂತವೆಂಬ ತೊಂಬತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚನವತಿತಮಸ್ಸರ್ಗಃ

ತಾನಿ ತಾನಿ ಸಹಸ್ರಾಣಿ ಸಾರೋಹಾಣಾಂ ಚ ವಾಜಿನಾಂ । ರಥಾನಾಂ ತ್ವಗ್ನಿ
ವರ್ಣಾನಾಂ ಸಧ್ವಜಾನಾಂ ಸಹಸ್ರಶಃ ॥ ೧ ॥ ರಾಕ್ಷಸಾನಾಂ ಸಹಸ್ರಾಣಿ ಗದಾಪರಿಘ
ಯೋಧಿನಾಂ । ಕಾಂಚನಧ್ವಜಚಿತ್ರಾಣಾಂ ಶೂರಾಣಾಂ ಕಾಮರೂಪಿಣಾಂ ॥ ೨ ॥
ನಿಹತಾನಿ ಶರೈಸ್ತೀಕ್ಷ್ಣೈಸ್ತಪ್ತಕಾಂಚನಭೂಷಣೈಃ । ರಾವಣೇನ ಪ್ರಯುಕ್ತಾನಿ
ರಾಮೇಣಾಕ್ಲಿಷ್ಟಕರ್ಮಣಾ ॥ ೩ ॥ ದೃಷ್ಟ್ವಾ ಶ್ರುತ್ವಾಚ ಸಂಭ್ರಾಂತಾ ಹತಶೇಷಾ
ನಿಶಾಚರಾಃ । ರಾಕ್ಷಸೀಶ್ಚ ಸಮಾಗಮ್ಯ ದೀನಾಶ್ಚಿಂತಾಪರಿಪ್ಲುತಾಃ ॥ ೪ ॥ ವಿಧವಾ
ಹತಪುತ್ರಾಶ್ಚ ಕ್ರೋಶಂತ್ಯೋ ಹತಬಾಂಧವಾಃ । ರಾಕ್ಷಸ್ಯಸ್ಸಹಸಂಗಮ್ಯ ದುಃಖಾರ್ತಾಃ

ಸಾರೋಹಾಣಾಂ - ಸವಾರರಿಂದೊಡಗೂಡಿದ, ವಾಜಿನಾಂ - ಕುದುರೆಗಳ, ತಾನಿತಾನಿಸಹಸ್ರಾಣಿ - ಆ ಆ ಸಹಸ್ರಗಳು, ಅಗ್ನಿವರ್ಣಾನಾಂ - ಅಗ್ನಿಯ ಬಣ್ಣದಂತೆ ಬಣ್ಣವುಳ್ಳ, ಸಧ್ವಜಾನಾಂ - ನಿಶಾನಿಗಳಿಂದೊಡಗೂಡಿದ, ರಥಾನಾಂ - ತೇರುಗಳ, ಸಹಸ್ರಶಃ-ಅನೇಕ ಸಹಸ್ರಗಳು, ಗದಾ.... ನಾಂ - ಗದಾಯುಧಗಳಿಂದಲೂ, ಪರಿಘಾಯುಧಗಳಿಂದಲೂ ಯುದ್ಧಮಾಡುತ್ತಿರುವ, ಕಾಂಚ..... ಣಾಂ - ಬಂಗಾರದ ವಿಕಾರವಾದ ಧ್ವಜಗಳಿಂದ ಚಿತ್ರವರ್ಣವುಳ್ಳ, ಶೂರಾಣಾಂ-ಶೂರರಾದ, ಕಾಮರೂಪಿಣಾಂ- ಬೇಕಾದ ರೂಪವನ್ನು ಧರಿಸುವ ಶಕ್ತಿಯುಳ್ಳ, ರಾಕ್ಷಸಾನಾಂ - ರಕ್ಕಸರ, ಸಹಸ್ರಾಣಿ - ಸಹಸ್ರಗಳು, ರಾವಣೇನ - ರಾವಣಾಸುರನಿಂದ, ಪ್ರಯುಕ್ತಾನಿ - ಪ್ರೇರೇಪಿಸಲ್ಪಟ್ಟು, ಅಕ್ಲಿ.... ಣಾ - ಕ್ಲೇಶವಿಲ್ಲದೆ ಕಾರ್ಯಗಳನ್ನು ಮಾಡುವ, ರಾಮೇಣ - ಶ್ರೀರಾಮನಿಂದ, ತಪ್ತ.... ಣೈಃ - ಶೋಧಿಸಿದ ಬಂಗಾರದ ಒಡವೆಗಳುಳ್ಳ, ತೀಕ್ಷ್ಣೈಃ - ಹದವಾದ, ಶರೈಃ - ಬಾಣಗಳಿಂದ, ನಿಹತಾನಿ - ಹೊಡೆಯಲ್ಪಟ್ಟುದನ್ನು, ದೃಷ್ಟ್ವಾ - ನೋಡಿ, ಶ್ರುತ್ವಾಚ - ಕೇಳಿಯೂ, ಸಂಭ್ರಾಂತಾಃ - ಗಾಬರಿ ಬಿದ್ದಿರುವ, ಹತಶೇಷಾಃ - ಮಡಿದುಳಿದ, ನಿಶಾಚರಾಃ - ರಕ್ಕಸರು, ರಾಕ್ಷಸೀಶ್ಚ - ರಾಕ್ಷಸಸ್ತ್ರೀಯರನ್ನು ಕುರಿತು, ಸಮಾಗಮ್ಯ - ಬಂದು, ದೀನಾಃ - ಪರಿತಪ್ತರಾಗಿ, ಚಿಂತಾ.... ತಾಃ - ಆಲೋಚನೆಯಲ್ಲಿ ಮುಳುಗಿದವರು, ಬಭೂವುಃ - ಆದರು. ॥ ೧-೪ ॥ ವಿಧವಾಃ - ವಿಧವೆಯರೂ, ಹತಪುತ್ರಾಶ್ಚ - ಮಡಿದ ಮಕ್ಕಳುಳ್ಳವರೂ, ಹತಬಾಂಧವಾಃ - ಹೊಡೆಯಲ್ಪಟ್ಟ ಸಂಬಂಧಿಗಳುಳ್ಳವರೂ ಆದ, ರಾಕ್ಷಸ್ಯಃ - ರಾಕ್ಷಸಸ್ತ್ರೀಯರು, ಕ್ರೋಶಂತ್ಯಃ - ಘಟ್ಟಿಯಾಗಿ ಅಳುತ್ತ, ಸಹಸಂಗಮ್ಯ - ಕೂಡಿಕೊಂಡು, ದುಃಖಾರ್ತಾಃ -

---

ಈ ಪ್ರಕಾರವಾಗಿ ಅಶ್ವಾರೋಹಕರ ಅನೇಕ ಸಹಸ್ರಗಳೂ, ಅಗ್ನಿಜ್ವಾಲೆಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿರುವ, ಧ್ವಜಸಹಿತವಾದ ರಥಗಳ ಅನೇಕ ಸಹಸ್ರಗಳೂ, ಗದಾಪರಿಘಾದ್ಯಾಯುಧಗಳಿಂದ ಕಾಳಗ ಮಾಡುತ್ತಿರುವವರೂ, ಸ್ವರ್ಣಧ್ವಜಸಮೇತರಾಗಿ ಶೂರರೂ, ಕಾಮರೂಪರೂ ಆದ ರಾಕ್ಷಸರ ಅನೇಕ ಸಹಸ್ರಗಳೂ, ಬಂಗಾರದ ರೆಕ್ಕೆಗಳೊಡಗೂಡಿ ಮಹಾ ತೀಕ್ಷ್ಣವಾದ ಶ್ರೀರಾಮನ ಬಾಣಗಳಿಂದ ನಾಶವಾದುವೆಂಬ ವೃತ್ತಾಂತವನ್ನು ಕೇಳಿ ರಾಕ್ಷಸರೆಲ್ಲರೂ ಬಹಳವಾಗಿ ವ್ಯಸನಪಟ್ಟರು. ಲಂಕಾನಗರವಾಸಿಗಳಾದ ರಾಕ್ಷಸರೂ ವ್ಯಸನಾಕ್ರಾಂತರಾದರು. ಆಗ ವಿಧವೆಯರೂ, ಮಡಿದ ಮಕ್ಕಳುಳ್ಳವರೂ, ಮಡಿದುರುಳಿದ ಬಂಧುಗಳುಳ್ಳವರೂ ಆದ ರಾಕ್ಷಸಾಂಗನೆಯರೆಲ್ಲರೂ ಅಪಾರ ದುಃಖ

ಪರ್ಯದೇವಯನ್ ||೫|| “ಕಥಂ ಶೂರ್ಪಣಖಾ ವೃದ್ಧಾ ಕರಾಳಾ ನಿರ್ಣತೋದರೀ |
ಆಸಸಾದ ವನೇ ರಾಮಂ ಕಂದರ್ಪಮಿವ ರೂಪಿಣಂ! || ೬ || ಸುಕುಮಾರಂ ಮಹಾ
ಸತ್ವಂ ಸರ್ವಭೂತಹಿತೇ ರತಂ | ತಂ ದೃಷ್ಟ್ವಾ ಲೋಕನಿಂದ್ಯಾ ಸಾ ಹೀನರೂಪಾ
ಪ್ರಕಾಮಿತಾ! || ೭ || ಕಥಂ ಸರ್ವಗುಣೈರ್ಹೀನಾ ಗುಣವಂತಂ ಮಹೌಜಸಂ |
ಸುಮುಖಂ ದುರ್ಮುಖೀ ರಾಮಂ ಕಾಮಯಾಮಾಸ ರಾಕ್ಷಸೀ! ||೮|| ಜನಸ್ಯಾಽಸ್ಯಾಲ್ಪ
ಭಾಗ್ಯತ್ವಾದ್ವಲಿನೀ ಶ್ವೇತಮೂರ್ಧಜಾ | ಅಕಾರ್ಯಮಪಹಾಸ್ಯಂಚ ಸರ್ವಲೋಕ

ದುಃಖದಿಂದ ಸಂಕಟಗೊಂಡು, ಪರ್ಯದೇವಯನ್ - ವಿಲಪಿಸಿದರು. || ೫ || ವೃದ್ಧಾ - ಮುದಕಿಯಾದ, ಕರಾಳಾ - ವಕ್ರರೂಪಿಯಾದ, ನಿರ್ಣತೋದರೀ - ಒಂಟೆಯ ಹೊಟ್ಟೆಯಂತೆ ಹೊಟ್ಟೆಯುಳ್ಳ, ಶೂರ್ಪಣಖಾ - ಶೂರ್ಪಣಖಿಯು, ವನೇ - ಅರಣ್ಯದಲ್ಲಿ, ರೂಪಿಣಂ - ರೂಪಧಾರಿಯಾದ, ಕಂದರ್ಪಮಿವಸ್ಥಿತಂ - ಮನ್ಮಥನೋ ಎಂಬಂತಿರುವ, ಸುಕುಮಾರಂ - ಮೃದುವಾದ ಶರೀರವುಳ್ಳ, ಮಹಾಸತ್ವಂ- ಮಹಾಬಲವುಳ್ಳ, ಸರ್ವಭೂತಹಿತೇ - ಸಮಸ್ತ ಭೂತಗಳಿಗೂ ಒಳ್ಳೆಯದನ್ನು ಮಾಡುವುದರಲ್ಲಿ, ರತಂ - ಆಸಕ್ತನಾದ, ರಾಮಂ - ಶ್ರೀರಾಮನನ್ನು, ಕಥಂ - ಹೇಗೆ, ಆಸಸಾದ - ಹೊಂದಿದಳೋ. || ೬ || ಲೋಕನಿಂದ್ಯಾ - ಲೋಕದಲ್ಲಿ ನಿಂದಿಸಲು ಯೋಗ್ಯಳಾದ, ಹೀನರೂಪಾ - ಸೌಂದರ್ಯ ಹೀನಳಾದ, ಸಾ - ಆ ಶೂರ್ಪಣಖಿಯು, ತಂ - ಆ ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಕಥಂ - ಹೇಗೆ, ಪ್ರಕಾಮಿತಾ - ಕೋರಿದಳೋ. || ೭ || ಸರ್ವಗುಣೈಃ - ಸಮಸ್ತ ಗುಣಗಳಿಂದಲೂ, ಹೀನಾ - ಹೀನಳಾದ, ದುರ್ಮುಖೀ - ಕೆಟ್ಟಮೋರೆಯುವಳಾದ, ರಾಕ್ಷಸೀ - ರಕ್ಕಸಿಯು, ಗುಣವಂತಂ - ರೂಪರೇಖಾದಿ ಗುಣಗಳುಳ್ಳ, ಮಹೌಜಸಂ - ಮಹಾ ತೇಜೋವಂತನಾದ, ಸುಮುಖಂ - ಪ್ರಸನ್ನಮುಖನಾದ, ರಾಮಂ - ಶ್ರೀರಾಮನನ್ನು, ಕಥಂಕಾಮಯಾಮಾಸ - ಹೇಗೆ ಕೋರಿದಳೋ. || ೮ || ವಲಿನೀ - ಮುಖದಲ್ಲಿ ನುದುಡುಗಳುಳ್ಳ, ಶ್ವೇತಮೂರ್ಧಜಾ - ನೆರತ ಕೂದಲುಗಳುಳ್ಳ, ಅಪ್ರತಿರೂಪಾ - ಕುರೂಪಿಯಾದ, ಸಾ - ಆ ಶೂರ್ಪಣಖಿಯು, ಅಸ್ಯಜನಸ್ಯ-ಈ ಲಂಕಾಪಟ್ಟಣದ ಜನರ, ಅಲ್ಪಭಾಗ್ಯತ್ವಾತ್-ನಿರ್ಭಾಗ್ಯತೆಯ ದೆಸೆಯಿಂದ, ಅಕಾರ್ಯಂ - ಮಾಡಬಾರದ, ಅಪಹಾಸ್ಯಂ - ನಗೆಗೀಡಾದ, ಸರ್ವ....ತಂ - ಸಮಸ್ತ ಜನರಿಂದಲೂ ನಿಂದಿತವಾದ, ರಾಘವಸ್ಯ - ಶ್ರೀರಾಮನ, ಪ್ರಧರ್ಷಣಂ - ತಿರಸ್ಕಾರವನ್ನು, ರಾಕ್ಷಸಾನಾಂ - ರಕ್ಕಸರ, ದೂಷಣಸ್ಯ - ದೂಷಣನ, ಖರಸ್ಯ - ಖರನ, ವಿನಾಶಾಯ - ನಾಶಕ್ಕಾಗಿ,

---

ಸಂಪೀಡಿತರಾಗಿ ಅತ್ಯಧಿಕವಾಗಿ ವಿಲಪಿಸಲಾರಂಭಿಸಿದರು. ಅವರೆಲ್ಲರೂ ತಂತಮ್ಮಲ್ಲಿಯೇ ಹೀಗೆಂದುಕೊಂಡರು. ||೧-೫|| “ಅಯ್ಯೋ! ದುರ್ಮಾರ್ಗಳೂ, ಭಯಂಕರಾಕಾರಳೂ ಆದ ಆ ಶೂರ್ಪಣಖಿಯು ಮನ್ಮಥನಂತಿರುವವನೂ, ಸುಕುಮಾರನೂ, ಮಹಾ ಪರಾಕ್ರಮವಂತನೂ, ಸಮಸ್ತ ಪ್ರಾಣಿಗಳ ಹಿತವನ್ನೂ ಕೋರುವವನೂ ಆದ ಶ್ರೀರಾಮಮೂರ್ತಿಯನ್ನು ಕಂಡು ಕಾಮಿಸಿದುದೆಂತೋ! ಅಕಟ!! ಸಕಲ ಗುಣವಿಹೀನೆಯೂ, ಸಕಲ ದುರ್ಗುಣಭರಿತೆಯೂ ಆದ ಆ ದುಷ್ಟ ಶೂರ್ಪಣಖಿಯು, ಸಕಲ ಸದ್ಗುಣಭರಿತನೂ, ಮಹಾ ತೇಜಸ್ಸಂಪನ್ನನೂ, ಸುಮುಖನೂ ಆದ ಶ್ರೀರಾಮಮೂರ್ತಿಯನ್ನು ಹೇಗೆತಾನೆ ಬಯಸಿದಳೋ! ನಮ್ಮ ರಾಕ್ಷಸಲೋಕದ ದೌರ್ಭಾಗ್ಯದಿಂದಲೇ, ಮುದಡು ಮೊಗದ ಬೆಳಗೂದಲ ಆ ಶೂರ್ಪಣಖಿಯು, ಎಲ್ಲರೂ ನಿಂದಿಸಲರ್ಹವಾದ, ಪರಮ ನೀಚಕಾರ್ಯವನ್ನು ಮಾಡಿಬಿಟ್ಟಳು. ದುರ್ಮಾರ್ಗಳಾದ ಆ ರಾಕ್ಷಸಿಯು ಸಮಸ್ತ ರಾಕ್ಷಸರ ಮತ್ತು ಮಹಾ ಪರಾ

ವಿಗರ್ಹಿತಂ! ‖ ೯ ‖ ರಾಕ್ಷಸಾನಾಂ ವಿನಾಶಾಯ ದೂಷಣಸ್ಯ ಖರಸ್ಯಚ । ಚಕಾರಾಽ ಪ್ರತಿರೂಪಾ ಸಾ ರಾಘವಸ್ಯ ಪ್ರಧರ್ಷಣಂ! ‖ ೧೦ ‖ ವಧಾಯ ಸೀತಾ ಸಾನೀತಾ ದಶಗ್ರೀವೇಣ ರಕ್ಷಸಾ । ನಚ ಸೀತಾಂ ದಶಗ್ರೀವಃ ಪ್ರಾಪ್ನೋತಿ ಜನಕಾತ್ಮಜಾಂ । ಬದ್ಧಂ ಬಲವತಾ ವೈರಮಕ್ಷಯ್ಯಂ ರಾಘವೇಣಚ ‖ ೧೧-೧೨ ‖ ವೈದೇಹೀಂ ಪ್ರಾರ್ಥಯಾನಂ ತಂ ವಿರಾಧಂ ಪ್ರೇಕ್ಷ್ಯ ರಾಕ್ಷಸಂ । ಹತಮೇಕೇನ ರಾಮೇಣ ಪರ್ಯಾಪ್ತಂ ತನ್ನಿದರ್ಶನಂ ‖೧೩‖ ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ । ನಿಹತಾನಿ ಜನಸ್ಥಾನೇ ಶರೈರಗ್ನಿಶಿಖೋಪಮೈಃ ‖೧೪‖ ಖರಶ್ಚ ನಿಹತಸ್ಸಂಖ್ಯೇ ದೂಷಣಸ್ತ್ರಿಶಿರಾ

ಚಕಾರ - ಮಾಡಿದಳು. ‖ ೯ ‖ ತನ್ನಿಮಿತ್ತಂ - ಆ ಶೂರ್ಪಣಖಿಯು ನಿಮಿತ್ತವಾಗಿ, ಮಹತ್ - ದೊಡ್ಡದಾದ, ಇದಂವೈರಂ - ಈ ಶತ್ರುತ್ವವೂ, ರಾವಣೇನ - ರಾವಣನಿಂದ, ಕೃತಂ - ಮಾಡಲ್ಪಟ್ಟಿತು, ದಶಗ್ರೀವೇಣ - ದಶಕಂಠನಾದ, ರಕ್ಷಸಾ - ರಾಕ್ಷಸನಾದ ರಾವಣನಿಂದ, ವಧಾಯ - ತನ್ನ ಸಂಹಾರಕ್ಕಾಗಿ, ಸಾಸೀತಾ - ಆ ಸೀತಾದೇವಿಯು, ಆನೀತಾ - ತರಲ್ಪಟ್ಟಳು, ದಶಗ್ರೀವಃ - ರಾವಣನು, ಜನಕಾತ್ಮಜಾಂ-ಜನಕರಾಯನ ಮಗಳಾದ, ಸೀತಾಂ - ಸೀತಾದೇವಿಯನ್ನು, ನಪ್ರಾಪ್ನೋತಿ - ಹೊಂದುವುದಿಲ್ಲ, ಬಲವತಾ - ಬಲವಂತನಾದ, ರಾಘವೇಣಸಹ - ಶ್ರೀರಾಮನೊಡನೆ, ಅಕ್ಷಯ್ಯಂ - ಎಂದಿಗೂ ಸವೆಯದಿರುವ, ವೈರಂ - ದ್ವೇಷವು, ಬದ್ಧಂ - ಕಟ್ಟಲ್ಪಟ್ಟಿತು. ‖ ೧೧-೧೨ ‖ ವೈದೇಹೀಂ - ಸೀತಾದೇವಿಯನ್ನು, ಪ್ರಾರ್ಥಯಾನಂ - ಕೋರುತ್ತಿರುವ, ವಿರಾಧಂ - ವಿರಾಧನೆಂಬ, ರಾಕ್ಷಸಂ - ರಕ್ಕಸನನ್ನು, ಏಕೇನರಾಮೇಣ - ಒಬ್ಬ ರಾಮನಿಂದ, ಹತಂ - ಹೊಡೆಯಲ್ಪಟ್ಟವನನ್ನಾಗಿ, ಪ್ರೇಕ್ಷ್ಯ - ಕಂಡು, ಸ್ಥಿತಾನಾಂ - ಇರುವ ನಮಗೆ, ತತ್ - ಆ ವಿರಾಧನ ಸಂಹಾರವು, ಪರ್ಯಾಪ್ತಂ - ಸಂಪೂರ್ಣವಾದ, ನಿದರ್ಶನಂ - ದೃಷ್ಟಾಂತವಷ್ಟೆ. ‖ ೧೩ ‖ ಜನಸ್ಥಾನೇ - ಪಂಚವಟೀ ಎಂಬ ಉಕ್ಕಡದಲ್ಲಿ, ಭೀಮಕರ್ಮಣಾಂ - ಭಯಂಕರಗಳಾದ, ರಕ್ಷಸಾಂ - ರಕ್ಕಸರ, ಚತು....ಣಿ - ಹದಿನಾಲ್ಕುಸಾವಿರಗಳು, ಅಗ್ನಿ....ಮೈಃ - ಅಗ್ನಿಜ್ವಾಲೆಗೆ ಸಮಾನವಾದ, ಶರೈಃ - ಬಾಣಗಳಿಂದ, ನಿಹತಾನಿ - ಹೊಡೆಯಲ್ಪಟ್ಟವು. ‖ ೧೪ ‖ ಸಂಖ್ಯೇ - ಕಾಳೆಗದಲ್ಲಿ, ಖರಶ್ಚ - ಖರನೂ, ದೂಷಣಶ್ಚ - ದೂಷಣನೂ, ತಥಾ -

---

ಕ್ರಮವಂತರಾದ ಖರದೂಷಣರ ನಾಶಕ್ಕೋಸ್ಕರವೇ ಆ ರಾಮನನ್ನು ಕಾಮಿಸಿದಳು. ‖೬-೯‖ ಅದಾದ ಬಳಿಕ ನಮ್ಮ ಮಹಾರಾಜನಾದ ರಾವಣಾಸುರನು ಆ ರಾಮನೊಡನೆ ಭಯಂಕರವಾದ ವೈರವನ್ನು ಕಟ್ಟಿಕೊಂಡನು. ರಾವಣನು ತನ್ನ ತಂಗಿಯಾದ ಶೂರ್ಪಣಖಿಗಾಗಿಯೇ ಅಲ್ಲದೆ ತನ್ನ ಸರ್ವನಾಶಕ್ಕಾಗಿಯೂ ಸೀತಾದೇವಿಯನ್ನು ಕದ್ದು ತಂದನು. ಇವನು ಜನಕಚಕ್ರೇಶ್ವರನ ಪುತ್ರಿಯಾದ ಸೀತೆಯನ್ನೆಂದಿಗೂ ಹೊಂದಲಾರನು. ಪೂರ್ವದಲ್ಲಿ ಸೀತಾದೇವಿಯನ್ನು ಕಾಮಿಸಿದ ವಿರಾಧನೆಂಬ ರಾಕ್ಷಸಶ್ರೇಷ್ಠನನ್ನು ಶ್ರೀರಾಮನು ಒಂದೇ ಒಂದು ಬಾಣದಿಂದ ಖಂಡಿಸಿದುದನ್ನು ನೆನೆದರೆ ರಾವಣನು ಆ ಮಹಾತ್ಮನೊಡನೆ ವೈರವನ್ನು ಬೆಳಸಿದುದು ಕೇವಲ ಅನುಚಿತವೆಂದು ಕಂಡುಬರುತ್ತದೆ. ಅದನ್ನು ಸ್ಮರಿಸಿದರೇನೇ ಭಯದಿಂದ ನಡುಗುವಂತಾಗುತ್ತದೆ. ಇದೂ ಅಲ್ಲದೆ ಆ ರಾಮನು ಜನಸ್ಥಾನ ನಿವಾಸಿಗಳೂ, ಭಯಂಕರಕಾರ್ಯಗಳನ್ನು ಮಾಡುವುದರಲ್ಲಿ ನಿಷ್ಣಾತರಾದವರೂ ಆದ ಹದಿನಾಲ್ಕುಸಾವಿರ ರಾಕ್ಷಸವೀರರನ್ನೂ ಖರದೂಷಣರನ್ನೂ ತೀಕ್ಷ್ಣವಾದ ಬಾಣಗಳಿಂದ ಸಂಹರಿಸಿದನು. ಆತನು ಪ್ರಯೋಗಿಸಿದ ಬಾಣಗಳೆಲ್ಲವೂ ಸೂರ್ಯನಿಗೆ ಸಮಾನವಾಗಿ ಪ್ರಜ್ವಲಿಸುತ್ತಿದ್ದುವು.

ಸ್ತಥಾ । ಶರೈರಾದಿತ್ಯಸಂಕಾಶೈಃ ಪರ್ಯಾಪ್ತಂ ತನ್ನಿದರ್ಶನಂ ॥೧೫॥ ಹತೋ ಯೋಜನಬಾಹುಶ್ಚ ಕಬಂಧೋ ರುಧಿರಾಶನಃ । ಕ್ರೋಧಾನ್ನಾದಂ ನರ್ದ ಸೋಽಥ ಪರ್ಯಾಪ್ತಂ ತನ್ನಿದರ್ಶನಂ ॥೧೬॥ ಜಘಾನ ಬಲಿನಂ ರಾಮಸ್ಸಹಸ್ರನಯನಾತ್ಮಜಂ। ವಾಲಿನಂ ಮೇರುಸಂಕಾಶಂ ಪರ್ಯಾಪ್ತಂ ತನ್ನಿದರ್ಶನಂ ॥೧೭॥ ಋಶ್ಯಮೂಕೇ ವರ್ಸ ಶೈಲೇ ದೀನೋ ಭಗ್ನಮನೋರಥಃ । ಸುಗ್ರೀವಸ್ಸ್ಥಾಪಿತೋ ರಾಜ್ಯೇ ಪರ್ಯಾಪ್ತಂ ತನ್ನಿದರ್ಶನಂ ॥೧೮॥ ಧರ್ಮಾರ್ಥಸಹಿತಂ ವಾಕ್ಯಂ ಸರ್ವೇಷಾಂ ರಕ್ಷಸಾಂ ಹಿತಂ। ಯುಕ್ತಂ ವಿಭೀಷಣೇನೋಕ್ತಂ ಮೋಹಾತ್ತಸ್ಯ ನರೋಚತೇ ॥೧೯॥

ಹಾಗೆಯೇ, ತ್ರಿಶಿರಾಶ್ಚ - ತ್ರಿಶಿರಸ್ಕನೂ, ಆದಿತ್ಯಸಂಕಾಶೈಃ - ಸೂರ್ಯನಿಗೆ ಸಮಾನಗಳಾದ, ಶರೈಃ - ಬಾಣಗಳಿಂದ, ನಿಹತಾಇತಿಯತ್ - ಹೊಡೆಯಲ್ಪಟ್ಟರೆಂಬುದು ಯಾವುದೋ, ತತ್ - ಅದು, ಪರ್ಯಾಪ್ತಂ - ಸಂಪೂರ್ಣವಾದ, ನಿದರ್ಶನಂ - ದೃಷ್ಟಾಂತವು. ॥೧೫॥ ರುಧಿರಾಶನಃ - ರಕ್ತಪಾನ ಮಾಡುತ್ತಿದ್ದ, ಯೋಜನಬಾಹುಃ - ಒಂದು ಗಾವುದ ವಿಸ್ತಾರವಾದ ಭುಜಗಳುಳ್ಳ, ಕಬಂಧಃ - ಕಬಂಧನು, ಕ್ರೋಧಾತ್ - ಕೋಪದಿಂದ, ನಾದಂ - ಧ್ವನಿಯನ್ನು, ನರ್ದ - ಕೂಗುತ್ತ, ಸಃ - ಅವನು, ಅಥ ಬಳಿಕ, ಹತಇತಿಯತ್-ಹತನಾದನೆಂಬುದು ಯಾವುದುಂಟೋ, ತತ್-ಅದು, ಪರ್ಯಾಪ್ತಂ-ಸಂಪೂರ್ಣವಾದ, ನಿದರ್ಶನಂ - ದೃಷ್ಟಾಂತವು. ॥೧೬॥ ರಾಮಃ - ಶ್ರೀರಾಮನು, ಮೇರುಸಂಕಾಶಂ-ಮೇರುಪರ್ವತಕ್ಕೆ ಸಮಾನನಾದ, ಬಲಿನಂ - ಬಲವಂತನಾದ, ಸಹ....ಜಂ - ದೇವೇಂದ್ರನಿಗೆ ಪುತ್ರನಾದ, ವಾಲಿನಂ - ವಾಲಿಯನ್ನು, ಜಘಾನ - ಹೊಡೆದನು, ತತ್ - ಅದು, ಪರ್ಯಾಪ್ತಂ - ಸಂಪೂರ್ಣವಾದ, ನಿದರ್ಶನಂ - ದೃಷ್ಟಾಂತವು. ॥೧೭॥ ಋಶ್ಯಮೂಕೇಶೈಲೇ - ಋಶ್ಯಮೂಕಪರ್ವತದಲ್ಲಿ, ವರ್ಸ - ಇರುವ, ದೀನಃ - ದರಿದ್ರನಾದ, ಭಗ್ನಮನೋರಥಃ - ಭಗ್ನವಾದ ಸಂಕಲ್ಪವುಳ್ಳ, ಸುಗ್ರೀವಃ - ಸುಗ್ರೀವನು, ರಾಜ್ಯೇ-ರಾಜ್ಯದಲ್ಲಿ, ಸ್ಥಾಪಿತಃ - ಇರಿಸಲ್ಪಟ್ಟನು, ಪರ್ಯಾಪ್ತಂ-ಸಾಕಾದ, ನಿದರ್ಶನಂ-ದೃಷ್ಟಾಂತವು. ॥೧೮॥ ವಿಭೀಷಣೇನ - ವಿಭೀಷಣನಿಂದ, ಧರ್ಮಾ....ತಂ - ಧರ್ಮದಿಂದಲೂ, ಅರ್ಥದಿಂದಲೂ ಕೂಡಿರುವ, ಸರ್ವೇಷಾಂರಕ್ಷಸಾಂ - ಸಮಸ್ತ ರಾಕ್ಷಸರಿಗೂ, ಹಿತಂ - ಹಿತಕರವಾದ, ಯುಕ್ತಂ - ಯೋಗ್ಯವಾದ, ವಾಕ್ಯಂ - ವಾಕ್ಯವು, ಉಕ್ತಂ - ಹೇಳಲ್ಪಟ್ಟಿತು, ತತ್ - ಆ ಮಾತು,

---

ಇದೊಂದೇ ನಿದರ್ಶನವು, ರಾಮನು ತನ್ನ ವೈರಿಗಳನ್ನು ನಾಶಗೊಳಿಸುವನೆಂಬುದಕ್ಕೆ ಸಾಕಾಗಿರುವುದು. ॥೧೧-೧೫॥ ಯೋಜನಬಾಹುವಾದ ಕಬಂಧನೇ ಮೊದಲಾದ ರಾಕ್ಷಸರನ್ನೂ ಮಹಾವೀರನಾದ ಆ ರಾಮನು ಸಂಹರಿಸಿದನು. ಮಹಾನುಭಾವನಾದ ಆ ವೀರರಾಮನು ದೇವೇಂದ್ರನಿಗೆ ಮಗನಾಗಿ, ಮೇರುಪರ್ವತಕ್ಕೆ ಸಮಾನನೂ, ಮಹಾ ಬಲಾಢ್ಯನೂ ಆದ ವಾಲಿಯನ್ನು ಒಂದೇ ಬಾಣದಿಂದಲೇ ಸಂಹರಿಸಿದನು. ಅದಾದ ತರುವಾಯ ರಾಜ್ಯಭ್ರಷ್ಟನಾಗಿ ದೈನ್ಯದಿಂದ ದರಿದ್ರನಾಗಿ ಋಷ್ಯಮೂಕಪರ್ವತದಲ್ಲಿ ಅಡಗಿದ್ದ ಸುಗ್ರೀವನನ್ನು ವಾನರರಾಜ್ಯಾಧಿಪತಿಯನ್ನಾಗಿ ಮಾಡಿ ಅವನ ಕೋರಿಕೆಗಳೆಲ್ಲವನ್ನೂ ನೆರವೇರಿಸಿದನು. ಆ ರಾಮನು ವೈರಿಗಳನ್ನು ನಿರ್ಮೂಲಮಾಡುವನೆಂಬುದಕ್ಕೆ ಇದೊಂದೇ ನಿದರ್ಶನವು ಸಾಕಾಗಿರುವುದು. ಯಾರಿಂದಲೂ ಮಾಡಲಸಾಧ್ಯವಾದ ಈ ಅದ್ಭುತಕಾರ್ಯಗಳೆಲ್ಲವೂ ಶ್ರೀರಾಮನಿಗೆ ವಿಜಯವಾಗುವುದೆಂದೂ, ಆತನು ಅತುಲ ಪರಾಕ್ರಮಿಯೆಂದೂ ಸೂಚಿಸುತ್ತಿರುವುವು. ಇಷ್ಟುಮಾತ್ರವಲ್ಲದೆ ದುರಾತ್ಮನಾದ ರಾವಣಾಸುರನು ತನ್ನ ತಮ್ಮನಾದ ವಿಭೀಷಣನು ರಾಕ್ಷಸರೆಲ್ಲರಿಗೂ ಹಿತಕರವಾಗಿ

ವಿಭೀಷಣವಚಃ ಕುರ್ಯಾದ್ಯದಿ ಸ್ಮ ಧನದಾನುಜಃ । ಶ್ಮಶಾನಭೂತಾ ದುಃಖಾರ್ತಾ ನೇಯಂ ಲಂಕಾಪುರೀ ಭವೇತ್ ! ॥೨೦॥ ಕುಂಭಕರ್ಣಂ ಹತಂ ಶ್ರುತ್ವಾ ರಾಘವೇಣ ಮಹಾಬಲಂ । ಅತಿಕಾಯಂ ಚ ದುರ್ಧರ್ಷಂ ಲಕ್ಷ್ಮಣೇನ ಹತಂ ಪುನಃ । ಪ್ರಿಯಂ ಚೇಂದ್ರಜಿತಂ ಪುತ್ರಂ ರಾವಣೋ ನಾವಬುಧ್ಯತೇ ॥ ೨೧ ॥ "ಮಮ ಪುತ್ರೋ ಮಮ ಭ್ರಾತಾ ಮಮ ಭರ್ತಾ ರಣೇ ಹತಃ" । ಇತ್ಯೇವಂ ಶ್ರೂಯತೇ ಶಬ್ದೋ ರಾಕ್ಷಸಾನಾಂ ಕುಲೇ ಕುಲೇ ॥ ೨೨ ॥ ರಥಾಶ್ಚಾಶ್ವಾಶ್ಚ ನಾಗಾಶ್ಚ ಹತಾಃ ಶತಸಹಸ್ರಶಃ । ರಣೇ

ಮೋಹಾತ್ - ಅಜ್ಞಾನದಿಂದ, ತಸ್ಯ - ಆ ರಾವಣನಿಗೆ, ನರೋಚತೇಸ್ಮ - ಸಮ್ಮತವಲ್ಲದೇ ಹೋಯಿತು. ॥ ೧೯ ॥ ಧನದಾನುಜನಃ - ಕುಬೇರನಿಗೆ ತಮ್ಮನಾದ ರಾವಣನು, ವಿಭೀಷಣವಚಃ - ವಿಭೀಷಣನ ಮಾತನ್ನು, ಕುರ್ಯಾದ್ಯದಿ-ಮಾಡಿದವನೇ ಆಗಿದ್ದರೆ, ದುಃಖಾರ್ತಾ-ದುಃಖದಿಂದಾರ್ತವಾದ, ಇಯಂ ಲಂಕಾಪುರೀ - ಈ ಲಂಕಾಪಟ್ಟಣವು, ಶ್ಮಶಾನಭೂತಾ - ಶ್ಮಶಾನಸದೃಶವಾದದ್ದು, ನಭವೇತ್ - ಆಗದಿರುತ್ತಿದ್ದಿತು. ॥ ೨೦ ॥ ರಾವಣಃ - ರಾವಣನು, ಮಹಾಬಲಂ - ಬಹಳ ಬಲವಂತನಾದ, ಕುಂಭಕರ್ಣಂ - ಕುಂಭಕರ್ಣನನ್ನು, ರಾಘವೇಣ - ಶ್ರೀರಾಮನಿಂದ, ಹತಂ - ಸಂಹೃತನನ್ನಾಗಿಯೂ, ದುರ್ಧರ್ಷಂ - ತಿರಸ್ಕರಿಸಲಸಾಧ್ಯನಾದ, ಅತಿಕಾಯಂಚ - ಅತಿಕಾಯನನ್ನೂ, ಪುನಃ - ಮತ್ತೂ, ಪ್ರಿಯಂ - ಪ್ರೀತಿಪಾತ್ರನಾದ, ಪುತ್ರಂ - ಮಗನಾದ, ಇಂದ್ರಜಿತಂ - ಇಂದ್ರಜಿತುವನ್ನೂ, ಲಕ್ಷ್ಮಣೇನ - ಲಕ್ಷ್ಮಣನಿಂದ, ಹತಂ - ಹತನನ್ನಾಗಿಯೂ, ಶ್ರುತ್ವಾ - ಕೇಳಿಯೂ, ನಾವಬುಧ್ಯತೇ - (ಶ್ರೀರಾಮನ ಪ್ರಭಾವವನ್ನು) ತಿಳಿಯದೇಹೋದನು. ॥ ೨೧ ॥ ಮಮ - ನನ್ನ, ಪುತ್ರಃ - ಮಗನು, ಮಮ - ನನ್ನ, ಭ್ರಾತಾ - ಸಹೋದರನು, ಮಮ - ನನ್ನ, ಭರ್ತಾ - ಗಂಡನು, ರಣೇ - ಕಾಳಗದಲ್ಲಿ, ಹತಃ - ಹತನಾದನು, ಇತ್ಯೇವಂ - ಈ ಪರಿಯಾಗಿಯೇ, ರಾಕ್ಷಸಾನಾಂ - ರಕ್ಕಸರ, ಶಬ್ದಃ - ದೀನಧ್ವನಿಯು, ಕುಲೇಕುಲೇ - ಮನೆಮನೆಯಲ್ಲಿಯೂ, ಶ್ರೂಯತೇ - ಕೇಳಲ್ಪಡುತ್ತದೆ. ॥ ೨೨ ॥ ರಥಾಶ್ಚ - ರಥಗಳೂ, ಅಶ್ವಾಶ್ಚ - ಕುದುರೆಗಳೂ, ನಾಗಾಶ್ಚ - ಆನೆಗಳೂ, ಶತಸಹಸ್ರಶಃ - ನೂರಾರು ಲಕ್ಷಗಳಷ್ಟು, ಪದಾತಯಃ-ಕಾಲಾಳುಗಳಾದ, ರಾಕ್ಷಸಾಶ್ಚ-ರಕ್ಕಸರೂ, ರಣೇ-ಕಾಳಗದಲ್ಲಿ, ಶೂರೇಣ-

ಹೇಳಿದ ಮಾತುಗಳನ್ನು ಕೇಳದೆ ಅಲ್ಲಗಳಿದನು. ಕುಬೇರಾನುಜನಾದ ಆ ರಾವಣಾಸುರನು ಧರ್ಮಾತ್ಮನಾದ ವಿಭೀಷಣನ ಮಾತುಗಳನ್ನು ಕೇಳಿದ್ದರೆ ನಮ್ಮ ಲಂಕಾನಗರಕ್ಕೆ ಈ ದುರ್ದಶೆಯೆಂದಿಗೂ ಬರುತ್ತಿರಲಿಲ್ಲವು. ಈ ನಗರವು ಈಗಿರುವಂತೆ, ಸ್ಮಶಾನ ಸದೃಶವಾಗಿ, ಎಲ್ಲೆಲ್ಲಿಯೂ ಅಳುವಿನ ದನಿಯೇ ತುಂಬಿ, ನೋಡಲು ಭಯಂಕರವಾಗಿರುತ್ತಿರಲಿಲ್ಲವು. ಅಯ್ಯೋ! ನಾವೇನುತಾನೆ ಮಾಡಲಾದೀತು! ಮಹಾ ಪರಾಕ್ರಮಿಯಾದ ಕುಂಭಕರ್ಣನು ಆ ರಾಮನಿಂದಲೇ ಮೃತಿಯೊಂದಿದನು. ಆ ರಾಮನ ತಮ್ಮನಾದ ಲಕ್ಷ್ಮಣನು ಮಹಾ ಬಲಾಢ್ಯನಾದ ಅತಿಕಾಯನನ್ನು ಕೊಂದನು. ಇದೂ ಅಲ್ಲದೆ ಅವನೇ ನಮ್ಮೊಡೆಯನ ಮುದ್ದು ಮಗನಾದ ಇಂದ್ರಜಿತುವನ್ನೂ ಸಂಹರಿಸಿದನು. ಇಷ್ಟಾದರೂ ನಮ್ಮೊಡೆಯನು ಎಚ್ಚೆತ್ತುಕೊಳ್ಳದಿದ್ದಾನೆಯಲ್ಲವೆ! ॥ ೧೬–೨೧ ॥ ಈಗಲಾದರೋ ಲಂಕಾನಗರದಲ್ಲಿ "ನಮ್ಮ ಮಗನು ಮಡಿದನು. ನಮ್ಮಣ್ಣನು ಸತ್ತನು. ಅಯ್ಯೋ! ಯುದ್ಧಭೂಮಿಯಲ್ಲಿ ನನ್ನ ಭರ್ತನು ಗತಿಸಿದನು" ಎಂಬ ಹಾಳು ಕೂಗುಗಳೇ ಮನೆಮನೆಯಲ್ಲಿಯೂ ಕೇಳಿ ಬರುತ್ತಿವೆ. ಇಷ್ಟುಮಾತ್ರವಲ್ಲದೆ ಶೂರನಾದ ಶ್ರೀರಾಮನ ಕೂರಂಬುಗಳಿಂದ ರಥ, ತುರಗ, ಗಜ, ಪದಾತಿಗಳ ಅನೇಕ ಲಕ್ಷ

ರಾಮೇಣ ಶೂರೇಣ ರಾಕ್ಷಸಾಶ್ಚ ಪದಾತಯಃ ॥ ೨೩ ॥ ರುದ್ರೋವಾ ಯದಿವಾ ವಿಷ್ಣುರ್ಮಹೇಂದ್ರೋವಾ ಶತಕ್ರತುಃ । ಹಂತಿ ನೋ ರಾಮರೂಪೇಣ ಯದಿ ವಾ ಸ್ವಯಮಂತಕಃ ॥ ೨೪ ॥ ಹತಪ್ರವೀರಾ ರಾಮೇಣ ನಿರಾಶಾ ಜೀವಿತೇ ವಯಂ । ಅಪಶ್ಯಂತೋ ಭಯಸ್ಯಾಂತಮನಾಥಾ ವಿಲಪಾಮಹೇ ! ॥ ೨೫ ॥ ರಾಮಹಸ್ತಾದ್ದಶಗ್ರೀವಃ ಶೂರೋ ದತ್ತಮಹಾವರಃ । ಇದಂ ಭಯಂ ಮಹಾಘೋರಮುತ್ಪನ್ನಂ ನಾವಬುಧ್ಯತೇ ॥ ೨೬ ॥ ನದೇವಾ ನಚ ಗಂಧರ್ವಾ ನಪಿಶಾಚಾ ನರಾಕ್ಷಸಾಃ । ಉಪಸೃಷ್ಟಂ ಪರಿತ್ರಾತುಂ ಶಕ್ತಾ ರಾಮೇಣ ಸಂಯುಗೇ ॥ ೨೭ ॥ ಉತ್ಪಾತಾಶ್ಚಾಪಿ

ಶೂರನಾದ, ರಾಮೇಣ - ಶ್ರೀರಾಮನಿಂದ, ಹತಾಃ - ಹೊಡೆಯಲ್ಪಟ್ಟರು. ॥ ೨೩ ॥ ರುದ್ರೋವಾ - ರುದ್ರನೋ, ಯದಿವಾ - ಹಾಗಲ್ಲದಿದ್ದರೆ, ವಿಷ್ಣುಃ - ವಿಷ್ಣುವೋ, ಶತಕ್ರತುಃ - ನೂರು ಅಶ್ವಮೇಧಗಳನ್ನು ಮಾಡಿರುವ, ಮಹೇಂದ್ರೋವಾ - ದೇವೇಂದ್ರನೋ, ಯದಿವಾ - ಹಾಗಲ್ಲದಿದ್ದರೆ, ಅಂತಕಃ- ಯಮನೋ, ಸ್ವಯಂ - ತಾನೇ, ರಾಮರೂಪೇಣ - ಶ್ರೀರಾಮರೂಪದಿಂದ, ನಃ - ನಮ್ಮನ್ನು, ಹಂತಿ - ಸಂಹರಿಸುತ್ತಾನೆ. ॥ ೨೪ ॥ ರಾಮೇಣ - ಶ್ರೀರಾಮನಿಂದ, ಹತಪ್ರವೀರಾಃ - ಹೊಡೆಯಲ್ಪಟ್ಟ ಶೂರರುಳ್ಳ, ವಯಂ - ನಾವು, ಜೀವಿತೇ - ಬದುಕಿನಲ್ಲಿ, ನಿರಾಶಾಃ - ಆಶೆಯಿಲ್ಲದವರಾಗಿ, ಭಯಸ್ಯ - ಭಯದ, ಅಂತಂ - ತುದಿಯನ್ನು, ಅಪಶ್ಯಂತಃ - ಕಾಣದೆ, ಅನಾಥಾಃ - ಪಾಲಕನಿಲ್ಲದವರಾಗಿ, ವಿಲಪಾಮಹೇ - ಪ್ರಲಾಪ ಮಾಡುತ್ತಿದ್ದೇವೆ, ಶೂರಃ - ಶೂರನಾದ, ದತ್ತ....ರಃ - ಕೊಡಲ್ಪಟ್ಟ ಬ್ರಹ್ಮವರವುಳ್ಳ, ದಶಗ್ರೀವಃ - ರಾವಣನು, ರಾಮಹಸ್ತಾತ್ - ಶ್ರೀರಾಮನ ಕೈಯಿಂದ, ಉತ್ಪನ್ನಂ - ಹುಟ್ಟಿರುವ, ಮಹಾಘೋರಂ-ಬಹಳ ಭಯಂಕರವಾದ, ಇದಂಭಯಂ-ಈ ಭಯವನ್ನು, ನಾವಬುಧ್ಯತೇ- ತಿಳಿಯದೇ ಹೋದನು. ॥೨೫-೨೬॥ ಸಂಯುಗೇ - ಕಾಳಿಗದಲ್ಲಿ, ರಾಮೇಣ - ಶ್ರೀರಾಮನಿಂದ, ಉಪಸೃಷ್ಟಂ - ಉಪದ್ರವಗೊಳಿಸಲ್ಪಟ್ಟ ಪುರುಷನನ್ನು, ಪರಿತ್ರಾತುಂ-ಸಂರಕ್ಷಿಸುವದಕ್ಕೆ, ದೇವಾಃ - ದೇವತೆಗಳು, ನಶಕ್ತಾಃ - ಸಮರ್ಥರಲ್ಲ, ಗಂಧರ್ವಾಃ - ಗಂಧರ್ವರೂ, ನಶಕ್ತಾಃ - ಸಮರ್ಥರಲ್ಲ, ಪಿಶಾಚಾಃ- ಪಿಶಾಚಗಳು, ನ - ಸಮರ್ಥರಲ್ಲ, ರಾಕ್ಷಸಾಶ್ಚ - ರಕ್ಷಸರೂ, ನ - ಸಮರ್ಥರಲ್ಲ. ॥ ೨೭ ॥ ರಣೇರಣೇ- ಕಾಳಿಗಕಾಳಿಗದಲ್ಲಿಯೂ, ರಾಮೇಣ - ಶ್ರೀರಾಮನಿಂದ, ರಾವಣಸ್ಯ - ರಾವಣನಿಗೆ, ಉತ್ಪಾತಾಶ್ಚಾಪಿ - ದುರ್ನಿಮಿತ್ತಗಳೂ, ದೃಶ್ಯಂತೇ - ಕಾಣಲ್ಪಡುತ್ತವೆ, ರಾಮೇಣ - ಶ್ರೀರಾಮನಿಂದ, ರಾವಣಸ್ಯ -

---

ಗಳು ನಾಶವಾಗಿ ಹೋದುವು. ರುದ್ರನೋ, ವಿಷ್ಣುವೋ, ದೇವೇಂದ್ರನೋ, ಯಮನೋ, ರಾಮರೂಪವನ್ನವಲಂಬಿಸಿ ನಮ್ಮೆಲ್ಲರನ್ನೂ ಕೊಲ್ಲುತ್ತಿದ್ದಾನೆಯೆಂದು ತೋರುತ್ತಿರುವುದು. ಲಂಕಾನಿವಾಸಿಗಳಾದ ವೀರರೆಲ್ಲರೂ ಆ ರಾಮನಿಂದ ಹತರಾಗಿ ಹೋದರು. ಅವನಿಂದಲೇ ನಮಗಿಂತಹ ಆಪತ್ತು ಒದಗಿಬಿಟ್ಟಿತು. ಇನ್ನು ನಾವು ಬದುಕಲು ಸಾಧ್ಯವಾದೀತೇ? ಈ ಭಯನಿವಾರಣೆಗೆ ದಾರಿಯೇ ತೋರದೆ ನಾವೆಲ್ಲರೂ ಗೋಳಾಡುವ ಗತಿ ಬಂದಿತು. ॥೨೧-೨೫॥ ಅಯ್ಯೋ! ರಾಮನಿಂದಲೇ ಇಂತಹ ವಿಪತ್ತು ಬಂದಿತೆಂದು ತಿಳಿದೂ ನಮ್ಮ ರಾವಣನು ಏನೂ ತಿಳಿಯದಂತಿದ್ದಾನೆಯಲ್ಲವೆ! ನಾವೇನುತಾನೆ ಮಾಡಲಾದೀತು! ರಣಾಂಗಣದಲ್ಲಿ ರಾಮನ ಕೈಗೆ ಸಿಕ್ಕಿಕೊಂಡವನನ್ನು ಕಾಪಾಡಲು ದೇವ, ಗಂಧರ್ವ, ಪಿಶಾಚ, ರಾಕ್ಷಸರಾದಿಯಾಗಿ ಯಾರಿಂದಲೂ ಸಾಧ್ಯವಾಗುವುದಿಲ್ಲವು. ಇದೂ ಅಲ್ಲದೆ ಈ ಯುದ್ಧದಲ್ಲಿ ರಾಮನಿಗೆ ವಿಜಯವನ್ನೂ, ರಾವಣನಿಗೆ ಅಪಜಯವನ್ನೂ ಸೂಚಿಸುವಂತಹ ಉತ್ಪಾತಗಳನೇಕವಾಗಿ

ದೃಶ್ಯಂತೇ ರಾವಣಸ್ಯ ರಣೇ ರಣೇ । ಕಥಯಿಷ್ಯಂತಿ ರಾಮೇಣ ರಾವಣಸ್ಯ ನಿಬರ್ಹಣಂ ॥೨೮॥ ಪಿತಾಮಹೇನ ಪ್ರೀತೇನ ದೇವದಾನವರಾಕ್ಷಸೈಃ । ರಾವಣಸ್ಯಾಭಯಂ ದತ್ತಂ ಮಾನುಷೇಭ್ಯೋ ನಯಾಚಿತಂ ॥ ೨೯ ॥ ತದಿದಂ ಮಾನುಷಂ ಮನ್ಯೇ ಪ್ರಾಪ್ತಂ ನಿಸ್ಸಂಶಯಂ ಭಯಂ । ಜೀವಿತಾಂತಕರಂ ಘೋರಂ ರಕ್ಷಸಾಂ ರಾವಣಸ್ಯಚ ॥೩೦॥ ಪೀಡ್ಯಮಾನಾಸ್ತು ಬಲಿನಾ ವರದಾನೇನ ರಕ್ಷಸಾ । ದೀಪ್ತೈಸ್ತಪೋಭಿರ್ವಿಬುಧಾಃ ಪಿತಾಮಹಮಪೂಜಯನ್ ॥ ೩೧ ॥ ದೇವತಾನಾಂ ಹಿತಾರ್ಥಾಯ ಮಹಾತ್ಮಾ ವೈ ಪಿತಾಮಹಃ । ಉವಾಚ ದೇವತಾಸ್ಸರ್ವಾ ಇದಂ ತುಷ್ಟೋ ಮಹದ್ವಚಃ ॥ ೩೨ ॥

ರಾವಣನ, ನಿಬರ್ಹಣಂ - ಸಂಹಾರವನ್ನು, ಕಥಯಿಷ್ಯಂತಿ - ಹೇಳುತ್ತಲಿವೆ. ॥ ೨೮ ॥ ಪ್ರೀತೇನ - ಸಂತುಷ್ಟನಾದ, ಪಿತಾಮಹೇನ - ಬ್ರಹ್ಮನಿಂದ, ದೇವ....ಸೈಃ - ದೇವತೆಗಳ ದೆಸೆಯಿಂದಲೂ, ದಾನವರ ದೆಸೆಯಿದಲೂ, ರಾಕ್ಷಸರ ದೆಸೆಯಿಂದಲೂ, ರಾವಣಸ್ಯ - ರಾವಣನಿಗೆ, ಅಭಯಂ - ಅಭಯವು, ದತ್ತಂ - ಕೊಡಲ್ಪಟ್ಟತು, ಮಾನುಷೇಭ್ಯಃ - ಮನುಷ್ಯರ ದೆಸೆಯಿಂದ, ಅಭಯಂ - ಅಭಯವು, ನಯಾಚಿತಂ - ಯಾಚಿಸಲ್ಪಡಲಿಲ್ಲ. ॥ ೨೯ ॥ ತತ್ - ಆ ಕಾರಣದಿಂದ, ರಕ್ಷಸಾಂ - ರಕ್ಕಸರಿಗೂ, ರಾವಣಸ್ಯಚ - ರಾವಣನಿಗೂ, ಘೋರಂ - ಭಯಂಕರವಾದ, ಜೀವಿತಾಂತಕರಂ - ಪ್ರಾಣಗಳನ್ನು ಹೋಗಲಾಡಿಸುತ್ತಿರುವ, ಮಾನುಷಂ - ಮನುಷ್ಯನಿಂದ ಬಂದಿರುವ, ಇದಂಭಯಂ - ಈ ಭಯವನ್ನು, ನಿಸ್ಸಂಶಯಂ - ನಿಸ್ಸಂಶಯವಾಗಿ, ಪ್ರಾಪ್ತಂ - ಬಂದದ್ದನ್ನಾಗಿ, ಮನ್ಯೇ - ತಿಳಿದಿದ್ದೇನೆ. ॥ ೩೦ ॥ ವರದಾನೇನ - ವರಪ್ರದಾನದಿಂದ, ಬಲಿನಾ - ಬಲಿಷ್ಠನಾದ, ರಕ್ಷಸಾ - ರಾವಣನಿಂದ, ಪೀಡ್ಯಮಾನಾಃ - ಬಾಧಿಸಲ್ಪಡುತ್ತಿರುವ, ವಿಬುಧಾಃ - ದೇವತೆಗಳು, ದೀಪ್ತೈಃ - ಘೋರವಾದ, ತಪೋಭಿಃ - ತಪಸ್ಸುಗಳಿಂದ, ಪಿತಾಮಹಂ - ಬ್ರಹ್ಮದೇವರನ್ನು, ಅಪೂಜಯನ್ - ಪೂಜೆ ಮಾಡಿದರು. ॥ ೩೧ ॥ ಮಹಾತ್ಮಾ - ಮಹಾ ಬುದ್ಧಿಶಾಲಿಯಾದ, ಪಿತಾಮಹಃ - ಬ್ರಹ್ಮದೇವನು, ತುಷ್ಟಃ - ಸಂತುಷ್ಟನಾಗಿ, ದೇವತಾನಾಂ - ದೇವತೆಗಳಿಗೆ, ಹಿತಾರ್ಥಾಯ - ಕ್ಷೇಮಕ್ಕೋಸ್ಕರ, ಸರ್ವಾಃ - ಸಮಸ್ತರಾದ, ದೇವತಾಃ - ದೇವತೆಗಳನ್ನು ಕುರಿತು, ಮಹತ್ - ಮಹಾರ್ಥಗರ್ಭಿತವಾದ, ಇದಂವಚಃ - ಈ ಮಾತನ್ನು, ಉವಾಚ - ಹೇಳಿದನು. ॥ ೩೨ ॥ ಅದ್ಯಪ್ರಭೃತಿ - ಈ ಮೊದಲುಗೊಂಡು, ಸರ್ವೇ - ಸಮಸ್ತರಾದ, ದಾನವರಾಕ್ಷಸಾಃ - ದಾನವರೂ ಮತ್ತು ರಕ್ಕಸರೂ, ಭಯೇನ - ಭಯದಿಂದ,

---

ತಲೆದೋರುತ್ತಿರುವುವು. ಈ ರಾವಣಾಸುರನು ಪೂರ್ವದಲ್ಲಿ ಘೋರವಾದ ತಪಸ್ಸನ್ನು ಮಾಡಿ ದೇವದಾನವ ರಾಕ್ಷಸರಿಂದ ಮರಣ ಸಂಭವಿಸದಂತೆ ಬ್ರಹ್ಮದೇವನನ್ನು ಸಂತೋಷಗೊಳಿಸಿ ವರಗಳನ್ನು ಪಡೆದನಾಗಲಿ ಮಾನವರಿಂದ ಮರಣವಾಗದಂತೆ ವರವನ್ನು ಪಡೆಯಲಿಲ್ಲವು. ಆದರಿಂದಲೇ ಮಾನವನಾದ ಈ ರಾಮನಿಂದ ಪ್ರಾಣಾಂತಕರವೂ, ಘೋರವೂ ಆದ ಭಯವು ರಾವಣನಿಗೂ, ಸಮಸ್ತ ರಾಕ್ಷಸರಿಗೂ ಅಡಸಿ ಬಂದಿತೆಂದು ತೋರುತ್ತದೆ. ॥ ೨೬-೩೦ ॥ ಇದರಿಂದ ಇನ್ನೂ ಅನೇಕ ರಾಕ್ಷಸವೀರರರು ನಾಶವಾಗುವರೆಂದು ತೋರುತ್ತಿರುವುದು. ಪೂರ್ವದಲ್ಲಿ ಈ ರಾವಣಾಸುರನಿಂದ ಸಮಸ್ತ ಲೋಕಗಳ ಪ್ರಜೆಗಳೂ, ಪೀಡೆಗೊಳಗಾದರು. ಆಗ ಮುನಿಸತ್ತಮರು ಮೊದಲಾಗಿ ದೇವತೆಗಳೆಲ್ಲರೂ ಮಹಾ ಭಯಂಕರವಾದ ತಪಸ್ಸಿನಿಂದ ಸರ್ವಲೋಕ ಪಿತಾಮಹನಾದ ಬಹ್ಮದೇವನನ್ನು ಪೂಜಿಸಿದರು. ಆಗ ಮಹಾತ್ಮನಾದ ಕಮಲಾಸನನು ದೇವತೆಗಳಿಗೆ ಹಿತವನ್ನು ಕೋರಿ ಅವರನ್ನು ಕುರಿತು, "ಎಲೈ

" ಅದ್ಯ ಪ್ರಭೃತಿ ಲೋಕಾಂಸ್ತ್ರೀನ್ ಸರ್ವೇ ದಾನವರಾಕ್ಷಸಾಃ । ಭಯೇನ ಪ್ರಾವೃತಾ ನಿತ್ಯಂ ವಿಚರಿಷ್ಯಂತಿ ಶಾಶ್ವತಂ " ॥ ೩೩ ॥ ದೈವತೈಸ್ತು ಸಮಾಗಮ್ಯ ಸರ್ವೈಶ್ಚೇಂದ್ರ ಪುರೋಗಮೈಃ । ವೃಷಧ್ವಜಸ್ತ್ರಿಪುರಹಾ ಮಹಾದೇವಃ ಪ್ರಸಾದಿತಃ ॥ ೩೪ ॥ ಪ್ರಸ ನ್ನಸ್ತು ಮಹಾದೇವೋ ದೇವಾನೇತದ್ವಚೋಽಬ್ರವೀತ್ । " ಉತ್ಪತ್ಸ್ಯತಿ ಹಿತಾರ್ಥಂ ವೋ ನಾರೀ ರಕ್ಷಃ ಕ್ಷಯಾವಹಾ " ॥೩೫॥ ಏಷಾ ದೇವೈಃ ಪ್ರಯುಕ್ತಾ ತು ಕ್ಷುದ್ಯಥಾ ದಾನವಾನ್ ಪುರಾ । ಭಕ್ಷಯಿಷ್ಯತಿ ನಸ್ಸೀತಾ ರಾಕ್ಷಸಘ್ನೀ ಸರಾವಣಾನ್ ॥ ೩೬ ॥ ರಾವಣಸ್ಯಾಪನೀತೇನ ದುರ್ವಿನೀತಸ್ಯ ದುರ್ಮತೇಃ । ಅಯಂ ನಿಷ್ಠಾನಕೋ ಘೋರಃ ಶೋಕೇನ ಸಮಭಿಪ್ಲುತಃ ॥ ೩೭ ॥ ತಂ ನ ಪಶ್ಯಾಮಹೇ ಲೋಕೇ ಯೋ ನಃ ಶರ

ಪ್ರಾವೃತಾಃ - ಆವೃತವಾಗಿ, ತ್ರೀನ್‌ಲೋಕಾನ್ - ಮೂರು ಲೋಕಗಳಲ್ಲಿಯೂ, ಶಾಶ್ವತಂ - ಸ್ಥಿರವಾಗಿ, ನಿತ್ಯಂ - ನಿರಂತರವೂ, ವಿಚರಿಷ್ಯಂತಿ - ಸಂಚರಿಸುವರು. ॥ ೩೩ ॥ ಇಂದ್ರ....ಮೈಃ - ದೇವೇಂದ್ರನೇ ಮೊದಲಾದ, ಸರ್ವೈರ್ದೈವತೈಸ್ತು - ಸಮಸ್ತರಾದ ದೇವರ್ಕಗಳಿಂದಲಾದರೆ, ಸಮಾಗಮ್ಯ - ಸೇರಿ, ತ್ರಿಪುರಹಾ - ತ್ರಿಪುರಾಸುರ ಸಂಹಾರಕನಾದ, ವೃಷಧ್ವಜಃ - ವೃಷಭವಾಹನನಾದ, ಮಹಾದೇವಃ - ಪರಮೇಶ್ವರನು, ಪ್ರಸಾದಿತಃ - ಪ್ರಸನ್ನನಾಗಿ ಮಾಡಿಕೊಳ್ಳಲ್ಪಟ್ಟನು. ॥ ೩೪ ॥ ಪ್ರಸನ್ನಃ - ಪ್ರಸನ್ನ ನಾದ, ಮಹಾದೇವಃ - ಈಶ್ವರನು, ದೇವಾನ್ - ದೇವತೆಗಳನ್ನುಕುರಿತು, ವಃ - ನಿಮಗೆ, ಹಿತಾರ್ಥಂ - ಹಿತ ಮಾಡುವ ನಿಮಿತ್ತವಾಗಿ, ರಕ್ಷಃಕ್ಷಯಾವಹಾ - ರಾಕ್ಷಸರಿಗೆಲ್ಲಾ ನಾಶಕಳಾದ, ನಾರೀ - ಹೆಂಗಸು, ಉತ್ಪತ್ಸ್ಯತಿ - ಹುಟ್ಟುತ್ತಾಳೆ, ಇತಿ - ಇಂತೆಂದು, ವಚಃ - ಮಾತನ್ನು, ಅಬ್ರವೀತ್ - ನುಡಿದನು, ಪುರಾ - ಪೂರ್ವದಲ್ಲಿ, ದೇವೈಃ - ದೇವತೆಗಳಿಂದ, ಪ್ರಯುಕ್ತಾ - ಪ್ರಯೋಗಿಸಲ್ಪಟ್ಟ, ಕ್ಷುತ್ - ಹಸಿವು, ಯಥಾ - ಹೇಗೆ, ದಾನವಾನ್ - ದಾನವರನ್ನು, ಅಭಕ್ಷಯತ್ - ನುಂಗಿತೋ, ತಥಾ - ಹಾಗೆಯೇ, ಏಷಾ - ಈ, ಸೀತಾ - ಸೀತಾದೇವಿಯು, ರಾಕ್ಷಸಘ್ನೀ - ರಾಕ್ಷಸರನ್ನು ಹೊಡೆಯುವವಳಾಗಿ, ಸರಾವಣಾನ್ - ರಾವಣನಿಂದೊಡಗೂಡಿದ, ನಃ - ನಮ್ಮನ್ನು, ಭಕ್ಷಯಿಷ್ಯತಿ - ತಿನ್ನುವಳು. ॥೩೫-೩೬॥ ದುರ್ವಿನೀತಸ್ಯ - ಧೂರ್ತನಾದ, ದುರ್ಮತೇಃ - ದುರ್ಬುದ್ಧಿಯುಳ್ಳ, ರಾವಣಸ್ಯ - ರಾವಣನ, ಅಪನೀತೇನ - ದುರ್ವ್ಯಾಪಾರದಿಂದ, ಶೋಕೇನ - ವ್ಯಸನದಿಂದ, ಸಮಭಿಪ್ಲುತಃ - ಕೂಡಿರುವ, ಘೋರಃ-ಭಯಂಕರವಾದ, ಅಯಂನಿಷ್ಠಾನಕಃ - ಈ ಸರ್ವನಾಶವು, ಪ್ರಾಪ್ತಃ-ಸಂಭವಿಸಿತು. ॥೩೭॥

ದೇವತೆಗಳಿರಾ ಮತ್ತು ಮುನಿಗಳಿರಾ ! ನೀವೆಲ್ಲರೂ ಸಂತೋಷದಿಂದಿರಿ. ಇದು ಮೊದಲು ಗೊಂಡು ಮೂರು ಲೋಕಗಳಲ್ಲಿ ದಾನವರಾಕ್ಷಸರೆಲ್ಲರೂ ಭಯಾವಿಷ್ಟರಾಗಿಯೇ ಸಂಚ ರಿಸುತ್ತಾರೆ " ಎಂದು ಹೇಳಿದನು. ಇದು ಮಾತ್ರವಲ್ಲದೆ ಮಹೇಂದ್ರಾದಿ ದೇವತೆಗಳೊಡ ಗೂಡಿದ ಪರಮೇಶ್ವರನೂ, ದೇವತೆಗಳೆಲ್ಲರಿಂದ ಸಂಪ್ರಾರ್ಥಿತನಾಗಿ ಪ್ರಸನ್ನ ವಾಣಿಯಿಂದ " ಅಯ್ಯಾ ದೇವೋತ್ತಮರಿರಾ ! ನೀವೆಲ್ಲರೂ ಇನ್ನುಮೇಲೆ, ರಾವಣಾಸುರನಿಂದುಂಟಾಗಿರುವ ಈ ಮಹಾ ಭಯವನ್ನು ತೊರೆಯಿರಿ. ಬಹು ಜಾಗ್ರತೆಯಾಗಿಯೇ ರಾಕ್ಷಸರೆಲ್ಲರನ್ನೂ ನಾಶ ಗೊಳಿಸುವ ಮಹಾ ಸಾಮರ್ಥ್ಯವುಳ್ಳ ಸ್ತ್ರೀಯು ಭೂಲೋಕದಲ್ಲಿ ಜನಿಸುತ್ತಾಳೆ " ಎಂದು ಹೇಳಿದನು. ॥ ೩೧–೩೫ ॥ ಅಕಟಕಟಾ ! ಪೂರ್ವದಲ್ಲಿ ರಾಕ್ಷಸರೆಲ್ಲರನ್ನೂ ನಾಶಗೊಳಿಸಲು ದೇವತೆಗಳು ಕಳುಹಿಸಿದ ಕ್ಷುಧೆಯಂತೆ ಈ ರಾಕ್ಷಸ ಘಾತುಕಿಯಾದ ಸೀತೆಯು ರಾವಣ ನೊಡಗೂಡಿದ ರಾಕ್ಷಸರೆಲ್ಲರನ್ನೂ ನುಂಗುವಳು. ಅಯ್ಯೋ ! ದುರಾಚಾರಿಯೂ, ದುರ್ಬು ದ್ಧಿಯೂ ಆದ ರಾವಣಾಸುರನ ದೆಸೆಯಿಂದ ನಮ್ಮೆಲ್ಲರಿಗೂ ಇಂತಹ ಆಪತ್ತು ಸಂಭವಿ

ಣದೋ ಭವೇತ್ । ರಾಘವೇಣೋಪಸೃಷ್ಟಾನಾಂ ಕಾಲೇನೇವ ಯುಗಕ್ಷಯೇ ॥೩೮॥
ನಾಸ್ತಿ ನಃ ಶರಣಂ ಕಶ್ಚಿದ್ಭಯೇ ಮಹತಿ ತಿಷ್ಠತಾಂ । ದವಾಗ್ನಿವೇಷ್ಟಿತಾನಾಂಹಿ ಕರೇಣೂನಾಂ ಯಥಾ ವನೇ ॥ ೩೯ ॥ ಪ್ರಾಪ್ತಕಾಲಂ ಕೃತಂ ತೇನ ಪೌಲಸ್ತ್ಯೇನ ಮಹಾತ್ಮನಾ । ಯತ ಏವ ಭಯಂ ದೃಷ್ಟಂ ತಮೇವ ಶರಣಂ ಗತಃ" ॥ ೪೦ ॥
ಇತೀವ ಸರ್ವಾ ರಜನೀಚರಸ್ತ್ರಿಯಃ ಪರಸ್ಪರಂ ಸಂಪರಿರಭ್ಯ ಬಾಹುಭಿಃ ।
ವಿಷೇದುರಾರ್ತಾ ಭಯಭಾರಪೀಡಿತಾ ವಿನೇದುರುಚ್ಚೈಶ್ಚ ತದಾ ಸುದಾರುಣಂ ॥೪೧॥
ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚನವತಿತಮಸ್ಸರ್ಗಃ

ಯಃ - ಯಾವ ಪುರುಷನು, ಲೋಕೇ - ಲೋಕದಲ್ಲಿ, ರಾಘವೇಣ - ಶ್ರೀರಾಮನಿಂದ, ಯುಗಕ್ಷಯೇ-ಪ್ರಳಯಕಾಲದಲ್ಲಿ, ಕಾಲೇನೇವ - ಯಮನಿಂದಲಂತೆ, ಉಪಸೃಷ್ಟಾನಾಂ - ಹಿಂಸೆ ಮಾಡಲ್ಪಟ್ಟ, ನಃ - ನಮಗೆ, ಶರಣಃ - ರಕ್ಷಕನು, ಭವೇತ್ - ಆಗುವನೋ, ತಂ - ಅಂಥಾ ಪುರುಷನನ್ನು, ಲೋಕೇ - ಲೋಕದಲ್ಲಿ, ನಪಶ್ಯಾಮಹೇ - ಕಾಣೆವು. ॥ ೩೮ ॥ ಮಹತಿಭಯೇ - ಮಹಾಭಯದಲ್ಲಿ, ತಿಷ್ಠತಾಂ - ಇರುವ, ನಃ - ನಮಗೆ, ವನೇ - ಅರಣ್ಯದಲ್ಲಿ, ದವಾ....ನಾಂ - ಕಾಳ್ಗಿಚ್ಚಿನಿಂದ ಸುತ್ತುವರೆದ, ಕರೇಣೂನಾಂಯಥಾ - ಹೆಣ್ಣಾನೆಗಳಗೆಂತೋ ಅಂತು, ಕಶ್ಚಿತ್ - ಯಾವನೂ, ಶರಣಂ - ರಕ್ಷಕನು, ನಾಸ್ತಿ - ಆಗುವುದಿಲ್ಲವು. ॥ ೩೯ ॥ ಮಹಾತ್ಮನಾ - ಮಹಾ ಬುದ್ಧಿಶಾಲಿಯಾದ, ಪೌಲಸ್ತ್ಯೇನ - ಪುಲಸ್ತ್ಯಬ್ರಹ್ಮನ ಮಗನಾದ, ತೇನ - ಆ ವಿಭೀಷಣನಿಂದ, ಪ್ರಾಪ್ತಕಾಲಂ - ಕಾಲೋಚಿತವಾದ ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಯತಃ - ಯಾವವನ ದೆಸೆಯಿಂದ, ಭಯಂ - ಭಯವು, ದೃಷ್ಟಂ - ಕಾಣಲ್ಪಟ್ಟಿತೋ, ತಮೇವ - ಅಂಥಾ ಶ್ರಿರಾಮನನ್ನೇ, ಶರಣಂ - ರಕ್ಷಕನನ್ನಾಗಿ, ಗತಃ - ಹೊಂದಿದನು. ॥ ೪೦ ॥ ಇತೀವ - ಈ ಪರಿಯಾಗಿಯೇ, ಸರ್ವಾಃ - ಸಮಸ್ತರಾದ, ರಜ....ಯಃ - ರಕ್ಕಸಿಯರು, ಪರಸ್ಪರಂ - ಅನ್ಯೋನ್ಯವಾಗಿ, ಬಾಹುಭಿಃ - ಭುಜಗಳಿಂದ, ಸಂಪರಿರಭ್ಯ - ಅಪ್ಪಿಕೊಂಡು, ಆರ್ತಾಃ - ದೀನರಾಗಿ, ಭಯ.....ತಾಃ - ಭಯವೆಂಬ ಭಾರದಿಂದ ಬಾಧಿಸಲ್ಪಟ್ಟವರಾಗಿ, ವಿಷೇದುಃ - ವ್ಯಸನಗೊಂಡರು, ತದಾ - ಆ ಕಾಲದಲ್ಲಿ, ಉಚ್ಚೈಃ - ಘಟ್ಟಿಯಾಗಿ, ಸುದಾರುಣಂ - ಬಹಳ ಕ್ರೂರವಾಗಿ, ವಿನೇದುಃ - ಧ್ವನಿಗೊಂಡರು. ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚನವತಿತಮಸ್ಸರ್ಗಃ.

ಸಿತು. ಈ ದುಃಖವನ್ನು ಭರಿಸುವುದೆಂತು? ಪ್ರಳಯಕಾಲದಲ್ಲಿ ಕಾಲರುದ್ರನ ಕೈಗೆ ಸಿಕ್ಕಿದವರಂತೆ ಈ ರಾಮನೆಂಬ ಕಾಲನ ಕೈಗೆ ಸಿಕ್ಕಿರುವ ನಮಗೆ ರಕ್ಷಕನಾಗುವವನನ್ನು ಮೂರು ಲೋಕಗಳಲ್ಲಿ ಯಾವನನ್ನೂ ಕಾಣೆವು. ದಾವಾಗ್ನಿಯಲ್ಲಿ ಸಿಲುಕಿಕೊಂಡ ಹೆಣ್ಣಾನೆಗಳಂತೆ ಈ ಮಹಾ ಭಯದಲ್ಲಿ ಸಿಲುಕಿಕೊಂಡು ಪರಿತಪಿಸುತ್ತಿರುವ ನಮಗೆ ಯಾರೂ ರಕ್ಷಕರು ದೊರೆಯುವುದಿಲ್ಲವು. ಈ ವಿಷಯಗಳೆಲ್ಲವನ್ನೂ ಮೊದಲೇ ಯೋಚಿಸಿ ಮಹಾತ್ಮನಾದ ವಿಭೀಷಣನು ಯುದ್ಧಕ್ಕೆ ಮೊದಲೇ ಶ್ರೀರಾಮನನ್ನು ಶರಣು ಹೊಕ್ಕು ಕೃತಾರ್ಥನಾದನು" ಎಂದು ತಂತಮ್ಮಲ್ಲಿಯೇ ಹೇಳಿಕೊಂಡರು. ಈ ಪ್ರಕಾರವಾಗಿ ಆ ರಾಕ್ಷಸಸ್ತ್ರೀಯರೆಲ್ಲರೂ ವಿಲಪಿಸುತ್ತ ಒಬ್ಬರನ್ನೊಬ್ಬರು ತಬ್ಬಿಕೊಂಡು ಭಯದ ಹೊರೆಯಿಂದ ಕುಗ್ಗಿ ಘಟ್ಟಿಯಾಗಿಯೂ, ಭಯಂಕರವಾಗಿಯೂ ಅಳತೊಡಗಿದರು. ॥ ೩೬—೪೧ ॥

ಇಂತಿದು ರಾಕ್ಷಸಸ್ತ್ರೀಸಮೂಹ ವಿಲಪನವೆಂಬ ತೊಂಬತ್ತೈದನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ಷಣ್ಣವತಿತಮಸ್ಸರ್ಗಃ

ಆರ್ತಾನಾಂ ರಾಕ್ಷಸೀನಾಂತು ಲಂಕಾಯಾಂ ವೈ ಕುಲೇಕುಲೇ । ರಾವಣಃ ಕರುಣಂ ಶಬ್ದಂ ಶುಶ್ರಾವ ಪರಿದೇವಿತಂ ‖೧‖ ಸತು ದೀರ್ಘಂ ವಿನಿಶ್ವಸ್ಯ ಮುಹೂರ್ತಂ ಧ್ಯಾನಮಾಸ್ಥಿತಃ । ಬಭೂವ ಪರಮಕ್ರುದ್ಧೋ ರಾವಣೋ ಭೀಮದರ್ಶನಃ ‖ ೨ ‖ ಸಂದಶ್ಯ ದಶನೈರೋಷ್ಠಂ ಕ್ರೋಧಸಂರಕ್ತಲೋಚನಃ । ರಾಕ್ಷಸೈರಪಿ ದುರ್ದರ್ಶಃ ಕಾಲಾಗ್ನಿರಿವ ಮೂರ್ಛಿತಃ ‖ ೩ ‖ ಉವಾಚಚ ಸಮೀಪಸ್ಥಾನ್ ರಾಕ್ಷಸಾನ್ ರಾಕ್ಷಸೇಶ್ವರಃ । ಭಯಾವ್ಯಕ್ತಕಥಸ್ತತ್ರ ನಿರ್ದಹನ್ನಿವ ಚಕ್ಷುಷಾ ‖ ೪ ‖ "ಮಹೋದರ ಮಹಾಪಾರ್ಶ್ವೌ ವಿರೂಪಾಕ್ಷಂಚ ರಾಕ್ಷಸಂ । ಶೀಘ್ರಂ ವದತ ಸೈನ್ಯಾನಿ ನಿರ್ಯಾತೇತಿ

ರಾವಣಃ - ರಾವಣನು, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಕುಲೇಕುಲೇ - ಮನೆಮನೆಗಳಲ್ಲಿಯೂ, ಆರ್ತಾನಾಂ - ಅಳುತ್ತಿರುವ, ರಾಕ್ಷಸೀನಾಂ - ರಕ್ಕಸಿಯರ, ಪರಿದೇವಿತಂ - ವಿಲಾಪ ಮಾಡಲ್ಪಟ್ಟ, ಕರುಣಂಶಬ್ದಂ - ದೀನಧ್ವನಿಯನ್ನು, ರಾವಣಃ - ರಾವಣನು, ಶುಶ್ರಾವ - ಕೇಳಿದನು. ‖೧‖ ಭೀಮದರ್ಶನಃ - ಭಯಂಕರವಾದ ನೋಟವುಳ್ಳ, ಸರಾವಣಸ್ತು - ಆ ರಾವಣನಾದರೆ, ದೀರ್ಘಂ - ಉದ್ದವಾಗಿ, ನಿಶ್ವಸ್ಯ - ನಿಟ್ಟುಸಿರನ್ನು ಬಿಟ್ಟು, ಮುಹೂರ್ತಂ - ಎರಡು ಘಳಿಗೆ ಕಾಲ, ಧ್ಯಾನಂ-ಧ್ಯಾನವನ್ನು, ಆಸ್ಥಿತಃ-ಹೊಂದಿ, ಪರಮಕ್ರುದ್ಧಃ-ಬಹಳ ಕುಪಿತನು, ಬಭೂವ-ಆದನು. ‖೨‖ ದಶನೈಃ - ದಂತಗಳಿಂದ, ಓಷ್ಠಂ - ತುಟಿಯನ್ನು, ಸಂದಶ್ಯ - ಕಚ್ಚಿ, ಕ್ರೋಧ....ನಃ - ಕೋಪದಿಂದ ಕೆಂಗಣ್ಣುಗಳುಳ್ಳ, ರಾಕ್ಷಸೇಶ್ವರಃ - ರಾವಣನು, ಮೂರ್ಛಿತಃ - ಪ್ರವೃದ್ಧನಾದ, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ರಾಕ್ಷಸೈರಪಿ - ರಕ್ಕಸರಿಂದಲೂ, ದುರ್ದರ್ಶಃ - ನೋಡಲಸಾಧ್ಯನಾಗಿ, ಸಮೀಪಸ್ಥಾನ್ - ಸಮೀಪವರ್ತಿಗಳಾದ, ರಾಕ್ಷಸಾನ್ - ರಕ್ಕಸರನ್ನು ಕುರಿತು, ಭಯಾ....ಥಃ - ಭೀತಿಯಿಂದ ಅಸ್ಪಷ್ಟವಾದ ರಾಕ್ಷಸರ ಕಥೆಯುಳ್ಳವನಾಗಿ, ತತ್ರ - ಆ ಕಾಲದಲ್ಲಿ, ಚಕ್ಷುಷಾ - ನೇತ್ರದಿಂದ, ನಿರ್ದಹನ್ನಿವ - ದಹಿಸುತ್ತಾನೋ ಎಂಬಂತೆ, ಮಹೋ....ಶ್ವೌ - ಮಹೋದರ ಮಹಾಪಾರ್ಶ್ವರನ್ನು, ರಾಕ್ಷಸಂ - ರಕ್ಕಸನಾದ, ವಿರೂಪಾಕ್ಷಂಚ - ವಿರೂಪಾಕ್ಷನನ್ನೂ ಈ ಮೂವರನ್ನು ಕುರತು, ಮಮ -

---

ಆ ಸಮಯದಲ್ಲಿ ರಾವಣಾಸುರನು ತನ್ನ ರಾಜಧಾನಿಯಾದ ಲಂಕಾನಗರದಲ್ಲಿ, ಮನೆಮನೆಯಲ್ಲಿಯೂ ದೈನ್ಯದಿಂದ ದುಃಖಿಸುತ್ತಿರುವ ರಾಕ್ಷಸಾಂಗನೆಯರ ವಿಲಾಪಧ್ವನಿಯನ್ನು ಕೇಳಿದನು. ಆ ಕೂಡಲೇ ಅವನು ನಿಟ್ಟುಸಿರುಗಳನ್ನು ಬಿಡುತ್ತ ಕೆಲಕಾಲ ಆಲೋಚಿಸುತ್ತಿದ್ದು ಆ ತರುವಾಯ ಬಹಳವಾಗಿ ಕೋಪಗೊಂಡು, ಆ ಕೋಪದ ಪರಿಣಾಮವಾಗಿಯೇ ಭಯಂಕರ ದರ್ಶನನಾಗಿ ಬಿಟ್ಟನು. ಅವನ ಸಮೀಪದಲ್ಲಿರುವ ರಾಕ್ಷಸರೇ, ಕಾಲಾಗ್ನಿಯಂತೆ ಕೋಪದಿಂದ ಪ್ರಜ್ವಲಿಸುತ್ತಿರುವ ಅವನನ್ನು ನೋಡಲೂ ಆರದೆ ಹೋದರು. ಆ ತರುವಾಯ ಆ ರಾಕ್ಷಸನು ಭಯದಿಂದುಂಟಾದ ಅಸ್ಪಷ್ಟ ಧ್ವನಿಯೊಡಗೂಡಿ ಬಳಿಯಲ್ಲಿರುವ ರಾಕ್ಷಸರೆಲ್ಲರನ್ನೂ ಕುರಿತು, ದೃಷ್ಟಿಯಿಂದಲೇ ಸುಡುವನೋ ಎಂಬಂತೆ, "ಎಲೈ ರಾಕ್ಷಸೋತ್ತಮರೇ! ನನ್ನ ಆಜ್ಞೆಯಿಂದ, ಮಹೋದರ, ಮಹಾಪಾರ್ಶ್ವ, ವಿರೂಪಾಕ್ಷರೆಂಬ ಮೂವರನ್ನೂ

ಮಮಾಜ್ಞಯಾ ॥ ೫ ॥ ತಸ್ಯ ತದ್ವಚನಂ ಶ್ರುತ್ವಾ ರಾಕ್ಷಸಾಸ್ತೇ ಭಯಾರ್ದಿತಾಃ । ಚೋದಯಾಮಾಸುರವ್ಯಗ್ರಾನ್ ರಾಕ್ಷಸಾಂಸ್ತಾನ್ನೃಪಾಜ್ಞಯಾ ॥ ೬ ॥ ತೇತು ಸರ್ವೇ ತಥೇತ್ಯುಕ್ತ್ವಾ ರಾಕ್ಷಸಾ ಘೋರದರ್ಶನಾಃ । ಕೃತಸ್ವಸ್ತ್ಯಯನಾಸ್ಸರ್ವೇ ರಣಾಯಾಭಿಮುಖಾ ಯಯುಃ ॥೭॥ ಪ್ರತಿಪೂಜ್ಯ ಯಥಾ ನ್ಯಾಯಂ ರಾವಣಂ ತೇ ನಿಶಾಚರಾಃ । ತಸ್ಥುಃ ಪ್ರಾಂಜಲಯಸ್ಸರ್ವೇ ಭರ್ತುರ್ವಿಜಯಕಾಂಕ್ಷಿಣಃ ॥ ೮ ॥ ಅಥೋವಾಚ ಪ್ರಹಸ್ಯೈತಾನ್ ರಾವಣಃ ಕ್ರೋಧಮೂರ್ಛಿತಂ । ಮಹೋದರ ಮಹಾಪಾರ್ಶ್ವೌ ವಿರೂಪಾಕ್ಷಂ ಚ ರಾಕ್ಷಸಂ ॥ ೯ ॥ "ಅದ್ಯ ಬಾಣೈರ್ಧನುರ್ಮುಕ್ತೈರ್ಯುಗಾಂತಾದಿತ್ಯ

ನನ್ನ, ಆಜ್ಞಯಾ - ಆಜ್ಞೆಯಿಂದ, ಸೈನ್ಯಾನಿ - ಸೇನೆಗಳನ್ನು, ಶೀಘ್ರಂ - ಜಾಗ್ರತೆಯಾಗಿ, ನಿರ್ಯಾತೇತಿ - ಹೊರಡಿರೆಂದು, ವದಕ - ಹೇಳಿರಿ ಎಂದು, ಉವಾಚ - ಹೇಳಿದನು. ॥ ೫ ॥ ತೇರಾಕ್ಷಸಾಃ - ಆ ರಕ್ಕಸರು, ತಸ್ಯ - ಆ ರಾವಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಭಯಾರ್ದಿತಾಃ - ಭೀತಿಗೊಂಡವರಾಗಿ, ನೃಪಾಜ್ಞಯಾ - ರಾಜಾಜ್ಞೆಯಿಂದ, ಅವ್ಯಗ್ರಾನ್ - ಸಾವಧಾನರಾದ, ತಾನ್‌ರಾಕ್ಷಸಾನ್ - ಆ ರಾಕ್ಷಸರನ್ನು, ಚೋದಯಾಮಾಸುಃ - ಆಜ್ಞಾಪಿಸಿದರು. ॥೬॥ ಘೋರದರ್ಶನಾಃ - ಭಯಂಕರ ದೃಷ್ಟಿಯುಳ್ಳ, ಸರ್ವೇ - ಸಮಸ್ತರಾದ, ತೇರಾಕ್ಷಸಾಸ್ತು - ಆ ರಾಕ್ಷಸರನ್ನು, ತಥೇತ್ಯುಕ್ತ್ವಾ - ಹಾಗೆಯೇ ಆಗಲೆಂದು, ಸರ್ವೇ - ಸಮಸ್ತರೂ, ಕೃತ....ನಾಃ - ಮಾಡಲ್ಪಟ್ಟ ಆಶೀರ್ವಾದಗಳುಳ್ಳವರಾಗಿ, ರಣಾಯ - ಕಾಳಗಕ್ಕೆ, ಅಭಿಮುಖಾಃ - ಎದುರಾಗಿ, ಯಯುಃ - ತೆರಳಿದರು. ॥೭॥ ಸರ್ವೇ - ಸಮಸ್ತರಾದ, ತೇನಿಶಾಚರಾಃ - ಆ ರಕ್ಕಸರು, ಯಥಾನ್ಯಾಯಂ - ನ್ಯಾಯಾನುಸಾರವಾಗಿ, ರಾವಣಂ - ರಾವಣನನ್ನು, ಪ್ರತಿಪೂಜ್ಯ - ಪೂಜಿಸಿ, ಸರ್ವೇ - ಸಮಸ್ತರೂ, ಪ್ರಾಂಜಲಯಃ - ಅಂಜಲಿಬದ್ಧರಾಗಿ, ಭರ್ತುಃ - ಪೋಷಣಕರ್ತನಿಗೆ, ವಿಜಯಕಾಂಕ್ಷಿಣಃ - ಜಯವನ್ನು ಕೋರುವವರಾಗಿ, ತಸ್ಥುಃ - ನಿಂತರು. ॥ ೮ ॥ ಅಥ - ಬಳಿಕ, ರಾವಣಃ - ರಾವಣನು, ಕ್ರೋಧಮೂರ್ಛಿತಃ - ಕೋಪದಿಂದ ವ್ಯಾಪ್ತನಾಗಿ, ಮಹೋ....ಶ್ವೌ - ಮಹೋದರನನ್ನೂ ಮಹಾಪಾರ್ಶ್ವನನ್ನೂ, ರಾಕ್ಷಸಂ - ರಾಕ್ಷಸನಾದ, ವಿರೂಪಾಕ್ಷಂ - ವಿರೂಪಾಕ್ಷನನ್ನೂ, ಏತಾನ್ - ಈ ಮೂವರನ್ನೂ ಕುರಿತು, ಪ್ರಹಸ್ಯ - ನಕ್ಕು, ಉವಾಚ - ಹೇಳಿದನು. ॥ ೯ ॥ ಅದ್ಯ - ಈಗ, ಯುಗಾಂ....ಭೈಃ - ಪ್ರಳಯಕಾಲದ ಸೂರ್ಯನಿಗೆ ಸಮಾನಗಳಾದ, ಧನುರ್ಮುಕ್ತೈಃ - ಬಿಲ್ಲಿನಿಂದ ಬಿಡಲ್ಪಟ್ಟ,

ಈ ಕೂಡಲೇ ಸೇನೆಗಳನ್ನೆಲ್ಲಾ ಯುದ್ಧಕ್ಕೆ ಹೊರಡಿಸತಕ್ಕದ್ದೆಂದು ತಿಳಿಸಿರಿ" ಎಂದು ಹೇಳಿದನು. ॥ ೧–೫ ॥ ರಾಕ್ಷಸರೆಲ್ಲರೂ ರಾಜಾಜ್ಞೆಯಂತೆ ಬಹಳ ಜಾಗ್ರತೆಯಾಗಿಯೇ ಸಕಲ ಸೇನೆಗಳನ್ನೂ ಯುದ್ಧಕ್ಕೆ ಹೊರಡಿಸಬೇಕೆಂದು ಆ ಮಹೋದರಾದಿಗಳನ್ನು ತ್ವರೆಗೊಳಿಸಿದರು. ಆಗ ಮಹಾ ಘೋರ ದರ್ಶನರಾದ ಮಹೋದರಾದಿಗಳಾದರೋ ಅಂತೆಯೇ ಆಗಲೆಂದು ಹೇಳಿ ಪ್ರಯಾಣ ಕಾಲದಲ್ಲಿ ಮಾಡಬೇಕಾದ ಮಂಗಳ ಕಾರ್ಯಗಳೆಲ್ಲವನ್ನೂ ಮಾಡಿದವರಾಗಿ ಯುದ್ಧಾಭಿಮುಖರಾಗಿ ಹೊರಟರು. ಆ ತರುವಾಯ ಆ ಸೇನಾನಾಯಕರಾದ ಅವರೆಲ್ಲರೂ ತಮ್ಮೊಡೆಯನಾದ ರಾವಣಾಸುರನನ್ನು ಉಚಿತವರಿತು ಸನ್ಮಾನಿಸಿ ಆತನಿಗೆ ವಿಜಯವನ್ನು ಕೋರಿ ಕೈಗಳನ್ನು ಮುಗಿದುಕೊಂಡು ಆತನ ಮುಂಗಡೆ ಭಯಭಕ್ತಿಯಿಂದ ನಿಂತರು. ಆಗ ರಾವಣನು ಅವರನ್ನು ಗೌರವಿಸಲೋಸುಗ ಮುಗುಳುನಗೆ ನಕ್ಕು ಆಮೇಲೆ ಕ್ರೋಧಮೂರ್ಛಿತನಾಗಿ ಅವರು ಮೂವರನ್ನೂ ಕುರಿತು, "ಎಲೈ ವೀರರೇ! ಈಗ

ಸನ್ನಿಭೈಃ । ರಾಘವಂ ಲಕ್ಷ್ಮಣಂಚೈವ ನೇಷ್ಯಾಮಿ ಯಮಸಾದನಂ ॥ ೧೦ ॥ ಖರಸ್ಯ ಕುಂಭಕರ್ಣಸ್ಯ ಪ್ರಹಸ್ತೇಂದ್ರಜಿತೋಸ್ತಥಾ । ಕರಿಷ್ಯಾಮಿ ಪ್ರತೀಕಾರಮದ್ಯ ಶತ್ರುವಧಾದಹಂ ॥ ೧೧ ॥ ನೈವಾಂತರಿಕ್ಷಂ ನ ದಿಶೋ ನ ನದ್ಯೋ ನಾಪಿ ಸಾಗರಃ । ಪ್ರಕಾಶತ್ವಂ ಗಮಿಷ್ಯಂತಿ ಮದ್ಬಾಣಜಲದಾವೃತಾಃ ॥ ೧೨ ॥ ಅದ್ಯ ವಾನರಮುಖ್ಯಾನಾಂ ತಾನಿ ಯೂಥಾನಿ ಭಾಗಶಃ । ಧನುಷಾ ಶರಜಾಲೇನ ವಿಧಮಿಷ್ಯಾಮಿ ಪತ್ರಿಣಾ ॥೧೩॥ ಅದ್ಯ ವಾನರಸೈನ್ಯಾನಿ ರಥೇನ ಪವನೌಜಸಾ । ಧನುಸ್ಸಮುದ್ರಾದುದ್ಭೂತೈರ್ಮಥಿಷ್ಯಾಮಿ ಶರೋರ್ಮಿಭಿಃ ॥ ೧೪ ॥ ಆಕೋಶಪದ್ಮವಕ್ತ್ರಾಣಿ ಪದ್ಮಕೇಸರವರ್ಚಸಾಂ ।

ಬಾಣೈಃ - ಬಾಣಗಳಿಂದ, ರಾಘವಂ - ಶ್ರೀರಾಮನನ್ನೂ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ಯಮಸಾಧನಂ - ಯಮನ ಪಟ್ಟಣವನ್ನು, ನೇಷ್ಯಾಮಿ - ಹೊಂದಿಸುವೆನು. ॥೧೦॥ ಅದ್ಯ - ಈಗ, ಅಹಂ-ನಾನು, ಖರಸ್ಯ - ಖರನ, ಕುಂಭಕರ್ಣಸ್ಯ - ಕುಂಭಕರ್ಣನ, ತಥಾ - ಹಾಗೆಯೇ, ಪ್ರಹಸ್ತೇಂದ್ರಜಿತೋಃ - ಪ್ರಹಸ್ತ ಇಂದ್ರಜಿತುಗಳ, ವಧಸ್ಯ - ಸಂಹಾರಕ್ಕೂ, ಪ್ರತೀಕಾರಂ - ಪ್ರತಿಕ್ರಿಯೆಯನ್ನು, ಶತ್ರುವಧಾತ್ - ಶತ್ರುಗಳ ಸಂಹಾರದಿಂದ, ಕರಿಷ್ಯಾಮಿ - ಮಾಡುವೆನು. ॥೧೧॥ ಮದ್ಬಾ....ತಾಃ - ನನ್ನ ಬಾಣಗಳೆಂಬ ಮೇಘಗಳಿಂದ ಆವೃತಗಳಾದ, ಅಂತರಿಕ್ಷಂ - ಅಂತರಿಕ್ಷವು, ಪ್ರಕಾಶತ್ವಂ - ಪ್ರಕಾಶವನ್ನು, ನಗಮಿಷ್ಯತಿ - ಹೊಂದಲಾಗದು, ದಿಶಃ - ದಿಕ್ಕುಗಳು, ಪ್ರಕಾಶತ್ವಂ - ಪ್ರಕಾಶವನ್ನು, ನಗಮಿಷ್ಯಂತಿ - ಹೊಂದಲಾರವು, ನದ್ಯಃ - ಹೊಳೆಗಳು, ನ - ಪ್ರಕಾಶಿಸಲಾರವು, ಸಾಗರಾಶ್ಚಾಪಿ - ಕಡಲುಗಳೂ, ನ - ಪ್ರಕಾಶಿಸಲಾರವು. ॥ ೧೨ ॥ ಅದ್ಯ - ಈಗ, ಧನುಷಾ - ಧನುಸ್ಸಿನಿಂದ, ಪತ್ರಿಣಾ - ರೆಕ್ಕೆಗಳುಳ್ಳ, ಶರಜಾಲೇನ - ಬಾಣಗಳ ತಂಡಗಳಿಂದ, ವಾನ....ನಾಂ - ಕಪಿಯೂಥಪತಿಗಳ, ತಾನಿಯೂಥಾನಿ - ಆ ಗುಂಪುಗಳನ್ನು, ಭಾಗಶಃ - ಖಂಡಖಂಡವಾಗಿ, ವಿಧಮಿಷ್ಯಾಮಿ - ಸಂಹರಿಸುವೆನು. ॥ ೧೩ ॥ ಅದ್ಯ - ಈಗ, ಪವನೌಜಸಾ - ಗಾಳಿಯಂತೆ ಸಾಮರ್ಥ್ಯವುಳ್ಳ, ರಥೇನ - ರಥದಿಂದ, ಧನುಸ್ಸಮುದ್ರಾತ್ - ಬಿಲ್ಲುಗಳೆಂಬ ಕಡಲಿನಿಂದ, ಉದ್ಭೂತೈಃ - ಹುಟ್ಟಿರುವ, ಶರೋರ್ಮಿಭಿಃ - ಬಾಣಗಳೆಂಬ ತೆರೆಗಳಿಂದ, ವಾನರಸೈನ್ಯಾನಿ - ಕಪಿಸೇನೆಗಳನ್ನು, ಮಥಿಷ್ಯಾಮಿ-ಮಥನ ಮಾಡುತ್ತೇನೆ. ॥ ೧೪ ॥ ಅದ್ಯ-ಈಗ, ಆಕೋ....ಣಿ-ಚೆನ್ನಾಗಿ ಅರಳಿದ ಕಮಲಗಳಂತಿರುವ ಮುಖಗಳುಳ್ಳ, ಪದ್ಮ....ಸಾಂ-ಕಮಲ ಕಿಂಜಲ್ಕಗಳಂತೆ ತೇಜಸ್ಸುಗಳುಳ್ಳ, ವಾನರಾಣಾಂ-

---

ನನ್ನ ಧನುಸ್ಸಿನಿಂದ ಬಿಡಲಾಗುವ ಪ್ರಳಯಾಗ್ನಿಸಮಾನವಾದ ಬಾಣಗಳಿಂದ ಆ ರಾಮಲಕ್ಷ್ಮಣರನ್ನು ಯಮನಾಲಯಕ್ಕೆ ಅಟ್ಟುವೆನು. ॥ ೬–೧೦ ॥ ಎಲೈ ರಾಕ್ಷಸವೀರರೇ! ಖರ, ಕುಂಭಕರ್ಣ, ಪ್ರಹಸ್ತ, ಇಂದ್ರಜಿತು ಮೊದಲಾದ ವೀರರಾಕ್ಷಸರನ್ನು ಸಂಹರಿಸಿದುದಕ್ಕೆ ಪ್ರತೀಕಾರವಾಗಿ ನಾನು ಹಗೆಯರಾದ ಆ ರಾಮಲಕ್ಷ್ಮಣರನ್ನು ರಣಾಂಗಣದಲ್ಲಿ ಕೊಂದು ಎಲ್ಲರಿಗೂ ಸಂತೋಷವನ್ನುಂಟುಮಾಡುವೆನು. ರಣಭೂಮಿಯಲ್ಲಿ ನಾನು ಪ್ರಯೋಗಿಸುವ ಅಂಬುಮಳೆಯಿಂದ ಆಗಸ, ದಿಶೆಗಳು, ನದಿಗಳು, ಸಮುದ್ರಗಳು ಯಾವುವೂ ಕಾಣಿಸದೆ ಹೋಗುವುವು. ಇದಿಗೋ, ನನ್ನ ಧನುರ್ಬಾಣಗಳಿಂದ ಈಗಲೇ ಆ ವೀರ ವಾನರ ಮುಖ್ಯರೆಲ್ಲರನ್ನೂ ಕೊಂದುರುಳಿಸುವೆನು ನೋಡಿರಿ. ವಾಯುವೇಗವುಳ್ಳ ರಥಶ್ರೇಷ್ಠವನ್ನೇರಿ ಹೊರಟು ಧನುಸ್ಸೆಂಬ ಸಾಗರದಿಂದುಸಿದ ಅಂಬುಗಳೆಂಬ ಅಲೆಗಳಿಂದ ವಾನರಸೇನೆಗಳನ್ನೆಲ್ಲ ಉಲ್ಲಕಲ್ಲೋಲಗೊಳಿಸುವೆನು. ಅಷ್ಟಿಷ್ಟು ಅರಳಿಯೂ ಅರಳದಂತಿರುವ ಕಮಲಸಮಾನ

ಅದ್ಯ ಯೂಥತಟಾಕಾನಿ ಗಜವತ್ಪ್ರಮಥಾಮ್ಯಹಂ ॥೧೫॥ ಸಶರೈರದ್ಯ ವದನೈಸ್ಸಂಖ್ಯೇ ವಾನರಯೂಥಪಾಃ । ಮಂಡಯಿಷ್ಯಂತಿ ವಸುಧಾಂ ಸನಾಳೈರಿವ ಪಂಕಜೈಃ ॥ ೧೬ ॥ ಅದ್ಯ ಯುದ್ಧಪ್ರಚಂಡಾನಾಂ ಹರೀಣಾಂ ದ್ರುಮಯೋಧಿನಾಂ । ಮುಕ್ತೇನೈಕೇಷುಣಾ ಯುದ್ಧೇ ಭೇತ್ಸ್ಯಾಮಿ ಚ ಶತಂ ಶತಂ ॥ ೧೭ ॥ ಹತೋ ಭರ್ತಾ ಹತೋ ಭ್ರಾತಾ ಯಾಸಾಂಚ ತನಯಾ ಹತಾಃ । ವಧೇನಾದ್ಯ ರಿಪೋಸ್ತಾಸಾಂ ಕರೋಮ್ಯಸ್ರಪ್ರಮಾರ್ಜನಂ ॥ ೧೮ ॥ ಅದ್ಯ ಮದ್ಬಾಣನಿರ್ಭಿನ್ನೈಃ ಪ್ರಕೀರ್ಣೈರ್ಗತಚೇತನೈಃ । ಕರೋಮಿ ವಾನರೈರ್ಯುದ್ಧೇ ಯತ್ನಾವೇಕ್ಷ್ಯತಲಾಂ ಮಹೀಂ ॥೧೯॥ ಅದ್ಯ ಗೋಮಾಯವೋ

ಕಪಿಗಳ, ಯೂಥ....ನಿ - ಗುಂಪುಗಳೆಂಬ ಕಟಾಕಗಗಳನ್ನು, ಗಜವತ್ - ಆನೆಯಂತೆ, ಅಹಂ - ನಾನು, ಪ್ರಮಥಾಮಿ - ಮಥನ ಮಾಡುತ್ತೇನೆ. ॥ ೧೫ ॥ ಅದ್ಯ - ಈಗ, ಸಂಖ್ಯೇ - ಕಾಳಗದಲ್ಲಿ, ವಾನ....ಪಾಃ - ವಾನರಯೂಥಪತಿಗಳು, ಸಶರೈಃ - ಬಾಣಗಳಿಂದೊಡಗೂಡಿದ, ವದನೈಃ - ಮುಖಗಳಿಂದ, ಸನಾಳೈಃ - ನಾಳಗಳಿಂದೊಡಗೂಡಿದ, ಪಂಕಜೈರಿವ - ಕಮಲಗಳಂತೆ, ವಸುಧಾಂ - ನೆಲವನ್ನು, ಮಂಡಯಿಷ್ಯಂತಿ - ಅಲಂಕರಿಸುವರು. ॥ ೧೬ ॥ ಅದ್ಯ - ಈಗ, ಯುದ್ಧೇ - ಕಾಳಗದಲ್ಲಿ, ಯುದ್ಧ....ನಾಂ - ಕಾಳಗದಲ್ಲಿ ಸಮರ್ಥರಾದ, ದ್ರುಮಯೋಧಿನಾಂ - ಮರಗಳಿಂದ ಕಾಳಗ ಮಾಡುತ್ತಿರುವ, ಹರೀಣಾಂ ಕಪಿಗಳ, ಶತಂಶತಂ-ನೂರುನೂರುಮಂದಿಯನ್ನು, ಮುಕ್ತೇನ-ಬಿಡಲ್ಪಟ್ಟ, ಏಕೇಷುಣಾ - ಒಂದು ಬಾಣದಿಂದಲೇ, ಭೇತ್ಸ್ಯಾಮಿ - ಭೇದಿಸುವೆನು. ॥ ೧೭ ॥ ಯಾಸಾಂ - ಯಾರಿಗೆ, ಭರ್ತಾ - ಗಂಡನು, ಹತಃ - ಹತನಾದನೋ, ಭ್ರಾತಾ - ಅಣ್ಣನು, ಹತಃ - ಹತನಾದನೋ, ತನಯಾಶ್ಚ - ಮಕ್ಕಳೂ, ಹತಾಃ - ಹತರಾದರೋ, ಅದ್ಯ - ಈಗ, ರಿಪೋಃ - ಶತ್ರುವಿನ, ವಧೇನ - ಸಂಹಾರದಿಂದ, ತಾಸಾಂ - ಅವರಿಗೆ, ಅಸ್ರ....ನಂ - ಕಂಬನಿಯಾರಿಸೋಣವನ್ನು, ಕರೋಮಿ - ಮಾಡುವೆನು. ॥ ೧೮ ॥ ಅದ್ಯ-ಈಗ, ಯುದ್ಧೇ-ಕಾಳಗದಲ್ಲಿ, ಮದ್ಬಾ....ನ್ನೈಃ-ನನ್ನ ಬಾಣಗಳಿಂದ ಭೇದಿಸಲ್ಪಟ್ಟ, ಪ್ರಕೀರ್ಣೈಃ-ಎರಚಲ್ಪಟ್ಟ, ಗತಚೇತನೈಃ-ಕಳೆದ ಪ್ರಜ್ಞೆಯುಳ್ಳ, ವಾನರೈಃ-ಕಪಿಗಳಿಂದ, ಮಹೀಂ-ನೆಲವನ್ನು, ಯತ್ನಾ....ಲಾಂ-ಪ್ರಯತ್ನದಿಂದ ನೋಡತಕ್ಕ ಸ್ಥಳವುಳ್ಳದ್ದನ್ನಾಗಿ, ಕರೋಮಿ-ಮಾಡುವೆನು. ॥ ೧೯ ॥ ಅದ್ಯ - ಈಗ, ಗೋಮಾಯವಃ - ನರಿಗಳೂ, ಗೃಧ್ರಾಶ್ಚ - ಹದ್ದುಗಳೂ,

---

ವಾದ ಮುಖಗಳುಳ್ಳವರೂ, ಕಮಲಕಿಂಜಲ್ಕಗಳಂತಹ ದೇಹಕಾಂತಿಯುಳ್ಳವರೂ ಆದ ವಾನರಸಮೂಹಗಳೆಂಬ ತಟಾಕಗಳನ್ನು ಕಾಡಾನೆಯಂತೆ ಈ ನಾನು ಕದಡಿಬಿಡುವೆನು. ॥೧೧–೧೫॥ ಈಗ ವಾನರಯೂಥಪತಿಗಳೆಲ್ಲರೂ ಬಾಣಗಳೊಡಗೂಡಿದ ಮುಖಗಳುಳ್ಳವರಾಗಿ ನೆಲದಲ್ಲುರುಳಿ ನಾಳಗಳೊಡಗೂಡಿದ ಕಮಲಗಳಂತೆಯೇ ಪ್ರಕಾಶಿಸುವರು. ರಣರಂಗದಲ್ಲಿ ಮಹಾ ಭಯಂಕರರೂ, ಕಲ್ಮರಗಳಿಂದ ಕಾಳಗ ಮಾಡುವವರೂ ಆದ ವಾನರರೆಲ್ಲರನ್ನೂ, ಒಂದೊಂದು ಬಾಣಕ್ಕೆ ನೂರುನೂರು ಮಂದಿಯಂತೆ ವಧಿಸುವೆನು. ಎಲೈ ರಾಕ್ಷಸೋತ್ತಮರಿರಾ ! ಈಗ ನಮ್ಮ ಲಂಕಾನಗರದಲ್ಲಿ ಯಾರಾರಿಗೆ ಭರ್ತೃವಿಯೋಗವಾಗಿರುವುದೋ, ಯಾರಾರಿಗೆ ಪುತ್ರವಿಯೋಗವಾಗಿರುವುದೋ, ಯಾರಾರಿಗೆ ಭ್ರಾತೃವಿಯೋಗಬಂಧುವಿಯೋಗಗಳಾಗಿರುವುದೋ ಅವರೆಲ್ಲರಿಗೂ ಶತ್ರುಮರ್ದನ ಮಾಡುವುದರ ಮೂಲಕ ಅಶ್ರುಪ್ರಮಾರ್ಜನೆಯನ್ನು ಮಾಡುತ್ತೇನೆ. ಈಗ ನನ್ನ ಕೂರಂಬುಗಳಿಂದ ಮಡಿದುರುಳಿದ ವಾನರರ ತಂಡಗಳಿಂದ ರಣಭೂಮಿಯು ತುಂಬಿ ತುಳುಕಿ ಹೋಗುವುದು. ಹದ್ದುಗಳು, ನರಿಗಳು ಮೊದಲಾಗಿ

ಗೃಧ್ರಾ ಯೇಚ ಮಾಂಸಾಶಿನೋಽಪರೇ । ಸರ್ವಾಂಸ್ತಾಂಸ್ತರ್ಪಯಿಷ್ಯಾಮಿ ಶತ್ರುಮಾಂಸೈಃ ಶರಾರ್ಪಿತೈಃ ॥೨೦॥ ಕಲ್ಪ್ಯತಾಂ ಮೇ ರಥಃ ಶೀಘ್ರಂ ಕ್ಷಿಪ್ರಮಾನೀಯತಾಂ ಧನುಃ । ಅನುಪ್ರಯಾಂತು ಮಾಂ ಸರ್ವೇ ಯೇಽವಶಿಷ್ಟಾ ನಿಶಾಚರಾಃ" ॥ ೨೧ ॥ ತಸ್ಯ ತದ್ವಚನಂ ಶ್ರುತ್ವಾ ಮಹಾಪಾರ್ಶ್ವೋಽಬ್ರವೀದ್ವಚಃ । ಬಲಾಧ್ಯಕ್ಷಾನ್ ಸ್ಥಿತಾಂಸ್ತತ್ರ ಬಲಂ ಸಂತ್ವರ್ಯತಾಮಿತಿ ॥ ೨೨ ॥ ಬಲಾಧ್ಯಕ್ಷಾಸ್ತು ಸಂರಬ್ಧಾ ರಾಕ್ಷಸಾಂಸ್ತಾನ್ ಗೃಹಾದ್ಗೃಹಾತ್ । ಚೋದಯಂತಃ ಪರಿಯಯುರ್ಲಂಕಾಯಾಂತು ಮಹಾಬಲಾಃ ॥೨೩॥ ತತೋ ಮುಹೂರ್ತಾನ್ನಿಷ್ಪೇತೂ ರಾಕ್ಷಸಾ ಭೀಮದರ್ಶನಾಃ ।

ಅಪರೇ - ಮತ್ತೆ ಕೆಲವೂ, ಯೇ - ಯಾವುಗಳು, ಮಾಂಸಾಶನಃ - ಮಾಂಸವನ್ನು ತಿನ್ನುವುವೋ, ತಾನ್ ಸರ್ವಾನ್ - ಅವುಗಳನ್ನೆಲ್ಲ, ಶರಾರ್ಪಿತೈಃ - ಬಾಣಗಳಿಂದ ಸಮರ್ಪಿಸಲ್ಪಟ್ಟ, ಶತ್ರುಮಾಂಸೈಃ - ಶತ್ರು ಮಾಂಸಗಳಿಂದ, ತರ್ಪಯಿಷ್ಯಾಮಿ - ತೃಪ್ತಿಗೊಳಿಸುವೆನು. ॥೨೦॥ ಮೇ - ನನ್ನ, ರಥಃ - ತೇರು, ಶೀಘ್ರಂ - ಜಾಗ್ರತೆಯಾಗಿ, ಕಲ್ಪ್ಯತಾಂ - ಅಲಂಕರಿಸಲ್ಪಡಲಿ, ಕ್ಷಿಪ್ರಂ - ಜಾಗ್ರತೆಯಾಗಿ, ಧನುಃ - ಧನುಸ್ಸು, ಆನೀಯತಾಂ - ತರಲ್ಪಡಲಿ, ಅವಶಿಷ್ಟಾಃ - ನಿಂತಿರುವ, ಯೇನಿಶಾಚರಾಃ - ರಾಕ್ಷಸರು ಯಾರೋ, ತೇಸರ್ವೇ - ಅವರೆಲ್ಲರೂ, ಮಾಂ - ನನ್ನನ್ನು, ಅನುಪ್ರಯಾಂತು - ಅನುಸರಿಸಿ ಬರಲಿ. ॥ ೨೧ ॥ ತಸ್ಯ - ಆ ರಾವಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಮಹಾಪಾರ್ಶ್ವಃ - ಮಹಾಪಾರ್ಶ್ವನು, ತತ್ರ - ಅಲ್ಲಿ, ಸ್ಥಿತಾನ್ - ಇರುವ, ಬಲಾಧ್ಯಕ್ಷಾನ್ - ಸೇನಾಧಿಪತಿಗಳನ್ನು ಕುರಿತು, ಬಲಂ - ಸೇನೆಯನ್ನು, ಸಂತ್ವರ್ಯತಾಮಿತಿ - ಜಾಗ್ರತೆ ಮಾಡಲ್ಪಡಲೆಂದು, ವಚಃ - ಮಾತನ್ನು, ಅಬ್ರವೀತ್ - ನುಡಿದನು. ॥ ೨೨ ॥ ಮಹಾಬಲಾಃ - ಬಹಳ ಬಲವಂತರಾದ, ಬಲಾಧ್ಯಕ್ಷಾಸ್ತು - ಸೇನಾಧಿಪತಿಗಳಾದರೆ, ಸಂರಬ್ಧಾಃ - ಜಾಗ್ರತೆಯುಳ್ಳವರಾಗಿ, ತಾಂಸ್ತಾನ್ರಾಕ್ಷಸಾನ್ - ಆಯಾಯ ರಕ್ಕಸರನ್ನು ಕುರಿತು, ಗೃಹಾದ್ಗೃಹಾತ್-ಮನೆಮನೆಯಿಂದಲೂ, ಚೋದಯಂತಃ-ಪ್ರೇರೇಪಿಸಿ, ಲಂಕಾಯಾಂತು - ಲಂಕಾಪಟ್ಟಣದಲ್ಲಾದರೆ, ಪರ್ಯಯುಃ - ಸಂಚರಿಸಿದರು. ॥ ೨೩ ॥ ತತಃ - ಬಳಿಕ, ಭೀಮದರ್ಶನಾಃ - ಭಯಂಕರವಾದ ಮುಖಗಳುಳ್ಳ, ಭುಜೈಃ - ಭುಜಗಳಿಂದ, ಅಸಿಭಿಃ - ಕತ್ತಿಗಳಿಂದ, ಪಟ್ಟಸೈಃ - ಪಟ್ಟಾಕತ್ತಿಗಳಿಂದ, ಶೂಲೈಃ - ಶೂಲಗಳಿಂದ, ಗದಾಭಿಃ - ಗದಾಯುಧಗಳಿಂದ,

ಮಾಂಸಭಕ್ಷಕಗಳಾದ ಪ್ರಾಣಿಗಳೆಲ್ಲವೂ ಮಡಿದುರುಳಿದ ಆ ವಾನರರ ಮಾಂಸವನ್ನು ತಿಂದು ತೃಪ್ತಿಗೊಳ್ಳುವುವು. ॥೧೬-೨೦॥ ಎಲೈ ರಾಕ್ಷಸಶ್ರೇಷ್ಠರೇ! ಹೊರಡಿರಿ. ಜಾಗ್ರತೆಯಾಗಿ ರಥವನ್ನು ಸಿದ್ಧಗೊಳಿಸಿರಿ. ಮಹೋತ್ತಮವಾದ ನನ್ನ ಧನುಸ್ಸನ್ನು ತೆಗೆದುಕೊಂಡು ಬನ್ನಿರಿ. ಉಳಿದಿರುವ ರಾಕ್ಷಸರೆಲ್ಲರೂ ನನ್ನನ್ನನುಸರಿಸಿಬರಲಿ" ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಸಮೀಪದಲ್ಲಿಯೇ ಇದ್ದ ಮಹಾಪಾರ್ಶ್ವನು ಸೇನಾಧಿಪತಿಗಳೆಲ್ಲರನ್ನೂ ಕುರಿತು ಜಾಗ್ರತೆಯಾಗಿ ಸೇನೆಗಳನ್ನು ಸಿದ್ಧಗೊಳಿಸಿರೆಂದು ಹೇಳಿದನು. ಮಹಾ ಪರಾಕ್ರಮಿಗಳಾದ ಆ ಸೇನಾನಾಯಕರಾದರೋ ರಣಪ್ರಯಾಣ ಸಂರಂಭದಿಂದೊಡಗೂಡಿದವರಾಗಿ ಬಹುಶೀಘ್ರದಲ್ಲಿಯೇ ಹೊರಟು ಲಂಕಾನಗರದ ಮನೆಮನೆಯಲ್ಲಿಯೂ ಇರುವ ರಾಕ್ಷಸರನ್ನೆಲ್ಲ ಯುದ್ಧಕ್ಕಾಗಿ ಪ್ರೇರೇಪಿಸಿ ಒಕ್ಕಡೆ ಕೂಡಿಸಲು ಮೊದಲು ಮಾಡಿ ನಗರವೆಲ್ಲವನ್ನು ಸಂಚರಿಸಿದರು. ಒಂದು ಮುಹೂರ್ತಕಾಲದಲ್ಲಿಯೇ, ಮಹಾ ಭಯಂಕರ ದರ್ಶನರೂ, ಭಯಂಕರ ಮುಖಗಳುಳ್ಳವರೂ, ವಿವಿಧಾಯುಧಗಳಿಂದಲಂಕೃತವಾದ ಭುಜಗಳುಳ್ಳವರೂ ಆದ

ನರ್ದಂತೋ ಭೀಮವದನಾ ನಾನಾಪ್ರಹರಣೈರ್ಭುಜೈಃ ॥ ೨೪ ॥ ಅಸಿಭಿಃ ಪಟ್ಟಸೈಃ ಶೂಲೈರ್ಗದಾಭಿರ್ಮುಸಲೈರ್ಹುಳೈಃ । ಶಕ್ತಿಭಿಸ್ತೀಕ್ಷ್ಣಧಾರಾಭಿರ್ಮಹದ್ಭಿಃ ಕೂಟಮುದ್ಗರೈಃ ॥೨೪॥ ಯಷ್ಟಿಭಿರ್ವಿಮಲೈಶ್ಚಕ್ರೈರ್ನಿಶಿತೈಶ್ಚ ಪರಶ್ವಧೈಃ । ಭಿಂಡಿವಾಲೈಃ ಶತಘ್ನೀಭಿರನ್ಯೈಶ್ಚಾಪಿ ವರಾಯುಧೈಃ ॥ ೨೬ ॥ ಅಥಾನಯದ್ಬಲಾಧ್ಯಕ್ಷಸ್ಸತ್ವರೋ ರಾವಣಾಜ್ಞಯಾ । ದ್ರುತಂ ಸೂತಸಮಾಯುಕ್ತಂ ಯುಕ್ತಾಷ್ಟತುರಗಂ ರಥಂ । ಆರುರೋಹ ರಥಂ ಭೀಮೋ ದೀಪ್ಯಮಾನಂ ಸ್ವತೇಜಸಾ ॥ ೨೭ ॥ ತತಃ ಪ್ರಯಾತಸ್ಸಹಸಾ ರಾಕ್ಷಸೈರ್ಬಹುಭಿರ್ವೃತಃ । ರಾವಣಸ್ಸತ್ತ್ವಗಾಂಭೀರ್ಯಾದ್ದಾರಯನ್ನಿವ ಮೇದಿನೀಂ ॥ ೨೮ ॥ ರಾವಣೇನಾಭ್ಯನುಜ್ಞಾತೌ ಮಹಾಪಾರ್ಶ್ವಮಹೋದರೌ ।

ಮುಸಲೈಃ - ಒನಕೆಗಳಿಂದ, ಹುಳೈಃ - ಹುಳಗಳೆಂಬ ಆಯುಧಗಳಿಂದ, ತೀಕ್ಷ್ಣಧಾರಾಭಿಃ - ಹದವಾದ ಅಲಗುಗಳುಳ್ಳ, ಶಕ್ತಿಭಿಃ - ಶಕ್ತಿಗಳಿಂದಲೂ, ಮಹದ್ಭಿಃ - ದೊಡ್ಡವವಾದ, ಕೂಟಮುದ್ಗರೈಃ - ಕಬ್ಬಿಣದ ಕೊಡತಿಗಳಿಂದಲೂ, ಯಷ್ಟಿಭಿಃ-ದಂಡಗಳಿಂದಲೂ, ವಿಮಲೈಃ-ನಿರ್ಮಲಗಳಾದ, ಚಕ್ರೈಃ-ಚಕ್ರಾಯುಧಗಳಿಂದಲೂ, ನಿಶಿತೈಃ-ಹದವಾದ, ಪರಶ್ವಧೈಃ-ಗೊಡ್ಲಿಗಳಿಂದಲೂ, ಭಿಂಡಿವಾಲೈಃ-ಮರದ ಕೊಡತಿಗಳಿಂದಲೂ, ಶತಘ್ನೀಭಿಃ - ಪಿರಂಗಿಗಳಿಂದಲೂ, ಅನ್ಯೈಃ - ಮತ್ತೆ ಕೆಲವಾದ, ವರಾಯುಧೈಶ್ಚಾಪಿ - ಉತ್ತಮವಾದ ಆಯುಧಗಳಿಂದಲೂ ಕೂಡಿದವರಾಗಿ, ಮುಹೂರ್ತಾತ್ - ಮುಹೂರ್ತಕಾಲದಲ್ಲಿಯೇ, ನಿಷ್ಪೇತುಃ-ಹೊರಟರು. ॥೨೪-೨೬॥ ಅಥ-ಬಳಿಕ, ಬಲಾಧ್ಯಕ್ಷಃ-ಸೇನಾನಾಯಕನು, ರಾವಣಾಜ್ಞಯಾ - ದಶಕಂಠನ ಅಪ್ಪಣೆಯಿಂದ, ಸತ್ವರಃ - ತ್ವರೆಯಿಂದ ಕೂಡಿ, ದ್ರುತಂ - ಶೀಘ್ರವಾಗಿ, ಸೂತ....ಕ್ತಂ - ಸಾರಥಿಯೊಡನೆ, ಯುಕ್ತಾ....ಗಂ - ಹೂಡಿದ ಎಂಟು ಕುದುರೆಗಳುಳ್ಳ, ರಥಂ-ತೇರನ್ನು, ಅನಯತ್ - ತಂದನು. ॥ ೨೭ ॥ ಭೀಮಃ - ಭಯಂಕರನಾದ ರಾವಣನು, ಸ್ವತೇಜಸಾ - ತನ್ನ ತೇಜಸ್ಸಿನಿಂದ, ದೀಪ್ಯಮಾನಂ - ಹೊಳೆಯುತ್ತಿರುವ, ರಥಂ - ತೇರನ್ನು, ಆರುರೋಹ - ಏರಿದನು, ತತಃ - ಬಳಿಕ, ರಾಕ್ಷಸೈಃ - ರಕ್ಕಸರಿಂದ, ವೃತಃ - ಸುತ್ತುವರೆದ, ರಾವಣಃ - ದಶಗ್ರೀವನು, ಸತ್ವ....ತ್ - ಬಲದಿಂದ ಹುಟ್ಟಿದ ಗಾಂಭೀರ್ಯದಿಂದ, ಮೇದಿನೀಂ - ಭೂಮಿಯನ್ನು, ದಾರಯನ್ನಿವ - ಸೀಳುವವನಂತೆ, ಸಹಸಾ - ಜಾಗ್ರತೆಯಾಗಿ, ಪ್ರಯಾತಃ - ಹೊರಟನು. ॥ ೨೮ ॥ ರಾವಣೇನ - ದಶಗ್ರೀವನಿಂದ, ಅಭ್ಯನುಜ್ಞಾತೌ - ಅಜ್ಞಾಪಿಸಲ್ಪಟ್ಟ, ಮಹಾ....ರೌ - ಮಹಾಪಾರ್ಶ್ವ

ರಾಕ್ಷಸರೆಲ್ಲರೂ ಸಿಂಹನಾದಗಳನ್ನು ಮಾಡುತ್ತ ಯುದ್ಧಕ್ಕೆ ಹೊರಡಲು ಒಕ್ಕೂಡಿದರು. ಅವರೆಲ್ಲರೂ, ಖಡ್ಗ, ಪಟ್ಟಿಸ, ಶೂಲ, ಗದೆ, ಒನಕೆ, ಹುಳೆ, ಶಕ್ತಿ, ಕೂಟ, ಮುದ್ಗರ, ನಿಡಿಗೋಲುಗಳು, ಚಕ್ರಗಳು, ಗಂಡುಗೊಡಲಿಗಳು ಇವೇ ಮೊದಲಾದ ಆಯುಧಗಳೊಡಗೂಡಿ ಬಹು ಭಯಂಕರವಾಗಿ ಶೋಭಿಸುತ್ತಿದ್ದರು. ॥೨೧–೨೬॥ ಆ ತರುವಾಯ ಬಲಾಧ್ಯಕ್ಷನು ಒಡೆಯನಾದ ರಾವಣನ ಅಪ್ಪಣೆಯಂತೆ ಎಂಟು ಕುದುರೆಗಳು ಹೂಡಿ, ಸಾರಥಿಯೊಡನೆ ಸಿದ್ಧವಾಗಿದ್ದ ತೇರನ್ನು ತಂದು ನಿಲ್ಲಿಸಿದನು. ಆಗ ಮಹಾ ಪರಾಕ್ರಮಿಯಾದ ರಾವಣಾಸುರನು ತನ್ನ ತೇಜಸ್ಸಿನಿಂದಲೇ ಬಹಳವಾಗಿ ಪ್ರಜ್ವಲಿಸುತ್ತ ಆ ರಥಶ್ರೇಷ್ಠವನ್ನೇರಿ ಕುಳಿತನು. ಇದಾದ ತರುವಾಯ ಆ ರಾಕ್ಷಸರಾಜನು ಸ್ವಪರಾಕ್ರಮದಿಂದಲೂ, ಸ್ವಗಾಂಭೀರ್ಯದಿಂದಲೂ ಶೋಭಿಸಿ, ಹಿಂಬಾಲಿಸಿರುವ ರಾಕ್ಷಸಸೇನೆಯೊಡನೆ ಭೂಮಿಯನ್ನೇ ಸೀಳುವನೋ ಎಂಬಂತೆ ತೋರುತ್ತ ಯುದ್ಧಕ್ಕಾಗಿ ಹೊರಟನು. ಆಮೇಲೆ ಮಹೋದರ, ಮಹಾಪಾರ್ಶ್ವ, ವಿರೂಪಾಕ್ಷರೆಂಬ ರಾಕ್ಷಸೋತ್ತ

ವಿರೂಪಾಕ್ಷಶ್ಚ ದುರ್ಧರ್ಷೋ ರಥಾನಾರುರುಹುಸ್ತದಾ ॥ ೨೯ ॥ ತೇತು ಹೃಷ್ಟಾ ವಿನರ್ದಂತೋ ಭಿಂದಂತ ಇವ ಮೇದಿನೀಂ । ನಾದಂ ಘೋರಂ ವಿಮುಂಚಂತೋ ನಿರ್ಯಯುರ್ಜಯಕಾಂಕ್ಷಿಣಃ ॥ ೩೦ ॥ ತತೋ ಯುದ್ಧಾಯ ತೇಜಸ್ವೀ ರಕ್ಷೋಗಣಬಲೈರ್ವೃತಃ । ನಿರ್ಯಯಾವುದ್ಯತಧನುಃ ಕಾಲಾಂತಕಯಮೋಪಮಃ ॥ ೩೧ ॥ ತತಃ ಪ್ರಜವನಾಶ್ವೇನ ರಥೇನ ಸ ಮಹಾರಥಃ । ದ್ವಾರೇಣ ನಿರ್ಯಯೌ ತೇನ ಯತ್ರ ತೌ ರಾಮಲಕ್ಷ್ಮಣೌ ॥೩೨॥ ತತೋ ನಷ್ಟಪ್ರಭಸ್ಸೂರ್ಯೋ ದಿಶಶ್ಚ ತಿಮಿರಾವೃತಾಃ । ದ್ವಿಜಾಶ್ಚ ನೇದುರ್ಘೋರಾಶ್ಚ ಸಂಚಚಾಲೇವ ಮೇದಿನೀ ॥ ೩೩ ॥ ವವರ್ಷ ರುಧಿರಂ ದೇವಶ್ಚಸ್ಖಲುಸ್ತುರಗಾಃ ಪಥಿ । ಧ್ವಜಾಗ್ರೇ ನ್ಯಪತದ್ಗೃಧ್ರೋ ವಿನೇದುಶ್ಚಾಽಶಿವಂ

ಮಹೋದರರು, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ, ವಿರೂಪಾಕ್ಷಶ್ಚ - ವಿರೂಪಾಕ್ಷನೂ, ತದಾ-ಆಗ, ರಥಾನ್ - ತೇರುಗಳನ್ನು, ಆರುರುಹುಃ - ಏರಿದರು. ॥ ೨೯ ॥ ತೇತು - ಅವರಾದರೆ, ಹೃಷ್ಟಾಃ-ಸಂತೋಷಗೊಂಡವರಾಗಿ, ಮೇದಿನೀಂ - ಭೂಮಿಯನ್ನು, ಭಿಂದಂತಇವ - ಭೇದಿಸುವವರಂತೆ, ನರ್ದಂತಃ - ಸಿಂಹನಾದ ಮಾಡುವವರಾಗಿ, ಘೋರಂ - ಭಯಂಕರವಾಗಿ, ನಾದಂ - ಧ್ವನಿಯನ್ನು, ವಿಮುಂಚಂತಃ - ಬಿಡುವವರಾಗಿ, ಜಯಕಾಂಕ್ಷಿಣಃ - ಜಯಾಪೇಕ್ಷೆಯುಳ್ಳವರಾಗಿ, ನಿರ್ಯಯುಃ-ಹೊರಟರು. ॥೩೦॥ ತತಃ - ಬಳಿಕ, ತೇಜಸ್ವೀ-ತೇಜೋವಂತನಾದ, ಕಾಲಾಂ....ಮಃ-ಪ್ರಳಯಕಾಲದ ಯಮನಿಗೆ ಸಮಾನನಾದ ರಾವಣನು, ರಕ್ಷೋಗಣಬಲೈಃ - ರಾಕ್ಷಸರ ಸಮೂಹಗಳ ಸೇನೆಗಳಿಂದ, ವೃತಃ - ಸುತ್ತುವರೆದವನಾಗಿ, ಉದ್ಯತಧನುಃ - ಮೇಲಕ್ಕೆತ್ತಿದ ಧನುಸ್ಸುಳ್ಳವನಾಗಿ, ಯುದ್ಧಾಯ - ಕಾಳಗಕ್ಕೆ, ನಿರ್ಯಯೌ-ಹೊರಟನು. ॥ ೩೧ ॥ ತತಃ - ಬಳಿಕ, ಸಮಹಾರಥಃ - ಆ ಮಹಾ ರಥಿಕನು, ಪ್ರಜವನಾಶ್ವೇನ - ಬಹು ವೇಗವತ್ತಾದ ಕುದುರೆಗಳುಳ್ಳ, ರಥೇನ - ತೇರಿನಿಂದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ಯತ್ರ - ಯಾವ ಸ್ಥಳದಲ್ಲಿ, ಸ್ಥಿತೌ - ನಿಂತಿದ್ದರೋ, ತೇನದ್ವಾರೇಣ - ಆ ಬಾಗಿಲಿನಿಂದ, ನಿರ್ಯಯೌ - ಹೊರಟುಬಂದರು. ॥ ೩೨ ॥ ತತಃ - ಬಳಿಕ, ಸೂರ್ಯಃ - ಸೂರ್ಯನು, ನಷ್ಟಪ್ರಭಃ - ನಷ್ಟವಾದ ಕಾಂತಿಯುಳ್ಳವನಾದನು, ದಿಶಶ್ಚ - ದಿಕ್ಕುಗಳೂ, ತಿಮಿರಾವೃತಾಃ - ಕತ್ತಲಿನಿಂದ ಮುಚ್ಚಲ್ಪಟ್ಟವು, ಘೋರಾಃ - ಭಯಂಕರವಾದ, ದ್ವಿಜಾಶ್ಚ - ಪಕ್ಷಿಗಳೂ, ನೇದುಃ - ಕೂಗಿದವು, ಮೇದಿನೀ - ಭೂಮಿಯು, ಚಚಾಲೇವ - ನಡುಗಿದಂತಿತ್ತು, ದೇವಃ - ಪರ್ಜನ್ಯನು, ರುಧಿರಂ - ರಕ್ತವನ್ನು, ವವರ್ಷ - ಸುರಿಸಿದನು, ತುರುಗಾಃ-

---

ಮರು ಮೂವರೂ ಒಡೆಯನಾದ ರಾವಣನ ಆಜ್ಞೆಯಂತೆ ತಂತಮ್ಮ ರಥಗಳನ್ನೇರಿ ಹೊರಟರು. ಅವರೆಲ್ಲರೂ ಭೂಮಿಯೇ ಒಡೆದುಹೋಗುವಂತೆ ಸಿಂಹನಾದಗಳನ್ನು ಮಾಡುತ್ತ, ರಣೋತ್ಸಾಹದಿಂದ ಸಂತುಷ್ಟರಾಗಿ ಜಯಕಾಂಕ್ಷೆಯಿಂದ ಹೊರಟರು. ಹೀಗೆ ಪ್ರಳಯಕಾಲದ ಯಮನಿಗೆ ಸಮಾನನೂ, ಮಹಾ ರಥಿಕನೂ, ಮಹಾ ತೇಜಸ್ವಿಯೂ ಆದ ರಾವಣನು ರಾಕ್ಷಸಸೇನೆಗಳಿಂದ ಪರಿವೃತನಾಗಿ ಶ್ರೀರಾಮಲಕ್ಷ್ಮಣರಿರುವ ಉತ್ತರದ್ವಾರದಿಂದ ಯುದ್ಧಕ್ಕಾಗಿ ಹೊರಟುಬಂದನು. ॥೨೭–೩೨॥ ಆಗ ಸೂರ್ಯನು ಕಾಂತಿಗುಂದಿ ಹೋದನು. ದಿಕ್ಕುಗಳೆಲ್ಲ ಕತ್ತಲಿಂದ ತುಂಬಿಹೋದುವು. ಹಕ್ಕಿಗಳೆಲ್ಲವೂ ಕರ್ಣಕಠೋರವಾಗಿ ಅರಚಿಕೊಂಡವು. ಭೂಮಿಯೇ ಒಡೆದುಹೋಗುವಂತಾಯಿತು. ವರುಣದೇವನು ರಕ್ತದ ಮಳೆಗರೆದನು. ರಾವಣನ ರಥಕ್ಕೆ ಹೂಡಿದ್ದ ಎಂಟು ಕುದುರೆಗಳೂ ಸಮಭೂಮಿಯಲ್ಲಿಯೇ ಮುಗ್ಗರಿಸಿ

ಶಿವಾಃ ॥ ೩೪ ॥ ನಯನಂ ಚಾಸ್ಫುರದ್ವಾಮಂ ಸವ್ಯೋ ಬಾಹುರಕಂಪತ । ವಿವರ್ಣಂ ವದನಂ ಚಾಸೀತ್ ಕಿಂಚಿದಭ್ರಶ್ಯತ ಸ್ವರಃ ॥ ೩೫ ॥ ತತೋ ನಿಷ್ಪತತೋ ಯುದ್ಧೇ ದಶಗ್ರೀವಸ್ಯ ರಕ್ಷಸಃ । ರಣೇ ನಿಧನಶಂಸೀನಿ ರೂಪಾಣ್ಯೇತಾನಿ ಜಜ್ಞಿರೇ ॥ ೩೬ ॥ ಅಂತರಿಕ್ಷಾತ್ಪಪಾತೋಲ್ಕಾ ನಿರ್ಘಾತಸಮನಿಸ್ವನಾ । ವಿನೇದುರಶಿವಾ ಗೃಧ್ರಾ ವಾಯಸೈರನುನಾದಿತಾಃ ॥೩೭॥ ಏತಾನಚಿಂತಯರ್ನ್ ಘೋರಾನುತ್ಪಾತಾನ್ ಸಮುಪಸ್ಥಿತಾನ್ । ನಿರ್ಯಯೌ ರಾವಣೋ ಮೋಹಾದ್ವಧಾರ್ಥೀ ಕಾಲಚೋದಿತಃ ॥ ೩೮ ॥ ತೇಷಾಂತು

ಕುದುರೆಗಳು, ಪಥಿ - ಮಾರ್ಗದಲ್ಲಿ, ಚಸ್ಖಲುಃ - ಜಾರಿದುವು, ಧ್ವಜಾಗ್ರೇ - ಧ್ವಜದ ತುದಿಯಲ್ಲಿ, ಗೃಧ್ರಃ - ಹದ್ದು, ನ್ಯಪತತ್ - ಬಿದ್ದಿತು, ಶಿವಾಶ್ಚ - ನರಿಗಳೂ ಕೂಡ, ಅಶಿವಂ - ಅಮಂಗಳವಾಗಿ, ವಿನೇದುಃ - ಕೂಗಿದವು, ವಾಮಂನಯನಂಚ - ಎಡಗಣ್ಣೂ ಕೂಡ, ಅಸ್ಫುರತ್ - ಚಲಿಸಿತು, ಸವ್ಯಃ ಬಾಹುಃ - ಎಡಭುಜವು, ಅಕಂಪತ - ಕದಲಿತು, ವದನಂಚ - ಮುಖವೂ ಕೂಡ, ವಿವರ್ಣಂ - ಕಾಂತಿಹೀನವಾದದ್ದು, ಆಸೀತ್ - ಆಯಿತು, ಸ್ವರಶ್ಚ - ಕೂಗೂ, ಕಿಂಚಿತ್ - ಸ್ವಲ್ಪ, ಅಭ್ರಶ್ಯತ - ಕುಗ್ಗಿತು, ತತಃ - ಬಳಿಕ, ದಶಗ್ರೀವಸ್ಯ - ದಶಗ್ರೀವನೆಂಬ, ರಕ್ಷಸಃ - ರಕ್ಕಸನು, ಯುದ್ಧೇ - ಕಾಳೆಗದ ವಿಷಯದಲ್ಲಿ, ನಿಷ್ಪತತಃ - ಹೊರುಟರು, ರಣೇ - ಯುದ್ಧದಲ್ಲಿ, ನಿಧನಶಂಸೀನಿ - ಸಂಹಾರವನ್ನು ಸೂಚಿಸುವ, ಏತಾನಿರೂಪಾಣಿ - ಈ ದುರ್ನಿಮಿತ್ತಾಕಾರಗಳು, ಜಜ್ಞಿರೇ - ಹುಟ್ಟಿದವು. ॥ ೩೩-೩೬ ॥ ಅಂತರಿಕ್ಷಾತ್ - ಗಗನದಿಂದ, ನಿರ್ಘಾ....ನಾ - ಸಿಡಿಲಿಗೆ ಸಮಾನವಾದ ಶಬ್ದವುಳ್ಳ, ಉಲ್ಕಾ - ಕೊಳ್ಳಿಯು, ಪಪಾತ - ಬಿದ್ದಿತು, ಅಶಿವಾಃ - ಅಮಂಗಳಕರವಾದ, ಗೃಧ್ರಾಃ - ಹದ್ದುಗಳು, ವಾಯಸೈಃ- ಕಾಗೆಗಳಿಂದ, ಅನುನಾದಿತಾಃ - ಅನುಸರಿಸಿ ಧ್ವನಿಮಾಡುವವುಗಳಾಗಿ, ವಿನೇದುಃ - ಕೂಗಿದವು. ॥೩೭॥ ವಧಾರ್ಥೀ - ಸಂಹಾರವನ್ನು ಕೋರುವ, ಕಾಲಚೋದಿತಃ - ಯಮನಿಂದ ಪ್ರೇರಿತನಾದ, ರಾವಣಃ - ದಶಗ್ರೀವನು, ಮೋಹಾತ್ - ಅಜ್ಞಾನದಿಂದ, ಸಮುಪಸ್ಥಿತಾನ್ - ಹುಟ್ಟಿದ, ಘೋರಾನ್ - ಭಯಂಕರವಾದ, ಏತಾನುತ್ಪಾತಾನ್ - ಈ ದುಶ್ಶಕುನಗಳನ್ನು, ಅಚಿಂತಯನ್ - ಲಕ್ಷ್ಯಮಾಡದೆ, ನಿರ್ಯಯೌ-

---

ದುವು. ಆ ರಾಕ್ಷಸನ ರಥಾಗ್ರದ ಧ್ವಜದ ಮೇಲೆ ರಣಹದ್ದು ಬಿದ್ದಿತು. ನರಿಗಳೆಲ್ಲ ಅಮಂಗಳಕರವಾಗಿ ಕೂಗಿಕೊಂಡವು. ರಾಕ್ಷಸರಾಜನಾದ ಆತನ ಎಡಗಣ್ಣೂ ಎಡಭುಜವೂ ಅದಿರಿದುವು; ಅವನ ಮುಖವೂ ವಿವರ್ಣವಾಗಿ, ಕಂಠಸ್ವರವೂ ಬೇರ್ಪಟ್ಟಿತು. ಇದೂ ಅಲ್ಲದೆ ಯುದ್ಧದಲ್ಲಿ ರಾವಣನ ವಧೆಯನ್ನು ಸೂಚಿಸುವ ಅನೇಕ ಅಪಶಕುನಗಳೂ ತಲೆದೋರಿದುವು. ಸಿಡಿಲಿಗೆ ಸಮಾನವಾಗಿ ಧ್ವನಿಮಾಡುತ್ತ ಅಂತರಿಕ್ಷದಿಂದ ಉಲ್ಕೆಯು ಭೂಮಿಗೆ ಬಿದ್ದಿತು. ಗೃಧ್ರಗಳೆಲ್ಲ ಕಾಗೆಗಳೊಡನೆ ದನಿಬೆರಸಿ ಅಮಂಗಳವಾಗಿ ಕೂಗಿಕೊಂಡವು. ಹೀಗೆಯೇ ಇನ್ನೂ ಅನೇಕ ಅಪಶಕುನಗಳಾದುವು. ಈ ರೀತಿ ತಲೆದೋರಿದ ಅಪಶಕುನಗಳಾವುವನ್ನೂ ಲಕ್ಷ್ಯಕ್ಕೆ ತಂದುಕೊಳ್ಳದೆ ಆ ರಾವಣನು ಕೇವಲ ತಿಳಿಗೇಡಿತನದಿಂದ ಕಾಲಚೋದಿತನಾಗಿಯೇ ಯುದ್ಧಕ್ಕೆ ಹೊರಟು ಬಂದನು. ॥ ೩೩–೩೮ ॥

ರಥಘೋಷೇಣ ರಾಕ್ಷಸಾನಾಂ ಮಹಾತ್ಮನಾಂ । ವಾನರಾಣಾಮಪಿ ಚಮೂರ್ಯುದ್ಧಾಯೈವಾಭ್ಯವರ್ತತ ॥೩೯॥ ತೇಷಾಂತು ತುಮುಲಂ ಯುದ್ಧಂ ಬಭೂವ ಕಪಿರಾಕ್ಷಸಾಂ। ಅನ್ಯೋನ್ಯಮಾಹ್ವಯಾನಾನಾಂ ಕ್ರುದ್ಧಾನಾಂ ಜಯಮಿಚ್ಛತಾಂ ॥ ೪೦ ॥ ತತಃ ಕ್ರುದ್ಧೋ ದಶಗ್ರೀವಃ ಶರೈಃ ಕಾಂಚನಭೂಷಣೈಃ । ವಾನರಾಣಾಮನೀಕೇಷು ಚಕಾರ ಕದನಂ ಮಹತ್ ॥ ೪೧ ॥ ನಿಕೃತ್ತಶಿರಸಃ ಕೇಚಿದ್ರಾವಣೇನ ವಲೀಮುಖಾಃ । ಕೇಚಿದ್ವಿಚ್ಛಿನ್ನಹೃದಯಾಃ ಕೇಚಿಚ್ಛ್ರೋತ್ರವಿವರ್ಜಿತಾಃ ॥ ೪೨ ॥ ನಿರುಚ್ಛ್ವಾಸಾ ಹತಾಃ ಕೇಚಿತ್ ಕೇಚಿತ್ಪಾರ್ಶ್ವೇಷು ದಾರಿತಾಃ । ಕೇಚದ್ವಿಭಿನ್ನಶಿರಸಃ ಕೇಚಚ್ಚಕ್ಷುರ್ವಿವರ್ಜಿತಾಃ ॥ ೪೩ ॥

ತೆರಳಿದನು. ॥ ೩೮ ॥ ಮಹಾತ್ಮನಾಂ - ದೊಡ್ಡ ಶರೀರಗಳುಳ್ಳ, ತೇಷಾಂರಾಕ್ಷಸಾನಾಂ - ಆ ರಕ್ಕಸರ, ರಥಘೋಷೇಣ - ರಥಧ್ವನಿಗಳಿಂದ, ವಾನರಾಣಾಂ - ಕಪಿಗಳ, ಚಮೂರಪಿ - ಸೇನೆಯೂ ಕೂಡ, ಯುದ್ಧಾಯೈವ ಯುದ್ಧಕ್ಕಾಗಿಯೇ, ಅಭ್ಯವರ್ತತ-ಹಿಂತಿರುಗಿ ಸಿದ್ಧವಾಗಿ ನಿಂತಿತು॥೩೯॥ಅನ್ಯೋನ್ಯಂ-ಪರಸ್ಪರವಾಗಿ, ಆಹ್ವಯಾನಾನಾಂ - ಕರೆಯುತ್ತಿರುವ, ಕ್ರುದ್ಧಾನಾಂ - ಕುಪಿತರಾದ, ಜಯಂ - ಜಯವನ್ನು, ಇಚ್ಛತಾಂ - ಅಪೇಕ್ಷಿಸುವ, ತೇಷಾಂಕಪಿರಕ್ಷಸಾಂ - ಆ ವಾನರರಿಗೂ ರಕ್ಕಸರಿಗೂ, ತುಮುಲಂ - ಸಂಕುಲವಾದ, ಯುದ್ಧಂತು - ಯುದ್ಧವಾದರೆ, ಬಭೂವ - ಆಯಿತು. ॥೪೦॥ ತತಃ - ಬಳಿಕ, ಕ್ರುದ್ಧಃ - ಕುಪಿತನಾದ, ದಶಗ್ರೀವಃ - ದಶಕಂಠನು, ವಾನರಾಣಾಂ - ಕಪಿಗಳ, ಅನೀಕೇಷು-ಸೇನೆಗಳಲ್ಲಿ, ಕಾಂಚ....ಣೈಃ - ಬಂಗಾರದ ಒಡವೆಗಳುಳ್ಳ, ಶರೈಃ - ಬಾಣಗಳಿಂದ, ಮಹತ್ - ಮಹತ್ತರವಾದ, ಕದನಂ - ಸಂಹಾರನನ್ನು, ಚಕಾರ - ಮಾಡಿದನು. ॥ ೪೧ ॥ ರಾವಣೇನ - ದಶಕಂಠನಿಂದ, ಕೇಚಿತ್ವಲೀಮುಖಾಃ - ಕೆಲವಾನರರು, ನಿಕೃತ್ತಶಿರಸಃ - ಕತ್ತರಿಸಲ್ಪಟ್ಟ ಶಿರಗಳುಳ್ಳವರಾದರು, ಕೇಚಿತ್ - ಕೆಲವರು, ವಿಚ್ಛಿನ್ನಹೃದಯಾಃ - ಭೇದಿಸಲ್ಪಟ್ಟ ಎದೆಗಳುಳ್ಳವರಾದರು, ಕೇಚಿತ್-ಕೆಲವರು, ಶ್ರೋತ್ರ....ತಾಃ - ಕಿವಿಗಳಿಲ್ಲದವರಾದರು, ಕೇಚಿತ್ - ಕೆಲವರು, ನಿರುಚ್ಛ್ವಾಸಾಃ - ಉಚ್ಛ್ವಾಸವಿಲ್ಲದೆ, ಹತಾಃ - ಹೊಡೆಯಲ್ಪಟ್ಟರು, ಕೇಚಿತ್ - ಕೆಲವರು, ಪಾರ್ಶ್ವೇಷು - ಪಾರ್ಶ್ವಗಳಲ್ಲಿ, ದಾರಿತಾಃ - ಸೀಳಲ್ಪಟ್ಟರು, ಕೇಚಿತ್ - ಕೆಲವರು, ವಿಭಿನ್ನಶಿರಸಃ - ಭೇದಿಸಿದ ಶಿರಸ್ಸುಗಳುಳ್ಳವರಾದರು, ಕೇಚಿತ್ - ಕೆಲವರು, ಚಕ್ಷು....ತಾಃ - ಕಣ್ಣುಗಳಿಂದ ವರ್ಜಿತರಾದರು. ॥ ೪೨-೪೩ ॥ ದಶಾನನಃ - ದಶಕಂಠನು, ಕ್ರೋಧ... ತ್ರಃ - ಕೋಪದಿಂದ ತಿರುಗಿಸಲ್ಪಟ್ಟ ಕಣ್ಣು

ರಾಕ್ಷಸರ ರಥಘೋಷವನ್ನು ಕೇಳಿದೊಡನೆಯೇ ರಣಾಂಗಣದಲ್ಲಿದ್ದ ಉಭಯಸೇನೆಗಳೂ ಯುದ್ಧಸನ್ನದ್ಧವಾಗಿ ನಿಂತವು. ಆ ತರುವಾಯ ಪರಸ್ಪರ ಜಯಕಾಕ್ಷಿಗಳಾಗಿ ಕೋಪಾಟೋಪದಿಂದ ಒಬ್ಬರಿಗೊಬ್ಬರು ಯುದ್ಧಕ್ಕೆ ಆಹ್ವಾನವೀಯುತ್ತ, ಆ ಕಪಿರಾಕ್ಷಸರೀರ್ವರಿಗೂ ಘೋರ ಯುದ್ಧಕ್ಕೆ ಮೊದಲಾಯಿತು. ಆಗ ಬಹಳವಾಗಿ ಕೆರಳಿದ ರಾವಣಾಸುರನು ಕಾಂಚನ ಭೂಷಣಗಳಾದ ಬಾಣಗಳಿಂದ ವಾನರಸೇನೆಯಲ್ಲಿ ಅನೇಕರನ್ನು ಸಂಹರಿಸಿದನು. ಆಗ ಕೆಲ ವಾನರರು ಆ ರಾವಣನ ಭಾಣಗಳಿಂಪ ಕತ್ತರಿಸಿದ ತಲೆಗಳುಳ್ಳವರಾದರು. ಕೆಲವರಿಗೆ ಎದೆಗಳೇ ಭೇದಿಸಿ ಹೋದುವು. ಕೆಲವರಿಗೆ ಕಿವಿಗಳೇ ಹರಿದುಹೋದುವು. ಉಸಿರಡಗಿ ಮಡಿದವರು ಕೆಲವರು. ಕೆಲವರಿಗೆ ಪಕ್ಕಗಳೇ ಸೀಳಿಹೋದುವು. ಕೆಲವರಿಗೆ ತಲೆಗಳೇ ಕಳಚಿ ಬಿದ್ದುಹೋದುವು. ಕೆಲವರಿಗೆ ಕಣ್ಣುಗಳೇ ಇಲ್ಲವಾಯಿತು. ಹೀಗೆ ಬಹಳವಾಗಿ

ದಶಾನನಃ ಕ್ರೋಧವಿವೃತ್ತನೇತ್ರೋ
ಯತೋ ಯತೋಽಭ್ಯೇತಿ ರಥೇನ ಸಂಖ್ಯೇ ।
ತತಸ್ತತಸ್ತಸ್ಯ ಶರಪ್ರವೇಗಂ
ಸೋಢುಂ ನಶೇಕುರ್ಹರಿಪುಂಗವಾಸ್ತೇ ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಣ್ಣವತಿತಮಸ್ಸರ್ಗಃ.

ಗಳುಳ್ಳವನಾಗಿ, ಸಂಖ್ಯೇ - ಯುದ್ಧದಲ್ಲಿ, ರಥೇನ - ತೇರಿನಿಂದ, ಯತಃಯತಃ - ಯಾವಯಾವ ಸ್ಥಳದಲ್ಲಿ, ಅಭ್ಯೇತಿ - ಬರುತ್ತಾನೆಯೋ, ತತಸ್ತತಃ - ಅಲ್ಲಲ್ಲಿ, ತಸ್ಯ - ಆ ದಶಕಂಠನ, ಶರಪ್ರವೇಗಂ - ಬಾಣವೇಗವನ್ನು, ಸೋಢುಂ - ಸಹಿಸುವದಕ್ಕೆ, ತೇಹರಿಪುಂಗವಾಃ - ಆ ವಾನರಶ್ರೇಷ್ಠರು, ನಶೇಕುಃ - ಸಮರ್ಥರಾಗಲಿಲ್ಲವು. ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಣ್ಣವತಿತಮಸ್ಸರ್ಗಃ.

ಕೆರಳಿ ಕಣ್ಣಾಲಿಗಳನ್ನು ತಿರುಗಿಸುತ್ತ ಭಯಂಕರ ಕದನ ಮಾಡುತ್ತ ರಥವೇರಿ ಬರುತ್ತಿದ್ದ ಆ ರಾವಣನ ಬಾಣದ ಬೇಗೆಯನ್ನು ವಾನರಶ್ರೇಷ್ಠರಾರೂ ಸಹಿಸಲಾರದೆ ಹೋದರು. ॥ ೩೯–೪೪ ॥

ಇಂತಿದು ರಾವಣನ ಯುದ್ಧನಿರ್ಯಾಣವೆಂಬ ತೊಂಬತ್ತಾರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತನವತಿತಮಸ್ಸರ್ಗಃ

ತಥಾ ತೈಃ ಕೃತ್ತಗಾತ್ರೈಸ್ತು ದಶಗ್ರೀವೇಣ ಮಾರ್ಗಣೈಃ । ಬಭೂವ ವಸುಧಾ ತತ್ರ ಪ್ರಕೀರ್ಣಾ ಹರಿಭಿಸ್ತದಾ ॥೧॥ ರಾವಣಸ್ಯಾಪ್ರಸಹ್ಯಂ ತಂ ಶರಸಂಪಾತಮೇಕತಃ । ನಶೇಕುಸ್ಸಹಿತುಂ ದೀಪ್ತಂ ಪತಂಗಾ ಜ್ವಲನಂ ಯಥಾ ॥ ೨ ॥ ತೇಽರ್ದಿತಾ ನಿಶಿತೈರ್ಬಾಣೈಃ ಕ್ರೋಶಂತೋ ವಿಪ್ರದುದ್ರುವುಃ । ಪಾವಕಾರ್ಚಿಸ್ಸಮಾವಿಷ್ಟಾ ದಹ್ಯಮಾನಾ ಯಥಾ ಗಜಾಃ ॥೩॥ ಪ್ಲವಂಗಾನಾಮನೀಕಾನಿ ಮಹಾಭ್ರಾಣೀವ ಮಾರುತಃ । ಸಯಯೌ ಸಮರೇ ತಸ್ಮಿನ್ ವಿಧಮನ್ ರಾವಣಃ ಶರೈಃ ॥ ೪ ॥ ಕದನಂ ತರಸಾ ಕೃತ್ವಾ ರಾಕ್ಷಸೇಂದ್ರೋ ವನೌಕಸಾಂ । ಆಸಸಾದ ತತೋ ಯುದ್ಧೇ ರಾಘವಂ ತ್ವರಿತಸ್ತದಾ

ತಥಾ - ಆ ಪ್ರಕಾರವಾಗಿ, ದಶಗ್ರೀವೇಣ - ದಶಕಂಠನಿಂದ, ಮಾರ್ಗಣೈಃ - ಬಾಣಗಳಿಂದ, ಕೃತ್ತಗಾತ್ರೈಃ - ಕತ್ತರಿಸಲ್ಪಟ್ಟ ಶರೀರಗಳುಳ್ಳ, ತೈರ್ಹರಿಭಿಃ - ಆ ಕಪಿಗಳಿಂದ, ತದಾ - ಆ ಕಾಲದಲ್ಲಿ, ತತ್ರ - ಆ ಯುದ್ಧದಲ್ಲಿ, ವಸುಧಾ - ನೆಲವು, ಪ್ರಕೀರ್ಣಾ - ತುಂಬಿದುದು, ಬಭೂವ - ಆಯಿತು. ॥ ೧ ॥ ಏಕತಃ - ಒಬ್ಬನಾದ, ರಾವಣಸ್ಯ - ದಶಕಂಠನ ಸಂಬಂಧವಾದ, ಅಪ್ರಸಹ್ಯಂ - ಸಹಿಸಲಸಾಧ್ಯವಾದ, ತಂಶ......ತಂ ಆ ಬಾಣಗಳ ಬೀಳುವಿಕೆಯನ್ನು, ಪತಂಗಾಃ- ಈಚಲು ಹುಳುಗಳು, ದೀಪ್ತಂ - ಉರಿಯುತ್ತಿರುವ, ಜ್ವಲನಂಯಥಾ - ಅಗ್ನಿಯನ್ನಂತೆ, ಸಹಿತುಂ - ಸಹಿಸುವುದಕ್ಕೆ, ನಶೇಕುಃ - ಸಮರ್ಥವಾಗಲಿಲ್ಲ. ॥ ೨ ॥ ತೇ - ಆ ಕಪಿಗಳು, ನಿಶಿತೈಃ - ತೀಕ್ಷ್ಣವಾದ, ಬಾಣೈಃ - ಬಾಣಗಳಿಂದ, ಅರ್ದಿತಾಃ - ಹೊಡೆಯಲ್ಪಟ್ಟವರಾದಕಾರಣ, ಕ್ರೋಶಂತಃ - ಅರಚಿಕೊಳ್ಳುವರಾಗಿ, ಪಾವ....ಷ್ಟಾಃ - ಅಗ್ನಿಜ್ವಾಲೆಗಳಿಂದ ವ್ಯಾಪ್ತವಾಗಿ, ದಹ್ಯಮಾನಾಃ - ದಹಿಸಲ್ಪಡುತ್ತಲಿರುವ, ಗಜಾ ಇವ-ಕಾಡಾನೆಗಳಂತೆ, ವಿಪ್ರದುದ್ರುವುಃ-ಓಡಿದರು. ॥ ೩ ॥ ಸರಾವಣಃ-ಆ ದಶಕಂಠನು, ತಸ್ಮಿನ್‌ಸಮರೇ-ಆ ಯುದ್ಧದಲ್ಲಿ, ಪ್ಲವಂಗಾನಾಂ - ಕಪಿಗಳ, ಅನೀಕಾನಿ - ಸೇನೆಗಳನ್ನು, ಶರೈಃ - ಬಾಣಗಳಿಂದ, ಮಹಾಭ್ರಾಣಿ - ಕಾಲಮೇಘಗಳನ್ನು, ಮಾರುತಇವ - ಚಂಡಮಾರುತದಂತೆ, ವಿಧಮನ್ - ನಾಶಗೊಳಿಸುವವನಾಗಿ, ಯಯೌ - ತೆರಳಿದನು. ॥೪॥ ತದಾ - ಆ ಕಾಲದಲ್ಲಿ, ರಾಕ್ಷಸೇಂದ್ರಃ - ರಾವಣನು, ತರಸಾ - ಬಲದಿಂದ, ವನೌಕಸಾಂ - ಕಪಿಗಳ, ಕದನಂ - ಹಿಂಸೆಯನ್ನು, ಕೃತ್ವಾ - ಮಾಡಿ, ತತಃ -

---

ಆ ರೀತಿ ದಶಗ್ರೀವನ ಬಾಣಗಳಿಂದ ಭೇದಿಸಿಹೋದ ವಾನರರಿಂದ ರಣಾಂಗಣವೆಲ್ಲವೂ ತುಂಬಿಹೋಯಿತು. ಅದ್ವಿತೀಯ ಪರಾಕ್ರಮವಂತನಾದ ಆ ರಾವಣಾಸುರನು ಪ್ರಯೋಗಿಸುತ್ತಿದ್ದ ಕೂರಂಬುಮಳೆಯನ್ನು, ಅಗ್ನಿಯನ್ನು ಪತಂಗಗಳೆಂತೋ ಅಂತು ವಾನರರು ಸಹಿಸಲಾರದೆ ಹೋದರು. ಅವರೆಲ್ಲರೂ ಆ ಬಾಣಗಳ ಬೇಗೆಯನ್ನು ಭರಿಸಲಾರದೆ, ಕಾಳ್ಗಿಚ್ಚಿಗೆ ಸಿಕ್ಕಿಬಿದ್ದ ಕಾಡಾನೆಗಳಂತೆ ದಿಕ್ಕೆಟ್ಟು ಕೂಗಿಕೊಳ್ಳುತ್ತ ಓಡಿಹೋದರು. ರಾವಣನು, ಈ ರೀತಿ ಆ ಯುದ್ಧದಲ್ಲಿ, ಮಾರುತನು ಮುಗಿಲುಗಳನ್ನೆಂತೋ ಅಂತು ವಾನರಸೇನೆಗಳೆಲ್ಲವನ್ನೂ ತನ್ನ ಬಾಣಗಳಿಂದಲೇ ಚದುರಿಸುತ್ತ ಹೊರಟುಬಂದನು. ಆ ರಾಕ್ಷಸರಾಜನು ತನ್ನ ಅತುಳ ಪರಾಕ್ರಮವನ್ನು ತೋರಿ ವಾನರರೊಡನೆ ಭಯಂಕರ ಕಾಳೆಗ

॥ ೫ ॥ ಸುಗ್ರೀವಸ್ತಾನ್ ಕಪೀನ್ ದೃಷ್ಟ್ವಾ ಭಗ್ನಾನ್ ವಿದ್ರವತೋ ರಣೇ । ಗುಲ್ಮೇ ಸುಷೇಣಂ ನಿಕ್ಷಿಪ್ಯ ಚಕ್ರೇ ಯುದ್ಧೇಽದ್ಭುತಂ ಮನಃ ॥ ೬ ॥ ಆತ್ಮನಸ್ಸದೃಶಂ ವೀರಸ್ಸತಂ ನಿಕ್ಷಿಪ್ಯ ವಾನರಂ । ಸುಗ್ರೀವೋಽಭಿಮುಖಃ ಶತ್ರುಂ ಪ್ರತಸ್ಥೇ ಪಾದಪಾಯುಧಃ ॥ ೭ ॥ ಪಾರ್ಶ್ವತಃ ಪೃಷ್ಠತಶ್ಚಾಸ್ಯ ಸರ್ವೇ ಯೂಥಾಧಿಪಾಸ್ಸ್ವಯಂ । ಅನುಜಹ್ರುರ್ಮಹಾಶೈಲಾನ್ ವಿವಿಧಾಂಶ್ಚ ಮಹಾದ್ರುಮಾನ್ ॥ ೮ ॥ ಸನರ್ದ ಯುಧಿ ಸುಗ್ರೀವಸ್ಸ್ವರೇಣ ಮಹತಾ ಮಹಾನ್ । ಪಾತಯನ್ ವಿವಿಧಾಂಶ್ಚಾನ್ಯಾನ್ ಜಗಾಮೋತ್ತಮರಾಕ್ಷಸಾನ್ ॥ ೯ ॥ ಮಮಂಥ ಚ ಮಹಾಕಾಯೋ ರಾಕ್ಷಸಾನ್ ವಾನರೇಶ್ವರಃ ।

ಬಳಿಕ, ಯುದ್ಧೇ - ಯುದ್ಧದಲ್ಲಿ, ತ್ವರಿತಃ - ತ್ವರೆಯುಳ್ಳವನಾಗಿ, ರಾಘವಂ - ಶ್ರೀರಾಮನನ್ನು, ಆಸಸಾದ - ಹೊಂದಿದನು. ॥ ೫ ॥ ಸುಗ್ರೀವಃ - ಸುಗ್ರೀವನು, ರಣೇ - ಯುದ್ಧದಲ್ಲಿ, ಭಗ್ನಾನ್ - ಮುರಿದು, ವಿದ್ರವತಃ - ಓಡಿಹೋಗುತ್ತಿರುವ, ತಾನ್‌ಕಪೀನ್ - ಆ ಕಪಿಗಳನ್ನು, ದೃಷ್ಟ್ವಾ - ಕಂಡು, ಗುಲ್ಮೇ - ಗುಂಪಿನಲ್ಲಿ, ಸುಷೇಣಂ - ಸುಷೇಣನನ್ನು, ನಿಕ್ಷಿಪ್ಯ - ಇರಿಸಿ, ಯುದ್ಧೇ - ಕಾಳಗದಲ್ಲಿ, ಅದ್ಭುತಂ - ಆಶ್ಚರ್ಯಕರವಾದ, ಮನಃ - ಮನವನ್ನು, ಚಕ್ರೇ - ಮಾಡಿದನು. ॥೬॥ ವೀರಃ- ಶೂರನಾದ, ಸಸುಗ್ರೀವಃ - ಆ ಸುಗ್ರೀವನು, ಆತ್ಮನಃ - ತನಗೆ, ಸದೃಶಂ - ಸಮಾನನಾದ, ವಾನರಂ- ಸುಷೇಣನೆಂಬ ಕಪಿಯನ್ನು, ನಿಕ್ಷಿಪ್ಯ - ಇರಿಸಿ, ಪಾದ....ಧಃ - ಮರವೇ ಆಯುಧವಾಗಿ ಉಳ್ಳವನಾಗಿ, ಅಭಿಮುಖಃ - ಎದುರಾಗಿ, ಪ್ರತಸ್ಥೇ - ತೆರಳಿದನು. ॥೭॥ ಸರ್ವೇ - ಸಮಸ್ತರಾದ, ಯೂಥಾಧಿಪಾಃ- ಯೂಥಪತಿಗಳು, ಸ್ವಯಂ - ತಾವು, ಅಸ್ಯ - ಈ ಸುಗ್ರೀವನಿಗೆ, ಪಾರ್ಶ್ವತಃ - ಪಾರ್ಶ್ವಭಾಗದಲ್ಲಿಯೂ, ಪೃಷ್ಠತಶ್ಚಾಪಿ - ಹಿಂಭಾಗದಲ್ಲಿಯೂ, ಮಹಾಶೈಲಾನ್ - ದೊಡ್ಡ ಬೆಟ್ಟಗಳನ್ನು, ವಿವಿಧಾನ್ - ನಾನಾಬಗೆಗಳಾದ, ಮಹಾದ್ರುಮಾನ್ - ದೊಡ್ಡ ಮರಗಳನ್ನೂ, ಅನುಜಹ್ರುಃ - ಅನುಸರಿಸಿ ಬಂದರು. ॥ ೮ ॥ ಮಹಾನ್ - ಮಹಾತ್ಮನಾದ, ಸಸುಗ್ರೀವಃ - ಆ ಸುಗ್ರೀವನು, ಯುಧಿ - ಯುದ್ಧದಲ್ಲಿ, ಮಹತಾ - ಮಹತ್ತರವಾದ, ಸ್ವರೇಣ - ಧ್ವನಿಯಿಂದ, ನರ್ದ - ಕೂಗುತ್ತ, ಅನ್ಯಾನ್ - ಇತರರಾದ, ವಿವಿಧಾನ್ - ಅನೇಕ ಮಂದಿ, ಉತ್ತ....ಸಾನ್ - ರಾಕ್ಷಸೋತ್ತಮರನ್ನು, ಪಾತಯನ್ - ಬೀಳಿಸುವವನಾಗಿ, ಜಗಾಮ- ತೆರಳಿದನು. ॥೯॥ ಮಹಾಕಾಯಃ - ದೊಡ್ಡ ಶರೀರವುಳ್ಳ, ವಾನರೇಶ್ವರಃ - ಸುಗ್ರೀವನು, ಯುಗಾಂತಸಮಯೇ - ಪ್ರಳಯಕಾಲದಲ್ಲಿ, ವಾಯುಃ - ಗಾಳಿಯು, ಪ್ರವೃದ್ಧಾನ್- ಬೆಳೆದು ನಿಂತಿರುವ, ಅಗಾನಿವ-

---

ಮಾಡಿ ಬಹು ವೇಗವಾಗಿ ರಾಮನನ್ನು ಎದುರಟ್ಟಿ ಬಂದನು. ॥ ೧–೫ ॥ ಆಗ ಕಪಿಸಾರ್ವಭೌಮನಾದ ಸುಗ್ರೀವನು ಯುದ್ಧದಲ್ಲಿ ಭಗ್ನರಾಗಿ ದಿಕ್ಕುಪಾಲಾಗಿ ಓಡುತ್ತಿರುವ ಕಪಿಗಳನ್ನು ಕಂಡು, ಸುಷೇಣನನ್ನು ಪಾಳೆಯದಲ್ಲಿರಿಸಿ ತನ್ನ ಭಯಂಕರ ಪರಾಕ್ರಮವನ್ನು ತೋರಲು ನಿಶ್ಚಯಿಸಿದನು. ಹೀಗೆ ಸುಗ್ರೀವನು ತನಗೆ ಸಮಾನವಾದ ಪರಾಕ್ರಮವುಳ್ಳ ಸುಷೇಣನನ್ನು ಪಾಳೆಯದಲ್ಲಿ ನಿಯೋಜಿಸಿ ಹೆಮ್ಮರವನ್ನೇ ಆಯುಧವನ್ನಾಗಿ ಹಿಡಿದು ಶತ್ರುವಾದ ರಾವಣನಿಗೆದುರಾಗಿ ಹೊರಟು ಬಂದನು. ಆತನ ಎರಡೂ ಕಡೆಗಳಲ್ಲಿಯೂ, ಹಿಂಭಾಗದಲ್ಲಿಯೂ ವಾನರಯೂಥಪತಿಗಳೇ ದೊಡ್ಡ ದೊಡ್ಡ ಕಲ್ಲುಗುಂಡುಗಳನ್ನೂ, ಹೆಮ್ಮರಗಳನ್ನೂ ಆಯುಧಗಳನ್ನಾಗಿ ಹಿಡಿದು ಹೊರಟರು. ಮಹಾಕಾಯನೂ ಮಹಾ ಪರಾಕ್ರಮವಂತನೂ ಆದ ಸುಗ್ರೀವನು ತನ್ನ ಪರಾಕ್ರಮಕ್ಕೆ ತಕ್ಕಂತೆ ಮಹತ್ತರವಾದ ಕಂಠಸ್ವರದಿಂದ ಸಿಂಹನಾದ ಮಾಡುತ್ತ ಶತ್ರುಗಳಾದ ರಾಕ್ಷಸೋತ್ತಮರೆಲ್ಲರನ್ನೂ ಕೆಡವುತ್ತ ಹೊರ

ಯುಗಾಂತಸಮಯೇ ವಾಯುಃ ಪ್ರವೃದ್ಧಾನಗಮಾನಿವ ‖ ೧೦ ‖ ರಾಕ್ಷಸಾನಾಮನೀಕೇಷು ಶೈಲವರ್ಷಂ ವವರ್ಷಹ । ಅಶ್ಮವರ್ಷಂ ಯಥಾ ಮೇಘಃ ಪಕ್ಷಿಸಂಘೇಷು ಕಾನನೇ ‖ ೧೧ ‖ ಕಪಿರಾಜವಿಮುಕ್ತೈಸ್ತೈಃ ಶೈಲವರ್ಷೈಸ್ತು ರಾಕ್ಷಸಾಃ । ವಿಕೀರ್ಣಶಿರಸಃ ಪೇತುರ್ನಿಕೃತ್ತಾ ಇವ ಪರ್ವತಾಃ ‖ ೧೨ ‖ ಅಥ ಸಂಕ್ಷೀಯಮಾಣೇಷು ರಾಕ್ಷಸೇಷು ಸಮಂತತಃ । ಸುಗ್ರೀವೇಣ ಪ್ರಭಗ್ನೇಷು ಪತತ್ಸು ನಿನದತ್ಸುಚ ‖೧೩‖ ವಿರೂಪಾಕ್ಷಸ್ಸ್ವಕಂ ನಾಮ ಧನ್ವೀ ವಿಶ್ರಾವ್ಯ ರಾಕ್ಷಸಃ । ರಥಾದಾಪ್ಲುತ್ಯ ದುರ್ಧರ್ಷೋ ಗಜಸ್ಕಂಧಮುಪಾರುಹತ್ ‖ ೧೪ ‖ ಸತಂ ದ್ವಿರದಮಾರುಹ್ಯ ವಿರೂಪಾಕ್ಷೋ ಮಹಾರಥಃ । ವಿನರ್ದ ಭೀಮನಿರ್ಹ್ರಾದಂ ವಾನರಾನಭ್ಯಧಾವತ ‖ ೧೫ ‖ ಸುಗ್ರೀವೇ

ಮರಗಳನ್ನಂತೆ, ರಕ್ಷಸಾ೯ - ರಕ್ಕಸರನ್ನು, ಮಮಂಥ - ಮಥಿಸಿದನು. ‖೧೦‖ ರಾಕ್ಷಸಾನಾಂ - ರಕ್ಕಸರ, ಅನೀಕೇಷು - ಸೇನೆಗಳಲ್ಲಿ, ಶೈಲವರ್ಷಂ - ಕಲ್ಮಳೆಯನ್ನು, ಕಾನನೇ - ಕಾಡಿನಲ್ಲಿ, ಮೇಘಃ - ಮೇಘವು, ಪಕ್ಷಿ ಸಂಘೇಷು - ಹಕ್ಕಿಗಳ ತಂಡಗಳಲ್ಲಿ, ಅಶ್ಮವರ್ಷಮಿವ - ಆನೆಗಲ್ಲಿನ ಮಳೆಯಂತೆ, ವವರ್ಷಹ - ಸುರಿಸಿದನಷ್ಟೆ. ‖೧೧‖ ಕಪಿ....ಕ್ತೈಃ - ಸುಗ್ರೀವನಿಂದ ಬಿಡಲ್ಪಟ್ಟ, ತೈಃಶೈಲವರ್ಷೈಃ - ಬೆಟ್ಟಗಳ ವೃಷ್ಟಿಗಳಿಂದ, ವಿಕೀ....ಸಃ - ಎರಚಲ್ಪಟ್ಟ ತಲೆಗಳುಳ್ಳ, ರಾಕ್ಷಸಾಸ್ತು - ರಕ್ಕಸರಾದರೆ, ನಿಕೃತ್ತಾಃ - ಕತ್ತರಿಸಲ್ಪಟ್ಟ, ಪರ್ವತಾಇವ - ಬೆಟ್ಟಗಳಂತೆ, ಪೇತುಃ - ಬಿದ್ದರು. ‖ ೧೨ ‖ ಅಥ - ಬಳಿಕ, ರಾಕ್ಷಸೇಷು - ರಕ್ಕಸರು, ಸುಗ್ರೀವೇಣ - ಸುಗ್ರೀವನಿಂದ, ಪ್ರಭಗ್ನೇಷು - ಮುರಿಯಲ್ಪಟ್ಟವರಾದಕಾರಣ, ಪತತ್ಸು - ಕೆಳಗೆ ಬಿದ್ದು, ಸಂಕ್ಷೀಯಮಾಣೇಷು - ನಾಶಗೊಳಿಸಲ್ಪಡುತ್ತಿರುವವರಾಗಿ, ಸಮಂತತಃ - ಎಲ್ಲೆಡೆಯಲ್ಲಿಯೂ, ನಿನದತ್ಸುಚ - ಕೂಗುತ್ತಿರಲೂ, ವಿರೂಪಾಕ್ಷಃ - ವಿರೂಪಾಕ್ಷನೆಂಬ, ರಾಕ್ಷಸಃ - ರಕ್ಕಸನು, ಧನ್ವೀ - ಧನುರ್ಧಾರಿಯಾಗಿ, ಸ್ವಕಂ - ತನ್ನ, ನಾಮ - ನಾಮಧೇಯವನ್ನು, ವಿಶ್ರಾವ್ಯ - ಕೇಳಿಸಿ, ರಥಾತ್ - ರಥದಿಂದ, ಆಪ್ಲುತ್ಯ - ಧುಮ್ಮಿಕ್ಕಿ, ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾಗಿ, ಗಜಸ್ಕಂಧಂ - ಆನೆಯ ಶಿರಸ್ಸನ್ನು, ಉಪಾರುಹತ್-ಏರಿದನು. ‖ ೧೩-೧೪ ‖ ಮಹಾರಥಃ-ಮಹಾ ರಥಿಕನಾದ, ಸವಿರೂಪಾಕ್ಷಃ-ಆ ವಿರೂಪಾಕ್ಷನು, ತಂದ್ವಿರದಂ - ಆ ಆನೆಯನ್ನು, ಆರುಹ್ಯ - ಏರಿ, ಭೀಮನಿರ್ಹ್ರಾದಂ - ಭಯಂಕರವಾದ ಧ್ವನಿಯುಳ್ಳದ್ದಂತೆ, ವಿನರ್ದ - ಕೂಗುತ್ತ, ವಾನರಾ೯ - ಕಪಿಗಳನ್ನು ಕುರಿತು, ಅಭ್ಯಧಾವತ - ಓಡಿ ಬಂದನು. ‖ ೧೫ ‖ ಸಃ - ಆ ವಿರೂಪಾಕ್ಷನು, ಚಮೂಮುಖೇ - ಸೇನಾಮುಖದಲ್ಲಿ, ಉದ್ವಿಗ್ನಾ೯ -

---

ಟನು. ಆ ವಾನರೇಶ್ವರನು, ಪ್ರಳಯಕಾಲದಲ್ಲಿ ಚಂಡಮಾರುತವು ಬೆಳೆದು ನಿಂತಿರುವ ಹೆಮ್ಮರಗಳನ್ನೆಂತೋ ಅಂತು ರಾಕ್ಷಸರೆಲ್ಲರನ್ನೂ ಮುರಿದಿಕ್ಕಿದನು. ‖ ೬–೧೦ ‖ ಅವನು ದೊಡ್ಡ ಮುಗಿಲು ಕಾಡಿನಲ್ಲಿರುವ ಹಕ್ಕಿಗಳ ಬಳಗದ ಮೇಲೆ ಕಲ್ಮಳೆಯನ್ನೆಂತೋ ಅಂತು ಆ ರಾಕ್ಷಸಸೇನೆಗಳ ಮೇಲೆ ಕಲ್ಲುಗುಂಡುಗಳ ಬಿರುಮಳೆಗರೆದು ಘಾತಿಸಿದನು. ಆತನು ಸುರಿಸಿದ ಕಲ್ಮಳೆಯಿಂದ ರಾಕ್ಷಸರೆಲ್ಲರೂ ತಲೆಕಳಚಿ ಬಿದ್ದು ಮುರಿದ ಪರ್ವತಗಳಂತೆ ನೆಲಕ್ಕುರುಳಿ ಹೋದರು. ಆ ಬಳಿಕ ಸುಗ್ರೀವನಿಂದ ಭಂಗಗೊಂಡು ನೆಲಕ್ಕುರುಳಿ ಕೂಗಿಕೊಳ್ಳುತ್ತಿರುವ ರಾಕ್ಷಸರನ್ನು ನೋಡಿ ವಿರೂಪಾಕ್ಷನೆಂಬ ರಾಕ್ಷಸೋತ್ತಮನು ತನ್ನ ಹೆಸರನ್ನು ಘಟ್ಟಿಯಾಗಿ ಕೂಗಿ ಹೇಳಿ ರಥದಿಂದ ಕೆಳಕ್ಕಿಳಿದು ಆನೆಯನ್ನೇರಿದನು. ಅವನಿಂತು ಆ ಗಜೋತ್ತಮವನ್ನೇರಿ ಕುಳಿತು ಭಯಂಕರ ಸಿಂಹನಾದಗಳನ್ನು ಮಾಡುತ್ತ ವಾನರರನ್ನಟ್ಟಿ

ಸಶರಾನ್ ಘೋರಾನ್ ವಿಸಸರ್ಜ ಚಮೂಮುಖೇ । ಸ್ಥಾಪಯಾಮಾಸ ಚೋದ್ವಿಗ್ನಾನ್ ರಾಕ್ಷಸಾನ್ ಸಂಪ್ರಹರ್ಷಯನ್ ॥ ೧೬ ॥ ಸತು ವಿದ್ಧಃ ಶಿತೈರ್ಬಾಣೈಃ ಕಪೀಂದ್ರಸ್ತೇನ ರಕ್ಷಸಾ । ಚುಕ್ರೋಧ ಸಮಹಾಕ್ರೋಧೋ ವಧೇಚಾಽಸ್ಯ ಮನೋ ದಧೇ ॥ ೧೭ ॥ ತತಃ ಪಾದಪಮುದ್ಧೃತ್ಯ ಶೂರಸ್ಸಂಪ್ರಧನೋ ಹರಿಃ । ಅಭಿಪತ್ಯ ಜಘಾನಾಸ್ಯ ಪ್ರಮುಖೇತು ಮಹಾಗಜಂ ॥ ೧೮ ॥ ಸತು ಪ್ರಹಾರಾಭಿಹತಃ ಸುಗ್ರೀವೇಣ ಮಹಾಗಜಃ । ಅಪಾಸರ್ಪದ್ಧನುರ್ಮಾತ್ರಂ ನಿಷಸಾದ ನನಾದಚ ॥ ೧೯ ॥ ಗಜಾತ್ತು ಮಥಿತಾತ್ತೂರ್ಣಮಪಕ್ರಮ್ಯ ಸವೀರ್ಯವಾನ್ । ರಾಕ್ಷಸೋಽಭಿಮುಖಃ ಶತ್ರುಂ ಪ್ರತ್ಯುದ್ಗಮ್ಯ ತತಃ ಕಪಿಂ ॥೨೦॥ ಆರ್ಷಭಂ ಚರ್ಮ ಖಡ್ಗಂಚ ಪ್ರಗೃಹ್ಯ ಲಘುವಿಕ್ರಮಃ ।

ಹೆದರಿರುವ, ರಾಕ್ಷಸಾನ್ - ರಕ್ಕಸರನ್ನು, ಸಂಪ್ರಹರ್ಷಯನ್ - ಸಂತೋಷಗೊಳಿಸುವವನಾಗಿ, ಸ್ಥಾಪಯಾಮಾಸ - ನಿಲ್ಲಿಸಿದನು, ಸುಗ್ರೀವೇಚ - ಸುಗ್ರೀವನಲ್ಲಿ, ಘೋರಾನ್ - ಭಯಂಕರವಾದ, ಶರಾನ್ - ಬಾಣಗಳನ್ನು, ವಿಸಸರ್ಜಚ - ಬಿಟ್ಟನು. ॥ ೧೬ ॥ ತೇನರಕ್ಷಸಾ - ಆ ವಿರೂಪಾಕ್ಷನಿಂದ, ಶಿತೈಃ - ತೀಕ್ಷ್ಣಗಳಾದ, ಬಾಣೈಃ - ಬಾಣಗಳಿಂದ, ವಿದ್ಧಃ - ಹೊಡೆಯಲ್ಪಟ್ಟ, ಸಕಪೀಂದ್ರಃ- ಆ ಕಪಿರಾಜನು, ಸುಮಹಾಕ್ರೋಧಃ - ಬಹಳ ಕೋಪವುಳ್ಳವನಾಗಿ, ಚುಕ್ರೋಧ - ಕೆರಳಿಹೋದನು, ಅಸ್ಯ - ಈ ವಿರೂಪಾಕ್ಷನ, ವಧೇ - ಸಂಹಾರದಲ್ಲಿ, ಮನಶ್ಚ - ಮನವನ್ನೂ, ದಧೇ - ಧರಿಸಿದನು. ॥ ೧೭ ॥ ತತಃ - ಬಳಿಕ, ಸಂಪ್ರಧನಃ - ತೀವ್ರ ಯುದ್ಧ ಮಾಡುತ್ತಿರುವ, ಶೂರಃ - ಶೂರನಾದ, ಹರಿಃ - ಸುಗ್ರೀವನು, ಪಾದಪಂ - ಮರವನ್ನು, ಉದ್ಧೃತ್ಯ - ಎತ್ತಿ, ಅಸ್ಯ - ಈ ವಿರೂಪಾಕ್ಷನ, ಪ್ರಮುಖೇ - ಎದುರಾಗಿ, ಅಭಿಪತ್ಯ - ಅಟ್ಟಿಬಂದು, ಮಹಾಗಜಂ - ದೊಡ್ಡ ಆನೆಯನ್ನು, ಜಘಾನ - ಹೊಡೆದನು. ॥ ೧೮ ॥ ಸುಗ್ರೀವೇಣ - ಸುಗ್ರೀವನಿಂದ, ಪ್ರಹಾರಾಭಿಹತಃ - ವೃಕ್ಷಪ್ರಹಾರದಿಂದ ಹೊಡೆಯಲ್ಪಟ್ಟ, ಸಮಹಾಗಜಃ - ಆ ದೊಡ್ಡಾನೆಯು, ಧನುರ್ಮಾತ್ರಂ - ನಾಲ್ಕು ಮೊಳದ ಆಚೆಯ ಪ್ರದೇಶದಲ್ಲಿ, ಅಪಾಸರ್ಪತ್ - ಹಿಂದಕ್ಕೆ ಹೋಯಿತು, ನಿಷಸಾದ - ಕುಕ್ಕರಿಸಿತು, ನನಾದಚ - ಕೂಗಲೂ ಕೂಗಿತು. ॥ ೧೯ ॥ ವೀರ್ಯವಾನ್ - ಸಾಮರ್ಥ್ಯವಂತನಾದ, ಸರಾಕ್ಷಸಃ - ಆ ವಿರೂಪಾಕ್ಷನು, ಮಥಿತಾತ್ - ಹೊಡೆಯಲ್ಪಟ್ಟ, ಗಜಾತ್ - ಆನೆಯಿಂದ, ತೂರ್ಣಂ - ಜಾಗ್ರತೆಯಾಗಿ, ಅಪಕ್ರಮ್ಯ - ಇಳಿದು, ಅಭಿಮುಖಃ - ಎದುರು ನಿಂತು, ತತಃ - ಬಳಿಕ, ಶತ್ರುಂ - ಶತ್ರುವಾದ, ಕಪಿಂ - ಕಪಿಯನ್ನು, ಪ್ರತುದ್ಗಮ್ಯ - ಎದುರುಗೊಂಡು, ಆರ್ಷಭಂ - ಎತ್ತಿನ, ಚರ್ಮ -

---

ಬಂದನು. ॥ ೧೧–೧೫ ॥ ಅವನು ಸುಗ್ರೀವನ ಮೇಲೆ ಘೋರವಾದ ಅನೇಕ ಬಾಣಗಳನ್ನು ಪ್ರಯೋಗಿಸಿ ಭಯ ಬಿದ್ದು ನಡುಗುತ್ತಿದ್ದ ರಾಕ್ಷಸರೆಲ್ಲರಿಗೂ ಧೈರ್ಯ ಹೇಳಿ ಅವರನ್ನು ಸಂತೋಷಗೊಳಿಸಿ ಅವರವರ ಸ್ಥಾನಗಳಲ್ಲಿ ನಿಲ್ಲಿಸಿದನು. ಮಹಾ ಕೋಪನನೂ, ವಾನರೇಶ್ವರನೂ ಆದ ಸುಗ್ರಿವನು ಈ ರೀತಿ ಆ ವಿರುಪಾಕ್ಷನ ಬಾಣಗಳಿಂದ ಬಾಧಿತನಾಗಿ ಬಹಳವಾಗಿ ಕೆರಳಿ ಆ ರಾಕ್ಷಸನನ್ನು ಸಂಹರಿಸಬೇಕೆಂದು ನಿಶ್ಚಯಿಸಿದನು. ಆ ತರುವಾಯ ಮಹಾ ಪರಾಕ್ರಮಿಯಾದ ಆತನು ದೊಡ್ಡದೊಂದು ಮರವನ್ನು 'ಪೆಳಗಿಸಿಕೊಂಡು ಆ ರಾಕ್ಷಸನ ಮೇಲ್ವಾಯ್ದು ಬಂದು ಅವನೇರಿದ್ದ ಆನೆಯ ಮುಖಕ್ಕೆ ಆದರಿಂದ ಬಲವಾಗಿ ಹೊಡೆದನು. ಆ ಹೊಡೆತವನ್ನು ತಾಳಲಾರದೆ ಆ ಗಜೋತ್ತಮವು ಒಂದು ಬಾರು ಹಿಂದಕ್ಕೆ ಸರಿದು ಬಾಧೆಯನ್ನು ಸಹಿಸಲಾರದೆ ಘಟ್ಟಿಯಾಗಿ ಘೀಂಕಾರಮಾಡಿ ಮಲಗಿಬಿಟ್ಟಿತು. ॥ ೧೬–೨೦ ॥

ಭರ್ತ್ಸಯನ್ನಿವ ಸುಗ್ರೀವಮಾಸಸಾದ ವ್ಯವಸ್ಥಿತಂ ॥ ೨೧ ॥ ಸಹಿತಸ್ಯಾಽಭಿಸಂಕ್ರುದ್ಧಃ ಪ್ರಗೃಹ್ಯ ವಿಪುಲಾಂ ಶಿಲಾಂ । ವಿರೂಪಾಕ್ಷಾಯ ಚಿಕ್ಷೇಪ ಸುಗ್ರೀವೋ ಜಲದೋಪಮಾಂ ॥ ೨೨ ॥ ಸತಾಂ ಶಿಲಾಮಾಪತಂತೀಂ ದೃಷ್ಟ್ವಾ ರಾಕ್ಷಸಪುಂಗವಃ । ಅಪಕ್ರಮ್ಯ ಸುವಿಕ್ರಾಂತಃ ಖಡ್ಗೇನ ಪ್ರಾಹರತ್ತದಾ ॥ ೨೩ ॥ ತೇನ ಖಡ್ಗಪ್ರಹಾರೇಣ ರಕ್ಷಸಾ ಬಲಿನಾ ಹತಃ । ಮುಹೂರ್ತಮಭವದ್ವೀರೋ ವಿಸಂಜ್ಞ ಇವ ವಾನರಃ ॥೨೪॥ ಸತದಾ ಸಹಸೋತ್ಪತ್ಯ ರಾಕ್ಷಸಸ್ಯ ಮಹಾಹವೇ । ಮುಷ್ಟಿಂ ಸಂವರ್ತ್ಯವೇಗೇನ ಪಾತಯಾಮಾಸ ವಕ್ಷಸಿ ॥ ೨೫ ॥ ಮುಷ್ಟಿಪ್ರಹಾರಾಭಿಹತೋ ವಿರೂಪಾಕ್ಷೋ ನಿಶಾ

ಖೇಟ್ಯವನ್ನೂ, ಖಡ್ಗಂಚ - ಕತ್ತಿಯನ್ನೂ, ಪ್ರಗೃಹ್ಯ - ಹಿಡಿದು, ಲಘುವಿಕ್ರಮಃ - ಶೀಘ್ರಗಮನವುಳ್ಳ, ವ್ಯವಸ್ಥಿತಂ - ಎದುರಿಗೆ ನಿಂತಿರುವ, ಸುಗ್ರೀವಂ - ಸುಗ್ರೀವನನ್ನು, ಭರ್ತ್ಸಯನ್ನಿವ - ಹೆದರಿಸುವನೋ ಎಂಬಂತೆ, ಆಸಸಾದ - ಬಂದನು. ॥ ೨೦-೨೧ ॥ ಸಃಸುಗ್ರೀವಃ - ಆ ಸುಗ್ರೀವನು, ತಸ್ಯ - ಆ ವಿರೂಪಾಕ್ಷನಿಗೆ, ಅಭಿಸಂಕ್ರುದ್ಧಃ - ಪ್ರತಿಯಾಗಿ ಕೋಪಿಸಿ, ವಿಪುಲಾಂ - ದೊಡ್ಡದಾದ, ಜಲದೋಪಮಾಂ - ಮೇಘಕ್ಕೆ ಸಮಾನವಾದ, ಶಿಲಾಂ - ಬಂಡೆಯನ್ನು, ಪ್ರಗೃಹ್ಯ - ಹಿಡಿದು, ವಿರೂಪಾಕ್ಷಾಯ - ವಿರೂಪಾಕ್ಷನಿಗೋಸ್ಕರ, ಚಿಕ್ಷೇಪ - ಎಸೆದನು. ॥ ೨೨ ॥ ಸುವಿಕ್ರಾಂತಃ - ಬಹಳ ಪರಾಕ್ರಮಶಾಲಿಯಾದ, ಸರಾಕ್ಷಸಪುಂಗವಃ - ಆ ರಾಕ್ಷಸೋತ್ತಮನು, ಆಪತಂತೀಂ - ಬರುತ್ತಿರುವ, ತಾಂಶಿಲಾಂ - ಆ ಪಾಷಾಣವನ್ನು, ಅಪಕ್ರಮ್ಯ - ಕೊಂಚ ತಪ್ಪಿಸಿಕೊಂಡು, ತದಾ - ಆ ಕಾಲದಲ್ಲಿ, ಖಡ್ಗೇನ - ಕತ್ತಿಯಿಂದ, ಪ್ರಾಹರತ್ - ಹೊಡೆದನು. ॥ ೨೩ ॥ ಬಲಿನಾ - ಬಲವಂತನಾದ, ತೇನ ರಕ್ಷಸಾ - ಆ ವಿರೂಪಾಕ್ಷನಿಂದ, ಖಡ್ಗಪ್ರಹಾರೇಣ - ಪಟ್ಟಾಕತ್ತಿಯ ಪೆಟ್ಟಿನಿಂದ, ಹತಃ - ಹೊಡೆಯಲ್ಪಟ್ಟ, ವೀರಃ - ಶೂರನಾದ, ವಾನರಃ - ಸುಗ್ರೀವನು, ಮುಹೂರ್ತಂ - ಎರಡು ಘಳಿಗೆ ಕಾಲ, ವಿಸಂಜ್ಞ ಇವ - ಪ್ರಜ್ಞೆ ತಪ್ಪಿದವನಂತೆ, ಅಭವತ್ - ಆದನು. ॥ ೨೪ ॥ ತದಾ - ಆ ಕಾಲದಲ್ಲಿ, ಸಃ - ಆ ಸುಗ್ರೀವನು, ಮಹಾಹವೇ - ದೊಡ್ಡ ಕಾಳಗದಲ್ಲಿ, ಸಹಸಾ - ಜಾಗ್ರುತೆಯಾಗಿ, ಉತ್ಪತ್ಯ - ಹಾರಿ, ರಾಕ್ಷಸಸ್ಯ - ರಕ್ಕಸನ, ವಕ್ಷಸಿ - ಎದೆಯಲ್ಲಿ, ವೇಗೇನ - ವೇಗದಿಂದ, ಮುಷ್ಟಿಂ - ಕೈಹಿಡಿಯನ್ನು, ಸಂವರ್ತ್ಯ - ಹಿಡಿದು, ಪಾತಯಾಮಾಸ - ಕೆಡವಿದನು. ॥ ೨೫ ॥ ನಿಶಾಚರಃ - ರಾಕ್ಷಸನಾದ, ವಿರೂಪಾಕ್ಷಃ - ವಿರೂಪಾಕ್ಷನು, ಮುಷ್ಟಿ......ತಃ - ಮುಷ್ಟಿಯ ಘಾತತದಿಂದ ಬಾಧಿತನಾಗಿ,

---

ಹೀಗೆ ಮಥಿಸಿಹೋದ ಆ ಗಜವನ್ನು ಕಂಡು ಮಹಾ ಪರಾಕ್ರಮಿಯಾದ ವಿರೂಪಾಕ್ಷನು ಬಹು ಬೇಗನೆಯೇ ನೆಲಕ್ಕೆ ಧುಮ್ಮಿಕ್ಕಿ ನಿಂತು ಆರ್ಷಭಖೇಟ್ಯವನ್ನೂ, ಖಡ್ಗವನ್ನೂ ಧರಿಸಿ ಸುಗ್ರೀವನನ್ನು ಬೆದರಿಸುತ್ತಾ ಯುದ್ಧಸನ್ನದ್ಧನಾಗಿ ನಿಂತನು. ಆಗ ಸುಗ್ರೀವನು ಬಹಳವಾಗಿ ಕೋಪಗೊಂಡು ದೊಡ್ಡ ಮುಗಿಲನ್ನು ಹೋಲುವ ಬಂಡೆಯೊಂದನ್ನು ಆ ವಿರುಪಾಕ್ಷನ ಮೇಲೆ ಬಲವಾಗೆಸೆದನು. ರಾಕ್ಷಸೋತ್ತಮನಾದ ವಿರೂಪಾಕ್ಷನು ತನ್ನ ಮೇಲೆರಗಿ ಬರುತ್ತಿರುವ ಆ ಶಿಲೆಯನ್ನು ಕಂಡು ಸ್ವಲ್ಪ ಹಿಂದಕ್ಕೆ ಸರಿದು ತಪ್ಪಿಸಿಕೊಂಡು ಆಮೇಲೆ ಪರಾಕ್ರಮಿಸಿ ತನ್ನ ಖಡ್ಗದಿಂದಲೇ ಅವನನ್ನು ಪ್ರಹರಿಸಿದನು. ಮಹಾ ಬಲಾಢ್ಯನಾದ ಆ ರಾಕ್ಷಸನ ಖಡ್ಗಪ್ರಹಾರದಿಂದ ಮಹಾ ವೀರನಾದ ಸುಗ್ರೀವನು ಒಂದು ಮುಹೂರ್ತಕಾಲ ಪ್ರಜ್ಞೆತಪ್ಪಿ ನಿಂತಿದ್ದು ಆ ತರುವಾಯ ಇದ್ದಕ್ಕಿದ್ದಂತೆಯೇ ಮೇಲಕ್ಕೆ ಹಾರಿ ಮುಷ್ಟಿಯನ್ನು ಹಿಡಿದು ಆ ರಾಕ್ಷಸನೆದೆಗೆ ಬಲವಾಗಿ ಗುದ್ದಿದನು. ॥ ೨೧-೨೫ ॥ ಮುಷ್ಟಿಯ ಪೆಟ್ಟು

ಚರಃ । ತೇನ ಖಡ್ಗೇನ ಸಂಕ್ರುದ್ಧಸ್ಸುಗ್ರೀವಸ್ಯ ಚಮೂಮುಖೇ । ಕವಚಂ ಪಾತಯಾಮಾಸ ಪದ್ಭ್ಯಾಮಭಿಹತೋಽಪತತ್ ॥೨೬॥ ಸ ಸಮುತ್ಥಾಯ ಪತಿತಃ ಕಪಿಸ್ತಸ್ಯ ವ್ಯಸರ್ಜಯತ್ । ತಲಪ್ರಹಾರಮಶನೇಸ್ಸಮಾನಂ ಭೀಮನಿಸ್ಸನಂ ॥ ೨೭ ॥ ತಲಪ್ರಹಾರಂ ತದ್ರಕ್ಷಸ್ಸುಗ್ರೀವೇಣ ಸಮುದ್ಯತಂ । ನೈಪುಣ್ಯಾನ್ಮೋಚಯಿತ್ವೈನಂ ಮುಷ್ಟಿನೋರಸ್ಯತಾಡಯತ್ ॥ ೨೮ ॥ ತತಸ್ತು ಸಂಕ್ರುದ್ಧತರಸ್ಸುಗ್ರೀವೋ ವಾನರೇಶ್ವರಃ । ಮೋಕ್ಷಿತಂ ಚಾತ್ಮನೋ ದೃಷ್ಟ್ವಾ ಪ್ರಹಾರಂ ತೇನ ರಕ್ಷಸಾ ॥೨೯॥ ಸದದರ್ಶಾಂತರಂ ತಸ್ಯ ವಿರೂಪಾಕ್ಷಸ್ಯ ವಾನರಃ । ತತೋ ನ್ಯಪಾತಯತ್ಕ್ರೋಧಾಚ್ಛಂಖದೇಶೇ ಮಹ

ಸಂಕ್ರುದ್ಧಃ - ಕೋಪಗೊಂಡು, ಚಮೂಮುಖೇ - ಯುದ್ಧರಂಗದಲ್ಲಿ, ತೇನಖಡ್ಗೇನ - ಆ ಕತ್ತಿಯಿಂದ, ಸುಗ್ರೀವಸ್ಯ - ಸುಗ್ರೀವನ, ಕವಚಂ - ಕವಚವನ್ನು, ಪಾತಯಾಮಾಸ - ಬೀಳಿಸಿದನು, ಪದ್ಭ್ಯಾಂ - ಕಾಲುಗಳಿಂದ, ಅಭಿಹತಃ - ಹೊಡೆಯಲ್ಪಟ್ಟವನಾಗಿ, ಅಪತತ್ - ಬಿದ್ದನು. ॥ ೨೬ ॥ ಪತಿತಃ - ಬಿದ್ದಿರುವ, ಸಕಪಿಃ - ಆ ಸುಗ್ರೀವನು, ಸಮುತ್ಥಾಯ - ಎದ್ದು, ಅಶನೇಃ - ಸಿಡಿಲಿಗೆ, ಸಮಾನಂ - ಸದೃಶವಾದ, ಭೀಮನಿಸ್ವನಂ - ಭಯಂಕರ ಧ್ವನಿಯುಳ್ಳ, ತಲಪ್ರಹಾರಂ - ಅಂಗೈ ಹೊಡೆತವನ್ನು, ತಸ್ಯ - ಆ ವಿರೂಪಾಕ್ಷನಿಗೆ, ವಿಸರ್ಜಯತ್ - ಬಿಟ್ಟನು. ॥ ೨೭ ॥ ತದ್ರಕ್ಷಃ - ಆ ವಿರೂಪಾಕ್ಷನು, ಸುಗ್ರೀವೇಣ - ಸುಗ್ರೀವನಿಂದ, ಸಮುದ್ಯಂತಂ - ಎತ್ತಿದ, ತಲಪ್ರಹಾರಂ - ಅಂಗೈಹೊಡೆತವನ್ನು, ನೈಪುಣ್ಯಾತ್ - ಚಾತುರ್ಯದಿಂದ, ಮೋಚಯಿತ್ವಾ - ಬಿಡಿಸಿಕೊಂಡು, ಏನಂ - ಈ ಸುಗ್ರೀವನನ್ನು, ಮುಷ್ಟಿನಾ - ಹಿಡಿಯಿಂದ, ಉರಸಿ - ವಕ್ಷಸ್ಥಲದಲ್ಲಿ, ತಾಡಯತ್ - ಹೊಡೆದನು. ॥ ೨೮ ॥ ತತಃ - ಬಳಿಕ, ವಾನರೇಶ್ವರಃ - ವಾನರಾಧಿಪತಿಯಾದ, ಸುಗ್ರೀವಃ - ಸುಗ್ರೀವನು, ತೇನರಕ್ಷಸಾ - ಆ ವಿರೂಪಾಕ್ಷನಿಂದ, ಮೋಕ್ಷಿತಂ - ಬಿಡಿಸಿಕೊಳ್ಳಲ್ಪಟ್ಟ, ಆತ್ಮನಃ - ತನ್ನ, ಪ್ರಹಾರ - ಪೆಟ್ಟನ್ನು, ದೃಷ್ಟ್ವಾ - ಕಂಡು, ಸಂಕ್ರುದ್ಧತರಃ - ಬಹಳ ಕೋಪಗೊಂಡನು. ॥ ೨೯ ॥ ತತಃ - ಅನಂತರದಲ್ಲಿ, ಸವಾನರಃ - ಆ ಕಪಿಯು, ತಸ್ಯವಿರೂಪಾಕ್ಷಸ್ಯ - ಆ ವಿರೂಪಾಕ್ಷನ, ಅಂತರಂ - ಅವಕಾಶವನ್ನು, ದದರ್ಶ - ನಿರೀಕ್ಷಿಸಿದನು, ತತಃ - ಬಳಿಕ, ಕ್ರೋಧಾತ್ - ಕೋಪದಿಂದ, ಶಂಖದೇಶೇ - ಲಲಾಟದ ಎಲುವಿನೆಡೆಯಲ್ಲಿ, ಮಹತ್ - ದೊಡ್ಡದಾದ, ತಲಂ - ಅಂಗೈಯನ್ನು, ನ್ಯಪಾತಯತ್ - ಬೀಳಿಸಿದನು. ॥ ೩೦ ॥ ಮಹೇಂ....ನ - ದೇವೇಂದ್ರನ ವಜ್ರಾಯುಧಕ್ಕೆ ಸಮಾನ

ಬಿದ್ದ ಬಳಿಕ ವಿರೂಪಾಕ್ಷನು ಬಹಳವಾಗಿ ಕೋಪಗೊಂಡು ತನ್ನ ಕೈಯಲ್ಲಿದ್ದ ಕತ್ತಿಯಿಂದಲೇ ಸುಗ್ರೀವನ ವಕ್ಷಸ್ಥಳಕ್ಕೆ ಹೊಡೆದು ರಣಮುಖದಲ್ಲಿ ಅವನ ಕವಚವನ್ನು ಭೇದಿಸಿದನು. ಆಗ ಸುಗ್ರೀವನು ವಿರೂಪಾಕ್ಷನು ಪ್ರಯೋಗಿಸಿದ ಪಾದಘಾತದಿಂದ ನೆಲಕ್ಕೆ ಬಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚೆತ್ತುಕೊಂಡು ಆ ವಾನರರಾಜನು ವಜ್ರಾಯುಧಕ್ಕೆ ಸಮಾನವಾಗಿಯೂ, ಬಹು ಭಯಂಕರವಾಗಿಯೂ ಇರುವ ಅಂಗೈಯಿಂದ ಆ ರಾಕ್ಷಸನನ್ನು ಹೊಡೆಯಹೋದನು. ಸುಗ್ರೀವನ ಆ ತಲಪ್ರಹಾರವನ್ನು ಕೌಶಲ್ಯದಿಂದ ತಪ್ಪಿಸಿಕೊಂಡು ಆ ವಿರೂಪಾಕ್ಷನು ಮುಷ್ಟಿಹಿಡಿದು ಅವನೆದೆಗೆ ಹೊಡೆದನು. ಆಗ ಸುಗ್ರೀವನು ಬಹಳವಾಗಿ ಮುನಿದು ತನ್ನ ಪೆಟ್ಟು ತಪ್ಪಿಹೋದುದಕ್ಕೆ ಮತ್ತಷ್ಟು ರೋಷಗೊಂಡು ಆ ರಾಕ್ಷಸನನ್ನು ಹೊಡೆಯುವುದಕ್ಕೆ ತಕ್ಕ ಅವಕಾಶವನ್ನೇ ನಿರೀಕ್ಷಿಸುತ್ತಿದ್ದನು. ಅದು ದೊರಕಿದೊಡನೆಯೇ ಮಹಾ ಪರಾಕ್ರಮಿಯಾದ ಆ ವಾನರೇಶ್ವರನು ಅವನ ಲಲಾಟಪ್ರದೇಶಕ್ಕೆ ಬಲವಾಗಿ ತನ್ನ

ತ್ತಲಂ ॥೩೦॥ ಮಹೇಂದ್ರಾಶನಿಕಲ್ಪೇನ ತಲೇನಾಽಭಿಹತಃ ಕ್ಷಿತೌ । ಪಪಾತ ರುಧಿರ ಕ್ಲಿನ್ನಃ ಶೋಣಿತಂಚ ಸಮುದ್ವಮನ್ । ಸ್ರೋತೋಭ್ಯಸ್ತು ವಿರೂಪಾಕ್ಷೋ ಜಲಂ ಪ್ರಸ್ರವಣಾದಿವ ॥೩೧-೩೨॥ ವಿವೃತ್ತನಯನಂ ಕ್ರೋಧಾತ್ಸಫೇನಂ ರುಧಿರಾಪ್ಲುತಂ । ದದೃಶುಸ್ತೇ ವಿರೂಪಾಕ್ಷಂ ವಿರೂಪಾಕ್ಷತರಂ ಕೃತಂ ॥೩೩॥ ಸ್ಫುರಂತಂ ಪರಿವರ್ತಂತಂ ಪಾರ್ಶ್ವೇನ ರುಧಿರೋಕ್ಷಿತಂ । ಕರುಣಂಚ ವಿನರ್ದಂತಂ ದದೃಶುಃ ಕಪಯೋ ರಿಪುಂ ॥ ೩೪ ॥ ತಥಾತು ತೌ ಸಂಯತಿ ಸಂಪ್ರಯುಕ್ತೌ ತರಸ್ವಿನೌ ವಾನರರಾಕ್ಷಸಾನಾಂ । ಬಲಾರ್ಣವೌ ಸಸ್ವನತುಸ್ಸುಭೀಮಂ ಮಹಾರ್ಣವೌ ದ್ವಾವಿವ ಭಿನ್ನವೇಲೌ ॥ ೩೫ ॥

ವಾದ, ತಲೇನ - ಅಂಗೈಯಿಂದ, ಅಭಿಹತಃ - ಹೊಡೆಯಲ್ಪಟ್ಟ, ವಿರೂಪಾಕ್ಷಃ - ವಿರೂಪಾಕ್ಷನು, ಸ್ರೋತೋಭ್ಯಃ - ಪ್ರವಾಹಗಳಿಂದ, ಪ್ರಸ್ರವಣಾತ್ - ಸರೋವರದ ದೆಸೆಯಿಂದ, ಜಲಮಿವ - ನೀರಿನೋಪಾದಿಯಲ್ಲಿ, ರುಧಿರಕ್ಲಿನ್ನಃ - ರಕ್ತದಿಂದ ತೊಯಿಸಲ್ಪಟ್ಟವನಾಗಿ, ಶೋಣಿತಂಚ - ಶೋಣಿತವನ್ನು, ಸಮುದ್ವಮನ್ - ಕಾರುತ್ತ, ಕ್ಷಿತೌ - ನೆಲದಲ್ಲಿ, ಪಪಾತ - ಬಿದ್ದನು. ॥ ೩೧-೩೨ ॥ ತೇ - ಆ ಕಪಿಗಳು, ಕ್ರೋಧಾತ್ - ಕ್ರೋಧದಿಂದ, ವಿವೃ....ನಂ - ತಿರುಗಿಸಲ್ಪಟ್ಟ ನೇತ್ರಗಳುಳ್ಳ, ಸಫೇನಂ-ನೊರೆಯೊಡಗೂಡಿದ, ರುಧಿರಾಪ್ಲುತಂ - ರಕ್ತದಿಂದ ನೆನೆಸಲ್ಪಟ್ಟ, ವಿರೂಪಾಕ್ಷತರಂ - ಮತ್ತೂ ವಿಕಾರವಾಗ ಮಾಡಲ್ಪಟ್ಟ ನೇತ್ರಗಳುಳ್ಳವನಾಗಿ, ಕೃತಂ - ಮಾಡಲ್ಪಟ್ಟ, ವಿರೂಪಾಕ್ಷಂ - ವಿರೂಪಾಕ್ಷನನ್ನು, ದದೃಶುಃ - ಕಂಡರು. ॥೩೩॥ ಕಪಯಃ - ಕಪಿಗಳು, ಸ್ಫುರಂತಂ - ಮೇಲಕ್ಕೇಳುತ್ತಿರುವ, ಪಾರ್ಶ್ವೇನ-ಪಾರ್ಶ್ವಭಾಗದಿಂದ, ಪರಿವರ್ತಂತಂ - ಹೊರಳಾಡುತ್ತಿರುವ, ರುಧಿರೋಕ್ಷಿತಂ - ರಕ್ತದಿಂದ ತೊಯಿಸಲ್ಪಟ್ಟ, ಕರುಣಂ - ದೀನನಾಗಿ, ವಿನರ್ದಂತಂ - ಕೂಗುತ್ತಿರುವ, ರಿಪುಂ - ಶತ್ರುವನ್ನು, ದದೃಶುಃ - ಕಂಡರು. ॥೩೪॥ ತಥಾ - ಆ ಪರಿಯಾಗಿ, ಸಂಯತಿ - ಯುದ್ಧದಲ್ಲಿ, ಸಂಪ್ರಯುಕ್ತೌ - ಸೇರಿರುವ, ತರಸ್ವಿನೌ - ಬಲವಂತರಾದ, ವಾನ....ನಾಂ - ಕಪಿರಾಕ್ಷಸರ, ಬಲಾರ್ಣವೌ - ಆ ಸೇನೆಗಳೆಂಬ ಸಮುದ್ರಗಳು, ಭಿನ್ನವೇಲೌ - ಭೇದಿಸಲ್ಪಟ್ಟ ದಡಗಳುಳ್ಳ, ದ್ವೌ - ಎರಡಾದ, ಮಹಾರ್ಣವಾವಿವ - ಮಹಾ ಸಮುದ್ರಗಳಂತೆ, ಸುಭೀಮಂ - ಬಹಳ ಭಯಂಕರವಾಗಿ, ಸಸ್ವನತುಃ - ಧ್ವನಿಮಾಡಿದುವು. ॥೩೫॥ ಹರಿಪಾರ್ಥಿವೇನ - ಕಪಿರಾಜನಿಂದ, ವಿನಾಶಿತಂ - ನಾಶಗೊಳಿಸಲ್ಪಟ್ಟ, ಮಹಾಬಲಂ - ಮಹಾ

ಅಂಗೈಯಿಂದಲೇ ಗುದ್ದಿದನು. ॥ ೨೬-೩೦ ॥ ಆ ತಲಪ್ರಹಾರವು ವಜ್ರಾಯುಧ ಘಾತೋಪಮವಾಗಿದ್ದಿತು. ಆ ತಲಘಾತದಿಂದ ವಿರೂಪಾಕ್ಷರಾಕ್ಷಸನು ರಕ್ತವನ್ನು ಕಾರುತ್ತ ನೆಲಕ್ಕುರುಳಿ ಪ್ರಸ್ರವಣಾಚಲವನ್ನು ಹೋಲುತ್ತಿದ್ದನು. ಆಗಲವನು ತಿರುಗಿಹೋದ ಕಣ್ಣಾಲಿಗಳುಳ್ಳವನಾಗಿ, ಬಾಯಿಯಿಂದ ನೊರೆಯುಗುಳುತ್ತ, ರಕ್ತಸಿಕ್ತವಾದ ದೇಹವುಳ್ಳವನೂ, ವಿಕಾರವಾದ ನೇತ್ರಗಳುಳ್ಳವನೂ, ದೀನಧ್ವನಿಗೈಯುತ್ತಿರುವವನೂ ಆಗಿಬಿದ್ದಿದ್ದನು. ಆ ಸ್ಥಿತಿಯಲ್ಲಿದ್ದ ಅವನನ್ನು ನೋಡಿ ವಾನರರೆಲ್ಲರೂ ಪರಮಾನಂದಭರಿತರಾದರು. ಆಗ ಉಭಯ ಪಕ್ಷದವರಿಗೂ ಭಯಂಕರ ಯುದ್ಧಕ್ಕೆ ಮೊದಲಾಯಿತು. ವಾನರರಾಕ್ಷಸರೀರ್ವರ ಸೇನೆಗಳೂ ಸಮುದ್ರದಂತೆ ಮೊರೆಯುತ್ತ ಮೇರೆಮೀರಿ ಹರಿದ ಮಹಾ ಸಾಗರಗಳಂತೆ ತೋರುತ್ತಿದ್ದುವು. ಇಷ್ಟೆಯಲ್ಲದೆ ಮಹಾ ಪರಾಕ್ರಮವಂತನಾದ ವಿರೂಪಾಕ್ಷನು ಮಡಿದುದರಿಂದ

ವಿನಾಶಿತಂ ಪ್ರೇಕ್ಷ್ಯ ವಿರೂಪನೇತ್ರಂ
ಮಹಾಬಲಂ ತಂ ಹರಿಪಾರ್ಥಿವೇನ ।
ಬಲಂ ಸಮಸ್ತಂ ಕಪಿರಾಕ್ಷಸಾನಾ
ಮುನ್ಮತ್ತಗಂಗಾಪ್ರತಿಮಂ ಬಭೂವ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತನವತಿತಮಸ್ಸರ್ಗಃ

ಬಲಿಷ್ಠನಾದ, ತಂ - ಆ ಪ್ರಸಿದ್ಧನಾದ, ವಿರೂಪಾಕ್ಷಂ - ವಿರೂಪಾಕ್ಷನನ್ನು, ಪ್ರೇಕ್ಷ್ಯ - ಕಂಡು, ಸಮಸ್ತಂ - ಸಮಸ್ತವಾದ, ಕಪಿರಾಕ್ಷಸಾನಾಂ - ಕಪಿರಾಕ್ಷಸರೀರ್ವರ, ಬಲಂ - ಸೇನೆಯು, ಉನ್ಮ.....ಮಂ - ಹುಚ್ಚುವೇಗವುಳ್ಳ ಗಂಗಾನದಿಗೆ ಸಮಾನವಾದಂತೆ, ಬಭೂವ - ಆಯಿತು. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತನವತಿತಮಸ್ಸರ್ಗಃ.

ಸಂತೋಷಗೊಂಡ ವಾನರಸೇನೆಯೂ, ಬಹಳವಾಗಿ ಪರಿತಪಿಸಿ ಹೋದ ರಾಕ್ಷಸಸೇನೆಯೂ ದಡವಿಾರಿ ಹರಿದ ಗಂಗಾನದಿಯನ್ನು ಹೋಲುತ್ತಿದ್ದುವು. ॥ ೩೧-೩೬ ॥

ಇಂತಿದು ವಿರೂಪಾಕ್ಷ ವಧ ವೃತ್ತಾಂತವೆಂಬ ತೊಂಬತ್ತೇಳನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟನವತಿತಮಸ್ಸರ್ಗಃ

ಹನ್ಯಮಾನೇ ಬಲೇ ತೂರ್ಣಮನ್ಯೋನ್ಯಂ ತೇ ಮಹಾಮೃಧೇ । ಸರಸೀವ ಮಹಾಘರ್ಮೇ ಸೋಪಕ್ಷೀಣೇ ಬಭೂವತುಃ ॥ ೧ ॥ ಸ್ವಬಲಸ್ಯ ವಿಘಾತೇನ ವಿರೂಪಾಕ್ಷವಧೇನಚ । ಬಭೂವ ದ್ವಿಗುಣಂ ಕ್ರುದ್ಧೋ ರಾವಣೋ ರಾಕ್ಷಸಾಧಿಪಃ ॥೨॥ ಪ್ರಕ್ಷೀಣಂತು ಬಲಂ ದೃಷ್ಟ್ವಾ ವಧ್ಯಮಾನಂ ವಲೀಮುಖೈಃ । ಬಭೂವಾಽಸ್ಯ ವ್ಯಥಾ ಯುದ್ಧೇ ಪ್ರೇಕ್ಷ್ಯ ದೈವವಿಪರ್ಯಯಂ ॥ ೩ ॥ ಉವಾಚಚ ಸಮೀಪಸ್ಥಂ ಮಹೋದರಮರಿಂದಮಂ । " ಅಸ್ಮಿನ್ಕಾಲೇ ಮಹಾಬಾಹೋ! ಜಯಾಶಾ ತ್ವಯಿ ಮೇ ಸ್ಥಿತಾ

ಮಹಾಮೃಧೇ - ದೊಡ್ಡ ಕಾಳಗದಲ್ಲಿ, ಅನ್ಯೋನ್ಯಂ - ಪರಸ್ಪರವಾಗಿ, ಹನ್ಯಮಾನೇ - ಹೊಡೆಯಲ್ಪಡುತ್ತಿರುವ, ತೇಬಲೇ - ಆ ಕಪಿರಾಕ್ಷಸ ಸೇನೆಗಳೆರಡೂ, ಮಹಾಘರ್ಮೇ - ತೀವ್ರವಾದ ಗ್ರೀಷ್ಮಕಾಲದಲ್ಲಿ, ಸರಸೀವ - ಎರಡು ಸರೋವರಗಳಂತೆ, ತೂರ್ಣಂ ಜಾಗ್ರತೆಯಾಗಿ, .ಸೋಪಕ್ಷೀಣೇ- ನಾಶದಿಂದ ಕೂಡಿರುವವು, ಬಭೂವತುಃ - ಆದವು. ॥ ೧ ॥ ರಾಕ್ಷಸಾಧಿಪಃ - ರಕ್ಕಸರೊಡೆಯನಾದ, ರಾವಣಃ - ರಾವಣನು, ಸ್ವಬಲಸ್ಯ - ತನ್ನ ಸೈನ್ಯದ, ವಿಘಾತೇನ - ನಾಶದಿಂದಲೂ, ವಿರೂ....ಚ - ವಿರೂಪಾಕ್ಷನ ಸಂಹಾರದಿಂದಲೂ, ದ್ವಿಗುಣಂ - ಇಮ್ಮಡಿಯಾಗಿ, ಕ್ರುದ್ಧಃ - ಕುಪಿತನಾದವನ, ಬಭೂವ - ಆದನು. ॥ ೨ ॥ ವಲೀಮುಖೈಃ - ಕಪಿಗಳಿಂದ, ವಧ್ಯಮಾನಂ - ವಧಿಸಲ್ಪಡುತ್ತಿರುವ, ಪ್ರಕ್ಷೀಣಂ - ಕ್ಷಯ ಹೊಂದುತ್ತಿರುವ, ಬಲಂ - ಸೇನೆಯನ್ನು, ದೃಷ್ಟ್ವಾ - ಕಂಡು, ಯುದ್ಧೇ - ಕಾಳಗದಲ್ಲಿ, ವ್ಯಥಾ - ವ್ಯಸನವು, ಬಭೂವ - ಆಯಿತು. ॥ ೩ ॥ ಸಮೀಪಸ್ಥಂ - ಸಮೀಪದಲ್ಲಿರುವ, ಅರಿಂದಮಂ - ಶತ್ರುಸಂಹಾರಕನಾದ, ಮಹೋದರಂ - ಮಹೋದರನನ್ನು ಕುರಿತು, ಉವಾಚ - ಹೇಳಿದನು, ಹೇ ಮಹಾಬಾಹೋ - ಎಲೈ ಮಹಾ ಭುಜಶಾಲಿಯೇ, ಅಸ್ಮಿನ್ಕಾಲೇ - ಈ ಸಮಯದಲ್ಲಿ, ಮೇ - ನನಗೆ, ಜಯಾಶಾ - ಜಯದ ಆಶೆಯು, ತ್ವಯಿ - ನಿನ್ನಲ್ಲಿ, ಸ್ಥಿತಾ - ನಿಂತಿರುವುದು, ವೀರ -

---

ಆ ಪ್ರಕಾರವಾಗಿ ಉಭಯಪಕ್ಷದವರಿಗೂ ಮಹಾ ಭಯಂಕರವಾದ ಕಾಳಗ ನಡೆಯುತ್ತಿದ್ದ ಸಮಯದಲ್ಲಿ, ಉಭಯಪಕ್ಷದವರ ಸೇನೆಗಳೂ ಬಿರುಬೇಸಗೆಯಲ್ಲಿ ಬತ್ತಿ ಹೋದ ಸರೋವರದಂತೆ ಕಾಣುತ್ತಿದ್ದುವು. ಆಗ ರಾಕ್ಷಸಾಧಿಪತಿಯಾದ ರಾವಣಾಸುರನು ಈ ರೀತಿ ತನ್ನ ಸೇನೆಯೆಲ್ಲವೂ ನಶಿಸಿಹೋದುದರಿಂದಲೂ, ಸೇನಾಧಿಪತಿಯಾದ ವಿರೂಪಾಕ್ಷನು ಮಡಿದುದರಿಂದಲೂ ಅಪರಿಮಿತವಾದ ಕೋಪವನ್ನು ತಾಳಿದನು. ವಾನರರಿಂದ ತನ್ನ ಸೇನೆಯು ಕ್ಷೀಣವಾದುದರಿಂದಲೂ, ದೈವಬಲವು ತಪ್ಪಿಹೋದುದರಿಂದಲೂ ಆ ರಾಕ್ಷಸ ರಾಜನು ಅತ್ಯಧಿಕವಾದ ಮನೋವ್ಯಥೆಯುಳ್ಳವನಾದನು. ಆತನು ತನ್ನ ಸಮೀಪದಲ್ಲಿದ್ದ ಶತ್ರುನಾಶಕನಾದ ಮಹೋದರನೆಂಬ ರಾಕ್ಷಸವೀರರನ್ನು ಕುರಿತು, " ಎಲೈ ಮಹಾ ಭುಜ ಬಲಸಂಪನ್ನನಾದ ಮಹೋದರನೇ! ಈ ವಿಷಮ ಸಮಯದಲ್ಲಿ ನನಗೆ ನೆರವಾಗುವವನು ನೀನೊಬ್ಬನೇ! ನನಗಿರುವ ಜಯಾಶೆಯೆಲ್ಲವೂ ನಿನ್ನನ್ನವಲಂಬಿಸಿರುವುದು. ಆದುದರಿಂದೆಲೈ ವೀರಶ್ರೇಷ್ಠನೇ! ಈಗ ನೀನು ನಿನ್ನ ಅತುಲಪರಾಕ್ರಮವನ್ನು ತೋರಿ ಈ ವಾನರಸೇನೆಯ

॥ ೪ ॥ ಜಹಿ ಶತ್ರುಚಮೂಂ ವೀರ! ದರ್ಶಯಾಽದ್ಯ ಪರಾಕ್ರಮಂ । ಭರ್ತೃಪಿಂಡಸ್ಯ ಕಾಲೋಽಯಂ ನಿರ್ದೇಷ್ಟುಂ ಸಾಧು ಯುಧ್ಯತಾಂ" ॥೫॥ ಏವಮುಕ್ತಸ್ತಥೇತ್ಯುಕ್ತ್ವಾ ರಾಕ್ಷಸೇಂದ್ರೋ ಮಹೋದರಃ । ಪ್ರವಿವೇಶಾರಿಸೇನಾಂ ತಾಂ ಪತಂಗ ಇವ ಪಾವಕಂ ॥ ೬ ॥ ತತಸ್ಸಕದನಂ ಚಕ್ರೇ ವಾನರಾಣಾಂ ಮಹಾಬಲಃ । ಭರ್ತೃವಾಕ್ಯೇನ ತೇಜಸ್ವೀ ಸ್ವೇನ ವೀರ್ಯೇಣ ಚೋದಿತಃ ॥ ೭ ॥ ವಾನರಾಶ್ಚ ಮಹಾಸತ್ವಾಃ ಪ್ರಗೃಹ್ಯ ವಿಪುಲಾಃ ಶಿಲಾಃ । ಪ್ರವಿಶ್ಯಾರಿಬಲಂ ಭೀಮಂ ಜಘ್ನುಸ್ತೇ ರಜನೀಚರಾನ್ ॥ ೮ ॥ ಮಹೋದರಸ್ತು ಸಂಕ್ರುದ್ಧಃ ಶರೈಃ ಕಾಂಚನಭೂಷಣೈಃ । ಚಿಚ್ಛೇದ ಪಾಣಿಪಾದೋರೂನ್

ಶೂರನೇ, ಶತ್ರೂಚಮೂಂ - ಶತ್ರುಸೇನೆಯನ್ನು, ಜಹಿ - ಹೊಡೆ, ಅದ್ಯ - ಈಗ, ಪರಾಕ್ರಮಂ - ಸಾಮರ್ಥ್ಯವನ್ನು, ದರ್ಶಯ - ತೋರಿಸು. ॥ ೪ ॥ ಭರ್ತೃಪಿಂಡಸ್ಯ - ಧಣಿಯ ಅನ್ನ ತಿಂದುದಕ್ಕೆ, ನಿರ್ದೇಷ್ಟುಂ - ಉಪಕಾರ ಮಾಡುವುದಕ್ಕೆ, ಅಯಂಕಾಲಃ - ಈ ಸಮಯವು, ಸಾಧು - ಚೆನ್ನಾಗಿ, ಯುಧ್ಯತಾಂ - ಯುದ್ಧ ಮಾಡಲ್ಪಡಲಿ. ॥ ೫ ॥ ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ರಾಕ್ಷಸೇಂದ್ರಃ - ರಾಕ್ಷಸೋತ್ತಮನಾದ, ಮಹೋದರಃ - ಮಹೋದರನು, ತಥೇತಿ - ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಪಾವಕಂ - ಅಗ್ನಿಯನ್ನು, ಪತಂಗಇವ - ಈಚಲುಹುಳದಂತೆ, ತಾಂಅರಿಸೇನಾಂ - ಆ ಶತ್ರುಸೇನೆಯನ್ನು, ಪ್ರವಿವೇಶ - ಹೊಕ್ಕನು. ॥ ೬ ॥ ತತಃ - ಬಳಿಕ, ಮಹಾಬಲಃ - ಬಹಳ ಬಲಶಾಲಿಯಾದ, ಮಹೋದರಃ - ಮಹೋದರನು, ತೇಜಸ್ವೀ - ಸಾಮರ್ಥ್ಯವಂತನಾದಕಾರಣ, ಭರ್ತೃವಾಕ್ಯೇನ - ಧಣಿಯಾದ ರಾವಣನ ಮಾತಿನಿಂದಲೂ, ಸ್ವೇನ ವೀರ್ಯೇಣ - ಸ್ವಸಾಮರ್ಥ್ಯದಿಂದಲೂ, ಚೋದಿತಃ - ಪ್ರೇರಿತನಾಗಿ, ವಾನರಾಣಾಂ - ಕಪಿಗಳೊಡನೆ, ಕದನಂ - ಕಾಳಗವನ್ನು, ಚಕ್ರೇ - ಮಾಡಿದನು. ॥ ೭ ॥ ಮಹಾಸತ್ವಾಃ - ಮಹಾ ಬಲವಂತರಾದ, ತೇವಾನರಾಃ - ಆ ಕಪಿಗಳು, ವಿಪುಲಾಃ - ವಿಸ್ತಾರಗಳಾದ, ಶಿಲಾಃ - ಕಲ್ಲುಗಳನ್ನು, ಪ್ರಗೃಹ್ಯ - ಹಿಡಿದು, ಭೀಮಂ - ಭಯಂಕರವಾದ, ಅರಿಬಲಂ - ಶತ್ರುಸೇನೆಯನ್ನು, ಪ್ರವಿಶ್ಯ - ಹೊಕ್ಕು, ರಜನೀಚರಾನ್ - ರಕ್ಕಸರನ್ನು, ಜಘ್ನುಃ - ಹೊಡೆದರು. ॥ ೮ ॥ ಮಹೋದರಸ್ತು - ಮಹೋದರನಾದರೆ, ಸಂಕ್ರುದ್ಧಃ - ಕುಪಿತನಾಗಿ, ಮಹಾಹವೇ - ದೊಡ್ಡ ಕಾಳಗದಲ್ಲಿ, ಕಾಂಚ....ಣೈಃ - ಚಿನ್ನದ ಒಡವೆ

ನ್ನೆಲ್ಲ ನಾಶಗೊಳಿಸುವವನಾಗು. ಪ್ರಭುವಾದ ನನ್ನಿಂದ ಈವರೆಗೂ ವೇತನವನ್ನು ಪಡೆದುದಕ್ಕೆ ಪ್ರತ್ಯುಪಕಾರವನ್ನು ಮಾಡಲು ಇದು ತಕ್ಕ ಸಮಯವಾಗಿರುವುದು. ಆದುದರಿಂದ ನೀನು ಈಗ ಶತ್ರುಗಳೊಡನೆ ಭಯಂಕರವಾದ ಯುದ್ಧವನ್ನು ಮಾಡಿ ನನಗೆ ಜಯವನ್ನು ದೊರಕಿಸಿಕೊಡು" ಎಂದು ಹೇಳಿದನು. ॥ ೧-೫ ॥ ಆಗ ರಾಕ್ಷಸೋತ್ತಮನಾದ ಮಹೋದರನು ಒಡೆಯನಾದ ರಾವಣಾಸುರನ ಮಾತುಗಳನ್ನು ಕೇಳಿ ಶಲಭವು ಅಗ್ನಿಯನ್ನು ಪ್ರವೇಶಿಸುವಂತೆ ವಾನರಸೈನ್ಯವನ್ನು ಪ್ರವೇಶಿಸಿದನು. ಮಹಾ ಬಲಾಢ್ಯನೂ, ಮಹಾ ತೇಜಸ್ವಿಯೂ ಆದ ಆ ಮಹೋದರನು ಪ್ರಭುವಾದ ರಾವಣಾಸುರನ ಮಾತಿನಿಂದಲೂ, ತನ್ನ ಪರಾಕ್ರಮದಿಂದಲೂ ಪ್ರೇರೇಪಿತನಾಗಿ ಆ ವಾನರ ದೊಡ್ಡ ಸೇನೆಯನ್ನು ಪ್ರವೇಶಿಸಿ ಭಯಂಕರ ಯುದ್ಧವನ್ನು ಮಾಡತೊಡಗಿದನು. ಆ ಸಮಯದಲ್ಲಿ ಅಧಿಕ ಬಲಸಂಪನ್ನರಾದ ವಾನರರೆಲ್ಲರೂ ದೊಡ್ಡ ದೊಡ್ಡ ಬೆಟ್ಟಗಳಿಂದ ಮಹಾ ಭಯಂಕರಾಕಾರರಾದ ರಾಕ್ಷಸವೀರರನೇಕರನ್ನು ಸಂಹರಿಸಿದರು. ಆಗ ಮಹೋದರನಾದರೋ ಬಂಗಾರದ ಹಿಡಿಗಳುಳ್ಳ ಕೂರಂಬುಗಳಿಂದ ವಾನರ

ವಾನರಾಣಾಂ ಮಹಾಹವೇ ॥ ೯ ॥ ತತಸ್ತೇ ವಾನರಾಸ್ಸರ್ವೇ ರಾಕ್ಷಸೈರರ್ದಿತಾ ಭೃಶಂ । ದಿಶೋ ದಶ ದ್ರುತಾಃ ಕೇಚಿತ್ಕೇಚಿತ್ಸುಗ್ರೀವಮಾಶ್ರಿತಾಃ ॥ ೧೦ ॥ ಪ್ರಭಗ್ನಾಂ ಸಮರೇ ದೃಷ್ಟ್ವಾ ವಾನರಾಣಾಂ ಮಹಾಚಮೂಂ । ಅಭಿದುದ್ರಾವ ಸುಗ್ರೀವೋ ಮಹೋದರಮನಂತರಂ ॥ ೧೧ ॥ ಪ್ರಗೃಹ್ಯ ವಿಪುಲಾಂ ಘೋರಾಂ ಮಹೀಧರಸಮಾಂ ಶಿಲಾಂ । ಚಿಕ್ಷೇಪ ಚ ಮಹಾತೇಜಾಸ್ತದ್ವಧಾಯ ಹರೀಶ್ವರಃ ॥ ೧೨ ॥ ತಾಮಾಪತಂತೀಂ ಸಹಸಾ ಶಿಲಾಂ ದೃಷ್ಟ್ವಾ ಮಹೋದರಃ । ಅಸಂಭ್ರಾಂತಸ್ತತೋ ಬಾಣೈರ್ನಿರ್ಬಿಭೇದ ದುರಾಸದಾಂ ॥ ೧೩ ॥ ರಕ್ಷಸಾ ತೇನ ಬಾಣೌಘೈರ್ನಿಕೃತ್ತಾ ಸಾ ಸಹ

ಗಳುಳ್ಳ, ಶರೈಃ - ಬಾಣಗಳಿಂದ, ವಾನರಾಣಾಂ - ಕಪಿಗಳ, ಪಾಣಿಪಾದೋರೂನ್ - ಕೈಕಾಲುಗಳನ್ನೂ ತೊಡೆಗಳನ್ನೂ, ಚಿಚ್ಛೇದ - ಕತ್ತರಿಸಿದನು. ॥ ೯ ॥ ತತಃ - ಬಳಿಕ, ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ಭೃಶಂ - ಬಹಳವಾಗಿ, ರಾಕ್ಷಸೈಃ - ರಕ್ಕಸರಿಂದ, ಅರ್ದಿತಾಃ - ಹೊಡೆಯಲ್ಪಟ್ಟವರಾಗಿ, ಕೇಚಿತ್ - ಕೆಲವರು, ದಶದಿಶಃ - ಹತ್ತು ದಿಕ್ಕುಗಳನ್ನೂ ಕುರಿತು, ದ್ರುತಾಃ- ಓಡಿದರು, ಕೇಚಿತ್ - ಕೆಲವರು, ಸುಗ್ರೀವಂ - ಸುಗ್ರೀವನನ್ನು, ಆಶ್ರಿತಾಃ - ಹೊಂದಿದರು. ॥ ೧೦ ॥ ಸುಗ್ರೀವಃ - ಸುಗ್ರೀವನು, ಸಮರೇ - ಕಾಳೆಗದಲ್ಲಿ, ಪ್ರಭಗ್ನಾಂ - ವಿಮುಖವಾದ, ವಾನರಾಣಾಂ - ಕಪಿಗಳ, ಮಹಾಚಮೂಂ - ದೊಡ್ಡ ಸೇನೆಯನ್ನು, ದೃಷ್ಟ್ವಾ - ಕಂಡು, ಅನಂತರಂ - ಬಳಿಕ, ಮಹೋದರಂ - ಮಹೋದರನನ್ನು ಕುರಿತು, ಅಭಿದುದ್ರಾವ - ಓಡಿಬಂದರು. ॥೧೧॥ ಮಹಾತೇಜಾಃ- ಮಹಾ ಸಾಮರ್ಥ್ಯವಂತನಾದ, ಹರೀಶ್ವರಃ - ಸುಗ್ರೀವನು, ಮಹಿ....ಮಾಂ - ಬೆಟ್ಟಕ್ಕೆ ಸಮಾನವಾದ, ವಿಪುಲಾಂ - ವಿಸ್ತಾರವಾದ, ಘೋರಾಂ - ಭಯಂಕರವಾದ, ಶಿಲಾಂ - ಕಲ್ಲನ್ನು, ಪ್ರಗೃಹ್ಯ - ತೆಗೆದುಕೊಂಡು, ತದ್ವಧಾಯ - ಆ ಮಹೋದರನ ಸಂಹಾರಕ್ಕಾಗಿ, ಚಿಕ್ಷೇಪ - ಎಸೆದನು. ॥ ೧೨ ॥ ತತಃ - ಬಳಿಕ, ಮಹೋದರಃ - ಮಹೋದರನು, ಸಹಸಾ - ಜಾಗ್ರತೆಯಾಗಿ, ಆಪತಂತೀಂ - ಬರುತ್ತಿರುವ, ದುರಾಸದಾಂ - ಹೊಂದಲಸಾಧ್ಯವಾದ, ತಾಂಶಿಲಾಂ - ಆ ಕಲ್ಲನ್ನು, ದೃಷ್ಟ್ವಾ - ಕಂಡು, ಅಸಂಭ್ರಾಂತಃ - ಭಯವಿಲ್ಲದವನಾಗಿ, ಬಾಣೈಃ - ಬಾಣಗಳಿಂದ, ನಿರ್ಬಿಭೇದ - ಸೀಳಿದನು. ॥ ೧೩ ॥ ತೇನರಕ್ಷಸಾ - ಆ ರಕ್ಕಸನಿಂದ, ಬಾಣೌಘೈಃ - ಬಾಣಗಳ ತಂಡಗಳಿಂದ, ಸಹಸ್ರಧಾ -

---

ವೀರರ ಕೈಕಾಲುಗಳನ್ನೂ, ತೊಡೆಗಳನ್ನೂ ಕತ್ತರಿಸಿ ಕೆಡವಿದನು. ಹೀಗೆ ವಾನರರೆಲ್ಲರೂ ಆ ಮಹೋದರನಿಂದಲೂ, ರಾಕ್ಷಸವೀರರಿಂದಲೂ ಬಹಳವಾಗಿ ಬಾಧಿಸಲ್ಪಟ್ಟು ನಾನಾ ದಿಕ್ಕುಗಳಿಗೂ ಓಡಿಹೋದರು. ಅವರಲ್ಲಿ ಕೆಲವರು ತಮ್ಮ ಪ್ರಭುವಾದ ಸುಗ್ರೀವನ ಬಳಿಗೆ ಕಾಪಾಡೆಂದು ಶರಣಿಟ್ಟು ಬಂದರು. ಹೀಗೆ ರಾಕ್ಷಸರಿಂದ ಸಂಹರಿಸಲ್ಪಟ್ಟುದೂ, ಅತ್ತಿತ್ತ ದಿಕ್ಕೆಟ್ಟು ಓಡುತ್ತಿರುವುದೂ, ಭಯಭ್ರಾಂತವಾಗಿರುವುದೂ ಆದ ತನ್ನ ಸೇನೆಯನ್ನು ಕಂಡು ವಾನರೇಶ್ವರನಾದ ಸುಗ್ರೀವನನ್ನು ಬಹಳನಾಗಿ ಕೆರಳಿ ಆ ಮಹೋದರನೊಡನೆ ಯುದ್ಧ ಮಾಡಲು ಅವನನ್ನಟ್ಟಿ ಬಂದನು. ॥೬–೧೧॥ ಈ ರೀತಿ ಮಹಾ ವೇಗದಿಂದೈತಂದು ಸುಗ್ರೀವನು ಮಹಾ ಭಯಂಕರವಾದುದೂ, ಬಹು ದೊಡ್ಡದಾದುದೂ ಆದ ಒಂದು ಶಿಲೆಯನ್ನು ಬಹು ರಭಸವಾಗಿ ಆ ಮಹೋದರನ ಮೇಲೆಸೆದನು. ತನ್ನ ಮೇಲೆರಗಿ ಬರುತ್ತಿರುವ ಆ ಶಿಲೆಯನ್ನು ಕಂಡು ಮಹೋದರನು ಸ್ವಲ್ಪವೂ ಭಯಪಡದೆ ಬಹು ತೀಕ್ಷ್ಣವಾದ ಬಾಣಗಳಿಂದ ಅದನ್ನು ಭೇದಿಸಿ ಪುಡಿಗುಟ್ಟಿದನು. ಆಗಲಾ ಶಿಲೆಯು ತುಂಡುತುಂಡುಗಳಾಗಿ ಕೆಳಕ್ಕೆ

ಸ್ರಧಾ । ನಿಪಪಾತ ಶಿಲಾ ಭೂಮೌ ಗೃಧ್ರಚಕ್ರಮಿವಾಕುಲಂ ॥೧೪॥ ತಾಂತು ಭಿನ್ನಾಂ ಶಿಲಾಂ ದೃಷ್ಟ್ವಾ ಸುಗ್ರೀವಃ ಕ್ರೋಧಮೂರ್ಛಿತಃ । ಸಾಲಮುತ್ಪಾಟ್ಯ ಚಿಕ್ಷೇಪ ರಾಕ್ಷಸೇ ರಣಮೂರ್ಧನಿ ॥ ೧೫ ॥ ಶರೈಶ್ಚ ವಿದದಾರೈನಂ ಶೂರಃ ಪರಪುರಂಜಯಃ । ಸದದರ್ಶ ತತಃ ಕ್ರುದ್ಧಃ ಪರಿಘಂ ಪತಿತಂ ಭುವಿ ॥ ೧೬ ॥ ಆವಿಧ್ಯತು ಸತಂ ದೀಪ್ತಂ ಪರಿಘಂ ತಸ್ಯ ದರ್ಶಯನ್ । ಪರಿಘಾಗ್ರೇಣ ವೇಗೇನ ಜಘಾನಾಽಸ್ಯ ಹಯೋತ್ತಮಾನ್ ॥ ೧೭ ॥ ತಸ್ಮಾದ್ಧತಹಯಾದ್ವೀರಸ್ಸೋಽವಪ್ಲುತ್ಯ ಮಹಾರಥಾತ್ । ಗದಾಂ ಜಗ್ರಾಹ ಸಂಕ್ರುದ್ಧೋ ರಾಕ್ಷಸೋಽಥ ಮಹೋದರಃ ॥ ೧೮ ॥ ಗದಾಪರಿಘಹಸ್ತೌ ತೌ ಯುಧಿ

ಸಾವಿರಾರು ಭಾಗವಾಗಿ, ನಿಕೃತ್ತಾ - ಕತ್ತರಿಸಲ್ಪಟ್ಟ, ಸಾಶಿಲಾ - ಆ ಕಲ್ಲು, ಆಕುಲಂ - ಸಂಕುಲವಾದ, ಗೃಧ್ರಚಕ್ರಮಿವ - ಹದ್ದುಗಳ ಗುಂಪಿನಂತೆ, ಭೂಮೌ - ನೆಲದಲ್ಲಿ, ನಿಪಪಾತ - ಬಿದ್ದಿತು. ॥೧೪॥ ಸುಗ್ರೀವಃ - ಸುಗ್ರೀವನು, ಭಿನ್ನಾಂ - ಭೇದಿಸಲ್ಪಟ್ಟ, ತಾಂಶಿಲಾಂ - ಆ ಕಲ್ಲನ್ನು, ದೃಷ್ಟ್ವಾ - ಕಂಡು, ಕ್ರೋಧಮೂರ್ಛಿತಃ - ಕೋಪದಿಂದ ಮೈಮರೆತು, ರಣಮೂರ್ಧನಿ - ರಣರಂಗದಲ್ಲಿ, ಸಾಲಂ - ಸಾಲವೃಕ್ಷವನ್ನು, ಉತ್ಪಾಟ್ಯ - ಕಿತ್ತು, ರಾಕ್ಷಸೇ - ಮಹೋದರನಲ್ಲಿ, ಚಿಕ್ಷೇಪ - ಎಸೆದನು. ॥ ೧೫ ॥ ಪರ....ಯಃ - ಶತ್ರುಸಂಹಾರಕನಾದ, ಶೂರಃ - ಶೂರನು, ಏನಂ - ಈ ಸಾಲವೃಕ್ಷವನ್ನು, ಶರೈಃ - ಬಾಣಗಳಿಂದ, ವಿದದಾರ - ಸೀಳಿದನು, ಸಃ - ಆ ಸುಗ್ರೀವನು, ತತಃ - ಬಳಿಕ, ಕ್ರುದ್ಧಃ - ಕೋಪಗೊಂಡು, ಭುವಿ - ನೆಲದಲ್ಲಿ, ಪತಿತಂ - ಬಿದ್ದಿರುವ, ಪರಿಘಂ - ಪರಿಘಾಯುಧವನ್ನು, ದದರ್ಶ - ಕಂಡನು. ॥ ೧೬ ॥ ಸಃ - ಆ ಸುಗ್ರೀವನು, ದೀಪ್ತಂ - ಹೊಳೆಯುತ್ತಿರುವ, ತಂಪರಿಘಂ - ಆ ಪರಿಘಾಯುಧವನ್ನು, ಆವಿಧ್ಯ - ತಿರುಗಿಸಿ, ತಸ್ಯ - ಮಹೋದರನಿಗೆ, ದರ್ಶಯನ್ - ತೋರಿಸುತ್ತ, ವೇಗೇನ - ಜವದಿಂದ, ಪರಿಘಾಗ್ರೇಣ - ಪರಿಘಾಯುಧದ ತುದಿಯಿಂದ, ಆಸ್ಯ - ಈ ಮಹೋದರನ, ಹಯೋತ್ತಮಾನ್ - ಉತ್ತಮವಾದ ಕುದುರೆಗಳನ್ನು, ಜಘಾನ - ಹೊಡೆದನು. ॥೧೭॥ ಅಥ - ಬಳಿಕ, ವೀರಃ - ಶೂರನಾದ, ರಾಕ್ಷಸಃ - ರಕ್ಕಸನಾದ, ಸಮಹೋದರಃ - ಆ ಮಹೋದರನು, ಹತಹಯಾತ್ - ಹೊಡೆಯಲ್ಪಟ್ಟ ಕುದುರೆಗಳುಳ್ಳ, ತಸ್ಮಾತ್‌ಮಹಾರಥಾತ್ - ಆ ದೊಡ್ಡ ತೇರಿನಿಂದ, ಅವಪ್ಲುತ್ಯ - ಧುಮುಕಿ, ಸಂಕ್ರುದ್ಧಃ - ಕುಪಿತನಾಗಿ, ಗದಾಂ - ಗದಾಯುಧವನ್ನು, ಜಗ್ರಾಹ - ತೆಗೆದುಕೊಂಡನು. ॥ ೧೮ ॥ ಯುಧಿ - ಕಾಳೆಗದಲ್ಲಿ, ಗದಾ....ಸ್ತೌ - ಗದಾ

ಬಿದ್ದ ಹದ್ದುಗಳ ಗುಂಪುಗಳಂತೆ ಭೂಮಿಗೆ ಬಿದ್ದುಹೋಯಿತು. ಸುಗ್ರೀವನು ತಾನೆಸೆದ ಶಿಲೆಯು ವಿಫಲವಾದುದನ್ನು ಕಂಡು ಕೋಪದಿಂದ ಕಿಡಿಕಿಡಿಯಾಗಿ ಬಹು ದೊಡ್ಡದಾದ ಸಾಲವೃಕ್ಷವನ್ನು ಬುಡಸಹಿತ ಪೆಳಗಿಸಿಕೊಂಡು ಆ ರಾಕ್ಷಸನ ಮಂಡೆಗೆ ಬಲವಾಗಿ ಬಿಗಿದನು. ॥೧೨–೧೫॥ ಮಹಾ ಶೂರನೂ, ಶತ್ರುಮರ್ದನನೂ ಆದ ಮಹೋದರನು ಸುಗ್ರೀವನು ಪ್ರಯೋಗಿಸಿದ ಆ ಹೆಮ್ಮರವನ್ನು ಬಾಣಗಳಿಂದಲೇ ಸೀಳಿ ಕೆಡವಿದನು. ಆಗ ಸುಗ್ರೀವನಾದರೋ ಮತ್ತೂ ಕೆರಳಿದವನಾಗಿ ಕೆಳಕ್ಕೆ ಜಾರಿಬಿದ್ದ ಮಹೋದರನ ಪರಿಘಾಯುಧವನ್ನು ತೆಗೆದುಕೊಂಡು ಆ ರಾಕ್ಷಸನೇರಿದ್ದ ರಥದ ಕುದುರೆಯನ್ನು ಹೊಡೆದನು. ಆ ಹೊಡೆತವನ್ನು ತಾಳಲಾರದೆ ಅದು ಕೆಳಕ್ಕುರುಳಿ ಮಡಿದು ಹೋಯಿತು. ಹೀಗೆ ಕುದುರೆಯು ಕೆಳಕ್ಕುರುಳಿದೊಡನೆಯೇ ಆ ಮಹೋದರನು ತನ್ನ ರಥದಿಂದ ಕೆಳಕ್ಕೆ ಧುಮುಕಿ ಬಹಳವಾಗಿ ಕೋಪಗೊಂಡು ಗದಾಯುಧವನ್ನು ಕೈಯಲ್ಲಿ ಹಿಡಿದು ಯುದ್ಧಸನ್ನದ್ಧನಾಗಿ ನಿಂತನು. ಹೀಗೆ ಗದಾಹಸ್ತನಾಗಿದ್ದ

ವೀರೌ ಸಮಿಾಯತುಃ । ನರ್ದಂತೌ ಗೋವೃಷಪ್ರಖ್ಯೌ ಘನಾವಿವ ಸವಿದ್ಯುತೌ ॥೧೯॥ ತತಃ ಕ್ರುದ್ಧೋ ಗದಾಂ ತಸ್ಮೈ ಚಿಕ್ಷೇಪ ರಜನೀಚರಃ । ಜ್ವಲಂತೀ ಭಾಸ್ಕರಾಭಾಸಾಂ ಸುಗ್ರೀವಾಯ ಮಹೋದರಃ ॥ ೨೦ ॥ ಗದಾಂ ತಾಂ ಸುಮಹಾಘೋರಾಮಾಪತಂತೀಂ ಮಹಾಬಲಃ । ಸುಗ್ರೀವೋ ರೋಷತಾಮ್ರಾಕ್ಷಸ್ಸಮುದ್ಯಮ್ಯ ಮಹಾಹವೇ ಆಜಘಾನ ಗದಾಂ ತಸ್ಯ ಪರಿಘೇಣ ಹರೀಶ್ವರಃ । ಪಪಾತ ಸಗದೋದ್ಭಿನ್ನಃ ಪರಿಘಸ್ತಸ್ಯ ಭೂತಲೇ ॥೨೧॥ ತತೋ ಜಗ್ರಾಹ ತೇಜಸ್ವೀ ಸುಗ್ರೀವೋ ವಸುಧಾತಲಾತ್ । ಆಯಸಂ ಮುಸಲಂ ಘೋರಂ ಸರ್ವತೋ ಹೇಮಭೂಷಿತಂ ॥ ೨೨ ॥ ಸತಮುದ್ಯಮ್ಯ

ಯುಧವೂ, ಕಬ್ಬಿಣದ ದೊಣ್ಣೆಯೂ ಕೈಯಲ್ಲುಳ್ಳ, ಗೋವೃಷಪಖ್ಯೌ-ವೃಷಭಗಳಂತಿರುವ, ತೌವೀರೌ-ಆ ಶೂರರೀರ್ವರೂ, ಸವಿದ್ಯುತೌ-ಮಿಂಚಿನಿಂದೊಡಗೂಡಿದ, ಘನಾವಿವ-ಮೇಘಗಳಂತೆ, ನರ್ದಂತೌ-ಕೂಗುವವರಾಗಿ, ಸಮಿಾಯತುಃ - ಸೇರಿದರು. ॥ ೧೯ ॥ ತತಃ - ಬಳಿಕ, ಕ್ರುದ್ಧಃ - ಕುಪಿತನಾದ, ರಜನೀಚರಃ - ರಕ್ಕಸನಾದ, ಮಹೋದರಃ - ಮಹೋದರನು, ಜ್ವಲಂತೀಂ - ಹೊಳೆಯುತ್ತಿರುವ, ಭಾಸ್ಕರಾಭಾಸಾಂ - ಸೂರ್ಯನ ಪ್ರಕಾಶದಂತೆ ಪ್ರಕಾಶಮಾನವಾದ, ಗದಾಂ - ಗದಾಯುಧವನ್ನು, ತಸ್ಮೈಸುಗ್ರೀವಾಯ - ಆ ಸುಗ್ರೀವನಿಗಾಗಿ, ಚಿಕ್ಷೇಪ - ಎಸೆದನು. ॥ ೨೦ ॥ ಮಹಾಬಲಃ - ಬಹಳ ಬಲಶಾಲಿಯಾದ, ಹರೀಶ್ವರಃ - ವಾನರರಾಜನಾದ, ಸುಗ್ರೀವಃ - ಸುಗ್ರೀವನು, ರೋಷತಾಮ್ರಾಕ್ಷಃ - ಕೋಪದಿಂದ ರಕ್ತನೇತ್ರನಾಗಿ, ಮಹಾಹವೇ - ದೊಡ್ಡ ಕಾಳಗದಲ್ಲಿ, ಆಪತಂತೀಂ - ಬರುತ್ತಿರುವ, ಸುಮಹಾಘೋರಾಂ - ಬಹಳ ಭಯಂಕರವಾದ, ತಾಂಗದಾಂ - ಆ ಗದೆಯನ್ನು, ದೃಷ್ಟ್ವಾ - ಕಂಡು, ತಸ್ಯ - ಆ ಮಹೋದರನ, ಗದಾಂ - ಗದಾಯುಧವನ್ನು, ಪರಿಘೇಣ - ಪರಿಘಾಯುಧದಿಂದ, ಸಮುದ್ಯಮ್ಯ - ಎತ್ತಿ, ಆಜಘಾನ - ಹೊಡೆದನು. ॥೨೧॥ ತಸ್ಯ - ಆ ಸುಗ್ರೀವನ, ಸಪರಿಘಃ - ಆ ಪರಿಘಾಯುಧವು, ಗದೋದ್ಭಿನ್ನಃ - ಗದಾಯುಧದಿಂದ ಹೊಡೆಯಲ್ಪಟ್ಟುದಾಗಿ, ಭೂತಲೇ - ನೆಲದಲ್ಲಿ, ಪಪಾತ - ಬಿದ್ದಿತು. ॥೨೨॥ ತತಃ - ಬಳಿಕ, ತೇಜಸ್ವೀ - ಸಾಮರ್ಥ್ಯವಂತನಾದ, ಸುಗ್ರೀವಃ - ಸುಗ್ರೀವನು, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಹೇಮಭೂಷಿತಂ - ಚಿನ್ನದ ಕಟ್ಟುಗಳಿಂದ ಅಲಂಕರಿಸಲ್ಪಟ್ಟ, ಘೋರಂ - ಭಯಂಕರವಾದ, ಆಯಸಂ - ಕಬ್ಬಿಣದ, ಮುಸಲಂ - ಒನಕೆಯನ್ನು, ವಸು......ತ್ - ಭೂಮಿಯಿಂದ, ಜಗ್ರಾಹ - ತೆಗೆದುಕೊಂಡನು. ॥೨೩॥ ಸಃ - ಆ ಸುಗ್ರೀವನು, ತಂ -

---

ಮಹೋದರನೂ, ಪರಿಘಹಸ್ತನಾಗಿದ್ದ ಸುಗ್ರೀವನೂ ಯುದ್ಧಸನ್ನದ್ಧರಾಗಿ ನಿಂತು ಮದಿಸಿದ ಗೂಳಿಗಳಂತೆ ಕೂಗಿಡುತ್ತಿದ್ದರು. ಅವರೀರ್ವರೂ ಮಿಂಚಿನ ಬಳ್ಳಿಯೊಡಗೂಡಿದ ಮುಗಿಲುಗಳನ್ನು ಹೋಲುತ್ತಿದ್ದರು. ರಾಕ್ಷಸಾಧಿಪತಿಯಾದ ಮಹೋದರನು ಮಹಾ ಕೋಪೋದ್ದೀಪಿತನಾಗಿ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳುದೂ, ಬಹು ಮನೋಹರವಾದುದೂ ಆದ ಆ ಗದೆಯನ್ನು ಸುಗ್ರೀವನ ಮೇಲೆ ಪ್ರಯೋಗಿಸಿದನು. ॥ ೧೯–೨೦ ॥ ಹೀಗೆ ಮಹೋದರನು ಪ್ರಯೋಗಿಸಿದ ಆ ಗದೆಯು ಸುಗ್ರೀವನ ಮೇಲೆ ವೇಗದಿಂದ ಬರುತ್ತಿದ್ದಿತು. ಅದನ್ನು ಕಂಡು ಆ ವಾನರೇಶ್ವರನು ತನಗಭಿಮುಖವಾಗಿ ಬರುತ್ತಿದ್ದ ಮಹಾ ಭಯಂಕರವಾದ ಆ ಗದೆಯನ್ನು ತನ್ನ ಕೈಯಲ್ಲಿದ್ದ ಪರಿಘಾಯುಧದಿಂದ ಹೊಡೆದನು. ಆದರೆ ಆ ಪರಿಘಾಯುಧವು ಗದೆಯೊಡನೆ ಸಮ್ಮರ್ದಿಸಿ ಮುರಿದು ಕೆಳಕ್ಕೆ ಬಿದ್ದುಹೋಯಿತು. ಆಗ ಅತ್ಯಧಿಕ ತೇಜಸ್ಸಂಪನ್ನನಾದ ಸುಗ್ರೀವನು ಮಹಾ ವೇಗದಿಂದ ಯುದ್ಧಭೂಮಿಯಲ್ಲಿದ್ದ

ಚಿಕ್ಷೇಪ ಸೋಽಪ್ಯನ್ಯಾಂ ವ್ಯಾಕ್ಷಿಪದ್ಗದಾಂ । ಭಿನ್ನಾವನ್ಯೋನ್ಯಮಾಸಾದ್ಯ ಪೇತತು ರ್ಧರಣೀತಲೇ ॥ ೨೪ ॥ ತತೋ ಭಗ್ನಪ್ರಹರಣೌ ಮುಷ್ಟಿಭ್ಯಾಂ ತೌ ಸಮಾಯತುಃ । ತೇಜೋಬಲಸಮಾವಿಷ್ಟೌ ದೀಪ್ತಾವಿವ ಹುತಾಶನೌ ॥ ೨೫ ॥ ಜಘ್ನತುಸ್ತೌ ತದಾ ನ್ಯೋನ್ಯಂ ನೇದತುಶ್ಚ ಪುನಃ ಪುನಃ । ತಲೈಶ್ಚಾನ್ಯೋನ್ಯಮಾಹತ್ಯ ಪೇತತುರ್ಧರಣೀ ತಲೇ ॥ ೨೬ ॥ ಉತ್ಪೇತತುಸ್ತತಸ್ತೂರ್ಣಂ ಜಘ್ನತುಶ್ಚ ಪರಸ್ಪರಂ । ಭುಜೈಶ್ಚಿಕ್ಷಿ ಪತುರ್ವೀರಾವನ್ಯೋನ್ಯಮಪರಾಜಿತೌ ॥ ೨೭ ॥ ಜಗ್ಮತುಸ್ತೌ ಶ್ರಮಂ ವೀರೌ ಬಾಹು ಯುದ್ಧೇ ಪರಂತಪೌ । ಆಜಹಾರ ತತಃ ಖಡ್ಗಮದೂರಪರಿವರ್ತಿನಂ । ರಾಕ್ಷಸಶ್ಚ

ಆ ಮುಸಲಾಯುಧವನ್ನು, ಉದ್ಯಮ್ಯ - ಎತ್ತಿ, ಚಿಕ್ಷೇಪ ಎಸೆದನು, ಸೋಽಪಿ - ಆ ಮಹೋದರನೂ, ಅನ್ಯಾಂ - ಮತ್ತೊಂದು, ಗದಾಂ - ಗದಾಯುಧವನ್ನು, ಅಕ್ಷಿಪತ್ - ಎತ್ತಿಹಾಕಿದನು (ಅವು), ಅನ್ಯೋನ್ಯಂ - ಪರಸ್ಪರವಾಗಿ, ಆಸಾದ್ಯ - ಹೊಂದಿ, ಭಿನ್ನಂ - ಸೀಳಲ್ಪಟ್ಟವುಗಳಾಗಿ, ಧರಣೀತಲೇ - ಭೂಪ್ರದೇಶದಲ್ಲಿ, ಪೇತತುಃ - ಬಿದ್ದವು. ॥ ೨೪ ॥ ತತಃ - ಬಳಿಕ, ಭಗ್ನ....ಣೌ - ಮುರಿಯಲ್ಪಟ್ಟ ಆಯುಧಗಳುಳ್ಳ, ತೇಜೋ.....ಷ್ಟೌ - ಅಂತಸ್ಸಾರದಿಂದಲೂ ದೇಹಸಾಮರ್ಥ್ಯದಿಂದಲೂ ಕೂಡಿರುವ, ತೌ - ಆ ಸುಗ್ರೀವ ಮಹೋದರರು, ದೀಪ್ತೌ - ಹೊಳೆಯುತ್ತಿರುವ, ಹುತಾಶನಾವಿವ - ಅಗ್ನಿಗಳಂತೆ, ಮುಷ್ಟಿಭ್ಯಾಂ - ಹಿಡಿಗಳಿಂದ, ಸಮಾಯತುಃ - ಸೇರಿದರು. ॥ ೨೫ ॥ ತೌ - ಆ ಸುಗ್ರೀವ ಮಹೋದರರು, ತದಾ - ಆ ಕಾಲದಲ್ಲಿ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ಜಘ್ನುಃ - ಹೊಡೆದರು, ಪುನಃಪುನಃ - ಬಾರಿಬಾರಿಗೂ, ನೇದತುಶ್ಚ - ಕೋಲಾಹಲ ಧ್ವನಿಗೈದರು, ತಲೈಃ - ಅಂಗೈಗಳಿಂದ, ಅನ್ಯೋನ್ಯಂ - ಪರಸ್ಪರವಾಗಿ, ಆಹತ್ಯ - ಹೊಡೆದು, ಧರಣೀತಲೇ - ಭೂಮಿಯಲ್ಲಿ, ಪೇತತುಃ - ಬಿದ್ದರು. ॥ ೨೬ ॥ ತತಃ - ಬಳಿಕ, ತೂರ್ಣಂ - ಜಾಗ್ರತೆಯಾಗಿ, ಉತ್ಪೇತತುಃ - ಹಾರಿದರು, ಪರಸ್ಪರಂ - ಅನ್ಯೋನ್ಯವಾಗಿ, ಜಘ್ನತುಃ - ಹೊಡೆದರು, ವೀರೌ - ಶೂರರಾದ ಅವರೀರ್ವರೂ, ಅಪರಾಜಿತೌ - ಪರಾಜಿತರಾಗದೆ, ಅನ್ಯೋನ್ಯಂ - ಪರಸ್ಪರವಾಗಿ, ಭುಜೈಃ - ಭುಜಗಳಿಂದ, ಚಿಕ್ಷಿಪತುಃ- ಎತ್ತಿಹಾಕಿದರು, ಪರಂತಪೌ - ಶತ್ರುಸಂಹಾರಕರಾದ, ವೀರೌ - ಶೂರರಾದ, ತೌ - ಆ ಸುಗ್ರೀವ ಮಹೋದರರು, ಬಾಹುಯುದ್ಧೇ - ಭುಜಾಭುಜಿ ಯುದ್ಧದಲ್ಲಿ, ಶ್ರಮಂ - ಆಯಾಸವನ್ನು, ಜಗ್ಮತುಃ- ಹೊಂದಿದರು. ॥೨೭॥ ತತಃ - ಬಳಿಕ, ಮಹಾವೇಗಃ - ಬಹಳ ವೇಗಶಾಲಿಯಾದ, ರಾಕ್ಷಸಃ - ರಕ್ಕಸ

ಸ್ವರ್ಣಾಲಂಕೃತವಾದ ಭಯಂಕರ ಮುಸಲಾಯುಧವನ್ನು ಗ್ರಹಿಸಿ ಮತ್ತೆ ಮಹೋದರ ನೆಸೆದ ಬೇರೊಂದು ಗದೆಯಮೇಲೆ ಬಿಸುಟನು. ಆಗ ಆ ಎರಡೂ ಆಯುಧಗಳೂ ತುಂಡುತುಂಡುಗಳಾಗಿ ಕೆಳಕ್ಕೆ ಬಿದ್ದುಹೋದುವು. ಆಗ ವೀರರಾದ ಸುಗ್ರೀವ ಮಹೋದರರೀರ್ವರೂ ಅಗ್ನಿಯಂತೆ ಪ್ರಜ್ವಲಿಸುತ್ತ ಭಯಂಕರವಾದ ಮುಷ್ಟಿಯುದ್ಧಕ್ಕೆ ಮೊದಲು ಮಾಡಿದರು. ॥ ೨೧–೨೫ ॥ ಅವರಿಬ್ಬರೂ ಪರಸ್ಪರವಾಗಿ ಮುಷ್ಟಿಗಳಿಂದ ಹೊಡೆದಾಡಿದರು. ಭಯಂಕರ ಧ್ವನಿಯಾಗುವಂತೆ ಸಿಂಹನಾದ ಮಾಡಿದರು. ಭೂಮಿಯೇ ಅದಿರಿ ಹೋಗುವಂತೆ ಅವರೀರ್ವರೂ ಪಾದಘಟ್ಟನಗಳನ್ನು ಮಾಡುತ್ತ, ಪಾದತಲಗಳಿಂದಲೂ, ಕೈಗಳಿಂದಲೂ, ಭಯಂಕರವಾದ ಯುದ್ಧವನ್ನು ಮಾಡಿದರು. ಒಬ್ಬರಮೇಲೊಬ್ಬರು ಹಾರಿ ಬೀಳುತ್ತ ಮಹತ್ತರವಾಗಿ ಸೆಣಸಿದರು. ಸ್ವಲ್ಪ ಹೊತ್ತು ಇಬ್ಬರೂ ಭುಜಗಳಿಂದಲೇ ಕಾಳೆಗ ಮಾಡಿದರು. ಹೀಗೆ ಬಹಳಕಾಲ ಯುದ್ಧ ಮಾಡಿದುದರಿಂದ ಇಬ್ಬರೂ

ರ್ಮಣಾ ಸಾರ್ಧಂ ಮಹಾವೇಗೋ ಮಹೋದರಃ ॥ ೨೮ ॥ ತಥೈವ ಚ ಮಹಾಖಡ್ಗಂ ಚರ್ಮಣಾ ಪತಿತಂ ಸಹ । ಜಗ್ರಾಹ ವಾನರಶ್ರೇಷ್ಠಸ್ಸುಗ್ರೀವೋ ವೇಗವತ್ತರಃ ॥೨೯॥ ತೌತು ರೋಷಪರೀತಾಂಗೌ ನರ್ದತಾವಭ್ಯಧಾವತಾಂ । ಉದ್ಯತಾಸೀ ರಣೇ ಹೃಷ್ಟೌ ಯುಧಿ ಶಸ್ತ್ರವಿಶಾರದೌ ॥ ೩೦ ॥ ದಕ್ಷಿಣಂ ಮಂಡಲಂ ಚೋಭೌ ಸುತೂರ್ಣಂ ಸಂಪರೀಯತುಃ । ಅನ್ಯೋನ್ಯಮಭಿಸಂಕ್ರುದ್ಧೌ ಜಯೇ ಪ್ರಣಿಹಿತಾವುಭೌ ॥ ೩೧ ॥ ಸತು ಶೂರೋ ಮಹಾವೇಗೋ ವೀರ್ಯಶ್ಲಾಘೀ ಮಹೋದರಃ । ಮಹಾಚರ್ಮಣಿ ತಂ ಖಡ್ಗಂ ಪಾತಯಾಮಾಸ ದುರ್ಮತಿಃ ॥ ೩೨ ॥ ಲಗ್ನಮುತ್ಕರ್ಷತಃ ಖಡ್ಗಂ ಖಡ್ಗೇನ ಕಪಿಕುಂಜರಃ । ಜಹಾರ ಸಶಿರಸ್ತ್ರಾಣಂ ಕುಂಡಲೋಪಹಿತಂ ಶಿರಃ ॥ ೩೩ ॥ ನಿಕೃತ್ತ

ನಾದ, ಮಹೋದರಃ - ಮಹೋದರನು, ಅದೂ....ನಂ - ಸಮೀಪದಲ್ಲಿ ಬಿದ್ದಿರುವ, ಖಡ್ಗಂ - ಖಡ್ಗವನ್ನು, ಚರ್ಮಣಾಸಾರ್ಧಂ - ಖೇಡ್ಯದೊಡನೆ, ಆಜಹಾರ - ತೆಗೆದುಕೊಂಡನು. ॥೨೮॥ ವೇಗವತ್ತರಃ- ಬಹಳ ವೇಗವಂತನಾದ, ವಾನರಶ್ರೇಷ್ಠಃ - ವಾನರೋತ್ತಮನಾದ, ಸುಗ್ರೀವಃ - ಸುಗ್ರೀವನು, ಚರ್ಮಣಾಸಹ - ಖೇಡ್ಯದಿಂದೊಡಗೂಡಿ, ಪತಿತಂ - ಬಿದ್ದಿರುವ, ಮಹಾಖಡ್ಗಂ - ದೊಡ್ಡ ಖಡ್ಗವನ್ನು, ತಥೈವ - ಹಾಗೆಯೇ, ಜಗ್ರಾಹ - ತೆಗೆದುಕೊಂಡನು. ॥ ೨೯ ॥ ರೋಷ....ಗೌ - ಕ್ರೋಧದಿಂದ ವ್ಯಾಪ್ತವಾದ ಶರೀರಗಳುಳ್ಳ, ತೌ - ಆ ಸುಗ್ರೀವ ಮಹೋದರರು, ಯುಧಿ - ಕಾಳಗದಲ್ಲಿ, ಶಸ್ತ್ರ....ದೌ - ಶಸ್ತ್ರವಿದ್ಯೆಗಳಲ್ಲಿ ಸಮರ್ಥರಾದಕಾರಣ, ರಣೇ - ಕಾಳಗದಲ್ಲಿ, ಹೃಷ್ಟೌ - ಸಂತೋಷಗೊಂಡು, ಉದ್ಯತಾಸೀ - ಎತ್ತಿದ ಕತ್ತಿಗಳುಳ್ಳವರಾಗಿ, ನರ್ದಂತೌ - ಕೂಗುತ್ತ, ಅಭ್ಯಧಾವತಾಂ - ಓಡಿಬಂದರು. ॥ ೩೦ ॥ ಉಭೌ - ಇಬ್ಬರೂ, ದಕ್ಷಿಣಂ - ಪ್ರದಕ್ಷಿಣಾಕಾರವಾಗಿಯೂ, ಮಂಡಲಂ - ಚಕ್ರಾಕಾರವಾಗಿಯೂ, ಸುತೂರ್ಣಂ - ಜಾಗ್ರತೆಯಾಗಿ, ಸಂಪರೀಯತುಃ - ಸುತ್ತಾಡಿದರು, ಉಭೌ- ಇಬ್ಬರೂ, ಅನ್ಯೋನ್ಯಂ - ಪರಸ್ಪರವಾಗಿ, ಅಭಿಸಂಕ್ರುದ್ಧೌ - ಕುಪಿತರಾಗಿ, ಜಯೇ - ಜಯದಲ್ಲಿ, ಪ್ರಣಿಹಿತೌ - ಅನುಸಂಧಾನವುಳ್ಳವರಾದರು. ॥ ೩೧ ॥ ಶೂರಃ - ಶೂರನಾದ, ಮಹಾವೇಗಃ - ಬಹಳ ವೇಗಶಾಲಿಯಾದ, ವೀರ್ಯಶ್ಲಾಘೀ - ಪರಾಕ್ರಮದಿಂದ ಸ್ತೋತ್ರಕ್ಕೆ ಅರ್ಹನಾದ, ದುರ್ಮತಿಃ - ದುರ್ಬುದ್ಧಿಯಾದ, ಸಮಹೋದರಸ್ತು - ಆ ಮಹೋದರನಾದರೆ, ತಂಖಡ್ಗಂ - ಆ ಕತ್ತಿಯನ್ನು, ಮಹಾಚರ್ಮಣಿ - ದೊಡ್ಡ ಖೇಡ್ಯದಲ್ಲಿ, ಪಾತಯಾಮಾಸ - ಕೆಡಹಿದನು. ॥ ೩೨ ॥ ಕಪಿಕುಂಜರಃ - ಸುಗ್ರೀವನು, ಲಗ್ನಂ - ಖೇಡ್ಯದಲ್ಲಿ ತಗುಲಿರುವ, ಖಡ್ಗಂ - ಕತ್ತಿಯನ್ನು, ಉತ್ಕರ್ಷತಃ - ಸೆಳೆಯುತ್ತಿರುವ, ತಸ್ಯ - ಆ ಮಹೋದರನ, ಸಶಿರಸ್ತ್ರಾಣಂ - ಕಿರೀಟದಿಂದೊಡಗೂಡಿದ, ಕುಂಡಲೋಪ

ಬಹಳ ಆಯಾಸಗೊಂಡವರಾದರು. ಆಗ ಮಹೋದರನು ಬಹಳವಾದ ಕೋಪಾಟೋಪವುಳ್ಳವನಾಗಿ ತನ್ನ ಸಮೀಪದಲ್ಲಿದ್ದ ಖಡ್ಗವನ್ನೂ ಖೇಡ್ಯವನ್ನೂ ಹಿಡಿದು ಸನ್ನದ್ಧನಾದನು. ವಾನರೇಶ್ವರನಾದ ಸುಗ್ರೀವನು ಕ್ರೋಧೋದ್ದೀಪಿತನಾಗಿ ಯುದ್ಧಭೂಮಿಯಲ್ಲಿ ಬಿದ್ದಿದ್ದ ಒಂದು ಖಡ್ಗವನ್ನೂ, ಖೇಡ್ಯವನ್ನೂ ಹಿಡಿದು ಆ ಮಹೋದರನೊಡನೆ ಕಾಳಗ ಮಾಡಲು ಸಿದ್ಧನಾದನು. ॥ ೨೬-೩೦ ॥ ಆಯುಧಪಾಣಿಗಳಾಗಿ ಅಪರಿಮಿತ ಕೋಪಾವಿಷ್ಟರಾಗಿಯೂ, ಮಹಾ ತೇಜಸ್ವಿಗಳಾಗಿಯೂ ಇರುವ ಆ ಮಹೋದರ ಸುಗ್ರೀವರು ಪರಸ್ಪರ ಜಯೇಚ್ಛೆಯುಳ್ಳವರಾಗಿ ಒಬ್ಬರಮೇಲೊಬ್ಬರು ಹಾರಿದರು. ಪರಸ್ಪರವಾಗಿ ಖಡ್ಗಗಳನ್ನು ಪ್ರಯೋಗಿಸಿದರು. ಆ ಸಮಯದಲ್ಲಿ ಸುಗ್ರೀವನು ಅಪರಿಮಿತ ಕ್ರೋಧಸಮನ್ವಿತನಾಗಿ ಕೈಲಿದ್ದ ಖಡ್ಗ

ಶಿರಸಸ್ತಸ್ಯ ಪತಿತಸ್ಯ ಮಹೀತಲೇ । ತದ್ಬಲಂ ರಾಕ್ಷಸೇಂದ್ರಸ್ಯ ದೃಷ್ಟ್ವಾ ತತ್ರ ನತಿಷ್ಠತೇ ॥ ೩೪ ॥ ಹತ್ವಾತು ವಾನರೈಸ್ಸಾರ್ಧಂ ನನಾದ ಮುದಿತೋ ಹರಿಃ । ಚುಕ್ರೋಧಚ ದಶಗ್ರೀವೋ ಬಭೌ ಹೃಷ್ಟಶ್ಚ ರಾಘವಃ ॥೩೫॥ ವಿಷಣ್ಣವದನಾಸ್ಸರ್ವೇ ರಾಕ್ಷಸಾ ದೀನಚೇತಸಃ । ವಿದ್ರವಂತಿ ತತಸ್ಸರ್ವೇ ಭಯವಿತ್ರಸ್ತಚೇತಸಃ ॥ ೩೬ ॥ ಮಹೋದರಂ ತಂ ವಿನಿಪಾತ್ಯ ಭೂಮೌ ಮಹಾಗಿರೇಃ ಕೀರ್ಣಮಿವೈಕದೇಶಂ । ಸೂರ್ಯಾತ್ಮಜಸ್ತತ್ರ ರರಾಜ ಲಕ್ಷ್ಮ್ಯಾ ಸೂರ್ಯಸ್ಸ್ವತೇಜೋಭಿರಿವಾಪ್ರಧೃಷ್ಯಃ ॥ ೩೭ ॥

ಹಿತಂ - ಕರ್ಣಾಭರಣಗಳಿಂದ ಕೂಡಿರುವ, ಶಿರಃ - ತಲೆಯನ್ನು, ಖಡ್ಗೇನ - ಕತ್ತಿಯಿಂದ, ಜಹಾರ - ಅಪಹರಿಸಿದರು. ॥ ೩೩ ॥ ನಿಕೃತ್ತಶಿರಸಃ - ಕತ್ತರಿಸಿದ ಶಿರಸ್ಸುಳ್ಳ, ತಸ್ಯ - ಆ ಮಹೋದರನು, ಮಹೀತಲೇ - ಭೂಮಿಯಲ್ಲಿ, ಪತಿತಸ್ಯ - ಬಿದ್ದವನಾಗಲು, ದೃಷ್ಟ್ವಾ - ಕಂಡು, ರಾಕ್ಷಸೇಂದ್ರಸ್ಯ - ರಾವಣನ, ತದ್ಬಲಂ - ಆ ಸೇನೆಯು, ತತ್ರ - ಆ ರಣರಂಗದಲ್ಲಿ, ನತಿಷ್ಠತೇ - ಇರಲೇ ಇಲ್ಲವು.॥೩೪॥ ಹರಿಃ - ಸುಗ್ರೀವನು, ಹತ್ವಾ - ಹೊಡೆದು, ಮುದಿತಃ - ಸಂತೋಷಗೊಂಡವನಾಗಿ, ವಾನರೈಸ್ಸಾರ್ಧಂ- ಕಪಿಗಳೊಡನೆ, ನನಾದ - ಕೋಲಾಹಲಧ್ವನಿ ಮಾಡಿದನು, ದಶಗ್ರೀವಃ - ರಾವಣನು, ಚುಕ್ರೋಧ - ಕೋಪ ಮಾಡಿದನು, ರಾಘವಶ್ಚ - ಶ್ರೀರಾಮನು, ಹೃಷ್ಟಃ - ಸಂತೋಷಗೊಂಡವನಾಗಿ, ಬಭೌ - ಹೊಳೆಯುತ್ತಿದ್ದನು. ॥ ೩೫ ॥ ಸರ್ವೇ - ಸಮಸ್ತರಾದ, ರಾಕ್ಷಸಾಃ - ರಕ್ಕಸರು, ವಿಷಣ್ಣವದನಾಃ - ವ್ಯಸನದಿಂದ ಬತ್ತಿದ ಮುಖವುಳ್ಳವನಾಗಿ, ದೀನಚೇತಸಃ - ಕುಗ್ಗಿದ ಮದಸ್ಸುಗಳುಳ್ಳವರಾಗಿ, ತತಃ - ಬಳಿಕ, ಸರ್ವೇ-ಸಮಸ್ತರೂ, ಭಯ....ಸಃ-ಭಯದಿಂದ ಹೆದರಿದ ಬುದ್ಧಿಯುಳ್ಳವನಾಗಿ, ವಿದ್ರವಂತಿ- ಓಡಿಹೋದರು. ॥ ೩೬ ॥ ಸೂರ್ಯಾತ್ಮಜಃ - ಸೂರ್ಯನ ಮಗನಾದ ಸುಗ್ರೀವನು, ಮಹಾಗಿರೇಃ - ದೊಡ್ಡ ಬೆಟ್ಟದ, ಕೀರ್ಣಂ - ಎರಚಲ್ಪಟ್ಟ, ಏಕದೇಶಮಿವ - ಒಂದು ಶೃಂಗದಂತಿರುವ, ತಂಮಹೋದರಂ - ಆ ಮಹೋದರನನ್ನು, ಭೂಮೌ - ನೆಲದಲ್ಲಿ, ವಿನಿಪಾತ್ಯ - ಕೆಡಹಿ, ತತ್ರ - ಆ ರಣರಂಗದಲ್ಲಿ, ಸ್ವತೇಜೋಭಿಃ - ತನ್ನ ಕಿರಣಗಳಿಂದ, ಸೂರ್ಯಇವ - ಸೂರ್ಯನಂತೆ, ಅಪ್ರಧೃಷ್ಯಃ - ತಿರಸ್ಕರಿಸಲಸಾಧ್ಯನಾಗಿ, ಲಕ್ಷ್ಮ್ಯಾ - ಜಯಲಕ್ಷ್ಮಿಯಿಂದ, ರರಾಜ - ಹೊಳೆಯುತ್ತಿದ್ದನು. ॥ ೩೭ ॥ ಅಥ - ಅನಂತರದಲ್ಲಿ, ಮಹಾತ್ಮಾ - ಮಹಾ ಧೈರ್ಯಶಾಲಿಯಾದ, ವಾನರೇಂದ್ರಃ - ಕಪಿರಾಜನಾದ

ದಿಂದ ಆ ಮಹೋದರನ ಕುಂಡಲಾಲಂಕೃತವಾದ ಶಿರಸ್ಸನ್ನು ಕಡಿದುಹಾಕಿದನು. ಕೂಡಲೇ ಆ ರಾಕ್ಷಸನು ನೆಲಕ್ಕುರುಳಿದನು. ರಾಕ್ಷಸಸೇನೆಯೆಲ್ಲವೂ ತಮ್ಮ ಅಧಿಪತಿಯಾದ ಮಹೋದರನು ಮಡಿದುದನ್ನು ಕಂಡು ಭಯಗೊಂಡು ಎತ್ತಲೂ ಹೋಗಲಾರದೆ ಭ್ರಾಂತವಾಗಿ ಹೋದರು. ಸುಗ್ರೀವನು ಹೀಗೆ ಮಹೋದರನ ತಲೆಯನ್ನು ಕಡಿದು ಬಹಳವಾದ ಸಂತೋಷದಿಂದ ಭಯಂಕರ ಸಿಂಹನಾದ ಮಾಡಿದನು. ಆಗ ಶ್ರೀರಾಮನು ಪರಮ ಸಂತುಷ್ಟನಾದನು. ರಾವಣಾಸುರನ ಕೋಪಕ್ಕೆ ಮಿತಿಯಿಲ್ಲವಾಯಿತು. ರಾಕ್ಷಸರೆಲ್ಲರೂ ದೀನರೂ, ವ್ಯಸನಯುಕ್ತರೂ, ಭಯಪೀಡಿತರೂ ಆಗಿ ನಾನಾದಿಕ್ಕುಗಳಿಗೂ ಓಡಿಹೋದರು. ಹೀಗೆ ದಿನಕರತನುಜನಾದ ಸುಗ್ರೀವನು ಬಹು ದೊಡ್ಡ ಪರ್ವತಪ್ರದೇಶದಲ್ಲಿನ ಒಂದು ಶಿಖರದಂತಿರುವ ಮಹಾ ಬಲಾಢ್ಯನಾದ ಮಹೋದರನನ್ನು ಕೊಂದು ಕೆಡವಿ ಜಯಲಕ್ಷ್ಮಿಯೊಡನೆಯೂ, ತನ್ನ ತೇಜಸ್ಸಿನೊಡನೆಯೂ ಕೂಡಿ ಸೂರ್ಯನಂತೆಯೇ ಶತ್ರುಗಳಿಗೆ ದುರ್ದರ್ಶನಾಗಿ ಪ್ರಕಾಶಿಸಿದನು. ॥ ೩೧–೩೭ ॥ ಆ ತರುವಾಯ ವಾನರೇಶ್ವರನಾದ ಸುಗ್ರೀವನು ರಣಾಂಗಣದಲ್ಲಿ

ಅಥ ವಿಜಯಮವಾಪ್ಯ ವಾನರೇಂದ್ರ
ಸ್ಸಮರಮುಖೇ ಸುರಯಕ್ಷಸಿದ್ಧಸಂಘೈಃ ।
ಅವನಿತಲಗತೈಶ್ಚ ಭೂತಸಂಘೈ
ರ್ಹರ್ಷಸಮಾಕುಲಿತೈಸ್ಸ್ತುತೋ ಮಹಾತ್ಮಾ ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟನವತಿತಮಸ್ಸರ್ಗಃ.

ಸುಗ್ರೀವನು, ಸಮರಮುಖೇ - ರಣಭೂಮಿಯಲ್ಲಿ, ವಿಜಯಂ - ಜಯವನ್ನು, ಅವಾಪ್ಯ - ಹೊಂದಿ, ಹರ್ಷ....ತೈ - ಸಂತೋಷದಿಂದ ವ್ಯಾಪ್ತರಾದ, ಸುರ....ಘೈಃ - ದೇವತೆಗಳ ಯಕ್ಷಸಿದ್ಧರುಗಳ ತಂಡಗಳಿಂದಲೂ, ಅವ....ತೈಃ - ಭೂಪ್ರದೇಶವನ್ನು ಹೊಂದಿರುವ, ಭೂತಸಂಘೈಶ್ಚ - ಪ್ರಾಣಿಗಳ ಸಂಘದಿಂದಲೂ, ಸ್ತುತಃ - ಸ್ತೋತ್ರಮಾಡಲ್ಪಟ್ಟನು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟನವತಿತಮಸ್ಸರ್ಗಃ.

ವಿಜಯವನ್ನು ಪಡೆದು ಸಂತೋಷಸಮಾಯುಕ್ತರಾದ ದೇವತೆಗಳ ಮತ್ತು ಯಕ್ಷಸಿದ್ಧರುಗಳ ಸಮೂಹಗಳಿಂದಲೂ. ಭೂಮಿಯಲ್ಲಿರುವ ಸಮಸ್ತ ಭೂತಗಣಗಳಿಂದಲೂ ಸ್ತುತಿಸಲ್ಪಟ್ಟವನಾದನು. ॥ ೩೮ ॥

ಇಂತಿದು ಮಹೋದರವಧ ವೃತ್ತಾಂತವೆಂಬ ತೊಂಬತ್ತೆಂಟನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕೋನಶತತಮಸ್ಸರ್ಗಃ

ಮಹೋದರೇತು ನಿಹತೇ ಮಹಾಪಾರ್ಶ್ವೋ ಮಹಾಬಲಃ । ಸುಗ್ರೀವೇಣ ಸಮೀಕ್ಷ್ಯಾಽಥ ಕ್ರೋಧಾತ್ಸಂರಕ್ತಲೋಚನಃ । ಅಂಗದಸ್ಯ ಚಮೂಂ ಭೀಮಾಂ ಕ್ಷೋಭಯಾಮಾಸ ಸಾಯಕೈಃ ॥ ೧ ॥ ಸ ವಾನರಾಣಾಂ ಮುಖ್ಯಾನಾ ಮುತ್ತಮಾಂಗಾನಿ ಸರ್ವಶಃ । ಪಾತಯಾಮಾಸ ಕಾಯೇಭ್ಯಃ ಫಲಂ ವೃಂತಾದಿವಾಽನಿಲಃ ॥ ೨ ॥ ಕೇಷಾಂಚಿದಿಷುಭಿರ್ಬಾಹೂನ್ ಸ್ಕಂಧಾಂಶ್ಚಿಚ್ಛೇದ ರಾಕ್ಷಸಃ । ವಾನರಾಣಾಂ ಸುಸಂಕ್ರುದ್ಧಃ ಪಾರ್ಶ್ವಂ ಕೇಷಾಂ ವ್ಯದಾರಯತ್ ॥ ೩ ॥ ತೇಽರ್ದಿತಾ ಬಾಣವರ್ಷೇಣ ಮಹಾಪಾರ್ಶ್ವೇನ ವಾನರಾಃ । ವಿಷಾದವಿಮುಖಾಸ್ಸರ್ವೇ ಬಭೂವುರ್ಗತಚೇತಸಃ ॥ ೪ ॥

ಮಹಾಬಲಃ - ಬಹಳ ಬಲಶಾಲಿಯಾದ, ಮಹಾಪಾರ್ಶ್ವಃ - ಮಹಾಪಾರ್ಶ್ವನು, ಮಹೋದರೇ - ಮಹೋದರನು, ಸುಗ್ರೀವೇಣ - ಸುಗ್ರೀವನಿಂದ, ನಿಹತೇ - ಸಂಹೃತನಾಗಲು, ಸಮೀಕ್ಷ್ಯ - ಕಂಡು, ಅಥ - ಬಳಿಕ, ಕ್ರೋಧಾತ್ - ಕೋಪದಿಂದ, ಸಂರ....ನಃ - ಕೆಂಗಣ್ಣುಗಳುಳ್ಳವನಾಗಿ, ಶರೈಃ- ಬಾಣಗಳಿಂದ, ಭೀಮಸ್ಯ - ಭಯಂಕರನಾದ, ಅಂಗದಸ್ಯ - ಅಂಗದನ, ಚಮೂಂ - ಸೇನೆಯನ್ನು, ಕ್ಷೋಭಯಾಮಾಸ - ಹಿಂಸೆಗೊಳಿಸಿದನು. ॥ ೧ ॥ ಸಃ - ಆ ಮಹಾಪಾರ್ಶ್ವನು, ಮುಖ್ಯಾನಾಂ - ಪ್ರಧಾನರಾದ, ವಾನರಾಣಾಂ - ಕಪಿಗಳ, ಉತ್ತಮಾಂಗಾನಿ - ಶಿರಸ್ಸುಗಳನ್ನು, ಸರ್ವದಿಶಃ - ಸಕಲ ದಿಕ್ಕುಗಳಲ್ಲಿಯೂ, ಅನಿಲಃ - ವಾಯುವು, ವೃಂತಾತ್ - ತೊಟ್ಟಿನಿಂದ, ಫಲಮಿವ - ಹಣ್ಣುಗಳನ್ನಂತೆ, ಕಾಯೇಭ್ಯಃ - ಶರೀರಗಳ ದೆಸೆಯಿಂದ, ಪಾತಯಾಮಾಸ - ಬೀಳಿಸಿದನು. ॥ ೨ ॥ ರಾಕ್ಷಸಃ - ಮಹಾಪಾರ್ಶ್ವನು, ಸಂಕ್ರುದ್ಧಃ - ಬಹಳ ಕುಪಿತನಾಗಿ, ಇಷುಭಿಃ - ಬಾಣಗಳಿಂದ, ಕೇಷಾಂ....ಣಾಂ - ಕೆಲ ಕಪಿಗಳ, ಬಾಹೂನ್ - ಭುಜಗಳನ್ನು, ಸ್ಕಂಧಾನ್ - ಭುಜಶಿರಗಳನ್ನು, ಚಿಚ್ಛೇದ - ಕತ್ತರಿಸಿದನು. ॥ ೩ ॥ ಕೇಷಾಂಚಿತ್ - ಕೆಲವರ, ಪಾರ್ಶ್ವಂ - ಪಾರ್ಶ್ವಭಾಗವನ್ನೂ, ವ್ಯದಾರಯತ್ - ಸೀಳಿದನು, ತೇವಾನರಾಃ - ಆ ಕಪಿಗಳು, ಮಹಾಪಾರ್ಶ್ವೇನ - ಮಹಾಪಾರ್ಶ್ವನಿಂದ, ಬಾಣವರ್ಷೇಣ - ಬಾಣವೃಷ್ಟಿಯಿಂದ, ಅರ್ದಿತಾಃ - ಹೊಡೆಯಲ್ಪಟ್ಟವರಾಗಿ, ಸರ್ವೇ - ಎಲ್ಲರೂ, ವಿಷಾ....ಕಾಃ - ವ್ಯಸನದಿಂದ

ವಾನರೇಶ್ವರನಾದ ಸುಗ್ರೀವನು ಮಹೋದರನನ್ನು ಸಂಹರಿಸಿದ ಬಳಿಕ ಮಹಾಬಲಾಢ್ಯನಾದ ಮಹಾಪಾರ್ಶ್ವನು ಅಪರಿಮಿತವಾದ ಕೋಪದಿಂದ ಕೆರಳಿ ಕೆಂಪಾದ ಕಣ್ಣುಗಳುಳ್ಳವನಾಗಿ ಮಹಾ ತೀಕ್ಷ್ಣಗಳಾದ ಬಾಣಗಳಿಂದ ಮಹಾ ಭಯಂಕರವಾದ ಅಂಗದಕುಮಾರನ ಸೇನೆಯನ್ನೆಲ್ಲ ಕ್ಷೋಭೆಗೊಳಿಸಿದನು. ಆ ರಾಕ್ಷಸವೀರನು ಮಹಾ ಕೋಪಾಟೋಪವುಳ್ಳವನಾಗಿ, ವಾಯುದೇವನು ಮಾಗಿದ ತಾಳೆಯ ಹಣ್ಣುಗಳನ್ನೆಂತೋ ಅಂತು, ಆ ವಾನರವೀರರೆಲ್ಲರ ತಲೆಗಳನ್ನೂ ನೆಲಕ್ಕೆ ಕೆಡವಿದನು. ಆ ರಾಕ್ಷಸನು ಅನೇಕ ಮಂದಿ ವಾನರರ ಭುಜಗಳಿಂದ ಬಾಹುಗಳನ್ನೇ ತನ್ನ ಬಾಣಗಳಿಂದ ಕತ್ತರಿಸಿ ಕೆಡವಿದನು. ಹೀಗೆ ಮಹಾ ಭಯಂಕರವಾದ ಆ ಮಹಾಪಾರ್ಶ್ವನ ಬಾಣವರ್ಷದಿಂದ ಬಹಳವಾಗಿ ಸಂತಪಿಸಿ ಹೋದವರೂ, ಬಾಧೆಪಡುತ್ತಿರುವವರೂ ಆಗಿ ವಾನರರೆಲ್ಲರೂ ಪ್ರಾಣಗಳನ್ನು ತೊರೆದರು. ಆ

ನಿರೀಕ್ಷ್ಯ ಬಲಮುದ್ವಿಗ್ನಮಂಗದೋ ರಾಕ್ಷಸಾರ್ದಿತಂ । ವೇಗಂ ಚಕ್ರೇ ಮಹಾಬಾಹು ಸ್ಸಮುದ್ರ ಇವ ಪರ್ವಣಿ ॥೫॥ ಆಯಸಂ ಪರಿಘಂ ಗೃಹ್ಯ ಸೂರ್ಯರಶ್ಮಿಸಮಪ್ರಭಂ । ಸಮರೇ ವಾನರಶ್ರೇಷ್ಠೋ ಮಹಾಪಾರ್ಶ್ವೇ ನ್ಯಪಾತಯತ್ ॥ ೬ ॥ ಸತು ತೇನ ಪ್ರಹಾರೇಣ ಮಹಾಪಾರ್ಶ್ವೋ ವಿಚೇತನಃ । ಸಸೂತ ಸ್ಸ್ಯಂದನಾತ್ತ ಸ್ಮಾದ್ವಿಸಂಜ್ಞಃ ಪ್ರಾಪತದ್ಭುವಿ ॥ ೭ ॥ ಸರ್ಕ್ಷರಾಜಸ್ತು ತೇಜಸ್ವೀ ನೀಲಾಂಜನಚಯೋಪಮಃ । ನಿಷ್ಪತ್ಯ ಸುಮಹಾವೀರ್ಯಸ್ಸ್ವಾದ್ವ್ಯೂಹಾನ್ಮೇಘಸನ್ನಿಭಾತ್ ॥ ೮ ॥ ಪ್ರಗೃಹ್ಯ ಗಿರಿಶೃಂಗಾಭಾಂ ಕ್ರುದ್ಧ ಸ್ಸುವಿಪುಲಾಂ ಶಿಲಾಂ । ಅಶ್ವಾನ್ ಜಘಾನ ತರಸಾ ಸ್ಯಂದನಂ ಚ ಬಭಂಜ ತಂ

ಪರಾಜಿತರಾಗಿ, ಗತಚೇತಸಃ - ಹೋದ ಪ್ರಜ್ಞೆಯುಳ್ಳವರು, ಬಭೂವುಃ - ಆದರು. ॥ ೪ ॥ ರಾಕ್ಷಸಾರ್ದಿತಂ - ರಾಕ್ಷಸನಿಂದ ಹೊಡೆಯಲ್ಪಟ್ಟು, ಉದ್ವಿಜ್ಞಂ - ಹೆದರಿರುವ, ಬಲಂ - ಸೇನೆಯನ್ನು, ನಿರೀಕ್ಷ್ಯ - ಕಂಡು, ಮಹಾಬಾಹುಃ - ಮಹಾ ಭುಜಶಾಲಿಯಾದ, ಅಂಗದಃ - ಅಂಗದನು, ಪರ್ವಣಿ - ಪರ್ವಕಾಲದಲ್ಲಿ, ಸಮುದ್ರಇವ - ಸಮುದ್ರದಂತೆ, ವೇಗಂ - ವೇಗವನ್ನು, ಚಕ್ರೇ - ಮಾಡಿದನು. ॥೫॥ ಸಮರೇ-ಕಾಳೆಗದಲ್ಲಿ, ವಾನರಶ್ರೇಷ್ಠಃ-ಕಪಿಶ್ರೇಷ್ಠನಾದ ಅಂಗದನು, ಸೂರ್ಯ......ಭಂ- ಸೂರ್ಯಕಿರಣಗಳಿಗೆ ಸಮಾನವಾದ ಕಾಂತಿಯುಳ್ಳ, ಆಯಸಂ - ಕಬ್ಬಿಣದ, ಪರಿಘಂ - ಪರಿಘಾಯುಧವನ್ನು, ಪ್ರಗೃಹ್ಯ - ತೆಗೆದುಕೊಂಡು, ಮಹಾಪಾರ್ಶ್ವೇ - ಮಹಾಪಾರ್ಶ್ವನಲ್ಲಿ, ನ್ಯಪಾತಯತ್ - ಬೀಳಿಸಿದನು. ॥ ೬ ॥ ಸಮಹಾಪಾರ್ಶ್ವಃ - ಆ ಮಹಾಪಾರ್ಶ್ವನು, ತೇನಪ್ರಹಾರೇಣ - ಆ ಏಟಿನಿಂದ, ವಿಚೇತನಃ - ಪ್ರಜ್ಞೆಯಿಲ್ಲದೆ, ಸಸೂತಃ - ಸಾರಥಿಯಿಂದೊಡಗೂಡಿ, ತಸ್ಮಾತ್ಸ್ಯಂದನಾತ್ - ಆ ರಥದ ದೆಸೆಯಿಂದ, ವಿಸಂಜ್ಞಃ - ಜ್ಞಾನ ತಪ್ಪಿ, ಭುವಿ - ನೆಲದಲ್ಲಿ, ಪ್ರಾಪತತ್ - ಬಿದ್ದನು. ॥೭॥ ತೇಜಸ್ವೀ - ಸಮರ್ಥನಾದ, ನೀಲಾಂ....ಮಃ - ಕಪ್ಪಾದ ಕಾಡಿಗೆ ಬೆಟ್ಟದ ತಂಡಗಳಿಗೆ ಸಮಾನನಾದ, ಸುಮಹಾವೀರ್ಯಃ - ಬಹಳ ತೇಜೋವಂತನಾದ, ಋಕ್ಷರಾಜಃ - ಆ ಜಾಂಬವಂತನು, ಮೇಘಸನ್ನಿಭಾತ್ - ಮೇಘಕ್ಕೆ ಸಮಾನನಾದ, ಸ್ವಾದ್ವ್ಯೂಹಾತ್ - ತನ್ನ ಸೈನ್ಯದಿಂದ, ನಿಷ್ಪತ್ಯ - ಹಾರಿ, ಕ್ರುದ್ಧಃ - ಕೋಪಾವಿಷ್ಟನಾಗಿ, ಗಿರಿಶೃಂಗಾಭಾಂ - ಬೆಟ್ಟದ ತುದಿಗೆ ಸಮಾನವಾದ, ಸುವಿಪುಲಾಂ - ಬಹಳ ವಿಸ್ತಾರವಾದ, ಶಿಲಾಂ - ಪಾಷಾಣವನ್ನು, ಪ್ರಗೃಹ್ಯ - ತೆಗೆದುಕೊಂಡು, ಅಶ್ವಾನ್ - ಕುದುರೆಗಳನ್ನು, ತರಸಾ - ಬಲವಾಗಿ, ಜಘಾನ - ಹೊಡೆದನು, ತಂಸ್ಯಂದನಂಚ - ಆ ರಥವನ್ನು, ಬಭಂಜ-

---

ಸಮಯದಲ್ಲಿ ಅಂಗದನು ಮಹಾಪಾರ್ಶ್ವನಿಂದ ಪೀಡಿಸಲ್ಪಟ್ಟು ಉಲ್ಲಕಲ್ಲೋಲವಾಗಿರುವ ತನ್ನ ಸೇನೆಯನ್ನು ನೋಡಿ ಪರ್ವಕಾಲದಲ್ಲಿ ಉಕ್ಕಿದ ಕಡಲಂತೆ ವಿಜೃಂಭಿಸಿದನು. ॥ ೧—೫ ॥ ಅವನು ಸೂರ್ಯಕಿರಣಗಳ ಕಾಂತಿಗೆ ಸಮಾನವಾದ ಕಾಂತಿಯುಳ್ಳುದೂ, ಕಬ್ಬಿಣದಿಂದ ಮಾಡಿದುದೂ ಆದ ಪರಿಘಾಯುಧವನ್ನು ಹಿಡಿದು ಆ ಮಹಾಪಾರ್ಶ್ವನ ಮೇಲೆ ವೇಗವಾಗಿ ಎಸೆದನು. ಆ ಪರಿಘಾಯುಧದ ಪೆಟ್ಟಿನಿಂದ ಮಹಾಪಾರ್ಶ್ವನು ಕೆಳಕ್ಕೆ ಬಿದ್ದು ಮೂರ್ಛೆಯೊಂದಿದನು. ಹೀಗೆ ಆ ಮಹಾಪಾರ್ಶ್ವನು ಸೂತನೊಡಗೂಡಿ ರಥದಲ್ಲಿಯೇ ಕೆಲಕಾಲ ಮೂರ್ಛಿತನಾಗಿ ಬಿದ್ದಿದ್ದನು. ಜಾಂಬವಂತನೊಡನಿದ್ದ ಅಂಗದನಾದರೋ ಮಹಾ ಕೋಪಾಟೋಪವುಳ್ಳವನಾಗಿ ಮತ್ತೂ ವಿಜೃಂಭಿಸಿದನು. ಆ ಸಮಯದಲ್ಲಿ ನೀಲಾಂಜನಚಯೋಪಮನೂ, ಮಹಾ ತೇಜಸ್ವಿಯೂ, ಮಹಾ ವೀರನೂ ಆದ ಜಾಂಬವಂತನು ತನ್ನ ವ್ಯೂಹದಿಂದ ತಟಕ್ಕನೆ ಹಾರಿ ಪರ್ವತಶಿಖರೋಪಮವಾದ ಶಿಲೆಯೊಂದನ್ನು ಹಿಡಿದು ಆ ರಾಕ್ಷಸನ ರಥಕ್ಕೆ

॥ ೯ ॥ ಮುಹೂರ್ತಾಲ್ಲಬ್ಧಸಂಜ್ಞಸ್ತು ಮಹಾಪಾರ್ಶ್ವೋ ಮಹಾಬಲಃ । ಅಂಗದಂ ಬಹುಭಿರ್ಬಾಣೈರ್ಭೂಯಸ್ತಂ ಪ್ರತ್ಯವಿಧ್ಯತ ॥ ೧೦ ॥ ಜಾಂಬವಂತಂ ತ್ರಿಭಿರ್ಬಾಣೈರಾಜಘಾನ ಸ್ತನಾಂತರೇ । ಋಕ್ಷರಾಜಂ ಗವಾಕ್ಷಂಚ ಜಘಾನ ಬಹುಭಿಃ ಶರೈಃ ॥೧೧॥ ಜಾಂಬವಂತಂ ಗವಾಕ್ಷಂಚ ಸದೃಷ್ಟ್ವಾ ಶರಪೀಡಿತೌ । ಜಗ್ರಾಹ ಪರಿಘಂ ಘೋರಮಂಗದಃ ಕ್ರೋಧಮೂರ್ಛಿತಃ ॥ ೧೨ ॥ ತಸ್ಯಾಂಗದಃ ಪ್ರಕುಪಿತೋ ರಾಕ್ಷಸಸ್ಯಾತ್ತಮಾಯಸಂ । ದೂರಸ್ಥಿತಸ್ಯ ಪರಿಘಂ ರವಿರಶ್ಮಿಸಮಪ್ರಭಂ ॥ ೧೩ ॥ ದ್ವಾಭ್ಯಾಂ ಭುಜಾಭ್ಯಾಂ ಸಂಗೃಹ್ಯ ಭ್ರಾಮಯಿತ್ವಾ ಚ ವೇಗವಾನ್ । ಮಹಾಪಾರ್ಶ್ವಸ್ಯ ಚಿಕ್ಷೇಪ ವಧಾರ್ಥಂ ವಾಲಿನಸ್ಸುತಃ ॥ ೧೪ ॥ ಸತು ಕ್ಷಿಪ್ತೋ ಬಲವತಾ ಪರಿಘಸ್ತಸ್ಯ ರಕ್ಷಸಃ ।

ಮುರಿದನು. ॥ ೯ ॥ ಮುಹೂರ್ತಾತ್ - ಕ್ಷಣಕಾಲದಲ್ಲಿಯೇ, ಲಬ್ಧಸಂಜ್ಞಃ - ಹೊಂದಿದ ಪ್ರಜ್ಞೆಯುಳ್ಳ, ಮಹಾಬಲಃ - ಬಹಳ ದೇಹತ್ರಾಣವುಳ್ಳ, ಮಹಾಪಾರ್ಶ್ವಸ್ತು - ಮಹಾಪಾರ್ಶ್ವನಾದರೆ, ಬಹುಭಿಃ - ಅನೇಕಗಳಾದ, ಬಾಣೈಃ - ಬಾಣಗಳಿಂದ, ತಮಂಗದಂ - ಆ ಅಂಗದನನ್ನು, ಭೂಯಃ - ಮತ್ತೂ, ಪ್ರತ್ಯವಿಧ್ಯತ - ಹೊಡೆದನು. ॥ ೧೦ ॥ ತ್ರಿಭಿರ್ಬಾಣೈಃ - ಮೂರು ಬಾಣಗಳಿಂದ, ಋಕ್ಷರಾಜಃ - ಕರಡಿಗಳಿಗೆ ಅಧಿಪತಿಯಾದ, ಜಾಂಬವಂತಂ - ಜಾಂಬವಂತನನ್ನು, ಸ್ತನಾಂತರೇ - ಎದೆಯಲ್ಲಿ, ಆಜಘಾನ - ಹೊಡೆದನು, ಗವಾಕ್ಷಂಚ - ಗವಾಕ್ಷನನ್ನೂ, ಬಹುಭಿಃಶರೈಃ - ಅನೇಕ ಬಾಣಗಳಿಂದ, ಜಘಾನ - ಹೊಡೆದನು. ॥೧೧॥ ಸಃಅಂಗದಃ - ಆ ಅಂಗದನು, ಜಾಂಬವಂತಂ - ಜಾಂಬವಂತನನ್ನೂ, ಗವಾಕ್ಷಂ - ಗವಾಕ್ಷನನ್ನೂ, ಉಭೌ - ಇಬ್ಬರನ್ನೂ, ಶರಪೀಡಿತೌ - ಬಾಣಗಳಿಂದ ಪೀಡಿತರನ್ನಾಗಿ, ದೃಷ್ಟ್ವಾ - ಕಂಡು, ಕ್ರೋಧ....ತಃ - ಕೋಪದಿಂದ ವ್ಯಾಪ್ತನಾಗಿ, ಘೋರಂ - ಭಯಂಕರವಾದ, ಪರಿಘಂ - ಪರಿಘಾಯುಧವನ್ನು, ಜಗ್ರಾಹ - ತೆಗೆದುಕೊಂಡನು. ॥೧೨॥ ವಾಲಿನಃ- ವಾಲಿಗೆ, ಸುತಃ - ಕುವರನಾದ, ವೇಗವಾನ್ - ವೇಗವಂತನಾದ, ಅಂಗದಃ - ಅಂಗದನು, ಪ್ರಕುಪಿತಃ- ಬಹಳ ಕುಪಿತನಾಗಿ, ಆತ್ತಂ - ಗ್ರಹಿಸಲ್ಪಟ್ಟ, ರವಿ....ಭಂ - ಸೂರ್ಯರಶ್ಮಿಗೆ ಸಮಾನವಾದ, ಪರಿಘಂ- ಪರಿಘಾಯುಧವನ್ನು, ದ್ವಾಭ್ಯಾಂಭುಜಾಭ್ಯಾಂ - ಎರಡು ಭುಜಗಳಿಂದಲೂ, ಸಂಗೃಹ್ಯ - ತೆಗೆದುಕೊಂಡು, ಭ್ರಾಮಯಿತ್ವಾ - ತಿರುಗಿಸಿ, ದೂರಸ್ಥಿತಸ್ಯ - ದೂರವಾಗಿ ನಿಂತಿರುವ, ರಾಕ್ಷಸಸ್ಯ - ರಕ್ಕಸನಾದ, ತಸ್ಯಮಹಾಪಾರ್ಶ್ವಸ್ಯ - ಆ ಮಹಾಪಾರ್ಶ್ವನ, ವಧಾರ್ಥಂ - ಸಂಹಾರಾರ್ಥವಾಗಿ, ಚಿಕ್ಷೇಪ-

ಹೂಡಿದ್ದ ಕುದುರೆಗಳ ಮೇಲೆಸೆದುದು ಮಾತ್ರವಲ್ಲದೆ ರಥವನ್ನೂ ಆ ಶಿಲೆಯಿಂದಲೇ ಪುಡಿಗುಟ್ಟಿದನು. ಮಹಾ ಬಲಾಢ್ಯನಾದ ಮಹಾಪಾರ್ಶ್ವನಾದರೋ ಇಷ್ಟಾದರೂ ಒಂದು ಮುಹೂರ್ತಕಾಲದಲ್ಲಿಯೇ ಎಚ್ಚೆತ್ತು ಯುದ್ಧಸನ್ನದ್ಧನಾಗಿ ಅಂಗದಕುಮಾರನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದ್ದಲ್ಲದೆ ಜಾಂಬವಂತನೆದೆಯಲ್ಲಿ ಮೂರು ಬಾಣಗಳನ್ನು ಹೊಗಿಸಿದನು. ಇಷ್ಟೆಯಲ್ಲದೆ ಗವಾಕ್ಷನ ಮೇಲೂ ಅನೇಕ ಬಾಣಗಳನ್ನೆಸೆದನು. ॥ ೯–೧೧ ॥ ಆಗ ವಾಲಿಕುಮಾರನಾದ ಅಂಗದನು ಮಹಾಪಾರ್ಶ್ವನ ಬಾಣಗಳಿಂದ ಪೀಡಿತರಾದ ಜಾಂಬವಂತ ಮತ್ತು ಗವಾಕ್ಷರನ್ನು ನೋಡಿ ಕೋಪದಿಂದ ಮೈಮರೆತವನಾಗಿ ಮಹಾ ಭಯಂಕರವಾದ ಪರಿಘಾಯುಧವನ್ನು ಗ್ರಹಿಸಿದನು. ಮಹಾ ಪರಾಕ್ರಮಿಯಾದ ಅಂಗದಕುಮಾರನು ಮಹಾ ಕೋಪಾಟೋಪವುಳ್ಳವನಾಗಿ ಆ ಪರಿಘಾಯುಧವನ್ನು ತನ್ನೆರಡೂ ಭುಜಗಳಿಂದ ಹಿಡಿದು ಗಿರಗಿರನೆ ತಿರುಗಿಸಿ ಬಹು ದೂರದಲ್ಲಿ ನಿಂತಿದ್ದ ಆ ಮಹಾಪಾರ್ಶ್ವನ ಮೇಲೆ ಬಿಸುಟನು.

ಧನುಶ್ಚ ಸಶರಂ ಹಸ್ತಾಚ್ಛಿರಸ್ತ್ರಂ ಚಾಪ್ಯಪಾತಯತ್ ‖ ೧೫ ‖ ತಾಂ ಸಮಾಸಾದ್ಯ ವೇಗೇನ ವಾಲಿಪುತ್ರಃ ಪ್ರತಾಪವಾನ್ । ತಲೇನಾಭ್ಯಹನತ್ಕ್ರುದ್ಧಃ ಕರ್ಣಮೂಲೇ ಸಕುಂಡಲೇ ‖ ೧೬ ‖ ಸತು ಕ್ರುದ್ಧೋ ಮಹಾವೇಗೋ ಮಹಾಪಾರ್ಶ್ವೋ ಮಹಾದ್ಯುತಿಃ । ಕರೇಣೈಕೇನ ಜಗ್ರಾಹ ಸುಮಹಾಂತಂ ಪರಶ್ವಥಂ ‖೧೭‖ ತಂ ತೈಲಧೌತಂ ವಿಮಲಂ ಶೈಲಸಾರಮಯಂ ದೃಢಂ । ರಾಕ್ಷಸಃ ಪರಮಕ್ರುದ್ಧೋ ವಾಲಿಪುತ್ರೇ ನ್ಯಪಾತಯತ್ ‖ ೧೮ ‖ ತೇನ ವಾಮಾಂಸಫಲಕೇ ಭೃಶಂ ಪ್ರತ್ಯವಪಾದಿತಂ । ಅಂಗದೋ ಮೋಕ್ಷಯಾಮಾಸ ಸರೋಷಸ್ಸಪರಶ್ವಥಂ ‖ ೧೯ ‖ ಸವೀರೋ ವಜ್ರಸಂಕಾಶಮಂ

ಎಸೆದನು. ‖ ೧೩-೧೪ ‖ ಬಲವತಾ - ಬಲವಂತನಾದ ಅಂಗದನಿಂದ, ಕ್ಷಿಪ್ತಂ - ಎತ್ತಿಹಾಕಲ್ಪಟ್ಟ, ಸಪರಿಘಸ್ತು - ಆ ಪರಿಘಾಯುಧವಾದರೆ, ತಸ್ಯರಕ್ಷಸಃ - ಆ ಮಹಾಪಾರ್ಶ್ವನ, ಹಸ್ತಾತ್ - ಕೈಯಿಂದ, ಸಶರಂಧನುಶ್ಚ - ಬಾಣಗಳಿಂದೊಡಗೂಡಿದ ಆ ಬಿಲ್ಲನ್ನು, ಶಿರಸ್ತ್ರಂಚ - ಕಿರೀಟವನ್ನೂ, ವ್ಯಪಾತಯತ್ - ಕೆಡವಿತು. ‖ ೧೫ ‖ ಪ್ರತಾಪವಾನ್ - ಪರಾಕ್ರಮಶಾಲಿಯಾದ, ವಾಲಿಪುತ್ರಃ - ಅಂಗದನು, ತಂ-ಆ ಪರಿಘಾಯುಧವನ್ನು, ಸಮಾಸಾದ್ಯ-ಹೊಂದಿಯೂ, ವೇಗೇನ-ವೇಗವಾಗಿ, ತಲೇನ-ಅಂಗೈಯಿಂದ, ಕ್ರುದ್ಧಃ - ಕೋಪಿಷ್ಠನಾಗಿ, ಸಕುಂಡಲೇ - ಕರ್ಣಭೂಷಣದಿಂದ ಕೂಡಿದ, ಕರ್ಣಮೂಲೇ-ಕಿವಿಗಳ ಬಳಿಯಲ್ಲಿ, ಅಭ್ಯಹನತ್-ಹೊಡೆದನು. ‖ ೧೬ ‖ ಕ್ರುದ್ಧಃ-ಕೋಪಿಷ್ಠನಾದ, ಮಹಾದ್ಯುತಿಃ-ಮಹಾ ಪ್ರಕಾಶವಂತನಾದ, ಸಮಹಾಪಾರ್ಶ್ವಃ - ಆ ಮಹಾಪಾರ್ಶ್ವನು, ಮಹಾವೇಗಃ - ಬಹಳ ವೇಗವುಳ್ಳವನಾಗಿ, ಏಕೇನಕರೇಣ - ಒಂದು ಹಸ್ತದಿಂದ, ಸುಮಹಾಂತಂ - ದೊಡ್ಡದಾದ, ಪರಶ್ವಥಂ-ಕೊಡಲಿಯನ್ನು, ಜಗ್ರಾಹ - ತೆಗೆದುಕೊಂಡನು. ‖ ೧೭ ‖ ರಾಕ್ಷಸಃ - ಮಹಾಪಾರ್ಶ್ವನು, ಪರಮಕ್ರುದ್ಧಃ - ಬಹಳ ಕೋಪಿಷ್ಠನಾಗಿ, ತೈಲಧೌತಂ - ಎಣ್ಣೆಯಿಂದ ತೋಯಿಸಲ್ಪಟ್ಟ, ವಿಮಲಂ-ನಿರ್ಮಲವಾದ, ಶೈಲ....ಯಂ - ಕಠಿನವಾದ, ದೃಢಂ - ದೃಢವಾದ, ತಂ - ಆ ಕೊಡಲಿಯನ್ನು, ವಾಲಿಪುತ್ರೇ - ಅಂಗದನಲ್ಲಿ, ನ್ಯಪಾತಯತ್ - ಕೆಡವಿದನು. ‖ ೧೮ ‖ ತೇನ - ಆ ಮಹಾಪಾರ್ಶ್ವನಿಂದ, ವಾಮಾಂಸಫಲಕೇ - ಎಡಭುಜದ ತುದಿಯಲ್ಲಿ, ಭೃಶಂ - ಬಹಳವಾಗಿ, ಪ್ರತ್ಯವಪಾದಿತಂ - ಹೊಡೆಯಲ್ಪಟ್ಟ, ಪರಶ್ವಥಂ - ಕೊಡಲಿಯನ್ನು, ಸರೋಷಃ - ರೋಷದಿಂದೊಡಗೂಡಿದವನಾಗಿ, ಸಃಅಂಗದಃ - ಆ ಅಂಗದನು, ಮೋಕ್ಷಯಾಮಾಸ - ತಪ್ಪಿಸಿಕೊಂಡನು. ‖೧೯‖ ವೀರಃ - ಶೂರನಾದ,

---

ಮಹಾದ್ಭುತವಾದ ಆ ಪರಿಘವನ್ನು ಆ ಕಪಿವೀರನು ಮಹಾಪಾರ್ಶ್ವನ ವಧೆಗಾಗಿಯೇ ಪ್ರಯೋಗಿಸಿದನು. ಆ ಮಹಾಯುಧವು ವೇಗದಿಂದ ಹೊರಟು ಆ ರಾಕ್ಷಸನ ಧನುರ್ಬಾಣಗಳನ್ನೂ, ಶಿರಸ್ತ್ರಾಣವನ್ನೂ ಪುಡಿಗುಟ್ಟಿತು. ‖೧೨-೧೫‖ ಆ ತರುವಾಯ ವಾಲಿಕುಮಾರನು ಅಪರಿಮಿತವಾದ ವೇಗದಿಂದ ಮುನ್ನುಗ್ಗಿ ಆ ಮಹಾಪಾರ್ಶ್ವನ ಕಪಾಳದ ಬಳಿ ಕರ್ಣಕುಂಡಲಗಳೇ ಕಳಚಿ ಬೀಳುವಂತೆ ಬಲವಾಗಿ ತನ್ನ ಅಂಗೈಯಿಂದ ಪೆಟ್ಟಿದನು. ಮಹಾ ತೇಜೋವಂತನಾದ ಮಹಾಪಾರ್ಶ್ವನಾದರೋ ಅತ್ಯಧಿಕ ಕೋಪಾಟೋಪವುಳ್ಳವನಾಗಿ ಬಹು ದೊಡ್ಡದಾದ ಗಂಡುಗೊಡಲಿಯನ್ನು ಒಂದೇ ಕೈಯಿಂದಲೇ ಅದನ್ನು ಹಿಡಿದೆತ್ತಿ ತೈಲಸಿಕ್ತವಾಗಿ ಫಳಫಳನೆ ಹೊಳೆಯುತ್ತಿರುವುದಾಗಿಯೂ, ಬಹು ದೃಢವಾಗಿಯೂ ಇರುವ ಆ ಆಯುಧವನ್ನು ಅಂಗದನ ಮೇಲೆ ಪ್ರಯೋಗಿಸಿದನು. ಆಗ ಮಹಾ ಚತುರನಾದ ಆ ವಾಲಿಪುತ್ರನು ತನ್ನ ಜಾಣ್ಮೆಯಿಂದಲೇ ಆ ಗಂಡುಗೊಡಲಿಯ ಪೆಟ್ಟನ್ನು ತಪ್ಪಿಸಿಕೊಂಡು ಮಹಾ ಕೋಪಾಟೋಪ

ಗದೋ ಮುಷ್ಟಿಮಾತ್ಮನಃ । ಸಂವರ್ತಯತ್ಸುಸಂಕ್ರುದ್ಧಃ ಪಿತುಸ್ತುಲ್ಯಪರಾಕ್ರಮಃ ॥ ೨೦ ॥ ರಾಕ್ಷಸಸ್ಯ ಸ್ತನಾಭ್ಯಾಶೇ ಮರ್ಮಜ್ಞೋ ಹೃದಯಂ ಪ್ರತಿ । ಇಂದ್ರಾಶನಿಸಮಸ್ಪರ್ಶಂ ಸಮುಷ್ಟಿಂ ವ್ಯನಿಪಾತಯತ್ ॥ ೨೧ ॥ ತೇನ ತಸ್ಯ ನಿಪಾತೇನ ರಾಕ್ಷಸಸ್ಯ ಮಹಾಮೃಥೇ । ಪಫಾಲ ಹೃದಯಂಚಾಶು ಸಪಪಾತ ಹತೋ ಭುವಿ ॥ ೨೨ ॥ ತಸ್ಮಿನ್ನಿಪತಿತೇ ಭೂಮೌ ತತ್ಸೈನ್ಯಂ ಸಂಪ್ರಚುಕ್ಷುಭೇ । ಅಭವಚ್ಚ ಮಹಾನ್ ಕ್ರೋಧಸ್ಸಮರೇ ರಾವಣಸ್ಯತು ॥೨೩॥ ವಾನರಾಣಾಂಚ ಹೃಷ್ಟಾನಾಂ ಸಿಂಹನಾದಶ್ಚ ಪುಷ್ಕಲಃ । ಸ್ಫೋಟಯನ್ನಿವ ಶಬ್ದೇನ ಲಂಕಾಂ ಸಾಟ್ಟಾಲಗೋಪುರಾಂ । ಮಹೇಂದ್ರೇಣೇವ ದೇವಾನಾಂ ನಾದಸ್ಸಮಭವನ್ಮಹಾನ್ ॥ ೨೪-೨೫ ॥

ಪಿತುಃ - ತಂದೆಗೆ, ತುಲ್ಯ....ಮಃ - ಸಮಾನವಾದ ಪರಾಕ್ರಮವುಳ್ಳ, ಸೋಽಂಗದಃ - ಆ ಅಂಗದನು, ಸುಸಂಕ್ರುದ್ಧಃ - ಬಹಳ ಕುಪಿತನಾಗಿ, ವಜ್ರಸಂಕಾಶಂ - ವಜ್ರಾಯುಧಕ್ಕೆ ಸಮಾನವಾದ, ಆತ್ಮನಃ - ತನ್ನ, ಮುಷ್ಟಿಂ - ಕೈಪಿಡಿಯನ್ನು, ಸಂವರ್ತಯತ್ - ಹಿಡಿದನು. ॥ ೨೦ ॥ ಮರ್ಮಜ್ಞಃ - ಮರ್ಮಗಳನ್ನು ತಿಳಿದಿರುವ, ಸಃ - ಆ ಅಂಗದನು, ರಾಕ್ಷಸಸ್ಯ - ಮಹಾಪಾರ್ಶ್ವನ, ಸ್ತನಾಭ್ಯಾಸೇ - ಸ್ತನಗಳ ಮಧ್ಯದಲ್ಲಿ, ಹೃದಯಂಪ್ರತಿ - ಹೃದಯವನ್ನು ಕುರಿತು, ಇಂದ್ರಾ....ಶಂ - ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ, ಮುಷ್ಟಿಂ - ಹಿಡಿಯನ್ನು, ವ್ಯನಿಪಾತಯತ್ - ವಿಶೇಷವಾಗಿ ಹೊಡೆದನು. ॥೨೧॥ ತಸ್ಯ - ಆ ಮುಷ್ಟಿಯ, ತೇನನಿಪಾತೇನ - ಆ ಪ್ರಹಾರದಿಂದ, ಮಹಾಮೃಥೇ - ದೊಡ್ಡ ಕಾಳಗದಲ್ಲಿ, ರಾಕ್ಷಸಸ್ಯ - ಮಹಾಪಾರ್ಶ್ವನ, ಹೃದಯಂ - ಎದೆಯು, ಪಫಾಲ - ಒಡೆದು ಹೋಯಿತು, ಸಃ - ಆ ರಕ್ಕಸನು, ಹತಃ - ಹೊಡೆಯಲ್ಪಟ್ಟವನಾಗಿ, ಭುವಿ - ನೆಲದಲ್ಲಿ, ಪಪಾತ - ಬಿದ್ದನು. ॥ ೨೨ ॥ ತಸ್ಮಿನ್ - ಆ ಮಹಾಪಾರ್ಶ್ವನು, ಭೂಮೌ - ನೆಲದಲ್ಲಿ, ನಿಪತಿತೇ - ಬೀಳಲು, ತತ್ಸೈನ್ಯಂ - ಆ ರಾಕ್ಷಸಸೈನ್ಯವು, ಸಂಪ್ರಚುಕ್ಷುಭೇ - ಸಂಕಟಗೊಂಡಿತು, ಸಮರೇ - ಕಾಳಗದಲ್ಲಿ, ರಾವಣಸ್ಯತು - ರಾವಣನಿಗಾದರೆ, ಮಹಾನ್‌ಕ್ರೋಧಃ - ಬಹಳ ಆಗ್ರಹವು, ಅಭವಚ್ಚ - ಆಯಿತು. ॥೨೩॥ ಹೃಷ್ಟಾನಾಂ - ಸಂತೋಷಗೊಂಡ, ವಾನರಾಣಾಂ - ಕಪಿಗಳ, ಸಿಂಹನಾದಃ - ಕೋಲಾಹಲ ಧ್ವನಿಯು, ಪುಷ್ಕಲಃ - ಸಂಪೂರ್ಣವಾದ, ಶಬ್ದೇನ - ಧ್ವನಿಯಿಂದ, ಸಾಟ್ಟಾ......ರಾಂ - ಬುರುಜುಗಳೂ, ಊರುಬಾಗಿಲುಗಳೊಡಗೂಡಿದ ಗೋಪುರಗಳುಳ್ಳ, ಲಂಕಾಂ - ಲಂಕಾಪಟ್ಟಣವನ್ನು, ಸ್ಫೋಟಯನ್ನಿವ-ಒಡೆಯುತ್ತದೋ ಎಂಬಂತೆ, ಮಹೇಂದ್ರೇಣ-ದೇವೇಂದ್ರನೊಡಗೂಡಿ, ದೇವಾನಾಂ-

---

ವುಳ್ಳವನಾಗಿ ವಜ್ರಾಯುಧಕ್ಕೆ ಸಮಾನವಾದ ತನ್ನ ಮುಷ್ಟಿಯಿಂದ ಆ ಮಹಾಪಾರ್ಶ್ವನ ವಕ್ಷಸ್ಥಳಕ್ಕೆ ಬಹು ರಭಸವಾಗಿ ಗುದ್ದಿದನು. ॥ ೧೯-೨೦ ॥ ಆ ಹೊಡೆತದಿಂದ ರಾಕ್ಷಸವೀರನ ಹೃದಯವೇ ಭೇದಿಸಿ ಹೋಯಿತು. ಕೂಡಲೇ ಆವನು ನೆಲಕ್ಕುರುಳಿದನು. ಈ ಪ್ರಕಾರವಾಗಿ ರಾಕ್ಷಸಶ್ರೇಷ್ಠನಾದ ಮಹಾಪಾರ್ಶ್ವನು ಮೃತಿಯೊಂದಿದೊಡನೆಯೇ ರಾಕ್ಷಸಸೇನೆಯೆಲ್ಲವು ಬಹಳ ವ್ಯಸನಾಕ್ರಾಂತವಾಯಿತು. ರಾವಣನಾದರೋ ಕೋಪದಿಂದ ಕಿಡಿಕಿಡಿಯಾದನು. ವಾನರವೀರರೆಲ್ಲರೂ ಸಂತೋಷಭರದಿಂದ ಸಿಂಹನಾದ ಮಾಡಿದರು. ಮಹಾದ್ಭುತಕರವಾದ ಆ ಸಿಂಹನಾದಗಳಿಂದ ಲಂಕಾಪಟ್ಟಣದ ಪ್ರಾಕಾರಗಳೆಲ್ಲವೂ ಭೇದಿಸಿ ಹೋದುವು. ಆ ಸಿಂಹನಾದವು ದೇವೇಂದ್ರನು ರಾಕ್ಷಸರನ್ನು ಜಯಿಸಿದಂದು ದೇವತೆಗಳು ಮಾಡಿದ ಸಿಂಹನಾದವನ್ನು ಅನುಕರಿಸುತ್ತಿದ್ದಿತು. ಇಷ್ಟೆಯಲ್ಲದೆ ಆ ಸಮಯದಲ್ಲಿ ಗಗನ

ಅಥೇಂದ್ರಶತ್ರುಸ್ತ್ರಿದಿವಾಲಯಾನಾಂ
ವನೌಕಸಾಂ ಚೈವ ಮಹಾಪ್ರಣಾದಂ ।
ಶ್ರುತ್ವಾ ಸರೋಷಂ ಯುಧಿ ರಾಕ್ಷಸೇಂದ್ರಃ
ಪುನಶ್ಚ ಯುದ್ಧಾಭಿಮುಖೋಽವತಸ್ಥೇ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಶತತಮಸ್ಸರ್ಗಃ

ದೇವತೆಗಳ, ಮಹಾನ್ - ದೊಡ್ಡದಾದ, ನಾದಇವ-ಧ್ವನಿಯಂತೆ, ಸಮಭವತ್ ಆಯಿತು ॥ ೨೪-೨೫ ॥
ಅಥ - ಬಳಿಕ, ಇಂದ್ರಶತ್ರುಃ - ದೇವೇಂದ್ರನಿಗೆ ಶತ್ರುವಾದ, ರಾಕ್ಷಸೇಂದ್ರಃ - ರಾಕ್ಷಸಾಧಿಪತಿಯಾದ ರಾವಣನು, ತ್ರಿದಿ....ನಾಂ - ದೇವತೆಗಳ, ವನೌಕಸಾಂಚೈವ - ಕಪಿಗಳ, ಮಹಾಪ್ರಣಾದಂ - ದೊಡ್ಡ ಘೋಷವನ್ನು, ಶೃತ್ವಾ - ಕೇಳಿ, ಯುಧಿ - ಕಾಳೆಗದಲ್ಲಿ, ಸರೋಷಂ - ಕೋಪದಿಂದೊಡಗೂಡಿದಂತೆ, ಪುನಶ್ಚ - ಮತ್ತೂ, ಯುದ್ಧಾಭಿಮುಖಃ - ಕಾಳೆಗಕ್ಕೆದುರಾಗಿ, ಅವತಸ್ಥೇ - ನಿಂತನು. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನಶತತಮಸ್ಸರ್ಗಃ.

ನಿವಾಸಿಗಳಾದ ದೇವತೆಗಳೆಲ್ಲರೂ ಅಪರಿಮಿತಾನಂದಭರಿತರಾಗಿ ತಾವೂ ಸಿಂಹನಾದಗಳನ್ನು ಮಾಡಿದರು. ಹೀಗೆ ದೇವತೆಗಳೂ ಮತ್ತು ವಾನರವೀರರೂ ಭಯಂಕರ ಸಿಂಹನಾದಗಳನ್ನು ಮಾಡಿದುದನ್ನು ನೋಡಿ ರಾಕ್ಷಸೇಶ್ವರನಾದ ರಾವಣಾಸುರನು ಮತ್ತೂ ಅಧಿಕವಾಗಿ ಕೋಪಿಸಿ ಮತ್ತೆ ಯುದ್ಧಸನ್ನದ್ಧನಾಗಿ ನಿಂತನು. ॥ ೨೨-೨೬ ॥

ಇಂತಿದು ಮಹಾಪಾರ್ಶ್ವವಧ ವೃತ್ತಾಂತವೆಂಬ ತೊಂಬತ್ತೊಂಬತ್ತನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಶತತಮಸ್ಸರ್ಗಃ

ಮಹೋದರಮಹಾಪಾರ್ಶ್ವೌ ಹತೌ ದೃಷ್ಟ್ವಾತು ರಾಕ್ಷಸೌ । ತಸ್ಮಿಂಶ್ಚ ನಿಹತೇ ವೀರೇ ವಿರೂಪಾಕ್ಷೇ ಮಹಾಬಲೇ ॥ ೧ ॥ ಅವಿವೇಶ ಮಹಾನ್ ಕ್ರೋಧೋ ರಾವಣಂ ತಂ ಮಹಾಮೃಧೇ । ಸೂತಂ ಸಂಚೋದಯಾಮಾಸ ವಾಕ್ಯಂ ಚೇದಮುವಾಚಹ ॥ ೨ ॥ "ನಿಹತಾನಾಮಮಾತ್ಯಾನಾಂ ರುದ್ಧಸ್ಯ ನಗರಸ್ಯಚ । ದುಃಖಮೇಷೋಽಪನೇಷ್ಯಾಮಿ ಹತ್ವಾ ತೌ ರಾಮಲಕ್ಷ್ಮಣೌ ॥ ೩ ॥ ರಾಮವೃಕ್ಷಂ ರಣೇ ಹನ್ಮಿ ಸೀತಾಪುಷ್ಪಫಲಪ್ರದಂ । ಪ್ರಶಾಖಾ ಯಸ್ಯ ಸುಗ್ರೀವೋ ಜಾಂಬವಾನ್ ಕುಮುದೋ ನಳಃ ॥ ೪ ॥ ಮೈಂದಶ್ಚ ದ್ವಿವಿದಶ್ಚೈವ ಹ್ಯಂಗದೋ ಗಂಧಮಾದನಃ । ಹನುಮಾಂಶ್ಚ ಸುಷೇಣಶ್ಚ ಸರ್ವೇಚ

ಮಹೋ....ಶ್ವೌ - ಮಹೋದರ ಮಹಾಪಾರ್ಶ್ವರೆಂಬ, ತೌರಾಕ್ಷಸೌ - ಆ ರಾಕ್ಷಸರನ್ನು, ಹತೌ - ಹೊಡೆಯಲ್ಪಟ್ಟವರನ್ನಾಗಿ, ದೃಷ್ಟ್ವಾ - ಕಂಡು, ಮಹಾಬಲೇನ - ಬಹಳ ಬಲಶಾಲಿಯಾದ, ವೀರೇ - ಶೂರನಾದ, ತಸ್ಮಿನ್ವಿರೂಪಾಕ್ಷೇಚ - ಆ ವಿರೂಪಾಕ್ಷನೂ, ಹತೇ - ಸಂಹೃತನಾಗಲೂ, ಮಹಾಮೃಧೇ - ದೊಡ್ಡ ಕಾಳೆಗದಲ್ಲಿ, ಮಹಾನ್ - ದೊಡ್ಡದಾದ, ಕ್ರೋಧಃ - ಆಗ್ರಹವು, ತಂರಾವಣಂ- ಆ ರಾವಣನನ್ನು, ಅವಿವೇಶ - ಹೊಕ್ಕಿತು. ॥ ೧ ॥ ಸಃ - ಅವನು, ಸೂತಂ - ಸಾರಥಿಯನ್ನು, ಚೋದಯಾಮಾಸ - ಪ್ರೇರೇಪಿಸಿದನು, ಇದಂವಾಕ್ಯಂಚ - ಈ ಮಾತನ್ನೂ, ಉವಾಚಹ - ಹೇಳಿದನಷ್ಟೆ. ॥೨॥ ಏಷಃ - ಈ ನಾನು, ನಿಹತಾನಾಂ - ಹೊಡೆಯಲ್ಪಟ್ಟ, ಅಮಾತ್ಯಾನಾಂ - ಮಂತ್ರಿಗಳಿಗೂ, ರುದ್ಧಸ್ಯ - ತಡೆಮಾಡಲ್ಪಟ್ಟ, ನಗರಸ್ಯ - ಪಟ್ಟಣಕ್ಕೂ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರನ್ನು, ಹತ್ವಾ - ಕೊಂದು, ದುಃಖಂ - ದುಃಖವನ್ನು, ಅಪನೇಷ್ಯಾಮಿ - ಹೋಗಲಾಡಿಸುವೆನು. ॥೩॥ ಯಸ್ಯ - ಯಾವ ಶ್ರೀರಾಮನೆಂಬ ವೃಕ್ಷಕ್ಕೆ, ಸುಗ್ರೀವಃ - ಸುಗ್ರೀವನು, ಜಾಂಬವಾನ್ - ಜಾಂಬವಂತನು, ಕುಮುದಃ - ಕುಮುದನು, ನಲಃ - ನಳನು, ಮೈಂದಶ್ಚ - ಮೈಂದನು, ದ್ವಿವಿದಶ್ಚೈವ - ದ್ವಿವಿದನೂ, ಅಂಗದಃ - ಅಂಗದನೂ, ಗಂಧಮಾದನಶ್ಚ - ಗಂಧಮಾದನನನ್ನೂ, ಹನೂಮಾಂಶ್ಚ - ಹನುಮಂತನೂ, ಸುಷೇಣಶ್ಚ - ಸುಷೇಣನೂ, ಸರ್ವೇ - ಸಮಸ್ತರಾದ, ಹರಿಯೂಥಪಾಶ್ಚ - ವಾನರಯೂಥಪತಿಗಳೂ, ಪ್ರಶಾಖಾಃ - ದೊಡ್ಡ ಕೊಂಬೆಗಳೋ, ಸೀತಾ....ದಂ - ಸೀತಾದೇವಿಯೆಂಬ ಪುಷ್ಪ

ಆ ಪ್ರಕಾರವಾಗಿ ಮಹೋದರ ಮಹಾಪಾರ್ಶ್ವರೂ, ಮಹಾ ಪರಾಕ್ರಮಶಾಲಿಯಾದ ವಿರೂಪಾಕ್ಷ ರಾಕ್ಷಸನೂ ರಣರಂಗದಲ್ಲಿ ಮೃತಿಯೊಂದಿದ ತರುವಾಯ ಆ ರಾವಣಾಸುರನನ್ನು ನಿರತಿಶಯವಾದ ಮಹಾ ಕ್ರೋಧವೇ ಆವರಿಸಿತು. ಆ ಕೂಡಲೇ ಅವನು ತನ್ನ ಸಾರಥಿಯನ್ನು ಪ್ರೇರಿಸುವವನಾಗಿ, "ಎಲೈ ಸೂತನೇ! ಈ ನಾನು ವೀರಶ್ರೇಷ್ಠರಾದ ನಮ್ಮವರ ಮರಣಕ್ಕೂ, ನಮ್ಮ ಪಟ್ಟಣಕ್ಕೆ ಮುತ್ತಿಗೆ ಹಾಕಿರುವುದಕ್ಕೂ ಶತ್ರುಗಳಿಗೆ ತಕ್ಕ ಪ್ರತೀಕಾರವನ್ನು ಮಾಡುವವನಾಗಿದ್ದೇನೆ. ನನ್ನ ಹಗೆಯರಾದ ಆ ರಾಮಲಕ್ಷ್ಮಣರನ್ನು ಸಂಹರಿಸಿ ಈ ನಮ್ಮ ಮಂತ್ರಿಗಳಿಗುಂಟಾಗಿರುವ ದುಃಖವನ್ನು ಹೋಗಲಾಡಿಸುತ್ತೇನೆ. ಸೀತೆಯೆಂಬ ಫಲಪುಷ್ಪಗಳುಳ್ಳ ರಾಮನೆಂಬ ವೃಕ್ಷವನ್ನೀಗ ಛೇದಿಸುವೆನು. ಆ ರಾಮ ವೃಕ್ಷಕ್ಕೆ ಸುಗ್ರೀವ, ಜಾಂಬವಂತ, ಕುಮುದ, ನಳ, ಮೈಂದ, ದ್ವಿವಿದ, ಅಂಗದ, ಗಂಧಮಾದನ, ಹನುಮಂತ, ಸುಷೇ

ಹರಿಯೂಥಪಾಃ " ‖ ೫ ‖ ಸದಿಶೋ ದಶ ಘೋಷೇಣ ರಥಸ್ಯಾತಿರಥೋ ಮಹಾನ್ ।
ನಾದಯನ್ ಪ್ರಯಯೌ ತೂರ್ಣಂ ರಾಘವಂ ಚಾಭ್ಯವರ್ತತ ‖ ೬ ‖ ಪೂರಿತಾ ತೇನ
ಶಬ್ದೇನ ಸನದೀಗಿರಿಕಾನನಾ । ಸಂಚಚಾಲ ಮಹೀ ಸರ್ವಾ ಸವರಾಹಮೃಗದ್ವಿಪಾ
‖ ೭ ‖ ತಾಮಸಂ ಸುಮಹಾಘೋರಂ ಚಕಾರಾಸ್ತ್ರಂ ಸುದಾರುಣಂ । ನಿರ್ದದಾಹ
ಕಪೀನ್ ಸರ್ವಾಂಸ್ತೇ ಪ್ರಪೇತುಸ್ಸಮಂತತಃ ‖ ೮ ‖ ಉತ್ಪಪಾತ ರಜೋ ಘೋರಂ
ತೈರ್ಭಗ್ನೈಸ್ಸಂಪ್ರಧಾವಿತೈಃ । ನಹಿ ತತ್ಸಹಿತುಂ ಶೇಕುರ್ಬ್ರಹ್ಮಣಾ ನಿರ್ಮಿತಂ ಸ್ವಯಂ

ವನ್ನೂ ಫಲವನ್ನೂ ಕೊಡುತ್ತಿರುವ, ರಾಮವೃಕ್ಷಂ - ಶ್ರೀರಾಮನೆಂಬ ಮರವನ್ನು, ರಣೇ - ಕಾಳಗದಲ್ಲಿ, ಹನ್ಮಿ - ಹೊಡೆಯುವೆನು. ‖ ೪-೫ ‖ ಅತಿರಥಃ - ಮಹಾ ರಥಿಕನಾದ, ಮಹಾನ್ - ದೊಡ್ಡವನಾದ, ಸಃ - ಆ ರಾವಣನು, ರಥಸ್ಯ - ರಥದ, ಘೋಷೇಣ - ಧ್ವನಿಯಿಂದ, ದಶದಿಶಃ - ಹತ್ತು ದಿಕ್ಕುಗಳನ್ನೂ, ನಾದಯನ್ - ಧ್ವನಿಗೊಳಿಸುತ್ತ, ತೂರ್ಣಂ - ಜಾಗ್ರತೆಯಾಗಿ, ಪ್ರಯಯೌ - ಹೊರಟುಬಂದನು, ರಾಘವಂಚ - ಶ್ರೀರಾಮನನ್ನೂ ಕುರಿತು, ಅಭ್ಯವರ್ತತ - ಎದುರಾಗಿ ನಿಂತನು. ‖ ೬ ‖ ತೇನಶಬ್ದೇನ-ಆ ರಾವಣನ ರಥದ ಶಬ್ದದಿಂದ, ಸನ....ನಾ-ನದಿಗಳಿಂದಲೂ, ಬೆಟ್ಟಗಳಿಂದಲೂ, ಕಾಡುಗಳಿಂದಲೂ ಕೂಡಿದ, ಸವ....ಪಾ - ಕಾಡುಹಂದಿಗಳಿಂದಲೂ, ಜಿಗರಿಗಳಿಂದಲೂ, ಆನೆಗಳಿಂದಲೂ ಕೂಡಿದ, ಸರ್ವಾ - ಸಮಸ್ತವಾದ, ಮಹೀ - ನೆಲವು, ಪೂರಿತಾ - ತುಂಬಿಸಲ್ಪಟ್ಟುದಾಗಿ, ಸಂಚಚಾಲ - ನಡುಗಿತು. ‖ ೭ ‖ ಸಃ - ಆ ರಾವಣನು, ತಾಮಸಂ - ತಾಮಸವೆಂಬ, ಸುದಾರುಣಂ - ಬಹಳ ಕ್ರೂರವಾದ, ಮಹಾಘೋರಂ - ಬಹಳ ಭಯಂಕರವಾದ, ಅಸ್ತ್ರಂ - ಅಸ್ತ್ರವನ್ನು, ಚಕಾರ - ಪ್ರಯೋಗ ಮಾಡಿದನು, ಸರ್ವಾನ್‌ಕಪೀನ್ - ಸಮಸ್ತ ವಾನರರನ್ನೂ, ನಿರ್ದದಾಹ - ದಹಿಸಿದನು, ತೇ-ಆ ಕಪಿಗಳು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಪ್ರಪೇತುಃ - ಬಿದ್ದರು. ‖ ೮ ‖ ಭಗ್ನೈಃ - ಮುರಿಯಲ್ಪಟ್ಟು, ಸಂಪ್ರಧಾವಿತೈಃ - ಅಟ್ಟಲ್ಪಟ್ಟ, ತೈಃ - ಆ ಕಪಿಗಳಿಂದ, ಘೋರಂ - ಭಯಂಕರವಾದ, ರಜಃ - ಧೂಳು, ಉತ್ಪಪಾತ - ಹುಟ್ಟಿತು, ಬ್ರಹ್ಮಣಾ-ಬ್ರಹ್ಮನಿಂದ, ಸ್ವಯಂ - ತನ್ನಿಷ್ಟಕ್ಕೆ ತಾನೇ, ನಿರ್ಮಿತಂ - ಸೃಷ್ಟಿಮಾಡಲ್ಪಟ್ಟ, ತತ್ - ಆ ಧೂಳನ್ನು, ಸಹಿತುಂ - ಸಹಿಸುವುದಕ್ಕೆ,

---

ಣರೇ ಕೊಂಬೆಗಳಂತಿರುವರು. ನಾನು ಇವರೆಲ್ಲರನ್ನೂ ನಾಶಗೊಳಿಸುವೆನು" ಎಂದು ಹೇಳಿದನು. ‖೧-೫‖ ಆ ಬಳಿಕ ಅತಿರಥನೂ, ಮಹಾತ್ಮನೂ ಆದ ಆ ರಾಕ್ಷಸೇಶ್ವರನು ದಶದಿಶೆಗಳಲ್ಲಿಯೂ ಪ್ರತಿಧ್ವನಿಯಾಗುವಂತೆ ಮಹಾದ್ಭುತವಾಗಿ ಸಿಂಹನಾದ ಮಾಡುತ್ತ ಶ್ರೀರಾಮನಿದ್ದೆಡೆಗೆ ರಥವನ್ನು ತರುಬಿಸಿದನು. ಆ ರಥಧ್ವನಿಯಿಂದ ನದೀ ಪರ್ವತಾರಣ್ಯಗಳಿಂದಲೂ, ಮೃಗಗಳು, ಗಜಗಳೇ ಮೊದಲಾದ ಪ್ರಾಣಿಗಳಿಂದಲೂ ತುಂಬಿದ ಭೂಮಿಯೆಲ್ಲವೂ ಗಡಗಡನೆ ನಡುಗಿಹೋಯಿತು. ಆ ಸಮಯದಲ್ಲಿ ಮಹಾ ಪರಾಕ್ರಮಿಯಾದ ರಾವಣಾಸುರನಾದರೋ ಮಹಾ ಕೋಪೋದ್ದೀಪಿತನಾಗಿ ಬಹು ಭಯಂಕರವೂ, ಬಹು ಕ್ರೂರವೂ ಆದ ತಾಮಸಸ್ತ್ರವನ್ನು ಪ್ರಯೋಗಿಸಿದನು. ಆ ಮಹಾಸ್ತ್ರವು ಅನೇಕ ಸಹಸ್ರ ವೀರ ವಾನರರನ್ನು ದಹಿಸಿಬಿಟ್ಟಿತು. ಅನೇಕ ವಾನರರು ಭಯಭಾರಪೀಡಿತರಾಗಿ ದಿಕ್ಕುವಿದಿಕ್ಕುಗಳಿಗೆಲ್ಲ ಪಲಾಯನವಾಗಿ ಹೋದರು. ಹೀಗೆ ಕಪಿಸೇನೆಯೆಲ್ಲವೂ ಪಲಾಯನವಾಗುತ್ತಿರಲು ಅಪರಿಮಿತವಾದ ಧೂಳೆದ್ದಿತು. ಸಾಕ್ಷಾತ್ ಬ್ರಹ್ಮದೇವನಿಂದಲೇ ನಿರ್ಮಿತವಾದ ಆ ಧೂಳು ಯಾರಿಗೂ ಸಹಿಸಲಸಾಧ್ಯವಾಗಿದ್ದಿತು. ಇಷ್ಟೆಯಲ್ಲದೆ ಆ ಸಮಯದಲ್ಲಿ

॥ ೯ ॥ ತಾನ್ಯನೀಕಾನ್ಯನೇಕಾನಿ ರಾವಣಸ್ಯ ಶರೋತ್ತಮೈಃ । ದೃಷ್ಟ್ವಾ ಭಗ್ನಾನಿ ಶತಶೋ ರಾಘವಃ ಪರ್ಯವಸ್ಥಿತಃ ॥ ೧೦॥ ತತೋ ರಾಕ್ಷಸಶಾರ್ದೂಲೋ ವಿದ್ರಾವ್ಯ ಹರಿವಾಹಿನೀಂ । ಸದದರ್ಶ ತತೋ ರಾಮಂತಿಷ್ಠಂತಮಪರಾಜಿತಂ ॥೧೧॥ ಲಕ್ಷ್ಮಣೇನ ಸಹಭ್ರಾತ್ರಾ ವಿಷ್ಣುನಾ ವಾಸವಂ ಯಥಾ । ಆಲಿಖಂತಮಿವಾಕಾಶಮವಷ್ಟಭ್ಯ ಮಹದ್ಧನುಃ ॥ ೧೨ ॥ ಪದ್ಮಪತ್ರವಿಶಾಲಾಕ್ಷಂ ದೀರ್ಘಬಾಹುಮರಿಂದಮಂ । ತತೋ ರಾಮೋ ಮಹಾತೇಜಾ ಸೌಮಿತ್ರಿಸಹಿತೋ ಬಲೀ ॥ ೧೩ ॥ ವಾನರಾಂಶ್ಚ ರಣೇ ಭಗ್ನಾನಾಪತಂತಂ ಚ ರಾವಣಂ । ಸಮೀಕ್ಷ್ಯ ರಾಘವೋ ಹೃಷ್ಟೋ ಮಧ್ಯೇ ಜಗ್ರಾಹ

ನಶೇಕುರ್ಹಿ - ಸಮರ್ಥರಾಗಲಿಲ್ಲವಷ್ಟೆ. ॥ ೯ ॥ ರಾವಣಸ್ಯ - ರಾವಣನ, ಶರೋತ್ತಮೈಃ - ಉತ್ತಮ ಬಾಣಗಳಿಂದ, ಶತಶಃ - ನೂರಾರು ಬಗೆಯಾಗಿ, ಭಗ್ನಾನಿ - ಮುರಿಯಲ್ಪಟ್ಟ, ಅನೇಕಾನಿ - ಅನೇಕ ಸಂಖ್ಯೆಗಳುಳ್ಳ, ತಾನ್ಯನೀಕಾನಿ - ಆ ಸೇನೆಗಳನ್ನು, ದೃಷ್ಟ್ವಾ - ಕಂಡು, ಪರ್ಯವಸ್ಥಿತಃ - ಎದುರಾಗಿ ನಿಂತನು. ॥ ೧೦ ॥ ತತಃ - ಬಳಿಕ, ರಾಕ್ಷ....ಲಃ - ರಾಕ್ಷಸಾಧಿಪತಿಯಾದ ರಾವಣನು, ಹರಿವಾಹಿನೀಂ - ಕಪಿಸೇನೆಯನ್ನು, ವಿದ್ರಾವ್ಯ - ಓಡಿಸಿ, ತತಃ - ಬಳಿಕ, ಅಪರಾಜಿತಂ - ಜಯಿಸಲ್ಪಡದೆ, ತಿಷ್ಠಂತಂ-ಇರುವ, ಭ್ರಾತ್ರಾ-ತಮ್ಮನಾದ, ಲಕ್ಷ್ಮಣೇನಸ-ಲಕ್ಷ್ಮಣನೊಡನೆ, ವಿಷ್ಣುನಾ-ಶ್ರೀಮಹಾವಿಷ್ಣುವಿನೊಡನಿರುವ, ವಾಸವೋಯಥಾ - ದೇವೇಂದ್ರನಂತೆ, ಆಕಾಶಂ - ಅಂತರಿಕ್ಷವನ್ನು, ಆಲಿಖಂತಮಿವ - ಒರೆಯುವುದೋ ಎಂಬಂತಿರುವ, ಮಹದ್ಧನುಃ - ದೊಡ್ಡ ಬಿಲ್ಲನ್ನು, ಅವಷ್ಟಭ್ಯ - ನೆಮ್ಮಿ, ಸ್ಥಿತಂ - ನಿಂತಿರುವ, ಪದ್ಮ....ಕ್ಷಃ - ಕಮಲಪತ್ರಗಳಂತೆ ವಿಸ್ತಾರವಾದ ನೇತ್ರಗಳುಳ್ಳ, ದೀರ್ಘಬಾಹುಂ - ಉದ್ದವಾದ ಭುಜಗಳುಳ್ಳ, ಅರಿಂದಮಂ - ಶತ್ರುಸಂಹಾರಕನಾದ, ರಾಮಂ - ಶ್ರೀರಾಮನನ್ನು, ದದರ್ಶ - ಕಂಡನು. ॥೧೧-೧೨॥ ತತಃ - ಬಳಿಕ, ಮಹಾತೇಜಾಃ - ಬಹಳ ತೇಜೋವಂತನಾದ, ರಾಘವಃ - ರಘುವಂಶೋತ್ಪನ್ನನಾದ, ಬಲೀ - ಬಲವಂತನಾದ, ರಾಮಃ - ಶ್ರೀರಾಮನು, ಸೌಮಿ....ತಃ - ಲಕ್ಷ್ಮಣನೊಡಗೂಡಿ, ರಣೇ - ಕಾಳಗದಲ್ಲಿ, ಭಗ್ನಾನ್ - ಮುರಿಯಲ್ಪಟ್ಟ, ವಾನರಾಂಶ್ಚ - ಕಪಿಗಳನ್ನೂ, ಆಪತಂತಂ - ಬರುತ್ತಿರುವ, ರಾವಣಂಚ - ರಾವಣನನ್ನೂ, ಸಮೀಕ್ಷ್ಯ - ಕಂಡು, ಹೃಷ್ಟಃ - ಸಂತೋಷಗೊಂಡವನಾಗಿ, ಕಾರ್ಮುಕಂ - ಧನುಸ್ಸನ್ನು, ಮಧ್ಯೇ - ಮಧ್ಯಪ್ರದೇಶ

ರಾವಣನು ಮಹಾ ತೀಕ್ಷ್ಣವಾದ ಅನೇಕ ಬಾಣಗಳಿಂದ ಅನೇಕ ಸಹಸ್ರ ವಾನರವೀರರನ್ನು ಸಂಹರಿಸಿದನು. ಹೀಗೆ ವಾನರರು ಆ ರಾವಣನ ಸಹಸ್ರಾರು ಬಾಣಗಳ ಘಾತದಿಂದ ಮಡಿಯುತ್ತಿರುವುದನ್ನು ಶ್ರೀರಾಮನು ಕಂಡನು. ॥೬-೧೦॥ ರಾವಣಾಸುರನಾದರೋ ಈ ರೀತಿ ವಾನರ ಸೇನೆಯನ್ನೆಲ್ಲ ಚದುರಿಸಿ ಯುದ್ಧ ಮಾಡುತ್ತ ಮುಂದುವರಿದು ಹಗೆಯರಾರಿಗೂ ಸಗ್ಗದೆ, ಪರಾಭವವನ್ನು ಹೊಂದದೆ ಸ್ಥಿರವಾಗಿ ನಿಂತಿರುವ ಶ್ರೀರಾಮಮೂರ್ತಿಯನ್ನು ನೋಡಿದನು. ಆಗ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡಗೂಡಿ ಶ್ರೀಮಹಾವಿಷ್ಣುವಿನೊಡನಿರುವ ದೇವೇಂದ್ರನಂತೆ, ಪ್ರಕಾಶಿಸುತ್ತಿದ್ದನು. ಇಷ್ಟೆಯಲ್ಲದೆ ಆತನು ಗಗನಾಂಗಣವನ್ನೇ ಉಲ್ಲೇಖಿಸುವಂತಿರುವ ದೊಡ್ಡ ಧನುಸ್ಸನ್ನು ನೆಮ್ಮಿ, ಪದ್ಮಪತ್ರವಿಶಾಲಾಕ್ಷನಾಗಿಯೂ, ದೀರ್ಘಬಾಹುವಾಗಿಯೂ ವಿರಾಜಿಸುತ್ತಿದ್ದನು. ಆತನನ್ನು ನೋಡಿದೊಡನೆಯೇ ರಾವಣಾಸುರನು ಕೋಪದಿಂದ ಕಿಡಿಕಿಡಿಯಾಗಿ ಹೋದನು. ಮಹಾ ತೇಜಸ್ವಿಯೂ, ಮಹಾ ಬಲಾಢ್ಯನೂ ಆದ ಶ್ರೀರಾಮನು ಯುದ್ಧಭೂಮಿಯಲ್ಲಿ ಭಗ್ನರಾಗಿ ಓಡಿಹೋಗುತ್ತಿರುವ ವಾನರರನ್ನೂ, ತನಗಭಿ

ಕಾರ್ಮುಕಂ ||೧೪|| ವಿಸ್ಫಾರಯಿತುಮಾರೇಭೇ ತತಸ್ಸಧನುರುತ್ತಮಂ । ಮಹಾವೇಗಂ ಮಹಾನಾದಂ ನಿರ್ಭಿಂದನ್ನಿವ ಮೇದಿನೀಂ || ೧೫ || ರಾವಣಸ್ಯಚ ಬಾಣೌಘೈ ರಾಮ ವಿಸ್ಫಾರಿತೇನಚ । ಶಬ್ದೇನ ರಾಕ್ಷಸಾಸ್ತೇ ಚ ಪೇತುಶ್ಚ ಶತಶಸ್ತದಾ || ೧೬ || ತಯೋಃ ಶರಪಥಂ ಪ್ರಾಪ್ತೋ ರಾವಣೋ ರಾಜಪುತ್ರಯೋಃ । ಸಬಭೌ ಚ ಯಥಾ ರಾಹು ಸ್ಸಮೀಪೇ ಶಶಿಸೂರ್ಯಯೋಃ ||೧೭|| ತಮಿಚ್ಛನ್ ಪ್ರಥಮಂ ಯೋದ್ಧುಂ ಲಕ್ಷ್ಮಣೋ ನಿಶಿತೈಃ ಶರೈಃ । ಮುಮೋಚ ಧನುರಾಯಮ್ಯ ಶರಾನಗ್ನಿಶಿಖೋಪಮಾನ್ ||೧೮|| ತಾನ್ ಮುಕ್ತಮಾತ್ರಾನಾಕಾಶೇ ಲಕ್ಷ್ಮಣೇನ ಧನುಷ್ಮತಾ । ಬಾಣಾನ್ ಬಾಣೈರ್ಮಹಾತೇಜಾ

ದಲ್ಲಿ, ಜಗ್ರಾಹ - ಹಿಡಿದುಕೊಂಡನು. ||೧೩-೧೪|| ತತಃ - ಬಳಿಕ, ಸಃ - ಆ ಶ್ರೀರಾಮನು, ಮಹಾವೇಗಂ - ಬಹಳ ವೇಗವುಳ್ಳ, ಮಹಾನಾದಂ - ದೊಡ್ಡ ಧ್ವನಿಯುಳ್ಳ, ಉತ್ತಮಂ - ಸರ್ವೋತ್ತಮವಾದ, ಧನುಃ - ಧನುಸ್ಸನ್ನು, ಮೇದಿನೀಂ - ನೆಲವನ್ನು, ನಿರ್ಭಿಂದನ್ನಿವ - ಸೀಳುವನೋ ಎಂಬಂತೆ, ವಿಸ್ಫಾರಯಿತುಂ - ಟಂಕಾರ ಮಾಡುವದಕ್ಕೆ, ಆರೇಭೇ - ಪ್ರಾರಂಭ ಮಾಡಿದನು. ||೧೫|| ರಾವಣಸ್ಯ- ರಾವಣನ, ಬಾಣೌಘೈಶ್ಚ - ಬಾಣಗಳ ತಂಡಗಳಿಂದಲೂ, ರಾಮ....ಚ - ಶ್ರೀರಾಮನಿಂದ ಟಂಕಾರ ಮಾಡಲ್ಪಟ್ಟ, ಶಬ್ದೇನಚ - ಧ್ವನಿಯಿಂದಲೂ, ತೇರಾಕ್ಷಸಾಶ್ಚ - ಆ ರಾಕ್ಷಸರು, ತದಾ - ಆ ಕಾಲದಲ್ಲಿ, ಶತಶಃ - ನೂರಾರಾಗಿ, ಪೇತುಃ - ಬಿದ್ದವು. ||೧೬|| ತಯೋಃರಾಜಪುತ್ರಯೋಃ - ಆ ರಾಜಪುತ್ರರಾದ ರಾಮಲಕ್ಷ್ಮಣರ, ಶರಪಥಂ ಬಾಣಮಾರ್ಗವನ್ನು, ಪ್ರಾಪ್ತಃ-ಹೊಂದಿ, ಸರಾವಣಃ- ಆ ರಾವಣಾಸುರನು, ಶಶಿಸೂರ್ಯಯೋಃ-ಚಂದ್ರಸೂರ್ಯರ, ಸಮೀಪೇ-ಬಳಿಯಲ್ಲಿ, ರಾಹುರ್ಯಥಾ- ರಾಹುಗ್ರಹದಂತೆ, ಬಭೌ - ಹೊಳೆಯುತ್ತಿದ್ದನು. ||೧೭|| ಪ್ರಥಮಂ - ಮೊದಲು, ಲಕ್ಷ್ಮಣಃ - ಲಕ್ಷ್ಮಣನು, ತಂ - ಆ ರಾವಣಾಸುರನನ್ನು ಕುರಿತು, ನಿಶಿತೈಃ - ತೀಕ್ಷ್ಣಗಳಾದ, ಶರೈಃ - ಸರಳುಗಳಿಂದ, ಯೋದ್ಧುಂ - ಯುದ್ಧಮಾಡುವುದಕ್ಕೆ, ಇಚ್ಛನ್ - ಅಪೇಕ್ಷಿಸಿ, ಧನುಃ - ಬಿಲ್ಲನ್ನು, ಆಯಮ್ಯ - ಬಗ್ಗಿಸಿ ಕಟ್ಟಿ, ಅಗ್ನಿಶಿಖೋಪಮಾನ್ - ಅಗ್ನಿಜ್ವಾಲೆಗಳಿಗೆ ಸಮಾನವಾದ, ಶರಾನ್ - ಬಾಣಗಳನ್ನು, ಮುಮೋಚ-ಬಿಟ್ಟನು. || ೧೮ || ಮಹಾತೇಜಾಃ-ಮಹಾ ಸಾಮರ್ಥ್ಯವಂತನಾದ, ರಾವಣಃ-ರಾವಣಾಸುರನು, ಧನುಷ್ಮತಾ - ಧನುರ್ಧಾರಿಯಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಮುಕ್ತಮಾತ್ರಾನ್ - ಬಿಡಲ್ಪಟ್ಟ ಕೂಡಲೇ, ತಾನ್‌ಬಾಣಾನ್ - ಆ ಸರಳುಗಳನ್ನು, ಬಾಣೈಃ - ಸರಳುಗಳಿಂದ, ಆಕಾಶೇ - ಅಂತ

ಮುಖನಾಗಿ ಬರುತ್ತಿರುವ ರಾವಣಾಸುರನನ್ನು ನೋಡಿ ಅಪರಿಮಿತಾನಂದಭರಿತನಾಗಿ ಮಹೋತ್ತಮವಾದ ತನ್ನ ಧನುಸ್ಸನ್ನು ಗ್ರಹಿಸಿ ಭೂಮ್ಯಂತರಿಕ್ಷಗಳೇ ಭೇದಿಸಿ ಹೋಗುವಂತೆ ಟಂಕಾರ ಮಾಡಿದನು. ||೧೧–೧೫|| ಅದೇ ಸಮಯದಲ್ಲಿಯೇ ರಾವಣನು ಪ್ರಯೋಗಮಾಡಿದ ಅನೇಕ ಬಾಣಗಳಿಂದಲೂ, ರಾಮನು ಮಾಡಿದ ಧನುಷ್ಟಂಕಾರದಿಂದಲೂ ರಣಾಂಗಣದಲ್ಲಿ ಕಾಳಗ ಮಾಡುತ್ತಿದ್ದ ರಾಕ್ಷಸರೆಲ್ಲರೂ ಸಾವಿರಾರುಗಳಾಗಿ ನೆಲಕ್ಕುರುಳಿದರು. ಶ್ರೀರಾಮ ಲಕ್ಷ್ಮಣರ ಬಾಣಮಾರ್ಗವನ್ನು ಹೊಂದಿದ ಆ ರಾವಣನು ಸೂರ್ಯಚಂದ್ರರ ನಡುವೆ ಸಿಕ್ಕಿದ ರಾಹುಗ್ರಹದಂತೆ ನಿಸ್ತೇಜನಾದನು. ಆಗ ಲಕ್ಷ್ಮಣನು ರಾವಣನೊಡನೆ ಮೊದಲು ತಾನು ಯುದ್ಧ ಮಾಡಬಯಸಿ ಬಿಲ್ಲನ್ನು ಬಾಗಿಸಿ ಅಗ್ನಿಜ್ವಾಲೋಪಮವಾದ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಮಹಾ ಧಾನುಷ್ಕನಾದ ಲಕ್ಷ್ಮಣಸ್ವಾಮಿಯು ಪ್ರಯೋಗಿಸಿದ ಬಾಣಗಳನ್ನು ಆ ರಾವಣನು ಗಗನಮಾರ್ಗದಲ್ಲಿ ತನ್ನ ಕೂರಂಬುಗಳಿಂದ ತಡೆಗಟ್ಟಿದನು. ಆ ರಾಕ್ಷ

ರಾವಣಃ ಪ್ರತ್ಯವಾರಯತ್ ॥೧೯॥ ಏಕಮೇಕೇನ ಬಾಣೇನ ತ್ರಿಭಿಸ್ತ್ರೀನ್ ದಶಭಿರ್ದಶ । ಲಕ್ಷ್ಮಣಸ್ಯ ಪ್ರಚಿಚ್ಛೇದ ದರ್ಶಯನ್ ಪಾಣಿಲಾಘವಮ್ ॥೨೦॥ ಅಭ್ಯತಿಕ್ರಮ್ಯ ಸೌಮಿತ್ರಿಂ ರಾವಣಸ್ಸಮಿತಿಂಜಯಃ । ಆಸಸಾದ ತತೋ ರಾಮಂ ಸ್ಥಿತಂ ಶೈಲಮಿವಾಚಲಮ್ ॥೨೧॥ ಸಸಂಖ್ಯೇ ರಾಮಮಾಸಾದ್ಯ ಕ್ರೋಧಸಂರಕ್ತಲೋಚನಃ । ವ್ಯಸೃಜಚ್ಛರವರ್ಷಾಣಿ ರಾವಣೋ ರಾಘವೋಪರಿ ॥ ೨೨ ॥ ಶರಧಾರಾಸ್ತತೋ ರಾಮೋ ರಾವಣಸ್ಯ ಧನುಶ್ಚ್ಯುತಾಃ । ದೃಷ್ಟ್ವೈವಾಪತತಃ ಶೀಘ್ರಂ ಭಲ್ಲಾನ್ ಜಗ್ರಾಹ ಸತ್ವರಂ ॥ ೨೩ ॥ ತಾನ್ ಶರೌಘಾಂಸ್ತತೋ ಭಲ್ಲೈಸ್ತೀಕ್ಷ್ಣೈಶ್ಚಿಚ್ಛೇದ ರಾಘವಃ । ದೀಪ್ಯಮಾನಾನ್ ಮಹಾ

ರಿಕ್ಷ ಮಧ್ಯದಲ್ಲಿಯೇ, ಪ್ರತ್ಯವಾರಯತ್ - ತಡೆದನು. ॥ ೧೯ ॥ ಲಕ್ಷ್ಮಣಸ್ಯ - ಸೌಮಿತ್ರಿಗೆ, ಪಾಣಿಲಾಘವಂ - ಕರಲಾಘವವನ್ನು, ದರ್ಶಯನ್ - ತೋರಿಸುವವನಾಗಿ, ಏಕಂ - ಒಂದು ಸರಳನ್ನು, ಏಕೇನ ಬಾಣೇನ - ಒಂದು ಬಾಣದಿಂದಲೂ, ತ್ರಿಭಿಃ - ಮೂರರಿಂದ, ತ್ರೀನ್ - ಮೂರು ಸರಳುಗಳನ್ನೂ, ದಶಭಿಃ - ಹತ್ತು ಸರಳುಗಳಿಂದ, ದಶ - ಹತ್ತು ಸರಳುಗಳನ್ನೂ, ಪ್ರಚಿಚ್ಛೇದ - ಕತ್ತರಿಸಿದನು. ॥೨೦॥ ತತಃ-ಬಳಿಕ, ಸಮಿತಿಂಜಯಃ-ಕಾಳಗದಲ್ಲಿ ಜಯಶೀಲನಾದ, ರಾವಣಃ-ದಶಕಂಠನು, ಸೌಮಿತ್ರಿಂ-ಲಕ್ಷ್ಮಣನನ್ನು, ಅಭ್ಯತಿಕ್ರಮ್ಯ - ಅತಿಕ್ರಮಿಸಿ, ಅಚಲಂ - ಚಲನವಿಲ್ಲದಿರುವ, ಶೈಲಮಿವ - ಬೆಟ್ಟದಂತೆ, ಸ್ಥಿತಂ - ನಿಂತಿರುವ, ರಾಮಂ - ಶ್ರೀರಾಮನನ್ನು ಕುರಿತು, ಆಸಸಾದ - ಬಂದನು. ॥ ೨೧ ॥ ಸರಾವಣಃ - ಆ ದಶಗ್ರೀವನು, ಸಂಖ್ಯೇ - ಕಾಳಗದಲ್ಲಿ, ರಾಮಂ - ಶ್ರೀರಾಮನನ್ನು, ಆಸಾದ್ಯ - ಹೊಂದಿ, ಕ್ರೋಧ....ನಃ - ಕೋಪದಿಂದ ಕೆರಳಿದ ಕಣ್ಣುಗಳುಳ್ಳವನಾಗಿ, ರಾಘವೋಪರಿ - ಶ್ರೀರಾಮನ ಮೇಲೆ, ಶರವರ್ಷಾಣಿ - ಸರಳುಗಳ ಮಳೆಗಳನ್ನು, ವ್ಯಸೃಜತ್ - ಸುರಿಸಿದನು. ॥೨೨॥ ತತಃ - ಬಳಿಕ, ರಾಮಃ - ಶ್ರೀರಾಮನು, ರಾವಣಸ್ಯ - ದಶಕಂಠನ, ಧನುಶ್ಚ್ಯುತಾಃ - ಬಿಲ್ಲಿನಿಂದ ಜಾರುತ್ತಿರುವ, ಶೀಘ್ರಂ-ಜಾಗ್ರತೆಯಾಗಿ, ಆಪತತಃ-ಬರುತ್ತಿರುವ, ಶರಧಾರಾಃ-ಸರಳಪಂಗ್ತಿಗಳನ್ನು, ದೃಷ್ಟ್ವೈವ-ನೋಡುತ್ತಲೇ, ಸತ್ವರಂ - ಜಾಗ್ರತೆಯಾಗಿ, ಭಲ್ಲಾನ್ - ಭಲ್ಲಾಯುಧಗಳನ್ನು, ಜಗ್ರಾಹ - ತೆಗೆದುಕೊಂಡನು. ॥ ೨೩ ॥ ತತಃ - ಬಳಿಕ, ರಾಘವಃ - ಶ್ರೀರಾಮನು, ತೀಕ್ಷ್ಣೈಃ - ಹದವಾದ, ಭಲ್ಲೈಃ - ಭರ್ಜಿಗಳಿಂದ, ಕ್ರುದ್ಧಾನ್ - ಕುಪಿತಗಳಾದ, ಆಶೀವಿಷಾನಿವ - ಸರ್ಪಗಳಂತೆ, ಮಹಾಘೋರಾನ್ - ಮಹಾ ಭಯಂಕರಗಳಾದ, ದೀಪ್ಯಮಾನಾನ್ - ಹೊಳೆಯುತ್ತಿರುವ, ತಾನ್‌ಶರೌಘಾನ್ -

---

ಸೇಶ್ವರನು ತನ್ನ ಕರಕೌಶಲವನ್ನು ಮೆರೆಯುತ್ತ ಒಂದೇ ಬಾಣದಿಂದ ಆ ಲಕ್ಷ್ಮಣನ ಒಂದು ಬಾಣವನ್ನೂ, ನಾಲ್ಕು ಹತ್ತು ಬಾಣಗಳಿಂದ ಅಷ್ಟಷ್ಟೇ ಬಾಣಗಳನ್ನೂ ಕತ್ತರಿಸಿ ಕೆಡವಿದನು. ॥ ೧೯–೨೦ ॥ ಈ ಪ್ರಕಾರ ರಾವಣಾಸುರನು ಅಮೋಘವಾದ ಹಸ್ತಲಾಘವವನ್ನು ತೋರಿ ತರುವಾಯ ಅತ್ತಿತ್ತ ಕದಲದೆ ಸ್ಥಿರವಾಗಿ ನಿಂತು ಪರ್ವತದಂತೆ ಬೆಳಗುತ್ತಿರುವ ಶ್ರೀರಾಮಮೂರ್ತಿಯನ್ನು ಕುರಿತು ಮುನ್ನುಗ್ಗಿದನು. ಆ ಕೂಡಲೇ ಅವನು ಕೋಪಸಂರಕ್ತಲೋಚನನಾಗಿ ಶ್ರೀರಾಮಮೂರ್ತಿಯ ಮೇಲೆ ಹಲವು ಬಗೆಯ ಅಂಬಿನ ಮಳೆಯನ್ನು ಸುರಿಸಿದನು. ಆ ಬಾಣಗಳನ್ನೆಲ್ಲ ಶ್ರೀರಾಮನು ಮಹಾ ತೀಕ್ಷ್ಣವಾದ ತನ್ನ ಬಾಣಗಳಿಂದ ನಿವಾರಿಸಿದನು. ಇದೂ ಅಲ್ಲದೆ ಪುನಃ ರಾವಣಾಸುರನು ಪ್ರಯೋಗಿಸಿದ ಭಯಂಕರವಾದ ವಿಷಸರ್ಪಗಳನ್ನು ಹೋಲುತ್ತಿರುವ ಬಾಣಸಮುದಾಯಗಳನ್ನು ಭಲ್ಲಾಯುಧಗಳಿಂದ ಖಂಡಿಸಿ ಕೆಡವಿದನು. ಆ ಸಮಯದಲ್ಲಿಯೇ ಶ್ರೀರಾಮನು ರಾವಣಾಸುರನ

ಘೋರರ್ಾ ಕ್ರುದ್ಧಾನಾಶೀವಿಷಾನಿವ ॥ ೨೪ ॥ ರಾಘವೋ ರಾವಣಂ ತೂರ್ಣಂ ರಾವಣೋ ರಾಘವಂ ತದಾ । ಅನ್ಯೋನ್ಯಂ ವಿವಿಧೈಸ್ತೀಕ್ಷ್ಣೈಶ್ಶರೈರಭಿವವರ್ಷತುಃ ॥ ೨೫ ॥ ಚೇರತುಶ್ಚ ಚಿರಂ ಚಿತ್ರಂ ಮಂಡಲಂ ಸವ್ಯದಕ್ಷಿಣಂ । ಬಾಣವೇಗಾನ್ ಸಮುತ್ ಕ್ಷಿಪ್ತಾವನ್ಯೋನ್ಯಮಪರಾಜಿತೌ ॥೨೬॥ ತಯೋರ್ಭೂತಾನಿ ವಿತ್ರೇಸುರ್ಯುಗಪತ್ಸಂಪ್ರಯುಧ್ಯತೋಃ । ರೌದ್ರಯೋಸ್ಸಾಯಕಮುಚೋರ್ಯಮಾಂತಕನಿಕಾಶಯೋಃ ॥೨೭॥ ಸಂತತಂ ವಿವಿಧೈರ್ಬಾಣೈರ್ಬಭೂವ ಗಗನಂ ತದಾ । ಘನೈರಿವಾತಪಾಪಾಯೇ ವಿದ್ಯುನ್ಮಾಲಾಸಮಾಕುಲೈಃ ॥ ೨೮ ॥ ಗವಾಕ್ಷಿತಮಿವಾಕಾಶಂ ಬಭೂವ ಶರವೃಷ್ಟಿಭಿಃ । ಮಹಾವೇಗೈಸ್ಸುತೀಕ್ಷ್ಣಾಗ್ರೈರ್ಗೃಧ್ರಪತ್ರೈಸ್ಸುವಾಜಿತೈಃ ॥೨೯॥

ಆ ಬಾಣಗಳ ತಂಡಗಳನ್ನು, ಚಿಚ್ಛೇದ - ಕತ್ತರಿಸಿದನು. ॥೨೪॥ ರಾಘವಃ - ಶ್ರೀರಾಮನು, ತೂರ್ಣಂ- ಜಾಗ್ರತೆಯಾಗಿ, ರಾವಣಂ - ದಶಕಂಠನನ್ನೂ, ರಾವಣಃ - ರಾವಣನು, ರಾಘವಃ - ಶ್ರೀರಾಮನನ್ನೂ, ತದಾ - ತತ್ ಕ್ಷಣದಲ್ಲಿ, ಅನ್ಯೋನ್ಯಂ - ಪರಸ್ಪರವಾಗಿ, ವಿವಿಧೈಃ - ನಾನಾಬಗೆಗಳಾದ, ತೀಕ್ಷ್ಣೈಃ - ಹದಗಳಾದ, ಶರೈಃ - ಸರಳುಗಳಿಂದ, ಅಭಿವವರ್ಷತುಃ - ಸುರಿಸಿದರು. ॥ ೨೫ ॥ ಅಪರಾಜಿತೌ - ಪರಾಜಿತರಾಗದೆ, ಬಾಣವೇಗಾನ್ - ಬಾಣವೇಗಗಳನ್ನು, ಅನ್ಯೋನ್ಯಂ - ಪರಸ್ಪರವಾಗಿ, ಸಮುತ್ ಕ್ಷಿಪ್ತೌ - ಎಸೆಯುತ್ತ, ಸವ್ಯದಕ್ಷಿಣಂ - ಸವ್ಯವಾಗಿಯೂ, ಪ್ರದಕ್ಷಿಣಾಕಾರವಾಗಿಯೂ, ಚಿತ್ರಂ - ಆಶ್ಚರ್ಯಕರವಾದ, ಮಂಡಲಂ - ಮಂಡಲಾಕಾರ ಗಮನವನ್ನು, ಚಿರಂ - ಬಹುಕಾಲ, ಚೇರತುಃ - ಸಂಚರಿಸಿದರು. ॥೨೬॥ ಯುಗಪತ್ - ಏಕಕಾಲದಲ್ಲಿ, ಸಂಪ್ರಯುಧ್ಯತೋಃ - ಕಾಳಗ ಮಾಡುತ್ತಿರುವ, ರೌದ್ರಯೋಃ - ಭಯಂಕರರಾದ, ಯಮಾಂ.....ಯೋಃ - ಅಂತಕಾಂತಕನಾದ ಅಂತಕನಿಗೂ ರುದ್ರನಿಗೂ ಸಮಾನರಾದ, ತಯೋಃ-ಆ ರಾಮ ರಾವಣರೀರ್ವರೂ, ಸಾಯ....ತೋಃ - ಸರಳಗಳನ್ನು ಬಿಡುತ್ತಿರಲು, ಭೂತಾನಿ-ಪ್ರಾಣಿಗಳು, ವಿತ್ರೇಸುಃ-ಭಯಗೊಂಡವು. ॥ ೨೭ ॥ ತದಾ-ಆ ಕಾಲದಲ್ಲಿ, ಗಗನಂ - ಅಂತರಿಕ್ಷವು, ಆತಪಾಪಾಯೇ-ವರ್ಷಾಕಾಲದಲ್ಲಿ, ವಿದ್ಯು......ಲೈಃ-ಮಿಂಚುಗಳ ಸಾಲುಗಳಿಂದ ವ್ಯಾಪ್ತವಾದ, ಘನೈರಿವ - ಮೇಘಗಳಿಂದಲಂತೆ, ವಿವಿಧೈಃ - ನಾನಾಬಗೆಗಳಾದ, ಬಾಣೈಃ - ಸರಳುಗಳಿಂದ, ಸಂತತಂ - ತುಂಬಿದುದು, ಬಭೂವ - ಆಯಿತು, ಆಕಾಶಂ - ಅಂತರಿಕ್ಷವು, ಶರವೃಷ್ಟಿಭಿಃ - ಸರಳು ಮಳೆಗಳಿಂದ, ಗವಾಕ್ಷಿತಮಿವ - ಗವಾಕ್ಷಿಗಳುಳ್ಳದಂತೆ, ಬಭೂವ - ಆಯಿತು. ॥ ೨೮ ॥ ಮಹಾವೇಗೈಃ - ಮಹಾ ವೇಗವುಳ್ಳ, ಸುತೀಕ್ಷ್ಣಾಗ್ರೈಃ - ಬಹಳ ಹದವಾದ ತುದಿಗಳುಳ್ಳ, ಗೃಧ್ರಪಕ್ಷೈಃ - ಹದ್ದುಗಳ ಗರಿಗಳುಳ್ಳ, ಸುವಾಜಿತೈಃ - ಒಳ್ಳೆಯ ರೆಕ್ಕೆಗಳುಳ್ಳ, (ಬಾಣೈಃ - ಸರಳುಗಳಿಂದ),

---

ಮೇಲೆಯೂ, ರಾವಣಾಸುರನು ಶ್ರೀರಾಮನ ಮೇಲೆಯೂ ಬಹು ಭಯಂಕರವಾದ ಬಾಣ ವೃಷ್ಟಿಯನ್ನು ವರ್ಷಿಸಿದರು. ॥೨೧–೨೫॥ ಶ್ರೀರಾಮ ಲಕ್ಷ್ಮಣರೀರ್ವರೂ ಬಾಣವೇಗವನ್ನು ಚಿಮ್ಮುತ್ತ ಮಹತ್ತರವಾದ ಯುದ್ಧವನ್ನು ಮಾಡುವವರಾಗಿ ಚಿತ್ರವಿಚಿತ್ರಗತಿಗಳಿಂದ ಸವ್ಯ ದಕ್ಷಿಣ ಮಾರ್ಗಗಳಲ್ಲಿ ಸಂಚರಿಸುತ್ತಿದ್ದರು. ಆ ಸಮಯದಲ್ಲಿ ಆ ರಾಮರಾವಣರ ಯುದ್ಧದ ಭೀಕರತೆಯಿಂದ ಸಮಸ್ತ ಭೂತಗಳೂ ಭಯಭ್ರಾಂತವಾಗಿ ಹೋದುವು. ಯಮನಿಗೂ, ಯಮಾಂತಕನಾದ ರುದ್ರನಿಗೂ ಸಮಾನರಾದ ಆ ರಾಮ ರಾವಣರೀರ್ವರೂ ಪ್ರಯೋಗಿಸಿದ ಬಾಣಗಳು ಅಂತರಿಕ್ಷದಲ್ಲಿ ವ್ಯಾಪಿಸಿ ವರ್ಷಾಕಾಲದಲ್ಲಿ ಮಿಂಚಿನ ಬಳ್ಳಿಯೊಡಗೂಡಿದ ಮುಗಿಲುಗಳನ್ನು ಹೋಲುತ್ತಿದ್ದುವು. ಅವರೀರ್ವರ ಬಾಣಸಮುದಾಯಗಳೂ ಮಹಾ ವೇಗವುಳ್ಳವುಗಳಾಗಿಯೂ, ತೀಕ್ಷ್ಣವಾದ ಅಗ್ರಭಾಗಗಳುಳ್ಳವುಗಳಾಗಿಯೂ, ಶ್ರೇಷ್ಠವಾದ

ಶರಾಂಧಕಾರಂ ತೌ ಭೀಮಂ ಚಕ್ರತುಸ್ಸಮರಂ ತದಾ । ಗತೇಽಸ್ತಂ ತಪನೇ ಚಾಪಿ
ಮಹಾಮೇಘಾವಿವೋತ್ಥಿತೌ ॥ ೩೦ ॥ ಬಭೂವ ತುಮುಲಂ ಯುದ್ಧಮನ್ಯೋನ್ಯವಧ
ಕಾಂಕ್ಷಿಣೋಃ । ಅನಾಸಾದ್ಯಮಚಿಂತ್ಯಂಚ ವೃತ್ರವಾಸವಯೋರಿವ ॥೩೧॥ ಉಭೌಹಿ
ಪರಮೇಷ್ವಾಸಾವುಭೌ ಶಸ್ತ್ರವಿಶಾರದೌ । ಉಭಾವಸ್ತ್ರವಿದಾಂ ಮುಖ್ಯಾವುಭೌ
ಯುದ್ಧೇ ವಿಚೇರತುಃ ॥ ೩೨ ॥ ಉಭೌ ರಯೇಣ ವ್ರಜತಸ್ತೇನ ತೇನ ಶರೋ
ರ್ಮಯಃ । ಊರ್ಮಯೋ ವಾಯುನಾ ವಿದ್ಧಾ ಜಗ್ಮುಸ್ಸಾಗರಯೋರಿವ ॥ ೩೩ ॥
ತತಸ್ಸಂಸಕ್ತಹಸ್ತಸ್ತು ರಾವಣೋ ಲೋಕರಾವಣಃ । ನಾರಾಚಮಾಲಾಂ ರಾಮಸ್ಯ

ತದಾ - ಆ ಕಾಲದಲ್ಲಿ, ತೌ - ಆ ರಾಮ ದಶಕಂಠರೀರ್ವರೂ, ಭೀಮಂ - ಭಯಂಕರವಾದ, ಶರಾಂಧಕಾರಂ-ಶರಗಳಿಂದುಂಟಾದ ಅಂಧಕಾರವುಳ್ಳ, ತಪನೇ-ಸೂರ್ಯನು, ಅಸ್ತಂಗತೇಪಿ-ಅಸ್ತಮಯವನ್ನು ಹೊಂದಿದರು, ಉತ್ಥಿತೌ-ಹುಟ್ಟಿರುವ, ಮಹಾಮೇಘಾವಿವ-ಮಹಾ ಮೇಘಗಳಂತೆ, ಸಮರಂ-ಕಾಳಗವನ್ನು, ಚಕ್ರತುಃ - ಮಾಡಿದರು. ||೨೯-೩೦|| ವೃತ್ರ....ವ - ದೇವೇಂದ್ರ ವೃತ್ರಾಸುರರಿಗೆಂತೋ ಅಂತು, ಅನ್ಯೋ....ಣೋಃ - ಪರಸ್ಪರ ಸಂಹಾರವನ್ನು ಅಪೇಕ್ಷಿಸುತ್ತಿರುವ, ತಯೋಃ - ಆ ರಾಮ ದಶಗ್ರೀವರಿಬ್ಬರಿಗೂ, ಅನಾಸಾದ್ಯಂ - ಹೊಂದಲಸಾಧ್ಯವಾದ, ಅಚಿಂತ್ಯಂಚ - ಊಹಿಸಲಸಾಧ್ಯವಾದ, ತುಮುಲಂ - ಸಂಕುಲವಾದ, ಯುದ್ಧಂ - ಕಾಳಗವು, ಬಭೂವ - ಆಯಿತು. ||೩೧|| ಉಭೌ-ಇಬ್ಬರೂ, ಪರಮೇಷ್ವಾಸೌ - ದೊಡ್ಡ ಧನುಸ್ಸುಳ್ಳವರು, ಉಭೌ - ಇಬ್ಬರೂ, ಶಸ್ತ್ರ....ದೌ - ಶಸ್ತ್ರವಿದ್ಯೆಯಲ್ಲಿ ಸಮರ್ಥರಾದವರು, ಉಭೌ-ಇಬ್ಬರೂ, ಅಸ್ತ್ರವಿದಾಂ - ಅಸ್ತ್ರಶಾಸ್ತ್ರಜ್ಞರಲ್ಲಿ, ಮುಖ್ಯೌ-ಪ್ರಧಾನರಾದವರು, ಉಭೌ - ಇಬ್ಬರೂ, ಯುದ್ಧೇ - ಯುದ್ಧದಲ್ಲಿ, ವಿಚೇರತುಃ - ಸಂಚರಿಸಿದರು. || ೩೨ || ಉಭೌ - ಇಬ್ಬರೂ, ರಯೇಣ - ವೇಗದಿಂದ, ವ್ರಜತಃ - ಹೋಗುತ್ತಿದ್ದರು, ತೇನತೇನ - ಆಯಾಯ ವೇಗದಿಂದ, ಶರೋರ್ಮಯಃ - ಶರಗಳ ಅಲೆಗಳು, ಜಾತಾಃ - ಹುಟ್ಟಿದವು, ಊರ್ಮಯಃ - ಅಲೆಗಳು, ಸಾಗರಯೋಃ - ಕಡಲುಗಳ, ಊರ್ಮಯಇವ - ಅಲೆಗಳಂತೆ, ವಾಯುನಾ - ಗಾಳಿಯಿಂದ, ವಿದ್ಧಾಃ - ಹೊಡೆಯಲ್ಪಟ್ಟವುಗಳಾಗಿ, ಜಗ್ಮುಃ - ತೆರಳಿದವು. ||೩೩|| ತತಃ - ಬಳಿಕ, ಸಂಸಕ್ತಹಸ್ತಃ - ಶರಗಳನ್ನು ಪ್ರಯೋಗ ಮಾಡುವುದರಲ್ಲಿ ಆಸಕ್ತವಾದ ಕೈಯುಳ್ಳ, ಲೋಕರಾವಣಃ - ಲೋಕಕ್ಕೇ ಕಂಟಕನಾದ, ರಾವಣಸ್ತು - ದಶಗ್ರೀವನಾದರೋ, ರಾಮಸ್ಯ - ಶ್ರೀರಾಮನ, ಲಲಾಟೇ - ಫಾಲಪ್ರದೇಶ

ಕಂಕಪತ್ರಸಹಿತಗಳಾಗಿಯೂ ಇದ್ದುವು. ಆಗ ಗಗನಾಂಗಣವೆಲ್ಲವೂ ಕಿಂಡಿಗಳಿಂದ ಕೂಡಿ ಬೆಳಗುತ್ತಿರುವಂತೆ ತೋರುತ್ತಿದ್ದಿತು. ಇದೂ ಅಲ್ಲದೆ ಆ ಸಮಯದಲ್ಲಿ ರಾಮರಾವಣರೀರ್ವರೂ ಸೂರ್ಯನಸ್ತಮಿಸಿದೊಡನೆಯೇ ಗಗನವನ್ನು ಆವರಿಸಿದ ಮುಗಿಲುಗಳು ಕತ್ತಲನ್ನುಂಟುಮಾಡುವಂತೆ ತಾವು ಪ್ರಯೋಗಿಸಿದ ಬಾಣವರ್ಷಗಳಿಂದ ಗಾಢಾಂಧಕಾರವನ್ನುಂಟುಮಾಡಿದರು. ||೨೯-೩೦|| ಒಬ್ಬರನ್ನೊಬ್ಬರು ಸಂಹರಿಸಬೇಕೆಂಬ ಕಾಂಕ್ಷೆಯಿಂದ ಅವರೀರ್ವರೂ ವೃತ್ರವಾಸವರಂತೆ ಭಯಂಕರ ಯುದ್ಧವನ್ನು ಮಾಡತೊಡಗಿದರು. ಉತ್ತಮೋತ್ತಮವಾದ ಧನುಸ್ಸುಗಳುಳ್ಳವರೂ, ಶಸ್ತ್ರವಿದ್ಯಾವಿಶಾರದರೂ, ಅಸ್ತ್ರವೇತ್ತರಲ್ಲಿ ಶ್ರೇಷ್ಠರೂ ಆದ ಆ ವೀರರೀರ್ವರೂ ಯುದ್ಧಭೂಮಿಯಲ್ಲಿ ಸಂಚರಿಸುತ್ತ ನಿರತಿಶಯವಾದ ವೇಗವುಳ್ಳ ಬಾಣತರಂಗಗಳುಳ್ಳವರಾಗಿ ವಾಯುವಿನಿಂದ ಉಲ್ಲಕಲ್ಲೋಲವಾದ ಮಹಾ ಸಾಗರವನ್ನು ಹೋಲುತ್ತಿದ್ದರು. ಆಗ ಸಕಲಲೋಕ ಭಯಂಕರನಾಗಿ, ಎಲ್ಲರನ್ನು ಕ್ಷೋಭೆಗೊಳಿಸುವ ರಾವಣಾಸುರನು ಶ್ರೀರಾಮನ ಲಲಾಟಪ್ರದೇಶದಲ್ಲಿ ಅಪರಿ

ಲಲಾಟೇ ಪ್ರತ್ಯಮುಂಚತ ॥ ೩೪ ॥ ರೌದ್ರಚಾಪಪ್ರಯುಕ್ತಾಂ ತಾಂ ನೀಲೋತ್ಪಲದಳ ಪ್ರಭಾಂ । ಶಿರಸಾ ಧಾರಯರ್ನ್ ರಾಮೋ ನವ್ಯಥಾಂ ಪ್ರತ್ಯಪದ್ಯತ ॥ ೩೫ ॥ ಅಥ ಮಂತ್ರಾನಭಿಜಪರ್ನ್ ರೌದ್ರಮಸ್ತ್ರಮುದೀರಯರ್ನ್ । ಶರಾರ್ನ್ ಭೂಯಸ್ಸಮಾದಾಯ ರಾಮಃ ಕ್ರೋಧಸಮನ್ವಿತಃ । ಮುಮೋಚಚ ಮಹಾತೇಜಾಶ್ಚಾಪಮಾಯಮ್ಯ ವೀರ್ಯವಾರ್ನ್ ॥೩೬॥ ತೇ ಮಹಾಮೇಘಸಂಕಾಶೇ ಕವಚೇ ಪತಿತಾಃ ಶರಾಃ। ಅವಧ್ಯೇ ರಾಕ್ಷಸೇಂದ್ರಸ್ಯಾಽವಧ್ಯತಾಂ ಜನಯಂಸ್ತದಾ ॥ ೩೭ ॥ ಪುನರೇವಾಥ ತಂ ರಾಮೋ ರಥಸ್ಥಂ ರಾಕ್ಷಸಾಧಿಪಂ । ಲಲಾಟೇ ಪರಮಾಸ್ತ್ರೇಣ ಸರ್ವಾಸ್ತ್ರಕುಶಲೋ ರಣೇ ॥೩೮॥

ದಲ್ಲಿ, ನಾರಾಚಮಾಲಾಂ - ಸರಳ ಪರಂಪರೆಯನ್ನು, ಪ್ರತ್ಯಮುಂಚತ - ಬಿಟ್ಟನು. ॥ ೩೪ ॥ ರಾಮಃ-ಶ್ರೀರಾಮನು, ರೌದ್ರ....ಕ್ತಾಂ-ಭಯಂಕರವಾದ ಬಿಲ್ಲಿನಿಂದ ಬಿಡಲ್ಪಟ್ಟ, ನೀಲೋ....ಭಾಂ-ಕನ್ನೈದಿಲೆಯ ದಳಗಳ ಕಾಂತಿಯಂತೆ ಕಾಂತಿಯುಳ್ಳ, ತಾಂ - ಆ ಸರಳ ಮಾಲಿಕೆಯನ್ನು, ಶಿರಸಾ-ಮಂಡೆಯಿಂದ, ಧಾರಯರ್ನ್ - ಧರಿಸಿ, ವ್ಯಥಾಂ - ವ್ಯಸನವನ್ನು, ನಪ್ರತ್ಯಪದ್ಯತ - ಹೊಂದಲಿಲ್ಲವು. ॥ ೩೫ ॥ ಅಥ - ಬಳಿಕ, ವೀರ್ಯವಾರ್ನ್ - ಸಾಮರ್ಥ್ಯವಂತನಾದ, ಮಹಾತೇಜಾಃ - ಬಹಳ ತೇಜೋವಂತನಾದ, ರಾಮಃ - ಶ್ರೀರಾಮನು, ಕ್ರೋಧಸಮನ್ವಿತಃ - ಕೋಪದಿಂದ ಕೂಡಿ, ಮಂತ್ರಾರ್ನ್ - ಮಂತ್ರಗಳನ್ನು, ಅಭಿಜಪರ್ನ್ - ಪಠನ ಮಾಡುತ್ತ, ರೌದ್ರಂ - ರುದ್ರದೇವತಾಕವಾದ, ಅಸ್ತ್ರಂ - ಅಸ್ತ್ರ ಮಂತ್ರವನ್ನು, ಉದೀರಯರ್ನ್ - ಹೇಳಿ, ಚಾಪಂ - ಕೋದಂಡವನ್ನು, ಆಯಮ್ಯ - ಬಿಗಿದು, ಶರಾರ್ನ್ - ಸರಳುಗಳನ್ನು, ಭೂಯಃ - ಮತ್ತೂ, ಸಮಾದಾಯ - ತೆಗೆದುಕೊಂಡು, ಮುಮೋಚ - ಬಿಟ್ಟನು. ॥೩೬॥ ತೇಶರಾಃ - ಆ ಬಾಣಗಳು, ಮಹಾ....ಶೇ - ನೀಲಮೇಘಕ್ಕೆ ಸಮಾನವಾದ, ಅವಧ್ಯೇ - ವಧಿಸಲಸಾಧ್ಯವಾದ, ರಾಕ್ಷಸೇಂದ್ರಸ್ಯ - ರಾವಣನ, ಕವಚೇ - ಕವಚದಲ್ಲಿ, ಪತಿತಾಃ - ಬಿದ್ದವು, ತದಾ - ಆ ಕಾಲದಲ್ಲಿ, ಅವಧ್ಯತಾಂ - ವಧಿಸಲಸಾಧ್ಯತೆಯನ್ನೇ, ಜನಯರ್ನ್ - ಹುಟ್ಟಿಸಿದವು. ॥೩೭॥ ಅಥ - ಬಳಿಕ, ರಣೇ-ಕಾಳಗದಲ್ಲಿ, ಸರ್ವಾ....ಲಃ-ಸಮಸ್ತ ಅಸ್ತ್ರಗಳಲ್ಲಿಯೂ ಬುದ್ಧಿಶಾಲಿಯಾದ, ರಾಮಃ - ಶ್ರೀರಾಮನು, ರಥಸ್ಥಂ - ರಥಾರೂಢನಾದ, ರಾಕ್ಷಸಾಧಿಪಂ - ರಾಕ್ಷಸರಾಜನಾದ, ತಂ - ಆ ದಶಕಂಠನನ್ನು, ಲಲಾಟೇ - ಫಾಲಪ್ರದೇಶದಲ್ಲಿ, ಪರಮಾಸ್ತ್ರೇಣ - ದೊಡ್ಡ ಅಸ್ತ್ರದಿಂದ, ಪುನರೇವ - ಮತ್ತೂ,

---

ಮಿತವಾದ ಬಾಣವರ್ಷವನ್ನು ಸುರಿಸಿದನು. ಶ್ರೀರಾಮಮೂರ್ತಿಯಾದರೋ ಮಹಾ ಭಯಂಕರವಾದ ಆ ರಾವಣನ ಧನುಸ್ಸಿನಿಂದ ಬಿಡಲ್ಪಟ್ಟು, ಕನ್ನೈದಿಲೆಯ ಕಾಂತಿಯನ್ನೊಳಗೊಂಡಿರುವ ಆ ಬಾಣಗಳನ್ನು ಹಣೆಯಲ್ಲಿ ಧರಿಸಿಯೂ ಸ್ವಲ್ಪವೂ ವ್ಯಥೆಗೀಡಾಗಲಿಲ್ಲವು. ॥ ೩೧–೩೫ ॥ ಆ ಬಳಿಕ ಮಹಾ ತೇಜಸ್ವಿಯಾದ ಆ ರಾಮಮೂರ್ತಿಯು ಮಹಾ ಕ್ರೋಧಸಮನ್ವಿತನಾದ ರೌದ್ರಾಸ್ತ್ರವನ್ನು ಪ್ರಯೋಗಿಸಬಯಸಿ ಅನೇಕ ಬಾಣಗಳನ್ನು ಮಂತ್ರೋಚ್ಚಾರಣಸಹಿತವಾಗಿ ಬಿಲ್ಲಿನಲ್ಲಿ ಸಂಧಾನ ಮಾಡಿ ಆ ರಾವಣನ ಮೇಲೆ ಪ್ರಯೋಗಿಸಿದನು. ಆ ಬಾಣಗಳೆಲ್ಲವೂ ಬಹು ದೊಡ್ಡ ಮುಗಿಲಿಗೆ ಸಮಾನನಾದ ಆ ರಾವಣಾಸುರನ ಕವಚದಲ್ಲಿ ಬಿದ್ದುವು. ಆದರೆ ಆ ರಾಕ್ಷಸೇಶ್ವರನು ಅಭೇದ್ಯ ಕವಚನಾಗಿದ್ದುದರಿಂದ ಆ ಬಾಣಗಳು ಅದನ್ನು ಭೇದಿಸದೆಯೂ, ಅವನಿಗೆ ಯಾವ ಬಾಧೆಯನ್ನೂ ಉಂಟುಮಾಡದೆಯೂ ವ್ಯರ್ಥವಾಗಿ ಹೋದುವು. ಆಗ ರಣರಂಗದಲ್ಲಿ ಸಕಲಾಸ್ತ್ರಗಳನ್ನೂ ಪ್ರಯೋಗಿಸುವುದರಲ್ಲಿ ಮಹಾ ಸಮರ್ಥನಾದ ಶ್ರೀರಾಮಮೂರ್ತಿಯು ರಥಾರೂಢನಾದ ಆ ರಾವಣನ ಹಣೆಗೆ

ತೇ ಭಿತ್ವಾ ಬಾಣರೂಪಾಣಿ ಪಂಚಶೀರ್ಷಾ ಇವೋರಗಾಃ । ಶ್ವಸಂತೋ ವಿವಿಶು ರ್ಭೂಮಿಂ ರಾವಣಪ್ರತಿಕೂಲಿತಾಃ ॥೩೯॥ ನಿಹತ್ಯ ರಾಘವಸ್ಯಾಸ್ತ್ರಂ ರಾವಣಃ ಕ್ರೋಧ ಮೂರ್ಛಿತಃ । ಆಸುರಂ ಸುಮಹಾಘೋರಮಸ್ತ್ರಂ ಪ್ರಾದುಶ್ಚಕಾರಹ ॥೪೦॥ ಸಿಂಹ ವ್ಯಾಘ್ರಮುಖಾಂಶ್ಚಾನ್ಯಾ ಕಂಕಕಾಕಮುಖಾನಪಿ । ಗೃಧ್ರಶ್ಯೇನಮುಖಾಂಶ್ಚಾಪಿ ಶೃಗಾಲವದನಾಂಸ್ತಥಾ ॥೪೧॥ ಈಹಾಮೃಗಮುಖಾಂಶ್ಚಾನ್ಯಾನ್ವ್ಯಾದಿತಾಸ್ಯಾ ಭಯಾ ನಕಾನ್ । ಪಂಚಾಸ್ಯಾನ್ ಲೇಲಿಹಾನಾಂಶ್ಚ ಸಸರ್ಜ ನಿಶಿತಾನ್ ಶರಾನ್ ॥ ೪೨ ॥ ಶರಾನ್ ಖರಮುಖಾಂಶ್ಚಾನ್ಯಾನ್ವರಾಹಮುಖಸಂಸ್ಥಿತಾನ್ । ಶ್ವಾನಕುಕ್ಕುಟವಕ್ತ್ರಾಂಶ್ಚ ಮಕರಾ

ವಿವ್ಯಾಧ - ಹೊಡೆದನು. ॥೩೮॥ ತೇ - ಆ ಬಾಣಗಳು, ಬಾಣರೂಪಾಣಿ - ಬಾಣಗಳ ಆಕಾರಗಳನ್ನು, ಭಿತ್ವಾ - ಭೇದಿಸಿ, ಪಂಚಶೀರ್ಷಾಃ - ಐದು ಶಿರಗಳುಳ್ಳ, ಉರಗಾ ಇವ - ಸರ್ಪಗಳಂತೆ, ಶ್ವಸಂತಃ - ಉಸಿರು ಬಿಡುತ್ತ, ರಾವ....ತಾಃ-ದಶಕಂಠನ ಪ್ರತಿಬಾಣಗಳಿಂದ ಹೊಡೆಯಲ್ಪಟ್ಟವುಗಳಾಗಿ, ಭೂಮಿಂ- ನೆಲವನ್ನು, ವಿವಿಶುಃ - ಹೊಕ್ಕವು. ॥೩೯॥ ರಾವಣಃ - ದಶಕಂಠನು, ಕ್ರೋಧಮೂರ್ಛಿತಃ - ಕ್ರೋಧ ದಿಂದ ವ್ಯಾಪ್ತವಾಗಿ, ರಾಘವಸ್ಯ - ಶ್ರೀರಾಮನ, ಅಸ್ತ್ರಂ - ಅಸ್ತ್ರವನ್ನು, ನಿಹತ್ಯ - ಹೊಡೆದು, ಸುಮಹಾಘೋರಂ - ಬಹು ಭಯಂಕರವಾದ, ಆಸುರಂ - ಆಸುರಾಸ್ತ್ರವನ್ನು, ಪ್ರಾದುಶ್ಚಕಾರಹ - ಪ್ರಯೋಗಮಾಡಿದನು. ॥ ೪೦ ॥ ಸಿಂಹ....ಖಾನ್ - ಸಿಂಹ ಹುಲಿಗಳ ಮುಖಗಳಂತೆ ಮುಖಗಳುಳ್ಳ, ಅನ್ಯಾನ್ - ಮತ್ತೆ ಕೆಲವಾದ, ಶರಾನ್ - ಬಾಣಗಳನ್ನು, ಕಂಕ....ಪಿ - ಹದ್ದು ಕಾಗೆಗಳ ಮುಖಗಳುಳ್ಳ ಬಾಣಗಳನ್ನೂ, ಗೃಧ್ರ....ಪಿ-ರಣಹದ್ದು ಡೇಗೆಗಳ ಮುಖಗಳುಳ್ಳ ಬಾಣಗಳನ್ನೂ, ತಥಾ-ಹಾಗೆಯೇ, ಸೃಗಾಲವದನಾನ್ - ನರಿಗಳ ಮುಖಗಳಂತೆ ಮುಖಗಳುಳ್ಳ ಬಾಣಗಳನ್ನೂ, ಈಹಾ.... ಖಾನ್ - ಆಡು ಗಳ ಮುಖದಂತೆ ಮುಖಗಳುಳ್ಳ, ಅನ್ಯಾನ್ - ಮತ್ತು ಕೆಲವಾದ ಬಾಣಗಳನ್ನೂ, ವ್ಯಾದಿತಾಸ್ಯಾನ್ - ತೆರೆಯಲ್ಪಟ್ಟ ಬಾಯಿಯುಳ್ಳ, ಭಯಾನಕಾನ್ - ಭಯಂಕರಗಳಾದ, ಪಂಚಾಸ್ಯಾನ್ - ಐದು ಮುಖ ಗಳುಳ್ಳ, ಲೇಲಿಹಾನಾಂಶ್ಚ - ಸರ್ಪರೂಪವಾದ, ನಿಶಿತಾನ್ - ತೀಕ್ಷ್ಣಗಳಾದ, ಶರಾನ್ - ಬಾಣಗಳನ್ನು, ಸಸರ್ಜ - ಬಿಟ್ಟನು, ಮಹಾತೇಜಾಃ - ಬಹಳವಾದ ಮುಖ ತೇಜಸ್ಸುಳ್ಳ, ರಾವಣಃ - ರಾವಣನು, ಖರಮುಖಾನ್ - ಕತ್ತೆಗಳಂತೆ ಮುಖವುಳ್ಳ, ವರಾ....ತಾನ್ - ಹಂದಿಯ ಮುಖದಂತಿರುವ, ಅನ್ಯಾನ್ - ಮತ್ತೂ ಕೆಲವರಾದ, ಶರಾನ್ - ಬಾಣಗಳನ್ನು, ಶ್ವಾನ....ಶ್ಚ - ನಾಯಿ ಕೋಳಿಗಳ ಮುಖಗಳಂತೆ

ರೌದ್ರಾಸ್ತ್ರವನ್ನು ಪ್ರಯೋಗಿಸಿದನು. ರಾವಣಾಸುರನಾದರೋ ಅಪಾರ ಕೋಪಾವಿಷ್ಟನಾಗಿ ಆ ಮಹಾಸ್ತ್ರವನ್ನು ತನ್ನ ಬಾಣಗಳಿಂದ ಭೇದಿಸಿದನು. ಈ ಪ್ರಕಾರ ರಾವಣಾಸುರನಿಂದ ಭೇದಿಸಲಾದ ಆ ಬಾಣವು ಐದು ಹೆಡೆಗಳುಳ್ಳ ಸರ್ಪದಂತೆ ಭೂಮಿಯನ್ನು ಭೇದಿಸಿ ಒಳ ಹೊಕ್ಕಿತು. ಆ ದಶಾನನು ಈ ರೀತಿ ರಾಮನು ಪ್ರಯೋಗಿಸಿದ ಮಹಾಸ್ತ್ರವನ್ನು ಖಂಡಿಸಿ ಕ್ರೋಧಸಮನ್ವಿತನಾಗಿ ಮಹಾ ಘೋರವಾದ ಆ ಸುರಾಸ್ತ್ರವನ್ನು ಹೊರಪಡಿಸಿದನು. ॥ ೩೬–೪೦ ॥ ಆ ಅಸ್ತ್ರವಾದರೋ ಸಿಂಹ ವ್ಯಾಘ್ರಗಳ ಮುಖಗಳುಳ್ಳವೂ, ಕಂಕಪಕ್ಷಿಗಳ, ಕಾಗೆಗಳ ಮುಖಗಳುಳ್ಳವೂ, ಹದ್ದುಗಳು, ಡೇಗೆಗಳು ಇವುಗಳ ಮುಖಗಳುಳ್ಳವೂ, ಈಹಾ ಮೃಗಗಳ ಮುಖಗಳುಳ್ಳವೂ, ತೆರೆದ ಬಾಯಿಯುಳ್ಳವೂ, ಮಹಾ ಭಯಂಕರವಾದುವೂ, ಐದು ಹೆಡೆಗಳುಳ್ಳ ಸರ್ಪಗಳ ನಾಲಗೆಗಳಂತೆ ಬಹು ಘೋರವಾಗಿರುವುವೂ ಆದ ಬಾಣಪರಂ ಪರೆಯನ್ನು ಹುಟ್ಟಿಸಿತು. ಈ ಬಾಣಗಳೆಲ್ಲವೂ ಶ್ರೀರಾಮನನ್ನು ಬಾಧಿಸತೊಡಗಿದವು. ಇಷ್ಟೆ

ಶೀವಿಷಾನನಾನ್ ॥ ೪೩ ॥ ಏತಾನನ್ಯಾಂಶ್ಚ ಮಾಯಾವೀ ಸಸರ್ಜ ನಿಶಿತಾನ್ ಶರಾನ್ ।
ರಾಮಂ ಪ್ರತಿ ಮಹಾತೇಜಾಃ ಕ್ರುದ್ಧಸ್ಸರ್ಪಇವ ಶ್ವಸನ್ ॥ ೪೪ ॥ ಆಸುರೇಣ ಸಮಾ
ವಿಷ್ಟಸ್ಸೋಽಸ್ತ್ರೇಣ ರಘುನಂದನಃ । ಸಸರ್ಜಾಸ್ತ್ರಂ ಮಹೋತ್ಸಾಹಃ ಪಾವಕಂ ಪಾವ
ಕೋಪಮಃ ॥ ೪೫ ॥ ಅಗ್ನಿದೀಪ್ತಮುಖಾನ್ ಬಾಣಾನ್ ತಥಾ ಸೂರ್ಯಮುಖಾನಪಿ ।
ಚಂದ್ರಾರ್ಧಚಂದ್ರವಕ್ತ್ರಾಂಶ್ಚ ಧೂಮಕೇತುಮುಖಾನಪಿ ॥೪೬॥ ಗ್ರಹನಕ್ಷತ್ರವಕ್ತ್ರಾಂಶ್ಚ
ಮಹೋಲ್ಕಾಮುಖಸಂಸ್ಥಿತಾನ್ । ವಿದ್ಯುಜ್ಜಿಹ್ವೋಪಮಾಂಶ್ಚಾನ್ಯಾನ್ ಸಸರ್ಜ ನಿಶಿತಾನ್
ಶರಾನ್ ॥ ೪೭ ॥ ತೇ ರಾವಣಶರಾ ಘೋರಾ ರಾಘವಾಸ್ತ್ರಸಮಾಹತಾಃ । ವಿಲಯಂ

ಮುಖಗಳುಳ್ಳ, ಮಕ....ನಾನ್ - ಏಡೀಕಾಯಿ ಮತ್ತು ಸರ್ಪಗಳ ಮುಖಗಳಂತೆ ಮುಖಗಳುಳ್ಳ, ಏತಾನ್-ಇವುಗಳನ್ನು, ಅನ್ಯಾಂಶ್ಚ - ಮತ್ತೂ ಕೆಲವಾದ, ನಿಶಿತಾನ್ - ತೀಕ್ಷ್ಣಗಳಾದ, ಶರಾನ್ - ಬಾಣಗಳನ್ನು, ಮಾಯಾವೀ - ಮಾಯಾವಿಯಾದ ರಾವಣನು, ಕ್ರುದ್ಧಃ - ಕುಪಿತನಾಗಿ, ಸರ್ಪಇವ - ಹಾವಿನಂತೆ, ಶ್ವಸನ್-ಉಸುರು ಬಿಡುತ್ತ, ರಾಮಂಪ್ರತಿ-ಶ್ರೀರಾಮನನ್ನು ಕುರಿತು, ಸಸರ್ಜ-ಬಿಟ್ಟನು. ॥ ೪೧-೪೪ ॥ ಪಾವಕೋಪಮಃ - ಅಗ್ನಿಗೆ ಸಮಾನನಾದ, ಸರಘುನಂದನಃ - ಆ ಶ್ರೀರಾಮನು, ಆಸುರೇಣ - ಆಸುರಾಸ್ತ್ರದಿಂದ, ಸಮಾವಿಷ್ಟಃ - ಕೂಡಿ, ಮಹೋತ್ಸಾಹಃ - ಮಹೋತ್ಸಾಹವುಳ್ಳವನಾಗಿ, ಪಾವಕಂ ಅಸ್ತ್ರಂ - ಆಗ್ನೇಯಾಸ್ತ್ರವನ್ನು, ವಿಸಸರ್ಜ - ಬಿಟ್ಟನು. ॥ ೪೫ ॥ ಅಗ್ನಿ... ಖಾನ್ - ಅಗ್ನಿಯಂತೆ ಉರಿಯುತ್ತಿರುವ ಮುಖಗಳುಳ್ಳ, ತಥಾ - ಹಾಗೆಯೇ, ಸೂರ್ಯಮುಖಾನಪಿ - ಸೂರ್ಯನ ಮುಖದಂತೆ ಮುಖಗಳುಳ್ಳ, ಬಾಣಾನ್ - ಬಾಣಗಳನ್ನು, ಚಂದ್ರಾ....ಶ್ಚ - ಚಂದ್ರನಂತೆಯೂ ಅರ್ಧಚಂದ್ರನಂತೆಯೂ ಮುಖಗಳುಳ್ಳ, ಬಾಣಾನ್ - ಬಾಣಗಳನ್ನು, ಗ್ರಹ....ಶ್ಚ - ಗ್ರಹಗಳ, ನಕ್ಷತ್ರಗಳ ಮುಖಗಳಂತೆ ಮುಖಗಳುಳ್ಳ, ಮಹೋ....ತಾನ್ - ದೊಡ್ಡ ಕೊಳ್ಳಿಗಳಂತೆ ಮುಖಗಳುಳ್ಳ, ವಿದ್ಯು....ಮಾನ್ - ಮಿಂಚುಗಳಿಗೂ, ತೇಜಸ್ಸುಗಳಿಗೂ ಸಮಾನವಾದ, ಅನ್ಯಾನ್ - ಮತ್ತೆ ಕೆಲವಾದ, ನಿಶಿತಾನ್ - ತೀಕ್ಷ್ಣಗಳಾದ, ಶರಾನ್ - ಬಾಣಗಳನ್ನು, ಸಸರ್ಜ - ಬಿಟ್ಟನು. ॥೪೬-೪೭॥ ಘೋರಾಃ - ಭಯಂಕರಗಳಾದ, ತೇರಾವಣಶರಾಃ - ಆ ರಾವಣನ ಬಾಣಗಳು, ರಾಘ....ತಾಃ - ಶ್ರೀರಾಮನ ಆಗ್ನೇಯಾಸ್ತ್ರದಿಂದ ಹೊಡೆಯಲ್ಪಟ್ಟವುಗಳಾಗಿ, ಸಹಸ್ರಶಃ - ಸಾವಿರಾರುಗಳಾಗಿ, ಆಕಾಶೇ - ಅಂತರಿಕ್ಷದಲ್ಲಿ, ಜಗ್ಮುಃ -

---

ಯಲ್ಲದೆ ಆ ರಾವಣಾಸುರನು ನಾಯಿ, ಕೋಳಿ, ಮೊಸಳೆ, ಸರ್ಪ, ಕತ್ತೆ, ಕಾಡುಹಂದಿ ಮೊದಲಾದ ಮೃಗಾದಿ ಮುಖಗಳುಳ್ಳ ಬಾಣಗಳನ್ನು ಶ್ರೀರಾಮನ ಮೇಲೆ ಪ್ರಯೋಗಿಸಿದನು. ಆ ಸಮಯದಲ್ಲಿ ದಶಾನನನು ನಿಟ್ಟುಸಿರುಬಿಡುತ್ತಿರುವ ಮಹಾಸರ್ಪವನ್ನು ಹೋಲುತ್ತಿದ್ದನು. ಹೀಗೆ ಕ್ರೋಧಾವಿಷ್ಟನಾದ ರಾವಣನು ಆಸುರಾಸ್ತ್ರವನ್ನು ಪ್ರಯೋಗಿಸಿದ ಬಳಿಕ ಆಯಸ್ತ್ರದಿಂದ ಪರಿಪೀಡಿತನಾದ ಶ್ರೀರಾಮಮೂರ್ತಿಯು ಮಹೋತ್ಸಾಹಭರಿತನಾಗಿ ಕೂಡಲೇ ಮಹಾ ಜಾಜ್ವಲ್ಯಮಾನವಾದ ಆಗ್ನೇಯಾಸ್ತ್ರವನ್ನು ರಾವಣನ ಮೇಲೆ ಪ್ರಯೋಗಿಸಿದನು. ॥ ೪೧-೪೫ ॥ ಇಷ್ಟೆಯಲ್ಲದೆ ಆ ರಘುನಾಥನು ಅಗ್ನಿಜ್ವಾಲೆಗಳಿಗೆ ಸಮಾನವಾದ ಅಗ್ರಭಾಗಗಳುಳ್ಳವುಗಳಾಗಿ, ಸೂರ್ಯ ಮುಖಗಳೂ, ಚಂದ್ರಾಕಾರಗಳೂ, ಅರ್ಧಚಂದ್ರಾಕಾರಗಳೂ, ಧೂಮಕೇತು ಮುಖಗಳೂ, ಗ್ರಹನಕ್ಷತ್ರ ಮುಖಗಳೂ ಆಗಿ ಮಿಂಚಿನ ಬಳ್ಳಿಗೆ ಸಮಾನವೂ, ಮಹಾ ತೀಕ್ಷ್ಣವೂ ಆದ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳೆಲ್ಲವೂ ರಾವಣನ ಆಸುರಾಸ್ತ್ರದಿಂದುದಿಸಿದ ಮಹಾ ಭಯಂಕರ ಬಾಣಗಳೆಲ್ಲವನ್ನೂ ನಾಶಗೊಳಿಸಿದುವು. ಆ

ಜಗ್ಮುರಾಕಾಶೇ ಜಗ್ಮುಶ್ಚೈವ ಸಹಸ್ರಶಃ ॥ ೪೮ ॥ ತದಸ್ತ್ರಂ ನಿಹತಂ ದೃಷ್ಟ್ವಾ
ರಾಮೇಣಾಕ್ಲಿಷ್ಟಕರ್ಮಣಾ । ಹೃಷ್ಟಾ ನೇದುಸ್ತತಸ್ಸರ್ವೇ ಕಪಯಃ ಕಾಮರೂಪಿಣಃ ।
ಸುಗ್ರೀವಪ್ರಮುಖಾ ವೀರಾಃ ಪರಿವಾರ್ಯ ತು ರಾಘವಂ ॥ ೪೯-೫೦ ॥

ತತಸ್ತದಸ್ತ್ರಂ ವಿನಿಹತ್ಯ ರಾಘವಃ
ಪ್ರಸಹ್ಯ ತದ್ರಾವಣಬಾಹುನಿಸ್ಸೃತಂ ।
ಮುದಾನ್ವಿತೋ ದಾಶರಥಿರ್ಮಹಾಹವೇ
ವಿನೇದರುಚ್ಚೈರ್ಮುದಿತಾಃ ಕಪೀಶ್ವರಾಃ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಶತತಮಸ್ಸರ್ಗಃ.

ಹೊರಟುಹೋದವು, ವಿಲಯಂಚ-ನಾಶವನ್ನೂ, ಜಗ್ಮುಃ-ಹೊಂದಿದವು. ॥ ೪೮ ॥ ಅಕ್ಲಿಷ್ಟಕರ್ಮಣಾ-ಕ್ಲೇಶವಿಲ್ಲದೆಯೇ ಕಾರ್ಯಗಳನ್ನು ನಡೆಸುತ್ತಿರುವ, ರಾಮೇಣ-ಶ್ರೀರಾಮನಿಂದ, ನಿಹತಂ-ಹೊಡೆಯಲ್ಪಟ್ಟ, ತದಸ್ತ್ರಂ-ಆ ಆಸುರಾಸ್ತ್ರವನ್ನು, ದೃಷ್ಟ್ವಾ-ಕಂಡು, ಸುಗ್ರೀವಮುಖಾಃ-ಸುಗ್ರೀವನೇ ಮೊದಲಾದ, ವೀರಾಃ - ಶೂರರಾದ, ಕಾಮರೂಪಿಣಃ - ಕಾಮರೂಪಿಗಳಾದ, ಸರ್ವೇಕಪಯಃ - ಸಮಸ್ತ ವಾನರರೂ, ಹೃಷ್ಟಾಃ - ಸಂತೋಷಗೊಂಡವರಾಗಿ, ತತಃ - ಬಳಿಕ, ರಾಘವಂ - ಶ್ರೀರಾಮನನ್ನು, ಪರಿವಾರ್ಯ - ಸುತ್ತಿಕೊಂಡು, ನೇದುಃ - ಕೋಲಾಹಲಧ್ವನಿಗೈದರು. ॥೪೯-೫೦॥ ತತಃ - ಬಳಿಕ, ದಾಶರಥಿಃ - ದಶರಥಪುತ್ರನಾದ, ರಾಮಃ - ಶ್ರೀರಾಮನು, ಪ್ರಸಹ್ಯ - ವಿಜೃಂಭಿಸಿ, ತದ್ರಾ....ತಂ - ಆ ರಾವಣನ ಭುಜದಿಂದ ಬಿಡಲ್ಪಟ್ಟ, ತದಸ್ತ್ರಂ - ಆ ಅಸ್ತ್ರವನ್ನು, ವಿನಿಹತ್ಯ - ಹೊಡೆದು, ಮಹಾಹವೇ - ದೊಡ್ಡ ಕಾಳಗದಲ್ಲಿ, ಮುದಾ - ಸಂತೋಷದಿಂದ, ಅನ್ವಿತಃ - ಕೂಡಿದವನು, ಬಭೂವ - ಆದನು, ಕಪೀಶ್ವರಾಃ - ವಾನರೋತ್ತಮರು, ಮುದಿತಾಃ - ಸಂತೋಷಗೊಂಡವರಾಗಿ, ಉಚ್ಚೈಃ - ಘಟ್ಟಿಯಾಗಿ, ವಿನೇದುಃ - ಘೋಷ ಮಾಡಿದರು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಶತತಮಸ್ಸರ್ಗಃ.

ಬಾಣಗಳೆಲ್ಲವೂ ಆಕಾಶದಲ್ಲಿಯೇ ಅಡಗಿಹೋದುವು. ಹೀಗೆ ರಾಮನು ನಿರಾಯಾಸವಾಗಿ ರಾವಣನ ಬಾಣಗಳೆಲ್ಲವನ್ನು ನಾಶಗೊಳಿಸಿದುದನ್ನು ನೋಡಿ ಕಾಮರೂಪಿಗಳಾದ ವಾನರರೆಲ್ಲರೂ ಮಹದಾನಂದಭರಿತರಾಗಿ ಬಹು ಭಯಂಕರವಾದ ಸಿಂಹನಾದಗಳನ್ನು ಮಾಡಿದರು. ಇದೂ ಅಲ್ಲದೆ ಸುಗ್ರೀವನೇ ಮೊದಲಾದ ವಾನರವೀರರೆಲ್ಲರೂ ಶ್ರೀರಾಮನನ್ನು ಅನೇಕ ವಿಧವಾಗಿ ಹೊಗಳಿದರು. ರಘುಕುಲೋದ್ಭವನಾದ ಶ್ರೀರಾಮಮೂರ್ತಿಯು ಈ ಪ್ರಕಾರವಾಗಿ ರಾವಣನ ಆಸುರಾಸ್ತ್ರವನ್ನು ನಾಶಗೊಳಿಸಿ ಪರಮಾನಂದಭರಿತನಾದನು. ವಾನರಸೇನೆಯೆಲ್ಲವೂ ಅತ್ಯಧಿಕ ಸಂತೋಷವುಳ್ಳದಾಯಿತು. ॥ ೪೬–೫೧ ॥

ಇಂತಿದು ರಾಮರಾವಣಯುದ್ಧಾರಂಭ ವೃತ್ತಾಂತವೆಂಬ ನೂರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕೋತ್ತರಶತತಮಸ್ಸರ್ಗಃ

ತಸ್ಮಿನ್ ಪ್ರತಿಹತೇಽಸ್ತ್ರೇತು ರಾವಣೋ ರಾಕ್ಷಸಾಧಿಪಃ । ಕ್ರೋಧಂ ಚ ದ್ವಿಗುಣಂ ಚಕ್ರೇ ಕ್ರೋಧಾಚ್ಚಾಸ್ತ್ರಮನಂತರಂ ॥ ೧ ॥ ಮಯೇನ ವಿಹಿತಂ ರೌದ್ರ ಮನ್ಯದಸ್ತ್ರಂ ಮಹಾದ್ಯುತಿಃ । ಉತ್ಸ್ರಷ್ಟುಂ ರಾವಣೋ ಘೋರಂ ರಾಘವಾಯ ಪ್ರಚಕ್ರಮೇ ॥ ೨ ॥ ತತಃ ಶೂಲಾನಿ ನಿಶ್ಚೇರುರ್ಗದಾಶ್ಚ ಮುಸಲಾನಿಚ । ಕಾರ್ಮುಕಾದ್ದೀಪ್ಯಮಾನಾನಿ ವಜ್ರಸಾರಾಣಿ ಸರ್ವಶಃ ॥ ೩ ॥ ಮುದ್ಗರಾಃ ಕೂಟಪಾಶಾಶ್ಚ ದೀಪ್ತಾಶ್ಚಾಽಶನಯಸ್ತಥಾ । ನಿಷ್ಪೇತುರ್ವಿವಿಧಾಸ್ತೀಕ್ಷ್ಣಾ ವಾತಾಇವ ಯುಗಕ್ಷಯೇ ॥೪॥ ತದಸ್ತ್ರಂ ರಾಘವಃ ಶ್ರೀಮಾನುತ್ತಮಾಸ್ತ್ರವಿದಾಂ ವರಃ । ಜಘಾನ ಪರಮಾಸ್ತ್ರೇಣ

ರಾಕ್ಷಸಾಧಿಪಃ - ರಾಕ್ಷಸರೊಡೆಯನಾದ, ರಾವಣಃ - ರಾವಣನು, ತಸ್ಮಿನ್ಅಸ್ತ್ರೇತು - ಆ ಅಸುರಾಸ್ತ್ರವು, ಪ್ರತಿಹತೇ - ಹೊಡೆಯಲ್ಪಟ್ಟದಾಗಲು, ದ್ವಿಗುಣಂಚ - ಎರಡರಷ್ಟು, ಕ್ರೋಧಂಚ - ಕೋಪವನ್ನು, ಚಕ್ರೇ - ಮಾಡಿದನು, ಕ್ರೋಧಾಚ್ಚ - ಕೋಪದಿಂದಲೂ, ಅನಂತರಂ - ಬಳಿಕ, ಅಸ್ತ್ರಂ- ಮತ್ತೊಂದು ಅಸ್ತ್ರವನ್ನು, ಚಕ್ರೇ - ಪ್ರಯೋಗ ಮಾಡಿದನು, ರಾವಣಃ - ರಾವಣನು, ಮಯೇನ - ಮಯಾಸುರನಿಂದ, ವಿಹಿತಂ - ಮಾಡಲ್ಪಟ್ಟ, ಅನ್ಯತ್ - ಮತ್ತೊಂದಾದ, ರೌದ್ರಂ - ರುದ್ರದೇವ ತಾಕವಾದ, ಮಹಾದ್ಯುತಿ-ಮಹಾ ತೇಜಸ್ಸುಳ್ಳ, ಘೋರಂ-ಭಯಂಕರವಾದ, ಅಸ್ತ್ರಂ-ಅಸ್ತ್ರವನ್ನು, ರಾಘವಾಯ - ಶ್ರೀರಾಮನಿಗಾಗಿ, ಉತ್ಸ್ರಷ್ಟುಂ - ಬಿಡುವುದಕ್ಕೆ, ಪ್ರಚಕ್ರಮೇ - ಉಪಕ್ರಮಿಸಿದನು, ತತಃ - ಬಳಿಕ, ಕಾರ್ಮುಕಾತ್ - ಬಿಲ್ಲಿನಿಂದ, ಶೂಲಾನಿ - ಶೂಲಾಯುಧಗಳೂ, ದೀಪ್ಯಮಾನಾನಿ - ಹೊಳೆಯುತ್ತಿರುವ, ವಜ್ರಸಾರಾಣಿ - ವಜ್ರಾಯುಧದಂತೆ ದೃಢವಾದ, ಸರ್ವಶಃ - ಸಮಸ್ತಗಳಾದ, ಮುಸಲಾನಿಚ - ಒನಕೆಗಳನ್ನೂ, ನಿಶ್ಚೇರುಃ - ಹೊರಟವು, ಮುದ್ಗರಃ - ಮುದ್ಗರಾಯುಧವೂ, ಕೂಟ ಪಾಶಾಶ್ಚ - ಕಬ್ಬಿಣದ ಹಗ್ಗಗಳೂ, ದೀಪ್ತಾಃ - ಹೊಳೆಯುತ್ತಿರುವ, ವಿವಿಧಾಃ - ನಾನಾಬಗೆಗಳಾದ, ಅಶನಯಃ - ಸಿಡಿಲುಗಳು, ಯುಗಕ್ಷಯೇ - ಪ್ರಳಯಕಾಲದಲ್ಲಿ, ತೀಕ್ಷ್ಣಾಃ - ಪ್ರಚಂಡಗಳಾದ, ವಾತಾಇವ - ಗಾಳಿಗಳಂತೆ, ನಿಷ್ಪೇತುಃ - ಹೊರಟವು. ॥ ೧-೪ ॥ ಉತ್ತ....ದಾಂ - ಉತ್ತಮವಾದ ಅಸ್ತ್ರಗಳನ್ನು ತಿಳಿದವರಲ್ಲಿ, ವರಃ - ಶ್ರೇಷ್ಠನಾದ, ಶ್ರೀಮಾನ್ - ಸಂಪದ್ಯುಕ್ತನಾದ, ಮಹಾದ್ಯುತಿಃ-

---

ಈ ಪ್ರಕಾರವಾಗಿ ಶ್ರೀರಾಮಮೂರ್ತಿಯು ಅಸುರಾಸ್ತ್ರವನ್ನು ಮುರಿದೊಡನೆಯೇ ರಾಕ್ಷಸೇಶ್ವರನಾದ ರಾವಣಾಸುರನಿಗೆ ಕೋಪವು ಇಮ್ಮಡಿಸಿಹೋಯಿತು. ಅವನು ಅದೇ ಕೋಪದಲ್ಲಿಯೇ ಪೂರ್ವದಲ್ಲಿ ಮಯಾಸುರನಿಂದ ನಿರ್ಮಿತವಾಗಿದ್ದ ಮಹಾ ಘೋರವಾದ ರೌದ್ರಾಸ್ತ್ರವನ್ನು ಶ್ರೀರಾಮನ ಮೇಲೆ ಪ್ರಯೋಗಿಸಲುಪಕ್ರಮಿಸಿದನು. ಮಹಾ ತೇಜಸ್ವಿ ಯಾದ ಆ ರಾವಣನು ಪ್ರಯೋಗಿಸಿದ ಆ ರೌದ್ರಾಸ್ತ್ರದಿಂದ ಧಗಧಗನುರಿಯುತ್ತಿರುವು ದಾಗಿಯೂ, ಮಹೇಂದ್ರನ ವಜ್ರಾಯುಧಕ್ಕೆ ಸಮಾನಗಳಾಗಿಯೂ ಇರುವ ಶೂಲಗಳೂ, ಒನಕೆಗಳೂ, ಅಗಳಿಗಳೂ, ಕೂಟಪಾಶಗಳೂ, ಉರಿಗೊಳ್ಳಿಗಳೂ ಎಲ್ಲೆಲ್ಲಿಯೂ ಸಂಚರಿ ಸುತ್ತ, ಯುಗಕ್ಷಯ ಕಾಲದಲ್ಲಿ ಬಿರುಗಾಳಿಗಳಂತೋ ಅಂತು ಬೀಳಲಾರಂಭಿಸಿದುವು. ಅಸ್ತ್ರ ವೇತ್ತರಲ್ಲಿ ಅಗ್ಗಳೆಯನಾದ ಶ್ರೀರಾಮಮೂರ್ತಿಯು ಆ ರೌದ್ರಾಸ್ತ್ರವನ್ನು ಗಾಂಧರ್ವವೆಂ..

ಗಾಂಧರ್ವೇಣ ಮಹಾದ್ಯುತಿಃ ॥ ೫ ॥ ತಸ್ಮಿನ್ ಪ್ರತಿಹತೇಽಸ್ತ್ರೇತು ರಾಘವೇಣ ಮಹಾತ್ಮನಾ । ರಾವಣಃ ಕ್ರೋಧತಾಮ್ರಾಕ್ಷಸ್ಸೌರಮಸ್ತ್ರಮುದೈರಯತ್ ॥೬॥ ತತಶ್ಚಕ್ರಾಣಿ ನಿಷ್ಪೇತುರ್ಭಾಸ್ವರಾಣಿ ಮಹಾಂತಿಚ । ಕಾರ್ಮುಕಾದ್ಭೀಮವೇಗಸ್ಯ ದಶಗ್ರೀವಸ್ಯ ಧೀಮತಃ ॥೭॥ ತೈರಾಸೀದ್ಗಗನಂ ದೀಪ್ತಂ ಸಂಪತದ್ಭಿರಿತಸ್ತತಃ । ಪತದ್ಭಿಶ್ಚ ದಿಶೋ ದೀಪ್ತಾಶ್ಚಂದ್ರಸೂರ್ಯಗ್ರಹೈರಿವ ॥ ೮ ॥ ತಾನಿ ಚಿಚ್ಛೇದ ಬಾಣೌಘೈಶ್ಚಕ್ರಾಣಿ ಸತು ರಾಘವಃ । ಆಯುಧಾನಿ ಚ ಚಿತ್ರಾಣಿ ರಾವಣಸ್ಯ ಚಮೂಮುಖೇ ॥ ೯ ॥ ತದಸ್ತ್ರಂ ತು ಹತಂ ದೃಷ್ಟ್ವಾ ರಾವಣೋ ರಾಕ್ಷಸಾಧಿಪಃ । ವಿವ್ಯಾಧ ದಶಭಿರ್ಬಾಣೈ ರಾಮಂ

ಮಹಾ ತೇಜೋವಂತನಾದ, ರಾಘವಃ - ಶ್ರೀರಾಮನು, ತದಸ್ತ್ರಂ - ಆ ರೌದ್ರಾಸ್ತ್ರವನ್ನು, ಗಾಂಧರ್ವೇಣ - ಗಂಧರ್ವದೇವತಾಕವಾದ, ಪರಮಾಸ್ತ್ರೇಣ - ಉತ್ತಮಾಸ್ತ್ರದಿಂದ, ಜಘಾನ - ಹೊಡೆದನು. ॥೫॥ ತಸ್ಮಿನ್ಅಸ್ತ್ರೇತು - ಆ ರೌದ್ರಾಸ್ತ್ರವಾದರೆ, ಮಹಾತ್ಮನಾ - ಮಹಾನುಭಾವನಾದ, ರಾಘವೇಣ - ಶ್ರೀರಾಮನಿಂದ, ಪ್ರತಿಹತೇ - ಹೊಡೆಯಲ್ಪಟ್ಟುದಾಗಲು, ರಾವಣಃ - ದಶಗ್ರೀವನು, ಕ್ರೋಧತಾಮ್ರಾಕ್ಷಃ-ಕ್ರೋಧದಿಂದ ಕೆಂಗಣ್ಣುಗಳುಳ್ಳವನಾಗಿ, ಸೌರಂ-ಸೂರ್ಯದೇವತಾಕವಾದ, ಅಸ್ತ್ರಂ-ಅಸ್ತ್ರವನ್ನು, ಉದೈರಯತ್ - ಎತ್ತಿಕೊಂಡನು. ॥ ೬ ॥ ತತಃ - ಬಳಿಕ, ಧೀಮತಃ - ಬುದ್ಧಿಶಾಲಿಯಾದ, ಭೀಮವೇಗಸ್ಯ - ಭಯಂಕರವಾದ ವೇಗವುಳ್ಳ, ದಶಗ್ರೀವಸ್ಯ - ದಶಕಂಧರನ, ಕಾರ್ಮುಕಾತ್ - ಬಿಲ್ಲಿನಿಂದ, ಮಹಾಂತಿ - ದೊಡ್ಡವಾದ, ಭಾಸ್ವರಾಣಿ - ಹೊಳೆಯುತ್ತಿರುವ, ಚಕ್ರಾಣಿ - ಚಕ್ರಾಯುಧಗಳು, ನಿಷ್ಪೇತುಃ - ಹೊರಟವು. ॥೭॥ ಇತಸ್ತತಃ - ಇಲ್ಲಿ ಅಲ್ಲಿ, ಸಂಪತದ್ಭಿಃ - ಹೊರಟುಬರುತ್ತಿರುವ, ತೈಃ - ಆ ಚಕ್ರಾಯುಧಗಳಿಂದ, ಗಗನಂ - ಅಂತರಿಕ್ಷವು, ಪತದ್ಭಿಃ - ಬೀಳುತ್ತಿರುವ, ಚಂದ್ರಸೂರ್ಯಗ್ರಹೈಃ - ಚಂದ್ರಸೂರ್ಯಗ್ರಹಗಳಿಂದಲೂ, ದಿಶಇವ - ದಿಕ್ಕುಗಳಂತೆ, ದೀಪ್ತಂ - ಹೊಳೆಯುತ್ತಿತ್ತು. ॥ ೮ ॥ ಸರಾಘವಸ್ತು - ಆ ಶ್ರೀರಾಮನಾದರೆ, ಬಾಣೌಘೈಃ - ಸರಳುಗಳ ಸಮುದಾಯಗಳಿಂದ, ತಾನಿಚಕ್ರಾಣಿ - ಆ ಚಕ್ರಾಯುಧಗಳನ್ನು, ಚಮೂಮುಖೇ - ಸೇನೆಯಲ್ಲಿ, ರಾವಣಸ್ಯ - ದಶಕಂಧರನ, ಚಿತ್ರಾಣಿ - ಆಶ್ಚರ್ಯಕರವಾದ, ಆಯುಧಾನಿಚ - ಆಯುಧಗಳನ್ನೂ, ಚಿಚ್ಛೇದ - ಕತ್ತರಿಸಿದನು. ॥ ೯ ॥ ತದಸ್ತ್ರಂ - ಆ ಅಸ್ತ್ರವನ್ನು, ಹತಂ - ಹೊಡೆಯಲ್ಪಟ್ಟುದನ್ನಾಗಿ, ದೃಷ್ಟ್ವಾ - ಕಂಡು, ರಾಕ್ಷಸಾಧಿಪಃ - ರಾಕ್ಷಸಾಧಿಪತಿಯಾದ, ರಾವಣಃ - ರಾವಣನು,

ದಿವ್ಯಾಸ್ತ್ರವನ್ನು ಪ್ರಯೋಗಿಸಿ ನಾಶಗೊಳಿಸಿದನು. ॥ ೧-೫ ॥ ರಾವಣನಾದರೋ ತಾನು ಪ್ರಯೋಗಿಸಿದ ರೌದ್ರಾಸ್ತ್ರವು ನಿಷ್ಫಲವಾಗಲು ಕೋಪದಿಂದ ಕೆರಳಿದ ಕಣ್ಣುಗಳುಳ್ಳವನಾಗಿ ಮಹಾತ್ಮನಾದ ಶ್ರೀರಾಮನ ಮೇಲೆ ಸೌರಾಸ್ತ್ರವನ್ನು ಪ್ರಯೋಗಿಸಿದನು. ಮಹಾ ಬುದ್ಧಿಶಾಲಿಯಾದ ಆ ದಶಗ್ರೀವನ ವೇಗಯುಕ್ತವಾದ ಧನುಸ್ಸಿನಿಂದ ಹೊರಟ ಆ ಸೌರಾಸ್ತ್ರದ ದೆಸೆಯಿಂದ ದೊಡ್ಡ ದೊಡ್ಡವಾದ ಜಾಜ್ವಲ್ಯಮಾನವಾದ ಚಕ್ರಗಳು ಎಲ್ಲೆಲ್ಲಿಯೂ ವೇಗವಾಗಿ ಹೊರಟುಬಂದವು. ಆ ಚಕ್ರಗಳಿಂದ ಗಗನಾಂಗಣವೆಲ್ಲವೂ, ಬಂದು ಬೀಳುತ್ತಿರುವ ಚಂದ್ರಸೂರ್ಯಗ್ರಹಗಳಿಂದ ತುಂಬಿರುವಂತೆ ತೋರುತ್ತಿದ್ದಿತು. ಶ್ರೀರಾಮಚಂದ್ರನು ಆ ಚಕ್ರಗಳೆಲ್ಲವನ್ನೂ ಅಮೋಘವಾದ ತನ್ನ ಬಾಣಗಳಿಂದ ಕತ್ತರಿಸಿದುದಲ್ಲದೆ, ಆ ರಾವಣನೆಸೆದ ಎಲ್ಲ ಆಯುಧಗಳನ್ನೂ ಖಂಡಿಸಿ ಬಿಟ್ಟನು. ಹೀಗೆ ಸೌರಾಸ್ತ್ರವೂ ರಾಮನಿಂದ ಭಗ್ನವಾದುದನ್ನು ಕಂಡು ಆ ರಾಕ್ಷಸನು ಮಹಾತ್ಮನಾದ ಶ್ರೀರಾಮನ ಮರ್ಮಪ್ರದೇಶಗಳಲ್ಲೆಲ್ಲ

ಸರ್ವೇಷು ಮರ್ಮಸು ॥ ೧೦ ॥ ಸವಿದ್ಧೋ ದಶಭಿರ್ಬಾಣೈರ್ಮಹಾಕಾರ್ಮುಕ ನಿಸ್ಸೃತೈಃ । ರಾವಣೇನ ಮಹಾತೇಜಾ ನಪ್ರಾಕಂಪತ ರಾಘವಃ ॥ ೧೧ ॥ ತತೋ ವಿವ್ಯಾಧ ಗಾತ್ರೇಷು ಸರ್ವೇಷು ಸಮಿತಿಂಜಯಃ । ರಾಘವಸ್ತು ಸುಸಂಕ್ರುದ್ಧೋ ರಾವಣಂ ಬಹುಭಿಃ ಶರೈಃ ॥ ೧೨ ॥ ಏತಸ್ಮಿನ್ನಂತರೇ ಕ್ರುದ್ಧೋ ರಾಘವಸ್ಯಾಽನುಜೋ ಬಲೀ । ಲಕ್ಷ್ಮಣಸ್ಸಾಯಕಾನ್ ಸಪ್ತ ಜಗ್ರಾಹ ಪರವೀರಹಾ ॥ ೧೩ ॥ ತೈಸ್ಸಾಯಕೈ ರ್ಮಹಾವೇಗೈ ರಾವಣಸ್ಯ ಮಹಾದ್ಯುತಿಃ । ಧ್ವಜಂ ಮನುಷ್ಯಶೀರ್ಷಂತು ತಸ್ಯ ಚಿಚ್ಛೇದ ನೈಕಧಾ ॥ ೧೪ ॥ ಸಾರಥೇಶ್ಚಾಪಿ ಬಾಣೇನ ಶಿರೋಜ್ವಲಿತಕುಂಡಲಂ । ಜಹಾರ ಲಕ್ಷ್ಮಣಶ್ಶ್ರೀಮಾನ್ ನೈರ್ಋತಸ್ಯ ಮಹಾಬಲಃ ॥ ೧೫ ॥ ತಸ್ಯ ಬಾಣೈಶ್ಚ ಚಿಚ್ಛೇದ

ದಶಭಿಃ - ಹತ್ತಾದ, ಬಾಣೈಃ - ಬಾಣಗಳಿಂದ, ರಾಮಂ - ಶ್ರೀರಾಮನನ್ನು, ಸರ್ವೇಷು - ಸಮಸ್ತ ಗಳಾದ, ಮರ್ಮಸು - ಮರ್ಮಸ್ಥಾನಗಳಲ್ಲಿ, ವಿವ್ಯಾಧ - ಹೊಡೆದನು. ॥೧೦॥ ರಾವಣೇನ - ರಾವಣ ನಿಂದ, ಮಹಾ....ತೈಃ-ದೊಡ್ಡ ಧನುಸ್ಸಿನಿಂದ ಹೊರಟುಬರುತ್ತಿರುವ, ದಶಭಿಃ-ಹತ್ತಾದ, ಬಾಣೈಃ-ಬಾಣಗಳಿಂದ, ವಿದ್ಧಃ-ಹೊಡೆಯಲ್ಪಟ್ಟ, ಮಹಾತೇಜಾಃ-ಮಹಾ ಸಾಮರ್ಥ್ಯವಂತನಾದ, ಸರಾಘವಃ-ಆ ಶ್ರೀರಾಮನು, ನಪ್ರಾಕಂಪತ - ಚಲಿಸಲಿಲ್ಲವು. ॥೧೧॥ ತತಃ - ಬಳಿಕ, ಸಮಿತಿಂಜಯಃ - ಯುದ್ಧ ದಲ್ಲಿ ಜಯಶೀಲನಾದ, ರಾಘವಸ್ತು-ಶ್ರೀರಾಮನಾದರೆ, ಸಂಕ್ರುದ್ಧಃ-ಕುಪಿತನಾಗಿ, ರಾವಣಂ-ರಾವಣ ನನ್ನು, ಸರ್ವೇಷುಗಾತ್ರೇಷು-ಸಮಸ್ತಾವಯವಗಳಲ್ಲಿಯೂ, ಬಹುಭಿಃ-ಅನೇಕಗಳಾದ, ಶರೈಃ-ಬಾಣ ಗಳಿಂದ, ವಿವ್ಯಾಧ-ಹೊಡೆದನು. ॥೧೨॥ ಏತಸ್ಮಿನ್ಅಂತರೇ-ಈ ಮಧ್ಯದಲ್ಲಿ, ಪರವೀರಹಾ-ಶತ್ರುಸಂಹಾರಕ ನಾದ, ರಾಘವಸ್ಯ - ಶ್ರೀರಾಮನಿಗೆ, ಅನುಜಃ - ತಮ್ಮನಾದ, ಲಕ್ಷ್ಮಣಃ - ಲಕ್ಷ್ಮಣನು, ಕ್ರುದ್ಧಃ - ಕುಪಿತನಾಗಿ, ಸಪ್ತಸಾಯಕಾನ್ - ಏಳು ಬಾಣಗಳನ್ನು, ಜಗ್ರಾಹ - ತೆಗೆದುಕೊಂಡನು. ॥ ೧೩ ॥ ಮಹಾದ್ಯುತಿಃ - ಮಹಾ ತೇಜೋವಂತನಾದ ಲಕ್ಷ್ಮಣನು, ಮಹಾವೇಗೈಃ - ಮಹಾ ವೇಗವತ್ತು ಗಳಾದ, ತೈಸ್ಸಾಯಕೈಃ - ಆ ಬಾಣಗಳಿಂದ, ತಸ್ಯರಾವಣಸ್ಯ - ಆ ರಾವಣನ, ಮನುಷ್ಯಶೀರ್ಷಂ - ಮನುಷ್ಯನ ತಲೆಯಂತೆ ತಲೆಯುಳ್ಳ, ಧ್ವಜಂ - ನಿಶಾನಿಯನ್ನು, ನೈಕಧಾ - ಅನೇಕ ತುಂಡುಗಳಾಗಿ, ಚಿಚ್ಛೇದ - ಕತ್ತರಿಸಿದನು. ॥ ೧೪ ॥ ಮಹಾಬಲಃ - ಬಹಳ ಬಲಶಾಲಿಯಾದ, ಶ್ರೀಮಾನ್ - ಜಯ ಸಂಪತ್ತಿನಿಂದ ಕೂಡಿರುವ, ಲಕ್ಷ್ಮಣಃ-ಲಕ್ಷ್ಮಣನು, ನೈರ್ಋತಸ್ಯ-ರಾವಣನ, ಸಾರಥೇಃ-ಸಾರಥಿಯ, ಜ್ವಲಿತಕುಂಡಲಂ - ಬೆಳಗುತ್ತಿರುವ ಕುಂಡಲಗಳುಳ್ಳ, ಶಿರಃ - ತಲೆಯನ್ನು, ಬಾಣೇನ - ಒಂದೇ

ಹತ್ತು ಬಾಣಗಳನ್ನು ಪ್ರಯೋಗಿಸಿ ಘಾತಿಸಿದನು. ॥ ೬–೧೦ ॥ ಆ ರಾವಣನ ದೊಡ್ಡ ಬಿಲ್ಲಿ ನಿಂದ ಬಂದ ಆ ಹತ್ತು ಬಾಣಗಳಿಂದಲೂ ಘಾತಿಸಲ್ಪಟ್ಟ ಶ್ರೀರಾಮನು ಸ್ವಲ್ಪವೂ ಅತ್ತಿತ್ತ ಕದಲದೆ ಸ್ಥಿರವಾಗಿ ನಿಂತಿದ್ದನು. ಆತನು ಬಹಳವಾಗಿ ಕೋಪಗೊಂಡು ರಾವಣನ ಅಂಗಾಂಗ ಗಳಲ್ಲೆಲ್ಲ ಬಾಣಗಳನ್ನು ತುಂಬಿಸಿದನು. ಇದೇ ಸಮಯದಲ್ಲಿಯೇ ಶತ್ರುಮರ್ದನನೂ ಶ್ರೀರಾಮನೂ ಆದ ಲಕ್ಷ್ಮಣಸ್ವಾಮಿಯು ಮಹೋತ್ತಮವಾದ ಏಳು ಬಾಣಗಳನ್ನು ತೆಗೆದುಕೊಂಡು ಧನುಸ್ಸಿನಲ್ಲಿ ಹೂಡಿ ಎಸೆದು ಆ ರಾವಣನ ರಥಾಗ್ರಭಾಗದಲ್ಲಿದ್ದ ಮನುಷ್ಯನ ತಲೆಯೇ ಚಿಹ್ನೆಯನ್ನಾಗಿ ಒಳಗೊಂಡಿದ್ದ ಧ್ವಜವನ್ನು ತುಂಡುತುಂಡಾಗಿ ಕತ್ತರಿಸಿದನಲ್ಲದೆ ಮತ್ತೊಂದು ಬಾಣವನ್ನೂ ಪ್ರಯೋಗಿಸಿ ಆ ರಾಕ್ಷಸರಾಜನ ಸಾರಥಿಯ ಕರ್ಣಕುಂಡಲ ಸಹಿತವಾದ ಶಿರಸ್ಸನ್ನೂ ಹಾರಿಸಿದನು. ಇನ್ನೂ ಐದು ಬಾಣಗಳನ್ನೆಸೆದು ಆ ರಾವಣನ

ಧನುರ್ಗಜಕರೋಪಮಂ । ಲಕ್ಷ್ಮಣೋ ರಾಕ್ಷಸೇಂದ್ರಸ್ಯ ಪಂಚಭಿರ್ನಿಶಿತೈಃ ಶರೈಃ ॥೧೬॥ ನೀಲಮೇಘನಿಭಾಂಶ್ಚಾಸ್ಯ ಸದಶ್ವಾನ್ ಪರ್ವತೋಪಮಾನ್ । ಜಘಾನ ಪ್ಲುತ್ಯ ಗದಯಾ ರಾವಣಸ್ಯ ವಿಭೀಷಣಃ ॥೧೭॥ ಹತಾಶ್ವೋ ವೇಗವಾನ್ ವೇಗಾದವಪ್ಲುತ್ಯ ಮಹಾರಥಾತ್ । ಕ್ರೋಧಮಾಹಾರಯತ್ತೀವ್ರಂ ಭ್ರಾತರಂ ಪ್ರತಿ ರಾವಣಃ ॥೧೮॥ ತತಃ ಶಕ್ತಿಂ ಮಹಾಶಕ್ತಿರ್ದೀಪ್ತಾಂ ದೀಪ್ತಾಶನೀಮಿವ । ವಿಭೀಷಣಾಯ ಚಿಕ್ಷೇಪ ರಾಕ್ಷಸೇಂದ್ರಃ ಪ್ರತಾಪವಾನ್ ॥೧೯॥ ಅಪ್ರಾಪ್ತಾಮೇವ ತಾಂ ಬಾಣೈಸ್ತ್ರಿಭಿಶ್ಚಿಚ್ಛೇದ ಲಕ್ಷ್ಮಣಃ । ಅಥೋದತಿಷ್ಠತ್ ಸನ್ನಾದೋ ವಾನರಾಣಾಂ ತದಾ ರಣೇ ॥೨೦॥ ಸಾ

ಬಾಣದಿಂದಲೇ, ಜಹಾರ - ತೆಗೆದನು. ॥೧೫॥ ಶರೈಃ - ಕಾಚೀಹುಲ್ಲಿನ ಸ್ತಂಭಗಳಿಂದ ಮಾಡಲ್ಪಟ್ಟ, ಪಂಚಭಿಃ - ಐದಾದ, ನಿಶಿತೈಃ - ಹದಗಳಾದ, ಬಾಣೈಃ - ಬಾಣಗಳಿಂದ, ಲಕ್ಷ್ಮಣಃ - ಲಕ್ಷ್ಮಣನು, ತಸ್ಯರಾಕ್ಷಸೇಂದ್ರಸ್ಯ-ಆ ರಾವಣನ, ಗಜಕರೋಪಮಂ-ಆನೆಯ ಸೊಂಡಿಲಿಗೆ ಸಮಾನವಾದ, ಧನುಃ- ಬಿಲ್ಲನ್ನು, ಚಿಚ್ಛೇದ - ಕತ್ತರಿಸಿದನು. ॥೧೬॥ ವಿಭೀಷಣಃ - ವಿಭೀಷಣನು, ಗದಯಾ - ಗದಾಯುಧ ದಿಂದ, ಅಸ್ಯರಾವಣಸ್ಯ - ಈ ದಶಕಂಠನ, ನೀಲಮೇಘನಿಭಾನ್ - ಕಾಲಮೇಘಕ್ಕೆ ಸಮಾನಗಳಾದ, ಪರ್ವತೋಪಮಾನ್ - ಬೆಟ್ಟಕ್ಕೆ ಸಮಾನಗಳಾದ, ಸದಶ್ವಾನ್ - ಒಳ್ಳೆಯ ಕುದುರೆಗಳನ್ನು, ಆಪ್ಲುತ್ಯ - ಹಾರಿ, ಜಘಾನ - ಹೊಡೆದನು. ॥೧೭॥ ಹತಾಶ್ವಃ - ಹೊಡೆಯಲ್ಪಟ್ಟ ಕುದುರೆಗಳುಳ್ಳ, ರಾವಣಃ - ದಶಕಂಠನು, ವೇಗವಾನ್ - ವೇಗವುಳ್ಳವನಾಗಿ, ಮಹಾರಥಾತ್ - ದೊಡ್ಡ ತೇರಿನ ದೆಶೆಯಿಂದ, ವೇಗಾತ್ - ವೇಗವಾಗಿ, ಅವಪ್ಲುತ್ಯ - ಧುಮುಕಿ, ಭ್ರಾತರಂಪ್ರತಿ - ತಮ್ಮನನ್ನು ಕುರಿತು, ತೀವ್ರಂ- ತೀಕ್ಷ್ಣವಾದ, ಕ್ರೋಧಂ - ಕೋಪವನ್ನು, ಆಹಾರಯತ್ - ತೆಗೆದುಕೊಂಡನು. ॥೧೮॥ ತತಃ - ಬಳಿಕ, ಮಹಾಶಕ್ತಿಃ - ಮಹಾ ಸಾಮರ್ಥ್ಯವಂತನಾದ, ಪ್ರತಾಪವಾನ್ - ಸಾಮರ್ಥ್ಯವಂತನಾದ, ರಾಕ್ಷ ಸೇಂದ್ರಃ - ದಶಕಂಠನು, ದೀಪ್ತಾಶನೀಮಿವ - ಉರಿಯುತ್ತಿರುವ ಸಿಡಿಲಿನಂತೆ, ದೀಪ್ತಾಂ - ಪ್ರಜ್ವಲಿ ಸುತ್ತಿರುವ, ಶಕ್ತಿಂ - ಶಕ್ತ್ಯಾಯುಧವನ್ನು, ವಿಭೀಷಣಾಯ - ವಿಭೀಷಣನಿಗೋಸುಗ, ಚಿಕ್ಷೇಪ - ಎಸೆದನು. ॥೧೯॥ ಲಕ್ಷ್ಮಣಃ - ಸೌಮಿತ್ರಿಯು, ತ್ರಿಭಿಃಬಾಣೈಃ - ಮೂರು ಬಾಣಗಳಿಂದ, ಅಪ್ರಾಪ್ತಾ ಮೇವ - ಬಳಿಗೆ ಬರುವ ಮೊದಲೇ, ತಾಂ - ಆ ಶಕ್ತಿಯನ್ನು, ಚಿಚ್ಛೇದ - ಕತ್ತರಿಸಿದನು, ಅಥ - ಬಳಿಕ, ತದಾ - ಆ ಕಾಲದಲ್ಲಿ, ರಣೇ - ಕಾಳಗದಲ್ಲಿ, ವಾನರಾಣಾಂ - ಕಪಿಗಳ, ಸನ್ನಾದಃ - ಕೋಲಾ

ಕೈಯಲ್ಲಿದ್ದ ಬಿಲ್ಲನ್ನು ಮುರಿದು ಕೆಡವಿದನು. ॥೧೧-೧೬॥ ಅದೇ ಸಮಯದಲ್ಲಿಯೇ ವಿಭೀಷ ಣನು ಒಂದೇ ಹಾರಿಗೆ ಹಾರಿ ಆ ರಾವಣನ ರಥಕ್ಕೆ ಹೂಡಿದ್ದ ನೀಲಮೇಘೋಪಮಗಳೂ, ಪರ್ವತಸಮಾನಗಳೂ ಆದ ಕುದುರೆಗಳನ್ನು ಹೊಡೆದು ಕೆಡವಿದನು. ಮಹಾ ವೇಗವಂತನಾದ ರಾವಣನಾದರೋ ಮಡಿದ ಕುದುರೆಗಳುಳ್ಳ ತನ್ನ ರಥದಿಂದ ತಟಕ್ಕನೆ ಧುಮುಕಿ ಭೂಮಿಯಲ್ಲಿ ನಿಂತು ಮಹಾ ಕ್ರೋಧಸಮನ್ವಿತನಾಗಿ ತಮ್ಮನಾದ ವಿಭೀಷಣನ ಮೇಲೆ ಬಹಳವಾಗಿ ಕೆರಳಿ ದನು. ಮಹಾ ಪ್ರತಾಪಿಯಾದ ಅವನು ಉರಿಯುತ್ತಿರುವ ವಜ್ರಾಯುಧಕ್ಕೆ ಸಮಾನವಾದ ಶಕ್ತ್ಯಾಯುಧವನ್ನು ತೆಗೆದುಕೊಂಡು ವಿಭೀಷಣನ ಮೇಲೆಸೆದನು. ಆಗ ಲಕ್ಷ್ಮಣಸ್ವಾಮಿಯು ಆ ಶಕ್ತ್ಯಾಯುಧವು ವಿಭೀಷಣನ ಬಳಿಗೆ ಬರುವ ಮೊದಲೇ ಮೂರೇ ಮೂರು ಬಾಣ ಗಳಿಂದ ಅದನ್ನು ಪುಡಿಗುಟ್ಟಿದನು. ಆ ಸಮಯದಲ್ಲಿ ವಾನರವೀರರೆಲ್ಲರೂ ಆನಂದಾ ಧಿಕ್ಯದಿಂದ ಕೋಲಾಹಲ ಧ್ವನಿ ಮಾಡಿದರು. ॥೧೭-೨೦॥ ತರುವಾಯ ರಾವಣಾಸುರನು

ಪಪಾತ ತ್ರಿಧಾ ಭಿನ್ನಾ ಶಕ್ತಿಃ ಕಾಂಚನಮಾಲಿನೀ । ಸವಿಸ್ಫುಲಿಂಗಾ ಜ್ವಲಿತಾ ಮಹೋಲ್ಕೇವ ದಿವಶ್ಚ್ಯುತಾ ॥ ೨೧ ॥ ತತಸ್ಸಂಭಾವಿತತರಾಂ ಕಾಲೇನಾಪಿ ದುರಾಸದಾಂ । ಜಗ್ರಾಹ ವಿಪುಲಾಂ ಶಕ್ತಿಂ ದೀಪ್ಯಮಾನಾಂ ಸ್ವತೇಜಸಾ ॥ ೨೨ ॥ ಸಾವೇಗಿತಾ ಬಲವತಾ ರಾವಣೇನ ದುರಾಸದಾ । ಜಜ್ವಾಲ ಸುಮಹಾಘೋರಾ ಶಕ್ರಾಶನಿಸಮಪ್ರಭಾ ॥ ೨೩ ॥ ಏತಸ್ಮಿನ್ನಂತರೇ ವೀರೋ ಲಕ್ಷ್ಮಣಸ್ತಂ ವಿಭೀಷಣಂ । ಪ್ರಾಣಸಂಶಯಮಾಪನ್ನಂ ತೂರ್ಣಮಭ್ಯವಪದ್ಯತ ॥ ೨೪ ॥ ತಂ ವಿಮೋಚಯಿತುಂ ವೀರಶ್ಚಾಪಮಾಯಮ್ಯ ಲಕ್ಷ್ಮಣಃ । ರಾವಣಂ ಶಕ್ತಿಹಸ್ತಂ ವೈ ಶರವರ್ಷೈರವಾಕಿರತ್ ॥ ೨೫ ॥ ಕೀರ್ಯಮಾಣಃ ಶರೌಘೇಣ ವಿಸೃಷ್ಟೇನ ಮಹಾತ್ಮನಾ । ನಪ್ರಹರ್ತುಂ ಮನಶ್ಚಕ್ರೇ

ಹಲಧ್ವನಿಯು, ಉದತಿಷ್ಠತ್ - ಹುಟ್ಟಿತು. ||೨೦|| ತ್ರಿಧಾ - ಮೂರು ಬಗೆಯಾಗಿ, ಭಿನ್ನಾ - ಕತ್ತರಿಸಲ್ಪಟ್ಟ, ಕಾಂಚನಮಾಲಿನೀ - ಭಂಗಾರದ ಮಾಲಿಕೆಯುಳ್ಳ, ಸಾಶಕ್ತಿಃ - ಆ ಶಕ್ತ್ಯಾಯುಧವು, ಸವಿಸ್ಫುಲಿಂಗಾ - ಅಗ್ನಿಕಣಗಳಿಂದ ಕೂಡಿದ, ಜ್ವಲಿತಾ - ಪ್ರಜ್ವಲಿತವಾಗಿ, ದಿವಃ - ಅಂತರಿಕ್ಷದಿಂದ, ಚ್ಯುತಾ - ಜಾರುತ್ತಿರುವ, ಮಹೋಲ್ಕೇವ - ದೊಡ್ಡ ಕೊಳ್ಳಿಯಂತೆ, ಪಪಾತ - ಬಿದ್ದಿತು. ॥ ೨೧ ॥ ತತಃ - ಬಳಿಕ, ಕಾಲೇನಾಪಿ - ಯಮನಿಂದಲೂ, ಸಂಭಾವಿತತರಾಂ - ಬಹುಮಾನಿಸಲ್ಪಟ್ಟ, ದುರಾಸದಾಂ - ಹೊಂದಲಸಾಧ್ಯವಾದ, ಸ್ವತೇಜಸಾ - ತನ್ನ ತೇಜಸ್ಸಿನಿಂದ, ದೀಪ್ಯಮಾನಾಂ - ಹೊಳೆಯುತ್ತಿರುವ, ವಿಪುಲಾಂ - ವಿಸ್ತಾರವಾದ, ಶಕ್ತಿಂ - ಶಕ್ತ್ಯಾಯುಧವನ್ನು, ಜಗ್ರಾಹ - ತೆಗೆದುಕೊಂಡನು. ||೨೨|| ಬಲವತಾ - ಬಲಿಷ್ಠನಾದ, ರಾವಣೇನ - ದಶಕಂಠನಿಂದ, ವೇಗಿತಾ - ಹುಟ್ಟಿಸಿದ ವೇಗವುಳ್ಳ, ದುರಾಸದಾ - ಹೊಂದಲಸಾಧ್ಯವಾದ, ಸುಮಹಾಘೋರಾ - ಬಹಳ ಭಯಂಕರವಾದ, ಶಕ್ರಾ....ಭಾ - ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಪ್ರಕಾಶವುಳ್ಳ, ಸಾ - ಆ ಶಕ್ತ್ಯಾಯುಧವು, ಜಜ್ವಾಲ- ಉರಿಯುತ್ತಿತ್ತು. ॥ ೨೩ ॥ ಏತಸ್ಮಿನ್ನಂತರೇ - ಈ ಮಧ್ಯದಲ್ಲಿ, ವೀರಃ - ಶೂರನಾದ, ಲಕ್ಷ್ಮಣಃ - ಸೌಮಿತ್ರಿಯು, ತಂವಿಭೀಷಣಂ - ಆ ವಿಭೀಷಣನನ್ನು, ಪ್ರಾಣಸಂಶಯಂ - ಪ್ರಾಣಗಳ ಸಂಶಯವನ್ನು, ಆಪನ್ನಂ - ಹೊಂದಿದವನನ್ನಾಗಿ, ತೂರ್ಣಂ - ಜಾಗ್ರತೆಯಾಗಿ, ಅಭ್ಯವಪದ್ಯತ - ತಿಳಿದುಕೊಂಡನು. ॥ ೨೪ ॥ ವೀರಃ - ಶೂರನಾದ, ಲಕ್ಷ್ಮಣಃ - ಸೌಮಿತ್ರಿಯು, ತಂ - ಆ ವಿಭೀಷಣನನ್ನು, ವಿಮೋಚಯಿತುಂ - ಬಿಡಿಸುವದಕ್ಕೆ, ಚಾಪಂ - ಬಿಲ್ಲನ್ನು, ಆಯಮ್ಯ - ಬೊಗ್ಗಿಸಿ, ಶಕ್ತಿಹಸ್ತಂ - ಶಕ್ತ್ಯಾಯುಧವೇ ಹಸ್ತದಲ್ಲುಳ್ಳ, ರಾವಣಂ - ದಶಕಂಠನನ್ನು, ಶರವರ್ಷೈಃ - ಬಾಣವರ್ಷಗಳಿಂದ, ಅವಾಕಿರತ್ - ಎರಚಿದನು. ||೨೫|| ಮಹಾತ್ಮನಾ - ಮಹಾ ಧೈರ್ಯಶಾಲಿಯಾದ ಸೌಮಿತ್ರಿಯಿಂದ, ವಿಸೃಷ್ಟೇನ - ಬಿಡಲ್ಪಟ್ಟ, ಶರೌಘೇಣ - ಸರಳುಗಳ ವರ್ಷದಿಂದ, ಕೀರ್ಯಮಾಣಃ - ಎರಚಲ್ಪಟ್ಟವನಾಗಿ, ವಿಮು....ಮಃ - ಪರಾಙ್ಮುಖನಾಗಿ ಮಾಡಲ್ಪಟ್ಟ ಪರಾಕ್ರಮವುಳ್ಳವನಾಗಿ, ಪ್ರಹರ್ತುಂ - ಹೊಡೆ

ಮಹತ್ತರವಾದ ಮತ್ತೊಂದು ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡನು. ಬಹಳ ವೇಗವಾಗಿ ತೆಗೆದುಕೊಳ್ಳಲಾದ ಆ ಶಕ್ತಿಯು ಶಕ್ರನ ವಜ್ರಾಯುಧದಂತೆ ಬಹಳ ಜಾಜ್ವಲ್ಯಮಾನವಾಗಿದ್ದಿತು. ಇದೇ ಸಮಯದಲ್ಲಿಯೇ ವೀರನಾದ ಲಕ್ಷ್ಮಣಸ್ವಾಮಿಯು, ಆ ಶಕ್ತ್ಯಾಯುಧವನ್ನು ಕಂಡು ಪ್ರಾಣಸಂಶಯವನ್ನು ಹೊಂದಿ ನಡುಗುತ್ತಿರುವ ವಿಭೀಷಣನನ್ನು ನೋಡಿ ಅವನನ್ನು ಆ ಭಯದಿಂದ ಬಿಡಿಸಲೋಸುಗ ತನ್ನ ಬಿಲ್ಲನ್ನು ಹಿಡಿದು ಬೊಗ್ಗಿಸಿ ಶಕ್ತಿಹಸ್ತನಾದ ಆ ರಾವಣನ ಮೇಲೆ ಬಾಣಗಳ ಮಳೆಗರೆದನು. ॥ ೨೧—೨೫ ॥ ಇದರಿಂದ ರಾವಣನು ವಿಮುಖವಿಕ್ರಮನಾಗಿ ತಮ್ಮನ ಮೇಲೆ ಆ ಶಕ್ತಿಯನ್ನು ಪ್ರಯೋಗಿಸಲು ಮನಸ್ಸು ಮಾಡದೆ ಹೋದನು.

ವಿಮುಖೀಕೃತವಿಕ್ರಮಃ ॥ ೨೬ ॥ ಮೋಕ್ಷಿತಂ ಭ್ರಾತರಂ ದೃಷ್ಟ್ವಾ ಲಕ್ಷ್ಮಣೇನ
ಸರಾವಣಃ । ಲಕ್ಷ್ಮಣಾಭಿಮುಖಸ್ತಿಷ್ಠನ್ನಿದಂ ವಚನಮಬ್ರವೀತ್ ॥ ೨೭ ॥ "ಮೋಕ್ಷಿ
ತಸ್ತೇ ಬಲಶ್ಲಾಘಿನ್! ಯಸ್ಮಾದೇವಂ ವಿಭೀಷಣಃ । ವಿಮುಚ್ಯ ರಾಕ್ಷಸಂ ಶಕ್ತಿಸ್ತ್ವ
ಯೀಯಂ ವಿನಿಪಾತ್ಯತೇ ॥ ೨೮ ॥ ಏಷಾ ತೇ ಹೃದಯಂ ಭಿತ್ತ್ವಾ ಶಕ್ತಿರ್ಲೋಹಿತ
ಲಕ್ಷಣಾ । ಮದ್ಬಾಹುಪರಿಘೋತ್ಸೃಷ್ಟಾ ಪ್ರಾಣಾನಾದಾಯ ಯಾಸ್ಯತಿ" ॥ ೨೯ ॥
ಇತ್ಯೇವಮುಕ್ತ್ವಾ ತಾಂ ಶಕ್ತಿಮಷ್ಟಘಂಟಾಂ ಮಹಾಸ್ವನಾಂ । ಮಯೇನ ಮಾಯಾ
ವಿಹಿತಾಮಮೋಘಾಂ ಶತ್ರುಘಾತಿನೀಂ ॥೩೦॥ ಲಕ್ಷ್ಮಣಾಯ ಸಮುದ್ದಿಶ್ಯ ಜ್ವಲಂತೀ

ಯುವುದಕ್ಕೆ, ಮನಃ - ಮನವನ್ನು, ನಚಕ್ರೇ - ಮಾಡಲಿಲ್ಲವು. ॥ ೨೬ ॥ ಭ್ರಾತರಂ - ತಮ್ಮನಾದ ವಿಭೀಷಣನನ್ನು, ಲಕ್ಷ್ಮಣೇನ - ಸೌಮಿತ್ರಿಯಿಂದ, ಮೋಕ್ಷಿತಂ - ಬಿಡಿಸಲ್ಪಟ್ಟವನನ್ನಾಗಿ, ದೃಷ್ಟ್ವಾ-ಕಂಡು, ಸರಾವಣಃ - ಆ ದಶಕಂಠನು, ಲಕ್ಷ್ಮ......ಖಃ ಸೌಮಿತ್ರಿಗೆ ಅಭಿಮುಖವಾಗಿ, ತಿಷ್ಠನ್-ನಿಂತು, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೨೭॥ ಬಲಶ್ಲಾಘಿನ್ - ದೇಹತ್ರಾಣದಿಂದ ಶ್ಲಾಘಿಸತಕ್ಕವನೇ, ಯಸ್ಮಾತ್ - ಯಾವ ಕಾರಣದಿಂದ, ವಿಭೀಷಣಃ - ವಿಭೀಷಣನು, ತೇ - ನಿನ್ನಿಂದ, ಏವಂ - ಈ ಪರಿಯಾಗಿ, ಮೋಕ್ಷಿತಃ - ಬಿಡಿಸಲ್ಪಟ್ಟನೋ, ತಸ್ಮಾತ್ - ಆ ಕಾರಣದಿಂದ, ರಾಕ್ಷಸಂ-ಈ ವಿಭೀಷಣನನ್ನು, ವಿಮುಚ್ಯ - ಬಿಟ್ಟು, ಇಯಂಶಕ್ತಿಃ - ಈ ಶಕ್ತ್ಯಾಯುಧವು, ತ್ವಯಿ - ನಿನ್ನಲ್ಲಿ, ವಿನಿಪಾತ್ಯತೇ - ಕೆಡಹಲ್ಪಡುತ್ತದೆ. ॥೨೮॥ ಮದ್ಬಾ....ಷ್ಟಾ - ಊರುಬಾಗಿಲು ಲಾಲವುಂಡಿಗೆ ಸಮಾನವಾದ ನನ್ನ ಭುಜಗಳ ದೆಸೆಯಿಂದ ಬಿಡಲ್ಪಟ್ಟ, ಲೋಹಿತಲಕ್ಷಣಾ - ಕೆಂಪಾದ ಗುರ್ತುಗಳುಳ್ಳ, ಏಷಾ ಶಕ್ತಿಃ - ಈ ಶಕ್ತ್ಯಾಯುಧವು, ತೇ - ನಿನ್ನ, ಹೃದಯಂ - ಎದೆಯನ್ನು, ಭಿತ್ತ್ವಾ - ಭೇದಿಸಿ, ಪ್ರಾಣಾನ್-ಪ್ರಾಣಗಳನ್ನು, ಆದಾಯ - ತೆಗೆದುಕೊಂಡು, ಯಾಸ್ಯತಿ - ಹೋಗುತ್ತದೆ. ॥ ೨೯ ॥ ಇತ್ಯೇವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಅಷ್ಟಘಂಟಾಂ - ಎಂಟು ಘಂಟೆಗಳುಳ್ಳ, ಮಹಾಸ್ವನಾಂ - ಮಹಾಧ್ವನಿಗಳುಳ್ಳ, ಮಯೇನ - ಮಯಾಸುರನಿಂದ, ಮಾಯಾವಿಹಿತಾಂ - ಮಾಯೆಯಿಂದ ಮಾಡಲ್ಪಟ್ಟ, ಅಮೋಘಾಂ - ವ್ಯರ್ಥವಾಗದಿರುವ, ಶತ್ರುಘಾತಿನೀಂ - ಶತ್ರುಸಂಹಾರಕವಾದ, ತಾಂಶಕ್ತಿಂ - ಆ ಶಕ್ತಿಯನ್ನು, ಲಕ್ಷ್ಮಣಾಯ - ಸೌಮಿತ್ರಿಯನ್ನು, ಸಮುದ್ದಿಶ್ಯ - ಉದ್ದೇಶ ಮಾಡಿ, ರಾವಣಃ - ದಶಕಂಠನು, ಪರಮಕ್ರುದ್ಧಃ - ಬಹಳ ಕುಪಿತನಾಗಿ, ತೇಜಸಾ - ತೇಜಸ್ಸಿನಿಂದ, ಜ್ವಲಂತೀಮಿವ -

---

ಹೀಗೆ ಲಕ್ಷ್ಮಣನು ವಿಭೀಷಣನನ್ನುಳಿಸಿದುದನ್ನು ಕಂಡು ರಾಕ್ಷಸರಾಜನಾದ ರಾವಣನು ಲಕ್ಷ್ಮಣಸ್ವಾಮಿಗೆದುರಾಗಿ ನಿಂತು, "ಎಲೈ ಬಲಶ್ಲಾಘ್ಯನಾದ ಲಕ್ಷ್ಮಣನೇ! ನೀನು ಈ ನನ್ನ ಶಕ್ತ್ಯಾಯುಧದಿಂದ ಯಮನಾಲಯಕ್ಕೆ ಹೋಗುತ್ತಿದ್ದ ವಿಭೀಷಣನನ್ನು ಬಿಡಿಸಿ ಕಾಪಾಡಿದೆಯಲ್ಲವೆ. ಇದಿಗೋ, ನನ್ನ ಬಾಹುವೇಗದಿಂದ ಬಿಡಲಾಗುವ ಅದೇ ಶಕ್ತಿಯೇ ಕೆಂಪು ಬಣ್ಣವೇ ಲಕ್ಷಣವಾಗಿ ಉಳ್ಳ ವಿಭೀಷಣನನ್ನು ಬಿಟ್ಟು ನಿನ್ನಲ್ಲಿ ಬೀಳುತ್ತದೆ. ಈ ಶಕ್ತ್ಯಾಯುಧವು ನಿನ್ನ ಹೃದಯವನ್ನು ಭೇದಿಸಿ ನಿನ್ನ ಪ್ರಾಣಗಳನ್ನಪಹರಿಸುತ್ತದೆ" ಎಂದು ಹೇಳಿದನು. ॥ ೨೬-೨೯ ॥ ರಾಕ್ಷಸರಾಜನಾದ ರಾವಣಾಸುರನು ಈ ರೀತಿ ಹೇಳಿ, ಎಂಟು ಘಂಟೆಗಳಿಂದಲಂಕೃತವಾಗಿ, ಮಯನ ಮಾಯಾಬಲದಿಂದ ನಿರ್ಮಿತವಾಗಿ, ಭಯಂಕರ ಧ್ವನಿಯುಳ್ಳುದಾಗಿಯೂ, ಶತ್ರುಗಳನ್ನು ನಾಶಗೊಳಿಸುವುದರಲ್ಲಿ ಅಪರಿಮಿತ ಸಾಮರ್ಥ್ಯವುಳ್ಳುದಾಗಿಯೂ, ಭಯಂಕರ ತೇಜಸ್ಸಿನಿಂದ ಜಾಜ್ವಲ್ಯಮಾನವಾಗಿ ಬೆಳಗುತ್ತಿರುವುದಾಗಿಯೂ

ಮಿವ ತೇಜಸಾ । ರಾವಣಃ ಪರಮಕ್ರುದ್ಧಶ್ಚಿಕ್ಷೇಪಚ ನನಾದಚ ॥ ೩೧ ॥ ಸಾ ಕ್ಷಿಪ್ತಾ ಭೀಮವೇಗೇನ ಶಕ್ರಾಶನಿಸಮಸ್ವನಾ । ಶಕ್ತಿರಭ್ಯಪತದ್ವೇಗಾಲ್ಲಕ್ಷ್ಮಣಂ ರಣಮೂರ್ಧನಿ ॥ ೩೨ ॥ ತಾಮನುವ್ಯಾಹರಚ್ಛಕ್ತಿಮಾಪತಂತೀಂ ಸ ರಾಘವಃ । ಸ್ವಸ್ತ್ಯಸ್ತು ಲಕ್ಷ್ಮಣಾಯೇತಿ ಮೋಘಾಭವ ಹತೋದ್ಯಮಾ ॥ ೩೩ ॥ ರಾವಣೇನ ರಣೇ ಶಕ್ತಿಃ ಕ್ರುದ್ಧೇನಾಶೀವಿಷೋಪಮಾ । ಮುಕ್ತಾ ಶೂರಸ್ಯ ಭೀತಸ್ಯ ಲಕ್ಷ್ಮಣಸ್ಯ ಮಮಜ್ಜ ಸಾ ॥ ೩೪ ॥ ನ್ಯಪತತ್ಸಾ ಮಹಾವೇಗಾಲ್ಲಕ್ಷ್ಮಣಸ್ಯ ಮಹೋರಸಿ । ಜಿಹ್ವೇವೋರಗರಾಜಸ್ಯ ದೀಪ್ಯಮಾನಾ ಮಹಾದ್ಯುತಿಃ ॥ ೩೫ ॥ ತತೋ ರಾವಣವೇಗೇನ ಸುದೂರಮವ

ಪ್ರಜ್ವಲಿಸುತ್ತದೆಯೋ ಎಂಬಂತಿರುವ, ತಾಂ - ಆ ಶಕ್ತಿಯನ್ನು, ಚಿಕ್ಷೇಪ - ಎಸೆದನು, ನನಾದಚ - ಕೂಗು ಹಾಕಿದನು. ॥ ೩೧ ॥ ಭೀಮವೇಗೇನ - ಭಯಂಕರ ವೇಗದಿಂದ, ಕ್ಷಿಪ್ತಾ - ಎಸೆಯಲ್ಪಟ್ಟ, ಶಕ್ರಾ....ನಾ - ದೇವೇಂದ್ರನ ವಜ್ರಾಯುಧಕ್ಕೆ ಸಮಾನವಾದ ಧ್ವನಿಯುಳ್ಳ, ಸಾಶಕ್ತಿಃ - ಆ ಶಕ್ತ್ಯಾಯುಧವು, ವೇಗಾತ್ - ವೇಗದಿಂದ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ರಣೇ - ಯುದ್ಧರಂಗದಲ್ಲಿ, ಅಭ್ಯಪತತ್ - ಅಭಿಮುಖವಾಗಿ ಬಿತ್ತು. ॥೩೨॥ ಸರಾಘವಃ - ಆ ಶ್ರೀರಾಮನು, ಆಪತಂತೀಂ - ಬರುತ್ತಿರುವ, ತಾಂಶಕ್ತಿಂ - ಆ ಶಕ್ತ್ಯಾಯುಧವನ್ನು ಕುರಿತು, ಲಕ್ಷ್ಮಣಾಯ - ಲಕ್ಷ್ಮಣನಿಗೆ, ಸ್ವಸ್ತಿ - ಶುಭವು, ಅಸ್ತು - ಆಗಲಿ, ಮೋಘಾ - ವ್ಯರ್ಥವಾದದ್ದು, ಭವ - ಆಗು, ಹತೋದ್ಯಮಾ - ಹೊಡೆಯಲ್ಪಟ್ಟ ಉದ್ಯೋಗವುಳ್ಳದ್ದು, ಭವ - ಆಗು, ಇತಿ - ಇಂತೆಂದು, ಅನುವ್ಯಾಹರತ್ - ಹೇಳಿದನು. ॥೩೩॥ ಕ್ರುದ್ಧೇನ - ಕೋಪಿಷ್ಠನಾದ, ರಾವಣೇನ - ದಶಕಂಧರನಿಂದ, ಮುಕ್ತಾ - ಬಿಡಲ್ಪಟ್ಟ, ಆಶೀ....ಮಾ - ಮಹಾ ಸರ್ಪಕ್ಕೆ ಸಮಾನವಾದ, ಸಾಶಕ್ತಿಃ - ಆ ಶಕ್ತ್ಯಾಯುಧವು, ಅಭೀತಸ್ಯ - ಭಯಗೊಳ್ಳದಿರುವ, ಲಕ್ಷ್ಮಣಸ್ಯ - ಸೌಮಿತ್ರಿಯ, ಉರಸಿ - ವಕ್ಷಸ್ಥಳದಲ್ಲಿ, ಅಶು - ಜಾಗ್ರುತೆಯಾಗಿ, ಮಮಜ್ಜ - ಮುಳುಗಿತು. ॥ ೩೪ ॥ ಮಹಾದ್ಯುತಿಃ - ಮಹಾ ತೇಜಸ್ಸುಳ್ಳ, ಉರಗರಾಜಸ್ಯ - ಆದಿಶೇಷನ, ಜಿಹ್ವೇವ - ನಾಲಗೆಯಂತೆ, ದೀಪ್ಯಮಾನಾ - ಹೊಳೆಯುತ್ತಿರುವ, ಮಹಾವೇಗಾ - ಬಹು ವೇಗವುಳ್ಳ, ಸಾ - ಆ ಶಕ್ತ್ಯಾಯುಧವು, ಲಕ್ಷ್ಮಣಸ್ಯ - ಲಕ್ಷ್ಮಣನ, ಮಹೋರಸಿ - ದೊಡ್ಡ ಎದೆಯಲ್ಲಿ, ನ್ಯಪತತ್ - ಬಿತ್ತು. ॥ ೩೫ ॥ ತತಃ - ಬಳಿಕ, ರಾವಣವೇಗೇನ - ದಶಕಂಠನ ಕರವೇಗದಿಂದ, ಸುದೂರಂ - ಬಹಳ ದೂರ

ಇರುವ ಆ ಶಕ್ತ್ಯಾಯುಧವನ್ನು ರಾಮಾನುಜನಾದ ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಹೀಗೆ ಆಯುಧವನ್ನು ವೇಗವಾಗಿ ಪ್ರಯೋಗಿಸಿ ಬಹು ಭಯಂಕರವಾಗಿ ಸಿಂಹಗರ್ಜನೆ ಮಾಡಿದನು. ಹೀಗೆ ಅಪರಿಮಿತವಾಗಿ ಕೋಪೋದ್ರಿಕ್ತನಾದ ರಾವಣಾಸುರನಿಂದ ಪ್ರಯೋಗಿಸಲ್ಪಟ್ಟುದೂ, ಗುಡುಗಿನ ಧ್ವನಿಯನ್ನನುಕರಿಸುವ ಭಯಂಕರ ಧ್ವನಿಯುಳ್ಳುದೂ ಆದ ಆ ಶಕ್ತ್ಯಾಯುಧವು ಲಕ್ಷ್ಮಣನನ್ನು ಕುರಿತು ಮಹಾ ವೇಗದಿಂದ ಬಂದಿತು. ಆಗ ಲಕ್ಷ್ಮಣನ ಮೇಲೆ ಬರುತ್ತಿರುವ ಆ ರಾಕ್ಷಸನ ಶಕ್ತ್ಯಾಯುಧವನ್ನು ನೋಡಿ ಶ್ರೀರಾಮಮೂರ್ತಿಯು, "ಲಕ್ಷ್ಮಣಸ್ವಾಮಿಗೆ ಕ್ಷೇಮವಾಗಲಿ! ಈ ಶಕ್ತಿಯು ವ್ಯರ್ಥವಾದ ಸಾಮರ್ಥ್ಯವುಳ್ಳುದಾಗಲಿ" ಎಂದು ಹರಸಿದನು. ಆದರೂ ರಾವಣನು ಪ್ರಯೋಗಿಸಿದ ಆ ಶಕ್ತಿಯು ಕ್ರೋಧಸಮನ್ವಿತವಾದ ಸರ್ಪದಂತೆ ಮಹಾ ವೇಗದಿಂದೈತಂದು ಲಕ್ಷ್ಮಣನ ವಕ್ಷಸ್ಥಲದಲ್ಲಿ ಬಿದ್ದಿತು. ಆ ಶಕ್ತಿಯ ಹೊಡೆತಕ್ಕೆ ತಾಳಲಾರದೆ ಲಕ್ಷ್ಮಣನು ಕೆಳಕ್ಕೆ ಬಿದ್ದನು. ॥೩೦–೩೫॥ ಹೀಗೆ ಶಕ್ತಿಘಾತದಿಂದ ಮೂರ್ಛೆಯೊಂದಿ ಕೆಳಕ್ಕೆ ಬಿದ್ದ ಲಕ್ಷ್ಮಣನನ್ನು ನೋಡಿ

ಗಾಢಯಾ । ಶಕ್ತ್ಯಾ ನಿರ್ಭಿನ್ನಹೃದಯಃ ಪಪಾತ ಭುವಿ ಲಕ್ಷ್ಮಣಃ ॥ ೩೬ ॥ ತದವಸ್ಥಂ ಸಮೀಪಸ್ಥೋ ಲಕ್ಷ್ಮಣಂ ಪ್ರೇಕ್ಷ್ಯ ರಾಘವಃ । ಭ್ರಾತೃಸ್ನೇಹಾನ್ಮಹಾತೇಜಾ ವಿಷಣ್ಣಹೃದಯೋಽಭವತ್ ॥ ೩೭ ॥ ಸಮುಹೂರ್ತಮನುಧ್ಯಾಯ ಬಾಷ್ಪವ್ಯಾಕುಲಲೋಚನಃ । ಬಭೂವ ಸಂರಬ್ಧತರೋ ಯುಗಾಂತ ಇವ ಪಾವಕಃ ॥ ೩೮ ॥ ನವಿಷಾದಸ್ಯ ಕಾಲೋಽಯಮಿತಿ ಸಂಚಿಂತ್ಯ ರಾಘವಃ । ಚಕ್ರೇ ಸುತುಮುಲಂ ಯುದ್ಧಂ ರಾವಣಸ್ಯ ವಧೇ ಧೃತಃ । ಸರ್ವಯತ್ನೇನ ಮಹತಾ ಲಕ್ಷ್ಮಣಂ ಸನ್ನಿರೀಕ್ಷ್ಯಚ ॥೩೯॥ ಸ ದದರ್ಶ ತತೋ ರಾಮಃ ಶಕ್ತ್ಯಾ ಭಿನ್ನಂ ಮಹಾಹವೇ । ಲಕ್ಷ್ಮಣಂ ರುಧಿರಾದಿಗ್ಧಂ ಸಪನ್ನಗಮಿವಾಚಲಂ ॥೪೦॥ ತಾಮಪಿ ಪ್ರಹಿತಾಂ ಶಕ್ತಿಂ ರಾವಣೇನ ಬಲೀಯಸಾ ।

ದೇಶವನ್ನು, ಅವಗಾಢಯಾ - ಪ್ರವೇಶಿಸುತ್ತಿರುವ, ಶಕ್ತ್ಯಾ - ಶಕ್ತ್ಯಾಯುಧದಿಂದ, ನಿರ್ಭಿ....ಯಃ - ಭೇದಿಸಲ್ಪಟ್ಟ ಎದೆಯುಳ್ಳವನಾಗಿ, ಲಕ್ಷ್ಮಣಃ - ಸೌಮಿತ್ರಿಯು, ಭುವಿ - ನೆಲದಲ್ಲಿ, ಪಪಾತ - ಬಿದ್ದನು. ॥೩೬॥ ಮಹಾತೇಜಾಃ - ಮಹಾ ತೇಜೋವಂತನಾದ, ಸಮೀಪಸ್ಥಃ - ಸಮೀಪವರ್ತಿಯಾದ, ರಾಘವಃ- ಶ್ರೀರಾಮನು, ತದವಸ್ಥಂ - ಅಂಥಾ ಅವಸ್ಥೆಯನ್ನು ಹೊಂದಿರುವ, ಲಕ್ಷ್ಮಣಂ - ಸೌಮಿತ್ರಿಯನ್ನು, ಅವೇಕ್ಷ್ಯ - ಕಂಡು, ಭ್ರಾತೃಸ್ನೇಹಾತ್ - ತಮ್ಮನ ಮೇಲಣ ವಾತ್ಸಲ್ಯದಿಂದ, ವಿಷಣ್ಣಹೃದಯಃ - ದೀನವಾದ ಮನವುಳ್ಳವನು, ಅಭವತ್ - ಆದನು. ॥ ೩೭ ॥ ಸಃ - ಆ ಶ್ರೀರಾಮನು, ಬಾಷ್ಪ....ನಃ - ಕಂಬನಿಯಿಂದ ಕದಡಿದ ಕಣ್ಣುಗಳುಳ್ಳವನಾಗಿ, ಮುಹೂರ್ತಂ - ಮುಹೂರ್ತಕಾಲವು, ಅನುಧ್ಯಾಯ - ಧ್ಯಾನ ಮಾಡಿ, ಯುಗಾಂತೇ - ಪ್ರಳಯಕಾಲದಲ್ಲಿನ, ಪಾವಕಇವ - ಅಗ್ನಿಯಂತೆ, ಸಂರಬ್ಧತರಃ - ಅತಿ ಕೋಪವುಳ್ಳವನು, ಬಭೂವ - ಆದನು. ॥ ೩೮ ॥ ರಾಘವಃ - ಶ್ರೀರಾಮನು, ವಿಷಾದಸ್ಯ - ವ್ಯಸನಕ್ಕೆ, ಅಯಂಕಾಲಃ - ಈ ಕಾಲವು, ನ - ಅಲ್ಲ, ಇತಿ - ಇಂತೆಂದು, ಸಂಚಿಂತ್ಯ - ಆಲೋಚಿಸಿ, ರಾವಣಸ್ಯ - ರಾವಣನ, ವಧೇ - ಸಂಹಾರದಲ್ಲಿ, ಧೃತಃ - ಧೈರ್ಯ ಮಾಡಿ, ಮಹತಾ - ಮಹತ್ತರವಾದ, ಸರ್ವಯತ್ನೇನ - ಸರ್ವ ಪ್ರಯತ್ನದಿಂದಲೂ, ಲಕ್ಷ್ಮಣಂ - ಸೌಮಿತ್ರಿಯನ್ನು, ಸನ್ನಿರೀಕ್ಷ್ಯ - ನೋಡುತ್ತಲೇ, ಸುತುಮುಲಂ - ಬಹಳ ಸಂಕುಲವಾದ, ಯುದ್ಧಂ - ಕಾಳಗವನ್ನು, ಚಕ್ರೇ - ಮಾಡಿದನು. ॥ ೩೯ ॥ ತತಃ - ಬಳಿಕ, ಸರಾಮಃ - ಆ ಶ್ರೀರಾಮನು, ಮಹಾಹವೇ - ದೊಡ್ಡ ಕಾಳಗದಲ್ಲಿ, ಶಕ್ತ್ಯಾ - ಶಕ್ತ್ಯಾಯುಧದಿಂದ, ರುಧಿರಾಗ್ಧಂ - ರಕ್ತದಿಂದ ನೆನೆಸಲ್ಪಟ್ಟ, ಸಪನ್ನಗಂ - ಹಾವುಗಳಿಂದೊಡಗೂಡಿದ, ಅಚಲಮಿವ - ಬೆಟ್ಟದಂತಿರುವ, ಲಕ್ಷ್ಮಣಂ - ಸೌಮಿತ್ರಿಯನ್ನು; ದದರ್ಶ - ಕಂಡನು. ॥೪೦॥ ಬಲೀಯಸಾ - ಬಲಿಷ್ಠನಾದ, ರಾವಣೇನ - ದಶಗ್ರೀವನಿಂದ, ಪ್ರಹಿತಾಂ - ಪ್ರೇರೇಪಿಸಲ್ಪಟ್ಟ,

---

ರಘುಕುಲೋದ್ಭವನಾದ ಶ್ರೀರಾಮಮೂರ್ತಿಯು ವ್ಯಸನಸಂತಪ್ತನಾಗಿ ಸ್ವಲ್ಪ ಹೊತ್ತು ಕಂಬನಿಗೂಡಿದ ಕಣ್ಣುಗಳುಳ್ಳವನಾದನು. ಆ ತರುವಾಯ ಆತನು ಪ್ರಳಯಾಗ್ನಿಯಂತೆ ಮಹಾ ಕೋಪೋದ್ರಿಕ್ತನಾದನು. ಇದು ದುಃಖಿಸಲು ತಕ್ಕ ಸಮಯವೆಂದು ಚಿಂತಿಸಿ ಆತನು ರಾವಣಾಸುರನೊಡನೆ ಬಹು ಭಯಂಕರವಾಗಿ ಕಾಳಗ ಮಾಡಲುಪಕ್ರಮಿಸಿದನು. ಲಕ್ಷ್ಮಣನನ್ನು ಆ ಸ್ಥಿತಿಯಲ್ಲಿ ಕಂಡು ಶ್ರೀರಾಮನಿಗೆ ರಾವಣನ ಮೇಲೆ ಮಹಾ ಕ್ರೋಧವುಕ್ಕೇರಿತು. ಆತನು ಮತ್ತಷ್ಟು ರಭಸವಾಗಿ ಯುದ್ಧಮಾಡತೊಡಗಿದನು. ಇತ್ತ ಲಕ್ಷ್ಮಣನು ಶಕ್ತಿಘಾತದಿಂದ ರಕ್ತಸಿಕ್ತನಾಗಿ ಸರ್ಪವೇಷ್ಟಿತವಾದ ಪರ್ವತದಂತೆ ಭೂಮಿಯಲ್ಲಿ ಬಿದ್ದಿದ್ದನು. ॥ ೩೯–೪೦ ॥ ಮಹಾ ಬಲಾಢ್ಯನಾದ ರಾವಣಾಸುರನು ಬಲಪ್ರಯೋಗದಿಂದೆಸೆದ ಆ ಶಕ್ತಿ

ಯತ್ನತಸ್ತೇ ಹರಿಶ್ರೇಷ್ಠಾ ನಶೇಕುರವಮರ್ದಿತುಂ ||೪೧|| ಅರ್ದಿತಾಶ್ಚೈವ ಬಾಣೌಘೈಃ ಕ್ಷಿಪ್ರಹಸ್ತೇನ ರಕ್ಷಸಾ | ಸೌಮಿತ್ರಿಂ ಸಾ ವಿನಿರ್ಭಿದ್ಯ ಪ್ರವಿಷ್ಟಾ ಧರಣೀತಲಂ ||೪೨|| ತಾಂ ಕರಾಭ್ಯಾಂ ಪರಾಮೃಶ್ಯ ರಾಮಃ ಶಕ್ತಿಂ ಭಯಾವಹಂ | ಬಭಂಜ ಸಮರೇ ಕ್ರುದ್ಧೋ ಬಲವಾನ್ ವಿಚಕರ್ಷಚ || ೪೩ || ಅಚಿಂತಯಿತ್ವಾ ತಾನ್ ಬಾಣಾನ್ ಸಮಾಶ್ಲಿಷ್ಯ ಚ ಲಕ್ಷ್ಮಣಂ | ಅಬ್ರವೀಚ್ಚ ಹನೂಮಂತಂ ಸುಗ್ರೀವಂ ಚೈವ ರಾಘವಃ ||೪೪|| "ಲಕ್ಷ್ಮಣಂ ಪರಿವಾರ್ಯೇಹ ತಿಷ್ಠಧ್ವಂ ವಾನರೋತ್ತಮಾಃ|ಪರಾಕ್ರಮಸ್ಯ ಕಾಲೋಽಯಂ ಸಂಪ್ರಾಪ್ತೋ ಮೇ ಚಿರೇಪ್ಸಿತಃ || ೪೫ || ಪಾಪಾತ್ಮಾಽಯಂ ದಶಗ್ರೀವೋ

ತಾಂಶಕ್ತಿಂ - ಆ ಶಕ್ತಿಯನ್ನು, ಅವಮರ್ದಿತುಂ - ಹೊಡೆಯುವುದಕ್ಕೆ, ಯತ್ನತಃ - ಪ್ರಯತ್ನದ ದೆಸೆಯಿಂದ, ತೇಹರಿಶ್ರೇಷ್ಠಾಃ - ಆ ವಾನರೋತ್ತಮರು, ನಶೇಕುಃ - ಸಮರ್ಥರಲ್ಲದೇ ಹೋದರು, ಕ್ಷಿಪ್ರಹಸ್ತೇನ - ಶೀಘ್ರ ಹಸ್ತವುಳ್ಳ, ರಕ್ಷಸಾ - ರಾವಣನಿಂದ, ಬಾಣೌಘೈಃ - ಸರಳುಗಳ ತಂಡಗಳಿಂದ, ಅರ್ದಿತಾಶ್ಚೈವ - ಹೊಡೆಯಲ್ಪಟ್ಟವರಾದರು. ||೪೧ ೪೨| ಸಾ - ಆ ಶಕ್ತ್ಯಾಯುಧವು, ಸೌಮಿತ್ರಿಂ - ಸೌಮಿತ್ರಿಯನ್ನು, ವಿನಿರ್ಭಿದ್ಯ - ಭೇದಿಸಿ, ಧರಣೀತಲಂ - ಭೂಪ್ರದೇಶವನ್ನು, ಪ್ರವಿಷ್ಟಾ - ಹೊಕ್ಕಿತು, ಬಲವಾನ್ - ಬಲವಂತನಾದ, ರಾಮಃ - ಶ್ರೀರಾಮನು, ಸಮರೇ - ಕಾಳಿಗದಲ್ಲಿ, ಕ್ರುದ್ಧಃ - ಕುಪಿತನಾಗಿ, ಭಯಾವಹಾಂ - ಭಯವನ್ನುಂಟುಮಾಡುತ್ತಿರುವ, ತಾಂಶಕ್ತಿಂ - ಆ ಶಕ್ತಿಯನ್ನು, ಕರಾಭ್ಯಾಂ - ಹಸ್ತಗಳಿಂದ, ಪರಾಮೃಶ್ಯ - ಹಿಡಿದುಕೊಂಡು, ಬಭಂಜ - ಮುರಿದುಹಾಕಿದನು, ವಿಚಕರ್ಷಚ - ಸೆಳೆದನು. || ೪೩ || ಬಲೀಯಸಾ - ಬಲಿಷ್ಠನಾದ, ರಾವಣೇನ - ದಶಗ್ರೀವನಿಂದ, ಮುಕ್ತಾಂ - ಬಿಡಲ್ಪಟ್ಟ, ತಾಂಶಕ್ತಿಂ - ಆ ಶಕ್ತಿಯನ್ನು, ನಿಷ್ಕರ್ಷತಃ - ಸೆಳೆಯುತ್ತಿರುವ, ತಸ್ಯ - ಆ ಶ್ರೀರಾಮನ, ಸರ್ವೇಷುಗಾತ್ರೇಷು-ಸಮಸ್ತಾವಯವಗಳಲ್ಲಿಯೂ, ಮರ್ಮಭೇದಿನಃ-ಮರ್ಮವನ್ನು ಭೇದಿಸುತ್ತಿರುವ, ಶರಾಃ-ಸರಳುಗಳು, ಪಾತಿತಾಃ-ಬೀಳಿಸಲ್ಪಟ್ಟವು. || ೪೪ || ರಾಘವಃ - ಶ್ರೀರಾಮನು, ತಾನ್‌ಬಾಣಾನ್ - ಆ ಬಾಣಗಳನ್ನು, ಅಚಿಂತಯಿತ್ವಾ-ಆಲೋಚಿಸದೆಯೇ, ಲಕ್ಷ್ಮಣಂ-ಸೌಮಿತ್ರಿಯನ್ನು, ಸಮಾಶ್ಲಿಷ್ಯ-ಅಪ್ಪಿಕೊಂಡು, ಹನೂಮಂತಂ - ಆಂಜನೇಯನನ್ನು, ಸುಗ್ರೀವಂಚೈವ - ಸುಗ್ರೀವನನ್ನೂ ಕುರಿತು, ಅಬ್ರವೀಚ್ಚ - ಹೇಳಿದನು, ವಾನರೋತ್ತಮಾಃ - ಕಪಿಶ್ರೇಷ್ಠರುಗಳಿರಾ, ಇಹ - ಇಲ್ಲಿ ಲಕ್ಷ್ಮಣಂ - ಸೌಮಿತ್ರಿಯನ್ನು, ಪರಿವಾರ್ಯ - ಸುತ್ತಿಕೊಂಡು, ತಿಷ್ಠಧ್ವಂ - ಇರಿ. || ೪೫ || ಪರಾಕ್ರಮಸ್ಯ -

ಯನ್ನು ವಾನರರಾರೂ ಮರ್ದಿಸಲಾರದೆ ಹೋದರು. ಅದನ್ನು ಮುಟ್ಟಲು ಹೋಗುವಷ್ಟರಲ್ಲಿಯೇ ರಾವಣನು ಅವರ ಮೇಲೆ ಬಾಣಗಳನ್ನು ಹಾಕಿ ಬಾಧಿಸಿ ಬಿಡುತ್ತಿದ್ದನು. ಆ ಶಕ್ತ್ಯಾಯುಧವಾದರೋ ಲಕ್ಷ್ಮಣಸ್ವಾಮಿಯ ವಕ್ಷಸ್ಥಳವನ್ನು ಭೇದಿಸಿ ಹೊರಬಂದು ಭೂಮಿಯನ್ನು ಹೊಕ್ಕಿತು. ಆಗ ಶ್ರೀರಾಮನು ರೋಷಸಮನ್ವಿತನಾಗಿ ಮಹಾ ಭಯಂಕರವಾದ ಆ ಶಕ್ತಿಯನ್ನು ಕೈಯಲ್ಲಿಯೇ ಎತ್ತಿ ಹಿಡಿದು ಎಳೆದು ಮುರಿದಿಕ್ಕಿದನು. ಆ ಸಮಯದಲ್ಲಿ ರಾವಣನಾದರೋ ಶಕ್ತಿಯನ್ನು ಮುರಿದುಹಾಕುತ್ತಿರುವ ಶ್ರೀರಾಮನ ಸರ್ವಾವಯವಗಳಲ್ಲಿಯೂ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಶ್ರೀರಾಮಮೂರ್ತಿಯಾದರೋ ಆ ಬಾಣಗಳನ್ನು ಲಕ್ಷಿಸದೆಯೇ ಲಕ್ಷ್ಮಣನನ್ನು ಬಿಗಿದಪ್ಪಿ ಹನುಮಂತನನ್ನೂ ಸುಗ್ರೀವನನ್ನೂ ಕುರಿತು, "ಎಲೈ ವಾನರೋತ್ತಮರೇ! ನೀವು ಈ ಲಕ್ಷ್ಮಣನನ್ನು ಸುತ್ತುವರಿದು ನಿಲ್ಲಿರಿ. ನಾನು ಬಹು ಕಾಲದಿಂದಲೂ ಆಶಿಸುತ್ತಿದ್ದ ಪರಾಕ್ರಮ ಪ್ರದರ್ಶನ ಕಾಲವು ಇದೀಗ ಒದಗಿ

ವಧ್ಯತಾಂ ಪಾಪನಿಶ್ಚಯಃ । ಕಾಂಕ್ಷತಸ್ತೋಕಕಸ್ಯೇವ ಘರ್ಮಾಂತೇ ಮೇಘ ದರ್ಶನಂ ॥ ೪೬ ॥ ಅಸ್ಮಿನ್ ಮುಹೂರ್ತೇ ನಚಿರಾತ್ಸತ್ಯಂ ಪ್ರತಿಶೃಣೋಮಿ ವಃ । ಅರಾವಣಮರಾಮಂವಾ ಜಗದ್ದ್ರಕ್ಷ್ಯಥ ವಾನರಾಃ ॥ ೪೭-೪೮ ॥ ರಾಜ್ಯನಾಶಂ ವನೇ ವಾಸಂ ದಂಡಕೇ ಪರಿಧಾವನಂ । ವೈದೇಹ್ಯಾಶ್ಚ ಪರಾಮರ್ಶಂ ರಕ್ಷೋಭಿಶ್ಚ ಸಮಾಗಮಂ ॥ ೪೯ ॥ ಪ್ರಾಪ್ತಂ ದುಃಖಂ ಮಹದ್ಘೋರಂ ಕ್ಲೇಶಂಚ ನಿರಯೋಪಮಂ । ಅದ್ಯ ಸರ್ವಮಹಂ ತ್ಯಕ್ಷ್ಯೇ ನಿಹತ್ವಾ ರಾವಣಂ ರಣೇ ॥ ೫೦ ॥ ಯದರ್ಥಂ ವಾನರಂ

ಪರಾಕ್ರಮಕ್ಕೆ, ಮೇ - ನನ್ನಿಂದ, ಚಿರೇಪ್ಸಿತಃ - ಬಹು ಕಾಲದಿಂದ ಪ್ರಾರ್ಥಿಸಲ್ಪಟ್ಟ, ಅಯಂಕಾಲಃ - ಈ ಕಾಲವು, ಸಂಪ್ರಾಪ್ತಃ - ಪ್ರಾಪ್ತವಾಯಿತು, ಪಾಪಾತ್ಮಾ - ಪಾಪದಲ್ಲಿಯೇ ಮನವುಳ್ಳ, ಅಯಂ ದಶಗ್ರೀವಃ - ಈ ದಶಕಂಧರನು, ಪಾಪನಿಶ್ಚಯಃ-ಪಾಪದಲ್ಲಿಯೇ ಬುದ್ಧಿಯುಳ್ಳವನಾಗಿ, ಘರ್ಮಾಂತೇ-ಗ್ರೀಷ್ಮಾಂತಕಾಲದಲ್ಲಿ, ಕಾಂಕ್ಷತಃ - ಅಪೇಕ್ಷಿಸುತ್ತಿರುವ, ಸ್ತೋಕಕಸ್ಯ - ಚಾತಕಪಕ್ಷಿಗೆ, ಮೇಘದರ್ಶನ ಮಿವ-ಮೇಘದ ನೋಟದಂತೆ, ಪರಾಕ್ರಮಕ್ಕೆ ಕಾಲ ಪ್ರಾಪ್ತವಾದನು, ವಧ್ಯತಾಂ-ಹೊಡೆಯಲ್ಪಡಲಿ. ॥ ೪೬-೪೭ ॥ ಅಸ್ಮಿನ್‌ಮುಹೂರ್ತೇ- ಈ ಮುಹೂರ್ತದಲ್ಲಿ, ನಚಿರಾತ್-ಜಾಗ್ರತೆಯಾಗಿ, ವಃ-ನಿಮ್ಮಗಳಿಗೆ, ಸತ್ಯಂ-ಯಥಾರ್ಥವಾಗಿ, ಪ್ರತಿಶೃಣೋಮಿ - ಪ್ರತಿಜ್ಞೆ ಮಾಡುವೆನು, ವಾನರಾಃ - ಕಪಿಗಳಿರಾ, ಜಗತ್ - ಲೋಕವನ್ನು, ಅರಾವಣಂ - ರಾವಣರಹಿತನನ್ನಾಗಿಯೋ, ಅರಾಮಂ - ಶ್ರೀರಾಮನಿಲ್ಲದೇ ಇರುವದ ನ್ನಾಗಿಯೋ, ದ್ರಕ್ಷ್ಯಥ - ಕಾಣುವಿರಿ. ॥ ೪೮ ॥ ರಾಜ್ಯನಾಶಂ - ರಾಜ್ಯನಾಶವನ್ನೂ, ವನೇವಾಸಂ - ವನದಲ್ಲಿ ವಾಸವನ್ನೂ, ದಂಡಕೇ - ದಂಡಕಾವನದಲ್ಲಿ, ಪರಿಧಾವನಂ - ಸಂಚಾರವನ್ನೂ, ವೈದೇಹ್ಯಾಶ್ಚ - ಸೀತಾದೇವಿಯ, ಪರಾಮರ್ಶಂಚ - ರಾಕ್ಷಸಸ್ಪರ್ಶವನ್ನೂ, ರಕ್ಷೋಭಿಶ್ಚ - ರಾಕ್ಷಸರೊಡನೆ, ಸಮಾಗಮಂ - ಯುದ್ಧವನ್ನೂ, ಪ್ರಾಪ್ತಂ - ಬಂದಿರುವ, ಮಹತ್ - ಬಹಳವಾದ, ಘೋರಂ - ಭಯಂಕರವಾದ, ದುಃಖಂ - ದುಃಖವನ್ನೂ, ನಿರಯೋಪಮಂ - ನರಕಕ್ಕೆ ಸಮಾನವಾದ, ಕ್ಲೇಶಂಚ - ವ್ಯಸನವನ್ನೂ, ಅಹಂ - ನಾನು, ಅದ್ಯ - ಈಗ, ರಣೇ - ಕಾಳಗದಲ್ಲಿ, ರಾವಣಂ - ದಶಕಂಧರನನ್ನು, ನಿಹತ್ವಾ - ಕೊಂದು, ಸರ್ವಂ - ಸಮಸ್ತ ದುಃಖವನ್ನೂ, ತ್ಯಕ್ಷ್ಯೇ - ಬಿಡುವೆನು. ॥೪೯-೫೦॥ ಇದಂ ವಾನರಸೈನ್ಯಂ - ಈ ಕಪಿಸೇನೆಯು, ಮಯಾ - ನನ್ನಿಂದ, ಯದರ್ಥಂ - ಯಾವ ರಾವಣನ ನಿಮಿತ್ತ

ಬಂದಿದೆ. (ದುಃಖಿಸಲು ಇದು ತಕ್ಕ ಸಮಯವಲ್ಲವು) ಪಾಪಕೃತ್ಯಗಳನ್ನೇ ಮಾಡುವವನೂ, ಮಹಾ ಪಾಪಿಷ್ಠನೂ ಆದ ಈ ರಾವಣನು ಅವಶ್ಯವೂ ವಧ್ಯನಾಗಿರುವನು. ಅಯ್ಯಾ ವಾನರ ರಿರಾ! ಈ ದುರಾತ್ಮನನ್ನು ನೋಡಿದೊಡನೆಯೇ ಇವನನ್ನು ಸಂಹರಿಸಲು ಸಮಯ ದೊರೆಯಿ ತಲ್ಲ ಎಂದು ನನಗೆ, ಬೇಸಗೆಯಾದ ಮೇಲೆ ಮುಗಿಲುಗಳನ್ನು ಕಂಡು ಚಾತಕಗಳಿಗೆಂತೋ ಅಂತು ಆನಂದವಾಗುತ್ತಿರುವುದು. ॥ ೪೧-೪೭ ॥ ಈ ರಾವಣನು ಈಗ ನನ್ನ ದೃಷ್ಟಿಗೋಚರ ನಾದನಲ್ಲವೆ! ಇಂದು ಈ ಲೋಕಹಲ್ಲಿ ರಾವಣನಾಗಲಿ, ರಾಮನಾಗಲಿ ನಶಿಸಿ ಹೋಗುವ ರೆಂದರಿಯಿರಿ. ಇದನ್ನು ನೀವೆಲ್ಲರೂ ನೋಡುವಿರಿ. ಎಲೈ ವೀರರೇ! ಈವರೆಗೆ ನಾನು, ರಾಜ್ಯನಾಶ, ವನವಾಸ, ದಂಡಕಾರಣ್ಯ ಸಂಚಾರ, ಸೀತಾಹರಣ, ರಾಕ್ಷಸರೊಡನೆ ಯುದ್ಧ ಮೊದಲಾದ ದುರ್ಭರ ದುಃಖ ಪರಂಪರೆಗಳನ್ನು ಅನುಭವಿಸಿದೆನು. ಆ ದುಃಖವೆಲ್ಲವನ್ನೂ ಇದೋ ಈ ಯುದ್ಧದಲ್ಲಿ ರಾವಣನನ್ನು ಕೊಲ್ಲುವುದರ ಮೂಲಕ ಹೋಗಲಾಡಿಸಿಕೊಳ್ಳುವೆನು. ಎಲೈ ವಾನರೋತ್ತಮರಿರಾ! ಯಾರಿಗೋಸುಗ ವಾನರಸೈನ್ಯವನ್ನು ಸಂಪಾದಿಸಿದ್ದಾಯಿತೋ,

ಸೈನ್ಯಂ ಸಮಾನೀತಮಿದಂ ಮಯಾ । ಸುಗ್ರೀವಶ್ಚ ಕೃತೋ ರಾಜ್ಯೇ ನಿಹತ್ವಾ ವಾಲಿನಂ ರಣೇ ॥ ೫೧ ॥ ಯದರ್ಥಂ ಸಾಗರಃ ಕ್ರಾಂತಸ್ಸೇತುರ್ಬದ್ಧಶ್ಚ ಸಾಗರೇ । ಸೋಽಯಮದ್ಯ ರಣೇ ಪಾಪಶ್ಚಕ್ಷುರ್ವಿಷಯಮಾಗತಃ ॥ ೫೨ ॥ ಚಕ್ಷುರ್ವಿಷಯಮಾಗಮ್ಯ ನಾಯಂ ಜೀವಿತುಮರ್ಹತಿ । ದೃಷ್ಟಿಂ ದೃಷ್ಟಿವಿಷಸ್ಯೇವ ಸರ್ಪಸ್ಯ ಮಮ ರಾವಣಃ ॥ ೫೩ ॥ ಸ್ವಸ್ಥಾಃ ಪಶ್ಯತ ದುರ್ಧರ್ಷಾ ಯುದ್ಧಂ ವಾನರಪುಂಗವಾಃ । ಆಸೀನಾಃ ಪರ್ವತಾಗ್ರೇಷು ಮಮೇದಂ ರಾವಣಸ್ಯಚ ॥ ೫೪ ॥ ಅದ್ಯ ರಾಮಸ್ಯ ರಾಮತ್ವಂ ಪಶ್ಯಂತು ಮಮ ಸಂಯುಗೇ । ತ್ರಯೋ ಲೋಕಾಸ್ಸಗಂಧರ್ವಾಸ್ಸದೇವಾ ಸ್ಸರ್ಷಿಚಾರಣಾಃ ॥೫೫॥ ಅದ್ಯ ಕರ್ಮ ಕರಿಷ್ಯಾಮಿ ಯಲ್ಲೋಕಾ ಸ್ಸಚರಾಚರಾಃ । ಸದೇವಾಃ

ವಾಗಿ, ಸಮಾನೀತಂ - ತರಲ್ಪಟ್ಟಿತೋ, ರಣೇ - ಕಾಳೆಗದಲ್ಲಿ, ವಾಲಿನಂ - ವಾಲಿಯನ್ನು, ನಿಹತ್ವಾ - ಹೊಡೆದು, ಸುಗ್ರೀವಃ - ಸುಗ್ರೀವನು, ಯದರ್ಥಂ - ಯಾವ ಕಾರಣ, ರಾಜ್ಯೇ - ರಾಜ್ಯದಲ್ಲಿ, ಕೃತಃ - ಸ್ಥಾಪಿಸಲ್ಪಟ್ಟನೋ, ಯದರ್ಥಂ - ಯಾವ ನಿಮಿತ್ತವಾಗಿ, ಸಾಗರಃ - ಕಡಲು, ಕ್ರಾಂತಃ - ದಾಂಟಲ್ಪಟ್ಟಿತೋ, ಸಾಗರೇ - ಕಡಲಿನಲ್ಲಿ, ಸೇತುಶ್ಚ - ಸೇತುವೂ, ಬದ್ಧಶ್ಚ - ಕಟ್ಟಲ್ಪಟ್ಟಿತೋ, ಸೋಯಂ - ಆ ಈ, ಪಾಪಃ - ಪಾಪಿಷ್ಠನು, ಅದ್ಯ - ಈಗ, ರಣೇ - ಕಾಳೆಗದಲ್ಲಿ, ಚಕ್ಷುರ್ವಿಷಯಂ - ದೃಷ್ಟಿಗೋಚರತ್ವವನ್ನು, ಆಗತಃ - ಹೊಂದಿದನು, ದೃಷ್ಟಿವಿಷಸ್ಯ - ದೃಷ್ಟಿಯಲ್ಲಿ ವಿಷವುಳ್ಳ, ಸರ್ಪಸ್ಯ - ಹಾವಿಗೆ, ದೃಷ್ಟಿಮಿವ-ದೃಷ್ಟಿಯನ್ನಂತೆ, ಮಮ-ನನ್ನ, ಚಕ್ಷುರ್ವಿಷಯಂ ದೃಷ್ಟಿಗೋಚರತ್ವವನ್ನು, ಆಗಮ್ಯ- ಹೊಂದಿ, ಅಯಂರಾವಣಃ - ಈ ದಶಗ್ರೀವನು, ಜೀವಿತುಂ - ಬದುಕುವುದಕ್ಕೆ, ನಾರ್ಹತಿ - ಯೋಗ್ಯನಲ್ಲವು. ॥ ೫೧-೫೩ ॥ ವಾನರಪುಂಗವಾಃ - ಕಪಿಶ್ರೇಷ್ಠರೇ, ದುರ್ಧರ್ಷಾಃ - ತಿರಸ್ಕರಿಸಲಸಾಧ್ಯರೇ, ಸ್ವಸ್ಥಾಃ - ಸ್ವಸ್ಥಚಿತ್ತರಾಗಿ, ಪರ್ವತಾಗ್ರೇ - ಬೆಟ್ಟದ ತುದಿಗಳಲ್ಲಿ, ಆಸೀನಾಃ - ಕುಳಿತು, ಮಮ - ನನಗೂ, ರಾವಣಸ್ಯಚ - ದಶಕಂಠನಿಗೂ, ಇದಂಯುದ್ಧಂ - ಈ ಕಾಳೆಗವನ್ನು, ಪಶ್ಯತ - ನೋಡುತ್ತಲಿರಿ, ಅದ್ಯ - ಈಗ, ರಾಮಸ್ಯ - ರಾಮನೆಂಬ ಹೆಸರುಳ್ಳ, ಮಮ - ನನ್ನ, ರಾಮತ್ವಂ - ರಾಮತ್ವವನ್ನು, ಸಂಯುಗೇ - ಕಾಳೆಗದಲ್ಲಿ, ಸಗಂಧರ್ವಾಃ - ಗಂಧರ್ವರಿಂದೊಡಗೂಡಿದ, ಸದೇವಾಃ - ದೇವತೆಗಳಿಂದೊಡಗೂಡಿದ, ಸರ್ಷಿಚಾರಣಾಃ - ಋಷಿಗಳಿಂದಲೂ ಚಾರಣರಿಂದಲೂ ಒಡಗೂಡಿದ, ತ್ರಯೋ ಲೋಕಾಃ - ಮೂರುಲೋಕಗಳಲ್ಲಿರುವ ಜನರು, ಪಶ್ಯಂತು - ನೋಡಲಿ. ॥ ೫೪-೫೫ ॥ ಸಚರಾಚರಾಃ - ಸ್ಥಾವರಜಂಗಮಗಳಿಂದೊಡಗೂಡಿದ, ಸದೇವಾಃ - ದೇವತೆಗಳಿಂದೊಡಗೂಡಿದ, ಲೋಕಾಃ - ಜನರು,

---

ಯಾರಿಗೋಸುಗ ವಾಲಿಯನ್ನು ಕೊಂದು ಸುಗ್ರೀವನಿಗೆ ಪಟ್ಟವನ್ನು ಕಟ್ಟಿದ್ದಾಯಿತೋ, ಯಾರಿಗೋಸುಗ ಸಮುದ್ರವನ್ನು ದಾಟಿದ್ದಾಯಿತೋ, ಅಂತಹ ರಾವಣನೀಗ ನನ್ನ ದೃಷ್ಟಿಗೋಚರನಾಗಿದ್ದಾನೆ. ಈ ದುಷ್ಟನು ನನ್ನ ದೃಗ್ಗೋಚರನಾದಮೇಲೆ ಬದುಕಿ ಹೋಗುವುದೆಂದರೇನು? ದೃಷ್ಟಿಯಲ್ಲಿಯೇ ವಿಷವುಳ್ಳ ಸರ್ಪಕ್ಕೆ ಎದುರು ಬಿದ್ದವನು ನಿಸ್ಸಂದೇಹವಾಗಿಯೂ ಮೃತಿಯೊಂದುವಂತೆ ನನಗೆದುರು ಬಿದ್ದಿರುವ ಈ ರಾವಣನೂ ಜೀವಿಸಲಾರನು. ಆದುದರಿಂದ ನೀವೆಲ್ಲರೂ ಸ್ವಸ್ಥಚಿತ್ತರಾಗಿ, ಧರ್ಷಿಸಲಸಾಧ್ಯರಾಗಿ ಪರ್ವತಾಗ್ರಗಳಲ್ಲಿ ಕುಳಿತು ನನ್ನ ಮತ್ತು ರಾವಣನ ಯುದ್ಧವನ್ನು ನೋಡುತ್ತಿರಿ. ಇಂದಿನ ಯುದ್ಧದಲ್ಲಿ ಈ ರಾಮನ ರಾಮತ್ವವನ್ನಾದರೂ ನೋಡಿರಿ. ಗಂಧರ್ವರಿಂದಲೂ, ದೇವತೆಗಳಿಂದಲೂ, ಋಷಿಗಳಿಂದಲೂ, ಚಾರಣರಿಂದಲೂ ಕೂಡಿದ ಮೂರು ಲೋಕಗಳೂ ಈ ಯುದ್ಧವನ್ನು ನೋಡಲಿ.

ಕಥಯಿಷ್ಯಂತಿ ಯಾವದ್ಭೂಮಿರ್ಧರಿಷ್ಯತಿ । ಸಮಾಗಮ್ಯ ಸದಾ ಲೋಕೇ ಯಥಾ ಯುದ್ಧಂ ಪ್ರವರ್ತಿತಂ ॥ ೫೬-೫೭ ॥ ಏವಮುಕ್ತ್ವಾ ಶಿತೈರ್ಬಾಣೈಸ್ತಪ್ತಕಾಂಚನ ಭೂಷಣೈಃ । ಆಜಘಾನ ದಶಗ್ರೀವಂ ರಣೇ ರಾಮಸ್ಸಮಾಹಿತಃ ॥ ೫೮ ॥ ಅಥ ಪ್ರದೀಪ್ತೈರ್ನಾರಾಚೈರ್ಮುಸಲೈಶ್ಚಾಪಿ ರಾವಣಃ । ಅಭ್ಯವರ್ಷತ್ತದಾ ರಾಮಂ ಧಾರಾಭಿರಿವ ತೋಯದಃ ॥ ೫೯ ॥ ರಾಮರಾವಣಮುಕ್ತಾನಾಮನ್ಯೋನ್ಯಮಭಿ ನಿಘ್ನತಾಂ । ಶರಾಣಾಂ ಚ ಶರಾಣಾಂಚ ಬಭೂವ ತುಮುಲಸ್ಸ್ವನಃ ॥ ೬೦ ॥ ತೇ ಭಿನ್ನಾಶ್ಚ ವಿಕೀರ್ಣಾಶ್ಚ ರಾಮರಾವಣಯೋಃ ಶರಾಃ । ಅಂತರಿಕ್ಷಾತ್ಪ್ರದೀಪ್ತಾಗ್ರಾ

ಯತ್ - ಯಾವ ನನ್ನ ಕಾರ್ಯವನ್ನು, ಕಥಯಿಷ್ಯಂತಿ - ಹೇಳುವರೋ, ಯಾವತ್ - ಎಷ್ಟು ಪರ್ಯಂತವೂ, ಭೂಮಿಃ - ಭೂಮಿಯು, ಧರಿಷ್ಯತಿ - ಧರಿಸುತ್ತದೋ, ಅದ್ಯ - ಈಗ. ತತ್ಕರ್ಮ - ಅಂಥಾ ಕಾರ್ಯವನ್ನು, ಕರಿಷ್ಯಾಮಿ - ಮಾಡುವೆನು. ॥ ೫೬ ॥ ಸಮಾಗಮ್ಯ - ಸೇರಿ, ಲೋಕೇ - ಲೋಕದಲ್ಲಿ, ಯಥಾ - ಹೇಗೆ, ಪ್ರವರ್ತಿತಂ - ಪ್ರವರ್ತಿಸಲ್ಪಟ್ಟ, ಯುದ್ಧಂ - ಕಾಳಗವನ್ನು, ಸದಾ - ಸರ್ವಕಾಲದಲ್ಲಿಯೂ, ಭೂಮಿಃ - ಭೂಮಿಯೂ, ಧರಿಷ್ಯತಿ - ಧರಿಸುತ್ತದೋ, ತಾವತ್ - ಅಷ್ಟು ಪರ್ಯಂತರವೂ, ಯತ್ಕರ್ಮ - ಯಾವ ಕಾರ್ಯವನ್ನು, ಕಥಯಿಷ್ಯಂತಿ - ಹೇಳುವರೋ, ತತ್ಕರ್ಮ - ಅಂಥಾ ಕರ್ಮವನ್ನು, ಅದ್ಯ - ಈಗ, ಕರಿಷ್ಯಾಮಿ - ಮಾಡುವೆನು. ॥ ೫೭ ॥ ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ರಣೇ - ಕಾಳಗದಲ್ಲಿ, ಸಮಾಹಿತಃ - ಸಮಾಧಾನಚಿತ್ತನಾಗಿ, ರಾಮಃ - ಶ್ರೀರಾಮನು, ತಪ್ತ.....ಣೈಃ - ಬಂಗಾರದ ಒಡವೆಗಳುಳ್ಳ, ಶಿತೈಃ - ತೀಕ್ಷ್ಣಗಳಾದ, ಬಾಣೈಃ - ಸರಳುಗಳಿಂದ, ದಶಗ್ರೀವಂ - ದಶಕಂಠನನ್ನು, ಆಜಘಾನ - ಹೊಡೆದನು. ॥ ೫೮ ॥ ಅಥ - ಬಳಿಕ, ರಾವಣಶ್ಚಾಪಿ - ದಶಕಂಠನು, ಪ್ರದೀಪ್ತೈಃ - ಹೊಳೆಯುತ್ತಿರುವ, ನಾರಾಚೈಃ - ಸರಳುಗಳಿಂದಲೂ, ಮುಸಲೈಶ್ಚ - ಒನಿಕೆಗಳಿಂದಲೂ, ಧಾರಾಭಿಃ - ಉದಕಧಾರೆಗಳಿಂದ, ತೋಯದಃಇವ - ಮೇಘದಂತೆ, ರಾಮಂ - ಶ್ರೀರಾಮನನ್ನು, ತದಾ - ತತ್ಕ್ಷಣದಲ್ಲಿ, ಅಭ್ಯವರ್ಷತ್ - ಸುರಿಸಿದನು ॥ ೫೯ ॥ ರಾಮ......ನಾಂ - ಶ್ರೀರಾಮನಿಂದಲೂ, ರಾವಣನಿಂದಲೂ ಬಿಡಲ್ಪಟ್ಟ, ಅನ್ಯೋನ್ಯಂ - ಪರಸ್ಪರವಾಗಿ, ಅಭಿನಿಘ್ನತಾಂ - ಹೊಡೆಯುತ್ತಿರುವ, ಶರಣಾಂಚಶರಾಣಾಂಚ - ಸರಳುಸರಳುಗಳ, ತುಮುಲಃ - ಸಂಕುಲವಾದ, ಸ್ವನಃ - ಧ್ವನಿಯು, ಬಭೂವ - ಆಯಿತು. ॥ ೬೦ ॥ ರಾಮರಾವಣಯೋಃ - ರಾಮರಾವಣರೀರ್ವರ, ತೇಶರಾಃ - ಆ ಸರಳುಗಳು, ಭಿನ್ನಾಃ - ಭೇದಿಸಲ್ಪಟ್ಟವುಗಳಾಗಿ, ವಿಕೀರ್ಣಾಶ್ಚ -

---

ಇಂದು ನಾನು ಚರಾಚರಸಮನ್ವಿತವಾದ ಈ ಭೂಮಿಯಿರುವವರೆಗೂ, ದೇವತೆಗಳೂ, ಚಾರಣರೂ, ಗಂಧರ್ವರೂ ಹೊಗಳುವಂತಹ ಯುದ್ಧವನ್ನು ಮಾಡುವೆನು" ಎಂದು ಹೇಳಿದನು. ॥ ೪೮–೫೭ ॥ ಶ್ರೀರಾಮಮೂರ್ತಿಯು ಈ ರೀತಿ ಹೇಳಿ ಆಮೇಲೆ ಕಾಂಚನಭೂಷಣ ಭೂಷಿತಗಳಾದ ಬಾಣಗಳಿಂದ ಸಮಾಹಿತಚಿತ್ತನಾಗಿ ರಾವಣನನ್ನು ಘಾತಿಸಲಾರಂಭಿಸಿದನು. ಆಗ ರಾವಣಾಸುರನೂ ಸಹ ಮಹಾ ಜಾಜ್ವಲ್ಯಮಾನವಾದ ಬಾಣಗಳಿಂದಲೂ, ಮುಸಲಗಳಿಂದಲೂ, ಮೇಘವು ಉದಕಧಾರೆಯಿಂದ ಪರ್ವವನ್ನೆಂತೋ ಅಂತು ಶ್ರೀರಾಮನ ಮೇಲೆ ಮಳೆಗರೆದನು. ಆ ಸಮಯದಲ್ಲಿ ರಾಮರಾವಣರಿಂದ ಪ್ರಯೋಗಿಸಲಾದುವೂ, ಪರಸ್ಪರವಾಗಿ ಸಂಘರ್ಷಿಸುತ್ತಿರುವುವೂ ಆದ ಬಾಣಗಳಿಂದ ಭಯಂಕರ ಧ್ವನಿಯುಂಟಾಯಿತು. ಅಲ್ಲದೆ ರಾಮರಾವಣ ಪ್ರಯುಕ್ತಗಳಾದ ಆ ಬಾಣಗಳು ಅಂತರಿಕ್ಷದಲ್ಲಿ ಒಂದರೊಡನೊಂದು

ನಿಪೇತುರ್ಧರಣೀತಲೇ ॥ ೬೦ ॥ ತಯೋರ್ಜ್ಯಾತಲನಿರ್ಘೋಷೋ ರಾಮರಾವಣಯೋರ್ಮಹಾನ್ । ತ್ರಾಸನಸ್ಸರ್ವಭೂತಾನಾಂ ಸಂಬಭೂವಾಽದ್ಭುತೋಪಮಃ ॥೬೨॥

ಸಕೀರ್ಯಮಾಣಃ ಶರಜಾಲವೃಷ್ಟಿಭಿ
ರ್ಮಹಾತ್ಮನಾ ದೀಪ್ತಧನುಷ್ಮತಾಽರ್ದಿತಃ ।
ಭಯಾತ್ ಪ್ರದುದ್ರಾವ ಸಮೇತ್ಯ ರಾವಣೋ
ಯಥಾಽನಿಲೇನಾಭಿಹತೋ ವಲಾಹಕಃ ॥ ೬೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋತ್ತರಶತತಮಸ್ಸರ್ಗಃ

ಎರಚಲ್ಪಟ್ಟವುಗಳಾಗಿಯೂ, ಪ್ರದೀಪ್ತಾಗ್ರಾಃ - ಪ್ರಜ್ವಲಿಸುತ್ತಿರುವ ಕೊಂಕಿಗಳುಳ್ಳವುಗಳಾಗಿ, ಅಂತರಿಕ್ಷಾತ್ - ಅಂತರಿಕ್ಷದಿಂದ, ಧರಣೀತಲೇ - ನೆಲದಲ್ಲಿ, ನಿಪೇತುಃ - ಬಿದ್ದವು, ತಯೋಃರಾಮರಾವಣಯೋಃ - ಶ್ರೀರಾಮ ರಾವಣಾಸುರರ, ಮಹಾನ್ - ದೊಡ್ಡದಾದ, ಜ್ಯಾತಲನಿರ್ಘೋಷಃ - ಹೆದೆಯ ಟಂಕಾರಧ್ವನಿಯು, ಸರ್ವಭೂತಾನಾಂ - ಸಮಸ್ತ ಪ್ರಾಣಿಗಳಿಗೂ, ತ್ರಾಸನಃ - ಭಯಂಕರವಾಗಿ, ಅದ್ಭುತೋಪಮಃ-ಆಶ್ಚರ್ಯಕರವಾದದ್ದು, ಸಂಬಭೂವ-ಆಯಿತು. ॥ ೬೨ ॥ ಮಹಾತ್ಮನಾ-ಮಹಾಧೈರ್ಯಶಾಲಿಯಾದ, ದೀಪ್ತಧನುಷತಾ - ಹೊಳೆಯುತ್ತಿರುವ ಧನುಸ್ಸುಳ್ಳ, ರಾಮೇಣ - ಶ್ರೀರಾಮನಿಂದ, ಶರಜಾಲವೃಷ್ಟಿಭಿಃ - ಸರಳುಗಳ ತಂಡಗಳ ವರ್ಷಗಳಿಂದ, ಕೀರ್ಯಮಾಣಃ - ಎರಚಲ್ಪಟ್ಟು, ಅರ್ದಿತಃ - ಹೊಡೆಯಲ್ಪಟ್ಟ, ಸರಾವಣಃ - ಆ ದಶಕಂಠನು, ಅನಿಲೇನ - ವಾಯುವಿನಿಂದ, ಅಭಿಹತಃ - ಹೊಡೆಯಲ್ಪಟ್ಟ, ವಲಾಹಕೋಯಥಾ - ಮೇಘದಂತೆ, ಭಯಾತ್ - ಭಯದಿಂದ, ಸಮೇತ್ಯ - ಸೇರಿ, ಪ್ರದುದ್ರಾವ - ಓಡಿಹೋದನು. ॥ ೬೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋತ್ತರಶತತಮಸ್ಸರ್ಗಃ.

ಬಡಿದಾಡಿ ಪುಡಿಪುಡಿಯಾಗಿ ನೆಲಕ್ಕೆ ಬೀಳುತ್ತಿದ್ದುವು. ಆ ರಾಮರಾವಣರ ಧನುಷ್ಟಂಕಾರಧ್ವನಿಯು ಸಕಲ ಭೂತಗಳಿಗೂ ಮಹಾ ಭಯವನ್ನುಂಟುಮಾಡಿತು. ಆಗ ಮಹಾತ್ಮನಾದ ರಾಮನು ಅಪರಿಮಿತವಾಗಿ ಕೂರಂಬು ಮಳೆಗರೆದು ರಾವಣನನ್ನು ನೋಯಿಸಿದನು. ರಾವಣನಾದರೋ ಆ ಬಾಣವೃಷ್ಟಿಯ ಬೇಗೆಯನ್ನು ತಾಳಲಾರದೆ, ವಾಯುವೇಗವನ್ನು ತಾಳಲಾರದ ಮೇಘಗಳಂತೋ ಅಂತು ಲಂಕಾಭಿಮುಖನಾಗಿ ಓಡಿಹೋದನು. ॥ ೫೮–೬೩ ॥

ಇಂತಿದು ಲಕ್ಷ್ಮಣ ಮೂರ್ಛೆಯೆಂಬ ನೂರೊಂದನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ದ್ವ್ಯುತ್ತರಶತತಮಸ್ಸರ್ಗಃ

ಶಕ್ತ್ಯಾ ವಿನಿಹತಂ ದೃಷ್ಟ್ವಾ ರಾವಣೇನ ಬಲೀಯಸಾ । ಲಕ್ಷ್ಮಣಂ ಸಮರೇ ಶೂರಂ ರುಧಿರೌಘಪರಿಪ್ಲುತಮ್ ‖ ೧ ‖ ಸದತ್ವಾ ತುಮುಲಂ ಯುದ್ಧಂ ರಾವಣಸ್ಯ ದುರಾತ್ಮನಃ । ವಿಸೃಜನ್ನಿವ ಬಾಣೌಘಾನ್ ಸುಷೇಣಂ ವಾಕ್ಯಮಬ್ರವೀತ್ ‖೨‖ " ಏಷ ರಾವಣವೀರ್ಯೇಣ ಲಕ್ಷ್ಮಣಃ ಪತಿತಃ ಕ್ಷಿತೌ । ಸರ್ಪವದ್ವೇಷ್ಟತೇ ವೀರೋ ಮಮ ಶೋಕಮುದೀರಯನ್ ‖ ೩ ‖ ಶೋಣಿತಾರ್ದ್ರಮಿಮಂ ವೀರಂ ಪ್ರಾಣೈರಿಷ್ಟತಮಂ ಮಮ । ಪಶ್ಯತೋ ಮಮ ಕಾ ಶಕ್ತಿರ್ಯೋದ್ಧುಂ ಪರ್ಯಾಕುಲಾತ್ಮನಃ ‖ ೪ ‖

ಬಲೀಯಸಾ - ಬಲವಂತನಾದ, ರಾವಣೇನ - ದಶಕಂಠನಿಂದ, ಶಕ್ತ್ಯಾ - ಶಕ್ತ್ಯಾಯುಧದಿಂದ, ವಿನಿಹತಂ - ಹೊಡೆಯಲ್ಪಟ್ಟ, ಸಮರೇ - ಕಾಳಗದಲ್ಲಿ, ಶೂರಂ - ಶೌರ್ಯವಂತನಾದ, ರುಧಿ....ತಂ-ರಕ್ತಪ್ರವಾಹದಿಂದ ತೋಯಿಸಲ್ಪಟ್ಟ, ಲಕ್ಷ್ಮಣಂ-ಸೌಮಿತ್ರಿಯನ್ನು, ದೃಷ್ಟ್ವಾ-ಕಂಡು, ಸಃ - ಆ ಶ್ರೀರಾಮನು, ದುರಾತ್ಮನಃ - ದುಷ್ಟಬುದ್ಧಿಯುಳ್ಳ, ರಾವಣಸ್ಯ - ದಶಕಂಠನಿಗೆ, ತುಮುಲಂ - ಸಂಕುಲವಾದ, ಯುದ್ಧಂ - ಕಾಳಗವನ್ನು, ದತ್ವಾ - ಕೊಟ್ಟು, ಬಾಣೌಘಾನ್-ಸರಳುಗಳ ತಂಡಗಳನ್ನು, ವಿಸೃಜನ್ನೇವ - ಬಿಡುತ್ತಿರುವವನಾಗಿಯೇ, ಸುಷೇಣಂ - ಸುಷೇಣನನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ‖ ೧-೨ ‖ ವೀರಃ - ಶೂರನಾದ, ಏಷಲಕ್ಷ್ಮಣಃ - ಈ ಸೌಮಿತ್ರಿಯು, ರಾವಣವೀರ್ಯೇಣ - ರಾವಣಾಸುರನ ಪರಾಕ್ರಮದಿಂದ, ಕ್ಷಿತೌ - ನೆಲದಲ್ಲಿ, ಪಾತಿತಃ - ಬೀಳಿಸಲ್ಪಟ್ಟವನಾಗಿ, ಮಮ - ನನಗೆ, ಶೋಕಂ - ವ್ಯಸನವನ್ನು, ಉದೀರಯನ್ - ಹುಟ್ಟಿಸುತ್ತ, ಸರ್ಪವತ್ - ಹಾವಿನಂತೆ, ವೇಷ್ಟತೇ - ಹೊರಳಾಡುತ್ತಿದ್ದಾನೆ. ‖ ೩ ‖ ಶೋಣಿತಾರ್ದ್ರಂ - ರಕ್ತದಿಂದ ನೆನೆದುಹೋದ, ವೀರಂ - ಶೂರನಾದ, ಪ್ರಾಣೈಃ - ಪ್ರಾಣಗಳಿಗಿಂತಲೂ, ಮಮ - ನನಗೆ, ಇಷ್ಟತಮಂ - ಬಹಳ ಇಷ್ಟನಾದ, ಇಮಂ - ಈ ಸೌಮಿತ್ರಿಯು, ಪಶ್ಯತಃ - ನೋಡುತ್ತಿರುವನಾದಕಾರಣ, ಪರ್ಯಾಕುಲಾತ್ಮನಃ- ವ್ಯಾಕುಲವಾದ ಚಿತ್ತವುಳ್ಳ, ಮಮ - ನನಗೆ, ಯೋದ್ಧುಂ - ಕಾಳಗ ಮಾಡುವುದಕ್ಕೆ, ಕಾಶಕ್ತಿಃ -

---

ಆ ತರುವಾಯ ಶ್ರೀರಾಮಚಂದ್ರನು, ಮಹಾ ಬಲಾಢ್ಯನಾದ ರಾವಣನ ಶಕ್ತ್ಯಾಯುಧದ ಪೆಟ್ಟಿನಿಂದ ರಕ್ತವ್ಯಾಪ್ತವಾದ ಶರೀರವುಳ್ಳವನಾಗಿ, ಮಹಾ ಶೂರನಾದರೂ ಮೃತಿಯೊಂದಿದವನಂತೆ ಭೂಮಿಯಲ್ಲಿ ಬಿದ್ದಿದ್ದ ಲಕ್ಷ್ಮಣಸ್ವಾಮಿಯನ್ನು ನೋಡಿದನು. ಶ್ರೀರಾಮನು ದುರಾತ್ಮನಾದ ರಾವಣನಿಗೆ ಪ್ರಬಲವಾದ ಯುದ್ಧವನ್ನು ಕೊಟ್ಟು ಬಾಣಗಳನ್ನು ಪ್ರಯೋಗಿಸುತ್ತಲೇ ಸಮೀಪದಲ್ಲಿದ್ದ ಸುಷೇಣನೆಂಬ ವಾನರಯೂಥನಾಥನನ್ನು ಕುರಿತು, " ಅಯ್ಯಾ ಸುಷೇಣನೇ ! ನೋಡಿದೆಯಾ, ನಮ್ಮ ಲಕ್ಷ್ಮಣನು ರಾವಣನ ಪರಾಕ್ರಮದಿಂದ ನೆಲಕ್ಕೆ ಬಿದ್ದು ಸರ್ಪದಂತೆ ಹೊರಳಾಡುತ್ತ ನನಗೆ ಶೋಕವನ್ನುಂಟುಮಾಡುತ್ತಿರುವನು. ನನಗೆ ಪ್ರಾಣಗಳಿಗಿಂತಲೂ ಅತ್ಯಂತ ಪ್ರಿಯತಮನಾದ ವೀರನಾದ ಈ ಲಕ್ಷ್ಮಣಸ್ವಾಮಿಯು ರಕ್ತದಿಂದ ತೊಯ್ದು ಈ ಸ್ಥಿತಿಯಲ್ಲಿರುವುದನ್ನು ಕಂಡು ಮನಸ್ಸೇ ದುಃಖದಿಂದ ಕದಡಿಹೋಗಿರುವ ನನಗೆ ಇನ್ನೂ ಯುದ್ಧಮಾಡಲು ಶಕ್ತಿಯೆಲ್ಲಿಯದು. ಶುಭಲಕ್ಷಣಸಂಪನ್ನನೂ,

ಅಯಂ ಸ ಸಮರಶ್ಲಾಘೀ ಭ್ರಾತಾ ಮೇ ಶುಭಲಕ್ಷಣಃ । ಯದಿ ಪಂಚತ್ವಮಾಪನ್ನಃ ಪ್ರಾಣೈರ್ಮೇ ಕಿಂ ಸುಖೇನಚ ॥ ೫ ॥ ಲಜ್ಜತೀವ ಹಿ ಮೇ ವೀರ್ಯಂ ಭ್ರಶ್ಯತೀವ ಕರಾದ್ಧನುಃ । ಸಾಯಕಾ ವ್ಯವಸೀದಂತಿ ದೃಷ್ಟಿರ್ಬಾಷ್ಪವಶಂ ಗತಾ ॥ ೬ ॥ ಅವಸೀದಂತಿ ಗಾತ್ರಾಣಿ ಸ್ವಪ್ನಯಾನೇ ನೃಣಾಮಿವ । ಚಿಂತಾ ಮೇ ವರ್ಧತೇ ತೀವ್ರಾ ಮುಮೂರ್ಷಾ ಚೋಪಜಾಯತೇ" ॥ ೭ ॥ ಭ್ರಾತರಂ ನಿಹತಂ ದೃಷ್ಟ್ವಾ ರಾವಣೇನ ದುರಾತ್ಮನಾ । ವಿನಿಷ್ಟನಂತಂ ದುಃಖಾರ್ತಂ ಮರ್ಮಣ್ಯಭಿಹತಂ ಭೃಶಂ ॥ ೮ ॥

ಶಕ್ತಿಯೆಲ್ಲಿರುವುದು. ॥ ೪ ॥ ಸಮರಶ್ಲಾಘೀ - ಯುದ್ಧದಲ್ಲಿ ಸ್ತೋತ್ರಾರ್ಹನಾದ, (ಯುದ್ಧವನ್ನೇ ಸ್ತೋತ್ರಮಾಡುತ್ತಿರುವ), ಶುಭಲಕ್ಷಣಃ - ಶುಭಕರವಾದ ಲಕ್ಷಣಗಳುಳ್ಳ, ಮೇಭ್ರಾತಾ - ನನಗೆ ತಮ್ಮನಾದ, ಸೋಽಯಂಲಕ್ಷ್ಮಣಃ - ಈ ಸೌಮಿತ್ರಿಯು, ಪಂಚತ್ವಂ - ಮೃತಿಯನ್ನು, ಆಪನ್ನೋಯದಿ - ಹೊಂದಿದವನೇ ಆದರೆ, ಮೇ - ನನಗೆ, ಪ್ರಾಣೈಃ - ಪ್ರಾಣಗಳಿಂದಲೂ, ಸುಖೇನಚ - ಸುಖದಿಂದಲೂ, ಕಿಂ - ಏನು ಪ್ರಯೋಜನವು. ।೫। ಮೇ - ನನ್ನ, ವೀರ್ಯಂ - ಸಾಮರ್ಥ್ಯವು, ಲಜ್ಜತೀವಹಿ - ನಾಚಿಕೊಳ್ಳುತ್ತದೆಯೋ ಎಂಬಂತಿದೆ, ಕರಾತ್ - ಕೈಯಿಂದ, ಧನುಃ - ಬಿಲ್ಲು, ಭ್ರಶ್ಯತೀವ - ಜಾರಿಬೀಳುತ್ತದೆಯೋ ಎಂಬಂತಿದೆ, ಸಾಯಕಾಃ - ಸರಳುಗಳು, ವ್ಯವಸೀದಂತಿ - ದುಃಖಗೊಂಡಿವೆ, ದೃಷ್ಟಿಃ - ದೃಷ್ಟಿಯು, ಬಾಷ್ಪವಶಂ - ಕಂಬನಿಗಳ ಸ್ವಾಧೀನವನ್ನು, ಗತಾ - ಹೊಂದಿತು. ॥ ೬ ॥ ಗಾತ್ರಾಣಿ - ಅವಯವಗಳು, ನೃಣಾಂ - ಮನುಷ್ಯರಿಗೆ, ಸ್ವಪ್ನಯಾನೇವ - ಸ್ವಪ್ನಗಮನದಲ್ಲಿಯಂತೆ, ಅವಸೀದಂತಿ - ಸೆಳೆಯಲ್ಪಡುತ್ತದೆ, ಮೇ - ನನಗೆ, ತೀವ್ರಾ - ತೀಕ್ಷ್ಣವಾದ, ಚಿಂತಾ - ಆಲೋಚನೆಯು, ವರ್ಧತೇ - ಬೆಳೆಯುತ್ತಿದೆ, ದುರಾತ್ಮನಾ - ದುಷ್ಟಬುದ್ಧಿಯುಳ್ಳ, ರಾವಣೇನ - ದಶಕಂಠನಿಂದ, ನಿಹತಂ - ಹೊಡೆಯಲ್ಪಟ್ಟ, ದುಃಖಾರ್ತಂ - ವ್ಯಸನದಿಂದ ದೀನನಾದ, ಮರ್ಮಣಿ - ಮರ್ಮಸ್ಥಾನದಲ್ಲಿ, ಭೃಶಂ - ಬಹಳವಾಗಿ, ಅಭಿಹತಂ - ಹೊಡೆಯಲ್ಪಟ್ಟ, ವಿನಿಷ್ಟನಂತಂ - ನಿಶ್ವಾಸವನ್ನು ಬಿಡುತ್ತಿರುವ, ಭ್ರಾತರಂ - ತಮ್ಮನನ್ನು, ದೃಷ್ಟ್ವಾ - ಕಂಡು, ಮುಮೂರ್ಷಾ - ಮರಣೇಚ್ಛೆಯು,

---

ಸಮರಶ್ಲಾಘಿಯೂ, ನನ್ನ ತಮ್ಮನೂ ಆದ ಈ ಲಕ್ಷ್ಮಣಸ್ವಾಮಿಯು ಮೃತಿಯೊಂದಿದನಂದರೆ ನನಗೆ ಪ್ರಾಣಗಳಿಂದಾಗಲಿ, ಸುಖಗಳಿಂದಾಗಲಿ ಏನುತಾನೆ ಪ್ರಯೋಜನವು. ॥ ೧-೫ ॥ ನನ್ನ ಪರಾಕ್ರಮವೇ ನಾಚಿದಂತೆ ಕುಗ್ಗಿಹೋಗುತ್ತಿದೆ. ನನ್ನ ಧನುಸ್ಸು ತಾನಾಗಿಯೇ ಕೈಯಿಂದ ಜಾರುವಂತಿದೆ. ಬಾಣಗಳೆಲ್ಲವೂ ಹಿಂಜರಿಯುತ್ತಿವೆ. ದೃಷ್ಟಿಯೋ ಕಂಬನಿಯಿಂದ ಕಾಣದೇ ಹೋಗಿರುವುದು. ಅಂಗಾಂಗಗಳೂ ಮಾನವರಿಗೆ ಸ್ವಪ್ನಯಾನದಲ್ಲಿ ಹೇಗೋ ಹಾಗೆ ಸೀದುಹೋಗುತ್ತಿರುವುವು. ದುಃಖವು ವೃದ್ಧಿಗೊಳ್ಳುತ್ತಿರುವುದು. ತಮ್ಮನಾದ ಲಕ್ಷ್ಮಣಸ್ವಾಮಿಯು ಈ ಸ್ಥಿತಿಯಲ್ಲಿರುವುವನ್ನು ಕಂಡು ನನಗೆ ಮರಣದಲ್ಲಿ ಅಪೇಕ್ಷೆಯುಂಟಾಗುತ್ತಿರುವುದು. ಎಲೈ ಸುಷೇಣನೇ! ದುರಾತ್ಮನಾದ ರಾವಣನಿಂದ ಹೊಡೆಯಲ್ಪಟ್ಟ ಈತನನ್ನು ಕಂಡಮೇಲೆ ನನಗಿನ್ನೇನುತಾನೇ ಬೇಕಾದೀತು" ಎಂದು ಹೇಳಿದನು. ಹೀಗೆ ಮಹಾ ದುರಾತ್ಮನಾದ ರಾವಣಾಸುರನ ಶಕ್ತಿಘಾತದಿಂದ ಕೆಳಕ್ಕೆ ಬಿದ್ದು ಮೂರ್ಛೆಗೊಂಡು ನಿಟ್ಟುಸಿರು ಬಿಡುತ್ತಿರುವವನೂ, ಕೇವಲ ದುಃಖಪೀಡಿತನಾಗಿರುವವನೂ, ಹೊರಗೆ ಸಂಚರಿಸುತ್ತಿರುವ ಪ್ರಾಣಗಳೋ ಎಂಬಂತಿರುವವನೂ ಆದ ಲಕ್ಷ್ಮಣನನ್ನು ಕಂಡು ರಘುಕುಲೋದ್ಭವ

ರಾಘವೋ ಭ್ರಾತರಂ ದೃಷ್ಟ್ವಾ ಪ್ರಿಯಂ ಪ್ರಾಣಂ ಬಹಿಶ್ಚರಂ । ದುಃಖೇನ ಮಹತಾಽಽವಿಷ್ಟೋ ಧ್ಯಾನಶೋಕಪರಾಯಣಃ । ಪರಂ ವಿಷಾದಮಾಪನ್ನೋ ವಿಲಲಾಪಾಕುಲೇಂದ್ರಿಯಃ ॥ ೯ ॥ ನಹಿ ಯುದ್ಧೇನ ಮೇ ಕಾರ್ಯಂ ನೈವ ಪ್ರಾಣೈರ್ನಸೀತಯಾ । ಭ್ರಾತರಂ ನಿಹತಂ ದೃಷ್ಟ್ವಾ ಲಕ್ಷ್ಮಣಂ ರಣಪಾಂಸುಷು ॥೧೦॥ ಕಿಂ ಮೇ ರಾಜ್ಯೇನ ಕಿಂ ಪ್ರಾಣೈರ್ಯುದ್ಧೇ ಕಾರ್ಯಂ ನವಿದ್ಯತೇ । ಯತ್ರಾಽಯಂ ನಿಹತಃ ಶೇತೇ ರಣಮೂರ್ಧನಿ ಲಕ್ಷ್ಮಣಃ ॥೧೧॥ ದೇಶೇದೇಶೇ ಕಳತ್ರಾಣಿ ದೇಶೇದೇಶೇಚ ಬಾಂಧವಾಃ । ತಂತು ದೇಶಂ ನಪಶ್ಯಾಮಿ ಯತ್ರ ಭ್ರಾತಾ ಸಹೋದರಃ" ॥ ೧೨ ॥ ಇತ್ಯೇವಂ ವಿಲ

ಜಾಯತೇ-ಹುಟ್ಟುತ್ತದೆ, ಇತಿ ಇಂತೆಂದು ಸುಷೇಣನನ್ನು ಕುರಿತು ನುಡಿದನು, ರಾಘವಃ ಶ್ರೀರಾಮನು, ಬಹಿಶ್ಚರಂ - ಬಹಿಃಸಂಚಾರಶೀಲವಾದ, ಪ್ರಾಣಂ - ಪ್ರಾಣದಂತೆ, ಪ್ರಿಯಂ - ಇಷ್ಟನಾದ, ಭ್ರಾತರಂ - ತಮ್ಮನನ್ನು, ದೃಷ್ಟ್ವಾ - ಕಂಡು, ಮಹತಾ - ದೊಡ್ಡದಾದ, ದುಃಖೇನ - ದುಃಖದಿಂದ, ಆವಿಷ್ಟಃ - ವ್ಯಾಪ್ತನಾಗಿ, ಧ್ಯಾನ......ಣಃ - ಯೋಚನೆಯಿಂದ ಕೂಡಿ, ವ್ಯಸನದಲ್ಲಿಯೂ ಆಸಕ್ತನಾಗಿ, ಪರಂ - ಬಹಳವಾಗಿ, ವಿಷಾದಂ - ವ್ಯಸನವನ್ನು, ಆಪನ್ನಃ - ಹೊಂದಿ, ಆಕುಲೇಂದ್ರಿಯಃ - ವ್ಯಾಕುಲವಾದ ಇಂದ್ರಿಯಗಳುಳ್ಳವನಾಗಿ, ವಿಲಲಾಪ - ಪ್ರಲಾಪಮಾಡಿದನು. ॥೯॥ ರಣಪಾಂಸುಷು - ಯುದ್ಧಭೂಮಿಯ ಧೂಳಿಗಳಲ್ಲಿ, ನಿಹತಂ - ಹೊಡೆಯಲ್ಪಟ್ಟ, ಭ್ರಾತರಂ - ತಮ್ಮನಾದ, ಲಕ್ಷ್ಮಣಂ - ಸೌಮಿತ್ರಿಯನ್ನು, ದೃಷ್ಟ್ವಾ - ಕಂಡು, ಮೇ - ನನಗೆ, ಯುದ್ಧೇನ - ಯುದ್ಧದಲ್ಲಿ, ಕಾರ್ಯಂ - ಪ್ರಯೋಜನವು, ನಹಿ - ಇಲ್ಲವಷ್ಟೆ, ಪ್ರಾಣೈಃ - ಪ್ರಾಣಗಳಿಂದ, ನೈವ - ಇಲ್ಲ, ಸೀತಯಾ - ಸೀತಾದೇವಿಯಿಂದ, ನ - ಪ್ರಯೋಜನವಿಲ್ಲ, ಯತ್ರ - ಯಾವ ಕಾರಣದಿಂದ, ಅಯಂಲಕ್ಷ್ಮಣಃ - ಈ ಸೌಮಿತ್ರಿಯು, ನಿಹತಃ - ಹೊಡೆಯಲ್ಪಟ್ಟವನಾಗಿ, ರಣಮೂರ್ಧನಿ - ರಣಭೂಮಿಯಲ್ಲಿ, ಶೇತೇ - ಮಲಗಿದ್ದಾನೆಯೋ, ತಸ್ಮಾತ್ - ಆ ಕಾರಣದಿಂದ, ಮೇ - ನನಗೆ, ರಾಜ್ಯೇನ - ರಾಜ್ಯದಿಂದ, ಕಿಂ - ಏನು, ಪ್ರಾಣೈಃ - ಪ್ರಾಣಗಳಿಂದ, ಕಿಂ - ಏನು, ಯುದ್ಧೇ - ಕಾಳಗದಲ್ಲಿ, ಕಾರ್ಯಂ - ಪ್ರಯೋಜನವು, ನವಿದ್ಯತೇ - ಇಲ್ಲವೇ ಇಲ್ಲ. ॥ ೧೦-೧೧ ॥ ದೇಶೇದೇಶೇ - ಪ್ರತಿ ದೇಶದಲ್ಲಿಯೂ, ಕಳತ್ರಾಣಿ - ಹೆಂಡತಿಯರು, ಸಂತಿ - ಇರುತ್ತಾರೆ, ದೇಶೇದೇಶೇಚ - ಪ್ರತಿ ದೇಶದಲ್ಲಿಯೂ, ಬಾಂಧವಾಃ - ಬಂಧುಗಳು, ಸಂತಿ - ಇರುತ್ತಾರೆ, ಯತ್ರ - ಯಾವ ಸ್ಥಳದಲ್ಲಿ, ಸಹೋದರಃ - ಒಂದೇ ಹೊಟ್ಟೆಯಲ್ಲಿ ಹುಟ್ಟಿದ, ಭ್ರಾತಾ -

---

ನಾದ ಶ್ರೀರಾಮನು ಮಹತ್ತರವಾದ ದುಃಖದಿಂದ ವ್ಯಾಪ್ತನೂ, ಧ್ಯಾನಶೋಕಸಮನ್ವಿತನೂ ಆದನು. ಹೀಗೆ ನಾನಾವಿಧಗಳಾದ ವ್ಯಸನಗಳಿಂದ ಕೂಡಿದವನಾದ ಆ ರಾಮಭದ್ರನು ಅಪರಿಮಿತವಾಗಿ ರೋದನ ಮಾಡಿದನು. ಇಷ್ಟೆಯಲ್ಲದೆ ಮೂರ್ಛೆಯೊಂದಿ ಧೂಳಿಯಲ್ಲಿ ಹೊರಳಾಡುತ್ತಿದ್ದ ಆ ಲಕ್ಷ್ಮಣನನ್ನು ಕಂಡು, "ಅಯ್ಯೋ! ಮ್ಲಾನಿಯೊಂದಿದ ಈ ಲಕ್ಷ್ಮಣನನ್ನು ಕಂಡ ಬಳಿಕ ನನಗಿನ್ನು ಯುದ್ಧದಿಂದೇನುಪ್ರಯೋಜನವು? ಪ್ರಾಣಗಳಿದ್ದೇನು ಪ್ರಯೋಜನವು? ಸೀತೆಯಿಂದ ತಾನೇ ಏನಾಗಬೇಕು? ॥೯-೧೦॥ ಅಕ್ಕಟ ನನ್ನತಮ್ಮನಾದ ಲಕ್ಷ್ಮಣಸ್ವಾಮಿಯು ಯುದ್ಧಭೂಮಿಯಲ್ಲಿ ಬಿದ್ದು ದೀರ್ಘನಿದ್ರೆಯೊಂದುತ್ತಿರುವನು. ಈಗ ನನಗೆ ಯಾವುದರಿಂದಲೂ ಯಾವ ಪ್ರಯೋಜನವೂ ಇರುವುದಿಲ್ಲವು. ಎಲೈ ವಾನರೋತ್ತಮನೇ! ಪ್ರತಿ ದೇಶದಲ್ಲಿಯೂ ಹೆಂಡತಿಯರು ದೊರಕುವರು. ಪ್ರತಿ ದೇಶದಲ್ಲಿಯೂ ಬಂಧುಗಳುಂಟಾಗುತ್ತಾರೆ. ಸಹೋದರರಾದ ಅಣ್ಣತಮ್ಮಂದಿರು ಮಾತ್ರ ಯಾವ ದೇಶದಲ್ಲಿಯೂ ದೊರಕುವು

ಪಂತಂ ತಂ ಶೋಕವಿಹ್ವಲಿತೇಂದ್ರಿಯಂ । ವಿವೇಷ್ಟಮಾನಂ ಕರುಣಮುಚ್ಛ್ವಸಂತಂ ಪುನಃ ಪುನಃ । ರಾಮಮಾಶ್ವಾಸಯನ್ ವೀರಸ್ಸುಷೇಣೋ ವಾಕ್ಯಮಬ್ರವೀತ್ ॥೧೩-೧೪॥ ನಮೃತೋಽಯಂ ಮಹಾಬಾಹೋ! ಲಕ್ಷ್ಮಣೋ ಲಕ್ಷ್ಮಿವರ್ಧನಃ । ನಚಾಸ್ಯ ವಿಕೃತಂ ವಕ್ತ್ರಂ ನಾಪಿ ಶ್ಯಾವಂ ನನಿಷ್ಪ್ರಭಂ ॥೧೫॥ ಸುಪ್ರಭಂಚ ಪ್ರಸನ್ನಂ ಚ ಮುಖಮಸ್ಯಾಭಿಲಕ್ಷ್ಯತೇ । ಪದ್ಮರಕ್ತತಲೌ ಹಸ್ತೌ ಸುಪ್ರಸನ್ನೇಚ ಲೋಚನೇ ॥೧೬॥ ಏವಂ ನವಿದ್ಯತೇ ರೂಪಂ ಗತಾಸೂನಾಂ ವಿಶಾಂಪತೇ! । ದೀರ್ಘಾಯುಷಸ್ತು ಯೇ ಮರ್ತ್ಯಾಸ್ತೇಷಾಂತು ಮುಖಮೀದೃಶಂ ॥೧೭॥ ನಾಽಯಂ ಪ್ರೇತತ್ವ

ತಮ್ಮನು, ಅಸ್ತಿ - ಇದ್ದಾನೆಯೋ, ತಂತುದೇಶಂ - ಅಂಥಾ ಪ್ರದೇಶವನ್ನು, ನಪಶ್ಯಾಮಿ - ಕಾಣೆನು. ॥೧೨॥ ವೀರಃ - ಶೂರನಾದ ಸುಷೇಣನು, ಇತ್ಯೇವಂ - ಈ ಪರಿಯಾಗಿ, ವಿಲಪಂತಂ - ವಿಲಪಿಸುತ್ತಿರುವ, ಶೋಕ.....ಯಂ ವ್ಯಸನದಿಂದ, ಕಲಿಕಿಹೋದ ಇಂದ್ರಿಯುಗಳುಳ್ಳವನಾಗಿ, ವಿವೇಷ್ಟಮಾನಂ-ಹೊರಳಾಡುತ್ತಿರುವ, ಕರುಣಂ - ದೀನವಾಗಿ, ಪುನಃಪುನಃ - ಬಾರಿಬಾರಿಗೂ, ಉಚ್ಛ್ವಸಂತಂ - ಉಸಿರುಬಿಡುತ್ತಿರುವ, ತಂರಾಮಂ - ಆ ಶ್ರೀರಾಮನನ್ನು, ಆಶ್ವಾಸಯನ್ - ಸಮಾಧಾನಗೊಳಿಸುತ್ತ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧೩-೧೪॥ ಮಹಾಬಾಹೋ - ಮಹಾ ಭುಜಬಲಶಾಲಿಯೇ, ಲಕ್ಷ್ಮಿವರ್ಧನಃ - ತೇಜೋಲಕ್ಷ್ಮಿಯನ್ನು ವೃದ್ಧಿಗೊಳಿಸುತ್ತಿರುವ, ಅಯಂಲಕ್ಷ್ಮಣಃ - ಈ ಸೌಮಿತ್ರಿಯು, ನಮೃತಃ - ಮರಣಾವಸ್ಥೆಯನ್ನು ಹೊಂದಿಲ್ಲ, ಅಸ್ಯ - ಈತನ, ವಕ್ತ್ರಂ - ಮುಖವು, ನವಿಕೃತಂ - ವಿಕಾರವಾಗಿಲ್ಲ, ನಿಷ್ಪ್ರಭಂ - ಕಾಂತಿಹೀನವಾದದ್ದು, ನ - ಅಲ್ಲ. ॥೧೫॥ ಅಸ್ಯ - ಈ ಲಕ್ಷ್ಮಣನ, ಮುಖಂ - ಮುಖವು, ಸುಪ್ರಭಂಚ - ಒಳ್ಳೆಯ ಕಾಂತಿಯುಳ್ಳದ್ದಾಗಿಯೂ, ಪ್ರಸನ್ನಂಚ - ನಿರ್ಮಲವಾಗಿಯೂ, ಅಭಿಲಕ್ಷ್ಯತೇ - ಕಾಣಲ್ಪಡುತ್ತದೆ, ಹಸ್ತೌ - ಕೈಗಳು, ಪದ್ಮ....ಲೌ - ಕಮಲಗಳಂತೆ ಕೆಂಪಾಗಿರುವ ಅಂಗೈಗಳುಳ್ಳವುಗಳಾಗಿವೆ, ಲೋಚನೇ - ನೇತ್ರಗಳು, ಸುಪ್ರಸನ್ನೇ - ತಿಳಿಯಾಗಿದೆ. ॥೧೬॥ ವಿಶಾಂಪತೇ - ಅರಸೇ, ಗತಾಸೂನಾಂ - ಹೋಗಿರತಕ್ಕ ಪ್ರಾಣಗಳುಳ್ಳವರಿಗೆ, ರೂಪಂ - ಆಕಾರವು, ಏವಂ - ಈ ಪರಿಯಾಗಿ, ನವಿದ್ಯತೇ - ಇರುವುದಿಲ್ಲ, ದೀರ್ಘಾಯುಷಃ - ದೀರ್ಘಾಯುಷ್ಮಂತರಾಗಿ, ಯೇಮರ್ತ್ಯಾಃ - ಯಾವ ಮನುಷ್ಯರು, ಸಂತಿ - ಇರುತ್ತಾರೋ, ತೇಷಾಂತು -

---

ದಿಲ್ಲವು. ನಾನಿನ್ನು ಯಾವ ದೇಶದಲ್ಲಿದ್ದು ಯಾವ ಪ್ರಯೋಜನವನ್ನು ತಾನೇ ಕಂಡೇನು'' ಎಂದು ಹೇಳಿದನು. ಈ ರೀತಿ ನುಡಿದು ದುಃಖಪಡುತ್ತಿರುವವನೂ, ಅದೇ ದುಃಖದಿಂದಲೇ ಕದಡಿಹೋದ ಇಂದ್ರಿಯಗಳುಳ್ಳವನೂ, ದುಃಖವ್ಯಾಪ್ತನಾಗಿ ಬಹು ದೀನತೆಯಿಂತು ನಿಟ್ಟುಸಿರು ಬಿಡುತ್ತಿರುವವನೂ ಆದ ಶ್ರೀರಾಮಮೂರ್ತಿಯನ್ನು ಸಮಾಧಾನಗೊಳಿಸುತ್ತ ಸುಷೇಣನು, "ಎಲೈ ಮನೋಹರವಾದ ಭುಜಗಳುಳ್ಳವನೇ! ಶ್ರೀರಾಮಾ, ಸಂಪತ್ತನ್ನು ವೃದ್ಧಿಗೊಳಿಸುತ್ತಿರುವ ಈ ಲಕ್ಷ್ಮಣನು ಮೃತಿಯೊಂದಲಿಲ್ಲವು. ಈತನ ಮುಖವು ವಿಕಾರವಾಗಿರುವುದಿಲ್ಲವಲ್ಲದೆ ಬತ್ತಿಯೂ ಇರುವುದಿಲ್ಲ. ಕಾಂತಿಗುಂದಿಲ್ಲ. ಈತನ ಮುಖವು ಕಾಂತಿಯುತವಾಗಿಯೂ, ಪ್ರಸನ್ನವಾಗಿಯೂ ಇರುವುದು. ॥೧೧-೧೫॥ ಹಸ್ತಗಳು ಪದ್ಮಗಳಂತೆ ಮೃದುವಾಗಿಯೂ, ಕೆಂಪಾಗಿಯೂ ಇರುವುವು ನೇತ್ರಗಳು ಕಾಂತಿಸಂಪನ್ನಗಳಾಗಿವೆ. ಎಲೈ ರಾಜೋತ್ತಮನೇ! ರಾಮಚಂದ್ರಾ! ಮರಣವನ್ನು ಹೊಂದಿದವರಿಗೆ ಇಂತಹ ರೂಪರೇಖೆಗಳಿರುವುದಿಲ್ಲವು. ದೀರ್ಘಾಯುಷ್ಯವುಳ್ಳ ಮನುಷ್ಯರ ಮುಖವು ಈ ವಿಧವಾಗಿ ಇರುತ್ತದೆಯಾಗಲಿ

ಮಾಪನ್ನೋ ಲಕ್ಷ್ಮಣೋ ಲಕ್ಷ್ಮಿವರ್ಧನಃ । ಮಾ ವಿಷಾದಂ ಕೃಥಾ ವೀರ! ಸಪ್ರಾಣೋಽಯಮರಿಂದಮಃ ॥ ೧೮ ॥ ಆಖ್ಯಾಸ್ಯತೇ ಪ್ರಸುಪ್ತಸ್ಯ ಸ್ರಸ್ತಗಾತ್ರಸ್ಯ ಭೂತಲೇ । ಸೋಚ್ಛ್ವಾಸಂ ಹೃದಯಂ ವೀರ! ಕಂಪಮಾನಂ ಮುಹುರ್ಮುಹುಃ" ॥ ೧೯ ॥ ಏವಮುಕ್ತ್ವಾ ತು ವಾಕ್ಯಜ್ಞಃ ಸುಷೇಣೋ ರಾಘವಂ ವಚಃ । ಹನುಮಂತಮುವಾಚೇದಂ ಹನುಮಂತಮಭಿತ್ವರ ॥ ೨೦ ॥ "ಸೌಮ್ಯ! ಶೀಘ್ರಮಿತೋ ಗತ್ವಾ ಶೈಲಮೋಷಧಿಪರ್ವತಂ । ಪೂರ್ವಂ ತೇ ಕಥಿತೋ ಯೋಽಸೌ ವೀರ! ಜಾಂಬವತಾ ಶುಭಃ ॥ ೨೧ ॥ ದಕ್ಷಿಣೇ ಶಿಖರೇ ತಸ್ಯ ಜಾತಾಮೋಷಧಿಮಾನಯ । ವಿಶಲ್ಯಕರಣೀಂ

ಅಂಥವರಿಗಾದರೆ, ಮುಖಂ - ಮುಖವು, ಈದೃಶಂ - ಇಂಥಾ ಬಣ್ಣದ್ದಾಗಿರುತ್ತದೆ. ॥ ೧೭ ॥ ವೀರ - ಶೂರನೇ, ಲಕ್ಷ್ಮಿವರ್ಧನಃ - ಕಾಂತಿಯನ್ನು ವೃದ್ಧಿಹೊಂದಿಸುತ್ತಿರುವ, ಅಯಂಲಕ್ಷ್ಮಣಃ - ಈ ಸೌಮಿತ್ರಿಯು, ಪ್ರೇತತ್ವಂ-ಮರಣಧರ್ಮವನ್ನು, ಆಪನ್ನಃ-ಹೊಂದಿದವನು, ನ-ಅಲ್ಲ, ಅರಿಂದಮಃ - ಶತ್ರುಸಂಹಾರಕನಾದ, ಅಯಂ ಈ ಸೌಮಿತ್ರಿಯು, ಸಪ್ರಾಣಃ-ಪ್ರಾಣಸಹಿತನಾಗಿದ್ದಾನೆ, ವಿಷಾದಂ-ವ್ಯಸನವನ್ನು, ಮಾಕೃಥಾಃ - ಮಾಡಬೇಡ. ॥ ೧೮ ॥ ವೀರ - ಶೂರನೇ, ಭೂತಲೇ - ನೆಲದಲ್ಲಿ, ಪ್ರಸುಪ್ತಸ್ಯ - ಮಲಗಿರುವ, ಸ್ರಸ್ತಗಾತ್ರಸ್ಯ - ಸಡಿಲಿದ ಶರೀರವುಳ್ಳವನಾದ್ದರಿಂದ, ಹೃದಯಂ - ಎದೆಯು, ಮುಹುರ್ಮುಹುಃ - ಬಾರಿಬಾರಿಗೂ, ಕಂಪಮಾನಂ - ನಡುಗುತ್ತ, ಸೋಚ್ಛ್ವಾಸಂ - ಪ್ರಾಣದಿಂದೊಡಗೂಡಿದವನನ್ನಾಗಿ, ಆಖ್ಯಾಸ್ಯತೇ - ಹೇಳುತ್ತದೆ. ॥ ೧೯ ॥ ವಾಕ್ಯಜ್ಞಃ - ಮಾತುಗಳನ್ನರಿತ, ಸುಷೇಣಃ - ಸುಷೇಣನು, ರಾಘವಂ - ಶ್ರೀರಾಮನನ್ನು ಕುರಿತು, ಏವಂವಚಃ - ಈ ಮಾತನ್ನು, ಉಕ್ತ್ವಾ - ಹೇಳಿ, ಅಭಿತ್ವರ - ತ್ವರೆಯುಳ್ಳವನಾಗಿ, ಹನುಮಂತಂ - ಆಂಜನೇಯನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೨೦ ॥ ಸೌಮ್ಯ - ಪ್ರಸನ್ನನೇ, ಇಹ - ಇಲ್ಲಿಂದ, ಶೀಘ್ರಂ - ಜಾಗ್ರತೆಯಾಗಿ, ಓಷಧಿಪರ್ವತಂ - ಮಹೋಷಧಿ ಪರ್ವತವೆಂಬ, ಶೈಲಂ - ಬೆಟ್ಟವನ್ನು ಕುರಿತು, ಗತ್ವಾ - ಹೋಗಿ, ವೀರ - ಶೂರನೇ, ಪೂರ್ವಂ - ಪೂರ್ವದಲ್ಲಿ, ಶುಭಃ - ಶುಭಕರವಾದ, ಯೋಽಸೌ - ಯಾವ ಪರ್ವತವು, ತೇ - ನಿನಗೆ, ಜಾಂಬವತಾ - ಜಾಂಬವಂತನಿಂದ, ಕಥಿತಃ - ಹೇಳಲ್ಪಟ್ಟಿತೋ, ತಸ್ಯ - ಆ ಓಷಧಿ ಪರ್ವತದ, ದಕ್ಷಿಣೇಶಿಖರೇ - ಬಲಭಾಗದ ಶಿಖರದಲ್ಲಿ, ಜಾತಾಂ - ಹುಟ್ಟಿರುವ, ವಿಶಲ್ಯಕರಣೀಂ - ಶಲ್ಯವನ್ನು ಹೋಗಲಾಡಿಸುವ, ವಿಶಲ್ಯಕರಣೀಂನಾಮ - ವಿಶಲ್ಯಕರಣಿಯೆಂದು ಪ್ರಖ್ಯಾತವಾದ, ಶುಭಾಂ - ಮಂಗಳಕರವಾದ, ಓಷಧಿಂ -

---

ಮತ್ತೆ ಬೇರೆಯಲ್ಲವು ಶ್ರೀರಾಮಾ! ಈ ಲಕ್ಷ್ಮಣನು ಖಂಡಿತವಾಗಿಯೂ ಮೃತಿಯೊಂದಿಲ್ಲ. ಶತ್ರುನಾಶಕನಾದ ಈತನಲ್ಲಿ ಪ್ರಾಣಗಳು ಉಳಿದಿರುವುವು. ಆದುದರಿಂದೆಲೈ ರಾಘವನೇ! ನೀನೀರೀತಿ ವ್ಯಸನಪಡಬೇಡ. ಭೂಮಿಯಲ್ಲಿ ಮಲಗಿ ನಿದ್ರೆಹೋಗುತ್ತಿರುವವನಿಗೆ ಎಂತೋ ಅಂತು ಈತನಲ್ಲಿಯೂ ಬಿಸಿಯುಸಿರು ಆಡುತ್ತಿರುವುದು. ಹೃದಯವು ಅಡಿಗಡಿಗೂ ಹೊಡೆಯುತ್ತಿದೆ" ಎಂದು ಹೇಳಿದನು. ॥೧೭–೨೦॥ ವಾಕ್ಯಜ್ಞನಾದ ಸುಷೇಣನು ಶ್ರೀರಾಮನೊಡನೆ ಈ ರೀತಿ ನುಡಿದು ಸಮೀಪದಲ್ಲಿದ್ದ ಹನುಮಂತನನ್ನು ಕುರಿತು, "ಎಲೈ ಸೌಮ್ಯನಾದ ಹನುಮಂತನೇ! ನೀನಿಲ್ಲಿಂದ ಜಾಗ್ರತೆಯಾಗಿ ಹೊರಟು ಓಷಧಿಪರ್ವತಕ್ಕೆ ಹೋಗು. ಅಲ್ಲಿಗೆ ಹೋಗಿ ಹಿಂದೆ ಜಾಂಬವಂತನು ಹೇಳಿದಂತೆಯೇ ಆ ಪರ್ವತದಲ್ಲಿ ಹುಡುಕಿನೋಡು. ಆ ಪರ್ವತದ ದಕ್ಷಿಣಶಿಖರದಲ್ಲಿರುವ ಪರಮ ಮಂಗಳಕರವಾದ ವಿಶಲ್ಯಕರಣಿ, ಸಾವರ್ಣ

ನಾಮ ವಿಶಲ್ಯಕರಣೀಂ ಶುಭಾಂ ॥ ೨೨ ॥ ಸಾವರ್ಣ್ಯಕರಣೀಂ ಚಾಪಿ ತಥಾ ಸಂಜೀವನೀಮಪಿ । ಸಂಧಾನಕರಣೀಂಚಾಪಿ ಗತ್ವಾ ಶೀಘ್ರಮಿಹಾನಯ ॥ ೨೩ ॥ ಸಂಜೀವನಾರ್ಥಂ ವೀರಸ್ಯ ಲಕ್ಷ್ಮಣಸ್ಯ ಮಹಾತ್ಮನಃ” । ಇತ್ಯೇವಮುಕ್ತೋ ಹನುಮಾನ್ ಗತ್ವಾ ಚೌಷಧಿಪರ್ವತಂ ॥ ೨೪ ॥ ಚಿಂತಾಮಭ್ಯಗಮಚ್ಛ್ರೀಮಾನಜಾನಂಸ್ತಾಂ ಮಹೌಷಧಿಂ । ತಸ್ಯ ಬುದ್ಧಿಸ್ಸಮುತ್ಪನ್ನಾ ಮಾರುತೇರಮಿತೌಜಸಃ ॥ ೨೫ ॥ ಇದಮೇವ ಗಮಿಷ್ಯಾಮಿ ಗೃಹೀತ್ವಾ ಶಿಖರಂ ಗಿರೇಃ । ಅಸ್ಮಿನ್ ಹಿ ಶಿಖರೇ ಜಾತಾಮೋಷಧಿಂ ತಾಂ ಸುಖಾವಹಾಂ ॥ ೨೬ ॥ ಪ್ರತರ್ಕೇಣಾಽವಗಚ್ಛಾಮಿ ಸುಷೇಣೋ ಮಾಂ ಯಥಾಬ್ರವೀತ್ । ಅಗೃಹ್ಯ ಯದಿ ಗಚ್ಛಾಮಿ ವಿಶಲ್ಯಕರಣೀಮಹಂ ॥ ೨೭ ॥

ಮೂಲಿಕೆಯನ್ನು, ಆನಯ - ತೆಗೆದುಕೊಂಡು ಬಾ, ಸಾವರ್ಣ್ಯಕರಣೀಂಚಾಪಿ - ಸಾವರ್ಣ್ಯಕರಣಿಯೆಂಬ ಮೂಲಿಕೆಯನ್ನೂ, ತಥಾ - ಹಾಗೆಯೇ, ಮಹಾತ್ಮನಃ - ಮಹಾನುಭಾವನಾದ, ವೀರಸ್ಯ - ವೀರನಾದ, ಅಸ್ಯ - ಈ, ಲಕ್ಷ್ಮಣಸ್ಯ - ಲಕ್ಷ್ಮಣನ, ಸಂಜೀವನಾರ್ಥಂ ಬದುಕುವಿಕೆಗಾಗಿ, ಆನಯ - ತೆಗೆದು ಕೊಂಡು ಬಾ. ॥ ೨೩ ॥ ಇತ್ಯೇವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಹನುಮಾನ್ - ಆಂಜನೇಯನು, ಓಷಧಿಪರ್ವತಂ - ಓಷಧಿ ಪರ್ವತವನ್ನು ಕುರಿತು, ಗತ್ವಾ - ಹೋಗಿ, ತಾಂಮಹೌಷಧಿಂ - ಆ ದೊಡ್ಡ ಮೂಲಿಕೆಯನ್ನು, ಅಜಾನನ್ - ತಿಳಿಯದೆ, ಚಿಂತಾಂ - ಆಲೋಚನೆಯನ್ನು, ಅಭ್ಯಗಮತ್ - ಹೊಂದಿದನು. ॥ ೨೪ ॥ ಅಮಿತೌಜಸಃ - ಅಪಾರ ಪರಾಕ್ರಮಶಾಲಿಯಾದ, ಮಾರುತೇಃ - ವಾಯುಪುತ್ರನಾದ, ತಸ್ಯ - ಆ ಆಂಜನೇಯನಿಗೆ, ಗಿರೇಃ - ಬೆಟ್ಟದ, ಇದಮೇವಶಿಖರಂ - ಈ ಶಿಖರವನ್ನೇ, ಗೃಹೀತ್ವಾ - ತೆಗೆದುಕೊಂಡು, ಗಮಿಷ್ಯಾಮಿ - ಹೋಗುವೆನು, ಇತಿ - ಇಂತೆದು, ಬುದ್ಧಿಃ - ಬುದ್ಧಿಯು, ಸಮುತ್ಪನ್ನಾ - ಹುಟ್ಟಿತು, ಅಸ್ಮಿನ್‌ಶಿಖರೇ - ಇದೇ ದಕ್ಷಿಣ ಶೃಂಗದಲ್ಲಿ, ಜಾತಾಂ - ಹುಟ್ಟಿರುವ, ತಾಮೌಷಧಿಂ - ಆ ಮೂಲಿಕೆಯನ್ನು, ಸುಖಾವಹಂ - ಸುಖಕರವಾದುದನ್ನಾಗಿ, ಸುಷೇಣಃ - ಸುಷೇಣನು, ಮಾಂ - ನನ್ನನ್ನು ಕುರಿತು, ಯಥಾ - ಹೇಗೆ, ಅಬ್ರವೀತ್ - ನುಡಿದನೋ, ತಥಾ - ಹಾಗೆಯೇ, ಪ್ರತರ್ಕೇಣ - ಊಹೆಯಿಂದ, ಅವಗಚ್ಛಾಮಿ - ತಿಳಿಯುತ್ತೇನೆ. ॥ ೨೬ ॥ ಅಹಂ - ನಾನು, ವಿಶಲ್ಯಕರಣೀಂ - ವಿಶಲ್ಯಕರಣಿಯೆಂಬ ಮೂಲಿಕೆಯನ್ನು, ಅಗೃಹ್ಯ - ತೆಗೆದುಕೊಳ್ಳದೇ, ಗಚ್ಛಾಮಿಯದಿ - ಹೋದುದೇ ಆದರೆ, ಕಾಲಾತ್ಯಯೇನ - ಕಾಲಾತಿಕ್ರಮಣದಿಂದ, ದೋಷಃ -

---

ಕರಣಿ, ಸಂಜೀವಿನಿ, ಸಂಧಾನಕರಣಿ ಎಂಬ ಮೂಲಿಕೆಗಳನ್ನು ತಗದುಕೊಂಡು ಬಹು ಜಾಗ್ರತೆಯಾಗಿ ಹಿಂತಿರುಗಿ ಬರುವವನಾಗು. ಆ ಔಷಧಗಳನ್ನು ತಂದಲ್ಲಿ ಮಹಾನುಭಾವನಾದ ಈ ಲಕ್ಷ್ಮಣನು ಜೀವಿಸುವನು” ಎಂದು ಹೇಳಿದನು. ಸುಷೇಣನಾಡಿದ ಮಾತುಗಳನ್ನು ಕೇಳಿ ಹನುಮಂತನು ಮಹಾ ವೇಗವುಳ್ಳವನಾಗಿ ಆ ಓಷಧಿಪರ್ವತಕ್ಕೆ ಹೋದನು. ಅಲ್ಲಿಗೆ ಹೋಗಿ ಆ ಪರ್ವತದ ದಕ್ಷಿಣಶಿಖರದಲ್ಲೆಲ್ಲ ಚೆನ್ನಾಗಿ ಹುಡುಕಿ ನೋಡಿದನು. ॥ ೨೧-೨೫ ॥ ಆದರೂ ಆ ಮೂಲಿಕೆಗಳನ್ನು ತಿಳಿದುಕೊಳ್ಳಲಾರದೆ, “ಎಷ್ಟು ಹುಡುಕಿದರೂ ಮೂಲಿಕೆಗಳು ಕಾಣದಿರುವುವು. ಕಾಲಹರಣವಾಗುತ್ತಿರುವುದು. ಆದುದರಿಂದ ಇನ್ನು ಹುಡುಕುವುದು ಉಚಿತವಾಗಲಾರದು. ಈ ಪರ್ವತಶಿಖರವನ್ನೇ ತೆಗೆದುಕೊಂಡು ಹೋಗಿ ಸುಷೇಣನ ಮುಂದಿಡುವುದು ಸೂಕ್ತವೆಂದು ತೋರುತ್ತದೆ. ಆತನೇ ಸುಲಭವಾಗಿ ಮೂಲಿಕೆಗಳನ್ನು ಹುಡುಕಿಕೊಳ್ಳುವನು. ಅದರಿಂದ ಕಾಲಹರಣವೂ ತಪ್ಪುವುದು. ಕಾಲಹರಣವಾಗುವುದರಿಂದ ಬಹಳ ಅನರ್ಥಗಳಿಗೆ ಆಸ್ಪದವಾಗುವುದು. ನಾನೇಕೆ ಹಾಗೆ ಮಾಡಬೇಕು” ಎಂದು ಆಲೋ

ಕಾಲಾತ್ಯಯೇನ ದೋಷಸ್ಸ್ಯಾದ್ವೈಕ್ಲಬ್ಯಂ ಚ ಮಹದ್ಭವೇತ್ " । ಇತಿ ಸಂಚಿಂತ್ಯ ಹನುಮಾನ್ ಗತ್ವಾ ಕ್ಷಿಪ್ರಂ ಮಹಾಬಲಃ ॥ ೨೮ ॥ ಆಸಾದ್ಯ ಪರ್ವತಶ್ರೇಷ್ಠಂ ತ್ರಿಃ ಪ್ರಕಂಪ್ಯ ಗಿರೇಃ ಶಿರಃ । ಫುಲ್ಲನಾನಾತರುಗಣಂ ಸಮುತ್ಪಾಟ್ಯ ಮಹಾಬಲಃ । ಗೃಹೀತ್ವಾ ಹರಿಶಾರ್ದೂಲೋ ಹಸ್ತಾಭ್ಯಾಂ ಸಮತೋಲಯತ್ ॥೨೯॥ ಸನೀಲಮಿವ ಜೀಮೂತಂ ತೋಯಪೂರ್ಣಂ ನಭಸ್ಸ್ಥಲಾತ್ । ಆಪಪಾತ ಗೃಹೀತ್ವಾತು ಹನುಮಾನ್ ಶಿಖರಂ ಗಿರೇಃ ॥ ೩೦ ॥ ಸಮಾಗಮ್ಯ ಮಹಾವೇಗಸ್ಸನ್ನ್ಯಸ್ಯ ಶಿಖರಂ ಗಿರೇಃ । ವಿಶ್ರಮ್ಯ ಕಿಂಚಿದ್ಧನುಮಾನ್ ಸುಷೇಣ ಮಿದಮಬ್ರವೀತ್ ॥ ೩೧ ॥ " ಓಷಧಿಂ ನಾವಗಚ್ಛಾಮಿ ತಾಮಹಂ ಹರಿಪುಂಗವ । ತದಿದಂ ಶಿಖರಂ ಕೃತ್ಸ್ನಂ ಗಿರೇಸ್ತಸ್ಯಾಹೃತಂ ಮಯಾ "

ದೋಷವು, ಸ್ಯಾತ್ - ಆಗುವದು, ಮಹತ್ - ಬಹಳವಾದ, ವೈಕ್ಲಬ್ಯಂಚ - ವಿಕಲತ್ವವು, ಭವೇತ್-ಪ್ರಕಟವಾಗುವದು. ॥೨೭॥ ಮಹಾಬಲಃ - ಬಹಳ ಬಲಶಾಲಿಯಾದ, ಹನುಮಾನ್ - ಆಂಜನೇಯನು, ಇತಿ - ಈ ಪರಿಯಾಗಿ, ಸಂಚಿತ್ಯ - ಆಲೋಚಿಸಿ, ಕ್ಷಿಪ್ರಂ - ಜಾಗ್ರತೆಯಾಗಿ, ಗತ್ವಾ - ಹೋಗಿ, ಪರ್ವತಶ್ರೇಷ್ಠಂ - ಓಷಧಿ ಪರ್ವತವನ್ನು, ಆಸಾದ್ಯ - ಹೊಂದಿ, ಗಿರೇಃ - ಬೆಟ್ಟದ, ಶಿರಃ - ಶಿಖರವನ್ನು, ತ್ರಿಃ - ಮೂರಾವರ್ತಿ, ಪ್ರಕಂಪ್ಯ - ಕದಲಿಸಿ, ಮಹಾಬಲಃ - ಬಹಳ ಬಲಶಾಲಿಯಾದ, ಹರಿಶಾರ್ದೂಲಃ - ವಾನರೋತ್ತಮನಾದ ಆಂಜನೇಯನು, ಹಸ್ತಾಭ್ಯಾಂ - ಕೈಗಳಿಂದ, ಫುಲ್ಲ....ಣಂ- ಅರಳಿದ ನಾನಾಬಗೆಯ ವೃಕ್ಷಗಳ ತಂಡಗಳುಳ್ಳ, ಗಿರೇಃ - ಓಷಧಿ ಪರ್ವತದ, ಶಿಖರಂ - ಶೃಂಗವನ್ನು, ಸಮುತ್ಪಾಟ್ಯ - ಕಿತ್ತು, ಗೃಹೀತ್ವಾ - ತೆಗೆದುಕೊಂಡು, ಸಮತೋಲಯತ್ - ಎತ್ತಿಕೊಂಡನು. ॥ ೨೮-೨೯ ॥ ಸಹನುಮಾನ್ - ಆ ಆಂಜನೇಯನು, ನೀಲಂ - ಕಪ್ಪಾಗಿರುವ, ತೋಯಪೂರ್ಣಂ - ಉದಕಪೂರಿತವಾದ, ಜೀಮೂತಮಿವ - ಮೇಘವನ್ನಂತೆ, ಗಿರೇಃ - ಬೆಟ್ಟದ, ಶಿಖರಂ - ಶೃಂಗವನ್ನು, ಗೃಹೀತ್ವಾ - ತೆಗದುಕೊಂಡು, ನಭಸ್ಥಲಾತ್ - ಅಂತರಿಕ್ಷದಿಂದ, ಆಪಪಾತ - ಹೊರಟು ಬಂದನು. ॥ ೩೦ ॥ ಮಹಾವೇಗಃ - ಬಹಳ ವೇಗಶಾಲಿಯಾದ, ಹನುಮಾನ್ - ಆಂಜನೇಯನು, ಸಮಾಗಮ್ಯ - ಬಂದು, ಗಿರೇಃ - ಬೆಟ್ಟದ, ಶಿಖರಂ - ಶೃಂಗವನ್ನು, ಸನ್ನ್ಯಸ್ಯ - ಕೆಳಗಿರಿಸಿ, ಕಿಂಚಿತ್ - ಕೊಂಚ, ವಿಶ್ರಮ್ಯ - ಸುದಾರಿಸಿಕೊಂಡು, ಸುಷೇಣಂ - ಸುಷೇಣನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೩೧ ॥ ಹರಿಪುಂಗವ - ವಾನರಶ್ರೇಷ್ಠನೇ, ಅಹಂ - ನಾನು, ತಾಮೋಷಧಿಂ - ಆ ಓಷಧಿಯನ್ನು, ನಾವಗಚ್ಛಾಮಿ - ಅರಿಯೆನು, ತತ್ - ಆ ಕಾರಣದಿಂದ, ಮಯಾ - ನನ್ನಿಂದ, ತಸ್ಯಗಿರೇಃ - ಆ ಬೆಟ್ಟದ, ಕೃತ್ಸ್ನಂ - ಸಮಸ್ತವಾದ, ಇದಂಶಿಖರಂ - ಈ ಶೃಂಗವು, ಆಹೃತಂ - ತರಲ್ಪಟ್ಟಿತು. ॥ ೩೨ ॥ ಏವಂ - ಈ ಪರಿಯಾಗಿ, ಕಥಯಮಾನಂ - ಹೇಳುತ್ತಿರುವ,

---

ಚಿಸಿ ಆ ಬಳಿಕ ಆ ಶಿಖರವನ್ನು ತೂಗಿ ಪೆಳಗಿಸಿದನು. ಆ ರೀತಿ, ವೀರ ಹನುಮಂತನು, ನಾನಾವಿಧಗಳಾದ ವೃಕ್ಷಾದಿಗಳೊಡಗೂಡಿದ ಆ ಪರ್ವತಶಿಖರವನ್ನು ಪೆಳಗಿಸಿ ತನ್ನ ಕೈಗಳಿಂದ ಅದನ್ನು ಹಿಡಿದುಕೊಂಡು ಮಹಾ ವೇಗದಿಂದ್ವೈತಂದು ಅದನ್ನು ಸುಷೇಣನ ಮುಂದಿಟ್ಟನು. ॥೨೮-೩೦॥ ಹೀಗೆ ಆ ಹನುಮಂತನು ಗಿರಿಶಿಖರವನ್ನು ಆತನ ಮುಂದಿಟ್ಟು " ಎಲೈ ಸುಷೇಣನೇ! ಮೂಲಿಕೆ ಯಾವುದೆಂಬುದೇ ನನಗೆ ತಿಳಿಯಲಿಲ್ಲವು. ಆದುದರಿಂದ ಆ ಪರ್ವತದ ದಕ್ಷಿಣಭಾಗದ ಶಿಖರವನ್ನೇ ತೆಗೆದುಕೊಂಡು ಬಂದಿರುವೆನು. ನೀನೇ ಹುಡುಕಿ ತೆಗೆದುಕೊಳ್ಳಬಹುದು " ಎಂದು ಹೇಳಿದನು. ಹನುಮಂತನಿಂತು ನುಡಿಯಲು ಸುಷೇಣನು



ಓಷಧಿಪರ್ವತಾನಯನ

" ಆಪಪಾತ ಗೃಹೀತ್ವಾತು ಹನುಮಾನ್ ಶಿಖರಂ ಗಿರೇಃ "

ಪುಟ ೫೧೧

॥ ೩೨ ॥ ಏವಂ ಕಥಯಮಾನಂ ತಂ ಪ್ರಶಸ್ಯ ಪವನಾತ್ಮಜಂ । ಸುಷೇಣೋ ವಾನರ
ಶ್ರೇಷ್ಠೋ ಜಗ್ರಾಹೋತ್ಪಾಟ್ಯ ಚೌಷಧಿಂ ॥ ೩೩ ॥ ವಿಸ್ಮಿತಾಸ್ತು ಬಭೂವುಸ್ತೇ ರಣೇ
ವಾನರರಾಕ್ಷಸಾಃ । ದೃಷ್ಟ್ವಾ ಹನುಮತಃ ಕರ್ಮ ಸುರೈರಪಿ ಸುದುಷ್ಕರಂ ॥ ೩೪ ॥
ತತಸ್ಸಂಕ್ಷೋದಯಿತ್ವಾ ತಾಮೋಷಧಿಂ ವಾನರೋತ್ತಮಃ । ಲಕ್ಷ್ಮಣಸ್ಯ ದದೌ ನಸ್ತ
ಸ್ಸುಷೇಣಸ್ಸುಮಹಾದ್ಯುತಿಃ ॥ ೩೫ ॥ ಸಶಲ್ಯಸ್ತಾಂ ಸಮಾಘ್ರಾಯ ಲಕ್ಷ್ಮಣಃ ಪರ
ವೀರಹಾ । ವಿಶಲ್ಯೋ ವಿರುಜಃ ಶೀಘ್ರಮುದತಿಷ್ಠನ್ಮಹೀತಲಾತ್ ॥ ೩೬ ॥ ತಮು
ತ್ಥಿತಂ ತೇ ಹರಯೋ ಭೂತಲಾತ್ಪ್ರೇಕ್ಷ್ಯ ಲಕ್ಷ್ಮಣಂ । ಸಾಧುಸಾಧ್ವಿತಿ ಸುಪ್ರೀತಾ
ಸ್ಸುಷೇಣಂ ಪ್ರತ್ಯಪೂಜಯನ್ ॥ ೩೭ ॥ ಏಹ್ಯೇಹೀತ್ಯಬ್ರವೀದ್ರಾಮೋ ಲಕ್ಷ್ಮಣಂ

ತಂಪವನಾತ್ಮಜಂ - ಆ ಹನುಮಂತನನ್ನು, ಪ್ರಶಸ್ಯ - ಸ್ತುತಿಸಿ, ವಾನರಶ್ರೇಷ್ಠಃ - ವಾನರೋತ್ತಮನಾದ, ಸುಷೇಣಃ - ಸುಷೇಣನು, ಓಷಧಿಂಚ - ಮೂಲಿಕೆಯನ್ನೂ, ಉತ್ಪಾಟ್ಯ - ಕಿತ್ತು, ಜಗ್ರಾಹ - ತೆಗೆದುಕೊಂಡನು. ॥ ೩೩ ॥ ತೇವಾನರರಾಕ್ಷಸಾಃ - ಆ ಕಪಿರಾಕ್ಷಸರೂ, ಹನುಮತಃ - ಆಂಜನೇಯನ ಸಂಬಂಧವಾದ, ಸುರೈರಪಿ - ದೇವತೆಗಳಿಂದಲೂ, ಸುದುಷ್ಕರಂ - ಮಾಡಲಶಕ್ಯವಾದ, ಕರ್ಮ - ಕಾರ್ಯವನ್ನು, ದೃಷ್ಟ್ವಾ - ಕಂಡು, ರಣೇ - ಯುದ್ಧಭೂಮಿಯಲ್ಲಿ, ವಿಸ್ಮಿತಾಃ - ಆಶ್ಚರ್ಯಗೊಂಡವರು, ಬಭೂವುಃ - ಆದರು. ॥೩೪॥ ತತಃ - ಬಳಿಕ, ವಾನರೋತ್ತಮಃ - ಕಪಿಶ್ರೇಷ್ಠನಾದ, ಸುಷೇಣಃ - ಸುಷೇಣನು, ತಾಮೋಷಧಿಂ - ಆ ಮೂಲಿಕೆಯನ್ನು, ಸಂಕ್ಷೋದಯಿತ್ವಾ - ಪುಡಿಮಾಡಿ, ಸುಮಹಾದ್ಯುತಿಃ - ಮಹಾ ತೇಜೋವಂತನಾದ, ಲಕ್ಷ್ಮಣಸ್ಯ - ಸೌಮಿತ್ರಿಯ, ನಸ್ತಃ - ಮೂಗಿನಲ್ಲಿ, ದದೌ - ಕೊಟ್ಟನು. ॥ ೩೫ ॥ ಪರವೀರಹಾ - ಶತ್ರುಸಂಹಾರಕನಾದ, ಸಶಲ್ಯಃ - ಸರಳುಗಳಿಂದೊಡಗೂಡಿದ, ಲಕ್ಷ್ಮಣಃ - ಸೌಮಿತ್ರಿಯು, ತಾಂ - ಆ ವಿಶಲ್ಯಕರಣಿಯೆಂಬ ಮೂಲಿಕೆಯನ್ನು, ಸಮಾಘ್ರಾಯ - ಆಘ್ರಾಣಿಸಿ, ಶೀಘ್ರಂ - ಜಾಗ್ರತೆಯಾಗಿ, ವಿಶಲ್ಯಃ - ವಾಸಿಯಾದ ಸರಳು ಗಾಯಗಳುಳ್ಳವನಾಗಿ, ವಿರುಜಃ - ರೋಗವಿಲ್ಲದೆ, ಮಹೀತಲಾತ್ - ಭೂಪ್ರದೇಶದಿಂದ, ಉದತಿಷ್ಠತ್ - ಮೇಲಕ್ಕೆದ್ದನು. ॥ ೩೬ ॥ ತೇಹರಯಃ - ಆ ಕಪಿಗಳು, ಭೂತಲಾತ್ - ಭೂಪ್ರದೇಶದ ದೆಶೆಯಿಂದ, ಉತ್ಥಿತಂ - ಎದ್ದ, ತಂಲಕ್ಷ್ಮಣಂ - ಆ ಸೌಮಿತ್ರಿಯನ್ನು, ಪ್ರೇಕ್ಷ್ಯ - ಕಂಡು, ಸುಪ್ರೀತಾಸ್ಸಂತಃ - ಬಹಳ ಸಂತೋಷಗೊಂಡವರಾಗಿ, ಸಾಧುಸಾಧ್ವಿತಿ - ಒಳ್ಳೆಯದು ಒಳ್ಳೆಯದೆಂದು, ಸುಷೇಣಂ - ಸುಷೇಣನನ್ನು, ಪ್ರತ್ಯ

ಅವನನ್ನು ಶ್ಲಾಘಿಸಿ ಆ ತರುವಾಯ ಆ ಶಿಖರದಲ್ಲಿದ್ದ ಮೂಲಿಕೆಗಳನ್ನು ತೆಗೆದುಕೊಂಡನು. ಆ ಅದ್ಭುತ ಕಾರ್ಯವನ್ನು ಕಂಡು ವಾನರರಾಕ್ಷಸರೆಲ್ಲರೂ ಪರಮಾಶ್ಚರ್ಯಭರಿತರಾದರು. ಅದೇ ಸಮಯದಲ್ಲಿ ಗಗನಚಾರಿಗಳಾದ ದೇವತೆಗಳೂ ಸಹ ಇತರರಾರಿಂದಲೂ ಮಾಡಲಸಾಧ್ಯವಾದ ಅಂತಹ ಅದ್ಭುತ ಕಾರ್ಯವನ್ನು ಮಾಡಿರುವ ಹನುಮಂತನನ್ನು ಅನೇಕ ವಿಧವಾಗಿ ಸ್ತುತಿಸಿದರು. ॥೩೧–೩೪॥ ಆಮೇಲೆ ಸುಷೇಣನು ಆ ಮೂಲಿಕೆಗಳನ್ನು ಹಿಂಡಿ ಮಹಾ ತೇಜಸ್ವಿಯಾದ ಲಕ್ಷ್ಮಣನಿಗೆ ಮೂಗಿನಲ್ಲಿ ಹಿಂಡಿದನು. ಆಗ ಶತ್ರುಮರ್ದನನಾದ ಲಕ್ಷ್ಮಣಸ್ವಾಮಿಯು ಆ ಮೂಲಿಕೆಗಳ ಗಂಧವನ್ನು ಆಘ್ರಾಣಿಸುತ್ತಲೇ ಏನೊಂದು ಬಾಧೆಯೂ ಇಲ್ಲದೆ ಎದ್ದು ನಿಂತನು. ಹಾಗೆ ನೀರೋಗನಾಗಿ ಯಾವ ಬಾಧೆಯೂ ಇಲ್ಲದೆ ಸುಖವಾಗಿ ಎದ್ದು ಕುಳಿತ ಆತನನ್ನು ನೋಡಿ ವಾನರರೆಲ್ಲರೂ ಅಪರಿಮಿತಾನಂದದಿಂದ ಸುಷೇಣನನ್ನು ಸ್ತೋತ್ರಮಾಡಿದರಲ್ಲದೆ, ಬಹುವಾಗಿ ಪೂಜಿಸಿದರು. ಶತ್ರುವೀರರನ್ನು ಸದೆಬಡಿವ ಸಾಮರ್ಥ್ಯವುಳ್ಳ ಶ್ರೀರಾಮ

ಪರವೀರಹಾ । ಸಸ್ವಜೇ ಸ್ನೇಹಗಾಢಂಚ ಬಾಷ್ಪಪರ್ಯಾಕುಲೇಕ್ಷಣಃ ॥ ೩೮ ॥ ಅಬ್ರವೀಚ್ಚ ಪರಿಷ್ವಜ್ಯ ಸೌಮಿತ್ರಿಂ ರಾಘವಸ್ತದಾ । "ದಿಷ್ಟ್ಯಾ ತ್ವಾಂ ವೀರ! ಪಶ್ಯಾಮಿ ಮರಣಾತ್ ಪುನರಾಗತಂ ॥ ೩೯ ॥ ನಹಿ ಮೇ ಜೀವಿತೇನಾರ್ಥ ಸ್ಸೀತಯಾ ಚಾಪಿ ಲಕ್ಷ್ಮಣ! । ಕೋಹಿ ಮೇ ವಿಜಯೇನಾರ್ಥ ಸ್ತ್ವಯಿ ಪಂಚತ್ವಮಾಗತೇ" ॥ ೪೦ ॥ ಇತ್ಯೇವಂ ವದತಸ್ತಸ್ಯ ರಾಘವಸ್ಯ ಮಹಾತ್ಮನಃ । ಖಿನ್ನಃ ಶಿಥಿಲಯಾ ವಾಚಾ ಲಕ್ಷ್ಮಣೋ ವಾಕ್ಯಮಬ್ರವೀತ್ ॥ ೪೧ ॥ "ತಾಂ ಪ್ರತಿಜ್ಞಾಂ ಪ್ರತಿಜ್ಞಾಯ ಪುರಾ ಸತ್ಯಪರಾಕ್ರಮ! । ಲಘುಃ ಕಶ್ಚಿದಿವಾಸತ್ತ್ವೋ ನೈವಂ ವಕ್ತುಮಿಹಾರ್ಹಸಿ ॥ ೪೨ ॥

ಪೂಜಯರ್ - ಶ್ಲಾಘನೆ ಮಾಡಿದರು. ॥ ೩೭ ॥ ಪರವೀರಹಾ - ಶೂರರಾದ ಶತ್ರುಗಳನ್ನು ಸಂಹರಿಸುವವನಾದ, ರಾಮಃ - ಶ್ರೀರಾಮನು, ಲಕ್ಷ್ಮಣಂ - ಸೌಮಿತ್ರಿಯನ್ನು ಕುರಿತು, ಏಹ್ಯೇಹೀತಿ - ಬಾಬಾರೆಂದು, ಅಬ್ರವೀತ್ - ನುಡಿದನು, ಬಾಷ್ಪ....ಣಃ - ಕಂಬನಿಗಳಿಂದ ಕದಡಿವ ಕಣ್ಣುಗಳುಳ್ಳವನಾಗಿ, ಸ್ನೇಹಗಾಢಂ-ಸ್ನೇಹದಿಂದ ದೃಢವಾಗಿ, ಸಸ್ವಜೇ-ಅಪ್ಪಿಕೊಂಡನು. ॥ ೩೮ ॥ ರಾಘವಃ ಶ್ರೀರಾಮನು, ಪರಿಷ್ವಜ್ಯ - ಅಪ್ಪಿಕೊಂಡು, ತದಾ - ಆ ಕಾಲದಲ್ಲಿ, ಅಬ್ರವೀತ್ - ನುಡಿದನು, ವೀರಃ - ಶೂರನೇ, ಮರಣಾತ್-ಮರಣವನ್ನು ಹೊಂದಿ, ಪುನರಾಗತಂ - ಹಿಂತಿರುಗಿ ಬಂದ, ತ್ವಾಂ-ನಿನ್ನನ್ನು, ದಿಷ್ಟ್ಯಾ - ಅದೃಷ್ಟವಶದಿಂದ, ಪಶ್ಯಾಮಿ - ನೋಡಿದೆನು, ಲಕ್ಷ್ಮಣ - ಸೌಮಿತ್ರಿಯೇ, ತ್ವಯಿ - ನೀನು, ಪಂಚತ್ವಂ-ಮರಣವನ್ನು, ಆಗತೇ - ಹೊಂದಲು, ಮೇ - ನನಗೆ, ಜೀವಿತೇನ - ಪ್ರಾಣದಿಂದ, ಅರ್ಥಃ - ಪ್ರಯೋಜನವು, ನಹಿ - ಇಲ್ಲವಷ್ಟೆ, ಸೀತಯಾಚಾಪಿ - ಸೀತಾದೇವಿಯಿಂದಲೂ, ನಹಿ - ಇಲ್ಲವಷ್ಟೆ, ಮೇ - ನನಗೆ, ವಿಜಯೇನ - ಶತ್ರುನಿಗ್ರಹದಿಂದ, ಕೋವಾಅರ್ಥಃ - ಏನು ಪ್ರಯೋಜನವು. ॥ ೪೦ ॥ ಇತ್ಯೇವಂ - ಈ ಪರಿಯಾಗಿ, ಮಹಾತ್ಮನಃ-ಮಹಾ ಮನಸ್ವಿಯಾದ, ತಸ್ಯರಾಘವಸ್ಯ - ಆ ಶ್ರೀರಾಮನು, ವದತಃ - ಹೇಳುತ್ತಿರಲು, ಖಿನ್ನಃ - ವ್ಯಸನಗೊಂಡವನಾಗಿ, ಲಕ್ಷ್ಮಣಃ - ಸೌಮಿತ್ರಿಯು, ಶಿಥಿಲಯಾ - ಶಿಥಿಲವಾದ ಅಕ್ಷರಗಳುಳ್ಳ, ವಾಚಾ - ಮಾತಿನಿಂದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೪೧॥ ಸತ್ಯಪರಾಕ್ರಮ - ಸಫಲವಾದ ಪರಾಕ್ರಮವುಳ್ಳವನೇ, ಪುರಾ - ಪೂರ್ವದಲ್ಲಿ, ತಾಂಪ್ರತಿಜ್ಞಾಂ - ಅಂಥಾ ದಶಕಂಠ ವಧರೂಪವಾದ ಪ್ರತಿಜ್ಞೆಯನ್ನು, ಪ್ರತಿಜ್ಞಾಯ - ಮಾಡಿ, ಅಸತ್ವಃ - ಬಲಹೀನನಾದ, ಲಘುಃ - ಸ್ವಲ್ಪನಾದ, ಕಶ್ಚಿದಿವ - ಅನಾಥ ಪುರುಷನಂತೆ, ಏವಂ - ಈ ಪರಿಯಾಗಿ, ವಕ್ತುಂ - ಹೇಳುವುದಕ್ಕೆ, ಇಹ - ಈಗ, ನಾರ್ಹತಿ - ಯೋಗ್ಯನಾಗಬೇಡ. ॥ ೪೨ ॥ ಅನಘ - ನಿರ್ದೋಷನೇ,

---

ಮೂರ್ತಿಯಾದವರೋ. ಲಕ್ಷ್ಮಣನನ್ನು ಬಳಿಗೆ ಕರೆದು ಸ್ನೇಹದಿಂದ ಆಲಿಂಗಿಸಿ ಆನಂದಾಧಿಕ್ಯದಿಂದ ಕಂಬನಿಯಿಡುತ್ತ ಸಮಿತ್ರಾನಂದವರ್ಧನನಾದ ಆತನನ್ನು ಕುರಿತು, "ತಮ್ಮಾ ಲಕ್ಷ್ಮಣಾ! ದೈವಯೋಗದಿಂದ ಮೃತಿಯೊಂದಿ ಮತ್ತೆ ಜೀವಿಸಿ ಬಂದ ನಿನ್ನನ್ನು ನೋಡಿದೆನು. ಎಲೆ ವೀರನೇ! ಲಕ್ಷ್ಮಣಾ! ನೀನು ನಿಜವಾಗಿಯೂ ಮರಣವನ್ನು ಹೊಂದಿದ್ದರೆ, ನನಗೆ ಸೀತೆಯಿಂದಾಗಲಿ, ಪ್ರಾಣಗಳಿಂದಾಗಲಿ ಏನುತಾನೆ ಪ್ರಯೋಜನವಿರುತ್ತಿದ್ದಿತು. ಇಷ್ಟೆಯಲ್ಲದೆ ನನಗೆ ವಿಜಯದಿಂದ ತಾನೆ ಪ್ರಯೋಜನವೇನು?" ಎಂದನು. ॥ ೩೭–೪೦ ॥ ಹೀಗೆ ಹೇಳುತ್ತಿರುವ ಮಹಾತ್ಮನಾದ ರಘುಕುಲೋದ್ಭವನನ್ನು ಕುರಿತು, ಲಕ್ಷ್ಮಣಸ್ವಾಮಿಯು ಗದ್ಗದ ಧ್ವನಿಯುಳ್ಳವನಾಗಿ, "ಎಲೈ ಸತ್ಯಪರಾಕ್ರಮಿಯಾದ ಶ್ರೀರಾಮಮೂರ್ತಿಯೇ! ನೀನು ಪೂರ್ವದಲ್ಲಿ ರಾವಣ ಸಂಹಾರವನ್ನು ಮಾಡುವೆನೆಂದು ಪ್ರತಿಜ್ಞೆ ಮಾಡಿ ಈಗ ಪರಾಕ್ರಮ

ನಹಿ ಪ್ರತಿಜ್ಞಾಂ ಕುರ್ವಂತಿ ವಿತಥಾಂ ಸಾಧವೋಽನಘ ! । ಲಕ್ಷಣಂ ಹಿ ಮಹತ್ತ್ವಸ್ಯ ಪ್ರತಿಜ್ಞಾಪರಿಪಾಲನಂ ॥ ೪೩ ॥ ನೈರಾಶ್ಯಮುಪಗಂತುಂ ತೇ ತದಲಂ ಮತ್ಕೃತೇಽನಘ ! । ವಧೇನ ರಾವಣಸ್ಯಾದ್ಯ ಪ್ರತಿಜ್ಞಾಮನುಪಾಲಯ ॥ ೪೪ ॥ ನಜೀವನ್ ಯಾಸ್ಯತೇ ಶತ್ರುಸ್ತವಬಾಣಪಥಂಗತಃ । ನರ್ದತಸ್ತೀಕ್ಷ್ಣದಂಷ್ಟ್ರಸ್ಯ ಸಿಂಹಸ್ಯೇವ ಮಹಾಗಜಃ ॥೪೫॥ ಅಹಂ ತು ವಧಮಿಚ್ಛಾಮಿ ಶೀಘ್ರಮಸ್ಯ ದುರಾತ್ಮನಃ । ಯಾವದಸ್ತಂ ನಯಾತ್ಯೇಷ ಕೃತಕರ್ಮಾ ದಿವಾಕರಃ ॥ ೪೬ ॥

ಹಿ - ಯಾವ ಕಾರಣದಿಂದ, ಪ್ರತಿ....ನಂ - ಶಪಥ ವಚನದ ಪರಿಪಾಲನವು, ಮಹತ್ತ್ವಸ್ಯ - ದೊಡ್ಡತನಕ್ಕೆ, ಲಕ್ಷಣಂ-ಚಿಹ್ನರೂಪವಾದದ್ದೋ, ತಸ್ಮಾತ್ - ಆ ಕಾರಣದಿಂದ, ಸಾಧವಃ - ಸತ್ಪುರುಷರು, ಪ್ರತಿಜ್ಞಾಂ - ಶಪಥವನ್ನು, ವಿತಥಾಂ - ವಿಫಲವನ್ನಾಗಿ, ನಕುರ್ವಂತಿಹಿ - ಮಾಡ ವವಿಲ್ಲವಷ್ಟೆ. ॥ ೪೩ ॥ ಅನಘ - ನಿರ್ದೋಷನೇ, ತತ್ - ಆ ಕಾರಣದಿಂದ, ಮತ್ಕೃತೇ - ನನ್ನ ನಿಮಿತ್ತವಾಗಿ, ತೇ - ನಿನಗೆ, ನೈರಾಶ್ಯಂ - ವೈರಾಗ್ಯವನ್ನು, ಉಪಗಂತುಂ - ಹೊಂದುವದಕ್ಕೆ, ಅಲಂ - ಸಾಕು, ಅದ್ಯ - ಈಗ, ರಾವಣಸ್ಯ - ದಶಕಂಠನ, ವಧೇನ - ಸಂಹಾರದಿಂದ, ಪ್ರತಿಜ್ಞಾಂ ಶಪಥ ವಚನವನ್ನು, ಅನುಪಾಲಯ - ಸಂರಕ್ಷಿಸಿಕೋ. ॥ ೪೪ ॥ ತೀಕ್ಷ್ಣದಂಷ್ಟ್ರಸ್ಯ - ತೀಕ್ಷ್ಣವಾದ ಕೋರೆಹಲ್ಲುಗಳುಳ್ಳ, ನರ್ದತಃ - ಗರ್ಜಿಸುತ್ತಿರುವ, ಸಿಂಹಸ್ಯ - ಸಿಂಹದ, ಅಗ್ರೇ - ಮುಂದೆ, ಮಹಾಗಜಇವ - ದೊಡ್ಡ ಆನೆಯಂತೆ, ತವ - ನಿನ್ನ, ಬಾಣಪಥಂ - ಸರಳುಗಳ ಮಾರ್ಗವನ್ನು, ಗತಃ - ಹೊಂದಿರುವ, ತೇ - ನಿನ್ನ, ಶತ್ರುಃ - ಶತ್ರುವಾದ ದಶಕಂಠನು, ಜೀವನ್ - ಬದುಕಿ, ನಯಾಸ್ಯತೇ - ಹೋಗಲಾರನು. ॥ ೪೫ ॥ ಯಾವತ್ - ಎಷ್ಟರೊಳಗೆ, ಏಷದಿವಾಕರಃ - ಈ ಸೂರ್ಯನು, ಕೃತಕರ್ಮಾ - ಮಾಡಲ್ಪಟ್ಟ ಸಂಚಾರವುಳ್ಳವನಾಗಿ, ಅಸ್ತಂ - ಅಸ್ತಮಯ ಪರ್ವತವನ್ನು, ನಯಾತಿ - ಹೊಂದುವದಿಲ್ಲವೋ, ತಾವತ್-ಅಷ್ಟರೊಳಗೆ, ಅಹಂತು-ನಾನಾದರೆ, ಅಸ್ಯದುರಾತ್ಮನಃ - ಈ ದಶಕಂಠನ, ವಧಂ - ಸಂಹಾರವನ್ನು, ಶೀಘ್ರಂ - ಜಾಗ್ರತೆಯಾಗಿ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೪೬ ॥ ರಾಜವರಾತ್ಮಜ - ಅರಸುಮಗನೇ, ಸಂಖ್ಯೇ - ಕಾಳಗದಲ್ಲಿ, ರಾವಣಸ್ಯ - ದಶಕಂಠನ, ವಧಂ - ಸಂಹಾರವನ್ನು, ಇಚ್ಛಸಿ

ಹೀನನಂತೆ ನುಡಿಯುವುದು ಯೋಗ್ಯವಲ್ಲವು. ಎಲೈ ಅನಘನೇ ! ಸತ್ಪುರುಷರು ಮಾಡಿದ ಪ್ರತಿಜ್ಞೆಯನ್ನು ವ್ಯರ್ಥಗೊಳಿಸರು. ಅಣ್ಣಾ ! ಮಹತ್ವವನ್ನು ಕಾಪಾಡಿಕೊಳ್ಳುವುದಕ್ಕೆ ಪ್ರತಿಜ್ಞೆಯೇ ಗುರುತಾಗುವುದು. ಆದುದರಿಂದ ಈಗ ನೀನು ಸ್ಥಿರಚಿತ್ತನಾಗಿ ನಿನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿ ರಾವಣನನ್ನು ಸಂಹರಿಸು. ನಿನ್ನ ಬಾಣಮಾರ್ಗವನ್ನು ಹೊಂದಿದ ಆ ರಾವಣನು, ಗರ್ಜಿಸುತ್ತಿರುವ ಸಿಂಹಕ್ಕೆದುರಾದ ಆನೆಯಂತೆ ಎಷ್ಟುಮಾತ್ರಕ್ಕೂ ಜೀವಿಸಲಾರನು. ಈಗ ನಾನು ದುರಾತ್ಮನಾದ ಆ ರಾಕ್ಷಸನ ಸಾವನ್ನೇ ಕೋರುತ್ತಿರುವೆನು. ಈ ದಿನವೇ ಸೂರ್ಯನಸ್ತಮಿಸುವ ಮೊದಲೇ ನೀನು ಅವನನ್ನು ಸಂಹರಿಸು. ಅಣ್ಣಾ ರಾಮಚಂದ್ರಾ ! ನೀನು ಯುದ್ಧದಲ್ಲಿ ರಾವಣಾಸುರನನ್ನು ಕೊಂದು ನಿನ್ನ ಪ್ರತಿಜ್ಞೆಯನ್ನು ನೆರವೇರಿ

ಯದಿ ವಧಮಿಚ್ಛಸಿ ರಾವಣಸ್ಯ ಸಂಖ್ಯೇ
ಯದಿ ಚ ಕೃತಾಂ ತ್ವಮಿಹೇಚ್ಛತಿ ಪ್ರತಿಜ್ಞಾಂ ।
ಯದಿ ತವ ರಾಜವರಾತ್ಮಜಾಭಿಲಾಷಃ
ಕುರುಚ ವಚೋ ಮಮ ಶೀಘ್ರಮದ್ಯ ವೀರ!" ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವ್ಯುತ್ತರಶತತಮಸ್ಸರ್ಗಃ.

ಯದಿ - ಇಚ್ಛಿಸುವವನೇ ಆದರೆ, ಕೃತಾಂ - ಮಾಡಲ್ಪಟ್ಟ, ಪ್ರತಿಜ್ಞಾಂ - ಶಪಥವನ್ನು, ತ್ವಂ - ನೀನು, ಇಹ - ಈಗ, ಇಚ್ಛಸಿಯದಿಚ - ಅಪೇಕ್ಷಿಸುವನೇ ಆದರೆ, ತವ - ನಿನಗೆ, ಅಭಿಲಾಷಃ - ಅಪೇಕ್ಷೆಯು, ಅಸ್ತಿಯದಿ - ಇದ್ದುದೇ ಆದರೆ, ವೀರ - ಶೂರನೇ, ಮಮ - ನನ್ನ, ವಚಃ - ಮಾತನ್ನು, ಅದ್ಯ - ಈಗಲೇ, ಶೀಘ್ರಂ - ಜಾಗ್ರತೆಯಾಗಿ, ಕುರು - ಮಾಡು. ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವ್ಯುತ್ತರಶತತಮಸ್ಸರ್ಗಃ.

ಸುವ ಕೋರಿಕೆಯುಳ್ಳವನಾಗಿದ್ದರೆ ನನ್ನ ಮಾತಿನಂತೆ ಮೊದಲು ಆ ರಾಕ್ಷಸನನ್ನು ಸಂಹರಿಸು" ಎಂದು ಹೇಳಿದನು. ॥ ೪೪-೪೯ ॥

ಇಂತಿದು ಲಕ್ಷ್ಮಣ ಸಂಜೀವನವೆಂಬ ನೂರೆರಡನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ತ್ರ್ಯುತ್ತರಶತತಮಸ್ಸರ್ಗಃ

ಲಕ್ಷ್ಮಣೇನತು ತದ್ವಾಕ್ಯಮುಕ್ತಂ ಶ್ರುತ್ವಾ ಸ ರಾಘವಃ । ಸಂದಧೇ ಪರವೀರಘ್ನೋ ಧನುರಾದಾಯ ವೀರ್ಯವಾನ್ । ರಾವಣಾಯ ಶರಾನ್ ಘೋರಾನ್ ವಿಸಸರ್ಜ ಚಮೂಮುಖೇ ॥ ೧ ॥ ಅಥಾನ್ಯಂ ರಥಮಾರುಹ್ಯ ರಾವಣೋ ರಾಕ್ಷಸಾಧಿಪಃ । ಅಭ್ಯದ್ರವತ ಕಾಕುತ್ಸ್ಥಂ ಸ್ವರ್ಭಾನುರಿವ ಭಾಸ್ಕರಂ ॥ ೨ ॥ ದಶಗ್ರೀವೋ ರಥಸ್ಥಸ್ತು ರಾಮಂ ವಜ್ರೋಪಮೈಃ ಶರೈಃ । ಆಜಘಾನ ಮಹಾಘೋರೈರ್ಧಾರಾಭಿರಿವ ತೋಯದಃ ॥೩॥ ದೀಪ್ತಪಾವಕಸಂಕಾಶೈಃ ಶರೈಃ ಕಾಂಚನಭೂಷಣೈಃ । ನಿರ್ಬಿಭೇದ

ವೀರ್ಯವಾನ್-ಪರಾಕ್ರಮಶಾಲಿಯಾದ, ಪರವೀರಘ್ನಃ - ಶತ್ರುಶೂರರನ್ನು ಹೊಡೆಯುತ್ತಿರುವ, ಸರಾಘವಃ - ಆ ಶ್ರೀರಾಮನು, ಲಕ್ಷ್ಮಣೇನ - ಸೌಮಿತ್ರಿಯಿಂದ, ಉಕ್ತಂ - ಹೇಳಲ್ಪಟ್ಟ, ತದ್ವಾಕ್ಯಂ- ಆ ಮಾತನ್ನು, ಶ್ರುತ್ವಾ - ಕೇಳಿ, ಧನುಃ - ಬಿಲ್ಲನ್ನು, ಆದಾಯ - ತೆಗೆದುಕೊಂಡು, ಸಂದಧೇ - ಸಂಧಾನ ಮಾಡಿದನು. ॥೧॥ ಚಮೂಮುಖೇ - ಯುದ್ಧರಂಗದಲ್ಲಿ, ರಾವಣಾಯ - ದಶಕಂಧರನಿಗಾಗಿ, ಘೋರಾನ್ - ಭಯಂಕರವಾದ, ಶರಾನ್ - ಸರಳುಗಳನ್ನು, ವಿಸಸರ್ಜ - ಬಿಟ್ಟನು, ಅಥ - ಬಳಿಕ, ರಾಕ್ಷಸಾಧಿಪಃ - ರಕ್ಕಸರಿಗೆ ಅಧಿಪತಿಯಾದ, ರಾವಣಃ - ದಶಕಂಠನು, ಅನ್ಯಂ - ಮತ್ತೊಂದಾದ, ರಥಂ - ತೇರನ್ನು, ಆರುಹ್ಯ - ಏರಿ, ಸ್ವರ್ಭಾನುಃ - ರಾಹುವು, ಭಾಸ್ಕರಮಿವ - ಸೂರ್ಯನನ್ನಂತೆ, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಅಭ್ಯದ್ರವತ - ಓಡಿಬಂದನು. ॥೨॥ ದಶಗ್ರೀವಸ್ತು - ದಶಕಂಠನಾದರೆ, ರಥಾರೂಢಃ - ರಥದಲ್ಲಿ ಕುಳಿತು, ಮಹಾಘೋರೈಃ - ಮಹಾ ಕ್ರೂರಗಳಾದ, ವಜ್ರೋಪಮೈಃ - ವಜ್ರಾಯುಧಕ್ಕೆ ಸಮಾನಗಳಾದ, ಶರೈಃ - ಸರಳುಗಳಿಂದ, ಧಾರಾಭಿಃ - ಉದಕಧಾರೆಗಳಿಂದ, ತೋಯದಇವ - ಮೇಘದಂತೆ, ರಾಮಂ - ಶ್ರೀರಾಮನನ್ನು, ಆಜಘಾನ-ಹೊಡೆದನು ॥೩॥ ರಾಮಃ - ಶ್ರೀರಾಮನು, ರಣೇ - ಕಾಳಗದಲ್ಲಿ, ಸಮಾಹಿತಂ - ಸಮಾಧಾನಚಿತ್ತನಾದ, ದಶಗ್ರೀವಂ - ದಶಕಂಧರನನ್ನು, ಕಾಂಚ....ಣೈಃ - ಚಿನ್ನದ ಒಡವೆಗಳುಳ್ಳ, ದೀಪ್ತ....ಶೈಃ - ಹೊಳೆಯುತ್ತಿರುವ ಅಗ್ನಿಗೆ

ಲಕ್ಷ್ಮಣನು ಈ ರೀತಿ ನುಡಿಯಲು, ರಘುಕುಲೋದ್ಭವನೂ, ಶತ್ರುನಾಶಕನೂ, ಮಹಾ ಪ್ರತಾಪಶಾಲಿಯೂ ಆದ ಶ್ರೀರಾಮಚಂದ್ರನು ಧನುಸ್ಸನ್ನು ಗ್ರಹಿಸಿ ರಣಾಂಗಣದಲ್ಲಿ ನಿಂತು ರಾವಣನ ಮೇಲೆ ಮಹಾ ಘೋರವಾದ ಬಾಣಗಳನ್ನು ಪ್ರಯೋಗಿಸಿದನು. ಅದೇ ಸಮಯದಲ್ಲಿ ರಾಕ್ಷಸಾಧಿಪತಿಯಾದ ರಾವಣಾಸುರನಾದರೋ ಬೇರೊಂದು ರಥವನ್ನೇರಿ ರಾಹುವು ಸೂರ್ಯನನ್ನಟ್ಟಬರುವ ರೀತಿಯಲ್ಲಿ ಶ್ರೀರಾಮನನ್ನಟ್ಟಬಂದನು. ಆ ರಾಕ್ಷಸರಾಜನು ಮಹಾ ವೇಗದಿಂದೈತರುತ್ತ ವಜ್ರಾಯುಧಕ್ಕೆ ಸಮಾನವಾಗಿ ಬಹು ಭಯಂಕರಗಳಾಗಿರುವ ಅನೇಕ ಬಾಣಗಳನ್ನು ಶ್ರೀರಾಮನ ಮೇಲೆ ಪ್ರಯೋಗಿಸಿದನು. ಆಗಲಾ ರಘುಕುಲೋದ್ಭವನು ಅಪರಿಮಿತ ಕ್ರೋಧೋದ್ದೀಪಿತನಾಗಿ ಪ್ರಜ್ವಲಿಸುತ್ತಿರುವ ಯಜ್ಞೇಶ್ವರನನ್ನು ಹೋಲುತ್ತ, ಸುವರ್ಣಾಲಂಕೃತವಾದ ಬಾಣಗಳಿಂದ ಯುದ್ಧಸನ್ನದ್ಧನಾಗಿ ಬರುತ್ತಿರುವ ರಾವಣನ ಮೇಲೆ ಅವುಗಳನ್ನು ಪ್ರಯೋಗಿಸಿದನು. ಆ ಸಮಯದಲ್ಲಿ ಯುದ್ಧವನ್ನು

ರಣೇ ರಾಮೋ ದಶಗ್ರೀವಂ ಸಮಾಹಿತಂ ॥ ೪ ॥ ಭೂಮೌ ಸ್ಥಿತಸ್ಯ ರಾಮಸ್ಯ ರಥಸ್ಥಸ್ಯ ಚ ರಕ್ಷಸಃ । ನಸಮಂ ಯುದ್ಧಮಿತ್ಯಾಹುರ್ದೇವಗಂಧರ್ವದಾನವಾಃ ॥ ೫ ॥ ತತಃ ಕಾಂಚನಚಿತ್ರಾಂಗಃ ಕಿಂಕಿಣೀಶತಭೂಷಿತಃ । ತರುಣಾದಿತ್ಯಸಂಕಾಶೋ ವೈಡೂರ್ಯಮಯಕೂಬರಃ । ಸದಶ್ವೈಃ ಕಾಂಚನಾಪೀಡೈರ್ಯುಕ್ತಃ ಶ್ವೇತಪ್ರಕೀರ್ಣಕೈಃ ॥ ೬-೭ ॥ ಹರಿಭಿಸ್ಸೂರ್ಯಸಂಕಾಶೈ ರ್ಹೇಮಜಾಲವಿಭೂಷಿತೈಃ । ರುಕ್ಮವೇಣುಧ್ವಜಃ ಶ್ರೀಮಾನ್ ದೇವರಾಜರಥೋ ವರಃ ॥ ೮ ॥ ದೇವರಾಜೇನ ಸಂದಿಷ್ಟೋ ರಥಮಾರುಹ್ಯ ಮಾತಲಿಃ । ಅಭ್ಯವರ್ತತ ಕಾಕುತ್ಸ್ಥಮವತೀರ್ಯ ತ್ರಿವಿಷ್ಟಪಾತ್

ಸಮಾನಗಳಾದ, ಶರೈಃ - ಸರಳುಗಳಿಂದ, ನಿರ್ಬಿಭೇದ - ಭೇದಿಸಿದನು. ॥ ೪ ॥ ಭೂಮೌ - ನೆಲದಲ್ಲಿ, ಸ್ಥಿತಸ್ಯ - ನಿಂತಿರುವ, ರಾಮಸ್ಯ - ಶ್ರೀರಾಮನಿಗೂ, ರಥಸ್ಥಸ್ಯ - ರಥಾರೂಢನಾದ, ರಾಕ್ಷಸಸ್ಯ - ರಾವಣನಿಗೂ, ಯುದ್ಧಂ - ಕಾಳಿಗವು, ನಸಮಂ - ಸಮವಾದದ್ದಲ್ಲ, ಇತಿ-ಇಂತೆಂದು ದೇವ....ವಾಃ - ದೇವತೆಗಳು, ಗಂಧರ್ವರು, ರಕ್ಕಸರೂ, ಆಹುಃ - ಹೇಳಿದರು. ॥ ೫ ॥ ತತಃ - ಬಳಿಕ, ಕಾಂಚ....ಗಃ - ಬಂಗಾರದ ರೇಖೆಗಳಿಂದ ವಿಚಿತ್ರನಾದ ಅವಯವಗಳುಳ್ಳ, ಕಿಂಕಿ....ತಃ - ನೂರು ಘಂಟೆಗಳಿಂದ ಅಲಂಕೃತವಾದ, ವೈಡೂ....ರಃ - ವೈಡೂರ್ಯಮಣಿ ವಿಕಾರವಾದ, ಯುಗಂಧರಃ - ನೊಗಕ್ಕೆ ಆಧಾರಭೂತವಾದ ಮರಗಳುಳ್ಳ, ಕಾಂಚನಾಪೀಡೈಃ - ಬಂಗಾರದ ಅಲಂಕಾರಗಳುಳ್ಳ, ಶ್ವೇತಪ್ರಕೀರ್ಣಕೈಃ - ಬೆಳ್ಳಗಿರುವ ಚಾಮರಗಳುಳ್ಳ, ಸೂರ್ಯಸಂಕಾಶೈಃ - ಸೂರ್ಯನಂತೆ ಹೊಳೆಯುತ್ತಿರುವ, ಹೇಮ....ತೈಃ - ಬಂಗಾರದ ಮೇಲ್ವಸ್ತ್ರದಿಂದಲಂಕೃತವಾದ, ಹರಿಭಿಃ ಹಸುರು ಬಣ್ಣವುಳ್ಳ, ಸದಶ್ವೈಃ - ಉತ್ತಮಾಶ್ವಗಳಿಂದ, ಯುಕ್ತಃ - ಕೂಡಿರುವ, ರುಕ್ಮ....ಜಃ - ಬಂಗಾರದ ವಿಕಾರವಾದ ಬಿದಿರ ನಿಶಾನಿಯುಳ್ಳ, ಶ್ರೀಮಾನ್ - ಸಂಪದ್ಯುಕ್ತವಾದ, ದೇವ....ಥಃ - ದೇವೇಂದ್ರನ ರಥವು, ವರಃ - ಶ್ರೇಷ್ಠವಾದದ್ದು, ಯಃ - ಯಾವದು, ಅಸ್ತಿ - ಇದೆಯೋ, ತಂರಥಂ - ಆ ರಥವನ್ನು, ದೇವರಾಜೇನ - ದೇವೇಂದ್ರನಿಂದ, ಸಂದಿಷ್ಟಃ - ಆಜ್ಞಾಪಿಸಲ್ಪಟ್ಟ, ಮಾತಲಿಃ - ಮಾತಲಿಯು, ಆರುಹ್ಯ - ಏರಿ, ತ್ರಿವಿಷ್ಟಪಾತ್-ಸ್ವರ್ಗದಿಂದ, ಅವತೀರ್ಯ-ಇಳಿದು, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಅಭ್ಯವರ್ತತ - ಎದುರಾಗಿ ನಿಂತನು. ॥೬-೯॥ ತದಾ - ಆ ಕಾಲದಲ್ಲಿ, ಸಪ್ರತೋದಃ - ಕೋರಡೆಯಿಂದೊಡ

ನೋಡಲಪೇಕ್ಷೆಯಿಂದ ಅಂತರಿಕ್ಷದಲ್ಲಿ ಬಂದು ನೆಲಸಿದ್ದ ದೇವತೆಗಳೆಲ್ಲರೂ ಶ್ರೀರಾಮನು ಭೂಮಿಯಲ್ಲಿ ನಿಂತು ಯುದ್ಧ ಮಾಡುತ್ತಿರುವುದನ್ನೂ, ರಾವಣಾಸುರನು ರಥಾರೂಢನಾಗಿ ಯುದ್ಧ ಮಾಡುತ್ತಿರುವುದನ್ನೂ ನೋಡಿ ಅದು ಕೇವಲ ಅನುಚಿತವಾಗಿ ಕಾಣುವುದೆನ್ನುತ್ತಿದ್ದರು. ॥೧-೫॥ ಆಗ ದೇವೇಂದ್ರನ ಸಾರಥಿಯಾದ ಮಾತಲಿಯು ತನ್ನೊಡೆಯನ ಅಪ್ಪಣೆಯಂತೆ ಬಂಗಾರದಿಂದ ಚಿತ್ರವಿಚಿತ್ರಾವಯವಗಳುಳ್ಳುದಾಗಿ, ಅನೇಕ ನೂರು ಘಂಟೆಗಳಿಂದ ಶೋಭಿಸುತ್ತ, ಬಾಲಸೂರ್ಯನಿಗೆ ಸಮಾನವಾಗಿಯೂ, ವೈಡೂರ್ಯಮಣಿಗಳಿಂದ ಮಾಡಲ್ಪಟ್ಟ ಕಾಡೀಮರವುಳ್ಳುದಾಗಿಯೂ, ಬಂಗಾರದ ಒಡವೆಗಳಿಂದಲಂಕೃತವಾದ ಜಾತ್ಯಶ್ವಗಳು ಹೂಡಿದ್ದಾಗಿಯೂ, ಸ್ವರ್ಣವೇಣುಧ್ವಜವಿರಾಜಿತವಾಗಿಯೂ, ಸಂಪತ್ಕರವಾಗಿಯೂ ಇರುವ ಶ್ರೇಷ್ಠವಾದ ರಥದೊಡನೆ ಅಂತರಿಕ್ಷದಿಂದ ನೆಲಕ್ಕಿಳಿದು ಶ್ರೀರಾಮನ ಬಳಿಗೆ ಬಂದನು. ಇಂದ್ರಸಾರಥಿಯಾದ ಆ ಮಾತಲಿಯು ರಥಾಗ್ರದಲ್ಲಿಯೇ ಕುಳಿತು ಕೈಗಳನ್ನು ಜೋಡಿಸಿಕೊಂಡವನಾಗಿ ಶ್ರೀರಾಮನನ್ನು ಕುರಿತು, "ರಘುಕುಲೋತ್ತಮನಾದ ಶ್ರೀರಾಮ

॥ ೯ ॥ ಅಬ್ರವೀಚ್ಚ ತದಾ ರಾಮಂ ಸಪ್ರತೋದೋ ರಥೇ ಸ್ಥಿತಃ । ಪ್ರಾಂಜಲಿರ್ಮಾತಲಿರ್ವಾಕ್ಯಂ ಸಹಸ್ರಾಕ್ಷಸ್ಯ ಸಾರಥಿಃ ॥ ೧೦ ॥ "ಸಹಸ್ರಾಕ್ಷೇಣ ಕಾಕುತ್ಸ್ಥ! ರಥೋಽಯಂ ವಿಜಯಾಯ ತೇ । ದತ್ತಸ್ತವ ಮಹಾಸತ್ತ್ವ! ಶ್ರೀಮನ್! ಶತ್ರುನಿಬರ್ಹಣ! ॥೧೧॥ ಇದಮೈಂದ್ರಂ ಮಹಚ್ಚಾಪಂ ಕವಚಂ ಚಾಗ್ನಿಸನ್ನಿಭಂ । ಶರಾಶ್ಚಾದಿತ್ಯಸಂಕಾಶಾಃ ಶಕ್ತಿಶ್ಚ ವಿಮಲಾ ಶಿತಾ ॥ ೧೨ ॥ ಆರುಹ್ಯೇಮಂ ರಥಂ ವೀರ! ರಾಕ್ಷಸಂ ಜಹಿ ರಾವಣಂ । ಮಯಾ ಸಾರಥಿನಾ ರಾಜನ್! ಮಹೇಂದ್ರ ಇವ ದಾನವಾನ್ ॥೧೩॥ ಇತ್ಯುಕ್ತಸ್ಸಂಪರಿಕ್ರಮ್ಯ ರಥಂ ಸಮಭಿವಾದ್ಯ ಚ । ಆರುರೋಹ ತದಾ ರಾಮೋ

ಗೂಡಿದ, ಸಹಸ್ರಾಕ್ಷಸ್ಯ - ದೇವೇಂದ್ರನಿಗೆ, ಸಾರಥಿಃ - ಸಾರಥಿಯಾದ, ಮಾತಲಿಃ - ಮಾತಲಿಯು, ರಥೇ - ರಥದಲ್ಲಿ, ಸ್ಥಿತಃ - ನಿಂತು, ಪ್ರಾಂಜಲಿಃ - ಅಂಜಲಿಬದ್ಧನಾಗಿ, ರಾಮಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೦ ॥ ಕಾಕುತ್ಸ್ಥ - ಶ್ರೀರಾಮನೇ, ಮಹಾಸತ್ತ್ವ - ಮಹಾಸಾಮರ್ಥ್ಯವಂತನೇ, ಶ್ರೀಮನ್ - ಶ್ರೀಮಂತನೇ, ಶತ್ರುನಿಬರ್ಹಣ - ಹಗೆಯರ ನಿಗ್ರಹದಲ್ಲಿ ಸಮರ್ಥನೇ, ತೇ - ನಿನಗೆ, ವಿಜಯಾಯ - ವಿಜಯಕ್ಕಾಗಿ, ಅಯಂರಥಃ - ಈ ರಥವು, ಸಹಸ್ರಾಕ್ಷೇಣ - ದೇವೇಂದ್ರನಿಂದ, ತವ - ನಿನಗೋಸ್ಕರ, ದತ್ತಃ - ಕೊಡಲ್ಪಟ್ಟಿತು, ಮಹತ್ - ದೊಡ್ಡದಾದ, ಇದಂ ಚಾಪಂ - ಈ ಧನುಸ್ಸು, ಐಂದ್ರಂ - ಇಂದ್ರ ಸಂಬಂಧವಾದದ್ದು, ಅಗ್ನಿಸನ್ನಿಭಂ - ಅಗ್ನಿಗೆ ಸಮಾನವಾದ, ಕವಚಂಚ-ಕವಚವೂ, ಐಂದ್ರಂ-ಇಂದ್ರಸಂಬಂಧವಾದದ್ದು, ಶರಾಶ್ಚ-ಸರಳುಗಳು, ಆದಿ....ಶಾಃ-ಸೂರ್ಯನಿಗೆ ಸಮಾನವಾದುವು, ವಿಮಲಾ-ನಿರ್ಮಲವಾದ, ಶಕ್ತಿಶ್ಚ-ಶಕ್ತ್ಯಾಯುಧವೂ, ಶಿತಾ-ತೀಕ್ಷ್ಣವಾದದ್ದು. ॥ ೧೧-೧೨ ॥ ಹೇ ವೀರ - ಎಲೈ ಶೂರನೇ, ರಾಜನ್ - ಅರಸೇ, ಇಮಂರಥಂ - ಈ ರಥವನ್ನು, ಆರುಹ್ಯ - ಏರಿ, ಸಾರಥಿನಾ - ಸಾರಥಿಯಾದ, ಮಯಾಸಹ - ನನ್ನೊಡನೆ, ಮಹೇಂದ್ರಃ - ದೇವೇಂದ್ರನು, ದಾನವಾನಿವ - ರಕ್ಕಸರನ್ನಂತೆ, ರಾಕ್ಷಸಂ - ರಕ್ಕಸನಾದ, ರಾವಣಂ - ದಶಕಂಠನನ್ನು, ಜಹಿ - ಹೊಡೆ. ॥ ೧೩ ॥ ಇತಿ - ಈ ಪರಿ, ಉಕ್ತಃ - ಹೇಳಲ್ಪಟ್ಟ, ರಾಮಃ - ಶ್ರೀರಾಮನು, ರಥಂ - ತೇರನ್ನು ಕುರಿತು, ಸಂಪರಿಕ್ರಮ್ಯ - ಪ್ರದಕ್ಷಿಣಮಾಡಿ, ಸಮಭಿವಾದ್ಯಚ - ನಮಸ್ಕಾರಮಾಡಿ, ಲಕ್ಷ್ಮ್ಯಾ - ತನ್ನ ದೇಹಕಾಂತಿಯಿಂದ, ಲೋಕಾನ್ - ಲೋಕಗಳನ್ನು, ವಿರಾಜಯನ್ -

---

ಮೂರ್ತಿಯೇ! ಸ್ವರ್ಲೋಕಾಧೀಶನಾದ ದೇವೇಂದ್ರನು ನಿನಗೆ ವಿಜಯವನ್ನುಕೋರಿ ಈ ರಥಶ್ರೇಷ್ಠವನ್ನು ಕಳುಹಿಸಿರುವನು. ಎಲೈ ಅರಿಮರ್ದನನೇ! ನೀನು ಈ ರಥವನ್ನೇರಿ ಮಹೇಂದ್ರಸಂಬಂಧವಾದ ಧನುರ್ಬಾಣಗಳನ್ನು ಧರಿಸುವವನಾಗು. ರಾಮಾ! ಈ ಬಾಣಗಳೆಲ್ಲವೂ ತೇಜಸ್ಸಿನಲ್ಲಿಯೂ, ಸತ್ತ್ವದಲ್ಲಿಯೂ ಸೂರ್ಯನಿಗೆ ಸಮಾನಗಳಾದುವು; ನಿರ್ಮಲವೂ, ಬಹು ತೀಕ್ಷ್ಣವೂ ಆಗಿವೆ. ಇವುಗಳೆಲ್ಲವನ್ನೂ ಸ್ವೀಕರಿಸುವವನಾಗು. ಎಲೈ ರಾಘವನೇ! ಈ ರಥವೇರಿ ರಾವಣನನ್ನು ಜಯಿಸು. ನಾನು ಸಾರಥಿಯಾಗಿರುತ್ತೇನೆ. ದೇವತೆಗಳು ನನ್ನ ಸಾರಥ್ಯದಲ್ಲಿ ರಾಕ್ಷಸರನ್ನು ವಧಿಸಿದಂತೆ ನೀನು ಈ ರಾಕ್ಷಸರೆಲ್ಲರನ್ನೂ ಸಂಹರಿಸು" ಎಂದು ಹೇಳಿದನು. ॥ ೬–೧೩ ॥ ಈ ರೀತಿ ನುಡಿದ ಮಾತಲಿಯ ಮಾತುಗಳನ್ನು ಕೇಳಿ ಶ್ರೀರಾಮಮೂರ್ತಿಯು ಆ ದಿವ್ಯ ರಥಕ್ಕೆ ಪ್ರದಕ್ಷಿಣಪೂರ್ವಕ ನಮಸ್ಕಾರವನ್ನು ಮಾಡಿ ಅದನ್ನೇರಿದನು. ಆಗಲಾತನು ಪ್ರತಾಪಸಂಪದದಿಂದ ಕೂಡಿದವನಾಗಿ ಮೂರು ಲೋಕಗಳನ್ನೂ ಪ್ರಕಾಶಗೊಳಿಸುತ್ತಿರುವನೋ ಎಂಬಂತಿದ್ದನು. ಆ ತರುವಾಯ ಶ್ರೀರಾಮನು ನೋಡು

ಲೋಕೇ ಲಕ್ಷ್ಮ್ಯಾ ವಿರಾಜತಃ ॥೧೪॥ ತದ್ಬಭೂವಾದ್ಭುತಂ ಯುದ್ಧಂ ತುಮುಲಂ ರೋಮಹರ್ಷಣಂ । ರಾಮಸ್ಯ ಚ ಮಹಾಬಾಹೋ! ರಾವಣಸ್ಯ ಚ ರಕ್ಷಸಃ ॥೧೫॥ ಸ ಗಾಂಧರ್ವೇಣ ಗಾಂಧರ್ವಂ ದೈವಂ ದೈವೇನ ರಾಘವಃ । ಅಸ್ತ್ರಂ ರಾಕ್ಷಸರಾಜಸ್ಯ ಜಘಾನ ಪರಮಾಸ್ತ್ರವಿತ್ ॥೧೬॥ ಅಸ್ತ್ರಂ ತು ಪರಮಂ ಘೋರಂ ರಾಕ್ಷಸಂ ರಾಕ್ಷಸಾಧಿಪಃ । ಸಸರ್ಜ ಪರಮಕ್ರುದ್ಧಃ ಪುನರೇವ ನಿಶಾಚರಃ ॥೧೭॥ ತೇ ರಾವಣಧನುರ್ಮುಕ್ತಾಃ ಶರಾಃ ಕಾಂಚನಭೂಷಣಾಃ । ಅಭ್ಯವರ್ತಂತ ಕಾಕುತ್ಸ್ಥಂ ಸರ್ಪಾ ಭೂತ್ವಾ ಮಹಾವಿಷಾಃ ॥೧೮॥ ತೇ ದೀಪ್ತವದನಾ ದೀಪ್ತಂ ವಮಂತೋ ಜ್ವಲನಂ

ಕಂಗೊಳಿಸುತ್ತ, ತದಾ - ತತ್‌ಕ್ಷಣದಲ್ಲಿ, ಆರುರೋಹ - ಏರಿದನು. ॥೧೪॥ ಮಹಾಬಾಹುಃ - ಮಹಾಭುಜಪರಾಕ್ರಮಶಾಲಿಯಾದ, ರಾಮಸ್ಯಚ - ಶ್ರೀರಾಮನಿಗೂ, ರಕ್ಷಸಃ - ರಕ್ಕಸನಾದ, ರಾವಣಸ್ಯಚ-ರಾವಣನಿಗೂ, ತುಮುಲಂ-ಸಂಕುಲವಾದ, ರೋಮಹರ್ಷಣಂ-ರೋಮಾಂಚಕರವಾದ, ಅದ್ಭುತಂ-ಆಶ್ಚರ್ಯಕರವಾದ, ತದ್ಯುದ್ಧಂ - ಆ ಕಾಳಿಗವು, ಬಭೂವ - ಆಯಿತು. ॥೧೫॥ ಪರ....ತ್ - ಉತ್ತಮವಾದ ಅಸ್ತ್ರಗಳನ್ನು ತಿಳಿದಿರುವ, ಸರಾಘವಃ - ಆ ಶ್ರೀರಾಮನು, ರಾಕ್ಷಸರಾಜಸ್ಯ - ದಶಗ್ರೀವನ, ಗಾಂಧರ್ವಂ - ಗಂಧರ್ವದೇವತಾಕವಾದ, ಅಸ್ತ್ರಂ - ಅಸ್ತ್ರವನ್ನು, ಗಾಂಧರ್ವೇಣ - ಗಾಂಧರ್ವಾಸ್ತ್ರದಿಂದಲೂ, ದೈವಂ - ದೇವತಾಸಂಬಂಧವಾದ ಅಸ್ತ್ರವನ್ನೂ, ದೈವೇನ - ದಿವ್ಯಾಸ್ತ್ರದಿಂದಲೂ, ಜಘಾನ - ಹೊಡೆದನು. ॥೧೬॥ ರಾಕ್ಷಸಾಧಿಪಃ - ರಕ್ಕಸರೊಡೆಯನಾದ, ನಿಶಾಚರಃ - ದಶಕಂಠನು, ಪರಮಕ್ರುದ್ಧಃ - ಬಹಳ ಕುಪಿತನಾಗಿ, ಪುನರೇವ - ಮತ್ತೂ, ರಾಕ್ಷಸಂ - ರಕ್ಷೋದೇವತಾಕವಾದ, ಘೋರಂ - ಕ್ರೂರವಾದ, ಪರಮಂ - ಉತ್ಕೃಷ್ಟವಾದ, ಅಸ್ತ್ರಂ - ಅಸ್ತ್ರವನ್ನು, ಸಸರ್ಜ - ಬಿಟ್ಟನು. ॥೧೭॥ ರಾವ....ಕ್ತಾಃ - ರಾವಣನ ಬಿಲ್ಲಿನಿಂದ ಬಿಡಲ್ಪಟ್ಟ, ಕಾಂಚ....ಣಾಃ - ಚಿನ್ನದ ರೇಖೆಗಳೇ ಅಲಂಕಾರವಾಗುಳ್ಳ, ತೇಶರಾಃ - ಆ ಸರಳುಗಳು, ಮಹಾವಿಷಾಃ - ದೊಡ್ಡ ವಿಷವುಳ್ಳ, ಸರ್ಪಾಃ - ಹಾವುಗಳು, ಭೂತ್ವಾ - ಆಗಿ, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಅಭ್ಯವರ್ತಂತ - ಎದುರಾಗಿ ಬಂದವು. ॥೧೮॥ ದೀಪ್ತವದನಾಃ - ಪ್ರಜ್ವಲಿಸುತ್ತಿರುವ ಮುಖಗಳುಳ್ಳ, ಮುಖೈಃ - ಬಾಯಿಗಳಿಂದ, ದೀಪ್ತಂ - ಹೊಳೆಯುತ್ತಿರುವ, ಜ್ವಲನಂ - ಅಗ್ನಿಯನ್ನು, ವಮಂತಃ - ಕಾರುತ್ತಿರುವ, ಭಯಾನಕಾಃ - ಭಯಂಕರಗಳಾದ, ತೇ - ಆ ಸರಳುಗಳು, ವ್ಯಾದಿತಾಸ್ಯಾಃ - ತೆರೆಯಲ್ಪಟ್ಟ ಬಾಯಿ

ವವರೆಲ್ಲರಿಗೂ ರೋಮಾಂಚವಾಗುವಂತೆ ರಾವಣಾಸುರನೊಡನೆ ಸಂಕುಲ ಯುದ್ಧವನ್ನು ಮಾಡಲುಪಕ್ರಮಿಸಿದನು. ಆಗ ರಾಮರಾವಣರಿಗೆ ಭಯಂಕರ ಯುದ್ಧವಾರಂಭವಾಯಿತು. ಉತ್ತಮೋತ್ತಮವಾದ ಆಯುಧಗಳೆಲ್ಲವನ್ನೂ ತಿಳಿದಿರುವ ಶ್ರೀರಾಮನು ರಾಕ್ಷಸಾಧಿಪನಾದ ರಾವಣನ ಗಾಂಧರ್ವಾಸ್ತ್ರವನ್ನು ಗಾಂಧರ್ವಾಸ್ತ್ರದಿಂದಲೂ, ದೈವಾಸ್ತ್ರವನ್ನು ದೈವಾಸ್ತ್ರದಿಂದಲೂ ಹೊಡೆದು ಕೆಡವುತ್ತಿದ್ದನು. ರಾಕ್ಷಸಾಧಿಪನಾದ ರಾವಣಾಸುರನಾದರೋ ಆ ಸಮಯದಲ್ಲಿ ಮಹಾ ಕೋಪಾವಿಷ್ಟನಾಗಿ ಮತ್ತೆ ಮಹಾ ಭಯಂಕರವಾದ ಅಸ್ತ್ರವೊಂದನ್ನು ಪ್ರಯೋಗಿಸಿದನು. ರಾವಣನ ಧನುಸ್ಸಿನಿಂದ ಪ್ರಯೋಗಿಸಲಾದ ಸ್ವರ್ಣಾಲಂಕೃತಗಳಾದ ಆ ಬಾಣಗಳೆಲ್ಲವೂ ಉರಿಯುತ್ತಿರುವ ಮುಖಗಳುಳ್ಳ ಸರ್ಪಗಳ ಆಕಾರಗಳನ್ನು ಹೊಂದಿ ಮುಖಗಳಿಂದ ಬೆಂಕಿಯನ್ನುಗುಳುತ್ತ ತೆರೆದ ಬಾಯಿಗಳುಳ್ಳವಾಗಿ ಶ್ರೀರಾಮನ ಮೇಲೆ ಬಂದುವು. ಆಗ ವಾಸುಕಿ ಸರ್ಪದ ಸ್ಪರ್ಶಕ್ಕೆ ಸಮಾನವಾದ ಸ್ಪರ್ಶವುಳ್ಳವೂ, ಧಗಧಗನೆ

ಮುಖೈಃ । ರಾಮಮೇವಾಭ್ಯವರ್ತಂತ ವ್ಯಾದಿತಾಸ್ಯಾ ಭಯಾನಕಾಃ ॥ ೧೯ ॥ ತೈರ್ವಾಸುಕಿಸಮಸ್ಪರ್ಶೈ ರ್ದೀಪ್ತಭೋಗೈ ರ್ಮಹಾವಿಷೈಃ । ದಿಶಶ್ಚ ಸಂತತಾಸ್ಸರ್ವಾಃ ಪ್ರದಿಶಶ್ಚ ಸಮಾವೃತಾಃ ॥ ೨೦ ॥ ತಾನ್ ದೃಷ್ಟ್ವಾ ಪನ್ನಗಾನ್ ರಾಮಸ್ಸಮಾಪತತ ಆಹವೇ । ಅಸ್ತ್ರಂ ಗಾರುತ್ಮತಂ ಘೋರಂ ಪ್ರಾದುಶ್ಚಕ್ರೇ ಭಯಾವಹಂ ॥ ೨೧ ॥ ತೇ ರಾಘವ ಶರಾ ಮುಕ್ತಾ ರುಕ್ಮಪುಂಖಾಃ ಶಿಖಿಪ್ರಭಾಃ । ಸುಪರ್ಣಾಃ ಕಾಂಚನಾ ಭೂತ್ವಾ ವಿಚೇರುಸ್ಸರ್ಪಶತ್ರವಃ ॥ ೨೨ ॥ ತೇ ತಾನ್ ಸರ್ವಾನ್ ಶರಾನ್ ಜಘ್ನುಸ್ಸರ್ಪರೂಪಾನ್ ಮಹಾಜವಾನ್ । ಸುಪರ್ಣರೂಪಾ ರಾಮಸ್ಯ ವಿಶಿಖಾಃ ಕಾಮರೂಪಿಣಃ ॥೨೩॥ ಅಸ್ತ್ರೇ ಪ್ರತಿಹತೇ ಕ್ರುದ್ಧೋ ರಾವಣೋ ರಾಕ್ಷಸಾಧಿಪಃ । ಅಭ್ಯವರ್ಷತ್ತದಾ ರಾಮಂ

ಗಳುಳ್ಳವುಗಳಾಗಿ, ರಾಮಮೇವ - ಶ್ರೀರಾಮನನ್ನೇ, ಅಭ್ಯವರ್ತಂತ - ಎದುರು ಬಂದುವು. ॥ ೧೯ ॥ ವಾಸು.....ರ್ಶೈಃ - ವಾಸುಕಿ ಎಂಬ ಸರ್ಪಕ್ಕೆ ಸಮಾನವಾದ ಸ್ಪರ್ಶವುಳ್ಳ, ದೀಪ್ತಭೋಗೈಃ - ಹೊಳೆಯುವ ಶರೀರಗಳುಳ್ಳ, ಮಹಾವಿಷೈಃ - ಮಹಾ ವಿಷಗಳುಳ್ಳ, ತೈಃ - ಆ ಸರಳುಗಳಿಂದ, ಸರ್ವಾಃ - ಸಮಸ್ತವಾದ, ದಿಶಃ - ದಿಕ್ಕುಗಳೂ, ಸಂತತಾಃ - ತುಂಬಿ, ಸಮಾವೃತಾಶ್ಚ - ಮುಚ್ಚಲ್ಪಟ್ಟವು. ॥೨೦॥ ರಾಮಃ - ಶ್ರೀರಾಮನು, ಆಹವೇ - ಕಾಳಗದಲ್ಲಿ, ಸಮಾಪತತಃ - ಬರುತ್ತಿರುವ, ತಾನ್‌ಪನ್ನಗಾನ್ - ಆ ಸರ್ಪಗಳನ್ನು, ದೃಷ್ಟ್ವಾ - ಕಂಡು, ಭಯಾವಹಂ - ಭಯಂಕರವಾದ, ಘೋರಂ - ಕ್ರೂರವಾದ, ಗಾರುತ್ಮತಮಸ್ತ್ರಂ - ಗಾರುಡಾಸ್ತ್ರವನ್ನು, ಪ್ರಾದುಶ್ಚಕ್ರೇ - ಪ್ರಯೋಗ ಮಾಡಿದನು. ॥ ೨೧ ॥ ಮುಕ್ತಾಃ - ಬಿಡಲ್ಪಟ್ಟ, ರುಕ್ಮಪುಂಖಾಃ - ಬಂಗಾರದ ಕೊಂಕಿಗಳುಳ್ಳ, ಶಿಖಿಪ್ರಭಾಃ - ಅಗ್ನಿಯಂತೆ ಹೊಳೆಯುತ್ತಿರುವ, ತೇರಾಘವಶರಾಃ - ಆ ರಾಮನ ಸರಳುಗಳು, ಸರ್ಪಶತ್ರವಃ - ಸರ್ಪಗಳಿಗೆಲ್ಲಾ ಶತ್ರುಗಳಾಗಿ, ಕಾಂಚನಾಃ-ಬಂಗಾರದ ವಿಕಾರವಾದ, ಸುಪರ್ಣಾಃ ಗರುಡಪಕ್ಷಿಗಳು, ಭೂತ್ವಾ-ಆಗಿ, ವಿಚೇರುಃ - ಸಂಚರಿಸಿದುವು. ॥ ೨೨ ॥ ರಾಮಸ್ಯ - ಶ್ರೀರಾಮನ, ಕಾಮರೂಪಿಣಃ - ಕಾಮರೂಪಿಗಳಾದ, ತೇವಿಶಿಖಾಃ - ಆ ಸರಳುಗಳು, ಸುಪ......ಪಾಃ - ಗರುಡರೂಪಗಳಾಗಿ, ಸರ್ಪರೂಪಾನ್ - ಸರ್ಪಾಕಾರಗಳಾದ, ಸರ್ವಾನ್ - ಸಮಸ್ತವಾದ, ಮಹಾಜವಾನ್ - ಮಹಾ ವೇಗವುಳ್ಳ, ತಾನ್‌ಶರಾನ್ - ಆ ಸರಳಗಳನ್ನು, ಜಘ್ನುಃ - ಹೊಡೆದವು. ॥೨೩॥ ಅಸ್ತ್ರೇ - ಪನ್ನಗಾಸ್ತ್ರವು, ಪ್ರತಿಹತೇ - ಗಾರುಡಾಸ್ತ್ರದಿಂದೆ ಹೊಡೆಯಲ್ಪಟ್ಟದಾಗಲೂ, ಕ್ರುದ್ಧಃ - ಕುಪಿತನಾದ, ರಾಕ್ಷಸಾಧಿಪಃ - ರಕ್ಕಸರೊಡೆಯನಾದ,

---

ಉರಿಯುತ್ತಿರುವುವೂ, ಬಹಳವಾಗಿ ವಿಷವನ್ನೊಳಗೊಂಡಿರುವುವೂ ಆದ ಆ ಬಾಣಗಳಿಂದ ದಶದಿಶೆಗಳೂ ತುಂಬಿಹೋದುವು. ॥ ೧೪-೨೦ ॥ ಆ ವಿಧವಾಗಿ ಹೊರಟು ಬರುತ್ತಿರುವ ಸರ್ಪಾಕಾರಗಳಾದ ಬಾಣಗಳನ್ನು ನೋಡಿ ಶ್ರೀರಾಮನು ಅಪರಿಮಿತ ಕೋಪಾವಿಷ್ಟನಾಗಿ ಮಹಾ ಭಯಂಕರವಾದ ಗಾರುಡಾಸ್ತ್ರವನ್ನು ಪ್ರಯೋಗಿಸಿದನು. ಆಗ ಶ್ರೀರಾಮಮೂರ್ತಿಯ ಧನುಸ್ಸಿನಿಂದ ಹೊರಟ ಬಾಣಗಳೆಲ್ಲವೂ ಬಂಗಾರದ ಹಿಡಿಗಳುಳ್ಳವುಗಳಾಗಿ, ಅಗ್ನಿಜ್ವಾಲೆಗಳಿಗೆ ಸಮಾನವಾದ ಕಾಂತಿಯುಳ್ಳವುಗಳಾಗಿ ಗರುಡಪಕ್ಷಿಗಳ ಆಕಾರವನ್ನು ತಾಳಿ ಬಹು ವೇಗದಿಂದ್ಯೆತಂದವು. ಕಾಮರೂಪಗಳೂ, ಗರುತ್ಮಂತನಾಕಾರವುಳ್ಳವುಗಳೂ ಆದ ಶ್ರೀರಾಮನ ಆ ಬಾಣಗಳು, ರಾವಣಾಸುರನು ಪ್ರಯೋಗಿಸಿದ ಮಹಾ ವೇಗವತ್ತುಗಳಾದ ಸರ್ಪಾಕಾರವಾದ ಬಾಣಗಳೆಲ್ಲವನ್ನೂ ನಾಶಗೊಳಿಸಿದುವು. ಹೀಗೆ ತಾನು ಪ್ರಯೋಗಿಸಿದ ಬಾಣವು ಹೀಗೆ ತಾನು ಪ್ರಯೋಗಿಸಿದ ಬಾಣವು ಗಾರುಡಾಸ್ತ್ರದಿಂದ ನಾಶವಾದುದನ್ನು ನೋಡಿ ರಾಕ್ಷ

ಘೋರಾಭಿಃ ಶರವೃಷ್ಟಿಭಿಃ ॥ ೨೪ ॥ ತತಃ ಶರಸಹಸ್ರೇಣ ರಾಮಮಕ್ಲಿಷ್ಟಕಾರಿಣಂ ।
ಅರ್ದಯಿತ್ವಾ ಶರೌಘೇಣ ಮಾತಲಿಂ ಪ್ರತ್ಯವಿಧ್ಯತ ॥೨೫॥ ಚಿಚ್ಛೇದ ಕೇತುಮುದ್ದಿಶ್ಯ
ಶರೇಣೈಕೇನ ರಾವಣಃ । ಪಾತಯಿತ್ವಾ ರಥೋಪಸ್ಥೇ ರಥಾತ್ಕೇತುಂಚ ಕಾಂಚನಂ ।
ಐಂದ್ರಾನಪಿ ಜಘಾನಾಶ್ವಾನ್ ಶರಜಾಲೇನ ರಾವಣಃ ॥೨೬॥ ತಂ ದೃಷ್ಟ್ವಾ ಸುಮಹ
ತ್ಕರ್ಮ ರಾವಣಸ್ಯ ದುರಾತ್ಮನಃ । ವಿಷೇದುರ್ದೇವಗಂಧರ್ವಾ ದಾನವಾಶ್ಚಾರಣೈಸ್ಸಹ
॥ ೨೭ ॥ ರಾಮಮಾರ್ತಂ ತದಾ ದೃಷ್ಟ್ವಾ ಸಿದ್ಧಾಶ್ಚ ಪರಮರ್ಷಯಃ । ವ್ಯಥಿತಾ
ವಾನರೇಂದ್ರಾಶ್ಚ ಬಭೂವುಸ್ಸವಿಭೀಷಣಾಃ । ರಾಮಚಂದ್ರಮಸಂ ದೃಷ್ಟ್ವಾ ಗ್ರಸ್ತಂ

ರಾವಣಃ - ದಶಕಂಠನು, ತದಾ - ಆ ಕಾಲದಲ್ಲಿ, ಘೋರಾಭಿಃ - ಕ್ರೂರಗಳಾದ, ಶರವೃಷ್ಟಿಭಿಃ - ಸರಳುಮಳೆಯಿಂದ, ರಾಮಂ - ಶ್ರೀರಾಮನನ್ನು ಕುರಿತು, ಅಭ್ಯವರ್ಷತ್ - ಸುರಿಸಿದನು. ॥ ೨೪ ॥ ತತಃ - ಬಳಿಕ, ಶರಸಹಸ್ರೇಣ - ಸಾವಿರಾರು ಸರಳುಗಳಿಂದ, ಅಕ್ಲಿ...ಣಂ - ಕ್ಲೇಶವಿಲ್ಲದೆಯೇ ಕಾರ್ಯವನ್ನೆಸಗುವ, ರಾಮಂ - ಶ್ರೀರಾಮನನ್ನು ಕುರಿತು, ಅರ್ದಯಿತ್ವಾ - ಹೊಡೆದು, ಶರೌಘೇಣ - ಸರಳು ತಂಡಗಳಿಂದ, ಮಾತಲಿಂ - ಮಾತಲಿಯನ್ನು, ಪ್ರತ್ಯವಿಧ್ಯತ - ಹೊಡೆದನು. ॥ ೨೫ ॥ ರಾವಣಃ - ದಶಕಂಠನು, ಏಕೇನಶರೇಣ - ಒಂದೇ ಬಾಣದಿಂದ, ಉದ್ದಿಶ್ಯ - ಲಕ್ಷ್ಯಮಾಡಿ, ಕೇತುಂ - ಇಂದ್ರಧ್ವಜವನ್ನೂ, ಚಿಚ್ಛೇದ - ಕತ್ತರಿಸಿದನು, ರಥೋಪಸ್ಥೇ - ರಥಗರ್ಭದಲ್ಲಿ, ರಥಾತ್ - ತೇರಿನ ದೆಸೆಯಿಂದ, ಕಾಂಚನಂ - ಬಂಗಾರದ ವಿಕಾರವಾದ, ಕೇತುಂ - ಧ್ವಜವನ್ನು, ಪಾತಯಿತ್ವಾ - ಕೆಡುಹಿ, ರಾವಣಃ - ದಶಗ್ರೀವನು, ಶರಜಾಲೇನ - ಸರಳು ತಂಡಗಳಿಂದ, ಐಂದ್ರಾನ್ - ಇಂದ್ರಸಂಬಂಧಗಳಾದ, ಅಶ್ವಾನ್ - ಕುದುರೆಗಳನ್ನು, ಜಘಾನ - ಹೊಡೆದನು ॥೨೬॥ ದುರಾತ್ಮನಃ - ದುಷ್ಟನಾದ, ರಾವಣಸ್ಯ - ದಶಕಂಠನ, ಸುಮಹತ್ - ಬಹಳ ದೊಡ್ಡದಾದ, ತತ್ಕರ್ಮ - ಆ ಕೃತ್ಯವನ್ನು, ದೃಷ್ಟ್ವಾ - ಕಂಡು, ದೇವಗಂಧರ್ವಾಃ - ದೇವತೆಗಳೂ ಗಂಧರ್ವರೂ, ದಾನವಾಃ - ದಾನವರೂ, ಚಾರಣೈಸ್ಸಹ - ಚಾರಣರೊಡಗೂಡಿ, ವಿಷೇದುಃ - ವ್ಯಸನಗೊಂಡರು. ॥೨೭॥ ತದಾ - ಆ ಕಾಲದಲ್ಲಿ, ಆರ್ತಂ - ದೀನನಾದ, ರಾಮಂ - ಶ್ರೀರಾಮನನ್ನು, ದೃಷ್ಟ್ವಾ - ಕಂಡು, ಸಿದ್ಧಾಶ್ಚ - ಸಿದ್ಧರೂ, ಪರಮರ್ಷಯಶ್ಚ - ಬ್ರಹ್ಮರ್ಷಿಗಳೂ, ಸವಿಭೀಷಣಾಃ - ವಿಭೀಷಣನಿಂದೊಡಗೂಡಿದ, ವಾನರೇಂದ್ರಾಶ್ಚ - ಕಪಿಶ್ರೇಷ್ಠರೂ, ವ್ಯಥಿತಾಃ -

ಸೇಶ್ವರನಾದ ರಾವಣನು ಮಹಾ ಕ್ರೋಧೋದ್ದೀಪಿತನಾಗಿ ರಾಮನ ಮೇಲೆ ಬಹು ಭಯಂಕರವಾದ ಅಂಬುಮಳೆಗರೆದನು. ಆ ತರುವಾಯ ಅನಾಯಾಸವಾಗಿ ಯುದ್ಧ ಮಾಡಬಲ್ಲ ಸಾಮರ್ಥ್ಯವುಳ್ಳ ಶ್ರೀರಾಮಚಂದ್ರನನ್ನೂ, ಇಂದ್ರಸಾರಥಿಯಾದ ಮಾತಲಿಯನ್ನೂ ಮಹಾ ತೀಕ್ಷ್ಣವಾದ ಬಾಣಗಳಿಂದ ಬಹಳವಾಗಿ ಪೀಡಿಸಿದನು. ಇಷ್ಟೆಯಲ್ಲದೆ ಆ ರಾಕ್ಷಸರಾಜನು ಮಾತಲಿಯ ಮೇಲೆ ಅಪರಿಮಿತವಾಗಿ ಬಾಣಗಳನ್ನು ಪ್ರಯೋಗಿಸಿದನು. ॥ ೨೧-೨೫ ॥ ಆ ರಾಕ್ಷಸನು ಒಂದೇ ಒಂದು ಬಾಣದಿಂದಲೇ ಆ ಮಹೇಂದ್ರ ರಥದ ಸ್ವರ್ಣಮಯವಾದ ಧ್ವಜವನ್ನು ನೆಲಕ್ಕೆ ಕೆಡವಿ, ಅನೇಕ ಬಾಣಗಳಿಂದ ರಥಾಶ್ವಗಳನ್ನೂ ಬಾಧಿಸಿದನು. ಈ ಪ್ರಕಾರವಾಗಿ ರಾವಣನು ಭಯಂಕರವಾದ ಕಾಳಗವನ್ನು ಮಾಡುತ್ತಿರುವುದನ್ನು ನೋಡಿ ದೇವತೆಗಳೂ, ಗಂಧರ್ವರೂ, ದಾನವರೂ, ಚಾರಣರೂ ಬಹಳ ಸಂತಾಪಗೊಂಡರು. ಆ ಸಮಯದಲ್ಲಿ ರಾವಣನ ಬಾಣಗಳಿಂದ ಬಹಳವಾಗಿ ನೊಂದು ಪರಿತಪಿಸುತ್ತಿರುವ ಶ್ರೀರಾಮಮೂರ್ತಿಯನ್ನು ಕಂಡು, ಸಿದ್ಧರೂ, ಪರಮರ್ಷಿಗಳೂ, ವಾನರೋತ್ತಮರೂ, ವಿಭೀ

ರಾವಣರಾಹುಣಾ ॥ ೨೮-೨೯ ॥ ಪ್ರಾಜಾಪತ್ಯಂ ಚ ನಕ್ಷತ್ರಂ ರೋಹಿಣೀಂ ಶಶಿನಃ ಪ್ರಿಯಾಂ । ಸಮಾಕ್ರಮ್ಯ ಬುಧಸ್ತಸ್ಥೌ ಪ್ರಜಾನಾಮಶುಭಾವಹಃ ॥ ೩೦ ॥ ಸಧೂಮ ಪರಿವೃತ್ತಾಗ್ನಿಃ ಪ್ರಜ್ವಲನ್ನಿವ ಸಾಗರಃ । ಉತ್ಪಪಾತ ತದಾ ಕ್ರುದ್ಧಃ ಸ್ಪೃಶನ್ನಿವ ದಿವಾಕರಂ ॥ ೩೧ ॥ ಶಸ್ತ್ರವರ್ಣಸ್ಸುಪರುಷೋ ಮಂದರಶ್ಮಿರ್ದಿವಾಕರಃ । ಅದೃಶ್ಯತ ಕಬಂಧಾಂಕಸ್ಸಂಸಕ್ತೋ ಧೂಮಕೇತುನಾ ॥ ೩೨ ॥ ಕೋಸಲಾನಾಂಚ ನಕ್ಷತ್ರಂ ವ್ಯಕ್ತಮಿಂದ್ರಾಗ್ನಿದೈವತಂ । ಆಕ್ರಮ್ಯಾಂಗಾರಕಸ್ತಸ್ಥೌ ವಿಶಾಖಾಮಪಿ ಚಾಂಬರೇ ॥ ೩೩ ॥ ದಶಾಸ್ಯೋ ವಿಂಶತಿಭುಜಃ ಪ್ರಗೃಹೀತ ಶರಾಸನಃ । ಅದೃಶ್ಯತ ದಶಗ್ರೀವೋ

ವ್ಯಸನಗೊಂಡವರು, ಬಭೂವುಃ - ಆದರು. ॥ ೨೮ ॥ ರಾಮ....ಸಂ - ಶ್ರೀರಾಮನೆಂಬ ಚಂದ್ರನನ್ನು, ರಾವಣರಾಹುಣಾ-ದಶಕಂಠನೆಂಬ ರಾಹುವಿನಿಂದ, ಗ್ರಸ್ತಂ-ಹಿಡಿಯಲ್ಪಟ್ಟವನನ್ನಾಗಿ, ದೃಷ್ಟ್ವಾ-ಕಂಡು, ಬುಧಃ - ಬುಧನು, ಪ್ರಾಜಾಪತ್ಯಂಚ - ಪ್ರಜಾಪತಿದೇವತಾಕನಾದ, ನಕ್ಷತ್ರಂ - ನಕ್ಷತ್ರರೂಪವಾದ, ಶಶಿನಃ - ಚಂದ್ರನಿಗೆ, ಪ್ರಿಯಾಂ - ಹೆಂಡತಿಯಾದ, ರೋಹಿಣೀಂ - ರೋಹಿಣೀದೇವಿಯನ್ನು, ಸಮಾಕ್ರಮ್ಯ - ಆಕ್ರಮಿಸಿ, ಪ್ರಜಾನಾಂ - ಜನಗಳಿಗೆ, ಅಶುಭಾವಹಃ - ಪೀಡಾಕರನಾಗಿ, ತಸ್ಥೌ - ನಿಂತನು. ॥ ೨೯-೩೦ ॥ ಸಾಗರಃ - ಕಡಲು, ಸಧೂ....ಗ್ನಿಃ - ಹೊಗೆಯೊಡಗೂಡಿದ ವರ್ತುಲಾಕಾರವಾದ ಬೆಂಕಿಗಳುಳ್ಳುದಾಗಿ, ಪ್ರಜ್ವಲನ್ನಿವ - ಸುಡುತ್ತದೆಯೋ ಎಂಬಂತೆ, ತದಾ - ಆ ಕಾಲದಲ್ಲಿ, ಕ್ರುದ್ಧಃ - ಕುಪಿತನಾಗಿ, ದಿವಾಕರಂ - ಸೂರ್ಯನನ್ನು, ಸ್ಪೃಶನ್ನಿವ - ಸ್ಪರ್ಶ ಮಾಡುತ್ತದೋ ಎಂಬಂತೆ, ಉತ್ಪಪಾತ - ಉಕ್ಕಿಬಂದಿತು. ॥ ೩೧ ॥ ದಿವಾಕರಃ - ಸೂರ್ಯನು, ಮಂದರಶ್ಮಿಃ - ಕುಗ್ಗಿದ ಪ್ರಕಾಶವುಳ್ಳ ಕಿರಣಗಳುಳ್ಳವನಾಗಿ, ಸುಪರುಷಃ - ಅತಿ ಕ್ರೂರನಾಗಿ, ಶಸ್ತ್ರವರ್ಣಃ - ಖಡ್ಗದ ಕಾಂತಿಗೆ ಸಮಾನವಾದ ಕಾಂತಿಯುಳ್ಳವನಾಗಿ, ಕಬಂಧಾಂಕಃ - ಕಬಂಧವೇ ಗುರುತುಳ್ಳವನಾಗಿ, ಧೂಮಕೇತುನಾ - ಧೂಮಕೇತುವೆಂಬ ಉತ್ಪಾತದಿಂದ, ಸಂಸಕ್ತಃ - ಸೇರಿ, ಅದೃಶ್ಯತ - ಕಾಣಿಸಿದನು. ॥ ೩೨ ॥ ಇಂದ್ರಾ....ತಂ-ಇಂದ್ರಾಗ್ನಿಗಳೇ ದೇವತೆಗಳಾಗುಳ್ಳ, ವ್ಯಕ್ತಂ - ಸ್ಪಷ್ಟವಾದ, ಕೋಸಲಾನಾಂಚ - ಇಕ್ಷ್ವಾಕು ವಂಶಸ್ಥರಿಗೆ, ನಕ್ಷತ್ರಂ - ನಕ್ಷತ್ರರೂಪವಾದ, ವಿಶಾಖಾಮಪಿ - ವಿಶಾಖಾ ನಕ್ಷತ್ರವನ್ನು, ಅಂಗಾರಕಃ - ಅಂಗಾರಕನು, ಆಕ್ರಮ್ಯ - ಆಕ್ರಮಿಸಿ, ಅಂಬರೇ - ಅಂತರಿಕ್ಷದಲ್ಲಿ, ತಸ್ಥೌ - ನಿಂತನು. ॥ ೩೩ ॥ ದಶಾಸ್ಯಃ -

---

ಷಣನೂ ವ್ಯಸನಗೊಂಡರು. ಆಗ ರಾವಣಾಸುರನೆಂಬ ರಾಹುವಿನಿಂದ ಪರಿಪೀಡಿತನಾದ ಶ್ರೀರಾಮನೆಂಬ ಚಂದ್ರನನ್ನು ನೋಡಿ ಬುಧಗ್ರಹವು, ಬ್ರಹ್ಮದೇವತಾಕವಾದುದೂ, ಚಂದ್ರನಿಗೆ ಅತ್ಯಂತ ಪ್ರಿಯವಾದುದೂ ಆದ ರೋಹಿಣೀ ನಕ್ಷತ್ರದೊಡನೆ ಸೇರಿ ಲೋಕಕ್ಕೆ ಅಪ್ರಿಯವನ್ನು ಸೂಚಿಸುತ್ತಿದ್ದನು. ॥ ೨೬-೩೦ ॥ ಆ ಸಮಯದಲ್ಲಿ ಸಮುದ್ರವೂ ಸಹ ತಿತ್ತಿರುಗುತ್ತಿರುವ ತೆರೆಗಳುಳ್ಳುದಾಗಿ ಪ್ರಜ್ವಲಿಸುವುದೋ ಎಂಬಂತೆ ತೋರುತ್ತ ಕನಲಿ ಸೂರ್ಯನನ್ನೇ ಸ್ಪರ್ಶಿಸುವುದೋ ಎಂಬಂತೆ ಮೇಲಕ್ಕೆ ಉಕಿತು. ಸೂರ್ಯನಾದರೋ ಖಡ್ಗದಂತೆ ಶ್ಯಾಮಲವರ್ಣನಾಗಿ ಬಹು ಭಯಂಕರವಾದ ಕಬಂಧವೇ ಗುರುತುಳ್ಳವನಾಗಿ ಧೂಮಕೇತುವಿನೊಡಗೂಡಿದವನಾಗಿ ಕಾಣಿಸಿಕೊಂಡನು. ಇಷ್ಟೆಯಲ್ಲದೆ ಇಂದ್ರಾಗ್ನಿದೇವತಾಕವೂ ಕೋಸಲದೇಶದ ರಾಜರಾದ ಇಕ್ಷ್ವಾಕುವಂಶಜರಿಗೆ ಪೂಜ್ಯವೂ ಆದ ವಿಶಾಖಾನಕ್ಷತ್ರವನ್ನು ಅಂಗಾರಕಗ್ರಹವು ಆಕ್ರಮಿಸಿರುವುದು ಸ್ಪಷ್ಟವಾಗಿ ಕಾಣಿಸುತ್ತಿದ್ದಿತು. ಅದೇ ಸಮಯದಲ್ಲಿಯೇ

ಮೈನಾಕ ಇವ ಪರ್ವತಃ ‖ ೩೪ ‖ ನಿರಸ್ಯಮಾನೋ ರಾಮಸ್ತು ದಶಗ್ರೀವೇಣ ರಕ್ಷಸಾ । ನಾಶಕ್ನೋದಭಿಸಂಧಾತುಂ ಸಾಯಕಾನ್ ರಣಮೂರ್ಧನಿ ‖ ೩೫ ‖

ಸಕೃತ್ವಾ ಭೃಕುಟಿಂ ಕ್ರುದ್ಧಃ
ಕಿಂಚಿತ್ಸಂರಕ್ತಲೋಚನಃ ।
ಜಗಾಮ ಸುಮಹಾಕ್ರೋಧಂ
ನಿರ್ದಹನ್ನಿವ ಚಕ್ಷುಷಾ ‖ ೩೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರ್ಯುತ್ತರಶತತಮಸ್ಸರ್ಗಃ

ಹತ್ತು ಮುಖಗಳುಳ್ಳ, ವಿಂಶತಿಭುಜಃ - ಇಪ್ಪತ್ತು ಭುಜಗಳುಳ್ಳ, ಪ್ರಗೃ....ನಃ - ಗ್ರಹಿಸಲ್ಪಟ್ಟ ಧನುರ್ಬಾಣಗಳುಳ್ಳ, ದಶಗ್ರೀವಃ - ದಶಕಂಠನು, ಮೈನಾಕಃ - ಮೈನಾಕವೆಂಬ, ಪರ್ವತಇವ - ಪರ್ವತದಂತೆ, ಅದೃಶ್ಯತ - ಕಾಣಿಸಿದನು. ‖ ೩೪ ‖ ರಕ್ಷಸಾ - ರಕ್ಕಸನಾದ, ದಶಗ್ರೀವೇಣ - ದಶಕಂಠನಿಂದ, ನಿರಸ್ಯಮಾನಃ - ನಿರಾಕರಿಸಲ್ಪಟ್ಟ, ರಾಮಸ್ತು - ಶ್ರೀರಾಮನಾದರೆ, ರಣಮೂರ್ಧನಿ - ರಣರಂಗದಲ್ಲಿ, ಸಾಯಕಾನ್ - ಸರಳುಗಳನ್ನು, ಅಭಿಸಂಧಾತುಂ - ಸಂಧಾನ ಮಾಡುವುದಕ್ಕೂ, ನಾಶಕ್ನೋತ್ - ಸಮರ್ಥನಾಗದೇ ಹೋದನು. ‖ ೩೫ ‖ ಸಃ - ಈ ಶ್ರೀರಾಮನು, ಕ್ರುದ್ಧಃ - ಕೋಪಿಷ್ಠನಾಗಿ, ಭೃಕುಟಿಂ - ಕಣ್ಣುಬ್ಬುಗಳ ಗಂಟನ್ನು, ಕೃತ್ವಾ - ಮಾಡಿ, ಕಿಂಚಿತ್ - ಸ್ವಲ್ಪವಾಗಿ, ಸಂರಕ್ತಲೋಚನಃ - ಕೆಂಪಾದ ನೇತ್ರಗಳುಳ್ಳವನಾಗಿ, ಚಕ್ಷುಷಾ - ನೇತ್ರದಿಂದ, ನಿರ್ದಹನ್ನಿವ - ದಹಿಸುವನಂತೆ, ಸುಮಹಾಕ್ರೋಧಂ- ಬಹಳ ಕೋಪವನ್ನು, ಜಗಾಮ - ಹೊಂದಿದನು. ‖ ೩೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರ್ಯುತ್ತರಶತತಮಸ್ಸರ್ಗಃ.

ಇಪ್ಪತ್ತು ಭುಜಗಳೂ, ಹತ್ತು ಶಿರಸ್ಸುಗಳೂ ಉಳ್ಳ ರಾವಣಾಸುರನು ಮೈನಾಕಪರ್ವತದಂತೆ ಮಹೋನ್ನತವಾಗಿ ಪ್ರಕಾಶಿಸುತ್ತಿದ್ದನು. ಅವನು ಶ್ರೀರಾಮನ ಮೇಲೆ ಮಹಾ ತೀಕ್ಷ್ಣವಾದ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಅದರಿಂದ ಶ್ರೀರಾಮನು ಬಾಣಗಳನ್ನು ಸಂಧಾನ ಮಾಡುವುದಕ್ಕೂ ಶಕ್ತಿಯಿಲ್ಲದವನಾದನು. ಆ ಸಮಯದಲ್ಲಿ ಆತನು ಕಣ್ಣುಬ್ಬುಗಳನ್ನು ಗಂಟಿಕ್ಕಿ ಮಹಾ ಕ್ರೋಧೋದ್ದೀಪಿತನಾಗಿ ಕೆಂಗಣ್ಣುಗಳಿಂದಲೇ ಲೋಕವನ್ನು ದಹಿಸುವನೋ ಎಂಬಂತೆ ವಿರಾಜಿಸಿದನು. ‖ ೩೧–೩೬ ‖

ಇಂತಿದು ರಾಮರಾವಣರ ಯುದ್ಧನಿರೂಪಣವೆಂಬ ನೂರಮೂರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಚತುರುತ್ತರಶತತಮಸ್ಸರ್ಗಃ

ತಸ್ಯ ಕ್ರುದ್ಧಸ್ಯ ವದನಂ ದೃಷ್ಟ್ವಾ ರಾಮಸ್ಯ ಧೀಮತಃ । ಸರ್ವಭೂತಾನಿ ವಿತ್ರೇಸುಃ ಪ್ರಾಕಂಪತಚ ಮೇದಿನೀ ॥ ೧ ॥ ಸಿಂಹಶಾರ್ದೂಲವಾನ್ ಶೈಲಸ್ಸಂಚಚಾಲ ಚಲದ್ರುಮಃ । ಬಭೂವ ಚಾತಿಕ್ಷುಭಿತಸ್ಸಮುದ್ರಸ್ಸರಿತಾಂಪತಿಃ ॥ ೨ ॥ ಖಗಾಶ್ಚ ಖರನಿರ್ಘೋಷಾ ಗಗನೇ ಪರುಷಾ ಘನಾಃ । ಔತ್ಪಾತಿಕಾನಿ ನರ್ದಂತಸ್ಸಮಂತಾತ್ಪರಿ ಚಕ್ರಮುಃ ॥ ೩ ॥ ರಾಮಂ ದೃಷ್ಟ್ವಾ ಸುಸಂಕ್ರುದ್ಧಮುತ್ಪಾತಾಂಶ್ಚ ಸುದಾರುಣಾನ್ । ವಿತ್ರೇಸುಸ್ಸರ್ವಭೂತಾನಿ ರಾವಣಸ್ಯಾಽಭವದ್ಭಯಂ ॥೪॥ ವಿಮಾನಸ್ಥಾಸ್ತದಾ ದೇವಾ

ಕ್ರುದ್ಧಸ್ಯ - ಕುಪಿತನಾದ, ಧೀಮತಃ - ಬುದ್ಧಿಶಾಲಿಯಾದ, ತಸ್ಯರಾಮಸ್ಯ - ಆ ಶ್ರೀರಾಮನ, ವದನಂ - ಮುಖವನ್ನು, ದೃಷ್ಟ್ವಾ - ಕಂಡು, ಸರ್ವಭೂತಾನಿ - ಸಮಸ್ತ ಪ್ರಾಣಿಗಳೂ, ವಿತ್ರೇಸುಃ - ಭಯಗೊಂಡವು, ಮೇದಿನೀಚ - ಭೂಮಿಯೂ, ಪ್ರಾಕಂಪತ - ನಡುಗಿತು. ॥ ೧ ॥ ಸಿಂಹ....ವಾನ್ - ಸಿಂಹಗಳೂ, ವ್ಯಾಘ್ರಗಳೂ ಉಳ್ಳ, ಶೈಲಃ - ಬೆಟ್ಟವು, ಚಲದ್ರುಮಃ - ಅಲ್ಲಾಡಿದ ಮರಗಳುಳ್ಳುದಾಗಿ, ಸಂಚಚಾಲ - ಕಂಪಿಸಿತು, ಸರಿತಾಂ - ನದಿಗಳಿಗೆ, ಪತಿಃ - ಅಧಿಪತಿಯಾದ, ಸಮುದ್ರಃ - ಕಡಲು, ಅತಿಕ್ಷುಭಿತಃ - ಬಹು ಕ್ಷೋಭೆಯುಳ್ಳದು, ಬಭೂವ - ಆಯಿತು. ॥೨॥ ಖಗಾಶ್ಚ - ಪಕ್ಷಿಗಳೂ, ಖರನಿರ್ಘೋಷಾಃ - ಕ್ರೂರಧ್ವನಿಗಳುಳ್ಳವುಗಳಾದವು, ಗಗನೇ - ಅಂತರಿಕ್ಷದಲ್ಲಿ, ಘನಾಃ - ಮೇಘಗಳು, ಪರುಷಾಃ - ಕ್ರೂರವಾದವುಗಳಾಗಿ, ಔತ್ಪಾತಿಕಾನಿ - ಉತ್ಪಾತಸೂಚಕಗಳಾದ ಧ್ವನಿಗಳನ್ನು, ನರ್ದಂತಃ- ಕೂಗುವವುಗಳಾಗಿ, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಪರಿಚಕ್ರಮುಃ - ತಿರುಗುತ್ತಿದ್ದವು. ॥ ೩ ॥ ಸುಸಂಕ್ರುದ್ಧಂ - ಬಹು ಕುಪಿತನಾದ, ರಾಮಂ - ಶ್ರೀರಾಮನನ್ನೂ, ಸುದಾರುಣಾನ್ - ಕ್ರೂರವಾದ, ಉತ್ಪಾತಾಂಶ್ಚ - ನಾಶಸೂಚಕವಾದ ದುರ್ನಿಮಿತ್ತಗಳನ್ನೂ, ದೃಷ್ಟ್ವಾ - ಕಂಡು, ಸರ್ವಭೂತಾನಿ - ಸಮಸ್ತ ಪ್ರಾಣಿಗಳೂ, ವಿತ್ರೇಸುಃ - ಹೆದರಿದುವು, ರಾವಣಸ್ಯ - ದಶಕಂಠನಿಗೆ, ಭಯಂ - ಭೀತಿಯು, ಅಭವತ್ - ಆಯಿತು. ॥೪॥ ತದಾ - ಆ ಕಾಲದಲ್ಲಿ, ವಿಮಾನಸ್ಥಾಃ - ವಿಮಾನಗಳಲ್ಲಿ ಕುಳಿತಿರುವ, ದೇವಾಃ - ದೇವತೆಗಳೂ, ಗಂಧರ್ವಾಶ್ಚ - ಗಂಧರ್ವರು, ಮಹೋರಗಾಃ - ಪನ್ನಗರೂ, ಋಷಿ....ಶ್ಚ-

---

ಮಹಾ ಮೇಧಾವಿಯಾದ ಶ್ರೀರಾಮಮೂರ್ತಿಯು ಈ ಪ್ರಕಾರ ಕೋಪಾವಿಷ್ಟನಾಗಲು ಆತನನ್ನು ಕಂಡು ಜಗತ್ತಿನಲ್ಲಿರುವ ಸಮಸ್ತ ಭೂತಗಳೂ ಭಯದಿಂದ ತತ್ತಳಿಸಿಹೋದುವು. ಭೂಮಿಯೆಲ್ಲವೂ ಗಡಗಡನೆ ನಡುಗಿಹೋಯಿತು. ಸಿಂಹ ಶಾರ್ದೂಲಾದಿ ಮೃಗಗಳಿಂದ ಕೂಡಿದ ಪರ್ವತಗಳೂ, ವನಗಳೂ ಅದಿರಿಹೋದುವು. ಸಮುದ್ರರಾಜನು ಕ್ಷೋಭೆಗೊಂಡನು. ಸಾಗರವೆಲ್ಲವೂ ಕದಡಿಹೋಯಿತು. ಅಂತರಿಕ್ಷದಲ್ಲಿ ಹಕ್ಕಿಗಳೆಲ್ಲವೂ ಬಹು ಘೋರವಾಗಿ ಅರಚುತ್ತ ಎಲ್ಲೆಲ್ಲಿಯೂ ಸಂಚರಿಸುತ್ತಿದ್ದುವು. ಹೀಗೆ ಆ ಸಮಯದಲ್ಲಿ ಅನೇಕ ಉತ್ಪಾತಗಳುಂಟಾದುವು. ರಾವಣನಾದರೋ ಈ ವಿಧವಾದ ಉತ್ಪಾತಗಳನ್ನೂ, ಕ್ರೋಧೋದ್ದೀಪಿತನಾದ ಶ್ರೀರಾಮಮೂರ್ತಿಯನ್ನೂ ನೋಡಿ ಬಹಳವಾಗಿ ಹೆದರಿದನು. ಗಗನಾಂಗಣದಲ್ಲಿ ಸಂಚರಿಸುತ್ತಿದ್ದ ದೇವತೆಗಳೂ, ಗಂಧರ್ವರೂ, ಪನ್ನಗರೂ, ಋಷಿಗಳೂ,

ಗಂಧರ್ವಾಶ್ಚ ಮಹೋರಗಾಃ । ಋಷಿದಾನವದೈತ್ಯಾಶ್ಚ ಗರುತ್ಮಂತಶ್ಚ ಖೇಚರಾಃ ॥೫॥ ದದೃಶುಸ್ತೇ ಮಹಾಯುದ್ಧಂ ಲೋಕಸಂವರ್ತಸಂಸ್ಥಿತಂ । ನಾನಾಪ್ರಹರಣೈರ್ಭೀಮೈಃ ಶೂರಯೋಸ್ಸಂಪ್ರಯುಧ್ಯತೋಃ ॥ ೬ ॥ ಊಚುಸ್ಸುರಾಸುರಾಸ್ಸರ್ವೇ ತದಾ ವಿಗ್ರಹಮಾಗತಾಃ । ಪ್ರೇಕ್ಷಮಾಣಾ ಮಹದ್ಯುದ್ಧಂ ವಾಕ್ಯಂ ಭಕ್ತ್ಯಾ ಪ್ರಹೃಷ್ಟವತ್ ॥ ೭ ॥ ದಶಗ್ರೀವಂ ಜಯೇತ್ಯಾಹುರಸುರಾಸ್ಸಮುಪಸ್ಥಿತಾಃ । ದೇವಾ ರಾಮಮಥೋಚುಸ್ತೇ ತ್ವಂ ಜಯೇತಿ ಪುನಃ ಪುನಃ ॥೮॥ ಏತಸ್ಮಿನ್ನಂತರೇ ಕ್ರೋಧಾದ್ರಾಘವಸ್ಯ ಸ ರಾವಣಃ । ಪ್ರಹರ್ತುಕಾಮೋ ದುಷ್ಟಾತ್ಮಾ ಸ್ಪೃಶನ್ ಪ್ರಹರಣಂ ಮಹತ್ ॥ ೯ ॥ ವಜ್ರಸಾರಂ ಮಹಾನಾದಂ ಸರ್ವಶತ್ರುನಿಬರ್ಹಣಂ । ಶೈಲಶೃಂಗನಿಭೈಃ

ಮುನಿಗಳೂ, ದಾನವರೂ, ದೈತ್ಯರೂ, ಗರುತ್ಮಂತಶ್ಚ - ಪಕ್ಷಿಗಳೂ, ಖೇಚರಾಃ - ಗಗನಚಾರಿಗಳಾಗಿ, ಭೀಮೈಃ - ಭಯಂಕರವಾದ, ನಾನಾ....ಣೈಃ - ಅನೇಕ ಆಯುಧಗಳಿಂದ, ಸಂಪ್ರಯುಧ್ಯತೋಃ - ಯುದ್ಧವನ್ನು ಮಾಡುತ್ತಿರುವ, ಶೂರಯೋಃ - ವೀರರಾದ ರಾಮ ರಾವಣರ, ಲೋಕ....ತಂ - ಲೋಕಗಳ ಪ್ರಳಯದಂತೆ ಇರುವ, ಮಹಾಯುದ್ಧಂ - ದೊಡ್ಡ ಕಾಳಗವನ್ನು, ತೇ - ಅವರೆಲ್ಲರೂ, ದದೃಶುಃ - ಕಂಡರು. ॥೫ ೬॥ ತದಾ - ಆ ಕಾಲದಲ್ಲಿ, ವಿಗ್ರಹಂ - ಯುದ್ಧವನ್ನು, ದ್ರಷ್ಟುಂ - ನೋಡುವುದಕ್ಕಾಗಿ, ಆಗತಾಃ - ಬಂದಿರುವ, ಸರ್ವೇ - ಸಮಸ್ತರಾದ, ಸುರಾಸುರಾಃ - ದೇವರಾಕ್ಷಸರೂ, ಮಹದ್ಯುದ್ಧಂ - ದೊಡ್ಡ ಕಾಳಗವನ್ನು, ಪ್ರೇಕ್ಷಮಾಣಾಃ - ನೋಡುವವರಾಗಿ, ಪ್ರಹೃಷ್ಟವತ್ - ಸಂತುಷ್ಟರಾಗಿ, ಭಕ್ತ್ಯಾ-ವಿಶ್ವಾಸದಿಂದ, ವಾಕ್ಯಂ - ಮಾತನ್ನು, ಊಚುಃ - ಹೇಳಿದರು. ॥ ೭ ॥ ಉಪಸ್ಥಿತಾಃ - ಸಮೀಪವರ್ತಿಗಳಾದ, ಅಸುರಾಃ - ರಕ್ಕಸರು, ದಶಗ್ರೀವಂ - ದಶಕಂಠನನ್ನು ಕುರಿತು, ಜಯೇತಿ - ಜಯಿಸೆಂದು, ಆಹುಃ - ಹೇಳಿದರು, ಅಥ - ಬಳಿಕ, ತೇದೇವಾಃ - ಆ ದೇವತೆಗಳು, ರಾಮಂ - ಶ್ರೀರಾಮನನ್ನು ಕುರಿತು, ತ್ವಂ - ನೀನು, ಜಯೇತಿ - ಜಯಿಸೆಂದು, ಪುನಃಪುನಃ - ಬಾರಿಬಾರಿಗೂ, ಊಚುಃ - ಹೇಳಿದರು. ॥ ೮ ॥ ಏತಸ್ಮಿನ್ನಂತರೇ-ಈ ಮಧ್ಯದಲ್ಲಿ, ಕ್ರೋಧಾತ್-ಕೋಪದಿಂದ, ದುಷ್ಟಾತ್ಮಾ-ದುರ್ಬುದ್ಧಿಯಾದ, ರಾವಣಃ - ದಶಕಂಠನು, ರಾಘವಸ್ಯ - ಶ್ರೀರಾಮನನ್ನು, ಪ್ರಹರ್ತುಕಾಮಃ - ಹೊಡೆಯಲಿಚ್ಛೆಯುಳ್ಳವನಾಗಿ, ಮಹತ್ - ದೊಡ್ಡದಾದ, ಪ್ರಹರಣಂ - ಆಯುಧವನ್ನು, ಸ್ಪೃಶನ್ - ಸ್ಪರ್ಶಿಸಿ, ವಜ್ರಸಾರಂ-ವಜ್ರಾಯುಧದಂತೆ ದೃಢವಾದ, ಮಹಾನಾದಂ-ಬಹು ಧ್ವನಿಯುಳ್ಳ, ಸರ್ವಶತ್ರುನಿಬರ್ಹಣಂ-ಸಮಸ್ತ ಶತ್ರುಗಳನ್ನೂ ಸಂಹಾರ ಮಾಡುವ, ಶೈಲ....ಭೈಃ - ಪರ್ವತಶಿಖರಗಳಿಗೆ ಸಮಾನವಾದ,

---

ದಾನವರೂ ಪ್ರಳಯಕ್ಕಾಗಿಯೋ ಎಂಬಂತೆ ಒದಗಿ ಬಂದಿರುವ ಆ ರಾಮ ರಾವಣರ ಭಯಂಕರ ಯುದ್ಧವನ್ನು ಆಶ್ಚರ್ಯಚಕಿತರಾಗಿ ನೋಡುತ್ತಿದ್ದರು. ಆಗ ಶ್ರೀರಾಮನೂ, ರಾವಣನೂ ನಾನಾವಿಧವಾದ ಆಯುಧಗಳಿಂದ ಮಹಾ ಘೋರವಾದ ಯುದ್ಧವನ್ನು ಮಾಡುತ್ತಿದ್ದರು. ॥ ೧–೫ ॥ ಆ ಯುದ್ಧವನ್ನು ಶ್ರದ್ಧೆಯಿಂದ ನೋಡುತ್ತಿದ್ದ ಸುರಾಸುರರೆಲ್ಲರೂ ಮಹದಾನಂದಭರಿತರಾದರು. ಅವರಲ್ಲಿ ಅಸುರರು, ರಾವಣನು ಗೆಲ್ಲಲೆಂದೂ, ದೇವತೆಗಳು ಶ್ರೀರಾಮಮೂರ್ತಿಯು ಗೆಲ್ಲಲೆಂದೂ ಬಾರಿಬಾರಿಗೂ ಕೂಗಿ ಹೇಳುತ್ತಿದ್ದರು. ಈ ಮಧ್ಯದಲ್ಲಿ ದುಷ್ಟಾತ್ಮನಾದ ರಾವಣನು ಶ್ರೀರಾಮನನ್ನು ಹೊಡೆಯಲಪೇಕ್ಷಿಸಿದವನಾಗಿ ಆಯುಧವನ್ನು ಗ್ರಹಿಸಿದನು. ಅದು ವಜ್ರಾಯುಧಕ್ಕೆ ಸಮಾನವಾದ ಸತ್ವವುಳ್ಳದೂ, ಮಹಾ ಧ್ವನಿಯುಳ್ಳದೂ, ಸಮಸ್ತ ಶತ್ರುಗಳನ್ನೂ ಸಂಹರಿಸುವಂಥದೂ, ಪರ್ವತಶಿಖರೋಪಮವಾದ ಕೂಟಗಳಿಂದ ಕೂಡಿ

ಕೂಟೈಶ್ಚಿತಂ ದೃಷ್ಟಿಭಯಾವಹಂ ೧೦॥ ಸಧೂಮಮಿವ ತೀಕ್ಷ್ಣಾಗ್ರಂ ಯುಗಾಂತಾಗ್ನಿ ಚಯೋಪಮಂ । ಅತಿರೌದ್ರಮನಾಸಾದ್ಯಂ ಕಾಲೇನಾಪಿ ದುರಾಸದಂ ॥೧೧॥ ತ್ರಾಸನಂ ಸರ್ವಭೂತಾನಾಂ ದಾರುಣಂ ಭೇದನಂ ತಥಾ । ಪ್ರದೀಪ್ತಮಿವ ರೋಷೇಣ ಶೂಲಂ ಜಗ್ರಾಹ ರಾವಣಃ॥೧೨॥ ತಚ್ಛೂಲಂ ಪರಮಕ್ರುದ್ಧೋ ಮಧ್ಯೇ ಜಗ್ರಾಹ ವೀರ್ಯವಾನ್। ಅನೇಕೈಸ್ಸಮರೇ ಶೂರೈ ರಾಕ್ಷಸೈಃ ಪರಿವಾರಿತಃ ॥೧೩॥ ಸಮುದ್ಯಮ್ಯ ಮಹಾಕಾಯೋ ನನಾದ ಯುಧಿ ಭೈರವಂ । ಸಂರಕ್ತನಯನೋ ರೋಷಾತ್ಸ್ವಸೈನ್ಯಮಭಿಹರ್ಷಯನ್ ॥೧೪॥ ಪೃಥಿವೀಂ ಚಾಂತರಿಕ್ಷಂಚ ದಿಶಶ್ಚ ಪ್ರದಿಶಸ್ತಥಾ । ಪ್ರಾಕಂಪಯತ್ತದಾ ಶಬ್ದೋ ರಾಕ್ಷಸೇಂದ್ರಸ್ಯ ದಾರುಣಃ ॥೧೫॥ ಅತಿನಾದಸ್ಯ ನಾದೇನ ತೇನ ತಸ್ಯ ದುರಾ

ಕೂಟೈಃ - ಶಿಖರಗಳಿಂದ, ಚಿತಂ - ವ್ಯಾಪ್ತವಾದ, ದೃಷ್ಟಿ....ಹಂ - ನೋಟದಿಂದಲೇ ಭಯವನ್ನುಂಟು ಮಾಡುತ್ತಿರುವ, ಸಧೂಮಮಿವ - ಹೊಗೆಯೊಡಗೂಡಿದಂತೆ, ತೀಕ್ಷ್ಣಾಗ್ರಂ - ಹದವಾದ ತುದಿಗಳುಳ್ಳ, ಯುಗಾಂ....ಮಂ - ಪ್ರಳಯಾಗ್ನಿಗಳ ರಾಶಿಗೆ ಸಮಾನವಾದ, ಅತಿರೌದ್ರಂ - ಬಹು ಭಯಂಕರವಾದ, ಅನಾಸಾದ್ಯಂ - ಹೊಂದಲಸಾಧ್ಯವಾದ, ಕಾಲೇನಾಪಿ - ಯಮನಿಂದಲೂ, ದುರಾಸದಂ - ಹೊಂದ ಲಸಾಧ್ಯವಾದ, ಸರ್ವಭೂತಾನಾಂ-ಸಮಸ್ತ ಪ್ರಾಣಿಗಳಿಗೂ, ತ್ರಾಸನಂ-ಹೆದರಿಕೆಯನ್ನುಂಟುಮಾಡುವ, ದಾರುಣಂ - ಭಯಂಕರವಾದ, ಭೇದನಂ - ಹಾಗೆಯೇ ಎರಡು ಭಾಗ ಮಾಡುವ, ರೋಷೇಣ - ಕೋಪ ದಿಂದ, ಪ್ರದೀಪ್ತಮಿವ - ಉರಿಯುವಂತಿರುವ, ಶೂಲಂ - ಶೂಲಾಯುಧವನ್ನು, ರಾವಣಃ - ದಶಕಂಠನು, ಜಗ್ರಾಹ - ತೆಗೆದುಕೊಂಡನು. ॥೯-೧೨॥ ವೀರ್ಯವಾನ್ - ಸಮರ್ಥನಾದ ರಾವಣನು, ಪರಮಕ್ರುದ್ಧಃ- ಬಹು ಕುಪಿತನಾಗಿ, ಸಮರೇ - ಕಾಳಗದಲ್ಲಿ, ಶೂರೈಃ - ವೀರರಾದ, ಅನೇಕೈಃ - ಅನೇಕರಾದ, ರಾಕ್ಷಸೈಃ- ರಕ್ಕಸರಿಂದ, ಪರಿವಾರಿತಃ - ಸುತ್ತುವರೆದು, ತಚ್ಛೂಲಂ - ಆ ಶೂಲವನ್ನು, ಮಧ್ಯೇ - ಮಧ್ಯಭಾಗದಲ್ಲಿ, ಜಗ್ರಾಹ-ಗ್ರಹಿಸಿದನು. ॥೧೩॥ ಮಹಾಕಾಯಃ-ಮಹಾ ಶರೀರವುಳ್ಳ ರಾವಣನು, ರೋಷಾತ್-ಕೋಪದಿಂದ, ಸಂರಕ್ತನಯನಃ - ಕೆಂಪಾದ ಕಣ್ಣುಗಳುಳ್ಳವನಾಗಿ, ಸ್ವಸೈನ್ಯಂ - ತನ್ನ ಸೇನೆಯನ್ನು, ಅಭಿಹರ್ಷಯನ್- ಸಂತೋಷಗೊಳಿಸುವವನಾಗಿ,(ಆ ಶೂಲವನ್ನು) ಸಮುದ್ಯಮ್ಯ-ಮೇಲಕ್ಕೆತ್ತಿ, ಯುಧಿ ಕಾಳಗದಲ್ಲಿ, ಭೈರವಂ- ಭಯಂಕರವಾಗಿ, ನನಾದ-ಕೂಗಿದನು. ॥೧೪॥ ತದಾ - ಆ ಕಾಲದಲ್ಲಿ, ರಾಕ್ಷಸೇಂದ್ರಸ್ಯ-ರಕ್ಕಸಾಧಿಪತಿಯ, ದಾರುಣಃ - ಕ್ರೂರವಾದ, ಶಬ್ದಃ - ಕೋಲಾಹಲಧ್ವನಿಯು, ಪೃಥಿವೀಂಚ - ಭೂಮಿಯನ್ನೂ, ಅಂತ ರಿಕ್ಷಂಚ - ಗಗನವನ್ನೂ, ದಿಶಶ್ಚ - ದಿಕ್ಕುಗಳನ್ನೂ, ಪ್ರದಿಶಶ್ಚ - ವಿದಿಕ್ಕುಗಳನ್ನೂ, ಪ್ರಾಕಂಪಯತ್ -

---

ದುದೂ ಬಹು ತೀಕ್ಷ್ಣವಾದ ಜ್ವಾಲೆಗಳಿಂದಲಂಕೃತವಾದುದೂ, ಧೂಮಕೇತುಗಳೊಡ ಗೂಡಿ ಪ್ರಳಯಕಾಲಾಗ್ನಿಗೆ ಸಮಾನವಾದುದೂ ಯಮನಿಂದಲೂ ಹೊಂದಲಸದಳವಾದುದೂ ಸಮಸ್ತ ಭೂತಗಳಿಗೂ ಭಯವನ್ನುಂಟುಮಾಡುವಂಥದೂ, ಸಮಸ್ತ ಭೂತಗಳನ್ನೂ ಭೇದಿಸು ವುದರಲ್ಲಿ ಮಹಾ ಸಾಮರ್ಥ್ಯವುಳ್ಳುದೂ ಆಗಿದ್ದಿತು. ಆ ಶೂಲಾಯುಧವು ರಾವಣನ ಕ್ರೋಧೋದ್ವೇಗದಿಂದ ಮತ್ತಷ್ಟು ಪ್ರಬಲವಾಗಿ ಪ್ರಜ್ವಲಿಸುತ್ತಿದ್ದಿತು. ರಾವಣನು ಆ ಶೂಲವನ್ನು ಕೈಯಲ್ಲಿ ಹಿಡಿದು ಇನ್ನೂ ಹೆಚ್ಚಾಗಿ ಕನಲಿದನು. ॥ ೬-೧೨ ॥ ಆವರೆಗೇ ಅನೇಕ ಯುದ್ಧಗಳಲ್ಲಿ ಅಸಂಖ್ಯಾತವಾದ ವಾನರರನ್ನು ಸಂಹರಿಸಿದವನೂ ಮಹಾಕಾಯನೂ ಆದ ಆ ರಾವಣನು ಭಯಂಕರವಾಗಿ ಸಿಂಹನಾದ ಮಾಡಿದನು. ಅದರಿಂದ ದಿಕ್ಕುವಿದಿಕ್ಕು ಗಳೆಲ್ಲ ನಡುಗಿಹೋದುವು. ಭೂಮ್ಯಾಕಾಶಗಳು ತತ್ತಳಿಸಿದುವು; ಸಮಸ್ತ ಭೂತಗಳೂ

ತ್ಮನಃ । ಸರ್ವಭೂತಾನಿ ವಿತ್ರೇಸುಸ್ಸಾಗರಶ್ಚ ಪ್ರಚುಕ್ಷುಭೇ ॥ ೧೬ ॥ ಸ ಗೃಹೀತ್ವಾ ಮಹಾವೀರ್ಯಃ ಶೂಲಂ ತದ್ರಾವಣೋ ಮಹಾನ್ । ವಿನದ್ಯ ಸುಮಹಾನಾದಂ ರಾಮಂ ಪರುಷಮಬ್ರವೀತ್ ॥ ೧೭ ॥ ೫ "ಶೂಲೋಽಯಂ ವಜ್ರಸಾರಸ್ತೇ ರಾಮ! ರೋಷಾನ್ಮಯೋದ್ಯತಃ । ತವಭ್ರಾತೃಸಹಾಯಸ್ಯ ಸದ್ಯಃ ಪ್ರಾಣಾನ್ ಹರಿಷ್ಯತಿ ॥೧೮॥ ರಕ್ಷಸಾಮದ್ಯ ಶೂರಾಣಾಂ ನಿಹತಾನಾಂ ಚಮೂಮುಖೇ । ತ್ವಾಂ ನಿಹತ್ಯ ರಣಶ್ಲಾಘಿನ್! ಕರೋಮಿ ತರಸಾ ಸಮಂ ॥ ೧೯ ॥ ತಿಷ್ಠೇದಾನೀಂ ನಿಹನ್ಮಿ ತ್ವಾಮೇಷಶೂಲೇನ ರಾಘವ!" । ಏವಮುಕ್ತ್ವಾ ಸ ಚಿಕ್ಷೇಪ ತಚ್ಛೂಲಂ ರಾಕ್ಷಸಾಧಿಪಃ ॥೨೦॥ ತದ್ರಾವಣ

ಕಂಪಿಸುವಂತೆ ಮಾಡಿದನು. ॥ ೧೫ ॥ ಅತಿನಾದಸ್ಯ - ಅತಿ ಧ್ವನಿಯುಳ್ಳ, ತಸ್ಯದುರಾತ್ಮನಃ - ಆ ದುರ್ಬುದ್ಧಿಯುಳ್ಳ ದಶಕಂಠನ, ತೇನನಾದೇನ - ಆ ಧ್ವನಿಯಿಂದ, ಸರ್ವಭೂತಾನಿ - ಸಮಸ್ತ ಪ್ರಾಣಿಗಳೂ, ವಿತ್ರೇಸುಃ - ಹೆದರಿದುವು, ಸಾಗರಶ್ಚ - ಸಮುದ್ರವೂ, ಪ್ರಚುಕ್ಷುಭೇ - ನಡುಗಿತು, ಸರಾವಣಃ- ಆ ರಾವಣನು, ಮಹಾವೀರ್ಯಃ - ಮಹಾ ಶಕ್ತಿಯುಳ್ಳ, ಮಹತ್ - ದೊಡ್ಡದಾದ, ತಚ್ಛೂಲಂ - ಆ ಶೂಲವನ್ನು, ಗೃಹೀತ್ವಾ - ತೆಗೆದುಕೊಂಡು, ಸುಮಹಾನಾದಂ - ದೊಡ್ಡ ಧ್ವನಿಯುಳ್ಳಂತೆ, ವಿನದ್ಯ - ಗರ್ಜಿಸಿ, ರಾಮಂ - ಶ್ರೀರಾಮನನ್ನು, ಪರುಷಂ ಕ್ರೂರವಾಗಿ, ಅಬ್ರವೀತ್ - ನುಡಿದನು. ॥ ೧೬-೧೭ ॥ ರಾಮ - ಶ್ರೀರಾಮ, ತೇ - ನಿನ್ನ ವಿಷಯದಲ್ಲಿ, ರೋಷಾತ್ - ಕೋಪದಿಂದ, ಮಯಾ - ನನ್ನಿಂದ, ಉದ್ಯತಃ - ಎತ್ತಲ್ಪಟ್ಟ, ವಜ್ರಸಾರಃ - ವಜ್ರಾಯುಧದಂತೆ ದೃಢವಾದ, ಅಯಂಶೂಲಃ - ಈ ಶೂಲವು, ಭ್ರಾತೃ....ಸ್ಯ - ತಮ್ಮನೇ ಸಹಾಯವಾಗುಳ್ಳ, ತವ - ನಿನ್ನ, ಪ್ರಾಣಾನ್ - ಪ್ರಾಣಗಳನ್ನು, ಸದ್ಯಃ - ಈಗಲೇ, ಹರಿಷ್ಯತಿ - ಅಪಹರಿಸುವದು. ॥ ೧೮ ॥ ರಣಶ್ಲಾಘಿನ್ - ಕಾಳಗದಲ್ಲಿ ಶ್ಲಾಘನೀಯನೆ, ಅದ್ಯ - ಈಗ, ತ್ವಾಂ - ನಿನ್ನನ್ನು, ಚಮೂಮುಖೇ - ಸೇನಾಮುಖದಲ್ಲಿ, ನಿಹತಾನಾಂ - ಹೊಡೆಯಲ್ಪಟ್ಟ, ಶೂರಾಣಾಂ - ವೀರರಾದ, ರಕ್ಷಸಾಂ - ರಕ್ಕಸರೊಡನೆ, ಸಮಂ - ಸಮನನ್ನಾಗಿ, ತರಸಾ - ಬಲದಿಂದ, ಕರೋಮಿ - ಮಾಡುವೆನು, ರಾಘವ - ಶ್ರೀರಾಮನೇ, ತಿಷ್ಠ - ನಿಲ್ಲು, ಇದಾನೀಂ - ಈಗ, ಏಷಃ - ಈ ನಾನು, ಶೂಲೇನ - ಶೂಲಾಯುಧದಿಂದ, ತ್ವಾಂ - ನಿನ್ನನ್ನು, ನಿಹನ್ಮಿ - ಹೊಡೆಯುತ್ತೇನೆ. ॥೧೯॥ ಸರಾಕ್ಷಸಾಧಿಪಃ - ಆ ದಶಕಂಧರನು, ಏವಂ - ಈ ಪರಿ, ಉಕ್ತ್ವಾ - ಹೇಳಿ, ತಚ್ಛೂಲಂ - ಆ ಶೂಲಾ

ಭಯಭ್ರಾಂತವಾದುವು ; ಸಮುದ್ರವು ಅಪರಿಮಿತವಾಗಿ ಕ್ಷೋಭೆಗೊಂಡಿತು. ಅಪಾರ ಪರಾಕ್ರಮಿಯಾದ ರಾವಣನು ಬಹು ಭಯಂಕರವಾದ ಆ ಶೂಲಾಯುಧವನ್ನು ಗ್ರಹಿಸಿ ಇನ್ನೂ ಭಯಂಕರವಾಗಿ ಗರ್ಜಿಸಿ ಶ್ರೀರಾಮಮೂರ್ತಿಯನ್ನು ಕುರಿತು ಬಹು ಕಠಿನವಾಗಿ, "ಎಲವೊ ರಾಮನೇ! ಈ ಶೂಲವನ್ನು ನೋಡು. ಇದು ವಜ್ರಾಯುಧಕ್ಕೆ ಸಮಾನವಾದ ಸತ್ವವುಳ್ಳದ್ದು. ಇದನ್ನು ನಿನ್ನಮೇಲೆ ಪ್ರಯೋಗಿಸಲುದ್ಯಮಿಸಿದ್ದೇನೆ. ಪ್ರಯೋಗಿಸುತ್ತೇನೆ. ಕೂಡಲೇ ಇದು ನಿನ್ನ ಮತ್ತು ನಿನ್ನ ತಮ್ಮನಾದ ಆ ಲಕ್ಷ್ಮಣನ ಪ್ರಾಣಗಳನ್ನು ಅಪಹರಿಸುತ್ತದೆ. ರಣಾಂಗಣದಲ್ಲಿ ಶ್ಲಾಘ್ಯನಾದವನೇ! ಇಂದು ನಿನ್ನನ್ನು ಸಂಹರಿಸಿ ಈವರೆಗೂ ಮಡಿದಿರುವ ಶೂರರಾದ ರಾಕ್ಷಸರಿಗೆಲ್ಲ ತೃಪ್ತಿಯನ್ನುಂಟುಮಾಡುವೆನು. ರಾಘವ! ನಿಲ್ಲು ನಿಲ್ಲು.

೫ "ಎಲೈ ರಾಮನೇ, ಈ ಶೂಲಾಯುಧದಿಂದ ನಿನ್ನ ತಮ್ಮನಿಗೆ ಸಹಾಯಭೂತರಾದ ವಾನರರೆಲ್ಲರನ್ನೂ ಮಡಿದ ರಾಕ್ಷಸಶೂರರೊಡಗೂಡಿಸುವೆನು" ಎಂದು ವಾಸ್ತವಿಕಾರ್ಥ. (ಮ)

ಕರಾನ್ಮುಕ್ತಂ ವಿದ್ಯುಜ್ಜ್ವಾಲಾಸಮಾಕುಲಂ । ಅಷ್ಟಘಂಟಂ ಮಹಾನಾದಂ ವಿಯದ್ಗತ
ಮಶೋಭತ ॥ ೨೦ ॥ ತಚ್ಛೂಲಂ ರಾಘವೋ ದೃಷ್ಟ್ವಾ ಜ್ವಲಂತಂ ಘೋರದರ್ಶನಂ।
ಸಸರ್ಜ ವಿಶಿಖಾನ್ ರಾಮಶ್ಚಾಪಮಾಯಮ್ಯ ವೀರ್ಯವಾನ್ ॥ ೨೧ ॥ ಆಪತಂತಂ
ಶರೌಘೇಣ ವಾರಯಾಮಾಸ ರಾಘವಃ । ಉತ್ಪತಂತಂ ಯುಗಾಂತಾಗ್ನಿಂ ಜಲೌ
ಘೈರಿವ ವಾಸವಃ ॥೨೨॥ ನಿರ್ದದಾಹ ಸ ತಾನ್ ಬಾಣಾನ್ ರಾಮಕಾರ್ಮುಕನಿಸ್ಸೃತಾನ್।
ರಾವಣಸ್ಯ ಮಹಾಶೂಲಃ ಪತಂಗಾನಿವ ಪಾವಕಃ ॥ ೨೩ ॥ ತಾನ್ ದೃಷ್ಟ್ವಾ ಭಸ್ಮ
ಸಾದ್ಭೂತಾನ್ ಶೂಲಸಂಸ್ಪರ್ಶಚೂರ್ಣಿತಾನ್ । ಸಾಯಕಾನಂತರಿಕ್ಷಸ್ಥಾನ್ ರಾಘವಃ
ಕ್ರೋಧಮಾಹರತ್ ॥೨೪॥ ಸ ತಾಂ ಮಾತಲಿನಾ ನೀತಾಂ ಶಕ್ತಿಂ ವಾಸವನಿರ್ಮಿತಾಂ।

ಯುಧವನ್ನು, ಚಿಕ್ಷೇಪ - ಎಸೆದನು. ॥ ೨೦ ॥ ರಾವಣಕರಾತ್ - ರಾವಣನ ಕೈಯಿಂದ, ಮುಕ್ತಃ - ಬಿಡಲ್ಪಟ್ಟ, ವಿದ್ಯು....ಲಂ - ಮಿಂಚುಗಳ ಜ್ವಾಲೆಗಳಿಂದ ವ್ಯಾಪ್ತವಾದ, ಅಷ್ಟಘಂಟಂ - ಎಂಟು ಘಂಟೆಗಳುಳ್ಳ, ಮಹಾನಾದಂ - ದೊಡ್ಡ ಧ್ವನಿಯುಳ್ಳ, ವಿಯದ್ಗತಂ - ಅಂತರಿಕ್ಷವನ್ನು ಹೊಂದಿದ, ತತ್ - ಆ ಶೂಲವು, ಅಶೋಭತ-ಹೊಳೆಯುತ್ತಿತ್ತು. ॥೨೦॥ ರಾಘವಃ ರಘುಕುಲೋತ್ಪನ್ನನಾದ. ವೀರ್ಯವಾನ್-ಪರಾಕ್ರಮಿಯಾದ, ರಾಮಃ - ಶ್ರೀರಾಮನು, ಘೋರದರ್ಶನಂ - ಭಯಂಕರವಾದ ನೋಟವುಳ್ಳ, ಜ್ವಲಂತಂ-ಪ್ರಜ್ವಲಿಸುತ್ತಿರುವ, ತಚ್ಛೂಲಂ ಆ ಶೂಲವನ್ನು, ದೃಷ್ಟ್ವಾ-ಕಂಡು, ಚಾಪಂ-ಬಿಲ್ಲನ್ನು, ಆಯಮ್ಯ - ಬಗ್ಗಿಸಿ, ವಿಶಿಖಾನ್ - ಸರಳುಗಳನ್ನು, ಸಸರ್ಜ - ಬಿಟ್ಟನು. ॥೨೧॥ ಉತ್ಪತಂತಂ - ಜೀಕಮಬರುವ, ಯುಗಾಂತಾಗ್ನಿಂ - ಪ್ರಳಯಾಗ್ನಿಯನ್ನು, ಜಲೌಘೈಃ - ಜಲಪ್ರವಾಹಗಳಿಂದ, ವಾಸವಇವ - ದೇವೇಂದ್ರನಂತೆ, ರಾಘವಃ-ಶ್ರೀರಾಮನು. ಆಪತಂತಂ-ಬರುತ್ತಿರುವ ಶೂಲಾಯುಧವನ್ನು, ವಾರಯಾಮಾಸ-ತಡೆದನು. ॥೨೨॥ ರಾವಣಸ್ಯ-ರಾವಣನ, ಸಮಹಾಶೂಲಃ-ಆ ದೊಡ್ಡ ಶೂಲವು, ರಾಮ....ತಾನ್-ಶ್ರೀರಾಮನ ಧನುಸ್ಸಿನಿಂದ ಬಿಡಲ್ಪಟ್ಟ, ತಾನ್‌ಬಾಣಾನ್ - ಆ ಸರಳುಗಳನ್ನು, ಪತಂಗಾನ್ - ಈಚಲು ಹುಳುಗಳನ್ನು, ಪಾವಕಇವ - ಅಗ್ನಿಯಂತೆ, ನಿರ್ದದಾಹ - ಸುಡುತ್ತಿತ್ತು. ॥೨೩॥ ರಾಘವಃ - ಶ್ರೀರಾಮನು, ಶೂಲ....ತಾನ್ - ಶೂಲಾಯುಧದ ಸ್ಪರ್ಶಮಾತ್ರದಿಂದಲೇ ಪುಡಿಯಾಗಿ ಮಾಡಲ್ಪಟ್ಟ, ಭಸ್ಮಸಾದ್ಭೂತಾನ್-ಭಸ್ಮೀಭೂತಗಳಾದ, ಅಂತರಿಕ್ಷಸ್ಥಾನ್ - ಗಗನದಲ್ಲಿರುವ, ತಾನ್‌ಸಾಯಕಾನ್ - ಆ ಬಾಣಗಳನ್ನು, ದೃಷ್ಟ್ವಾ-ಕಂಡು, ಕ್ರೋಧಂ ಕೋಪವನ್ನು, ಆಹರತ್-ತೆಗೆದುಕೊಂಡನು. ॥ ೨೪ ॥ ರಘುನಂದನಃ-ರಘುಕುಲಾ

ಈ ಶೂಲದಿಂದಲಿ ನಿನ್ನನ್ನು ಕೊಲ್ಲುವೆನು ” ಎಂದು ಹೇಳಿ ಆ ಶೂಲವನ್ನು ಶ್ರೀರಾಮನ ಮೇಲೆಸೆದನು. ॥ ೧೩–೨೦ ॥ ದಶಕಂಠಕರಮುಕ್ತವಾದುದೂ, ಮಿಂಚುಗಳಿಂದಲೂ, ಜ್ವಾಲೆಗಳಿಂದಲೂ ಕೂಡಿ, ಅಷ್ಟಘಂಟಾವಿರಾಜಿತವಾಗಿ ಮಹಾನಾದವನ್ನು ಮಾಡುತ್ತಿರುವ ಆ ಶೂಲಾಯುಧವು ಗಗನಾಂಗಣದಲ್ಲಿ ಬಹುವಾಗಿ ಶೋಭಿಸುತ್ತಿದ್ದಿತು. ವೀರನಾದ ಶ್ರೀರಾಮಮೂರ್ತಿಯು ಪ್ರಜ್ವಲಿಸುತ್ತಿರುವ ಮಹಾ ಘೋರವಾದ ಆ ಶೂಲವನ್ನು ಕಂಡೊಡನೆಯೇ ಬಿಲ್ಲು ಬಗ್ಗಿಸಿ ಅನೇಕ ಬಾಣಗಳನ್ನು ಅದರಮೇಲೆ ಪ್ರಯೋಗಿಸಿದನು. ಹೀಗೆ ಅನೇಕ ಬಾಣಗಳನ್ನೆಸೆದು ವೇಗವಾಗಿ ಬರುತ್ತಿರುವ ಆ ಶೂಲಾಯುಧವನ್ನು ಮಹೇಂದ್ರನು ಯುಗಾಂತಾಗ್ನಿಯನ್ನು ವರ್ಷಗಳಿಂದೆಂತೋ ಅಂತು ತಡೆದನು. ಆದರೆ ಅದು ಶ್ರೀರಾಮನ ಬಾಣಗಳೆಲ್ಲವನ್ನೂ ಬೆಂಕಿಯು ಪತಂಗದ ಹುಳುಗಳನ್ನೆಂತೋ ಅಂತು ಸುಟ್ಟು ಬೂದಿ ಮಾಡಿತು. ಹೀಗೆ ತನ್ನ ಬಾಣಗಳೆಲ್ಲವೂ ವ್ಯರ್ಥವಾಗಲು ಆತನಿಗೆ ವಿಶಿವಿಾರಿದ ಕೋಪವುಂಟಾಯಿತು. ॥೨೧–೨೪॥

ಜಗ್ರಾಹ ಪರಮಕ್ರುದ್ಧೋ ರಾಘವೋ ರಘುನಂದನಃ ॥ ೨೬ ॥ ಸಾ ತೋಲಿತಾ ಬಲವತಾ ಶಕ್ತಿರ್ಘಂಟಾಕೃತಸ್ವನಾ । ನಭಃ ಪ್ರಜ್ವಾಲಯಾಮಾಸ ಯುಗಾಂತೋಲ್ಕೇವ ಸಪ್ರಭಾ ॥ ೨೭ ॥ ಸಾಕ್ಷಿಪ್ತಾ ರಾಕ್ಷಸೇಂದ್ರಸ್ಯ ತಸ್ಮಿನ್ ಶೂಲೇ ಪಪಾತಹ । ಭಿನ್ನಃ ಶಕ್ತ್ಯಾ ಮಹಾನ್ಶೂಲೋ ನಿಪಪಾತ ಹತದ್ಯುತಿಃ ॥ ೨೮ ॥ ನಿರ್ಬಿಭೇದ ತತೋ ಬಾಣೈರ್ಹಯಾನಸ್ಯ ಮಹಾಜವಾನ್ । ರಾಮಸ್ತೀಕ್ಷ್ಣೈರ್ಮಹಾವೇಗೈರ್ವಜ್ರಕಲ್ಪೈಃ ಶಿತೈಃ ಶರೈಃ ॥೨೯॥ ನಿರ್ಬಿಭೇದೋರಸಿ ತತೋ ರಾವಣಂ ನಿಶಿತೈಃ ಶರೈಃ । ರಾಘವಃ

ನಂದಕರನಾದ, ಸರಾಘವಃ - ಆ ಶ್ರೀರಾಮನು, ಪರಮಕ್ರುದ್ಧಃ - ಬಹು ಕುಪಿತನಾಗಿ, ಮಾತಲಿನಾ - ಮಾತಲಿಯಿಂದ, ಆನೀತಾಂ - ತರಲ್ಪಟ್ಟ, ವಾಸವನಿರ್ಮಿತಾಂ - ಇಂದ್ರನಿಂದ ಸೃಷ್ಟಿಮಾಡಲ್ಪಟ್ಟ, ತಾಂಶಕ್ತಿಂ - ಆ ಶಕ್ತ್ಯಾಯುಧವನ್ನು, ಜಗ್ರಾಹ - ತೆಗೆದುಕೊಂಡನು. ॥ ೨೬ ॥ ಬಲವತಾ - ಬಲವಂತನಾದ ಶ್ರೀರಾಮನಿಂದ, ತೋಲಿತಾ - ತೂಗಿ ಬಿಡಲ್ಪಟ್ಟ, ಘಂಟಾ....ನಾ - ಘಂಟೆಗಳಿಂದ ಹುಟ್ಟಿದ ಧ್ವನಿಯುಳ್ಳ, ಸಾಶಕ್ತಿಃ - ಆ ಶಕ್ತ್ಯಾಯುಧವು, ಯುಗಾಂತೋಲ್ಕೇವ - ಪ್ರಳಯಕಾಲದ ಕೊಳ್ಳಿಯಂತೆ, ಸಪ್ರಭಾ - ಕಾಂತಿಯಿಂದ ಕೂಡಿದ್ದಾಗಿ, ನಭಃ - ಅಂತರಿಕ್ಷವನ್ನು, ಪ್ರಜ್ವಾಲಯಾಮಾಸ - ಬೆಳಗುವಂತೆ ಮಾಡಿತು. ॥೨೭॥ ಸಾ-ಆ ಶಕ್ತಿಯು, ಕ್ಷಿಪ್ತಾ-ಎತ್ತಿಹಾಕಲ್ಪಟ್ಟುದಾಗಿ, ರಾಕ್ಷಸೇಂದ್ರೇಣ ರಾವಣನ, ತಸ್ಮಿನ್‌ಶೂಲೇ - ಆ ಶೂಲದಲ್ಲಿ, ಪಪಾತಹ - ಬಿದ್ದಿತಷ್ಟೆ, ಶಕ್ತ್ಯಾ - ಶಕ್ತ್ಯಾಯುಧದಿಂದ, ಭಿನ್ನಃ - ಭೇದಿಸಲ್ಪಟ್ಟ, ಮಹಾನ್ ಮಹತ್ತರವಾದ, ಶೂಲಃ-ಶೂಲವು, ಹತದ್ಯುತಿಃ ನೀಗಿದ ಕಾಂತಿಯುಳ್ಳುದಾಗಿ, ನಿಪಪಾತ - ಕೆಳಗೆ ಬಿದ್ದಿತು. ॥೨೮॥ ತತಃ - ಬಳಿಕ, ರಾಮಃ - ಶ್ರೀರಾಮನು, ತೀಕ್ಷ್ಣೈಃ - ಕ್ರೂರವಾದ, ಮಹಾವೇಗೈಃ - ಬಹು ವೇಗವುಳ್ಳ, ವಜ್ರಕಲ್ಪೈಃ - ವಜ್ರಾಯುಧಕ್ಕೆ ಸಮಾನವಾದ, ಶಿತೈಃ - ಹದವಾದ, ಶರೈಃ - ಜಂಬಿನ ಕಾಮುಗಳಿಂದ ಮಾಡಲ್ಪಟ್ಟ, ಬಾಣೈಃ - ಸರಳುಗಳಿಂದ ಅಸ್ಯ - ಈ ರಾವಣನ, ಮಹಾಜವಾನ್ - ಬಹು ವೇಗವುಳ್ಳ, ಹಯಾನ್ - ಕುದುರೆಗಳನ್ನು, ನಿರ್ಬಿಭೇದ - ಭೇದಿಸಿದನು. ॥೨೯॥ ತತಃ - ಬಳಿಕ, ರಾಘವಃ - ಶ್ರೀರಾಮನು, ಪರಮಾಯತ್ತಃ - ಬಹು ಜಾಗರೂಕನಾಗಿ, ರಾವಣಂ - ದಶಗ್ರೀವನನ್ನು, ಉರಸಿ - ಎದೆಯಲ್ಲಿ, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ನಿರ್ಬಿಭೇದ-ಭೇದಿಸಿದನು, ಲಲಾಟೇ - ಹಣೆಯಲ್ಲಿ, ತ್ರಿಭಿಃ - ಮೂರಾದ, ಪತ್ರಿಭಿಃ - ಬಾಣಗಳಿಂದ, ರಾವಣಂ - ದಶಕಂಠನನ್ನು, ನಿರ್ಬಿಭೇದ - ಭೇದಿಸಿದನು. ॥೩೦॥ ಶರೈಃ - ಬಾಣಗಳಿಂದ, ಭಿನ್ನಸರ್ವಾಂಗಃ - ಭೇದಿಸ

ರಘುನಂದನನಾದ ಆತನು ಕೂಡಲೇ ಮಾತಲಿಯು ತಂದಿದ್ದ ಇಂದ್ರನಿರ್ಮಿತವಾದ ಶಕ್ತ್ಯಾಯುಧವನ್ನು ಗ್ರಹಿಸಿದನು. ಮಹಾ ಬಲಾಢ್ಯನಾದ ಶ್ರೀರಾಮನು ಆ ಶಕ್ತಿಯನ್ನು ತೂಗಿ ಎಸೆಯಲು ಘಂಟಾಲಂಕೃತವಾದ ಆ ಆಯುಧವು ಧ್ವನಿಗೈಯುತ್ತ ಪ್ರಳಯಕಾಲದಲ್ಲಿ ಮಹೋಲ್ಕೆಯಂತೆ ಅಂತರಿಕ್ಷವನ್ನೆಲ್ಲ ಪ್ರಜ್ವಲಗೊಳಿಸಿದುದಲ್ಲದೆ ರಾವಣನ ಶೂಲಾಯುಧಕ್ಕೆ ತಗುಲಿತು. ಒಡನೆಯೇ ಶೂಲವು ಕಾಂತಿಗುಂದಿ ಕೆಳಕ್ಕೆ ಬಿದ್ದಿತು. ಆ ತರುವಾಯ ಶ್ರೀರಾಮಚಂದ್ರನು ಮಹಾ ತೀಕ್ಷ್ಣವಾದ ಅಂಬುಗಳನ್ನೆಸೆದು ರಾವಣನ ರಥಕ್ಕೆ ಹೂಡಿದ್ದ ಕುದುರೆಗಳನ್ನು ಹೊಡೆದನು. ಆತನೆಸೆದ ಪ್ರತಿಯೊಂದು ಅಂಬೂ ವಜ್ರಾಯುಧಕ್ಕೆ ಸಮಾನವಾಗಿದ್ದಿತು. ಶ್ರೀರಾಮನು ಇದಾದ ಬಳಿಕ ಆ ದಶಕಂಠನ ಹಣೆಗೆ ಗುರಿಯಿಟ್ಟು ಬಹು ಮೊನಚಾದ ಮೂರು ಬಾಣಗಳನ್ನೆಸೆದು ಘಾತಿಸಿದನು. ಹೀಗೆ ಶ್ರೀರಾಮನ ಬಾಣಗಳಿಂದ ಭೇದಿಸಿಹೋದ ಸರ್ವಾ

ಶರಮಾಯತ್ತೋ ಲಲಾಟೇ ಪತ್ರಿಭಿಸ್ತ್ರಿಭಿಃ ॥೩೦॥ ಸಶರೈರ್ಭಿನ್ನಸರ್ವಾಂಗೋ ಗಾತ್ರ ಪ್ರಸೃತಶೋಣಿತಃ । ರಾಕ್ಷಸೇಂದ್ರಸ್ಸಮೂಹಸ್ಥಃ ಫುಲ್ಲಾಶೋಕ ಇವಾಬಭೌ ॥೩೧॥

ಶರಾಮುಬಾಣೈರಭಿವಿದ್ಧಗಾತ್ರೋ
ನಿಶಾಚರೇಂದ್ರಃ ಕ್ಷತಜಾರ್ದ್ರಗಾತ್ರಃ ।
ಜಗಾಮ ಖೇದಂಚ ಸಮಾಜಮಧ್ಯೇ
ಕ್ರೋಧಂಚ ಚಕ್ರೇ ಸುಭೃಶಂ ತದಾನೀಂ ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರುತ್ತರಶತತಮಸ್ಸರ್ಗಃ.

ಲ್ಪಟ್ಟ ಸರ್ವಾವಯವಗಳುಳ್ಳವನಾಗಿ, ಗಾತ್ರ....ತಃ - ಶರೀರದಿಂದ ಸೋರುತ್ತಿರುವ ರಕ್ತವುಳ್ಳವನಾಗಿ, ಸಮೂಹಸ್ಥಃ - ಯುದ್ಧದಲ್ಲಿರುವ, ರಾಕ್ಷಸೇಂದ್ರಃ - ರಾವಣನು, ಫುಲ್ಲಾಶೋಕಃ - ಅರಳಿದ ಹುವ್ವು ಗಳುಳ್ಳ ಅಶೋಕ ವೃಕ್ಷದಂತೆ, ಆಬಭೌ - ಹೊಳೆಯುತ್ತಿದ್ದನು. ॥೩೧॥ ತದಾನೀಂ - ಆ ಕಾಲದಲ್ಲಿ, ರಾಮುಬಾಣೈಃ - ಶ್ರೀರಾಮನ ಸರಳುಗಳಿಂದ, ಅಭಿ....ತ್ರಃ - ಹೊಡೆಯಲ್ಪಟ್ಟ ಶರೀರವುಳ್ಳ, ಕ್ಷತ....ತ್ರಃ - ರಕ್ತದಿಂವ ತೊಯಿಸಲ್ಪಟ್ಟ ಶರೀರವುಳ್ಳ, ನಿಶಾಚರೇಂದ್ರಃ - ರಾವಣನು, ಸಮಾಜಮಧ್ಯೇ - ಯುದ್ಧ ರಂಗದ ನಡುವೆ, ಖೇದಂ - ವ್ಯಸನವನ್ನು, ಜಗಾಮ - ಹೊಂದಿದನು, ಸುಭೃಶಂ - ವಿಶೇಷವಾಗಿ, ಕ್ರೋಧಂಚ - ಕೋಪವನ್ನು, ಚಕ್ರೇ - ಮಾಡಿದನು. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರುತ್ತರಶತತಮಸ್ಸರ್ಗಃ.

ವಯವಗಳುಳ್ಳ ಆ ರಾವಣಾಸುರನು ಹೂಬಿಟ್ಟ ಅಶೋಕವೃಕ್ಷದಂತೆ ಶೋಭಿಸುತ್ತಿದ್ದನು. ಶ್ರೀರಾಮುಬಾಣಗಳಿಂದ ಭೇದಿಸಿದ ಸರ್ವಾವಯವಗಳುಳ್ಳವನಾಗಿ, ರಕ್ತದಿಂದ ತೊಯ್ದಿರುವ ಆ ರಾವಣನಿಗೆ ಅಪರಿಮಿತವಾದ ಕ್ರೋಧವುಂಟಾಯಿತು. ॥ ೨೬–೩೨ ॥

ಇಂತಿದು ರಾಮ ರಾವಣರ ಯುದ್ಧವೆಂಬ ನೂರ ನಾಲ್ಕನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚೋತ್ತರಶತತಮಸ್ಸರ್ಗಃ

ಸತೇನ ತು ತಥಾ ಕ್ರೋಧಾತ್ಕಾಕುತ್ಸ್ಥೇನಾರ್ದಿತೋ ರಣೇ । ರಾವಣಸ್ಸಮರಶ್ಲಾಘೀ ಮಹಾಕ್ರೋಧಮುಪಾಗಮತ್ ॥ ೧ ॥ ಸದೀಪ್ತನಯನೋ ರೋಷಾಚ್ಚಾಪಮಾಯಮ್ಯ ವೀರ್ಯವಾನ್ । ಅಭ್ಯರ್ದಯತ್ಸುಸಂಕ್ರುದ್ಧೋ ರಾಘವಂ ಪರಮಾಹವೇ ॥ ೨ ॥ ಬಾಣಧಾರಾಸಹಸ್ರೈಸ್ತೈಸ್ಸತೋಯದ ಇವಾಂಬರಾತ್ । ರಾಘವಂ ರಾವಣೋ ಬಾಣೈಸ್ತಟಾಕಮಿವ ಪೂರಯತ್ ॥ ೩ ॥ ಪೂರಿತಃ ಶರಜಾಲೇನ ಧನುರ್ಮುಕ್ತೇನ ಸಂಯುಗೇ । ಮಹಾಗಿರಿರಿವಾಕಂಪ್ಯಃ ಕಾಕುತ್ಸ್ಥೋ ನಪ್ರಕಂಪತೇ ॥ ೪ ॥ ಸಶರೈಃ ಶರಜಾಲಾನಿ ವಾರಯನ್ ಸಮರೇ ಸ್ಥಿತಃ । ಗಭಸ್ತೀನಿವ ಸೂರ್ಯಸ್ಯ

ತಥಾ - ಆ ಪರಿಯಾಗಿ, ಕ್ರೋಧಾತ್ - ಕೋಪದಿಂದ, ರಣೇ - ಕಾಳೆಗದಲ್ಲಿ, ತೇನಕಾಕುಸ್ಥೇನ - ಆ ಶ್ರೀರಾಮನಿಂದ, ಅರ್ದಿತಃ - ಹೊಡೆಯಲ್ಪಟ್ಟ, ಸಮರಶ್ಲಾಘೀ - ಕಾಳೆಗದಲ್ಲಿ ಸ್ತೋತ್ರಾರ್ಹನಾದ, ಸರಾವಣಃ - ಆ ದಶಕಂಠನು, ಮಹಾಕ್ರೋಧಂ - ಬಹಳವಾದ ಕೋಪವನ್ನು, ಉಪಾಗಮತ್ - ಹೊಂದಿದನು. ॥ ೧ ॥ ವೀರ್ಯವಾನ್ - ಸಮರ್ಥನಾದ, ಸಃ - ಆ ರಾವಣನು, ರೋಷಾತ್ - ಕೋಪದಿಂದ, ದೀಪ್ತನಯನಃ - ಹೊಳೆಯುವ ಕಣ್ಣುಗಳುಳ್ಳವನಾಗಿ, ಚಾಪಂ - ಧನುಸ್ಸನ್ನು, ಆಯಮ್ಯ - ಬೊಗ್ಗಿಸಿ, ಸುಸಂಕ್ರುದ್ಧಃ - ಬಹು ಕುಪಿತನಾಗಿ, ಪರಮಾಹವೇ - ಉತ್ತಮವಾದ ಕಾಳೆಗದಲ್ಲಿ, ರಾಘವಂ - ಶ್ರೀರಾಮನನ್ನು, ಅಭ್ಯರ್ದಯತ್ - ಹೊಡೆದನು. ॥ ೨ ॥ ಸರಾವಣಃ - ಆ ದಶಕಂಠನು, ಅಂಬರಾತ್ - ಅಂತರಿಕ್ಷದಿಂದ, ತೋಯದಇವ - ಮೇಘದಂತೆ, ತೈಃಬಾ....ಸ್ರೈಃ - ಬಾಣಧಾರೆಗಳೆಂಬ ವರ್ಷಧಾರೆಗಳನೇಕಗಳಿಂದ, ರಾಘವಂ - ಶ್ರೀರಾಮನನ್ನು, ಬಾಣೈಃ - ಸರಳುಗಳಿಂದ, ತಟಾಕಮಿವ - ಕೆರೆಯನ್ನಂತೆ, ಪೂರಯತ್ - ತುಂಬಿಸಿದನು. ॥ ೩ ॥ ಸಂಯುಗೇ - ಕಾಳೆಗದಲ್ಲಿ, ಧನುರ್ಮುಕ್ತೇನ - ಧನುಸ್ಸಿನಿಂದ ಬಿಡಲ್ಪಟ್ಟ, ಶರಜಾಲೇನ - ಸರಳತಂಡದಿಂದ, ಪೂರಿತಃ - ತುಂಬಿಸಲ್ಪಟ್ಟ, ಕಾಕುತ್ಸ್ಥಃ - ಶ್ರೀರಾಮನು, ಅಕಂಪ್ಯಃ - ಚಲಿಸಲಸಾಧ್ಯವಾದ, ಮಹಾಗಿರಿರಿವ - ದೊಡ್ಡಬೆಟ್ಟದಂತೆ, ನಪ್ರಕಂಪತೇ - ಚಲಿಸಲಿಲ್ಲವು. ॥ ೪ ॥ ವೀರ್ಯವಾನ್ - ಪರಾಕ್ರಮಿಯಾದ, ಸಃ - ಆ ಶ್ರೀರಾಮನು, ಸಮರೇ - ಕಾಳೆಗದಲ್ಲಿ, ಸ್ಥಿತಃ - ನಿಂತು, ಶರೈಃ - ಸರಳುಗಳಿಂದ, ಶರಜಾಲಾನಿ -

---

ಈ ಪ್ರಕಾರವಾಗಿ ಕಕುತ್ಸ್ಥಕುಲೋದ್ಭವನಾದ ಶ್ರೀರಾಮನ ಬಾಣಗಳಿಂದ ಅಪರಿಮಿತವಾಗಿ ಪೀಡಿಸಲ್ಪಟ್ಟವನೂ, ಯುದ್ಧದಲ್ಲಿ ಮಹಾ ಸ್ತೋತ್ರಾರ್ಹನೂ ಆದ ರಾವಣಾಸುರನು ಬಹಳವಾಗಿ ಕೋಪಗೊಂಡನು. ಆ ಕೋಪದಿಂದ ಕೆಂಪಡರಿದ ಕಣ್ಣುಗಳುಳ್ಳವನಾದ ಅವನು ಕೂಡಲೇ ಮಹಾ ಭಯಂಕರವಾದ ಧನುಸ್ಸನ್ನು ಹಿಡಿದನು. ಹೀಗೆ ದನುಸ್ಸನ್ನು ಹಿಡಿದೆತ್ತಿ ಶ್ರೀರಾಮನ ಶರೀರಾದ್ಯಂತವನ್ನೂ, ಮೇಘವು ಉದಕ ಧಾರೆಗಳಿಂದ ತಟಾಕವನ್ನೆಂತೋ ಅಂತು ಶರವರ್ಷದಿಂದ ತುಂಬಿಸಿದನು. ಈ ರೀತಿ ಅನೇಕ ಬಾಣಸಹಸ್ರಗಳಿಂದ ಪೀಡಿತವಾದ ಶರೀರವುಳ್ಳವನಾದರೂ ಆ ರಾಘವನು ಮಹಾಚಲದಂತೆ ಸ್ವಲ್ಪವಾದರೂ ಕದಲದಿದ್ದನು. ರಾವಣನು ಪ್ರಯೋಗಿಸಿದ ಬಾಣಗಳೆಲ್ಲವನ್ನೂ, ಶ್ರೀರಾಮನು ಸೂರ್ಯನು ತನ್ನ

ಪ್ರತಿಜಗ್ರಾಹ ವೀರ್ಯವಾನ್ ||೫|| ತತಃ ಶರಸಹಸ್ರಾಣಿ ಕ್ಷಿಪ್ರಹಸ್ತೋ ನಿಶಾಚರಃ |
ನಿಜಘಾನೋರಸಿ ಕ್ರುದ್ಧೋ ರಾಘವಸ್ಯ ಮಹಾತ್ಮನಃ || ೬ || ಸಶೋಣಿತಸಮಾದಿಗ್ಧ
ಸ್ಸಮರೇ ಲಕ್ಷ್ಮಣಾಗ್ರಜಃ | ದೃಷ್ಟಃ ಫುಲ್ಲಇವಾರಣ್ಯೇ ಸುಮಹಾನ್ ಕಿಂಶುಕದ್ರುಮಃ
||೭|| ಶರಾಭಿಘಾತಸಂರಬ್ಧಸ್ಸೋಽಪಿ ಜಗ್ರಾಹ ಸಾಯಕಾನ್ | ಕಾಕುತ್ಸ್ಥಸ್ಸುಮಹಾ
ತೇಜಾ ಯುಗಾಂತಾದಿತ್ಯತೇಜಸಃ || ೮ || ತತೋಽನ್ಯೋನ್ಯಂ ಸುಸಂರಬ್ಧಾವುಭೌ ತೌ
ರಾಮ ರಾವಣೌ | ಶರಾಂಧಕಾರೇ ಸಮರೇ ನೋಪಾಲಕ್ಷಯತಾಂ ತದಾ ||೯|| ತತಃ
ಕ್ರೋಧಸಮಾವಿಷ್ಟೋ ರಾಮೋ ದಶರಥಾತ್ಮಜಃ | ಉವಾಚ ರಾವಣಂ ವೀರಃ ಪ್ರಹಸ್ಯ

ಸರಳತಂಡಗಳನ್ನು, ವಾರಯನ್ - ನಿವಾರಿಸುತ್ತ, ಸೂರ್ಯಸ್ಯ - ಸೂರ್ಯನ, ಗಭಸ್ತೀನಿವ - ಕಿರಣಗಳನ್ನಂತೆ, ಪ್ರತಿಜಗ್ರಾಹ - ಗ್ರಹಿಸಿದನು. || ೫ || ತತಃ - ಬಳಿಕ, ಕ್ಷಿಪ್ರಹಸ್ತಃ - ಕೈಚಳಕವುಳ್ಳ, ನಿಶಾಚರಃ - ದಶಕಂಠನು, ಕ್ರುದ್ಧಃ - ಕೋಪಿಸ್ಠನಾಗಿ, ಮಹಾತ್ಮನಃ - ಮಹಾತ್ಮನಾದ, ರಾಘವಸ್ಯ - ಶ್ರೀರಾಮನ, ಉರಸಿ - ವಕ್ಷಸ್ಥಳದಲ್ಲಿ, ಶರ....ಣಿ - ಸರಳುಗಳ ಸಹಸ್ರಗಳನ್ನು, ನಿಜಘಾನ-ನಾಟಿಸಿದನು. || ೬ || ಶೋಣಿ....ಗ್ಧಃ - ರಕ್ತದಿಂದ ವ್ಯಾಪಿಸಲ್ಪಟ್ಟ, ಸಲಕ್ಷ್ಮಣಾಗ್ರಜಃ - ಆ ಶ್ರೀರಾಮನು, ಅರಣ್ಯೇ - ಕಾಡಿನಲ್ಲಿ, ಫುಲ್ಲಃ - ಅರಳಿರುವ, ಸುಮಹಾನ್ - ದೊಡ್ಡದಾದ, ಕಿಂಶುಕದ್ರುಮಇವ - ಮುತ್ತುಗದ ಗಿಡದಂತೆ, ದೃಷ್ಟಃ - ಕಾಣಲ್ಪಟ್ಟನು. || ೭ || ಶರಾ....ದ್ಧಃ - ಬಾಣಪ್ರಹಾರದಿಂದ ಕೋಪವುಳ್ಳ, ಸುಮಹಾತೇಜಾಃ - ಬಹಳ ತೇಜೋವಂತನಾದ, ಸಕಾಕುತ್ಸ್ಥೋಽಪಿ - ಆ ಶ್ರೀರಾಮನೂ ಕೂಡ, ಯುಗಾಂ....ಸಃ-ಯುಗಾಂತಕಾಲದ ಸೂರ್ಯನಂತೆ ತೇಜಸ್ಸುಳ್ಳ, ಸಾಯಕಾನ್-ಸರಳುಗಳನ್ನು, ಜಗ್ರಾಹ - ಗ್ರಹಿಸಿದನು. ||೮|| ತತಃ - ಬಳಿಕ, ತದಾ - ಆ ಕಾಲದಲ್ಲಿ, ಅನ್ಯೋನ್ಯಂ-ಪರಸ್ಪರವಾಗಿ, ಸುಸಂರಬ್ಧೌ - ಬಹಳ ಕೋಪಿಸ್ಠರಾದ, ತೌರಾಮರಾವಣಾವುಭೌ - ಆ ರಾಮ ರಾವಣರೀರ್ವರೂ, ಶರಾಂಧಕಾರೇ-ಬಾಣಗಳಿಂದ ಕತ್ತಲುಳ್ಳ, ಸಮರೇ-ಕಾಳಗದಲ್ಲಿ, ನೋಪಾಲಕ್ಷಯತಾಂ-ಕಾಣಲ್ಪಡಲಿಲ್ಲ. ||೯|| ತತಃ-ಬಳಿಕ, ಕ್ರೋಧಸಮಾವಿಷ್ಟಃ-ಕೋಪದಿಂದ ಕೂಡಿರುವ, ದಶರಥಾತ್ಮಜಃ-ದಶರಥಪುತ್ರನಾದ, ವೀರಃ - ಶೂರನಾದ, ರಾಮಃ - ಶ್ರೀರಾಮನು, ರಾವಣಂ - ದಶಕಂಠನನ್ನು ಕುರಿತು, ಪ್ರಹಸ್ಯ - ನಕ್ಕು, ಪರುಷಂ - ಕ್ರೂರವಾದ, ವಚಃ - ಮಾತನ್ನು, ಉವಾಚ - ಹೇಳಿದನು.

ಕಿರಣಗಳನ್ನೆಂತೋ ಅಂತು ಆಕ್ರಮಿಸಿಬಿಟ್ಟನು. || ೧–೫ || ಆಗ ರಾವಣಾಸುರನು ಬಹಳವಾಗಿ ಮುನಿದು ಮಹಾತ್ಮನಾದ ಶ್ರೀರಾಮಮೂರ್ತಿಯ ವಕ್ಷಸ್ಥಲದಲ್ಲಿ ಅನೇಕ ಸಹಸ್ರ ಬಾಣಗಳನ್ನು ನಾಟಿಸಿದನು. ಅದರಿಂದ ರಾಘವನು ರಕ್ತವ್ಯಾಪ್ತವಾದ ಶರೀರವುಳ್ಳವನಾಗಿ ಹೂಬಿಟ್ಟ ಮುತ್ತುಗದ ಗಿಡದಂತೆ ಪ್ರಕಾಶಿಸುತ್ತಿದ್ದನು. ಮಹಾ ತೇಜಸ್ವಿಯಾದ ಆ ಕಾಕುತ್ಸ್ಥನು ಪ್ರಳಯಕಾಲದ ದಿನಕರನಂತೆ ಅತ್ಯಧಿಕ ತೇಜಸ್ಸಂಪನ್ನನಾಗಿ ಒಡನೊಡನೆಯೇ ಆ ರಾವಣಾಸುರನು ಪ್ರಯೋಗಿಸಿದ ಬಾಣಗಳೆಲ್ಲವನ್ನೂ ಪುಡಿಗುಟ್ಟಿದನು. ಆಗ ಅವರಿಬ್ಬರಿಗೂ ಭಯಂಕರ ದ್ವಂದ್ವಯುದ್ಧವು ಮೊದಲಾಗಿ ಒಬ್ಬರಮೇಲೊಬ್ಬರು ಅಪರಿಮಿತವಾಗಿ ಬಾಣಗಳನ್ನು ಪ್ರಯೋಗಿಸುತ್ತಿದ್ದರು. ಅವರು ಪ್ರಯೋಗಿಸುತ್ತಿದ್ದ ಬಾಣಪರಂಪರೆಗಳಿಂದ ಎಲ್ಲೆಲ್ಲಿಯೂ ಕತ್ತಲು ಕವಿದುಕೊಂಡಿತು. ಆ ಕತ್ತಲಿನಿಂದ ರಾಮರಾವಣರೀ ಕಾಣಿಸದಾದರು. ಆಗ ದಶರಥರಾಜನಂದನನಾದ ಶ್ರೀರಾಮಮೂರ್ತಿಯು ಅಪರಿಮಿತವಾದ ಕೋಪವುಳ್ಳವನಾಗಿ ರಾವಣಾಸುರನನ್ನು ಕುರಿತು ಹೀಗೆಂದನು. ||೬–೧೦||

ಪರುಷಂ ವಚಃ ॥೧೦॥ " ಮಮ ಭಾರ್ಯಾಜನಸ್ಥಾನಾದಜ್ಞಾನಾ ದ್ರಾಕ್ಷಸಾಧಮ ! । ಹೃತಾ ತೇ ವಿವಶಾ ಯಸ್ಮಾತ್ತಸ್ಮಾತ್ತ್ವಂ ನಾಸಿ ವೀರ್ಯವಾ ॥ ೧೧ ॥ ಮಯಾ ವಿರಹಿತಾಂ ದೀನಾಂ ವರ್ತಮಾನಾಂ ಮಹಾವನೇ । ವೈದೇಹೀಂ ಪ್ರಸಭಂ ಹೃತ್ವಾ ಶೂರೋಽಹಮಿತಿ ಮನ್ಯಸೇ ॥ ೧೨ ॥ ಸ್ತ್ರೀಷು ಶೂರವಿನಾಥಾಸು ಪರದಾರಾಭಿ ಮರ್ಶಕ ! । ಕೃತ್ವಾ ಕಾಪುರುಷಂ ಕರ್ಮ ಶೂರೋಽಹಮಿತಿ ಮನ್ಯಸೇ ॥ ೧೩ ॥ ಭಿನ್ನಮರ್ಯಾದ ! ನಿರ್ಲಜ್ಜ ! ಚಾರಿತ್ರೇಷ್ವನವಸ್ಥಿತ ! । ದರ್ಪಾನ್ಮೃತ್ಯುಮುಪಾ ದಾಯ ಶೂರೋಽಹಮಿತಿ ಮನ್ಯಸೇ ॥ ೧೪ ॥ ಶೂರೇಣ ಧನದಭ್ರಾತ್ರಾ ಬಲೈ ಸ್ಸಮುದಿತೇನಚ । ಶ್ಲಾಘನೀಯಂ ಯಶಸ್ಯಂಚ ಕೃತಂ ಕರ್ಮ ಮಹತ್ತ್ವಯಾ

॥ ೧೧ ॥ ರಾಕ್ಷಸಾಧಮ - ನೀಚ ರಕ್ಕಸನೇ, ಅಜ್ಞಾನಾತ್ - ಅಜ್ಞಾನದಿಂದ, ವಿವಶಾ - ಪರಾಧೀನೆ ಯಾದ, ಮಮ - ನನ್ನ, ಭಾರ್ಯಾ - ಹೆಂಡತಿಯು, ಯಸ್ಮಾತ್ - ಯಾವ ಕಾರಣದಿಂದ, ಜನಸ್ಥಾ ನಾತ್ - ಪಂಚವಟಿಯಿಂದ, ತೇ - ನಿನ್ನಿಂದ, ಹೃತಾ - ಅಪಹರಿಸಲ್ಪಟ್ಟಳೋ, ತಸ್ಮಾತ್ - ಆ ಕಾರಣದಿಂದ, ತ್ವಂ - ನೀನು, ವೀರ್ಯವಾ - ಪರಾಕ್ರಮವಂತನು, ನಾಸಿ - ಅಲ್ಲವು. ॥ ೧೧ ॥ ಮಯಾ - ನನ್ನಿಂದ, ವಿರಹಿತಾಂ - ರಹಿತಳಾದ, ಮಹಾವನೇ - ದೊಡ್ಡ ಅರಣ್ಯದಲ್ಲಿ, ವರ್ತಮಾನಾಂ- ಇರುವ, ದೀನಾಂ - ತಪಸ್ವಿನಿಯಾದ, ವೈದೇಹೀಂ - ಸೀತೆಯನ್ನು, ಪ್ರಸಭಂ - ಬಲಾತ್ಕರಿಸಿ, ಹೃತ್ವಾ- ಅಪಹರಿಸಿ, ಅಹಂ - ನಾನು, ಶೂರಃ - ಶೂರನು, ಇತಿ - ಇಂತೆಂದು, ಮನ್ಯಸೇ - ತಿಳಿದಿದ್ದೀಯೆ. ॥ ೧೨ ॥ ಪರ....ಕ - ಪರಸ್ತ್ರೀಯರಲ್ಲಿಯೇ ಆಸಕ್ತಿಯುಳ್ಳವನೇ, ಶೂರ....ಸು - ಶೂರರಾದ ನಾಥರಿಲ್ಲ ದಿರುವ, ಸ್ತ್ರೀಷು - ಸ್ತ್ರೀಯರುಗಳಲ್ಲಿ, ಕಾಪುರುಷಂ - ನೀಚ ಪುರುಷನು ಮಾಡತಕ್ಕ, ಕರ್ಮ - ವ್ಯಾಪಾರವನ್ನು, ಕೃತ್ವಾ - ಮಾಡಿ, ಅಹಂ - ನಾನು, ಶೂರಃ - ಶೂರನು, ಇತಿ - ಇಂತೆಂದು, ಮನ್ಯಸೇ - ತಿಳಿದಿದ್ದೀಯೆ. ॥ ೧೩ ॥ ಭಿನ್ನಮರ್ಯಾದ - ಭೇದಿಸಲ್ಪಟ್ಟ ಮರ್ಯಾದೆಯುಳ್ಳವನೇ, ನಿರ್ಲಜ್ಜ - ನಾಚಿಕೆಯಿಲ್ಲದವನೇ, ಚಾರಿತ್ರೇಷು - ಸಚ್ಚರಿತ್ರಗಳಲ್ಲಿ, ಅನವಸ್ಥಿತ - ಇರದಿರುವನೇ, ದರ್ಪಾತ್ - ದರ್ಪದಿಂದ, ಮೃತ್ಯುಂ - ಮೃತ್ಯುಪ್ರಾಯವಾದ ಸೀತಾಪಹರಣವನ್ನು, ಉಪಾದಾಯ - ಗ್ರಹಿಸಿ, ಅಹಂ - ನಾನು, ಶೂರಇತಿ - ಶೂರನೆಂದು, ಮನ್ಯಸೇ - ಎಣಿಸುತ್ತೀಯೆ. ॥೧೪॥ ಶೂರೇಣ- ಶೂರನಾದ, ಧನದಭ್ರಾತ್ರಾ - ಕುಬೇರನಿಗೆ ತಮ್ಮನಾದ, ಬಲೈಃ - ಸೇನೆಯಿಂದ, ಸಮುದಿತೇನಚ - ಕೂಡಿರುವ, ತ್ವಯಾ - ನಿನ್ನಿಂದ, ಶ್ಲಾಘನೀಯಂ - ಸ್ತೋತ್ರಾರ್ಹವಾದ, ಯಶಸ್ಯಂ - ಕೀರ್ತಿಸಂಪಾ

"ಎಲೈ ರಾಕ್ಷಸಾಧಮನಾದ ರಾವಣಾಸುರನೇ! ದುಷ್ಟನಾದ ನೀನು ನಾನಿಲ್ಲದ ಸಮಯದಲ್ಲಿ ವೇಷಾಂತರದಿಂದ ಬಂದು ನನ್ನ ಭಾರ್ಯೆಯಾದ ಸೀತೆಯನ್ನು ಕದ್ದು ತಂದೆ. ಇಂಥ ನಿನ್ನನ್ನು ವೀರನೆಂದು ನಾನು ಭಾವಿಸುವುದಿಲ್ಲವು. ಎಲಾ ರಾವಣಾ! ನನ್ನ ವಿಯೋಗವನ್ನು ಹೊಂದಿ ದೀನೆಯಾಗಿ ಕಗ್ಗಾಡಿನಲ್ಲಿ ಸಂಚರಿಸುತ್ತಿದ್ದ ಸೀತೆಯನ್ನು ಕದ್ದು ತಂದು ವೀರನೆಂದು ಬೀಗುತ್ತಿರುವೆಯಲ್ಲವೆ? ರಾವಣಾ! ನೀನು ಪರಸ್ತ್ರೀಯರನ್ನು ಕದ್ದು ತಂದ ಪಾಪಿ. ದಿಕ್ಕಿ ಲ್ಲದ ಸ್ತ್ರೀಯರಲ್ಲಿ ನಿನ್ನ ಪರಾಕ್ರಮವನ್ನು ತೋರಿ ನಾನೇ ಶೂರನೆಂದು ತಿಳಿದಿದ್ದೀಯೆ. ನಿನಗೆ ಮರ್ಯಾದೆಯಿದೆಯೆ! ನಾಚಿಕೆಯುಂಟೆ? ಎಲವೋ ರಾಕ್ಷಸನೇ! ನೀನು ಗರ್ವದಿಂದ ಮೈಮರೆತು ಮೃತ್ಯುವನ್ನು ಬೆನ್ನಿಗೇರಿಸಿಕೊಂಡೂ ಶೂರನೆಂದು ಮೆರೆಯುತ್ತಿರುವೆ. ಎಲಾ! ಶೂರನೂ, ಕುಬೇರಾನುಜನೂ ವಿವಿಧ ಸೇನಾಸಮೇತನೂ ಆದರೂ, ನೀನು ಕೇವಲ ಅಪ

॥ ೧೫ ॥ ಉತ್ಸೇಕೇನಾಭಿಪನ್ನಸ್ಯ ಗರ್ಹಿತಸ್ಯಾಹಿತಸ್ಯಚ । ಕರ್ಮಣಃ ಪ್ರಾಪ್ನುಹೀ ದಾನೀಂ ತಸ್ಯಾದ್ಯ ಸುಮಹತ್ಫಲಂ ॥ ೧೬ ॥ ಶೂರೋಽಹಮಿತಿ ಚಾತ್ಮಾನಮವಗಚ್ಛಸಿ ದುರ್ಮತೇ । ನೈವ ಲಜ್ಜಾಸ್ತಿ ತೇ ಸೀತಾಂ ಚೋರವದ್ವ್ಯಪಕರ್ಷತಃ ॥೧೭॥ ಯದಿ ಮತ್ಸನ್ನಿಧೌ ಸೀತಾ ಧರ್ಷಿತಾಸ್ಯಾತ್ತ್ವಯಾ ಬಲಾತ್ । ಭ್ರಾತರಂ ತು ಖರಂ ಪಶ್ಯೇ ಸ್ತದಾ ಮತ್ಸಾಯಕೈರ್ಹತಃ ॥ ೧೮ ॥ ದಿಷ್ಟ್ಯಾಸಿ ಮಮ ದುಷ್ಟಾತ್ಮಂಶ್ಚಕ್ಷುರ್ವಿಷಯ ಮಾಗತಃ । ಅದ್ಯ ತ್ವಾಂ ಸಾಯಕೈಸ್ತೀಕ್ಷ್ಣೈರ್ನಯಾಮಿ ಯಮಸಾದನಂ ॥ ೧೯ ॥

ದಕವಾದ, ಮಹತ್ಕರ್ಮ - ದೊಡ್ಡ ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಗರ್ಹಿತಸ್ಯ - ನಿಂದಿತ ವಾದ, ಅಹಿತಸ್ಯ - ಅನಿಷ್ಟಕರವಾದ, ತಸ್ಯಕರ್ಮಣಃ - ಪರದಾರ ಚೌರ್ಯರೂಪವಾದ ಕರ್ಮಕ್ಕೆ, ಇದಾನೀಂ - ಈಗ, ಅದ್ಯ - ಈ ಕ್ಷಣದಲ್ಲಿ, ಸುಮಹತ್ - ಬಹಳ ದೊಡ್ಡದಾದ, ಫಲಂ - ಫಲವನ್ನು, ಪ್ರಾಪ್ನುಹಿ - ಹೊಂದುವೆ. ॥ ೧೫-೧೬ ॥ ದುರ್ಮತೇ - ದುರ್ಬುದ್ಧಿಯುಳ್ಳವನೇ, ಆತ್ಮಾನಂ - ನಿನ್ನನ್ನು, ಶೂರೋಽಹಮಿತಿ - ನಾನು ಶೂರನೆಂದು, ಅವಗಚ್ಛಸಿ - ತಿಳಿದಿದ್ದೀಯೆ, ಸೀತಾಂ - ಸೀತಾ ದೇವಿಯನ್ನು, ಚೋರವತ್ - ಕಳ್ಳನಂತೆ, ವ್ಯಪಕರ್ಷತಃ - ಸೆಳದುಕೊಂಡು ಹೋಗುತ್ತಿರುವ, ತೇ - ನಿನಗೆ, ಲಜ್ಜಾ - ನಾಚಿಕೆಯು, ನೈವಾಸ್ತಿ - ಇಲ್ಲದೆ ಹೋಯಿತು. ॥ ೧೭ ॥ ಮತ್ಸನ್ನಿಧೌ - ನನ್ನ ಸಮಾಪದಲ್ಲಿ, ಸೀತಾಂ - ಸೀತಾದೇವಿಯು, ತ್ವಯಾ - ನಿನ್ನಿಂದ, ಬಲಾತ್ - ಬಲಾತ್ಕರಿಸಿ, ಧರ್ಷಿತಾ- ತಿರಸ್ಕೃತಳು, ಸ್ಯಾದ್ಯದಿ - ಆದವಳೇ ಆದರೆ, ತದಾ - ಆವಾಗಲೇ, ಮತ್ಸಾಯಕೈಃ - ನನ್ನ ಸರಳು ಗಳಿಂದ, ಹತಃ - ಹೊಡೆಯಲ್ಪಟ್ಟವನಾಗಿ, ಭ್ರಾತರಂ - ತಮ್ಮನಾದ, ಖರಂ - ಖರಾಸುರನನ್ನು, ಪಶ್ಯೇಃ-ನೋಡುತ್ತಿದ್ದೆ. ॥ ೧೮ ॥ ದುಷ್ಟಾತ್ಮ-ದುಷ್ಟವಾದ ಸ್ವಭಾವವುಳ್ಳವನೇ, ದಿಷ್ಟ್ಯಾ - ದೈವಾ ಧೀನದಿಂದ, ಚಕ್ಷುರ್ವಿಷಯಂ - ದೃಷ್ಟಿಗೋಚರವನ್ನು, ಆಗತಃ - ಹೊಂದಿದವನು, ಅಸಿ - ಆಗಿ ದ್ದೀಯೆ, ಅದ್ಯ - ಈ ಕ್ಷಣದಲ್ಲಿ, ತ್ವಾಂ - ನಿನ್ನನ್ನು, ತೀಕ್ಷ್ಣೈಃ - ತೀಕ್ಷ್ಣಗಳಾದ, ಸಾಯಕೈಃ - ಸರಳುಗಳಿಂದ, ಯಮಸಾದನಂ - ಯಮನ ಮನೆಯನ್ನು, ನಯಾಮಿ - ಹೊಂದಿಸುವೆನು. ॥ ೧೯ ॥ ಅದ್ಯ - ಈಗ, ಮಚ್ಛರೈಃ - ನನ್ನ ಸರಳುಗಳಿಂದ, ಭಿನ್ನಂ - ಕತ್ತರಿಸಲ್ಪಟ್ಟ, ಜ್ವಲಿ....ಲಂ -

---

ಯಶಸ್ಕರವೂ, ನಿಂದನೀಯವೂ ಆದ ಇಂಥ ಹೇಯ ಕಾರ್ಯವನ್ನು ಮಾಡಿದೆ. ॥೧೧–೧೫॥ ಕೇವಲ ಶೂರನೆಂಬ ಒಣಹೆಮ್ಮೆಯಿಂದ ಮೆರೆಯುತ್ತಿರುವವನೂ, ಕೇವಲ ನಿಂದಿತನೂ, ನೀಚನೂ, ಶತ್ರುವೂ ಆದ ನೀನು ನಿನ್ನ ನೀಚಕರ್ಮಕ್ಕನುಗುಣವಾದ ಫಲವನ್ನೀಗ ಹೊಂ ದುವೆ. ಎಲವೋ ದುರಾತ್ಮನೇ! ನಿನ್ನನ್ನು ನೀನೇ ಶೂರನೆಂದು ತಿಳಿದಿರುವೆಯಲ್ಲವೆ? ಆಹಾ! ಕಳ್ಳನಂತೆ ನನ್ನ ಭಾರ್ಯೆಯಾದ ಸೀತೆಯನ್ನು ಕದ್ದು ತಂದು ಶೂರನೆಂದು ಜಂಬ ಕೊಚ್ಚಿ ಕೊಳ್ಳುತ್ತಿರುವ ನಿನ್ನನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತಿರುವುದು. ನೀನು ಮೋಸ ದಿಂದ ವರ್ತಿಸದೆ ನನ್ನೆದುರಿನಲ್ಲಿಯೇ ಆಕೆಯನ್ನು ಹೊತ್ತು ತಂದಿದ್ದರೆ ನೀನು ಎಂದೋ ನಿನ್ನ ತಮ್ಮನಾದ ಖರನ ದಾರಿಯನ್ನು ಹಿಡಿಯುತ್ತಿದ್ದೆ. ನನ್ನ ಕೂರಂಬುಗಳ ಸವಿಯನ್ನು ಆಗಲೇ ಸವಿದು ಯಮನಾಲಯವನ್ನು ಸೇರುತ್ತಿದ್ದೆ. ಎಲೈ ದುಷ್ಟನೇ! ರಾವಣಾ! ದೈವಯೋಗ ದಿಂದ ಇಂದು ನೀನು ನನ್ನ ದೃಷ್ಟಿಗೆ ಬಿದ್ದೆ. ಇನ್ನು ನೀನು ನನ್ನ ಬಾಣಗಳಿಂದ ಯಮ ಪಟ್ಟಣವನ್ನು ಸೇರದಿರಲಾರೆ. ಎಲವೋ ಕೇಳು ಕೇಳು; ಈಗ ನನ್ನ ಕೂರಂಬುಗಳಿಂಧ

ಅದ್ಯ ತೇ ಮಚ್ಛರೈಶ್ಛಿನ್ನಂ ಶಿರೋಜ್ಜ್ವಲಿತಕುಂಡಲಂ । ಕ್ರವ್ಯಾದಾ ವ್ಯಪಕರ್ಷಂತು ವಿಕೀರ್ಣಂ ರಣಪಾಂಸುಷು ॥ ೨೦ ॥ ನಿಪತ್ಯೋರಸಿ ಗೃಧ್ರಾಸ್ತೇ ಕ್ಷಿತೌ ಕ್ಷಿಪ್ತಸ್ಯ ರಾವಣ ! । ಪಿಬಂತು ರುಧಿರಂ ತರ್ಷಾಚ್ಛರಶಲ್ಯಾಂತರೋತ್ಥಿತಂ ॥ ೨೧ ॥ ಅದ್ಯ ಮದ್ಬಾಣಭಿನ್ನಸ್ಯ ಗತಾಸೋಃ ಪತಿತಸ್ಯ ತೇ । ಕರ್ಷಂತ್ವಾಂತ್ರಾಣಿ ಪತಗಾ ಗರುತ್ಮಂತ ಇವೋರಗಾನ್ ॥ ೨೨ ॥ ಇತ್ಯೇವಂ ಸಂವದನ್ ವೀರೋ ರಾಮಃ ಶತ್ರುನಿಬರ್ಹಣಃ । ರಾಕ್ಷಸೇಂದ್ರಂ ಸಮೀಪಸ್ಥಂ ಶರವರ್ಷೈರವಾಕಿರತ್ ॥ ೨೩ ॥ ಬಭೂವದ್ವಿಗುಣಂ ವೀರ್ಯಂ ಬಲಂ ಹರ್ಷಶ್ಚ ಸಂಯುಗೇ । ರಾಮಸ್ಯಾಽಸ್ತ್ರಬಲಂ ಚೈವ ಶತ್ರೋರ್ನಿ

ಪ್ರಜ್ವಲಿಸುತ್ತಿರುವ ಕರ್ಣಾಭರಣಗಳುಳ್ಳ, ರಣಪಾಂಸುಷು - ರಣಭೂಮಿಯ ಧೂಳಿಗಳಲ್ಲಿ, ವಿಕೀರ್ಣಂ- ಹೊರಳಾಡುತ್ತಿರುವ, ತೇ - ನಿನ್ನ, ಶಿರಃ - ಶಿರಸ್ಸನ್ನು, ಕ್ರವ್ಯಾದಾಃ - ಮಾಂಸವನ್ನು ತಿನ್ನುವ ಗೃಧ್ರಾದಿಗಳು, ವ್ಯಪಕರ್ಷಂತು - ಸೆಳದುಕೊಂಡು ಹೋಗಲಿ. ॥ ೨೦ ॥ ರಾವಣ - ರಾವಣನೇ, ಕ್ಷಿತೌ - ನೆಲದಲ್ಲಿ, ಕ್ಷಿಪ್ತಸ್ಯ - ಎತ್ತಿಹಾಕಲ್ಪಟ್ಟ, ತೇ - ನಿನ್ನ, ಉರಸಿ - ಎದೆಯಲ್ಲಿ, ಗೃಧ್ರಾಃ - ಹದ್ದುಗಳು, ನಿಪತ್ಯ - ಹಾರಿಬಿದ್ದು, ತರ್ಷಾತ್ - ಪಾನೇಚ್ಛೆಯಿಂದ, ಶರೌ....ತಂ - ಸರಳುಗಳ ಗಾಯಗಳ ರಂಧ್ರದಿಂದ ಹುಟ್ಟಿದ, ರುಧಿರಂ - ರಕ್ತವನ್ನು, ಪಿಬಂತು - ಪಾನಮಾಡಲಿ. ॥ ೨೧ ॥ ಅದ್ಯ - ಈಗ, ಮದ್ಬಾಣಭಿನ್ನಸ್ಯ - ನನ್ನ ಬಾಣಗಳಿಂದ ಭೇದಿಸಲ್ಪಟ್ಟ, ಗತಾಸೋಃ - ಕಳೆದುಹೋದ ಪ್ರಾಣಗಳುಳ್ಳ, ಪತಿತಸ್ಯ - ಕೆಳಗೆ ಬಿದ್ದಿರುವ, ತೇ - ನಿನ್ನ, ಆಂತ್ರಾಣಿ - ಕರಳುಗಳನ್ನು, ಪತಗಾಃ - ಪಕ್ಷಿಗಳು, ಉರಗಾನ್ - ಹಾವುಗಳನ್ನು, ಗರುತ್ಮಂತಇವ - ಗರುಡಪಕ್ಷಿಗಳಂತೆ, ಕರ್ಷಂತು - ಸೆಳದು ಕೊಂಡು ಹೋಗಲಿ. ॥೨೨॥ ಇತ್ಯೇವಂ - ಈ ಪರಿಯಾಗಿ, ಸಂವದನ್ - ಮಾತನಾಡುತ್ತಿರುವ, ವೀರಃ - ಶೂರನಾದ, ಶತ್ರುನಿಬರ್ಹಣಃ - ಶತ್ರುಸಂಹಾರಕನಾದ, ರಾಮಃ - ಶ್ರೀರಾಮನು, ಸಮೀಪಸ್ಥಂ - ಸಮೀಪವರ್ತಿಯಾದ, ರಾಕ್ಷಸೇಂದ್ರಂ - ರಾವಣನನ್ನು, ಶರವೃಷ್ಟಿಭಿಃ - ಸರಳುಗಳ ವರ್ಷಗಳಿಂದ, ಅವಾಕಿರತ್ - ಸುರಿಸುತ್ತಿದ್ದನು. ॥ ೨೩ ॥ ಸಂಯುಗೇ - ಕಾಳಗದಲ್ಲಿ, ಶತ್ರೋಃ - ಶತ್ರುವಾದ ದಶ ಕಂಠನ, ನಿಧನಕಾಂಕ್ಷಿಣಃ - ಸಂಹಾರವನ್ನಪೇಕ್ಷಿಸುತ್ತಿರುವ, ರಾಮಸ್ಯ - ಶ್ರೀರಾಮನಿಗೆ, ಅಸ್ತ್ರಬಲಂ ಚೈವ - ಅಸ್ತ್ರಬಲವೂ, ವೀರ್ಯಂ - ಸ್ವಸಾಮರ್ಥ್ಯವೂ, ಬಲಂ - ದೇಹತ್ರಾಣವೂ, ದ್ವಿಗುಣಂ - ಎರಡರಷ್ಟು, ಬಭೂವ - ಆಯಿತು. ॥ ೨೪ ॥ ವಿದಿತಾತ್ಮನಃ - ಆತ್ಮಜ್ಞಾನಿಯಾದ, ಶ್ರೀರಾಮನಿಗೆ,

ಛಿನ್ನಭಿನ್ನವಾಗಿ, ಹೊಳೆಯುವ ಕಿವಿಯೋಲೆಗಳೊಡಗೂಡಿ ಯುದ್ಧಭೂಮಿಯಲ್ಲಿ ಉರುಳಾಡುವ ನಿನ್ನ ಮಂಡೆಯುನ್ನು ಹದ್ದು ಕಾಗೆಗಳು ಕಿತ್ತು ತಿನ್ನುವುವು. ರಣಾಂಗಣದಲ್ಲಿ ಬೀಳುವ ನಿನ್ನ ಮೇಲೆ ಹದ್ದುಗಳೆರಗಿ ಎದೆಗುಂಡಿಗೆಯ ಬಿಸಿ ರಕ್ತವನ್ನು ಕುಡಿದು ತೃಪ್ತಿ ಹೊಂದುತ್ತವೆ. ಎಲವೋ ದುಷ್ಟ ರಾಕ್ಷಸನೇ! ನನ್ನ ಬಾಣಗಳಿಂದ ಭೇದಿಸಲಾಗುವ ಶರೀರವುಳ್ಳವನಾಗಿ ಮೃತಿಯೊಂದುವ ನಿನ್ನ ಕರುಳುಗಳನ್ನು ಹಕ್ಕಿಪಕ್ಕಿಗಳೆಲ್ಲವೂ ಗರುಡನೆ ಸರ್ಪಗಳನ್ನೆಂತೋ ಅಂತು ಕಳಚಿಕೊಂಡು ಹೋಗಿ ತಿನ್ನಲಿ. ಇದೀಗ ನನ್ನ ಪರಾಕ್ರಮವನ್ನಾದರೂ ನೋಡು.'' ॥೧೬–೨೨॥ ಶತ್ರುನಾಶಕನಾದ ಶ್ರೀರಾಮಮೂರ್ತಿಯು ರಾವಣಾಸುರನನ್ನು ಕುರಿತು ಈ ರೀತಿ ಕಠಿನವಾಗಿ ನುಡಿಯುತ್ತ ಸಮೀಪದಲ್ಲಿಯೇ ನಿಂತಿದ್ದ ರಾವಣನ ಮೇಲೆ ಬಿರುಸಾದ ಅಂಬು ಮಳೆಯನ್ನು ಕರೆದನು. ಆ ಸಮಯದಲ್ಲಿ ಹಗೆಯನ್ನು ತೀರಿಸಿಬಿಡುವ ಬಯಕೆಯುಳ್ಳ ಶ್ರೀ ರಾಮಮೂರ್ತಿಗೆ, ಉತ್ಸಾಹಸಂತೋಷಗಳೂ, ಬಲಪರಾಕ್ರಮಗಳೂ ಇಮ್ಮಡಿಸಿ ಹೋದುವು.

ಧನಕಾಂಕ್ಷಿಣಃ ॥೨೪॥ ಪ್ರಾದುರ್ಬಭೂವುರಸ್ತ್ರಾಣಿ ಸರ್ವಾಣಿ ವಿದಿತಾತ್ಮನಃ । ಪ್ರಹರ್ಷಾಚ್ಚ ಮಹಾತೇಜಾಃ ಶೀಘ್ರಹಸ್ತತರೋಽಭವತ್ ॥ ೨೫ ॥ ಶುಭಾನ್ಯೇತಾನಿ ಚಿಹ್ನಾನಿ ವಿಜ್ಞಾಯಾಽತ್ಮಗತಾನಿ ಸಃ । ಭೂಯ ಏವಾರ್ದಯದ್ರಾಮೋ ರಾವಣಂ ರಾಕ್ಷಸಾಂತಕೃತ್ ॥ ೨೬ ॥ ಹರೀಣಾಂಚಾಶ್ಮನಿಕರೈಃ ಶರವರ್ಷೈಶ್ಚ ರಾಘವಾತ್ । ಹನ್ಯಮಾನೋ ದಶಗ್ರೀವೋ ವಿಘೂರ್ಣಹೃದಯೋಽಭವತ್ ॥ ೨೭ ॥ ಯದಾಚ ಶಸ್ತ್ರಂ ನಾಲೇಭೇ ನವ್ಯಕರ್ಷಚ್ಛರಾಸನಂ । ನಾಸ್ಯ ಪ್ರತ್ಯಕರೋದ್ವೀರ್ಯಂ ವಿಕ್ಲಬೇ

ಸರ್ವಾಣ್ಯಸ್ತ್ರಾಣಿ-ಸಮಸ್ತ ಅಸ್ತ್ರಗಳೂ, ಪ್ರಾದುರ್ಬಭೂವುಃ-ಬುದ್ಧಿಗೆ ಸ್ಫುರಿಸಿದವು, ಮಹಾತೇಜಾಃ-ಮಹಾ ತೇಜೋವಂತನಾದ ಶ್ರೀರಾಮನು, ಪ್ರಹರ್ಷಾತ್ - ಸಂತೋಷದಿಂದ, ಶೀಘ್ರಹಸ್ತತರಃ - ಅತಿ ವೇಗವುಳ್ಳ ಹಸ್ತವುಳ್ಳವನು, ಅಭವತ್ - ಆದನು. ॥೨೫॥ ರಾಕ್ಷಸಾಂತಕೃತ್ - ರಾಕ್ಷಸರಿಗೆಲ್ಲಾ ನಾಶಕರನಾದ, ಸರಾಮಃ - ಆ ಶ್ರೀರಾಮನು, ಆತ್ಮಗತಾನಿ - ತನ್ನನ್ನು ಹೊಂದಿರುವ, ಶುಭಾನಿ - ಶುಭಕರಗಳಾದ, ಏತಾನಿಚಿಹ್ನಾನಿ - ಈ ಲಕ್ಷಣಗಳನ್ನು, ವಿಜ್ಞಾಯ - ತಿಳಿದು, ಭೂಯಏವ - ಮತ್ತೂ, ರಾವಣಂ - ದಶಕಂಠನನ್ನು, ಅರ್ದಯತ್ - ಹೊಡೆದನು. ॥೨೬॥ ಹರೀಣಾಂ - ವಾನರರ, ಅಶ್ಮನಿಕರೈಃ - ಕಲ್ಲುಗಳ ತಂಡಗಳಿಂದಲೂ, ರಾಘವಾತ್ - ಶ್ರೀರಾಮನ, ಶರವರ್ಷೈಶ್ಚ - ಸರಳುಗಳ ಮಳೆಯಿಂದಲೂ, ಹನ್ಯಮಾನಃ ಹೊಡೆಯಲ್ಪಡುತ್ತಿರುವ, ದಶಗ್ರೀವಃ-ದಶಕಂಠನು, ವಿಘೂ....ಯಃ-ವಿಹ್ವಲವಾದ ಚಿತ್ತವುಳ್ಳವನು, ಅಭವತ್ - ಆದನು. ॥ ೨೭ ॥ ಯದಾ - ಯಾವಾಗ, ಶಸ್ತ್ರಂ - ಆಯುಧವನ್ನು, ನಾಲೇಭೇ - ಪ್ರಯೋಗ ಮಾಡದೇ ಹೋದನೋ, ಶರಾಸನಂ - ಧನುಸ್ಸನ್ನು, ನವ್ಯಕರ್ಷತ್ - ಸೆಳೆಯದೇಯೂ ಹೋದನೋ, ತದಾ - ಆ ಕಾಲದಲ್ಲಿ, ವಿಕ್ಲಬೇನ - ವ್ಯಾಕುಲವಾದ, ಅಂತರಾತ್ಮನಾ - ಮನಸ್ಸಿನಿಂದ, ಅಸ್ಯ - ಈ ಶ್ರೀರಾಮನ, ವೀರ್ಯಂ - ಪರಾಕ್ರಮವನ್ನು ಕುರಿತು, ನಪ್ರತ್ಯಕರೋತ್ - ಪ್ರತಿಕ್ರಿಯೆ ಮಾಡದೇ ಹೋದನು. ॥ ೨೮ ॥ ತೇನ - ಆ ಶ್ರೀರಾಮನಿಂದ, ರಣಾರ್ಥಾಯ - ಕಾಳಗದಲ್ಲಿ ರಾವಣನ ಸಂಹಾರಾರ್ಥವಾಗಿ, ಕ್ಷಿಪ್ತಾಃ - ಎಸೆಯಲ್ಪಟ್ಟ, ಶರಾಃ - ಸರಳುಗಳು, ವಿವಿಧಾನಿ - ನಾನಾಬಗೆಗಳಾದ, ಶಸ್ತ್ರಾಣಿಚ - ಶಸ್ತ್ರಗಳೂ, ಯಥಾ - ಹೇಗೆ, ವರ್ತಂತೇ -

---

ಮಹಾತ್ಮನಾದ ಆತನಿಗೆ ಸಮಸ್ತ ಶಸ್ತ್ರಾಸ್ತ್ರಗಳೂ ಗೋಚರವಾದುವು. ಇದರಿಂದ ಮತ್ತೂ ಉತ್ಸಾಹಗೊಂಡು ಆ ರಘುಕುಲೋದ್ಭವನು ಪರಮಾಶ್ಚರ್ಯಕರವಾದ ಕರಲಾಘವವನ್ನು ತೋರಲುಪಕ್ರಮಿಸಿದನು. ಆತನು ತನ್ನಲ್ಲಿ ಉದಿಸಿದ ಈ ಶುಭಲಕ್ಷಣಗಳನ್ನು ಕಂಡು ಆ ಸಮಯದಲ್ಲಿಯೇ ರಾವಣನನ್ನು ತನ್ನ ಬಾಣವಿಶೇಷಗಳಿಂದ ಬಹಳವಾಗಿ ಬಾಧಿಸಿದನು. ಆ ಸಮಯದಲ್ಲಿಯೇ ವಾನರವೀರರೂ ಆ ರಾವಣನ ಮೇಲೆ ಬಿರುಸಾದ ಕಲ್ಮಳೆಗಳನ್ನೂ ಕರೆದರು. ರಾವಣಾಸುರನಾದರೋ ರಾಮಮೂರ್ತಿಯ ಶರವರ್ಷಗಳಿಂದಲೂ, ವಾನರವೀರರ ಕಲ್ಮಳೆಗಳಿಂದಲೂ ಪೀಡಿತನಾಗಿ ಹೃದಯವೇ ಸ್ತಂಭಿಸಿ ಹೋದಂತೆ ಮುಗ್ಧನಾಗಿ ನಿಂತುಬಿಟ್ಟನು. ಅವನು ಶ್ರೀರಾಮಬಾಣಗಳಿಂದ ಪರಿಪೀಡಿತನಾಗಿ ಶಸ್ತ್ರವನ್ನಾಗಲಿ, ಧನುರ್ಬಾಣಗಳನ್ನಾಗಲಿ ಹಿಡಿಯಲೂ ಸಾಮರ್ಥ್ಯವಿಲ್ಲದವನಾದನು. ॥೨೩–೨೭॥ ಆಗ ಅವನಿಗೆ ಅಪರಿಮಿತವಾದ ಚಿಂತೆಯೇ ಮೂಡಿದ್ದಿತು. ಅವನು ಮೃತ್ಯುಮುಖದಲ್ಲಿಯೇ ಇದ್ದನು. ಶ್ರೀರಾಮಚಂದ್ರನಾದರೋ ಅವನನ್ನು ವಧಿಸಲೋಸುಗ ವಿವಿಧಾಸ್ತ್ರಗಳನ್ನೂ, ಅಸಂಖ್ಯಾತವಾದ ಬಾಣ

ನಾಂತರಾತ್ಮನಾ ॥ ೨೮ ॥ ಕ್ಷಿಪ್ತಾಶ್ಚಾಪಿ ಶರಾಸ್ತೇನ ಶಸ್ತ್ರಾಣಿ ವಿವಿಧಾನಿಚ । ನರಣಾರ್ಥಾಯ ವರ್ತಂತೇ ಮೃತ್ಯುಕಾಲೇಽಭಿವರ್ತತಃ ॥ ೨೯ ॥

ಸೂತಸ್ತು ರಥನೇತಾಸ್ಯ ತದವಸ್ಥಂ ಸಮೀಕ್ಷ್ಯ ತಂ ।
ಶನೈರ್ಯುದ್ಧಾದಸಂಭ್ರಾಂತೋ ರಥಂ ತಸ್ಯಾಪವಾಹಯತ್ ॥ ೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚೋತ್ತರಶತತಮಸ್ಸರ್ಗಃ

ಇರುತ್ತಲಿದ್ದವೋ, ತಥಾ - ಹಾಗೆಯೇ, ಮೃತ್ಯುಕಾಲೇ - ಮೃತ್ಯುವು ಸಮೀಪವಾಗುವ ಕಾಲದಲ್ಲಿ, ಅಭಿವರ್ತತಃ - ಇರುತ್ತಿರುವ, ಅಸ್ಯ - ಈ ದಶಕಂಠನ, ಶರಾಃ - ಸರಳುಗಳು, ರಣಾರ್ಥಾಯ - ರಣದಲ್ಲಿ ಪ್ರಯೋಜನಕ್ಕೆ, ನವರ್ತಂತೇ - ಉಪಯೋಗವಾಗದೇ ಹೋದವೋ, ತದಾ - ಆ ಕಾಲದಲ್ಲಿ, ಅಸ್ಯ - ಈ ದಶಕಂಠನ, ರಥನೇತಾ - ರಥವನ್ನು ನಡಸುತ್ತಿರುವ, ಸೂತಸ್ತು - ಸಾರಥಿಯಾದರೆ, ತದವಸ್ಥಂ - ಅಂಥಾ ಅವಸ್ಥೆಯುಳ್ಳ, ತಂ - ಆ ದಶಗ್ರೀವನನ್ನು, ಸಮೀಕ್ಷ್ಯ-ಕಂಡು, ಅಸಂಭ್ರಾಂತಃ-ಭ್ರಾಂತನಾಗದೆ, ಶನೈಃ - ಮೆಲ್ಲಗೆ, ಯುದ್ಧಾತ್ - ಯುದ್ಧಭೂಮಿಯಿಂದ, ತಸ್ಯ - ಆ ರಾವಣನ, ರಥಂ - ರಥವನ್ನು, ಅಪವಾಹಯತ್ - ಹಿಂದಕ್ಕೆ ಜರುಗಿಸಿದನು. ॥ ೨೯-೩೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚೋತ್ತರಶತತಮಸ್ಸರ್ಗಃ.

ಗಳನ್ನೂ ಪ್ರಯೋಗಿಸಿದನು. ಆ ಸಮಯದಲ್ಲಿ ರಾವಣನ ಸಾರಥಿಯು ತನ್ನೊಡೆಯನ ಅವಸ್ಥೆಯನ್ನು ಕಂಡು ಅಲ್ಲಿದ್ದರೆ ಮೃತ್ಯುವೇ ಸಂಭವಿಸುವುದೆಂದು ನಿಶ್ಚಯಿಸಿ ಮೆಲ್ಲಮೆಲ್ಲನೆ ರಥವನ್ನು ಯುದ್ಧರಂಗದಿಂದ ಹಿಂತಿರುಗಿಸಿ ಬಿಟ್ಟನು. ॥ ೨೮-೩೦ ॥

ಇಂತಿದು ಸಾರಥಿಕೃತ ರಾವಣರಥಾಪವಾಹನ ವೃತ್ತಾಂತವೆಂಬ ನೂರೈದನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಷಡುತ್ತರಶತತಮಸ್ಸರ್ಗಃ

ಸತು ಮೋಹಾತ್ಸುಸಂಕ್ರುದ್ಧಃ ಕೃತಾಂತಬಲಚೋದಿತಃ । ಕ್ರೋಧಸಂರಕ್ತನಯನೋ ರಾವಣಸ್ಸೂತಮಬ್ರವೀತ್ ॥ ೧ ॥ " ಹೀನವೀರ್ಯಮಿವಾಶಕ್ತಂ ಪೌರುಷೇಣ ವಿವರ್ಜಿತಂ । ಭೀರುಂ ಲಘುಮಿವಾಽಸತ್ತ್ವಂ ವಿಹೀನಮಿವ ತೇಜಸಾ ॥೨॥ ವಿಮುಕ್ತಮಿವ ಮಾಯಾಭಿರಸ್ತ್ರೈರಿವ ಬಹಿಷ್ಕೃತಂ । ಮಾಮವಜ್ಞಾಯ ದುರ್ಬುದ್ಧೇ! ಸ್ವಯಾ ಬುದ್ಧ್ಯಾ ವಿಚೇಷ್ಟಸೇ ॥೩॥ ಕಿಮರ್ಥಂ ಮಾಮವಜ್ಞಾಯ ಮಚ್ಛಂದಮನವೇಕ್ಷ್ಯ ಚ । ತ್ವಯಾ ಶತ್ರೋಸ್ಸಮಕ್ಷಂ ಮೇ ರಥೋಽಯಮುಪವಾಹಿತಃ ॥೪॥ ತ್ವಯಾಽದ್ಯ ಹಿ

ಮೋಹಾತ್ - ಅಜ್ಞಾನದಿಂದ, ಸುಸಂಕ್ರುದ್ಧಃ - ಕೋಪಿಷ್ಠನಾದ, ಕೃತಾಂ....ತಃ - ಯಮ ಬಲದಿಂದ ಪ್ರೇರಿತನಾದ, ಸರಾವಣಃ - ಆ ದಶಕಂಠನು, ಕ್ರೋಧ....ನಃ - ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ, ಸೂತಂ - ಸಾರಥಿಯನ್ನು ಕುರಿತು, ಅಬ್ರವೀತ್ - ನುಡಿದನು. ||೧|| ದುರ್ಬುದ್ಧೇ - ದುರ್ಮತಿಯೇ, ಹೀನವೀರ್ಯಮಿವ - ಪರಾಕ್ರಮದಿಂದ ಶೂನ್ಯನಾದವನಂತೆ, ಅಶಕ್ತಮಿವ - ಶಕ್ತಿಯಿಲ್ಲದವನಂತೆಯೂ, ಪೌರುಷೇಣ - ಪುರುಷಸಾಮರ್ಥ್ಯದಿಂದ, ವಿವರ್ಜಿತಮಿವ - ಬಿಡಲ್ಪಟ್ಟವನನ್ನಾಗಿಯೂ, ಭೀರುಮಿವ - ಭಯಶೀಲನನ್ನಂತೆಯೂ, ಲಘುಮಿವ - ಸ್ವಲ್ಪ ಮನುಷ್ಯನನ್ನಂತೆಯೂ, ಅಸತ್ವಮಿವ - ದೇಹತ್ರಾಣವಿಲ್ಲದವನನ್ನಂತೆಯೂ, ತೇಜಸಾ - ಶತ್ರುಗಳ ತಿರಸ್ಕಾರ ಸಾಮರ್ಥ್ಯದಿಂದ, ವಿಹೀನಮಿವ - ವಿರಹಿತನನ್ನಂತೆಯೂ, ಮಾಯಾಭಿಃ - ಮಾಯಾಶಕ್ತಿಗಳಿಂದ, ವಿಮುಕ್ತಮಿವ - ಬಿಡಲ್ಪಟ್ಟವನನ್ನಂತೆಯೂ, ಅಸ್ತ್ರೈಃ - ಅಸ್ತ್ರಗಳಿಂದ, ಬಹಿಷ್ಕೃತಮಿವ - ಬಿಡಲ್ಪಟ್ಟವನನ್ನಂತೆಯೂ, ಮಾಂ - ನನ್ನನ್ನು, ಅವಿಜ್ಞಾಯ - ಅವಮಾನಪಡಿಸಿ, ಸ್ವಯಾ - ನಿನ್ನ, ಬುಧ್ಯಾ - ಬುದ್ಧಿಯಿಂದ, ವಿಚೇಷ್ಟಸೇ - ನಡೆಯುತ್ತೀಯೆ. ||೩|| ಮಾಂ - ನನ್ನನ್ನು, ಅವಜ್ಞಾಯ - ಅವಮಾನಪಡಿಸಿ, ಮಚ್ಛಂದಂ - ನನ್ನ ಅಭಿಪ್ರಾಯವನ್ನು, ಅನವೇಕ್ಷ್ಯಚ - ತಿಳಿಯದೇನೆ, ತ್ವಯಾ - ನಿನ್ನಿಂದ, ಶತ್ರೋಃ - ಶತ್ರುವಿನ, ಸಮಕ್ಷಂ - ಎದುರಾಗಿ, ಮೇ - ನನ್ನ, ಅಯಂರಥಃ - ಈ ರಥವು, ಕಿಮರ್ಥಂ - ಏತಕ್ಕೋಸ್ಕರ, ಅಪವಾಹಿತಃ - ಹಿಂತಿರುಗಿಸಲ್ಪಟ್ಟಿತು. || ೪ || ಅನಾರ್ಯ -

---

ಕಾಲಚೋದಿತನಾದ ರಾವಣಾಸುರನು ಅಜ್ಞಾನದ ದೆಸೆಯಿಂದ ಮಿತಿಮೀರಿದ ಕೋಪವುಳ್ಳವನಾಗಿ ತನ್ನನ್ನು ರಣಭೂಮಿಯಿಂದ ಹಿಂದಿರುಗಿಸಿದ ಸಾರಥಿಯನ್ನು ಕುರಿತು, " ಎಲವೋ ದುರಾತ್ಮನೇ! ನನ್ನನ್ನು ಹೀನವಾದ ಪರಾಕ್ರಮವುಳ್ಳವನೆಂದೂ, ಪೌರುಷವಿಲ್ಲದವನೆಂದೂ, ಭಯಭ್ರಾಂತನಾಗಿರುವನೆಂದೂ, ಅಲ್ಪವಾದ ಬಲವುಳ್ಳವನಾಗಿರುವನೆಂದೂ, ತೇಜೋವಿಹೀನನೆಂದೂ, ಮಾಯಾಶಕ್ತಿಸಂಪನ್ನನಲ್ಲವೆಂದೂ, ಅಸ್ತ್ರಗಳೇ ನನ್ನಲ್ಲಿಲ್ಲವೆಂದೂ ನಿನ್ನಿಷ್ಟಕ್ಕೆ ನೀನೇ ತಿಳಿದುಕೊಂಡು ನನಗೆ ಅಪಮಾನ ಮಾಡಬಯಸಿಯೇ ರಥವನ್ನು ಹಿಂತಿರುಗಿಸಿದೆಯಲ್ಲವೆ? ಎಲಾ ದುರ್ಬುದ್ಧಿಯೇ! ನನ್ನ ಅಭಿಪ್ರಾಯವನ್ನೇ ಅರಿಯದೆ ನನ್ನನ್ನು ಅಪಮಾನಗೊಳಿಸುತ್ತಿರುವೆ. ಶತ್ರುವು ಎದುರಿನಲ್ಲಿ ನಿಂತಿರಲು ನೀನು ಯಾವ ಕಾರಣದಿಂದ ನನ್ನ ರಥವನ್ನು ಹಿಂತಿರುಗಿಸಿದೆ? ನೀನು ಈ ರೀತಿ ಶತ್ರುವಿನ ಮುಂಗಡೆ ರಥವನ್ನು ಹಿಂತಿರು

ಮಮಾನಾರ್ಯ! ಚಿರಕಾಲಸಮಾರ್ಜಿತಂ । ಯಶೋ ವೀರ್ಯಂಚ ತೇಜಶ್ಚ ಪ್ರತ್ಯ ಯಶ್ಚ ವಿನಾಶಿತಃ ॥೫॥ ಶತ್ರೋಃ ಪ್ರಖ್ಯಾತವೀರ್ಯಸ್ಯ ರಂಜನೀಯಸ್ಯ ವಿಕ್ರಮೈಃ । ಪಶ್ಯತೋ ಯುದ್ಧಲುಬ್ಧೋಹಂ ಕೃತಃಕಾಪುರುಷಸ್ತ್ವಯಾ॥೬॥ಯಸ್ತ್ವಂ ರಥಮಿಮಂ ಮೋಹಾನ್ನಚೋದ್ವಹಸಿ ದುರ್ಮತೇ! । ಸತ್ಯೋಽಯಂ ಪ್ರತಿತರ್ಕೋ ಮೇ ಪರೇಣ ತ್ವಮುಪಸ್ಕೃತಃ ॥ ೭ ॥ ನಹ್ಯೇತದ್ವಿದ್ಯತೇ ಕರ್ಮ ಸುಹೃದೋ ಹಿತಕಾಂಕ್ಷಿಣಃ । ರಿಪೂಣಾಂ ಸದೃಶಂ ಚೈತನ್ನತ್ವಯೈತತ್ ಸ್ವನುಷ್ಠಿತಂ ॥ ೮ ॥ ನಿವರ್ತಯ ರಥಂ

ನೀಚನೇ, ತ್ವಯಾ - ನಿನ್ನಿಂದ, ಅದ್ಯ - ಈಗ, ಮಮ - ನನ್ನ, ಚಿರ....ತಂ - ಬಹಳ ಕಾಲ ದಿಂದಲೂ ಸಂಪಾದಿಸಲ್ಪಟ್ಟ, ಯಶಃ - ಕೀರ್ತಿಯು, ವೀರ್ಯಂಚ - ಸಾಮರ್ಥ್ಯವೂ, ತೇಜಶ್ಚ - ಶತ್ರುನಿಗ್ರಹ ಸಾಮರ್ಥ್ಯವೂ, ಪ್ರತ್ಯಯಶ್ಚ - ನಂಬಿಕೆಯೂ, ವಿನಾಶಿತಃ - ನಾಶಗೊಳಿಸಲ್ಪಟ್ಟಿತು. ॥೫॥ ಪ್ರಖ್ಯಾ....ಸ್ಯ - ಪ್ರಸಿದ್ಧವಾದ ಪರಾಕ್ರಮವುಳ್ಳ, ವಿಕ್ರಮೈಃ - ಪರಾಕ್ರಮಗಳಿಂದ, ರಂಜನೀಯಸ್ಯ - ಸಂತೋಷಪಡತಕ್ಕ, ಶತ್ರೋಃ - ಶತ್ರುವು, ಪಶ್ಯತಸ್ಸತಃ - ನೋಡುತ್ತಿರಲು, ಯುದ್ಧಲುಬ್ಧಃ - ಕಾಳಗ ದಲ್ಲಿ ಆಸಕ್ತಿಯುಳ್ಳ, ಅಹಂ - ನಾನು, ತ್ವಯಾ - ನಿನ್ನಿಂದ, ಕಾಪುರುಷಃ - ಕುತ್ಸಿತ ಪುರುಷನಂತೆ, ಕೃತಃ - ಮಾಡಲ್ಪಟ್ಟನು. ॥೬॥ ದುರ್ಮತೇ - ದುರ್ಬುದ್ಧಿಯುಳ್ಳವನೇ, ಯಸ್ತ್ವಂ - ಯಾವ ನೀನು, ಮೋಹಾತ್ - ಅವಿವೇಕದಿಂದ, ಇಮಂರಥಂ - ಈ ರಥವನ್ನು, ನಚೋದ್ವಹಸಿ - ಎದುರಾಗಿ ನಿಲ್ಲಿ ಸದೇ ಹೋದೆಯೋ, ಸತ್ವಂ - ಆ ಈ ನೀನು, ಮೇ - ನನ್ನ, ಪರೇಣ - ಶತ್ರುವಿನಿಂದ, ಉಪಸ್ಕೃತಃ- ಲಂಚ ಕೊಟ್ಟು ಸ್ವಾಧೀನಗೊಳಿಸಿಕೊಳ್ಳಲ್ಪಟ್ಟಿದ್ದೀಯೆ, ಇತಿ-ಇಂತೆಂದು, ಅಯಂ-ಈ, ಪ್ರತಿತರ್ಕಃ- ಊಹೆಯು, ಸತ್ಯಃ - ಸಫಲವಾಗಿದೆ. ॥೭॥ ಏತತ್ - ಈ ಕಾರ್ಯವು, ಹಿತಕಾಂಕ್ಷಿಣಃ - ಹಿತವನ್ನು ತೋರುತ್ತಿರುವ, ಸುಹೃದಃ - ಸ್ನೇಹಿತನಿಗೆ, ನವಿದ್ಯತೇ - ಇರುವುದಿಲ್ಲ, ರಿಪೂಣಾಂ - ಶತ್ರುಗಳಿಗೆ, ಇದಂ - ಈ ಕಾರ್ಯವು, ಸದೃಶಂ - ಸಮಾನವಾದದ್ದು, ತ್ವಯಾ - ನಿನ್ನಿಂದ, ಏತತ್ - ಈ ಕಾರ್ಯವು, ಸ್ವನುಷ್ಠಿತಂ - ಚನ್ನಾಗಿ ಮಾಡಲ್ಪಟ್ಟದು, ನ - ಅಲ್ಲವು. ॥ ೮ ॥ ಅಧ್ಯುಷಿತೋವಾ -

ಗಿಸಿದುದರಿಂದ ನಾನು ಬಹು ಕಾಲದಿಂದಲೂ ಸಂಪಾದಿಸಿದ ತೇಜೋಬಲವೀರ್ಯಾದಿ ಗಳೆಲ್ಲವೂ ನಶಿಸಿಹೋದುವು. ॥ ೧–೫ ॥ ರಾಕ್ಷಸಾಧಮನೇ! ಪರಾಕ್ರಮದಿಂದ ಮನಸ್ಸಿಗೆ ಆನಂದವನ್ನುಂಟುಮಾಡುವವನೂ, ಸುಪ್ರಸಿದ್ಧವಾದ ಪರಾಕ್ರಮವಂತನೂ ಆದ ಹಗೆಯು ನೋಡುತ್ತಿರುವಂತೆಯೇ ಯುದ್ಧಲಬ್ಧನಾದ ನನ್ನನ್ನು ಹಿಂತಿರುಗಿಸಿಕೊಂಡು ಬಂದು ಕಾಪುರುಷ ನೆನಿಸಿದೆ. ನೀನು ಕೇವಲ ಅಜ್ಞಾನವಶದಿಂದ ಈ ಕೆಲಸವನ್ನು ಮಾಡಿದೆಯೆಂದು ನಾನು ನಂಬು ವುದಿಲ್ಲ. ವಾಸ್ತವವಾಗಿ ಶತ್ರುಪಕ್ಷದವರ ಬೋಧನೆಗೊಳಗಾಗಿ ನೀನು ಈ ಹೇಯ ಕಾರ್ಯ ವನ್ನು ಮಾಡಿರುವೆಯೆಂದು ತೋರುತ್ತದೆ. ಹಾಗಲ್ಲದೆ, ನೀನು ನನ್ನಲ್ಲಿ ಸ್ನೇಹವನ್ನೂ, ಹಿತ ವನ್ನೂ ಪ್ರಕಟಿಸುವವನೇ ಆಗಿದ್ದರೆ ಈ ರೀತಿ ಎಂದಿಗೂ ಮಾಡುತ್ತಿರಲಿಲ್ಲವೆಂಬುದರಲ್ಲಿ ಸಂಶಯ ವಿಲ್ಲವು. ಮಿತ್ರನೂ, ಹಿತವಂತನೂ ಆದವನೆಂದಿಗೂ ಹೀಗೆ ಮಾಡಬಾರದು. ಎಲವೋ ಸಾರ ಥಿಯೇ! ನೀನು ನನಗೆ ಆಪ್ತನಾದವನಂತಿದ್ದುಕೊಂಡೇ ಶತ್ರುವಾದವನು ಮಾಡುವ ಕಾರ್ಯ ವನ್ನು ಮಾಡಿದ್ದೀಯೆ. ಈಗ ನಾನಿಲ್ಲಿರುವುದು ನನಗೆ ಕೇವಲ ಅಪಮಾನಕರವಾಗಿರುವುದು. ನಾನು ನನ್ನ ಶತ್ರುವಿಗೆ ಅಭಿಮುಖನಾಗಿ ನಿಲ್ಲಬೇಕು. ಜಾಗ್ರತೆಯಾಗಿ ರಥವನ್ನು ಹಿಂತಿರು

ಶೀಘ್ರಂ ಯಾವನ್ನೋಪೈತಿ ಮೇ ರಿಪುಃ । ಯದಿ ವಾಽಧ್ಯುಷಿತೋ ವಾಸಿ ಸ್ಮರ್ಯಂತೇ ಯದಿ ವಾ ಗುಣಾಃ" ‖ ೯ ‖ ಏವಂ ಪರುಷಮುಕ್ತಸ್ತು ಹಿತಬುದ್ಧಿರಬುದ್ಧಿನಾ । ಅಬ್ರವೀದ್ರಾವಣಂ ಸೂತೋ ಹಿತಂ ಸಾನುನಯಂ ವಚಃ ‖ ೧೦ ‖ "ನಭೀತೋಽಸ್ಮಿ ನಮೂಢೋಽಸ್ಮಿ ನೋಪಜಪ್ತೋಽಸ್ಮಿ ಶತ್ರುಭಿಃ । ನಪ್ರಮತ್ತೋ ನನಿಸ್ಸ್ನೇಹೋ ವಿಸ್ಮೃತಾ ನಚ ಸತ್ಕ್ರಿಯಾ ‖೧೧‖ ಮಯಾತು ಹಿತಕಾಮೇನ ಯಶಶ್ಚ ಪರಿರಕ್ಷತಾ । ಸ್ನೇಹಪ್ರಸನ್ನಮನಸಾ ಪ್ರಿಯಮಿತ್ಯಪ್ರಿಯಂ ಕೃತಂ ‖೧೨‖ ನಾಸ್ಮಿನ್ನರ್ಥೇ ಮಹಾರಾಜ!

ಬಹು ಕಾಲದಿಂದಲೂ ನನ್ನಿಂದ ಪೋಷಿತನು, ಅಸಿಯದಿ - ಆದವನೇ ಆದರೆ, ಗುಣಾಃ - ನನ್ನ ಗುಣಗಳೇ, ಸ್ಮರ್ಯಂತೇಯದಿ-ಸ್ಮರಣೆ ಮಾಡಲ್ಪಟ್ಟವುಗಳೇ ಆದರೆ, ಯಾವತ್-ಎಷ್ಟರೊಳಗೆ, ಮೇ-ನನ್ನ, ರಿಪುಃ - ಶತ್ರುವು, ನೋಪೈತಿ - ಬರುವದಿಲ್ಲವೋ, ತಾವತ್ - ಅಷ್ಟರೊಳಗೆ, ರಥಂ - ತೇರನ್ನು, ಶೀಘ್ರಂ - ಜಾಗ್ರತೆಯಾಗಿ, ನಿವರ್ತಯ - ತಿರುಗಿಸು. ‖ ೯ ‖ ಏವಂ - ಈ ಪರಿಯಾಗಿ, ಅಬುದ್ಧಿನಾ - ಬುದ್ಧಿಹೀನನಾದ ರಾವಣನಿಂದ, ಪರುಷಂ - ಕಠಿನವಾಗಿ, ಉಕ್ತಃ - ಹೇಳಲ್ಪಟ್ಟ, ಹಿತಬುದ್ಧಿಃ - ಹಿತಕರವಾದ ಬುದ್ಧಿಯುಳ್ಳ, ಸೂತಃ - ಸಾರಥಿಯು, ರಾವಣಂ - ದಶಕಂಠನನ್ನು ಕುರಿತು, ಹಿತಂ - ಹಿತಕರವಾಗಿಯೂ, ಸಾನುನಯಂ - ನಯದಿಂದೊಡಗೂಡಿದ, ವಚಃ - ಮಾತನ್ನು, ಅಬ್ರವೀತ್ - ನುಡಿದನು. ‖೧೦‖ ಭೀತಃ - ಭಯಗೊಂಡವನು, ನಾಸ್ಮಿ - ಅಲ್ಲ, ಮೂಢಃ - ಮೂಢನು, ನಾಸ್ಮಿ - ಅಲ್ಲವು, ಶತ್ರುಭಿಃ - ಶತ್ರುಗಳಿಂದ, ಉಪಜಪ್ತಃ - ಆಲೋಚನೆ ಮಾಡಲ್ಪಟ್ಟವನು, ನಾಸ್ಮಿ - ಅಲ್ಲ, ಪ್ರಮತ್ತಃ - ಮೋಹವನ್ನು ಹೊಂದಿದವನು, ನ - ಅಲ್ಲವು, ನಿಸ್ನೇಹಃ - ನಿನ್ನಲ್ಲಿ ವಿಶ್ವಾಸವಿಲ್ಲದವನು, ನ - ಅಲ್ಲವು, ಸತ್ಕ್ರಿಯಾ - ನೀನು ಮಾಡಿದ ಸತ್ಕ್ರಿಯೆಯು, ನವಿಸ್ಮೃತಾ - ಮರೆಯಲ್ಪಡಲಿಲ್ಲವು. ‖೧೧‖ ಹಿತಕಾಮೇನ - ನಿನಗೆ ಉತ್ತರೋತ್ತರ ಶ್ರೇಯಸ್ಸನ್ನು ಕೋರುತ್ತಿರುವ, ಯಶಶ್ಚ - ಕೀರ್ತಿಯನ್ನೂ, ಪರಿರಕ್ಷತಾ - ಸಂರಕ್ಷಿಸುತ್ತಿರುವ, ಸ್ನೇಹ....ಸಾ - ಪ್ರೇಮದಿಂದ ಪ್ರಸನ್ನ ಮನವುಳ್ಳ, ಮಯಾತು - ನನ್ನಿಂದಲಾದರೆ, ಪ್ರಿಯಮಿತಿ - ಒಳ್ಳೆಯದೆಂದು, ಅಪ್ರಿಯಂ - ಅನಿಷ್ಟ ಕಾರ್ಯವು, ಕೃತಂ - ಮಾಡಲ್ಪಟ್ಟಿತು. ‖೧೨‖ ಮಹಾರಾಜ - ಮಹಾರಾಜನೇ, ಅಸ್ಮಿನ್ಅರ್ಥೇ - ಈ ವಿಷಯದಲ್ಲಿ, ತ್ವಂ - ನೀನು, ಪ್ರಿಯಹಿತೇ - ನಿನ್ನ ಹಿತದಲ್ಲಿ, ರತಂ - ಆಸಕ್ತನಾದ, ಮಾಂ - ನನ್ನನ್ನು, ಕಶ್ಚಿತ್-

ಗಿಸು. ಎಲೈ ಸೂತನೇ! ನೀನು ಬಹು ಕಾಲದಿಂದಲೂ ನನ್ನೊಡನಿರುವೆ. ನನ್ನ ಗುಣಗಳೆಲ್ಲವೂ ನಿನಗೆ ತಿಳಿದಿರುವುದು. ನೀನು ಇಷ್ಟಾದರೂ ಕೇವಲ ಮೌಢ್ಯದಿಂದ ಈ ಹೇಯ ಕಾರ್ಯವನ್ನು ಮಾಡಿರುವೆ. ಇನ್ನು ಹೀಗೆ ಮಾಡಬೇಡ. ಜಾಗ್ರತೆಯಾಗಿ ರಥವನ್ನು ಹಿಂತಿರುಗಿಸು" ಎಂದು ಹೇಳಿದನು. ‖ ೬–೧೦ ‖ ಪ್ರಭುವಾದ ರಾವಣಾಸುರನು ಈ ರೀತಿ ಬಹು ಕಠಿನವಾದ ಮಾತುಗಳಾಡಲು ಸಾರಥಿಯು ಮಹಾ ಬುದ್ಧಿವಂತನಾದುದರಿಂದ ವಿನಯ ಪೂರ್ವಕವಾಗಿ ಆತನನ್ನು ಕುರಿತು, "ರಾಕ್ಷಸರಾಜ! ನಾನು ಹೆದರಿದವನಲ್ಲ, ನಾನು ಬುದ್ಧಿಹೀನನೂ ಅಲ್ಲ, ನನಗಂತಹ ಮೌಢ್ಯವೂ ಇಲ್ಲ, ನಾನು ಶತ್ರುಗಳ ಭೋಧನೆಗೊಳಗಾಗಿ ಈ ಕಾರ್ಯವನ್ನು ಮಾಡಿದವನೂ ಅಲ್ಲ, ಪ್ರಮಾದವಶದಿಂದಲೂ ನಾನು ಈ ಕಾರ್ಯಕ್ಕೆ ತೊಡಗಲಿಲ್ಲ. ನಿನ್ನಲ್ಲಿ ನನಗೆ ಅಪರಿಮಿತವಾದ ಸ್ನೇಹವುಂಟು. ಮಹಾರಾಜ! ನೀನು ನನಗೆ ಮಾಡಿರುವ ಉಪಕಾರವನ್ನು ನಾನೆಂದಿಗೂ ಮರೆತಿರುವುದಿಲ್ಲ. ನಾನು ಪ್ರಭುವಾದ

ತ್ವಂ ಮಾಂ ಪ್ರಿಯಹಿತೇ ರತಂ । ಕಶ್ಚಿಲ್ಲಘುರಿವಾನಾರ್ಯೋ ದೋಷತೋ ಗಂತುಮರ್ಹಸಿ ॥೧೩॥ ಶ್ರೂಯತಾಂ ತ್ವಭಿಧಾಸ್ಯಾಮಿ ಯನ್ನಿಮಿತ್ತಂ ಮಯಾ ರಥಃ । ನದೀವೇಗ ಇವಾಭೋಗೇ ಸಂಯುಗೇ ವಿನಿವರ್ತಿತಃ ॥೧೪॥ ಶ್ರಮಂ ತವಾವಗಚ್ಛಾಮಿ ಮಹತಾ ರಣಕರ್ಮಣಾ । ನಹಿ ತೇ ವೀರ! ಸೌಮುಖ್ಯಂ ಪ್ರಹರ್ಷಂ ವೋಪಧಾರಯೇ ॥೧೫॥ ರಥೋದ್ವಹನಖಿನ್ನಾಶ್ಚ ತ ಇಮೇ ರಥವಾಜಿನಃ । ದೀನಾ ಘರ್ಮಪರಿಶ್ರಾಂತಾ ಗಾವೋ ವರ್ಷಹತಾ ಇವ ॥೧೬॥ ನಿಮಿತ್ತಾನಿ ಚ ಭೂಯಿಷ್ಠಂ ಯಾನಿ

ಯಾವನೋ ಒಬ್ಬ, ಅನಾರ್ಯಇವ - ಅಪೂಜ್ಯನಂತೆ, ದೋಷತಃ - ದೋಷದಿಂದ, ಗಂತುಂ - ತಿಳಿದುಕೊಳ್ಳುವದಕ್ಕೆ, ನಾರ್ಹಸಿ - ಯೋಗ್ಯನಾಗಬೇಡ. ॥೧೩॥ ಮಯಾ - ನನ್ನಿಂದ, ರಥಃ - ರಥವು, ಆಭೋಗೇ - ಪರ್ವತೋನ್ನತ ಪ್ರದೇಶಗಳಲ್ಲಿ, ನದೀವೇಗಇವ - ಹೊಳೆಯ ವೇಗದಂತೆ, ಸಂಯುಗೇ - ಕಾಳಗದಲ್ಲಿ, ಯನ್ನಿಮಿತ್ತಂ - ಯಾವ ನಿಮಿತ್ತವಾಗಿ, ವಿನಿವರ್ತಿತಃ - ತಿರುಗಿಸಲ್ಪಟ್ಟಿತೋ, ತತ್ - ಅದನ್ನು, ಅಭಿಧಾಸ್ಯಾಮಿ - ಹೇಳುವೆನು, ಶ್ರೂಯತಾಂ - ಕೇಳಲ್ಪಡಲಿ. ॥೧೪॥ ವೀರ - ಶೂರನೇ, ತವ - ನಿನಗೆ, ಮಹತಾ - ಬಹಳವಾದ, ರಣಕರ್ಮಣಾ - ಯುದ್ಧ ವ್ಯಾಪಾರದಿಂದ, ಅವಗಚ್ಛಾಮಿ - ತಿಳಿದೆನು, ತೇ - ನಿನಗೆ, ಸೌಮುಖ್ಯಂ - ಸಮುಖತ್ವವನ್ನೇ ಆಗಲಿ, ಪ್ರಹರ್ಷಂವಾ - ಯುದ್ಧೋತ್ಸಾಹವನ್ನೇ ಆಗಲಿ, ನೋಪಧಾರಯೇ - ತಿಳಿಯದೇ ಹೋದೆನು. ॥೧೫॥ ತೇ - ನಿನ್ನ, ಇಮೇರಥವಾಜಿನಃ- ಈ ತೇರಿನ ಕುದುರೆಗಳು, ರಥೋ....ನ್ನಾಃ-ತೇರಿನ ಭಾರದಿಂದ ಖಿನ್ನಗಳಾಗಿ, ಘರ್ಮ....ತಾಃ- ಬೆವರಿನಿಂದ ಬಳಲಿ, ವರ್ಷಹತಾಃ - ಮಳೆಯಿಂದ ಹೊಡೆಯಲ್ಪಟ್ಟ, ಗಾವಇವ - ಗೋವುಗಳಂತೆ, ದೀನಾಃ - ಪರಿತಪ್ತಗಳಾದವು. ॥೧೬॥ ಯಾನಿನಿಮಿತ್ತಾನಿ - ಯಾವ ಶಕುನಗಳು, ನಃ - ನಮಗೆ, ಭೂಯಿಷ್ಠಂ - ಬಹಳವಾಗಿ, ಪ್ರಾದುರ್ಭವಂತಿ - ಹುಟ್ಟುತ್ತ ಬಂದವೋ, ತೇಷುತೇಷು - ಆಯಾಯ ಶಕುನಗಳು, ಅಭಿಪನ್ನೇಷು - ಆವಿರ್ಭವಿಸಿದವುಗಳಾಗಲೂ, ಅಪ್ರದಕ್ಷಿಣಂ - ಪ್ರತಿಕೂಲತ್ವವನ್ನು,

---

ನಿನಗೆ ಹಿತವನ್ನುಂಟುಮಾಡಬೇಕೆಂಬ ನಿನ್ನ ಕೀರ್ತಿಯನ್ನು ಇತೋಽಪ್ಯತಿಶಯವಾಗಿ ಬೆಳಸಬೇಕೆಂಬ ಬಯಕೆಯಿಂದ ಈ ಕಾರ್ಯವನ್ನು ಮಾಡಿದೆನಾಗಲಿ ಮತ್ತೆ ಬೇರೆಯಲ್ಲವು. ಎಲೈ ರಾಕ್ಷಸರಾಜಶ್ರೇಷ್ಠನೇ! ನಿನಗೆ ಪ್ರಿಯವನ್ನುಂಟುಮಾಡಬೇಕೆಂಬ ಸಂಕಲ್ಪವುಳ್ಳವನಾದ ನನ್ನ ವಿಷಯದಲ್ಲಿ ಸ್ವಲ್ಪ ಬುದ್ಧಿಯುಳ್ಳವನೆಂದಾಗಲಿ, ದುಷ್ಟನೆಂದಾಗಲಿ ತಪ್ಪನ್ನು ಹೊರಿಸಬೇಡ. ॥೧೧–೧೩॥ ಧೊರೆಯೇ! ನಾನು ರಥವನ್ನು ಏತಕ್ಕೋಸ್ಕರ ಹಿಂತಿರುಗಿಸಿಕೊಂಡು ಬಂದೆನೆಂಬ ವಿಷಯವನ್ನು ಅರಿಕೆ ಮಾಡುವೆನು. ಲಾಲಿಸು. ರಣಾಂಗಣದಲ್ಲಿ ನೀನು ಬಹಳವಾಗಿ ಆಯಾಸಗೊಂಡುದನ್ನು ನೋಡಿದೆನು. ನಿನಗೆ ಯುದ್ಧದಲ್ಲಿ ಸೌಮುಖ್ಯವಿಲ್ಲದಿರುವಿಕೆಯನ್ನೂ, ಅಪಾರವಾದ ರಣವ್ಯಾಪಾರನಿರತನಾಗಿ ಆಯಾಸಗೊಂಡುದರಿಂದ ನೀನು ಉತ್ಸಾಹ ಸಂತೋಷಗಳಿಲ್ಲದೆ ದುಃಖಿತನಾಗಿರುವುದನ್ನೂ ತಿಳಿದುಕೊಂಡೆನು. ಇಷ್ಟೆಯಲ್ಲದೆ ಈ ರಥಾಶ್ವಗಳೂ ಸಹ ವರ್ಷಾಧಿಕ್ಯದಿಂದ ಗೋವುಗಳೆಂತೋ ಅಂತು ಶ್ರಮಾಧಿಕ್ಯದಿಂದ ಬಹಳವಾಗಿ ಬಾಧೆಗೊಂಡಿದ್ದುವು. ಇದರಮೇಲಾಗಿ ನಮಗೆ ಅಮಂಗಳವನ್ನು ಸೂಚಿಸುವಂತಹ ಅನೇಕ ಅಪಶಕುನಗಳೂ ಉಂಟಾದುವು. ಈ ಎಲ್ಲ ಕಾರಣಗಳೂ ನನ್ನ ಮನಸ್ಸಿನಲ್ಲಿ ಅನೇಕ ಸಂದೇಹಗಳನ್ನು ಹುಟ್ಟಿಸಿದುವು. ಆದುದರಿಂದ ನಾನು ಯುಕ್ತಾಯುಕ್ತ

ಪ್ರಾದುರ್ಭವಂತಿ ನಃ । ತೇಷು ತೇಷ್ವಭಿಪನ್ನೇಷು ಲಕ್ಷಯಾಮ್ಯಪ್ರದಕ್ಷಿಣಂ ‖ ೧೭ ‖ ದೇಶಕಾಲೌಚ ವಿಜ್ಞೇಯೌ ಲಕ್ಷಣಾನೀಂಗಿತಾನಿಚ । ದೈನ್ಯಂ ಖೇದಶ್ಚ ಹರ್ಷಶ್ಚ ರಥಿನಶ್ಚ ಬಲಾಬಲಂ ‖೧೮‖ ಸ್ಥಲನಿಮ್ನಾನಿ ಭೂಮೇಶ್ಚ ಸಮಾನಿ ವಿಷಮಾಣಿಚ । ಯುದ್ಧಕಾಲಶ್ಚ ವಿಜ್ಞೇಯಃ ಪರಸ್ಯಾಂತರದರ್ಶನಂ ‖ ೧೯ ‖ ಉಪಯಾನಾಪಯಾನೇಚ ಸ್ಥಾನಂ ಪ್ರತ್ಯಪಸರ್ಪಣಂ । ಸರ್ವಮೇತದ್ರಥಸ್ಥೇನ ಜ್ಞೇಯಂ ರಥಕುಟುಂಬಿನಾ ‖ ೨೦ ‖ ತವ ವಿಶ್ರಮಹೇತೋಶ್ಚ ತದೇಷಾಂ ರಥವಾಜಿನಾಂ । ರೌದ್ರಂ ವರ್ಜಯತಾ ಖೇದಂ ಕ್ಷಮಂ ಕೃತಮಿದಂ ಮಯಾ ‖ ೨೧ ‖ ನಮಯಾ ಸ್ವೇಚ್ಛಯಾ ವೀರ!

ಲಕ್ಷಯಾಮಿ - ಕಂಡೆನು. ‖ ೧೭ ‖ ರಥಕುಟುಂಬಿನಾ - ರಥವೆಂಬ ಸಂಸಾರಕ್ಕೆ ನಿರ್ವಾಹಕನಾದ ಸಾರಥಿಯಿಂದ, ದೇಶಕಾಲೌ - ದೇಶಕಾಲಗಳು, ವಿಜ್ಞೇಯೌ - ತಿಳಿಯತಕ್ಕುವು, ಲಕ್ಷಣಾನಿ - ಶುಭಾಶುಭ ಲಕ್ಷಣಗಳು, ಇಂಗಿತಾನಿಚ - ಮುಖಮಾಲಿನ್ಯ ಮುಖಪ್ರಸಾದಗಳೂ, ದೈನ್ಯಂಚ - ಅನುತ್ಸಾಹವೂ, ರಥಿನಃ - ರಥಿಕನ, ಖೇದಶ್ಚ - ವ್ಯಸನವೂ, ಹರ್ಷಶ್ಚ - ಸಂತೋಷವೂ, ಬಲಾಬಲಂ - ಪ್ರಾಬಲ್ಯ ದೌರ್ಬಲ್ಯಗಳು, ಭೂಮೇಶ್ಚ - ಭೂಮಿಯ, ಸ್ಥಲನಿಮ್ನಾನಿ - ಉನ್ನತ ಪ್ರದೇಶಗಳು, ಗುಣಿಯಾಗಿರುವ ಪ್ರದೇಶಗಳೂ, ಸಮಾನಿ - ಸಮಸ್ಥಲಗಳು, ವಿಷಮಾನಿ - ವಕ್ರಸ್ಥಳಗಳು, ಯುದ್ಧಕಾಲಶ್ಚ - ಕಾಳಿಗಕ್ಕೆ ಸಮಯವೂ, ಏತಾನಿಸರ್ವಾಣಿ - ಇವುಗಳೆಲ್ಲಾ, ವಿಜ್ಞೇಯಾಃ - ತಿಳಿದುಕೊಳ್ಳತಕ್ಕವು, ಪರಸ್ಯ - ಶತ್ರುವಿನ, ಅಂತರದರ್ಶನಂ - ಛಿದ್ರಾನ್ವೇಷಣವು, ಕರ್ತವ್ಯಂ - ಮಾಡತಕ್ಕದ್ದು, ಉಪ....ಚ - ಸಮೀಪ ಗಮನವೂ, ದೂರದಲ್ಲಿ ಹೋಗುವಿಕೆ ಈ ಎರಡು, ಸ್ಥಾನಂಚ - ಸ್ಥಿರವಾಗಿ ನಿಲ್ಲುವಿಕೆಯೂ, ಪ್ರತ್ಯಪಸರ್ಪಣಂ - ಅಭಿಮುಖ ಸ್ಥಿತಿಯಿಂದಲೇ ಹಿಂದಕ್ಕೆ ಹೋಗೋಣವು, ಏತತ್ಸರ್ವಂ - ಈ ಸಮಸ್ತವೂ, ಜ್ಞೇಯಂ - ತಿಳಿದುಕೊಳ್ಳತಕ್ಕದ್ದು. ‖೧೮-೨೦‖ ತವ - ನಿನಗೆ, ವಿಶ್ರಮಹೇತೋಶ್ಚ - ಶ್ರಮ ಪರಿಹಾರವಾಗಲೆಂಬ ಕಾರಣದಿಂದಲೂ, ತಥಾ - ಹಾಗೆಯೇ, ರಥವಾಜಿನಾಂ - ಈ ರಥದ ಕುದುರೆಗಳಿಗೆ, ವಿಶ್ರಮಹೇತೋಃ - ಶ್ರಮ ಪರಿಹಾರವಾಗಲೆಂಬ ಕಾರಣದಿಂದಲೂ, ರೌದ್ರಂ - ಸಹಿಸಲಸಾಧ್ಯವಾದ, ಖೇದಂ - ಶ್ರಮವನ್ನು, ವರ್ಜಯತಾ - ಪರಿಹಾರ ಮಾಡುತ್ತಿರುವ, ಮಯಾ - ನನ್ನಿಂದ, ಕ್ಷಮಂ - ಯುಕ್ತವಾದ, ಇದಂ - ಈ ಕಾರ್ಯವು, ಕೃತಂ - ಮಾಡಲ್ಪಟ್ಟಿತು. ‖ ೨೧ ‖ ವೀರ - ಶೂರನೇ, ಮಯಾ - ನನ್ನಿಂದ,

---

ಗಳನ್ನು ವಿಚಾರಿಸಿಯೆ ರಥವನ್ನು ಹಿಂತಿರುಗಿಸಿಕೊಂಡು ಬಂದೆನು. ‖೧೪-೧೭‖ ಪ್ರಭುವೇ! ಸಾರಥಿಯಾದವನು ದೇಶಕಾಲಗಳನ್ನೂ, ಇಂಗಿತಗಳನ್ನೂ, ಶುಭಾಶುಭ ಲಕ್ಷಣಗಳನ್ನೂ, ದೈನ್ಯ ಖೇದ ಹರ್ಷಗಳನ್ನೂ, ರಥಿಕನಾದವನ ಬಲಾಬಲಗಳನ್ನೂ ಚೆನ್ನಾಗಿ ಅರಿತುಕೊಳ್ಳಲು ತಕ್ಕ ಸಾಮರ್ಥ್ಯವುಳ್ಳವನಾಗಿರಬೇಕು. ಇಷ್ಟುಮಾತ್ರವೇ ಅಲ್ಲದೆ ಸಾರಥಿಯಾದವನು ಶತ್ರುಪಕ್ಷದ ಛಿದ್ರಗಳೆಲ್ಲವನ್ನೂ ತಿಳಿದಿರಬೇಕು. ಸಮೀಪಗಮನ, ಪಾರ್ಶ್ವಗಮನ, ಅಭಿಮುಖಗಮನ, ಪೃಷ್ಠಭಾಗಗಮನ ಇವುಗಳನ್ನು ಯಾವಾಗ ಕಾರ್ಯಮುಖವಾಗಿಸಬೇಕೆಂಬುದನ್ನೂ ಸಾರಥಿಯಾದವನು ಚೆನ್ನಾಗಿ ತಿಳಿದಿರಬೇಕು. ನಾನು ಈ ವಿಚಾರವೆಲ್ಲವನ್ನೂ ನಿನ್ನ ಅನುಗ್ರಹದಿಂದ ಚೆನ್ನಾಗಿಯೇ ತಿಳಿದುಕೊಂಡಿದ್ದೇನೆ. ‖೧೮-೨೦‖ ಪ್ರಭುವೇ! ಈಗ ನೀನು ಶ್ರಮಪಟ್ಟಿರುವುದರಿಂದಲೂ, ರಥಾಶ್ವಗಳು ದೈನ್ಯತೆಯನ್ನು ಹೊಂದಿದ್ದುದರಿಂದಲೂ ನಾನು ರಥವನ್ನು ಹಿಂತಿರುಗಿಸಿದೆನು. ಎಲೈ ವೀರನೇ! ನಾನು ಸ್ವೇಚ್ಛಾಚಾರಿ

ರಥೋಽಯಮುಪವಾಹಿತಃ । ಭರ್ತೃಸ್ನೇಹಪರೀತೇನ ಮಯೇದಂ ಯತ್ಕೃತಂ ವಿಭೋ! ॥ ೨೨ ॥ ಆಜ್ಞಾಪಯ ಯಥಾ ತತ್ತ್ವಂ ವಕ್ಷ್ಯಸ್ಯರಿನಿಷೂದನ! । ತತ್ಕರಿಷ್ಯಾಮ್ಯಹಂ ವೀರ! ಗತಾನೃಣ್ಯೇನ ಚೇತಸಾ ” ॥ ೨೩ ॥ ಸಂತುಷ್ಟಸ್ತೇನ ವಾಕ್ಯೇನ ರಾವಣಸ್ತಸ್ಯ ಸಾರಥೇಃ । ಪ್ರಶಸ್ಯೈನಂ ಬಹುವಿಧಂ ಯುದ್ಧಲುಬ್ಧೋಽಬ್ರವೀದಿದಂ ॥೨೪॥ “ ರಥಂ ಶೀಘ್ರಮಿಮಂ ಸೂತ! ರಾಘವಾಭಿಮುಖಂ ಕುರು । ನಾಽಹತ್ವಾ ಸಮರೇ ಶತ್ರೂನ್ನಿವರ್ತಿಷ್ಯತಿ ರಾವಣಃ ” ॥ ೨೫ ॥ ಏವಮುಕ್ತ್ವಾ ತತಸ್ತುಷ್ಟೋ ರಾವಣೋ ರಾಕ್ಷಸೇಶ್ವರಃ । ದದೌ ತಸ್ಮೈ ಶುಭಂ ಹ್ಯೇಕಂ ಹಸ್ತಾಭರಣಮುತ್ತಮಂ । ಶ್ರುತ್ವಾ ರಾವಣವಾಕ್ಯಂ ತು ಸಾರಥಿಸ್ಸನ್ನ್ಯವರ್ತತ ॥ ೨೬ ॥

ಸ್ವೇಚ್ಛಯಾ - ಸ್ವೇಚ್ಛೆಯಿಂದ, ಅಯಂರಥಃ - ಈ ರಥವು, ನಾಪವಾಹಿತಃ - ಹಿಂತಿರುಗಿಸಲ್ಪಡಲಿಲ್ಲ, ವಿಭೋ - ಪ್ರಭುವೇ, ಯತ್ - ಯಾವದು, ಮಯಾ - ನನ್ನಿಂದ, ಕೃತಂ - ಮಾಡಲ್ಪಟ್ಟಿತೋ, ಇದಂ - ಇದು, ಭರ್ತೃ....ನ - ಪೋಷಕನಲ್ಲಿ ವಿಶ್ವಾಸದಿಂದ ಕೂಡಿರುವ ನನ್ನಿಂದ, ಕೃತಂ - ಮಾಡಲ್ಪಟ್ಟಿತು. ॥ ೨೨ ॥ ಅರಿನಿಷೂದನ - ಶತ್ರುಸಂಹಾರಕನೇ, ವೀರ - ಶೂರನೇ, ಯಥಾತತ್ತ್ವಂ - ಯಾವ ಕಾರ್ಯಸ್ವರೂಪವನ್ನು, ವಕ್ಷ್ಯಸಿ - ಹೇಳುತ್ತೀಯೋ, ಆಜ್ಞಾಪಯ - ಆಜ್ಞಾಪಿಸು, ತತ್ - ಅದನ್ನು, ಗತಾನೃಣ್ಯೇನ - ಕೃತಜ್ಞತೆಯುಳ್ಳ, ಚೇತಸಾ - ಮನಸ್ಸಿನಿಂದ, ಕರಿಷ್ಯಾಮಿ - ಮಾಡುವೆನು. ॥ ೨೩ ॥ ರಾವಣಃ - ದಶಕಂಠನು, ತಸ್ಯಸಾರಥೇಃ - ಆ ಸಾರಥಿಯ, ತೇನವಾಕ್ಯೇನ - ಆ ಮಾತಿನಿಂದ, ಸಂತುಷ್ಟಃ - ಸಂತೋಷಿಸಿ, ಬಹುವಿಧಂ - ಬಹಳ ಬಗೆಯಾಗಿ, ಏನಂ - ಈ ಸಾರಥಿಯನ್ನು, ಪ್ರಶಸ್ಯ - ಶ್ಲಾಘಿಸಿ, ಯುದ್ಧಲುಬ್ಧಃ - ಕಾಳಗದಲ್ಲಿ ಆಸಕ್ತಿಯುಳ್ಳವನಾಗಿ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೪ ॥ ಸೂತ - ಸಾರಥಿಯೇ, ಇಮಂರಥಂ - ಈ ರಥವನ್ನು, ಶೀಘ್ರಂ - ಜಾಗ್ರತೆಯಾಗಿ, ರಾಘ....ಖಂ - ಶ್ರೀರಾಮನಿಗೆದುರಾಗಿ, ಕುರು - ಮಾಡು, ರಾವಣಃ - ದಶಗ್ರೀವನು, ಸಮರೇ - ಕಾಳೆಗದಲ್ಲಿ, ಶತ್ರೂನ್ - ಶತ್ರುಗಳನ್ನು, ಅಹತ್ವಾ - ಹೊಡೆಯದೆ, ನನಿವರ್ತಿಷ್ಯತಿ - ಹಿಂತಿರುಗುವದಿಲ್ಲ. ॥ ೨೫ ॥ ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ತತಃ - ಬಳಿಕ, ತುಷ್ಟಃ - ಸಂತುಷ್ಟನಾದ, ರಾಕ್ಷಸೇಶ್ವರಃ - ರಕ್ಕಸರೊಡೆಯನಾದ, ರಾವಣಃ - ರಾವಣನು, ತಸ್ಮೈ - ಆ ಸಾರಥಿಗಾಗಿ, ಉತ್ತಮಂ - ಉತ್ತಮವಾದ, ಶುಭಂ - ಶುಭಕರವಾದ, ಏಕಂಹಸ್ತಾಭರಣಂ - ಒಂದು ಕೈಕಡಗವನ್ನು, ದದೌ - ಕೊಟ್ಟನು, ರಾವಣವಾಕ್ಯಂತು - ದಶಗ್ರೀವನ

ಯಾಗಿ ಈ ಕಾರ್ಯವನ್ನೆಂದಿಗೂ ಮಾಡಲಿಲ್ಲ. ಯುಕ್ತಾಯುಕ್ತಗಳನ್ನು ಪರಿಶೀಲಿಸಿಯೇ ಮಾಡಿದ್ದೇನೆ. ನಿನ್ನಲ್ಲಿ ನನಗೆ ರೂಢಮೂಲವಾಗಿರುವ ಅಗಾಧ ಪ್ರೇಮವೇ ಈ ಕಾರ್ಯವನ್ನು ಮಾಡಿಸಿತು. ಆದುದರಿಂದ ಪ್ರಭುವೇ! ನೀನು ನನ್ನ ವಿಷಯದಲ್ಲಿ ಕೋಪಗೊಳ್ಳಬೇಡ. ಪ್ರಕೃತದಲ್ಲಿ ನಾನಾವ ಕಾರ್ಯವನ್ನು ಮಾಡಬೇಕೋ ಅದನ್ನು ಆಜ್ಞಾಪಿಸು. ನಿನ್ನ ಅಭೀಷ್ಟಾನುಸಾರ ನಡೆಯಲು ಸಿದ್ಧನಾಗಿಯೇ ಇರುವೆನು ” ಎಂದು ಹೇಳಿದನು. ಯುದ್ಧಲುಬ್ಧನಾದ ರಾವಣಾಸುರನು ತನ್ನ ಸಾರಥಿಯು ಈ ರೀತಿ ನುಡಿಯಲು ಪರಮ ಸಂತುಷ್ಟನಾಗಿ ಅವನನ್ನು ಪ್ರಶಂಸಿಸಿ, “ ಸೂತ! ಜಾಗ್ರತೆಯಾಗಿ ರಥವನ್ನು ರಾಮನಿಗಭಿಮುಖವಾಗಿ ನಡೆಸು. ಈ ರಾವಣನು ಶತ್ರುನಿಗ್ರಹ ಮಾಡದೆ ಎಂದಿಗೂ ಹಿಂತಿರುಗುವುದಿಲ್ಲ ” ಎಂದು ಆಜ್ಞಾಪಿಸಿ ಅವನಿಗೆ ಸೊಗಸಾದ ಒಂದು ಕೈಕಡಗವನ್ನು ಬಹುಮಾನವಾಗಿ

ತತೋ ದ್ರುತಂ ರಾವಣವಾಕ್ಯಚೋದಿತಃ
ಪ್ರಚೋದಯಾಮಾಸ ಹಯಾನ್ ಸ ಸಾರಥಿಃ ।
ಸರಾಕ್ಷಸೇಂದ್ರಸ್ಯ ತತೋ ಮಹಾರಥಃ
ಕ್ಷಣೇನ ರಾಮಸ್ಯ ರಣಾಗ್ರತೋಽಭವತ್ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡುತ್ತರಶತತಮಸ್ಸರ್ಗಃ

ಮಾತನ್ನಾದರೆ, ಶ್ರುತ್ವಾ - ಕೇಳಿ, ಸಾರಥಿಃ - ಸಾರಥಿಯು, ಸನ್ನ್ಯವರ್ತತ - ಹಿಂತಿರುಗಿದನು. ॥ ೨೬ ॥ ತತಃ - ಬಳಿಕ, ರಾವ....ತಃ - ರಾವಣನ ಮಾತಿನಿಂದ ಪ್ರೇರಿತನಾದ, ಸಸಾರಥಿಃ - ಆ ಸಾರಥಿಯು, ಹಯಾನ್ - ಕುದುರೆಗಳನ್ನು, ದ್ರುತಂ - ಶೀಘ್ರವಾಗಿ, ಪ್ರಚೋದಯಾಮಾಸ - ನಡಸಿದನು, ತತಃ - ಬಳಿಕ, ರಾಕ್ಷಸೇಂದ್ರಸ್ಯ - ರಾವಣನ, ಸಮಹಾರಥಃ - ಆ ದೊಡ್ಡ ರಥವು, ಕ್ಷಣೇನ - ಕ್ಷಣಮಾತ್ರ ದಲ್ಲಿಯೇ, ರಾಮಸ್ಯ - ಶ್ರೀರಾಮನಿಗೆ, ರಣಾಗ್ರತಃ - ರಣರಂಗದ ಮುಂದುಗಡೆ, ಅಭವತ್ - ನಿಂತಿತು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡುತ್ತರಶತತಮಸ್ಸರ್ಗಃ.

ಕೊಟ್ಟನು. ಸಾರಥಿಯಾದರೋ ಪ್ರಭುವಾದ ರಾವಣನ ಅಪ್ಪಣೆಯಂತೆ ರಥವನ್ನು ರಣ ರಂಗಾಭಿಮುಖವಾಗಿ ನಡಸಿದನು. ರಾವಣವಾಕ್ಯಚೋದಿತನಾಗಿ ಆ ಸಾರಥಿಯು ಶೀಘ್ರವಾಗಿ ಕುದುರೆಗಳನ್ನು ತರುಬಲು ರಥವು ಜಾಗ್ರತೆಯಾಗಿಯೇ ಶ್ರೀರಾಮಮೂರ್ತಿಗಭಿಮುಖವಾಗಿ ಬಂದಿತು. ॥ ೨೦--೨೭ ॥

ಇಂತಿದು ರಾವಣರಥಪ್ರತ್ಯಾನಯನ ವೃತ್ತಾಂತನಿರೂಪಣವೆಂಬ ನೂರ
ಆರನೆಯ ಸರ್ಗವು ಸಮಾಪ್ತವಾದುದು.

ಶ್ರೀರಸ್ತು

ಆದಿತ್ಯಹೃದಯ ಪ್ರಾರಂಭಃ

ಶ್ಲೋ ॥ ತತೋ ಯುದ್ಧಪರಿಶ್ರಾಂತಂ ಸಮರೇ ಚಿಂತಯಾಸ್ಥಿತಂ ।
ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಂ ॥ ೧ ॥
ದೈವತೈಶ್ಚ ಸಮಾಗಮ್ಯ ದ್ರಷ್ಟುಮಭ್ಯಾಗತೋ ರಣಂ ।
ಉಪಾಗಮ್ಯಾಽಬ್ರವೀದ್ರಾಮಮಗಸ್ತ್ಯೋ ಭಗವಾನೃಷಿಃ ॥ ೨ ॥

ಪ್ರತಿಪದ ॥ ತತಃ - ಆ ಬಳಿಕ, ರಣಂ - ಯುದ್ಧವನ್ನು, ದ್ರಷ್ಟುಂ - ನೋಡುವುದಕ್ಕೆ, ದೈವತೈಶ್ಚ - ದೇವತೆಗಳೊಡನೆ, ಸಮಾಗಮ್ಯ - ಸೇರಿ, ಅಭ್ಯಾಗತಃ - ಬಂದಿರುವ, ಭಗವಾನ್ - ಪೂಜ್ಯನಾದ, ಅಗಸ್ತ್ಯಃ ಋಷಿಃ - ಅಗಸ್ತ್ಯ ಋುಷಿಯು, ಯುದ್ಧಪರಿಶ್ರಾಂತಂ - ಕಾಳಗದಲ್ಲಿ ಆಯಾಸಗೊಂಡಿರುವ, ಸಮರೇ - ಯುದ್ಧಭೂಮಿಯಲ್ಲಿ, ಚಿಂತಯಾ - ಯೋಚನೆಯಿಂದ, ಸ್ಥಿತಂ - ಇರುವ, ಅಗ್ರತಃ - ಮುಂದುಗಡೆ, ರಾವಣಂ - ರಾವಣನನ್ನು, ದೃಷ್ಟ್ವಾ - ನೋಡಿ, ಯುದ್ಧಾಯ - ಕಾಳಗಕ್ಕೆ, ಸಮುಪಸ್ಥಿತಂ - ನಿಂತಿರುವ, ರಾಮಂ - ಶ್ರೀರಾಮನನ್ನು, ಉಪಾಗಮ್ಯ - ಬಳಿಸಾರಿ, ಅಬ್ರವೀತ್ - ನುಡಿದನು. ॥ ೧-೨ ॥

ತಾತ್ಪರ್ಯ ॥ ಆ ಬಳಿಕ ಕಾಳಗವನ್ನು ನೋಡಲೋಸುಗ ಸಮಸ್ತ ದೇವತೆಗಳೊಡಗೂಡಿ ಬಂದಿದ್ದ ಪೂಜ್ಯನಾದ ಅಗಸ್ತ್ಯ ಮಹರ್ಷಿಯು, ಯುದ್ಧಕ್ರಿಯೆಯಿಂದ ಆಯಾಸಗೊಂಡು ರಾವಣನನ್ನು ಹೇಗೆ ಜಯಿಸಬೇಕೆಂದು ಯೋಚಿಸುತ್ತ, ತನ ಗೆದುರು ಬರುತ್ತಿರುವ ಆ ದಶಾನನನ್ನು ಕಂಡು ಯುದ್ಧಸನ್ನದ್ಧನಾಗುತ್ತಿರುವ ಶ್ರೀರಾಮಮೂರ್ತಿಯ ಬಳಿಗೈದಿ ಆತನನ್ನು ಕುರಿತು ಹೀಗೆ ನುಡಿದನು. ॥೧—೨॥

ವಿಶೇಷ ವಿಷಯಗಳು:—ರಾವಣಾಸುರನ ಅಪಾರವೈಭವವನ್ನು ಕಂಡು ಹೆದರಿದವನಂತೆ (ನಟಿಸುತ್ತಿರುವ) ತೋರುತ್ತಿರುವ ಪೂಜ್ಯನಾದ ಶ್ರೀರಾಮಮೂರ್ತಿಯು, ಷಡ್ಗುಣೈಶ್ವರ್ಯಸಂಪನ್ನನಾದ ಬ್ರಹ್ಮನಿಂದ ಅನುಗ್ರಹ ರೂಪವಾಗಿ ಬಂದ ರಾವಣನ ಅಖಂಡ ವೈಭವವನ್ನು ಹಿಂತಿರುಗಿಸಲು ಬ್ರಹ್ಮಾನುಗ್ರಹವೇ ಅವಶ್ಯಕವಾಗಿ ಬೇಕಾಗಿದ್ದುದರಿಂದ ವಿದ್ಯಾಮಂಡಲ ಮಹರ್ಷಿಗಳಾದ ಅಗಸ್ತ್ಯರು ಬ್ರಹ್ಮರೂಪವಾದ ಆದಿತ್ಯದೇವತಾಕವಾದ ಆದಿತ್ಯಹೃದಯ ಸ್ತೋತ್ರವನ್ನು ಆತನಿಗೆ ಉಪದೇಶ ಮಾಡುವರು. (೧)

ತಿಲಕ ವ್ಯಾಖ್ಯಾನದ ಪ್ರಕಾರ ಋಷಿ ಛಂದಾದಿಗಳನ್ನು ಈ ರೀತಿ ತಿಳಿಯತಕ್ಕದ್ದು.

ಅಸ್ಯಸ್ತೋತ್ರಸ್ಯ:—ಅಗಸ್ತ್ಯಋಷಿಃ, ಅನುಷ್ಟುಪ್‌ಛಂದಃ, ಆದಿತ್ಯಹೃದಯಭೂತೋ ಭಗವಾನ್ ಬ್ರಹ್ಮಾ ದೇವತಾ, ನಿರಸ್ತಾಶೇಷ ವಿಘ್ನತಯಾ ಬ್ರಹ್ಮವಿದ್ಯಾಸಿದ್ಧೌ, ಸರ್ವತ್ರ ಜಯಸಿದ್ಧೌ ಚ ವಿನಿಯೋಗಃ.

ಈ ಸ್ತೋತ್ರ ಮಹಾಮಂತ್ರಕ್ಕೆ ಷಡಂಗನ್ಯಾಸವು ಪ್ರಣವದಿಂದ. ಅಥವಾ "ರಶ್ಮಿಮತೇ ನಮಃ" ಎಂಬುದರಿಂದಾದರೂ ಮಾಡತಕ್ಕದ್ದು (ಕೆಲವರು ಗಾಯತ್ರಿಯಿಂದ ಷಡಂಗನ್ಯಾಸ ಮಾಡಬೇಕೆಂದು ಹೇಳುವರು.)

ಸ್ತೋತ್ರ, "ತತೋ ಯುದ್ಧಪರಿಶ್ರಾಂತಂ" ಎಂಬ ಶ್ಲೋಕದಿಂದ ಮೊದಲ್ಗೊಂಡು, "ತ್ವರಸ್ವ" ಎಂಬುದರವರೆಗೂ.

ಇಲ್ಲಿ ಶ್ರೀರಾಮಚಂದ್ರನು ರಾವಣನ ವೈಭವದಿಂದ ಭೀತನಂತೆ ನಟಿಸಿದ್ದು, ಅಗಸ್ತ್ಯ ಮಹರ್ಷಿಗಳೈತಂದು ಆತನಿಗೆ ಆದಿತ್ಯಹೃದಯೋಪದೇಶ ಮಾಡಿದ್ದು, ಇವೆಲ್ಲ ಲೋಕಾನುಗ್ರಹಕ್ಕೋಸ್ಕರವೆಂದೇ ತಿಳಿಯಬೇಕು.

ಜಯಸಾಧನ ವಸ್ತುವನ್ನು ಪ್ರಕಾಶಗೊಳಿಸಿ ಲೋಕೋಪಕಾರ ಮಾಡಿರುವುದೇ ಈ ಸ್ತೋತ್ರದ ತತ್ತ್ವ.

"ಆದಿತ್ಯಹೃದಯಂ" ಎಂಬ ಹೆಸರು ಈ ಸ್ತೋತ್ರಕ್ಕೆ ಬಂದ ವಿಷಯದಲ್ಲಿ ವ್ಯಾಖ್ಯಾತೃಗಳು ಮೂರು ಬಗೆಯಾಗಿ ಹೇಳುತ್ತಾರೆ.

(೧) ಆದಿತ್ಯಸ್ಯ-ಹೃದಯಂ (ಸೂರ್ಯನನ್ನು ಪ್ರಕಟಿಸುವುದು ಎಂದರೆ ಸೂರ್ಯ ಪ್ರಸಾದಕವೆಂದು ಅರ್ಥ.)

(೨) ಆದಿತ್ಯಸ್ಯ-ಹೃದಯಂ, "ಯ ಏಷೋಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ" ಎಂಬ ಶ್ರುತಿಯಲ್ಲಿರುವ "ಆದಿತ್ಯ" ಶಬ್ದಕ್ಕೆ ಹೇಗೋ ಹಾಗೆ ಇಲ್ಲಿಯ "ಆದಿತ್ಯ" ಶಬ್ದಕ್ಕೂ ಆದಿತ್ಯ (ಸೂರ್ಯ) ಮಂಡಲವೆಂದು ಅರ್ಥ. "ತಸ್ಯ ಹೃದಯಂ" ಎಂದರೆ ಆ ಮಂಡಲದಲ್ಲಿರುವವನು—ಅಂತರಾದಿತ್ಯ ವಿದ್ಯೆಯಿಂದ ಉಪಾಸ್ಯನಾದ ಪರಮಾತ್ಮ, ಆ ಪರಮಾತ್ಮನನ್ನು ಪ್ರತಿಪಾದಿಸುವಂಥದು" "ಆದಿತ್ಯ ಹೃದಯಂ" ಅಥವಾ

(೩) "ಆದಿತ್ಯಸ್ಯ-ಹೃತ್-ಅಯಃ" (ಆದಿತ್ಯಹೃದಯಃ) "ಯ ಆದಿತ್ಯೇ ತಿಷ್ಠನ್ ಯ ಆದಿತ್ಯೋಂತರೋಯಮಯತಿ" ಎಂಬ ಶ್ರುತಿಯಂತೆ ಆದಿತ್ಯನ ಹೃದಯವನ್ನೊಳಗೊಂಡವನು ಯಾವನೋ ಅವನು (ಶ್ರೀಮನ್ನಾರಾಯಣನು). ಅವನನ್ನು ಪ್ರತಿಪಾದಿಸುವುದು "ಆದಿತ್ಯಹೃದಯಂ"

ವಿಶಿಷ್ಟಾದ್ವೈತ ವ್ಯಾಖ್ಯಾತೃಗಳಾದ ಗೋವಿಂದರಾಜರು ಈ ಆದಿತ್ಯಹೃದಯ ಸ್ತೋತ್ರವು ಪ್ರಕ್ಷಿಪ್ತವೆಂಬುದು ಸಕಾರಣವಾಗಿ ಪ್ರತಿಪಾದಿಸುತ್ತಾರೆ. ಅದನ್ನು ಸಂಗ್ರಹವಾಗಿ ಇಲ್ಲಿ ಕೊಡಲಾಗಿದೆ.

ಈ ಆದಿತ್ಯಹೃದಯ ಸ್ತೋತ್ರವು ಕೆಲವು ಪ್ರಾಚೀನ ರಾಮಾಯಣ ಪ್ರತಿಗಳಲ್ಲಿ ದೊರಕುವುದಿಲ್ಲ. ರಾಮಾಯಣಕ್ಕೆ ಪ್ರಾಚೀನ ವ್ಯಾಖ್ಯಾತೃವಾದ ಉಡಾರಿಯು ಈ ಸರ್ಗಕ್ಕೆ ವ್ಯಾಖ್ಯಾನವನ್ನು ಬರೆದಿರುವುದಿಲ್ಲ. ರಾಮಾಯಣವು ಆದಿಯಿಂದ ಶ್ರೀಮನ್ನಾರಾಯಣ ಪರತ್ವವನ್ನೇ ಪ್ರತಿಪಾದಿಸುವುದಾಗಿದ್ದು ಈಗ ಈ ಸ್ತೋತ್ರದಲ್ಲಿ ಸೂರ್ಯ ಪರತ್ವ ದ್ಯೋತಕವಾಗಿದೆ. ಇದೂ ಅಲ್ಲದೆ ಯುದ್ಧಕಾಂಡದಲ್ಲಿ ೧೩೦ ಸರ್ಗಗಳೆಂದು ಉಡಾರಿಯು ಹೇಳಿರುವನು. ಈ ಸರ್ಗವು ಸೇರಿದರೆ ೧೩೧ ಸರ್ಗಗಳು ಆಗುತ್ತವೆ. ಅವರಿಂದ ಬಹುತರವಾಗಿ ಈ ಸ್ತೋತ್ರವು ಪ್ರಕ್ಷಿಪ್ತವೆಂದೇ ತೋರುವುದಾದರೂ ಬಹು ಪ್ರಾಚೀನವಾದುದರಿಂದಲೂ, ಅನೇಕ ಶಿಷ್ಟಾಗ್ರಣಿಗಳು ಐಹಿಕಾಮುಷ್ಮಿಕ ಫಲಸಾಧನೆಗಾಗಿ ಪಠನ ಪಾರಾಯಣಾದಿಗಳನ್ನು ಮಾಡುತ್ತಿರುವುದರಿಂದಲೂ ನಾರಾಯಣ ಪರವಾಗಿಯೇ ವ್ಯಾಖ್ಯಾನಿಸಿರುವುದಾಗಿ ಬರೆದಿರುತ್ತಾರೆ.

ಇಲ್ಲಿ ಒಂದು ವಿಚಾರವನ್ನು ಮಾತ್ರ ವಾಚಕರ ಗಮನಕ್ಕೆ ತರಬಯಸುತ್ತೇವೆ.

ಗೋವಿಂದರಾಜರು, "ರಾಮಾಯಣದಲ್ಲಿ ಉಪಕ್ರಮ ಮೊದಲುಗೊಂಡು ಉಪಸಂಹಾರದವರೆಗಣ ಸಮಗ್ರ ಗ್ರಂಥವೂ ನಾರಾಯಣ ಪರತ್ವವನ್ನೇ ಪ್ರತಿಪಾದಿಸುತ್ತದೆ" ಎಂದು ಹೇಳುತ್ತಾರೆ.

ತಿಲಕ ವ್ಯಾಖ್ಯಾನಕಾರರಾದ ರಾಮಪಂಡಿತರು ರಾಮಾಯಣದಲ್ಲಿ ಕೆಲಮಟ್ಟಿಗೆ ಸಾಂಖ್ಯವನ್ನು ನಿರೂಪಿಸಿರುತ್ತಾರೆ.

ಮಹೇಶ್ವರ ತೀರ್ಥರು ಅದ್ವೈತ ವೇದಾಂತ ಪ್ರತಿಪಾದಕವಾದ ಪರಬ್ರಹ್ಮವನ್ನು ನಿರೂಪಣೆ ಮಾಡಿ, ತದುಪಾಸನಾ ವಿಧಾನ ಪುರಸ್ಸರವಾದ ಅನುಷ್ಠಾನವನ್ನೇ ರಾಮಾಯಣ ವ್ಯಾಖ್ಯಾನದಲ್ಲಿ ಹಲವೆಡೆಗಳಲ್ಲಿ ನಿರೂಪಿಸಿರುತ್ತಾರೆ.

ಅಂತು ವಾಚಕರು ತಮತಮಗೆ ಸೂಕ್ತವಾದುದನ್ನು ಗ್ರಹಿಸಿ ಕೃತಾರ್ಥರಾಗುವುದು ಶಿಷ್ಟಾಚಾರವಾಗಿದೆ.

ಮತ್ತೊಂದು ವಿಚಾರ:—ವಾಲ್ಮೀಕಿಗಳು,

"ಏನ ಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷು ಚ ।
ಕೀರ್ತಯನ್ ಪುರುಷಃ ಕಶ್ಚಿನ್ನಾವಸೀದತಿ ರಾಘವ ! ॥"

(ಆಪತ್ತುಗಳಲ್ಲಿಯೂ, ಕಷ್ಟಗಳಲ್ಲಿಯೂ, ಭಯ ನಿಮಿತ್ತ ಸಮಯಗಳಲ್ಲಿಯೂ ಈ ಸ್ತೋತ್ರವನ್ನು ಹೇಳಿಕೊಂಡ ಯಾವನೂ ದುಃಖಕ್ಕೀಡಾಗುವುದಿಲ್ಲ.)

ಎಂದು ಈ ಸ್ತೋತ್ರಕ್ಕೆ ಫಲಶ್ರುತಿ ಹೇಳಿದ್ದಾರೆ.

"ಕಶ್ಚಿತ್" ಎನ್ನುವ ಕಡೆ "ದ್ವಿಜಃ" (ಬ್ರಾಹ್ಮಣ) ಎಂದು ತಿಲಕ ಮತ್ತು ಮಹೇಶ್ವರ ತೀರ್ಥೀಯ ವ್ಯಾಖ್ಯಾನಗಳು. ರಾಮಾಯಣ ಟೀಕಾ ಮತ್ತು ಗೋವಿಂದರಾಜೀಯಗಳು, "ಕಶ್ಚಿದಿತ್ಯಧಿಕಾರಿ ನಿಯಮಾಭಾವೋದರ್ಶಿತಃ" ಎಂದು ಬರೆದು ಯಾರಾದರೂ ಪಠನ ಮಾಡಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

ಶ್ಲೋ ॥ "ರಾಮ! ರಾಮ! ಮಹಾಬಾಹೋ! ಶೃಣು ಗುಹ್ಯಂ ಸನಾತನಂ ।
ಯೇನ ಸರ್ವಾನರೀನ್ವತ್ಸ! ಸಮರೇ ವಿಜಯಿಷ್ಯಸಿ ॥ ೩ ॥
ಆದಿತ್ಯಹೃದಯಂ ಪುಣ್ಯಂ ಸರ್ವ ಶತ್ರು ವಿನಾಶನಮ್ ।
ಜಯಾವಹಂ ಜಪೇನ್ನಿತ್ಯಮಕ್ಷಯ್ಯಂ ಪರಮಂ ಶಿವಂ ॥ ೪ ॥
ಸರ್ವಮಂಗಲಮಂಗಲ್ಯಂ ಸರ್ವಪಾಪ ಪ್ರಣಾಶನಂ ॥
ಚಿಂತಾಶೋಕಪ್ರಶಮನಮಾಯುರ್ವರ್ಧನಮುತ್ತಮಂ ॥ ೫ ॥

ಪ್ರತಿಪದ ॥ ರಾಮರಾಮ - ಶ್ರೀರಾಮ.ರಾಮಾ, ಮಹಾಬಾಹೋ - ದೊಡ್ಡ ಭುಜಗಳುಳ್ಳವನೇ, ವತ್ಸ - ಮಗುವೇ, ಯೇನ - ಯಾವುದರಿಂದ, ಸಮರೇ - ಕಾಳೆಗದಲ್ಲಿ, ಸರ್ವಾನರೀನ್ - ಶತ್ರುಗಳನ್ನೆಲ್ಲ, ವಿಜಯಿಷ್ಯಸಿ - ಗೆಲ್ಲುವೆಯೋ, (ತತ್ - ಅಂತಹ) ಸನಾತನಂ - (ವೇದಗಳಂತೆ) ನಿತ್ಯವಾದ, ಗುಹ್ಯಂ - ರಹಸ್ಯವಾದ, ಪುಣ್ಯಂ - ಪರಮಪವಿತ್ರವಾದ, ಸರ್ವಶತ್ರುವಿನಾಶನಂ - ಶತ್ರುಗಳನ್ನೆಲ್ಲ ನಾಶಗೊಳಿಸುವ, ಜಯಾವಹಂ - ಜಯಪ್ರದವಾದ, ನಿತ್ಯಂ - ನಿತ್ಯವೂ, ಜಪ್ಯಂ - ಜಪಿಸಲು ಯೋಗ್ಯವಾದ, ಅಕ್ಷಯ್ಯಂ - ಅನಂತಫಲಪ್ರದಾಯಕವಾದ, (ಮೋಕ್ಷಪ್ರದವಾದ) ಪರಮಂಶಿವಂ - ಪರಮಪಾವನವಾದ, ಸರ್ವಮಂಗಲಮಂಗಲ್ಯಂ - ಎಲ್ಲ ಮಂಗಳಗಳಿಗೂ ಮಂಗಳಕರವಾದ, ಸರ್ವಪಾಪಪ್ರಣಾಶನಂ - ಎಲ್ಲ ಪಾಪಗಳನ್ನೂ ನಾಶಗೊಳಿಸುವ, ಚಿಂತಾಶೋಕಪ್ರಶಮನಂ - ಚಿಂತೆ ಮತ್ತು ದುಃಖಗಳನ್ನು ಅಡಗಿಸುವ, ಆಯುರ್ವರ್ಧನಂ - ಆಯುಸ್ಸನ್ನು ವೃದ್ಧಿಗೊಳಿಸುವ, ಉತ್ತಮಂ - ಶ್ರೇಷ್ಠವಾದ, ಆದಿತ್ಯಹೃದಯಂ - ಆದಿತ್ಯಹೃದಯ ಸ್ತೋತ್ರವನ್ನು, ಶೃಣು - ಕೇಳು. ॥ ೩-೫ ॥

ತಾತ್ಪರ್ಯ ॥ ಎಲೈ ಮಹಾಬಾಹುವೇ, ವತ್ಸ ರಾಮಚಂದ್ರಾ! ಪುರಾತನವಾದ ರಹಸ್ಯವೊಂದನ್ನು ನಿನಗೆ ತಿಳಿಸುವೆನು. ಲಾಲಿಸುವವನಾಗು. ಇದರಿಂದ ನೀನು ರಣಾಂಗಣದಲ್ಲಿ ಸಮಸ್ತ ಶತ್ರುಗಳನ್ನೂ ಜಯಿಸಲು ಸಮರ್ಥನಾಗುವೆ. ಮಹಾ ಪುಣ್ಯಪ್ರದವೂ, ಸಮಸ್ತ ಶತ್ರುವಿನಾಶಕವೂ, ವಿಜಯಪ್ರದವೂ, ಶಾಶ್ವತವಾದ ಪದವಿಪ್ರದವೂ, ಪರಮಪವಿತ್ರವೂ, ಸಮಸ್ತ ಮಂಗಲಮಂಗಲ್ಯವೂ, ಸಮಸ್ತ ಪಾಪಪ್ರಣಾಶಕವೂ, ಆಧಿವ್ಯಾಧಿ ನಿವಾರಕವೂ, ದೀರ್ಘಾಯುಷ್ಯಪ್ರದವೂ, ಉತ್ತಮೋತ್ತಮವೂ ಆದ (ರಹಸ್ಯಾತಿರಹಸ್ಯವಾದ) ಆದಿತ್ಯಹೃದಯ ಸ್ತೋತ್ರವನ್ನು ನಿನಗೆ ಹೇಳುವೆನು. ಕೇಳು. ॥ ೩-೫ ॥

ವಿಶೇಷವಿಷಯಗಳು:—(೧) ಶ್ರೀರಾಮಮೂರ್ತಿಯು (ರಾವಣನನ್ನು ಜಯಿಸುವುದು ಹೇಗೆಂದು) ಚಿಂತಾವಿಷ್ಟನಾಗಿದ್ದುದರಿಂದಲೂ, ತಮಗೆ ಅತನಲ್ಲಿ ಆದರಾತಿಶಯವಿದ್ದುದರಿಂದಲೂ ಪೂಜ್ಯರಾದ ಅಗಸ್ತ್ಯರು ಇಲ್ಲಿ "ರಾಮ ರಾಮ!" ಎಂದು ಎರಡು ಸಲ ಆತನನ್ನು ಸಂಬೋಧಿಸುತ್ತಾರೆ.

(೨) "ಮಹಾಬಾಹೋ !" ಎಂದುದರಿಂದ, "ಅತುಲಪರಾಕ್ರಮಿಯಾದ ನೀನು ಈ ರೀತಿ ಚಿಂತೆಗೆ ಗುರಿಯಾಗುವುದು ತಕ್ಕುದಲ್ಲ" ಎಂದೂ, "ವತ್ಸ" ಎಂದುದರಿಂದ ತನಗಿರುವ ನಿರತಿಶಯ ವಾತ್ಸಲ್ಯವನ್ನು ಪ್ರಕಟಿಸಿದಂತಾಯಿತೆಂದೂ ಗ್ರಹಿಸಬೇಕು.

(೩) "ಗುಹ್ಯಂ-ರಹಸ್ಯಂ" "ಸನಾತನಂ-ಪ್ರವಾಹಾನಾದಿ ಭೂತಂ" ಇದರಿಂದ ಈ ಆದಿತ್ಯಹೃದಯವು ಸ್ವಕಪೋಲಕಲ್ಪಿತವಾಗಿಲ್ಲದೆ ವೇದದಂತೆ ಅನಾದಿ ಸಿದ್ಧವೂ, ಆರ್ಷವೂ ಆದುದೆಂದು ತಿಳಿಯತಕ್ಕದ್ದು. (ಆಧುನಿಕತ್ವ ನಿರಾಸಾರ್ಥಂ ಸನಾತನಮಿತಿ).

(೪) "ಜಪ್ಯಂ" ಕತಕರು ೧೫೫ ನಾಮ (ಮಂತ್ರ)ಗಳಿಂದ ಈ ಸ್ತೋತ್ರವನ್ನು ಜಪಿಸತಕ್ಕದ್ದೆಂದು ಹೇಳುತ್ತಾರೆ. ಮಹೇಶ್ವರತೀರ್ಥರು ೧೦೮ ನಾಮ (ಮಂತ್ರ)ಗಳಿಂದ ಈ ಸ್ತೋತ್ರವನ್ನು ಜಪಿಸಬೇಕೆಂದು ಅಭಿಪ್ರಾಯಪಡುತ್ತಾರೆ.

(೫) ರಾಮಾಯಣ ಶಿರೋಮಣಿಕಾರರು "ಆದಿತ್ಯಹೃದಯಂ" ಎಂಬ ಶಬ್ದಕ್ಕೆ "ಯ ಏಷೋಂತರಾದಿತ್ಯೇ" ಎಂಬ ಶ್ರುತಿಯನ್ನೇ ಉದಾಹರಿಸಿ ಆದಿತ್ಯಮಂಡಲ ಮಧ್ಯವರ್ತಿಯಾದ ಶ್ರೀರಾಮ (ಇಲ್ಲಿ ರಾಮ ಎಂದರೆ "ರಮಂತೇಯೋಗಿನೋನಂತೇ" ಎಂಬ ಶ್ರುತಿ ಪ್ರತಿಪಾದ್ಯನಾದ ಪರಬ್ರಹ್ಮವೆಂದರ್ಥ) ಬ್ರಹ್ಮಪ್ರತಿಪಾದಕವಾದದ್ದೆಂದು ಟೀಕೆ ಬರೆದಿರುತ್ತಾರೆ.

ಶ್ಲೋ || ರಶ್ಮಿಮಂತಂ ಸಮುದ್ಯಂತಂ ದೇವಾಸುರ ನಮಸ್ಕೃತಂ |
ಪೂಜಯಸ್ವ ವಿವಸ್ವಂತಂ ಭಾಸ್ಕರಂ ಭುವನೇಶ್ವರಂ || ೬ ||

ರಶ್ಮಿಮತೇನಮಃ (೧) ಸಮುದ್ಯತೇನಮಃ (೨) ದೇವಾಸುರನಮಸ್ಕೃತಾಯನಮಃ (೩) ವಿವಸ್ವತೇನಮಃ (೪) ಭಾಸ್ಕರಾಯನಮಃ (೫) ಭುವನೇಶ್ವರಾಯನಮಃ (೬)

ಪ್ರತಿಪದ || ರಶ್ಮಿಮಂತಂ - ಪ್ರಶಸ್ತವಾದ ಕಿರಣಗಳುಳ್ಳ, ಸಮುದ್ಯಂತಂ - ಉದಯಗಿರಿಯಲ್ಲಿ ಉದಿಸುತ್ತಿರುವ, ದೇವಾಸುರ ನಮಸ್ಕೃತಂ - ದೇವತೆಗಳಿಂದಲೂ, ಅಸುರರಿಂದಲೂ ನಮಸ್ಕರಿಸಲ್ಪಟ್ಟ, ವಿವಸ್ವಂತಂ - ಪ್ರಭೆಯಿಂದ ಸಮಸ್ತ ಪದಾರ್ಥಗಳನ್ನು ಹೊದಿಸುವವನಾದ, ಭಾಸ್ಕರಂ - ಕಾಂತಿಯನ್ನುಂಟುಮಾಡುವ, ಭುವನೇಶ್ವರಂ - ಪ್ರಪಂಚಕ್ಕೆ ಒಡೆಯನಾದ (ಸೂರ್ಯನನ್ನು), ಪೂಜಯಸ್ವ-ಪೂಜಿಸು. || ೬ ||

ತಾತ್ಪರ್ಯ || ಪ್ರಶಸ್ತವಾದ ಕಿರಣಗಳುಳ್ಳವನೂ, ಅಧೋರ್ದಯಾದಿಗಳಿಲ್ಲದೆ ಚೆನ್ನಾಗಿ ಉದಿಸುವವನೂ, ದೇವತೆಗಳಿಂದಲೂ, ರಾಕ್ಷಸರಿಂದಲೂ ನಮಸ್ಕೃತನಾದವನೂ, ತನ್ನ ತೇಜಸ್ಸಿನಿಂದಲೇ ಇತರ ತೇಜಸ್ಸುಗಳಿಗೆಲ್ಲ ತೇಜಸ್ವಿತೆಯನ್ನುಂಟುಮಾಡುವಾತನೂ, ಭಾಸ್ಕರನೂ, ತ್ರಿಭುವನಾಧಿಪನೂ ಆದ (ಈ ಸೂರ್ಯ ಪರಮಾತ್ಮನನ್ನು ಈ ಸ್ತೋತ್ರದಿಂದ) ಸಂತೋಷಪಡಿಸು. || ೬ ||

ವಿಶೇಷವಿಷಯಗಳು:—ರಶ್ಮಿಮಂತಂ-(ಅ) ಪಂಚೇಂದ್ರಿಯಗಳ ಮೂಲಕವಾದ ಅನೇಕ ಜ್ಞಾನ ಕಿರಣಗಳುಳ್ಳವನು. (ಆ) ಭಕ್ತರ ನಡುವೆ ಪ್ರಕಾಶಿಸುತ್ತಿರುವವನು. (ಇ) "ತಸ್ಯಭಾಸಾಸರ್ವಮಿದಂ ವಿಭಾತಿ" ಎಂಬ ಶ್ರುತ್ಯಾನುಸಾರ ಎಲ್ಲಾ ತೇಜಸ್ಸುಗಳಿಗೂ ಮೂಲತೇಜಸ್ಸ್ವರೂಪನಾದವನು. (ಈ) (ರಶ್ಮಯಃ ಅಸ್ಯಸಂತೀತಿ) "ರಶ್ಮಿಗಂ ರಶ್ಮಿನಾಂ ಮಧ್ಯೇವಸಂತಂ" ಎಂಬ ಶ್ರುತಿಪ್ರಮಾಣದಿಂದ ನಿತ್ಯ ಸೂರಿಗಳ ಮಧ್ಯದಲ್ಲಿ ಪ್ರಕಾಶಿಸುತ್ತಿರುವವನು. (ಉ) ಸ್ವರ್ಣವರ್ಣಗಳಾದ ಪ್ರಶಸ್ತ ಕಿರಣಗಳುಳ್ಳವನು.

ಸಮುದ್ಯಂತಂ—(ಅ) "ಯಃ ಪೂರ್ವಾಯ ವೇಧಸೇ ನವೀಯಸೇ" ಎಂಬ ಶ್ರುತ್ಯನುಸಾರವಾಗಿ ನವನವೀನನಾದ ಕಾಂತ್ಯತಿಶಯದಿಂದ ಉದಿಸುವವನು. (ಆ) ಪ್ರಪಂಚದಲ್ಲಿರುವ ಪ್ರಾಣಿಗಳೆಲ್ಲವನ್ನೂ, ಭೂರ್ಭುವಸ್ಸುವರಾದಿ ಸಮಸ್ತ

ಲೋಕಗಳನ್ನೂ ಅವವುಗಳ ವ್ಯಾಪಾರಗಳಲ್ಲಿ ನಿಯೋಗಿಸುವವನು. (ಇ) ಬ್ರಹ್ಮ, ವಿಷ್ಣು, ಮಹೇಶ್ವರಾದಿ ಸಮಸ್ತ ದೇವತಗಳನ್ನೂ ಅವರವರ ಕಾರ್ಯಗಳಲ್ಲಿ ನಿರತರಾಗುವಂತೆ ಪ್ರವರ್ತಿಸುವವನು. (ಈ) ಅರ್ಘೋದಯಾದಿಗಳಿಲ್ಲದೆ ಸ್ಫುಟವಾಗಿ ಉದಿಸುವವನು.

ಸಮುದ್ಯಂತಂ ಎಂಬ ಪದವು, ಧ್ಯೇಯಾಭಿಪ್ರಾಯದಿಂದಲೇ ಹೇಳಲ್ಪಟ್ಟಿರುವುದಾಗಲಿ ಸೂರ್ಯೋದಯ ಕಾಲವೆಂಬ ಅರ್ಥದ್ಯೋತಕವಾಗಿಯಲ್ಲ. ಏಕೆಂದರೆ ಅಗಸ್ತ್ಯರು ಅಪರಾಹ್ಣ ಕಾಲದಲ್ಲಿ ಶ್ರೀರಾಮನ ಬಳಿಗೈದಿ ಈ ಸ್ತೋತ್ರವನ್ನು ಉಪದೇಶಿಸಿದರೆಂದು ತಿಳಿಯಬರುತ್ತದೆ. ಆದರಿಂದಲೇ ಲಕ್ಷ್ಮಣನು ಸಹ ಹಿಂದೆ "ಅಹಂತುವಧ ಮಿಚ್ಛಾಮಿ ಶ್ರೀಘ್ರಮಸ್ಯ ದುರಾತ್ಮನಃ । ಯಾವದಸ್ತಂ ನಯಾತ್ಯೇಷ ಕೃತಕರ್ಮಾ ದಿವಾಕರಃ ॥" ಸಾಯಂಕಾಲವಾಗುವದರೊಳಗಾಗಿ ರಾವಣನನ್ನು ಸಂಹರಿಸಬೇಕೆಂದು ಹೇಳಿದನು. ಇದು ಗೋವಿಂದರಾಜೀಯಾಭಿಪ್ರಾಯ, ತಿಲಕಕಾರರಾದ ರಾಮಪಂಡಿತರು ಮುಂದಣ ಏಳನೆಯ ಶ್ಲೋಕದಲ್ಲಿ "ಲೋಕಾನ್ ಪಾತಿಗಭಸ್ತಿಭಿಃ" ಎಂಬೆಡೆ "ಪಾತಿ" ಎಂಬ ಕ್ರಿಯಾಪದ ಬಲದಿಂದ ಅಗಸ್ತ್ಯರು ಸೂರ್ಯನಿಗೆ ಎದುರಾಗಿ ನಿಂತು ಆತನನ್ನು ನಿರ್ದೇಶಿಸಿಯೇ ಶ್ರೀರಾಮನಿಗೆ ಈ ಸ್ತೋತ್ರವನ್ನು ಉಪದೇಶ ಮಾಡಿರುವುದರಿಂದ ಸೂರ್ಯೋದಯಕಾಲದಲ್ಲಿಯೇ ಸ್ತೋತ್ರದಾನವೆಂದು ಬರೆದಿರುತ್ತಾರೆ.

(ಅ) ದೇವಾಸುರನಮಸ್ಕೃತಂ—ಸಾತ್ವಿಕ ವೃತ್ತಿಯುಳ್ಳವರು ರಾಜಸ ತಾಮಸ ವೃತ್ತಿಯುಳ್ಳವರು ಈ ಉಭಯರಿಂದಲೂ ನಮಸ್ಕರಿಸಲ್ಪಟ್ಟವನು. (ಆ) ಸಾಕ್ಷಿಚೈತನ್ಯನಾಗಿರುವುದರಿಂದ ಸಾರ್ವಕಾಲಿಕವಾಗಿ ಸಮಸ್ತರಿಂದಲೂ ಉಪಾಸ್ಯನಾದವನು.

(ಅ) ವಿವಸ್ವಂತಂ - ಸಮಸ್ತೈಶ್ವರ್ಯಗಳಿಗೂ ನಿಧಿಯಾದವನು. ಎಲ್ಲಾ ವ್ಯವಹಾರಗಳಿಗೂ ಅಧಿಷ್ಠಾನ ದೇವತೆಯಾಗಿರುವುದರಿಂದಲೂ, ತನ್ನ ಉದಯದಿಂದ ಸಮಸ್ತ ವ್ಯವಹಾರಗಳಿಗೂ ಪ್ರವರ್ತಕನಾಗಿರುವುದರಿಂದಲೂ ಈ ಹೆಸರು ಬಂದಿದೆ. (ಆ) ಅಪೂರ್ವವಾದ ಮಣಿಯನ್ನು ಧರಿಸಿರುವವನು. (ರಾ. ಟೀ.).

(ಅ) ಭಾಸ್ಕರಂ-ಜ್ಞಾನಜ್ಞೇಯಸ್ವರೂಪಗಳ ಅರಿವನ್ನುಂಟುಮಾಡುವವನು.

(ಅ) ಭುವನೇಶ್ವರಂ-ಮಳೆಬಿಸಿಲುಗಳಿಂದ ಸಮಸ್ತ ಲೋಕಗಳನ್ನು ಸಲಹುವವನು. (ಆ) ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮುಮ್ಮೂರ್ತಿಗಳ ಮೂಲಕ ಲೋಕಗಳನ್ನು ಕಾಪಾಡುವವನು. (ಇ) ಮೂಲಾದಿ ಬ್ರಹ್ಮರಂಧ್ರ ಪರ್ಯಂತವಾದ ಲೋಕಗಳಿಗೆ ಆಧಾರವಾದ ಭೂಮಿಕೆಗಳಿಗೆ ಅಧಿಷ್ಠಾತೃವಾದವನು. [ಇಂಥಾ ಸೂರ್ಯಭಗವಂತನನ್ನು (ಆದಿತ್ಯಹೃದಯ ಸ್ತೋತ್ರದಿಂದ) ಸಂತೋಷಗೊಳಿಸು.]

ಶ್ಲೋ ॥ ಸರ್ವದೇವಾತ್ಮಕೋಹ್ಯೇಷ ತೇಜಸ್ವೀ ರಶ್ಮಿಭಾವನಃ ।
ಏಷ ದೇವಾಸುರಗಣಾನ್ ಲೋಕಾನ್ ಪಾತಿ ಗಭಸ್ತಿಭಿಃ ॥ ೭ ॥
ಏಷ ಬ್ರಹ್ಮಾಚ ವಿಷ್ಣುಶ್ಚ ಶಿವಸ್ಕಂದಃ ಪ್ರಜಾಪತಿಃ ।
ಮಹೇಂದ್ರೋ ಧನದಃ ಕಾಲೋ ಯಮಸ್ಸೋಮೋ ಹ್ಯಪಾಂಪತಿಃ ॥೮॥
ಪಿತರೋ ವಸವಸ್ಸಾಧ್ಯಾಹ್ಯಶ್ವಿನೌ ಮರುತೋ ಮನುಃ ।
ವಾಯುರ್ವಹ್ನಿಃ ಪ್ರಜಾಪ್ರಾಣ ಋತುಕರ್ತಾ ಪ್ರಭಾಕರಃ ॥ ೯ ॥

ಸರ್ವದೇವಾತ್ಮಕಾಯನಮಃ (೭) ತೇಜಸ್ವಿನೇನಮಃ (೮) ರಶ್ಮಿಭಾವನಾಯನಮಃ (೯) ದೇವಾಸುರಗಣಪಾಲಕಾಯನಮಃ (೧೦) ಬ್ರಹ್ಮಣೇನಮಃ (೧೧) ವಿಷ್ಣವೇನಮಃ (೧೨) ಶಿವಾಯನಮಃ (೧೩) ಸ್ಕಂದಾಯನಮಃ (೧೪) ಪ್ರಜಾಪತಯೇನಮಃ (೧೫) ಮಹೇಂದ್ರಾಯನಮಃ (೧೬) ಧನದಾಯನಮಃ (೧೭) ಕಾಲಾಯನಮಃ (೧೮) ಯಮಾಯನಮಃ (೧೯) ಸೋಮಾಯನಮಃ (೨೦) ಅಪಾಂಪತಯೇನಮಃ (೨೧) ಪಿತೃದೇವತಾಭ್ಯೋನಮಃ (೨೨) ವಸುಮೂರ್ತಯೇನಮಃ (೨೩) ಸಾಧ್ಯಮೂರ್ತಯೇನಮಃ (೨೪) ಅಶ್ವಿಮೂರ್ತಯೇನಮಃ (೨೫) ಮರುನ್ಮೂರ್ತಯೇನಮಃ (೨೬) ಮನವೇನಮಃ (೨೭) ವಾಯವೇನಮಃ (೨೮) ವಹ್ನಯೇನಮಃ (೨೯) ಪ್ರಜಾರೂಪಾಯನಮಃ (೩೦) ಪ್ರಾಣಾಯನಮಃ (೩೧) ಋತುಕರ್ತ್ರೇನಮಃ (೩೨) ಪ್ರಭಾಕರಾಯನಮಃ (೩೩)

ಪ್ರತಿಪದ ॥ ಏಷಃ - ಈತನು, ಸರ್ವದೇವಾತ್ಮಕಃ - ಸಮಸ್ತ ದೇವತಾಸ್ವರೂಪನು, ತೇಜಸ್ವಿ - ತೇಜಸ್ಸಂಪನ್ನನಾದವನು, ರಶ್ಮಿಭಾವನಃ - ಜ್ಞಾನರೂಪವಾದ ತನ್ನ ಕಿರಣಗಳಿಂದ ಸಮಸ್ತ

ಪದಾರ್ಥಗಳೂ ಸ್ಫುರಿಸುವಂತೆ ಮಾಡುವವನು, ಏಷಃ - ಈತನು, ದೇವಾಸುರಗಣಾನ್ - ಸುರಾಸುರ ಸಮೂಹಗಳನ್ನೂ, ಲೋಕಾನ್ - ಅವರವರ ಲೋಕಗಳನ್ನೂ, ಗಭಿಸ್ತಭಿಃ - ಕಿರಣಗಳಿಂದ, ಪಾತಿ - ಕಾಪಾಡುತ್ತಾನೆ, ಏಷಃ - ಈತನೇ, ಬ್ರಹ್ಮಾ - ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು, ವಿಷ್ಣುಃ - ವಿಷ್ಣುವು, ಶಿವಃ - ಶಿವ (ಸ್ವರೂಪ)ನು, ಸ್ಕಂದಃ - ಹಗೆಗಳನ್ನು ತನ್ನ ಪ್ರತಾಪದಿಂದ ಶೋಷಿಸುವವನು, ಪ್ರಜಾಪತಿಃ - ನವ ಬ್ರಹ್ಮಸ್ವರೂಪನು, ಮಹೇಂದ್ರಃ - ದೇವೇಂದ್ರಸ್ವರೂಪನು, ಧನದಃ - ಕುಬೇರ ಸ್ವರೂಪನು, ಕಾಲಃ - ನಿರವಧಿಯಾದ ಕಾಲಸ್ವರೂಪನು, ಯಮಃ - ಯಮಸ್ವರೂಪನು, ಸೋಮಃ - ಚಂದ್ರಸ್ವರೂಪನು, ಅಪಾಂಪತಿಃ - ವರುಣಸ್ವರೂಪನು, ಪಿತರಃ - ಪಿತೃದೇವತಾಸ್ವರೂಪನಾದವನು, ವಸವಃ - ಅಷ್ಟವಸುಗಳ ಸ್ವರೂಪನಾದವನು, ಸಾಧ್ಯಾಃ - ಸಾಧ್ಯರೆಂಬ ದೇವತೆಗಳಸ್ವರೂಪನು, ಅಶ್ವಿನೌ - ಅಶ್ವಿನೀಕುಮಾರರಸ್ವರೂಪನಾದವನು, ಮರುತಃ - ಸಪ್ತಮರುತ್ತುಗಳ ಸ್ವರೂಪನಾದವನು, ವಾಯುಃ - ವಾಯುಸ್ವರೂಪನಾದವನು, ಮನುಃ - ಚತುರ್ದಶಮನುಸ್ವರೂಪನು, ವಹ್ನಿಃ - ಅಗ್ನಿಸ್ವರೂಪನು, ಪ್ರಜಾಃ - ಪ್ರಜಾರೂಪನಾದವನು, ಪ್ರಾಣಃ - ಸಮಸ್ತ ಭೂತಗಳಲ್ಲಿಯೂ ಸಂಚರಿಸುವ ಪ್ರಾಣಸ್ವರೂಪನಾದವನು, ಋತುಕರ್ತಾ - ಷಡೃತುಗಳಿಗೆ ನಿಯಾಮಕನಾದವನು, ಪ್ರಭಾಕರಃ - ಪ್ರಭೆಯನ್ನುಂಟುಮಾಡುವವನು. ॥ ೭-೯ ॥

ತಾತ್ಪರ್ಯ ॥ ಈತನು ಸಮಸ್ತ ದೇವತಾಸ್ವರೂಪನಾದವನು ; ಸಮಸ್ತ ಪದಾರ್ಥಗಳನ್ನೂ ತನ್ನ ಕಿರಣಗಳಿಂದ ಪ್ರಕಾಶಗೊಳಿಸುವವನು ; ಜ್ಞಾನಸ್ವರೂಪವಾದ ತನ್ನ ಕಿರಣಗಳಿಂದ ಯೋಗಿಗಳಿಗೆ ಬ್ರಹ್ಮಲೋಕವನ್ನು ಗ್ರಹಿಸುವಾತನೂ ಈತನೇ. ಈತನೇ ದೇವರಾಕ್ಷಸ ಸಮೂಹಗಳನ್ನೂ, ಅವರ ಲೋಕಗಳನ್ನೂ ತನ್ನ ಕಿರಣಗಳಿಂದ ಕಾಪಾಡುವಾತನು. ಬ್ರಹ್ಮನೂ, ವಿಷ್ಣುವೂ, ಶಿವನೂ, ಕುಮಾರಸ್ವಾಮಿಯೂ, ನವಪ್ರಜಾಪತಿಗಳೂ, ದೇವೇಂದ್ರನೂ, ಕುಬೇರನೂ, ಮೃತ್ಯುವೂ, ಯಮನೂ, ಚಂದ್ರನೂ, ವರುಣನೂ (ಸಮುದ್ರನೂ) ಈತನೇ. ಪಿತೃದೇವತೆಗಳೂ, ಅಷ್ಟವಸುಗಳೂ, ಸಾಧ್ಯರೂ, ಅಶ್ವಿನೀದೇವತೆಗಳೂ, ಮರುತ್ತುಗಳೂ, ಮನುವೂ, ವಾಯುವೂ, ಅಗ್ನ್ಯಂತರ್ಯಾಮಿಯೂ, ವಸಂತಾದಿ ಋತುಗಳಿಗೆ ಕಾರಣನಾದವನೂ ಈತನೇ. ॥ ೭-೯ ॥

ವಿಶೇಷವಿಷಯಗಳು:—ರಶ್ಮಿಮದಾದಿ ಶಬ್ದ ಪ್ರತಿಪಾದ್ಯನಾದ ಸೂರ್ಯನ ಬ್ರಹ್ಮಸ್ವರೂಪವನ್ನು ಈ ಶ್ಲೋಕದಿಂದ ಮೊದಲ್ಗೊಂಡು ಪ್ರಕಟಗೊಳಿಸುತ್ತಾರೆ. (ತಿ) ಏಷಃ - ಅದಿತ್ಯಮಂಡಲಾಂತರ್ವರ್ತಿಯಾದ ಪರಮಾತ್ಮ (ರಾಮ)ನು. ರಾ. ಟೀ.

"ಸರ್ವದೇವಾತ್ಮಕಃ" - (ಅ) ಸರ್ವ ದೇವತೆಗಳಿಗೂ ಉಪಾದಾನ ಕಾರಣನಾದವನು. ಇದು ಸೂರ್ಯನು ಸರ್ವಾತ್ಮಕನಾಗಿರುವುದಕ್ಕೆ ಉಪಲಕ್ಷಣವು. (ತಿ)

(ಅ) "ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ" ಎಂಬ ಶ್ರುತ್ಯನುಸಾರವಾಗಿ ಈತನು ಸಮಸ್ತ ದೇವತೆಗಳಿಗೂ ಆತ್ಮನಾದವನು. (ಗೋ)

(ಇ) "ಯಸ್ಸರ್ವೇಷು ದೇವೇಷು ತಿಷ್ಠ" ಎಂಬ ಶ್ರುತಿಯಿಂದ ಈತನು ಸಮಸ್ತ ದೇವತೆಗಳೇ ಶರೀರವಾಗುಳ್ಳವನು ಎಂದು ಅರ್ಥವಾಗುತ್ತದೆ. (ವ್ಯಾ)

"ತೇಜಸ್ವೀ" ಪರಾಭಿಭವನ ಸಾಮರ್ಥ್ಯವುಳ್ಳವನು.

"ರಶ್ಮಿಭಾವನಃ" (ಅ) (ಏಷಃ) ಆದಿತ್ಯಾಂತರ್ವರ್ತಿಯಾದ ರಾಮನು - ಆದಿತ್ಯಕಿರಣಗಳ ಕಾಂತಿಯನ್ನು ಕಾಪಾಡುವಾತ ೧. (ರಶ್ಮಿ ಭಾ-ಅವನಃ) ರಾ. ಟೀ.

(ಆ) (ರಶ್ಮಿಭಿಃ ಲೋಕಾನನುಭಾವಯತೀತಿ ರಶ್ಮಿಭಾವನಃ) ತನ್ನ ಕಿರಣಗಳಿಂದ ಲೋಕಗಳನ್ನು ರಕ್ಷಿಸುವಾತನು.

"ದೇವಾಸುರಗಣಾ" "ದೈವೀಸಂಪದ್ವಿಮೋಕ್ಷಾಯ ನಿಬಂಧಾಯಾಸುರೀಮತಾ" ಎಂಬಂತೆ ದೈವ (ಸಾತ್ವಿಕ) ಸ್ವಭಾವವುಳ್ಳವರ ಮತ್ತು ಅಸುರ (ರಾಜಸತಾಮಸ) ಸ್ವಭಾವವುಳ್ಳವರ ಸಮೂಹಗಳನ್ನೂ ತನ್ನ ಕಿರಣಗಳಿಂದ ಕಾಪಾಡುವಾತನು.

"ಅಗ್ನೌ ಪ್ರಾಸ್ತಾಹುತಿಸ್ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ ॥"

"ಅಗ್ನಿಯಲ್ಲಿ ಶಾಸ್ತ್ರೋಕ್ತವಾಗಿ ಕೊಟ್ಟ ಆಹುತಿಯು ಸೂರ್ಯನನ್ನು ಸೇರುತ್ತದೆ. ಸೂರ್ಯನ ದೆಸೆಯಿಂದ ಮಳೆಯೂ, ಮಳೆಯ ದೆಸೆಯಿಂದ ಅನ್ನವೂ, ಅನ್ನದ ದೆಸೆಯಿಂದ ಪ್ರಜೆಗಳೂ ಆಗುತ್ತಾರೆ."

"ದೇವಾನ್ ಭಾವಯತಾನೇನ ತೇದೇವಾ ಭಾವಯಂತುವಃ" ಎಂಬಿವೇ ಮೊದಲಾದ ಶ್ರುತಿ ಪ್ರಮಾಣಗಳಿಂದ ಈ ಅರ್ಥವು ಪ್ರತಿಪಾದಿತವಾಗಿದೆ. (ಮ)

"ಏಷಃ" "ಯಏಷೋಂತರಾದಿತ್ಯೇ ಪುರುಷೋ ದೃಶ್ಯತೇ" ಎಂಬ ಶ್ರುತ್ಯನುಸಾರವಾಗಿ ಯೋಗಿ ಜನರಿಗೆ ದೃಗ್ಗೋಚರನಾದ ಈ ಪರಮಾತ್ಮನು.

"ಬ್ರಹ್ಮಾ" (ಅ) ಅಖಂಡೈಶ್ವರ್ಯ ವಿದ್ಯಾಸಮುತ್ಕೃಷ್ಟ ಶಕ್ತಿಮಂತನಾದ ಬ್ರಹ್ಮನು.

(ಆ) ಸಮಸ್ತ ದೇವತೆಗಳ ಶರೀರಗಳಲ್ಲಿಯೂ ಅಂತರ್ಯಾಮಿಯಾಗಿರುವಾತನು. ಈ ವಿಷಯವನ್ನೇ ಶಿವನೊಡನೆ ಬ್ರಹ್ಮನು, "ತವಾಂತರಾತ್ಮಾ ಮಮಚ ಯೇ ಚಾನ್ಯೇ ದೇಹಿ ಸಂಜ್ಞಿತಃ" ಎಂದು ನುಡಿದು ಸ್ಪಷ್ಟಪಡಿಸುತ್ತದೆ.

ವಿಷ್ಣುಃ - ಸರ್ವಾಂತರ್ಯಾಮಿ.

"ಶಿವಃ" ಶಿವನೇ ಶರೀರವಾಗುಳ್ಳವನು (ಶಿವಾಂತರ್ಯಾಮಿಯಾದವನು) ("ಸ ಬ್ರಹ್ಮಾ ಸ ಶಿವಸ್ಸೇಂದ್ರಸ್ಸೋಽಕ್ಷರಃ ಪರಮಸ್ಸ್ವರಾಟ್" ಎಂದು ಶ್ರುತಿಯು.)

ಸ್ಕಂದಃ - ಸಮಸ್ತವನ್ನೂ ಶೋಷಣಗೊಳಿಸುವಾತನು. (ಸ್ಕದಿರ್ ಗತಿಶೋಷಣಯೋಃ) ಅಥವಾ ಸಂಸಾರಬಂಧ ವಿಮೋಚಕನಾದವನು.

ಪ್ರಜಾಪತಿಃ—(ಪ್ರಜಾಪತಿಶ್ಚರತಿ ಗರ್ಭೇ ಅಂತಃ) ಎಂಬ ಶ್ರುತಿಯಲ್ಲಿ ಪ್ರತಿಪಾದಿತನಾದ ಪ್ರಜಾಪತಿ ಶಬ್ದ ವಾಚ್ಯನು.

ಮಹೇಂದ್ರಃ—(ಮಹಾನ್ ಇಂದ್ರಃ - ಮಹೇಂದ್ರಃ) "ಇಂದ್ರಂ ಮಿತ್ರಂ ವರುಣಮಗ್ನಿಮಾಹುಃ ಪರಮೋವ್ಯೋಮನ್, ಇಂದ್ರೋ ಮಾಯಾಭಿಃ ಪುರುರೂಪ ಈಯತೇ" ಎಂಬ ಶ್ರುತ್ಯನುಸಾರವಾಗಿ ಸ್ವರೂಪದಲ್ಲಿಯೂ, ಐಶ್ವರ್ಯದಲ್ಲಿಯೂ ನಿರವಧಿಕನಾದವನೆಂದು ಅರ್ಥ.

ಧನದಃ—"ಅನ್ನಾದೋ ವಸುದಾನಃ" ಎಂಬ ಶ್ರುತ್ಯನುಸಾರ ಸಮಸ್ತ ಫಲಪ್ರದಾಯಕನಾದವನು.

ಕಾಲಃ—"ಕಾಲಾಯ ಮಹಾಗ್ರಾಸಾಯ ವೈ ನಮಃ" ಎಂಬ ಶ್ರುತಿಯಿಂದಲೂ, "ಅನಾದಿಗರ್ಭವಾನ್ ಕಾಲಃ" ಎಂಬ ವಿಷ್ಣುಪುರಾಣ ವಚನದಿಂದಲೂ, "ಅತ್ತಾ ಚರಾಚರ ಗ್ರಹಣಾತ್" ಎಂಬ ಬ್ರಹ್ಮಸೂತ್ರ ವಚನದಿಂದಲೂ ಸರ್ವ ಪ್ರಪಂಚ ಸಂಹಾರಕನಾದವನೆಂದರ್ಥವು.

ಯಮಃ—"ಯಮೋ ವೈವಸ್ವತೋ ರಾಜಾ ಯಸ್ತು ವೈ ಹೃದಿಸ್ಥಿತಃ । ತೇನ ಚೇದವಿವಾದಸ್ತೇ ಮಾ ಗಂಗಾಂ ಮಾ ಕುರೂನ್ ಗಮಃ" ಎಂಬ ಮನುವಚನಾನುಸಾರವಾಗಿ ಎಲ್ಲ ಜನರ ಹೃದಯದಲ್ಲಿಯೂ ಇದ್ದುಕೊಂಡು ಅವರನ್ನು ಶಿಕ್ಷಿಸುವಾತನೆಂದು ಅರ್ಥ.

ಸೋಮಃ - (ಅ) "ಸೋಮಃ ಪವತೇ ಜನಿತಾ ಮತೀನಾಂ" ಎಂಬಂತೆ ಸರ್ವಕ್ಕೂ ಕಾರಣನಾದವನು.

(ಆ) "ಉಮಯಾಸಹವರ್ತತ ಇತಿ ಸೋಮಃ" ಉಮೆಯೊಡಗೂಡಿದ ಶಿವನು.

ಅಪಾಂಪತಿಃ—"ಆಪೋನಾರಾ ಇತಿ ಪ್ರೋಕ್ತಾ ಆಪೋವೈ ನರಸೂನವಃ । ತಾಯದಸ್ಯಾಯನಂ ಪೂರ್ವಂ ತೇನ ನಾರಾಯಣಸ್ಮೃತಃ ॥" ನಾರಾಯಣನು. "ಅಪ ಏವ ಸಸರ್ಜಾದೌ ತಾಸು ವೀರ್ಯಮಪಾಸೃಜತ್" ಇದರಿಂದ ಈ ಪದಕ್ಕೆ ನಾರಾಯಣನೆಂದೇ ಅರ್ಥ. ಈ ಎರಡು ಶ್ಲೋಕಗಳಿಂದಲೂ ತಿಳಿದು ಬರುವ ಒಂದು ರಹಸ್ಯವೇನೆಂದರೆ :

ಬ್ರಹ್ಮನೇ ಮೊದಲಾದವರನ್ನೊಳಗೊಂಡ ಈ ಸೂರ್ಯಭಗವಂತನಿಗೂ ಶ್ರೀರಾಮನೇ ನಿಯಾಮಕನಾದಕಾರಣ ಎಲ್ಲರಲ್ಲಿಯೂ ಶ್ರೀರಾಮನೇ ನೆಲಸಿದ್ದಾನೆಂದು ಭಾವಿಸತಕ್ಕದ್ದು. "ಸರಿತ್ಸಮುದ್ರಾಂಶ್ಚ ಹರೇಶ್ಶರೀರಂ ಯತ್ಕಿಂಚ ಭೂತಂ ಪ್ರಣಮೇದನನ್ಯಃ" ಎಂಬಿವೇ ಮೊದಲಾದ ವಾಕ್ಯಗಳು ಈ ತತ್ವವನ್ನೇ ಸಾರುತ್ತವೆ. (ರಾ. ಟೀ).

"ಪಿತರಃ"—ಬೀಜಪ್ರದರಾದವರು ಪಿತೃದೇವತೆಗಳು. ಆ ರೂಪದಿಂದ ಸಮಸ್ತ ಪ್ರಾಣಿಗಳಿಗೂ ಬೀಜಪ್ರದಾಯಕನಾಗಿರುವವನು ಎಂದು ಅರ್ಥ, "ತಾಸಾಂ ಬ್ರಹ್ಮಮಹದ್ಯೋನಿರಹಂ ಬೀಜಪ್ರದಃ ಪಿತಾ" ಎಂಬ ವಚನವು ಇದಕ್ಕೆ ಪ್ರಮಾಣ. ಇಲ್ಲಿ ಬಹುವಚನ ಪ್ರಯೋಗವು ಗೌರವದ್ಯೋತಕವಾದದ್ದು. ಕವ್ಯವಾಹನನೇ ಮೊದಲಾದವರೆಲ್ಲರೂ ಪಿತೃದೇವತೆಗಳೇ.

ವಸವಃ—ಯಾವಾಗಲೂ ಇರತಕ್ಕವರು ಅಷ್ಟವಸುಗಳು:-ಧ್ರುವ, ದರ, ಸೋಮ, ಅಪ, ವೈಶ್ವಾನರ, ಅನಿಲ, ಪ್ರತ್ಯೂಷ, ಪ್ರಭಾವ ಅಥವಾ ಶ್ರುತಿಪ್ರತಿಪಾದ್ಯಗಳಾದ (ಅಗ್ನಿಶ್ಚ ಪೃಥಿವೀಚ ವಾಯುಶ್ಚಾಂತರಿಕ್ಷಂಚ ಆದಿತ್ಯಶ್ಚ ದ್ಯೌಶ್ಚಂದ್ರಮಾಶ್ಚ ನಕ್ಷತ್ರಾಣಿಚೈತೇವೈವಸವಃ) ಅಗ್ನಿ, ಭೂಮಿ, ವಾಯು, ಆಕಾಶ, ಸೂರ್ಯ, ಸ್ವರ್ಗ, ಚಂದ್ರ, ನಕ್ಷತ್ರಗಳು ಇವು ಅಷ್ಟ ವಸುಗಳು.

ಸಾಧ್ಯಾಃ—ಸಿದ್ಧಿಯುಳ್ಳವರು, ಇವರು ಹನ್ನೆರಡುಮಂದಿ : "ಬ್ರಹ್ಮಣೋವೈ ಮುಖಾತ್ಸೃಷ್ಟಾ ಯೇತು ದೇವಾ ಪ್ರಜೇಪ್ಸಯಾ । ಸಾಧ್ಯಾ ಮಂತ್ರಶರೀರಾಸ್ತೇ ಸ್ಥಿತಾ ಮನ್ವಂತರೇಷ್ವಪಿ ॥ ಧರ್ಮಪುತ್ರಾ ಮಹಾಭಾಗಾ ವಿಜ್ಞೇಯಾ ದ್ವಾದಶಾಮರಾಃ । ಮನುರ್ಮಂತ್ರಃ ಪ್ರಾಣದಶ್ಚ ಚೇತಯಾನಶ್ಚ ವೀರ್ಯವಾನ್ ॥ ವಿತ್ತಿರ್ಜಯೋನಯಶ್ಚೈವ ಹಂಸೋ ನಾರಾಯಣಸ್ತಥಾ । ಪ್ರಭವೋಥ ವಿಭುಶ್ಚೈವ ಸಾಧ್ಯಾ ದ್ವಾದಶ ಜಜ್ಞಿರೇ ॥" ಬ್ರಹ್ಮನು ಪ್ರಜಾಕಾಂಕ್ಷೆಯಿಂದ ತನ್ನ ಮುಖದ ದೆಸೆಯಿಂದ ಸೃಜಿಸಿದ ಈ ದೇವತೆಗಳು ಸಾಧ್ಯರೆಂದು ಪ್ರಖ್ಯಾತರಾದವರು. ಇವರು ಮನ್ವಂತರಗಳಲ್ಲಿಯೂ ಇರತಕ್ಕವರು. ಎಲ್ಲರೂ ಮಂತ್ರಶರೀರಿಗಳು. ಬ್ರಹ್ಮನ ಧರ್ಮಪುತ್ರರೂ, ಮಹಾ ಭಾಗ್ಯಶೀಲರೂ ಆದ ಈ ಸಾಧ್ಯರು ಹನ್ನೆರಡುಮಂದಿಯೆಂದು ತಿಳಿಯತಕ್ಕದ್ದು. ಮನು, ಮಂತ್ರ, ಪ್ರಾಣದ, ಚೇತಯಾನ, ವೀರ್ಯವಂತ, ವಿತ್ತಿ, ಜಯ, ನಯ, ಹಂಸ, ನಾರಾಯಣ, ಪ್ರಭವ, ವಿಭು.

ಅಶ್ವಿನೌ—ಹೆಣ್ಣು ಕುದುರೆಯ ರೂಪವನ್ನು ತಾಳಿದ ತನ್ನ ಪಟ್ಟಮಹಿಷಿಯಾದ ಸಜ್ಞಾದೇವಿಯೊಡನೆ, ಗಂಡು ಕುದುರೆಯ ಆಕಾರ ತಾಳಿ ಕೂಡಿದುದರಿಂದ ಹುಟ್ಟಿದವರು ಈ ಅಶ್ವಿನೀ ದೇವತೆಗಳು.

ಮರುತಃ—ಮೃತಿಯಿಲ್ಲದವರು. ವಾಯುಪುರಾಣೋಕ್ತಿಪ್ರಕಾರ ಈ ಮರುತರು ೪೯ ಮಂದಿ. ಶುಕ್ರ, ಜ್ಯೋತಿ ಮೊದಲಾದವರು. ಅಥವಾ ಅನರ್ಥಗಳನ್ನು ದೂರಮಾಡುವವರೆಂದೂ ಅರ್ಥವಾಗುವುದು. (ಮೃಙ್‌ಧಾತುವಿಗೆ ಉತಿಪ್ರತ್ಯಯ ಹಚ್ಚಿದರೆ ಮರುತ್ ಎಂದಾಗುವುದು).

ಮನಃ—ಮನನಮಾಡುವನು-"ನಾನ್ಯತೋಽಸ್ತಿ ಮಂತಾ" (ಈತನಿಗಿಂತ ಮನನಮಾಡುವವನಾವನೂ ಇರುವುದಿಲ್ಲ) ಎಂದು ಶ್ರುತಿವಚನ. ಅರ್ಥಾತ್ ಸೃಷ್ಟಿಗೂ ಪೂರ್ವದಲ್ಲಿ ಪ್ರಪಂಚವಿಷಯಕವಾದ ಮನನವುಳ್ಳವನು.

ವಾಯುಃ - ಸಮಸ್ತ ಪದಾರ್ಥಗಳನ್ನೂ ವಾಸನೆಯುಳ್ಳದನ್ನಾಗಿ ಮಾಡುವವನು. "ಸರ್ವಕರ್ಮಾ ಸರ್ವಕಾಮಸ್ಸರ್ವಗಂಧಸ್ಸರ್ವರಸಃ" ಎಂದು ಶ್ರುತಿ ಹೇಳುತ್ತದೆ.

ವಹ್ನಿಃ—ಹವಿಸ್ಸನ್ನು ವಹಿಸುವವನೆಂದರ್ಥ. "ಇಷ್ಟಾಪೂರ್ತಂ ಬಹುಧಾಜಾತಂ ಜಾಯಮಾನಂ ವಿಶ್ವಂ ಬಿಭರ್ತಿ ಭುವನಸ್ಯ ನಾಭಿಃ ; ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತತ್ ಚಂದ್ರಮಾಃ" ಎಂದು ಶ್ರುತಿ.

ಪ್ರಜಾಪ್ರಾಣಃ—ಪ್ರಜೆಗಳನ್ನು ಉಳಿಸುವವನು, "ಕೋಹ್ಯೇವಾನ್ಯಾತ್ ಕಃ ಪ್ರಾಣ್ಯಾತ್ ಯದೇಷ ಆಕಾಶ ಆನಂದೋ ನಸ್ಯಾತ್" ಎಂದು ಶ್ರುತಿ. (ಮ.)

ಪ್ರಾಣಯಾತ್ರಾಪ್ರವರ್ತಕವಾದ ಪ್ರಾಣಸ್ವರೂಪನಾದವನು. "ನ ಪ್ರಾಣೇನ ನಾ ಪಾನೇನ ಮರ್ತ್ಯೋ ಜೀವತಿ ಕಶ್ಚನ । ಇತರೇಣತು ಜೀವಂತಿ ಯಸ್ಮಿನ್ನೇತಾ ಉಪಾಶ್ರಿತಾಃ ॥" ಎಂದು ಶ್ರುತಿಯು, "ಮರ್ತ್ಯನಾದವನಾವನೂ ಪ್ರಾಣ

ದಿಂದಾಗಲಿ, ಅಪಾನದಿಂದಾಗಲಿ ಬದುಕಲಾರನು. ಯಾವುದನ್ನು ಎಲ್ಲವೂ ಆಶ್ರಯಿಸಿರುವುದೋ ಅದರಿಂದ ಎಲ್ಲರೂ ಬದುಕುತ್ತಾರೆ. (ತಿ.)

ಋತುಕರ್ತಾ—("ಋತುಃ, ಕರ್ತಾ" ಎಂದು ಪದ ಛೇದ) "ಋತುಸ್ಸುದರ್ಶನಃ ಕಾಲಃ" ಎಂಬ ವಿಷ್ಣುಸಹಸ್ರನಾಮ ಪಾಠ ಪ್ರಮಾಣದಿಂದ "ಋತುಃ" ಎಂದರೆ ಋತುಸ್ವರೂಪನು.

ಕರ್ತಾ—"ತೇನವಿನಾ ತೃಣಾಗ್ರಮಪಿ ನಚಲತಿ" ಎಂಬಂತೆ ಸಮಸ್ತ ಭೂತಾಂತರ್ಯಾಮಿಯಾಗಿ ಸಮಸ್ತ ಕರ್ಮಗಳನ್ನೂ ಮಾಡಿಸುವಾತನು. "ಅಂತಃ ಪ್ರವಿಷ್ಟಂ ಕರ್ತಾರಮೇತಂ" "ಅಥ ರಥಾ ರಥಯೋಗಾ ಪಥಸ್ಸೃಜತೇ ಸಹಿಕರ್ತಾ-ಸರ್ವಕರ್ಮಾ" ಎಂಬದಾಗಿ ಶ್ರುತಿವಚನಗಳು ಸಾರುತ್ತಿವೆ.

ಶ್ಲೋ ॥ ಆದಿತ್ಯಸ್ಸವಿತಾ ಸೂರ್ಯಃ ಖಗಃ ಪೂಷಾ ಗಭಸ್ತಿಮಾನ್ ।
ಸುವರ್ಣಸದೃಶೋ ಭಾನುಸ್ಸ್ವರ್ಣರೇತಾ ದಿವಾಕರಃ ॥ ೧೦ ॥

ಆದಿತ್ಯಾಯನಮಃ (೩೪) ಸವಿತ್ರೇನಮಃ (೩೫) ಸೂರ್ಯಾಯನಮಃ (೩೬) ಖಗಾಯನಮಃ (೩೭) ಪೂಷ್ಣೇನಮಃ (೩೮) ಗಭಸ್ತಿಮತೇನಮಃ (೩೯) ಸುವರ್ಣಸದೃಶೇನಮಃ (೪೦) ಭಾನವೇನಮಃ (೪೧) ಸುವರ್ಣರೇತಸೇನಮಃ (೪೨) ದಿವಾಕರಾಯನಮಃ (೪೩).

ಪ್ರತಿಪದ ॥ ಆದಿತ್ಯಃ-ಎಲ್ಲವನ್ನೂ ಆಕರ್ಷಿಸುವವನೂ, ಸವಿತಾ-ಜಗತ್ತಿನ ತಂದೆಯೂ, ಸೂರ್ಯಃ-ಚೆನ್ನಾಗಿ ಪ್ರೇರಿಸುವಾತನೂ, ಖಗಃ - ಆಕಾಶದಲ್ಲಿ ಸಂಚರಿಸುವವನೂ, ಪೂಷಾ - ಪೋಷಕನೂ, ಗಭಸ್ತಿಮಾನ್ - ಭೂಮಿಯನ್ನೂ, ದಿಕ್ಕುಗಳನ್ನೂ ತನ್ನ ಕಿರಣಗಳಿಂದ ಬೆಳಗಿಸುವವನೂ, ಸುವರ್ಣಸದೃಶಃ - ಸುವರ್ಣಸದೃಶವಾದ ಆತ್ಮಜ್ಞಾನನಿಧಿಯ ಲಾಭಕ್ಕೆ ಸಮಾನನಾದವನೂ, ಭಾನುಃ - ಪ್ರಕಾಶಕನಾದವನೂ, ಸ್ವರ್ಣರೇತಾಃ - ಬ್ರಹ್ಮಾಂಡೋತ್ಪಾದಕ ದ್ರವ್ಯವುಳ್ಳವನೂ, ದಿವಾಕರಃ-ಹಗಲನ್ನುಂಟುಮಾಡುವವನೂ (ನೀನೇ). ॥೧೦॥

ತಾತ್ಪರ್ಯ ॥ ಸಮಸ್ತವನ್ನೂ ಆಕರ್ಷಿಸುವವನೂ, ಜಗತ್ಪಿತೃವೂ, ಸಮಸ್ತರನ್ನೂ ಪ್ರೇರಿಸುವವನೂ, ಆಕಾಶದಲ್ಲಿ ಸಂಚರಿಸುವವನೂ, ವಿಶ್ವಪೋಷಕನೂ, ಭೂಮ್ಯಂತರಿಕ್ಷಗಳನ್ನೂ, ಸಮಸ್ತ ದಿಶೆಗಳನ್ನೂ ಬೆಳಗಿಸುವವನೂ, ಸುವರ್ಣಸದೃಶವಾದ ಆತ್ಮಜ್ಞಾನವೆಂಬ ನಿಧಿಯ ಲಾಭಕ್ಕೆ ಸಮಾನವಾದವನೂ, (ಮಂಗಳಕರವಾದ ಪಕ್ಷದ್ವಯಸಮನ್ವಿತನಾದ ಪರಮಾತ್ಮತಾದಾತ್ಮ್ಯವುಳ್ಳವನೂ) ಸರ್ವಪ್ರಕಾಶಕನೂ, ಬ್ರಹ್ಮಾಂಡೋತ್ಪಾದಕ ದ್ರವ್ಯವುಳ್ಳವನೂ (ಆಗಿರುವವನು ನೀನು). ॥ ೧೦ ॥

ಆದಿತ್ಯಃ - ಈ ನಾಮ ಮೊದಲ್ಗೊಂಡು ಪ್ರಥಮಾ ವಿಭಕ್ತಿಯಲ್ಲಿರುವ ನಾಮಗಳೆಲ್ಲವುಗಳನ್ನೂ "ತ್ವಂ" ಪದಪೂರ್ವಕವಾಗಿ ಉಚ್ಚರಿಸಿಕೊಳ್ಳಬೇಕು. ಇಲ್ಲಿಂದಲೇ ಸ್ತೋತ್ರಸ್ವರೂಪವನ್ನು ತಿಳಿಸಲು ಪ್ರಾರಂಭಿಸುತ್ತಾರೆ. (ಮ)

(ಅ) ಆದಿತಿಯ ಮಗನಾಗಿ ಅವತಾರ ಮಾಡಿದವನು-ಆದಿತ್ಯನು.

(ಆ) "ಅದಿತೇಃ ಅಖಂಡಿತಾಯಾ ಭೂಮೇಃ ಅಯಂ ಪತಿರಿತಿ ಆದಿತ್ಯಃ" ಅಖಂಡಭೂನಾಯಕನೆಂದರ್ಥ.

(ಇ) "ಯಸ್ಮಾತ್ಸರ್ವಮಾದತ್ತೇ ತಸ್ಮಾದಾದಿತ್ಯಃ" ಇತ್ಯಾದಿ ಉಪನಿಷದ್ವಾಕ್ಯಪ್ರಮಾಣದಿಂದ ಸಮಸ್ತವನ್ನೂ ಗ್ರಹಿಸುವವನೆಂದರ್ಥ.

(ಉ) ಅದಿತ್ಯಮಂಡಲಾಭಿಮಾನಿದೇವತೆ. (ಊ) ಆದಿತಿಪುತ್ರ.

ಸವಿತಾ (ಅ) "ಷೂಙ್ - ಪ್ರಾಣಿಪ್ರಸವೇ" ಅಂತಃಕರಣೋಪಾಧಿಯಿಂದ ಪರಿಮಿತವಾದ ಚಿದಾತ್ಮವರ್ಗಕ್ಕೆ ಸೃಷ್ಟಿಕರ್ತನಾದವನು.

70

(ಆ) ತನ್ನ ಕಿರಣಗಳಿಂದ ಪರ್ಜನ್ಯಾದಿಗಳಿಗೆ ಪ್ರವೃತ್ತಿಯನ್ನುಂಟುಮಾಡುವುದರ ಮೂಲಕ ಅನ್ನಾದಿಗಳನ್ನು ಸೃಷ್ಟಿ ಮಾಡುವವನು.

(ಇ) ಜಗತ್ಸ್ರಷ್ಟೃ. (ಈ) ಜಗತ್ತನ್ನು ಪ್ರೇರಿಸುವವನು.

ಸೂರ್ಯಃ - (ಅ) ಸಮಸ್ತ ಜನರನ್ನೂ ಅವರವರ ಕಾರ್ಯಗಳಲ್ಲಿ ತೊಡಗಿಸುವಾತನು. "ಷೂ ಪ್ರೇರಣೇ" ಎಂಬ ಧಾತುವಿನಿಂದಾದ ರೂಪನಿಷ್ಪತ್ತಿಯಿದು.

(ಆ) ಸ್ಥಾವರಜಂಗಮಾತ್ಮಕವಾದ ಜಗತ್ತಿನಲ್ಲಿ ಅಂತರ್ಯಾಮಿಯಾಗಿರುವನು. ("ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ" ಎಂದು ಶ್ರುತಿ.)

ಖಗಃ - ಪರಮಾಕಾಶದಲ್ಲಿ ಅಧಿಷ್ಠಿತನಾಗಿರುವವನು. "ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್" ಎಂದು ಶ್ರುತಿ.

ಗಭಸ್ತಿಮಾನ್ - ಸರ್ವತ್ರ ವ್ಯಾಪಿನಿಯಾದ ಲಕ್ಷ್ಮಿಯನ್ನು ಒಳಗೊಂಡವನು. "ಯಥಾ ಸರ್ವಗತೋ ವಿಷ್ಣುಃ ತಥೈವೇಯಂ ದ್ವಿಜೋತ್ತಮ" ಎಲೈ ವಿಪ್ರನೇ! ಸರ್ವಗತನಾದ ವಿಷ್ಣುವು ಹೇಗೋ ಹಾಗೆಯೇ ಈ ಸೂರ್ಯನು ಸಹ ಸರ್ವಗತನಾಗಿರುವನು.

ಸುವರ್ಣಸದೃಶಃ - (ಅ) "ಆತ್ಮಲಾಭಾನ್ನ ಪರಂ ವಿದ್ಯತೇ" (ಶ್ರು) ಆತ್ಮಜ್ಞಾನವನ್ನು ಪಡೆಯುವುದಕ್ಕಿಂತ ಶ್ರೇಷ್ಠವಾದದ್ದು ಮತ್ತೊಂದಿಲ್ಲ. ಸುವರ್ಣಕ್ಕೆ ಸದೃಶವಾದ ಆತ್ಮಜ್ಞಾನನಿಧಿಯ ಲಾಭಕ್ಕೆ ಸಮಾನನಾದವನು. "ಆ ಪ್ರಣಖಾತ್ ಸರ್ವಏವ ಸುವರ್ಣಃ (ಶ್ರು) ನಖಶಿಖಾಂತವಾಗಿ ಸುವರ್ಣಮೂರ್ತಿಯುಳ್ಳವನು.

"ಸುಪರ್ಣಸ್ತಪನಃ" ಎಂದು ಪಾಠಾಂತರ.

"ಸುಪರ್ಣಃ" ಎಂದರೆ ಮಂಗಳಕರವಾದ ಪಕ್ಷಗಳುಳ್ಳ ಪರಮಾತ್ಮಾ "ದ್ವಾಸುಪರ್ಣಾಸಯುಜಾ ಸಖಾಯೋ ಸಮಾನಂ" (ಶ್ರು) ತಪನಃ - ತಪಿಸುವಾತನು.

ಭಾನುಃ - "ತಮೇವ ಭಾಂತಮನುಭಾತಿ ಸರ್ವಂ" ಪ್ರಕಾಶಿಸುತ್ತಿರುವ ಆತನನ್ನು ಅನುಸರಿಸಿಯೇ ಎಲ್ಲವೂ ಪ್ರಕಾಶಿಸುತ್ತಿದೆ ಎಂಬ ಶ್ರುತಿಪ್ರಮಾಣದಿಂದ ಸರ್ವಪ್ರಕಾಶಕನೆಂದರ್ಥ.

ಹಿರಣ್ಯರೇತಾಃ - (ಅ) ಬ್ರಹ್ಮಾಂಡಕರ್ತೃ ಅಥವಾ ಬ್ರಹ್ಮಾಂಡೋತ್ಪಾದಕವಾದ ದ್ರವ್ಯವನ್ನೊಳಗೊಂಡವನು. "ಅಪ ಏವ ಸಸರ್ಜಾದೌ ತಾಸುವೀರ್ಯ ಮಪಾಸೃಜತ್ | ತದಂಡಮಭವದ್ಧೈಮಂ ಸಹಸ್ರಾಂಶುಸಮಪ್ರಭಂ ||" ಮೊದಲು ಜಲವನ್ನೇ ಸೃಜಿಸಿದನು. ಅದರಲ್ಲಿ ವೀರ್ಯವನ್ನಿರಿಸಿದನು. ಆ ವೀರ್ಯವು ಸೂರ್ಯನಂತೆ ಪ್ರಕಾಶಿಸುವ ಸುವರ್ಣಾಂಡವಾಯಿತು. (ಮನುಸ್ಮೃತಿ)

ದಿವಾಕರಃ - (ಅ) ಹಗಲಿನಲ್ಲಿ ಸಮಸ್ತ ಪ್ರಾಣಿಗಳಿಗೂ ಚೇಷ್ಟೆಗಳನ್ನುಂಟುಮಾಡುವನು.

(ಆ) "ದಿವಾಂ - ದ್ಯುತಿಂ, ಕರೋತಿ" ಎಂಬ ವ್ಯುತ್ಪತ್ತಿಯಿಂದ, "ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ" ದದಾಮಿ ಬುದ್ಧಿಯೋಗಂ ತಂ ಯೇನಮಾಮುಪಯಾಂತಿ ತೇ" ಎಂಬ ಗೀತಾವಚನಪ್ರಮಾಣವನ್ನನುಸರಿಸಿ, ಅಜ್ಞಾನವನ್ನು ನಾಶಪಡಿಸುವುದರ ಮೂಲಕ ಜ್ಞಾನವನ್ನುಂಟುಮಾಡುವವನು ಎಂದು ಹೇಳಬಹುದು.

ಶ್ಲೋ || ಹರಿದಶ್ವಸ್ಸಹಸ್ರಾರ್ಚಿಸ್ಸಪ್ತಸಪ್ತಿರ್ಮರೀಚಿಮಾನ್ |
ತಿಮಿರೋನ್ಮಥನಶ್ಶಂಭುಸ್ತ್ವಷ್ಟಾ ಮಾರ್ತಾಂಡ ಅಂಶುಮಾನ್ || ೧೧ ||

ಹರಿದಶ್ವಾಯನಮಃ (೪೪) ಸಹಸ್ರಾರ್ಚಿಷೇನಮಃ (೪೫) ಸಪ್ತಸಪ್ತಯೇನಮಃ (೪೬) ಮರೀಚಯೇನಮಃ (೪೭) ತಿಮಿರೋನ್ಮಥನಾಯನಮಃ (೪೮) ಶಂಭವೇನಮಃ (೪೯) ತ್ವಷ್ಟ್ರೇನಮಃ (೫೦) ಮಾರ್ತಾಂಡಾಯನಮಃ (೫೧) ಅಂಶುಮತೇನಮಃ (೫೨)

ಪ್ರತಿಪದ || ಹರಿದಶ್ವಃ-ಮನೋಹರವಾದ ಶ್ಯಾಮಲವರ್ಣವುಳ್ಳ ಕುದುರೆಯುಳ್ಳವನು, ಸಹಸ್ರಾರ್ಚಿಃ-ಸಾವಿರ ಕಿರಣಗಳುಳ್ಳವನು, ಸಪ್ತಸಪ್ತಿಃ - ಸಪ್ತಿ ಎಂಬ ಕುದುರೆಯುಳ್ಳವನು, ಮರೀ

ಚಿರ್ಮಾ - ಕಾಂತಿಪುಂಜವುಳ್ಳವನು, ತಿಮಿರೋನ್ಮಥನಃ - ಅಂಧಕಾರವನ್ನು ಹೋಗಲಾಡಿಸುವವನು, ಶಂಭುಃ - ಸುಖವನ್ನುಂಟುಮಾಡುವವನು, ತ್ವಷ್ಟಾ - ಸಮಸ್ತ ರೂಪಗಳನ್ನೂ ಉಪಸಂಹಾರ ಮಾಡುವಾತನು, ಮಾರ್ತಾಂಡಃ - (ಮೃತವಾದ ಅಂಡದಲ್ಲಿ ಜನಿಸಿದವನು) ಎಲ್ಲವೂ ಸಂಹೃತವಾದ ಮೇಲೆ ಸಮಸ್ತವನ್ನೂ ಮತ್ತೆ ಸೃಷ್ಟಿಮಾಡಲು ಅದೇ ಅಂಡದಲ್ಲಿಯೇ ಆವಿರ್ಭವಿಸಿದವನು, ಅಂಶುಮಾನ್ - ಎಲ್ಲವನ್ನೂ ಪ್ರಕಾಶಿಸುವವನು ‖ ೧೧ ‖

ತಾತ್ಪರ್ಯ ‖ ಮನೋಹರವಾದ ಶ್ಯಾಮಲವರ್ಣವುಳ್ಳ ಕುದುರೆಗಳುಳ್ಳವನೂ, ಸಹಸ್ರ ಕಿರಣಗಳುಳ್ಳವನೂ, ಸಪ್ತಿಯೆಂಬ ಅಶ್ವಶ್ರೇಷ್ಠವುಳ್ಳವನೂ, ಕಾಂತಿಪುಂಜವನ್ನೊಳಗೊಂಡವನೂ, ಕತ್ತಲನ್ನು ಕಳೆಯುವವನೂ, ಸುಖವನ್ನುಂಟುಮಾಡುವವನೂ, ಪ್ರಪಂಚದಲ್ಲಿರುವ ಸಮಸ್ತ ರೂಪಗಳನ್ನೂ ಹೋಗಲಾಡಿಸುವವನೂ (ಉಪಸಂಹರಿಸುವಾತನೂ), ಪ್ರಳಯವಾದ ಬಳಿಕ ಎಲ್ಲವನ್ನೂ ಮೊದಲಿದ್ದಂತೆ ಸೃಷ್ಟಿಮಾಡಲು ಆವಿರ್ಭವಿಸುವವನೂ, ಸರ್ವಪ್ರಕಾಶಕನೂ ನೀನೇ. ‖ ೧೧ ‖

ಹರಿದಶ್ವಃ - (ಅ) "ಮನೋಹರಃ ಅಶ್ವಃ ವಾಹನಃ ಗರುಡೋಽಯಸ್ಯಸಃ" ಮನೋಹರನಾದ ಗರುಡನೇ ವಾಹನವಾಗುಳ್ಳ ಪರಮಾತ್ಮ. (ವಿಷ್ಣುವೆಂದರ್ಥ)

(ಅ) "ಹರಿತಃ ದಿಶಃ ಅಶ್ನೋತೀತಿ ಹರಿದಶ್ವಃ" ದಿಕ್ಕುಗಳೆಲ್ಲವನ್ನೂ ವ್ಯಾಪಿಸುವಾತನೆಂದರ್ಥ.

ಸಹಸ್ರಾರ್ಚಿಃ - (ಅ) ಅನಂತಜ್ಞಾನವುಳ್ಳವನು.

(ಅ) "ಅರ್ಚ್ಯತ ಇತ್ಯರ್ಚಿಃ" ಅರ್ಚಿ ಶಬ್ದದಿಂದ ಇಲ್ಲಿ ಪರಮಪೂಜ್ಯವಾದ ಮಂಗಳಗುಣಗಳು ಹೇಳಲ್ಪಟ್ಟಿವೆ. ಅನಂತಕಲ್ಯಾಣಗುಣಪರಿಪೂರ್ಣನೆಂದರ್ಥ.

ಸಪ್ತಸಪ್ತಿಃ - (ಅ) ಸಪ್ತವೆಂಬ ಕುದುರೆಯುಳ್ಳವನೆಂದು ಅರ್ಥ; ಇದರಿಂದ ಕಲ್ಕ್ಯವತಾರವು ಸೂಚಿತವಾಗುತ್ತದೆ. (ಮ) "ಏಕೋ ಅಶ್ವೋ ವಹತಿ ಸಪ್ತನಾಮಾ" ಎಂದು ಶ್ರುತಿ.

(ಅ) "ಸಪ್ತಸಪ್ತಿಃ ಸಪ್ತಶೀರ್ಷಣ್ಯಾಃ ಪ್ರಾಣಾ ಇಂದ್ರಿಯಾಣಿ ದ್ವೇ ಚಕ್ಷುಷೀ ದ್ವೇ ಶ್ರೋತ್ರೇ ದ್ವೇ ನಾಸಿಕೇ ವಾಕ್ಚೈಕೇತಿ ಸಪ್ತಪ್ರಾಣಾಃ ಪ್ರಭವಂತಿ ತಸ್ಮಾತ್" ಎಂಬ ಶ್ರುತಿಪ್ರಮಾಣದಿಂದ ಸಪ್ತಪ್ರಾಣಗಳ ಪ್ರವೃತ್ತಿಯನ್ನೊಳಗೊಂಡವನು, ಅಥವಾ ಸಪ್ತಾಶ್ವಗಳುಳ್ಳವನು. (ತಿ)

ಮರೀಚಿಮಾನ್ - (ಅ) "ಮ್ರಿಯಂತೇ ಅನೇನ ಶತ್ರವ ಇತಿ ಮರೀಚಿಃ ಚಕ್ರಂ" ಸಮಸ್ತ ಶತ್ರುಗಳನ್ನೂ ನಾಶಗೊಳಿಸುವ (ಚಕ್ರವು ಇತರಾಯುಧಗಳಿಗೆ ಉಪಲಕ್ಷಕವಾದುದರಿಂದ) ಶಂಖಚಕ್ರಗದಾದ್ಯಾಯುಧಗಳನ್ನು ಧರಿಸಿರುವವನು. (ಮ)

(ಅ) "ಮರೀಚಿಪ್ರಭೃತಯಃ ಮುನಯಃ ಸಂತಿ ಸೇವಕತ್ವೇನಾಸ್ಯೇತಿ ಮರೀಚಿಮಾನ್" ಮರೀಚಿಯೇ ಮೊದಲಾದ ಮಹರ್ಷಿಗಳೆಲ್ಲರೂ ಸೇವೆ ಸಲ್ಲಿಸುತ್ತಿರುವ ಪರಮಾತ್ಮ. (ಉಪಲಕ್ಷಕಾರ್ಥ) (ರಾ. ಟೀ.)

ತಿಮಿರೋನ್ಮಥನಃ - (ಅ) ಜ್ಞಾನಸಂಪಾದನೆಗೆ ಪ್ರತಿಬಂಧಕವಾದ ವಿಘ್ನಗಳೆಲ್ಲವನ್ನೂ ಪರಿಹರಿಸುವವನು.

(ಅ) ತಿಮಿರವೆಂದರೆ ಮೂಲಾವಿದ್ಯೆ. ಅದನ್ನು ಮಥನ ಮಾಡುವವನು; ಎಂದರೆ ತನ್ನ ಭಕ್ತರಿಗೆ ಮೂಲಾವಿದ್ಯಾ ನಿರಾಸಪೂರ್ವಕ ದಿವ್ಯಜ್ಞಾನಪ್ರದಾಯಕನಾದವನು. (ರಾ. ಟೀ.)

ತ್ವಷ್ಟಾ - (ಅ) ತನ್ನನ್ನು ಆಶ್ರಯಿಸಿದವರ ಮಹಾಪರಾಧವನ್ನೂ ಗಣಿಸದೆ ಅವರಿಗೆ ಮಂಗಳವನ್ನುಂಟುಮಾಡುವವನು. (ರಾ. ಟೀ.)

(ಆ) ಉಪಾಸಕರಿಗೆ ಉತ್ಪತ್ತಿಪ್ರಳಯಾದಿ ರೂಪವಾದ ಅನರ್ಥಪ್ರವಾಹದುಃಖವನ್ನು ಛೇದಿಸುವವನು. (ದೇವವರ್ಧಕನೆಂದೂ) ಅರ್ಥವಾಗುವುದು. (ತಿ)

(ಇ) "ತಕ್ಷೂತ್ವಕ್ಷೂ ತನೂಕರಣೇ" ಎಂಬ ಧಾತುವಿನಿಂದ ಈ ರೂಪನಿಷ್ಪತ್ತಿಯುಂಟಾಗಿದೆ. ಇದರಿಂದ ೨೧ ಬಾರಿ ಕ್ಷತ್ರಿಯರನ್ನು ನಾಶಮಾಡಿದ ಪರಶುರಾಮನ ಅವತಾರವು ಸೂಚಿತವಾಗುತ್ತದೆ (ಮ).

ಮಾರ್ತಾಂಡಃ - ಮಾರ್ತಂಡವೆಂಬುದು ಸರಿಯಾದ ರೂಪ. ಮಾರ್ತಾಂಡವೆಂಬುದು ವೈದಿಕಪ್ರಯೋಗ. "ಮಾರ್ತಂಡಃ" ಎಂದು ತಿಲಕಪಾಠ.

ಅಂಶುಮಾನ್ - "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯನಾರಾಯಣಃ ಸ್ಥಿತಃ" ಒಳಗೂ, ಹೊರಗೂ, ಎಲ್ಲೆಡೆಗಳಲ್ಲಿಯೂ ನಾರಾಯಣನೇ ವ್ಯಾಪಿಸಿರುವನು" ಎಂಬ ಶ್ರುತ್ಯನುಸಾರವಾಗಿ ಸರ್ವವ್ಯಾಪಕನೆಂದರ್ಥ. (ಅಶೂ - ವ್ಯಾಪ್ತೌ - ಧಾ) (ತಿ)

ಶ್ಲೋ ॥ ಹಿರಣ್ಯಗರ್ಭ ಶ್ಶಿಶಿರಸ್ತಪನೋ ಭಾಸ್ಕರೋ ರವಿಃ ।
ಅಗ್ನಿಗರ್ಭೋಽದಿತೇಃ ಪುತ್ರಶ್ಶಂಖಃ ಶಿಶಿರ ನಾಶನಃ ॥ ೧೨ ॥

ಹಿರಣ್ಯಗರ್ಭಾಯನಮಃ (೫೩) ಶಿಶಿರಾಯನಮಃ (೫೪) ತಪನಾಯನಮಃ (೫೫) ಅಹಸ್ಕರಾಯನಮಃ (೫೬) (ಭಾಸ್ಕರಾಯನಮಃ) (೫೭) ರವಯೇನಮಃ (೫೮) ಅಗ್ನಿಗರ್ಭಾಯನಮಃ (೫೯) ಅದಿತೇಃ ಪುತ್ರಾಯನಮಃ (೬೦) ಶಂಖಾಯನಮಃ (೬೧) ಶಿಶಿರನಾಶನಾಯನಮಃ (೬೨).

ಪ್ರತಿಪದ ॥ ಹಿರಣ್ಯಗರ್ಭಃ - ಹಿರಣ್ಯವೇ ಗರ್ಭವಾಗುಳ್ಳವನು, ಶಿಶಿರಃ - ತಾಪತ್ರಯದಿಂದ ನೊಂದವರಿಗೆ ವಿಶ್ರಾಂತಿಯನ್ನುಂಟುಮಾಡುವವನು, ತಪನಃ - ಸಾತ್ವಿಕರ ವಿರೋಧಿಗಳಿಗೆ ತಾಪವನ್ನುಂಟುಮಾಡುವವನು, ಭಾಸ್ಕರಃ - ಸಮಸ್ತ ವಸ್ತುಗಳನ್ನೂ ಪ್ರಕಾಶಗೊಳಿಸುವವನು, ರವಿಃ - ಸಮಸ್ತರಿಂದಲೂ ನುತಿಸಲ್ಪಟ್ಟವನು, ಅಗ್ನಿಗರ್ಭಃ - ಅಗ್ನಿಯೇ ಗರ್ಭದಲ್ಲುಳ್ಳವನು, ಅದಿತೇಃ ಪುತ್ರಃ - ಅದಿತಿಯ ಮಗನಾಗಿ ಅವತಾರ ಮಾಡಿದವನು, ಶಂಖಃ - ಸಂಜೆಯ ಹೊತ್ತು ತನ್ನಷ್ಟಕ್ಕೆ ತಾನೇ ಉಪಶಾಂತನಾಗುವವನು, ಶಿಶಿರನಾಶನಃ - ಹಿಮವನ್ನು ನಾಶಮಾಡುವವನು (ನೀನೇ). ॥ ೧೨ ॥

ತಾತ್ಪರ್ಯ ॥ ಹಿರಣ್ಯವೇ ಗರ್ಭವಾಗುಳ್ಳವನೂ, ತಾಪತ್ರಯದಿಂದ ನೊಂದವರಿಗೆ ವಿಶ್ರಾಂತಿಯನ್ನುಂಟುಮಾಡುವವನೂ, ಸಾತ್ವಿಕರಾದವರಿಗೆ ತೊಂದರೆ ಕೊಡುವವರನ್ನು ತಾಪಗೊಳಿಸುವವನೂ, ಸಕಲ ಪದಾರ್ಥಗಳನ್ನೂ ಪ್ರಕಾಶಗೊಳಿಸುವವನೂ, ಸರ್ವಸ್ತುತನೂ, ಅಗ್ನಿಯೇ ಗರ್ಭದಲ್ಲಿರುವವನೂ ಅದಿತಿಯ ಮಗನಾಗಿ ಅವತಾರ ಮಾಡಿದವನೂ, ಸಂಜೆಯ ಹೊತ್ತು ತನ್ನಷ್ಟಕ್ಕೆ ತಾನೇ ಉಪಶಾಂತನಾಗುವವನೂ, ಹಿಮನಾಶಕನೂ (ನೀನೇ). ॥ ೧೨ ॥

ವಿಶೇಷವಿಷಯಗಳು:—(ಅ) "ಹಿರಣ್ಯಗರ್ಭಃ" ಸಮಸ್ತ ಜಗತ್ತಿಗೂ ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣಕರ್ತರಾದ ಬ್ರಹ್ಮ ವಿಷ್ಣು ರುದ್ರರೆಂಬ ಮುಮ್ಮೂರ್ತಿಗಳ ರೂಪನಾದ ಹಿರಣ್ಯಗರ್ಭನು.

ಕತಕರು, ಈ ನಾಮವೇ ಆದಿತ್ಯಹೃದಯ ರಹಸ್ಯರೂಪವಾದುದೆಂದು ಬರೆಯುತ್ತಾರೆ. "ಓಂ ನಮೋ ಭಗವತೇ ಹಿರಣ್ಯಗರ್ಭಾಯನಮಃ" ಎಂದು ಈ ನಾಮಮಂತ್ರವು ದ್ವಾದಶಾಕ್ಷರಿಯೆಂದೂ ಬರೆಯುತ್ತಾರೆ.

(ಆ) ಬ್ರಹ್ಮಾಂಡಕ್ಕೆ ಅತಿ ಸಮೀಪದಲ್ಲಿರುವವನು. ಅಥವಾ, ಹಿತವೂ, ರಮಣೀಯವೂ ಆದ ಅಂತಃಕರಣವುಳ್ಳವನು. ಅಥವಾ, ಬ್ರಹ್ಮಾಂಡಾಂತರ್ಯಾಮಿಯಾದವನು.

(ಇ) ಸಕಲ ಜಗದುತ್ಪಾದಕವಾದ ಸಮಸ್ತ ಜೀವಜಾತವೂ ಹಿರಣ್ಯವೆನಿಸುತ್ತದೆ. ಅದನ್ನೇ ಗರ್ಭದಲ್ಲುಳ್ಳವನು. "ಹಿರಣ್ಯಗರ್ಭಸ್ಸಮವರ್ತತಾಗ್ರೇ" ಎಂದುಶ್ರುತಿ.

"ರವಿಃ" (ಯೋವೈವೇದಾಂಶ್ಚ ಪ್ರಹಿಣೋತಿ ತಸ್ಮೈ,) ಎಂಬ ಶ್ರುತ್ಯನುಸಾರವಾಗಿ ಹಿರಣ್ಯಗರ್ಭಾದಿಗಳಿಗೆ ಉಪದೇಶ ಮಾಡುವವನು.

"ಅಗ್ನಿಗರ್ಭಃ"—(ಅ) ಕಾಲಾಗ್ನಿ ರುದ್ರನನ್ನೇ ಗರ್ಭದಲ್ಲಿ ಒಳಗೊಂಡವನು. ("ನಾರಾಯಣಾದ್ರುದ್ರೋ ಜಾಯತೇ" ಎಂದು ಶ್ರುತಿಯು).

(ಆ) ಅಗ್ನಿಯೇ ಗರ್ಭದಲ್ಲಿರುವವನು. "ಉದ್ಯಂತಂ ವಾ ವಾದಿತ್ಯಮಗ್ನಿರನುಸಮಾರೋಹತಿ" ಎಂದು ಶ್ರುತಿ.

"ಅದಿತೇಃ ಪುತ್ರಃ" ಅದಿತಿಯಮಗನಾದ ಇಂದ್ರನನ್ನು ಕಾಪಾಡಿದವನು. (ಅದಿತೇಃ ಪುಮಪತ್ಯಂ ಪುರಂದರಂ ತ್ರಾಯತ ಇತಿ ಪುತ್ರಃ) ಇದರಿಂದ ವಾಮನಾವತಾರವು ಸೂಚಿತವಾಗುತ್ತದೆ.

ಶಂಖಃ-(ಅ) ಶಂಚ ಖಂಚ ಶಂಖಃ" ಪರಮಾನಂದಾಕಾಶಸ್ವರೂಪನಾದವನು. (ಆ) ಕಲ್ಯಾಣಮಯವಾದ ಕಿರಣಗಳುಳ್ಳವನು.

ಶಿಶಿರನಾಶನಃ-ಮಂದಬುದ್ಧಿಯನ್ನು ಹೋಗಲಾಡಿಸುವವನು.

ಶ್ಲೋ || ವ್ಯೋಮನಾಥಸ್ತಮೋ ಭೇದೀ ಋಗ್ಯಜುಸ್ಸಾಮ ಪಾರಗಃ |
ಘನವೃಷ್ಟಿರಪಾಂ ಮಿತ್ರೋ ವಿಂಧ್ಯವೀಥೀಪ್ಲವಂಗಮಃ || ೧೩ ||

ವ್ಯೋಮನಾಥಾಯನಮಃ (೬೩) ತಮೋಭೇದಿನೇನಮಃ (೬೪) ಋಗ್ಯಜುಸ್ಸಾಮಪಾರಗಾಯನಮಃ (೬೫) ಘನವೃಷ್ಟಯೇನಮಃ (೬೬) ಅಪಾಂಮಿತ್ರಾಯನಮಃ (೬೭) ವಿಂಧ್ಯವೀಥೀಪ್ಲವಂಗಮಾಯನಮಃ (೬೮).

ಪ್ರತಿಪದ || ವ್ಯೋಮನಾಥಃ - ಅಂತರಿಕ್ಷಕ್ಕೊಡೆಯನು, ತಮೋಭೇದೀ - ಕತ್ತಲನ್ನು ಕಳೆಯುವವನು, ಋಗ್ಯಜುಸ್ಸಾಮಪಾರಗಃ - ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಪಾಠವನ್ನೂ ಚೆನ್ನಾಗಿ ತಿಳಿದವನು, ಘನವೃಷ್ಟಿಃ - ಅಪಾರವಾದ ಮಳೆಯುಳ್ಳವನು, ಅಪಾಂಮಿತ್ರಃ - ಉದಕಗಳಿಗೆ ಗೆಳೆಯನಾದವನು, ವಿಂಧ್ಯವೀಥೀಪ್ಲವಂಗಮಃ-ದಕ್ಷಿಣಾಯನದಲ್ಲಿ ವಿಂಧ್ಯಪರ್ವತದ ಮಾರ್ಗದಲ್ಲಿ ತೇಲಿಕೊಂಡು ಹೋಗುವವನು (ನೀನೇ). || ೧೩ ||

ತಾತ್ಪರ್ಯ || ಅಂತರಿಕ್ಷಕ್ಕೆ ಅಧಿಪತಿಯಾದವನೂ, ಕತ್ತಲನ್ನು ಕಳೆಯುವವನೂ, ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಪಾಠವನ್ನರಿತವನೂ, ಅಪರಿಮಿತವಾದ ವೃಷ್ಟಿಯುಳ್ಳವನೂ, ಉದಕಗಳಿಗೆ ಮಿತ್ರನೂ, ದಕ್ಷಿಣಾಯನದಲ್ಲಿ ವಿಂಧ್ಯಾದ್ರಿಯ ಮಾರ್ಗದಲ್ಲಿ ಹಗುರವಾಗಿ ತೇಲಿಕೊಂಡು ಹೋಗುವವನೂ (ನೀನೇ). || ೧೩ ||

ವಿಶೇಷವಿಷಯಗಳು:—(ಅ) ವ್ಯೋಮನಾಥಃ-ತಾಮಸಾಹಂಕಾರರೂಪದಿಂದ ಆಕಾಶವನ್ನು ಸೃಷ್ಟಿ ಮಾಡಿದವನು (ಕರ್ತಾ) "ಆತ್ಮನ ಆಕಾಶಸ್ಸಂಭೂತಃ" ಎಂದು ಶ್ರುತಿ.

(ಆ) ಆಕಾಶದಂತೆ ಸರ್ವತ್ರ ವ್ಯಾಪಕನಾದವನು.

ತಮೋಭೇದೀ-(ಅ) ಭಕ್ತರಲ್ಲಿ ಮೂಡುವ ಅಜ್ಞಾನವನ್ನು ನಾಶಮಾಡುವವನು.

(ಆ) ಸ್ಮರಣ ಮಾತ್ರದಿಂದಲೇ ಅಜ್ಞಾನಾಂಧಕಾರವನ್ನು ತೊಲಗಿಸುವವನು.

(ಇ) ರಾಹುವನ್ನು ಭೇದಿಸುವ ಶೀಲವಿರುವವನು (ತಮಃ-ರಾಹುಂ ಭೇತ್ತುಂ ಶೀಲಮಸ್ಯಾಸ್ತೀತಿ).

ಋಗ್ಯಜುಃ ಸ್ಸಾಮಪಾರಗಃ-(ಅ) ಋಗಾದಿ ವೇದತ್ರಯದಲ್ಲಿಯೂ, ಅವುಗಳ ಸಂಬಂಧವಾದ ಉಪನಿಷತ್ತುಗಳಲ್ಲಿಯೂ ಪ್ರತಿಪಾದ್ಯನಾದವನು.

(ಆ) ಶ್ಲೋ ॥ ಯೇಚ ವೇದವಿದೋ ವಿಪ್ರಾ ಯೇಚಾಧ್ಯಾತ್ಮ ವಿದೋ ಜನಾಃ ।
ತೇ ವದಂತಿ ಮಹಾತ್ಮಾನಂ ಕೃಷ್ಣಂ ಧರ್ಮಂ ಸನಾತನಂ ॥

ಎಂಬಂತೆ ಋಗ್ಯಜುಸ್ಸಾಮವೇದಗಳಲ್ಲಿ ನಿಷ್ಣಾತರಾದ ಮಹನೀಯರಿಂದ ಸ್ತುತಿಸಲ್ಪಟ್ಟವನು ಮತ್ತು ಉಪಾಸ್ಯನಾದವನು.

(ಇ) ಋಗ್ಯಜುಸ್ಸಾಮಗಳೆಂಬ ವೇದತ್ರಯಗಳ ಪಾರವನ್ನು ಹೊಂದುವವನು.

"ಋಗ್ಭಿಃ ಪೂರ್ವಾಹ್ಣೇ ದಿವಿದೇವ ಈಯತೇ । ಯಜುರ್ವೇದೇ ತಿಷ್ಠತಿ ಮಧ್ಯೇ ಅಹ್ನಃ । ಸಾಮವೇದೇನಾಸ್ತಮಯೇ ಮಹೀಯತೇ । ವೇದೈರಶೂನ್ಯ ಸ್ತ್ರಿಭಿರೇತಿ ಸೂರ್ಯಃ" ಎಂದು ಶ್ರುತಿ.

(ಸೂರ್ಯನು ಪ್ರಾತಃಕಾಲದಲ್ಲಿ ಋಗ್ವೇದ ಮಂತ್ರಗಳಿಂದ ಹೊಂದಲ್ಪಡುವನು. ಮಧ್ಯಾಹ್ನದಲ್ಲಿ ಯಜುರ್ವೇದದಲ್ಲಿರುವನು. ಸಾಯಂಕಾಲದಲ್ಲಿ ಸಾಮವೇದದಲ್ಲಿರುತ್ತಾನೆ ಎಂದು ಇದರ ಭಾವಾರ್ಥವು).

ಘನವೃಷ್ಟಿಃ-ಈ ಪದಕ್ಕೆ ವಿಶೇಷಾರ್ಥವನ್ನು "ರಶ್ಮಿ ಭಾವನಃ" ಎಂಬ ಕಡೆ ನೋಡಿರಿ.

ಅಪಾಂಮಿತ್ರಃ-(ಅ) ಸಾತ್ವಿಕರಿಗೆ ಚೈತನ್ಯ ದಾನ ಮಾಡುವವನು. (ಆ) ಭಕ್ತರಿಗೆ ಬೇಕುಬೇಕಾದುದನ್ನೆಲ್ಲ ದಾನ ಮಾಡುವವನು.

ವಿಂಧ್ಯವೀಥೀಪ್ಲವಂಗಮಃ—ಇಲ್ಲಿ "ವಿಂಧ್ಯವೀಥಿಃ ಪ್ಲವಂಗಮಃ" ಎಂಬ ಪಾಠಾಂತರವಿದೆ. (ವಿಂಧ್ಯವತ್ ದುರ್ಗಮಾಯಾ ವೀಥ್ಯಾಂ ಸುಷುಮ್ನಾ ಮಾರ್ಗೇ ಪ್ಲವಂ ಶೀಘ್ರಂ ಗಮಯತೀತಿ, ಮುಕ್ತಿಪ್ರಾಪಕ ಇತ್ಯರ್ಥಃ) "ಅತಿ ದುರ್ಗಮವಾದ ಸುಷುಮ್ನಾಮಾರ್ಗದಲ್ಲಿ ಜಾಗ್ರತೆಯಾಗಿ ಭಕ್ತರನ್ನು ನಡೆಯಿಸಿ ಅವರಿಗೆ ಮುಕ್ತಿಯನ್ನು ದೊರಕಿಸುವವನು ನೀನು" ಎಂದು ಅರ್ಥ.

"ಸ ಏತಾ‌ನ್ ಬ್ರಹ್ಮ ಗಮಯತಿ, ಹಾರ್ದಾನುಗೃಹೀತಶ್ಶತಾಧಿಕಯಾ" ಎಂಬಿವೇ ಮೊದಲಾದ ಅನೇಕ ವಾಕ್ಯಗಳ ಪ್ರಮಾಣಗಳಿಂದ ಈ ಅರ್ಥವು ಸೂಚಿತವಾಗಿದೆ.

ಶ್ಲೋ ॥ ಆತಪೀ ಮಂಡಲೀ ಮೃತ್ಯುಃ ಪಿಂಗಲಃ ಸರ್ವತಾಪನಃ ।
ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ ॥ ೧೪ ॥

ಆತಪಿನೇನಮಃ (೬೯) ಮಂಡಲಿನೇನಮಃ (೭೦) ಮೃತ್ಯವೇನಮಃ (೭೧) ಪಿಂಗಲಾಯನಮಃ (೭೨) ಸರ್ವತಾಪನಾಯನಮಃ (೭೩) ಕವಯೇನಮಃ (೭೪) ವಿಶ್ವಸ್ಮೈನಮಃ (೭೫) ಮಹಾತೇಜಸೇನಮಃ (೭೬) ರಕ್ತಾಯನಮಃ (೭೭) ಸರ್ವಭವೋದ್ಭವಾಯನಮಃ (೭೮).

ಪ್ರತಿಪದ ॥ ಆತಪೀ - ಬಿಸಿಲುಳ್ಳವನು, ಮಂಡಲೀ - ಗುಂಡಾದ ಬಿಂಬವುಳ್ಳವನು, ಮೃತ್ಯುಃ - (ವಿರೋಧಿಗಳಾದವರಿಗೆ) ಮೃತ್ಯುಸ್ವರೂಪನಾದವನು, ಪಿಂಗಲಃ - (ಉದಯ ಕಾಲದಲ್ಲಿ) ಹಚ್ಚನೆಯ ಬಣ್ಣವುಳ್ಳವನು, ಸರ್ವತಾಪನಃ - ಏಕಕಾಲದಲ್ಲಿಯೇ ಸಮಸ್ತ ಜಗತ್ತನ್ನೂ ಸಂಹರಿಸುವವನು, ಕವಿಃ - ಸರ್ವಜ್ಞನಾದವನು, ವಿಶ್ವಃ - ಪ್ರಪಂಚಸ್ವರೂಪನಾದವನು, ಮಹಾತೇಜಾಃ - ಪ್ರಬಲವಾದ ತೇಜಸ್ಸುಳ್ಳವನು, ರಕ್ತಃ - ಎಲ್ಲವನ್ನೂ ಸಂತೋಷಗೊಳಿಸುವವನು, ಸರ್ವಭವೋದ್ಭವಃ - ಸಮಸ್ತರಿಗೂ ಸಂಸಾರವನ್ನು ಕಲ್ಪಿಸಿ ಕೊಡುವವನು (ನೀನೇ). ॥ ೧೪ ॥

ತಾತ್ಪರ್ಯ ॥ ಬಿಸಿಲುಳ್ಳವನೂ, ವರ್ತುಲಾಕಾರವಾದ ಬಿಂಬವುಳ್ಳವನೂ, ವಿರೋಧಿಗಳಾದವರಿಗೆ ಮೃತ್ಯುಸ್ವರೂಪನಾದವನೂ, ಉದಯಕಾಲದಲ್ಲಿ ಹಳದಿಯ ಬಣ್ಣದಿಂದ ಶೋಭಿಸುವವನೂ, ಏಕಕಾಲದಲ್ಲಿ ಸಮಸ್ತ ಜಗತ್ತನ್ನೇ ಸಂಹರಿಸುವವನೂ, ಸರ್ವಜ್ಞಮೂರ್ತಿಯೂ, ಪ್ರಪಂಚಸ್ವರೂಪನೂ, ಪ್ರಬಲ ತೇಜಸ್ಸಂಪನ್ನನೂ, ಸಮಸ್ತ ಪ್ರಾಣಿಗಳನ್ನೂ ಸಂತೋಷಗೊಳಿಸುವವನೂ, ಸಮಸ್ತ ಪ್ರಾಣಿಗಳಿಗೂ ಸಂಸಾರವನ್ನು ಕಲ್ಪಿಸಿಕೊಡುವವನೂ (ನೀನೇ). ॥ ೧೪ ॥

ವಿಶೇಷವಿಷಯಗಳು:—ಆತಪೀ-(ಅ) ಜಗನ್ನಿರ್ಮಾಣ ಸಂಕಲ್ಪವುಳ್ಳವನು. (ಆ) ಎಲ್ಲವನ್ನೂ ತಿಳಿಯುವ ದಿವ್ಯಜ್ಞಾನಸಂಪನ್ನನಾದವನು. (ತಪಃ-ಜ್ಞಾನಂ).

ಮಂಡಲೀ-(ಮಂಡ್ಯತೇಽನೇನೇತಿ) ಕೌಸ್ತುಭಾದ್ಯಾಭರಣಭೂಷಿತನಾದವನು ಅಥವಾ ಕಿರಣಸಮೂಹವುಳ್ಳವನು.

ಮೃತ್ಯುಃ-(ಅ) ಮೃತ್ಯುವಿಗೂ ವಿಘಾತಕನಾದವನು ಎಂದರೆ ಮೃತ್ಯುಂಜಯನಾದವನು.

(ಆ) ಸಮಸ್ತ ಪ್ರಾಣಿಗಳಿಗೂ ಮೃತ್ಯುಸಂಪಾದಕನಾದವನು (ಶ್ರು: ಅಮುಮಾಹುಃ ಪರಂಮೃತ್ಯುಂ).

ಪಿಂಗಲಃ-ಪಿಂಗಲಾದಿ ನಾಡೀಪ್ರವರ್ತಕನು. ತನ್ಮೂಲಕ ಕರ್ಮಮಾರ್ಗ ಪ್ರವರ್ತಕನಾದವನು.

ಕವಿಃ-ಇಚ್ಛಾಮಾತ್ರದಿಂದಲೇ ಗದ್ಯಪದ್ಯಾತ್ಮಕವಾದ ಸಮಸ್ತ ಸಾಹಿತ್ಯವನ್ನೂ ನಿರ್ಮಿಸುವಾತನು. ಅಥವಾ ವ್ಯಾಕರಣಾದಿ ಸಕಲ ಶಾಸ್ತ್ರಪ್ರವರ್ತಕನಾದವನು.

ವಿಶ್ವಃ-"ವಿಶ್ವಮೇವೇದಂ ಪುರುಷಃ" ಎಂಬ ಶ್ರುತಿವಚನದಂತೆ ವಿಶ್ವಸ್ವರೂಪನಾದವನು ಅಥವಾ ಸಕಲ ಬ್ರಹ್ಮಾಂಡ ನಿಯಂತೃವಾದವನು.

ಸರ್ವಭವೋದ್ಭವಃ - ಬ್ರಹ್ಮನಿಗೂ ಉದ್ಭವಸ್ಥಾನವಾದವನು. ಅಥವಾ ಸಮಸ್ತ ಕಾರ್ಯವರ್ಗಗಳಿಗೂ ಉತ್ಪಾದಕನಾದವನು.

ಶ್ಲೋ ॥ ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ ।
ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ನಮೋಽಸ್ತು ತೇ ॥ ೧೫ ॥

ನಕ್ಷತ್ರಗ್ರಹತಾರಾಧಿಪಾಯನಮಃ (೭೯) ವಿಶ್ವಭಾವನಾಯನಮಃ (೮೦) ತೇಜಸಾಮಪಿ ತೇಜಸ್ವಿನೇನಮಃ (೮೧) ದ್ವಾದಶಾತ್ಮನೇನಮಃ (೮೨).

ಪ್ರತಿಪದ ॥ ನಕ್ಷತ್ರಗ್ರಹ ತಾರಾಣಾಂ - ನಕ್ಷತ್ರಗಳಿಗೂ, ಗ್ರಹಗಳಿಗೂ, ತಾರೆಗಳಿಗೂ, ಅಧಿಪಃ - ಒಡೆಯನೂ, ವಿಶ್ವಭಾವನಃ-ಪ್ರಪಂಚದ ಸ್ಥಿತಿಗೆ ಕಾರಣಭೂತನೂ, ತೇಜಸಾಮಪಿ-ಅಗ್ನಿಯೇ ಮೊದಲಾದ ತೇಜಸ್ಸುಗಳಿಗೂ, ತೇಜಸ್ವೀ - ಪ್ರಶಸ್ತವಾದ ತೇಜಸ್ಸುಳ್ಳವನೂ, (ಆದ) ದ್ವಾದಶಾತ್ಮನ್ - ದ್ವಾದಶ ಮಂಡಲಗಳಲ್ಲಿಯೂ ಒಳಹೊಕ್ಕಿರುವ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಇರಲಿ. ॥ ೧೫ ॥

ತಾತ್ಪರ್ಯ ॥ ನಕ್ಷತ್ರಗಳಿಗೂ, ಗ್ರಹಗಳಿಗೂ, ತಾರೆಗಳಿಗೂ ಒಡೆಯನಾದವನೂ, ಪ್ರಪಂಚದ ಸ್ಥಿತಿ ಕಾರಣನೂ, ಅಗ್ನಿಯೇ ಮೊದಲಾದ ಸಮಸ್ತ ತೇಜಸ್ಸುಗಳಿಗೂ ಕಾರಣನಾದವನೂ, ದ್ವಾದಶಮಂಡಲಗಳಲ್ಲಿಯೂ ಒಳಹೊಕ್ಕಿದವನೂ ಆದ ನಿನಗೆ ನಮಸ್ಕಾರವಿರಲಿ. ॥ ೧೫ ॥

ವಿಶೇಷವಿಷಯಗಳು:—ನಕ್ಷತ್ರ........ಅಧಿಪಃ-ನಕ್ಷತ್ರಗಳಲ್ಲಿಯೂ, ಗ್ರಹಗಳಲ್ಲಿಯೂ, ತಾರೆಗಳಲ್ಲಿಯೂ ಅಂತರ್ವರ್ತಿಯಾಗಿದ್ದು ಅವುಗಳೆಲ್ಲವನ್ನೂ ಪ್ರವರ್ತಿಸುವಾತನು.

ವಿಶ್ವಭಾವನಃ-ಈ ನಾಮವು ಹಿಂದಣ ಶ್ಲೋಕದಲ್ಲಿಯ "ಸರ್ವಭವೋದ್ಭವಾಯನಮಃ" ಎಂಬುದರ ಪರ್ಯಾಯ ವಾಚಕವು.

ತೇಜಸಾಮಪಿ ತೇಜಸ್ವೀ-ಅಗ್ನ್ಯಾದಿ ತೇಜಸ್ಸುಗಳಿಗೆಲ್ಲ ತೇಜಸ್ಸನ್ನುಂಟುಮಾಡುವ ಚಿನ್ಮಯ ತೇಜೋ ವಿರಾಜಿತನು. "ಯೇನ ಸೂರ್ಯಸ್ತಪತಿ ತೇಜಸೇದ್ಧಃ" ಎಂದು ಶ್ರುತಿ.

ದ್ವಾದಶಾತ್ಮ-ದ್ವಾದಶಮಾಸಸ್ವರೂಪನಾದವನು ಅಥವಾ ದ್ವಾದಶಾದಿತ್ಯರಿಗೂ ಒಡೆಯನಾಗಿ ಅವರೆಲ್ಲರಿಗೂ ನಿಯಂತೃವಾಗಿರುವಾತನು. ಅಥವಾ ದ್ವಾದಶಮೂರ್ತಿ ಸ್ವರೂಪನಾದವನು. ಸ್ಮೃತಿಯಲ್ಲಿ, "ಇಂದ್ರೋ ಧಾತಾ ಭಗಃ ಪೂಷಾ ಮಿತ್ರೋಥ ವರುಣೋರ್ಯಮಾ । ಅರ್ಚಿರ್ವಿವಸ್ವಾಂಸ್ತ್ವಷ್ಟಾ ಚ ಸವಿತಾ ವಿಷ್ಣುರೇವಚ ॥ ಇಂದ್ರ, ಧಾತೃ, ಭಗ, ಪೂಷ, ಮಿತ್ರ, ವರುಣ, ಅರ್ಯಮ, ಅರ್ಚಿ, ವಿವಸ್ವಂತ, ತ್ವಷ್ಟಾ, ಸವಿತೃ, ವಿಷ್ಣು ಎಂಬುದಾಗಿ ಹನ್ನೆರಡೂ ಮೂರ್ತಿಗಳ ಸ್ವರೂಪನಾದವನು" ಎಂದು ಹೇಳಿದೆ.

ಶ್ಲೋ ॥ ನಮಃ ಪೂರ್ವಾಯ ಗಿರಯೇ ಪಶ್ಚಿಮೇ ಗಿರಯೇನಮಃ ।
ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇನಮಃ ॥ ೧೬ ॥

ಪೂರ್ವಾಯ ಗಿರಯೇನಮಃ (೮೩) ಪಶ್ಚಿಮಾದ್ರಯೇನಮಃ (೮೪) ಜ್ಯೋತಿರ್ಗಣಾನಾಂ ಪತಯೇನಮಃ (೮೫) ದಿನಾಧಿಪತಯೇನಮಃ (೮೬)

ಪ್ರತಿಪದ ॥ ಪೂರ್ವಾಯ - ಮೂಡಲಲ್ಲಿರುವ, ಗಿರಯೇ - ಉದಯ ಪರ್ವತಾಂತರ್ಯಾಮಿಯಾಗಿರುವ ನಿನಗೆ, ನಮಃ - ನಮಸ್ಕಾರವು, ಪಶ್ಚಿಮೇ - ಪಡವಲಲ್ಲಿರುವ, ಗಿರಯೇ - ಅಸ್ತ ಪರ್ವತಾಂತರ್ಯಾಮಿಯಾಗಿರುವ ನಿನಗೆ, ನಮಃ - ನಮಸ್ಕಾರವು, ಜ್ಯೋತಿರ್ಗಣಾನಾಂ - ಅಗ್ನ್ಯಾದಿ ತೇಜೋರಾಶಿಗಳಿಗೆ, ಪತಯೇ ಸ್ವಾಮಿಯಾದ, ದಿನಾಧಿಪತಯೇ - ದಿನಗಳಿಗೆ ಅಧಿಪತಿಯಾದ, (ತೇ - ನಿನಗೆ) ನಮಃ - ನಮಸ್ಕಾರವು. ॥ ೧೬ ॥

ತಾತ್ಪರ್ಯ ॥ ಮೂಡಲ ಪಡವಲ ಪರ್ವತಗಳಲ್ಲಿ ಅಂತರ್ಯಾಮಿಯಾಗಿಯೂ, ಅಗ್ನ್ಯಾದಿ ತೇಜೋರಾಶಿಗಳಿಗೆ ಸ್ವಾಮಿಯಾಗಿಯೂ, ದಿನಗಳಿಗೆ ಒಡೆಯನಾಗಿಯೂ ಇರುವ ನಿನಗೆ ನಮಸ್ಕಾರವು. ॥ ೧೬ ॥

ವಿಶೇಷವಿಷಯಗಳು:—ಜ್ಯೋತಿರ್ಗಣಾನಾಂಪತಯೇ-ಮುಕ್ತರೆಲ್ಲರಿಗೂ ಸ್ವಾಮಿಯಾದವನು.

ಶ್ಲೋ ॥ ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋನಮಃ ।
ನಮೋನಮಸ್ಸಹಸ್ರಾಂಶೋ ಆದಿತ್ಯಾಯ ನಮೋನಮಃ ॥ ೧೭ ॥

ಜಯಾಯನಮಃ (೮೭) ಜಯಭದ್ರಾಯನಮಃ (೮೮) ಹರ್ಯಶ್ವಾಯನಮಃ(೮೯) ಸಹಸ್ರಾಂಶವೇನಮಃ(೯೦) ಆದಿತ್ಯಾಯನಮಃ (೯೧).

ಪ್ರತಿಪದ ॥ ಜಯಾಯ-ಉಪಾಸಕರಿಗೆ ಜಯವನ್ನುಂಟುಮಾಡುವವನೂ, ಜಯಭದ್ರಾಯ-ವಿಜಯ ಮತ್ತು ಕಲ್ಯಾಣಗಳನ್ನು ಕರುಣಿಸುವವನೂ, ಹರ್ಯಶ್ವಾಯ - ಹಸರು ಬಣ್ಣದ ಕುದುರೆ

ಗಳುಳ್ಳವನೂ ಆದ, (ತೇ-ನಿನಗೆ) ನಮಃ-ನಮಸ್ಕಾರವು, ಸಹಸ್ರಾಂಶೋ-ಎಲೈ ಸಹಸ್ರ ಕಿರಣನೇ, (ತೇ - ನಿನಗೆ) ನಮಃ - ನಮಸ್ಕಾರವು, ಆದಿತ್ಯಾಯ - ಅದಿತಿಯ ಮಗನಾದ ನಿನಗೆ, ನಮಃ - ನಮಸ್ಕಾರವು. ‖ ೧೭ ‖

ತಾತ್ಪರ್ಯ ‖ ಉಪಾಸಕರಾದವರಿಗೆ ವಿಜಯವನ್ನುಂಟುಮಾಡುವಾತನೂ, ಭಕ್ತರಿಗೆ ವಿಜಯವನ್ನೂ, ಕಲ್ಯಾಣವನ್ನೂ ಕರುಣಿಸುವಾತನೂ, ಹಸರು ಬಣ್ಣದ ಕುದುರೆಗಳುಳ್ಳವನೂ, ಸಹಸ್ರ ಕಿರಣನೂ ಅದಿತಿಯ ಮಗನೂ ಆದ ನಿನಗೆ ನಮಸ್ಕಾರವು. ‖ ೧೭ ‖

ವಿಶೇಷವಿಷಯ—ಹರ್ಯಶ್ವಾಯ - ಎಂಬ ನಾಮದಿಂದ (ಹರಿಃ - ಹನುಮಾನ್, ಅಶ್ವಃ - ವಾಹನಃ, ಸ ಏವ ವಾಹನೋಯಸ್ಯಸಃ) ರಾಮಾವತಾರವು ಸೂಚಿತವಾಗುವುದು. ಹನುಮಂತನೇ ವಾಹನವಾಗುಳ್ಳವನು.

ಶ್ಲೋ ‖ ನಮ ಉಗ್ರಾಯ ವೀರಾಯ ಸಾರಂಗಾಯ ನಮೋನಮಃ ।
ನಮಃ ಪದ್ಮಪ್ರಬೋಧಾಯ ಮಾರ್ತಾಂಡಾಯ ನಮೋನಮಃ ‖ ೧೮ ‖

ಉಗ್ರಾಯನಮಃ (೯೨) ವೀರಾಯನಮಃ (೯೩) ಸಾರಂಗಾಯನಮಃ (೯೪) ಪದ್ಮಪ್ರಬೋಧಾಯನಮಃ (೯೫) ಮಾರ್ತಾಂಡಾಯನಮಃ (೯೬)

ಪ್ರತಿಪದ ‖ ಉಗ್ರಾಯ - ಭಯಂಕರವಾದ ರೂಪವುಳ್ಳವನೂ, ವೀರಾಯ - ಪ್ರಾಣಿಗಳಿಗೆ ಅನೇಕ ಮಾರ್ಗಗಳನ್ನೂ ಪ್ರೇರಿಸುವವನೂ, ಸಾರಂಗಾಯ-ಮಹಾ ವೇಗವಾಗಿ ನಡೆಯುವವನೂ, ಪದ್ಮಪ್ರಬೋಧಾಯ - ಕಮಲಗಳನ್ನು ಅರಳಿಸುವವನೂ, ಮಾರ್ತಾಂಡಾಯ - ಬ್ರಹ್ಮಾಂಡವು ಮೃತವಾದಂದು (ಅದನ್ನು ಮತ್ತೆ ಸೃಜಿಸಲು) ಮತ್ತೆ ಹುಟ್ಟುವವನೂ ಆದ (ತೇ-ನಿನಗೆ) ನಮಃ - ನಮಸ್ಕಾರವು. ‖ ೧೮ ‖

ತಾತ್ಪರ್ಯ ‖ ಉಪಾಸಕರಲ್ಲದವರಿಗೆ ಭಯಂಕರಾಕಾರವುಳ್ಳವನೂ, (ಭೂಮಂಡಲದಲ್ಲಿರುವ) ಸಮಸ್ತ ಪ್ರಾಣಿಗಳಿಗೂ (ಜೀವನ) ಮಾರ್ಗಗಳನ್ನು ಕಲ್ಪಿಸಿಕೊಡುವುದರ ಮೂಲಕ ಅವರಿಗೆ ಪ್ರೇರಕನಾದವನೂ, ಮಹಾ ವೇಗದಿಂದ ಸಂಚರಿಸುವವನೂ, ಕಮಲಗಳನ್ನು ಅರಳಿಸುವವನೂ ಮಾರ್ತಂಡನೂ ಆದ ನಿನಗೆ ನಮಸ್ಕಾರವು. ‖ ೧೮ ‖

ವಿಶೇಷವಿಷಯಗಳು:—ಉಗ್ರಾಯ-(ಅ) ಇಂದ್ರಿಯನಿಗ್ರಹಕನಾದವನು ಅಥವಾ ರುದ್ರಸ್ವರೂಪನಾದವನು.

(ಅ) ತನ್ನ ಸೇವೆಯನ್ನು ಮಾಡಿದವನಾದುದರಿಂದ ಶಂಕರನಿಂದ ತಿಳಿಯಲ್ಪಟ್ಟವನು. (ಮುಂದೆ ಶ್ರೀರಾಮಚಂದ್ರನು ರಾಮೇಶ್ವರದಲ್ಲಿ ಶಿವಲಿಂಗವನ್ನು ಪ್ರತಿಷ್ಠಿಸಿದ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡು, ಆದಿತ್ಯಹೃದಯಕ್ಕೆಲ್ಲ ಶ್ರೀರಾಮಪರವಾಗಿಯೇ ವ್ಯಾಖ್ಯಾನ ಮಾಡಿರುವ ಶಿರೋಮಣಿಕಾರರು ಇಲ್ಲಿ ಈ ವಿಷಯವನ್ನು ಬರೆದಿರುವರೆಂದು ತೋರುತ್ತದೆ.)

ವೀರಾಯ—ತನ್ನ ಭಕ್ತರಿಗೆ ಸಮಸ್ತರಿಗೂ ಅಭ್ಯಯನ ಮಾಡಿಸುವ ಶಕ್ತಿಯನ್ನುಂಟುಮಾಡುವವನೂ, ಅಥವಾ (ವಿಂ-ಈರತಇತಿ) ಪಕ್ಷಿಯಾದ ಜಟಾಯುವಿಗೆ ಮೋಕ್ಷವನ್ನು ಕರುಣಿಸಿದಾತನು (ರಾ. ಶಿ.)

ಸಾರಂಗಾಯ—(ಅ) ಪ್ರಣವ ಪ್ರತಿಪಾದ್ಯನಾದವನು (ಸಾರಂ-ಪ್ರಣವಃ).

(ಆ) ಶುಕಸಾರಣ ಪ್ರಾಯೋತ್ರಿದಿ ಅರ್ತ ದನುಜರನ್ನು ಕೃಪಾದೃಷ್ಟಿಯಿಂದ ಕಾಪಾಡಿದವನು (ರಾ. ಶಿ.)

(ಇ) ಸಾರಗ್ರಹಣ ಸಾಮರ್ಥ್ಯವುಳ್ಳವನು ಅಥವಾ ಹಂಸಾವತಾರಿಯಾದ ಪರಮಾತ್ಮನು.

(ಪುರಾಣದಲ್ಲಿ ದಿನಕರನು ನಿಮಿಷಾರ್ಧದಲ್ಲಿ ಎರಡು-ಸಾವಿರ ಯೋಜನಗಳ ದೂರ ಹೋಗುವನೆಂದು ಪುರಾಣದಲ್ಲಿ ಹೇಳಿದೆ).

ಪದ್ಮಪ್ರಬೋಧಾಯ—ಇಲ್ಲಿ ಪದ್ಮ ಎಂದರೆ ಹೃದಯಕಮಲವೆಂದು ಅರ್ಥ.

"ಮಾರ್ತಂಡಾಯ" ಎಂಬುದಕ್ಕೆ "ಪ್ರಚಂಡಾಯ" ಎಂದು ಪಾಠಾಂತರವುಂಟು. ಚಂಡಿಯು ನಿಯಾಮಕನಾಹವನೆಂದು ಅರ್ಥ. ಸರ್ವಸಮರ್ಥ ಅಥವಾ ಅತಿಕೋಪನ ಎಂದೂ ಅರ್ಥವಾಗುತ್ತದೆ.

ಶ್ಲೋ || ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾದಿತ್ಯ ವರ್ಚಸೇ |
ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇನಮಃ || ೧೯ ||

ಬ್ರಹ್ಮೇಶಾನಾಚ್ಯುತೇಶಾಯನಮಃ (೯೭) ಸೂರ್ಯಾಯನಮಃ (೯೮) ಆದಿತ್ಯವರ್ಚಸೇನಮಃ (೯೯) ಭಾಸ್ವತೇನಮಃ (೧೦೦) ಸರ್ವಭಕ್ಷಾಯನಮಃ (೧೦೧) ರೌದ್ರವಪುಷೇನಮಃ (೧೦೨).

ಪ್ರತಿಪದ || ಬ್ರಹ್ಮೇ........ಶಾಯ-ಬ್ರಹ್ಮ, ಶಿವ, ವಿಷ್ಣುಗಳಿಗೆ ನಿಯಾಮಕನಾದವನು, ಸೂರ್ಯಾಯ-ಪ್ರಾಣಿಗಳನ್ನು ಗರ್ಭದಲ್ಲಿರುವಾಗಲೇ ಪ್ರೇರಿಸುವವನು, ಆದಿತ್ಯವರ್ಚಸೇ - ಸೂರ್ಯಮಂಡಲದಲ್ಲಿ ತೇಜೋರೂಪನಾಗಿರುವವನು, ಭಾಸ್ವತೇ - ಕಾಂತಿಯುಳ್ಳವನು, ಸರ್ವಭಕ್ಷಾಯ - ಸಮಸ್ತವನ್ನೂ ಸಂಹರಿಸುವವನೂ, ರೌದ್ರಾಯ - ಭಯಂಕರವಾದ, ವಪುಷೇ - ಆಕಾರವುಳ್ಳವನೂ ಆದ (ತೇ) ನಿನಗೆ ನಮಃ - ನಮಸ್ಕಾರವು. || ೧೯ ||

ತಾತ್ಪರ್ಯ || ಬ್ರಹ್ಮ ವಿಷ್ಣು ಶಿವರಿಗೆ ನಿಯಾಮಕನಾದ ಪರಬ್ರಹ್ಮಸ್ವರೂಪನಾಗಿರುವವನೂ, ಸಮಸ್ತ ಪ್ರಾಣಿಗಳನ್ನೂ ಆಯಾ ಕಾರ್ಯಗಳಲ್ಲಿ ಪ್ರೇರಿಸುವವನೂ, ಸೂರ್ಯಮಂಡಲದಲ್ಲಿ ತೇಜೋರೂಪನಾಗಿ ನೆಲಸಿರುವವನೂ, ಸಮಸ್ತ ತೇಜಸ್ಸುಗಳಿಗೂ ಕಾರಣಭೂತನಾಗಿ ಮಹಾ ತೇಜಸ್ಸುಳ್ಳವನೂ, ಪ್ರಳಯ ಸಮಯದಲ್ಲಿ ಸಮಸ್ತವನ್ನೂ ಸಂಹರಿಸುವವನೂ, ವಿಶೇಷವಾದ ಕಾಂತಿಯುಳ್ಳವನೂ, ಭಯಂಕರಾಕಾರವುಳ್ಳವನೂ ಆದ ನಿನಗೆ ನಮಸ್ಕಾರವು. || ೧೯ ||

ವಿಶೇಷವಿಷಯಗಳು:—ಬ್ರಹ್ಮ........ಶಾಯ-(ಅ) ಸೃಷ್ಟಿ, ಸ್ಥಿತಿ ಲಯ ಕರ್ತರಿಗೆ ಪರಬ್ರಹ್ಮರೂಪನಾದ ಒಡೆಯನು (ಶ್ರು : ಅಸಾವಾದಿತ್ಯೋ ಬ್ರಹ್ಮ) ಅಥವಾ-ಬ್ರಹ್ಮೇಶಾನರಿಗೆ, ಅಚ್ಯುತ-ಶಾಶ್ವತನಾದ, ಈಶಾಯ-ಒಡೆಯನು ಎಂದರೆ ಎಲ್ಲ ಆಪತ್ತುಗಳಲ್ಲಿಯೂ ಪಾಲಕನಾದವನು. ವೇದಾಪಹಾರ-ಗುರುಪಾತಕ-ದೈತ್ಯಪೀಡಾ ಮೊದಲಾದ ಆಪತ್ತುಗಳನ್ನು ನಿವಾರಿಸುವವನೆಂದು ಅರ್ಥವು. "ಬ್ರಹ್ಮೇಶಾಯಾಚ್ಯುತೇಶಾಯ" ಎಂದು ಪಾಠಾಂತರ. (ಗೋವಿಂದರಾಜರು).

(ಆ) ಸೃಷ್ಟಿ ಸ್ಥಿತಿ ಲಯ ಕರ್ತೃಗಳಿಗೆ ಸ್ವಾಮಿ ಎಂದರ್ಥ.

"ಸೃಷ್ಟಿಸ್ಥಿತ್ಯಂತ ಕರಿಣೀಂ ಬ್ರಹ್ಮ ವಿಷ್ಣು ಶಿವಾತ್ಮಿಕಾಂ |
ಸಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ ||"

ಎಂದು ಸ್ಮೃತಿಪ್ರಮಾಣ.

ಸರ್ವಭಕ್ಷಾಯ—ಸರ್ವಜ್ಞನೂ, ಸರ್ವಭೋಕ್ತೃವೂ ಆದವನು. "ಯಸ್ಯ ಬ್ರಹ್ಮ ಚ ಕ್ಷತ್ರಂ ಚ ಉಭೇ ಭವತ ಓದನೇ" ಎಂದು ಶ್ರುತಿ.

ರೌದ್ರಾಯವಪುಷೇ—(ಅ) ಸರ್ವ ಶತ್ರುಸಂಹಾರಕ್ಕಾಗಿ ಭಯಂಕರವಾದ ರೂಪವನ್ನು ತಾಳಿದವನು. ಇದರಿಂದ ನೃಸಿಂಹಾವತಾರವು ಸೂಚಿತವಾಗುತ್ತದೆ. (ಮ.)

(ಆ) "ರು - ದುಃಖಂ - ತನ್ಮೂಲಂ ರಾಗದ್ವೇಷೌ ತನ್ಮೂಲಮಜ್ಞಾನಂ ಚ ವಿದ್ರಾವಯತೀತಿ ರುದ್ರಃ ತಸ್ಯೇದಂ ರೌದ್ರಂ" ದುಃಖವನ್ನೂ ಅದಕ್ಕೆ ಕಾರಣಗಳಾದ ರಾಗದ್ವೇಷಗಳನ್ನೂ, ಅವಕ್ಕೂ ಕಾರಣವಾದ ಅಜ್ಞಾನವನ್ನೂ ಸಂಹರಿಸುವಂಥ ಶುದ್ಧ ಜ್ಞಾನಾಕಾರನಾದವನೆಂದರ್ಥ. (ತಿ.)

ಶ್ಲೋ॥ ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।
ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂಪತಯೇನಮಃ ॥ ೨೦ ॥

ತಮೋಘ್ನಾಯ ನಮಃ (೧೦೩) ಹಿಮಘ್ನಾಯನಮಃ (೧೦೪) ಶತ್ರುಘ್ನಾಯನಮಃ (೧೦೫) ಅಮಿತಾತ್ಮನೇ ನಮಃ (೧೦೬) ಕೃತಘ್ನಘ್ನಾಯನಮಃ (೧೦೭) ದೇವಾಯನಮಃ (೧೦೮) ಜ್ಯೋತಿಷಾಂಪತಯೇನಮಃ (೧೦೯)

ಪ್ರತಿಪದ ॥ ತಮೋಘ್ನಾಯ - ಕತ್ತಲನ್ನು ಕಳೆಯುವವನೂ, ಹಿಮಘ್ನಾಯ - ಮಂಜನ್ನು ಹೋಗಲಾಡಿಸುವವನೂ, ಶತ್ರುಘ್ನಾಯ - ಉಪಾಸಕರಿಗೆ ಶತ್ರುಗಳಾದವರನ್ನು ನಿಗ್ರಹಿಸುವಾತನೂ, ಅಮಿತಾತ್ಮನೇ - ಅಪರಿಚ್ಛಿನ್ನವಾದ ಸ್ವರೂಪವುಳ್ಳವನೂ, ಕೃತಘ್ನಘ್ನಾಯ - ಮಾಡಿದ ಉಪಕಾರವನ್ನು ಮರೆಯುವವರನ್ನು ಘಾತಿಸುವವನೂ, ದೇವಾಯ - ಸ್ವಯಂಪ್ರಕಾಶಕನಾದವನು, ಜ್ಯೋತಿಷಾಂ - ಚಂದ್ರಸೂರ್ಯಾದಿ ಪ್ರಕಾಶಮಾನನಾದ ಸಕಲ ವಸ್ತುಗಳಿಗೂ, ಪತಯೇ - ಒಡೆಯನಾದ (ತೇ - ನಿನಗೆ, ನಮಃ - ನಮಸ್ಕಾರವು) ॥೨೦॥

ತಾತ್ಪರ್ಯ ॥ ಕತ್ತಲನ್ನು ಕಳೆಯುವವನೂ, ಮಂಜನ್ನು ಹೋಗಲಾಡಿಸುವವನೂ, ಉಪಾಸಕರಿಗೆ ಶತ್ರುಗಳಾದವರನ್ನು ನಿಗ್ರಹಿಸುವವನೂ, ಅಪರಿಚ್ಛಿನ್ನವಾದ ಸ್ವರೂಪವುಳ್ಳವನೂ, ಮಾಡಿದ ಉಪಕಾರವನ್ನು ಮರೆಯುವವರನ್ನು ಸಂಹರಿಸುವವನೂ, ಸ್ವಯಂಪ್ರಕಾಶಕನೂ, ಚಂದ್ರಸೂರ್ಯಾದಿ ಸಕಲ ಪ್ರಕಾಶಕ ವಸ್ತುಗಳಿಗೂ ಒಡೆಯನಾದವನೂ ಆದ ನಿನಗೆ ನಮಸ್ಕಾರವು. ॥ ೨೦ ॥

ವಿಶೇಷವಿಷಯಗಳು:—ತಮೋಘ್ನ ಹಿಮಘ್ನ ಶಬ್ದಗಳು ಹಿಂದೆ ನಿರೂಪಿಸಲಾಗಿರುವ ತಿಮಿರೋನ್ಮಥನ ಶಿಶಿರನಾಶನ ಶಬ್ದಗಳ ಪರ್ಯಾಯಗಳು. (ತಿ.)

ಶತ್ರುಘ್ನಾಯ—ನಿಜ ತತ್ವವಾದ ಭಗವದನುಸಂಧಾನಕ್ಕೆ ನಿರೋಧಕವಾದ ದೇಹಾಹಂಭಾವವನ್ನು ನಿರ್ಮೂಲ ಮಾಡುವವನು. ಅಥವಾ ಋಣಸಮುದಾಯವನ್ನೂ, ಬಾಹ್ಯ ಶತ್ರುಗಳನ್ನೂ, ಆಂತರಿಕ ಶತ್ರುಗಳಾದ ಅರಿಷಡ್ವರ್ಗಗಳನ್ನೂ, ವ್ಯಾಧಿಗಳನ್ನೂ ನಿವಾರಿಸುವವನು.

ಅಮಿತಾತ್ಮನೇ—ಅನಂತ ಮಹಿಮಾ ಸಂಪನ್ನನಾದವನು. ಅಥವಾ ದೇಶಕಾಲಗಳಿಂದ ಅಪರಿಚ್ಛಿನ್ನನಾದವನು.

ಕೃತಘ್ನಘ್ನಾಯ—ಭಗವಂತನು ಮಾಡಿದ ಉಪಕಾರವನ್ನು ಮರೆಯುವವರು ಕೃತಘ್ನರು ಅವರನ್ನು ನಿಗ್ರಹಿಸುವವನು.

ದೇವಾಯ—ಚಿದಾನಂದ ಜ್ಯೋತಿಸ್ಸ್ವರೂಪನಾದವನು.

ಶ್ಲೋ || ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ |
ನಮಸ್ತಮೋಽಭಿ ನಿಘ್ನಾಯ ರುಚಯೇ ಲೋಕಸಾಕ್ಷಿಣೇ || ೨೧ ||

ತಪ್ತಚಾಮೀಕರಾಭಾಯನಮಃ (೧೧೦) ವಹ್ನಯೇನಮಃ (೧೧೧) ವಿಶ್ವಕರ್ಮಣೇನಮಃ (೧೧೨) ತಮೋಽಭಿನಿಘ್ನಾಯನಮಃ (೧೧೩) ರುಚಯೇನಮಃ (೧೧೪) ಲೋಕಸಾಕ್ಷಿಣೇನಮಃ (೧೧೫)

ಪ್ರತಿಪದ || ತಪ್ತಚಾಮೀಕರಾಭಾಯ - ಪುಟಪಾಕಶೋಧಿತವಾದ ಬಂಗಾರದ ಕಾಂತಿಯುಳ್ಳ (ತೇ) ನಮಃ - ನಿನಗೆ ನಮಸ್ಕಾರವು, ವಹ್ನಯೇ - ಅಗ್ನಿಸ್ವರೂಪನಾದವನೂ, ವಿಶ್ವಕರ್ಮಣೇ - ಸಮಸ್ತ ಕರ್ಮಗಳಿಗೂ ಸಾಕ್ಷಿಭೂತನಾದ (ತೇ - ನಿನಗೆ) ನಮಃ - ನಮಸ್ಕಾರವು, ತಮೋಽಭಿನಿಘ್ನಾಯ-ಅಂಧಕಾರವನ್ನು ಹೋಗಲಾಡಿಸುವವನೂ, ರುಚಯೇ-(ಚಿದ್ರೂಪವಾದ) ತೇಜಸ್ಸುಳ್ಳವನೂ, ಲೋಕಸಾಕ್ಷಿಣೇ - ಪ್ರಪಂಚಕ್ಕೆಲ್ಲ ಸಾಕ್ಷಿಚೈತನ್ಯ ಸ್ವರೂಪನೂ ಆದ (ತೇ - ನಿನಗೆ) ನಮಃ - ನಮಸ್ಕಾರವು. || ೨೧ ||

ತಾತ್ಪರ್ಯ || ಅಪರಂಜಿಯ ಮೆರಗುಳ್ಳವನೂ, ಅಗ್ನಿಸ್ವರೂಪನೂ, ಚಿದ್ರೂಪವಾದ ತೇಜಸ್ಸಂಪನ್ನನೂ ಅಜ್ಞಾನವೆಂಬ ಕಗ್ಗತ್ತಲೆಯನ್ನು ನಾಶಗೊಳಿಸುವವನೂ, ಸ್ವಯಂ ಪ್ರಕಾಶಸ್ವರೂಪನೂ, ಸಮಸ್ತ ಕರ್ಮಗಳಲ್ಲಿಯೂ ಅಂತರ್ಯಾಮಿಯಾದವನೂ ಆದ ನಿನಗೆ ನಮಸ್ಕಾರವು. || ೨೧ ||

ವಿಶೇಷವಿಷಯಗಳು:—"ವಹ್ನಯೇ" ಎಂಬುದಕ್ಕೆ "ಹರಯೇ" ಎಂದು ಪಾಠಾಂತರ. ಅಜ್ಞಾನನಾಶಕನೆಂದರ್ಥವು.

ವಿಶ್ವಕರ್ಮಣೇ—"ವಿಶ್ವಂ ಸರ್ವಂ ಕರ್ಮ ಯಸ್ಯ ಸಃ" "ಸರ್ವಕರ್ಮಾ ಸರ್ವಕಾಮಃ" ಎಂದು ಶ್ರುತಿ. ಜಗತ್ತಿಗೆ ಕಾರಣವಾಗುಳ್ಳವನು. (ತಿ.)

ಲೋಕಸಾಕ್ಷಿಣೇ—"ಲೋಕಯತೀತಿ ಲೋಕಃ" ದೃಶ್ಯ ಪ್ರಪಂಚದಲ್ಲಿ ಜನಗಳ ಪುಣ್ಯಪಾಪ ಕರ್ಮಗಳಿಗೆ ಸಾಕ್ಷಿಚೈತನ್ಯನಾಗಿರುವವನು. (ತಿ.)

ಶ್ಲೋ || ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ |
ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ || ೨೨ ||

ಭೂತನಾಶನಾಯನಮಃ (೧೧೬) ಭೂತಸ್ರಷ್ಟ್ರೇನಮಃ (೧೧೭) ಪ್ರಭವೇನಮಃ (೧೧೮) ಪಾಯತೇನಮಃ (೧೧೯) ತಪತೇನಮಃ (೧೨೦) ವರ್ಷತೇನಮಃ (೧೨೧)

ಪ್ರತಿಪದ || ಏಷಃ - ಈ, ಪ್ರಭುಃ - ಸ್ವಾಮಿಯು, ಭೂತಂ - ಸಮಸ್ತ ಭೂತ (ಪ್ರಾಣಿ) ಸಮೂಹವನ್ನೂ, ನಾಶಯತಿ - ನಾಶಗೊಳಿಸುತ್ತಾನೆ, ತದೇವ - ಅದನ್ನೇ, ಸೃಜತಿ - ಸೃಷ್ಟಿಮಾಡುತ್ತಾನೆ, ಏಷಃ - ಈ ಸ್ವಾಮಿಯೇ, ಗಭಸ್ತಿಭಿಃ - ಕಿರಣಗಳಿಂದ, ಪಾಯತಿ - ಶೋಷಿಸುತ್ತಾನೆ, ಏಷಃ - ಈತನೇ, ತಪತಿ - ತಾಪ ಹೊಂದಿಸುತ್ತಾನೆ, ಏಷಃ - ಈತನೇ, ಗಭಸ್ತಿಭಿಃ - ಕಿರಣಗಳಿಂದ, ವರ್ಷತಿ - ಮಳೆಗರೆಯುತ್ತಾನೆ. || ೨೨ ||

ತಾತ್ಪರ್ಯ ॥ ಈ ಸ್ವಾಮಿಯು ಸಮಸ್ತ ಭೂತಜಾತವನ್ನೂ ನಾಶಗೊಳಿಸುತ್ತಾನೆ; ಈ ರೀತಿ ನಾಶವಾದ ಅದೇ ಭೂತಜಾತವನ್ನೇ ಮತ್ತೆ ಸೃಷ್ಟಿಮಾಡುತ್ತಾನೆ. ಈ ಪ್ರಭುವೇ ತನ್ನ ಕಿರಣಗಳಿಂದ ಸಮಸ್ತ ಭೂಮಂಡಲವನ್ನೂ ಶೋಷಿಸುವನಲ್ಲದೆ, ತಾಪಗೊಳಿಸಿ ವೃಷ್ಟಿಯನ್ನೂ ಉಂಟುಮಾಡುತ್ತಾನೆ. ॥ ೨೨ ॥

ವಿಶೇಷವಿಷಯಗಳು:—ನಾಶಯತಿ-(ಅ) ಸಮಸ್ತ ಭೂತಸಮುದಾಯವನ್ನೂ ಅವುಗಳ ಆಯುಸ್ಸು ತೀರಿದ ತರುವಾಯ ಸಂಹರಿಸುವನು ಎಂದರ್ಥ.

(ಸ್ವದಿನಾಂತೇ ನಾಶಯತಿ ತೇನ—ತನ್ನ ದಿನಗಳು ಕಳೆದ ಬಳಿಕ ಸಮಸ್ತವನ್ನೂ ನಾಶಗೊಳಿಸುವವನೆಂದೂ ಅರ್ಥವಾಗುವುದು.) (ತಿ)

(ಆ) ಈ ಸೂರ್ಯಮಂಡಲಾಂತರ್ವರ್ತಿಯಾದ ಪರಮಾತ್ಮನು ರುದ್ರಾದಿಗಳ ದ್ವಾರಾ ಸಮಸ್ತ ಪ್ರಾಣಿಗಳನ್ನೂ ಸಂಹರಿಸುವನು ಎಂದು ತಾತ್ಪರ್ಯ. (ರಾ. ಶಿ)

(ಇ) "ಭವತೀತಿ ಭೂತಂ ಜಗತ್" ಪ್ರಳಯಕಾಲದಲ್ಲಿ ಜಗತ್ತನ್ನೆಲ್ಲ ನಾಶಮಾಡುವವನು. (ಗೋ.)

ಪಾಯತಿ—"ಪೈ-ಶೋಷಣೇ" ಎಂಬ ಧಾತುವಿನಿಂದ ಆದ ರೂಪವಿದು. ಈವರೆಗೆ ಮಾತ್ರ ಆದಿತ್ಯಹೃದಯ ಸ್ತೋತ್ರವನ್ನು ಶ್ರೀರಾಮಮೂರ್ತಿಗೆ ಉಪದೇಶಮಾಡಿ ಇಲ್ಲಿಂದ ಮುಂದಕ್ಕೆ ಹಿಂದೆ ಹೇಳಿದ ಸ್ತೋತ್ರದ ಅರ್ಥವನ್ನೇ ಮುಂದಣ ಮೂರು ಶ್ಲೋಕಗಳಿಂದ ತಾತ್ಪರ್ಯವಾಗಿ ನಿರೂಪಿಸುತ್ತಾರೆ. (ಗೋ.)

ಶ್ಲೋ ॥ ಏಷ ಸುಪ್ತೇಷು ಜಾಗರ್ತಿ ಭೂತೇಷು ಪರಿನಿಷ್ಠಿತಃ ।
ಏಷ ಚೈವಾಗ್ನಿಹೋತ್ರಂಚ ಫಲಂಚೈವಾಗ್ನಿಹೋತ್ರಿಣಾಂ ॥ ೨೩ ॥

ಸುಪ್ತೇಷುಜಾಗ್ರತೇನಮಃ (೧೨೨) ಭೂತೇಷು ಪರಿನಿಷ್ಠಿತಾಯನಮಃ (೧೨೩) ಅಗ್ನಿಹೋತ್ರಾಯನಮಃ (೧೨೪) ಅಗ್ನಿಹೋತ್ರಿಣಾಂ ಫಲದಾಯಕಾಯನಮಃ (೧೨೫).

ಪ್ರತಿಪದ ॥ ಏಷಃ - ಈ ಸ್ವಾಮಿಯು, ಸುಪ್ತೇಷು-ಸ್ವಪ್ನಾವಸ್ಥೆಯನ್ನು ಹೊಂದಿರುವ, ಭೂತೇಷು - ಭೂತಗಳಲ್ಲಿ, ಪರಿನಿಷ್ಠಿತಃ - ಅಂತರ್ಯಾಮಿಯಾಗಿ, ಜಾಗರ್ತಿ - ಎಚ್ಚರ (ಜ್ಞಾನಾನಂದಮಯ)ನಾಗಿರುತ್ತಾನೆ, ಏಷಏವ - ಈ ಪ್ರಭುವೇ, ಅಗ್ನಿಹೋತ್ರಿಣಾಂ - ಬಾಹ್ಯಾಭ್ಯಂತರಗಳಾದ ಅಗ್ನಿಹೋತ್ರಗಳನ್ನು ಮಾಡುವವರಿಗೆ, ಅಗ್ನಿಹೋತ್ರಂ - ಅಗ್ನಿಹೋತ್ರಸ್ವರೂಪನಾಗಿಯೂ, ಫಲಂಚೈವ - ಫಲಸ್ವರೂಪನಾಗಿಯೂ (ಇರುವನು) ॥ ೨೩ ॥

ತಾತ್ಪರ್ಯ ॥ ಭೂತಗಳೆಲ್ಲವೂ ಸ್ವಪ್ನಾವಸ್ಥೆಯಲ್ಲಿರುವಾಗ ಈ ಪ್ರಭುವೇ ಅವುಗಳಲ್ಲಿ ಅಂತರ್ಯಾಮಿಯಾಗಿದ್ದುಕೊಂಡು ಎಚ್ಚರ (ಜ್ಞಾನಾನಂದಮಯ)ನಾಗಿಯೇ ಇರುತ್ತಾನೆ. ಈತನೇ ಒಳಗಣ ಹೊರಗಣ ಅಗ್ನಿಹೋತ್ರಗಳನ್ನು ಮಾಡುವವರಿಗೆ ಅಗ್ನಿಹೋತ್ರಸ್ವರೂಪನಾಗಿಯೂ, ಫಲಸ್ವರೂಪನಾಗಿಯೂ ಇರುವನು. ॥೨೩॥

ವಿಶೇಷವಿಷಯಗಳು:—ಈ ಶ್ಲೋಕದಲ್ಲಿ ಪರಮಾತ್ಮನು ಸಕಲ ಭೂತಾಂತರ್ಯಾಮಿಯಾಗಿದ್ದುಕೊಂಡು ಯಜ್ಞಾದಿ ಸಕಲ ಕರ್ಮಕರ್ತೃವೂ, ಫಲಪ್ರದಾಯಕನೂ ಆಗಿರುತ್ತಾನೆಂಬ ಅಂಶವನ್ನು ನಿರೂಪಿಸಿರುವರು. (ಗೋ.)

ಈ ಸ್ವಾಮಿಯು ಕರಣಗಳೆಲ್ಲವೂ ಉಪರತಗಳಾಗಲು ತಾನು ಮಾತ್ರ ಉಪರತನಾಗದೆ ನಿತ್ಯಚಿದ್ರೂಪನಾಗಿ ಎಚ್ಚರದಿಂದಲೇ ಇರುತ್ತಾನೆ. (ಮ)

ಸ್ವಮಂಡಲವು ಕಾಣದಾದ ಬಳಿಕ ಪ್ರಾಣಿಗಳೆಲ್ಲವೂ ಸುಷುಪ್ತ್ಯವಸ್ಥೆಯನ್ನು ಹೊಂದಿದ ತರುವಾಯ, ಅವರಿಗೆ ಅಗೋಚರವಾದ ಪ್ರದೇಶದಲ್ಲಿರುವ ತನ್ನ ಮಂಡಲದಲ್ಲಿ ಜಾಗರೂಕನಾಗಿಯೇ ಇರುತ್ತಾನೆ. (ತಿ)

ಅಗ್ನಿಹೋತ್ರಂ—ಪಂಚೇಂದ್ರಿಯ ಲಕ್ಷಣಗಳಾದುವು ಪಂಚಾಗ್ನಿಗಳು; ಅವುಗಳಲ್ಲಿ (ಹೋತ್ರಂ-)ಹೋಮವು ಎಂದರೆ ಆಯಾ ವಿಷಯಾನುಭವರೂಪವುಳ್ಳವನೆಂದು ಅರ್ಥ.

ಶ್ಲೋ || ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವಚ ।
ಯಾನಿ ಕೃತ್ಯಾನಿ ಲೋಕೇಷು ಸರ್ವ ಏಷ ರವಿಃ ಪ್ರಭುಃ || ೨೪ ||

ಪರಮಸಮರ್ಥಾಯ ಭಗವತೇ ಬ್ರಹ್ಮಣೇನಮಃ (೧೨೬). (ಹೀಗೆ ಶ್ಲೋಕದ ಕೆಳಗೆ ಕೊಟ್ಟಿರುವ ನಾಮಗಳನ್ನು ಹೇಳಿಕೊಳ್ಳುವ ಮೊದಲು "ಓಂ" ಪ್ರಣವವನ್ನು ಉಚ್ಚರಿಸಿಕೊಳ್ಳಬೇಕು).

ಪ್ರತಿಪದ || ವೇದಾಃ - ಋಗ್ಯಜುಸ್ಸಾಮಾಥರ್ವಣಗಳೆಂಬ ವೇದಗಳೂ, ಕ್ರತವಶ್ಚೈವ - ಅಗ್ನಿಷ್ಟೋಮಾದಿ ಕ್ರತುಗಳೂ, ಕ್ರತೂನಾಂ - ಆ ಕ್ರತು (ಯಜ್ಞ)ಗಳಿಗೆ, ಫಲಮೇವಚ - ಸ್ವರ್ಗಾದಿ ರೂಪವಾದ ಫಲವೂ, ಲೋಕೇಷು - ಲೋಕಗಳಲ್ಲಿ (ಚತುರ್ದಶ ಭುವನಗಳಲ್ಲಿ) ಯಾನಿ - ಯಾವ, ಕೃತ್ಯಾನಿ - ಕಾರ್ಯಗಳೋ, (ಅವೆಲ್ಲವೂ) ಸರ್ವಃ - ಸರ್ವಾತ್ಮಕನಾದ, ಏಷಃ - ಈ, ರವಿಃ - ಸೂರ್ಯಪರಮಾತ್ಮನೇ, (ತೇಷಾಂ - ಅವುಗಳಿಗೆಲ್ಲ) ಪ್ರಭುಃ - ಫಲಪ್ರದಾನದಲ್ಲಿ ಸಮರ್ಥನಾದವನು. || ೨೪ ||

ವಿಶೇಷವಿಷಯಗಳು:—"ವೇದಾಃ" ಎಂಬುದಕ್ಕೆ "ದೇವಾಃ" ಎಂಬ ಪಾಠಾಂತರವೊಂದುಂಟು:—ಕ್ರತು ದೇವತೆಗಳೂ, ಅಷ್ಟವಸುಗಳೂ ಏಕಾದಶರುದ್ರರೂ ಮೊದಲಾದ ಮೂವತ್ತುಮೂರು (ಕೋಟಿ) ದೇವತೆಗಳೂ ಈತನೇ ಎಂದರ್ಥ. (ತಿ.)

ಈ ಶ್ಲೋಕದಲ್ಲಿ ಒಬ್ಬನೇ ಆಗಿರುವವನು ಸರ್ವಾತ್ಮಕನಾಗಿರುವುದೆಂತೆಂಬ ವಿಷಯವನ್ನು ನಿರೂಪಿಸಿರುತ್ತಾರೆ.

ಕರ್ತೃತ್ವಂ ಕರಣತ್ವಂ ಚ ಸ್ವಭಾವಶ್ಚೇತನಾಧೃತಿಃ । ಯತ್ಪ್ರಸಾದಾದಿಮೇ ಸಂತಿ ನ ಸಂತಿ ಯದುಪೇಕ್ಷಯಾ॥ಶ್ರುತಿ॥

ಕರ್ತೃತ್ವ, ಕರಣತ್ವ, ಸ್ವಭಾವ, ಚೇತನ, ಧೃತಿ ಎಂಬಿವುಗಳು ಯಾರ ಪ್ರಸಾದದಿಂದ ನೆಲೆಯಾಗಿರುವುವೋ, ಯಾರ ಉಪೇಕ್ಷೆಯಿಂದ ಇರುವುದಿಲ್ಲವೋ ಆತನೇ ಸರ್ವ ನಿಯಂತೃವು: ಎಂದರೆ ಸರ್ವಸಮರ್ಥನಾದ ಪರಬ್ರಹ್ಮಮೂರ್ತಿ ಎಂದರ್ಥ.

ಶ್ಲೋ || ಏನಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷುಚ ।
ಕೀರ್ತಯನ್ ಪುರುಷಃ ಕಶ್ಚಿನ್ನಾವಸೀದತಿ ರಾಘವ! || ೨೫ ||

ಪ್ರತಿಪದ || ಹೇ ರಾಘವ - ಎಲೈ ಶ್ರೀರಾಮನೇ! ಆಪತ್ಸು - ಆಪತ್ಕಾಲಗಳಲ್ಲಿಯೂ, ಕೃಚ್ಛ್ರೇಷು - ಕಷ್ಟಕಾಲಗಳಲ್ಲಿಯೂ, ಕಾಂತಾರೇಷು - ವನಗಳಲ್ಲಿಯೂ, ಭಯೇಷುಚಸತ್ಸು - ಭಯಕಾರಣಗಳು ತಲೆದೋರಿದಾಗಲೂ, ಕಶ್ಚಿತ್ - ಯಾರಾದರೂ, ಪುರುಷಃ - ಪುರುಷನು, ಏನಂ - ಈ ಆದಿತ್ಯಹೃದಯ ಸ್ತೋತ್ರವನ್ನು, ಕೀರ್ತಯನ್ - ಹೇಳಿಕೊಂಡವನಾಗಿ, ನಾವಸೀದತಿ - ಸಂಕಟಕ್ಕೊಳಗಾಗುವುದಿಲ್ಲ. || ೨೫ ||

ತಾತ್ಪರ್ಯ || ಎಲೈ ಶ್ರೀರಾಮಮೂರ್ತಿಯೇ! ಯಾವ ಪುರುಷನಾದರೂ ಸರಿಯೆ, ಕಷ್ಟಕಾಲಗಳಲ್ಲಿಯೂ, ವನಗಳಲ್ಲಿಯೂ, ಭಯಕಾರಣಗಳುಂಟಾದಾಗಲೂ ಈ ಆದಿತ್ಯಹೃದಯ ಸ್ತೋತ್ರವನ್ನು ಹೇಳಿಕೊಂಡರೆ ಸಂಕಟಕ್ಕೊಳಗಾಗದೆ ಪಾರಾಗುತ್ತಾನೆ. || ೨೫ ||

ವಿಶೇಷವಿಷಯಗಳು:—"ಆಪತ್" ಎಂದರೆ ಅಪಮೃತ್ಯು (ಈ ಸ್ತೋತ್ರವನ್ನು ಜಪಿಸಿಕೊಂಡವನು ಅಪಮೃತ್ಯುವಿನಿಂದ ಪಾರಾಗುವನು.)

"ಕೃಛ್ರ" ಎಂದರೆ ಜ್ವರಾದಿ ದುಃಖಭಯವೆಂದರ್ಥ.

"ಭಯ" ಎಂದರೆ ಕಳ್ಳಕಾಕರ ಮೂಲಕ ಉಂಟಾಗುವ ಹೆದರಿಕೆ. (ತಿ)

ಸೂರ್ಯಮಂಡಲಾಂತರ್ವರ್ತಿಯಾದ ಶ್ರೀರಾಮನೆಂಬ ಪರಬ್ರಹ್ಮಮೂರ್ತಿಯನ್ನು ಈ ಸ್ತೋತ್ರದಿಂದ ಸ್ತುತಿಸಿದ ಯಾವನೂ ಕಷ್ಟಕ್ಕೀಡಾಗುವುದಿಲ್ಲ. (ರಾ. ಶಿ.)

ಶ್ಲೋ || ಪೂಜಯಸ್ವೈನಮೇಕಾಗ್ರೋ ದೇವದೇವಂ ಜಗತ್ಪತಿಂ |
ಏತತ್ತ್ರಿಗುಣಿತಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ || ೨೬ ||

ಪ್ರತಿಪದ || ಏತತ್ - ಈ ಆದಿತ್ಯಹೃದಯವನ್ನು, ತ್ರಿಗುಣಿತಂ - ಮೂರಾವೃತ್ತಿ, ಜಪ್ತ್ವಾ - ಜಪಿಸಿ, ಏಕಾಗ್ರಃ - ಸ್ಥಿರಚಿತ್ತನಾಗಿ, ದೇವದೇವಂ - ದೇವೋತ್ತಮನಾದ, ಜಗತ್ಪತಿಂ - ಲೋಕನಾಯಕನಾದ, ಏನಂ - ಈ ಸೂರ್ಯಪರಮಾತ್ಮನನ್ನು, ಪೂಜಯಸ್ವ - ಪೂಜಿಸು, ಯುದ್ಧೇಷು - ಕಾಳೆಗಗಳಲ್ಲಿ, ವಿಜಯಿಷ್ಯಸಿ - ಗೆಲ್ಲುವೆ. || ೨೬ ||

ತಾತ್ಪರ್ಯ || ರಾಮಚಂದ್ರ! ಈ ಆದಿತ್ಯಹೃದಯಸ್ತೋತ್ರವನ್ನು ಮೂರಾವೃತ್ತಿ ಜಪಮಾಡಿ, ಏಕಾಗ್ರಚಿತ್ತನಾಗಿ ದೇವದೇವೋತ್ತಮನೂ, ಜಗನ್ನಾಯಕನೂ ಆದ ಈ ಸೂರ್ಯಭಗವಂತನನ್ನು ಪೂಜಿಸು. ಇದರಿಂದ ನೀನು ಕಾಳೆಗಗಳಲ್ಲಿ ಶತ್ರುಗಳನ್ನು ಜಯಿಸುತ್ತೀಯೆ. || ೨೬ ||

ವಿಶೇಷವಿಷಯಗಳು:—ದೇವದೇವಂ - ಬ್ರಹ್ಮ ವಿಷ್ಣು ರುದ್ರಾದಿಗಳಿಗೆ ಉಪಾಸ್ಯನಾದ ಪರಮಾತ್ಮನು.

ಜಗತ್ಪತಿಂ—ಭೂರ್ಭುವಸ್ಸುವರಾದಿ ಲೋಕಗಳಿಗೆಲ್ಲ ನಾಯಕನು ಅಥವಾ ಸಂಸಾರ ಮಾತ್ರಕ್ಕೆ ಒಡೆಯನಾದವನು. (ತಿ.)

ಶ್ಲೋ || ಅಸ್ಮಿನ್ ಕ್ಷಣೇ ಮಹಾಬಾಹೋ! ರಾವಣಂ ತ್ವಂ ಜಯಿಷ್ಯಸಿ | "
ಏವಮುಕ್ತ್ವಾ ತತೋಽಗಸ್ತ್ಯೋ ಜಗಾಮ ಸ ಯಥಾಗತಂ || ೨೭ ||

ಪ್ರತಿಪದ || ಹೇ ಮಹಾಬಾಹೋ! - ಎಲೈ ಮಹಾಬಾಹುವಾದ ಶ್ರೀರಾಮಮೂರ್ತಿಯೇ, ತ್ವಂ - ನೀನು, ಅಸ್ಮಿನ್ ಕ್ಷಣೇ - ಈ ಕ್ಷಣದಲ್ಲಿಯೇ, ರಾವಣಂ - ರಾವಣಾಸುರನನ್ನು, ಜಯಿಷ್ಯಸಿ - ಜಯಿಸುತ್ತೀಯೆ, ಏವಂ - ಈ ರೀತಿಯಾಗಿ, ಉಕ್ತ್ವಾ - ಹೇಳಿ, ಅಗಸ್ತ್ಯಃ - ಅಗಸ್ತ್ಯಋಷಿಯು, ತದಾ - ಆ ಕ್ಷಣದಲ್ಲಿಯೇ, ಯಥಾಗತಂ - ಬಂದಂತೆ, ಜಗಾಮ - ಹೊರಟುಹೋದನು. || ೨೭ ||

ತಾತ್ಪರ್ಯ || ಎಲೈ ಮಹಾಬಾಹುವಾದ ಶ್ರೀರಾಮಮೂರ್ತಿಯೇ! (ನಾನು ನಿರೂಪಿಸಿದಂತೆ ಈ ಸ್ತೋತ್ರವನ್ನು ಜಪ ಮಾಡಿ ಸೂರ್ಯಭಗವಂತನನ್ನು ಪೂಜಿಸಿದೆಯಾದರೆ) ಈ ಕ್ಷಣದಲ್ಲಿಯೇ ನೀನು ರಾವಣನನ್ನು ಜಯಿಸುವೆ" ಎಂದು ಹೇಳಿ ಪೂಜ್ಯರಾದ ಅಗಸ್ತ್ಯಮಹರ್ಷಿಗಳು ತಾವು ಬಂದಂತೆ ಹಿಂತಿರುಗಿದರು. ||೨೭||

ಶ್ಲೋ ॥ ಏತಚ್ಛ್ರುತ್ವಾ ಮಹಾತೇಜಾ ನಷ್ಟಶೋಕೋಽಭವತ್ತದಾ ।
ಧಾರಯಾಮಾಸ ಸುಪ್ರೀತೋ ರಾಘವಃ ಪ್ರಯತಾತ್ಮವಾನ್ ॥ ೨೮ ॥

ಪ್ರತಿಪದ ॥ ಮಹಾತೇಜಾಃ - ಬಹಳ ತೇಜಸ್ವಿಯಾದ, ರಾಘವಃ - ಶ್ರೀರಾಮಮೂರ್ತಿಯು, ಏತತ್ - ಈ ಮಾತನ್ನು (ಆದಿತ್ಯಹೃದಯ ಸ್ತೋತ್ರವನ್ನು) ಶ್ರುತ್ವಾ - ಕೇಳಿ, ತದಾ - ಆ ಸಮಯದಲ್ಲಿ, ನಷ್ಟಶೋಕಃ - ಕಳೆದ ದುಃಖವುಳ್ಳವನು, ಅಭವತ್ - ಆದನು, ಪ್ರಯತಾತ್ಮವಾನ್ - ಸ್ಥಿರಗೊಳಿಸಿದ ಚಿತ್ತವುಳ್ಳವನಾಗಿ, ಸುಪ್ರೀತಃ - ಸಂತೋಷಗೊಂಡವನಾಗಿ, (ಏತತ್) ಈ ಸ್ತೋತ್ರವನ್ನು ಧಾರಯಾಮಾಸ - ಧರಿಸಿದವನಾದನು. ॥ ೨೮ ॥

ತಾತ್ಪರ್ಯ ॥ ಆಗ ಮಹಾ ತೇಜಸ್ವಿಯಾದ ಶ್ರೀರಾಮಚಂದ್ರನು, ಈ ಆದಿತ್ಯಹೃದಯ ಸ್ತೋತ್ರವನ್ನು ಕೇಳಿದೊಡನೆಯೇ ತನ್ನ ಮನಸ್ಸಿನಲ್ಲಿದ್ದ ಚಿಂತೆಯನ್ನು ಕಳೆದು, ಬಹಳವಾಗಿ ಸಂತೋಷಿಸಿ, ಪರಿಶುದ್ಧವಾದ (ಸ್ಥಿರ) ಮನಸ್ಸಿನಿಂದ ಈ ಸ್ತೋತ್ರದಲ್ಲಿ ಪ್ರತಿಪಾದಿಸಿದ ಜಗದೀಶ್ವರನನ್ನು ಧ್ಯಾನಿಸಿದನು. (ಸ್ತೋತ್ರವನ್ನು ಧರಿಸಿದನು.) ॥ ೨೮ ॥

ಶ್ಲೋ ॥ ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾತು ಪರಂ ಹರ್ಷಮವಾಪ್ತವಾನ್ ।
ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ॥ ೨೯ ॥
ರಾವಣಂ ಪ್ರೇಕ್ಷ್ಯ ಹೃಷ್ಟಾತ್ಮಾ ಯುದ್ಧಾಯ ಸಮುಪಾಗತಂ ।
ಸರ್ವಯತ್ನೇನ ಮಹತಾ ವಧೇ ತಸ್ಯ ಧೃತೋಽಭವತ್ ॥ ೩೦ ॥

ಪ್ರತಿಪದ ॥ ವೀರ್ಯವಾನ್ - ಶೂರನಾದ ಶ್ರೀರಾಮನು, ತ್ರಿರಾಚಮ್ಯ - ಮೂರಾವೃತ್ತಿ ಆಚಮನ ಮಾಡಿ, ಶುಚಿಃ - ಪರಿಶುದ್ಧನು, ಭೂತ್ವಾ - ಆಗಿ, ಆದಿತ್ಯಂ - ಸೂರ್ಯನನ್ನು (ಸೂರ್ಯಮಂಡಲಾಂತರ್ವರ್ತಿಯಾದ ಹಿರಣ್ಮಯಪುರುಷನನ್ನು) ಪ್ರೇಕ್ಷ್ಯ - ನೋಡಿ, ತ್ರಿಃ - ಮೂರಾವೃತ್ತಿ, ಜಪ್ತ್ವಾ - ಜಪಿಸಿ, ಧನುಃ - ಧನುಸ್ಸನ್ನು, ಆದಾಯ - ತೆಗೆದುಕೊಂಡು ಹರ್ಷಂ - ಸಂತೋಷವನ್ನು, ಅವಾಪ್ತವಾನ್-ಹೊಂದಿದನು. ॥೨೯॥ (ಸಃ - ಆ ರಾಮನು) ಯುದ್ಧಾಯ - ಕಾಳೆಗಕ್ಕೋಸ್ಕರ, ಸಮುಪಾಗತಂ - ಬಂದಿರುವ, ರಾವಣಂ - ರಾವಣಾಸುರನನ್ನು, ಪ್ರೇಕ್ಷ್ಯ - ಕಂಡು, ಮಹತಾ - ಮಹತ್ತರವಾದ, ಸರ್ವಯತ್ನೇನ - ಸಮಸ್ತ ಪ್ರಯತ್ನದಿಂದಲೂ, ತಸ್ಯ - ಆ ರಾವಣನ, ವಧೇ - ಸಂಹಾರದಲ್ಲಿ, ಧೃತಃ - ಸ್ಥಿರಚಿತ್ತನಾದವನು, ಬಭೂವ - ಆದನು. ॥ ೩೦ ॥

ತಾತ್ಪರ್ಯ ॥ ಆ ತರುವಾಯ ಶ್ರೀರಾಮಚಂದ್ರನು ಮೂರಾವೃತ್ತಿ ಆಚಮನ ಮಾಡಿ ಪರಿಶುದ್ಧ ಮಾನಸನಾಗಿ ಸೂರ್ಯಭಗವಂತನನ್ನು ನೋಡಿ (ಸೂರ್ಯಮಂಡಲಾಂತರ್ವರ್ತಿಯಾದ ಪರಮಾತ್ಮನನ್ನು—ಹಿರಣ್ಮಯ ಪುರುಷನನ್ನು ನೋಡಿ) ಮೂರಾವೃತ್ತಿ ಆದಿತ್ಯಹೃದಯ ಸ್ತೋತ್ರವನ್ನು ಜಪಿಸಿ ತರುವಾಯ ಮಹಾ ಪರಾಕ್ರಮವನ್ನು ತಂದುಕೊಂಡು ಬಹು ಸಂತೋಷದಿಂದ ಬಿಲ್ಲನ್ನು ಕೈಗೆ ತೆಗೆದು

ಕೊಂಡನು. ‖೨೯‖ ರಾವಣನು ಯುದ್ಧಸನ್ನದ್ಧನಾಗಿ ಬಂದಿರುವುದನ್ನು ಕಂಡು ಶ್ರೀರಾಮಚಂದ್ರನು ಯಾವ ಪ್ರಕಾರದಿಂದಾದರೂ-ಸರ್ವಪ್ರಯತ್ನದಿಂದಲೂ-ಆತನನ್ನು ಸಂಹರಿಸಲು ನಿಶ್ಚಯಿಸಿ, ಅವನೊಡನೆ ಯುದ್ಧ ಮಾಡಲು ಪರಮೋತ್ಸಾಹದಿಂದ ಬಳಿ ಸಾರಿದನು. ‖ ೩೦ ‖

ಶ್ಲೋ ‖ ಅಥ ರವಿರವದನ್ನಿರೀಕ್ಷ್ಯ ರಾಮಂ
ಮುದಿತಮನಾಃ ಪರಮಂ ಪ್ರಹೃಷ್ಯಮಾಣಃ ।
ನಿಶಿಚರಪತಿಸಂಕ್ಷಯಂ ವಿದಿತ್ವಾ
ಸುರಗಣಮಧ್ಯಗತೋ ವಚಸ್ತ್ವರೇತಿ ‖ ೩೧ ‖

ಪ್ರತಿಪದ ‖ ಅಥ - ತರುವಾಯ, ರವಿಃ - ಸೂರ್ಯನು, (ಸೂರ್ಯಮಂಡಲಾಂತರ್ವರ್ತಿಯಾದ ಹಿರಣ್ಮಯಪುರುಷರೂಪನಾದ ಪರಮಾತ್ಮನು) ಮುದಿತಮನಾಃ - ಹರ್ಷಗೊಂಡ ಮನಸ್ಸುಳ್ಳವನಾಗಿ, ಪರಮಂ - ಬಹಳವಾಗಿ, ಪ್ರಹೃಷ್ಯಮಾಣಃ - ರೋಮಾಂಚವುಳ್ಳವನಾಗಿ, ಸುರಗಣಮಧ್ಯಗಃ - ದೇವತಾಸಮೂಹಗಳ ನಡುವೆ ನಿಂತು, ರಾಮಂ - ಶ್ರೀರಾಮನನ್ನು, ನಿರೀಕ್ಷ್ಯ - ನೋಡಿ, ನಿಶಿಚರಪತಿಸಂಕ್ಷಯಂ - ರಾಕ್ಷಸಾಧಿಪತಿಯಾದ ರಾವಣಾಸುರನ ವಿನಾಶವನ್ನು, ವಿದಿತ್ವಾ - ತಿಳಿದವನಾಗಿ, ತ್ವರೇತಿ - ಜಾಗ್ರತೆ ಮಾಡು ಎಂದು, ವಚಃ - ಮಾತನ್ನು, ಅವದತ್ - ಹೇಳಿದನು. ‖ ೩೧ ‖

ತಾತ್ಪರ್ಯ ‖ ಹೀಗೆ ಶ್ರೀರಾಮನು ಸೂರ್ಯಮಂಡಲ ಮಧ್ಯವರ್ತಿಯಾದ ಹಿರಣ್ಮಯ ಪುರುಷನನ್ನು, ಈ ಆದಿತ್ಯಹೃದಯ ಸ್ತೋತ್ರದಿಂದ ಧ್ಯಾನಿಸಿದ ತರುವಾಯ ಆ ಪರಮಾತ್ಮನು ಬಹಳವಾಗಿ ಆನಂದಗೊಂಡ ಮನಸ್ಸುಳ್ಳವನಾಗಿಯೂ, ಪುಳಕಾಂಕಿತ ಶರೀರನಾಗಿಯೂ, ಶ್ರೀರಾಮನನ್ನು ನೋಡಿ, "ಎಲೈ ಶ್ರೀರಾಮಚಂದ್ರನೇ! ರಾಕ್ಷಸರಾಜನಾದ ರಾವಣಾಸುರನ ವಿನಾಶಕಾಲವು ಸಮೀಪಿಸಿರುವುದು. ಜಾಗ್ರತೆ ಮಾಡು" ಎಂದು ಹೇಳಿದನು. ‖ ೩೧ ‖

ವಿಶೇಷವಿಷಯ:—ಇಲ್ಲಿ, "ಸುರಗಣಮಧ್ಯಗತಃ" ಎಂದಿರುವುದರಿಂದ ಸೂರ್ಯಭಗವಂತನು ತನ್ನ ಮಂಡಲವನ್ನು ತೊರೆದು, ರಣರಂಗದಲ್ಲಿ ಶ್ರೀರಾಮನ ಬಳಿಗೈದಿ, ಆತನು ಮಾಡಿದ ತನ್ನ ಸಂಬಂಧವಾದ "ಆದಿತ್ಯಹೃದಯ ಸ್ತೋತ್ರ"ಕ್ಕೆ ಫಲವನ್ನನುಗ್ರಹಿಸಿದನೆಂದು ಸೂಚಿತವಾಗುವುದು. (ಗೋ.)

ಇಂತಿದು ಆದಿತ್ಯಹೃದಯ ಸ್ತೋತ್ರ ನಿರೂಪಣವೆಂಬ ನೂರೇಳನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟೋತ್ತರಶತತಮಸ್ಸರ್ಗಃ

ಸರಥಂ ಸಾರಥಿರ್ಹೃಷ್ಟಃ ಪರಸೈನ್ಯಪ್ರಧರ್ಷಣಂ । ¶ ಗಂಧರ್ವನಗರಾಕಾರಂ ಸಮುಚ್ಛ್ರಿತಪತಾಕಿನಂ ॥೧॥ ಯುಕ್ತಂ ಪರಮಸಂಪನ್ನೈರ್ವಾಜಿಭಿರ್ಹೇಮಮಾಲಿಭಿಃ । ಯುದ್ಧೋಪಕರಣೈಃ ಪೂರ್ಣಂ ಪತಾಕಾಧ್ವಜಮಾಲಿನಂ ॥೨॥ ಗ್ರಸಂತಮಿವ ಚಾಕಾಶಂ ನಾದಯಂತಂ ವಸುಂಧರಾಂ । ಪ್ರಣಾಶಂ ಪರಸೈನ್ಯಾನಾಂ ಸ್ವಸೈನ್ಯಾನಾಂ ಪ್ರಹರ್ಷಣಂ । ರಾವಣಸ್ಯ ರಥಂ ಕ್ಷಿಪ್ರಂ ಚೋದಯಾಮಾಸ ಸಾರಥಿಃ ॥೪॥

ಹೃಷ್ಟಃ-ಸಂತೋಷಗೊಂಡ, ಸಃ-ಆ ಸಾರಥಿಯು, ಪರ....ಣಂ-ಶತ್ರುಸೇನೆಗಳನ್ನು ಪರಾಭವಗೊಳಿಸುತ್ತಿರುವ, ಗಂಧ....ರಂ - ಗಂಧರ್ವರ ಪಟ್ಟಣದ ಆಕಾರವುಳ್ಳ, ಸಮು....ನಂ - ಅತ್ಯುನ್ನತವಾಗಿ ಕಟ್ಟಲ್ಪಟ್ಟ ಧ್ವಜಗಳುಳ್ಳ, ಹೇಮಮಾಲಿಭಿಃ - ಚಿನ್ನದ ಹಾರಗಳುಳ್ಳ, ಪರಮಸಂಪನ್ನೈಃ - ಬಹಳವಾದ ಜಯದಿಂದ ಕೂಡಿರುವ, ವಾಜಿಭಿಃ - ಕುದುರೆಗಳಿಂದ, ಯುಕ್ತಂ - ಕೂಡಿರುವ, ಯುದ್ಧೋಪಕರಣೈಃ - ಕಾಳೆಗದ ಸಾಮಗ್ರಿಗಳಿಂದ, ಪೂರ್ಣಂ - ತುಂಬಿರುವ, ಪತಾ....ನಂ - ದೊಡ್ಡ ನಿಶಾನಿಗಳ ಪಂಕ್ತಿಗಳುಳ್ಳ, ಆಕಾಶಂ - ಅಂತರಿಕ್ಷವನ್ನು, ಗ್ರಸಂತಮಿವ - ನುಂಗುವುದೋ ಎಂಬಂತಿರುವ, ವಸುಂಧರಾಂ-ನೆಲವನ್ನು, ನಾದಯಂತಂ-ಧ್ವನಿಗೊಳಿಸುತ್ತಿರುವ, ಪರಸೈನ್ಯಾನಾಂ-ಶತ್ರುಗಳ ಸೇನೆಗಳಿಗೆ, ಪ್ರಣಾಶಂ - ನಾಶಕರವಾದ, ಸ್ವಸೈನ್ಯಾನಾಂ - ತಮ್ಮ ರಾಕ್ಷಸಸೇನೆಗಳಿಗೆ, ಪ್ರಹರ್ಷಣಂ - ಸಂತೋಷಕರವಾದ, ರಾವಣಸ್ಯ - ರಾವಣನ, ರಥಂ - ತೇರನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಚೋದಯಾಮಾಸ - ನಡೆಸಿದನು. ॥೧-೪॥ ನರರಾಜಃ - ಮನುಷ್ಯರಾಜನಾದ ಶ್ರೀರಾಮನು,

---

ಆ ಬಳಿಕ ರಾವಣಾಸುರನ ಸಾರಥಿಯಾದ ಮಾತಲಿಯು ಬಹಳ ಸಂತೋಷಗೊಂಡವನಾಗಿ ಶತ್ರುಸೇನೆಯನ್ನು ಪರಿದಾಡಿಸುವುದರಲ್ಲಿ ಮಹಾ ಸಾಮರ್ಥ್ಯವುಳ್ಳದೂ, ಗಂಧರ್ವ ನಗರದಂತೆ ಸುಂದರವಾದ ಆಕಾರವುಳ್ಳದೂ, ಅತ್ಯುನ್ನತವಾದ ಪತಾಕೆಗಳುಳ್ಳದೂ, ಸರ್ವೋತ್ತಮವಾದ ಕುಲದಲ್ಲಿ ಹುಟ್ಟಿದುವೂ, ಬಂಗಾರದ ಜೀನುಗಳಿಂದ ಪ್ರಕಾಶಿಸುತ್ತಿರುವುವೂ ಆದ ಕುದುರೆಗಳಿಂದ ಹೂಡಲ್ಪಟ್ಟಿರುವುದೂ, ಯುದ್ಧಕ್ಕೆ ತಕ್ಕ ನಾದನಗಳೊಡಗೂಡಿರುವುದೂ, ಪತಾಕೆಗಳಿಂದಲೂ, ಧ್ವಜಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ಆಕಾಶದವರೆಗೂ ವ್ಯಾಪ್ತವಾಗಿ, ಭೂಮಿಯೆಲ್ಲವನ್ನೂ ಧ್ವನಿಗೊಳಿಸುತ್ತಿರುವುದೂ ಆದ ರಥವನ್ನು ಬಹು ಶೀಘ್ರವಾಗಿ ನಡೆಸಿಕೊಂಡು ಬಂದನು. ಹೀಗೆ ಬಹು ಶೀಘ್ರವಾಗಿ ಧ್ವನಿಯೊಡಗೂಡಿ

¶ "ಗಂಧರ್ವ ನಗರಾಕಾರಂ" ಗಂಧರ್ವ ನಗರ ಲಕ್ಷಣವನ್ನು ವರಾಹಮಿಹಿರಾಚಾರ್ಯರು ಹೀಗೆ ಹೇಳಿರುತ್ತಾರೆ.

ಚಿತ್ರವರ್ಣಂ ಚಿತ್ರರೂಪಪ್ರಾಕಾರಗೃಹಗೋಪುರಂ ।
ಅಲಂಕೃತಮನೇಕಾಭ್ರೈರ್ವಿತಾನ ಧ್ವಜತೋರಣೈಃ ॥
ಗಂಧರ್ವನಗರಂ ದಂತಿ ನೃವಾಜಿ ಕ್ಷಯ ಯುದ್ಧಕೃತ್ ।
ದೃಶ್ಯತೇ ಚೇನ್ಮಹದ್ಯುದ್ಧಮನ್ಯೋನ್ಯಂ ಧರಣೀಭಾಜಾಂ ॥

ತಮಾಪತಂತಂ ಸಹಸಾ ಸ್ವನವಂತಂ ಮಹಾಸ್ವನಂ । ರಥಂ ರಾಕ್ಷಸರಾಜಸ್ಯ ನರ
ರಾಜೋ ದದರ್ಶಹ ॥ ೪ ॥ ಕೃಷ್ಣವಾಜಿಸಮಾಯುಕ್ತಂ ಯುಕ್ತಂ ರೌದ್ರೇಣ
ವರ್ಚಸಾ । ತಟಿತ್ಪತಾಕಾಗಹನಂ ದರ್ಶಿತೇಂದ್ರಾಯುಧಾಯುಧಂ । ಶರಧಾರಾ
ವಿಮುಂಚಂತಂ ಧಾರಾಸಾರಮಿವಾಂಬುದಂ ॥ ೫-೬ ॥ ತಂ ದೃಷ್ಟ್ವಾ ಮೇಘಸಂಕಾಶ
ಮಾಪತಂತಂ ರಥಂ ರಿಪೋಃ । ಗಿರೇರ್ವಜ್ರಾಭಿಮೃಷ್ಟಸ್ಯ ದೀರ್ಯತಸ್ಸದೃಶಸ್ವನಂ
॥ ೭ ॥ ವಿಸ್ಫಾರಯನ್ವೈ ವೇಗೇನ ಬಾಲಚಂದ್ರನತಂ ಧನುಃ । ಉವಾಚ ಮಾತಲಿಂ
ರಾಮಸ್ಸಹಸ್ರಾಕ್ಷಸ್ಯ ಸಾರಥಿಂ ॥ ೮ ॥ "ಮಾತಲೇ! ಪಶ್ಯ ಸಂರಬ್ಧಮಾಪತಂತಂ

ಸಹಸಾ - ಜಾಗ್ರತೆಯಾಗಿ, ಆಪತಂತಂ - ಬರುತ್ತಿರುವ, ಸ್ವನವಂತಂ - ಧ್ವನಿಮಾಡುತ್ತಿರುವ, ಮಹಾಸ್ವನಂ - ದೊಡ್ಡ ಧ್ವನಿಯುಳ್ಳ, ರಾಕ್ಷಸರಾಜಸ್ಯ - ರಾವಣನ, ತಂರಥಂ - ಆ ತೇರನ್ನು, ದದರ್ಶಹ - ನೋಡಿದನಷ್ಟೆ. ॥೪॥ ಕೃಷ್ಣ....ಕ್ತಂ - ಕಪ್ಪು ಕುದುರೆಗಳಿಂದ ಕೂಡಿರುವ, ರೌದ್ರೇಣ- ಭಯಂಕರವಾದ, ವರ್ಚಸಾ - ತೇಜಸ್ಸಿನಿಂದ, ಯುಕ್ತಂ - ಕೂಡಿರುವ, ತಟಿ....ನಂ - ಮಿಂಚುಗಳಂ ತಿರುವ ನಿಶಾನಿಗಳಿಂದ ತುಂಬಿರುವ, ದರ್ಶಿ....ಧಂ - ಕಾಣಿಸಲ್ಪಟ್ಟ ಇಂದ್ರಧನುಸ್ಸಿನಂತಿರುವ ಆಯುಧ ಗಳುಳ್ಳ, ಶರಧಾರಾಃ - ಬಾಣಧಾರೆಗಳನ್ನು, ವಿಮುಂಚಂತಂ - ಬಿಡುತ್ತಿರುವ, ಧಾರಾಸಾರಂ - ಧಾರಾ ಸಂಪಾತವನ್ನುಂಟುಮಾಡುತ್ತಿರುವ, ಅಂಬುದಮಿವ-ಮೇಘದಂತಿರುವ, ಮೇಘಸಂಕಾಶಂ-ಮೇಘಕ್ಕೆ ಸಮಾನವಾಗಿ, ಆಪತಂತಂ - ಬರುತ್ತಿರುವ, ವಜ್ರಾ....ಸ್ಯ - ವಜ್ರಾಯುಧದಿಂದ ಹೊಡೆಯ ಲ್ಪಟ್ಟು, ದೀರ್ಯತಃ - ಒಡೆದುಹೋಗುತ್ತಿರುವ, ಗಿರೇಃ - ಬೆಟ್ಟಕ್ಕೆ, ಸದೃಶಸ್ವನಂ - ಸಮಾನ ಧ್ವನಿ ಯುಳ್ಳ, ರಿಪೋಃ - ಶತ್ರುವಿನ, ತಂರಥಂ - ಆ ರಥವನ್ನು, ದೃಷ್ಟ್ವಾ - ಕಂಡು, ಬಾಲ....ತಂ- ಅರ್ಧಚಂದ್ರನಂತೆ ಬೊಗ್ಗಿರುವ, ಧನುಃ - ಬಿಲ್ಲನ್ನು, ವೇಗೇನ - ಕರಲಾಘವದಿಂದ, ವಿಸ್ಫಾರಯನ್ - ಟಂಕಾರ ಮಾಡುತ್ತಿರುವನಾಗಿ, ರಾಮಃ - ಶ್ರೀರಾಮನು, ಸಹಸ್ರಾಕ್ಷಸ್ಯ - ದೇವೇಂದ್ರನ, ಸಾರಥಿಂ - ಸಾರಥಿಯಾದ, ಮಾತಲಿಂ ಮಾತಲಿಯನ್ನು ಕುರಿತು, ಉವಾಚ-ಹೇಳಿದನು. ॥೫-೮॥ ಹೇ ಮಾತಲೇ-

---

ಬರುತ್ತಿರುವ ಆ ರಾವಣಾಸುರನ ರಥವನ್ನು ಶ್ರೀರಾಮಮೂರ್ತಿಯೂ ನೋಡಿದನು. ಆ ಸಮ ಯದಲ್ಲಿ ಶ್ರೀರಾಮನೂ ಕೂಡ ಕಪ್ಪನೆಯ ಕುದುರೆಗಳು ಹೂಡಿ ಮಹಾ ಭಯಂಕರವಾದ ತೇಜ ಸ್ಸುಳ್ಳುದಾಗಿ, ಮಿಂಚಿನ ಬಳ್ಳಿಯಂತೆ ಮಿರುಗುತ್ತಿರುವ ಪತಾಕೆಗಳೊಡಗೂಡಿದುದಾಗಿಯೂ, ಮಹಾ ದುರ್ಭೇದ್ಯವಾದುದಾಗಿಯೂ, ಆಗತಾನೆ ಮೂಡಿದ ಇಂದ್ರ ಧನುಸ್ಸನ್ನು ಹೋಲುವ ಧನುಸ್ಸನ್ನೊಳಗೊಂಡುದಾಗಿಯೂ, ಬಾಣಪರಂಪರೆಗಳನ್ನು ಪ್ರಕಟಗೊಳಿಸುತ್ತ ವರ್ಷಾ ಕಾಲದ ಮುಗಿಲಿಗೆ ಸಮಾನವಾದುದಾಗಿಯೂ ಆದ ಶತ್ರುವಿನ ರಥವನ್ನು ನೋಡಿ ಪರ್ವತ ವನ್ನು ಭೇದಿಸುವಂತಹ ವಜ್ರಾಯುಧದ ಧ್ವನಿಗೆ ಸಮಾನವಾದ ತನ್ನ ಧನುಸ್ಸನ್ನು ಟಂಕಾರ ಮಾಡಿ ಆ ಬಳಿಕ ಮಹೇಂದ್ರ ಸಾರಥಿಯಾದ ಮಾತಲಿಯನ್ನು ಕುರಿತು ಹೀಗೆಂದನು. ॥೪-೮॥

"ಚಿತ್ರವರ್ಣವುಳ್ಳುದಾಗಿಯೂ, ಅನೇಕ ಬಣ್ಣಗಳಿಂದ ಬಗೆಬಗೆಯಾದ ಪ್ರಾಕಾರಗಳೂ, ಮನೆಗಳೂ, ಗೋಪುರ ಗಳೂ ಉಳ್ಳುದಾಗಿಯೂ, ವಿವಿಧ ಕಾಂತಿ ಸಮನ್ವಿತಗಳಾದ ನಿಶಾನಿಗಳಿಂದಲೂ, ತೋರಣಗಳಿಂದಲೂ ಕೂಡಿದ (ರಥವು) ಆನೆಗಳು, ಪದಾತಿಗಳು, ಕುದುರೆಗಳು ಮೊದಲಾದವುಗಳನ್ನು ನಾಶಗೊಳಿಸುವ ಯುದ್ಧದಲ್ಲಿ ಕಾಣಿಸಿದುದಾದರೆ ರಾಜರು ಗಳಿಗೆ ಪರಸ್ಪರವಾಗಿ ಭಯಂಕರ ಯುದ್ಧವು ನಡೆಯುವುದೆಂದು ತಿಳಿಯತಕ್ಕದು.

ರಥಂ ರಿಪೋಃ । ಯಥಾಽಪಸವ್ಯಂ ಪತತಾ ವೇಗೇನ ಮಹತಾ ಪುನಃ । ಸಮರೇ ಹಂತುಮಾತ್ಮಾನಂ ತಥಾ ತೇನ ಕೃತಾ ಮತಿಃ ||೯|| * ತದಪ್ರಮಾದಮಾತಿಷ್ಠ ಪ್ರತ್ಯುದ್ಗಚ್ಛ ರಥಂ ರಿಪೋಃ । ವಿಧ್ವಂಸಯಿತುಮಿಚ್ಛಾಮಿ ವಾಯುರ್ಮೇಘಮಿವೋತ್ಥಿತಂ ||೧೦|| ಅವಿಕ್ಲಬಮಸಂಭ್ರಾಂತಮವ್ಯಗ್ರಹೃದಯೇಕ್ಷಣಂ । ರಶ್ಮಿಸಂಚಾರನಿಯತಂ ಪ್ರಚೋದಯ ರಥಂ ದ್ರುತಂ ||೧೧|| ಕಾಮಂ ನ ತ್ವಂ ಸಮಾಧೇಯಃ ಪುರಂದರರಥೋಚಿತಃ । ಯುಯುತ್ಸುರಹಮೇಕಾಗ್ರಃ ಸ್ಮಾರಯೇ ತ್ವಾಂ ನ ಶಿಕ್ಷಯೇ" ||೧೨||

ಎಲೈ ಮಾತಲಿಯೇ, ಸಂರಂಭಂ - ವೇಗವಾಗಿ, ಆಪತಂತಂ ಬರುತ್ತಿರುವ, ರಿಪೋಃ - ಶತ್ರುವಿನ, ರಥಂ - ತೇರನ್ನು, ಪಶ್ಯ - ನೋಡು, ಯಥಾ - ಹೇಗೆ, ಅಪಸವ್ಯಂ - ಅಪ್ರದಕ್ಷಿಣವೋ, ತಥಾ - ಹಾಗೆಯೇ, ಮಹತಾ - ಬಹಳವಾದ, ವೇಗೇನ - ಜಾಗ್ರತೆಯಿಂದ, ಪತತಾ - ಬರುತ್ತಿರುವ, ತೇನ - ಆ ರಾವಣನಿಂದ, ಸಮರೇ - ಕಾಳಗದಲ್ಲಿ, ಆತ್ಮಾನಂ - ತನ್ನನ್ನು, ಹಂತುಂ - ಸಂಹಾರ ಮಾಡಿಕೊಳ್ಳುವುದಕ್ಕಾಗಿ, ಮತಿಃ - ಬುದ್ಧಿಯು, ಕೃತಾ - ಮಾಡಲ್ಪಟ್ಟಿತು. ||೯|| ತತ್ - ಆ ಕಾರಣದಿಂದ, ಅಪ್ರಮಾದಂ - ಪ್ರಮಾದವಿಲ್ಲದೆ, ಆತಿಷ್ಠ - ನಿಂತವನಾಗಿ, ರಿಪೋಃ - ಶತ್ರುವಿನ, ರಥಂ - ರಥವನ್ನು, ಪ್ರತ್ಯುದ್ಗಚ್ಛ - ಎದುರು ಹೋಗು, ವಾಯುಃ - ಚಂಡಮಾರುತವು, ಉತ್ಥಿತಂ - ಹುಟ್ಟಿರುವ, ಮೇಘಮಿವ - ಮೇಘವನ್ನಂತೆ, ವಿಧ್ವಂಸಯಿತುಂ - ನಾಶಗೊಳಿಸುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುವೆನು. ||೧೦|| ಅವಿಕ್ಲಬಂ-ಧೈನ್ಯವಿಲ್ಲದೆ, ಅಸಂಭ್ರಾಂತಂ-ಉಪೇಕ್ಷೆಯಿಲ್ಲದಂತೆ, ಅವ್ಯ....ಣಂ-ವ್ಯಾಕುಲವಿಲ್ಲದಿರುವ ಮನಸ್ಸೂ, ದೃಷ್ಟಿಯೂ ಉಳ್ಳವನಂತೆ, ರಶ್ಮಿ....ತಂ - ಬಿಗಿಹಿಡಿದ ಹಗ್ಗಗಳ ಸಂಚಾರವುಳ್ಳುದಂತೆ, ರಥಂ - ರಥವನ್ನು, ದ್ರುತಂ - ಶೀಘ್ರವಾಗಿ, ಪ್ರಚೋದಯ - ನಡೆಸು. ||೧೧|| ಪುರಂ....ತಂ - ದೇವೇಂದ್ರನ ರಥಸಾರಥ್ಯಕ್ಕೆ ಯೋಗ್ಯನಾದ, ತ್ವಂ - ನೀನು, ಕಾಮಂ - ಬಹಳವಾಗಿ, ನಸಮಾಧೇಯಃ-ಸಮಾಧಾನಗೊಳಿಸತಕ್ಕವನಲ್ಲ, ಏಕಾಗ್ರಃ-ಏಕಾಗ್ರಚಿತ್ತನಾಗಿ, ಯುಯುತ್ಸುಃ-ಯುದ್ಧೇಚ್ಛೆಯುಳ್ಳ, ಅಹಂ-ನಾನು, ತ್ವಾಂ-ನಿನ್ನನ್ನು, ಸ್ಮಾರಯೇ-ಜ್ಞಾಪಿಸುತ್ತೇನೆ, ನಶಿಕ್ಷಯೇ-ಶಿಕ್ಷೆ (ಆಜ್ಞೆ) ಮಾಡತಕ್ಕವನಲ್ಲ. ||೧೨|| ರಾಮಸ್ಯ - ಶ್ರೀರಾಮನ, ತೇನವಾಕ್ಯೇನ - ಆ ಮಾತಿನಿಂದ,

"ಎಲೈ ಮಾತಲಿಯೇ! ಯುದ್ಧಸನ್ನದ್ಧನಾಗಿ ಬರುತ್ತಿರುವ ಶತ್ರುವಾದ ರಾವಣನ ರಥವನ್ನು ನೋಡು. ಅಪಸವ್ಯವಾಗಿಯೂ, ಮಹಾ ವೇಗವಾಗಿಯೂ ಬರುತ್ತಿರುವ ಈ ರಾವಣಾಸುರನು ತನ್ನನ್ನು ತಾನೇ ವಧಿಸಿಕೊಳ್ಳಬೇಕೆಂದು ಬಯಸಿದ್ದಾನೆ. ಆದುದರಿಂದ ನೀನು ಪ್ರಮಾದರಹಿತನಾಗಿ ನಮ್ಮ ರಥವನ್ನು ಅವನ ರಥಕ್ಕಭಿಮುಖವಾಗಿ ತುರುಬುವವನಾಗು. ಈಗ ನಾನು ಮುಗಿಲುಗಳನ್ನು ಮಾರುತನೆಂತೋ ಅಂತು ಈ ರಾವಣನನ್ನು ವಧಿಸಲಿಚ್ಛಿಸಿದ್ದೇನೆ. ಎಲೈ ಸಾರಥಿಯೇ! ವಿವಶತೆಯನ್ನು ಹೊಂದದೆಯೂ, ಭ್ರಾಂತನಾಗದೆಯೂ, ಹೃದಯದಲ್ಲಿಯೂ, ದೃಷ್ಟಿಯಲ್ಲಿಯೂ, ವ್ಯಾಕುಲತೆಯಿಲ್ಲದೆಯೂ, ಹಗ್ಗಗಳು ಬಿಟ್ಟು ಹೋಗದಂತೆಯೂ, ರಥವನ್ನು ನಡೆಸು. ಎಲೈ ಮಾತಲಿಯೇ! ಮಹೇಂದ್ರನಿಗೆ ಸಾರಥ್ಯವನ್ನು ಮಾಡುವ ನಿನಗೆ ನಾನೇನೂ ಹೇಳಬೇಕಾದ ಆವಶ್ಯಕತೆ ಇರುವುದಿಲ್ಲ. ಆದರೆ ಯುದ್ಧಕಾಲದಲ್ಲಿ ರಥವು ಯಾವ

* ಇಲ್ಲಿ ರಾವಣನು ಅಪ್ರದಕ್ಷಿಣವಾಗಿ ರಥವನ್ನು ನಡೆಸಿಕೊಂಡು ಬಂದುದರಿಂದ ಅವನು ತನ್ನ ಮೃತ್ಯುವನ್ನು ತಾನೇ ತಂದುಕೊಳ್ಳುವುದಕ್ಕೋಸ್ಕರ ನಿಶ್ಚಯಿಸಿಯೇ ಬಂದನೆಂದು ಸೂಚಿತವಾಗುವುದು.

ಪರಿತುಷ್ಟಸ್ಸರಾಮಸ್ಯ ತೇನ ವಾಕ್ಯೇನ ಮಾತಲಿಃ । ಪ್ರಚೋದಯಾಮಾಸ ರಥಂ ಸುರಸಾರಥಿಸತ್ತಮಃ ॥ ೧೩ ॥ ಅಪಸವ್ಯಂ ತತಃ ಕುರ್ವನ್ ರಾವಣಸ್ಯ ಮಹಾರಥಂ । ಚಕ್ರೋತ್ಕ್ಷಿಪ್ತೇನ ರಜಸಾ ರಾವಣಂ ವ್ಯವಧಾನಯತ್ ॥೧೪॥ ತತಃ ಕ್ರುದ್ಧೋ ದಶಗ್ರೀವ ಸ್ತಾಮ್ರವಿಸ್ಫಾರಿತೇಕ್ಷಣಃ । ರಥಪ್ರತಿಮುಖಂ ರಾಮಂ ಸಾಯಕೈರವಧೂನಯತ್ ॥ ೧೫ ॥ ಧರ್ಷಣಾಮರ್ಷಿತೋ ರಾಮೋ ಧೈರ್ಯಂ ರೋಷೇಣ ಲಂಭಯನ್ । ಜಗ್ರಾಹ ಸುಮಹಾವೇಗಮೈಂದ್ರಂ ಯುಧಿ ಶರಾಸನಂ । ಶರಾಂಶ್ಚ ಸುಮಹಾತೇಜಾಸ್ಸೂರ್ಯರಶ್ಮಿಸಮಪ್ರಭಾನ್ ॥ ೧೬-೧೭ ॥ ತದೋಪೋಢಂ ಮಹದ್ಯುದ್ಧ ಮನ್ಯೋನ್ಯವಧಕಾಂಕ್ಷಿಣೋಃ । ಪರಸ್ಪರಾಭಿಮುಖಯೋರ್ದೃಪ್ತಯೋರಿವ ಸಿಂಹಯೋಃ ॥೧೮॥

ಪರಿತುಷ್ಟಃ - ಸಂತೋಷಗೊಂಡು, ಸುರ....ಮಃ - ದೇವಸಾರಥಿಗಳಲ್ಲಿ ಉತ್ತಮನಾದ, ಸಮಾತಲಿಃ - ಆ ಮಾತಲಿಯು, ರಥಃ - ತೇರನ್ನು, ಪ್ರಚೋದಯಾಮಾಸ - ನಡೆಸಿದನು. ॥೧೩॥ ತತಃ - ಬಳಿಕ, ರಾವಣಸ್ಯ - ರಾವಣನ, ಮಹಾರಥಂ - ದೊಡ್ಡ ರಥವನ್ನು, ಅಪಸವ್ಯಂ - ಅಪ್ರದಕ್ಷಿಣವನ್ನು, ಕುರ್ವನ್ - ಮಾಡುತ್ತ, ಚಕ್ರೋತ್ಕ್ಷಿಪ್ತೇನ - ರಥದ ಚಕ್ರಗಳಿಂದ ಮೇಲಕ್ಕೆ ಹಾರಿಸಲ್ಪಟ್ಟ, ರಜಸಾ - ಧೂಳಿಯಿಂದ, ರಾವಣಂ - ದಶಕಂಠನನ್ನು, ವ್ಯವಧಾನಯತ್ - ಆಚ್ಛಾದನೆ ಮಾಡಿದನು. ॥೧೪॥ ತತಃ - ಬಳಿಕ, ಕ್ರುದ್ಧಃ - ಕೋಪಿಷ್ಠನಾಗಿ, ತಾಮ್ರ....ಣಃ - ತಿರುಗಿಸಲ್ಪಟ್ಟ ಕೆಂಪಾದ ನೇತ್ರಗಳುಳ್ಳ, ದಶಗ್ರೀವಃ - ದಶಕಂಠನು, ರಥ....ಖಂ - ರಥಕ್ಕೆ ಎದುರಾದ, ರಾಮಂ - ಶ್ರೀರಾಮನನ್ನು, ಸಾಯಕೈಃ - ಬಾಣಗಳಿಂದ, ಅವಧೂನಯತ್ - ಕೊಡಹಿದನು. ॥ ೧೫ ॥ ಧರ್ಷ....ತಃ - ತಿರಸ್ಕಾರದಿಂದ ಕೋಪಿಷ್ಠನಾದ, ರಾಮಃ - ಶ್ರೀರಾಮನು, ರೋಷೇಣ - ಕ್ರೋಧದಿಂದ, ಧೈರ್ಯಂ - ಧೀರತೆಯನ್ನು, ಲಂಭಯನ್ - ಅವಲಂಬಿಸಿ, ಮಹಾತೇಜಾಃ - ಶತ್ರು ತಿರಸ್ಕಾರದ ಸಾಮರ್ಥ್ಯವುಳ್ಳವನಾದ ಕಾರಣ, ಸುಮಹಾವೇಗಂ - ಬಹಳ ವೇಗವುಳ್ಳ, ಐಂದ್ರಂ - ಇಂದ್ರಸಂಬಂಧಿಯಾದ, ಶರಾಸನಂ - ಬಿಲ್ಲನ್ನು, ಸೂರ್ಯ....ಭಾನ್ - ಸೂರ್ಯನ ಕಿರಣಗಳಿಗೆ ಸಮಾನವಾದ ಕಾಂತಿಯುಳ್ಳ, ಶರಾನ್ - ಬಾಣಗಳನ್ನು, ಯುಧಿ - ಕಾಳಗದಲ್ಲಿ, ಜಗ್ರಾಹ - ತೆಗೆದುಕೊಂಡನು. ॥ ೧೬-೧೭ ॥ ತದಾ - ಆ ಕಾಲದಲ್ಲಿ, ಅನ್ಯೋ....ಣೋಃ - ಪರಸ್ಪರ ಸಂಹಾರವನ್ನು ಅಪೇಕ್ಷಿಸುತ್ತಿರುವ, ಸಿಂಹಯೋರಿವ - ಸಿಂಹಗಳಂತೆ, ದೃಪ್ತಯೋಃ - ಗರ್ವಿತರಾದ, ಪರ....ಯೋಃ - ಒಬ್ಬರಿಗೊಬ್ಬರು ಅಭಿಮುಖರಾಗಿರುವ

ರೀತಿ ಇರಬೇಕೆಂಬಂಶವನ್ನು ನಿನಗೆ ಜ್ಞಾಪಿಸಿರುವೆನಾಗಲಿ ಅಪ್ಪಣೆ ಮಾಡುತ್ತಿಲ್ಲ.'' ಶ್ರೀರಾಮಮೂರ್ತಿಯೂ ಹೀಗೆ ಹೇಳುತ್ತಲೇ ಇಂದ್ರಸಾರಥಿಯಾದ ಮಾತಲಿಯು ಮಹದಾನಂದಭರಿತನಾಗಿ ರಥವನ್ನು ಬಹು ಜಾಗರೂಕತೆಯಿಂದ ನಡೆಸಿದನು. ॥೯–೧೪॥ ಆ ಸಮಯದಲ್ಲಿ ಸುರಸಾರಥಿಸತ್ತಮನಾದ ಮಾತಲಿಯು ಮೊದಲು ರಥವನ್ನು ಅಪಸವ್ಯವಾಗಿ ನಡೆಸುತ್ತ ರಥ ಚಕ್ರದಿಂದ ಹುಟ್ಟಿದ ಧೂಳಿಯಿಂದ ರಾವಣಾಸುರನ ರಥವನ್ನು ಮುಚ್ಚಿದನು. ಆಗ ಮಹಾ ಸಾಮರ್ಥ್ಯವೂ, ಕೋಪವೂ ಉಳ್ಳ ರಾವಣನು ತಿರುಗುತ್ತಿರುವ ಕೆಂಗಣ್ಣುಗಳುಳ್ಳವನಾಗಿ ಶ್ರೀರಾಮನ ಮೇಲೆ ಅನೇಕ ಬಾಣಗಳನ್ನು ಪ್ರಯೋಗಿಸಿದನು. ಶ್ರೀರಾಮನೂ ಸಹ ಆ ತಿರಸ್ಕಾರದಿಂದ ಅಪರಿಮಿತವಾದ ಕೋಪವುಳ್ಳವನಾಗಿ ಮಹೇಂದ್ರನ ಧನುಸ್ಸನ್ನು ಗ್ರಹಿಸಿ ಸೂರ್ಯ ಕಿರಣಗಳಿಗೆ ಸಮಾನಗಳಾದ ಬಾಣಗಳನ್ನು ರಾವಣನ ಮೇಲೆ ಪ್ರಯೋಗಿಸಿದನು. ಆಗ ಪರಸ್ಪರ ವಧೆಯನ್ನೇ ಕೋರುತ್ತಿರುವ ಆ ರಾಮ ರಾವಣರು ಸಿಂಹಗಳಂತೆ ಮಹಾ ಭಯಂಕರವಾಗಿ

ತತೋ ದೇವಾಸ್ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ । ಸಮೇಯುರ್ದ್ವೈರಥಂ ದ್ರಷ್ಟುಂ ರಾವಣಕ್ಷಯಕಾಂಕ್ಷಿಣಃ ॥ ೧೯ ॥ ಸಮುತ್ಪೇತುರಥೋತ್ಪಾತಾ ದಾರುಣಾ ರೋಮಹರ್ಷಣಾಃ । ರಾವಣಸ್ಯ ವಿನಾಶಾಯ ರಾಘವಸ್ಯ ಜಯಾಯಚ ॥ ೨೦ ॥ ವವರ್ಷ ರುಧಿರಂ ದೇವೋ ರಾವಣಸ್ಯ ರಥೋಪರಿ । ವಾತಾ ಮಂಡಲಿನಸ್ತೀಕ್ಷ್ಣಾ ಹ್ಯಪಸವ್ಯಂ ಪ್ರಚಕ್ರಮುಃ ॥ ೨೧ ॥ * ಮಹದ್ಗೃಧ್ರಕುಲಂ ಚಾಸ್ಯ ಭ್ರಮಮಾಣಂ ನಭಸ್ಸ್ಥಲೇ । ಯೇನ ಯೇನ ರಥೋ ಯಾತಿ ತೇನ ತೇನ ಪ್ರಧಾವತಿ ॥ ೨೨ ॥

ಆ ರಾಮರಾವಣರೀರ್ವರಿಗೂ, ಮಹತ್ - ದೊಡ್ಡದಾದ, ಯುದ್ಧಂ - ಕಾಳೆಗವು, ಉಪೋಢಂ - ಪ್ರವರ್ತಿಸಿತು. ॥ ೧೮ ॥ ತತಃ - ಬಳಿಕ, ಸಗಂಧರ್ವಾಃ - ಗಂಧರ್ವರಿಂದೊಡಗೂಡಿದ, ದೇವಾಃ - ದೇವತೆಗಳೂ, ಸಿದ್ಧಾಶ್ಚ - ಸಿದ್ಧರೂ, ಪರಮರ್ಷಯಶ್ಚ - ಸರ್ವೋತ್ಕೃಷ್ಟರಾದ ಋಷಿಗಳೂ, ರಾವ....ಣಃ - ರಾವಣನ ನಾಶವನ್ನು ಕೋರುವವರಾಗಿ, ದ್ವೈರಥಂ - ಇಬ್ಬರು ರಥಿಕರಿಗೆ ಆಗತಕ್ಕ ಯುದ್ಧವನ್ನು, ದ್ರಷ್ಟುಂ - ನೋಡುವದಕ್ಕೆ, ಸಮೇಯುಃ - ಬಂದರು. ॥ ೧೯ ॥ ಅಥ - ಬಳಿಕ, ರಾವಣಸ್ಯ - ರಾವಣನ, ವಿನಾಶಾಯ - ನಾಶಕ್ಕಾಗಿಯೂ, ರಾಮಸ್ಯ - ಶ್ರೀರಾಮನ, ಜಯಾಯಚ - ವಿಜಯಕ್ಕಾಗಿಯೂ, ದಾರುಣಾಃ-ಕ್ರೂರಗಳಾದ, ರೋಮಹರ್ಷಣಾಃ-ರೋಮಾಂಚವನ್ನುಂಟುಮಾಡುತ್ತಿರುವ, ಉತ್ಪಾತಾಃ-ಅಪಶಕುನಗಳು, ಉತ್ಪೇತುಃ - ಹುಟ್ಟಿದವು. ॥೨೦॥ ದೇವಃ - ಪರ್ಜನ್ಯನು, ರಾವಣಸ್ಯ - ರಾವಣನ, ರಥೋಪರಿ - ರಥದ ಮೇಲೆ, ರುಧಿರಂ - ರಕ್ತವನ್ನು, ವವರ್ಷ - ಸುರಿಸಿದನು, ತೀಕ್ಷ್ಣಾಃ - ಚಂಡಗಳಾದ, ವಾತಾಃ - ಗಾಳಿಗಳು, ಕುಂಡಲಿನಃ - ಸುಳಿ ತಿರುಗುವವುಗಳಾಗಿ, ಅಪಸವ್ಯಂ - ಅಪ್ರದಕ್ಷಿಣವಾಗಿ, ಪ್ರಚಕ್ರಮುಃ-ಬೀಸಿದವು. ॥ ೨೧ ॥ ಮಹತ್-ಬಹಳವಾದ, ಗೃಧ್ರಕುಲಂ-ಹದ್ದುಗಳ ಗುಂಪು, ಅಸ್ಯ - ಈ ರಾವಣನ, ರಥಃ - ರಥವು, ಯೇನಯೇನ - ಯಾವಯಾವ ಮಾರ್ಗದಿಂದ, ಯಾತಿ - ಹೋಗುತ್ತದೆಯೋ, ತೇನತೇನ - ಆಯಾಯ ಮಾರ್ಗದಲ್ಲಿ, ಭ್ರಮಮಾಣಂ - ಚಕ್ರಾಕಾರವಾಗಿ ತಿರುಗುತ್ತ, ಪ್ರಧಾವತಿ - ಓಡಿಬರುತ್ತಿದ್ದಿತು. ॥೨೨॥ ಲಂಕಾ - ಲಂಕಾಪಟ್ಟಣವು, ಜಪಾ....ಯಾ - ದಾಸವಾಳದ

ಯುದ್ಧಮಾಡಲಾರಂಭಿಸಿದರು. ಆ ಸಮಯದಲ್ಲಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಪರಮಹರ್ಷಿಗಳೂ ರಾವಣಾಸುರನ ಸಂಹಾರವನ್ನು ಕೋರಿ ಆ ವೀರರೀರ್ವರ ಕಾಳೆಗವನ್ನು ನೋಡಲು ಅಂತರಿಕ್ಷದಲ್ಲಿ ಬಂದು ನಿಂತರು. ॥ ೧೫-೧೯ ॥ ಆಗ ರಾವಣನ ವಿನಾಶವನ್ನು ಸೂಚಿಸುವ ಅನೇಕ ಅಪಶಕುನಗಳುಂಟಾದುವು. ಶ್ರೀರಾಮನಿಗೆ ಜಯವನ್ನೇ ಸೂಚಿಸುವ ಅನೇಕ ಶುಭಶೂಚನೆಗಳೂ ಉಂಟಾದುವು. ರಾವಣಾಸುರನ ವಿನಾಶಸೂಚಕಗಳಾದ ಅಪಶಕುನಗಳು ಮಹಾ ಭಯಂಕರವಾಗಿದ್ದುವು. ವಾಯುವು ಸುಳಿಯೊಡಗೂಡಿ ಅಪಸವ್ಯವಾಗಿ ಬೀಸತೊಡಗಿತು. ವರುಣದೇವನು ರಾವಣನ ರಥದ ಮೇಲೆ ರಕ್ತದ ಮಳೆಗರೆದನು. ಆಕಾಶದಲ್ಲಿ ಹದ್ದುಗಳ ದೊಡ್ಡ ಗುಂಪು ಆ ರಾವಣಾಸುರನ ರಥವು ಯಾವ ಯಾವ ಕಡೆಗೆ ಹೋಗುತ್ತಿದ್ದಿತೋ ಆ ಕಡೆಗಳಿಗೆಲ್ಲ ಹಿಂದಟ್ಟಿ ಹೋಗುತ್ತಿದ್ದಿತು. ಆ ಹದ್ದುಗಳೆಲ್ಲವೂ ಆ ರಾಕ್ಷಸನ ರಥವನ್ನು ಸುತ್ತುಗಟ್ಟಿ ಹಾರುತ್ತಿದ್ದವು. ಹಗಲಿನಲ್ಲಿಯೂ ಸಹ ಲಂಕಾಪಟ್ಟಣ

---

* ಇಲ್ಲಿ ಶಕುನಶಾಸ್ತ್ರ ವಚನ:—"ಆಸನ್ನಮೃತ್ಯೋರ್ನಿಕಟೇ ಚರಂತಿ ಗೃಧ್ರಾದಯೋ ಮೂರ್ಧ್ನಿ, ಗೃಹೋರ್ಧ್ವಭಾಗೇ" ಎಂದು ಹೇಳುತ್ತದೆ. ಮೃತ್ಯುವು ಸಮಿಾಪಿಸಿರುವವನ ಶಿರಸ್ಸಿನ ಮೇಲೆಯೂ, ಮನೆಗಳ ಮೇಲೆಯೂ, ಸಮಿಾಪದಲ್ಲಿಯೂ ಹದ್ದುಗಳೇ ಮೊದಲಾದ ಪಕ್ಷಿಗಳು ಸಂಚರಿಸುತ್ತವೆ. (ತಿ)

ಸಂಧ್ಯಯಾ ಚಾವೃತಾ ಲಂಕಾ ಜಪಾಪುಷ್ಪನಿಕಾಶಯಾ । ದೃಶ್ಯತೇ ಸಂಪ್ರದೀಪ್ತೇವ ದಿವಸೇಽಪಿ ವಸುಂಧರಾ ॥ ೨೩ ॥ ಸನಿರ್ಘಾತಾ ಮಹೋಲ್ಕಾಶ್ಚ ಸಂಪ್ರಚೇರುರ್ಮಹಾಸ್ವನಾಃ । ವಿಷಾದಯಂಸ್ತೇ ರಕ್ಷಾಂಸಿ ರಾವಣಸ್ಯ ತದಾಽಹಿತಾಃ ॥ ೨೪ ॥ ರಾವಣಶ್ಚ ಯತಸ್ತತ್ರ ಸಂಚಚಾಲ ವಸುಂಧರಾ । ರಕ್ಷಸಾಂ ಚ ಪ್ರಹರತಾಂ ಗೃಹೀತಾ ಇವ ಬಾಹವಃ ॥ ೨೫ ॥ ತಾಮ್ರಾಃ ಪೀತಾಸ್ಸಿತಾಃ ಶ್ವೇತಾಃ ಪತಿತಾಸ್ಸೂರ್ಯರಶ್ಮಯಃ । ದೃಶ್ಯಂತೇ ರಾವಣಸ್ಯಾಂಗೇ ಪರ್ವತಸ್ಯೇವ ಧಾತವಃ ॥ ೨೬ ॥ ಗೃಧ್ರೈರನುಗತಾಶ್ಚಾಸ್ಯ ವಮಂತ್ಯೋ ಜ್ವಲನಂ ಮುಖೈಃ । ಪ್ರಣೇದುರ್ಮುಖಮೀಕ್ಷಂತ್ಯಸ್ಸಂರಬ್ಧ

ಹುವ್ವಿಗೆ ಸಮಾನವಾದ, ಸಂಧ್ಯಯಾ - ಸಂಧ್ಯಾರಾಗದಿಂದ, ಆವೃತಾ - ವ್ಯಾಪ್ತವಾದುದಾಗಿತ್ತು, ವಸುಂಧರಾ - ಭೂಮಿಯು, ದಿವಸೇಽಪಿ - ಹಗಲಿನಲ್ಲಿಯೂ ಕೂಡ, ಸಂಪ್ರದೀಪ್ತೇವ - ಉರಿಯುತ್ತಿದೆಯೋ ಎಂಬಂತೆ, ದೃಶ್ಯತೇ - ಕಾಣಲ್ಪಟ್ಟಿತು. ॥ ೨೩ ॥ ತದಾ - ಆ ಕಾಲದಲ್ಲಿ, ಸನಿರ್ಘಾತಾಃ - ಸಿಡುಗಳಿಂದ ಕೂಡಿದ, ಮಹೋಲ್ಕಾಶ್ಚ-ದೊಡ್ಡ ಕೊಳ್ಳಿಗಳು, ಮಹಾಸ್ವನಾಃ-ದೊಡ್ಡ ಧ್ವನಿಗಳುಳ್ಳವುಗಳಾಗಿ, ಸಂಪ್ರಚೇರುಃ ಸಂಚರಿಸಿದುವು, ತದಾ-ಆ ಕಾಲದಲ್ಲಿ, ರಾವಣಸ್ಯ ರಾವಣನಿಗೆ, ಅಹಿತಾಃ ಅನಿಷ್ಟಸೂಚಕಗಳಾದ, ತೇ - ಆ ಅಪಶಕುನಗಳು, ರಕ್ಷಾಂಸಿ - ರಕ್ಕಸರನ್ನು, ವಿಷಾದಯನ್ - ದುಃಖಗೊಳಿಸುವುದು. ॥೨೪॥ ರಾವಣಶ್ಚ - ರಾವಣನು, ಯತಃ - ಎಲ್ಲಿಯೋ, ತತ್ರ - ಅಲ್ಲಿ, ವಸುಂಧರಾ - ಭೂಮಿಯು, ಸಂಚಚಾಲ - ನಡುಗಿತು, ಪ್ರಹರತಾಂ - ಹೊಡೆಯುತ್ತಿರುವ, ರಕ್ಷಸಾಂ - ರಕ್ಕಸರ, ಬಾಹವಃ ಭುಜಗಳು, ಗೃಹೀತಾ ಇವ-ಹಿಡಿದುಕೊಳ್ಳಲ್ಪಟ್ಟಂತೆ ಸ್ತಬ್ಧವಾಗಿದ್ದವು. ॥ ೨೫ ॥ ತಾಮ್ರಾಃ- ಕೆಂಪಾಗಿಯೂ ಇರುವ, ಸೂರ್ಯರಶ್ಮಯಃ - ಸೂರ್ಯನ ಕಿರಣಗಳು, ರಾವಣಸ್ಯ - ರಾವಣನ, ಅಂಗೇ - ಶರೀರದಲ್ಲಿ, ಪರ್ವತಸ್ಯ - ಬೆಟ್ಟದ, ಧಾತವ ಇವ - ಧಾತುವಿಕಾರಗಳಂತೆ, ಪೀತಾಃ - ಹಳದಿಯ ಬಣ್ಣವುಳ್ಳವುಗಳಾಗಿಯೂ, ಸಿತಾಃ - ಬೆಳ್ಳಗೂ, ಶ್ವೇತಾಃ - ಬಿಳುಪುಳ್ಳವುಗಳಾಗಿಯೂ, ಪತಿತಾಃ - ಬೀಳುತ್ತಿರುವವುಗಳಾಗಿ, ದೃಶ್ಯಂತೇ - ಕಾಣಲ್ಪಡುತ್ತಿತ್ತು. ॥ ೨೬ ॥ ಗೃಧ್ರೈಃ - ಹದ್ದುಗಳಿಂದ, ಅನುಗತಾಃ - ಅನುಸರಿಸಲ್ಪಟ್ಟ, ಶಿವಾಃ - ನರಿಗಳು, ಅಸ್ಯ - ಈ ರಾವಣನ, ಸಂರಬ್ಧಂ - ಕೋಪವುಳ್ಳ, ಮುಖಂ - ಮುಖವನ್ನು, ಈಕ್ಷಂತಃ - ನೋಡುತ್ತಿರುವವುಗಳಾಗಿ, ಮುಖೈಃ - ಮುಖಗಳಿಂದ, ಜ್ವಲನಂ - ಅಗ್ನಿಯನ್ನು, ಅಶಿವಂ - ಅಮಂಗಳವಾಗಿ, ವಮಂತ್ಯಃ - ಕಾರುತ್ತಿರುವವು

ವೆಲ್ಲ ದಾಸವಾಳದ ಹೂಗಳ ಕಾಂತಿಯನ್ನೊಳಗೊಂಡ ಸಂಧ್ಯಾರಾಗದಿಂದ ಕೂಡಿದ್ದಿತು. ಇದನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು. ಇಷ್ಟೆಯಲ್ಲದೆ ಅದೇ ಸಮಯದಲ್ಲಿಯೇ ಸಿಡಿಲುಗಳು, ಉಲ್ಕೆಗಳು ಲಂಕಾಪಟ್ಟಣದಲ್ಲಿ ಬಹಳವಾಗಿ ಬೀಳುತ್ತಿದ್ದುವು. ಈ ಉತ್ಪಾತಗಳೆಲ್ಲವನ್ನೂ ನೋಡುತ್ತಿದ್ದ ರಾಕ್ಷಸರೆಲ್ಲರೂ ಚಿಂತೆಗೊಳಗಾದರು. ರಾವಣನೂ ಇವುಗಳನ್ನೆಲ್ಲ ನೋಡಿ ನಡುಗಿಹೋದನಲ್ಲದೆ ಭೂಮಿಯೇ ನಡುಗಿಹೋಯಿತು. ॥೨೦-೨೫॥ ಇದೂ ಅಲ್ಲದೆ ಯುದ್ಧಮಾಡುತ್ತಿದ್ದ ರಾಕ್ಷಸರ ಬಾಹುಗಳೆಲ್ಲವೂ ಸ್ತಬ್ಧವಾಗಿ ನಿಂತುಹೋದುವು. ಪರ್ವತದಲ್ಲಿ ನಾನಾವಿಧ ಧಾತುಗಳು ವ್ಯಾಪಿಸಿದಂತೆ ರಾವಣನ ಮೇಲೆ ಕೆಂಪಾಗಿಯೂ, ಹಳದಿಯಾಗಿಯೂ, ಬೆಳ್ಳಗೂ ಇರುವ ಸೂರ್ಯಕಿರಣಗಳು ಬಿದ್ದು ವ್ಯಾಪಿಸಿದುವು. ನರಿಗಳೆಲ್ಲವೂ ಕೋಪದಿಂದ ಕೆಂಪಡರಿದ ಆ ರಾವಣನ ಮುಖವನ್ನು ನೋಡಿ ತಾವೂ ಕಿಡಿಗಳನ್ನುಗುಳುತ್ತ ಅವನ ರಥದ ಬಳಿ ತಿರುಗುತ್ತಿದ್ದುವು. ಮಹಾ ಭಯಂಕರವೂ, ಕೇವಲ ಅಮಂಗಳಕರವೂ ಆದ ನರಿಗಳ ಧ್ವನಿಗಳು ಎಲ್ಲೆಲ್ಲಿಯೂ ಕೇಳಿಬರುತ್ತಿದ್ದುವು. ರಾವಣನಿಗೆ ಪ್ರತಿಕೂಲ

ಮಶಿವಂ ಶಿವಾಃ ॥ ೨೭ ॥ ಪ್ರತಿಕೂಲಂ ವವೌ ವಾಯೂ ರಣೇ ಪಾಂಸೂನ್ ಸಮಾಕಿರನ್ । ತಸ್ಯ ರಾಕ್ಷಸರಾಜಸ್ಯ ಕುರ್ವನ್ ದೃಷ್ಟಿವಿಲೋಪನಂ ॥ ೨೮ ॥ ನಿಪೇತುರಿಂದ್ರಾಶನಯಸ್ಸೈನ್ಯೇ ಚಾಸ್ಯ ಸಮಂತತಃ । ದುರ್ವಿಷಹ್ಯಸ್ವನಾ ಘೋರಾ ವಿನಾ ಜಲಧರಸ್ವನಂ ॥೨೯॥ ದಿಶಶ್ಚ ಪ್ರದಿಶಸ್ಸರ್ವಾ ಬಭೂವುಸ್ತಿಮಿರಾವೃತಾಃ । ಪಾಂಸುವರ್ಷೇಣ ಮಹತಾ ದುರ್ದರ್ಶಂಚ ನಭೋಽಭವತ್ ॥ ೩೦ ॥ ಕುರ್ವಂತ್ಯಃ ಕಲಹಂ ಘೋರಂ ಶಾರಿಕಾಸ್ತದ್ರಥಂ ಪ್ರತಿ । ನಿಪೇತುಃ ಶತಶಸ್ತತ್ರ ದಾರುಣಂ ದಾರುಣಾರುತಾಃ ॥ ೩೧ ॥ ಜಘನೇಭ್ಯಸ್ಸ್ಫುಲಿಂಗಾಂಶ್ಚ ನೇತ್ರೇಭ್ಯೋಽಶ್ರೂಣಿ ಸಂತತಂ । ಮುಮುಚುಸ್ತಸ್ಯ ತುರಗಾಸ್ತುಲ್ಯಮಗ್ನಿಂಚ ವಾರಿಚ ॥೩೨॥ ಏವಂ ಪ್ರಕಾರಾ ಬಹವ

ಗಳಾಗಿ, ಪ್ರಣೇದುಃ - ಕೂಗುತ್ತಿದ್ದವು. ॥ ೨೭ ॥ ವಾಯುಃ - ಗಾಳಿಯು, ರಣೇ - ಕಾಳಗದಲ್ಲಿ, ಪಾಂಸೂನ್ - ಧೂಳಿಗಳನ್ನು, ಸಮಾಕಿರನ್ - ಎರಚುತ್ತಿರುವುದಾಗಿ, ತಸ್ಯ....ಸ್ಯ - ಆ ದಶಕಂಠನ, ದೃಷ್ಟಿ....ನಂ - ನೋಟಕ್ಕೆ ಲೋಪವನ್ನು, ಕುರ್ವನ್ - ಮಾಡುತ್ತ, ಪ್ರತಿಕೂಲಂ - ಪ್ರತಿಕೂಲವಾಗಿ, ವವೌ - ಬೀಸಿದವು. ॥ ೨೮ ॥ ಅಸ್ಯ - ಈ ದಶಕಂಠನ, ಸೈನ್ಯೇ - ಸೇನೆಯುಲ್ಲಿ, ಸಮಂತತಃ - ಎಲ್ಲಾ ಕಡೆಗಳಲ್ಲಿಯೂ, ಜಲ....ನಾ - ಮೇಘಧ್ವನಿಯನ್ನು ಬಿಟ್ಟು, ಘೋರಾಃ - ಭಯಂಕರಗಳಾದ, ದುರ್ವಿ....ನಾಃ - ಸಹಿಸಲಸಾಧ್ಯವಾದ ಧ್ವನಿಯುಳ್ಳ, ಇಂದ್ರಾಶನಯಃ - ಸಿಡಿಲುಗಳು, ನಿಪೇತುಃ - ಬಿದ್ದವು. ॥ ೨೯ ॥ ಸರ್ವಾಃ - ಸಮಸ್ತಗಳಾದ, ದಿಶಶ್ಚ - ದಿಕ್ಕುಗಳೂ, ಪ್ರದಿಶಶ್ಚ - ವಿದಿಕ್ಕುಗಳೂ, ತಿಮಿರಾವೃತಾಃ - ಕತ್ತಲಿನಿಂದ ಆವರಿಸಿದವುಗಳು, ಬಭೂವುಃ - ಆದವು, ನಭಃ - ಅಂತರಿಕ್ಷವು, ಮಹತಾ - ಬಹಳವಾದ, ಪಾಂಸುವರ್ಷೇಣ - ಧೂಳಿಯ ಮಳೆಗಳಿಂದ, ದುರ್ದರ್ಶಂ - ನೋಡಲಸಾಧ್ಯವು, ಅಭವತ್ - ಆಯಿತು. ॥ ೩೦ ॥ ತತ್ರ - ಆ ಯುದ್ಧದಲ್ಲಿ, ಘೋರಂ - ಭಯಂಕರವಾದ, ದಾರುಣಂ - ಕ್ರೂರವಾದ, ಕಲಹಂ - ಕಲಹವನ್ನು, ಕುರ್ವಂತ್ಯಃ - ಮಾಡುತ್ತಿರುವ, ಶಾರಿಕಾಃ - ಹೆಣ್ಣು ಗಿಳಿಗಳು, ತದ್ರಥಂಪ್ರತಿ-ಆ ದಶಕಂಠನ ರಥದ ಮೇಲೆ, ದಾರುಣಾಃ-ಕ್ರೂರವಾದ, ರುತಾಃ - ಧ್ವನಿಗಳುಳ್ಳವುಗಳಾಗಿ, ಶತಶಃ - ನೂರಾರುಗಳಾಗಿ, ನಿಪೇತುಃ - ಬಿದ್ದವು. ॥ ೩೧ ॥ ತಸ್ಯ - ಆ ರಾವಣನ, ತುರಗಾಃ - ಕುದುರೆಗಳು, ಜಘನೇಭ್ಯಃ - ಕಟಿಪುರೋಭಾಗಗಳ ದೆಸೆಯಿಂದ, ಸ್ಫುಲಿಂಗಾನ್ - ಕಿಡಿಗಳನ್ನೂ, ನೇತ್ರೇಭ್ಯಃ - ಕಣ್ಣುಗಳ ದೆಸೆಯಿಂದ, ಸಂತತಂ - ವಿರಾಮವಿಲ್ಲದಂತೆ, ಅಶ್ರೂಣಿ - ಕಂಬನಿಗಳನ್ನೂ, ಅಗ್ನಿಂ - ಬೆಂಕಿಯನ್ನೂ, ವಾರಿಚ - ನೀರನ್ನೂ, ತುಲ್ಯಂ - ಸಮಾನವಾಗಿ, ಮುಮುಚುಃ - ಬಿಟ್ಟವು. ॥ ೩೨ ॥ ಏವಂಪ್ರಕಾರಾಃ - ಈ ಪ್ರಕಾರವಾದ, ಬಹವಃ - ಅನೇಕಗಳಾದ,

---

ವಾಗಿ ಬೀಸತೊಡಗಿತು. ಆಗ ರಾಕ್ಷಸಾಧಿಪನಾದ ರಾವಣನ ಕಣ್ಣುಗಳಲ್ಲಿ ದೂಳಿಯು ವ್ಯಾಪಿಸಿದುದರಿಂದ, ಮುಂದಿರುವ ವಸ್ತುಗಳೇ ಕಾಣದೇ ಹೋಯಿತು. ಅವನ ಸೇನೆಯುಲ್ಲೆಲ್ಲ ಸಿಡಿಲುಗಳೂ,ಉಲ್ಕೆಗಳೂ ಬೀಳುತ್ತಿದ್ದುವು. ಮೇಘಗಳೆಲ್ಲ ಅಸಹ್ಯವಾದ ಧ್ವನಿಯುಳ್ಳವುಗಳಾಗಿ ಗರ್ಜಿಸುತ್ತಿದ್ದುವು. ದಿಕ್ಕುವಿದಿಕ್ಕುಗಳೆಲ್ಲ ಅಂಧಕಾರಾವೃತವಾದುವು. ಎಲ್ಲೆಲ್ಲಿಯೂ ಧೂಳಿ ಮುಚ್ಚಿ ಏನೊಂದೂ ಕಾಣದಾಯಿತು. ಅದೇ ಸಮಯದಲ್ಲಿಯೇ ಗಿಳಿಗಳೂ ಕೂಡ ಒಂದ ರೊಡನೊಂದು ಕಾದಾಡುತ್ತ ಗುಂಪುಗುಂಪುಗಳಾಗಿ ವಿಕಾರ ಧ್ವನಿಯೊಡಗೂಡಿ ಆ ರಾವಣನ ರಥದ ಮೇಲೆ ಬೀಳುತ್ತಿದ್ದುವು. ॥ ೨೭–೩೧ ॥ ಆ ರಾಕ್ಷಸರಾಜನ ರಥಕ್ಕೆ ಹೂಡಿದ್ದ ಕುದುರೆ ಗಳು ಜಘನಪ್ರದೇಶಗಳಿಂದ ಕಿಡಿಗಳನ್ನೂ, ಕಣ್ಣುಗಳಿಂದ ದುಃಖಾಶ್ರುಗಳನ್ನೂ ಕಾರು

ಸ್ಸಮುಂತಾತ್ತಾ ಭಯಾವಹಾಃ । ರಾವಣಸ್ಯ ವಿನಾಶಾಯ ದಾರುಣಾ ಸ್ಸಂಪ್ರಜಜ್ಞಿರೇ
॥ ೩೩ ॥ ರಾಮಸ್ಯಾಪಿ ನಿಮಿತ್ತಾನಿ ಸೌಮ್ಯಾನಿಚ ಶುಭಾನಿಚ । ಬಭೂವುರ್ಜಯ
ಶಂಸೀನಿ ಪ್ರಾದುರ್ಭೂತಾನಿ ಸರ್ವಶಃ ॥ ೩೪ ॥ ನಿಮಿತ್ತಾನಿಚ ಸೌಮ್ಯಾನಿ ರಾಘವ
ಸ್ಸ್ವಜಯಾಯಚ । ದೃಷ್ಟ್ವಾ ಪರಮಸಂಹೃಷ್ಟೋ ಹತಂ ಮೇನೇಚ ರಾವಣಂ ॥೩೫॥

ತತೋ ನಿರೀಕ್ಷ್ಯಾತ್ಮಗತಾನಿ ರಾಘವೋ
ರಣೇ ನಿಮಿತ್ತಾನಿ ನಿಮಿತ್ತಕೋವಿದಃ ।
ಜಗಾಮ ಹರ್ಷಂಚ ಪರಾಂಚ ನಿರ್ವೃತಿಂ
ಚಕಾರ ಯುದ್ಧೇ ಹ್ಯಧಿಕಂ ಚ ವಿಕ್ರಮಂ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟೋತ್ತರಶತತಮಸ್ಸರ್ಗಃ

ಭಯಾವಹಾಃ - ಭಯಂಕರಗಳಾದ, ಸಮುತ್ಪಾತಾಃ - ದುಶ್ಶಕುನಗಳು, ರಾವಣಸ್ಯ - ದಶಕಂಧರನ, ವಿನಾಶಾಯ - ನಾಶಕ್ಕೋಸುಗ, ದಾರುಣಾಃ - ಕ್ರೂರಗಳಾಗಿ, ಸಂಪ್ರಜಜ್ಞಿರೇ - ಹುಟ್ಟಿದುವು. ॥೩೩॥ ರಾಮಸ್ಯಾಪಿ - ಶ್ರೀರಾಮನಿಗೂ, ಜಯಶಂಸೀನಿ - ಜಯವನ್ನು ಹೇಳುತ್ತಿರುವ, ಸೌಮ್ಯಾನಿ - ಪ್ರಸನ್ನಗಳಾದ, ಶುಭಾನಿ - ಶುಭಕರಗಳಾದ, ಸರ್ವಶಃ - ಸಮಸ್ತಗಳಾದ, ನಿಮಿತ್ತಾನಿ - ಶಕುನಗಳೂ, ಪ್ರಾದುರ್ಭೂತಾನಿ - ಆವಿರ್ಭವಿಸಿದವು. ॥೩೪॥ ರಾಘವಃ - ಶ್ರೀರಾಮನು, ಸ್ವಜಯಾಯಚ- ತನ್ನ ಜಯಕ್ಕಾಗಿ, ಸೌಮ್ಯಾನಿ - ಪ್ರಸನ್ನಗಳಾದ, ನಿಮಿತ್ತಾನಿಚ - ಶಕುನಗಳನ್ನು, ದೃಷ್ಟ್ವಾ - ಕಂಡು, ಪರಮಸಂಹೃಷ್ಟಃ - ಬಹಳ ಸಂತುಷ್ಟನಾಗಿ, ರಾವಣಂ - ರಾವಣನನ್ನು, ಹತಂ - ಸಂಹೃತನನ್ನಾಗಿ, ಮೇನೇ - ತಿಳಿದುಕೊಂಡನು. ॥೩೫॥ ತತಃ - ಬಳಿಕ, ನಿಮಿತ್ತಕೋವಿದಃ - ಶಕುನಗಳಲ್ಲಿ ಪಂಡಿತನಾದ, ರಾಘವಃ - ಶ್ರೀರಾಮನು, ರಣೇ - ಕಾಳಗದಲ್ಲಿ, ಆತ್ಮಗತಾನಿ - ತನಗೆ ಪ್ರಾಪ್ತಗಳಾದ, ನಿಮಿತ್ತಾನಿ - ಶುಭಶಕುನಗಳನ್ನು, ನಿರೀಕ್ಷ್ಯ - ಕಂಡು, ಹರ್ಷಂ - ಸಂತೋಷವನ್ನು, ಪರಾಂ - ಉತ್ಕೃಷ್ಟವಾದ, ನಿರ್ವೃತಿಂಚ - ಸುಖವನ್ನೂ, ಜಗಾಮ - ಪಡೆದನು, ಯುದ್ಧೇ - ಕಾಳಗದಲ್ಲಿ, ಅಧಿಕಂ - ಹೆಚ್ಚಾದ, ವಿಕ್ರಮಂಚ - ಪರಾಕ್ರಮವನ್ನೂ, ಚಕಾರ - ಮಾಡಿದನು. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟೋತ್ತರಶತತಮಸ್ಸರ್ಗಃ.

ತ್ತಿದ್ದವು. ಹೀಗೆ ಅನೇಕ ವಿಧವಿಧವಾಗಿ ತಲೆದೋರುತ್ತಿದ್ದ, ಮಹಾ ಭಯಂಕರವೂ, ರಾವಣಾಸುರನಿಗೆ ವಿನಾಶಸೂಚಕವೂ ಆದ ಉತ್ಪಾತಗಳುಂಟಾದುವು. ಅದೇ ಸಮಯದಲ್ಲಿಯೇ ಶ್ರೀರಾಮಮೂರ್ತಿಗೆ ಶುಭಸೂಚಕಗಳಾದ ಅನೇಕ ಶುಭಶಕುನಗಳೂ ಉಂಟಾದುವು. ಅವುಗಳನ್ನು ನೋಡಿ ಶ್ರೀರಾಮನು ಅಪರಿಮಿತವಾದ ಸಂತೋಷದಿಂದ ಕೂಡಿದವನಾಗಿ ರಾವಣಾಸುರನು ಮಡಿದನೆಂದೇ ತಿಳಿದನು. ರಘುಕುಲೋದ್ಭವನಾದ ಆ ಶ್ರೀರಾಮನು ಈ ನಿಮಿತ್ತಗಳೆಲ್ಲವನ್ನೂ ಚೆನ್ನಾಗಿ ತಿಳಿದವನಾದುದರಿಂದ ರಾವಣ ಸಂಹಾರವು ಶೀಘ್ರದಲ್ಲಿಯೇ ಕೈಗೂಡುವುದೆಂದು ನಿಶ್ಚಯಿಸಿಕೊಂಡು ಪರಮಾನಂದಭರಿತನಾದನಲ್ಲದೆ, ಯುದ್ಧ ಮಾಡುವುದರಲ್ಲಿ ಕುತೂಹಲವುಳ್ಳವನೂ ಆದನು. ॥ ೩೨–೩೬ ॥

ಇಂತಿದು ರಾವಣ ದುರ್ನಿಮಿತ್ತಾವಿರ್ಭಾವನಿರೂಪಣವೆಂಬ ನೂರೆಂಟನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ನವೋತ್ತರಶತತಮಸ್ಸರ್ಗಃ

ತತಃ ಪ್ರವೃತ್ತಂ ಸುಕ್ರೂರಂ ರಾಮರಾವಣಯೋಸ್ತದಾ । ಸುಮಹದ್ದ್ವೈರಥಂ ಯುದ್ಧಂ ಸರ್ವಲೋಕಭಯಾವಹಂ ॥ ೧ ॥ ತತೋ ರಾಕ್ಷಸಸೈನ್ಯಂಚ ಹರೀಣಾಂಚ ಮಹದ್ಬಲಂ । ಪ್ರಗೃಹೀತಪ್ರಹರಣಂ ನಿಶ್ಚೇಷ್ಟಂ ಸಮತಿಷ್ಠತ ॥೨॥ ಸಂಪ್ರಯುದ್ಧೌ ತತೋ ದೃಷ್ಟ್ವಾ ಬಲವನ್ನರರಾಕ್ಷಸೌ । ವ್ಯಾಕ್ಷಿಪ್ತಹೃದಯಾಸ್ಸರ್ವೇ ಪರಂ ವಿಸ್ಮಯಮಾಗತಾಃ ॥ ೩ ॥ ನಾನಾಪ್ರಹರಣೈರ್ವ್ಯಗ್ರೈರ್ಭುಜೈರ್ವಿಸ್ಮಿತಬುದ್ಧಯಃ । ಸರ್ಪಂತಂ ಪ್ರೇಕ್ಷ್ಯ ಸಂಗ್ರಾಮಂ ನಾಭಿಜಗ್ಮುಃ ಪರಸ್ಪರಂ ॥ ೪ ॥

ತತಃ - ಬಳಿಕ, ತದಾ - ಆ ಕಾಲದಲ್ಲಿ, ರಾಮರಾವಣಯೋಃ - ರಾಮ ರಾವಣರಿಗೆ, ಸುಕ್ರೂರಂ ಬಹಳ ಕ್ರೂರವಾದ, ಸರ್ವ....ಹಂ-ಸಮಸ್ತ ಜನರಿಗೂ ಭಯಂಕರವಾದ, ಸುಮಹತ್-ಬಹಳ ದೊಡ್ಡದಾದ, ದ್ವೈರಥಂ-ಎರಡು ರಥಗಳಿಂದ ಮಾಡತಕ್ಕ, ಯುದ್ಧಂ ಕಾಳಗವು, ಪ್ರವೃತ್ತಂ-ಪ್ರಾರಂಭವಾಯಿತು. ॥ ೧ ॥ ತತಃ - ಬಳಿಕ, ರಾಕ್ಷಸಸೈನ್ಯಂಚ - ರಕ್ಕಸರ ಸೇನೆಯೂ, ಹರೀಣಾಂ - ಕಪಿಗಳ, ಮಹದ್ಬಲಂಚ - ಮಹಾ ಸೇನೆಯೂ, ಪ್ರಗೃ....ಣಂ - ಹಿಡಿಯಲ್ಪಟ್ಟ ಆಯುಧಗಳುಳ್ಳುದಾಗಿ, ನಿಶ್ಚೇಷ್ಟಂ - ಅಂಗಚೇಷ್ಟಾದಿರಹಿತವಾಗಿ, ಸಮತಿಷ್ಠತ - ನಿಂತಿತು. ॥ ೨ ॥ ತತಃ - ಬಳಿಕ, ಬಲವತ್ - ಬಲವಾಗಿ, ಸಂಪ್ರಯುದ್ಧೌ - ಯುದ್ಧಮಾಡುತ್ತಿರುವ, ನರರಾಕ್ಷಸೌ - ಮನುಷ್ಯರಾಕ್ಷಸರಿಬ್ಬರನ್ನೂ, ದೃಷ್ಟ್ವಾ - ಕಂಡು, ಸರ್ವೇ - ಸಮಸ್ತರೂ, ವ್ಯಾಕ್ಷಿ....ಯಾಃ - ವಿಶೇಷವಾಗಿ ಯುದ್ಧದಲ್ಲೇ ಆಸಕ್ತವಾದ ಮನಸ್ಸುಗಳುಳ್ಳವರಾಗಿ, ಪರಂ - ಬಹಳವಾದ, ವಿಸ್ಮಯಂ - ಆಶ್ಚರ್ಯವನ್ನು, ಆಗತಾಃ - ಹೊಂದಿದರು. ॥ ೩ ॥ ವಿಸ್ಮಿತಬುದ್ಧಯಃ - ಆಶ್ಚರ್ಯಗೊಂಡಿರುವ ಬುದ್ಧಿಗಳುಳ್ಳವರಾಗಿ, ಸರ್ಪಂತಂ - ನಡೆಯುತ್ತಿರುವ, ಸಂಗ್ರಾಮಂ - ಕಾಳಗವನ್ನು, ಪ್ರೇಕ್ಷ್ಯ - ಕಂಡು, ನಾನಾಪ್ರಹರಣೈಃ - ಅನೇಕಾಯುಧಗಳುಳ್ಳ, ವ್ಯಗ್ರೈಃ - ತ್ವರೆಗೊಂಡಿರುವ, ಭುಜೈಃ - ಭುಜಗಳಿಂದ ಕೂಡಿದವರಾದರು, ಪರಸ್ಪರಂ - ಅನ್ಯೋನ್ಯವಾಗಿ, ನಾಭಿಜಗ್ಮುಃ - ಯುದ್ಧಕ್ಕೆ ನುಗ್ಗವೇ ಹೋದರು. ॥ ೪ ॥ ರಾವಣಂ - ದಶಕಂಠನನ್ನು, ಪಶ್ಯತಾಂ - ನೋಡುತ್ತಿರುವ, ರಕ್ಷಸಾಂ - ರಕ್ಕಸರ, ರಾಘವಂ -

---

ಆ ತರುವಾಯ ಶ್ರೀರಾಮನಿಗೂ, ರಾವಣನಿಗೂ ಮಹಾ ಭಯಂಕರವಾದುದೂ, ಎಲ್ಲ ಲೋಕಗಳನ್ನೂ ತಲ್ಲಣಗೊಳಿಸುವಂತಹುದೂ ಆದ ಎರಡು ರಥಗಳಿಂದಾಗುವ ದ್ವಂದ್ವಯುದ್ಧಕ್ಕೆ ಮೊದಲಾಯಿತು. ಆ ಸಮಯದಲ್ಲಿ ವಾನರರಾಕ್ಷಸರ ಸೈನ್ಯವೆಲ್ಲವೂ ತಂತಮ್ಮ ಕಡೆಯ ನಾಯಕರಾದ ರಾಮರಾವಣರ ಕಾಳಗವನ್ನು ನೋಡುತ್ತ ಅತ್ತಿತ್ತ ಕದಲದೆ ನಿಂತಿತು. ಅವರೆಲ್ಲರೂ ತಮ್ಮ ಒಡೆಯರುಗಳು ಮಾಡುತ್ತಿರುವ ಮಹಾ ಭಯಂಕರವಾದ ಯುದ್ಧವನ್ನು ನೋಡಿ ಪರಮಾಶ್ಚರ್ಯಚಕಿತರಾದರು. ಎಲ್ಲರೂ ನಾನಾವಿಧವಾದ ಆಯುಧಗಳೊಡಗೂಡಿದ್ದರೂ, ಯುದ್ಧ ಮಾಡುವುದರಲ್ಲಿ ಆಸಕ್ತಿಯುಳ್ಳವರಾಗಿದ್ದರೂ ರಾಮರಾವಣರ ಆ ಯುದ್ಧವನ್ನು ನೋಡುತ್ತ ನೋಡುತ್ತಾ ಪರಮಾಶ್ಚರ್ಯಭರಿತರಾಗಿ ಒಬ್ಬರೊಡನೊಬ್ಬರು ಕಾಳೆಗಮಾಡದೆ ಸುಮ್ಮನೆ ನಿಂತುಬಿಟ್ಟರು. ಆ ಕಾಳೆಗದಲ್ಲಿ ರಾಕ್ಷಸರೆಲ್ಲರೂ ತಮ್ಮೊಡೆಯನಾದ ರಾವಣಾ

ರಕ್ಷಸಾಂ ರಾವಣಂಚಾಪಿ ವಾನರಾಣಾಂಚ ರಾಘವಂ । ಪಶ್ಯತಾಂ ವಿಸ್ಮಿತಾಕ್ಷಾಣಾಂ
ಸೈನ್ಯಂ ಚಿತ್ರಮಿವಾಬಭೌ ॥೫॥ ತೌತು ತತ್ರ ನಿಮಿತ್ತಾನಿ ದೃಷ್ಟ್ವಾ ರಾವಣರಾಘವೌ ।
ಕೃತಬುದ್ಧೀ ಸ್ಥಿರಾಮರ್ಷೌ ಯುಯುಧಾತೇ ಹ್ಯಭೀತವತ್ ॥ ೬ ॥ ಜೇತವ್ಯಮಿತಿ
ಕಾಕುತ್ಸ್ಥೋ ಮರ್ತವ್ಯಮಿತಿ ರಾವಣಃ । ಧೃತೌ ಸ್ವವೀರ್ಯಸರ್ವಸ್ವಂ ಯುದ್ಧೇ
ದರ್ಶಯತಾಂ ತದಾ ॥ ೭ ॥ ತತಃ ಕ್ರೋಧಾದ್ದಶಗ್ರೀವಃ ಶರಾನ್ ಸಂಧಾಯ
ವೀರ್ಯವಾನ್ । ಮುಮೋಚ ಧ್ವಜಮುದ್ದಿಶ್ಯ ರಾಘವಸ್ಯ ರಥೇ ಸ್ಥಿತಂ ॥ ೮ ॥ ತೇ
ಶರಾಸ್ತಮನಾಸಾದ್ಯ ಪುರಂದರರಥಧ್ವಜಂ । ರಥಶಕ್ತಿಂ ಪರಾಮೃಶ್ಯ ನಿಪೇತುರ್ಧರಣೀ
ತಲೇ ॥ ೯ ॥ ತತೋ ರಾಮೋಽಭಿಸಂಕ್ರುದ್ಧಶ್ಚಾಪಮಾಯಮ್ಯ ವೀರ್ಯವಾನ್ ।

ಶ್ರೀರಾಮನನ್ನು, ಪಶ್ಯತಾಂ - ನೋಡುತ್ತಿರುವ, ವಿಸ್ಮಿತಾಕ್ಷಾಣಾಂ - ಆಶ್ಚರ್ಯದಿಂದ ನಿಶ್ಚಲವಾದ ನೇತ್ರಗಳುಳ್ಳ, ವಾನರಾಣಾಂ - ಕಪಿಗಳ, ಸೈನ್ಯಂ - ಸೇನೆಯು, ಚಿತ್ರಮಿವ - ಬರೆದ ಚಿತ್ರದಂತೆ, ಆಬಭೌ - ಹೊಳೆಯುತ್ತಿತ್ತು. ॥ ೫ ॥ ತತ್ರ - ಆ ರಣರಂಗದಲ್ಲಿ, ಕೃತಬುದ್ಧೀ - ಮಾಡಲ್ಪಟ್ಟ ಬುದ್ಧಿಗಳು, ತೌರಾವಣರಾಘವೌ - ಆ ರಾವಣ ಶ್ರೀರಾಮರೀರ್ವರೂ, ನಿಮಿತ್ತಾನಿ - ಶಕುನಗಳನ್ನು, ದೃಷ್ಟ್ವಾ - ಕಂಡು, ಸ್ಥಿರಾಮರ್ಷೌ - ನಿಶ್ಚಲವಾದ ಕೋಪವುಳ್ಳವರಾಗಿ, ಅಭೀತವತ್ - ನಿರ್ಭಯವಾಗಿ, ಯುಯುಧಾತೇ - ಕಾಳಗ ಮಾಡಿದರು. ॥ ೬ ॥ ಕಾಕುತ್ಸ್ಥಃ - ಶ್ರೀರಾಮನು, ಜೇತವ್ಯಮಿತಿ - ಜಯಿಸತಕ್ಕದ್ದೆಂದೂ, ರಾವಣಃ - ದಶಕಂಠನು, ಮರ್ತವ್ಯಮಿತಿ - ಸಾಯಬೇಕೆಂತಲೂ, ಧೃತೌ - ಧೈರ್ಯಶಾಲಿಗಳಾಗಿ, ತದಾ - ಆ ಕಾಲದಲ್ಲಿ, ಯುದ್ಧೇ - ಕಾಳಿಗದಲ್ಲಿ, ಸವೀ....ಸ್ವಂ - ತಂತಮ್ಮ ಸಾಮರ್ಥ್ಯಸರ್ವಸ್ವವನ್ನೂ, ಆದರ್ಶಯತಾಂ - ತೋರಿಸಿದರು. ॥ ೭ ॥ ತತಃ - ಬಳಿಕ, ವೀರ್ಯವಾನ್ - ಸಾಮರ್ಥ್ಯವಂತನಾದ, ದಶಗ್ರೀವಃ - ದಶಕಂಠನು, ರಾಘವಸ್ಯ - ಶ್ರೀರಾಮನ, ರಥೇ-ತೇರಿನಲ್ಲಿ, ಸ್ಥಿತಂ-ಇರುವ, ಧ್ವಜಂ-ನಿಶಾನಿಯನ್ನು, ಉದ್ದಿಶ್ಯ-ಲಕ್ಷೀಕರಿಸಿ, ಕ್ರೋಧಾತ್-ಕೋಪದಿಂದ, ಶರಾನ್ - ಸರಳುಗಳನ್ನು, ಮುಮೋಚ - ಬಿಟ್ಟನು. ॥ ೮ ॥ ತೇಶರಾಃ - ಆ ಸರಳುಗಳು, ತಂಪು....ಜಂ - ಆ ದೇವೇಂದ್ರನ ರಥದ ನಿಶಾನಿಯನ್ನು, ಅನಾಸಾದ್ಯ - ಹೊಂದದೆಯೇ, ರಥಶಕ್ತಿಂ-ರಥದ ಬಲವನ್ನು, ಪರಾಮೃಶ್ಯ-ಮುಟ್ಟನೋಡಿ, ಧರಣೀತಲೇ-ಭೂಮಿಯಲ್ಲಿ, ನಿಪೇತುಃ - ಬಿದ್ದವು. ॥ ೯ ॥ ತತಃ - ಬಳಿಕ, ವೀರ್ಯವಾನ್ - ಶೌರ್ಯವಂತನಾದ, ರಾಮೋಪಿ - ಶ್ರೀರಾಮನೂ ಕೂಡ,

ಸುರನನ್ನೂ ವಾನರರು ತಮ್ಮ ಸ್ವಾಮಿಯಾದ ಶ್ರೀರಾಮಮೂರ್ತಿಯನ್ನೂ ನೆಟ್ಟನೆ ನೋಡುತ್ತಿರಲು ಒಟ್ಟು ಯುದ್ಧಭೂಮಿಯೇ ಬರೆದಿಟ್ಟ ಚಿತ್ರದಂತೆ ಶೋಭಿಸುತ್ತಿದ್ದಿತು. ॥ ೧–೫ ॥ ಆಗ ರಾವಣ ಶ್ರೀರಾಮರೀರ್ವರೂ ಶಕುನಗಳನ್ನು ನೋಡಿ ಸ್ಥಿರಬುದ್ಧಿಯುಳ್ಳವರೂ, ಬೇರೂರಿದ ರೋಷವುಳ್ಳವರೂ ಆಗಿ ಯಾವ ವಿಧದಲ್ಲಿಯೂ ಹೆದರದೆ ಯುದ್ಧ ಮಾಡುತ್ತಿದ್ದರು. ಶ್ರೀರಾಮಮೂರ್ತಿಯು ಹೇಗಾದರೂ ಇವನನ್ನು ಗೆದ್ದೇ ಗೆಲ್ಲುವೆನೆಂದೂ, ರಾವಣನು ಹೇಗಾದರೂ ಕಾಳೆಗದಲ್ಲಿ ಸಾಯಲೇಬೇಕೆಂದೂ ನಿರ್ಧರಿಸಿ ತಂತಮ್ಮ ಪರಾಕ್ರಮ ಸರ್ವಸ್ವವನ್ನೂ ಪ್ರದರ್ಶಿಸಲಾರಂಭಿಸಿದರು. ಆಗ ಮಹಾ ಪರಾಕ್ರಮಿಯಾದ ರಾವಣಾಸುರನು ಬಹಳವಾದ ಕೋಪದಿಂದ ಧನುಸ್ಸಿನಲ್ಲಿ ಬಾಣಗಳನ್ನು ಸಂಧಿಸಿ ಶ್ರೀರಾಮಮೂರ್ತಿಯ ರಥದ ಧ್ವಜವನ್ನುದ್ದೇಶಿಸಿ ಪ್ರಯೋಗಿಸಿದನು. ಆ ಬಾಣಗಳು ಪುರಂದರನ ರಥದ ಧ್ವಜವನ್ನು ಹೊಂದದೆಯೇ ಅದರ ಶಕ್ತಿಯನ್ನು ಪರಿಕಿಸಿ ನೋಡಿ ನೆಲಕ್ಕೆ ಬಿದ್ದವು. ಶ್ರೀರಾಮನೂ ಸಹ ಅದರಿಂದ ಪ್ರಕುಪಿತನಾಗಿ ಮಾಡಿದ್ದಕ್ಕೆ ಪ್ರತಿಮಾಡಬೇಕೆಂದು ಸಂಕಲ್ಪಿಸಿ ತನ್ನ ಧನುಸ್ಸನ್ನು,

ಕೃತಪ್ರತಿಕೃತಂ ಕರ್ತುಂ ಮನಸಾ ಸಂಪ್ರಚಕ್ರಮೇ ॥ ೧೦ ॥ ರಾವಣಧ್ವಜಮುದ್ದಿಶ್ಯ ಮುಮೋಚ ನಿಶಿತಂ ಶರಂ । ಮಹಾಸರ್ಪಮಿವಾಸಹ್ಯಂ ಜ್ವಲಂತಂ ಸ್ವೇನ ತೇಜಸಾ ॥ ೧೧ ॥ ಜಗಾಮ ಸ ಮಹೀಂ ಛಿತ್ವಾ ದಶಗ್ರೀವಧ್ವಜಂ ಶರಃ । ಸನಿಕೃತ್ತೋಽಪತ ದ್ಭೂಮೌ ರಾವಣಸ್ಯ ರಥಧ್ವಜಃ ॥ ೧೨ ॥ ಧ್ವಜಸ್ಯೋನ್ಮಥನಂ ದೃಷ್ಟ್ವಾ ರಾವಣ ಸ್ಸುಮಹಾಬಲಃ । ಸಂಪ್ರದೀಪ್ತೋಽಭವತ್ ಕ್ರೋಧಾದಮರ್ಷಾತ್ ಪ್ರದಹನ್ನಿವ ॥ ೧೩ ॥ ಸರೋಷವಶಮಾಪನ್ನಃ ಶರವರ್ಷಂ ಮಹದ್ವಮನ್ । ರಾಮಸ್ಯ ತುರಗಾನ್ ದೀಪ್ತೈಃ ಶರೈರ್ವಿವ್ಯಾಧ ರಾವಣಃ ॥೧೪॥ ತೇ ವಿದ್ಧಾ ಹರಯಸ್ತತ್ರ ನಾಸ್ಖಲನ್ನಾಪಿ

ಅಭಿಸಂಕ್ರುದ್ಧಃ - ಬಹಳ ಕೋಪಿಷ್ಠನಾಗಿ, ಚಾಪಂ - ಕೋದಂಡವನ್ನು, ಆಯಮ್ಯ - ದೃಢ ವಾಗಿ ಬಿಗಿದು, ಕೃತ....ತಂ - ಮಾಡಿದುದಕ್ಕೆ ಪ್ರತಿಕ್ರಿಯೆಯನ್ನು, ಕರ್ತುಂ - ಮಾಡುವುದಕ್ಕೆ, ಮನಸಾ - ಮನಸ್ಸಿನಲ್ಲಿ, ಸಂಪ್ರಚಕ್ರಮೇ - ಸಂಕಲ್ಪ ಮಾಡಿದನು. ॥ ೧೦ ॥ ರಾವಣಧ್ವಜಂ- ರಾವಣಾಸುರನ ಧ್ವಜವನ್ನು, ಉದ್ದಿಶ್ಯ - ಉದ್ದೇಶಮಾಡಿ, ಸ್ವೇನ - ಸ್ವಕೀಯವಾದ, ತೇಜಸಾ - ತೇಜಸ್ಸಿನಿಂದ, ಜ್ವಲಂತಂ - ಪ್ರಜ್ವಲಿಸುತ್ತಿರುವ, ಮಹಾಸರ್ಪಂ - ದೊಡ್ಡ ಹಾವಿನಂತೆ, ಅಸಹ್ಯಂ- ಸಹಿಸಲಸಾಧ್ಯವಾದ, ನಿಶಿತಂ - ತೀಕ್ಷ್ಣವಾದ, ಶರಂ - ಬಾಣವನ್ನು, ಮುಮೋಚ - ಬಿಟ್ಟನು. ॥೧೧॥ ಸಶರಃ - ಆ ಸರಳು, ದಶ....ಜಂ - ರಾವಣನ ನಿಶಾನಿಯನ್ನು, ಛಿತ್ವಾ - ಕತ್ತರಿಸಿ, ಮಹೀಂ - ನೆಲ ವನ್ನು, ಜಗಾಮ - ಹೊಂದಿತು, ನಿಕೃತ್ತಃ - ಕತ್ತರಿಸಲ್ಪಟ್ಟ, ರಾವಣಸ್ಯ - ದಶಗ್ರೀವನ, ಸರಥ ಧ್ವಜಃ - ಆ ತೇರಿನ ನಿಶಾನಿಯು, ಭೂಮೌ - ನೆಲದಲ್ಲಿ, ಅಪತತ್ - ಬಿದ್ದಿತು. ॥ ೧೨ ॥ ಸುಮಹಾ ಬಲಃ - ಬಹಳ ಬಲಶಾಲಿಯಾದ, ರಾವಣಃ - ದಶಕಂಠನು, ಧ್ವಜಸ್ಯ - ನಿಶಾನಿಯ, ಉನ್ಮಥನಂ - ಛೇದನವನ್ನು, ದೃಷ್ಟ್ವಾ - ಕಂಡು, ಕ್ರೋಧಾತ್ - ಕೋಪದಿಂದ, ಸಂಪ್ರದೀಪ್ತಃ - ಉರಿ ಯುತ್ತ, ಅಮರ್ಷಾತ್ - ಕ್ರೋಧಾತಿಶಯದಿಂದ, ಪ್ರದಹನ್ನಿವ - ಸುಡುವನೋ ಎಂಬಂತೆ, ಅಭ ವತ್ - ಆದನು. ॥ ೧೩ ॥ ರೋಷವಶಂ - ಕೋಪದ ಸ್ವಾಧೀನವನ್ನು, ಆಪನ್ನಃ - ಹೊಂದಿರುವ, ಸರಾವಣಃ - ಆ ದಶಕಂಠನು, ಮಹತ್ - ಬಹಳವಾದ, ಶರವರ್ಷಂ - ಸರಳು ಮಳೆಯನ್ನು, ವಮನ್- ಸುರಿಸುತ್ತ, ದೀಪ್ತೈಃ - ಹೊಳೆಯುತ್ತಿರುವ, ಬಾಣೈಃ - ಸರಳುಗಳಿಂದ, ರಾಮಸ್ಯ - ಶ್ರೀರಾಮನ, ತುರಗಾನ್-ಕುದುರೆಗಳನ್ನು, ವಿವ್ಯಾಧ-ಹೊಡೆದನು. ॥ ೧೪ ॥ ವಿದ್ಧಾಃ-ಹೊಡೆಯಲ್ಪಟ್ಟ, ತೇಹರಯಃ- ಆ ಕುದುರೆಗಳು, ತತ್ರ - ರಣರಂಗದಲ್ಲಿ, ನಾಸ್ಖಲನ್ - ಜಾರಲಿಲ್ಲ, ನಬಭ್ರಮುರಪಿ - ತಿರಗಲೂ

ಬೊಗ್ಗಿಸಿ ಅದರಲ್ಲಿ ಮಹಾ ಸರ್ಪದಂತೆ ತನ್ನ ತೇಜಸ್ಸಿನಿಂದಲೇ ಬೆಳಗುತ್ತಿರುವ ಬಾಣವನ್ನು ಹೂಡಿ ಆ ರಾವಣನ ರಥದ ಧ್ವಜವನ್ನುದ್ದೇಶಿಸಿ ಪ್ರಯೋಗಿಸಿದನು. ॥೬–೧೧॥ ಆ ಬಾಣವಾ ದರೋ ಮಹಾ ವೇಗದಿಂದ ಮೊದಲು ಭೂಮಿಯನ್ನು ಭೇದಿಸಿಕೊಂಡು ಮೇಲೆದ್ದು ರಾವಣನ ರಥಧ್ವಜವನ್ನು ಹೊಡೆಯಲು, ಅದು ತಕ್ಷಣವೇ ಮುರಿದು ನೆಲಕ್ಕೆ ಬಿದ್ದಿತು. ಹೀಗೆ ತನ್ನ ಧ್ವಜವು ಕೆಳಕ್ಕೆ ಬಿದ್ದು ಹೋಗುತ್ತಲೇ ಆ ದಶಾನನು ಬಹುವಾಗಿ ಕೆರಳಿ ಸುಡುವನೋ ಎಂಬಂತೆ ಪ್ರಜ್ವಲಿಸಿದನು. ಹೀಗೆ ಆ ರಾಕ್ಷಸರಾಜನು ಮಹತ್ತರವಾದ ಕೋಪರೋಷಗಳೊಡ ಗೂಡಿ ಮಹತ್ತರವಾದ ಅಂಬುಮಳೆಗರೆದು, ಶ್ರೀರಾಮನ ರಥಕ್ಕೆ ಹೂಡಿದ್ದ ಕುದುರೆಗಳ ಮೇಲೆ ಪ್ರಜ್ವಲಿಸುತ್ತಿರುವ ಬಾಣಗಳನ್ನು ಪ್ರಯೋಗಿಸಿದನು. ಆ ಕುದುರೆಗಳಾದರೋ ಬಾಣ ಗಳು ಬಿದ್ದರೂ ಅತ್ತಿತ್ತ ಕದಲದೆಯೂ, ಭ್ರಾಂತಿಗೊಳ್ಳದೆಯೂ ಕಮಲದ ದಂಟುಗಳಿಂದ

ಬಭ್ರಮುಃ । ಬಭೂವುಸ್ಸ್ವಸ್ಥಹೃದಯಾಃ ಪದ್ಮನಾಳೈರಿವಾಹತಾಃ ||೧೫|| ತೇಷಾಮ
ಸಂಭ್ರಮಂ ದೃಷ್ಟ್ವಾ ವಾಜಿನಾಂ ರಾವಣಸ್ತದಾ । ಭೂಯ ಏವ ಸುಸಂಕ್ರುದ್ಧಃ ಶರ
ವರ್ಷಂ ಮುಮೋಚಹ || ೧೬ || ಗದಾಶ್ಚ ಪರಿಘಾಶ್ಚೈವ ಚಕ್ರಾಣಿ ಮುಸಲಾನಿಚ ।
ಗಿರಿಶೃಂಗಾಣಿ ವೃಕ್ಷಾಂಶ್ಚ ತಥಾ ಶೂಲಪರಶ್ವಧಾನ್ || ೧೭ || ಮಾಯಾವಿಹಿತಮೇ
ತತ್ತು ಶಸ್ತ್ರವರ್ಷಮಪಾತಯತ್ । ತುಮುಲಂ ತ್ರಾಸಜನನಂ ಭೀಮಭೀಮಂ ಪ್ರತಿ
ಸ್ವನಂ || ೧೮ || ತದ್ವರ್ಷಮಭವದ್ಯುದ್ಧೇ ನೈಕಶಸ್ತ್ರಮಯಂ ಮಹತ್ । ವಿಮುಚ್ಯ
ರಾಘವರಥಂ ಸಮಂತಾದ್ವಾನರೇ ಬಲೇ ||೧೯|| ಸಾಯಕೈರಂತರಿಕ್ಷಂ ಚ ಚಕಾರಾಶು
ನಿರಂತರಂ । ಸಹಸ್ರಶಸ್ತತೋ ಬಾಣಾನಶ್ರಾಂತಹೃದಯೋದ್ಯಮಃ । ಮುಮೋಚ

ಯಿಲ್ಲ, ಪದ್ಮನಾಳೈಃ - ಕಮಲದ ನಾಳಗಳಿಂದ, ಆಹತಾಇವ - ಹೊಡೆಯಲ್ಪಟ್ಟವುಗಳಂತೆ, ಸ್ವಸ್ಥ ಹೃದಯಾಃ - ನಿಶ್ಚಲವಾದ ಮನಸ್ಸುಗಳುಳ್ಳವಾಗಿ, ಬಭೂವುಃ - ಆದವು. ||೧೫|| ತೇಷಾಂವಾಜಿನಾಂ- ಆ ಕುದುರೆಗಳ, ಅಸಂಭ್ರಮಂ - ನಿಶ್ಚಲತೆಯನ್ನು, ದೃಷ್ಟ್ವಾ - ಕಂಡು, ರಾವಣಃ - ದಶಕಂಠನು, ತದಾ - ಆ ಕಾಲದಲ್ಲಿ, ಸುಸಂಕ್ರುದ್ಧಃ - ಬಹಳ ಕುಪಿತನಾಗಿ, ಭೂಯಏವ - ಮತ್ತೂ, ಶರವರ್ಷಂ- ಸರಳು ಮಳೆಯನ್ನು, ಮುಮೋಚಹ - ಬಿಟ್ಟನಷ್ಟೆ. ||೧೬|| ಗದಾಶ್ಚ - ಗದಾಯುಧಗಳನ್ನೂ, ಪರಿಘಾ ಶ್ಚೈವ - ಕಬ್ಬಿಣದ ದೊಣ್ಣೆಗಳನ್ನೂ, ಚಕ್ರಾಣಿ - ಚಕ್ರಗಳನ್ನೂ, ಮುಸಲಾನಿಚ - ಒನಕೆಗಳನ್ನೂ, ಗಿರಿಶೃಂಗಾಣಿ - ಬೆಟ್ಟದ ಕೋಡುಗಲ್ಲುಗಳನ್ನೂ, ವೃಕ್ಷಾಂಶ್ಚ - ಮರಗಳನ್ನೂ, ತಥಾ - ಹಾಗೆಯೇ, ಶೂಲ....ಧಾನ್ - ಶೂಲಗಳನ್ನೂ, ಕೊಡಲಿಗಳನ್ನೂ, ಮಾಯಾವಿಹಿತಂ - ಮಾಯೆಯಿಂದ ನಿರ್ಮಿಸ ಲ್ಪಟ್ಟ, ತುಮುಲಂ - ಸಂಕುಲವಾದ, ತ್ರಾಸಜನನಂ - ಹೆದರಿಕೆಯನ್ನುಂಟುಮಾಡುವ, ಭೀಮಂ - ಭಯಂಕರವಾದ, ಭೀಮ....ನಂ - ಭಯಂಕರವಾದ ಧ್ವನಿಯುಳ್ಳ, ಶಸ್ತ್ರವರ್ಷಂ - ಶಸ್ತ್ರಗಳ ಮಳೆ ಯನ್ನೂ, ಅಪಾತಯತ್ - ಸುರಿಸಿದನು. || ೧೮ || ಯುದ್ಧೇ - ಕಾಳಗದಲ್ಲಿ, ನೈಕ....ಯಂ - ಅನೇಕ ಶಸ್ತ್ರಗಳಿಂದ ಪ್ರಚುರವಾದ, ಮಹತ್-ದೊಡ್ಡದಾದ, ತದ್ವರ್ಷಂ-ಆ ಶಸ್ತ್ರವೃಷ್ಟಿಯು, ರಾಘವರಥಂ- ಶ್ರೀರಾಮನ ರಥವನ್ನು, ವಿಮುಚ್ಯ - ಬಿಟ್ಟು, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ವಾನರೇಬಲೇ- ಕಪಿಸೇನೆಯಲ್ಲಿ, ಅಭವತ್ - ಬೀಳುತ್ತಿತ್ತು. || ೧೯ || ತತಃ - ಬಳಿಕ, ಅಶ್ರಾಂ....ಮಃ - ಅವಿಚ್ಛಿನ್ನ ವಾದ ಮನೋತ್ಸಾಹವುಳ್ಳವನಾಗಿ, ದಶಗ್ರೀವಃ - ರಾವಣನು, ಸಾಯಕೈಃ - ಸರಳುಗಳಿಂದ, ಆಶು- ಜಾಗ್ರತೆಯಾಗಿ, ಅಂತರಿಕ್ಷಂ - ಆಕಾಶವನ್ನು, ನಿರಂತರಂ - ಅವಕಾಶವಿಲ್ಲದವನಾಗಿ, ಚಕಾರ -

---

ಹೊಡೆಯಲ್ಪಟ್ಟವುಗಳಂತೆ ಸ್ವಸ್ಥಹೃದಯುಗಳುಳ್ಳವಾಗಿ ನೆಲೆಯಾಗಿಯೇ ನಿಂತಿದ್ದುವು. ||೧೨–೧೫|| ರಾವಣನಾದರೋ ಆ ಕುದುರೆಗಳು ಏನೊಂದೂ ಸಂಭ್ರಮಗೊಳ್ಳದಿರುವುದನ್ನು ಕಂಡು ಮತ್ತೂ ಕೆರಳಿದವನಾಗಿ ಇನ್ನೂಹೆಚ್ಚಿನ ಬಾಣವೃಷ್ಟಿಯನ್ನು ವರ್ಷಿಸಿದನು. ಗದೆಗಳೂ, ಲಾಳುಂಡಿಗೆಗಳನ್ನೂ, ಒನಕೆಗಳನ್ನೂ, ಚಕ್ರಗಳನ್ನೂ ಅಲ್ಲದೆ, ಬೆಟ್ಟದ ಕೋಡುಗಲ್ಲುಗಳನ್ನೂ ಅವುಗಳ ಮೇಲೆ ಪ್ರಯೋಗಿಸಿದನು. ಹೀಗೆ ಆ ರಾವಣಾಸುರನು ಮಹಾ ಭಯಂಕರವಾ ದುದೂ, ಭಯಂಕರ ಧ್ವನಿಯುಳ್ಳುದೂ, ಎಲ್ಲರನ್ನೂತಲ್ಲಣಗೊಳಿಸುವಂಥದೂ, ಮಾಯೆಯಿಂದ ನಿರ್ಮಿಸಿದುದೂ ಆದ ಶರವರ್ಷವನ್ನು ಸುರಿಸಿದನು. ರಣಾಂಗಣದಲ್ಲಿ ಆ ಬಾಣವರ್ಷವು ಸಹಸ್ರಾರು ಬಾಣಗಳೊಡಗೂಡಿದುದಾಗಿದ್ದು ರಾಮನ ರಥವನ್ನು ತೊರೆದು ವಾನರಸೇನೆಯ ಸುತ್ತಲೂ ಬಿದ್ದುದಾಯಿತು. ಆ ರಾವಣಾಸುರನು ಇಷ್ಟುಮಾತ್ರವಲ್ಲದೆ ನೂರಾರು ಸಾವಿ

ಚ ದಶಗ್ರೀವೋ ನಿಸ್ಸಂಗೇನಾಂತರಾತ್ಮನಾ ‖ ೨೦ ‖ ವ್ಯಾಯಚ್ಛಮಾನಂ ತಂ ದೃಷ್ಟ್ವಾ ತತ್ಪರಂ ರಾವಣಂ ರಣೇ । ಪ್ರಹಸನ್ನಿವ ಕಾಕುತ್ಸ್ಥಸ್ಸಂದಧೇ ಸಾಯಕಾನ್ ಶಿತಾನ್ ‖೨೧‖ ಸ ಮುಮೋಚ ತತೋ ಬಾಣಾನ್ ರಣೇ ಶತಸಹಸ್ರಶಃ । ತಾನ್ ದೃಷ್ಟ್ವಾ ರಾವಣ ಶ್ಚಕ್ರೇ ಸ್ವಶರೈಃ ಖಂ ನಿರಂತರಂ ‖ ೨೨ ‖ ತತಸ್ತಾಭ್ಯಾಂ ಪ್ರಮುಕ್ತೇನ ಶರವರ್ಷೇಣ ಭಾಸ್ವತಾ । ಶರಬದ್ಧಮಿವಾಭಾತಿ ದ್ವಿತೀಯಂ ಭಾಸ್ವದಂಬರಂ ‖ ೨೩ ‖ ನಾನಿ ಮಿತ್ತೋಽಭವದ್ಬಾಣೋ ನಾತಿಭೇತ್ತಾ ನ ನಿಷ್ಫಲಃ । ಅನ್ಯೋನ್ಯಮಭಿಸಂಹತ್ಯ

ಮಾಡಿದನು, ನಿಸ್ಸಂಗೇನ - ಆಸಕ್ತವಾದ, ಅಂತರಾತ್ಮನಾ - ಮನಸ್ಸಿನಿಂದ, ಸಹಸ್ರಶಃ - ಸಾವಿರಾರಾದ, ಬಾಣಾನ್ - ಸರಳುಗಳನ್ನು, ಮುಮೋಚಚ - ಬಿಡಲೂ ಬಿಟ್ಟನು. ‖೨೦‖ ವ್ಯಾಯಚ್ಛಮಾನಂ- ಸರಳುಗಳನ್ನು ಬಿಡುವುದಕ್ಕೆ ಯತ್ನಮಾಡುತ್ತಿರುವ, ರಣೇ - ಕಾಳಗದಲ್ಲಿ, ತತ್ಪರಂ - ಆಸಕ್ತನಾದ, ತಂರಾವಣಂ - ಆ ದಶಕಂಠನನ್ನು, ದೃಷ್ಟ್ವಾ - ಕಂಡು, ಪ್ರಹಸನ್ನಿವ - ನಸುನಕ್ಕವನಂತೆ, ಶಿತಾನ್ - ತೀಕ್ಷ್ಣವಾದ, ಸಾಯಕಾನ್ - ಸರಳುಗಳನ್ನು, ಸಂದಧೇ - ಸಂಧಾನ ಮಾಡಿದನು. ‖ ೨೧ ‖ ತತಃ - ಬಳಿಕ, ಸಃ - ಆ ಶ್ರೀರಾಮನು, ರಣೇ - ಕಾಳಗದಲ್ಲಿ, ಶತಸಹಸ್ರಶಃ - ನೂರಾರು ಸಾವಿರಾರಾದ, ಬಾಣಾನ್ - ಸರಳುಗಳನ್ನು, ಮುಮೋಚ - ಬಿಟ್ಟನು, ರಾವಣಃ - ದಶಕಂಠನು, ತಾನ್ - ಅವುಗಳನ್ನು, ದೃಷ್ಟ್ವಾ - ಕಂಡು, ಸ್ವಶರೈಃ - ತನ್ನ ಬಾಣಗಳಿಂದ, ಖಂ - ಅಂತರಿಕ್ಷವನ್ನು, ನಿರಂತರಂ - ಸ್ವಲ್ಪ ವಾದರೂ ಅವಕಾಶವಿಲ್ಲದಂತೆ, ಚಕ್ರೇ - ಮಾಡಿದನು. ‖ ೨೨ ‖ ತತಃ - ಬಳಿಕ, ತಾಭ್ಯಾಂ - ಅವರಿಬ್ಬ ರಿಂದಲೂ, ಪ್ರಮುಕ್ತೇನ - ಬಿಡಲ್ಪಟ್ಟ, ಭಾಸ್ವತಾ - ಹೊಳೆಯುತ್ತಿರುವ, ಶರವರ್ಷೇಣ - ಬಾಣವರ್ಷ ದಿಂದ, ಭಾಸ್ವತ್ - ಹೊಳೆಯುವ, ಅಂಬರಂ - ಅಂತರಿಕ್ಷವು, ಶರಬದ್ಧಂ - ಸರಳುಗಳಿಂದ ಕಟ್ಟಲ್ಪಟ್ಟ, ದ್ವಿತೀಯಂ - ಎರಡನೆಯದಾದ, ಅಂಬರಮಿವ - ಅಂತರಿಕ್ಷದಂತೆ, ಆಭಾತಿ-ಹೊಳೆಯುತ್ತಿತ್ತು. ‖೨೩‖ ಬಾಣಃ - ಸರಳು, ಅನಿಮಿತ್ತಃ - ಲಕ್ಷ್ಯವಿಲ್ಲದ್ದು, ನಾಭವತ್ - ಆಗಲಿಲ್ಲ, ಅತಿಭೇತ್ತಾ - ಅಪೇಕ್ಷಿಸಿದು ದಕ್ಕಿಂತಲೂ ಅಧಿಕವಾಗಿ ಭೇದಿಸಿದಂಥಾದ್ದು, ನ - ಆಗಲಿಲ್ಲವು. ‖೨೪‖ ತಥಾ - ಹಾಗೆಯೇ, ವೃಥೇ-

ರಾರು ಬಾಣಗಳನ್ನು ಸ್ವಲ್ಪವೂ ವಿರಾಮವಿಲ್ಲದೆ ಪ್ರಯೋಗಿಸಿ ಅಂತರಿಕ್ಷವೆಲ್ಲವನ್ನೂ ಅವ ಕಾಶವೇ ಇಲ್ಲದಂತೆ ತುಂಬಿಸಿದನು. ‖೧೬–೨೦‖ ಆ ಸಮಯದಲ್ಲಿ ಶ್ರೀರಾಮಚಂದ್ರನೂ ಸಹ ಕೇವಲ ಬಾಣಪ್ರಯೋಗದಲ್ಲಿಯೇ ನಿರತನಾಗಿದ್ದ ರಾವಣಾಸುರನನ್ನು ಕಂಡು ನಸುನಗುತ್ತ ತನ್ನ ಧನುಸ್ಸನ್ನು ಸಜ್ಜುಗೊಳಿಸಿ ಮಹಾ ತೀಕ್ಷ್ಣವಾದ ಸಹಸ್ರಾರು ಬಾಣಗಳನ್ನು ಪ್ರಯೋಗಿಸಿ ದನು. ಅದನ್ನು ಕಂಡೊಡನೆಯೇ ಆ ರಾಕ್ಷಸರಾಜನು ಮತ್ತೂ ಅಸಂಖ್ಯಾತವಾದ ಬಾಣ ಗಳನ್ನು ಪ್ರಯೋಗಿಸಿ ಆಕಾಶವನ್ನೆಲ್ಲ ತುಂಬಿಸಿಬಿಟ್ಟನು. ಆ ರಾಮರಾವಣರು ಪ್ರಯೋಗಿ ಸಿದ ಬಾಣಜಾಲಗಳೆಲ್ಲವೂ ಗಗನದಲ್ಲಡರಿ, ಮತ್ತೊಂದು ಆಕಾಶವೋ ಎಂಬಂತೆ ಶೋಭಿಸು ತ್ತಿದ್ದಿತು. ಅವರೀರ್ವರೂ ಪ್ರಯೋಗಿಸಿದ ಯಾವ ಬಾಣವೂ ನಿಮಿತ್ತವಿಲ್ಲದೆ ಪ್ರಯೋಗಿಸಿ ದ್ದುದಾಗಲಿ, ನಿಷ್ಫಲವಾದುದಾಗಲಿ ಆಗಲಿಲ್ಲವು. ಪ್ರತಿಯೊಂದು ಬಾಣವೂ ಇನ್ನೊಂದನ್ನು

ನಿಪೇತುರ್ಧರಣೀತಲೇ । ತಥಾ ವಿಸೃಜತೋರ್ಬಾಣಾನ್ ರಾಮರಾವಣಯೋರ್ಮೃಧೇ ॥ ೨೪-೨೫ ॥ ಪ್ರಾಯುಧ್ಯತಾಮವಿಚ್ಛಿನ್ನಮಸ್ಯಂತೌ ಸವ್ಯದಕ್ಷಿಣಂ । ಚಕ್ರತುಶ್ಚ ಶರೌಘೈಸ್ತೌ ನಿರುಚ್ಛ್ವಾಸಮಿವಾಂಬರಂ ॥ ೨೬ ॥ ರಾವಣಸ್ಯ ಹಯಾನ್ ರಾಮೋ ಹಯಾನ್ ರಾಮಸ್ಯ ರಾವಣಃ । ಜಘ್ನತುಸ್ತೌ ತಥಾನ್ಯೋನ್ಯಂ ಕೃತಾನುಕೃತಕಾರಿಣೌ ॥ ೨೭ ॥ ಏವಂ ತೌ ತು ಸುಸಂಕ್ರುದ್ಧೌ ಚಕ್ರತುರ್ಯುದ್ಧಮದ್ಭುತಂ । ಮುಹೂರ್ತಮಭವದ್ಯುದ್ಧಂ ತುಮುಲಂ ರೋಮಹರ್ಷಣಂ ॥ ೨೮ ॥

ಕಾಳೆಗದಲ್ಲಿ, ಬಾಣಾನ್ - ಸರಳುಗಳನ್ನು, ವಿಸೃಜತೋಃ - ಬಿಡುತ್ತಿರುವ, ರಾಮರಾವಣಯೋಃ - ರಾಮರಾವಣರ, ಬಾಣಾಃ - ಬಾಣಗಳು, ಅನ್ಯೋನ್ಯಂ - ಒಂದನ್ನೊಂದು, ಅಭಿಸಂಹತ್ಯ - ಹೊಡೆದು, ಧರಣೀತಲೇ - ನೆಲದಲ್ಲಿ, ನಿಪೇತುಃ - ಬಿದ್ದವು. ॥೨೫॥ ಅವಿಚ್ಛಿನ್ನಂ - ವಿಚ್ಛಿತ್ತಿಯಿಲ್ಲದೆ, ಸವ್ಯದಕ್ಷಿಣಂ- ಎಡಬಲಭಾಗಗಳಲ್ಲಿ, ಅಸ್ಯಂತೌ - ಹೊಡೆಯುವವರಾಗಿ, ಪ್ರಾಯುಧ್ಯತಾಂ - ಯುದ್ಧ ಮಾಡಿದರು, ತೌ - ಅವರಿಬ್ಬರೂ, ಶರೌಘೈಃ - ಬಾಣತಂಡಗಳಿಂದ, ಅಂಬರಂ - ಅಂತರಿಕ್ಷವನ್ನು, ನಿರುಚ್ಛ್ವಾಸಂ- ಸ್ಥಳವಿಲ್ಲದಂತೆ, ಚಕ್ರತುಃ - ಮಾಡಿದರು. ॥೨೬॥ ರಾಮಃ - ಶ್ರೀರಾಮನು, ರಾವಣಸ್ಯ - ದಶಕಂಠನ, ಹಯಾನ್ - ಕುದುರೆಗಳನ್ನೂ, ರಾವಣಃ - ದಶಗ್ರೀವನು, ರಾಮಸ್ಯ - ದಾಶರಥಿಯ, ಹಯಾನ್ - ಕುದುರೆಗಳನ್ನೂ, ತಥಾ - ಹಾಗೆಯೇ, ಅನ್ಯೋನ್ಯಂ - ಪರಸ್ಪರವಾಗಿ, ಕೃತಾ....ಣೌ - ಮಾಡಿದ್ದಕ್ಕೆ ಪ್ರತಿಕ್ರಿಯೆ ಮಾಡುತ್ತ, ತೌ - ಅವರಿಬ್ಬರೂ, ಜಘ್ನತುಃ - ಹೊಡೆದಾಡಿದರು. ॥ ೨೭ ॥ ಏವಂ - ಈ ಪ್ರಕಾರವಾಗಿ, ಸುಸಂಕ್ರುದ್ಧೌ - ಕುಪಿತರಾದ, ತೌತು - ಆ ರಾಮರಾವಣರ, ಅದ್ಭುತಂ - ಆಶ್ಚರ್ಯಕರವಾದ, ಯುದ್ಧಂ - ಕಾಳೆಗವು, ಅಭವತ್ - ಆಯಿತು. ॥೨೮॥ ಸಮರೇ - ಕಾಳೆಗದಲ್ಲಿ, ನಿಶಿತೈಃ - ತೀಕ್ಷ್ಣವಾದ, ಶರೈಃ - ಬಾಣಗಳಿಂದ, ಮಹಾಬಲೌ - ಬಹು ಬಲವಂತರಾದ, ರಾವ....ಣೌ- ರಾವಣ ಶ್ರೀರಾಮರಿಬ್ಬರೂ, ಪ್ರಯುಧ್ಯಮಾನೌ - ಯುದ್ಧ ಮಾಡುತ್ತಿದ್ದರು, ತದಾ - ಆ ಕಾಲದಲ್ಲಿ,

---

ಹೊಡೆದು ರಣರಂಗದಲ್ಲಿ ಬೀಳುತ್ತಿದ್ದವು. ಹೀಗೆ ಆ ರಾಮರಾವಣರೀರ್ವರೂ ಪ್ರಯೋಗಿಸುತ್ತಿದ್ದ ಬಾಣಗಳೆಲ್ಲವೂ ಈ ರೀತಿ ಮಹಾ ಭಯಂಕರವಾಗಿ ತೋರುತ್ತಿದ್ದಿತು. ॥ ೨೧-೨೫ ॥ ಆ ಮಹಾ ವೀರರೀರ್ವರೂ ಎಷ್ಟುಮಾತ್ರವೂ ವಿರಾಮವಿಲ್ಲದೆ ಬಾಣಗಳನ್ನು ಪ್ರಯೋಗಿಸಿ ಯುದ್ಧಮಾಡುತ್ತ ಎರಡೂ ಕಡೆಗಳಲ್ಲಿಯೂ ಬಾಣಪ್ರಯೋಗ ಚಮತ್ಕಾರವನ್ನುಮೆರೆಯಿಸುತ್ತ, ಅಂತರಿಕ್ಷವನ್ನೇ ನಿರುಚ್ಛ್ವಾಸವಾಗುವಂತೆ ಬಾಣಗಳಿಂದ ತುಂಬಿಸಿಬಿಟ್ಟರು. ರಾವಣನ ರಥಾಶ್ವಗಳನ್ನು ಶ್ರೀರಾಮಮೂರ್ತಿಯೂ, ಶ್ರೀರಾಮಮೂರ್ತಿಯ ರಥಾಶ್ವಗಳನ್ನು ರಾವಣನೂ ಮಾಡಿದ್ದಕ್ಕೆ ಪ್ರತಿಮಾಡುವವರಾಗಿ ಹೊಡೆಯುತ್ತಿದ್ದರು. ಹೀಗೆ ಆ ವೀರರೀರ್ವರೂ ಮಹಾದ್ಭುತವಾದ ಯುದ್ಧವನ್ನು ಮಾಡಿದರು. ಆ ಯುದ್ದವು ಒಂದು ಮುಹೂರ್ತಕಾಲ ಮಹಾ ಸಂಕುಲವಾಗಿಯೂ, ಮಹಾ ರೋಮಾಂಚಕರವಾಗಿಯೂ ನಡೆಯಿತು. ಶ್ರೀರಾಮಮೂರ್ತಿಯೂ, ರಾಕ್ಷಸ ಪ್ರಭುವಾದ ರಾವಣಾಸುರನೂ ಹೀಗೆ ಸಂಕುಲ ಯುದ್ಧವನ್ನು ಮಾಡಿದರು.

ಪ್ರಯುಧ್ಯಮಾನೌ ಸಮರೇ ಮಹಾಬಲೌ
ಶಿತೈಃ ಶರೈ ರಾವಣಲಕ್ಷ್ಮಣಾಗ್ರಜೌ ।
ಧ್ವಜಾವಪಾತೇನ ಸ ರಾಕ್ಷಸಾಧಿಪೋ
ಭೃಶಂ ಪ್ರಚುಕ್ರೋಧ ತದಾ ರಘೂತ್ತಮೇ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ನವೋತ್ತರಶತತಮಸ್ಸರ್ಗಃ

ಸರಾಕ್ಷಸಾಧಿಪಃ - ಆ ದಶಕಂಠನು, ಧ್ವಜಾವಪಾತೇನ - ಧ್ವಜವು ಬಿದ್ದುದರಿಂದ, ರಘೂತ್ತಮೇ - ಶ್ರೀರಾಮನಲ್ಲಿ, ಭೃಶಂ - ವಿಶೇಷವಾಗಿ, ಪ್ರಚುಕ್ರೋಧ - ಕೋಪಿಸಿಕೊಂಡನು. ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ನವೋತ್ತರಶತತಮಸ್ಸರ್ಗಃ.

ರಾವಣಾಸುರನಾದರೋ ಶ್ರೀರಾಮನು ತನ್ನ ರಥದ ಧ್ವಜವನ್ನು ಹೊಡೆದು ಕೆಡವಿದುದರಿಂದ ಅವನಲ್ಲಿ ಬಹಳವಾಗಿ ಕೋಪಗೊಂಡನು. ॥ ೨೬–೨೯ ॥

ಇಂತಿದು ರಾಮರಾವಣರ ಸಂಕುಲ ಯುದ್ಧನಿರೂಪಣವೆಂಬ ನೂರೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ದಶೋತ್ತರಶತತಮಸ್ಸರ್ಗಃ

ತೌ ತದಾ ಯುಧ್ಯಮಾನೌ ತು ಸಮರೇ ರಾಮರಾವಣೌ । ದದೃಶುಸ್ಸರ್ವಭೂತಾನಿ ವಿಸ್ಮಿತೇನಾಂತರಾತ್ಮನಾ ॥ ೧ ॥ ಅರ್ದಯಂತೌ ತು ಸಮರೇ ತಯೋಸ್ತೌ ಸ್ಯಂದನೋತ್ತಮೌ । ಪರಸ್ಪರಮಭಿಕ್ರುದ್ಧೌ ಪರಸ್ಪರಮಭಿದ್ರುತೌ ॥ ೨ ॥ ಪರಸ್ಪರವಧೇ ಯುಕ್ತೌ ಘೋರರೂಪೌ ಬಭೂವತುಃ । ಮಂಡಲಾನಿ ಚ ವೀಥೀಶ್ಚ ಗತಪ್ರತ್ಯಾಗತಾನಿ ಚ । ದರ್ಶಯಂತೌ ಬಹುವಿಧಾಂ ಸೂತಸಾರಥ್ಯಜಾಂ ಗತಿಂ ॥೩॥ ಅರ್ದಯನ್ ರಾವಣಂ ರಾಮೋ ರಾಘವಂ ಚಾಪಿ ರಾವಣಃ । ಗತಿವೇಗಂ ಸಮಾಪನ್ನೌ ಪ್ರವರ್ತನ

ತದಾ - ಆ ಕಾಲದಲ್ಲಿ, ಯುಧ್ಯಮಾನೌ - ಕಾಳೆಗ ಮಾಡುತ್ತಿರುವ, ರಾಮರಾವಣೌ - ರಾಮ ರಾವಣರಿಬ್ಬರನ್ನೂ, ಸಮರೇ-ಕಾಳೆಗವಲ್ಲಿ, ಸರ್ವಭೂತಾನಿ-ಸಮಸ್ತ ಪ್ರಾಣಿಗಳೂ, ವಿಸ್ಮಿತೇನ-ಆಶ್ಚರ್ಯಯುಕ್ತವಾದ, ಅಂತರಾತ್ಮನಾ - ಮನಸ್ಸಿನಿಂದ, ದದೃಶುಃ - ಕಂಡವು. ॥ ೧ ॥ ಸಮರೇ - ಕಾಳೆಗದಲ್ಲಿ, ತಯೋಃ - ಅವರಿಬ್ಬರ, ತೌಸ್ಯಂದನೋತ್ತಮೌ - ಆ ಉತ್ತಮವಾದ ತೇರುಗಳೆರಡೂ, ಪರಸ್ಪರಂ - ಅನ್ಯೋನ್ಯವಾಗಿ, ಅರ್ದಯಂತೌ - ಬಾಧೆಗೊಳಿಸುತ್ತಿದ್ದವು, ಪರಸ್ಪರಂ - ಅನ್ಯೋನ್ಯವಾಗಿ, ಅಭಿಕ್ರುದ್ಧೌ - ಕುಪಿತವಾಗಿ, ಅಭಿದ್ರುತೌ - ಅಟ್ಟಿಬಂದವು, ಪರಸ್ಪರವಧೇ - ಅನ್ಯೋನ್ಯವಾಗಿ ಸಂಹರಿಸುವದರಲ್ಲಿ, ಯುಕ್ತೌ - ಆಸಕ್ತಿಯುಳ್ಳವುಗಳಾಗಿ, ಘೋರರೂಪೌ - ಭಯಂಕರವಾದ ಆಕಾರಗಳುಳ್ಳವುಗಳು, ಬಭೂವತುಃ - ಆದವು, ಮಂಡಲಾನಿ - ಮಂಡಲಾಕಾರ ಗಮನಗಳನ್ನು, ವೀಥೀಶ್ಚ - ಉದ್ದಕ್ಕೆ ಹೋಗುವುದನ್ನೂ, ಗತ....ಚ-ಮುಂದಕ್ಕೆಹೋಗಿ ಹಿಂದಕ್ಕೆ ಬರುವಿಕೆಗಳನ್ನು, ಸೂತ....ಜಾಂ-ಸಾರಥಿಗಳ ಸಾರಥ್ಯಕರ್ಮಗಳಿಂದ ಹುಟ್ಟಿದ, ಬಹುವಿಧಾಂ - ಅನೇಕವಾದ, ಗತಿಂ - ಗಮನ ವಿಶೇಷವನ್ನು, ದರ್ಶಯಂತೌ - ತೋರಿದವು. ॥೨-೩॥ ರಾಮಃ - ಶ್ರೀರಾಮನು, ರಾವಣಂ - ದಶಕಂಠನನ್ನು, ಅರ್ದಯನ್ - ಹೊಡೆಯುವವನಾಗಿ, ರಾವಣಃ - ದಶಗ್ರೀವನು, ರಾಘವಂಚಾಪಿ - ಶ್ರೀರಾಮನನ್ನೂ ಕೂಡ, ಅರ್ದಯನ್ - ಹೊಡೆಯುವವನಾಗಿಯೂ, ಪ್ರವ....ನೇ - ಮುಂದೆ ಬಂದು ಹಿಂದಕ್ಕೆ ಹೋಗುವಿಕೆಯೆಂಬ, ಗತಿವೇಗಂ - ಗಮನ ವೇಗವನ್ನು, ಸಮಾಪನ್ನೌ - ಹೊಂದಿದವರಾದರು. ॥೪॥ ಶರಜಾ

ಈ ಪ್ರಕಾರವಾಗಿ ಆ ರಾಮರಾವಣರೀರ್ವರೂ ರಣಾಂಗಣದಲ್ಲಿ ಕಾಳೆಗ ಮಾಡುತ್ತಿರಲು, ಸಮಸ್ತ ಭೂತಗಳೂ ಮಹದಾಶ್ಚರ್ಯಭರಿತಗಳಾದ ಮನಸ್ಸುಗಳುಳ್ಳವಾಗಿ ಎವೆಯಿಕ್ಕದೆ ನೋಡುತ್ತಿದ್ದವು. ಆ ವೀರರೀರ್ವರ ರಥಗಳೂ ಪರಸ್ಪರವಾಗಿ ಕೆರಳಿ ಒಂದನ್ನೊಂದು ಅಟ್ಟಿಹೋಗುತ್ತಲೂ, ಒಂದನ್ನೊಂದು ಕೆಡಹುವುದರಲ್ಲಿ ಆಸಕ್ತಗಳಾಗಿಯೂ, ಮಹಾ ಘೋರರೂಪಗಳಾಗಿಯೂ ಕಾಣುತ್ತಿದ್ದುವಲ್ಲದೆ ಮಂಡಲವೀಥಿಗಳೇ ಮೊದಲಾದ ವಿಚಿತ್ರಗತಿಗಳನ್ನೂ, ಮುಂದು ಹೋಗುವುದು, ಹಿಂದೆ ಬರುವುವೇ ಮೊದಲಾದ ಚಮತ್ಕಾರಗಳನ್ನೂ ತೋರುತ್ತ ಸೂತರ ಸಾರಥ್ಯ ಚಮತ್ಕಾರಗಳನ್ನು ಪದರ್ಶಿಸಿ ಶೋಭಿಸುತ್ತಿದ್ದುವು. ಶ್ರೀರಾಮನು ರಾವಣನನ್ನೂ, ರಾವಣನು ಶ್ರೀರಾಮನನ್ನೂ ಮರ್ದಿಸುತ್ತ ರಥಸಮೇತವಾಗಿ ಹಿಂದಕ್ಕೆ ಬರುವುದರಲ್ಲಿಯೂ, ಮುಂದಕ್ಕೆ ಹೋಗುವುದರಲ್ಲಿಯೂ ಗಮನವೇಗವನ್ನವ

ನಿವರ್ತನೇ ॥ ೪ ॥ ಕ್ಷಿಪತೋಃ ಶರಜಾಲಾನಿ ತಯೋಸ್ತೌ ಸ್ಯಂದನೋತ್ತಮೌ । ಚೇರತುಸ್ಸಂಯುಗಮಹೀಂ ಸಾಸಾರೌ ಜಲದೌ ಯಥಾ ॥ ೫ ॥ ದರ್ಶಯಿತ್ವಾ ತಥಾ ತೌ ತು ಗತಿಂ ಬಹುವಿಧಾಂ ರಣೇ । ಪರಸ್ಪರಸ್ಯಾಭಿಮುಖೌ ಪುನರೇವಾಽವತಸ್ಥತುಃ ॥ ೬ ॥ ಧುರಂ ಧುರೇಣ ರಥಯೋರ್ವಕ್ತ್ರಂ ವಕ್ತ್ರೇಣ ವಾಜಿನಾಂ । ಪತಾಕಾಶ್ಚ ಪತಾಕಾಭಿಸ್ಸಮೇಯುಸ್ಸ್ಥಿತಯೋಸ್ತದಾ ॥ ೭ ॥ ರಾವಣಸ್ಯ ತತೋ ರಾಮೋ ಧನುರ್ಮುಕ್ತೈಃ ಶಿತೈಶ್ಶರೈಃ । ಚತುರ್ಭಿಶ್ಚತುರೋ ದೀಪ್ತೈರ್ಹಯಾನ್ ಪ್ರತ್ಯಪಸರ್ಪಯತ್ ॥ ೮ ॥ ಸ ಕ್ರೋಧವಶಮಾಪನ್ನೋ ಹಯಾನಾಮಪಸರ್ಪಣೇ । ಮುಮೋಚ ನಿಶಿತಾನ್ ಬಾಣಾನ್ ರಾಘವಾಯ ನಿಶಾಚರಃ ॥ ೯ ॥ ಸೋಽತಿವಿದ್ಧೋ

ಲಾನಿ - ಸರಳು ತಂಡಗಳನ್ನು, ಕ್ಷಿಪತೋಃ - ಎಸೆಯುತ್ತಿರುವ, ತಯೋಃ - ಅವರ, ತೌ ಸ್ಯಂದನೋತ್ತಮೌ - ಆ ಉತ್ತಮವಾದ ತೇರುಗಳು, ಸಾಸಾರೌ - ಉದಕಧಾರೆಗಳೊಡಗೂಡಿದ, ಜಲದೌ ಯಥಾ - ಮೇಘಗಳಂತೆ, ಸಂಯುಗಮಹೀಂ - ರಣಭೂಮಿಯಲ್ಲಿ, ಚೇರತುಃ - ಸಂಚರಿಸಿದವು. ॥ ॥ ತಥಾ - ಆ ಪರಿಯಾಗಿ, ಬಹುವಿಧಾಂ - ಅನೇಕ ವಿಧವಾದ, ಗತಿಂ - ಗಮನವನ್ನು, ರಣೇ - ಕಾಳಗದಲ್ಲಿ, ದರ್ಶಯಿತ್ವಾ - ತೋರಿಸಿ, ಪುನಃ - ಮತ್ತೂ, ಪರಸ್ಪರಸ್ಯ - ಅನ್ಯೋನ್ಯವಾಗಿ, ಅಭಿಮುಖಾವೇವ - ಎದುರಾಗಿರುವಂತೆಯೇ, ಅಭಿತಸ್ಥತುಃ - ನಿಂತವು. ॥೬॥ ತದಾ - ಆಗ, ಸ್ಥಿತಯೋಃ - ನಿಂತ, ರಥಯೋಃ - ತೇರುಗಳ, ಧುರಂ - ಮೂಕೀಮರವು, ಧುರೇಣ - ಮೂಕೀಮರದಿಂದಲೂ, ವಾಜಿನಾಂ - ಕುದುರೆಗಳ, ವಕ್ತ್ರೇಣ - ಮುಖಗಳಿಂದ, ವಕ್ತ್ರಂ - ಮುಖಗಳೂ ಪತಾಕಾಭಿಃ - ಧ್ವಜಗಳಿಂದ, ಪತಾಕಾಶ್ಚ - ಧ್ವಜಗಳೂ, ಸಮೇಯುಃ - ಸೇರಿದವು. ॥ ೭ ॥ ತತಃ - ಬಳಿಕ, ರಾಮಃ - ಶ್ರೀರಾಮನು, ಧನುರ್ಮುಕ್ತೈಃ - ಬಿಲ್ಲಿನಿಂದ ಬಿಡಲ್ಪಟ್ಟ, ಚತುರ್ಭಿಃ - ನಾಲ್ಕಾದ, ಶಿತೈಃ - ಬಾಣಗಳಿಂದ, ರಾವಣಸ್ಯ - ರಾವಣನ, ಚತುರಃ - ನಾಲ್ಕಾದ, ಹಯಾನ್ - ಕುದುರೆಗಳನ್ನು, ಪ್ರತ್ಯ....ತ್- ಹಿಂತಿರುಗಿಸಿದನು. ॥೮॥ ಸನಿಶಾಚರಃ - ಆ ದಶಕಂಠನು, ಹಯಾನಾಂ - ಕುದುರೆಗಳ, ಅಪಸರ್ಪಣೇ - ಹಿಂತಿರುಗಿದುವಾಗಲೂ, ಕ್ರೋಧವಶಂ - ಕೋಪಾಧೀನವನ್ನು, ಆಪನ್ನಃ - ಹೊಂದಿ, ರಾಘವಾಯ - ಶ್ರೀರಾಮನಿಗೋಸ್ಕರ, ನಿಶಿತಾನ್ - ತೀಕ್ಷ್ಣವಾದ, ಬಾಣಾನ್ - ಸರಳುಗಳನ್ನು, ಮುಮೋಚ - ಬಿಟ್ಟನು. ॥ ೯ ॥ ಸರಾಘವಃ - ಆ ಶ್ರೀರಾಮನು, ಬಲವತಾ - ಬಲಾಢ್ಯನಾದ, ದಶಗ್ರೀವೇಣ - ರಾವಣನಿಂದ,

---

ಲಂಬಿಸಿದವರಾಗಿ ಮಹತ್ತರವಾಗಿ ಯುದ್ಧವನ್ನು ಮಾಡಿದರು. ಆ ವೀರರೀರ್ವರ ರಥಶ್ರೇಷ್ಠಗಳೆರಡೂ ಮಹತ್ತರವಾದ ಬಾಣವರ್ಷಗಳನ್ನು ಸುರಿಸುತ್ತ, ನೀರು ತುಂಬಿದ ಮೋಡಗಳಂತೆ ರಣಾಂಗಣದಲ್ಲಿ ಸಂಚರಿಸುತ್ತಿದ್ದುವು. ॥ ೧–೫ ॥ ಒಬ್ಬರ ರಥದ ಮೂಕೀ ಮರದಿಂದ ಮತ್ತೊಬ್ಬರ ಮೂಕೀ ಮರದಿಂದಲೂ, ರಥಾಶ್ವಗಳ ಮುಖಗಳಿಂದ ಶತ್ರು ರಥಾಶ್ವಗಳ ಮುಖಗಳನ್ನೂ ಹೊಡೆಯುತ್ತ ಹೋರಾಡುತ್ತಿದ್ದರು. ಆ ಸಮಯದಲ್ಲಿ ಒಂದು ರಥಧ್ವಜವು ಮತ್ತೊಂದು ರಥಧ್ವಜದೊಡನೆ ಸೇರಿತು. ಆಗ ಶ್ರೀರಾಮಮೂರ್ತಿಯು ಅಪರಿಮಿತವಾದ ಕೋಪವನ್ನು ತಾಳಿದವನಾಗಿ ಮಹಾ ತೀಕ್ಷ್ಣವಾದ ನಾಲ್ಕು ಬಾಣಗಳಿಂದ ರಾವಣನ ರಥಕ್ಕೆ ಹೂಡಿದ್ದ ನಾಲ್ಕು ಕುದುರೆಗಳನ್ನು ಹೊಡೆದನು. ಆ ಪಟುಗಳ ನೋವನ್ನು ತಾಳಲಾರದೆ ಹಿಂಜರಿದು ಹೊರಟವು. ರಾವಣನಾದರೋ ತನ್ನ ಕುದುರೆಗಳು ಹಿಮ್ಮುಖವಾದುದನ್ನು ಕಂಡು ರೋಷೋದ್ದೀಪಿತನಾಗಿ ಶ್ರೀರಾಮಮೂರ್ತಿಯನ್ನುದ್ದೇಶಿಸಿ ತೀಕ್ಷ್ಣವಾದ ಬಾಣಗಳನ್ನು

ಬಲವತಾ ದಶಗ್ರೀವೇಣ ರಾಘವಃ । ಜಗಾಮ ನ ವಿಕಾರಂ ಚ ನ ಚಾಪಿ ವ್ಯಥಿತೋಽಭವತ್ ॥೧೦॥ ಚಿಕ್ಷೇಪ ಚ ಪುನರ್ಬಾಣಾನ್ ವಜ್ರಪಾತಸಮಸ್ವನಾನ್ । ಸಾರಥಿಂ ವಜ್ರಹಸ್ತಸ್ಯ ಸಮುದ್ದಿಶ್ಯ ನಿಶಾಚರಃ ॥೧೧॥ ಮಾತಲೇಸ್ತು ಮಹಾವೇಗಾಃ ಶರೀರೇ ಪತಿತಾಃ ಶರಾಃ । ನಸೂಕ್ಷ್ಮಮಪಿ ಸಂಮೋಹಂ ವ್ಯಥಾಂ ವಾ ಪ್ರದದುರ್ಯುಧಿ ॥೧೨॥ ತಯಾ ಧರ್ಷಣಯಾ ಕ್ರುದ್ಧೋ ಮಾತಲೇರ್ನ ತಥಾತ್ಮನಃ । ಚಕಾರ ಶರಜಾಲೇನ ರಾಘವೋ ವಿಮುಖಂ ರಿಪುಂ ॥೧೩॥ ವಿಂಶತಂ ತ್ರಿಂಶತಿಂ ಷಷ್ಟಿಂ ಶತಶೋಽಥ ಸಹಸ್ರಶಃ । ಮುಮೋಚ ರಾಘವೋ ವೀರಸ್ಸಾಯಕಾನ್ ಸ್ಯಂದನೇ ರಿಪೋಃ ॥೧೪॥

ಅತಿವಿದ್ಧೋಽಪಿ - ವಿಶೇಷವಾಗಿ ಹೊಡೆಯಲ್ಪಟ್ಟವನಾದರೂ, ವಿಕಾರಂ - ವಿಕಾರವನ್ನು, ನಜಗಾಮ - ಹೊಂದಲಿಲ್ಲವು, ವ್ಯಥಿತಶ್ಚಾಪಿ-ವ್ಯಸನಪಟ್ಟವನೂ ಕೂಡ, ನಾಭವತ್-ಆಗಲಿಲ್ಲ ॥೧೦॥ ನಿಶಾಚರಃ-ರಾವಣನು, ಪುನಃ - ಮತ್ತು, ವಜ್ರಹಸ್ತಸ್ಯ - ಇಂದ್ರನ, ಸಾರಥಿಂ - ಸಾರಥಿಯನ್ನು, ಸಮುದ್ದಿಶ್ಯ-ಲಕ್ಷೀಕರಿಸಿ, ವಜ್ರ....ನಾನ್ - ವಜ್ರಾಯುಧ ಪ್ರಹಾರಕ್ಕೆ ಸಮಾನವಾದ ಧ್ವನಿಯುಳ್ಳ, ಬಾಣಾನ್ - ಸರಳುಗಳನ್ನು. ಚಿಕ್ಷೇಪ - ಎಸೆದನು. ॥೧೧॥ ಮಹಾವೇಗಾಃ - ಬಹು ವೇಗವುಳ್ಳ. ಶರಾಃ - ಬಾಣಗಳು, ಯುಧಿ - ಕಾಳಗದಲ್ಲಿ, ಮಾತಲೇಃ - ಮಾತಲಿಯ, ಶರೀರೇ - ದೇಹದಲ್ಲಿ, ಪತಿತಾಃ - ಬಿದ್ದವುಗಳಾಗಿ, ಸೂಕ್ಷ್ಮಮಪಿ - ಸ್ವಲ್ಪವಾದರೂ, ಸಂಮೋಹಂ - ಅಜ್ಞಾನವನ್ನು, ವ್ಯಥಾಂವಾ - ದುಃಖವನ್ನಾದರೂ, ನಪ್ರದದುಃ - ಕೊಡಲಿಲ್ಲ. ॥೧೨॥ ರಾಮಃ - ಶ್ರೀರಾಮನು, ಮಾತಲೇಃ - ಮಾತಲಿಯ, ತಯಾ ಧರ್ಷಣಯಾ - ಆ ತಿರಸ್ಕಾರದಿಂದ, ಯಥಾ - ಹೇಗೆ, ಕ್ರುದ್ಧಃ - ಕುಪಿತನಾದನೋ, ತಥಾ - ಹಾಗೆ, ಆತ್ಮನಃ - ತನ್ನ, ಧರ್ಷಣಯಾ - ತಿರಸ್ಕಾರದಿಂದ, ನಕ್ರುದ್ಧಃ - ಕುಪಿತನಾಗಲಿಲ್ಲ, ಏವಂ - ಈ ಪರಿಯಾಗಿ, ರಾಘವಃ - ಶ್ರೀರಾಮನು, ಶರಜಾಲೇನ - ಸರಳುಗಳ ತಂಡದಿಂದ, ರಿಪುಂ - ಶತ್ರುವನ್ನು, ವಿಮುಖಂ - ಪರಾಙ್ಮುಖನನ್ನಾಗಿ, ಚಕಾರ - ಮಾಡಿದನು. ॥೧೩॥ ವೀರಃ - ಶೂರನಾದ, ರಾಘವಃ - ಶ್ರೀರಾಮನು, ಅಥ - ಬಳಿಕ, ವಿಂಶತಂ - ಇಪ್ಪತ್ತು ಸಂಖ್ಯೆಯುಳ್ಳ, ತ್ರಿಂಶತಿಂ - ಮುವ್ವತ್ತಾದ, ಷಷ್ಟಿಂ-ಅರುವತ್ತುಸಂಖ್ಯೆಯುಳ್ಳ, ಶತಶಃ-ನೂರಾರಾದ, ಸಹಸ್ರಶಃ-ಸಾವಿರಾರಾದ, ಸಾಯಕಾನ್-ಸರಳುಗಳನ್ನು, ರಿಪೋಃ - ಶತ್ರುವಿನ, ಸ್ಯಂದನೇ - ರಥದಲ್ಲಿ, ಮುಮೋಚ - ಬಿಟ್ಟನು. ॥೧೪॥ ತತಃ -

---

ಪ್ರಯೋಗಿಸಿದನು. ಮಹಾ ಪರಾಕ್ರಮಿಯಾದ ಆ ರಾವಣನು ಈ ರೀತಿ ತನ್ನನ್ನು ಘಾತಿಸಿದರೂ ಶ್ರೀರಾಮಮೂರ್ತಿಯು ಯಾವೊಂದು ವಿಕಾರವನ್ನಾಗಲಿ, ವ್ಯಸನವನ್ನಾಗಲಿ ಹೊಂದಲಿಲ್ಲವು. ॥೬-೧೦॥ ತರುವಾಯ ಆ ರಾಕ್ಷಸನು ವಜ್ರಧರನಾದ ದೇವೇಂದ್ರನ ಸಾರಥಿಯಾದ ಮಾತಲಿಯನ್ನು ವಜ್ರಾಯುಧಕ್ಕೆ ಸಮಾನವಾದ ಬಾಣಗಳನ್ನು ಪ್ರಯೋಗಿಸಿ ಘಾತಿಸಿದನು. ಮಹಾ ವೇಗವತ್ತುಗಳಾದ ಆ ಬಾಣಗಳು ಆತನ ಶರೀರದಲ್ಲಿ ಬಿದ್ದರೂ ಅವುಗಳಿಂದಾತನಿಗೆ ಸ್ವಲ್ಪವಾದರೂ ಬಾಧೆಯನ್ನುಂಟುಮಾಡಲಿಲ್ಲವು. ಅದರಿಂದ ಆತನಿಗೆ ಭ್ರಮೆಯಾಗಲಿ, ವ್ಯಥೆಯಾಗಲಿ ಉಂಟಾಗಲಿಲ್ಲವು. ಮಾತಲಿಯನ್ನು ಘಾತಿಸಿದುದರಿಂದ ಶ್ರೀರಾಮಮೂರ್ತಿಯು ರಾವಣನ ವಿಷಯದಲ್ಲಿ ಮತ್ತೂ ಕೋಪಗೊಂಡು ಬಾಣಗಳ ತಂಡಗಳನ್ನೇ ಸುರಿಸಿ ಅವನನ್ನು ವಿಮುಖನನ್ನಾಗಿಸಿದನು. ಆವೇಳೆ ಆ ರಘುನಂದನನು ಧನುಸ್ಸಂಧಾನ ಮಾಡಿ ಒಂದೇ ತಡವೆಗೆ ಇಪ್ಪತ್ತು, ಮುವತ್ತು, ಅರುವತ್ತು, ನೂರಾರು, ಸಾವಿರಾರು ಬಾಣಗಳನ್ನು ಆ ರಾವಣನ ರಥದಲ್ಲಿ ತುಂಬಿಸಿಬಿಟ್ಟನು. ರಥಾರೂಢನಾದ ರಾವಣಾ

ರಾವಣೋಽಪಿ ತತಃ ಕ್ರುದ್ಧೋ ರಥಸ್ಥೋ ರಾಕ್ಷಸೇಶ್ವರಃ । ಗದಾಮುಸಲವರ್ಷೇಣ ರಾಮಂ ಪ್ರತ್ಯರ್ದಯದ್ರಣೇ । ತತ್ಪ್ರವೃದ್ಧಂ ಮಹದ್ಯುದ್ಧಂ ತುಮುಲಂ ರೋಮಹರ್ಷಣಂ ॥ ೧೫-೧೬ ॥ ಗದಾನಾಂ ಮುಸಲಾನಾಂಚ ಪರಿಘಾಣಾಂಚ ನಿಸ್ವನೈಃ । ಶರಾಣಾಂ ಪುಂಖಪಾತೈಶ್ಚ ಕ್ಷುಭಿತಾಸ್ಸಪ್ತಸಾಗರಾಃ ॥ ೧೭ ॥ ಕ್ಷುಬ್ಧಾನಾಂ ಸಾಗರಾಣಾಂಚ ಪಾತಾಳತಲವಾಸಿನಃ । ವ್ಯಥಿತಾಃ ಪನ್ನಗಾಸ್ಸರ್ವೇ ದಾನವಾಶ್ಚ ಸಹಸ್ರಶಃ ॥ ೧೮ ॥ ಚಕಂಪೇ ಮೇದಿನೀ ಕೃತ್ಸ್ನಾ ಸಶೈಲವನಕಾನನಾ । ಭಾಸ್ಕರೋ ನಿಷ್ಪ್ರಭಶ್ಚಾಸೀನ್ನವವೌ ಚಾಪಿ ಮಾರುತಃ ॥ ೧೯ ॥ ತತೋ ದೇವಾಸ್ಸಗಂಧರ್ವಾಸ್ಸಿದ್ಧಾಶ್ಚ ಪರಮರ್ಷಯಃ । ಚಿಂತಾಮಾಪೇದಿರೇ ಸರ್ವೇ ಸಕಿನ್ನರಮಹೋರಗಾಃ ॥ ೨೦ ॥

ಬಳಿಕ, ರಾಕ್ಷಸೇಶ್ವರಃ - ರಾಕ್ಷಸಾಧಿಪತಿಯಾದ, ರಾವಣೋಽಪಿ - ರಾವಣನೂ, ಕ್ರುದ್ಧಃ - ಕುಪಿತನಾಗಿ, ರಥಸ್ಥಃ - ತೇರಿನಲ್ಲಿಯೇ ನಿಂತು, ರಣೇ - ಕಾಳೆಗದಲ್ಲಿ, ರಾಮಂ - ಶ್ರೀರಾಮನನ್ನು, ಗದಾ....ಣ - ಗದಾಯುಧಗಳ ಮತ್ತು ಒನಕೆಗಳ ಮಳೆಯಿಂದ, ಪ್ರತ್ಯರ್ದಯತ್ - ಪ್ರತಿಘಟಿಸಿ ಹೊಡೆದನು. ||೧೫|| **ತುಮುಲಂ** - ಸಂಕುಲವಾದ, ರೋಮಹರ್ಷಣಂ - ರೋಮಾಂಚಕರವಾದ, ಮಹತ್ - ಬಹಳವಾದ, **ತದ್ಯುದ್ಧಂ**-ಆ ಕಾಳೆಗವು, ಪ್ರವೃತ್ತಂ ಮೊದಲಾಯಿತು. ||೧೬|| ಗದಾನಾಂ-ಗದೆಗಳ, ಮುಸಲಾನಾಂ-ಒನಕೆಗಳ, ನಿಸ್ವನೈಃ-ಧ್ವನಿಗಳಿಂದಲೂ, ಶರಾಣಾಂ-ಸರಳುಗಳ, ಪುಂಖಪಾತೈಶ್ಚ ಕೊಂಕಿಗಳ ಬೀಳುವಿಕೆಯಿಂದಲೂ, ಸಪ್ತಸಾಗರಾಃ - ಏಳು ಸಮುದ್ರಗಳೂ, ಕ್ಷುಭಿತಾಃ - ಕ್ಷೋಭಿಸಲ್ಪಟ್ಟವು. || ೧೭ || ಸಾಗರಾಣಾಂ - ಸಮುದ್ರಗಳು, ಕ್ಷುಬ್ಧಾನಾಂ - ಕದಡಿಹೋಗಲು, ಪಾತಾ....ನಃ - ಪಾತಾಳಲೋಕದಲ್ಲಿ ವಾಸಮಾಡುವ, ಸರ್ವೇ - ಸಮಸ್ತವಾದ, ಪನ್ನಗಾಃ - ಹಾವುಗಳು, ಸಹಸ್ರಶಃ - ಸಾವಿರಾರು ಸಂಖ್ಯೆಯುಳ್ಳ, ದಾನವಾಶ್ಚ - ದೈತ್ಯರೂ, ವ್ಯಥಿತಾಃ - ವ್ಯಸನಗೊಳಿಸಲ್ಪಟ್ಟರು. ||೧೮|| ಸಶೈ....ನಾ - ಪರ್ವತಗಳಿಂದಲೂ, ತೋಪುಗಳಿಂದಲೂ, ಕಾಡುಗಳಿಂದಲೂ ಕೂಡಿದ, ಕೃತ್ಸ್ನಾ - ಸಮಸ್ತವಾದ, ಮೇದಿನೀ - ಭೂಮಿಯು, ಚಕಂಪೇ - ನಡುಗಿತು, ಭಾಸ್ಕರಶ್ಚಾಪಿ - ಭಾಸ್ಕರನೂ, ನಿಷ್ಪ್ರಭಶ್ಚ - ಕಾಂತಿಹೀನನು, **ಆಸೀತ್** - ಆದನು, ಮಾರುತಶ್ಚಾಪಿ - ಗಾಳಿಯೂ ಕೂಡ, ನವವೌ - ಬೀಸಲಿಲ್ಲವು. || ೧೯ || ತತಃ - **ಬಳಿಕ**, ಸಗಂಧರ್ವಾಃ - ಗಂಧರ್ವರೊಡಗೂಡಿದ, ದೇವಾಃ - ದೇವತೆಗಳು, ಸಿದ್ಧಾಃ - ಸಿದ್ಧರೂ, **ಪರಮರ್ಷಯಶ್ಚ** - ಮಹಾ ಮುನಿಗಳೂ, ಸಕಿ....ಗಾಃ - ಕಿನ್ನರರಿಂದಲೂ ಮಹಾ ಸರ್ಪಗಳಿಂದಲೂ

ಸುರನಾದರೋ ಶ್ರೀರಾಮಚಂದ್ರನ ಈ ರಣವ್ಯಾಪಾರದಿಂದ ಕುಪಿತನಾಗಿ ಗದಾಮುಸಲಗಳ ಬಿರುಮಳೆಯಿಂದ ಅವನನ್ನು ಮರ್ದಿಸತೊಡಗಿದನು. ॥ ೧೧–೧೫ ॥ ಆ ಸಮಯದಲ್ಲಿ ರಾಮರಾವಣರ ಯುದ್ಧವು ಮಹಾ ಭಯಂಕರವಾಯಿತು. ಎಲ್ಲರಿಗೂ ಮೈನವಿರೆದ್ದಿತು. ಗದೆಗಳ, ಮುಸಲಗಳ, ಲಾಳುಂಡಿಗೆಗಳ ಶಬ್ದಗಳಿಂದಲೂ, ಬಾಣಗಳ ಮತ್ತು ಪುಂಖಗಳ ಬೀಳುವಿಕೆಯಿಂದಲೂ ಸಪ್ತಸಮುದ್ರಗಳೂ ಅಲ್ಲಕಲ್ಲೋಲವಾಗಿ ಹೋದುವು. ಸಪ್ತಸಾಗರಗಳೂ ಅಲ್ಲಕಲ್ಲೋಲವಾದೊಡನೆಯೇ ಪಾತಾಳತಲವಾಸಿಗಳಾದ ಪನ್ನಗರೂ, ದಾನವರೂ ಸಾವಿರಾರುಗಳಾಗಿ ವ್ಯಥೆಪಟ್ಟು ಹೋದರು. ಗಿರಿ, ಕಾನನ ಪರಿವೃತೆಯಾದ ಮೇದಿನಿಯೇ ನಡುನಡುಗಿ ಹೋಯಿತು. ಭಗವಾನ್ ಸೂರ್ಯದೇವನೇ ಕಾಂತಿಗುಂದಿ ಹೋದನು. ಮಾರುತನು ಬೀಸದೆಯೇ ಹೋದನು. ಆ ಸಮಯದಲ್ಲಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹನೀಯರಾದ ಮಹರ್ಷಿಗಳೂ, ಕಿನ್ನರರೂ, ಮಹೋರಗರೂ ಕೇವಲ ಚಿಂತಾಧೀನರಾಗಿ

“ಸ್ವಸ್ತಿ ಗೋಬ್ರಾಹ್ಮಣೇಭ್ಯಸ್ತು ಲೋಕಾಸ್ತಿಷ್ಠಂತು ಶಾಶ್ವತಾಃ । ಜಯತಾಂ ರಾಘವ
ಸ್ಸಂಖ್ಯೇ ರಾವಣಂ ರಾಕ್ಷಸೇಶ್ವರಂ” ॥ ೨೦ ॥ ಏವಂ ಜಪಂತೋಽಪಶ್ಯಂಸ್ತೇ ದೇವಾ
ಸ್ಸರ್ಷಿಗಣಾಸ್ತಥಾ । ರಾಮರಾವಣಯೋರ್ಯುದ್ಧಂ ಸುಘೋರಂ ರೋಮಹರ್ಷಣಂ
॥ ೨೨ ॥ ಗಂಧರ್ವಾಪ್ಸರಸಾಂ ಸಂಘಾ ದೃಷ್ಟ್ವಾ ಯುದ್ಧಮನೂಪಮಂ । “ಗಗನಂ
ಗಗನಾಕಾರಂ ಸಾಗರಸ್ಸಾಗರೋಪಮಃ ॥ ೨೩ ॥ ರಾಮರಾವಣಯೋರ್ಯುದ್ಧಂ
ರಾಮರಾವಣಯೋರಿವ” । ಏವಂ ಬ್ರುವಂತೋ ದದೃಶುಸ್ತದ್ಯುದ್ಧಂ ರಾಮರಾವಣಂ
॥೨೪॥ ತತಃ ಕ್ರುದ್ಧೋ ಮಹಾಬಾಹೂ ರಘೂಣಾಂ ಕೀರ್ತಿವರ್ಧನಃ । ಸಂಧಾಯ

ಒಡಗೂಡಿದ, ಸರ್ವೇ - ಸಮಸ್ತರೂ, ಚಿಂತಾಂ - ಆಲೋಚನೆಯನ್ನು, ಅಪೇದಿರೇ - ಹೊಂದಿದರು. ॥೨೦॥ ಗೋಬ್ರಾಹ್ಮಣೇಭ್ಯಸ್ತು - ಗೋವುಗಳಿಂದಲೂ ಬ್ರಾಹ್ಮಣರಿಗೂ, ಸ್ವಸ್ತಿ - ಶುಭವು, ಅಸ್ತು - ಆಗಲಿ, ಲೋಕಾಃ - ಲೋಕಗಳು, ಶಾಶ್ವತಾಃ - ಸ್ಥಿರವಾಗಿ, ತಿಷ್ಠಂತು - ನಿಲ್ಲಲಿ, ಸಂಖ್ಯೇ - ಕಾಳೆಗ ದಲ್ಲಿ, ರಾಘವಃ - ಶ್ರೀರಾಮನು, ರಾಕ್ಷಸೇಶ್ವರಂ - ದಶಕಂಠನನ್ನು, ಜಯತಾಂ - ಜಯಿಸಲಿ. ॥೨೧॥ ಏವಂ - ಈ ಪರಿಯಾಗಿ, ಜಪಂತಃ - ಜಪಮಾಡುವವರಾಗಿ, ಸರ್ಷಿಗಣಾಃ - ಋಷಿಗಣಗಳಿಂದೊಡ ಗೂಡಿದ, ದೇವಾಃ - ದೇವತೆಗಳು, ತದಾ - ಆ ಕಾಲದಲ್ಲಿ, ರಾಮರಾವಣಯೋಃ - ರಾಮರಾವಣರ ಸಂಬಂಧವಾದ, ರೋಮಹರ್ಷಣಂ - ರೋಮಾಂಚನವನ್ನುಂಟುಮಾಡುವ, ಸುಘೋರಂ - ಬಹು ಭಯಂಕರವಾದ, ಯುದ್ಧಂ - ಕಾಳೆಗವನ್ನು, ಅಪಶ್ಯನ್ - ನೋಡುತ್ತಿದ್ದರು. ॥೨೨॥ ಗಂಧ....ಸಾಂ - ಗಂಧರ್ವರ ಅಪ್ಸರಸ್ತ್ರೀಯರ, ಸಂಘಾಃ - ಸಮೂಹಗಳ, ಅನೂಪಮಂ - ಅಸದೃಶವಾದ, ಯುದ್ಧಂ- ಕಾಳೆಗವನ್ನು, ದೃಷ್ಟ್ವಾ - ಕಂಡು, ಗಗನಂ - ಅಂತರಿಕ್ಷವು, ಗಗನಾಕಾರಂ - ಅಂತರಿಕ್ಷದ ಆಕಾರ ದಂತೆ ಆಕಾರವುಳ್ಳದು, ಸಾಗರಃ - ಕಡಲು, ಸಾಗರೋಪಮಃ - ಕಡಲಿಗೆ ಸಮಾನವಾದದ್ದು, ರಾಮರಾವಣಯೋಃ ರಾಮರಾವಣರ, ಯುದ್ಧಂ-ಕಾಳೆಗವು, ರಾಮರಾವಣಯೋಃ-ರಾಮರಾವಣರ, ಯುದ್ಧಮಿವ - ಕಾಳೆಗದಂತೆ, ಅಸ್ತಿ - ಇರುವುದು, ಏವಂ - ಈ ಪ್ರಕಾರವಾಗಿ, ಬ್ರುವಂತಃ - ಹೇಳು ವವರಾಗಿ, ರಾಮರಾವಣಂ-ರಾಮರಾವಣರ ಸಂಬಂಧವಾದ, ತದ್ಯುದ್ಧಂ-ಆ ಕಾಳೆಗವನ್ನು, ದದೃಶುಃ- ಕಂಡರು. ॥ ೨೩-೨೪ ॥ ತತಃ ಬಳಿಕ, ರಘೂಣಾಂ-ರಘುವಂಶೋತ್ಪನ್ನ ರಾಜರಿಗೆ, ಕೀರ್ತಿವರ್ಧನಃ- ಯಶಸ್ಸನ್ನು ಬೆಳಸುವ, ಮಹಾಬಾಹುಃ - ಮಹಾ ಭುಜಬಲಪರಾಕ್ರಮಿಯಾದ, ರಾಮಃ ಶ್ರೀರಾಮನು, ಕ್ರುದ್ಧಃ - ಕುಪಿತನಾಗಿ, ಆಶೀ....ಮಂ - ಸರ್ಪಸದೃಶವಾದ, ಕ್ಷುರಂ - ಕ್ಷುರಪ್ರಾಯವಾದ ಸರ

ಹೋದರು. ॥೧೯-೨೦॥ ದೇವರ್ಷಿಗಳೆಲ್ಲರೂ, “ಗೋವುಗಳಿಗೂ, ಬ್ರಾಹ್ಮಣರಿಗೂ ಮಂಗಳ ವಾಗಲಿ! ಸಮಸ್ತ ಲೋಕಗಳೂ ಕ್ಷೇಮವಾಗಿಯೂ, ಶಾಶ್ವತವಾಗಿಯೂ ಬಾಳಲಿ! ಶ್ರೀರಾಮಚಂದ್ರನು ರಣಾಂಗಣದಲ್ಲಿ ರಾವಣಾಸುರನನ್ನು ಜಯಿಸಲಿ” ಎಂದು ಜಪಿಸುತ್ತ, ಆ ರಾಮರಾವಣರ ಮಹತ್ತರವೂ, ಮಹಾ ಘೋರವೂ, ರೋಮಾಂಚಕರವೂ ಆದ ಯುದ್ಧ ವನ್ನು ನೋಡುತ್ತಿದ್ದರು. ಗಂಧರ್ವರೂ, ಅಪ್ಸರೋವೃಂದಗಳೂ ಆ ಭಯಂಕರ ಯುದ್ಧ ವನ್ನು ನೋಡಿ, “ಗಗನಕ್ಕೆ ಗಗನವೇ ಆಕಾರವು. ಕಡಲಿಗೆ ಕಡಲೇ ಹೋಲಿಕೆ. ಅಂತೆಯೇ ರಾಮರಾವಣರ ಯುದ್ಧವು ರಾಮರಾವಣರ ಯುದ್ಧಕ್ಕೇ ಹೋಲಿಕೆ” ಎಂದು ಹೇಳಿಕೊಳ್ಳುತ್ತಲಿದ್ದರು. ರಘುಕುಲದ ಕೀರ್ತಿಯನ್ನು ವೃದ್ಧಿಗೊಳಿಸುವವನೂ, ಮಹಾ ಬಾಹುವೂ ಆದ ಶ್ರೀರಾಮಮೂರ್ತಿಯು ರಾವಣನ ಮೇಲೆ ಅತ್ಯಂತ ಕುಪಿತನಾಗಿ ಮಹತ್ತರ

ಧನುಷಾ ರಾಮಂ ಕ್ಷುರಮಾಶೀವಿಷೋಪಮಂ ॥೨೫॥ ರಾವಣಸ್ಯ ಶಿರಶ್ಛಿಂದಚ್ಛ್ರೀಮ ಜ್ಜ್ವಲಿತಕುಂಡಲಂ । ತಚ್ಛಿರಃ ಪತಿತಂ ಭೂಮೌ ದೃಷ್ಟಂ ಲೋಕೈಸ್ತ್ರಿಭಿಸ್ತದಾ ॥ ೨೬ ॥ ತಸ್ಯೈವ ಸದೃಶಂ ಚಾನ್ಯದ್ರಾವಣಸ್ಯೋತ್ಥಿತಂ ಶಿರಃ । ತತ್ ಕ್ಷಿಪ್ರಂ ಕ್ಷಿಪ್ರ ಹಸ್ತೇನ ರಾಮೇಣ ಕ್ಷಿಪ್ರಕಾರಿಣಾ ॥ ೨೭ ॥ ದ್ವಿತೀಯಂ ರಾವಣಶಿರಶ್ಛಿನ್ನಂ ಸಂಯತಿ ಸಾಯಕೈಃ । ಛಿನ್ನಮಾತ್ರಂ ತು ತಚ್ಛೀರ್ಷಂ ಪುನರನ್ಯತ್ಸ್ಮ ದೃಶ್ಯತೇ ॥೨೮॥ ತದಪ್ಯ ಶನಿಸಂಕಾಶೈಶ್ಛಿನ್ನಂ ರಾಮೇಣ ಸಾಯಕೈಃ । ಏವಮೇಕಶತಂ ಛಿನ್ನಂ ಶಿರಸಾಂ ತುಲ್ಯ ವರ್ಚಸಾಂ । ನಚೈವ ರಾವಣಸ್ಯಾಂತೋ ದೃಶ್ಯತೇ ಜೀವಿತಕ್ಷಯೇ ॥ ೨೯ ॥ ತತಸ್ಸ

ಳನ್ನು, ಧನುಷಾ - ಬಿಲ್ಲಿನೊಡನೆ, ಸಂಧಾಯ - ತೊಡಗಿಸಿ, ರಾವಣಸ್ಯ - ದಶಕಂಠನ, ಜ್ವಲಿ....ಲಂ-ಬೆಳಗುತ್ತಿರುವ ಕುಂಡಲಗಳುಳ್ಳ, ಶ್ರೀಮತ್-ಸಂಪದ್ಯುಕ್ತವಾದ, ಶಿರಃ-ಮುಂಡೆಯನ್ನು, ಛಿಂದತ್-ಕತ್ತರಿಸಿದನು, ತದಾ - ಆ ಕಾಲದಲ್ಲಿ, ಭೂಮೌ - ನೆಲದಲ್ಲಿ, ಪತಿತಂ - ಬಿದ್ದಿರುವ, ತಚ್ಛಿರಃ - ಆ ಮುಂಡೆಯು, ತ್ರಿಭಿರ್ಲೋಕೈಃ - ಮೂರು ಲೋಕಗಳಲ್ಲಿರುವ ಜನರಿಂದ, ದೃಷ್ಟಂ - ನೋಡಲ್ಪಟ್ಟಿತು, ತಸ್ಯೈವ - ಆ ಶಿರಸ್ಸಿಗೇನೆ, ಸದೃಶಂ - ಸಮಾನವಾದ, ಅನ್ಯತ್ - ಮತ್ತೊಂದಾದ, ಶಿರಃ - ಮುಂಡೆಯು, ರಾವಣಸ್ಯ - ರಾವಣನಿಗೆ, ಉತ್ಥಿತಂ - ಎದ್ದಿತು, ಕ್ಷಿಪ್ರಹಸ್ತೇನ - ಶೀಘ್ರ ಹಸ್ತನಾದ ಕಾರಣ, ಕ್ಷಿಪ್ರ ಕಾರಿಣಾ - ಬೇಗ ಕಾರ್ಯವನ್ನು ಮಾಡುತ್ತಿರುವ, ರಾಮೇಣ - ಶ್ರೀರಾಮನಿಂದ, ದ್ವಿತೀಯಂ - ಎರಡನೆಯದಾದ, ತದ್ರಾ....ರಃ - ಆ ದಶಕಂಠನ ಶಿರಸ್ಸು, ಸಂಯತಿ - ಕಾಳಗದಲ್ಲಿ, ಸಾಯಕೈಃ - ಬಾಣಗಳಿಂದ, ಛಿನ್ನಂ - ಕತ್ತರಿಸಲ್ಪಟ್ಟಿತು, ತಚ್ಛೀರ್ಷಂ - ಆ ಶಿರಸ್ಸು, ಛಿನ್ನಮಾತ್ರಂತು - ಕತ್ತರಿಸಲ್ಪಟ್ಟ ಮಾತ್ರದಿಂದಲೇ, ಪುನಃ - ಮತ್ತೂ, ಅನ್ಯತ್ - ಮತ್ತೊಂದು ಶಿರವು, ದೃಶ್ಯತೇ - ಕಾಣಲ್ಪಟ್ಟಿತಷ್ಟೆ, ತದಪಿ - ಆ ಶಿರಸ್ಸೂ ಕೂಡ, ರಾಮೇಣ - ಶ್ರೀರಾಮನಿಂದ, ಅಶ....ಶೈಃ - ಸಿಡಲಿಗೆ ಸಮಾನವಾದ, ಸಾಯಕೈಃ - ಸರಳುಗಳಿಂದ, ಛಿನ್ನಂ - ಕತ್ತರಿಸಲ್ಪಟ್ಟಿತು, ಏವಂ - ಈ ಪರಿಯಾಗಿ, ತುಲ್ಯವರ್ಚಸಾಂ-ಸಮಾನವಾದ ಕಾಂತಿಯುಳ್ಳ, ಶಿರಸಾಂ-ಶಿರಸ್ಸುಗಳ, ಏಕಶತಂ-ನೂರೊಂದು, ಛಿನ್ನಂ-ಕತ್ತರಿಸಲ್ಪಟ್ಟಿತು, ರಾವಣಸ್ಯ - ದಶಕಂಠನ, ಜೀವಿತಕ್ಷಯೇ - ಪ್ರಾಣನಾಶದ ವಿಷಯದಲ್ಲಿ, ಅಂತಃ-ನಿಶ್ಚಯವು, ನದೃಶ್ಯತಏವ - ಕಾಣಲ್ಪಡಲೇ ಇಲ್ಲವು. ॥೨೫-೨೯॥ ತತಃ - ಬಳಿಕ, ರಾಘವಃ - ರಘು

ವಾದ ತನ್ನ ಧನುಸ್ಸಿನಲ್ಲಿ ಕ್ಷುರವೆಂಬ ಬಾಣಶ್ರೇಷ್ಠವನ್ನು ಹೂಡಿ ಹೊಡೆದು, ಕುಂಡಲಗಳಿಂದ ಪ್ರಜ್ವಲಿಸುತ್ತಿರುವ ಆ ರಾಕ್ಷಸನ ತಲೆಯನ್ನು ಕತ್ತರಿಸಿ ಕೆಡವಿದನು. ಆ ಸಮಯದಲ್ಲಿ ರಾವಣನ ತಲೆಯು ನೆಲಕ್ಕುರುಳಿದುದನ್ನು ಮೂರು ಲೋಕಗಳವರೂ ಕಂಡರು. ॥೨೧-೨೬॥ ಒಡನೆಯೇ ಆ ತಲೆಯಿದ್ದಕಡೆ ಅದಕ್ಕೆ ಸಮಾನವಾದುದೇ ಆದ ಇನ್ನೊಂದು ತಲೆಯು ಹುಟ್ಟಿಕೊಂಡಿತು. ಶ್ರೀರಾಮಚಂದ್ರನು ಬಹು ಜಾಗ್ರತೆಯಾಗಿ ಕ್ಷಿಪ್ರಹಸ್ತದಿಂದ ಬಾಣಗಳನ್ನು ಬಿಲ್ಲಿನಲ್ಲಿ ಸಂಧಿಸಿ ಅದನ್ನು ನೆಲಕ್ಕುರುಳಿಸಿದನು. ಹೀಗೆ ಆ ರಾವಣನ ಎರಡನೆಯ ತಲೆಯೂ ಕೆಳಕ್ಕೆ ಬಿದ್ದಿತು. ಅದು ಕತ್ತರಿಸಿ ಬಿದ್ದೊಡನೆಯೇ ಆ ಸ್ಥಳದಲ್ಲಿ ಮತ್ತೊಂದು ತಲೆಯು ಹುಟ್ಟಿಕೊಂಡಿತು. ಹೀಗೆ ಶ್ರೀರಾಮನು ಆ ರಾವಣನ ತಲೆಯನ್ನು ಬಾಣಗಳಿಂದ ಕತ್ತರಿಸಿ ಕೆಡಹಲು, ಆ ಸ್ಥಳದಲ್ಲಿ ಅಂಥದೇ ಆದ ಮತ್ತೊಂದು ತಲೆಯು ಹುಟ್ಟಿಕೊಳ್ಳುವುದಕ್ಕೆ ಮೊದಲಾಯಿತು. ಈ ಪ್ರಕಾರವಾಗಿಯೇ ಶ್ರೀರಾಮನು ಸಮಾನ ಕಾಂತಿಯುಳ ನೂರೊಂದು ತಲೆಗಳನ್ನು ಕಡಿದರೂ ರಾವಣನು ಸಾಯಲಿಲ್ಲವು. ಅವನ

ರ್ವಾಸ್ತ್ರವಿದ್ವೀರಃ ಕೌಸಲ್ಯಾನಂದವರ್ಧನಃ। ಮಾರ್ಗಣೈರ್ಬಹುಭಿರ್ಯುಕ್ತಶ್ಚಿಂತಯಾಮಾಸ ರಾಘವಃ ॥ ೩೦ ॥ "ಮಾರೀಚೋ ನಿಹತೋ ಯೈಸ್ತು ಖರೋ ಯೈಸ್ತು ಸದೂಷಣಃ । ಕ್ರೌಂಚಾವನೇ ವಿರಾಧಸ್ತು ಕಬಂಧೋ ದಂಡಕಾವನೇ ॥ ೩೧ ॥ ತ ಇಮೇ ಸಾಯಕಾಸ್ಸರ್ವೇ ಯುದ್ಧೇ ಪ್ರತ್ಯಯಿಕಾ ಮಮ । ಕಿನ್ನು ತತ್ಕಾರಣಂ ಯೇನ ರಾವಣೇ ಮಂದತೇಜಸಃ?" ॥೩೨॥ ಇತಿ ಚಿಂತಾಪರಶ್ಚಾಸೀದಪ್ರಮತ್ತಶ್ಚ ಸಂಯುಗೇ। ವವರ್ಷ ಶರವರ್ಷಾಣಿ ರಾಘವೋ ರಾವಣೋರಸಿ ॥೩೩॥ ರಾವಣೋಽಪಿ ತತಃ ಕ್ರುದ್ಧೋ ರಥಸ್ಥೋ ರಾಕ್ಷಸೇಶ್ವರಃ । ಗದಾಮುಸಲವರ್ಷೇಣ ರಾಮಂ ಪ್ರತ್ಯ

ವಂಶೋತ್ಪನ್ನನಾದ, ಸರ್ವಾಸ್ತ್ರವಿತ್ - ಸಮಸ್ತ ಅಸ್ತ್ರಗಳನ್ನೂ ತಿಳಿದ, ಕೌಸ....ನಃ - ಕೌಸಲ್ಯಾದೇವಿಗೆ ಆನಂದಕರನಾದ, ವೀರಃ-ಶೂರನಾದ ಶ್ರೀರಾಮನು, ಬಹುಭಿಃ-ಅನೇಕವಾದ, ಮಾರ್ಗಣೈಃ-ಸರಳುಗಳಿಂದ, ಯುಕ್ತಃ-ಕೂಡಿದವನಾಗಿ, ಚಿಂತಯಾಮಾಸ-ಆಲೋಚಿಸಿದನು. ||೩೦|| ಮಾರೀಚಃ-ಮಾರೀಚನು, ಯೈಃ - ಯಾವ ಬಾಣಗಳಿಂದ, ನಿಹತಃ-ಹೊಡೆಯಲ್ಪಟ್ಟನೋ, ಸದೂಷಣಃ-ದೂಷಣನಿಂದೊಡಗೂಡಿದ, ಖರಃ - ಖರನು, ಯೈಃ - ಯಾವ ಬಾಣಗಳಿಂದ ಹೊಡೆಯಲ್ಪಟ್ಟನೋ, ಕ್ರೌಂಚಾವನೇ - ಕ್ರೌಂಚಾರಣ್ಯದಲ್ಲಿ, ಕಬಂಧಃ - ಕಬಂಧನು, ಯೈಃ - ಯಾವ ಬಾಣಗಳಿಂದ, ನಿಹತಃ - ಹೊಡೆಯಲ್ಪಟ್ಟನೋ, ದಂಡಕಾವನೇ - ದಂಡಕಾರಣ್ಯದಲ್ಲಿ, ಯೈಃ - ಯಾವ ಸರಳುಗಳಿಂದ, ವಿರಾಧಃ-ವಿರಾಧನು, ನಿಹತಃ - ಹೊಡೆಯಲ್ಪಟ್ಟನೋ, ತ ಇಮೇ ಸಾಯಕಾಃ - ಆ ಈ ಬಾಣಗಳು, ಸರ್ವೇ - ಸಮಸ್ತವೂ, ಮಮ - ನನಗೆ, ಯುದ್ಧೇ - ಕಾಳಗದಲ್ಲಿ, ಪ್ರತ್ಯಯಿಕಾಃ - ನಂಬಿಕೆಯನ್ನು ಹುಟ್ಟಿಸತಕ್ಕವವು. ರಾವಣೇ - ದಶಕಂಠನ ವಿಷಯದಲ್ಲಿ, ಯೇನ - ಯಾವ ಕಾರಣದಿಂದ, ಮಂದತೇಜಸಃ - ಸ್ವಲ್ಪವಾದ ಸಾಮರ್ಥ್ಯವುಳ್ಳವುಗಳಾದವೋ, ತತ್ಕಾರಣಂ - ಆ ಕಾರಣವು, ಕಿನ್ನು - ಏನಿದ್ದೀತು, ಇತಿ - ಇಂತೆಂದು, ಚಿಂತಾಪರಃ - ಆಲೋಚನಪರನಾಗಿ, ಸಂಯುಗೇ - ಕಾಳಗದಲ್ಲಿ, ಅಪ್ರಮತ್ತಶ್ಚ - ಜಾಗರೂಕನೂ ಕೂಡ, ಆಸೀತ್ - ಆದನು, ರಾಘವಃ - ಶ್ರೀರಾಮನು, ರಾವಣೋರಸಿ - ದಶಕಂಠನ ಎದೆಯಲ್ಲಿ, ಶರವರ್ಷಾಣಿ - ಬಾಣವರ್ಷಗಳನ್ನು, ವವರ್ಷ - ಸುರಿಸಿದನು. || ೩೧ ೩೩ || ತತಃ - ಬಳಿಕ, ರಥಸ್ಥಃ-ರಥಾರೂಢನಾದ, ರಾಕ್ಷಸೇಶ್ವರಃ-ರಾಕ್ಷಸಾಧಿಪತಿಯಾದ, ರಾವಣಃ-ದಶಕಂಠನು, ಕ್ರುದ್ಧಃ-ಕುಪಿತನಾಗಿ, ರಣೇ - ಕಾಳಗದಲ್ಲಿ, ರಾಮಂ - ಶ್ರೀರಾಮನನ್ನು, ಗದಾ....ಣ - ಗದಾಯುಧಗಳ

ಅವಸಾನವೇ ಕಾಣದಾಯಿತು. ಆಗ ಸಮಸ್ತಾಸ್ತ್ರಗಳನ್ನರಿತವನೂ, ಅನೇಕ ಬಾಣಗಳನ್ನುಳ್ಳವನೂ ಆದ ಶ್ರೀರಾಮನು ಯೋಚಿಸಲಾರಂಭಿಸಿದನು. "ಯಾವ ಬಾಣಗಳಿಂದ ಮಾರೀಚನು ಮಡಿದನೋ, ದೂಷಣನು ಯಾವ ಬಾಣಗಳಿಂದ ಹತನಾದನೋ, ಕ್ರೌಂಚಾರಣ್ಯದಲ್ಲಿ ವಿರಾಧನು ಯಾವುಗಳಿಂದ ವಧಿಸಲ್ಪಟ್ಟನೋ, ದಂಡಕಾರಣ್ಯದಲ್ಲಿ ಕಬಂಧನು ಯಾವ ಬಾಣಗಳಿಂದ ಮೃತಿಪಟ್ಟನೋ ಆ ಬಾಣಗಳೆಲ್ಲವೂ ನನಗೆ ಕೇವಲ ಅನುಭವಸಿದ್ಧವಾದ ಪ್ರಭಾವವುಳ್ಳವುಗಳು. ಯಾವ ಕಾರಣದಿಂದ ಈ ಬಾಣಗಳೆಲ್ಲವೂ ರಾವಣನಲ್ಲಿ ತೇಜೋವಿಹೀನವಾದುವೆಂಬುದು ತಿಳಿಯುಲಿಲ್ಲವು." ಶ್ರೀರಾಮನು ಹೀಗೆ ಚಿಂತಿಸಿದರೂ ಯುದ್ಧದಲ್ಲಿ ಅಪ್ರಮತ್ತನಾಗಿ ಭಯಂಕರ ಯುದ್ಧಮಾಡುತ್ತ ಮತ್ತು ಹೆಚ್ಚಾಗಿ ಕನಲಿ ಆ ರಾವಣನ ಎದೆಯಲ್ಲಿ ಬಾಣಗಳ ಬಿರುಮಳೆಯನ್ನು ಸುರಿಸಿದನು. ‖ ೩೦—೩೩ ‖ ರಥಾರೂಢನಾದ ರಾವಣಾಸುರನಾದರೋ ಅತಿಯಾಗಿ ಕನಲಿ ರಾಮನ ಮೇಲೆ ಗದಾಮುಸಲಗಳ ವರ್ಷ

ರ್ದಯದ್ರಣೇ ॥ ೩೪ ॥ ತತ್ಪ್ರವೃತ್ತಂ ಮಹದ್ಯುದ್ಧಂ ತುಮುಲಂ ರೋಮಹರ್ಷಣಂ ।
ಅಂತರಿಕ್ಷೇಚ ಭೂಮೌಚ ಪುನಶ್ಚ ಗಿರಿಮೂರ್ಧನಿ ॥ ೩೫ ॥ ದೇವದಾನವಯಕ್ಷಾಣಾಂ
ಪಿಶಾಚೋರಗರಕ್ಷಸಾಂ । ಪಶ್ಯತಾಂ ತನ್ಮಹದ್ಯುದ್ಧಂ ಸರ್ವರಾತ್ರಮವರ್ತತ ॥ ೩೬ ॥
ನೈವರಾತ್ರಂ ನದಿವಸಂ ನಮುಹೂರ್ತಂ ನಚ ಕ್ಷಣಂ । ರಾಮರಾವಣಯೋರ್ಯುದ್ಧಂ
ವಿರಾಮಮುಪಗಚ್ಛತಿ ॥ ೩೭ ॥

ದಶರಥಸುತರಾಕ್ಷಸೇಂದ್ರಯೋರ್ಜಯಮನವೇಕ್ಷ್ಯ ರಣೇ ಸ ರಾಘವಸ್ಯ ।
ಸುರವರರಥಸಾರಥಿರ್ಮಹಾತ್ಮಾ ರಣಗತಮೇನಮುವಾಚ ವಾಕ್ಯಮಾಶು ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದಶೋತ್ತರಶತತಮಸ್ಸರ್ಗಃ

ಮುಸಲಾಯುಧಗಳ ಮಳೆಯಿಂದ, ಪ್ರತ್ಯರ್ದಯತ್ - ಪ್ರತಿಯಾಗಿ ಹೊಡೆದನು. ॥೩೪॥ ತುಮುಲಂ - ಸಂಕುಲವಾದ, ರೋಮಹರ್ಷಣಂ - ರೋಮಾಂಚಕರವಾದ, ಅಂತರಿಕ್ಷೇಚ - ಗಗನದಲ್ಲಿಯೂ, ಭೂಮೌಚ - ನೆಲದಲ್ಲಿಯೂ, ಪುನಶ್ಚ - ಮತ್ತೂ, ಗಿರಿಮೂರ್ಧನಿ - ಪರ್ವತಾಗ್ರದಲ್ಲಿಯೂ, ತದ್ಯುದ್ಧಂ - ಆ ಕಾಳೆಗವು, ಪ್ರವೃತ್ತಂ - ನಡೆಯಿತು. ॥ ೩೫ ॥ ದೇವ....ಣಾಂ - ದೇವತೆಗಳೂ, ದಾನವರೂ, ಯಕ್ಷರೂ, ಪಿಶಾ....ಸಾಃ - ಪಿಶಾಚಗಳೂ, ಸರ್ಪಗಳೂ, ರಾಕ್ಷಸರೂ, ಪಶ್ಯತಾಂ - ನೋಡುತ್ತಿರಲು, ಮಹತ್ - ದೊಡ್ಡದಾದ, ತದ್ಯುದ್ಧಂ - ಆ ಯುದ್ಧವು, ಸರ್ವರಾತ್ರಂ - ರಾತ್ರಿಹಗಲಿನಲ್ಲಿಯೂ, ಅವರ್ತತ - ನಡೆಯಿತು. ॥ ೩೬ ॥ ರಾಮರಾವಣಯೋಃ - ರಾಮರಾವಣರ, ಯುದ್ಧಂ - ಕಾಳೆಗವು, ರಾತ್ರಂ - ರಾತ್ರಿಯಲ್ಲಿಯೂ, ವಿರಾಮಂ - ವಿರಾಮವನ್ನು, ನೈವ ಗಚ್ಛತಿ-ಹೊಂದಲಿಲ್ಲವು, ದಿವಸಂ-ಹಗಲಿನಲ್ಲಿಯೂ, ನ-ವಿರಾಮವನ್ನು ಹೊಂದಲಿಲ್ಲ, ಮುಹೂರ್ತಂ-ಎರಡು ಘಳಿಗೆ ಕಾಲವೂ, ವಿರಾಮಂ - ವಿರಾಮವನ್ನು, ನೋಪಗಚ್ಛತಿ - ಹೊಂದಲಿಲ್ಲವು, ಕ್ಷಣಂ - ಕ್ಷಣಕಾಲದಲ್ಲಿಯೂ, ನೋಪಗಚ್ಛತಿ - ವಿರಾಮವನ್ನು ಹೊಂದಲಿಲ್ಲವು. ॥೩೭॥ ರಣೇ - ಯುದ್ಧದಲ್ಲಿ, ದಶ....ಯೋಃ – ರಾಮರಾವಣರೊಳಗೆ, ರಾಘವಸ್ಯ - ಶ್ರೀರಾಮನಿಗೆ, ಜಯಂ - ಜಯವನ್ನು, ಅನವೇಕ್ಷ್ಯ - ಕಾಣದೆ, ಮಹಾತ್ಮಾ - ಮಹಾತ್ಮನಾದ, ಸುರ....ಥಿಃ - ಇಂದ್ರ ರಥಕ್ಕೆ ಸಾರಥಿಯಾದ, ಸಃ - ಆ ಮಾತಲಿಯು, ರಣಗತಂ - ಯುದ್ಧರಂಗವನ್ನು ಹೊಂದಿರುವ, ಏನಂ - ಈ ಶ್ರೀರಾಮನನ್ನು ಕುರಿತು, ಆಶು - ಜಾಗ್ರತೆಯಾಗಿ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೩೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದಶೋತ್ತರಶತತಮಸ್ಸರ್ಗಃ.

ವನ್ನು ವರ್ಷಿಸಿದನು. ಆಗಣ ಯುದ್ಧವು ಮಹಾ ಭಯಂಕರವಾಗಿಯೂ, ರೋಮಾಂಚಕರವಾಗಿಯೂ, ಅಂತರಿಕ್ಷದಲ್ಲಿ, ಭೂಮಿಯಲ್ಲಿ, ಪರ್ವತಶಿಖರಗಳಲ್ಲಿ, ಎಲ್ಲೆಡೆಯೂ ದೇವ, ದಾನವ, ಪಿಶಾಚ, ಪನ್ನಗ, ರಾಕ್ಷಸರೆಲ್ಲರೂ ನೋಡುತ್ತಿರಲು ರಾತ್ರಿಯೆಲ್ಲ ನಡೆಯಿತು. ರಾತ್ರಿಯಾಗಲಿ, ಹಗಲಾಗಲಿ, ಒಂದು ಮುಹೂರ್ತ, ಒಂದು ಕ್ಷಣಕಾಲವಾಗಲಿ ರಾಮರಾವಣರ ಯುದ್ಧವು ನಿಲ್ಲಲಿಲ್ಲವು. ಆಗ ದೇವೇಂದ್ರ ಸಾರಥಿಯಾದ ಮಾತಲಿಯು ರಾಮರಾವಣರ ಯುದ್ಧದಲ್ಲಿ ಶ್ರೀರಾಮಮೂರ್ತಿಗೆ ಜಯವನ್ನು ಕಾಣದವನಾಗಿ ಯುದ್ಧಾಸಕ್ತನಾಗಿದ್ದ ಆತನನ್ನು ಕುರಿತು ಒಂದು ಮಾತನ್ನು ಜಾಗ್ರತೆಯಾಗಿ ಹೇಳಿದನು. ॥ ೩೪=೩೮ ॥

ಇಂತಿದು ರಾವಣ ಶಿರಶ್ಛೇದ ವೃತ್ತಾಂತವೆಂಬ ನೂರಹತ್ತನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕಾದಶೋತ್ತರಶತತಮಸ್ಸರ್ಗಃ

¶ ಅಥ ಸಂಸ್ಮಾರಯಾಮಾಸ ರಾಘವಂ ಮಾತಲಿಸ್ತದಾ । “ಅಜಾನನ್ನಿವ ಕಿಂ
ವೀರ! ತ್ವಮೇನಮನುವರ್ತಸೇ? ॥೧॥ ವಿಸೃಜಾಸ್ಮೈ ವಧಾಯ ತ್ವಮಸ್ತ್ರಂ ಪೈತಾ
ಮಹಂ ಪ್ರಭೋ! । ವಿನಾಶಕಾಲಃ ಕಥಿತೋ ಯಸ್ಸುರೈಸ್ಸೋಽದ್ಯ ವರ್ತತೇ” ॥೨॥
ತತಸ್ಸಂಸ್ಮಾರಿತೋ ರಾಮಸ್ತೇನ ವಾಕ್ಯೇನ ಮಾತಲೇಃ । ಜಗ್ರಾಹ ಸಶರಂ ದೀಪ್ತಂ
ನಿಶ್ವಸಂತಮಿವೋರಗಂ ॥ ೩ ॥ ಯಮಸ್ಮೈ ಪ್ರಥಮಂ ಪ್ರಾದಾದಗಸ್ತ್ಯೋ ಭಗವಾ

ಅಥ - ಬಳಿಕ, ಮಾತಲಿಃ - ಮಾತಲಿಯು, ತದಾ - ಆ ಕಾಲದಲ್ಲಿ, ರಾಘವಂ - ಶ್ರೀರಾಮನನ್ನು ಕುರಿತು, ಸಂಸ್ಮಾ....ಸ - ಜ್ಞಾಪಕ ಮಾಡಿದನು, ಹೇ ವೀರ - ಎಲೈ ಶೂರನೇ, ತ್ವಂ - ನೀನು, ಅಜಾನನ್ನಿವ - ಅರಿಯದವನಂತೆ, ಏವಂ - ಈ ದಶಕಂಠನನ್ನು, ಕಿಂಅನುವರ್ತಸೇ - ಏಕೆ (ಸುಮ್ಮನೆ) ಅನುಸರಿಸುವೆ, ಹೇ ಪ್ರಭೋ - ಎಲೈ ಸ್ವಾಮಿಯೇ, ತ್ವಂ - ನೀನು, ಅಸ್ಯ - ಇವನ, ವಧಾಯ - ಸಂಹಾರಕ್ಕಾಗಿ, ಪೈತಾಮಹಂ - ಬ್ರಹ್ಮಸಂಬಂಧವಾದ, ಅಸ್ತ್ರಂ - ಅಸ್ತ್ರವನ್ನು, ಅಸ್ಮೈ - ಈ ರಾವಣಾಸುರನಿಗಾಗಿ, ವಿಸೃಜ - ಬಿಡು, ಸುರೈಃ - ದೇವತೆಗಳಿಂದ, ಯಃವಿನಾಶಕಾಲಃ - ಯಾವ ವಿನಾಶಕಾಲವು ಹೇಳಲ್ಪಟ್ಟದ್ದಿತೋ ಅದು, ಅದ್ಯ - ಈಗ, ವರ್ತತೇ - ಸಮೀಪವರ್ತಿಯಾಗಿದೆ. ॥ ೧-೨ ॥ ತತಃ - ಬಳಿಕ, ಮಾತಲೇಃ - ಮಾತಲಿಯ, ತೇನವಾಕ್ಯೇನ - ಆ ಮಾತಿನಿಂದ, ಸಂಸ್ಮಾರಿತಃ - ಜ್ಞಾಪಕ ಮಾಡಲ್ಪಟ್ಟ, ಸರಾಮಃ - ಆ ಶ್ರೀರಾಮನು, ಶರಂ-ಸರಳನ್ನು, ಜಗ್ರಾಹ-ತೆಗೆದುಕೊಂಡನು. ॥ ೩ ॥ ತಂ-ಆ, ಭಗವಾನ್-ಷಡ್ಗುಣೈಶ್ವರ್ಯಸಂಪನ್ನನಾದ, ಅಗಸ್ತ್ಯಃಋಷಿಃ-ಅಗಸ್ತ್ಯಋಷಿಯು, ಅಸ್ಮೈ-ಈ ಶ್ರೀರಾಮನಿಗೆ, ಪ್ರಥಮಂ - ಮೊದಲು, ನಿಶ್ವಸಂತಂ - ನಿಟ್ಟುಸಿರು ಬಿಡುತ್ತಿರುವ, ಉರ......ತಂ - ದೊಡ್ಡ ಹಾವಿನಂತಿರುವ, ದೀಪ್ತಂ - ಹೊಳೆಯುತ್ತಿರುವ, ಯಂ - ಯಾವ ಅಸ್ತ್ರವನ್ನು, ಅಸ್ಮೈ -

---

ಆ ತರುವಾಯ ದೇವೇಂದ್ರಸಾರಥಿಯಾದ ಮಾತಲಿಯು ಶ್ರೀರಾಮಮೂರ್ತಿಗೆ ಒಂದು ವಿಷಯವನ್ನು ಜ್ಞಾಪಿಸುವವನಾಗಿ ಆತನನ್ನು ಕುರಿತು, “ಎಲೈ ಶ್ರೀರಾಮಮೂರ್ತಿಯೇ! ಏನೂ ಅರಿಯದವನಂತೆ ನೀನೇಕೆ ಈ ರೀತಿ ಚಿಂತಿಸುತ್ತಿರುವೆ? ನಿನಗೆ ತಿಳಿಯದ ವಿಷಯವೇನಿರುವುದು? ಎಲೈ ಪ್ರಭುವೇ? ಈ ರಾವಣಾಸುರನ ವಿನಾಶಕ್ಕೋಸುಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸು. ದೇವತೆಗಳು ಹೇಳಿದ ಇವನ ವಿನಾಶ ಸಮಯವು ಇದೀಗ ಪ್ರಾಪ್ತವಾಗಿದೆ” ಎಂದು ಹೇಳಿದನು. ಶ್ರೀರಾಮನು ಮಾತಲಿಯ ಮಾತನ್ನು ಕೇಳಿದ ತರುವಾಯ ಬ್ರಹ್ಮಾಸ್ತ್ರವನ್ನು ಸ್ಮೃತಿಗೆ ತಂದುಕೊಂಡನು. ಆಮೇಲೆ ಮಹಾ ಕ್ರೂರವಾದುದೂ, ಮಹಾ ಸರ್ಪದಂತೆ ಉಸಿರಾಡುತ್ತಿರುವುದೂ, ಮಹಾ ಜಾಜ್ವಲ್ಯಮಾನವಾದುದೂ ಆದ ಬ್ರಹ್ಮಾಸ್ತ್ರವನ್ನು ಗ್ರಹಿಸಿದನು. ಆ ಮಹಾಸ್ತ್ರವು ಯುದ್ಧಗಳಲ್ಲಿ ಅಮೋಘ

¶ ಅಜಾನನ್ನಿವ—ಬ್ರಹ್ಮಾಸ್ತ್ರವನ್ನು ತಿಳಿಯದವನಂತಿರುವ, ವಿನಾಶಕಾಲಃ—ಮನುಷ್ಯನಿಂದ ವಧವು ಸಂಭವಿಸುತ್ತದೆಯೆಂದು ಹೇಳಿದ ಸಮಯವು. (ಗೋ)

ನೃಷಿಃ । ಬ್ರಹ್ಮದತ್ತಂ ಮಹಾಬಾಣಮಮೋಘಂ ಯುಧಿ ವೀರ್ಯವಾನ್ ॥ ೪ ॥ * ಬ್ರಹ್ಮಣಾ ನಿರ್ಮಿತಂ ಪೂರ್ವಮಿಂದ್ರಾರ್ಥಮಮಿತೌಜಸಾ । ದತ್ತಂ ಸುರಪತೇಃ ಪೂರ್ವಂ ತ್ರಿಲೋಕಜಯಕಾಂಕ್ಷಿಣಃ ॥೫॥ ಯಸ್ಯ ವಾಜೇಷು ಪವನಃ ಫಲೇ ಪಾವಕಭಾಸ್ಕರೌ । ಶರೀರಮಾಕಾಶಮಯಂ ಗೌರವೇ ಮೇರುಮಂದರೌ ॥ ೬ ॥ ಜಾಜ್ವಲ್ಯಮಾನಂ ವಪುಷಾ ಸುಪುಂಖಂ ಹೇಮಭೂಷಿತಂ । ತೇಜಸಾ ಸರ್ವಭೂತಾನಾಂ ಕೃತಂ ಭಾಸ್ಕರವರ್ಚಸಂ ॥ ೭ ॥ ಸಧೂಮಮಿವ ಕಾಲಾಗ್ನಿಂ ದೀಪ್ತಮಾಶೀವಿಷಂ ಯಥಾ ।

ಇವನಿಗೆ, ಪ್ರದದೌ - ಕೊಟ್ಟನೋ, ವೀರ್ಯವಾನ್ - ಸಮರ್ಥನಾದ ಶ್ರೀರಾಮನು, ಅಮೋಘಂ - ಸಫಲವಾದ, ಬ್ರಹ್ಮದತ್ತಂ-ಬ್ರಹ್ಮದೇವರಿಂದ ಕೊಡಲ್ಪಟ್ಟ, ಪೂರ್ವಂ-ಪೂರ್ವದಲ್ಲಿ, ತ್ರಿಲೋ......ಣಃ-ಮೂರು ಲೋಕದ ಜಯವನ್ನಪೇಕ್ಷಿಸುತ್ತಿರುವ, ಸುರಪತೇಃ - ದೇವೇಂದ್ರನಿಗೋಸ್ಕರ, ಅಮಿತೌಜಸಾ - ಅಪಾರವಾದ ತೇಜಸ್ಸುಳ್ಳ, ಬ್ರಹ್ಮಣಾ - ಬ್ರಹ್ಮದೇವರಿಂದ, ಇಂದ್ರಾರ್ಥಂ - ಇಂದ್ರನ ನಿಮಿತ್ತವಾಗಿಯೇ, ಪೂರ್ವಂ - ಬಹು ಪೂರ್ವದಲ್ಲಿ, ನಿರ್ಮಿತಂ - ನಿರ್ಮಿಸಲ್ಪಟ್ಟು, ದತ್ತಂ - ಕೊಡಲ್ಪಟ್ಟ, ಮಹಾಬಾಣಂ - ದೊಡ್ಡ ಶರಳನ್ನು, ಜಗ್ರಾಹ - ಗ್ರಹಿಸಿದನು, ಯಸ್ಯ - ಯಾವ ಶರಳಿನ, ವಾಜೇಷು - ಪಕ್ಷಗಳಲ್ಲಿ, ಪವನಃ - ವಾಯುವು, ಅಸ್ತಿ - ಇದ್ದಾನೆಯೋ, ಫಲೇ - ಕೊಂಕಿಯಲ್ಲಿ, ಪಾವ....ರೌ - ಅಗ್ನ್ಯಾದಿತ್ಯರು ಇರುತ್ತಾರೆಯೋ, ಶರೀರಂ - ಶರೀರವು, ಆಕಾಶಮಯಂ - ಆಕಾಶವಾಗಿದೆಯೋ, ಗೌರವೇ - ಭಾರದಲ್ಲಿ, ಮೇರುಮಂದರೌ - ಮೇರುಮಂದರಪರ್ವತಗಳಿವೆಯೋ, ವಪುಷಾ - ಶರೀರದಿಂದ, ಜಾಜ್ವಲ್ಯಮಾನಂ - ಪ್ರಜ್ವಲಿಸುತ್ತಿರುವ, ಸುಪುಂಖಂ - ಒಳ್ಳೆಯ ತುದಿಯುಳ್ಳ, ಹೇಮಭೂಷಿತಂ - ಚಿನ್ನದಿಂದಲಂಕೃತವಾದ, ಸರ್ವಭೂತಾನಾಂ - ಎಲ್ಲಾ ಪ್ರಾಣಿಗಳ, ತೇಜಸಾ - ಸಾರಾಂಶದಿಂದ, ಕೃತಂ - ಮಾಡಲ್ಪಟ್ಟ, ಭಾಸ್ಕ....ಸಂ - ಸೂರ್ಯನಂತೆ ತೇಜಸ್ಸುಳ್ಳ, ಸಧೂಮಂ - ಹೊಗೆಯೊಡಗೂಡಿದ, ಕಾಲಾಗ್ನಿಂ - ಪ್ರಳಯಾಗ್ನಿಯಂತಿರುವ, ಆಶೀವಿಷಂಯಥಾ -

ವಾದುದು; ಮೊದಲು ಬ್ರಹ್ಮದೇವನು ಅದನ್ನು ಅಗಸ್ತ್ಯರಿಗೆ ಕೊಟ್ಟು ಆ ತರುವಾಯ ಅಗಸ್ತ್ಯರು ಶ್ರೀರಾಮಮೂರ್ತಿಗೆ ಅನುಗ್ರಹಿಸಿದುದು. ಬ್ರಹ್ಮದೇವನು ಆ ಬ್ರಹ್ಮಾಸ್ತ್ರವನ್ನು ದೇವೇಂದ್ರನಿಗಾಗಿಯೇ ನಿರ್ಮಿಸಿ ಮೂರು ಲೋಕಗಳನ್ನೂ ಗೆಲ್ಲಲುದ್ಯಮಿಸಿದ ಕಾಲದಲ್ಲಿ ಆತನಿಗೆ ಕೊಟ್ಟನು. ಆ ಮಹಾಸ್ತ್ರದ ಪಕ್ಷಸ್ಥಳದಲ್ಲಿ ವಾಯುದೇವನೂ, ಫಾಲ (ಶಲ್ಯ) ಭಾಗಗಳಲ್ಲಿ ಸೂರ್ಯಾಗ್ನಿಗಳೂ ಅಧಿಷ್ಠಿತರಾಗಿರುವರಲ್ಲದೆ, ಅದರ ಶರೀರವು ಆಕಾಶಮಯವಾಗಿಯೂ ಇರುವುದು. ಗೌರವದಲ್ಲಿ ಅದು ಮೇರುಮಂದರ ಪರ್ವತಗಳಿಗೆ ಸಮಾನವಾಗಿಯೂ, ತನ್ನ ದೇಹದಿಂದಲೇ ಪ್ರಜ್ವಲಿಸುತ್ತ ಒಳ್ಳೆಯ ಕೊಂಕಿನಗಳೂ, ಸುವರ್ಣಭೂಷಣಗಳೂ ಉಳ್ಳುದಾಗಿಯೂ ಇದ್ದಿತು. ಅದು ಸಮಸ್ತ ಭೂತಗಳ ತೇಜಸ್ಸುಗಳ ಸಾರಾಂಶದಿಂದ ಮಾಡಲ್ಪಟ್ಟುದಾಗಿ ಭಾಸ್ಕರನ ಕಾಂತಿಯನ್ನೊಳಗೊಂಡಿದ್ದಿತು. ಪ್ರಳಯ ಕಾಲಾಗ್ನಿಯಂತೆ ಹೊಗೆಯೊಡ

* ಈ ಬ್ರಹ್ಮಾಸ್ತ್ರವು ಮೊದಲು ದೇವೇಂದ್ರನ ನಿಮಿತ್ತವಾಗಿ ಬ್ರಹ್ಮದೇವನಿಂದ ಸೃಷ್ಟಿಸಲ್ಪಟ್ಟಿತು. ಕೃತಕೃತ್ಯನಾದ ದೇವೇಂದ್ರನು ಆ ಅಸ್ತ್ರವನ್ನು ಶ್ರೀರಾಮಮೂರ್ತಿಗೆ ಕೊಡಲೋಸುಗ ಪೂಜ್ಯರಾದ ಅಗಸ್ತ್ಯಮಹರ್ಷಿಗಳಿಗೆ ಸಮರ್ಪಿಸಿದನು. ಅಗಸ್ತ್ಯರು ಶ್ರೀರಾಮಮೂರ್ತಿಯು ಸೀತಾಲಕ್ಷ್ಮಣಸಮೇತನಾಗಿ ದಂಡಕಾರಣ್ಯಕ್ಕೆ ಆಗಮಿಸಿದಾಗ್ಗೆ ಆ ಅಸ್ತ್ರವನ್ನು ಆಶೀರ್ವಾದಪುರಸ್ಸರವಾಗಿ ಆತನಿಗೆ ಕೊಟ್ಟರು. ಅರಣ್ಯಕಾಂಡ ೧೨ ಸರ್ಗ, ೩೪ ರಿಂದ ೩೬ನೇ ಶ್ಲೋಕದವರೆಗೂ ನೋಡಿರಿ.

ಪರನಾಗಾಶ್ವಬೃಂದಾನಾಂ ಭೇದನಂ ಕ್ಷಿಪ್ರಕಾರಿಣಂ ||೮|| ದ್ವಾರಾಣಾಂ ಪರಿಘಾಣಾಂಚ ಗಿರೀಣಾಮಪಿ ಭೇದನಂ | ನಾನಾರುಧಿರಸಿಕ್ತಾಂಗಂ ಮೇದೋದಿಗ್ಧಂ ಸುದಾರುಣಂ ||೯|| ವಜ್ರಸಾರಂ ಮಹಾನಾದಂ ನಾನಾಸಮಿತಿದಾರಣಂ | ಸರ್ವವಿತ್ರಾಸನಂ ಭೀಮಂ ಶ್ವಸಂತಮಿವ ಪನ್ನಗಂ ||೧೦|| ಕಂಕಗೃಧ್ರವಳಾನಾಂಚ ಗೋಮಾಯುಗಣ ರಕ್ಷಸಾಂ | ನಿತ್ಯಂ ಭಕ್ಷಪ್ರದಂ ಯುದ್ಧೇ ಯಮರೂಪಂ ಭಯಾವಹಂ ||೧೧|| ನಂದನಂ ವಾನರೇಂದ್ರಾಣಾಂ ರಕ್ಷಸಾಮವಸಾದನಂ | ವಾಜಿತಂ ವಿವಿಧೈರ್ವಾಜೈ ಶ್ಚಾರುಚಿತ್ರೈರ್ಗರುತ್ಮತಃ ||೧೨|| ತಮುತ್ತಮೇಷುಂ ಲೋಕಾನಾಮಿಕ್ಷ್ವಾಕುಭಯ

ಸರ್ಪದಂತೆ, ದೀಪ್ತಂ - ಹೊಳೆಯುತ್ತಿರುವ, ಪ....ನಾಂ - ಶತ್ರುಗಳ ಆನೆ ಕುದುರೆಗಳ ತಂಡಗಳಿಗೆ, ಭೇದನಂ - ವಿನಾಶಕರವಾದ, ಕ್ಷಿಪ್ರಕಾರಿಣಂ ಶೀಘ್ರಗಾಮಿಯಾದ, ದ್ವಾರಾಣಾಂ - ಶತ್ರುಗಳ ಊರು ಬಾಗಿಲುಗಳಿಗೆ, ಪರಿಘಾಣಾಂ - ಲಾಳುಂಡಿಗೆಗಳಿಗೆ, ಗಿರೀಣಾಮಪಿ - ಬೆಟ್ಟಗಳಿಗೂ, ಭೇದನಂ - ಭೇದಕವಾದ, ನಾನಾ....ಗಂ - ನಾನಾ ಬಗೆಯಾದ ರಕ್ತದಿಂದ ತೋಯಿಸಲ್ಪಟ್ಟ ಅವಯವಗಳುಳ್ಳ, ಮೇದೋದಿಗ್ಧಂ - ಮೇದಸ್ಸಿನಿಂದ ಲೇಪನ ಮಾಡಲ್ಪಟ್ಟ, ಸುದಾರುಣಂ - ಬಹಳ ಭಯಂಕರವಾದ, ವಜ್ರಸಾರಂ ವಜ್ರಾಯುಧದಂತೆ ದೃಢವಾದ, ಮಹಾನಾದಂ-ದೊಡ್ಡ ಧ್ವನಿಯುಳ್ಳ, ನಾನಾ....ಣಂ- ಅನೇಕ ಕಾಳೆಗಗಳಲ್ಲಿ ಮಾರಕವಾದ, ಸರ್ವ....ನಂ - ಮಹಾ ಭಯಂಕರವಾದ, ಭೀಮಂ- ಕ್ರೂರವಾದ, ಶ್ವಸಂತಂ - ನಿಟ್ಟುಸಿರು ಬಿಡುತ್ತಿರುವ, ಪನ್ನಗಮಿವ - ಸರ್ಪದಂತಿರುವ, ಕಂಕ....ಚ - ಕಂಕಗಳು, ಗೃಧ್ರಗಳು ವಳಗಳೂ ಎಂಬ ಹದ್ದುಗಳ ಭೇದಗಳಿಗೂ, ಗೋಮಾ....ಸಾಂ - ನರಿಗಳ ತಂಡಗಳಿಗೂ, ರಕ್ಕಸರಿಗೂ, ನಿತ್ಯಂ - ನಿರಂತರವೂ, ಭಕ್ಷಪ್ರದಂ - ಭಕ್ಷ್ಯವನ್ನು ಕೊಡುತ್ತಿರುವ, ಯುದ್ಧೇ - ಕಾಳೆಗ ದಲ್ಲಿ, ಯಮರೂಪಂ - ಮೃತ್ಯುಸ್ವರೂಪವಾದ, ಭಯಾವಹಂ - ಭಯಂಕರವಾದ, ವಾನರೇಂದ್ರಾಣಾಂ- ಕಪಿಶ್ರೇಷ್ಠರಿಗೆ, ನಂದನಂ - ಆನಂದಕರವಾದ, ರಕ್ಷಸಾಂ - ರಾಕ್ಷಸರಿಗೆ, ಅವಸಾದನಂ - ವಿನಾಶಕರ ವಾದ, ಗರುತ್ಮತಃ - ಗರುಡನ, ಚಾರುಚಿತ್ರೈಃ - ಮನೋಹರವಾಗಿಯೂ, ಚಿತ್ರವರ್ಣವಾಗಿಯೂ ಇರುವ, ವಿವಿಧೈಃ-ನಾನಾ ಬಗೆಗಳಾದ, ವಾಜೈಃ-ಪಕ್ಷಗಳಿಂದ, ವಾಜಿತಂ-ಕೀಲಿಸಿದ, ಲೋಕಾನಾಂ- ಲೋಕಗಳಲ್ಲಿ, ಇಕ್ಷ್ವಾ....ನಂ - ಇಕ್ಷ್ವಾಕು ವಂಶಸ್ಥರಿಗೆ ಭಯವನ್ನು ಪರಿಹಾರ ಮಾಡುತ್ತಿರುವ,

ಗೂಡಿದುದಾಗಿಯೂ, ಕಾಳಸರ್ಪದಂತೆ ಮಹಾ ಭಯಂಕರವಾಗಿಯೂ, ಶತ್ರುಪಕ್ಷದ ಆನೆ ಕುದುರೆಗಳ ಗುಂಪುಗಳನ್ನು ಭೇದಿಸುವಂತಹುದಾಗಿಯೂ, ಜಾಗ್ರತೆಯಾಗಿ ಪರಿಣಾಮ ವನ್ನುಂಟುಮಾಡುವುದಾಗಿಯೂ, ಬಾಗಿಲುಗಳನ್ನೂ, ಲಾಳುಂಡಿಗೆಗಳನ್ನೂ ಭೇದಿಸುವು ದಾಗಿಯೂ, ವಿವಿಧ ರುಧಿರಸಿಕ್ತವಾದ ಶರೀರವುಳ್ಳುದಾಗಿಯೂ, ಶತ್ರುಗಳ ಮೇದಸ್ಸಿನಿಂದ ಲೇಪಿತವಾಗಿ ಮಹಾ ಭಯಂಕರವಾಗಿರುವುದಾಗಿಯೂ, ವಜ್ರದಂತೆ ಮಹಾ ಸತ್ವವುಳ್ಳು ದಾಗಿಯೂ, ಮಹಾ ಶಬ್ದವುಳ್ಳುದಾಗಿಯೂ, ಅನೇಕ ಯುದ್ಧಗಳಲ್ಲಿ ಶತ್ರುಗಳನ್ನು ಖಂಡಿಸಿರು ವುದಾಗಿಯೂ, ಸರ್ವಭಯಂಕರವೂ, ಮಹಾ ಬಲಾಢ್ಯವೂ, ಆಗಿ ಮಹಾ ಸರ್ಪದಂತೆ ನಿಶ್ವಾಸ ಮಾಡುತ್ತಿರುವುದಾಗಿಯೂ, ಕಾಗೆ, ಹದ್ದು, ರಣಹದ್ದು, ನರಿ ಮೊದಲಾದ ಪ್ರಾಣಿಗಳ ಗುಂಪಿಗೆ ಪ್ರತಿನಿತ್ಯವೂ ಭೋಜನವನ್ನು ಕೊಡುತ್ತಿರುವುದಾಗಿಯೂ, ಯಮಸ್ವರೂಪ ವಾಗಿಯೂ, ವಾನರೇಂದ್ರರಿಗೆ ಸಂತೋಷಪ್ರದವಾಗಿಯೂ, ರಾಕ್ಷಸರಿಗೆ ವಿನಾಶಕರ ವಾಗಿಯೂ, ಗರುತ್ಮಂತನಂತೆ ಬಹು ಮನೋಹರವಾದ ಅನೇಕ ರೆಕ್ಕೆಗಳಿಂದಲಂಕೃತವಾ

ನಾಶನಂ । ದ್ವಿಷತಾಂ ಕೀರ್ತಿಹರಣಂ ಪ್ರಹರ್ಷಕರಮಾತ್ಮನಃ ॥೧೩॥ ಅಭಿಮಂತ್ರ್ಯ ತತೋ ರಾಮಸ್ತಂ ಮಹೇಷುಂ ಮಹಾಬಲಃ । ವೇದಪ್ರೋಕ್ತೇನ ವಿಧಿನಾ ಸಂದಧೇ ಕಾರ್ಮುಕೇ ಬಲೀ ॥೧೪॥ ತಸ್ಮಿನ್ ಸಂಧೀಯಮಾನೇತು ರಾಘವೇಣ ಶರೋತ್ತಮೇ । ಸರ್ವಭೂತಾನಿ ವಿತ್ರೇಸು ಶ್ಚಚಾಲಚ ವಸುಂಧರಾ॥೧೫॥ ಸರಾವಣಾಯ ಸಂಕ್ರುದ್ಧೋ ಭೃಶಮಾಯಮ್ಯ ಕಾರ್ಮುಕಂ । ಚಿಕ್ಷೇಪ ಪರಮಾಯತ್ತ ಸ್ತಂ ಶರಂ ಮರ್ಮಘಾತಿನಂ ॥ ೧೬ ॥ ಸವಜ್ರ ಇವ ದುರ್ಧರ್ಷೋ ವಜ್ರಬಾಹುವಿಸರ್ಜಿತಃ । ಕೃತಾಂತ ಇವಚಾವಾರ್ಯೋ ನ್ಯಪತದ್ರಾವಣೋರಸಿ ॥ ೧೭ ॥ ಸವಿಸೃಷ್ಟೋ ಮಹಾವೇಗಃ

ದ್ವಿಷತಾಂ - ಶತ್ರುಗಳಿಗೆ, ಕೀರ್ತಿಹರಣಂ - ಕೀರ್ತಿಯನ್ನು ಹೋಗಲಾಡಿಸುತ್ತಿರುವ, ಆತ್ಮನಃ - ತನಗೆ, ಪ್ರಹರ್ಷಕರಂ - ಸಂತೋಷಕರವಾದ, ತಮುತ್ತಮೇಷುಂ - ಆ ಉತ್ತಮ ಬಾಣವನ್ನು, ತತಃ - ಬಳಿಕ, ಮಹಾಬಲಃ - ಮಹಾ ಬಲವಂತನಾದ ಶ್ರೀರಾಮನು, ವೇದಪ್ರೋಕ್ತೇನ - ವೇದಮಂತ್ರಗಳಿಂದ ಹೇಳಲ್ಪಟ್ಟ, ವಿಧಿನಾ - ವಿಧಾನದಿಂದ, ಅಭಿಮಂತ್ರ್ಯ-ಅಭಿಮಂತ್ರಿಸಿ, ಬಲೀ - ಬಲವಂತನಾದ ಶ್ರೀರಾಮನು, ತತಃ - ಬಳಿಕ, ಕಾರ್ಮುಕೇ - ಬಿಲ್ಲಿನಲ್ಲಿ, ತಂಮಹೇಷುಂ - ಆ ದೊಡ್ಡ ಬಾಣವನ್ನು, ಸಂದಧೇ - ಸಂಧಾನ ಮಾಡಿದನು. ॥ ೧೪ ॥ ರಾಘವೇಣ - ಶ್ರೀರಾಮನಿಂದ, ತಸ್ಮಿಂಶರೋತ್ತಮೇ - ಆ ಉತ್ತಮವಾದ ಸರಳು, ಸಂಧೀಯಮಾನೇತು - ಸಂಧಾನ ಮಾಡಲ್ಪಡಲು, ಸರ್ವಭೂತಾನಿ - ಎಲ್ಲ ಪ್ರಾಣಿಗಳೂ, ವಿತ್ರೇಸುಃ - ಹೆದರಿದರು, ವಸುಂಧರಾ - ಭೂಮಿಯು, ಚಚಾಲ - ಕದಲಿತು, ಸಃ - ಆ ಶ್ರೀರಾಮನು, ಪರಮಾಯತ್ತಃ - ಬಹಳ ಜಾಗ್ರತೆಯುಳ್ಳವನಾಗಿ, ಕಾರ್ಮುಕಂ - ಬಿಲ್ಲನ್ನು, ಭೃಶಂ - ಬಹಳವಾಗಿ, ಆಯಮ್ಯ - ಬೊಗ್ಗಿಸಿ, ರಾವಣಾಯ - ದಶಕಂಠನಿಗೋಸ್ಕರ, ಸಂಕ್ರುದ್ಧಃ - ಕೋಪಿಷ್ಠನಾಗಿ, ಮರ್ಮಘಾತಿನಂ - ಮರ್ಮದಲ್ಲೇ ಹೊಡೆಯುತ್ತಿರುವ, ತಂಶರಂ - ಆ ಸರಳನ್ನು, ಚಿಕ್ಷೇಪ - ಎಸೆದನು. ॥ ೧೫-೧೬ ॥ ಸಃ - ಆ ಬಾಣವು, ವಜ್ರ....ತಃ - ದೇವೇಂದ್ರನ ಭುಜದಿಂದ ಬಿಡಲ್ಪಟ್ಟ, ವಜ್ರೇವ - ವಜ್ರಾಯುಧದಂತೆ, ದುರ್ಧರ್ಷಃ - ತಿರಸ್ಕರಿಸಲಸಾಧ್ಯವಾಗಿ, ಕೃತಾಂತಇವ - ಯಮನಂತೆ, ಅವಾರ್ಯಃ - ನಿವಾರಿಸಲಶಕ್ಯವಾಗಿ, ರಾವಣೋರಸಿ - ದಶಕಂಠನ ಎದೆಯಲ್ಲಿ, ನ್ಯಪತತ್ - ಬಿದ್ದಿತು.

ಗಿರುವುದಾಗಿಯೂ, ಇಕ್ಷ್ವಾಕುವಂಶದ ಭಯವನ್ನು ನಾಶಗೊಳಿಸುವುದಾಗಿಯೂ, ಶತ್ರುಗಳ ಕೀರ್ತಿಯನ್ನಪಹರಿಸುವುದಾಗಿಯೂ, ತನಗೂ ಆನಂದವನ್ನುಂಟುಮಾಡುವುದಾಗಿಯೂ ಇರುವ ಆ ಬ್ರಹ್ಮಾಸ್ತ್ರವನ್ನು ಶ್ರೀರಾಮಮೂರ್ತಿಯು ಕೈಗೆ ತೆಗೆದುಕೊಂಡನು. ॥ ೧-೧೩ ॥ ಆ ಬಳಿಕ ಮಹಾ ಬಲಪರಾಕ್ರಮಿಯಾದ ಶ್ರೀರಾಮಮೂರ್ತಿಯು ವೇದಪ್ರೋಕ್ತವಾದ ವಿಧಿಯಿಂದ ಆ ಮಹಾಸ್ತ್ರವನ್ನಭಿಮಂತ್ರಿಸಿ ಧನುಸ್ಸಿನಲ್ಲಿ ಸಂಧಿಸಿದನು. ಆತನು ಆ ಬ್ರಹ್ಮಾಸ್ತ್ರವನ್ನು ಧನುಸ್ಸಿನಲ್ಲಿ ಸಂಧಾನ ಮಾಡುತ್ತಿರುವಲ್ಲಿ ಸಮಸ್ತ ಭೂತಗಳೂ ಬೆದರಿಬೆಂಡಾಗಿ ಹೋದುವು. ಭೂಮಿಯು ನಡುಗಿಹೋಯಿತು. ಶ್ರೀರಾಮನೂ ಆ ಸಮಯದಲ್ಲಿ ಮಹತ್ತರವಾಗಿ ಕೋಪಗೊಂಡು ಬಿಲ್ಲನ್ನು ಸೆಳೆದು ಶತ್ರುಮರ್ಮ ವಿಭೇದಕವಾದ ಆ ಮಹಾಸ್ತ್ರವನ್ನು ರಾವಣನಿಗೋಸುಗ ಪ್ರಯೋಗಿಸಿದನು. ಮಹಾ ಬಲಿಷ್ಠವಾದ ಶ್ರೀರಾಮನ ಬಾಹುಗಳಿಂದ ವಿಮುಕ್ತವಾದ ಮಹೇಂದ್ರನ ವಜ್ರಾಯುಧದಂತೆಯೂ, ಕಾಲಯಮನಂತೆಯೂ, ಶತ್ರುಗಳಿಂದ ನಿವಾರಿಸಲಸದಳವಾಗಿಯೂ ಇರುವ ಆ ಮಹಾಸ್ತ್ರವು ರಾವಣನ ವಕ್ಷಸ್ಥಳದಲ್ಲಿ ಬಿದ್ದಿತು. ಹೀಗೆ ಶ್ರೀರಾಮನು ಪ್ರಯೋಗಿಸಿದ ಶತ್ರುಶರೀರ ವಿನಾಶಕರ

ಶರೀರಾಂತಕರಃ ಶರಃ । ಬಿಭೇದ ಹೃದಯಂ ತಸ್ಯ ರಾವಣಸ್ಯ ದುರಾತ್ಮನಃ ॥ ೧೮ ॥
ರುಧಿರಾಕ್ತಸ್ಸ ವೇಗೇನ ಜೀವಿತಾಂತಕರಶ್ಶರಃ । ರಾವಣಸ್ಯ ಹರನ್ ಪ್ರಾಣಾನ್ ವಿವೇಶ
ಧರಣೀತಲಂ ॥ ೧೯ ॥ ಸಶರೋ ರಾವಣಂ ಹತ್ವಾ ರುಧಿರಾರ್ದ್ರೀಕೃತಚ್ಛವಿಃ । ಕೃತ
ಕರ್ಮಾನಿಭೃತವತ್ ಸ್ವತೂಣೀಂ ಪುನರಾಗಮತ್ ॥ ೨೦ ॥ ತಸ್ಯ ಹಸ್ತಾದ್ಧತಸ್ಯಾಶು
ಕಾರ್ಮುಕಂ ತತ್ಸಸಾಯಕಂ । ನಿಪಪಾತ ಸಹಪ್ರಾಣೈರ್ಭ್ರಶ್ಯಮಾನಸ್ಯ ಜೀವಿತಾತ್
॥ ೨೧ ॥ ಗತಾಸುರ್ಭೀಮವೇಗಸ್ತು ನೈರ್ಋತೇಂದ್ರೋ ಮಹಾದ್ಯುತಿಃ । ಪಪಾತ
ಸ್ಯಂದನಾದ್ಭೂಮೌ ವೃತ್ರೋ ವಜ್ರಹತೋ ಯಥಾ ॥ ೨೨ ॥ ತಂ ದೃಷ್ಟ್ವಾ ಪತಿತಂ
ಭೂಮೌ ಹತಶೇಷಾ ನಿಶಾಚರಾಃ । ಹತನಾಥಾ ಭಯತ್ರಸ್ತಾಸ್ಸರ್ವತಸ್ಸಂಪ್ರದು

॥ ೧೭ ॥ ಮಹಾವೇಗಃ - ಬಹು ವೇಗವತ್ತಾಗಿ, ವಿಸೃಷ್ಟಃ - ಬಿಡಲ್ಪಟ್ಟ, ಶರೀ....ರಃ - ಶರೀರನಾಶಕರವಾದ, ಸಶರಃ - ಆ ಸರಳು, ದುರಾತ್ಮನಃ - ದುಷ್ಟಬುದ್ಧಿಯುಳ್ಳ, ತಸ್ಯರಾವಣಸ್ಯ - ಆ ದಶಕಂಠನ, ಹೃದಯಂ - ವಕ್ಷಸ್ಥಲವನ್ನು, ಬಿಭೇದ - ಭೇದಿಸಿತು. ॥ ೧೮ ॥ ರುಧಿರಾಕ್ತಃ - ರಕ್ತದಿಂದ ತೋಯಿಸಲ್ಪಟ್ಟ, ಸಶರಃ - ಆ ಸರಳುಗಳು, ವೇಗೇನ - ಜವದಿಂದ, ಜೀವಿ....ರಃ - ಪ್ರಾಣನಾಶಕರವಾದ ಕಾರಣ, ರಾವಣಸ್ಯ - ದಶಗ್ರೀವನ, ಪ್ರಾಣಾನ್ - ಪ್ರಾಣಗಳನ್ನು, ಹರನ್ - ಅಪಹರಿಸಿ, ಧರಣೀತಲಂ - ಭೂಪ್ರದೇಶವನ್ನು, ವಿವೇಶ - ಹೊಕ್ಕಿತು. ॥ ೧೯ ॥ ಸಶರಃ - ಆ ಸರಳು, ರಾವಣಂ - ರಾವಣಾಸುರನನ್ನು, ಹತ್ವಾ - ಕೊಂದು, ರುಧಿ....ವಿಃ - ರಕ್ತದಿಂದ ನೆನೆದ ಕಾಂತಿಯುಳ್ಳದ್ದಾಗಿ, ಕೃತಕರ್ಮಾ - ಮಾಡಲ್ಪಟ್ಟ ವಧರೂಪಕಾರ್ಯವುಳ್ಳದ್ದಾಗಿ, ನಿಭೃತವತ್ - ನಿಶ್ಚಂಚಲವಾಗಿ, ಸ್ವತೂಣೀಂ - ತನ್ನ ಬತ್ತಳಿಕೆಯನ್ನು ಕುರಿತು, ಪುನಃ - ಮತ್ತು, ಆಗಮತ್ - ಬಂದು ಸೇರಿತು. ॥ ೨೦ ॥ ಜೀವಿತಾತ್ - ಪ್ರಾಣದಿಂದ, ಭ್ರಶ್ಯಮಾನಸ್ಯ - ಜಾರಿ ಬೀಳುತ್ತಿರುವ, ಹತಸ್ಯ - ಸಂಹೃತನಾದ, ತಸ್ಯ - ದಶಕಂಠನ, ಹಸ್ತಾತ್ - ಕೈಯಿಂದ, ಆಶು - ಜಾಗ್ರತೆಯಾಗಿ, ಸಸಾಯಕಂ - ಸರಳುಗಳಿಂದೊಡಗೂಡಿದ, ತತ್ಕಾರ್ಮುಕಂ - ಆ ಕೋದಂಡವು, ನಿಪಪಾತ - ಕೆಳಕ್ಕೆ ಬಿದ್ದಿತು. ॥ ೨೧ ॥ ಗತಾಸುಃ - ಹೋದ ಪ್ರಾಣಗಳುಳ್ಳ, ಭೀಮವೇಗಃ - ಭಯಂಕರವಾದ ವೇಗವುಳ್ಳ, ನೈರ್ಋತೇಂದ್ರಃ - ರಾವಣಾಸುರನು, ವಜ್ರಹತಃ - ವಜ್ರಾಯುಧದಿಂದ ಹೊಡೆಯಲ್ಪಟ್ಟ, ವೃತ್ರೋಯಥಾ - ವೃತ್ರಾಸುರನಂತೆ, ಸ್ಯಂದನಾತ್ - ರಥದಿಂದ, ಭೂಮೌ - ನೆಲದಲ್ಲಿ, ಪಪಾತ - ಬಿದ್ದನು. ॥ ೨೨ ॥ ಭೂಮೌ - ನೆಲದಲ್ಲಿ, ಪತಿತಂ - ಬಿದ್ದಿರುವ, ತಂ - ಆ ದಶಕಂಠನನ್ನು, ದೃಷ್ಟ್ವಾ - ಕಂಡು, ಹತಶೇಷಾಃ - ಮಡಿದುಳಿದ,

---

ವಾದ ಆ ಬ್ರಹ್ಮಾಸ್ತ್ರವು ದುರಾತ್ಮನಾದ ರಾವಣನ ವಕ್ಷಸ್ಥಳದಲ್ಲಿ ಬಿದ್ದು ಅವನ ಹೃದಯವನ್ನೇ ಭೇದಿಸಿಬಿಟ್ಟಿತು. ॥೧೪–೧೮॥ ಆ ಬ್ರಹ್ಮಾಸ್ತ್ರ ಬಾಣವು ಮಹಾ ವೇಗದಿಂದ ರಾವಣಾಸುರನ ಪ್ರಾಣಗಳನ್ನಪಹರಿಸಿ ರಕ್ತಸಿಕ್ತವಾಗಿ ಭೂಮಿಯನ್ನು ಹೊಕ್ಕು ಅಲ್ಲಿಂದ ಮೇಲೆದ್ದು ರಕ್ತದಿಂದ ತೊಯ್ದು ಕೆಂಪೊಗೆವ ಕಾಂತಿಯುಳ್ಳುದಾಗಿ ಕೃತಕೃತ್ಯವಾಗಿ ಬಳಿಕ ಸುಮ್ಮನೆ ತನ್ನ ಬತ್ತಳಿಕೆಯನ್ನು ಸೇರಿಕೊಂಡಿತು. ಬ್ರಹ್ಮಾಸ್ತ್ರವಿದ್ದನಾದ ರಾವಣಾಸುರನ ಕೈಯಿಂದ ಬಾಣಸಮೇತವಾದ ಬಿಲ್ಲೂ ಪ್ರಾಣಗಳೊಡಗೂಡಿ ಕೆಳಕ್ಕೆ ಬಿದ್ದಿತು. ಮಹಾತೇಜಸ್ವಿಯೂ, ಮಹಾ ವೇಗವಂತನೂ, ರಾಕ್ಷಸರಾಜನೂ ಆದ ರಾವಣಾಸುರನಾದರೋ ಗತಪ್ರಾಣನಾಗಿ ವಜ್ರಹತನಾದ ವೃತ್ರಾಸುರನಂತೆ ರಥದಿಂದ ಕೆಳಕ್ಕೆ ಬಿದ್ದುಬಿಟ್ಟನು. ತಮ್ಮ ಒಡೆಯನಾದ ಆ ರಾಕ್ಷಸರಾಜನು ಮಡಿದುರುಳಿದೊಡನೆಯೇ ಅಳಿದುಳಿದಿದ್ದ ರಾಕ್ಷಸರೆಲ್ಲರೂ,

ದ್ರುವುಃ ॥ ೨೩ ॥ ನರ್ದಂತಶ್ಚಾಭಿಪೇತುಸ್ತಾನ್ ವಾನರಾ ದ್ರುಮಯೋಧಿನಃ । ದಶ
ಗ್ರೀವವಧಂ ದೃಷ್ಟ್ವಾ, ವಿಜಯಂ ರಾಘವಸ್ಯ ಚ ॥ ೨೪ ॥ ಅರ್ದಿತಾ ವಾನರೈರ್ಹೃಷ್ಟೈ
ರ್ಲಂಕಾಮಭ್ಯಪತನ್ ಭಯಾತ್ । ಗತಾಶ್ರಯತ್ವಾತ್ಕರುಣೈರ್ಬಾಷ್ಪಪ್ರಸ್ರವಣೈ
ರ್ಮುಖೈಃ ॥ ೨೫ ॥ ತತೋ ವಿನೇದುಸ್ಸಂಹೃಷ್ಟಾ ವಾನರಾ ಜಿತಕಾಶಿನಃ । ವದಂತೋ
ರಾಘವಜಯಂ ರಾವಣಸ್ಯ ಚ ತದ್ವಧಂ ॥ ೨೬ ॥ ಅಥಾಂತರಿಕ್ಷೇ ವ್ಯನದತ್ಸೌಮ್ಯಸ್ತ್ರಿ
ದಶದುಂದುಭಿಃ । ದಿವ್ಯಗಂಧವಹಸ್ತತ್ರ ಮಾರುತಸ್ಸುಸುಖಂ ವವೌ ॥ ೨೭ ॥ ನಿಪ

ನಿಶಾಚರಾಃ - ರಕ್ಕಸರು, ಹತನಾಥಾಃ - ಹೊಡೆಯಲ್ಪಟ್ಟ ಧಣಿಯುಳ್ಳವರಾಗಿ, ಭಯತ್ರಸ್ತಾಃ - ಭಯಗೊಂಡವರಾಗಿ, ಸರ್ವತಃ - ಎಲ್ಲಾ ದಿಕ್ಕುಗಳಲ್ಲಿಯೂ, ಸಂಪ್ರದುದ್ರುವುಃ - ಓಡಿಹೋದರು. ॥ ೨೩ ॥ ವಾನರಾಃ - ಕಪಿಗಳು, ದ್ರುಮಯೋಧಿನಃ - ವೃಕ್ಷಗಳಿಂದ ಯುದ್ಧಮಾಡುತ್ತಿರುವವರಾಗಿ, ನದಂತಃ - ಗರ್ಜಿಸುತ್ತ, ಅಭಿಪೇತುಃ - ಅಟ್ಟಿಹೋದರು, ದಶ....ಧಂ - ರಾವಣಾಸುರನ ಸಂಹಾರವನ್ನು, ರಾಘವಸ್ಯ - ಶ್ರೀರಾಮನಿಗೆ, ವಿಜಯಂ - ಜಯವನ್ನೂ, ದೃಷ್ಟ್ವಾ - ಕಂಡು, ಹೃಷ್ಟೈಃ - ಸಂತೋಷಯುಕ್ತರಾದ, ವಾನರೈಃ - ಕಪಿಗಳಿಂದ, ಅರ್ದಿತಾಃ - ಹೆದರಿಸಲ್ಪಟ್ಟವರಾಗಿ, ಗತಾಶ್ರಯತ್ವಾತ್ - ಕಳೆದುಹೋದ ಆಶ್ರಯವುಳ್ಳವರಾದಕಾರಣ, ಕರುಣೈಃ - ದೀನಗಳಾದ, ಬಾಷ್ಪ....ಣೈಃ - ಕಂಬನಿಯನ್ನು ಸುರಿಸುತ್ತಿರುವ, ಮುಖೈಃ - ಮುಖಗಳಿಂದ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಭಯಾತ್ - ಭಯದಿಂದ, ಅಭ್ಯಪತನ್ - ಬಂದರು. ॥ ೨೪-೨೫ ॥ ತತಃ - ಬಳಿಕ, ಜಿತಕಾಶಿನಃ - ಜಯದಿಂದ ಪ್ರಕಾಶಮಾನರಾದ, ವಾನರಾಃ - ಕಪಿಗಳು, ಸಂಹೃಷ್ಟಾಃ - ಹರ್ಷಯುಕ್ತರಾಗಿ, ರಾಘವಜಯಂ - ಶ್ರೀರಾಮನ ಜಯವನ್ನೂ, ರಾವಣಸ್ಯ - ದಶಕಂಠನ, ತದ್ವಧಂಚ - ಆ ಸಂಹಾರವನ್ನೂ, ವದಂತಃ - ಹೇಳುತ್ತಿರುವವರಾಗಿ, ವಿನೇದುಃ - ಮಂಗಳವನ್ನು ಹಾಡಿದರು. ॥೨೬॥ ಅಥ - ಬಳಿಕ, ಅಂತರಿಕ್ಷೇ - ಅಂತರಿಕ್ಷದಲ್ಲಿ, ಸೌಮ್ಯ....ಭಿಃ - ಸೌಮ್ಯರಾದ ದೇವತೆಗಳ ಭೇರಿಯು, ವ್ಯನದತ್ - ಧ್ವನಿಗೊಂಡಿತು, ತತ್ರ - ಆ ರಣರಂಗದಲ್ಲಿ, ದಿವ್ಯಗಂಧವಹಃ - ದೇವತಾಸಂಬಂಧವಾದ ಸುವಾಸನೆಯನ್ನು ವಹಿಸುತ್ತಿರುವ, ಸುಸುಖಃ - ಸುಖಸ್ಪರ್ಶವುಳ್ಳ, ಮಾರುತಃ - ಮಂದಮಾರುತವು, ವವೌ - ಬೀಸಿತು. ॥ ೨೭ ॥ ತದಾ - ಆ ಕಾಲದಲ್ಲಿ, ದುರವಾಪಾ - ಹೊಂದಲಸಾಧ್ಯವಾದ, ಮನೋ

ಪ್ರಾಣದಮೇಲೆ ಆಶೆಯಿಲ್ಲದೆ, ಭಯದಿಂದ ತತ್ತಳಿಸಿ ದಿಕ್ಕೆಟ್ಟು ಎಲ್ಲೆಡೆಗೂ ಓಡಿಹೋದರು. ಮರಗಳೇ ಆಯುಧಗಳಾಗಿರುವ ವಾನರರೆಲ್ಲರೂ ಮಹಾ ಸಿಂಹನಾದಗಳನ್ನು ಮಾಡುತ್ತ ಆ ರಾಕ್ಷಸರನ್ನೆತ್ತೆತ್ತಲೂ ಅಟ್ಟಿಹೋದರು. ರಾವಣಾಸುರನ ವಧವನ್ನೂ, ಶ್ರೀರಾಮಮೂರ್ತಿಯ ವಿಜಯವನ್ನೂ ಕಂಡು ಪರಮಾನಂದಭರಿತರಾದ ಆ ವಾನರರಿಂದ ಬಹಳವಾಗಿ ಪೀಡಿತರಾದ ರಾಕ್ಷಸರು ಆಶ್ರಯವಿಲ್ಲದೆ ದೀನದೀನವಾಗಿ ಕಣ್ಣೀರಿಡುತ್ತ ಲಂಕಾನಗರಕ್ಕೆ ಅಭಿಮುಖವಾಗಿ ಹೊರಟುಹೋದರು. ॥೧೯-೨೫॥ ಆಗ ಜಯಶಾಲಿಗಳೂ, ಮಹಾ ತೇಜಸ್ವಿಗಳೂ ಆದ ವಾನರರೆಲ್ಲರೂ ಸಂತೋಷ ಸಂಭ್ರಮಗಳಿಂದ ಕೋಲಾಹಲ ಧ್ವನಿ ಮಾಡಿದರು. ಅವರೆಲ್ಲರೂ ಶ್ರೀರಾಮನ ವಿಜಯವನ್ನೂ, ರಾವಣಾಸುರನ ಸೋಲನ್ನೂ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತ ಆನಂದಪಡುತ್ತಿದ್ದರು. ಆ ತರುವಾಯ ಅಂತರಿಕ್ಷದಲ್ಲಿ ಶಾಂತಿಕರವಾದ ದೇವದುಂದುಭಿಗಳು ಮೆಲ್ಲನೆ ಮೊಳಗಿದುವು. ಸುರೇಂದ್ರನ ನಂದನೋದ್ಯಾನದ ಪುಷ್ಪಪರಿಮಳವನ್ನು ಹೊತ್ತ ಮಾರುತನು ಬಹು ಸುಖಸ್ಪರ್ಶವಾಗಿ ಬೀಸತೊಡಗಿದನು. ಅಂತರಿಕ್ಷದಿಂದ

ಪಾತಾಂತರಿಕ್ಷಾಚ್ಚ ಪುಷ್ಪವೃಷ್ಟಿಸ್ತದಾ ಭುವಿ । ಕಿರಂತೀ ರಾಘವರಥಂ ದುರವಾಪಾ ಮನೋರಮಾ ॥ ೨೮ ॥ ರಾಘವಸ್ತವಸಂಯುಕ್ತಾ ಗಗನೇಽಪಿಚ ಶುಶ್ರುವೇ । ಸಾಧು ಸಾಧ್ವಿತಿ ವಾಗಗ್ರ್ಯಾ ದೈವತಾನಾಂ ಮಹಾತ್ಮನಾಂ ॥೨೯॥ ಆವಿವೇಶ ಮಹಾಹರ್ಷೋ ದೇವಾನಾಂ ಚಾರಣೈಸ್ಸಹ । ರಾವಣೇ ನಿಹತೇ ರೌದ್ರೇ ಸರ್ವಲೋಕಭಯಂಕರೇ ॥ ೩೦ ॥ ‡ ತತಸ್ಸಕಾಮಂ ಸುಗ್ರೀವಮಂಗದಂಚ ಮಹಾಬಲಂ । ಚಕಾರ ರಾಘವಃ ಪ್ರೀತೋ ಹತ್ವಾ ರಾಕ್ಷಸಪುಂಗವಂ ॥ ೩೧ ॥ ತತಃ ಪ್ರಜಗ್ಮುಃ ಪ್ರಶಮಂ ಮರುದ್ಗಣಾ ದಿಶಃ ಪ್ರಸೇದುರ್ವಿಮಲಂ ನಭೋಽಭವತ್ । ಮಹೀ ಚಕಂಪೇ ನಹಿ ಮಾರುತೋ

ರಮಾ - ಮನೋಹರವಾದ, ಪುಷ್ಪವೃಷ್ಟಿಃ - ಹೂಮಳೆಯು, ಭುವಿ - ನೆಲದಲ್ಲಿ, ರಾಘವರಥಂ - ಶ್ರೀರಾಮನ ರಥದಲ್ಲಿ, ಕಿರಂತೀ - ಎರಚಲ್ಪಟ್ಟದಾಗಿ, ಅಂತರಿಕ್ಷಾತ್ - ಅಂತರಿಕ್ಷದಿಂದ, ನಿಪಪಾತ - ಕೆಳಕ್ಕೆ ಬಿದ್ದಿತು. ॥ ೨೮ ॥ ಗಗನೇಽಪಿ - ಅಂತರಿಕ್ಷದಲ್ಲಿಯೂ, ರಾಘ....ಕ್ತಾ - ಶ್ರೀರಾಮನ ಸ್ತೋತ್ರದಿಂದ ಕೂಡಿರುವ, ಮಹಾತ್ಮನಾಂ - ಮಹಾ ಪ್ರಭಾವವಂತನಾದ, ದೇವತಾನಾಂ - ದೇವತೆಗಳ, ಸಾಧು ಸಾಧ್ವಿತಿ - ಒಳ್ಳೆಯದು ಒಳ್ಳೆಯದೆಂಬ, ಅಗ್ರ್ಯಾ - ಶ್ರೇಷ್ಠವಾದ, ವಾಕ್ - ವಾಣಿಯು, ಶುಶ್ರುವೇ - ಕೇಳಲ್ಪಟ್ಟಿತು. ॥ ೨೯ ॥ ಸರ್ವ....ರೇ - ಸಮಸ್ತ ಲೋಕಗಳಿಗೂ ಭಯಂಕರನಾದ, ರೌದ್ರೇ - ಅತಿ ಕ್ರೂರನಾದ, ರಾವಣೇ - ದಶಕಂಠನು, ನಿಹತೇ - ಮೃತನಾಗಲು, ಚಾರಣೈಸ್ಸಹ - ಚಾರಣರಿಂದೊಡಗೂಡಿದ, ದೇವಾನಾಂ - ದೇವತೆಗಳಿಗೆ, ಮಹಾಹರ್ಷಃ - ಬಹಳ ಸಂತೋಷವು, ಆವಿವೇಶ - ಹೊಕ್ಕಿತು. ॥ ೩೦ ॥ ತತಃ - ಬಳಿಕ, ರಾಘವಃ - ಶ್ರೀರಾಮನು, ರಾಕ್ಷಸಪುಂಗವಂ - ದಶಕಂಠನನ್ನು, ಹತ್ವಾ - ಕೊಂದು, ಪ್ರೀತಃ - ಸಂತೋಷಗೊಂಡವನಾಗಿ, ಸುಗ್ರೀವಂ - ಸುಗ್ರೀವನನ್ನು, ಮಹಾಬಲಂ - ಬಹಳ ಬಲವಂತನಾದ, ಅಂಗದಂಚ - ಅಂಗದನನ್ನು, ಸಕಾಮಂ - ಕೋರಿಕೆಯಿಂದೊಡಗೂಡಿದವರನ್ನಾಗಿ, ಚಕಾರ - ಮಾಡಿದನು. ॥ ೩೧ ॥ ತತಃ - ಬಳಿಕ, ಮರುದ್ಗಣಾಃ - ದೇವತಾ ಸಮೂಹಗಳು, ಪ್ರಶಮಂ - ಶಾಂತಿಯನ್ನು, ಪ್ರಜಗ್ಮುಃ - ಹೊಂದಿದವು, ದಿಶಃ - ದಿಕ್ಕುಗಳು, ಪ್ರಸೇದುಃ - ಪ್ರಸನ್ನವಾದವು,

---

ಬಹು ಮನೋಹರವೂ, ಇತರರಿಂದ ಪಡೆಯಲಸದಳವೂ ಆದ ಪುಷ್ಪವೃಷ್ಟಿಯು ಶ್ರೀರಾಮಚಂದ್ರನ ರಥದಮೇಲೆ ಬಿದ್ದು ಭೂಮಿಗೆ ಬೀಳುತ್ತಲಿದ್ದಿತು. ಅಂತರಿಕ್ಷದಲ್ಲಿಯೂ ಮಹಾತ್ಮರಾದ ದೇವತೆಗಳು ಶ್ರೀರಾಮನನ್ನು ಸ್ತೋತ್ರ ಮಾಡಿಕೊಂಡು 'ಭಲೆ, ಭಲೆ' ಎಂದು ಹೇಳಿಕೊಳ್ಳುತ್ತಿದ್ದ ಸ್ಪಷ್ಟವೂ, ಶ್ರೇಷ್ಠವೂ ಆದ ಮಾತುಗಳೂ ಕೇಳಿಬರುತ್ತಲಿದ್ದುವು. ಸಮಸ್ತಲೋಕಗಳಿಗೂ ಭಯಂಕರನೂ, ಮಹಾ ಕ್ರೂರನೂ ಆದ ರಾವಣಾಸುರನು ಮಡಿದು ಬೀಳಲು, ಚಾರಣರೊಡಗೂಡಿದ ದೇವತೆಗಳೆಲ್ಲರೂ ಪರಮಾನಂದಭರಿತರಾದರು. ॥೨೯-೩೦॥ ಹೀಗೆ ಶ್ರೀರಾಮಚಂದ್ರನು ರಾವಣಾಸುರನನ್ನು ರಣರಂಗದಲ್ಲಿ ಕೊಂದುರುಳಿಸಿ ಅತ್ಯಾನಂದಭರಿತನಾಗಿ, ವಾನರೇಶ್ವರನಾದ ಸುಗ್ರೀವನನ್ನೂ, ವಾಲಿಪುತ್ರನಾದ ಅಂಗದಕುಮಾರನನ್ನೂ, ರಾಕ್ಷಸೇಶ್ವರನಾದ ವಿಭೀಷಣನನ್ನೂ ಸಮಸ್ತ ಇಷ್ಟಾರ್ಥಸಹಿತರನ್ನಾಗಿಸಿದನು. ಆಗ ಮರುದ್ಗಣ

---

‡ ಸುಗ್ರೀವನು ರಾವಣಸಂಹಾರವಾದ ತರುವಾಯ ತನಗೆ ಕಪಿಸಾರ್ವಭೌಮ ಪಟ್ಟವು ಸ್ಥಿರವಾಗುವುದೆಂದು ಹೇಗೆ ತಿಳಿದಿದ್ದನೋ ಹಾಗೆಯೇ ವಾಲಿಯ ಪುತ್ರನಾದ ಅಂಗದನೂ ಸಹ ತನಗೆ ಯುವರಾಜಪದವಿಯು ದೊರಕುತ್ತದೆಯೆಂದು ಆಶಿಸಿದ್ದನಾದುದರಿಂದ ಇಲ್ಲಿ "ಅಂಗದಂಚ ಮಹಾಬಲಂ" ಎಂಬ ದಳವನ್ನು ಪ್ರಯೋಗಿಸಿದ್ದಾರೆ. (ಗೋ)

ವವೌ ಸ್ಥಿರಪ್ರಭಶ್ಚಾಪ್ಯಭವದ್ದಿವಾಕರಃ ॥ ೩೨ ॥ ತತಸ್ತು ಸುಗ್ರೀವವಿಭೀಷಣಾದಯಃ ಸ್ಸುಹೃದ್ವಿಶೇಷಾಸ್ಸಹಲಕ್ಷ್ಮಣಾಸ್ತದಾ । ಸಮೇತ್ಯ ಹೃಷ್ಟಾ ವಿಜಯೇನ ರಾಘವಂ ರಣೇಽಭಿರಾಮಂ ವಿಧಿನಾ ಹ್ಯಪೂಜಯನ್ ॥ ೩೩ ॥

ಸತು ನಿಹತರಿಪುಸ್ಸ್ಥಿರಪ್ರತಿಜ್ಞ
ಸ್ಸ್ವಜನಬಲಾಭಿವೃತೋ ರಣೇ ರರಾಜ ।
ರಘುಕುಲನೃಪನಂದನೋ ಮಹೌಜಾ
ಸ್ತ್ರಿದಶಗಣೈ ರಭಿಸಂವೃತೋ ಯಥೇಂದ್ರಃ ॥ ೨೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಾದಶೋತ್ತರಶತತಮಸ್ಸರ್ಗಃ

ನಭಃ - ಅಂತರಿಕ್ಷವು, ವಿಮಲಂ - ನಿರ್ಮಲವಾಗಿ, ಅಭವತ್ - ಆಯಿತು, ಮಹೀ - ನೆಲವು, ನ ಚಕಂಪೇಹಿ-ಚಲಿಸಲಿಲ್ಲ, ಮಾರುತಃ-ಮಂದಮಾರುತವು, ವವೌ ಬೀಸಿತು, ದಿವಾಕರಃ-ಸೂರ್ಯನು, ಸ್ಥಿರಪ್ರಭಶ್ಚ - ಶಾಶ್ವತವಾದ ಪ್ರಕಾಶವುಳ್ಳವನು, ಅಭವತ್ - ಆದನು. ॥ ೩೨ ॥ ತತಃ - ಬಳಿಕ, ಸುಗ್ರೀ....ಯಃ - ಸುಗ್ರೀವ ವಿಭೀಷಣರೇ ಮೊದಲಾದ, ಸುಹೃದ್ವಿಶೇಷಾಃ - ಮಿತ್ರಶ್ರೇಷ್ಠರೆಲ್ಲರೂ, ಸಹಲಕ್ಷ್ಮಣಾಃ - ಲಕ್ಷ್ಮಣನಿಂದೊಡಗೂಡಿದವರಾಗಿ, ತದಾ - ಆ ಕಾಲದಲ್ಲಿ, ಸಮೇತ್ಯ - ಸೇರಿ, ಹೃಷ್ಟಾಃ - ಸಂತೋಷಗೊಂಡವರಾಗಿ, ರಣೇ - ರಂಗಸ್ಥಳದಲ್ಲಿ, ವಿಜಯೇನ - ವಿಜಯದ ಮಾತುಗಳಿಂದ, ಅಭಿರಾಮಂ - ಮನೋಹರನಾದ, ರಾಮಂ - ಶ್ರೀರಾಮನನ್ನು, ವಿಧಿನಾ - ಶಾಸ್ತ್ರೋಕ್ತ ವಿಧಿಯಿಂದ, ಅಪೂಜಯನ್ - ಪೂಜಿಸಿದರಷ್ಟೆ. ॥ ೩೩ ॥ ಮಹಾತೇಜಾಃ - ಮಹಾ ತೇಜೋವಂತನಾದ, ರಘು....ನಃ - ರಘುವಂಶಸ್ಥ ರಾಜರಿಗೆ ಆನಂದಕರನಾದ, ಸ್ಥಿರಪ್ರತಿಜ್ಞಃ - ಶಾಶ್ವತವಾದ ಪ್ರತಿಜ್ಞೆಯುಳ್ಳ, ಸತು - ಆ ಶ್ರೀರಾಮನಾದರೆ, ರಣೇ - ಕಾಳಗದಲ್ಲಿ, ನಿಹತಃ - ಹೊಡೆಯಲ್ಪಟ್ಟ ಶತ್ರುವುಳ್ಳವನಾಗಿ, ಸ್ವಜ....ತಃ-ತನ್ನ ಸಂಬಂಧಿಗಳಾದ ವಾನರ ಜನರ ಸೇನೆಗಳಿಂದ ಸುತ್ತುವರೆಯಲ್ಪಟ್ಟವನಾಗಿ, ತ್ರಿದಶಗಣೈಃ - ದೇವತೆಗಳ ಸಮೂಹಗಳಿಂದ, ಅಭಿಸಂವೃತಃ - ಪರಿವೃತನಾದ, ಇಂದ್ರೋಯಥಾ - ದೇವೇಂದ್ರನಂತೆ, ರರಾಜ - ಹೊಳೆಯುತ್ತಿದ್ದನು. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕಾದಶೋತ್ತರಶತತಮಸ್ಸರ್ಗಃ.

ಗಳೆಲ್ಲವೂ ಶಾಂತಿಯನ್ನು ಹೊಂದಿದುವು. ದಶದಿಶೆಗಳೂ ಪ್ರಸನ್ನಗಳಾದುವು. ಅಂತರಿಕ್ಷವು ನಿರ್ಮಲವಾಯಿತು. ಭೂಮಿಯು ಕಂಪಿಸದೆ ಶಾಂತವಾಗಿ ನೆಲೆಯಾಗಿ ನಿಂತಿತು. ವಾಯುದೇವನು ಸೊಂಪಾಗಿ ಬೀಸತೊಡಗಿದನು. ಸೂರ್ಯದೇವನೂ ಸಹ ಸ್ಥಿರವಾದ ಕಾಂತಿಯುಳ್ಳವನಾದನು. ಆ ಬಳಿಕ ಸುಗ್ರೀವ ವಿಭೀಷಣರೇ ಮೊದಲಾದ ಮಿತ್ರೋತ್ತಮರು ಲಕ್ಷ್ಮಣಸ್ವಾಮಿಯೊಡಗೂಡಿದವರಾಗಿ ವಿಜಯಲಕ್ಷ್ಮೀ ಸಮೇತನಾಗಿದ್ದ ಶ್ರೀರಾಮಮೂರ್ತಿಯನ್ನು ಸಂತೋಷ ಸಂಭ್ರಮಗಳಿಂದ ಶಾಸ್ತ್ರೋಕ್ತವಾಗಿ ಪೂಜಿಸಿದರು. ರಘುಕುಲರಾಜನಂದನನಾದ ಶ್ರೀರಾಮಚಂದ್ರನು ಶತ್ರುವಾದ ರಾವಣನನ್ನು ವಧಿಸಿದ ತರುವಾಯ ಸ್ಥಿರಪ್ರತಿಜ್ಞೆಯುಳ್ಳವನಾಗಿ ತನ್ನ ಮಿತ್ರರೊಡಗೂಡಿ ಸುರಗಣಗಳ ನಡುವಣ ಮಹೇಂದ್ರನಂತೆ ವಿರಾಜಿಸುತ್ತಿದ್ದನು. ॥ ೩೦–೩೪ ॥

ಇಂತಿದು ರಾವಣ ವಧವೆಂಬ ನೂರಹನ್ನೊಂದನೆಯ ಸರ್ಗವು
ಸಮಾಪ್ತವಾದುದು.

ಯುದ್ಧಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ

ಭ್ರಾತರಂ ನಿಹತಂ ದೃಷ್ಟ್ವಾ ಶಯಾನಂ ರಾಮನಿರ್ಜಿತಂ । ಶೋಕವೇಗಪರೀತಾತ್ಮಾ ವಿಲಲಾಪ ವಿಭೀಷಣಃ ॥೧॥ "ವೀರ! ವಿಕ್ರಾಂತ! ವಿಖ್ಯಾತ! ವಿನೀತ! ನಯಕೋವಿದ! । ಮಹಾರ್ಹಶಯನೋಪೇತ! ಕಿಂ ಶೇಷೇಽದ್ಯ ಹತೋ ಭುವಿ ॥೨॥ ವಿಕ್ಷಿಪ್ಯ ದೀರ್ಘೌ ನಿಶ್ಚೇಷ್ಟೌ ಭುಜಾವಂಗದಭೂಷಿತೌ । ಮುಕುಟೇನಾಪವೃತ್ತೇನ ಭಾಸ್ಕರಾಕಾರವರ್ಚಸಾ ॥೩॥ ತದಿದಂ ವೀರ! ಸಂಪ್ರಾಪ್ತಂ ಮಯಾ ಪೂರ್ವಂ ಸಮೀರಿತಂ । ಕಾಮಮೋಹಪರೀತಸ್ಯ ಯತ್ತೇ ನ ರುಚಿತಂ ವಚಃ ॥ ೪ ॥ ಯನ್ನದರ್ಪಾತ್ ಪ್ರಹ

ವಿಭೀಷಣಃ - ವಿಭೀಷಣನು, ರಾಮನಿರ್ಜಿತಂ - ಶ್ರೀರಾಮನಿಂದ ಜಯಿಸಲ್ಪಟ್ಟು, ಹತಂ - ಮಡಿದು, ಶಯಾನಂ - ಮಲಗಿರುವ, ಭ್ರಾತರಂ - ಅಣ್ಣನಾದ ದಶಕಂಠನನ್ನು, ದೃಷ್ಟ್ವಾ - ಕಂಡು, ಶೋಕ....ತ್ಮಾ - ಶೋಕಾತಿಶಯದಿಂದ ವ್ಯತ್ಯಸ್ತವಾದ ಮನವುಳ್ಳವನಾಗಿ, ವಿಲಲಾಪ - ವಿಲಪಿಸಿದನು. ॥೧॥ ಹೇ ವೀರ - ಎಲೈ ಪರಾಕ್ರಮಶಾಲಿಯೇ, ವಿಖ್ಯಾತ - ಪ್ರಖ್ಯಾತಪುರುಷನೇ, ವಿನೀತ - ಸಮಸ್ತ ವಿದ್ಯೆಗಳಲ್ಲಿಯೂ ಶಿಕ್ಷಿತನಾದವನೇ, ನ್ಯಾಯಕೋವಿದ - ನೀತಿಮಾರ್ಗದಲ್ಲಿ ಕೋವಿದನೇ, ಮಹಾ....ತ - ಅಮೂಲ್ಯವಾದ ಶಯನದಿಂದ ಕೂಡಬೇಕಾದವನೇ, ಅದ್ಯ - ಈಗ, ಹತಃ - ಹೊಡೆಯಲ್ಪಟ್ಟವನಾಗಿ, ಭುವಿ - ನೆಲದಲ್ಲಿ, ಕಿಂಶೇಷೇ - ಏಕೆ ಮಲಗಿರುವೆ. ॥೨॥ ದೀರ್ಘೌ - ಉದ್ದವಾಗಿರುವ, ನಿಶ್ಚೇಷ್ಟೌ - ಚೇಷ್ಟಾರಹಿತಗಳಾದ, ಅಂಗಾ.....ತೌ - ತೋಳುಬಂದಿಗಳಿಂದಲಂಕೃತವಾದ, ಭುಜೌ - ಭುಜಗಳನ್ನು, ನಿಕ್ಷಿಪ್ಯ - ಇರಿಸಿಕೊಂಡು, ಭಾಸ್ಕ....ಸಾ - ಸೂರ್ಯನ ಆಕಾರಕ್ಕೆ ಸಮಾನವಾದ ತೇಜಸ್ಸುಳ್ಳ, ಅಪವೃತ್ತೇನ - ನೆಲದಲ್ಲಿ ಹೊರಳಾಡುತ್ತಿರುವ, ಮಕುಟೇನ - ಕಿರೀಟದಿಂದೊಡಗೂಡಿ, ಕಿಂಶೇಷೇ - ಏಕೆ ಮಲಗಿರುವೆ. ॥೩॥ ಹೇ ವೀರ - ಎಲೈ ಶೂರನೇ, ಕಾಮ....ಸ್ಯ - ಕಾಮಜನ್ಯವಾದ ಮೋಹದಿಂದ ವ್ಯಾಪ್ತನಾದ, ತೇ - ನಿನಗೆ, ಪೂರ್ವಂ - ಪೂರ್ವದಲ್ಲಿ, ಮಯಾ - ನನ್ನಿಂದ, ಸಮೀರಿತಂ - ಹೇಳಲ್ಪಟ್ಟ, ಯದ್ವಚಃ - ಯಾವ ಮಾತು, ನರುಚಿತಂ - ಇಷ್ಟವಾದುದಾಗಲಿಲ್ಲವೋ,

---

ಆ ತರುವಾಯ ವಿಭೀಷಣನು, ಶ್ರೀರಾಮನಿಂದ ನಿರ್ಜಿತನಾಗಿ ಮಡಿದು ನೆಲದಲ್ಲಿ ಮಲಗಿರುವ ತನ್ನ ಅಣ್ಣನಾದ ರಾವಣಾಸುರನನ್ನು ನೋಡಿ, ದುಃಖದ ಬೇಗೆಯಿಂದ ಕದಡಿದ ಮನಸ್ಸುಳ್ಳವನಾಗಿ ರೋಗಿಸಿದನು. "ಅಕ್ಕಟ? ಅಣ್ಣಾ, ವೀರನೇ, ಪರಾಕ್ರಮದಿಂದ ಜಗತ್ಪ್ರಸಿದ್ಧನಾದವನೇ! ವಿನಯವನ್ನೂ, ನೀತಿಯನ್ನೂ ಚೆನ್ನಾಗಿ ತಿಳಿದವನೇ! ಮಹೋತ್ತಮವಾದ ಶಯನದಲ್ಲಿ ಮಲಗಲು ಯೋಗ್ಯವಾದ ನೀನು ಈಗ ಶ್ರೀರಾಮನಿಂದ ಹತನಾಗಿ ಭೂಮಿಯಲ್ಲಿ ಪವಳಿಸುವಂತಾಯ್ತೇ! ಅಯ್ಯೋ! ಹೀಗೇಕೆ ಮಲಗಿದೆ! ಎಲೈ ಮಹಾರಾಜನೇ! ಭುಜಕೀರ್ತಿಗಳೇ ಮೊದಲಾದ ಉತ್ತಮ ಭೂಷಣಗಳಿಂದ ಭೂಷಿತವಾದ ನಿಶ್ಚಲವಾದ ಈ ಭುಜಗಳನ್ನು ಕೆಳಗೆ ಬೀಳಿಸಿಕೊಂಡು, ಸೂರ್ಯನಂತೆ ಪ್ರಜ್ವಲಿಸುತ್ತಿರುವ ಕಿರೀಟವು ಜಾರಿರಲು ಭೂಮಿಯಲ್ಲಿ ಮಲಗಿರುವೆಯೋ! ಅಯ್ಯೋ! ಹಿಂದೆಯೇ ಈ ದುರವಸ್ಥೆಯು ನಿನಗೆ ಬರುವುದೆಂದು ನಾನು ಮುನ್ನ ತಿಳಿಸಿದ್ದುದು ಈಗ ಒದಗಿಬಂದಿತೇ? ಅಕಟಕಟಾ!

ಸ್ತೋವಾ ಇಂದ್ರಜಿನ್ನಾಪರೇ ಜನಾಃ । ನಕುಂಭಕರ್ಣೋಽತಿರಥೋ ನಾತಿಕಾಯೋ ನರಾಂತಕಃ ॥ ೫ ॥ § ನಸ್ತ್ವಯಂ ತ್ವಮಮನ್ಯೇಥಾ ಸ್ತಸ್ಯೋದರ್ಕೋಽಯಮಾಗತಃ । ಗತಸ್ಸೇತುಸ್ಸುನೀತಾನಾಂ ಗತೋ ಧರ್ಮಸ್ಯ ವಿಗ್ರಹಃ ॥ ೬ ॥ ಗತಸ್ಸತ್ವಸ್ಯ ಸಂಕ್ಷೇಪಃ ಪ್ರಸ್ತಾವಾನಾಂ ಗತಿರ್ಗತಾ । ಆದಿತ್ಯಃ ಪತಿತೋ ಭೂಮೌ ಮಗ್ನಸ್ತಮಸಿ ಚಂದ್ರಮಾಃ

ತದಿದಂ ಆ ಮಾತಿನ ಅರ್ಥವು, ಅದ್ಯ-ಈಗ, ಸಂಪ್ರಾಪ್ತಂ-ಒದಗಿಬಂದಿತು. ॥ ೪ ॥ ಪ್ರಹಸ್ತಃ ಪ್ರಹಸ್ತನು, ದರ್ಪಾತ್ - ಗರ್ವದಿಂದ, ಯತ್ - ಯಾವ ಸೀತಾಪಹರಣವನ್ನು, ನಾಮನ್ಯತ - ಪಾಪಕರ್ಮವನ್ನಾಗಿ ತಿಳಿಯದೇ ಹೋದನೋ, ಇಂದ್ರಜಿತ್-ಇಂದ್ರಜಿತುವು, ನಾಮನ್ಯತ ತಿಳಿಯದೇ ಹೋದನೋ, ಅಪರೇಜನಾಃ - ಇತರ ರಾಕ್ಷಸರೂ, ನಾಮನ್ಯಂತ - ತಿಳಿಯದೇ ಹೋದರೋ, ಕುಂಭಕರ್ಣಃ - ಕುಂಭಕರ್ಣನು, ನಾಮನ್ಯತ - ತಿಳಿಯದೇ ಹೋದನೋ, ಅತಿರಥಃ - ಮಹಾ ರಥಿಕನಾದ, ಅತಿಕಾಯಃ - ಅತಿಕಾಯನು, ನ-ತಿಳಿಯದೇ ಹೋದನೋ, ನರಾಂತಕಃ-ನರಾಂತಕನು, ನ-ತಿಳಿಯದೇ ಹೋದನೋ, ತ್ವಮಪಿ - ನೀನು, ಸ್ವಯಂ - ತಾನಾಗಿಯೇ, ನಾಮನ್ಯೇಥಾಃ - ತಿಳಿಯದೇ ಹೋದೆಯೋ, ತಸ್ಯ - ಅಂಥಾ ಪಾಪಕೃತ್ಯಕ್ಕೆ, ಅಯಂಉದರ್ಕಃ - ಈ ಉತ್ತರ ಫಲವು, ಆಗತಃ - ಪ್ರಾಪ್ತವಾಯಿತು. ॥ ೫ ॥ ಸುನೀತಾನಾಂ - ನೀತಿಮಾರ್ಗದ, ಸೇತುಃ - ಮರ್ಯಾದೆಯು, ಗತಃ - ಹೋಯಿತು, ಧರ್ಮಸ್ಯ - ಧರ್ಮದ, ವಿಗ್ರಹಃ ಸ್ವರೂಪವು, ಗತಃ-ಹೋಯಿತು, ಸತ್ವಸ್ಯ-ಬಲದ, ಸಂಕ್ಷೇಪಃ ಸಂಗ್ರಹವು, ಗತಃ-ಹೋಯಿತು, ಪ್ರಸ್ತಾವಾನಾಂ-ಪ್ರಕೃಷ್ಟವಾದ ಸ್ತೋತ್ರಗಳಿಗೆ, ಗತಿಃ-ವಿಷಯವು, ಗತಃ-ಹೋಯಿತು. ॥ ೬ ॥ ಶಸ್ತ್ರಭೃತಾಂ-ಶಸ್ತ್ರಧಾರಿಗಳಲ್ಲಿ, ವರೇ-ಶ್ರೇಷ್ಠನಾದ, ವೀರೇ-ಶೂರನಾದ, ಅಸ್ಮಿ-ಈ ರಾವಣನು, ಭೂಮೌ - ನೆಲದಲ್ಲಿ, ನಿಪತಿತೇ - ಬಿದ್ದವನಾಗಲು, ಆದಿತ್ಯಃ - ಸೂರ್ಯನು, ಭೂಮೌ - ನೆಲದಲ್ಲಿ, ಪತಿತಃ - ಬಿದ್ದನು, ಚಂದ್ರಮಾಃ - ಚಂದ್ರನು, ತಮಸಿ - ಅಂಧಕಾರದಲ್ಲಿ, ಮಗ್ನಃ - ಮುಳುಗಿದನು,

---

ಕಾಮಮೋಹಗಳಿಂದ ಮೈಮರೆತಿದ್ದ ನಿನಗೆ ನನ್ನ ಮಾತುಗಳು ಆಗ್ಗೆ ರುಚಿಸಲಿಲ್ಲವು. ಅಯ್ಯೋ! ಆಗ ನಿನ್ನ ಮಂತ್ರಿಯಾದ ಪ್ರಹಸ್ತನಾಗಲಿ, ನಿನ್ನ ಮಗನಾದ ಇಂದ್ರಜಿತುವಾಗಲಿ, ನಿನ್ನ ತಮ್ಮನಾದ ಕುಂಭಕರ್ಣನಾಗಲಿ, ಅತಿರಥರಾದ ಅತಿಕಾಯ ನರಾಂತಕರಾಗಲಿ, ನೀನಾಗಲಿ ಸೀತಾಪಹರಣದಿಂದ ಈ ವಿಧವಾದ ಅನರ್ಥವು ಬರುವುದೆಂದು ತಿಳಿಯದೇ ಹೋದಿರಿ. ಅದರ ಫಲವು ಈಗ ಈ ರೀತಿಯಾಗಿ ಪರಿಣಮಿಸಿತು. ॥೧-೫॥ ಅಕಟಕಟಾ! ನಯನೀತಿಗಳ ದಡವೇ ಇಂದು ಮುರಿದುಹೋಯಿತು. ವಿಗ್ರಹವನ್ನು ಧರಿಸಿದಂತಿದ್ದ ಧರ್ಮವೇ ಅಳಿದು ಹೋಯಿತು. ಸತ್ವದ ಸಾರವೇ ಇಂದು ತೊಡೆದುಹೋಯಿತು. ಉತ್ತಮೋತ್ತಮವಾದ ಸ್ತೋತ್ರಕ್ಕೆ ಪಾತ್ರವಾದ ವಸ್ತುವು ಇಂದು ಹೊರಟುಹೋಯಿತು. ಇಂದು ನನ್ನ ಭ್ರಾತೃವಾದ ರಾವಣಾಸುರನು ಮಡಿದು ಹೋದುದರಿಂದ ಸೂರ್ಯನೇ ಕಳಚಿ ಬಿದ್ದಂತಾಯಿತು. ಚಂದ್ರನೇ ಕತ್ತಲಲ್ಲಿ ಮುಳುಗಿ ಹೋದಂತಾಯಿತು. ಮಹಾ ಶಸ್ತ್ರಾಸ್ತ್ರಕೋವಿದನಾದ ರಾವ

---

§ ಇಲ್ಲಿ ಗೋವಿಂದರಾಜರು "ಗತೋಧರ್ಮಸ್ಯ ವಿಗ್ರಹಃ" ಎಂಬ ಕಡೆ "ಗತಃ, ಅಧರ್ಮಸ್ಯ" ಎಂದು ವಿಕಲ್ಪವಾಗಿ ಪದಚ್ಛೇದ ಮಾಡಿ ಅಧರ್ಮದ ಪ್ರತ್ಯರ್ಥಿಯೆಂದು ಅರ್ಥ ಬರೆದಿರುತ್ತಾರೆ. ಇದು ಗೋವಿಂದರಾಜರ ಮಾತಿನಲ್ಲಿ ಸುರಸವಾಗಿ ರುದ್ಧಾಚರಣ [illegible] ಸ್ಪಷ್ಟವಾದ ಪ್ರಕಾರ, ವಿಭೀಷಣನ ವಚನ ಸ್ವಾರಸ್ಯವನ್ನು ಹಿಡಿದು ಹೇಳುವುದಾದರೆ "ಧರ್ಮಸ್ಯ ವಿಗ್ರಹಃ" ಎಂದೇ ಪದಚ್ಛೇದ ಮಾಡಿ [illegible] ಅರ್ಥ ಮಾಡಬೇಕೆಂದು ತೋರುತ್ತದೆ.

||೭|| ಚಿತ್ರಭಾನುಃ ಪ್ರಶಾಂತಾರ್ಚಿರ್ವ್ಯವಸಾಯೋ ನಿರುದ್ಯಮಃ । ಅಸ್ಮಿನ್ನಿಪತಿತೇ ಭೂಮೌ ವೀರೇ ಶಸ್ತ್ರಭೃತಾಂ ವರೇ ||೮|| ಕಿಂ ಶೇಷಮಿವ ಲೋಕಸ್ಯ ಹತವೀರಸ್ಯ ಸಾಂಪ್ರತಂ । ರಣೇ ರಾಕ್ಷಸಶಾರ್ದೂಲೇ ಪ್ರಸುಪ್ತ ಇವ ಪಾಂಸುಷು ||೯|| ಧೃತಿಪ್ರವಾಳಃ ಪ್ರಸಹಾಗ್ರ್ಯಪುಷ್ಪಸ್ತಪೋಬಲಶ್ಶೌರ್ಯನಿಬದ್ಧಮೂಲಃ । ರಣೇ ಮಹಾನ್ ರಾಕ್ಷಸರಾಜವೃಕ್ಷಸ್ಸಂಮರ್ದಿತೋ ರಾಘವಮಾರುತೇನ ||೧೦|| ತೇಜೋವಿಷಾಣಃ ಕುಲವಂಶವಂಶಃ ಕೋಪಪ್ರಸಾದಾಪರಗಾತ್ರಹಸ್ತಃ । ಇಕ್ಷ್ವಾಕುಸಿಂಹಾವಗೃಹೀತದೇಹಸ್ಸುಪ್ತಃ ಕ್ಷಿತೌ ರಾವಣಗಂಧಹಸ್ತೀ ||೧೧|| ಪರಾಕ್ರಮೋತ್ಸಾಹ

ಚಿತ್ರಭಾನುಃ - ಅಗ್ನಿಯು, ಪ್ರಶಾಂತಾರ್ಚಿಃ - ಉಪಶಾಂತವಾದ ಜ್ವಾಲೆಗಳುಳ್ಳವನಾದನು, ವ್ಯವಸಾಯಃ - ಉತ್ಸಾಹ ಶಕ್ತಿಯು, ನಿರುದ್ಯಮಃ - ಉದ್ಯೋಗವಿಲ್ಲದ್ದಾಯಿತು. ||೭-೮|| ರಣೇ - ಕಾಳೆಗದಲ್ಲಿ, ರಾಕ್ಷ....ಲೇ - ದಶಕಂಠನು, ಪಾಂಸುಷು - ಧೂಳಿಗಳಲ್ಲಿ, ಪ್ರಸುಪ್ತ ಇವಸ್ಥಿತೇ - ಮಲಗಿದವನಂತಿರಲು, ಸಾಂಪ್ರತಂ - ಈಗ, ಹತವೀರಸ್ಯ - ಹತನಾದ ವೀರ ಪುರುಷನುಳ್ಳ, ಲೋಕಸ್ಯ - ಲೋಕಕ್ಕೆ, ಶೇಷಂ - ಮಿಕ್ಕಿದುದು, ಕಿಮಿವ - ಏನಿರುವುದು? ||೯|| ಧೃತಿಪ್ರವಾಳಃ - ಧೈರ್ಯವೆಂಬ ಚಿಗುರುಗಳುಳ್ಳ, ಪ್ರಸ....ಷ್ಪಃ - ಉತ್ತಮವಾದ ಸಹನೆಯೆಂಬ ಪುಷ್ಪಗಳುಳ್ಳ, ತಪೋಬಲಃ - ತಪಸ್ಸೇ ಸ್ಥಿರಾಂಶವಾಗಿರುವ, ಶೌರ್ಯ....ಲಃ - ಶೂರತ್ವವೆಂಬ ತಿದ್ದಿದ ಪಾತಿಯುಳ್ಳ, ರಣೇ - ರಣಭೂಮಿಯಲ್ಲಿ, ಮಹಾನ್ - ದೊಡ್ಡದಾದ, ರಾಕ್ಷ....ಕ್ಷಃ - ರಾಕ್ಷಸರಾಜನೆಂಬ ದೊಡ್ಡ ಮರವು, ರಾಘ....ನ - ಶ್ರೀರಾಮನೆಂಬ ಚಂಡಮಾರುತನಿಂದ, ಸಂಮರ್ದಿತಃ - ಚನ್ನಾಗಿ ಕೆಡಹಲ್ಪಟ್ಟಿತು, ತೇಜೋವಿಷಾಣಃ - ತೇಜಸ್ಸೆಂಬ ದಂತಗಳುಳ್ಳ, ಕುಲವಂಶವಂಶಃ - ಪಿತೃಪಿತಾಮಹರ ವಂಶವೇ ಬೆನ್ನಿನ ಎಲುವುಳ್ಳ, ಕೋಪ....ಸ್ತಃ - ಕೋಪ ಪ್ರಸಾದಗಳೆಂಬ ಪೃಷ್ಠ ಪ್ರದೇಶವೂ ಸೊಂಡಿಲೂ ಉಳ್ಳ, ರಾವ....ಸ್ತೀ - ರಾವಣನೆಂಬ ಮದವೇರಿದ ಆನೆಯು, ಇಕ್ಷ್ವಾ....ಹಃ - ಇಕ್ಷ್ವಾಕುವಂಶದ ಅರಸರಲ್ಲಿ ಶ್ರೇಷ್ಠನಾದ ಶ್ರೀರಾಮನೆಂಬ ಸಿಂಹದಿಂದ ಹಿಡಿಯಲಾದ ಶರೀರವುಳ್ಳದಾಗಿ, ಕ್ಷಿತೌ - ನೆಲದಲ್ಲಿ, ಸುಪ್ತಃ - ಮಲಗಿತು. ||೧೦-೧೧|| ಪರಾ....ರ್ಚಿಃ - ಪರಾಕ್ರಮ ಮತ್ತು ಉತ್ಸಾಹ ಶಕ್ತಿಗಳೆಂಬ

ಣೇಶ್ವರನು ಹತನಾದುದರಿಂದ ಸರ್ವವೂ ಕಾಂತಿಹೀನವಾಗಿಹೋಯಿತು. ಅಗ್ನಿಹೋತ್ರನೂ ಸಹ ನೀನು ಶಾಂತನಾಗಲು ತಾನೂ ಜ್ವಾಲೆಗಳೂ, ತೇಜಸ್ಸೂ ಇಲ್ಲದವನಾಗಿ ಕೆಳಗೆ ಬಿದ್ದಂತೆ ತೋರುತ್ತಿದೆ. ಹೀಗಿರುವಲ್ಲಿ ವೀರನಾದ ನಿನ್ನನ್ನು ಕೊಂದ ಬಳಿಕ ಶ್ರೀರಾಮನಿಗೆ ಈ ಲೋಕದಲ್ಲಿ ಯಾವುದು ತಾನೇ ದುಸ್ಸಾಧ್ಯವಾದೀತು! ಅಣ್ಣಾ! ರಾವಣಾ!! ರಾಕ್ಷಸೋತ್ತಮನಾದ ನೀನು ಮೃತಿಯೊಂದಿ ಈ ದೂಳು ನೆಲದಲ್ಲಿ ಬಿದ್ದಿರುವುದನ್ನು ನೋಡಿದರೆ ಭೂಮಿಯೆಲ್ಲವೂ ಶೂರಶೂನ್ಯವಾಗಿರುವಂತೆಯೇ ತೋರುತ್ತಿರುವುದು. ಆಹಾ! ಧೈರ್ಯವೆಂಬ ಚಿಗುರೆಲೆಗಳುಳ್ಳುದೂ, ಸಾಮರ್ಥ್ಯವೆಂಬ ಹೂಗಳುಳ್ಳುದೂ, ತಪಸ್ಸೆಂಬ ಬಲವುಳ್ಳುದೂ, ಶೌರ್ಯ ಸಾಹಸಗಳೆಂಬ ಬೇರುಳ್ಳುದೂ ಆದ ರಾವಣೇಶ್ವರನೆಂಬ ಮಹಾ ವೃಕ್ಷವು ಶ್ರೀರಾಮಮೂರ್ತಿಯೆಂಬ ಪ್ರಳಯಮಾರುತನಿಂದ ಪೆಳಗಿಸಲ್ಪಟ್ಟಿತಲ್ಲವೆ! ||೬-೧೦|| ತೇಜಸ್ಸೆಂಬ ದಂತಗಳುಳ್ಳುದೂ, ಪಿತೃಪಿತಾಮಹಾದಿ ವರ್ಗವೆಂಬ ಬೆನ್ನೆಲವುಳ್ಳುದೂ, ಕೋಪಪ್ರಸಾದಗಳೆಂಬ ಪೃಷ್ಠ ಭಾಗಾವಯವಗಳುಳ್ಳುದೂ, ಸೊಂಡಿಲುಳ್ಳುದೂ, ಕ್ರೋಧವೆಂಬ ಅಪರ ಗಾತ್ರವುಳ್ಳುದೂ ಆದ ರಾವಣೇಶ್ವರನೆಂಬ ಮದಗಜವನ್ನು ಶ್ರೀರಾಮನೆಂಬ ಸಿಂಹವು ಸಂಹರಿಸಿ ಭೂಮಿಯಲ್ಲಿ ಮಲ

ವಿಜೃಂಭಿತಾರ್ಚಿರ್ನಿಶ್ವಾಸಧೂಮಸ್ಸ್ವಬಲಪ್ರತಾಪಃ । ಪ್ರತಾಪವಾನ್ ಸಂಯತಿ ರಾಕ್ಷಸಾಗ್ನಿರ್ನಿರ್ವಾಪಿತೋ ರಾಮಪಯೋಧರೇಣ ॥ ೧೨ ॥ ¶ ಸಿಂಹರ್ಕ್ಷಲಾಂಗೂಲಕಕುದ್ವಿಷಾಣಃ ಪರಾಭಿಜಿದ್ಗಂಧನಗಂಧಹಸ್ತೀ । ರಕ್ಷೋವೃಷಶ್ಚಾಪಲಕರ್ಣಚಕ್ಷುಃ ಕ್ಷಿತೀಶ್ವರವ್ಯಾಘ್ರಹತೋಽವಸನ್ನಃ" ॥ ೧೩ ॥ ವದಂತಂ ಹೇತುಮದ್ವಾಕ್ಯಂ ಪರಿಮೃಷ್ಟಾರ್ಥನಿಶ್ಚಯಂ । ರಾಮಃ ಶೋಕಸಮಾವಿಷ್ಟಮಿತ್ಯುವಾಚ ವಿಭೀಷಣಂ

ಅಭಿವೃದ್ಧಿಗೊಳಿಸಲ್ಪಟ್ಟ ಜ್ವಾಲೆಗಳುಳ್ಳ, ನಿಃಶ್ವಾಸಧೂಮಃ - ನಿಶ್ವಾಸವೆಂಬ ಧೂಮವುಳ್ಳ, ಸ್ವಬ....ಪಃ- ತನ್ನ ಸಾಮರ್ಥ್ಯದ ಪ್ರಭಾವವುಳ್ಳ, ಸಂಯತಿ - ಕಾಳಗದಲ್ಲಿ, ಪ್ರತಾಪವಾನ್ - ಬಹಳ ಬಿಸಿಯಾದ, ರಾಕ್ಷಸಾಗ್ನಿಃ - ರಾವಣನೆಂಬ ಅಗ್ನಿಯು, ರಾಮ....ಣ - ಶ್ರೀರಾಮನೆಂಬ ಮೇಘದಿಂದ, ನಿರ್ವಾಪಿತಃ - ತಣ್ಣಗೆ ಮಾಡಲ್ಪಟ್ಟಿತು. ॥ ೧೨ ॥ ಸಿಂಹ....ಣಃ - ರಾಕ್ಷಸರೆಂಬ ಬಾಲವೂ ಭುಜಗೋಪುರಗಳೂ ಕೊಂಬುಗಳೂ ಉಳ್ಳ, ಪರಾಭಿಜಿತ್ - ಶತ್ರುವಿಜಯದಲ್ಲಿ ಸಮರ್ಥವಾದ, ಗಂಧ....ಸ್ತೀ - ಶತ್ರುಗಳ ನಿಗ್ರಹದಲ್ಲಿ ಮತ್ತಗಜಪ್ರಾಯನಾದ, ಚಾಲ....ಕ್ಷುಃ-ವಿಷಯಚಾಪಲ್ಯವೆಂಬ ಕರ್ಣಗಳೂ, ನೇತ್ರಗಳೂ ಉಳ್ಳ, ರಕ್ಷೋವೃಷಃ-ರಕ್ಕಸನೆಂಬ ವೃಷಭವು, ಕ್ಷಿತೀ....ತಃ-ರಾಜನಾದ ಶ್ರೀರಾಮನೆಂಬ ಹುಲಿಯಿಂದ ಹೊಡೆಯಲ್ಪಟ್ಟುದಾಗಿ, ಅವಸನ್ನಃ - ನಾಶ ಹೊಂದಿಸಲ್ಪಟ್ಟಿತು. ॥ ೧೩ ॥ ಹೇತುಮತ್ - ಅರ್ಥಗರ್ಭಿತವಾದ, ವಾಕ್ಯಂ - ಮಾತನ್ನು, ವದಂತಂ - ಹೇಳುತ್ತಿರುವ, ಪರಿ....ಯಂ - ಆಲೋಚಿಸಲ್ಪಟ್ಟ ಕಾರ್ಯನಿಶ್ಚಯವುಳ್ಳ, ಶೋಕ....ಷ್ಟಂ - ವ್ಯಸನದಿಂದ ವ್ಯಾಪ್ತನಾದ, ವಿಭೀಷಣಂ - ವಿಭೀಷಣನನ್ನು ಕುರಿತು, ರಾಮಃ - ಶ್ರೀರಾಮನು, ಇತಿ - ಈ ಪರಿಯಾಗಿ, ಉವಾಚ - ಹೇಳಿದನು. ॥ ೧೪ ॥ ಅಯಂ - ಈ

ಗಿಸಿತು. ಪರಾಕ್ರಮೋತ್ಸಾಹಗಳಿಂದ ಪ್ರಜ್ವಲಿಸುತ್ತಿರುವ ಜ್ವಾಲೆಗಳುಳ್ಳುದೂ, ನಿಟ್ಟುಸಿರುಗಳೆಂಬ ಹೊಗೆಯುಳ್ಳುದೂ, ತನ್ನ ಬಲ ಪ್ರತಾಪಗಳಿಂದ ದುರ್ಧರ್ಷವಾದ ರಾಕ್ಷಸೇಶ್ವರನೆಂಬ ಅಗ್ನಿಯು ಶ್ರೀರಾಮಚಂದ್ರನೆಂಬ ಮುಗಿಲಿಂದ ತಣ್ಣಗೆ ಮಾಡಲ್ಪಟ್ಟಿತು. ರಾಕ್ಷಸರೇ ಬಾಲ, ಭುಜಗೋಪುರ ಮತ್ತು ಕೊಂಬುಗಳುಳ್ಳುದೂ, ಶತ್ರುಗಳನ್ನು ಸದೆಬಡಿಯುವುದರಲ್ಲಿ ಉತ್ತಮ ಸಾಮರ್ಥ್ಯವುಳ್ಳುದೂ, ವಿಷಯಲೌಲ್ಯವೆಂಬ ಕಣ್ಣುಗಳುಳ್ಳುದೂ ಆದ ರಾವಣನೆಂಬ ವೃಷಭವು ಶ್ರೀರಾಮಚಂದ್ರನೆಂಬ ವ್ಯಾಘ್ರದಿಂದ ಮುಗಿದುಹೋಯಿತು." ಈ ಪ್ರಕಾರವಾಗಿ ವಿಭೀಷಣನು ಅಭಿಪ್ರಾಯಗರ್ಭಿತವಾದ ಮಾತುಗಳನ್ನು ಆಡಿ ವಿಚಾರಪೂರ್ವಕವಾಗಿ, ಸಮಸ್ತ ಕಾರ್ಯಾರ್ಥ ನಿಶ್ಚಯದಿಂದ ಕೂಡಿದವನಾದರೂ, ದುಃಖವ್ಯಾಪ್ತವಾದ ಚಿತ್ತವುಳ್ಳವನಾಗಿರುವುದನ್ನು ಕಂಡು ಶ್ರೀರಾಮಮೂರ್ತಿಯು ಅವನನ್ನು ಕುರಿತು, "ಅಯ್ಯಾ ರಾಕ್ಷಸೋತ್ತಮನೇ! ವಿಭೀಷಣಾ!! ನಿನ್ನ ಅಗ್ರಜನಾದ ರಾವಣಾಸುರನು ಪರಾಕ್ರಮ

¶ "ಸಿಂಹರ್ಕ್ಷಲಾಂಗೂಲಕಕುದ್ವಿಷಾಣಃ" ಇಲ್ಲಿ "ಸಿಂಹರ್ಕ್ಷ" ಎಂದರೆ ಮೂಲಾನಕ್ಷತ್ರ ಇದು ರಾಕ್ಷಸರ ನಕ್ಷತ್ರವಾಗಿರುವುದು. ಜ್ಯೋತಿಷದಲ್ಲಿ ಕಾಶಪರು,

"ಅಗ್ನಿರ್ಮಘಾ ವಿಶಾಖಾಚ ಆಶ್ಲೇಷಾ ಶತತಾರಕಾ ।
ಧನಿಷ್ಠಾ ಚಿತ್ರಯಾಯುಕ್ತಾ ಜ್ಯೇಷ್ಠಾ ಮೂಲಾಚ ರಾಕ್ಷಸಾ ॥"

ಎಂದು ಬರೆದಿರುವರು. ಲಾಂಗೂಲಾದಿ ಶಬ್ದಗಳು ರಾಕ್ಷಸಸಮೃದ್ಧಿಯಿಂದುಂಟಾದ ಗರ್ವವನ್ನು ಸೂಚಿಸುವುದಕ್ಕಾಗಿ ಉಪಯೋಗಿಸಲ್ಪಟ್ಟಿರುವುವೆಂದು ತೋರುತ್ತದೆ. (ಗೋ)

॥ ೧೪ ॥ "ನಾಯಂ ವಿನಷ್ಟೋ ನಿಶ್ಚೇಷ್ಟಸ್ಸಮರೇ ಚಂಡವಿಕ್ರಮಃ । ಅತ್ಯುನ್ನತ
ಮಹೋತ್ಸಾಹಃ ಪತಿತೋಽಯಮಶಂಕಿತಃ ॥ ೧೫ ॥ ನೈವಂ ವಿನಷ್ಟಾಃ ಶೋಚ್ಯಂತೇ
ಕ್ಷತ್ರಧರ್ಮವ್ಯವಸ್ಥಿತಾಃ । ವೃದ್ಧಿಮಾಶಂಸಮಾನಾ ಯೇ ನಿಪತಂತಿ ರಣಾಜಿರೇ
॥ ೧೬ ॥ ಯೇನ ಸೇಂದ್ರಾಸ್ತ್ರಯೋ ಲೋಕಾ ಸ್ತ್ರಾಸಿತಾ ಯುಧಿ ಧೀಮತಾ । ತಸ್ಮಿ
ಕಾಲಸಮಾಯುಕ್ತೇ ನಕಾಲಃ ಪರಿಶೋಚಿತುಂ ॥ ೧೭ ॥ ನೈಕಾಂತವಿಜಯೋ
ಯುದ್ಧೇ ಭೂತಪೂರ್ವಃ ಕದಾಚನ । ಪರೈರ್ವಾ ಹನ್ಯತೇ ವೀರಃ ಪರಾನ್ ವಾ ಹಂತಿ
ಸಂಯುಗೇ ॥ ೧೮ ॥ ಇಯಂ ಹಿ ಪೂರ್ವೈಸ್ಸಂದಿಷ್ಟಾ ಗತಿಃ ಕ್ಷತ್ರಿಯಸಮ್ಮತಾ ।

ದಶಕಂಠನು, ನಿಶ್ಚೇಷ್ಟಃ - ಪರಾಕ್ರಮವಿಲ್ಲದವನಾಗಿ, ನವಿನಷ್ಟಃ - ನಷ್ಟವಾಗಲಿಲ್ಲ, ಕಿಂತು - ಮತ್ತೇನಂದರೆ, ಸಮರೇ - ಕಾಳಗದಲ್ಲಿ, ಚಂಡವಿಕ್ರಮಃ - ಕ್ರೂರಪರಾಕ್ರಮಿಯಾದ, ಅತ್ಯುನ್ನತಮಹೋತ್ಸಾಹಃ-ಬಹುತರವಾಗಿ ಪ್ರಬಲವಾದ ಉತ್ಸಾಹ ಶಕ್ತಿಯುಳ್ಳ, ಅಯಂ ಈ ದಶಕಂಠನು, ಅಶಂಕಿತಃ-ಸಂಶಯವಿಲ್ಲದವನಾಗಿ, ಪತಿತಃ-ಬಿದ್ದನು, ಯೇ-ಯಾರು, ವೃದ್ಧಿಂ-ವೃದ್ಧಿಯನ್ನು, ಆಶಂಸಮಾನಾಃ-ಕೋರುವವರಾಗಿ, ರಣಾಜಿರೇ - ಕಾಳಗದಲ್ಲಿ, ನಿಪತಂತಿ - ಬೀಳುತ್ತಾರೆಯೋ, ಕ್ಷತ್ರಧರ್ಮಂ - ಕ್ಷತ್ರಿಯ ಧರ್ಮವನ್ನು, ಅನುವ್ರತಾಃ - ಅನುಸರಿಸಿ, ವಿನಷ್ಟಾಃ - ನಷ್ಟರಾದ, ತೇ - ಅವರು, ನಶೋಚ್ಯಂತೇ - ದುಃಖಿಸಲ್ಪಡುವುದಿಲ್ಲ. ॥ ೧೫-೧೬ ॥ ಧೀಮತಾ - ಬುದ್ಧಿಶಾಲಿಯಾದ, ಯೇನ - ಯಾವ ದಶಕಂಠನಿಂದ, ಸೇಂದ್ರಾಃ - ಇಂದ್ರನಿಂದೊಡಗೂಡಿದ, ತ್ರಯೋಲೋಕಾಃ - ಮೂರು ಲೋಕಗಳೂ, ಯುಧಿ-ಕಾಳಿಗದಲ್ಲಿ, ವಿತ್ರಾಸಿತಾಃ-ಹೆದರಿಸಲ್ಪಟ್ಟವೋ, ತಸ್ಮಿ-ಅಂಥಾ ದಶಕಂಠನು, ಕಾಲ....ಕ್ತೇ-ಮೃತ್ಯುವಿನಿಂದ ಕೂಡಿದವನಾಗಲೂ, ಪರಿಶೋಚಿತುಂ - ದುಃಖಿಸುವುದಕ್ಕೆ, ನಕಾಲಃ - ಕಾಲವಲ್ಲ. ॥ ೧೭ ॥ ಯುದ್ಧೇ-ಕಾಳಗದಲ್ಲಿ, ಕದಾಚನ-ಎಂದಿಗೂ, ಏಕಾಂ....ಯಃ-ನಿಯಮದಿಂದ ವಿಜಯವು, ಭೂತಪೂರ್ವಃ - ಪೂರ್ವದಲ್ಲಿ ಯಾರಿಗೂ ಆದುದಲ್ಲ, ವೀರಃ - ಶೂರನು, ಪರೈರ್ವಾ - ಶತ್ರುಗಳಿಂದಲಾದರೂ, ಹನ್ಯತೇ - ಹೊಡೆಯಲ್ಪಡುತ್ತಾನೆ, ಸಂಯುಗೇ - ಕಾಳಗದಲ್ಲಿ, ಪರಾನ್ವಾ - ಶತ್ರುಗಳನ್ನೇ ಆಗಲಿ, ಹಂತಿ - ಹೊಡೆಯುತ್ತಾನೆ, ಇಯಂಗತಿಃ - ಈ ಪದ್ಧತಿಯು, ಕ್ಷತ್ರಿಯಸಮ್ಮತಾ - ಕ್ಷತ್ರಿಯ ರಾಜರಿಗೆ ಇಷ್ಟವಾದದ್ದಾಗಿ, ಪೂರ್ವೈಃ - ಪೂರ್ವಿಕರಿಂದ, ಸಂದಿಷ್ಟಾಹಿ - ತೋರಿಸಲ್ಪಟ್ಟದೆಯಷ್ಟೆ,

---

ರಹಿತನಾಗಿ ಮೃತಿಯೊಂದಲಿಲ್ಲವು. ರಣರಂಗದಲ್ಲಿ ಮಹಾ ಭಯಂಕರವಾದ ಪರಾಕ್ರಮವನ್ನು ಮೆರೆವೇ ಮರಣ ಹೊಂದಿದನು. ॥ ೧೧-೧೫ ॥ ಇವನು ಅಪರಿಮಿತವಾದ ರಣೋತ್ಸಾಹದಿಂದ ಕಾಳಗ ಮಾಡಿ ನೆಲಕ್ಕುರುಳಿದನು. ಹೀಗೆ ಕಾಳಗ ಮಾಡಿ, ಕ್ಷಾತ್ರಧರ್ಮವನ್ನವಲಂಬಿಸಿಯೇ ಮೃತಿಯೊಂದಿದವರನ್ನು ಕುರಿತು ದುಃಖಿಸುವುದು ಉಚಿತವಲ್ಲವು. ಅಯ್ಯಾ, ವಿಭೀಷಣನೇ! ಈ ರಾವಣಾಸುರನು ಯುದ್ಧದಲ್ಲಿ ದೇವೇಂದ್ರನೊಡಗೂಡಿದ ಮೂರು ಲೋಕಗಳನ್ನೂ ತಾಪಗೊಳಿಸಿದವನು. ಅಂಥಾ ಪರಾಕ್ರಮಿಯಾದ ಈತನೀಗ ಕಾಲಧರ್ಮವನ್ನು ಹೊಂದಿ ಮೃತನಾದನು. ಆದುದರಿಂದ ಇವನನ್ನು ಕುರಿತು ವ್ಯಸನಪಡುವುದು ಯೋಗ್ಯವಲ್ಲವು. ಅಲ್ಲದೆ ಯಾರಿಗಾದರೂ ಸರಿಯೆ ; ಯುದ್ಧದಲ್ಲಿ ವಿಜಯವೇ ಉಂಟಾಗುತ್ತದೆಯೆಂದು ಹೇಳಲಾಗುವುದಿಲ್ಲವು. ಶತ್ರುವಿನಿಂದ ಮೃತಿಯೊಂದಿದರೂ ಹೊಂದಬಹುದು. ತಾನೇ ಗೆದ್ದರೂ ಗೆಲ್ಲಬಹುದು. ಪೂರ್ವಿಕರೆಲ್ಲರೂ ಕ್ಷತ್ರಿಯನಾದವನಿಗೆ ಈ ವಿಧವಾದ ಗತಿಗಳುಂಟಾಗುತ್ತವೆಯೆಂದು ಹೇಳಿಯೇ ಇದ್ದಾರೆ. ಈಗ ಕ್ಷತ್ರಿಯ ಧರ್ಮ

ಕ್ಷತ್ರಿಯೋ ನಿಹತಸ್ಸಂಖ್ಯೇ ನಶೋಚ್ಯ ಇತಿ ನಿಶ್ಚಯಃ ‖ ೧೯ ‖ ತದೇವಂ ನಿಶ್ಚಯಂ ದೃಷ್ಟ್ವಾ ತತ್ತ್ವಮಾಸ್ಥಾಯ ವಿಜ್ವರಃ । ಯದಿಹಾನಂತರಂ ಕಾರ್ಯಂ ಕಲ್ಪ್ಯಂ ತದನು ಚಿಂತಯ" ‖ ೨೦ ‖ ತಮುಕ್ತವಾಕ್ಯಂ ವಿಕ್ರಾಂತಂ ರಾಜಪುತ್ರಂ ವಿಭೀಷಣಃ । ಉವಾಚ ಶೋಕಸಂತಪ್ತೋ ಭ್ರಾತುರ್ಹಿತಮನಂತರಂ ‖೨೧‖ "ಯೋಽಯಂ ವಿಮರ್ದೇಷು ನಭಗ್ನಪೂರ್ವಸ್ಸುರೈಸ್ಸಮೇತೈಸ್ಸಹವಾಸವೇನ । ಭವಂತಮಾಸಾದ್ಯ ರಣೇ ವಿಭಗ್ನೋ ವೇಲಾಮಿವಾಸಾದ್ಯ ಯಥಾ ಸಮುದ್ರಃ ‖ ೨೨ ‖ ಅನೇನ ದತ್ತಾನಿ ಸುಪೂಜಿತಾನಿ ಭುಕ್ತಾಶ್ಚ ಭೋಗಾನಿ ಭೃತಾಶ್ಚ ಭೃತ್ಯಾಃ । ಧನಾನಿ ಮಿತ್ರೇಷು

ಸಂಖ್ಯೇ-ಕಾಳಗದಲ್ಲಿ, ನಿಹತಃ-ಹೊಡೆಯಲ್ಪಟ್ಟ, ಕ್ಷತ್ರಿಯಃ-ಕ್ಷತ್ರಿಯನು, ನಶೋಚ್ಯ ಇತಿ-ದುಃಖಿಸಲ್ಪಡತಕ್ಕವನಲ್ಲವೆಂದು, ನಿಶ್ಚಯಃ - ನಿಶ್ಚಯವು. ‖ ೧೮-೧೯ ‖ ತತ್ - ಆ ಕಾರಣದಿಂದ, ಏವಂ - ಈ ಪರಿಯಾಗಿ, ನಿಶ್ಚಯಂ - ನಿಶ್ಚಯವನ್ನು, ದೃಷ್ಟ್ವಾ - ಕಂಡು, ತತ್ತ್ವಂ - ಯಥಾರ್ಥವನ್ನು, ಆಸ್ಥಾಯ - ತಿಳಿದು, ವಿಜ್ವರಃ - ಸಂಕಟವಿಲ್ಲದವನಾಗಿ, ಇಹ - ಈ ಸಮಯದಲ್ಲಿ, ಅನಂತರಂ - ಮುಂದೆ ಮಾಡಬೇಕಾದ, ಕಾರ್ಯಂ - ಕೆಲಸವು, ಯತ್ - ಯಾವುದೋ, ಕಲ್ಪ್ಯಂ - ಮಾಡತಕ್ಕುದೋ, ತತ್ - ಅದನ್ನು, ಅನುಚಿಂತಯ - ಆಲೋಚಿಸು. ‖ ೨೦ ‖ ಉಕ್ತವಾಕ್ಯಂ - ಹೇಳಲ್ಪಟ್ಟ ಮಾತುಳ್ಳ, ವಿಕ್ರಾಂತಂ-ಪರಾಕ್ರಮಶಾಲಿಯಾದ, ತಂರಾಜಪುತ್ರಂ - ರಾಜಪುತ್ರನಾದ ಆ ಶ್ರೀರಾಮನನ್ನು ಕುರಿತು, ವಿಭೀಷಣಃ - ವಿಭೀಷಣನು, ಶೋಕಸಂತಪ್ತಃ - ವ್ಯಸನದಿಂದ ಸಂಕಟಗೊಂಡವನಾಗಿ, ಅನಂತರಂ - ಬಳಿಕ, ಭ್ರಾತುಃ - ಅಣ್ಣನಾದ ರಾವಣನಿಗೆ, ಹಿತಂ - ಹಿತವಾದ ಮಾತನ್ನು, ಉವಾಚ - ಹೇಳಿದನು. ‖ ೨೧ ‖ ಯಃ - ಯಾವ ದಶಕಂಠನು, ವಿಮರ್ದೇಷು - ಕಾಳಗಗಳಲ್ಲಿ, ವಾಸವೇನಸಹ - ದೇವೇಂದ್ರನೊಡನೆ, ಸಮೇತೈಃ - ಸೇರಿರುವ, ಸುರೈಃ - ದೇವತೆಗಳಿಂದ, ನಭಗ್ನಪೂರ್ವಃ - ಭಗ್ನನಾಗಲಿಲ್ಲವೋ, ಅಯಂ - ಈ ದಶಕಂಠನು, ಯಥಾ - ಹೇಗೆ, ವೇಲಾಂ - ದಡವನ್ನು, ಆಸಾದ್ಯ - ಹೊಂದಿ, ಸಮುದ್ರ ಇವ - ಕಡಲಿನಂತೆ, ರಣೇ - ಕಾಳಗದಲ್ಲಿ, ಭವಂತಂ - ನಿನ್ನನ್ನು, ಆಸಾದ್ಯ - ಹೊಂದಿ, ವಿಭಗ್ನಃ - ಮುರಿದುಹೋದನು. ‖ ೨೨ ‖ ಅನೇನ - ಈ ದಶಕಂಠನಿಂದ, ದತ್ತಾನಿ - ದಾನಗಳು, (ಕೃತಾನಿ - ಮಾಡಲ್ಪಟ್ಟವು), ದೈವತಾನಿ - ದೇವತೆಗಳು, ಸುಪೂಜಿತಾನಿ - ಚನ್ನಾಗಿ ಪೂಜಿಸಲ್ಪಟ್ಟವು, ಭೋಗಾಃ - ಭೋಗಗಳು, ಭುಕ್ತಾಃ - ಅನುಭವಿಸಲ್ಪಟ್ಟವು, ಭೃತ್ಯಾಶ್ಚ - ಆಳುಗಳೂ, ಸುಭೃತಾಃ - ಚನ್ನಾಗಿ

ವನ್ನವಲಂಬಿಸಿಯೇ ಈ ರಾವಣಾಸುರನು ಮೃತಿಪಟ್ಟಿರುವನಾದುದರಿಂದ ಇವನನ್ನು ಕುರಿತು ದುಃಖಿಸಬಾರದು. ಮುಂದೆ ಮಾಡಬೇಕಾದ ಕಾರ್ಯಗಳನ್ನು ಕುರಿತು ಯೋಚಿಸು" ಎಂದು ಹೇಳಿದನು. ‖ ೧೬–೨೦ ‖ ಮಹಾ ಪರಾಕ್ರಮಿಯೂ, ರಾಜನಂದನನೂ ಆದ ಶ್ರೀರಾಮಚಂದ್ರನೀರೀತಿ ನುಡಿಯಲು, ವಿಭೀಷಣನು ಶೋಕಸಂತಪ್ತನಾಗಿ ತನ್ನ ಅಣ್ಣನಾದ ರಾವಣನಿಗೆ ಹಿತವನ್ನು ಮಾಡಬಯಸಿದವನಾಗಿ ಆತನನ್ನು ಕುರಿತು, "ಎಲೈ ರಾಮ ಮೂರ್ತಿಯೇ! ಈ ರಾವಣಾಸುರನು ಈವರೆಗೆ ಎಂದೂ ಯುದ್ಧದಲ್ಲಿ ಅಪಜಯವನ್ನು ಪಡೆದವನಲ್ಲವು. ಇಂಥವನು ನಿನ್ನನ್ನೆದುರಿಸಿ ಮಿತಿಮೀರಿ ಬಂದ ಸಾಗರದಂತೆ ಭಗ್ನವಾದನು. ರಾಮಚಂದ್ರಾ! ಈತನು ಅನೇಕ ದಾನಗಳನ್ನು ಮಾಡಿದ್ದಾನೆ. ದೇವತೆಗಳನ್ನೂ ಬಹಳವಾಗಿ ಪೂಜಿಸಿ ಸಂತೋಷಗೊಳಿಸಿದ್ದಾನೆ; ವಿವಿಧ ಭೋಗಗಳನ್ನು ಅನುಭವಿಸಿರುವನು. ಅಸಂಖ್ಯಾತ ಮಂದಿ ಭೃತ್ಯರನ್ನು ಚೆನ್ನಾಗಿ ಕಾಪಾಡಿರುವನು; ಮಿತ್ರರೆಲ್ಲರಿಗೂ ಬೇಕು

ಸಮರ್ಪಿತಾನಿ ವೈರಾಣ್ಯಮಿತ್ರೇಷು ಚ ವ್ಯಾಪಿತಾನಿ ॥ ೨೩ ॥ ಏಷೋಽಹಿತಾಗ್ನಿಶ್ಚ ಮಹಾತಪಾಶ್ಚ ವೇದಾಂತಗಃ ಕರ್ಮಸು ಚಾಗ್ರ್ಯವೀರ್ಯಃ । ಏತಸ್ಯ ಯತ್ಪ್ರೇತಗತಸ್ಯ ಕೃತ್ಯಂ ತತ್ಕರ್ತುಮಿಚ್ಛಾಮಿ ತವ ಪ್ರಸಾದಾತ್" ॥ ೨೪ ॥ ಸತಸ್ಯ ವಾಕ್ಯೈಃ ಕರುಣೈರ್ಮಹಾತ್ಮಾ ಸಂಬೋಧಿತ ಸ್ಸಾಧು ವಿಭೀಷಣೇನ । ಆಜ್ಞಾಪಯಾಮಾಸ ನರೇಂದ್ರಸೂನು ಸ್ಸ್ವರ್ಗೀಯಮಾಧಾನಮದೀನಸತ್ವಃ ॥ ೨೫ ॥

ಪೋಷಿಸಲ್ಪಟ್ಟರು, ಧನಾನಿ - ದ್ರವ್ಯಗಳು, ಮಿತ್ರೇಷು - ಮಿತ್ರರಲ್ಲಿ, ಸಮರ್ಪಿತಾನಿ - ಕೊಡಲ್ಪಟ್ಟವು, ವೈರಾಣಿ - ದ್ವೇಷಗಳು, ಅಮಿತ್ರೇಷು - ಶತ್ರುಗಳಲ್ಲಿ, ವ್ಯಾಪಿತಾನಿ - ಹೊಂದಿಸಲ್ಪಟ್ಟವು. ॥ ೨೩ ॥ ಏಷಃ - ಈ ದಶಕಂಠನು, ಆಹಿತಾಗ್ನಿಃ - ಸೋಮಯಾಜಿಯು, ಮಹಾತಪಾಶ್ಚ - ಬಹಳವಾದ ತಪಸ್ಸುಳ್ಳವನು, ವೇದಾಂತಗಃ - ವೇದಾಂತ ಶಾಸ್ತ್ರವನ್ನು ತಿಳಿದವನು, ಕರ್ಮಸುಚ - ಕರ್ಮಗಳಲ್ಲಿ, ಅಗ್ರ್ಯವೀರ್ಯಃ - ಶ್ರೇಷ್ಠವಾದ ಸಾಮರ್ಥ್ಯವುಳ್ಳವನು, ಪ್ರೇತಗತಸ್ಯ - ಪ್ರೇತತ್ವನನ್ನು ಹೊಂದಿದ, ಏತಸ್ಯ - ಈ ದಶಕಂಠನಿಗೆ, ಯತ್ ಯಾವ ಕಾರ್ಯವು, ಕೃತ್ಯಂ-ಮಾಡತಕ್ಕದೋ, ತವ-ನಿನ್ನ, ಪ್ರಸಾದಾತ್-ಪ್ರಸಾದದಿಂದ, ತತ್ - ಆ ಪ್ರೇತಕೃತ್ಯವನ್ನು, ಕರ್ತುಂ - ಮಾಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೨೪ ॥ ಮಹಾತ್ಮಾ - ಮಹಾ ಪ್ರಭಾವವಂತನಾದ, ಅದೀನಸತ್ವಃ - ದೃಢವಾದ ಸತ್ವಗುಣವುಳ್ಳ, ಸನರೇಂದ್ರಸೂನುಃ-ರಾಜಪುತ್ರನಾದ ಶ್ರೀರಾಮನು, ಕರುಣೈಃ-ದೈನ್ಯದಿಂದ ಕೂಡಿರುವ, ತಸ್ಯ - ಆ ವಿಭೀಷಣನ, ವಾಕ್ಯೈಃ - ಮಾತುಗಳಿಂದ, ಸಾಧು - ಚನ್ನಾಗಿ, ವಿಭೀಷಣೇನ - ವಿಭೀಷಣನಿಂದ, ಸಂಬೋಧಿತಃ - ವಿಜ್ಞಾಪಿಸಲ್ಪಟ್ಟವನಾಗಿ, ಸ್ವರ್ಗೀಯಂ - ಸ್ವರ್ಗಲೋಕ ಸಂಪಾದಕವಾದ, ಆಧಾನಂ - ಅಂತ್ಯೇಷ್ಟಿಯನ್ನು, ಕರ್ತುಂ - ಮಾಡುವುದಕ್ಕೆ, ಆಜ್ಞಾಪಯಾಮಾಸ - ಆಜ್ಞಾಪಿಸಿದನು.

ಬೇಕಾದ ಹಾಗೆ ಧನಕನಕಾದಿಗಳನ್ನು ಕೊಟ್ಟು ಸಂತೋಷಗೊಳಿಸಿರುವನು ; ಅನೇಕ ಮಂದಿ ಹಗೆಯರನ್ನೊಕ್ಕಲಿಕ್ಕಿರುವನು. ರಾಕ್ಷಸರಾಜನಾದ ಈತನು ಮಹಾ ನಿಷ್ಠನಾದವನು ; ಅಗ್ನಿಹೋತ್ರಿಯಾದವನು ; ವೇದಾಧ್ಯಯನಸಂಪನ್ನನಾದವನು ; ವೇದಾಂತವನ್ನು ಚೆನ್ನಾಗಿ ಓದಿದವನು ; ವೈದಿಕ ಕರ್ಮಗಳನ್ನು ನಿಷ್ಠೆಯಿಂದ ಮಾಡುವಾತನು ; ಅಲ್ಲದೆ ಅವುಗಳಲ್ಲಿ ಭಕ್ತಿಶ್ರದ್ಧೆಗಳಿರುವವನು. ಇಂತಹನೀಗ ಮೃತಿಯೊಂದಿರುವನು. ಆದುದರಿಂದ ಈತನ ತಮ್ಮನಾದ ನಾನು ಈತನಿಗೆ ವೇದೋಕ್ತ ವಿಧಿಯಿಂದ ದಹನ ಸಂಸ್ಕಾರವನ್ನು ಮಾಡಬೇಕೆಂದು ಅಪೇಕ್ಷಿಸಿರುವೆನು. ಅದು ನಿನ್ನ ಅನುಗ್ರಹದಿಂದ ಆಗಬೇಕಾಗಿರುವುದು. ನೀನು ಅನುಜ್ಞೆಯಿತ್ತರೆ ಮಾಡುವೆನು" ಎಂದು ಹೇಳಿದನು. ಆ ಮಾತುಗಳನ್ನು ಕೇಳಿ ಮಹಾನುಭಾವನಾದ ಶ್ರೀರಾಮಮೂರ್ತಿಯು ಅವನನ್ನು ಕುರಿತು, "ಎಲೈ ರಾಕ್ಷಸರಾಜನಾದ ವಿಭೀಷಣನೇ! ಈ ರಾವಣಾಸುರನಿಗೆ ಸ್ವರ್ಗಲೋಕಪ್ರಾಪ್ತಿಗೆ ಸಾಧನಭೂತವಾದ ಸಮಸ್ತ ಪ್ರೇತಕೃತ್ಯಗಳನ್ನೂ ವೇದೋಕ್ತವಾಗಿ ನೆರವೇರಿಸುವವನಾಗು. ವಿಭೀಷಣಾ! ಹಗೆತನವೆಂಬುದು ಶತ್ರುವು ಮಡಿವವರೆಗೆ ಮಾತ್ರವೇ! ಆಮೇಲೆ ಹಗೆತನ ಕಟ್ಟಿಕೊಂಡರೂ ಪ್ರಯೋಜನವಿರುವುದಿಲ್ಲವು. ಈಗ ನನಗೆ ರಾವಣನ ಮೇಲೆ ಯಾವ ವಿಧವಾದ ವೈರವೂ ಇರುವುದಿಲ್ಲವು. ಇವನ ಮೇಲಣ ವೈರದಿಂದ ನನಗೆ ಯಾವ ಪ್ರಯೋಜನವಾಗಬೇಕೋ, ಸೀತಾಪ್ರಾಪ್ತಿರೂಪ ಆ ಪ್ರಯೋಜನವು ಆಗಿರುವುದು. ಆದುದರಿಂದ ನೀನು ಇವನಿಗೆ ವೇದೋಕ್ತವಾಗಿ

§ "ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ ।
ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ" ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ

॥ ೨೫ ॥ ವೈರಾಣಿ - ವೈರಗಳು, ಮರಣಾಂತಾನಿ - ಮರಣವೇ ಅಂತವಾಗುಳ್ಳವುಗಳು, ನಃ - ನಮಗೆ, ಪ್ರಯೋಜನಂ - ಕಾರ್ಯವು, ನಿರ್ವೃತ್ತಂ - ಸಫಲವಾಯಿತು, ಏಷಃ - ಈ ರಾವಣನು, ತವ - ನಿನಗೆ, ಯಥಾ - ಹೇಗೋ, ಮಮಾಪಿ - ನನಗೂ, ತಥಾ - ಹಾಗೆಯೇ ಸರಿ, ಅಸ್ಯ - ಈ ರಾವಣನಿಗೆ, ಸಂಸ್ಕಾರಃ - ಅಂತ್ಯ ಸಂಸ್ಕಾರವು, ಕ್ರಿಯತಾಂ - ಮಾಡಲ್ಪಡಲಿ. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾದಶೋತ್ತರಶತತಮಸ್ಸರ್ಗಃ.

ಅಂತ್ಯಸಂಸ್ಕಾರವನ್ನು ನಡೆಸು. ನಿನಗೆ ಈತನ ವಿಷಯದಲ್ಲಿ ಯಾವ ಬಗೆಯ ಪ್ರೀತಿ ಇರುವುದೋ, ವ್ಯಸನವಿರುವುದೋ ನನಗೂ ಈಗ ಅದೇ ಪ್ರೀತಿ ಮತ್ತು ಅದೇ ವ್ಯಸನವಿರುವುದು" ಎಂದನು. ॥ ೨೧–೨೬ ॥

ಇಂತಿದು ವಿಭೀಷಣ ವಿಲಾಪವೆಂಬ ನೂರಹನ್ನೆರಡನೆಯ ಸರ್ಗವು
ಸಮಾಪ್ತವಾದುದು.

§ ಇಲ್ಲಿ, "ಮಮಾಪ್ಯೇಷ ಯಥಾ ತವ" ಎಂದರೆ ಇವನು ನಿನಗೆ ಹೇಗೆ ಅಣ್ಣನೋ ನನಗೂ ಹಾಗೆಯೇ ಅಣ್ಣನೇ, ನನಗೂ ಭ್ರಾತೃಭೂತನಾಗಿ, ನಿನಗೆ ಭ್ರಾತೃವೇ ಆಗಿರುವುದರಿಂದ ನೀನು ಈತನಿಗೆ, ಯಾಯಜೂಕನಿಗೆ ಸಲ್ಲಬೇಕಾದ ಅಂತ್ಯೇಷ್ಟಿಯನ್ನು ದೋಷೈಕದೃಷ್ಟಿಯುಳ್ಳವನಾಗಿ ಮಾಡದಿದ್ದರೆ ನಾನೇ ಮಾಡುತ್ತೇನೆ. ಭ್ರಾತೃಗಳಾದವರಲ್ಲಿ ಯಾರಾದರೊಬ್ಬರು ಈ ಕರ್ಮವನ್ನು ಮಾಡಲೇ ಬೇಕಲ್ಲವೆ?" ಎಂದು ಅಭಿಪ್ರಾಯ. (ಗೋ)

ಈ ಶ್ಲೋಕದಲ್ಲಿ "ನಿವೃತ್ತಂ ನಃ ಪ್ರಯೋಜನಂ" ಎಂಬ ಕಡೆ ಹನ್ನೆರಡನೆಯ ಅಕ್ಷರವಾದ ನಃ ಎಂಬುದು ಗಾಯತ್ರಿಯ ಇಪ್ಪತ್ತನೆಯ ಅಕ್ಷರವು. ಇಲ್ಲಿಗೆ ೨೦ ಸಾವಿರ ಶ್ಲೋಕಗಳು ಮುಗಿದು ಮುಂದಿನ ಸರ್ಗದಿಂದ ೨೧ನೇ ಸಾವಿರವು ಮೊದಲಾಗುತ್ತದೆ. (ಗೋ+ಮ)

ಯುದ್ಧಕಾಂಡೇ ತ್ರಯೋದಶೋತ್ತರಶತತಮಸ್ಸರ್ಗಃ

ರಾವಣಂ ನಿಹತಂ ಶ್ರುತ್ವಾ ರಾಘವೇಣ ಮಹಾತ್ಮನಾ । ಅಂತಃಪುರಾದ್ವಿನಿಷ್ಪೇತೂ ರಾಕ್ಷಸ್ಯಶ್ಶೋಕಕರ್ಶಿತಾಃ ॥೧॥ ವಾರ್ಯಮಾಣಾಸ್ಸುಬಹುಶೋ ವೇಷ್ಟಂತ್ಯಃ ಕ್ಷಿತಿಪಾಂಸುಷು । ವಿಮುಕ್ತಕೇಶ್ಯೋ ದುಃಖಾರ್ತಾ ಗಾವೋ ವತ್ಸಹತಾ ಇವ ॥ ೨ ॥ ಉತ್ತರೇಣ ವಿನಿಷ್ಕ್ರಮ್ಯ ದ್ವಾರೇಣ ಸಹರಾಕ್ಷಸೈಃ । ಪ್ರವಿಶ್ಯಾಯೋಧನಂ ಘೋರಂ ವಿಚಿನ್ವಂತ್ಯೋ ಹತಂ ಪತಿಂ ॥ ೩ ॥ ರಾಜಪುತ್ರೇತಿ ವಾದಿನ್ಯೋ ಹಾ! ನಾಥೇತಿ ಚ ಸರ್ವಶಃ । ಪರಿಪೇತುಃ ಕಬಂಧಾಂಕಾಂ ಮಹೀಂ ಶೋಣಿತ ಕರ್ದಮಾಂ ॥ ೪ ॥ ತಾ

ಮಹಾತ್ಮನಾ - ಮಹಾ ಪ್ರಭಾವವಂತನಾದ, ರಾಘವೇಣ - ಶ್ರೀರಾಮನಿಂದ, ನಿಹತಂ - ಹೊಡೆಯಲ್ಪಟ್ಟ, ರಾವಣಂ - ದಶಕಂಠನು, ಶ್ರುತ್ವಾ - ಕೇಳಿ, ರಾಕ್ಷಸ್ಯಃ - ರಕ್ಕಸಿಯರು, ಶೋಕಕರ್ಶಿತಾಃ - ವ್ಯಸನದಿಂದ ಕೃಶೀಭೂತರಾಗಿ, ಅಂತಃಪುರಾತ್ - ಅಂತಃಪುರದಿಂದ, ವಿನಿಷ್ಪೇತುಃ - ಹೊರಟುಬಂದರು. ॥ ೧ ॥ ಸುಬಹುಶಃ - ಬಹಳವಾಗಿ, ವಾರ್ಯಮಾಣಾಃ - ತಡೆಯಲ್ಪಟ್ಟವರಾದರೂ, ಕ್ಷಿತಿಪಾಂಸುಷು - ನೆಲದ ದೂಳಿನಲ್ಲಿ, ವೇಷ್ಟಂತ್ಯಃ - ಹೊರಳಾಡುತ್ತಿರುವವರಾಗಿ, ವಿಮುಕ್ತಕೇಶ್ಯಃ - ಬಿಚ್ಚಿಹೋದ ಕೂದಲುಗಳುಳ್ಳವರಾಗಿ, ದುಃಖಾರ್ತಾಃ - ವ್ಯಸನದಿಂದ ದೀನರಾಗಿ, ವತ್ಸಹತಾಃ - ಮಡಿದ ಕರುಗಳುಳ್ಳ, ಗಾವಇವ - ಗೋವುಗಳಂತೆ. ॥ ೨ ॥ ಉತ್ತರೇಣದ್ವಾರೇಣ - ಉತ್ತರದ್ವಾರದಿಂದ, ರಾಕ್ಷಸೈಸಹ - ರಕ್ಕಸರೊಡಗೂಡಿ, ವಿನಿಷ್ಕ್ರಮ್ಯ - ಹೊರಟು, ಘೋರಂ - ಭಯಂಕರವಾದ, ಆಯೋಧನಂ - ರಣಭೂಮಿಯನ್ನು, ಪ್ರವಿಶ್ಯ - ಹೊಕ್ಕು, ಹತಂ - ಸಂಹೃತನಾದ, ಪತಿಂ - ಗಂಡನನ್ನು, ವಿಚಿನ್ವಂತ್ಯಃ - ಹುಡುಕುತ್ತ, ರಾಜಪುತ್ರೇತಿ - ಎಲೈ ಅರಸುಮಗನೇ, ಹಾ ನಾಥ - ಎಲೈ ಒಡೆಯನೇ, ಇತಿ - ಇಂತೆಂದು, ವಾದಿನ್ಯಃ - ಹೇಳುತ್ತಿರುವವರಾಗಿ, ಸರ್ವಶಃ - ಸರ್ವಪ್ರಕಾರದಲ್ಲಿಯೂ, ಕಬಂಧಾಂಕಂ - ಮುಂಡಗಳೇ ಸಮಿಾಪದಲ್ಲಿರುವ, ಶೋಣಿ....ಮಾಂ - ರಕ್ತದಿಂದ ಕೆಸರಾಗಿರುವ, ಮಹೀಂ-ಭೂಮಿಯಲ್ಲಿ, ಪರಿಪೇತುಃ-ಬಿದ್ದರು. ॥೩-೪॥ ಬಾಷ್ಪ....ಕ್ಷ್ಯಃ-

---

ಆ ತರುವಾಯ, ಮಹಾತ್ಮನಾದ ಶ್ರೀರಾಮಮೂರ್ತಿಯಿಂದ, ತಮ್ಮ ಒಡೆಯನಾದ ರಾವಣಾಸುರನು ಹತನಾದನೆಂಬ ಸುದ್ದಿಯನ್ನು ಕೇಳಿದೊಡನೆಯೇ ಅಂತಃಪುರದಲ್ಲಿದ್ದ ರಾಕ್ಷಸಾಂಗನೆಯರೆಲ್ಲರೂ ವ್ಯಸನಪೀಡಿತೆಯರಾಗಿ ಹೊರಟುಬಂದರು. ಎಷ್ಟು ಬಗೆಯಾಗಿ ತಡೆದರೂ, ಅವರು ನೆಲದ ದೂಳಿನಲ್ಲಿ ಬಿದ್ದು ಬಿದ್ದು ಹೊರಳಾಡುತ್ತ ಬಿರಿದುಹೋದ ಮುಂದಲೆಗಳುಳ್ಳವರಾಗಿ ಅಳಿದುಹೋದ ಕರುಗಳುಳ್ಳ ಆಕಳುಗಳಂತೆ ರೋದಿಸುತ್ತ ಎಲ್ಲರೂ ಲಂಕಾನಗರದ ಉತ್ತರದ್ವಾರದಿಂದ ಹೊರಟು ರಾಕ್ಷಸರೊಡನೆ ರಣಭೂಮಿಯನ್ನು ಪ್ರವೇಶಿಸಿ, “ ರಾಜಪುತ್ರ! ಸ್ವಾಮಿ ” ಎಂದು ಅರಚುತ್ತ, ತಮ್ಮ ಪತಿಯಾದ ರಾವಣನನ್ನು ಹುಡುಕತೊಡಗಿದರು. ಆ ರಾಕ್ಷಸ ಲಲನೆಯರು ಹೀಗೆ ತಮ್ಮ ಪತಿಯನ್ನು ಹುಡುಕುವವರಾಗಿ ಮುಂಡಗಳಿಂದ ತುಂಬಿ, ರಕ್ತದಿಂದ ಕೆಸರಾಗಿರುವ ರಣಭೂಮಿಯಲ್ಲಿ ಎಲ್ಲ ಕಡೆಗಳಿಂದಲೂ ಹೊರಟುಬಂದರು. ಕಂಬನಿಗಳಿಂದ ತುಂಬಿದ ಕಣ್ಣುಗಳುಳ್ಳವರೂ, ಸ...

ಬಾಷ್ಪಪರಿಪೂರ್ಣಾಕ್ಷ್ಯೋ ಭರ್ತೃಶೋಕಪರಾಜಿತಾಃ । ಕರೇಣ್ವ ಇವ ನರ್ದಂತ್ಯೋ ವಿನೇದುರ್ಹತಯೂಥಪಾಃ ॥ ೫ ॥ ದದೃಶುಸ್ತಂ ಮಹಾವೀರ್ಯಂ ಮಹಾಕಾಯಂ ಮಹಾದ್ಯುತಿಂ । ರಾವಣಂ ನಿಹತಂ ಭೂಮೌ ನೀಲಾಂಜನಚಯೋಪಮಂ ॥೬॥ ತಾಃ ಪತಿಂ ಸಹಸಾ ದೃಷ್ಟ್ವಾ ಶಯಾನಂ ರಣಪಾಂಸುಷು । ನಿಪೇತುಸ್ತಸ್ಯ ಗಾತ್ರೇಷು ಛಿನ್ನಾ ವನಲತಾ ಇವ ॥ ೭ ॥ ಬಹುಮಾನಾತ್ಪರಿಷ್ವಜ್ಯ ಕಾಚಿದೇನಂ ರುರೋದಹ । ಚರಣೌ ಕಾಚಿದಾಲಿಂಗ್ಯ ಕಾಚಿತ್ ಕಂಠೇಽವಲಂಬ್ಯ ಚ ॥೮॥ ಉದ್ಧೃತ್ಯ ಚ ಭುಜೌ ಕಾಚಿದ್ಭೂಮೌ ಸ್ಮ ಪರಿವರ್ತತೇ । ಹತಸ್ಯ ವದನಂ ದೃಷ್ಟ್ವಾ ಕಾಚಿನ್ಮೋಹಮುಪಾಗಮತ್ ॥೯॥ ಕಾಚಿ

ಕಂಬನಿಗಳಿಂದ ತುಂಬಿರುವ ಕಣ್ಣುಗಳುಳ್ಳ, ಭರ್ತೃ....ತಾಃ ದಶಕಂಠನ ಶೋಕದಿಂದ ವ್ಯಸನಗೊಂಡ, ತಾಃ - ಆ ಹೆಂಗಳು, ಹತಯೂಥಪಾಃ - ಹೊಡೆಯಲ್ಪಟ್ಟ ಸಲಗವುಳ್ಳ, ಕರೇಣ್ವ ಇವ - ಹೆಣ್ಣಾನೆಗಳಂತೆ, ನರ್ದಂತ್ಯಃ - ಕೂಗುತ್ತ, ವಿನೇದುಃ - ಗಟ್ಟಿಯಾಗಿ ಚೀರಿಟ್ಟರು. ॥ ೫ ॥ ಮಹಾವೀರ್ಯಂ- ಮಹಾ ಸಾಮರ್ಥ್ಯವಂತನಾದ, ಮಹಾಕಾಯಂ - ದೊಡ್ಡ ಶರೀರವುಳ್ಳ, ಮಹಾದ್ಯುತಿಂ - ಮಹಾ ತೇಜೋವಂತನಾದ, ನೀಲಾಂ....ಮಂ - ಕಪ್ಪಾದ ಕಾಡಿಗೆಯ ರಾಶಿಗೆ ಸಮಾನವಾಗಿ, ಭೂಮೌ - ನೆಲದಲ್ಲಿ, ನಿಹತಂ - ಹೊಡೆಯಲ್ಪಟ್ಟ, ತಂ ರಾವಣಂ - ಆ ದಶಕಂಠನನ್ನು, ದದೃಶುಃ - ಕಂಡರು. ॥ ೬ ॥ ತಾಃ - ಆ ಹೆಂಗಳು, ರಣಪಾಂಸುಷು - ಕಾಳೆಗದ ಭೂಮಿಯ ದೂಳಿನಲ್ಲಿ, ಶಯಾನಂ - ಮಲಗಿರುವ, ಪತಿಂ - ಗಂಡನನ್ನು, ಸಹಸಾ - ಜಾಗ್ರತೆಯಾಗಿ, ದೃಷ್ಟ್ವಾ - ಕಂಡು, ತಸ್ಯ - ಆ ದಶಕಂಠನ, ಗಾತ್ರೇಷು - ಅವಯವಗಳಲ್ಲಿ, ಛಿನ್ನಾಃ - ಕತ್ತರಿಸಿದ, ವನಲತಾ ಇವ - ವನದಲ್ಲಿಯ ಬಳ್ಳಿಗಳಂತೆ, ನಿಪೇತುಃ - ಬಿದ್ದರು. ॥ ೭ ॥ ಕಾಚಿತ್ - ಒಬ್ಬಳು, ಬಹುಮಾನಾತ್ - ಬಹುಮಾನದಿಂದ, ಏನಂ - ಈ ದಶಕಂಠನನ್ನು, ಪರಿಷ್ವಜ್ಯ - ಅಪ್ಪಿ, ರುರೋದಹ - ರೋದನ ಮಾಡಿದಳು, ಕಾಚಿತ್ - ಓರ್ವಳು, ಚರಣೌ - ಕಾಲುಗಳನ್ನು, ಆಲಿಂಗ್ಯ - ಅಪ್ಪಿಯೂ, ಕಾಚಿತ್ - ಒಬ್ಬಳು, ಕಂಠೇ - ಕೊರಳಿನಲ್ಲಿ, ಅವಲಂಬ್ಯ - ಹಿಡಿದುಕೊಂಡೂ, ಭುಜೌ - ಭುಜಗಳನ್ನು, ಉದ್ಧೃತ್ಯ - ಎತ್ತಿ, ಕಾಚಿತ್ - ಒಬ್ಬಳೂ, ಭೂಮೌ - ನೆಲದಲ್ಲಿ, ಪರಿವರ್ತತೇಸ್ಮ - ಹೊರಳಾಡಿದಳಷ್ಟೆ, ಕಾಚಿತ್ - ಒಬ್ಬಳು, ಹತಸ್ಯ - ಸಂಹೃತನಾದ ರಾವಣನ, ವದನಂ - ಮುಖವನ್ನು, ದೃಷ್ಟ್ವಾ - ಕಂಡ, ಮೋಹಂ - ಮೂರ್ಛೆಯನ್ನು, ಉಪಾಗಮತ್ - ಹೊಂದಿದಳು, ಕಾಚಿತ್ - ಒಬ್ಬಳು, ಅಂಕೇ - ತೊಡೆಯಲ್ಲಿ, ಶಿರಃ - ತಲೆಯನ್ನು, ಕೃತ್ವಾ - ಇಟ್ಟು, ಮುಖಂ - ಮುಖವನ್ನು, ಈಕ್ಷತೀ - ನೋಡುತ್ತ,

---

ವಿಯೋಗ ದುಃಖದಿಂದ ಸೋತವರೂ, ಸಲಗವಿಲ್ಲದ ಹೆಣ್ಣಾನೆಗಳಂತೆ ಚೀರಿಡುತ್ತಿರುವವರೂ ಆದ ಆ ರಾಕ್ಷಸ ವನಿತೆಯರು ಮಹಾ ಪರಾಕ್ರಮಿಯೂ, ಮಹಾ ತೇಜಸ್ವಿಯೂ, ತಮ್ಮ ಪತಿಯೂ ಆದ ರಾವಣಾಸುರನು ಮಡಿದು, ಕಾಡಿಗೆಯ ಬೆಟ್ಟಕ್ಕೆ ಸಮಾನವಾಗಿ ಭೂಮಿಯಲ್ಲಿ ಬಿದ್ದಿರುವುದನ್ನು ಕಂಡರು. ॥೧-೬॥ ಯುದ್ಧಭೂಮಿಯ ದೂಳಿನಲ್ಲಿ ಬಿದ್ದಿರುವ ತಮ್ಮ ಪತಿಯನ್ನು ಕಂಡೊಡನೆಯೇ ಅವರೆಲ್ಲರೂ ಮುರಿದ ಬಳ್ಳಿಗಳಂತೆ ತಟ್ಟನೆ ಅವನ ಮೃತ ಕಳೇಬರದ ಮೇಲೆ ಬಿದ್ದರು. ಒಬ್ಬಳು ಗೌರವದಿಂದ ಆ ಕಳೇಬರವನ್ನಾಲಿಂಗಿಸಿಕೊಂಡು ಗೋಳಿಟ್ಟಳು. ಒಬ್ಬಳು ಕಾಲುಗಳನ್ನು ತಬ್ಬಿಕೊಂಡೂ, ಇನ್ನೊಬ್ಬಳು ಕಂಠವನ್ನಪ್ಪಿಯೂ, ಮತ್ತೊಬ್ಬಳು ಭುಜಗಳನ್ನೆತ್ತಿಯೂ ರೋದಿಸಿದರು. ಮೃತನಾದ ಆ ರಾಕ್ಷಸೇಶ್ವರನ ಮುಖವನ್ನು ಕಂಡು ಒಬ್ಬಳು ಹಾಗೆಯೇ ಮೂರ್ಛೆಯೊಂದಿದಳು, ಒಬ್ಬಾಕೆಯು ಆ ರಾಕ್ಷಸರಾಜನ

ದಂಕೇ ಶಿರಃ ಕೃತ್ವಾ ರುರೋದ ಮುಖಮೀಕ್ಷತೀ । ಸ್ನಾಪಯಂತೀ ಮುಖಂ ಬಾಷ್ಪೈ ಸ್ತುಷಾರೈರಿವ ಪಂಕಜಂ ॥ ೧೦ ॥ ಏವಮಾರ್ತಾಃ ಪತಿಂ ದೃಷ್ಟ್ವಾ ರಾವಣಂ ನಿಹತಂ ಭುವಿ । ಚುಕ್ರುಶು ರ್ಬಹುಧಾ ಶೋಕಾದ್ಭೂಯಸ್ತಾಃ ಪರ್ಯದೇವಯನ್ ॥ ೧೧ ॥ ಯೇನ ವಿತ್ರಾಸಿತಃ ಶಕ್ರೋ ಯೇನ ವಿತ್ರಾಸಿತೋ ಯಮಃ । ಯೇನ ವೈಶ್ರವಣೋ ರಾಜಾ ಪುಷ್ಪಕೇಣ ವಿಯೋಜಿತಃ ॥ ೧೨ ॥ ಗಂಧರ್ವಾಣಾಮೃಷೀಣಾಂಚ ಸುರಾಣಾಂಚ ಮಹಾತ್ಮನಾಂ । ಭಯಂ ಯೇನ ಮಹದ್ದತ್ತಂ ಸೋಽಯಂ ಶೇತೇ ರಣೇ ಹತಃ ॥೧೩॥ ಅಸುರೇಭ್ಯ ಸ್ಸುರೇಭ್ಯೋ ವಾ ಪನ್ನಗೇಭ್ಯೋಽಪಿ ವಾ ತಥಾ । ನಭಯಂ

ಬಾಷ್ಪೈಃ - ಕಂಬನಿಗಳಿಂದ, ಪಂಕಜೈಃ - ಕಮಲವನ್ನು, ತುಷಾರೈರಿವ - ಮಂಜಿನ ತೊಟ್ಟುಗಳಿಂದ ಹೇಗೋ ಹಾಗೆ, ಮುಖಂ-ಮುಖವನ್ನು, ಸ್ನಾಪಯಂತೀ-ತೋಯಿಸುತ್ತ, ರುರೋದ-ಅಳುತ್ತಿದ್ದಳು. ॥೮-೧೦॥ ಏವಂ - ಈ ಪರಿಯಾಗಿ, ಭುವಿ - ನೆಲದಲ್ಲಿ, ನಿಹತಂ - ಮೃತನಾದ, ಪತಿಂ - ಪತಿಯಾದ, ರಾವಣಂ - ದಶಕಂಠನನ್ನು, ದೃಷ್ಟ್ವಾ - ಕಂಡು, ಆರ್ತಾಃ - ದೀನರಾಗಿ, ತಾಃ - ಆ ರಕ್ಕಸಿಯರು, ಬಹುಧಾ - ಬಹಳವಾಗಿ, ಶೋಕಾತ್ - ವ್ಯಸನದಿಂದ, ಚುಕ್ರುಶುಃ - ಅಳುತ್ತಿದ್ದರು, ಭೂಯಃ - ಮತ್ತೂ, ಪರ್ಯದೇವಯನ್ - ಸುತ್ತಿಕೊಂಡು ಪ್ರಲಾಪ ಮಾಡಿದರು. ॥ ೧೧ ॥ ಯೇನ - ಯಾವ ದಶಕಂಠನಿಂದ, ಶಕ್ರಃ - ದೇವೇಂದ್ರನು, ವಿತ್ರಾಸಿತಃ - ಹೆದರಿಸಲ್ಪಟ್ಟನೋ, ಯಮಃ - ಯಮನು, ಯೇನ - ಯಾವನಿಂದ, ವಿತ್ರಾಸಿತಃ - ಹೆದರಿಸಲ್ಪಟ್ಟನೋ, ರಾಜಾ - ಅರಸಾದ, ವೈಶ್ರವಣಃ - ಕುಬೇರನು, ಯೇನ - ಯಾವ ದಶಕಂಠನಿಂದ, ಪುಷ್ಪಕೇಣ - ಪುಷ್ಪಕದಿಂದ, ವಿಯೋಜಿತಃ - ಬಿಡಿಸಲ್ಪಟ್ಟನೋ, ಗಂಧರ್ವಾಣಾಂ - ಗಂಧರ್ವರಿಗೂ, ಮಹಾತ್ಮನಾಂ - ಮಹಾ ಮನಸ್ವಿಗಳಾದ, ಋಷೀಣಾಂಚ - ಋಷಿಗಳಿಗೂ, ಸುರಾಣಾಂಚ - ದೇವತೆಗಳಿಗೂ, ಮಹತ್ - ದೊಡ್ಡದಾದ, ಭಯಂ - ಭಯವು, ಯೇನ - ಯಾವನಿಂದ, ದತ್ತಂ - ಕೊಡಲ್ಪಟ್ಟಿತೋ, ಸೋಽಯಂ - ಅಂಥಾ ಈ ರಾವಣನು, ರಣೇ - ಕಾಳೆಗದಲ್ಲಿ, ಹತಃ - ಸಂಹೃತನಾಗಿ, ಶೇತೇ - ಮಲಗಿದ್ದಾನೆ. ॥೧೨-೧೩॥ ಯಃ- ಯಾವ ದಶಕಂಠನು, ಅಸುರೇಭ್ಯಃ - ದೈತ್ಯರ ದೆಸೆಯಿಂದಲೂ, ಸುರೇಭ್ಯೋವಾ - ದೇವತೆಗಳ ದೆಸೆಯಿಂದಲೂ, ತಥಾ - ಹಾಗೆಯೇ, ಪನ್ನಗೇಭ್ಯೋಽಪಿವಾ - ಸರ್ಪಗಳ ದೆಸೆಯಿಂದಲೂ, ಭಯಂ -

---

ಶಿರಸ್ಸನ್ನು ತೊಡೆಯ ಮೇಲಿಟ್ಟುಕೊಂಡು ಅವನ ಮುಖವನ್ನೇ ದೃಷ್ಟಿಸಿ ನೋಡುತ್ತ ಕಮಲವನ್ನು ಮಂಜಿನ ತೊಟ್ಟುಗಳಿಂದೆಂತೋ ಅಂತು ತನ್ನ ಕಂಬನಿಗಳಿಂದದನ್ನು ತೋಯಿಸುತ್ತಿದಳು. ॥೬-೧೦॥ ಹೀಗೆ ಆ ರಾಕ್ಷಸ ರಮಣಿಯರೆಲ್ಲರೂ, ಮಡಿದು ನೆಲದಲ್ಲಿ ಬಿದ್ದಿರುವ ತಮ್ಮ ಪತಿಯನ್ನು ಕಂಡು ದುಃಖಾರ್ತೆಯರಾಗಿ ಮತ್ತೆ ಮತ್ತೆ ರೋದಿಸತೊಡಗಿದರು. “ ಯಾವಾತನು ದೇವೇಂದ್ರನನ್ನು ಬೆದರಿಸಿ ಬೆಂಡಾಗಿಸಿದನೋ, ಯಾವನು ಯಮನನ್ನು ಭಯದಿಂದ ನಡುಗುವಂತೆ ಮಾಡಿದನೋ, ಯಾವನು ರಾಜರಾಜನಾದ ಕುಬೇರನಿಂದ ಪುಷ್ಪಕ ವಿಮಾನವನ್ನು ಕಸೆದೊಯ್ದನೋ, ಯಾವನು ಗಂಧರ್ವರಿಗೂ, ಋಷಿಗಳಿಗೂ, ಮಹಾತ್ಮರಾದ ದೇವತೆಗಳಿಗೂ ಅಪರಿಮಿತವಾದ ಭಯಶೋಕಗಳನ್ನುಂಟುಮಾಡಿದನೋ ಅಂಥ ವೀರಾಧಿವೀರನಾದ ಈ ರಾವಣೇಶ್ವರನು ಈಗ ರಣಭೂಮಿಯಲ್ಲಿ ಮಡಿದು ಮಲಗಿದನು! ಅಸುರರಿಂದಾಗಲಿ, ಸುರರಿಂದಾಗಲಿ, ಪನ್ನಗರಿಂದಾಗಲಿ ಯಾವಾತನಿಗೆ ಭಯವೆಂಬುದೇ ಇಲ್ಲದಿದ್ದಿತೋ ಅಂಥ ರಾಕ್ಷಸರಾಜನೀಗ ಮಾನವನಿಂದ ಭಯವಡಸಿಬಂದಿತು. ಯಾವಾತನು ದೇವತೆ

ಯೋ ವಿಜಾನಾತಿ ತಸ್ಯೇದಂ ಮಾನುಷಾದ್ಭಯಂ ॥ ೧೪ ॥ ಅವಧ್ಯೋ ದೇವತಾನಾಂ ಯಸ್ತಥಾ ದಾನವರಕ್ಷಸಾಂ । ಹತಸ್ಸೋಽಯಂ ರಣೇ ಶೇತೇ ಮಾನುಷೇಣ ಪದಾತಿನಾ ॥ ೧೫ ॥ ಯೋ ನಶಕ್ಯಸ್ಸುರೈರ್ಹಂತುಂ ನಯಕ್ಷೈರ್ನಾಸುರೈಸ್ತಥಾ । ಸೋಽಯಂ ಕಶ್ಚಿದಿವಾಸತ್ವೋ ಮೃತ್ಯುಂ ಮರ್ತ್ಯೇನ ಲಂಭಿತಃ ॥ ೧೬ ॥ ಏವಂ ವದಂತ್ಯೋ ಬಹುಧಾ ರುರುದುಸ್ತಸ್ಯ ತಾಃ ಸ್ತ್ರಿಯಃ । ಭೂಯಏವಚ ದುಃಖಾರ್ತಾ ವಿಲೇಪುಶ್ಚ ಪುನಃಪುನಃ ॥ ೧೭ ॥ ಅಶೃಣ್ವತಾಚ ಸುಹೃದಾಂ ಸತತಂ ಹಿತವಾದಿನಾಂ । ಮರಣಾಯಾಹೃತಾ ಸೀತಾ ಘಾತಿತಾಶ್ಚ ನಿಶಾಚರಾಃ । ಏತಾಸ್ಸಮಮಿದಾನೀಂ ತೇ

ಭೀತಿಯನ್ನು, ನವಿಜಾನಾತಿ - ಅರಿಯನೋ, ತಸ್ಯ - ಅಂಥಾ ರಾವಣನಿಗೆ, ಮಾನುಷಾತ್ - ಮನುಷ್ಯನ ದೆಸೆಯಿಂದ, ಇದಂ - ಈ ಅವಸ್ಥೆಯು, ಪ್ರಾಪ್ತಂ - ಒದಗಿತು, ಯಃ - ಯಾವುದು, ದೇವತಾನಾಂ - ದೇವತೆಗಳಿಗೂ, ತಥಾ - ಹಾಗೆಯೇ, ದಾನವರಕ್ಷಸಾಂ - ದಾನವರಾಕ್ಷಸರಿಗೂ, ಅವಧ್ಯಃ - ವಧಿಸಲಸಾಧ್ಯನೋ, ಸೋಽಯಂ - ಆ ಈ ದಶಕಂಠನು, ರಣೇ - ಕಾಳಗದಲ್ಲಿ, ಪದಾತಿನಾ - ಪಾದಚಾರಿಯಾದ, ಮಾನುಷೇಣ - ಮನುಷ್ಯನಿಂದ, ಹತಃ - ಹೊಡೆಯಲ್ಪಟ್ಟವನಾಗಿ, ಶೇತೇ - ಮಲಗಿದ್ದಾನೆ. ॥ ೧೪-೧೫ ॥ ಯಃ - ಯಾವ ದಶಕಂಠನು, ಸುರೈಃ - ದೇವತೆಗಳಿಂದ, ಹಂತುಂ - ಹೊಡೆಯುವುದಕ್ಕೆ, ನಶಕ್ಯಃ - ಸಮರ್ಥನಲ್ಲವೋ, ಯಕ್ಷೈಃ - ಯಕ್ಷರಿಂದ, ನವಧ್ಯಃ - ವಧಿಸಲಸಾಧ್ಯನೋ, ತಥಾ - ಹಾಗೆಯೇ, ಅಸುರೈಃ - ಅಸುರರಿಂದ, ನ - ಅಸಾಧ್ಯನೋ, ಸೋಽಯಂ- ಆ ಈ ದಶಕಂಠನು, ಅಸತ್ವಃ - ಬಲಹೀನನಾದ, ಕಶ್ಚಿದಿವ - ಸಾಧಾರಣನಂತೆ, ಮೃತ್ಯುಂ - ಮರಣವನ್ನು, ಮರ್ತ್ಯೇನ - ಮನುಷ್ಯನಿಂದ, ಲಂಭಿತಃ - ಹೊಂದಿಸಲ್ಪಟ್ಟನು. ॥ ೧೬ ॥ ಏವಂ - ಈ ಪರಿಯಾಗಿ, ವದಂತ್ಯಃ - ಹೇಳುತ್ತ, ತಸ್ಯ - ಆ ರಾವಣನ, ತಾಃಸ್ತ್ರಿಯಃ - ಆ ಹೆಂಗಸರು, ಬಹುಧಾ - ಬಹು ಬಗೆಯಾಗಿ, ರುರುದುಃ - ರೋದನಮಾಡಿ, ಭೂಯಏವ - ಮತ್ತೂ, ದುಃಖಾರ್ತಾಃ - ದುಃಖಗೊಂಡವನಾಗಿ, ಪುನಃಪುನಃ - ಬಾರಿಬಾರಿಗೂ, ವಿಲೇಪುಶ್ಚ - ವಿಲಾಪ ಮಾಡಿದರು. ॥೧೭॥ ಸತತಂ- ನಿರಂತರವೂ, ಹಿತವಾದಿನಾಂ - ಶ್ರೇಯಸ್ಸನ್ನೇ ಕೋರುತ್ತಿರುವ, ಸುಹೃದಾಂ - ಸ್ನೇಹಿತರ ದೆಸೆಯಿಂದ, ಅಶೃಣ್ವತಾ - ಮಾತನ್ನು ಕೇಳದಿರುವ ಈ ರಾವಣನಿಂದ, ಮರಣಾಯ - ಮರಣಕ್ಕಾಗಿ, ಸೀತಾ - ಸೀತಾದೇವಿಯು, ಆಹೃತಾ - ತರಲ್ಪಟ್ಟಳೋ, ನಿಶಾಚರಾಃ - ರಕ್ಕಸರೂ, ಘಾತಿತಾಃ - ಹೊಡೆಯಲ್ಪಟ್ಟರೋ, ತೇ - ನಿನ್ನಿಂದ, ಇದಾನೀಂ - ಈಗ, ಏತಾವಯಂ - ಈ ನಾವುಗಳೂ, ಆತ್ಮಾಚ-

ಗಳಿಗೂ, ದಾನವ ರಾಕ್ಷಸರಿಗೂ ಕೊಲ್ಲಲಸಾಧ್ಯನಾಗಿದ್ದನೋ, ಅಂಥ ನಮ್ಮ ಪ್ರಭುವು ಈಗ ಪದಾತಿಯಾದ ಕೇವಲ ಮಾನವನಿಂದ ಹತನಾಗಿ ಮಲಗಿದನು! ದೇವತೆಗಳಿಂದಾಗಲಿ, ಯಕ್ಷರಾಕ್ಷಸರಿಂದಾಗಲಿ ಕೊಲ್ಲಲಸಾಧ್ಯನಾದ ಈತನು ಮಹಾ ವೀರನು; ಕೇವಲ ಗಣನೀಯನಲ್ಲದ ಬಾನಾಡಿಯಂತೆ-ನಿಶ್ಶಕ್ತನಂತೆ-ಒಬ್ಬ ಮರ್ತ್ಯನಿಂದ ಮೃತ್ಯುವನ್ನು ಹೊಂದಿದನಲ್ಲವೇ! ॥ ೧೧-೧೫ ॥ ಅಯ್ಯೋ! ನಮ್ಮ ಪಾಡು ಹೀಗಾಯಿತೇ!" ಎಂಬುದಾಗಿ ಹೇಳಿಕೊಂಡು ಅಳುತ್ತ ಅವರೆಲ್ಲರೂ ಬಹಳವಾಗಿ ಸಂತಪಿಸಿ ಹೋನರಲ್ಲದೆ, ದುಃಖದ ಭಾರವನ್ನು ತಾಳಲಾರದೆ ಮತ್ತೆ ಮತ್ತೆ ಗಟ್ಟಿಯಾಗಿ ರೋದಿಸುತ್ತಿದ್ದರು. "ಅಕಟಕಟಾ! ಈತನು ತನ್ನ ಶ್ರೇಯಸ್ಸನ್ನು ಕೋರುವವರಾದ ಮಿತ್ರರ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ತನ್ನ ಸಾವಿಗೋಸ್ಕರವೇ ಸೀತೆಯನ್ನು ಕದ್ದು ತಂದುದೂ ಅಲ್ಲದೆ ರಾಕ್ಷಸರೆಲ್ಲರನ್ನೂ ಘಾತಿಸಿದನು.

ವಯಮಾತ್ಮಾಚ ಪಾತಿತಾಃ ||೧೮|| ಬ್ರುವಾಣೋಽಪಿ ಹಿತಂ ವಾಕ್ಯ ಮಿಷ್ಟೋ ಭ್ರಾತಾ
ವಿಭೀಷಣಃ । ಧೃಷ್ಟಂ ಪರುಷಿತೋ ಮೋಹಾತ್ತ್ವಯಾಽತ್ಮವಧಕಾಂಕ್ಷಿಣಾ || ೧೯ ||
ಯದಿ ನಿರ್ಯಾತಿತಾ ತೇಸ್ಯಾತ್ಸೀತಾ ರಾಮಾಯ ಮೈಥಿಲೀ । ನನಸ್ಸ್ಯಾದ್ವ್ಯಸನಂ
ಘೋರಮಿದಂ ಮೂಲಹರಂ ಮಹತ್ || ೨೦ || ವೃತ್ತಕಾಮೋ ಭವೇದ್ಭ್ರಾತಾ
ರಾಮೋ ಮಿತ್ರಕುಲಂ ಭವೇತ್ । ವಯಂಚಾವಿಧವಾಸ್ಸರ್ವಾ ಸ್ಸಕಾಮಾ ನಚ
ಶತ್ರವಃ || ೨೧ || ತ್ವಯಾ ಪುನರ್ನೃಶಂಸೇನ ಸೀತಾಂ ಸಂರುಂಧತಾ ಬಲಾತ್ ।

ನೀನೂ, ಸಮಂ - ಏಕಕಾಲದಲ್ಲಿ, ನಿಪಾತಿತಾಃ - ಬೀಳಿಸಲ್ಪಟ್ಟೆವು. || ೧೮ || ಹಿತಂ - ಹಿತವಾದ,
ವಾಕ್ಯಂ - ಮಾತನ್ನು, ಬ್ರುವಾಣೋಪಿ - ಹೇಳುತ್ತಿರುವವನಾದರೂ, ಇಷ್ಟಃ - ಪ್ರೀತಿಪಾತ್ರನಾದ,
ಭ್ರಾತಾ - ತಮ್ಮನಾದ, ವಿಭೀಷಣಃ - ವಿಭೀಷಣನು, ಮೋಹಾತ್ - ಅವಿವೇಕದಿಂದ, ಆತ್ಮ....ಣಾ -
ನಿನ್ನ ಸಂಹಾರವನ್ನೇ ಅಪೇಕ್ಷಿಸುತ್ತಿರುವ, ತ್ವಯಾ - ನಿನ್ನಿಂದ, ಧೃಷ್ಟಂ - ಧೂರ್ತತೆಯಿಂದ,
ಪರುಷಿತಃ - ದೂಷಿಸಲ್ಪಟ್ಟನು. || ೧೯ || ತೇ - ನಿನ್ನಿಂದ, ರಾಮಾಯ - ಶ್ರೀರಾಮನಿಗೆ,
ಮೈಥಿಲೀ - ಜನಕರಾಯನ ಮಗಳಾದ, ಸೀತಾ - ಸೀತಾದೇವಿಯು, ನಿರ್ಯಾತಿತಾ - ಸಮರ್ಪಣೆ
ಮಾಡಲ್ಪಟ್ಟವಳು, ಸ್ಯಾದ್ಯದಿ - ಆದವಳೇ ಆಗಿದ್ದರೆ, ನಃ - ನಮಗೆ, ಇದಂ - ಇಂಥಾ, ಮೂಲಹರಂ-
ಮೂಲನಾಶಕರವಾದ, ಮಹತ್ - ದೊಡ್ಡದಾದ, ಘೋರಂ - ಕ್ರೂರವಾದ, ವ್ಯಸನಂ - ದುಃಖವು,
ನಸ್ಯಾತ್ - ಇಲ್ಲದೆ ಹೋಗುತ್ತಿತ್ತು. ಭ್ರಾತಾ - ತಮ್ಮನಾದ ವಿಭೀಷಣನು, ವೃತ್ತಕಾಮಃ - ಸಫಲ
ವಾದ ಕೋರಿಕೆಯುಳ್ಳವನು, ಭವೇತ್ - ಆಗುತ್ತಿದ್ದನು, ರಾಮಃ - ಶ್ರೀರಾಮನು, ಮಿತ್ರಕುಲಂ -
ನಮ್ಮ ಕುಲಕ್ಕೆಲ್ಲಾ ಮಿತ್ರನು, ಭವೇತ್ - ಆಗುತ್ತಿದ್ದನು, ಸರ್ವಾಃ - ಸಮಸ್ತರಾದ, ವಯಂಚ -
ನಾವು, ಅವಿಧವಾಃ - ವಿಧವೆಯರಾಗದಿರುತ್ತಿದ್ದೆವು, ಶತ್ರವಶ್ಚ - ಶತ್ರುಗಳೂ, ಸಕಾಮಾಃ -
ಕೋರಿಕೆಯಿಂದೊಡಗೂಡಿದವರು, ನಸ್ಯುಃ - ಆಗದೇ ಇರುತ್ತಿದ್ದರು. ||೨೦ ೨೧|| ಸೀತಾಂ - ಸೀತಾ
ದೇವಿಯನ್ನು, ಬಲಾತ್ - ಬಲಾತ್ಕಾರದಿಂದ, ಸಂರುಂಧತಾ - ತಡೆಮಾಡಿದ, ನೃಶಂಸೇನ - ಘಾತುಕ
ನಾದ, ತ್ವಯಾಪುನಃ - ನಿನ್ನಿಂದಲಾದರೆ, ರಾಕ್ಷಸಾಃ - ರಕ್ಕಸರೂ, ವಯಂ - ನಾವೆಲ್ಲರೂ, ಆತ್ಮಾಚ -

---

ಓ ರಾಕ್ಷಸರಾಜ! ನಿನ್ನನ್ನೇ ನಂಬಿದ್ದ ನಾವುಗಳೆಲ್ಲರೂ ನಿನ್ನ ದೆಸೆಯಿಂದ ಹತರಾದೆವಲ್ಲದೆ
ನೀನು ಇಂತಹ ದುರವಸ್ಥೆಗೊಳಗಾಗಿ ನಿನ್ನನ್ನೂ ಹಾಳುಮಾಡಿಕೊಂಡೆ. ಅಯ್ಯೋ! ಪ್ರಿಯ
ಭ್ರಾತೃವಾದ ವಿಭೀಷಣನು ನಿನಗೆಷ್ಟು ಬಗೆಯಾಗಿ ಹಿತೋಕ್ತಿಗಳನ್ನು ಹೇಳಿದರೂ ಕೇಳದೆ
ಅವನನ್ನು ಕ್ರೂರವಾಗಿ ಬೈದು ನಿನ್ನ ಸಾವನ್ನು ನೀನೇ ಬರಮಾಡಿಕೊಂಡೆ. || ೧೬-೨೦ ||
ಮಹಾರಾಜಾ! ಅಯ್ಯೋ! ನೀನು ಅಂದೇ ಸೀತಾದೇವಿಯನ್ನು ಶ್ರೀರಾಮಮೂರ್ತಿಗೆ ಒಪ್ಪಿ
ಸಿದ್ದ ಪಕ್ಷದಲ್ಲಿ ನಮಗೆ ಈ ದುರವಸ್ಥೆಯು ತಪ್ಪುತ್ತಿದ್ದಿತಲ್ಲದೆ, ನಿನಗೂ ಈ ಮೂಲನಾಶಕ
ವಾದ ವಿಪತ್ತೂ ತಪ್ಪುತ್ತಿದ್ದಿತು. ಭ್ರಾತೃವಾದ ವಿಭೀಷಣನು ನಿನ್ನಲ್ಲಿ ವಿಶ್ವಾಸಪರನಾಗಿ,
ಎಂದಿನಂತೆ ನಿನಗೆ ಸಹಾಯಕನಾಗಿಯೇ ಇರುತ್ತಿದ್ದನಲ್ಲದೆ, ಶ್ರೀರಾಮಚಂದ್ರನೂ ನಿನಗೆ
ಮಿತ್ರನಾಗುತ್ತಿದ್ದನು. ನಾವೂ ಅವಿಧವೆಯರಾಗಿ ಸಮಸ್ತ ಇಷ್ಟಾರ್ಥ ಸಂಪನ್ನೆಯರಾಗಿರು
ತ್ತಿದ್ದೆವು. ಶತ್ರುಗಳು ಅಡಗಿ ಹೋಗುತ್ತಿದ್ದರು. ಅಕ್ಕಟಾ! ಪ್ರಭುವೇ! ಈಗ ನಿನ್ನ
ಹಗೆಗಳು ಈಡೇರಿದ ಮನೋರಥಗಳುಳ್ಳವರಾದರಲ್ಲವೇ! ಅಯ್ಯೋ! ನೃಶಂಸನಾದ ನೀನು
ಸೀತೆಯನ್ನು ಕದ್ದು ತಂದು ಆಕೆಯನ್ನು ಬಲಾತ್ಕಾರದಿಂದ ಬಂಧಿಸಿದುದರ ಸಲುವಾಗಿ ನಾವೂ,

ರಾಕ್ಷಸಾ ವಯಮಾತ್ಮಾಚ ತ್ರಯಂ ತುಲ್ಯಂ ನಿಪಾತಿತಂ ॥ ೨೨ ॥ ನಕಾಮಕಾರಃ ಕಾಮಂವಾ ತವ ರಾಕ್ಷಸಪುಂಗವ! । ದೈವಂ ಚೇಷ್ಟಯತೇ ಸರ್ವಂ ಹತಂ ದೈವೇನ ಹನ್ಯತೇ ॥ ೨೩ ॥ ವಾನರಾಣಾಂ ವಿನಾಶೋಽಯಂ ರಕ್ಷಸಾಂಚ ಮಹಾಹವೇ । ತವ ಚೈವ ಮಹಾಬಾಹೋ! ದೈವಯೋಗಾದುಪಾಗತಃ ॥ ೨೪ ॥ ನೈವಾರ್ಥೇನ ನಕಾಮೇನ ವಿಕ್ರಮೇಣ ನಚಾಜ್ಞಯಾ । ಶಕ್ಯಾ ದೈವಗತಿರ್ಲೋಕೇ ನಿವರ್ತಯಿತುಮುದ್ಯತಾ ॥ ೨೫ ॥

ವಿಲೇಪುರೇವಂ ದೀನಾಸ್ತಾ ರಾಕ್ಷಸಾಧಿಪಯೋಷಿತಃ ।
ಕುರರ್ಯ ಇವ ದುಃಖಾರ್ತಾ ಬಾಷ್ಪಪರ್ಯಾಕುಲೇಕ್ಷಣಾಃ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋದಶೋತ್ತರಶತತಮಸ್ಸರ್ಗಃ

ನೀನೂ, ತ್ರಯಂ - ಮೂವರೂ, ತುಲ್ಯಂ - ಒಂದೇ ಕಾಲದಲ್ಲಿ, ನಿಪಾತಿತಂ - ನಾಶಗೊಳಿಸಲ್ಪಟ್ಟವರಾದೆವು ॥ ೨೨ ॥ ರಾಕ್ಷಸಪುಂಗವ ಎಲೈ ರಾಕ್ಷಸಶ್ರೇಷ್ಠನೇ, ತವ-ನಿನಗೆ, ಕಾಮಂವಾ-ಬಹಳವಾಗಿ, ಕಾಮಕಾರಃ - ಸ್ವೇಚ್ಛಾವಿಹಾರವು, ನ - ಇಲ್ಲ, ದೈವಂ - ದೈವವು, ಸರ್ವಂ - ಸಮಸ್ತವನ್ನೂ, ಚೇಷ್ಟಯತೇ - ನಡೆಸುತ್ತದೆ, ದೈವೇನ - ದೈವದಿಂದ, ಹತಂ - ಹೊಡೆಯಲ್ಪಟ್ಟದ್ದು, ಹನ್ಯತೇ - ಹೊಡೆಯಲ್ಪಡುತ್ತದೆ. ॥೨೩॥ ಹೇ ಮಹಾಬಾಹೋ - ಎಲೈ ಮಹಾಭುಜಬಲಶಾಲಿಯೇ, ಮಹಾಹವೇ - ದೊಡ್ಡ ಕಾಳಗದಲ್ಲಿ, ರಕ್ಷಸಾಂಚ - ರಕ್ಕಸರಿಗೂ, ವಾನರಾಣಾಂಚ - ಕಪಿಗಳಿಗೂ, ತವಚೈವ - ನಿನಗೂ, ಅಯಂವಿನಾಶಃ - ಈ ಆಪತ್ತು, ದೈವಯೋಗಾತ್ - ದೈವಾಧೀನದಿಂದ, ಉಪಾಗತಃ - ಪ್ರಾಪ್ತವಾಯಿತು. ॥ ೨೪ ॥ ಲೋಕೇ - ಲೋಕದಲ್ಲಿ, ದೈವಗತಿಃ - ದೈವಗತಿಯು, ಅರ್ಥೇನ - ಅರ್ಥದಿಂದ, ನಿವರ್ತಯಿತುಂ - ಹಿಂತಿರುಗಿಸುವುದಕ್ಕೆ, ನೋದ್ಯತಾ - ಸಾಧ್ಯವಾಗುವುದಿಲ್ಲ, ಕಾಮೇನ - ಕಾಮದಿಂದ, ನೋದ್ಯತಾ - ಹಿಂತಿರುಗಿಸುವುದಕ್ಕೆ ಆಗುವುದಿಲ್ಲ, ವಿಕ್ರಮೇಣ - ಪರಾಕ್ರಮದಿಂದ, ನ - ಆಗುವುದಿಲ್ಲ, ಆಜ್ಞಯಾ - ರಾಜಾಜ್ಞೆಯಿಂದಲೂ, ನ - ಸಾಧ್ಯವಲ್ಲ. ॥ ೨೫ ॥ ಏವಂ - ಈ ಪರಿಯಾಗಿ, ದೀನಾಃ - ಪರಿತಪ್ತರಾದ, ತಾಃರಾ....ತಃ - ಆ ರಾವಣನ ಹೆಂಗಸರು, ಬಾಷ್ಪ....ಣಾಃ - ಕಂಬನಿಯಿಂದ ಕದಡಿದ ಕಣ್ಣುಗಳುಳ್ಳವರಾಗಿ, ಕುರರ್ಯ ಇವ - ಕುರರಪಕ್ಷಿಗಳಂತೆ, ದುಃಖಾರ್ತಾಃ- ದುಃಖದಿಂದ ವ್ಯಸನಗೊಂಡವರಾದರು. ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋದಶೋತ್ತರಶತತಮಸ್ಸರ್ಗಃ.

ನೀನೂ, ರಾಕ್ಷಸರೂ ಮೂವರೂ ಏಕಕಾಲದಲ್ಲಿಯೇ ನಾಶವಾಗಿ ಹೋದೆವು. ಎಲೈ ರಾಕ್ಷಸೋತ್ತಮನೇ! ನಿನ್ನ ಸ್ವೇಚ್ಛಾಚರಣವು ನಿನ್ನ ನಾಶಕ್ಕೆ ಕಾರಣವಾಗಲಿಲ್ಲವು. (ಇದುವರೆಗೂ ನೀನು ಮಾಡಿದ ಸ್ವೇಚ್ಛಾಚರಣಕ್ಕೆ ಪ್ರತಿಯಿರುತ್ತಿದ್ದಿತೇ?) ಆದರೆ ಈ ಸರ್ವನಾಶಕ್ಕೆ ಕಾರಣವು ವಿಧಿಯೇ! ವಿಧಿಹತನಾದವನನ್ನೇ ದೈವವು ನಾಶಮಾಡುತ್ತದೆಯಾಗಲಿ ಅನ್ಯಥಾ ಅಲ್ಲವು. ವಾನರರ, ರಾಕ್ಷಸರ ಮತ್ತು ಧೀರನಾದ ನಿನ್ನ ವಿನಾಶವು ದೈವದಿಂದಾದುದಲ್ಲದೆ ಮತ್ತೆ ಬೇರೆಯಲ್ಲವು. ಅರ್ಥದಿಂದಾಗಲಿ, ಕಾಮದಿಂದಾಗಲಿ, ಪರಾಕ್ರಮದಿಂದಾಗಲಿ, ಪ್ರಚಂಡವಾದ ಆಜ್ಞೆಯಿಂದಾಗಲಿ, ಒದಗಿ ಬಂದಿರುವ ದೈವಗತಿಯನ್ನು ಹಿಂತಿರುಗಿಸಲಾಗುವುದಿಲ್ಲವು.'' ಹೀಗೆ ಹೇಳಿಕೊಳ್ಳುತ್ತಾ ಆ ರಾಕ್ಷಸ ರಾಜಪುತ್ರಿಯರು ಕುರರಪಕ್ಷಿಗಳಂತೆ ಆರ್ತೆಯರಾಗಿ ಕಂಬನಿತುಂಬಿದ ಕಂಗಳುಳ್ಳವರಾಗಿ ಬಹಳವಾಗಿ ರೋದಿಸಿದರು. ॥೨೧—೨೬॥

ಇಂತಿದು ರಾವಣಾಂತಃಪುರ ಸ್ತ್ರೀಗಣವಿಲಾಪವೆಂಬ ನೂರಹದಿಮೂರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಚತುರ್ದಶೋತ್ತರಶತತಮಸ್ಸರ್ಗಃ

ತಾಸಾಂ ವಿಲಪಮಾನಾನಾಂ ತಥಾ ರಾಕ್ಷಸಯೋಷಿತಾಂ । ಜ್ಯೇಷ್ಠಾಪತ್ನೀ ಪ್ರಿಯಾ ದೀನಾ ಭರ್ತಾರಂ ಸಮುದೈಕ್ಷತ ॥೧॥ ದಶಗ್ರೀವಂ ಹತಂ ದೃಷ್ಟ್ವಾ ರಾಮೇಣಾಚಿಂತ್ಯಕರ್ಮಣಾ । ಪತಿಂ ಮಂಡೋದರೀ ತತ್ರ ಕೃಪಣಾ ಪರ್ಯದೇವಯತ್ ॥ ೨ ॥ "ನನು ನಾಮ! ಮಹಾಭಾಗ ತವ ವೈಶ್ರವಣಾನುಜ! । ಕ್ರುದ್ಧಸ್ಯ ಪ್ರಮುಖೇ ಸ್ಥಾತುಂ ತ್ರಸ್ಯತ್ಯಪಿ ಪುರಂದರಃ ॥೩॥ ಋಷಯಶ್ಚ ಮಹೀ ದೇವಾ ಗಂಧರ್ವಾಶ್ಚ ಯಶಸ್ವಿನಃ । ನನು ನಾಮ! ತವೋದ್ವೇಗಾಚ್ಚಾರಣಾಶ್ಚ ದಿಶೋಗತಾಃ ॥೪॥

ತಥಾ-ಆ ಪರಿಯಾಗಿ, ತಾಸಾಂರಾಕ್ಷಸಯೋಷಿತಾಂ-ಆ ರಕ್ಕಸರ ಹೆಂಗಸರು, ವಿಲ....ನಾಂ-ಪ್ರಲಾಪ ಮಾಡುತ್ತಿರಲು, ಜ್ಯೇಷ್ಠಾಪತ್ನೀ-ಹಿರಿಯ ಹೆಂಡತಿಯಾದ, ಪ್ರಿಯಾ-ಇಷ್ಟಳಾದ ಮಂಡೋದರೀದೇವಿಯು, ದೀನಾ - ಪರಿತಪ್ತಳಾಗಿ, ಭರ್ತಾರಂ - ಗಂಡನನ್ನು, ಸಮುದೈಕ್ಷತ - ಕಂಡಳು. ॥೧॥ ತತ್ರ - ಆ ರಣರಂಗದಲ್ಲಿ, ಮಂಡೋದರೀ - ಮಂಡೋದರಿಯು, ಅಚಿಂ....ಣಾ - ಆಲೋಚಿಸಲಸಾಧ್ಯವಾದ ಕರ್ಮವುಳ್ಳ, ರಾಮೇಣ - ಶ್ರೀರಾಮನಿಂದ, ಹತಂ - ಹೊಡೆಯಲ್ಪಟ್ಟ, ಪತಿಂ - ಗಂಡನಾದ, ದಶಗ್ರೀವಂ - ದಶಕಂಠನನ್ನು, ದೃಷ್ಟ್ವಾ - ಕಂಡು, ಕೃಪಣಾ - ದೀನೆಯಾಗಿ, ಪರ್ಯದೇವಯತ್ - ವಿಲಾಪ ಮಾಡಿದಳು. ॥ ೨ ॥ ಮಹಾಭಾಗ - ಮಹಾ ಪುಣ್ಯವಂತನೇ, ವೈಶ್ರವಣಾನುಜ - ಎಲೈ ಕುಬೇರನ ತಮ್ಮನೇ, ಕ್ರುದ್ಧಸ್ಯ - ಕುಪಿತನಾದ, ತವ - ನಿನ್ನ, ಪ್ರಮುಖೇ - ಎದುರಾಗಿ, ಸ್ಥಾತುಂ - ನಿಲ್ಲುವುದಕ್ಕೆ, ಪುರಂದರೋಪಿ - ದೇವೇಂದ್ರನೂ ಕೂಡ, ತ್ರಸ್ಯತಿನನು - ಭಯಪಡುತ್ತಾನೆಯಲ್ಲವೆ? ॥ ೩ ॥ ಋಷಯಶ್ಚ - ಋಷಿಗಳೂ, ಮಹೀದೇವಾಃ - ಬ್ರಾಹ್ಮಣರೂ, ಯಶಸ್ವಿನಃ - ಕೀರ್ತಿವಂತರಾದ, ಗಂಧರ್ವಾಶ್ಚ - ಗಂಧರ್ವರೂ, ತ್ರಸ್ಯಂತಿನಾಮ - ಹೆದರುವರಷ್ಟೆ, ನನು - ಎಲೈ ದಶಕಂಠನೇ, ತವ - ನಿನ್ನ, ಉದ್ವೇಗಾತ್ - ಭಯದಿಂದ, ಚಾರಣಾಶ್ಚ - ಚಾರಣರೂ, ದಿಶಃ - ದಿಕ್ಕುಗಳನ್ನು, ಗತಾನಾಮ - ಹೊಂದಿದರಷ್ಟೆ, ರಾಜ್ - ಅರಸೇ, ರಾಕ್ಷಸರ್ಷಭ - ರಕ್ಕಸನೇ, ಸತ್ವಂ-

---

ಈ ಪ್ರಕಾರವಾಗಿ ಅಂತಃಪುರದ ರಾಕ್ಷಸಾಂಗನೆಯರೆಲ್ಲರೂ ವಿಲಪಿಸುತ್ತಿರಲು, ರಾವಣನ ಪ್ರಿಯೆಯೂ, ಹಿರಿ ಹೆಂಡತಿಯೂ ಆದ ಮಂಡೋದರೀದೇವಿಯು ದೀನದೀನೆಯಾಗಿ ತನ್ನ ಪ್ರಿಯಪತಿಯಾದ ಆತನನ್ನು ಕಂಡಳು. ಲೀಲಾಜಾಲವಾಗಿ ಎಂತಹ ಕಾರ್ಯವನ್ನಾದರೂ ಮಾಡಿ, ಸಫಲಪ್ರಯತ್ನನಾಗುವ ಶ್ರೀರಾಮಮೂರ್ತಿಯಿಂದ ಮಡಿದು ಬಿದ್ದಿರುವ ರಾವಣಾಸುರನನ್ನು ನೋಡಿ, ಆಕೆಯು ಕೃಪಣೆಯಾಗಿ ಅಳತೊಡಗಿದಳು. "ಓ ಮಹಾಭಾಗ! ಕುಬೇರಾನುಜನಾದ ನೀನು ಕನಲಿ ನೆಡದು ನಿಂತರೆ ನಿನ್ನ ಮುಂಗಡೆ ನಿಲ್ಲಲು ಪುರಂದರನೂ ಹೆದರುವನಲ್ಲವೆ! ಮಹಾ ಕೀರ್ತಿಸಂಪನ್ನರಾದ ಋಷಿಗಳೂ, ಬ್ರಾಹ್ಮಣರೂ, ಗಂಧರ್ವರೂ ಮಹಾ ಕೋಪದಿಂದೈತರುವ ನಿನ್ನ ಮುಂಗಡೆ ನಿಲ್ಲುವುದಕ್ಕೂ ಶಕ್ತರಾಗದೆ ಬೆದರುವರಲ್ಲವೆ! ನಿನ್ನ ಪರಾಕ್ರಮದ ವೇಗೆಗೆ ಬೆಂಡಾಗಿ ಚಾರಣರೆಲ್ಲರೂ ದಶದಿಶೆಗಳನ್ನಡರಿದರಲ್ಲವೆ! ಅಂಥ ವೀರಾಧಿವೀರನಾದ ನೀನು ಈಗ ಒಬ್ಬ ಮನುಷ್ಯಮಾತ್ರನಿಂದ—ಶ್ರೀರಾಮ

ಸತ್ವಂ ಮಾನುಷಮಾತ್ರೇಣ ರಾಮೇಣ ಯುಧಿ ನಿರ್ಜಿತಃ । ನವ್ಯಪತ್ರಪಸೇ ರಾಜನ್! ಕಿಮಿದಂ ರಾಕ್ಷಸರ್ಷಭ! ॥೫॥ ಕಥಂ ತ್ರೈಲೋಕ್ಯಮಾಕ್ರಮ್ಯ ಶ್ರಿಯಾ ವೀರ್ಯೇಣ ಚಾನ್ವಿತಂ । ಅವಿಷಹ್ಯಂ ಜಘಾನ ತ್ವಾಂ ಮಾನುಷೋ ವನಗೋಚರಃ ॥ ೬ ॥ ಮಾನುಷಾಣಾಮವಿಷಯೇ ಚರತಃ ಕಾಮರೂಪಿಣಃ । ವಿನಾಶಸ್ತವ ರಾಮೇಣ ಸಂಯುಗೇನೋಪಪದ್ಯತೇ ॥ ೭ ॥ ನಚೈತತ್ಕರ್ಮ ರಾಮಸ್ಯ ಶ್ರದ್ದಧಾಮಿ ಚಮೂಮುಖೇ । ಸರ್ವತಸ್ಸಮುಪೇತಸ್ಯ ತವ ತೇನಾಭಿಮರ್ಶನಂ ॥ ೮ ॥ ಯದೈವಚ ಜನಸ್ಥಾನೇ ರಾಕ್ಷಸೈರ್ಬಹುಭಿರ್ವೃತಃ । ಖರಸ್ತವ ಹತೋ ಭ್ರಾತಾ ತದೈವಾಸೌ ನ

ಆ ಈ ನೀನು, ಮಾನುಷಮಾತ್ರೇಣ - ಮನುಷ್ಯಮಾತ್ರನಾದ, ರಾಮೇಣ - ಶ್ರೀರಾಮನಿಂದ, ಯುಧಿ- ಕಾಳಗದಲ್ಲಿ, ನಿರ್ಜಿತಃ - ಜಯಿಸಲ್ಪಟ್ಟವನಾಗಿ, ನವ್ಯಪತ್ರಪಸೇ ನಾಚಿಕೆಗೊಳ್ಳಲಿಲ್ಲವೆ, ಇದಂ - ಇದು, ಕಿಂ - ಏನು. ॥ ೪–೫ ॥ ವನಗೋಚರಃ-ವನವಾಸಿಯಾದ, ಮಾನುಷಃ-ಮನುಷ್ಯನು, ತ್ರೈಲೋಕ್ಯಂ- ಲೋಕತ್ರಯವನ್ನು, ಆಕ್ರಮ್ಯ - ಆಕ್ರಮಿಸಿ, ಶ್ರಿಯಾ - ಐಶ್ವರ್ಯದಿಂದಲೂ, ವೀರ್ಯೇಣ - ಸಾಮರ್ಥ್ಯದಿಂದಲೂ, ಅನ್ವಿತಂ - ಕೂಡಿರುವ, ಅವಿಷಹ್ಯಂ - ಸಹಿಸಲಸಾಧ್ಯನಾದ, ತ್ವಾಂ - ನಿನ್ನನ್ನು, ಕಥಂಜಘಾನ - ಹೇಗೆ ಹೊಡೆದನು. ॥ ೬ ॥ ಮಾನುಷಾಣಾಂ - ಮನುಷ್ಯರಿಗೆ, ಅವಿಷಯೇ - ಅಗೋಚರವಾದ ಮಾರ್ಗದಲ್ಲಿ, ಚರತಃ - ಸಂಚರಿಸುತ್ತಿರುವ, ಕಾಮರೂಪಿಣಃ - ಕಾಮರೂಪಿಯಾದ, ತವ - ನಿನಗೆ, ಸಂಯುಗೇ - ಕಾಳಿಗದಲ್ಲಿ, ರಾಮೇಣ - ಶ್ರೀರಾಮನಿಂದ, ವಿನಾಶಃ - ನಾಶವು, ನೋಪಪದ್ಯತೇ - ಉಂಟಾಗುವುದಿಲ್ಲ. ॥ ೭ ॥ ಸರ್ವತಃ - ಸಮಸ್ತವಾದ ಯುದ್ಧಸಾಮಗ್ರಿಗಳಿಂದಲೂ, ಸಮುಪೇತಸ್ಯ - ಕೂಡಿರುವ, ತವ - ನಿನಗೆ, ತೇನ - ಆ ರಾಮನಿಂದ, ಚಮೂಮುಖೇ - ಸೇನಾಮುಖದಲ್ಲಿ, ಅಭಿಮರ್ಶನಮಿತಿಯತ್ - ತಿರಸ್ಕಾರವಾಯಿತೆಂಬದಾವದೋ, ಏತತ್ಕರ್ಮ - ಈ ಕಾರ್ಯವೂ, ರಾಮಸ್ಯೇತಿ - ಶ್ರೀರಾಮನದೆಂದು, ನಶ್ರದ್ಧಧಾಮಿ - ನಂಬಲಾರೆನು. ॥ ೮ ॥ ಯದೈವ - ಯಾವ ಕಾಲದಲ್ಲಿ, ಜನಸ್ಥಾನೇ - ಉಕ್ಕಡದಲ್ಲಿ, ಬಹುಭಿಃ - ಅನೇಕರಾದ, ರಾಕ್ಷಸೈಃ - ರಕ್ಕಸರಿಂದ, ವೃತಃ - ಪರಿವೃತನಾದ, ತವ - ನಿನಗೆ, ಭ್ರಾತಾ - ತಮ್ಮನಾದ, ಖರಃ - ಖರಾಸುರನು, ಹತಃ - ಹೊಡೆಯಲ್ಪಟ್ಟನೋ, ತದೈವ - ಆವಾಗಲೇ, ಅಸೌ - ಈ ಶ್ರೀರಾಮನು, ಮಾನುಷಃ - ಮನುಷ್ಯನ, ನ - ಅಲ್ಲ.

ಮೂರ್ತಿಯಿಂದ–ಸೋತು ಬಿದ್ದೆಯಾ!! ರಾಕ್ಷಸೋತ್ತಮಾ! ಏನಿದು. ಇದರಿಂದ ನಿನಗೆ ನಾಚಿಕೆಯಾಗಲಿಲ್ಲವೆ!! ॥ ೧–೫ ॥ ನೀನೇನು ಸಾಮಾನ್ಯನೇ! ಮೂರೂ ಲೋಕಗಳನ್ನು ಗೆದ್ದಿರುವವನು; ಅಪರಿಮಿತವಾದ ತೇಜಸ್ಸಿನಿಂದಲೂ, ಐಶ್ವರ್ಯದಿಂದಲೂ ಕೂಡಿದವನು. ಮಹಾ ಪರಾಕ್ರಮಶಾಲಿಯು; ಯಾರಿಂದಲೂ ಎದುರಿಸಲಸಾಧ್ಯನಾದವನು. ಆ ರಾಮನೋ ಅರಣ್ಯವಾಸಿ; ಮಾನವನು. ಅಂತಹನು ನಿನ್ನನ್ನು ಕೊಂದುದಾದರೂ ಹೇಗೆ? ಮನುಷ್ಯ ಸಂಚಾರವಿಲ್ಲದ, ಮನುಷ್ಯರಿಗೆ ಸಂಬಂಧಪಡದ ದೇಶದಲ್ಲಿ ಸ್ವೇಚ್ಛಾಚಾರಿಯಾಗಿ, ಕಾಮರೂಪಿಯಾಗಿ ಸಂಚರಿಸುತ್ತಿದ್ದ ನಿನಗೆ ರಣಾಂಗಣದಲ್ಲಿ ರಾಮನಿಂದ ವಿನಾಶವು ಸಂಭವಿಸಿದುದಾದರೂ ಹೇಗೆ! ರಾಕ್ಷಸೋತ್ತಮಾ! ಯುದ್ಧಭೂಮಿಯಲ್ಲಿ ಇದುವರೆಗಾವಾಗಲೂ ಸೋಲನ್ನೇ ಕಾಣದ ನಿನಗೆ ಆ ರಾಮನಿಂದ ಸೋಲುಂಟಾದುದನ್ನು ಯೋಚಿಸಿದರೆ ನನಗಂತೂ ನಂಬಿಕೆಯೇ ಆಗುವುದಿಲ್ಲವು. ಯಾವಾಗ ಈ ರಾಮನು ನಿನ್ನ ಉಕ್ಕಡವಾದ ದಂಡಕಾರಣ್ಯದಲ್ಲಿ ಅನೇಕ ರಾಕ್ಷಸರೊಡಗೂಡಿದ ನಿನ್ನ ತಮ್ಮನಾದ ಖರಾಸುರನನ್ನು ಸಂಹ

ಮಾನುಷಃ ॥ ೯ ॥ ಯದೈವ ನಗರೀಂ ಲಂಕಾಂ ದುಷ್ಪ್ರವೇಶಾಂ ಸುರೈರಪಿ ।
ಪ್ರವಿಷ್ಟೋ ಹನುಮಾನ್ ವೀರ್ಯಾತ್ತದೈವ ವ್ಯಥಿತಾ ವಯಂ ॥ ೧೦ ॥ ಯದೈವ
ವಾನರೈರ್ಘೋರೈರ್ಬದ್ಧಸ್ಸೇತುರ್ಮಹಾರ್ಣವೇ । ತದೈವ ಹೃದಯೇನಾಹಂ
ಶಂಕೇ ರಾಮಮಮಾನುಷಂ ॥ ೧೧ ॥ ¶ ಅಥವಾ ರಾಮರೂಪೇಣ ಕೃತಾಂತಸ್ಸ್ವಯ
ಮಾಗತಃ । ಮಾಯಾಂ ತವ ವಿನಾಶಾಯ ವಿಧಾಯಾಽಪ್ರತಿತರ್ಕಿತಾಂ ॥ ೧೨ ॥
ಅಥವಾ ವಾಸವೇನ ತ್ವಂ ಧರ್ಷಿತೋಽಸಿ ಮಹಾಬಲ! । ವಾಸವಸ್ಯ ಕುತಃ ಶಕ್ತಿಸ್ತ್ವಾಂ

॥ ೯ ॥ ಯದೈವ - ಯಾವಾಗ, ಹನುಮಾನ್ - ಆಂಜನೇಯನು, ಸುರೈರಪಿ - ದೇವತೆಗಳಿಂದಲೂ, ದುಷ್ಪ್ರವೇಶಾಂ - ಪ್ರವೇಶಿಸಲಸಾಧ್ಯವಾದ, ಲಂಕಾಂ - ಲಂಕಾಪಟ್ಟಣವನ್ನು, ವೀರ್ಯಾತ್ - ಸಾಮರ್ಥ್ಯದಿಂದ, ಪ್ರವಿಷ್ಟಃ - ಹೊಕ್ಕನೋ, ತದೈವ - ಆಗಲೇ, ವಯಂ - ನಾವು, ವ್ಯಥಿತಾಃ - ವ್ಯಸನಗೊಂಡವರಾದೆವು. ॥ ೧೦ ॥ ಯದೈವ - ಯಾವ ಕಾಲದಲ್ಲಿ, ಘೋರೈಃ - ಭಯಂಕರರಾದ, ವಾನರೈಃ - ಕಪಿಗಳಿಂದ, ಮಹಾರ್ಣವೇ - ದೊಡ್ಡ ಸಮುದ್ರದಲ್ಲಿ, ಸೇತುಃ - ಸೇತುವು, ಬದ್ಧಃ - ಕಟ್ಟಲ್ಪಟ್ಟಿತೋ, ತದೈವ - ಆಗಲೇ, ಅಹಂ - ನಾನು, ರಾಮಂ - ಶ್ರೀರಾಮನನ್ನು, ಅಮಾನುಷಂ - ಮನುಷ್ಯನಲ್ಲದವನನ್ನಾಗಿ, ಹೃದಯೇನ - ಮನಸ್ಸಿನಿಂದ, ಶಂಕೇ - ಊಹಿಸಿದೆನು. ॥ ೧೧ ॥ ಅಥವಾ - ಹಾಗಲ್ಲದಿದ್ದರೆ, ಕೃತಾಂತಃ - ಯಮನು, ತವ - ನಿನ್ನ, ವಿನಾಶಾಯ - ನಾಶಕ್ಕಾಗಿ, ಅಪ್ರತಿತರ್ಕಿತಾಂ - ಊಹಿಸಲ್ಪಡದಿರುವ, ಮಾಯಾಂ - ಮಾಯೆಯನ್ನು, ವಿಧಾಯ - ಮಾಡಿ, ರಾಮರೂಪೇಣ - ಶ್ರೀರಾಮನ ರೂಪದಿಂದ, ಸ್ವಯಂ - ತಾನೇ, ಆಗತಃ - ಬಂದನು. ॥ ೧೨ ॥ ಅಥವಾ - ಹಾಗಲ್ಲದಿದ್ದರೆ, ಮಹಾಬಲಂ - ಮಹಾ ಬಲಶಾಲಿಯೇ, ತ್ವಂ - ನೀನು, ವಾಸವೇನ - ದೇವೇಂದ್ರನಿಂದ, ಧರ್ಷಿತಃ - ತಿರಸ್ಕರಿಸಲ್ಪಟ್ಟವನು, ಅಸಿ - ಆದೆ, ವಾಸವಸ್ಯ - ದೇವೇಂದ್ರನಿಗೆ, ಸಂಯುಗೇ - ಕಾಳಗದಲ್ಲಿ, ತ್ವಾಂ - ನಿನ್ನನ್ನು, ದ್ರಷ್ಟುಮಪಿ - ನೋಡುವುದಕ್ಕೂ, ಶಕ್ತಿಃ - ಶಕ್ತಿಯು,

---

ರಿಸಿದನೋ ಆಗಲೇ ಇವನು ಮನುಷ್ಯನಲ್ಲವೆಂದೇ ನಿರ್ಧರವಾಯಿತು. ॥ ೬-೯ ॥ ದೇವತೆಗಳಿಂದಲೂ ಪ್ರವೇಶಿಸಲಸದಳವಾದ ನಮ್ಮ ಈ ಲಂಕಾಪಟ್ಟಣವನ್ನು ಹನುಮಂತನು ತನ್ನ ಪರಾಕ್ರಮದಿಂದ ಪ್ರವೇಶಿಸಿದಾಗಲೇ ನಾವೆಲ್ಲರೂ ದುಃಖಿತರಾಗಿ ಹೋದೆವು. ಅಪಾರವಾದ ಸಮುದ್ರದಲ್ಲಿ ಶ್ರೀರಾಮನು ವಾನರರಿಂದ ಸೇತುವೆಯನ್ನು ಕಟ್ಟಿಸಿದಾಗಲೇ ಅವನು ಮಾನವನಲ್ಲವೆಂದೇ ಶಂಕಿಸಿದೆನು. ಅಥವಾ ಯಮನೇ ಸಾಕ್ಷಾತ್ತಾಗಿ, ಊಹಿಸಲೂ ಅಸಾಧ್ಯವಾದ ಮಾಯೆಯನ್ನವಲಂಬಿಸಿ ನಿನ್ನ ವಧೆಗೋಸ್ಕರ ಈ ರಾಮರೂಪದಿಂದ ಬಂದಿರುವನೆಂದು ತೋರುತ್ತದೆ. ಅಥವಾ ದೇವೇಂದ್ರನೇ ನಿನ್ನನ್ನು ವಧಿಸಿರುವನೆಂದು ಹೇಳೋಣವೇ! ರಣಾಂಗಣದಲ್ಲಿ ನಿನ್ನನ್ನು ನೋಡಲೂ ಆಗದ ಆ ದೇವೇಂದ್ರನಿಂದೇನಾದೀತು? ಈ ರಾಮನು

¶ ಮಂಡೋದರಿಯು ಈವರೆಗೆ ಶ್ರೀರಾಮಚಂದ್ರನ ಅಮಾನುಷತ್ವವನ್ನು ಸರ್ವಸಾಮಾನ್ಯವಾಗಿ ನಿರೂಪಿಸಿ ಇಲ್ಲಿಂದ ಉತ್ಕೃಷ್ಟರಾದ ಯಮ ಇಂದ್ರ ಮೊದಲಾದ ದೇವತೆಗಳನ್ನೂ ಮೀರಿದ ವೈಶಿಷ್ಟ್ಯವೂ ಆತನಲ್ಲಿರುವುದೆಂಬ ವಿಷಯವನ್ನು ಪ್ರತಿಪಾದಿಸುತ್ತಾಳೆ. (ಗೋ)

ಇಲ್ಲಿ "ಮಾಯಾಂ" ಎಂದರೆ ಸೀತಾರೂಪವಾದ ಮಾಯೆಯನ್ನು ಎಂದೂ, "ಅಪ್ರತರ್ಕಿತಾಂ" ಎಂದರೆ ನಿರತಿಶಯ ಲಾವಣ್ಯ ಸಂಪನ್ನೆಯಾದವಳನ್ನಾಗಿ (ವಿಧಾಯ) ನಿರ್ಮಿಸಿ ಎಂದೂ ಅರ್ಥ ಮಾಡಬೇಕು. (ಗೋ)

ದೃಷ್ಟ್ವಮಪಿ ಸಂಯುಗೇ ॥ ೧೩ ॥ ಈ ವ್ಯಕ್ತಮೇಷ ಮಹಾಯೋಗೀ ಪರಮಾತ್ಮಾ ಸನಾತನಃ । ಅನಾದಿಮಧ್ಯನಿಧನೋ ಮಹತಃ ಪರಮೋ ಮಹಾನ್ ॥ ೧೪ ॥ ತಮಸಃ ಪರಮೋ ಧಾತಾ ಶಂಖಚಕ್ರಗದಾಧರಃ । ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಃ

ಕುತಃ - ಎಲ್ಲಿಬಂತು. ॥ ೧೩ ॥ ಮಹಾಯೋಗೀ - ಲೋಕಸಂರಕ್ಷಣೋಪಾಯವುಳ್ಳ, ಪರಮಾತ್ಮಾ - ಸರ್ವೋತ್ಕೃಷ್ಟನಾದ, ಸನಾತನಃ - ಸರ್ವಕಾಲದಲ್ಲಿಯೂ ಏಕರೂಪದಲ್ಲಿರುವ, ಅನಾ....ನಃ - ಉತ್ಪತ್ತಿ ವೃದ್ಧಿ ವಿನಾಶ ಈ ಮೂರು ಇಲ್ಲದ, ಮಹತಃ - ದೊಡ್ಡವರಾದ ಇಂದ್ರಾದಿಗಳಿಗಿಂತಲೂ, ಮಹಾನ್ - ದೊಡ್ಡವನಾದ, ಪರಮಃ - ಶ್ರೇಷ್ಠನಾದ, ತಮಸಃ - ಪ್ರಾಕೃತಮಂಡಲಕ್ಕಿಂತಲೂ, ಪರಮಃ - ಪ್ರತ್ಯೇಕನಾಗಿರುವ, ಅಪ್ರಾಕೃತದಿವ್ಯ - ವೈಕುಂಠವಾಸಿಯಾಗಿರುವ, ಧಾತಾ - ಬ್ರಹ್ಮಾದಿ ಜಗ

ಸಾಮಾನ್ಯನಲ್ಲವು. ಈತನು ಮಹಾಯೋಗಿಯೂ, ಸನಾತನನಾದ ಪರಮಾತ್ಮನೂ, ಆದಿ ಮಧ್ಯಾಂತಶೂನ್ಯನೂ, ಹಿರಿಯರಿಗೆ ಅತ್ಯಂತ ಹಿರಿಯನೂ, ಅಕ್ಷರಕ್ಕಿಂತಲೂ ಶ್ರೇಷ್ಠನೂ, ಭೂತಭವಿಷ್ಯದ್ವರ್ತಮಾನಕಾಲಾವಚ್ಛಿನ್ನವಾದ ಜಗನ್ನಿರ್ಮಾಣಕರ್ತನೂ, ಶಂಖಚಕ್ರಗದಾ ಧರನೂ, ಶ್ರೀವತ್ಸವಕ್ಷಸನೂ, ಶಾಶ್ವತನೂ, ಶಾಶ್ವತೈಶ್ವರ್ಯಸಹಿತನೂ, ಯಾರಿಂದಲೂ

ಈ ಹಿಂದಣ ಶ್ಲೋಕಗಳಲ್ಲಿ ಸರ್ವಸಾಮಾನ್ಯವಾಗಿ ಪ್ರತಿಪಾದಿಸಿರುವ ಶ್ರೀರಾಮನ ಅಮಾನುಷತ್ವವನ್ನು ಈ ಶ್ಲೋಕ ಮೊದಲಾಗಿ "ಮಹಾದ್ಯುತಿಃ" ಎಂಬುದರವರೆಗೂ ವಿಶೇಷವಾಗಿ ನಿರೂಪಿಸಿರುತ್ತಾರೆ. ಇಲ್ಲಿ ಆದಿಕವಿಗಳಾದ ವಾಲ್ಮೀಕಿ ಮುನಿಗಳು ಮಂಡೋದರಿಯ ಮಾತಿನ ಮೂಲಕ ಎಲ್ಲಾ ದೇವತೆಗಳಿಗಿಂತಲೂ ವಿಷ್ಣುವೇ ಸರ್ವೋತ್ಕೃಷ್ಟ ನೆಂಬಂಶವನ್ನು ವ್ಯವಸ್ಥಾಪನೆ ಮಾಡಿರುತ್ತಾರೆ.

ಮಹಾಯೋಗೀ-(ಮಹಾಯೋಗಃ ಅಸ್ಯಾಸ್ತೀತಿ) ಲೋಕರಕ್ಷಣೋಪಾಯ ಚಿಂತೆಯುಳ್ಳವನು, ಪರಮಾತ್ಮಾ- ಎಲ್ಲಾ ಜೀವಾತ್ಮರುಗಳಿಗಿಂತಲೂ ಉತ್ಕೃಷ್ಟವಾದವನು, (ಈತನಿಗೆ ಪರಮತ್ವವು ಸಿದ್ಧಿಸುವುದು ಹೇಗೆಂದು ಆಶಂಕಿಸಿ ಷಡ್ಭಾವವಿಲ್ಲದಿರುವುದರಿಂದಲೇ ಅದು ಸಿದ್ಧಿಸಿದೆ ಎಂಬ ಅರ್ಥವನ್ನು ನಿರೂಪಿಸಲು) ಸನಾತನಃ-ಯಾವಾಗಲೂ ಇರುವ ವನು, ಅನಾ....ನಃ - ಜನ್ಮವೃದ್ಧಿ ವಿನಾಶಗಳಿಂದ ಬಿಡಲ್ಪಟ್ಟವನು, ಶಾಶ್ವತಃ-ಅಪಕ್ಷಯರಹಿತನು, ಧ್ರುವಃ-ಪರಿಣಾಮ ಗೊಳ್ಳದವನು. (ಈ ವಿಶೇಷಣಗಳು ವಿಷ್ಣುವಿನ ಷಡ್ಭಾವರಾಹಿತ್ಯವನ್ನು ಸೂಚಿಸುತ್ತವೆ) ವಿಷ್ಣು ಪುರಾಣದಲ್ಲಿ ಷಡ್ಭಾವ ಗಳು ಹೀಗೆ ನಿರೂಪಿತವಾಗಿವೆ. "ಅಪಕ್ಷಯ ವಿನಾಶಾಭ್ಯಾಂ ಪರಿಣಾಮರ್ಧಿ ಜನ್ಮಭಿಃ । ವರ್ಜಿತಶ್ಶಕ್ಯತೇ ವಕ್ತುಂ ಯಸ್ಸದಾ ಸ್ತೀತಿ ಕೇವಲಂ ॥" ಇನ್ನು ಮುಂದೆ ಪರಮಾತ್ಮ ಶಬ್ದಾರ್ಥವನ್ನು ವಿವರಿಸುತ್ತಾರೆ. "ಮಹತಃ ಪರಮೋ ಮಹಾನ್" ಇಂದ್ರಾದಿಗಳು ದೊಡ್ಡವರು; ಅವರಿಗಿಂತಲೂ "ಪರಮಃ" ದೊಡ್ಡವರು ಬ್ರಹ್ಮಾದಿಗಳು; ಅವರಿಗಿಂತಲೂ ದೊಡ್ಡವನು ಶ್ರೀ ಮಹಾ ವಿಷ್ಣುವು. "ಸ್ಥಾನವಿಶೇಷದಿಂದಲೂ ಎಲ್ಲರಿಗೂ ದೊಡ್ಡವನೆಂಬುದನ್ನು "ತಮಸಃ ಪರಮಃ" ಪ್ರಾಕೃತ ಮಂಡಲಕ್ಕಿಂತಲೂ ಮೇಲಾದ ಅಪ್ರಾಕೃತಮಂಡಲವೆಂದು ಪ್ರಸಿದ್ಧವಾದ ವೈಕುಂಠದಲ್ಲಿ ವಾಸಿಸುವನು" ಎಂಬುದ ರಿಂದ ಸೂಚಿಸುವರು. "ಆದಿತ್ಯವರ್ಣಂ ತಮಸಃ ಪರಸ್ತಾತ್" ಎಂಬುದಾಗಿ ಶ್ರುತಿಗಳು ಸಾರುತ್ತಿವೆ. "ಸರ್ವತ್ರ ವ್ಯಾಪಕನಾದ ಆ ಪರಮಾತ್ಮನಿಗೆ ವೈಕುಂಠದಲ್ಲಿ ನಿವಾಸವೆಂಬುದು ಹೇಗೆ?" ಎಂಬುದಾಗಿ ಆಶಂಕಿಸಿ ವಿಗ್ರಹ ರೂಪದಿಂದ ಎಂದು ಹೇಳಿ, ತದುಪಲಕ್ಷಕವಾದ "ಶಂಖಾದಿ" ವಿಶೇಷಣಗಳಿಂದ ವಿವರಿಸಿರುತ್ತಾರೆ. "ಇವುಗಳ ನ್ನೇಕೆ ಧರಿಸಿರಬೇಕು?" ಎಂದರೆ "ಧಾತಾ" ಪೋಷಕನಾದ್ದರಿಂದ ಎಂದು ಸಮಾಧಾನ. ಆದ್ದರಿಂದಲೇ ತಿಳಿದವರು, "ಪಾತು ಪ್ರಣತರಕ್ಷಾಯಾಂ ವಿಳಂಬಮಸಹನ್ನಿವ । ಸದಾ ಪಂಚಾಯುಧೀಂ ಬಿಭ್ರತ್ ಸನಃ ಶ್ರೀರಂಗನಾಯಕಃ ॥" ಎಂದು ಸ್ತುತಿಸಿರುತ್ತಾರೆ. ಶ್ರೀ ವಿಷ್ಣು ಪರಮಾತ್ಮನ ಸರ್ವೇಶ್ವರತ್ವವನ್ನು, "ಶ್ರೀವತ್ಸವಕ್ಷಾಃ" ಎಂಬುದರಿಂದ ನಿರೂಪಿಸುತ್ತಾರೆ. ಸಂಪದ್ಯುಕ್ತವೂ ರಕ್ತವರ್ಣವೂ ಆದ ಗುರುತನ್ನು ದಕ್ಷಿಣಭಾಗದಲ್ಲಿ ಧರಿಸಿರುವವನು. ಜಗದ್ರಕ್ಷಣ ಕಾರ್ಯಕ್ಕೆ ಉಪ ಯೋಗವನ್ನೊಳಗೊಂಡ ಪುರುಷಕಾರ ಸಂಬಂಧವನ್ನು "ನಿತ್ಯಶ್ರೀಃ" ಎಂಬ ವಿಶೇಷಣದಿಂದ ಸೂಚಿಸುತ್ತಾರೆ. ಅನಪಾಯಿನಿ ಯಾದ ಲಕ್ಷ್ಮಿಯಿಂದ ಸನಾಥನಾದವನು. ಆದ್ದರಿಂದಲೇ ಅಜೇಯನಾದವನು. ಇಂತಹನೇ ಶ್ರೀರಾಮನು. ಆತನೇ ಪರಮಾತ್ಮನು. (ತನಿಶ್ಲೋಕಿ)

ಶಾಶ್ವತೋ ಧ್ರುವಃ ||೧೫|| $ ಮಾನುಷಂ ವಪುರಾಸ್ಥಾಯ ವಿಷ್ಣುಸ್ಸತ್ಯಪರಾಕ್ರಮಃ |
ಸರ್ವೈಃ ಪರಿವೃತೋ ದೇವೈರ್ವಾನರತ್ವಮುಪಾಗತೈಃ || ೧೬ || ಸರ್ವಲೋಕೇಶ್ವರ
ಸ್ಸಾಕ್ಷಾಲ್ಲೋಕಾನಾಂ ಹಿತಕಾಮ್ಯಯಾ | ಸರಾಕ್ಷಸಪರೀವಾರಂ ಹತವಾಂಸ್ತ್ವಂ
ಮಹಾದ್ಯುತಿಃ || ೧೭ || ಇಂದ್ರಿಯಾಣಿ ಪುರಾ ಜಿತ್ವಾ ಜಿತಂ ತ್ರಿಭುವನಂ ತ್ವಯಾ |
ಸ್ಮರದ್ಭಿರಿವ ತದ್ವೈರಮಿಂದ್ರಿಯೈರೇವ ನಿರ್ಜಿತಃ || ೧೮ || ಕ್ರಿಯತಾಮವಿರೋಧಶ್ಚ
ರಾಘವೇಣೇತಿ ಯನ್ಮಯಾ | ಉಚ್ಯಮಾನೋ ನಗೃಹ್ಣಾಸಿ ತಸ್ಯೇಯಂ ವ್ಯುಷ್ಟಿರಾ

ತ್ಸೃಷ್ಟಿಕರ್ತನಾದ, ಶಂಖ....ರಃ - ಶಂಖವನ್ನೂ ಚಕ್ರವನ್ನೂ ಗದಾಯುಧವನ್ನೂ ನಿಯತವಾಗಿ ಧರಿಸಿರುವ, ಶ್ರೀವತ್ಸವಕ್ಷಾಃ - ಕಾಂತಿಯುಕ್ತವಾದ ಶ್ರೀವತ್ಸವೆಂಬ ಗುರುತೇ ವಕ್ಷಸ್ಥಲದಲ್ಲುಳ್ಳ, ನಿತ್ಯಶ್ರೀಃ - ಎಡಬಿಡದ ಲಕ್ಷ್ಮಿಯುಳ್ಳ, ಅಜಯ್ಯಃ - ಜಯಿಸಲಸಾಧ್ಯನಾದ, ಶಾಶ್ವತಃ - ನಿತ್ಯವಿಭೂತಿಯುಕ್ತನಾದ, ಧ್ರುವಃ - ಪರಿಣಾಮಶೂನ್ಯನಾದ ಸಾಕ್ಷಾದ್ವಿಷ್ಣುವೇ, ಏಷಃ - ಈ ಶ್ರೀರಾಮನು, ವ್ಯಕ್ತಂ - ಸ್ಪಷ್ಟವು, ಸತ್ಯಪರಾಕ್ರಮಃ - ಸಫಲವಾದ ಪರಾಕ್ರಮವುಳ್ಳ, ಸವಿಷ್ಣುಃ - ಆ ವಿಷ್ಣುವೇ, ಮಾನುಷಂ - ಮನುಷ್ಯಸಂಬಂಧವಾದ, ವಪುಃ - ಶರೀರವನ್ನು, ಆಸ್ಥಾಯ - ಆಶ್ರಯಿಸಿ, ವಾನರತ್ವಂ - ಕಪಿತ್ವವನ್ನು, ಉಪಾಗತೈಃ - ಹೊಂದಿರುವ, ಸರ್ವೈಃ - ಸಮಸ್ತರಾದ, ದೇವೈಃ - ದೇವತೆಗಳಿಂದ, ಪರಿವೃತಃ - ಸುತ್ತುವರೆದವನಾಗಿ, ಸರ್ವ....ರಃ - ಎಲ್ಲ ಲೋಕಕ್ಕೂ ಪೋಷಕನಾದಕಾರಣ, ಲೋಕಾನಾಂ - ಲೋಕಗಳಿಗೆ, ಹಿತಕಾಮ್ಯಯಾ - ಹಿತವಾಗಲೆಂಬ ಕೋರಿಕೆಯಿಂದ, ಮಹಾದ್ಯುತಿಃ - ಮಹಾ ಪ್ರಕಾಶವಂತನಾಗಿ, ಸರಾ....ರಂ - ರಾಕ್ಷಸರೂಪವಾದ ಪರಿವಾರದಿಂದೊಡಗೂಡಿದ, ತ್ವಾಂ - ನಿನ್ನನ್ನು, ಹತವಾನ್ - ಹೊಡೆದನು. || ೧೪-೧೭ || ಪುರಾ - ಪೂರ್ವದಲ್ಲಿ, ತ್ವಯಾ - ನಿನ್ನಿಂದ, ಇಂದ್ರಿಯಾಣಿ - ಇಂದ್ರಿಯಗಳನ್ನು, ಜಿತ್ವಾ - ಜಯಿಸಿ, ತ್ರಿಭುವನಂ - ಲೋಕತ್ರಯವೂ, ಜಿತಂ - ಜಯಿಸಲ್ಪಟ್ಟಿತು, ತದ್ವೈರಂ - ಆ ದ್ವೇಷವನ್ನು, ಸ್ಮರದ್ಭಿರಿವ - ಸ್ಮರಿಸಿಕೊಳ್ಳುತ್ತಿರುವವುಗಳಂತಿರುವ, ಇಂದ್ರಿಯೈರೇವ - ಇಂದ್ರಿಯಗಳಿಂದಲೇ, ನಿರ್ಜಿತಃ - ಜಯಿಸಲ್ಪಟ್ಟೆ. || ೧೮ || ರಾಘವೇಣ - ಶ್ರೀರಾಮನೊಡನೆ, ಅವಿರೋಧಃ - ವಿರೋಧಪರಿಹಾರವು, ಕ್ರಿಯತಾಂ -

---

ಜಯಿಸಲಸಾಧ್ಯನೂ, ಸ್ಥಿರನೂ ಆದ ವಿಷ್ಣುವೇ ಸರಿ. ||೧೨-೧೫|| ಮಹಾ ಸತ್ಯಪರಾಕ್ರಮಿಯಾದ ಶ್ರೀ ಮಹಾವಿಷ್ಣುವೇ ಈ ರಾಮರೂಪವನ್ನು ಧರಿಸಿ ವಾನರರೂಪವನ್ನು ತಾಳಿರುವ ಸಮಸ್ತ ದೇವತೆಗಳೊಡಗೂಡಿ, ತಾನು ಸಮಸ್ತ ಲೋಕಗಳ ಸ್ವಾಮಿಯಾದುದರಿಂದ ಸಮಸ್ತ ಲೋಕಗಳನ್ನೂ ಸಂರಕ್ಷಿಸುವ ಸಲುವಾಗಿಯೂ, ಅವುಗಳಿಗೆ ಹಿತವನ್ನುಂಟುಮಾಡಲೋಸುಗವಾಗಿಯೂ, ಪರಿವಾರಸಹಿತನಾದ ನಿನ್ನನ್ನು ಸಂಹರಿಸಿರುವನೆಂದು ತೋರುತ್ತದೆ. ಪ್ರಾಣನಾಥ! ಪೂರ್ವದಲ್ಲಿ ನೀನು ಇಂದ್ರಿಯಗಳೆಲ್ಲವನ್ನೂ ಜಯಿಸಿ ಆ ತರುವಾಯ ಮೂರು ಲೋಕಗಳನ್ನೂ ಜಯಿಸಿದೆ. ಆ ಇಂದ್ರಿಯಗಳೆಲ್ಲವೂ ನೀನು ತಮ್ಮನ್ನು ಜಯಿಸಿದುದರಿಂದ ನಿನ್ನಲ್ಲಿ ವೈರವನ್ನು ಬೆಳಸಿ ಈಗ ನಿನ್ನನ್ನು ಸೋಲಿಸಿದವು. ಪ್ರಭುವೇ!

$ "ಸರ್ವೇಶ್ವರನಾದ ಆ ಮಹಾ ವಿಷ್ಣುವು ಮನುಷ್ಯನಾಗಿ ಪ್ರಕಟವಾದುದೇಕೆ? ವಾನರರೊಡನೆ ಸಹವಾಸ ಮಾಡಿದುದಾದರೂ ಹೇಗೆ? ಅವಾಪ್ತ ಸಕಲ ಕಾಮನಾಗಿರುವ ಆತನಿಗೆ ರಾವಣ ಸಂಹಾರದಿಂದಾದ ಪ್ರಯೋಜನವಾದರೂ ಏನು?" ಮುಂತಾದ ಪ್ರಶ್ನೆಗಳನ್ನು ಆಶಂಕಿಸಿಕೊಂಡು ಈ ಶ್ಲೋಕದಲ್ಲಿ ಅವಕ್ಕೆಲ್ಲ ಸಮಾಧಾನ ಹೇಳುತ್ತಾರೆ. (ಮ)

ಗತಾ ‖ ೧೯ ‖ ಅಕಸ್ಮಾಚ್ಚಾಭಿಕಾಮೋಽಸಿ ಸೀತಾಂ ರಾಕ್ಷಸಪುಂಗವ! । ಐಶ್ವರ್ಯಸ್ಯ ವಿನಾಶಾಯ ದೇಹಸ್ಯ ಸ್ವಜನಸ್ಯಚ ‖ ೨೦ ‖ ಅರುಂಧತ್ಯಾ ವಿಶಿಷ್ಟಾಂ ತಾಂ ರೋಹಿಣ್ಯಾಶ್ಚಾಪಿ ದುರ್ಮತೇ! । ಸೀತಾಂ ಧರ್ಷಯತಾ ಮಾನ್ಯಾಂ ತ್ವಯಾಹ್ಯಸದೃಶಂ ಕೃತಂ ‖ ೨೧ ‖ ವಸುಧಾಯಾಶ್ಚ ವಸುಧಾಂ ಶ್ರಿಯಃ ಶ್ರೀಂ ಭರ್ತೃವತ್ಸಲಾಂ । ಸೀತಾಂ ಸರ್ವಾನವದ್ಯಾಂಗೀಮರಣ್ಯೇ ವಿಜನೇ ಶುಭಾಂ ‖ ೨೨ ‖ ಆನಯಿತ್ವಾತು

ಮಾಡಲ್ಪಡಲಿ, ಇತಿ - ಇಂತೆಂದು, ಮಯಾ - ನನ್ನಿಂದ, ಉಚ್ಯಮಾನಃ - ಹೇಳಲ್ಪಟ್ಟವನಾದರೂ, ನಗೃಹ್ಣಾಸಿಯತ್ - ಗ್ರಹಿಸದಿರುವೆಯೆಂಬುದಾವುದೋ, ತಸ್ಯ - ಅದಕ್ಕೆ, ಇಯಂವ್ಯುಷ್ಟಿಃ - ಈ ಫಲವು, ಆಗತಾ - ಪ್ರಾಪ್ತವಾಯಿತು. ‖ ೧೯ ‖ ರಾಕ್ಷಸಪುಂಗವ - ರಾಕ್ಷಸಶ್ರೇಷ್ಠನೇ, ಅಕಸ್ಮಾತ್ - ಆಕಸ್ಮಿಕವಾಗಿ, ಐಶ್ವರ್ಯಸ್ಯ - ಸಂಪತ್ತಿನ, ದೇಹಸ್ಯ - ದೇಹದ, ಸ್ವಜನಸ್ಯ - ತನ್ನ ಬಂಧುಜನರ, ನಾಶಾಯ - ವಿನಾಶಕ್ಕಾಗಿ, ಸೀತಾಂ - ಸೀತಾದೇವಿಯನ್ನು, ಅಭಿಕಾಮಃ - ಕೋರಿದವನು, ಅಸಿ - ಆದೆ ‖ ೨೦ ‖ ದುರ್ಬುದ್ಧೇ - ದುಷ್ಟಬುದ್ಧಿಯುಳ್ಳವನೇ, ಅರುಂಧತ್ಯಾಃ - ಅರುಂಧತೀದೇವಿಗಿಂತಲೂ, ವಿಶಿಷ್ಟಾಂ - ಉತ್ಕೃಷ್ಟಳಾದ, ರೋಹಿಣ್ಯಾಶ್ಚಾಪಿ-ರೋಹಿಣೀದೇವಿಗಿಂತಲೂ, ಮಾನ್ಯಾಂ-ಪೂಜ್ಯಳಾದ, ಸೀತಾಂ-ಸೀತಾದೇವಿಯನ್ನು, ಧರ್ಷಯತಾ - ತಿರಸ್ಕರಿಸಿದ, ತ್ವಯಾ - ನಿನ್ನಿಂದ, ಅಸದೃಶಂ - ಅಯೋಗ್ಯ ಕಾರ್ಯವು, ಕೃತಂ - ಮಾಡಲ್ಪಟ್ಟಿತು. ‖ ೨೧ ‖ ಆತ್ಮಸ್ವದೂಷಣ - ತನ್ನವರನ್ನು ತಾನೇ ದೂಷಣೆ ಮಾಡುವವನೇ, ವಸುಧಾಯಾಃ - ಭೂಮಿಗೂ ಕೂಡ, ವಸುಧಾಂ - ಭೂಮಿಸ್ವರೂಪಳಾದ, (ಅಂದರೆ-ಅತಿ ಕ್ಷಮಾವಂತಳಾದ), ಶ್ರಿಯಃ-ಲಕ್ಷ್ಮೀದೇವಿಗೆ, ಶ್ರೀಂ-ಲಕ್ಷ್ಮೀಸ್ವರೂಪಳಾದ, ಭರ್ತೃವತ್ಸಲಾಂ-ಗಂಡನಲ್ಲಿ ಅತಿ ವಾತ್ಸಲ್ಯವುಳ್ಳ, ಸರ್ವಾ....ಗೀಂ - ನಿರ್ದುಷ್ಟ ಸಮಸ್ತಾವಯವಗಳುಳ್ಳ, ವಿಜನೇ - ಜನರಹಿತವಾದ, ಅರಣ್ಯೇ - ಕಾಡಿನಲ್ಲಿ, ಸ್ಥಿತಾಂ - ಇರುವ, ದೀನಾಂ - ಪರಿತಪ್ತಳಾದ, ಶುಭಾಂ - ಮಂಗಳಕರಳಾದ, ತಾಂಸೀತಾಂ - ಆ ಸೀತಾದೇವಿಯನ್ನು, ಛದ್ಮನಾ - ಕಪಟದಿಂದ, ಆನಯಿತ್ವಾ -

---

“ ಶ್ರೀರಾಮನೊಡನೆ ಮೈತ್ರಿಯನ್ನು ಬೆಳಸಿಕೋ. ಅವನೊಡನೆ ಹಗೆತನವು ಬೇಡ ” ಎಂದು ನಾನು ಹೇಳಿದ ಮಾತುಗಳನ್ನು ನೀನು ಕೇಳದಿದ್ದುದಕ್ಕೆ ಇದೀಗ ಫಲವುಂಟಾಯಿತು. ಎಲೈ ರಾಕ್ಷಸಶ್ರೇಷ್ಠನೇ! ಐಶ್ವರ್ಯನಾಶಕ್ಕಾಗಿಯೂ, ನಿನ್ನ ದೇಹದ ಮತ್ತು ಸ್ವಜನರ ನಾಶಕ್ಕಾಗಿಯೂ ನೀನು ಅಕಸ್ಮಾತ್ತಾಗಿ ಸೀತೆಯಲ್ಲಿ ಬಯಕೆಯುಳ್ಳವನಾದೆ! ಎಲೈ ದುರ್ಬುದ್ಧಿಯೇ! ಆ ಸೀತಾದೇವಿಯು ಸಾಮಾನ್ಯಳೇ! ಪಾತಿವ್ರತ್ಯದಲ್ಲಿ ಅರುಂಧತಿಗಿಂತಲೂ ಶ್ರೇಷ್ಠಳು. ಪತಿಯನ್ನು ಅನುಸರಿಸುವುದರಲ್ಲಿ ರೋಹಿಣಿಯನ್ನೂ ಮೀರಿಸಿದವಳು. ಅಂಥ ಪೂಜ್ಯಳನ್ನು ತಿರಸ್ಕರಿಸಲು ಹೋಗಿ ನೀನು ಅನುಚಿತವಾದ ಕಾರ್ಯವನ್ನೇ ಮಾಡಿದೆ! ಅಕ್ಕಟ! ನನ್ನ ಸ್ವಾಮಿಯೇ! ಸೀತಾದೇವಿಯು ತಾಳ್ಮೆಯಲ್ಲಿ ಭೂಮಿಗೂ ಭೂಸದೃಶಳಾದವಳು. ಲಕ್ಷ್ಮೀದೇವಿಗೂ ಲಕ್ಷ್ಮಿಯಾದವಳು. ಪತಿಪರಾಯಣೆಯಾದವಳು. ಆತನಲ್ಲಿ ನಿರತಿಶಯವಾದ ಪ್ರೀತಿಯಿರುವವಳು. ನಿರ್ದುಷ್ಟವಾದ ಸರ್ವಾವಯವಗಳುಳ್ಳವಳು. ಅಂತಹಳು ನಿರ್ಜನವಾದ ಅರಣ್ಯದಲ್ಲಿರುವಾಗ ಮಂಗಳಾಂಗಿಯಾದ ಆಕೆಯು ದೀನೆದೀನೆಯಾಗಿ ಹಲಬುತ್ತಿದ್ದರೂ ಬಿಡದೆ ಬಲಾತ್ಕರಿಸಿ ಮೋಸಗೊಳಿಸಿ ಮಾರುವೇಷದಿಂದ ಕದ್ದುತಂದು ನಿನ್ನನ್ನು ನೀನೇ ಹಾಳುಮಾಡಿಕೊಂಡೆ! ಹೋಗಲಿ ನಿನ್ನ ಬಯಕೆಯನ್ನಾದರೂ ಈಡೇರಿಸಿಕೊಂಡೆಯಾ!

ತಾಂ ದೀನಾಂ ಛದ್ಮನಾಽತ್ಮಸ್ವದೂಷಣ । ಅಪ್ರಾಪ್ಯಚೈವ ತಂ ಕಾಮಂ ಮೈಥಿಲೀ
ಸಂಗಮೇ ಕೃತಂ । ಪತಿವ್ರತಾಯಾಸ್ತಪಸಾ ನೂನಂ ದಗ್ಧೋಽಸಿ ಮೇ ಪ್ರಭೋ!
॥ ೨೩ ॥ ತದೈವ ಯನ್ನ ದಗ್ಧಸ್ತ್ವಂ ಧರ್ಷಯಂಸ್ತನುಮಧ್ಯಮಾಂ । ದೇವಾ ಬಿಭ್ಯತಿ
ತೇ ಸರ್ವೇ ಸೇಂದ್ರಾಸ್ಸಾಗ್ನಿಪುರೋಗಮಾಃ ॥ ೨೪ ॥ ಅವಶ್ಯಮೇವ ಲಭತೇ ಫಲಂ
ಪಾಪಸ್ಯ ಕರ್ಮಣಃ । ಘೋರಂ ಪರ್ಯಾಗತೇ ಕಾಲೇ ಕರ್ತಾ ನಾಸ್ತ್ಯತ್ರ ಸಂಶಯಃ
॥ ೨೫ ॥ ಶುಭಕೃಚ್ಛುಭಮಾಪ್ನೋತಿ ಪಾಪಕೃತ್ಪಾಪಮಶ್ನುತೇ । ವಿಭೀಷಣಸ್ಸುಖಂ
ಪ್ರಾಪ್ತಸ್ತ್ವಂ ಪ್ರಾಪ್ತಃ ಪಾಪಮೀದೃಶಂ ॥ ೨೬ ॥ ಸಂತ್ಯನ್ಯಾ ಪ್ರಮದಾಸ್ತುಭ್ಯಂ

ಕರೆತಂದು, ತ್ವಯಾ - ನಿನ್ನಿಂದ, ಮೈಥಿಲೀಸಂಗಮೇ - ಸೀತಾದೇವಿಯ ಸಂಗದ ವಿಷಯದಲ್ಲಿ, ಕೃತಂ - ಮಾಡಲ್ಪಟ್ಟ, ತಂಕಾಮಂ - ಆ ಕೋರಿಕೆಯನ್ನೂ, ಅಪ್ರಾಪ್ಯೈವ - ಹೊಂದದೆಯೇ, ಮೇ - ನನಗೆ, ಪ್ರಭೋ - ಸ್ವಾಮಿಯೇ, ಪತಿವ್ರತಾಯಾಃ - ಪತಿವ್ರತೆಯಾದ ಸೀತಾದೇವಿಯ, ತಪಸಾ - ತಪೋಜ್ವಾಲೆಯಿಂದ, ದಗ್ಧಃ - ಸುಡಲ್ಪಟ್ಟವನು, ಅಸಿ - ಆದೆ, ನೂನಂ - ನಿಶ್ಚಯವು. ॥ ೨೨-೨೩ ॥ ತನುಮಧ್ಯಮಾಂ - ಸೂಕ್ಷ್ಮವಾದ ಮಧ್ಯಪ್ರದೇಶವುಳ್ಳ ಸೀತಾದೇವಿಯನ್ನು, ಧರ್ಷಯನ್ - ತಿರಸ್ಕರಿಸಿ ಕರೆತಂದ, ತ್ವಂ - ನೀನು, ತದೈವ - ಆ ತರುವ ಕಾಲದಲ್ಲೇ, ನದಗ್ಧ ಇತಿಯತ್ - ದಹಿಸಲ್ಪಡಲಿಲ್ಲವೆಂಬುದು ಯಾವುದೋ, ತೇನ - ಅದರ ಪ್ರಭಾವದಿಂದ, ಸಾಗ್ನಿ....ಮಾಃ - ಅಗ್ನಿಯೇ ಮೊದಲಾದವರಿಂದೊಡಗೂಡಿದ, ಸೇಂದ್ರಾಃ - ಇಂದ್ರನಿಂದೊಡಗೂಡಿದ, ಸರ್ವೇದೇವಾಃ - ಸಮಸ್ತ ದೇವತೆಗಳೂ, ತೇ - ನಿನ್ನ ದೆಸೆಯಿಂದ, ಬಿಭ್ಯತಿ - ಹೆದರಿದರು. ॥ ೨೪ ॥ ಪಾಪಸ್ಯಕರ್ಮಣಃ - ಪಾಪಕರ್ಮಕ್ಕೆ, (ಕರ್ತಾ - ಕರ್ತೃವಾದ ಪುರುಷನು). ಕಾಲೇ - ನಾಶಕಾಲವು, ಪರ್ಯಾಗತೇ - ಒದಗಿದರೆ, ಅವಶ್ಯಂ - ನಿಶ್ಚಯವಾಗಿ, ಫಲಂ - ಫಲವನ್ನು, ಲಭತಏವ - ಹೊಂದಲೇ ಹೊಂದುತ್ತಾನೆ, ಅತ್ರ - ಈ ವಿಷಯದಲ್ಲಿ, ಸಂಶಯಃ - ಸಂಶಯವು, ನಾಸ್ತಿ - ಇಲ್ಲವು. ॥ ೨೫ ॥ ಶುಭಕೃತ್ - ಶುಭಕರ್ಮವನ್ನು ಮಾಡಿದವನು, ಶುಭಂ - ಶುಭವನ್ನು, ಆಪ್ನೋತಿ - ಹೊಂದುತ್ತಾನೆ, ಪಾಪಕೃತ್ - ಪಾಪಕರ್ಮವನ್ನು ಮಾಡಿದವನು, ಪಾಪಂ - ಪಾಪಫಲವನ್ನು, ಅಶ್ನುತೇ - ಅನುಭವಿಸುತ್ತಾನೆ, ವಿಭೀಷಣಃ - ವಿಭೀಷಣನು, ಸುಖಂ - ಸುಖವನ್ನು, ಪ್ರಾಪ್ತಃ - ಹೊಂದಿದವನು, ತ್ವಂ - ನೀನು, ಈದೃಶಂಪಾಪಂ - ಇಂಥಾ ಪಾಪವನ್ನು, ಪ್ರಾಪ್ತಃ - ಹೊಂದಿದೆ. ॥ ೨೬ ॥ ತತಃ - ಆ ಸೀತಾದೇವಿಗಿಂತಲೂ, ರೂಪೇಣ - ಸೌಂದರ್ಯದಿಂದ, ಅಭ್ಯಧಿಕಾಃ - ಹೆಚ್ಚಾದ, ಅನ್ಯಾಃ - ಇತರರಾದ, ಪ್ರಮದಾಃ - ಹೆಂಗಸರು,

---

ಅದೂ ಇಲ್ಲದೆ ಹೀಗೆ ಮಡಿದುಬಿದ್ದೆ. ಎಲೈ ಒಡೆಯನೇ! ನೀನು ನಿಜವಾಗಿಯೂ, ಮಹಾ ಪತಿವ್ರತೆಯಾದ ಆ ಸೀತಾದೇವಿಯ ತಪಃಪ್ರಭಾವದಿಂದಲೇ ಸುಟ್ಟುಹೋದೆ. ॥ ೧೬-೨೩ ॥ ಪ್ರಭುವೇ! ನೀನು ಆ ದೇವಿಯನ್ನು ಹೊತ್ತು ತರುವಾಗಲೇ ಸುಟ್ಟುಹೋಗದಿರುವುದನ್ನು ಕಂಡು ಇಂದ್ರಾಗ್ನಿಪುರಸ್ಸರರಾದ ದೇವತೆಗಳೆಲ್ಲರೂ ಭಯದಿಂದ ನಡುಗಿಹೋದರು. ಕಡೆಕಾಲ ಬಂದಾಗ ಎಲ್ಲರೂ ತಮ್ಮ ಪಾಪಕರ್ಮಕ್ಕೆ ಅನುಗುಣವಾದ ಘೋರ ಫಲವನ್ನು ಹೊಂದಿಯೇ ಹೊಂದುವರು. ಪುಣ್ಯಕರ್ಮವನ್ನು ಮಾಡುವವನು ಪುಣ್ಯಫಲವನ್ನೂ, ಪಾಪ ಕರ್ಮ ಮಾಡುವವನು ಪಾಪಫಲವನ್ನೂ ಹೊಂದಿಯೇ ಹೊಂದುತ್ತಾನೆ. ಪುಣ್ಯಕರ್ಮವನ್ನೇ ಮಾಡಿದ ನಿನ್ನ ತಮ್ಮನಾದ ವಿಭೀಷಣನು ಸುಖವನ್ನೇ ಪಡೆದನು. ಪಾಪಕರ್ಮ ಮಾಡಿದ ನೀನಾದರೋ ಇಂತಹ ದುಷ್ಫಲವನ್ನು ಹೊಂದಿದೆ. ಮಹಾರಾಜಾ! ರೂಪದಿಂದ

ರೂಪೇಣಾಭ್ಯಧಿಕಾಸ್ತತಃ । ಅನಂಗವಶಮಾಪನ್ನಸ್ತ್ವಂತು ಮೋಹಾನ್ನಬುಧ್ಯಸೇ ॥೨೭॥ ನಕುಲೇನ ನರೂಪೇಣ ನದಾಕ್ಷಿಣ್ಯೇನ ಮೈಥಿಲೀ । ಮಯಾಧಿಕಾ ವಾ ತುಲ್ಯಾ ವಾ ತ್ವಂತು ಮೋಹಾನ್ನಬುಧ್ಯಸೇ ॥೨೮॥ ಸರ್ವಥಾ ಸರ್ವಭೂತಾನಾಂ ನಾಸ್ತಿ ಮೃತ್ಯುರಲಕ್ಷಣಃ । ತವತಾವದಯಂ ಮೃತ್ಯುರ್ಮೈಥಿಲೀಕೃತಲಕ್ಷಣಃ ॥ ೨೯ ॥ ಸೀತಾನಿಮಿತ್ತಜೋ ಮೃತ್ಯುಸ್ತ್ವಯಾ ದೂರಾದುಪಾಹೃತಃ । ಮೈಥಿಲೀ ಸಹರಾಮೇಣ ವಿಶೋಕಾ ವಿಹರಿಷ್ಯತಿ । ಅಲ್ಪಪುಣ್ಯಾ ತ್ವಹಂ ಘೋರೇ ಪತಿತಾ ಶೋಕಸಾಗರೇ ॥ ೩೦-೩೧ ॥

ತುಭ್ಯಂ - ನಿನಗೆ, ಸಂತಿ - ಇದ್ದರಷ್ಟೆ, ತ್ವಂತು - ನೀನಾದರೆ, ಮೋಹಾತ್ - ಅವಿವೇಕದಿಂದ, ಅನಂಗವಶಂ - ಮನ್ಮಥನ ವಶವನ್ನು, ಆಪನ್ನಃ - ಹೊಂದಿ, ನಬುಧ್ಯಸೇ - ತಿಳಿಯದೇ ಹೋದೆ ॥೨೭॥ ಮೈಥಿಲೀ - ಸೀತಾದೇವಿಯು, ಕುಲೇನ - ಕುಲದಿಂದಲೂ, ಮಯಾ - ನನ್ನೊಡನೆ, ತುಲ್ಯಾ - ಸಮಾನಳು, ಅಧಿಕಾವಾ - ಹೆಚ್ಚಾದವಳೇ ಆಗಲಿ, ನ - ಅಲ್ಲ, ರೂಪೇಣ - ಸೌಂದರ್ಯದಿಂದ, ನ-ಅಲ್ಲವು, ದಾಕ್ಷಿಣ್ಯೇನ-ವಿದ್ಯಾಸಾಮರ್ಥ್ಯದಿಂದ, ನ-ಅಲ್ಲವು, ತ್ವಂತು-ನೀನಾದರೆ, ಮೋಹಾತ್-ಅವಿವೇಕದಿಂದ, ನಬುಧ್ಯಸೇ - ತಿಳಿಯದೇ ಹೋದೆ. ॥ ೨೮ ॥ ಸರ್ವಭೂತಾನಾಂ - ಸರ್ವಪ್ರಾಣಿಗಳಿಗೂ, ಸರ್ವಥಾ - ಸರ್ವಪ್ರಕಾರದಲ್ಲಿಯೂ, ಮೃತ್ಯುಃ - ಮರಣವು, ಅಲಕ್ಷಣಃ - ನಿಮಿತ್ತವಿಲ್ಲದಿರುವುದಾಗಿ, ನಾಸ್ತಿ - ಉಂಟಾಗುವುದಿಲ್ಲ, ತವತಾವತ್ - ನಿನಗಾದರೆ, ಅಯಂಮೃತ್ಯುಃ - ಈ ಮರಣವು, ಮೈಥಿ....ಣಃ - ಸೀತಾದೇವಿಯ ರೂಪವಾದ ನಿಮಿತ್ತದಿಂದ ಮಾಡಲ್ಪಟ್ಟಿತು. ॥ ೨೯ ॥ ತ್ವಯಾ - ನಿನ್ನಿಂದ, ಸೀತಾ....ಜಃ - ಸೀತಾದೇವಿ ಎಂಬ ಕಾರಣದಿಂದ ಹುಟ್ಟಿರುವ, ಮೃತ್ಯುಃ - ಮೃತ್ಯುವು, ದೂರಾತ್ - ದೂರದಿಂದ, ಉಪಾಹೃತಃ - ತರಲ್ಪಟ್ಟಿತು, ಮೈಥಿಲೀ - ಸೀತಾದೇವಿಯು, ವಿಶೋಕಾ - ಶೋಕವಿಲ್ಲದವಳಾಗಿ, ರಾಮೇಣಸಹ - ಶ್ರೀರಾಮನೊಡಗೂಡಿ, ವಿಹರಿಷ್ಯತಿ - ವಿಹರಿಸುವಳು, ಅಲ್ಪಪುಣ್ಯಾ - ನಿರ್ಭಾಗ್ಯಳಾದ, ಅಹಂತು - ನಾನಾದರೆ, ಘೋರೇ - ಭಯಂಕರವಾದ, ಶೋಕಸಾಗರೇ - ದುಃಖವೆಂಬ ಕಡಲಿನಲ್ಲಿ, ನಿಮಗ್ನಾ - ಮುಳುಗಿದವಳು, ಅಸ್ಮಿ - ಆದೆನು. ॥೩೦-೩೧॥ ಹೇ ವೀರ - ಎಲೈ ಶೂರನೇ, ಕೈಲಾಸೇ - ಕೈಲಾಸಪರ್ವತದಲ್ಲಿಯೂ, ಮಂದರೇ - ಮಂದರಪರ್ವತ

ಈ ಸೀತೆಗಿಂತ ಮಿಗಿಲಾದ ಅನೇಕ ಪ್ರಮದೆಯರು ನಿನಗೆ ಲೆಕ್ಕವಿಲ್ಲದಷ್ಟು ಮಂದಿ ಇರುತ್ತಾರೆ. ಕೇವಲ ಕಾಮಪಾಶಕ್ಕೆ ಸಿಲುಕಿ ನೀನು ಮಾತ್ರ ಅವರನ್ನು ಲಕ್ಷ್ಯಕ್ಕೆ ತಂದುಕೊಳ್ಳಲಿಲ್ಲವು. (ಕಾಮದೋಷದಿಂದ ಕುರುಡನಾಗಿರುವ ನಿನಗೆ ಅವರು ಕಣ್ಣಿಗೆ ಸಹ ಬೀಳಲಿಲ್ಲವು). ಪ್ರಭುವೇ! ವಂಶದಿಂದಾಗಲಿ, ರೂಪದಿಂದಾಗಲಿ, ದಾಕ್ಷಿಣ್ಯದಿಂದಾಗಲಿ, ಮಿಥಿಲರಾಯನ ಮಗಳಾದ ಸೀತೆಯು ನನಗಿಂತ ಹೆಚ್ಚಾದವಳಾಗಲಿ, ನಿನಗೆ ಸಮಾನವಾದವಳಾಗಲಿ ಖಂಡಿತವಾಗಿಯೂ ಅಲ್ಲವು. ಅದನ್ನೂ ನೀನು ಭ್ರಾಂತಿಯಿಂದ–ಅಜ್ಞಾನದಿಂದ–ತಿಳಿಯದೇ ಹೋದೆ. ಯಾವಾಗಲೂ, ಎಲ್ಲ ಪ್ರಾಣಿಗಳಿಗೂ ಮೃತ್ಯುವೆಂಬುದು ಲಕ್ಷಣವಿಲ್ಲದಿರುವುದಿಲ್ಲವು. ನಿನಗಾದರೋ ಮೃತ್ಯುವೆಂಬುದು ಸೀತಾ ಲಕ್ಷಣವಾಗಿ ಬಂದಿತು. ಸೀತಾನಿಮಿತ್ತವಾದ ಮೃತ್ಯುವನ್ನು ನೀನು ಬಹಳ ದೂರದಿಂದ ಕರೆತಂದೆ. ॥೨೪–೩೦॥ ಸೀತೆಯು ಶೋಕರಹಿತಳಾಗಿ ತನ್ನ ಪತಿಯಾದ ಶ್ರೀರಾಮಮೂರ್ತಿಯೊಡನೆ ವಿಹರಿಸುವಳು. ಮಂದಭಾಗ್ಯಳಾದ ನಾನಾದರೋ ಮಹಾ ಭಯಂಕರವಾದ ದುಃಖಸಮುದ್ರದಲ್ಲಿ ಬಿದ್ದುಹೋದೆನು! ಕೈಲಾಸಪರ್ವತದಲ್ಲಿಯೂ, ಮೇರುಮಂದರಪರ್ವತಗಳಲ್ಲಿಯೂ, ಹಾಗೆಯೇ ಕುಬೇರನ

ಕೈಲಾಸೇ ಮಂದರೇ ಮೇರೌ ತಥಾಚೈತ್ರರಥೇ ವನೇ । ದೇವೋದ್ಯಾನೇಷು ಸರ್ವೇಷು ವಿಹೃತ್ಯ ಸಹಿತಾ ತ್ವಯಾ ॥ ೩೨ ॥ ವಿಮಾನೇನಾನುರೂಪೇಣ ಯಾಯಾ ಮ್ಯತುಲಯಾ ಶ್ರಿಯಾ । ಪಶ್ಯಂತೀ ವಿವಿಧಾನ್ ದೇಶಾಂಸ್ತಾಂಸ್ತಾಂಶ್ಚಿತ್ರಸ್ರಗಂಬರಾ ॥ ೩೩ ॥ ಭ್ರಂಶಿತಾ ಕಾಮಭೋಗೇಭ್ಯಸ್ಸಾಸ್ಮಿ ವೀರ! ವಧಾತ್ತವ । ಕೀರ್ತಿಶ್ರೀದ್ಯುತಿಭಿಸ್ತುಲ್ಯಮಿಂದುಪದ್ಮದಿವಾಕರೈಃ ॥೩೪॥ ಕಿರೀಟಕೂಟೋಜ್ವಲಿತಂ ತಾಮ್ರಾಸ್ಯಂ ದೀಪ್ತಕುಂಡಲಂ । ಮದವ್ಯಾಕುಲಲೋಲಾಕ್ಷಂ ಭೂತ್ವಾ ಯತ್ಪಾನಭೂಮಿಷು ॥೩೫॥

ದಲ್ಲಿಯು, ಮೇರೌ - ಮೇರುಪರ್ವತದಲ್ಲಿಯೂ, ತಥಾ - ಹಾಗೆಯೇ, ಚೈತ್ರರಥೇ - ಚೈತ್ರರಥವೆಂಬ, ವನೇ - ಕುಬೇರನ ವನದಲ್ಲಿಯೂ, ಸರ್ವೇಷು - ಸಮಸ್ತಗಳಾದ, ದೇವೋದ್ಯಾನೇಷು - ದೇವತೆಗಳ ಶೃಂಗಾರವನಗಳಲ್ಲಿಯೂ, ವಿಹೃತ್ಯ - ವಿಹಾರಮಾಡಿಕೊಂಡು, ತ್ವಯಾ - ನಿನ್ನೊಡನೆ, ಸಹಿತಾ - ಕೂಡಿದವಳಾಗಿ, ಅನುರೂಪೇಣ - ಅನುರೂಪವಾದ, ವಿಮಾನೇನ - ವಿಮಾನದಿಂದ, ಅತುಲಯಾ - ಸಮಾನವಿಲ್ಲದಿರುವ, ಶ್ರಿಯಾ - ಸಂಪತ್ತಿನಿಂದ, ವಿವಿಧಾನ್ - ನಾನಾಬಗೆಗಳಾದ, ತಾಂಸ್ತಾಂದೇಶಾನ್ - ಆಯಾ ದೇಶಗಳನ್ನು, ಪಶ್ಯಂತೀ - ನೋಡುವವಳಾಗಿ, ಚಿತ್ರಸ್ರಗಂಬರಾ - ಚಿತ್ರವರ್ಣಗಳುಳ್ಳ ಪುಷ್ಪಹಾರಗಳೂ ವಸ್ತ್ರಗಳೂ ಉಳ್ಳವಳಾಗಿ, ಯಾ - ಯಾವ ನಾನು, ಯಾಮಿ - ಬರುತ್ತಿದ್ದೆನೋ, ಸಾ - ಅಂಥಾ ನಾನು, ತವ - ನಿನ್ನ, ವಧಾತ್ - ಸಂಹಾರದಿಂದ, ಕಾಮಭೋಗೇಭ್ಯಃ - ಬೇಕಾದ ವಿಷಯಸುಖಗಳ ದೆಸೆಯಿಂದ, ಭ್ರಂಶಿತಾ - ಜಾರಿಬೀಳಿಸಲ್ಪಟ್ಟವಳು, ಅಸ್ಮಿ - ಆದೆನು. ॥ ೩೨-೩೩ ॥ ಸೈವ - ಅವಳೇ, ಅನ್ಯೇವ - ಮತ್ತೊಬ್ಬಳಂತೆ, ಸಂವೃತ್ತಾ - ಆದವಳು, ಅಸ್ಮಿ - ಆದೆನು, ರಾಜ್ಞಾಂ - ಅರಸುಗಳ, ಶ್ರಿಯಃ - ಐಶ್ವರ್ಯಗಳು, ಚಂಚಲಾಃ - ಅಶಾಶ್ವತಗಳು, ಧಿಕ್ - ಬಿಡು, ॥ ೩೪ ॥ ಹಾ-ಕಷ್ಟವು, ಹೇ ರಾಜನ್-ಎಲೈ ಅರಸೇ, ಸುಕುಮಾರಂ-ಸುಂದರವಾದ, ಸುಭ್ರು-ಒಳ್ಳೆಯ ಕಣ್ಣುಬ್ಬುಗಳುಳ್ಳ, ಸತ್ವಕ್ - ಒಳ್ಳೆಯ ಚರ್ಮವುಳ್ಳ, ಸಮುನ್ನಸಂ - ಉನ್ನತವಾದ ಮೂಗುಳ್ಳ, ಕಾಂತಿಶ್ರೀದ್ಯುತಿಭಿಃ - ಕಾಂತಿಯಿಂದಲೂ, ತೇಜಸ್ಸಿನಿಂದಲೂ, ಸೌಂದರ್ಯದಿಂದಲೂ, ಇಂದು....ರೈಃ - ಚಂದ್ರ ಕಮಲ ಸೂರ್ಯ ಮೊದಲದವುಗಳ ಮೂರಕ್ಕೂ, ತುಲ್ಯಂ - ಸಮಾನನಾದ, ಕಿರೀ....ತಂ - ಶಿಖರದಂತಿರುವ ಕಿರೀಟದಿಂದ ಹೊಳೆಯುತ್ತಿರುವ, ದೀಪ್ತಕುಂಡಲಂ - ಪ್ರಜ್ವಲಿಸುತ್ತಿರುವ ಕರ್ಣಭೂಷಣಗಳುಳ್ಳ, ಮದ....ಕ್ಷಂ - ಮತ್ತಿನಂತೆ ಚಂಚಲವಾಗಿ ಚಲಿಸುತ್ತಿರುವ ನೇತ್ರಗಳುಳ್ಳ,

---

ಚೈತ್ರರಥೋದ್ಯಾನದಲ್ಲಿಯೂ, ಮಹೇಂದ್ರನ ನಂದನೋದ್ಯಾನದಲ್ಲಿಯೂ ಎಲ್ಲೆಡೆಗಳಲ್ಲಿಯೂ ಅನುಪಮವಾದ ವಿಮಾನದಲ್ಲಿ ನಿನ್ನೊಡಗೂಡಿ ವಿಹರಿಸುತ್ತ, ವಸ್ತ್ರಮಾಲ್ಯಾಂಬರಭೂಷಿತೆಯಾಗಿ ದೇಶದೇಶಗಳನ್ನೂ ನೋಡುತ್ತ ಆನಂದಿಸುತ್ತಿದ್ದ ನಾನು ವೀರನಾದ ನಿನ್ನ ವಧೆಯಿಂದ ಇದ್ದಕ್ಕಿದ್ದಂತೆಯೇ ಕಾಮೋಪಭೋಗಗಳಿಂದ ಭ್ರಷ್ಟಳಾಗಿ ಹೋದೆನು. ಅಕ್ಕಟ! ಎಷ್ಟೋ ಆನಂದವಾಗಿದ್ದ ನಾನು ಈಗ ಯಃಕಶ್ಚನಳಾಗಿ ಹೋದೆನು. ಛೀ. ಛೀ. ರಾಜೈಶ್ವರ್ಯಗಳೆಲ್ಲವೂ ಬಹಳ ಚಂಚಲಗಳಾದುವು. ಸುಡು; ಸುಡು. ॥೩೧-೩೪॥ ಅಯ್ಯೋ! ಮಹಾರಾಜಾ!! ಸುಕುಮಾರವೂ, ಒಳ್ಳೆಯ ಹುಬ್ಬುಳ್ಳುದೂ, ಸೊಗಸಾದ ಮೂಗುಳ್ಳುದೂ, ಕಾಂತಿ ಲಕ್ಷ್ಮೀಸಹಿತವಾದುದೂ, ಚಂದ್ರನಿಗೂ, ಕಮಲಕ್ಕೂ, ಸೂರ್ಯನಿಗೂ ಸಮಾನವಾದುದೂ, ಕಿರೀಟಭೂಷಿತವಾದುದೂ ಕೆಂಪೊಗೆವ ಮೊಗ, ಪ್ರಜ್ವಲಿಸುತ್ತಿರುವ ಕರ್ಣಕುಂಡಲಗಳುಳ್ಳುದೂ, ಮಧುಪಾನಮತ್ತತೆಯಿಂದ ಲೋಲಾಡುವ ಕಣ್ಣಾಲಿಗಳುಳ್ಳುದೂ

ವಿವಿಧಸ್ರಗ್ಧರಂ ಚಾರು ವಲ್ಗುಸ್ಮಿತಕಥಂ ಶುಭಂ । ತದೇವಾಽದ್ಯ ತವೇದಂಹಿ ವಕ್ತ್ರಂ ನಭ್ರಾಜತೇ ಪ್ರಭೋ! ॥ ೩೬-೩೭ ॥ ರಾಮಸಾಯಕನಿರ್ಭಿನ್ನಂ ಸಿಕ್ತಂ ರುಧಿರವಿಸ್ರವೈಃ । ವಿಶೀರ್ಣಮೇದೋ ಮಸ್ತಿಷ್ಕಂ ರೂಕ್ಷಂ ಸ್ಯಂದನರೇಣುಭಿಃ ॥ ೩೮ ॥ ಹಾ! ಪಶ್ಚಿಮಾ ಮೇ ಸಂಪ್ರಾಪ್ತಾ ದಶಾ ವೈಧವ್ಯಕಾರಿಣೀ । ಯಾ ಮಯಾಽಸೀನ್ನ ಸಂಬುದ್ಧಾ ಕದಾಚಿದಪಿ ಮಂದಯಾ ॥ ೩೯ ॥ ಪಿತಾ ದಾನವರಾಜೋ ಮೇ ಭರ್ತಾ ಮೇ ರಾಕ್ಷಸೇಶ್ವರಃ । ಪುತ್ರೋ ಮೇ ಶಕ್ರನಿರ್ಜೇತಾ ಇತ್ಯೇವಂ ಗರ್ವಿತಾಭೃಶಂ॥೪೦॥ ದೃಪ್ತಾರಿಮರ್ದನಾಃ ಶೂರಾಃ ಪ್ರಖ್ಯಾತಬಲಪೌರುಷಾಃ । ಅಕುತಶ್ಚಿದ್ಭಯೋ ನಾಥಾ

ವಿವಿ....ರಂ - ನಾನಾಬಗೆಯಾದ ಹೂವಿನ ಹಾರಗಳನ್ನು ಧರಿಸಿರುವ, ಚಾರು - ಮನೋಹರವಾದ, ತಾಮ್ರಾಸ್ಯಂ - ಕೆಂಪಾಗಿರುವ ಬಾಯಿಯುಳ್ಳ, ವಲ್ಗು....ಥಂ - ಮನೋಹರವಾದ ಮಂದಹಾಸದಿಂದ ಕೂಡಿರುವ ಮಾತುಗಳುಳ್ಳ, ಯತ್ - ಯಾವ, ವಕ್ತ್ರಂ - ಮುಖವು, ಪಾನಭೂಮಿಷು - ಪಾನಮಾಡತಕ್ಕ ಸ್ಥಾನಗಳಲ್ಲಿ, ಶುಭಂ - ಶುಭಕರವಾದದ್ದು, ಭೂತ್ವಾ - ಆಗಿ, ಅಭ್ರಾಜತ - ಬೆಳಗುತ್ತಿತ್ತೋ, ತದೇವ ಆ, ಇದಂ - ಈ, ತವ - ನಿನ್ನ, ವಕ್ತ್ರಂ - ಮುಖವೇ, ಪ್ರಭೋ - ಒಡೆಯನೇ, ರಾಮ....ನ್ನಂ - ಶ್ರೀರಾಮಬಾಣಗಳಿಂದ ಭೇದಿಸಲ್ಪಟ್ಟುದಾಗಿ, ರುಧಿ....ವೈಃ - ರಕ್ತದ ಜಾರಿಕೆಗಳಿಂದ, ಸಿಕ್ತಂ - ನೆನೆಯಲ್ಪಟ್ಟುದಾಗಿ, ವಿಶೀ....ಷ್ಕಂ - ಶಿಥಿಲವಾದ ಮೇದಸ್ಸು ಮಾಂಸವಿಶೇಷವೂ ಉಳ್ಳ, ಸ್ಯಂದನರೇಣುಭಿಃ - ರಥದ ಧೂಳಿಗಳಿಂದ, ರೂಕ್ಷಂ - ಕಠಿಣವಾಗಿ, ನಭ್ರಾಜತೇಹಿ - ಬೆಳಗುತ್ತಿಲ್ಲವಷ್ಟೆ. ॥ ೩೮ ॥ ಹಾ - ಕಷ್ಟವು, ಮೇ - ನನಗೆ, ವೈಧ....ಣೀ - ವೈಧವ್ಯವನ್ನು ಮಾಡುತ್ತಿರುವ, ಪಶ್ಚಿಮಾ ದಶಾ - ಚರಮಾವಸ್ಥೆಯು, ಸಂಪ್ರಾಪ್ತಾ - ಪ್ರಾಪ್ತವಾಯಿತು, ಯಾ - ಯಾವ ದಶೆಯು, ಮಂದಯಾ - ಮಂದಬುದ್ಧಿಯುಳ್ಳ, ಮಯಾ-ನನ್ನಿಂದ, ಕದಾಚಿದಪಿ-ಯಾವಾಗಲೂ, ನಸಂಬುದ್ಧಾ-ತಿಳಿಯಲ್ಪಡದಿರುವುದಾಗಿ, ಆಸೀತ್ - ಆಯಿತೋ. ॥ ೩೯ ॥ ಮೇ - ನನ್ನ, ಪಿತಾ - ತಂದೆಯು, ದಾನವರಾಜಃ - ದಾನವರಿಗೆಲ್ಲಾ ಅಧಿಪತಿಯಾದ ಮಯಾಸುರನು, ಮೇ - ನನ್ನ, ಭರ್ತಾ - ಗಂಡನು, ರಾಕ್ಷಸೇಶ್ವರಃ - ರಾಕ್ಷಸರಾಜನು, ಮೇ - ನನ್ನ, ಪುತ್ರಃ - ಮಗನು, ಶಕ್ರನಿರ್ಜೇತಾ - ಇಂದ್ರನನ್ನು ಜಯಿಸಿದವನು, ಇತ್ಯೇವಂ - ಈ ಪರಿಯಾಗಿ, ಭೃಶಂ - ಬಹಳವಾಗಿ, ಗರ್ವಿತಾ - ಗರ್ವಿತಳಾಗಿದ್ದೆನು. ॥ ೪೦ ॥ ಮಮ - ನನಗೆ, ನಾಥಾಃ - ನಾಥರು, ದೃಪ್ತಾ....ನಾಃ - ಗರ್ವಿತರಾದ ಶತ್ರುಗಳನ್ನು ಮರ್ದಿಸುವವರು,

---

ಆಗಿ ಪಾನಭೂಮಿಗಳಲ್ಲಿ ನಸುನಗುತ್ತ ಹೂಮಾಲೆಗಳನ್ನು ಧರಿಸಿ ಇಂಪಾಗಿ ಮಾತನಾಡುತ್ತಿದ್ದ ನಿನ್ನ ಆ ಶ್ರೀಮುಖವೇ ಈಗ ಕಾಂತಿಹೀನವಾಗಿರುವುದಲ್ಲಾ! ಅಯ್ಯಯ್ಯೋ! ಪ್ರಭುವೇ!! ಆ ನಿನ್ನ ಮುಖವೇ ಈಗ ಶ್ರೀರಾಮನ ಬಾಣಗಳಿಂದ ಕತ್ತರಿಸಿ ರಕ್ತದಿಂದ ತೋಯ್ದು ಸೀಳಿ, ಮೇದಸ್ಸು, ಮಸ್ತಿಷ್ಕಗಳಿಂದ ಕೂಡಿ ನೆಲದದೂಳಿನಲ್ಲಿ ಬಿದ್ದು ತೇಜೋವಿಹೀನವಾಗಿ ಹೋಗಿದೆಯಲ್ಲಾ!! ಮೂಢಳಾದ ನಾನು ಇಂತಹ ಹೀನವಾದ ವೈಧವ್ಯದಶೆಯು ಬರುತ್ತದೆಯೆಂದು ತಿಳಿಯಲೇ ಇಲ್ಲವು. ಎಂದಿಗೂ ನನಗಿಂತಹ ದಶೆಯು ಬರಲಾರದೆಂದೇ ತಿಳಿದಿದ್ದೆನು. "ನನ್ನ ತಂದೆಯು ದಾನವೇಶ್ವರನಾದ ಮಾಯಾಸುರನು. ಭರ್ತನೋ ರಾಕ್ಷಸೇಶ್ವರನು. ಪುತ್ರನೋ ಮಹೇಂದ್ರನಿರ್ಜೇತೃವು. ಇನ್ನು ನನ್ನ ಸಮಾನರಾರು?" ಎಂದು ನಾನು ಗರ್ವಿಸಿ ಹೋಗಿದ್ದೆನು. ॥ ೩೬—೪೦ ॥ "ನನ್ನ ಒಡೆಯರು ಗರ್ವದಿಂದ ಬೀಗುತ್ತಿರುವ ಹಗೆಯರನ್ನೆಲ್ಲ ಮರ್ದಿಸುವ ಶೂರಶ್ರೇಷ್ಠರು. ಸುಪ್ರಸಿದ್ಧವಾದ ಬಲಪರಾಕ್ರಮಗಳುಳ್ಳವರು.

ಮಮೇತ್ಯಾಸೀನ್ಮತಿರ್ದೃಢಾ ॥ ೪೧ ॥ ತೇಷಾಮೇವಂ ಪ್ರಭಾವಾನಾಂ ಯುಷ್ಮಾಕಂ
ರಾಕ್ಷಸರ್ಷಭ! । ಕಥಂ ಭಯಮಸಂಬುದ್ಧಂ ಮಾನುಷಾದಿದಮಾಗತಂ ॥ ೪೨ ॥
ಸ್ನಿಗ್ಧೇಂದ್ರನೀಲನೀಲಂತು ಪ್ರಾಂಶುಶೈಲೋಪಮಂ ಮಹತ್ । ಕೇಯೂರಾಂಗದ
ವೈಡೂರ್ಯಮುಕ್ತಾದಾಮಸ್ರಗುಜ್ಜ್ವಲಂ ॥ ೪೩ ॥ ಕಾಂತಂ ವಿಹಾರೇಷ್ವಧಿಕಂ
ದೀಪ್ತಂ ಸಂಗ್ರಾಮಭೂಮಿಷು । ಭಾತ್ಯಾಭರಣಭಾಭಿರ್ಯದ್ವಿದ್ಯುದ್ಭಿರಿವ ತೋಯದಃ
॥ ೪೪ ॥ ತದೇವಾದ್ಯ ಶರೀರಂ ತೇ ತೀಕ್ಷ್ಣೈರ್ನೈಕೈಃ ಶರೈಶ್ಚಿತಂ । ಪುನರ್ದುರ್ಲಭ
ಸಂಸ್ಪರ್ಶಂ ಪರಿಷ್ವಕ್ತುಂ ನಶಕ್ಯತೇ ॥ ೪೫ ॥ ಶ್ವಾವಿದಃ ಶಲಲೈರ್ಯದ್ವತ್ ಬಾಣೈ

ಶೂರಾಃ - ಶೌರ್ಯವಂತರು, ಪ್ರಖ್ಯಾ....ಷಾಃ - ಜಗದ್ವಿಖ್ಯಾತವಾದ ಸಾಮರ್ಥ್ಯವೂ, ಪರಾಕ್ರಮವೂ ಉಳ್ಳವರು, ಅಕುತಶ್ಚಿದ್ಭಯಾಃ - ಯಾರಿಂದಲೂ ಭಯವಿಲ್ಲದವರು, ಇತಿ - ಇಂತೆಂದು, ಮೇ - ನನಗೆ, ಮತಿಃ - ಬುದ್ಧಿಯು, ದೃಢಾ - ನಿಶ್ಚಯವಾದದ್ದು, ಆಸೀತ್ - ಆಗಿದ್ದಿತು. ॥ ೪೧ ॥ ರಾಕ್ಷಸರ್ಷಭ - ರಾಕ್ಷಸಶ್ರೇಷ್ಠನೇ, ಏವಂಪ್ರಭಾವಾನಾಂ - ಇಂಥಾ ಪ್ರಭಾವವುಳ್ಳ, ತೇಷಾಂ - ಅಂಥಾ, ಯುಷ್ಮಾಕಂ - ನಿಮಗೆ, ಅಸಂಬುದ್ಧಂ - ತಿಳಿಯದೇ ಇರುವ, ಇದಂಭಯಂ - ಈ ಭಯವು, ಮಾನುಷಾತ್ - ಮನುಷ್ಯನ ದೆಸೆಯಿಂದ, ಕಥಮಾಗತಂ - ಹೇಗೆ ಬಂದಿತು. ॥ ೪೨ ॥ ಸ್ನಿಗ್ಧೇಂ....ತು - ಮನೋಹರವಾದ ಇಂದ್ರ ನೀಲ ಮಾಣಿಕ್ಯದಂತೆ ಕಪ್ಪಾದ, ಪ್ರಾಂಶು - ದೀರ್ಘವಾದ, ಮಹತ್ - ದೊಡ್ಡದಾದ, ಶೈಲೋಪಮಂ - ಬೆಟ್ಟಕ್ಕೆ ಸಮಾನವಾದ, ಕೇಯೂ....ಲಂ-ತೋಳುಬಂದಿಗಳು, ಭುಜಕೀರ್ತಿಗಳು, ವೈಡೂರ್ಯಮಣಿ ಹಾರಗಳು, ಮುತ್ತಿನ ಸರಗಳೂ ಇವುಗಳಿಂದ ಹೊಳೆಯುತ್ತಿರುವ, ವಿಹಾರೇಷು - ವಿಹಾರ ಸ್ಥಾನಗಳಲ್ಲಿ, ಅಧಿಕಂ - ಹೆಚ್ಚಾಗಿ, ಕಾಂತಂ - ಮನೋಹರವಾದ, ಸಂಗ್ರಾ....ಷು - ಯುದ್ಧರಂಗದಲ್ಲಿ, ದೀಪ್ತಂ - ಪ್ರಜ್ವಲಿಸುತ್ತಿರುವ, ಯತ್ - ಯಾವ ಶರೀರವು, ಆಭರಣಭಾಭಿಃ - ಆಭರಣಗಳ ಕಾಂತಿಗಳಿಂದ, ವಿದ್ಯುದ್ಭಿಃ - ಮಿಂಚುಗಳಿಂದ, ತೋಯದಇವ - ಮೇಘದಂತೆ, ಭಾತಿ - ಬೆಳಗುತ್ತಿತ್ತೋ, ತೇ - ನಿನ್ನ, ತದೇವಶರೀರಂ - ಅಂಥಾ ಶರೀರವೇ, ಅದ್ಯ - ಈಗ, ತೀಕ್ಷ್ಣೈಃ - ಹದವಾಗಿರುವ, ಅನೇಕೈಃ - ಅನೇಕಗಳಾದ, ಶರೈಃ-ಬಾಣಗಳಿಂದ, ಚಿತ್ರಂ-ವ್ಯಾಪ್ತವಾದುದಾಗಿ, ಪುನಃ-ಮತ್ತು, ದುರ್ಲ....ರ್ಶಂ- ದುರ್ಲಭವಾದ ಸ್ಪರ್ಶವುಳ್ಳುದಾಗಿ, ಪರಿಷ್ವಕ್ತುಂ - ಅಪ್ಪಿಕೊಳ್ಳುವುದಕ್ಕೂ, ನಶಕ್ಯತೇ - ಸಾಧ್ಯವಾಗುವುದಿಲ್ಲ. ॥ ೪೩-೪೫ ॥ ಶ್ವಾವಿದಃ - ಕಾಡುಹಂದಿಯ, ಶಲಲೈಃ - ಮುಳ್ಳುಗಳಿಂದ, ಯದ್ವತ್ - ಹೇಗೋ,

---

ಯಾವೊಂದು ಭಯವೂ ಇಲ್ಲದವರು.” ಹೀಗೆಂದೇ ನನಗೆ ಸಂಪೂರ್ಣವಾಗಿ ನಂಬುಗೆಯಿದ್ದಿತು. ಓ ರಾಕ್ಷಸೋತ್ತಮಾ! ಅಂಥ ಪ್ರಭಾವವಂತರಾದ ನಿಮಗೆ ಕೇವಲ ಮಾನವನಾದ ರಾಮನಿಂದ ಈ ಭಯವು ಹೇಗೆ ಒದಗಿ ಬಂದಿತೋ! ಆರ್ದ್ರವಾದ ಇಂದ್ರನೀಲಮಣಿಯಂತೆ ನೀಲವಾಗಿ ಉನ್ನತಾದ್ರಿಯಂತೆ ದೊಡ್ಡದಾಗಿ, ಭುಜಕೀರ್ತಿಗಳಿಂದಲೂ, ಕೇಯೂರಗಳಿಂದಲೂ, ವೈಡೂರ್ಯಮಣಿಗಳ ಮತ್ತು ಮುತ್ತುಗಳ ಹಾರಗಳಿಂದ ಪ್ರಜ್ವಲಿಸುತ್ತಿರುವ ವಿಹಾರಭೂಮಿಗಳಲ್ಲಿಯೂ, ರಣಭೂಮಿಗಳಲ್ಲಿಯೂ, ಮಿಂಚುಗಳೊಡಗೂಡಿದ ಮುಗಿಲಂತೆ ಆಭರಣಕಾಂತಿಗಳಿಂದ ವಿರಾಜಿಸುತ್ತಿದ್ದ ನಿನ್ನೀದೇಹವು ಮಹಾ ತೀಕ್ಷ್ಣಗಳಾದ ಅಸಂಖ್ಯಾತ ಶರಗಳಿಂದ ತುಂಬಿ, ಮುಂದೆ ದೊರಕಲಸಾಧ್ಯವಾದುದುದಾವರೂ ಈಗ ಮುಟ್ಟುವುದಕ್ಕೂ, ಆಲಿಂಗಿಸಿಕೊಳ್ಳುವುದಕ್ಕೂ ಶಕ್ಯವಲ್ಲವಾಗಿದೆ. ಅನೇಕ ಬಾಣಗಳನ್ನು ಚೆನ್ನಾಗಿಯೂ, ತೀಕ್ಷ್ಣವಾಗಿಯೂ ಮರ್ಮಸ್ಥಾನಗಳಲ್ಲಿ ಪ್ರಯೋಗಿಸಿದುದರ ಸಲುವಾಗಿ ನಿನ್ನ

ಲಗ್ನೈರ್ನಿರಂತರಂ । ಸ್ವರ್ಪಿತೈರ್ಮರ್ಮಸು ಭೃಶಂ ಸಂಛಿನ್ನಸ್ನಾಯುಬಂಧನಂ ॥೪೬॥ ಕ್ಷಿತೌ ನಿಪತಿತಂ ರಾಜನ್ ಶ್ಯಾವಂ ರುಧಿರಸಚ್ಛವಿ । ವಜ್ರಪ್ರಹಾರಾಭಿಹತೋ ವಿಕೀರ್ಣ ಇವ ಪರ್ವತಃ ॥೪೭॥ ಹಾ ! ಸ್ವಪ್ನಸ್ಸತ್ಯಮೇವೇದಂ ತ್ವಂ ರಾಮೇಣ ಕಥಂ ಹತಃ? । ತ್ವಂ ಮೃತ್ಯೋರಪಿ ಮೃತ್ಯುಸ್ಸ್ಯಾಃ ಕಥಂ ಮೃತ್ಯುವಶಂ ಗತಃ ॥ ೪೮ ॥ ತ್ರೈಲೋಕ್ಯ ವಸುಭೋಕ್ತಾರಂ ತ್ರೈಲೋಕ್ಯೋದ್ವೇಗದಂ ಮಹತ್ । ಜೇತಾರಂ ಲೋಕಪಾಲಾನಾಂ ಕ್ಷೇಪ್ತಾರಂ ಶಂಕರಸ್ಯ ಚ ॥೪೯॥ ದೃಪ್ತಾನಾಂ ನಿಗೃಹೀತಾರಮಾವಿಷ್ಕೃತಪರಾಕ್ರಮಂ। ಲೋಕಕ್ಷೋಭಯಿತಾರಂಚ ನಾದೈರ್ಭೂತವಿರಾವಿಣಂ ॥ ೫೦ ॥ ಓಜಸಾ ದೃಪ್ತ

ತದ್ವತ್ - ಹಾಗೆ, ಮರ್ಮಸು - ಮರ್ಮಸ್ಥಾನಗಳಲ್ಲಿ, ಭೃಶಂ - ಬಹಳವಾಗಿ, ಸ್ವರ್ಪಿತೈಃ - ಚೆನ್ನಾಗಿ ನಾಟಿಸಿದ, ನಿರಂತರಂ - ನೀರಂಧ್ರವಾಗಿ, ಲಗ್ನೈಃ - ಸಂಬಂಧಿಸಿರುವ, ಬಾಣೈಃ - ಬಾಣಗಳಿಂದ, ಸಂಛಿ....ನಂ - ಕತ್ತರಿಸಲ್ಪಟ್ಟ ಎಲುವುಗಳ ಸಂಧಿಬಂಧಗಳುಳ್ಳ, ಕ್ಷಿತೌ - ನೆಲದಲ್ಲಿ, ಪತಿತಂ - ಬಿದ್ದಿರುವ, ಶ್ಯಾವಂ - ಹಸುರು ಬಣ್ಣವುಳ್ಳ, ರುಧಿರಸಚ್ಛವಿ - ರಕ್ತಕ್ಕೆ ಸಮಾನವಾದ ಕಾಂತಿಯುಳ್ಳ, ತಚ್ಛರೀರಂ - ಆ ಶರೀರವು, ರಾಜನ್ - ಅರಸೇ, ಕ್ಷಿತೌ - ನೆಲದಲ್ಲಿ, (ಕಥಂ ಹೇಗೆ) ನಿಪತಿತಂ - ಬೀಳಿಸಲ್ಪಟ್ಟುದಾಗಿ, ವಜ್ರ....ತಃ - ವಜ್ರಾಯುಧದಿಂದ ಹೊಡೆಯಲ್ಪಟ್ಟ, ವಿಕೀರ್ಣಃ - ಎರಚಲ್ಪಟ್ಟ, ಪರ್ವತಇವ - ಬೆಟ್ಟದಂತೆ, ಅಸಿ - ಆಗಿಹೋದೆ. ॥ ೪೬ ೪೭ ॥ ತ್ವಂ - ನೀನು, ಮೃತ್ಯೋರಪಿ - ಯಮನಿಗೂ, ಮೃತ್ಯುಃ - ಮೃತ್ಯುಪ್ರಾಯನಾಗಿರುವನಾಗಿ, ಮೃತ್ಯುವಶಂ - ಯಮನ ವಶವನ್ನು, ಗತಃ - ಹೊಂದಿದವನು, ಕಥಂಸ್ಯಾಃ - ಹೇಗೆ ಆದೆಯೋ, ತ್ವಂ - ನೀನು, ರಾಮೇಣ - ಶ್ರೀರಾಮ ನಿಂದ, ಕಥಂ - ಹೇಗೆ, ಹತಃ - ಹೊಡೆಯಲ್ಪಟ್ಟೆಯೋ, ಸ್ವಪ್ನಂ - ಸ್ವಪ್ನವು, ಯಃ - ಯಾವುದೋ, ಇದಂ - ಇದು, ಸತ್ಯಮೇವ - ನಿಜವೇ ಆಯಿತು. ॥ ೪೮ ॥ ತ್ರೈಲೋ....ರಂ - ಮೂರುಲೋಕ ಗಳಲ್ಲಿರುವ ದ್ರವ್ಯಗಳನ್ನು ಅನುಭವಿಸುತ್ತಿರುವ, ತ್ರೈಲೋ....ದಂ - ಲೋಕತ್ರಯಕ್ಕೂ ಭಯವನ್ನುಂಟು ಮಾಡುತ್ತಿರುವ, ಲೋಕಪಾಲಾನಾಂ - ದಿಕ್ಪಾಲಕರಿಗೆ, ಜೇತಾರಂ - ಜಯಶೀಲನಾದ, ಶಂಕ ರಸ್ಯ - ಪರಮೇಶ್ವರನನ್ನು, ಕ್ಷೇಪ್ತಾರಂ - ಎತ್ತಿಹಾಕಿದ, ದೃಪ್ತಾನಾಂ - ಗರ್ವಿತರಾದವರಿಗೆ, ನಿಗೃಹೀತಾರಂ - ನಿಗ್ರಹಶೀಲನಾದ, ಆವಿಷ್ಕೃತಪರಾಕ್ರಮಂ - ಪ್ರಸಿದ್ಧವಾದ ಪರಾಕ್ರಮವುಳ್ಳ, ಲೋಕ....ರಂ - ಲೋಕಗಳನ್ನು ಕ್ಷೋಭೆಗೊಳಿಸುತ್ತಿರುವ, ನಾದೈಃ - ಧ್ವನಿಗಳಿಂದ, ಭೂತ....ಣಂ -

---

ದೇಹದ ಸ್ನಾಯುಬಂಧಗಳೆಲ್ಲವೂ ಮುರಿದು, ಕೆರಳಿದ ಮುಳ್ಳುಹಂದಿಯ ದೇಹವನ್ನು ಹೋಲಿರುವುದು. ಅಕ್ಕಟ! ಪ್ರಭುವೇ! ನಿನ್ನ ದೇಹವು ಬಾಣಾಹತವಾಗಿ ರಕ್ತದಿಂದ ತೊಯ್ದು ನೆಲದ ಮೇಲೆ ಬಿದ್ದಿರುವುದಲ್ಲವೆ. ಅಯ್ಯೋ! ಈ ನಿನ್ನ ದೇಹವು ಮಹೇಂದ್ರನ ವಜ್ರಾಯುಧದಿಂದ ಹತವಾದ ಪರ್ವತದಂತೆ ಚದುರಿಹೋಗಿದೆಯಲ್ಲಾ ? ಆಹಾ ! ನಿನ್ನ ಮರಣವು ಸ್ವಪ್ನವೇ ಅಥವಾ ಸತ್ಯವಾದುದೇ ? ಸ್ವಪ್ನವೇ ಇರಬೇಕು. ಸತ್ಯವಿರಲಾರದು. ಏಕೆಂದರೆ ನೀನು ಯಮನಿಗೂ ಯಮನಾಗಿದ್ದೆ. ಇಂತಹ ನೀನು ರಾಮನಿಂದ ಮೃತನಾಗುವೆಯಾ? ॥೪೧-೪೮॥ ಅಥವಾ ಇದು ನಿಜವೇ ಇರಬಹುದು ಅಯ್ಯೋ! ಮೂರುಲೋಕಗಳ ಐಶ್ವರ್ಯಗಳನ್ನೂ ಭೋಗಿಸಿದವನು ; ಮೂರು ಲೋಕಗಳಿಗೂ ಭಯವನ್ನುಂಟುಮಾಡಿದವನು; ಇಂದ್ರಾದಿ ಲೋಕಪಾಲಕರೆಲ್ಲರನ್ನೂ ಗೆದ್ದವನು ; ಶಂಕರನನ್ನೇ ಎತ್ತಿಹಾಕಿದವನು ; ಹೆಮ್ಮೆಯಿಂದ ಬೀಗಿದವರನ್ನು ಸಂಹರಿಸಿದವನು ; ಅತುಲವಾದ ತನ್ನ ಪರಾಕ್ರಮವನ್ನು ಪ್ರಕಟಗೊಳಿಸಿದವನು ; ಲೋಕವನ್ನೇ ಕ್ಷೋಭೆ

ವಾಕ್ಯಾನಾಂ ವಕ್ತಾರಂ ರಿಪುಸನ್ನಿಧೌ । ಸ್ವಯೂಥಭೃತ್ಯವರ್ಗಾಣಾಂ ಗೋಪ್ತಾರಂ ಭೀಮಕರ್ಮಣಾಂ ॥ ೫೧ ॥ ಹಂತಾರಂ ದಾನವೇಂದ್ರಾಣಾಂ ಯಕ್ಷಾಣಾಂ ಚ ಸಹಸ್ರಶಃ । ನಿವಾತಕವಚಾನಾಂಚ ಸಂಗೃಹೀತಾರಮೀಶ್ವರಂ ॥ ೫೨ ॥ ನೈಕಯಜ್ಞವಿಲೋಪ್ತಾರಂ ತ್ರಾತಾರಂ ಸ್ವಜನಸ್ಯಚ । ಧರ್ಮವ್ಯವಸ್ಥಾ ಭೇತ್ತಾರಂ ಮಾಯಾಸ್ರಷ್ಟಾರಮಾಹವೇ ॥ ೫೩ ॥ ದೇವಾಸುರನೃಕನ್ಯಾನಾಮಾಹರ್ತಾರಂ ತತಸ್ತತಃ । ಶತ್ರುಸ್ತ್ರೀಶೋಕದಾತಾರಂ ದಾತಾರಂ ಸ್ವಜನಸ್ಯಚ ॥ ೫೪ ॥ ಲಂಕಾದ್ವೀಪಸ್ಯ ಗೋಪ್ತಾರಂ ಕರ್ತಾರಂ ಭೀಮಕರ್ಮಣಾಂ । ಅಸ್ಮಾಕಂ ಕಾಮಭೋಗಾನಾಂ

ಪ್ರಾಣಿಗಳಿಗೆ ಗೋಳನ್ನುಂಟುಮಾಡುತ್ತಿರುವ, ಓಜಸಾ-ಪರಾಭಿಭವಸಾಮರ್ಥ್ಯದಿಂದ, ರಿಪುಸನ್ನಿಧೌ-ಶತ್ರುಗಳ ಸಮೀಪದಲ್ಲಿ, ದೃಪ್ತವಾಕ್ಯಾನಾಂ - ಗರ್ವಿತವಾದ ಮಾತುಗಳನ್ನು, ವಕ್ತಾರಂ - ಹೇಳುತ್ತಿರುವ, ಭೀಮ....ಣಾಂ - ಭಯಂಕರ ವ್ಯಾಪಾರಗಳುಳ್ಳ, ಸ್ವಯೂ....ಣಾಂ - ತನ್ನ ಗುಂಪಿನ ಸೇವಕರ ಸಮೂಹಗಳಿಗೆ, ಗೋಪ್ತಾರಂ - ಕಾಯುವವನಾದ, ಸಹಸ್ರಶಃ - ಅನೇಕರಾದ, ದಾನವೇಂದ್ರಾಣಾಂ - ಉತ್ತಮ ದಾನವರಿಗೂ, ಯಕ್ಷಾಣಾಂಚ - ಯಕ್ಷರಿಗೂ, ಹಂತಾರಂ - ಸಂಹಾರಕನಾದ, ನಿವಾ....ಚ - ನಿವಾತಕವಚರೆಂಬ ರಕ್ಕಸರ, ಸಂಗೃಹೀತಾರಂ - ಸಂಗ್ರಹಕರ್ತನಾದ, ಈಶ್ವರಂ - ಸಮರ್ಥನಾದ, ನೈಕ....ರಂ-ಅನೇಕ ಯಜ್ಞಗಳನ್ನು ಧ್ವಂಸ ಮಾಡಿದವನಾದ, ಸ್ವಜನಸ್ಯಚ-ತನ್ನವರಿಗೆ, ತ್ರಾತಾರಂ-ರಕ್ಷಣಕರ್ತನಾದ, ಧರ್ಮ....ರಂ - ಧರ್ಮನಿಬಂಧಗಳ ಭೇದಕನಾದ, ಆಹವೇ - ಕಾಳಗದಲ್ಲಿ, ಮಾಯಾ....ರಂ - ಮಾಯೆಯನ್ನು, ಸೃಷ್ಟಿಮಾಡುವ, ತತಸ್ತತಃ - ಅಲ್ಲಲ್ಲಿ, ದೇವಾ....ನಾಂ - ದೇವತೆಗಳ, ರಕ್ಕಸರ ಮತ್ತು ಮನುಷ್ಯರ ಕನ್ಯಕೆಯರಿಗೆ, ಆಹರ್ತಾರಂ - ಅಪಹಾರದಲ್ಲಿ ನಿಪುಣನಾದ, ಶತ್ರು....ರಂ - ಶತ್ರುಸ್ತ್ರೀಯರಿಗೆ ದುಃಖವನ್ನುಂಟುಮಾಡುವ, ಸ್ವಜನಸ್ಯ - ತನ್ನ ಜನಕ್ಕೆ, ನೇತಾರಂ - ನಾಯಕನಾದ, ಲಂಕಾದ್ವೀಪಸ್ಯ - ಲಂಕಾದ್ವೀಪಕ್ಕೆ, ಗೋಪ್ತಾರಂ-ಸಂರಕ್ಷಣಕರ್ತನಾದ, ಭೀಮಕರ್ಮಣಾಂ - ಭಯಂಕರ ಕರ್ಮಗಳಿಗೆ, ಕರ್ತಾರಂ - ಕರ್ತೃವಾದ, ಅಸ್ಮಾಕಂ - ನಮಗೆ, ಕಾಮಭೋಗಾನಾಂ - ಬೇಕಾದ ವಿಷಯಸುಖಗಳಿಗೆ, ದಾತಾರಂ - ದಾತೃವಾದ, ರಥಿನಾಂ - ಮಹಾ

ಗೊಳಿಸಿದವನು ; ಸಮಸ್ತ ಭೂತಗಳನ್ನೂ ತನ್ನ ಭಯಂಕರ ಸಿಂಹನಾದದಿಂದ ಭಯಗೊಳಿಸಿದವನು ; ಶತ್ರುಗಳ ಸಮಕ್ಷದಲ್ಲಿ ಅವರು ಬಿರುನುಡಿಗಳಾಡಿದಾಗ, ತನ್ನ ಸತ್ವಸಾಮರ್ಥ್ಯಪೂರಿತವಾದ ವಾಕ್ಯಗಳನ್ನಾಡಿದವನು ; ತನ್ನ ಗುಂಪಿನವರನ್ನೂ, ಸೇವಕರನ್ನೂ ಕಾಪಾಡಿದವನು ; ಸಹಸ್ರಾರು ದಾನವರನ್ನೂ, ಯಕ್ಷರನ್ನೂ ನಿಗ್ರಹಿಸಿದ ಮಹಾ ಶೂರನು ; ನಿವಾತಕವಚರೆಂಬ ಶೂರಾಗ್ರಣಿಗಳಾದ ಅಸುರರೊಡನೆ ಮೈತ್ರಿಯನ್ನು ಸಂಪಾದಿಸಿದವನು ; ಮೂರು ಲೋಕಗಳಿಗೂ ಪ್ರಭುವೆನಿಸಿದವನು ; ಸಹಸ್ರಾರು ಯಜ್ಞಗಳನ್ನು ಧ್ವಂಸಮಾಡಿದವನು ; ಸ್ವಜನರನ್ನು ಸಂರಕ್ಷಿಸಿದವನು ; ಧರ್ಮವ್ಯವಸ್ಥೆಯನ್ನು ಭೇದಿಸಿದವನು ; ರಣರಂಗಗಳಲ್ಲಿ ಅಪಾರವಾದ ಮಾಯೆಯನ್ನು ಸೃಜಿಸುವವನು ; ಆಯಾ ದೇಶಗಳಿಂದ ದೇವತೆಗಳ, ಅಸುರರ ಮತ್ತು ಮಾನವರ ಕನ್ನಿಕೆಯರನ್ನು ಅಪಹರಿಸಿ ತಂದವನು ; ಹಗೆಯರ ಹೆಂಗಳಿಗೆ ಅಪಾರವಾದ ದುಃಖವನ್ನೂ, ತನ್ನ ಜನರಿಗೆ ಸುಖವನ್ನೂ ಉಂಟುಮಾಡಿದವನು. ಈ ಲಂಕಾದ್ವೀಪದ ಪಾಲಕನಾದವನು ; ಮಹತ್ತರವೂ, ಭಯಂಕರವೂ ಆದ ಕಾರ್ಯಗಳನ್ನು ಮಾಡಿದವನು ; ರಥಿಕರಲ್ಲಿ ಶ್ರೇಷ್ಠನಾದವನು ; ನಮ್ಮೆಲ್ಲರಿಗೂ ಕಾಮೋಪಭೋಗಗಳನ್ನು ಕಲ್ಪಿಸಿ

ದಾತಾರಂ ರಥಿನಾಂ ವರಂ ॥ ೫೫ ॥ ಏವಂ ಪ್ರಭಾವಂ ಭರ್ತಾರಂ ದೃಷ್ಟ್ವಾ ರಾಮೇಣ ಪಾತಿತಂ । ಸ್ಥಿರಾಸ್ಮಿ ಯಾ ದೇಹಮಿಮಂ ಧಾರಯಾಮಿ ಹತಪ್ರಿಯಾ ॥ ೫೬ ॥ ಶಯನೇಷು ಮಹಾರ್ಹೇಷು ಶಯಿತ್ವಾ ರಾಕ್ಷಸೇಶ್ವರ! । ಇಹ ಕಸ್ಮಾತ್ ಪ್ರಸುಪ್ತೋಽಸಿ ಧರಣ್ಯಾಂ ರೇಣುಪಾಟಲಃ ॥ ೫೭ ॥ ಯದಾ ಮೇ ತನಯಃ ಶಸ್ತೋ ಲಕ್ಷ್ಮಣೇನೇಂದ್ರಜಿದ್ಯುಧಿ । ತದಾಸ್ಮ್ಯಭಿಹತಾ ತೀವ್ರಮದ್ಯತ್ವಸ್ಮಿನ್ನಿಪಾತಿತಾ ॥ ೫೮ ॥ ನಾಹಂ ಬಂಧುಜನೈರ್ಹೀನಾ ಹೀನಾ ನಾಥೇನ ತು ತ್ವಯಾ । ವಿಹೀನಾ ಕಾಮಭೋಗೈಶ್ಚ

ರಥಿಕರಿಗೆ, ವರಂ - ಶ್ರೇಷ್ಠನಾದ, ಏವಂಪ್ರಭಾವಂ - ಇಂಥಾ ಪ್ರಭಾವವುಳ್ಳ, ಭರ್ತಾರಂ - ಗಂಡನಾದ ರಾವಣನನ್ನು, ರಾಮೇಣ - ಶ್ರೀರಾಮನಿಂದ, ಪಾತಿತಂ - ಬೀಳಿಸಲ್ಪಟ್ಟವನನ್ನಾಗಿ, ದೃಷ್ಟ್ವಾ - ಕಂಡು, ಇಮಂದೇಹಂ - ಈ ಶರೀರವನ್ನು, ಯಾ - ಯಾವ ನಾನು, ಧಾರಯಾಮಿ - ಧರಿಸಿದ್ದೇನೆಯೋ, ಸಾ - ಅಂಥಾ ನಾನು, ಹತಪ್ರಿಯಾ - ಹೊಡೆಯಲ್ಪಟ್ಟ ಗಂಡನುಳ್ಳವಳಾಗಿ, ಸ್ಥಿರಾ - ಶಾಶ್ವತಳಾಗಿ, ಅಸ್ಮಿ - ಆಗಿದ್ದೇನೆ. ॥೫೦-೫೬॥ ರಾಕ್ಷಸೇಶ್ವರ - ರಾಕ್ಷಸಾಧಿಪತಿಯೇ, ಮಹಾರ್ಹೇಷು - ಅಮೂಲ್ಯಗಳಾದ, ಶಯನೇಷು - ಹಾಸಿಗೆಗಳಲ್ಲಿ, ಶಯಿತ್ವಾ - ಮಲಗಿದ್ದು, ಇಹ - ಈಗ, ಧರಣ್ಯಾಂ - ಭೂಮಿಯಲ್ಲಿ, ರೇಣುಪಾಟಲಃ - ಧೂಳಿಗಳಿಂದ ಕೆಂಪುಬಣ್ಣವುಳ್ಳವನಾಗಿ, ಕಸ್ಮಾತ್ - ಏತರದೆಸೆಯಿಂದ, ಪ್ರಸುಪ್ತಃ - ಮಲಗಿದವನು, ಅಸಿ - ಆದೆ. ॥ ೫೭ ॥ ಮೇ - ನನ್ನ, ತನಯಃ - ಕುವರನಾದ, ಇಂದ್ರಜಿತ್-ಇಂದ್ರಜಿತುವು, ಯದಾ-ಯಾವಾಗ, ಯುಧಿ-ಕಾಳೆಗದಲ್ಲಿ, ಲಕ್ಷ್ಮಣೇನ-ಲಕ್ಷ್ಮಣನಿಂದ, ಶಸ್ತಃ-ಸಂಹಾರ ಮಾಡಲ್ಪಟ್ಟನೋ, ತದಾ - ಆಗಲೇ, ಅಭಿಹತಾ - ಹೊಡೆಯಲ್ಪಟ್ಟವಳು, ಅಸ್ಮಿ - ಆದೆನು. ಅದ್ಯತು - ಈಗಾದರೆ, ಅಸ್ಮಿನ್ಹತೇ - ಈ ದಶಕಂಠನು ಮಡಿಯಲು, ತೀವ್ರಂ - ಬಹಳವಾಗಿ, ನಿಪಾತಿತಾ - ನಾಶಗೊಳಿಸಲ್ಪಟ್ಟನು. ॥೫೮॥ ಅಹಂ - ನಾನು, ಬಂಧುಜನೈಃ - ಬಂಧುಜನರಿಂದ, ಹೀನಾ-ಬಿಡಲ್ಪಟ್ಟವಳು, ನ - ಅಲ್ಲವು, ಕಿಂತು - ಮತ್ತೇನಂದರೆ, ನಾಥೇನ - ಸ್ವಾಮಿಯಾದ, ತ್ವಯಾ - ನಿನ್ನಿಂದ, ಹೀನಾ - ಹೀನಳಾಗಿ, ಕಾಮಭೋಗೈಶ್ಚ - ವಿಷಯಭೋಗಾದಿ ಸುಖಗಳಿಂದ, ವಿಹೀನಾ - ಹೀನಳಾಗಿ, ಶಾಶ್ವತೀಸ್ಸಮಾಃ - ಅನೇಕ ಸಂವತ್ಸರಗಳು, ಶೋಚಿಷ್ಯೇ - ದುಃಖಿಸುವೆನು. ॥ ೫೯ ॥

ದವನು ; ಇಂಥ ನನ್ನ ಒಡೆಯನಾದ ಈ ರಾವಣಾಸುರನು ರಾಮನಿಂದ ಹತನಾಗಿ ಬಿದ್ದಿರುವುದನ್ನು ಕಂಡೂ ಸ್ಥಿರಚಿತ್ತೆಯಾಗಿ ಈ ದೇಹವನ್ನು ಧರಿಸಿಕೊಂಡಿರುವೆನಲ್ಲವೆ! ಕಳೆದುಹೋದ ಪ್ರಿಯನುಳ್ಳವಳಾದರೂ ದೇಹವನ್ನು ಧರಿಸಿಕೊಂಡಿರುವ ನಾನು ನಿಜವಾಗಿಯೂ ಕಠೋರ ಹೃದಯಗಳೇ ಸರಿ! ॥ ೪೯–೫೬ ॥ ಓ ನಾಥಾ! ರಾಕ್ಷಸೇಶ್ವರಾ!! ಅಕ್ಕಟ, ಉತ್ತಮೋತ್ತಮವಾದ ಶಯನಗಳುಳ್ಳ ಹಂಸತೂಲಿಕಾತಲ್ಪಗಳಲ್ಲಿ ಪವಳಿಸಿದ ನೀನು ಇದೀಗ ದೂಳಿನಿಂದ ತುಂಬಿ ಕೆಂಪಾಗಿರುವ ಈ ಭೂಮಿಯಲ್ಲಿ ಏಕಾಕಿಯಾಗಿ ಮಲಗಿರುವೆಯೇಕೆ! ನನ್ನ ಮಗನಾದ ಇಂದ್ರಜಿತುವು ರಾಮಾನುಜನಾದ ಲಕ್ಷ್ಮಣಸ್ವಾಮಿಯಿಂದ ಯಾವಾಗ ಮಡಿದು ಬಿದ್ದನೋ ಆಗಲೇ ನಾನು ತೀಕ್ಷ್ಣವಾದ ಪೆಟ್ಟಿಗೆ ತುತ್ತಾದವಳಾದೆನು. ಈಗ ನೀನು ರಾಮನಿಂದ ಮಡಿದೊಡನೆಯೇ ನಾನು ಪೂರ್ತಿಯಾಗಿ ನಾಶಗೊಳಿಸಲ್ಪಟ್ಟವಳಾದೆನು. ಓ ನಾಥ! ನಾನು ಬಂಧುವಿಹೀನೆಯಾದುದರಿಂದ ಪೇಚಾಡಿ ಸಂತಪಿಸುವುದಿಲ್ಲ. ನೀನೊಬ್ಬನು ಜೀವದಿಂದಿದ್ದರೆ ನಾನು ಬಂಧುವಿನಾಶದಿಂದ ಎಷ್ಟುಮಾತ್ರವೂ ವ್ಯಸನಪಡುತ್ತಿರಲಿಲ್ಲವು. ಈಗ ನೀನು ಮೃತಿ ಹೊಂದಿದುದರಿಂದ ಕಾಮೋಪಭೋಗಗಳೆಲ್ಲವೂ ಮಣ್ಣುಗೂಡಿಹೋಗಿ ನಾನು ಯಾವ

ಶೋಚಿಷ್ಯೇ ಶಾಶ್ವತೀಸ್ಸಮಾಃ ||೫೯|| ಪ್ರಪನ್ನೋ ದೀರ್ಘಮಧ್ವಾನಂ ರಾಜನ್ನದ್ಯಾಸಿ ದುರ್ಗಮಮ್ | ನಯ ಮಾಮಪಿ ದುಃಖಾರ್ತಾಂ ನಜೀವಿಷ್ಯೇ ತ್ವಯಾ ವಿನಾ || ೬೦ || ಕಸ್ಮಾತ್ತ್ವಂ ಮಾಂ ವಿಹಾಯೇಹ ಕೃಪಣಾಂ ಗಂತುಮಿಚ್ಛಸಿ | ದೀನಾಂ ವಿಲಪಿತೈರ್ಮಂದಾಂ ಕಿಂ ವಾ ಮಾಂ ನಾಭಿಭಾಷಸೇ || ೬೧ || ದೃಷ್ಟ್ವಾ ನಖಲ್ವಸಿ ಕ್ರುದ್ಧೋ ಮಾಮಿಹಾನವಕುಂಠಿತಾಂ | ನಿರ್ಗತಾಂ ನಗರದ್ವಾರಾತ್ಪದ್ಭ್ಯಾಮೇವಾಗತಾಂ ಪ್ರಭೋ! ||೬೨|| ಪಶ್ಯೇಷ್ಟದಾರ! ದಾರಾಂಸ್ತೇ ಭ್ರಷ್ಟಲಜ್ಜಾವಕುಂಠಿತಾನ್ | ಬಹಿರ್ನಿಷ್ಪತಿತಾನ್ ಸರ್ವಾನ್ ಕಥಂ ದೃಷ್ಟ್ವಾ ನಕುಪ್ಯಸಿ ||೬೩|| ಅಯಂ ಕ್ರೀಡಾಸಹಾಯಸ್ತೇ ನಾಥೋ

ದೀರ್ಘಂ - ದೂರವಾದ, ದುರ್ಗಮಂ - ಹೊಂದಲಸಾಧ್ಯವಾದ, ಅಧ್ವಾನಂ - ಮಾರ್ಗವನ್ನು, ಅದ್ಯ-ಈಗ, ಪ್ರಪನ್ನಃ - ಹೊಂದಿದವನು, ಅಸಿ - ಆದೆ, ತ್ವಯಾವಿನಾ - ನಿನ್ನನ್ನು ಬಿಟ್ಟು, ಅಹಂ - ನಾನು, ನಜೀವಿಷ್ಯೇ - ಬದುಕಲಾರೆ, ದುಃಖಾರ್ತಾಂ - ದುಃಖಿತಳಾದ, ಮಾಮಪಿ - ನನ್ನನ್ನೂ, ನಯ - ಕರೆದುಕೋ. ||೬೦|| ಇಹ - ಈಗ, ತ್ವಂ - ನೀನು, ಕೃಪಣಾಂ - ದೀನಳಾದ, ಮಾಂ - ನನ್ನನ್ನು, ವಿಹಾಯ - ಬಿಟ್ಟು, ಕಸ್ಮಾತ್ - ಏತಕ್ಕಾಗಿ, ಗಂತುಂ - ಹೋಗುವದಕ್ಕೆ, ಇಚ್ಛಸಿ - ಅಪೇಕ್ಷಿಸುವೆ, ವಿಲಪಿತೈಃ - ಅಳುವಿನಿಂದ, ದೀನಾಂ - ಕುಗ್ಗಿರುವ, ಮಂದಾಂ - ಮೂಢಳಾದ, ಮಾಂ - ನನ್ನನ್ನು ಕುರಿತು, ಕಿಂನಾಭಿಭಾಷಸೇ - ಏತಕ್ಕೆ ಮಾತಾಡದಿರುವೆ. ||೬೧|| ಇಹ - ಈ ನಗರದ, ಪ್ರಭೋ - ಸ್ವಾಮಿಯೇ, ಇಹ - ಈಗ, ಅನವಕುಂಠಿತಾಂ - ಮುಖದ ತೆರೆಯಿಲ್ಲದೆ, ಇಹ - ಈ ರಣರಂಗದಲ್ಲಿ, ನಗರದ್ವಾರಾತ್-ಊರುಬಾಗಲಿನಿಂದ, ನಿರ್ಗತಾಂ-ಹೊರಟುಬಂದು, ಪದ್ಭ್ಯಾಂ-ಕಾಲುಗಳಿಂದಲೇ, ಆಗತಾಂ - ನಡೆದು ಬಂದಿರುವ, ಮಾಂ - ನನ್ನನ್ನು, ದೃಷ್ಟ್ವಾ - ಕಂಡು, ನಕ್ರುದ್ಧಃ - ಕುಪಿತನಾಗದೇ ಇರುವನು, ಅಸಿಖಲು - ಆಗಿರುವೆಯಲ್ಲವೆ. ||೬೨|| ಇಷ್ಟದಾರ - ಪ್ರಿಯವಾದ ಹೆಂಡತಿಯರುಳ್ಳವನೇ, ಭ್ರಷ್ಟ....ತಾನ್-ಹೋಗಲಾಡಿಸಲ್ಪಟ್ಟ ನಾಚಿಕೆಯೂ, ಮೇಲ್ಹೊದಿಕೆಗಳೂ ಉಳ್ಳ, ಬಹಿಃ-ಹೊರಗೆ, ನಿಷ್ಪತಿತಾನ್ - ಬಂದಿರುವ, ಸರ್ವಾನ್ - ಸಮಸ್ಥರಾದ, ತೇ - ನಿನ್ನ, ದಾರಾನ್ - ಹೆಂಡತಿಯರನ್ನು, ಪಶ್ಯ - ನೋಡು, ದೃಷ್ಟ್ವಾ - ನೋಡಿ, ಕಥಂ - ಹೇಗೆ, ನಕುಪ್ಯಸಿ - ಕೋಪಿಸದಿರುವೆ.||೬೩|| ಅಯಂ-ಈ ಜನವು, ತೇ-ನಿನಗೆ, ಕ್ರೀಡಾಸಹಾಯಃ-ವಿಹಾರಕ್ಕೆ ಸಹಾಯಕರಾದವರು, ಅನಾಥಃ -

---

ಜ್ಜೀವವೂ ಸಂತಪಿಸುವೆನು. ಓ ನನ್ನ ದೊರೆಯೇ! ಈಗ ನೀನು ಬಹು ದುರ್ಗಮವಾದ ಪ್ರದೇಶಕ್ಕೆ ಬಹುದೂರ ಪ್ರಯಾಣ ಮಾಡಿರುವೆ. ನಾನಾದರೋ ನಿನ್ನನ್ನು ಬಿಟ್ಟು ಬದುಕಲಾರೆನು. ಆದುದರಿಂದ ನನ್ನನ್ನೂ ಕರೆದುಕೊಂಡು ಹೋಗು. ದೀನೆಯಾಗಿ, ಅತ್ತತ್ತು ಕೃಶಳಾಗಿರುವ ನನ್ನನ್ನು ತೊರೆದು ಹೊರಡುವೆಯಾ? ಹೇಗೆ ಹೊರಡುವೆ? ಸ್ವಾಮಿ! ಮಾತನಾಡದಿರುವೆಯೇಕೆ? ಪ್ರಿಯನೇ! ನಾನು ಮೊಗದೆರೆಯನ್ನು ತೆಗೆದುಹಾಕಿ, ಅಂತಃಪುರದಿಂದ ಕಾಲ್ನಡಗೆಯಿಂದಲೇ ಹೊರಬಂದುದು ಮಾತ್ರವಲ್ಲದೆ, ಈ ರಣಭೂಮಿಗೂ ಬಂದಿರುವುದು ನಿನಗೆ ಕೋಪವುಂಟುಮಾಡಿದೆಯೇ! ಅದಕ್ಕಾಗಿಯೇ ನನ್ನೊಡನೆ ಸಂಭಾಷಿಸದಿರುವೆಯಾ!! ಎಲೈ ಪ್ರಭುವೇ! ಇಷ್ಟರಾದ ಪತ್ನಿಯರುಳ್ಳವನೇ!! ಇತ್ತನೋಡು; ನಿನ್ನ ಪತ್ನಿಯರೆಲ್ಲರೂ ಮೊಗದೆರೆಗಳಿಲ್ಲವನ್ನೂ ತೆಗೆದುಹಾಕಿ, ನಾಚಿಕೆಯನ್ನೇ ತೊರೆದು ಅಂತಃಪುರದಿಂದ ಹೊರಬಂದಿರುವರು. ಇವರನ್ನು ನೋಡಿ ಕೋಪಗೊಳ್ಳದಿರುವೆಯೇಕೆ? ನಾಥ! ಈ ಸ್ತ್ರೀಯರೆಲ್ಲರೂ ನಿನ್ನ ವಿಹಾರಕ್ಕೆ ಸಹಾಯಕರಾದವರಲ್ಲವೆ? ಇವರೆಲ್ಲರೂ ನೀನು ಹೀಗೆ ನೆಲದಲ್ಲಿ

ಲಾಲಪ್ಯತೇ ಜನಃ । ನಚೈವ ಮಾಶ್ವಾಸಯಸೇ ಕಿಂವಾ ನಬಹುಮನ್ಯಸೇ ॥ ೬೪ ॥ ಯಾಸ್ತ್ವಯಾ ವಿಧವಾ ರಾಜನ್! ಕೃತಾ ನೈಕಾಃ ಕುಲಸ್ತ್ರಿಯಃ । ಪತಿವ್ರತಾ ಧರ್ಮಪರಾ ಗುರುಶುಶ್ರೂಷಣೇ ರತಾಃ ॥ ೬೫ ॥ ತಾಭಿಃ ಶೋಕಾಭಿತಪ್ತಾಭಿಃ ಶಪ್ತಃ ಪರವಶಂಗತಃ । ತ್ವಯಾ ವಿಪ್ರಕೃತಾಭಿರ್ಯತ್ತದಾ ಶಪ್ತಂ ತದಾಗತಂ ॥ ೬೬ ॥ ಪ್ರವಾದಸ್ಸತ್ಯಏವಾಯಂ ತ್ವಾಂ ಪ್ರತಿ ಪ್ರಾಯಶೋ ನೃಪ! । ಪತಿವ್ರತಾನಾಂ ನಾಕಸ್ಮಾತ್ಪತಂತ್ಯಶ್ರೂಣಿ ಭೂತಲೇ ॥೬೭॥ ಕಥಂಚ ನಾಮ ತೇ ರಾಜನ್! ಲೋಕಾನಾಕ್ರಮ್ಯ ತೇಜಸಾ । ನಾರೀಚೌರ್ಯಮಿದಂ ಕ್ಷುದ್ರಂ ಕೃತಂ ಶೌಂಡೀರ್ಯಮಾನಿನಾ? ॥೬೮॥

ನಾಥನಿಲ್ಲದ, ಜನಃ - ಈ ಜನವು, ಲಾಲಪ್ಯತೇ - ವಿಲಪಿಸುತ್ತಲಿದೆ, ಏನಂ - ಈ ಜನವನ್ನು, ಕಿಂವಾ - ಏತಕ್ಕೆ, ನಾಶ್ವಾಸಯಸೇ - ಸಮಾಧಾನಗೊಳಿಸದಿರುವೆ, ಕಿಂವಾ - ಏತಕ್ಕಾದರೂ, ನಬಹುಮನ್ಯಸೇ - ಬಹುಮಾನ ಮಾಡಲಾರೆ. ॥ ೬೪ ॥ ರಾಜನ್ - ಅರಸೇ, ನೈಕಾಃ - ಅನೇಕರಾದ, ಯಾಃ - ಯಾವ, ಕುಲಸ್ತ್ರಿಯಃ - ಪತಿವ್ರತಾ ಸ್ತ್ರೀಯರುಗಳು, ಪತಿ....ರಾಃ - ಪಾತಿವ್ರತ್ಯ ಧರ್ಮದಲ್ಲಿಯೇ ಆಸಕ್ತರಾಗಿ, ಗುರು....ಣೇ - ಗುರುಸೇವೆಯಲ್ಲಿ, ರತಾಃ - ಆಸಕ್ತರಾಗಿ, ತ್ವಯಾ - ನಿನ್ನಿಂದ, ವಿಧವಾಃ - ಭರ್ತೃಹೀನರಾಗಿ, ಕೃತಾಃ - ಮಾಡಲ್ಪಟ್ಟರೋ, ಶೋಕಾ....ಭಿಃ - ಶೋಕದಿಂದ ದುಃಖಿತರಾದ, ತಾಭಿಃ - ಆ ಪತಿವ್ರತಾ ಸ್ತ್ರೀಯರುಗಳಿಂದ, ಶಪ್ತಃ - ಶಪಿಸಲ್ಪಟ್ಟು, ಪರವಶಂ - ಶತ್ರುವಿನ ಅಧೀನವನ್ನು, ಗತಃ - ಹೊಂದಿದೆ. ॥ ೬೫ ॥ ತ್ವಯಾ - ನಿನ್ನಿಂದ, ವಿಪ್ರಕೃತಾಭಿಃ - ನಿರಾಕರಿಸಲ್ಪಟ್ಟ ಪತಿವ್ರತೆಗಳಿಂದ, ಯತ್ - ಯಾವದು, ತದಾ - ಆ ಕಾಲದಲ್ಲಿ, ಶಪ್ತಂ - ಶಪಿಸಲ್ಪಟ್ಟಿತೋ, ತತ್ - ಅದು, ಆಗತಂ - ಬಂದಿತು. ॥೬೬॥ ನೃಪ - ಅರಸೇ, ಭೂತಲೇ - ನೆಲದಲ್ಲಿ, ಪತಿವ್ರತಾನಾಂ - ಪತಿವ್ರತಾ ಸ್ತ್ರೀಯರುಗಳ, ಅಶ್ರೂಣಿ - ಕಂಬನಿಗಳು, ಅಕಸ್ಮಾತ್ - ನಿಷ್ಕಾರಣವಾಗಿ, ನಪತಂತಿ - ಬೀಳುವದಿಲ್ಲ, ಇತಿ - ಇಂತೆಂದು, ಅಯಂಪ್ರವಾದಃ - ಈ ಪ್ರವಾದವು, ತ್ವಾಂಪ್ರತಿ - ನಿನಗೋಸುಗ, ಸತ್ಯಏವ - ಸಫಲವಾಗಿಯೇ, ಅಭೂತ್ - ಆಯಿತು. ॥ ೬೭ ॥ ರಾಜನ್ - ಅರಸೇ, ತೇಜಸಾ - ಪರಾಕ್ರಮದಿಂದ, ಲೋಕಾನ್ - ಮೂರು ಲೋಕಗಳನ್ನೂ, ಆಕ್ರಮ್ಯ - ಆಕ್ರಮಿಸಿ, ಶೌಂಡೀರಮಾನಿನಾ - ನಾನೇ ಶೂರನೆಂದು ಭಾವಿಸಿ ಬೀಗಿದ, ತೇ - ನಿನ್ನಿಂದ, ಇದಂ - ಈ, ಕ್ಷುದ್ರಂ - ನೀಚವಾದ,

---

ಪವಳಿಸಿರುವುದನ್ನು ಕಂಡು ಹಂಬಲಿಸುತ್ತಿರುವರು ; ಗೋಳಾಡುತ್ತಿರುವರು. ನೀನಿವರನ್ನೇಕೆ ಆದರಿಸದಿರುವೆ? ಇವರನ್ನು ಗೌರವಿಸಿ ಮಾತನಾಡಿಸುವುದಿಲ್ಲವೆ? ದೊರೆಯೇ! ಪೂರ್ವದಲ್ಲಿ ನೀನು ಪತಿವ್ರತೆಯರೂ, ಪತಿಸೇವೆಗೈವುದರಲ್ಲಿ ಕೇವಲ ಆಸಕ್ತರೂ, ಧರ್ಮಜ್ಞೆಯರೂ ಆದ ಅನೇಕ ಕುಲಾಂಗನೆಯರನ್ನು ವಿಧವೆಯರನ್ನಾಗಿಸಿದೆ. ಅವರೆಲ್ಲರೂ ಶತ್ರುಗಳ ಕೈಗೆ ಸಿಕ್ಕಿ ದುಃಖದಿಂದ ಬೆಂದುಹೋದರು. ಹೀಗೆ ನಿನ್ನಿಂದ ತಿರಸ್ಕೃತೆಯರಾದ ಆ ಕುಲಾಂಗನೆಯರೆಲ್ಲರೂ ಆಗಲೇ ನಿನ್ನನ್ನು ಶಪಿಸಿದರು. ಅವರ ಆ ಶಾಪವು ಇದೀಗ ಫಲಿಸಿತು.॥೫೯—೬೬॥ ಮಹಾರಾಜ! ಲೋಕವೆಲ್ಲ ಆಡಿಕೊಳ್ಳುತ್ತಿರುವ, "ಪತಿವ್ರತಾಸ್ತ್ರೀಯರ ಕಣ್ಣೀರು ನಿಷ್ಪ್ರಯೋಜಕವಾಗಿ ನೆಲಕ್ಕೆ ಬೀಳುವುದಿಲ್ಲ. (ಮಹದನರ್ಥವನ್ನು ಮಾಡಿಯೇ ಮುಗಿಯುತ್ತದೆ)" ಎಂಬ ಮಾತು ನಿನ್ನ ವಿಷಯದಲ್ಲಿ ನಿಜವಾಗಿ ಹೋಯಿತು. ದೊರೆಯೇ! ಸ್ವಪರಾಕ್ರಮದಿಂದಲೇ ಲೋಕಲೋಕಗಳೆಲ್ಲವನ್ನೂ ಗೆದ್ದು, ಪರಾಕ್ರಮವನ್ನೇ ಅಮಿತವನ್ನಾಗಿ ಎಣಿಸಿರುವ ನೀನು ಹೇಯವಾದ ಈ ಸ್ತ್ರೀಚೌರ್ಯವನ್ನು ಹೇಗೆ ಮಾಡಿದೆ! ಮಹಾರಾಜ! ನೀನು

ಅಪನೀಯಾಶ್ರಮಾದ್ರಾಮಂ ಯನ್ಮೃಗಚ್ಛದ್ಮನಾ ತ್ವಯಾ । ಆನೀತಾ ರಾಮಪತ್ನೀ ಸಾ ತತ್ತೇ ಕಾತರ್ಯಲಕ್ಷಣಂ ॥ ೧೯ ॥ ಕಾತರ್ಯಂ ಚ ನ ತೇ ಯುದ್ಧೇ ಕದಾಚಿತ್ಸಂಸ್ಮರಾಮ್ಯಹಂ । ತತ್ತು ಭಾಗ್ಯವಿಪರ್ಯಾಸಾನ್ನೂನಂ ತೇ ಪಕ್ವಲಕ್ಷಣಂ ॥ ೨೦ ॥ ಅತೀತಾನಾಗತಾರ್ಥಜ್ಞೋ ವರ್ತಮಾನವಿಚಕ್ಷಣಃ । ಮೈಥಿಲೀಮಾಹೃತಾಂ ದೃಷ್ಟ್ವಾ ಧ್ಯಾತ್ವಾ ನಿಶ್ವಸ್ಯ ಚಾಯತಂ ॥ ೨೧ ॥ ಸತ್ಯವಾಕ್ಸ ಮಹಾಭಾಗೋ ದೇವರೋ ಮೇ ಯದಬ್ರವೀತ್ । ಸೋಽಯಂ ರಾಕ್ಷಸಮುಖ್ಯಾನಾಂ ವಿನಾಶಃ ಪರ್ಯುಪಸ್ಥಿತಃ । ಕಾಮಕ್ರೋಧಸಮುತ್ಥೇನ ವ್ಯಸನೇನ ಪ್ರಸಂಗಿನಾ ॥ ೨೨ ॥ ನಿರ್ವೃತ್ತಸ್ತ್ವತ್ಕೃತೇಽನರ್ಥ

ನಾರೀಚೌರ್ಯಂ - ಸ್ತ್ರೀಚೌರ್ಯವು ಕಥಂ - ಹೇಗೆ, ಕೃತಂನಾಮ - ಮಾಡಲ್ಪಟ್ಟಿತೋ. ॥ ೧೮ ॥ ತ್ವಯಾ - ನಿನ್ನಿಂದ, ಮೃಗಛದ್ಮನಾ - ಮಾಯಾಮೃಗರೂಪನಾದ ಮಾರೀಚನ ಮೋಸದಿಂದ, ಆಶ್ರಮಾತ್ - ಆಶ್ರಮದ ದೆಸೆಯಿಂದ, ರಾಮಂ - ಶ್ರೀರಾಮನನ್ನು, ಅಪನೀಯ - ದೂರಮಾಡಿ, ಸಾರಾಮಪತ್ನೀ ಆತನ ಹೆಂಡತಿಯಾದ ಸೀತಾದೇವಿಯು, ಆನೀತಾ-ತರಲ್ಪಟ್ಟಳು, ಇತಿಯತ್-ಎಂಬುದುದಾವುದೋ, ತತ್-ಅದು, ತೇ-ನಿನಗೆ, ಕಾರ್ಯಲಕ್ಷಣಂ-ಚೌರ್ಯಲಕ್ಷಣವಲ್ಲವೇ, ಅಹಂ-ನಾನು, ತೇ-ನಿನಗೆ, ಯುದ್ಧೇ - ಕಾಳೆಗದಲ್ಲಿ, ತದಾಚಿತ್ - ಎಂದಿಗೂ, ಕಾತರ್ಯಂ - ಬಹು ಚಾಂಚಲ್ಯವನ್ನು, ನಸ್ಮರಾಮಿ-ಸ್ಮರಿಸಲಾರೆ, ತೇ - ನಿನಗೆ, ಭಾಗ್ಯ....ತ್ - ಭಾಗ್ಯ ವ್ಯತ್ಯಾಸದಿಂದ, ತತ್ - ಆ ಕಾರ್ಯವು, ಪಕ್ವಲಕ್ಷಣಂ - ವಿನಾಶಕ್ಕೆ ಗುರುತಾಯಿತು. ॥೧೯ ೨೦॥ ಅತೀ....ಜ್ಞಃ - ಭೂತ ಭವಿಷ್ಯದರ್ಥಗಳನ್ನು ತಿಳಿದಿರುವ, ವರ್ತ....ಣಃ - ವರ್ತಮಾನ ಕಾರ್ಯಗಳಲ್ಲಿ ಬುದ್ಧಿವಂತನಾದ, ಸತ್ಯವಾಕ್ - ಸತ್ಯವಾದ ವಚನವುಳ್ಳ, ಮಹಾಭಾಗಃ - ಮಹಾ ಪುಣ್ಯಶಾಲಿಯಾದ, ಮೇ - ನನ್ನ, ದೇವರಃ - ಮೈದುನನು, ಮೈಥಿಲೀಂ - ಸೀತಾದೇವಿಯನ್ನು, ಆಹೃತಾಂ - ತರಲ್ಪಟ್ಟವಳನ್ನಾಗಿ, ದೃಷ್ಟ್ವಾ - ಕಂಡು, ಧ್ಯಾತ್ವಾ-ಯೋಚಿಸಿ, ಆಯತಂ - ಉದ್ದವಾಗಿ, ನಿಶ್ವಸ್ಯ - ನಿಟ್ಟುಸಿರುಬಿಟ್ಟು, ಯತ್ - ಯಾವ ಮಾತನ್ನು, ಅಬ್ರವೀತ್ - ನುಡಿದನೋ, ಸೋಽಯಂ - ಆ ಮಾತಿನ ಅರ್ಥರೂಪವಾದ, ರಾಕ್ಷ....ನಾಂ - ರಾಕ್ಷಸಶ್ರೇಷ್ಠರ, ವಿನಾಶಃ - ನಾಶವು, ಕಾಮೋ....ನ - ಕಾಮದಿಂದಲೂ, ಕ್ರೋಧದಿಂದಲೂ ಹುಟ್ಟಿರುವ, ಪ್ರಸಂಗಿನಾ - ಪ್ರಸಕ್ತವಾದ, ವ್ಯಸನೇನ - ವ್ಯಸನದಿಂದ, ಪರ್ಯವಸಿತಃ - ಪ್ರಾಪ್ತವಾಯಿತು, ತ್ವತ್ಕೃತೇ - ನಿನಗೋಸ್ಕರ, ಸೋಽಯಂ - ಆ ಈ, ಮಹಾನ್ - ದೊಡ್ಡದಾದ, ಮೂಲಹರಃ - ಬುಡಕ್ಕೆ

ದಂಡಕಾರಣ್ಯದಲ್ಲಿ ಶ್ರೀರಾಮನನ್ನು ಮೃಗಮಾಯೆಯ ಮೂಲಕ ಆಶ್ರಮದಿಂದ ದೂರಮಾಡಿ ಆತನ ಪ್ರಿಯಪತ್ನಿಯಾದ ಸೀತಾದೇವಿಯನ್ನು ಕರೆದುತಂದೆ. ಅದೇ ನಿನ್ನ ಕಳವಳಕ್ಕೆ ಕಾರಣವಾಯಿತು. ನೀನು ಈವರೆಗೆ ಎಂದಿಗೂ ಯುದ್ಧ ವಿಷಯದಲ್ಲಿ ಕಳವಳಗೊಂಡುದಿಲ್ಲವು. ಆದರೆ ಈ ಹೇಯ ಕಾರ್ಯವನ್ನು ಮಾಡಿದೆಯಾಗಿ ಕಳವಳಿಸಿದೆ. ಭಾಗ್ಯವಿಪರ್ಯಾಸದಿಂದ ನಿನ್ನಲ್ಲಿ ಹುಟ್ಟಿದ ಯುದ್ಧ ಕಳವಳವು ನಿನ್ನ ಮೃತ್ಯುವಿನ ಲಕ್ಷಣವಾಗಿ ಪರಿಣಮಿಸಿತು. ಒದಗಿರುವ, ಒದಗಿಬರುವ, ವರ್ತಮಾನಕಾಲದ ವಿಷಯಗಳೆಲ್ಲವನ್ನೂ, ತಿಳಿದಿರುವ ನನ್ನ ಮೈದುನನಾದ ವಿಭೀಷಣನು, ನೀನು ಶ್ರೀರಾಮಪತ್ನಿಯಾದ ಸೀತೆಯನ್ನು ಕದ್ದು ತಂದುದನ್ನು ಕುರಿತು ಕೇವಲ ಪಶ್ಚಾತ್ತಾಪಪಟ್ಟು ನಿಟ್ಟುಸಿರಿಟ್ಟು ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಯೋಚಿಸಿ ನಿನಗೆ ಎಷ್ಟೋ ಹಿತವಾದವನ್ನು ಹೇಳಿದನು. ಆತನು ಮುನ್ನುಡಿದಿದ್ದ ರಾಕ್ಷಸವಿನಾಶವು ಈಗ ಬಂದೊದಗಿತು. ಅದು ಕಾಮಕ್ರೋಧಗಳೊಡಗೂಡಿದ ಸೀತಾಪಹರಣ

ಸ್ತ್ವೋಽಯಂ ಮೂಲಹರೋ ಮಹಾನ್ । ತ್ವಯಾ ಕೃತಮಿದಂ ಸರ್ವಮನಾಥಂ ರಕ್ಷಸಾಂ ಕುಲಂ ॥ ೭೩ ॥ ನಹಿ ತ್ವಂ ಶೋಚಿತವ್ಯೋ ಮೇ ಪ್ರಖ್ಯಾತಬಲಪೌರುಷಃ । ಸ್ತ್ರೀಸ್ವಭಾವಾತ್ತು ಮೇ ಬುದ್ಧಿಃ ಕಾರುಣ್ಯೇ ಪರಿವರ್ತತೇ ॥ ೭೪ ॥ ಸುಕೃತಂ ದುಷ್ಕೃತಂಚ ತ್ವಂ ಗೃಹೀತ್ವಾ ಸ್ವಾಂ ಗತಿಂ ಗತಃ । ಆತ್ಮಾನಮನುಶೋಚಾಮಿ ತ್ವದ್ವಿಯೋಗೇನ ದುಃಖಿತಾ ॥ ೭೫ ॥ ಸುಹೃದಾಂ ಹಿತಕಾಮಾನಾಂ ನಶ್ರುತಂ ವಚನಂ ತ್ವಯಾ । ಭ್ರಾತೄಣಾಂ ಚಾಪಿ ಕಾರ್ತ್ಸ್ನ್ಯೇನ ಹಿತಮುಕ್ತಂ ತ್ವಯಾಽನಘ! ॥೭೬॥ ಹೇತ್ವರ್ಥಯುಕ್ತಂ ವಿಧಿವತ್ ಶ್ರೇಯಸ್ಕರಮದಾರುಣಂ । ವಿಭೀಷಣೇನಾಭಿಹಿತಂ ನಕೃತಂ

ವಿನಾಶಕವಾದ, ಅನರ್ಥಃ - ಅನರ್ಥವು, ನಿರ್ವೃತ್ತಃ - ನೆರವೇರಿಸಲ್ಪಟ್ಟಿತು, ತ್ವಯಾ - ನಿನ್ನಿಂದ, ಇದಂ - ಈ, ಸರ್ವಂ - ಸಮಸ್ತವಾದ, ರಕ್ಷಸಾಂಕುಲಂ - ರಕ್ಕಸರ ವಂಶವು, ಅನಾಥಂ - ನಾಥನಿಲ್ಲದಂತೆ, ಕೃತಂ - ಮಾಡಲ್ಪಟ್ಟಿತು. ॥ ೭೧-೭೩ ॥ ಪ್ರಖ್ಯಾ....ಷಃ - ಪ್ರಸಿದ್ಧವಾದ ದೇಹಸಾಮರ್ಥ್ಯವೂ ಪರಾಕ್ರಮವೂ ಉಳ್ಳ, ತ್ವಂ - ನೀನು, ಮೇ - ನನ್ನಿಂದ, ನಶೋಚಿತವ್ಯಃ - ಶೋಕಿಸತಕ್ಕವನು, ನ - ಅಲ್ಲವು, ಕಿಂತು - ಆದರೆ, ಸ್ತ್ರೀಸ್ವಭಾವಾತ್ - ಹೆಂಗುಸಿನ ಚಾಪಲ್ಯದಿಂದ, ಮೇ - ನನ್ನ, ಬುದ್ಧಿಃ - ಬುದ್ಧಿಯು, ಕಾರುಣ್ಯೇ - ದೈನ್ಯದಲ್ಲಿ, ಪರಿವರ್ತತೇ - ನಿಂತಿದೆ. ॥ ೭೪ ॥ ತ್ವಂ - ನೀನು, ಸುಕೃತಂ - ಪುಣ್ಯವನ್ನೂ, ದುಷ್ಕೃತಂ - ಪಾಪವನ್ನೂ, ಗೃಹೀತ್ವಾ - ತೆಗೆದುಕೊಂಡು, ಸ್ವಾಂ - ಸ್ವಕೀಯವಾದ, ಗತಿಂ - ಲೋಕಾಂತರ ಗಮನವನ್ನು, ಗತಃ - ಹೊಂದಿದೆ, ತದ್ವಿಯೋಗೇನ- ನಿನ್ನ ವಿರಹದಿಂದ, ದುಃಖಿತಾ - ದುಃಖಿತಳಾಗಿ, ಆತ್ಮಾನಂ - ನನ್ನನ್ನು ಕುರಿತು, ಅನುಶೋಚಾಮಿ- ವ್ಯಸನಗೊಂಡಿದ್ದೇನೆ. ॥ ೭೫ ॥ ಅನಘ - ನಿರ್ದೋಷಿಯೇ, ಹಿತಕಾಮಾನಾಂ - ನಿನಗೆ ಶ್ರೇಯಸ್ಸನ್ನಪೇಕ್ಷಿಸುತ್ತಿರುವ, ಸುಹೃದಾಂ - ಸ್ನೇಹಿತರ, ವಚನಂ - ಮಾತು, ತ್ವಯಾ - ನಿನ್ನಿಂದ, ನಶ್ರುತಂ - ಕೇಳಲ್ಪಡಲಿಲ್ಲ, ಕಾರ್ತ್ಸ್ನ್ಯೇನ - ಸಂಪೂರ್ಣವಾಗಿ, ಹಿತಂ - ಹಿತಕರವಾದ, ಭ್ರಾತೄಣಾಂ - ತಮ್ಮಂದಿರಿಂದ, ಉಕ್ತಂ - ಹೇಳಿದ ಮಾತು, ತ್ವಯಾ - ನಿನ್ನಿಂದ, ನಶ್ರುತಂ - ಕೇಳಲ್ಪಡಲಿಲ್ಲ. ॥ ೭೬ ॥ ಹೇತ್ವರ್ಥಯುಕ್ತಂ - ಹೇತುಪ್ರಯೋಜನಗಳೆಂಬೆರಡರಿಂದಲೂ ಕೂಡಿರುವ, ವಿಧಿವತ್ - ಶಾಸ್ತ್ರೋಕ್ತವಾದ, ಶ್ರೇಯಸ್ಕರಂ - ಮುಂದಣ ಶ್ರೇಯಸ್ಸಿಗೆ ಕಾರಣವಾದ, ಅದಾರುಣಂ - ಸಾಂತ್ವ

ಪ್ರಸಂಗದಿಂದಲೇ ಒದಗಿತು. ಅಕ್ಕಟಾ! ಮೂಲಹರವಾದ ಈ ದೊಡ್ಡ ಅನರ್ಥವು ನಿನ್ನಿಂದಲೇ ಉಂಟಾಯಿತು!! ಒಟ್ಟು ರಾಕ್ಷಸಕುಲವೇ ನಿನ್ನಿಂದ ದಿಕ್ಕಿಲ್ಲದಂತೆ ಮಾಡಲ್ಪಟ್ಟಿತು. ಮಹಾರಾಜ! ನಿನ್ನನ್ನು ಕುರಿತು ನಾನೇಕೆ ಅಳಬೇಕು. ನೀನೇನು ಸಾಮಾನ್ಯನೇ! ಪ್ರಖ್ಯಾತವಾದ ಬಲಪರಾಕ್ರಮವುಳ್ಳವನು. ನಿನ್ನನ್ನು ಕುರಿತು ಅಳುವುದು ಯೋಗ್ಯವಲ್ಲವು. ಆದರೂ ನಾನು ಕೇವಲ ಸ್ತ್ರೀಯಾದ್ದರಿಂದ, ಆ ಸ್ತ್ರೀಸ್ವಭಾವದಿಂದ ನನ್ನ ಮನಸ್ಸು ದಯೆಯಿಂದ ಮಾರ್ಪಡುತ್ತಿದೆ. ಪುಣ್ಯವನ್ನೋ, ಪಾಪವನ್ನೋ ತೆಗೆದುಕೊಂಡು ನಿನ್ನ ಗತಿಯನ್ನು ನೀನು ಹೊಂದಿದೆ. ನಿನಗಾಗಿ ನಾನೇಕೆ ದುಃಖಿಸಬೇಕು. ಆದರೂ ನಿನ್ನ ವಿಯೋಗಕ್ಕಾಗಿ ನಾನು ನನಗೋಸ್ಕರವಾಗಿಯೇ ದುಃಖಿಸುತ್ತೇನೆ. ॥೭೬-೭೫॥ ಮಹಾರಾಜ! ನಿನಗೆ ಮಿತ್ರರಾದವರೆಲ್ಲರೂ ಹಿತಬೋಧೆ ಮಾಡಿದರು; ತಮ್ಮಂದಿರೆಲ್ಲರೂ ಹಿತಬೋಧೆ ಮಾಡಿದರು. ನೀನು ಯಾವುದನ್ನೂ ಕಿವಿಗೆ ಹಾಕಿಕೊಳ್ಳಲೇ ಇಲ್ಲವು. ಸಕಾರಣವಾಗಿಯೂ, ಶಾಸ್ತ್ರಸಮ್ಮತವಾಗಿಯೂ, ಕೇವಲ ಶ್ರೇಯಸ್ಕರವಾಗಿಯೂ, ಮೃದುವಾಗಿಯೂ, ಪಥ್ಯವಾಗಿಯೂ

ಹೇತುಮತ್ತ್ವಯಾ ॥ ೭೭ ॥ ಮಾರೀಚಕುಂಭಕರ್ಣಾಭ್ಯಾಂ ವಾಕ್ಯಂ ಮಮ ಪಿತು ಸ್ತದಾ । ನಶ್ರುತಂ ವೀರ್ಯಮತ್ತೇನ ತಸ್ಯೇದಂ ಫಲಮೀದೃಶಂ ॥ ೭೮ ॥ ನೀಲ ಜೀಮೂತಸಂಕಾಶ! ಪೀತಾಂಬರ! ಶುಭಾಂಗದ! । ಸ್ವಗಾತ್ರಾಣಿ ವಿನಿಕ್ಷಿಪ್ಯ ಕಿಂಶೇಷೇ ರುಧಿರಾಪ್ಲುತಃ । ಪ್ರಸುಪ್ತ ಇವ ಶೋಕಾರ್ತಾಂ ಕಿಂ ಮಾಂ ನಪ್ರತಿಭಾಷಸೇ ॥೭೯-೮೦॥ ಮಹಾವೀರ್ಯಸ್ಯ ದಕ್ಷಸ್ಯ ಸಂಯುಗೇಷ್ವಪಲಾಯಿನಃ । ಯಾತುಧಾನಸ್ಯ ದೌಹಿತ್ರೀಂ ಕಿಂ ಚ ಮಾಂ ನಾಭ್ಯುದೀಕ್ಷಸೇ ॥ ೮೧ ॥ ಉತ್ತಿಷ್ಠೋತ್ತಿಷ್ಠ ಕಿಂ ಶೇಷೇ ಪ್ರಾಪ್ತೇ

ಪೂರ್ವಕವಾದ, ಹೇತುಮತ್ - ಯುಕ್ತಿಸಹಿತವಾಗಿ, ವಿಭೀಷಣೇನ - ವಿಭೀಷಣನಿಂದ, ಅಭಿಹಿತಂ - ಹೇಳಲ್ಪಟ್ಟ, ವಚನಂ - ಮಾತು, ತ್ವಯಾ - ನಿನ್ನಿಂದ, ನಕೃತಂ - ಮಾಡಲ್ಪಡಲಿಲ್ಲ. ॥ ೭೭ ॥ ಮಾರೀ....ಭ್ಯಾಂ - ಮಾರೀಚ ಕುಂಭಕರ್ಣರೀರ್ವರೊಡನೆ, ಮಮ - ನನ್ನ, ಪಿತುಃ - ತಂದೆಯಾದ ಮಯಾಸುರನ, ವಾಕ್ಯಂ - ಮಾತು, ತದಾ - ಆ ಕಾಲದಲ್ಲಿ, ವೀರ್ಯಮತ್ತೇನ - ಸಾಮರ್ಥ್ಯದಿಂದ ಮದೋನ್ಮತ್ತನಾದ, ತ್ವಯಾ - ನಿನ್ನಿಂದ, ನಶ್ರುತಂ - ಕೇಳಲ್ಪಡಲಿಲ್ಲ, ತಸ್ಯ - ಅದಕ್ಕೆ, ಈದೃಶಂ - ಇಂತಹುದಾದ, ಇದಂಫಲಂ- ಈ ಫಲವು, ಆಗತಂ-ಪ್ರಾಪ್ತವಾಯಿತು. ॥ ೭೮ ॥ ನೀಲ....ಶ-ಕಪ್ಪಾದ ಮೇಘಕ್ಕೆ ಸಮಾನನಾದವನೇ, ಪೀತಾಂಬರ-ದಿವ್ಯವಾದ ಪೀತಾಂಬರವನ್ನು ಧರಿಸಿದವನೇ, ಶುಭಾಂಗದ- ಮಂಗಳಕರವಾದ ಅಂಗದಗಳನ್ನು ಧರಿಸಿರುವನೇ, ಸ್ವಗಾತ್ರಾಣಿ - ನಿನ್ನ ಅವಯವಗಳನ್ನು, ವಿನಿಕ್ಷಿಪ್ಯ - ವಿಸ್ತಾರವಾಗಿ ನೀಡಿಕೊಂಡು, ರುಧಿರಾಪ್ಲುತಃ - ರಕ್ತದಿಂದ ನೆನೆಸಲ್ಪಟ್ಟವನಾಗಿ, ಕಿಂಶೇಷೇ - ಏಕೆ ಮಲಗಿದ್ದೀಯೆ, ಪ್ರಸುಪ್ತ ಇವ - ನಿದ್ದೆ ಮಾಡುತ್ತಿರುವವನಂತೆ, ಶೋಕಾರ್ತಾಂ - ಶೋಕದಿಂದ ಬಾಧಿತಳಾದ, ಮಾಂ - ನನ್ನನ್ನು ಕುರಿತು, ಕಿಂ - ಏತಕ್ಕೆ, ನಪ್ರತಿಭಾಷಸೇ - ಮಾತನಾಡಿಸದಿರುವೆ. ॥ ೭೯ ॥ ಮಹಾವೀರ್ಯಸ್ಯ - ಮಹಾ ಪರಾಕ್ರಮವಂತನಾದ, ಸಂಯುಗೇಷು - ಕಾಳೆಗಗಳಲ್ಲಿ, ದಕ್ಷಸ್ಯ - ಸಮರ್ಥನಾದ, ಅಪಲಾಯಿನಃ - ಓಡಿಹೋಗದಿರುವ, ಯಾತುಧಾನಸ್ಯ - ರಕ್ಕಸನಾದ ಮಾಲ್ಯವಂತನ, ದೌಹಿತ್ರೀಂ - ಮೊಮ್ಮಗಳಾದ, ಮಾಂ - ನನ್ನನ್ನು, ಕಿಂನಾಭ್ಯುದೀಕ್ಷಸೇ - ಏತಕ್ಕೆ ನೋಡದಿರುವೆ, ಉತ್ತಿಷ್ಠೋತ್ತಿಷ್ಠ - ಮೇಲಕ್ಕೇಳು ಏಳು, ನವೇ - ನೂತನವಾದ, ಪರಿಭವೇ - ಈ ತಿರಸ್ಕಾರವು, ಪ್ರಾಪ್ತೇ - ಬಂದಿದ್ದರೂ, ಕಿಂಶೇಷೇ - ಏಕೆ ಮಲಗಿದ್ದೀಯೆ. ॥ ೮೦ ॥ ಅದ್ಯ - ಈಗ,

---

ನುಡಿದ, ನಿನ್ನ ಪ್ರಿಯಾನುಜನಾದ ವಿಭೀಷಣನ ಮಾತುಗಳನ್ನೂ ನೀನು ಕೇಳಲಿಲ್ಲ. ಅದರಂತೆ ನಡೆಯಲೂ ಇಲ್ಲ. ಪರಾಕ್ರಮ ಮತ್ತನಾದ ನೀನು, ಮಾರೀಚನೂ, ಕುಂಭಕರ್ಣನೂ, ನನ್ನ ತಂದೆಯಾದ ಮಯಾಸುರನೂ ಹೇಳಿದ ಹಿತವಾಕ್ಯಗಳನ್ನು ಸಹ ಕೇಳದೇ ಹೋದೆ. ಅವೆಲ್ಲಕ್ಕೂ ಇಂಥ ದುಷ್ಫಲವುಂಟಾಯಿತು. ಕಾರ್ಮುಗಿಲಿಗೆ ಸಮಾನವಾದ ಕಾಂತಿಯುಳ್ಳವನೇ! ಪೀತಾಂಬರಾಲಂಕೃತವಾದ ಮಂಗಳದೇಹವುಳ್ಳವನೇ! ನಿನ್ನ ಅವಯವಗಳೆಲ್ಲವನ್ನೂ ಭೂಮಿ ಯಲ್ಲಿರಿಸಿ ರಕ್ತದಿಂದ ತೊಯ್ದು ಹೀಗೇಕೆ ಮಲಗಿರುವೆ? ಮಲಗಿದಂತೆ ನಟಿಸುತ್ತಿರುವೆಯಾ! ದುಃಖಪೀಡಿತೆಯಾದ ನನ್ನೊಡನೆ ಮಾತನಾಡದಿರುವೆಯೇಕೆ! ॥೭೯-೮೦॥ ಓ ನನ್ನ ಸ್ವಾಮಿಯೇ!! ಮಹಾ ವೀರಾಧಿವೀರನೂ, ರಣಭೂಮಿಯಲ್ಲಿ ಯಾವಾಗಲೂ ಹಿಂತಿರುಗದವನೂ, ಮಹಾ ದಕ್ಷನೂ, ರಾಕ್ಷಸೋತ್ತಮನೂ ಆದ ಮಾಲ್ಯವಂತನ ದೌಹಿತ್ರಿಯಾದ! ನನ್ನನ್ನು ನೋಡು ವುದೇ ಇಲ್ಲವೆ? ಹೊಸದಾಗಿ ಸೋಲುಂಟಾದರೂ ಹೀಗೇಕೆ ಮಲಗಿದೆ? ಪ್ರಭುವೇ! ಏಳು; ಮೇಲಕ್ಕೇಳು. ಅಹಹ! ಇದೀಗ ಸೂರ್ಯಕಿರಣಗಳು ನಿರ್ಭಯವಾಗಿ ನಮ್ಮ ಲಂಕಾ

ಪರಿಭವೇ ನವೇ । ಅದ್ಯ ವೈ ನಿರ್ಭಯಾ ಲಂಕಾಂ ಪ್ರವಿಷ್ಟಾಃ ಸೂರ್ಯರಶ್ಮಯಃ
॥ ೮೨ ॥ ಯೇನ ಸೂದಯಸೇ ಶತ್ರೂನ್ ಸಮರೇ ಸೂರ್ಯವರ್ಚಸಾ । ವಜ್ರೋ
ವಜ್ರಧರಸ್ಯೇವ ಸೋಽಯಂ ತೇ ಸತತಾರ್ಚಿತಃ ॥ ೮೩ ॥ ರಣೇ ಶತ್ರುಪ್ರಹರಣೋ
ಹೇಮಜಾಲಪರಿಷ್ಕೃತಃ । ಪರಿಘೋ ವ್ಯವಕೀರ್ಣಸ್ತೇ ಬಾಣೈಶ್ಛಿನ್ನಃ ಸಹಸ್ರಧಾ ॥೮೪॥
ಪ್ರಿಯಾಮಿವೋಪಗೂಹ್ಯ ತ್ವಂ ಶೇಷೇ ಸಮರಮೇದಿನೀಂ । ಅಪ್ರಿಯಾಮಿವ ಕಸ್ಮಾಚ್ಚ
ಮಾಂ ನೇಚ್ಛಸ್ಯಭಿಭಾಷಿತುಂ ॥೮೫॥ ಧಿಗಸ್ತು ಹೃದಯಂ ಯಸ್ಯಾ ಮಮೇದಂ ನಸಹ
ಸ್ರಧಾ । ತ್ವಯಿ ಪಂಚತ್ವಮಾಪನ್ನೇ ಫಲತೇ ಶೋಕಪೀಡಿತಂ !" ॥೮೬॥ ಇತ್ಯೇವಂ

ಸೂರ್ಯರಶ್ಮಯಃ - ಸೂರ್ಯನ ಕಿರಣಗಳು, ನಿರ್ಭಯಾಂ - ಭಯರಹಿತವಾದ, ಲಂಕಾಂ - ಲಂಕಾ ಪಟ್ಟಣವನ್ನು, ಪ್ರವಿಷ್ಟಾಃ - ಹೊಕ್ಕವು, ಸೂರ್ಯವರ್ಚಸಾ - ಸೂರ್ಯನ ತೇಜಸ್ಸಿಗೆ ಸಮಾನವಾದ, ಯೇನ - ಯಾವ ಪರಿಘಾಯುಧದಿಂದ, ಸಮರೇ - ಕಾಳೆಗದಲ್ಲಿ, ಶತ್ರೂನ್ - ಶತ್ರುಗಳನ್ನು, ಸೂದಯಸೇ - ಸಂಹಾರ ಮಾಡುತ್ತಿದ್ದೆಯೋ, ವಜ್ರಧರಸ್ಯ - ದೇವೇಂದ್ರನ, ವಜ್ರ ಇವ - ವಜ್ರಾಯುಧದಂತೆ, ತೇ - ನಿನ್ನಿಂದ, ಸತತಾರ್ಚಿತಃ - ನಿರಂತರವೂ ಪೂಜಿಸಲ್ಪಟ್ಟ, ರಣೇ - ಕಾಳೆಗದಲ್ಲಿ, ಶತ್ರುಪ್ರಹರಣಃ - ಶತ್ರುನಾಶಕವಾದ, ಹೇಮ....ತಃ - ಬಂಗಾರದ ರೇಖೆಗಳಿಂದಲಂಕೃತವಾದ, ತೇ - ನಿನ್ನ, ಪರಿಘಃ - ಪರಿಘಾಯುಧವು, ಬಾಣೈಃ - ಬಾಣಗಳಿಂದ, ಸಹಸ್ರಧಾ - ಸಾವಿರಾರು ಭಾಗವಾಗಿ, ಛಿನ್ನಃ - ಕತ್ತರಿಸಲ್ಪಟ್ಟುದಾಗಿ, ವ್ಯವಕೀರ್ಣಃ - ಎರಚಲ್ಪಟ್ಟಿದೆ. ॥ ೮೧-೮೪ ॥ ತ್ವಂ - ನೀನು, ಪ್ರಿಯಾಮಿವ - ಪ್ರೇಮಪಾತ್ರಳಾದವನಂತೆ, ಸಮರಮೇದಿನೀಂ - ಯುದ್ಧಭೂಮಿಯನ್ನು, ಉಪಗೂಹ್ಯ - ಅಪ್ಪಿಕೊಂಡು, ಶೇಷೇ - ಮಲಗಿದೆ, ಮಾಂ - ನನ್ನನ್ನು, ಅಪ್ರಿಯಾಮಿವ - ಅನಿಷ್ಟಳನ್ನಂತೆ, ಅಭಿಭಾಷಿತುಂಚ - ಮಾತನಾಡಿಸುವುದಕ್ಕೂ ಕೂಡ, ಕಸ್ಮಾತ್ - ಏತರ ದೆಸೆಯಿಂದ, ನೇಚ್ಛಸಿ - ಬಯಸುವುದಿಲ್ಲ, ತ್ವಯಿ - ನೀನು, ಪಂಚತ್ವಂ - ಮರಣವನ್ನು, ಆಪನ್ನೇ - ಹೊಂದಲು, ಶೋಕಪೀಡಿತಂ - ಶೋಕದಿಂದ ಪೀಡಿಸಲ್ಪಟ್ಟ, ಯಸ್ಯ - ಯಾವ ನನ್ನ, ಇದಂ ಹೃದಯಂ - ಈ ಎದೆಯು, ಸಹಸ್ರಧಾ - ಸಾವಿರಾರು ಹೋಳಾಗಿ, ನಫಲತೇ - ಒಡೆದುಹೋಗಲಿಲ್ಲವೋ, ಧಿಕ್ - ನಿಂದನವು, ಅಸ್ತು - ಆಗಲಿ. ॥ ೮೫-೮೬ ॥ ಇತ್ಯೇವಂ - ಈ ಪರಿಯಾಗಿ, ವಿಲಪಂತ್ಯೇವ - ಪ್ರಲಾಪ ಮಾಡುತ್ತಿರುವವಳಾಗಿಯೇ, ಬಾಷ್ಪಾ....ನಾ - ಕಂಬನಿಗಳಿಂದ ವ್ಯಾಕುಲವಾದ ನೇತ್ರಗಳುಳ್ಳ, ದೇವೀ - ಮಂಡೋದರಿಯು,

---

ನಗರವನ್ನು ಪ್ರವೇಶಿಸಿದುವಲ್ಲವೇ? ಅಕಟಾ! ದಿನಕರನಿಗೆ ಸಮಾನವಾದ ತೇಜಸ್ಸುಳ್ಳ ಯಾವ ಪರಿಘಾಯುಧದಿಂದ ರಣಭೂಮಿಯಲ್ಲಿ ಶತ್ರುಗಳನ್ನು ಸಂಹರಿಸಿದೆಯೋ, ದೇವೇಂದ್ರನಿಗೆ ವಜ್ರಾಯುಧವೆಂತೋ ಅಂತು, ಯಾವಾಗಲೂ ನಿನ್ನ ಪೂಜೆಯನ್ನು ಕೈಕೊಂಡು ಬಂಗಾರದ ಸರಗಳಿಂದಲಂಕೃತವಾಗಿ, ಶತ್ರುಮರ್ದನವೆನಿಸಿ ಪ್ರಸಿದ್ಧವಾದ ಅದೇ ಪರಿಘಾಯುಧವೇ ಈಗ ಅನೇಕ ಬಾಣಗಳ ಹೊಡೆತಗಳಿಂದ ಹೋಳುಹೋಳಾಗಿ ಬಿದ್ದಿರುವುದಲ್ಲವೆ! ನಾಥಾ!! ನೀನು ಈ ರಣಭೂಮಿಯನ್ನು ನಲ್ಲೆಯನ್ನೆಂತೋ ಅಂತು ಆಲಿಂಗಿಸಿಕೊಂಡು ಮಲಗಿರುವೆಯೋ! ಪ್ರಿಯತಮೆಯೂ, ಧರ್ಮಪತ್ನಿಯೂ ಆದ ನನ್ನನ್ನು ಯಾವ ಕಾರಣದಿಂದ ಮಾತನಾಡಿಸದಿರುವೆ? ಅಯ್ಯೋ! ನೀನು ದಿವಂಗತನಾದರೂ ದುಃಖಾಗ್ನಿಯಲ್ಲಿ ಬೆಂದು ಹೋಳುಹೋಳಾಗಿ ಸೀಳಿಹೋಗದಿರುವ ಈ ನನ್ನ ಹೃದಯವನ್ನು ಸುಡಬೇಕು; ಧಿಕ್ಕರಿಸಬೇಕು." ॥೮೧-೮೬॥ ಆ ಮಂಡೋದರೀದೇವಿಯು ಈ ಪ್ರಕಾರವಾಗಿ ಪ್ರಲಾಪಿಸುತ್ತ ಕಂಬನಿದುಂಬಿದ ಕಂಗಳುಳ್ಳವ

ವಿಲಪಂತ್ಯೇವ ಬಾಷ್ಪವ್ಯಾಕುಲಲೋಚನಾ । ಸ್ನೇಹಾವಸ್ಕನ್ನಹೃದಯಾ ದೇವೀ ಮೋಹಮುಪಾಗಮತ್ ॥ ೮೭ ॥ ಕಶ್ಮಲಾಭಿಹತಾ ಸನ್ನಾ ಬಭೌ ಸಾ ರಾವಣೋರಸಿ । ಸಂಧ್ಯಾನುರಕ್ತೇ ಜಲದೇ ದೀಪ್ತಾ ವಿದ್ಯುದಿವಾಸಿತೇ ॥೮೮॥ ತಥಾಗತಾಂ ಸಮುತ್ಪತ್ಯ ಸಪತ್ನ್ಯಸ್ತಾ ಭೃಶಾತುರಾಃ । ಪರ್ಯವಸ್ಥಾಪಯಾಮಾಸುಃ ರುದಂತ್ಯೋ ರುದತೀಂ ಭೃಶಂ ॥ ೮೯ ॥ "ನತೇ ಸುವಿದಿತಾ ದೇವಿ! ಲೋಕಾನಾಂ ಸ್ಥಿತಿರಧ್ರುವಾ । ದಶಾವಿಭಾಗಪರ್ಯಾಯೇ ರಾಜ್ಞಾಂ ಚಂಚಲಯಾ ಶ್ರಿಯಾ" ॥ ೯೦ ॥ ಇತ್ಯೇವಮುಚ್ಯಮಾನಾ ಸಾ ಸಶಬ್ದಂ ಪ್ರರುರೋದಹ! । ಸ್ನಾಪಯಂತೀ ತ್ವಭಿಮುಖೌ ಸ್ತನಾವಸ್ರಾಂಬುವಿಸ್ರವೈಃ ॥ ೯೧ ॥ ಏತಸ್ಮಿನ್ನಂತರೇ ರಾಮೋ ವಿಭೀಷಣಮುವಾಚಹ ।

ಸ್ನೇಹಾ....ಸತ್ - ಪ್ರೇಮದಿಂದ ಶೋಕಗ್ರಸ್ತವಾದ ಹೃದಯವುಳ್ಳವಳಾಗಿ, ಮೋಹಂ - ಮೂರ್ಛೆಯನ್ನು, ಉಪಾಗಮತ್ - ಹೊಂದಿದಳು. ॥ ೮೭ ॥ ಕಶ್ಮಲಾಭಿಹತಾ - ಮೂರ್ಛಾವಸ್ಥೆಯಿಂದ ಹೊಡೆಯಲ್ಪಟ್ಟ, ಸನ್ನಾ - ಕೃಶೀಭೂತಳಾದ, ಸಾ - ಆ ಮಂಡೋದರಿಯು, ರಾವಣೋರಸಿ - ರಾವಣನೆದೆಯಲ್ಲಿ, ಸಂಧ್ಯಾನುರಕ್ತೇ - ಸಂಧ್ಯಾರಾಗದಿಂದ ಕೆಂಪಾಗಿರುವ, ಅಸಿತೇ - ಕಪ್ಪಾದ, ಜಲದೇ - ಮುಗಿಲಿಲ್ಲಿ, ದೀಪ್ತಾ - ಹೊಳೆಯುತ್ತಿರುವ, ವಿದ್ಯುದಿವ - ಮಿಂಚಿನಂತೆ, ಬಭೌ - ಹೊಳೆಯುತ್ತಿದ್ದಳು. ॥ ೮೮ ॥ ತಥಾಗತಾಂ - ಅಂಥಾ ಅವಸ್ಥೆಯನ್ನು ಹೊಂದಿರುವ, ಭೃಶಂ - ಬಹಳವಾಗಿ, ರುದತೀಂ - ರೋದನ ಮಾಡುತ್ತಿರುವ ಆ ಮಂಡೋದರಿಯನ್ನು, ಭೃಶಾತುರಾಃ - ಬಹಳವಾಗಿ ದುಃಖಿತರಾದ, ತಾಸ್ಸಪತ್ನ್ಯಃ - ಆ ಸವತಿಯರು, ಸಮುತ್ಪತ್ಯ - ಹಾರಿ, ರುದಂತ್ಯಃ - ಅಳುತ್ತಾ, ಪರ್ಯ....ಸುಃ - ಒಂದೆಡೆ ಕೂಡಿಸಿದರು. ॥ ೮೯ ॥ ದೇವೀ - ದೇವಿಯೇ, ದಶಾ....ಯೇ - ದಶೆಗಳು ಬದಲಾಯಿಸಿದಾಗ, ರಾಜ್ಞಾಂ - ಅರಸುಗಳ, ಚಂಚಲಯಾ - ಚಂಚಲವಾದ, ಶ್ರಿಯಾತ - ಐಶ್ವರ್ಯದಿಂದಲೂ, ತೇ - ನಿನಗೆ, ಲೋಕಾನಾಂ - ಲೋಕಗಳ, ಅಧ್ರುವಾ - ಶಾಶ್ವತವಲ್ಲದಿರುವ, ಸ್ಥಿತಿಃ - ಮರ್ಯಾದೆಯು, ನಸುವಿದಿತಾ - ಚೆನ್ನಾಗಿ ತಿಳಿಯಲ್ಪಟ್ಟದೇ ಅಲ್ಲವೆ. ॥ ೯೦ ॥ ಇತ್ಯೇವಂ - ಈ ಪರಿಯಾಗಿ, ಉಚ್ಯಮಾನಾ - ಹೇಳಲ್ಪಟ್ಟ. ಸಾ - ಆ ಮಂಡೋದರಿಯು, ಅಭಿಮುಖೌ - ಎದುರಾದ, ಸ್ತನೌ - ಸ್ತನಗಳನ್ನು, ಅಸ್ರಾಂಬುವಿಸ್ರವೈಃ - ಕಂಬನಿಯ ಹೊಳೆಗಳಿಂದ, ಸ್ನಾಪಯಂತೀ - ಸ್ನಾನಮಾಡಿಸುತ್ತ, ಸಶಬ್ದಂ - ಶಬ್ದದಿಂದೊಡಗೂಡಿದಂತೆ, ಪ್ರರುರೋದಹ - ಅಳುತಿದ್ದಳಷ್ಟೆ. ॥೯೧॥ ಏತಸ್ಮಿನ್ನಂತರೇ - ಈ ಮಧ್ಯದಲ್ಲಿ, ರಾಮಃ - ಶ್ರೀರಾಮನು, ವಿಭೀಷಣಂ - ವಿಭೀಷಣನನ್ನು ಕುರಿತು,

---

ಳಾಗಿ, ಸ್ನೇಹದಿಂದ ಕುಗ್ಗಿದ ಹೃದಯವುಳ್ಳವಳಾಗಿ ಮೂರ್ಛೆ ಹೊಂದಿದಳು. ಮೂರ್ಛೆಯೊಂದಿ ರಾವಣಾಸುರನ ವಕ್ಷಸ್ಥಳದಲ್ಲಿ ಬಿದ್ದ ಆ ದೇವಿಯು ಸಂಧಾರಾಗದಿಂದ ಕೂಡಿದ ಕಪ್ಪು ಮೋಡದಲ್ಲಿನ ಮಿಂಚಿನ ಬಳ್ಳಿಯಂತೆ ತೋರುತ್ತಿದ್ದಳು. ಈ ರೀತಿ ಮೂರ್ಛಿತೆಯಾದ ಆಕೆಯನ್ನು ಕಂಡು ಆಕೆಯ ಸವತಿಯರೆಲ್ಲರೂ ಗಟ್ಟಿಯಾಗಿ ಅಳುತ್ತ ಅವಳ ಬಳಿಗೈದಿ ಅವಳನ್ನು ಕುರಿತು, "ದೇವಿ! ಲೋಕಸ್ಥಿತಿಯೇ ಸ್ಥಿರವಲ್ಲವೆಂಬ ವಿಷಯವೂ, ಭಾಗ್ಯವಿಪರ್ಯಯ ಕಾಲದಲ್ಲಿ ಅರಸರ ಐಶ್ವರ್ಯವು ಕೇವಲ ಚಂಚಲವಾದುದೆಂಬ ವಿಷಯವೂ ನಿನಗೆ ಚೆನ್ನಾಗಿ ತಿಳಿದಿರುವುದಲ್ಲವೆ? (ನಿಷ್ಪ್ರಯೋಜಕವಾಗಿ ಅಳುವೆಯೇಕೆ? ಸಮಾಧಾನಗೊಳ್ಳು!)" ಎಂದು ಹೇಳಿ ಸಂತೈಸಿದರು. ಈ ಮಾತುಗಳನ್ನು ಕೇಳುತ್ತಲೇ ಮಂಡೋದರಿಯು ದುಃಖವನ್ನು ತಡೆಯಲಾರದೆ ಗಟ್ಟಿಯಾಗಿ ಅಳತೊಡಗಿ ತನ್ನ ಸ್ತನಗಳನ್ನು ಕಂಬನಿಗಳಿಂದ ತೊಯಿಸುತ್ತಿದ್ದಳು.

"ಸಂಸ್ಕಾರಃ ಕ್ರಿಯತಾಂ ಭ್ರಾತುಃ ಸ್ತ್ರಿಯಶ್ಚೈತಾ ನಿವರ್ತಯ ॥ ೯೨ ॥ ತಂ ಪ್ರಶ್ರಿತಸ್ತತೋ ರಾಮಂ ಶ್ರುತವಾಕ್ಯೋ ವಿಭೀಷಣಃ । ವಿಮೃಶ್ಯ ಬುದ್ಧ್ಯಾ ಧರ್ಮಜ್ಞೋ ಧರ್ಮಾರ್ಥಸಹಿತಂ ವಚಃ । ರಾಮಸ್ಯೈವಾನುವೃತ್ತ್ಯರ್ಥಮುತ್ತರಂ ಪ್ರತ್ಯಭಾಷತ ॥೯೩॥ "ತ್ಯಕ್ತಧರ್ಮವ್ರತಂ ಕ್ರೂರಂ ನೃಶಂಸಮನೃತಂ ತಥಾ । ನಾಹಮರ್ಹೋಽಸ್ಮಿ ಸಂಸ್ಕರ್ತುಂ ಪರದಾರಾಭಿಮರ್ಶಿನಂ ॥ ೯೪ ॥ ಭ್ರಾತೃರೂಪೋ ಹಿ ಮೇ ಶತ್ರುರೇಷ ಸರ್ವಾಹಿತೇ ರತಃ । ರಾವಣೋ ನಾರ್ಹತೇ ಪೂಜಾಂ ಪೂಜ್ಯೋಽಪಿ ಗುರುಗೌರವಾತ್ ॥ ೯೫ ॥ ನೃಶಂಸ ಇತಿ ಮಾಂ ರಾಮಂ ವಕ್ಷ್ಯಂತಿ ಮನುಜಾ ಭುವಿ । ಶ್ರುತ್ವಾ ತಸ್ಯ

ಭ್ರಾತುಃ - ಅಣ್ಣನಾದ ರಾವಣನಿಗೆ, ಸಂಸ್ಕಾರಃ - ಪ್ರೇತಸಂಸ್ಕಾರವು, ಕ್ರಿಯತಾಂ - ಮಾಡಲ್ಪಡಲಿ, ಏತಾಸ್ತ್ರಿಯಶ್ಚ - ಈ ಹೆಂಗಸರನ್ನು, ನಿವರ್ತಯ - ಹಿಂತಿರುಗಿಸು, ಇತಿ - ಇಂತೆಂದು, ಉವಾಚಹ - ಹೇಳಿದನಷ್ಟೆ. ॥೯೨॥ ತತಃ - ಬಳಿಕ, ಶ್ರುತವಾಕ್ಯಃ - ಕೇಳಲ್ಪಟ್ಟ ಶ್ರೀರಾಮವಾಕ್ಯವುಳ್ಳ, ವಿಭೀಷಣಃ - ವಿಭೀಷಣನು, ಧರ್ಮಜ್ಞಃ - ಧರ್ಮಶಾಸ್ತ್ರವನ್ನು ತಿಳಿದವನಾದಕಾರಣ, ಬುಧ್ಯಾ - ಬುದ್ಧಿಯಿಂದ, ವಿಮೃಶ್ಯ - ಆಲೋಚಿಸಿ, ಪ್ರಶ್ರಿತಃ - ನಮ್ರನಾಗಿ, ರಾಮಸ್ಯ - ಶ್ರೀರಾಮನ, ಅನುವೃತ್ತ್ಯರ್ಥಂ - ಅನುಸರಣೆಗಾಗಿಯೇ, ಧರ್ಮಾರ್ಥಸಹಿತಂ - ಧರ್ಮದಿಂದಲೂ, ಪ್ರಯೋಜನದಿಂದಲೂ ಕೂಡಿರುವ, ಉತ್ತರಂ - ಉತ್ತರರೂಪವಾದ, ವಚಃ - ಮಾತನ್ನು, ಪ್ರತ್ಯಭಾಷತ - ನುಡಿದನು, ತ್ಯಕ್ತಧರ್ಮವ್ರತಂ - ಬಿಡಲ್ಪಟ್ಟ ಧರ್ಮವೂ ನಿಯಮವೂ ಉಳ್ಳ, ಕ್ರೂರಂ - ಕಠೋರಚಿತ್ತನಾದ, ನೃಶಂಸಂ - ಘಾತುಕನಾದ, ತಥಾ - ಹಾಗೆಯೇ, ಅನೃತಂ - ಸುಳ್ಳುಗಾರನಾದ, ಪರ....ನಂ - ಪರಸ್ತ್ರೀಗಾಮಿಯಾದ ಈ ರಾವಣನನ್ನು, ಅಹಂ - ನಾನು, ಸಂಸ್ಕರ್ತುಂ - ಸಂಸ್ಕಾರ ಮಾಡುವುದಕ್ಕೆ, ಅರ್ಹಃ - ಅರ್ಹನು, ನಾಸ್ಮಿ - ಆಗಲಾರೆ. ॥೯೩-೯೪॥ ಹಿ - ಯಾವ ಕಾರಣದಿಂದ, ಮೇ - ನನಗೆ, ಭ್ರಾತೃರೂಪಃ - ಭ್ರಾತೃಸ್ವರೂಪನಾದ, ಶತ್ರುಃ - ಹಗೆಯುನಾದ, ಏಷಃ - ಈತನು, ಸರ್ವಾಹಿತೇರತಃ - ಎಲ್ಲರಿಗೂ ಅಪ್ರಿಯ ಮಾಡುವುದರಲ್ಲಿಯೇ ಆಸಕ್ತನಾದವನೋ, ತತಃ-ಆ ಕಾರಣದಿಂದ, ರಾವಣಃ-ದಶಕಂಠನು, ಗುರುಗೌರವಾತ್-ಜ್ಯೇಷ್ಠನೆಂಬ ಗೌರವದಿಂದ, ಪೂಜ್ಯೋಽಪಿ-ಪೂಜ್ಯನಾದರೂ, ಪೂಜಾಂ-ಪೂಜೆಯನ್ನು, ನಾರ್ಹತಿ-ಪಡೆಯಲು ಯೋಗ್ಯನಲ್ಲ, ಭುವಿ - ಲೋಕದಲ್ಲಿ, ಮನುಜಾಃ - ಮನುಷ್ಯರು, ಮಾಂ - ನನ್ನನ್ನು,

ಇದೇ ಸಮಯದಲ್ಲಿ ಶ್ರೀರಾಮಮೂರ್ತಿಯು ವಿಭೀಷಣನನ್ನು ಕುರಿತು, "ವಿಭೀಷಣಾ! ನಿಮ್ಮಣ್ಣನಾದ ಈ ರಾವಣಾಸುರನಿಗೆ ಅಂತ್ಯೇಷ್ಟಿಯನ್ನು ನಡೆಸುವವನಾಗು. ಈ ಹೆಂಗುಸರೆಲ್ಲರನ್ನೂ ಕಳುಹಿಸು" ಎಂದು ಹೇಳಿದನು. ॥ ೮೬-೯೨ ॥ ಆ ತರುವಾಯ ವಿಭೀಷಣನು ಶ್ರೀರಾಮಚಂದ್ರನ ಮಾತುಗಳನ್ನು ಕೇಳಿ ವಿನಯದಿಂದೊಡಗೂಡಿ, ಧರ್ಮಜ್ಞನಾದುದರಿಂದ ಕಾರ್ಯಾಕಾರ್ಯಗಳನ್ನು ತನ್ನ ಮನಸ್ಸಿನಲ್ಲಿಯೇ ಚೆನ್ನಾಗಿ ಆಲೋಚಿಸಿ ಆತನಿಂದಲೇ ಅಪ್ಪಣೆ ಪಡೆಯಲೋಸುಗ ಆತನನ್ನೇ ಕುರಿತು ಧರ್ಮಾರ್ಥಸಹಿತವಾದ ಮಾತುಗಳನ್ನಾಡುವವನಾಗಿ, "ಶ್ರೀರಾಮ! ಧರ್ಮವ್ರತವನ್ನೇ ತೊರೆದವನೂ, ಕ್ರೂರನೂ, ದುಷ್ಟನೂ, ಅಸತ್ಯವಂತನೂ, ಇತರರ ಹೆಂಗುಸರನ್ನು ಕೆಡಿಸಿದವನೂ ಎಲ್ಲರಿಗೂ ಅನಿಷ್ಟವುಂಟುಮಾಡುವುದರಲ್ಲಿಯೇ ನಿರತನೂ ಆದ ಈ ರಾವಣನ ಅಂತ್ಯಕ್ರಿಯೆಯನ್ನು ಮಾಡುವುದು ನನಗೆ ಯೋಗ್ಯವಲ್ಲವು. ಇವನು ನನಗೆ ಭ್ರಾತೃರೂಪನಾದ ಶತ್ರುವು. ಎಲ್ಲರಿಗೂ ಪೀಡನಾದವನು. ಇವನು ನನಗೆ ಅಣ್ಣನೇ ಆದರೂ ಹಿರಿಯನೆಂಬ ಗೌರವದಿಂದಾದರೂ

ಗುಣಾನ್ಸರ್ವೇ ವಕ್ಷ್ಯಂತಿ ಸುಕೃತಂ ಪುನಃ" ॥ ೯೬ ॥ ತಚ್ಛ್ರುತ್ವಾ ಪರಮಪ್ರೀತೋ ರಾಮೋ ಧರ್ಮಭೃತಾಂ ವರಃ । ವಿಭೀಷಣಮುವಾಚೇದಂ ವಾಕ್ಯಜ್ಞೋ ವಾಕ್ಯಕೋವಿದಂ ॥ ೯೭ ॥ "ತವಾಪಿ ಮೇ ಪ್ರಿಯಂ ಕಾರ್ಯಂ ತ್ವತ್ಪ್ರಭಾವಾಚ್ಚ ಮೇ ಜಿತಂ । ಅವಶ್ಯಂತು ಕ್ಷಮಂ ವಾಚ್ಯೋ ಮಯಾ ತ್ವಂ ರಾಕ್ಷಸೇಶ್ವರ! ॥ ೯೮ ॥ ಅಧರ್ಮಾನೃತಸಂಯುಕ್ತಃ ಕಾಮಂ ತ್ವೇಷ ನಿಶಾಚರಃ । ತೇಜಸ್ವೀ ಬಲವಾನ್ ಶೂರೋ ಸಂಯುಗೇಷುಚ ನಿತ್ಯಶಃ ॥ ೯೯ ॥ ಶತಕ್ರತುಮುಖೈರ್ದೇವೈಃ ಶ್ರೂಯತೇ

ನೃಶಂಸಇತಿ - ಘಾತುಕನೆಂದು, ಕಾಮಂ - ಸ್ವೇಚ್ಛೆಯಾಗಿ, ವಕ್ಷ್ಯಂತೇ - ಹೇಳುವರು, ತಸ್ಯ - ಆ ದಶಕಂಠನ, ಗುಣಾನ್ - ಗುಣಗಳನ್ನು, ಶ್ರುತ್ವಾ - ಕೇಳಿ, ಸರ್ವೇ - ಸಮಸ್ತರೂ, ಪುನಃ - ಮತ್ತೂ, ಸುಕೃತಂ - ಚೆನ್ನಾಗಿ ಮಾಡಲ್ಪಟ್ಟಿತು ಎಂದು, ವಕ್ಷ್ಯಂತಿ - ಹೇಳುವರು. ॥ ೯೫ ೯೬ ॥ ತಚ್ಛ್ರುತ್ವಾ - ಆ ವಿಭೀಷಣನ ವಾಕ್ಯವನ್ನು ಕೇಳಿ, ಪರಮಪ್ರೀತಃ - ಬಹಳ ಸಂತುಷ್ಟನಾಗಿ, ಧರ್ಮಭೃತಾಂ - ಧರ್ಮಿಷ್ಠರಿಗೆಲ್ಲ, ವರಃ - ಶ್ರೇಷ್ಠನಾದ, ವಾಕ್ಯಜ್ಞಃ - ಮಾತುಗಾರಿಕೆಯನ್ನು ಬಲ್ಲ, ರಾಮಃ - ಶ್ರೀರಾಮನು, ವಾಕ್ಯಕೋವಿದಂ - ಮಾತುಗಳಲ್ಲಿ ಪಂಡಿತನಾದ, ವಿಭೀಷಣಂ ವಿಭೀಷಣನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೯೭ ॥ ತವಾಪಿ - ನಿನಗೂ, ಮೇ - ನನ್ನಿಂದ, ಪ್ರಿಯಂ - ಹಿತವು, ಕಾರ್ಯಂ - ಮಾಡತಕ್ಕದು, ತ್ವತ್ಪ್ರಭಾವಾತ್ - ನಿನ್ನ ಸಾಮರ್ಥ್ಯದಿಂದ, ಮೇ - ನನ್ನಿಂದ, ಜಿತಂ - ಜಯಿಸಲ್ಪಟ್ಟಿತು, ರಾಕ್ಷಸೇಶ್ವರ - ರಾಕ್ಷಸಾಧಿಪನೇ, ತ್ವಂ - ನೀನು, ಮಯಾ - ನನ್ನಿಂದ, ಅವಶ್ಯಂ - ಅವಶ್ಯವಾಗಿ, ಕ್ಷಮಂ - ಯೋಗ್ಯವಾದ ಮಾತು, ವಾಚ್ಯಃ - ಹೇಳತಕ್ಕವನು. ॥ ೯೮ ॥ ಏಷನಿಶಾಚರಸ್ತು - ಈ ರಾಕ್ಷಸನಾದರೆ, ಕಾಮಂ - ಯಥೇಷ್ಟವಾಗಿ, ಅಧ....ಕ್ತಃ - ಅಧರ್ಮದಿಂದಲೂ, ಸುಳ್ಳುಮಾತುಗಳಿಂದಲೂ ಕೂಡಿದವನೇ ಹೌದು, ತಥಾಪಿ - ಹಾಗಾದರೂ, ತೇಜಸ್ವೀ - ತೇಜೋವಂತನಾಗಿ, ಬಲವಾನ್ - ಸಾಮರ್ಥ್ಯವಂತನಾಗಿ, ನಿತ್ಯಶಃ - ನಿರಂತರವೂ, ಸಂಯುಗೇಷು - ಕಾಳಗಗಳಲ್ಲಿ, ಶೂರಃ - ಶೂರನಾಗಿ, ಮಹಾತ್ಮಾ - ಮಹಾ ಧೈರ್ಯಶಾಲಿಯಾಗಿ, ಬಲಸಂಪನ್ನಃ - ಸಾಮರ್ಥ್ಯದಿಂದ ಕೂಡಿರುವನು, ಲೋಕರಾವಣಃ - ಜನಗಳಿಗೆ ದುಃಖವನ್ನು ಕೊಡುವ, ರಾವಣಃ -

ಸಂಸ್ಕರಿಸಲು ಯೋಗ್ಯನಲ್ಲದಿರುವನು. ನಾನೊಂದುವೇಳೆ ಇವನಿಗೆ ಸಂಸ್ಕಾರಗಳನ್ನು ನಡೆಸಿದುದಾದರೆ ಈ ಲೋಕದಲ್ಲಿ ಎಲ್ಲರೂ ನನ್ನನ್ನು ನೃಶಂಸನೆಂದು ಆಡಿಕೊಳ್ಳುವರು. ನಡೆಸದಿದ್ದರೆ ಇವನ ದುರ್ಗುಣಗಳೆಲ್ಲವನ್ನೂ ಕೇಳಿ, ವಿಭೀಷಣನು ಇವನಿಗೆ ಸಂಸ್ಕಾರ ಮಾಡದಿದ್ದುದೇ ಒಳ್ಳೆಯದಾಯಿತು. ಎಂದುಕೊಳ್ಳುತ್ತಾರೆ" ಎಂದು ಅರಿಕೆ ಮಾಡಿದನು. ॥ ೯೩-೯೬ ॥ ವಿಭೀಷಣನಾಡಿದ ಈ ಮಾತುಗಳನ್ನು ಕೇಳಿ ಧರ್ಮಚರಿತರಲ್ಲಿ ಶ್ರೇಷ್ಠನೂ, ವಾಕ್ಯಜ್ಞನೂ ಆದ ಶ್ರೀರಾಮಮೂರ್ತಿಯು ಪರಮಸಂತುಷ್ಟನಾಗಿ ಮಾತನಾಡುವುದರಲ್ಲಿ ಕುಶಲನಾದ ಅವನನ್ನು ಕುರಿತು, "ಎಲೈ ವಿಭೀಷಣನೇ, ರಾಕ್ಷಸೇಶ್ವರಾ!! ನಿನ್ನ ಪ್ರಭಾವದಿಂದ ನಾನು ವಿಜಯವನ್ನು ಪಡೆದಿರುವೆನು. ನಿನಗೆ ಪ್ರಿಯವನ್ನುಂಟುಮಾಡುವುದು ನನ್ನ ಕರ್ತವ್ಯವು. ನಿನಗೆ ಸಮಾಧಾನ ಹೇಳುವುದು ನನಗೆ ಆವಶ್ಯಕವಾಗಿದೆ. ರಾಕ್ಷಸರಾಜಾ! ಈ ರಾವಣನು ಅಧರ್ಮಿಷ್ಠನೂ, ಅನೃತವಾದಿಯೂ, ದುರಾಚಾರಿಯೂ ಆಗಿರಲಿ. ನೀನು ಹೇಳುವಂತೆ ಇವನಿರುವುದೂ ಹೌದು. ಏನಾದರೂ ಇವನು ತೇಜಸ್ವಿಯು. ಮಹಾ ಕಾಂತಿವಂತನೂ, ಶೂರನೂ, ಯುದ್ಧಗಳಲ್ಲಿ ಅಪರಿಮಿತವಾದ ಪರಾಕ್ರಮವಂತನೂ ಆದವನು.

ನಪರಾಜಿತಃ । ಮಹಾತ್ಮಾ ಬಲಸಂಪನ್ನೋ ರಾವಣೋ ಲೋಕರಾವಣಃ ॥ ೧೦೦ ॥ ಮರಣಾಂತಾನಿ ವೈರಾಣಿ ನಿರ್ವೃತ್ತಂ ನಃ ಪ್ರಯೋಜನಂ । ಕ್ರಿಯತಾಮಸ್ಯ ಸಂಸ್ಕಾರೋ ಮಮಾಪ್ಯೇಷ ಯಥಾ ತವ ॥ ೧೦೧ ॥ ತ್ವತ್ಸಕಾಶಾದ್ದಶಗ್ರೀವಸ್ಸಂಸ್ಕಾರಂ ವಿಧಿ ಪೂರ್ವಕಂ । ಪ್ರಾಪ್ತುಮರ್ಹತಿ ಧರ್ಮಜ್ಞ ! ತ್ವಂ ಯಶೋಭಾಗ್ಭವಿಷ್ಯಸಿ'' ॥೧೦೨॥ ರಾಘವಸ್ಯ ವಚಃ ಶ್ರುತ್ವಾ ತ್ವರಮಾಣೋ ವಿಭೀಷಣಃ । ಸಂಸ್ಕಾರೇಣಾನುರೂಪೇಣ ಯೋಜಯಾಮಾಸ ರಾವಣಂ ॥೧೦೩॥ ಚಿತಾಂ ಚಂದನಕಾಷ್ಠಾನಾಂ ಪದ್ಮಕೋಶೀರ

ದಶಕಂಠನು, ಶತ....ಖ್ಯೈಃ - ದೇವೇಂದ್ರನೇ ಮೊದಲಾದ, ದೇವೈಃ - ದೇವತೆಗಳಿಂದ, ನಪರಾಜಿತಃ - ಸೋಲಿಸಲ್ಪಡಲಿಲ್ಲವೆಂದು, ಶ್ರೂಯತೇ-ಕೇಳಲ್ಪಡುತ್ತಿದ್ದಾನೆ. ॥೯೯-೧೦೦ ॥ ವೈರಾಣಿ ಹಗೆತನಗಳು, ಮರಣಾಂತಾನಿ - ಮರಣವೇ ಕೊನೆಯಾಗಿರುವುವು, ನಃ - ನಮಗೆ, ಪ್ರಯೋಜನಂ - ಕಾರ್ಯವು, ನಿರ್ವೃತ್ತಂ - ನೆರವೇರಿತು, ಏಷಃ - ಈತನು, ತವ - ನಿನಗೆ, ಯಥಾ - ಹೇಗೆಯೋ, ಮಮಾಪಿ- ನನಗೂ, ತಥಾ - ಹಾಗೆಯೇ ಸರಿ, ಅಸ್ಯ - ಈ ದಶಕಂಠನಿಗೆ, ಸಂಸ್ಕಾರಃ - ಪಾರಲೌಕಿಕ ಸಂಸ್ಕಾರವು, ಕ್ರಿಯತಾಂ - ಮಾಡಲ್ಪಡಲಿ. ॥ ೧೦೧ ॥ ಧರ್ಮಜ್ಞ - ಧರ್ಮವನ್ನರಿತವನೇ, ತ್ವತ್ಸಕಾಶಾತ್ - ನಿನ್ನ ದೆಸೆಯಿಂದ, ದಶಗ್ರೀವಃ - ದಶಕಂಠನು, ವಿಧಿಪೂರ್ವಕಂ - ವಿಧಿಪುರಸ್ಸರವಾಗಿ, ಸಂಸ್ಕಾರಂ - ಪೈತೃಕ ಕರ್ಮವನ್ನು, ಪ್ರಾಪ್ತುಂ - ಹೊಂದುವುದಕ್ಕೆ ಅರ್ಹತಿ - ಯೋಗ್ಯನಾಗಿದ್ದಾನೆ, ತ್ವಂ - ನೀನು, ಯಶೋಭಾಕ್ - ಕೀರ್ತಿವಂತನು, ಭವಿಷ್ಯಸಿ - ಆಗುವೆ. ॥ ೧೦೨ ॥ ರಾಘವಸ್ಯ - ಶ್ರೀರಾಮನ, ವಚಃ-ಮಾತನ್ನು, ಶ್ರುತ್ವಾ-ಕೇಳಿ, ವಿಭೀಷಣಃ-ವಿಭೀಷಣನು, ತ್ವರಮಾಣಃ-ತ್ವರೆಗೊಂಡವನಾಗಿ, ರಾವಣಂ - ರಾವಣನನ್ನು, ಅನುರೂಪೇಣ - ಯೋಗ್ಯವಾದ, ಸಂಸ್ಕಾರೇಣ - ಸಂಸ್ಕಾರದಿಂದ, ಯೋಜಯಾಮಾಸ - ಸಂಯೋಜನೆ ಮಾಡಿದನು. ॥ ೧೦೩ ॥ ಪದ್ಮ....ತಾಂ - ಪದ್ಮಕವೆಂಬ ಸುಗಂಧ ದ್ರವ್ಯದಿಂದಲೂ, ಲಾವಂಚದ ಗಂಧದಿಂದಲೂ ಕೂಡಿರುವ, ರಾಂಕ....ತಾಂ - ಮೃಗರೋಮಗಳಿಂದ ನಿರ್ಮಿಸ

ಇವನು ದೇವೇಂದ್ರನೇ ಮೊದಲಾದವರಿಂದಲೂ ಈವರೆಗೂ ಜಯಿಸಲ್ಪಡಲಿಲ್ಲವೆಂದು ಕೇಳಿಬರುತ್ತದೆ. ಲೋಕರಾವಣನಾದ ಈ ರಾವಣನು ಮಹಾತ್ಮನೂ, ಬಲಸಂಪನ್ನನೂ ಆಗಿರುವನು. ಇದರ ಮೇಲಾಗಿಯೋ ಹಗೆತನವೆಂಬುದು ಮರಣವೇ ಅಂತವಾಗುಳ್ಳದ್ದು. ನಮಗೆ ಇವನ ಹಗೆತನದಿಂದ ಯಾವ ಪ್ರಯೋಜನವಾಗಬೇಕಾಗಿದ್ದಿತೋ ಅದು ಆಗಿರುವುದು. ಇನ್ನು ಇವನಲ್ಲಿ ವರವನ್ನು ಕಟ್ಟಿಕೊಂಡೇನು? ನೀನು ಇವನಿಗೆ ಅಪರಕ್ರಿಯೆಗಳನ್ನು ಮಾಡುವವನಾಗು. ಈಗ ಈತನು ನಿನಗೆ ಹೇಗೋ ನನಗೂ ಹಾಗೆಯೇ. ಭ್ರಾತೃಭೂತನಾದವನೇ! ಈ ದಶಗ್ರೀವನು ನಿನ್ನಿಂದ ಸಂಸ್ಕಾರವನ್ನು ಪಡೆಯಲು ಅರ್ಹನಾಗಿಯೇ ಇರುವನು. ಇವನಿಗೆ ಶಾಸ್ತ್ರೋಕ್ತವಾದ ಸಂಸ್ಕಾರವನ್ನು ಮಾಡಿದರೆ ಅಪಕೀರ್ತಿ ಬರುವುದೆಂದು ಭಾವಿಸಬೇಡ. ಇದರಿಂದ ನಿನಗೆ ಕೀರ್ತಿಯೇ ಲಭಿಸುತ್ತದೆ'' ಎಂದನು. ॥೯೭-೧೦೨॥ ಶ್ರೀರಾಮಮೂರ್ತಿಯ ಮಾತುಗಳನ್ನು ಕೇಳಿದ ತರುವಾಯ ಧರ್ಮಜ್ಞನಾದ ವಿಭೀಷಣನು ತ್ವರೆಗೊಂಡವನಾಗಿ ರಾವಣನಿಗೆ (ಕ್ಷತ್ರಿಯೋಚಿತವಾದ) ಯಾಯಜೂಕನಿಗೆ ಅನುಗುಣವಾದ ಸಂಸ್ಕಾರವನ್ನು ಮಾಡಲಾರಂಭಿಸಿದನು. ಆ ತರುವಾಯ ರಾಕ್ಷಸರು ಸೊಗಸಾದ ಗಂಧದ ಮರಗಳಿಂದಲೂ, ಇತರ ಪರಿಮಳ ದ್ರವ್ಯಗಳಿಂದಲೂ, ಮೃಗರೋಮನಿರ್ಮಿತವಾದಂತಿರುವ ವಸ್ತ್ರಗಳಿಂದಲೂ,

ಸಂವೃತಾಃ । ಬ್ರಾಹ್ಮ್ಯಾ ಸಂವೇಶಯಾಂ ಚಕ್ರೂ ರಾಂಕವಾಸ್ತರಣಾವೃತಾಂ ||೧೦೪||
ವರ್ತತೇ ವೇದವಿಹಿತೋ ರಾಜ್ಞಾಂ ವೈ ಪಶ್ಚಿಮಃ ಕ್ರತುಃ । ಪ್ರಚಕ್ರೂ ರಾಕ್ಷ
ಸೇಂದ್ರಸ್ಯ ಪಿತೃಮೇಧಮನುಕ್ರಮಂ || ೧೦೫ || ವೇದಿಂಚ ದಕ್ಷಿಣಪ್ರಾಚ್ಯಾಂ ಯಥಾ
ಸ್ಥಾನಂ ಚ ಪಾವಕಂ । ಪೃಷದಾಜ್ಯೇನ ಸಂಪೂರ್ಣಂ ಸ್ರುವಂ ಸ್ಸರ್ವೇ ಪ್ರಚಿಕ್ಷಿಪುಃ
|| ೧೦೬ || ಪಾದಯೋಃ ಶಕಟಂ ಪ್ರಾದುರಂತರೂರ್ವೋರುಲೂಖಲಂ । ದಾರು
ಪಾತ್ರಾಣಿ ಸರ್ವಾಣಿ ಅರಣಿಂ ಚೋತ್ತರಾರಣಿಂ || ೧೦೭ || ದತ್ತ್ವಾತು ಮುಸಲಂ
ಚಾನ್ಯದ್ಯಥಾಸ್ಥಾನಂ ವಿಚಕ್ಷಣಾಃ । ಶಾಸ್ತ್ರದೃಷ್ಟೇನ ವಿಧಿನಾ ಮಹರ್ಷಿವಿಹಿತೇನಚ

ಲ್ಪಟ್ಟ ಹಾಗಿರುವ ವಸ್ತ್ರಗಳಿಂದ, ಆವೃತಾಂ ಸುತ್ತುವರೆದ, ರಾಂಕವಿಸ್ತರಣ-ಕೃಷ್ಣಾಜಿನದಿಂದ, ಆವೃತಾಂ-ಸುತ್ತಲ್ಪಟ್ಟ, ಚಂದ....ನಾಂ - ಶ್ರೀಗಂಧದ ಚಕ್ಕೆಗಳ, ಚಿತಾಂ - ಚಿತಿಯನ್ನು, ಬ್ರಾಹ್ಮ್ಯಾ - ಬ್ರಹ್ಮಮೇಧ ಮಂತ್ರಗಳಿಂದ ಹೇಳಲ್ಪಟ್ಟ ಪ್ರಕ್ರಿಯೆಯಿಂದ, ಸಂವೇಶಯಾಂಚಕ್ರುಃ - ಪ್ರಯೋಗ ನಡೆಸಿದರು.
|| ೧೦೪ || ವೇದವಿಹಿತಃ - ವೇದದಲ್ಲಿ ಪ್ರೋಕ್ತವಾದ, ರಾಜ್ಞಾಂ - ಅರಸುಗಳಿಗೆ, ಪಶ್ಚಿಮಕ್ರತುಃ - ಪಿತೃಕರ್ಮವು, ಯಥಾ - ಹೇಗೆ, ವರ್ತತೇ - ಇದೆಯೋ, ತಥಾ - ಹಾಗೆಯೇ, ರಾಕ್ಷಸೇಂದ್ರಸ್ಯ - ದಶಕಂಠನಿಗೆ, ಪಿತೃಮೇಧಂ - ಪಿತೃಮೇಧ ಕರ್ಮವನ್ನು, ಅನುಕ್ರಮಂ - ಕ್ರಮಾನುಸಾರವಾಗಿ, ಪ್ರಚಕ್ರುಃ - ಮಾಡಿದರು. || ೧೦೫ || ದಕ್ಷಿಣಪ್ರಾಚ್ಯಾಂ - ದಕ್ಷಿಣಭಾಗದಲ್ಲಿ ಪ್ರಾಚೀ ದಿಕ್ಕಿನಲ್ಲಿ, (ಅಂದರೆ - ಆಗ್ನೇಯಭಾಗದಲ್ಲಿ), ವೇದಿಂ - ವೇದಿಕೆಯನ್ನು, ಯಥಾಸ್ಥಾನಂ - ಸ್ಥಾನಾನುಸಾರವಾಗಿ, ಪಾವಕಂ - ಅಗ್ನಿಯನ್ನು, ಪ್ರಚಿಕ್ಷಿಪುಃ - ಇರಿಸಿದರು, ಪೃಷದಾಜ್ಯೇನ - ದಧ್ಯಾಜ್ಯ ಮಿಶ್ರವಾದ ಹವಿರ್ದ್ರವ್ಯದಿಂದ, ಸಂಪೂರ್ಣಂ - ತುಂಬಿರುವ, ಸ್ರುವಂ - ಸ್ರುವವನ್ನು, ಪ್ರಚಿಕ್ಷಿಪುಃ - ಇರಿಸಿದರು.
|| ೧೦೬ || ಪಾದಯೋಃ - ಪಾದಗಳ ಮಧ್ಯದಲ್ಲಿ, ಶಕಟಂ - ಸೋಮರಾಜನನ್ನು ತರಿಸುವ ಭಂಡಿಯನ್ನೂ, ಪ್ರಾದುಃ - ಇರಿಸಿದರು, ಊರ್ವೋಃ - ಊರುಗಳ, ಅಂತಃ - ಮಧ್ಯದಲ್ಲಿ, ಉಲೂಖಲಂ - ಮರದ ಒರಳನ್ನೂ, ಪ್ರಾದುಃ - ಕೊಟ್ಟರು, ವಿಚಕ್ಷಣಾಃ - ವಿದ್ವಾಂಸರಾದ ರಾಕ್ಷಸರು, ಯಥಾಸ್ಥಾನಂ - ಆಯಾಯ ಸ್ಥಾನಗಳಲ್ಲಿ, ಸರ್ವಾಣಿ - ಸಮಸ್ತಗಳಾದ, ದಾರುಪಾತ್ರಾಣಿ - ಮರದ ಪಾತ್ರಗಳನ್ನು, ಅರಣಿಂ - ಅರಣಿಯನ್ನು, ಉತ್ತರಾರಣಿಂಚ - ಉತ್ತರಾರಣಿಯನ್ನೂ, (ಮೇಲೆ ಮಥಿಸುವ ಅರಣಿಯನ್ನು), ಅನ್ಯತ್ - ಮತ್ತೊಂದಾದ, ಮುಸಲಂಚ - ಮುಸಲವೆಂಬ ಪಾತ್ರೆಯನ್ನು, ದತ್ತ್ವಾ - ಕೊಟ್ಟು, ಶಾಸ್ತ್ರದೃಷ್ಟೇನ - ಶಾಸ್ತ್ರದಲ್ಲಿ ಹೇಳಲ್ಪಟ್ಟ, ಮಹ....ಚ - ಋಷಿಪ್ರೋಕ್ತವಾದ, ವಿಧಿನಾ -

---

ಕೃಷ್ಣಾಜಿನದಿಂದಲೂ ಹರಡಿರುವ ಚಿತಿಯನ್ನು ಶಾಸ್ತ್ರೋಕ್ತಪ್ರಕಾರವಾಗಿ ಬ್ರಹ್ಮಮೇಧ ಮಂತ್ರೋಚ್ಚಾರಣಪೂರ್ವಕವಾಗಿ ನಿರ್ಮಿಸಿದರು. ಆ ಸಮಯದಲ್ಲಿ ರಾಕ್ಷಸ ಋತ್ವಿಜರೆಲ್ಲರೂ ಮರಣಾನಂತರ ಮೊದಲು ಮಾಡಬೇಕಾದ ಇಷ್ಟಿಯನ್ನು ಮಾಡಿದರು. ಆಮೇಲೆ ಅವರು ವೇದಪ್ರೋಕ್ತವಾದ, ಅರಸರಿಗೆ ಸಲ್ಲಬೇಕಾದ ಪಿತೃಮೇಧವನ್ನಾರಂಭಿಸಿದರು. ಆಗ ಚಿತಿಗೆ ಆಗ್ನೇಯಭಾಗದಲ್ಲಿ ಒಂದು ವೇದಿಕೆಯನ್ನು ನಿರ್ಮಿಸಿ ಅಲ್ಲಿ ಯಥಾಸ್ಥಾನಿಕವಾಗಿ ತ್ರೇತಾಗ್ನಿಗಳನ್ನು ಸ್ಥಾಪಿಸಿದರು. ಆ ತರುವಾಯ ಮೊಸರು ತುಪ್ಪಗಳಿಂದ ಚೆನ್ನಾಗಿ ತೋಯಿಸಿದ ಸ್ರುವವನ್ನು ಎಲ್ಲ ಋತ್ವಿಜರೂ ಚಿತಿಯಲ್ಲಿ ಹೋಮ ಮಾಡಿದರು. ಆಗ ರಾವಣಾಸುರನ ಪಾದಗಳಲ್ಲಿ ಸೋಮರಾಜಾನಯನ ಶಕಟವನ್ನಿರಿಸಿದರು. ಆಮೇಲೆ ಊರುಗಳ ನಡುವೆ ಉಲೂಖಲವನ್ನೂ ಸ್ಥಾನಾನುಸಾರವಾಗಿ, ಅರಣಿ ಉತ್ತರಾರಣಿಗಳನ್ನೂ ಕ್ರಮವರಿತು ಇರಿಸಿದರು. ಆಮೇಲೆ

||೧೦೮|| ತತ್ರ ಮೇಧ್ಯಂ ಪಶುಂ ಹತ್ವಾ ರಾಕ್ಷಸೇಂದ್ರಸ್ಯ ರಾಕ್ಷಸಾಃ । ಅನುಸ್ತರಣಿಕಾಂ ರಾಜ್ಞೋ ಘೃತಾಕ್ತಾಂ ಸಮವೇಶಯನ್ ॥ ೧೦೯ ॥ ಗಂಧೈರ್ಮಾಲ್ಯೈರಲಂಕೃತ್ಯ ರಾವಣಂ ದೀನಮಾನಸಾಃ । ವಿಭೀಷಣಸಹಾಯಾಸ್ತೇ ವಸ್ತ್ರೈಶ್ಚ ವಿವಿಧೈರಪಿ । ಲಾಜೈಶ್ಚಾವಕಿರಂತಿಸ್ಮ ಬಾಷ್ಪಪೂರ್ಣಮುಖಾಸ್ತದಾ ॥ ೧೧೦-೧೧೧ ॥ ದದೌಚ ಪಾವಕಂ ತಸ್ಯ ವಿಧಿಯುಕ್ತಂ ವಿಭೀಷಣಃ । ಸ್ನಾತ್ವಾ ಚೈವಾರ್ದ್ರವಸ್ತ್ರೇಣ ತಿಲಾನ್ ದೂರ್ವಾಭಿಮಿಶ್ರಿತಾನ್ ॥ ೧೧೨ ॥ ಉದಕೇನಚ ಸಂಮಿಶ್ರಾನ್ ಪ್ರದಾಯ ವಿಧಿ ಪೂರ್ವಕಂ । ಪ್ರದಾಯಚೋದಕಂ ತಸ್ಮೈ ಮೂರ್ಧ್ನಾ ಚೈನಂ ನಮಸ್ಯಚ । ತಾಃ

ಶಾಸ್ತ್ರದಿಂದ, ತತ್ರ - ಆ ರುದ್ರಭೂಮಿಯಲ್ಲಿ, ರಾಜ್ಞಃ - ಅರಸನಾದ, ರಾಕ್ಷಸೇಂದ್ರಸ್ಯ - ರಾಕ್ಷಸನ, ಪ್ರೀತಯೇ - ಪ್ರೀತಿನಿಮಿತ್ತವಾಗಿ, ಮೇಧ್ಯಂ - ಪರಿಶುದ್ಧವಾದ, ಪಶುಂ - ಪಶುವನ್ನು, ಹತ್ವಾ - ಆಲಂಭನ ಮಾಡಿ, ಘೃತಾಕ್ತಾಂ - ಘೃತದಿಂದ ನೆನೆಸಲ್ಪಟ್ಟ, ಅನುಸ್ತರಣಿಕಾಂ - ಪರಿಸ್ತರಣಗಳನ್ನು, ಸಮವೇಶಯನ್ - ಇರಿಸಿದರು. ||೧೦೭-೧೦೯|| ದೀನಮಾನಸಾಃ - ಪರಿತಪ್ತವಾದ ಮನವುಳ್ಳ, ತೇ - ಆ ರಕ್ಕಸರು, ವಿಭೀ....ಯಾಃ - ವಿಭೀಷಣನಿಗೆ ಸಹಾಯಭೂತರಾಗಿ, ತದಾ - ಆ ಕಾಲದಲ್ಲಿ, ಬಾಷ್ಪಪೂರ್ಣಮುಖಾಃ - ಕಂಬನಿಗಳಿಂದ ಪೂರ್ಣವಾದ ಮುಖವುಳ್ಳವರಾಗಿ, ರಾವಣಂ - ರಾವಣನನ್ನು, ಗಂಧೈಃ - ಗಂಧಗಳಿಂದಲೂ, ಮಾಲ್ಯೈಶ್ಚ - ಪುಷ್ಪಹಾರಗಳಿಂದ, ತಥಾ - ಹಾಗೆಯೇ, ವಿವಿಧೈಃ - ನಾನಾಬಗೆಗಳಾದ, ವಸ್ತ್ರೈಶ್ಚ - ವಸ್ತ್ರಗಳಿಂದಲೂ, ಅಲಂಕೃತ್ಯ - ಅಲಂಕರಿಸಿ, ಲಜೈಶ್ಚ - ಅರಳುಗಳಿಂದ, ಅವಕಿರಂತಿಸ್ಮ - ಎರಚಿದರಷ್ಟೆ. ||೧೧೦|| ವಿಭೀಷಣಃ - ವಿಭೀಷಣನು, ತಸ್ಯ - ಆ ರಾವಣನಿಗೆ, ವಿಧಿಯುಕ್ತಂ - ಶ್ರೌತವಿಧಿಯಿಂದ ಕೂಡಿರುವ, ಪಾವಕಂ - ಅಗ್ನಿಯನ್ನು, ದದೌ - ಕೊಟ್ಟನು, ಸ್ನಾತ್ವಾಚೈವ - ಸ್ನಾನವನ್ನು ಮಾಡಿ, ಆರ್ದ್ರವಸ್ತ್ರೇಣ - ಆರ್ದ್ರವಸ್ತ್ರದಿಂದ, ವಿಧಿಪೂರ್ವಕಂ-ವಿಧ್ಯುಕ್ತಪುರಸ್ಸರವಾಗಿ, ದೂರ್ವಾಭಿಮಿಶ್ರಿತಾನ್ ಗರಿಕೆಗಳಿಂದ ಕೂಡಿರುವ, ಉದಕೇನಚ- ಉದಕದಿಂದಲೂ, ಸಮ್ಮಿಶ್ರಾನ್ - ಕೂಡಿದ, ತಿಲಾನ್ - ತಿಲಗಳನ್ನು, ಪ್ರದಾಯ - ಕೊಟ್ಟು, ತಸ್ಮೈ - ಆ ರಾವಣನಿಗೆ, ಉದಕಂ - ಉದಕವನ್ನು, ಪ್ರದಾಯ - ಕೊಟ್ಟು, ಮೂರ್ಧ್ನಾ - ಶಿರಸ್ಸಿನಿಂದ, ಏನಂ - ಈ ದಶಕಂಠನನ್ನು ಕುರಿತು, ನಮಸ್ಯಚ - ನಮಸ್ಕಾರವನ್ನು ಮಾಡಿ, ತಾಸ್ತ್ರಿಯಃ - ಆ ಅಂತಃಪುರ

ಮುಸಲವೆಂಬ ಪಾತ್ರವಿಶೇಷವನ್ನು ಕೊಟ್ಟು, ಧೊರೆಯಾಗಿದ್ದ ಆ ರಾಕ್ಷಸನ ಪ್ರೀತ್ಯರ್ಥವಾಗಿ ಪರಿಶುದ್ಧವಾದ ಪಶುವೊಂದನ್ನು ಹನನ ಮಾಡಿ, ತುಪ್ಪದಿಂದ ತೋಯಿಸಿದ ಅನುಸ್ತರಣಿಕೆಗಳನ್ನು ಚಿತಿಯ ಮೇಲಿರಿಸಿದರು. ಬಳಿಕಲಾ ಋತ್ವಿಜರು ಗಂಧಮಾಲ್ಯಾದಿಗಳಿಂದಲೂ, ವಿವಿಧ ವಸ್ತ್ರಗಳಿಂದಲೂ ರಾವಣಾಸುರನನ್ನಲಂಕರಿಸಿದರು. ವಿಭೀಷಣ ಸಹಿತರಾದ ಆ ರಾಕ್ಷಸ ಋತ್ವಿಜರೆಲ್ಲರೂ ವಿವಿಧವಾದ ಲಾಜಾದಿ ದ್ರವ್ಯಗಳನ್ನು ಆ ರಾಕ್ಷಸೇಶ್ವರನ ಮೇಲೆ ಚೆಲ್ಲಿ ಅತ್ಯಂತ ವ್ಯಸನದಿಂದ ಕಣ್ಣೀರಿಟ್ಟರು. ||೧೦೩–೧೧೧|| ಆ ತರುವಾಯ ಧರ್ಮಾತ್ಮನಾದ ವಿಭೀಷಣನಾದರೋ ಶಾಸ್ತ್ರೋಕ್ತಪ್ರಕಾರವಾಗಿ ಭ್ರಾತೃವಿನ ದಹನ ಸಂಸ್ಕಾರವನ್ನು ನೆರವೇರಿಸಿದನು. ಆದಾದ ತರುವಾಯ ಸ್ನಾನ ಮಾಡಿ ಒದ್ದೆಯ ಬಟ್ಟೆಯೊಡನೆಯೇ ದರ್ಭಾದಿಗಳೊಡಗೂಡಿದ ತಿಲೋದಕವನ್ನೂ ಶಾಸ್ತ್ರೋಕ್ತಪ್ರಕಾರವಾಗಿ ಕೊಟ್ಟನು. ಇದಾದಮೇಲೆ ಅವನು ಅಣ್ಣನಾದ ರಾವಣಾಸುರನಿಗೆ ಶಿರಸ್ಸಿನಿಂದ ಪ್ರಣಾಮ ಮಾಡಿ ಅಲ್ಲಿದ್ದ ಸ್ತ್ರೀಯರೆಲ್ಲರನ್ನೂ

ಸ್ತ್ರಿಯೋಽನುನಯಾಮಾಸ ಸಾಂತ್ವಮುಕ್ತ್ವಾ ಪುನಃಪುನಃ ॥೧೧೩-೧೧೪॥ ಗಮ್ಯತಾಮಿತಿ ತಾಸ್ಸರ್ವಾ ವಿವಿಶುರ್ನಗರಂ ತದಾ । ಪ್ರವಿಷ್ಟಾಸು ಚ ಸರ್ವಾಸು ರಾಕ್ಷಸೀಷು ವಿಭೀಷಣಃ । ರಾಮಪಾರ್ಶ್ವಮುಪಾಗಮ್ಯ ತದಾತಿಷ್ಠದ್ವಿನೀತವತ್ ॥ ೧೧೫ ॥

ರಾಮೋಽಪಿ ಸಹಸೈನ್ಯೇನ ಸುಗ್ರೀವಸ್ಸಹಲಕ್ಷ್ಮಣಃ ।
ಹರ್ಷಂ ಲೇಭೇ ರಿಪುಂ ಹತ್ವಾ ಯಥಾ ವೃತ್ರಂ ಶತಕ್ರತುಃ ॥ ೧೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ದಶೋತ್ತರಶತತಮಸ್ಸರ್ಗಃ

ಸ್ತ್ರೀಯರನ್ನು, ಪುನಃಪುನಃ - ಬಾರಿಬಾರಿಗೂ, ಸಾಂತ್ವಂ - ಸಮಾಧಾನ ವಚನವನ್ನೂ, ಉಕ್ತ್ವಾ - ಹೇಳಿ, ಗಮ್ಯತಾಮಿತಿ - ಹೋಗಿರೆಂದು, ಅನುನಯಾಮಾಸ - ಊರಿಗೆ ಕಳುಹಿಸಿದನು. ॥೧೧೧-೧೧೪॥ ತದಾ - ಆಗ, ಸರ್ವಾಃ - ಸಮಸ್ತರಾದ, ತಾಃ - ಆ ಸ್ತ್ರೀಯರು, ನಗರಂ - ಪಟ್ಟಣವನ್ನು, ವಿವಿಶುಃ - ಹೊಕ್ಕರು, ಸರ್ವಾಸು - ಸಮಸ್ತರಾದ, ರಾಕ್ಷಸೀಷು - ರಕ್ಕಸಸ್ತ್ರೀಯರು, ಪ್ರವಿಷ್ಟಾಸು - ಊರಿಗೆ ಹೋದವರಾಗಲು, ವಿಭೀಷಣಃ - ವಿಭೀಷಣನು, ತದಾ - ಆ ಸಮಯದಲ್ಲಿ, ರಾಮಪಾರ್ಶ್ವಂ - ಶ್ರೀರಾಮನ ಬಳಿಯನ್ನು, ಉಪಾಗಮ್ಯ - ಸೇರಿ, ವಿನೀತವತ್ - ನಮ್ರನಾಗಿ, ಅತಿಷ್ಠತ್ - ನಿಂತನು. ॥ ೧೧೫ ॥ ರಾಮೋಽಪಿ - ಶ್ರೀರಾಮನೂ, ಸೈನ್ಯೇನಸಹ - ಸೇನೆಯಿಂದೊಡಗೂಡಿ, ಸುಗ್ರೀವಃ - ಸುಗ್ರೀವನು, ಸಹಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿಯೂ, ವೃತ್ರಂ - ವೃತಾಸುರನನ್ನು, ಹತ್ವಾ - ಕೊಂದು, ಶತಕ್ರತುರ್ಯಥಾ-ದೇವೇಂದ್ರನು ಹೇಗೋ, ರಿಪುಂ-ಶತ್ರುವಾದ ದಶಕಂಠನನ್ನು, ಹತ್ವಾ-ಕೊಂದು, (ಹಾಗೆ) ಹರ್ಷಂ - ಸಂತೋಷವನ್ನು, ಲೇಭೇ - ಹೊಂದಿದನು. ॥ ೧೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ದಶೋತ್ತರಶತತಮಸ್ಸರ್ಗಃ.

ಮೃದುವಚನಗಳಿಂದ ಸಂತೈಸಿ "ಇನ್ನು ನೀವೆಲ್ಲರೂ ಮನೆಗಳಿಗೆ ಹೊರಡಿರಿ" ಎಂದು ಹೇಳಿದ ಬಳಿಕ ಅವರೆಲ್ಲರೂ ಲಂಕಾನಗರಕ್ಕೆ ಹೊರಟುಹೋದರು. ॥ ೧೧೨-೧೧೪ ॥ ಹೀಗೆ ಅವರೆಲ್ಲರೂ ನಗರಾಭಿಮುಖವಾಗಿ ಹೊರಟುಹೋಗಲು ರಾಕ್ಷಸೋತ್ತಮನಾದ ವಿಭೀಷಣನು ಶ್ರೀರಾಮಪಾರ್ಶ್ವವನ್ನು ಸೇರಿ ವಿನೀತನಾಗಿ ನಿಂತುಕೊಂಡನು. ಶ್ರೀರಾಮಚಂದ್ರನೂ ಕೂಡ ಶತ್ರುವಾದ ರಾವಣನನ್ನೀರೀತಿ ಸಂಹರಿಸಿ ಸುಗ್ರೀವಲಕ್ಷ್ಮಣಸಹಿತನಾಗಿ, ವೃತ್ರಾಸುರನನ್ನು ಸಂಹರಿಸಿದ ಮಹೇಂದ್ರನಂತೆ ಸಂತೋಷಗೊಂಡನು. ॥ ೧೧೫-೧೧೬ ॥

ಇಂತಿದು ಮಂಡೋದರೀವಿಲಾಪ-ರಾವಣದಹನ ಸಂಸ್ಕಾರ-ಶ್ರೀರಾಮ ಸಂತೋಷಹೇತ್ಯಾದಿ ವೃತ್ತಾಂತ ನಿರೂಪಣವೆಂಬ ನೂರಹದಿನಾಲ್ಕನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚದಶೋತ್ತರಶತತಮಸ್ಸರ್ಗಃ

ತೇ ರಾವಣವಧಂ ದೃಷ್ಟ್ವಾ ದೇವಗಂಧರ್ವದಾನವಾಃ । ಜಗ್ಮುಸ್ಸ್ವೈಸ್ಸ್ವೈರ್ವಿಮಾನೈಸ್ತೇ ಕಥಯಂತಃ ಶುಭಾಃ ಕಥಾಃ ॥ ೧ ॥ ರಾವಣಸ್ಯ ವಧಂ ಘೋರಂ ರಾಘವಸ್ಯ ಪರಾಕ್ರಮಂ । ಸುಯುದ್ಧಂ ವಾನರಾಣಾಂಚ ಸುಗ್ರೀವಸ್ಯ ಚ ಮಂತ್ರಿತಂ ॥ ೨ ॥ ಅನುರಾಗಂ ಚ ವೀರ್ಯಂ ಚ ಸೌಮಿತ್ರೇರ್ಲಕ್ಷ್ಮಣಸ್ಯ ಚ । ಕಥಯಂತೋ ಮಹಾಭಾಗಾ ಜಗ್ಮುರ್ಹೃಷ್ಟಾ ಯಥಾಗತಂ ॥ ೩ ॥ ರಾಘವಸ್ತು ರಥಂ ದಿವ್ಯಮಿಂದ್ರದತ್ತಂ ಶಿಖಿಪ್ರಭಂ । ಅನುಜ್ಞಾಯ ಮಹಾಭಾಗೋ ಮಾತಲಿಂ ಪ್ರತ್ಯಪೂಜಯತ್

ತೇ - ಆ ಪ್ರಸಿದ್ಧರಾದ, ದೇ....ವಾಃ - ದೇವತೆಗಳೂ, ಗಂಧರ್ವರೂ, ದಾನವರೂ, ರಾವಣವಧಂ - ದಶಕಂಠನ ಸಂಹಾರವನ್ನು, ದೃಷ್ಟ್ವಾ - ಕಂಡು, ಶುಭಾಃ - ಶುಭಕರವಾದ, ಕಥಾಃ- ಶ್ರೀರಾಮಚರಿತ್ರೆಗಳನ್ನು, ಕಥಯಂತಃ - ಹೇಳುತ್ತ, ಸ್ವೈಃಸ್ವೈಃ - ತಮ್ಮತಮ್ಮ, ವಿಮಾನೈಃ - ವಿಮಾನಗಳಿಂದ, ಜಗ್ಮುಃ - ತೆರಳಿದರು. ॥ ೧ ॥ ಮಹಾಭಾಗಾಃ - ಮಹಾ ಪುಣ್ಯಶಾಲಿಗಳಾದ ಆ ದೇವತೆಗಳೇ ಮುಂತಾದವರೆಲ್ಲ, ಹೃಷ್ಟಾಃ - ಸಂತೋಷಗೊಂಡವರಾಗಿ, ರಾವಣಸ್ಯ - ದಶಕಂಠನ, ಘೋರಂ - ಭಯಂಕರವಾದ, ವಧಂಚ - ಸಂಹಾರವನ್ನೂ, ರಾಘವಸ್ಯ - ಶ್ರೀರಾಮನ, ಪರಾಕ್ರಮಂಚ - ಪರಾಕ್ರಮವನ್ನೂ, ಸುಗ್ರೀವಸ್ಯ - ಸುಗ್ರೀವನ, ಮಂತ್ರಿತಂ - ಮಂತ್ರಿತ್ವವನ್ನೂ, ವಾನರಾಣಾಂ - ಕಪಿಗಳ, ಸುಯುದ್ಧಂಚ - ಮಹಾ ಯುದ್ಧವನ್ನೂ, ಸೌಮಿತ್ರೇಃ-ಸುಮಿತ್ರಾದೇವಿಯ ಕುಮಾರನಾದ, ಲಕ್ಷ್ಮಣಸ್ಯಚ-ಲಕ್ಷ್ಮಣನ, ಅನುರಾಗಂಚ-ಯುದ್ಧದಲ್ಲಿ ಆಸಕ್ತಿಯನ್ನೂ, ಅಥವಾ ಅಣ್ಣನಲ್ಲಿನ ವಾತ್ಸಲ್ಯವನ್ನೂ, ವೀರ್ಯಂಚ-ಸಾಮರ್ಥ್ಯವನ್ನೂ, ಕಥಯಂತಃ-ಹೇಳುತ್ತ, ಯಥಾಗತಂ- ಬಂದಹಾಗೆ, ಜಗ್ಮುಃ-ತೆರಳಿದರು. ॥೨-೩॥ ಮಹಾಭಾಗಃ - ಮಹಾ ಪುಣ್ಯಶಾಲಿಯಾದ, ರಾಘವಸ್ತು - ಶ್ರೀರಾಮನಾದರೋ, ಇಂದ್ರದತ್ತಂ-ದೇವೇಂದ್ರನಿಂದ ಕೊಡಲ್ಪಟ್ಟ, ಶಿಖಿಪ್ರಭಂ-ಅಗ್ನಿಕಾಂತಿಯುಳ್ಳ, ದಿವ್ಯಂ-ಮನೋಹರವಾದ, ರಥಂ-ತೇರನ್ನು, ಅನುಜ್ಞಾಯ-ತೆಗೆದುಕೊಂಡು ಹೋಗೆಂದು ಆಜ್ಞಾಪಿಸಿ, ಮಾತಲಿಂ - ಇಂದ್ರಸಾರಥಿಯಾದ ಮಾತಲಿಯನ್ನು, ಪ್ರತ್ಯಪೂಜಯತ್ - ಪೂಜಿಸಿದನು. ॥೪॥ ರಾಘವೇಣ - ಶ್ರೀರಾಮನಿಂದ, ಅಭ್ಯನುಜ್ಞಾತಃ - ಆಜ್ಞಾಪಿಸಲ್ಪಟ್ಟ, ಶಕ್ರಸಾರಥಿಃ - ಇಂದ್ರಸಾರಥಿಯಾದ,

---

ಆ ತರುವಾಯ ದೇವದಾನವ ಗಂಧರ್ವರೆಲ್ಲರೂ ರಾವಣಾಸುರ ವಧೆಯನ್ನು ಕಂಡು, ಮಹಾ ಭಯಂಕರವಾದ ಆ ರಾಕ್ಷಸನ ವಧೆಯನ್ನೂ, ಶ್ರೀರಾಮಮೂರ್ತಿಯ ಅತುಲ ಪರಾಕ್ರಮವನ್ನೂ, ವಾನರೆಸಗಿದ ಚಮತ್ಕಾರ ಪುರಸ್ಸರವಾದ ಮಹಾ ಯುದ್ಧವನ್ನೂ, ವಾನರೇಶ್ವರನಾದ ಸುಗ್ರೀವನ ಮಂತ್ರಿತ್ವವನ್ನೂ, ಲಕ್ಷ್ಮಣಸ್ವಾಮಿಯ ಬಂಧುಪ್ರೇಮ ಮತ್ತು ಪರಾಕ್ರಮಗಳನ್ನೂ ಕುರಿತ ಮಾತುಗಳನ್ನಾಡಿಕೊಳ್ಳುತ್ತ ಸಂತೋಷಭರಿತರಾಗಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು. ಇತ್ತ ಶ್ರೀರಾಮಚಂದ್ರನಾದರೋ ಮಹೇಂದ್ರನು ಕಳುಹಿಸಿಕೊಟ್ಟಿದ್ದ, ಯಜ್ಞೇಶ್ವರನ ಕಾಂತಿಗೆ ಸಮಾನವಾದ ದಿವ್ಯ ಕಾಂತಿಯುಳ್ಳ ರಥವನ್ನು ತೆಗೆದುಕೊಂಡು ಹೋಗೆಂದು ಹೇಳಿ ಮಾತಲಿಯನ್ನು ವಿಧಿವತ್ತಾಗಿ ಬಹು

॥ ೪ ॥ ರಾಘವೇಣಾಭ್ಯನುಜ್ಞಾತೋ ಮಾತಲಿಃ ಶಕ್ರಸಾರಥಿಃ । ದಿವ್ಯಂ ತಂ ರಥಮಾಸ್ಥಾಯ ದಿವಮೇವಾರುರೋಹ ಸಃ ॥ ೫ ॥ ತಸ್ಮಿಂಸ್ತು ದಿವಮಾರೂಢೇ ಸುರಸಾರಥಿಸತ್ತಮೇ । ರಾಘವಃ ಪರಮಪ್ರೀತಸ್ಸುಗ್ರೀವಂ ಪರಿಷಸ್ವಜೇ ॥ ೬ ॥ ಪರಿಷ್ವಜ್ಯ ಚ ಸುಗ್ರೀವಂ ಲಕ್ಷ್ಮಣೇನ ಪ್ರಚೋದಿತಃ । ಪೂಜ್ಯಮಾನೋ ಹರಿಶ್ರೇಷ್ಠೈರಾಜಗಾಮ ಬಲಾಲಯಂ ॥ ೭ ॥ ಅಬ್ರವೀಚ್ಚ ತದಾ ರಾಮಸ್ಸಮೀಪಪರಿವರ್ತಿನಂ । ಸೌಮಿತ್ರಿಂ ಸತ್ವಸಂಪನ್ನಂ ಲಕ್ಷ್ಮಣಂ ದೀಪ್ತತೇಜಸಂ ॥ ೮ ॥ "ವಿಭೀಷಣಮಿಮಂ ಸೌಮ್ಯ! ಲಂಕಾಯಾಮಭಿಷೇಚಯ । ಅನುರಕ್ತಂಚ ಭಕ್ತಂಚ ಮಮ ಚೈವೋಪಕಾರಿಣಂ ॥ ೯ ॥ ಏಷ ಮೇ ಪರಮಃ ಕಾಮೋ ಯದೀಮಂ ರಾವಣಾನುಜಂ ।

ಸಮಾತಲಿಃ-ಆ ಮಾತಲಿಯು, ದಿವ್ಯಂ-ದೇವತಾಸಂಬಂಧವಾದ, ರಥಂ-ರಥದಲ್ಲಿ, ಆಸ್ಥಾಯ ಕುಳಿತು, ದಿವಮೇವ - ಸ್ವರ್ಗವನ್ನು ಕುರಿತೇ, ಆರುರೋಹ - ಏರಿದನು. ॥ ೫ ॥ ಸುರ....ಮೇ - ದೇವೇಂದ್ರನ ಸಾರಥಿ ಶ್ರೇಷ್ಠನಾದ, ತಸ್ಮಿನ್ - ಆ ಮಾತಲಿಯು, ದಿವಂ - ಸ್ವರ್ಗಲೋಕವನ್ನು ಕುರಿತು, ಆರೂಢೇ - ಏರಿದವನಾಗಲು, ರಾಘವಃ - ಶ್ರೀರಾಮನು, ಪರಮಪ್ರೀತಃ - ಬಹಳ ಸಂತೋಷಗೊಂಡವನಾಗಿ, ಸುಗ್ರೀವಂ - ಸುಗ್ರೀವನನ್ನು, ಪರಿಷಸ್ವಜೇ - ಅಪ್ಪಿಕೊಂಡನು. ॥೬॥ ಸುಗ್ರೀವಂ - ಸುಗ್ರೀವನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಲಕ್ಷ್ಮಣೇನ - ಲಕ್ಷ್ಮಣನಿಂದ, ಪ್ರಚೋದಿತಃ - ಪ್ರೇರಿತನಾಗಿ, ಹರಿಶ್ರೇಷ್ಠೈಃ - ವಾನರೋತ್ತಮರಿಂದ, ಪೂಜ್ಯಮಾನಃ - ಪೂಜಿಸಲ್ಪಟ್ಟವನಾಗಿ, ಬಲಾಲಯಂ - ವಾನರ ಸೇನೆಯಿಳಿದಿರುವ ಪಾಳೆಯವನ್ನು ಕುರಿತು, ಆಜಗಾಮ - ಬಂದನು. ॥ ೭ ॥ ತದಾ - ಆ ಕಾಲದಲ್ಲಿ, ರಾಮಃ - ಶ್ರೀರಾಮನು, ಸಮೀ....ನಂ - ಬಳಿಯಲ್ಲಿ ನಿಂತಿರುವ, ಸತ್ಯಸಂಪನ್ನಂ - ಸತ್ಯಧರ್ಮಾದಿಗುಣಗಳಿಂದ ಕೂಡಿದ, ದೀಪ್ತತೇಜಸಂ - ಪ್ರಕಾಶಮಾನವಾದ ತೇಜಸ್ಸುಳ್ಳ, ಸೌಮಿತ್ರಿಂ - ಲಕ್ಷ್ಮಣನನ್ನು ಕುರಿತು, ಅಬ್ರವೀತ್ - ಹೇಳಿದನು. ॥ ೮ ॥ ಸೌಮ್ಯ - ಸೌಮ್ಯನೇ, ಅನುರಕ್ತಂಚ - ನನ್ನಲ್ಲಿ ಅನುರಾಗವುಳ್ಳ, ಭಕ್ತಂಚ - ಭಕ್ತನಾದ, ಮಮ - ನನಗೆ, ಉಪಕಾರಿಣಂಚೈವ - ಉಪಕಾರವನ್ನೇ ಮಾಡಿರುವ, ಇಮಂವಿಭೀಷಣಂ - ಈ ವಿಭೀಷಣನನ್ನು, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಅಭಿಷೇಚಯ - ಪಟ್ಟಾಭಿಷೇಕ ಮಾಡು, ಸೌಮ್ಯ - ಸೌಮ್ಯನೇ, ಲಂಕಾಯಾಂ - ಲಂಕಾಪಟ್ಟಣದಲ್ಲಿ, ರಾವಣಾನುಜಂ - ದಶಕಂಠನ ತಮ್ಮನಾದ, ಇಮಂವಿಭೀಷಣಂ - ಈ ವಿಭೀಷಣನನ್ನು, ಅಭಿಷಿಕ್ತಂ-

---

ಮತಿಸಿದನು. ಆ ತರುವಾಯ ಮಾತಲಿಯು ರಥದೊಡನೆ ಸ್ವರ್ಗಲೋಕಕ್ಕೆ ತೆರಳಿದನು. ॥ ೧–೫ ॥ ಅತ್ತ ಇಂದ್ರಸಾರಥಿಯಾದ ಆತನು ರಥರೂಢನಾಗಿ ಸ್ವರ್ಗಕ್ಕೆ ಪ್ರಯಾಣಮಾಡಿದೊಡನೆಯೇ ಶ್ರೀರಾಮನು, ತನ್ನ ಕಾರ್ಯಗಳೆಲ್ಲವೂ ಈಡೇರಿದುದಕ್ಕಾಗಿ ಅಪರಿಮಿತಾನಂದ ತುಂದಿಲಿತಸ್ವಾಂತನಾಗಿ ಮಿತ್ರೋತ್ತಮನಾದ ಸುಗ್ರೀವನನ್ನು ಗಾಢವಾಗಿ ಆಲಿಂಗಿಸಿಕೊಂಡನು. ಆಮೇಲೆ ತಮ್ಮನಾದ ಲಕ್ಷ್ಮಣಸ್ವಾಮಿಯಿಂದ ಪ್ರೇರಿತನಾದ ಆ ರಘುರಾಮನು ಕಪಿಶ್ರೇಷ್ಠರಿಂದ ಪೂಜಿಸಲ್ಪಟ್ಟವನಾಗಿ ಸೈನ್ಯವಿದ್ದ ಪಾಳೆಯಕ್ಕೆ ಬಂದನು. ಅಲ್ಲಿಗೆ ಬಂದ ಬಳಿಕ ಆತನು ತನ್ನ ಬಳಿಯಿದ್ದ ಸತ್ಯಸಂಪನ್ನನೂ, ಮಹಾ ಕಾಂತಿಮಂತನೂ ಆದ ಲಕ್ಷ್ಮಣನನ್ನು ಕುರಿತು, "ಎಲೈ ಸೌಮ್ಯನೇ! ಕೇವಲ ಅನುರಕ್ತನೂ, ಭಕ್ತನೂ, ನನಗೆ ಬಹಳ ಉಪಕಾರ ಮಾಡಿದವನೂ ಆದ ಈ ವಿಭೀಷಣನನ್ನು ಲಂಕಾ ಸಿಂಹಾಸನದಲ್ಲಿ ಅಭಿಷೇಕ ಮಾಡುವವನಾಗು. ಎಲೈ ಪ್ರಶಾಂತ ಹೃದಯನೇ! ಲಂಕಾರಾಜ್ಯದಲ್ಲಿ ಸುಪ್ರತಿಷ್ಠಿತ

ಲಂಕಾಯಾಂ ಸೌಮ್ಯ ಪಶ್ಯೇಯಮಭಿಷಿಕ್ತಂ ವಿಭೀಷಣಂ" ॥ ೧೦ ॥ ಏವಮುಕ್ತಸ್ತು ಸೌಮಿತ್ರೀ ರಾಘವೇಣ ಮಹಾತ್ಮನಾ । ತಥೇತ್ಯುಕ್ತ್ವಾತು ಸಂಹೃಷ್ಟಸ್ಸೌವರ್ಣಂ ಘಟಮಾದಧೇ ॥ ೧೧ ॥ ತಂ ಘಟಂ ವಾನರೇಂದ್ರಾಣಾಂ ಹಸ್ತೇ ದತ್ವಾ ಮನೋಜವಾನ್ । ಆದಿದೇಶ ಮಹಾಸತ್ವಾನ್ ಸಮುದ್ರಸಲಿಲಾನಯೇ ॥ ೧೨ ॥ ಇತಿ ಶೀಘ್ರಂ ತತೋ ಗತ್ವಾ ವಾನರಾಸ್ತೇ ಮಹಾಬಲಾಃ । ಆಗತಾಸ್ತಜ್ಜಲಂ ಗೃಹ್ಯ ಸಮುದ್ರಾದ್ವಾನರೋತ್ತಮಾಃ ॥ ೧೩ ॥ ತತಸ್ತ್ವೇಕಂ ಘಟಂ ಗೃಹ್ಯ ಸಂಸ್ಥಾಪ್ಯ ಪರಮಾಸನೇ । ಘಟೇನ ತೇನ ಸೌಮಿತ್ರಿರಭ್ಯಷಿಂಚದ್ವಿಭೀಷಣಂ ॥ ೧೪ ॥ ಲಂಕಾಯಾಂ ರಕ್ಷಸಾಂ ಮಧ್ಯೇ ರಾಜಾನಂ ರಾಮಶಾಸನಾತ್ । ವಿಧಿನಾ ಮಂತ್ರದೃಷ್ಟೇನ ಸುಹೃದ್ಗಣಸಮಾ

ಪಟ್ಟಾಭಿಷಿಕ್ತನನ್ನಾಗಿ, ಪಶ್ಯಾಮಿತಿಯತ್ - ನೋಡುವೆನೆಂಬುದಾವದೋ, ಏಷಃ - ಈ, ಕಾಮಃ - ಕೋರಿಕೆಯು, ಮೇ - ನನಗೆ, ಪರಮಃ - ಮುಖ್ಯವಾದುದು. ॥ ೯ ೧೦ ॥ ಏವಂ - ಈ ಪರಿಯಾಗಿ, ಮಹಾತ್ಮನಾ - ಮಹಾ ಮನಸ್ವಿಯಾದ, ರಾಘವೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ಸೌಮಿತ್ರಿಃ - ಲಕ್ಷ್ಮಣನು, ಪ್ರಹೃಷ್ಟಃ - ಸಂತೋಷಗೊಂಡವನಾಗಿ, ತಥೇತಿ - ಹಾಗೆಯೇ ಆಗಲೆಂದು, ಉಕ್ತ್ವಾ - ಹೇಳಿ, ಸೌವರ್ಣಂ - ಸುವರ್ಣವಿಕಾರವಾದ, ಘಟಂ - ಕಲಶವನ್ನು, ಆದದೇ - ತರಿಸಿದನು. ॥೧೧॥ ತಂಘಟಂ - ಆ ಚಿನ್ನದ ಬಿಂದಿಗೆಯನ್ನು, ವಾನರೇಂದ್ರಾಣಾಂ - ವಾನರೋತ್ತಮರ, ಹಸ್ತೇ - ಕೈಗಳಲ್ಲಿ, ದತ್ವಾ - ಕೊಟ್ಟು, ಸಮು....ಯೇ - ಕಡಲುಗಳ ಉದಕಗಳನ್ನು ತರುವಿಕೆಯಲ್ಲಿ, ಮನೋಜವಾನ್ - ಮನೋವೇಗವುಳ್ಳ, ಮಹಾಸತ್ವಾನ್ - ದೊಡ್ಡ ಸಾಮರ್ಥ್ಯವುಳ್ಳ, ವಾನರಾನ್ - ವಾನರರನ್ನು ಕುರಿತು, ಆದಿದೇಶ - ಅಪ್ಪಣೆ ಮಾಡಿದನು. ॥೧೨॥ ತತಃ - ಆ ಬಳಿಕ, ಮಹಾಬಲಾಃ- ಬಹಳ ಬಲಿಷ್ಠರಾದ, ತೇವಾನರೋತ್ತಮಾಃ - ವಾನರಶ್ರೇಷ್ಠರು, ಅತಿಶೀಘ್ರಂ - ಬಹಳ ಜಾಗ್ರತೆಯಾಗಿ, ಗತ್ವಾ - ಹೋಗಿ, ಸಮುದ್ರಾತ್ - ಕಡಲುಗಳ ದೆಸೆಯಿಂದ, ತಜ್ಜಲಂ - ಆ ಉದಕಗಳನ್ನು, ಗೃಹ್ಯ - ತೆಗೆದುಕೊಂಡು, ಆಗತಾಃ - ಬಂದರು. ॥ ೧೩ ॥ ತತಃ - ಬಳಿಕ, ಸೌಮಿತ್ರಿಃ - ಲಕ್ಷ್ಮಣನು, ಏಕಂಘಟಂ - ಒಂದು ಚಿನ್ನದ ಬಿಂದಿಗೆಯನ್ನು, ಗೃಹ್ಯ - ತೆಗೆದುಕೊಂಡು, ವಿಭೀಷಣಂ - ವಿಭೀಷಣನನ್ನು, ಪರಮಾಸನೇ - ಸಿಂಹಾಸನದಲ್ಲಿ, ಸಂಸ್ಥಾಪ್ಯ - ಕೂಡಿಸಿ, ತೇನಘಟೇನ - ಆ ಕಲಶದಿಂದ, ಅಭ್ಯಷಿಂಚತ್ - ಅಭಿಷೇಕ ಮಾಡಿದನು. ॥ ೧೪ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಸಃ - ಆ ಲಕ್ಷ್ಮಣನು, ಶುದ್ಧಾತ್ಮಾನಂ - ನಿರ್ಮಲಚಿತ್ತನಾದ, ಸುಹೃ....ತಂ - ಸ್ನೇಹಿತರ ಗುಂಪುಗಳಿಂದ ಕೂಡಿರುವ,

---

ನಾಗುವ ಈ ವಿಭೀಷಣ ರಾಜನನ್ನು ನೋಡುವುದೇ ನನಗಿರುವ ಹಿರಿಬಯಕೆ" ಎಂದು ಹೇಳಿದನು. ॥ ೬-೧೦ ॥ ಶ್ರೀರಾಮಮೂರ್ತಿಯು ಈ ಪ್ರಕಾರವಾಗಿ ನುಡಿಯಲು, ಲಕ್ಷ್ಮಣಸ್ವಾಮಿಯು ಹಾಗೆಯೇ ಆಗಲೆಂದು ಹೇಳಿ ಪರಮಾನಂದಭರಿತನಾಗಿ ಸುವರ್ಣ ಕಲಶವನ್ನು ಕೈಗೆ ತೆಗೆದುಕೊಂಡನು. ಆತನಾ ಕಲಶವನ್ನು ಮಹಾ ಬಲಾಢ್ಯರಾದ ವಾನರವೀರರ ಕೈಗಿತ್ತು ಸಪ್ತಸಾಗರಗಳಿಂದಲೂ, ಪುಣ್ಯ ನದಿಗಳಿಂದಲೂ ಉದಕಗಳನ್ನು ತೆಗೆದುಕೊಂಡು ಬನ್ನಿರೆಂದು ಆಜ್ಞಾಪಿಸಿದನು. ಕೂಡಲೇ ಮನೋವೇಗ ವಾಯುವೇಗಗಳುಳ್ಳ ಆ ವಾನರರು ಜಾಗ್ರತೆಯಾಗಿ ತೆರಳಿ ಆತನಪ್ಪಣೆಯಂತೆಯೇ ಆ ಉದಕಗಳನ್ನು ತೆಗೆದುಕೊಂಡು ಬಂದರು. ಆ ತರುವಾಯ ರಾಮಾನುಜನಾದ ಲಕ್ಷ್ಮಣಸ್ವಾಮಿಯು ಶ್ರೀರಾಮನ ಅಪ್ಪಣೆಯಂತೆ, ಪವಿತ್ರ ಹೃದಯನಾದ ವಿಭೀಷಣನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಆ ಸುವರ್ಣ

ನ್ವಿತಂ । ಅಭ್ಯಷಿಂಚತ ಧರ್ಮಾತ್ಮಾ ಶುದ್ಧಾತ್ಮಾನಂ ವಿಭೀಷಣಂ ॥ ೧೫ ॥ ತಸ್ಯಾ ಮಾತ್ಯಾ ಜಹೃಷಿರೇ ಭಕ್ತಾ ಯೇಚಾಽಸ್ಯ ರಾಕ್ಷಸಾಃ । ದೃಷ್ಟ್ವಾಽಭಿಷಿಕ್ತಂ ಲಂಕಾ ಯಾಂ ರಾಕ್ಷಸೇಂದ್ರಂ ವಿಭೀಷಣಂ ॥ ೧೬ ॥ ಸತದ್ರಾಜ್ಯಂ ಮಹತ್ ಪ್ರಾಪ್ಯ ರಾಮ ದತ್ತಂ ವಿಭೀಷಣಃ । ಪ್ರಕೃತೀಸ್ಸಾಂತ್ವಯಿತ್ವಾಚ ತತೋ ರಾಮಮುಪಾಗಮತ್ ॥ ೧೭ ॥ ಅಕ್ಷತಾನ್ ಮೋದಕಾನ್ ಲಾಜಾನ್ ದಿವ್ಯಾಸ್ಸುಮನಸಸ್ತದಾ । ಆಜಹ್ರುರಥ ಸಂಹೃಷ್ಟಾಃ ಪೌರಾಸ್ತಸ್ಮೈ ನಿಶಾಚರಾಃ ॥ ೧೮ ॥ ಸತಾನ್ ಗೃಹೀತ್ವಾ ದುರ್ಧರ್ಷೋ ರಾಘವಾಯ ನ್ಯವೇದಯತ್ । ಮಂಗಳ್ಯಂ ಮಂಗಳಂ ಸರ್ವಂ ಲಕ್ಷ್ಮಣಾಯಚ

ವಿಭೀಷಣಂ - ವಿಭೀಷಣನನ್ನು, ರಾಮಶಾಸನಾತ್ - ಶ್ರೀರಾಮನ ಆಜ್ಞೆಯಿಂದ, ಮಂತ್ರದೃಷ್ಟೇನ - ವೇದಮಂತ್ರಗಳಲ್ಲಿ ಕಾಣಿಸಿದ, ವಿಧಿನಾ - ರೀತಿಯಿಂದ, ರಕ್ಷಸಾಂ - ರಕ್ಕಸರ, ಮಧ್ಯೇ - ನಡುವೆ, ಲಂಕಾಯಾಂ - ಲಂಕಾಪಟ್ಟಣದಲ್ಲಿ, ರಾಜಾನಂ - ರಾಜನನ್ನಾಗಿ, ಅಭ್ಯಷಿಂಚತ್ - ಅಭಿಷೇಕ ಮಾಡಿದನು. ||೧೫|| ತಸ್ಯ - ಆ ವಿಭೀಷಣನಿಗೆ, ಯೇ - ಯಾರು, ಭಕ್ತಾಃ - ಭಕ್ತರೋ, ತೇರಾಕ್ಷಸಾಃ - ಆ ರಕ್ಕಸರು, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಅಭಿಷಿಕ್ತಂ - ಪಟ್ಟಾಭಿಷಿಕ್ತನಾದ, ರಾಕ್ಷಸೇಂದ್ರಂ- ರಾಕ್ಷಸಾಧಿಪತಿಯಾದ, ವಿಭೀಷಣಂ-ವಿಭೀಷಣನನ್ನು, ದೃಷ್ಟ್ವಾ-ಕಂಡು, ಜಹೃಷಿರೇ ಸಂತೋಷ ಗೊಂಡರು. ||೧೬|| ತತಃ - ಬಳಿಕ, ವಿಭೀಷಣಃ - ವಿಭೀಷಣನು, ರಾಮದತ್ತಂ - ಶ್ರೀರಾಮನಿಂದ ಕೊಡಲ್ಪಟ್ಟ, ಮಹತ್-ದೊಡ್ಡದಾದ, ತದ್ರಾಜ್ಯಂ-ಆ ರಾಜ್ಯವನ್ನು, ಪ್ರಾಪ್ಯ-ಹೊಂದಿ, ಪ್ರಕೃತೀಃ- ಮಂತ್ರಿಗಳನ್ನು, (ಪ್ರಜೆಗಳನ್ನು) ಸಾಂತ್ವಯಿತ್ವಾ - ಸಮಾಧಾನಗೊಳಿಸಿ, ತತಃ - ಬಳಿಕ, ರಾಮಂ - ಶ್ರೀರಾಮನನ್ನು ಕುರಿತು, ಉಪಾಗಮತ್ - ಬಂದನು. ||೧೭|| ಅಥ - ಬಳಿಕ, ತದಾ - ಆ ಕಾಲದಲ್ಲಿ, ಪೌರಾಃ-ಪಟ್ಟಣಸ್ಥರಾದ, ನಿಶಾಚರಾಃ ರಕ್ಕಸರು, ತಸ್ಮೈ-ಆ ವಿಭೀಷಣನಿಗಾಗಿ, ಅಕ್ಷತಾನ್-ಅಕ್ಷತೆ ಗಳನ್ನೂ, ಮೋದಕಾನ್ - ಕಡುಬುಗಳನ್ನೂ, ಲಾಜಾನ್ - ಅರಳುಗಳನ್ನೂ, ದಿವ್ಯಾಃ - ಮನೋಹರವಾದ, ಸುಮನಸಃ - ಹುವ್ವುಗಳನ್ನೂ, ಸಂಹೃಷ್ಟಾಃ - ಸಂತೋಷಗೊಂಡವರಾಗಿ, ಆಜಹ್ರುಃ - ತಂದು ಸಮರ್ಪಿ ಸಿದರು. ||೧೮|| ದುರ್ಧರ್ಷಃ-ತಿರಸ್ಕರಿಸಲಸಾಧ್ಯನಾದ, ಸಃ-ಆ ವಿಭೀಷಣನು, ತಾನ್ ಆ ಅಕ್ಷತೆ ಕಡುಬು ಮೊದಲಾದವುಗಳನ್ನು, ಗೃಹೀತ್ವಾ - ತೆಗೆದುಕೊಂಡು, ರಾಘವಾಯ - ಶ್ರೀರಾಮನಿಗೋಸುಗ, ನ್ಯವೇ ದಯತ್ - ಸಮರ್ಪಿಸಿದನು, ವೀರ್ಯವಾನ್ - ಸಾಮರ್ಥ್ಯವಂತನಾದ ವಿಭೀಷಣನು, ಮಂಗಳ್ಯಂ -

ಕಲಶದಲ್ಲಿರುವ ಮಂಗಳೋದಕದಿಂದ ಶಾಸ್ತ್ರೋಕ್ತವಾಗಿ ಮಿತ್ರರೆಲ್ಲರ ಸಮ್ಮುಖದಲ್ಲಿ ಆವನಿಗೆ ಲಂಕಾರಾಜ್ಯಾಭಿಷೇಕ ಮಾಡಿದನು. ||೧೧–೧೫|| ಆ ಸಮಯದಲ್ಲಿ ಈ ಪ್ರಕಾರ ಲಂಕಾರಾಜ್ಯ ದಲ್ಲಿ ಪಟ್ಟಾಭಿಷಿಕ್ತನಾದ ವಿಭೀಷಣನನ್ನು ನೋಡಿ ಆತನ ಮಂತ್ರಿಶ್ರೇಷ್ಠರೂ, ಆಶ್ರಿತರೂ, ಮಿತ್ರರೂ ಆದ ರಾಕ್ಷಸೋತ್ತಮರೆಲ್ಲರೂ ಪರಮಾನಂದಭರಿತರಾದರು. ಹೀಗೆ ವಿಭೀ ಷಣನು ಶ್ರೀರಾಮಮೂರ್ತಿಯು ಕೊಟ್ಟ ಮಹತ್ತರವಾದ ಲಂಕಾರಾಜ್ಯವನ್ನು ಹೊಂದಿ ತರು ವಾಯ ಪ್ರಜೆಗಳನ್ನೂ, ಸಮಸ್ತ ಅಧಿಕಾರಿಗಳನ್ನೂ ಮೃದುಮಧುರ ವಚನಗಳಿಂದ ಸಂತೋಷ ಗೊಳಿಸಿ ಲಕ್ಷ್ಮಣನೊಡನೆ ಶ್ರೀರಾಮನ ಬಳಿಗೆ ಹೊರಟಬಂದನು. ಶ್ರೀರಾಮನ ಬಳಿ ಸಾರು ತ್ತಿರುವ ತಮ್ಮೊಡೆಯನಾದ ವಿಭೀಷಣನನ್ನು ಕಂಡು ಪರಮ ಸಂತುಷ್ಟರಾದ ರಾಕ್ಷಸರೆಲ್ಲರೂ ಆ ಶಿಕ್ಷಾಕ್ಷತೆಗಳನ್ನೂ, ಮೋದಕಗಳನ್ನೂ, ಆಚಾರ ಲಾಜಗಳನ್ನೂ, ದಿವ್ಯತಮವಾದ ಪುಷ್ಪ ಗಳನ್ನೂ, ಕಾಣಿಕೆಯಾಗಿ ತೆಗೆದುಕೊಂಡು ಬಂದರು. ಆಗ ಮಹಾ ತೇಜಸ್ವಿಯೂ, ಪರಾ

ವೀರ್ಯವಾನ್ ॥ ೧೯ ॥ ಕೃತಕಾರ್ಯಂ ಸಮೃದ್ಧಾರ್ಥಂ ದೃಷ್ಟ್ವಾ ರಾಮೋ ವಿಭೀಷಣಂ । ಪ್ರತಿಜಗ್ರಾಹ ತತ್ಸರ್ವಂ ತಸ್ಯೈವ ಪ್ರಿಯಕಾಮ್ಯಯಾ ॥ ೨೦ ॥ ತತಃ ಶೈಲೋಪಮಂ ವೀರಂ ಪ್ರಾಂಜಲಿಂ ಪಾರ್ಶ್ವತಸ್ಸ್ಥಿತಂ । ಅಬ್ರವೀದ್ರಾಘವೋ ವಾಕ್ಯಂ ಹನುಮಂತಂ ಪ್ಲವಂಗಮಂ ॥೨೧॥ "ಅನುಮಾನ್ಯ ಮಹಾರಾಜಮಿಮಂ ಸೌಮ್ಯ! ವಿಭೀಷಣಂ । ಗಚ್ಛ ಸೌಮ್ಯ! ಪುರೀಂ ಲಂಕಾಮನುಜ್ಞಾಪ್ಯ ಯಥಾವಿಧಿ । ಪ್ರವಿಶ್ಯರಾವಣಗೃಹಂ ವಿಜಯೇನಾಭಿನಂದ್ಯಚ ॥೨೨-೨೩॥ ವೈದೇಹ್ಯೈ ಮಾಂ ಕುಶಲಿನಂ ಸಸುಗ್ರೀವಂ ಸಲಕ್ಷ್ಮಣಂ । ಆಚಕ್ಷ್ವ ಜಯತಾಂ ಶ್ರೇಷ್ಠ! ರಾವಣಂ ಚ ಮಯಾ ಹತಂ ॥ ೨೪ ॥

ಶುಭಕರ್ಮಗಳಿಗೆ ಯೋಗ್ಯವಾದ, ಮಂಗಳಂ - ಶುಭಕರವಾದ, ಸರ್ವಂ - ಸಮಸ್ತ ಪದಾರ್ಥಗಳನ್ನೂ, ರಾಘವಾಯ-ಶ್ರೀರಾಮಮೂರ್ತಿಗೂ, ಲಕ್ಷ್ಮಣಾಯಚ ಲಕ್ಷ್ಮಣನಿಗೂ, ನ್ಯವೇದಯತ್-ಸಮರ್ಪಿಸಿದನು. ॥೧೯॥ ರಾಮಃ-ಶ್ರೀರಾಮನು, ಕೃತಕಾರ್ಯಂ-ನೆರವೇರಿದ ಕಾರ್ಯವುಳ್ಳ, ಸಮೃದ್ಧಾರ್ಥಂ-ಸಂಪೂರ್ಣವಾದ ಪ್ರಯೋಜನವುಳ್ಳ, ವಿಭೀಷಣಂ-ವಿಭೀಷಣನನ್ನು, ದೃಷ್ಟ್ವಾ-ಕಂಡು, ತಸ್ಯೈವ-ಆ ವಿಭೀಷಣನಿಗೇ, ಪ್ರಿಯಕಾಮ್ಯಯಾ-ಹಿತಮಾಡಲಿಚ್ಛೆಯಿಂದ, ತತ್ಸರ್ವಂ-ಆ ಸಮಸ್ತವನ್ನೂ, ಪ್ರತಿಜಗ್ರಾಹ-ಪರಿಗ್ರಹಿಸಿದನು. ॥ ೨೦ ॥ ತತಃ-ಬಳಿಕ, ರಾಘವಃ-ಶ್ರೀರಾಮನು, ಪ್ರಾಂಜಲಿಂ-ಅಂಜಲಿಬದ್ಧನಾಗಿ, ಪಾರ್ಶ್ವತಃ ಪಾರ್ಶ್ವಭಾಗದಲ್ಲಿ, ಸ್ಥಿತಂ-ನಿಂತಿರುವ, ಶೈಲೋಪಮಂ-ಬೆಟ್ಟಕ್ಕೆ ಸಮಾನನಾದ, ವೀರಂ-ಶೂರನಾದ, ಪ್ಲವಂಗಮಂ - ವಾನರನಾದ, ಹನುಮಂತಂ - ಆಂಜನೇಯನನ್ನು ಕುರಿತು, ವಾಕ್ಯಂ - ಮಾತನ್ನು, ಅಬ್ರವೀತ್-ನುಡಿದನು. ॥೨೧॥ ಸೌಮ್ಯ-ಪ್ರಸನ್ನನೇ, ಮಹಾರಾಜಂ-ಮಹಾರಾಜನಾದ, ಇಮಂವಿಭೀಷಣಂ - ಈ ವಿಭೀಷಣನನ್ನು, ಅನುಮಾನ್ಯ - ಸಮ್ಮತಿಸಿ, ಲಂಕಾಪುರೀಂ - ಲಂಕಾಪಟ್ಟಣವನ್ನು ಕುರಿತು, ಗಚ್ಛ - ಹೋಗು, ಸೌಮ್ಯ - ಪ್ರಸನ್ನನೇ, ಅನುಜ್ಞಾಪ್ಯ - ಸಮ್ಮತಿಸಿ, ಯಥಾವಿಧಿ - ವಿಧ್ಯನುಸಾರವಾಗಿ, ರಾವಣಗೃಹಂ - ದಶಕಂಠನ ಮನೆಯನ್ನು, ಪ್ರವಿಶ್ಯ - ಪ್ರವೇಶಿಸಿ, ವೈದೇಹ್ಯೈ - ಸೀತಾದೇವಿಗೋಸುಗ, ವಿಜಯೇನ - ಜಯಶಬ್ದದಿಂದ, ಅಭಿನಂದ್ಯಚ - ಸಂತೋಷಗೊಳಿಸಿ, ಜಯತಾಂಶ್ರೇಷ್ಠ - ಜಯಶೀಲರಲ್ಲಿ ಉತ್ತಮನೇ, ಸಸುಗ್ರೀವಂ - ಸುಗ್ರೀವಸಹಿತನಾದ, ಲಕ್ಷ್ಮಣಂ - ಲಕ್ಷ್ಮಣನೊಡಗೂಡಿದ, ಮಾಂ - ನನ್ನನ್ನು, ಕುಶಲಿನಂ - ಕ್ಷೇಮದಲ್ಲಿರುವವನನ್ನಾಗಿಯೂ,

---

ಕ್ರಮಿಯೂ ಆದ ವಿಭೀಷಣನು, ಆ ಪೂಜಾ ಸಾಮಗ್ರಿಗಳೆಲ್ಲವನ್ನೂ ತೆಗೆದುಕೊಂಡು ಮಾಂಗಲ್ಯಾರ್ಥಕವಾದ ಆ ಮಂಗಲದ್ರವ್ಯಗಳೆಲ್ಲವನ್ನೂ, ಶ್ರೀರಾಮಚಂದ್ರನಿಗೂ, ಲಕ್ಷ್ಮಣಸ್ವಾಮಿಗೂ ನಿವೇದನ ಮಾಡಿದನು. ॥೧೬-೧೯॥ ಆಗ ಶ್ರೀರಾಮನು, ನೆರವೇರಿದ ಸಮಸ್ತ ಕಾರ್ಯಗಳುಳ್ಳವನೂ, ಈಡೇರಿದ ಸಮಸ್ತ ಇಷ್ಟಾರ್ಥಗಳುಳ್ಳವನೂ ಆದ ವಿಭೀಷಣನನ್ನು ನೋಡಿ ಅವನಿಗೆ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿಯೇ ಅವುಗಳೆಲ್ಲವನ್ನೂ ಹರ್ಷದಿಂದ ಸ್ವೀಕರಿಸಿದನು. ಇದಾದ ತರುವಾಯ ರಘುವಂಶೋತ್ಪನ್ನನಾದ ಶ್ರೀರಾಮಮೂರ್ತಿಯು, ಮಹಾ ವೀರನೂ, ಪರ್ವತೋಪಮನೂ, ಬದ್ಧಾಂಜಲಿಹಸ್ತನೂ ಆಗಿ ನಿಂತಿದ್ದ ಹನುಮಂತನನ್ನು ನೋಡಿ, ಅವನನ್ನು ಕುರಿತು, " ಎಲೈ ಸೌಮ್ಯನಾದ ಹನುಮಂತನೇ! ನೀನು ರಾಕ್ಷಸೇಶ್ವರನಾದ ಈ ವಿಭೀಷಣನ ಸಮ್ಮತಿಯನ್ನು ಪಡೆದು ಲಂಕಾನಗರವನ್ನು ಪ್ರವೇಶಿಸು. ಆಮೇಲೆ ಈತನ ಅಪ್ಪಣೆಯನ್ನು ಪಡೆದೇ ರಾವಣನ ಅರಮನೆಯನ್ನು ಪ್ರವೇಶಿಸಿ ಸೀತಾದೇವಿಯಿರುವ ಅಶೋಕವನಕ್ಕೆ ಹೋಗಿ ಜಯಶಬ್ದಗಳಿಂದ ಆ ದೇವಿಯನ್ನಭಿನಂದಿಸಿ, ನಾವು ಲಕ್ಷ್ಮಣ ಸುಗ್ರೀವರೊಡನೆ ಸುಖ

ಪ್ರಿಯಮೇತದುದಾಹೃತ್ಯ ವೈಥಿಲ್ಯಾಸ್ತ್ವಂ ಹರೀಶ್ವರ! ।
ಪ್ರತಿಗೃಹ್ಯಚ ಸಂದೇಶಮುಪಾವರ್ತಿತು ಮರ್ಹಸಿ" ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚದಶೋತ್ತರಶತತಮಸ್ಸರ್ಗಃ

ಆಚಕ್ಷ್ವ - ಹೇಳು, ಹರೀಶ್ವರ - ಎಲೈ ವಾನರೋತ್ತಮನೇ, ತ್ವಂ - ನೀನು, ವೈಥಿಲ್ಯಾಃ - ಸೀತಾದೇವಿಗೆ, ಏತತ್ಪ್ರಿಯಂ - ಇಷ್ಟವಾದ ಈ ಸಂದೇಶವನ್ನು, ಉದಾಹೃತ್ಯ - ಹೇಳಿ, ಸಂದೇಶಂ - ಆಕೆಯ ಮಾತನ್ನು, ಪ್ರತಿಗೃಹ್ಯ - ತೆಗೆದುಕೊಂಡು, ಉಪಾವರ್ತಿತುಂ - ಹಿಂತಿರುಗುವುದಕೆ, ಅರ್ಹಸಿ - ಯೋಗ್ಯನಾಗು. ॥ ೨೨ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚದಶೋತ್ತರಶತತಮಸ್ಸರ್ಗಃ.

ವಾಗಿರುವೆವೆಂದೂ, ರಾವಣನು ನಮ್ಮಿಂದ ಮಡಿದನೆಂದೂ ತಿಳಿಸು. ಎಲೈ ಕಪೀಶ್ವರನೇ! ನೀನು ಈ ರೀತಿ ಆಸೀತಾದೇವಿಗೆ ಪ್ರಿಯೋದಂತವನ್ನು ನಿವೇದಿಸಿ, ಆಕೆಯ ಸಂದೇಶವನ್ನು ಕೈಕೊಂಡು, ಹಿಂತಿರುಗಿ ಬರುವವನಾಗು" ಎಂದು ಹೇಳಿದನು. ॥ ೨೦–೨೫ ॥

ಇಂತಿದು ವಿಭೀಷಣ ಪಟ್ಟಾಭಿಷೇಕ ವೃತ್ತಾಂತವೆಂಬ ನೂರಹದಿ
ನೈದನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಷೋಡಶೋತ್ತರಶತತಮಸ್ಸರ್ಗಃ

ಇತಿ ಪ್ರತಿಸಮಾದಿಷ್ಟೋ ಹನುಮಾನ್ಮಾರುತಾತ್ಮಜಃ । ಪ್ರವಿವೇಶ ಪುರೀಂ ಲಂಕಾಂ ಪೂಜ್ಯಮಾನೋ ನಿಶಾಚರೈಃ ॥ ೧ ॥ ಪ್ರವಿಶ್ಯ ಚ ಮಹಾತೇಜಾ ರಾವಣಸ್ಯ ನಿವೇಶನಂ । ದದರ್ಶ ಮೃಜಯಾ ಹೀನಾಂ ಸಾತಂಕಾಮಿವ ರೋಹಿಣೀಂ ॥ ೨ ॥ ವೃಕ್ಷಮೂಲೇ ನಿರಾನಂದಾಂ ರಾಕ್ಷಸೀಭಿಸ್ಸಮಾವೃತಾಂ । ನಿಭೃತಃ ಪ್ರಣತಃ ಪ್ರಹ್ವ ಸ್ಸೋಽಭಿಗಮ್ಯಾಽಭಿವಾದ್ಯ ಚ ॥ ೩ ॥ ದೃಷ್ಟ್ವಾ ತಮಾಗತಂ ದೇವೀ ಹನುಮಂತಂ ಮಹಾಬಲಂ । ತೂಷ್ಣೀಮಾಽಸ್ತ ತದಾ ದೃಷ್ಟ್ವಾ ಸ್ಮೃತ್ವಾ ಪ್ರಮುದಿತಾಽಭವತ್

ಇತಿ - ಈ ಪರಿಯಾಗಿ, ಪ್ರತಿ....ಷ್ಟಃ - ಆಜ್ಞಾಪಿಸಲ್ಪಟ್ಟ, ಮಾರುತಿಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ನಿಶಾಚರೈಃ - ರಕ್ಕಸರಿಂದ, ಪೂಜ್ಯಮಾನಃ - ಮರ್ಯಾದಿಸಲ್ಪಟ್ಟವನಾಗಿ, ಲಂಕಾಂಪುರೀಂ - ಲಂಕಾಪಟ್ಟಣವನ್ನು, ಪ್ರವಿವೇಶ - ಹೊಕ್ಕನು. ॥ ೧ ॥ ಮಹಾತೇಜಾಃ - ಮಹಾ ತೇಜೋವಂತನಾದ ಆ ಆಂಜನೇಯನು, ರಾವಣಸ್ಯ - ದಶಕಂಠನ, ನಿವೇಶನಂ - ಮನೆಯನ್ನು, ಪ್ರವಿಶ್ಯ - ಹೊಕ್ಕು, ಮೃಜಯಾ - ಸ್ನಾನಾದಿ ಮಂಗಳ ಕಾರ್ಯಗಳಿಂದ, ಹೀನಾಂ - ವರ್ಜಿತಳಾದ, ಸಾತಂಕಾಂ - ಗ್ರಹಬಾಧೆ ಎಂಬ ಭಯದಿಂದ ಕೂಡಿದ, ರೋಹಿಣೀಮಿವ - ರೋಹಿಣೀ ದೇವಿಯಂತಿರುವ, ವೃಕ್ಷಮೂಲೇ - ಅಶೋಕವೃಕ್ಷದ ಬುಡದಲ್ಲಿ, ನಿರಾನಂದಾಂ - ಸಂತೋಷವಿಲ್ಲದ, ರಾಕ್ಷಸೀಭಿಃ - ರಕ್ಕಸಿಯರಿಂದ, ಸಮಾವೃತಾಂ - ಸುತ್ತುವರೆದ, ಸೀತಾಂ - ಸೀತಾದೇವಿಯನ್ನು, ದದರ್ಶ - ಕಂಡನು. ॥ ೨ ॥ ಪ್ರಹ್ವಃ - ನಮ್ರನಾಗಿ, ಸಃ - ಆ ಆಂಜನೇಯನು, ಅಭಿಗಮ್ಯ - ಬಂದು, ಅಭಿವಾದ್ಯಚ - ನಮಸ್ಕಾರವನ್ನು ಮಾಡಿ, ಪ್ರಣತಃ - ಬಾಗಿನಮಿಸಿ, ನಿಭೃತಃ - ನಿಶ್ಚಂಚಲವಾಗಿ ನಿಂತನು, ತದಾ - ಆಗ, ದೇವೀ - ಸೀತಾದೇವಿಯು, ಆಗತಂ - ಬಂದಿರುವ, ಮಹಾಬಲಂ - ಬಹಳ ಬಲವಂತನಾದ, ತಂಹನೂಮಂತಂ - ಆ ಹನುಮಂತನನ್ನು, ದೃಷ್ಟ್ವಾ - ಕಂಡು, ತೂಷ್ಣೀಂ - ಸುಮ್ಮನೆ, ಆಸ್ತ - ಇದ್ದಳು, ಸ್ಮೃತ್ವಾ - ಜ್ಞಾಪಕ ಮಾಡಿಕೊಂಡು, ಪ್ರಮುದಿತಾ - ಸಂತೋಷಗೊಂಡವಳು, ಅಭವತ್ - ಆದಳು. ॥ ೩-೪ ॥ ಪ್ಲವಗೋತ್ತಮಃ - ವಾನರಶ್ರೇಷ್ಠನಾದ,

---

ಶ್ರೀರಾಮನು ಈ ರೀತಿ ಆಜ್ಞಾಪಿಸಿದ ತರುವಾಯ ಮಾರುತಿಯು ಸಮಸ್ತ ರಾಕ್ಷಸರಿಂದಲೂ ಪೂಜಿಸಲ್ಪಟ್ಟವನಾಗಿ ಲಂಕಾನಗರವನ್ನು ಪ್ರವೇಶಿಸಿದನು. ಮಹಾ ತೇಜಸ್ವಿಯಾದ ಆತನು ರಾವಣನರಮನೆಯನ್ನು ಪ್ರವೇಶಿಸಿ, ಅಲ್ಲಿ ಸ್ನಾನಾದಿ ಮಂಗಳ ಸಂಸ್ಕಾರವಿಲ್ಲದಿರುವವಳೂ, ಗ್ರಹಪೀಡಿತೆಯಾದ ರೋಹಿಣೀದೇವಿಯಂತಿರುವವಳೂ, ರಾಕ್ಷಸಸ್ತ್ರೀಯರಿಂದ ಪರಿವೇಷ್ಟಿತಳೂ ಆದ ಸೀತಾದೇವಿಯನ್ನು ಕಂಡನು. ಏನೊಂದೂ ಸಂತೋಷವಿಲ್ಲದೆ ಆ ಶಿಂಶುಪಾವೃಕ್ಷದ ಮೂಲಪ್ರದೇಶದಲ್ಲಿ ಪರಿತಪಿಸುತ್ತ ಕುಳಿತಿರುವ ಆ ದೇವಿಯನ್ನು ಕಂಡೊಡನೆಯೇ ಆತನು ದೂರದಲ್ಲಿಯೇ ಕೇವಲ ಭಕ್ತಿ ನಮ್ರತೆಗಳಿಂದ ಆಕೆಗೆ ನಮಸ್ಕಾರ ಮಾಡಿ ಸುಮ್ಮನೆ ನಿಂತನು. ಮಹಾ ಬಲಾಢ್ಯನಾದ ಹನುಮಂತನು ಬಂದುದನ್ನು ಕಂಡು ಜಾನಕಿಯು ಮೊದಮೊದಲು ಸುಮ್ಮನೆಯೇ ಇದ್ದು ಆ ತರುವಾಯ ಅವನನ್ನು ಜ್ಞಾಪಿಸಿಕೊಂಡು ಪರಮಾ

||೪|| ಸೌಮ್ಯಂ ದೃಷ್ಟ್ವಾ ಮುಖಂ ತಸ್ಯಾ ಹನುಮಾನ್ ಪ್ಲವಗೋತ್ತಮಃ । ರಾಮಸ್ಯ ವಚನಂ ಸರ್ವಮಾಖ್ಯಾತುಮುಪಚಕ್ರಮೇ ||೫|| "ವೈದೇಹಿ! ಕುಶಲೀ ರಾಮ ಸ್ಸಹಸುಗ್ರೀವಲಕ್ಷ್ಮಣಃ । ವಿಭೀಷಣಸಹಾಯಶ್ಚ ಹರೀಣಾಂ ಸಹಿತೋ ಬಲೈಃ । ಕುಶಲಂ ಚಾಹ ಸಿದ್ಧಾರ್ಥೋ ಹತಶತ್ರುರರಿಂದಮಃ ||೬|| ವಿಭೀಷಣಸಹಾಯೇನ ರಾಮೇಣ ಹರಿಭಿಸ್ಸಹ । ನಿಹತೋ ರಾವಣೋ ದೇವಿ! ಲಕ್ಷ್ಮಣಸ್ಯ ನಯೇನಚ ||೭|| ಪೃಷ್ಟ್ವಾಚ ಕುಶಲಂ ರಾಮೋ ವೀರಸ್ತ್ವಾಂ ರಘುನಂದನಃ । ಅಬ್ರವೀತ್ಪರಮ ಪ್ರೀತಃ ಕೃತಾರ್ಥೇನಾಂತರಾತ್ಮನಾ ||೮|| ಪ್ರಿಯಮಾಖ್ಯಾಮಿ ತೇ ದೇವಿ! ತ್ವಾಂತು

ಹನುಮಾನ್ - ಆಂಜನೇಯನು, ಸೌಮ್ಯಂ - ಪ್ರಸನ್ನವಾದ, ತಸ್ಯಾಃ - ಆ ಸೀತಾದೇವಿಯ, ಮುಖಂ - ಮುಖವನ್ನು, ದೃಷ್ಟ್ವಾ - ಕಂಡು, ರಾಮಸ್ಯ - ಶ್ರೀರಾಮನ, ಸರ್ವಂವಚನಂ - ಸಮಸ್ತವಾದ ಮಾತನ್ನೂ, ಆಖ್ಯಾತುಂ - ಹೇಳುವುದಕ್ಕೆ, ಉಪಚಕ್ರಮೇ - ಉಪಕ್ರಮಿಸಿದನು. ||೫|| ವೈದೇಹೀ - ಸೀತಾದೇವಿಯೇ, ರಾಮಃ - ಶ್ರೀರಾಮನು, ಸುಗ್ರೀ....ಹ - ಸುಗ್ರೀವ ಲಕ್ಷ್ಮಣರೊಡಗೂಡಿ, ವಿಭೀ....ಶ್ಚ - ವಿಭೀಷಣನೇ ಸಹಾಯವಾಗುಳ್ಳವನಾಗಿ, ಹರೀಣಾಂ - ವಾನರರ, ಬಲೈಃ - ಸೈನ್ಯಗಳಿಂದ, ಸಹಿತಃ - ಕೂಡಿ, ಕುಶಲೀ - ಕ್ಷೇಮವಾಗಿರುವನು, ಹತಶತ್ರುಃ - ಹೊಡೆಯಲ್ಪಟ್ಟ ಶತ್ರುವುಳ್ಳವನಾಗಿ, ಅರಿಂದಮಃ - ಶತ್ರುಸಂಹಾರಕನಾಗಿ, ಸಿದ್ಧಾರ್ಥಃ - ಕೃತಕಾರ್ಯ ನಾಗಿ, ಕುಶಲಂ - ಕ್ಷೇಮವನ್ನು ಆಹ - ಹೇಳಿದನು. ||೬|| ದೇವೀ - ಸೀತಾದೇವಿಯೇ, ಹರಿಭಿಸ್ಸಹ- ವಾನರರೊಡನೆ, ವಿಭೀ....ನ - ವಿಭೀಷಣನೇ ಸಹಾಯವಾಗುಳ್ಳ, ರಾಮೇಣ - ಶ್ರೀರಾಮನಿಂದ, ಲಕ್ಷ್ಮಣಸ್ಯ - ಸೌಮಿತ್ರಿಯ, ನಯೇನಚ - ನೀತಿಮಾರ್ಗದಿಂದಲೂ, ರಾವಣಃ - ದಶಕಂಠನು, ನಿಹತಃ - ಹೊಡೆಯಲ್ಪಟ್ಟನು. ||೭|| ವೀರಃ - ಶೂರನಾದ, ರಘುನಂದನಃ - ರಘುಕುಲಾನಂದಕರ ನಾದ, ರಾಮಃ - ಶ್ರೀರಾಮನು, ಕುಶಲಂ - ಕ್ಷೇಮವನ್ನು, ಪೃಷ್ಟ್ವಾ - ಕೇಳಿ, ಪರಮಪ್ರೀತಃ - ಬಹಳ ಸಂತುಷ್ಟನಾಗಿ, ಕೃತಾರ್ಥೇನ - ಕೃತಪ್ರಯೋಜನವುಳ್ಳ, ಅಂತರಾತ್ಮನಾ - ಅಂತರಂಗದಿಂದ, ಅಬ್ರವೀತ್ - ನುಡಿದನು. ||೮|| ದೇವೀ - ಸೀತಾದೇವಿಯೇ, ತೇ - ನಿನಗೆ, ಪ್ರಿಯಂ - ಇಷ್ಟವಾದ

ನಂದಿತೆಯಾದಳು. ಕಪಿಶ್ರೇಷ್ಠನಾದ ಹನುಮಂತನು ಸೀತಾದೇವಿಯ ಮುಖವು ಪ್ರಸನ್ನ ವಾಗಿರುವುದನ್ನು ಕಂಡು ಶ್ರೀರಾಮನ ಸಂದೇಶವನ್ನು ನಿವೇದಿಸಲುಪಕ್ರಮಿಸಿದನು ||೧-೫|| "ಓ ವಿದೇಹರಾಜಪುತ್ರಿಯಾದ ಸೀತಾದೇವಿಯೇ! ಲಕ್ಷ್ಮಣಸಮೇತನಾದ ಶ್ರೀರಾಮನು ಕ್ಷೇಮದಿಂದಿರುವನು. ವಿಭೀಷಣನೂ, ವಾನರಸೇನೆಗಳೂ, ಕಪಿನಾಯಕರೂ ಎಲ್ಲರೂ ಕುಶಲಿಗಳಾಗಿರುವರು- ಶತ್ರುಮರ್ದನನಾದ ರಘುನಂದನನು ನಿನ್ನ ಕುಶಲವಾರ್ತೆಯನ್ನು ಕೇಳಿದುದಲ್ಲದೆ, ಶತ್ರುವಾದ ರಾವಣನನ್ನು ನಿಗ್ರಹಿಸಿ ಸಮಸ್ತ ಇಷ್ಟಾರ್ಥಗಳೂ ಈಡೇರಿದ ತನ್ನ ಕುಶಲ ಸಮಾಚಾರವನ್ನೂ ಹೇಳಿ ಕಳುಹಿಸಿರುವನು. ಎಲೌ ದೇವೀ! ರಾಕ್ಷಸೋ ತ್ತಮನಾದ ವಿಭೀಷಣನ ಸಹಾಯದಿಂದಲೂ, ಲಕ್ಷ್ಮಣಸ್ವಾಮಿಯ ಮಂತ್ರಾಲೋಚ ನೆಯ ಸಹಾಯದಿಂದಲೂ, ಕಪಿನಾಯಕರ ಮತ್ತು ಕಪಿಸೇನೆಗಳ ಬಲದಿಂದಲೂ ಶ್ರೀರಾಮಚಂದ್ರನು ರಾವಣನನ್ನು ಸಂಹರಿಸಿದನು. ಆತನು ಕೃತಾರ್ಥವಾದ ಅಂತ ರಾತ್ಮವುಳ್ಳವನಾಗಿ ನಿನಗೆ ಈ ಸಂದೇಶವನ್ನು ಕಳುಹಿಸಿರುವನು. ಆದನ್ನೀಗ ಹೇಳು ವೆನು. ಆಲಿಸು. ಆತನೆಂದನು: "ಓ ದೇವೀ! ನಿನಗೆ ಈ ಪ್ರಿಯೋದಂತವನ್ನರುಹುವೆನು.

ಭೂಯಸ್ಸಭಾಜಯೇ । ದಿಷ್ಟ್ಯಾ ಜೀವಸಿ ಧರ್ಮಜ್ಞೇ! ಜಯೇನ ಮಮ ಸಂಯುಗೇ ॥೯॥ ಲಬ್ಧೋ ನೋ ವಿಜಯಸ್ಸೀತೇ! ಸ್ವಸ್ಥಾ ಭವ ಗತವ್ಯಥಾ । ರಾವಣಶ್ಚ ಹತಃ ಶತ್ರುರ್ಲಂಕಾ ಚೇಯಂ ವಶೇ ಸ್ಥಿತಾ ॥೧೦॥ ಮಯಾಹ್ಯಲಬ್ಧನಿದ್ರೇಣ ದೃಢೇನ ತವ ನಿರ್ಜಯೇ । ಪ್ರತಿಜ್ಞೈಷಾ ವಿನಿಸ್ತೀರ್ಣಾ ಬಧ್ವಾ ಸೇತುಂ ಮಹೋದಧೌ ॥೧೧॥ ಸಂಭ್ರಮಶ್ಚ ನಗಂತವ್ಯೋ ವರ್ತಂತ್ಯಾ ರಾವಣಾಲಯೇ । ವಿಭೀಷಣ ವಿಧೇಯಂ ಹಿ ಲಂಕೈಶ್ವರ್ಯಮಿದಂ ಕೃತಂ ॥೧೨॥ ತದಾಶ್ವಸಿಹಿ ವಿಶ್ವಸ್ತಾ ಸ್ವಗೃಹೇ

ಮಾತನ್ನು, ಆಖ್ಯಾಮಿ - ಹೇಳುವೆನು, ತ್ವಾಂತು - ನಿನ್ನನ್ನಾದರೆ, ಭೂಯಃ - ಯಥೇಷ್ಟವಾಗಿ, ಸಭಾಜಯೇ - ಬಹುಮಾನಿಸುತ್ತೇನೆ, ಧರ್ಮಜ್ಞೇ - ಧರ್ಮವನ್ನರಿತವಳೇ, ದಿಷ್ಟ್ಯಾ - ಅದೃಷ್ಟವಶ ದಿಂದ, ಜೀವಸಿ - ಬದುಕಿರುವೆಯಷ್ಟೆ, ಸಂಯುಗೇ - ಕಾಳಗದಲ್ಲಿ, ಮಮ - ನನ್ನ, ಜಯೇನ - ಜಯ ದಿಂದ, ನಃ - ನಮ್ಮೆಲ್ಲರಿಗೂ, ವಿಜಯಃ - ಜಯವು, ಲಬ್ಧಃ - ದೊರಕಿತು, ಸೀತೇ - ಸೀತಾ ದೇವಿಯೇ, ಶತ್ರುಃ - ಶತ್ರುವಾದ, ರಾವಣಃ - ದಶಕಂಠನು, ಹತಃ - ಮಡಿದನು, ಇಯಂ ಲಂಕಾಚ - ಈ ಲಂಕಾಪಟ್ಟಣವು, ವಶಂ - ನಮ್ಮ ಸ್ವಾಧೀನದಲ್ಲಿ, ಸ್ಥಿತಾ - ನಿಂತಿತು, ತ್ವಂ - ನೀನು, ಗತವ್ಯಥಾ - ಕಳೆದ ವ್ಯಸನವುಳ್ಳವಳಾಗಿ, ಸ್ವಸ್ಥಾ - ಸ್ವಸ್ಥಚಿತ್ತಳು, ಭವ - ಆಗು. ॥೯ ೧೦॥ ತವ - ನಿನ್ನ, ನಿರ್ಜಯೇ - ಜಯಿಸುವ ವಿಷಯದಲ್ಲಿ, ದೃಢೇ - ದೃಢಚಿತ್ತನಾದ, ಅಲಬ್ಧನಿದ್ರೇಣ - ಹೊಂದಲ್ಪಡದಿರುವ ನಿದ್ರೆಯುಳ್ಳ, ಮಯಾ - ನನ್ನಿಂದ, ಮಹೋದಧೌ - ಕಡಲಿನಲ್ಲಿ, ಸೇತೌ - ಸೇತುವನ್ನು, ಬಧ್ವಾ - ಕಟ್ಟಿ, ಏಷಾಪ್ರತಿಜ್ಞಾ - ಈ ಪ್ರತಿಜ್ಞೆಯು, ವಿನಿಸ್ತೀರ್ಣಾ - ಪೂರ್ಣಗೊಳಿಸ ಲ್ಪಟ್ಟಿತು. ॥೧೧॥ ರಾವಣಾಲಯೇ - ರಾವಣನ ಮನೆಯಲ್ಲಿ, ವರ್ತಂತ್ಯಾ - ಇರುವ, ತ್ವಯಾ - ನಿನ್ನಿಂದ, ಸಂಭ್ರಮಶ್ಚ - ಭಯವು, ನಕರ್ತವ್ಯಃ - ಮಾಡತಕ್ಕುದಲ್ಲ, ಇದಂಲಂಕೈಶ್ವರ್ಯಂ - ಈ ಲಂಕಾರಾಜ್ಯಾಧಿಪತ್ಯವು, ವಿಭೀ....ಯಂ - ವಿಭೀಷಣನಿಗೆ ಅಧೀನವಾಗಿ, ಕೃತಂ - ಮಾಡಲ್ಪಟ್ಟಿತು. ॥೧೨॥ ತತ್ - ಆ ಕಾರಣದಿಂದ, ವಿಶ್ವಸ್ತಾ - ನಂಬಿಕೆಯುಳ್ಳವಳಾಗಿ, ಆಶ್ವಸಿಹಿ - ಸಮಾಧಾನ ಮಾಡಿಕೋ, ಸ್ವಗೃಹೇ - ನಿನ್ನ ಮನೆಯಲ್ಲಿ, ಪರಿವರ್ತಸೇ - ಇರುತ್ತೀಯೆ, ಅಯಂಚ - ಈ ವಿಭೀ

ಈಗ ನಾನು ನಿನ್ನನ್ನು ಇನ್ನೂ ಅತಿಶಯವಾಗಿ ಗೌರವಿಸುವೆನು. ಎಲೆ ಧರ್ಮಜ್ಞೆ! ನನ್ನ ವಿಜಯವನ್ನು ನೋಡಿ ಆನಂದಿಸಲು ಭಾಗ್ಯವಶದಿಂದ ಜೀವಿಸಿರುವೆಯಲ್ಲವೆ! ಸೀತೇ! ನಮಗೆ ವಿಜಯವಾಯಿತು; ನಿನ್ನ ಕಷ್ಟಗಳೆಲ್ಲವೂ ಕಳೆದವು. ಇನ್ನು ನೀನು ಯಾವೊಂದು ವ್ಯಸನ ವನ್ನೂ ಅನುಭವಿಸಬೇಕಾಗಿಲ್ಲ. ಸಮಾಧಾನಚಿತ್ತಳಾಗು. ॥ ೬–೧೦ ॥ (ಪುತ್ರಮಿತ್ರಾ ಮಾತ್ಯಸಹಿತನಾದ ಪಾಪಿ ರಾವಣನನ್ನು ಸಂಹರಿಸಿಯಾಯಿತು) ದುರುಳ ರಾವಣನು ಹತನಾಗಿ ಹೋದನು. ಈಗ ಲಂಕಾರಾಜ್ಯವೆಲ್ಲವೂ ನಮ್ಮ ವಶದಲ್ಲಿರುವುದು. ಓ ದೇವೀ! ನಿನ್ನ ದಾರ್ಢ್ಯದಿಂದಲೂ, ನಿದ್ರೆಯೇ ಇಲ್ಲದೆ ಶ್ರಮಿಸಿದ ನನ್ನಿಂದಲೂ ಈ ವಿಜಯವು ಸಂಪೂರ್ಣ ವಾಗಿ ಹೊಂದಲಾಯಿತು. ಸಮುದ್ರದಲ್ಲಿ ಸೇತುವೆಯನ್ನು ರಚಿಸಿ ನಾನು ಮಾಡಿದ ಪ್ರತಿಜ್ಞೆ ಯನ್ನು ಪೂರ್ಣಗೊಳಿಸಿದುದಾಯಿತು. ದೇವೀ! ನೀನು ರಾವಣಾಲಯದಲ್ಲಿರುವೆನೆಂದು ವ್ಯಥೆ ಗೊಳ್ಳಬೇಕಾದುದಿಲ್ಲ. ಈಗ ಈ ಲಂಕಾರಾಜ್ಯವೆಲ್ಲವೂ ರಾಕ್ಷಸೋತ್ತಮನಾದ ವಿಭೀಷಣನ ವಶದಲ್ಲಿರುವುದು. ಈ ಪಟ್ಟಣದ ಅಖಿಲೈಶ್ವರ್ಯವೂ ವಿಭೀಷಣನ ಅಧೀನವೇ ಆಗಿರುವುದು.

ಪರಿವರ್ತಸೇ । ಅಯಂ ಚಾಭ್ಯೇತಿ ಸಂಹೃಷ್ಟಸ್ತ್ವದ್ದರ್ಶನಸಮುತ್ಸುಕಃ" ॥೧೩॥ ಏವಮುಕ್ತಾ ಸಮುತ್ಪತ್ಯ ಸೀತಾ ಶಶಿನಿಭಾನನಾ । ಪ್ರಹರ್ಷೇಣಾವರುದ್ಧಾ ಸಾ ವ್ಯಾಜಹಾರ ನಕಿಂಚನ ॥ ೧೪ ॥ ಅಬ್ರವೀಚ್ಚ ಹರಿಶ್ರೇಷ್ಠಸ್ಸೀತಾಮಪ್ರತಿಜಲ್ಪತೀಂ । "ಕಿನ್ನು ಚಿಂತಯಸೇ ದೇವಿ! ಕಿನ್ನು ಮಾಂ ನಾಭಿಭಾಷಸೇ?" ॥೧೫॥ ಏವಮುಕ್ತಾ ಹನುಮತಾ ಸೀತಾ ಧರ್ಮೇ ವ್ಯವಸ್ಥಿತಾ । ಅಬ್ರವೀತ್ಪರಮಪ್ರೀತಾ ಹರ್ಷಗದ್ಗದಯಾ ಗಿರಾ ॥ ೧೬ ॥ "ಪ್ರಿಯಮೇತದುಪಶ್ರುತ್ಯ ಭರ್ತುರ್ವಿಜಯಸಂಶ್ರಿತಂ । ಪ್ರಹರ್ಷ ವಶಮಾಪನ್ನಾ ನಿರ್ವಾಕ್ಯಾಸ್ಮಿ ಕ್ಷಣಾಂತರಂ ॥ ೧೭ ॥ ನಹಿ ಪಶ್ಯಾಮಿ ಸದೃಶಂ ಚಿಂತ

ಷಣನು, ಸಂಹೃಷ್ಟಃ - ಸಂತೋಷಗೊಂಡವನಾಗಿ, ತ್ವದ್ದ....ಕಃ - ನಿನ್ನ ದರ್ಶನದಲ್ಲಿ ಉತ್ಕಂಠೆಯುಳ್ಳವನಾಗಿ, ಅಭ್ಯೇತಿ - ಬರುತ್ತಾನೆ. ॥ ೧೩ ॥ ಏವಂ - ಈ ಪರಿಯಾಗಿ, ಉಕ್ತಾ - ಹೇಳಲ್ಪಟ್ಟ, ಶಶಿ....ನಾ - ಚಂದ್ರನಿಗೆ ಸಮಾನವಾದ ಮುಖವುಳ್ಳ, ಸಾಸೀತಾ - ಆ ಸೀತಾದೇವಿಯು, ಸಮುತ್ಪತ್ಯ- ತಟಕ್ಕನೆದ್ದುನಿಂತು, ಪ್ರಹರ್ಷೇಣ-ಸಂತೋಷಾಧಿಕ್ಯದಿಂದ, ಅವರುದ್ಧಾ-ತಡೆಮಾಡಿದ ಸಕಲ ವ್ಯಾಪಾರವುಳ್ಳವಳಾಗಿ, ಕಿಂಚನ-ಸ್ವಲ್ಪವಾದರೂ, ನವ್ಯಾಜಹಾರ-ಮಾತನಾಡಲಿಲ್ಲವು. ॥ ೧೪ ॥ ಹರಿಶ್ರೇಷ್ಠಃ- ಆಂಜನೇಯನು, ಅಪ್ರತಿಜಲ್ಪತೀಂ-ಪ್ರತ್ಯುತ್ತರ ಕೊಡದಿರುವ, ಸೀತಾಂ ಸೀತಾದೇವಿಯನ್ನು ಕುರಿತು, ಅಬ್ರವೀತ್-ನುಡಿದನು, ದೇವೀ-ಸೀತಾದೇವಿಯೇ, ಕಿನ್ನು ಚಿಂತಯಸೇ-ಆಲೋಚಿಸುವೆಯೇನನ್ನು, ಮಾಂ - ನನ್ನನ್ನು ಕುರಿತು, ಕಿನ್ನುನಾಭಿಭಾಷಸೇ - ಏತಕ್ಕೆ ಮಾತಾಡದಿರುವೆ. ॥೧೫॥ ಹನುಮತಾ - ಆಂಜನೇಯನಿಂದ, ಏವಂ - ಈ ಪರಿ, ಉಕ್ತಾ - ಹೇಳಲ್ಪಟ್ಟ, ಸೀತಾ - ಸೀತಾದೇವಿಯು, ಧರ್ಮೇ- ಪಾತಿವ್ರತ್ಯ ಧರ್ಮದಲ್ಲಿ, ವ್ಯವಸ್ಥಿತಾ - ಇರುವವಳಾಗಿ, ಪರಮಪ್ರೀತಾ - ಬಹಳ ಸಂತೋಷಗೊಂಡವಳಾಗಿ, ಹರ್ಷ....ಯಾ - ಸಂತೋಷದಿಂದ ಗದ್ಗದಸ್ವರವುಳ್ಳ, ಗಿರಾ - ಮಾತಿನಿಂದ, ಅಬ್ರವೀತ್ - ನುಡಿದಳು. ॥ ೧೬ ॥ ಭರ್ತುಃ - ಗಂಡನ, ವಿಜ....ತಂ - ಜಯದಿಂದ ಕೂಡಿರುವ, ಏತತ್ - ಈ, ಪ್ರಿಯಂ - ಹಿತವಾದ ಮಾತನ್ನು, ಸಂಶ್ರುತ್ಯ - ಕೇಳಿ, ಪ್ರಹರ್ಷವಶಂ - ಸಂತೋಷದ ವಶವನ್ನು, ಆಪನ್ನಾ - ಹೊಂದಿ, ಕ್ಷಣಾಂತರಂ - ಒಂದು ಕ್ಷಣಕಾಲ, ನಿರ್ವಾಕ್ಯಾ - ಮಾತಿಲ್ಲನವಳು, ಅಸ್ಮಿ - ಆಗಿದ್ದೇನೆ. ॥ ೧೭ ॥ ಪ್ಲವಂಗನು - ವಾನರೋತ್ತಮನೇ, ಚಿಂತಯಂತೀ - ಆಲೋಚಿಸುತ್ತಿರುವವ

ಆದುದರಿಂದ ನೀನು ಸ್ವಂತ ಮನೆಯಲ್ಲಿದ್ದಂತೆಯೇ ಸರಿ. ತಲ್ಲಣಗೊಳ್ಳದೆ ಸಮಾಧಾನದಿಂದಿರುವವಳಾಗು. ಈ ಹನುಮಂತನು ಪರಮ ಸಂತುಷ್ಟನಾಗಿ ನಿನ್ನನ್ನು ನೋಡಲು ಬರುವನು." ॥೧೧-೧೪॥ ಹನುಮಂತನೀಮಾತುಗಳನ್ನು ಹೇಳಿದೊಡನೆಯೇ ಮಹಾ ಧರ್ಮಿಷ್ಠೆಯಾದ ಸೀತಾದೇವಿಯು ದಿಗ್ಗನೆದ್ದು ಸಂತೋಷಾಧಿಕ್ಯದಿಂದ ಮಾತೇ ಹೊರಡದವಳಾಗಿ ಏನೂ ಹೇಳದೆ ಸ್ವಲ್ಪಹೊತ್ತು ಸುಮ್ಮನಿದ್ದಳು. ಆಗ ಕಪಿಶ್ರೇಷ್ಠನಾದ ಹನುಮಂತನು ಆಕೆಯನ್ನು ಕುರಿತು, "ಎಲೌ ದೇವಿಯೇ! ಏನನ್ನು ಯೋಚಿಸುತ್ತಿರುವೆ. ನನ್ನನ್ನೇಕೆ ಮಾತನಾಡಿಸದಿರುವೆ?" ಎಂದನು. ಹನುಮಂತನಿಂತು ನುಡಿಯಲು ಮಹಾ ಧರ್ಮಿಷ್ಠೆಯಾದ ಆಕೆಯು ಪರಮ ಸಂತುಷ್ಟೆಯಾಗಿ ಸಂತೋಷಾಧಿಕ್ಯದಿಂದ ಗದ್ಗದಧ್ವನಿಭರಿತೆಯಾಗಿ ಆತನನ್ನು ಕುರಿತು, "ಮಾರುತೀ! ನನ್ನ ಸ್ವಾಮಿಯ ವಿಜಯವನ್ನೊಳಗೊಂಡ ಈ ಪ್ರಿಯೋದಂತವನ್ನು ಕೇಳಿ ಅಧಿಕಾಧಿಕವಾದ ಸಂತೋಷಕ್ಕೆ ವಶಳಾಗಿ ಒಂದು ಕ್ಷಣಕಾಲ ಏನೂ ಮಾತನಾಡಲಾರದವಳಾದೆನು. ವಾನರೋತ್ತಮಾ! ನಾನು ಎಷ್ಟು ಬಗೆಯಾಗಿ ಯೋಚಿಸಿ

ಯಂತೀ ಪ್ಲವಂಗಮ! । ಮತ್ಪ್ರಿಯಾಖ್ಯಾನಕಸ್ಯೇಹ ತವ ಪ್ರತ್ಯಭಿನಂದನಂ ॥ ೧೮ ॥ ನಚ ಪಶ್ಯಾಮಿ ತತ್ಸೌಮ್ಯ! ಪೃಥಿವ್ಯಾಮಪಿ ವಾನರ! । ಸದೃಶಂ ಮತ್ಪ್ರಿಯಾಖ್ಯಾನೇ! ತವ ದಾತುಂ ಭವೇತ್ಸಮಂ ॥ ೧೯ ॥ ಹಿರಣ್ಯಂ ವಾ ಸುವರ್ಣಂ ವಾ ರತ್ನಾನಿ ವಿವಿಧಾನಿಚ । ರಾಜ್ಯಂ ವಾ ತ್ರಿಷು ಲೋಕೇಷು ನೈತದರ್ಹತಿ ಭಾಷಿತುಂ" ॥ ೨೦ ॥ ಏವಮುಕ್ತಸ್ತು ವೈದೇಹ್ಯಾ ಪ್ರತ್ಯುವಾಚ ಪ್ಲವಂಗಮಃ । ಗೃಹೀತಪ್ರಾಂಜಲಿರ್ವಾಕ್ಯಂ ಸೀತಾಯಾಃ ಪ್ರಮುಖೇ ಸ್ಥಿತಃ ॥ ೨೧ ॥ "ಭರ್ತುಃ ಪ್ರಿಯಹಿತೇ ಯುಕ್ತೇ ಭರ್ತುರ್ವಿಜಯಕಾಂಕ್ಷಿಣೀ । ಸ್ನಿಗ್ಧಮೇವಂ ವಿಧಂ ವಾಕ್ಯಂ ತ್ವಮೇವಾರ್ಹಸಿ ಭಾಷಿತುಂ

ಳಾಗಿ, ಇಹ - ಈಗ, ಮತ್ಪ್ರಿ....ಸ್ಯ - ನನಗೆ ಪ್ರಿಯವನ್ನು ಹೇಳುತ್ತಿರುವ, ತವ - ನಿನಗೆ, ಇಹ - ಲೋಕದಲ್ಲಿ, ಪ್ರತ್ಯಭಿನಂದನಂ - ಪ್ರತಿಯಾಗಿ ಸಂತೋಷಕರವಾದ, ಸದೃಶಂ - ಸಮಾನ ಪದಾರ್ಥವನ್ನು, ನಪಶ್ಯಾಮಿಹಿ - ಕಾಣೆನು. ॥ ೧೮ ॥ ಸೌಮ್ಯ - ಪ್ರಸನ್ನನೇ, ವಾನರ - ವಾನರನೇ, ಮತ್ಪ್ರಿ....ನೇ - ನನಗೆ ಇಷ್ಟವಾದ ಮಾತನ್ನು ಹೇಳುವಿಕೆಯ ವಿಷಯದಲ್ಲಿ, ತವ - ನಿನಗೆ, ಯತ್ - ಯಾವ ಪದಾರ್ಥವು, ದಾತುಂ - ಕೊಡುವುದಕ್ಕೆ, ಸಮಂ - ಸಮಾನವಾದದ್ದಾಗಿ, ಸದೃಶಂ - ಯೋಗ್ಯವಾದದ್ದು, ಭವೇತ್ - ಆಗುವದೋ, ತತ್ - ಅದನ್ನು, ಪೃಥಿವ್ಯಾಮಪಿ - ಭೂಮಿಯಲ್ಲಿಯೂ ಕೂಡ, ನಪಶ್ಯಾಮಿ - ಕಾಣೆನು. ॥೧೯॥ ಹಿರಣ್ಯಂವಾ - ಬೆಳ್ಳಿಯೇ ಆಗಲಿ, ಸುವರ್ಣಂವಾ - ಚಿನ್ನವೇ ಆಗಲಿ, ವಿವಿಧಾನಿ - ನಾನಾಬಗೆಗಳಾದ, ರತ್ನಾನಿ - ರತ್ನಗಳಾಗಲಿ, ರಾಜ್ಯಂವಾ - ರಾಜ್ಯವಾದರೂ, ತ್ರಿಷು ಲೋಕೇಷು - ಮೂರು ಲೋಕಗಳಲ್ಲಿಯೂ, ಏತತ್ - ಇದು, ಭಾಷಿತುಂ - ಮಾತನಾಡುವುದಕ್ಕೂ ಕೂಡ, ನಾರ್ಹತಿ - ಯೋಗ್ಯವಲ್ಲವು, ಏವಂ - ಈ ಪರಿಯಾಗಿ, ವೈದೇಹ್ಯಾ - ಸೀತಾದೇವಿಯಿಂದ, ಉಕ್ತಃ - ಹೇಳಲ್ಪಟ್ಟ, ಪ್ಲವಂಗಮಸ್ತು - ಆಂಜನೇಯನಾದರೆ, ಗೃಹೀ....ಲಿಃ - ಹಿಡಿಯಲ್ಪಟ್ಟ ಬೊಗಸೆಯುಳ್ಳವನಾಗಿ, ಸೀತಾಯಾಃ - ಸೀತಾದೇವಿಯ, ಪ್ರಮುಖೇ - ಎದುರಾಗಿ, ಸ್ಥಿತಃ - ನಿಂತು, ವಾಕ್ಯಂ - ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥೨೦ ೨೧। ಹೇ ಭರ್ತುಃಪ್ರಿಯಹಿತೇ- ಎಲೌ ಗಂಡನಿಗೆ ಪ್ರಿಯವನ್ನೂ ಶ್ರೇಯಸ್ಸನ್ನೂ ಕೋರುವವಳೇ, ಹೇ ಭರ್ತು....ಣಿ-ಗಂಡನಿಗೆ ಜಯವನ್ನಪೇಕ್ಷಿಸುವವಳೇ, ಏವಂವಿಧಂ-ಇಂತಹ, ಸ್ನಿಗ್ಧಂ-ಸ್ನೇಹದಿಂದ ಕೂಡಿರುವ, ವಾಕ್ಯಂ-ಮಾತನ್ನು, ಭಾಷಿತುಂ - ಮಾತನಾಡುವದಕ್ಕೆ, ತ್ವಮೇವ - ನೀನೇ, ಅರ್ಹಸಿ - ಯೋಗ್ಯಳು. ॥ ೨೨ ॥

ದರೂ, ನನಗೆ ಅತ್ಯಂತ ಪ್ರಿಯಂಕರವಾದ ಈ ವಾರ್ತೆಯನ್ನು ತಂದು ಹೇಳಿದ ನಿನ್ನನ್ನು ಯಾವ ರೀತಿ ಅಭಿನಂದಿಸುವುದೆಂಬುದೇ ತಿಳಿಯದಾಗಿದೆ. ಓ ಸೌಮ್ಯನೇ! ಈ ಪ್ರಿಯ ವಾರ್ತೆಗೆ ತಕ್ಕುದಾದ ಬಹುಮತಿಯು ಈ ಭೂಮಂಡಲದಲ್ಲಿಯೇ ಇರುವುದಿಲ್ಲವು. ಹೀಗಿರುವಾಗ ನಿನಗೆ ನಾನಾವ ಬಹುಮತಿಯನ್ನು ತಾನೆ ಕೊಡಲಿ! ನೀನು ಮಾಡಿರುವ ಉಪಕಾರಕ್ಕೆ ಸಮಾನವಾಗಿ ಹಣವೂ, ಚಿನ್ನವೋ, ರತ್ನಗಳೋ, ಮೂರು ಲೋಕಗಳ ರಾಜ್ಯವೋ ಯಾವುದನ್ನು ಹೇಳಲೂ ಯೋಗ್ಯವಲ್ಲದಿರುವುವು. ಎಲೈ ಸೌಮ್ಯನೇ! ನೀನು ಈಗ ನನಗೆ ಹೇಳಿರುವ ಪ್ರಿಯವಾರ್ತೆಯು ಇವೆಲ್ಲವನ್ನೂ ಮೀರಿಸಿರುವಾಗ ನಾನು ನಿನಗೇನನ್ನು ತಾನೆ ಕೊಡಬಲ್ಲೆನು. ॥ ೧೫-೨೧ ॥ ವಾನರೋತ್ತಮನಾದ ಹನುಮಂತನು ಪೂಜ್ಯೆಯಾದ ಸೀತಾದೇವಿಯು ನುಡಿದ ಈ ಮಾತುಗಳನ್ನು ಕೇಳಿ ಆ ದೇವಿಯ ಮುಂಗಡೆ ಕೈಜೋಡಿಸಿ ನಿಂತು ಆಕೆಯನ್ನು ಕುರಿತು, "ಓ ದೇವೀ! ನಿನ್ನ ಪತಿದೇವನ ಹಿತದಲ್ಲಿ ಆಸಕ್ತೆಯೂ, ಆತನ

॥ ೨೨ ॥ ತನ್ವೈತದ್ವಚನಂ ಸೌಮ್ಯೇ! ಸಾರವತ್ಸ್ನಿಗ್ಧಮೇವಚ । ರತ್ನೌಘಾದ್ವಿವಿಧಾ
ಚ್ಚಾಪಿ ದೇವರಾಜಾದ್ವಿಶಿಷ್ಯತೇ ॥ ೨೩ ॥ ಅರ್ಥತಶ್ಚ ಮಯಾ ಪ್ರಾಪ್ತಾ ದೇವರಾಜ್ಯಾ
ದಯೋ ಗುಣಾಃ । ಹತಶತ್ರುಂ ವಿಜಯಿನಂ ರಾಮಂ ಪಶ್ಯಾಮಿ ಸುಸ್ಥಿತಂ" ॥೨೪॥
ತಸ್ಯ ತದ್ವಚನಂ ಶ್ರುತ್ವಾ ಮೈಥಿಲೀ ಜನಕಾತ್ಮಜಾ । ತತಃ ಶುಭತರಂ ವಾಕ್ಯಮುವಾಚ
ಪವನಾತ್ಮಜಂ ॥೨೫॥ ಅತಿಲಕ್ಷಣಸಂಪನ್ನಂ ಮಾಧುರ್ಯಗುಣಭೂಷಿತಂ । ಬುಧ್ಯಾ
ಹ್ಯಷ್ಟಾಂಗಯಾ ಯುಕ್ತಂ ತ್ವಮೇವಾರ್ಹಸಿ ಭಾಷಿತುಂ ॥ ೨೬ ॥ ಶ್ಲಾಘನೀಯೋಃ

ಹೇ ಸೌಮ್ಯೇ - ಎಲೌ ಪ್ರಸನ್ನಳೇ, ತವ - ನಿನ್ನ, ಏತದ್ವಚನಂ - ಈ ಮಾತು, ಸಾರವತ್ - ಸಾರವತ್ತಾಗಿಯೂ, ಸ್ನಿಗ್ಧಮೇವಚ - ಗಂಭೀರವಾದದ್ದಾಗಿಯೂ, ವಿವಿಧಾತ್ - ನಾನಾಬಗೆಗಳಾದ, ರತ್ನೌಘಾತ್ - ರತ್ನಗಳ ರಾಶಿಗಿಂತಲೂ, ದೇವರಾಜ್ಯಾಚ್ಚ - ಸ್ವರ್ಗರಾಜ್ಯಕ್ಕಿಂತಲೂ, ವಿಶಿಷ್ಯತೇ - ಮೀರಿದೆ. ॥ ೨೩ ॥ ಹತಶತ್ರುಂ - ಹೊಡೆಯಲ್ಪಟ್ಟ ಶತ್ರುಗಳುಳ್ಳ, ರಾಮಂ - ಶ್ರೀರಾಮನನ್ನು, ವಿಜಯಿನಂ-ಶತ್ರುವಿಜಯದಿಂದ ಕೂಡಿರುವನನ್ನಾಗಿಯೂ, ಸುಸ್ಥಿತಂ-ಸುಖವಾಗಿರುವನನ್ನಾಗಿಯೂ, ಪಶ್ಯಾಮೀತಿಯತ್ - ಕಾಣುತ್ತೇನೆಂಬುದು ಯಾವುದೋ, ಅಸ್ಮಾತ್ ಅರ್ಥತಃ - ಈ ಪ್ರಯೋಜನದ ದೆಸೆಯಿಂದ, ಮಯಾ - ನನ್ನಿಂದ, ದೇವ....ಯಃ - ಸ್ವರ್ಗರಾಜ್ಯಾಧಿಪತ್ಯವೇ ಮೊದಲಾದ, ಗುಣಾಃ - ಗುಣಗಳು, ಪ್ರಾಪ್ತಾಃ - ಹೊಂದಲ್ಪಟ್ಟವು. ॥ ೨೪ ॥ ಜನಕಾತ್ಮಜಾ - ಜನಕರಾಜನ ಮಗಳಾದ, ಮೈಥಿಲೀ - ಸೀತಾದೇವಿಯು, ತಸ್ಯ - ಆ ಆಂಜನೇಯನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ತತಃ - ಬಳಿಕ, ಪವನಾತ್ಮಜಂ - ವಾಯುಪುತ್ರನಾದ ಹನುಮಂತನನ್ನು ಕುರಿತು, ಶುಭತರಂ - ಬಹಳ ಮಂಗಳಕರವಾದ, ವಾಕ್ಯಂ - ಮಾತನ್ನು, ಉವಾಚ - ಹೇಳಿದಳು. ॥ ೨೫ ॥ ಅತಿ....ನ್ನಂ - ಸಲ್ಲಕ್ಷಣಗಳಿಂದ ಕೂಡಿರುವ, ಮಾಧು....ತಂ - ಮಾಧುರ್ಯವೆಂಬ ಗುಣದಿಂದ ಕಿವಿಗಳಿಗೆ ಇಂಪಾಗಿರುವ ಗುಣಗಳಿಂದಲಂಕೃತವಾದ, ಅಷ್ಟಾಂಗಯಾ - ಎಂಟು ಅಂಗಗಳುಳ್ಳ ಅಂದರೆ, (ಗ್ರಹಣ, ಧಾರಣ, ಸ್ಮರಣ, ಪ್ರತಿಪಾದನ, ಊಹಾ, ಅಪೋಹ, ಅರ್ಥವಿಜ್ಞಾನ, ತತ್ವಜ್ಞಾನ ಎಂಬ ಎಂಟು ಅಂಗಗಳುಳ್ಳ,) ಬುಧ್ಯಾ - ಬುದ್ಧಿಯಿಂದ, ತ್ವಮೇವ - ನೀನೇ, ಭಾಷಿತುಂ - ಮಾತನಾಡುವು

ವಿಜಯವನ್ನೇ ಬಯಸುವಾಕೆಯೂ ಆದ ನೀನೊಬ್ಬಳೇ ಇಂತಹ ಮಾತನ್ನಾಡಲು ಸಾಧ್ಯವೇ ಹೊರತು ಮತ್ತಾರಿಂದಲೂ ಈ ಮಾತನ್ನಾಡಲು ಶಕ್ಯವಲ್ಲವು. ಎಲೌ ಸೌಮ್ಯಳೇ! (ನನ್ನ ಮಾತಿಗೆ ನೀನು ಅಷ್ಟೊಂದು ಬೆಲೆಯನ್ನು ಕಟ್ಟಿದೆ. ಅದಂತಿರಲಿ) ಸಾರವತ್ತಾದುದೂ, ಪರಮ ವಿಶ್ವಾಸಪೂರ್ವಕವಾದುದೂ ಆದ ನೀನಾಡಿದ ಮಾತುಗಳು ರತ್ನರಾಶಿಗಳು ಮತ್ತು ದೇವರಾಜ್ಯಗಳಿಗಿಂತಲೂ ಎರಡರಷ್ಟು ಹೆಚ್ಚಾದವುಗಳು. ಹೆಚ್ಚಾಗಿ ಹೇಳುವುದೇನು? ದೇವೀ! ಈ ನಿನ್ನ ಮಾತುಗಳನ್ನು ಕೇಳಿದುದರಿಂದ ನಾನು ಅರ್ಥಾತ್ (ಯಥಾರ್ಥವಾಗಿಯೇ) ದೇವರಾಜ್ಯವೇ ಮೊದಲಾದ ಸಮಸ್ತ ಸಂಪತ್ತುಗಳನ್ನೂ ಪಡೆದಂತಾಯಿತು. ನಾನು ಶತ್ರುಸಂಹಾರ ಮಾಡಿ ವಿಜಯಶಾಲಿಯಾದ ಶ್ರೀರಾಮಮೂರ್ತಿಯನ್ನು ನೋಡಿದೆನಲ್ಲವೆ? " ಎಂದು ಹೇಳಿದನು. ॥ ೨೨–೨೪ ॥ ಮಿಥಿಲರಾಯನ ಕುಮಾರಿಯಾದ ಸೀತೆಯು ಈ ರೀತಿ ನುಡಿದ ಹನುಮಂತನ ಮಾತುಗಳನ್ನು ಕೇಳಿ ಆತನನ್ನು ಕುರಿತು ಮಂಗಳತರವಾದ ಮಾತುಗಳನ್ನಾಡುವವಳಾಗಿ, " ಓ ಆಂಜನೇಯಾ! ಸಮಸ್ತ ಲಕ್ಷಣಲಕ್ಷಿತವೂ, ಮಧುರತೆಯೇ ಮೊದಲಾದ ಗುಣಸಹಿತವೂ, ಅಷ್ಟಾಂಗಯುಕ್ತವಾದ ಬುದ್ಧಿಸಹಿತವೂ ಆದ ಇಂತಹ ಮಾತು

ನಿಲಸ್ಯ ತ್ವಂ ಪುತ್ರಃ ಪರಮಧಾರ್ಮಿಕಃ । ಬಲಂ ಶೌರ್ಯಂ ಶ್ರುತಂ ಸತ್ವಂ ವಿಕ್ರಮೋ ದಾಕ್ಷ್ಯಮುತ್ತಮಂ ॥ ೨೭ ॥ ತೇಜಃ ಕ್ಷಮಾ ಧೃತಿರ್ಧೈರ್ಯಂ ವಿನೀತತ್ವಂ ನಸಂಶಯಃ । ಏತೇ ಚಾನ್ಯೇಚ ಬಹವೋ ಗುಣಾಸ್ತ್ವಯ್ಯೇವ ಶೋಭನಾಃ" ॥ ೨೮ ॥ ಅಥೋವಾಚ ಪುನಸ್ಸೀತಾಮಸಂಭ್ರಾಂತೋ ವಿನೀತವತ್ । ಪ್ರಗೃಹೀತಾಂಜಲಿ ರ್ಹರ್ಷಾತ್ಸೀತಾಯಾಃ ಪ್ರಮುಖೇ ಸ್ಥಿತಃ ॥ ೨೯ ॥ "ಇಮಾಸ್ತು ಖಲು ರಾಕ್ಷಸ್ಯೋ ಯದಿ ತ್ವಮನುಮನ್ಯಸೇ । ಹಂತುಮಿಚ್ಛಾಮ್ಯಹಂ ಸರ್ವಾ ಯಾಭಿಸ್ತ್ವಂ ತರ್ಜಿತಾ ಪುರಾ ॥ ೩೦ ॥ ಕ್ಲಿಶ್ಯಂತೀಂ ಪತಿದೈವಾಂ ತ್ವಾಮಶೋಕವನಿಕಾಂ ಗತಾಂ । ಘೋರ

ದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೨೬ ॥ ತ್ವಂ - ನೀನು, ಪರಮಧಾರ್ಮಿಕಃ - ಬಹಳ ಧರ್ಮಜ್ಞನಾದ, ಅನಿಲಸ್ಯ - ವಾಯುವಿಗೆ, ಶ್ಲಾಘನೀಯಃ - ಸ್ತೋತ್ರಾರ್ಹನಾದ, ಪುತ್ರಃ - ಮಗನು, ಬಲಂ - ದೇಹಪ್ರಯಾಸವನ್ನು ಸಹಿಸುವಿಕೆಯೂ, ಶೌರ್ಯಂ - ಯುದ್ಧೋತ್ಸಾಹವೂ, ಶ್ರುತಂ - ಶಾಸ್ತ್ರಜ್ಞಾನವೂ, ಸತ್ವಂ - ಬಲವೂ, ವಿಕ್ರಮಃ - ಪರಾಕ್ರಮವೂ, ಉತ್ತಮಂ - ಉತ್ಕೃಷ್ಟವಾದ, ದಾಕ್ಷ್ಯಂ - ಸಾಮರ್ಥ್ಯವೂ, ತೇಜಃ - ಶತ್ರುನಿಗ್ರಹ ಸಾಮರ್ಥ್ಯವೂ, ಕ್ಷಮಾ - ಅಪರಾಧಸಹನೆಯೂ, ಧೃತಿಃ - ಧಾರಣವೂ, ಧೈರ್ಯಂ - ಧೀರತೆಯೂ, ವಿನೀತತ್ವಂ - ವಿನಯಸಂಪನ್ನತೆಯೂ, ಏತೇಚ- ಇವುಗಳೂ, ಅನ್ಯೇಚ - ಇನ್ನೂ ಕೆಲವು (ಏಕೆ), ಬಹುವಃ - ಬಹಳವಾದ, ಗುಣಾಃ - ಗುಣಗಳೂ, ತ್ವಯ್ಯೇವ-ನಿನ್ನಲ್ಲಿಯೇ, ಶೋಭನಾಃ-ಶುಭಕರಗಳಾಗಿವೆ. ॥ ೨೭-೨೮ ॥ ಅಥ-ಬಳಿಕ, ಸೀತಾಯಾಃ- ಸೀತಾದೇವಿಗೆ, ಪ್ರಮುಖೇ - ಎದುರಾಗಿ, ಸ್ಥಿತಃ - ನಿಂತಿರುವ, ಅಸಂಭ್ರಾಂತಃ - ಸಾವಧಾನಮನಸ್ಕನಾದ ಹನುಮಂತನು, ಹರ್ಷಾತ್ - ಸಂತೋಷದಿಂದ, ಪ್ರಗೃಹೀತಾಂಜಲಿಃ - ಹಿಡಿದ ಬೊಗಸೆಯುಳ್ಳವನಾಗಿ, ಸೀತಾಂ - ಸೀತಾದೇವಿಯನ್ನು ಕುರಿತು, ಪುನಃ - ಮತ್ತೆ, ಉವಾಚ - ಹೇಳಿದನು. ॥೨೯॥ ತ್ವಂ - ನೀನು, ಅನುಮನ್ಯಸೇಯದಿ - ಸಮ್ಮತಿಸಿದವಳೇ ಆದರೆ, ಪುರಾ - ಪೂರ್ವದಲ್ಲಿ, ತ್ವಂ - ನೀನು, ಯಾಭಿಃ - ಯಾವ ಸ್ತ್ರೀಯರಿಂದ, ತರ್ಜಿತಾ - ಹೆದರಿಸಲ್ಪಟ್ಟಿಯೋ, ಸರ್ವಾಃ - ಸಮಸ್ತರಾದ, ಇಮಾಃರಾಕ್ಷಸ್ಯಃಖಲು - ಈ ರಾಕ್ಷಸಸ್ತ್ರೀಯರನ್ನು, ಅಹಂ - ನಾನು, ಹಂತುಂ - ಸಂಹಾರ ಮಾಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೩೦ ॥ ಅಶೋಕವನಿಕಾಂ - ಅಶೋಕ ವನವನ್ನು, ಗತಾಂ - ಹೊಂದಿ, ಕೃಶಂತೀಂ - ಸಂಕಟಗೊಂಡಿರುವ, ಪತಿದೈವಾಂ - ಪತಿಯೇ ದೈವ

ಗಳನ್ನಾಡಲು ನೀನೊಬ್ಬನೇ ಸಮರ್ಥನು. ನೀನು ವಾಯುದೇವನ ಶ್ಲಾಘನೀಯನಾದ ಪುತ್ರನಲ್ಲವೆ! ಮಹಾ ಧಾರ್ಮಿಕನು ನೀನು. ಬಲ, ಶೌರ್ಯ, ಕೇಳ್ವಿಕೆ, ಸ್ಥೈರ್ಯ, ಪರಾಕ್ರಮ, ಉತ್ತಮೋತ್ತಮವಾದ ದಾಕ್ಷಿಣ್ಯ, ತೇಜಸ್ಸು, ಕ್ಷಾಂತಿ, ದಾಂತಿ, ನಮ್ರತೆ ಇವೇ ಮೊದಲಾದ ಅನೇಕಾನೇಕ ಮಂಗಳಮಯವಾದ ಗುಣಗಳೆಲ್ಲವೂ ನಿನ್ನಲ್ಲಿಯೇ ನೆಲಸಿರುವುವೆಂಬುದರಲ್ಲಿ ಸಂಶಯವಿಲ್ಲವು" ಎಂದು ಹೇಳಿದಳು. ॥ ೨೬-೨೯ ॥ ಈ ರೀತಿ ಪ್ರಶಂಸಿಸಿ ನುಡಿದ ಸೀತಾದೇವಿಯ ಮಾತುಗಳನ್ನು ಕೇಳಿದ ತರುವಾಯ ಹನುಮಂತನು ಯಾವ ವಿಧದಲ್ಲಿಯೂ ಸಂಭ್ರಮಗೊಳ್ಳದೆ ಮತ್ತೆ ಕೈಜೋಡಿಸಿಕೊಂಡು ನಮ್ರತೆಯಿಂದ ಕೂಡಿದವನಾಗಿ ಸಂತೋಷಾಧಿಕ್ಯದಿಂದ ಆಕೆಗಭಿಮುಖನಾಗಿ ನಿಂತು, "ಓ ದೇವೀ! ನೀನು ಒಪ್ಪುವೆಯಾದರೆ ನಿನ್ನನ್ನು ಬಗೆಬಗೆಯಾಗಿ ಚಿತ್ರಹಿಂಸೆಗೆ ಗುರಿಮಾಡಿದ ಈ ರಕ್ಕಸಿಯರೆಲ್ಲರನ್ನೂ ಕೊಲ್ಲಬಯಸುವೆನು. ಆಹಹ!! ಮಹಾ ಕಠೋರಚಿತ್ತೆಯರೂ, ಕರಾಳರೂಪಿಣಿಯರೂ, ಭಯಂಕರ

ರೂಪಸಮಾಚಾರಾಃ ಕ್ರೂರಾಃ ಕ್ರೂರತರೇಕ್ಷಣಾಃ । ರಾಕ್ಷಸ್ಯೋ ದಾರುಣಕಥಾ ವರಮೇತತ್ಪ್ರಯಚ್ಛ ಮೇ ॥ ೩೧-೩೨ ॥ ಮುಷ್ಟಿಭಿಃ ಪಾಣಿಭಿಸ್ಸರ್ವಾಶ್ಚರಣೈಶ್ಚೈವ ಶೋಭನೇ! । ಇಚ್ಛಾಮಿ ವಿವಿಧೈರ್ಘೋರೈರ್ಹಂತುಮೇತಾಸ್ಸುದಾರುಣಾಃ ॥ ೩೩ ॥ ಘೋರೈರ್ಜಾನುಪ್ರಹಾರೈಶ್ಚ ದಶನಾನಾಂಚ ಪಾತನೈಃ । ಭಕ್ಷಣೈಃಕರ್ಣನಾಸಾನಾಂ ಕೇಶಾನಾಂ ಲುಂಛನೈಸ್ತಥಾ ॥ ೩೪ ॥ ನಖೈಃ ಶುಷ್ಕಮುಖೀಭಿಶ್ಚ ದಾರಣೈರ್ಲಂಘನೈರ್ಹತೈಃ । ನಿಪಾತ್ಯ ಹಂತುಮಿಚ್ಛಾಮಿ ತವ ವಿಪ್ರಿಯಕಾರಿಣೀಃ" ॥ ೩೫ ॥ ಏವಂ

ವಾಗುಳ್ಳ, ತ್ವಾಂ - ನಿನ್ನನ್ನು ಕುರಿತು, ಘೋರ....ರಃ - ಭಯಂಕರವಾದ ಆಕಾರವೂ, ಆಚಾರವೂ ಉಳ್ಳವರಾಗಿ, ಯಾಃರಾಕ್ಷಸ್ಯಃ-ಯಾವ ರಕ್ಕಸಿಯರು, ಕ್ರೂರಾಃ-ಕಠಿನಚಿತ್ತೆಯರಾಗಿ, ಕ್ರೂರ....ಣಾಃ- ಅತಿ ಕ್ರೂರವಾದ ನೇತ್ರಗಳುಳ್ಳವರಾಗಿ, ದಾರುಣಕಥಾಃ - ಕ್ರೂರವಾದ ಮಾತುಗಳುಳ್ಳವರಾದರೋ, ಏತಾಃ - ಇವರುಗಳನ್ನು ನಾನು ಸಂಹಾರ ಮಾಡುವುದಕ್ಕೆ ಇಚ್ಛಿಸುತ್ತೇನೆ, ಏತದ್ವರಂ - ಈ ವರವನ್ನು, ಮೇ - ನನಗೆ, ಪ್ರಯಚ್ಛ - ಕೊಡು. ॥ ೩೧-೩೨ ॥ ಹೇ ಶೋಭನೇ - ಎಲೈ ಮಂಗಳಕರಳೇ, ಸುದಾರುಣಾಃ - ಬಹಳ ಕ್ರೂರರಾದ, ಏತಾಃ - ಈ ರಕ್ಕಸಿಯರನ್ನು, ಮುಷ್ಟಿಭಿಃ - ಕೈ ಹಿಡಿಗಳಿಂದಲೂ, ಪಾಣಿಭಿಃ - ಕೈಗಳಿಂದಲೂ, ಚರಣೈಶ್ಚೈವ - ಕಾಲೊದೆಗಳಿಂದಲೂ, ವಿವಿಧೈಃ - ನಾನಾಬಗೆಗಳಾದ, ಘೋರೈಃ - ಕ್ರೂರ ವ್ಯಾಪಾರಗಳಿಂದಲೂ, ಹಂತುಂ - ಹೊಡೆಯುವದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೩೩ ॥ ಘೋರೈಃ - ಭಯಂಕರಗಳಾದ, ಜಾನುಪ್ರಹಾರೈಶ್ಚ - ಮೊಣಕಾಲು ಹೊಡೆತಗಳಿಂದಲೂ, ದಶನಾನಾಂ - ದಂತಗಳ, ಪಾತನೈಃ - ಉದರಿಸುವುದರಿಂದಲೂ, ಕರ್ಣನಾಸಾನಾಂ - ಕಿವಿ ಮೂಗುಗಳ, ಭಕ್ಷಣೈಃ - ಕಚ್ಚೋಣದರಿಂದಲೂ, ತಥಾ - ಹಾಗೆಯೇ, ಕೇಶಾನಾಂ - ಕೂದಲುಗಳ, ಲುಂಛನೈಃ - ಕಿತ್ತುಹಾಕುವಿಕೆಯಿಂದಲೂ, ನಖೈಃ - ಉಗುರುಗಳಿಂದ, ಶುಷ್ಕಮುಖೀಭಿಃ - ಬಾಡಿದ ಮುಖಗಳುಳ್ಳವರೊಡಗೂಡಿ, ಲಂಘನೈಃ - ದಾಟುವಿಕೆಗಳಿಂದಲೂ, ದಾರುಣೈಃ - ಸೀಳುವಿಕೆಗಳಿಂದಲೂ, ನಿಪಾತ್ಯ - ಕೆಳಕ್ಕೆ ಕೆಡವಿ, ತವ - ನಿನಗೆ, ವಿಪ್ರಿ....ಣೀಃ - ಅಪರಾಧ ಮಾಡಿರುವ ಈ ರಕ್ಕಸಿಯರನ್ನು, ಹಂತುಂ-ಹೊಡೆಯಲು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥೩೪-೩೫॥ ಹೇ ದೇವೀ -

---

ಕಾರ್ಯಗಳಲ್ಲಿ ನಿರತರಾದವರೂ ಆದ ಈ ರಕ್ಕಸಿಯರು ಅಶೋಕವನದಲ್ಲಿ ಪತಿಯೇ ದೈವವೆಂದೆಣಿಸಿ ಆತನನ್ನೇ ಕುರಿತು ಚಿಂತಿಸುತ್ತ ಸವೆದು ಬತ್ತಿಹೋಗುತ್ತಿದ್ದ ನಿನ್ನನ್ನು ಬಗೆಬಗೆಯಾಗಿ ಹಿಂಸಿಸಿದರಲ್ಲವೆ? ದೇವೀ! ಈ ರಾಕ್ಷಸಿಯರೆಲ್ಲರೂ ಮಹಾ ಕ್ರೂರೆಯರು. ಇವರ ಕೃತ್ಯಗಳೆಲ್ಲವೂ ಬಹು ಭಯಂಕರವಾದುವು. ನನಗೆ ಇವರೆಲ್ಲರನ್ನೂ ಕೊಲ್ಲುವ ಬಯಕೆಯುಂಟಾಗಿದೆ. ನೀನು ಮಾತ್ರ ಈ ವರವೊಂದನ್ನು ನನಗೆ ದಯಪಾಲಿಸು. (ನೀನು ಅಪ್ಪಣೆ ಕೊಡುವುದೇ ತಡ) ಇದೋ ಓ ಮಂಗಳಕರಳೇ! ಈಗಲೇ ನಾನು, ಇವರೆಲ್ಲರನ್ನೂ ಮುಷ್ಟಿಗಳಿಂದಲೂ, ಕಾಲುಗಳಿಂದಲೂ, ಅಂಗೈಗಳಿಂದಲೂ ಇನ್ನೂ ಭಯಂಕರವಾದ ಅನೇಕ ರೀತಿಗಳಲ್ಲಿ ಅಪ್ಪಳಿಸಿ ಹೊಡೆದು ಸಾಯಿಸಲಪೇಕ್ಷಿಸುವೆನು. ಎಲೌ ಸೀತಾಮಾತೇ! ಭಯಂಕರಾಕಾರೆಯರಾದ ಆ ರಾಕ್ಷಸಿಯರನ್ನು ಕಠೋರವಾದ ಕಾಲೊದೆಗಳಿಂದಲೂ, ಹಲ್ಲುಗಳ ಕಡಿತಗಳಿಂದಲೂ, ಕಿವಿಮೂಗುಗಳನ್ನು ಕಡಿದೆಸೆಯುವಿಕೆಯಿಂದಲೂ, ಕೂದಲುಗಳನ್ನು ಕಿತ್ತೆಸೆಯುವಿಕೆಯಿಂದಲೂ, ಉಗುರುಗಳಿಂದ ಪರಚುವಿಕೆಯಿಂದಲೂ, ಮೇಲಕ್ಕೆ ಹಾರಿ ಭಯಂಕರವಾಗಿ ಇವರ ಮೇಲೆ ಬೀಳುವಿಕೆಯಿಂದಲೂ ಹೊಡೆದು ಕೆಡವಲು ಬಯಸುತ್ತೇನೆ.

ಪ್ರಕಾರೈರ್ಬಹುಭಿರ್ವಿಪ್ರಕಾರೈರ್ಯಶಸ್ವಿನಿ! । ಹಂತುಮಿಚ್ಛಾಮ್ಯಹಂ ದೇವಿ! ತವೇಮಾಃ ಕೃತಕಿಲ್ಬಿಷಾಃ" ॥ ೩೬ ॥ ಏವಮುಕ್ತಾ ಹನುಮತಾ ವೈದೇಹೀ ಜನಕಾತ್ಮಜಾ । ಉವಾಚ ಧರ್ಮಸಹಿತಂ ಹನುಮಂತಂ ಯಶಸ್ವಿನೀ ॥ ೩೭ ॥ "ರಾಜಸಂಶ್ರಯವಶ್ಯಾನಾಂ ಕುರ್ವಂತೀನಾಂ ಪರಾಜ್ಞಯಾ । ವಿಧೇಯಾನಾಂಚ ದಾಸೀನಾಂ ಕಃಕುಪ್ಯೇದ್ವಾನರೋತ್ತಮ? ॥ ೩೮ ॥ ಭಾಗ್ಯವೈಷಮ್ಯಯೋಗೇನ ಪುರಾ ದುಶ್ಚರಿತೇನಚ । ಮಯೈತತ್ಪ್ರಾಪ್ಯತೇ ಸರ್ವಂ ಸ್ವಕೃತಂ ಹ್ಯುಪಭುಜ್ಯತೇ ॥ ೩೯ ॥ ಪ್ರಾಪ್ತವ್ಯಂ ತು ದಶಾಯೋಗಾನ್ಮಯೈತದಿತಿ ನಿಶ್ಚಿತಂ । ದಾಸೀನಾಂ ರಾವಣಸ್ಯಾಹಂ ಮರ್ಷ

ಎಲೌ ಸೀತಾದೇವಿಯೇ, ಹೇ ಯಶಸ್ವಿನೀ - ಎಲೈ ಕೀರ್ತಿವಂತಳೇ, ಏವಂಪ್ರಕಾರೈಃ - ಈ ರೀತಿಯಾದ, ಬಹುಭಿಃ - ಅನೇಕ ಬಗೆಗಳಾದ, ವಿಪ್ರಕಾರೈಃ - ಅಪಕಾರಗಳಿಂದ, ತವ - ನಿನಗೆ, ಕೃತಕಿಲ್ಬಿಷಾಃ - ಮಾಡಲ್ಪಟ್ಟ ಅಪರಾಧಗಳುಳ್ಳ, ಇಮಾಃ - ಈ ರಕ್ಕಸಿಯರನ್ನು, ಅಹಂ - ನಾನು, ಹಂತುಂ - ಹೊಡೆಯುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೩೬ ॥ ಏವಂ - ಈ ಪರಿಯಾಗಿ, ಹನುಮತಾ - ಆಂಜನೇಯನಿಂದ, ಉಕ್ತಾ - ಹೇಳಲ್ಪಟ್ಟ, ಜನಕಾತ್ಮಜಾ - ಜನಕರಾಯನ ಮಗಳಾದ, ವೈದೇಹೀ - ಸೀತಾದೇವಿಯು, ಹನುಮಂತಂ - ಆಂಜನೇಯನನ್ನು ಕುರಿತು, ಧರ್ಮಸಂಹಿತಂ - ಧರ್ಮಯುಕ್ತವಾದ ಮಾತನ್ನು, ಉವಾಚ-ಹೇಳಿದಳು. ॥ ೩೭ ॥ ಹೇ ವಾನರೋತ್ತಮ-ಎಲೈ ಉತ್ತಮ ವಾನರನೇ, ರಾಜ....ನಾಂ - ರಾಜಾಶ್ರಯಕ್ಕೆ ವಶರಾದ, ಪರಾಜ್ಞಯಾ - ಇತರರ ಆಜ್ಞೆಯಿಂದ, ಕುರ್ವಂತೀನಾಂ - ಕೆಲಸ ನಡೆಸುತ್ತಿರುವ, ವಿಧೇಯಾನಾಂಚ - ವಿಧೇಯರಾದ, ದಾಸೀನಾಂ - ದಾಸಿಯರಿಗೆ, ಕಃ - ಯಾವನು ತಾನೆ, ಕುಪ್ಯೇತ್ - ಕೋಪಿಸಿಕೊಳ್ಳುವನು. ॥ ೩೮ ॥ ಭಾಗ್ಯ....ನ - ಅದೃಷ್ಟ ವ್ಯತ್ಯಾಸದಿಂದಲೂ, ಪುರಾ ಪೂರ್ವದಲ್ಲಿ, ದುಃಶ್ಚರಿತೇನಚ-ದುಷ್ಟ ವ್ಯಾಪಾರದಿಂದಲೂ, ಮಯಾ - ನನ್ನಿಂದ, ಏತತ್ಸರ್ವಂ - ಇದೆಲ್ಲಾ, ಪ್ರಾಪ್ಯತೇ - ಅನುಭವಿಸಲ್ಪಟ್ಟಿತು, ಸ್ವಕೃತಂ - ತನ್ನ ದುಷ್ಕರ್ಮಫಲವು, ಉಪಭುಜ್ಯತೇಹಿ - ಅನುಭವಿಸಲ್ಪಡುತ್ತದಷ್ಟೆ. ॥ ೩೯ ॥ ದಶಾಯೋಗಾತ್ - ಅನುಭವಕಾಲದ ಸಂಬಂಧದ ದೆಸೆಯಿಂದ, ಏತತ್ - ಇದು, ಮಯಾ - ನನ್ನಿಂದ, ಪ್ರಾಪ್ತವ್ಯಂ - ಅನುಭವಿಸತಕ್ಕದು, ಇತಿ - ಇಂತೆಂದು, ನಿಶ್ಚಿತಂ - ನಿಶ್ಚಯಿಸಲ್ಪಟ್ಟಿತು, ಇಹ - ಇಲ್ಲಿ, ಅಹಂ - ನಾನು,

---

॥೩೦–೩೫॥ ಓ ದೇವೀ! ಈ ಪ್ರಕಾರವಾಗಿ, ನಿನಗೆ ಅಪಕಾರ ಮಾಡಿದ ಈ ಕ್ರೂರೆಯರೆಲ್ಲರನ್ನೂ ಕೊಲ್ಲುತ್ತೇನೆ. ಯಶಸ್ವಿನಿಯಾದ ಓ ದೇವಿಯೇ! ನಿನ್ನನ್ನು ಹಿಂಸಿಸಿದ ಮಹಾಪಾಪಿಷ್ಠೆಯರಾದ ಇವರೆಲ್ಲರನ್ನೂ ಬಡಿದುಹಾಕುವೆನು. ನೀನು ಮಾತ್ರ ನನಗೆ ಅಪ್ಪಣೆ ಕೊಡು" ಎಂದು ಹೇಳಿದನು. ಹನುಮಂತನಿಂತು ನುಡಿಯಲು ವಿದೇಹದಲ್ಲಿ ಜನಕರಾಯನ ಮಗಳಾಗಿ ಜನಿಸಿದ ಸೀತಾದೇವಿಯು, ಧರ್ಮಾರ್ಥಸಹಿತವಾದ ಮಾತನಾಡುವವಳಾಗಿ ಅವನನ್ನುಕುರಿತು, "ಎಲೈ ವಾನರೋತ್ತಮನೇ! ಇವರೆಲ್ಲರೂ ರಾಜನಿಗೆ ವಶರಾದವರು; ಅವರ ಕೈಕೆಳಗಿದ್ದು ಅಧಿಕಾರಿಗಳು ಹೇಳಿದಂತೆ ನಡೆಯುವವರು. ಒಡೆಯನಿಗೆ ಇವರೆಲ್ಲರೂ ವಿಧೇಯರಾಗಿರುವವರು, ದಾಸಿಯರಿವರು. ಇಂಥವರಲ್ಲಿ ಕೋಪಗೊಳ್ಳುವುದೇ? ಅದು ಯೋಗ್ಯವಲ್ಲವು. ಯಾವನು ತಾನೆ ಇಂಥವರ ವಿಷಯದಲ್ಲಿ ಮುನಿಸನ್ನು ತಾಳಿಯಾರು? ಭಾಗ್ಯವಿಪರ್ಯಯದಿಂದಲೂ, ನಾನು ಹಿಂದೆ ಮಾಡಿದ ಪಾಪಕರ್ಮದಿಂದಲೂ ಈ ಹಿಂಸೆಗಳೆಲ್ಲವೂ ನನಗೆ ಒದಗಿದೆ. (ನಾನದನ್ನು ಅನುಭವಿಸಿದುದೂ ಆಯಿತು.) ಯಾವುದೂ ದಶಾಬಲ

ಯಾಮಿಹ ದುರ್ಬಲಾ ॥ ೪೦ ॥ ಆಜ್ಞಪ್ತಾ ರಾವಣೇನೈತಾ ರಾಕ್ಷಸ್ಯೋ ಮಾಮತರ್ಜಯನ್ । ಹತೇ ತಸ್ಮಿನ್ನಕುರ್ಯುರ್ಹಿ ತರ್ಜನಂ ವಾನರೋತ್ತಮ! ॥ ೪೧ ॥ ಅಯಂ ವ್ಯಾಘ್ರಸಮೀಪೇತು ಪುರಾಣೋ ಧರ್ಮಸಂಸ್ಥಿತಃ । ಋಕ್ಷೇಣ ಗೀತಃ ಶ್ಲೋಕೋ ಮೇ ತನ್ನಿಬೋಧ ಪ್ಲವಂಗಮ! ॥ ೪೨ ॥ 'ನ ಪರಃ ಪಾಪಮಾದತ್ತೇ ಪರೇಷಾಂ ಪಾಪಕರ್ಮಣಾಂ । ಸಮಯೋ ರಕ್ಷಿತವ್ಯಸ್ತು ಸಂತಶ್ಚಾರಿತ್ರಭೂಷಣಾಃ' ॥೪೩॥ ಪಾಪಾನಾಂ ವಾ ಶುಭಾನಾಂ ವಾ ವಧಾರ್ಹಾಣಾಂ ಪ್ಲವಂಗಮ! । ಕಾರ್ಯಂ

ದುರ್ಬಲಾ - ಬಲಹೀನಳಾಗಿದ್ದ ಕಾರಣ, ರಾವಣಸ್ಯ - ದಶಕಂಠನ, ದಾಸೀನಾಂ - ಸೇವಕಿಯರ, ಏತತ್ - ಈ ದುಷ್ಕರ್ಮವನ್ನು, ಮರ್ಷಯಾಮಿ - ಸಹಿಸಿಕೊಂಡೆನು. ॥೪೦॥ ಹೇ ವಾನರೋತ್ತಮ - ಎಲೈ ವಾನರಶ್ರೇಷ್ಠನೇ, ರಾವಣೇನ - ದಶಗ್ರೀವನಿಂದ, ಆಜ್ಞಪ್ತಾಃ - ಆಜ್ಞಾಪಿಸಲ್ಪಟ್ಟು, ಏತಾಃ ರಾಕ್ಷಸ್ಯಃ - ಈ ರಕ್ಕಸಿಯರು, ಮಾಂ - ನನ್ನನ್ನು, ಅತರ್ಜಯನ್ - ಹೆದರಿಸಿದರು, ತಸ್ಮಿನ್ - ಆ ದಶಕಂಠನು, ಹತೇ - ಸಂಹೃತನಾಗಿರಲು, ತರ್ಜನಂ - ಹೆದರಿಸುವಿಕೆಯನ್ನು, ನಕುರ್ಯುಃ ಹಿ - ಮಾಡುವುದಿಲ್ಲವಷ್ಟೆ. ॥ ೪೧ ॥ ಹೇ ಪ್ಲವಂಗಮ - ಎಲೈ ವಾನರನೇ, ವ್ಯಾಘ್ರ....ತು - ಹುಲಿಯ ಸಮೀಪದಲ್ಲಿ, ಋಕ್ಷೇಣ - ಕರಡಿಯಿಂದ, ಧರ್ಮಸಂಸ್ಥಿತಃ - ಧರ್ಮವನ್ನೇ ವ್ಯವಸ್ಥಾಪಿಸಿರುವ, ಪುರಾಣಃ - ಹಳೆಯದಾದ, ಅಯಂಶ್ಲೋಕಃ - ಈ ಶ್ಲೋಕವು, ಗೀತಃ - ಹೇಳಲ್ಪಟ್ಟಿತು, ಏತತ್ - ಈ ಅರ್ಥವನ್ನು, ನಿಬೋಧ - ತಿಳಿದುಕೊ. ॥ ೪೨ ॥ ಪರೇಷಾಂ - ಹೊರಗಿನವರ ಉದ್ದೇಶವಾಗಿ, ಪಾಪಕರ್ಮಣಾಂ - ಪಾಪಕೃತ್ಯವನ್ನು ನಡೆಸುತ್ತಿರುವವರಿಗೆ, ಪರಃ - ಪ್ರಾಜ್ಞನಾದ ಪುರುಷನು, ಪಾಪಂ - ಪಾಪವನ್ನು, ನಾದತ್ತೇ - ಎಣಿಸಬಾರದು, ಸಮಯಃ - ತಾನು ಪೂರ್ವದಲ್ಲಿ ಆಡಿದ ಮಾತೇ, ರಕ್ಷಣೀಯಃ - ರಕ್ಷಿಸತಕ್ಕದ್ದು, ಸಂತಃ - ಸತ್ಪುರುಷರು, ಚಾರಿ....ಣಾಃ - ಸಚ್ಚರಿತ್ರೆಯೇ ಅಲಂಕಾರವಾಗುಳ್ಳವರು. ॥೪೩॥ ಹೇ ಪ್ಲವಂಗಮ - ಎಲೈ ವಾನರನೇ, ಪಾಪಾನಾಂ - ನಿನ್ನ ಅಭಿಪ್ರಾಯದಿಂದ ಪಾಪಿಷ್ಠರೇ ಆಗಲಿ, ಶುಭಾನಾಂವಾ - ಪುಣ್ಯವಂತರೇ ಆಗಲಿ, ವಧಾರ್ಹಾಣಾಂ - ಸಂಹಾರ

ದಿಂದಲೇ ಒದಗುತ್ತದೆ. ನನಗೂ ಹಾಗೆಯೇ ಒದಗಿತು. ಎಲೈ ಹನುಮಂತನೇ! ನಾನು ಹೀಗೆಂದೇ ನಿಶ್ಚಯಿಸಿದ್ದೇನೆ. ॥ ೩೬–೪೦ ॥ ಎಲೈ ಕಪಿವೀರನೇ! ನಾನು ಕೇವಲ ದುರ್ಬಲೆಯಾಗಿದ್ದರೂ, ರಾವಣಾಸುರನ ದಾಸಿಯರಾದ ಈ ರಾಕ್ಷಸಿಯರು ಮಾಡಿದ ಅಕೃತ್ಯಗಳೆಲ್ಲವನ್ನೂ ಮನ್ನಿಸುತ್ತೇನೆ. ಈ ರಾಕ್ಷಸಿಯರೆಲ್ಲರೂ ರಾವಣಾಸುರನಿಂದ ನಿಯೋಜಿತರೂ, ಆಜ್ಞಪ್ತರೂ ಆಗಿ ನನ್ನನ್ನು ಬಗೆಬಗೆಯಾಗಿ ಹಿಂಸಿಸಿದರು. ಈಗ ಆ ರಾಕ್ಷಸನು ಮಡಿದು ಹೋದುದರಿಂದ ಇನ್ನುಮೇಲೆ ಇವರು ನನ್ನನ್ನು ಹಿಂಸಿಸುವುದಿಲ್ಲವು. ಎಲೈ ವಾನರೋತ್ತಮನೇ! ಈ ಶ್ಲೋಕವನ್ನು ಕೇಳು. ಇದನ್ನು ಬಹಳ ಮುದಿಯಾದ ಕರಡಿಯೊಂದು ಹುಲಿಯ ಬಳಿ ಹೇಳಿತು. ಇನ್ನೊಬ್ಬನ ಪ್ರೇರಣೆಯಿಂದ ಮತ್ತೊಬ್ಬನು ಮಾಡಿದ ಪಾಪವನ್ನು ಪ್ರಾಜ್ಞನಾದವನೆಂದಿಗೂ ಗಣನೆಗೆ ತೆಗೆದುಕೊಳ್ಳುವುದಿಲ್ಲವು. ಚರಿತ್ರೆಯೇ (ನಡತೆಯೇ) ಭೂಷಣವಾಗಿರುವವರು, ಮಾಡಿದ ಸಮಯ (ಪ್ರತಿಜ್ಞೆಯ)ವನ್ನು ಮಾತ್ರ ಪಾಲಿಸಬೇಕು. (ಆ ಪ್ರಕಾರ ನಾನು ಹಿಂದೆ ಈ ರಾಕ್ಷಸಿಯರ ಸಮ್ಮುಖದಲ್ಲಿ ಮಾಡಿದ ಪ್ರತಿಜ್ಞೆಯನ್ನು ಕಾಪಾಡಬೇಕು.) ಎಲೈ ಪ್ಲವಂಗಮಶ್ರೇಷ್ಠನೇ! ಪೂಜ್ಯನಾದ ನನ್ನ ಒಡೆಯನು (ಪೂಜ್ಯನು) ನಿನ್ನ ಅಭಿಪ್ರಾಯದಂತೆ ವಧಾರ್ಹನಾದವನು, ಪುಣ್ಯಮಾಡಿದವನಾಗಲಿ,

ಕರುಣಮಾರ್ಯೇಣ ನಕಶ್ಚಿನ್ನಾಪರಾಧ್ಯತಿ ॥ ೪೪ ॥ ಲೋಕಹಿಂಸಾವಿಹಾರಾಣಾಂ ರಕ್ಷಸಾಂ ಕಾಮರೂಪಿಣಾಂ । ಕುರ್ವತಾಮಪಿ ಪಾಪಾನಿ ನೈವಕಾರ್ಯಮಶೋಭನಂ" ॥ ೪೫ ॥ ಏವಮುಕ್ತಸ್ತು ಹನುಮಾನ್ ಸೀತಯಾ ವಾಕ್ಯಕೋವಿದಃ । ಪ್ರತ್ಯುವಾಚ ತತಸ್ಸೀತಾಂ ರಾಮಪತ್ನೀಂ ಯಶಸ್ವಿನೀಂ ॥ ೪೬ ॥ "ಯುಕ್ತಾ ರಾಮಸ್ಯ ಭವತೀ ಧರ್ಮಪತ್ನೀ ಯಶಸ್ವಿನೀ । ಪ್ರತಿಸಂದಿಶ ಮಾಂ ದೇವಿ ಗಮಿಷ್ಯೇ ಯತ್ರ ರಾಘವಃ" ॥ ೪೭ ॥ ಏವಮುಕ್ತಾ ಹನುಮತಾ ವೈದೇಹೀ ಜನಕಾತ್ಮಜಾ । ಅಬ್ರವೀತ್ "ದ್ರಷ್ಟುಮಿಚ್ಛಾಮಿ ಭರ್ತಾರಂ ವಾನರೋತ್ತಮ!" ॥ ೪೮ ॥ ತಸ್ಯಾಸ್ತದ್ವಚನಂ ಶ್ರುತ್ವಾ

ಯೋಗ್ಯರಿಗೆ, ಕರುಣಂ - ಕರುಣವು, ಆರ್ಯೇಣ - ಪೂಜ್ಯನಿಂದ, ಕಾರ್ಯಂ - ಮಾಡತಕ್ಕದು, ಕಶ್ಚಿತ್ - ಯಾವ ಪುರುಷನೂ, ನಾಪರಾಧ್ಯತೀತಿನ - ಅಪರಾಧ ಮಾಡುವನಲ್ಲನೆಂಬುದಿಲ್ಲವು. ॥೪೪॥ ಲೋಕ....ಣಾಂ - ಜನರ ಹಿಂಸೆಯಿಂದಲೇ ವಿಹಾರ ಮಾಡುತ್ತಿರುವ, ಕಾಮರೂಪಿಣಾಂ - ಬೇಕಾದ ರೂಪವನ್ನು ಧರಿಸುವ ಶಕ್ತಿಯುಳ್ಳ, ಪಾಪಾನಿ - ಪಾಪಗಳನ್ನೇ, ಕುರ್ವತಾಂ - ಮಾಡುತ್ತಿರುವ, ರಕ್ಷಸಾಮಪಿ - ರಕ್ಕಸರಿಗೂ, ಅಶೋಭನಂ - ವಧರೂಪವಾದ ಅಮಂಗಳ ಕಾರ್ಯವು, ನೈವಕಾರ್ಯಂ - ಮಾಡತಕ್ಕದಲ್ಲ. ॥ ೪೫ ॥ ಏವಂ - ಈ ಪರಿಯಾಗಿ, ಸೀತಯಾ - ಸೀತಾದೇವಿಯಿಂದ, ಉಕ್ತಃ - ಹೇಳಲ್ಪಟ್ಟ, ವಾಕ್ಯಕೋವಿದಃ - ವಚನಾರ್ಥವನ್ನು ತಿಳಿದಿರುವ, ಹನುಮಾನ್ - ಆಂಜನೇಯನು, ತತಃ - ಬಳಿಕ, ಯಶಸ್ವಿನೀಂ - ಕೀರ್ತಿವಂತಳಾದ, ರಾಮಪತ್ನೀಂ - ಶ್ರೀರಾಮನ ಹೆಂಡತಿಯಾದ, ಸೀತಾಂ - ಸೀತಾದೇವಿಯನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಹೇಳಿದನು. ॥ ೪೬ ॥ ಭವತೀ - ನೀನು, ರಾಮಸ್ಯ - ಶ್ರೀರಾಮನಿಗೆ, ಯುಕ್ತಾ - ಅರ್ಹಳಾದ, ಧರ್ಮಪತ್ನೀ - ಹೆಂಡತಿಯು, ಯಶಸ್ವಿನೀ - ಕೀರ್ತಿವಂತಳು, ದೇವೀ - ಸೀತಾದೇವಿಯೇ, ರಾಘವಃ - ಶ್ರೀರಾಮನು, ಯತ್ರ - ಎಲ್ಲಿಯೋ, ತತ್ರ - ಅಲ್ಲಿ, ಗಮಿಷ್ಯೇ - ಹೋಗುವೆನು, ಮಾಂ - ನನ್ನನ್ನು, ಪ್ರತಿಸಂದಿಶ - ಆಜ್ಞಾಪಿಸು, ಏವಂ - ಈ ಪರಿಯಾಗಿ, ಹನುಮತಾ - ಆಂಜನೇಯನಿಂದ, ಉಕ್ತಾ - ಹೇಳಲ್ಪಟ್ಟ, ಜನಕಾತ್ಮಜಾ - ಜನಕರಾಯನ ಮಗಳಾದ, ವೈದೇಹೀ - ಸೀತಾದೇವಿಯು, ವಾನರೋತ್ತಮ - ಆಂಜನೇಯನೇ, ಭರ್ತಾರಂ - ಗಂಡನನ್ನು, ದ್ರಷ್ಟುಂ - ನೋಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಇತಿ - ಇಂತೆಂದು, ಅಬ್ರವೀತ್ - ನುಡಿದಳು. ॥ ೪೭-೪೮ ॥ ತಸ್ಯಾಃ - ಆ ಸೀತಾದೇವಿಯ, ತದ್ವಚನಂ - ಆ ಮಾತನ್ನು,

---

ಪಾಪಮಾಡಿದವನಾಗಲಿ ಅವನನ್ನು ದಯೆಯಿಂದ ನೋಡಬೇಕು. ಯಾವನೂ ಪಾಪ ಮಾಡದೆಯೇ (ಅಪರಾಧ ಮಾಡದೆಯೇ) ಇರುವುದಿಲ್ಲವು. ಲೋಕಹಿಂಸೆಯೇ ಆಟವಾಗಿರುವ, ಕಾಮರೂಪಿಗಳಾದ, ಕೇವಲ ಪಾಪಕರ್ಮವನ್ನು ಮಾಡಿರುವ ಈ ರಾಕ್ಷಸರಿಗೂ ಅಮಂಗಳವನ್ನುಂಟುಮಾಡಬಾರದು" ಎಂದು ಹೇಳಿದಳು. ॥ ೪೧-೪೫ ॥ ಸೀತಾದೇವಿಯು ಹೀಗೆ ಹೇಳಲು ವಾಕ್ಯವಿಶಾರದನಾದ ಹನುಮಂತನು ಮಹಾ ಕೀರ್ತಿಸಂಪನ್ನೆಯಾದ ಆ ಶ್ರೀರಾಮಪತ್ನಿಯನ್ನು ಕುರಿತು, "ಮಹಾ ಕೀರ್ತಿಸಂಪನ್ನೆಯೂ, ಶ್ರೀರಾಮಪತ್ನಿಯೂ ಆದ ನೀನು ಈ ಮಾತುಗಳನ್ನಾಡುವುದೇ ಯೋಗ್ಯವು. ಈಗ ನನಗೆ ಅನುಜ್ಞೆಯನ್ನು ಕೊಟ್ಟು ಸಂದೇಶವನ್ನು ದಯಪಾಲಿಸುವವಳಾಗು. ನಾನು ಶ್ರೀರಾಮಮೂರ್ತಿಯ ಬಳಿಗೆ ಹೋಗುವೆನು" ಎಂದು ಹೇಳಿದನು. ಆಗ ಸೀತಾದೇವಿಯು ಅವನನ್ನು ಕುರಿತು, "ಎಲೈ ಕಪಿಶ್ರೇಷ್ಠನೇ! ನಾನು ನನ್ನ ಭರ್ತನನ್ನು ನೋಡಬೇಕೆನ್ನುವೆನು"

ಹನುಮಾನ್ ಮಾರುತಾತ್ಮಜಃ । ಹರ್ಷಯನ್ ಮೈಥಿಲೀಂ ವಾಕ್ಯಮುವಾಚೇದಂ ಮಹಾದ್ಯುತಿಃ ॥೪೯॥ ಪೂರ್ಣಚಂದ್ರಾನನಂ ರಾಮಂ ದ್ರಕ್ಷ್ಯಸ್ಯಾರ್ಯೇ! ಸಲಕ್ಷ್ಮಣಂ। ಸ್ಥಿರಮಿತ್ರಂ ಹತಾಮಿತ್ರಂ ಶಚೀವ ತ್ರಿದಶೇಶ್ವರಂ" ॥ ೫೦ ॥

ತಾಮೇವಮುಕ್ತ್ವಾ ರಾಜಂತೀಂ ಸೀತಾಂ ಸಾಕ್ಷಾದಿವ ಶ್ರಿಯಂ ।
ಆಜಗಾಮ ಮಹಾವೇಗೋ ಹನುಮಾನ್ ಯತ್ರ ರಾಘವಃ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷೋಡಶೋತ್ತರಶತತಮಸ್ಸರ್ಗಃ

ಶ್ರುತ್ವಾ - ಕೇಳಿ, ಮಾರುತಾತ್ಮಜಃ - ವಾಯುಪುತ್ರನಾದ, ಮಹಾದ್ಯುತಿಃ - ಮಹಾ ತೇಜೋವಂತನಾದ, ಹನುಮಾನ್ - ಆಂಜನೇಯನು, ಮೈಥಿಲೀಂ - ಸೀತಾದೇವಿಯನ್ನು, ಹರ್ಷಯನ್ - ಸಂತೋಷಗೊಳಿಸುವವನಾಗಿ, ಇದಂವಾಕ್ಯಂ - ಈ ಮಾತನ್ನು, ಉವಾಚ - ಹೇಳಿದನು. ॥ ೪೯ ॥ ಆರ್ಯೇ - ಪೂಜ್ಯಳೇ, ತ್ರಿದಶೇಶ್ವರಂ - ದೇವೇಂದ್ರನನ್ನು, ಶಚೀವ - ಶಚೀದೇವಿಯಂತೆ, ಸ್ಥಿರಮಿತ್ರಂ - ಸ್ಥಿರಚಿತ್ತರಾದ ಸ್ನೇಹಿತರುಳ್ಳ, ಹತಾಮಿತ್ರಂ - ಹೊಡೆಯಲ್ಪಟ್ಟ ಶತ್ರುಗಳುಳ್ಳ, ಪೂರ್ಣ....ನಂ - ಪೂರ್ಣಚಂದ್ರನಂತೆ ಮುಖವುಳ್ಳ, ಸಲಕ್ಷ್ಮಣಂ - ಸೌಮಿತ್ರಿಯಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ದ್ರಕ್ಷ್ಯಸಿ - ನೋಡುವೆ ॥೫೦॥ ಸಾಕ್ಷಾತ್ - ಪ್ರತ್ಯಕ್ಷವಾಗಿ, ಶ್ರಿಯಮಿವ - ಲಕ್ಷ್ಮೀದೇವಿಯಂತೆ, ರಾಜಂತೀಂ - ಹೊಳೆಯುತ್ತಿರುವ, ತಾಂಸೀತಾಂ - ಆ ಸೀತಾದೇವಿಯನ್ನು ಕುರಿತು, ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಮಹಾವೇಗಃ - ಬಹಳ ವೇಗವಂತನಾದ, ಹನುಮಾನ್ - ಹನುಮಂತನು, ರಾಘವಃ - ಶ್ರೀರಾಮನು, ಯತ್ರ - ಎಲ್ಲಿಯೋ, ತತ್ರ - ಅಲ್ಲಿಗೆ, ಆಜಗಾಮ - ಹೊರಟುಬಂದನು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷೋಡಶೋತ್ತರಶತತಮಸ್ಸರ್ಗಃ.

ಎಂದಳು. ಮಾರುತಿಯು ಆ ಮಾತನ್ನು ಕೇಳಿ ಮೈಥಿಲಿಯನ್ನು ಆನಂದಗೊಳಿಸುವವನಾಗಿ ಆಕೆಯನ್ನು ಕುರಿತು, "ಓ ದೇವೀ! ಪೂರ್ಣಚಂದ್ರಸಮಾನವಾದ ಮುಖವುಳ್ಳ ಶ್ರೀರಾಮಮೂರ್ತಿಯನ್ನು ಲಕ್ಷ್ಮಣಸಮೇತನನ್ನಾಗಿಯೇ ನೋಡುವೆ. ಸ್ಥಿರವಾದ ಮಿತ್ರರುಳ್ಳವನೂ, ನಾಶ ಹೊಂದಿದ ಸಮಸ್ತ ಶತ್ರುಗಳುಳ್ಳವನೂ ಆದ ದೇವೇಂದ್ರನನ್ನು ಶಚೀದೇವಿಯೆಂತೋ ಅಂತು, ನೀನು ಶ್ರೀರಾಮಮೂರ್ತಿಯನ್ನು ಸಂದರ್ಶಿಸುವೆ" ಎಂದನು. ಮಹಾ ವೇಗಶಾಲಿಯಾದ ಆಂಜನೇಯನು ಈ ರೀತಿ ನುಡಿದು ಮಹಾ ಲಕ್ಷ್ಮಿಯಂತೆ ವಿರಾಜಿಸುತ್ತಿರುವ ಆ ದೇವಿಯಿಂದ ಬೀಳ್ಕೊಂಡು ಶ್ರೀರಾಮನಿರುವೆಡೆಗೆ ಜಾಗ್ರತೆಯಾಗಿ ಹೊರಟುಬಂದನು. ॥೪೬-೫೧॥

ಇಂತಿದು ಸೀತಾ ಸಂತೋಷವೃತ್ತಾಂತವೆಂಬ ನೂರಹದಿನಾರನೆಯ
ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ

ಸ ಉವಾಚ ಮಹಾಪ್ರಾಜ್ಞಮಭಿಗಮ್ಯ ಪ್ಲವಂಗಮಃ । ರಾಮಂ ವಚನಮರ್ಥಜ್ಞೋ ವರಂ ಸರ್ವಧನುಷ್ಮತಾಂ ॥ ೧ ॥ "ಯನ್ನಿಮಿತ್ತೋಯಮಾರಂಭಃ ಕರ್ಮಣಾಂಚ ಫಲೋದಯಃ । ತಾಂ ದೇವೀಂ ಶೋಕಸಂತಪ್ತಾಂ ಮೈಥಿಲೀಂ ದ್ರಷ್ಟುಮರ್ಹಸಿ ॥ ೨ ॥ ಸಾಹಿ ಶೋಕಸಮಾವಿಷ್ಟಾ ಬಾಷ್ಪಪರ್ಯಾಕುಲೇಕ್ಷಣಾ । ಮೈಥಿಲೀ ವಿಜಯಂ ಶ್ರುತ್ವಾ ತವ ಹರ್ಷಮುಪಾಗಮತ್ ॥೩॥ ಪೂರ್ವಕಾತ್ಪ್ರತ್ಯಯಾಚ್ಚಾಹಮುಕ್ತೋ ವಿಶ್ವಸ್ತಯಾ ತಯಾ । ಭರ್ತಾರಂ ದ್ರಷ್ಟುಮಿಚ್ಛಾಮಿ ಕೃತಾರ್ಥಂ

ಅರ್ಥಜ್ಞಃ - ವಚನಾರ್ಥವನ್ನು ತಿಳಿದಿರುವ, ಪ್ಲವಂಗಮಃ - ವಾನರನಾದ, ಸಃ - ಆ ಆಂಜನೇಯನು, ಸರ್ವ....ರಂ - ಸಮಸ್ತ ಧನುರ್ಧಾರಿಗಳಲ್ಲಿ ಶ್ರೇಷ್ಠನಾದ, ಮಹಾಪ್ರಾಜ್ಞಂ - ಬಹಳ ಬುದ್ಧಿವಂತನಾದ, ರಾಮಂ - ಶ್ರೀರಾಮನನ್ನು ಕುರಿತು, ವಚನಂ - ಮಾತನ್ನು, ಉವಾಚ - ಹೇಳಿದನು. ॥ ೧ ॥ ಕರ್ಮಣಾಂ - ಸೇತುಬಂಧನಾದಿ ಕಾರ್ಯಗಳಿಗೆ, ಫಲೋದಯಃ - ರಾವಣನ ವಿಜಯಾದಿ ಫಲಪ್ರಾಪ್ತಿ ರೂಪವಾದ, ಅಯಮಾರಂಭಃ - ಈ ಉದ್ಯೋಗವು, ಯನ್ನಿಮಿತ್ತಃ - ಯಾವ ಸೀತಾದೇವಿಯೇ ನಿಮಿತ್ತಕಾರಣವಾಗಿ ಉಳ್ಳದ್ದೋ, ಶೋಕ....ಪ್ತಾಂ - ಬಹಳ ದಿವಸದಿಂದ ನಿನ್ನ ವಿರಹದಿಂದಾದ ಶೋಕದಿಂದ ಪರಿತಪ್ತಳಾದ, ಮೈಥಿಲೀಂ - ಜನಕರಾಯನ ಮಗಳಾದ, ತಾಂದೇವೀಂ - ಆ ಸೀತಾದೇವಿಯನ್ನು, ದ್ರಷ್ಟುಂ- ನೋಡುವುದಕ್ಕೆ, ಅರ್ಹಸಿ-ಯೋಗ್ಯನಾಗು. ॥೨॥ ಶೋಕ....ಷ್ಟಾ-ವ್ಯಸನಾಕ್ರಾಂತಳಾದ, ಬಾಷ್ಪ....ಣಾ - ಕಂಬನಿಗಳಿಂದ ವ್ಯಾಕುಲವಾದ ನೇತ್ರಗಳುಳ್ಳ, ಸಾಮೈಥಿಲೀ - ಆ ಸೀತಾದೇವಿಯು, ತವ - ನಿನ್ನ, ವಿಜಯಂ - ಶತ್ರುನಿಗ್ರಹವನ್ನು, ಶ್ರುತ್ವಾ - ಕೇಳಿ, ಹರ್ಷಂ - ಸಂತೋಷವನ್ನು, ಉಪಾಗಮದ್ಧಿ - ಹೊಂದಿದಳಷ್ಟೆ. ॥ ೩ ॥ ಪೂರ್ವಕಾತ್ - ಪೂರ್ವದಲ್ಲಿ ನಾನು ನಿನ್ನ ವಾರ್ತೆಯನ್ನು ತೆಗೆದುಕೊಂಡು ಬಂದ ಕಾಲದಿಂದ ಹುಟ್ಟಿದ, ಪ್ರತ್ಯಯಾತ್ - ವಿಶ್ವಾಸದಿಂದ, ವಿಶ್ವಸ್ತಯಾ - ಪ್ರೀತಿಯುಳ್ಳ, ತಯಾ - ಆ ಸೀತಾದೇವಿಯಿಂದ, ಅಹಂ - ನಾನು, ಕೃತಾರ್ಥಂ - ಕೃತಕಾರ್ಯನಾದ, ಸಲಕ್ಷ್ಮಣಂ - ಸೌಮಿತ್ರಿ ಯಿಂದೊಡಗೂಡಿದ, ಭರ್ತಾರಂ - ಗಂಡನನ್ನು, ದ್ರಷ್ಟುಂ -

---

ಸಮಸ್ತ ಕಾರ್ಯಾರ್ಥಗಳನ್ನೂ ಬಲ್ಲವನಾದ ಹನುಮಂತನು ಬಹು ವೇಗದಿಂದ ಶ್ರೀರಾಮನ ಬಳಿಗೈತಂದ ತರುವಾಯ ಮಹಾ ಜ್ಞಾನಿಯೂ, ಬಿಲ್ಲುಗಾರರಿಗೆಲ್ಲ ಮೇಲಾದವನೂ ಆದ ಆತನನ್ನು ಕುರಿತು, "ಶ್ರೀರಾಮಚಂದ್ರ! ಯಾವಾಕೆಗೋಸುಗ ಈ ಮಹತ್ತರವಾದ ಕಾರ್ಯವನ್ನು ಆರಂಭಿಸಿದುದಾಯಿತೋ, ಈ ಕಾರ್ಯಕ್ಕೆ ಫಲಸ್ವರೂಪಿಣಿಯೂ, ಶೋಕಸಂತಪ್ತೆಯೂ ಆದ ಆ ಮೈಥಿಲಿಯನ್ನು ನೋಡುವವನಾಗು." ದುಃಖಪರಿತಪ್ತೆಯಾದ ಆ ದೇವಿಯು ನಿನ್ನ ವಿಜಯವಾರ್ತೆಯನ್ನು ಕೇಳಿದೊಡನೆಯೇ ಅಮಿತಾನಂದದಿಂದ ಆನಂದಬಾಷ್ಪಗಳನ್ನುಗರೆದಳು. ಹಿಂದಿನ ಪರಿಚಯದಿಂದಲೂ, ನನ್ನಲ್ಲಿ ಆಕೆಗಿರುವ ನಂಬುಗೆಯಿಂದಲೂ, "ಎಲೈ ಹನುಮಂತನೇ! ರಾವಣಾಸುರನನ್ನು ಸಂಹರಿಸಿ ಕೃತಕೃತ್ಯತೆಯನ್ನು ಪಡೆದು ಲಕ್ಷ್ಮಣನೊಡನಿರುವ ನನ್ನ ಸ್ವಾಮಿಯಾದ ಶ್ರೀರಾಮಚಂದ್ರನನ್ನು ನೋಡ

ಸಹಲಕ್ಷ್ಮಣಂ" ॥೪॥ ಏವಮುಕ್ತೋ ಹನುಮತಾ ರಾಮೋ ಧರ್ಮಭೃತಾಂ ವರಃ । ಆಗಚ್ಛತ್ಸಹಸಾ ಧ್ಯಾನಮೀಷದ್ಬಾಷ್ಪಪರಿಪ್ಲುತಃ ॥ ೫ ॥ ದೀರ್ಘಮುಷ್ಣಂ ವಿನಿಶ್ವಸ್ಯ ಮೇದಿನೀಮವಲೋಕಯನ್ । ಉವಾಚ ಮೇಘಸಂಕಾಶಂ ವಿಭೀಷಣಮುಪಸ್ಥಿತಂ ॥ ೬ ॥ "ದಿವ್ಯಾಂಗರಾಗಾಂ ವೈದೇಹೀಂ ದಿವ್ಯಾಭರಣಭೂಷಿತಾಂ । ಇಹ ಸೀತಾಂ ಶಿರಸ್ಸ್ನಾತಾಮುಪಸ್ಥಾಪಯ ಮಾಚಿರಂ" ॥ ೭ ॥ ಏವಮುಕ್ತಸ್ತು ರಾಮೇಣ ತ್ವರಮಾಣೋ ವಿಭೀಷಣಃ । ಪ್ರವಿಶ್ಯಾಂತಃಪುರಂ ಸೀತಾಂ ಸ್ವಾಭಿಸ್ಸ್ತ್ರೀಭಿರಚೋದಯತ್ ॥ (ತತ್ರ ಸೀತಾ ಮಹಾಭಾಗಾಂ ದೃಷ್ಟ್ವೋವಾಚ ವಿಭೀಷಣಃ । ಮೂರ್ಧ್ನಿ ಬದ್ಧಾಂಜಲಿ ಶ್ರೀಮಾನ್ವಿನೀತೋ ರಾಕ್ಷಸೇಶ್ವರಃ) ॥ ೮ ॥ "ದಿವ್ಯಾಂಗರಾಗಾ

ನೋಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಇತಿ - ಇಂತೆಂದು, ಉಕ್ತಃ - ಹೇಳಲ್ಪಟ್ಟನು. ॥ ೪ ॥ ಏವಂ - ಈ ಪರಿಯಾಗಿ, ಹನುಮತಾ - ಆಂಜನೇಯನಿಂದ, ಉಕ್ತಃ - ಹೇಳಲ್ಪಟ್ಟ, ಧರ್ಮಭೃತಾಂ - ಧರ್ಮಿಷ್ಠರಿಗೆಲ್ಲ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ಈಷ....ತಃ - ಸ್ವಲ್ಪ ಕಂಬನಿಯಿಂದ ತೋಯಿಸಲ್ಪಟ್ಟವನಾಗಿ, ಸಹಸಾ - ಜಾಗ್ರತೆಯಾಗಿ, ಧ್ಯಾನಂ - ಚಿಂತೆಯನ್ನು, ಆಗಚ್ಛತ್ - ಹೊಂದಿದನು. ॥ ೫ ॥ ದೀರ್ಘಂ - ಉದ್ದವಾಗಿಯೂ, ಉಷ್ಣಂ - ಬಿಸಿಯಾಗಿಯೂ, ವಿನಿಶ್ವಸ್ಯ - ನಿಟ್ಟುಸಿರು ಬಿಟ್ಟು, ಮೇದಿನೀಂ - ನೆಲವನ್ನು, ಅವಲೋಕಯನ್ - ನೋಡುತ್ತಿರುವವನಾಗಿ, ಮೇಘಸಂಕಾಶಂ - ನೀಲಮೇಘಕ್ಕೆ ಸಮಾನನಾಗಿ, ಉಪಸ್ಥಿತಂ - ನಿಂತಿರುವ, ವಿಭೀಷಣಂ - ವಿಭೀಷಣನನ್ನು ಕುರಿತು, ಉವಾಚ - ಹೇಳಿದನು. ॥ ೬ ॥ ದಿವ್ಯಾಂಗರಾಗಾಂ - ಮನೋಹರವಾದ ಅಂಗಲೇಪನವುಳ್ಳ, ದಿವ್ಯಾ....ತಾಂ - ಅಮೂಲ್ಯಗಳಾದ ಒಡವೆಗಳಿಂದ ಅಲಂಕೃತಳಾದ, ಇಹ - ಈಗ, ಶಿರಸ್ನಾತಾಂ - ಅಭ್ಯಂಗನ ಮಾಡಿಕೊಳ್ಳಲ್ಪಟ್ಟ, ಸೀತಾಂ - ಸೀತಾದೇವಿಯನ್ನು, ಉಪಸ್ಥಾಪಯ - ನನ್ನ ಸಮೀಪಕ್ಕೆ ಕರೆದುಕೊಂಡು ಬಾ, ಚಿರಂ - ಸಾವಕಾಶವನ್ನು, ಮಾಕುರು - ಮಾಡಬೇಡ. ॥೭॥ ಏವಂ - ಈ ಪರಿಯಾಗಿ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ತ್ವರಮಾಣಃ - ತ್ವರೆಗೊಂಡಿರುವ, ವಿಭೀಷಣಃ - ವಿಭೀಷಣನು, ಅಂತಃಪುರಂ - ಅಂತಃಪುರವನ್ನು, ಪ್ರವಿಶ್ಯ - ಪ್ರವೇಶಮಾಡಿ, ಸ್ವಾಭಿಃಸ್ತ್ರೀಭಿಃ - ಸ್ವಕೀಯರಾದ ಸ್ತ್ರೀಯರೊಡನೆ, ಸೀತಾಂ - ಸೀತಾದೇವಿಯನ್ನು, ಅಚೋದಯತ್ - ಪ್ರೇರಿಸಿದನು. ॥ ೮ ॥ ಹೇ ವೈದೇಹೀ - ಎಲೌ ಸೀತಾದೇವಿಯೇ, ದಿವ್ಯಾಂಗರಾಗಾ - ದೇವತಾ ಸಂಬಂಧವಾದ ಅಂಗಲೇಪನವುಳ್ಳವಳಾಗಿ, ದಿವ್ಯಾ....ತಾ - ದೇವತಾಸಂಬಂಧವಾದ ಆಭರಣಗಳಿಂದ

ಬಯಸುವೆನು" ಎಂದು ಹೇಳಿದಳೆಂಬುದಾಗಿ ನಿವೇದಿಸಿದನು. ಹನುಮಂತನೀರೀತಿ ಹೇಳಿದೊಡನೆಯೇ ಧರ್ಮಚರಿತರಲ್ಲಿ ಶ್ರೇಷ್ಠನಾದ ಶ್ರೀರಾಮಮೂರ್ತಿಯು ಸ್ವಲ್ಪ ಕಂಬನಿದುಂಬಿ ಕದಡಿದ ಕಣ್ಣುಗಳುಳ್ಳವನಾಗಿ ಕೂಡಲೇ ಧ್ಯಾನಾಸಕ್ತನಾದನು. ॥೧-೫॥ ಇದಾದ ತರುವಾಯ ಆತನು ದೀರ್ಘವಾಗಿ ಬಿಸಿಯ ನಿಟ್ಟುಸಿರನ್ನು ಬಿಟ್ಟು ನೆಲವನ್ನೇ ನೋಡುತ್ತ, ಮುಗಿಲಿನಂತೆ ತನ್ನಮುಂದೆ ನಿಂತಿರುವ ವಿಭೀಷಣನನ್ನು ಕುರಿತು, "ಎಲೈ ವಿಭೀಷಣನೇ! ಸ್ನಾನಾದಿ ಸಂಸ್ಕಾರಗಳಿಂದ ಸಂಸ್ಕೃತೆಯೂ, ದಿವ್ಯಾಭರಣಭೂಷಿತೆಯೂ ಆದ ಸೀತಾದೇವಿಯನ್ನು ಇಲ್ಲಿಗೆ ಕರೆದುಕೊಂಡು ಬರುವವನಾಗು. ತಡೆಮಾಡಬೇಡ" ಎಂದನು. ವಿಭೀಷಣನಾದರೋ ಶ್ರೀರಾಮನ ಮಾತನ್ನು ಕೇಳಿ ಜಾಗ್ರತೆಯಾಗಿ ಅಂತಃಪುರಕ್ಕೆ ಬಂದು ತನ್ನ ಸ್ತ್ರೀಯರಿಂದ ಸೀತೆಯನ್ನು ಶ್ರೀರಾಮಸಂದರ್ಶನಕ್ಕಾಗಿ, ಪ್ರೇರೇಪಿಸಿದನು. (ವಿಭೀಷಣನು ಮಹಾಭಾಗ್ಯಶಾಲಿನಿಯಾದ ಸೀತಾದೇವಿಯನ್ನುಕಂಡು, ಕೈಜೋಡಿಸಿ ತನ್ನತಲೆಯಲ್ಲಿರಿಸಿಕೊಂಡು ಆಕೆಯನ್ನು ನಮಸ್ಕರಿಸಿ

ವೈದೇಹೀ ದಿವ್ಯಾಭರಣಭೂಷಿತಾ । ಯಾನಮಾರೋಹ ಭದ್ರಂ ತೇ ಭರ್ತಾ ತ್ವಾಂ ದ್ರಷ್ಟುಮಿಚ್ಛತಿ" ॥ ೯ ॥ ಏವಮುಕ್ತಾತು ವೈದೇಹೀ ಪ್ರತ್ಯುವಾಚ ವಿಭೀಷಣಂ । "ಅಸ್ನಾತಾ ದ್ರಷ್ಟುಮಿಚ್ಛಾಮಿ ಭರ್ತಾರಂ ರಾಕ್ಷಸಾಧಿಪ!" ॥ ೧೦ ॥ ತಸ್ಯಾಸ್ತದ್ವಚನಂ ಶ್ರುತ್ವಾ ಪ್ರತ್ಯುವಾಚ ವಿಭೀಷಣಃ । "ಯದಾಹ ರಾಜಾ ಭರ್ತಾ ತೇ ತತ್ತಥಾ ಕರ್ತುಮರ್ಹಸಿ" ॥ ೧೧ ॥ ತಸ್ಯ ತದ್ವಚನಂ ಶ್ರುತ್ವಾ ಮೈಥಿಲೀ ಭರ್ತೃದೇವತಾ । ಭರ್ತೃಭಕ್ತಿವ್ರತಾ ಸಾಧ್ವೀ ತಥೇತಿ ಪ್ರತ್ಯಭಾಷತ ॥ ೧೨ ॥ ತತಸ್ಸೀತಾಂ ಶಿರಸ್ಸ್ನಾತಾಂ ಯುವತೀಭಿರಲಂಕೃತಾಂ । ಮಹಾರ್ಹಾಭರಣೋಪೇತಾಂ ಮಹಾ

ಅಲಂಕೃತಳಾಗಿ, ಯಾನಂ - ವಾಹನವನ್ನು, (ಎಂದರೆ-ಮೇನಾವನ್ನು), ಆರೋಹ - ಏರು, ತೇ - ನಿನಗೆ, ಭದ್ರಂ - ಮಂಗಳವು, ಅಸ್ತು - ಆಗಲಿ, ಭರ್ತಾ - ನಿನ್ನ ಗಂಡನು, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವುದಕ್ಕೆ, ಇಚ್ಛತಿ - ಅಪೇಕ್ಷಿಸುತ್ತಾನೆ. ॥ ೯ ॥ ಏವಂ - ಈ ಪರಿಯಾಗಿ, ಉಕ್ತಾ - ಹೇಳಲ್ಪಟ್ಟ, ವೈದೇಹೀ - ಸೀತಾದೇವಿಯು, ವಿಭೀಷಣಂ - ವಿಭೀಷಣನನ್ನು ಕುರಿತು, ಹೇ ರಾಕ್ಷಸಾಧಿಪ - ಎಲೈ ರಕ್ಕಸರೊಡೆಯನೇ, ಅಸ್ನಾತಾ - ಮಂಗಳಸ್ನಾನವಿಲ್ಲದೆಯೇ, ಭರ್ತಾರಂ - ಗಂಡನನ್ನು, ದ್ರಷ್ಟುಂ - ನೋಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ, ಇತಿ - ಇಂತೆಂದು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟಳು. ॥ ೧೦ ॥ ತಸ್ಯಾಃ - ಆ ಸೀತಾದೇವಿಯ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ವಿಭೀಷಣಃ - ವಿಭೀಷಣನು, ತೇ ಭರ್ತಾ - ನಿನ್ನ ಗಂಡನಾದ, ರಾಜಾ - ಅರಸಾದ ಶ್ರೀರಾಮನು, ಯದಾಹ - ಯಾವ ಮಾತನ್ನು ಹೇಳಿದ್ದಾನೆಯೋ, ತಥಾ - ಹಾಗೆಯೇ, ಕರ್ತುಂ - ಮಾಡುವುದಕ್ಕೆ, ಅರ್ಹಸಿ - ಯೋಗ್ಯಳಾಗು, ಇತಿ - ಇಂತೆಂದು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥ ೧೧ ॥ ತಸ್ಯ - ಆ ವಿಭೀಷಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಭರ್ತೃದೇವತಾ - ಪತಿಯೇ ದೈವವಾಗುಳ್ಳ, ಸಾಧ್ವೀ-ಪತಿವ್ರತೆಯಾದ, ಭರ್ತೃ....ತಾ-ಗಂಡನಲ್ಲಿಯೇ ಭಕ್ತಿಭಾವವೆಂಬ ನಿಯಮವುಳ್ಳ, ಮೈಥಿಲೀ - ಸೀತಾದೇವಿಯು, ತಥೇತಿ - ಹಾಗೆಯೇ ಆಗಲೆಂದು, ಪ್ರತ್ಯಭಾಷತ - ಪ್ರತ್ಯುತ್ತರ ಹೇಳಿದಳು. ॥ ೧೨ ॥ ತತಃ - ಬಳಿಕ, ವಿಭೀಷಣಃ - ವಿಭೀಷಣನು, ಶಿರಸ್ನಾತಾಂ - ಮಂಗಳಸ್ನಾನ ಮಾಡಿಸಲ್ಪಟ್ಟ, ಯುವತೀಭಿಃ - ಸ್ನೇಹಿತರಿಂದ, ಅಲಂಕೃತಾಂ - ಅರಶಿನಕುಂಕುಮಾದಿ ಮಂಗಳ ದ್ರವ್ಯಗಳಿಂದಲಂಕೃತಳಾದ, ಮಹಾ....ತಾಂ - ಅಮೂಲ್ಯಗಳಾದ ಒಡವೆಗಳಿಂದ ಕೂಡಲ್ಪಟ್ಟ,

---

ನಮ್ರತೆಯಿಂದ ಕೂಡಿದವನಾಗಿ) ಆಕೆಯನ್ನು ಕುರಿತು, "ಎಲೌ ವೈದೇಹಿಯೇ! ನಿನ್ನ ಸ್ವಾಮಿಯು ನಿನ್ನನ್ನುನೋಡಬಯಸುವನು. ಆದುದರಿಂದ ದಿವ್ಯಾಂಗರಾಗಸಹಿತೆಯೂ, ಉತ್ತಮೋತ್ತಮವಾದ ವಿವಿಧಾಭರಣಭೂಷಿತೆಯೂ ಆಗಿ ಮೇನಾವನ್ನೇರುವವಳಾಗು. ನಿನಗೆ ಮಂಗಳವಾಗಲಿ" ಎಂದು ಅರಿಕೆ ಮಾಡಿದನು. ॥ ೬-೧೦ ॥ ಪತಿಪರಾಯಣೆಯಾದ ಸೀತಾದೇವಿಯು ಆ ಮಾತುಗಳನ್ನು ಕೇಳಿ ಆತನನ್ನು ಕುರಿತು, "ಎಲೈ ರಾಕ್ಷಸೇಶ್ವರನೇ! ನಾನು ಸ್ನಾನ ಮಾಡದೆಯೂ, (ಯಾವೊಂದು ಅಲಂಕಾರವೂ ಇಲ್ಲದೆಯೂ) ಸ್ವಾಮಿಯನ್ನು ನೋಡ ಬಯಸುವೆನು" ಎಂದಳು. ಆಕೆಯ ಮಾತನ್ನುಕೇಳಿ ವಿಭೀಷಣನು ಮಹಾರಾಜನೂ, ನಿನ್ನ ಪತಿ ದೇವನೂ ಆದ ಶ್ರೀರಾಮಮೂರ್ತಿಯೂ ಹೇಗೆ ಅಪ್ಪಣೆ ಮಾಡಿರುವನೋ ಹಾಗೆಯೇ ನೀನು ನಡೆದುಕೊಳ್ಳಬೇಕು" ಎಂದನು. ಆ ಮಾತನ್ನು ಕೇಳಿ ಪತಿದೇವತೆಯಾದ ಸೀತಾದೇವಿಯು ತನ್ನ ಪತಿಯಲ್ಲಿ ಭಕ್ತಿಯುಳ್ಳವಳಾಗಿ, ಮಹಾ ಪತಿವ್ರತೆಯಾದುದರಿಂದ "ಹಾಗೆಯೇ ಆಗಲಿ"ಎಂದಳು. ಇದಾದ ತರುವಾಯ ಶಿರಸ್ನಾತೆಯಾಗಿ ರಾಕ್ಷಸಯುವತಿಯರಿಂದ ಅಲಂಕೃ

ಹಾರ್ಂಬರಧಾರಿಣೀಂ ‖ ೧೩ ‖ ಆರೋಪ್ಯ ಶಿಬಿಕಾಂ ದೀಪ್ತಾಂ ಪರಾರ್ಧ್ಯಾಂಬರ
ಸಂವೃತಾಂ । ರಕ್ಷೋಭಿರ್ಬಹುಭಿರ್ಗುಪ್ತಾಮಾಜಹಾರ ವಿಭೀಷಣಃ ‖ ೧೪ ‖
ಸೋಽಭಿಗಮ್ಯ ಮಹಾತ್ಮಾನಂ ಜ್ಞಾತ್ವಾಪಿ ಧ್ಯಾನಮಾಸ್ಥಿತಂ । ಪ್ರಣತಶ್ಚ ಪ್ರಹೃಷ್ಟಶ್ಚ
ಪ್ರಾಪ್ತಾಂ ಸೀತಾಂ ನ್ಯವೇದಯತ್ ‖ ೧೫ ‖ ತಾಮಾಗತಾಮುಪಶ್ರುತ್ಯ ರಕ್ಷೋಗೃಹ
ಚಿರೋಷಿತಾಂ । ಹರ್ಷೋ ದೈನ್ಯಂ ಚ ರೋಷಶ್ಚ ತ್ರಯಂ ರಾಘವಮಾವಿಶತ್ ‖೧೬‖
ತತಃ ಪಾರ್ಶ್ವಗತಂ ದೃಷ್ಟ್ವಾ ಸವಿಮರ್ಶಂ ವಿಚಾರಯನ್ । ವಿಭೀಷಣಮಿದಂ ವಾಕ್ಯ

ಮಹಾ....ಣೀಂ - ಅಮೂಲ್ಯವಾದ ದಿವ್ಯಾಂಬರವನ್ನು ಧರಿಸಿರುವ, ಸೀತಾಂ - ಸೀತಾದೇವಿಯನ್ನು, ಪರಾ....ತಾಂ - ಶ್ರೇಷ್ಠವಾದ ವಸ್ತ್ರದಿಂದ ಹೊದಿಸಲ್ಪಟ್ಟ, ದೀಪ್ತಾಂ - ಹೊಳೆಯುತ್ತಿರುವ, ಬಹುಭಿಃ - ಅನೇಕರಾದ, ರಕ್ಷೋಭಿಃ - ರಾಕ್ಷಸರಿಂದ, ಗುಪ್ತಾಂ - ಸಂರಕ್ಷಿಸಲ್ಪಟ್ಟ, ದೀಪ್ತಾಂ - ಹೊಳೆಯುತ್ತಿರುವ, ಶಿಬಿಕಾಂ - ಮೇನಾವನ್ನು, ಆರೋಪ್ಯ - ಏರಿಸಿ, ಆಜಹಾರ - ಕರೆದುಕೊಂಡು ಬಂದನು. ‖ ೧೩-೧೪ ‖ ಸಃ - ಆ ವಿಭೀಷಣನು, ಮಹಾತ್ಮಾನಂ - ಮಹಾ ಪ್ರಭಾವವಂತನಾದ, ಧ್ಯಾನಂ - ಚಿಂತೆಯನ್ನು, ಆಸ್ಥಿತಂ - ಹೊಂದಿರುವ ಶ್ರೀರಾಮನನ್ನು, ಜ್ಞಾತ್ವಾಪಿ - ತಿಳಿದರೂ ಕೂಡ, ಅಭಿಗಮ್ಯ - ಬಳಿಸಾರಿ, ಪ್ರಣತಶ್ಚ - ನಮಸ್ಕಾರ ಮಾಡಿ, ಪ್ರಹೃಷ್ಟಶ್ಚ - ಸಂತೋಷಗೊಂಡವನಾಗಿ, ಸೀತಾಂ - ಸೀತಾದೇವಿಯನ್ನು, ಪ್ರಾಪ್ತಾಂ - ಬಂದವಳನ್ನಾಗಿ, ನ್ಯವೇದಯತ್ - ವಿಜ್ಞಾಪಿಸಿದನು. ‖ ೧೫ ‖ ರಕ್ಷೋ....ತಾಂ - ರಾಕ್ಷಸರ ಮನೆಯಲ್ಲಿ ಬಹಳ ಕಾಲದಿಂದಲೂ ವಾಸಿಸುತ್ತಿದ್ದ, ತಾಂ - ಆ ಸೀತಾದೇವಿಯನ್ನು, ಆಗತಾಂ - ಬಂದವಳನ್ನಾಗಿ, ಉಪಶ್ರುತ್ಯ - ಕೇಳಿ, ಹರ್ಷಃ - ಸಂತೋಷವೂ, ದೈನ್ಯಂ - ದುಃಖವೂ, ರೋಷಃ - ರೋಷವೂ, ತ್ರಯಂ - ಈ ಮೂರೂ, ರಾಘವಂ - ಶ್ರೀರಾಮನನ್ನು, ಆವಿಶತ್ - ಹೊಕ್ಕಿತು. ‖ ೧೬ ‖ ತತಃ - ಬಳಿಕ, ರಾಘವಃ - ಶ್ರೀರಾಮನು, ಸವಿಮರ್ಶಂ - ಊಹೆಯಿಂದೊಡಗೂಡಿದಂತೆ, ವಿಚಾರಯನ್ - ಆಲೋಚಿಸಿ, ಪಾರ್ಶ್ವಗತಂ - ಬಳಿ ಬಂದಿರುವ, ವಿಭೀಷಣಂ - ವಿಭೀಷಣನನ್ನು, ದೃಷ್ಟ್ವಾ - ಕಂಡು, ಅಹೃಷ್ಟಂ - ಸಂತೋಷವಿಲ್ಲದಂತೆ, ಇದಂ

ತೆಯೂ, ಅನರ್ಘವಾದ ವಿವಿಧಾಭರಣಾಲಂಕೃತೆಯೂ, ದಿವ್ಯಾಂಬರಧಾರಿಣಿಯೂ ಆದ ಆ ದೇವಿಯನ್ನು ರಾಕ್ಷಸನಾಥನಾದ ವಿಭೀಷಣನು ಅಮೂಲ್ಯವಾದ ವಸ್ತ್ರದ ಮೇಲ್ಹೊದಿಕೆಯುಳ್ಳ ಮೇನಾದಲ್ಲಿ ಕೂಡಿಸಿ ಅನೇಕಮಂದಿ ರಾಕ್ಷಸರ ಕಾವಲಿನೊಡನೆ ಶ್ರೀರಾಮನಿದ್ದೆಡೆಗೆ ತೆಗೆದುಕೊಂಡು ಬಂದನು. ‖೧೧–೧೪‖ ಆಮೇಲೆ ಆತನು ಶ್ರೀರಾಮನ ಬಳಿ ಬೈದಿ ಆತನು ಧ್ಯಾನಾವಸ್ಥೆಯಲ್ಲಿದ್ದುದನ್ನು ಕಂಡೂ, ನಮಸ್ಕರಿಸಿ ಸಂತೋಷಭರಿತನಾಗಿ "ಶ್ರೀರಾಮಾ! ಸೀತಾದೇವಿಯು ನಿನ್ನ ಸಂದರ್ಶನಕ್ಕಾಗಿ ಬಂದಿರುವಳು" ಎಂದು ಅರಿಕೆ ಮಾಡಿದನು. ಶ್ರೀರಾಮನಾದರೋ ರಾವಣನ ಮನೆಯಲ್ಲಿ ಬಹು ಕಾಲದಿಂದಲೂ ಇದ್ದ ಸೀತೆಯು ತನ್ನ ಸಂದರ್ಶನಕ್ಕಾಗಿ ಬಂದಿರುವ ವಿಷಯವನ್ನು ವಿಭೀಷಣನಿಂದರಿತು "ಇಷ್ಟು ಕಾಲವಾದ ಮೇಲೆ ನನ್ನನಲ್ಲಿಯನ್ನು ಕಾಣುವೆನಲ್ಲ!" ಎಂಬುದಾಗಿ ಸಂತೋಷವನ್ನೂ, "ನಾನು ಜೀವಿಸಿದ್ದೂ ಈವರೆಗೆ ಸೀತೆಯು ಇಂತಹ ದುಃಖವನ್ನನುಭವಿಸಬೇಕಾಯಿತಲ್ಲವೇ!" ಎಂಬುದಾಗಿ ದೈನ್ಯವನ್ನು "ಈ ಸೀತೆಯು ಇಷ್ಟು ದಿನಗಳೂ ದುರುಳನಾದ ರಾವಣನ ಮನೆಯಲ್ಲಿದ್ದಳಲ್ಲವೇ?" ಎಂಬುದಾಗಿ ರೋಷವನ್ನೂ ಏಕಕಾಲದಲ್ಲಿಯೇ ಹೊಂದಿದನು. ಆ ತರುವಾಯ ಆತನು ಹೀಗೆಯೇ ಸವಿಮರ್ಶನಾಗಿ ಆಲೋಚಿಸುತ್ತ, ಪಕ್ಕದಲ್ಲಿದ್ದ ವಿಭೀಷಣನನ್ನು ಕಂಡು ಸಂತೋಷಹೀನನಾಗ

ಮಾಹೃಷ್ಟಂ ರಾಘವೋಽಬ್ರವೀತ್ ॥೧೭॥ "ರಾಕ್ಷಸಾಧಿಪತೇ! ಸೌಮ್ಯ ನಿತ್ಯಂ ಮದ್ವಿಜಯೇ ರತ! । ವೈದೇಹೀ ಸನ್ನಿಕರ್ಷಂ ಮೇ ಶೀಘ್ರಂ ಸಮುಪಗಚ್ಛತು" ॥೧೮॥ ಸ ತದ್ವಚನಮಾಜ್ಞಾಯ ರಾಘವಸ್ಯ ವಿಭೀಷಣಃ । ತೂರ್ಣಮುತ್ಸಾರಣೇ ಯತ್ನಂ ಕಾರಯಾಮಾಸ ಸರ್ವತಃ ॥೧೯॥ ಕಂಚುಕೋಷ್ಣೀಷಿಣಸ್ತತ್ರ ವೇತ್ರಜರ್ಝರಪಾಣಯಃ । ಉತ್ಸಾರಯಂತಃ ಪುರುಷಾಸ್ಸಮಂತಾತ್ಪರಿಚಕ್ರಮುಃ ॥೨೦॥ ಋಕ್ಷಾಣಾಂ ವಾನರಾಣಾಂಚ ರಾಕ್ಷಸಾನಾಂಚ ಸರ್ವಶಃ । ಬೃಂದಾನ್ಯುತ್ಸಾರ್ಯಮಾಣಾನಿ ದೂರಮುತ್ಸಸೃಜುಸ್ತದಾ ॥೨೧॥ ತೇಷಾಮುತ್ಸಾರ್ಯಮಾಣಾನಾಂ ಸರ್ವೇಷಾಂ ಧ್ವನಿರುತ್ಥಿತಃ । ವಾಯುನೋದ್ವರ್ತಮಾನಸ್ಯ ಸಾಗರಸ್ಯೇವ ನಿಸ್ವನಃ

ವಾಕ್ಯಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೧೭॥ ಹೇ ರಾಕ್ಷಸಾಧಿಪತೇ - ಎಲೈ ರಾಕ್ಷಸಾಧಿಪತಿಯೇ, ಸೌಮ್ಯ - ಪ್ರಸನ್ನನೇ, ನಿತ್ಯಂ - ನಿರಂತರವೂ, ಮದ್ವಿಜಯೇ - ನನ್ನ ಜಯದಲ್ಲಿ, ರತ - ಆಸಕ್ತನಾದವನೇ, ವೈದೇಹೀ - ಸೀತಾದೇವಿಯು, ಮೇ - ನನ್ನ, ಸನ್ನಿಕರ್ಷಂ - ಸಮೀಪವನ್ನು ಕುರಿತು, ಶೀಘ್ರಂ - ಜಾಗ್ರತೆಯಾಗಿ, ಸಮುಪಗಚ್ಛತು - ಬರಲಿ. ॥೧೮॥ ಸವಿಭೀಷಣಃ - ಆ ವಿಭೀಷಣನು, ರಾಘವಸ್ಯ - ಶ್ರೀರಾಮನ, ತದ್ವಚನಂ - ಆ ಮಾತನ್ನು, ಆಜ್ಞಾಯ - ತಿಳಿದು, ತೂರ್ಣಂ - ಜಾಗ್ರತೆಯಾಗಿ, ಉತ್ಸಾರಣೇ - ಜನರನ್ನು ದೂರ ಕಳುಹಲು, ಸರ್ವತಃ - ಎಲ್ಲ ದಿಕ್ಕುಗಳಲ್ಲಿಯೂ, ಯತ್ನಂ - ಪ್ರಯತ್ನವನ್ನು, ಕಾರಯಾಮಾಸ - ಮಾಡಿಸಿದನು. ॥೧೯॥ ತತ್ರ - ಆ ಸ್ಥಳದಲ್ಲಿ, ಕಂಚು....ಣಃ-ಕವಚಗಳನ್ನೂ, ಮುಂಡಾಸುಗಳನ್ನೂ ಧರಿಸಿರುವ, ವೇತ....ಯಃ-ಬೆತ್ತಗಳೇ ಕೈಯಲ್ಲುಳ್ಳವರಾಗಿ ಧ್ವನಿಗೊಳಿಸುತ್ತಿರುವ, ಸಮಂತಾತ್ - ಎಲ್ಲೆಡೆಯಲ್ಲಿಯೂ, ಉತ್ಸಾರಯಂತಃ ಜನರನ್ನು ಹೊರಡಿಸುತ್ತಿರುವ, ಪುರುಷಾಃ ರಾಜಭಟರು, ಪರಿಚಕ್ರಮುಃ-ಓಡಾಡುತ್ತ ಬಂದರು ॥೨೦॥ ತದಾ - ಆ ಕಾಲದಲ್ಲಿ, ಋಕ್ಷಾಣಾಂ - ಕರಡಿಗಳ, ವಾನರಾಣಾಂಚ - ಕಪಿಗಳ, ರಾಕ್ಷಸಾನಾಂಚ - ರಕ್ಕಸರ, ಸರ್ವಶಃ - ಸಮಸ್ತಗಳಿಂದ, ಬೃಂದಾನಿ - ಗುಂಪುಗಳು, ಉತ್ಸಾ...ನಿ - ಹೊರಡಿಸಲ್ಪಟ್ಟವುಗಳಾಗಿ, ದೂರಂ ದೂರವಾಗಿ, ಉತ್ಸಸೃಜುಃ-ದೂರವಾಗಿ ಹೋದವು. ॥೨೧॥ ಉತ್ಸಾ....ನಾಂ-ಹೊರಡಿಸಲ್ಪಡುತ್ತಿರುವ, ಸರ್ವೇಷಾಂ - ಸಮಸ್ತರಾದ, ತೇಷಾಂ - ಆ ವಾನರರಾಕ್ಷಸರ, ಧ್ವನಿಃ - ಧ್ವನಿಯು, ವಾಯುನಾ - ಗಾಳಿಯಿಂದ, ಉದ್ವರ್ತಮಾನಸ್ಯ - ಸುಳಿ ತಿರುಗುತ್ತಿರುವ, ಸಾಗರಸ್ಯ -

---

ಈ ಮಾತನ್ನಾಡಿದನು. "ಎಲೈ ವಿಭೀಷಣನೇ! ರಾಕ್ಷಸಾಧಿಪತಿಯಾದ ನೀನು ಯಾವಾಗಲೂ ನನ್ನ ವಿಜಯದಲ್ಲಿಯೇ ಅಪೇಕ್ಷೆಯುಳ್ಳವನು. ಎಲೈ ಸೌಮ್ಯನೇ! ವೈದೇಹಿಯು ಜಾಗ್ರತೆಯಾಗಿ ನನ್ನ ಬಳಿಗೈದಲಿ" ವಿಭೀಷಣನು ಈ ಮಾತನ್ನು ಶ್ರೀರಾಮನ ಬಾಯಿಂದ ಕೇಳಿದೊಡನೆಯೇ ಅಲ್ಲಿದ್ದ ಜನಸಂದಣಿಯನ್ನೆಲ್ಲ ಜಾಗ್ರತೆಯಾಗಿ ದೂರ ಕಳುಹಿಸಲು ಏರ್ಪಾಡು ಮಾಡಿದನು. ॥೧೭-೨೦॥ ತಲೆಪಾಗುಗಳನ್ನೂ, ಕವಚಗಳನ್ನೂ ಧರಿಸಿದ ರಕ್ಷಕಪಡೆಯ ರಾಕ್ಷಸರು ಚಬುಕುಗಳನ್ನೂ, ಬೆತ್ತಗಳನ್ನೂ ಕೈಯಲ್ಲಿ ಹಿಡಿದು ಅಲ್ಲಿದ್ದ ಜನಗಳೆಲ್ಲರನ್ನೂ 'ಅತ್ತ ಸರಿಯಿರಿ ಅತ್ತ ಸರಿಯಿರಿ' ಎಂದು ದೂರ ಕಳುಹಿಸುತ್ತ ಎಲ್ಲೆಲ್ಲಿಯೂ ಓಡಾಡಲುಪಕ್ರಮಿಸಿದರು. ಆ ಸಮಯದಲ್ಲಿ ಋಕ್ಷರ, ವಾನರರ ಮತ್ತು ರಾಕ್ಷಸರ ಗುಂಪುಗಳು ಎಲ್ಲೆಡೆಯಲ್ಲಿಯೂ ರಕ್ಷಕ ಪುರುಷರಿಂದ ದೂರ ಸರಿಯಿಸಲ್ಪಟ್ಟು ಆ ಸ್ಥಳವನ್ನು ಬಿಟ್ಟು ಹೋದರು. ಅವರೆಲ್ಲರೂ ದೂರ ಸರಿಯುತ್ತಿರಲು ಮಹತ್ತರವಾದ ಕೋಲಾಹಲ ಧ್ವನಿಯುಂಟಾಯಿತು. ಆ ಧ್ವನಿ

॥ ೨೨ ॥ ಉತ್ಸಾರ್ಯಮಾಣಾಂಸ್ತಾನ್ ದೃಷ್ಟ್ವಾ ಸಮಂತಾಜ್ಜಾತಸಂಭ್ರಮಾನ್ ।
ದಾಕ್ಷಿಣ್ಯಾತ್ತದಮರ್ಷಾಚ್ಚ ವಾರಯಾಮಾಸ ರಾಘವಃ ॥ ೨೩ ॥ ಸಂರಬ್ಧಶ್ಚಾಽಬ್ರವೀ
ದ್ರಾಮಶ್ಚಕ್ಷುಷಾ ಪ್ರದಹನ್ನಿವ । ವಿಭೀಷಣಂ ಮಹಾಪ್ರಾಜ್ಞಂ ಸೋಪಾಲಂಭಮಿದಂ
ವಚಃ ॥೨೪॥ "ಕಿಮರ್ಥಂ ಮಾಮನಾದೃತ್ಯ ಕ್ಲಿಶ್ಯತೇಽಯಂ ತ್ವಯಾ ಜನಃ । ನಿವರ್ತ
ಯೈನಮುದ್ಯೋಗಂ ಜನೋಽಯಂ ಸ್ವಜನೋ ಮಮ ॥ ೨೫ ॥ ನಗೃಹಾಣಿ ನವ
ಸ್ತ್ರಾಣಿ ನಪ್ರಾಕಾರಾಸ್ತಿರಸ್ಕ್ರಿಯಾಃ । ನೇದೃಶಾ ರಾಜಸತ್ಕಾರಾ ವೃತ್ತಮಾವರಣಂ
ಸ್ತ್ರಿಯಾಃ ॥ ೨೬ ॥ ವ್ಯಸನೇಷು ನಕೃಚ್ಛ್ರೇಷು ನಯುದ್ಧೇಷು ಸ್ವಯಂವರೇ । ನಕ್ರತೌ

ಸಮುದ್ರದ, ನಿಸ್ವನಇವ - ಧ್ವನಿಯಂತೆ, ಉತ್ಥಿತಃ - ಹುಟ್ಟಿತು. ॥ ೨೨ ॥ ಸಮಂತಾತ್ - ಎಲ್ಲೆಡೆ ಯಲ್ಲಿಯೂ, ಉತ್ಸಾರ್ಯಮಾಣಾನ್ - ಹೊರಹೊರಡಿಸಲ್ಪಡುತ್ತಿರುವ, ಜಾತ....ಮಾನ್ - ಹುಟ್ಟಿದ ತ್ವರೆಯುಳ್ಳ, ತಾನ್ - ಆ ವಾನರರನ್ನು, ದೃಷ್ಟ್ವಾ - ಕಂಡು, ರಾಘವಃ - ಶ್ರೀರಾಮನ , ದಾಕ್ಷಿಣ್ಯಾತ್ - ವಾನರರಲ್ಲಿ ದಾಕ್ಷಿಣ್ಯದಿಂದ, ವಾರಯಾಮಾಸ - ಬೇಡವೆಂದು ಹೇಳಿದನು. ॥ ೨೩ ॥ ರಾಮಃ - ಶ್ರೀರಾಮನು, ಸಂರಬ್ಧಃ-ಕೋಪಗೊಂಡು, ಮಹಾಪ್ರಾಜ್ಞಂ-ಬಹಳ ತಿಳಿದವನಾದ, ವಿಭೀಷಣಂ- ವಿಭೀಷಣನನ್ನು ಕುರಿತು, ಚಕ್ಷುಷಾ - ಕಣ್ಣುಗಳಿಂದ, ಪ್ರದಹನ್ನಿವ - ಸುಡುವ, ಸೋಪಾಲಂಭಂ - ನಿಂದೆಯಿಂದೊಡಗೂಡಿದಂತೆ, ಇದಂವಚಃ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೪ ॥ ತ್ವಯಾ - ನಿನ್ನಿಂದ, ಮಾಂ - ನನ್ನನ್ನು, ಅನಾದೃತ್ಯ - ಉಪೇಕ್ಷೆ ಮಾಡಿ, ಕಿಮರ್ಥಂ - ಯಾವ ನಿಮಿತ್ತವಾಗಿ, ಅಯಂಜನಃ- ಈ ಜನವು, ಕ್ಲಿಶ್ಯತೇ ತೊಂದರೆಗೊಳಿಸಲ್ಪಡುತ್ತದೆ, ಏನಂಉದ್ಯೋಗಂ- ಈ ಪ್ರಯತ್ನವನ್ನು, ನಿವರ್ತಯ - ಬಿಡಿಸು, ಅಯಂಜನಃ - ಈ ಜನವು, ಮಮ - ನನಗೆ, ಸ್ವಜನಃ - ಸ್ವಂತ ಜನವು. ॥ ೨೫ ॥ ಗೃಹಾಣಿ - ಮನೆಗಳು, ಸ್ತ್ರಿಯಾಃ - ಹೆಂಗಸಿಗೆ, ಆವರಣಂ - ಆವರಣವು, ನ - ಅಲ್ಲ, ವಸ್ತ್ರಾಣಿ - ವಸ್ತ್ರಗಳು, ನ - ಆವರಣವಲ್ಲವು, ಪ್ರಾಕಾರಾಃ - ಕೋಟೆಯ ಗೋಡೆಗಳು, ನ- ಆವರಣವಲ್ಲವು, ತಿರಸ್ಕ್ರಿಯಾಃ-ಮೊಗದೆರೆಗಳು, ನ-ಅಲ್ಲವು, ಈದೃಶಾಃ-ಇಂಥವು, ರಾಜಸತ್ಕಾರಾಃ - ಜನೋತ್ಸರಣಾದಿ ರೂಪವಾದ ರಾಜಮರ್ಯಾದೆಗಳು, ನ ಅಲ್ಲವು, ಕಿಂತು-ಮತ್ತೇನಂಧರೆ, ಸ್ತ್ರಿಯಾಃ - ಹೆಂಗಸಿಗೆ, ವೃತ್ತಂ - ಸದಾಚಾರವೇ, ಆವರಣಂ - ಆವರಣವು, ಕಿಂಚ - ಇಷ್ಟು ಮಾತ್ರವೇ ಅಲ್ಲ. ॥ ೨೬ ॥ ವ್ಯಸನೇಷು-ಸ್ವಜನ ಮರಣದಿಂದ ಹುಟ್ಟಿದ ದುಃಖಕಾಲಗಳಲ್ಲಿಯೂ, ಸ್ತ್ರಿಯಾಃ-ಹೆಂಗಸಿನ,

ಯಾದರೋ ಬಿರುಗಾಳಿಯಿಂದ ಭೋರ್ಗರೆಯುತ್ತಿರುವ ಸಾಗರವನ್ನು ಹೋಲುತ್ತಿದ್ದಿತು. ಹೀಗೆ ರಾಕ್ಷಸಭಟರು ವಾನರರಾಕ್ಷಸರೆಲ್ಲರನ್ನೂ ಹೊರಡಿಸುತ್ತಿರುವುದನ್ನು ಕಂಡು ಶ್ರೀರಾಮನು ಆ ಕಾರ್ಯವನ್ನು ಸಹಿಸಲಾರದೆ ತಡೆಮಬಿಟ್ಟನು. ಆತನು ನೋಟದಿಂದಲೇ ಸುಡುವನೋ ಎಂಬಂತೆ ಕೆಂಪಡರಿದ ಕಂಗಳುಳ್ಳವನಾಗಿ ಮಹಾ ಪ್ರಾಜ್ಞನಾದ ವಿಭೀಷಣನನ್ನು ಕುರಿತು ನಿಂದಾಪೂರ್ವಕವಾಗಿ, "ಎಲೈ ! ನನ್ನನ್ನು ಲಕ್ಷ್ಯಕ್ಕೆ ತಂದು ಕೊಳ್ಳದೆಯೇ ಈ ಜನ ವನ್ನು ಹೊರಡಿಸಿ ಹೀಗೇಕೆ ತೊಂದರೆಗೊಳಿಸುತ್ತಿರುವೆ? ಈ ಕಾರ್ಯವನ್ನು ಸಾಕುಮಾಡು. ॥೨೧–೨೫॥ ಇವರೆಲ್ಲರೂ ನನ್ನವರೆಂಬುದನ್ನು ಮರೆತೆಯಾ. (ನನ್ನವರಿಗೆ ಈ ರೀತಿ ತೊಂದರೆ ಕೊಡಬೇಡ) ಹೆಂಗಸರಿಗೆ ಮನೆಗಳಾಗಲಿ, ವಸ್ತ್ರಗಳಾಗಲಿ, ಪ್ರಾಕಾರಗಳಾಗಲಿ (ಕೋಟೆ ಕೊತ್ತಲುಗಳಾಗಲಿ) ಮೊಗದೆರೆಗಳಾಗಲಿ, ಈ ವಿಧವಾದ ರಾಜಸತ್ಕಾರಗಳಾಗಲಿ ಭೂಷಣ ಗಳೆನಿಸುವುದಿಲ್ಲ. ತಡೆಯು ಮೊದಲೇ ಅಲ್ಲವು. ನಡತೆಯೊಂದುಮಾತ್ರವೇ ಅವರಿಗೆ ಭೂಷಣ ಮತ್ತು

ನ ವಿವಾಹೇಚ ದರ್ಶನಂ ದುಷ್ಯತಿ ಸ್ತ್ರಿಯಾಃ ॥ ೨೭ ॥ ಸೈಷಾ ಯುದ್ಧಗತಾ ಚೈವ ಕೃಚ್ಛ್ರೇಚ ಮಹತಿ ಸ್ಥಿತಾ । ದರ್ಶನೇಽಸ್ಯಾ ನದೋಷಸ್ಸ್ಯಾನ್ಮತ್ಸಮೀಪೇ ವಿಶೇಷತಃ ॥ ೨೮ ॥ ತದಾನಯ ಸಮೀಪಂ ಮೇ ಶೀಘ್ರಮೇನಾಂ ವಿಭೀಷಣ! । ಸೀತಾ ಪಶ್ಯತು ಮಾಮೇಷಾ ಸುಹೃದ್ಗಣವೃತಂ ಸ್ಥಿತಂ" ॥ ೨೯ ॥ ಏವಮುಕ್ತಸ್ತು ರಾಮೇಣ ಸವಿಮರ್ಶೋ ವಿಭೀಷಣಃ । ರಾಮಸ್ಯೋಪಾನಯತ್ಸೀತಾಂ ಸನ್ನಿಕರ್ಷಂ ವಿನೀತವತ್ ॥ ೩೦ ॥ ತತೋ ಲಕ್ಷ್ಮಣಸುಗ್ರೀವೌ ಹನುಮಾಂಶ್ಚ ಪ್ಲವಂಗಮಃ । ನಿಶಮ್ಯ ವಾಕ್ಯಂ

ದರ್ಶನಂ - ನೋಟವು, ನದುಷ್ಯತಿ - ದೋಷಯುಕ್ತವಲ್ಲ, ಕೃಚ್ಛ್ರೇಷು - ರಾಜ್ಯಕ್ಷೋಭೆಯ ಕಾಲಗಳಲ್ಲಿ, (ತನಗೆ ಆಪತ್ಕಾಲದಲ್ಲಿ) ನ - ದೋಷವಲ್ಲ, ಯುದ್ಧೇಷು - ಯುದ್ಧಭೂಮಿಯಲ್ಲಿ, ನ - ದುಷ್ಟವಲ್ಲ, ಸ್ವಯಂವರೇ - ಸ್ವಯಂವರ ಕಾಲದಲ್ಲಿ, ನ - ದುಷ್ಟವಲ್ಲ, ಕ್ರತೌ - ಯಾಗಕಾಲದಲ್ಲಿ, ನ - ದುಷ್ಟವಲ್ಲ, ವಿವಾಹೇಚ - ವಿವಾಹಕಾಲದಲ್ಲಿ, ನದುಷ್ಯತಿ - ದೋಷಯುಕ್ತವಲ್ಲ. ॥ ೨೭ ॥ ಸೈಷಾ - ಅಂಥ ಈ ಸೀತಾದೇವಿಯು, ಯುದ್ಧಗತಾಚೈವ - ರಣರಂಗವನ್ನೂ ಹೊಂದಿದ್ದಾಳೆ, ಮಹತೀ - ದೊಡ್ಡದಾದ, ಕೃಚ್ಛ್ರೇಚ - ಕಷ್ಟಾವಸ್ಥೆಯಲ್ಲಿ, ಸ್ಥಿತಾ - ಇದ್ದಾಳೆ, ವಿಶೇಷತಃ - ವಿಶೇಷವಾಗಿ, ಮತ್ಸಮೀಪೇ - ನನ್ನ ಬಳಿ, ಅಸ್ಯಾಃ - ಈ ಸೀತಾದೇವಿಯ, ದರ್ಶನೇ - ನೋಟದಲ್ಲಿ, ದೋಷಃ ದೋಷವು, ನಸ್ಯಾತ್ - ಆಗಲಾರದು. ॥ ೨೮ ॥ ಹೇ ವಿಭೀಷಣ - ಎಲೈ ವಿಭೀಷಣನೇ, ತತ್ - ಆ ಕಾರಣದಿಂದ, ಏನಾಂ - ಈ ಸೀತಾದೇವಿಯನ್ನು, ಶೀಘ್ರಂ - ಜಾಗ್ರತೆಯಾಗಿ, ಮೇ - ನನ್ನ, ಸಮೀಪಂ - ಸಾಮೀಪ್ಯವನ್ನು ಕುರಿತು, ಆನಯ - ಕರೆದುಕೊಂಡು ಬಾ, ಏಷಾಸೀತಾ - ಈ ಸೀತಾದೇವಿಯು, ಸುಹೃ....ತಂ - ಗೆಳೆಯರ ಗುಂಪುಗಳಿಂದ ಪರಿವೃತನಾಗಿ, ಸ್ಥಿತಂ - ಇರುವ, ಮಾಂ - ನನ್ನನ್ನು, ಪಶ್ಯತು - ನೋಡಲಿ. ॥ ೨೯ ॥ ಏವಂ - ಈ ಪರಿಯಾಗಿ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ವಿಭೀಷಣಃ - ವಿಭೀಷಣನು, ಸವಿಮರ್ಶಃ - ಧ್ಯಾನದಿಂದೊಡಗೂಡಿದವನಾಗಿ, ವಿನೀತವತ್ ನಮ್ರನಾಗಿ, ಸೀತಾಂ - ಸೀತಾದೇವಿಯನ್ನು, ರಾಮಸ್ಯ - ಶ್ರೀರಾಮನ, ಸನ್ನಿಕರ್ಷಂ - ಸಮೀಪವನ್ನು ಕುರಿತು, ಉಪಾನಯತ್ - ಕರೆದುಕೊಂಡು ಬಂದನು, ತತಃ - ಬಳಿಕ, ಲಕ್ಷ್ಮ....ವೌ - ಲಕ್ಷ್ಮಣನೂ, ಸುಗ್ರೀವನೂ,

---

ಒಂದು ಆವರಣವು. ದುಃಖಕಾಲಗಳಲ್ಲಿಯೂ, ಕಷ್ಟ (ಆಪತ್) ಕಾಲಗಳಲ್ಲಿಯೂ, ಯುದ್ಧಭೂಮಿಗಳಲ್ಲಿಯೂ, ಸ್ವಯಂವರಗಳಲ್ಲಿಯೂ, ಯಜ್ಞಯಜನಾದಿಗಳಲ್ಲಿಯೂ, ವಿವಾಹಕಾಲಗಳಲ್ಲಿಯೂ ಸ್ತ್ರೀಯರ ದರ್ಶನವು ನಿಷಿದ್ಧ (ದೋಷ) ವೆನಿಸುವುದಿಲ್ಲವು. ಆ ಕಾಲಗಳಲ್ಲಿ ಅವರನ್ನು ನೋಡುವುದರಿಂದ ಅವರಿಗೆ ಯಾವ ದೋಷವೂ ಉಂಟಾಗುವುದಿಲ್ಲವು. ಈಗಲಾದರೋ ಈ ಸೀತಾದೇವಿಯು ದುಸ್ಥಿತಿಯಲ್ಲಿರುವಳು. ಸಮರಭೂಮಿಗೆ ಬಂದಿರುವಳು. ಅದರಲ್ಲಿಯೂ ನನ್ನ ಸಮೀಪಕ್ಕೆ ಬರುವ ಈಕೆಯನ್ನು ನೋಡುವುದರಿಂದ ಯಾವ ದೋಷವೂ ಇರುವುದಿಲ್ಲವು. ಆದುದರಿಂದೆಲೈ ವಿಭೀಷಣನೇ! ನೀನು ಈ ಜನಗಳನ್ನು ಹೊರಡಿಸುವ ಕಾರ್ಯವನ್ನು ತೊರೆದು, ಸೀತೆಯನ್ನು ಜಾಗ್ರತೆಯಾಗಿ ಕರೆದುಕೊಂಡು ಬಾ. ಅವಳು ನನ್ನನ್ನು ಮಿತ್ರಸಹಿತನನ್ನಾಗಿಯೇ ನೋಡಲಿ" ಎಂದನು. ॥ ೨೬-೩೦ ॥ ಶ್ರೀರಾಮಮೂರ್ತಿಯು ಈ ರೀತಿ ನುಡಿಯಲು ವಿಭೀಷಣನು ತನ್ನ ಮನಸ್ಸಿನಲ್ಲಿ ತಾನೇ ವಿಮರ್ಶಿಸಿಕೊಂಡು ಕೇವಲ ನಮ್ರನಾಗಿ ಸೀತಾದೇವಿಯನ್ನು ಆತನ ಬಳಿಗೆ ಕರೆದುಕೊಂಡು ಬಂದನು. ಆ ಸಮಯದಲ್ಲಿ ಲಕ್ಷ್ಮಣಸ್ವಾಮಿಯೂ, ವಾನರೇಶ್ವರ

ರಾಮಸ್ಯ ಬಭೂವುರ್ವ್ಯಥಿತಾಭೃಶಂ ॥೩೧॥ ಕಳತ್ರನಿರಪೇಕ್ಷೈಶ್ಚ ಇಂಗಿತೈರಸ್ಯ ದಾರುಣೈಃ । ಅಪ್ರೀತಮಿವ ಸೀತಾಯಾಂ ತರ್ಕಯಂತಿ ಸ್ಮ ರಾಘವಂ ॥ ೩೨ ॥ ಲಜ್ಜಯಾತ್ವವಲೀಯಂತೀ ಸ್ವೇಷು ಗಾತ್ರೇಷು ಮೈಥಿಲೀ । ವಿಭೀಷಣೇನಾನುಗತಾ ಭರ್ತಾರಂ ಸಾಭ್ಯವರ್ತತ ॥೩೩॥ ಸಾ ವಸ್ತ್ರಸಂರುದ್ಧಮುಖೀ ಲಜ್ಜಯಾ ಜನಸಂಸದಿ । ರುರೋದಾಸಾದ್ಯ ಭರ್ತಾರಮಾರ್ಯಪುತ್ರೇತಿ ಭಾಷಿಣೀ ॥೩೪॥ ವಿಸ್ಮಯಾಚ್ಚ ಪ್ರಹರ್ಷಾಚ್ಚ ಸ್ನೇಹಾಚ್ಚ ಪತಿದೇವತಾ । ಉದೈಕ್ಷತ ಮುಖಂ ಭರ್ತುಃ ಸೌಮ್ಯಂ ಸೌಮ್ಯತರಾನನಾ ॥ ೩೫ ॥

ಪ್ಲವಂಗಮಾಃ - ವಾನರರಾದ, ಹನುಮಾನ್ - ಆಂಜನೇಯನು, ರಾಮಸ್ಯ - ಶ್ರೀರಾಮನ, ವಾಕ್ಯಂ - ಮಾತನ್ನು, ನಿಶಮ್ಯ - ಕೇಳಿ, ಭೃಶಂ - ಬಹಳವಾಗಿ, ವ್ಯಥಿತಾಃ - ವ್ಯಸನಗೊಂಡವರು, ಬಭೂವುಃ - ಆದರು. ॥ ೩೦-೩೧ ॥ ಕಳ....ಶ್ಚ - ಭಾರ್ಯೆಯಲ್ಲಿ ಅಪೇಕ್ಷೆಯಿಲ್ಲದ ಅರ್ಥವನ್ನೇ ಸೂಚಿಸುತ್ತಿರುವ, ದಾರುಣೈಃ - ಕ್ರೂರಗಳಾದ, ಅಸ್ಯ - ಈ ಶ್ರೀರಾಮನ, ಇಂಗಿತೈಃ - ಚೇಷ್ಟಾವಿಶೇಷಗಳಿಂದ, ರಾಘವಂ - ಶ್ರೀರಾಮನನ್ನು, ಸೀತಾಯಾಂ - ಸೀತಾದೇವಿಯಲ್ಲಿ, ಅಪ್ರೀತಮಿವ - ಪ್ರೀತಿಯಿಲ್ಲದವನಂತೆ, ತರ್ಕಯಂತಿಸ್ಮ - ಊಹಿಸಿದರು. ॥ ೩೨ ॥ ಲಜ್ಜಯಾ - ನಾಚಿಕೆಯಿಂದ, ಸ್ವೇಷುಗಾತ್ರೇಷು - ತನ್ನ ಅವಯವಗಳಲ್ಲಿಯೇ, ಅವಲೀಯಂತಿ - ಅಡಗಿಕೊಳ್ಳುತ್ತಿರುವ, ಸಾಮೈಥಿಲೀ - ಆ ಸೀತಾದೇವಿಯು, ವಿಭೀಷಣೇನ - ವಿಭೀಷಣನಿಂದ, ಅನುಗತಾ - ಅನುಸರಿಸಲ್ಪಟ್ಟವಳಾಗಿ, ಭರ್ತಾರಂ - ಗಂಡನನ್ನು ಕುರಿತು, ಅಭ್ಯವರ್ತತ - ಎದುರಾಗಿ ಬಂದು ನಿಂತಳು. ॥ ೩೩ ॥ ಸಾ - ಆ ಸೀತಾದೇವಿಯು, ಜನಸಂಸದಿ - ಜನಸಂಘದಲ್ಲಿ, ಲಜ್ಜಯಾ - ನಾಚಿಕೆಯಿಂದ, ವಸ್ತ್ರ....ಖೀ - ವಸ್ತ್ರದಿಂದ ಹೊದಿಸಲ್ಪಟ್ಟ ಮುಖವುಳ್ಳವಳಾಗಿ, ಭರ್ತಾರಂ - ಗಂಡನನ್ನು ಕುರಿತು, ಆಸಾದ್ಯ - ಬಂದು, ಹೇ ಆರ್ಯಪುತ್ರೇತಿ - ಎಲೈ ಆರ್ಯಪುತ್ರನೇ ಎಂದು, ಭಾಷಿಣೀ - ನುಡಿಯುತ್ತ, ರುರೋದ - ಅತ್ತಳು. ॥ ೩೪ ॥ ಸೌಮ್ಯ....ನಾ - ಅತಿ ಪ್ರಸನ್ನವಾದ ಮುಖವುಳ್ಳ, ಪತಿವ್ರತಾ - ಪತಿವ್ರತೆಯಾದ ಸೀತಾದೇವಿಯು, ವಿಸ್ಮಯಾಚ್ಚ-ಅಪೂರ್ವ ವಸ್ತುದರ್ಶನದಿಂದ ಹುಟ್ಟಿದ ಆಶ್ಚರ್ಯದಿಂದಲೂ, ಪ್ರಹರ್ಷಾಚ್ಚ-ಗಂಡನ ದರ್ಶನದಿಂದ ಹುಟ್ಟಿದ ಸಂತೋಷದಿಂದಲೂ, ಸ್ನೇಹಾಚ್ಚ - ಪತಿಯಲ್ಲಿನ ಪ್ರೇಮಾತಿಶಯದಿಂದಲೂ, ಭರ್ತುಃ - ಗಂಡನ, ಸೌಮ್ಯಂ - ಪ್ರಸನ್ನವಾದ, ಮುಖಂ - ಮುಖವನ್ನು, ಉದೈಕ್ಷತ - ಕಣ್ಣೆತ್ತಿ

ನಾದ ಸುಗ್ರೀವನೂ, ವಾನರೋತ್ತಮನಾದ ಹನುಮಂತನೂ ಶ್ರೀರಾಮನಾಡಿದ ಮಾತುಗಳನ್ನು ಕೇಳಿ, ಆತನಲ್ಲಿ ಪ್ರಿಯಪತ್ನಿಯಾದ ಸೀತಾದೇವಿಯ ವಿಷಯದಲ್ಲಿ ನಿರಪೇಕ್ಷಾಸೂಚಕವಾದ ಭಯಂಕರಭಾವವಿರುವದನ್ನು ಕಂಡು, "ಶ್ರೀರಾಮನು ಸೀತೆಯಲ್ಲಿ ಪ್ರಸನ್ನನಾಗಿಲ್ಲ"ವೆಂದು ತಮ್ಮತಮ್ಮಲ್ಲಿಯೇ ತರ್ಕಿಸಿಕೊಂಡು ದುಃಖಿತರಾದರು. ಇತ್ತ ಸೀತಾದೇವಿಯಾದರೋ ವಿಭೀಷಣನಿಂದ ಹಿಂಬಾಲಿಸಲ್ಪಟ್ಟವಳಾಗಿ ಸಹಜವಾದ ನಾಚಿಕೆಯಿಂದಲೇ ತನ್ನ ಅಂಗಾಂಗಗಳೆಲ್ಲವನ್ನೂ ತನ್ನಲ್ಲಿಯೇ ಅಡಗಿಕೊಳ್ಳುತ್ತ ತನ್ನ ಸ್ವಾಮಿಯಾದ ಶ್ರೀರಾಮನ ಬಳಿಗೈದಿದಳು. ಆ ದೇವಿಯು ಆ ಜನಸಂದಣಿಯಲ್ಲಿ ನಾಚಿ ವಸ್ತ್ರದಿಂದ ಮುಖವನ್ನು ಮುಚ್ಚಿಕೊಂಡು ಮುಂಬರಿದು ಭರ್ತನಾದ ಶ್ರೀರಾಮನ ಸಮೀಪಕ್ಕೆ ಬಂದು "ಆರ್ಯಪುತ್ರ!" ಎಂದು ಮಾತ್ರ ನುಡಿದು ರೋದಿಸಿದಳು. ॥ ೩೧-೩೪ ॥ ಅತಿ ಸೌಮ್ಯವಾದ ಮುಖಮುದ್ರೆಯುಳ್ಳವಳೂ, ಪತಿದೇವತೆಯೂ ಆದ ಆ ದೇವಿಯು, ವಿಸ್ಮಯದಿಂದಲೂ, ಸಂತೋಷಾಧಿಕ್ಯದಿಂದಲೂ, ನಿರತಿಶಯವಾದ ಪ್ರೇಮದಿಂದಲೂ ತನ್ನ ಪತಿಯಾದ

ಅಥ ಸಮಪನುದನ್ಮನಃಕ್ಲಮಂ ಸಾ
ಸುಚಿರಮದೃಷ್ಟಮುದೀಕ್ಷ್ಯ ವೈ ಪ್ರಿಯಸ್ಯ ।
ವದನಮುದಿತಪೂರ್ಣಚಂದ್ರಕಾಂತಂ
ವಿಮಲಶಶಾಂಕನಿಭಾನನಾ ತದಾನೀಂ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ

ನೋಡಿದಳು. ॥ ೩೫ ॥ ಅಥ - ಬಳಿಕ, ತದಾನೀಂ - ಆ ಸಮಯದಲ್ಲಿ, ವಿಮ....ನಾ - ನಿರ್ಮಲವಾದ ಚಂದ್ರಮಂಡಲಕ್ಕೆ ಸಮಾನವಾದ ಮುಖವುಳ್ಳ, ಸಾ ಆ ಸೀತಾದೇವಿಯು, ಉದಿ....ತಂ ಆಗತಾನೇ ಹುಟ್ಟಿದ ಪೂರ್ಣಚಂದ್ರನಂತೆ ಮನೋಹರವಾದ, ಸುಚಿರಂ - ಬಹಳ ಕಾಲದಿಂದಲೂ, ಅದೃಷ್ಟಂ - ಕಾಣಲ್ಪಡದಿರುವ, ಪ್ರಿಯಸ್ಯ - ಶ್ರೀರಾಮನ, ವದನಂ - ಮುಖವನ್ನು, ಉದೀಕ್ಷ್ಯ - ಕಂಡು, ಮನಃ ಕ್ಲಮಂ - ಮನಃಕ್ಲೇಶವನ್ನು, ಸಮಪನುದತ್ - ಹೋಗಲಾಡಿಸಿಕೊಂಡಳು. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತದಶೋತ್ತರಶತತಮಸ್ಸರ್ಗಃ.

ಶ್ರೀರಾಮನ ಮುಖವನ್ನು ನೋಡಿದಳು. ಆ ಸಮಯದಲ್ಲಿ ಪರಿಶುದ್ಧವಾದ ಚಂದ್ರನಿಗೆ ಸಮಾನವಾದ ಮುಖವುಳ್ಳ ಸೀತಾದೇವಿಯು ಬಹು ಕಾಲದಿಂದಲೂ ನೋಡಲ್ಪಡದಿರುವ ಮತ್ತು ಆಗತಾನೆ ಉದಿಸಿದ ಪೂರ್ಣಚಂದ್ರನಿಗೆ ಸಮಾನವಾದ ಪ್ರಿಯನ ಮುಖವನ್ನು ನೋಡಿ ತನ್ನ ಮನಸ್ಸಿನಲ್ಲಿದ್ದ ವ್ಯಸನಗಳೆಲ್ಲವನ್ನೂ ಕಳೆದು ಸಂತೋಷಗೊಂಡಳು. ॥ ೩೫-೩೬ ॥

ಇಂತಿದು ಸೀತಾಕೃತ ಶ್ರೀರಾಮ ಸಂದರ್ಶನ ವೃತ್ತಾಂತವೆಂಬ ನೂರ
ಹದಿನೇಳನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟಾದಶೋತ್ತರಶತತಮಸ್ಸರ್ಗಃ

ತಾಂತು ಪಾರ್ಶ್ವಸ್ಥಿತಾಂ ಪ್ರಹ್ವಾಂ ರಾಮಸ್ಸಂಪ್ರೇಕ್ಷ್ಯ ಮೈಥಿಲೀಂ । ಹೃದಯಾಂತರ್ಗತಕ್ರೋಧೋ ವ್ಯಾಹರ್ತುಮುಪಚಕ್ರಮೇ ॥ ೧ ॥ " ಏಷಾಸಿ ನಿರ್ಜಿತಾ ಭದ್ರೇ! ಶತ್ರುಂ ಜಿತ್ವಾ ಮಯಾ ರಣೇ । ಪೌರುಷಾದ್ಯದನುಷ್ಠೇಯಂ ತದೇತದುಪಪಾದಿತಂ ॥ ೨ ॥ ಗತೋಸ್ಮ್ಯಂತಮಮರ್ಷಸ್ಯ ಧರ್ಷಣಾ ಸಂಪ್ರಮಾರ್ಜಿತಾ । ಅವಮಾನಶ್ಚ ಶತ್ರುಶ್ಚ ಮಯಾ ಯುಗಪದುದ್ಧೃತೌ ॥೩॥ ಅದ್ಯ ಮೇ ಪೌರುಷಂ ದೃಷ್ಟಮದ್ಯ ಮೇ ಸಫಲಃ ಶ್ರಮಃ । ಅದ್ಯ ತೀರ್ಣಪ್ರತಿಜ್ಞತ್ವಾತ್ಪ್ರಭವಾಮೀಹ ಚಾತ್ಮನಃ

ರಾಮಃ - ಶ್ರೀರಾಮನು, ಪಾರ್ಶ್ವಸ್ಥಿತಾಂ - ಪಕ್ಕದಲ್ಲಿ ಬಂದು ನಿಂತಿರುವ, ಪ್ರಹ್ವಾಂ - ನಮ್ರಳಾದ, ತಾಂಮೈಥಿಲೀಂ - ಆ ಸೀತಾದೇವಿಯನ್ನು, ಸಂಪ್ರೇಕ್ಷ್ಯ - ಕಂಡು, ಹೃದ....ಧಃ - ಮನದಲ್ಲಿಯೇ ಅಡಗಿದ ಕೋಪವುಳ್ಳವನಾಗಿ, ವ್ಯಾಹರ್ತುಂ - ಹೇಳುವದಕ್ಕೆ, ಉಪಚಕ್ರಮೇ - ಮೊದಲು ಮಾಡಿದನು. ॥ ೧ ॥ ಭದ್ರೇ - ಶುಭಕರಳೇ, ಮಯಾ - ನನ್ನಿಂದ, ರಣೇ - ಕಾಳಗದಲ್ಲಿ, ಶತ್ರುಂ - ಶತ್ರುವಾದ ರಾವಣನನ್ನು, ಜಿತ್ವಾ - ಜಯಿಸಿ, ಏಷಾ - ಈ ನೀನು, ನಿರ್ಜಿತಾ - ಜಯಿಸಲ್ಪಟ್ಟವಳು, ಅಸಿ - ಆಗಿರುವೆ, ಪೌರುಷಾತ್ - ಪುರುಷ ಪ್ರಯತ್ನದಿಂದ, ಯತ್ - ಯಾವದು, ಅನುಷ್ಠೇಯಂ - ಮಾಡತಕ್ಕದ್ದೋ, ತದೇತತ್ - ಆ ಈ ಕಾರ್ಯವು, ಉಪಪಾದಿತಂ - ಸಂಪಾದಿಸಲ್ಪಟ್ಟಿತು. ॥ ೨ ॥ ಅಮರ್ಷಸ್ಯ - ಕ್ರೋಧಕ್ಕೆ, ಅಂತಂ - ತುದಿಯನ್ನು, ಗತಃ - ಹೊಂದಿದವನು, ಅಸ್ಮಿ - ಆಗಿದ್ದೇನೆ, ಧರ್ಷಣಾ - ನಿಂದೆಯು, ಸಂಪ್ರಮಾರ್ಜಿತಾ - ಹೋಗಲಾಡಿಸಲ್ಪಟ್ಟಿತು, ಅವಮಾನಶ್ಚ - ಅವಮಾನವೂ, ಶತ್ರುಶ್ಚ - ಶತ್ರುವೂ, ಮಯಾ - ನನ್ನಿಂದ, ಯುಗಪತ್ - ಏಕಕಾಲದಲ್ಲಿಯೇ, ಉದ್ಧೃತೌ - ಮೂಲೋತ್ಪಾಟನ ಮಾಡಲ್ಪಟ್ಟವು. ॥ ೩ ॥ ಅದ್ಯ - ಈಗ, ಮೇ - ನನ್ನ, ಪೌರುಷಂ - ಪರಾಕ್ರಮವು, ದೃಷ್ಟಂ - ತೋರಿಸಲ್ಪಟ್ಟಿತು, ಅದ್ಯ - ಈಗ, ಮೇ - ನನ್ನ, ಶ್ರಮಃ - ಆಯಾಸವು, ಸಫಲಃ - ಸಫಲವಾಯಿತು, ಅದ್ಯ - ಈಗ, ತೀರ್ಣ....ತ್ - ದಾಟಿದ ಪ್ರತಿಜ್ಞೆಯುಳ್ಳುವಿಕೆ

ಶ್ರೀರಾಮಮೂರ್ತಿಯು ವಿನಯದಿಂದ ತನ್ನ ಬಳಿ ಬಂದು ನಿಂತಿರುವ ಮಿಥಿಲರಾಜಪುತ್ರಿಯಾದ ಸೀತಾದೇವಿಯನ್ನು ನೋಡಿ ಮನಸ್ಸಿನಲ್ಲಿಯೇ ಅಡಗಿರುವ ಮುನಿಸುಳ್ಳವನಾಗಿ ಆಕೆಯನ್ನು ಕುರಿತು ಮಾತನಾಡಲುಪಕ್ರಮಿಸಿದನು. " ಎಲೆ ಮಂಗಳಕರಳೇ ! ಶತ್ರುವಾದ ರಾವಣನನ್ನು ಗೆದ್ದು ನಿನ್ನನ್ನು ಗೆದ್ದುದಾಯಿತು. ನಾನು ನನ್ನ ಪೌರುಷದಿಂದ ಯಾವುದನ್ನು ಸಾಧಿಸಬೇಕಾಗಿದ್ದಿತೋ ಅದನ್ನು ಸಾಧಿಸಿದ್ದಾಯಿತು. ನನ್ನಲ್ಲಿ ಹುಟ್ಟಿದ್ದ ರೋಷವನ್ನು ಶಾಂತಗೊಳಿಸಿದ್ದಾಯಿತು. ನನಗುಂಟಾಗಿದ್ದ ಅಪಕೀರ್ತಿಯನ್ನೂ, ತಿರಸ್ಕಾರವನ್ನೂ ತೊಡೆದುಹಾಕಿದುದೂ ಆಯಿತು. ನನಗುಂಟಾಗಿದ್ದ ಅಪಮಾನ ಮತ್ತು ಶಾತ್ರವಗಳೆರಡೂ ಏಕಕಾಲದಲ್ಲಿಯೇ ಕಿತ್ತೆಸೆಯಲಾದುವು. ಈಗ ನನ್ನ ಪರಾಕ್ರಮವನ್ನು ಜಗತ್ತೇ ನೋಡಿದಂತಾಯಿತು. ಈಗ ನಾನು ಪಟ್ಟಶ್ರಮವೆಲ್ಲವೂ ಸಾರ್ಥಕವಾಯಿತು. ಈಗ ನಾನು ನನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿದೆನಾದುದರಿಂದ ಇನ್ನುಮೇಲೆ ನಿರಾತಂಕವಾಗಿ ಬಾಳುವಂತೆಯೂ

॥ ೪ ॥ ಯಾ ತ್ವಂ ವಿರಹಿತಾಽನೀತಾ ಚಲಚಿತ್ತೇನ ರಕ್ಷಸಾ । ದೈವಸಂಪಾದಿತೋ ದೋಷೋ ಮಾನುಷೇಣ ಮಯಾ ಜಿತಃ ॥ ೫ ॥ ಸಂಪ್ರಾಪ್ತಮವಮಾನಂ ಯಸ್ತೇಜಸಾ ನಪ್ರಮಾರ್ಜತಿ । ಕಸ್ತಸ್ಯ ಪುರುಷಾರ್ಥೋಽಸ್ತಿ ಪುರುಷಸ್ಯಾಲ್ಪತೇಜಸಃ ॥೬॥ ಲಂಘನಂಚ ಸಮುದ್ರಸ್ಯ ಲಂಕಾಯಾಶ್ಚಾಽವಮರ್ದನಂ । ಸಫಲಂ ತಸ್ಯ ತಚ್ಛ್ಲಾಘ್ಯಂ ಮಹತ್ಕರ್ಮ ಹನೂಮತಃ ॥೭॥ ಯುದ್ಧೇ ವಿಕ್ರಮತಶ್ಚೈವ ಹಿತಂ ಮಂತ್ರಯತಶ್ಚ ಮೇ । ಸುಗ್ರೀವಸ್ಯ ಸಸೈನ್ಯಸ್ಯ ಸಫಲೋಽದ್ಯ ಪರಿಶ್ರಮಃ ॥ ೮ ॥ ನಿರ್ಗುಣಂ

ಯಿಂದ, ಇಹ - ಈಗ, ಆತ್ಮನಃ - ನನಗೆ ನಾನು, ಪ್ರಭವಾಮಿ - ಸ್ವತಂತ್ರನಾಗಿದ್ದೇನೆ. ॥ ೪ ॥ ಯಾತ್ವಂ - ಯಾವ ನೀನು, ವಿರಹಿತಾ - ನನ್ನಿಂದ ವಿರಹಿತಳಾಗಿ, ಚಲಚಿತ್ತೇನ - ಚಪಲಚಿತ್ತನಾದ, ರಕ್ಷಸಾ - ರಾವಣನಿಂದ, ನೀತಾ ಅಪಹರಿಸಲ್ಪಟ್ಟವಳಾದೆಯೋ, ದೈವಸಂಪಾದಿತಃ - ದೈವದಿಂದ ಮಾಡಲ್ಪಟ್ಟ, ಸದೋಷಃ - ನಿನ್ನ ಪ್ರಯುಕ್ತವಾದ ಆ ದೋಷವು, ಮನುಷ್ಯೇಣ - ಮನುಷ್ಯನಾದ, ಮಯಾ - ನನ್ನಿಂದ, ಜಿತಃ - ಜಯಿಸಲ್ಪಟ್ಟಿತು. ॥೫॥ ಯಃ - ಯಾವ ಪುರುಷನು, ಸಂಪ್ರಾಪ್ತಂ - ಬಂದಿರುವ, ಅಪಮಾನಂ - ಅಪಮಾನವನ್ನು, ತೇಜಸಾ - ಸ್ವಪ್ರಭಾವದಿಂದ, ನಪ್ರಮಾರ್ಜತಿ - ಹೋಗಲಾಡಿಸುವದಿಲ್ಲವೋ, ಅಲ್ಪತೇಜಸಃ - ಸ್ವಲ್ಪ ತೇಜಸ್ಸುಳ್ಳ, ತಸ್ಯಪುರುಷಸ್ಯ - ಆ ಪುರುಷನಿಗೆ, ಕಃಪುರುಷಾರ್ಥಃ-ಯಾವ ಪುರುಷಾರ್ಥವು ತಾನೆ, ಅಸ್ತಿ-ಇರುತ್ತದೆ. ॥ ೬ ॥ ಸಮುದ್ರಸ್ಯ-ಸಮುದ್ರದ, ಲಂಘನಂಚ - ದಾಟುವಿಕೆಯೂ, ಲಂಕಾಯಾಃ - ಲಂಕಾಪಟ್ಟಣದ, ಅವಮರ್ದನಂ - ಕ್ಷೋಭೆಯೂ, ಯತ್ - ಯಾವದೋ, ತಸ್ಯಹನೂಮತಃ - ಆ ಆಂಜನೇಯನ, ಮಹತ್ - ದೊಡ್ಡದಾದ, ಶ್ಲಾಘ್ಯಂ- ಸ್ತೋತ್ರಾರ್ಹವಾದ, ತತ್ಕರ್ಮ - ಆ ಕಾರ್ಯವೂ, ಸಫಲಂ - ಸಫಲವಾಯಿತು. ॥ ೭ ॥ ಯುದ್ಧೇ - ಕಾಳಗದಲ್ಲಿ, ವಿಕ್ರಮತಶ್ಚೈವ - ಪರಾಕ್ರಮವನ್ನು ನಡೆಸಿದ, ಮೇ - ನನಗೆ, ಹಿತಂ - ಹಿತವನ್ನು, ಮಂತ್ರಯತಃ - ಆಲೋಚಿಸುತ್ತಿರುವ, ಸಸೈನ್ಯಸ್ಯ - ಸೇನೆಯಿಂದೊಡಗೂಡಿದ, ಸುಗ್ರೀವಸ್ಯ - ಸುಗ್ರೀವನ, ಪರಿಶ್ರಮಃ - ಆಯಾಸವು, ಅದ್ಯ - ಈಗ, ಸಫಲಃ - ಸಾರ್ಥಕವಾಯಿತು. ॥ ೮ ॥ ಯಃ - ಯಾವ ವಿಭೀಷಣನು, ನಿರ್ಗುಣಂ - ಗುಣಹೀನನಾದ, ಭ್ರಾತರಂ - ಅಣ್ಣನನ್ನು, ತ್ಯಕ್ತ್ವಾ - ಬಿಟ್ಟು.

ಆಯಿತು. ಇನ್ನು ಮುಂದೆ ನನಗೆ ನಾನು ಸ್ವತಂತ್ರನಾಗಿದ್ದೇನೆ. ನನ್ನಿಂದ ದೂರ ಮಾಡಲ್ಪಟ್ಟು, ಚಪಲನಾದ ರಾವಣಾಸುರನಿಂದ ನೀನು ತಿರಸ್ಕರಿಸಲ್ಪಟ್ಟೆಯೆಂಬ ಯಾವ ದೈವಿಕವಾದ ದೋಷವೋ, ಅದನ್ನು ನಾನು—ಕೇವಲ ಮಾನವನಾದ ನಾನು—ಪರಾಕ್ರಮದಿಂದ ಜಯಿಸಿದುದಾಯಿತು. ॥೧—೫॥ ಅಡಸಿ ಬಂದ ಅವಮಾನವನ್ನು ಯಾವನಾದರೆ ತನ್ನ ಪರಾಕ್ರಮದಿಂದ ತೊಡೆದು ಹಾಕಲಾರನೋ ಅಂತಹ ದುರ್ಬಲನೂ, ನಿಸ್ತೇಜಸ್ವಿಯೂ ಆದ ಮಾನವನಿಗೆ ಈ ಲೋಕದಲ್ಲಿ ಯಾವ ಪುರುಷಾರ್ಥವು ತಾನೆ ದೊರಕೀತು? (ಅವನು ಮನುಷ್ಯನೇ ಅಲ್ಲವು). ಅಪಾರವಾದ ಸಾಗರವನ್ನುದಾಟಿ, ಲಂಕಾಪಟ್ಟಣವೆಲ್ಲವನ್ನೂಧ್ವಂಸಮಾಡಿ ಬಹುವಾಗಿ ಶ್ರಮಿಸಿರುವ ನನ್ನ ಹನುಮಂತನ ಶ್ರಮವೆಲ್ಲವೂ ಸಾರ್ಥಕವಾಯಿತು. ರಣಾಂಗಣದಲ್ಲಿ ಪರಾಕ್ರಮದಿಂದ ಮಾತ್ರವಲ್ಲದೆ ತನ್ನ ಸೈನ್ಯಗಳಿಂದಲೂ ನನಗೆ ಮಂತ್ರಾಲೋಚನೆ ಹೇಳಿದುದರಿಂದಲೂ ಅಪಾರವಾದ ಸಹಾಯ ಮಾಡಿದ ವಾನರೇಶ್ವರನಾದ ಸುಗ್ರೀವನ ಶ್ರಮವೂ ಸಫಲವಾಯಿತು. ವಾನರಸೇನೆಗಳೆಲ್ಲವೂ ಯುದ್ಧದಲ್ಲಿ ಬಹಳ ಕಷ್ಟಪಟ್ಟವು. ಅದಕ್ಕೆಲ್ಲ ಫಲವು ದೊರಕಿದಂತಾಯಿತು. ಇಷ್ಟೆಯಲ್ಲದೆ ಗುಣಹೀನನಾದ ಅಣ್ಣನನ್ನು ತೊರೆದು ನನ್ನನ್ನು ಆಶ್ರಯಿಸಿದ ಭಕ್ತನೂ,

ಭ್ರಾತರಂ ತ್ಯಕ್ತ್ವಾ ಯೋ ಮಾಂ ಸ್ವಯಮುಪಸ್ಥಿತಃ । ವಿಭೀಷಣಸ್ಯ ಭಕ್ತಸ್ಯ ಸಫ
ಲೋಽದ್ಯ ಪರಿಶ್ರಮಃ ॥ ೯ ॥ ಇತ್ಯೇವಂ ಬ್ರುವತಸ್ತಸ್ಯ ಸೀತಾ ರಾಮಸ್ಯ ತದ್ವಚಃ ।
ಮೃಗೀವೋತ್ಫುಲ್ಲನಯನಾ ಬಭೂವಾಶ್ರುಪರಿಪ್ಲುತಾ ॥೧೦॥ ಪಶ್ಯತಸ್ತಾಂತು ರಾಮಸ್ಯ
ಭೂಯಃ ಕ್ರೋಧೋ ವ್ಯವರ್ಧತ । ಪ್ರಭೂತಾಜ್ಯಾವಸಿಕ್ತಸ್ಯ ಪಾವಕಸ್ಯೇವ ದೀಪ್ಯತಃ
॥೧೧॥ ಸಬದ್ಧ್ವಾ ಭ್ರುಕುಟಿಂ ವಕ್ತ್ರೇ ತಿರ್ಯಕ್ಪ್ರೇಕ್ಷಿತಲೋಚನಃ । ಅಬ್ರವೀತ್ಪರುಷಂ
ಸೀತಾಂ ಮಧ್ಯೇ ವಾನರರಕ್ಷಸಾಂ ॥ ೧೨ ॥ ಯತ್ಕರ್ತವ್ಯಂ ಮನುಷ್ಯೇಣ ಧರ್ಷಣಾ
ಪರಿಮಾರ್ಜತಾ । ತತ್ಕೃತಂ ಸಕಲಂ ಸೀತೇ! ಶತ್ರುಹಸ್ತಾದಮರ್ಷಣಾತ್ ॥೧೩॥

ಸ್ವಯಂ - ತಾನೇ, ಮಾಂ - ನನ್ನನ್ನು ಕುರಿತು, ಉಪಸ್ಥಿತಃ - ಬಂದನೋ, ಭಕ್ತಸ್ಯ - ಭಕ್ತನಾದ, ವಿಭೀಷಣಸ್ಯ - ವಿಭೀಷಣನ, ಪರಿಶ್ರಮಃ - ಆಯಾಸವು, ಅದ್ಯ - ಈಗ, ಸಫಲಃ - ಸಾರ್ಥಕ ವಾಯಿತು. ॥ ೯ ॥ ಇತ್ಯೇವಂ - ಈ ಪರಿಯಾಗಿ, ತಸ್ಯರಾಮಸ್ಯ - ಆ ಶ್ರೀರಾಮನು, ತದ್ವಚಃ - ಆ ಮಾತನ್ನು, ಬ್ರುವತಸ್ತತಃ - ಹೇಳುತ್ತಿರುವಂತೆಯೇ, ಮೃಗೀವ - ಚಿಗರಿಯಂತೆ, ಉತ್ಫು....ನಾ - ಅರಳಿದ ಕಣ್ಣುಗಳುಳ್ಳ ಸೀತಾದೇವಿಯು, ಅಶ್ರುಪರಿಪ್ಲುತಾ - ಕಂಬನಿಗಳಿಂದ ತೊಯಿಸಲ್ಪಟ್ಟವಳು, ಬಭೂವ - ಆದಳು. ॥ ೧೦ ॥ ತಾಂತು - ಆ ಸೀತಾದೇವಿಯನ್ನಾದರೆ, ಪಶ್ಯತಃ - ನೋಡುತ್ತಿರುವ, ರಾಮಸ್ಯ - ಶ್ರೀರಾಮನಿಗೆ, ಪ್ರಭೂ....ಸ್ಯ - ಪ್ರಚುರವಾದ ಆಜ್ಯದಿಂದ ತೊಯಿಸಲ್ಪಟ್ಟ, ದೀಪ್ಯತಃ - ಉರಿಯುತ್ತಿರುವ, ಪಾವಕಸ್ಯ - ಅಗ್ನಿಯ, ಪ್ರಜ್ವಲನಮಿವ - ಜ್ವಾಲೆಯಂತೆ, ಕ್ರೋಧಃ - ಕೋಪವು, ಭೂಯಃ - ಮತ್ತೂ ಹೆಚ್ಚಾಗಿ, ವ್ಯವರ್ಧತ - ವೃದ್ಧಿಗೊಂಡಿತು. ॥ ೧೧ ॥ ಸಃ - ಆ ಶ್ರೀರಾಮನು, ವಕ್ತ್ರೇ - ಮುಖದಲ್ಲಿ, ಭ್ರುಕುಟೀಂ - ಕಣ್ಣುಬ್ಬುಗಳ ಮುಡಿಯನ್ನು, ಬಧ್ವಾ - ಕಟ್ಟಿಕೊಂಡು, ತಿರ್ಯ....ನಃ - ವಾರೆನೋಟದಿಂದ ನೋಡಲ್ಪಟ್ಟ ನೇತ್ರಗಳುಳ್ಳವನಾಗಿ, ವಾನರರಕ್ಷಸಾಂ - ಕಪಿರಾಕ್ಷಸರ, ಮಧ್ಯೇ - ಮಧ್ಯದಲ್ಲಿ, ಸೀತಾಂ - ಸೀತಾದೇವಿಯನ್ನು ಕುರಿತು, ಪರುಷಂ - ಕಠಿ ನೋಕ್ತಿಯನ್ನು ಅಬ್ರವೀತ್ - ನುಡಿದನು. ॥ ೧೨ ॥ ಸೀತೇ - ಸೀತಾದೇವಿಯೇ, ಧರ್ಷಣಾಂ - ನಿಂದೆ ಯನ್ನು, ಪರಿಮಾರ್ಜತಾ - ಹೋಗಲಾಡಿಸಿಕೊಳ್ಳುತ್ತಿರುವ, ಮನುಷ್ಯೇಣ - ಮನುಷ್ಯನಿಂದ, ಯತ್- ಯಾವ ಕರ್ಮವು, ಕರ್ತವ್ಯಂ - ಮಾಡತಕ್ಕದ್ದೋ, ಸಕಲಂ - ಸಮಸ್ತವಾದ, ತತ್ - ಆ ಕಾರ್ಯವು, ಕೃತಂ - ಮಾಡಲ್ಪಟ್ಟಿತು. ॥ ೧೩ ॥ ತಪಸಾ - ತಪಸ್ಸಿನಿಂದ, ಭಾವಿತಾತ್ಮನಾ - ಭಾವಿಸಲ್ಪಟ್ಟ ಪರ

ವಿಧೇಯನೂ ಆದ ವಿಭೀಷಣನ ಪರಿಶ್ರಮವೂ ಇದೀಗ ಸಫಲವಾಯಿತು.'' ಶ್ರೀರಾಮ ಮೂರ್ತಿಯು ಈ ರೀತಿ ನುಡಿಯಲು ಅದೆಲ್ಲವನ್ನೂ ಕೇಳಿ ಸೀತಾದೇವಿಯು ಹೆಣ್ಣು ಜಿಂಕೆ ಯಂತೆ ಬೆದರಿ ಬೆಂಡಾಗಿ ಕಂಬನಿದುಂಬಿ ಕದಡಿದ ಕಣ್ಣುಗಳುಳ್ಳವಳಾದಳು.॥೯–೧೦॥ ಇಂತಹ ಸ್ಥಿತಿಯಲ್ಲಿರುವ ಆಕೆಯನ್ನು ನೋಡುತ್ತ ನೋಡುತ್ತ ಶ್ರೀರಾಮನಿಗೆ, ಯಜ್ಞೇಶ್ವರನಿಗೆ ಆಜ್ಯಾ ಹುತಿ ಕೊಟ್ಟಾಗ ಜ್ವಾಲೆಗಳುಕ್ಕಿದಂತೆ ಮಿತಿಮೀರಿದ ಕ್ರೋಧವು ಉಕ್ಕೇರಿತು. ಆಗಲಾತನು ಮುಖದಲ್ಲಿ ಹುಬ್ಬುಗಂಟಿಕ್ಕಿ ಮೇಲ್ಮುಖವಾದ ದೃಷ್ಟಿಯುಳ್ಳವನಾಗಿ, ವಾನರರಾಕ್ಷಸರ ಮಧ್ಯ ದಲ್ಲಿಯೇ ಆ ದೇವಿಯನ್ನು ಕುರಿತು, ಹೀಗೆ ಹೇಳಿದನು. "ಎಲೆ ಸೀತೇ! ತಿರಸ್ಕಾರವನ್ನು ಹೊಂದಿದ ಮನುಷ್ಯನು ಅದನ್ನು ತೊಡೆದುಹಾಕಲು ಯಾವ ಕಾರ್ಯವನ್ನು ಮಾಡಬೇಕೋ ಅದೆಲ್ಲ ವನ್ನೂ ಮಾಡಿ ಮುಗಿಸಿದುದಾಯಿತು! ಮಹಾ ತಪಸ್ವಿಯೂ, ಮಹಾ ಜ್ಞಾನಿಯೂ ಆದ ಅಗಸ್ತ್ಯಮುನಿಯು ತನ್ನ ತಪಶ್ಶಕ್ತಿಯಿಂದ ಜೀವಲೋಕದ ದಕ್ಷಿಣದಿಶೆಯನ್ನೇ ಜಯಿಸಿದಂತೆ

ನಿರ್ಜಿತಾ ಜೀವಲೋಕಸ್ಯ ತಪಸಾ ಭಾವಿತಾತ್ಮನಾ । ಅಗಸ್ತ್ಯೇನ ದುರಾಧರ್ಷಾ
ಮುನಿನಾ ದಕ್ಷಿಣೇವ ದಿಕ್ ॥ ೧೪ ॥ ವಿದಿತಶ್ಚಾಸ್ತು ತೇ ಭದ್ರೇ! ಯೋಽಯಂ ರಣ
ಪರಿಶ್ರಮಃ । ಸತೀರ್ಣಸ್ಸುಹೃದಾಂ ವೀರ್ಯಾನ್ನತ್ವದರ್ಥಂ ಮಯಾ ಕೃತಃ ॥ ೧೫ ॥
ರಕ್ಷತಾತು ಮಯಾ ವೃತ್ತಮಪವಾದಂ ಚ ಸರ್ವಶಃ । ಪ್ರಖ್ಯಾತಸ್ಯಾತ್ಮವಂಶಸ್ಯ
ನ್ಯಂಗಂ ಚ ಪರಿರಕ್ಷತಾ ॥ ೧೬ ॥ ಪ್ರಾಪ್ತಚಾರಿತ್ರಸಂದೇಹಾ ಮಮ ಪ್ರತಿಮುಖೇ
ಸ್ಥಿತಾ । ದೀಪೋ ನೇತ್ರಾತುರಸ್ಯೇವ ಪ್ರತಿಕೂಲಾಸಿ ಮೇ ದೃಢಂ ॥ ೧೭ ॥ ತದ್ಗಚ್ಛ

ಮಾತ್ಮನುಳ್ಳ, ಅಗಸ್ತ್ಯೇನಮುನಿನಾ- ಅಗಸ್ತ್ಯಋಷಿಯಿಂದ, ಜೀವಲೋಕಸ್ಯ - ಈ ಪ್ರಾಣಿಲೋಕದ, ಮಧ್ಯೇ - ಮಧ್ಯದಲ್ಲಿ ದುರಾಧರ್ಷಃ - ತಿರಸ್ಕರಿಸಲಸಾಧ್ಯವಾದ, ದಕ್ಷಿಣಾದಿಗಿವ - ದಕ್ಷಿಣದಿಕ್ಕಿನಂತೆ, ಅಮರ್ಷಣಾತ್ - ಕ್ರೋಧದ ದೆಸೆಯಿಂದ, ಶತ್ರುಹಸ್ತಾತ್ - ಹಗೆಯ ನ ಕೈಯಿಂದ, ತ್ವಂ - ನೀನು, ಮಯಾ - ನನ್ನಿಂದ, ನಿರ್ಜಿತಾ - ಜಯಿಸಲ್ಪಟ್ಟೆ. ॥ ೧೪ ॥ ಭದ್ರೇ - ಶುಭಕರಳೇ, ಯೋಽಯಂರಣಪರಿಶ್ರಮಃ - ಯಾವ ಈ ಯುದ್ಧಾಯಾಸವು, ಸುಹೃದಾಂ - ಸ್ನೇಹಿತರ, ವೀರ್ಯಾತ್- ಸಾಮರ್ಥ್ಯದಿಂದ, ತೀರ್ಣಃ - ನೆರವೇರಿಸಲ್ಪಟ್ಟಿತೋ, ಸಃ - ಆ ಶ್ರಮವು, ತ್ವದರ್ಥಂ - ನಿನ್ನ ನಿಮಿತ್ತವಾಗಿ, ಮಯಾ - ನನ್ನಿಂದ, ನಕೃತಃ - ಮಾಡಲ್ಪಡಲಿಲ್ಲ, ತೇ - ನಿನಗೆ, ವಿದಿತಃ - ತಿಳಿಯಲ್ಪಟ್ಟದ್ದು, ಅಸ್ತು - ಆಗಲಿ. ॥೧೫॥ ಸರ್ವಶಃ - ಸರ್ವಪ್ರಕಾರದಲ್ಲಿಯೂ, ಪ ಖ್ಯಾತಸ್ಯ- ಪ್ರಸಿದ್ಧವಾದ, ಆತ್ಮವಂಶಸ್ಯ ನನ್ನ ವಂಶಕ್ಕೆ, ನ್ಯಂಗಂಚ - ಅಪಕೀರ್ತಿಕರವಾದ, ಅಪವಾದಂಚ - ಅಪವಾದವನ್ನು, ಪರಿರಕ್ಷತಾ - ಪರಿಹಾರ ಮಾಡಿಕೊಳ್ಳುತ್ತಿರುವ, ವೃತ್ತಂ - ನಡತೆಯನ್ನು, ರಕ್ಷತಾ - ಸಂರಕ್ಷಿಸುತ್ತಿರುವ, ಮಯಾ - ನನ್ನಿಂದ, ರಣಪರಿಶ್ರಮಃ - ಯುದ್ಧ ಪರಿಶ್ರಮವು, ಕೃತಃ - ಮಾಡಲ್ಪಟ್ಟಿತು. ॥೧೬॥ ಪ್ರಾಪ್ತ....ಹಾ - ಹೊಂದಲ್ಪಟ್ಟ ಸಚ್ಚರಿತ್ರ ಸಂಶಯವುಳ್ಳ, ಮಮ - ನನಗೆ, ಪ್ರತಿಮುಖೇ - ಎದುರಾಗಿ, ಸ್ಥಿತಾ - ನಿಂತಿರುವ, ತ್ವಂ - ನೀನು, ನೇತ್ರಾತುರಸ್ಯ - ನೇತ್ರರೋಗವುಳ್ಳ ಪುರುಷನಿಗೆ, ದೀಪಇವ - ದೀಪದಂತೆ, ಮೇ - ನನಗೆ, ದೃಢಂ - ನಿಶ್ಚಯವಾಗಿ, ಪ್ರತಿಕೂಲಾ - ಪ್ರತಿಕೂಲಳು, ಅಸಿ - ಆಗಿದ್ದೀಯೇ. ॥ ೧೭ ॥ ಜನಕಾತ್ಮಜೇ - ಸೀತಾದೇವಿಯೇ, ತತ್ - ಆ ಕಾರಣದಿಂದ,

---

ನಾನು ನನಗೆ ತಿರಸ್ಕಾರ ಮಾಡಿ, ಅಪಮಾನವನ್ನು ತಂದೊಡ್ಡಿದ ಶತ್ರುವನ್ನು ಜಯಿಸಿದುದಾಯಿತು. ಎಲೆ ಭದ್ರೇ! ಈ ವಿಷಯವು ನಿನಗೆ ಚೆನ್ನಾಗಿ ತಿಳಿದಿರಲಿ. ಈಗ ನಾನು ನನ್ನ ಮಿತ್ರರ ಪರಾಕ್ರಮ ಸಹಾಯದಿಂದ ವಿಜಯವನ್ನು ಪಡೆದಿರುವುದು ನಿನಗೋಸ್ಕರವಾಗಿಯಲ್ಲವು. ನನ್ನ ಚರಿತ್ರೆ (ನಡತೆ) ಯನ್ನು ಕಾಪಾಡಲೋಸುಗವೂ, ಎಲ್ಲೆಡೆಗಳಲ್ಲಿಯೂ ಹರಡಿರುವ ಅಪವಾದವನ್ನು ತೊಡೆದುಹಾಕಲೋಸುಗವೂ, ಮಹಾ ಪ್ರಸಿದ್ಧವಾದ ನನ್ನ ಇಕ್ಷ್ವಾಕು ವಂಶಕ್ಕೆ ಬಂದಿದ್ದ ಕಳಂಕವನ್ನು ಹೋಗಲಾಡಿಸಲೋಸುಗವೂ ನಾನು ಈ ಮಹತ್ಪ್ರಯತ್ನವನ್ನು ಕೈಕೊಂಡು ಶತ್ರುವನ್ನು ಸಂಹರಿಸಿ ವಿಜಯವನ್ನು ಪಡೆದು ಕೃತಕೃತ್ಯನಾದೆನು. ಅದು ನಿನಗೋಸ್ಕರವಾಗಿ ಅಲ್ಲವೇ ಅಲ್ಲವು. ॥ ೧೧–೧೬ ॥ (ಎಲೆ ಭದ್ರೇ! ಹಗೆಯವನ ಕೈಗೆ ಸಿಕ್ಕಿ ತಿರಸ್ಕೃತೆಯಾಗಿದ್ದ ನಿನ್ನನ್ನು ನಾನು ಗೆದ್ದಿರುವೆನು.) ಈಗಲೋ ನಿನ್ನ ಚಾರಿತ್ರಕ್ಕೆ ಕಳಂಕ ಬಂದಿರುವ ಮತ್ತು ನನ್ನ ಸಂದೇಹಕ್ಕೆ ತುತ್ತಾಗಿರುವ ನೀನು ಕಣ್ಣೋವು ಬಂದಿರುವವನಿಗೆ ಕಣ್ಣು ಕುಕ್ಕುವ ದೀಪದಂತೆ ನನ್ನೆದುರಿಗೆ ನಿಂತಿರುವೆ. ಈಗ ನೀನು ನನಗೆ ನಿಜವಾಗಿಯೂ ಪ್ರತಿಕೂಲೆಯಾಗಿರುವೆ. ಎಲೌ ಜನಕಾತ್ಮಜೇ! ಆದುದರಿಂದ ನಾನು

ತ್ವಂಹ್ಯನುಜ್ಞಾತಾ ಯಥೇಷ್ಟಂ ಜನಕಾತ್ಮಜೇ! । ಏತಾ ದಶದಿಶೋ ಭದ್ರೇ! ಕಾರ್ಯ
ಮಸ್ತಿ ನಮೇ ತ್ವಯಾ ॥೧೮॥ ಕಃ ಪುಮಾನ್ ಹಿ ಕುಲೇ ಜಾತಃ ಸ್ತ್ರಿಯಂ ಪರಗೃಹೋ
ಷಿತಾಂ । ತೇಜಸ್ವೀ ಪುನರಾದದ್ಯಾತ್ಸುಹೃಲ್ಲೇಖ್ಯೇನ ಚೇತಸಾ ॥ ೧೯ ॥ ರಾವಣಾಂಕ
ಪರಿಭ್ರಷ್ಟಾಂ ದೃಷ್ಟಾಂ ದುಷ್ಟೇನ ಚಕ್ಷುಷಾ । ಕಥಂ ತ್ವಾಂ ಪುನರಾದದ್ಯಾಂ ಕುಲಂ
ವ್ಯಪದಿಶನ್ ಮಹತ್ ॥ ೨೦ ॥ ತದರ್ಥಂ ನಿರ್ಜಿತಾ ಮೇ ತ್ವಂ ಯಶಃ ಪ್ರತ್ಯಾಹೃತಂ
ಮಯಾ । ನಾಸ್ತಿ ಮೇ ತ್ವಯ್ಯಭಿಷ್ವಂಗೋ ಯಥೇಷ್ಟಂ ಗಮ್ಯತಾಮಿತಃ ॥ ೨೧ ॥
ಇತಿ ಪ್ರವ್ಯಾಹೃತಂ ಭದ್ರೇ! ಮಯೈತತ್ ಕೃತಬುದ್ಧಿನಾ । ಲಕ್ಷ್ಮಣೇ ಭರತೇ ವಾ ತ್ವಂ

ಅಭ್ಯನುಜ್ಞಾತಾ-ನನ್ನಿಂದ ಅಪ್ಪಣೆ ತೆಗೆದುಕೊಳ್ಳಲ್ಪಟ್ಟವಳಾಗಿ, ಹೇ ಭದ್ರೇ-ಎಲೈ ಶುಭಕರಳೇ, ಏತಾಃ ದಶದಿಶಃ - ಈ ಹತ್ತು ದಿಕ್ಕುಗಳಲ್ಲಿಯೂ, ಯಥೇಷ್ಟಂ - ಸ್ವೇಚ್ಛೆಯಾಗಿ, ಗಚ್ಛ - ಹೋಗು, ಮೇ - ನನಗೆ, ತ್ವಯಾ - ನಿನ್ನಿಂದ, ಕಾರ್ಯಂ - ಪ್ರಯೋಜನವು, ನಾಸ್ತಿಹಿ - ಇಲ್ಲವಷ್ಟೆ. ॥೧೮॥ ಕುಲೇ - ಸತ್ಕುಲದಲ್ಲಿ, ಜಾತಃ - ಹುಟ್ಟಿದ, ಕಃಪುಮಾನ್ - ಯಾವ ಪುರುಷನು ತಾನೆ, ತೇಜಸ್ವೀ - ಅಂತಃಸಾರವುಳ್ಳವನಾಗಿ, ಸುಹೃಲ್ಲೇಖ್ಯೇನ - ಅನುರಾಗದಿಂದ ಕೂಡಿದ, ಚೇತಸಾ - ಮನಸ್ಸಿನಿಂದ, ಪರಗೃಹೋಷಿತಾಂ - ಇತರ ಗೃಹದಲ್ಲಿ ವಾಸಮಾಡುತ್ತಿದ್ದ, ಸ್ತ್ರಿಯಂ - ಹೆಂಗಸನ್ನು, ಪುನಃ - ತಿರುಗಿ, ಆದದ್ಯಾತ್ - ಪರಿಗ್ರಹಿಸಿಯಾನು. ॥ ೧೯ ॥ ರಾವ....ಷ್ಟಾಂ - ರಾವಣನ ತೊಡೆಯಿಂದ ಜಾರಿ, ದುಷ್ಟೇನ - ದೋಷಯುಕ್ತವಾದ, ಚಕ್ಷುಷಾ - ಅವನ ನೇತ್ರದಿಂದ, ದೃಷ್ಟಾಂ - ನೋಡಲ್ಪಟ್ಟ, ತ್ವಾಂ- ನಿನ್ನನ್ನು, ಮಹತ್ - ದೊಡ್ಡದಾದ, ಕುಲಂ - ಕುಲವನ್ನು, ವ್ಯಪದಿಶನ್ - ಕೀರ್ತಿಯುಕ್ತವಾಗಿ ಮಾಡಲ್ಪಟ್ಟವನಾಗಿ, ಪುನಃ - ಮತ್ತು, ಕಥಂ - ಹೇಗೆ, ಆದದ್ಯಾಂ - ಪರಿಗ್ರಹಿಸಲಿ. ॥ ೨೦ ॥ ತ್ವಂ - ನೀನು, ಮಯಾ - ನನ್ನಿಂದ, ತದರ್ಥಂ - ಆ ವಂಶದ ಕೀರ್ತಿನಿಮಿತ್ತವಾಗಿ, ನಿರ್ಜಿತಾ - ಜಯಿಸಲ್ಪಟ್ಟಿರುವೆ, ಮೇ - ನನ್ನ, ಯಶಶ್ಚ - ಕೀರ್ತಿಯೂ, ಪ್ರತ್ಯಾಹೃತಂ - ಸಂಪಾದಿಸಲ್ಪಟ್ಟಿತು, ಮೇ - ನನಗೆ, ತ್ವಯಿ - ನಿನ್ನಲ್ಲಿ, ಅಭಿಷ್ವಂಗಃ - ಅನುರಾಗವು, ನಾಸ್ತಿ - ಇಲ್ಲ, ಯಥೇಷ್ಟಂ - ಇಷ್ಟಾನುಸಾರವಾಗಿ, ಇತಃ - ಇಲ್ಲಿಂದಲೇ, ಗಮ್ಯತಾಂ - ಹೋಗಲ್ಪಡಲಿ, ಭದ್ರೇ - ಶುಭಕರಳೇ,

---

ನಿನಗೆ ಅನುಜ್ಞೆಯಿತ್ತಿರುವೆನು. ಇನ್ನುಮೇಲೆ ನೀನು ಮನಬಂದಂತೆ ಹೋಗಬಹುದು. ಎಲೆ ಭದ್ರೇ! ಈ ದಶದಿಶೆಗಳಲ್ಲಿಯೂ ನೀನು ಬೇಕಾದ ಹಾಗೆ ಹೋಗಬಹುದು. ನಿನ್ನಿಂದ ನನಗಾವ ಪ್ರಯೋಜನವೂ ಇರುವುದಿಲ್ಲವು. ಸದ್ವಂಶದಲ್ಲಿ ಹುಟ್ಟಿದ ಯಾವ ಪುರುಷನು ತಾನೆ ಶತ್ರುವಿನ ಮನೆಯಲ್ಲಿ ಬಹಳಕಾಲ ನೆಲಸಿದ್ದ ಸ್ತ್ರೀಯನ್ನು ಪರಿಗ್ರಹಿಸಿಯಾನು ? ರಾವಣಾಂಕ ಪರಿಭ್ರಷ್ಟೆಯಾಗಿ (ದೂಷಿತೆಯಾಗಿ) ಕಳಂಕಿತವಾದ ಅವನ ದೃಷ್ಟಿಯಿಂದ ನೋಡಲ್ಪಟ್ಟ ನಿನ್ನನ್ನು ಪರಾಕ್ರಮಿಯೂ, ತೇಜಸ್ವಿಯೂ, ಸತ್ಕುಲಪ್ರಸೂತನೂ ಆದ ನಾನು ಪರಿಗ್ರಹಿಸುವುದಾದರೂ ಹೇಗೆ? ॥೧೭–೨೦॥ ನನ್ನ ಕುಲಗೌರವವನ್ನು ದೃಷ್ಟಿಯಲ್ಲಿಟ್ಟು ಕಳಂಕ ನಿವಾರಣೆಗಾಗಿ ನಿನ್ನನ್ನು ಗೆದ್ದುದಾಯಿತು. ಕಳೆದುಹೋದ ಕೀರ್ತಿಯನ್ನು ಸಂಪಾದಿಸಿದುದೂ ಆಯಿತು. (ಈಗ ನಿನ್ನ ದಾರಿ ನಿನಗೆ). ನಾನು ನನ್ನ ವಂಶಗೌರವವನ್ನು ಯೋಚಿಸಿಯೂ ಪ್ರೀತಿಯೊಂದನ್ನೇ ಪುರಸ್ಕರಿಸಿ ನಿನ್ನನ್ನು ಹೇಗೆತಾನೇ ಸ್ವೀಕರಿಸಲಿ. ಅದು ಸಾಧ್ಯವಾಗುವುದಿಲ್ಲವು. ನನಗೆ ನಿನ್ನಲ್ಲಿ ಯಾವ ವಿಶ್ವಾಸವೂ ಇಲ್ಲ. ಗೌರವವೂ ಇರುವುದಿಲ್ಲವು. ಇನ್ನು ನೀನು ಯಥೇಷ್ಟವಾಗಿ ಹೋಗಬಹುದು. ಎಲೆ ಭದ್ರೇ! ನಾನು ಈ ರೀತಿ ನಿನಗೆ ಹೇಳಬೇಕಾದುದನ್ನು

ಕುರುಬುದ್ಧಿಂ ಯಥಾ ಸುಖಂ ॥ ೨೨ ॥ ಸುಗ್ರೀವೇ ವಾನರೇಂದ್ರೇವಾ ರಾಕ್ಷಸೇಂದ್ರೇ
ವಿಭೀಷಣೇ । ನಿವೇಶಯ ಮನಸ್ಸೀತೇ ಯಥಾ ವಾ ಸುಖಮಾತ್ಮನಃ ॥ ೨೩ ॥ ನಹಿ
ತ್ವಾಂ ರಾವಣೋ ದೃಷ್ಟ್ವಾ ದಿವ್ಯರೂಪಾಂ ಮನೋರಮಾಂ । ಮರ್ಷಯೇತ ಚಿರಂ
ಸೀತೇ! ಸ್ವಗೃಹೇ ಪರಿವರ್ತಿನೀಂ" ॥ ೨೪ ॥

ತತಃ ಪ್ರಿಯಾರ್ಹಶ್ರವಣಾ ತದಪ್ರಿಯಂ
ಪ್ರಿಯಾದುಪಶ್ರುತ್ಯ ಚಿರಸ್ಯ ಮೈಥಿಲೀ ।
ಮುಮೋಚ ಬಾಷ್ಪಂ ಸುಭೃಶಂ ಪ್ರವೇಪಿತಾ
ಗಜೇಂದ್ರಹಸ್ತಾಭಿಹತೇವ ಸಲ್ಲಕೀ ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾದಶೋತ್ತರಶತತಮಸ್ಸರ್ಗಃ

ಕೃತಬುದ್ಧಿನಾ - ಮಾಡಲ್ಪಟ್ಟ ನಿಶ್ಚಯುಳ್ಳ, ಮಯಾ - ನನ್ನಿಂದ, ಇದಮೇತತ್ - ಈ ಮಾತು, ಪ್ರವ್ಯಾಹೃತಂ - ಹೇಳಲ್ಪಟ್ಟಿತು, ಲಕ್ಷ್ಮಣೇ - ಲಕ್ಷ್ಮಣನಲ್ಲಿ ಆಗಲಿ, ಭರತೇವ - ಭರತನಲ್ಲೀ ಆಗಲಿ, ತ್ವಂ - ನೀನು, ಬುದ್ಧಿಂ - ಬುದ್ಧಿಯನ್ನು, ಯಥಾಸುಖಂ - ಸುಖವಾಗಿ, ಕುರು - ಮಾಡು. ॥ ೨೧-೨೨ ॥ ಅಥವಾ - ಹಾಗಲ್ಲದೇ ಹೋದರೆ, ಸೀತೇ - ಸೀತಾದೇವಿಯೇ, ವಾನರೇಂದ್ರೇ - ವಾನರಾಧಿಪತಿಯಾದ, ಸುಗ್ರೀವೇವಾ - ಸುಗ್ರೀವನಲ್ಲಿಯಾದರೂ, ರಾಕ್ಷಸೇಂದ್ರೇ - ರಾಕ್ಷಸಾಧಿಪತಿಯಾದ, ವಿಭೀಷಣೇವಾ - ವಿಭೀಷಣನಲ್ಲಾದರೂ, ಆತ್ಮನಃ - ನಿನಗೆ, ಯಥಾಸುಖಂ - ಸುಖವಾಗಿ, ಮನಃ - ಮನಸ್ಸನ್ನು, ನಿದೇಶಯ - ಇರಿಸು. ॥ ೨೩ ॥ ಸೀತೇ - ಸೀತಾದೇವಿಯೇ, ರಾವಣಃ - ದಶಕಂಠನು, ದಿವ್ಯರೂಪಾಂ - ದಿವ್ಯ ಸೌಂದರ್ಯವುಳ್ಳ, ಮನೋರಮಾಂ - ಮನೋಹರಳಾದ, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ಸ್ವಗೃಹೇ - ತನ್ನ ಮನೆಯಲ್ಲಿಯೇ, ಚಿರಂ - ಬಹಳಕಾಲ, ಪರಿವರ್ತಿನೀಂ - ಇರುವವಳನ್ನು, ನಾನುಮರ್ಷಯೇತಹಿ - ಸಹಿಸಿಕೊಂಡಿದ್ದಿರಲಾರನಷ್ಟೆ. ॥ ೨೪ ॥ ತತಃ - ಬಳಿಕ, ಪ್ರಿಯಾ....ಣಾ-ಇಷ್ಟವಾದ ಮಾತುಗಳಿಗೆ ಯೋಗ್ಯಳಾದ, ಮೈಥಿಲೀ-ಸೀತಾದೇವಿಯು, ಪ್ರಿಯಾತ್-ಗಂಡನಿಂದ, ಚಿರಸ್ಯ - ಬಹು ಕಾಲಕ್ಕೆ, ಅಪ್ರಿಯಂ - ಕಠೋರವಾದ ಮಾತನು, ಉಪಶ್ರುತ್ಯ - ಕೇಳಿ, ಗಜೇ....ತಾ - ಆನೆಯ ಸೊಂಡಲದಿಂದ ಹೊಡೆಯಲ್ಪಟ್ಟ, ಸಲ್ಲಕೀವ - ಸಲ್ಲಕೀವೃಕ್ಷದಂತೆ, ಭೃಶಂ - ಬಹಳವಾಗಿ, ಪ್ರವೇಪಿತಾ ನಡುಗಿ, ಬಾಷ್ಪಂ-ಕಂಬನಿಯನ್ನು, ಮುಮೋಚ-ಬಿಟ್ಟಳು. ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾದಶೋತ್ತರಶತತಮಸ್ಸರ್ಗಃ.

ನಿರ್ಧರಿಸಿ ಹೇಳುವೆನು. ಇಗೋ. ಲಕ್ಷ್ಮಣನಲ್ಲಿಯೋ, ಭರತನಲ್ಲಿಯೋ, ವಾನರೇಶ್ವರನಾದ ಸುಗ್ರೀವನಲ್ಲಿಯೋ, ರಾಕ್ಷಸೇಶ್ವರನಾದ ವಿಭಿಷಣನಲ್ಲಿಯೋ ಮನಸ್ಸಿಟ್ಟು ಸೇರಿ ಸುಖವಾಗಿರು. ಅಥವಾ ನಿನಗೆ ಸುಖವಾಗಿರುವಂತೆ ಹೇಗೆ ಬೇಕಾದರೂ ನಡೆದುಕೋ. ಎಲೆ ಸೀತೇ! ರಾವಣಾಸುರನು ದಿವ್ಯ ರೂಪಿಣಿಯೂ, ಮನೋಹಾರಿಣಿಯೂ ಆದ ನೀನು ಬಹಳಕಾಲ ತನ್ನ ಮನೆಯಲ್ಲಿದ್ದರೂ ಸಹಿಸಿಕೊಂಡು ಸುಮ್ಮನಿದ್ದಿರಲಾರನಷ್ಟೆ." ಆಗ ಪ್ರಿಯವಾದ ಮಾತುಗಳನ್ನು ಮಾತ್ರ ಕೇಳಲು ಯೋಗ್ಯಳಾದ ಸೀತಾದೇವಿಯು ತನ್ನ ಪ್ರಿಯನಾದ ಶ್ರೀರಾಮನಾಡಿದ ಕಠೋರ ವಚನವನ್ನು ಕೇಳಿ ಕಣ್ಣೀರಿಟ್ಟು, ಆನೆಯ ಸೊಂಡಿಲ ಹೊಡೆತದಿಂದ ಸಲ್ಲಕೀವೃಕ್ಷವೆಂತೋ ಅಂತು ಗಡಗಡನೆ ನಡುಗಿಹೋದಳು. ॥ ೨೧–೨೫ ॥

ಇಂತಿದು ಶ್ರೀರಾಮಕೃತ ಸೀತಾ ತಿರಸ್ಕಾರ ವೃತ್ತಾಂತವೆಂಬ ನೂರ
ಹದಿನೆಂಟನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕೋನವಿಂಶತ್ಯುತ್ತರಶತತಮಸ್ಸರ್ಗಃ

ಏವಮುಕ್ತಾತು ವೈದೇಹೀ ಪರುಷಂ ರೋಮಹರ್ಷಣಂ । ರಾಘವೇಣ ಸರೋಷೇಣ ಭೃಶಂ ಪ್ರವ್ಯಥಿತಾಽಭವತ್ ॥ ೧ ॥ ಸಾ ತದಶ್ರುತಪೂರ್ವಂ ಹಿ ಜನೇ ಮಹತಿ ಮೈಥಿಲೀ । ಶ್ರುತ್ವಾ ಭರ್ತೃವಚೋ ರೂಕ್ಷಂ ಲಜ್ಜಯಾ ವ್ರೀಡಿತಾಽಭವತ್ ॥೨॥ ಪ್ರವಿಶಂತೀವ ಗಾತ್ರಾಣಿ ಸ್ವಾನ್ಯೇವ ಜನಕಾತ್ಮಜಾ । ವಾಕ್ಛಲ್ಯೈಸ್ತೈಸ್ಸಶಲ್ಯೇವ ಭೃಶಮಶ್ರೂಣ್ಯವರ್ತಯತ್ ॥ ೩ ॥ ತತೋ ಬಾಷ್ಪಪರಿಕ್ಲಿಷ್ಟಂ ಪ್ರಮಾರ್ಜಂತೀ ಸ್ವಮಾನನಂ । ಶನೈರ್ಗದ್ಗದಯಾ ವಾಚಾ ಭರ್ತಾರಮಿದಮಬ್ರವೀತ್ ॥ ೪ ॥ " ಕಿಂ

ಏವಂ - ಈ ಪರಿಯಾಗಿ, ಸರೋಷೇಣ - ಕೋಪದಿಂದೊಡಗೂಡಿದ, ರಾಘವೇಣ - ಶ್ರೀರಾಮನಿಂದ, ಪರುಷಂ - ಕ್ರೂರವಾದ, ರೋಮಹರ್ಷಣಂ - ರೋಮಾಂಚಕರವಾದ ಮಾತನ್ನು, ಉಕ್ತಾ - ಹೇಳಲ್ಪಟ್ಟ, ವೈದೇಹೀ - ಸೀತಾದೇವಿಯು, ಭೃಶಂ - ಬಹಳವಾಗಿ, ಪ್ರವ್ಯಥಿತಾ - ವ್ಯಸನಗೊಂಡವಳು, ಅಭವತ್-ಆದಳು. ॥ ೧ ॥ ಸಾಮೈಥಿಲೀ-ಆ ಸೀತಾದೇವಿಯು, ಮಹತಿಜನೇ-ಬಹಳವಾದ ಜನಸಂದಣಿಯಲ್ಲಿ, ಅಶ್ರುತಪೂರ್ವಂ - ಹಿಂದಾವಾಗಲೂ ಕೇಳಲ್ಪಡದಿರುವ, ರೂಕ್ಷಂ - ತೀಕ್ಷ್ಣವಾದ, ತತ್ - ಆ, ಭರ್ತೃವಚಃ - ಗಂಡನ ಮಾತನ್ನು, ಶ್ರುತ್ವಾ - ಕೇಳಿ, ಲಜ್ಜಯಾ - ನಾಚಿಕೆಯಿಂದ, ವ್ರೀಳಿತಾ - ತಗ್ಗಿದ ಮುಖವಳ್ಳವಳು, ಅಭವತ್ - ಆದಳು. ॥ ೨ ॥ ಜನಕಾತ್ಮಜಾ - ಸೀತಾದೇವಿಯು, ತೈಃ - ಆ, ವಾಕ್ಛಲ್ಯೈಃ - ವಾಗ್ರೂಪವಾದ ಬಾಣಗಳಿಂದ, ಸ್ವಾನಿಗಾತ್ರಾಣ್ಯೇವ - ತನ್ನ ಅವಯವಗಳಲ್ಲಿಯೇ, ಪ್ರವಿಶಂತೀವ - ಅಡಗಿಹೋಗುವಳೋ ಎಂಬಂತೆ, ಸಶಲ್ಯೇವ - ಅಂಬು ನಾಟಿದವಳಂತೆ, ಭೃಶಂ - ಬಹಳವಾಗಿ, ಅಶ್ರೂಣಿ - ಕಣ್ಣೀರನ್ನು, ಅವರ್ತಯತ್ - ಬಿಟ್ಟಳು. ॥ ೩ ॥ ತತಃ - ಬಳಿಕ, ಬಾಷ್ಪಪರಿಕ್ಲಿಷ್ಟಂ - ಕಂಬನಿಯಿಂದ ತೋಯಿಸಲ್ಪಟ್ಟ, ಸ್ವಂ - ಸ್ವಕೀಯವಾದ, ಆನನಂ - ಮುಖವನ್ನು, ಪ್ರಮಾರ್ಜಂತೀ - ಒರಸಿಕೊಳ್ಳುತ್ತ, ಶನೈಃ - ಮೆಲ್ಲನೆ, ಗದ್ಗದಯಾ - ವಿಸ್ವರವಾದ, ವಾಚಾ - ಮಾತಿನಿಂದ, ಭರ್ತಾರಂ - ಗಂಡನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್-ನುಡಿದಳು. ॥ ೪ ॥ ವೀರ-ಶೂರನೇ, ಪ್ರಾಕೃತಃ ಪಾಮರನಾದ ಪುರುಷನು, ಪ್ರಾಕೃತಾ

ರೋಷೋದ್ದೀಪಿತನಾದ ಶ್ರೀರಾಮಮೂರ್ತಿಯು ಈ ಪ್ರಕಾರವಾಗಿ ಬಿರುನುಡಿಗಳನ್ನಾಡಲು ವಿದೇಹರಾಜಪುತ್ರಿಯಾದ ಸೀತಾದೇವಿಯು ಬಹಳವಾಗಿ ಪರಿತಪಿಸಿಹೋದಳು. ಆ ಸಮಯದಲ್ಲಿ ಅಷ್ಟುಮಂದಿಯ ನಡುವೆ ತನ್ನ ಪತಿಯಾಡಿದ ಕಠಿನೋಕ್ತಿಗಳನ್ನು ಕೇಳಿ, ಎಂದೂ ಆತನಿಂದ ಅಂತಹ ಕಠಿನೋಕ್ತಿಗಳನ್ನೇ ಕೇಳದಿದ್ದ ಆಕೆಯು ತುಂಬಾ ನಾಚಿ ತಲೆ ತಗ್ಗಿಸಿಬಿಟ್ಟಳು. ಆಕೆಯು ತನ್ನ ಅಂಗಗಳಲ್ಲಿ ತಾನೇ ಅಡಗಿಹೋಗುವಂತೆ ಕುಗ್ಗುತ್ತ ಶ್ರೀರಾಮಮೂರ್ತಿಯ ವಾಗ್ಬಾಣಗಳಿಂದ ಪರಿಪೀಡಿತಳಾಗಿ ಬಹಳವಾಗಿ ಕಂಬನಿಗರೆದಳು. ಆ ತರುವಾಯ ಆಕೆಯು ಕಂಬನಿಗಳಿಂದ ಕಲುಷಿತವಾಗಿದ್ದ ತನ್ನ ಮುಖವನ್ನು ಒರಸಿಕೊಂಡು ಗದ್ಗದಸ್ವರಭರಿತೆಯಾಗಿ ತನ್ನ ಪತಿದೇವನಾದ ಶ್ರೀರಾಮನನ್ನು ಕುರಿತು ಮೆಲ್ಲಮೆಲ್ಲಗೆ, " ಓ ಪ್ರಾಣೇಶ್ವರಾ, ವೀರ! ಪ್ರಾಕೃತನಾದ ಪುರುಷನು ಪ್ರಾಕೃತೆಯಾದ ಸ್ತ್ರೀಯನ್ನೆಂತೋ

ಮಾಮಸದೃಶಂ ವಾಕ್ಯಮೀದೃಶಂ ಶ್ರೋತ್ರದಾರುಣಂ । ರೂಕ್ಷಂ ಶ್ರಾವಯಸೇ ವೀರ! ಪ್ರಾಕೃತಃ ಪ್ರಾಕೃತಾಮಿವ ॥ ೫ ॥ ನತಥಾಸ್ಮಿ ಮಹಾಬಾಹೋ! ಯಥಾ ತ್ವಮವಗಚ್ಛಸಿ । ಪ್ರತ್ಯಯಂ ಗಚ್ಛ ಮೇ ಯೇನ ಚಾರಿತ್ರೇಣೈವ ತೇ ಶಪೇ ॥ ೬ ॥ ಪೃಥಕ್ ಸ್ತ್ರೀಣಾಂ ಪ್ರಚಾರೇಣ ಜಾತಿಂ ತಾಂ ಪರಿಶಂಕಸೇ । ಪರಿತ್ಯಜೇಮಾಂ ಶಂಕಾಂತು ಯದಿ ತೇಽಹಂ ಪರೀಕ್ಷಿತಾ ॥ ೭ ॥ ಯದ್ಯಹಂ ಗಾತ್ರಸಂಸ್ಪರ್ಶಂ ಗತಾಸ್ಮಿ ವಿವಶಾ ಪ್ರಭೋ! । ಕಾಮಕಾರೋ ನಮೇ ತತ್ರ ದೈವಂ ತತ್ರಾಽಪರಾಧ್ಯತಿ ॥ ೮ ॥ ಮದಧೀನಂ ತು ಯತ್ತನ್ಮೇ ಹೃದಯಂ ತ್ವಯಿ ವರ್ತತೇ । ಪರಾಧೀನೇಷು ಗಾತ್ರೇಷು ಕಿಂ

ಮಿವ - ಪಾಪಸ್ತ್ರೀಯನ್ನಂತೆ, ಮಾಂ - ನನ್ನನ್ನು, ಅಸದೃಶಂ - ಅಯೋಗ್ಯವಾದ, ಶ್ರೋತ್ರಧಾರುಣಂ- ಕರ್ಣಕಠೋರವಾದ, ರೂಕ್ಷಂ - ಕಠಿನವಾದ, ಈದೃಶಂ - ಇಂಥಾ, ವಾಕ್ಯಂ - ಮಾತನ್ನು, ಕಿಂಶ್ರಾವಯಸೇ-ಏತಕ್ಕೆ ಕೇಳಿಸುತ್ತಿದ್ದೀಯೆ. ॥೫॥ ಮಹಾಬಾಹೋ ಮಹಾ ಭುಜಬಲಶಾಲಿಯೇ, ತ್ವಂ- ನೀನು, ಯಥಾಅವಗಚ್ಛಸಿ-ಹೇಗೆ ತಿಳಿದಿದ್ದೀಯೋ, ತಥಾ-ಹಾಗೆ, ನಾಸ್ಮಿ - ನಾನಿರುವುದಿಲ್ಲ, ಮಮ- ನನ್ನ, ಚಾರಿತ್ರೇಣೈವ - ನಡತೆಯಿಂದಲೇ, ತೇ - ನಿನಗಾಗಿ, ಶಪೇ - ಶಪಥ ಮಾಡುವೆನು, ಯೇನ - ಯಾವ ಶಪಥದಿಂದ, ಪ್ರತ್ಯಯಂ - ನಂಬಿಕೆಯನ್ನು, ಗಚ್ಛಸಿ - ಹೊಂದುವೆಯೋ, ತತಃ - ಅಂಥಾ ಶಪಥದಿಂದ, ಪ್ರತ್ಯಯಂ - ನಂಬಿಕೆಯನ್ನು, ಗಚ್ಛ - ಹೊಂದು. ॥೬॥ ಪೃಥಕ್‌ಸ್ತ್ರೀಣಾಂ - ಪ್ರಾಕೃತ ಸ್ತ್ರೀಯರುಗಳ, ಪ್ರಚಾರೇಣ - ಆಚಾರದಿಂದ, ತಾಂಜಾತಿಂ - ಆ ಸ್ತ್ರೀಜಾತಿಯನ್ನೇ, ಪರಿಶಂಕಸೇ - ಸಂಶಯಪಡುತ್ತಿರುವೆ, ಅಹಂ - ನಾನು, ತೇ - ನಿನ್ನಿಂದ, ಪರೀಕ್ಷಿತಾಯದಿ - ಪರೀಕ್ಷಿಸಲ್ಪಟ್ಟವಳೇ ಆದರೆ, ಇಮಾಂಶಂಕಾಂ - ಈ ಸಂಶಯವನ್ನು, ಪರಿತ್ಯಜ - ಬಿಡು. ॥೭॥ ಪ್ರಭೋ - ಸ್ವಾಮಿಯೇ, ಅಹಂ - ನಾನು, ವಿವಶಾ - ಪರಾಧೀನಳಾಗಿ, ಯದ್ಯಪಿ - ಆದರೆ, ಗಾತ್ರಸಂಸ್ಪರ್ಶಂ - ದೇಹಸ್ಪರ್ಶ ವನ್ನು, ಗತಾ - ಹೊಂದಿದವಳು, ಅಸ್ಮಿ - ಆಗಿದ್ದೇನೆ, ತತ್ರ - ಆ ವಿಷಯದಲ್ಲಿ, ಮೇ - ನನ್ನ, ಕಾಮಕಾರಃ - ಸ್ವೇಚ್ಛಾಚರಣವು, ನ - ಇರುವುದಿಲ್ಲ, ದೈವಂ - ದೈವವು, ತತ್ರ - ಆ ವಿಷಯದಲ್ಲಿ, ಅಪರಾಧ್ಯತಿ - ದ್ರೋಹ ಮಾಡಿತು. ।೮। ಯತ್ - ಯಾವ ಮನವು, ಮದಧೀನಂ - ನನ್ನ ಸ್ವಾಧೀನ ವಾಗಿತ್ತೋ, (ನನ್ನ) ತದ್ಧೃದಯಂ - ಆ ಹೃದಯವು, ತ್ವಯಿ - ನಿನ್ನಲ್ಲಿ, ವರ್ತತೇ - ಇರುತ್ತದೆ, ಅನೀಶ್ವರಾ - ಅಸಮರ್ಥಳಾದ ನಾನು, ಗಾತ್ರೇಷು - ಅವಯವಗಳು, ಪರಾಧೀನೇಷು - ಇತರರಿಗೆ

ಅಂತು (ಮಹಾ ಜ್ಞಾನಿಯೂ, ಪರಾಕ್ರಮಿಯೂ ಆದ) ನೀನು ಇಂತಹ ಕರ್ಣಕಠೋರ ವಾದ ಅಯೋಗ್ಯ ನುಡಿಗಳನ್ನೇಕೆ ಕೇಳಿಸುತ್ತಿರುವೆ! ॥೧-೫॥ ಎಲೈ ಮಹಾ ಬಾಹುವೇ! ನೀನು ನನ್ನ ವಿಷಯದಲ್ಲಿ ಹೇಗೆ ಭಾವಿಸಿರುವೆಯೋ ಆ ರೀತಿ ನಾನು ಕಲುಷಿತೆಯಾಗಿರುವುದಿಲ್ಲವು. ನಾನಾಡುವ ಮಾತುಗಳನ್ನು ನಂಬು. ಇದೋ ನಾನು ನನ್ನ ನಡತೆಯಿಂದಲೇ ಪ್ರತಿಜ್ಞೆ ಮಾಡಿ ಹೇಳುತ್ತೇನೆ. ಯಾವಳೋ ಒಬ್ಬಳ ದುರ್ನಡತೆಯಿಂದ ಒಟ್ಟು ಸ್ತ್ರೀಜಾತಿಯನ್ನೇ ಸಂದೇಹಿ ಸುತ್ತಿರುವೆ! ನೀನು ನನ್ನನ್ನು ಚೆನ್ನಾಗಿ ಪರೀಕ್ಷಿಸಿರುವೆಯೋ ಆದರೆ ನನ್ನ ವಿಷಯದಲ್ಲಿ ಈ ರೀತಿ ಸಂದೇಹಪಡಬೇಡ. ಎಲೈ ಪ್ರಭುವೇ! ವಿವಶೆ (ಪರಾಧೀನೆ) ಯಾದ ನಾನು (ರಾವಣನ) ಶರೀರ ಸಂಸ್ಪರ್ಶವನ್ನು ಹೊಂದಿದೆನೆಂಬುದು ನನ್ನ ಮನಃಪೂರ್ತಿಯಿಂದಾದುದಲ್ಲವು. ಅದರಲ್ಲಿ ನನ್ನ ಅಪರಾಧವೇನೂ ಇರುವುದಿಲ್ಲವು. ಆದಷ್ಟೂ ದೈವದ (ಕ್ಷೇಷ್ಟಿತವೇ) ಅಪರಾಧವೇ ಸರಿ. ನನ್ನ ವಶದಲ್ಲಿರುವುದು ನನ್ನ ಮನಸ್ಸು. ಅದು ನಿನ್ನಲ್ಲಿ ಸೇರಿಹೋಗಿದೆ. ನನ್ನ ಶರೀರವೇ ಪರಾಧೀನ

ಕರಿಷ್ಯಾಮ್ಯನೀಶ್ವರಾ ॥ ೯ ॥ ಸಹಸಂವೃದ್ಧಭಾವಾಚ್ಚ ಸಂಸರ್ಗೇಣ ಚ ಮಾನದ! ।
ಯದ್ಯಹಂ ತೇ ನವಿಜ್ಞಾತಾ ಹತಾ ತೇನಾಽಸ್ಮಿ ಶಾಶ್ವತಂ ॥ ೧೦ ॥ ಪ್ರೇಷಿತಸ್ತೇ
ಯದಾ ವೀರೋ ಹನುಮಾನವಲೋಕಕಃ । ಲಂಕಾಸ್ಥಾಽಹಂ ತ್ವಯಾ ವೀರ! ಕಿಂ
ತದಾ ನವಿಸರ್ಜಿತಾ ॥ ೧೧ ॥ ಪ್ರತ್ಯಕ್ಷಂ ವಾನರೇಂದ್ರಸ್ಯ ತ್ವದ್ವಾಕ್ಯಸಮನಂತರಂ ।
ತ್ವಯಾ ಸಂತ್ಯಕ್ತಯಾ ವೀರ! ತ್ಯಕ್ತಂ ಸ್ಯಾಜ್ಜೀವಿತಂ ಮಯಾ ॥ ೧೨ ॥ ನವೃಥಾ
ತೇ ಶ್ರಮೋಽಯಂ ಸ್ಯಾತ್ಸಂಶಯೇ ನ್ಯಸ್ಯಜೀವಿತಂ । ಸುಹೃಜ್ಜನಪರಿಕ್ಲೇಶೋ
ನಚಾಽಯಂ ನಿಷ್ಫಲಸ್ತವ ॥ ೧೩ ॥ ತ್ವಯಾತು ನರಶಾರ್ದೂಲ! ಕ್ರೋಧಮೇವಾನು

ಆಧೀನವಾಗಲು, ಕಿಂಕರಿಷ್ಯಾಮಿ - ಏನುಮಾಡಲಿ. ॥ ೯ ॥ ಹೇ ಮಾನದ - ಎಲೈ ಬಹುಮಾನದಾಯಕನೇ, ಅಹಂ - ನಾನು, ಸಹ....ತ್ - ಒಡಬೆಳದಿರುವಿಕೆಯಿಂದಲೂ, ಸಂಸರ್ಗೇಣಚ - ದೇಹಸಂಬಂಧದಿಂದಲೂ, ತೇ - ನಿನ್ನಿಂದ, ನವಿಜ್ಞಾತಾಯದಿ - ತಿಳಿಯಲ್ಪಡದೇ ಹೋದವಳಾದರೆ, ತೇನ - ಆದರಿಂದ, ಶಾಶ್ವತಂ - ಶಾಶ್ವತವಾಗಿ, ಹತಾಸ್ಮಿ - ಹೊಡೆಯಲ್ಪಟ್ಟವಳಾದೆನು. ॥೧೦॥ ವೀರ - ಶೂರನೇ, ಯದಾ - ಯಾವ ಕಾಲದಲ್ಲಿ, ತೇ - ನಿನ್ನಿಂದ, ಅವಲೋಕಕಃ - ನೋಡುವವನಾಗಿ, ವೀರಃ - ಶೂರನಾದ, ಹನುಮಾನ್ - ಆಂಜನೇಯನು, ತೇ - ನಿನ್ನಿಂದ, ಪ್ರೇಷಿತಃ - ಕಳುಹಲ್ಪಟ್ಟನೋ, ತದಾ - ಆ ಕಾಲದಲ್ಲಿ, ಲಂಕಾಸ್ಥಾ - ಲಂಕಾಪಟ್ಟಣದಲ್ಲಿಯೇ ಇರುತ್ತಿರುವ, ಅಹಂ - ನಾನು, ತ್ವಯಾ - ನಿನ್ನಿಂದ, ಕಿನ್ನವಿಸರ್ಜಿತಾ - ಏಕೆ ಬಿಡಲ್ಪಡಲಿಲ್ಲ. ॥ ೧೧ ॥ ವೀರ - ಶೂರನೇ, ತ್ವದ್ವಾ....ರಂ - ನಿನ್ನ ಮಾತಿನ ಅನಂತರದಲ್ಲಿ, ವಾನರೇಂದ್ರಸ್ಯ - ಸುಗ್ರೀವನ, ಪ್ರತ್ಯಕ್ಷಂ - ಎದುರಾಗಿ, ತ್ವಯಾ - ನಿನ್ನಿಂದ, ಸಂತ್ಯಕ್ತಯಾ - ತ್ಯಾಗ ಮಾಡಲ್ಪಟ್ಟ, ಮಯಾ - ನನ್ನಿಂದ, ಜೀವಿತಂ - ಪ್ರಾಣವು, ತ್ಯಕ್ತಂ - ಬಿಡಲ್ಪಟ್ಟದು, ಸ್ಯಾತ್ - ಆಗುತ್ತಿತ್ತು. ॥೧೨॥ ಜೀವಿತಂ - ಪ್ರಾಣವನ್ನು, ಸಂಶಯೇ - ಸಂಶಯದಲ್ಲಿ, ನ್ಯಸ್ಯ - ಇರಿಸಿ, ಅಯಂ - ಈ, ತೇ - ನಿನ್ನ, ಶ್ರಮಃ - ಆಯಾಸವು, ವೃಥಾ - ವ್ಯರ್ಥವಾಗಿ, ನಸ್ಯಾತ್ - ಆಗದೇ ಹೋಗುವದಷ್ಟೆ, ತವ - ನಿನ್ನ, ಅಯಂ - ಈ, ಸುಹೃ....ಶಃ - ಮಿತ್ರಜನರ ಆಯಾಸವು, ನನಿಷ್ಫಲಃ - ವ್ಯರ್ಥವಾಗಿ, ನಸ್ಯಾತ್ - ಆಗದೇ ಇರುತ್ತಿತ್ತು. ॥೧೩॥ ನರಶಾರ್ದೂಲ - ಮನುಷ್ಯೋತ್ತಮನೇ, ಕ್ರೋಧಮೇವ - ಕ್ರೋಧವನ್ನೇ, ಅನುವರ್ತತಾ - ಅನುಸರಿಸುತ್ತಿರುವ, ತ್ವಯಾ - ನಿನ್ನಿಂದಲಾದರೆ, ಲಘುನಾ - ಸ್ವಲ್ಪನಾದ, ಮನುಷ್ಯೇಣೇವ - ಮನುಷ್ಯನಿಂದಲಂತೆ,

---

ವಾದಾಗ ಅನಾಥೆಯಾದ ನಾನು ಏನನ್ನು ತಾನೆ ಮಾಡಲಾದೀತು? ಎಲೈ ಮಾನದಾಯಕನೇ! ನಿನ್ನೊಡನಾಡಿ ನಿನ್ನೊಡ ಬೆಳೆದೂ, ನೀನು ನನ್ನ ಹೃದಯವನ್ನು ತಿಳಿದಿರುವುದಿಲ್ಲವಾದರೆ ನಾನು ಶಾಶ್ವತವಾಗಿ ಕೆಟ್ಟುಹೋದೆನು. ॥ ೬-೧೦ ॥ ಎಲೈ ವೀರನೇ! ನೀನು ನನ್ನನ್ನು ನೋಡಿಕೊಂಡು ಬರಲೋಸುಗ ವೀರನಾದ ಹನುಮಂತನನ್ನು ಕಳುಹಿಸಿದಾಗಲೇ, ನಾನು ಲಂಕಾನಗರದಲ್ಲಿರುವಂತೆಯೇ ನನ್ನನ್ನೇಕೆ ತೊರೆಯಲಿಲ್ಲವು? ವಾನರೇಶ್ವರನಾದ ಸುಗ್ರೀವನ ಸಮ್ಮುಖದಲ್ಲಿ ನೀನು ಆ ರೀತಿ ನುಡಿದ ತರುವಾಯ ನಾನು ಈಗಾಗಲೇ ಈ ಪ್ರಾಣಗಳನ್ನು ತೊರೆದಿರುತ್ತಿದ್ದೆನು. ಮಿತ್ರರೊಡಗೂಡಿದ ಈ ನಿನ್ನ ಶ್ರಮವೂ ನಿರರ್ಥಕವಾಗುತ್ತಿರಲಿಲ್ಲವು. ಪ್ರಾಣಾಪಾಯಕರವಾದ ಈ ನಿನ್ನ ಗೆಳೆಯರ ಕಷ್ಟವೂ ನಷ್ಟವಾಗುತ್ತಿರಲಿಲ್ಲ. ಎಲೈ ಪುರುಷೋತ್ತಮನೇ! ಕೋಪವನ್ನೇ ಅನುಸರಿಸುತ್ತಿರುವ ನೀನು ಕೇವಲ ಪಾಮರನಾದ ಮಾನವನಂತೆ ಸ್ತ್ರೀತ್ವವನ್ನೇ (ಚಾಪಲ್ಯವನ್ನೇ) ಮುಂದು ಮಾಡುತ್ತಿರುವೆ. ಎಲೈ

ವರ್ತತಾ । ಲಘುನೇವ ಮನುಷ್ಯೇಣ ಸ್ತ್ರೀತ್ವಮೇವ ಪುರಸ್ಕೃತಂ ॥೧೪॥ ಅಪದೇಶೇನ ಜನಕಾನ್ನೋತ್ಪತ್ತಿರ್ವಸುಧಾತಲಾತ್ । ಮಮ ವೃತ್ತಂಚ ವೃತ್ತಜ್ಞ! ಬಹು ತೇನ ಪುರಸ್ಕೃತಂ ॥೧೫॥ ನಪ್ರಮಾಣೀಕೃತಃ ಪಾಣಿರ್ಬಾಲ್ಯೇ ಬಾಲೇನ ಪೀಡಿತಃ । ಮಮ ಭಕ್ತಿಶ್ಚ ಶೀಲಂಚ ಸರ್ವಂ ತೇ ಪೃಷ್ಠತಃ ಕೃತಂ" ॥೧೬॥ ಏವಂ ಬ್ರುವಾಣಾ ರುದತೀ ಬಾಷ್ಪಗದ್ಗದಭಾಷಿಣೀ । ಅಬ್ರವೀಲ್ಲಕ್ಷ್ಮಣಂ ಸೀತಾ ದೀನಂ ಧ್ಯಾನಪರಂ ಸ್ಥಿತಂ ॥೧೭॥ "ಚಿತಾಂ ಮೇ ಕುರು ಸೌಮಿತ್ರೇ! ವ್ಯಸನಸ್ಯಾಽಸ್ಯ ಭೇಷಜಂ । ಮಿಥ್ಯೋಪಘಾತೋಪಹತಾ ನಾಽಹಂ ಜೀವಿತುಮುತ್ಸಹೇ ॥೧೮॥ ಅಪ್ರೀತಸ್ಯ

ಸ್ತ್ರೀತ್ವಮೇವ - ಸ್ತ್ರೀಸ್ವಭಾವವೇ, ಪುರಸ್ಕೃತಂ - ಮುಂದು ಮಾಡಲ್ಪಟ್ಟಿತು. ॥೧೪॥ ವೃತ್ತಜ್ಞ - ಸಚ್ಚರಿತೆಯನ್ನು ತಿಳಿದವನೇ, ಜನಕಾತ್ - ಜನಕರಾಯನನ್ನುದ್ದೇಶಿಸಿ, ಅಪದೇಶೇನ - ವ್ಯಾಜದಿಂದ, ವಸುಧಾತಲಾತ್ - ಭೂಪ್ರದೇಶದಿಂದ, ಉತ್ಪತ್ತಿಃ - ಉತ್ಪತ್ತಿಯು, ನಪುರಸ್ಕೃತಾ - ಪುರಸ್ಕರಿಸಲ್ಪಡಲಿಲ್ಲ, ಮಮ - ನನ್ನ, ವೃತ್ತಂಚ - ಸಚ್ಚರಿತ್ರವೂ, ತೇ - ನಿನ್ನಿಂದ, ನಪುರಸ್ಕೃತಂ - ಅಂಗೀಕರಿಸಲ್ಪಡಲಿಲ್ಲ. ॥೧೫॥ ಬಾಲ್ಯೇ - ಬಾಲ್ಯಾವಸ್ಥೆಯಲ್ಲಿ, ಬಾಲೇನ - ಬಾಲನಾದ ನಿನ್ನಿಂದ, ಪೀಡಿತಃ - ಗ್ರಹಿಸಲ್ಪಟ್ಟ, ಪಾಣಿಃ - ಹಸ್ತವು, ನಪ್ರ....ತಃ - ಪ್ರಮಾಣವಾಗಿ ಎಣಿಸಲ್ಪಡಲಿಲ್ಲ, ಮಮ - ನನ್ನ, ಭಕ್ತಿಶ್ಚ - ಭಕ್ತಿಯೂ, ನಪ್ರ....ತಃ - ಎಣಿಸಲ್ಪಡಲಿಲ್ಲ, ಶೀಲಂಚ - ಸ್ವಭಾವವೂ, ನಪ್ರ....ತಂ - ಪ್ರಮಾಣವಾಗಿ ಎಣಿಸಲ್ಪಡಲಿಲ್ಲ, ಸರ್ವಂ - ಸಮಸ್ತವೂ, ತೇ - ನಿನ್ನಿಂದ, ಪೃಷ್ಠತಃಕೃತಃ - ಕಡೆಗಣಿಸಲ್ಪಟ್ಟಿತು. ॥೧೬॥ ಏವಂ - ಈ ಪರಿಯಾಗಿ, ಬ್ರುವಾಣಾ - ಹೇಳಿ, ರುದತೀ - ಅಳುತ್ತಿರುವ, ಸೀತಾ - ಸೀತಾದೇವಿಯು, ಬಾಷ್ಪ....ಣೀ - ಕಣ್ಣೀರು ತುಂಬಿ ಗದ್ಗದಸ್ವರದಿಂದ ಮಾತನಾಡುತ್ತಿರುವವಳಾಗಿ, ದೀನಂ-ದೈನ್ಯಮುಖದಿಂದ, ಧ್ಯಾನಪರಂ-ಚಿಂತೆಯಲ್ಲಿ ಆಸಕ್ತನಾಗಿ, ಸ್ಥಿತಂ ನಿಂತಿರುವ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಅಬ್ರವೀತ್ - ನುಡಿದಳು. ॥೧೭॥ ಹೇ ಸೌಮಿತ್ರೇ - ಎಲೈ ಸೌಮಿತ್ರಿಯೇ, ಅಸ್ಯವ್ಯಸನಸ್ಯ - ಈ ದುಃಖಕ್ಕೆ, ಭೇಷಜಂ - ಔಷಧಪ್ರಾಯವಾದ, ಚಿತಾಂ - ಚಿತಿಯನ್ನು, ಮೇ - ನನಗೆ, ಕುರು - ಮಾಡು, ಮಿಥ್ಯೋ... ತಾ - ಸುಳ್ಳು ಅಪವಾದದಿಂದ ಹೊಡೆಯಲ್ಪಟ್ಟವಳಾದ, ಅಹಂ - ನಾನು, ಜೀವಿತುಂ - ಬದುಕುವುದಕ್ಕೆ, ನೋತ್ಸಹೇ - ಉದ್ಯುಕ್ತಳಾಗಲಾರೆನು. ॥೧೮॥ ಗುಣೈಃ ಪಾತಿವ್ರತ್ಯಾದಿ ಗುಣಗಳಿಂದ, ಅಪ್ರೀತಸ್ಯ - ತೃಪ್ತನಾಗದಿರುವ, ಭರ್ತುಃ -

---

ನಡತೆಯನ್ನರಿತ ಶ್ರೀರಾಮಚಂದ್ರನೇ! ನನ್ನ ತಂದೆಯು (ಕೇವಲ ಸದಾಚಾರಸಂಪನ್ನನಾದ ಜನಕರಾಯನೆಂಬುದನ್ನೂ, ನಾನು ಭೂಜಾತೆಯೆಂಬುದನ್ನೂ, ಪವಿತ್ರವಾದ ನನ್ನ ನಡತೆಯೇನೆಂಬುದನ್ನೂ ನೀನು ಲೆಕ್ಕಿಸದೆ ಹೋದೆಯಲ್ಲವೇ! ಬಾಲಕನಾದ ನೀನು ಕೇವಲ ಬಾಲ್ಯದಲ್ಲಿದ್ದ ನನ್ನ ಕೈಹಿಡಿದುದನ್ನೂ ಪ್ರಮಾಣವನ್ನಾಗಿ ಎಣಿಸದೆ ಹೋದೆ. ನಿನ್ನಲ್ಲಿ ನನಗಿರುವ ಅಚಲವಾದ ಭಕ್ತಿ (ಪ್ರೇಮ), ನನ್ನ ಶೀಲ ಇವುಗಳೆಲ್ಲವನ್ನೂ ನೀನು ಗಣನೆಗೆ ತಂದುಕೊಳ್ಳಲಿಲ್ಲವು" ಎಂಬುದಾಗಿ ಹೇಳುತ್ತ (ಆ ದೇವಿಯು) ರೋದಿಸುತ್ತ ಗದ್ಗದಸ್ವರಭರಿತೆಯೂ, ದೀನೆಯೂ ಆಗಿ, ಚಿಂತಾಪರನಾಗಿ ನಿಂತಿದ್ದ ಲಕ್ಷ್ಮಣಸ್ವಾಮಿಯನ್ನು ಕುರಿತು ಹೀಗೆಂದಳು. "ಎಲೈ ಸೌಮಿತ್ರಿಯೇ! ಈ ವ್ಯಸನಕ್ಕೆ ಔಷಧಪ್ರಾಯವಾದ ಚಿತಿಯನ್ನು ಏರ್ಪಡಿಸುವವನಾಗು. ಈ ವಿಧವಾದ ಮಿಥ್ಯಾಪವಾದದಿಂದ ದೂಷಿತೆಯಾದ ನಾನು ಜೀವದಿಂದುಳಿದಿರಲಾರೆನು. ಭರ್ತನಿಗೆ ಪ್ರತಿಕೂಲೆಯಾಗಿ (ಅನಿಷ್ಟೆಯಾಗಿ) ಮಹಾಜನರ ಸಮ್ಮುಖದಲ್ಲಿ ಪರಿ

ಗುಣೈರ್ಭರ್ತುಸ್ತ್ಯಕ್ತಾ ಯಾ ಜನಸಂಸದಿ । ಯಾ ಕ್ಷಮಾ ಮೇ ಗತಿರ್ಗಂತುಂ ಪ್ರವೇಕ್ಷ್ಯೇ ಹವ್ಯವಾಹನಂ" ॥ ೧೯ ॥ ಏವಮುಕ್ತಸ್ತು ವೈದೇಹ್ಯಾ ಲಕ್ಷ್ಮಣಃ ಪರವೀರಹಾ । ಅಮರ್ಷವಶಮಾಪನ್ನೋ ರಾಘವಾನನಮೈಕ್ಷತ ॥ ೨೦ ॥ ಸ ವಿಜ್ಞಾಯ ತತಶ್ಛಂದಂ ರಾಮಸ್ಯಾಕಾರಸೂಚಿತಂ । ಚಿತಾಂ ಚಕಾರ ಸೌಮಿತ್ರಿರ್ಮತೇ ರಾಮಸ್ಯ ವೀರ್ಯವಾನ್ ॥೨೧॥ ಅಧೋಮುಖಂ ತದಾ ರಾಮಂ ಶನೈಃ ಕೃತ್ವಾ ಪ್ರದಕ್ಷಿಣಂ । ಉಪಾಸರ್ಪತ ವೈದೇಹೀ ದೀಪ್ಯಮಾನಂ ಹುತಾಶನಂ ॥ ೨೨ ॥ ಪ್ರಣಮ್ಯ ದೇವತಾಭ್ಯಶ್ಚ ಬ್ರಾಹ್ಮಣೇಭ್ಯಶ್ಚ ಮೈಥಿಲೀ । ಬದ್ಧಾಂಜಲಿಪುಟಾ ಚೇದಮುವಾಚಾಗ್ನಿಸಮೀಪ

ಗಂಡನಿಂದ, ಜನಸಂಸದಿ - ಜನರ ಸಭೆಯಲ್ಲಿ, ತ್ಯಕ್ತಾಯಾಃ - ಬಿಡಲ್ಪಟ್ಟ, ಮೇ - ನನಗೆ, ಯಾ - ಯಾವ ಗತಿಯು, ಗಂತುಂ - ಹೊಂದುವುದಕ್ಕೆ, ಕ್ಷಮಾ - ಯೋಗ್ಯವೋ, ತಾಂಗತಿಂ - ಅಂಥಾ ಗತಿರೂಪವಾದ, ಹವ್ಯವಾಹನಂ - ಅಗ್ನಿಯನ್ನು, ಪ್ರವೇಕ್ಷ್ಯೇ - ಪ್ರವೇಶಿಸುತ್ತೇನೆ. ॥೧೯॥ ಏವಂ - ಈ ಪರಿಯಾಗಿ, ವೈದೇಹ್ಯಾ - ಸೀತಾದೇವಿಯಿಂದ, ಉಕ್ತಃ - ಹೇಳಲ್ಪಟ್ಟ, ಪರವೀರಹಾ - ಶತ್ರುಸಂಹಾರಕನಾದ, ಲಕ್ಷ್ಮಣಃ - ಲಕ್ಷ್ಮಣನು, ಅಮರ್ಷವಶಂ - ಕ್ರೋಧವಶವನ್ನು, ಆಪನ್ನಃ - ಹೊಂದಿ, ರಾಘವಾನನಂ - ಶ್ರೀರಾಮನ ಮುಖವನ್ನು, ಐಕ್ಷತ - ನೋಡಿದನು. ॥೨೦॥ ವೀರ್ಯವಾನ್- ಸಾಮರ್ಥ್ಯವಂತನಾದ, ಸಸೌಮಿತ್ರಿಃ - ಆ ಲಕ್ಷ್ಮಣನು, ತತಃ - ಬಳಿಕ, ರಾಮಸ್ಯ - ಶ್ರೀರಾಮನ, ಆಕಾರಸೂಚಿತಂ - ಆಕಾರದಿಂದ ಸೂಚಿಸಲ್ಪಟ್ಟ ಛಂದಂ - ಅಭಿಪ್ರಾಯವನ್ನು, ವಿಜ್ಞಾಯ - ತಿಳಿದು, ರಾಮಸ್ಯ - ಶ್ರೀರಾಮನ, ಮತೇ - ಅಭಿಪ್ರಾಯದಂತೆ, ಸ್ಥಿತಃ - ಇರುವವನಾಗಿ, ಚಿತಾಂ - ಚಿತಿಯನ್ನು, ಚಕಾರ-ಮಾಡಿದನು. ॥ ೨೧ ॥ ತದಾ ಆಗ, ವೈದೇಹೀ-ಸೀತಾದೇವಿಯು, ಅಧೋಮುಖಂ- ತಲೆ ಬಾಗ್ಗಿಸಿ, ರಾಮಂ - ಶ್ರೀರಾಮನನ್ನು, ಶನೈಃ - ಮೆಲ್ಲನೆ, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕೃತ್ವಾ - ಮಾಡಿ, ದೀಪ್ಯಮಾನಂ - ಪ್ರಜ್ವಲಿಸುತ್ತಿರುವ, ಹುತಾಶನಂ - ಅಗ್ನಿಯನ್ನು ಕುರಿತು, ಉಪಾಸರ್ಪತ - ಬಂದಳು. ॥೨೨॥ ಮೈಥಿಲೀ - ಸೀತಾದೇವಿಯು, ದೇವತಾಭ್ಯಶ್ಚ - ದೇವತೆಗಳಿಗೋಸುಗವೂ, ಬ್ರಾಹ್ಮಣೇಭ್ಯಶ್ಚ - ಬ್ರಾಹ್ಮಣರಿಗಾಗಿಯೂ, ಪ್ರಣಮ್ಯ - ನಮಸ್ಕರಿಸಿ, ಬದ್ಧಾಂ....ಟಾ - ಕೈಮುಗಿದು, ಅಗ್ನಿಸಮೀಪತಃ - ಯಜ್ಞೇಶ್ವರನ ಬಳಿಯಲ್ಲಿ, ಇದಂ - ಈ ಮಾತನ್ನು, ಉವಾಚ - ಹೇಳಿದಳು.

ತ್ಯಕ್ತೆಯಾದ ನಾನು ಹುತಾಶನನ್ನು ಪ್ರವೇಶಿಸುವುದೇ ಯೋಗ್ಯವು. (ಭರ್ತೃಪರಿತ್ಯಕ್ತೆಯರಾದವರಿಗೆ ಇದೇ ಗತಿಯು. ಆ ಗತಿಯನ್ನೇ ನಾನು ಹೊಂದುವೆನು)" ಸೀತಾದೇವಿಯು ಆಡಿದ ನುಡಿಗಳನ್ನು ಕೇಳಿ ಶತ್ರುಮರ್ದನನಾದ ಲಕ್ಷ್ಮಣಸ್ವಾಮಿಯು ಕ್ರೋಧಾವಿಷ್ಟನಾಗಿ ಶ್ರೀರಾಮನ ಮುಖವನ್ನು ನೋಡಿದನು. ॥ ೧೬-೨೦ ॥ ಮಹಾ ಪರಾಕ್ರಮಿಯಾದ ಆತನು ಅಣ್ಣನ ಮುಖವನ್ನು ಕಂಡೊಡನೆಯೇ ಆತನ ಮುಖಭಂಗಿಯನ್ನೂ, ಇಂಗಿತವನ್ನೂ ತತ್ಪ್ರಯುಕ್ತವಾದ ಚೇಷ್ಟೆಯನ್ನೂ ಕಂಡುಕೊಂಡು ಆತನ ಅಪೇಕ್ಷೆಯಂತೆ ಸೀತಾದೇವಿಗೋಸ್ಕರ ಚಿತಿಯನ್ನೇರ್ಪಡಿಸಿದನು. (ವಾನರರು ತಂದ ಅಗರು, ಶ್ರೀಗಂಧವೇ ಮೊದಲಾದ ಕಾಷ್ಟಗಳಿಂದ ಸೌಮಿತ್ರಿಯು ಚಿತಿಯನ್ನು ಮಾಡಿದನು.) ಆ ತರುವಾಯ ಸೀತಾದೇವಿಯು ತಲೆ ತಗ್ಗಿಸಿ ಕುಳಿತಿದ್ದ ಶ್ರೀರಾಮಚಂದ್ರನಿಗೆ ಮೆಲ್ಲಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಆ ತರುವಾಯ ಧಗಧಗನುರಿಯುತ್ತಿರುವ ಯಜ್ಞೇಶ್ವರನ ಬಳಿಗೈದಿದಳು. ಆ ಸಮಯದಲ್ಲಿ ಮಿಥಿಲೇಶ್ವರನ ಪುತ್ರಿಯಾದ ಆ ದೇವಿಯು ದೇವತೆಗಳಿಗೂ, ಬ್ರಾಹ್ಮಣರಿಗೂ ನಮಸ್ಕರಿಸಿ ಕೈಗ

ಪನಃ ॥ ೨೩ ॥ "ಯಥಾ ಮೇ ಹೃದಯಂ ನಿತ್ಯಂ ನಾಪಸರ್ಪತಿ ರಾಘವಾತ್ । ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ॥ ೨೪ ॥ ಯಥಾ ಮಾಂ ಶುದ್ಧ ಚಾರಿತ್ರಾಂ ದುಷ್ಟಾಂ ಜಾನಾತಿ ರಾಘವಃ । ತಥಾ ಲೋಕಸ್ಯ ಸಾಕ್ಷೀ ಮಾಂ ಸರ್ವತಃ ಪಾತು ಪಾವಕಃ ॥ ೨೫ ॥ ಕರ್ಮಣಾ ಮನಸಾ ವಾಚಾ ಯಥಾ ನಾತಿಚರಾಮ್ಯಹಂ । ರಾಘವಂ ಸರ್ವಧರ್ಮಜ್ಞಂ ತಥಾ ಮಾಂ ಪಾತು ಪಾವಕಃ ॥ ೨೬ ॥ ಆದಿತ್ಯೋ ಭಗವಾನ್ ವಾಯುರ್ದಿಶಶ್ಚಂದ್ರಸ್ತಥೈವಚ । ಅಹಶ್ಚಾಪಿ ತಥಾ ಸಂಧ್ಯೇ ರಾತ್ರಿಶ್ಚ

॥ ೨೩ ॥ ಮೇ - ನನ್ನ, ಹೃದಯಂ - ಮನಸ್ಸು, ಯಥಾ - ಹೇಗೆ, ರಾಘವಾತ್ - ಶ್ರೀರಾಮನ ದೆಸೆಯಿಂದ, ನಿತ್ಯಂ - ನಿರಂತರವೂ, ನಾಪಸರ್ಪತಿ - ಹೊರಗೆ ಹೋಗದಿರುತ್ತಿದ್ದಿಯೋ, ತಥಾಚೇತ್ - ಹಾಗಿದ್ದುದೇ ಆದರೆ, ಲೋಕಸ್ಯ - ಲೋಕಕ್ಕೆ, ಸಾಕ್ಷೀ - ಸಾಕ್ಷೀಭೂತನಾದ, ಪಾವಕಃ - ಯಜ್ಞೇಶ್ವರನು, ಮಾಂ - ನನ್ನನ್ನು, ಸರ್ವತಃ - ಸರ್ವಾಂಶಗಳಲ್ಲಿಯೂ, ಪಾತು - ಸಂರಕ್ಷಿಸಲಿ. ॥ ೨೪ ॥ ರಾಘವಃ - ಶ್ರೀರಾಮನು, ಯಥಾ - ಹೇಗೆ, ಶುದ್ಧಚಾರಿತ್ರಾಂ - ಪರಿಶುದ್ಧವಾದ ನಡತೆಯುಳ್ಳ, ಮಾಂ - ನನ್ನನ್ನು, ದುಷ್ಟಾಂ - ದೋಷಯುಕ್ತಳನ್ನಾಗಿ, ಜಾನಾತಿ - ತಿಳಿದಿರುವನೋ, ತಥಾಚೇತ್- ಹಾಗಾದರೆ, ಲೋಕಸ್ಯ - ಲೋಕಕ್ಕೂ, ಸಾಕ್ಷೀ - ಪ್ರತ್ಯಕ್ಷವಾಗಿ ನೋಡುತ್ತಿರುವ, ಪಾವಕಃ - ಯಜ್ಞೇಶ್ವರನು, ಮಾಂ - ನನ್ನನ್ನು, ಸರ್ವತಃ - ಎಲ್ಲಾ ಅಂಶಗಳಲ್ಲಿಯೂ, ಪಾತು - ಸಂರಕ್ಷಣೆ ಮಾಡಲಿ. ॥ ೨೫ ॥ ಯಥಾ - ಹೇಗೆ, ಅಹಂ - ನಾನು, ಕರ್ಮಣಾ - ಕ್ರಿಯೆಯಿಂದಲೂ, ಮನಸಾ - ಮನಸ್ಸಿನಿಂದಲೂ, ವಾಚಾ - ವಾಕ್ಕಿನಿಂದಲೂ, ಸರ್ವಧರ್ಮಜ್ಞಂ - ಸಕಲ ಧರ್ಮಗಳನ್ನು ತಿಳಿದಿರುವ, ರಾಘವಂ - ಶ್ರೀರಾಮನನ್ನು, ನಾತಿಚರಾಮಿ - ಅತಿಕ್ರಮಿಸದೆ ಇದ್ದೇನೆಯೋ, ತಥಾಚೇತ್ - ಹಾಗೆಯೇ ಇದ್ದುದಾದರೆ, ಪಾವಕಃ - ಅಗ್ನಿಯು, ಮಾಂ - ನನ್ನನ್ನು, ಸರ್ವತಃ - ಸರ್ವಾಂಶಗಳಲ್ಲಿಯೂ, ಪಾತು - ಸಂರಕ್ಷಿಸಲಿ. ॥ ೨೬ ॥ ಭಗವಾನ್ - ಪೂಜ್ಯನಾದ, ಆದಿತ್ಯಃ - ಸೂರ್ಯನು, ವಾಯುಃ - ವಾಯುದೇವನು, ದಿಶಃ - ದಿಗಭಿಮಾನಿದೇವತೆಗಳೂ, ಚಂದ್ರಃ - ಚಂದ್ರನೂ, ತಥಾ - ಹಾಗೆಯೇ, ಸಂಧ್ಯೇ - ಪ್ರಾತಸ್ಸಾಯಂ ಸಂಧ್ಯಾಭಿಮಾನಿದೇವತೆಗಳೂ, ರಾತ್ರಿಶ್ಚ - ರಾತ್ರಿಯ ಅಭಿಮಾನದೇವತೆಯೂ, ತಥಾ - ಹಾಗೆಯೇ, ಪೃಥಿವೀಚ - ಭೂದೇವತೆಯೂ, ಅನ್ಯೇಪಿ - ಧರ್ಮದೇವತೆಯೇ ಮುಂತಾದ ಇತರ ದೇವತೆಗಳೂ, ಯಥಾ - ಹೇಗೆ, ಚಾರಿ....ತಾಂ - ಒಳ್ಳೆಯ ನಡತೆ

ಳನ್ನು ಜೋಡಿಸಿಕೊಂಡು ಯಜ್ಞೇಶ್ವರನ ಸಮೀಪದಲ್ಲಿ ಈ ಮಾತುಗಳನ್ನಾಡಿ ಪ್ರಾರ್ಥಿಸಿದಳು. "ನನ್ನ ಮನಸ್ಸು ಯಾವಾಗಲೂ ಶ್ರೀರಾಮಮೂರ್ತಿಯಿಂದ ಅತ್ತಿತ್ತ ಕದಲದಿರುವುದೇ ನಿಜವಾಗಿದ್ದರೆ ಲೋಕಸಾಕ್ಷಿಯಾಗಿರುವ ಈ ಯಜ್ಞೇಶ್ವರನು ನನ್ನನ್ನು ಕಾಪಾಡಲಿ. ಪರಿಶುದ್ಧ ಚಾರಿತ್ರೆಯಾದ ನನ್ನನ್ನು ಶ್ರೀರಾಮನು ದುಷ್ಟೆಯನ್ನಾಗಿ ಭಾವಿಸಿರುವಂತೆ ನಾನಿರದೆ ಪರಿಶುದ್ಧಚಾರಿತ್ರೆಯಾಗಿರುವುದೇ ನಿಜವಾದರೆ ಲೋಕಸಾಕ್ಷಿಯಾದ ಯಜ್ಞೇಶ್ವರನು ಎಲ್ಲ ರೀತಿಗಳಲ್ಲಿಯೂ ನನ್ನನ್ನು ಕಾಪಾಡಲಿ. ಎಲ್ಲ ಧರ್ಮಗಳನ್ನೂ ಅರಿತಿರುವ ಶ್ರೀರಾಮಮೂರ್ತಿಯನ್ನು ನಾನು ನಡತೆಯಿಂದಲೂ, ನುಡಿಯಿಂದಲೂ, ಮೀರಿ ನಡೆಯದಿರುವಂತೆ ಪೂಜ್ಯನಾದ ಯಜ್ಞೇಶ್ವರನು ನನ್ನನ್ನು ಕಾಪಾಡಲಿ. ಸೂರ್ಯಭಗವಂತನೂ ಸರ್ವತ್ರವ್ಯಾಪಕನಾದ ಈ ವಾಯುದೇವನೂ, ಚಂದ್ರನೂ, ಹಗಲಿರುಳುಗಳೂ, ತ್ರಿಸಂಧ್ಯೆಗಳೂ ನನ್ನನ್ನು ಪರಿಶುದ್ಧೆಯನ್ನಾಗಿ ಹೇಗೆ ಭಾವಿಸುವರೋ ಹಾಗೆ ಪೂಜ್ಯನಾದ ಲೋಕಸಾಕ್ಷಿಯಾದ ಯಜ್ಞೇಶ್ವರನು ನನ್ನನ್ನು ಕಾಪಾಡಲಿ!

ಪೃಥಿವೀ ತಥಾ । ಯಥಾಽನ್ಯೇಪಿ ವಿಜಾನಂತಿ ತಥಾ ಚಾರಿತ್ರಸಂಯುತಾಂ" ॥೨೭॥ ಏವಮುಕ್ತ್ವಾತು ವೈದೇಹೀ ಪರಿಕ್ರಮ್ಯ ಹುತಾಶನಂ । ವಿವೇಶ ಜ್ವಲನಂ ದೀಪ್ತಂ ನಿಸ್ಸಂಗೇನಾಂತರಾತ್ಮನಾ ॥ ೨೮ ॥ ಜನಸ್ಸಸುಮಹಾಂಸ್ತ್ರಸ್ತೋ ಬಾಲವೃದ್ಧಸಮಾಕುಲಃ । ದದರ್ಶ ಮೈಥಿಲೀಂ ತತ್ರ ಪ್ರವಿಶಂತೀಂ ಹುತಾಶನಂ ॥ ೨೯ ॥ ಸಾ ತಪ್ತನವ ಹೇಮಾಭಾ ತಪ್ತಕಾಂಚನಭೂಷಣಾ । ಪಪಾತ ಜ್ವಲನಂ ದೀಪ್ತಂ ಸರ್ವಲೋಕಸ್ಯ ಸನ್ನಿಧೌ ॥ ೩೦ ॥ ದದೃಶುಸ್ತಾಂ ಮಹಾಭಾಗಾಂ ಪ್ರವಿಶಂತೀಂ ಹುತಾಶನಂ । ಸೀತಾಂ ಕೃತ್ಸ್ನಾಸ್ತ್ರಯೋ ಲೋಕಾಃ ಪುಣ್ಯಾಮಾಜ್ಯಾಹುತೀಮಿವ ॥ ೩೧ ॥ ಪ್ರಚು

ಯಿಂದ ಕೂಡಿರುವಳನ್ನಾಗಿ, ವಿಜಾನಂತಿ - ತಿಳಿದುಕೊಂಡಿದ್ದಾರೋ, ತಥಾಚೇತ್ - ಹಾಗಿದ್ದುದೇ ಆದರೆ, ಪಾವಕಃ - ಅಗ್ನಿಯು, ಮಾಂ - ನನ್ನನ್ನು, ಸರ್ವತಃ - ಸರ್ವಾಂಶಗಳಲ್ಲಿಯೂ, ಪಾತು - ಸಂರಕ್ಷಿಸಲಿ. ॥೨೭॥ ವೈದೇಹೀ-ಸೀತಾದೇವಿಯು, ಏವಂ-ಈ ಪರಿಯಾಗಿ, ಉಕ್ತ್ವಾತು-ಹೇಳಿಯಾದರೆ, ಹುತಾಶನಂ - ಯಜ್ಞೇಶ್ವರನನ್ನು, ಪರಿಕ್ರಮ್ಯ - ಪ್ರದಕ್ಷಿಣೆಮಾಡಿ, ನಿಸ್ಸಂಗೇನ - ದೇಹಾಭಿಮಾನ ರಹಿತವಾದ, ಅಂತರಾತ್ಮನಾ - ಮನಸ್ಸಿನಿಂದ, ದೀಪ್ತಂ - ಪ್ರಜ್ವಲಿಸುತ್ತಿರುವ, ಜ್ವಲನಂ - ಅಗ್ನಿಯನ್ನು, ವಿವೇಶ - ಪ್ರವೇಶ ಮಾಡಿದಳು. ॥ ೨೮ ॥ ಸುಮಹಾ - ಬಹಳವಾದ, ಬಾಲ....ಲಃ - ಹುಡುಗರು ಮುದುಕರುಗಳಿಂದ ತುಂಬಿರುವ, ಸಜನಃ - ಆ ಜನವು, ತ್ರಸ್ತಃ - ಭಯಗೊಂಡು, ತತ್ರ - ಆ ಸ್ಥಳದಲ್ಲಿ, ಹುತಾಶನಂ - ಅಗ್ನಿಯನ್ನು, ಪ್ರವಿಶಂತೀಂ - ಪ್ರವೇಶ ಮಾಡುತ್ತಿರುವ, ಮೈಥಿಲೀಂ - ಸೀತಾದೇವಿಯನ್ನು, ದದರ್ಶ - ನೋಡಿತು. ॥೨೯॥ ಸರ್ವಲೋಕಸ್ಯ - ಸಮಸ್ತ ಜನರ, ಸನ್ನಿಧೌ - ಸಾನ್ನಿಧ್ಯದಲ್ಲಿ, ತಪ್ತ....ಭಾ - ಪುಟಪಾಕಶೋಧಿತವಾದ ಚಿನ್ನದ ಕಾಂತಿಯಂತೆ ದೇಹ ಕಾಂತಿಯುಳ್ಳ, ತಪ್ತ....ಣಾ - ಅಪರಂಜಿಯ ಒಡವೆಗಳುಳ್ಳ, ಸಾ - ಆ ಸೀತಾದೇವಿಯು, ದೀಪ್ತಂ - ಪ್ರಜ್ವಲಿಸುತ್ತಿರುವ, ಜ್ವಲನಂ - ಅಗ್ನಿಯಲ್ಲಿ, ಪಪಾತ - ಬಿದ್ದಳು. ॥೩೦॥ ಮಹಾಭಾಗಾಂ - ಮಹಾ ಪುಣ್ಯವಂತಳಾದ, ಹುತಾಶನಂ - ಅಗ್ನಿಯನ್ನು, ಪುಣ್ಯಾಂ - ಪುಣ್ಯಕರವಾದ, ಆಜ್ಯಾಹುತೀಮಿವ - ಮಂತ್ರಪೂತವಾದ ಆಜ್ಯಾಹುತಿಯಂತೆ, ಪ್ರವಿಶಂತೀಂ - ಪ್ರವೇಶ ಮಾಡುತ್ತಿರುವ, ತಾಂಸೀತಾಂ - ಆ ಸೀತಾದೇವಿಯನ್ನು, ಕೃತ್ಸ್ನಾಃ - ಸಮಸ್ತಗಳಾದ, ತ್ರಯೋಲೋಕಾಃ - ಮೂರೂ ಲೋಕಗಳಲ್ಲಿ ವಾಸ

(ಶ್ರೀರಾಮನು ತಿಳಿದಿರುವಂತೆ ನಾನು ದುಷ್ಟೆಯಲ್ಲದಿದ್ದರೆ, ನಡೆನುಡಿಗಳಿಂದಲೂ, ಏಕೆ ತ್ರಿಕರಣ ಶುದ್ಧವಾಗಿ ನಾನು ಶ್ರೀರಾಮನಿಗೆ ಅನುರೂಪಳಾಗಿದ್ದುಕೊಂಡು ನಡೆದುಕೊಂಡಿರುವುದೇ ನಿಜವಾಗಿದ್ದರೆ, ಸೂರ್ಯನೂ, ವಾಯುವೂ, ಚಂದ್ರನೂ, ಪ್ರಾತಃಸಾಯಂಸಂಧ್ಯೆಗಳೂ, ಹಗಲಿರುಳುಗಳೂ ನನ್ನನ್ನು ಪರಿಶುದ್ಧೆಯೆಂದು ಭಾವಿಸಿರುವುದೇ ದಿಟವಾಗಿದ್ದರೆ ಲೋಕ ಸಾಕ್ಷಿಯೂ, ಪರಮಪೂಜ್ಯನೂ ಆದ ಈ ಪಾವಕನು ನನ್ನನ್ನು ಕಾಪಾಡಲಿ!)" ॥ ೨೧–೨೮ ॥ ಮಹಾ ಪತಿವ್ರತೆಯಾದ ಸೀತಾದೇವಿಯು ಈ ರೀತಿ ನುಡಿದ ತರುವಾಯ ಯಜ್ಞೇಶ್ವರನಿಗೆ ಮತ್ತೊಮ್ಮೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ನಿಶ್ಚಂಚಲವಾದ ಹೃದಯದಿಂದ ಧಗಧಗನೆ ಉರಿಯುತ್ತಿರುವ ಆ ಯಜ್ಞೇಶ್ವರನನ್ನು ಪ್ರವೇಶಿಸಿದಳು. ಆಗ ಅಲ್ಲಿದ್ದ ಸ್ತ್ರೀಬಾಲವೃದ್ಧರಾದಿಯಾದ ಸಮಸ್ತ ಜನರೂ ಹಾಹಾಕಾರ ಮಾಡಿದರು. ಹೀಗೆ, ಪುಟಪಾಕಪರಿಶೋಧಿತವಾದ ಸುವರ್ಣಾಭರಣಭೂಷಿತೆಯಾದ ಆ ದೇವಿಯು ಎಲ್ಲರ ಮುಂದೆಯೂ ಉರಿಯುತ್ತಿರುವ ಯಜ್ಞೇಶ್ವರನಲ್ಲಿ ಬಿದ್ದಳು. ಆಗ ಸಮಸ್ತ ಭೂತಗಳು ಮಾತ್ರವಲ್ಲದೆ ಮೂರು ಲೋಕ

ಕ್ರುಶುಸ್ಸ್ತ್ರಿಯಸ್ಸರ್ವಾಸ್ತಾಂ ದೃಷ್ಟ್ವಾ ಹವ್ಯವಾಹನೇ । ಪತಂತೀಂ ಸಂಸ್ಕೃತಾಂ ಮಂತ್ರೈರ್ವಸೋರ್ಧಾರಾಮಿವಾಧ್ವರೇ ॥ ೩೨ ॥ ದದೃಶುಸ್ತಾಂ ತ್ರಯೋ ಲೋಕಾ ದೇವಗಂಧರ್ವದಾನವಾಃ । ಶಪ್ತಾಂ ಪತಂತೀಂ ನಿರಯೇ ತ್ರಿದಿವಾದ್ದೇವತಾಮಿವ ॥ ೩೩ ॥

ತಸ್ಯಾಮಗ್ನಿಂ ವಿಶಂತ್ಯಾಂತು ಹಾಹೇತಿ ವಿಪುಲಸ್ಸ್ವನಃ ।
ರಕ್ಷಸಾಂ ವಾನರಾಣಾಂಚ ಸಂಬಭೂವಾದ್ಭುತೋಪಮಃ ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನವಿಂಶತ್ಯುತ್ತರಶತತಮಸ್ಸರ್ಗಃ

ಮಾಡುವ ಜನರು, ದದೃಶುಃ - ಕಂಡರು. ॥ ೩೧ ॥ ಸರ್ವಾಃ - ಸಮಸ್ತರಾದ, ಸ್ತ್ರೀಯಃ - ಹೆಂಗಸರು, ಮಂತ್ರೈಃ - ಮಂತ್ರಗಳಿಂದ, ಅಧ್ವರೇ - ಯಾಗದಲ್ಲಿ, ಸಂಸ್ಕೃತಾಂ - ಸಂಸ್ಕಾರ ಮಾಡಲ್ಪಟ್ಟ, ವಸೋರ್ಧಾರಾಮಿವ - ಸಂತತವಾದ ಆಜ್ಯಧಾರೆಯಂತೆ, ಹವ್ಯವಾಹನೇ - ಅಗ್ನಿಯಲ್ಲಿ, ಪತಂತೀಂ - ಬೀಳುತ್ತಿರುವ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಪಚುಕ್ರುಶುಃ - ಅಳುತ್ತಿದ್ದರು. ॥ ೩೨ ॥ ತ್ರಯೋಲೋಕಾಃ - ಮೂರು ಲೋಕಗಳಲ್ಲಿರುವ ಜನರೂ, ದೇವ....ವಾಃ - ದೇವತೆಗಳೂ, ಗಂಧರ್ವರೂ, ದಾನವರೂ, ತ್ರಿದಿವಾತ್ - ಸ್ವರ್ಗದಿಂದ, ಶಪ್ತಾಂ - ಶಪಿಸಲ್ಪಟ್ಟು, ನಿರಯೇ - ನರಕದಲ್ಲಿ, ಪತಂತೀಂ - ಬೀಳುತ್ತಿರುವ, ದೇವತಾಮಿವ - ದೇವತೆಯನ್ನಂತೆ, ತಾಂ - ಆ ಸೀತಾದೇವಿಯನ್ನು, ದದೃಶಃ - ಕಂಡರು. ॥ ೩೩ ॥ ತಸ್ಯಾಂತು - ಆ ಸೀತಾದೇವಿಯಾದರೆ, ಅಗ್ನಿಂ - ಅಗ್ನಿಯನ್ನು, ವಿಶಂತ್ಯಾಂ - ಪ್ರವೇಶ ಮಾಡಿದವಳಾಗಲೂ, ರಕ್ಷಸಾಂ - ರಕ್ಕಸರ, ವಾನರಾಣಾಂಚ - ಕಪಿಗಳ, ಹಾಹೇತಿ - ಹಾಹಾ ಎಂಬ, ವಿಪುಲಃ - ದೊಡ್ಡದಾದ, ಸ್ವನಃ - ಕೋಲಾಹಲ ಧ್ವನಿಯು, ಅದ್ಭುತೋಪಮಃ - ಆಶ್ಚರ್ಯಕರವಾದುದಾಗಿ, ಸಂಬಭೂವ - ಹುಟ್ಟಿತು. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನವಿಂಶತ್ಯುತ್ತರಶತತಮಸ್ಸರ್ಗಃ.

ಗಳವರೂ ಪವಿತ್ರವಾದ ಆಜ್ಯಾಹುತಿಯಂತೆ ಯಜ್ಞೇಶ್ವರನಲ್ಲಿ ಬಿದ್ದ ಆ ಸೀತಾದೇವಿಯನ್ನು ಕಂಡರು. ಆ ದೇವಿಯು ಅಗ್ನಿಪ್ರವೇಶ ಮಾಡಿದುದನ್ನು ಕಂಡು ಅಲ್ಲಿದ್ದ ಹೆಂಗಸರೆಲ್ಲರೂ ದುಃಖಾಕ್ರಾಂತೆಯರಾಗಿ ಕೂಗಿಕೊಂಡರು. ಯಾಗಶಾಲೆಯ ಅಗ್ನಿಕುಂಡದಲ್ಲಿ ಮಂತ್ರಪೂರ್ವಕವಾಗಿ ಬೀಳುವ ಆಜ್ಯಧಾರೆಯಂತೆ ಯಜ್ಞೇಶ್ವರನಲ್ಲಿ ಬಿದ್ದ ಆ ದೇವಿಯನ್ನು ದೇವ ದಾನವ ಗಂಧರ್ವರಾದಿಯಾಗಿ ಮೂರು ಲೋಕಗಳವರೂ ಕಂಡರು. ದೇವಲೋಕದಿಂದ ತಿರಸ್ಕೃತೆಯಾಗಿ ನರಕಕ್ಕೆ ಬೀಳುತ್ತಿರುವ ದೇವತೆಯಂತೆ ಯಜ್ಞೇಶ್ವರನನ್ನು ಪ್ರವೇಶಿಸಿದ ಆ ಸೀತಾದೇವಿಯನ್ನು ಕಂಡು ಎಲ್ಲರೂ ಎಲ್ಲೆಡೆಗಳಲ್ಲಿಯೂ ಹಾಹಾಕಾರವನ್ನು ಮಾಡಿದರು. ಆ ಸಮಯದಲ್ಲಿಯೇ ರಾಕ್ಷಸರ ಮತ್ತು ವಾನರರ ಮಹಾದ್ಭುತವಾದ ಹಾಹಾಕಾರಗಳ ಧ್ವನಿಯೂ ಬಹಳವಾಗಿ ಕೇಳಿಸಿತು. ॥ ೨೯—೩೬ ॥

ಇಂತಿದು ಸೀತಾದೇವಿಯ ಅಗ್ನಿಪ್ರವೇಶ ವೃತ್ತಾಂತವೆಂಬ ನೂರ
ಹತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ವಿಂಶತ್ಯುತ್ತರಶತತಮಸ್ಸರ್ಗಃ

ತತೋಹಿ ದುರ್ಮನಾ ರಾಮಃ ಶ್ರುತ್ವೈವ ವದತಾಂ ಗಿರಃ । ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ ॥ ೧ ॥ ತತೋ ವೈಶ್ರವಣೋ ರಾಜಾ ಯಮಶ್ಚಾಽಮಿತ್ರಕರ್ಶನಃ । ಸಹಸ್ರಾಕ್ಷೋ ಮಹೇಂದ್ರಶ್ಚ ವರುಣಶ್ಚ ಪರಂತಪಃ ॥ ೨ ॥ ಷಡರ್ಧನಯನಃ ಶ್ರೀಮಾ ಮಹಾದೇವೋ ವೃಷಧ್ವಜಃ । ಕರ್ತಾ ಸರ್ವಸ್ಯ ಲೋಕಸ್ಯ ಬ್ರಹ್ಮಾ ಬ್ರಹ್ಮವಿದಾಂವರಃ ॥ ೩ ॥ ಏತೇ ಸರ್ವೇ ಸಮಾಗಮ್ಯ ವಿಮಾನೈಸ್ಸೂರ್ಯಸನ್ನಿಭೈಃ । ಆಗಮ್ಯ ನಗರೀಂ ಲಂಕಾಮಭಿಜಗ್ಮುಶ್ಚ ರಾಘವಂ

ತತಃ - ಬಳಿಕ, ಧರ್ಮಾತ್ಮಾ - ಧರ್ಮದಲ್ಲಿಯೇ ಮನವುಳ್ಳ, ರಾಮಃ - ಶ್ರೀರಾಮನು, ವದತಾಂ - ಹೇಳುತ್ತಿರುವ ರಾಕ್ಷಸವಾನರಾದಿಗಳ, ಗಿರಃ - ಮಾತುಗಳನ್ನು, ಶ್ರುತ್ವೈವ - ಕೇಳುತ್ತಲೇ, ದುರ್ಮನಾಃ - ದುಃಖಿತವಾದ ಮನವುಳ್ಳವನಾಗಿ, ಬಾಷ್ಪ....ನಃ - ಕಂಬನಿಗಳಿಂದ ಚಂಚಲವಾದ ಕಣ್ಣುಗಳುಳ್ಳವನಾಗಿ, ಮುಹೂರ್ತಂ - ಎರಡು ಘಳಿಗೆ ಕಾಲ, ದಧ್ಯೌ - ಆಲೋಚಿಸುತ್ತಿದ್ದನು. ॥೧॥ ತತಃ - ಬಳಿಕ, ರಾಜಾ - ಯಕ್ಷರಾಜನಾದ, ವೈಶ್ರವಣಃ - ಕುಬೇರನೂ, ಅಮಿತ್ರಕರ್ಶನಃ - ಶತ್ರುಸಂಹಾರಕನಾದ, ಯಮಶ್ಚ - ಯಮನೂ, ಸಹಸ್ರಾಕ್ಷಃ - ಸಹಸ್ರ ನೇತ್ರಗಳುಳ್ಳ, ಮಹೇಂದ್ರಶ್ಚ - ದೇವೇಂದ್ರನೂ, ಪರಂತಪಃ - ಶತ್ರುಸಂಹಾರಕನಾದ, ವರುಣಶ್ಚ - ವರುಣನೂ, ಷಡರ್ಧನಯನಃ - ಮೂರು ಕಣ್ಣುಗಳುಳ್ಳ, ಶ್ರೀಮಾ - ಸಂಪದ್ಯುಕ್ತನಾದ, ಮಹಾದೇವಃ - ದೇವದೇವೋತ್ತಮನಾದ, ವೃಷಭಧ್ವಜಃ - ಪರಮೇಶ್ವರನೂ, ಬ್ರಹ್ಮವಿದಾಂ - ಬ್ರಹ್ಮಜ್ಞಾನಿಗಳಲ್ಲಿ, ವರಃ - ಶ್ರೇಷ್ಠನಾದ, ಸರ್ವಸ್ಯ ಲೋಕಸ್ಯ - ಸಮಸ್ತ ಲೋಕಕ್ಕೂ, ಕರ್ತಾ - ಸೃಷ್ಟಿಕರ್ತನಾದ, ಬ್ರಹ್ಮಾ - ಚತುರ್ಮುಖ ಬ್ರಹ್ಮನೂ, ಏತೇಸರ್ವೇ - ಈ ಸಮಸ್ತರೂ, ಸೂರ್ಯಸನ್ನಿಭೈಃ - ಸೂರ್ಯನಿಗೆ ಸಮಾನಗಳಾದ, ವಿಮಾನೈಃ - ವಿಮಾನಗಳಿಂದ, ಲಂಕಾಂನಗರೀಂ - ಲಂಕಾಪಟ್ಟಣವನ್ನು ಕುರಿತು, ಸಮಾಗಮ್ಯ - ಬಂದು, ರಾಘವಂ - ಶ್ರೀರಾಮನನ್ನು, ಅಭಿಜಗ್ಮುಃ - ಎದುರುಗೊಂಡರು. ॥ ೩-೪ ॥ ತತಃ - ಬಳಿಕ, ತ್ರಿದಶ

ಆ ತರುವಾಯ ವಾಗ್ಮಿಶ್ರೇಷ್ಠನಾದ ಶ್ರೀರಾಮಮೂರ್ತಿಯು, ಸೀತೆಯ ಅಗ್ನಿ ಪ್ರವೇಶವನ್ನು ಸಾಕ್ಷಾತ್ತಾಗಿ ನೋಡಿ, ಪರಸ್ಪರವಾಗಿ ಆಡಿಕೊಳ್ಳುತ್ತಿರುವ ವಾನರರಾಕ್ಷಸರ ಮಾತುಗಳನ್ನು ಕೇಳಿ, ಮಹಾ ಧರ್ಮಾತ್ಮನಾದುದರಿಂದ ಒಂದು ಮುಹೂರ್ತಕಾಲ ಮನಸ್ಸು ಕದಡಿ ದುಃಖಾಧಿಕ್ಯದಿಂದ ಕಂಬನಿಯುಕ್ಕಿ ಚಂಚಲವಾದ ಕಣ್ಣುಗಳುಳ್ಳವನಾದನು. ಆ ಸಮಯದಲ್ಲಿಯೇ, ರಾಜರಾಜನಾದ ಕುಬೇರನೂ, ಪಿತೃದೇವತೆಗಳೊಡಗೂಡಿದ ಯಮ ಧರ್ಮರಾಯನೂ, ದೇವತೆಗಳೊಡೆಯನಾದ ಮಹೇಂದ್ರನೂ, ಶತ್ರುಮರ್ದನನಾದ ವರುಣ ದೇವನೂ, ಮಹಾ ತೇಜಸ್ಸಂಪನ್ನನಾದ ಮಹೇಶ್ವರನೂ, ಬ್ರಹ್ಮವೇತೃಗಳಲ್ಲಿ ಉತ್ತಮೋತ್ತಮನಾದ ಚತುರಾನನೂ ಸೂರ್ಯಕಾಂತಿಗೆ ಸಮಾನವಾದ ಕಾಂತಿಯುಳ್ಳ ವಿಮಾನಗಳಲ್ಲಿ ಕುಳಿತು ಲಂಕಾನಗರಕ್ಕೈತಂದು ಶ್ರೀರಾಮಮೂರ್ತಿಯಿದ್ದೆಡೆಗೆ ಬಂದರು. ಅವರೆಲ್ಲರೂ

॥ ೪ ॥ ತತಸ್ಸಹಸ್ತಾಭರಣಾನ್ ಪ್ರಗೃಹ್ಯ ವಿಪುಲಾನ್ ಭುಜಾನ್ । ಅಬ್ರುವಂಸ್ತ್ರಿದಶ ಶ್ರೇಷ್ಠಾಃ ಪ್ರಾಂಜಲಿಂ ರಾಘವಂ ಸ್ಥಿತಂ ॥ ೫ ॥ "ಕರ್ತಾ ಸರ್ವಸ್ಯ ಲೋಕಸ್ಯ ಶ್ರೇಷ್ಠೋ ಜ್ಞಾನವತಾಂ ವರಃ । ಉಪೇಕ್ಷಸೇ ಕಥಂ ಸೀತಾಂ ಪತಂತೀಂ ಹವ್ಯ ವಾಹನೇ ॥ ೬ ॥ ಕಥಂ ದೇವಗಣಶ್ರೇಷ್ಠಮಾತ್ಮಾನಂ ನಾವಬುಧ್ಯಸೇ । ಋತಧಾಮಾ ವಸುಃ ಪೂರ್ವಂ ವಸೂನಾಂ ತ್ವಂ ಪ್ರಜಾಪತಿಃ ॥೭॥ ತ್ರಯಾಣಾಂ ತ್ವಂ ಹಿ ಲೋಕಾ ನಾಮಾದಿಕರ್ತಾ ಸ್ವಯಂ ಪ್ರಭುಃ । ರುದ್ರಾಣಾಮಷ್ಟಮೋ ರುದ್ರಸ್ಸಾಧ್ಯಾನಾಮಸಿ

ಶ್ರೇಷ್ಠಾಃ - ಆ ದೇವೋತ್ತಮರು, ಸಹ....ಣಾನ್ - ಹಸ್ತಾಭರಣಗಳೊಡಗೂಡಿದ, ವಿಪುಲಾನ್ - ವಿಸ್ತಾರವಾದ, ಭುಜಾನ್ - ಭುಜಗಳನ್ನು, ಪ್ರಗೃಹ್ಯ - ಎತ್ತಿ, ಪ್ರಾಂಜಲಿಂ - ಕೈಜೋಡಿಸಿ, ಸ್ಥಿತಂ - ನಿಂತಿರುವ, ರಾಘವಂ - ಶ್ರೀರಾಮನನ್ನು ಕುರಿತು, ಅಬ್ರುವನ್ - ನುಡಿದರು. ॥ ೫ ॥ ಸರ್ವಸ್ಯ ಲೋಕಸ್ಯ - ಸಮಸ್ತ ಲೋಕಕ್ಕೂ, ಕರ್ತಾ - ಸೃಷ್ಟಿಕರ್ತನಾದ, ಶ್ರೇಷ್ಠ - ಸರ್ವೋತ್ಕೃಷ್ಟನಾದ, ಜ್ಞಾನವತಾಂ - ಭೂತಭವಿಷ್ಯದ್ವರ್ತಮಾನಗಳನ್ನರಿತವರಲ್ಲಿ, ವರಃ - ಶ್ರೇಷ್ಠನಾದ, ತ್ವಂ - ನೀನು, ಹವ್ಯ ವಾಹನೇ - ಅಗ್ನಿಯಲ್ಲಿ, ಪತಂತೀಂ - ಬೀಳುತ್ತಿರುವ, ಸೀತಾಂ - ಸೀತಾದೇವಿಯನ್ನು, ಕಥಂ - ಹೇಗೆ, ಉಪೇಕ್ಷಸೇ - ಉಪೇಕ್ಷೆ ಮಾಡುವೆ? ॥ ೬ ॥ ದೇವಗಣಶ್ರೇಷ್ಠ - ದೇವಗಣಾಧಿಪತಿಯೇ, ಆತ್ಮಾನಂ - ನಿನ್ನನ್ನು, ಕಥಂನಾವಬುಧ್ಯಸೇ - ತಿಳಿದುಕೊಳ್ಳದಿರುವೆಯೇಕೆ, ತ್ವಂ - ನೀನು, ಪೂರ್ವಂ- ಮೊದಲು, ವಸೂನಾಂ - ಅಷ್ಟವಸುಗಳಲ್ಲಿ, ಋತಧಾಮಾ - ಋತಧಾಮನೆಂಬ, ವಸುಃ - ಮೊದಲನೆಯ ವಸುವಾಗಿದ್ದೆ, ತ್ವಂ - ನೀನು, ತ್ರಯಾಣಾಂಲೋಕಾನಾಂ - ಮೂರು ಲೋಕಗಳ, ಆದಿಕರ್ತಾ - ಮೊದಲನೆಯ ಸೃಷ್ಟಿಕರ್ತನು, ಸ್ವಯಂಪ್ರಭುಃ - ಸ್ವತಂತ್ರಸ್ವಾಮಿಯು, ರುದ್ರಾಣಾಂ - ಎಂಟು ಜನ ರುದ್ರರಲ್ಲಿ, ಅಷ್ಟಮಃ - ಎಂಟನೆಯವನಾದ, ಮಹಾದೇವಃ - ಮಹಾದೇವನೆಂಬ ಹೆಸರುಳ್ಳ, ರುದ್ರಃ - ಸಮಸ್ತರ ದುಃಖಗಳನ್ನೂ ಪರಿಹರಿಸುವ ಪರಮೇಶ್ವರನು, ಸಾಧ್ಯಾನಾಂ - ಹನ್ನೆರಡುಮಂದಿ ಸಾಧ್ಯರಲ್ಲಿ, ಪಂಚಮಃ - ಐದನೆಯವನಾದ ವೀರ್ಯವಂತನೆಂಬವನು, ಅಸಿ - ಆಗಿದ್ದೀಯೆ, ಅಶ್ವಿನೌ ಚಾಪಿ - ಅಶ್ವಿನೀದೇವತೆಗಳು, ತೇ - ನಿನಗೆ, ಕರ್ಣೌ - ಶ್ರೋತ್ರಗಳು, ಚಂದ್ರಸೂರ್ಯೌ - ಚಂದ್ರ ಸೂರ್ಯರು, ತೇ - ನಿನಗೆ, ಚಕ್ಷುಷೀ - ಕಣ್ಣುಗಳು, ಪರಂತಪ - ಶತ್ರುಸಂಹಾರಕನೇ, ತ್ವಂ -

---

ಹಸ್ತಾಭರಣಗಳೊಡಗೂಡಿದ ದೀರ್ಘವಾದ ತಮ್ಮ ಭುಜಗಳನ್ನು ಮುಂಚಾಚಿ, ಕೈಜೋಡಿಸಿ ಕೊಂಡು ನಿಂತಿರುವ ಶ್ರೀರಾಮನನ್ನುಕುರಿತು ಹೀಗೆಂದರು.॥೧–೫॥ "ಎಲೈಶ್ರೀರಾಮಚಂದ್ರನೇ! ನೀನು ಈ ಲೋಕಕ್ಕೆಲ್ಲ ಕರ್ತನಾದವನು; ಜ್ಞಾನಿಗಳಾದವರಲ್ಲಿ ಶ್ರೇಷ್ಠನು; ಎಲ್ಲಕ್ಕೂ ಪ್ರಭುವಾದವನು. ಇಂಥ ನೀನು ನಿನ್ನ ಪತ್ನಿಯಾದ ಸೀತಾದೇವಿಯು ಬೆಂಕಿಯಲ್ಲಿ ಬೀಳು ತ್ತಿದ್ದರೂ ಉಪೇಕ್ಷೆಮಾಡುತ್ತಿರುವೆಯೇಕೆ? ಎಲೈ ರಾಮಮೂರ್ತಿಯೇ! ನೀನು ದೇವಸಮೂಹ ಗಳೆಲ್ಲಕ್ಕೂ ಶ್ರೇಷ್ಠನಾಗಿದ್ದರೂ, ದೇವಾಧಿದೇವನಾಗಿದ್ದರೂ ಹೀಗೇಕೆ ನಿನ್ನನ್ನು ನೀನೇ ತಿಳಿಯ ದಿರುವೆ? ಎಲೈ ಪ್ರಭುವೇ! ನೀನು ಹಿಂದಿನ ಕಲ್ಪದಲ್ಲಿ ಅಷ್ಟವಸುಗಳಲ್ಲಿ ಋತುಧಾಮನೆಂಬ ವಸುವಾಗಿದ್ದೆಯಲ್ಲದೆ ಮೂರೂ ಲೋಕಗಳಲ್ಲಿರುವ ರೂಪಾದಿಗಳಿಗೆ ಸೃಷ್ಟಿಕರ್ತನಾದ ಪ್ರಜಾ ಪತಿಯಾಗಿಯೂ, ಸ್ವಯಂಪ್ರಭುವಾಗಿಯೂ ಇದ್ದೆ. ನೀನು ರುದ್ರರಲ್ಲಿ ಎಂಟನೆಯ ರುದ್ರನು. ಸಾಧ್ಯದೇವತೆಗಳಲ್ಲಿ ಐದನೆಯವನಾದ ವೀರ್ಯವಂತನೆಂಬವನು. ಎಲೈ ಮಹಾತ್ಮನೇ! ನಿನಗೆ ಅಶ್ವಿನೀದೇವತೆಗಳೇ ಕಿವಿಗಳು. ಸೂರ್ಯಚಂದ್ರರೇ ನಿನ್ನ ನೇತ್ರಗಳು. ಎಲೈ ಪರಂತಪನೇ!

ಪಂಚಮಃ ॥ ೮ ॥ ಅಶ್ವಿನೌಚಾಪಿ ತೇ ಕರ್ಣೌ ಚಂದ್ರಸೂರ್ಯೌಚ ಚಕ್ಷುಷೀ । ಅಂತೇ ಚಾದೌಚ ಲೋಕಾನಾಂ ದೃಶ್ಯಸೇ ತ್ವಂ ಪರಂತಪ ! । ಉಪೇಕ್ಷಸೇಚ ವೈದೇಹೀಂ ಮಾನುಷಃ ಪ್ರಾಕೃತೋ ಯಥಾ" ॥೯॥ ಇತ್ಯುಕ್ತೋ ಲೋಕಪಾಲೈಸ್ತೈಸ್ಸ್ವಾಮೀ ಲೋಕಸ್ಯ ರಾಘವಃ । ಅಬ್ರವೀತ್ತ್ರಿದಶಶ್ರೇಷ್ಠಾನ್ ರಾಮೋ ಧರ್ಮಭೃತಾಂ ವರಃ ॥೧೦॥ "ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ । ಯೋಽಹಂ ಯಸ್ಯ ಯತಶ್ಚಾಹಂ ಭಗವಾಂಸ್ತದ್ಬ್ರವೀತು ಮೇ" ॥ ೧೧ ॥ ಇತಿ ಬ್ರುವಂತಂ ಕಾಕುತ್ಸ್ಥಂ ಬ್ರಹ್ಮಾ ಬ್ರಹ್ಮವಿದಾಂ ವರಃ । ಅಬ್ರವೀಚ್ಛೃಣು ಮೇ ರಾಮ ! ಸತ್ಯಂ

ನೀನು, ಲೋಕಾನಾಂ - ಮೂರು ಲೋಕಗಳ, ಆದೌ - ಸೃಷ್ಟಿಕಾಲದಲ್ಲಿಯೂ, ಅಂತೇಚ - ಪ್ರಳಯ ಕಾಲದಲ್ಲಿಯೂ, ದೃಶ್ಯಸೇ - ಕಾಣಲ್ಪಡುತ್ತೀಯೆ, ಪ್ರಾಕೃತಃ - ಪ್ರಾಕೃತನಾದ, ಮಾನುಷೋಯಥಾ - ಮನುಷ್ಯನಂತೆ, ವೈದೇಹೀಂ - ಸೀತಾದೇವಿಯನ್ನು, (ಕಥಂ) ಉಪೇಕ್ಷಸೇ - ಉಪೇಕ್ಷಿಸುವೆಯೆಂತು ? ॥ ೮-೯ ॥ ಇತಿ - ಈ ಪರಿಯಾಗಿ, ತೈರ್ಲೋಕಪಾಲಕೈಃ - ಆ ದಿಕ್ಪಾಲಕರಿಂದ, ಉಕ್ತಃ - ಹೇಳಲ್ಪಟ್ಟ, ಲೋಕಸ್ಯ-ಜಗತ್ತಿಗೆ, ಸ್ವಾಮೀ-ನಾಯಕನಾದ, ರಾಘವಃ-ರಘುವಂಶೋತ್ಪನ್ನನಾದ, ಧರ್ಮಭೃತಾಂ-ಧರ್ಮಿಷ್ಠರಿಗೆಲ್ಲ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ತ್ರಿದಶಶ್ರೇಷ್ಠಾನ್ - ಉತ್ತಮರಾದ ಆ ದೇವತೆಗಳನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೦ ॥ ಆತ್ಮಾನಂ - ನನ್ನನ್ನು, ಮಾನುಷಂ - ಮನುಷ್ಯನನ್ನಾಗಿಯೂ, ರಾಮಂ-ಶ್ರೀರಾಮನೆಂಬ ಹೆಸರುಳ್ಳವನನ್ನಾಗಿಯೂ, ದಶರಥಾತ್ಮಜಂ-ದಶರಥ ರಾಯನ ಮಗನನ್ನಾಗಿಯೂ, ಮನ್ಯೇ ತಿಳಿದಿದ್ದೇನೆ, ಅಹಂ-ನಾನು, ಯಃ-ಯಾವನೋ, ಯಸ್ಯ-ಯಾವವನ ಸಂಬಂಧಿಯೋ, (ಅಹಂ-ನಾನು,) ಯತಶ್ಚ - ಯಾವ ಪ್ರಯೋಜನನಿಮಿತ್ತವಾಗಿ ಹುಟ್ಟಿದನೋ, ತತ್ - ಅದನ್ನು, ಭಗವಾನ್ - ಪೂಜ್ಯನಾದ ಈ ಬ್ರಹ್ಮನು, ಮೇ - ನನಗೆ, ಬ್ರವೀತು - ಹೇಳಲಿ. ॥ ೧೧ ॥ ಇತಿ - ಈ ಪರಿಯಾಗಿ, ಬ್ರುವಂತಂ - ಹೇಳುತ್ತಿರುವ, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ಬ್ರಹ್ಮವಿದಾಂ - ಬ್ರಹ್ಮಜ್ಞಾನಿಗಳಲ್ಲಿ, ವರಃ - ಶ್ರೇಷ್ಠನಾದ, ಬ್ರಹ್ಮಾ - ಚತುರ್ಮುಖನು, ಹೇ ರಾಮ - ಎಲೈ ಶ್ರೀರಾಮನೇ, ಸತ್ಯಪರಾಕ್ರಮ - ಸಫಲವಾದ ಪರಾಕ್ರಮವುಳ್ಳವನೇ, ಮೇ - ನನ್ನ, ಸತ್ಯಂ -

---

ನೀನು ಸೃಷ್ಟ್ಯಾದಿಯಲ್ಲಿಯೂ, ಮಧ್ಯದಲ್ಲಿಯೂ, ಅಂತ್ಯದಲ್ಲಿಯೂ, ಅವಿನಾಶಿಯಾಗಿಯೂ, ಜ್ಞಾನಿಗೋಚರನಾಗಿಯೂ ಇರುತ್ತೀಯೆ. ಇಂತಹ ನೀನು ಕೇವಲ ಪಾಮರನಾದ ಮಾನವನಂತೆ ವಿದೇಹರಾಜಪುತ್ರಿಯಾದ ಸೀತಾದೇವಿಯನ್ನು ಉಪೇಕ್ಷೆಮಾಡುತ್ತಿರುವೆಯಲ್ಲವೆ! ಹೀಗೆ ಮಾಡಬಹುದೇ?" ॥೬-೧೦॥ ಲೋಕಪಾಲಕರೆಲ್ಲರಿಂದಲೂ ಈ ರೀತಿ ಆಜ್ಞಾಪಿತನಾಗಿ ಲೋಕೇಶ್ವರನಾದ ಶ್ರೀರಾಮಚಂದ್ರನು ಧರ್ಮಸಂರಕ್ಷಕರಲ್ಲಿ ಪರಮ ಶ್ರೇಷ್ಠನಾದುದರಿಂದ ಆ ದೇವತಾ ಶ್ರೇಷ್ಠರೆಲ್ಲರನ್ನೂ ಕುರಿತು, "ಎಲೈ ದೇವೋತ್ತಮರಿರಾ ! ನಾನು ಕೇವಲ ಮಾನವನೆಂದೂ, ದಶರಥರಾಯನ ಕುಮಾರನೆಂದೂ ಮಾತ್ರ ತಿಳಿದಿರುತ್ತೇನೆ. ಹೀಗಿರುವ ನಾನು ಯಾರು ? ಎಲ್ಲಿಂದ ಬಂದವನು ? ಯಾರಿಗೆ ಸಂಬಂಧಿಸಿದವನು ? ಎಂಬಿವೇ ಮೊದಲಾದ ವಿಷಯಗಳನ್ನು ಷಡ್ಗುಣೈಶ್ವರ್ಯಸಂಪನ್ನನಾದ ಈ ಬ್ರಹ್ಮದೇವನು ಅಪ್ಪಣೆ ಕೊಡಿಸಲಿ" ಎಂದು ಹೇಳಿದನು. ಶ್ರೀರಾಮಮೂರ್ತಿಯು ಈ ರೀತಿ ಹೇಳಲು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಚತುರಾನನನು ಕಕುತ್ಸ್ಥವಂಶೋತ್ಪನ್ನನಾದ ಶ್ರೀರಾಮನನ್ನು ಕುರಿತು ಹೀಗೆಂದನು. "ಎಲೈ ಸತ್ಯವಾದ

ಸತ್ಯಪರಾಕ್ರಮ! ॥ ೧೨ ॥ † ಭವಾನ್ನಾರಾಯಣೋ ‡ ದೇವಃ ಶ್ರೀಮಾ೯ ¶ ಚಕ್ರಾಯುಧೋ ವಿಭುಃ Ψ । ಏಕಶೃಂಗೋ ವರಾಹಸ್ತ್ವಂ ＄ ಭೂತಭವ್ಯಸಪತ್ನಜಿತ್ ॥ ೧೩ ॥ § ಅಕ್ಷರಂ ಬ್ರಹ್ಮ * ಸತ್ಯಂಚ ಮಧ್ಯೇಚಾಂತೇಚ ರಾಘವ! । ಲೋಕಾನಾಂ ತ್ವಂ ಪರೋ ‡ ಧರ್ಮೋ ವಿಷ್ವಕ್ಸೇನಶ್ಚತುರ್ಭುಜಃ ॥ ೧೪ ॥ ಶಾರ್ಙ್ಗಧನ್ವಾ ಹೃಷೀಕೇಶಃ

ಸತ್ಯವಾದ ವಚನವನ್ನು, ಶೃಣು - ಕೇಳು, ಇತಿ - ಎಂದು, ಅಬ್ರವೀತ್ - ನುಡಿದನು. ॥ ೧೨ ॥ ಭವಾ೯-ನೀನು, ನಾರಾಯಣಃ-ನಾರಾಯಣನು, ದೇವಃ-ಸ್ವಾಮಿಯು, ಶ್ರೀಮಾ೯-ಕಾಂತಿಮಂತನು, ಚಕ್ರಾಯುಧಃ - ಚಕ್ರವೇ ಆಯುಧವಾಗುಳ್ಳವನು, ವಿಭುಃ - ಸರ್ವವ್ಯಾಪಕನು, ತ್ವಂ - ನೀನು, ಏಕಶೃಂಗಃ - ಒಂದೇ ಶೃಂಗವುಳ್ಳ, ವರಾಹಃ - ಆದಿವರಾಹಮೂರ್ತಿಯು, ಭೂತ....ತ್ - ಹಿಂದೆ ಹುಟ್ಟಿದ ಮತ್ತು ಮುಂದೆ ಹುಟ್ಟುವ ಶತ್ರುಗಳನ್ನು ಜಯಿಸುವವನು. ॥ ೧೩ ॥ ಹೇ ರಾಘವ - ಎಲೈ ಶ್ರೀರಾಮನೇ, ತ್ವಂ-ನೀನು, ಅಕ್ಷರಂ-ನಾಶರಹಿತನು, ಬ್ರಹ್ಮಾ-ಬ್ರಹ್ಮನು, ಸತ್ಯಂ-ಯಥಾರ್ಥನು, ಲೋಕಾನಾಂ - ಲೋಕಗಳ, ಮಧ್ಯೇ - ಮಧ್ಯದಲ್ಲಿಯೂ, ಅಂತೇಚ - ಕಡೆಯಲ್ಲಿಯೂ ಇರತಕ್ಕವನು, ಪರಃ - ಶ್ರೇಷ್ಠವಾದ, ಧರ್ಮಃ - ಧರ್ಮಸ್ವರೂಪನು, ವಿಷ್ವಕ್ಸೇನಃ - ಸರ್ವವ್ಯಾಪಕವಾದ ಸೇನೆಯುಳ್ಳವನು, ಚತುರ್ಭುಜಃ - ಶತ್ರುಸಂಹಾರದಲ್ಲಿ ಸಮರ್ಥಗಳಾದ ನಾಲ್ಕು ಭುಜಗಳುಳ್ಳವನು. ॥ ೧೪ ॥ ಶಾರ್ಙ್ಗಧನ್ವಾ - ಶಾರ್ಙ್ಗವೆಂಬ ಧನುಸ್ಸುಳ್ಳವನು, ಹೃಷೀಕೇಶಃ - ಇಂದ್ರಿಯಗಳಿ

ಪರಾಕ್ರಮವುಳ್ಳವನೇ! ರಾಮಾ, ನಾನು ಹೇಳುವ ಯಥಾರ್ಥವಾದ ವಿಷಯವನ್ನು ಕೇಳು. ನೀನು ಚಕ್ರಾಯುಧಧಾರಿಯೂ, ಸರ್ವಸ್ವಾಮಿಯೂ, ಮಹಾ ತೇಜಸ್ವಿಯೂ ಆದ ನಾರಾಯಣಮೂರ್ತಿಯು. ಹಿಂದಿದ್ದ, ಈಗ ಹುಟ್ಟಿರುವ, ಮುಂದೆ ಹುಟ್ಟುವ ಶತ್ರುಗಳೆಲ್ಲರನ್ನೂ ಗೆಲ್ಲುವವನು ನೀನೇ. ಏಕಶೃಂಗನಾದ ಯಜ್ಞ ವರಾಹ ಮೂರ್ತಿಯೂ ನೀನೇ. ಆದಿಯಲ್ಲಿಯೂ, ಮಧ್ಯದಲ್ಲಿಯೂ, ಅಂತ್ಯದಲ್ಲಿಯೂ ಯಾವುದು ಅಚ್ಯುತವಾಗಿರುವುದೋ ಆ ಪರಬ್ರಹ್ಮ ಪದಾರ್ಥವೂ ನೀನೇ! ಎಲೈ ರಾಘವನೇ! ಸಮಸ್ತ ಲೋಕಗಳಿಗೂ ಉತ್ತಮೋತ್ತಮವಾದ ಧರ್ಮಸ್ವರೂಪನಾಗಿರುವವನೂ ನೀನೇ! ಚತುರ್ಬಾಹುಸಮನ್ವಿತನಾದ ವಿಷ್ವಕ್ಸೇನಸ್ವಾಮಿಯೂ ನೀನೇ! ಶಾರ್ಙ್ಗವೆಂಬ ಧನುಸ್ಸನ್ನು ಧರಿಸಿರುವ ಹೃಷೀಕೇಶನೂ ನೀನೇ! ಪರಮ ಪುರುಷನೂ,

† ಪ್ರಳಯೋದಕವೇ ಆಶ್ರಯವಾಗುಳ್ಳವನು. ನರಸಂಬಂಧವಾದ ಜ್ಞಾನಕ್ಕೆ ಆಶ್ರಯಭೂತನು.

‡ ವಿಲಾಸಾರ್ಥವಾಗಿ ಪ್ರವರ್ತಿಸಿದಂಥಾ ಅವತಾರಮೂರ್ತಿಯುಳ್ಳವನು.

¶ ನಿತ್ಯಲಕ್ಷ್ಮಿಯುಳ್ಳವನು.

Ψ ತತ್ವಾವಧಾರಣ ಸಮರ್ಥನು.

＄ ಪೂರ್ವದಲ್ಲಿ ಹುಟ್ಟಿರುವ ಮಧುಕೈಟಭಾದಿ ರಾಕ್ಷಸರನ್ನೂ, ಮುಂದೆ ಹುಟ್ಟತಕ್ಕ ಶಿಶುಪಾಲ ದಂತವಕ್ತ್ರಾದಿ ಶತ್ರುಗಳನ್ನೂ ಜಯಿಸುವವನು.

§ ನಿರ್ಗುಣ ಬ್ರಹ್ಮಸ್ವರೂಪನು.

* ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿಯೂ ಅಬಾಧ್ಯವಾದ ಚೈತನ್ಯಸ್ವರೂಪದಿಂದಿರತಕ್ಕವನು.

‡ ಸಕಲ ಲೋಕಕ್ಕೂ ಶ್ರೇಯಸ್ಸಾಧನಭೂತನಾದ ಧರ್ಮಸ್ವರೂಪನು.

‡ ಪುರುಷಃ † ಪುರುಷೋತ್ತಮಃ । * ಅಜಿತಃ ಖಡ್ಗಧೃಗ್ವಿಷ್ಣುಃ ಕೃಷ್ಣಶ್ಚೈವ ಬೃಹದ್ಬಲಃ ॥ ೧೩ ॥ ಸೇನಾನೀರ್ಗ್ರಾಮಣೀಶ್ಚತ್ವಂ ಬುದ್ಧಿಸ್ಸತ್ವಂ ಕ್ಷಮಾ ದಮಃ । ಪ್ರಭವಶ್ಚಾವ್ಯಯಶ್ಚ ತ್ವಮುಪೇಂದ್ರೋ ಮಧುಸೂದನಃ ॥ ೧೪ ॥ ಇಂದ್ರಕರ್ಮಾ ಮಹೇಂದ್ರಸ್ತ್ವಂ ಪದ್ಮನಾಭೋ ರಣಾಂತಕೃತ್ । ಶರಣ್ಯಂ ಶರಣಂಚ ತ್ವಾಮಾಹುರ್ದಿವ್ಯಾ ಮಹರ್ಷಯಃ ॥ ೧೫ ॥ ಸಹಸ್ರಶೃಂಗೋ ವೇದಾತ್ಮಾ ಶತಜಿಹ್ವೋ ಮಹರ್ಷಭಃ ।

ಗೆಲ್ಲಾ ನಿಯಾಮಕನು, ಪುರುಷಃ - ಹೃದಯಕಮಲದಲ್ಲಿ ವಾಸಮಾಡತಕ್ಕವನು, ಪುರುಷೋತ್ತಮಃ - ಪುರುಷೋತ್ತಮನು, ಅಜಿತಃ - ಜಯಿಸಲ್ಪಡದಿರುವನು, ಖಡ್ಗಧೃಕ್ - ವಿದ್ಯಾಸ್ವರೂಪವಾದ ನಂದಕವೆಂಬ ಖಡ್ಗವನ್ನು ಧರಿಸಿರುವನು, ವಿಷ್ಣುಃ - ಜಗದ್ವ್ಯಾಪಕನು, ಕೃಷ್ಣಶ್ಚೈವ - ಸೃಷ್ಟಿಸ್ಥಿತಿ ಪ್ರಳಯಗಳಿಗೆ ಕಾರಣಭೂತನಾದವನು, ಬೃಹದ್ಬಲಃ-ಮಹತ್ತರವಾದ ಧಾರಣಸಾಮರ್ಥ್ಯವುಳ್ಳವನು, ಸೇನಾನೀಃ-ದೇವಸೈನ್ಯಗಳನ್ನು ನಿರ್ವಹಿಸುವನು, ಗ್ರಾಮಣೀಃ - ದೇವತಾಸಂಬಂಧವಾದ ಜನಪದಾದಿಗಳನ್ನೆಲ್ಲ ಪರಿಪಾಲಿಸುವನು, ತ್ವಂ - ನೀನು, ಬುದ್ಧಿಃ - ಅಧ್ಯವಸಾಯಾತ್ಮಕನಾಗಿರುವನು, ಸತ್ವಂ - ಶುದ್ಧಸತ್ವಸ್ವರೂಪನು, ಕ್ಷಮಾ - ಆಶ್ರಿತಾಪರಾಧವನ್ನು ಹೊರುವವನು, ದಮಃ - ದಮಸ್ವರೂಪನು, ಪ್ರಭವಶ್ಚ - ಜಗತ್ತಿಗೆಲ್ಲಾ ಉತ್ಪತ್ತಿಸ್ಥಾನಭೂತನು, ಅವ್ಯಯಶ್ಚ - ಲಯಾಧಿಷ್ಠಾನಭೂತನು, ತ್ವಂ - ನೀನು, ಉಪೇಂದ್ರಃ - ದೇವೇಂದ್ರನ ತಮ್ಮನಾಗಿ ಹುಟ್ಟಿದವನು, ಮಧುಸೂದನಃ - ಮಧುವೆಂಬ ರಾಕ್ಷಸನನ್ನು ಮರ್ದಿಸಿದವನು. ॥ ೧೩-೧೪ ॥ ಇಂದ್ರಕರ್ಮಾ - ಇಂದ್ರನ ತ್ರೈಲೋಕ್ಯಪಾಲನರೂಪ ಕರ್ಮದಂತೆ ಪರಿಪಾಲನ ಕರ್ಮವುಳ್ಳವನು, ಮಹೇಂದ್ರಃ - ಮಹದೈಶ್ವರ್ಯಸಂಪನ್ನನು, ಪದ್ಮನಾಭಃ - ಕಮಲವೇ ನಾಭಿಯಲ್ಲಿವುಳ್ಳವನು, ರಣಾಂತಕೃತ್ - ಕಾಳಿಗದಲ್ಲಿ ಶತ್ರುಗಳಿಗೆ ನಾಶಕನು, ದಿವ್ಯಾಃ - ದೇವತೆಗಳ ಸಂಬಂಧಿಗಳಾದ, ಮಹರ್ಷಯಃ-ಋಷಿಗಳು, ಶರಣ್ಯಂ-ಶರಣವಾಗಿ ಹೊಂದತಕ್ಕ, ತ್ವಾಂ-ನಿನ್ನನ್ನು, ಶರಣಂ - ರಕ್ಷಕನನ್ನಾಗಿ, ಆಹುಃ - ಹೇಳಿದರು. ॥ ೧೫ ॥ ಸಹಸ್ರಶೃಂಗಃ - ಸಹಸ್ರ ಶಾಖೆಗಳುಳ್ಳ, ವೇದಾತ್ಮಾ - ಸಾಮವೇದಸ್ವರೂಪನೂ, ಶತಜಿಹ್ವಃ - ಅನೇಕ ವಿಧವಾದ ಚೋದನಾರೂಪ ಜಿಹ್ವೆ

ಪುರುಷೋತ್ತಮನೂ ನೀನೇ! ನೀನು ಯಾರಿಂದಲೂ ಗೆಲ್ಲಲ್ಪಡದಿರುವವನು. ನಂದಕವೆಂಬ ಖಡ್ಗಧಾರಿಯೂ ನೀನೇ! ಸರ್ವತ್ರವ್ಯಾಪಕನಾದ ವಿಷ್ಣುಪರಮಾತ್ಮನೂ ನೀನೇ! ನೀಲಮೇಘಶ್ಯಾಮಲನಾಗಿ ಕೃಷ್ಣನೆಂಬಭಿಧಾನವುಳ್ಳವನೂ ನೀನೇ! ॥ ೧೧–೧೩ ॥ ಸೇನಾನಿಯೂ, (ರಾಜಸೇನಾಪತಿ ದೇವಸೇನಾಪತಿಗಳ ಸ್ವರೂಪನೂ) ಮಂತ್ರಿಸ್ವರೂಪಿಯೂ, ಬುದ್ಧಿಯೂ, ಕ್ಷಮೆಯೂ, ದಮಸ್ವರೂಪನೂ, ಆಯವ್ಯಯ ಸ್ವರೂಪನೂ ನೀನೇ! ಉಪೇಂದ್ರನೂ, ಮಧುಸೂದನನೂ ನೀನೇ! ಇಂದ್ರಕರ್ಮವನ್ನೊಳಗೊಂಡ ಮಹೇಂದ್ರನೂ, ಪದ್ಮನಾಭನೂ, ಯುದ್ಧಾಂತಕರನೂ ನೀನೇ! ಶರಣ್ಯನೂ, ಶರಣನೂ ನೀನೇ ಎಂದು ದೇವರ್ಷಿಗಳೆಲ್ಲರೂ ಹೇಳುವರು. ಸಹಸ್ರಶಾಖಾತ್ಮಕವಾದ ಸಾಮವೇದಸ್ವರೂಪನೂ ನೀನೇ!

---

‡ ಪುರುಷಃ-ಸಕಲ ಜಗತ್ತಿನಲ್ಲಿಯೂ ತುಂಬಿರುವನು, ಅಥವಾ-ಜಗತ್ಸೃಷ್ಟಿಗೆ ಪೂರ್ವದಲ್ಲಿಯೂ ಇರುವುದರಿಂದ ಪರಮ ಪುರುಷನು.

† ಕ್ಷರಾಕ್ಷರರೂಪವಾದ ಶರೀರ ಸಮಷ್ಟಿ ವ್ಯಷ್ಟಿ ರೂಪಗಳಾದ ಭೂತಗಳಿಗಿಂತಲೂ ಉತ್ತಮನಾದವನು.

* ಐಶ್ವರ್ಯದಿಂದಲೇ ಆಗಲಿ, ಗುಣಗಳಿಂದಲೇ ಆಗಲಿ ಯಾವ ಪುರುಷನಿಂದಲೂ ಜಯಿಸಲ್ಪಡದಿರುವನು.

ತ್ವಂ ತ್ರಯಾಣಾಂ ಹಿ ಲೋಕಾನಾಮಾದಿಕರ್ತಾ ಸ್ವಯಂ ಪ್ರಭುಃ । ಸಿದ್ಧಾನಾಮಪಿ ಸಾಧ್ಯಾನಾಮಾಶ್ರಯಶ್ಚಾಸಿ ಪೂರ್ವಜಃ ॥೧೮-೧೯॥ ತ್ವಂ ಯಜ್ಞಸ್ತ್ವಂ ವಷಟ್ಕಾರಸ್ತ್ವಮೋಂಕಾರಃ ಪರಂತಪ ! । ಪ್ರಭವಂ ನಿಧನಂ ವಾ ತೇ ನ ವಿದುಃ ಕೋ ಭವಾನಿತಿ ॥೨೦॥ * ದೃಶ್ಯಸೇ ಸರ್ವಭೂತೇಷು ಬ್ರಾಹ್ಮಣೇಷುಚ ಗೋಷುಚ । ದಿಕ್ಷು ಸರ್ವಾಸು ಗಗನೇ ಪರ್ವತೇಷು ವನೇಷುಚ ॥ ೨೧ ॥ ಸಹಸ್ರಚರಣಃ ಶ್ರೀಮಾನ್ ಶತಶೀರ್ಷ

ಗಳುಳ್ಳವನೂ, ಮಹರ್ಷಭಃ - ಬಹಳ ಶ್ರೇಷ್ಠನಾದವನೂ, ತ್ವಂ - ನೀನು, ತ್ರಯಾಣಾಂಲೋಕಾನಾಂ - ಮೂರು ಲೋಕಗಳಿಗೂ, ಆದಿಕರ್ತಾ (ಬ್ರಹ್ಮನಾದ) ನನಗೆ ಮೊದಲುಗೊಂಡು ಸೃಷ್ಟಿಕರ್ತನಾದವನು, ಸ್ವಯಂಪ್ರಭುಃ-ಸರ್ವಸ್ವತಂತ್ರನು, ಸಿದ್ಧಾನಾಂ-ಮುಕ್ತರಿಗೂ, ಸಾಧ್ಯಾನಾಮಪಿ-ಸಾಧ್ಯರೆಂಬ ದೇವತೆಗಳಿಗೂ, ಪೂರ್ವಜಃ-ಮೊದಲಿರುವ, ಆಶ್ರಯಃ-ಆಧಾರಭೂತನು. ॥೧೮-೧೯॥ ತ್ವಂ-ನೀನು, ಯಜ್ಞಃ-ಯಜ್ಞಸ್ವರೂಪನು ಅಥವಾ, (ಗೋ) ಯಜ್ಞನಿರ್ವಾಹಕನು, ತ್ವಂ - ನೀನು, ವಷಟ್ಕಾರಃ - ವಷಟ್ಕಾರಸ್ವರೂಪನು, ತ್ವಂ - ನೀನು, ಓಂಕಾರಃ - ಪ್ರಣವಸ್ವರೂಪನು, ಪರಂತಪಃ - ಸರ್ವೋತ್ಕೃಷ್ಟವಾದ ತಪಸ್ಸ್ವರೂಪನು, ತೇ - ನಿನ್ನ, ಪ್ರಭವಂವಾ - ಉತ್ಪತ್ತಿಯನ್ನೇ ಆಗಲಿ, ನಿಧನಂವಾ - ಲಯವನ್ನೇ ಆಗಲಿ, ಭವಾನ್-ನೀನು, ಕಇತಿ-ಯಾವನೆಂದಾಗಲಿ, (ಯಾರೂ) ನವಿದುಃ-ತಿಳಿಯಲಾರರು. ॥ ೨೦ ॥ (ನೀನು) ಸರ್ವಭೂತೇಷು-ಸಮಸ್ತ ಪ್ರಾಣಿಗಳಲ್ಲಿಯೂ, ಬ್ರಾಹ್ಮಣೇಷು ಬ್ರಾಹ್ಮಣರಲ್ಲಿಯೂ, ಗೋಷು-ಗೋವುಗಳಲ್ಲಿಯೂ, ಸರ್ವಾಸು-ಸಮಸ್ತಗಳಾದ, ದಿಕ್ಷು-ದಿಕ್ಕುಗಳಲ್ಲಿಯೂ, ಗಗನೇ-ಅಂತರಿಕ್ಷದಲ್ಲಿಯೂ, ಪರ್ವತೇಷು - ಬೆಟ್ಟಗಳಲ್ಲಿಯೂ, ವನೇಷುಚ - ವನಗಳಲ್ಲಿಯೂ, ದೃಶ್ಯಸೇ - ಕಾಣಲ್ಪಡುತ್ತೀಯೆ. ॥೨೧॥ ತ್ವಂ-ನೀನು, ಸಹಸ್ರಚರಣಃ-ಸಾವಿರಪಾದಗಳುಳ್ಳವನು, ಶ್ರೀಮಾನ್-ಲಕ್ಷ್ಮೀಸಮೇತನಾದವನು, ಶತಶೀರ್ಷಃ - ನೂರಾರು ಶಿರಸ್ಸುಗಳುಳ್ಳವನು, (ಗೋ) ಸಹಸ್ರ ಶಿರಸ್ಸುಗಳೂ ಉಳ್ಳವನು, ಸಹಸ್ರದೃಕ್ - ಸಹಸ್ರ ನೇತ್ರಗಳುಳ್ಳವನು, ತ್ವಂ - ನೀನು, ಭೂತಾನಿ - ಸರ್ವಪ್ರಾಣಿಗಳನ್ನೂ,

---

ಶ್ರೇಷ್ಠತಮನೂ ನೀನೇ! ನೀನು ಮೂರು ಲೋಕಗಳಿಗೂ ಆದಿಕರ್ತನೂ, ಸ್ವಯಂಪ್ರಭುವೂ ಆದ ಮಹಾತ್ಮನು. ಪುರಾಣಪುರುಷನಾದ ನೀನು ಸಿದ್ಧರಿಗೂ ಸಾಧ್ಯರಿಗೂ ಆಶ್ರಯನು. ಯಜ್ಞಸ್ವರೂಪಿಯೂ, ವಷಟ್ಕಾರ ಮತ್ತು ಓಂಕಾರಗಳೂ ನೀನೇ ಆಗಿರುವೆ. ॥ ೧೬—೨೦ ॥ ಎಲೈ ರಾಮಚಂದ್ರನೇ! ಪರಾತ್ಪರನಾಗಿರುವವನೂ ನೀನೇ. ಮಹಾ ತಾತ್ವಿಕರಾದವರೂ ಸಹ, ಸಮಸ್ತ ಭೂತಾಂತರ್ಯಾಮಿಯಾಗಿರುವ ನಿನ್ನ ಉತ್ಪತ್ತಿಸ್ಥಿತ್ಯಾದಿಗಳನ್ನರಿಯಲಾರರು. ನೀನು ಗೋಬ್ರಾಹ್ಮಣರಲ್ಲಿಯೂ, ಸಮಸ್ತ ಭೂತಗಳಲ್ಲಿಯೂ ಕಂಡುಬರುತ್ತೀಯೆ. ಎಲೈ ಪ್ರಭುವೇ! ಪರಬ್ರಹ್ಮಮೂರ್ತಿಯಾದ ನೀನು ದಶದಿಶೆಗಳಲ್ಲಿಯೇ ಅಲ್ಲದೆ ಸಕಲ ಪರ್ವತಗಳಲ್ಲಿಯೂ, ಸಮಸ್ತ ವನಗಳಲ್ಲಿಯೂ, (ಸಮಸ್ತ ನದನದಿಗಳಲ್ಲಿಯೂ) ಕಂಡುಬರುತ್ತೀಯೆ. ಸಹಸ್ರ ಶೀರ್ಷನೂ, ಸಹಸ್ರಾಕ್ಷನೂ ಆದ ವಿರಾಟ್ಸ್ವರೂಪನೂ ನೀನೇ! ಎಲೈ ಮಹಾತ್ಮನೇ! ಸಮಸ್ತ ಭೂತಗಳನ್ನೂ, ಸಮಸ್ತ ಪರ್ವತ ನದನದೀ ಕಾನನಸಹಿತವಾದ ಈ ಅಖಂಡ

---

* ಅಂತರ್ಯಾಮಿ ರೂಪದಿಂದಲೂ ಅರ್ಚಾಯ ರೂಪಗಳಿಂದಲೂ ನೀನೇ ಕಾಣಲ್ಪಡುತ್ತೀಯೆಂದು ಇಲ್ಲಿನ ತಾತ್ಪರ್ಯಾರ್ಥ.

ಸ್ಸಹಸ್ರದೃಕ್ । ತ್ವಂ ಧಾರಯಸಿ ಭೂತಾನಿ ವಸುಧಾಂಚ ಸಪರ್ವತಾಂ ॥ ೨೨ ॥ ಅಂತೇ ಪೃಥಿವ್ಯಾಸ್ಸಲಿಲೇ ದೃಶ್ಯಸೇ ತ್ವಂ ಮಹೋರಗಃ । ತ್ರೀನ್ ಲೋಕಾನ್ ಧಾರಯನ್ ರಾಮ! ದೇವಗಂಧರ್ವದಾನವಾನ್ ॥೨೩॥ ಅಹಂ ತೇ ಹೃದಯಂ ರಾಮ! ಜಿಹ್ವಾ ದೇವೀ ಸರಸ್ವತೀ । ದೇವಾ ಗಾತ್ರೇಷು ರೋಮಾಣಿ ನಿರ್ಮಿತಾ ಬ್ರಹ್ಮಣಃ ಪ್ರಭೋ! ॥ ೨೪ ॥ ನಿಮೇಷಸ್ತೇ ಭವೇದ್ರಾತ್ರಿರುನ್ಮೇಷಸ್ತೇ ಭವೇದ್ದಿವಾ । ಸಂಸ್ಕಾರಾಸ್ತೇಽ ಭವನ್ ವೇದಾ ನತದಸ್ತಿ ತ್ವಯಾ ವಿನಾ ॥೨೫॥ ಜಗತ್ಸರ್ವಂ ಶರೀರಂ ತೇ ಸ್ಥೈರ್ಯಂ ತೇ ವಸುಧಾತಲಂ । ಅಗ್ನಿಃ ಕೋಪಃ ಪ್ರಸಾದಸ್ತೇ ಸೋಮಃ ಶ್ರೀವತ್ಸಲಕ್ಷಣಃ ॥೨೬॥

(ಪಂಚಮಹಾ ಭೂತಗಳನ್ನೂ), ಸಪರ್ವತಾಂ - ಬೆಟ್ಟಗಳಿಂದೊಡಗೂಡಿದ, ವಸುಧಾಂ - ಭೂಮಿಯನ್ನೂ, ಧಾರಯಸಿ - ಧರಿಸಿರುವೆ, (ಕೂರ್ಮಾವತಾರದಲ್ಲಿ ಧರಿಸಿದೆ) ಎಂದು ತಾತ್ಪರ್ಯವು. ॥೨೨॥ ಹೇ ರಾಮ - ಎಲೈ ಶ್ರೀರಾಮನೇ, ತ್ವಂ - ನೀನು, ಪೃಥಿವ್ಯಾಃ - ಭೂಮಿಯ, ಅಂತೇ - ನಾಶಕಾಲದಲ್ಲಿ, ಮಹೋರಗಃ - ದೊಡ್ಡ ಸರ್ಪವುಳ್ಳವನಾಗಿ (ಶೇಷಶಾಯಿಯಾಗಿ), ಸಮುಸಲಿಲೇ - ಸಮುದ್ರದ ಜಲದಲ್ಲಿ, ತ್ರೀನ್‌ಲೋಕಾನ್ - ಮೂರು ಲೋಕಗಳನ್ನೂ, ದೇವ....ವಾನ್ - ದೇವತೆಗಳನ್ನೂ, ಗಂಧರ್ವರನ್ನೂ, ದಾನವರನ್ನೂ, ಧಾರಯನ್ - ಕುಕ್ಷಿಯಲ್ಲಿ ಧರಿಸಿ, ದೃಶ್ಯಸೇ - ಕಾಣಲ್ಪಡುತ್ತೀಯೆ. ॥ ೨೩ ॥ ರಾಮ - ಶ್ರೀರಾಮನೇ, ಅಹಂ - ನಾನು, ತೇ - ನಿನ್ನ, ಹೃದಯಂ - ಮನಸ್ಸು, ತೇ - ನಿನ್ನ, ಜಿಹ್ವಾ - ನಾಲಗೆಯು, ಸರಸ್ವತೀದೇವೀ - ಸರಸ್ವತೀದೇವಿಯು, ಪ್ರಭೋ - ಸ್ವಾಮಿಯೇ, ಬ್ರಹ್ಮಣಃ- ಪರಬ್ರಹ್ಮಮೂರ್ತಿಯಾದ ನಿನ್ನ, ಗಾತ್ರೇಷು-ಶರೀರದಲ್ಲಿರುವ, ರೋಮಾಣಿ-ಕೂದಲುಗಳು, ದೇವಾಃ- ದೇವತೆಗಳಾಗಿ, ನಿರ್ಮಿತಾಃ - ನಿರ್ಮಿಸಲ್ಪಟ್ಟಿದ್ದಾರೆ. ॥ ೨೪ ॥ ತೇ - ನಿನ್ನ, ನಿಮೇಷಃ - ರೆಪ್ಪೆ ಹಾಕೋಣವು, ರಾತ್ರಿಃ - ರಾತ್ರಿಯಾಗಿದೆ, ತೇ - ನಿನ್ನ, ಉನ್ಮೇಷಃ-ರೆಪ್ಪೆಗಳ ತೆರೆಯುವಿಕೆಯು, ದಿವಾ - ಹಗಲು, ಭವೇತ್ - ಆಗುತ್ತದೆ, ವೇದಾಃ - ವೇದಗಳು, ತೇ-ನಿನ್ನ, ಸಂಸ್ಕಾರಾಃ - ಪ್ರವೃತ್ತಿನಿವೃತ್ತಿಗಳನ್ನು ಬೋಧಿಸುವುಗಳಾಗಿ, ಅಭವನ್ - ಆಗಿವೆ, ತ್ವಯಾವಿನಾ - ನಿನ್ನಿಂದ ವಿನಾಯಿಸಿ, ಯತ್ - ಯಾವುದೋ, ತತ್ - ಅದು, ನಾಸ್ತಿ - ಇಲ್ಲವೇ ಇಲ್ಲವು. ॥ ೨೫ ॥ ತೇ - ನಿನ್ನ, ಶರೀರಂ - ಶರೀರವು, ಸರ್ವಂಜಗತ್ - ಸಮಸ್ತ ಜಗದ್ರೂಪವಾಗಿದೆ, ತೇ - ನಿನ್ನ, ಕೋಪಃ - ಕೋಪವು, ಅಗ್ನಿಃ - ಅಗ್ನಿಸ್ವರೂಪವಾಗಿದೆ, ತೇ - ನಿನ್ನ, ಪ್ರಸಾದಃ - ಅನುಗ್ರಹವು, ಶ್ರೀವತ್ಸಲಕ್ಷಣಃ - ಶ್ರೀವತ್ಸವೆಂಬ ಚಿಹ್ನ

ಭೂಮಂಡಲವನ್ನು ಧರಿಸಿರುವವನೂ ನೀನೇ! ನೀನು ಚೇತನಾಚೇತನಗಳೆರಡರಲ್ಲಿಯೂ ಅಂತರ್ಯಾಮಿಯಾಗಿರುವೆ. ಪ್ರಳಯಾನಂತರದಲ್ಲಿ ಭೂಮಂಡಲವೆಲ್ಲವೂ ಮುಳುಗಿಹೋದ ತರುವಾಯ ನೀನು ಸಮುದ್ರ ಜಲಮಧ್ಯದಲ್ಲಿ ಶೇಷಶಾಯಿಯಾಗಿರುತ್ತೀಯೆ. ಆಗ ನೀನು ದೇವದಾನವ ಗಂಧರ್ವಸಹಿತವಾದ ಮೂರು ಲೋಕಗಳನ್ನೂ ಧರಿಸಿರುತ್ತೀಯೆ. ರಾಮಚಂದ್ರ! ನಾನೇ (ಬ್ರಹ್ಮ) ನಿನ್ನ ಹೃದಯವು. ಸರಸ್ವತೀದೇವಿಯೇ ನಿನ್ನ ನಾಲಗೆಯು. ಬ್ರಹ್ಮನಿರ್ಮಿತವಾದ ದೇವತೆಗಳೆಲ್ಲರೂ ನಿನ್ನ ರೋಮಗಳು. ನೀನು ಕಣ್ಣು ಮುಚ್ಚಿದರೆ ಇರುಳಾಗುವುದು; ಕಣ್ತೆರದರೆ ಹಗಲಾಗುವುದು. ನಿನ್ನ ಉಸಿರುಗಳೇ ನಾಲ್ಕು ವೇದಗಳು. ವೇದಗಳೆಲ್ಲವೂ ನಿನ್ನ ಪ್ರವೃತ್ತಿನಿವೃತ್ತಿ ಧರ್ಮಗಳನ್ನು ತಿಳಿಸುವವುಗಳಾದುವು. ನಿನ್ನನ್ನು ಬಿಟ್ಟು ಈ ಜಗತ್ತಿನಲ್ಲಿ ಏನೂ ಇರುವುದಿಲ್ಲವು. ಈ ಅಖಿಲ ಜಗತ್ತೇ ನಿನ್ನ ಶರೀರವು. ನಿನ್ನ ಸ್ಥೈರ್ಯವೇ ಈ ಭೂಮಂಡಲವು. ॥ ೨೧-೨೫ ॥ ನಿನ್ನ ಕೋಪವೇ ಅಗ್ನಿಯು. ನಿನ್ನ ಪ್ರಸನ್ನತೆಯೇ ಶ್ರೀವತ್ಸಲಾಂಛನನಾದ ಚಂದ್ರನು. (ಶ್ರೀವತ್ಸಲಾಂಛನನೂ ನೀನೇ!)

ತ್ವಯಾ ಲೋಕಾಸ್ತ್ರಯಃ ಕ್ರಾಂತಾಃ ಪುರಾಣೇ ವಿಕ್ರಮೈಸ್ತ್ರಿಭಿಃ । ಮಹೇಂದ್ರಶ್ಚ ಕೃತೋ ರಾಜಾ ಬಲಿಂ ಬಧ್ವಾ ಮಹಾಸುರಂ ॥ ೨೭ ॥ ಸೀತಾ ಲಕ್ಷ್ಮೀರ್ಭವಾನ್ ವಿಷ್ಣುರ್ದೇವಃ ಕೃಷ್ಣಃ ಪ್ರಜಾಪತಿಃ * । ವಧಾರ್ಥಂ ರಾವಣಸ್ಯೇಹ ಪ್ರವಿಷ್ಟೋ ಮಾನುಷೀಂ ತನುಂ ॥ ೨೮ ॥ ತದಿದಂ ನಃ ಕೃತಂ ಕಾರ್ಯಂ ತ್ವಯಾ ಧರ್ಮಭೃತಾಂ ವರ! । ನಿಹತೋ ರಾವಣೋ ರಾಮ! ಪ್ರಹೃಷ್ಟೋ ದಿವಮಾಕ್ರಮ! ॥ ೨೯ ॥ ಅಮೋಘಂ ಬಲವೀರ್ಯಂ ತೇಽಮೋಘಸ್ತೇ ಪರಾಕ್ರಮಃ । ಅಮೋಘಂ ದರ್ಶನಂ

ರೂಪವಾದ, ಸೋಮಃ - ಚಂದ್ರನಾಗಿದೆ. ॥ ೨೬ ॥ ಪುರಾಣೇ - ಪೂರ್ವಕಾಲದಲ್ಲಿ, ತ್ರಯೋಲೋಕಾಃ - ಮೂರು ಲೋಕಗಳೂ, ತ್ರಿಭಿಃ - ಮೂರಾದ, ವಿಕ್ರಮೈಃ - ಪಾದನ್ಯಾಸಗಳಿಂದ, ಕ್ರಾಂತಾಃ - ಆಕ್ರಮಿಸಲ್ಪಟ್ಟವು, ಮಹಾಸುರಂ - ಮಹಾ ದೈತ್ಯನಾದ, ಬಲಿಂ - ಬಲಿಚಕ್ರವರ್ತಿಯನ್ನು, ಬಧ್ವಾ - ಬಿಗಿಸಿ, ಮಹೇಂದ್ರಶ್ಚ - ದೇವೇಂದ್ರನು, ರಾಜಾ - ಅರಸಾಗಿ, ಕೃತಃ - ಮಾಡಲ್ಪಟ್ಟನು. ॥ ೨೭ ॥ ಸೀತಾ - ಸೀತಾದೇವಿಯೇ, ಲಕ್ಷ್ಮೀಃ - ಲಕ್ಷ್ಮೀದೇವಿಯು, ಭವಾನ್ - ನೀನೇ, ವಿಷ್ಣುಃ - ವಿಷ್ಣುವು, ದೇವಃ - ಸ್ವಪ್ರಕಾಶರೂಪನಾಗಿದ್ದೀಯೆ, ಕೃಷ್ಣಃ - ಮುಂದೆ ಕೃಷ್ಣನಾಗುವವನೂ ನೀನೇ, ಪ್ರಜಾಪತಿಃ - ಸಮಸ್ತ ಪ್ರಜೆಗಳಿಗೂ ಅಧಿಪತಿಯಾದವನು, ರಾವಣಸ್ಯ - ರಾವಣನ, ವಧಾರ್ಥಂ - ಸಂಹಾರಾರ್ಥವಾಗಿ, ಇಹ - ಈಗ, ಮಾನುಷೀಂ - ಮನುಷ್ಯಸಂಬಂಧವಾದ, ತನುಂ - ಶರೀರವನ್ನು, ಪ್ರವಿಷ್ಟಃ - ಪ್ರವೇಶ ಮಾಡಿದವನಾದೆ. ॥ ೨೮ ॥ ಧರ್ಮಭೃತಾಂವರ - ಧರ್ಮಿಷ್ಠರಲ್ಲಿ ಶ್ರೇಷ್ಠನೇ, ರಾಮ - ಶ್ರೀರಾಮನೇ, ತ್ವಯಾ - ನಿನ್ನಿಂದ, ರಾವಣಃ - ದಶಕಂಠನು, ನಿಹತಃ-ಸಂಹರಿಸಲ್ಪಟ್ಟನು, ತದಿದಂ - ಆ ಈ ರಾವಣನ ವಧರೂಪವಾದ, ನಃ - ನಮ್ಮ, ಕಾರ್ಯಂ - ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಪ್ರಹೃಷ್ಟಃ - ಸಂತೋಷಗೊಂಡವನಾಗಿ, ದಿವಂ - ಸ್ವರ್ಗಲೋಕವನ್ನು, ಆಕ್ರಮ - ಆಕ್ರಮಿಸು. ॥ ೨೯ ॥ ರಾಮ - ಶ್ರೀರಾಮನೇ, ತೇ - ನಿನ್ನ, ಬಲವೀರ್ಯಂ - ದೇಹತ್ರಾಣವೂ, ಸಾಮರ್ಥ್ಯವೂ, ಅಮೋಘಂ - ಸಫಲವಾದುದು, ತೇ - ನಿನ್ನ, ಪರಾಕ್ರಮಃ - ಶೌರ್ಯವೂ, ಅಮೋಘಃ - ವ್ಯರ್ಥವಾಗದುದು, ತೇ -

ಹಿಂದೆ ತ್ರಿವಿಕ್ರಮಾವತಾರ ಮಾಡಿ ಬಲಿಚಕ್ರವರ್ತಿಯಲ್ಲಿ ಭಿಕ್ಷೆಬೇಡಿ, ಮೂರೇ ಅಡಿಗಳಿಂದ ಮೂರು ಲೋಕಗಳನ್ನಾಕ್ರಮಿಸಿದ ವಾಮನಮೂರ್ತಿಯೂ ನೀನೇ! ಆಗ ನೀನು ಬಲಿಯನ್ನು ಪಾತಾಳಕ್ಕೊತ್ತಿ ಮಹೇಂದ್ರನನ್ನು ದೇವರಾಜನನ್ನಾಗಿಸಿದೆ. ಎಲೈ ರಾಮಭದ್ರನೇ! ಸೀತಾದೇವಿಯೇ ಲಕ್ಷ್ಮೀದೇವಿಯು. ಪೂಜ್ಯನಾದ ನೀನೇ ನೀಲಮೇಘಶ್ಯಾಮಲನಾದ ವಿಷ್ಣುವು. ಸಾಕ್ಷಾತ್ ಪರಬ್ರಹ್ಮಮೂರ್ತಿಯೂ ನೀನೇ! ಎಲೈ ಪ್ರಭುವೇ! ರಾವಣ ಸಂಹಾರಕ್ಕಾಗಿ ನೀನು ಈ ಮಾನವತ್ವವನ್ನು ತಾಳಿರುವೆ. ಆದುದರಿಂದೆಲೈ ಧರ್ಮಜ್ಞಶ್ರೇಷ್ಠನೇ! ಇಂತಹ ಮಹಾತ್ಮನಾದ ನೀನು ಈ ರೀತಿ ಸೀತೆಯ ಅಗ್ನಿಪ್ರವೇಶವನ್ನುಪೇಕ್ಷಿಸಬಾರದು. ನೀನು ಯಾವುದಕ್ಕಾಗಿ ಮಾನವಾವತಾರವನ್ನು ತಾಳಿದೆಯೋ ಆ ಕಾರ್ಯವು ಮುಗಿಯಿತು. ರಾವಣನು ಸಂಹೃತನಾದನಲ್ಲವೆ! ಇನ್ನು ನೀನು ಸಂತುಷ್ಟಮಾನಸನಾಗಿ ಸ್ವರ್ಗವನ್ನಾಕ್ರಮಿಸಿ ಬರುವವನಾಗು. ಎಲೈ ಸ್ವಾಮಿಯೇ! ನಿನ್ನ ತೇಜಸ್ಸು ಅಮೋಘವಾದುದು. ನಿನ್ನ ಬಲಪರಾಕ್ರಮ

* ಈವರೆಗೆ ನಿರೂಪಿಸಿದ ಶ್ರೀರಾಮಸ್ವರೂಪದಿಂದ ಮಹಾವಿಷ್ಣು ಸ್ವರೂಪಿಯಾದ ಆತನ ವಿರಾಡ್ರೂಪವನ್ನು ವಿಶದಗೊಳಿಸಿದಂತಾಯಿತು.

ರಾಮ! ನಚ ಮೋಘಸ್ಸ್ತವಸ್ತವಃ । ಅಮೋಘಾಸ್ತೇ ಭವಿಷ್ಯಂತಿ ಭಕ್ತಿಮಂತಶ್ಚ ಯೇ ನರಾಃ ॥ ೩೦ ॥ ಯೇ ತ್ವಾಂ ದೇವಂ ಧ್ರುವಂ ಭಕ್ತಾಃ ಪುರಾಣಂ ಪುರುಷೋತ್ತಮಂ । ಪ್ರಾಪ್ನುವಂತಿ ಸದಾಕಾಮಾನಿಹ ಲೋಕೇ ಪರತ್ರಚ ॥ ೩೧ ॥

ಇಮಮಾರ್ಷಂ ಸ್ತವಂ ನಿತ್ಯಮಿತಿಹಾಸಂ ಪುರಾತನಂ ।
ಯೇ ನರಾಃ ಕೀರ್ತಯಿಷ್ಯಂತಿ ನಾಸ್ತಿ ತೇಷಾಂ ಪರಾಭವಃ ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ವಿಂಶತ್ಯುತ್ತರಶತತಮಸ್ಸರ್ಗಃ

ನಿನ್ನ, ದರ್ಶನಂ - ದರ್ಶನವು, ಅಮೋಘಂ - ಸಫಲವಾದುದು, ತವ - ನಿನ್ನ, ಸ್ತವಃ - ಸ್ತೋತ್ರವೂ, ಮೋಘಃ - ವ್ಯರ್ಥವಾದುದು, ನ - ಆಗುವುದಿಲ್ಲವು. ॥ ೩೦ ॥ ಯೇನರಾಃ - ಯಾವ ಮನುಜರು, ತೇ - ನಿನ್ನ ವಿಷಯಕವಾದ, ಭಕ್ತಿಮಂತಃ - ಭಕ್ತಿಯುಳ್ಳವರಾಗಿದ್ದಾರೆಯೋ, ತೇ - ಅವರು, ಅಮೋಘಃ - ಅಪ್ರತಿಬದ್ಧವಾದ ಫಲಗಳುಳ್ಳವರು, ಭವಿಷ್ಯಂತಿ - ಆಗುವರು, ಯೇ - ಯಾವ, ಭಕ್ತಾಃ - ಭಕ್ತರು, ಪುರಾಣಂ - ಪುರಾತನವಾದ, ಪುರುಷೋತ್ತಮಂ - ಪುರುಷಶ್ರೇಷ್ಠನಾದ, ಧ್ರುವಂ - ಶಾಶ್ವತನಾದ, ದೇವಂ - ಸ್ವಯಂಪ್ರಕಾಶನಾದ, ತ್ವಾಂ - ನಿನ್ನನ್ನುದ್ದೇಶಿಸಿ, ಭಕ್ತಿಮಂತಃ - ಭಕ್ತಿಯುಳ್ಳವರು, ಭವಿಷ್ಯಂತಿ - ಆಗುವರೋ, ತೇ - ಅವರು, ಇಹಲೋಕೇ - ಈ ಲೋಕದಲ್ಲಿಯೂ, ಪರತ್ರಚ - ಪರಲೋಕದಲ್ಲಿಯೂ, ಸದಾ - ನಿರಂತರವೂ, ಕಾಮಾನ್ - ಸಕಲ ಭೋಗಗಳನ್ನೂ, ಪ್ರಾಪ್ನುವಂತಿ - ಹೊಂದುತ್ತಾರೆ. ॥ ೩೧ ॥ ಯೇ - ಯಾವ, ನರಾಃ - ಮನುಷ್ಯರು, ಪುರಾತನಂ - ಪುರಾತನವಾದ, ಆರ್ಷಂ - ಋಷಿಪ್ರೋಕ್ತವಾದ, ಇಮಂಸ್ತವಂ - ಈ ಸ್ತೋತ್ರರೂಪವಾದ, ಇತಿಹಾಸಂ - ಕಥೆಯನ್ನು, ನಿತ್ಯಂ - ನಿರಂತರವೂ, ಕೀರ್ತಯಿಷ್ಯಂತಿ - ಪಠನಮಾಡುವರೋ, ತೇಷಾಂ - ಅವರಿಗೆ, ಪರಾಭವಃ - ತಿರಸ್ಕಾರವು, ನಾಸ್ತಿ - ಇರುವುದಿಲ್ಲವು. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ವಿಂಶತ್ಯುತ್ತರಶತತಮಸ್ಸರ್ಗಃ.

ಗಳು ಅಮೋಘವಾದವುಗಳು. ನಿನ್ನ ಸಂದರ್ಶನವೂ ಅತ್ಯಂತಾಮೋಘವಾದುದು. ನಿನ್ನ ಸ್ತೋತ್ರವೂ ಅಮೋಘವಾದುದೇ. ಯಾವ ಮಾನವರು ಈ ಭೂಲೋಕದಲ್ಲಿ ನಿನ್ನಲ್ಲಿ ಭಕ್ತಿಮಂತರಾಗಿರುವರೋ ಅವರೂ ಅಮೋಘರಾದವರೇ. (ಅವರಿಗೆ ಮುಕ್ತಿಯೆಂಬುದು ಖಂಡಿತವಾಗಿಯೂ ದೊರಕುವುದು). ಪುರಾಣಪುರುಷೋತ್ತಮನೂ, ದೇವಾದಿದೇವನೂ, ಶಾಶ್ವತನೂ ಆದ ನಿನ್ನನ್ನು ಯಾರು ಹೊಂದಿ ಭಜಿಸುವರೋ ಅವರು ಈ ಲೋಕ ಪರಲೋಕಗಳಲ್ಲಿ ಸಮಸ್ತ ಇಷ್ಟಾರ್ಥಗಳನ್ನೂ ಪಡೆಯುತ್ತಾರೆ. ಎಲೈ ಶ್ರೀರಾಮಮೂರ್ತಿಯೇ! ಋಷಿಪ್ರೋಕ್ತವೂ, ಅತಿ ಪುರಾತನವೂ ಆದ ಈ ಸ್ತೋತ್ರವನ್ನು ನಿರಂತರವೂ ಕೀರ್ತಿಸುವ (ಹೇಳಿಕೊಳ್ಳುವ) ಮಾನವರಿಗೆ ಎಲ್ಲ ವಿಷಯಗಳಲ್ಲಿಯೂ ಸೋಲೆಂಬುದೇ ಇರುವುದಿಲ್ಲವು. ॥೨೬-೩೨॥

ಇಂತಿದು ಬ್ರಹ್ಮಕೃತ ಶ್ರೀರಾಮಸ್ತೋತ್ರ ನಿರೂಪಣವೆಂಬ ನೂರ
ಇಪ್ಪತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕವಿಂಶತ್ಯುತ್ತರಶತತಮಸ್ಸರ್ಗಃ

ಏತಚ್ಛ್ರುತ್ವಾ ಶುಭಂ ವಾಕ್ಯಂ ಪಿತಾಮಹಸಮೀರಿತಂ । ಅಂಕೇನಾದಾಯ ವೈದೇಹೀಮುತ್ಪಪಾತ ವಿಭಾವಸುಃ ॥ ೧ ॥ ಸವಿಧೂಯ ಚಿತಾಂ ತಾಂತು ವೈದೇಹೀಂ ಹವ್ಯವಾಹನಃ । ಉತ್ತಸ್ಥೌ ಮೂರ್ತಿಮಾನಾಶು ಗೃಹೀತ್ವಾ ಜನಕಾತ್ಮಜಾಂ ॥ ೨ ॥ ತರುಣಾದಿತ್ಯಸಂಕಾಶಾಂ ತಪ್ತಕಾಂಚನಭೂಷಣಾಂ । ರಕ್ತಾಂಬರಧರಾಂ ಬಾಲಾಂ ನೀಲಕುಂಚಿತಮೂರ್ಧಜಾಂ ॥ ೩ ॥ ಅಕ್ಲಿಷ್ಟಮಾಲ್ಯಾಭರಣಾಂ ತಥಾರೂಪಾಂ ಮನಸ್ವಿನೀಂ । ದದೌ ರಾಮಾಯ ವೈದೇಹೀಮಂಕೇ ಕೃತ್ವಾ ವಿಭಾವಸುಃ ॥ ೪ ॥ ಅಬ್ರ

ಪಿತಾ....ತಂ - ಬ್ರಹ್ಮದೇವರಿಂದ ಹೇಳಲ್ಪಟ್ಟ, ಶುಭಂ - ಶುಭಕರವಾದ, ಏತದ್ವಾಕ್ಯಂ - ಈ ಮಾತನ್ನು, ಶ್ರುತ್ವಾ-ಕೇಳಿ, ವಿಭಾವಸುಃ-ಯಜ್ಞೇಶ್ವರನು, ಅಂಕೇನ ತೊಡೆಯಿಂದ, ವೈದೇಹೀಂ-ಸೀತಾದೇವಿಯನ್ನು, ಆದಾಯ-ಗ್ರಹಿಸಿ, ಉತ್ಪಪಾತ-ಮೇಲಕ್ಕೆದ್ದು ಬಂದನು. ॥ ೧ ॥ ಸಹವ್ಯವಾಹನಃ-ಆ ಅಗ್ನಿಯು, ತಾಂಚಿತಾಂ - ಆ ಚಿತಿಯನ್ನು, ವಿಧೂಯ - ಕೊಡವಿ, ವೈದೇಹೀಂ - ವಿದೇಹರಾಜನ ಮಗಳಾದ, ಜನಕಾತ್ಮಜಾಂ - ಸೀತಾದೇವಿಯನ್ನು, ಆಶು - ಜಾಗ್ರತೆಯಾಗಿ, ಗೃಹೀತ್ವಾ - ತೆಗೆದುಕೊಂಡು, ಮೂರ್ತಿಮಾನ್ - ದೇಹಧಾರಿಯಾಗಿ, ಉತ್ತಸ್ಥೌ - ಮೇಲಕ್ಕೆದ್ದನು. ॥ ೨ ॥ ವಿಭಾವಸುಃ-ಅಗ್ನಿಯು, ವೈದೇಹೀಂ - ಸೀತಾದೇವಿಯನ್ನು, ಅಂಕೇ - ತೊಡೆಯಲ್ಲಿ, ಕೃತ್ವಾ - ಕೂಡಿಸಿಕೊಂಡು, ತರು... ಶಾಂ - ಬಾಲಸೂರ್ಯನಿಗೆ ಸಮಾನವಾದ ಪ್ರಕಾಶವುಳ್ಳ, ತಪ್ತ....ಣಾಂ - ಕಾದು ಶುದ್ಧವಾದ ಚಿನ್ನದ ಒಡವೆಗಳುಳ್ಳ, ರಕ್ತಾಂ....ರಾಂ - ಕೆಂಪಾದ ವಸ್ತ್ರವನ್ನುಟ್ಟಿರುವ, ಬಾಲಾಂ - ಯೌವನ ಮಧ್ಯಸ್ಥಳಾದ, ನೀಲ....ಜಾಂ - ಕಪ್ಪಾಗಿ ಗುಂಗುರುಗಳಾಗಿರುವ ತಲೆಗೂದಲುಗಳುಳ್ಳ, ಅಕ್ಲಿ....ಣಾಂ - ಬಾಡದಿರುವ ಪುಷ್ಪಮಾಲಿಕೆಗಳೂ, ಒಡವೆಗಳೂ ಉಳ್ಳ, ತಥಾರೂಪಾಂ-ಅಗ್ನಿಪ್ರವೇಶ ಕಾಲದಲ್ಲಿದ್ದ ರೂಪದಂತೆಯೇ ರೂಪವುಳ್ಳ, ಮನಸ್ವಿನೀಂ - ಗಂಭೀರವಾದ ಮನವುಳ್ಳ ಸೀತಾದೇವಿಯನ್ನು, ರಾಮಾಯ -

---

ಚತುರ್ಮುಖಬ್ರಹ್ಮನು ನುಡಿದ, ಪರಬ್ರಹ್ಮ ಪ್ರತಿಪಾದಕವಾದುದೂ, ಪರಮ ಮಂಗಳಕರವಾದುದೂ ಆದ ಸ್ತುತಿವಚನಗಳನ್ನು ಕೇಳಿ ಯಜ್ಞೇಶ್ವರನು ವಿದೇಹ ರಾಜಪುತ್ರಿಯಾದ ಸೀತಾದೇವಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೇಲಕ್ಕೆದ್ದು ಬಂದನು. ಸ್ವಸ್ವರೂಪವನ್ನು ತಾಳಿದ ಆ ಹವ್ಯವಾಹನನು ಚಿತೆಯನ್ನು ಭೇದಿಸಿಕೊಂಡು ಸೀತಾದೇವಿಯೊಡನೆ ಜಾಗ್ರತೆಯಾಗಿ ಹೊರಗೆ ಬಂದನು. ಆ ಸಮಯದಲ್ಲಿ ಸೀತಾದೇವಿಯಾದರೋ, ಆಗತಾನೇ ಉದಿಸುತ್ತಿರುವ ಬಾಲಸೂರ್ಯನಿಗೆ ಸಮಾನವಾದ ಕಾಂತಿಯುಳ್ಳವಳಾಗಿಯೂ, ಪುಟಪಾಕಶೋಧಿತವಾದ ಬಂಗಾರದ ಒಡವೆಗಳಿಂದಲಂಕೃತಗಳಾಗಿಯೂ, ರಕ್ತಾಂಬರಧಾರಿಣಿಯಾಗಿಯೂ, ಗುಂಗುರುಗುಂಗುರಾದ ಕಪ್ಪೊಗೆದ ತಲೆಗೂದಲುಗಳುಳ್ಳವಳಾಗಿಯೂ, ಬಾಡದ ಪುಷ್ಪಹಾರಗಳೂ, ಕೆಡದ ವಿವಿಧಾಭರಣಗಳೂ ಉಳ್ಳವಳಾಗಿಯೂ, ನಿರ್ದುಷ್ಟವೂ, ಯೌವನ ಮಧ್ಯಸ್ಥವೂ ಆದ ರೂಪವುಳ್ಳವಳಾಗಿಯೂ ಇದ್ದಳು. ಯಜ್ಞೇಶ್ವರನು ಆ ದೇವಿಯನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು ಬಂದು ಶ್ರೀರಾಮಮೂರ್ತಿಗೆ

ವೀಕ್ಷ್ಯ ತದಾ ರಾಮಂ ಸಾಕ್ಷೀ ಲೋಕಸ್ಯ ಪಾವಕಃ । "ಏಷಾ ತೇ ರಾಮ! ವೈದೇಹೀ
ಪಾಪಮಸ್ಯಾ ನವಿದ್ಯತೇ ॥೫॥ ನೈವ ವಾಚಾ ನಮನಸಾ ನಾನುಧ್ಯಾನಾನ್ನಚಕ್ಷುಷಾ ।
ಸುವೃತ್ತಾ ವೃತ್ತಶೌಂಡೀರ! ನತ್ವಾಮತಿಚಚಾರಹ ॥ ೬ ॥ ರಾವಣೇನಾಪನೀತೈಷಾ
ವೀರ್ಯೋತ್ಸಿಕ್ತೇನ ರಕ್ಷಸಾ । ತ್ವಯಾ ವಿರಹಿತಾ ದೀನಾ ವಿವಶಾ ನಿರ್ಜನಾದ್ವನಾತ್
॥ ೭ ॥ ರುದ್ಧಾಚಾಂತಃಪುರೇ ಗುಪ್ತಾ ತ್ವಚ್ಚಿತ್ತಾ ತ್ವತ್ಪರಾಯಣಾ । ರಕ್ಷಿತಾ ರಾಕ್ಷಸೀ
ಸಂಘೈರ್ವಿಕೃತೈರ್ಘೋರದರ್ಶನೈಃ ॥ ೮ ॥ ಪ್ರಲೋಭ್ಯಮಾನಾ ವಿವಿಧಂ ಭರ್ತ್ಸ್ಯ

ಶ್ರೀರಾಮನಿಗೋಸ್ಕರ, ದದೌ - ಸಮರ್ಪಿಸಿದನು. ॥ ೩-೪ ॥ ತದಾ - ಆ ಕಾಲದಲ್ಲಿ, ಲೋಕಸ್ಯ - ಲೋಕಕ್ಕೆ, ಸಾಕ್ಷೀ - ಸಾಕ್ಷಾತ್ತಾಗಿ ದ್ರಷ್ಟೃವಾದ, ಪಾವಕಃ - ಅಗ್ನಿಯು, ರಾಮಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು, ಹೇ ರಾಮ - ಎಲೈ ಶ್ರೀರಾಮನೇ, ಏಷಾವೈದೇಹೀ - ಈ ಸೀತಾ ದೇವಿಯು, ತೇ - ನಿನ್ನವಳು, ಅಸ್ಯಾಃ - ಈ ದೇವಿಗೆ, ಪಾಪಂ - ರಾವಣನ ದೇಹಸ್ಪರ್ಶದಿಂದ ಹುಟ್ಟಿದ ಪಾಪವು, ನವಿದ್ಯತೇ - ಇರುವುದಿಲ್ಲವು. ॥ ೫ ॥ ವೃತ್ತಶೌಂಡೀರ - ಸಚ್ಚರಿತ್ರೆಯಲ್ಲಿ ಹಟವುಳ್ಳವನೇ, ಸುವೃತ್ತಾ - ಸದ್ವ್ಯಾಪಾರಶೀಲಳಾದ ಈ ಸೀತಾದೇವಿಯು, ತ್ವಾಂ - ನಿನ್ನನ್ನು, ವಾಚಾ - ಮಾತಿನಿಂದಲೂ, ನಾತಿಚಚಾರ - ಅತಿಕ್ರಮಿಸಿದವಳಲ್ಲ, ಮನಸಾ - ಮನಸ್ಸಿನಿಂದ, ನ - ಅತಿಕ್ರಮಿಸಲಿಲ್ಲ, ಅನುಧ್ಯಾನಾತ್ - ಸಂಕಲ್ಪದಿಂದಲೂ, ನ - ಅತಿಕ್ರಮಿಸಲಿಲ್ಲವು, ಚಕ್ಷುಷಾ - ಕಣ್ಣಿನಿಂದಲೂ, ನಾತಿಚಚಾರ - ಅತಿಕ್ರಮಿಸಿದವಳಲ್ಲವು. ॥ ೬ ॥ ತ್ವಯಾ - ನಿನ್ನಿಂದ, ವಿರಹಿತಾ - ವಿವರ್ಜಿತಳಾದ, ದೀನಾ - ದೀನಮುಖಳಾದ, ಏಷಾ - ಈ ಸೀತಾದೇವಿಯು, ವೀರ್ಯೋತ್ಸಿಕ್ತೇನ - ಪೌರುಷದಿಂದ ಗರ್ವಿತನಾದ, ರಕ್ಷಸಾ - ರಕ್ಕಸನಾದ, ರಾವಣೇನ - ರಾವಣನಿಂದ, ವಿವಶಾ - ಪರಾಧೀನಳಾಗಿ, ನಿರ್ಜನಾತ್ - ಜನವರ್ಜಿತವಾದ, ವನಾತ್ - ಕಾಡಿನಿಂದ, ಅಪನೀತಾ - ಕರೆದೊಯ್ಯಲ್ಪಟ್ಟಳು. ॥ ೭ ॥ ರುದ್ಧಾ - ತಡೆಮಾಡಲ್ಪಟ್ಟವಳಾಗಿ, ಅಂತಃಪುರೇ - ಅಂತಃಪುರದಲ್ಲಿ, ಗುಪ್ತಾ - ಸಂರಕ್ಷಿಸಲ್ಪಟ್ಟವಳಾದರೂ, ತ್ವಚ್ಚಿತ್ತಾ - ನಿನ್ನಲ್ಲೇ ಮನವುಳ್ಳವಳಾಗಿ, ತ್ವತ್ಪರಾಯಣಾ - ನೀನೇ ಪರಮಗತಿಯಾಗಿಯೂ ಉಳ್ಳವಳಾಗಿ, ಘೋರದರ್ಶನೈಃ - ಭಯಂಕರವಾದ ನೋಟವುಳ್ಳ, ವಿಕೃತೈಃ - ವಿಕಾರರೂಪಿಗಳಾದ, ರಾಕ್ಷಸೀಸಂಘೈಃ - ರಕ್ಕಸಿಯರ ತಂಡಗಳಿಂದ, ರಕ್ಷಿತಾ - ಸಂರಕ್ಷಿಸಲ್ಪಟ್ಟವಳು. ॥ ೮ ॥ ಮೈಥಿಲೀ -

ಸಮರ್ಪಿಸಿದನು. ಇಷ್ಟೆಯಲ್ಲದೆ ಲೋಕಸಾಕ್ಷಿಯಾದ ಆ ಪಾವಕನು ಶ್ರೀರಾಮನನ್ನು ಕುರಿತು, "ಎಲೈ ಶ್ರೀರಾಮಮೂರ್ತಿಯೇ! ಈ ಜಾನಕಿಯು ನಿನ್ನವಳು (ನಿನ್ನ ಪತ್ನಿಯು). ಈಕೆಯಲ್ಲಿ ಯಾವ ವಿಧವಾದ ಪಾಪವೂ ಇರುವುದಿಲ್ಲವು. ॥ ೧-೫ ॥ ಎಲೈ ರಾಮಚಂದ್ರನೇ! ಸದಾಚಾರಸಂಪನ್ನೆಯಾದ ಈ ದೇವಿಯು ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಬುದ್ಧಿಯಿಂದಾಗಲಿ, ಯಾವ ವಿಧದಿಂದಲೇ ಆಗಲಿ, ನಡತೆಯಿಂದಲೇ ಮಹಾ ವೀರನೆನಿಸಿದ ನಿನಗೆ ಪ್ರತಿಯಾಗಿ ನಡೆದುಕೊಂಡಿರುವುದಿಲ್ಲವು. ಈಕೆಯು ಪರಮಮಂಗಳಕರಳಾದವಳು. ಕೇವಲ ಪರಾಕ್ರಮದಿಂದ ಗರ್ವಿತನಾದ ರಾವಣಾಸುರನು ನಿರ್ಜನವಾದ ವನದಲ್ಲಿ ನೀನಿಲ್ಲದಿರುವಾಗ (ನಿನ್ನಿಂದ ಈಕೆಯನ್ನು ದೂರ ಮಾಡಿ) ಪರಮ ದೀನೆಯೂ, ಕೇವಲ ವಿವಶೆಯೂ ಆದ ಈಕೆಯನ್ನು ಹೊತ್ತುಕೊಂಡು ಹೋದನು. ನಿನ್ನಲ್ಲೇ ನ್ಯಸ್ತಚಿತ್ತಳಾದ ಈಕೆಯು ರಾವಣಾಂತಃಪುರದಲ್ಲಿ ಬಂಧಿತೆಯಾಗಿ ಮಹಾ ಕಠೋರ ಬುದ್ಧಿಯವರೂ, ಭಯಂಕರರೂಪಿಣಿಯರೂ ಆದ ರಾಕ್ಷಸಿಯರಿಂದ ರಕ್ಷಿಸಲ್ಪಡುತ್ತಿದ್ದಳು. ಬಹು ವಿಧವಾಗಿ ಬೇಳುವೆಗೊಳಿಸಿದರೂ, ವಿಧವಿಧವಾಗಿ ಹಿಂಸೆ

ಮಾನಾಚ ಮೈಥಿಲೀ । ನಾಚಿಂತಯತ ತದ್ರಕ್ಷಸ್ತ್ವದ್ಗತೇನಾಂತರಾತ್ಮನಾ ॥ ೯ ॥ ವಿಶುದ್ಧಭಾವಾಂ ನಿಷ್ಪಾಪಾಂ ಪ್ರತಿಗೃಹ್ಣೀಷ್ವ ರಾಘವ ! । ನಕಿಂಚಿದಭಿಧಾತವ್ಯಮಹ ಮಾಜ್ಞಾಪಯಾಮಿ ತೇ" ॥ ೧೦ ॥ ತತಃ ಪ್ರೀತಮನಾ ರಾಮಃ ಶ್ರುತ್ವೈತದ್ವದತಾಂ ವರಃ । ದಧ್ಯೌ ಮುಹೂರ್ತಂ ಧರ್ಮಾತ್ಮಾ ಬಾಷ್ಪವ್ಯಾಕುಲಲೋಚನಃ ॥ ೧೧ ॥ ಏವಮುಕ್ತೋ ಮಹಾತೇಜಾ ದ್ಯುತಿಮಾನ್ ದೃಢವಿಕ್ರಮಃ । ಅಬ್ರವೀತ್ತ್ರಿದಶಶ್ರೇಷ್ಠಂ ರಾಮೋ ಧರ್ಮಭೃತಾಂ ವರಃ ॥ ೧೨ ॥ " ಅವಶ್ಯಂ ತ್ರಿಷು ಲೋಕೇಷು ನ ಸೀತಾ ಪಾಪಮರ್ಹತಿ । ದೀರ್ಘಕಾಲೋಷಿತಾ ಹೀಯಂ ರಾವಣಾಂತಃಪುರೇ ಶುಭಾ ॥೧೩॥

ಸೀತಾದೇವಿಯು, ವಿವಿಧಂ - ನಾನಾರೀತಿಯಾಗಿ, ಪ್ರಲೋಭ್ಯಮಾನಾ - ಬೋಧಿಸಲ್ಪಟ್ಟವಳಾದರೂ, ಭರ್ತ್ಸ್ಯಮಾನಾಚ ಗರ್ಜಿಸಲ್ಪಟ್ಟವಳಾದರೂ, ತ್ವದ್ಗತೇನ-ನಿನ್ನನ್ನೇ ಹೊಂದಿರುವ, ಅಂತರಾತ್ಮನಾ-ಮನಸ್ಸಿನಿಂದ, ತದ್ರಕ್ಷಃ - ಆ ರಕ್ಕಸನನ್ನು, ನಾಚಿಂತಯತ - ಸ್ಮರಿಸಿದವಳಲ್ಲ. ॥ ೯ ॥ ರಾಘವ - ಶ್ರೀರಾಮನೇ, ವಿಶುದ್ಧಭಾವಾಂ - ಪರಿಶುದ್ಧವಾದ ಅಭಿಪ್ರಾಯವುಳ್ಳ, ನಿಷ್ಪಾಪಾಂ - ಪಾಪರಹಿತಳಾದ ಸೀತಾದೇವಿಯನ್ನು, ಪ್ರತಿಗೃಹ್ಣೀಷ್ವ-ಪರಿಗ್ರಹಿಸು, ಕಿಂಚಿತ್-ಸ್ವಲ್ಪವಾದರೂ, (ತ್ವಯಾ-ನಿನ್ನಿಂದ), ನಾಭಿಧಾತವ್ಯಂ-ಪ್ರತ್ಯುತ್ತರ ಹೇಳತಕ್ಕದಲ್ಲ, ಅಹಂ-ನಾನು, ತೇ-ನಿನಗೆ, ಆಜ್ಞಾಪಯಾಮಿ-ಆಜ್ಞಾಪಿಸುತ್ತೇನೆ. ॥೧೦॥ ತತಃ-ಬಳಿಕ, ವದತಾಂ-ಮಾತುಗಾರರಲ್ಲಿ, ವರಃ-ಶ್ರೇಷ್ಠನಾದ, ರಾಮಃ-ಶ್ರೀರಾಮನು, ಏತತ್ - ಈ ಮಾತನ್ನು, ಶ್ರುತ್ವಾ - ಕೇಳಿ, ಧರ್ಮಾತ್ಮಾ - ಧರ್ಮದಲ್ಲೇ ಮನವುಳ್ಳವನಾದಕಾರಣ, ಪ್ರೀತಮನಾಃ - ಸಂತೋಷಯುಕ್ತವಾದ ಮನವುಳ್ಳವನಾಗಿ, ಬಾಷ್ಪ....ನಃ - ಕಂಬನಿದುಂಬಿದ ಕಣ್ಣುಗಳುಳ್ಳವನಾಗಿ, ಮುಹೂರ್ತಂ - ಒಂದು ಮುಹೂರ್ತಕಾಲ, ದಧ್ಯೌ - ಆಲೋಚಿಸಿದನು, ಏವಂ - ಈ ಪರಿ, ಉಕ್ತಃ - ಹೇಳಲ್ಪಟ್ಟ, ಮಹಾತೇಜಾಃ - ಮಹಾ ಪ್ರಭಾವವಂತನಾದ, ದ್ಯುತಿಮಾನ್ - ಪ್ರಸನ್ನವಾದ ಕಾಂತಿಯುಳ್ಳ, ದೃಢವಿಕ್ರಮಃ - ದೃಢವಾದ ಪರಾಕ್ರಮವುಳ್ಳ, ಧರ್ಮಭೃತಾಂ - ಧರ್ಮಿಷ್ಠರಲ್ಲಿ, ವರಃ - ಶ್ರೇಷ್ಠನಾದ, ರಾಮಃ - ಶ್ರೀರಾಮನು, ತ್ರಿದಶಶ್ರೇಷ್ಠಂ - ದೇವತಾಶ್ರೇಷ್ಠನಾದ ಅಗ್ನಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೧೧-೧೨ ॥ ಸೀತಾ - ಸೀತಾದೇವಿಯು, ತ್ರಿಷುಲೋಕೇಷು - ಮೂರು ಲೋಕಗಳಲ್ಲಿಯೂ, ಪಾಪಂ - ಪಾಪಕೃತ್ಯವನ್ನು ಕುರಿತು, ನಾರ್ಹತಿ - ಯೋಗ್ಯಳಲ್ಲ, ಅವಶ್ಯಂ - ನಿಶ್ಚಯವು, ಜಾನಕೀಂ - ಸೀತಾದೇವಿಯನ್ನು, ಅವಿಶೋಧ್ಯ - ಅಗ್ನಿಶುದ್ಧಿ

ಗೊಳಗುಮಾಡಿದರೂ ನಿನ್ನಲ್ಲಿಯೇ ನೆಟ್ಟಮನಸ್ಸುಳ್ಳವಳಾದ ಈ ಮಿಥಿಲರಾಜ ಕುಮಾರಿಯಾದ ಸೀತಾದೇವಿಯು ರಾವಣಾಸುರನನ್ನು ಕುರಿತು ಯೋಚಿಸಿದವಳೇ ಅಲ್ಲವು. ಓ ರಾಮಭದ್ರ ! ಪರಿಶುದ್ಧವಾದ ಸ್ವಭಾವವುಳ್ಳವಳೂ, ಪಾಪರಹಿತಳೂ ಆದ ಈಕೆಯನ್ನು ಪರಿಗ್ರಹಿಸುವವನಾಗು. ನೀನು ಈ ವಿಷಯದಲ್ಲಿ ಪ್ರತಿಯಾಗಿ ಏನನ್ನೂ ಹೇಳಬೇಡ. ನಾನು ನಿನಗೆ ಅಪ್ಪಣೆ ಮಾಡುತ್ತಿರುವೆನು" ಎಂದು ಹೇಳಿದನು. ॥ ೬–೧೦ ॥ ಮಹಾ ಧರ್ಮಾತ್ಮನಾದ ಶ್ರೀರಾಮಮೂರ್ತಿಯು ಯಜ್ಞೇಶ್ವರನ ಮಾತುಗಳನ್ನು ಕೇಳಿ ಸ್ವಲ್ಪಕಾಲ ಯೋಚಿಸಿ ಆಮೇಲೆ ಸಂತುಷ್ಟಾಂತರಂಗನಾಗಿ, ಆನಂದಾಶ್ರುಗಳನ್ನು ಸುರಿಸುತ್ತ ಮಹಾವಾಗ್ಮಿಯೂ, ತೇಜಸ್ವಿಯೂ, ಧೀರನೂ, ಮಹಾ ವೀರನೂ ಆದುದರಿಂದ ಸುರಶ್ರೇಷ್ಠನಾದ ಯಜ್ಞೇಶ್ವರನನ್ನು ಕುರಿತು ಹೀಗೆಂದನು. "ಎಲೈ ಯಜ್ಞೇಶ್ವರನೇ! ಸೀತಾದೇವಿಯು ಮೂರು ಲೋಕಗಳಲ್ಲಿಯೂ ಪಾಪವನ್ನು ಮಾಡಲು ಅರ್ಹಳಲ್ಲವು. ಈ ದೇವಿಯು ರಾವಣನ ಅಂತಃಪುರದಲ್ಲಿ ಬಹಳಕಾಲವಿದ್ದುದರಿಂದ ಶುದ್ಧಳಾಗುವುದಕ್ಕೆ



ಯಜ್ಞೇಶ್ವರನು ಶ್ರೀರಾಮನಿಗೆ ಸೀತೆಯನ್ನು ಸಮರ್ಪಿಸುವುದು

" ಏಷಾ ತೇ ರಾಮ ! ವೈದೇಹೀ ಪಾಪಮಸ್ಯಾ ನವಿದ್ಯತೇ ।

....

ವಿಶುದ್ಧಭಾವಾಂ ನಿಷ್ಪಾಪಾಂ ಪ್ರತಿಗೃಹ್ಣೀಷ್ವ ರಾಘವ ! " ॥

ಪುಟ ೬೯೩

ಬಾಲಿಶಃ ಖಲು ಕಾಮಾತ್ಮಾ ರಾಮೋ ದಶರಥಾತ್ಮಜಃ । ಇತಿ ವಕ್ಷ್ಯಂತಿ ಮಾಂ ಸಂತೋ ಜಾನಕೀಮವಿಶೋಧ್ಯ ಹಿ ॥ ೧೪ ॥ ಅನನ್ಯಹೃದಯಾಂ ಭಕ್ತಾಂ ಮಚ್ಚಿತ್ತ ಪರಿವರ್ತಿನೀಂ । ಅಹಮಪ್ಯವಗಚ್ಛಾಮಿ ಮೈಥಿಲೀಂ ಜನಕಾತ್ಮಜಾಂ ॥ ೧೫ ॥ ಪ್ರತ್ಯ ಯಾರ್ಥಂ ತು ಲೋಕಾನಾಂ ತ್ರಯಾಣಾಂ ಸತ್ಯಸಂಶ್ರಯಃ । ಉಪೇಕ್ಷೇ ಚಾಪಿ ವೈದೇಹೀಂ ಪ್ರವಿಶಂತೀಂ ಹುತಾಶನಂ ॥ ೧೬ ॥ ಇಮಾಮಪಿ ವಿಶಾಲಾಕ್ಷೀಂ ರಕ್ಷಿತಾಂ ಸ್ವೇನ ತೇಜಸಾ । ರಾವಣೋ ನಾತಿವರ್ತೇತ ವೇಲಾಮಿವ ಮಹೋದಧಿಃ ॥ ೧೭ ॥

ಮಾಡದೆ, ಪರಿಗ್ರಹೇ - ಪರಿಗ್ರಹಣದಲ್ಲಿ, ಶುಭಾ - ಶುಭಕರಳಾದ, ಇಯಂ - ಈ ಸೀತಾದೇವಿಯು, ರಾವಣಾಂತಃಪುರೇ - ದಶಕಂಠನ ಅಂತಃಪುರದಲ್ಲಿ, ದೀರ್ಘ....ಹಿ - ಬಹಳಕಾಲವಿದ್ದವಳಷ್ಟೆ, ಬಾಲಿಶಃ - ಮೂರ್ಖನಾದ, ದಶರಥಾತ್ಮಜಃ - ದಶರಥನ ಮಗನಾದ, ರಾಮಃ - ಶ್ರೀರಾಮನು, ಕಾಮಾತ್ಮಾಖಲು - ಕಾಮದಲ್ಲಿಯೇ ಮನಸ್ಸುಳ್ಳವನಾದವನಷ್ಟೆ, ಇತಿ - ಇಂತೆಂಬ ಕಾರಣದಿಂದ, ಸಂತಃ - ಸತ್ಪುರುಷರು, ಮಾಂ - ನನ್ನನ್ನು ಕುರಿತು, ವಕ್ಷ್ಯಂತಿ - ಹೇಳುವರು. ॥ ೧೩-೧೪ ॥ ಅಹಮಪಿ - ನಾನೂ ಕೂಡ, ಅನ....ಯಾಂ - ಮತ್ತೊಬ್ಬರಲ್ಲಿ ಮನವಿಲ್ಲದಿರುವ, ಭಕ್ತಾಂ - ಭಕ್ತಳಾದ, ಜನಕಾತ್ಮಜಾಂ - ಜನಕ ರಾಯನ ಮಗಳಾದ, ಮೈಥಿಲೀಂ - ಸೀತಾದೇವಿಯನ್ನು, ಮಚ್ಚಿ....ನೀಂ-ನನ್ನ ಚಿತ್ತವನ್ನೇ ಅನುಸರಿ ಸಿರುವವಳನ್ನಾಗಿ, ಅವಗಚ್ಛಾಮಿ - ತಿಳಿದಿದ್ದೇನೆ. ॥ ೧೫ ॥ ಸತ್ಯಸಂಶ್ರಯಃ - ಸತ್ಯವೇ ಆಶ್ರಯ ವಾಗುಳ್ಳವನಾಗಿ, ತ್ರಯಾ....ನಾಂ - ಮೂರು ಲೋಕಗಳವರಿಗೂ, ಪ್ರತ್ಯಯಾರ್ಥಂ - ನಂಬಿಕೆ ಗಾಗಿ, ಹುತಾಶನಂ - ಅಗ್ನಿಯಲ್ಲಿ, ಪ್ರವಿಶಂತೀಂ - ಪ್ರವೇಶ ಮಾಡುತ್ತಿರುವ, ವೈದೇಹೀಂ - ಸೀತಾ ದೇವಿಯನ್ನು, ಉಪೇಕ್ಷೇ - ಉದಾಸೀನ ಮಾಡಿದೆನು. ॥ ೧೬ ॥ ಸ್ವೇನತೇಜಸಾ - ತನ್ನ ಪಾತಿವ್ರತ್ಯ ಪ್ರಭಾವದಿಂದ, ರಕ್ಷಿತಾಂ - ಸಂರಕ್ಷಿಸಲ್ಪಟ್ಟ, ವಿಶಾಲಾಕ್ಷೀಂ - ವಿಸ್ತಾರವಾದ ನೇತ್ರಗಳುಳ್ಳ, ಇಮಾ ಮಪಿ - ಈ ಸೀತಾದೇವಿಯನ್ನು, ರಾವಣಃ ದಶಕಂಠನು, ಮಹೋದಧಿಃ - ಸಮುದ್ರವು, ವೇಲಾಮಿವ - ತೀರವನ್ನೆಂತೋ ಅಂತು, ನಾತಿವರ್ತೇತ - ಅತಿಕ್ರಮಿಸಲಾರನು. ॥ ೧೭ ॥ ದುಷ್ಟಾತ್ಮಾ - ದುಷ್ಟವಾದ

ಅರ್ಹಳೇ ಅಹುದು. ಹಾಗೆ ಶುದ್ಧಳಾಗದ ಈಕೆಯನ್ನು ನಾನು ಪರಿಗ್ರಹಿಸಿದ್ದರೆ ಜನ ಗಳು, "ದಶರಥಾತ್ಮಜನಾದ ರಾಮನು ಕೇವಲ ಬಾಲ್ಯಚಾಪಲ್ಯದಿಂದಲೂ, ಕೇವಲ ವಿಷಯ ಲೋಲುಪತೆಯಿಂದಲೂ ತನ್ನ ಪತ್ನಿಯಾದ ಜಾನಕಿಯನ್ನು ಪರೀಕ್ಷಿಸದೆಯೇ ಪರಿಗ್ರಹಿಸಿ ದನು" ಎಂದು ಹೇಳಿಕೊಳ್ಳುವರು. ನನ್ನೊಬ್ಬನಲ್ಲಿಯೇ ನಟ್ಟಮನಸ್ಸುಳ್ಳವಳೂ, ನಿನ್ನ ಅಭಿ ಮತದಂತೆಯೇ ಯಾವಾಗಲೂ ನಡೆದುಕೊಳ್ಳುವಳೂ ಮಿಥಿಲೇಶ್ವರನಾದ ಜನಕರಾಯನ ಮಗಳೂ ಆದ ಈ ಸೀತೆಯನ್ನು ನಾನು ಯಥಾರ್ಥವಾಗಿ ತಿಳಿದಿದ್ದೇನೆ. ॥೧೧-೧೫॥ ಸ್ವತೇ ಜಸ್ಸಿನಿಂದಲೇ ತನ್ನನ್ನು ರಕ್ಷಿಸಿಕೊಂಡಿರುವ ಈ ದೇವಿಯನ್ನು ರಾವಣಾಸುರನು ಸಮುದ್ರವು ದಡವನ್ನೆಂತೋ ಅಂತು ತಿರಸ್ಕರಿಸಿರಲಾರನು. ("ಹಾಗಾದರೆ ಅಗ್ನಿಪ್ರವೇಶ ಮಾಡಿದ ಈಕೆ ಯನ್ನೇಕೆ ಉಪೇಕ್ಷಿಸಿದೆ" ಎಂದು ಕೇಳುವೆಯೇನೋ! ಆಲಿಸು.) ಮೂರು ಲೋಕಗಳವರೂ ಈ ದೇವಿಯು ಪಾವನಳೆಂಬ ವಿಷಯವನ್ನು ತಿಳಿದುಕೊಳ್ಳಲೆಂಬ ಭಾವದಿಂದಲೇ ನಾನು

ನಹಿಶಕ್ತಸ್ಸದುಷ್ಟಾತ್ಮಾ ಮನಸಾಪಿಹಿ ಮೈಥಿಲೀಂ । ಪ್ರಧರ್ಷಯಿತುಮಪ್ರಾಪ್ತಾಂ
ದೀಪ್ತಾಮಗ್ನಿಶಿಖಾಮಿವ ॥ ೧೮ ॥ ನೇಯಮರ್ಹತಿ ಚೈಶ್ವರ್ಯಂ ರಾವಣಾಂತಃ
ಪುರೇಶುಭಾ । ಅನನ್ಯಾಹಿ ಮಯಾ ಸೀತಾ ಭಾಸ್ಕರೇಣ ಪ್ರಭಾ ಯಥಾ ॥ ೧೯ ॥
ವಿಶುದ್ಧಾ ತ್ರಿಷು ಲೋಕೇಷು ಮೈಥಿಲೀ ಜನಕಾತ್ಮಜಾ । ನಹಿ ಹಾತುಮಿಯಂ ಶಕ್ಯಾ
ಕೀರ್ತಿರಾತ್ಮವತಾ ಯಥಾ ॥೨೦॥ ಅವಶ್ಯಂತು ಮಯಾ ಕಾರ್ಯಂ ಸರ್ವೇಷಾಂ ವೋ
ವಚಶ್ಶುಭಂ । ಸ್ನಿಗ್ಧಾನಾಂ ಲೋಕಮಾನ್ಯಾನಾಮೇವಂಚ ಬ್ರುವತಾಂ ಹಿತಂ" ॥೨೧॥

ಮನವುಳ್ಳ, ಸಃ - ಆ ದಶಕಂಠನು, ದೀಪ್ತಾಂ - ಪ್ರಜ್ವಲಿಸುತ್ತಿರುವ, ಅಗ್ನಿಶಿಖಾಮಿವ - ಅಗ್ನಿಜ್ವಾಲೆಯನ್ನೆಂತೋ ಅಂತು, ಅಪ್ರಾಪ್ತಾಂ ಅಸ್ವಾಧೀನಳಾದ, ಮೈಥಿಲೀಂ-ಸೀತಾದೇವಿಯನ್ನು, ಮನಸಾಪಿ - ಮನಸ್ಸಿನಿಂದಲೂ, ಪ್ರಧರ್ಷಯಿತುಂ-ತಿರಸ್ಕರಿಸುವುದಕ್ಕೆ, ನಶಕ್ತೋಹಿ-ಸಮರ್ಥನಲ್ಲವಷ್ಟೆ. ॥ ೧೮ ॥ ಶುಭಾ-ಶುಭಕರಳಾದ, ಇಯಂ-ಈ ಸೀತಾದೇವಿಯು, ರಾವಣಾಂತಃಪುರೇ ದಶಕಂಠನ ಅಂತಃಪುರದಲ್ಲಿ, ಐಶ್ವರ್ಯಂ - ಅವನ ಐಶ್ವರ್ಯವನ್ನು ಕುರಿತು, ನಾರ್ಹತಿ - ಅಪೇಕ್ಷಿಸುವವಳಲ್ಲ, ಸೀತಾ - ಸೀತಾದೇವಿಯು, ಭಾಸ್ಕರೇಣ - ಸೂರ್ಯನಿಂದ, ಪ್ರಭಾಯಥಾ - ಕಾಂತಿಯಂತೆ, ಮಯಾ - ನನ್ನಿಂದ, ಅನನ್ಯಾಹಿ - ಅಭಿನ್ನಳಷ್ಟೆ. ॥ ೧೯ ॥ ತ್ರಿಷುಲೋಕೇಷು - ಮೂರು ಲೋಕಗಳಲ್ಲಿಯೂ, ವಿಶುದ್ಧಾ - ಪರಿಶುದ್ಧಳಾದ, ಜನಕಾತ್ಮಜಾ - ಜನಕರಾಯನ ಮಗಳಾದ, ಇಯಂಮೈಥಿಲೀ - ಈ ಸೀತಾದೇವಿಯು, ಆತ್ಮವತಾ - ಆತ್ಮಜ್ಞಾನಿಯಾದ ಪುರುಷನಿಂದ, ಕೀರ್ತಿರಿವ - ಯಶಸ್ಸಿನಂತೆ, ಹಾತುಂ - ತೊರೆಯಲು, ನಶಕ್ಯಾಹಿ - ಸಾಧ್ಯಳಲ್ಲವಷ್ಟೆ. ॥ ೨೦ ॥ ಏವಂ - ಈ ಪರಿಯಾಗಿ, ಹಿತಂ - ಹಿತವನ್ನು, ಬ್ರುವತಾಂ - ಹೇಳುತ್ತಿರುವ, ಲೋಕಮಾನ್ಯಾನಾಂ-ಲೋಕಪೂಜ್ಯರಾದ, ಸ್ನಿಗ್ಧಾನಾಂ-ಪ್ರೇಮವುಳ್ಳ, ಸರ್ವೇಷಾಂ-ಸಮಸ್ತರಾದ, ವಃ - ನಿಮ್ಮ, ಶುಭಂ - ಮಂಗಳಕರವಾದ, ವಚಃ - ಮಾತು, ಮಯಾತು - ನನ್ನಿಂದಲಾದರೆ, ಅವಶ್ಯಂ - ನಿಶ್ಚಯನಾಗಿಯೂ, ಕಾರ್ಯಂ - ಮಾಡತಕ್ಕದ್ದು. ॥೨೧॥ ಮಹಾಬಲಃ - ಬಹಳ

ಉಪೇಕ್ಷಿಸಿದೆನು. ದುಷ್ಟಬುದ್ಧಿಯವನಾದ ರಾವಣನು ಪ್ರಜ್ವಲಿಸುತ್ತಿರುವ ಅಗ್ನಿಜ್ವಾಲೆಯನ್ನೆಂತೋ ಅಂತು ಈ ಜಾನಕಿಯನ್ನು ಮನಸ್ಸಿನಿಂದಲೂ ತಿರಸ್ಕರಿಸಲು ಸಮರ್ಥನಾಗುತ್ತಿರಲಿಲ್ಲವು. ಎಲೈ ಅಗ್ನಿದೇವನೇ! ಈಕೆಯು ರಾವಣನ ಅಂತಃಪುರದಲ್ಲಿದ್ದರೂ ಈಕೆಯ ಪಾತಿವ್ರತ್ಯಕ್ಕೆ ಕುಂದಕ ಬರುವುದಿಲ್ಲವು. ಈ ದೇವಿಯು ನನ್ನಿಂದ ಅನನ್ಯಳಾದವಳು. ಸೂರ್ಯನಿಗೆ ಪ್ರಭಾದೇವಿಯೆಂತೋ ಅಂತು ಈ ದೇವಿಯು ನನ್ನಿಂದ ಅಭೇದ್ಯಳಾದವಳು. ಈಕೆಯು ಮೂರು ಲೋಕಗಳಲ್ಲಿಯೂ ಪರಮ ಪವಿತ್ರಳಾದವಳು. ಇಂತಹಳನ್ನು ಪರಾಕ್ರಮಿಯಾದವನು ಕೀರ್ತಿಯನ್ನೆಂತೋ ಅಂತು ನಾನೆಂದಿಗೂ ತೊರೆಯಲಾರೆನು. "ಎಲೈ ದೇವೋತ್ತಮರಿರಾ! ನೀವೆಲ್ಲರೂ ನನ್ನಲ್ಲಿ ಪರಮ ವಿಶ್ವಾಸವುಳ್ಳವರು. ಲೋಕಪಾಲಕರಾದವರು. ಇಂತಹ ನೀವೆಲ್ಲರೂ ನನಗೆ ಹಿತವನ್ನು ಹೇಳುತ್ತಿರುವಿರಿ. ನಿಮ್ಮೆಲ್ಲರ ಮಾತಿನಂತೆ ನಾನು ನಡೆಯಬೇಕು; ನಡೆಯುವೆನು." ಮಹಾ ಬಲಾಢ್ಯನೂ, ವಿಜಯಲಕ್ಷ್ಮೀ

ಇತ್ಯೇವಮುಕ್ತ್ವಾ ವಿದಿತಂ ಮಹಾಬಲೈಃ
ಪ್ರಶಸ್ಯಮಾನಸ್ಸ್ವಕೃತೇನ ಕರ್ಮಣಾ ।
ಸಮೇತ್ಯ ರಾಮಃ ಪ್ರಿಯಯಾ ಮಹಾಬಲ
ಸ್ಸುಖಂ ಸುಖಾರ್ಹೋಽನುಬಭೂವ ರಾಘವಃ ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕವಿಂಶತ್ಯುತ್ತರಶತತಮಸ್ಸರ್ಗಃ

ಸಾಮರ್ಥ್ಯವಂತನಾದ, ರಾಘವಃ - ರಘುಕುಲೋತ್ಪನ್ನನಾದ, ರಾಮಃ - ಶ್ರೀರಾಮನು, ಇತ್ಯೇವಂ - ಈ ಪರಿಯಾಗಿ, ವಿದಿತಂ-ತಿಳಿಯಲ್ಪಟ್ಟಿತು, ಇದಂ - ಈ ಮಾತನ್ನು, ಉಕ್ತ್ವಾ-ಹೇಳಿ, ಸ್ವಕೃತೇನ - ತನ್ನಿಂದ ಮಾಡಲ್ಪಟ್ಟ, ಕರ್ಮಣಾ - ವ್ಯಾಪಾರದಿಂದ, ಮಹಾಬಲೈಃ - ಬಹಳ ಪ್ರಭಾವವಂತರಾದ ಬ್ರಹ್ಮಾದಿಗಳಿಂದ, ಪ್ರಶಸ್ಯಮಾನಃ - ಸ್ತೋತ್ರ ಮಾಡಲ್ಪಟ್ಟವನಾಗಿ, ಪ್ರಿಯಯಾ - ಹೆಂಡತಿಯಿಂದ, ಸಮೇತ್ಯ - ಸೇರಿ, ಸುಖಂ - ಸುಖವಾಗಿ, ಸುಖಾರ್ಹಃ - ಸುಖಕ್ಕೆ ಯೋಗ್ಯನಾಗಿ, ಅನುಬಭೂವ - ಅನುಭವಿಸಿದನಷ್ಟೆ. ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕವಿಂಶತ್ಯುತ್ತರಶತತಮಸ್ಸರ್ಗಃ.

ಸಹಿತನೂ, ತನ್ನ ಸತ್ಕ್ರಿಯೆಗಳಿಂದಲೇ ಸ್ತುತಿಸಲ್ಪಟ್ಟವನೂ ಆದ ಶ್ರೀರಾಮಮೂರ್ತಿಯು ಈ ಪ್ರಕಾರವಾಗಿ ನುಡಿದು ಯಜ್ಞೇಶ್ವರನ ಬಳಿಗೈದಿ ಪ್ರೀತಿಸಲು ಯೋಗ್ಯಳಾದ ಸೀತಾದೇವಿಯನ್ನು ಪರಿಗ್ರಹಿಸಿ ಸಂತೋಷಭರಿತನಾದನು. ॥ ೧೬-೨೧ ॥

ಇಂತಿದು ಯಜ್ಞೇಶ್ವರಕೃತ ಸೀತಾಸಮರ್ಪಣ ಮತ್ತು ಶ್ರೀರಾಮಕೃತ ಸೀತಾಪರಿಗ್ರಹ ವೃತ್ತಾಂತ ನಿರೂಪಣವೆಂಬ ನೂರಇಪ್ಪತ್ತೊಂದನೆಯ ಸರ್ಗವು ಸಮಾಪ್ತನಾದುದು.

ಯುದ್ಧಕಾಂಡೇ ದ್ವಾವಿಂಶತ್ಯುತ್ತರಶತತಮಸ್ಸರ್ಗಃ

ಏತಚ್ಛ್ರುತ್ವಾ ಶುಭಂ ವಾಕ್ಯಂ ರಾಘವೇಣ ಸುಭಾಷಿತಂ । ಇದಂ ಶುಭತರಂ ವಾಕ್ಯಂ ವ್ಯಾಜಹಾರ ಮಹೇಶ್ವರಃ ॥ ೧ ॥ "ಪುಷ್ಕರಾಕ್ಷ! ಮಹಾಬಾಹೋ ಮಹಾವಕ್ಷಃ ಪರಂತಪ! । ದಿಷ್ಟ್ಯಾ ಕೃತಮಿದಂ ಕರ್ಮ ತ್ವಯಾ ಶಸ್ತ್ರಭೃತಾಂವರ! ॥ ೨ ॥ ದಿಷ್ಟ್ಯಾ ಸರ್ವಸ್ಯ ಲೋಕಸ್ಯ ಪ್ರವೃದ್ಧಂ ದಾರುಣಂ ತಮಃ । ಅಪಾವೃತ್ತಂ ತ್ವಯಾ ಸಂಖ್ಯೇ ರಾಮ! ರಾವಣಜಂ ಭಯಂ ॥ ೩ ॥ ಆಶ್ವಾಸ್ಯ ಭರತಂ ದೀನಂ ಕೌಸಲ್ಯಾಂಚ ಯಶಸ್ವಿನೀಂ । ಕೈಕೇಯೀಂಚ ಸುಮಿತ್ರಾಂಚ ದೃಷ್ಟ್ವಾ ಲಕ್ಷ್ಮಣಮಾತರಂ ॥ ೪ ॥

ಮಹೇಶ್ವರಃ-ಪರಮೇಶ್ವರನು, ರಾಘವೇಣ-ಶ್ರೀರಾಮನಿಂದ, ಸುಭಾಷಿತಂ-ಚೆನ್ನಾಗಿ ಹೇಳಲ್ಪಟ್ಟ, ಶುಭಂ - ಶುಭಕರವಾದ, ಏತದ್ವಾಕ್ಯಂ - ಈ ಮಾತನ್ನು, ಶ್ರುತ್ವಾ - ಕೇಳಿ, ಶುಭತರಂ - ಶುಭತರವಾದ, ಇದಂವಾಕ್ಯಂ - ಈ ಮಾತನ್ನು, ವ್ಯಾಜಹಾರ - ಹೇಳಿದನು. ॥ ೧ ॥ ಪುಷ್ಕರಾಕ್ಷ - ಕಮಲಗಳಿಗೆ ಸಮಾನವಾದ ನೇತ್ರಗಳುಳ್ಳವನೇ, ಮಹಾಬಾಹೋ - ಮಹಾ ಭುಜಶಾಲಿಯೇ, ಮಹಾವಕ್ಷಃ - ವಿಶಾಲವಾದ ವಕ್ಷಸ್ಥಳವುಳ್ಳವನೇ, ಪರಂತಪ - ಶತ್ರುಸಂಹಾರಕನೇ, ಶಸ್ತ್ರ....ರ - ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದವನೇ, ದಿಷ್ಟ್ಯಾ - ದೈವಾಧೀನದಿಂದ, ಇದಂಕರ್ಮ - ಈ ರಾವಣನ ವಧರೂಪವಾದ ವ್ಯಾಪಾರವು, ತ್ವಯಾ - ನಿನ್ನಿಂದ, ಕೃತಂ - ಮಾಡಲ್ಪಟ್ಟಿತು. ॥ ೨ ॥ ರಾಮ - ಶ್ರೀರಾಮನೇ, ದಿಷ್ಟ್ಯಾ - ಅದೃಷ್ಟದಿಂದ, ಸರ್ವಸ್ಯಲೋಕಸ್ಯ - ಸಮಸ್ತ ಲೋಕಕ್ಕೂ, ಪ್ರವೃದ್ಧಃ - ವೃದ್ಧಿಗೊಂಡ, ದಾರುಣಂ - ಕ್ರೂರವಾದ ರಾವಣಜಂ - ರಾವಣನಿಂದ ಹುಟ್ಟಿದ, ಭಯಂ - ಭಯವೆಂಬ, ತಮಃ - ಅಂಧಕಾರವು, ಸಂಖ್ಯೇ - ಕಾಳೆಗದಲ್ಲಿ, ತ್ವಯಾ - ನಿನ್ನಿಂದ, ಅಪಾವೃತ್ತಂ - ಹೋಗಲಾಡಿಸಲ್ಪಟ್ಟಿತು. ॥೩॥ ದೀನಂ - ಪರಿತಪಿಸುತ್ತಿರುವ, ಭರತಂ - ಭರತನನ್ನು, ಯಶಸ್ವಿನೀಂ - ಕೀರ್ತಿವಂತಳಾದ, ಕೌಸಲ್ಯಾಂಚ - ಕೌಸಲ್ಯಾದೇವಿಯನ್ನೂ, ಲಕ್ಷ್ಮಣಮಾತರಂ - ಲಕ್ಷ್ಮಣನಿಗೆ ತಾಯಿಯಾದ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ದೃಷ್ಟ್ವಾ - ಕಂಡು, ಆಶ್ವಾಸ್ಯ - ಸಮಾಧಾನಗೊಳಿಸಿ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ರಾಜ್ಯಂ - ರಾಜ್ಯವನ್ನು, ಪ್ರಾಪ್ಯ-

---

ಶ್ರೀರಾಮಚಂದ್ರನಾಡಿದ ಶುಭ ವಾಕ್ಯಗಳನ್ನು ಕೇಳಿದ ತರುವಾಯ ಮಹೇಶ್ವರನು ಮತ್ತೂ ಶುಭತರವಾದ ಮಾತನ್ನಾಡುವವನಾಗಿ ಶ್ರೀರಾಮಮೂರ್ತಿಯನ್ನು ಕುರಿತು, "ಎಲೈ ಕಮಲಾಕ್ಷನೇ, ಮಹಾ ಬಾಹುವೂ, ಮಹಾ ವಕ್ಷಸ್ಕನೂ, ಶತ್ರುಮರ್ದನನೂ, ಧರ್ಮಜ್ಞರಲ್ಲಿ ಉತ್ತಮನಾದವನೂ ಆದ ನೀನು ದೈವಯೋಗದಿಂದ ಈ ಮಹತ್ತರವಾದ ಕಾರ್ಯವನ್ನು ಮಾಡಿದೆ. ನೀನು ರಣಾಂಗಣದಲ್ಲಿ ರಾವಣನನ್ನು ಗೆದ್ದು ಲೋಕವನ್ನೇ ಹಬ್ಬಿ ನಿಂತಿದ್ದ ಕತ್ತಲನ್ನು, ಕಳೆದೆಯಲ್ಲದೆ, ಅವನಿಂದುಂಟಾಗಿದ್ದ ಭಯವನ್ನೂ ನಿವಾರಿಸಿದೆ. ಎಲೈ ಶ್ರೀರಾಮಮೂರ್ತಿಯೇ! ದೀನನಾದ ಭರತಕುಮಾರನನ್ನು ಸಮಾಧಾನಗೊಳಿಸುವುದು ಮಾತ್ರವಲ್ಲದೆ, ಕೀರ್ತಿಶಾಲಿನಿಯಾದ ಕೌಸಲ್ಯೆಯನ್ನೂ, ಕೈಕೇಯಿ ಸುಮಿತ್ರೆಯರನ್ನೂ ಸಮಾಧಾನಗೊಳಿಸುವವನಾಗು. ರಾಮಾ! ನೀನು ಅಯೋಧ್ಯಾಪಟ್ಟಣವನ್ನು ಸೇರಿ ಅಲ್ಲಿ ಪಟ್ಟಾಭಿಷಿಕ್ತನಾಗಿ

ಪ್ರಾಪ್ಯ ರಾಜ್ಯಮಯೋಧ್ಯಾಯಾಂ ನಂದಯಿತ್ವಾ ಸುಹೃಜ್ಜನಂ । ಇಕ್ಷ್ವಾಕೂಣಾಂ ಕುಲೇ ವಂಶಂ ಸ್ಥಾಪಯಿತ್ವಾ ಮಹಾಬಲ ! ॥ ೫ ॥ ಇಷ್ಟ್ವಾ ತುರಗಮೇಧೇನ ಪ್ರಾಪ್ಯ ಚಾನುತ್ತಮಂ ಯಶಃ । ಬ್ರಾಹ್ಮಣೇಭ್ಯೋ ಧನಂ ದತ್ವಾ ತ್ರಿದಿನಂ ಗಂತುಮರ್ಹಸಿ ॥೬॥ ಏಷ ರಾಜಾವಿಮಾನಸ್ಥಃ ಪಿತಾ ದಶರಥಸ್ತವ । ಕಾಕುತ್ಸ್ಥ ಮಾನುಷೇ ಲೋಕೇ ಗುರುಸ್ತವ ಮಹಾಯಶಾಃ ॥ ೭ ॥ ಇಂದ್ರಲೋಕಂ ಗತಃ ಶ್ರೀಮಾಂಸ್ತ್ವಯಾ ಪುತ್ರೇಣ ತಾರಿತಃ । ಲಕ್ಷ್ಮಣೇನ ಸಹಭ್ರಾತ್ರಾ ತ್ವಮೇನಮಭಿವಾದಯ ” ॥ ೮ ॥ ಮಹಾದೇವ ವಚಃ ಶ್ರುತ್ವಾ ಕಾಕುತ್ಸ್ಥಸ್ಸಹಲಕ್ಷ್ಮಣಃ । ವಿಮಾನಶಿಖರಸ್ಥಸ್ಯ ಪ್ರಣಾಮಮಕರೋ

ಹೊಂದಿ, ಸುಹೃಜ್ಜನಂ - ಸ್ನೇಹಿತಜನರನ್ನು, ನಂದಯಿತ್ವಾ - ಸಂತೋಷಗೊಳಿಸಿ, ಇಕ್ಷ್ವಾಕೂಣಾಂ ಕುಲೇ - ಇಕ್ಷ್ವಾಕು ವಂಶದಲ್ಲಿ, ವಂಶಂ - ಸಂತಾನವನ್ನು, ಸ್ಥಾಪಯಿತ್ವಾ - ಪ್ರತಿಷ್ಠಿಸಿ, ಮಹಾಬಲ ಎಲೈ ಮಹಾ ಬಲಪರಾಕ್ರಮಿಯೇ, ತುರಗಮೇಧೇನ ಅಶ್ವಮೇಧದಿಂದ, ಇಷ್ಟ್ವಾ-ಯಜ್ಞಮಾಡಿ, ಅನುತ್ತಮಂ - ಸರ್ವೋತ್ತಮವಾದ, ಯಶಃ - ಕೀರ್ತಿಯನ್ನು, ಪ್ರಾಪ್ಯ - ಪಡೆದು, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗೆ, ಧನಂ - ದ್ರವ್ಯವನ್ನು, ದತ್ವಾ - ಕೊಟ್ಟು, ತ್ರಿದಿವಂ - ಸ್ವರ್ಲೋಕವನ್ನು, ಗಂತುಂ - ಹೊಂದುವುದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೪-೬ ॥ ಕಾಕುತ್ಸ್ಥ - ಕಕುತ್ಸ್ಥವಂಶೋತ್ಪನ್ನನೇ, ತವ - ನಿನ್ನ, ಪಿತಾ - ತಂದೆಯಾದ, ಏಷಃದಶರಥೋರಾಜಾ - ಈ ದಶರಥಮಹಾರಾಯನು, ವಿಮಾನಸ್ಥಃ - ವಿಮಾನದಲ್ಲಿ ಕುಳಿತಿರುವನು, ಮಾನುಷೇಲೋಕೇ - ಮನುಷ್ಯಲೋಕದಲ್ಲಿ, ಮಹಾಯಶಾಃ - ಮಹಾ ಕೀರ್ತಿವಂತನಾದ, ತವ - ನಿನಗೆ, ಗುರುಃ - ತಂದೆಯಾದ, ಶ್ರೀಮಾನ್ - ಸಂಪದ್ಯುಕ್ತನಾದ ಈ ದಶರಥಮಹಾರಾಯನು, ಪುತ್ರೇಣ - ಮಗನಾದ, ತ್ವಯಾ - ನಿನ್ನಿಂದ, ತಾರಿತಃ - ಉತ್ತೀರ್ಣನಾಗಿ, ಇಂದ್ರಲೋಕಂ - ಸ್ವರ್ಗಲೋಕವನ್ನು, ಗತಃ - ಹೊಂದಿದ್ದಾನೆ, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ತ್ವಂ - ನೀನು, ಏನಂ - ಈ ದಶರಥರಾಯನನ್ನು ಕುರಿತು, ಅಭಿವಾದಯ - ನಮಸ್ಕರಿಸು. ॥ ೭-೮ ॥ ಮಹಾದೇವವಚಃ - ಪರಮೇಶ್ವರನ ವಾಕ್ಯವನ್ನು, ಶ್ರುತ್ವಾ - ಕೇಳಿ, ಸಹಲಕ್ಷ್ಮಣಃ - ಲಕ್ಷ್ಮಣನೊಡಗೂಡಿದ, ಕಾಕುತ್ಸ್ಥಃ - ಶ್ರೀರಾಮನು, ವಿಮಾ....ಸ್ಯ ವಿಮಾನ ಶಿಖರದಲ್ಲಿ ಕುಳಿತಿರುವ, ಪಿತುಃ - ತಂದೆಗೆ, ಪ್ರಣಾಮಂ - ನಮಸ್ಕಾರವನ್ನು, ಅಕರೋತ್ - ಮಾಡಿದನು. ॥ ೯ ॥ ವಿಭುಃ - ಸಮರ್ಥನಾದ ಶ್ರೀರಾಮನು, ಸ್ವಯಾ - ತನ್ನ, ಲಕ್ಷ್ಮ್ಯಾ -

---

ಮಿತ್ರವೃಂದವನ್ನು ಆನಂದಗೊಳಿಸಿ ಇಕ್ಷ್ವಾಕುವಂಶದಲ್ಲಿ ಸಂತಾನವನ್ನು ವೃದ್ಧಿಗೊಳಿಸಿ ವಂಶವನ್ನು ಸ್ಥಾಪಿಸಿ, ಅಶ್ವಮೇಧ ಯಾಗವನ್ನು ಮಾಡಿ ದೇವತೆಗಳನ್ನು ತೃಪ್ತಿಗೊಳಿಸಿ ಬ್ರಾಹ್ಮಣೋತ್ತಮರಿಗೆ ಧನವನ್ನಿತ್ತು ಸ್ವರ್ಗವನ್ನು ಸೇರುವವನಾಗು. ॥೧-೬॥ ಎಲೈ ಮಹಾ ಬಲಾಢ್ಯನಾದ ಶ್ರೀರಾಮನೇ! ಇದೋ ನೋಡು. ಮಹಾರಾಜನಾದ ಈ ದಶರಥನು ವಿಮಾನಾರೂಢನಾಗಿ ಬಂದಿರುವನು. ಎಲೈ ಕಾಕುತ್ಸ್ಥನೇ ನಿನ್ನ ತಂದೆಯೂ, ಗುರುವೂ ಆದ ಈತನು ಮನುಷ್ಯಲೋಕದಲ್ಲಿ ಪುತ್ರನಾದ ನಿನ್ನಿಂದ ತಾರಿತನಾಗಿ ಕೀರ್ತಿಸಂಪನ್ನನೂ, ತೇಜಸ್ಸಂಪನ್ನನೂ ಆಗಿ ಇಂದ್ರಲೋಕವನ್ನು ಹೊಂದಿದನು. ರಾಮಾ! ಲಕ್ಷ್ಮಣ ಸಮೇತನಾಗಿ ನೀನೀತನನ್ನು ನಮಸ್ಕರಿಸುವವನಾಗು” ಎಂದು ಹೇಳಿದನು. ಶ್ರೀರಾಮಮೂರ್ತಿಯು ಮಹಾದೇವನ ಮಾತುಗಳನ್ನುಕೇಳಿ ವಿಮಾನಾರೂಢನಾಗಿದ್ದ ತನ್ನತಂದೆಯಾದ ದಶರಥಮಹಾರಾಜನಿಗೆ ಲಕ್ಷ್ಮಣಸಹಿತನಾಗಿ, ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಆಗ ಶ್ರೀರಾಮನು

ತ್ಪಿತುಃ ॥೯॥ ದೀಪ್ಯಮಾನಂ ಸ್ವಯಾ ಲಕ್ಷ್ಮ್ಯಾ ವಿರಜೋಂಬರಧಾರಿಣಂ । ಲಕ್ಷ್ಮಣೇನ ಸಹಭ್ರಾತ್ರಾ ದದರ್ಶ ಪಿತರಂ ವಿಭುಃ ॥೧೦॥ ಹರ್ಷೇಣ ಮಹತಾ ವಿಷ್ಟೋ ವಿಮಾನಸ್ಥೋ ಮಹೀಪತಿಃ । ಪ್ರಾಣೈಃ ಪ್ರಿಯತರಂ ದೃಷ್ಟ್ವಾ ಪುತ್ರಂ ದಶರಥಸ್ತದಾ ॥೧೧॥ ಆರೋಪ್ಯಾಂಕಂ ಮಹಾಬಾಹುರ್ವರಾಸನಗತಃ ಪ್ರಭುಃ । ಬಾಹುಭ್ಯಾಂ ಸಂಪರಿಷ್ವಜ್ಯ ತತೋ ವಾಕ್ಯಂ ಸಮಾದದೇ ॥೧೨॥ "ನಮೇ ಸ್ವರ್ಗೋ ಬಹುಮತಸ್ಸಮ್ಮಾನಶ್ಚ ಸುರರ್ಷಿಭಿಃ । ತ್ವಯಾ ರಾಮ ! ವಿಹೀನಸ್ಯ ಸತ್ಯಂ ಪ್ರತಿಶೃಣೋಮಿ ತೇ ॥೧೩॥ ಅದ್ಯ ತ್ವಾಂ ನಿಹತಾಮಿತ್ರಂ ದೃಷ್ಟ್ವಾ ಸಂಪೂರ್ಣಮಾನಸಂ ।

ದೇವೈಶ್ವರ್ಯದಿಂದ, ದೀಪ್ಯಮಾನಂ - ಕಂಗೊಳಿಸುತ್ತಿರುವ, ವಿರಜೋಂಬರಧಾರಿಣಂ - ಧೂಳಿಲ್ಲದ ಶುಭ್ರವಾದ ವಸ್ತ್ರವನ್ನು ಧರಿಸಿರುವ, ಪಿತರಂ-ತಂದೆಯನ್ನು, ಭ್ರಾತ್ರಾ-ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ದದರ್ಶ - ಕಂಡನು. ॥೧೦॥ ವಿಮಾನಸ್ಥಃ - ವಿಮಾನದಲ್ಲಿ ಕುಳಿತಿರುವ, ಮಹೀಪತಿಃ - ಅರಸನಾದ, ದಶರಥಃ - ದಶರಥರಾಯನು, ಪ್ರಾಣೈಃ - ಪ್ರಾಣಗಳಿಗಿಂತಲೂ, ಪ್ರಿಯತರಂ - ಅತ್ಯಂತ ಪ್ರೀತಿಪಾತ್ರನಾದ, ಪುತ್ರಂ - ಮಗನನ್ನು, ದೃಷ್ಟ್ವಾ - ಕಂಡ, ಮಹತಾ - ಬಹಳವಾದ, ಹರ್ಷೇಣ - ಸಂತೋಷದಿಂದ, ಆವಿಷ್ಟಃ - ಕೂಡಿದವನಾದನು. ॥೧೧॥ ತತಃ - ಬಳಿಕ, ಮಹಾಬಾಹುಃ - ಮಹಾ ಭುಜಪರಾಕ್ರಮಿಯಾದ, ವರಾ....ತಃ - ಶ್ರೇಷ್ಠವಾದ ಆಸನವನ್ನು ಹೊಂದಿರುವ, ಪ್ರಭುಃ - ಭೂಪತಿಯಾದ ದಶರಥರಾಯನು, ಅಂಕಂ - ತೊಡೆಯನ್ನು, ಆರೋಪ್ಯ - ಏರಿಸಿ, ಬಾಹುಭ್ಯಾಂ - ಭುಜಗಳಿಂದ, ಸಂಪರಿಷ್ವಜ್ಯ - ಅಪ್ಪಿಕೊಂಡು, ವಾಕ್ಯಂ - ಮಾತನ್ನು, ಸಮಾದದೇ- ಆಡಿದನು. ॥೧೨॥ ರಾಮಃ - ಶ್ರೀರಾಮನೇ, ತ್ವಯಾ - ನಿನ್ನಿಂದ, ವಿಹೀನಸ್ಯ - ರಹಿತನಾದ, ಮೇ - ನನಗೆ, ಸ್ವರ್ಗಃ - ಸ್ವರ್ಗವೂ ಕೂಡ, ನಬಹುಮತಃ - ಬಹಳ ಸಮ್ಮತವಾಗಲಿಲ್ಲ, ಸುರರ್ಷಿಭಿಃ - ದೇವರ್ಷಿಗಳಿಂದ, ಸಮ್ಮಾನಶ್ಚ - ಬಹುಮಾನವೂ, ನಬಹುಮತಃ - ಇಷ್ಟವಾಗಲಿಲ್ಲ, ತೇ - ನಿನಗೆ, ಸತ್ಯಂ - ಯಥಾರ್ಥವಾಗಿ, ಪ್ರತಿಶೃಣೋಮಿ - ಪ್ರತಿಜ್ಞೆ ಮಾಡುವೆನು. ॥೧೩॥ ವದತಾಂವರ - ವಾಗ್ಮಿಶ್ರೇಷ್ಠನೇ, ತವ - ನಿನ್ನ, ಪ್ರವ್ರಾ....ನಿ - ವನವಾಸವೇ ಪ್ರಯೋಜನವಾಗುಳ್ಳ, ಯಾನಿ ವಾಕ್ಯಾನಿ - ಯಾವ ಮಾತುಗಳು, ಕೈಕೇಯ್ಯಾ - ಕೈಕೆಯಿದೇವಿಯಿಂದ, ಉಕ್ತಾನಿ - ಹೇಳಲ್ಪಟ್ಟವೋ, ತಾನಿ - ಆ ಮಾತುಗಳು, ಮಮ - ನನ್ನ, ಹೃದಯೇ - ಮನಸ್ಸಿನಲ್ಲಿ, ಸ್ಥಿತಾನಿ - ಸ್ಥಿರ

ತನ್ನ ತೇಜಸ್ಸಿನಿಂದಲೇ ಬೆಳಗುತ್ತಿರುವವನೂ, ದೂಳಿಲ್ಲದ ಶುಭ್ರ ವಸ್ತ್ರಾಲಂಕೃತನೂ ಆಗಿ ಶೋಭಿಸುತ್ತಿದ್ದ, ತನ್ನ ತಂದೆಯಾದ ದಶರಥರಾಯನನ್ನು ಲಕ್ಷ್ಮಣನೊಡಗೂಡಿ ಸಂದರ್ಶಿಸಿದನು. ॥೭–೧೦॥ ಆಗ ದಶರಥರಾಯನು ವಿಮಾನದಲ್ಲಿ ಕುಳಿತೇ, ಪ್ರಾಣಗಳಿಗಿಂತಲೂ ಪ್ರಿಯತಮನೂ ತನ್ನ ಪುತ್ರನೂ ಆದ ಶ್ರೀರಾಮನನ್ನು ಕಂಡು ಅಮಂದಾನಂದಿತಸ್ವಾಂತನಾಗಿ ಅವನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ತನ್ನ ತೋಳ್ತೆಕ್ಕೆಯಿಂದ ಆತನನ್ನು ಬರಸೆಳೆದಾಲಿಂಗಿಸಿಕೊಂಡು "ರಾಮ ! ನಿನ್ನನ್ನಗಲಿದ ನನಗೆ ಸ್ವರ್ಗವಾಗಲಿ, ದೇವರ್ಷಿಗಳ ಸಮ್ಮಾನವಾಗಲಿ, ಬಹುಮತವಲ್ಲವೆಂದು ಸತ್ಯವಾಗಿಯೂ ಹೇಳುವೆನು. ಶತ್ರುಗಳನ್ನು ಜಯಿಸಿ ತೃಪ್ತಿಗೊಂಡ ಮನಸ್ಸುಳ್ಳವನಾಗಿ ವನವಾಸವನ್ನು ಸಂಪೂರ್ಣಗೊಳಿಸಿರುವ ನಿನ್ನನ್ನು ಕಂಡು ಈಗ ನನಗೆ ನಿರತಿಶಯವಾದ ಸಂತೋಷವುಂಟಾಗಿರುವುದು. ಎಲೈ ವಾಗ್ಮಿಶ್ರೇಷ್ಠನೇ! ನಿನ್ನ ವನವಾಸ ಸಂಬಂಧವಾಗಿ ಕೈಕೇಯಿಯಾಡಿದ ಮಾತುಗಳೆಲ್ಲವೂ ನನ್ನ

ನಿಸ್ತೀರ್ಣವನವಾಸಂಚ ಪ್ರೀತಿರಾಸೀತ್ಪರಾ ಮಮ ॥೧೪॥ ಕೈಕೇಯ್ಯಾ ಯಾನಿ
ಚೋಕ್ತಾನಿ ವಾಕ್ಯಾನಿ ವದತಾಂವರ! । ತವ ಪ್ರವ್ರಾಜನಾರ್ಥಾನಿ ಸ್ಥಿತಾನಿ ಹೃದಯೇ
ಮಮ ॥೧೫॥ ತ್ವಾಂ ತು ದೃಷ್ಟ್ವಾ ಕುಶಲಿನಂ ಪರಿಷ್ವಜ್ಯ ಸಲಕ್ಷ್ಮಣಂ । ಅದ್ಯ
ದುಃಖಾದ್ವಿಮುಕ್ತೋಽಸ್ಮಿ ನೀಹಾರಾದಿವ ಭಾಸ್ಕರಃ ॥೧೬॥ ತಾರಿತೋಽಹಂ ತ್ವಯಾ
ಪುತ್ರ! ಸುಪುತ್ರೇಣ ಮಹಾತ್ಮನಾ । ಅಷ್ಟಾವಕ್ರೇಣ ಧರ್ಮಾತ್ಮಾ ತಾರಿತೋ
ಬ್ರಾಹ್ಮಣೋ ಯಥಾ ॥೧೭॥ ಇದಾನೀಂತು ವಿಜಾನಾಮಿ ಯಥಾ ಸೌಮ್ಯ! ಸುರೇ
ಶ್ವರೈಃ । ವಧಾರ್ಥಂ ರಾವಣಸ್ಯೇದಂ ವಿಹಿತಂ ಪುರುಷೋತ್ತಮ! ॥೧೮॥ ಸಿದ್ಧಾರ್ಥಾ
ಖಲು ಕೌಸಲ್ಯಾ ಯಾ ತ್ವಾಂ ರಾಮ! ಗೃಹಂ ಗತಂ । ವನಾನ್ನಿವೃತ್ತಂ ಸಂದೃಷ್ಟಾ

ವಾಗಿ ನಿಂತಿದ್ದವೋ. ॥೧೫॥ ಸಲಕ್ಷ್ಮಣಂ-ಲಕ್ಷ್ಮಣನಿಂದೊಡಗೂಡಿದ, ಕುಶಲಿನಂ-ಕ್ಷೇಮವಂತನಾದ, ತ್ವಾಂತು - ನಿನ್ನನ್ನಾದರೆ, ದೃಷ್ಟ್ವಾ - ಕಂಡು, ಪರಿಷ್ವಜ್ಯ - ಅಪ್ಪಿಕೊಂಡು, ಅದ್ಯ- ಈಗ, ನೀಹಾರಾತ್ - ಮಂಜಿನದಿಂದ, ಭಾಸ್ಕರಇವ - ಸೂರ್ಯನಂತೆ, ದುಃಖಾತ್ - ದುಃಖದ ದೆಸೆಯಿಂದ, ವಿಮುಕ್ತಃ - ಬಿಡಲ್ಪಟ್ಟವನು ಆಗಿದ್ದೇನೆ. ॥೧೫॥ ಪುತ್ರ - ಮಗನೇ, ಧರ್ಮಾತ್ಮಾ - ಧರ್ಮಿಷ್ಠನಾದ, ಬ್ರಾಹ್ಮಣಃ-ಕಹೋಳನೆಂಬ ಬ್ರಹ್ಮರ್ಷಿಯು, ಯಥಾ-ಹೇಗೆ, ಅಷ್ಟಾವಕ್ರೇಣ-ಅಷ್ಟಾವಕ್ರ ಮುನಿಯಿಂದ, ತಾರಿತಃ - ತರಿಸಲ್ಪಟ್ಟನೋ, ತಥಾ - ಹಾಗೆಯೇ, ಮಹಾತ್ಮನಾ - ಮಹಾ ಮನಸ್ವಿಯಾದ, ಸುಪುತ್ರೇಣ - ಸುಪುತ್ರನಾದ, ತ್ವಯಾ - ನಿನ್ನಿಂದ, ಅಹಂ - ನಾನು, ತಾರಿತಃ - ಉದ್ಧರಿಸಲ್ಪಟ್ಟೆನು. ॥೧೬॥ ಸೌಮ್ಯ - ಪ್ರಸನ್ನನೇ, ಪುರುಷೋತ್ತಮ - ಪುರುಷೋತ್ತಮನೇ, ರಾವಣಸ್ಯ - ರಾವಣನ, ವಧಾರ್ಥಂ - ಸಂಹಾರಾರ್ಥವಾಗಿ, ಯಥಾ - ಹೇಗೆ, ಸುರೇಶ್ವರೈಃ - ಇಂದ್ರಾದಿಗಳಿಂದ, ಇದಂ - ಈ ಪಟ್ಟಾಭಿಷೇಕ ವಿಘ್ನವು, ವಿಹಿತಂ - ಮಾಡಲ್ಪಟ್ಟಿತೋ, ತಥಾ - ಹಾಗೆಯೇ, ಇದಾನೀಂತು - ಈಗಲಾದರೆ, ವಿಜಾನಾಮಿ - ತಿಳಿದುಕೊಂಡೆನು. ॥೧೭॥ ಅರಿನಿಷೂದನ - ಶತ್ರುಸಂಹಾರಕನೇ, ಯಾ - ಯಾವ ಕೌಸಲ್ಯಾದೇವಿಯು, ವನಾತ್ - ವನದಿಂದ, ನಿವೃತ್ತಂ - ಹಿಂತಿರುಗಿದ, ಗೃಹಂ - ಮನೆಯನ್ನು, ಗತಂ - ಹೊಂದಿರುವ, ತ್ವಾಂ - ನಿನ್ನನ್ನು, ದ್ರಕ್ಷ್ಯತಿ - ನೋಡುವಳೋ, ಸಾಕೌಸಲ್ಯಾ - ಆ ಕೌಸಲ್ಯಾದೇವಿಯು, ಸಿದ್ಧಾರ್ಥಾಖಲು - ಕೃತಾರ್ಥಳಷ್ಟೆ. ॥೧೮॥ ರಾಮ - ಶ್ರೀರಾಮನೇ, ಯೇನರಾಃ - ಯಾವ ಮನುಷ್ಯರು, ಪುರೀಂ - ಪಟ್ಟಣವನ್ನು, ಗತಂ -

---

ಮನಸ್ಸಿನಲ್ಲಿಯೇ ಈವರೆಗೂ ಕೊರೆಯುತ್ತಿದ್ದಿತು. ಈಗ ಲಕ್ಷ್ಮಣಸಹಿತನಾದ ನೀನು ಕುಶಲಿಯಾಗಿರುವುದನ್ನು ಕಂಡ ತರುವಾಯ ನನ್ನ ಮನಸ್ಸಿನಲ್ಲಿದ್ದ ಆ ದುಃಖವೆಲ್ಲವೂ, ಸೂರ್ಯನೆದುರಿನ ಮಂಜು ಹೇಗೋ ಹಾಗೆ ಕಳೆದುಹೋಯಿತು. ಈಗ ನನ್ನ ಮನಸ್ಸು ನಿರ್ಮಲವಾಯಿತು. ॥ ೧೧–೧೫ ॥ ಮಗನೇ, ರಾಮಚಂದ್ರಾ! ಅಷ್ಟಾವಕ್ರಮುನಿಯಿಂದ ಆತನ ತಂದೆಯಾದ ಕಹೋಳಮುನಿಯೆಂತೋ ಅಂತು ಮಹಾತ್ಮನಾದ ನಿನ್ನಿಂದ ನಾನು ಉದ್ಧಾರವಾದೆನು. ಎಲೈ ಪುರುಷೋತ್ತಮನೇ! ದೇವತೆಗಳು ರಾವಣನ ಸಂಹಾರಕ್ಕಾಗಿಯೇ ಈ ವಿಧವಾಗಿ ಉಪಾಯ ಮಾಡಿದರೆಂಬ ವಿಷಯವನ್ನೀಗತಾನೆ ತಿಳಿದೆನು. ರಾಮ! ವನವಾಸದಿಂದ ಹಿಂತಿರುಗಿ ಅರಮನೆಯನ್ನು ಸೇರುವ ಶತ್ರುಮರ್ದನನಾದ ನಿನ್ನನ್ನು ನೋಡುವ ನಿನ್ನ ಜನನಿಯಾದ ಕೌಸಲ್ಯಾದೇವಿಯೇ ಧನ್ಯಳು. ಅವಳ ಸರ್ವಾಭಿಷ್ಟಗಳೂ ನೆರವೇರುವುವು. ಸಾಕೇತರಾಜ್ಯದಲ್ಲಿ ಮಹಾರಾಜನಾಗಿ ಅಭಿಷಿಕ್ತನಾಗುವ ನಿನ್ನನ್ನು

ದ್ರಕ್ಷ್ಯಂತ್ಯರಿನಿಷೂದನ! ॥ ೧೯ ॥ ಸಿದ್ಧಾರ್ಥಾಃ ಖಲು ತೇ ರಾಮ! ನರಾ ಯೇ ತ್ವಾಂ ಪುರೀಂ ಗತಂ । ಜಲಾರ್ದ್ರಮಭಿಷಿಕ್ತಂ ಚ ದ್ರಕ್ಷ್ಯಂತಿ ವಸುಧಾಧಿಪಂ ॥ ೨೦ ॥ ಅನುರಕ್ತೇನ ಬಲಿನಾ ಶುಚಿನಾ ಧರ್ಮಚಾರಿಣಾ । ಇಚ್ಛಾಮಿ ತ್ವಾಮಹಂ ದ್ರಷ್ಟುಂ ಭರತೇನ ಸಮಾಗತಂ ॥ ೨೧ ॥ ಚತುರ್ದಶಸಮಾಃ ಸೌಮ್ಯ! ವನೇ ನಿರ್ಯಾಪಿತಾಸ್ತ್ವಯಾ । ವಸತಾ ಸೀತಯಾ ಸಾರ್ಧಂ ಲಕ್ಷ್ಮಣೇನಚ ಧೀಮತಾ ॥ ೨೨ ॥ ನಿವೃತ್ತವನವಾಸೋಽಸಿ ಪ್ರತಿಜ್ಞಾ ಸಫಲಾ ಕೃತಾ । ರಾವಣಂಚ ರಣೇ ಹತ್ವಾ ದೇವಾಸ್ತೇ ಪರಿತೋಷಿತಾಃ ॥ ೨೩ ॥ ಕೃತಂ ಕರ್ಮ ಯಶಶ್ಶ್ಲಾಘ್ಯಂ ಪ್ರಾಪ್ತಂ ತೇ ಶತ್ರುಸೂದನ! । ಭ್ರಾತೃಭಿಸ್ಸಹರಾಜ್ಯಸ್ಥೋ ದೀರ್ಘಮಾಯುರವಾಪ್ನುಹಿ" ॥ ೨೪ ॥

ಹೊಂದುವ, ಜಲಾರ್ದ್ರಂ - ಮಂಗಳಸ್ನಾನದಿಂದ ತೊಯ್ದಿರುವ, ತ್ವಾಂ - ನಿನ್ನನ್ನು, ವಸುಧಾಧಿಪಂ - ರಾಜನಾಗಿ, ಅಭಿಷಿಕ್ತಂ - ಪಟ್ಟಾಭಿಷಿಕ್ತನನ್ನಾಗಿ, ದ್ರಕ್ಷ್ಯಂತಿ - ನೋಡುವರೋ, ತೇ - ಆ ಮನುಷ್ಯರು, ಕೃತಾರ್ಥಾಃಖಲು - ಕೃತಕೃತ್ಯರಷ್ಟೆ. ॥೧೯॥ ಅನುರಕ್ತೇನ - ಅನುರಾಗವುಳ್ಳ, ಬಲಿನಾ - ಬಲವಂತನಾದ, ಶುಚಿನಾ - ಪರಿಶುದ್ಧನಾದ, ಧರ್ಮಚಾರಿಣಾ - ಧರ್ಮಾನುಷ್ಠಾನತತ್ಪರನಾದ, ಭರತೇನ-ಭರತನಿಂದ, ಸಮಾಗತಂ - ಸೇರಿರುವ, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವುದಕ್ಕೆ, ಅಹಂ - ನಾನು, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೨೦ ॥ ಸೌಮ್ಯ - ಪ್ರಸನ್ನನೇ, ಸೀತಯಾಸಾರ್ಧಂ - ಸೀತಾದೇವಿಯೊಡನೆ, ಧೀಮತಾ - ಬುದ್ಧಿಶಾಲಿಯಾದ, ಲಕ್ಷ್ಮಣೇನಚ - ಸೌಮಿತ್ರಿಯೊಡನೆ, ವನೇ - ಅರಣ್ಯದಲ್ಲಿ, ವಸತಾ - ವಾಸಮಾಡುತ್ತಿರುವ, ತ್ವಯಾ - ನಿನ್ನಿಂದ, ಚತು....ಮಾಃ - ಹದಿನಾಲ್ಕು ಸಂವತ್ಸರಗಳು, ನಿರ್ಯಾಪಿತಾಃ - ಕಳೆಯಲ್ಪಟ್ಟವು. ॥ ೨೧ ॥ ನಿವೃ....ಸಃ - ನೆರವೇರಿದ ವನವಾಸವುಳ್ಳವನು, ಅಸಿ - ಆದೆ, ಪ್ರತಿಜ್ಞಾ - ಪ್ರತಿಜ್ಞೆಯು, ಸಫಲಾ - ಫಲಸಹಿತವಾದದ್ದು. ಕೃತಾ - ಮಾಡಲ್ಪಟ್ಟಿತು, ರಣೇ - ಕಾಳೆಗದಲ್ಲಿ, ರಾವಣಂ - ದಶಕಂಠನನ್ನು, ಹತ್ವಾ - ಕೊಂದು, ತೇ - ನಿನ್ನಿಂದ, ದೇವಾಃ - ದೇವತೆಗಳು, ಪರಿತೋಷಿತಾಃ - ಸಂತೋಷಗೊಳಿಸಲ್ಪಟ್ಟರು. ॥೨೨॥ ಶತ್ರುಸೂದನ - ಶತ್ರುಸಂಹಾರಕನೇ, ಕರ್ಮ - ದಶಕಂಠನ ವಧರೂಪ ವ್ಯಾಪಾರವು, ಕೃತಂ - ಮಾಡಲ್ಪಟ್ಟಿತು, ತೇ - ನಿನಗೆ, ಶ್ಲಾಘ್ಯಂ - ಸ್ತೋತ್ರಾರ್ಹವಾದ, ಯಶಃ - ಕೀರ್ತಿಯು, ಪ್ರಾಪ್ತಂ - ಉಂಟಾಯಿತು, ಭ್ರಾತೃಭಿಸ್ಸಹ - ತಮ್ಮಂದಿರೊಡಗೂಡಿ, ರಾಜ್ಯಸ್ಥಃ - ರಾಜ್ಯದಲ್ಲಿ ನಿಂತು, ದೀರ್ಘಂ - ಬಹಳವಾದ, ಆಯುಃ-ಆಯುಷ್ಯವನ್ನು, ಅವಾಪ್ನುಹಿ - ಹೊಂದು. ॥೨೩-೨೪॥ ಇತಿ - ಈ ಪರಿ, ಬ್ರುವಾಣಂ - ಮಾತನಾಡು

ನೋಡುವ ಜನರೆಲ್ಲರೂ ಪುಣ್ಯವಂತರು. ವತ್ಸ! ನೀನು, ಭ್ರಾತೃವತ್ಸಲನೂ, ಭಕ್ತನೂ, ಪರಿಶುದ್ಧನೂ, ಧರ್ಮಿಷ್ಠನೂ ಆದ ಭರತಕುಮಾರನೊಡನೆ ಸೇರುವುದನ್ನು ನೋಡಲಪೇಕ್ಷಿಸುವೆನು. ॥೧೬–೨೦॥ ಎಲೈ ಸೌಮ್ಯನೇ! ಹದಿನಾಲ್ಕು ವರ್ಷಗಳಕಾಲ ಸೀತೆಯೊಡನೆಯೂ, ಲಕ್ಷ್ಮಣನೊಡನೆಯೂ ವನವಾಸವನ್ನು ಕಳೆದು ಪ್ರತಿಜ್ಞೆಯನ್ನು ಸಫಲವಾಗಿಸಿದೆ. ರಣಾಂಗಣದಲ್ಲಿ ರಾವಣನನ್ನು ಕೊಂದು ದೇವತೆಗಳೆಲ್ಲರನ್ನೂ ಸಂತೋಷಪಡಿಸಿದೆ. ಎಲೈ ರಾಮಭದ್ರ! ನೀನು ಮಹತ್ತರವಾದ ಕಾರ್ಯವನ್ನು ಮಾಡಿದೆ. ನಿರತಿಶಯವಾದ ಕೀರ್ತಿಯನ್ನು ಸಂಪಾದಿಸಿದೆ. ಎಲೈ ಶತ್ರುಮರ್ದನನೇ! ತಮ್ಮಂದಿರೊಡನೆ ರಾಜ್ಯವನ್ನು ಸೇರಿ ದೀರ್ಘಾಯುವಾಗಿ ಬಾಳು" ಎಂದು ಆಶೀರ್ವದಿಸಿದನು. ಆಗ ಶ್ರೀರಾಮನು ಈ ರೀತಿ ನುಡಿಯುತ್ತಿರುವ ತನ್ನ ತಂದೆಗೆ ಮತ್ತೊಮ್ಮೆ ನಮಸ್ಕರಿಸಿ ಬದ್ಧಾಂ

ಇತಿ ಬ್ರುವಾಣಂ ರಾಜಾನಂ ರಾಮಃ ಪ್ರಾಂಜಲಿರಬ್ರವೀತ್ । "ಕುರು ಪ್ರಸಾದಂ
ಧರ್ಮಜ್ಞ! ಕೈಕೇಯ್ಯಾ ಭರತಸ್ಯಚ ॥ ೨೫ ॥ ಸಪುತ್ರಾಂ ತ್ವಾಂ ತ್ಯಜಾಮೀತಿ
ಯದುಕ್ತಾ ಕೈಕಯೀ ತ್ವಯಾ । ಸ ಶಾಪಃ ಕೈಕಯೀಂ ಘೋರಸ್ಸಪುತ್ರಾಂ
ನಸ್ಪೃಶೇತ್ಪ್ರಭೋ!" ॥ ೨೬ ॥ ಸ ತಥೇತಿ ಮಹಾರಾಜೋ ರಾಮಮುಕ್ತ್ವಾ ಕೃತಾಂ
ಜಲಿಂ । ಲಕ್ಷ್ಮಣಂಚ ಪರಿಷ್ವಜ್ಯ ಪುನರ್ವಾಕ್ಯ ಮುವಾಚಹ ॥ ೨೭ ॥ "ರಾಮಂ
ಶುಶ್ರೂಷತಾ ಭಕ್ತ್ಯಾ ವೈದೇಹ್ಯಾಸಹ ಸೀತಯಾ । ಕೃತಾ ಮಮ ಮಹಾಪ್ರೀತಿಃ
ಪ್ರಾಪ್ತಂ ಧರ್ಮಫಲಂಚ ತೇ ॥ ೨೮ ॥ ಧರ್ಮಂ ಪ್ರಾಪ್ಸ್ಯಸಿ ಧರ್ಮಜ್ಞ! ಯಶಶ್ಚ
ವಿಪುಲಂ ಭುವಿ । ರಾಮೇ ಪ್ರಸನ್ನೇ ಸ್ವರ್ಗಂಚ ಮಹಿಮಾನಂ ತಥೈವಚ ॥ ೨೯ ॥

ತ್ತಿರುವ, ರಾಜಾನಂ - ದಶರಥರಾಯನನ್ನು ಕುರಿತು, ರಾಮಃ - ಶ್ರೀರಾಮನು, ಪ್ರಾಂಜಲಿಃ - ಅಂಜಲಿ ಬದ್ಧನಾಗಿ, ಅಬ್ರವೀತ್-ನುಡಿದನು, ಧರ್ಮಜ್ಞ-ಸಕಲ ಧರ್ಮಗಳನ್ನೂ ತಿಳಿದವನೇ, ಕೈಕೇಯ್ಯಾಃ- ಕೈಕೇಯಿದೇವಿಗೂ, ಭರತಸ್ಯಚ - ಭರತನಿಗೂ, ಪ್ರಸಾದಂ - ಅನುಗ್ರಹವನ್ನು, ಕುರು - ಮಾಡು, ಕೈಕಯೀ - ಕೈಕೇಯೀದೇವಿಯು, ಸಪುತ್ರಾಂ - ಮಗನೊಡಗೂಡಿದ, ತ್ವಾಂ - ನಿನ್ನನ್ನು, ತ್ಯಜಾ ಮೀತಿ - ತ್ಯಾಗಮಾಡುತ್ತೇನೆಂದು, ತ್ವಯಾ - ನಿನ್ನಿಂದ, ಯತ್ - ಯಾವ ಕಾರಣದಿಂದ, ಉಕ್ತಾ- ಹೇಳಲ್ಪಟ್ಟಳೋ, ಪ್ರಭೋ - ಸ್ವಾಮಿಯೇ, ಘೋರಃ - ಭಯಂಕರವಾದ, ಸಶಾಪಃ - ಆ ಶಾಪವು, ಪುತ್ರಾಂ - ಮಗನಿಂದೊಡಗೂಡಿದ, ಕೈಕೇಯೀಂ - ಕೈಕೇಯಿದೇವಿಯನ್ನು, ನಸ್ಪೃಶೇತ್ - ಸ್ಪರ್ಶಿಸ ದಿರಲಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೨೫ ॥ ಸಮಹಾರಾಜಃ - ಆ ದಶರಥ ರಾಯನು, ತಥೇತಿ - ಹಾಗೆಯೇ ಆಗಲೆಂದು, ಕೃತಾಂಜಲಿಂ - ಅಂಜಲಿಬದ್ಧನಾದ, ರಾಮಂ - ಶ್ರೀರಾಮನನ್ನು ಕುರಿತು, ಉಕ್ತ್ವಾ - ಹೇಳಿ, ಲಕ್ಷ್ಮಣಂಚ - ಲಕ್ಷ್ಮಣನನ್ನು, ಪರಿಷ್ವಜ್ಯ - ಅಪ್ಪಿ ಕೊಂಡು, ಪುನಃ - ಮತ್ತೂ, ವಾಕ್ಯಂ - ಮಾತನ್ನು, ಉವಾಚಹ - ಹೇಳಿದನಷ್ಟೆ. ॥೨೬॥ ಭಕ್ತ್ಯಾ- ಭಕ್ತಿಯಿಂದ, ವೈದೇಹ್ಯಾ - ವಿದೇಹರಾಯನ ಮಗಳಾದ, ಸೀತಯಾಸಹ - ಸೀತಾದೇವಿಯೊಡನೆ, ರಾಮಂ - ಶ್ರೀರಾಮನನ್ನು, ಶುಶ್ರೂಷತಾ - ಸೇವಿಸುತ್ತಿರುವ, ತ್ವಯಾ - ನಿನ್ನಿಂದ, ಮಮ - ನನಗೆ, ಮಹಾಪ್ರೀತಿಃ - ಬಹಳ ಪ್ರೀತಿಯು, ಕೃತಃ - ಮಾಡಲ್ಪಟ್ಟಿತು, ಧರ್ಮಫಲಂ - ಪುಣ್ಯಫಲವು, ತೇ - ನಿನಗೆ, ಪ್ರಾಪ್ತಂ - ಉಂಟಾಯಿತು. ॥ ೨೭ ॥ ಧರ್ಮಜ್ಞ - ಧರ್ಮಿಷ್ಠನೇ, ಧರ್ಮಂ - ಧರ್ಮ ವನ್ನು, ಪ್ರಾಪ್ಸ್ಯಸಿ - ಹೊಂದುತ್ತೀಯೆ, ಭುವಿ - ಭೂಲೋಕದಲ್ಲಿ, ವಿಪುಲಂ - ವಿಸ್ತಾರವಾದ, ಯಶಶ್ಚ - ಕೀರ್ತಿಯನ್ನೂ, ಪ್ರಾಪ್ಸ್ಯಸಿ - ಹೊಂದುತ್ತೀಯೆ, ರಾಮೇ - ಶ್ರೀರಾಮನು, ಪ್ರಸನ್ನೇ -

---

ಜಲಿ ಹಸ್ತನಾಗಿ, "ಎಲೈ ಪ್ರಸನ್ನನೇ, ತಂದೆಯೇ! ನೀನು ಕೈಕೇಯಿ ಮತ್ತು ಭರತ ರನ್ನು ಕುರಿತು ನಿಮ್ಮನ್ನು ತೊರೆದಿರುವೆನೆಂದು ಆಡಿದ ಶಾಪರೂಪವಾದ ಮಾತುಗಳನ್ನು ಮನ್ನಿಸಿ ಪ್ರಸನ್ನನಾಗಬೇಕು. ನೀನಿತ್ತ ಆ ಶಾಪವು ಕೈಕೇಯಿ ಭರತರನ್ನು ತಾಕದಿರಲಿ" ಎಂದು ಬೇಡಿಕೊಂಡನು. ॥೨೧–೨೫॥ ಆಗ ದಶರಥಮಹಾರಾಜನು "ಹಾಗೆಯೇ ಆಗಲಿ" ಎಂದು ಹೇಳಿ ಕೈಜೋಡಿಸಿಕೊಂಡು ನಿಂತಿದ್ದ ಲಕ್ಷ್ಮಣಸ್ವಾಮಿಯನ್ನು ಆಲಿಂಗಿಸಿ ಅವನನ್ನು ಕುರಿತು, "ಲಕ್ಷ್ಮಣ! ನೀನು ಸೀತೆಯಂತೆಯೇ ಶ್ರೀರಾಮನ ಶುಶ್ರೂಷೆಯನ್ನು ಮಾಡಿ ತನ್ಮೂ ಲಕ ನನಗೆ ಮಹತ್ಪ್ರಿಯವನ್ನುಂಟುಮಾಡಿದೆಯಲ್ಲದೆ ನಿರೂಪಮವಾದ ಧರ್ಮಫಲವನ್ನೂ ಪಡೆದವನಾದೆ. ಎಲೈ ಧರ್ಮಜ್ಞನೇ! ಇದರಿಂದ ನೀನು ಪುಣ್ಯವನ್ನು ಪಡೆವೆಯಲ್ಲದೆ ಅತುಲ

ರಾಮಂ ಶುಶ್ರೂಷ ಭದ್ರಂ ತೇ ಸುಮಿತ್ರಾನಂದವರ್ಧನ ! । ರಾಮಸ್ಸರ್ವಸ್ಯ ಲೋಕಸ್ಯ ಶುಭೇಷ್ವಭಿರತಸ್ಸದಾ ॥ ೩೦ ॥ ಏತೇ ಸೇಂದ್ರಾಸ್ತ್ರಯೋಲೋಕಾ ಸ್ಸಿದ್ಧಾಶ್ಚ ಪರಮರ್ಷಯಃ । ಅಭಿಗಮ್ಯ ಮಹಾತ್ಮಾನಮರ್ಚಂತಿ ಪುರುಷೋತ್ತಮಂ ॥ ೩೧ ॥ ಏತತ್ತದುಕ್ತಮವ್ಯಕ್ತಮಕ್ಷರಂ ಬ್ರಹ್ಮನಿರ್ಮಿತಂ । ವೇದಾನಾಂ ಹೃದಯಂ ಸೌಮ್ಯ ! ಗುಹ್ಯಂ ರಾಮಃ ಪರಂತಪಃ ॥ ೩೨ ॥ ಅವಾಪ್ತಂ ಧರ್ಮಚರಣಂ ಯಶಶ್ಚ ವಿಪುಲಂ

ಪ್ರಸನ್ನನಾಗಲೂ, ಸ್ವರ್ಗಂಚ - ಸ್ವರ್ಗವನ್ನೂ, ತಥೈವ - ಹಾಗೆಯೇ, ಮಹಿಮಾನಂ - ಮಾಹಾತ್ಮ್ಯವನ್ನೂ, ಪ್ರಾಪ್ಸ್ಯಸಿ - ಹೊಂದುತ್ತೀಯೆ. ॥ ೨೮ ೨೯ ॥ ಸುಮಿ.....ನ - ಸುಮಿತ್ರಾದೇವಿಗೆ ಆನಂದವನ್ನುಂಟುಮಾಡುವವನೇ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ರಾಮಂ - ಶ್ರೀರಾಮನನ್ನು, ಶುಶ್ರೂಷ-ಸೇವೆ ಮಾಡು, ರಾಮಃ-ಶ್ರೀರಾಮನು, ಸರ್ವಸ್ಯಲೋಕಸ್ಯ-ಸಮಸ್ತ ಲೋಕಕ್ಕೂ, ಶುಭೇಷು - ಶ್ರೇಯಸ್ಕರವಾದ ಕಾರ್ಯಗಳಲ್ಲಿ, ಸದಾ - ಯಾವಾಗಲೂ, ಅಭಿರತಃ - ಆಸಕ್ತನಾಗಿದ್ದಾನೆ. ॥೩೦॥ ಸೇಂದ್ರಾಃ - ಇಂದ್ರನಿಂದೊಡಗೂಡಿದ, ಏತೇತ್ರಯೋಲೋಕಾಃ - ಈ ಮೂರೂ ಲೋಕಗಳೂ, ಲೋಕಾಃ - ಜನರು, ಸಿದ್ಧಾಶ್ಚ - ಸಿದ್ಧಪುರುಷರೂ, ಪರಮರ್ಷಯಶ್ಚ - ಪರಮಋಷಿಗಳೂ, ಮಹಾತ್ಮಾನಂ - ಮಹಾ ಪ್ರಭಾವವಂತನಾದ, ಪುರುಷೋತ್ತಮಂ -- ಪುರುಷಶ್ರೇಷ್ಠನಾದ ಶ್ರೀರಾಮನನ್ನು, ಅಭಿಗಮ್ಯ - ಹೊಂದಿ, ಅರ್ಚಂತಿ - ಪೂಜಿಸುತ್ತಾರೆ. ॥೩೧॥ ಸೌಮ್ಯ - ಪ್ರಸನ್ನನೇ, ದೇವಾನಾಂ - ದೇವತೆಗಳ, ಹೃದಯಂ - ಮನವನ್ನು ಹೊಂದಿರುವ ಅಂತರ್ಯಾಮಿಯಾದ, ಗುಹ್ಯಂ-ಉಪನಿಷತ್ತುಗಳಿಂದ ತಿಳಿಯತಕ್ಕ, ಅವ್ಯಕ್ತಂ - ಭಕ್ತಿಶೂನ್ಯದಿಂದ ತಿಳಿಯಲ್ಪಡದಿರುವ, ಅಕ್ಷರಂ - ಪ್ರಣವಾಕ್ಷರಸ್ವರೂಪವಾದ. ಯದೇತದ್ಬ್ರಹ್ಮ-ಯಾವ ಈ ಬ್ರಹ್ಮಸ್ವರೂಪವು, ರಾಮಃ-ಶ್ರೀರಾಮರೂಪವಾಗಿ, ಪರಂ - ಸರ್ವೋತ್ಕೃಷ್ಟವಾದ, ತಪಃ - ತಪಸ್ಸ್ವರೂಪವಾಗಿರುವದಾಗಿ, ನಿರ್ಮಿತಂ - ನಿರ್ಮಿಸಲ್ಪಟ್ಟದ್ದು, ಯತ್ - ಯಾವದೋ, ತತ್ - ಅದು, ಬ್ರಹ್ಮಾದಿಭಿಃ - ಬ್ರಹ್ಮಾದಿಗಳಿಂದ, ಉಕ್ತಂ - ಹೇಳಲ್ಪಟ್ಟಿತು. ॥ ೩೨ ॥ ಭಕ್ತ್ಯಾ - ಭಕ್ತಿಯಿಂದ, ವೈದೇಹ್ಯಾ - ವಿದೇಹರಾಜನ ಕುವರಿಯಾದ, ಸೀತಾಯಾಸಹ - ಸೀತಾದೇವಿಯೊಡಗೂಡಿದ, ರಾಮಂ - ಶ್ರೀರಾಮನನ್ನು, ಶುಶ್ರೂಷತಾ - ಸೇವೆ

ವಾದ ಕೀರ್ತಿಯನ್ನೂ ಹೊಂದುವೆ. ಶ್ರೀರಾಮನು ಪ್ರಸನ್ನನಾದರೆ ಸ್ವರ್ಗವೂ, ಮಹತ್ವವೂ ದೊರಕುವುದೆಂಬುದರಲ್ಲಿ ಸಂದೇಹವೇನು ! ಆದುದರಿಂದೆಲೈ ಸುಮಿತ್ರಾನಂದವರ್ಧನನೇ ! ರಾಮನ ಶುಶ್ರೂಷೆಯಲ್ಲಿಯೇ ನಿರತನಾಗಿರು. ರಾಮನು ಸಮಸ್ತ ಲೋಕಗಳಿಗೂ ಹಿತವನ್ನುಂಟುಮಾಡುವುದರಲ್ಲಿಯೇ ಆಸಕ್ತನಾದವನು. ಮಹೇಂದ್ರನೊಡಗೊಂಡ ಈ ಮೂರು ಲೋಕಗಳೂ, ಸಿದ್ಧರೂ, ಮಹರ್ಷಿಗಳೂ ಮಹಾತ್ಮನಾದ ಈ ಪುರುಷೋತ್ತಮನನ್ನು ನಮಸ್ಕರಿಸಿ ಪೂಜಿಸುತ್ತಾರೆಯಲ್ಲವೆ. ಎಲೈ ಸೌಮ್ಯನೇ, ಈ ಶ್ರೀರಾಮನೇ ಪ್ರಣವಾಕ್ಷರ ಪ್ರತಿಪಾದ್ಯವಾದ ಪರಬ್ರಹ್ಮವು. ಈತನೇ ದೇವತೆಗಳ ಹೃದಯವು. (ಎಲೈ ಪರಂತಪನೇ ಈತನೇ ಅವ್ಯಕ್ತಾಕ್ಷರ ಸ್ವರೂಪನು.—ಇದೇ ಬ್ರಹ್ಮವು.) ॥ ೨೬-೩೦ ॥ ಲಕ್ಷ್ಮಣಾ ! ನೀನು ಧರ್ಮದಿಂದ ಯಾವ ಯಾವ ಫಲಗಳನ್ನೂ ಪಡೆಯಬಹುದೋ ಅವೆಲ್ಲವನ್ನೂ ಮಾತ್ರವಲ್ಲದೆ ವಿಪುಲವಾದ ಕೀರ್ತಿಯನ್ನೂ ಪಡೆದೆ. ರಾಮಮೂರ್ತಿಯನ್ನು ಸೀತಾದೇವಿಯೊಡನೆ ತದೇಕಾಯತ್ತಚಿತ್ತನಾಗಿ ಶುಶ್ರೂಷೆ ಮಾಡಿದುದರಿಂದ ನಿನಗೆ ಇಷ್ಟೂ (ನಿರಾಯಾಸವಾಗಿ) ಲಭಿಸಿತು !! ಎಂದು ಹೇಳಿದನು. [illegible] ಲಕ್ಷ್ಮಣನಿಗೆ ಈ ರೀತಿ ಹೇಳಿ

ತ್ವಯಾ । ರಾಮಂ ಶುಶ್ರೂಷತಾ ಭಕ್ತ್ಯಾ ವೈದೇಹ್ಯಾ ಸಹಸೀತಯಾ" ॥ ೩೩ ॥ ಸತಥೋಕ್ತ್ವಾ ಮಹಾಬಾಹುರ್ಲಕ್ಷ್ಮಣಂ ಪ್ರಾಂಜಲಿಸ್ಥಿತಂ । ಉವಾಚ ರಾಜಾ ಧರ್ಮಾತ್ಮಾ ವೈದೇಹೀಂ ವಚನಂ ಶುಭಂ ॥ ೩೪ ॥ "ಕರ್ತವ್ಯೋ ನತು ವೈದೇಹೀ! ಮನ್ಯುಸ್ತ್ಯಾಗಮಿಮಂಪ್ರತಿ । ರಾಮೇಣ ತ್ವದ್ವಿಶುದ್ಧ್ಯರ್ಥಂ ಕೃತಮೇತದ್ಧಿತೈಷಿಣಾ ॥ ೩೫ ॥ ನತ್ವಂ ಸುಭ್ರು! ಸಮಾಧೇಯಾ ಪತಿಶುಶ್ರೂಷಣಂ ಪ್ರತಿ । ಅವಶ್ಯಂತು ಮಯಾ ವಾಚ್ಯಮೇಷ ತೇ ದೈವತಂ ಪರಂ" ॥ ೩೬ ॥

ಗೈಯ್ಯುತ್ತಿರುವ, ತ್ವಯಾ - ನಿನ್ನಿಂದ, ಧರ್ಮಚರಣಂ - ಧರ್ಮಾನುಷ್ಠಾನವು, ವಿಪುಲಂ - ವಿಸ್ತಾರವಾದ, ಯಶಶ್ಚ - ಕೀರ್ತಿಯೂ, ಅವಾಪ್ತಂ - ಹೊಂದಲ್ಪಟ್ಟಿತು. ॥೩೩॥ ಮಹಾಬಾಹುಃ - ಮಹಾ ಭುಜ ಪರಾಕ್ರಮಶಾಲಿಯಾದ, ಧರ್ಮಾತ್ಮಾ-ಧರ್ಮಿಷ್ಠನಾದ, ಸರಾಜಾ-ಆ ದಶರಥರಾಯನು, ಪ್ರಾಂಜಲಿಂ-ಅಂಜಲಿಬದ್ಧನಾಗಿ, ಸ್ಥಿತಂ - ನಿಂತಿರುವ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ತಥಾ - ಆ ಪರಿ, ಉಕ್ತ್ವಾ - ಹೇಳಿ, ವೈದೇಹೀಂ - ಸೀತಾದೇವಿಯನ್ನು ಕುರಿತು, ಶುಭಂ - ಮಂಗಳಕರವಾದ, ವಚನಂ - ಮಾತನ್ನು, ಉವಾಚ - ಹೇಳಿದನು. ॥ ೩೪ ॥ ವೈದೇಹೀ - ಸೀತಾದೇವಿಯೇ, ಇಮಂ ತ್ಯಾಗಂಪ್ರತಿ - ಈ ತ್ಯಾಗಬುದ್ಧಿಯನ್ನು ಕುರಿತು, ಮನ್ಯುಃ - ಕೋಪವು, ನಕರ್ತವ್ಯಃ - ಮಾಡತಕ್ಕದಲ್ಲ, ಹಿತೈಷಿಣಾ - ನಿನಗೆ ಶ್ರೇಯಸ್ಸನ್ನೇ ಕೋರುತ್ತಿರುವ, ರಾಮೇಣ - ಶ್ರೀರಾಮನಿಂದ, ತ್ವದ್ವಿಶುದ್ಧ್ಯರ್ಥಂ - ನಿನ್ನ ಪರಿಶುದ್ಧಿನಿಮಿತ್ತವಾಗಿ, ಏತತ್ - ಈ ಕಾರ್ಯವು, ಕೃತಂ - ಮಾಡಲ್ಪಟ್ಟಿತು. ॥೩೫॥ ಹೇ ಸುಭ್ರು - ಎಲೌ ಶೋಭನಕರವಾದ ಕಣ್ಣುಬ್ಬುಗಳುಳ್ಳವನೇ, ತ್ವಂ - ನೀನು, ಪತಿ....ತಿ - ಪತಿಸೇವೆಯನ್ನು ಕುರಿತು, ನಸಮಾಧೇಯಾ - ಸಮಾಧಾನ ಹೇಳಿಸಿಕೊಳ್ಳತಕ್ಕವಳಲ್ಲ, ತಥಾಪಿ - ಹಾಗಾದರೂ, ಮಯಾ - ನನ್ನಿಂದ, ಅವಶ್ಯಂ - ಅವಶ್ಯಕವಾಗಿ, ವಾಚ್ಯಂ - ಹೇಳತಕ್ಕದ್ದುಂಟು, ಏಷಃ - ಈ ಶ್ರೀರಾಮನು, ತೇ - ನಿನಗೆ, ಪರಂದೈವತಂ - ಪರದೇವತಾಸ್ವರೂಪನು. ॥೩೬॥ ಇತಿ - ಈ ಪರಿಯಾಗಿ, ದಶರಥಃ ದಶರಥಮಹಾರಾಯನು, ಪುತ್ರೌ-ಮಕ್ಕಳಾದ ರಾಮಲಕ್ಷ್ಮಣರನ್ನು, ತಥಾ -

ಬದ್ಧಾಂಜಲಿಯಾಗಿ ನಿಂತಿದ್ದ ತನ್ನ ಸೊಸೆಯಾದ ಸೀತಾದೇವಿಯನ್ನು ಮೃದೂಕ್ತಿಗಳಿಂದ ಮಾತನಾಡಿಸಿ ಆಕೆಯನ್ನು ಕುರಿತು, "ವೈದೇಹೀ! ಶ್ರೀರಾಮನು ಮಾಡಿದ ಈ ಉಪೇಕ್ಷೆಗಾಗಿ ನೀನು ಆತನ ವಿಷಯದಲ್ಲಿ ಮುನಿಸನ್ನು ತಾಳಬಾರದು. ನಿನ್ನ ಹಿತೈಷಿಯಾದ ಆತನು ನಿನ್ನ ಪಾವಿತ್ರ್ಯಪ್ರದರ್ಶನಕ್ಕಾಗಿಯೇ ಈ ರೀತಿ ಮಾಡಿದನು. ಎಲೆ ಮಗಳೇ! ನಿನ್ನ ನಡತೆಗೆ ಲಕ್ಷಣವಾದ ಈ ಅಗ್ನಿಪ್ರವೇಶ ಕಾರ್ಯವು ಲೋಕದಲ್ಲಿ ಮತ್ತಾವ ಸ್ತ್ರೀಯಿಂದಲೂ ಮಾಡಲಸದಳವು. ಇದರಿಂದ ನಿನಗೆ ಅನನ್ಯ ಸಾಧಾರಣವಾದ ಕೀರ್ತಿಯುಂಟಾಗುವುದು. (ಇದರಿಂದ ನಿನ್ನ ಪಾತಿವ್ರತ್ಯ ಮಹಿಮೆಯು ನೂರ್ಮಡಿಯಾಗಿ ನಿನ್ನ ಪಾವಿತ್ರ್ಯವು ಜಗದ್ವಿಖ್ಯಾತವಾಗುವುದು.) ಪತಿಪರಾಯಣೆಯಾದ ನಿನಗೆ ಪತಿಶುಶ್ರೂಷೆಯ ವಿಷಯದಲ್ಲಿ ಹೇಳಬೇಕಾದುದೇನೂ ಇರುವುದಿಲ್ಲವು. ಆದರೂ ನಾನು ನಿನಗೆ ಹೇಳಲೇ ಬೇಕಾದುದೊಂದುಂಟು. ಎಲೌ ಸೀತಾದೇವಿಯೇ! ನಿನ್ನ ಪತಿಯಾದ ಈತನು ನಿನಗೆ ದೇವತಾಸ್ವರೂಪನು. (ಪರದೈವವು)" ಎಂದು ಹೇಳಿದನು. ರಘುಕುಲೋದ್ಭವನಾದ ದಶರಥರಾಯನು ಈ ರೀತಿ ಸೀತೆಗೆ ಆಜ್ಞಾಪಿಸಿ ವಿಮಾನದಲ್ಲಿ ಕುಳಿತು ಇಂದ್ರಲೋಕವನ್ನು ಕುರಿತು ಹೊರಟುಹೋದನು. ಮಹಾನು

ಇತಿ ಪ್ರತಿಸಮಾದಿಶ್ಯ ಪುತ್ರೌ ಸೀತಾಂ ತಥಾ ಸ್ನುಷಾಂ ।
ಇಂದ್ರಲೋಕಂ ವಿಮಾನೇನ ಯಯೌ ದಶರಥೋ ಜ್ವಲನ್ ॥ ೩೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾವಿಂಶತ್ಯುತ್ತರಶತತಮಸ್ಸರ್ಗಃ

ಹಾಗೆಯೇ, ಸ್ನುಷಾಂ - ಸೊಸೆಯಾದ, ಸೀತಾಂ - ಸೀತಾದೇವಿಯನ್ನು ಕುರಿತು, ಪ್ರತಿಸಮಾದಿಶ್ಯ - ಆಜ್ಞಾಪಿಸಿ, ವಿಮಾನೇನ - ವಿಮಾನದಿಂದ, ಜ್ವಲನ್ - ಹೊಳೆವವನಾಗಿ, ಇಂದ್ರಲೋಕಂ - ಸ್ವರ್ಗಲೋಕವನ್ನು ಕುರಿತು, ಯಯೌ - ತೆರಳಿದನು. ॥ ೩೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ದ್ವಾವಿಂಶತ್ಯುತ್ತರಶತತಮಸ್ಸರ್ಗಃ.

ಭಾವನಾದ ಆ ದಶರಥನು ಸಂತುಷ್ಟಮಾನಸನಾಗಿ ವಿಮಾನಾರೂಢನಾಗಿ ತನ್ನ ಮಕ್ಕಳಾದ ಶ್ರೀರಾಮಲಕ್ಷ್ಮಣರನ್ನೂ, ಸೊಸೆಯಾದ ಸೀತಾದೇವಿಯನ್ನೂ ಬೀಳ್ಕೊಂಡು ಮಹೇಂದ್ರಲೋಕಕ್ಕೆ ಹೊರಟುಹೋದನು. ॥ ೩೧–೩೭ ॥

ಇಂತಿದು ಮಹಾದೇವಕೃತ ಶ್ರೀರಾಮ ಸಮಾಶ್ವಾಸನ ಮತ್ತು ದಶರಥ ಸಂದರ್ಶನ ಸಲ್ಲಾಪ ವೃತ್ತಾಂತ ನಿರೂಪಣವೆಂಬ ನೂರಇಪ್ಪತ್ತೆರಡನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ತ್ರಯೋವಿಂಶತ್ಯುತ್ತರಶತತಮಸ್ಸರ್ಗಃ

ಪ್ರತಿಯಾತೇತು ಕಾಕುತ್‌ಸ್ಥೇ ಮಹೇಂದ್ರಃ ಪಾಕಶಾಸನಃ । ಅಬ್ರವೀತ್ಪರಮಪ್ರೀತೋ ರಾಘವಂ ಪ್ರಾಂಜಲಿಂ ಸ್ಥಿತಂ ॥೧॥ "ಅಮೋಘಂ ದರ್ಶನಂ ರಾಮ! ತವಾಸ್ಮಾಕಂ ಪರಂತಪ! । ಪ್ರೀತಿಯುಕ್ತಾಃ ಸ್ಮ ತೇನ ತ್ವಂ ಬ್ರೂಹಿ ಯನ್ಮನಸೇಚ್ಛಸಿ" ॥೨॥ ಏವಮುಕ್ತಸ್ತು ಕಾಕುತ್‌ಸ್ಥಃ ಪ್ರತ್ಯುವಾಚ ಕೃತಾಂಜಲಿಃ । ಲಕ್ಷ್ಮಣೇನ ಸಹಭ್ರಾತ್ರಾ ಸೀತಯಾಸಹ ಭಾರ್ಯಯಾ ॥೩॥ "ಯದಿಪ್ರೀತಿಸ್ಸಮುತ್ಪನ್ನಾ ಮಯಿ ಸರ್ವಸುರೇಶ್ವರ । ವಕ್ಷ್ಯಾಮಿ ಕುರು ತೇ ಸತ್ಯಂ ವಚನಂ ವದತಾಂ

ಕಾಕುತ್‌ಸ್ಥೇ - ಕಕುತ್‌ಸ್ಥ ವಂಶೋತ್ಪನ್ನನಾದ ದಶರಥರಾಯನು, ಪ್ರತಿಯಾತೇತು - ಹೊರಟುಹೋಗಲಾಗಿ, ಪಾಕಶಾಸನಃ - ಪಾಕಾಸುರ ಸಂಹಾರಕನಾದ, ಮಹೇಂದ್ರಃ - ದೇವೇಂದ್ರನು, ಪರಮಪ್ರೀತಃ - ಬಹಳ ಸಂತುಷ್ಟನಾಗಿ, ಪ್ರಾಂಜಲಿಂ - ಅಂಜಲಿಬದ್ಧನಾಗಿ, ಸ್ಥಿತಂ - ನಿಂತಿರುವ, ರಾಘವಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು. ॥೧॥ ರಾಮ - ಶ್ರೀರಾಮನೇ, ಪರಂತಪ - ಶತ್ರುಸಂಹಾರಕನೇ, ತವ - ನಿನಗೆ, ಅಸ್ಮಾಕಂದರ್ಶನಂ - ನಮ್ಮ ದರ್ಶನವು, ಅಮೋಘಂ- ವ್ಯರ್ಥವಾದುವಲ್ಲ, (ಗೋ) ಅಸ್ಮಾಕಂ - ನಮಗೆ, ತವ - ನಿನ್ನ, ದರ್ಶನಂ - ದರ್ಶನವು, ಅಮೋಘಂ - ಸಫಲವಾದದ್ದು, ಆಸೀತ್ - ಆಯಿತು, ಪ್ರೀತಿಯುಕ್ತಾಃ - ಸಂತೋಷಗೊಂಡವರು, ಸ್ಮ - ಆದೆವು, ತೇನ - ಆದ್ದರಿಂದ, ತ್ವಂ - ನೀನು, ಯತ್ - ಯಾವುದನ್ನು, ಮನಸಾ - ಮನಸ್ಸಿನಿಂದ, ಇಚ್ಛಸಿ - ಅಪೇಕ್ಷಿಸುತ್ತೀಯೋ, ತತ್ - ಅದನ್ನು, ಬ್ರೂಹಿ - ಹೇಳು. ॥೨॥ ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಕಾಕುತ್‌ಸ್ಥಃ - ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ಭಾರ್ಯಯಾ - ಹೆಂಡತಿಯಾದ, ಸೀತಯಾಸಹ - ಸೀತಾದೇವಿಯೊಡನೆ, ಕೃತಾಂಜಲಿಃ - ಅಂಜಲಿಬದ್ಧನಾಗಿ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥೩॥ ಸರ್ವಸುರೇಶ್ವರ- ಸಮಸ್ತ ದೇವತೆಗಳಿಗೂ ಒಡೆಯನೇ, ವದತಾಂವರ - ಮಾತನಾಡುವವರಲ್ಲಿ ಶ್ರೇಷ್ಠನೇ, ಮಯಿ - ನನ್ನಲ್ಲಿ, ಪ್ರೀತಿಃ - ವಿಶ್ವಾಸವು, ಸಮುತ್ಪನ್ನಾಯದಿ - ಹುಟ್ಟಿದ್ದೇ ಆದರೆ, ತೇ - ನಿನ್ನ, ವಚನಂ - ಮಾತು, ಸತ್ಯಂ - ಸಫಲವನ್ನಾಗಿ, ಕುರು - ಮಾಡು, ವಕ್ಷ್ಯಾಮಿ - ಹೇಳುವೆನು. ॥೪॥ ಮಮ -

---

ಕಕುತ್ಸ್ಥವಂಶೋದ್ಭವನಾದ ದಶರಥಮಹೀಪಾಲನು ಶ್ರೀರಾಮಲಕ್ಷ್ಮಣರನ್ನೂ, ತನ್ನ ಸೊಸೆಯಾದ ಸೀತಾದೇವಿಯನ್ನೂ ಕುರಿತು, ಈ ಪ್ರಕಾರವಾಗಿ ನುಡಿದು ಇಂದ್ರಲೋಕಕ್ಕೆ ಹೊರಟುಹೋದ ಬಳಿಕ ಪಾಕಶಾಸನನಾದ ದೇವೇಂದ್ರನು ಕೈಜೋಡಿಸಿಕೊಂಡು ನಿಂತಿರುವ ಶ್ರೀರಾಮಚಂದ್ರನನ್ನು ಕುರಿತು, "ಎಲೈ ಪರಂತಪನಾದ ಶ್ರೀರಾಮಮೂರ್ತಿಯೇ! ನಿನ್ನ ಸಂದರ್ಶನವು ನಮಗೆ ವಿಶೇಷ ಫಲಪ್ರದವಾದುದಾಯಿತು. ನಾವೆಲ್ಲರೂ ನಿನ್ನನ್ನು ಸಂದರ್ಶಿಸಿ ಅಪರಿಮಿತವಾದ ಸಂತೋಷವನ್ನು ಹೊಂದಿದೆವು. ಈಗ ನಿನ್ನ ಮನಸ್ಸಿನಲ್ಲಿ ಯಾವ ಅಭಿಲಾಷೆಯಿರುವುದೋ ಅದನ್ನು ತಿಳಿಸುವವನಾಗು" ಎಂದನು. ಮಹೇಂದ್ರನೀರೀತಿ ನುಡಿದುದನ್ನು ಕೇಳಿ ಕಕುತ್ಸ್ಥವಂಶೋದ್ಭವನಾದ ಶ್ರೀರಾಮಮೂರ್ತಿಯು ಕೈಗಳನ್ನು ಜೋಡಿಸಿಕೊಂಡು ಆತನಿಗೆ ಸೀತಾ ಲಕ್ಷ್ಮಣರು ಕೂಡ ನಮಸ್ಕರಿಸುತ್ತಿರಲು ಆತನನ್ನು ಕುರಿತು ನಮ್ರತೆಯೊಡ

ವರ! || ೪ || ಮಮ ಹೇತೋಃ ಪರಾಕ್ರಾಂತಾ ಯೇ ಗತಾ ಯಮಸಾದನಂ | ತೇ ಸರ್ವೇ ಜೀವಿತಂ ಪ್ರಾಪ್ಯ ಸ್ಸಮುತ್ತಿಷ್ಠಂತು ವಾನರಾಃ || ೫ || ಮತ್ಕೃತೇ ವಿಪ್ರಯುಕ್ತಾ ಯೇ ಪುತ್ರೈರ್ದಾರೈಶ್ಚ ವಾನರಾಃ | ಮತ್ಪ್ರಿಯೇಷ್ವಭಿಯುಕ್ತಾಶ್ಚ ನಮೃತ್ಯುಂ ಗಣಯಂತಿಚ | ತ್ವತ್ಪ್ರಸಾದಾತ್ಸಮೇಯುಸ್ತೇ ವರಮೇತದಹಂ ವೃಣೇ ||೬|| ನೀರುಜೋ ನಿರ್ವ್ರಣಾಂಶ್ಚೈವ ಸಂಪನ್ನಬಲಪೌರುಷಾನ್ | ಗೋಲಾಂಗೂಲಾಂಸ್ತಥೈವರ್ಕ್ಷಾನ್ ದ್ರಷ್ಟುಮಿಚ್ಛಾಮಿ ಮಾನದ! || ೭ || ಅಕಾಲೇಚಾಪಿ ಮುಖ್ಯಾನಿ ಮೂಲಾನಿಚ

ನನ್ನ, ಹೇತೋಃ - ನಿಮಿತ್ತವಾಗಿ, ಪರಾಕ್ರಾಂತಾಃ - ಪರಾಕ್ರಮ ತೋರಿ, ಯೇ - ಯಾವ ವಾನರರು, ಯಮಸಾದನಂ - ಯಮಪಟ್ಟಣವನ್ನು ಕುರಿತು, ಗತಾಃ - ಹೋಗಿರುವರೋ, ತೇಸರ್ವೇವಾನರಾಃ - ಆ ಕಪಿಗಳೆಲ್ಲರೂ, ಜೀವಿತಂ - ಪ್ರಾಣವನ್ನು, ಪ್ರಾಪ್ಯ - ಹೊಂದಿ, ಸಮುತ್ತಿಷ್ಠಂತು - ಮೇಲಕ್ಕೇಳಲಿ. || ೫ || ಮತ್ಕೃತೇ - ನನ್ನ ನಿಮಿತ್ತವಾಗಿ, ಯೇವಾನರಾಃ - ಯಾವ ಕಪಿಗಳು, ಪುತ್ರೈಃ - ಮಕ್ಕಳಿಂದಲೂ, ದಾರೈಶ್ಚ - ಹೆಂಡತಿಯರಿಂದಲೂ, ವಿಪ್ರಯುಕ್ತಾಃ - ವಿರಹಿತರಾಗಿ, ಮತ್ಪ್ರಿಯೇಷು - ನನ್ನ ಇಷ್ಟಕಾರ್ಯಗಳಲ್ಲಿಯೇ, ಅಭಿಯುಕ್ತಾಃ-ನಿಯುಕ್ತರಾಗಿ, ಮೃತ್ಯುಂ-ಮರಣವನ್ನು, ನಗಣಯಂತಿಚ-ಎಣಿಸದಿರುವರೋ, ತೇ - ಆ ವಾನರರು, ತ್ವತ್ಪ್ರಸಾದಾತ್ - ನಿನ್ನ ಅನುಗ್ರಹದಿಂದ, ಸಮೇಯುಃ - ಎದ್ದುಬರಲಿ, ಏತದ್ವರಂ - ಈ ವರವನ್ನು, ಅಹಂ - ನಾನು, ವೃಣೇ - ವರಿಸುತ್ತೇನೆ. || ೬ || ಮಾನದ - ಮಾನದಾಯಕನೇ, ಸಂಪ....ಷಾಂ - ಪೂರ್ವದಲ್ಲಿ ಹೊಂದಲ್ಪಟ್ಟ ದೇಹತ್ರಾಣವೂ ಪರಾಕ್ರಮವೂ ಉಳ್ಳ, ಗೋಲಾಂಗೂಲಾನ್ - ಶಿವಂಗಿಗಳನ್ನು, ತಥೈವ - ಹಾಗೆಯೇ, ಋಕ್ಷಾಂಶ್ಚ - ಕರಡಿಗಳನ್ನೂ, ನೀರುಜಃ - ರೋಗರಹಿತರನ್ನಾಗಿಯೂ, ನಿರ್ವ್ರಣಾಂಶ್ಚ - ಘಾಯಗಳಿಲ್ಲದವರನ್ನಾಗಿಯೂ, ದ್ರಷ್ಟುಂ - ನೋಡುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. || ೭ || ವಾನರಾಃ - ಕಪಿಗಳು, ಯತ್ರ - ಯಾವ ಸ್ಥಳಗಳಲ್ಲಿ, ತಿಷ್ಠೇಯುಃ - ಇರುವರೋ, ತತ್ರ - ಆ ಸ್ಥಳದಲ್ಲಿ, ಅಕಾಲೇಚಾಪಿ -

---

ಗೂಡಿ, "ಎಲೈ ದೇವೇಂದ್ರನೇ! ನನ್ನ ನಿಮಿತ್ತವಾಗಿ ಯಾವ ವಾನರರು ಶತ್ರುಗಳಿಂದ ಹತರಾಗಿ ಯಮಲೋಕವನ್ನು ಸೇರಿದರೋ ಅವರೆಲ್ಲರೂ ಎಂದಿನಂತೆ ಬದುಕಿ ಸಂಚರಿಸುವಂತೆ ಅನುಗ್ರಹಿಸು. ||೧–೫|| ಓ ಸುರನಾಯಕನೇ! ನಮ್ಮಲ್ಲಿ ನಿನಗೆ ವಾಸ್ತವವಾಗಿಯೂ ಪ್ರೀತಿಯಿರುವುದೇ ಆದರೆ ನನ್ನ ಅಭಿಪ್ರಾಯವನ್ನು ಇನ್ನೂ ತಿಳಿಸುವೆನು, ಆಲಿಸು. ನನ್ನ ನಿಮಿತ್ತವಾಗಿ ಯಾವ ಯಾವ ವಾನರರು ಪತ್ನೀಪುತ್ರಾದಿಗಳನ್ನಗಲಿ ಹೋಗಿರುವರೋ ಅವರೆಲ್ಲರೂ ಮತ್ತೆ ಅವರೊಡಗೂಡಿ ಸುಖವಾಗಿರುವಂತೆ ಅನುಗ್ರಹಿಸು. ನೀನು ಪ್ರಸನ್ನನಾಗಿರುವುದು ನಿಜವಾದರೆ ನಾನು ಕೇಳುತ್ತಿರುವ ಈ ವರವನ್ನು ಕೊಡು. ಎಲೈ ಮಹೇಂದ್ರನೇ! ಈ ವಾನರರೆಲ್ಲರೂ ಬಲಪೌರುಷಸಂಪನ್ನರಾಗಿಯೂ, ಏನೊಂದೂ ಬಾಧೆಯಿಲ್ಲದವರಾಗಿಯೂ, ಯಾವ ವ್ರಣಗಳೂ ಇಲ್ಲದೆ ಅಕ್ಷತಗಾತ್ರರಾಗಿಯೂ ಇರುವಂತೆ ಮಾಡುವವನಾಗು. ಇಷ್ಟೆಯಲ್ಲದೆ ನನಗಾಗಿ ಶ್ರಮಿಸಿರುವ ಭಲ್ಲೂಕಾದಿ ಪತಿಗಳನ್ನೂ ಬಲಸಂಪನ್ನರನ್ನಾಗಿಸು. ಎಲೈ ಸುರಶ್ರೇಷ್ಠನೇ, ನಾನು ಈ ವಾನರರೆಲ್ಲರೂ ಸುಖಸಂತೋಷಗಳಿಂದಿರುವುದನ್ನು ನೋಡಬಯಸುವೆನು. ಎಲೈ ಮಾನಪ್ರದಾಯಕನೇ! ನೀನು ನನಗೀವರವನ್ನು ಕೊಡುವವನಾಗು. ಈ ವಾನರರು ಯಾವ ಯಾವ ದೇಶಗಳಲ್ಲಿ ವಾಸ ಮಾಡುವರೋ ಆ ದೇಶಗಳಲ್ಲೆಲ್ಲ ಮುಖ್ಯಮುಖ್ಯವಾದ ಗೆಡ್ಡೆ

ಫಲಾನಿಚ । ನದ್ಯಶ್ಚ ವಿಮಲಾಸ್ತತ್ರ ತಿಷ್ಠೇಯುರ್ಯತ್ರ ವಾನರಾಃ" ॥೮॥ ಶ್ರುತ್ವಾ ತು ವಚನಂ ತಸ್ಯ ರಾಘವಸ್ಯ ಮಹಾತ್ಮನಃ । ಮಹೇಂದ್ರಃ ಪ್ರತ್ಯುವಾಚೇದಂ ವಚನಂ ಪ್ರೀತಿಲಕ್ಷಣಂ ॥೯॥ "ಮಹಾನಯುಂ ವರಸ್ತಾತ! ತ್ವಯೋಕ್ತೋ ರಘುನಂದನ! । ದ್ವಿರ್ಮಯಾ ನೋಕ್ತಪೂರ್ವಂಹಿ ತಸ್ಮಾದೇತದ್ಭವಿಷ್ಯತಿ ॥೧೦॥ ಸಮುತ್ಥಾಸ್ಯಂತಿ ಹರಯೋ ಯೇ ಹತಾ ಯುಧಿ ರಾಕ್ಷಸೈಃ । ಋಕ್ಷಾಶ್ಚ ಸಹಗೋಪುಚ್ಛಾ ನಿಕೃತ್ತಾನನ ಬಾಹವಃ ॥೧೧॥ ನೀರುಜೋ ನಿರ್ವ್ರಣಾಶ್ಚೈವ ಸಂಪನ್ನಬಲಪೌರುಷಾಃ । ಸಮುತ್ಥಾಸ್ಯಂತಿ ಹರಯೋ ಸುಪ್ತಾ ನಿದ್ರಾಕ್ಷಯೇ ಯಥಾ ॥ ೧೨ ॥ ಸುಹೃದ್ಭಿರ್ಬಾಂಧವೈಶ್ಚೈವ

ಆ ಕಾಲದಲ್ಲಿಯೂ, ಮುಖ್ಯಾನಿ - ಮುಖ್ಯಗಳಾದ, ಮೂಲಾನಿ - ಕಂದಮೂಲಗಳು, ಫಲಾನಿಚ - ಫಲವಸ್ತುಗಳೂ, ವಿಮಲಾಃ - ನಿರ್ಮಲವಾದ, ನದ್ಯಶ್ಚ - ನದಿಗಳೂ, ತಿಷ್ಠಂತು - ಇರಲಿ. ॥೮॥ ಮಹಾತ್ಮನಃ - ಮಹಾ ಮನಸ್ವಿಯಾದ, ತಸ್ಯರಾಘವಸ್ಯ - ಆ ಶ್ರೀರಾಮನ, ವಚನಂ - ಮಾತನ್ನು, ಶೃತ್ವಾ - ಕೇಳಿ, ಮಹೇಂದ್ರಃ - ದೇವೇಂದ್ರನು, ಪ್ರೀತಿಲಕ್ಷಣಂ - ವಿಶ್ವಾಸಕ್ಕೆ ಸೂಚಕವಾದ, ಇದಂವಚನಂ - ಈ ಮಾತನ್ನು, ಪ್ರತ್ಯುವಾಚ - ಪ್ರತ್ಯುತ್ತರ ಹೇಳಿದನು. ॥೯॥ ತಾತ - ಅಪ್ಪನೇ, ರಘುನಂದನ - ಶ್ರೀರಾಮನೇ, ಯಃ - ಯಾವ ವರವು, ತ್ವಯಾ - ನಿನ್ನಿಂದ, ಉಕ್ತಃ - ಹೇಳಲ್ಪಟ್ಟಿತೋ, ಅಯುಂವರಃ - ಈ ವರವು, ಮಹಾನ್ - ದೊಡ್ಡದಾಗಿದೆ, ಮಯಾ - ನನ್ನಿಂದ, ದ್ವಿಃ - ಎರಡನೆಯ ಮಾತು, ಹಿ - ಯಾವ ಕಾರಣದಿಂದ, ನೋಕ್ತಪೂರ್ವಂ - ಹಿಂದಾವಾಗಲೂ ಹೇಳಲ್ಪಡಲಿಲ್ಲವೋ, ತತ್ - ಆದ ಕಾರಣ, ಏತತ್ - ಇದು, ಭವಿಷ್ಯತಿ - ಆಗುವುದು. ॥೧೦॥ ಯುಧಿ - ಕಾಳೆಗದಲ್ಲಿಯೇ, ಯೇ - ಯಾವ, ಋಕ್ಷಃ - ಕರಡಿಗಳು, ಸಹಗೋಪುಚ್ಛಾಃ - ಶಿವಂಗಿಗಳಿಂದೊಡಗೂಡಿದ, ಹರಯಃ - ವಾನರರು, ರಾಕ್ಷಸೈಃ - ರಕ್ಕಸರಿಂದ, ನಿಕೃತ್ತಾನನಬಾಹವಃ - ಕತ್ತರಿಸಲ್ಪಟ್ಟ ಮುಖಗಳೂ, ಭುಜಗಳೂ ಉಳ್ಳವರಾಗಿದ್ದಾರೋ, ತೇ - ಅವರೆಲ್ಲರೂ, ಸಮುತ್ಥಾಸ್ಯಂತಿ - ಮೇಲಕ್ಕೆ ಏಳುತ್ತಾರೆ. ॥೧೧॥ ನೀರುಜಃ - ರೋಗರಹಿತರಾಗಿಯೂ, ನಿರ್ವ್ರಣಾಶ್ಚೈವ - ಗಾಯುಗಳಿಲ್ಲದವರಾಗಿಯೂ, ಸಂಪನ್ನಬಲಪೌರುಷಾಃ - ಪರಾಕ್ರಮದಿಂದ ಕೂಡಿದ ದೇಹತ್ರಾಣವೂ ಉಳ್ಳವರಾಗಿ, ಹರಯಃ - ವಾನರರೆಲ್ಲರೂ, ನಿದ್ರಾಕ್ಷಯೇ - ನಿದ್ದೆಯಾದ ಮೇಲೆ, ಸುಪ್ತಾಯಥಾ - ನಿದ್ದೆಗೊಂಡವರಂತೆ, ಸಮುತ್ಥಾಸ್ಯಂತಿ - ಮೇಲಕ್ಕೇಳುತ್ತಾರೆ. ॥೧೨॥ ಸರ್ವಏವ - ಸಮಸ್ತರೂ, ಸುಹೃದ್ಭಿಃ - ಸ್ನೇಹಿತರಿಂದಲೂ, ಜ್ಞಾತಿಭಿಃ - ಜ್ಞಾತಿಗಳಿಂದಲೂ, ಸ್ವಜನೈರಪಿ - ಸ್ವಕೀಯರಿಂದಲೂ, ಸಂಯುಕ್ತಾಃ - ಕೂಡಿದವರಾಗಿ, ಪರಯಾ -

---

ಗೆಣಸುಗಳೂ, ವಿವಿಧ ಫಲಗಳೂ, ತಿಳಿನೀರು ತುಂಬಿದ ನದಿಗಳೂ ಸಮೃದ್ಧವಾಗಿರುವಂತೆ ಅನುಗ್ರಹಿಸು" ಎಂದು ಹೇಳಿದನು. ॥ ೭–೧೦ ॥ ಮಹಾತ್ಮನಾದ ಶ್ರೀರಾಮಮೂರ್ತಿಯು ನುಡಿದ ಈ ಮಾತುಗಳನ್ನು ಕೇಳಿದ ತರುವಾಯ ಆ ಮಹೇಂದ್ರನು ಆತನಲ್ಲಿ ತನಗಿರುವ ನಿರತಿಶಯವಾದ ಪ್ರೇಮವನ್ನು ಸೂಚಿಸುವ ಮಾತುಗಳನ್ನಾಡುವವನಾಗಿ, "ಓ ರಘುನಂದನಾ! ನೀನೀಗ ಕೇಳಿರುವ ವರವು ಮಹತ್ತರವಾದುದು. ಆದರೂ ನಾನು ಅದಕ್ಕೆ ಪ್ರತಿ ಹೇಳುವುದಿಲ್ಲವು. ಇದುವರೆಗೂ ಆ ರೀತಿ ನಡೆದೂ ಇಲ್ಲವು. ಆದುದರಿಂದ ನೀನು ಕೇಳಿರುವಂತೆ ಎಲ್ಲವೂ ನಡೆಯುವುದು. ನಿನ್ನ ಮನೋರಥವು ಸಂಪೂರ್ಣವಾಗುವುದು. ಯುದ್ಧದಲ್ಲಿ ರಾಕ್ಷಸರಿಂದ ಮೃತಿಯೊಂದಿದ ವಾನರರೆಲ್ಲರೂ ಸಪ್ರಾಣರಾಗಿ ಮೇಲಕ್ಕೇಳುವರು. ಋಕ್ಷಗಣಾಧಿಪತಿಗಳೂ, ಭಲ್ಲೂಕಾಧಿಪತಿಗಳೂ, ವಾನರಾಧಿಪತಿಗಳೂ ಮತ್ತೆ ಜೀವಿಸಿ ಪ್ರಣರಹಿ

ಜ್ಞಾತಿಭಿಸ್ಸ್ವಜನೈರಪಿ । ಸರ್ವಏವ ಸಮೇಷ್ಯಂತಿ ಸಂಯುಕ್ತಾಃ ಪರಯಾ ಮುದಾ
॥ ೧೩ ॥ ಅಕಾಲೇ ಪುಷ್ಪಶಬಳಾಃ ಫಲವಂತಶ್ಚ ಪಾದಪಾಃ । ಭವಿಷ್ಯಂತಿ ಮಹೇ
ಷ್ವಾಸ! ನದ್ಯಶ್ಚ ಸಲಿಲಾಯುತಾಃ ॥ ೧೪ ॥ ಸ ವ್ರಣೈಃ ಪ್ರಥಮಂ ಗಾತ್ರೈಸ್ಸಂವೃತ್ತೈ
ರ್ನಿರ್ವ್ರಣೈಃ ಪುನಃ" । ತತಸ್ಸಮುತ್ಥಿತಾಸ್ಸರ್ವೇ ಸುಪ್ತ್ವೇವ ಹರಿಪುಂಗವಾಃ ॥ ೧೫ ॥
ಬಭೂವುರ್ವಾನರಾಸ್ಸರ್ವೇ ಕಿಮೇತದಿತಿ ವಿಸ್ಮಿತಾಃ । ತೇ ಸರ್ವೇ ವಾನರಾಸ್ತಸ್ಮೈ
ರಾಘವಾಯಾಭ್ಯವಾದಯನ್ ॥ ೧೬ ॥ ಕಾಕುತ್ಸ್ಥಂ ಪರಿಪೂರ್ಣಾರ್ಥಂ ದೃಷ್ಟ್ವಾ
ಸರ್ವೇ ಸುರೋತ್ತಮಾಃ । ಊಚುಸ್ತೇ ಪ್ರಥಮಂ ಸ್ತುತ್ವಾ ಸ್ತವಾರ್ಹಂ ಸಹಲಕ್ಷ್ಮಣಂ

ಉತ್ಕೃಷ್ಟವಾದ, ಮುದಾ - ಸಂತೋಷದಿಂದ, ಸಮೇಷ್ಯಂತಿ - ಸೇರುತ್ತಾರೆ, ಹೇ ಮಹೇಷ್ವಾಸ - ಎಲೈ ಮಹಾ ಧನುರ್ಧಾರಿಯೇ, ಅಕಾಲೇ - ಅಕಾಲದಲ್ಲಿಯೂ, ಪಾದಪಾಃ - ಮರಗಳು, ಪುಷ್ಪಶಬಳಾಃ- ಹೂವುಗಳಿಂದ ತುಂಬಿ, ಫಲವಂತಶ್ಚ - ಫಲಗಳುಳ್ಳವು, ನದ್ಯಶ್ಚ - ಹೊಳೆಗಳೂ, ಸಲಿಲಾಯುತಾಃ - ಉದಕದಿಂದ ತುಂಬಿದವುಗಳು, ಭವಿಷ್ಯಂತಿ - ಆಗುವುವು. ॥ ೧೩-೧೪ ॥ ಪ್ರಥಮಂ - ಮೊದಲು, ಸವ್ರಣೈಃ - ಗಾಯಗಳಿಂದೊಡಗೂಡಿದ, ಪುನಃ - ಮತ್ತು, ನಿರ್ವ್ರಣೈಃ - ಗಾಯಗಳಿಲ್ಲದಿರುವವಾಗಿ, ಸುವೃತ್ತೈಃ - ಆಗಿರುವ, ಗಾತ್ರೈಃ - ಅವಯವಗಳಿಂದ, ಉಪಲಕ್ಷಿತಾಃ - ಕೂಡಿದವರು, ಭವಿಷ್ಯಂತಿ - ಆಗುವರು. ॥೧೫॥ ತತಃ - ಬಳಿಕ, ಸರ್ವೇಹರಿಪುಂಗವಾಃ - ಸಮಸ್ತ ವಾನರೋತ್ತಮರೂ, ಸುಪ್ತ್ವೇವ- ಮಲಗಿದವರಂತೆ, ಸಮುತ್ಥಿತಾಃ-ಎದ್ದವರು, ಬಭೂವುಃ-ಆದರು, ವಾನರಾಃ-ವಿಶ್ವ ಕಪಿಗಳು, ಕಿಮೇತ ದಿತಿ - ಇದೇನು ಎಂದು, ವಿಸ್ಮಿತಾಃ - ಆಶ್ಚರ್ಯಗೊಂಡರು, ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ತಸ್ಮೈರಾಘವಾಯ-ಆ ಶ್ರೀರಾಮನಿಗೋಸುಗ, ಅಭ್ಯವಾದಯನ್-ನಮಸ್ಕರಿಸಿದರು. ॥೧೬॥ ಸರ್ವೇ-ಸಮಸ್ತರಾದ, ತೇಸುರೋತ್ತಮಾಃ-ಆ ದೇವತಾಶ್ರೇಷ್ಠರು, ಪರಿಪೂರ್ಣಾರ್ಥಂ-ಪರಿಪೂರ್ಣವಾದ ಪ್ರಯೋಜನವುಳ್ಳ, ಕಾಕುತ್ಸ್ಥಂ-ಶ್ರೀರಾಮನನ್ನು, ದೃಷ್ಟ್ವಾ-ಕಂಡು, ಸಹಲಕ್ಷ್ಮಣಂ-ಲಕ್ಷ್ಮಣನಿಂದೊಡಗೂಡಿದ, ಸ್ತವಾರ್ಹಂ - ಸ್ತೋತ್ರಾರ್ಹನಾದ, ರಾಮಂ - ಶ್ರೀರಾಮನನ್ನು, ಸ್ತುತ್ವಾ - ಸ್ತೋತ್ರ

ತರೂ, ಬಾಧಾರಹಿತರೂ ಆಗುತ್ತಾರೆಯೆಂಬುದರಲ್ಲಿ ಸಂದೇಹವಿಲ್ಲವು. ಇದು ಮಾತ್ರವಲ್ಲದೆ ರಣಾಂಗಣದಲ್ಲಿ ಮಡಿದ ನಿನ್ನಭಟರುಗಳೆಲ್ಲರೂ ಮಿತ್ರ, ಬಂಧು, ಜ್ಞಾತಿ, ಸ್ವಜನ ಸಮೇತರಾಗಿ ನಿರತಿಶಯವಾದ ಸಂತೋಷವನ್ನು ಹೊಂದುತ್ತಾರೆ. ॥೧೧-೧೩॥ ಎಲೈ ರಾಘವನೇ! ಅಕಾಲ ದಲ್ಲಿಯೂ ಕೂಡ ವಾನರರು ನಿವಾಸಮಾಡುವ ಪ್ರದೇಶಗಳಲ್ಲೆಲ್ಲಾ ವೃಕ್ಷಗಳೆಲ್ಲವೂ ಫಲಪುಷ್ಪ ಭರಿತಗಳಾಗಿರುವುದು ಮಾತ್ರವಲ್ಲದೆ ನದಿಗಳೂ ತುಂಬಿ ಹರಿಯುತ್ತವೆ. ಮೊದಲು ಈ ವಾನರ ರೆಲ್ಲರೂ ಈಗ ಜೀವಸಹಿತರಾಗುವರು. ಆಮೇಲೆ ವ್ರಣರಹಿತರೂ, ಬಾಧೆಯಿಲ್ಲದವರೂ ಆಗು ತ್ತಾರೆ" ಎಂದು ಹೇಳಿದನು. ಮಹೇಂದ್ರನೀರೀತಿ ನುಡಿದ ತರುವಾಯ ವಾನರವೀರರೆಲ್ಲರೂ ಆತನ ವಚನ ಬಲದಿಂದ ಕೂಡಲೇ ಪ್ರಾಣಸಹಿತರೂ ಆಮೇಲೆ ವ್ರಣರಹಿತರೂ, ಬಾಧಾರಹಿ ತರೂ ಆದರು. ಆಗ ಅವರೆಲ್ಲರೂ ನಿದ್ರೆಯಿಂದೆಚ್ಚತ್ತವರಂತೆ ಪರಮಾಶ್ಚರ್ಯಚಕಿತರಾಗಿ ನಿಂತರು. ಹೀಗೆ ಮಡಿದು ಬಿದ್ದಿದ್ದ ವಾನರರೆಲ್ಲರೂ ಜೀವದಿಂದ ಮೇಲಕ್ಕೆದ್ದು ಶ್ರೀರಾಮ ಮೂರ್ತಿಯನ್ನುಕಂಡು ಆತನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿದರು. ಆ ಸಮಯದಲ್ಲಿ ದೇವೋತ್ತಮರೆಲ್ಲರೂ ಸಮಸ್ತ ಕಾರ್ಯಗಳನ್ನೂ ಚೆನ್ನಾಗಿ ನೆರವೇರಿಸಿ ಕೃತಾರ್ಥನಾದವನೂ ಸ್ತುತ್ಯನೂ, ಲಕ್ಷ್ಮಣಸಮೇತನೂ ಆದ ಶ್ರೀರಾಮಮೂರ್ತಿಯನ್ನು ನೋಡಿ ಪರಮಾನಂದ

॥೧೭॥ "ಗಚ್ಛಾಯೋಧ್ಯಾಮಿತೋ ವೀರ! ವಿಸರ್ಜಯುಚ ವಾನರಾನ್ । ಮೈಥಿಲೀಂ ಸಾಂತ್ವಯಸ್ವೈನಾಮನುರಕ್ತಾಂ ತಪಸ್ವಿನೀಂ ॥ ೧೮ ॥ ಶತ್ರುಘ್ನಂ ಚ ಮಹಾತ್ಮಾನಂ ಮಾತೄಸ್ಸರ್ವಾಃ ಪರಂತಪ! । ಭ್ರಾತರಂ ಪಶ್ಯ ಭರತಂ ತ್ವಚ್ಛೋಕಾದ್ವ್ರತಧಾರಿಣಂ । ಅಭಿಷೇಚಯ ಚಾತ್ಮಾನಂ ಪೌರಾನ್ ಗತ್ವಾ ಪ್ರಹರ್ಷಯ" ॥ ೧೯-೨೦ ॥ ಏವ ಮುಕ್ತ್ವಾ ತಮಾಮಂತ್ರ್ಯ ರಾಮಂ ಸೌಮಿತ್ರಿಣಾ ಸಹ । ವಿಮಾನೈಸ್ಸೂರ್ಯಸಂಕಾಶೈ ರ್ಹೃಷ್ಟಾ ಜಗ್ಮುಸ್ಸುರಾ ದಿವಂ ॥ ೨೧ ॥ ಅಭಿವಾದ್ಯಚ ಕಾಕುತ್ಸ್ಥಸ್ಸರ್ವಾಂಸ್ತಾಂ ಸ್ತ್ರಿದಶೋತ್ತಮಾನ್ । ಲಕ್ಷ್ಮಣೇನ ಸಹಭ್ರಾತ್ರಾ ವಾಸಮಾಜ್ಞಾಪಯತ್ತದಾ ॥ ೨೨ ॥

ಮಾಡಿ, ಊಚುಃ - ಹೇಳಿದನು. ॥ ೧೭ ॥ ವೀರ - ಶೂರನೇ, ಇತಃ - ಇಲ್ಲಿಂದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಗಚ್ಛ - ಹೊರಡು, ವಾನರಾನ್ - ಕಪಿಗಳನ್ನು, ವಿಸರ್ಜಯ - ಬಿಟ್ಟುಬಿಡು, ತಪಸ್ವಿನೀಂ - ದೀನಳಾದ, ಅನುರಕ್ತಾಂ - ನಿನ್ನಲ್ಲಿಯೇ ಅನುರಾಗವುಳ್ಳ, ಏನಾಂ ಮೈಥಿಲೀಂ - ಈ ಸೀತಾದೇವಿಯನ್ನು, ಸಾಂತ್ವಯಸ್ವ - ಸಮಾಧಾನಗೊಳಿಸು, ಹೇಪರಂತಪ - ಎಲೈ ಶತ್ರುಸಂಹಾರಕರೇ, ಮಹಾತ್ಮಾನಂ - ಮಹಾ ಮನಸ್ವಿಯಾದ, ಶತ್ರುಘ್ನಂಚ - ಶತ್ರುಘ್ನನನ್ನೂ, ಸರ್ವಾಃ - ಸಮಸ್ತರಾದ, ಮಾತೄಃ - ತಾಯಿಯರನ್ನೂ, ತ್ವಚ್ಛೋಕಾತ್ - ನಿನ್ನ ವಿಷಯಕವಾದ ವ್ಯಸನದಿಂದ, ವ್ರತಧಾರಿಣಂ - ನಿಯಮವನ್ನು ಧರಿಸಿರುವ, ಭ್ರಾತರಂ - ತಮ್ಮನಾದ, ಭರತಂ - ಭರತನನ್ನು, ಪಶ್ಯ - ನೋಡು, ಆತ್ಮಾನಂ - ನಿನ್ನನ್ನು, ಅಭಿಷೇಚಯ - ಪಟ್ಟಾಭಿಷಿಕ್ತನನ್ನಾಗಿ ಮಾಡಿಕೋ, ಗತ್ವಾ - ಹೋಗಿ, ಪೌರಾನ್ - ಪಟ್ಟಣಿಗರನ್ನು, ಪ್ರಹರ್ಷಯ - ಸಂತೋಷಗೊಳಿಸು. ॥ ೧೮ ೨೦ ॥ ಸುರಾಃ - ದೇವತೆಗಳು, ಏವಂ - ಈ ಕರಿಯಾಗಿ, ಸೌಮಿತ್ರಿಣಾಸಹ - ಲಕ್ಷ್ಮಣನೊಡ ಗೂಡಿ, ತಂರಾಮಂ - ಆ ಶ್ರೀರಾಮನನ್ನು ಕುರಿತು, ಉಕ್ತ್ವಾ - ಹೇಳಿ, ಆಮಂತ್ರ್ಯ - ಅಪ್ಪಣೆ ತೆಗೆದುಕೊಂಡು, ಹೃಷ್ಟಾಃ - ಸಂತೋಷಗೊಂಡವರಾಗಿ, ಸೂರ್ಯಸಂಕಾಶೈಃ - ಸೂರ್ಯನಂತೆ ಹೊಳೆಯುತ್ತಿರುವ, ವಿಮಾನೈಃ - ವಿಮಾನಗಳಿಂದ, ದಿವಂ - ಸ್ವರ್ಗಲೋಕವನ್ನು ಕುರಿತು, ಯಯೌ- ತೆರಳಿದರು. ॥ ೨೧ ॥ ಕಾಕುತ್ಸ್ಥಃ - ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ಸರ್ವಾನ್ - ಸಮಸ್ತರಾದ, ತಾನ್‌ತ್ರಿದಶೋತ್ತಮಾನ್ - ಆ ದೇವತಾಶ್ರೇಷ್ಠರನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ತದಾ - ಆ ಕಾಲದಲ್ಲಿ, ವಾಸಂ - ನಿವಾಸವನ್ನು, ಆಜ್ಞಾಪ

ಭರಿತರಾದರು. ಹೀಗೆ ಪರಮ ಸಂತುಷ್ಟರಾದ ಆ ದೇವತೆಗಳು ಶ್ರೀರಾಮನನ್ನು ಕುರಿತು, "ಎಲೈ ವೀರನಾದ ರಾಮನೇ! ನೀನು ಇನ್ನು ಅಯೋಧ್ಯಾಪಟ್ಟಣಕ್ಕೆ ಹೋಗು. ಈ ವಾನರ ರೆಲ್ಲರನ್ನೂ ಬೀಳ್ಕೊಡುವವನಾಗು. ರಾಘವಾ! ನಿನ್ನಲ್ಲಿ ಪರಮ ಪ್ರೇಮವುಳ್ಳ ತಪಸ್ವಿನಿ ಯಾದ ಸೀತಾದೇವಿಯನ್ನು ಸಮಾಧಾನಗೊಳಿಸುವವನಾಗು. ಎಲೈ ಪರಂತಪನೇ! ಮಹಾನು ಭಾವನಾದ ಶತ್ರುಘ್ನನನ್ನೂ, ನಿನ್ನ ತಾಯಿಯರನ್ನೂ, ನಿನ್ನ ಅಗಲಿಕೆಯಿಂದ ಪರಿತಪಿಸುತ್ತ ಶೋಕದಲ್ಲಿ ಮುಳುಗಿರುವ ಭರತಕುಮಾರನನ್ನು ನೋಡುವವನಾಗು. ॥ ೧೭–೨೦ ॥ ರಾಮಚಂದ್ರಾ! ಆ ತರುವಾಯ ನೀನು ಸಾಕೇತ ಸಾಮ್ರಾಜ್ಯದಲ್ಲಿ ಅಭಿಷಿಕ್ತನಾಗಿ ಪ್ರಜೆ ಗಳೆಲ್ಲರನ್ನೂ ಆನಂದಗೊಳಿಸು" ಎಂದರು. ದೇವತೋತ್ತಮರೆಲ್ಲರೂ ಈ ರೀತಿ ಶ್ರೀರಾಮ ಲಕ್ಷ್ಮಣರನ್ನು ಸಂತೈಸಿ ದಿವ್ಯ ವಿಮಾನಾರೂಢರಾಗಿ ಪರಮ ಸಂತುಷ್ಟರಾಗಿ ಸ್ವರ್ಗಲೋಕಕ್ಕೆ ಹೊರಟುಹೋದರು. ಆ ಸಮಯದಲ್ಲಿ ಶ್ರೀರಾಮನಾದರೋ ಆ ದೇವತೆಗಳೆಲ್ಲರಿಗೂ

ತತಸ್ತು ಸಾ ಲಕ್ಷ್ಮಣರಾಮಪಾಲಿತಾ
ಮಹಾಚಮೂರ್ಹೃಷ್ಟಜನಾ ಯಶಸ್ವಿನೀ ।
ಶ್ರಿಯಾ ಜ್ವಲಂತೀ ವಿರರಾಜ ಸರ್ವತೋ
ನಿಶಾಪ್ರಣೀತೇವ ಹಿ ಶೀತರಶ್ಮಿನಾ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋವಿಂಶತ್ಯುತ್ತರಶತತಮಸ್ಸರ್ಗಃ

ಯತ್ - ಆಜ್ಞಾಪಿಸಿದನು. ॥ ೨೨ ॥ ತತಃ - ಬಳಿಕ, ಲಕ್ಷ್ಮ....ತಾ - ಶ್ರೀರಾಮಲಕ್ಷ್ಮಣರಿಂದ ಸಂರಕ್ಷಿಸಲ್ಪಟ್ಟ, ಹೃಷ್ಟಜನಾ - ಸಂತೋಷಯುಕ್ತವಾದ ಜನರುಳ್ಳ, ಯಶಸ್ವಿನೀ - ಕೀರ್ತಿಯುಳ್ಳ, ಸಾಮಹಾಚಮೂಃ - ಆ ದೊಡ್ಡ ಸೇನೆಯು, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಶೀತರಶ್ಮಿನಾ - ಚಂದ್ರನಿಂದ, ಪ್ರಣೀತಾ - ಪ್ರಕಾಶಿಸಲ್ಪಟ್ಟ, ನಿಶೇವ - ರಾತ್ರಿಯಂತೆ, ಶ್ರಿಯಾ - ಸಂಪತ್ತಿನಿಂದ, ಜ್ವಲಂತೀ - ಕಂಗೊಳಿಸುವುದಾಗಿ, ವಿರರಾಜ - ಹೊಳೆಯುತ್ತಿತ್ತು. ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಯೋವಿಂಶತ್ಯುತ್ತರಶತತಮಸ್ಸರ್ಗಃ.

ಪ್ರಣಾಮ ಮಾಡಿ ಲಕ್ಷ್ಮಣನನ್ನು ಕುರಿತು ವಾಸಕ್ಕೆ ಉಚಿತವಾದೊಂದು ಪ್ರದೇಶವನ್ನು ನೋಡೆಂದು ಆಜ್ಞಾಪಿಸಿದನು. ಆಗ ಶ್ರೀರಾಮಲಕ್ಷ್ಮಣರಿಂದ ಚೆನ್ನಾಗಿ ಸಂರಕ್ಷಿಸಲ್ಪಟ್ಟುದೂ, ಮಹದಾನಂದಭರಿತವಾದುದೂ, ಅಪರಿಮಿತವಾದ ಕಾಂತಿಯುಕ್ತವಾದುದೂ ಆದ ಆ ವಾನರ ಸೈನ್ಯವು ಚಂದ್ರನೊಡಗೂಡಿದ ರಾತ್ರಿಯಂತೆ ವಿರಾಜಿಸುತ್ತಿದ್ದಿತು. ॥ ೨೧–೨೪ ॥

ಇಂತಿದು ಮಹೇಂದ್ರಕೃತ ವರಪ್ರದಾನವೃತ್ತಾಂತ ನಿರೂಪಣವೆಂಬ ನೂರ
ಇಪ್ಪತ್ತಮೂರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಚತುರ್ವಿಂಶತ್ಯುತ್ತರಶತತಮಸ್ಸರ್ಗಃ

ತಾಂ ರಾತ್ರಿಮುಷಿತಂ ರಾಮಂ ಸುಖೋತ್ಥಿತಮರಿಂದಮಂ । ಅಬ್ರವೀತ್ ಪ್ರಾಂಜಲಿರ್ವಾಕ್ಯಂ ಜಯಂ ಪೃಷ್ಟ್ವಾ ವಿಭೀಷಣಃ ॥೧॥ "ಸ್ನಾನಾನಿ ಚಾಂಗ ರಾಗಾಣಿ ವಸ್ತ್ರಾಣ್ಯಾಭರಣಾನಿಚ । ಚಂದನಾನಿಚ ದಿವ್ಯಾನಿ ಮಾಲ್ಯಾನಿ ವಿವಿಧಾನಿಚ ॥೨॥ ಅಲಂಕಾರವಿದಶ್ಚೇಮಾ ನಾರ್ಯಃ ಪದ್ಮನಿಭೇಕ್ಷಣಾಃ । ಉಪಸ್ಥಿತಾಸ್ತ್ವಾಂ ವಿಧಿವತ್ ಸ್ನಾಪಯಿಷ್ಯಂತಿ ರಾಘವ! । ಪ್ರತಿಗೃಹ್ಣೀಷ್ವ ತತ್ಸರ್ವಂ ಮದನುಗ್ರಹ ಕಾಮ್ಯಯಾ" ॥೩॥ ಏವಮುಕ್ತಸ್ತು ಕಾಕುತ್ಸ್ಥಃ ಪ್ರತ್ಯುವಾಚ ವಿಭೀಷಣಂ ।

ವಿಭೀಷಣಃ - ವಿಭೀಷಣನು, ತಾಂರಾತ್ರಿಂ - ಆ ರಾತ್ರಿಯಲ್ಲಿ, ಉಷಿತಂ - ವಾಸಮಾಡಿದವನಾಗಿ, ಸುಖೋತ್ಥಿತಂ - ಸುಖವಾಗಿ ಎದ್ದಿರುವ, ಅರಿಂದಮಂ - ಶತ್ರುಸಂಹಾರಕನಾದ, ರಾಮಂ - ಶ್ರೀರಾಮನನ್ನು ಕುರಿತು, ಜಯಂ - ಜಯವನ್ನು, ಪೃಷ್ಟ್ವಾ - ಕೇಳಿ, ಪ್ರಾಂಜಲಿಃ - ಅಂಜಲಿಬದ್ಧನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥೧॥ ಹೇ ರಾಘವ - ಎಲೈ ಶ್ರೀರಾಮನೇ, ಅಲಂಕಾರವಿದಃ - ಅಲಂಕಾರ ಮಾಡುವುದನ್ನರಿತಿರುವ, ಪದ್ಮ....ಣಾಃ - ಕಮಲಗಳಿಗೆ ಸಮಾನವಾದ ನೇತ್ರಗಳುಳ್ಳ, ಇಮಾಃನಾರ್ಯಃ - ಈ ಹೆಂಗಸರು, ತ್ವಾಂ - ನಿನ್ನನ್ನು, ಉಪಸ್ಥಿತಾಃ - ಸಮೀಪದಲ್ಲಿರುವರಾಗಿ, ವಿಧಿವತ್ - ಯಥಾಶಾಸ್ತ್ರವಾಗಿ, ಸ್ನಾಪಯಿಷ್ಯಂತಿ - ಅಭ್ಯಂಜನ ಸ್ನಾನ ಮಾಡಿಸುತ್ತಾರೆ, ಸ್ನಾನಾನಿ - ಸ್ನಾನಗಳನ್ನೂ, ಅಂಗ....ಚ - ಅಂಗಲೇಪನಗಳನ್ನೂ, ವಸ್ತ್ರಾಣಿ - ವಸ್ತ್ರಗಳನ್ನೂ, ಆಭರಣಾನಿಚ - ಒಡವೆಗಳನ್ನೂ, ಚಂದನಾನಿಚ - ಶ್ರೀಗಂಧಗಳನ್ನೂ, ದಿವ್ಯಾನಿ - ಮನೋಹರಗಳಾದ, ವಿವಿಧಾನಿ - ನಾನಾಬಗೆಗಳಾದ, ಮಾಲ್ಯಾನಿಚ - ಹುವ್ವಿನ ಸರಗಳನ್ನು, ತತ್ಸರ್ವಂ - ಆ ಸಮಸ್ತವನ್ನೂ, ಮದ....ಯಾ - ನನ್ನನ್ನು ಅನುಗ್ರಹಿಸಲೋಸುಗ, ಪ್ರತಿಗೃಹ್ಣೀಷ್ವ - ಪರಿಗ್ರಹಿಸು. ॥೨ ೩॥ ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟ, ಕಾಕುತ್ಸ್ಥಃ - ಶ್ರೀರಾಮನು, ವಿಭೀಷಣಂಪ್ರತಿ - ವಿಭೀಷಣನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು, ತ್ವಂ - ನೀನು, ಸುಗ್ರೀವಮುಖ್ಯಾನ್ - ಸುಗ್ರೀವನೇ ಮೊದಲಾದ, ಹರೀನ್ - ವಾನರರನ್ನು, ಸ್ನಾನೇನ - ಅಭ್ಯಂಗನ

ಶ್ರೀರಾಮಮೂರ್ತಿಯು ಸೀತಾಲಕ್ಷ್ಮಣಸಹಿತನಾಗಿ ಅಂದಿನ ರಾತ್ರಿ ಉಚಿತ ಪ್ರದೇಶದಲ್ಲಿ ಸುಖವಾಗಿ ನಿದ್ರಿಸಿದನು. ಮಾರನೆಯ ಬೆಳಿಗ್ಗೆ ರಾಕ್ಷಸಪ್ರಭುವಾದ ವಿಭೀಷಣನು ಶ್ರೀರಾಮನ ಬಳಿಗೈದಿ ಕೈಗಳನ್ನು ಜೋಡಿಸಿಕೊಂಡು ವಿಜಯ ಶಬ್ದಗಳಿಂದಾತನನ್ನು ಅಭಿನಂದಿಸಿ ಆತನನ್ನು ಕುರಿತು, "ಓ ರಘುಕುಲೋತ್ತಮಾ! ಸ್ನಾನಗೈಯಲು ಯೋಗ್ಯ ಜಲವೂ, ಅಂಗರಾಗಗಳೂ, ಶುಭ ವಸ್ತ್ರಗಳೂ, ಆಭರಣಗಳೂ, ಸುಗಂಧ ದ್ರವ್ಯಗಳೂ, ಪುಷ್ಪ ಮಾಲಿಕೆಗಳೂ ಇವೆಲ್ಲವನ್ನೂ ತೆಗೆದುಕೊಂಡು ಅಲಂಕಾರ ಕುಶಲೆಯರಾದ ಈ ಚೇಟಿಯರೆಲ್ಲರೂ ಸಿದ್ಧರಾಗಿ ಬಂದಿರುವರು. ಇವರು ನಿನಗೆ ಮಂಗಳಸ್ನಾನ ಮಾಡಿಸುವರು. ಎಲೈ ರಾಘವನೇ! ನೀನಿವುಗಳೆಲ್ಲವನ್ನೂ ಸ್ವೀಕರಿಸಿ ನನ್ನನ್ನು ಅನುಗ್ರಹಿಸುವವನಾಗು" ಎಂದನು. ಆಗ ಕಾಕುತ್ಸ್ಥ ರಾಮನು ಆತನನ್ನು ಕುರಿತು, "ಎಲೈ ರಾಕ್ಷಸೋತ್ತಮನಾದ

"ಹರೀಶ ಸುಗ್ರೀವಮುಖ್ಯಾಸ್ತ್ವಂ ಸ್ನಾನೇನಾಭಿನಿಮಂತ್ರಯ ॥ ೪ ॥ ಸತು ತಾಮ್ಯತಿ ಧರ್ಮಾತ್ಮಾ ಮಮ ಹೇತೋಸ್ಸುಖೋಚಿತಃ । ಸುಕುಮಾರೋ ಮಹಾಬಾಹುಃ ಕುಮಾರಸ್ಸತ್ಯಸಂಶ್ರವಃ ॥೫॥ ತಂ ವಿನಾ ಕೈಕಯೀಪುತ್ರಂ ಭರತಂ ಧರ್ಮಚಾರಿಣಂ । ನಮೇ ಸ್ನಾನಂ ಬಹುಮತಂ ವಸ್ತ್ರಾಣ್ಯಾಭರಣಾನಿಚ ॥ ೬ ॥ ಇತ ಏವ ಪಥಾ ಕ್ಷಿಪ್ರಂ ಪ್ರತಿಗಚ್ಛಾಮಿ ತಾಂ ಪುರೀಂ । ಅಯೋಧ್ಯಾಮಾಗತೋ ಹ್ಯೇಷ ಪಂಥಾಃ ಪರಮ ದುರ್ಗಮಃ" ॥೭॥ ಏವಮುಕ್ತಸ್ತು ಕಾಕುತ್ಸ್ಥಂ ಪ್ರತ್ಯುವಾಚ ವಿಭೀಷಣಃ । "ಅಹ್ನಾ ತ್ವಾಂ ಪ್ರಾಪಯಿಷ್ಯಾಮಿ ತಾಂ ಪುರೀಂ ಪಾರ್ಥಿವಾತ್ಮಜ! ॥೮॥ ಪುಷ್ಪಕಂ ನಾಮ ಭದ್ರಂ

ಸ್ನಾನದಿಂದ, ಅಭಿನಿಮಂತ್ರಯ - ಬೇಡಿಕೋ ॥ ೪ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಸುಕುಮಾರಃ - ಮೃದುವಾದ ಶರೀರವುಳ್ಳ, ಮಹಾಬಾಹುಃ - ಮಹಾ ಭುಜಬಲಪರಾಕ್ರಮಶಾಲಿಯಾದ, ಸುಖೋಚಿತಃ - ಸುಖಕ್ಕೆ ಅರ್ಹನಾದ, ಸತ್ಯಸಂಶ್ರವಃ - ಸತ್ಯವಾದ ಪ್ರತಿಜ್ಞೆಯುಳ್ಳ, ಸಕುಮಾರಃ - ಸುಕುಮಾರನಾದ, ಸತು-ಆ ಭರತನಾದರೆ, ಮಮಹೇತೋಃ-ನನ್ನ ನಿಮಿತ್ತದಿಂದ, ತಾಮ್ಯತಿ-ಮುಗ್ಗಿ ಹೋಗಿದ್ದಾನೆ. ॥ ೫ ॥ ಧರ್ಮಚಾರಿಣಂ - ಧರ್ಮಿಷ್ಠನಾದ, ಕೈಕಯೀಪುತ್ರಂ - ಕೈಕೇಯೀದೇವಿಗೆ ಮಗನಾದ, ತಂಭರತಂವಿನಾ - ಆ ಭರತನನ್ನು ಬಿಟ್ಟು, ಮೇ - ನನಗೆ, ಸ್ನಾನಂ - ಮಂಗಳಸ್ನಾನವು, ನಬಹುಮತಂ - ಸಮ್ಮತವಲ್ಲವು, ವಸ್ತ್ರಾಣಿ - ವಸ್ತ್ರಗಳೂ, ಆಭರಣಾನಿಚ - ಒಡವೆಗಳೂ, ನಬಹುಮತಾನಿ - ಸಮ್ಮತಗಳಲ್ಲವು. ॥ ೬ ॥ ಇತಏವ - ಇಲ್ಲಿಂದಲೇ, ಕ್ಷಿಪ್ರಂ - ಜಾಗ್ರತೆಯಾಗಿ, ಪಥಾ - ಮಾರ್ಗದಿಂದ, ಅಯೋಧ್ಯಾಂ - ಅಯೋಧ್ಯೆಯೆಂಬ, ತಾಂಪುರೀಂ - ಆ ಪಟ್ಟಣವನ್ನು ಕುರಿತು, ಪ್ರತಿಗಚ್ಛಾಮಿ-ಹೋಗುತ್ತೇನೆ, ಏಷಪಂಥಾಃ ಈ ಮಾರ್ಗವು, ಪರ....ಮಃ-ಹೊಂದಲು ಬಹಳ ಅಸಾಧ್ಯವಾದದ್ದಾಗಿ, ಆಗತಃ - ಪ್ರಾಪ್ತವಾಗಿದೆ. ॥ ೭ ॥ ಏವಂ - ಈ ಪರಿ, ಉಕ್ತಃ - ಹೇಳಲ್ಪಟ್ಟ, ವಿಭೀಷಣಸ್ತು - ವಿಭೀಷಣನಾದರೆ, ಕಾಕುತ್‌ಸ್ಥಂ - ಶ್ರೀರಾಮನನ್ನು, ಪ್ರತ್ಯುವಾಚ - ಪ್ರತ್ಯುತ್ತರ ಹೇಳಿದನು, ಹೇ ಪಾರ್ಥಿವಾತ್ಮಜ - ಎಲೈ ರಾಜಪುತ್ರನೇ, ತ್ವಾಂ - ನಿನ್ನನ್ನು, ಅಹ್ನಾ - ಒಂದು ಹಗಲಿನಿಂದಲೇ, ತಾಂಪುರೀಂ - ಆ ಪಟ್ಟಣವನ್ನು, ಪ್ರಾಪಯಿಷ್ಯಾಮಿ - ಹೊಂದಿಸುವೆನು, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ. ॥ ೮ ॥ ಮಮ - ನನ್ನ, ಭ್ರಾತುಃ - ದೊಡ್ಡಣ್ಣನಾದ, ಕುಬೇರಸ್ಯ -

---

ವಿಭೀಷಣನೇ! ಸುಗ್ರೀವನೇ ಮೊದಲಾದ ಈ ವಾನರೋತ್ತಮರೆಲ್ಲರಿಗೂ ಶುಭಸ್ನಾನಗಳನ್ನು ಮಾಡಿಸು. ವಿಭೀಷಣಾ! ಧರ್ಮಾತ್ಮನೂ, ಸುಖಾರ್ಹನೂ, ಮಹಾಭುಜನೂ, ಬಾಲಕನೂ, ನನ್ನ ನಿಮಿತ್ತವಾಗಿ ಮಹಾ ವ್ಯಸನಮಗ್ನನೂ ಆದ ಭರತಕುಮಾರನನ್ನು ನೋಡಿದ ಹೊರತು ನನಗೊಂದೂ ಬೇಕಾಗುವುದಿಲ್ಲವು. ಎಲೈ ರಾಕ್ಷಸಶ್ರೇಷ್ಠನೇ! ನನ್ನಲ್ಲಿನ ಪ್ರೇಮದಿಂದಲೂ, ಭಕ್ತಿಯಿಂದಲೂ ಸರ್ವ ಸುಖಗಳನ್ನೂ ತೊರೆದಿರುವ ಆ ಕೈಕೇಯಿಯ ಮಗನಾದ ಭರತನನ್ನುಳಿದು ನನಗೆ ಈ ಸ್ನಾನವಾಗಲಿ, ಈ ಆಭರಣಾದ್ಯಲಂಕಾರಗಳಾಗಲಿ ಬಹುಮತವೆನಿಸುವುದಿಲ್ಲವು. ॥ ೧-೬ ॥ ನಾನು ಈಗಿರುವಂತೆಯೇ ಅಯೋಧ್ಯಾಪಟ್ಟಣಕ್ಕೆ ಹಿಂತಿರುಗಲಪೇಕ್ಷಿಸಿರುವೆನು. ಆದರೆ ಮಾರ್ಗವು ಮಾತ್ರ ಬಹಳ ದುರ್ಗಮವಾಗಿರುವುದು" ಎಂದು ಹೇಳಿದನು. ಶ್ರೀರಾಮನಾಡಿದ ಈ ಮಾತುಗಳನ್ನು ಕೇಳಿ ಧರ್ಮಾತ್ಮನಾದ ವಿಭೀಷಣನು ಆತನನ್ನು ಕುರಿತು, "ಎಲೈ ರಾಜನಂದನನೇ, ರಾಮಾ! ಒಂದೇ ದಿನದಲ್ಲಿಯೇ ನಿನ್ನನ್ನು ಅಯೋಧ್ಯಾಪಟ್ಟಣಕ್ಕೆ ಕರೆದೊಯ್ಯುವೆನು. ನನ್ನ ಅಗ್ರಜನಾದ ರಾವಣಾಸುರನು ಕುಬೇರನಿಂದ ಅಪ

ತೇ ವಿಮಾನಂ ಸೂರ್ಯಸನ್ನಿಭಂ । ಮಮ ಭ್ರಾತುಃ ಕುಬೇರಸ್ಯ ರಾವಣೇನಾಹೃತಂ
ಬಲಾತ್ ॥೯॥ ಹೃತಂ ನಿರ್ಜಿತ್ಯ ಸಂಗ್ರಾಮೇ ಕಾಮಗಂ ದಿವ್ಯಮುತ್ತಮಂ । ತ್ವದರ್ಥೇ
ಪಾಲಿತಂ ಚೈತತ್ತಿಷ್ಠತ್ಯತುಲವಿಕ್ರಮ ! ॥ ೧೦ ॥ ತದಿದಂ ಮೇಘಸಂಕಾಶಂ ವಿಮಾನ
ಮಿಹ ತಿಷ್ಠತಿ । ತೇನ ಯಾಸ್ಯಸಿ ಯಾನೇನ ತ್ವಮಯೋಧ್ಯಾಂ ಗತಜ್ವರಃ ॥ ೧೧ ॥
ಅಹಂ ತೇ ಯದ್ಯನುಗ್ರಾಹ್ಯೋ ಯದಿಸ್ಮರಸಿ ಮೇ ಗುಣಾನ್ । ವಸ ತಾವದಿಹ ಪ್ರಾಜ್ಞ!
ಯದ್ಯಸ್ತಿ ಮಯಿ ಸೌಹೃದಂ ॥ ೧೨ ॥ ಲಕ್ಷ್ಮಣೇನ ಸಹಭ್ರಾತ್ರಾ ವೈದೇಹ್ಯಾ ಚಾಪಿ
ಭಾರ್ಯಯಾ । ಅರ್ಚಿತಸ್ಸರ್ವಕಾಮೈಸ್ತ್ವಂ ತತೋ ರಾಮ ! ಗಮಿಷ್ಯಸಿ ॥ ೧೩ ॥

ಕುಬೇರನ, ಪುಷ್ಪಕಂನಾಮ - ಪುಷ್ಪಕವೆಂದು ಪ್ರಖ್ಯಾತವಾದ, ವಿಮಾನಂ - ವಿಮಾನವು, ರಾವಣೇನ - ರಾವಣಾಸುರನಿಂದ, ಬಲಾತ್ - ಸಾಮರ್ಥ್ಯದಿಂದ, ಆಹೃತಂ - ತರಲ್ಪಟ್ಟದಾಗಿದೆ, ಸಂಗ್ರಾಮೇ - ಕಾಳಗದಲ್ಲಿ, ನಿರ್ಜಿತ್ಯ - ಜಯಿಸಿ, ದಿವ್ಯಂ - ದೇವತಾಸಂಬಂಧವಾದ, ಉತ್ತಮಂ - ಸರ್ವೋತ್ತಮ ವಾದ, ಕಾಮಗಂ - ಕೋರಿದಂತೆ ಹೋಗುತ್ತಿರುವ, ವಿಮಾನಂ - ಆ ವಿಮಾನವು, ಹೃತಂ - ಅಪ ಹರಿಸಲ್ಪಟ್ಟದಾಗಿದೆ, ಹೇ ಅತುಲವಿಕ್ರಮ - ಎಲೈ ಬಹಳವಾದ ಪರಾಕ್ರಮವುಳ್ಳವನೇ, ತ್ವದರ್ಥೇ - ನಿನ್ನ ನಿಮಿತ್ತವಾಗಿ, ಪಾಲಿತಂ - ಸಂರಕ್ಷಿಸಲ್ಪಟ್ಟ, ಮೇಘಸಂಕಾಶಂ - ಮೇಘಕ್ಕೆ ಸಮಾನವಾದ, ತದಿದಂ - ಆ ವಿಮಾನವು, ಇಹ - ಇಲ್ಲಿಯೇ, ತಿಷ್ಠತಿ - ಇರುವುದು, ತೇನಯಾನೇನ - ಆ ವಿಮಾನ ದಿಂದ, ತ್ವಂ - ನೀನು, ಗತಜ್ವರಃ - ಹೋಗಲಾಡಿಸಲ್ಪಟ್ಟ ತಾಪವುಳ್ಳವನಾಗಿ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಯಾಸ್ಯಸಿ - ಹೋಗುತ್ತೀಯೆ, ಅಹಂ - ನಾನು, ತೇ - ನಿನಗೆ, ಅನುಗ್ರಾಹ್ಯೋಯದಿ - ಅನುಗ್ರಹಿಸಲ್ಪಡತಕ್ಕವನೇ ಆದರೆ, ಹೇ ಪ್ರಾಜ್ಞ - ಎಲೈ ಅಭಿಜ್ಞನೇ, ಮೇ - ನನ್ನ, ಗುಣಾನ್ - ಗುಣಗಳನ್ನು, ಸ್ಮರಸಿಯದಿ - ಸ್ಮರಿಸಿವೆಯೇ ಆದರೆ, ಮಯಿ - ನನ್ನಲ್ಲಿ, ಸೌಹೃದಂ - ಮೈತ್ರಿಯು, ಅಸ್ತಿಯದಿ - ಇದ್ದುದೇ ಆದರೆ, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ಭಾರ್ಯಯಾ - ಹೆಂಡತಿಯಾದ, ವೈದೇಹ್ಯಾಚಾಪಿ - ಸೀತಾದೇವಿಯೊಡಗೂಡಿ, ಇಹ - ಇಲ್ಲಿ, ವಸ - ಇರು, ಹೇ ರಾಮ - ಎಲೈ ಶ್ರೀರಾಮನೇ, ತ್ವಂ - ನೀನು, ಸರ್ವಕಾಮೈಃ - ಸಮಸ್ತ ಕೋರಿಕೆಗಳಿಂದಲೂ, ಅರ್ಚಿತಃ - ಪೂಜಿಸಲ್ಪಟ್ಟವನಾಗಿ, ತತಃ - ಬಳಿಕ, ಗಮಿಷ್ಯಸಿ - ಹೋಗುವೆ, ರಾಮ - ಶ್ರೀರಾಮನೇ, ಸಸೈನ್ಯಃ - ಸೇನಾಸಮೇತನಾಗಿ, ಸಸುಹೃದ್ಗಣಃ - ಸ್ನೇಹಿತರ

ಹರಿಸಿ ತಂದಿರುವ ಸೂರ್ಯಕಾಂತಿಯುತವಾದ ಪುಷ್ಪಕ ವಿಮಾನವಿರುವುದಷ್ಟೆ. ಆ ವಿಮಾನವು ಪರಮ ಶ್ರೇಷ್ಠವಾದುದು; ಬಯಸಿದೆಡೆಗೆ ಕರೆದೊಯ್ಯುವಂತಹುದು. ಎಲೈ ಅಮಿತ ಪರಾಕ್ರಮಿಯೇ! ರಾಮಚಂದ್ರಾ! ಮೇಘೋಪಮವಾದ ಆ ವಿಮಾನವು ನಿನಗಾಗಿಯೇ ಸಂರಕ್ಷಿಸಲಾಗಿರುವುದು. ॥ ೭–೧೦ ॥ ನೀನು ಅದರಲ್ಲಿ ಸುಖಾಸೀನನಾಗಿ ಶೀಘ್ರದಲ್ಲಿಯೇ ಅಯೋಧ್ಯೆಗೆ ಹೋಗುವೆ. ಆದುದರಿಂದ ನೀನು ಆ ವಿಷಯದಲ್ಲಿ ಯಾವ ರೀತಿಯಲ್ಲಿಯೂ ಚಿಂತಿಸಬೇಕಾಗಿಲ್ಲವು. ಎಲೈ ರಾಘವನೇ! ಗುಣಗಳಿಂದಲೇ ನಾನು ಅನುಗ್ರಾಹ್ಯನಾಗಿರುವುದಾದರೆ, ಇಲ್ಲಿಯೇ ಇರುವವನಾಗು. ನಿನಗೆ ನನ್ನಲ್ಲಿ ನಿರ್ವ್ಯಾಜವಾದ ಮೈತ್ರಿಯಿರುವುದು ದಿಟವಾದರೆ, ಸೀತಾಲಕ್ಷ್ಮಣ ಸಮೇತನಾಗಿ ನೀನಿಲ್ಲಿಯೇ ವಾಸಮಾಡುವವನಾಗು. ಹಾಗಿಲ್ಲದಿದ್ದರೆ ನನ್ನ ಕೋರಿಕೆಗಳೆಲ್ಲವೂ ತೀರುವಂತೆ ನನ್ನಿಂದ ಪೂಜಿತನಾಗಿ ಪ್ರಯಾಣ ಮಾಡುವಿಯಂತೆ. ಎಲೈ ರಾಮಭದ್ರನೇ! ಅಧಿಕವಾದ ಪ್ರೇಮವುಳ್ಳವನೂ, ಸೈನ್ಯಸಮೇ

ಪ್ರೀತಿಯುಕ್ತಸ್ಯ ಮೇ ರಾಮ! ಸಸೈನ್ಯಸ್ಸಸುಹೃದ್ಗಣಃ । ಸತ್ಕ್ರಿಯಾಂ ವಿಹಿತಾಂ ತಾವದ್ಗೃಹಾಣ ತ್ವಂ ಮಯೋದ್ಯತಾಂ ॥೧೪॥ ಪ್ರಣಯಾದ್ಬಹುಮಾನಾಚ್ಚ ಸೌಹೃದೇನಚ ರಾಘವ! । ಪ್ರಸಾದಯಾಮಿ ಪ್ರೇಷ್ಯೋಽಹಂ ನಖಲ್ವಾಜ್ಞಾಪಯಾಮಿ ತೇ" ॥೧೫॥ ಏವಮುಕ್ತಸ್ತತೋ ರಾಮಃ ಪ್ರತ್ಯುವಾಚ ವಿಭೀಷಣಂ । ರಕ್ಷಸಾಂ ವಾನರಾಣಾಂಚ ಸರ್ವೇಷಾಂ ಚೋಪಶೃಣ್ವತಾಂ ॥೧೬॥ "ಪೂಜಿತೋಽಹಂ ತ್ವಯಾ ಸೌಮ್ಯ! ಸಾಚಿವ್ಯೇನ ಪರಂತಪ! । ಸರ್ವಾತ್ಮನಾಚ ಚೇಷ್ಟಾಭಿಸ್ಸೌಹೃದೇನೋತ್ತಮೇನಚ ॥೧೭॥ ನಖಲ್ವೇತನ್ನಕುರ್ಯಾಂ ತೇ ವಚನಂ ರಾಕ್ಷಸೇಶ್ವರ! । ತಂತು ಮೇ ಭ್ರಾತರಂ

ಗುಂಪಿನಿಂದೊಡಗೂಡಿ, ಪ್ರೀತಿಯುಕ್ತಸ್ಯ - ವಿಶ್ವಾಸದಿಂದ ಕೂಡಿರುವ, ಮೇ - ನನ್ನ ಸಂಬಂಧಿಯಾದ, ಮಯಾ-ನನ್ನಿಂದ, ಉದ್ಯತಾಂ ಮಾಡಲ್ಪಟ್ಟ, ವಿಹಿತಾಂ-ಶಾಸ್ತ್ರೋಕ್ತವಾದ, ಸತ್ಕ್ರಿಯಾಂ-ಸತ್ಕಾರವನ್ನಾದರೆ, ತ್ವಂ - ನೀನು, ಗೃಹಾಣ - ಪರಿಗ್ರಹಿಸು, ರಾಘವ - ಶ್ರೀರಾಮನೇ, ಪ್ರೇಷ್ಯಃ - ಭಕ್ತನಾದ, ಅಹಂ - ನಾನು, ಪ್ರಣಯಾತ್ - ಪ್ರೀತಿಯಿಂದಲೂ, ಬಹುಮಾನಾಚ್ಚ - ಬಹುಮಾನದ ದೆಸೆಯಿಂದಲೂ, ಸೌಹೃದೇನಚ - ಸೌಹಾರ್ದದಿಂದಲೂ, ಪ್ರಸಾದಯಾಮಿ - ಬೇಡಿಕೊಳ್ಳುತ್ತೇನೆ, ತೇ - ನಿನಗೆ, ನಾಜ್ಞಾಪಯಾಮಿಖಲು - ಆಜ್ಞಾಪಿಸುವನಲ್ಲವಷ್ಟೆ. ॥೯-೧೫॥ ತತಃ - ಬಳಿಕ, ಏವಂ - ಈ ಪರಿ, ಉಕ್ತಃ - ಹೇಳಲ್ಪಟ್ಟ, ರಾಮಃ - ಶ್ರೀರಾಮನು, ಸರ್ವೇಷಾಂ - ಸಮಸ್ತವಾದ, ರಕ್ಷಸಾಂ - ರಕ್ಕಸರೂ, ವಾನರಾಣಾಂಚ - ಕಪಿಗಳೂ, ಉಪಶೃಣ್ವತಾಂ - ಕೇಳುತ್ತಿರಲು, ವಿಭೀಷಣಂ-ವಿಭೀಷಣನನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು. ॥೧೬॥ ಸೌಮ್ಯ - ಶತ್ರುಸಂಹಾರಕನೇ, ಅಹಂ - ನಾನು, ತ್ವಯಾ - ನಿನ್ನಿಂದ, ಸಾಚಿವ್ಯೇನಚ - ಮಂತ್ರಿತ್ವದಿಂದಲೂ, ಚೇಷ್ಟಾಭಿಃ - ಪೌರುಷಗಳಿಂದಲೂ, ಉತ್ತಮೇನ - ಉತ್ಕೃಷ್ಟವಾದ, ಸೌಹೃದೇನಚ - ಮೈತ್ರಿಯಿಂದಲೂ, ಸರ್ವಾತ್ಮನಾಚ - ಸರ್ವಾಂಶಗಳಿಂದಲೂ, ಪೂಜಿತಃ - ಪೂಜಿಸಲ್ಪಟ್ಟೆನು. ॥೧೭॥ ರಾಕ್ಷಸೇಶ್ವರ - ರಾಕ್ಷಸರಾಜನೇ, ಏತತ್ - ಈ, ತೇವಚನಂ - ನಿನ್ನ ಮಾತನ್ನು, ನಕುರ್ಯಾಮಿತೀನಖಲು - ಮಾಡುವುದಿಲ್ಲವೆಂಬುದಿಲ್ಲ, ಕಿಂತು - ಮತ್ತೇನೆಂದರೆ, ಮೇ - ನನ್ನ, ಮನಃ - ಮನಸ್ಸು, ಭ್ರಾತರಂ - ತಮ್ಮ

ತನೂ, ಮಿತ್ರಸಹಿತನೂ ಆದ ನನ್ನ ಸತ್ಕಾರವೆಲ್ಲವನ್ನೂ ಸ್ವೀಕರಿಸಿ ನನ್ನನ್ನು ಅನುಗ್ರಹಿಸುವವನಾಗು. ಪ್ರೀತಿಯಿಂದಲೂ, ಬಹುಮಾನದಿಂದಲೂ, ಸ್ನೇಹದಿಂದಲೂ ನನ್ನ ಪೂಜೆಯನ್ನು ಪರಿಗ್ರಹಿಸಿ ನನ್ನನ್ನು ಅನುಗ್ರಹಿಸು. ನೀನು ಹೇಗೆ ಹೇಳುವೆಯೋ ಹಾಗೆಯೇ ನಡೆದುಕೊಳ್ಳುವವನು ನಾನು. ನಾನೆಂದಿಗೂ ನಿನಗೆ ಆಜ್ಞಾಪಿಸುವವನಲ್ಲವು. ಆದುದರಿಂದೆಲೈ ರಾಮಮೂರ್ತಿಯೇ! ನಿನ್ನ ಆಜ್ಞಾನುಸಾರವಾಗಿ ನಡೆದುಕೊಳ್ಳಲು ಸರ್ವಸಿದ್ಧನಾಗಿರುವೆನು" ಎಂದು ಹೇಳಿದನು. ॥೧೧-೧೫॥ ವಿಭೀಷಣನಿಂತು ನುಡಿಯಲು, ಶ್ರೀರಾಮಮೂರ್ತಿಯು, ವಾನರರಾಕ್ಷಸರೆಲ್ಲರೂ ಕೇಳುತ್ತಿರುವಂತೆಯೇ ಆತನನ್ನು ಕುರಿತು, ಓ ಮಿತ್ರನಾದ ವಿಭೀಷಣನೇ! ಸೌಮ್ಯನೂ, ಶತ್ರುತಾಪನನೂ ಆದ ನಿನ್ನ ಮಂತ್ರಿತ್ವದಿಂದಲೂ, ನಿನ್ನ ನಡತೆಯಿಂದಲೂ, ನಿನಗೆ ನನ್ನಲ್ಲಿರುವ ಪರಮ ಸ್ನೇಹದಿಂದಲೂ ನಾನು ಪೂಜಿತನಾಗಿರುವೆನು. ನಿನ್ನ ಸತ್ಕಾರವನ್ನು ನಾನು ಸ್ವೀಕರಿಸಲಿಲ್ಲವೆಂದು ನುಡಿಯಬೇಡ. ಓ ರಾಕ್ಷಸೋತ್ತಮಾ! ನಾನು ನಿನ್ನ ಮಾತುಗಳಿಂದಲೇ ಪರಮ ಸಂತುಷ್ಟನಾಗಿರುವೆನು. ನಿನ್ನ ಮಾತಿನಂತೆ ನಡೆಯಲಿಲ್ಲವೆಂದು ಮನಸ್ಸಿನಲ್ಲಿ ಜೇಪೆಯೆಣಿಸಬೇಡ. ಎಲೈ ಮಿತ್ರನೇ! ನನ್ನ

ದ್ರಷ್ಟುಂ ಭರತಂ ತ್ವರತೇ ಮನಃ ॥ ೧೮ ॥ ಮಾಂ ನಿವರ್ತಯಿತುಂ ಯೋಽಸೌ ಚಿತ್ರಕೂಟಮುಪಾಗತಃ । ಶಿರಸಾ ಯಾಚತೋ ಯಸ್ಯ ವಚನಂ ನಕೃತಂ ಮಯಾ ॥ ೧೯ ॥ ಕೌಸಲ್ಯಾಂ ಚ ಸುಮಿತ್ರಾಂಚ ಕೈಕೇಯೀಂಚ ಯಶಸ್ವಿನೀಂ । ಗುರೂಂಶ್ಚ ಸುಹೃದಶ್ಚೈವ ಪೌರಾಂಶ್ಚ ತನಯೈಸ್ಸಹ ॥ ೨೦ ॥ ಉಪಸ್ಥಾಪಯ ಮೇ ಕ್ಷಿಪ್ರಂ ವಿಮಾನಂ ರಾಕ್ಷಸೇಶ್ವರ! । ಕೃತಕಾರ್ಯಸ್ಯ ಮೇ ವಾಸಃ ಕಥಂ ಸ್ವಿದಿಹ ಸಮ್ಮತಃ ॥೨೧॥ ಅನುಜಾನೀಹಿ ಮಾಂ ಸೌಮ್ಯ! ಪೂಜಿತೋಽಸ್ಮಿ ವಿಭೀಷಣ! । ಮನ್ಯುರ್ನ ಖಲು ಕರ್ತವ್ಯಸ್ತ್ವರಿತಂ ತ್ವಾಽನುಮಾನಯೇ" ॥ ೨೨ ॥ ರಾಘವಸ್ಯ ವಚಃ ಶ್ರುತ್ವಾ

ನಾದ, ತಂಭರತಂ - ಆ ಭರತನನ್ನು, ದ್ರಷ್ಟುಂ - ನೋಡುವುದಕ್ಕೆ, ತ್ವರತೇ - ತ್ವರೆಗೊಂಡಿದೆ, ಯೋಽಸೌ - ಯಾವ ಈ ಭರತನು, ಮಾಂ - ನನ್ನನ್ನು, ನಿವರ್ತಯಿತುಂ - ಹಿಂತಿರುಗಿಸುವುದಕ್ಕೆ, ಚಿತ್ರಕೂಟಂ - ಚಿತ್ರಕೂಟವನ್ನು ಕುರಿತು, ಉಪಾಗತಃ - ಬಂದನೋ, ಶಿರಸಾ - ಮಂಡೆಯಿಂದ, ಯಾಚತಃ - ಬೇಡಿಕೊಳ್ಳುತ್ತಿರುವ, ಯಸ್ಯ - ಯಾವ ಭರತನ, ವಚನಂ - ಮಾತು, ಮಯಾ - ನನ್ನಿಂದ, ನಕೃತಂ - ಮಾಡಲ್ಪಡಲಿಲ್ಲವೋ. ॥ ೧೮-೧೯ ॥ ಕೌಸಲ್ಯಾಂಚ - ಕೌಸಲ್ಯಾದೇವಿಯನ್ನೂ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ಯಶಸ್ವಿನೀಂ - ಕೀರ್ತಿವಂತಳಾದ, ಕೈಕೇಯೀಂಚ - ಕೈಕೇಯಿಯಾದೇವಿಯನ್ನೂ, ಗುರೂಂಶ್ಚ - ವಸಿಷ್ಠಾದಿ ಗುರುಗಳನ್ನು, ಸುಹೃದಶ್ಚೈವ - ಸ್ನೇಹಿತರನ್ನೂ, ತನಯೈಸ್ಸಹ - ಮಕ್ಕಳೊಡನೆ, ಪೌರಾಂಶ್ಚ - ಪಟ್ಟಣಿಗರನ್ನೂ, ದ್ರಷ್ಟುಂ - ನೋಡುವುದಕ್ಕೆ, ಮೇ - ನನ್ನ, ಮನಃ - ಮನವು, ತ್ವರತೇ - ತ್ವರೆಗೊಂಡಿದೆ. ॥ ೨೦ ॥ ರಾಕ್ಷಸೇಶ್ವರ - ರಾಕ್ಷಸರಾಜನೇ, ಮೇ - ನನಗೆ, ವಿಮಾನಂ - ಪುಷ್ಪಕವಿಮಾನವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಉಪಸ್ಥಾಪಯ - ತೆಗೆದುಕೊಂಡು ಬಾ, ಕೃತಕಾರ್ಯಸ್ಯ - ಮಾಡಲ್ಪಟ್ಟ ಕಾರ್ಯವುಳ್ಳ, ಮೇ - ನನಗೆ, ಇಹ - ಇಲ್ಲಿ, ವಾಸಃ - ನಿವಾಸವು, ಕಥಂಸ್ವಿತ್ - ಹಾಗಾದರೆ, ಸಮ್ಮತಃ - ಸಮ್ಮತವಾಗುವುದು. ॥ ೨೧ ॥ ಸೌಮ್ಯ - ಪ್ರಸನ್ನನೇ, ಮಾಂ - ನನ್ನನ್ನು, ಅನುಜಾನೀಹಿ - ಅಪ್ಪಣೆ ಕೊಡು, ವಿಭೀಷಣ - ವಿಭೀಷಣನೇ, ಪೂಜಿತಃ - ಪೂಜಿಸಲ್ಪಟ್ಟವನು, ಅಸ್ಮಿ - ಆಗಿದ್ದೇನೆ, ಮನ್ಯುಃ - ಕ್ರೋಧವು, ನಕರ್ತವ್ಯಃಖಲು - ಮಾಡತಕ್ಕುದಲ್ಲವಷ್ಟೆ, ತ್ವರಿತಂ - ಜಾಗ್ರತೆಯಾಗಿ, ತ್ವಾಂ - ನಿನ್ನನ್ನು, ಅನುಮಾನಯೇ - ಸಮ್ಮತಿ

ಅನುಜನಾದ ಭರತಕುಮಾರನನ್ನು ಕಾಣಬೇಕೆಂಬ ಕುತೂಹಲವು ನನ್ನ ಮನಸ್ಸಿನಲ್ಲಿ ತುಂಬಿ ಹೋಗಿರುವುದು. ವಿಭೀಷಣಾ! ಪೂರ್ವದಲ್ಲಿ ನನ್ನನ್ನು ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋಗಲು ಭರತನು ಚಿತ್ರಕೂಟಕ್ಕೆ ಬಂದಿದ್ದನಷ್ಟೆ. ಆತನು ಆ ಸಮಯದಲ್ಲಿ ಶಿರಸ್ಸಿನಿಂದ ನನಗೆ ಪ್ರಣಾಮ ಮಾಡಿ ಪಟ್ಟಣಕ್ಕೆ ಬರಬೇಕೆಂದು ಬಹು ವಿಧವಾಗಿ ಕೇಳಿಕೊಂಡನು. ಅವನ ಮಾತುಗಳನ್ನು ಆಗ ನಾನು ಕೇಳಲಿಲ್ಲವು. ಈಗ ಕೌಸಲ್ಯಾ ಸುಮಿತ್ರೆಯರನ್ನೂ, ಕೀರ್ತಿಶಾಲಿನಿಯಾದ ಕೈಕೇಯಿಯನ್ನೂ, ಗುರುಹಿರಿಯರನ್ನೂ, ಮಿತ್ರರನ್ನೂ, ಪೌರರನ್ನೂ, ಇತರರನ್ನೂ ನೋಡಬೇಕೆಂದು ಕುತೂಹಲವಾಗಿರುವುದು. ಆದುದರಿಂದೆಲೈ ರಾಕ್ಷಸೋತ್ತಮನೇ! ಶೀಘ್ರವಾಗಿ ನನ್ನನ್ನು ಕಳುಹಿಸಿಕೊಡು. ಸಮಸ್ತ ಕಾರ್ಯಗಳನ್ನೂ ನೆರವೇರಿಸಿದ ಬಳಿಕ ಈಗ ಇಲ್ಲಿರಲು ನನಗೆ ಇಷ್ಟವಿರುವುದಿಲ್ಲವು. ಎಲೈ ಸೌಮ್ಯನೇ! ನಾನು ನಿನ್ನಿಂದ ಪೂಜಿತನಾದೆನು. ಇನ್ನು ನನಗೆ ಅನುಮತಿಯನ್ನು ಕೊಡುವವನಾಗು. ನನ್ನ ವಿಷಯದಲ್ಲಿ ಮುನಿಸನ್ನು ತಾಳಬೇಡ. ಜಾಗ್ರತೆಯಾಗಿ ನನ್ನನ್ನು ಕಳುಹಿಸಿಕೊಡು" ಎಂದು

ರಾಕ್ಷಸೇಂದ್ರೋ ವಿಭೀಷಣಃ । ತಂ ವಿಮಾನಂ ಸಮಾದಾಯ ತೂರ್ಣಂ ಪ್ರತಿನಿವರ್ತತ
॥ ೨೩ ॥ ತತಃ ಕಾಂಚನಚಿತ್ರಾಂಗಂ ವೈಡೂರ್ಯಮಯವೇದಿಕಂ । ಕೂಟಗಾರೈಃ
ಪರಿಕ್ಷಿಪ್ತಂ ಸರ್ವತೋ ರಜತಪ್ರಭಂ ॥ ೨೪ ॥ ಪಾಂಡುರಾಭಿಃ ಪತಾಕಾಭಿರ್ಧ್ವಜೈಶ್ಚ
ಸಮಲಂಕೃತಂ । ಶೋಭಿತಂ ಕಾಂಚನೈರ್ಹರ್ಮ್ಯೈರ್ಹೇಮಪದ್ಮವಿಭೂಷಿತಂ ॥೨೫॥
ಪ್ರಕೀರ್ಣಂ ಕಿಂಕಿಣೀಜಾಲೈರ್ಮುಕ್ತಾಮಣಿಗವಾಕ್ಷಿತಂ । ಘಂಟಾಜಾಲೈಃ ಪರಿ
ಕ್ಷಿಪ್ತಂ ಸರ್ವತೋ ಮಧುರಸ್ವನಂ ॥ ೨೬ ॥ ಯನ್ಮೇರುಶಿಖರಾಕಾರಂ ನಿರ್ಮಿತಂ
ವಿಶ್ವಕರ್ಮಣಾ । ಬಹುಭಿರ್ಭೂಷಿತಂ ಹರ್ಮ್ಯೈರ್ಮುಕ್ತಾರಜತಸನ್ನಿಭೈಃ ॥ ೨೭ ॥

ಸುತ್ತೇನೆ. ॥ ೨೨ ॥ ರಾಘವಸ್ಯ - ಶ್ರೀರಾಮನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷಸೇಂದ್ರಃ - ರಾಕ್ಷಸರಾಜನಾದ, ವಿಭೀಷಣಃ - ವಿಭೀಷಣನು, ತಂವಿಮಾನಂ - ಆ ವಿಮಾನವನ್ನು, ಸಮಾದಾಯ - ತೆಗೆದುಕೊಂಡು, ತೂರ್ಣಂ - ಜಾಗ್ರತೆಯಾಗಿ, ಪ್ರತಿ....ತ - ಹಿಂತಿರುಗಿ ಬಂದನು. ॥ ೨೩ ॥ ತತಃ - ಬಳಿಕ, ವಿಭೀಷಣಃ - ವಿಭೀಷಣನು, ಕಾಂಚ....ಗಂ - ಚಿನ್ನದ ವಿಕಾರವಾದ ವಿಚಿತ್ರಾವಯವಗಳುಳ್ಳ, ವೈಡೂ....ಕಂ - ವೈಡೂರ್ಯಮಣಿ ವಿಕಾರವಾದ ಜಗುಲಿಗಳುಳ್ಳ, ಕೂಟಾಗಾರೈಃ - ಲಾವೆಗಳಿಂದ ಸುತ್ತುವರೆದ, ಸರ್ವತಃ - ಎಲ್ಲೆಡೆಯಲ್ಲಿಯೂ, ರಜತಪ್ರಭಂ - ಬೆಳ್ಳಿಯ ಕಾಂತಿಯುಳ್ಳ, ಪಾಂಡುರಾಭಿಃ-ಬೆಳ್ಳಗಿರುವ, ಪತಾಕಾಭಿಃ-ನಿಶಾನಿಗಳಿಂದಲೂ, ಧ್ವಜೈಶ್ಚ-ದೊಡ್ಡ ನಿಶಾನಿಗಳಿಂದಲೂ, ಸಮಲಂಕೃತಂ - ಅಲಂಕರಿಸಲ್ಪಟ್ಟ, ಕಾಂಚನೈಃ - ಚಿನ್ನದ ವಿಕಾರವಾದ, ಹರ್ಮ್ಯೈಃ - ರಾಜಗೃಹಗಳಿಂದಲೂ, ಶೋಭಿತಂ - ಪ್ರಕಾಶಿಸಲ್ಪಟ್ಟ, ಹೇಮ....ತಂ - ಭಂಗಾರದ ಕಮಲಗಳಿಂದಲಂಕರಿಸಲ್ಪಟ್ಟ, ಕಿಂಕಿಣೀಜಾಲೈಃ - ಕಿರುಘಂಟೆಗಳ ತಂಡಗಳಿಂದ, ಪ್ರಕೀರ್ಣಂ - ತುಂಬಿರುವ, ಮುಕ್ತಾ....ತಂ - ಮುತ್ತುಗಳಿಂದ ಮಾಡಲ್ಪಟ್ಟ ಗವಾಕ್ಷಿಗಳುಳ್ಳ, ಸರ್ವತಃ - ನಾಲ್ಕು ಕಡೆಗಳಲ್ಲಿಯೂ, ಘಂಟಾಜಾಲೈಃ - ಘಂಟೆಗಳ ತಂಡಗಳಿಂದ, ಪರಿಕ್ಷಿಪ್ತಂ - ಸುತ್ತುವರೆದ, ಮಧುರಸ್ವನಂ - ಮನೋಹರವಾದ ಧ್ವನಿಗಳುಳ್ಳ, ಯತ್-ಯಾವ ಪುಷ್ಪಕವಿಮಾನವು, ಮೇರು....ರಂ-ಮೇರುಪರ್ವತದ ಶಿಖರದಂತೆ ಅತ್ಯುನ್ನತವಾದ ಆಕಾರವುಳ್ಳದಾಗಿ, ವಿಶ್ವಕರ್ಮಣಾ - ವಿಶ್ವಕರ್ಮನೆಂಬ ದೇವಶಿಲ್ಪಿಯಿಂದ, ನಿರ್ಮಿತಂ - ನಿರ್ಮಿಸಲ್ಪಟ್ಟದೆಯೋ, ಮುಕ್ತಾ....ಭೈಃ - ಮುತ್ತುಗಳಿಗೂ ಬೆಳ್ಳಿಗೂ ಸಮಾನವಾದ ಪ್ರಕಾಶವುಳ್ಳ, ಬಹುಭಿಃ - ಅನೇಕಗಳಾದ, ಹರ್ಮ್ಯೈಃ - ಪ್ರಾಕಾರಗಳಿಂದಲೂ, ಭೂಷಿತಂ - ಅಲಂಕೃತವಾದ,

---

ಹೇಳಿದನು. ॥ ೧೬–೨೨ ॥ ಶ್ರೀರಾಮಮೂರ್ತಿಯು ಈ ರೀತಿ ಹೇಳಲು ರಾಕ್ಷಸೋತ್ತಮನಾದ ವಿಭೀಷಣನು ಆ ಪುಷ್ಪಕವಿಮಾನವನ್ನು ತೆಗೆಸಿಕೊಂಡು ಶ್ರೀರಾಮಮೂರ್ತಿಯ ಬಳಿಗೆ ಜಾಗ್ರತೆಯಾಗಿ ಬಂದನು. ಆ ವಿಮಾನವಾದರೋ, ಬಂಗಾರದಿಂದ ಚಿತ್ರವಿಚಿತ್ರವಾದ ವಿಭಾಗಗಳುಳ್ಳದಾಗಿಯೂ, ವೈಡೂರ್ಯಮಣಿಮಯವಾದ ವೇದಿಕೆಗಳುಳ್ಳದಾಗಿಯೂ, ಸ್ವರ್ಣಕಮಲ ವಿರಾಜಿತವಾಗಿಯೂ, ಶುಭ್ರವಾದ ಶ್ವೇತನಿಶಾನಿಗಳುಳ್ಳದಾಗಿಯೂ, ಧ್ವಜಪಟಾಲಂಕೃತವಾಗಿಯೂ, ಕಾಂಚನಗೃಹಸಹಿತವಾಗಿಯೂ, ಕಿರುಘಂಟೆಗಳಿಂದಲಂಕೃತವಾಗಿಯೂ, ಮುತ್ತುಗಳಿಂದ ಶೃಂಗರಿಸಲಾದ ಕಿಟಕಿಗಳುಳ್ಳದಾಗಿಯೂ, ದೊಡ್ಡ ಘಂಟೆಗಳ ಧ್ವನಿಗಳಿಂದ ಬಹು ಮನೋಹರವಾದುದಾಗಿಯೂ, ಮೇರುಶಿಖರಾಕಾರವಾಗಿಯೂ, ವಿಶ್ವಕರ್ಮನಿರ್ಮಿತವಾಗಿಯೂ, ಮುತ್ತುಗಳಿಂದಲೂ, ಬೆಳ್ಳಿಯಿಂದಲೂ ಬೆಳ್ಳಗೆ ಬೆಳಗುತ್ತಿದ್ದ ಉಪ್ಪರಿಗೆಗಳುಳ್ಳದಾಗಿಯೂ, ಸ್ಫಟಿಕಮಣಿಗಳಿಂದ ಚಿತ್ರಿತವಾದ ಅವಯವ

ತಲ್ಪೈಸ್ಸ್ಫಟಿಕಚಿತ್ರಾಂಗೈರ್ವೈಡೂರ್ಯೈಶ್ಚ ವರಾಸನೈಃ । ಮಹಾರ್ಹಾಸ್ತರಣೋಪೇತೈರುಪಪನ್ನಂ ಮಹಾಧನೈಃ ॥ ೨೮ ॥

ಉಪಸ್ಥಿತಮನಾಧೃಷ್ಯಂ ತದ್ವಿಮಾನಂ ಮನೋಜವಮ್ ।
ನಿವೇದಯಿತ್ವಾ ರಾಮಾಯ ತಸ್ಥೌ ತತ್ರ ವಿಭೀಷಣಃ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ವಿಂಶತ್ಯುತ್ತರಶತತಮಸ್ಸರ್ಗಃ

ಸ್ಫಾಟಿ....ಗೈಃ - ಸ್ಫಟಿಕಮಣಿಗಳ ವಿಕಾರವಾದ ನಾನಾಬಣ್ಣಗಳಾದ ಅವಯವಗಳುಳ್ಳ, ವೈಡೂರ್ಯೈಃ - ವೈಡೂರ್ಯಮಣಿವಿಕಾರಗಳಾದ, ಮಹಾ....ತೈಃ - ಅಮೂಲ್ಯಗಳಾದ ಹಾಸಿಗೆಗಳಿಂದ ಕೂಡಿರುವ, ಮಹಾಧನೈಃ - ಬಹು ಅಮೌಲ್ಯಗಳಾದ, ವರಾಸನೈಃ - ಶ್ರೇಷ್ಠಗಳಾದ ಆಸನಗಳುಳ್ಳ, ತಲ್ಪೈಃ - ಪ್ರದೇಶಗಳಿಂದ, ಉಪಸ್ಥಿತಂ - ಕೂಡಿರುವ, ಮನೋಜವಂ - ಮನೋವೇಗವುಳ್ಳ, ಅನಾಧೃಷ್ಯಂ - ತಿರಸ್ಕರಿಸಲಸಾಧ್ಯವಾದ, ತದ್ವಿಮಾನಂ - ಆ ವಿಮಾನವನ್ನು, ರಾಮಾಯ ಶ್ರೀರಾಮನಿಗಾಗಿ, ನಿವೇದಯಿತ್ವಾ - ತಿಳಿಸಿ, ತತ್ರ- ಆ ಶ್ರೀರಾಮನ ಸಾನ್ನಿಧ್ಯದಲ್ಲಿ, ವಿಭೀಷಣಃ-ವಿಭೀಷಣನು, ತಸ್ಥೌ-ನಿಂತನು. ॥೨೮-೨೯॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಚತುರ್ವಿಂಶತ್ಯುತ್ತರಶತತಮಸ್ಸರ್ಗಃ.

ಗಳುಳ್ಳ ವೈಡೂರ್ಯಮಣಿ ರಚಿತವಾದ ಸಿಂಹಗಳಿಂದಲೂ, ಬಹು ಅಮೂಲ್ಯವಾದ ಶಯ್ಯಾಗೃಹಗಳಿಂದಲೂ, ಸರ್ವೋತ್ತಮವಾದ ಧನದಿಂದಲೂ ವ್ಯಾಪ್ತವಾಗಿಯೂ, ಶತ್ರುಗಳಿಂದ ದುರ್ಧರ್ಷವಾಗಿಯೂ, ಮನೋವೇಗವುಳ್ಳದಾಗಿಯೂ ಇದ್ದಿತು. ರಾಕ್ಷಸೋತ್ತಮನಾದ ವಿಭೀಷಣನ ಇಂತಹ ಆ ಪುಷ್ಪಕ ವಿಮಾನವನ್ನು ತೆಗೆಸಿಕೊಂಡು ಬಂದು ಶ್ರೀರಾಮಮೂರ್ತಿಗೆ ಸಮರ್ಪಿಸಿದನು. ॥ ೨೩-೩೦ ॥

ಇಂತಿದು ವಿಭೀಷಣಕೃತ ಶ್ರೀರಾಮ ಸತ್ಕಾರ ವೃತ್ತಾಂತ ನಿರೂಪಣವೆಂಬ ನೂರ ಇಪ್ಪತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಪಂಚವಿಂಶತ್ಯುತ್ತರಶತತಮಸ್ಸರ್ಗಃ

ಉಪಸ್ಥಿತಂ ತು ತಂ ದೃಷ್ಟ್ವಾ ಪುಷ್ಪಕಂ ಪುಷ್ಪಭೂಷಿತಂ । ಅವಿದೂರಸ್ಥಿತೋ ರಾಮಂ ಪ್ರತ್ಯುವಾಚ ವಿಭೀಷಣಃ ॥ ೧ ॥ ಸತು ಬದ್ಧಾಂಜಲಿಃ ಪ್ರಹ್ವೋ ವಿನೀತೋ ರಾಕ್ಷಸೇಶ್ವರಃ । ಅಬ್ರವೀತ್ತ್ವರಯೋಪೇತಃ ಕಿಂಕರೋಮೀತಿ ರಾಘವಂ ॥ ೨ ॥ ತಮಬ್ರವೀನ್ಮಹಾತೇಜಾ ಲಕ್ಷ್ಮಣಸ್ಯೋಪಶೃಣ್ವತಃ । ವಿಮೃಶ್ಯ ರಾಘವೋ ವಾಕ್ಯಮಿದಂ ಸ್ನೇಹಪುರಸ್ಕೃತಂ ॥ ೩ ॥ "ಕೃತಪ್ರಯತ್ನಕರ್ಮಾಣೋ ವಿಭೀಷಣ! ವನೌಕಸಃ । ರತ್ನೈ ರರ್ಥೈಶ್ಚ ವಿವಿಧೈ ರ್ಭೂಷಣೈಶ್ಚಾಪಿ ಪೂಜಯ ॥೪॥ ಸಹೈಭಿ ರಜಿತಾ

ಪುಷ್ಪ....ತಂ - ಹುವ್ವುಗಳಿಂದಲಂಕರಿಸಲ್ಪಟ್ಟ, ಉಪಸ್ಥಿತಂ - ಸಮಿಾಪವರ್ತಿಯಾದ, ತಂಪುಷ್ಪಕಂ - ಆ ಪುಷ್ಪಕವಿಮಾನವನ್ನು, ದೃಷ್ಟ್ವಾ - ಕಂಡು, ಅವಿ....ತಃ - ಸಮಿಾಪವರ್ತಿಯಾದ, ವಿಭೀಷಣಃ - ವಿಭೀಷಣನು, ರಾಮಂಪ್ರತಿ - ಶ್ರೀರಾಮನನ್ನು ಕುರಿತು, ಉವಾಚ - ಹೇಳಿದನು. ॥೧॥ ವಿನೀತಃ - ವಿನಯಸಂಪನ್ನನಾದ, ಸರಾಕ್ಷಸೇಶ್ವರಃ - ಆ ವಿಭೀಷಣನು, ಬದ್ಧಾಂಜಲಿಃ - ಕೈಮುಗಿದು, ಪ್ರಹ್ವಃ - ನಮ್ರನಾಗಿ, ತ್ವರಯಾ - ಜಾಗ್ರತೆಯಿಂದ, ಉಪೇತಃ - ಕೂಡಿದವನಾಗಿ, ರಾಘವಂ - ಶ್ರೀರಾಮನನ್ನು ಕುರಿತು, ಕಿಂಕರೋಮಿ - ಏನು ಮಾಡಲಿ, ಇತಿ - ಇಂತೆಂದು, ಅಬ್ರವೀತ್ - ನುಡಿದನು. ॥ ೨ ॥ ಮಹಾತೇಜಾಃ - ಬಹಳ ತೇಜೋವಂತನಾದ, ರಾಘವಃ - ಶ್ರೀರಾಮನು, ವಿಮೃಶ್ಯ - ಆಲೋಚಿಸಿ, ಲಕ್ಷ್ಮಣಶ್ಚ - ಲಕ್ಷ್ಮಣನು, ಉಪಶೃಣ್ವತಃ - ಕೇಳುತ್ತಿರಲು, ತಂ - ಆ ವಿಭೀಷಣನನ್ನು ಕುರಿತು, ಸ್ನೇಹ....ತಂ - ಸ್ನೇಹಯುಕ್ತವಾದ, ಇದಂವಾಕ್ಯಂ - ಈ ಮಾತನ್ನು, ಅಬ್ರವೀತ್-ನುಡಿದನು. ॥ ೩ ॥ ವಿಭೀಷಣ-ವಿಭೀಷಣನೇ, ವನೌಕಸಃ-ಈ ಕಪಿಗಳು, ಕೃತ....ಣಃ-ಮಾಡಲ್ಪಟ್ಟ ಪ್ರಯತ್ನವೂ, ಕಾರ್ಯಗಳೂ ಉಳ್ಳವರಾದರು, ಏತಾನ್ - ಇವರುಗಳನ್ನು, ರತ್ನೈಃ - ರತ್ನಗಳಿಂದಲೂ, ಅರ್ಥೈಶ್ಚ - ಪ್ರಯೋಜನಗಳಿಂದಲೂ, ವಿವಿಧೈಃ - ನಾನಾಬಗೆಗಳಾದ, ಭೂಷಣೈಶ್ಚಾಪಿ - ಒಡವೆಗಳಿಂದಲೂ, ಪೂಜಯ - ಮರ್ಯಾದೆ ಮಾಡು. ॥ ೪ ॥ ರಾಕ್ಷಸೇಶ್ವರಃ - ರಾಕ್ಷಸ

ರಾಕ್ಷಸರಾಜನಾದ ವಿಭೀಷಣನು ಪುಷ್ಪಾಲಂಕೃತವಾದ ಪುಷ್ಪಕ ವಿಮಾನವನ್ನು ಸಿದ್ಧಗೊಳಿಸಿದ ತರುವಾಯ ಶ್ರೀರಾಮಮೂರ್ತಿಯ ಬಳಿಗೈದಿ ಸ್ವಲ್ಪ ದೂರದಲ್ಲಿಯೇ ನಿಂತು ನಮ್ರತೆಯಿಂದ ಕೈಗಳನ್ನು ಜೋಡಿಸಿಕೊಂಡು ಆತನನ್ನು ಕುರಿತು, "ಎಲೈ ರಘುಕುಲೋದ್ಭವನಾದ ಶ್ರೀರಾಮಮೂರ್ತಿಯೇ! ಈಗ ನಾನು ಮಾಡಬೇಕಾದ ಕಾರ್ಯವೇನೆಂಬುದನ್ನು ಆಜ್ಞಾಪಿಸು" ಎಂದು ಹೇಳಿದನು. ಆಗ ಮಹಾ ತೇಜಸ್ವಿಯಾದ ಶ್ರೀರಾಮನು ತನ್ನಲ್ಲಿಯೇ ಹೇಳಬೇಕಾದಂಶವನ್ನು ವಿಮರ್ಶಿಸಿಕೊಂಡು, ಲಕ್ಷ್ಮಣನು ಕೇಳುವಂತೆಯೇ ಆ ವಿಭೀಷಣನನ್ನು ಕುರಿತು ಸ್ನೇಹಪುರಸ್ಸರವಾಗಿ "ಎಲೈ ರಾಕ್ಷಸೋತ್ತಮನೇ! ಈ ವಾನರರೆಲ್ಲರೂ ಅತ್ಯಧಿಕವಾದ ಪ್ರಯತ್ನದಿಂದ ಸಮಸ್ತ ಕಾರ್ಯಗಳನ್ನೂ ನೆರವೇರಿಸಿರುವರು. ಆದುದರಿಂದ ಇವರೆಲ್ಲರನ್ನೂ ರತ್ನಗಳಿಂದಲೂ, ಭೂಷಣಗಳಿಂದಲೂ, ನಾನಾವಿಧಗಳಾದ ಧನಗಳಿಂದಲೂ ಗೌರವಿಸುವವನಾಗು. ಎಲೈ ರಾಕ್ಷಸೇಶ್ವರನೇ! ಇವರೆಲ್ಲರ ಸಹಾಯದಿಂದಲೇ ನೀನು

ಲಂಕಾ ನಿರ್ಜಿತಾ ರಾಕ್ಷಸೇಶ್ವರ! । ಹೃಷ್ಟೈಃ ಪ್ರಾಣಭಯಂ ತ್ಯಕ್ತ್ವಾ ಸಂಗ್ರಾಮೇಷ್ವನಿವರ್ತಿಭಿಃ ॥ ೫ ॥ ತ ಇಮೇ ಕೃತಕರ್ಮಾಣಃ ಪೂಜ್ಯಂತಾಂ ಸರ್ವವಾನರಾಃ । ಧನರತ್ನಪ್ರದಾನೇನ ಕರ್ಮೈಷಾಂ ಸಫಲಂ ಕುರು ॥ ೬ ॥ ಏವಂ ಸಮ್ಮಾನಿತಾಶ್ಚೈತೇ ಮಾನಾರ್ಹಾ ಮಾನದ! ತ್ವಯಾ । ಭವಿಷ್ಯಂತಿ ಕೃತಜ್ಞೇನ ನಿರ್ವೃತಾ ಹರಿಯೂಥಪಾಃ ॥ ೭ ॥ ತ್ಯಾಗಿನಂ ಸಂಗೃಹೀತಾರಂ ಸಾನುಕ್ರೋಶಂ ಯಶಸ್ವಿನಂ । ಸರ್ವೇ ತ್ವಾಮವಗಚ್ಛಂತಿ ತತಸ್ಸಂಬೋಧಯಾಮ್ಯಹಂ ॥ ೮ ॥ ಹೀನಂ ರತಿಗುಣೈಸ್ಸರ್ವೈ

ರಾಜನೇ, ಅಜಿತಾ - ಈವರೆಗೆ ಜಯಿಸಲ್ಪಡದಿರುವ, ಲಂಕಾ - ಲಂಕಾಪುರಿಯು, ಪ್ರಾಣಭಯಂ - ಪ್ರಾಣಭಯವನ್ನೂ, ತ್ಯಕ್ತ್ವಾ - ಬಿಟ್ಟು, ಸಂಗ್ರಾಮೇಷು - ಕಾಳೆಗಗಳಲ್ಲಿ, ಅನಿವರ್ತಿಭಿಃ - ಹಿಂತಿರುಗದಿರುವ, ಹೃಷ್ಟೈಃ - ಸಂತೋಷಗೊಂಡವರಾದ, ಏಭಿಃ - ಈ ಕಪಿಗಳಿಂದ, ನಿರ್ಜಿತಾ-ಜಯಿಸಲ್ಪಟ್ಟಿತು. ॥ ೫ ॥ ಕೃತಕರ್ಮಾಣಃ - ಮಾಡಲ್ಪಟ್ಟ ಕೃತ್ಯಗಳುಳ್ಳ, ತಇಮೇಸರ್ವವಾನರಾಃ - ಆ ಈ ಸಕಲ ವಾನರರೂ, ಪೂಜ್ಯಂತಾಂ - ಮರ್ಯಾದೆ ಮಾಡಲ್ಪಡಲಿ, ಧನ....ನ - ಧನಪ್ರದಾನದಿಂದಲೂ, ರತ್ನಪ್ರದಾನದಿಂದಲೂ, ಏಷಾಂ - ಈ ಕಪಿಗಳ, ಕರ್ಮ - ವ್ಯಾಪಾರವನ್ನು, ಸಫಲಂಕುರು - ಫಲದಿಂದೊಡಗೂಡಿದುದನ್ನಾಗಿ ಮಾಡು. ॥ ೬ ॥ ಮಾನದ - ಬಹುಮಾನಪ್ರದಾಯಕನೇ, ಮಾನಾರ್ಹಾಃ - ಬಹುಮಾನಕ್ಕೆ ಅರ್ಹರಾದ, ಏತೇಹರಿಯೂಥಪಾಃ - ಈ ವಾನರಯೂಥಪತಿಗಳು, ಕೃತಜ್ಞೇನ - ಕೃತಜ್ಞನಾದ, ತ್ವಯಾ - ನಿನ್ನಿಂದ, ಏವಂ - ಈ ಪರಿಯಾಗಿ, ಸಮ್ಮಾನಿತಾಃ - ಬಹುಮಾನಿಸಲ್ಪಟ್ಟವರಾಗಿ, ನಿರ್ವೃತಾಃ - ಸುಖವುಳ್ಳವರು, ಭವಿಷ್ಯಂತಿ - ಆಗುವರು. ॥ ೭ ॥ ಸರ್ವೇ - ಸಮಸ್ತರೂ, ತ್ವಾಂ - ನಿನ್ನನ್ನು, ತ್ಯಾಗಿನಂ - ಸತ್ಪಾತ್ರದಲ್ಲಿ ತ್ಯಾಗ ಮಾಡುವವನನ್ನಾಗಿಯೂ, ಸಂಗೃಹೀತಾರಂ - ಧನಮಾನಾದಿಗಳಿಂದ ಮಿತ್ರಸಂಗ್ರಹ ಮಾಡತಕ್ಕವನನ್ನಾಗಿಯೂ, ಸಾನುಕ್ರೋಶಂ - ದಯೆಯೊಡಗೂಡಿದವನನ್ನಾಗಿಯೂ, ಯಶಸ್ವಿನಂ - ಕೀರ್ತಿವಂತನನ್ನಾಗಿಯೂ, ಅವಗಚ್ಛಂತಿ - ತಿಳಿದುಕೊಳ್ಳುತ್ತಾರೆ, ತತಃ - ಆ ಕಾರಣದಿಂದ, ಅಹಂ-ನಾನು, ಸಂಬೋಧಯಾಮಿ-ಹೇಳುತ್ತಿದ್ದೇನೆ. ॥೮॥ ಸರ್ವೈಃ - ಸಮಸ್ತಗಳಾದ, ರತಿಗುಣೈಃ - ಮನೋಹರಗಳಾದ ಔದಾರ್ಯಾದಿ ಗುಣಗಳಿಂದ, ಹೀನಂ - ವರ್ಜಿತನಾದ, ಅಭಿಹಂತಾರಂ - ಹಿಂಸೆ ಮಾತ್ರವೇ ಪ್ರಯೋಜನವುಳ್ಳ, ನೃಪತಿಂ - ರಾಜನಾದ,

---

ಈ ಲಂಕಾಪಟ್ಟಣವನ್ನು ಗೆದ್ದಿರುವೆ. ರಣಾಂಗಣದಲ್ಲಿ ಯಾವಾಗಲೂ ಹಿಂತಿರುಗದಿರುವ ಈ ವಾನರವೀರರೆಲ್ಲರೂ ಪ್ರಾಣಗಳ ಮೇಲಣ ಆಶೆಯನ್ನೇ ತೊರೆದು ಶ್ರಮಿಸಿದುದರಿಂದ ಈ ಲಂಕಾರಾಜ್ಯವನ್ನು ಗೆಲ್ಲಲಾಯಿತು. ॥೧–೫॥ ಆದಕಾರಣ ನೆರವೇರಿಸಿದ ಸಮಸ್ತ ಕಾರ್ಯಭಾರಗಳುಳ್ಳ ಈ ವಾನರರೆಲ್ಲರನ್ನೂ, ಧನರತ್ನಾದಿಗಳಿಂದ ಸಫಲಮನೋರಥರನ್ನಾಗಿ ಮಾಡುವವನಾಗು. ಇದೂ ಅಲ್ಲದೆ ಎಲೈ ವಿಭೀಷಣನೇ! ನೀನು ಇವರೆಲ್ಲರನ್ನೂ ಆ ರೀತಿ ಸತ್ಕರಿಸಿದುದಾದರೆ ಇವರೆಲ್ಲರೂ ಕೃತಜ್ಞರೂ, ಸಂತುಷ್ಟಮಾನಸರೂ ಆಗುವರು. ಇದಕ್ಕೂ ಮೇಲಾಗಿ ಮಿತ್ರರನ್ನು ಸಂಪಾದಿಸಲೋಸುಗ ತ್ಯಾಗ ಮಾಡುವವನೂ, ಅಪಾರವಾಗಿ ಧನವನ್ನು ಸಂಗ್ರಹಿಸುವವನೂ, ದಯಾವಂತನೂ, ಮಹಾ ಕೀರ್ತಿವಂತನೂ ಆದ ನಿನ್ನನ್ನು ಎಲ್ಲರೂ ಆಶ್ರಯಿಸುತ್ತಾರೆ. ಆದಕಾರಣದಿಂದಲೇ ಈಗ ನಾನು ನಿನ್ನನ್ನು ಈ ವಿಧವಾಗಿ ಪ್ರೇರೇಪಿಸುತ್ತಿದ್ದೇನೆ. ಆಯ್ಯಾ ವಿಭೀಷಣನೇ! ಸ್ಪೃಹಣೀಯವಾದ ಗುಣಗಳಿಲ್ಲದವನೂ, ದುರ್ಗುಣ ಭೂಯಿಷ್ಠನೂ, ಮಹಾ ಕ್ರೂರಕರ್ಮಗಳನ್ನು ಮಾಡುವವನೂ ಆದ ಧೊರೆ

ರಭಿಹಂತಾರಮಾಹವೇ । ತ್ಯಜಂತಿ ನೃಪತಿಂ ಸೈನ್ಯಾಸ್ಸಂವಿಜ್ಞಾಸ್ತಂ ನರೇಶ್ವರಂ"
॥ ೯ ॥ ಏವಮುಕ್ತಸ್ತು ರಾಮೇಣ ವಾನರಾಂಸ್ತಾನ್ ವಿಭೀಷಣಃ । ರತ್ನಾರ್ಥೈಸ್ಸಂವಿ
ಭಾಗೇನ ಸರ್ವಾನೇವಾಽಭ್ಯಪೂಜಯತ್ ॥ ೧೦ ॥ ತತಸ್ತಾನ್ ಪೂಜಿತಾನ್ ದೃಷ್ಟ್ವಾ
ರತ್ನೈರರ್ಥೈಶ್ಚ ಯೂಥಪಾನ್ । ಆರುರೋಹ ತತೋ ರಾಮಸ್ತದ್ವಿಮಾನಮನು
ತ್ತಮಂ ॥ ೧೧ ॥ ಅಂಕೇನಾದಾಯ ವೈದೇಹೀಂ ಲಜ್ಜಮಾನಾಂ ಯಶಸ್ವಿನೀಂ ।
ಲಕ್ಷ್ಮಣೇನ ಸಹಭ್ರಾತ್ರಾ ವಿಕ್ರಾಂತೇನ ಧನುಷ್ಮತಾ ॥೧೨॥ ಅಬ್ರವೀಚ್ಚ ವಿಮಾನಸ್ಥಃ
ಪೂಜಯನ್ ಸರ್ವವಾನರಾನ್ । ಸುಗ್ರೀವಂಚ ಮಹಾವೀರ್ಯಂ ಕಾಕುತ್ಸ್ಥ

ತಂನರೇಶ್ವರಂ - ಆ ಮಾನವೇಶ್ವರನನ್ನು, ಸೈನ್ಯಾಃ - ಸೇನಾಧಿಪತಿಗಳು, ಸಂವಿಗ್ನಾಃ - ಹೆದರಿಕೆಯುಳ್ಳವರಾಗಿ, ಆಹವೇ - ಕಾಳಗದಲ್ಲಿ, ತ್ಯಜಂತಿ - ಬಿಡುತ್ತಾರೆ. ॥ ೯ ॥ ಏವಂ - ಈ ಪರಿ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ವಿಭೀಷಣಸ್ತು - ವಿಭೀಷಣನಾದರೆ, ಸರ್ವಾನೇವ - ಸಮಸ್ತರಾದ, ತಾನ್ - ಆ, ವಾನರಾನ್ - ವಾನರರನ್ನು ಕುರಿತು, ರತ್ನಾರ್ಥೈಃ - ರತ್ನಗಳಿಂದಲೂ, ಸಂವಿಭಾಗೇನ-ಯಥಾಯೋಗ್ಯವಾದ ಅಂಶಭಾಗದಿಂದಲೂ, ಅಭ್ಯಪೂಜಯತ್- ಪೂಜಿಸಿದನು. ॥ ೧೦ ॥ ತತಃ - ಬಳಿಕ, ತಾನ್ಯೂಥಪಾನ್ - ಆ ಯೂಥಪತಿಗಳನ್ನು, ರತ್ನೈಃ - ರತ್ನಗಳಿಂದಲೂ, ಅರ್ಥೈಶ್ಚ - ದ್ರವ್ಯಗಳಿಂದಲೂ, ಪೂಜಿತಾನ್ - ಮರ್ಯಾದಿಸಲ್ಪಟ್ಟವರನ್ನಾಗಿ, ದೃಷ್ಟ್ವಾ - ಕಂಡು, ತತಃ - ಬಳಿಕ, ರಾಮಃ - ಶ್ರೀರಾಮನು, ಲಜ್ಜಮಾನಾಂ - ನಾಚುತ್ತಿರುವ, ಯಶಸ್ವಿನೀಂ - ಕೀರ್ತಿವಂತಳಾದ, ವೈದೇಹೀಂ - ಸೀತಾದೇವಿಯನ್ನು, ಅಂಕೇನ - ತೊಡೆಯಿಂದ, ಆದಾಯ - ತೆಗೆದುಕೊಂಡು, ವಿಕ್ರಾಂತೇನ ಪರಾಕ್ರಮಶಾಲಿಯಾದ, ಧನುಷ್ಮತಾ-ಧನುರ್ಧಾರಿಯಾದ, ಭ್ರಾತ್ರಾ- ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡಗೂಡಿ, ಅನುತ್ತಮಂ - ಸರ್ವೋತ್ತಮವಾದ, ತದ್ವಿಮಾನಂ - ಆ ಪುಷ್ಪಕವಿಮಾನವನ್ನು, ಆರುರೋಹ - ಏರಿದನು. ॥ ೧೨ ॥ ವಿಮಾನಸ್ಥಃ - ವಿಮಾನದಲ್ಲಿ ಕುಳಿತಿರುವ, ಕಾಕುತ್ಸ್ಥಃ - ಕಕುತ್ಸ್ಥವಂಶೋತ್ಪನ್ನನಾದ, ಸಃ - ಆ ಶ್ರೀರಾಮನು, ಸರ್ವವಾನರಾನ್ - ಸಮಸ್ತ ಕಪಿಗಳನ್ನೂ, ಮಹಾವೀರ್ಯಂ - ಮಹಾ ಬಲಪರಾಕ್ರಮಶಾಲಿಯಾದ, ಸುಗ್ರೀವಂಚ - ಸುಗ್ರೀವನನ್ನೂ, ವಿಭೀಷಣಂಚ - ವಿಭೀಷಣನನ್ನೂ, ಪೂಜಯನ್ - ಮರ್ಯಾದೆ ಮಾಡಿದವನಾಗಿ, ಅಬ್ರವೀತ್ - ನುಡಿದನು. ॥ ೧೩ ॥ ವಾನರೋತ್ತಮಾಃ - ಕಪಿಶ್ರೇಷ್ಠರೇ, ಭವದ್ಭಿಃ -

ಯನ್ನು ಸೇನೆಗಳೆಲ್ಲ ಯುದ್ಧಕಾಲಗಳಲ್ಲಿ ತೊರೆದು ಹೋಗುತ್ತವೆ. ಆದುದರಿಂದ ಮಿತ್ರಲಾಭಕ್ಕಾಗಿಯೂ, ಕೀರ್ತಿಸಂಪಾದನೆಗಾಗಿಯೂ ನೀನು ಈ ವಾನರವೀರರೆಲ್ಲರನ್ನೂ ಧನಕನಕಭೂಷಣಾದಿಗಳಿಂದ ಸತ್ಕರಿಸುವವನಾಗು. ಶ್ರೀರಾಮಚಂದ್ರನೀರೀತಿ ನುಡಿಯಲು ರಾಕ್ಷಸೇಶ್ವರನಾದ ವಿಭೀಷಣನು ರತ್ನಾದಿಗಳಿಂದಲೂ, ಧನಕನಕಾದಿಗಳಿಂದಲೂ ಸಮಸ್ತ ವಾನರರನ್ನೂ ಸತ್ಕರಿಸಿದನು. ॥ ೬–೧೦ ॥ ವಿಭೀಷಣನು ಹೀಗೆ ಸಮಸ್ತ ವಾನರರನ್ನೂ ರತ್ನಾದಿಗಳಿಂದ ಸತ್ಕರಿಸಿದ ತರುವಾಯ ಶ್ರೀರಾಮನು ಮಹೋತ್ತಮವಾದ ಪುಷ್ಪಕವಿಮಾನವನ್ನು ಲಕ್ಷ್ಮಣಸಮೇತನಾಗಿ ಏರಿದ ತರುವಾಯ, ನಸುನಾಚುತ್ತಿರುವ ಕೀರ್ತಿಶಾಲಿನಿಯಾದ ಜಾನಕಿಯನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಮೇಲೆ ವಿಮಾನದಲ್ಲಿ ಕುಳಿತು ಸಮಸ್ತ ವಾನರರನ್ನೂ ಗೌರವಿಸಿ ವಿಭೀಷಣಸಹಿತನಾದ ಸುಗ್ರೀವನನ್ನೂ ಸತ್ಕರಿಸಿ ಎಲ್ಲರನ್ನೂ ಕುರಿತು ಹೀಗೆಂದನು. "ಮಿತ್ರರೇ ಮತ್ತು ವಾನರೋತ್ತಮರೇ! ನೀವೆಲ್ಲರೂ ಮಿತ್ರನಾದ

ಸ್ಸವಿಭೀಷಣಂ ॥೧೩॥ "ಮಿತ್ರಕಾರ್ಯಂ ಕೃತಮಿದಂ ಭವದ್ಭಿರ್ವಾನರೋತ್ತಮಾಃ। ಅನುಜ್ಞಾತಾ ಮಯಾ ಸರ್ವೇ ಯಥೇಷ್ಟಂ ಪ್ರತಿಗಚ್ಛತ ॥೧೪॥ ಯತ್ತು ಕಾರ್ಯಂ ವಯಸ್ಯೇನ ಸುಹೃದಾ ವಾ ಪರಂತಪ! । ಕೃತಂ ಸುಗ್ರೀವ! ತತ್ಸರ್ವಂ ಭವತಾ ಧರ್ಮಭೀರುಣಾ । ಕಿಷ್ಕಿಂಧಾಂ ಪ್ರತಿಯಾಹ್ಯಾಶು ಸ್ವಸೈನ್ಯೇನಾಽಭಿಸಂವೃತಃ ॥೧೫॥ ಸ್ವರಾಜ್ಯೇ ವಸ ಲಂಕಾಯಾಂ ಮಯಾದತ್ತೇ ವಿಭೀಷಣ! । ನತ್ವಾಂ ಧರ್ಷಯಿತುಂ ಶಕ್ತಾಸ್ಸೇಂದ್ರಾ ಅಪಿ ದಿವೌಕಸಃ ॥೧೬॥ ಅಯೋಧ್ಯಾಂ ಪ್ರತಿಯಾಸ್ಯಾಮಿ ರಾಜಧಾನೀಂ ಪಿತುರ್ಮಮ । ಅಭ್ಯನುಜ್ಞಾತುಮಿಚ್ಛಾಮಿ ಸರ್ವಾಂಶ್ಚಾಮಂತ್ರಯಾಮಿ

ನಿಮ್ಮಿಂದ, ಇದಂಮಿತ್ರಕಾರ್ಯಂ - ಈ ಸ್ನೇಹಿತನ ಕಾರ್ಯವು, ಕೃತಂ - ಮಾಡಲ್ಪಟ್ಟಿತು, ಮಯಾ - ನನ್ನಿಂದ, ಅನುಜ್ಞಾತಾಃ - ಸಮ್ಮತಿಸಲ್ಪಟ್ಟವರಾಗಿ, ಸರ್ವೇ - ನೀವೆಲ್ಲರೂ, ಯಥೇಷ್ಟಂ - ಇಷ್ಟಾನುಸಾರವಾಗಿ, ಪ್ರತಿಗಚ್ಛತ - ಹೋಗಿರಿ. ॥೧೪॥ ಪರಂತಪ - ಶತ್ರುಸಂಹಾರಕನೇ, ಸುಗ್ರೀವ - ಸುಗ್ರೀವನೇ, ವಯಸ್ಯೇನ - ಸ್ನೇಹಿತನಾದ, ಸುಹೃದಾ - ಒಳ್ಳೆಯ ಮನವುಳ್ಳ ಮಿತ್ರನಿಂದ, ಯತ್ - ಯಾವದು, ಕಾರ್ಯಂ - ಮಾಡತಕ್ಕುದೋ, ಸರ್ವಂ - ಸಮಸ್ತವಾದ, ತತ್ - ಆ ಕಾರ್ಯವು, ಧರ್ಮಭೀರುಣಾ - ಧರ್ಮದಿಂದ ಭಯಶೀಲನಾದ, ಭವತಾ - ನಿನ್ನಿಂದ, ಕೃತಂ - ಮಾಡಲ್ಪಟ್ಟಿತು, ಸ್ವಸೈನ್ಯೇನ - ನಿನ್ನ ಸೈನ್ಯದಿಂದ, ಅಭಿಸಂವೃತಃ - ಪರಿವೃತನಾಗಿ, ಆಶು - ಜಾಗ್ರತೆಯಾಗಿ, ಕಿಷ್ಕಿಂಧಾಂಪ್ರತಿ - ಕಿಷ್ಕಿಂಧಾಪಟ್ಟಣವನ್ನು ಕುರಿತು, ಯಾಹಿ - ಹೋಗು. ॥೧೫॥ ವಿಭೀಷಣ - ವಿಭೀಷಣನೇ, ಮಯಾ - ನನ್ನಿಂದ, ದತ್ತೇ - ಕೊಡಲ್ಪಟ್ಟ, ಸ್ವರಾಜ್ಯೇ - ಸ್ವಕೀಯವಾದ ರಾಜ್ಯದಲ್ಲಿ, ಲಂಕಾಯಾಂ - ಲಂಕಾಪಟ್ಟಣದಲ್ಲಿ, ವಸ - ಇರು, ಸೇಂದ್ರಾಃ - ಇಂದ್ರನಿಂದೊಡಗೂಡಿದ, ದಿವೌಕಸೋಪಿ - ದೇವತೆಗಳೂ ಕೂಡ, ತ್ವಾಂ - ನಿನ್ನನ್ನು, ಧರ್ಷಯಿತುಂ - ತಿರಸ್ಕರಿಸುವುದಕ್ಕೆ, ನಶಕ್ತಾಃ - ಸಮರ್ಥರಲ್ಲವು. ॥೧೬॥ ಮಮ - ನನ್ನ, ಪಿತುಃ - ತಂದೆಯಾದ ದಶರಥರಾಯನಿಗೆ, ರಾಜಧಾನೀಂ - ಪ್ರಧಾನ ನಗರವಾದ, ಅಯೋಧ್ಯಾಂಪ್ರತಿ - ಅಯೋಧ್ಯಾಪಟ್ಟಣವನ್ನು ಕುರಿತು, ಯಾಸ್ಯಾಮಿ - ಹೋಗುವೆನು, ಅಭ್ಯನುಜ್ಞಾತುಂ - ನಿಮ್ಮ ಅನುಜ್ಞೆಯನ್ನು ಹೊಂದುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುವೆನು,

---

ನನ್ನ ಕಾರ್ಯವನ್ನು ನೆರವೇರಿಸಿಕೊಟ್ಟಿರಿ. ಇದರಿಂದ ನನಗೆ ಅಪರಿಮಿತವಾದ ಆನಂದವುಂಟಾಗಿರುವುದು. ಈಗ ನಾನು ನಿಮ್ಮೆಲ್ಲರಿಗೂ ಅನುಜ್ಞೆಯನ್ನು ಕೊಟ್ಟಿರುತ್ತೇನೆ. ಆದುದರಿಂದ ನೀವು ನಿಮ್ಮ ಮನಬಂದಂತೆ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿಬರಬಹುದು. ಎಲೈ ಸುಗ್ರೀವನೇ! ಪ್ರಿಯಮಿತ್ರನಾದವನು ಯಾವ ಯಾವ ಸಾಹಾಯ್ಯ ಕಾರ್ಯಗಳನ್ನು ಮಾಡಬೇಕೋ ಅವೆಲ್ಲವನ್ನೂ ನೀನು ಮಾಡಿರುವೆ. ಇದು ಮಾತ್ರವಲ್ಲದೆ ನೀನು ಧರ್ಮಲೋಪವಾಗುವುದೆಂಬ ಭಯದಿಂದ ಬಹು ದೊಡ್ಡದಾದ ಪ್ರಯತ್ನವನ್ನು ಮಾಡಿದೆ. ॥೧೧–೧೫॥ ಇನ್ನು ನೀನು ಸೈನ್ಯಸಮೇತನಾಗಿ ನಿನ್ನ ರಾಜ್ಯವಾದ ಕಿಷ್ಕಿಂಧೆಗೆ ಹಿಂತಿರುಗುವವನಾಗು. ಎಲೈ ರಾಕ್ಷಸೋತ್ತಮನಾದ ವಿಭೀಷಣನೇ! ನಾನು ನಿನಗಿತ್ತಿರುವ ಲಂಕಾರಾಜ್ಯದಲ್ಲಿ ನೀನು ಸ್ಥಿರವಾಗಿ ರಾಜ್ಯಭಾರ ಮಾಡಿಕೊಂಡಿರುವವನಾಗು. ಇಂದ್ರಾದಿ ದೇವತೆಗಳೆಲ್ಲರೂ ಬಂದು ಮುತ್ತಿದ್ದರೂ ನಿನ್ನನ್ನು ಜಯಿಸಲಾರರು. ಅಯ್ಯಾ ವಿಭೀಷಣನೇ! ಈಗ ನಾನು ನನ್ನ ತಂದೆಯ ರಾಜಧಾನಿಯಾದ ಅಯೋಧ್ಯೆಗೆ ಹಿಂತಿರುಗುವೆನು. ಅಯ್ಯಾ ಮಿತ್ರರೇ, ನೀವೆಲ್ಲರೂ ನನಗೆ ಅನುಜ್ಞೆಯಾಯಬೇಕೆಂದು ನಿಮ್ಮನ್ನು ಪ್ರಾರ್ಥಿ

ವಃ ” ॥೧೭॥ ಏವಮುಕ್ತಾಸ್ತು ರಾಮೇಣ ವಾನರಾಸ್ತೇ ಮಹಾಬಲಾಃ । ಊಚುಃ
ಪ್ರಾಂಜಲಯೋ ರಾಮಂ ರಾಕ್ಷಸಶ್ಚ ವಿಭೀಷಣಃ ॥ ೧೮ ॥ “ ಅಯೋಧ್ಯಾಂ ಗಂತು
ಮಿಚ್ಛಾಮಸ್ಸರ್ವಾನ್ನಯತು ನೋ ಭವಾನ್ । ಉದ್ಯುಕ್ತಾ ವಿಚರಿಷ್ಯಾಮೋ ವನಾನಿ
ನಗರಾಣಿಚ ॥ ೧೯ ॥ ದೃಷ್ಟ್ವಾ ತ್ವಾಮಭಿಷೇಕಾರ್ದ್ರಂ ಕೌಸಲ್ಯಾಮಭಿವಾದ್ಯ ಚ ।
ಅಚಿರೇಣಾಗಮಿಷ್ಯಾಮಸ್ಸ್ವಾನ್ ಗೃಹಾನ್ ನೃಪತೇಸ್ಸುತ ! ” ॥೨೦॥ ಏವಮುಕ್ತಸ್ತು
ಧರ್ಮಾತ್ಮಾ ವಾನರೈಸ್ಸವಿಭೀಷಣೈಃ । ಅಬ್ರವೀದ್ರಾಘವಃ ಶ್ರೀಮಾನ್ ಸಸುಗ್ರೀವ

ಸರ್ವಾನ್ - ಸಮಸ್ತರಾದ, ವಃ - ನಿಮ್ಮನ್ನು, ಆಮಂತ್ರಯಾಮಿ - ಕೇಳುತ್ತೇನೆ. ॥ ೧೭ ॥ ಏವಂ -
ಈ ಪರಿಯಾಗಿ, ರಾಮೇಣ - ಶ್ರೀರಾಮನಿಂದ, ಉಕ್ತಾಃ - ಹೇಳಲ್ಪಟ್ಟ, ಮಹಾಬಲಾಃ - ಅತಿ ಬಲ
ವಂತರಾದ, ತೇವಾನರಾಃ - ಆ ಕಪಿಗಳು, ಪ್ರಾಂಜಲಯಃ - ಅಂಜಲಿಬದ್ಧರಾಗಿ, ರಾಮಂ - ಶ್ರೀರಾಮ
ನನ್ನು ಕುರಿತು, ಊಚುಃ - ಹೇಳಿದರು, ರಾಕ್ಷಸಃ - ರಾಕ್ಷಸನಾದ, ವಿಭೀಷಣಶ್ಚ - ವಿಭೀಷಣನೂ,
ಪ್ರಾಂಜಲಿಃ - ಅಂಜಲಿಬದ್ಧನಾಗಿ, ಉವಾಚ - ಹೇಳಿದನು. ॥ ೧೮ ॥ ಅಯೋಧ್ಯಾಂ - ಅಯೋಧ್ಯಾ
ಪಟ್ಟಣವನ್ನು ಕುರಿತು, ಗಂತುಂ - ಬರುವುದಕ್ಕೆ, ಇಚ್ಛಾಮಃ - ಅಪೇಕ್ಷಿಸುತ್ತೇವೆ, ಸರ್ವಾನ್ -
ಸಮಸ್ತರಾದ, ನಃ-ನಮ್ಮನ್ನು, ಭವಾನ್-ನೀನು, ನಯತು-ಕರೆದುಕೊಂಡು ಹೋಗು, ಉದ್ಯುಕ್ತಾಃ -
ಉತ್ಕಂಠವುಳ್ಳವರಾಗಿ, ವನಾನಿ - ಅರಣ್ಯಗಳಲ್ಲಿ, ನಗರಾಣಿಚ - ಊರುಗಳಲ್ಲಿಯೂ, ವಿಚರಿಷ್ಯಾಮಃ -
ಸಂಚರಿಸುವೆವು. ॥ ೧೯ ॥ ನೃಪತೇಸ್ಸುತ - ರಾಜಕುಮಾರನೇ, ಅಭಿಷೇಕಾರ್ದ್ರಂ - ಪಟ್ಟಾಭಿಷೇಕೋ
ದಕದಿಂದ ತೋಯಿಸಲ್ಪಟ್ಟವನಾದ, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ಕೌಸಲ್ಯಾಂ - ಕೌಸಲ್ಯಾ
ದೇವಿಯನ್ನೂ, ಅಭಿವಾದ್ಯ - ವಂದಿಸಿ, ಅಚಿರೇಣ - ಜಾಗ್ರತೆಯಾಗಿ, ಸ್ವಾನ್‌ಗೃಹಾನ್ - ತಮ್ಮ ತಮ್ಮ
ಮನೆಗಳನ್ನು ಕುರಿತು, ಆಗಮಿಷ್ಯಾಮಃ - ಬರುವೆವು. ॥ ೨೦ ॥ ಏವಂ - ಈ ಪರಿಯಾಗಿ, ಸವಿಭೀ
ಷಣೈಃ - ವಿಭೀಷಣನಿಂದೊಡಗೂಡಿದ, ವಾನರೈಃ - ಕಪಿಗಳಿಂದ, ಉಕ್ತಃ - ಹೇಳಲ್ಪಟ್ಟ, ಧರ್ಮಾತ್ಮಾ -
ಧರ್ಮಿಷ್ಠನಾದ, ಶ್ರೀಮಾನ್ - ಸಂಪದ್ಯುಕ್ತನಾದ, ರಾಘವಃ - ಶ್ರೀರಾಮನು, ಸುಗ್ರೀ....ಣಾನ್ -
ಸುಗ್ರೀವ ವಿಭೀಷಣರಿಂದೊಡಗೂಡಿದ ವಾನರರನ್ನು ಕುರಿತು, ಅಬ್ರವೀತ್ - ನುಡಿದನು. ॥ ೨೧ ॥

ಸುವೆನು.” ರಘುಕುಲೋದ್ಭವನೀರೀತಿ ನುಡಿದುದನ್ನು ಕೇಳಿದ ತರುವಾಯ ವಾನರರೆಲ್ಲರೂ ವಿಭೀಷಣನೊಡಗೂಡಿ ಎಲ್ಲರೂ ಕೈಮುಗಿದುಕೊಂಡು ಆತನನ್ನು ಕುರಿತು, “ ಓ ರಘು ವಂಶೋದ್ಭವಾ ! ನಾವೆಲ್ಲರೂ ಅಯೋಧ್ಯಾನಗರಕ್ಕೆ ಬರಬೇಕೆಂದು ಬಯಸಿರುವೆವು. ನಮ್ಮೆಲ್ಲರನ್ನು ನಿನ್ನೊಡನೆ ಕರೆದುಕೊಂಡು ಹೋಗು. ರಾಮಾ ! ನಾವು ಸಮಸ್ತ ವನಗಳನ್ನೂ, ಸಮಸ್ತ ನಗರಗಳನ್ನೂ ನೋಡಬೇಕೆಂದಿರುವೆವು. ರಾಘವಾ ! ಅಯೋಧ್ಯಾ ಪಟ್ಟಣದಲ್ಲಿ ಪಟ್ಟಾಭಿಷಿಕ್ತನಾಗುವ ನಿನ್ನನ್ನು ನೋಡಿ, ನಿನ್ನ ಜನನಿಯಾದ ಕೌಸಲ್ಯಾ ದೇವಿಯನ್ನು ಸಂದರ್ಶಿಸಿ ಆಕೆಗೆ ನಮ್ಮ ನಮಸ್ಕಾರಗಳನ್ನು ಸಲ್ಲಿಸಿ ಆಮೇಲೆ ನಮ್ಮ ನಮ್ಮ ಮನೆಗಳಿಗೆ ಹಿಂತಿರುಗಬೇಕೆಂದಿರುವೆವು. ಆದುದರಿಂದ ಎಲೈ ಪ್ರಭುವೇ ! ನೀನು ನಮ್ಮೆಲ್ಲರನ್ನೂ ನಿನ್ನೊಡನೆಯೇ ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋಗುವವನಾಗು” ಎಂದು ಕೇಳಿಕೊಂಡರು. ॥೧೭-೨೦॥ ಈ ರೀತಿ ಕೇಳಿಕೊಳ್ಳುತ್ತಿರುವ ಸುಗ್ರೀವಾದಿ ವಾನರರ ಮತ್ತು ವಿಭೀಷಣನ ಮಾತುಗಳನ್ನು ಕೇಳಿ ಮಹಾ ತೇಜಸ್ವಿಯಾದ ಶ್ರೀರಾಮನು ಅವರೆಲ್ಲ

ವಿಭೀಷಣಾ ॥ ೨೧ ॥ "ಪ್ರಿಯಾತ್ಪ್ರಿಯತರಂ ಲಬ್ಧಂ ಯದಹಂ ಸಸುಹೃಜ್ಜನಃ । ಸರ್ವೈರ್ಭವದ್ಭಿಸ್ಸಹಿತಃ ಪ್ರೀತಿಂ ಲಪ್ಸ್ಯೇ ಪುರೀಂ ಗತಃ ॥ ೨೨ ॥ ಕ್ಷಿಪ್ರಮಾರೋಹ ಸುಗ್ರೀವ! ವಿಮಾನಂ ವಾನರೈಸ್ಸಹ । ತ್ವಮಪ್ಯಾರೋಹ! ಸಾಮಾತ್ಯೋ ರಾಕ್ಷಸೇಂದ್ರ! ವಿಭೀಷಣ!" ॥೨೩॥ ತತಸ್ತುತ್ಪುಷ್ಪಕಂ ದಿವ್ಯಂ ಸುಗ್ರೀವಸ್ಸಹಸೇನಯಾ । ಅಧ್ಯಾರೋಹತ್ತ್ವರ್ರ ಶೀಘ್ರಂ ಸಾಮಾತ್ಯಶ್ಚ ವಿಭೀಷಣಃ ॥ ೨೪ ॥ ತೇಷ್ವಾರೂಢೇಷು ಸರ್ವೇಷು ಕೌಬೇರಂ ಪರಮಾಸನಂ । ರಾಘವೇಣಾಭ್ಯನುಜ್ಞಾತಮುತ್ಪ

ಅಹಂ - ನಾನು, ಸಸುಹೃಜ್ಜನಃ - ಆ ಸ್ನೇಹಿತರಿಂದೊಡಗೂಡಿ, ಸರ್ವೈಃ - ಸಮಸ್ತರಾದ, ಭವದ್ಭಿಃ - ನಿಮ್ಮಿಂದ, ಸಹಿತಃ - ಕೂಡಿ, ಪುರೀಂ - ಪಟ್ಟಣವನ್ನು ಕುರಿತು, ಗತಃ - ಹೋಗಿ, ಪ್ರೀತಿಂ - ಸಂತೋಷವನ್ನು, (ಅಂದರೆ - ಪಟ್ಟಾಭಿಷೇಕಾನಂದವನ್ನು,) ಲಪ್ಸ್ಯೇಇತಿಯತ್ - ಹೊಂದುವೆನೆಂಬದು ಯಾವದೋ, ತತ್ - ಆ, ಪ್ರಿಯಾತ್ - ಪ್ರಿಯ ಕಾರ್ಯಕ್ಕಿಂತಲೂ, ಪ್ರಿಯತರಂ - ಬಹಳ ಪ್ರೀತಿಕರವಾದ ಪ್ರಯೋಜನವು, ಲಬ್ಧಂ - ಹೊಂದಲ್ಪಟ್ಟಿತು. ॥ ೨೨ ॥ ಸುಗ್ರೀವ - ಸುಗ್ರೀವನೇ, ವಾನರೈಸ್ಸಹ - ವಾನರರೊಡಗೂಡಿ. ವಿಮಾನಂ - ಪುಷ್ಪಕವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಆರೋಹ - ಏರು, ರಾಕ್ಷಸೇಂದ್ರ - ರಕ್ಕಸರೊಡೆಯನೇ, ವಿಭೀಷಣ - ವಿಭೀಷಣನೇ, ತ್ವಂ - ನೀನು, ಸಾಮಾತ್ಯಃ - ಮಂತ್ರಿಗಳೊಡಗೂಡಿದವನಾಗಿ, ಆಧ್ಯಾರೋಹ - ವಿಮಾನವನ್ನೇರು. ॥ ೨೩ ॥ ತತಃ - ಆ ಬಳಿಕ, ಸುಗ್ರೀವಃ - ಸುಗ್ರೀವನು, ಸೇನಯಾಸಹ - ಸೇನೆಯೊಡನೆ, ತ್ವರ್ರ - ತ್ವರೆಗೊಂಡು, ದಿವ್ಯಂ - ದೇವತಾಸಂಬಂಧವಾದ, ತತ್ಪುಷ್ಪಕಂ - ಆ ಪುಷ್ಪಕವಿಮಾನವನ್ನು, ಅಧ್ಯಾರೋಹತ್ - ಏರಿದನು, ವಿಭೀಷಣಶ್ಚ - ವಿಭೀಷಣನೂ, ಸಾಮಾತ್ಯಃ - ಮಂತ್ರಿಗಳಿಂದೊಡಗೂಡಿ, ಅಧ್ಯಾರೋಹತ್ - ಏರಿದನು. ॥ ೨೪ ॥ ಸರ್ವೇಷು - ಸಮಸ್ತರಾದ, ತೇಷು - ಆ ವಾನರರಾಕ್ಷಸರು, ಆರೂಢೇಷು - ಹತ್ತಿದವರಾಗಲು, ರಾಘವೇಣ - ಶ್ರೀರಾಮನಿಂದ, ಅಭ್ಯನುಜ್ಞಾತಂ - ಸಮ್ಮತಿಸಲ್ಪಟ್ಟ, ಕೌಬೇರಂ - ಕುಬೇರನ ಸಂಬಂಧವಾದ, ತತ್ಪುಷ್ಪಕಂ - ಆ ಪುಷ್ಪಕವಿಮಾನವು, ವಿಹಾಯಸಂ - ಅಂತರಿಕ್ಷವನ್ನು ಕುರಿತು, ಉತ್ಪಪಾತ - ಮೇಲಕ್ಕೆ ಹಾರಿತು. ॥ ೨೫ ॥ ಪ್ರಹೃಷ್ಟಃ - ಸಂತೋಷಗೊಂಡ, ರಾಮಃ -

---

ರನ್ನೂ ಕುರಿತು, "ಎಲೈ ಮಿತ್ರರೇ! ನೀವಾಡಿದ ಮಾತುಗಳನ್ನು ಕೇಳಿ ಮಹದಾನಂದಭರಿತನಾದೆನು. ನನಗೆ ಶುಭದ ಮೇಲೆ ಶುಭವು ಸಂಭವಿಸುತ್ತಿರುವುದು. ಮಿತ್ರರಾದ ನಿಮ್ಮೆಲ್ಲರೊಡಗೂಡಿ ಅಯೋಧ್ಯೆಗೆ ಹೋಗುವುದು ನನಗೆ ಅತ್ಯಂತ ಪ್ರಿಯವಾದುದು" ಎಂದು ಹೇಳಿ ಸುಗ್ರೀವನನ್ನು ಕುರಿತು, "ಎಲೈ ಸುಗ್ರೀವನೇ! ಸಮಸ್ತ ವಾನರರೊಡಗೂಡಿ ನೀನು ವಿಮಾನವನ್ನೇರು" ಎಂದನು. ಆಮೇಲೆ ವಿಭೀಷಣನನ್ನು ಕುರಿತು ಶ್ರೀರಾಮನು, "ಓ ವಿಭೀಷಣಾ! ನೀನೂ ನಿನ್ನ ಮಂತ್ರಿಗಳೆಲ್ಲರೊಡಗೂಡಿ ವಿಮಾನದಲ್ಲಿ ಕುಳಿತುಕೋ" ಎಂದನು. ಆ ಕೂಡಲೇ ಸುಗ್ರೀವರಾಜನು ತನ್ನ ಸೇನೆಯೊಡಗೂಡಿ ಪುಷ್ಪಕವನ್ನೇರಿದ ಬಳಿಕ ರಾಕ್ಷಸೇಶ್ವರನಾದ ವಿಭೀಷಣನು ತನ್ನ ಮಂತ್ರಿಗಳೊಡಗೂಡಿ ಆ ವಿಮಾನವನ್ನೇರಿದನು. ಆ ತರುವಾಯ ಆ ಪುಷ್ಪಕವಿಮಾನವು ಶ್ರೀರಾಮನ ಅನುಮತಿಯಂತೆ ಅಂತರಿಕ್ಷಕ್ಕೆ ಹಾರಿ ಹೊರ

ಪಾತ ವಿಹಾಯಸಂ ‖೨೫‖ ಯಯೌ ತೇನ ವಿಮಾನೇನ ಹಂಸಯುಕ್ತೇನ ಭಾಸ್ವತಾ ।
ಪ್ರಹೃಷ್ಟಶ್ಚ ಪ್ರತೀತಶ್ಚ ಬಭೌ ರಾಮಃ ಕುಬೇರವತ್ ‖ ೨೬ ‖

ತೇ ಸರ್ವೇ ವಾನರಾ ಹೃಷ್ಟಾ ರಾಕ್ಷಸಾಶ್ಚ ಮಹಾಬಲಾಃ ।
ಯಥಾಸುಖಮಸಂಬಾಧಂ ದಿವ್ಯೇ ತಸ್ಮಿನ್ನುಪಾವಿಶನ್ ‖ ೨೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚವಿಂಶತ್ಯುತ್ತರಶತತಮಸ್ಸರ್ಗಃ

ಶ್ರೀರಾಮನು, ಪ್ರಥಿತಶ್ಚ-ಶ್ಲಾಘಿಸಲ್ಪಟ್ಟವನಾಗಿ, ಹಂಸಯುಕ್ತೇನ-ಹಂಸಗಳಿಂದ ಕೂಡಿ, ಭಾಸ್ವತಾ-ಹೊಳೆಯುತ್ತಿರುವ, ತೇನವಿಮಾನೇನ - ಆ ಪುಷ್ಪಕವಿಮಾನದಿಂದ, ಯಯೌ - ತೆರಳಿದನು, ಕುಬೇರವತ್ - ಕುಬೇರನಂತೆ, ಬಭೌಚ - ಹೊಳೆಯುತ್ತಿದ್ದನು. ‖ ೨೬ ‖ ತೇಸರ್ವೇವಾನರಾಃ - ಆ ವಾನರರೆಲ್ಲರೂ, ಮಹಾಬಲಾಃ - ಬಹಳ ಬಲಾಢ್ಯರಾದ, ರಾಕ್ಷಸಾಶ್ಚ - ರಕ್ಕಸರೂ, ಹೃಷ್ಟಾಃ - ಸಂತೋಷಗೊಂಡವರಾಗಿ, ದಿವ್ಯೇ - ದೇವತಾಸಂಬಂಧವಾದ, ತಸ್ಮಿನ್ - ಆ ವಿಮಾನದಲ್ಲಿ, ಯಥಾಸುಖಂ - ಸುಖವಾಗಿ, ಅಸಂಬಾಧಂ - ಸಮ್ಮರ್ದವಿಲ್ಲದೆ, ಉಪಾವಿಶನ್ - ಕುಳಿತುಕೊಂಡರು. ‖ ೨೭ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಪಂಚವಿಂಶತ್ಯುತ್ತರಶತತಮಸ್ಸರ್ಗಃ.

ಟೆತು. ಚಿತ್ರತರವಾಗಿ ರಚಿತವಾದ ಹಂಸಗಳಿಂದ ಕೂಡಿರುವ ಮಹಾ ಕಾಂತಿಸಂಪನ್ನವಾದ ಆ ಪುಷ್ಪಕವಿಮಾನದಲ್ಲಿ ಸುಖಾಸೀನನಾಗಿದ್ದ ಶ್ರೀರಾಮಮೂರ್ತಿಯು ಪರಮಾನಂದಭರಿತನಾಗಿ ಕುಬೇರನಂತೆ ಶೋಭಿಸುತ್ತಿದ್ದನು. ಮಹಾ ಬಲಪರಾಕ್ರಮಶಾಲಿಗಳಾದ ವಾನರರಾಕ್ಷಸರೂ ಸಹ ವಿಮಾನದಲ್ಲಿ ಯಥಾಸುಖವಾಗಿ ಸಮ್ಮರ್ದವಿಲ್ಲದಂತೆ ಕುಳಿತಿದ್ದರು. ‖೨೧–೨೭‖

ಇಂತಿದು ಶ್ರೀರಾಮಕೃತ ಪುಷ್ಪಕಾರೋಹಣ ವೃತ್ತಾಂತವೆಂಬ ನೂರ
ಇಪ್ಪತ್ತೈದನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಷಡ್ವಿಂಶತ್ಯುತ್ತರಶತತಮಸ್ಸರ್ಗಃ

ಅನುಜ್ಞಾತಂತು ರಾಮೇಣ ತದ್ವಿಮಾನಮನುತ್ತಮಂ । ಉತ್ಪಪಾತ ಮಹಾ ಮೇಘಃ ಶ್ವಸನೇನೋದ್ಧೃತೋ ಯಥಾ ॥ ೧ ॥ ಪಾತಯಿತ್ವಾ ತತಶ್ಚಕ್ಷುಸ್ಸರ್ವತೋ ರಘುನಂದನಃ । ಅಬ್ರವೀನ್ಮೈಥಿಲೀಂ ಸೀತಾಂ ರಾಮಃ ಶಶಿನಿಭಾನನಾಂ ॥ ೨ ॥ "ಕೈಲಾಸಶಿಖರಾಕಾರೇ ತ್ರಿಕೂಟಶಿಖರೇ ಸ್ಥಿತಾಂ । ಲಂಕಾಮೀಕ್ಷಸ್ವ ವೈದೇಹಿ! ನಿರ್ಮಿತಾಂ ವಿಶ್ವಕರ್ಮಣಾ ॥ ೩ ॥ ಏತದಾಯೋಧನಂ ಪಶ್ಯ ಮಾಂಸಶೋಣಿತ ಕರ್ದಮಂ । ಹರೀಣಾಂ ರಾಕ್ಷಸಾನಾಂಚ ಸೀತೇ ವಿಶಸನಂ ಮಹತ್ ॥ ೪ ॥ ಅತ್ರ

ರಾಮೇಣ - ಶ್ರೀರಾಮನಿಂದ, ಅನುಜ್ಞಾತಂ - ಆಜ್ಞಾಪಿಸಲ್ಪಟ್ಟ, ಅನುತ್ತಮಂ - ಸರ್ವೋತ್ತಮವಾದ, ತದ್ವಿಮಾನಂ - ಆ ವಿಮಾನವು, ಶ್ವಸನೇನ - ಗಾಳಿಯಿಂದ, ಉದ್ಧೃತಃ - ಹಾರಿಸಲ್ಪಟ್ಟ, ಮಹಾಮೇಘೋಯಥಾ - ದೊಡ್ಡ ಮುಗಿಲಂತೆ, ಉತ್ಪಪಾತ - ಹಾರಿತು. ॥ ೧ ॥ ತತಃ - ಬಳಿಕ, ರಘುನಂದನಃ - ರಘುಕುಲಾನಂದಕರನಾದ, ರಾಮಃ - ಶ್ರೀರಾಮನು, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಚಕ್ಷುಃ - ದೃಷ್ಟಿಯನ್ನು, ಪಾತಯಿತ್ವಾ - ಪ್ರಸರಣ ಮಾಡಿಸಿ, ಶಶಿನಿಭಾನನಾಂ - ಚಂದ್ರನಿಗೆ ಸಮಾನವಾದ ಮುಖವುಳ್ಳ, ಮೈಥಿಲೀಂ - ಜನಕರಾಯನ ಕುವರಿಯಾದ, ಸೀತಾಂ - ಸೀತಾದೇವಿಯನ್ನು ಕುರಿತು, ಅಬ್ರವೀತ್ - ನುಡಿದನು. ॥ ೨ ॥ ಹೇ ವೈದೇಹಿ - ಎಲೌ ಸೀತಾದೇವಿಯೇ, ಕೈಲಾಸಶಿಖರಾಕಾರೇ - ಕೈಲಾಸಗಿರಿಯ ಶಿಖರಕ್ಕೆ ಸಮಾನವಾದ ಆಕಾರವುಳ್ಳ, ತ್ರಿಕೂಟಶಿಖರೇ - ತ್ರಿಕೂಟಪರ್ವತದ ಶಿಖರದಲ್ಲಿ, ಸ್ಥಿತಾಂ - ಇರುವ, ವಿಶ್ವಕರ್ಮಣಾ - ವಿಶ್ವಕರ್ಮಬ್ರಹ್ಮನಿಂದ, ನಿರ್ಮಿತಾಂ - ನಿರ್ಮಿಸಲ್ಪಟ್ಟ, ಲಂಕಾಂ - ಲಂಕಾಪಟ್ಟಣವನ್ನು, ಈಕ್ಷಸ್ವ - ನೋಡು. ॥ ೩ ॥ ಸೀತೇ - ಸೀತಾದೇವಿಯೇ, ಮಾಂಸ....ಮಂ - ಮಾಂಸದಿಂದಲೂ, ರಕ್ತದಿಂದಲೂ ಕೆಸರಾದ, ಏತದಾಯೋಧನಂ - ಈ ಯುದ್ಧರಂಗವನ್ನು, ಪಶ್ಯ - ನೋಡು, ಹರೀಣಾಂ - ಕಪಿಗಳ, ರಾಕ್ಷಸಾನಾಂಚ - ರಕ್ಕಸರ, ಮಹತ್ - ಬಹಳವಾದ, ವಿಶಸನಂ - ಸಂಹಾರವನ್ನೊಳಗೊಂಡ ಪ್ರದೇಶವನ್ನು, ಪಶ್ಯ - ನೋಡು. ॥ ೪ ॥ ವಿಶಾಲಾಕ್ಷಿ - ವಿಸ್ತಾರವಾದ ನೇತ್ರಗಳುಳ್ಳವಳೇ, ಅತ್ರ - ಇಲ್ಲಿ, ದತ್ತವರಃ -

---

ಹೀಗೆ ಶ್ರೀರಾಮನಿಂದ ಅನುಮತಿಯನ್ನು ಪಡೆದ ತರುವಾಯ ಮಹಾ ಶ್ರೇಷ್ಠವಾದ ಆ ಪುಷ್ಪಕವಿಮಾನವು ಗಾಳಿಯಿಂದ ಹಾರಿಸಲ್ಪಟ್ಟ ದೊಡ್ಡ ಮುಗಿಲಂತೆ ಅಂತರಿಕ್ಷಕ್ಕೆ ಹಾರಿ ಹೊರಟಿತು. ಆ ಸಮಯದಲ್ಲಿ ರಘುನಂದನನಾದ ಶ್ರೀರಾಮಮೂರ್ತಿಯು ನಲ್ದಿಶೆಗಳನ್ನೂ ಪರಿಕಿಸಿ ನೋಡಿ ಜನಕಚಕ್ರೇಶ್ವರಿಯಾದ ಸೀತಾದೇವಿಯನ್ನು ಕುರಿತು ಹೀಗೆಂದನು. "ಜಾನಕಿ! ಕೈಲಾಸಗಿರಿಶಿಖರಾಕಾರವಾದ ತ್ರಿಕೂಟಾಚಲದ ಮೇಲಿರುವುದೂ, ವಿಶ್ವಕರ್ಮನಿಂದ ನಿರ್ಮಿಸಲಾಗಿರುವುದೂ ಆದ ಈ ಲಂಕಾಪಟ್ಟಣವನ್ನು ನೋಡು. ಸೀತೇ! ವಾನರರಾಕ್ಷಸರ ಸಮ್ಮರ್ದವಾಗಿ ಮಾಂಸದಿಂದಲೂ, ರಕ್ತದಿಂದಲೂ ಕೆಸರಾಗಿರುವ ಈ ಯುದ್ಧಭೂಮಿಯನ್ನು ನೋಡು. ಎಲೆ ವಿಶಾಲಾಕ್ಷಿ! ಸಮಸ್ತ ಲೋಕಗಳನ್ನೂ ಮರ್ದಿಸುವ, ರಾಕ್ಷಸಾಧಿಪನೂ, ಬ್ರಹ್ಮದೇವನಿಂದ ವರವನ್ನು ಪಡೆದವನೂ ಆದ ರಾವಣಾ

ದತ್ತವರಃ ಶೇತೇ ಪ್ರಮಾಥೀ ರಾಕ್ಷಸೇಶ್ವರಃ । ತವ ಹೇತೋರ್ವಿಶಾಲಾಕ್ಷಿ! ರಾವಣೋ ನಿಹತೋ ಮಯಾ ॥ ೫ ॥ ಕುಂಭಕರ್ಣೋಽತ್ರ ನಿಹತಃ ಪ್ರಹಸ್ತಶ್ಚ ನಿಶಾಚರಃ । ಧೂಮ್ರಾಕ್ಷಶ್ಚಾತ್ರ ನಿಹತೋ ವಾನರೇಣ ಹನೂಮತಾ ॥ ೬ ॥ ವಿದ್ಯುನ್ಮಾಲೀ ಹತಶ್ಚಾತ್ರ ಸುಷೇಣೇನ ಮಹಾತ್ಮನಾ । ಲಕ್ಷ್ಮಣೇನೇಂದ್ರಜಿಚ್ಚಾಽತ್ರ ರಾವಣಿರ್ನಿಹತೋ ರಣೇ ॥ ೭ ॥ ಅಂಗದೇನಾತ್ರ ನಿಹತೋ ವಿಕಟೋ ನಾಮ ರಾಕ್ಷಸಃ । ವಿರೂಪಾಕ್ಷಶ್ಚ ದುರ್ಧರ್ಷೋ ಮಹಾಪಾರ್ಶ್ವಮಹೋದರೌ ॥ ೮ ॥ ಅಕಂಪನಶ್ಚ ನಿಹತೋ ಬಲಿನೋಽನ್ಯೇಚ ರಾಕ್ಷಸಾಃ । ಅತ್ರ ಮಂಡೋದರೀ ನಾಮ ಭಾರ್ಯಾ ತಂ

ಬ್ರಹ್ಮದೇವರಿಂದ ಕೊಡಲ್ಪಟ್ಟ ವರವುಳ್ಳ, ಪ್ರಮಾಥೀ - ಲೋಕಹಿಂಸಕನಾದ, ರಾಕ್ಷಸೇಶ್ವರಃ - ರಾಕ್ಷಸರಾಜನಾದ, ರಾವಣಃ - ರಾವಣನು, ತವ - ನಿನ್ನ, ಹೇತೋಃ - ನಿಮಿತ್ತದಿಂದ, ಮಯಾ - ನನ್ನಿಂದ, ನಿಹತಃ - ಹೊಡೆಯಲ್ಪಟ್ಟನು. ॥ ೫ ॥ ಅತ್ರ - ಈ ಸ್ಥಳದಲ್ಲಿ, ಕುಂಭಕರ್ಣಃ - ಕುಂಭಕರ್ಣನು, ನಿಶಾಚರಃ - ರಕ್ಕಸನಾದ, ಪ್ರಹಸ್ತಶ್ಚ - ಪ್ರಹಸ್ತನೂ, ನಿಹತಃ - ಹೊಡೆಯಲ್ಪಟ್ಟರು, ಅತ್ರ - ಇಲ್ಲಿ, ಧೂಮ್ರಾಕ್ಷಶ್ಚ - ಧೂಮ್ರಾಕ್ಷನೂ, ವಾನರೇಣ - ಕಪಿಯಾದ, ಹನೂಮತಾ - ಆಂಜನೇಯನಿಂದ, ನಿಹತಃ-ಹೊಡೆಯಲ್ಪಟ್ಟನು, ಅತ್ರ - ಈ ಸ್ಥಳದಲ್ಲಿ, ವಿದ್ಯುನ್ಮಾಲೀ-ವಿದ್ಯುನ್ಮಾಲಿಯು, ಮಹಾತ್ಮನಾ - ಪರಾಕ್ರಮಿಯಾದ, ಸುಷೇಣೇನ - ಸುಷೇಣನಿಂದ, ಹತಃ - ಹೊಡೆಯಲ್ಪಟ್ಟನು. ॥ ೬ ॥ ಅತ್ರ - ಇಲ್ಲಿ, ಲಕ್ಷ್ಮಣೇನ - ಲಕ್ಷ್ಮಣನಿಂದ, ರಾವಣಿಃ - ದಶಕಂಠನ ಮಗನಾದ, ಇಂದ್ರಜಿಚ್ಚ - ಇಂದ್ರಜಿತುವೂ, ರಣೇ - ಕಾಳಗದಲ್ಲಿ, ನಿಹತಃ - ಹೊಡೆಯಲ್ಪಟ್ಟನು, ಅತ್ರ - ಈ ಸ್ಥಳದಲ್ಲಿ, ಅಂಗದೇನ - ಅಂಗದನಿಂದ, ವಿಕಟೋನಾಮ - ವಿಕಟನೆಂದು ಪ್ರಖ್ಯಾತನಾದ, ರಾಕ್ಷಸಃ - ರಕ್ಕಸನು, ನಿಹತಃ - ಹೊಡೆಯಲ್ಪಟ್ಟನು. ॥ ೭ ॥ ದುರ್ಧರ್ಷಃ - ತಿರಸ್ಕರಿಸಲಸಾಧ್ಯನಾದ, ವಿರೂಪಾಕ್ಷಶ್ಚ - ವಿರೂಪಾಕ್ಷನು, ಮಹಾ....ರೌ - ಮಹಾಪಾರ್ಶ್ವ ಮಹೋದರರೆಂಬೀರ್ವರೂ, ಹತೌ - ಹೊಡೆಯಲ್ಪಟ್ಟರು, ಅಕಂಪನಶ್ಚ - ಅಕಂಪನನೂ, ನಿಹತಃ - ಹೊಡೆಯಲ್ಪಟ್ಟನು, ಬಲಿನಃ - ಬಲವಂತರಾದ, ಅನ್ಯೇ ರಾಕ್ಷಸಾಶ್ಚ - ಮತ್ತು ಕೆಲ ರಕ್ಕಸರು, ನಿಹತಾಃ - ಹೊಡೆಯಲ್ಪಟ್ಟರು. ॥ ೮ ॥ ಅತ್ರ- ಇಲ್ಲಿ, ಮಂಡೋದರೀನಾಮ - ಮಂಡೋದರಿ ಎಂದು ಪ್ರಸಿದ್ಧಳಾದ, ಭಾರ್ಯಾ - ಹೆಂಡತಿಯು, ಸಪತ್ನೀನಾಂ - ಸವತಿಯರ, ಸಹಸ್ರೇಣ-ಸಾವಿರದಿಂದ, ಪರಿವಾರಿತಾ-ಸುತ್ತುವರೆದವಳಾಗಿ, ಸಾಸ್ರೇಣ-ಕಂಬನಿಯೊಡಗೂಡಿ,

---

ಸುರನು ನಿನ್ನ ನಿಮಿತ್ತವಾಗಿ ಈ ರಣಭೂಮಿಯಲ್ಲಿ ಹತನಾದನು. ॥ ೧–೫ ॥ ಈ ರಣಾಂಗಣದಲ್ಲಿಯೇ ರಾವಣಾನುಜನಾದ ಕುಂಭಕರ್ಣನೂ, ಪ್ರಹಸ್ತನೇ ಮೊದಲಾದ ಅನೇಕ ಮಂದಿ ರಾಕ್ಷಸರೂ ಮೃತರಾದರು. ದೇವಿ! ಇಲ್ಲಿಯೇ ವಾನರೋತ್ತಮನಾದ ಹನುಮಂತನು ಮಹಾ ಶೂರನಾದ ಧೂಮ್ರಾಕ್ಷನೆಂಬ ರಾಕ್ಷಸನನ್ನು ಕೊಂದುದು. ಇಲ್ಲಿ ಸುಷೇಣನು ವಿದ್ಯುನ್ಮಾಲಿಯೆಂಬ ರಾಕ್ಷಸನನ್ನು ಕೊಂದನು. ಈ ಪ್ರದೇಶದಲ್ಲಿಯೇ ನಮ್ಮ ಲಕ್ಷ್ಮಣಸ್ವಾಮಿಯು ರಾವಣನ ಮಗನಾದ ಇಂದ್ರಜಿತುವನ್ನು ಸಂಹರಿಸಿದುದು. ಇಲ್ಲಿ ವಾಲಿಪುತ್ರನಾದ ಅಂಗದನು ವಿಕಟನೆಂಬ ರಾಕ್ಷಸನನ್ನು ಕೊಂದನು. ಸೀತೇ! ವಿರೂಪಾಕ್ಷನೂ, ಮಹಾಪಾರ್ಶ್ವ ಮಹೋದರರೂ, ಅಕಂಪನನೂ, ಇನ್ನೂ ಇತರ ಪರಾಕ್ರಮಶಾಲಿಗಳಾದ ರಾಕ್ಷಸರೂ ಈ ಸ್ಥಳದಲ್ಲಿ ಮೃತಿಯೊಂದಿದರು. ಜಾನಕಿ! ಇಲ್ಲಿ ರಾವಣನ ಭಾರ್ಯೆಯಾದ ಮಂಡೋದರಿಯೆಂಬವಳು ತನ್ನ ಪತಿಯ ಮರಣದಿಂದ ದುಃಖಿತೆಯಾಗಿ ರೋದಿಸಿದಳು.

ಪರ್ಯದೇವಯತ್ ॥ ೯ ॥ ಸಪತ್ನೀನಾಂ ಸಹಸ್ರೇಣ ಸಾಸ್ರೇಣ ಪರಿವಾರಿತಾ । ಏತತ್ತು ದೃಶ್ಯತೇ ತೀರ್ಥಂ ಸಮುದ್ರಸ್ಯ ವರಾನನೇ! ॥ ೧೦ ॥ ಯತ್ರ ಸಾಗರ ಮುತ್ತೀರ್ಯ ತಾಂ ರಾತ್ರಿಮುಷಿತಾ ವಯಂ । ಏಷ ಸೇತುರ್ಮಯಾ ಬದ್ಧಸ್ಸಾಗರೇ ಸಲಿಲಾರ್ಣವೇ ॥ ೧೧ ॥ ತವ ಹೇತೋರ್ವಿಶಾಲಾಕ್ಷಿ! ನಲಸೇತುಸ್ಸುದುಷ್ಕರಃ । ಪಶ್ಯ ಸಾಗರಮಕ್ಷೋಭ್ಯಂ ವೈದೇಹಿ! ವರುಣಾಲಯಂ ॥ ೧೨ ॥ ಅಪಾರಮಭಿ ಗರ್ಜಂತಂ ಶಂಖಶುಕ್ತಿನಿಷೇವಿತಂ । ಹಿರಣ್ಯನಾಭಂ ಶೈಲೇಂದ್ರಂ ಕಾಂಚನಂ ಪಶ್ಯ ಮೈಥಿಲೀ! ॥ ೧೩ ॥ ವಿಶ್ರಮಾರ್ಥಂ ಹನುಮತೋ ಭಿತ್ವಾ ಸಾಗರಮುತ್ಥಿತಂ ।

ತಂ - ಆ ದಶಕಂಠನನ್ನು ಕುರಿತು, ಪರ್ಯದೇವಯತ್ - ವಿಲಾಪ ಮಾಡಿದಳು. ॥ ೯ ॥ ವರಾನನೇ - ಶ್ರೇಷ್ಠವಾದ ಮುಖವುಳ್ಳವಳೇ, ಯತ್ರ - ಯಾವ ತೀರ್ಥದ ಸಮೀಪದಲ್ಲಿ, ಸಾಗರಂ - ಕಡಲನ್ನು, ಉತ್ತೀರ್ಯ - ದಾಟಿ, ತಾಂರಾತ್ರಿಂ ಆ ರಾತ್ರಿಯಲ್ಲಿ, ವಯಂ - ನಾವು, ಉಷಿತಾಃ - ಇದ್ದೆವೋ, ಸಮುದ್ರಸ್ಯ - ಕಡಲಿನ, ಏತತ್ತೀರ್ಥಂ - ಈ ತೀರ್ಥವು, ದೃಶ್ಯತೇ - ಕಾಣಲ್ಪಡುತ್ತದೆ. ॥೧೦॥ ಏಷಸೇತುಃ - ಈ ಸೇತುವು, ಮಯಾ-ನನ್ನಿಂದ, ಸಾಗರೇ-ಸಗರಚಕ್ರವರ್ತಿಯ ಕುಮಾರರಿಂದ ನಿರ್ಮಿತವಾದ, ಸಲಿಲಾರ್ಣವೇ - ಜಲಾರ್ಣವದಲ್ಲಿ, ಬದ್ಧಃ - ಕಟ್ಟಲ್ಪಟ್ಟಿತು, ವಿಶಾಲಾಕ್ಷಿ - ವಿಸ್ತಾರ ವಾದ ನೇತ್ರಗಳುಳ್ಳವಳೇ, ತವ - ನಿನ್ನ, ಹೇತೋಃ - ಕಾರಣದಿಂದ, ದುಷ್ಕರಃ - ಮಾಡಲಸಾಧ್ಯ ವಾದ, ನಲಸೇತುಃ - ನಲನಿಂದ ಮಾಡಲ್ಪಟ್ಟ ಸೇತುವು, ಏಷಃ - ಇದು. ॥೧೧॥ ವೈದೇಹೀ - ಸೀತಾ ದೇವಿಯೇ, ಅಕ್ಷೋಭ್ಯಂ - ಕ್ಷೋಭಿಸಲಸಾಧ್ಯವಾದ, ವರುಣಾಲಯಂ - ವರುಣನಿಗೆ ಮನೆಯಾದ, ಅಪಾರಂ - ಪಾರವಿಲ್ಲದಿರುವ, ಅಭಿಗರ್ಜಂತಂ - ಘೋರಗರ್ಜಿಯುತ್ತಿರುವ, ಶಂಖ.....ತಂ - ಶಂಖ ಗಳಿಂದಲೂ, ಮುತ್ತಿನ ಚಿಪ್ಪುಗಳಿಂದಲೂ ಸೇವಿಸಲ್ಪಟ್ಟ, ಸಾಗರಂ - ಕಡಲನ್ನು, ಪಶ್ಯ - ನೋಡು. ॥೧೨॥ ಮೈಥಿಲಿ - ಮಿಥಿಲರಾಯನ ಮಗಳೇ, ಕಾಂಚನಂ - ಸುವರ್ಣವಿಕಾರವಾದ, ಹಿರಣ್ಯನಾಭಂ - ಹಿರಣ್ಯನಾಭವೆಂಬ ಹೆಸರುಳ್ಳ, ಹನೂಮತಃ-ಆಂಜನೇಯನಿಗೆ, ವಿಶ್ರಮಾರ್ಥಂ-ಶ್ರಮ ಪರಿಹಾರಾರ್ಥ ವಾಗಿ, ಸಾಗರಂ - ಕಡಲನ್ನು, ಭಿತ್ವಾ - ಭೇದಿಸಿ, ಉತ್ಥಿತಂ - ಮೇಲಕ್ಕೆದ್ದ, ಶೈಲೇಂದ್ರಂ - ಮೈನಾಕಪರ್ವತವನ್ನು, ಪಶ್ಯ - ನೋಡು. ॥ ೧೩ ॥ ಸಮುದ್ರಸ್ಯ - ಕಡಲಿನ, ಏತತ್ಕುಕ್ಷೌ -

---

ಇಲ್ಲಿಯೇ ಆಕೆಯು ಅನೇಕ ಸಹಸ್ರಗಳಾದ ಸವತಿಯರೊಡಗೂಡಿ ಕಣ್ಣೀರಿಟ್ಟು ಪ್ರಲಾ ಪಿಸಿದಳು. ವರಾನನೆಯಾದ ಸೀತಾದೇವಿಯೇ! ಈ ಸ್ಥಳದಲ್ಲಿ ಉತ್ತಮೋತ್ತಮವಾದ ಸಾಗರತೀರ್ಥವು ಕಾಣುತ್ತಿರುವುದನ್ನು ನೋಡು. ಇಲ್ಲಿ ನಾವು ಸಾಗರವನ್ನು ದಾಟದಂದಿನ ರಾತ್ರಿ ಸುಖವಾಗಿ ವಾಸಿಸಿದೆವು. ॥ ೬–೧೦ ॥ ಎಲೆ ದೇವಿ! ಇದೋ ನೋಡು. ನನ್ನಿಂದ ಮಹಾ ಸಾಗರದಲ್ಲಿ ರಚಿತವಾದ ಸೇತುವೆಯು ಇದೇ. ಜಾನಕಿ! ನಿನ್ನ ನಿಮಿತ್ತವಾಗಿಯೇ ವಾನರೋತ್ತಮನಾದ ನಳನು ಈ ಸೇತುವೆಯನ್ನು ನಿರ್ಮಿಸಿದನು. ಸೀತೇ! ಗಂಭೀರವೂ ಬಹು ದೊಡ್ಡದೂ ಆದ ಈ ಸಮುದ್ರವನ್ನು ನೋಡು. ಇಲ್ಲಿ ಕಪ್ಪೆಯ ಚಿಪ್ಪುಗಳೂ, ಶಂಖಗಳೂ ಬೇಕಾದ ಹಾಗೆ ತುಂಬಿವೆ. ಈ ಕಡಲು ಅಲೆಗಳಿಂದ ಮಹತ್ತರವಾಗಿ ಧ್ವನಿಗೈಯುತ್ತಿದೆ. ಇದೋ ಕಾಂಚನಮಯವಾದ ಈ ಪರ್ವತವೇ ಹಿರಣ್ಯನಾಭನೆಂಬ ಶೈಲೇಂದ್ರವು. ಓ ದೇವಿ! ಈ ಪರ್ವತವು ನಮ್ಮ ಹನುಮಂತನು ಕಡಲನ್ನು ದಾಟುವಾಗ ಆತನ ಶ್ರಮ ಪರಿಹಾರಾರ್ಥ ವಾಗಿ ಮೇಲಕ್ಕೆದ್ದಿತು. ಈ ಸಮುದ್ರದ ಕುಕ್ಷಿಪ್ರದೇಶದಲ್ಲಿಯೇ ನಮ್ಮ ವಾನರ ಸೇನೆಯೆಲ್ಲವೂ

ಏತತ್ಕುಕ್ಷೌ ಸಮುದ್ರಸ್ಯ ಸ್ಕಂಧಾವಾರನಿವೇಶನಂ ||೧೪|| ಏತತ್ತು ದೃಶ್ಯತೇ ತೀರ್ಥಂ ಸಾಗರಸ್ಯ ಮಹಾತ್ಮನಃ । ಸೇತುಬಂಧ ಇತಿ ಖ್ಯಾತಂ ತ್ರೈಲೋಕ್ಯೇನಾಽಭಿಪೂಜಿತಂ ||೧೫|| ಏತತ್ಪವಿತ್ರಂ ಪರಮಂ ಮಹಾಪಾತಕನಾಶನಂ । ‡ ಅತ್ರ ಪೂರ್ವಂ ಮಹಾದೇವಃ ಪ್ರಸಾದಮಕರೋತ್ಪ್ರಭುಃ । ಅತ್ರ ರಾಕ್ಷಸರಾಜೋಽಯಮಾಜಗಾಮ ವಿಭೀ

ಈ ಕುಕ್ಷಿಪ್ರದೇಶದಲ್ಲಿ, ಸ್ಕಂಧಾವಾರನಿವೇಶನಂ - ವಾನರಸೇನೆಯ ನಿವೇಶಸ್ಥಾನವು, ಮಹಾತ್ಮನಃ - ಮಹಾ ಪ್ರಭಾವವಂತನಾದ, ಸಾಗರಸ್ಯ - ಕಡಲಿನ, ಸೇತುಬಂಧ ಇತಿ - ಸೇತುಬಂಧವೆಂಬುದಾಗಿ, ಖ್ಯಾತಂ - ಪ್ರಸಿದ್ಧವಾದ, ತ್ರೈಲೋಕ್ಯೇನಾಪಿ - ಲೋಕತ್ರಯದಿಂದಲೂ, ಅಭಿಪೂಜಿತಂ - ಪೂಜಿಸಲ್ಪಟ್ಟ, ಏತತ್ತೀರ್ಥಂ - ಈ ತೀರ್ಥವು, ದೃಶ್ಯತೇ - ಕಾಣಲ್ಪಡುತ್ತದೆ, ಪವಿತ್ರಂ - ಪರಿಶುದ್ಧವಾದ, ಪರಮಂ - ಶ್ರೇಷ್ಠವಾದ, ಏತತ್ - ಈ ಸೇತುಬಂಧವೆಂಬ ತೀರ್ಥವು, ಮಹಾ......ನಂ - ಬ್ರಹ್ಮಹತ್ಯಾದಿ ಮಹಾ ಪಾತಕಗಳನ್ನು ಹೋಗಲಾಡಿಸುವದು. ||೧೪-೧೫|| ಅತ್ರ - ಈ ಪ್ರದೇಶದಲ್ಲಿ, ಪೂರ್ವಂ - ಸೇತುರಚನೆಗೆ ಮೊದಲು, ಪ್ರಭುಃ - ಸಮುದ್ರಜಲಾಧಿಷ್ಠಾತೃವಾದ, ಮಹಾದೇವಃ - ಸಮುದ್ರರಾಜನು, ಪ್ರಸಾದಂ - ಪ್ರತ್ಯಕ್ಷನಾದವನು (ಮ) ಪ್ರಸನ್ನತೆಯನ್ನು, ಅಕರೋತ್ - (ಆದನು) ಮಾಡಿದನು, ಅತ್ರ - ಈ ಸ್ಥಳದಲ್ಲಿ, ರಾಕ್ಷಸರಾಜಃ - ರಕ್ಕಸರೊಡೆಯನಾದ, ಅಯಂ ವಿಭೀಷಣಃ - ಈ ವಿಭೀಷಣನು,

ವಾಸವಾಗಿದ್ದಿತು. ಈ ಪ್ರದೇಶವನ್ನು ನೋಡು. ಮಹಾತ್ಮನಾದ ಸಮುದ್ರರಾಜನಿಗೆ ಆವಾಸಸ್ಥಾನವಾದ ಈ ಮಹಾ ಸಾಗರ ಮಧ್ಯಪ್ರದೇಶದಲ್ಲಿರುವ ಸೇತುಬಂಧವೆಂಬದಾಗಿ ಹೆಸರಾದ ಈ ತೀರ್ಥವು ಮೂರು ಲೋಕಗಳಿಂದಲೂ ಪೂಜಿತವಾಗಿರುವುದು. ಈ ತೀರ್ಥಕ್ಷೇತ್ರವು ಪರಮ ಪವಿತ್ರವಾದುದು. ಇದು ಸೇವಿಸಿದವರ ಪಾಪಗಳೆಲ್ಲವನ್ನೂ ನಾಶಗೊಳಿಸುತ್ತದೆ. ||೧೧-೧೫|| ಇಲ್ಲಿಯೇ ಮಹಾದೇವನಾದ ವರುಣನು ನನಗೆ ಪ್ರಸನ್ನನಾದನು. (ದೇವದೇವನಾದ ಮಹಾದೇವನು ಈ ಪ್ರದೇಶದಲ್ಲಿಯೇ ನನ್ನಿಂದ ಪ್ರಸನ್ನತೆಯಾಂತು ನಿಂತನು). ಜಾನಕಿ! ರಾಕ್ಷಸೋತ್ತಮನಾದ ವಿಭೀಷಣನು ನನ್ನನ್ನು ನೋಡಲು ಆಗಮಿಸಿ ನನ್ನೊಡನೆ ಸ್ನೇಹ ಮಾಡಿ

‡ ಈ ಶ್ಲೋಕದ ವಿಷಯದಲ್ಲಿ ವ್ಯಾಖ್ಯಾನಕಾರರ ಅಭಿಪ್ರಾಯ:—“ಸೇತುಬಂಧನ ಮಾಡುವುದಕ್ಕೆ ಮೊದಲು, ಸಮುದ್ರನು ತನ್ನನ್ನು ಶೋಷಿಸುವೆನೆಂದು ಮಹಾ ರೋಷವನ್ನೈದಿದ ನನ್ನನ್ನು ಪ್ರಸನ್ನನನ್ನಾಗಿಸಿದನು” ಎಂದು ಅರ್ಥ ಹೇಳಬೇಕೇ ಹೊರತು, ರುದ್ರನು ಪ್ರಸನ್ನನಾದನೆಂದು ಹೇಳಕೂಡದು. ಏಕೆಂದರೆ:—ರುದ್ರನು ಪ್ರಸನ್ನನಾದನೆಂದು ಆದಿಕವಿಯು ಮೊದಲು ಹೇಳಿರುವುದಿಲ್ಲ. ಅಲ್ಲದೆ ಈ ಗ್ರಂಥದಲ್ಲಿ, ಪೂರ್ವದಲ್ಲಿ ಯಾವ ಯಾವ ವಿಷಯಗಳು ಹೇಳಲ್ಪಟ್ಟಿರುವವೋ ಅವುಗಳನ್ನೇ ಇಲ್ಲಿ ಅನುವಾದಿಸಿರುತ್ತಾನೆ. ಹಾಗಾದರೆ,—ಅಂಗದನಿಂದ ವಿಕಟನೆಂಬವನು ಸಂಹೃತನಾದನೆಂದು ಪೂರ್ವದಲ್ಲಿ ಹೇಳದಿದ್ದರೂ, ಅವನ್ನಿಲ್ಲಿ ಅನುವಾದಿಸಿರುವುದರಿಂದ ಅದು ಸಿದ್ಧವಾದಂತೆಯೇ ಇದೂ ಕೂಡ ಸಿದ್ಧವಾಗುವುದೆಂದು ಏಕೆ ಹೇಳಬಾರದು ? ಎಂದರೆ, ಅದು ಪೂರ್ವೋತ್ತರ ಸಂದರ್ಭಗಳಿಗೆ ಸರಿಯಾಗಿದೆ; ಇದು ಹಾಗಿರುವುದಿಲ್ಲ, ಹೇಗೆಂದರೆ,—ಶ್ರೀರಾಮಚಂದ್ರನು ಸೇತು ನಿರ್ಮಾಣ ಮಾಡುವುದಕ್ಕಿಂತಲೂ ಪೂರ್ವದಲ್ಲಿ ಮಹಾದೇವನು ಪ್ರಸನ್ನನಾದನೋ ಅಥವಾ ರಾವಣಾದಿಗಳ ವಧೆಯಾದ ಬಳಿಕ ಪ್ರಸನ್ನನಾದನೋ ಎಂಬ ಸಂಶಯವು ಮೂಡುವುದು. ಈ ಎರಡು ಕಾಲಗಳಲ್ಲಿ ಮಹಾದೇವನು ಯಾವಾಗ ಅನುಗ್ರಹ ಮಾಡಿದನೆಂದು ಹೇಳಿದರೂ ಸಮಂಜಸವಾಗಿರುವುದಿಲ್ಲ. ಏಕೆಂದರೆ,—ಪ್ರಸಾದಕ್ಕೆ ಪ್ರಯೋಜನವಾದ ರಾವಣ ಸಂಹಾರಾದಿಗಳು ರುದ್ರ ಪ್ರಸಾದದಿಂದ ಆಗದಿರುವುದರಿಂದಲೂ, ಸಮುದ್ರರಾಜನ ಪ್ರಸಾದದಿಂದಲೇ ಆಗಿರುವುದರಿಂದಲೂ, ಪೂರ್ವದಲ್ಲಿ ರುದ್ರನು ಅನುಗ್ರಹ ಮಾಡಿದನೆಂದು ಹೇಳುವುದು ಯುಕ್ತವಲ್ಲವು. ಇಷ್ಟೆಯಲ್ಲದೆ ರಾವಣಾದಿಗಳ ವಧೆಯಾದ ಬಳಿಕ, ರುದ್ರನು ಪ್ರಸನ್ನನಾದನೆಂದು ಹೇಳುವುದಾದರೆ, “ಪೂರ್ವಂ” ಎಂಬ ಶಬ್ದಕ್ಕೆ ವಿರೋಧವುಂಟಾಗುತ್ತದೆ. ಆದ್ದರಿಂದ ಅನೇಕ [illegible] ಹೇಳಲಾಗದು. ಆದ್ದರಿಂದ ಸಮುದ್ರನಿಗೆ ಅನುಗ್ರಹ ಮಾಡಿದನೆಂದು ಹೇಳುವುದೇ ಸರಿ. ಇದೇ ಪೂರ್ವೋತ್ತರ ಸಂದರ್ಭಗಳಿಗೆ [illegible]

ವಾಗುವುದಿಲ್ಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಇನ್ನು ಕೆಲವರು ಹೀಗೆ ಹೇಳುತ್ತಾರೆ:—"ಈ ಸೇತುವಿನ ಮಧ್ಯಪ್ರದೇಶದಲ್ಲಿ, ಸೇತುಬಂಧನಕ್ಕಿಂತಲೂ ಪೂರ್ವದಲ್ಲಿ, ಸ್ವಾಮಿಯಾದ ಪರಮೇಶ್ವರನು, ನನಗೆ ಅನುಗ್ರಹ ಮಾಡಿದನು" (ಎಂದರೆ, ನನ್ನಿಂದ ಸ್ಥಾಪಿತವಾಗಿ ನಿಂತನು.) ಹೀಗೆ ಹೇಳಿದ್ದರಿಂದ ಸಮುದ್ರದಲ್ಲಿ ಸೇತುವು ನಿರ್ವಿಘ್ನವಾಗಿ ನಿಲ್ಲುವುದಕ್ಕಾಗಿ ಸಮುದ್ರನನ್ನು ಪ್ರಾರ್ಥಿಸಿದ ಬಳಿಕ, ಶ್ರೀರಾಮಚಂದ್ರನು ಶಿವಲಿಂಗ ಪ್ರತಿಷ್ಠೆಯನ್ನು ಮಾಡಿದನೆಂದು ತೋರುವುದು. ಇದಕ್ಕನುಸಾರವಾಗಿ ವಾಸಿಷ್ಠ, ದೌರ್ವಾಸ, ಅಧ್ಯಾತ್ಮವೇ ಮೊದಲಾದ ರಾಮಾಯಣಗಳಲ್ಲಿಯೂ, ಪುರಾಣಗಳಲ್ಲಿಯೂ ಸಹ ಈ ವಿಷಯವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿರುವುದು.

ದೌರ್ವಾಸ ರಾಮಾಯಣದಲ್ಲಿ:—"ರಾವಣಾದೀನ್ ರಣೇ ಹತ್ವಾ ಸಂಸ್ಥಾಪ್ಯಚ ವಿಭೀಷಣಂ । ಲಂಕಾಯಾಮಥ ಕೌಬೇರಂ ವೈದೇಹ್ಯಾ ಸಹ ರಾಘವಃ ॥ ಪುಷ್ಪಕಂ ತತ್ಸಮಾರುಹ್ಯ ಸಸೈನ್ಯೋ ರಘುನಂದನಃ । ಶಿವಲಿಂಗಪ್ರತಿಷ್ಠಾಂಚ ಕೃತ್ವಾ ತೀರೇ ಮಹೋದಧೇಃ ॥ ಪುನಃ ಪುಷ್ಪಕಮಾರುಹ್ಯ ವೈದೇಹ್ಯಾ ಸಹಿತೋ ಯಯೌ ॥" ವಾಸಿಷ್ಠ ರಾಮಾಯಣದಲ್ಲಿ:—"ಊರ್ಮಿಳೇ! ಶೃಣು ವೃತ್ತಾಂತಮಾತ್ಮನಶ್ಚ ಸುಶೋಭನಂ । ಚತುರ್ದಶಚ ವರ್ಷಾಣಿ ವನವಾಸೇನ ಯತ್ಕೃತಂ ॥ ತತ್ಸರ್ವಮಪಿ ವಕ್ಷ್ಯೇಽಹಂ ಅನುಭೂತಂ ಮಯಾಽಧುನಾ । ವನವಾಸಸ್ಯ ಗಮನಂ ಮುನೀನಾಂ ದರ್ಶನಂ ತತಃ ॥ ಪಂಚವಟ್ಯಾಂ ಸ್ಥಿತಿಂ ಚೈವ ಹ್ಯನಸೂಯಾಽಭಿಭಾಷಣಂ । ರಾವಣಾಪಹರಣಂ ಚೈವ ಲಂಕಾಯಾಂ ಸನ್ನಿವೇಶನಂ ॥ ಅಶೋಕವನಿಕಾಮಧ್ಯೇ ರಾಕ್ಷಸೀಗಣತರ್ಜನಂ । ಋಕ್ಷವಾನರಸಂಘೈಶ್ಚ ಸಂಗಮಂ ರಾಘವಸ್ಯಚ ॥ ಆಂಜನೇಯಸ್ಯ ಸಂವಾದಂ ಮುದ್ರಿಕಾಹರಣಂ ತಥಾ । ಆಂಜನೇಯಸ್ಯ ಮಾಹಾತ್ಮ್ಯಂ ಸರ್ವರಾಕ್ಷಸನಾಶನಂ ॥ ಶಿರೋರತ್ನಪ್ರಧಾನಂಚ ಕುಶಲಂಚಾತ್ಮನಸ್ತಥಾ । ರಾಮಸ್ಯಾಗಮನಂ ಚೈವ ಸಮುದ್ರತರಣಂ ತತಃ ॥ ಲಂಕಾಯಾಶ್ಚ ನಿರೋಧಂಚ ನಿಧನಂ ಸರ್ವರಕ್ಷಸಾಂ । ರಾಮರಾವಣಯೋರ್ಯುದ್ಧಂ ಕುಂಭಕರ್ಣವಧಂ ತಥಾ ॥ ಬ್ರಹ್ಮಾಸ್ತ್ರೇಣೈವ ಯುದ್ಧೇತು ಸಂಹಾರಂ ರಾವಣಸ್ಯಚ । ವಿಭೀಷಣಸ್ಯ ಲಂಕಾಯಾಮಭಿಷೇಕ ಮಹೋತ್ಸವಂ ॥ ಅಗ್ನಿಪ್ರವೇಶಂ ಸ್ವಸ್ಯಾಶ್ಚ ಪುನರಾಗಮನಂ ತಥಾ । ದೇವಾಭಿಭಾಷಣಂ ಚೈವ ಶ್ವಶುರಸ್ಯ ಚ ದರ್ಶನಂ ॥ ವರಪ್ರದಾನಂ ದೇವಾನಾಂ ಪುಷ್ಪಕಾರೋಹಣಂ ತತಃ । ರಾಮಲಿಂಗ ಪ್ರತಿಷ್ಠಾಂಚ ಸಿಂಧುತೀರೇ ವಿಶೇಷತಃ ॥ ಹನುಮಲ್ಲಿಂಗಸಂಸ್ಥಾನಂ ಪುಷ್ಪಕಾರೋಹಣಂ ತತಃ । ಕಿಷ್ಕಿಂಧಾದರ್ಶನಂ ಚೈವ ಭರದ್ವಾಜಸ್ಯ ದರ್ಶನಂ ॥ ತತ್ಸಂಭಾಷಣಮವ್ಯಗ್ರಂ ನಂದಿಗ್ರಾಮಪ್ರವೇಶನಂ । ಅಯೋಧ್ಯಾಯಾಂ ಪ್ರವೇಶಂಚ ಸರ್ವಂ ವಕ್ಷ್ಯೇ ಯಥಾಕ್ರಮಂ ॥ ಇತಿ ಬ್ರುವಂತೀ ಸಾ ಸೀತಾ ತಯಾ ಚೋರ್ಮಿಳಯಾಸಹ । ಮಾಂಡವೀಶ್ರುತಕೀರ್ತಿಭ್ಯಾಂ ಸಹಸಾಂತಃಪುರಂ ಯಯೌ ॥" ಅಧ್ಯಾತ್ಮ ರಾಮಾಯಣದಲ್ಲಿ:—ಅತ್ರ ರಾಮೇಶ್ವರೋ ದೇವೋ ಮಯಾ ಶಂಭುಃ ಪ್ರತಿಷ್ಠಿತಃ । ಅತ್ರ ಮಾಂ ಶರಣಂ ಪ್ರಾಪ್ತೋ ಮಂತ್ರಿಭಿಶ್ಚ ವಿಭೀಷಣಃ ॥" ಕೂರ್ಮ ಪುರಾಣದಲ್ಲಿ:—"ಸೇತುಮಧ್ಯೇ ಮಹಾದೇವಮೀಶಾನಂ ಕೃತ್ತಿವಾಸಸಂ । ಸ್ಥಾಪಯಾಮಾಸ ವೈ ಲಿಂಗಂ ಪೂಜಯಾಮಾಸ ರಾಘವಃ ॥ ತಸ್ಯ ದೇವೋ ಮಹಾದೇವಃ ಪಾರ್ವತ್ಯಾ ಸಹ ಶಂಕರಃ । ಪ್ರತ್ಯಕ್ಷಮೇವ ಭಗವಾನ್ ದತ್ತವಾನ್ವರಮುತ್ತಮಂ ॥ ಯೋ ತ್ವಯಾ ಸ್ಥಾಪಿತಂ ಲಿಂಗಂ ದ್ರಕ್ಷ್ಯಂತೀಹ ದ್ವಿಜಾತಯಃ । ಮಹಾಪಾತಕಸಂಯುಕ್ತಾಸ್ತೇಷಾಂ ಪಾಪಂ ವಿನಶ್ಯತಿ ॥ ಅನ್ಯಾನಿಚೈವ ಪಾಪಾನಿ ತೀರೇ ತತ್ರ ಮಹೋದಧೇಃ । ದರ್ಶನಾದೇವ ಲಿಂಗಸ್ಯ ನಾಶಂ ಯಾಂತಿ ನಸಂಶಯಃ ॥ ಯಾವತ್‌ಸ್ಥಾಸ್ಯಂತಿ ತವ್ರೋ ಯಾವದೇವಚ ಮೇದಿನೀ । ಯಾವತ್ಸೇತುಶ್ಚ ತಾವಚ್ಚ ಸ್ಥಾಸ್ಯಾಮ್ಯತ್ರ ತಿರೋಹಿತಃ ॥ ಸ್ನಾನಂ ದಾನಂ ಜಪಃ ಶ್ರಾದ್ಧಂ ಭವಿಷ್ಯತ್ಯಕ್ಷಯಂ ತತಃ । ಸ್ಮರಣಾದೇವ ಲಿಂಗಸ್ಯ ದಿನಪಾಪಂ ಪ್ರಣಶ್ಯತಿ ॥ ಇತ್ಯುಕ್ತ್ವಾ ಭಗವಾನ್ಸ್ವಾಚಂ ಪರಿಷ್ವಜ್ಯಚ ರಾಘವಂ ! ಸನಂದೀ ಸಗಣೋ ರುದ್ರಸ್ತತ್ರೈವಾಂಽತರಧೀಯತ ॥" ಪಾದ್ಮ ಪುರಾಣದಲ್ಲಿ:—"ರಾಮಃ ಪುಷ್ಪಕಾಪವರುಹ್ಯ ಮಹಾದೇವಂ ಪ್ರತಿಷ್ಠಾಪಿತವಾನ್ । ಸೋಽಸ್ಮೈ ಪ್ರಸನ್ನೋಽಭೂದಿತ್ಯುಚ್ಯತೇ ॥" ಈ ಪ್ರಕಾರವಾಗಿ ಶ್ರೀರಾಮಚಂದ್ರನು ಶಿವಲಿಂಗ ಸ್ಥಾಪನ ಮಾಡಿದನೆಂದು ಇತರ ರಾಮಾಯಣಗಳಲ್ಲಿಯೂ, ಪುರಾಣಗಳಲ್ಲಿಯೂ ಸಹ ಕಂಠೋಕ್ತವಾಗಿ ನಿರೂಪಿಸಲ್ಪಟ್ಟಿರುವುದಾದಕಾರಣ, ಸಮುದ್ರಪರ್ಯಾಯವಾಗಿ ಇಲ್ಲಿ ಅರ್ಥ ಮಾಡುವುದು ಯುಕ್ತವಲ್ಲ. ಅಲ್ಲದೆ, ಈ ಗ್ರಂಥದ ಪೂರ್ವಭಾಗದಲ್ಲಿ ಹೇಳಲ್ಪಡದ ಅನೇಕ ವಿಷಯಗಳು ಉತ್ತರಭಾಗದಲ್ಲಿ ಮತ್ತು ಅರಣ್ಯಕಾಂಡದ ಕಥಾ ಸಂದರ್ಭಗಳಲ್ಲಿ ಹೇಳಿದೆ. ಶ್ರೀರಾಮಚಂದ್ರನು ಚಿತ್ರಕೂಟಪರ್ವತದಲ್ಲಿ ನೆಲೆಗೊಂಡಿರುವಾಗ ಇಂದ್ರನ ಮಗನು ಕಾಗೆಯ ರೂಪವನ್ನು ತಾಳಿ ಜಗನ್ಮಾತೆಯಾದ ಸೀತಾದೇವಿಯ ಕುಚಘಾತ ಮಾಡಿದನೆಂದು ಅಲ್ಲಿ ಹೇಳಲ್ಪಡಲಿಲ್ಲ. ಆ ವೃತ್ತಾಂತವು ಹನುಮತ್ಸೀತಾ ಸಂವಾದ ಕಾಲದಲ್ಲಿ ಶ್ರೀರಾಮಚಂದ್ರನಿಗೆ ಅಭಿಜ್ಞಾನ ರೂಪವಾಗಿ ಹೇಗೆ ಉದಹರಿಸಲ್ಪಟ್ಟಿರುವುದೋ, ದಶಕಂಠನು ಸೀತಾಪಹಾರ ಮಾಡಿ, ಅಶೋಕವನವನ್ನೈದಿಸಿದಾಗ, ಸುರೇಂದ್ರನು ಆಕೆಗೆ ಕ್ಷುತ್ಪಿಪಾಸಾ ಪರಿಹಾರಾರ್ಥವಾಗಿ, ದೇವನಿರ್ಮಿತವಾದ ಪಾಯಸವನ್ನು ಕೊಟ್ಟನೆಂದು ಅಲ್ಲಿ ಹೇಳಲ್ಪಡದಿದ್ದರೂ, ಪ್ರಕರಣಾಂತರದಲ್ಲಿ ಹೇಗೆ ನಿರೂಪಿಸಲ್ಪಟ್ಟಿರುವುದೋ, ಯುದ್ಧಕಾಂಡದಲ್ಲಿ ವಿದ್ಯುನ್ಮಾಲಿ ಎಂಬವನು ಸುಷೇಣನೆಂಬ ವಾನರನಿಂದ ಹತನಾದನೆಂಬುದಾಗಿಯೂ, ವಿಕಟನೆಂಬವನು ಅಂಗದನಿಂದ ಸಂಹೃತನಾದನೆಂಬುದಾಗಿಯೂ, ಯುದ್ಧಪ್ರಕರಣದಲ್ಲಿ ವಿವರಿಸಲ್ಪಡದಿದ್ದರೂ

ಷಣಃ ||೧೬|| ಏಷಾ ಸಾ ದೃಶ್ಯತೇ ಸೀತೇ! ಕಿಷ್ಕಿಂಧಾ ಚಿತ್ರಕಾನನಾ । ಸುಗ್ರೀವಸ್ಯ ಪುರೀ ರಮ್ಯಾ ಯತ್ರ ವಾಲೀ ಮಯಾ ಹತಃ || ೧೭ || ಅಥ ದೃಷ್ಟ್ವಾ ಪುರೀಂ ಸೀತಾ ಕಿಷ್ಕಿಂಧಾಂ ವಾಲಿಪಾಲಿತಾಂ । ಅಬ್ರವೀತ್ಪ್ರಶ್ರಿತಂ ವಾಕ್ಯಂ ರಾಮಂ ಪ್ರಣಯಸಾಧ್ವಸಾ || ೧೮ || "ಸುಗ್ರೀವಪ್ರಿಯಭಾರ್ಯಾಭಿಸ್ತಾರಾಪ್ರಮುಖತೋ ನೃಪ! । ಅನ್ಯೇಷಾಂ ವಾನರೇಂದ್ರಾಣಾಂ ಸ್ತ್ರೀಭಿಃ ಪರಿವೃತಾಹ್ಯಹಂ ||೧೯|| ಗಂತುಮಿಚ್ಛೇ ಸಹಾಯೋಧ್ಯಾಂ

ಆಜಗಾಮ - ಬಂದನು. || ೧೬ || ಸೀತೇ - ಸೀತಾದೇವಿಯೇ, ಯತ್ರ - ಯಾವ ಕಿಷ್ಕಿಂಧಾಪಟ್ಟಣದಲ್ಲಿ, ವಾಲೀ - ವಾಲಿಯು, ಮಯಾ - ನನ್ನಿಂದ, ಹತಃ - ಹೊಡೆಯಲ್ಪಟ್ಟನೋ, ಸಾ - ಅಂತಹ, ಚಿತ್ರ ಕಾನನಾ - ಆಶ್ಚರ್ಯಕರವಾದ ವನಗಳುಳ್ಳ, ಸುಗ್ರೀವಸ್ಯ - ಸುಗ್ರೀವನದಾದ, ರಮ್ಯಾ - ಮನೋ ಹರವಾದ, ಏಷಾಕಿಷ್ಕಿಂಧಾ - ಈ ಕಿಷ್ಕಿಂಧಾಪಟ್ಟಣವು, ದೃಶ್ಯತೇ - ಕಾಣಲ್ಪಡುತ್ತದೆ. ||೧೭|| ಅಥ- ಬಳಿಕ, ಸೀತಾ - ಸೀತಾದೇವಿಯು, ವಾಲಿಪಾಲಿತಾಂ - ವಾಲಿಯಿಂದ ಪರಿಪಾಲಿತವಾದ, ಕಿಷ್ಕಿಂಧಾಂ ಪುರೀಂ - ಕಿಷ್ಕಿಂಧಾಪಟ್ಟಣವನ್ನು, ದೃಷ್ಟ್ವಾ - ಕಂಡು, ಪ್ರಣಯಸಾಧ್ವಸಾ - ವಿಶ್ವಾಸದಿಂದ ಕೂಡಿದ ತ್ವರೆಯುಳ್ಳವಳಾಗಿ, ರಾಮಂ - ಶ್ರೀರಾಮನನ್ನು ಕುರಿತು, ಪ್ರಶ್ರಿತಂ - ನಮ್ರವಾದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. || ೧೮ || ನೃಪ - ಅರಸೇ, ತಾರಾಪ್ರಮುಖತಃ - ತಾರಾದೇವಿಯೇ ಮೊದಲಾದ, ಸುಗ್ರೀ....ಭಿಃ - ಸುಗ್ರೀವನಿಗೆ ಇಷ್ಟರಾದ ಹೆಂಡತಿಯರೊಡನೆ, ಅನ್ಯೇಷಾಂವಾನರೇಂದ್ರಾಣಾಂ - ಇತರರಾದ ವಾನರೋತ್ತಮರ, ಸ್ತ್ರೀಭಿಃ - ಹೆಂಡತಿಯರೊಡನೆಯೂ, ಪರಿವೃತಾ - ಕೂಡಿದವಳಾಗಿ, ತ್ವಯಾಸಹ - ನಿನ್ನೊಡನೆ, ಅಹಂ - ನಾನು, ಅಯೋಧ್ಯಾಂ - ರಾಜ

ಕೊಂಡುದು ಈ ಪ್ರದೇಶದಲ್ಲಿಯೇ. ಸೀತೇ! ಅದೋ ನೋಡು; ಚಿತ್ರಗಳಾದ ಉಪವನ ಗಳಿಂದ ಸುತ್ತುವರೆದು ವಿರಾಜಿಸುತ್ತಿರುವ ಕಿಷ್ಕಿಂಧಾನಗರವು ಕಂಗೊಳಿಸುತ್ತಿರುವುದು. ಇದೇ ವಾನರೇಶ್ವರನಾದ ಸುಗ್ರೀವನ ರಾಜಧಾನಿಯು. ಇದು ಬಹು ಮನೋಹರವಾದುದು. ಈ ಪಟ್ಟಣದಲ್ಲಿಯೇ ನಾನು ಮಹಾ ಬಲಾಢ್ಯನಾದ ವಾಲಿಯನ್ನು ಕೊಂದೆನು." ಶ್ರೀರಾಮ ಚಂದ್ರನು ಈ ರೀತಿ ನುಡಿಯುತ್ತಿರುವಂತೆಯೇ ಜಾನಕಿಯು ವಾಲಿಪಾಲಿತವಾದ ಕಿಷ್ಕಿಂಧಾ ಪಟ್ಟಣವನ್ನು ನೋಡಿ ಪ್ರಣಯದಿಂದಲೂ, ನಮ್ರತೆಯಿಂದಲೂ, ಸ್ವಲ್ಪ ಭಯದಿಂದಲೂ ಕೂಡಿದವಳಾಗಿ, "ರಾಜೇಂದ್ರ, ಪ್ರಾಣಪ್ರಿಯನಾದ ಶ್ರೀರಾಮಚಂದ್ರ! ಸುಗ್ರೀವನ ಪ್ರಿಯ ಭಾರ್ಯೆಯರಾದ ತಾರಾದೇವಿಯೇ ಮೊದಲಾದವರೊಡನೆಯೂ, ಇತರ ವಾನರಸ್ತ್ರೀಯ

ಇಲ್ಲಿ ಹೇಗೆ ಹೇಳಲ್ಪಟ್ಟಿರುವುದೋ ಹಾಗೆಯೇ ಪ್ರಕೃತದಲ್ಲಿ ಶ್ರೀರಾಮಚಂದ್ರನಿಂದ ಶಿವಲಿಂಗ ಪ್ರತಿಷ್ಠೆ ಮಾಡಿದಂತೆಯೂ ನಿರೂಪಿಸಲ್ಪಟ್ಟಿದೆ. ಆದ್ದರಿಂದ ಉಕ್ತಾರ್ಥಾನುವಾದವನ್ನೇ ಮಾಡಬೇಕೆಂಬ ನಿಯಮವು ವಾಲ್ಮೀಕಿಯ ಅಭಿಪ್ರಾಯವಲ್ಲ. ಪುರಾಣಾಂತರಗಳಲ್ಲಿ ವಿಶೇಷವಾಗಿ ನಿರೂಪಿಸಲ್ಪಟ್ಟುದನ್ನು ಇಲ್ಲಿ ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಇದರಿಂದ ಶ್ರೀರಾಮ ಚಂದ್ರನು ಸೇತುಬಂಧನ ಮಾಡುವುದಕ್ಕೆ ಪೂರ್ವದಲ್ಲಿ, ಕಡಲಿನಲ್ಲಿ ಸೇತುವು ದೃಢವಾಗಿ ನಿಲ್ಲುವುದಕ್ಕಾಗಿ ಒಂದಾವರ್ತಿ ಶಿವ ಪ್ರತಿಷ್ಠೆ ಮಾಡಿದಂತೆಯೂ, ರಾವಣಾದಿ ರಾಕ್ಷಸರ ಸಂಹಾರವಾದಮೇಲೆ ಬ್ರಹ್ಮಹತ್ಯಾದೋಷ ನಿವಾರಣಕ್ಕಾಗಿ ಒಂದಾ ವರ್ತಿ ಮಾಡಿದಂತೆಯೂ ತೋರುತ್ತದೆ. ಹೀಗಿರುವಲ್ಲಿ ರಾಮೇಶ್ವರಕ್ಷೇತ್ರದಲ್ಲಿ ಸರ್ವ ಜನರಿಗೂ, ಪ್ರತ್ಯಕ್ಷವಾಗಿಯೂ, ಪುರಾಣವಚನ ಸಮ್ಮತವಾಗಿಯೂ ಇರುವ ಈ ಅರ್ಥವೇ ಯಥಾರ್ಥ. ಇದಕ್ಕೆ ಬಾಧಕವಾಗಿರುವ ಸಮಸ್ತ ವಚನ ಗಳನ್ನೂ ತಾಮಸ ಪುರಾಣದವುಗಳೆಂದು ಪ್ರಮಾಣವಿಲ್ಲದೆ ಹೇಳಿದ ಮಾತ್ರದಿಂದಲೇ ಯಾರೂ ನಂಬತಕ್ಕದ್ದಲ್ಲವೆಂಬದು ಸರ್ವರಿಗೂ ವೇದ್ಯವಾಗಿಯೇ ಇದೆಯಷ್ಟೆ.

ರಾಜಧಾನೀಂ ತ್ವಯಾಽನಘ!" । ಏವಮುಕ್ತೋಽಥ ವೈದೇಹ್ಯಾ ರಾಘವಃ ಪ್ರತ್ಯುವಾಚ ತಾಂ ॥ ೨೦ ॥ ಏವಮಸ್ತ್ವಿತಿ ಕಿಷ್ಕಿಂಧಾಂ ಪ್ರಾಪ್ಯ ಸಂಸ್ಥಾಪ್ಯ ರಾಘವಃ । ವಿಮಾನಂ ಪ್ರೇಕ್ಷ್ಯ ಸುಗ್ರೀವಂ ವಾಕ್ಯಮೇತದುವಾಚಹ ॥ ೨೧ ॥ "ಬ್ರೂಹಿ ವಾನರಶಾರ್ದೂಲ! ಸರ್ವಾನ್ ವಾನರಪುಂಗವಾನ್ । ಸದಾರಸಹಿತಾಸ್ಸರ್ವೇ ಹ್ಯಯೋಧ್ಯಾಂ ಯಾಂತು ಸೀತಯಾ ॥ ೨೨ ॥ ತಥಾ ತ್ವಮಪಿ ಸರ್ವಾಭಿಸ್ಸ್ತ್ರೀಭಿಸ್ಸಹ ಮಹಾಬಲ! । ಅಭಿತ್ವರಸ್ವ ಸುಗ್ರೀವ! ಗಚ್ಛಾಮಃ ಪ್ಲವಗೇಶ್ವರ!" ॥ ೨೩ ॥ ಏವಮುಕ್ತಸ್ತು ಸುಗ್ರೀವೋ ರಾಮೇಣಾಮಿತತೇಜಸಾ । ವಾನರಾಧಿಪತಿಶ್ಶ್ರೀಮಾಂಸ್ತೈಶ್ಚ ಸರ್ವೈ

ಧಾನಿಯಾದ ಅಯೋಧ್ಯೆಯನ್ನು ಕುರಿತು, ಗಂತುಂ - ಹೋಗುವುದಕ್ಕೆ, ಇಚ್ಛೇ - ಅಪೇಕ್ಷಿಸುತ್ತೇನೆ, ಏವಂ - ಈ ಪರಿಯಾಗಿ, ವೈದೇಹ್ಯಾ - ಸೀತಾದೇವಿಯಿಂದ, ಉಕ್ತಃ - ಹೇಳಲ್ಪಟ್ಟ, ರಾಘವಃ - ಶ್ರೀರಾಮನು, ಏವಮಸ್ತ್ವಿತಿ - ಹಾಗೆಯೇ ಆಗಲೆಂದು, ತಾಂ - ಆ ಸೀತಾದೇವಿಯನ್ನು ಕುರಿತು, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟನು, ಅಥ - ಬಳಿಕ, ರಾಘವಃ - ಶ್ರೀರಾಮನು, ಕಿಷ್ಕಿಂಧಾಂ - ಕಿಷ್ಕಿಂಧಾಪಟ್ಟಣವನ್ನು, ಪ್ರಾಪ್ಯ - ಹೊಂದಿ, ವಿಮಾನಂ - ವಿಮಾನವನ್ನು, ಸಂಸ್ಥಾಪ್ಯ - ನಿಲ್ಲಿಸಿ, ಸುಗ್ರೀವಂ - ಸುಗ್ರೀವನನ್ನು, ಪ್ರೇಕ್ಷ್ಯ - ಕಂಡು, ಏತದ್ವಾಕ್ಯಂ - ಈ ಮಾತನ್ನು, ಉವಾಚ - ಹೇಳಿದನಷ್ಟೆ. ॥ ೧೯-೨೧ ॥ ವಾನರಶಾರ್ದೂಲ - ಎಲೈ ವಾನರರಾಜನೇ, ಸರ್ವಾನ್ - ಸಮಸ್ತರಾದ, ವಾನರಪುಂಗವಾನ್ - ವಾನರಶ್ರೇಷ್ಠರನ್ನೂ ಕುರಿತು, ಸರ್ವೇ - ಸಮಸ್ತರೂ, ಸದಾರಸಹಿತಾಃ - ಹೆಂಡತಿಯರೊಡಗೂಡಿದವರಾಗಿ, ಸೀತಯಾ - ಸೀತಾದೇವಿಯೊಡನೆ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಯಾಂತು - ಬರಲಿ ಎಂದು, ಬ್ರೂಹಿ - ಹೇಳು. ॥ ೨೨ ॥ ಮಹಾಬಲ - ಮಹಾ ಬಲಶಾಲಿಯೇ, ಪ್ಲವಗೇಶ್ವರ - ವಾನರರಾಜನೇ, ತಥಾ - ಹಾಗೆಯೇ, ತ್ವಮಪಿ - ನೀನೂ ಕೂಡ, ಸರ್ವಾಭಿಃಸ್ತ್ರೀಭಿಸ್ಸಹ - ಎಲ್ಲ ಹೆಂಗಸರೊಡನೆಯೂ, ಅಭಿತ್ವರಸ್ವ - ಜಾಗ್ರತೆ ಮಾಡು, ಸುಗ್ರೀವ - ಸುಗ್ರೀವನೇ, ಗಚ್ಛಾಮಃ - ಹೋಗೋಣ. ॥ ೨೩ ॥ ಏವಂ - ಈ ಪರಿಯಾಗಿ, ಅಮಿತತೇಜಸಾ - ಅಪಾರವಾದ ತೇಜಸ್ಸುಳ್ಳ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ಶ್ರೀಮಾನ್ - ಸಂಪದ್ಯುಕ್ತನಾದ, ವಾನರಾಧಿಪತಿಃ - ಕಪಿರಾಜನಾದ, ಸುಗ್ರೀವಃ - ಸುಗ್ರೀವನು, ಸರ್ವೈಃ - ಸಮಸ್ತರಾದ, ತೈಃ - ಆ ಕಪಿಗಳಿಂದ, ಸಮಾವೃತಃ - ಸುತ್ತುವರಿಯಲ್ಪಟ್ಟವನಾಗಿ. ॥೨೪॥

ರೊಡನೆಯೂ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಬೇಕೆಂದು ನನಗೆ ಆಸೆಯಾಗುತ್ತಿರುವುದು" ಎಂದಳು. ॥೧೯-೨೦॥ ಆಗ ಶ್ರೀರಾಮನು, "ಪ್ರಿಯಳೇ! ನಿನ್ನ ಇಷ್ಟಾನುಸಾರವೇ ಆಗಲಿ" ಎಂದು ಹೇಳಿ ಸುಗ್ರೀವನನ್ನು ಕುರಿತು, "ವಾನರೋತ್ತಮನಾದ ಸುಗ್ರೀವನೇ! ವಾನರೋತ್ತಮರೆಲ್ಲರನ್ನೂ ಕರೆದು ಅವರೆಲ್ಲರೂ ತಂತಮ್ಮ ಭಾರ್ಯೆಯರೊಡಗೂಡಿ ಅಯೋಧ್ಯಾಪಟ್ಟಣಕ್ಕೆ ಹೊರಡಬೇಕೆಂದು ತಿಳಿಸು. ಸೀತಾದೇವಿಯು ಅವರೆಲ್ಲರೂ ಬಂದರೆ ಚೆನ್ನಾಗಿರುತ್ತದೆಯೆಂದು ಹೇಳಿರುವಳು. ಆದುದರಿಂದ ನೀನೂ ಸಹ ನಿನ್ನ ಪ್ರಿಯಭಾರ್ಯೆಯರೊಡಗೂಡಿ ಜಾಗ್ರತೆಯಾಗಿ ಬರುವವನಾಗು. ಎಲ್ಲ ವಾನರರನ್ನೂ ತ್ವರೆಗೊಳಿಸು. ನಾವುಗಳೆಲ್ಲರೂ ಜೊತೆಯಲ್ಲಿಯೇ ಅಯೋಧ್ಯಾಪಟ್ಟಣಕ್ಕೆ ಪ್ರಯಾಣ ಮಾಡೋಣ" ಎಂದು ಹೇಳಿದನು. ಮಹಾ ಮನಸ್ವಿಯಾದ ಶ್ರೀರಾಮಮೂರ್ತಿಯಾಡಿದ ಮಾತುಗಳನ್ನು ಕೇಳಿ ಶ್ರೀಮಂತನಾದ ಸುಗ್ರೀವನು ಸಕಲ ವಾನರವೀರರೊಡಗೂಡಿ ಪುಷ್ಪಕ

ಸ್ಸಮಾವೃತಃ । ಪ್ರವಿಶ್ಯಾಂತಃಪುರಂ ಶೀಘ್ರಂ ತಾರಾಮುದ್ವೀಕ್ಷ್ಯ ಭಾಷತ ||೨೪-೨೫||
"ಪ್ರಿಯೇ! ತ್ವಂ ಸಹನಾರೀಭಿರ್ವಾನರಾಣಾಂ ಮಹಾತ್ಮನಾಂ । ರಾಘವೇಣಾಭ್ಯನುಜ್ಞಾತಾ ಮೈಥಿಲೀಪ್ರಿಯಕಾಮ್ಯಯಾ ||೨೬|| ತ್ವರ ತ್ವಮಭಿಗಚ್ಛಾಮೋ ಗೃಹ್ಯ ವಾನರಯೋಷಿತಃ । ಅಯೋಧ್ಯಾಂ ದರ್ಶಯಿಷ್ಯಾಮ ಸ್ಸರ್ವಾ ದಶರಥಸ್ತ್ರಿಯಃ" ||೨೭|| ಸುಗ್ರೀವಸ್ಯ ವಚಃ ಶ್ರುತ್ವಾ ತಾರಾ ಸರ್ವಾಂಗಶೋಭನಾ । ಆಹೂಯ ಚಾಬ್ರವೀತ್ಸರ್ವಾ ವಾನರಾಣಾಂ ತು ಯೋಷಿತಃ ||೨೮|| "ಸುಗ್ರೀವೇಣಾಭ್ಯನುಜ್ಞಾತಾ ಗಂತುಂ ಸರ್ವೈಶ್ಚ ವಾನರೈಃ । ಮಮ ಚಾಪಿ ಪ್ರಿಯಂ ಕಾರ್ಯಮಯೋಧ್ಯಾ

ಅಂತಃಪುರಂ - ಅಂತಃಪುರವನ್ನು, ಶೀಘ್ರಂ - ಜಾಗ್ರತೆಯಾಗಿ, ಪ್ರವಿಶ್ಯ - ಹೊಕ್ಕು, ತಾರಾಂ - ತಾರಾದೇವಿಯನ್ನು, ಉದ್ವೀಕ್ಷ್ಯ - ಕಂಡು, ಭಾಷತ - ಮಾತನಾಡಿದನು. || ೨೫ || ಪ್ರಿಯೇ - ಪ್ರಿಯಳೇ, ತ್ವಂ - ನೀನು, ಮೈಥಿಲೀಪ್ರಿಯಕಾಮ್ಯಯಾ - ಸೀತಾದೇವಿಗೆ ಇಷ್ಟವನ್ನು ಮಾಡಲಿಚ್ಛೆಯಿಂದ, ರಾಘವೇಣ - ಶ್ರೀರಾಮನಿಂದ, ಅಭ್ಯನುಜ್ಞಾತಾ - ಸಮ್ಮತಿಸಲ್ಪಟ್ಟವಳಾಗಿದ್ದೀಯೆ, ಮಹಾತ್ಮಾನಂ - ಮಹಾ ಪ್ರಭಾವವಂತರಾದ, ವಾನರಾಣಾಂ - ಕಪಿಗಳ, ನಾರೀಭಿಸ್ಸಹ - ಹೆಂಡತಿಯರೊಡನೆ, ತ್ವಂ - ನೀನು, ತ್ವರಸ್ವ - ಜಾಗ್ರತೆಯಾಗಿ ಬಾ, ವಾನರಯೋಷಿತಃ - ವಾನರ ಪತ್ನಿಯರನ್ನು, ಗೃಹ್ಯ - ಕರೆದುಕೊಂಡು, ಅಭಿಗಚ್ಛಾಮಃ - ಹೋಗೋಣ, ಅಯೋಧ್ಯಾಂ - ಅಯೋಧ್ಯಾ ಪಟ್ಟಣದಲ್ಲಿ, ಸರ್ವಾಃ - ಸಮಸ್ತರಾದ, ದಶರಥಸ್ತ್ರಿಯಃ - ದಶರಥರಾಯನ ಹೆಂಡತಿಯರನ್ನು, ದರ್ಶಯಿಷ್ಯಾಮಃ - ತೋರಿಸುವೆವು. || ೨೬-೨೭ || ಸುಗ್ರೀವಸ್ಯ - ಸುಗ್ರೀವನ, ವಚಃ - ಮಾತನ್ನು, ಶೃತ್ವಾ - ಕೇಳಿ, ಸರ್ವಾಂಗಶೋಭನಾ - ಸರ್ವಾಂಗಸುಂದರಿಯಾದ, ತಾರಾ - ತಾರಾದೇವಿಯು, ವಾನರಾಣಾಂ - ಕಪಿಗಳ, ಸರ್ವಾಃ - ಸಮಸ್ತರಾದ, ಯೋಷಿತಃ - ಸ್ತ್ರೀಯರನ್ನು, ಆಹೂಯ - ಕರೆಯಿಸಿ, ಅಬ್ರವೀತ್ - ಹೇಳಿದಳು. ||೨೮|| ಸುಗ್ರೀವೇಣ - ಸುಗ್ರೀವನಿಂದ, ಸರ್ವೈಃವಾನರೈಶ್ಚ - ಸಮಸ್ತ ಕಪಿಗಳೊಡಗೂಡಿ, ಗಂತುಂ - ಹೋಗುವುದಕ್ಕೆ, ಅಭ್ಯನುಜ್ಞಾತಾಃ - ಆಜ್ಞಾಪಿಸಲ್ಪಟ್ಟವರಾಗಿದ್ದೇವೆ, ಮಮಚಾಪಿ - ನನಗೂ, ಅಯೋಧ್ಯಾದರ್ಶನೇನ - ಅಯೋಧ್ಯಾಪಟ್ಟಣವನ್ನ ನೋಡುವಿಕೆಯಿಂದ, ಪ್ರಿಯಂ - ಇಷ್ಟವು, ಕಾರ್ಯಂ - ಮಾಡತಕ್ಕುದು, ಪೌರಜಾನಪದೈಸ್ಸಹ - ಪಟ್ಟ

ದಿಂದಿಳಿದು ಬಹು ಜಾಗ್ರತೆಯಾಗಿಯೇ ಅಂತಃಪುರಕ್ಕೆ ಬಂದು ತನ್ನ ಪ್ರಿಯಪತ್ನಿಯಾದ ತಾರಾದೇವಿಯನ್ನು ನೋಡಿ ಆಕೆಯನ್ನು ಕುರಿತು, "ಎಲೆ ಪ್ರೇಯಸಿ! ಸೀತಾದೇವಿಗೆ ಪ್ರಿಯವನ್ನುಂಟುಮಾಡಬೇಕೆಂಬ ಕೋರಿಕೆಯಿಂದ ಶ್ರೀರಾಮಮೂರ್ತಿಯು ನಮ್ಮ ವಾನರರೆಲ್ಲರ ಭಾರ್ಯೆಯರೊಡನೆಯೇ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಬೇಕೆಂದು ಸಂಕಲ್ಪಿಸಿರುವನು. ತಾರೇ! ಆದುದರಿಂದ ಈಗ ನೀನು ಸಮಸ್ತ ವಾನರಸ್ತ್ರೀಯರೊಡಗೂಡಿ ಹೊರಡುವವಳಾಗು. ಅಯೋಧ್ಯಾಪಟ್ಟಣವನ್ನೂ, ದಶರಥರಾಯನ ಮಡದಿಯರನ್ನೂ ನೋಡುವಿಯಂತೆ" ಎಂದು ಹೇಳಿದನು. ||೨೫-೨೭|| ಸುಗ್ರೀವರಾಜನು ಈ ರೀತಿ ನುಡಿದೊಡನೆಯೇ, ಸರ್ವಾಂಗ ಶೋಭನೆಯಾದ ಆ ತಾರಾದೇವಿಯು ವಾನರಸ್ತ್ರೀಯರೆಲ್ಲರನ್ನೂ ತ್ವರೆಯಾಗಿ ಬರಮಾಡಿ, ಅವರನ್ನು ಕುರಿತು, "ಎಲೈ ಸಹೋದರಿಯರೇ! ಸಮಸ್ತ ವಾನರಸ್ತ್ರೀಯರೊಡಗೂಡಿ ಅಯೋಧ್ಯಾಪಟ್ಟಣಕ್ಕೆ ಹೋಗಿ ದಶರಥರಾಯನ ಪಟ್ಟಮಹಿಷಿಯೇ ಮೊದಲಾದವರನ್ನೂ ಸಂದರ್ಶಿಸಬೇಕೆಂಬ ಕುತೂಹಲವುಂಟಾಗಿರುವುದು. ಇದೂ ಅಲ್ಲದೆ, ರಘುಕುಲೋದ್ಭವನ

ದರ್ಶನೇನಚ ||೨೯|| ಪ್ರಶಂಸಾ ಚಾಪಿ ರಾಮಸ್ಯ ಪೌರಜಾನಪದೈಸ್ಸಹ | ವಿಭೂತಿಂ
ಚೈವ ಸರ್ವಾಸಾಂ ಸ್ತ್ರೀಣಾಂ ದಶರಥಸ್ಯಚ" ||೩೦|| ತಾರಯಾಚಾಭ್ಯನುಜ್ಞಾತಾ
ಸ್ಸರ್ವಾ ವಾನರಯೋಷಿತಃ | ನೈಪಥ್ಯಂ ವಿಧಿಪೂರ್ವೇಣ ಕೃತ್ವಾ ಚಾಪಿ ಪ್ರದಕ್ಷಿಣಂ |
ಅಧ್ಯಾರೋಹನ್ ವಿಮಾನಂ ತತ್ಸೀತಾದರ್ಶನಕಾಂಕ್ಷಯಾ ||೩೧|| ತಾಭಿಸ್ಸಹೋ
ತ್ಥಿತಂ ಶೀಘ್ರಂ ವಿಮಾನಂ ಪ್ರೇಕ್ಷ್ಯ ರಾಘವಃ | ಋಶ್ಯಮೂಕಸಮೀಪೇತು
ವೈದೇಹೀಂ ಪುನರಬ್ರವೀತ್ ||೩೨|| "ದೃಶ್ಯತೇಽಸೌ ಮಹಾನ್ ಸೀತೇ! ಸವಿದ್ಯುದಿವ
ತೋಯದಃ | ಋಶ್ಯಮೂಕೋ ಗಿರಿಶ್ರೇಷ್ಠಃ ಕಾಂಚನೈರ್ಧಾತುಭಿರ್ವೃತಃ ||೩೩||

ಣಸ್ತರು ಮತ್ತು ದೇಶವಾಸಿಗಳಿಂದೊಡಗೂಡಿ, ರಾಮಸ್ಯ - ಶ್ರೀರಾಮನ, ಪ್ರವೇಶಂಚ - ಪುರಪ್ರವೇಶ ವನ್ನೂ, ದಶರಥಸ್ಯ - ದಶರಥರಾಯನ, ಸರ್ವಾಸಾಂ - ಸಮಸ್ತರಾದ, ಸ್ತ್ರೀಣಾಂ - ಹೆಂಗಸರ, ವಿಭೂತಿಂ - ಐಶ್ವರ್ಯವನ್ನೂ, ದ್ರಷ್ಟುಂ - ನೋಡುವುದಕ್ಕೆ, ಆಗಚ್ಛತ - ಹೊರಟುಬನ್ನಿರಿ. ||೨೯-೩೦|| ತಾರಯಾಚ - ತಾರಾದೇವಿಯಿಂದ, ಅಭ್ಯನುಜ್ಞಾತಾಃ - ಆಜ್ಞೆ ಮಾಡಲ್ಪಟ್ಟ, ಸರ್ವಾಃ - ಸಮಸ್ತ ರಾದ, ವಾನರಯೋಷಿತಃ - ವಾನರಸ್ತ್ರೀಯರು, ವಿಧಿಪೂರ್ವೇಣ - ಅಲಂಕಾರವಿಧಿಪೂರ್ವಕವಾಗಿ, ನೈಪಥ್ಯಂ - ಅಂತಃಪುರವನ್ನು, ಪ್ರದಕ್ಷಿಣಂ - ಪ್ರದಕ್ಷಿಣವನ್ನು, ಕೃತ್ವಾ - ಮಾಡಿ, ಸೀತಾ....ಯಾಂ- ಸೀತಾದೇವಿಯನ್ನು ನೋಡುವುದರಲ್ಲಿ ಆಸಕ್ತಿಯಿಂದ, ತದ್ವಿಮಾನಂ - ಆ ವಿಮಾನವನ್ನು, ಅಧ್ಯಾ ರೋಹನ್ - ಏರಿದರು, ರಾಘವಃ - ಶ್ರೀರಾಮನು, ತಾಭಿಸ್ಸಹ - ಆ ವಾನರಸ್ತ್ರೀಯರೊಡಗೂಡಿ, ಶೀಘ್ರಂ - ಜಾಗ್ರತೆಯಾಗಿ, ಉತ್ಥಿತಂ - ಮೇಲಕ್ಕೆದ್ದ, ವಿಮಾನಂ - ವಿಮಾನವನ್ನು, ಪ್ರೇಕ್ಷ್ಯ - ಕಂಡು, ಋಶ್ಯ....ತು - ಋಶ್ಯಮೂಕದ ಸಮೀಪದಲ್ಲಿ, ವೈದೇಹೀಂ - ಸೀತಾದೇವಿಯನ್ನು ಕುರಿತು, ಪುನಃ - ಮತ್ತೂ, ಅಬ್ರವೀತ್ - ನುಡಿದನು. ||೩೧ ೩೨|| ಹೇ ಸೀತೇ - ಎಲೌ ಸೀತಾದೇವಿಯೇ, ಮಹಾನ್ - ದೊಡ್ಡದಾದ, ಋಶ್ಯಮೂಕಃ - ಋಶ್ಯಮೂಕನೆಂಬ, ಗಿರಿಶ್ರೇಷ್ಠಃ - ಪರ್ವತಶ್ರೇಷ್ಠವು, ಕಾಂಚನೈಃ - ಚಿನ್ನದ ವಿಕಾರವಾದ, ಧಾತುಭಿಃ - ಧಾತುವಿಶೇಷಗಳಿಂದ, ವೃತಃ - ಸುತ್ತುವರೆದ, ಸವಿ

ನಾದ ಶ್ರೀರಾಮಮೂರ್ತಿಯು ಪಟ್ಟಣ ಪ್ರವೇಶ ಮಾಡುವುದನ್ನೂ, ದಶರಥನ ಮಡದಿಯರ ಅತುಲೈಶ್ವರ್ಯವನ್ನೂ ಕಣ್ತುಂಬ ನೋಡಬೇಕೆಂದು ಬಯಕೆಯಾಗುತ್ತಿರುವುದು. ಶ್ರೀರಾಮ ಭಾರ್ಯೆಯಾದ ಸೀತಾದೇವಿಯೂ ನಮ್ಮೆಲ್ಲರನ್ನೂ ತನ್ನೊಡನೆ ಕರೆದುಕೊಂಡು ಹೋಗ ಬೇಕೆಂದು ಅಪೇಕ್ಷಿಸಿರುವಳು. ಆದುದರಿಂದ ನಾವೆಲ್ಲರೂ ಜಾಗ್ರತೆಯಾಗಿ ಹೋಗೋಣ" ಎಂದು ಪ್ರೇರೇಪಿಸಿದಳು. ಆ ತರುವಾಯ ವಾನರಾಂಗನೆಯರೆಲ್ಲರೂ ತಮ್ಮ ಒಡತಿಯಾದ ತಾರಾದೇವಿಯ ಅನುಮತಿಯನ್ನು ಹೊಂದಿ ಬಹು ಸೊಗಸಾಗಿ ಸಿಂಗರಿಸಿಕೊಂಡು ವಿಧಿ ಪೂರ್ವಕವಾಗಿ ಆ ತಾರೆಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದರು. ಆ ಕೂಡಲೇ ಎಲ್ಲರೂ ಅಲ್ಲಿಂದ ಹೊರಟು ಸೀತೆಯನ್ನು ಕಾಣಬೇಕೆಂಬ ಮಹದಾಕಾಂಕ್ಷೆಯಿಂದ ಜಾಗ್ರತೆಯಾಗಿ ಬಂದು ಪುಷ್ಪಕವಿಮಾನವನ್ನೇರಿದರು. ಇದಾದ ತರುವಾಯ ಶ್ರೀರಘುರಾಮನ ಅನುಮತಿ ಯನ್ನು ಪಡೆದು ಆ ವಿಮಾನವು ಅಂತರಿಕ್ಷಕ್ಕೆ ಹಾರಿ ಹೊರಟಿತು, ಆ ದಿವ್ಯ ವಿಮಾನವು ಋಷ್ಯಮೂಕಗಿರಿಯ ಸಮೀಪಕ್ಕೆ ಬಂದೊಡನೆಯೇ ಶ್ರೀರಾಮಮೂರ್ತಿಯು ಸೀತಾದೇವಿ ಯನ್ನು ಕುರಿತು, "ದೇವಿ! ಮಿಂಚಿನ ಬಳ್ಳಿಯೊಡಗೂಡಿದ ಮುಗಿಲಂತೆ ಕಾಣುತ್ತಿರುವ ಈ ಪರ್ವತವನ್ನು ನೋಡಿದೆಯಾ! ಬಂಗಾರದ ಗೈರಿಕಾದಿ ಧಾತುಗಳೊಡಗೂಡಿದ ಇದೇ ಋಷ್ಯ

ಅತ್ರಾಹಂ ವಾನರೇಂದ್ರೇಣ ಸುಗ್ರೀವೇಣ ಸಮಾಗತಃ । ಸಮಯಶ್ಚ ಕೃತಸ್ಸೀತೇ! ವಧಾರ್ಥಂ ವಾಲಿನೋ ಮಯಾ ॥ ೩೪ ॥ ಏಷಾ ಸಾ ದೃಶ್ಯತೇ ಪಂಪಾ ನಳಿನೀ ಚಿತ್ರಕಾನನಾ । ತ್ವಯಾ ವಿಹೀನೋ ಯತ್ರಾಹಂ ವಿಲಲಾಪ ಸುದುಃಖಿತಃ ॥ ೩೫ ॥ ಅಸ್ಯಾಸ್ತೀರೇ ಮಯಾ ದೃಷ್ಟಾ ಶಬರೀ ಧರ್ಮಚಾರಿಣೀ । ಅತ್ರ ಯೋಜನಬಾಹುಶ್ಚ ಕಬಂಧೋ ನಿಹತೋ ಮಯಾ ॥ ೩೬ ॥ ದೃಶ್ಯತೇಚ ಜನಸ್ಥಾನೇ ಸೀತೇ! ಶ್ರೀಮಾನ್ ವನಸ್ಪತಿಃ । ಯತ್ರ ಯುದ್ಧಂ ಮಹದ್ವೃತ್ತಂ ತವ ಹೇತೋರ್ವಿಲಾಸಿನಿ! ॥ ೩೭ ॥

ದ್ಯುತ್ ಮಿಂಚುಗಳಿಂದೊಡಗೂಡಿದ, ತೋಯದಇವ ಮೇಘದಂತೆ, ದೃಶ್ಯತೇ-ಕಾಣಲ್ಪಡುತ್ತದೆ. ॥೩೩॥ ಅತ್ರ - ಇಲ್ಲಿ, ಅಹಂ - ನಾನು, ವಾನರೇಂದ್ರೇಣ - ವಾನರಾಧಿಪತಿಯಾದ, ಸುಗ್ರೀವೇಣ - ಸುಗ್ರೀವನೊಡಗೂಡಿ, ಸಮಾಗತಃ - ಸೇರಿದೆನು, ಹೇ ಸೀತೇ - ಎಲೌ ಸೀತಾದೇವಿಯೇ, ವಾಲಿನಃ - ವಾಲಿಯ, ವಧಾರ್ಥಂ - ಸಂಹಾರಾರ್ಥವಾಗಿ, ಮಯಾ - ನನ್ನಿಂದ, ಸಮಯಃ - ಶಪಥವು, ಕೃತಃ - ಮಾಡಲ್ಪಟ್ಟಿತು. ॥ ೩೪ ॥ ಯತ್ರ - ಯಾವ ಪಂಪಾತೀರದಲ್ಲಿ, ಅಹಂ - ನಾನು, ತ್ವಯಾ - ನಿನ್ನಿಂದ, ವಿಹೀನಃ - ಅಗಲಿ, ಸುದುಃಖಿತಃ - ಬಹಳ ದುಃಖಗೊಂಡು, ವಿಲಲಾಪ - ವಿಲಪಿಸುತ್ತಿದ್ದೆನೋ, ಸೈಷಾ - ಆ ಈ, ಚಿತ್ರಕಾನನಾ - ಆಶ್ಚರ್ಯಕರವಾದ ಮಧುವನಾದಿಗಳುಳ್ಳ, ನಳಿನೀ - ಕಮಲಗಳುಳ್ಳ, ಪಂಪಾ - ಪಂಪಾಸರೋವರವು, ದೃಶ್ಯತೇ - ಕಾಣಲ್ಪಡುತ್ತದೆ. ॥ ೩೫ ॥ ಅಸ್ಯಾಃ - ಈ ಪಂಪಾನದಿಯ, ತೀರೇ - ಸಮೀಪದಲ್ಲಿ, ಧರ್ಮಚಾರಿಣೀ - ಧರ್ಮಾನುಷ್ಠಾನದಲ್ಲಿ ತತ್ಪರಳಾದ, ಶಬರೀ - ಶಬರಿಯು, ಮಯಾ - ನನ್ನಿಂದ, ದೃಷ್ಟಾ - ನೋಡಲ್ಪಟ್ಟಳು, ಅತ್ರ - ಈ ಸ್ಥಳದಲ್ಲಿ, ಯೋಜನಬಾಹುಃ - ಒಂದು ಗಾವುದ ಉದ್ದವಾದ ಭುಜಗಳುಳ್ಳ, ಕಬಂಧಃ - ಕಬಂಧನು, ಮಯಾ - ನನ್ನಿಂದ, ನಿಹತಃ - ಹೊಡೆಯಲ್ಪಟ್ಟನೋ. ॥ ೩೬ ॥ ಹೇ ವಿಲಾಸಿನಿ - ಎಲೆ ವಿಲಾಸವಂತಳೇ, ಯತ್ರ - ಯಾವ ಸ್ಥಳದಲ್ಲಿ, ತವಹೇತೋಃ - ನಿನ್ನ ನಿಮಿತ್ತವಾಗಿ, ನೃಶಂಸಸ್ಯ - ಘಾತುಕನಾದ, ರಾವಣಸ್ಯ - ರಾವಣನಿಗೂ, ಮಹಾತ್ಮನಃ - ಮಹಾತ್ಮನಾದ, ಜಟಾಯೋಶ್ಚ - ಜಟಾಯುವಿಗೂ, ಮಹತ್ - ಬಹಳವಾದ, ಯುದ್ಧಂ - ಕಾಳಗವು, ವೃತ್ತಂ - ಪ್ರವರ್ತಿಸಿತೋ, ಹೇ ಸೀತೇ - ಎಲೌ

ಮೂಕಪರ್ವತೋತ್ತಮವು. ನಾನು ಇದೇ ಪರ್ವತದಲ್ಲಿಯೇ ವಾನರೋತ್ತಮನಾದ ಸುಗ್ರೀವನೊಡನೆ ಸಖ್ಯವನ್ನು ಮಾಡಿಕೊಂಡರು. ಸೀತೇ! ಇದೇ ಪರ್ವತದಲ್ಲಿಯೇ ನಾನು ವಾಲಿಯನ್ನು ಸಂಹರಿಸುವುದಾಗಿ ಪ್ರತಿಜ್ಞೆಮಾಡಿದೆನು. ಇದೋ ನೋಡು. ಈ ಸರೋವರವೇ ಪಂಪಾಸರೋವರವು. ನೋಡು ಜಾನಕಿ! ಈ ಸುಂದರ ಸರೋವರವು ಪದ್ಮಗಳಿಂದ ಕಂಗೊಳಿಸುತ್ತ ಚಿತ್ರವನಗಳಿಂದ ಸುತ್ತುವರೆದು ಶೋಭಿಸುತ್ತಿರುವುದು. ॥ ೨೮–೩೫ ॥ ಈ ರಮ್ಯ ಸರಸ್ಸನ್ನು ಕಂಡು ಇದರ ಬಳಿಯಲ್ಲಿಯೇ ನಿನ್ನ ವಿರಹತಾಪಸಂತಪ್ತನಾಗಿ ಮಹತ್ತರವಾದ ವ್ಯಸನವನ್ನು ಹೊಂದಿ ಪ್ರಲಪಿಸಿದೆನು. ಈ ಪಂಪಾಸರೋವರದ ತೀರಪ್ರಾಂತ್ಯದಲ್ಲಿಯೇ ಧರ್ಮಚಾರಿಣಿಯಾದ ಶಬರಿಯನ್ನು ಸಂದರ್ಶಿಸಿದುದು. ಜಾನಕಿ! ಇಲ್ಲಿಯೇ ಒಂದು ಗಾವುದದುದ್ದ ತೋಳುಗಳುಳ್ಳ ಕಬಂಧ ರಾಕ್ಷಸನನ್ನು ಸಂಹರಿಸಿದುದು. ಜಾನಕಿ! ಇದೇ ಜನಸ್ಥಾನವು. ಇಲ್ಲಿರುವ ಮಹಾ ಸಂಪತ್ಕರವಾದ ವೃಕ್ಷಗಳನ್ನು ನೋಡು. ಈ ಮಹಾ ವೃಕ್ಷದ ಬಳಿಯಲ್ಲಿಯೇ ಮಹಾತ್ಮನಾದ ಜಟಾಯುವಿಗೂ ಮಹಾ ದುರ್ಮಾರ್ಗನಾದ ರಾವಣಾಸುರನಿಗೂ ಕಾಳಗವಾದುದು. ಈ ಪ್ರದೇಶದಲ್ಲಿ ಮಹಾ ತೀಕ್ಷ್ಣವಾದ ನನ್ನ

ರಾವಣಸ್ಯ ನೃಶಂಸಸ್ಯ ಜಟಾಯೋಶ್ಚ ಮಹಾತ್ಮನಃ । ಖರಶ್ಚ ನಿಹತೋ ಯತ್ರ ದೂಷಣಶ್ಚ ನಿಪಾತಿತಃ ॥ ೩೮ ॥ ತ್ರಿಶಿರಾಶ್ಚ ಮಹಾವೀರ್ಯೋ ಮಯಾ ಬಾಣೈರಜಿಹ್ಮಗೈಃ । ಏತತ್ತದಾಶ್ರಮಪದಮಸ್ಮಾಕಂ ವರವರ್ಣಿನಿ! ॥ ೩೯ ॥ ಪರ್ಣಶಾಲಾ ತಥಾ ಚಿತ್ರಾ ದೃಶ್ಯತೇ ಶುಭದರ್ಶನಾ । ಯತ್ರ ತ್ವಂ ರಾಕ್ಷಸೇಂದ್ರೇಣ ರಾವಣೇನ ಹೃತಾ ಬಲಾತ್ ॥೪೦॥ ಏಷಾ ಗೋದಾವರೀ ರಮ್ಯಾ ಪ್ರಸನ್ನಸಲಿಲಾ ಶಿವಾ । ಅಗಸ್ತ್ಯಸ್ಯಾಶ್ರಮೋ ಹ್ಯೇಷ ದೃಶ್ಯತೇ ಪಶ್ಯ ಮೈಥಿಲಿ! । ದೀಪ್ತಶ್ಚೈವಾಶ್ರಮೋ ಹ್ಯೇಷಸ್ಸುತೀಕ್ಷ್ಣಸ್ಯ ಮಹಾತ್ಮನಃ ॥ ೪೧-೪೨ ॥ ವೈದೇಹಿ! ದೃಶ್ಯತೇ ಚಾಽತ್ರ ಶರಭಂಗಾಶ್ರಮೋ

ಸೀತಾದೇವಿಯೇ, ತತ್ರಜನಸ್ಥಾನೇ - ಅಂತಹ ಜನಸ್ಥಾನದಲ್ಲಿ, ಶ್ರೀಮಾ೯ - ಸಂಪದ್ಯುಕ್ತವಾದ, ವನಸ್ಪತಿಃ - ಗಿಡವು, ದೃಶ್ಯತೇ - ಕಾಣಲ್ಪಡುತ್ತದೆ. ॥ ೩೭-೩೮ ॥ ಯತ್ರ - ಯಾವ ಸ್ಥಳದಲ್ಲಿ, ಖರಃ - ಖರನು, ಮಯಾ - ನನ್ನಿಂದ, ಅಜಿಹ್ಮಗೈಃ - ಸರಿಯಾಗಿ ಲಕ್ಷ್ಯವನ್ನು ಭೇದಿಸುತ್ತಿರುವ, ಬಾಣೈಃ - ಬಾಣಗಳಿಂದ, ನಿಹತಃ - ಹೊಡೆಯಲ್ಪಟ್ಟನೋ, ದೂಷಣಶ್ಚ - ದೂಷಣನೂ ಕೂಡ, ನಿಪಾತಿತಃ - ಕೆಡವಲ್ಪಟ್ಟರೋ, ಮಹಾವೀರ್ಯಃ - ಮಹಾ ಸಾಮರ್ಥ್ಯವಂತನಾದ, ತ್ರಿಶಿರಾಶ್ಚ - ತ್ರಿಶಿರಸ್ಕನೂ, ನಿಪಾತಿತಃ - ನಾಶಗೊಳಿಸಲ್ಪಟ್ಟನೋ, ಹೇ ವರವರ್ಣಿನೀ - ಎಲೌ ಶ್ರೇಷ್ಠವಾದ ದೇಹಕಾಂತಿಯುಳ್ಳವಳೇ, ಅಸ್ಮಾಕಂ - ನಮ್ಮ, ತದಾಶ್ರಮಪದಂ - ಆ ಆಶ್ರಮದ ಸ್ಥಳವು, ಏತತ್ - ಇದು. ॥ ೩೯ ॥ ಯತ್ರ - ಯಾವ ಆಶ್ರಮದಲ್ಲಿ, ತ್ವಂ - ನೀನು, ಬಲಾತ್ - ಬಲಾತ್ಕಾರದಿಂದ, ರಾಕ್ಷಸೇಂದ್ರೇಣ - ರಕ್ಕಸರೊಡೆಯನಾದ, ರಾವಣೇನ - ರಾವಣನಿಂದ, ಹೃತಾ - ಅಪಹರಿಸಲ್ಪಟ್ಟೆಯೋ, ಸಾ - ಅಂಥಾ, ಶುಭದರ್ಶನಾ - ಶುಭಕರವಾದ ನೋಟವುಳ್ಳ, ತಥಾ - ಹಾಗೆಯೇ, ಚಿತ್ರಾ - ಆಶ್ಚರ್ಯಕರವಾದ, ಪರ್ಣಶಾಲಾ - ಪರ್ಣಶಾಲೆಯು, ದೃಶ್ಯತೇ - ಕಾಣಲ್ಪಡುತ್ತಿದೆ. ॥ ೪೦ ॥ ಪ್ರಸನ್ನಸಲಿಲಾ - ನಿರ್ಮಲವಾದ ಉದಕವುಳ್ಳ, ಶಿವಾ - ಶುಭಕರವಾದ, ರಮ್ಯಾ - ಇಂಪಾಗಿರುವ, ಗೋದಾವರೀ - ಗೋದಾವರಿಯು, ಏಷಾ - ಇದು, ಹೇ ಮೈಥಿಲಿ - ಎಲೌ ಸೀತಾದೇವಿಯೇ, ಅಗಸ್ತ್ಯಸ್ಯ - ಅಗಸ್ತ್ಯಖುಷಿಯ, ಆಶ್ರಮಃ - ಆಶ್ರಮವು, ಏಷಃ - ಇದು, ದೃಶ್ಯತೇಹಿ - ಕಾಣಲ್ಪಡುತ್ತದೆಯಷ್ಟೆ, ಪಶ್ಯ - ನೋಡು, ಮಹಾತ್ಮನಃ - ಮಹಾತ್ಮನಾದ, ಸುತೀಕ್ಷ್ಣಸ್ಯ - ಸುತೀಕ್ಷ್ಣಖುಷಿಯ, ದೀಪ್ತಃ - ಹೊಳೆಯುತ್ತಿರುವ, ಆಶ್ರಮಃ - ಆಶ್ರಮವು, ಏಷಃ - ಇದು. ॥ ೪೧-೪೨ ॥ ಹೇ ವೈದೇಹಿ - ಎಲೌ ಸೀತಾದೇವಿಯೇ, ಯತ್ರ - ಯಾವ ಶರಭಂಗಾಶ್ರಮದಲ್ಲಿ, ಸಹಸ್ರಾಕ್ಷಃ - ಸಹಸ್ರ ನೇತ್ರಗಳುಳ್ಳ, ಪುರಂದರಃ - ದೇವೇಂ

ಬಾಣಗಳಿಂದ ಖರದೂಷಣರೆಂಬ ದುರುಳ ರಾಕ್ಷಸರನ್ನೂ, ಮಹಾ ಪರಾಕ್ರಮಿಯಾದ ತ್ರಿಶಿರಸ್ಕನನ್ನೂ ಸಂಹರಿಸಿದುದು. ಎಲೆ ಸುಂದರಿ! ಅಲ್ಲಿ ಕಾಣುವುದೇ ನಮ್ಮ ಆಶ್ರಮಪದವು. ಅದೋ ಮಂಗಳಕರವಾದ ದರ್ಶನವುಳ್ಳ ನಮ್ಮ ಪರ್ಣಶಾಲೆಯು ಅಲ್ಲಿ ಕಾಣುತ್ತಿರುವುದು. ರಾಕ್ಷಸರಾಜನಾದ ರಾವಣಾಸುರನು ನಿನ್ನನ್ನು ಈ ಪರ್ಣಶಾಲೆಯಿಂದಲೇ ಬಲಾತ್ಕಾರದಿಂದ ಕೊಂಡೊಯ್ದುದು. ಇತ್ತನೋಡು ಮನೋಹರವೂ, ನಿರ್ಮಲೋದಕಭರಿತವೂ ಆದ ಗೋದಾವರೀನದಿಯು ಇಲ್ಲಿ ಕಾಣುತ್ತಿರುವುದು. ಇದು ಮಹಾ ಪುಣ್ಯಕರವಾದುದು. ॥ ೩೭-೪೧ ॥ ಬಾಳೆಯಿಂದ ಸುತ್ತುಬಳಸಿದ ಈ ಆಶ್ರಮವೇ ಅಗಸ್ತ್ಯಮಹರ್ಷಿಗಳದು. (ಮಹಾತ್ಮನಾದ ಸುತೀಕ್ಷ್ಣಮುನಿಯ ಆಶ್ರಮವಿದು.) ಅದೋ; ಅತ್ತನೋಡು ಜಾನಕಿ! ಅಲ್ಲಿ ಕಾಣುತ್ತಿರುವುದು ಶರಭಂಗಾಶ್ರಮವು. ಹಿಂದೆ ಈ ಆಶ್ರಮದಲ್ಲಿಯೇ ದೇವೇಂದ್ರನು ನನಗೆ

ಮುಹರ್ನ | ಉಪಯಾತಸ್ಸಹಸ್ರಾಕ್ಷೋ ಯತ್ರ ಶಕ್ರಃ ಪುರಂದರಃ || ೪೩ || ತಸ್ಮಿ ದೇಶೇ ಮಹಾಕಾಯೋ ವಿರಾಧೋ ನಿಹತೋ ಮಯಾ | ಏತೇಹಿ ತಾಪಸಾವಾಸಾ ದೃಶ್ಯಂತೇ ತನುಮಧ್ಯಮೇ! || ೪೪ || ಅತ್ರಿಃ ಕುಲಪತಿರ್ಯತ್ರ ಸೂರ್ಯವೈಶ್ವಾನರ ಪ್ರಭಃ | ಅತ್ರ ಸೀತೇ! ತ್ವಯಾ ದೃಷ್ಟಾ ತಾಪಸೀ ಧರ್ಮಚಾರಿಣೀ || ೪೫ || ಅಸೌ ಸುತನು! ಶೈಲೇಂದ್ರಶ್ಚಿತ್ರಕೂಟಃ ಪ್ರಕಾಶತೇ | ಯತ್ರ ಮಾಂ ಕೈಕಯೀಪುತ್ರಃ ಪ್ರಸಾದಯಿತುಮಾಗತಃ || ೪೬ || ಏಷಾ ಸಾ ಯಮುನಾ ದೂರಾದ್ದೃಶ್ಯತೇ ಚಿತ್ರ ಕಾನನಾ | ಭರದ್ವಾಜಾಶ್ರಮೋ ಯತ್ರ ಶ್ರೀಮಾನೇಷ ಪ್ರಕಾಶತೇ || ೪೭ || ಏಷಾ

ಮ್ರನು, ಉಪಯಾತಃ - ಬಂದನೋ, ಸಃ - ಅಂಥಾ, ಮಹತ್ - ದೊಡ್ಡದಾದ, ಶರಭಂಗಾಶ್ರಮಃ - ಶರಭಂಗಋಷಿಯ ಆಶ್ರಮವು, ದೃಶ್ಯತೇ - ಕಾಣಲ್ಪಡುತ್ತದೆ. || ೪೩ || ಅಸ್ಮಿನ್ದೇಶೇ - ಈ ಪ್ರದೇಶದಲ್ಲಿ, ಮಹಾಕಾಯಃ - ದೊಡ್ಡ ಶರೀರವುಳ್ಳ, ವಿರಾಧಃ - ವಿರಾಧನು, ಮಯಾ - ನನ್ನಿಂದ, ನಿಹತಃ - ಹೊಡೆಯಲ್ಪಟ್ಟನು, ಹೇ ತನುಮಧ್ಯಮೇ - ಎಲೈ ಸೂಕ್ಷ್ಮವಾದ ಮಧ್ಯಪ್ರದೇಶವುಳ್ಳವಳೇ, ಏತೇ - ಈ, ತಾಪಸಾವಾಸಾಃ - ಋಷಿಗಳ ಆಶ್ರಮಗಳು, ದೃಶ್ಯಂತೇ - ಕಾಣಲ್ಪಡುತ್ತಿವೆ, ಯತ್ರ - ಯಾವ ಸ್ಥಳದಲ್ಲಿ, ಸೂರ್ಯ....ಭಃ - ಸೂರ್ಯನಿಗೂ, ಅಗ್ನಿಗೂ ಸಮಾನವಾದ ಕಾಂತಿಯುಳ್ಳ, ಕುಲಪತಿಃ - ಋಷಿಕುಲಗಳಿಗೆಲ್ಲಾ ಅಧಿಪತಿಯಾದ, ಅತ್ರಿಃ - ಅತ್ರಿಋಷಿಯು, ಅಸ್ತಿ - ಇದ್ದಾನೆಯೋ, ಹೇ ಸೀತೇ - ಎಲೌ ಸೀತಾದೇವಿಯೇ, ಅತ್ರ - ಈ ಅತ್ರ್ಯಾಶ್ರಮದಲ್ಲಿ, ತ್ವಯಾ - ನಿನ್ನಿಂದ, ಧರ್ಮಚಾರಿಣೀ - ಧರ್ಮಾನುಷ್ಠಾನದಲ್ಲಿಯೇ ಆಸಕ್ತಳಾದ, ತಾಪಸೀ - ತಪೋವಂತಳಾದ ಅನಸೂಯಾದೇವಿಯು, ದೃಷ್ಟಾ - ಕಾಣಲ್ಪಟ್ಟಳು. || ೪೪-೪೫ || ಹೇ ಸುತನು - ಎಲೌ ಸೂಕ್ಷ್ಮವಾದ ಶರೀರವುಳ್ಳವಳೇ, ಯತ್ರ - ಯಾವ ಚಿತ್ರಕೂಟದಲ್ಲಿ, ಕೈಕೇಯೀಪುತ್ರಃ - ಭರತನು, ಮಾಂ - ನನ್ನನ್ನು, ಪ್ರಸಾದಯಿತುಂ - ಪ್ರಸನ್ನನಾಗಿ ಮಾಡಿಕೊಳ್ಳಲು, ಆಗತಃ - ಬಂದನೋ, ಅಸೌ - ಈ, ಚಿತ್ರಕೂಟಃ - ಚಿತ್ರಕೂಟವೆಂಬ, ಶೈಲೇಂದ್ರಃ - ಶ್ರೇಷ್ಠವಾದ ಬೆಟ್ಟವು, ಪ್ರಕಾಶತೇ - ಕಂಗೊಳಿಸುತ್ತಲಿದೆ. || ೪೬ || ಚಿತ್ರಕಾನನಾ - ಶುಭಕರವಾದ ವನಗಳುಳ್ಳ, ಸೈಷಾ - ಆ ಈ, ಯಮುನಾ - ಯಮುನಾನದಿಯು, ದೂರಾತ್ - ದೂರದಲ್ಲಿ, ದೃಶ್ಯತೇ - ಕಾಣಲ್ಪಡುತ್ತದೆ, ಯತ್ರ - ಯಾವ ಸ್ಥಳದಲ್ಲಿ, ಶ್ರೀಮಾನ್ - ಸಂಪದ್ಯುಕ್ತವಾದ, ಏಷಭರದ್ವಾಜಾಶ್ರಮಃ - ಈ ಭರದ್ವಾಜ ಋಷಿಯ ಆಶ್ರಮವು, ಪ್ರಕಾಶತೇ - ಹೊಳೆಯುತ್ತಿದೆಯೋ. || ೪೭ || ಹೇ ವರವರ್ಣಿನೀ - ಎಲೌ ಉತ್ತಮ ಸ್ತ್ರೀಯೇ, ನಾನಾ....ರ್ಣಾ - ಅನೇಕ ಬಗೆಗಳಾದ ಪಕ್ಷಿಗಳ

ದರುಶನವನ್ನಿತ್ತುದು. ದೇವಿ! ಪೂಜ್ಯರಾದ ತಪಸ್ವಿಗಳೆಲ್ಲರೂ ಅಲ್ಲಿ ಕಾಣುತ್ತಿರುವುದನ್ನು ನೋಡು. ಜಾನಕಿ! ಸೂರ್ಯನಿಗೂ, ಯಜ್ಞೇಶ್ವರನಿಗೂ ಸಮಾನನಾಗಿ ಕುಲಪತಿಯೂ ಆದ ಅತ್ರಿಮುನಿಯ ಆಶ್ರಮವಿದು. ಇಲ್ಲಿಯೇ ನೀನು ಮಹಾ ಪತಿವ್ರತಾಶಿರೋಮಣಿಯಾದ ಅನಸೂಯಾದೇವಿಯನ್ನು ಸಂದರ್ಶಿಸಿದುದು. ಇದೇ ಚಿತ್ರಕೂಟಪರ್ವತವು. ಇದು ಬಹು ರಮಣೀಯವಾಗಿ ರಾರಾಜಿಸುತ್ತಿರುವುದು. ದೇವಿ! ಕೈಕೇಯಿಯ ಮಗನಾದ ಭರತಕುಮಾರನು ನನ್ನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಲು ಬಂದಿದ್ದುದು ಈ ಪ್ರದೇಶದಲ್ಲಿಯೇ. ಸೊಗಸಾದ ವನೋಪವನಗಳಿಂದ ಸುತ್ತುವರೆದು ಇಲ್ಲಿ ಕಾಣುತ್ತಿರುವುದೇ ಸುಂದರವಾದ ಯಮುನಾ ನದಿಯು. || ೪೩-೪೭ || ಮೈಥಿಲಿ! ಅದೋ ಮಹಾ ಕಾಂತಿಸಂಪನ್ನವಾದ ಭರದ್ವಾಜಾಶ್ರಮವು. ಅನೇಕ ಪಕ್ಷಿಸಮೂಹಗಳಿಂದಲೂ, ಕುಸುಮಿಸಿರುವ ಉಪವನಗಳಿಂದಲೂ,

ತ್ರಿಪಥಗಾ ಗಂಗಾ ದೃಶ್ಯತೇ ವರವರ್ಣಿನಿ! । ನಾನಾದ್ವಿಜಗಣಾಕೀರ್ಣಾ ಸಂಪ್ರ
ಪುಷ್ಪಿತಕಾನನಾ ॥ ೪೮ ॥ ಶೃಂಗಿಬೇರಪುರಂ ಚೈತದ್ಗುಹೋ ಯತ್ರ ಸಮಾಗತಃ ।
ಏಷಾ ಸಾ ದೃಶ್ಯತೇ ಸೀತೇ ಸರಯೂರ್ಯೂಪಮಾಲಿನೀ ॥ ೪೯ ॥ ನಾನಾತರುಶತಾ
ಕೀರ್ಣಾ ಸಂಪ್ರಪುಷ್ಪಿತಕಾನನಾ । ಏಷಾ ಸಾ ದೃಶ್ಯತೇಽಯೋಧ್ಯಾ ರಾಜಧಾನೀ
ಪಿತುರ್ಮಮ ॥ ೫೦ ॥ ಅಯೋಧ್ಯಾಂ ಕುರು ವೈದೇಹಿ ಪ್ರಣಾಮಂ ಪುನರಾಗತಾ" ।
ತತಸ್ತೇ ವಾನರಾಸ್ಸರ್ವೇ ರಾಕ್ಷಸಶ್ಚ ವಿಭೀಷಣಃ । ಉತ್ಪತ್ಯೋತ್ಪತ್ಯ ದದೃಶು ಸ್ತಾಂ
ಪುರೀಂ ಶುಭದರ್ಶನಾಂ ॥ ೫೧ ॥

ತಂಡಗಳಿಂದ ತುಂಬಿರುವ, ಸಂಪ್ರ....ನಾ - ಚನ್ನಾಗಿ ಹೂವು ಬಿಟ್ಟಿರುವ ವನಗಳುಳ್ಳ, ತ್ರಿಪಥಗಾ - ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಮಾರ್ಗಗಳಲ್ಲಿಯೂ ಹೋಗುತ್ತಿರುವ, ಏಷಾಗಂಗಾ - ಈ ಗಂಗಾನದಿಯು, ದೃಶ್ಯತೇ - ಕಾಣಲ್ಪಡುತ್ತದೆ. ॥೪೮॥ ಯತ್ರ - ಯಾವ ಸ್ಥಳದಲ್ಲಿ, ಗುಹಃ - ಗುಹನು, ಸಮಾಗತಃ - ಬಂದನೋ, ಏತತ್ - ಇದು, ಶೃಂಗೀಬೇರಪುರಂ - ಶೃಂಗೀಬೇರಪುರವೆಂಬ ಗುಹನ ಪಟ್ಟಣವು, ಯೂಪಮಾಲಿನೀ - ಯೂಪಸ್ತಂಭಗಳ ಪಂಕ್ತಿಯುಳ್ಳ, ನಾನಾ....ರ್ಣಾ - ಅನೇಕ ಬಗೆ ಗಳಾದ ನೂರಾರು ಗಿಡಗಳಿಂದ ತುಂಬಿರುವ, ಸಂಪ್ರ....ನಾ - ಅರಳಿದ ಹೂಗಳ ವನಗಳುಳ್ಳ, ಏಷಾ ಸರಯೂಃ - ಆ ಈ ಸರಯೂ ನದಿಯು, ದೃಶ್ಯತೇ - ಕಾಣಲ್ಪಡುತ್ತದೆ, ಮಮ - ನನ್ನ, ಪಿತುಃ - ತಂದೆ ಯಾದ ದಶರಥರಾಜನಿಗೆ, ರಾಜಧಾನೀ-ಪ್ರಧಾನನಗರವಾದ, ಸೈಷಾಅಯೋಧ್ಯಾ - ಆ ಈ ಅಯೋಧ್ಯಾ ಪಟ್ಟಣವು, ದೃಶ್ಯತೇ - ಕಾಣಲ್ಪಡುತ್ತದೆ. ॥ ೪೯-೫೦ ॥ ಹೇ ವೈದೇಹಿ - ಎಲೌ ಸೀತಾದೇವಿಯೇ, ಪುನರಾಗತಾ - ಹಿಂತಿರುಗಿ ಬಂದ ನೀನು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪ್ರಣಾಮಂ - ನಮಸ್ಕಾರವನ್ನು, ಕುರು - ಮಾಡು, ತತಃ - ಬಳಿಕ, ತೇವಾನರಾಃ - ಆ ಕಪಿಗಳು, ಸರ್ವೇ - ಸಮಸ್ತರು, ರಾಕ್ಷಸಃ - ರಕ್ಕಸನಾದ, ವಿಭೀಷಣಶ್ಚ - ವಿಭೀಷಣನೂ, ಉತ್ಪತ್ಯೋತ್ಪತ್ಯ - ಮೇಲಕ್ಕೆ ಎದ್ದು, ಶುಭದರ್ಶನಾಂ - ಶುಭಕರವಾದ ನೋಟವುಳ್ಳ, ತಾಂಪುರೀಂ - ಆ ಪಟ್ಟಣ ವನ್ನು, ದದೃಶುಃ - ಕಂಡರು. ॥ ೫೧ ॥ ತತಃ - ಬಳಿಕ, ಪ್ಲವಂಗಮಾಸ್ತು - ಕಪಿಗಳಾದರೆ,

---

ವಿರಾಜಿಸುತ್ತಿರುವ ಇದೇ ಪರಮಪವಿತ್ರವೂ, ಸ್ವರ್ಗ ಮರ್ತ್ಯ ಪಾತಾಳಗಾಮಿನಿಯೂ ಆದ ಗಂಗಾನದಿಯು. ಇದೇ ಶೃಂಗಬೇರಪುರವು. ಇಲ್ಲಿಯೇ ನನ್ನ ಮಿತ್ರನಾದ ಗುಹನೆಂಬ ಬೇಡರೊಡೆಯನು ವಾಸಿಸುತ್ತಿರುವುದು. ಯೂಪಮಾಲಿನಿಯಾದ ಸರಯೂನದಿಯು ಇದೋ ಅಲ್ಲಿ ಕಾಣುತ್ತಿರುವುದು. ಅದರ ತೀರದಲ್ಲಿ ಚೆನ್ನಾಗಿ ಹೂ ಬಿಟ್ಟಿರುವ ಅನೇಕ ಸಹಸ್ರ ತರುತತಿಯು ವಿರಾಜಿಸುತ್ತಿರುವುದು. ಸೀತೇ! ಇದೋ, ನಮ್ಮ ತಂದೆಯಾದ ದಶರಥರಾಯನ ರಾಜಧಾನಿಯಾದ ಅಯೋಧ್ಯೆ. ನೋಡು. ಜಾನಕಿ! ಅರಣ್ಯವಾಸ ದಿಂದ ಹಿಂತಿರುಗಿ ಬಂದ ನೀನು ಈಗ ಅಯೋಧ್ಯೆಗೆ ನಮಸ್ಕರಿಸು" ಎಂದು ಹೇಳಿದನು. ಶ್ರೀರಾಮಮೂರ್ತಿಯು ಅಯೋಧ್ಯಾಪಟ್ಟಣವನ್ನು ತೋರಿದೊಡನೆಯೇ ವಾನರರೂ, ವಿಭೀ ಷಣನೊಡಗೂಡಿದ ರಾಕ್ಷಸರೂ ತಂತಮ್ಮ ಸ್ಥಳಗಳಿಂದೆದ್ದು ಆ ಪಟ್ಟಣವನ್ನು ನೋಡಿ

ತತಸ್ತು ತಾಂ ಪಾಂಡುರಹರ್ಮ್ಯಮಾಲಿನೀಂ
ವಿಶಾಲಕಕ್ಷ್ಯಾಂ ಗಜವಾಜಿಸಂಕುಲಾಂ ।
ಪುರೀಮಯೋಧ್ಯಾಂ ದದೃಶುಃ ಪ್ಲವಂಗಮಾಃ
ಪುರೀಂ ಮಹೇಂದ್ರಸ್ಯ ಯಥಾಮರಾವತೀಂ ॥ ೫೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡ್ವಿಂಶತ್ಯುತ್ತರಶತತಮಸ್ಸರ್ಗಃ

ಮಹೇಂದ್ರಸ್ಯ - ದೇವೇಂದ್ರನ, ಅಮರಾವತೀಂಪುರೀಂಯಥಾ - ಅಮರಾವತೀ ಪಟ್ಟಣದಂತಿರುವ, ಪಾಂಡು....ನೀಂ - ಬೆಳ್ಳಗಿರುವ ಪ್ರಾಸಾದ ಪಂಗ್ತಿಗಳುಳ್ಳ, ವಿಶಾಲಕಕ್ಷ್ಯಾಂ - ವಿಸ್ತಾರವಾದ ತೊಟ್ಟಿಗಳುಳ್ಳ, ಗಜವಾಜಿಸಂಕುಲಾಂ - ಆನೆಗಳಿಂದಲೂ, ಕುದುರೆಗಳಿಂದಲೂ ಸಂಪೂರ್ಣವಾದ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ದದೃಶುಃ - ಕಂಡರು. ॥ ೫೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಷಡ್ವಿಂಶತ್ಯುತ್ತರಶತತಮಸ್ಸರ್ಗಃ.

ಆನಂದಿಸಿದರು. ಮಹದಾನಂದಭರಿತರಾದ ಆ ವಾನರರಾಕ್ಷಸರೆಲ್ಲರೂ, ಸುಧಾಲೇಪನದಿಂದ ಬೆಳ್ಳಗೆ ಬೆಳಗುತ್ತಿರುವ ಉಪ್ಪರಿಗೆಯ ಮನೆಗಳ ಸಾಲುಗಳಿಂದಲೂ, ಅನೇಕ ಪ್ರಾಕಾರಗಳಿಂದಲೂ, ಆನೆ ಕುದುರೆಗಳಿಂದಲೂ ತುಂಬಿ ತುಳುಕುತ್ತಿರುವ ಆ ಪಟ್ಟಣವನ್ನು ದೇವೇಂದ್ರನ ಅಮರಾವತಿಯನ್ನೋಪಾದಿಯಲ್ಲಿ ಕಂಡು ಆನಂದಭರಿತರಾದರು. ॥ ೪೮-೫೨ ॥

ಇಂತಿದು ಶ್ರೀರಾಮಕೃತ ತತ್ತದ್ದೇಶ ಪ್ರದರ್ಶನ ವೃತ್ತಾಂತ ನಿರೂಪಣವೆಂಬ
ನೂರಇಪ್ಪತ್ತಾರನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಸಪ್ತವಿಂಶತ್ಯುತ್ತರಶತತಮಸ್ಸರ್ಗಃ

† ಪೂರ್ಣೇ ಚತುರ್ದಶೇ ವರ್ಷೇ ಪಂಚಮ್ಯಾಂ ಲಕ್ಷ್ಮಣಾಗ್ರಜಃ । ಭರದ್ವಾಜಾಶ್ರಮಂ ಪ್ರಾಪ್ಯ ವವಂದೇ ನಿಯತೋ ಮುನಿಂ ॥ ೧ ॥ ಸೋಽಪೃಚ್ಛದಭಿವಾದ್ಯೈನಂ ಭರದ್ವಾಜಂ ತಪೋಧನಂ । "ಶೃಣೋಷಿ ಕಚ್ಚಿದ್ಭಗವನ್! ಸುಭಿಕ್ಷಾನಾಮಯಂ ಪುರೇ । ಕಚ್ಚಿಚ್ಚ ಯುಕ್ತೋ ಭರತೋ ಜೀವಂತ್ಯಪಿಚ ಮಾತರಃ" । ಏವಮುಕ್ತಸ್ತು ರಾಮೇಣ ಭರದ್ವಾಜೋ ಮಹಾಮುನಿಃ ॥ ೨-೩ ॥ ಪ್ರತ್ಯುವಾಚ ರಘುಶ್ರೇಷ್ಠಂ

ಚತುರ್ದಶೇವರ್ಷೇ - ಹದಿನಾಲ್ಕನೆಯ ವರುಷವು, ಪೂರ್ಣೇ - ತುಂಬಲು, ಪಂಚಮ್ಯಾಂ - ಪಂಚಮಿ ದಿವಸದಲ್ಲಿ, ಲಕ್ಷ್ಮಣಾಗ್ರಜಃ - ಶ್ರೀರಾಮನು, ನಿಯತಃ - ನಿಯಮಪರನಾಗಿ, ಭರದ್ವಾಜಾಶ್ರಮಂ - ಭರದ್ವಾಜ ಋಷಿಯ ಆಶ್ರಮವನ್ನು, ಪ್ರಾಪ್ಯ - ಹೊಂದಿ, ಮುನಿಂ - ಭರದ್ವಾಜರನ್ನು, ವವಂದೇ - ಅಭಿವಂದಿಸಿದನು. ॥ ೧ ॥ ಸಃ - ಆ ಶ್ರೀರಾಮನು, ತಪೋಧನಂ - ತಪಸ್ಸೇ ಧನವಾಗುಳ್ಳ, ಏನಂಭರದ್ವಾಜಂ - ಈ ಭರದ್ವಾಜಋಷಿಯನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ಅಪೃಚ್ಛತ್ - ಕೇಳಿದನು, ಹೇ ಭಗವನ್ - ಎಲೈ ಪೂಜ್ಯನೇ, ಪುರೇ - ಅಯೋಧ್ಯಾಪಟ್ಟಣದಲ್ಲಿ, ಸುಭಿಕ್ಷಾನಾಮಯಂ - ಸುಭಿಕ್ಷವನ್ನೂ, ಆರೋಗ್ಯವನ್ನು, ಶೃಣೋಷಿಕಚ್ಚಿತ್ - ಕೇಳಿರುವೆಯೋ, ಭರತಃ - ಭರತನು, ಯುಕ್ತಃಕಚ್ಚಿತ್ - ಪ್ರಜಾಪರಿಪಾಲನದಲ್ಲಿ ಜಾಗರೂಕನಾಗಿದ್ದಾನೆಯಷ್ಟೆ, ಮಾತರಃ - ತಾಯಿಯರು, ಜೀವಂತ್ಯಪಿಚ - ಬದುಕಿದ್ದಾರೆಯೇ, ಇತಿ - ಇಂತೆಂದು, ಅಬ್ರವೀತ್ - ಶ್ರೀರಾಮನು ನುಡಿದನು. ॥ ೨ ॥ ಏವಂ - ಈ ಪರಿಯಾಗಿ, ರಾಮೇಣ - ಶ್ರೀರಾಮನಿಂದ, ಉಕ್ತಃ - ಹೇಳಲ್ಪಟ್ಟ, ಭರದ್ವಾಜಃ - ಭರದ್ವಾಜನೆಂಬ, ಮಹಾಮುನಿಃ - ಮಹರ್ಷಿಯು, ರಘುಶ್ರೇಷ್ಠಂ - ರಘುಕುಲೋತ್ತಮನಾದ ಶ್ರೀರಾಮನನ್ನು ಕುರಿತು, ಪ್ರಹೃಷ್ಟವತ್ - ಸಂತೋಷಗೊಂಡವನಾಗಿ, ಸ್ಮಿತಪೂರ್ವಂ -

---

ಆ ತರುವಾಯ ಲಕ್ಷ್ಮಣಾಗ್ರಜನಾದ ಶ್ರೀರಾಮಚಂದ್ರನು ಹದಿನಾಲ್ಕು ಸಂವತ್ಸರಗಳು ಕಳೆದ ಬಳಿಕ ಪಂಚಮಿ ದಿನದಲ್ಲಿ ಭರದ್ವಾಜಾಶ್ರಮವನ್ನು ಪ್ರವೇಶಿಸಿ ಆತನನ್ನು ಕಂಡು ನಮಸ್ಕರಿಸಿದನು. ಹೀಗೆ ನಮಸ್ಕರಿಸಿದ ತರುವಾಯ ಆತನು ಆ ಮುನಿಯನ್ನು ಕುರಿತು, ಮುನಿಕುಲೋತ್ತಮನೇ! ಅಯೋಧ್ಯಾಪಟ್ಟಣದಲ್ಲಿರುವವರೆಲ್ಲರಿಗೂ ಸುಭಿಕ್ಷವಾಗಿರುವುದೇ? "ಎಲೈ ಭರತಕುಮಾರನು ಕ್ಷೇಮವಾಗಿರುವನೇ?" ಎಂದನು. ಶ್ರೀರಾಮನಾಡಿದ ಈ ಮಾತುಗಳನ್ನು ಕೇಳಿ ಮಹಾತ್ಮನಾದ ಭರದ್ವಾಜ ಮುನಿಯು ಮಹದಾನಂದಭರಿತನಾಗಿ ನಸುನಗುತ್ತ

---

† ಶ್ರೀರಾಮಚಂದ್ರನು ಚೈತ್ರ ಶುದ್ಧ ಪಂಚಮಿಯಲ್ಲಿಯೇ ಭರದ್ವಾಜಾಶ್ರಮ ಪ್ರವೇಶ ಮಾಡಿದನೆಂಬ ವಿಷಯದಲ್ಲಿ ವ್ಯಾಖ್ಯಾನಕಾರರು ಹೀಗೆ ಹೇಳಿರುವರು. ಶ್ರೀರಾಮನು ಚೈತ್ರ ಶುಕ್ಲ ಪಂಚಮಿ ದಿನದಲ್ಲಿ ಅರಣ್ಯವಾಸಕ್ಕಾಗಿ ಅಯೋಧ್ಯಾಪಟ್ಟಣದಿಂದ ಹೊರಟು, ಆ ರಾತ್ರಿಯಲ್ಲಿ ತಮಸಾನದೀತೀರದಲ್ಲಿ ತಂಗಿದ್ದು ಷಷ್ಠೀ ದಿನ ಶೃಂಗಿಬೇರಪುರದಲ್ಲಿ ವಾಸ ಮಾಡಿ, ಸಪ್ತಮಿಯಲ್ಲಿ ವಟವೃಕ್ಷದ ಕೆಳಗೆ ನಿಂತನು. ಆಮೇಲೆ ಅಷ್ಟಮಿ ದಿನ ಭರದ್ವಾಜಾಶ್ರಮದಲ್ಲಿಯೂ, ನವಮಿಯಲ್ಲಿ ಯಮುನಾನದೀತೀರದಲ್ಲಿಯೂ, ದಶಮಿಯಲ್ಲಿ ಚಿತ್ರಕೂಟಪರ್ವತದಲ್ಲಿಯೂ ಇದ್ದನು. ಅದೇ ದಿವಸವೇ ಸುಮಂತ್ರನು ಈ ವೃತ್ತಾಂತವನ್ನು ಗುಹನ ಚಾರರ ಮೂಲಕ ತಿಳಿದು ಸಾಯಂಕಾಲದಲ್ಲಿ ಅಯೋಧ್ಯಾಪಟ್ಟಣವನ್ನು

ಸೇರಿದನು. ಅದೇ ದಶಮಿಯ ರಾತ್ರಿಯೇ ದಶರಥನ ನಿರ್ಯಾಣ. ಏಕಾದಶಿಯಲ್ಲಿ ಎಣ್ಣೆಯ ದೋಣಿಯಲ್ಲಿ ಅವನ ಕಳೇಬರ ನಿವೇಶನ. ದ್ವಾದಶಿಯಲ್ಲಿ ಭರತನನ್ನು ಕುರಿತು ದೂತರನ್ನು ಕಳುಹಿಸುವಿಕೆಯೂ ನಡೆದವು. ಆ ದೂತರು ತ್ರಯೋದಶೀ ಮತ್ತು ಚತುರ್ದಶೀ ದಿನಗಳಲ್ಲಿ ಪ್ರಯಾಣ ಮಾಡಿ, ಹುಣ್ಣಿಮೆಯ ಸಾಯಂಕಾಲಕ್ಕೆ ಕೇಕಯರಾಜನ ಪಟ್ಟಣವನ್ನು ಸೇರಿದರು. ಕೃಷ್ಣಪಕ್ಷದ ಪಾಡ್ಯಮಿ ದಿನದಲ್ಲಿ ಭರತನು ಅಯೋಧ್ಯಾಪಟ್ಟಣವನ್ನು ಕುರಿತು ಪ್ರಯಾಣ ಮಾಡಿ ಏಳು ರಾತ್ರಿಗಳು ಮಾರ್ಗದಲ್ಲಿದ್ದು, ಅಷ್ಟಮಿ ದಿನ ಅತಿ ತ್ವರೆಯಾಗಿ ಬಂದು, ನವಮಿ ದಿನದಲ್ಲಿ ಸೂರ್ಯೋದಯ ಕಾಲದಲ್ಲಿ ಅಯೋಧ್ಯಾಪಟ್ಟಣವನ್ನು ಸೇರಿದನು. ಅದೇ ದಿನವೇ ದಶರಥನಿಗೆ ಸಂಸ್ಕಾರವು ಪ್ರಾರಂಭವಾಗಿ ಆ ದಿನ ಮೊದಲ್ಗೊಂಡು ಹದಿಮೂರನೆಯ ದಿನವಾದ ವೈಶಾಖ ಶುದ್ಧ ಪಂಚಮಿ ತಿಥಿಯಲ್ಲಿಯೂ, ಅದಕ್ಕೆ ಹಿಂದಿನ ದಿನದಲ್ಲಿಯೂ ಸಹ ಭರತನಿಂದ ಶ್ರಾದ್ಧ ಕರ್ಮಗಳು ಮಾಡಲ್ಪಟ್ಟವು. ಷಷ್ಠಿಯಲ್ಲಿ ಆ ದೇಶಾಚಾರಕ್ಕನುಗುಣವಾಗಿ ದಹನ ದೇಶ ಶೋಧನೆಯಾಯಿತು. ಸಪ್ತಮಿಯಲ್ಲಿ ಮಾರ್ಗವನ್ನು ಶೋಧಿಸುವುದಕ್ಕಾಗಿ ಕೆಲಸಗಾರರನ್ನು ಕಳುಹಿಸಿದನು. ಅವರಿಂದ ದಶಮಿ ಪರ್ಯಂತ ನಾಲ್ಕು ದಿನಗಳು ದಾರಿಯು ಸರಿಮಾಡಲ್ಪಟ್ಟಿತು. ಏಕಾದಶಿಯಲ್ಲಿ ಭರತನು ರಾಮನ ಸನ್ನಿಧಾನವನ್ನು ಕುರಿತು ತೆರಳಿ, ಆ ರಾತ್ರಿಯೇ ಗಂಗಾತೀರದಲ್ಲಿ ವಾಸಿಸಿ ದ್ವಾದಶಿಯ ದಿನ ಭರದ್ವಾಜಾಶ್ರಮವನ್ನು ಸೇರಿ ತ್ರಯೋದಶಿಯಲ್ಲಿ ರಾಮನನ್ನು ನೋಡಿದ ಬಳಿಕ ಮೂರು ದಿನಗಳು ಆ ಚಿತ್ರಕೂಟಪರ್ವತದಲ್ಲಿದ್ದು, ವೈಶಾಖ ಬಹುಳ ಬಿದಿಗೆಯ ದಿನ ಅಯೋಧ್ಯಾಪಟ್ಟಣವನ್ನು ಕುರಿತು ಹಿಂತಿರುಗಿ ಚತುರ್ಥಿಯ ದಿನ ಪುರಪ್ರವೇಶ ಮಾಡಿದನು. ಈ ಪ್ರಕಾರವಾಗಿ ಒಂದೂವರೆ ತಿಂಗಳು ಕಳೆದ ಮೇಲೆ ವೈಶಾಖ ಬಹುಳ ಪಂಚಮಿ ತಿಥಿಯಲ್ಲಿ ಶ್ರೀರಾಮಚಂದ್ರನು ಚಿತ್ರಕೂಟ ಪರ್ವತದಿಂದ ಹೊರಟು ಅತ್ರ್ಯಾಶ್ರಮವನ್ನು ಪ್ರವೇಶಿಸಿದನು. ಈ ಪ್ರಕಾರವಾಗಿ ಮುನಿಗಳ ಆಶ್ರಮಗಳ ಸಮೂಹದಲ್ಲಿ ವಾಸಿಸುವಾಗ ಹತ್ತು ವರ್ಷ ಒಂದೂವರೆ ತಿಂಗಳು ಕಳೆಯಿತು. ಉಳಿದ ಕಾಲದಲ್ಲಿ ಪಂಚವಟೀತೀರದಲ್ಲಿ ವಾಸಿಸುವಾಗ ಹದಿಮೂರು ವರುಷಗಳು ಕಳೆದ ತರುವಾಯ ಹದಿನಾಲ್ಕನೆಯ ವರುಷದ ಚೈತ್ರ ಮಾಸದಲ್ಲಿ ಸೀತಾಪಹರಣವೂ, ವೈಶಾಖ ಮಾಸದಲ್ಲಿ ಸುಗ್ರೀವ ಸಂದರ್ಶನವೂ, ಆಷಾಢ ಮಾಸದಲ್ಲಿ ವಾಲಿವಧೆಯೂ ನಡೆಯಿತು. ಆಶ್ವೀಜ ಮಾಸದಲ್ಲಿ ಸೀತಾನ್ವೇಷಣಾರ್ಥವಾಗಿ ವಾನರರು ತೆರಳಿ, ಸ್ವಯಂಪ್ರಭೆಯ ವನದಲ್ಲಿರುವಾಗ ವಸಂತಋತುವಿಗೆ ಆದಿಯಾದ ಫಾಲ್ಗುಣ ಮಾಸವು ಹುಟ್ಟಿ, ಆ ಫಾಲ್ಗುಣ ಶುದ್ಧ ತ್ರಯೋದಶಿಯ ಸಾಯಂಕಾಲದಲ್ಲಿ ಹನುಮಂತನು ಲಂಕಾಪಟ್ಟಣವನ್ನು ಸೇರಿ ಆ ದಿನವೇ ಸೀತಾದೇವಿಯನ್ನು ಹುಡುಕಿ ದರ್ಶನ ಮಾಡಿ ಮರುದಿನ ಬೆಳಿಗ್ಗೆ ಲಂಕಾಪಟ್ಟಣವನ್ನು ಸುಟ್ಟು ಕೂಡಲೇ ಅಲ್ಲಿಂದ ತೆರಳಿ ಮಧ್ಯಾಹ್ನಕ್ಕೆ ಮೊದಲೇ ಮಧುವನ ಭಂಗ ಮಾಡಿ, ಶ್ರೀರಾಮನ ಬಳಿಸಾರಿ, ಆ ಚತುರ್ದಶಿಯೊಡಗೂಡಿದ ಪೌರ್ಣಮಿಯ ದಿನದಲ್ಲಿಯೇ ಮಧ್ಯಾಹ್ನ ಶ್ರೀರಾಮಚಂದ್ರನು ಸಮಸ್ತ ವಾನರಸೇನೆಗಳೊದಲೂ, ಅಭಿಜಿನ್ಮುಹೂರ್ತದಲ್ಲಿ ಹೊರಟು, ಪ್ರಾತಃಕಾಲಕ್ಕೆ ಸರಿಯಾಗಿ, ಸಮುದ್ರತೀರವನ್ನು ಸೇರಿದನು. ಅತ್ತಕಡೆ ಲಂಕಾದಹನವಾದ ದಿನದಲ್ಲಿ ರಾವಣನು ಮಂತ್ರಿಗಳೊಡನೆ ಯೋಚಿಸುವಾಗ ವಿಭೀಷಣನೂ ಮೊದಲಸಲ ಬುದ್ಧಿ ಹೇಳಿ, ಪ್ರಾತಃಕಾಲದಲ್ಲಿ ಎರಡನೆಯ ಸಲ ಪುನಃ ಉಪದೇಶ ಮಾಡಿ, ಬಳಿಕ ರಾವಣನ ಕುಂಭಕರ್ಣಾದಿಗಳೊಡನೆ ಮತ್ತೆ ಸಭೆಗೆ ಬಂದನು. ಆಗ ವಿಭೀಷಣನು ಮೂರನೆಯ ಸಲ ಹಿತೋಪದೇಶ ಮಾಡಿ ರಾವಣನಿಂದ ತಿರಸ್ಕೃತನಾಗಿ, ಆಗಲೇ ಶ್ರೀರಾಮ ಸಾಮೀಪ್ಯವನ್ನೈದಿದನು. ಬಹುಳ ಪ್ರತಿಪತ್ತಿಥಿಯಲ್ಲಿ ಶ್ರೀರಾಮಚಂದ್ರನು ದರ್ಭಾಸ್ತರಣದಲ್ಲಿ ಮಲಗಿದನು. ಅದೇ ದಿನವೇ ಕುಂಭಕರ್ಣನ ನಿದ್ರೆಗೆ ಪ್ರಾರಂಭ. ಮೂರು ದಿನಗಳು ಶ್ರೀರಾಮಚಂದ್ರನು ದರ್ಭಾಸ್ತರಣದಲ್ಲಿಯೇ ಇದ್ದನು. ಆ ಬಳಿಕ ಬಹುಳ ಚತುರ್ಥೀ, ಪಂಚಮೀ, ಷಷ್ಠೀ, ಸಪ್ತಮೀ, ಅಷ್ಟಮೀ ಎಂಬ ಈ ಐದು ದಿನಗಳಲ್ಲಿ ಸೇತುಬಂಧನ. ಅಷ್ಟಮಿಯ ರಾತ್ರಿಯೇ ಸುವೇಲಾರೋಹಣವಾಯಿತು. ಶೇಷವಾದ ಅಷ್ಟಮಿಯಲ್ಲಿ ಯುದ್ಧಕ್ಕೆ ಪ್ರಾರಂಭವಾಗಿ ಆ ರಾತ್ರಿಯಲ್ಲಿಯೇ ನಾಗಪಾಶಬಂಧ ಮೋಕ್ಷಗಳೂ, ಧೂಮ್ರಾಕ್ಷ, ವಜ್ರದಂಷ್ಟ್ರ, ಅಕಂಪನರ ವಧೆಯೂ ಸಹ ಆಯಿತು. ನವಮಿಯಲ್ಲಿ ಪ್ರಹಸ್ತ ವಧೆ, ರಾವಣನ ಕಿರೀಟಭಂಗ, ದಶಮಿಯಲ್ಲಿ ಕುಂಭಕರ್ಣಾದಿ ರಾಕ್ಷಸರ ವಧೆ, ಆ ಬಳಿಕ ನಿಕುಂಭಿಳೆಯಲ್ಲಿ ಮೂರು ದಿನಗಳು ಲಕ್ಷ್ಮಣೇಂದ್ರಜಿತುಗಳ ಕಾಳಗ. ತ್ರಯೋದಶಿಯಲ್ಲಿ ಅವನ ಸಂಹಾರ. ರಾಮ ರಾವಣರಿಗೆ ಒಂದು ಹಗಲು ಒಂದು ರಾತ್ರಿ, ಈ ಪ್ರಕಾರ ಪ್ರಾರಂಭವಾದದ್ದು ಮೊದಲ್ಗೊಂಡು ಏಳು ದಿನ ಯುದ್ಧ ನಡೆದು ಅಮಾವಾಸ್ಯೆಯಲ್ಲಿ ರಾವಣನ ವಧೆಯೂ, ಪ್ರತಿಪತ್ತಿನಲ್ಲಿ ಅವನಿಗೆ ಸಂಸ್ಕಾರವೂ, ಬಿದಿಗೆಯಲ್ಲಿ ವಿಭೀಷಣ ಪಟ್ಟಾಭಿಷೇಕವೂ, ತದಿಗೆಯಲ್ಲಿ ಸೀತಾಗಮವೂ ಆದವು. ಆ ಬಳಿಕ ಶ್ರೀರಾಮಚಂದ್ರನು ಚೌತಿಯಲ್ಲಿ ಲಂಕಾಪಟ್ಟಣದಿಂದ ಹೊರಟು ಕಿಷ್ಕಿಂಧಾಪಟ್ಟಣವನ್ನು ಸೇರಿ, ಅಲ್ಲಿಂದ ಹೊರಟು ಪಂಚಮಿಯಲ್ಲಿ ಭರದ್ವಾಜಾಶ್ರಮವನ್ನು ಸೇರಿದನು. ಈ ಪಂಚಮಿಗೆ ೧೪ ವರುಷಗಳು ಪೂರ್ತಿಯಾದವು. ಷಷ್ಠೀ ದಿನದಲ್ಲಿ ನಂದಿಗ್ರಾಮ ಪ್ರವೇಶ ಮಾಡಿ, ಶೇಷ ಷಷ್ಠಿಯಲ್ಲಿ ಕ್ಷೌರಕರ್ಮ ಮಾಡಿಸಿಕೊಂಡು ಅಯೋಧ್ಯಾಪಟ್ಟಣವನ್ನು ಸೇರಿ, ಸಪ್ತಮಿಯಲ್ಲಿ ಪುಷ್ಯ ನಕ್ಷತ್ರದಲ್ಲಿ ಪಟ್ಟಾಭಿಷಿಕ್ತನಾದನೆಂಬ ಕ್ರಮವನ್ನು ಈ ರೀತಿ ತಿಳಿದುಕೊಳ್ಳಬಹುದು.

ಸ್ಮಿತಪೂರ್ವಂ ಪ್ರಹೃಷ್ಟವತ್ । "ಪಂಕದಿಗ್ಧಸ್ತು ಭರತೋ ಜಟಿಲಸ್ತ್ವಾಂ ಪ್ರತೀಕ್ಷತೇ ॥ ೪ ॥ ಪಾದುಕೇ ತೇ ಪುರಸ್ಕೃತ್ಯ ಸರ್ವಂಚ ಕುಶಲಂ ಗೃಹೇ । ತ್ವಾಂ ಪುರಾ ಚೀರವಸನಂ ಪ್ರವಿಶಂತಂ ಮಹಾವನಂ ॥ ೫ ॥ ಸ್ತ್ರೀತೃತೀಯಂ ಚ್ಯುತಂ ರಾಜ್ಯಾದ್ಧರ್ಮಕಾಮಂ ಚ ಕೇವಲಂ । ಪದಾತಿಂ ತ್ಯಕ್ತಸರ್ವಸ್ವಂ ಪಿತುರ್ವಚನಕಾರಿಣಂ ॥ ೬ ॥ ಸರ್ವಭೋಗೈಃ ಪರಿತ್ಯಕ್ತಂ ಸ್ವರ್ಗಚ್ಯುತಮಿವಾಮರಂ । ದೃಷ್ಟ್ವಾ ತು ಕರುಣಾ ಪೂರ್ವಂ ಮಮಾಸೀತ್ಸಮಿತಿಂಜಯ ! । ಕೈಕೇಯೀವಚನೇ ಯುಕ್ತಂ ವನ್ಯಮೂಲ

ಮುಗುಳುನಗೆಯೊಡನೆ, ಪ್ರತ್ಯುವಾಚ - ಪ್ರತ್ಯುತ್ತರ ಹೇಳಿದನು. ॥ ೩ ॥ ಪಂಕದಿಗ್ಧಃ - ಅಭ್ಯಂಗನ ಸ್ನಾನವಿಲ್ಲದಿರುವುದರಿಂದ ಮಾಲಿನ್ಯಯುಕ್ತನಾದ, ಜಟಿಲಃ - ಜಟಾಧಾರಿಯಾದ, ಭರತಃ - ಭರತನು, ತೇ - ನಿನ್ನ, ಪಾದುಕೇ - ಪಾದುಕೆಗಳನ್ನು, ಪುರಸ್ಕೃತ್ಯ - ಮುಂದಿರಿಸಿಕೊಂಡು, ತ್ವಾಂ - ನಿನ್ನನ್ನು, ಪ್ರತೀಕ್ಷತೇ - ಎದುರುನೋಡುತ್ತಿದ್ದಾನೆ, ಗೃಹೇ - ಮನೆಯಲ್ಲಿ, ಸರ್ವಂ - ಸಮಸ್ತವೂ, ಕುಶಲಂ - ಕ್ಷೇಮವು, ಸಮಿತಿಂಜಯ - ಕಾಳಗದಲ್ಲಿ ಜಯಶೀಲನೇ, ಪುರಾ - ಹಿಂದೆ, ಚೀರವಸನಂ - ನಾರು ಮಡಿಯೇ ವಸ್ತ್ರವಾಗುಳ್ಳ, ಮಹಾವನಂ - ದೊಡ್ಡ ಕಾಡನ್ನು, ಪ್ರವಿಶಂತಂ - ಪ್ರವೇಶಿಸುತ್ತಿರುವ, ಸ್ತ್ರೀತೃತೀಯಂ - ಹೆಂಗಸೇ ಮೂರನೆಯವಳಾಗುಳ್ಳ, ರಾಜ್ಯಾತ್ - ರಾಜ್ಯದಿಂದ, ಚ್ಯುತಂ - ಜಾರಿಬಂದ, ಕೇವಲಂ - ಅತ್ಯಂತವಾಗಿ, ಧರ್ಮಕಾಮಂ - ಧರ್ಮದಲ್ಲಿಯೇ ದೃಷ್ಟಿಯುಳ್ಳ, ಪದಾತಿಂ-ಪಾದಚಾರಿಯಾದ, ತ್ಯಕ್ತಸರ್ವಸ್ವಂ - ಪರಿತ್ಯಾಗ ಮಾಡಲ್ಪಟ್ಟ ಎಲ್ಲ ಸ್ವತ್ತುಗಳುಳ್ಳ, ಪಿತುಃ - ತಂದೆಯ, ವಚನಕಾರಿಣಂ - ಮಾತನ್ನು ನಡೆಸುತ್ತಿರುವ, ಸರ್ವಭೋಗೈಃ - ಸಮಸ್ತ ಐಹಿಕ ಭೋಗಗಳಿಂದಲೂ, ಪರಿತ್ಯಕ್ತಂ - ಬಿಡಲ್ಪಟ್ಟ, ಸ್ವರ್ಗಚ್ಯುತಂ - ಸ್ವರ್ಗಲೋಕದಿಂದ ಜಾರಿಬಂದ, ಅಮರಮಿವ - ದೇವತೆಯಂತಿರುವ, ಕೈಕೇಯೀವಚನೇ - ಕೈಕೇಯೀದೇವಿಯ ಮಾತಿನಲ್ಲಿ, ಯುಕ್ತಂ - ಬದ್ಧನಾದ, ವನ್ಯ....ನಂ - ವನದಲ್ಲಿ ಹುಟ್ಟಿರುವ ಕಂದಮೂಲಗಳನ್ನು ಭಕ್ಷಿಸುತ್ತಿರುವ, ತ್ವಾಂ - ನಿನ್ನನ್ನು, ಪೂರ್ವಂ - ಮೊದಲು, ದೃಷ್ಟ್ವಾ - ಕಂಡು, ಮಮ - ನನಗೆ, ಕರುಣಾ - ವ್ಯಸನವು, ಆಸೀತ್ -

---

ಆ ರಾಘವನನ್ನು ಕುರಿತು, "ಅಯ್ಯಾ! ರಘುಕುಲೋತ್ತಮನಾದ ಶ್ರೀರಾಮನೇ! ಭರತಕುಮಾರನು ಧೂಳಿಯಿಂದ ಮುಚ್ಚಿದ ಮೈಯುಳ್ಳವನಾಗಿ, ಜಟಾವಲ್ಕಲಧಾರಿಯಾಗಿ ನಿನ್ನ ಪಾದುಕೆಗಳನ್ನು ಪುರಸ್ಕರಿಸಿ (ರಾಜ್ಯಭಾರ ಮಾಡುತ್ತ) ನಿನ್ನ ಬರುವಿಕೆಯನ್ನೇ ನಿರೀಕ್ಷಿಸುತ್ತಿರುವನು. ರಾಮಾ ! ನೀನು ಪೂರ್ವದಲ್ಲಿ ನಾರುಡಿಯುಟ್ಟು ಮಹಾರಣ್ಯವನ್ನು ಪ್ರವೇಶಿಸಿದುದನ್ನೂ, ಸೀತೆಯೊಡನೆಯೂ ಲಕ್ಷ್ಮಣನೊಡನೆಯೂ, ರಾಜೈಶ್ವರ್ಯವನ್ನು ತೊರೆದುದನ್ನೂ, ಮುಖ್ಯವಾಗಿ (ಧರ್ಮಕ್ಕಾಗಿಯೇ) ಧರ್ಮಾಪೇಕ್ಷೆಯಿಂದಲೇ ಪಾದಚಾರಿಯಾಗಿ, ಸಮಸ್ತೈಶ್ವರ್ಯಗಳನ್ನೂ ತೊರೆದು ನಿನ್ನ ತಂದೆಯ ಆಜ್ಞೆಯಂತೆ ನಡೆಯುವದರಲ್ಲಿಯೇ ನಿರತನಾಗಿ ಸರ್ವ ಭೋಗಗಳನ್ನೂ ತೊರೆದು ಸ್ವರ್ಗದಿಂದ ಜಾರಿದ ದೇವತೆಯಂತಿದ್ದುದನ್ನೂ ಕಂಡು ನನಗೆ ಅಧಿಕಾಧಿಕವಾದ ಕನಿಕರ ಉಂಟಾಗಿದ್ದಿತು. ॥ ೧–೫ ॥ ಇಷ್ಟೆಯಲ್ಲದೆ ಯುದ್ಧದಲ್ಲಿ ಜಯಶಾಲಿಯಾಗಿ, ನಿನ್ನ ಮಲತಾಯಿಯಾದ ಕೈಕೇಯೀದೇವಿಯ ಮಾತಿನಂತೆ ನಡೆಯುತ್ತ, ಕಂದಮೂಲಫಲಾದಿಗಳನ್ನು ಭುಜಿಸಿಕೊಂಡು ಕೇವಲ ತಾಪಸವೃತ್ತಿಯುಳ್ಳಿದ್ದ ನಿನ್ನನ್ನು ನೋಡಿ ಪೂರ್ವದಲ್ಲಿ ನನಗೆ ಬಹಳ ವ್ಯಸನವಾಗಿದ್ದಿತು. ಈಗ ಸಕಲ ಕಾರ್ಯಗಳೂ ನೆರ

ಫಲಾಶಿನಂ ॥೭॥ ಸಾಂಪ್ರತಂ ಸುಸಮೃದ್ಧಾರ್ಥಂ ಸಮಿತ್ರಗಣಬಾಂಧವಂ । ಸಮೀಕ್ಷ್ಯ ವಿಜಿತಾರಿಂ ತ್ವಾಂ ಮಮ ಪ್ರೀತಿರನುತ್ತಮಾ ॥ ೮ ॥ ಸರ್ವಂಚ ಸುಖದುಃಖಂ ತೇ ವಿದಿತಂ ಮಮ ರಾಘವ! । "ರಾವಣೇನ ಹೃತಾ ಭಾರ್ಯಾ ಬಭೂವೇಯಮನಿಂದಿತಾ ॥ ೯ ॥ ಮಾರೀಚದರ್ಶನಂಚೈವ ಸೀತೋನ್ಮಥನಮೇವಚ । ಕಬಂಧದರ್ಶನಂಚೈವ ಪಂಪಾಭಿಗಮನಂ ತಥಾ ॥ ೧೦ ॥ ಸುಗ್ರೀವೇಣಚ ತೇ ಸಖ್ಯಂ ಯಚ್ಚ ವಾಲೀ ಹತಸ್ತ್ವಯಾ । ಮಾರ್ಗಣಂ ಚೈವ ವೈದೇಹ್ಯಾಃ ಕರ್ಮ ವಾತಾತ್ಮಜಸ್ಯಚ ॥ ೧೧ ॥

ಆಯಿತು. ॥ ೪ ೭ ॥ ಸಾಂಪ್ರತಂ - ಈಗ, ಸುಸಮೃದ್ಧಾರ್ಥಂ - ಸಂಪೂರ್ಣವಾದ ಕಾರ್ಯಗಳುಳ್ಳ, ಸಮಿ....ವಂ - ಮಿತ್ರಪರಿವಾರದಿಂದಲೂ, ಬಂಧುಜನರಿಂದಲೂ ಕೂಡಿರುವ, ವಿಜಿತಾರಿಂ - ಜಯಿಸಲ್ಪಟ್ಟ ಶತ್ರುಗಳುಳ್ಳ, ತ್ವಾಂ - ನಿನ್ನನ್ನು, ಸಮೀಕ್ಷ್ಯ - ಕಂಡು, ಮಮ - ನನಗೆ, ಅನುತ್ತಮಾ - ಸರ್ವೋತ್ತಮವಾದ, ಪ್ರೀತಿಃ - ಸಂತೋಷವು, ಆಸೀತ್ - ಆಯಿತು. ॥ ೮ ॥ ರಾಘವ - ಶ್ರೀರಾಮ, ತೇ - ನಿನ್ನ, ಸರ್ವಂ - ಸಮಸ್ತವಾದ, ಸುಖದುಃಖಂ - ಸುಖವೂ, ದುಃಖವೂ, ಮಮ - ನನಗೆ, ವಿದಿತಂ - ತಿಳಿಯಲ್ಪಟ್ಟದೆ, ವಿಪುಲಂ - ವಿಸ್ತಾರವಾದ, ಜನ....ಕಂ - ಜನಸ್ಥಾನದಲ್ಲಿರುವ ರಾಕ್ಷಸರ ವಧೆಯೇ ಮೊದಲಾದ, ಯತ್ - ಯಾವ ಕಾರ್ಯವು, ಪ್ರಾಪ್ತಂ - ಹೊಂದಲ್ಪಟ್ಟಿತೋ, ಬ್ರಾಹ್ಮಣಾರ್ಥೇ - ಬ್ರಾಹ್ಮಣರ ಸಂರಕ್ಷಣೆಯ ನಿಮಿತ್ತವಾಗಿ, ನಿಯುಕ್ತಸ್ಯ - ಪ್ರಾರ್ಥಿಸಲ್ಪಟ್ಟ, ಸರ್ವತಾಪಸಾನ್ - ಸಮಸ್ತ ಋಷಿಗಳನ್ನೂ, ರಕ್ಷಿತುಃ - ಸಂರಕ್ಷಿಸುತ್ತಿರುವ, ತೇ - ನಿನ್ನ, ಅನಿಂದಿತಾ - ನಿರ್ದೋಷಳಾದ, ಇಯಂಭಾರ್ಯಾ - ಈ ಸೀತಾದೇವಿಯು, ರಾವಣೇನ - ದಶಕಂಠನಿಂದ, ಹೃತೇತಿಯತ್ - ಅಪಹರಿಸಲ್ಪಟ್ಟಳೆಂಬದೂ, ಮಾರೀಚದರ್ಶನಂಚೈವ - ಮಾರೀಚನ ದರ್ಶನವೂ, ಸೀತೋನ್ಮಥನಮೇವಚ - ಸೀತಾದೇವಿಯ ಕ್ಲೇಶವೂ, ಕಬಂಧದರ್ಶನಂಚೈವ - ಕಬಂಧನ ದರ್ಶನವೂ, ತಥಾ-ಹಾಗೆಯೇ, ಪಂಪಾಭಿಗಮನಂ-ಪಂಪಾನದಿಯ ತೀರಕ್ಕೆ ಬರುವಿಕೆಯೂ, ತೇ-ನಿನಗೆ, ಸುಗ್ರೀವೇಣಚ - ಸುಗ್ರೀವನೊಡನೆ, ಸಖ್ಯಂಚ - ಸ್ನೇಹವೂ, ತ್ವಯಾ - ನಿನ್ನಿಂದ, ವಾಲೀ - ವಾಲಿಯು, ಹತಇತಿಯತ್ - ಸಂಹೃತನಾದನೆಂಬದೂ, ತತ್ - ಅದನ್ನೂ, ವೈದೇಹ್ಯಾಃ - ಸೀತಾದೇವಿಯ, ಮಾರ್ಗಣಂಚೈವ - ಹುಡುಕುವಿಕೆಯೂ, ವಾತಾತ್ಮಜಸ್ಯ - ಆಂಜನೇಯನ, ಕರ್ಮಚ - ವ್ಯಾಪಾರವೂ,

---

ವೇರಿ, ಸಫಲವಾದ ಕೋರಿಕೆಗಳುಳ್ಳವನೂ, ಮಿತ್ರಸ್ತೋಮಪರಿವೃತನೂ, ಶತ್ರುಗಳನ್ನು ಜಯಿಸಿದವನೂ ಆದ ನಿನ್ನನ್ನು ನೋಡಿ ನನಗೆ ಅಪಾರವಾದ ಸಂತೋಷವಾಗಿರುವುದು. ಓ ರಘುಕುಲೋದ್ಭವನಾದ ಶ್ರೀರಾಮ ಚಂದ್ರನೇ! ಈಗ ನಾನು ನೀನು ಅನುಭವಿಸಿದ ಸುಖದುಃಖಗಳೆಲ್ಲವನ್ನೂ ನನ್ನ ತಪೋಬಲದಿಂದಲೇ ಅರಿತುಕೊಂಡೆನು. ಜನಸ್ಥಾನವೆಂದು ಹೆಸರಾದ ದಂಡಕಾರಣ್ಯದಲ್ಲಿ ನೀನು ಸಾಧಿಸಿದ ಕಾರ್ಯಗಳೆಲ್ಲವನ್ನೂ ನಾನು ತಿಳಿದೆನು. ಅಲ್ಲಿ ನೀನು ದುಷ್ಟರಾದ ರಾಕ್ಷಸರನ್ನು ಸಂಹಾರ ಮಾಡಲೋಸುಗವೂ, ತಪಸ್ವಿಗಳಾದ ಬ್ರಾಹ್ಮಣರ ಸಂರಕ್ಷಣೆಗೋಸುಗವೂ ಸಂಚರಿಸುತ್ತಿದ್ದುದನ್ನರಿತಿರುವೆನು. ರಾಮಾ! ಪರಮಪವಿತ್ರೆಯಾದ ಸೀತಾದೇವಿಯನ್ನು ರಾವಣಾಸುರನು ಅಪಹರಿಸಿದುದನ್ನೂ, ಮಾರೀಚನು ಕಂಡು ಬಂದುದನ್ನೂ, ಕಬಂಧನನ್ನು ನೋಡಿದುದನ್ನೂ, ಪಂಪಾಸರೋವರಕ್ಕೆ ಹೋದುದನ್ನೂ, ವಾನರೇಶ್ವರನಾದ ಸುಗ್ರೀವನೊಡನೆ ಮೈತ್ರಿ ಬೆಳಸಿದುದನ್ನೂ, ವಾಲಿಯ ಸಂಹಾರವನ್ನೂ, ವಾಯುಪುತ್ರನಾದ ಹನುಮಂತನು ಸೀತಾದೇವಿಯನ್ನು ಹುಡುಕಿಕೊಂಡು ಬಂದು

ವಿದಿತಾಯಾಂಚ ವೈದೇಹ್ಯಾಂ ನಳಸೇತುರ್ಯಥಾಕೃತಃ । ಯಥಾ ವಾ ದೀಪಿತಾ
ಲಂಕಾ ಪ್ರಹೃಷ್ಟೈರ್ಹರಿಯೂಥಪೈಃ ॥ ೧೨ ॥ ಸಪುತ್ರಬಾಂಧವಾಮಾತ್ಯಸ್ಸಬಲ
ಸ್ಸಹವಾಹನಃ । ಯಥಾ ವಿನಿಹತಸ್ಸಂಖ್ಯೇ ರಾವಣೋ ದೇವಕಂಟಕಃ ॥ ೧೩ ॥
ಸಮಾಗಮಶ್ಚ ತ್ರಿದಶೈರ್ಯಥಾ ದತ್ತಶ್ಚ ತೇ ವರಃ । ಸರ್ವಂ ಮಮೈತದ್ವಿದಿತಂ
ತಪಸಾ ಧರ್ಮವತ್ಸಲ! ॥೧೪॥ ಅಹಮಪ್ಯತ್ರ ತೇ ದದ್ಮಿ ವರಂ ಶಸ್ತ್ರಭೃತಾಂವರ! ।
ಅರ್ಘ್ಯಮದ್ಯ ಗೃಹಾಣೇದಮಯೋಧ್ಯಾಂ ಶ್ವೋ ಗಮಿಷ್ಯಸಿ" ॥ ೧೫-೧೬ ॥ ತಸ್ಯ
ತಚ್ಛಿರಸಾ ವಾಕ್ಯಂ ಪ್ರತಿಗೃಹ್ಯ ನೃಪಾತ್ಮಜಃ । ಬಾಢಮಿತ್ಯೇವ ಸಂಹೃಷ್ಟೋ ಧೀಮಾ

ವೈದೇಹ್ಯಾಂ - ಸೀತಾದೇವಿಯು, ವಿದಿತಾಯಾಂ - ತಿಳಿಯಲ್ಪಟ್ಟವಳಾಗಲೂ, ನಳಸೇತುಃ - ನಳನಿಂದ ಮಾಡಲ್ಪಟ್ಟ ಸೇತುವೂ, ಯಥಾ - ಹೇಗೆ, ಕೃತಃ - ಮಾಡಲ್ಪಟ್ಟಿತೋ, ಪ್ರಹೃಷ್ಟೈಃ - ಸಂತೋಷಗೊಂಡಿರುವ, ಹರಿಯೂಥಪೈಃ - ವಾನರಯೂಥಪತಿಗಳಿಂದ, ಯಥಾ - ಹೇಗೆ, ಲಂಕಾ - ಲಂಕಾಪಟ್ಟಣವು, ದೀಪಿತಾವಾ - ಸುಡಲ್ಪಟ್ಟಿತೋ, ಸಪು....ತ್ಯಃ - ಮಕ್ಕಳಿಂದಲೂ, ಮಂತ್ರಿ, ಬಂಧುಗಳಿಂದಲೂ ಕೂಡಿದ, ಸಬಲಃ - ಸೇನಾಸಮೇತನಾದ, ಸಹವಾಹನಃ - ವಾಹನಗಳಿಂದೊಡಗೂಡಿದ, ದೇವಕಂಟಕಃ - ದೇವತೆಗಳಿಗೆ ಶತ್ರುವಾದ, ರಾವಣಃ - ರಾವಣನು, ಯಥಾ - ಹೇಗೆ, ಸಂಖ್ಯೇ - ಕಾಳಗದಲ್ಲಿ, ವಿನಿಹತಃ - ಹೊಡೆಯಲ್ಪಟ್ಟನೋ, ತ್ರಿದಶೈಃ - ದೇವತೆಗಳಿಂದ, ಯಥಾ - ಹೇಗೆ, ಸಮಾಗಮಃ - ಸೇರುವಿಕೆಯೂ, ತೇ - ನಿನಗೆ, ವರಃ - ವರವು, ಯಥಾ - ಹೇಗೆ, ದತ್ತಃ - ಕೊಡಲ್ಪಟ್ಟಿತೋ, ಧರ್ಮವತ್ಸಲ - ಧರ್ಮದಲ್ಲೇ ವಾತ್ಸಲ್ಯವುಳ್ಳವನೇ, ಏತತ್ಸರ್ವಂ - ಈ ಸಮಸ್ತವೂ, ಮಮ - ನನಗೆ, ತಥಾತಥಾ - ಹಾಗೆ ಹಾಗೆಯೇ, ತಪಸಾ - ತಪೋಯೋಗದಿಂದ, ವಿದಿತಂ - ತಿಳಿಯಲ್ಪಟ್ಟಿದೆ. ॥೯-೧೪॥ ಶಸ್ತ್ರ....ರ - ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೇ, ಅಹಮಪಿ - ನಾನೂ ಕೂಡ, ಅತ್ರ - ಈ ಆಶ್ರಮದಲ್ಲಿ, ತೇ - ನಿನಗೆ, ವರಂ - ವರವನ್ನು, ದದ್ಮಿ - ಕೊಡುತ್ತೇನೆ, ಅದ್ಯ - ಈಗ, ಇದಮರ್ಘ್ಯಂ- ಈ ಪೂಜಾದ್ರವ್ಯವನ್ನು, ಪರಿಗೃಹಾಣ - ಗ್ರಹಿಸು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಶ್ವಃ - ನಾಳೆ, ಗಮಿಷ್ಯಸಿ - ಹೋಗುವೆ. ॥ ೧೬ ॥ ನೃಪಾತ್ಮಜಃ - ಅರಸುಮಗನಾಗ ಶ್ರೀರಾಮನು, ತಸ್ಯ - ಆ ಭರದ್ವಾಜಋಷಿಯ, ತದ್ವಾಕ್ಯಂ - ಆ ಮಾತನ್ನು, ಬಾಢಮಿತ್ಯೇವ - ಹಾಗೆಯೇ ಆಗಲೆಂದು, ಪ್ರತಿಗೃಹ್ಯ - ಪರಿಗ್ರಹಿಸಿ, ಧೀಮಾನ್ - ಬುದ್ಧಿವಂತನಾದಕಾರಣ, ಸಂಹೃಷ್ಟಃ-

---

ದನ್ನೂ, ನಳನು ಸೇತುವನ್ನು ಕಟ್ಟಿದುದನ್ನೂ, ಅಪಾರ ಸಂತೋಷಸಂಭ್ರಮಪೂರಿತರಾದ ವಾನರರು ಲಂಕಾಪಟ್ಟಣವನ್ನು ಸುಟ್ಟುದನ್ನೂ ಬಲಗರ್ವಿತನಾಗಿ ಪುತ್ರ, ಮಿತ್ರ, ಬಂಧು, ಮಂತ್ರಿ ಸಹಿತನಾದ ರಾವಣಾಸುರನನ್ನು ನೀನು ಸಮರ ಭೂಮಿಯಲ್ಲಿ ಸಂಹರಿಸಿದುದನ್ನೂ, ದೇವತೆಗಳೆಲ್ಲರೂ ನಿನಗೆ ವರಗಳನ್ನು ಕೊಟ್ಟುದನ್ನೂ ಇವೇ ಮೊದಲಾದ ಎಲ್ಲ ವಿಚಾರಗಳನ್ನೂ ನಾನು ನನ್ನ ತಪೋಮಹಿಮೆಯಿಂದ ಅರಿತುಕೊಂಡಿದ್ದೇನೆ. ಶಸ್ತ್ರವೇತ್ತರಲ್ಲಿ ಅಗ್ಗಳೆಯನಾದ ಶ್ರೀರಾಮಮೂರ್ತಿಯೇ! ನಾನೂ ನೀನು ಕೋರಿದ ವರವನ್ನು ಕೊಡಬಯಸಿರುವೆನು. ನೀನು ಇಂದು ಇಲ್ಲಿಯೇ ಇದ್ದು ನಾನು ಮಾಡುವ ಅತಿಥಿ ಸತ್ಕಾರವನ್ನು ಕೈಕೊಂಡು ನಾಳೆ ಅಯೋಧ್ಯೆಗೆ ಪ್ರಯಾಣ ಮಾಡುವವನಾಗು" ಎಂದು ಹೇಳಿದನು. ॥ ೬-೧೬ ॥ ಮಹಾತ್ಮನಾದ ಭರದ್ವಾಜ ಮಹರ್ಷಿಯು ನುಡಿದ ನುಡಿಗಳನ್ನು ಕೇಳಿ ಆತನ ಆಜ್ಞೆಯನ್ನು ಶಿರಸಾವಹಿಸಿ ಆತನನ್ನು ಕುರಿತು, "ಎಲೈ ಮುನಿಶ್ರೇಷ್ಠನೇ! ಅಯೋಧ್ಯಾ

ಸ್ವರಮಯಾಚತ ॥ ೧೭ ॥ “ಅಕಾಲೇ ಫಲಿನೋ ವೃಕ್ಷಾಸ್ಸರ್ವೇಚಾಪಿ ಮಧುಸ್ರವಾಃ । ಫಲಾನ್ಯಮೃತಕಲ್ಪಾನಿ ಬಹೂನಿ ವಿವಿಧಾನಿಚ ॥೧೮॥ ಭವಂತು ಮಾರ್ಗೇ ಭಗವನ್ನಯೋಧ್ಯಾಂ ಪ್ರತಿಗಚ್ಛತಃ । ತಥೇತಿಚ ಪ್ರತಿಜ್ಞಾತೇ ವಚನಾತ್ಸಮನಂತರಂ ॥ ೧೯ ॥ ಅಭವನ್ಪಾದಪಾಸ್ತತ್ರ ಸ್ವರ್ಗಪಾದಪಸನ್ನಿಭಾಃ । ನಿಷ್ಫಲಾಃ ಫಲಿನಶ್ಚಾಸನ್ ವಿಪುಷ್ಪಾಃ ಪುಷ್ಪಶಾಲಿನಃ ॥ ೨೦ ॥ ಶುಷ್ಕಾಸ್ಸಮಗ್ರಪತ್ರಾಸ್ತೇ ನಗಾಶ್ಚೈವ ಮಧುಸ್ರವಾಃ । ಸರ್ವತೋ ಯೋಜನಾ ಸ್ತ್ರೀಣಿ ಗಚ್ಛತಾಮಭವಂಸ್ತದಾ ॥ ೨೧ ॥

ಸಂತೋಷಗೊಂಡವನಾಗಿ, ವರಂ - ವರವನ್ನು, ಅಯಾಚತ - ಬೇಡಿದನು. ॥ ೧೭ ॥ ಭಗವನ್ - ಪೂಜ್ಯನೇ, ಅಯೋಧ್ಯಾಂಪ್ರತಿ - ಅಯೋಧ್ಯಾಪಟ್ಟಣವನ್ನು ಕುರಿತು, ಗಚ್ಛತಃ - ಹೋಗುತ್ತಿರುವ, ಮಮ - ನನ್ನ, ಮಾರ್ಗೇ - ದಾರಿಯಲ್ಲಿ, ಸರ್ವೇ - ಸಮಸ್ತವಾದ, ವೃಕ್ಷಾಃ - ಗಿಡಗಳು, ಅಕಾಲೇ- ಅಕಾಲದಲ್ಲಿಯೂ, ಫಲಿನಃ - ಫಲಗಳುಳ್ಳವುಗಳು, ಭವಂತು - ಆಗಲಿ ಮಧುಸ್ರವಾಶ್ಚಾಪಿ - ಜೇನುಗಳನ್ನು ಸುರಿಸುತ್ತಿರುವವುಗಳು. ಭವಂತು - ಆಗಲಿ, ವಿವಿಧಾನಿ - ನಾನಾಬಗೆಗಳಾದ, ಬಹೂನಿ - ಅನೇಕಗಳಾದ, ಫಲಾನಿ - ಫಲಗಳು, ಅಮೃತಕಲ್ಪಾನಿ - ಅಮೃತಕ್ಕೆ ಸಮಾನಗಳಾದವವು, ಭವಂತು- ಆಗಲಿ. ॥ ೧೮ ೧೯ ॥ ತಥೇತಿ - ಹಾಗೆಯೇ ಆಗಲೆಂದು, ಪ್ರತಿಜ್ಞಾತೇ - ಪ್ರತಿಜ್ಞೆ ಮಾಡಲ್ಪಡಲು, ವಚನಾತ್ - ಋಷಿವಚನದಿಂದ, ಸಮನಂತರಂ - ಬಳಿಕ, ತತ್ರ - ಆ ಮಾರ್ಗದಲ್ಲಿ, ಪಾದಪಾಃ - ಗಿಡಗಳು, ಸ್ವರ್ಗ....ಭಾಃ - ಕಲ್ಪವೃಕ್ಷಗಳಿಗೆ ಸಮಾನವಾದವುಗಳು, ಅಭವನ್ - ಆದವು, ನಿಷ್ಫಲಾಃ - ಫಲವಿಲ್ಲದ ಗಿಡಗಳು, ಫಲಿನಃ - ಫಲಿಸಿದವುಗಳು, ಆಸನ್ - ಆದವು, ವಿಪುಷ್ಪಾಃ - ಪುಷ್ಪಗಳಿಲ್ಲದ ಮರಗಳು, ಪುಷ್ಪಶಾಲಿನಃ - ಹುವ್ವುಗಳಿಂದ ಒಪ್ಪುತ್ತಿದ್ದವು, ಶುಷ್ಕಾಃ - ಒಣಗಿದ, ತೇನಗಾಃ - ಆ ಗಿಡಗಳು, ಸಮಗ್ರಪತ್ರಾಃ - ಸಂಪೂರ್ಣವಾದ ಎಲೆಗಳುಳ್ಳವುಗಳಾಗಿ, ಮಧುಸ್ರವಾಃ - ಜೇನುಗಳನ್ನು ಸುರಿಸುತ್ತಿದ್ದವ, ಸರ್ವತಃ - ಸರ್ವಪ್ರದೇಶಗಳಲ್ಲಿಯೂ, ಗಚ್ಛತಾಂ - ಹೋಗುತ್ತಿರುವ ಆ ಸೇನಾಜನರಿಗೆ, ತದಾ - ಆ ಕಾಲದಲ್ಲಿ, ತ್ರೀಣಿಯೋಜನಾನಿ - ಮೂರು ಗಾವುದಗಳು, ಅಭವನ್ - ಆದವು. ॥೨೦ ೨೧॥ ತತಃ - ಬಳಿಕ, ಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ತೇಪ್ಲವಗರ್ಷಭಾಃ - ಆ ವಾನರೋತ್ತಮರು, ಬಹೂನಿ - ಅನೇಕಗಳಾದ, ದಿವ್ಯಾನಿ - ಮನೋಹರಗಳಾದ, ಸಹಸ್ರಶಃ - ಅನೇಕ

ಪಟ್ಟಣಕ್ಕೆ ಹೋಗುವ ಮಾರ್ಗವಲ್ಲಿರುವ ವೃಕ್ಷಗಳೆಲ್ಲವೂ ಅಕಾಲದಲ್ಲಿಯೂ ಕೂಡ ಫಲಪುಷ್ಪಭರಿತಗಳಾಗಲಿ. ಎಲ್ಲ ವೃಕ್ಷಗಳೂ ಮಕರಂದವನ್ನು ಸ್ರವಿಸುವಂತೆ ಅನುಗ್ರಹಿಸುವವನಾಗು. ಈ ವೃಕ್ಷಗಳ ಫಲಗಳೆಲ್ಲವೂ ಬಹು ರುಚಿಕರವಾಗಿರುವಂತೆ ವರವನ್ನು ದಯಪಾಲಿಸುವವನಾಗು” ಎಂದು ಪ್ರಾರ್ಥಿಸಿದನು. ಶ್ರೀರಾಮನೀರೀತಿ ಪ್ರಾರ್ಥಿಸಲು ಮಹಾತ್ಮನಾದ ಆ ಮುನಿಯು ಅಂತೆಯೇ ಆಗಲೆಂದು ವರವನ್ನಿತ್ತನು. ಆ ಕೂಡಲೇ ಅಯೋಧ್ಯಾ ಮಾರ್ಗದಲ್ಲಿರುವ ಸಮಸ್ತ ವೃಕ್ಷಗಳೂ ಸ್ವರ್ಗಲೋಕದ ಮಹಾ ವೃಕ್ಷಗಳಂತೆ ಮಧುರವಾದ ಫಲಗಳುಳ್ಳವುಗಳಾದುವು. ಫಲರಹಿತಗಳಾದ ವೃಕ್ಷಗಳೂ ಕೂಡ ಸಮೃದ್ಧವಾದ ದಿವ್ಯ ಫಲಗಳುಳ್ಳವುಗಳಾದುವು. ಕಡೆಗೆ ಒಣಗಿ ಬರಡಾಗಿದ್ದ ಗಿಡಮರಗಳೂ ಸಂಪೂರ್ಣವಾಗಿ ಎಲೆ, ಕಾಯಿ, ಹೂ, ಹಣ್ಣುಗಳಿಂದ ಶೋಭಿಸಿದುವು. ಹೀಗೆ ಅಯೋಧ್ಯೆಗೆ ಮೂರುಯೋಜನಗಳಲ್ಲಿರುವ ವೃಕ್ಷಗಳೆಲ್ಲವೂ ಸಕಲ ಸಮೃದ್ಧವಾಗಿ ವಿರಾಜಿಸಿದುವು. ಆಗ ವಾನರರೆಲ್ಲರೂ ಪರಮಾ

ತತಃ ಪ್ರಹೃಷ್ಟಾಃ ಪ್ಲವಗರ್ಷಭಾಸ್ತೇ
ಬಹೂನಿ ದಿವ್ಯಾನಿ ಫಲಾನಿಚೈವ ।
ಕಾಮಾದುಪಾಶ್ನಂತಿ ಸಹಸ್ರಶಸ್ತೇ
ಮುದಾನ್ವಿತಾಃ ಸ್ವರ್ಗಜಿತೋ ಯಥೈವ ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತವಿಂಶತ್ಯುತ್ತರಶತತಮಸ್ಸರ್ಗಃ

ಗಳಾದ, ಫಲಾನಿಚೈವ - ಹಣ್ಣುಗಳನ್ನೂ, ಕಾಮಾತ್ - ಮನಬಂದಂತೆ, ಉಪಾಶ್ನಂತಿ - ತಿನ್ನುತ್ತಿದ್ದರು. ತೇ - ಆ ಕಪಿಗಳು, ಸ್ವರ್ಗಜಿತಃಯಥೈವ - ಸ್ವರ್ಗವಾಸಿಗಳಾದ ದೇವತೆಗಳಂತೆ, ಮುದಾ-ಸಂತೋಷದಿಂದ, ಅನ್ವಿತಾಃ - ಕೂಡಿದವರು, ಅಭವನ್ - ಆದರು. ॥ ೨೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಸಪ್ತವಿಂಶತ್ಯುತ್ತರಶತತಮಸ್ಸರ್ಗಃ.

ನಂದಭರಿತರಾಗಿ ಆ ವೃಕ್ಷಗಳಲ್ಲಿಯ ಫಲಗಳನ್ನು ಭುಜಿಸಿ ಸರ್ಗಲೋಕವನ್ನೇ ಜಯಿಸಿದವರಂತೆ ಅಮಿತಾನಂದತುಂದಿಲಿತ ಸ್ವಾಂತರಾದರು. ॥ ೧೭–೨೨ ॥

ಇಂತಿದು ಭರದ್ವಾಜಾಕೃತ ರಾಮಸತ್ಕಾರ ನಿರೂಪಣವೆಂಬ ನೂರ
ಇಪ್ಪತ್ತೇಳನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಅಷ್ಟಾವಿಂಶತ್ಯುತ್ತರಶತತಮಸ್ಸರ್ಗಃ

ಅಯೋಧ್ಯಾಂತು ಸಮಾಲೋಕ್ಯ ಚಿಂತಯಾಮಾಸ ರಾಘವಃ । ಚಿಂತಯಿತ್ವಾ ಹನೂಮಂತಮುವಾಚ ಪ್ಲವಗೋತ್ತಮಂ । "ಜಾನೀಹಿ ಕಚ್ಚಿತ್ಕುಶಲೀ ಜನೋ ನೃಪತಿಮಂದಿರೇ ॥೧॥ ಶೃಂಗಿಬೇರಪುರಂ ಪ್ರಾಪ್ಯ ಗುಹಂ ಗಹನಗೋಚರಂ । ನಿಷಾದಾಧಿಪತಿಂ ಬ್ರೂಹಿ ಕುಶಲಂ ವಚನಾನ್ಮಮ ॥೨॥ ಶ್ರುತ್ವಾ ತು ಮಾಂ ಕುಶಲಿನಮರೋಗಂ ವಿಗತಜ್ವರಂ । ಭವಿಷ್ಯತಿ ಗುಹಃ ಪ್ರೀತ ಸ್ಸಮಮಾತ್ಮಸಮಸ್ಸಖಾ ॥೩॥ ಅಯೋಧ್ಯಾಯಾಶ್ಚ ತೇ ಮಾರ್ಗಂ ಪ್ರವೃತ್ತಿಂ ಭರತಸ್ಯಚ । ನಿವೇದಯಿಷ್ಯತಿ ಪ್ರೀತೋ ನಿಷಾದಾಧಿಪತಿರ್ಗುಹಃ ॥೪॥ ಭರತಸ್ತು ತ್ವಯಾ ವಾಚ್ಯಃ

ರಾಘವಃ - ಶ್ರೀರಾಮನು, ಅಯೋಧ್ಯಾಂತು - ಅಯೋಧ್ಯಾಪಟ್ಟಣವನ್ನಾದರೆ, ಸಮಾಲೋಕ್ಯ - ಕಂಡು, ಚಿಂತಯಾಮಾಸ - ಆಲೋಚಿಸಿದನು, ಚಿಂತಯಿತ್ವಾ - ಆಲೋಚಿಸಿ, ಪ್ಲವಗೋತ್ತಮಂ - ವಾನರೋತ್ತಮನಾದ, ಹನೂಮಂತಂ - ಆಂಜನೇಯನನ್ನು ಕುರಿತು, ಉವಾಚ - ಹೇಳಿದನು. ॥೧॥ ನೃಪತಿಮಂದಿರೇ - ಅರಮನೆಯಲ್ಲಿ, ಜನಃ - ಸಮಸ್ತ ಜನವೂ, ಕುಶಲೀಕಚ್ಚಿತ್- ಕ್ಷೇಮವೋ ಏನೋ, ಜಾನೀಹಿ - ತಿಳಿದುಕೋ, ಶೃಂಗಿಬೇರಪುರಂ - ಶೃಂಗಿಬೇರಪುರವನ್ನು, ಪ್ರಾಪ್ಯ- ಹೊಂದಿ, ನಿಷಾದಾಧಿಪತಿಂ - ಬೇಡರ ರಾಜನಾದ, ಗುಹಂ - ಗುಹನನ್ನು ಕುರಿತು, ಮಮ - ನನ್ನ, ವಚನಾತ್ - ಮಾತಿನ ದೆಸೆಯಿಂದ, ಕುಶಲಂ - ಕ್ಷೇಮವನ್ನು, ಬ್ರೂಹಿ - ಹೇಳು, ಸಃ - ಆ ಗುಹನು, ಮಮ - ನನಗೆ, ಆತ್ಮಸಮಃ - ಆತ್ಮಸಮಾನನಾದ, ಸಖಾ - ಸ್ನೇಹಿತನು ಆದಕಾರಣ, ಗುಹಃ - ಗುಹನು, ಮಾಂ - ನನ್ನನ್ನು, ಕುಶಲಿನಂ - ಕ್ಷೇಮವಂತನನ್ನಾಗಿಯೂ, ಅರೋಗಂ - ರೋಗರಹಿತನನ್ನಾಗಿಯೂ, ವಿಗತಜ್ವರಂ - ಕಳೆದುಹೋದ ಸಂಕಟವುಳ್ಳವನನ್ನಾಗಿಯೂ, ಶ್ರುತ್ವಾ - ಕೇಳಿ, ಪ್ರೀತಃ - ಸಂತೋಷಗೊಂಡವನು, ಭವಿಷ್ಯತಿ - ಆಗುತ್ತಾನೆ. ॥೨ ೩॥ ನಿಷಾ....ತಿಃ - ಬೇಡರೊಡೆಯನಾದ, ಗುಹಃ - ಗುಹನು, ಪ್ರೀತಃ - ಸಂತೋಷಗೊಂಡವನಾಗಿ, ತೇ - ನಿನಗೆ, ಅಯೋಧ್ಯಾಯಾಃ - ಅಯೋಧ್ಯಾಪಟ್ಟಣದ, ಮಾರ್ಗಂಚ - ಮಾರ್ಗವನ್ನೂ, ಭರತಸ್ಯ - ಭರತನ, ಪ್ರವೃತ್ತಿಂಚ -

---

ಆ ತರುವಾಯ ರಘುಕುಲೋದ್ಭವನಾದ ಶ್ರೀರಾಮಮೂರ್ತಿಯು ಅಯೋಧ್ಯಾಪಟ್ಟಣವನ್ನು ನೋಡಿ, ಸ್ವಲ್ಪಹೊತ್ತು ಯೋಚಿಸಿ ವಾನರೋತ್ತಮನಾದ ಹನುಮಂತನನ್ನು ಕುರಿತು ಹೀಗೆಂದನು. "ಎಲೈ ಹನುಮಂತನೇ! ನೀನು ಇಲ್ಲಿಂದ ಈಗಲೇ ಹೋಗು. ರಾಜಮಂದಿರದಲ್ಲಿರುವ ಎಲ್ಲರೂ ಸುಖವಾಗಿರುವ ವಿಷಯವನ್ನು ತಿಳಿದುಕೊಂಡು ಬರುವವನಾಗು. ನೀನು ಮೊದಲು ಶೃಂಗಿಬೇರಪುರಕ್ಕೆ ಹೋಗು. ಅಲ್ಲಿಗೆ ಹೋಗಿ ಅರಣ್ಯದಲ್ಲಿ ಸಂಚಾರ ಮಾಡುವಾತನೂ, ಬೇಡರಿಗೆಲ್ಲ ಒಡೆಯನೂ ಆದ ಆ ಗುಹನನ್ನು ನೋಡಿ ಆತನ ಕುಶಲವಾರ್ತೆಯನ್ನು ವಿಚಾರಿಸು. ಆ ತರುವಾಯ ನಾನು ಕ್ಷೇಮವಾಗಿರುವ ಸಂಗತಿಯನ್ನು ಆತನಿಗೆ ತಿಳಿಸುವವನಾಗು. ನನ್ನ ಪ್ರಾಣಸ್ನೇಹಿತನಾದ ಆ ಗುಹನು ನನ್ನ ಕುಶಲವಾರ್ತೆಯನ್ನು ಕೇಳಿದೊಡನೆಯೇ ಅಪರಿಮಿತವಾಗಿ ಸಂತೋಷಪಡುವನು. ಎಲೈ ಹನುಮಂತನೇ! ಆ ಗುಹನು ನಿನಗೆ ಅಯೋಧ್ಯಾ ಮಾರ್ಗವನ್ನೂ, ನಮ್ಮ ಭರತಕುಮಾರನ ಕುಶಲವನ್ನೂ

ಕುಶಲಂ ವಚನಾನ್ಮಮ । ಸಿದ್ಧಾರ್ಥಂ ಶಂಸ ಮಾಂ ತಸ್ಮೈ ಸಭಾರ್ಯಂ ಸಹಲಕ್ಷ್ಮಣಂ
॥೫॥ ಹರಣಂ ಚಾಪಿ ವೈದೇಹ್ಯಾ ರಾವಣೇನ ಬಲೀಯಸಾ । ಸುಗ್ರೀವೇಣಚ ಸಂಸರ್ಗಂ
ವಾಲಿನಶ್ಚ ವಧಂ ರಣೇ ॥೬॥ ಮೈಥಿಲ್ಯನ್ವೇಷಣಂಚೈವ ಯಥಾಚಾಧಿಗತಾ ತ್ವಯಾ ।
ಲಂಘಯಿತ್ವಾ ಮಹಾತೋಯಮಾಪಗಾಪತಿಮವ್ಯಯಂ ॥೭॥ ಉಪಯಾನಂ ಸಮು
ದ್ರಸ್ಯ ಸಾಗರಸ್ಯ ಚ ದರ್ಶನಂ । ಯಥಾಚ ಕಾರಿತಸ್ಸೇತೂ ರಾವಣಶ್ಚ ಯಥಾ ಹತಃ
॥ ೮ ॥ ವರದಾನಂ ಮಹೇಂದ್ರೇಣ ಬ್ರಹ್ಮಣಾ ವರುಣೇನಚ । ಮಹಾದೇವಪ್ರಸಾ
ದಾಚ್ಚ ಪಿತ್ರಾ ಮಮ ಸಮಾಗಮಂ ॥೯॥ ಉಪಯಾತಂಚ ಮಾಂ ಸೌಮ್ಯ! ಭರತಸ್ಯ

ವೃತ್ತಾಂತವನ್ನೂ, ನಿವೇದಯಿಷ್ಯತಿ - ಹೇಳುವನು. ॥ ೪ ॥ ಭರತಸ್ತು - ಭರತನಾದರೆ, ತ್ವಯಾ - ನಿನ್ನಿಂದ, ಮಮ - ನನ್ನ, ವಚನಾತ್ - ಮಾತಿನಿಂದ, ಕುಶಲಂ - ಕ್ಷೇಮವನ್ನು, ವಾಚ್ಯಃ - ಹೇಳ ತಕ್ಕವನು, ತಸ್ಮೈ - ಆ ಭರತನಿಗಾಗಿ, ಸಹಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ಸಭಾರ್ಯಂ- ಹೆಂಡತಿಯಿಂದೊಡಗೂಡಿದ, ಮಾಂ - ನನ್ನನ್ನು, ಸಿದ್ಧಾರ್ಥಂ - ಕೃತಕೃತ್ಯನನ್ನಾಗಿ, ಶಂಸ - ಹೇಳು. ॥ ೫ ॥ ಬಲೀಯಸಾ - ಬಲಿಷ್ಠನಾದ, ರಾವಣೇನ - ರಾವಣನಿಂದ, ವೈದೇಹ್ಯಾಃ - ಸೀತಾದೇವಿಯ, ಹರಣಂಚಾಪಿ - ಅಪಹಾರವನ್ನೂ, ಸುಗ್ರೀವೇಣ - ಸುಗ್ರೀವನೊಡನೆ, ಸಂಸರ್ಗಂಚ - ಸಹವಾಸ ವನ್ನೂ, ರಣೇ - ಕಾಳಗದಲ್ಲಿ, ವಾಲಿನಃ - ವಾಲಿಯ, ವಧಂಚ - ಸಂಹಾರವನ್ನೂ, ಮೈಥಿಲ್ಯ ನ್ವೇಷಣಂಚೈವ - ಸೀತಾದೇವಿಯ ಹುಡುಕುವಿಕೆಯನ್ನೂ, ತಥಾ - ಹಾಗೆಯೇ, ಅವ್ಯಯಂ - ನಾಶ ರಹಿತವಾದ, ಮಹಾತೋಯಂ - ಬಹಳ ಆಳವಾದ ನೀರುಳ್ಳ, ಆಪಗಾಪತಿಂ - ಸಮುದ್ರವನ್ನು, ಲಂಘ ಯಿತ್ವಾ - ದಾಟಿ, ಯಥಾ - ಹೇಗೆ, ತ್ವಯಾ - ನಿನ್ನಿಂದ, ಸೀತಾ - ಸೀತಾದೇವಿಯು, ಅಭಿಗತಾ - ಹೊಂದಲ್ಪಟ್ಟಳೋ, ತಥಾ - ಹಾಗೆಯೇ, ಶಂಸ - ಹೇಳು, ಸಮುದ್ರಸ್ಯ - ಕಡಲಿನ, ಉಪಯಾನಂ - ಸಮೀಪವನ್ನು ಕುರಿತು ಪ್ರಯಾಣವನ್ನೂ, ಸಾಗರಸ್ಯ - ಸಾಗರರಾಜನ, ದರ್ಶನಂಚ - ದರ್ಶನವನ್ನೂ, ಸೇತುಶ್ಚ - ಸೇತುವು, ಯಥಾ - ಹೇಗೆ, ಕಾರಿತಃ - ಮಾಡಿಸಲ್ಪಟ್ಟಿತೋ, ರಾವಣಶ್ಚ - ರಾವಣನು, ಯಥಾ - ಹೇಗೆ, ಹತಃ - ಹೊಡೆಯಲ್ಪಟ್ಟನೋ, ಮಹೇಂದ್ರೇಣ - ದೇವೇಂದ್ರನಿಂದಲೂ, ಬ್ರಹ್ಮಣಾ- ಬ್ರಹ್ಮನಿಂದಲೂ, ವರುಣೇನಚ - ವರುಣನಿಂದಲೂ, ವರದಾನಂ - ವರಪ್ರದಾನವನ್ನೂ, ಮಹಾ....ಚ- ಪರಮೇಶ್ವರನ ಅನುಗ್ರಹದಿಂದ, ಮಮ - ನನಗೆ, ಪಿತಾ - ತಂದೆಯು, ಸಮಾಗಮಂ - ದರ್ಶನ

ತಿಳಿಸುವನು. ಆ ತರುವಾಯ ನೀನು ಅಯೋಧ್ಯಾಪಟ್ಟಣಕ್ಕೆ ಹೋಗಿ ನನ್ನ ಕುಶಲವಾರ್ತೆ ಯನ್ನರುಹು. ನಾನು ಸೀತಾಲಕ್ಷ್ಮಣಸಮೇತನಾಗಿ ಕ್ಷೇಮವಾಗಿರುವ ವಿಷಯವನ್ನು ಭರತ ನಿಗೆ ತಿಳುಹಿಸು. ॥೧-೫॥ ಎಲೈ ವಾನರೋತ್ತಮನೇ! ರಾವಣಾಸುರನು ಸೀತೆಯನ್ನಪಹರಿಸಿ ಕೊಂಡು ಹೋದುದನ್ನೂ, ನಾನು ಸುಗ್ರೀವನೊಡನೆ ಸಖ್ಯಮಾಡಿಕೊಂಡುದನ್ನೂ, ಯುದ್ಧದಲ್ಲಿ ವಾಲಿಯನ್ನು ಸಂಹರಿಸಿದುದನ್ನೂ, ಸೀತಾನ್ವೇಷಣ ವೃತ್ತಾಂತವನ್ನೂ, ನೀನು ಆಕೆಯನ್ನು ಹುಡುಕಿ ಸಮಾಚಾರವನ್ನು ತಂದುದನ್ನೂ, ನೀನು ಸಮುದ್ರವನ್ನು ದಾಟಿದುದನ್ನೂ, ನಾವೆಲ್ಲರೂ ಸಾಗರಸಮೀಪವನ್ನು ಸೇರಿದುದನ್ನೂ, ಸಮುದ್ರರಾಜನ ಸಂದರ್ಶನ ಮತ್ತು ಸೇತುಬಂಧನಗಳನ್ನೂ, ರಾವಣನು ಮಡಿದುದನ್ನೂ, ವರುಣನಿಂದಲೂ, ಬ್ರಹ್ಮನಿಂದಲೂ, ಮಹೇಂದ್ರನಿಂದಲೂ ವರಗಳನ್ನು ಪಡೆದುದನ್ನೂ, ಪರಮೇಶ್ವರನ ಅನುಗ್ರಹದಿಂದ ನನ್ನ ತಂದೆಯನ್ನು ಸಂದರ್ಶಿಸಿದುದನ್ನೂ, ನಾನು ಪುನಃ ಇಲ್ಲಿಗೆ ಬಂದಿರುವುದನ್ನೂ, ವಿಭೀಷಣ

ನಿವೇದಯ । ಸಹರಾಕ್ಷಸರಾಜೇನ ಹರೀಣಾಂ ಪ್ರವರೇಣಚ ॥ ೧೦ ॥ ಏತಚ್ಛೃತ್ವಾ ಯಮಾಕಾರಂ ಭಜತೇ ಭರತಸ್ತದಾ । ಸಚ ತೇ ವೇದಿತವ್ಯಸ್ಸ್ಯಾತ್ಸರ್ವಂ ಯಚ್ಚಾಪಿ ಮಾಂ ಪ್ರತಿ ॥ ೧೧ ॥ ಜಿತ್ವಾ ಶತ್ರುಗಣಾನ್ ರಾಮಃ ಪ್ರಾಪ್ಯಚಾನುತ್ತಮಂ ಯಶಃ । ಉಪಯಾತಿ ಸಮೃದ್ಧಾರ್ಥಸ್ಸಹಮಿತ್ರೈರ್ಮಹಾಬಲೈಃ ॥ ೧೨ ॥ ಜ್ಞೇಯಾಶ್ಚ ಸರ್ವೇ ವೃತ್ತಾಂತಾ ಭರತಸ್ಯೇಂಗಿತಾನಿಚ । ತತ್ವೇನ ಮುಖವರ್ಣೇನ ದೃಷ್ಟ್ಯಾ ವ್ಯಾಭಾಷಣೇನಚ ॥ ೧೩ ॥ ಸರ್ವಕಾಲಸಮೃದ್ಧಂಹಿ ಹಸ್ತ್ಯಶ್ವರಥಸಂಕುಲಂ । ಪಿತೃ

ಸಂಭಾಷಣಾದಿ ರೂಪಕಾರ್ಯವನ್ನೂ, ಶಂಸ - ಹೇಳು, ಹೇ ಸೌಮ್ಯ - ಎಲೈ ಪ್ರಸನ್ನನೇ, ಭರತಸ್ಯ-ಭರತನಿಗೆ, ರಾಕ್ಷ.. ಹ - ವಿಭೀಷಣನಿಂದೊಡಗೂಡಿ, ಹರೀಣಾಂ - ಕಪಿಗಳ, ಪ್ರವರೇಣಚ - ರಾಜನಾದ ಸುಗ್ರೀವನೊಡಗೂಡಿ, ಮಾಂ - ನನ್ನನ್ನು, ಉಪಯಾತಂ - ಬಂದವನನ್ನಾಗಿ, ನಿವೇದಯ - ತಿಳಿಸು, ಏತತ್ - ಈ ಸಮಸ್ತವನ್ನೂ, ಶ್ರುತ್ವಾ - ಕೇಳಿ, ಭರತಃ - ಭರತನು, ತದಾ - ಆ ಕಾಲದಲ್ಲಿ, ಯಮಾಕಾರಂ - ಯಾವ ಚೇಷ್ಟೆಯನ್ನು, ಭಜತೇ - ಹೊಂದುತ್ತಾನೆಯೋ, ಸಃ - ಅದು, ತೇ - ನಿನ್ನಿಂದ, ವೇದಿತವ್ಯಃ - ತಿಳಿದುಕೊಳ್ಳತಕ್ಕದ್ದು, ಸರ್ವಂ - ಸಮಸ್ತವೂ, ಯತ್ಸ್ಯಾತ್ - ಯಾವುದಾಗುವದೋ, ತತ್ - ಅದು, ಮಾಂಪ್ರತಿ - ನನ್ನನ್ನು ಕುರಿತು, ವೇದಿತವ್ಯಂ - ತಿಳಿಸತಕ್ಕದ್ದು. ॥೬-೧೧॥ ರಾಮಃ - ಶ್ರೀರಾಮನು, ಶತ್ರುಗಣಾನ್ - ಶತ್ರುಗಳ ತಂಡಗಳನ್ನು, ಜಿತ್ವಾ - ಜಯಿಸಿ, ಅನುತ್ತಮಂ - ಸರ್ವೋತ್ತಮವಾದ, ಯಶಃ - ಕೀರ್ತಿಯನ್ನು, ಪ್ರಾಪ್ಯ - ಹೊಂದಿ, ಸಮೃದ್ಧಾರ್ಥಃ-ಸಫಲವಾದ ಕಾರ್ಯವುಳ್ಳವನಾಗಿ, ಮಹಾಬಲೈಃ - ಬಹಳ ಬಲಶಾಲಿಗಳಾದ, ಮಿತ್ರೈಸ್ಸಹ - ಸ್ನೇಹಿತರೊಡಗೂಡಿ, ಉಪಯಾತಿ - ಬರುತ್ತಾನೆ, ಇತಿ - ಇಂತೆಂದು, ಉಕ್ತ್ವಾ - ಹೇಳಿ, ಭರತಸ್ಯ - ಭರತನ, ಸರ್ವೇಪಿವೃತ್ತಾಂತಾಃ - ಸಮಸ್ತ ವಾರ್ತೆಗಳೂ, ಜ್ಞೇಯಾಃ - ತಿಳಿದುಕೊಳ್ಳತಕ್ಕವು, ತತ್ವೇನ - ಯಥಾರ್ಥವಾಗಿ, ಮುಖವರ್ಣೇನ - ಮುಖಕಾಂತಿಯಿಂದಲೂ, ದೃಷ್ಟ್ಯಾಚ - ನೋಟದಿಂದಲೂ, ವ್ಯಾಭಾಷಣೇನಚ - ಮಾತಿನಿಂದಲೂ, ಭರತಸ್ಯ - ಭರತನ, ಇಂಗಿತಾನಿ - ಚೇಷ್ಟಾವಿಶೇಷಗಳು, ಜ್ಞೇಯಾನಿ - ತಿಳಿದುಕೊಳ್ಳತಕ್ಕವು. ॥ ೧೨ ೧೩ ॥ ಸರ್ವ......ದ್ಧಃ - ಸರ್ವಕಾಲದಲ್ಲಿಯೂ ಧನದಿಂದ ಸಮೃದ್ಧವಾದ, ಹಸ್ತ್ಯ....ಲಂ - ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ

ನೊಡನೆಯೂ, ವಾನರೇಶ್ವರನಾದ ಸುಗ್ರೀವನೊಡನೆಯೂ, ಇಲ್ಲಿರುವ ವಿಷಯವನ್ನೂ ಇವೇ ಮೊದಲಾದ ಎಲ್ಲ ಸಂಗತಿಗಳನ್ನೂ ಆ ಭರತನಿಗೆ ತಿಳಿಸು. ॥ ೬-೧೦ ॥ ಇದಾದ ತರುವಾಯ ಭರತನ ಮುಖದಲ್ಲಿ ಮೂಡುವ ಭಾವಗಳನ್ನೂ, ಚೇಷ್ಟೆಗಳನ್ನೂ ಚೆನ್ನಾಗಿ ತಿಳಿದುಕೊಳ್ಳುವವನಾಗು. ಆಮೇಲೆ ನಾನು ಶತ್ರುಗಳನ್ನು ಜಯಿಸಿದ ವಿಧಾನವನ್ನೂ, ಅಪರಿಮಿತವಾದ ಕೀರ್ತಿಯನ್ನು ಗಳಿಸಿದ ವಿಚಾರವನ್ನೂ, ಮಹಾ ಬಲಾಢ್ಯರಾದ ಮಿತ್ರರೊಡನೆ ಇಲ್ಲಿಗೈತಂದಿರುವುದನ್ನೂ, ಕೃತಕಾರ್ಯನಾಗಿರುವುದನ್ನೂ ಇನ್ನೂ ನಾನು ಮಾಡಿರುವ ಇತರ ಕಾರ್ಯಗಳನ್ನೂ ಆತನಿಗೆ ತಿಳಿಯಪಡಿಸು. ಆಮೇಲೆಯೂ ಭರತನು ಅವುಗಳೆಲ್ಲವನ್ನೂ ಕೇಳಿ ಯಾವ ಆಕಾರವನ್ನು ತಾಳುವನೋ, ಯಾವ ಚೇಷ್ಟೆಗಳನ್ನು ಮಾಡುವನೋ ಅವುಗಳೆಲ್ಲವನ್ನೂ ತಿಳಿದುಕೊಳ್ಳುವವನಾಗು. ಎಲೈ ಕಪಿಶ್ರೇಷ್ಠನೇ! ಮುಖವರ್ಣದಿಂದಲೂ, ಸಂಭಾಷಣೆಯಿಂದಲೂ, ಯಥಾರ್ಥವಾಗಿರುವ ಸಂಗತಿಗಳೆಲ್ಲವನ್ನೂ ತಿಳಿದುಕೊಂಡು ಬರುವವನಾಗು. ಎಲ್ಲ ಕಾಲಗಳಲ್ಲಿಯೂ ಸುಸಮೃದ್ಧವಾಗಿ, ಚತುರಂಗಬಲಸಮನ್ವಿತವಾಗಿ, ನಮ್ಮ ತಂದೆತಾತಂದಿರ ಕಾಲ

ಪೈತಾಮಹಂ ರಾಜ್ಯಂ ಕಸ್ಯ ನಾವರ್ತಯೇನ್ಮನಃ ||೧೪|| ಸಂಗತ್ಯಾ ಭರತಃ ಶ್ರೀಮಾನ್ ರಾಜ್ಯಾರ್ಥೀ ಚೇತ್ಸ್ವಯಂ ಭವೇತ್ | ಪ್ರಶಾಸ್ತು ವಸುಧಾಂ ಕೃತ್ಸ್ನಾಮಖಿಲಾಂ ರಘುನಂದನಃ ||೧೫|| ತಸ್ಯ ಬುದ್ಧಿಂ ಚ ವಿಜ್ಞಾಯ ವ್ಯವಸಾಯಂಚ ವಾನರ! | ಯಾವನ್ನದೂರಂ ಯಾತಾಸ್ಸ್ಮ ಕ್ಷಿಪ್ರಮಾಗಂತುಮರ್ಹಸಿ" ||೧೬|| ಇತಿ ಪ್ರತಿಸಮಾದಿಷ್ಟೋ ಹನುಮಾನ್ ಮಾರುತಾತ್ಮಜಃ | ಮಾನುಷಂ ಧಾರಯನ್ ರೂಪಮಯೋಧ್ಯಾಂ ತ್ವರಿತೋ ಯಯೌ ||೧೭|| ಅಥೋತ್ಪಪಾತ ವೇಗೇನ ಹನುಮಾನ್ ಮಾರುತಾತ್ಮಜಃ | ಗರುತ್ಮಾನಿವ ವೇಗೇನ ಜಿಘೃಕ್ಷನ್ ಭುಜಗೋತ್ತಮಂ ||೧೮||

ತುಂಬಿರುವ, ಪಿತೃಪೈತಾಮಹಂ - ಪಿತೃಪಿತಾಮಹಾದಿಗಳಿಂದ ಪ್ರಾಪ್ತವಾದ, ರಾಜ್ಯಂ - ರಾಜ್ಯವು, ಕಸ್ಯ - ಯಾವನ, ಮನಃ - ಮನವನ್ನು, ನಾವರ್ತಯೇತ್ - ತಿರುಗಿಸದಿರುವದು. ||೧೪|| ಸಂಗತ್ಯಾ - ಚಿರಕಾಲದ ರಾಜ್ಯಪರಿಚಯದಿಂದ, ಶ್ರೀಮಾನ್ - ಸಂಪದ್ಯುಕ್ತನಾದ, ಭರತಃ - ಭರತನು, ಸ್ವಯಂ - ತಾನು, ರಾಜ್ಯಾರ್ಥೀ - ರಾಜ್ಯವನ್ನಪೇಕ್ಷಿಸುತ್ತಿರುವವನು, ಭವೇತ್ಕಚ್ಚಿತ್ - ಆಗಿರುವನೇ ಆದರೆ, ರಘುನಂದನಃ - ರಘುಕುಲಾನಂದಕರನಾದ ಭರತನು, ಅಖಿಲಾಂ - ಖಿಲವಾಗದಿರುವ, ಕೃತ್ಸ್ನಾಂ - ಸಮಸ್ತವಾದ, ವಸುಧರಾಂ - ಭೂಮಿಯನ್ನು, ಪ್ರಶಾಸ್ತು - ಪಾಲಿಸಲಿ. ||೧೫|| ಹೇ ವಾನರ - ಎಲೈ ಆಂಜನೇಯನೇ, ತಸ್ಯ - ಆ ಭರತನ, ಬುದ್ಧಿಂಚ - ಮನಸ್ಸನ್ನೂ, ವ್ಯವಸಾಯಂಚ - ಉದ್ಯೋಗವನ್ನೂ, ವಿಜ್ಞಾಯ - ತಿಳಿದು, ಯಾವತ್ - ಎಷ್ಟರೊಳಗೆ, ದೂರಂ - ದೂರಮಾರ್ಗವನ್ನು, ಯಾತಾಃ - ಬಂದವರು, ನಸ್ಮ - ಆಗದಿರುವೆವೋ, ತಾವತ್ - ಅಷ್ಟರೊಳಗೆ, ಕ್ಷಿಪ್ರಂ - ಜಾಗ್ರತೆಯಾಗಿ, ಆಗಂತುಂ - ಬರುವದಕ್ಕಾಗಿ, ಅರ್ಹಸಿ - ಯೋಗ್ಯನಾಗು. ||೧೬|| ಇತಿ - ಈ ಪರಿಯಾಗಿ, ಪ್ರತಿಸಮಾದಿಷ್ಟಃ - ಆಜ್ಞಾಪಿಸಲ್ಪಟ್ಟ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಮಾನುಷಂ - ಮನುಷ್ಯಸಂಬಂಧವಾದ, ರೂಪಂ - ರೂಪವನ್ನು, ಧಾರಯನ್ - ಧರಿಸಿ, ತ್ವರಿತಃ - ತ್ವರೆಯುಳ್ಳವನಾಗಿ, ಅಯೋಧ್ಯಾಂ - ಆಯೋಧ್ಯಾಪಟ್ಟಣವನ್ನು ಕುರಿತು, ಯಯೌ - ತೆರಳಿದನು. ||೧೭|| ಅಥ - ಬಳಿಕ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಅಂಜನೇಯನು, ವೇಗೇನ - ವೇಗದಿಂದ, ಭುಜಗೋತ್ತಮಂ - ಉತ್ತಮವಾದ ಸರ್ಪವನ್ನು, ಜಿಘೃಕ್ಷನ್ - ಗ್ರಹಿಸಲಿಚ್ಛೆಯುಳ್ಳ, ಗರುತ್ಮಾನಿವ - ಗರುಡನಂತೆ, ಉತ್ಪಪಾತ - ಹಾರಿದನು.

ದಿಂದಲೂ ಪಾರಂಪರ್ಯವಾಗಿ ಬರುತ್ತಿರುವ ರಾಜ್ಯದ ಮೇಲೆ ಯಾರಿಗೆತಾನೆ ಆಶೆಯಿರುವುದಿಲ್ಲವು! ಎಲ್ಲರಿಗೂ ಇದ್ದೇ ಇರುತ್ತದೆ. ಆದುದರಿಂದ ಭರತನ ಅಭಿಪ್ರಾಯವನ್ನು ನೀನು ಅವಶ್ಯವಾಗಿಯೂ ತಿಳಿದುಕೊಂಡು ಬರುವವನಾಗು. ಎಲೈ ಹನುಮಂತನೇ! ಭರತನಿಗೆ ನಿಜವಾಗಿಯೂ ರಾಜ್ಯವಾಳಬೇಕೆಂಬ ಅಪೇಕ್ಷೆಯಿರುವುದಾದರೆ ಆತನೇ ರಾಜ್ಯವೆಲ್ಲವನ್ನೂ ಆಳಿಕೊಳ್ಳಲಿ. (ಭರತನು ರಾಜ್ಯವಾಳುವನೆಂಬ ಕೋಪವು ನನಗೆಷ್ಟುಮಾತ್ರವೂ ಇರುವುದಿಲ್ಲ.) ಆದುದರಿಂದೆಲೈ ಕಪಿವೀರನೇ! ಭರತನಿಗೆ ಅಂತಹ ಅಭಿಪ್ರಾಯವೇನಾದರೂ ಇರುವುದಾದರೆ ನಾವು ಅಯೋಧ್ಯಾಪಟ್ಟಣದ ಸಮೀಪವನ್ನು ಸೇರುವಷ್ಟರೊಳಗೆ ಜಾಗ್ರತೆಯಾಗಿ ಬಂದು ನನಗೆ ತಿಳುಹಿಸುವವನಾಗು.'' ||೧೧-೧೬|| ಶ್ರೀರಾಮಮೂರ್ತಿಯು ಈ ರೀತಿ ನುಡಿದೊಡನೆಯೇ ಆ ಹನುಮಂತನು ಮಾನವರೂಪವನ್ನು ಧರಿಸಿ ಅಯೋಧ್ಯಾನಗರಕ್ಕೆ ಬಹಳ ಜಾಗ್ರತೆಯಾಗಿ ಹೊರಟನು. ಆ ತರುವಾಯ ವಾಯುನಂದನನಾದ ಹನುಮಂತನು ಆಕಾಶ ಮಾರ್ಗ

ಲಂಘಯಿತ್ವಾ ಪಿತೃಪಥಂ ಭುಜಗೇಂದ್ರಾಲಯಂ ಶುಭಂ । ಗಂಗಾಯಮುನಯೋರ್ಮಧ್ಯಂ ಸನ್ನಿಪಾತಮತೀತ್ಯಚ ॥ ೧೯ ॥ ಶೃಂಗಿಬೇರಪುರಂ ಪ್ರಾಪ್ಯ ಗುಹಮಾಸಾದ್ಯ ವೀರ್ಯವಾನ್ । ಸ ವಾಚಾ ಶುಭಯಾ ಹೃಷ್ಟೋ ಹನುಮಾನಿದಮಬ್ರವೀತ್ ॥೨೦॥ “ಸಖಾ ತು ತವ ಕಾಕುತ್ಸ್ಥೋ ರಾಮಸ್ಸತ್ಯಪರಾಕ್ರಮಃ । ಸಹಸೀತಸ್ಸಸೌಮಿತ್ರಿಸ್ಸತ್ವಾಂ ಕುಶಲಮಬ್ರವೀತ್ ॥ ೨೧ ॥ ಪಂಚಮೀಮದ್ಯ ರಜನೀಮುಷಿತ್ವಾ ವಚನಾನ್ಮುನೇಃ । ಭರದ್ವಾಜಾಭ್ಯನುಜ್ಞಾತಂ ದ್ರಕ್ಷ್ಯಸ್ಯದ್ಯೈವ ರಾಘವಂ” ॥ ೨೨ ॥ ಏವಮುಕ್ತ್ವಾ ಮಹಾತೇಜಾಸ್ಸಂಪ್ರಹೃಷ್ಟತನೂರುಹಃ । ಉತ್ಪಪಾತ ಮಹಾವೇಗೋ

॥ ೧೮ ॥ ಪಿತೃಪಥಂ - ವಾಯುಮಾರ್ಗವನ್ನು ಕುರಿತು, ಲಂಘಯಿತ್ವಾ - ಹಾರಿ, ಭುಜಗೇಂದ್ರಾಲಯಂ - ಸರ್ಪಗಳಿಗೆ ಆಸ್ಪದವಾದ, ಶುಭಂ - ಶುಭಕರವಾದ, ಗಂಗಾಯಮುನಯೋಃ - ಗಂಗಾಯಮುನಾನದಿಗಳ, ಮಧ್ಯಂ - ಮಧ್ಯಪ್ರದೇಶವನ್ನು, ಸನ್ನಿಪಾತಂಚ - ಸಂಗಮ ಸ್ಥಳವನ್ನೂ, ಅತೀತ್ಯ - ದಾಟಿ, ವೀರ್ಯವಾನ್ - ಪರಾಕ್ರಮಶಾಲಿಯಾದ, ಹನುಮಾನ್ - ಆ ಆಂಜನೇಯನು, ಹೃಷ್ಟಃ - ಸಂತೋಷಗೊಂಡವನಾಗಿ, ಶೃಂಗಿಬೇರಪುರಂ - ಶೃಂಗಿಬೇರಪುರವನ್ನು, ಪ್ರಾಪ್ಯ - ಸೇರಿ, ಗುಹಂ - ಗುಹನನ್ನು, ಆಸಾದ್ಯ - ಹೊಂದಿ, ಹೃಷ್ಟಃ - ಸಂತೋಷಗೊಂಡವನಾಗಿ, ಶುಭಯಾ - ಶುಭಕರವಾದ, ವಾಚಾ - ಮಾತಿನಿಂದ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥೧೯-೨೦॥ ತವ - ನಿನಗೆ, ಸಖಾ - ಸ್ನೇಹಿತನಾದ, ಕಾಕುತ್ಸ್ಥಃ - ಕಕುತ್ಸ್ಥವಂಶೋತ್ಪನ್ನನಾದ, ಸತ್ಯಪರಾಕ್ರಮಃ - ಸಫಲವಾದ ಪರಾಕ್ರಮವುಳ್ಳ, ರಾಮಸ್ತು - ಆ ಶ್ರೀರಾಮನಾದರೆ, ಸಹಸೀತಃ - ಸೀತಾಸಮೇತನಾಗಿ, ಸಸೌಮಿತ್ರಿಃ - ಲಕ್ಷ್ಮಣನಿಂದೊಡಗೂಡಿ, ತ್ವಾಂ - ನಿನ್ನನ್ನು, ಕುಶಲಂ - ಕ್ಷೇಮವನ್ನು, ಅಬ್ರವೀತ್ - ನುಡಿದನು. ॥೨೧॥ ಪಂಚಮೀಂ - ಪಂಚಮೀ ಸಂಬಂಧಿಯಾದ, ಅದ್ಯ ರಜನೀಂ - ಈ ರಾತ್ರಿಯಲ್ಲಿ, ಮುನೇಃ - ಭರದ್ವಾಜಋಷಿಯ, ವಚನಾತ್ - ಮಾತಿನ ದೆಸೆಯಿಂದ, ಉಷಿತ್ವಾ - ಇದ್ದು, ಭರ....ತಂ - ಭರದ್ವಾಜಋಷಿಯಿಂದ ಅಪ್ಪಣೆ ತೆಗೆದುಕೊಂಡು ಬರುತ್ತಿರುವ, ರಾಘವಂ - ಶ್ರೀರಾಮನನ್ನು, ಅದ್ಯೈವ - ಕೊಂಚ ಕಾಲದಲ್ಲಿಯೇ, ದ್ರಕ್ಷ್ಯಸಿ - ನೋಡುವೆ. ॥೨೨॥ ಏವಂ - ಈ ಪರಿಯಾಗಿ, ಉಕ್ತ್ವಾ - ಹೇಳಿ, ಮಹಾತೇಜಾಃ - ಬಹಳ ಪ್ರಭಾವವಂತನಾದ,

ವನ್ನವಲಂಬಿಸಿ ಮಹಾ ಸರ್ಪವನ್ನು ಗ್ರಹಿಸಲಿಚ್ಛೆಯಿಂದ ಮಹಾ ವೇಗದಿಂದ ಹಾರಿಬರುವ ಗರುತ್ಮಂತನಂತೆ ಬಹ ಜಾಗ್ರತೆಯಾಗಿಹೊರಟು ಬಹಳಶುಭಕರವಾದುದೂ, ಭುಜಗೇಂದ್ರರಿಗೆ ಆವಾಸಸ್ಥಾನವಾದುದೂ ಆದ ಗಂಗಾ ಯಮುನಾ ನದಿಗಳ ಸಂಗಮ ಪ್ರದೇಶಕ್ಕೆ ಬಂದನು. ಮಹಾ ಪರಾಕ್ರಮಿಯಾದ ಹನುಮಂತನು ಅಮೇಲೆ ಪ್ರಯಾಗಕ್ಕೆ ಬಂದು ಶೃಂಗಿಬೇರಪುರವನ್ನು ಸೇರಿ ಬೇಡರೊಡೆಯನಾದ ಗುಹನನ್ನು ಕಂಡನು. ಆಗ ಹನುಮಂತನು ಪರಮ ಸಂತುಷ್ಟನಾಗಿ ಶುಭಕರಗಳಾದ ಮಾತುಗಳನ್ನಾಡುತ್ತ ಆತನನ್ನು ಕುರಿತು, “ಎಲೈ ನಿಷಾದರಾಜನೇ! ಗುಹಾ!! ನಿನಗೆ ಸ್ನೇಹಿತನೂ, ಸತ್ಯಪರಾಕ್ರಮಿಯೂ, ಕಕುತ್ಸ್ಥವಂಶೋತ್ಪನ್ನನೂ ಆದ ಶ್ರೀರಾಮಮೂರ್ತಿಯು ಸೀತಾಲಕ್ಷ್ಮಣರೊಡನೆ ಬರುತ್ತ ತನ್ನ ಕುಶಲ ವಾರ್ತೆಯನ್ನು ನಿನಗೆ ತಿಳಿಸಿ ಬರಬೇಕೆಂದು ಆಜ್ಞಾಪಿಸಿರುವನು. ಈ ಪಂಚಮೀ ತಿಥಿಯ ರಾತ್ರಿಯೆಲ್ಲ ಭರದ್ವಾಜ ಮುನಿಯ ವಚನಾನುಸಾರವಾಗಿ ಆತನ ಆಶ್ರಮದಲ್ಲಿಯೇ ತಂಗಿದ್ದು ಆತನ ಅಪ್ಪಣೆಯನ್ನು ಪಡೆದು ಬರುವ ಶ್ರೀರಾಮಮೂರ್ತಿಯನ್ನು ನೀನು ನೋಡುವೆ” ಎಂದು ಹೇಳಿದನು. ॥೧೭-೨೨॥ ಮಹಾ ತೇಜೋವಂತನಾದ ಆಂಜನೇಯನು ಈ ರೀತಿ ನುಡಿದು ರೋಮಾಂಚನ

ವೇಗವಾನವಿಚಾರಯರ್ನ್ ॥೨೩॥ ಸೋಽಪಶ್ಯದ್ರಾಮತೀರ್ಥಂಚ ನದೀಂ ವಾಲುಕಿನೀಂ ತಥಾ । ಗೋಮತೀಂ ತಾಂಚ ಸೋಽಪಶ್ಯತ್ ಭೀಮಂ ಸಾಲವನಂ ತಥಾ ॥ ೨೪ ॥ ಪ್ರಜಾಶ್ಚ ಬಹುಸಾಹಸ್ರಾಃ ಸ್ಫೀತಾನ್ ಜನಪದಾನಪಿ । ಸಗತ್ವಾ ದೂರಮಧ್ವಾನಂ ತ್ವರಿತಃ ಕಪಿಕುಂಜರಃ । ಆಸಸಾದಂ ದ್ರುಮಾನ್ ಫುಲ್ಲಾನ್ ನಂದಿಗ್ರಾಮ ಸಮೀಪಗಾನ್ ॥ ೨೫-೨೬ ॥ ಸ್ತ್ರೀಭಿಸ್ಸಪುತ್ರೈರ್ವೃದ್ಧೈಶ್ಚ ರಮಮಾಣೈರಲಂಕೃತಾನ್ । ಸುರಾಧಿಪಸ್ಯೋಪವನೇ ಯಥಾ ಚೈತ್ರರಥೇ ದ್ರುಮಾನ್ ॥ ೨೭ ॥ ಕ್ರೋಶಮಾತ್ರೇತ್ವಯೋಧ್ಯಾಯಾಶ್ಚೀರಕೃಷ್ಣಾಜಿನಾಂಬರಂ । ದದರ್ಶ ಭರತಂ ದೀನಂ ಕೃಶಮಾಶ್ರಮವಾಸಿನಂ

ಸಂಪ್ರ....ಹಃ - ಹರ್ಷಯುಕ್ತವಾದ ರೋಮಗಳುಳ್ಳವನಾಗಿ, ಮಹಾವೇಗಃ - ಬಹಳ ವೇಗವುಳ ಆಂಜನೇಯನು, ವೇಗವಾನ್ - ವೇಗವಂತನಾಗಿ, ಅವಿಚಾರಯನ್ - ಆಯಾಸವನ್ನು ಗಮನಿಸದೆ, ಉತ್ಪಪಾತ - ಮೇಲಕ್ಕೆ ಹಾರಿದನು. ॥ ೨೩ ॥ ಸಃ - ಆ ಆಂಜನೇಯನು, ರಾಮತೀರ್ಥಂಚ - ಪರಶುರಾಮತೀರ್ಥವನ್ನೂ, ತಥಾ - ಹಾಗೆಯೇ, ವಾಲುಕಿನೀಂ - ವಾಲುಕಿನೀ ಎಂಬ, ನದೀಂ - ಹೊಳೆಯನ್ನು, ಗೋಮತೀಂ - ಗೋಮತೀ ನದಿಯನ್ನು, ಅಪಶ್ಯತ್ - ಕಂಡನು. ॥ ೨೪ ॥ ಸಃ - ಆ ಆಂಜನೇಯನು, ಭೀಮಂ - ಭಯಂಕರವಾದ, ಸಾಲವನಂ - ಸಾಲವೃಕ್ಷಗಳ ವನವನ್ನು, ತಥಾ - ಹಾಗೆಯೇ, ಬಹುಸಾಹಸ್ರಾಃ - ಅನೇಕ ಸಾವಿರ ಸಂಖ್ಯಾಕರಾದ, ಪ್ರಜಾಶ್ಚ - ಪ್ರಜೆಗಳನ್ನೂ, ಸ್ಫೀತಾನ್ - ಸಮೃದ್ಧಗಳಾದ, ಜನಪದಾನಪಿ - ದೇಶಗಳನ್ನೂ, ಅಪಶ್ಯತ್ - ಕಂಡನು. ॥೨೫॥ ಸಕಪಿಕುಂಜರಃ - ಆ ವಾನರೋತ್ತಮನು, ತ್ವರಿತಃ - ತ್ವರೆಯುಳ್ಳವನಾಗಿ, ದೂರಂ - ಬಹಳದೂರ, ಅಧ್ವಾನಂ - ಮಾರ್ಗದಲ್ಲಿ, ಗತ್ವಾ - ಹೋಗಿ, ನಂದಿ....ಗಾನ್ - ನಂದಿಗ್ರಾಮದ ಸಮೀಪದಲ್ಲಿರುವ, ಸ್ತ್ರೀಭಿಃ - ಹೆಂಗಸರೊಡಗೂಡಿ, ರಮಮಾಣೈಃ - ಆಡುತ್ತಿರುವ, ಸಪುತ್ರೈಃ - ಮಕ್ಕಳಿಂದೊಡಗೂಡಿದ, ವೃದ್ಧೈಃ - ಮುದುಕರಿಂದ, ಅಲಂಕೃತಾನ್ - ಅಲಂಕರಿಸಲ್ಪಟ್ಟ, ಸುರಾಧಿಪಸ್ಯ - ದೇವೇಂದ್ರನ, ಉಪವನೇ - ಉದ್ಯಾನದಲ್ಲಿಯೂ, ಚೈತ್ರರಥೇ - ಕುಬೇರನ ವನದಲ್ಲಿಯೂ, ದ್ರುಮಾನ್ಯಥಾ - ಮರಗಳಂತೆ, ಫುಲ್ಲಾನ್ - ಅರಳಿದ, ದ್ರುಮಾನ್ - ಗಿಡಗಳನ್ನೂ, ಆಸಸಾದ - ಹೊಂದಿದನು. ॥ ೨೬-೨೭ ॥ ಅಯೋಧ್ಯಯಾಃ - ಅಯೋಧ್ಯಾಪಟ್ಟಣಕ್ಕೆ, ಕ್ರೋಶಮಾತ್ರೇ - ಹರಿದಾರಿ ದೂರದಲ್ಲಿ, ಚೀರ....ರಂ- ನಾರುಮಡಿಗಳೂ, ಕೃಷ್ಣಾಜಿನಗಳೇ ವಸ್ತ್ರಗಳಾಗುಳ್ಳ, ದೀನಂ - ದೀನಮುಖನಾದ, ಕೃಶಂ - ಕೃಶೀ

ವುಳ್ಳವನಾಗಿ ಯಾವ ವಿಧದಲ್ಲಿಯೂ ಆಲೋಚಿಸದೆಯೇ ಅಂತರಿಕ್ಷಕ್ಕೆ ಮತ್ತೆ ಹಾರಿ ಹೊರಟನು. ಆಮೇಲೆ ಆತನು ಪರಶುರಾಮ ತೀರ್ಥವನ್ನೂ, ವಾಲುಕೀ ನದಿಯನ್ನೂ, ಗೋಮತೀ ನದಿಯನ್ನೂ, ಗಹನಾತಿಗಹನವಾದ ಸಾಲವನವನ್ನೂ ನೋಡಿದನು. ಇಷ್ಟೆಯಲ್ಲದೆ ಅನೇಕ ದೇಶಗಳನ್ನೂ, ಅನೇಕ ಸಹಸ್ರ ಜನಗಳನ್ನೂ ಸಣ್ಣಪುಟ್ಟ ಹಳ್ಳಿಗಳನ್ನೂ ನೋಡುತ್ತ ಆ ವಾನರವೀರನು ಬಹಳ ದೂರ ಹೋದನು. ಆಗ ಆ ಪ್ರದೇಶಗಳಲ್ಲಿ ವಿಹರಿಸುತ್ತಿರುವ ಸ್ತ್ರೀಪುರುಷರಿಂದಲೂ, ವೃದ್ಧರಿಂದಲೂ ಅಲಂಕೃತವಾಗಿ ಹೂಗಳಿಂದ ನಗುವಂತಿರುವ ನಂದಿಗ್ರಾಮಕ್ಕೆ ಸಮೀಪದಲ್ಲಿರುವ ವೃಕ್ಷಗಳನ್ನು ನೋಡಿದನು. ಆ ವೃಕ್ಷಗಳೆಲ್ಲವೂ ದೇವೇಂದ್ರನ ನಂದನೋದ್ಯಾನವು ವೃಕ್ಷಗಳಂತೆ ಶೋಭಿಸುತ್ತಿದ್ದುವು. ॥೨೩—೨೭॥ ಆ ತರುವಾಯ ಅಯೋಧ್ಯಾಪಟ್ಟಣಕ್ಕೆ ಒಂದು ಕ್ರೋಶಮಾತ್ರ ದೂರದಲ್ಲಿಯೇ ನಾರುಡಿಯುಟ್ಟು, ಕೃಷ್ಣಾಜಿನವನ್ನು ಹೊದೆದು, ದೀನನೂ, ಸಮೆದುಹೋಗಿರುವವನೂ, ಆಶ್ರಮದಲ್ಲಿರುವವನೂ ಆದ ಭರತಕುಮಾರನನ್ನು

॥ ೨೮ ॥ ಜಟಿಲಂ ಮಲದಿಗ್ಧಾಂಗಂ ಭ್ರಾತೃವ್ಯಸನಕರ್ಶಿತಂ । ಫಲಮೂಲಾಶಿನಂ ದಾಂತಂ ತಾಪಸಂ ಧರ್ಮಚಾರಿಣಂ ॥ ೨೯ ॥ ಸಮುನ್ನತ ಜಟಾಭಾರಂ ವಲ್ಕಲಾಜಿನವಾಸನಂ । ನಿಯತಂ ಭಾವಿತಾತ್ಮಾನಂ ಬ್ರಹ್ಮರ್ಷಿಸಮತೇಜಸಂ ॥ ೩೦ ॥ ಪಾದುಕೇ ತೇ ಪುರಸ್ಕೃತ್ಯ ಶಾಸಂತಂ ವೈ ವಸುಂಧರಾಂ । ಚಾತುರ್ವರ್ಣ್ಯಸ್ಯ ಲೋಕಸ್ಯ ತ್ರಾತಾರಂ ಸರ್ವತೋ ಭಯಾತ್ ॥ ೩೧ ॥ ಉಪಸ್ಥಿತಮಮಾತ್ಯೈಶ್ಚ ಶುಚಿಭಿಶ್ಚ ಪುರೋಹಿತೈಃ । ಬಲಮುಖ್ಯೈಶ್ಚ ಯುಕ್ತೈಶ್ಚ ಕಾಷಾಯಾಂಬರಧಾರಿಭಿಃ ॥ ೩೨ ॥ ನಹಿ ತೇ ರಾಜಪುತ್ರಂ ತಂ ಚೀರಕೃಷ್ಣಾಜಿನಾಂಬರಂ । ಪರಿಭೋಕ್ತುಂ ವ್ಯವಸ್ಯಂತಿ

ಭೂತನಾದ, ಆಶ್ರಮವಾಸಿನಂ - ಪರ್ಣಶಾಲೆಯಲ್ಲಿ ವಾಸಮಾಡುತ್ತಿರುವ, ಜಟಿನಂ - ಜಟಾಧಾರಿಯಾದ, ಮಲದಿಗ್ಧಾಂಗಂ-ಮಾಲಿನ್ಯದಿಂದ ವ್ಯಾಪ್ತವಾದ ಶರೀರವುಳ್ಳ, ಭ್ರಾತೃ....ತಂ-ಅಣ್ಣನ ವಿಷಯವಾದ ವ್ಯಸನದಿಂದ ಕೃಶೀಭೂತನಾದ, ಫಲಮೂಲಾಶಿನಂ - ಕಂದಮೂಲಗಳನ್ನು ಫಲಗಳನ್ನು ತಿನ್ನುತ್ತಿರುವ, ದಾಂತಂ - ಇಂದ್ರಿಯ ನಿಗ್ರಹಶೀಲನಾದ, ತಾಪಸಂ - ತಪೋನಿಷ್ಠನಾದ, ಧರ್ಮಚಾರಿಣಂ- ಧರ್ಮಾನುಷ್ಠಾನ ತತ್ಪರನಾದ, ಸಮು......ರಂ-ಅತ್ಯುನ್ನತವಾದ ಜಟೆಗಳನ್ನು ಧರಿಸಿರುವ, ವಲ್ಕ....ಸಂ- ನಾರುಮಡಿಗಳೂ, ಕೃಷ್ಣಾಜಿನವೇ ವಸ್ತ್ರವಾಗುಳ್ಳ, ನಿಯತಂ - ನಿಯತಪರನಾದ, ಭಾವಿತಾತ್ಮಾನಂ - ಆತ್ಮಜ್ಞಾನನಿಷ್ಠನಾದ, ಬ್ರಹ್ಮ....ಸಂ-ಬ್ರಹ್ಮರ್ಷಿಗೆ ಸಮಾನವಾದ ಮುಖಕಾಂತಿಯುಳ್ಳ, ತೇಪಾದುಕೇ- ಆ ಶ್ರೀರಾಮನ ಪಾದುಕೆಗಳನ್ನು, ಪುರಸ್ಕೃತ್ಯ - ಮುಂದು ಮಾಡಿಕೊಂಡು, ವಸುಂಧರಾಂ - ಭೂಮಿಯನ್ನು, ಶಾಸಂತಂ - ರಕ್ಷಿಸುತ್ತಿರುವ, ಸರ್ವತೋಭಯಾತ್ - ಸಮಸ್ತ ಭಯಗಳ ದೆಸೆಯಿಂದಲೂ, ಚಾತುರ್ವರ್ಣ್ಯಸ್ಯ - ಬ್ರಹ್ಮ. ಕ್ಷತ್ರಿ. ವೈಶ್ಯ, ಶೂದ್ರರೆಂಬ ನಾಲ್ಕು ಜಾತಿಗಳೆಂಬ, ಲೋಕಸ್ಯ - ಜನಕ್ಕೆ, ತ್ರಾತಾರಂ-ರಕ್ಷಣಕರ್ತನಾದ, ಶುಚಿಭಿಃ-ಪರಿಶುದ್ಧರಾದ, ಅಮಾತ್ಯೈಶ್ಚ-ಮಂತ್ರಿಗಳಿಂದಲೂ, ಪುರೋಹಿತೈಶ್ಚ-ವಸಿಷ್ಠಾದಿ ಪುರೋಹಿತರಿಂದಲೂ, ಉಪಸ್ಥಿತಂ ಕೂಡಿರುವ, ಕಾಷಾ....ಭಿಃ-ಕೆಂಪು ವಸ್ತ್ರಗಳನ್ನು ಧರಿಸಿರುವ, ಯುಕ್ತೈಃ - ವಿಹಿತಮಾರ್ಗದಲ್ಲಿರುವ, ಬಲಮುಖ್ಯೈಶ್ಚ - ಸೇನಾಧಿಪತಿಗಳಿಂದಲೂ, ಉಪಸ್ಥಿತಂ - ಕೂಡಿರುವ, ಭರತಂ - ಭರತನನ್ನು, ದದರ್ಶ - ಕಂಡನು. ॥೨೮ ೩೨॥ ಧರ್ಮವತ್ಸಲಾಃ- ಧರ್ಮದಲ್ಲಿಯೇ ಅಭಿಮಾನವುಳ್ಳ, ತೇಪೌರಾಃ - ಆ ಅಯೋಧ್ಯಾಪಟ್ಟಣವಾಸಿಗಳು, ಚೀರ....ರಂ - ನಾರುಮಡಿಗಳೂ, ಕೃಷ್ಣಾಜಿನಗಳೇ ವಸ್ತ್ರಗಳಾಗಿ ಹೊದೆದಿರುವ, ರಾಜಪುತ್ರಂ - ರಾಜಪುತ್ರನಾದ,

---

ನೋಡಿದನು. ಆ ಸಮಯದಲ್ಲಿ ಭರತಕುಮಾರನು ಜಟಾಧಾರಿಯಾಗಿ, ಧೂಳಿನಿಂದ ಮುಚ್ಚಿದ ಮೈಯುಳ್ಳವನಾಗಿ, ಭ್ರಾತೃವ್ಯಸನದಿಂದ ಕೃಶಿಸಿಹೋಗಿರುವವನೂ, ಕಂದಮೂಲ ಫಲಗಳೇ ಆಹಾರವಾಗುಳ್ಳವನೂ,ದಾಂತನೂ, ತಪಸ್ಸನ್ನು ಮಾಡುತ್ತಿರುವವನೂ,ಧರ್ಮಮಾರ್ಗದಲ್ಲಿಯೇ ಸಂಚರಿಸುತ್ತಿರುವವನೂ ಆಗಿದ್ದನು. ಆ ಭರತಕುಮಾರನು ಮಹೋನ್ನತವಾದ ಜಟೆಗಳನ್ನು ಧರಿಸಿ, ನಾರುಡೆಗಳುಟ್ಟು, ಕೃಷ್ಣಾಜಿನದ ಹೊದಿಕೆಯನ್ನು ಹೊದ್ದು, ನಿಯತನೂ,ಧ್ಯಾನಪರನೂ ಆಗಿ, ಬ್ರಹ್ಮರ್ಷಿಗಳ ತೇಜಸ್ಸಿನಂತೆ ತೇಜಸ್ಸಂಪನ್ನನಾಗಿ ಶ್ರೀರಾಮನ ಪಾದುಕೆಗಳನ್ನು ಪುರಸ್ಕರಿಸಿ ಭೂಮಿಯನ್ನು ಪಾಲಿಸುತ್ತ ಚಾತುರ್ವರ್ಣ್ಯಸಮನ್ವಿತವಾದ ಸಮಸ್ತ ಪ್ರಜೆಗಳನ್ನೂ ಸಂರಕ್ಷಿಸುತ್ತ, ಸಮಸ್ತ ವಿಷಯಗಳಲ್ಲಿಯೂ, ಸಮಸ್ತ ಪ್ರಜೆಗಳಿಗೂ ಭ್ರಮೆಯುಂಟಾಗುವಂತೆ ರಾಜ್ಯವಾಳುತ್ತ, ಪರಿಶುದ್ಧರೂ, ಕಾಷಾಯವಸ್ತ್ರಧಾರಿಗಳೂ ಆದ ಮಂತ್ರಿ ಪುರೋಹಿತರೊಡಗೂಡಿ ಆ ನಂದಿಗ್ರಾಮದಲ್ಲಿದ್ದನು. ಹೀಗಿರುವ ಭರತನನ್ನು ನೋಡಿ ಪ್ರಜೆಗಳೂ ಸಹ

ಪೌರಾ ವೈ ಧರ್ಮವತ್ಸಲಾಃ ॥೩೩॥ ತಂ ಧರ್ಮಮಿವ ಧರ್ಮಜ್ಞಂ ದೇಹವಂತಮಿವಾ
ಪರಮಂ । ಉವಾಚ ಪ್ರಾಂಜಲಿರ್ವಾಕ್ಯಂ ಹನುಮಾನ್ ಮಾರುತಾತ್ಮಜಃ ॥ ೩೪ ॥
"ವಸಂತಂ ದಂಡಕಾರಣ್ಯೇ ಯಂ ತ್ವಂ ಚೀರಜಟಾಧರಂ । ಅನುಶೋಚಸಿ ಕಾಕು
ತ್ಸ್ಥಂ ಸತ್ವಾಂ ಕುಶಲಮಬ್ರವೀತ್ ॥೩೫॥ ಪ್ರಿಯಮಾಖ್ಯಾಮಿ ತೇ ದೇವ! ಶೋಕಂ
ತ್ಯಕ್ಷ್ಯಸಿ ದಾರುಣಂ । ಅಸ್ಮಿನ್ ಮುಹೂರ್ತೇ ಭ್ರಾತ್ರಾ ತ್ವಂ ರಾಮೇಣ ಸಹಸಂಗತಃ
॥ ೩೬ ॥ ನಿಹತ್ವಾ ರಾವಣಂ ರಾಮಃ ಪ್ರತಿಲಭ್ಯಚ ಮೈಥಿಲೀಂ । ಉಪಯಾತಿ ಸಮೃ

ತಂ - ಆ ಭರತನನ್ನು, ವರ್ಜಯಿತ್ವಾ - ಬಿಟ್ಟು, ಪರಿಭೋಕ್ತುಂ - ಭೋಜನ ಮಾಡುವುದಕ್ಕೂ,
ನವ್ಯವಸ್ಯಂತಿಹಿ - ಉದ್ಯುಕ್ತರಾಗುವದಿಲ್ಲವಷ್ಟೆ. ॥ ೩೩ ॥ ಮಾರುತಾತ್ಮಜಃ - ವಾಯುಪುತ್ರನಾದ,
ಹನೂಮಾನ್ - ಆಂಜನೇಯನು, ದೇಹವಂತಂ - ಶರೀರಧಾರಿಯಾದ, ಅಪರಂ - ಮತ್ತೊಂದಾದ,
ಧರ್ಮಮಿವಸ್ಥಿತಂ - ಧರ್ಮವೋ ಎಂಬಂತಿರುವ, ಧರ್ಮಜ್ಞಂ - ಧರ್ಮವನ್ನರಿತ, ತಂ - ಆ ಭರತ
ನನ್ನು ಕುರಿತು, ಪ್ರಾಂಜಲಿಃ - ಕೈಮುಗಿದವನಾಗಿ, ವಾಕ್ಯಂ - ಮಾತನ್ನು, ಉವಾಚ - ಹೇಳಿ
ದನು. ॥ ೩೪ ॥ ತ್ವಂ - ನೀನು, ದಂಡಕಾರಣ್ಯೇ - ದಂಡಕಾವನದಲ್ಲಿ, ವಸಂತಂ - ಇರುತ್ತಿರುವ,
ಚೀರ....ರಂ - ನಾರುಮಡಿಗಳನ್ನೂ, ಜಟೆಯನ್ನೂ ಧರಿಸಿರುವ, ಕಾಕುತ್ಸ್ಥಂ - ಕಕುತ್ಸ್ಥವಂಶೋ
ತ್ಪನ್ನನಾದ, ಯಂ - ಯಾವ ಶ್ರೀರಾಮನನ್ನು ಕುರಿತು, ಅನುಶೋಚಸಿ - ಅನುಸರಿಸಿ ದುಃಖಿಸು
ತ್ತಿದ್ದೀಯೋ, ಸಃ - ಆ ಶ್ರೀರಾಮನ, ತ್ವಾಂ - ನಿನ್ನನ್ನು ಕುರಿತು, ಕುಶಲಂ - ಕ್ಷೇಮವನ್ನು,
ಅಬ್ರವೀತ್ - ನುಡಿದನು. ॥ ೩೫ ॥ ದೇವ - ಸ್ವಾಮಿಯೇ, ತೇ - ನಿನಗೆ, ಪ್ರಿಯಂ - ಇಷ್ಟವನ್ನು,
ಆಖ್ಯಾಮಿ - ಹೇಳುವೆನು, ಅಸ್ಮಿನ್ಮುಹೂರ್ತೇ - ಈ ಮುಹೂರ್ತದಲ್ಲಿ, ತ್ವಂ - ನೀನು, ಭ್ರಾತ್ರಾ -
ಅಣ್ಣನಾದ, ರಾಮೇಣಸಹ - ಶ್ರೀರಾಮನೊಡನೆ, ಸಂಗತಃ - ಸೇರಿ, ದಾರುಣಂ - ಕ್ರೂರವಾದ,
ಶೋಕಂ - ಮನೋವ್ಯಥೆಯನ್ನು, ತ್ಯಕ್ಷ್ಯಸಿ - ಬಿಡುತ್ತೀಯೆ. ॥ ೩೬ ॥ ರಾಮಃ - ಶ್ರೀರಾಮನು,
ರಾವಣಂ - ರಾವಣಾಸುರನನ್ನು, ನಿಹತ್ವಾ - ಕೊಂದು, ಮೈಥಿಲೀಂಚ - ಸೀತಾದೇವಿಯನ್ನೂ, ಪ್ರತಿ
ಲಭ್ಯ - ಹೊಂದಿ, ಸಮೃದ್ಧಾರ್ಥಃ - ಸಂಪೂರ್ಣವಾದ ಕಾರ್ಯಗಳುಳ್ಳವನಾಗಿ, ಮಹಾಬಲೈಃ - ಬಹಳ

ಸಮಸ್ತ ಭೋಗಗಳನ್ನು ತೊರೆದು ಅವನಂತೆಯೇ ನಿಯಮಪರರಾಗಿದ್ದರು. ॥ ೨೮-೩೩ ॥
ಆ ಸಮಯದಲ್ಲಿ ಹನುಮಂತನಾದರೋ, ಧರ್ಮಸ್ವರೂಪನೂ, ಸಮಸ್ತ ಧರ್ಮಗಳನ್ನೂ
ತಿಳಿದಿರುವವನೂ ಆದ ಆ ರಘುಕುಲೋದ್ಭವನನ್ನು ಕಂಡು ಕೈಗಳನ್ನು ಜೋಡಿಸಿ
ಕೊಂಡು ಆತನನ್ನು ಕುರಿತು, "ಎಲೈ ರಘುಕುಲೋತ್ತಮನೇ! ಭರತ; ದಂಡಕಾ
ರಣ್ಯದಲ್ಲಿ ವಾಸ ಮಾಡುತ್ತಿದ್ದವನೂ, ನಾರುಡೆಗಳನ್ನೂ, ಜಟೆಗಳನ್ನೂ ಧರಿಸಿರುವನೂ,
ಕಕುತ್ಸ್ಥವಂಶೋದ್ಭವನೂ ಆದ ಯಾವ ಶ್ರೀರಾಮನಿಗೋಸುಗ ನೀನು ಈ ರೀತಿ ವ್ಯಸನ
ಸಂತಪ್ತನಾಗಿರುವೆಯೋ ಆ ರಾಮನು ತನ್ನ ಕುಶಲವಾರ್ತೆಯನ್ನು ನಿನಗೆ ತಿಳಿಸಿರುವನು.
ಅಯ್ಯಾ ಭರತಕುಮಾರನೇ! ನಿನಗೆ ಅತ್ಯಂತ ಪ್ರಿಯಕರವಾದ ವಾರ್ತೆಯನ್ನರುಹುವೆನು.
ನೀನೀಗಲೇ ಮಹಾ ದಾರುಣವಾದ ಈ ದಃಖವನ್ನು ತೊರೆಯುವೆ. ಎಲೈ ದೊರೆಯೇ!
ನೀನು ಈಗಲೇ ಶ್ರೀರಾಮನೊಡನೆ ಸೇರುವೆ. ಹಾಗೆ ನಿನ್ನ ಅಗ್ರಜನಾದ ಆತನೊಡ
ಗೂಡಿ ಅಪಾರ ಸಂತೋಷವನ್ನು ಹೊಂದುವೆ. ಎಲೈ ರಾಘವನೇ! ರಾಮನು ರಾವಣ
ನನ್ನು ಸಂಹರಿಸಿ ಸೀತಾದೇವಿಯೊಡಗೂಡಿ ಮಹಾ ಬಲಿಷ್ಠರಾದ ಮಿತ್ರರೊಡನೆ ಕೃತಾರ್ಥ

ದ್ಧಾರ್ಥಸ್ಸಹಮಿತ್ರೈರ್ಮಹಾಬಲೈಃ ॥ ೩೭ ॥ ಲಕ್ಷ್ಮಣಶ್ಚ ಮಹಾತೇಜಾ ವೈದೇಹೀಚ ಯಶಸ್ವಿನೀ । ಸೀತಾ ಸಮಗ್ರಾ ರಾಮೇಣ ಮಹೇಂದ್ರೇಣ ಯಥಾ ಶಚೀ" ॥ ೩೮ ॥ ಏವಮುಕ್ತೋ ಹನುಮತಾ ಭರತೋ ಭ್ರಾತೃವತ್ಸಲಃ । ಪಪಾತ ಸಹಸಾ ಹೃಷ್ಟೋ ಹರ್ಷಾನ್ಮೋಹಂ ಜಗಾಮಹ ॥ ೩೯ ॥ ತತೋ ಮುಹೂರ್ತಾದುತ್ಥಾಯ ಪ್ರತ್ಯಾಶ್ವಸ್ಯ ಚ ರಾಘವಃ । ಹನುಮಂತಮುವಾಚೇದಂ ಭರತಃ ಪ್ರಿಯವಾದಿನಂ ॥ ೪೦ ॥ ಅಶೋಕಜೈಃ ಪ್ರೀತಿಮಯೈಃ ಕಪಿಮಾಲಿಂಗ್ಯ ಸಂಭ್ರಮಾತ್ । ಸಿಷೇಚ ಭರತಃ ಶ್ರೀಮಾನ್ ವಿಪುಲೈರಾಸ್ರಬಿಂದುಭಿಃ ॥೪೧॥ "ದೇವೋ ವಾ ಮಾನುಷೋ ವಾ ತ್ವಮನು

ಬಲವಂತರಾದ, ಮಿತ್ರೈಸ್ಸಹ - ಮಿತ್ರಜನರೊಡಗೂಡಿ, ಉಪಯಾತಿ - ಬರುತ್ತಿರುವನು. ॥ ೩೭ ॥ ಮಹಾತೇಜಾಃ - ಮಹಾ ಸಾಮರ್ಥ್ಯವಂತನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ಯಶಸ್ವಿನೀ - ಕೀರ್ತಿವಂತಳಾದ, ವೈದೇಹೀಸೀತಾಚ - ಸೀತಾದೇವಿಯೂ, ಸಮಗ್ರಾ - ಸಂಪೂರ್ಣವಾದ ಮನೋರಥವುಳ್ಳವಳಾಗಿ, ಮಹೇಂದ್ರೇಣ - ದೇವೇಂದ್ರನೊಡನೆ, ಶಚೀಯಥಾ - ಶಚೀದೇವಿಯಂತೆ, ರಾಮೇಣ ಸಹ - ಶ್ರೀರಾಮನೊಡಗೂಡಿ, ಉಪಯಾತಿ - ಬರುತ್ತಿರುವಳು. ॥ ೩೮ ॥ ಏವಂ - ಈ ಪರಿಯಾಗಿ, ಹನುಮತಾ - ಆಂಜನೇಯನಿಂದ, ಉಕ್ತಃ - ಹೇಳಲ್ಪಟ್ಟ, ಭರತಃ - ಭರತನು, ಭ್ರಾತೃವತ್ಸಲಃ - ಅಣ್ಣನಲ್ಲಿ ಭಕ್ತಿಯುಳ್ಳವನಾದಕಾರಣ, ಹೃಷ್ಟಃ - ಸಂತೋಷಗೊಂಡವನಾಗಿ, ಹರ್ಷಾತ್ - ಸಂತೋಷದಿಂದ, ಸಹಸಾ - ಜಾಗ್ರತೆಯಾಗಿ, ಮೋಹಂ - ಮೂರ್ಛೆಯನ್ನು, ಜಗಾಮಹ - ಹೊಂದಿದನಷ್ಟೆ, ಸಹಸಾ - ಜಾಗ್ರುತೆಯಾಗಿ, ಪಪಾತ - ಬಿದ್ದನು. ॥ ೩೯ ॥ ತತಃ - ಬಳಿಕ, ಮುಹೂರ್ತಾತ್ - ಎರಡು ಘಳಿಗೆಯಲ್ಲಿಯೇ, ಉತ್ಥಾಯ - ಮೇಲಕ್ಕೆದ್ದು, ಪ್ರತ್ಯಾಶ್ವಸ್ಯಚ - ಸಮಾಧಾನವನ್ನೂ ಪಡೆದು, ರಾಘವಃ - ರಘುವಂಶೋತ್ಪನ್ನನಾದ, ಭರತಃ - ಭರತನು, ಪ್ರಿಯವಾದಿನಂ - ಇಷ್ಟವನ್ನು ಹೇಳುತ್ತಿರುವ, ಹನುಮಂತಂ - ಆಂಜನೇಯನನ್ನು ಕುರಿತು, ಇದಂ - ಈ ಮಾತನ್ನು, ಉವಾಚ - ಹೇಳಿದನು. ॥ ೪೦ ॥ ಶ್ರೀಮಾನ್ - ಸಂಪದ್ಯುಕ್ತನಾದ, ಭರತಃ - ಭರತನು, ಕಪಿಂ - ವಾನರನಾದ ಆಂಜನೇಯನನ್ನು, ಸಂಭ್ರಮಾತ್ - ತ್ವರೆಯಿಂದ, ಆಲಿಂಗ್ಯ - ಅಪ್ಪಿಕೊಂಡು, ಅಶೋಕಜೈಃ - ಸಂತೋಷದಿಂದ ಹುಟ್ಟಿದ, ಪ್ರೀತಿಮಯೈಃ - ಸಂತೋಷವಿಕಾರಗಳಾದ, ವಿಪುಲೈಃ - ವಿಸ್ತಾರಗಳಾದ, ಅಸ್ರಬಿಂದುಭಿಃ - ಕಂಬನಿಗಳಿಂದ, ಸಿಷೇಚ - ನೆನೆಸಿದನು. ॥ ೪೧ ॥ ಸೌಮ್ಯ - ಪ್ರಸನ್ನನೇ, ತ್ವಂ - ನೀನು, ದೇವೋವಾ - ದೇವತೆಯೋ, ಮಾನುಷೋವಾ - ಮನುಷ್ಯನೋ, ಅನುಕ್ರೋಶಾತ್ - ದಯೆ

ನಾಗಿ ಬರುತ್ತಿರುವನು. ಮಹಾ ತೇಜೋವಂತನಾದ ಲಕ್ಷ್ಮಣಸ್ವಾಮಿಯೂ, ಮಹಾ ಕೀರ್ತಿಶಾಲಿನಿಯಾದ ಸೀತಾದೇವಿಯೂ ಬರುತ್ತಿರುವರು. ಎಲೈ ರಾಜನೇ! ಆ ಸೀತಾದೇವಿಯು ಈಡೇರಿದ ಸಮಸ್ತ ಕೋರಿಕೆಗಳುಳ್ಳವಳಾಗಿ ಶಚೀದೇವಿಯಂತೆ ಶ್ರೀರಾಮನೊಡಗೂಡಿ ಬರುತ್ತಿರುವಳು" ಎಂದು ಹೇಳಿದನು. ॥ ೩೪-೩೮ ॥ ಹೀಗೆ ಹೇಳಿದ ಹನುಮಂತನ ಮಾತುಗಳನ್ನು ಕೇಳುತ್ತಲೇ ಭ್ರಾತೃವತ್ಸಲನಾದ ಭರತನು ಅಧಿಕವಾದ ಸಂತೋಷದಿಂದ ಮೈಮರೆತು ಮೂರ್ಛಿತನಾಗಿ ಕೆಳಕ್ಕೆ ಬಿದ್ದು ಸ್ವಲ್ಪಹೊತ್ತಿನ ಮೇಲೆ ಎಚ್ಚತ್ತುಕೊಂಡು ಪ್ರಿಯವಾರ್ತೆಯನ್ನರುಹಿದ ಆ ಹನುಮಂತನನ್ನು ಗಾಢವಾಗಿ ಅಪ್ಪಿಕೊಂಡನು. ಆ ಭರತಕುಮಾರನು ಸಂತೋಷಾಧಿಕ್ಯದಿಂದ ಆನಂದಬಾಷ್ಪಗಳನ್ನು ಸುರಿಸುತ್ತ ಆ ಕಪಿವೀರನನ್ನು ಕುರಿತು, "ಎಲೈ ಪುರುಷೋತ್ತಮನೇ! ನೀನು ದೇವನೋ ಮಾನವನೋ ಯಾರಾದರೂ

ಕ್ರೋಶಾದಿಹಾಗತಃ । ಪ್ರಿಯಾಖ್ಯಾನಸ್ಯ ತೇ ಸೌಮ್ಯ ದದಾಮಿ ಬ್ರುವತಃ ಪ್ರಿಯಂ ॥ ೪೨ ॥ ಗವಾಂಶತಸಹಸ್ರಂಚ ಗ್ರಾಮಾಣಾಂ ಚ ಶತಂ ಪರಂ । ಸುಕುಂಡಲಾಃ ಶುಭಾಚಾರಾ ಭಾರ್ಯಾಃ ಕನ್ಯಾಶ್ಚ ಷೋಡಶ ॥೪೩॥ ಹೇಮವರ್ಣಾಸ್ಸುನಾಸೋರೂಃ ಶಶಿಸೌಮ್ಯಾನನಾಃ ಸ್ತ್ರಿಯಃ । ಸರ್ವಾಭರಣಸಂಪನ್ನಾಃ ಸಂಪನ್ನಾಃ ಕುಲಜಾತಿಭಿಃ" ॥೪೪॥

ನಿಶಮ್ಯ ರಾಮಾಗಮನಂ ನೃಪಾತ್ಮಜಃ ಕಪಿಪ್ರವೀರಸ್ಯ ತದದ್ಭುತೋಪಮಂ ।
ಪ್ರಹರ್ಷಿತೋ ರಾಮದಿದೃಕ್ಷಯಾಽಭವತ್ ಪುನಶ್ಚ ಹರ್ಷಾದಿದಮಬ್ರವೀದ್ವಚಃ ॥೪೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾವಿಂಶತ್ಯುತ್ತರಶತತಮಸ್ಸರ್ಗಃ

ಯಿಂದ, ಇಹ - ಇಲ್ಲಿ, ಆಗತಃ - ಬಂದವನಾದೆ, ಬ್ರುವತಃ - ಹೇಳುತ್ತಿರುವ, ತೇ - ನಿನ್ನ, ಪ್ರಿಯಾಖ್ಯಾನಸ್ಯ - ಸಂತೋಷವಾಕ್ಯಕ್ಕಾಗಿ, ಪ್ರಿಯಂ - ಇಷ್ಟಾರ್ಥವನ್ನು, ದದಾಮಿ - ಕೊಡುವೆನು. ॥೪೨। ಗವಾಂ - ಗೋವುಗಳ, ಶತಸಹಸ್ರಂಚ - ಲಕ್ಷವನ್ನು, ಗ್ರಾಮಾಣಾಂಚ - ಹಳ್ಳಿಗಳ, ಪರಂ - ಉತ್ಕೃಷ್ಟವಾದ, ಶತಂಚ - ನೂರನ್ನೂ, ಸುಕುಂಡಲಾಃ - ಒಳ್ಳೆಯ ಕರ್ಣಾಭರಣಗಳುಳ್ಳ, ಶುಭಾಚಾರಾಃ - ಶುಭಕರವಾದ ಆಚಾರಗಳುಳ್ಳ, ಭಾರ್ಯಾಃ - ಭರಣಕ್ಕೆ ಯೋಗ್ಯರಾದ, ಹೇಮವರ್ಣಾಃ - ಚಿನ್ನದಂತೆ ಬಣ್ಣವುಳ್ಳ, ಸುನಾಸೋರೂಃ-ಶುಭಕರವಾದ ಮೂಗುಗಳೂ, ಊರುಪ್ರದೇಶಗಳೂ ಉಳ್ಳ, ಶಶಿಸೌಮ್ಯಾನನಾಃ - ಚಂದ್ರನಂತೆ ಪ್ರಸನ್ನವಾದ ನೇತ್ರಗಳೂ, ಮುಖಗಳೂ ಉಳ್ಳ, ಕುಲಜಾತಿಭಿಃ - ಸದ್ವಂಶದಿಂದಲೂ, ಜಾತಿಗಳಿಂದಲೂ, ಸಂಪನ್ನಾಃ ಕೂಡಿರುವ, ಸರ್ವಾ....ನ್ನಾಃ - ಸಮಸ್ತ ಒಡವೆಗಳಿಂದಲೂ ಅಲಂಕೃತರಾದ, ಕನ್ಯಾಃ - ಅವಿವಾಹಿತರಾದ, ಷೋಡಶಾಃ - ಹದಿನಾರು ಸಂಖ್ಯೆಯುಳ್ಳ, ಸ್ತ್ರಿಯಃ - ಹೆಂಗಸರನ್ನು, ದದಾಮಿ - ಕೊಡುವೆನು, ನೃಪಾತ್ಮಜಃ - ರಾಜಪುತ್ರನಾದ ಭರತನು, ಅದ್ಭುತೋಪಮಂ-ಆಶ್ಚರ್ಯಕರವಾದ, ತದ್ರಾಮಾಗಮನಂ - ಆ ಶ್ರೀರಾಮನ ಆಗಮನವನ್ನೂ, ಕಪಿಪ್ರವೀರಸ್ಯ-ಕಪಿಶ್ರೇಷ್ಠನಾದ ಆಂಜನೇಯನಿಂದ, ನಿಶಮ್ಯ - ಕೇಳಿ, ರಾಮ....ಯಾ - ಶ್ರೀರಾಮನ ದರ್ಶನೇಚ್ಛೆಯಿಂದ, ಪ್ರಹರ್ಷಿತಃ - ಸಂತೋಷಗೊಂಡವನು, ಅಭವತ್ - ಆದನು, ಹರ್ಷಾತ್ - ಸಂತೋಷದಿಂದ, ಪುನಶ್ಚ - ಮತ್ತೂ, ಇದಂವಚಃ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೪೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಅಷ್ಟಾವಿಂಶತ್ಯುತ್ತರಶತತಮಸ್ಸರ್ಗಃ.

ಸರಿಯೆ. ನನ್ನಲ್ಲಿ ದಯೆಯಿಂದ ಇಲ್ಲಿಗೈತಂದು ಪ್ರಿಯೋದಂತವನ್ನರುಹಿ ಉಪಕಾರ ಮಾಡಿದ ನೀನಾರೆಂಬುದು ನನಗೆ ತಿಳಿಯದಾಗಿದೆ. ಈ ಪ್ರಿಯವಾರ್ತೆಯನ್ನು ತಿಳಿಸಿದುದಕ್ಕಾಗಿ ನಿನಗೆ ನಾನು ಪ್ರಿಯವಾದ ಬಹುಮತಿಗಳನ್ನು ಕೊಡುವೆನು. ಎಲೈ ಧೀಮಂತನೇ! ನಿನಗೆ ಒಂದು ಲಕ್ಷ ಗೋವುಗಳನ್ನು ಕೊಡುವೆನು. ನೂರು ಗ್ರಾಮಗಳನ್ನು ಬಹುಮತಿಸುವೆನು. ಬಹಳ ಮಂಗಳಕರಗಳೂ, ಅಮೂಲ್ಯವಾದುವೂ ಆದ ಕರ್ಣಕುಂಡಲಗಳುಳ್ಳವರೂ, ಸ್ವರ್ಣಚ್ಛಾಯೆಯ ದೇಹವುಳ್ಳವರೂ, ದಿವ್ಯಾಂಬರಧಾರಿಣಿಯರೂ, ಸೊಗಸಾದ ಮೂಗುಳ್ಳವರೂ, ಸುಂದರವಾದ ತೊಡೆಗಳುಳ್ಳವರೂ, ಚಂದ್ರಮುಖಿಯರೂ, ಸರ್ವಾಭರಣಭೂಷಿತೆಯರೂ ಆದ ಹದಿನಾರುಮಂದಿ ಸ್ತ್ರೀಯರನ್ನೀಯುವೆನು " ಎಂದನು. ರಘುಕುಲೋದ್ಭವನಾದ ಆ ಭರತಕುಮಾರನು ಈ ರೀತಿ ಹೇಳಿ ಪರಮಾನಂದಭರಿತನಾಗಿ ಶ್ರೀರಾಮಮೂರ್ತಿಯನ್ನು ನೋಡಬೇಕೆಂಬ ಕುತೂಹಲವುಳ್ಳವನಾಗಿ ಹೀಗೆಂದನು. ॥ ೩೯–೪೫ ॥

ಇಂತಿದು ಹನುಮತ್ಕಥಿತ ಶ್ರೀರಾಮಾಗಮನ ವೃತ್ತಾಂತ ನಿರೂಪಣವೆಂಬ
ನೂರ ಇಪ್ಪತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕೋನ ತ್ರಿಂಶದುತ್ತರಶತತಮಸ್ಸರ್ಗಃ

"ಬಹೂನಿ ನಾಮ ವರ್ಷಾಣಿ ಗತಸ್ಯ ಸುಮಹದ್ವನಂ । ಶೃಣೋಮ್ಯಹಂ ಪ್ರೀತಿಕರಂ ಮಮ ನಾಥಸ್ಯ ಕೀರ್ತನಂ ॥ ೧ ॥ ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮೇ । 'ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ' ॥೨॥ ರಾಘವಸ್ಯ ಹರೀಣಾಂಚ ಕಥಮಾಸೀತ್ಸಮಾಗಮಃ । ಕಸ್ಮಿನ್ ದೇಶೇ ಕಿಮಾಶ್ರಿತ್ಯ ತತ್ವಮಾಖ್ಯಾಹಿ ಪೃಚ್ಛತಃ ॥ ೩ ॥ ಸಪೃಷ್ಟೋ ರಾಜಪುತ್ರೇಣ ಬೃಸ್ಯಾಂ ಸಮುಪವೇಶಿತಃ । ಆಚ

ಬಹೂ....ಣಿ - ಅನೇಕ ಸಂವತ್ಸರಗಳಲ್ಲಿ, ಸುಮಹತ್ - ಬಹಳ ದೊಡ್ಡದಾದ, ವನಂ - ಆರಣ್ಯವನ್ನು ಕುರಿತು, ಗತಸ್ಯ - ಹೊರಟುಹೋಗಿರುವ, ಮಮ - ನನ್ನ, ನಾಥಸ್ಯ - ಸ್ವಾಮಿಯಾದ ಶ್ರೀರಾಮನ, ಪ್ರೀತಿಕರಂ - ಸಂತೋಷಕರವಾದ, ಕೀರ್ತನಂ - ಕಥೆಯನ್ನು, ಯತಃ - ಯಾವ ಕಾರಣ ದಿಂದ, ಶೃಣೋಮಿ - ಕೇಳುತ್ತೇನೆಯೋ, ಅತಃ - ಈ ಕಾರಣದಿಂದ, ಜೀವಂತಂ - ಬದುಕಿರುವ, ನರಂ - ಮನುಷ್ಯನನ್ನು, ಆನಂದಃ - ಸಂತೋಷವು, ವರ್ಷಶತಾದಪಿ - ನೂರು ಸಂವತ್ಸರಗಳ ಮೇಲಾದರೂ, ಏತಿ - ಹೊಂದುತ್ತದೆ, ಇತಿ - ಇಂತೆಂಬ, ಲೌಕಿಕೀ - ಲೋಕಸಿದ್ಧವಾದ, ಇಯಂ ಗಾಥಾ - ಈ ವಾರ್ತೆಯು, ಕಲ್ಯಾಣೀ - ಶುಭಕರವಾದ ಅರ್ಥವುಳ್ಳುದಾಗಿ, ಮೇ - ನನಗೆ, ಪ್ರತಿಭಾತಿ- ತೋರುತ್ತದೆ. ॥೧-೨॥ ರಾಘವಸ್ಯ - ಶ್ರೀರಾಮನಿಗೂ, ಹರೀಣಾಂಚ - ವಾನರರಿಗೂ, ಸಮಾಗಮಃ - ಪರಿಚಯವು, ಕಸ್ಮಿಂದೇಶೇ - ಯಾವ ದೇಶದಲ್ಲಿ, ಕಿಂ - ಯಾರನ್ನು, ಆಶ್ರಿತ್ಯ - ಆಶ್ರಯಿಸಿ, ಕಥ ಮಾಸೀತ್ - ಹೇಗಾಯಿತು, ಪೃಚ್ಛತಃ - ಕೇಳುತ್ತಿರುವ ನನಗೆ, ತತ್ವಂ - ಯಥಾರ್ಥವಾಗಿ, ಆಖ್ಯಾಹಿ- ಹೇಳು. ॥ ೩ ॥ ರಾಜಪುತ್ರೇಣ - ಅರಸುಮಗನಾದ ಭರತನಿಂದ, ಪೃಷ್ಟಃ - ಕೇಳಲ್ಪಟ್ಟ, ಬೃಸ್ಯಾಂ - ದರ್ಭಾಸನದಲ್ಲಿ, ಸಮುಪವೇಶಿತಃ - ಕೂಡಿಸಲ್ಪಟ್ಟ, ಸಃ - ಆ ಆಂಜನೇಯನು, ತತಃ - ಬಳಿಕ,

---

"ಆಹಾ ! ನನ್ನ ಅದೃಷ್ಟವನ್ನೆಷ್ಟೆಂದು ಹೇಳಲಿ ! ಶ್ರೀರಾಮಮೂರ್ತಿಯು ಅರಣ್ಯಕ್ಕೆ ತೆರಳಿ ಅನೇಕ ಸಂವತ್ಸರಗಳು ಕಳೆದು ಹೋದುವಾದರೂ, (ಈವರೆಗೂ ಆತನ ಕುಶಲವಾರ್ತೆ ಯಾಗಲಿ, ಆಗಮನವಾರ್ತೆಯಾಗಲಿ) ತಿಳಿದು ಬಂದಿರಲಿಲ್ಲವು. (ಎಲೈ ಮಹಾತ್ಮನೇ !) ಇಂದು ನೀನು ನನಗೆ ಅತ್ಯಂತ ಪ್ರಿಯಕರವಾದ ನನ್ನ ಪ್ರಭುವಿನ ಕುಶಲೋದಂತವನ್ನು ಹೇಳಿದುದನ್ನು ಕಿವಿಯಾರ ಕೇಳಿದೆನಲ್ಲವೆ! ನನ್ನಷ್ಟು ಭಾಗ್ಯಶಾಲಿ ಯಾರೂ ಇರುವುದಿಲ್ಲವು. ನಾನೇ ಪುಣ್ಯವಂತನು. "ಎಲೈ ಪುರುಷೋತ್ತಮನೇ! ಬದುಕಿದ್ದರೆ ನೂರು ಸಂವತ್ಸರಗಳಿ ಗಾದರೂ (ಮಾನವನಿಗೆ) ಆನಂದವೆಂಬುದು ಬಂದೇ ಬರುವುದು" ಎಂಬ ನಾಣ್ಣುಡಿಯು ಸತ್ಯ ವೆಂಬುದರಲ್ಲಿ ಲೇಶಮಾತ್ರವೂ ಸಂಶಯವಿರುವುದಿಲ್ಲವು. ಎಲೈ ಮಹಾತ್ಮನೇ! ಶ್ರೀರಾಮ ನಿಗೂ ವಾನರರಿಗೂ ಯಾವ ದೇಶದಲ್ಲಿ ಯಾರಿಂದ, ಯಾವ ರೀತಿ ಸಮಾಗಮವುಂಟಾಯಿತು? ಅವರವರಿಗೆ ಸಖ್ಯವುಂಟಾದುದು ಯಾವ ನಿಮಿತ್ತದಿಂದ? ಈ ಎಲ್ಲ ವಿಷಯಗಳನ್ನೂ ನನಗೆ ಸಮಗ್ರವಾಗಿ ತಿಳಿಸುವವನಾಗು" ಭರತಕುಮಾರನೀರೀತಿ ಪ್ರಶ್ನಿಸಲು ಆತನ ಅನುಮತಿ ಯನ್ನು ಹೊಂದಿ ಮಾನವವೇಷಧರನಾದ ಹನುಮಂತನು ತಪಸ್ವಿಗಳು ಕುಳಿತುಕೊಳ್ಳಲು

ಚಕ್ಷೇ ತತಸ್ಸರ್ವಂ ರಾಮಸ್ಯ ಚರಿತಂ ವನೇ ‖ ೪ ‖ ಯಥಾಪ್ರವ್ರಾಜಿತೋ ರಾಮೋ ಮಾತುರ್ದತ್ತೋ ವರಸ್ತವ । ಯಥಾಚ ಪುತ್ರಶೋಕೇನ ರಾಜಾ ದಶರಥೋ ಮೃತಃ ‖ ೫ ‖ ಯಥಾ ದೂತೈಸ್ತ್ವಮಾನೀತಸ್ತೂರ್ಣಂ ರಾಜಗೃಹಾತ್ಪ್ರಭೋ! । ತ್ವಯಾಽಽಯೋಧ್ಯಾಂ ಪ್ರವಿಷ್ಟೇನ ಯಥಾ ರಾಜ್ಯಂ ನಚೇಪ್ಸಿತಂ ‖ ೬ ‖ ಚಿತ್ರಕೂಟಂ ಗಿರಿಂ ಗತ್ವಾ ರಾಜ್ಯೇನಾಮಿತ್ರಕರ್ಶನ! । ನಿಮಂತ್ರಿತಸ್ತ್ವಯಾ ಭ್ರಾತಾ ಧರ್ಮಮಾಚರತಾ ಸತಾಂ ‖೭‖ ಸ್ಥಿತೇನ ರಾಜ್ಞೋ ವಚನೇ ಯಥಾ ರಾಜ್ಯಂ ವಿಸರ್ಜಿತಂ । ಆರ್ಯಸ್ಯ ಪಾದುಕೇ ಗೃಹ್ಯ ಯಥಾಸಿ ಪುನರಾಗತಃ ‖೮‖ ಸರ್ವಮೇತನ್ಮಹಾಬಾಹೋ! ಯಥಾ

ರಾಮಸ್ಯ - ಶ್ರೀರಾಮನ ಸಂಬಂಧವಾದ, ವನೇ - ಅರಣ್ಯದಲ್ಲಿ, ಸರ್ವಂ - ಸಮಸ್ತವಾದ, ಚರಿತಂ - ಚರಿತ್ರೆಯನ್ನು, ಆಚಚಕ್ಷೇ - ಹೇಳಿದನು. ‖ ೪ ‖ ಹೇ ಪ್ರಭೋ - ಎಲೈ ಸ್ವಾಮಿಯೇ, ರಾಮಃ - ಶ್ರೀರಾಮನು, ಯಥಾ - ಹೇಗೆ, ಪ್ರವ್ರಾಜಿತಃ - ವನಕ್ಕೆ ಕಳುಹಿಸಲ್ಪಟ್ಟನೋ, ತವ - ನಿನ್ನ, ಮಾತುಃ - ತಾಯಿಗೆ, ವರಃ - ವರವು, ಯಥಾ - ಹೇಗೆ, ದತ್ತಃ - ಕೊಡಲ್ಪಟ್ಟಿತೋ, ದಶರಥೋರಾಜಾ - ದಶರಥ ಮಹಾರಾಯನು, ಪುತ್ರಶೋಕೇನ-ಮಗನ ಸಂಬಂಧವಾದ ವ್ಯಸನದಿಂದ, ಯಥಾ-ಹೇಗೆ, ಮೃತಃ-ಮರಣ ಹೊಂದಿದನೋ, ತ್ವಂ - ನೀನು, ದೂತೈಃ - ದೂತರಿಂದ, ರಾಜಗೃಹಾತ್ - ಕೇಕಯರಾಜನ ಮನೆ ಯಿಂದ, ತೂರ್ಣಂ - ಜಾಗ್ರತೆಯಾಗಿ, ಯಥಾ - ಹೇಗೆ, ಆನೀತಃ - ಕರೆತರಲ್ಪಟ್ಟೆಯೋ, ಹೇ ಅಮಿತ್ರ ಕರ್ಶನ - ಎಲೈ ಶತ್ರುಸಂಹಾರಕನೇ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವಿಷ್ಟೇನ - ಪ್ರವೇಶಮಾಡಿದ, ತ್ವಯಾ - ನಿನ್ನಿಂದ, ರಾಜ್ಯಂ - ರಾಜ್ಯವು, ಯಾಥಾ - ಹೇಗೆ, ನೇಪ್ಸಿತಂಚ - ಅಪೇಕ್ಷಿಸಲ್ಪಡಲಿಲ್ಲವೋ. ‖ ೬ ‖ ಚಿತ್ರಕೂಟಂಗಿರಿಂ - ಚಿತ್ರಕೂಟಪರ್ವತವನ್ನು ಕುರಿತು, ಗತ್ವಾ - ಹೋಗಿ, ಸತಾಂ ಸತ್ಪುರುಷರ, ಧರ್ಮಂ- ಧರ್ಮವನ್ನು, ಆಚರಿತಾ - ಅನುಷ್ಠಾನ ಮಾಡುತ್ತಿರುವ, ತ್ವಯಾ - ನಿನ್ನಿಂದ, ಭ್ರಾತಾ - ನಿಮ್ಮಣ್ಣನಾದ ಶ್ರೀರಾಮನು, ಯಥಾ - ಹೇಗೆ, ರಾಜ್ಯೇನ - ರಾಜ್ಯ ದಿಂದ, ನಿಮಂತ್ರಿತಃ - ಪ್ರಾರ್ಥಿಸಲ್ಪಟ್ಟನೋ, ರಾಜ್ಞಃ - ದಶರಥರಾಯನ, ವಚನೇ - ಮಾತಿನಲ್ಲಿ, ಸ್ಥಿತೇನ - ಇರುವ ಶ್ರೀರಾಮನಿಂದ, ರಾಜ್ಯಂ - ರಾಜ್ಯವು, ಯಥಾ - ಹೇಗೆ, ವಿಸರ್ಜಿತಂ - ಬಿಡಲ್ಪಟ್ಟಿತೋ, ಆರ್ಯಸ್ಯ - ಪೂಜ್ಯನಾದ ಶ್ರೀರಾಮನ, ಪಾದುಕೇ - ಪಾದುಕೆಗಳನ್ನು, ಗೃಹ್ಯ - ತೆಗೆದುಕೊಂಡು, ಯಥಾ - ಹೇಗೆ, ಪುನಃ - ಮತ್ತೂ ಆಗತಃ - ಬಂದವನು, ಅಸಿ - ಆದೆಯೋ,

---

ಯೋಗ್ಯವಾದ ದರ್ಭಾಸನದಲ್ಲಿ ಕುಳಿತು ಆ ರಾಜಪುತ್ರನನ್ನು ಕುರಿತು, ಅರಣ್ಯದಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಹೇಳಬಯಸುವವನಾಗಿ ಹೀಗೆಂದನು. ‖೧-೪‖ “ಎಲೈ ಭರತನೇ! ಶ್ರೀರಾಮನು ಅರಣ್ಯಕ್ಕೆ ಹೋದುದನ್ನೂ, ದಶರಥರಾಯನು ನಿನ್ನ ತಾಯಿಯಾದ ಕೈಕೇಯಿಾ ದೇವಿಗೆ ವರಗಳನಿತ್ತುದೂ, ಪುತ್ರಶೋಕದಿಂದ ಆ ಮಹಾರಾಜನು ಸ್ವರ್ಗಸ್ಥನಾದುದೂ, ದೂತರ ಮೂಲಕ ಆ ಸಮಾಚಾರವನ್ನು ಕೇಳಿ ನೀನು ಅಯೋಧ್ಯಾಪಟ್ಟಣಕ್ಕೆ ಬಂದುದೂ, ನೀನು ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿ ರಾಜ್ಯವನ್ನು ಬಯಸದೆ ಚಿತ್ರಕೂಟಪರ್ವತಕ್ಕೆ ಹೋಗಿ ನಿಮ್ಮ ಅಣ್ಣನಾದ ಶ್ರೀರಾಮಮೂರ್ತಿಯನ್ನು, ಪಟ್ಟಣಕ್ಕೆ ಹಿಂತಿರುಗಬೇಕೆಂದು ಪ್ರಾರ್ಥಿಸಿದುದೂ, ಆ ತರುವಾಯ ಆತನ ಅನುಮತಿಯನ್ನು ಹೊಂದಿ ಧರ್ಮವಾಗಿ ಸಂಚರಿಸುತ್ತ ಪ್ರಜಾಪಾಲನವನ್ನು ಮಾಡಲೋಸುಗ ಶ್ರೀರಾಮನ ಪಾದುಕೆಗಳನ್ನು ತೆಗೆದುಕೊಂಡು ಬಂದುದೂ ಇವೇ ಮೊದಲಾದ ಎಲ್ಲ ಸಂಗತಿಗಳೂ ನೀನು ತಿಳಿದುವೇ

ವದ್ವಿದಿತಾ ತವ । ತ್ವಯಿ ಪ್ರತಿಪ್ರಯಾತೇತು ಯದ್ವೃತ್ತಂ ತನ್ನಿಬೋಧ ಮೇ ॥ ೯ ॥ ಅಪಯಾತೇ ತ್ವಯಿ ತದಾ ಸಮುದ್ಭ್ರಾಂತಮೃಗದ್ವಿಜಂ । ಪರಿದ್ಯೂನಮಿವಾತ್ಯರ್ಥಂ ತದ್ವನಂ ಸಮುಪದ್ಯತ ॥ ೧೦ ॥ ತದ್ಧಸ್ತಿಮೃದಿತಂ ಘೋರಂ ಸಿಂಹವ್ಯಾಘ್ರಮೃಗಾಯುತಂ । ಪ್ರವಿವೇಶಾಽಥ ವಿಜನಂ ಸುಮಹದ್ದಂಡಕಾವನಂ ॥ ೧೧ ॥ ತೇಷಾಂ ಪುರಸ್ತಾದ್ಬಲವಾನ್ ಗಚ್ಛತಾಂ ಗಹನೇ ವನೇ । ನಿನದನ್ ಸುಮಹಾನಾದಂ ವಿರಾಧಃ ಪ್ರತ್ಯದೃಶ್ಯತ ॥೧೨॥ ಸಮುತ್ಕ್ಷಿಪ್ಯ ಮಹಾನಾದಮೂರ್ಧ್ವಬಾಹುಮಧೋಮುಖಂ । ನಿಖಾತೇ ಪ್ರಕ್ಷಿಪಂತಿಸ್ಮ ನದಂತಮಿವ ಕುಂಜರಂ ॥ ೧೩ ॥ ತತ್ಕೃತ್ವಾ ದುಷ್ಕರಂ

ಹೇ ಮಹಾಬಾಹೋ - ಎಲೈ ಮಹಾ ಭುಜಶಾಲಿಯೇ, ಸರ್ವಂ - ಸಮಸ್ತವಾದ, ಏತತ್ - ಈ ವೃತ್ತಾಂತವು, ಯಥಾವತ್ - ನಡೆದಂತೆ, ತವ - ನಿನಗೆ, ವಿದಿತಂ - ತಿಳಿದೇ ಇದೆ, ತ್ವಯಿ - ನೀನು, ಪ್ರತಿಪ್ರಯಾತೇ - ಹಿಂದಕ್ಕೆ ಬಂದವನಾಗಲು, ಯತ್ - ಯಾವದು, ವೃತ್ತಂ - ನಡೆಯಿತೋ, ತತ್ - ಅದನ್ನು, ಮೇ - ನನ್ನಿಂದ, ನಿಬೋಧ - ತಿಳಿದುಕೋ. ॥ ೮-೯ ॥ ತ್ವಯಿ - ನೀನು, ಅಪಯಾತೇ - ಹೊರಟುಬಂದಮೇಲೆ, ತದಾ - ಆ ಕಾಲದಲ್ಲಿ, ಸಮು....ಜಂ - ಭ್ರಾಂತಿಯಿಂದ ಹಾರುತ್ತಿರುವ ಮೃಗಗಳೂ ಪಕ್ಷಿಗಳೂ ಉಳ್ಳ, ಪರಿದ್ಯೂನಮಿವ - ಸಂಕಟಗೊಂಡಂತಿರುವ, ತದ್ವನಂ - ಆ ವನವು, ಅತ್ಯರ್ಥಂ - ಬಹಳವಾಗಿ, ಸಮುಪದ್ಯತ - ಹೊಂದಿದನು. ॥ ೧೦ ॥ ಅಥ - ಬಳಿಕ, ಹಸ್ತಿಮೃದಿತಂ - ಆನೆಗಳಿಂದ ಮುರಿಯಲ್ಪಟ್ಟ, ಘೋರಂ - ಭಯಂಕರವಾದ, ಸಿಂಹ....ತಂ - ಸಿಂಹಗಳಿಂದಲೂ, ಹುಲಿಗಳಿಂದಲೂ, ಚಿಗರಿಗಳಿಂದಲೂ ಕೂಡಿರುವ, ವಿಜನಂ - ಜನರಹಿತವಾದ, ಸುಮಹತ್ - ಬಹಳ ದೊಡ್ಡದಾದ, ದಂಡಕಾವನಂ - ದಂಡಕಾರಣ್ಯವನ್ನು, ಪ್ರವಿವೇಶ - ಹೊಕ್ಕನು. ॥ ೧೧ ॥ ಗಹನೇ - ಪ್ರವೇಶಿಸಲಸಾಧ್ಯವಾದ, ವನೇ - ದಂಡಕಾರಣ್ಯದಲ್ಲಿ, ಗಚ್ಛತಾಂ - ಹೋಗುತ್ತಿರುವ, ತೇಷಾಂ - ಆ ಸೀತಾರಾಮಲಕ್ಷ್ಮಣರ, ಪುರಸ್ತಾತ್ - ಮುಂಗಡೆ, ಬಲವಾನ್ - ಪರಾಕ್ರಮಿಯಾದ, ವಿರಾಧಃ- ವಿರಾಧನು, ಸುಮಹಾನಾದಂ - ಬಹು ದೊಡ್ಡ ಕೂಗನ್ನು, ನಿನದನ್ - ಕೂಗುತ್ತಿರುವವನಾಗಿ, ಪ್ರತ್ಯದೃಶ್ಯತ-ಕಾಣಲ್ಪಟ್ಟನು. ॥೧೨॥ ಮಹಾನಾದಂ-ಘಟ್ಟಿಯಾಗಿ ಕೂಗುಳ್ಳ, ಊರ್ಧ್ವಬಾಹುಂ-ಊರ್ಧ್ವಕಾರವಾದ ಭುಜಗಳುಳ್ಳ, ಅಧೋಮುಖಂ - ಬೊಗ್ಗಿರುವ ಮುಖವುಳ್ಳ, ತಂ - ಆ ವಿರಾಧನನ್ನು, ಉತ್ಕ್ಷಿಪ್ಯ - ಮೂಲೋತ್ಪಾಟನ ಮಾಡಿ, ನದಂತಂ - ಧ್ವನಿಗೊಂಡಿರುವ, ಕುಂಜರಮಿವ - ಆನೆಯನ್ನಂತೆ, ನಿಖಾತೇ - ಗುಳಿಯಲ್ಲಿ, ಪ್ರಕ್ಷಿಪಂತಿಸ್ಮ - ಹಾಕಿದರಷ್ಟೆ. ॥ ೧೩ ॥ ಭ್ರಾತರೌ - ಅಣ್ಣ

ಆಗಿವೆ. ಆದುದರಿಂದ ನಾನು ಅವುಗಳೆಲ್ಲವನ್ನೂ ಮತ್ತೆ ಹೇಳಬೇಕಾದ ಆವಶ್ಯಕತೆಯಿರುವುದಿಲ್ಲವಷ್ಟೆ. ಎಲೈ ಭರತನೇ! ನೀನು ಶ್ರೀರಾಮನನ್ನು ಬಿಟ್ಟು ಬಂದ ತರುವಾಯ ನಡೆದ ಸಂಗತಿಗಳೆಲ್ಲವನ್ನೂ ಈಗ ಹೇಳುವೆನು. ಆಲಿಸು. ಆತನು ನಾನಾವಿಧಗಳಾದ ಕ್ರೂರ ಮೃಗಗಳಿಂದ ಕೂಡಿದ ಮಹಾ ಭಯಂಕರವಾದ ದಂಡಕಾರಣ್ಯವನ್ನು ಪ್ರವೇಶಿಸಿದನು. ॥ ೫-೧೦ ॥ ಹೀಗೆ ಪ್ರವೇಶಿಸಿ ಆನೆಗಳ ಸಂಚಾರದಿಂದ ಗಹನವಾಗಿ, ಸಿಂಹ, ವ್ಯಾಘ್ರಗಳಿಂದ ಭೀಕರವೂ, ಜನರಹಿತವೂ ಆದ ಆ ವನವನ್ನು ಪ್ರವೇಶಿಸಿ ಮುಂದು ವರಿಯುತ್ತಿರಲು ಆ ಸೀತಾ ರಾಮಲಕ್ಷ್ಮಣರ ಮುಂಗಡೆ ವಿರಾಧನೆಂಬ ರಾಕ್ಷಸನೊಬ್ಬನು ಭಯಂಕರ ಸಿಂಹನಾದವನ್ನು ಮಾಡುತ್ತ ನಿಂತನು. ಹೀಗೆ ಸಿಂಹನಾದ ಮಾಡುತ್ತ, ಊರ್ಧ್ವಮುಖವಾದ ಬಾಹುಗಳುಳ್ಳವನೂ, ಕೆಳಬಾಗದಲ್ಲಿರುವ ಮುಖವುಳ್ಳವನೂ ಆದ ಆ ರಾಕ್ಷಸ

ಕರ್ಮ ಭ್ರಾತರೌ ರಾಮಲಕ್ಷ್ಮಣೌ । ಸಾಯಾಹ್ನೇ ಶರಭಂಗಸ್ಯ ರಮ್ಯಮಾಶ್ರಮಮೀ ಯತುಃ ॥ ೧೪ ॥ ಶರಭಂಗೇ ದಿವಂ ಪ್ರಾಪ್ತೇ ರಾಮಸ್ಸತ್ಯಪರಾಕ್ರಮಃ । ಅಭಿವಾದ್ಯ ಮುನೀನ್ ಸರ್ವಾನ್ ಜನಸ್ಥಾನಮುಪಾಗಮತ್ । ತತಃ ಪಶ್ಚಾಚ್ಛೂರ್ಪಣಖಾ ರಾಮ ಪಾರ್ಶ್ವಮುಪಾಗತಾ ॥ ೧೫ ॥ ತತೋ ರಾಮೇಣ ಸಂದಿಷ್ಟೋ ಲಕ್ಷ್ಮಣಸ್ಸಹಸೋ ತ್ಥಿತಃ । ಪ್ರಗೃಹ್ಯ ಖಡ್ಗಂ ಚಿಚ್ಛೇದ ಕರ್ಣನಾಸಂ ಮಹಾಬಲಃ ॥ ೧೬ ॥ ಚತುರ್ದಶ ಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ । ಹತಾನಿ ವಸತಾ ತತ್ರ ರಾಘವೇಣ ಮಹಾ ತ್ಮನಾ ॥೧೭॥ ಏಕೇನ ಸಹ ಸಂಗಮ್ಯ ರಣೇ ರಾಮೇಣ ಸಂಗತಾಃ । ಅಹ್ನಶ್ಚತುರ್ಥ

ತಮ್ಮಂದಿರಾದ, ರಾಮಲಕ್ಷ್ಮಣೌ - ಶ್ರೀರಾಮಲಕ್ಷ್ಮಣರು, ದುಷ್ಕರಂ - ಯಾರಿಂದಲೂ ಮಾಡ ಲಸಾಧ್ಯವಾದ, ತತ್ಕರ್ಮ - ಆ ಕೆಲಸವನ್ನು, ಕೃತ್ವಾ - ಮಾಡಿ, ಸಾಯಾಹ್ನೇ - ಸಾಯಂಕಾಲದಲ್ಲಿ, ಶರಭಂಗಸ್ಯ - ಶರಭಂಗಋಷಿಯ, ರಮ್ಯಂ - ಮನೋಹರವಾದ, ಆಶ್ರಮಂ - ಆಶ್ರಮವನ್ನು, ಈಯತುಃ - ಹೊಂದಿದರು. ॥ ೧೪ ॥ ಶರಭಂಗೇ - ಶರಭಂಗಋಷಿಯು, ದಿವಂಪ್ರಾಪ್ತೇ - ಸ್ವರ್ಗವನ್ನು ಹೊಂದಿದವನಾಗಲೂ, ಸತ್ಯಪರಾಕ್ರಮಃ - ಸತ್ಯದಿಂದಲೇ ಶತ್ರುನಿಗ್ರಹವನ್ನು ಮಾಡುತ್ತಿರುವ, ರಾಮಃ - ಶ್ರೀರಾಮನು, ಸರ್ವಾನ್ - ಸಮಸ್ತರಾದ, ಮುನೀನ್ - ಋಷಿಗಳನ್ನು, ಅಭಿವಾದ್ಯ - ನಮಸ್ಕರಿಸಿ, ಜನ ಸ್ಥಾನಂ - ಪಂಚವಟೀತೀರವನ್ನು, ಉಪಾಗಮತ್ - ಹೊಂದಿದನು. ॥ ೧೫ ॥ ತತಃಪಶ್ಚಾತ್ - ಆ ಬಳಿಕ, ಶೂರ್ಪಣಖಾ - ರಾಕ್ಷಸಿಯಾದ ಶೂರ್ಪಣಖಿಯು, ರಾಮಪಾರ್ಶ್ವಂ - ಶ್ರೀರಾಮನ ಸಮೀಪವನ್ನು, ಉಪಾಗತಾ-ಹೊಂದಿದಳು, ತತಃ-ಬಳಿಕ, ರಾಮೇಣ-ಶ್ರೀರಾಮನಿಂದ, ಸಂದಿಷ್ಟಃ-ಆಜ್ಞಾಪಿಸಲ್ಪಟ್ಟ, ಮಹಾಬಲಃ - ಮಹಾ ಬಲಶಾಲಿಯಾದ, ಲಕ್ಷ್ಮಣಃ - ಲಕ್ಷ್ಮಣನು, ಸಹಸಾ - ಜಾಗ್ರತೆಯಾಗಿ, ಉತ್ಥಿತಃ - ಎದ್ದು, ಖಡ್ಗಂ - ಕತ್ತಿಯನ್ನು, ಪ್ರಗೃಹ್ಯ - ತೆಗೆದುಕೊಂಡು, ಕರ್ಣನಾಸಂ - ಕಿವಿ ಮೂಗುಗಳನ್ನು, ಚಿಚ್ಛೇದ - ಕತ್ತರಿಸಿದನು. ॥ ೧೬ ॥ ತತ್ರ - ಆ ಪಂಚವಟೀತೀರದಲ್ಲಿ, ವಸತಾ - ಇರುವ, ಮಹಾತ್ಮನಾ - ಮಹಾತ್ಮನಾದ, ರಾಘವೇಣ - ಶ್ರೀರಾಮನಿಂದ, ಭೀಮಕರ್ಮಣಾ - ಭಯಂಕರ ಕೃತ್ಯಗಳುಳ್ಳ, ರಕ್ಷಸಾಂ - ರಕ್ಕಸರ, ಚತು....ಣಿ - ಹದಿನಾಲ್ಕುಸಾವಿರಗಳು, ಹತಾನಿ - ಹೊಡೆಯಲ್ಪಟ್ಟವು. ॥೧೭॥ ರಣೇ - ಕಾಳಗದಲ್ಲಿ, ಏಕೇನರಾಮೇಣಸಹ - ಒಬ್ಬ ಶ್ರೀರಾಮನಿಂದಲೇ, ಸಂಗಮ್ಯ - ಸೇರಿ, ರಕ್ಕಸಾಃ - ರಕ್ಕಸರು, ಅಹ್ನಃ - ಹಗಲಿನ, ಚತುರ್ಥಭಾಗೇನ - ನಾಲ್ಕನೆಯ

ನನ್ನು ಶ್ರೀರಾಮನು ಕ್ಷಣಮಾತ್ರದಲ್ಲಿಯೇ ಸಂಹರಿಸಿ ಕೆಡವಿದನು. ಆ ತರುವಾಯ ಅಣ್ಣ ತಮ್ಮಂದಿರಾದ ಶ್ರೀರಾಮಲಕ್ಷ್ಮಣರೀರ್ವರೂ ಆನೆಯಂತೆ ಅರಚುತ್ತಿರುವ ಆ ರಾಕ್ಷಸನನ್ನು ಗುಂಡಿಯಲ್ಲಿ ಕೆಡವಿ ಆ ಸಾಯಂಕಾಲವೇ ಶರಭಂಗಮುನಿಯ ಆಶ್ರಮಕ್ಕೈತಂದರು. ॥೧೧–೧೫॥ ಆ ತರುವಾಯ ಮಹಾತ್ಮನಾದ ಶರಭಂಗಮುನಿಯು ಶ್ರೀರಾಮನನ್ನು ಸಂದರ್ಶಿಸಿ ಸ್ವರ್ಗಲೋಕಕ್ಕೆ ಹೊರಟುಹೋದನು. ಆ ತರುವಾಯ ಸತ್ಯಪರಾಕ್ರಮಿಯಾದ ಶ್ರೀರಾಮನು ಸಮಸ್ತ ಮುನಿಶ್ರೇಷ್ಠರನ್ನೂ ನಮಸ್ಕರಿಸಿ ಜನಸ್ಥಾನವನ್ನು ಪ್ರವೇಶಿಸಿದನು. ಆಗ ಶೂರ್ಪ ಣಖಿಯೆಂದು ಹೆಸರುಳ್ಳ ರಾಕ್ಷಸಸ್ತ್ರೀಯೊಬ್ಬಳು ರಾಮನ ಬಳಿಗೆ ಬಂದಳು. ಆಗ ಲಕ್ಷ್ಮಣನು ಶ್ರೀರಾಮನ ಅಪ್ಪಣೆಯನ್ನು ಪಡೆದು ಆ ರಾಕ್ಷಸಿಯ ಕಿವಿಮೂಗುಗಳನ್ನು ಕತ್ತರಿಸಿ ಓಡಿ ಸಿದನು. ಆ ಬಳಿಕ ಜನಸ್ಥಾನದಲ್ಲಿ ಶ್ರೀರಾಮನು ಹದಿನಾಲ್ಕುಸಾವಿರ ರಾಕ್ಷಸರನ್ನು ಏಕ ಕಾಲದಲ್ಲಿಯೇ ಸಂಹರಿಸಿದನು. ಈ ಹದಿನಾಲ್ಕುಸಾವಿರ ರಾಕ್ಷಸರನ್ನೂ, ಅವರೊಡನೆ ಬಂದ

ಭಾಗೇನ ನಿಃಶೇಷಾ ರಾಕ್ಷಸಾಃ ಕೃತಾಃ ॥ ೧೮ ॥ ಮಹಾಬಲಾ ಮಹಾವೀರ್ಯಾ ಸ್ತಪಸೋವಿಘ್ನಕಾರಿಣಃ । ನಿಹತಾ ರಾಘವೇಣಾಜೌ ದಂಡಕಾರಣ್ಯವಾಸಿನಃ ॥ ೧೯ ॥ ರಾಕ್ಷಸಾಶ್ಚ ವಿನಿಷ್ಪಿಷ್ಟಾಃ ಖರಶ್ಚ ನಿಹತೋ ರಣೇ । ತತಸ್ತೇನಾರ್ದಿತಾ ಬಾಲಾ ರಾವಣಂ ಸಮುಪಾಗತಾ ॥ ೨೦ ॥ ರಾವಣಾನುಚರೋ ಘೋರೋ ಮಾರೀಚೋ ನಾಮ ರಾಕ್ಷಸಃ । ಲೋಭಯಾಮಾಸ ವೈದೇಹೀಂ ಭೂತ್ವಾ ರತ್ನಮಯೋ ಮೃಗಃ ॥ ೨೧ ॥ ಅಥೈನಮಬ್ರವೀದ್ರಾಮಂ ವೈದೇಹೀ "ಗೃಹ್ಯತಾಮಯಂ । ಅಹೋ! ಮನೋಹರಃ ಕಾಂತ! ಆಶ್ರಮೋ ನೋ ಭವಿಷ್ಯತಿ" ॥ ೨೨ ॥ ತತೋ ರಾಮೋ

ಯಾಮದ ಮೂರು ಭಾಗಗಳ ಕಾಲದಿಂದ, (ಅಂದರೆ - ಅರ್ಧಾಧಿಕ ಮುಹೂರ್ತಕಾಲದಿಂದಲೇ), ನಿಶ್ಶೇಷಾಃ - ಶೇಷವಿಲ್ಲದೆ, ಕೃತಾಃ - ಮಾಡಲ್ಪಟ್ಟರು. ॥ ೧೮ ॥ ಆಜೌ - ಕಾಳಗದಲ್ಲಿ, ರಾಘವೇಣ - ಶ್ರೀರಾಮನಿಂದ, ತಪಸಃ - ತಪಸ್ಸಿಗೆ, ವಿಘ್ನಕಾರಿಣಃ - ವಿಘಾತ ಮಾಡುತ್ತಿರುವ, ದಂಡ....ನಃ - ದಂಡಕಾರಣ್ಯದಲ್ಲಿ ವಾಸಮಾಡುತ್ತಿರುವ, ಮಹಾಬಲಾಃ - ಬಹಳ ದೇಹತ್ರಾಣವುಳ್ಳ, ಮಹಾವೀರ್ಯಾಃ - ಬಹಳ ವೀರ್ಯವಂತನಾದ, ರಾಕ್ಷಸಾಃ - ರಕ್ಕಸರು, ನಿಹತಾಃ - ಹೊಡೆಯಲ್ಪಟ್ಟವರಾಗಿ, ವಿನಿಷ್ಪಿಷ್ಟಾಃ - ಅರೆಯಲ್ಪಟ್ಟವರು, ಖರಶ್ಚ - ಖರನೂ ಕೂಡ, ರಣೇ - ಕಾಳಗದಲ್ಲಿ, ನಿಹತಃ - ಹೊಡೆಯಲ್ಪಟ್ಟನು, ತತಃ - ಬಳಿಕ, ತೇನ - ಆ ಲಕ್ಷ್ಮಣನಿಂದ, ಬಾಲಾ - ಆ ಶೂರ್ಪಣಖಿಯು, ರಾವಣಂ - ರಾವಣನನ್ನು ಕುರಿತು, ಸಮುಪಾಗತಾ - ಬಂದಳು. ॥೧೯-೨೦॥ ರಾವ....ರಃ - ರಾವಣನಿಗೆ ಸೇವಕನಾದ, ಘೋರಃ - ಭಯಂಕರನಾದ, ಮಾರೀಚೋನಾಮ - ಮಾರೀಚನೆಂಬ, ರಾಕ್ಷಸಃ - ರಕ್ಕಸನು, ರತ್ನಮಯಃ - ರತ್ನವಿಕಾರವಾದ, ಮೃಗಃ - ಮೃಗರೂಪನು, ಭೂತ್ವಾ - ಆಗಿ, ವೈದೇಹೀಂ - ಸೀತಾದೇವಿಯನ್ನು, ಲೋಭಯಾಮಾಸ - ಭ್ರಾಂತಳನ್ನಾಗಿ ಮಾಡಿದನು. ॥ ೨೧ ॥ ಅಥ - ಬಳಿಕ, ವೈದೇಹೀ - ಸೀತಾದೇವಿಯು, ರಾಮಂ - ಶ್ರೀರಾಮನನ್ನು ಕುರಿತು, ಅಯಂ - ಈ ಮೃಗವು, ಮನೋಹರಃ - ಮನಸ್ಸಿಗೆ ರಮ್ಯವಾಗಿದೆ, ಅಹೋ - ಆಶ್ಚರ್ಯಕರವಾಗಿದೆ, ನಃ - ನಮ್ಮ, ಆಶ್ರಮಃ - ಆಶ್ರಮವು, ಕಾಂತಃ - ಮನೋಹರವಾದದ್ದು, ಭವಿಷ್ಯತಿ - ಆಗುವುದು, ಗೃಹ್ಯತಾಂ - ಹಿಡಿದು ತರಲ್ಪಡಲಿ, ಇತಿ - ಇಂತೆಂದು,

---

ಖರದೂಷಣ ತ್ರಿಶಿರಸ್ಕರೆಂಬ ಮಹಾರಾಕ್ಷಸರನ್ನೂ ಶ್ರೀರಾಮಮೂರ್ತಿಯು ಮೂರೂ ಮುಕ್ಕಾಲು ಘಳಿಗೆಯೊಳಗಾಗಿ ನಾಶಗೊಳಿಸಿದನು. ಆ ರೀತಿ ದಂಡಕಾರಣ್ಯದಲ್ಲಿ ವಾಸವಾಗಿರುವವರೂ, ತಪಸ್ಸಿಗೆ ವಿಘ್ನಮಾಡುತ್ತಿರುವವರೂ ಆದ ರಾಕ್ಷಸರೆಲ್ಲರೂ ಶ್ರೀರಾಮನೊಬ್ಬನಿಂದಲೇ ಸಂಹೃತರಾದರು. ಆ ಬಳಿಕ ಶ್ರೀರಾಮನ ಅನುಮತಿಯಿಂದ ಲಕ್ಷ್ಮಣನ ಮೂಲಕ ಕಿವಿಮೂಗುಗಳನ್ನು ಕಳೆದುಕೊಂಡ ಶೂರ್ಪಣಖಿಯೆಂಬ ಆ ರಾಕ್ಷಸಸ್ತ್ರೀಯು ತನ್ನ ಅಣ್ಣನಾದ ರಾವಣಾಸುರನ ಬಳಿಗೆ ಹೋದಳು. ॥೧೫–೨೦॥ ಹೀಗೆ ಆ ರಾಕ್ಷಸಿಯು ಅವನಲ್ಲಿಗೆ ಹೋಗಿ ದಂಡಕಾರಣ್ಯದಲ್ಲಿ ನಡೆದ ವೃತ್ತಾಂತವೆಲ್ಲವನ್ನೂ ಅರಿಕೆ ಮಾಡಿದಳು. ಆಗ ಎಡಬಿಡದೆ ರಾವಣನೊಡನೆಯೇ ಸಂಚರಿಸುವವನೂ, ಮಹಾ ಭಯಂಕರನೂ ಆದ ಮಾರೀಚನೆಂಬ ರಾಕ್ಷಸನು ಆ ರಾಕ್ಷಸನೊಡನೆ ದಂಡಕಾರಣ್ಯಕ್ಕೆ ಬಂದು ಮೃಗರೂಪಧಾರಿಯಾಗಿ ಸೀತಾದೇವಿಯನ್ನು ಭ್ರಾಂತಿಗೊಳಿಸಿದನು. ಆ ಸಮಯದಲ್ಲಿ ಸೀತಾದೇವಿಯಾದರೋ, ಕನಕಮೃಗಧಾರಿಯಾದ ಆ ಮಾರೀಚನನ್ನು ನೋಡಿ, ಮಾಯೆಯೆಂಬುದನ್ನರಿಯದೆ ಆ ಸ್ವರ್ಣಮೃಗದಲ್ಲಿ ಬಹಳ ಆಸೆಯುಳ್ಳವಳಾಗಿ ಶ್ರೀರಾಮನನ್ನು ಪ್ರಾರ್ಥಿಸಿದಳು. "ಈ ಮೃಗವು ಆಶ್ರಮದಲ್ಲಿದ್ದರೆ, ನಮ್ಮ

ಧನುಷ್ಪಾಣಿರ್ಧಾವಂತಮನುಧಾವತಿ । ಸ ತಂ ಜಘಾನ ಧಾವಂತಂ ಶರೇಣಾಽನತ
ಪರ್ವಣಾ ॥ ೨೩ ॥ ಅಥ ಸೌಮ್ಯ! ದಶಗ್ರೀವೋ ಮೃಗಂ ಯಾತೇತು ರಾಘವೇ ।
ಲಕ್ಷ್ಮಣೇಚಾಪಿ ನಿಷ್ಕ್ರಾಂತೇ ಪ್ರವಿವೇಶಾಽಶ್ರಮಂ ತದಾ ॥ ೨೪ ॥ ಜಗ್ರಾಹ ತರಸಾ
ಸೀತಾಂ ಗ್ರಹಃ ಖೇ ರೋಹಿಣೀಮಿವ । ತ್ರಾತುಕಾಮಂ ತತೋ ಯುದ್ಧೇ ಹತ್ವಾ
ಗೃಧ್ರಂ ಜಟಾಯುಷಂ ॥೨೫॥ ಪ್ರಗೃಹ್ಯ ಸೀತಾಂ ಸಹಸಾ ಜಗಾಮಾಶು ಸ ರಾವಣಃ ।
ತತಸ್ತ್ವದ್ಭುತಸಂಕಾಶಾ ಸ್ಥಿತಾಃ ಪರ್ವತಮೂರ್ಧನಿ ॥ ೨೬ ॥ ಸೀತಾಂ ಗೃಹೀತ್ವಾ

ಅಬ್ರವೀತ್ - ನುಡಿದಳು. ॥ ೨೨ ॥ ತತಃ - ಬಳಿಕ, ರಾಮಃ - ಶ್ರೀರಾಮನು, ಧನುಷ್ಪಾಣಿಃ - ಧನುರ್ಧಾರಿಯಾಗಿ, ಧಾವಂತಂ - ಓಡಿಹೋಗುತ್ತಿರುವ ಆ ಮೃಗವನ್ನು, ಅನುಧಾವತಿ - ಅನುಸರಿಸಿ ಹೋದನು, ಸಃ - ಆ ಶ್ರೀರಾಮನು, ಧಾವಂತಂ - ಓಡುತ್ತಿರುವ, ತಂ - ಆ ಮಾರೀಚನನ್ನು, ಅನ....ಣಾ - ಬೊಗ್ಗಿದ ತುದಿಗಳುಳ್ಳ, ಶರೇಣ - ಬಾಣದಿಂದ, ಜಘಾನ - ಹೊಡೆದನು. ॥ ೨೩ ॥ ಅಥ - ಬಳಿಕ, ಸೌಮ್ಯ - ಪ್ರಸನ್ನನೇ, ರಾಘವೇ - ಶ್ರೀರಾಮನು, ಮೃಗಂ - ಮೃಗವನ್ನು ಕುರಿತು, ಯಾತೇ - ಹೋದವನಾಗಲೂ, ಲಕ್ಷ್ಮಣೇಚಾಪಿ - ಲಕ್ಷ್ಮಣನೂ, ನಿಷ್ಕ್ರಾಂತೇ - ಹೊರಟುಹೋದವನಾಗಲೂ, ತದಾ - ಆ ಕಾಲದಲ್ಲಿ, ದಶಗ್ರೀವಃ - ರಾವಣನು, ಆಶ್ರಮಂ - ಪರ್ಣಶಾಲೆಯನ್ನು, ಪ್ರವಿವೇಶ - ಹೊಕ್ಕನು, ತರಸಾ - ಬಲದಿಂದ, ಗ್ರಹಃ - ಅಂಗಾರಕ ಗ್ರಹವು, ಖೇ - ಅಂತರಿಕ್ಷದಲ್ಲಿ, ರೋಹಿಣೀಮಿವ - ರೋಹಿಣೀನಕ್ಷತ್ರವನ್ನಂತೆ, ಸೀತಾಂ - ಸೀತಾದೇವಿಯನ್ನು, ಜಗ್ರಾಹ - ಹಿಡಿದನು. ॥ ೨೪-೨೫ ॥ ತತಃ - ಬಳಿಕ, ತ್ರಾತುಕಾಮಂ - ಸಂರಕ್ಷಿಸಲಿಚ್ಛೆಯುಳ್ಳ, ಗೃಧ್ರಂಜಟಾಯುಷಂ - ಗೃಧ್ರರಾಜನಾದ ಜಟಾಯುವನ್ನು, ಯುದ್ಧೇ - ಕಾಳಗದಲ್ಲಿ, ಹತ್ವಾ - ಕೊಂದು, ಸರಾವಣಃ - ಆ ರಾವಣನು, ಸೀತಾಂ - ಸೀತಾದೇವಿಯನ್ನು, ಪ್ರಗೃಹ್ಯ - ಹಿಡಿದು, ಸಹಸಾ - ಬಲದಿಂದ, ಆಶು - ಜಾಗ್ರತೆಯಾಗಿ, ಜಗಾಮ - ತೆರಳಿದನು. ॥೨೬॥ ತತಃ - ಬಳಿಕ, ಅದ್ಭುತಸಂಕಾಶಾಃ - ಆಶ್ಚರ್ಯಕರವಾದ ಆಕಾರಗಳುಳ್ಳ, ಪರ್ವತಮೂರ್ಧನಿ - ಋಷ್ಯಮೂಕವೆಂಬ ಬೆಟ್ಟದ ಶಿಖರದಲ್ಲಿ,

---

ಆಶ್ರಮವು ಮತ್ತಷ್ಟು ಶೋಭಾಯಮಾನವಾಗಿರುತ್ತದೆ" ಎಂದಳು. ಆಗ ಶ್ರೀರಾಮನು ಧನುಷ್ಪಾಣಿಯಾಗಿ ನಾಗಾಲೋಟದಿಂದ ಹಾರಿಹೋಗುತ್ತಿರುವ ಆ ಮೃಗವನ್ನಟ್ಟಿಹೋದನು. ಕೆಲದೂರ ಆ ಮೃಗವನ್ನು ಬೆನ್ನಟ್ಟಿಹೋಗಿ ಕಡೆಗೆ ಅದನ್ನು ಒಂದೇ ಒಂದು ಬಾಣದಿಂದಲೇ ಸಂಹರಿಸಿದನು. ಶ್ರೀರಾಮನು ಕನಕಮೃಗವನ್ನು ಹಿಂಬಾಲಿಸಲು, ಲಕ್ಷ್ಮಣಸ್ವಾಮಿಯೂ ಆತನನ್ನೇ ಅನುಸರಿಸಿ ಹೊರಟನು. ಆಶ್ರಮವು ಶ್ರೀರಾಮಲಕ್ಷ್ಮಣರಹಿತವಾಗಿ ಅಲ್ಲಿ ಸೀತಾದೇವಿಯೊಬ್ಬಳು ಮಾತ್ರ ಉಳಿದ ಬಳಿಕ ರಾವಣಾಸುರನು ಅದನ್ನು ಪ್ರವೇಶಿಸಿದನು. ॥ ೨೧–೨೫ ॥ ಹೀಗೆ ಪ್ರವೇಶಿಸಿ ಅಂತರಿಕ್ಷದಲ್ಲಿ ರೋಹಿಣೀ ನಕ್ಷತ್ರವನ್ನು ದುಷ್ಟ ಗ್ರಹವು ಆಕ್ರಮಿಸಿದಂತೆ ಆ ರಾಕ್ಷಸನು, ಸೀತಾದೇವಿಯನ್ನಾಕ್ರಮಿಸಿದನು. ಆ ಬಳಿಕ ಆ ದುಷ್ಟನು ಸೀತಾದೇವಿಯನ್ನು ತನ್ನ ರಥದ ಮೇಲಿರಿಸಿಕೊಂಡು ಜಾಗ್ರತೆಯಾಗಿ ತನ್ನ ನಗರಕ್ಕೆ ಹೋಗುತ್ತಿದ್ದನು. ಆಗ ಜಟಾಯುವೆಂಬ ಪಕ್ಷಿರಾಜನು ಸೀತಾದೇವಿಯನ್ನು ಬಿಡಿಸಿಕೊಳ್ಳಬಯಸಿ ಅವನಿಗೆ ಅಡ್ಡವಾಗಿ ಬಂದನು. ಆ ಸಮಯದಲ್ಲಿ ಆ ಜಟಾಯುವಿಗೂ, ರಾವಣಾಸುರನಿಗೂ ದ್ವಂದ್ವಯುದ್ಧವಾಗಿ ಅದರಲ್ಲಿ ಜಟಾಯುವು ರಾವಣನಿಂದ ಮಡಿದುಹೋದನು. ಆಮೇಲೆ ರಾವಣನು ಸೀತಾದೇವಿಯನ್ನೆತ್ತಿಕೊಂಡು ಬಹು ಜಾಗ್ರತೆಯಾಗಿ

ಗಚ್ಛಂತಂ ವಾನರಾಃ ಪರ್ವತೋಪಮಾಃ। ದದೃಶುರ್ವಿಸ್ಮಿತಾಸ್ತತ್ರ ರಾವಣಂ ರಾಕ್ಷಸಾಧಿಪಂ ॥ ೨೭ ॥ ಪ್ರವಿವೇಶ ತತೋ ಲಂಕಾಂ ರಾವಣೋ ಲೋಕರಾವಣಃ । ತಾಂ ಸುವರ್ಣಪರಿಕ್ರಾಂತೇ ಶುಭೇ ಮಹತಿ ವೇಶ್ಮನಿ ॥ ೨೮ ॥ ಪ್ರವಿಶ್ಯ ಮೈಥಿಲೀಂ ವಾಕ್ಯೈಸ್ಸಾಂತ್ವಯಾಮಾಸ ರಾವಣಃ । ತೃಣವದ್ಭಾಷಿತಂ ತಸ್ಯ ತಂ ಚ ನೈರ್ಋತಪುಂಗವಂ ॥ ೨೯ ॥ ಅಚಿಂತಯಂತೀ ವೈದೇಹೀ ಅಶೋಕವನಿಕಾಂ ಗತಾ । ನ್ಯವರ್ತತ ತತೋ ರಾಮೋ ಮೃಗಂ ಹತ್ವಾ ಮಹಾವನೇ ॥ ೩೦ ॥ ನಿವರ್ತಮಾನಃ ಕಾಕುತ್ಸ್ಥೋ

ಸ್ಥಿತಾಃ - ಇರುವ, ಪರ್ವತೋಪಮಾಃ - ಬೆಟ್ಟಕ್ಕೆ ಸಮಾನರಾದ, ತೇವಾನರಾಃ - ಆ ಕಪಿಗಳು, ಸೀತಾಂ - ಸೀತಾದೇವಿಯನ್ನು, ಗೃಹೀತ್ವಾ - ತೆಗೆದುಕೊಂಡು, ಗಚ್ಛಂತಂ - ಹೋಗುತ್ತಿರುವ, ರಾಕ್ಷಸಾಧಿಪಂ - ರಕ್ಕಸರೊಡೆಯನಾದ, ರಾವಣಂ - ದಶಕಂಠನನ್ನು, ತತ್ರ - ಆ ಋಷ್ಯಮೂಕಪರ್ವತದಲ್ಲಿ, ವಿಸ್ಮಿತಾಃ - ಆಶ್ಚರ್ಯಗೊಂಡವರಾಗಿ, ದದೃಶುಃ - ಕಂಡರು, ತತಃ - ಬಳಿಕ, ಲೋಕರಾವಣಃ- ಲೋಕಕ್ಕೇ ಕಂಟಕನಾದ, ರಾವಣಃ - ದಶಕಂಠನು, ಲಂಕಾಂ - ಲಂಕಾಪಟ್ಟಣವನ್ನು, ಪ್ರವಿವೇಶ - ಹೊಕ್ಕನು. ॥ ೨೭-೨೮ ॥ ರಾವಣಃ - ದಶಕಂಠನು, ಸುವರ್ಣಪರಿಕ್ರಾಂತೇ - ಬಂಗಾರದಿಂದ ಲೇಪನ ಮಾಡಲ್ಪಟ್ಟ, ಶುಭೇ-ಶುಭಕರವಾದ, ಮಹತಿ-ದೊಡ್ಡದಾದ, ವೇಶ್ಮನಿ-ಮನೆಯಲ್ಲಿ, ಪ್ರವಿಶ್ಯ-ಹೊಕ್ಕು, ಮೈಥಿಲೀಂ - ಸೀತಾದೇವಿಯನ್ನು, ವಾಕ್ಯೈಃ - ಮಾತುಗಳಿಂದ, ಸಾಂತ್ವಯಾಮಾಸ - ಸಮಾಧಾನಗೊಳಿಸಿದನು. ॥ ೨೯ ॥ ತಸ್ಯ - ಆ ದಶಕಂಠನ, ಭಾಷಿತಂ - ಮಾತನ್ನು, ತೃಣವತ್ - ಹುಲ್ಲುಕಡ್ಡಿಗೆ ಸಮಾನವಾದ್ದಂತೆ, ಮತ್ವಾ - ತಿಳಿದು, ನೈರ್ಋತಪುಂಗವಂ - ರಾಕ್ಷಸರಾಜನಾದ, ತಂಚ - ಆ ದಶಕಂಠನನ್ನು, ಅಚಿಂತಯಂತೀ - ಲಕ್ಷ್ಯಮಾಡದಿರುವವಳಾಗಿ, ವೈದೇಹೀ - ಸೀತಾದೇವಿಯು, ಅಶೋಕವನಿಕಾಂ-ಅಶೋಕವನವನ್ನು, ಗತಾ-ಹೊಂದಿದಳು. ॥ ೩೦ ॥ ತತಃ-ಬಳಿಕ, ರಾಮಃ-ಶ್ರೀರಾಮನು, ಮಹಾವನೇ - ದೊಡ್ಡ ಅರಣ್ಯದಲ್ಲಿ, ಮೃಗಂ - ಮೃಗರೂಪನಾದ ಮಾರೀಚನನ್ನು, ಹತ್ವಾ-ಕೊಂದು, ನ್ಯವರ್ತತ-ಹಿಂತಿರುಗಿದನು, ನಿವರ್ತಮಾನಃ-ಹಿಂತಿರುಗಿ ಬರುತ್ತಿರುವ, ಕಾಕುತ್ಸ್ಥಃ-ಶ್ರೀರಾಮನು, ಗೃಧ್ರಂ - ಜಟಾಯುವನ್ನು, ದೃಷ್ಟ್ವಾ - ಕಂಡು, ಪ್ರವಿವ್ಯಥೇ - ವ್ಯಸನಗೊಂಡನು. ॥೩೧॥ ತತಃ -

---

ಹೋಗುತ್ತಿರುವಾಗ ಋಷ್ಯಮೂಕಪರ್ವತದಲ್ಲಿ ಕುಳಿತಿದ್ದ ಮಹಾ ವೀರರೂ, ಪರ್ವತಕ್ಕೆ ಸಮಾನವಾದ ಶರೀರಗಳುಳ್ಳವರೂ ಆದ ವಾನರರೂ ಆಕೆಯನ್ನು ನೋಡಿದರು. ಆಕೆಯನ್ನು ನೋಡಿ ಅವರೆಲ್ಲರೂ ಪರಮಾಶ್ಚರ್ಯಭರಿತರಾದರು. ಅಷ್ಟರಲ್ಲಿಯೇ ಸಕಲ ಲೋಕಭಯಂಕರನಾದ ಆ ರಾವಣಾಸುರನು ತನ್ನಿಂದ ಸಂರಕ್ಷಿತವಾದ ಲಂಕಾಪಟ್ಟಣಕ್ಕೆ ಹೋಗಿ ಆ ಸೀತಾದೇವಿಯನ್ನು ಸುವರ್ಣ ನಿರ್ಮಿತವಾದೊಂದು ಗೃಹದಲ್ಲಿರಿಸಿದನು. ಆಮೇಲೆ ಆ ದುರುಳನು ಆಕೆಯನ್ನು ಸಾಂತ್ವವಚನಗಳಿಂದ ಬೇಳುವೆಗೊಳಿಸಲಾರಂಭಿಸಿದನು. ॥ ೨೬–೩೦ ॥ ಮಹಾ ಪತಿವ್ರತೆಯಾದ ಆಕೆಯಾದರೋ ಆ ರಾಕ್ಷಸನನ್ನೂ ಅವನ ಮಾತುಗಳನ್ನೂ ಹುಲ್ಲುಕಡ್ಡಿಯಂತೆ ಕಡೆಗಣಿಸಿ ಮಾತನಾಡಿದಳು. ಆಕೆಯು ರಾವಣಾಸುರನ ಅಶೋಕವನದಲ್ಲಿ ತನ್ನ ಪತಿದೇವನಾದ ಶ್ರೀರಾಮಮೂರ್ತಿಯನ್ನೇ ಧ್ಯಾನಿಸುತ್ತ, ಅಪರಿಮಿತವಾದ ದುಃಖದಿಂದ ಪರಿತಪ್ತೆಯಾಗಿದ್ದಳು. ಇತ್ತ ಶ್ರೀರಾಮಮೂರ್ತಿಯು ಆ ಮಾಯಾಮೃಗವನ್ನು ಸಂಹರಿಸಿ ತಮ್ಮನಾದ ಲಕ್ಷ್ಮಣಸ್ವಾಮಿಯೊಡನೆ ಆಶ್ರಮಕ್ಕೆ ಬಂದನು. ಆಶ್ರಮದಲ್ಲಿ ತನ್ನ ಪ್ರಿಯೆಯಾದ ಸೀತೆಯನ್ನು ಕಾಣದೆ ಮಹಾ ವ್ಯಸನಪೀಡಿತನಾಗಿ

ದೃಷ್ಟ್ವಾ ಗೃಧ್ರಂ ಪ್ರವಿವ್ಯಥೇ । ಗೃಧ್ರಂ ಹತಂ ತತೋ ದಗ್ಧ್ವಾ ರಾಮಃ ಪ್ರಿಯಸಖಂ ಪಿತುಃ ॥ ೩೦ ॥ ಮಾರ್ಗಮಾಣಸ್ತು ವೈದೇಹೀಂ ರಾಘವಸ್ಸಹಲಕ್ಷ್ಮಣಃ । ಗೋದಾವರೀಮನ್ವಚರದ್ವನೋದ್ದೇಶಾಂಶ್ಚ ಪುಷ್ಪಿತಾನ್ ॥ ೩೧ ॥ ಆಸೇದತುರ್ಮಹಾರಣ್ಯೇ ಕಬಂಧಂ ನಾಮ ರಾಕ್ಷಸಂ । ತತಃ ಕಬಂಧವಚನಾದ್ರಾಮಸ್ಸತ್ಯಪರಾಕ್ರಮಃ ॥೩೨॥ ಋಶ್ಯಮೂಕಂ ಗಿರಿಂ ಗತ್ವಾ ಸುಗ್ರೀವೇಣ ಸಮಾಗತಃ । ತಯೋಸ್ಸಮಾಗಮಃ ಪೂರ್ವಂ ಪ್ರೀತ್ಯಾ ಹಾರ್ದೋ ವ್ಯಜಾಯತ ॥ ೩೩ ॥ ಭ್ರಾತ್ರಾ ನಿರಸ್ತಃ ಕ್ರುದ್ಧೇನ ಸುಗ್ರೀವೋ ವಾಲಿನಾ ಪುರಾ । ಇತರೇತರಸಂವಾದಾತ್ಪ್ರಗಾಢಃ ಪ್ರಣಯಸ್ತಯೋಃ

ಬಳಿಕ, ಪಿತುಃ - ತಂದೆಯಾದ ದಶರಥರಾಯನಿಗೆ, ಪ್ರಿಯಸಖಂ - ಇಷ್ಟಮಿತ್ರನಾದ, ಹತಂ - ಮೃತನಾದ, ಗೃಧ್ರಂ - ಜಟಾಯುವನ್ನು, ದಗ್ಧ್ವಾ - ಸುಟ್ಟು, ರಾಮಃ - ಶ್ರೀರಾಮನು, ವೈದೇಹೀಂ - ಸೀತಾದೇವಿಯನ್ನು, ಮಾರ್ಗಮಾಣಃ - ಹುಡುಕುತ್ತಿದ್ದನು. ॥ ೩೧ ॥ ರಾಘವಃ - ಶ್ರೀರಾಮನು, ಸಹಲಕ್ಷ್ಮಣಃ - ಲಕ್ಷ್ಮಣನೊಡಗೂಡಿ, ಗೋದಾವರೀಂ - ಗೋದಾವರೀತೀರದಲ್ಲಿ, ವನೋದ್ದೇಶಾಂಶ್ಚ - ವನಪ್ರದೇಶಗಳನ್ನು ಕುರಿತು, ಅನ್ವಚರತ್ - ಅನುಸರಿಸಿ ಸಂಚರಿಸಿದನು, ಮಹಾರಣ್ಯೇ - ದೊಡ್ಡ ಕಾಡಿನಲ್ಲಿ, ಕಬಂಧಂನಾಮ - ಕಬಂಧನೆಂದು ಪ್ರಸಿದ್ಧನಾದ, ರಾಕ್ಷಸಂ - ರಕ್ಕಸನನ್ನು, ಆಸೇದತುಃ - ಹೊಂದಿದರು. ॥ ೩೨ ॥ ತತಃ - ಬಳಿಕ, ಸತ್ಯಪರಾಕ್ರಮಃ - ಸಫಲವಾದ ಪರಾಕ್ರಮವುಳ್ಳ, ರಾಮಃ - ಶ್ರೀರಾಮನು, ಕಬಂಧವಚನಾತ್ - ಕಬಂಧನ ಮಾತಿನಿಂದ, ಋಶ್ಯಮೂಕಂ - ಋಶ್ಯಮೂಕವೆಂಬ, ಗಿರಿಂ - ಬೆಟ್ಟವನ್ನು, ಗತ್ವಾ - ಹೊಂದಿ, ಸುಗ್ರೀವೇಣ - ಸುಗ್ರೀವನೊಡನೆ, ಸಮಾಗತಃ - ಸೇರಿದನು, ತಯೋಃ - ಆ ರಾಮಸುಗ್ರೀವರಿಗೆ, ಸಮಾಗಮಾತ್ - ದರ್ಶನಕ್ಕಿಂತಲೂ, ಪೂರ್ವಂ - ಮೊದಲು, ಪ್ರೀತ್ಯಾ - ವಿಶ್ವಾಸದಿಂದ, ಹಾರ್ದಃ - ವಿಶ್ವಾಸವು, ವ್ಯಜಾಯತ - ಹುಟ್ಟಿತು. ॥ ೩೩ ॥ ಕ್ರುದ್ಧೇನ - ಕುಪಿತನಾದ, ಭ್ರಾತ್ರಾ - ಅಣ್ಣನಾದ, ವಾಲಿನಾ - ವಾಲಿಯಿಂದ, ಸುಗ್ರೀವಃ - ಸುಗ್ರೀವನು, ಪುರಾ - ಪೂರ್ವದಲ್ಲಿ, ನಿರಸ್ತಃ - ಹೊರಡಿಸಲ್ಪಟ್ಟನು, ಇತ....ತ್ - ಅನ್ಯೋನ್ಯ ಸಂಭಾಷಣೆಯ ದೆಸೆಯಿಂದ, ತಯೋಃ - ಆ ರಾಮಸುಗ್ರೀವರಿಗೆ, ಪ್ರಣಯಃ - ವಿಶ್ವಾಸವು, ಪ್ರಗಾಢಾ - ದೃಢವಾಯಿತು. ॥ ೩೪ ॥ ರಾಮಸ್ಯ - ಶ್ರೀರಾಮನ, ಬಾಹು

ಲಕ್ಷ್ಮಣನೊಡನೆ ಆಕೆಯನ್ನು ಹುಡುಕಿಕೊಂಡು ಹೊರಟನು. ಆಗ ಒಂದು ಪ್ರದೇಶದಲ್ಲಿ ರಾವಣನಿಂದ ವಧಿಸಲಾದ ಜಟಾಯುವನ್ನು ನೋಡಿ ಆತನಿಂದ ನಡೆದ ವೃತ್ತಾಂತವೆಲ್ಲವನ್ನೂ ಅರಿತುಕೊಂಡನು. ಆ ತರುವಾಯ ತನ್ನ ತಂದೆಗೆ ಗೆಳೆಯನಾದ ಆ ಜಟಾಯುವು ಮಡಿಯಲು ಶ್ರೀರಾಮನು ಆತನ ದಹನ ಸಂಸ್ಕಾರವನ್ನು ಮುಗಿಸಿದನು. ಆಮೇಲೆ ಆತನು ಲಕ್ಷ್ಮಣನೊಡಗೂಡಿ ಗೋದಾವರೀತೀರದಲ್ಲಿಯೂ, ಹೂಬಿಟ್ಟು ಸೊಗಸಾಗಿರುವ ವನೋಪವನಗಳಲ್ಲಿಯೂ ತನ್ನ ಪ್ರಿಯಭಾರ್ಯೆಯಾದ ಸೀತಾದೇವಿಯನ್ನು ಹುಡುಕುತ್ತಿದ್ದನು. ಹಾಗೆಯೇ ಮುಂದೆ ಬರುತ್ತಿರಲು ಕಬಂಧನೆಂಬ ರಾಕ್ಷಸನೊಬ್ಬನನ್ನು ಕಂಡು ಆತನ ಮಾತಿನ ಪ್ರಕಾರ ಮಹಾ ಸತ್ಯಪರಾಕ್ರಮಿಯಾದ ಶ್ರೀರಾಮಮೂರ್ತಿಯು ಋಷ್ಯಮೂಕಪರ್ವತಕ್ಕೆ ಹೋದನು. ॥೩೦-೩೪॥ ಅಲ್ಲಿಗೆ ಹೋಗಿ ವಾನರೇಶ್ವರನಾದ ಸುಗ್ರೀವನೊಡನೆ ಸಖ್ಯಮಾಡಿಕೊಂಡನು. ಆ ಶ್ರೀರಾಮ ಸುಗ್ರೀವರಿಬ್ಬರೂ ಒಬ್ಬರನ್ನೊಬ್ಬರು ನೋಡುವ ಮೊದಲೇ ಪರಸ್ಪರ ಸ್ನೇಹಯುಕ್ತರಾದರು. ಆ ಸಮಯದಲ್ಲಿ ಸುಗ್ರೀವನಾದರೂ, ಮಹಾ ಬಲಾಢ್ಯನೂ,

॥ ೩೫ ॥ ರಾಮಸ್ಯ ಬಾಹುವೀರ್ಯೇಣ ಸ್ವರಾಜ್ಯಂ ಪ್ರತ್ಯಪಾದಯತ್ । ವಾಲಿನಂ ಸಮರೇ ಹತ್ವಾ ಮಹಾಕಾಯಂ ಮಹಾಬಲಂ ॥೩೬॥ ಸುಗ್ರೀವಃ ಸ್ಥಾಪಿತೋ ರಾಜ್ಯೇ ಸಹಿತಸ್ಸರ್ವವಾನರೈಃ । ರಾಮಾಯ ಪ್ರತಿಜಾನೀತೇ ರಾಜಪುತ್ರ್ಯಾಶ್ಚ ಮಾರ್ಗಣಂ ॥ ೩೭ ॥ ಆದಿಷ್ಟಾ ವಾನರೇಂದ್ರೇಣ ಸುಗ್ರೀವೇಣ ಮಹಾತ್ಮನಾ । ದಶಕೋಟ್ಯಃ ಪ್ಲವಂಗಾನಾಂ ಸರ್ವಾಃ ಪ್ರಸ್ಥಾಪಿತಾ ದಿಶಃ ॥ ೩೮ ॥ ತೇಷಾಂ ನೋ ವಿಪ್ರಕೃಷ್ಟಾನಾಂ ವಿಂಧ್ಯೇ ಪರ್ವತಸತ್ತಮೇ । ಭೃಶಂ ಶೋಕಾಭಿತಪ್ತಾನಾಂ ಮಹಾನ್ ಕಾಲೋಽತ್ಯವರ್ತತ ॥ ೩೯ ॥ ಭ್ರಾತಾತು ಗೃಧ್ರರಾಜಸ್ಯ ಸಂಪಾತಿರ್ನಾಮ ವೀರ್ಯವಾನ್ । ಸಮಾ

ವೀರ್ಯೇಣ - ಭುಜಪರಾಕ್ರಮದಿಂದ, ಸುಗ್ರೀವಃ - ಸುಗ್ರೀವನು, ಸಮರೇ - ಕಾಳಗದಲ್ಲಿ, ಮಹಾಕಾಯಂ - ದೊಡ್ಡ ಶರೀರವುಳ್ಳ, ಮಹಾಬಲಂ - ಬಹಳ ಬಲಿಷ್ಠನಾದ, ವಾಲಿನಂ - ವಾಲಿಯನ್ನು, ಸಮರೇ - ಕಾಳಗದಲ್ಲಿ, ಹತ್ವಾ - ಕೊಂದು, ಸ್ವರಾಜ್ಯಂ - ತನ್ನ ರಾಜ್ಯವನ್ನು, ಪ್ರತ್ಯಪಾದಯತ್ - ಸಂಪಾದಿಸಿಕೊಂಡನು. ॥೩೬॥ ರಾಜ್ಯೇ - ರಾಜ್ಯದಲ್ಲಿ, ಸ್ಥಾಪಿತಃ - ನಿಲ್ಲಿಸಲ್ಪಟ್ಟ, ಸುಗ್ರೀವಃ - ಸುಗ್ರೀವನು, ಸರ್ವವಾನರೈಃ - ಸಮಸ್ತ ಕಪಿಗಳಿಂದಲೂ, ಸಹಿತಃ - ಕೂಡಿದವನಾಗಿ, ರಾಮಾಯ - ಶ್ರೀರಾಮನಿಗಾಗಿ, ರಾಜಪುತ್ರ್ಯಾಃ - ಸೀತಾದೇವಿಯ, ಮಾರ್ಗಣಂ - ಹುಡುಕುವಿಕೆಯನ್ನು, ಪ್ರತಿಜಾನೀತೇ-ಪ್ರತಿಜ್ಞೆ ಮಾಡಿದನು. ॥ ೩೭ ॥ ಮಹಾತ್ಮನಾ-ಮಹಾ ಪ್ರಭಾವವಂತನಾದ, ವಾನರೇಂದ್ರೇಣ-ಕಪಿರಾಜನಾದ, ಸುಗ್ರೀವೇಣ-ಸುಗ್ರೀವನಿಂದ, ಆದಿಷ್ಟಾಃ-ಆಜ್ಞಾಪಿಸಲ್ಪಟ್ಟವರಾಗಿ, ಪ್ಲವಂಗಾನಾಂ-ಕಪಿಗಳ, ದಶಕೋಟ್ಯಃ - ಹತ್ತುಕೋಟಿಗಳು, ಸರ್ವಾಃ - ಸಮಸ್ತಗಳಾದ, ದಿಶಃ - ದಿಕ್ಕುಗಳನ್ನು ಕುರಿತು, ಪ್ರಸ್ಥಾಪಿತಾಃ - ಕಳುಹಲ್ಪಟ್ಟರು. ॥ ೩೮ ॥ ಪರ್ವತಸತ್ತಮೇ - ಪರ್ವತಶ್ರೇಷ್ಠವಾದ, ವಿಂಧ್ಯೇ - ವಿಂಧ್ಯಪರ್ವತದಲ್ಲಿ, ವಿಪ್ರಕೃಷ್ಟಾನಾಂ - ಬಹುಕಾಲ ವಿಲಂಬವುಳ್ಳ, ಭೃಶಂ - ಬಹಳವಾಗಿ, ಶೋಕಾ......ನಾಂ - ವ್ಯಸನದಿಂದ ಸಂಕಟಗೊಂಡ, ತೇಷಾಂನಃ - ಆ ನಮಗೆ, ಮಹಾನ್‌ಕಾಲಃ - ಬಹಳ ಕಾಲವು, ಅತ್ಯವರ್ತತ - ಕಳೆದುಹೋಯಿತು. ॥ ೩೯ ॥ ಗೃಧ್ರರಾಜಸ್ಯ - ಜಟಾಯುವಿಗೆ, ಭ್ರಾತಾ - ಅಣ್ಣನಾದ, ವೀರ್ಯವಾನ್ - ಸಾಮರ್ಥ್ಯವಂತನಾದ, ಸಂಪಾತಿರ್ನಾಮ - ಸಂಪಾತಿಯೆಂದು ಪ್ರಸಿದ್ಧ

ತನ್ನ ಅಗ್ರಜನೂ ಆದ ವಾಲಿಯ ದೆಸೆಯಿಂದ ತಾನು ರಾಜ್ಯಭ್ರಷ್ಟನಾಗಿ ಪರಿತಪಿಸುತ್ತಿರುವ ವಿಚಾರವೆಲ್ಲವನ್ನೂ ಶ್ರೀರಾಮನಿಗೆ ಅರಿಕೆ ಮಾಡಿದನು. ಆಗ ಅವರಿಬ್ಬರಿಗೂ ಗಾಢವಾದ ಪ್ರೇಮವು ಬೆಳೆಯಿತು. ಆ ತರುವಾಯ ಶ್ರೀರಾಮನು ತನ್ನ ಪರಾಕ್ರಮದಿಂದಲೇ ಮಹಾ ಬಲಾಢ್ಯನಾದ ವಾಲಿಯನ್ನು ಯುದ್ಧದಲ್ಲಿ ಸಂಹರಿಸಿ ಸುಗ್ರೀವನನ್ನು ವಾನರರಾಜ್ಯದಲ್ಲಿ ಸ್ಥಾಪಿಸಿದನು. ಇದಾದ ಬಳಿಕ ಸುಗ್ರೀವನು ಸೀತಾದೇವಿಯಿರುವ ಸ್ಥಳವನ್ನು ಹುಡುಕಿಸುವೆನೆಂದು ಶ್ರೀರಾಮನೊಡನೆ ಪ್ರತಿಜ್ಞೆ ಮಾಡಿದಂತೆ ಹತ್ತುಕೋಟಿ ವಾನರವೀರರನ್ನು ಬರಮಾಡಿ ಸಮಸ್ತ ದಿಕ್ಕುಗಳಿಗೂ ಕಳುಹಿಸಿದನು. ಅವರಲ್ಲಿ ಕೆಲವರಾದ ನಾವು ದಕ್ಷಿಣ ದಿಶೆಯನ್ನು ಕುರಿತು ಹೊರಟೆವು. ನಾವು ಸಮಸ್ತ ದೇಶಗಳಲ್ಲಿಯೂ ಹುಡುಕಿ ಆ ದೇವಿಯನ್ನು ಕಾಣದೆ ವಿಂಧ್ಯಪರ್ವತವನ್ನು ಪ್ರವೇಶಿಸಿ ಅಪಾರ ದುಃಖವನ್ನು ಹೊಂದಿ ಪರಿತಪಿಸುತ್ತಿದ್ದವು. ಆ ಪರ್ವತದಲ್ಲಿ ವಾಸವಾಗಿದ್ದ ಜಟಾಯುವಿನ ಅಣ್ಣನಾದ ಸಂಪಾತಿಯೆಂಬ ಗೃಧ್ರರಾಜನು ಸೀತಾದೇವಿಯು ಲಂಕಾಪಟ್ಟಣದಲ್ಲಿರುವಳೆಂಬುದಾಗಿ ಆ ಸಮಯದಲ್ಲಿ

ಖ್ಯಾತಿಸ್ಮ ವಸತಿಂ ಸೀತಾಯಾ ರಾವಣಾಲಯೇ ॥ ೪೦ ॥ ಸೋಽಹಂ ಶೋಕಪರೀತಾನಾಂ ದುಃಖಂ ತತ್ ಜ್ಞಾತಿನಾಂ ನುದನ್ । ಆತ್ಮವೀರ್ಯಂ ಸಮಾಸ್ಥಾಯ ಯೋಜನಾನಾಂ ಶತಂ ಪ್ಲುತಃ ॥೪೦॥ ತತ್ರಾಹಮೇಕಾ ಮದ್ರಾಕ್ಷ ಮಶೋಕವನಿಕಾಂ ಗತಾಂ । ಕೌಶೇಯವಸ್ತ್ರಾಂ ಮಲಿನಾಂ ನಿರಾನಂದಾಂ ದೃಢವ್ರತಾಂ ॥ ೪೨ ॥ ತಯಾ ಸಮೇತ್ಯ ವಿಧಿವತ್ಪೃಷ್ಟ್ವಾ ಸರ್ವಮನಿಂದಿತಾಂ । ಅಭಿಜ್ಞಾನಂ ಚ ಮೇ ದತ್ತಮರ್ಚಿಷ್ಮಾನ್ ಸಮಹಾಮಣಿಃ । ಅಭಿಜ್ಞಾನಂ ಮಣಿಂ ಲಬ್ಧ್ವಾ ಚರಿತಾರ್ಥೋಽಹಮಾಗತಃ ॥ ೪೩-೪೪ ॥ ಮಯಾ ಚ ಪುನರಾಗಮ್ಯ ರಾಮಸ್ಯಾಕ್ಲಿಷ್ಟಕರ್ಮಣಃ । ಅಭಿಜ್ಞಾನಂ

ನಾದ ಗೃಧ್ರರಾಜನು, ರಾವಣಾಲಯೇ - ದಶಕಂಠನ ಮನೆಯಲ್ಲಿ, ಸೀತಾಯಾಃ - ಸೀತಾದೇವಿಯ, ವಸತಿಂ - ನಿವಾಸವನ್ನು, ಸಮಾಖ್ಯಾತಿಸ್ಮ - ಹೇಳಿದನಷ್ಟೆ. ॥ ೪೦ ॥ ಸೋಽಹಂ - ಆ ಈ ನಾನು, ಶೋಕ....ನಾಂ - ದುಃಖದಿಂದ ಸಂಕಟಗೊಂಡಿರುವ, ಜ್ಞಾತೀನಾಂ - ಸ್ವಜಾತಿಯರಾದ ಬಂಧುಗಳ, ತದ್ದುಃಖಂ - ಆ ವ್ಯಸನವನ್ನು, ನುದನ್ - ಹೋಗಲಾಡಿಸುವವನಾಗಿ, ಆತ್ಮವೀರ್ಯಂ - ನನ್ನ ಸಾಮರ್ಥ್ಯವನ್ನು, ಸಮಾಸ್ಥಾಯ - ಹೊಂದಿ, ಯೋಜನಾನಾಂ - ಗಾವುದಗಳ, ಶತಂ - ನೂರನ್ನು, ಪ್ಲುತಃ - ಹಾರಿದೆನು. ॥೪೧॥ ತತ್ರ - ಆ ಲಂಕಾಪಟ್ಟಣದಲ್ಲಿ, ಅಹಂ - ನಾನು, ಅಶೋಕವನಿಕಾಂ - ಅಶೋಕವನವನ್ನು, ಗತಾಂ - ಹೊಂದಿರುವ, ಕೌಶೇಯವಸ್ತ್ರಾಂ - ಪಟ್ಟುವಸ್ತ್ರವನ್ನುಟ್ಟಿರುವ, ಮಲಿನಾಂ - ಮಾಲಿನ್ಯವಂತಳಾದ, ನಿರಾನಂದಾಂ-ಸಂತೋಷವಿಲ್ಲದಿರುವ, ದೃಢವ್ರತಾಂ-ದೃಢವಾದ ನಿಯಮವುಳ್ಳ, ಸೀತಾಂ - ಸೀತಾದೇವಿಯನ್ನು, ಏಕಾಂ - ಒಬ್ಬಂಟಿಗಳನ್ನಾಗಿ, ಅದ್ರಾಕ್ಷಂ - ನೋಡಿದೆನು. ॥ ೪೨ ॥ ತಯಾ - ಆ ಸೀತಾದೇವಿಯೊಡನೆ, ಸಮೇತ್ಯ - ಸೇರಿ, ವಿಧಿವತ್ - ಯಥಾಶಾಸ್ತ್ರವಾಗಿ, ಅನಿಂದಿತಾಂ-ನಿರ್ದೋಷಳಾದ ಸೀತಾದೇವಿಯನ್ನು ಕುರಿತು, ಸರ್ವಂ - ಸಮಸ್ತವನ್ನೂ, ದೃಷ್ಟ್ವಾ - ಕೇಳಿ, ಮೇ - ನನಗೆ, ಅರ್ಚಿಷ್ಮಾನ್ - ಕಾಂತಿಯುಕ್ತವಾದ, ಸಮಹಾಮಣಿಃ - ಚೂಡಾಮಣಿಯು, ಅಭಿಜ್ಞಾನಂ - ಗುರುತಾಗಿ, ದತ್ತಂ - ಕೊಡಲ್ಪಟ್ಟಿತು, ಅಭಿಜ್ಞಾನಂ - ಗುರುತಾದ, ಮಣಿಂ - ಮಣಿಯನ್ನು, ಲಬ್ಧ್ವಾ - ಹೊಂದಿ, ಅಹಂ - ನಾನು, ಚರಿತಾರ್ಥಃ - ಕೃತಕೃತ್ಯನಾಗಿ, ಆಗತಃ - ಬಂದೆನು. ॥ ೪೩-೪೪ ॥ ಮಯಾ ಚ-ನನ್ನಿಂದಲೂ, ಪುನರಾಗಮ್ಯ ಹಿಂತಿರುಗಿ ಬಂದು, ಅಕ್ಲಿಷ್ಟಕರ್ಮಣಃ-ಕ್ಲೇಶವಿಲ್ಲದೆ ಕಾರ್ಯ

ನಮಗೆ ತಿಳಿಸಿದನು. ॥ ೩೬—೪೨ ॥ ಆಗ ನಾನು ನನ್ನ ಬಂಧುಗಳಾದ ವಾನರರೆಲ್ಲರ ದುಃಖವನ್ನು ಹೋಗಲಾಡಿಸುವವನಾಗಿ ಪರಾಕ್ರಮವನ್ನವಲಂಬಿಸಿ ನೂರು ಗಾವುದಗಳ ಅಗಲವಿರುವ ಸಾಗರವನ್ನು ದಾಟಿದೆನು. ಹೀಗೆ ಸಾಗರವನ್ನು ದಾಟಿಹೋಗಿ ಲಂಕಾಧೀಶ್ವರನಾದ ರಾವಣಾಸುರನ ಅಶೋಕವನದಲ್ಲಿ ಕೇವಲ ಪತಿಪರಾಯಣೆಯಾಗಿ ವ್ಯಸನಸಂತಪ್ತೆಯಾಗಿದ್ದ ಸೀತಾದೇವಿಯನ್ನು ಕಂಡೆನು. ಆ ಸಮಯದಲ್ಲಿ ಆ ಸೀತಾದೇವಿಯು ಮಾಸಿದ ಪಟ್ಟುಸೀರೆಯುಟ್ಟು, ಕೊಳೆದುಂಬಿದ ಮೈಯುಳ್ಳವಳಾಗಿ, ಯಾವೊಂದು ಸಂತೋಷವೂ ಇಲ್ಲದೆ ದೃಢವಾದ ಪಾತಿವ್ರತ್ಯ ವ್ರತದಿಂದ ಪಾವನೆಯಾಗಿದ್ದಳು. ಇಂತಿರುವ ಆ ದೇವಿಯನ್ನು ವಿಧಿಪೂರ್ವಕವಾಗಿ ನೋಡಿ ನಮಸ್ಕರಿಸಿ ಮಹಾ ತೇಜಸ್ಸಂಪನ್ನವಾದುದೂ, ಶ್ರೀರಾಮನು ಅಭಿಜ್ಞಾನಾರ್ಥವಾಗಿ ಕೊಟ್ಟಿದ್ದುದೂ ಆದ ಅಂಗುಳೀಯಕವನ್ನು ಆಕೆಗೆ ಕೊಟ್ಟೆನು. ಇಷ್ಟೆಯಲ್ಲದೆ ಶ್ರೀರಾಮಮೂರ್ತಿಯ ಕುಶಲವಾರ್ತೆಯೆಲ್ಲವನ್ನೂ ಆಕೆಗರುಹಿದೆನು. ಆಗಲಾ ದೇವಿಯು ನನಗಿತ್ತ ಚೂಡಾಮಣಿಯನ್ನು ಕೈಕೊಂಡು ಕೃತಾರ್ಥನಾದೆನೆಂದು ಆನಂದಿಸಿ ಕೂಡಲೇ ಹಿಂತಿರುಗಿ

ಮಯಾ ದತ್ತಮರ್ಚಿಷ್ಮಾನ್ ಸಮಹಾಮಣಿಃ ॥೪೫॥ ಶ್ರುತ್ವಾ ತು ಮೈಥಿಲೀಂ ಹೃಷ್ಟ
ಸ್ತ್ವಾಶಶಂಸೇಚ ಜೀವಿತಂ । ಜೀವಿತಾಂತಮನುಪ್ರಾಪ್ತಃ ಪೀತ್ವಾಽಮೃತಮಿವಾತುರಃ
॥ ೪೬ ॥ ಉದ್ಯೋಜಯಿಷ್ಯನ್ನುದ್ಯೋಗಂ ದಧ್ರೇ ಕಾಮಂ ವಧೇ ಮನಃ । ಜಿಘಾಂಸು
ರಿವ ಲೋಕಾಂತೇ ಸರ್ವಾನ್ ಲೋಕಾನ್ ವಿಭಾವಸುಃ ॥೪೭॥ ತತಸ್ಸಮುದ್ರಮಾಸಾದ್ಯ
ನಳಂ ಸೇತುಮಕಾರಯತ್ । ಅತರತ್ಕಪಿವೀರಾಣಾಂ ವಾಹಿನೀ ತೇನ ಸೇತುನಾ
॥ ೪೮ ॥ ಪ್ರಹಸ್ತಮವಧೀನ್ನೀಲಃ ಕುಂಭಕರ್ಣಂ ತು ರಾಘವಃ । ಲಕ್ಷ್ಮಣೋ

ವನ್ನು ಸಾಧಿಸುವ, ರಾಮಸ್ಯ - ಶ್ರೀರಾಮನಿಗೆ, ಅರ್ಚಿಷ್ಮಾನ್ - ತೇಜೋಯುಕ್ತವಾದ, ಸಮಹಾಮಣಿಃ- ಆ ಶಿರೋಮಾಣಿಕ್ಯರೂಪವಾದ, ಅಭಿಜ್ಞಾನಂ - ಗುರುತು, ಮಯಾ - ನನ್ನಿಂದ, ದತ್ತಂ - ಕೊಡ ಲ್ಪಟ್ಟಿತು. ॥ ೪೫ ॥ ಮೈಥಿಲೀಂ - ಸೀತಾದೇವಿಯ ವಿಷಯವನ್ನು, ಶ್ರುತ್ವಾ - ಕೇಳಿ, ಹೃಷ್ಟಃ - ಸಂತೋಷಗೊಂಡವನಾಗಿ, ಜೀವಿತಾಂತಂ - ಪ್ರಾಣಾಂತವನ್ನು, ಅನುಪ್ರಾಪ್ತಃ - ಹೊಂದಿರುವ, ಆತುರಃ - ರೋಗಾರ್ತನು, ಅಮೃತಂ - ಅಮೃತವನ್ನು, ಪೀತ್ವೇವ - ಪಾನಮಾಡಿದಂತೆ, ಜೀವಿತಂ - ಬದುಕುವಿಕೆಯನ್ನು, ಆಶಶಂಸೇ - ಕೋರಿದನು. ॥ ೪೬ ॥ ಉದ್ಯೋಗಂ - ಯುದ್ಧೋದ್ಯೋಗವನ್ನು, ಉದ್ಯೋಜಯನ್ - ಪ್ರಯತ್ನ ಮಾಡುತ್ತಿರುವವನಾಗಿ, ಲೋಕಾಂತೇ - ಪ್ರಳಯಕಾಲದಲ್ಲಿ, ಸರ್ವಾನ್ ಲೋಕಾನ್ - ಸಮಸ್ತ ಜನರನ್ನೂ, ಜಿಘಾಂಸುಃ - ಹೊಡೆಯಲಿಚ್ಛೆಯುಳ್ಳ, ವಿಭಾವಸುರಿವ - ಅಗ್ನಿ ಯಂತೆ, ವಧೇ - ಶತ್ರುಸಂಹಾರದಲ್ಲಿ, ಮನಃ - ಮನವನ್ನು, ಕಾಮಂ - ಬಹಳವಾಗಿ, ದಧ್ರೇ - ಧರಿ ಸಿದನು. ॥೪೭॥ ತತಃ - ಬಳಿಕ, ಸಮುದ್ರಂ - ಕಡಲನ್ನು, ಆಸಾದ್ಯ - ಹೊಂದಿ, ನಳಂ - ನಳನೆಂಬ ವಾನರನಿಂದ, ಸೇತುಂ - ಸೇತುವನ್ನು, ಅಕಾರಯತ್ - ಮಾಡಿಸಿದನು, ಕಪಿವೀರಾಣಾಂ - ಶೂರ ರಾದ ವಾನರರ, ವಾಹಿನೀ-ಸೇನೆಯು, ತೇನಸೇತುನಾ-ಆ ನಳಸೇತುವಿನಿಂದ, ಅತರತ್-ದಾಂಟಿತು. ॥ ೪೮ ॥ ನೀಲಃ - ನೀಲನು, ಪ್ರಹಸ್ತಂ - ಪ್ರಹಸ್ತನೆಂಬ ಸೇನಾಧಿಪತಿಯನ್ನು, ಅವಧೀತ್ - ಹೊಡೆ ದನು, ರಾಘವಃ - ಶ್ರೀರಾಮನು, ಕುಂಭಕರ್ಣಂ - ಕುಂಭಕರ್ಣನನ್ನು, ಅವಧೀತ್ - ಸಂಹರಿಸಿದನು, ಲಕ್ಷ್ಮಣಃ - ಲಕ್ಷ್ಮಣನು, ರಾವಣಸುತಂ - ಇಂದ್ರಜಿತುವನ್ನು, ಅವಧೀತ್ - ಹೊಡೆದನು, ರಾಮಸ್ಯ-

---

ಬಂದು ಶ್ರೀರಾಮಮೂರ್ತಿಯನ್ನು ಕಂಡು ಆತನಿಗೆ ಆ ಆಭರಣವನ್ನಿತ್ತು ಸಮಸ್ತ ವೃತ್ತಾಂತ ವನ್ನೂ ತಿಳಿಸಿದೆನು. ಆಗ ಶ್ರೀರಾಮನು ಅಮೃತಪಾನ ಮಾಡಿದ ರೋಗಿಯಂತೆ ಮಹದಾ ನಂದಭರಿತನಾದನು. ಇದಾದ ತರುವಾಯ ಆತನು ಸಮಸ್ತ ಲೋಕಗಳನ್ನೂ ಭಸ್ಮಸಾತ್ಕರಿ ಸುವ ಅಗ್ನಿದೇವನಂತೆ ಕೋಪದಿಂದ ಕೆರಳಿ ಕಿಡಿಕಿಡಿಯಾಗಿ ರಾವಣಾಸುರನನ್ನು ಸಂಹರಿಸು ವುದರಲ್ಲಿ ದೃಢಸಂಕಲ್ಪವುಳ್ಳವನಾದನು. ಆತನು ಆ ಕೂಡಲೇ ಸಮಸ್ತ ವಾನರವೀರರೊಡ ಗೂಡಿ ಸಾಗರಸಮೀಪವನ್ನು ಸಾರಿದನು. ಆಮೇಲೆ ಆತನು ಸಾಗರದಲ್ಲಿ ಸೇತುವನ್ನು ಕಟ್ಟಿ ವಾನರರೆಲ್ಲರೊಡಗೂಡಿ ಸಾಗರವನ್ನು ದಾಟಿ ಲಂಕಾಪಟ್ಟಣದ ಬಳಿಗೈದಿದನು. ಆಗ ವಾನರ ರಿಗೂ, ರಾಕ್ಷಸರಿಗೂ ಭಯಂಕರ ಯುದ್ಧವಾಯಿತು. ಆ ಸಮಯದಲ್ಲಿ ನೀಲನೆಂಬ ವಾನರ ವೀರನು ಪ್ರಹಸ್ತನೆಂಬ ರಾಕ್ಷಸೋತ್ತಮನನ್ನು ಸಂಹರಿಸಿದನು. ಶ್ರೀರಾಮನು ಕುಂಭಕರ್ಣ ನನ್ನು ವಧಿಸಿದನು. ರಾಮಾನುಜನಾದ ಲಕ್ಷ್ಮಣಸ್ವಾಮಿಯು ರಾವಣನ ಮಗನಾದ ಮೇಘ ನಾದನನ್ನು ಕೆಡವಿದನು. ಇದಾದ ಬಳಿಕ ಶ್ರೀರಾಮಮೂರ್ತಿಯು ರಾಕ್ಷಸರಾಜನಾದ

ರಾವಣಸುತಂ ಸ್ವಯಂ ರಾಮಸ್ತು ರಾವಣಂ ‖ ೪೯ ‖ ಸಶಕ್ರೇಣ ಸಮಾಗಮ್ಯ ಯಮೇನ ವರುಣೇನಚ । ಮಹೇಶ್ವರಸ್ವಯಂಭೂಭ್ಯಾಂ ತಥಾ ದಶರಥೇನಚ ‖೫೦‖ ತೈಶ್ಚ ದತ್ತವರಃ ಶ್ರೀಮಾನೃಷಿಭಿಶ್ಚ ಸಮಾಗತಃ । ಸುರರ್ಷಿಭಿಶ್ಚ ಕಾಕುತ್ಸ್ಥೋ ವರಾ೯ ಲೇಭೇ ಪರಂತಪಃ ‖೫೧‖ ಸತು ದತ್ತವರಃ ಪ್ರೀತ್ಯಾ ವಾನರೈಶ್ಚ ಸಮಾಗತಃ । ಪುಷ್ಪಕೇಣ ವಿಮಾನೇನ ಕಿಷ್ಕಿಂಧಾಮಭ್ಯುಪಾಗಮತ್ ‖ ೫೨ ‖ ತಂ ಗಂಗಾಂ ಪುನರಾಸಾದ್ಯ ವಸಂತಂ ಮುನಿಸನ್ನಿಧೌ । ಅವಿಘ್ನಂ ಪುಷ್ಯಯೋಗೇನ ಶ್ವೋ ರಾಮಂ ದ್ರಷ್ಟುಮರ್ಹಸಿ" ‖ ೫೩ ‖

ಶ್ರೀರಾಮನಾದರೆ, ಸ್ವಯಂ-ತಾನೇ, ರಾವಣಂ-ದಶಕಂಠನನ್ನು, ಅವಧೀತ್-ಸಂಹರಿಸಿದನು. ‖೪೯‖ ಶಕ್ರೇಣ-ದೇವೇಂದ್ರನಿಂದಲೂ, ಯಮೇನ-ಯಮನಿಂದಲೂ, ವರುಣೇನ-ವರುಣನಿಂದಲೂ, ಮಹೇಶ್ವರಸ್ವಯಂಭೂಭ್ಯಾಂ - ಪರಮೇಶ್ವರನಿಂದಲೂ, ಬ್ರಹ್ಮದೇವರಿಂದಲೂ, ತಥಾ - ಹಾಗೆಯೇ, ದಶರಥೇನಚ - ದಶರಥನಿಂದಲೂ, ಸಮಾಗಮ್ಯ - ಸೇರಿ, ತೈಶ್ಚ - ಅವರಿಂದ, ದತ್ತವರಃ - ಕೊಡಲ್ಪಟ್ಟ ವರವುಳ್ಳವನಾಗಿ, ಶ್ರೀಮಾ೯ - ಸಂಪದ್ಯುಕ್ತನಾದ, ಸಕಾಕುತ್ಸ್ಥಃ - ಆ ಶ್ರೀರಾಮನು, ಋಷಿಭಿಶ್ಚ - ಋಷಿಗಳೊಡನೆ, ಸಮಾಗತಃ - ಸೇರಿದವನಾಗಿ, ಸುರರ್ಷಿಭಿಶ್ಚ - ದೇವರ್ಷಿಗಳಿಂದ, ವರಾ೯ - ವರಗಳನ್ನು, ಲೇಭೇ - ಹೊಂದಿದನು. ‖ ೫೦-೫೧ ‖ ದತ್ತವರಃ - ಕೊಡಲ್ಪಟ್ಟ ವರವುಳ್ಳ, ಸತು - ಆ ಶ್ರೀರಾಮನಾದರೆ, ಪ್ರೀತ್ಯಾ - ವಿಶ್ವಾಸದಿಂದ, ವಾನರೈಶ್ಚ - ಕಪಿಗಳಿಂದ, ಸಮಾಗತಃ - ಕೂಡಿ, ಪುಷ್ಪಕೇನವಿಮಾನೇನ - ಪುಷ್ಪಕ ವಿಮಾನದಿಂದ, ಕಿಷ್ಕಿಂಧಾಂ - ಕಿಷ್ಕಿಂಧಾಪಟ್ಟಣವನ್ನು ಕುರಿತು, ಅಭ್ಯುಪಾಗಮತ್ - ಬಂದನು. ‖ ೫೨ ‖ ಗಂಗಾಂ - ಗಂಗಾನದಿಯನ್ನು ಕುರಿತು, ಪುನಃ - ಮತ್ತು, ಆಸಾದ್ಯ - ಹೊಂದಿ, ಮುನಿಸನ್ನಿಧೌ - ಭರದ್ವಾಜ ಋಷಿಗಳ ಸನ್ನಿಧಾನದಲ್ಲಿ, ಅದ್ಯ - ಈಗ, ವಸಂತಂ - ಇರುವ, ತಂರಾಮಂ - ಆ ಶ್ರೀರಾಮನನ್ನು, ಅವಿಘ್ನಂ - ನಿರ್ವಿಘ್ನವಾಗಿ, ಪುಷ್ಯಯೋಗೇನ - ಪುಷ್ಯನಕ್ಷತ್ರ ಯೋಗದಲ್ಲಿ, ದ್ರಷ್ಟುಂ - ನೋಡುವುದಕ್ಕೆ, ಅರ್ಹಸಿ - ಯೋಗ್ಯನಾಗು.

ರಾವಣಾಸುರನನ್ನು ಸಂಹರಿಸಿದನು. ಆಗ ದೇವೇಂದ್ರನೂ, ಯಮಧರ್ಮನೂ, ವರುಣನೂ, ಪರಮೇಶ್ವರನೂ, ಬ್ರಹ್ಮದೇವನೂ, ಇನ್ನೂ ಇತರ ದೇವತೆಗಳೂ ದಶರಥರಾಯನೊಡಗೂಡಿ ಪ್ರತ್ಯಕ್ಷರಾದರು. ಅನೇಕ ಋಷಿಪುಂಗವರು ಸಂದರ್ಶನವಿತ್ತರು. ಅವರೆಲ್ಲರೂ ಶ್ರೀರಾಮನಿಗೆ ಅನೇಕ ವರಗಳನ್ನಿತ್ತರು. ಹೀಗೆ ದೇವತೆಗಳೇ ಮೊದಲಾದವರಿಂದ ವರಗಳನ್ನು ಹೊಂದಿ ಶ್ರೀರಾಮನು ಪುಷ್ಪಕವನ್ನೇರಿ ಕಿಷ್ಕಿಂಧಾಪಟ್ಟಣಕ್ಕೈತಂದನು. ಅಲ್ಲಿ ಸ್ವಲ್ಪ ಹೊತ್ತಿದ್ದು ಅನೇಕ ಕೋಟಿ ವಾನರರೊಡನೆಯೂ, ವಾನರಸ್ತ್ರೀಯರೊಡನೆಯೂ ಹೊರಟು ಅನೇಕ ದೇಶಗಳನ್ನು ನೋಡುತ್ತ ಗಂಗಾನದಿಯ ಬಳಿಗೆ ಬಂದು, ಅದರ ತೀರದಲ್ಲಿಯೇ ಇರುವ ಭರದ್ವಾಜ ಮಹರ್ಷಿಗಳ ಆಶ್ರಮವನ್ನು ಪ್ರವೇಶಿಸಿ ಅವರನ್ನು ಸಂದರ್ಶಿಸಿ ಅವರ ಆಜ್ಞೆಯಂತೆ ಅಲ್ಲಿಯೇ ತಂಗಿರುವನು. ನಾಳೆ ಪುಷ್ಯ ನಕ್ಷತ್ರಯೋಗವಿರುವುದಾದುದರಿಂದ ನಾಳೆಯೇ ಅಲ್ಲಿಂದ ಹೊರಟು ಇಲ್ಲಿಗೆ ಬರುವನು. ಆದುದರಿಂದೆಲೈ ಭರತಕುಮಾರನೇ! ನಾಳೆ ನೀನು ನಿಮ್ಮ ಅಣ್ಣನಾದ ಶ್ರೀರಾಮಮೂರ್ತಿಯನ್ನು ನೋಡಿ ಆನಂದಿಸುವೆ" ಈ ರೀತಿ ನುಡಿದ

ತತಸ್ತು ಸತ್ಯಂ ಹನುಮದ್ವಚೋ ಮಹ
ನ್ನಿಶಮ್ಯ ಹೃಷ್ಟೋ ಭರತಃ ಕೃತಾಂಜಲಿಃ ।
ಉವಾಚ ವಾಣೀಂ ಮನಸಃ ಪ್ರಹರ್ಷಿಣೀಂ
"ಚಿರಸ್ಯ ಪೂರ್ಣಃ ಖಲು ಮೇ ಮನೋರಥಃ" ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನತ್ರಿಂಶದುತ್ತರಶತತಮಸ್ಸರ್ಗಃ

||೫೪|| ತತಃ - ಆ ಬಳಿಕ, ಭರತಸ್ತು-ಭರತನಾದರೆ, ಸತ್ಯಂ - ಯಥಾರ್ಥವಾದ, ಮಹತ್ - ಮಹಾರ್ಥ ಗರ್ಭಿತವಾದ ದೊಡ್ಡದಾದ, ಹನುಮದ್ವಚಃ - ಹನುಮಂತನ ಮಾತನ್ನು, ಶ್ರುತ್ವಾ - ಕೇಳಿ, ಹೃಷ್ಟಃ - ಸಂತೋಷಗೊಂಡವನಾಗಿ, ಕೃತಾಂಜಲಿಃ-ಅಂಜಲಿಬದ್ಧನಾಗಿ, ಚಿರಸ್ಯ-ಬಹುಕಾಲಕ್ಕೆ, ಮೇ-ನನ್ನ, ಮನೋರಥಃ - ಸಂಕಲ್ಪವು, ಪೂರ್ಣಃಖಲು - ಸಂಪೂರ್ಣವಾಯಿತು, ಇತಿ - ಇಂತೆಂದು, ಮನಸಃ - ಮನಸ್ಸಿಗೆ, ಪ್ರಹರ್ಷಣೀಂ ಸಂತೋಷಕರವಾದ, ವಾಣೀಂ ಮಾತನ್ನು, ಉವಾಚ-ಹೇಳಿದನು. ||೫೪||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ಏಕೋನತ್ರಿಂಶದುತ್ತರಶತತಮಸ್ಸರ್ಗಃ.

ಹನುಮಂತನ ಮಾತುಗಳನ್ನು ಕೇಳಿ ಭರತನು ಮಹದಾನಂದಭರಿತನಾಗಿ ಕೈಗಳನ್ನು ಜೋಡಿಸಿಕೊಂಡು ಮನಸ್ಸಿಗೆ ಇಂಪಾದ ಮತ್ತು ಸಂತೋಷಕರವಾದ ಮಾತುಗಳನ್ನಾಡುತ್ತ "ಎಲೈ ಪುರುಷೋತ್ತಮನೇ! ನನ್ನ ಮನೋರಥವು ಇಂದು ಪೂರ್ಣವಾಯಿತು" ಎಂದು ಹೇಳಿದನು. ॥ ೪೩–೫೪ ॥

ಇಂತಿದು ಹನುಮತ್ಕಥಿತ ಶ್ರೀರಾಮಾಗಮನ ವೃತ್ತಾಂತ ನಿರೂಪಣವೆಂಬ
ನೂರ ಇಪ್ಪತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ತ್ರಿಂಶದುತ್ತರಶತತಮಸ್ಸರ್ಗಃ

ಶ್ರುತ್ವಾ ತು ಪರಮಾನಂದಂ ಭರತಸ್ಸತ್ಯವಿಕ್ರಮಃ । ಹೃಷ್ಟಮಾಜ್ಞಾಪಯಾಮಾಸ ಶತ್ರುಘ್ನಂ ಪರವೀರಹಾ ॥೧॥ "ದೈವತಾನಿಚ ಸರ್ವಾಣಿ ಚೈತ್ಯಾನಿ ನಗರಸ್ಯಚ । ಸುಗಂಧಮಾಲ್ಯೈರ್ವಾದಿತ್ರೈರರ್ಚಂತು ಶುಚಯೋ ನರಾಃ ॥ ೨ ॥ ಸೂತಾಸ್ತುತಿ ಪುರಾಣಜ್ಞಾಸ್ಸರ್ವೇ ವೈತಾಳಿಕಾಸ್ತಥಾ । ಸರ್ವೇ ವಾದಿತ್ರಕುಶಲಾ ಗಣಿಕಾಶ್ಚಾಪಿ ಸಂಘಶಃ ॥ ೩ ॥ (ರಾಜದಾರಾಸ್ತಥಾ ಮಾತ್ಯಾಃ ಸೈನ್ಯಾಃ ಸೇನಾಂಗನಾಗಣಾಃ । ಬ್ರಾಹ್ಮಣಾಶ್ಚ ಸರಾಜನ್ಯಾಃ ಶ್ರೇಣೀಮುಖ್ಯಾ ಸ್ತಥಾಗಣಾಃ ॥) ಅಭಿನಿರ್ಯಾಂತು

ಸತ್ಯವಿಕ್ರಮಃ - ಸಫಲವಾದ ಪರಾಕ್ರಮವುಳ್ಳ, ಪರವೀರಹಾ - ಶತ್ರುಸಂಹಾರಕನಾದ, ಭರತಃ - ಭರತನು, ಪರಮಾನಂದಂ - ಬಹಳ ಆನಂದಕರವಾದ ಆಂಜನೇಯನ ವಚನವನ್ನು, ಶ್ರುತ್ವಾತಂ - ಕೇಳಿಯಾದರೆ, ಹೃಷ್ಟಂ - ಸಂತೋಷಗೊಂಡಿರುವ, ಶತ್ರುಘ್ನಂ - ಶತ್ರುಘ್ನನನ್ನು ಕುರಿತು, ಆಜ್ಞಾಪಯಾಮಾಸ - ಆಜ್ಞಾಪಿಸಿದನು. ॥ ೧ ॥ ಸರ್ವಾಣಿ - ಸಮಸ್ತವಾದ, ದೇವತಾನಿ - ಕುಲದೇವತೆಗಳನ್ನೂ, ನಗರಸ್ಯ - ಪಟ್ಟಣದ, ಚೈತ್ಯಾನಿ - ದೇವಾಲಯಗಳನ್ನೂ, ಶುಚಯಃ - ಪರಿಶುದ್ಧರಾದ, ನರಾಃ - ಮನುಷ್ಯರು, ಸುಗಂಧಮಾಲ್ಯೈಃ - ಗಂಧಪುಷ್ಪಗಳಿಂದಲೂ, ವಾದಿತ್ರೈಃ - ಮಂಗಳವಾದ್ಯ ವಿಶೇಷಗಳಿಂದಲೂ, ಅರ್ಚಂತು - ಪೂಜಿಸಲಿ. ॥ ೨ ॥ ಸ್ತುತಿ....ಜ್ಞಾಃ - ಸ್ತೋತ್ರಗಳನ್ನೂ, ಪುರಾಣಕಥೆಗಳನ್ನೂ ತಿಳಿದಿರುವ, ಸರ್ವೇ - ಸಮಸ್ತರಾದ, ಸೂತಾಃ - ಸ್ತುತಿಪಾಠಕರೂ, ತಥಾ - ಹಾಗೆಯೇ, ವೈತಾಳಿಕಾಃ - ಸ್ತೋತ್ರಮಾಡತಕ್ಕ ಸ್ತುತಿಪಾಠಕರೂ, ವಾದಿತ್ರಕುಶಲಾಃ - ವಾದ್ಯವಿಶೇಷಗಳಲ್ಲಿ ಕುಶಲರಾದ, ಸರ್ವೇ - ಸಮಸ್ತ ಜನರೂ, ಗಣಿಕಾಶ್ಚಾಃ - ವೇಶ್ಯಾಸ್ತ್ರೀಯರೂ, ಸಂಘಶಃ - ಗುಂಪಾಗಿ, ರಾಮಸ್ಯ - ಶ್ರೀರಾಮನ, ಶಶಿನಿಭಂ - ಚಂದ್ರಸಮಾನವಾದ, ಮುಖಂ - ಮುಖವನ್ನು, ದ್ರಷ್ಟುಂ - ನೋಡುವುದಕ್ಕೆ, ಅಭಿನಿರ್ಯಾಂತು - ಹೋಡಲಿ. ॥ ೩ ॥ ಭರತಸ್ಯ - ಭರತನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಪರವೀರಹಾ - ಶತ್ರುಸಂಹಾರಕನಾದ,

---

ಈ ಪ್ರಕಾರವಾಗಿ ಹನುಮಂತನು ತಿಳಿಸಿದ ಶ್ರೀರಾಮಾಗಮನ ವಾರ್ತೆಯನ್ನು ಕೇಳಿ ಸತ್ಯಪರಾಕ್ರಮಿಯಾದ ಭರತಕುಮಾರನು ಸಂತುಷ್ಟನಾಗಿ ಸಮೀಪದಲ್ಲಿಯೇ ನಿಂತಿದ್ದ ಸಂತುಷ್ಟನಾದ ಶತ್ರುಘ್ನನನ್ನು ಕುರಿತು ಹೀಗೆಂದನು. "ಶತ್ರುಘ್ನ! ನಮ್ಮ ಅಯೋಧ್ಯಾನಗರದಲ್ಲಿರುವ ಸಮಸ್ತ ದೇವಾಲಯಗಳಲ್ಲಿಯೂ, ಚೈತ್ಯಾಲಯಗಳಲ್ಲಿಯೂ, ಶುಚಿರ್ಭೂತರಾದ ನರರು ಪರಿಮಳಭರಿತವಾದ ಪುಷ್ಪಗಳಿಂದಲೂ, ಸುಗಂಧದ್ರವ್ಯಗಳಿಂದಲೂ ಮಂಗಳವಾದ್ಯಗಳಿಂದಲೂ ಪೂಜೆಗಳನ್ನು ನಡೆಸುವಂತೆ ಆಜ್ಞಾಪಿಸು. ಸ್ತುತಿಪುರಾಣಗಳನ್ನು ಚೆನ್ನಾಗಿ ತಿಳಿದಿರುವ ಸೂತರೂ, ವೈತಾಳಿಕರೂ, ವೀಣಾವೇಣುಮೃದಂಗಕಾಂಸ್ಯಾದಿ ಸಮಸ್ತ ವಾದ್ಯಗಳಲ್ಲಿಯೂ ಚತುರರಾದವರೂ, ವೇಶ್ಯೆಯರೂ ಎಲ್ಲರೂ ಈ ಕೂಡಲೇ ಬಂದು ಗುಂಪು ಸೇರಲಿ. (ಅಂತಃಪುರದವರೂ, ನಮ್ಮ ತಾಯಿಯರೂ, ಸೇನೆಗಳೂ, ಸೇನಾಪರಿಜನರೂ, ಬ್ರಾಹ್ಮಣರೂ, ಶೆಟ್ಟಿ ವರ್ತಕರೂ, ಅರಮನೆಯವರೂ) ಶ್ರೀರಾಮಮೂರ್ತಿಯ ಚಂದ್ರೋಪಮವಾದ ಮುಖಸಂದರ್ಶನ ಭಾಗ್ಯವನ್ನು ಪಡೆಯುಲು ಜಾಗ್ರತೆಯಾಗಿ ಹೊರಟುಬರಲಿ." ॥ ೧-೩ ॥ ಭರ

ರಾಮಸ್ಯ ದ್ರಷ್ಟುಂ ಶಶಿನಿಭಂ ಮುಖಂ । ಭರತಸ್ಯ ವಚಃ ಶ್ರುತ್ವಾ ಶತ್ರುಘ್ನಃ ಪರ ವೀರಹಾ ॥ ೪ ॥ ವಿಷ್ಟೀರನೇಕಸಾಹಸ್ರಾಶ್ಚೋದಯಾಮಾಸ ವೀರ್ಯವಾನ್ । "ಸಮೀಕುರುತ ನಿಮ್ನಾನಿ ವಿಷಮಾಣಿ ಸಮಾನಿಚ ॥ ೫ ॥ ಸ್ಥಲಾನಿಚ ನಿರಸ್ಯಂತಾಂ ನಂದಿಗ್ರಾಮಾದಿತಃಪರಂ । ಸಿಂಚಂತು ಪೃಥಿವೀಂ ಕೃತ್ಸ್ನಾಂ ಹಿಮಶೀತೇನ ವಾರಿಣಾ ॥ ೬ ॥ ತತೋಽಭ್ಯವಕಿರಂತ್ವನ್ಯೇ ಲಾಜೈಃ ಪುಷ್ಪೈಶ್ಚ ಸರ್ವಶಃ । ಸಮುಚ್ಛ್ರಿತ ಪತಾಕಾಸ್ತು ರಥ್ಯಾಃ ಪುರವರೋತ್ತಮೇ ॥ ೭ ॥ ಶೋಭಯಂತುಚ ವೇಶ್ಮಾನಿ ಸೂರ್ಯಸ್ಯೋದಯನಂ ಪ್ರತಿ । ಸ್ರಗ್ದಾಮಭಿರ್ಮುಕ್ತಪುಷ್ಪೈಸ್ಸುಗಂಧೈಃ ಪಂಚ ವರ್ಣಕೈಃ ॥ ೮ ॥ ರಾಜಮಾರ್ಗಮಸಂಬಾಧಂ ಕಿರಂತು ಶತಶೋ ನರಾಃ ।

ವೀರ್ಯವಾನ್ - ಸಾಮರ್ಥ್ಯವಂತನಾದ, ಶತ್ರುಘ್ನಃ - ಶತ್ರುಘ್ನನು, ಅನೇಕಸಾಹಸ್ರಾಃ - ಅನೇಕ ಸಹಸ್ರ ಸಂಖ್ಯೆಯುಳ್ಳ, ವಿಷ್ಟೀಃ - ಬಿಟ್ಟಿಯಾಳುಗಳನ್ನು ಕುರಿತು, ಚೋದಯಾಮಾಸ - ಆಜ್ಞಾಪಿಸಿದನು. ॥ ೪ ॥ ನಂದಿ....ತಃ - ನಂದಿಗ್ರಾಮದಿಂದ ಅಯೋಧ್ಯಾಪಟ್ಟಣದವರೆಗೂ, ನಿಮ್ನಾನಿ - ಗುಣಿಗಳಾದ, (ಮತ್ತೂ) ವಿಷಮಾನಿ - ವಕ್ರಗಳಾದ ಪ್ರದೇಶಗಳನ್ನು, ಸಮಾನಿ - ಸಮವಾದವುಗಳನ್ನಾಗಿ, ಸಮೀಕುರುತ - ಸರಿಮಾಡಿರಿ, ಸ್ಥಲಾನಿಚ - ದಿಣ್ಣೆಗಳು, ನಿರಸ್ಯಂತಾಂ - ಹೋಗಲಾಡಿಸಲ್ಪಡಲಿ, ಕೃತ್ಸ್ನಾಂ - ಸಮಸ್ತವಾದ, ಪೃಥಿವೀಂ - ನೆಲವನ್ನು, ಹಿಮಶೀತೇನ - ಹಿಮದಂತೆ ತಣ್ಣಗಿರುವ, ವಾರಿಣಾ - ನೀರಿನಿಂದ, ಸಿಚಂತು - ನೆನಸಲಿ, ತತಃ - ಬಳಿಕ, ಅನ್ಯೇ - ಮತ್ತೆ ಕೆಲವರು, ಲಾಜೈಃ - ಅರಳುಗಳಿಂದಲೂ, ಪುಷ್ಪೈಶ್ಚ-ಹುವ್ವುಗಳಿಂದಲೂ, ಸರ್ವಶಃ-ಎಲ್ಲಾ ಪ್ರದೇಶಗಳಲ್ಲಿ, ಅಭ್ಯವಕಿರಂತು-ಎರಚಲಿ, ಪುರವರೋತ್ತಮೇ - ಉತ್ತಮವಾದ ಪಟ್ಟಣಗಳಲ್ಲಿ ಶ್ರೇಷ್ಠವಾದ ಅಯೋಧ್ಯಾಪಟ್ಟಣದಲ್ಲಿ, ಸಮು......ಕಾಃ - ಎತ್ತಿ ನಿಲ್ಲಿಸಲ್ಪಟ್ಟ ಧ್ವಜಪಟಗಳುಳ್ಳ, ರಥ್ಯಾಃ - ರಾಜಬೀದಿಗಳು, ಸೂರ್ಯಸ್ಯ - ಸೂರ್ಯನ, ಉದಯನಂಪ್ರತಿ - ಉದಯಕ್ಕೆ ಸರಿಯಾಗಿ, ವೇಶ್ಮಾನಿ - ಮನೆಗಳನ್ನೂ, ಶೋಭಯಂತು-ಬೆಳಗುವಂತೆ ಮಾಡಲಿ, ಶತಶಃ - ಅನೇಕರಾದ, ನರಾಃ - ಮನುಷ್ಯರು, ಸ್ರಗ್ದಾಮಭಿಃ - ಮಾಲಿಕೆಗಳಿಂದಲೂ, ಅರಳಿದ ಹುವ್ವುಗಳಿಂದಲೂ, ಪಂಚವರ್ಣಕೈಃ - ಐದು ಬಣ್ಣಗಳುಳ್ಳ ರಂಗವಲ್ಲಿಗಳಿಂದಲೂ, ಸುಗಂಧೈಃ - ಸುವಾಸನೆಯ ದ್ರವ್ಯಗಳಿಂದಲೂ, ರಾಜಮಾರ್ಗಂ - ರಾಜಬೀದಿಯನ್ನು, ಅಸಂಬಾಧಂ - ಸಮ್ಮರ್ದವಿಲ್ಲದೆ, ಕಿರಂತು - ತುಂಬಿಸಲಿ, ಇತಿ - ಇಂತೆಂದು ಆಜ್ಞಾಪಿಸಿದನು. ॥೫ ೮॥

ಕುಮಾರನೀರೀತಿ ನುಡಿಯಲು ಶತ್ರುಮರ್ದನನಾದ ಶತ್ರುಘ್ನನು ಆ ಕೂಡಲೇ ಕೂಲಿಯಾಳುಗಳನೇಕರನ್ನು ಕರೆದು, "ಎಲೈ ನೀವೆಲ್ಲರೂ ಈ ಕೂಡಲೇ ಇಲ್ಲಿಂದ ಅಯೋಧ್ಯೆಯವರೆಗಣ ದಾರಿಯನ್ನು ಹಳ್ಳತಿಟ್ಟೆಗಳಿಲ್ಲದೆ ಸಮಗೊಳಿಸಿ ಶೀತಳೋದಕದಿಂದ (ಪನ್ನೀರಿನಿಂದ) ತೋಯಿಸಿ ಸುಖಸಂಚಾರಯೋಗ್ಯವಾದುದನ್ನಾಗಿ ಮಾಡಿರಿ. ಎಲ್ಲೆಡೆಗಳಲ್ಲಿಯೂ ಹೂಗಳನ್ನೂ, ಅರಳನ್ನೂ ಹರಡಿ ಮಂಗಳಮಯವನ್ನಾಗಿ ಮಾಡಿರಿ. ಪಟ್ಟಣಶ್ರೇಷ್ಠವಾದ ನಮ್ಮ ಅಯೋಧ್ಯೆಯಲ್ಲೆಲ್ಲ ಧ್ವಜಪತಾಕೆಗಳನ್ನೆತ್ತಿ ಕಟ್ಟಿರಿ. ನಾಳೆ ಬೆಳಗಾಗುವುದರೊಳಗಾಗಿ ಪಟ್ಟಣದ ರಾಜಬೀದಿಗಳಲ್ಲಿ ಮನೆಮನೆಯೂ ಪತಾಕೆಗಳಿಂದಲಂಕೃತವಾಗಿ ಶೋಭಿಸಲಿ. ಪ್ರಜೆಗಳೆಲ್ಲ ಪ್ರತಿ ಮನೆಯನ್ನೂ ಪುಷ್ಪಹಾರಗಳಿಂದಲೂ, ಸೊಗಸಾದ ಪಂಚವರ್ಣದ ರಂಗವಲ್ಲಿಗಳಿಂದಲೂ ಸಿಂಗರಿಸಬೇಕಲ್ಲದೆ, ರಾಜಮಾರ್ಗವನ್ನೆಲ್ಲ ರಂಗವಲ್ಲ್ಯಾದಿಗಳಿಂದಲೂ, ಪರಿಮಳದ್ರವ್ಯಗಳಿಂದಲೂ ಶೋಭಿಸುವಂತೆ ಮಾಡಲಿ. ಎಲ್ಲ ಜನಗಳೂ, ಶ್ರೀರಾಮನನ್ನುಎದುರುಗೊಳ್ಳುವುದಕ್ಕೆ ಪಟ್ಟಣಶೃಂಗಾರದಲ್ಲಿ ತೊಡಗಲಿ"ಎಂದು ಆಜ್ಞಾಪಿಸಿದನು. ॥೪–೮॥ ಶತ್ರುಘ್ನನು ಈ ರೀತಿ ಆಜ್ಞಾಪಿಸಿದುದನ್ನು

(† ರಾಜದಾರಾಸ್ತಥಾಽಮಾತ್ಯಾಸ್ಸೈನ್ಯಾಸ್ಸೇನಾಗಣಾಽಂಗನಾಃ ॥೯॥ ಬ್ರಾಹ್ಮಣಾಶ್ಚ ಸರಾಜನ್ಯಾಃ ಶ್ರೇಣೀಮುಖ್ಯಾಸ್ತಥಾಗಣಾಃ) । ಧೃಷ್ಟಿರ್ಜಯಂತೋ ವಿಜಯ ಸ್ಸಿದ್ಧಾರ್ಥೋ ಹ್ಯರ್ಥಸಾಧಕಃ ॥೧೦॥ ಅಶೋಕೋ ಮಂತ್ರಪಾಲಶ್ಚ ಸುಮಂತ್ರ ಶ್ಚಾಪಿ ನಿರ್ಯಯುಃ । ಮತ್ತೈರ್ನಾಗಸಹಸ್ರೈಶ್ಚ ಶಾತಕುಂಭವಿಭೂಷಿತೈಃ ॥೧೧॥ ಅಪರೇ ಹೇಮಕಕ್ಷ್ಯಾಭಿಸ್ಸಗಜಾಭಿಃ ಕರೇಣುಭಿಃ । ನಿರ್ಯಯುಸ್ತುರಗಾಕ್ರಾಂತೈ ರಥೈಶ್ಚ ಸುಮಹಾರಥಾಃ ॥೧೨॥ ಶಕ್ತ್ಯೃಷ್ಟಿಪ್ರಾಸಹಸ್ತಾನಾಂ ಸಧ್ವಜಾನಾಂ ಪತಾ ಕಿನಾಂ । ತುರಗಾಣಾಂ ಸಹಸ್ರೈಶ್ಚ ಮುಖ್ಯೈರ್ಮುಖ್ಯನರಾನ್ವಿತೈಃ ॥೧೩॥ ಪದಾ ತೀನಾಂ ಸಹಸ್ರೈಶ್ಚ ವೀರಾಃ ಪರಿವೃತಾ ಯಯುಃ । ತತೋ ಯಾನಾನ್ಯುಪಾರೂಢಾ

ರಾಜದಾರಾಃ-ರಾಜಪತ್ನಿಯರು, ತಥಾ-ಹಾಗೆಯೇ, ಅಮಾತ್ಯಾಃ-ಮಂತ್ರಿಗಳೂ, ಸೈನ್ಯಾಃ - ಸೇನಾಧಿ ಪತಿಗಳೂ, ಸೇನಾಃ - ಸೇನೆಗಳೂ, ಗಣಾಂಗನಾಃ - ದೊಡ್ಡ ಮನುಷ್ಯರೂ ಮತ್ತೂ ಹೆಂಗಸರೂ, ಶೆಟ್ಟಿ ವರ್ತಕರೂ, ಅವರ ಹೆಂಗಸರೂ, ಬ್ರಾಹ್ಮಣಾಶ್ಚ - ಬ್ರಾಹ್ಮಣರೂ, ಸರಾಜನ್ಯಾಃ - ರಾಜಶ್ರೇಷ್ಠರಿಂದೊಡ ಗೂಡಿದ, ಶ್ರೇಣೀಮುಖ್ಯಾಃ-ಘನಾಂತರಾದ ಜನರು, ತಥಾ-ಹಾಗೆಯೇ, ಗಣಾಃ-ಗುಂಪುಗಳಾಗಿರುವ ಇತರ ಪಣಸ್ಥರೂ, ಧೃಷ್ಟಿಃ - ಧೃಷ್ಟಿ ಎಂಬವನೂ, ಜಯಂತಃ - ಜಯಂತನೂ, ವಿಜಯಃ - ವಿಜ ಯನೂ, ಸಿದ್ಧಾರ್ಥಃ - ಸಿದ್ಧಾರ್ಥನೂ, ಅರ್ಥಸಾಧಕಃ - ಅರ್ಥಸಾಧಕನೂ, ಅಶೋಕಃ - ಅಶೋಕನೂ, ಮಂತ್ರಪಾಲಶ್ಚ - ಮಂತ್ರಪಾಲನೂ, ಸುಮಂತ್ರಶ್ಚಾಪಿ - ಸುಮಂತ್ರನೂ, ಮತ್ತೈಃ - ಮದವೇರಿದ, ಶಾತ....ತೈಃ - ಬಂಗಾರದ ಒಡವೆಗಳಿಂದಲಂಕೃತವಾದ, ನಾಗಸಹಸ್ರೈಶ್ಚ - ಅನೇಕ ಆನೆಗಳಿಂದ, ನಿರ್ಯಯುಃ - ಹೊರಟುಬಂದರು, ಅಪರೇ - ಮತ್ತೆ ಕೆಲವರು, ಹೇಮಕಕ್ಷ್ಯಾಭಿಃ - ಭಂಗಾರದ ತಂಗು ಗಳುಳ್ಳ, ಸಗಜಾಭಿಃ - ಗಂಡಾನೆಗಳಿಂದೊಡಗೂಡಿದ, ಕರೇಣುಭಿಃ - ಹೆಣ್ಣಾನೆಗಳಿಂದ, ನಿರ್ಯಯುಃ - ಹೊರಟರು, ವೀರಾಃ - ಶೂರರೂ, ಸುಮಹಾರಥಾಃ - ಮಹಾ ರಥಿಕರೂ, ತುರಗಾಕ್ರಾಂತೈಃ - ಕುದುರೆ ಗಳಿಂದ ಕಟ್ಟಲ್ಪಟ್ಟ, ರಥೈಃ - ತೇರುಗಳಿಂದ, ನಿರ್ಯಯುಃ - ಹೊರಟರು. ॥೯-೧೨॥ ಶಕ್ತ್ಯ....ನಾಂ- ಶಕ್ತ್ಯಾಯುಧಗಳೂ, ದಂಡಾಯುಧಗಳೂ, ಈಟಿಗೋಲುಗಳೂ ಕೈಗಳಲ್ಲಿ ಉಳ್ಳ, ಸಧ್ವಜಾನಾಂ - ನಿಶಾನಿಗಳಿಂದೊಡಗೂಡಿದ, ಪತಾಕಿನಾಂ - ಸಣ್ಣ ಧ್ವಜಪಟಗಳುಳ್ಳ, ತುರಗಾಣಾಂ - ಕುದುರೆಗಳ, ಮುಖ್ಯನರಾನ್ವಿತೈಃ - ಮುಖ್ಯರಾದ ಮನುಷ್ಯರಿಂದ ಕೂಡಿರುವ, ಮುಖ್ಯೈಃ - ಪ್ರಧಾನಗಳಾದ, ಸಹ ಸ್ರೈಶ್ಚ - ಸಾವಿರಗಳಿಂದಲೂ, ಪರಿವೃತಾಃ - ಸುತ್ತುವರೆಯಲ್ಪಟ್ಟ, ವೀರಾಃ - ಶೂರರು, ಯಯುಃ -

ಕೇಳಿ ಆ ಸೇವಕರೆಲ್ಲರೂ ಪರಮಾನಂದಭರಿತರಾದರು. (ಅವರೆಲ್ಲರೂ ಆ ಆಜ್ಞೆಯನ್ನು ನೆರವೇರಿ ಸಲು ಬದ್ಧಾದರರಾಗಿ ಹೊರಟರು.) ಆಮೇಲೆ ಮಾರನೆಯ ದಿನ ಪ್ರಾತಃಕಾಲದಲ್ಲಿ ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ, ಸುಮಂತ್ರ ಮೊದ ಲಾದ ಮಂತ್ರಿಗಳೆಲ್ಲರೂ ಮದಿಸಿರುವ ಧ್ವಜಗಳಿಂದಲೂ, ಇತರ ಆಭರಣಗಳಿಂದಲೂ ಅಲಂಕೃತಗಳಾದ ಅನೇಕ ಆನೆಗಳನ್ನೇರಿ ಹೊರಟುಬಂದರು. ಇತರರು ಬಂಗಾರದ ಸರಪಣಿ ಗಳಿಂದ ಕೂಡಿದ ಹೆಣ್ಣಾನೆಗಳಿಂದಲೂ, ಗಂಡಾನೆಗಳಿಂದಲೂ ಹೊರಟುಬಂದರು. ಕೆಲವರು ಮಹಾ ರಥಿಕರು ದಿವ್ಯ ರಥಾರೂಢರಾಗಿಯೂ, ಕೆಲವರು ಶಕ್ತಿಗದಾಪಾಶಹಸ್ತರಾಗಿ ಪತಾಕೆ ಗಳೊಡಗೂಡಿ ಅನೇಕ ಕುದುರೆಗಳನ್ನೇರಿ ಮುಖಂಡರಾದವರೊಡನೆ ಹೊರಟುಬಂದರು. ಅವ

† ಈ ಶ್ಲೋಕವು ಈ ಸರ್ಗದ ನಾಲ್ಕನೆಯ ಶ್ಲೋಕವಾಗಿದೆ. ತಾತ್ಪರ್ಯ ಅಲ್ಲಿಯೇ ಕೊಟ್ಟಿದೆ. ತಿಲಕ ಪಾಠದ ಕತೆ ಇಲ್ಲಿರುವುದು ಸರಿ.

ಸ್ಸರ್ವಾ ದಶರಥಸ್ತ್ರಿಯಃ ॥ ೧೪ ॥ ಕೌಸಲ್ಯಾಂ ಪ್ರಮುಖೇ ಕೃತ್ವಾ ಸುಮಿತ್ರಾಂಚಾಪಿ ನಿರ್ಯಯುಃ । ಕೈಕೇಯ್ಯಾ ಸಹಿತಾಸ್ಸರ್ವಾ ನಂದಿಗ್ರಾಮಮುಪಾಗರ್ಮ ॥ ೧೫ ॥ ಕೃತ್ಸ್ನಂಚ ನಗರಂ ತತ್ತು ನಂದಿಗ್ರಾಮಮುಪಾಗಮತ್ । ಅಶ್ವಾನಾಂ ಖುರಶಬ್ದೇನ ರಥನೇಮಿಸ್ವನೇನಚ ॥ ೧೬ ॥ ಶಂಖದುಂದುಭಿನಾದೇನ ಸಂಚಚಾಲೇವ ಮೇದಿನೀ । ದ್ವಿಜಾತಿಮುಖ್ಯೈರ್ಧರ್ಮಾತ್ಮಾ ಶ್ರೇಣೀಮುಖ್ಯೈಸ್ಸನೈಗಮೈಃ ॥ ೧೭ ॥ ಮಾಲ್ಯಮೋದಕಹಸ್ತೈಶ್ಚ ವಂದಿಭಿಶ್ಚಾಭಿನಂದಿತಃ । ಆರ್ಯಪಾದೌ ಗೃಹೀತ್ವಾತು ಶಿರಸಾ ಧರ್ಮಕೋವಿದಃ ॥ ೧೮ ॥ ಪಾಂಡುರಂ ಛತ್ರಮಾದಾಯ ಶುಕ್ಲಮಾಲ್ಯೋಪ

ತೆರಳಿದಳು. ॥ ೧೩ ॥ ತತಃ - ಬಳಿಕ, ಸರ್ವಾಃ - ಸಮಸ್ತರಾದ, ದಶರಥಸ್ತ್ರೀಯಃ - ದಶರಥರಾಯನ ಸ್ತ್ರೀಯರುಗಳು, ಕೌಸಲ್ಯಾಂ - ಕೌಸಲ್ಯಾದೇವಿಯನ್ನು, ಸುಮಿತ್ರಾಂಚಾಪಿ - ಸುಮಿತ್ರಾದೇವಿಯನ್ನು, ಪ್ರಮುಖೇ - ಮುಂದುಗಡೆ, ಕೃತ್ವಾ - ಮಾಡಿಕೊಂಡು, ಯಾನಾನಿ - ವಾಹನಗಳನ್ನು, ಉಪಾರೂಢಾಃ - ಏರಿದವರಾಗಿ, ನಿರ್ಯಯುಃ - ಹೊರಟರು. ॥ ೧೪ ॥ ಸರ್ವಾಃ - ಸಮಸ್ತ ಸ್ತ್ರೀಯರೂ, ಕೈಕೇಯ್ಯಾ - ಕೈಕೇಯಿದೇವಿಯಿಂದ, ಸಹಿತಾಃ - ಕೂಡಿದವರಾಗಿ, ನಂದಿಗ್ರಾಮಂ - ನಂದಿಗ್ರಾಮವನ್ನು ಕುರಿತು, ಉಪಾಗರ್ಮ - ಬಂದರು, ಕೃತ್ಸ್ನಂ - ಸಮಸ್ತವಾದ, ತನ್ನಗರಂತು - ಆ ಪಟ್ಟಣವಾದರೆ, ನಂದಿಗ್ರಾಮಂ - ನಂದಿಗ್ರಾಮವನ್ನು ಕುರಿತು, ಉಪಾಗಮತ್ - ಹೊರಟಿತು, ಅಶ್ವಾನಾಂ - ಕುದುರೆಗಳ, ಖುರಶಬ್ದೇನ - ಗೊರಸುಗಳ ಧ್ವನಿಯಿಂದಲೂ, ರಥ....ಚ - ರಥಚಕ್ರಗಳ ಧ್ವನಿಗಳಿಂದಲೂ, ಶಂಖ....ನ - ಶಂಖಗಳ ಮತ್ತು ಭೇರಿಗಳ ಧ್ವನಿಗಳಿಂದಲೂ, ಮೇದಿನೀ - ಭೂಮಿಯು, ಸಂಚಚಾಲೇವ - ಒಡೆಯಿತೋ ಎಂಬಂತಿತ್ತು. ॥೧೫-೧೬॥ ಧರ್ಮಾತ್ಮಾ - ಧರ್ಮಿಷ್ಠನಾದ, ಭರತಃ- ಭರತನು, ದ್ವಿಜಾತಿಮುಖ್ಯೈಃ - ಬ್ರಾಹ್ಮಣಶ್ರೇಷ್ಠರಿಂದಲೂ, ಸನೈಗಮೈಃ - ವರ್ತಕರಿಂದೊಡಗೂಡಿದ, ಮಾಲ್ಯಮೋದಕಹಸ್ತೈಶ್ಚ - ಪುಷ್ಪಹಾರಗಳೂ, ಕಡುಬುಗಳೂ ಹಸ್ತಗಳಲ್ಲುಳ್ಳ, ಮಂತ್ರಿಭಿಃ - ಮಂತ್ರಿಗಳಿಂದ, ವೃತಃ - ಪರಿವೃತನಾಗಿ, ಶಂಖ....ಶ್ಚ - ವಿಜಯ ಶಂಖಗಳ ಜಯಭೇರಿಗಳಿಂದಲೂ, ವಂದಿಭಿಶ್ಚ - ಸ್ತುತಿಪಾಠಕರಿಂದಲೂ, ಅಭಿನಂದಿತಃ - ವಂದನ ಮಾಡಲ್ಪಟ್ಟವನಾದನು, ಧರ್ಮಕೋವಿದಃ- ಧರ್ಮದಲ್ಲಿಯೇ ಪಂಡಿತನಾದ, ದೀನಃ - ದೀನನಾದ, ಚೀರ....ಠಃ - ನಾರುಮಡಿ ಮತ್ತು ಕೃಷ್ಣಾಜಿನವೇ ವಸ್ತ್ರವಾಗುಳ್ಳ, ಭರತಃ - ಭರತನು, ಆರ್ಯಪಾದೌ - ಅಣ್ಣನ ಪಾದುಕೆಗಳನ್ನು, ಶಿರಸಾ - ಮಂಡೆಯಿಂದ, ಗೃಹೀತ್ವಾ - ತೆಗೆದುಕೊಂಡು, ಪಾಂಡುರಂ - ಬೆಳ್ಳಗಿರುವ, ಶುಕ್ಲ....ತಂ - ಬೆಳ್ಳ

ರೆಲ್ಲರೂ ಸಾವಿರಾರು ಪದಾತಿಗಳೊಡಗೂಡಿ ಬಂದರು. ಇದಾದ ತರುವಾಯ ದಶರಥರಾಯನ ಮಡದಿಯರೆಲ್ಲರೂ ಕೌಸಲ್ಯಾ ಸುಮಿತ್ರೆಯರನ್ನು ಮುಂದಿಟ್ಟುಕೊಂಡು ಕೈಕೇಯಿಯೊಡಗೂಡಿ ಎಲ್ಲರೂ ಯಾನಾರೂಢರಾಗಿ ನಂದಿಗ್ರಾಮಕ್ಕೆ ಬಂದರು. ॥ ೯—೧೪ ॥ ಆ ತರುವಾಯ ಧರ್ಮಾತ್ಮನಾದ ಭರತಕುಮಾರನು ಬ್ರಾಹ್ಮಣೋತ್ತಮರಿಂದಲೂ, ಮುಖ್ಯಮುಖ್ಯರಾದ ಶೆಟ್ಟಿ ವರ್ತಕರಿಂದಲೂ, ಮಾಂಗಲ್ಯಾರ್ಥವಾಗಿ ಪುಷ್ಪಗಳು ಮತ್ತು ಮೋದಕಗಳೂ ಕೈಗಳಲ್ಲುಳ್ಳ ಮಂತ್ರಿಗಳಿಂದಲೂ ಸುತ್ತುವರೆದವನಾಗಿ, ಶಂಖ ಮತ್ತು ಭೇರಿಗಳು ಮೊಳಗುತ್ತಿರಲು, ವಂದಿಮಾಗಧರು ಹೊಗಳುತ್ತಿರಲು, ಅಗ್ರಜನಾದ ಶ್ರೀರಾಮಮೂರ್ತಿಯ ಪಾದುಕೆಗಳನ್ನು ತಲೆಯಲ್ಲಿ ತಾಳಿದವನಾಗಿ, ಸಮಸ್ತ ಧರ್ಮಗಳನ್ನೂ, ತಿಳಿದವನಾದುದರಿಂದ ರಾಜಾರ್ಹವಾದ ಮತ್ತು ಸ್ವರ್ಣಭೂಷಿತವಾದ ಬೆಳಗೊಡೆಯನ್ನೂ, ಶುಭ್ರವಾದ ಮತ್ತು ಪರಿಮಳಯುಕ್ತವಾದ ಮಾಲೆಗಳಿಂದಲಂಕೃತವಾದ ಶುಕ್ಲಚಾಮರಗಳೆರಡನ್ನೂ ತೆಗೆಸಿಕೊಂಡು,

ಶೋಭಿತಂ । ಶುಕ್ಲೇಚ ವಾಲವ್ಯಜನೇ ರಾಜಾರ್ಹೇ ಹೇಮಭೂಷಿತೇ ॥೧೯॥ ಉಪವಾಸಕೃಶೋ ದೀನಶ್ಚೀರಕೃಷ್ಣಾಜಿನಾಂಬರಃ । ಭ್ರಾತುರಾಗಮನಂ ಶ್ರುತ್ವಾ ತತ್ಪೂರ್ವಂ ಹರ್ಷಮಾಗತಃ ॥೨೦॥ ಪ್ರತ್ಯುದ್ಯಯೌ ತತೋ ರಾಮಂ ಮಹಾತ್ಮಾ ಸಚಿವೈಸ್ಸಹ । ಸಮೀಕ್ಷ್ಯ ಭರತೋ ವಾಕ್ಯಮುವಾಚ ಪವನಾತ್ಮಜಂ ॥೨೧॥ "ಕಚ್ಚಿನ್ನಖಲು ಕಾಪೇಯೀ ಸೇವ್ಯತೇಽಚಲಚಿತ್ತತಾ । ನಹಿ ಪಶ್ಯಾಮಿ ಕಾಕುತ್ಸ್ಥಂ ರಾಮಮಾರ್ಯಂ ಪರಂತಪಂ ॥೨೨॥ ಕಚ್ಚಿನ್ನಖಲು ದೃಶ್ಯಂತೇ ವಾನರಾಃ ಕಾಮರೂಪಿಣಃ" । ಅಥೈವಮುಕ್ತೇ ವಚನೇ ಹನುಮಾನಿದಮಬ್ರವೀತ್ ॥೨೩॥ ಅರ್ಥಂ ವಿಜ್ಞಾಪಯನ್ನೇವ ಭರತಂ ಸತ್ಯವಿಕ್ರಮಂ । ಸದಾಫಲಾನ್ ಕುಸುಮಿತಾನ್ ವೃಕ್ಷಾನ್ ಪ್ರಾಪ್ಯ

ಗಿರುವ ಹುವ್ವಿನ ಸರಗಳಿಂದಲಂಕರಿಸಲ್ಪಟ್ಟ, ಛತ್ರಂ - ಶ್ವೇತಚ್ಛತ್ರವನ್ನು, ರಾಜಾರ್ಹೇ - ರಾಜನಿಗೆ ಯೋಗ್ಯಗಳಾದ, ಹೇಮಭೂಷಿತೇ ಬಂಗಾರದ ಕಟ್ಟುಗಳಿಂದಲಂಕೃತಗಳಾದ, ಶುಕ್ಲೇ - ಬೆಳ್ಳಗಿರುವ, ವಾಲವ್ಯಜನೇ - ಚಾಮರಗಳನ್ನೂ, ಆದಾಯ - ತೆಗೆದುಕೊಂಡು, ಭ್ರಾತುಃ - ಅಣ್ಣನಾದ ಶ್ರೀರಾಮನ, ಆಗಮನಂ - ಬರುವಿಕೆಯನ್ನು, ಶ್ರುತ್ವಾ - ಕೇಳಿ, ತತ್ಪೂರ್ವಂ - ಮೊದಲೇ, ಹರ್ಷಂ - ಸಂತೋಷವನ್ನು, ಆಗತಃ - ಹೊಂದಿ, ತತಃ - ಬಳಿಕ, ಮಹಾತ್ಮಾ - ಮಹಾ ಉದಾರವಾದ ಮನವುಳ್ಳವನಾಗಿ, ಸಚಿವೈಸ್ಸಹ - ಮಂತ್ರಿಗಳೊಡನೆ, ರಾಮಂ - ಶ್ರೀರಾಮನನ್ನು ಕುರಿತು, ಪ್ರತ್ಯುದ್ಯಯೌ - ಎದುರುಗೊಳ್ಳಲು ಹೊರಟನು, ಭರತಃ ಭರತನು, ಪವನಾತ್ಮಜಂ - ವಾಯುಪುತ್ರನಾದ ಆಂಜನೇಯನನ್ನು, ಸಮೀಕ್ಷ್ಯ - ಕಂಡು, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥೧೭-೨೧॥ ತ್ವಯಾ - ನಿನ್ನಿಂದ, ಕಾಪೇಯೀ - ವಾನರಸಂಬಂಧಿಯಾದ, ಚಲಚಿತ್ತತಾ - ಚಿತ್ತಚಾಂಚಲ್ಯವು, ನಸೇವ್ಯತೇ ಕಚ್ಚಿತ್ - ಸೇವಿಸಲ್ಪಡುವದಿಲ್ಲವಷ್ಟೆ, ಕಾಕುತ್ಸ್ಥಂ - ಕಕುತ್ಸ್ಥವಂಶೋದ್ಭವನಾದ, ಆರ್ಯಂ - ಪೂಜ್ಯನಾದ, ಪರಂತಪಂ - ಶತ್ರುಸಂಹಾರಕನಾದ ರಾಮನನ್ನು, ನಪಶ್ಯಾಮಿಹಿ - ಕಾಣೆನಷ್ಟೆ, ಕಾಮರೂಪಿಣಃ-ಕಾಮರೂಪಿಗಳಾದ, ವಾನರಾಃ-ಕಪಿಗಳು, ನದೃಶಂತೇಕಚ್ಚಿತ್ಖಲು-ಕಾಣಲ್ಪಡುವುದಿಲ್ಲವಷ್ಟೆ. ॥೨೨-೨೩॥ ಅಥ - ಅನಂತರದಲ್ಲಿ, ಏವಂ - ಈ ಪರಿಯಾಗಿ, ವಚನೇ - ಮಾತು, ಉಕ್ತೇ - ಹೇಳಲು, ಹನುಮಾನ್ - ಆಂಜನೇಯನು, ಸತ್ಯವಿಕ್ರಮಂ - ಸತ್ಯಪರಾಕ್ರಮಿಯಾದ, ಭರತಂ - ಭರತನನ್ನು ಕುರಿತು, ಅರ್ಥಂ - ವಿಲಂಬಕ್ಕೆ ಕಾರಣವಾದ ಅರ್ಥವನ್ನು, ವಿಜ್ಞಾಪಯನ್ನೇವ - ಅರಿಕೆ ಮಾಡಲಿಚ್ಛಿ

ಉಪವಾಸದಿಂದ ಕೃಶನೂ, ದೀನನೂ, ನಾರುಡೆಯುಟ್ಟವನೂ ಆಗಿ ಪೂರ್ವದಲ್ಲಿಯೇ ಅಣ್ಣನಾದ ಶ್ರೀರಾಮನ ಆಗಮನವನ್ನು ಕೇಳಿ ಪರಮಾನಂದಭರಿತನಾಗಿ ಆತನನ್ನೆದುರುಗೊಳ್ಳಲು ಹೊರಟನು. ॥೧೬-೨೦॥ ಆಗ ಕುದುರೆಗಳ ಖುರಪುಟಧ್ವನಿಯೂ, ರಥಚಕ್ರಗಳ ಧ್ವನಿಯೂ, ಶಂಖದುಂದುಭಿಗಳ ಮಧುರಧ್ವನಿಯೂ, ಆನೆಗಳ ಘೀಂಕಾರಧ್ವನಿಯೂ ಅಧಿಕವಾಗಿ ಭೂಮಿಯೇ ಬಿರಿಯುವುದೋ ಎಂಬಂತಾಯಿತು. ಹೀಗೆ ಅಯೋಧ್ಯಾಪಟ್ಟಣಕ್ಕೆ ಪಟ್ಟಣವೇ ನಂದಿಗ್ರಾಮದಲ್ಲಿ ಶ್ರೀರಾಮನ ಸಂದರ್ಶನಕ್ಕಾಗಿ ಸಿದ್ಧವಾದ ತರುವಾಯ ವಾಯುಪುತ್ರನಾದ ಹನುಮಂತನನ್ನು ಕುರಿತು, "ಎಲೈ ವಾನರಶ್ರೇಷ್ಠನೇ! ನೀನು ವಾನರಸಹಜವಾದ ಚಂಚಲ ಚಿತ್ತವನ್ನವಲಂಬಿಸಿ ಮಾತನಾಡಲಿಲ್ಲವಷ್ಟೆ! ಶತ್ರುತಾಪನನೂ, ಪೂಜ್ಯನೂ ಆದ ಶ್ರೀರಾಮಮೂರ್ತಿಯು ಕಾಣಿಸಲಿಲ್ಲವಲ್ಲ! ಕಾಮರೂಪರಾದ ವಾನರರೂ ಕಾಣಿಸಲಿಲ್ಲವು" ಎಂದನು. ಆಗ ಭರತನಾಡಿದ ಮಾತುಗಳನ್ನು ಕೇಳಿ ಹನುಮಂತನು ಶ್ರೀರಾಮನ ಬರುವಿಕೆಯು ಸಾವ

ಮಧುಸ್ರವಾನ್ ॥ ೨೪ ॥ ಭರದ್ವಾಜಪ್ರಸಾದೇನ ಮತ್ತಭ್ರಮರನಾದಿತಾನ್ । ತಸ್ಯ ಚೈಷ ವರೋ ದತ್ತೋ ವಾಸವೇನ ಪರಂತಪ! ॥ ೨೫ ॥ ಸಸೈನ್ಯಸ್ಯ ತಥಾಽತಿಥ್ಯಂ ಕೃತಂ ಸರ್ವಗುಣಾನ್ವಿತಂ । ನಿಸ್ವನಃ ಶ್ರೂಯತೇ ಭೀಮಃ ಪ್ರಹೃಷ್ಟಾನಾಂ ವನೌಕಸಾಂ ॥ ೨೬ ॥ ಮನ್ಯೇ ವಾನರಸೇನಾ ಸಾ ನದೀಂ ತರತಿ ಗೋಮತೀಂ । ರಜೋವರ್ಷಂ ಸಮುದ್ಭೂತಂ ಪಶ್ಯ ವಾಲುಕಿನೀಂ ಪ್ರತಿ ॥೨೭॥ ಮನ್ಯೇ ಸಾಲವನಂ ರಮ್ಯಂ

ಯುಳ್ಳವನಾಗಿಯೇ, ಇದಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೨೪ ॥ ಭರ....ನ - ಭರದ್ವಾಜಋಷಿಯ ಅನುಗ್ರಹದಿಂದ, ಸದಾಫಲಾನ್ - ನಿರಂತರವೂ ಪುಷ್ಪಗಳುಳ್ಳ, ಕುಸುಮಿತಾನ್ - ಹೂವೊಳೆತಿರುವ, ಮಧುಸ್ರವಾನ್ - ಜೇನುಗಳನ್ನು ಸ್ರವಿಸುತ್ತಿರುವ, ಮತ್ತ....ತಾನ್ - ಮದವೇರಿದ ಭ್ರಮರನಾದದಿಂದ ಧ್ವನಿಗೊಳುತಿರುವ, ವೃಕ್ಷಾನ್ - ಗಿಡಗಳನ್ನು, ಪ್ರಾಪ್ಯ - ಹೊಂದಿ, ವಾನರಾಃ - ಕಪಿಗಳು, ಹೃಷ್ಯಂತಿ-ಹರ್ಷಗೊಂಡಿದ್ದಾರೆ, ಪರಂತಪ-ಶತ್ರುಸಂಹಾರಕನೇ, ವಾಸವೇನ-ದೇವೇಂದ್ರನಿಂದ, ಏಷವರಃ - ಈ ವರವು, ತಸ್ಯ - ಆ ಶ್ರೀರಾಮನಿಗೆ, ದತ್ತಃ - ಕೊಡಲ್ಪಟ್ಟಿತು, ತಥಾ - ಹಾಗೆಯೇ, ಸಸೈನ್ಯಸ್ಯ - ಸೇನಾಸಮೇತನಾದ ಶ್ರೀರಾಮನಿಗೆ, ಸರ್ವಗುಣಾನ್ವಿತಂ - ಮಾಧುರ್ಯಾದಿ ಸಮಸ್ತ ಗುಣಗಳಿಂದಲೂ ಸಂಪೂರ್ಣವಾಗಿ ಕೂಡಿರುವ, ಆತಿಥ್ಯಂ - ಅತಿಥಿ ಸತ್ಕಾರವು, ಕೃತಂ - ಮಾಡಲ್ಪಟ್ಟಿತು. ॥ ೨೫ ೨೬ ॥ ಪ್ರಹೃಷ್ಟಾನಾಂ - ಸಂತೋಷಗೊಂಡಿರುವ, ವನೌಕಸಾಂ - ಕಪಿಗಳ, ಭೀಮಃ - ಭಯಂಕರವಾದ, ನಿಸ್ವನಃ - ಧ್ವನಿಯು, ಶ್ರೂಯತೇ - ಕೇಳಲ್ಪಡುತ್ತದೆ, ಸಾವಾನರಸೇನಾ - ಆ ವಾನರಸೇನೆಯು, ಗೋಮತೀಂನದೀಂ - ಗೋಮತೀನದಿಯನ್ನು, ತರತೀತಿ - ದಾಟುತ್ತದೆಯೆಂದು, ಮನ್ಯೇ - ತಿಳಿದಿದ್ದೇನೆ. ॥ ೨೭ ॥ ಸಮುದ್ಭೂತಂ - ಹುಟ್ಟಿರುವ, ರಜೋವರ್ಷಂ - ದೂಳುಮಳೆಯನ್ನು, ಪಶ್ಯ - ನೋಡು, ವಾಲುಕಿನೀಂಪ್ರತಿ - ವಾಲುಕಿನೀ ಎಂಬ ನದಿಯನ್ನು ಕುರಿತು, ಯಾತಿ - ಬರುತ್ತದೆ, ಇತಿ - ಈ ಪರಿ, ಮನ್ಯೇ - ತಿಳಿದಿದ್ದೇನೆ, ಪ್ಲವಂಗಮಾಃ - ಕಪಿಗಳು, ರಮ್ಯಂ-

---

ಕಾಶವಾಗಿರುವುದಕ್ಕೆ ಕಾರಣವನ್ನು ತಿಳಿಸುವವನಾಗಿ ಆತನನ್ನು ಕುರಿತು, “ಎಲೈ ರಘುವಂಶೋತ್ಪನ್ನನೇ, ಭರತಾ! ಕೇಳು; ಭರದ್ವಾಜ ಮಹರ್ಷಿಯ ಅನುಗ್ರಹದಿಂದ ವೃಕ್ಷಗಳೆಲ್ಲವೂ ಎಲ್ಲ ಕಾಲಗಳಲ್ಲಿಯೂ ಫಲಪುಷ್ಪಭರಿತಗಳಾಗಿವೆ. ಈ ವೃಕ್ಷಗಳೆಲ್ಲವೂ ನಿರಂತರವೂ ಮಕರಂದವನ್ನು ಸ್ರವಿಸುತ್ತಿರುವುವು. ॥೨೧–೨೫॥ ಇವೆಲ್ಲವೂ ಮಧುಕರಪರಿವೃತಗಳಾಗಿ ವಿರಾಜಿಸುತ್ತಿವೆ. ಅಯ್ಯಾ ಭರತನೇ! ನಮ್ಮ ವಾನರರು ಸಂಚರಿಸುವ ವನಗಳಲ್ಲೆಲ್ಲ ಅಕಾಲದಲ್ಲಿಯೂ ವೃಕ್ಷಗಳೆಲ್ಲವೂ ಫಲಿಸುವುವೆಂದು ಮಹೇಂದ್ರನು ಶ್ರೀರಾಮನಿಗಾಗಿ ವರವನ್ನಿತ್ತಿರುವನು. ಆ ವರಪ್ರದಾನ ಮಹಿಮೆಯಿಂದ ಸಮಸ್ತ ವೃಕ್ಷಗಳೂ ವಾನರವೀರರಿಂದ ಪರಿವೃತನಾದ ನಮ್ಮ ಶ್ರೀರಾಮನಿಗೆ ಆತಿಥ್ಯ ಮಾಡುತ್ತಿರುವುವು. ನೋಡೈ ಭರತಕುಮಾರ! ಮಹದಾನಂದಭರಿತರಾದ ನಮ್ಮ ವಾನರವೀರರ ಹರ್ಷಧ್ವನಿಗಳು ಕೇಳಿಬರುತ್ತಿವೆ. ಆಲಿಸಿ ಕೇಳು. ಈ ಧ್ವನಿಯನ್ನು ಕೇಳಿದರೆ ಅವರೆಲ್ಲರೂ ಗೋಮತೀನದಿಯನ್ನು ದಾಟಿರುವಂತೆ ತೋರುತ್ತಿರುವುದು. ಎಲೈ ಭರತಕುಮಾರನೇ! ನೋಡು ನೋಡು; ವಾನರರ ಪಾದಘಟ್ಟನದಿಂದ ಹೊರಟ ದೂಳು ಎಲ್ಲೆಲ್ಲಿಯೂ ವ್ಯಾಪಿಸುತ್ತಿರುವುದು. ಈ ದೂಳಿಯು ವಾಲುಕೀನದಿಯ ಸಮೀಪದಲ್ಲಿ ಕಾಣಿಸುತ್ತಿರುವುದು. ನಮ್ಮ ವಾನರರೆಲ್ಲರೂ ಮನೋಹರವಾದ ಸಾಲವನವನ್ನು ಉಲ್ಲೋಲ

ಲೋಳಯಂತಿ ಪ್ಲವಂಗಮಾಃ । ತದೇತದ್ದೃಶ್ಯತೇ ದೂರಾದ್ವಿಮಲಂ ಚಂದ್ರಸನ್ನಿಭಂ ॥೨೮॥ ವಿಮಾನಂ ಪುಷ್ಪಕಂ ದಿವ್ಯಂ ಮನಸಾ ಬ್ರಹ್ಮನಿರ್ಮಿತಂ । ರಾವಣಂ ಬಾಂಧವೈಸ್ಸಾರ್ಧಂ ಹತ್ವಾ ಲಬ್ಧಂ ಮಹಾತ್ಮನಾ ॥ ೨೯ ॥ ತರುಣಾದಿತ್ಯಸಂಕಾಶಂ ವಿಮಾನಂ ರಾಮವಾಹನಂ । ಧನದಸ್ಯ ಪ್ರಸಾದೇನ ದಿವ್ಯಮೇತನ್ಮನೋಜವಂ ॥ ೩೦ ॥ ಏತಸ್ಮಿನ್ ಭ್ರಾತರೌ ವೀರೌ ವೈದೇಹ್ಯಾ ಸಹ ರಾಘವೌ । ಸುಗ್ರೀವಶ್ಚ ಮಹಾತೇಜಾ ರಾಕ್ಷಸಶ್ಚ ವಿಭೀಷಣಃ ॥ ೩೧ ॥ ತತೋ ಹರ್ಷಸಮುದ್ಭೂತೋ ನಿಸ್ವನೋ ದಿವಮಸ್ಪೃಶತ್ । ಸ್ತ್ರೀಬಾಲಯುವವೃದ್ಧಾನಾಂ ರಾಮೋಽಯಮಿತಿ ಕೀರ್ತಿತೇ ॥೩೨॥ ರಥಕುಂಜರವಾಜಿ

ಮನೋಹರವಾದ, ಸಾಲವನಂ - ಸಾಲವೃಕ್ಷಗಳ ವನವನ್ನು, ಲೋಳಯಂತಿ - ಉಲ್ಲೋಲಕಲ್ಲೋಲಗೊಳಿಸುತ್ತಿದೆ. ॥೨೮॥ ಚಂದ್ರಸನ್ನಿಭಂ-ಚಂದ್ರನಿಗೆ ಸಮಾನವಾದ, ವಿಮಲಂ-ನಿರ್ಮಲವಾದ, ಮನಸಾ-ಮನಸ್ಸಿನಿಂದ, ಬ್ರಹ್ಮನಿರ್ಮಿತಂ - ಬ್ರಹ್ಮದೇವರಿಂದ ನಿರ್ಮಿಸಲ್ಪಟ್ಟ, ದಿವ್ಯಂ - ದೇವತಾಸಂಬಂಧವಾದ, ತದೇತತ್ಪುಷ್ಪಕಂವಿಮಾನಂ - ಆ ಈ ಪುಷ್ಪಕ ವಿಮಾನವು, ದೃಶ್ಯತೇ - ಕಾಣಲ್ಪಡುತ್ತದೆ. ॥೨೯॥ ಬಾಂಧವೈಸ್ಸಾರ್ಧಂ - ಬಂಧುಗಳೊಡಗೂಡಿದ, ರಾವಣಂ - ದಶಕಂಠನನ್ನು, ಹತ್ವಾ - ಕೊಂದು, ಮಹಾತ್ಮನಾ - ಮಹಾ ಪ್ರಭಾವವಂತನಾದ ಶ್ರೀರಾಮನಿಂದ, ಲಬ್ಧಂ - ಹೊಂದಲ್ಪಟ್ಟ, ತರು....ಶಂ-ಬಾಲಸೂರ್ಯನಿಗೆ ಸಮಾನವಾದ ಪ್ರಕಾಶವುಳ್ಳ, ರಾಮವಾಹನಂ - ಶ್ರೀರಾಮನನ್ನು ವಹಿಸುತ್ತಿರುವ, ದಿವ್ಯಂ - ದೇವತಾಸಂಬಂಧವಾದ, ಏತದ್ವಿಮಾನಂ - ಈ ವಿಮಾನವು, ಧನದಸ್ಯ - ಕುಬೇರನ, ಪ್ರಸಾದೇನ - ಅನುಗ್ರಹದಿಂದ, ಮನೋಜವಂ - ಮನೋವೇಗದಂತೆ ವೇಗವುಳ್ಳದಾಗಿದೆ. ॥ ೩೦ ॥ ಏತಸ್ಮಿನ್ - ಈ ವಿಮಾನದಲ್ಲಿ, ವೈದೇಹ್ಯಾಸಹ - ಸೀತಾದೇವಿಯೊಡನೆ, ವೀರೌ - ಶೂರರಾದ, ಭ್ರಾತರೌ-ಅಣ್ಣತಮ್ಮಂದಿರಾದ, ರಾಘವೌ - ಶ್ರೀರಾಮಲಕ್ಷ್ಮಣರೂ, ಮಹಾತೇಜಾಃ - ಬಹಳ ತೇಜೋವಂತನಾದ, ಸುಗ್ರೀವಶ್ಚ - ಸುಗ್ರೀವನೂ, ರಾಕ್ಷಸಃ - ರಕ್ಕಸನಾದ, ವಿಭೀಷಣಶ್ಚ - ವಿಭೀಷಣನೂ, ಆಸತೇ - ಕುಳಿತುಕೊಂಡಿದ್ದಾರೆ. ॥ ೩೧ ॥ ತತಃ - ಬಳಿಕ, ಅಯಂರಾಮಃ - ಈತನೇ ರಾಮನು, ಇತಿ - ಇಂತೆಂದು, ಕೀರ್ತಿತೇ - ಹೇಳಲ್ಪಡಲೂ, ಸ್ತ್ರೀಬಾ....ನಾಂ - ಹೆಂಗಸರು, ಬಾಲಕರು, ಯೌವನಸ್ಥರು, ವೃದ್ಧರು ಇವರುಗಳ, ಹರ್ಷ....ತಃ-ಸಂತೋಷದಿಂದ ಹುಟ್ಟಿದ, ನಿಸ್ವನಃ - ಕೋಲಾಹಲಧ್ವನಿಯು, ದಿವಂ - ಸ್ವರ್ಗಲೋಕವನ್ನೂ, ಅಸ್ಪೃಶತ್ - ಮುಟ್ಟಿತು. ॥ ೩೨ ॥ ರಥ....ಭ್ಯಃ -

---

ಕಲ್ಲೋಲಗೊಳಿಸುತ್ತಿರುವರೆಂದು ತಿಳಿಯುತ್ತೇನೆ. ಎಲೈ ಭರತನೇ! ನೋಡಿದೆಯಾ! ಅದೋ ದೂರದಲ್ಲಿ ಚಂದ್ರಕಾಂತಿವಿರಾಜಿತವಾದ ಪುಷ್ಪಕವಿಮಾನವು ಕಾಣಿಸುತ್ತಿದೆ. ಅದೋ! ಅದೋ!! ಬ್ರಹ್ಮದೇವನು ತನ್ನ ಮನಸ್ಸಿನಿಂದಲೇ ಸೃಷ್ಟಿಸಿದ ಆ ಪುಷ್ಪಕವಿಮಾನವನ್ನು ನಮ್ಮ ಶ್ರೀರಾಮಮೂರ್ತಿಯು, ಬಂಧುಸಹಿತನಾದ ರಾವಣಾಸುರನನ್ನು ವಧಿಸಿ ಸಂಪಾದಿಸಿದನು. ॥ ೨೩–೩೦ ॥ ಈ ವಿಮಾನವು ಬಾಲಸೂರ್ಯನಿಗೆ ಸಮಾನವಾದ ಕಾಂತಿಯುಳ್ಳದಾಗಿರುವುದು. ಇದನ್ನು ಮೊದಲು ಧನಾಧಿಪನಾದ ಕುಬೇರನು ಸಂಪಾದಿಸಿದನು. ಈ ವಿಮಾನದಲ್ಲಿಯೇ ಸೀತಾ ರಾಮ ಲಕ್ಷ್ಮಣರೂ, ಮಹಾ ತೇಜಸ್ವಿಯಾದ ಸುಗ್ರೀವನೂ, ರಾಕ್ಷಸರಾಜನಾದ ವಿಭೀಷಣನೂ ಸುಖಾಸೀನರಾಗಿರುವರು" ಎಂದು ಹೇಳಿದನು. ಹನುಮಂತನು ಈತನೇ ಶ್ರೀರಾಮಮೂರ್ತಿಯೆಂದು ಹೇಳಿದೊಡನೆಯೇ ನಂದಿಗ್ರಾಮದ ಬಳಿಯಿದ್ದ ಸ್ತ್ರೀಬಾಲವೃದ್ಧರಾದಿಯಾದ ಆ ಸಮಸ್ತರೂ ಪರಮಾನಂದಭರಿತರಾಗಿ ಜಯಜಯ

ಭ್ಯಸ್ತೇಽವತೀರ್ಯ ಮಹೀಂಗತಾಃ । ದದೃಶುಸ್ತೇ ವಿಮಾನಸ್ಥಂ ನರಾಸ್ಸೋಮಮಿವಾಂಬರೇ ॥ ೩೩ ॥ ಪ್ರಾಂಜಲಿರ್ಭರತೋ ಭೂತ್ವಾ ಪ್ರಹೃಷ್ಟೋ ರಾಘವೋನ್ಮುಖಃ । ಸ್ವಾಗತೇನ ಯಥಾರ್ಥೇನ ತತೋ ರಾಮಮಪೂಜಯತ್ ॥೩೪॥ ಮನಸಾ ಬ್ರಹ್ಮಣಾ ಸೃಷ್ಟೇ ವಿಮಾನೇ ಭರತಾಗ್ರಜಃ । ರರಾಜ ಪೃಥುದೀರ್ಘಾಕ್ಷೋ ವಜ್ರಪಾಣಿರಿವಾಪರಃ ॥ ೩೫ ॥ ತತೋ ವಿಮಾನಾಗ್ರಗತಂ ಭರತೋ ಭ್ರಾತರಂ ತಥಾ । ವವಂದೇ ಪ್ರಯತೋ ರಾಮಂ ಮೇರುಸ್ಥಮಿವ ಭಾಸ್ಕರಂ ॥ ೩೬ ॥ ತತೋ ರಾಮಾಭ್ಯನುಜ್ಞಾತಂ ತದ್ವಿಮಾನಮನುತ್ತಮಂ । ಹಂಸಯುಕ್ತಂ ಮಹಾವೇಗಂ ನಿಷ್ಪ

ರಥಗಳ ದೆಸೆಯಿಂದಲೂ, ಆನೆಗಳ ದೆಸೆಯಿಂದಲೂ, ಕುದುರೆಗಳ ದೆಸೆಯಿಂದಲೂ, ಅವತೀರ್ಯ - ಇಳಿದು, ಮಹೀಂ - ನೆಲವನ್ನು, ಗತಾಃ - ಹೊಂದಿ, ತೇನರಾಃ - ಆ ಮನುಷ್ಯರು, ಅಂಬರೇ - ಅಂತರಿಕ್ಷದಲ್ಲಿ, ಸೋಮಮಿವ - ಚಂದ್ರನನ್ನಂತೆ, ವಿಮಾನಸ್ಥಂ - ವಿಮಾನಾರೂಢನಾದ, ತಂ - ಆ ಶ್ರೀರಾಮನನ್ನು, ದದೃಶುಃ - ಕಂಡರು. ॥೩೩॥ ತತಃ - ಬಳಿಕ, ಭರತಃ - ಭರತನು, ಪ್ರಾಂಜಲಿಃ - ಅಂಜಲಿಬದ್ಧನು, ಭೂತ್ವಾ - ಆಗಿ, ಪ್ರಹೃಷ್ಟಃ - ಸಂತೋಷಗೊಂಡವನಾಗಿ, ರಾಘವೋನ್ಮುಖಃ - ಶ್ರೀರಾಮನಿಗೆ ಅಭಿಮುಖನಾಗಿ, ಯಥಾರ್ಥೇನ - ಸತ್ಯವಾದ, ಸ್ವಾಗತೇನ - ಸ್ವಾಗತದಿಂದ, ರಾಮಂ - ಶ್ರೀರಾಮನನ್ನು, ಅಪೂಜಯತ್ - ಪೂಜಿಸಿದನು. ॥ ೩೪ ॥ ಮನಸಾ - ಮನಸ್ಸಿನಿಂದ, ಬ್ರಹ್ಮಣಾ - ಬ್ರಹ್ಮದೇವರಿಂದ, ಸೃಷ್ಟಃ - ನಿರ್ಮಿಸಲ್ಪಟ್ಟ, ವಿಮಾನೇ - ವಿಮಾನದಲ್ಲಿ, ಪೃಥು ದೀರ್ಘಾಕ್ಷಃ - ದೊಡ್ಡವೂ, ದೀರ್ಘವೂ ಆದ ನೇತ್ರಗಳುಳ್ಳ, ಭರತಾಗ್ರಜಃ - ಶ್ರೀರಾಮನು, ಅಪರಃ - ಮತ್ತೊಬ್ಬನಾದ, ವಜ್ರಪಾಣಿಃ - ವಜ್ರಾಯುಧವೇ ಹಸ್ತದಲ್ಲುಳ್ಳ ದೇವೇಂದ್ರನಂತೆ, ರರಾಜ - ಬೆಳಗುತ್ತಿದ್ದನು. ॥೩೫॥ ತತಃ-ಬಳಿಕ, ಭರತಃ-ಭರತನು, ಪ್ರಯತ್ನಃ-ಪ್ರಯತ್ನಪೂರ್ವಕವಾಗಿ, ತದಾ-ತತ್ಕ್ಷಣದಲ್ಲಿ, ವಿಮಾನಾಗ್ರಗತಂ - ವಿಮಾನದ ಶಿಖರದಲ್ಲಿ ಕುಳಿತಿರುವ, ಮೇರುಸ್ಥಂ - ಮೇರುಪರ್ವತದಲ್ಲಿರುವ, ಭಾಸ್ಕರಮಿವ - ಸೂರ್ಯನಂತಿರುವ, ಭ್ರಾತರಂ - ಅಣ್ಣನಾದ, ರಾಮಂ - ಶ್ರೀರಾಮನನ್ನು, ವವಂದೇ - ನಮಸ್ಕರಿಸಿದನು. ॥ ೩೬ ॥ ತತಃ - ಬಳಿಕ, ರಾಮಾಭ್ಯನುಜ್ಞಾತಂ - ಶ್ರೀರಾಮನಿಂದ ಆಜ್ಞಾಪಿಸಲ್ಪಟ್ಟ, ಹಂಸಯುಕ್ತಂ - ಹಂಸಗಳಿಂದ ಕೂಡಿರುವ, ಮಹಾವೇಗಂ - ಮಹಾ ವೇಗವುಳ್ಳ,

---

ಕಾರಗಳನ್ನು ಮಾಡಿದರು. ಅವರ ಜಯಧ್ವನಿಯು ಗಗನಾಂಗಣವೆಲ್ಲವನ್ನೂ ತುಂಬಿತು. ಆ ಸಮಯದಲ್ಲಿ ಅಲ್ಲಿದ್ದ ಸಮಸ್ತರೂ ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ಕೆಳಕ್ಕಿಳಿದು ನೆಲದಮೇಲೆ ನಿಂತು ಅಂತರಿಕ್ಷದಲ್ಲಿ ವಿಮಾನಾರೂಢನಾಗಿ ಬರುತ್ತಿರುವ ಶ್ರೀರಾಮಮೂರ್ತಿಯನ್ನು ಚಂದ್ರನನ್ನೋಪಾದಿಯಲ್ಲಿ ಕಂಡು ಪರಮಾನಂದಭರಿತರಾಗಿ ನಲಿದರು. ಆಗ ಭರತನಾದರೋ ಪರಮ ಸಂತುಷ್ಟನಾಗಿ ಕೈಗಳನ್ನು ಜೋಡಿಸಿಕೊಂಡು ಶ್ರೀರಾಮನಿಗಭಿಮುಖವಾಗಿ ಹೊರಟು ಯಥಾರ್ಥವಾದ ಸ್ವಾಗತದಿಂದಲೂ, (ಅರ್ಘ್ಯಪಾದ್ಯಾದಿಗಳಿಂದಲೂ) ಆತನನ್ನು ಸತ್ಕರಿಸಿದನು. ॥೩೧–೩೪॥ ಆ ಸಮಯದಲ್ಲಿ ಬ್ರಹ್ಮನಿರ್ಮಿತವಾದ ಪುಷ್ಪಕ ವಿಮಾನದಲ್ಲಿ ಸುಖಾಸೀನನಾಗಿದ್ದವನೂ, ವಿಶಾಲನಯನನೂ ಆದ ಶ್ರೀರಾಮಮೂರ್ತಿಯು ಮಹೇಂದ್ರನಂತೆ ಶೋಭಿಸುತ್ತಿದ್ದನು. ಭರತಕುಮಾರನಾದರೋ ಅಗ್ರಜನಾದ ಆತನನ್ನು ನೋಡಿ ಮೇರುಪರ್ವತಶಿಖರದ ಮೇಲಿರುವ ಸೂರ್ಯನನ್ನೆಂತೋ ಅಂತು ಆತನನ್ನು ಮತ್ತೆ ನಮಸ್ಕರಿಸಿದನು. ಆಗ ಹಂಸಯುಕ್ತವೂ, ಮಹಾಜವವೂ, ಮಹೋತ್ತಮವೂ ಆದ ಆ ಪುಷ್ಪಕ

ಪಾತ ಮಹೀತಲೇ ॥ ೩೭ ॥ ಆರೋಪಿತೋ ವಿಮಾನಂ ತದ್ಭರತಸ್ಸತವಿಕ್ರಮಃ । ರಾಮಮಾಸಾದ್ಯ ಮುದಿತಃ ಪುನರೇವಾಭ್ಯವಾದಯತ್ ॥ ೩೮ ॥ ತಂ ಸಮುತ್ಥಾಪ್ಯ ಕಾಕುತ್ಸ್ಥಶ್ಚಿರಸ್ಯಾಽಕ್ಷಿಪಥಂ ಗತಂ । ಅಂಕೇ ಭರತಮಾರೋಪ್ಯ ಮುದಿತಃ ಪರಿಷಸ್ವಜೇ ॥ ೩೯ ॥ ತತೋ ಲಕ್ಷ್ಮಣಮಾಸಾದ್ಯ ವೈದೇಹೀಂಚಾಭ್ಯವಾದಯತ್ । ಅಭಿವಾದ್ಯ ತತಃ ಪ್ರೀತೋ ಭರತೋ ನಾಮ ಚಾಬ್ರವೀತ್ ॥೪೦। ಸುಗ್ರೀವಂ ಕೈಕಯೀಪುತ್ರೋ ಜಾಂಬವಂತಂ ತಥಾಂಗದಂ । ಮೈಂದಂ ಚ ದ್ವಿವಿದಂ ನೀಲಮೃಷಭಂ ಪರಿಷಸ್ವಜೇ ॥೪೧॥ ಸುಷೇಣಂಚ ನಲಂಚೈವ ಗವಾಕ್ಷಂ ಗಂಧಮಾದನಂ । ಶರಭಂ ಪನಸಂ

ಅನುತ್ತಮಂ - ಸರ್ವೋತ್ತಮವಾದ, ತದ್ವಿಮಾನಂ - ಆ ವಿಮಾನವು, ಮಹೀತಲೇ - ಭೂಪ್ರದೇಶದಲ್ಲಿ, ನಿಪ್ಪಪಾತ - ಇಳಿದು ಬಂದಿತು. ॥ ೩೭ ॥ ತದ್ವಿಮಾನಂ - ಆ ವಿಮಾನವನ್ನು, ಆರೋಪಿತಃ - ಏರಿಸಲ್ಪಟ್ಟ, ಸತ್ಯವಿಕ್ರಮಃ - ಸಫಲವಾದ ಪರಾಕ್ರಮವುಳ್ಳ, ಭರತಃ - ಭರತನು, ರಾಮಂ - ಶ್ರೀರಾಮನನ್ನು, ಆಸಾದ್ಯ - ಹೊಂದಿ, ಮುದಿತಃ - ಸಂತೋಷಗೊಂಡವನಾಗಿ, ಪುನರೇವ - ಮತ್ತೂ, ಅಭ್ಯವಾದಯತ್ - ನಮಸ್ಕರಿಸಿದನು. ॥ ೩೮ ॥ ಕಾಕುತ್ಸ್ಥಃ - ಶ್ರೀರಾಮನು, ಚಿರಸ್ಯ - ಬಹುಕಾಲಕ್ಕೆ, ಅಕ್ಷಿಪಥಂ - ನೇತ್ರಗೋಚರವನ್ನು, ಗತಂ - ಹೊಂದಿರುವ, ತಂಭರತಂ - ಆ ಭರತನನ್ನು, ಸಮುತ್ಥಾಪ್ಯ - ಎತ್ತಿಕೊಂಡು, ಅಂಕೇ - ತೊಡೆಯಲ್ಲಿ, ಆರೋಪ್ಯ - ಏರಿಸಿಕೊಂಡು, ಮುದಿತಃ - ಸಂತೋಷಗೊಂಡವನಾಗಿ, ಪರಿಷಸ್ವಜೇ-ಅಪ್ಪಿಕೊಂಡನು. ॥೩೯॥ ತತಃ-ಬಳಿಕ, ಲಕ್ಷ್ಮಣಂ-ಲಕ್ಷ್ಮಣನನ್ನು, ಆಸಾದ್ಯ - ಹೊಂದಿ, ವೈದೇಹೀಂಚ - ಸೀತಾದೇವಿಯನ್ನು, ಅಭ್ಯವಾದಯತ್ - ನಮಸ್ಕರಿಸಿದನು, ತತಃ - ಬಳಿಕ, ಪ್ರೀತಃ - ಸಂತೋಷಗೊಂಡ, ಭರತಃ - ಭರತನು, ಅಭಿವಾದ್ಯ - ನಮಸ್ಕರಿಸಿ, ನಾಮಚ - ಹೆಸರನ್ನೂ ಕೂಡ, ಅಬ್ರವೀತ್ - ಹೇಳಿದನು. ॥ ೪೦ ॥ ಕೈಕಯೀಪುತ್ರಃ - ಭರತನು, ಸುಗ್ರೀವಂ - ಸುಗ್ರೀವನನ್ನೂ, ಜಾಂಬವಂತಂಚ - ಜಾಂಬವಂತನನ್ನೂ, ತಥಾ - ಹಾಗೆಯೇ, ಅಂಗದಂಚ - ಅಂಗದನನ್ನೂ, ಮೈಂದಂಚ - ಮೈಂದನನ್ನೂ, ದ್ವಿವಿದಂಚ - ದ್ವಿವಿದನನ್ನೂ, ನೀಲಂ - ನೀಲನನ್ನೂ, ಋಷಭಂಚ - ವೃಷಭನೆಂಬ ವಾನರನನ್ನೂ, ಪರಿಷಸ್ವಜೇ - ಅಪ್ಪಿಕೊಂಡನು. ॥೪೧॥ ಸುಷೇಣಂಚ - ಸುಷೇಣನನ್ನೂ, ನಲಂಚೈವ - ನಳನನ್ನೂ, ಗವಾಕ್ಷಂಚ - ಗವಾಕ್ಷನನ್ನೂ, ಗಂಧಮಾದನಂಚ - ಗಂಧಮಾದನನನ್ನೂ, ಶರಭಂ - ಶರಭನನ್ನೂ, ಪನಸಂಚೈವ - ಪನಸನನ್ನೂ, ಪರಿಷ

ವಿಮಾನವು ಶ್ರೀರಾಮನ ಅಪ್ಪಣೆಯನ್ನು ಪಡೆದು ಕೆಳಕ್ಕಿಳಿಯಿತು. ಆ ಕೂಡಲೇ ಭರತನು ಜಾಗ್ರತೆಯಾಗಿ ವಿಮಾನದ ಬಳಿಗೈದಿ ಶ್ರೀರಾಮನಿಗೆ ಪುನಃ ಪ್ರಣಾಮ ಮಾಡಿದನು. ಆ ಸಮಯದಲ್ಲಿ ಶ್ರೀರಾಮಮೂರ್ತಿಯು ಬಹು ಕಾಲದಮೇಲೆ ಕಂಡ ಆ ಭರತನನ್ನು ಮೇಲಕ್ಕೆಬ್ಬಿಸಿ ತನ್ನ ತೊಡೆಯಮೇಲೆ ಕೂಡಿಸಿಕೊಂಡು ಪರಮಾನಂದಭರಿತನಾಗಿ ಅವನನ್ನಪ್ಪಿಕೊಂಡನು. ॥ ೩೭–೪೦ ॥ ಆಮೇಲೆ ಭರತನು ಲಕ್ಷ್ಮಣನ ಬಳಿಗೈದಿ ಆತನನ್ನು ಮಾತನಾಡಿಸಿದ ಬಳಿಕ ಸೀತಾದೇವಿಯನ್ನು ಕಂಡು ಆಕೆಗೆ ನಮಸ್ಕಾರ ಮಾಡಿದನು. ಹಾಗೆ ನಮಸ್ಕಾರ ಮಾಡುವಾಗ ತನ್ನ ಹೆಸರು ಮತ್ತು ಗೋತ್ರಗಳನ್ನು ಹೇಳಿ ತನ್ನ ಭಕ್ತಿಯನ್ನು ಪ್ರದರ್ಶಿಸಿದನು. ಇದಾದ ಮೇಲೆ ಅವನು ಸುಗ್ರೀವನನ್ನೂ, ಜಾಂಬವಂತ, ಅಂಗದ, ದ್ವಿವಿದ, ನೀಲ, ನಳ, ಋಷಭ, ಸುಷೇಣ, ಗವಾಕ್ಷ, ಗಂಧಮಾದನ, ಶರಭ, ಪನಸ ಇವರೇ ಮೊದಲಾದ ವಾನರವೀರರನ್ನೂ ಆಲಿಂಗನ ಮಾಡಿಕೊಂಡನು. ಆ ಸಮಯದಲ್ಲಿ ಕಾಮ

ಚ್ಛೈವ ಭರತಃ ಪರಿಷಸ್ವಜೇ ॥೪೨॥ ತೇ ಕೃತ್ವಾ ಮಾನುಷಂ ರೂಪಂ ವಾನರಾಃ ಕಾಮರೂಪಿಣಃ । ಕುಶಲಂ ಪರ್ಯಪೃಚ್ಛಂಸ್ತೇ ಪ್ರಹೃಷ್ಟಾ ಭರತಂ ತದಾ ॥೪೩॥ ಅಥಾಽಬ್ರವೀದ್ರಾಜಪುತ್ರಸ್ಸುಗ್ರೀವಂ ವಾನರರ್ಷಭಂ । ಪರಿಷ್ವಜ್ಯ ಮಹಾತೇಜಾ ಭರತೋ ಧರ್ಮಿಣಾಂ ವರಃ ॥ ೪೪ ॥ "ತ್ವಮಸ್ಮಾಕಂ ಚತುರ್ಣಾಂತು ಭ್ರಾತಾ ಸುಗ್ರೀವ! ಪಂಚಮಃ । ಸೌಹೃದಾಜ್ಜಾಯತೇ ಮಿತ್ರಮಪಕಾರೋಽರಿಲಕ್ಷಣಂ" ॥೪೫॥ ವಿಭೀಷಣಂಚ ಭರತಸ್ಸಾಂತ್ವಂ ವಾಕ್ಯಮಥಾಬ್ರವೀತ್ । "ದಿಷ್ಟ್ಯಾ ತ್ವಯಾ ಸಹಾಯೇನ ಕೃತಂ ಕರ್ಮ ಸುದುಷ್ಕರಂ" ॥ ೪೬ ॥ ಶತ್ರುಘ್ನಶ್ಚ ತದಾ ರಾಮಮಭಿವಾದ್ಯ ಸಲಕ್ಷ್ಮಣಂ ।

ಸ್ವಜೇ - ಅಪ್ಪಿಕೊಂಡನು. ॥ ೪೨ ॥ ಕಾಮರೂಪಿಣಃ - ಬೇಕಾದ ರೂಪವನ್ನು ಧರಿಸುವ ಸಾಮರ್ಥ್ಯವುಳ್ಳ, ತೇವಾನರಾಃ - ಆ ಕಪಿಗಳು, ಮಾನುಷಂ - ಮನುಷ್ಯಸಂಬಂಧವಾದ, ರೂಪಂ - ರೂಪವನ್ನು, ಕೃತ್ವಾ - ಮಾಡಿಕೊಂಡು, ಪ್ರಹೃಷ್ಟಾಃ - ಸಂತೋಷಗೊಂಡವರಾಗಿ, ತದಾ - ಆ ಕಾಲದಲ್ಲಿ, ಭರತಂ- ಭರತನನ್ನು, ಕುಶಲಂ - ಕ್ಷೇಮವನ್ನು, ಪರ್ಯಪೃಚ್ಛನ್ - ಪ್ರಶ್ನೆ ಮಾಡಿದರು. ॥೪೩॥ ಅಥ - ಬಳಿಕ, ಧರ್ಮಿಣಾಂ - ಧರ್ಮಿಷ್ಠರಲ್ಲಿ, ವರಃ - ಶ್ರೇಷ್ಠನಾದ, ಮಹಾತೇಜಾಃ - ಬಹಳ ತೇಜೋವಂತನಾದ, ರಾಜಪುತ್ರಃ - ಅರಸುಮಗನಾದ, ಭರತಃ - ಭರತನು, ವಾನರರ್ಷಭಂ - ಕಪಿರಾಜನಾದ, ಸುಗ್ರೀವಂ- ಸುಗ್ರೀವನನ್ನು, ಪರಿಷ್ವಜ್ಯ - ಅಪ್ಪಿಕೊಂಡು, ಅಬ್ರವೀತ್ - ನುಡಿದನು. ॥೪೪॥ ಸುಗ್ರೀವ - ಸುಗ್ರೀವನೇ, ತ್ವಂ - ನೀನು, ಚತುರ್ಣಾಂ - ನಾಲ್ವರಾದ, ಅಸ್ಮಾಕಂ - ನಮಗೆ, ಪಂಚಮಃ - ಐದನೆಯವನಾದ, ಭ್ರಾತಾ - ತಮ್ಮನು, ಅಸಿ - ಆದೆ, ಸೌಹೃದಾತ್ - ಸೌಹಾರ್ದದ ದೆಸೆಯಿಂದ, ಮಿತ್ರಂ - ಗೆಳೆಯನು, ಜಾಯತೇ - ಆಗುತ್ತಾನೆ, ಅಪಕಾರಃ - ಅಪಕಾರವು, ಅರಿಲಕ್ಷಣಂ - ಶತ್ರುವಿಗೆ ಲಕ್ಷಣವು. ॥ ೪೫ ॥ ಭರತಃ - ಭರತನು, ಅಥ - ಬಳಿಕ, ವಿಭೀಷಣಂ - ವಿಭೀಷಣನನ್ನು ಕುರಿತು, ಸಾಂತ್ವಂ - ಸಮಾಧಾನ ಪ್ರಧಾನವಾದ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು, ದಿಷ್ಟ್ಯಾ- ದೈವಾಧೀನದಿಂದ, ಸಹಾಯೇನ - ಸಹಾಯಭೂತನಾದ, ತ್ವಯಾ - ನಿನ್ನಿಂದ, ಸುದುಷ್ಕರಂ - ಮಾಡಲಸಾಧ್ಯವಾದ, ಕರ್ಮ - ವ್ಯಾಪಾರವೂ, ಕೃತಂ - ಮಾಡಲ್ಪಟ್ಟಿತು. ॥ ೪೬ ॥ ತದಾ - ಆ ಕಾಲದಲ್ಲಿ,

---

ರೂಪಿಗಳಾದ ಆ ವಾನರರೆಲ್ಲರೂ ಮಾನವ ರೂಪವನ್ನು ಧರಿಸಿದ್ದವರಾಗಿ ಕ್ಷೇಮವನ್ನು ವಿಚಾರಿಸಿದರು. ಮಹಾ ಧರ್ಮಾತ್ಮನಾದ ಭರತನಾದರೋ ಸುಗ್ರೀವರಾಜನನ್ನು ಮತ್ತೆ ಆಲಿಂಗಿಸಿ ಆತನನ್ನು ಕುರಿತು, "ಎಲೈ ವಾನರೇಶ್ವರನೇ! ನಾವು ನಾಲ್ವರು ಅಣ್ಣತಮ್ಮಂದಿರೊಡನೆ ಈಗ ನೀನು ಐದನೆಯವನಾದೆ. ಲೋಕದಲ್ಲಿ ಯಾರಾದರೂ ಒಳ್ಳೆಯ ಮನಸ್ಸಿನಿಂದ ಗೆಳೆಯರಾಗುವರು. ಅಪಕಾರ ಬುದ್ಧಿಯುಳ್ಳವರಾದರೆ ಶತ್ರುಗಳಾಗುವರು. ನೀನು ಒಳ್ಳೆಯ ಮನಸ್ಸುಳ್ಳವನಾಗಿ ನಮಗೆ ಸನ್ಮಿತ್ರನಾಗಿರುವೆಯಲ್ಲದೆ ನಮ್ಮ ನಾಲ್ವರ ಅಣ್ಣತಮ್ಮಂದಿರೊಡನೆ ಐದನೆಯವನಾದ ತಮ್ಮನೂ ಆದೆ" ಎಂದು ಹೇಳಿದನು. ॥ ೪೧–೪೬ ॥ ಭರತನು ಈ ರೀತಿ ಸುಗ್ರೀವನೊಡನೆ ಹೇಳಿ ಆಮೇಲೆ ರಾಕ್ಷಸರಾಜನಾದ ವಿಭೀಷಣನನ್ನು ಸಾಂತ್ವವಚನಗಳಿಂದ ಮಾತನಾಡಿಸುವವನಾಗಿ ಅವನನ್ನು ಕುರಿತು, "ಎಲೈ ರಾಕ್ಷಸೋತ್ತಮನಾದ ವಿಭೀಷಣನೇ! ದೈವಯೋಗದಿಂದ ನಿನ್ನ ಸಹಾಯವನ್ನವಲಂಬಿಸಿ ನಮ್ಮ ಅಗ್ರಜನಾದ ಶ್ರೀರಾಮಮೂರ್ತಿಯು ಇತರ ದುರ್ಲಭವಾದ ಅದ್ಭುತ ಕಾರ್ಯವನ್ನು ಮಾಡಿದನು"

ಸೀತಾಯಾಶ್ಚರಣೌ ಪಶ್ಚಾದ್ವಿನಯಾದಭ್ಯವಾದಯುತ್ ॥ ೪೭ ॥ ರಾಮೋ ಮಾತರಮಾಸಾದ್ಯ ವಿಷಣ್ಣಾಂ ಶೋಕಕರ್ಶಿತಾಂ । ಜಗ್ರಾಹ ಪ್ರಣತಃ ಪಾದೌ ಮನೋ ಮಾತುಃ ಪ್ರಸಾದಯನ್ ॥ ೪೮ ॥ ಅಭಿವಾದ್ಯ ಸುಮಿತ್ರಾಂಚ ಕೈಕೇಯೀಂಚ ಯಶಸ್ವಿನೀಂ । ಸ ಮಾತೄಶ್ಚ ತತಸ್ಸರ್ವಾಃ ಪುರೋಹಿತಮುಪಾಗಮತ್ ॥೪೯॥ "ಸ್ವಾಗತಂ ತೇ ಮಹಾಬಾಹೋ! ಕೌಸಲ್ಯಾನಂದವರ್ಧನ" । ಇತಿ ಪ್ರಾಂಜಲಯಸ್ಸರ್ವೇ ನಾಗರಾ ರಾಮಮಬ್ರುವನ್ ॥ ೫೦ ॥ ತಾನ್ಯಂಜಲಿಸಹಸ್ರಾಣಿ ಪ್ರಗೃಹೀತಾನಿ ನಾಗರೈಃ ।

ಶತ್ರುಘ್ನಶ್ಚ - ಶತ್ರುಘ್ನನೂ, ಸಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ರಾಮಂ - ಶ್ರೀರಾಮನನ್ನು, ಅಭಿವಾದ್ಯ - ವಂದಿಸಿ, ಪಶ್ಚಾತ್ - ಬಳಿಕ, ಸೀತಾಯಾಃ - ಸೀತಾದೇವಿಯ, ಚರಣೌ - ಪಾದಗಳನ್ನು ಕುರಿತು, ವಿನಯಾತ್ - ವಿನಯದಿಂದ, ಅಭ್ಯವಾದಯುತ್ - ನಮಸ್ಕರಿಸಿದನು. ॥೪೬-೪೭॥ ರಾಮಃ- ಶ್ರೀರಾಮನು, ವಿಷಣ್ಣಾಂ - ವಿಷಾದಯುಕ್ತಳಾದ, ಶೋಕಕರ್ಶಿತಾಂ - ಶೋಕದಿಂದ ಕೃಶೀಭೂತಳಾದ, ಮಾತರಂ - ಕೌಸಲ್ಯಾದೇವಿಯನ್ನು, ಆಸಾದ್ಯ - ಹೊಂದಿ, ಮಾತುಃ - ತಾಯಿಯ, ಮನಃ - ಮನಸ್ಸನ್ನು, ಪ್ರಸಾದಯನ್ - ಸಮಾಧಾನಗೊಳಿಸಿ, ಪ್ರಣತಃ - ನಮ್ರವಾಗಿ, ಪಾದೌ - ಪಾದಗಳನ್ನು, ಜಗ್ರಾಹ - ಹಿಡಿದುಕೊಂಡನು. ॥ ೪೮ ॥ ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ಯಶಸ್ವಿನೀಂ - ಕೀರ್ತಿವಂತಳಾದ, ಕೈಕೇಯೀಂಚ - ಕೈಕೇಯೀದೇವಿಯನ್ನೂ, ಅಭಿವಾದ್ಯ - ನಮಸ್ಕರಿಸಿ, ತತಃ - ಬಳಿಕ, ಸರ್ವಾಃ - ಸಮಸ್ತರಾದ, ಮಾತೄಶ್ಚ - ಇತರರಾದ ತಾಯಿಯರನ್ನು, ಅಭಿವಾದ್ಯ - ನಮಸ್ಕರಿಸಿ, ಪುರೋಹಿತಂ - ಪುರೋಹಿತರಾದ ವಸಿಷ್ಠಋಷಿಗಳನ್ನು ಕುರಿತು, ಉಪಾಗಮತ್ - ಬಂದನು. ॥ ೪೯ ॥ ಮಹಾಬಾಹೋ - ಮಹಾ ಭುಜಪರಾಕ್ರಮಶಾಲಿಯೇ, ಕೌಸ....ನ - ಕೌಸಲ್ಯಾದೇವಿಗೆ ಆನಂದವನ್ನುಂಟುಮಾಡುವನೇ, ತೇ - ನಿನಗೆ, ಸ್ವಾಗತಂ - ಸುಖಾಗಮನವೇ, ಇತಿ - ಇಂತೆಂದು, ಪ್ರಾಂಜಲಯಃ - ಅಂಜಲಿಬದ್ಧರಾಗಿ, ಸರ್ವೇ - ಸಮಸ್ತರಾದ, ನಾಗರಾಃ - ಪಟ್ಟಣವಾಸಿಗಳಾದ ಪ್ರಜೆಗಳು, ರಾಮಂ - ಶ್ರೀರಾಮನನ್ನು ಕುರಿತು, ಅಬ್ರುವನ್ - ನುಡಿದರು. ॥ ೫೦ ॥ ಭರತಾಗ್ರಜಃ - ಶ್ರೀರಾಮನು, ನಾಗರೈಃ - ಪಟ್ಟಣವಾಸಿಗಳಾದ ಜನಗಳಿಂದ, ಪ್ರಗೃಹೀತಾನಿ - ಹಿಡಿಯಲ್ಪಟ್ಟ, ತಾನ್ಯಂಜಲಿಸಹಸ್ರಾಣಿ - ಆ ಅಂಜಲಿಗಳ ಸಾವಿರಾರುಗಳನ್ನು, ಆಕೋಶಾನಿ - ಸ್ವಲ್ಪ ಮೊಗ್ಗುಗಳಾ

ಎಂದನು. ಅದೇ ಸಮಯದಲ್ಲಿಯೇ ಭರತಾನುಜನಾದ ಶತ್ರುಘ್ನನೂ ಕೂಡ ಕ್ರಮವಾಗಿ ಸೀತಾ ರಾಮ ಲಕ್ಷ್ಮಣರ ಪಾದಗಳಿಗೆ ನಮಸ್ಕರಿಸಿದನು. ಆಮೇಲೆ ಶ್ರೀರಾಮನು ದುಃಖದಿಂದ ಕೃಶಿಸಿರುವವಳೂ, ವ್ಯಸನ ಹೊಂದುತ್ತಿರುವವಳೂ ತನ್ನ ತಾಯಿಯೂ ಆದ ಕೌಸಲ್ಯಾದೇವಿಯ ಪಾದಗಳಿಗೆ ಮಣಿದು ಆಕೆಯ ಮನಸ್ಸಿಗೆ ಅಮಿತಾನಂದವನ್ನುಂಟುಮಾಡಿದನು. ಆಗ ಆಕೆಯ ಮನಸ್ಸು ನಿರ್ಮಲವಾಯಿತು. ಇದಾದ ಬಳಿಕ ಶ್ರೀರಾಮನು ತನ್ನ ಮಲತಾಯಿಯರಾದ ಸುಮಿತ್ರಾದೇವಿಗೂ, ಕೀರ್ತಿಶಾಲಿನಿಯಾದ ಕೈಕೇಯೀದೇವಿಗೂ ನಮಸ್ಕರಿಸಿ ಇತರ ತಾಯಂದಿರೆಲ್ಲರಿಗೂ ಕ್ರಮವಾಗಿ ಮಣಿದನು. ಹೀಗೆ ಎಲ್ಲರಿಗೂ ನಮಸ್ಕರಿಸಿದ ಬಳಿಕ ಆತನು ಪುರೋಹಿತರಾದ ವಸಿಷ್ಠರ ಬಳಿಗೈದಿದನು. ॥ ೪೭–೫೦ ॥ ಆಗ ಪುರಜನರೆಲ್ಲರೂ ಆತನ ಬಳಿಸಾರಿ, "ಎಲೈ ಮಹಾಬಾಹುವಾದ ಶ್ರೀರಾಮಮೂರ್ತಿಯೇ! ನಿನಗೆ ಕುಶಲವೇ?" ಎಂದು ಕೇಳಿ ಭಕ್ತಿಯಿಂದ ಕೈಜೋಡಿಸಿ ನಮಿಸಿದರು. ಆಗ ಶ್ರೀರಾಮನು ಸಹಸ್ರಾರು ಜನರ ಅಂಜಲಿಗಳನ್ನು ಸ್ವಲ್ಪಸ್ವಲ್ಪವಾಗಿ ಮುಗಿದಿದ್ದ ಕಮಲದ

ಆಕೋಶಾನೀವ ಪದ್ಮಾನಿ ದದರ್ಶ ಭರತಾಗ್ರಜಃ ॥೫೧॥ ಪಾದುಕೇ ತೇತು ರಾಮಸ್ಯ ಗೃಹೀತ್ವಾ ಭರತಸ್ಸ್ವಯಂ । ಚರಣಾಭ್ಯಾಂ ನರೇಂದ್ರಸ್ಯ ಯೋಜಯಾಮಾಸ ಧರ್ಮವಿತ್ ॥೫೨॥ ಅಬ್ರವೀಚ್ಚ ತದಾ ರಾಮಂ ಭರತಸ್ಸಕೃತಾಂಜಲಿಃ । "ಏತತ್ತೇ ರಕ್ಷಿತಂ ರಾಜನ್ ! ರಾಜ್ಯಂ ನಿರ್ಯಾತಿತಂ ಮಯಾ ॥೫೩॥ ಅದ್ಯ ಜನ್ಮಕೃತಾರ್ಥಂ ಮೇ ಸಂವೃತ್ತಶ್ಚ ಮನೋರಥಃ । ಯಸ್ತ್ವಾಂ ಪಶ್ಯಾಮಿ ರಾಜಾನಮಯೋಧ್ಯಾಂ ಪುನರಾಗತಂ ॥ ೫೪ ॥ ಅವೇಕ್ಷತಾಂ ಭರ್ವಾನ್ ಕೋಶಂ ಕೋಷ್ಠಾಗಾರಂ ಪುರಂ ಬಲಂ । ಭವತಸ್ತೇಜಸಾ ಸರ್ವಂ ಕೃತಂ ದಶಗುಣಂ ಮಯಾ ॥ ೫೫ ॥ ತಥಾ ಬ್ರುವಾಣಂ ಭರತಂ

ಗಿರುವ, ಪದ್ಮಾನೀವ - ಕಮಲಗಳನ್ನಂತೆ, ದದರ್ಶ - ಕಂಡನು. ॥ ೫೧ ॥ ಧರ್ಮವೀತ್ - ಧರ್ಮವೇತ್ತನಾದ, ಭರತಃ - ಭರತನು, ನರೇಂದ್ರಸ್ಯ - ಮನುಷ್ಯರಾಜನಾದ, ರಾಮಸ್ಯ - ಶ್ರೀರಾಮನ, ತೇಪಾದುಕೇ-ಆ ಪಾದುಕೆಗಳನ್ನು, ಸ್ವಯಂ-ತಾನೇ, ಗೃಹೀತ್ವಾ - ಹಿಡಿದುಕೊಂಡು, ಚರಣಾಭ್ಯಾಂ-ರಾಮಪಾದುಕೆಗಳಿಗಾಗಿ, ಯೋಜಯಾಮಾಸ - ತೊಡಸಿದನು. ॥ ೫೨ ॥ ಸಭರತಃ - ಆ ಭರತನು, ಕೃತಾಂಜಲಿಃ - ಅಂಜಲಿಬದ್ಧನಾಗಿ, ತದಾ - ಆ ಕಾಲದಲ್ಲಿ, ರಾಮಂ - ಶ್ರೀರಾಮನನ್ನು ಕುರಿತು, ಅಬ್ರವೀತ್ - ನುಡಿದನು, ರಾಜನ್ - ಅರಸೇ, ತೇ - ನಿನ್ನ, ಏತತ್ - ಈ, ರಾಜ್ಯಂ - ರಾಜ್ಯವು, ರಕ್ಷಿತಂ - ಸಂರಕ್ಷಿಸಲ್ಪಟ್ಟಿತು, ಮಯಾ - ನನ್ನಿಂದ, ಅದ್ಯ - ಈಗ, ನಿರ್ಯಾತಿತಂ - ನಿನಗೆ ಕೊಡಲ್ಪಟ್ಟಿತು, ಮೇ - ನನ್ನ, ಜನ್ಮ - ಜನ್ಮವು, ಕೃತಾರ್ಥಂ - ಸಾರ್ಥಕವಾಯಿತು, ಮೇ - ನನ್ನ, ಮನೋರಥಃ - ಸಂಕಲ್ಪವು, ಸಂವೃತ್ತಃ - ನೆರವೇರಿತು, ಯಃ - ಯಾವ ನಾನು, ರಾಜಾನಂ - ಅರಸಾದ, ತ್ವಾಂ - ನಿನ್ನನ್ನು, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು ಕುರಿತು, ಪುನಃ - ಮತ್ತೆ, ಆಗತಂ - ಬಂದವನನ್ನಾಗಿ, ಪಶ್ಯಾಮಿ - ನೋಡುತ್ತೇನೆಯೋ, ಭರ್ವಾ - ನೀನು, ಕೋಶಂ - ಬೊಕ್ಕಸವನ್ನೂ, ಕೋಷ್ಠಾಗಾರಂ-ಧಾನ್ಯದ ಮನೆಯನ್ನೂ, ಪುರಂ-ಪಟ್ಟಣವನ್ನೂ, ಬಲಂ-ಸೇನೆಯನ್ನೂ, ಅವೇಕ್ಷತಾಂ-ನೋಡುವವನಾಗು, ಭವತಃ - ನಿನ್ನ, ತೇಜಸಾ - ತೇಜಸ್ಸಿನಿಂದ, ಸರ್ವಂ - ಸಮಸ್ತವೂ, ಮಯಾ - ನನ್ನಿಂದ, ದಶಗುಣಂ - ಹತ್ತರಷ್ಟು ಹೆಚ್ಚಾಗಿ, ಕೃತಂ - ಮಾಡಲ್ಪಟ್ಟಿದೆ. ॥ ೫೫ ॥ ತಥಾ - ಹಾಗೆ,

---

ಮೊಗ್ಗುಗಳಂತಿರುವುದನ್ನು ಕಂಡು ಆನಂದಭರಿತನಾದನು. ಅಷ್ಟರಲ್ಲಿ ಧರ್ಮಜ್ಞನಾದ ಭರತಕುಮಾರನು ತನ್ನ ಕೈಗಳಿಂದಲೇ ಅಣ್ಣನಾದ ಶ್ರೀರಾಮನ ಪಾದುಕೆಗಳನ್ನು ತೆಗೆದುಕೊಂಡು ಬಂದು ಆತನ ಪಾದಗಳಿಗೆ ಸೇರಿಸಿ ಕೈಗಳನ್ನು ಜೋಡಿಸಿಕೊಂಡು ನಮ್ರನಾಗಿ ಆತನನ್ನು ಕುರಿತು ಹೀಗೆಂದನು. " ಅಣ್ಣಾ ! ರಾಜೋತ್ತಮನಾದ ರಾಮಚಂದ್ರಾ ! ನನಗೆ ನ್ಯಾಸವಾಗಿ ನೀನು ಕೊಟ್ಟಿದ್ದ ರಾಜ್ಯವೆಲ್ಲವನ್ನೂ ನಿನ್ನ ಆಜ್ಞೆಯಂತೆ ಈವರೆಗೂ ರಕ್ಷಿಸಿದೆನು. ಅದನ್ನೀಗ ನಿನಗೆ ಒಪ್ಪಿಸಿರುವೆನು. ಸಮಸ್ತ ರಾಜ್ಯಭಾರವನ್ನೂ ನಿನ್ನ ಪಾದುಕೆಗಳಿಗೊಪ್ಪಿಸಿ ಈವರೆಗೂ ಆಡಳಿತವನ್ನು ಚೆನ್ನಾಗಿ ನೆರವೇರಿಸಿದೆನು. ಆ ರಾಜ್ಯವನ್ನು ಈಗ ನಿನಗೊಪ್ಪಿಸಿದೆನು. ಇಂದಿಗೆ ನನ್ನ ಜನ್ಮವು ಸಫಲವಾಯಿತು. ನನ್ನ ಮನೋರಥವಿಂದಿಗೆ ನೆರವೇರಿತು. ಸುಖವಾಗಿ ಹಿಂತಿರುಗಿ ಬಂದ ನಿನ್ನನ್ನು ಅಯೋಧ್ಯೆಯ ರಾಜನನ್ನಾಗಿ ನೋಡಿದೆನಲ್ಲವೇ ! ಶ್ರೀರಾಮಾ ! ನೀನು ಈಗ ಕೋಶಾಗಾರ, (ಧನಾಗಾರ) ಧಾನ್ಯಾಗಾರಗಳನ್ನು ನೋಡು. ಪಟ್ಟಣವನ್ನೂ ಅರಮನೆಯನ್ನೂ ಸೇನೆಯನ್ನೂ ನೋಡು. ಅಣ್ಣಾ ! ನಿನ್ನ ಪ್ರಭಾವದ ದೆಸೆಯಿಂದ ನಾನಿವುಗಳೆಲ್ಲವನ್ನೂ ಮೊಲಿದ್ದುದಕ್ಕಿಂತಲೂ ಹತ್ತರಷ್ಟು ವೃದ್ಧಿಗೊಳಿಸಿದ್ದೇನೆ. "

ದೃಷ್ಟ್ವಾ ತಂ ಭ್ರಾತೃವತ್ಸಲಂ । ಮುಮುಚುರ್ವಾನರಾ ಬಾಷ್ಪಂ ರಾಕ್ಷಸಶ್ಚ ವಿಭೀ
ಷಣಃ ॥ ೫೬ ॥ ತತಃ ಪ್ರಹರ್ಷಾದ್ಭರತಮಂಕಮಾರೋಪ್ಯ ರಾಘವಃ । ಯಯೌ
ತೇನ ವಿಮಾನೇನ ಸಸೈನ್ಯೋ ಭರತಾಶ್ರಮಂ ॥ ೫೭ ॥ ಭರತಾಶ್ರಮಮಾಸಾದ್ಯ
ಸಸೈನ್ಯೋ ರಾಘವಸ್ತಥಾ । ಅವತೀರ್ಯ ವಿಮಾನಾಗ್ರಾದವತಸ್ಥೇ ಮಹೀತಲೇ
॥ ೫೮ ॥ ಅಬ್ರವೀಚ್ಚ ತದಾ ರಾಮಸ್ತದ್ವಿಮಾನಮನುತ್ತಮಂ । "ವಹ ವೈಶ್ರವಣಂ
ದೇವಮನುಜಾನಾಮಿ ಗಮ್ಯತಾಂ" ॥೫೯॥ ತತೋ ರಾಮಾಭ್ಯನುಜ್ಞಾತಂ ತದ್ವಿಮಾನ
ಮನುತ್ತಮಂ । ಉತ್ತರಾಂ ದಿಶಮಾಗಮ್ಯ ಜಗಾಮ ಧನದಾಲಯಂ ॥ ೬೦ ॥

ಬ್ರುವಾಣಂ - ನುಡಿಯುತ್ತಿರುವ, ಭ್ರಾತೃವತ್ಸಲಂ - ಅಣ್ಣನಲ್ಲಿ ಭಕ್ತಿಯುಳ್ಳ, ತಂಭರತಂ - ಆ ಭರತನನ್ನು, ದೃಷ್ಟ್ವಾ - ಕಂಡು, ವಾನರಾಃ - ಸುಗ್ರೀವಾದಿ ವಾನರರು, ರಾಕ್ಷಸಃ - ರಕ್ಕಸನಾದ, ವಿಭೀಷಣಶ್ಚ - ವಿಭೀಷಣನೂ, ಬಾಷ್ಪಂ - ಕಂಬನಿಯನ್ನು, ಮುಮುಚುಃ - ಬಿಟ್ಟರು. ॥ ೫೬ ॥ ತತಃ - ಬಳಿಕ, ರಾಘವಃ - ಶ್ರೀರಾಮನು, ಪ್ರಹರ್ಷಾತ್ - ಸಂತೋಷದ ದೆಸೆಯಿಂದ, ಭರತಂ - ಭರತನನ್ನು, ಅಂಕಂ - ತೊಡೆಯನ್ನು, ಆರೋಪ್ಯ - ಏರಿಸಿ, ತೇನವಿಮಾನೇನ - ಆ ವಿಮಾನದಿಂದಲೇ, ಸಸೈನ್ಯಃ - ಸೇನೆಸಮೇತನಾಗಿ, ಭರತಾಶ್ರಮಂ - ಭರತನ ಆಶ್ರಮವನ್ನು, ಯಯೌ - ಹೊಂದಿದನು. ॥ ೫೭ ॥ ತದಾ-ಆ ಕಾಲದಲ್ಲಿ, ರಾಘವಃ-ಶ್ರೀರಾಮನು, ಸಸೈನ್ಯಃ-ಸೇನಾಸಮೇತನಾಗಿ, ಭರತಾಶ್ರಮಂ-ಭರತನ ಆಶ್ರಮವನ್ನು, ಆಸಾದ್ಯ-ಹೊಂದಿ, ವಿಮಾನಾಗ್ರಾತ್-ಪುಷ್ಪಕವಿಮಾನದಿಂದ, ಅವತೀರ್ಯ-ಇಳಿದು, ಅವತಸ್ಥೇ-ನಿಂತನು. ॥ ೫೮ ॥ ತದಾ-ಆ ಕಾಲದಲ್ಲಿ, ರಾಮಃ-ಶ್ರೀರಾಮನು, ಅನುತ್ತಮಂ-ಸರ್ವೋತ್ತಮವಾದ, ತದ್ವಿಮಾನಂ - ಆ ವಿಮಾನವನ್ನು, ಕುರಿತು, ವೈಶ್ರವಣಂದೇವಂ - ಕುಬೇರದೇವನನ್ನು, ವಹ - ವಹಿಸು, ಅನುಜಾನಾಮಿ - ಆಜ್ಞಾಪಿಸಿದ್ದೇನೆ, ಗಮ್ಯತಾಂ - ಹೋಗಲ್ಪಡಲಿ. ॥ ೫೯ ॥ ತತಃ-ಬಳಿಕ, ರಾಮಾಭ್ಯನುಜ್ಞಾತಂ-ಶ್ರೀರಾಮನಿಂದ ಆಜ್ಞಾಪಿಸಲ್ಪಟ್ಟುದಾಗಿ, ಅನುತ್ತಮಂ-ಸರ್ವೋತ್ತಮವಾದ, ತದ್ವಿಮಾನಂ - ಆ ವಿಮಾನವು ಉತ್ತರಾಂದಿಶಂ - ಉತ್ತರದಿಕ್ಕನ್ನು, ಆಗಮ್ಯ - ಹೊಂದಿ, ಧನದಾಲಯಂ - ಕುಬೇರನ ಮನೆಯನ್ನು ಕುರಿತು, ಜಗಾಮ - ತೆರಳಿತು. ॥ ೬೦ ॥

ಭ್ರಾತೃವತ್ಸಲನಾದ ಭರತನೀರೀತಿ ನುಡಿಯುತ್ತಿರಲು ಸಮಸ್ತ ವಾನರರೂ, ರಾಕ್ಷಸೇಶ್ವರನಾದ ವಿಭೀಷಣನೂ ಅಡಿಗಡಿಗೂ ಅಮಿತಾನಂದಭರಿತರಾಗಿ ಆನಂದಬಾಷ್ಪಗಳನ್ನು ಸುರಿಸಿದರು. ಆಗ ಶ್ರೀರಾಮಮೂರ್ತಿಯು ಪರಮಾನಂದಭರಿತನಾದ ಭರತನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸೇನಾಸಮೇತನಾಗಿ ವಿಮಾನಾರೂಢನಾಗಿಯೇ ಭರತಾಶ್ರಮಕ್ಕೆ ತಂದನು. ಆ ರೀತಿ ಭರತಾಶ್ರಮಕ್ಕೆ ಬಂದ ಬಳಿಕ ಶ್ರೀರಾಮನು ವಿಮಾನದಿಂದ ಕೆಳಕ್ಕಿಳಿದು ಪುಷ್ಪಕವಿಮಾನವನ್ನು ಕುರಿತು, "ಎಲೈ ವಿಮಾನವೇ! ನೀನಿನ್ನುಮೇಲೆ ನಿನ್ನೊಡೆಯನಾದ ಕುಬೇರನ ಸೇವೆಯನ್ನು ಸಲ್ಲಿಸಲು ತೆರಳುವವನಾಗು" ಎಂದು ಹೇಳಿದನು. ಆಗಲಾ ವಿಮಾನವು ಶ್ರೀರಾಮನ ಅಪ್ಪಣೆಯನ್ನು ಪಡೆದು ಉತ್ತರದಿಶೆಯನ್ನಡರಿ ಕುಬೇರನ ಭವನ

ಪುರೋಹಿತಸ್ಯಾತ್ಮಸಮಸ್ಯ ರಾಘವೋ
ಬೃಹಸ್ಪತೇಃ ಶಕ್ರ ಇವಾಮರಾಧಿಪಃ ।
ನಿಪೀಡ್ಯ ಪಾದೌ ಪೃಥಗಾಸನೇ ಶುಭೇ
ಸಹೈವ ತೇನೋಪವಿವೇಶರಾಘವಃ ॥ ೬೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಂಶದುತ್ತರಶತತಮಸ್ಸರ್ಗಃ

ರಾಘವಃ - ಶ್ರೀರಾಮನು, ಆತ್ಮಸಮಸ್ಯ - ಬ್ರಹ್ಮವೇತ್ತರಾದ, ಪುರೋಹಿತಸ್ಯ - ಪುರೋಹಿತರಾದ ವಸಿಷ್ಠಮುನಿಯ, ಅಮರಾಧಿಪಃ - ದೇವಾಧಿಪತಿಯಾದ, ಶಕ್ರಃ - ಇಂದ್ರನು, ಬೃಹಸ್ಪತೇಃ - ಬೃಹಸ್ಪತಿಯ, ಪಾದೌ - ಕಾಲುಗಳನ್ನು, ನಿಪೀಡ್ಯೇವ - ಪೀಡಿಸಿದಂತೆ ಪೀಡಿಸಿ, ಶುಭೇ - ಶುಭಕರವಾದ, ಪೃಥಗಾಸನೇ - ಪ್ರತ್ಯೇಕವಾದ ಪೀಠದಲ್ಲಿ, ತೇನಸಹೈವ - ಆತನೊಡನೆಯೇ, ಉಪವಿವೇಶ - ಸಮೀಪದಲ್ಲಿ ಕುಳಿತುಕೊಂಡನು. ॥ ೬೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಯುದ್ಧಕಾಂಡೇ ತ್ರಿಂಶದುತ್ತರಶತತಮಸ್ಸರ್ಗಃ.

ವನ್ನು ಕುರಿತು ಹೊರಟಿತು. ಆ ತರುವಾಯ ಮಹೇಂದ್ರಸಮಾನನಾದ ಶ್ರೀರಾಮನು ಬ್ರಹ್ಮವೇತ್ತರೂ ಬೃಹಸ್ಪತಿಸಮಾನರೂ ಪುರೋಹಿತರೂ ಆದ ವಸಿಷ್ಠರ ಪಾದಗಳಿಗೆರಗಿ ಮಂಗಳಕರವಾದ ಬೇರೊಂದು ಸಿಂಹಾಸನದಲ್ಲಿ ಅವರೊಡನೆ ಸುಖಾಸೀನನಾದನು. ॥ ೫೧-೬೧ ॥

ಇಂತಿದು ಭರತಕೃತ ಶ್ರೀರಾಮ ಸಂದರ್ಶನ ಮತ್ತು ರಾಜ್ಯಸಮರ್ಪಣ ವೃತ್ತಾಂತ
ನಿರೂಪಣವೆಂಬ ನೂರ ಮುವತ್ತನೆಯ ಸರ್ಗವು ಸಮಾಪ್ತವಾದುದು.

ಯುದ್ಧಕಾಂಡೇ ಏಕತ್ರಿಂಶದುತ್ತರಶತತಮಸ್ಸರ್ಗಃ

ಶಿರಸ್ಯಂಜಲಿಮಾಧಾಯ ಕೈಕೇಯ್ಯಾನಂದವರ್ಧನಃ । ಬಭಾಷೇ ಭರತೋ ಜ್ಯೇಷ್ಠಂ ರಾಮಂ ಸತ್ಯಪರಾಕ್ರಮಂ ॥ ೧ ॥ "ಪೂಜಿತಾ ಮಾಮಿಕಾ ಮಾತಾ ದತ್ತಂ ರಾಜ್ಯಮಿದಂ ಮಮ । ತದ್ದದಾಮಿ ಪುನಸ್ತುಭ್ಯಂ ಯಥಾ ತ್ವಮದದಾ ಮಮ ॥ ೨ ॥ ಧುರಮೇಕಾಕಿನಾ ನ್ಯಸ್ತಾ ವೃಷಭೇಣ ಬಲೀಯಸಾ । ಕಿಶೋರೀವ ಗುರುಂ ಭಾರಂ ನ ವೋಢುಮಹಮುತ್ಸಹೇ ॥ ೩ ॥ ವಾರಿವೇಗೇನ ಮಹತಾ ಭಿನ್ನಸ್ಸೇತುರಿವ ಕ್ಷರನ್ । ದುರ್ಬಂಧನಮಿದಂ ಮನ್ಯೇ ರಾಜ್ಯಚ್ಛಿದ್ರಮಸಂವೃತಂ ॥೪॥ ಗತಿಂ ಖರ ಇವಾಶ್ವಸ್ಯ

ಕೈಕೇ....ನಃ - ಕೈಕೇಯಿದೇವಿಗೆ ಸಂತೋಷವನ್ನು ವೃದ್ಧಿಗೊಳಿಸುತ್ತಿರುವ, ಭರತಃ - ಭರತನು, ಶಿರಸಿ - ಮಂಡೆಯಲ್ಲಿ, ಅಂಜಲಿಂ - ಬೊಗಸೆಯನ್ನು, ಆಧಾಯ - ಇಟ್ಟುಕೊಂಡು, ಜ್ಯೇಷ್ಠಂ - ದೊಡ್ಡವನಾದ, ಸತ್ಯಪರಾಕ್ರಮಂ - ಸಫಲವಾದ ಪರಾಕ್ರಮವುಳ್ಳ, ರಾಮಂ - ಶ್ರೀರಾಮನನ್ನು ಕುರಿತು, ಬಭಾಷೇ - ನುಡಿದನು. ॥ ೧ ॥ ಮಾಮಿಕಾ - ನನ್ನ ಸಂಬಂಧಿನಿಯಾದ, ಮಾತಾ - ತಾಯಿಯು, ಪೂಜಿತಾ - ಪೂಜಿಸಲ್ಪಟ್ಟಳು, ಇದಂರಾಜ್ಯಂ - ಈ ರಾಜ್ಯವು, ಮಮ - ನನಗೆ, ದತ್ತಂ - ಕೊಡಲ್ಪಟ್ಟಿತು, ತ್ವಂ - ನೀನು, ಮಮ - ನನಗೆ, ಯಥಾ - ಹೇಗೆ, ಆದದಾಃ - ಕೊಟ್ಟಿಯೋ, ತಥಾ - ಹಾಗೆ, ತತ್ - ಆದನ್ನು, ತುಭ್ಯಂ - ನಿನಗೆ, ಪುನಃ - ಮತ್ತು, ದದಾಮಿ - ಕೊಡುತ್ತೇನೆ. ॥ ೨ ॥ ಏಕಾಕಿನಾ - ಒಂಟಿಯಾದ, ಬಲೀಯಸಾ - ಬಲಿಷ್ಠವಾದ, ಋಷಭೇಣ - ಎತ್ತಿನಿಂದ, ನ್ಯಸ್ತಾಂ - ಇಡಲ್ಪಟ್ಟ, ಧುರಂ - ಭಾರವನ್ನು, ಕಿಶೋರೀವ - ಎಳೆಗರುವಿನಂತೆ, ಅಹಂ - ನಾನು, ಗುರುಂ - ಮಹತ್ತರವಾದ, ಭಾರಂ - ಹೊರೆಯನ್ನು, ವೋಢುಂ - ಹೊರುವುದಕ್ಕೆ, ನೋತ್ಸಹೇ - ಉದ್ಯಕ್ತನಾಗಲಾರೆನು. ॥ ೩ ॥ ಮಹತಾ - ಮಹತ್ತರವಾದ, ವಾರಿವೇಗೇನ - ಉದಕವೇಗದಿಂದ, ಭಿನ್ನಃ - ಮುರಿದುಹೋಗಿ, ಕ್ಷರನ್ - ಸೋರುತ್ತಿರುವ, ಸೇತುರಿವ - ಸೇತುವೆಯಂತೆ, ಅಸಂವೃತಂ - ಆವರಣವಿಲ್ಲದ, ಇದಂ - ಈ, ರಾಜ್ಯಛಿದ್ರಂ - ರಾಜ್ಯದ ರಂಧ್ರವನ್ನು, ದುರ್ಬಂಧನಂ - ಬಂಧಿಸಲಸಾಧ್ಯವನ್ನಾಗಿ, ಮನ್ಯೇ - ತಿಳಿ

ಆ ತರುವಾಯ ಕೈಕೇಯಿದೇವಿಗೆ ಆನಂದಕರನಾದ ಭರತನು ಕೈಗಳನ್ನು ಮುಗಿದುಕೊಂಡು ಜ್ಯೇಷ್ಠನೂ, ಸತ್ಯಪರಾಕ್ರಮವಂತನೂ ಆದ ಶ್ರೀರಾಮಮೂರ್ತಿಯನ್ನು ಕುರಿತು ಹೀಗೆಂದನು. "ಎಲೈ ಅಗ್ರಜನಾದ ಶ್ರೀರಾಮಮೂರ್ತಿಯೇ! ನೀನು ಪೂರ್ವದಲ್ಲಿ ವನವಾಸಕ್ಕೆ ಸಮ್ಮತಿಸಿ ನನ್ನ ತಾಯಿಯಾದ ಕೈಕೇಯಿದೇವಿಯನ್ನು ಗೌರವಿಸಿದೆ. ಆಮೇಲೆ ನಾನು ಚಿತ್ರಕೂಟಪರ್ವತಕ್ಕೆ ಬಂದಿದ್ದ ಸಮಯದಲ್ಲಿ ಈ ರಾಜ್ಯವನ್ನು ನನಗಿತ್ತೆ. ಆಗ ನೀನು ನನಗಿತ್ತು ಹೊರಿಸಿದ ರಾಜ್ಯಭಾರವನ್ನು ಈವರೆಗೂ ಬಹಳ ಕಷ್ಟದಿಂದ ನಿರ್ವಹಿಸಿದೆನು. ಆಗ ನೀನು ರಾಜ್ಯವನ್ನು ಹೇಗೆ ಕೊಟ್ಟಿದ್ದೆಯೋ ಹಾಗೆಯೇ ಮತ್ತೆ ನಿನಗೆ ಒಪ್ಪಿಸಿರುವೆನು. ಅಣ್ಣಾ! ಬಹು ಬಲಿಷ್ಠವಾದ ವೃಷಭವು ಹೊರುವ ಭಾರವನ್ನು ಎಳೆಗರುವು ಹೇಗೆತಾನೆ ಹೊತ್ತೀತು? ಅಂತೆಯೇ ನಾನೂ ಈ ರಾಜ್ಯಭಾರವನ್ನು ಹೊರಲಾರದವನಾಗಿರುವೆನು. ದುರ್ಬಂಧನವೂ, ಅನೇಕ ಛಿದ್ರಸಹಿತವೂ ಆದ ರಾಜ್ಯವೆಂಬುದು, ಮಹಾ ವೇಗಪೂರಿತವೂ, ಮಹತ್ತರವೂ ಆದ ಜಲಪ್ರವಾಹದಿಂದ ಸೇತುವೆಯಂತೋ ಅಂತು ಬಹಿರ್ಗತವಾದ ಛಿದ್ರಗಳುಳ್ಳದು. ಇದೂ

ಹಂಸಸ್ಯೇವ ಚ ವಾಯಸಃ । ನಾನ್ವೇತುಮುತ್ಸಹೇ ರಾಮ ! ತವಮಾರ್ಗಮರಿಂದಮ !
॥ ೫ ॥ ಯಥಾಚಾಽರೋಪಿತೋ ವೃಕ್ಷೋ ಜಾತಶ್ಚಾಂತರ್ನಿವೇಶನೇ । ಮಹಾಂಶ್ಚ
ಸುದುರಾರೋಹೋ ಮಹಾಸ್ಕಂಧಪ್ರಶಾಖವಾನ್ ॥ ೬ ॥ ಶೀರ್ಯೇತ ಪುಷ್ಪಿತೋ
ಭೂತ್ವಾ ನಫಲಾನಿ ಪ್ರದರ್ಶಯನ್ । ತಸ್ಯ ನಾನುಭವೇದರ್ಥಂ ಯಸ್ಯಹೇತೋಸ್ಸರೋ
ಪ್ಯತೇ ॥ ೭ ॥ ಏಷೋಪಮಾ ಮಹಾಬಾಹೋ ! ತ್ವಮರ್ಥಂ ವೇತ್ತುಮರ್ಹಸಿ ।
ಯದ್ಯಸ್ಮಾನ್ಮನುಜೇಂದ್ರ! ತ್ವಂ ಭಕ್ತಾನ್ ಭೃತ್ಯಾನ್ನಶಾಧಿಹಿ ॥೮॥ ಜಗದದ್ಯಾಭಿಷಿಕ್ತಂ

ದಿದ್ದೇನೆ. ॥ ೪ ॥ ಹೇ ರಾಮ - ಎಲೈ ಶ್ರೀರಾಮನೇ, ಅರಿಂದಮ - ಶತ್ರುಸಂಹಾರಕನೇ, ಖರಃ - ಕತ್ತೆಯು, ಅಶ್ವಸ್ಯ - ಕುದುರೆಯ, ಗತಿಮಿವ - ಗಮನವನ್ನಂತೆಯೂ, ವಾಯಸಃ - ಕಾಗೆಯು, ಹಂಸಸ್ಯೇವ - ಹಂಸಗಮನವನ್ನಂತೆಯೂ, ತವ - ನಿನ್ನ, ಮಾರ್ಗಂ - ರಾಜ್ಯಪಾಲನರೂಪವಾದ ಮಾರ್ಗವನ್ನು, ಅನ್ವೇಷ್ಟುಂ - ಅನುಸರಿಸಲು, ನೋತ್ಸಹೇ - ಉದ್ಯುಕ್ತನಾಗಲಾರೆನು. ॥ ೫ ॥ ಯಥಾ - ಹೇಗೆ, ಅಂತಃ - ಬಳಿಗೆ, ನಿವೇಶನ - ಮನೆಯಲ್ಲಿ, ಆರೋಪಿತಃ - ನಾಟಿದ, ವೃಕ್ಷಃ - ಮರವು, ಜಾತಃ-ಹುಟ್ಟಿ, ಮಹಾನ್-ದೊಡ್ಡದಾಗಿ, ಸುದುರಾರೋಹಃ ಏರುವುದಕ್ಕೆ ಅಶಕ್ಯವಾದದ್ದೂ, ಮಹಾ....ವಾನ್ - ದೊಡ್ಡ ರೆಂಬೆಗಳೂ ಚಿಕ್ಕ ರೆಂಬೆಗಳೂ ಉಳ್ಳದ್ದೂ, ಜಾತಸ್ಸನ್ - ಆಗಿ, ಪುಷ್ಪಿತಃ - ಹೂಬಿಟ್ಟದ್ದೂ, ಭೂತ್ವಾ - ಆಗಿ, ಫಲಾನಿ - ಫಲಗಳನ್ನು, ನಪ್ರದರ್ಶಯನ್ - ತೋರಿಸದೆ, ಶೀರ್ಯೇತ ಯದಿ - ನಶಿಸಿಹೋದರೆ, ಯಸ್ಯ - ಯಾವ ಫಲದ, ಹೇತೋಃ - ನಿಮಿತ್ತದಿಂದ, ಸಃ - ಆ ಗಿಡವು, ರೋಪ್ಯತೇ - ಆರೋಪಿಸಲ್ಪಟ್ಟಿತೋ, ಸಃ - ಆ ಆರೋಪಣಕರ್ತನು, ತಸ್ಯ - ಆ ಮರದ, ಅರ್ಥಂ - ಫಲರೂಪಪ್ರಯೋಜನವನ್ನು, ನಾನುಭವೇತ್ - ಅನುಭವಿಸದೇ ಹೋಗುವನೋ, ಮಹಾಬಾಹೋ - ಭುಜಬಲಶಾಲಿಯೇ, ಏಷಾ - ಈ, ಉಪಮಾ - ಸಾಮ್ಯವು, ತ್ವದರ್ಥಂ - ನಿನ್ನ ನಿಮಿತ್ತವಾಗಿ, ಉಕ್ತೇತಿ - ಹೇಳಲ್ಪಟ್ಟಿತೆಂದು, ವೇತ್ತುಂ - ತಿಳಿಯುವುದಕ್ಕೆ, ಅರ್ಹಸಿ - ಯೋಗ್ಯನಾಗು, ಯತ್ - ಯಾವ ಕಾರಣದಿಂದ, ಮನುಜೇಂದ್ರ - ಮನುಷ್ಯರಾಜನೇ, ತ್ವಂ - ನೀನು, ಭಕ್ತಾನ್ - ಭಕ್ತರನ್ನೂ, ಭೃತ್ಯಾನ್ - ಸೇವಕರನ್ನೂ, ನಶಾಧಿಯದಿ - ಸಂರಕ್ಷಣೆ ಮಾಡದಿದ್ದರೆ ಈ ಹಿಂದೆ ಹೇಳಿದ ಸಾದೃಶ್ಯಾರ್ಥವನ್ನು ನೀನೇ ತಿಳಿದುಕೊಳ್ಳಬೇಕು, ಜಗತ್ - ಜಗತ್ತು. ಅದ್ಯ - ಈಗ, ಅಭಿಷಿಕ್ತಂ - ಪಟ್ಟಾಭಿಷಿಕ್ತ

ಅಲ್ಲದೆ, ಕುದುರೆಯ ನಡಿಗೆಯನ್ನೂ, ಕತ್ತೆಯು ಅನುಸರಿಸಲಾರದಂತೆಯೂ, ಹಂಸಗಮನವನ್ನು ಕಾಗೆಯು ಅನುಸರಿಸಲಾರದಂತೆಯೂ ನಾನು ಮಹಾ ಸಮರ್ಥನಾದ ನಿನ್ನ ಮಾರ್ಗವನ್ನು ಅನುಸರಿಸಲಾರೆನು. ॥ ೧–೫ ॥ ಎಲೈ ರಾಮಮೂರ್ತಿಯೇ! ಅಂಗಳದಲ್ಲಿ ನಾಟಹಾಕಿದ ಮರವು ಬಹು ದೊಡ್ಡದೂ, ಏರಲಸದಳವಾದುದೂ, ಬಹು ಉದ್ದವಾದ ರೆಂಬೆಗಳುಳ್ಳದೂ ಆಗಿ ಹೂಬಿಟ್ಟು, ಹಣ್ಣುಗಳನ್ನು ಬಿಡದೆ ಹಾಗೆಯೇ ಒಣಗಿಹೋದರೆ ಅದನ್ನು ಅಷ್ಟುಮಟ್ಟಿಗೆ ಬೆಳಸಿದ ಕಷ್ಟವೆಲ್ಲವೂ ವ್ಯರ್ಥವಾಗಿ ಹೋಗುವುದಲ್ಲವೇ? ಅದನ್ನು ಬೆಳಸಿದವನು ಯಾವ ಪ್ರಯೋಜನವನ್ನು ಪಡೆದಂತಾಯಿತು. ಅಣ್ಣಾ! ಈಗ ನಾನಾಡಿದ ಮಾತುಗಳ ಅರ್ಥವನ್ನು ನೀನು ಬಲ್ಲೆ. ಈಗ ನಮ್ಮೆಲ್ಲರಿಗೂ ಪ್ರಭುವಾಗಿ ಭೃತ್ಯರಾದ ನಮ್ಮೆಲ್ಲರನ್ನೂ ಕಾಪಾಡಿಯಾದರೆ ಈ ರಾಜ್ಯವನ್ನು ಇಷ್ಟು ಅಭಿವೃದ್ಧಿಗೊಳಿಸಿಯೂ ನಮಗಾವ ಫಲವೂ ದೊರಕಲಾರದು. (ನೀನೀಗ ದೊರೆಯಾಗಿ ನಮ್ಮನ್ನು ಸಲಹಿದರೆ ನಮಗೆ ಪೂರ್ಣಫಲವು ದೊರಕಿದಂತಾಗುವುದು. ಇಲ್ಲದಿದ್ದರೆ ಆ ಮರವನ್ನು ಬೆಳಸಿದವನ ಉಪಮಾನವೇ ಅಲ್ಲವೆ ನಮಗೆ ದೊರಕುವುದು.) ಈಗ ಸಾಕೇತಸಾಮ್ರಾಜ್ಯದಲ್ಲಿ ಪಟ್ಟಾಭಿ

ತ್ವಾಮನುಪಶ್ಯತು ಸರ್ವತಃ । ಪ್ರತಪಂತಮಿವಾದಿತ್ಯಂ ಮಧ್ಯಾಹ್ನೇ ದೀಪ್ತತೇಜಸಂ ॥೯॥ ತೂರ್ಯಸಂಘಾತನಿರ್ಘೋಷೈಃ ಕಾಂಚೀನೂಪುರನಿಸ್ವನೈಃ । ಮಧುರೈರ್ಗೀತಶಬ್ದೈಶ್ಚ ಪ್ರತಿಬುಧ್ಯಸ್ವ ರಾಘವ! ॥೧೦॥ ಯಾವದಾವರ್ತತೇ ಚಕ್ರಂ ಯಾವತೀಚ ವಸುಂಧರಾ । ತಾವತ್ತ್ವಮಿಹ ಸರ್ವಸ್ಯ ಸ್ವಾಮಿತ್ವಮನುವರ್ತಯ" ॥೧೧॥ ಭರತಸ್ಯ ವಚಃ ಶ್ರುತ್ವಾ ರಾಮಃ ಪರಪುರಂಜಯಃ। ತಥೇತಿ ಪ್ರತಿಜಗ್ರಾಹ ನಿಷಸಾದಾಽಸನೇ ಶುಭೇ ॥೧೨॥ ತತಃ ಶತ್ರುಘ್ನವಚನಾನ್ನಿಪುಣಾಃ ಶ್ಮಶ್ರುವರ್ಧಕಾಃ । ಸುಖಹಸ್ತಾಸ್ಸುಶೀಘ್ರಾಶ್ಚ ರಾಘವಂ ಪರ್ಯುಪಾಸತ ॥೧೩॥ ಪೂರ್ವಂತು ಭರತೇ ಸ್ನಾತೇ

ನಾದ, ತ್ವಾಂ - ನಿನ್ನನ್ನು, ಸರ್ವತಃ - ಸರ್ವ ದಿಕ್ಕುಗಳಲ್ಲಿಯೂ, ಮಧ್ಯಾಹ್ನೇ - ಮಧ್ಯಾಹ್ನ ಕಾಲದಲ್ಲಿ, ಪ್ರತಪಂತಂ - ತಪಿಸುತ್ತಿರುವ, ದೀಪ್ತತೇಜಸಂ - ಹೊಳೆಯುತ್ತಿರುವ ತೇಜಸ್ಸುಳ್ಳ, ಆದಿತ್ಯಮಿವ - ಸೂರ್ಯನಂತೆ, ಅನುಪಶ್ಯತು - ನೋಡಲಿ. ॥೮೯॥ ಹೇ ರಾಘವ - ಎಲೈ ಶ್ರೀರಾಮನೇ, ತೂರ್ಯ....ಷೈಃ - ವಾದ್ಯಗಳ ಧ್ವನಿಗಳಿಂದಲೂ, ಕಾಂಚೀ....ನೈಃ - ಓಡ್ಯಾಣದ ಮತ್ತು ಗೆಜ್ಜೆಗಳ ಧ್ವನಿಗಳಿಂದಲೂ, ಮಧುರೈಃ - ಕಿವಿಗಿಂಪಾಗಿರುವ, ಗೀತಶಬ್ದೈಶ್ಚ - ಗಾನಧ್ವನಿಯಿಂದಲೂ, ಪ್ರತಿಬುಧ್ಯಸ್ವ ಎಚ್ಚರಗೊಳ್ಳು. ॥೧೦॥ ಚಕ್ರಂ-ಕಾಲಚಕ್ರವು, ಯಾವತ್-ಎಷ್ಟರವರೆಗೂ, ಆವರ್ತತೇ-ತಿರುಗುತ್ತದೆಯೋ, ವಸುಂಧರಾ - ಭೂಮಿಯು, ಯಾವತೀ - ಎಷ್ಟರವರೆಗೆ, ಸ್ಥಿರವಾಗುತ್ತದೆಯೋ, ತಾವತ್ - ಅಷ್ಟರವರೆಗೂ, ಸರ್ವಸ್ಯ - ಸಮಸ್ತವಾದ ಈ ರಾಜ್ಯಕ್ಕೆ, ಸ್ವಾಮಿತ್ವಂ - ಪ್ರಭುತ್ವವನ್ನು, ಇಹ - ಈಗ, ಅನುವರ್ತಯ - ಅಂಗೀಕರಿಸು ॥೧೧॥ ಭರತಸ್ಯ - ಭರತನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಪರಪುರಂಜಯಃ - ಶತ್ರುಪುರವನ್ನು ಜಯಿಸುವ ಸಾಮರ್ಥ್ಯವುಳ್ಳ, ರಾಮಃ - ಶ್ರೀರಾಮನು, ತಥೇತಿ - ಹಾಗೆಯೇ ಆಗಲೆಂದು, ಪ್ರತಿಜಗ್ರಾಹ - ಪರಿಗ್ರಹಿಸಿದನು, ಶುಭೇ - ಶುಭಕರವಾದ, ಆಸನೇ - ಪೀಠದಲ್ಲಿ, ಸಃ - ಆ ಭರತನು, ನಿಷಸಾದ - ಕುಳಿತುಕೊಂಡನು. ॥೧೨॥ ತತಃ - ಬಳಿಕ, ಶತ್ರುಘ್ನವಚನಾತ್ - ಶತ್ರುಘ್ನನ ಮಾತಿನಿಂದ, ನಿಪುಣಾಃ - ಬುದ್ಧಿಶಾಲಿಗಳಾದ, ಸುಖಹಸ್ತಾಃ - ಸುಖಕರವಾದ ಹಸ್ತಗಳುಳ್ಳ, ಸುಶೀಘ್ರಾಶ್ಚ - ಶೀಘ್ರವಾಗಿ ಕಾರ್ಯಗಳು ನಡೆಸುವ, ಶ್ಮಶ್ರುವರ್ಧಕಾಃ - ನಾಪಿತರು, ರಾಘವಂ - ಶ್ರೀರಾಮನನ್ನು, ಪರ್ಯುಪಾಸತ - ಸೇವಿಸಿದರು. ॥೧೩॥

ಷಿಕ್ತನಾಗುವ ನಿನ್ನನ್ನು ಪ್ರಜೆಗಳೆಲ್ಲ ಕಣ್ತುಂಬ ನೋಡಿ ಆನಂದಪಡಲಿ. ಅಣ್ಣಾ! ಈಗ ಪ್ರಜೆಗಳೆಲ್ಲರೂ ಮಧ್ಯಾಹ್ನಕಾಲದಲ್ಲಿ ಗಗನಮಧ್ಯಗತನಾಗಿ ಬೆಳಗುವ ದಿನನನ್ನು ಹೇಗೋ ಹಾಗೆ ಪಟ್ಟಾಭಿಷಿಕ್ತನಾಗಿ ಬೆಳಗುವ ನಿನ್ನನ್ನುನೋಡಿ ಸಂತೋಷಪಡಲಿ. ಎಲೈ ರಾಮಮೂರ್ತಿಯೇ! ನಾಳೆ ಬೆಳಗ್ಗೆ ನೀನು ಮಂಗಳವಾದ್ಯಗಳ ಧ್ವನಿಯಿಂದಲೂ, ಬಂಗಾರದ ಕಂಠೀಸರಗಳು ಮತ್ತು ಕಾಲ್ಕಡಗಗಳ ಧ್ವನಿಯಿಂದಲೂ, ಬಹು ಮನೋಹರಗಳಾದ ಗೀತವಾದಿತ್ರಾದಿಗಳ ಧ್ವನಿಯಿಂದಲೂ ಎಚ್ಚರಗೊಂಡವನಾಗಿ, ಈ ಜ್ಯೋತಿಶ್ಚಕ್ರವು ತಿರುಗುತ್ತಿರುವವರೆಗೂ, ಭೂಮಂಡಲವಿರುವವರೆಗೂ ಅಖಂಡವಾದ ಈ ಸಾಮ್ರಾಜ್ಯಕ್ಕೊಡೆಯನಾಗಿರುವವನಾಗು." ॥೬-೧೧॥ ಭರತಕುಮಾರನಾಡಿದ ಈ ಮಾತುಗಳನ್ನು ಕೇಳಿದ ತರುವಾಯ ಪರಂತಪನಾದ ಶ್ರೀರಾಮಮೂರ್ತಿಯು, "ಎಲೈ ಭರತಕುಮಾರನೇ! ನಿನ್ನ ಮಾತಿನಂತೆಯೇ ಆಗಲಿ" ಎಂದು ಹೇಳಿ ಮಂಗಳಕರವಾದ ಸಿಂಹಾಸನದಲ್ಲಿ ಕುಳಿತನು. ಆ ಸಮಯದಲ್ಲಿ ಶತ್ರುಘ್ನನ ಅನುಮತಿ ಹೊಂದಿ ಕುಶಲರಾದ ಶ್ಮಶ್ರುವರ್ಧಕರೂ, ಸುಖಹಸ್ತರೂ, ತ್ವರಾನ್ವಿತರೂ ಆಗಿ ಶ್ರೀರಾಮನ

ಲಕ್ಷ್ಮಣೇಚ ಮಹಾಬಲೇ । ಸುಗ್ರೀವೇ ವಾನರೇಂದ್ರೇಚ ರಾಕ್ಷಸೇಂದ್ರೇ ವಿಭೀಷಣೇ ॥ ೧೮ ॥ ವಿಶೋಧಿತಜಟಸ್ಸ್ನಾತಶ್ಚಿತ್ರಮಾಲ್ಯಾನುಲೇಪನಃ । ಮಹಾರ್ಹವಸನೋ ರಾಮಸ್ತಸ್ಥೌ ತತ್ರ ಶ್ರಿಯಾ ಜ್ವಲನ್ ॥ ೧೫ ॥ ಪ್ರತಿಕರ್ಮಚ ರಾಮಸ್ಯ ಕಾರಯಾಮಾಸ ವೀರ್ಯವಾನ್ । ಲಕ್ಷ್ಮಣಸ್ಯ ಚ ಲಕ್ಷ್ಮೀವಾನಿಕ್ಷ್ವಾಕುಕುಲವರ್ಧನಃ ॥ ೧೬ ॥ ಪ್ರತಿಕರ್ಮಚ ಸೀತಾಯಾಸ್ಸರ್ವಾ ದಶರಥಸ್ತ್ರಿಯಃ । ಆತ್ಮನೈವ ತದಾ ಚಕ್ರುರ್ಮನಸ್ವಿನ್ಯೋ ಮನೋಹರಂ ॥ ೧೭ ॥ ತತೋ ವಾನರಪತ್ನೀನಾಂ ಸರ್ವಾಸಾಮೇವ ಶೋಭನಂ । ಚಕಾರ ಯತ್ನಾತ್ಕೌಸಲ್ಯಾ ಪ್ರಹೃಷ್ಟಾ ಪುತ್ರಲಾಲಸಾ ॥ ೧೮ ॥ ತತಃ

ಪೂರ್ವಂ - ಮೊದಲು, ಭರತೇ - ಭರತನು, ಸ್ನಾತೇ - ಸ್ನಾನಮಾಡಲು, ಮಹಾಬಲೇ - ಮಹಾಬಲಶಾಲಿಯಾದ, ಲಕ್ಷ್ಮಣೇ - ಲಕ್ಷ್ಮಣನೂ, ವಾನರೇಂದ್ರೇ - ವಾನರಾಧಿಪತಿಯಾದ, ಸುಗ್ರೀವೇಚ - ಸುಗ್ರೀವನೂ, ರಾಕ್ಷಸೇಂದ್ರೇ - ರಾಕ್ಷಸರಾಜನಾದ, ವಿಭೀಷಣೇ - ವಿಭೀಷಣನೂ, ಸ್ನಾತೇ - ಸ್ನಾನಮಾಡಿದವರಾಗಲೂ, ವಿಶೋಧಿತಜಟಃ - ಚನ್ನಾಗಿ ಶೋಧಿಸಲ್ಪಟ್ಟ ಜಡೆಗಳುಳ್ಳವನಾಗಿ, ಸ್ನಾತಃ - ಸ್ನಾನಮಾಡಿರುವ, ಚಿತ್ರ....ನಃ - ನಾನಾಬಣ್ಣಗಳುಳ್ಳ, ಹುವ್ವುಗಳೂ ಗಂಧಗಳೂ ಉಳ್ಳವನಾಗಿ, ಮಹಾ....ತಃ - ಅಮೂಲ್ಯಗಳಾದ ವಸ್ತ್ರಗಳುಳ್ಳ, ರಾಮಃ - ಶ್ರೀರಾಮನು, ಶ್ರಿಯಾ - ಕಾಂತಿಯಿಂದ, ಜ್ವಲನ್ - ಪ್ರಕಾಶಮಾನನಾಗಿ, ತಸ್ಥೌ - ಕುಳಿತುಕೊಂಡನು. ॥ ೧೮-೧೫ ॥ ಲಕ್ಷ್ಮೀವಾನ್ - ಲಕ್ಷ್ಮೀಸಂಪನ್ನನಾದ, ವೀರ್ಯವಾನ್ - ಸಮರ್ಥನಾದ, ಇಕ್ಷ್ವಾ....ನಃ - ಇಕ್ಷ್ವಾಕು ವಂಶಾಭಿವೃದ್ಧಿಕರನಾದ ಶತ್ರುಘ್ನನು, ರಾಮಸ್ಯ - ಶ್ರೀರಾಮನಿಗೂ, ಲಕ್ಷ್ಮಣಸ್ಯಚ - ಲಕ್ಷ್ಮಣನಿಗೂ, ಪ್ರತಿಕರ್ಮ - ಕಂಠೀಸರಗಳೂ, ಕರ್ಣಕುಂಡಲಗಳೇ ಮೊದಲಾದ ಆಭರಣಗಳಿಂದ ಅಲಂಕಾರವನ್ನು, ಕಾರಯಾಮಾಸ - ಮಾಡಿಸಿದನು. ॥ ೧೬ ॥ ತದಾ - ಆ ಕಾಲದಲ್ಲಿ, ಸರ್ವಾಃ - ಸಮಸ್ತರಾದ, ದಶರಥಸ್ತ್ರಿಯಃ - ದಶರಥರಾಯನ ಸ್ತ್ರೀಯರು, ಮನಸ್ವಿನ್ಯಃ - ಒಳ್ಳೆಯ ಮನಸ್ಸುಗಳುಳ್ಳವರಾಗಿ, ಸೀತಾಯಾಶ್ಚ - ಸೀತಾದೇವಿಗೂ, ಪ್ರತಿಕರ್ಮ - ಅಲಂಕಾರವನ್ನು, ಮನೋಹರಂ - ತಮ್ಮ ಮನಸ್ಸಿಗಿಂಪಾಗಿರುವಂತೆ, ಆತ್ಮನೈವ - ತಮ್ಮ ಇಷ್ಟಾನುಸಾರ ಮಾಡಿದರು. ॥ ೧೭ ॥ ತತಃ - ಬಳಿಕ, ಪುತ್ರಲಾಲಸಾ - ಮಗನ ಮೇಲಣ ಮಮತೆಯುಳ್ಳ ಕೌಸಲ್ಯಾದೇವಿಯು, ಪ್ರಹೃಷ್ಟಾ - ಸಂತೋಷಗೊಂಡವಳಾಗಿ, ಯತ್ನಾತ್ - ಪ್ರಯತ್ನದಿಂದ, ಸರ್ವಾಸಾಂ-ಸಮಸ್ತರಾದ, ವಾನರಪತ್ನೀನಾಂ-ವಾನರ ಪತ್ನಿಯರಿಗೆ, ಶೋಭನಂ-

---

ಬಳಿಗೈದಿದರು. ಆಗ ಶ್ರೀರಾಮನು ಮೊದಲು ಭರತನೂ, ಮಹಾಬಲನಾದ ಲಕ್ಷ್ಮಣನೂ, ವಾನರೋತ್ತಮನಾದ ಸುಗ್ರೀವನೂ, ರಾಕ್ಷಸರಾಜನಾದ ವಿಭೀಷಣನೂ ಮಂಗಳಸ್ನಾನ ಮಾಡುವಂತೆ ಆಜ್ಞಾಪಿಸಿ ಆಮೇಲಿ ತಾನೂ ಜಡೆಗಳನ್ನು ಬಿಡಿಸಿ ಮಂಗಳಸ್ನಾನವನ್ನು ಮಾಡಿ ಚಿತ್ರಗಳಾದ ಮಾಲ್ಯಲೇಪನಾದಿಗಳುಳ್ಳವನಾಗಿ ಅಮೂಲ್ಯಗಳಾದ ವಸ್ತ್ರಗಳನ್ನುಧರಿಸಿದವನಾದನು. ಆಗಲಾತನು ರಾಜ್ಯಲಕ್ಷ್ಮೀಸಮೇತನಾಗಿ ರಾರಾಜಿಸುತ್ತಿದ್ದನು. ॥೧೨–೧೫॥ ಆ ಸಮಯದಲ್ಲಿ ಇಕ್ಷ್ವಾಕುಕುಲವರ್ಧನನಾದ ಶತ್ರುಘ್ನನು ಶ್ರೀರಾಮಲಕ್ಷ್ಮಣರಿಗೆ ವಿವಿಧಾಭರಣಾದಿಗಳಿಂದ ಅಲಂಕಾರವನ್ನು ಮಾಡಿದನು. ದಶರಥನ ಭಾರ್ಯೆಯರೆಲ್ಲರೂ ಶ್ರೀರಾಮನ ಪ್ರಿಯಭಾರ್ಯೆಯಾದ ಸೀತಾದೇವಿಗೆ ಬಹು ಮನೋಹರವಾದ ಉಡುಗೆತೊಡಿಗೆಗಳನ್ನಿಟ್ಟು ತಮ್ಮ ಮನಸಾರ ಸಿಂಗರಿಸಿದರು. ಪುತ್ರಲಾಲಸೆಯಾದ ಕೌಸಲ್ಯಾದೇವಿಯಾದರೋ ಅತ್ಯಾನಂದಭರಿತೆಯಾಗಿ, ಬಂದಿದ್ದ ವಾನರಾಂಗನೆಯರೆಲ್ಲರಿಗೂ ಸ್ನಾನ ಮಾಡಿಸಿ ಪ್ರತಿಯೊಬ್ಬರಿಗೂ ಅಲಂಕಾರಗಳ

ಶತ್ರುಘ್ನವಚನಾತ್ಸುಮಂತ್ರೋ ನಾಮ ಸಾರಥಿಃ । ಯೋಜಯಿತ್ವಾಽಭಿಚಕ್ರಾಮ ರಥಂ ಸರ್ವಾಂಗಶೋಭನಂ ॥ ೧೯ ॥ ಅರ್ಕಮಂಡಲಸಂಕಾಶಂ ದಿವ್ಯಂ ದೃಷ್ಟ್ವಾ ರಥೋತ್ತಮಂ । ಆರುರೋಹ ಮಹಾಬಾಹೂ ರಾಮಸ್ಸತ್ಯಪರಾಕ್ರಮಃ ॥ ೨೦ ॥ ಸುಗ್ರೀವೋ ಹನುಮಾಂಶ್ಚೈವ ಮಹೇಂದ್ರಸದೃಶದ್ಯುತೀ । ಸ್ನಾತೌ ದಿವ್ಯನಿಭೈರ್ವಸ್ತ್ರೈರ್ಜಗ್ಮತುಃ ಶುಭಕುಂಡಲೌ ॥ ೨೧ ॥ ವರಾಭರಣಸಂಪನ್ನಾ ಯಯುಸ್ತಾಃ ಶುಭಕುಂಡಲಾಃ । ಸುಗ್ರೀವಪತ್ನ್ಯಸ್ಸೀತಾಚ ದ್ರಷ್ಟುಂ ನಗರಮುತ್ಸುಕಾಃ ॥ ೨೨ ॥ ಅಯೋಧ್ಯಾಯಾಂತು ಸಚಿವಾ ರಾಜ್ಞೋ ದಶರಥಸ್ಯ ಯೇ । ಪುರೋಹಿತಂ ಪುರ

ಅಲಂಕಾರವನ್ನು, ಚಕಾರ - ಮಾಡಿಸಿದಳು. ॥ ೧೮ ॥ ತತಃ - ಬಳಿಕ, ಸುಮಂತ್ರೋನಾಮ - ಸುಮಂತ್ರನೆಂದು ಪ್ರಖ್ಯಾತನಾದ, ಸಾರಥಿಃ - ಸಾರಥಿಯು, ಶತ್ರುಘ್ನವಚನಾತ್ - ಶತ್ರುಘ್ನನ ಮಾತಿನಂತೆ, ಸರ್ವಾಂಗಶೋಭನಂ - ಸರ್ವಾವಯವ ಶುಭಕರವಾದ, ರಥಂ - ತೇರನ್ನು, ಯೋಜಯಿತ್ವಾ - ಕುದುರೆಗಳಿಂದ ಕಟ್ಟಿ, ಅಭಿಚಕ್ರಾಮ - ತೆಗೆದುಕೊಂಡು ಬಂದನು. ॥ ೧೯ ॥ ಮಹಾಬಾಹುಃ - ಮಹಾಭುಜಗಳುಳ್ಳ, ಸತ್ಯಪರಾಕ್ರಮಃ-ಸಫಲವಾದ ಪರಾಕ್ರಮವುಳ್ಳ, ರಾಮಃ-ಶ್ರೀರಾಮನು, ಅರ್ಕ....ಶಂ-ಸೂರ್ಯಮಂಡಲದಂತೆ ಬೆಳಗುತ್ತಿರುವ, ದಿವ್ಯಂ - ಮನೋಹರವಾದ, ರಥೋತ್ತಮಂ - ಉತ್ತಮ ರಥವನ್ನು, ಆರುರೋಹ - ಏರಿದನು. ॥ ೨೦ ॥ ಸುಗ್ರೀವಃ - ಸುಗ್ರೀವನೂ, ಹನುಮಾಂಶ್ಚೈವ - ಹನುಮಂತನೂ, ಮಹೇಂ....ತೀ - ದೇವೇಂದ್ರನಿಗೆ ಸಮಾನವಾದ ಕಾಂತಿಯುಳ್ಳ, ಉಭೌ - ಈರ್ವರೂ, ಸ್ನಾತೌ - ಸ್ನಾನಮಾಡಿ, ದಿವ್ಯನಿಭೈಃ - ದೇವತಾವಸ್ತ್ರಗಳಿಗೆ ಸಮಾನಗಳಾದ, ವಸ್ತ್ರೈಃ - ವಸ್ತ್ರಗಳಿಂದ, ಯುಕ್ತೌ - ಕೂಡಿದವರಾಗಿ, ಶುಭಕುಂಡಲೌ - ಮಂಗಳಕರವಾದ ಕರ್ಣಾಭರಣಗಳುಳ್ಳವರಾಗಿ, ಜಗ್ಮತುಃ - ಹೊರಟರು. ॥ ೨೧ ॥ ವರಾ....ನಾಃ - ಶ್ರೇಷ್ಠಗಳಾದ ಒಡವೆಗಳಿಂದಲಂಕೃತರಾದ, ಶುಭಕುಂಡಲಾಃ - ಶುಭಕರವಾದ ಕರ್ಣಾಭರಣಗಳುಳ್ಳ, ಸೀತಾ - ಸೀತಾದೇವಿಯು, ತಾಃ - ಆ, ಸುಗ್ರೀವಪತ್ನ್ಯಶ್ಚ - ಸುಗ್ರೀವನ ಹೆಂಗಳೂ, ನಗರಂ - ಪಟ್ಟಣವನ್ನು, ದ್ರಷ್ಟುಂ - ನೋಡುವುದಕ್ಕೋಸ್ಕರ, ಉತ್ಸುಕಾಃ-ಉತ್ಕಂಠೆಯುಳ್ಳವರಾಗಿ, ಯಯುಃ-ತೆರಳಿದರು. ॥ ೨೨ ॥ ಅಯೋಧ್ಯಾಯಾಂತು-ಅಯೋಧ್ಯಾಪಟ್ಟಣದಲ್ಲಾದರೇ, ದಶರಥಸ್ಯರಾಜ್ಞಃ - ದಶರಥರಾಯನಿಗೆ, ಯೇ - ಯಾರು, ಸಚಿವಾಃ - ಮಂತ್ರಿಗಳೋ, ತೇ-ಅವರು, ಪುರೋಹಿತಂ-ವಸಿಷ್ಠಋಷಿಗಳನ್ನು, ಪುನಸ್ಕೃತ್ಯ-ಮುಂದಿರಿಸಿಕೊಂಡು,

---

ನ್ನನುಗೊಳಿಸಿದಳು. ಆ ತರುವಾಯ ರಾಜಪುತ್ರನಾದ ಶತ್ರುಘ್ನನ ಆಣತಿಯಂತೆ ಮಂತ್ರಿಶ್ರೇಷ್ಠನಾದ ಸುಮಂತ್ರನು ಸರ್ವಾಂಗಸುಂದರವಾದ ದಿವ್ಯ ರಥವನ್ನು ಸಿದ್ಧಗೊಳಿಸಿ ತಂದನು. ಆಗ ಮಹಾ ಸತ್ಯಪರಾಕ್ರಮಿಯಾದವನೂ, ಮಹಾ ಭುಜಬಲನೂ ಆದ ಶ್ರೀರಾಮಚಂದ್ರನು ಸೂರ್ಯಮಂಡಲೋಪಮವಾದುದೂ ಮಹಾರ್ಹವಾದುದೂ ಆದ ಆ ರಥವನ್ನೇರಿದನು. ॥ ೧೬-೨೦ ॥ ಆಮೇಲೆ ಮಹೇಂದ್ರನ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳ ಸುಗ್ರೀವನೂ, ಹನುಮಂತನೇ ಮೊದಲಾದವರೂ ಮಂಗಳಸ್ನಾನವನ್ನು ಮಾಡಿ ಶುಭಕರವಾದ ಕರ್ಣಕುಂಡಲಗಳನ್ನು ಧರಿಸಿ ಬಿಜಮಾಡಿದರು. ಅದೇ ಸಮಯದಲ್ಲಿ ಸುಗ್ರೀವನ ಭಾರ್ಯೆಯರೂ, ಇತರ ವಾನರಸ್ತ್ರೀಯರೂ ಬಹಳ ಶ್ರೇಷ್ಠವಾದ ಆಭರಣಗಳನ್ನು ಧರಿಸಿದವರಾಗಿ ಪಟ್ಟಣವನ್ನು ನೋಡುವ ಅಭಿಲಾಷೆಯಿಂದ ಹೊರಟುಬಂದರು. ದಶರಥರಾಯನ ಮಂತ್ರಿಗಳೆಲ್ಲರೂ ಪುರೋಹಿತರಾದ ವಸಿಷ್ಠರನ್ನು ಮುಂದಿಟ್ಟುಕೊಂಡು ಅಯೋಧ್ಯಾಪಟ್ಟಣದಲ್ಲಿ ಮಾಡಬೇಕಾದ ಶ್ರೀರಾಮ ರಾಜ್ಯಾಭಿಷೇಕ ಕಾರ್ಯಗಳನ್ನು ಕುರಿತು ಆ ಕಾರ್ಯವು

ಸ್ಕೃತ್ಯ ಮಂತ್ರಯಾಮಾಸುರರ್ಥವತ್ ॥ ೨೩ ॥ ಅಶೋಕೋ ವಿಜಯಶ್ಚೈವ ಸುಮಂತ್ರಶ್ಚೈವ ಸಂಗತಾಃ । ಮಂತ್ರಯರ್ನ್ ರಾಮವೃದ್ಧ್ಯರ್ಥಮೃದ್ಧ್ಯರ್ಥಂ ನಗರಸ್ಯಚ ॥ ೨೪ ॥ "ಸರ್ವಮೇವಾಭಿಷೇಕಾರ್ಥಂ ಜಯಾರ್ಹಸ್ಯ ಮಹಾತ್ಮನಃ । ಕರ್ತುಮರ್ಹಥ ರಾಮಸ್ಯ ಯದ್ಯನ್ಮಂಗಳಪೂರ್ವಕಂ" ॥೨೫॥ ಇತಿ ತೇ ಮಂತ್ರಿಣಸ್ಸರ್ವೇ ಸಂದಿಶ್ಯತು ಪುರೋಹಿತಂ । ನಗರಾನ್ನಿರ್ಯಯುಸ್ತೂರ್ಣಂ ರಾಮದರ್ಶನಬುದ್ಧಯಃ ॥ ೧೬ ॥ ಹರಿಯುಕ್ತಂ ಸಹಸ್ರಾಕ್ಷೋ ರಥಮಿಂದ್ರ ಇವಾಽನಘಃ । ಪ್ರಯಯೌ ರಥಮಾಸ್ಥಾಯ ರಾಮೋ ನಗರಮುತ್ತಮಂ ॥ ೨೭ ॥ ಜಗ್ರಾಹ ಭರತೋ ರಶ್ಮೀನ್

ಅರ್ಥವತ್ - ಪಟ್ಟಾಭಿಷೇಕೋಪಯುಕ್ತವಾದ ದ್ರವ್ಯಸಂಪಾದನಾರ್ಥವಾಗಿ, ಮಂತ್ರಯಾಮಾಸುಃ - ಆಲೋಚಿಸಿದರು. ॥ ೨೩ ॥ ಅಶೋಕಃ - ಅಶೋಕನೂ, ವಿಜಯಶ್ಚೈವ - ವಿಜಯನೂ, ಸುಮಂತ್ರಶ್ಚೈವ - ಸುಮಂತ್ರನೂ ಎಂಬ ಮಂತ್ರಿಗಳೂ, ಸಂಗತಾಃ - ಸೇರಿ, ರಾಮವೃಧ್ಯರ್ಥಂ - ಶ್ರೀರಾಮನ ಸಂತೋಷಾಭಿವೃದ್ಧ್ಯರ್ಥವಾಗಿ, ನಗರಸ್ಯ - ಪಟ್ಟಣದ, ವೃದ್ಧ್ಯರ್ಥಂ - ಸಂತೋಷಾಭಿವೃಧ್ಯರ್ಥವಾಗಿಯೂ, ಮಂತ್ರಯನ್ - ಆಲೋಚಿಸಿದರು. ॥ ೨೪ ॥ ಜಯಾರ್ಹಸ್ಯ - ಜಯಕ್ಕೆ ಅರ್ಹನಾದ, ಮಹಾತ್ಮನಃ - ಮಹಾ ಮನಸ್ವಿಯಾದ, ರಾಮಸ್ಯ - ಶ್ರೀರಾಮನಿಗೆ, ಅಭಿಷೇಕಾರ್ಥಂ - ಪಟ್ಟಾಭಿಷೇಕಾರ್ಥವಾಗಿ, ಯದ್ಯತ್ - ಯಾವಾವುದು, ಮಂಗಳಪೂರ್ವಕಂ - ಮಂಗಳ ಕಾರ್ಯವೇ ಮೊದಲಾಗುಳ್ಳುದೋ, ತತ್‌ಸರ್ವಮೇವ - ಆ ಸಮಸ್ತವಾದ ಕರ್ಮವನ್ನೇ, ಕರ್ತುಂ - ಮಾಡುವುದಕ್ಕೆ, ಅರ್ಹಥ - ಯೋಗ್ಯರಾಗಿರಿ, ಇತಿ - ಇಂತೆಂದು, ಸರ್ವೇ - ಸಮಸ್ತರಾದ, ತೇಮಂತ್ರಿಣಃ - ಆ ಮಂತ್ರಿಗಳು, ಪುರೋಹಿತಂ - ಪುರೋಹಿತರಾದ ವಸಿಷ್ಠಋಷಿಗಳನ್ನು ಕುರಿತು, ಸಂದಿಶ್ಯತು - ವಿಜ್ಞಾಪಿಸಿಯಾದರೆ ರಾಮ....ಯಃ - ಶ್ರೀರಾಮನನ್ನು ನೋಡುವುದರಲ್ಲಿ ಆಸಕ್ತರಾಗಿ, ನಗರಾತ್ - ಪಟ್ಟಣದಿಂದ, ತೂರ್ಣಂ - ಜಾಗ್ರತೆಯಾಗಿ, ನಿರ್ಯಯುಃ - ಹೊರಟುಬಂದರು. ॥ ೨೫-೨೬ ॥ ಹರಿಯುಕ್ತಂ - ಅಶ್ವಗಳಿಂದ ಕೂಡಿರುವ, ರಥಂ - ತೇರನ್ನು, ಆಸ್ಥಾಯ - ಏರಿ, ಅನಘಃ - ನಿರ್ದೋಷನಾದ, ಸಹಸ್ರಾಕ್ಷಃ - ಸಹಸ್ರನೇತ್ರಗಳುಳ್ಳ, ಇಂದ್ರಇವ - ದೇವೇಂದ್ರನಂತೆ, ರಾಮಃ - ಶ್ರೀರಾಮನು, ರಥಂ - ರಥದಲ್ಲಿ, ಆಸ್ಥಾಯ - ಕುಳಿತು, ಉತ್ತಮಂ - ಸರ್ವೋತ್ತಮವಾದ, ನಗರಂ - ಪಟ್ಟಣವನ್ನು ಕುರಿತು, ಪ್ರಯಯೌ - ಹೊರಟನು. ॥ ೨೭ ॥ ಭರತಃ - ಭರತನು, ರಶ್ಮೀನ್ - ಹಗ್ಗಗಳನ್ನೂ, ಜಗ್ರಾಹ -

---

ಸಾಂಗವಾಗಿ, ಸಾರ್ಥಕವಾಗಿ ನೆರವೇರುವಂತೆ ಯೋಚಿಸಿದರು. ಅಶೋಕ, ವಿಜಯ, ಸುಮಂತ್ರನೇ ಮೊದಲಾದ ಮಂತ್ರಿಶ್ರೇಷ್ಠರೆಲ್ಲರೂ ಒಂದುಗೂಡಿ ಶ್ರೀರಾಮಮೂರ್ತಿಯ ಪುರೋಭಿವೃದ್ಧಿಗೋಸುಗವೂ, ಆತನ ಪಟ್ಟಾಭಿಷೇಕ ಸಾಮಗ್ರಿಗಳ ಸಂಪಾದನೆಗೋಸುಗವೂ ಪಟ್ಟಣದ ಅಭಿವೃದ್ಧಿಗೋಸುಗವೂ ಚೆನ್ನಾಗಿ ಪರ್ಯಾಲೋಚಿಸಿದರಲ್ಲದೆ, ಪಟ್ಟಾಭಿಷೇಕ ಮಹೋತ್ಸವಕ್ಕೆ ಬೇಕಾದ ಸಮಸ್ತ ಸಾಮಗ್ರಿಗಳನ್ನೂ ಶೇಖರಿಸಲು ನಿರ್ಣಯಿಸಿದರು. ಅವರೆಲ್ಲರೂ ಪುರೋಹಿತ ಪುರಸ್ಸರರಾಗಿ ಅಲ್ಲಿದ್ದ ಎಲ್ಲರನ್ನೂ ಕುರಿತು ಅಭಿಷೇಕ ಮಹೋತ್ಸವಕ್ಕೆ ಬೇಕಾದ ಎಲ್ಲ ಪದಾರ್ಥಗಳನ್ನೂ ಸಿದ್ಧಗೊಳಿಸಬೇಕೆಂದು ಆಜ್ಞಾಪಿಸಿದ ತರುವಾಯ ಶ್ರೀರಾಮಮೂರ್ತಿಯನ್ನು ಸಂದರ್ಶಿಸಬಯಸಿದವರಾಗಿ ನಗರದಿಂದ ಹೊರಟುಬಂದರು. ॥ ೨೧–೨೬ ॥ ಆ ಸಮಯದಲ್ಲಿಯೇ ಶ್ರೀರಾಮಮೂರ್ತಿಯು, ಮಹಾತ್ಮನಾದ ಮಹೇಂದ್ರನಂತೆ ದಿವ್ಯ ರಥವನ್ನೇರಿ ಪಟ್ಟಣಶ್ರೇಷ್ಠವಾದ ಅಯೋಧ್ಯೆಯನ್ನು ಕುರಿತು ಹೊರ

ಶತ್ರುಘ್ನಶ್ಛತ್ರಮಾದದೇ । ಲಕ್ಷ್ಮಣೋ ವ್ಯಜನಂ ತಸ್ಯ ಮೂರ್ಧ್ನಿ ಸಂಪರ್ಯವೀಜ
ಯತ್ ॥ ೨೮ ॥ ಶ್ವೇತಂಚ ವಾಲವ್ಯಜನಂ ಜಗ್ರಾಹ ಪುರತಸ್ಥಿತಃ । ಅಪರಂ ಚಂದ್ರ
ಸಂಕಾಶಂ ರಾಕ್ಷಸೇಂದ್ರೋ ವಿಭೀಷಣಃ ॥೨೯॥ ಋಷಿಸಂಘೈಸ್ತದಾಽಕಾಶೇ ದೇವೈಶ್ಚ
ಸಮರುದ್ಗಣೈಃ । ಸ್ತೂಯಮಾನಸ್ಯ ರಾಮಸ್ಯ ಶುಶ್ರುವೇ ಮಧುರಧ್ವನಿಃ ॥ ೩೦ ॥
ತತಃ ಶತ್ರುಂಜಯಂ ನಾಮ ಕುಂಜರಂ ಪರ್ವತೋಪಮಂ । ಆರುರೋಹ ಮಹಾ
ತೇಜಾಸ್ಸುಗ್ರೀವಃ ಪ್ಲವಗರ್ಷಭಃ ॥ ೩೧ ॥ ನವನಾಗಸಹಸ್ರಾಣಿ ಯಯುಃರಾಸ್ಥಾಯ
ವಾನರಾಃ । ಮಾನುಷಂ ವಿಗ್ರಹಂ ಕೃತ್ವಾ ಸರ್ವಾಭರಣಭೂಷಿತಾಃ ॥ ೩೨ ॥ ಶಂಖ

ಹಿಡಿದುಕೊಂಡನು, ಶತ್ರುಘ್ನಃ - ಶತ್ರುಘ್ನನು, ಛತ್ರಂ ಶ್ವೇತಛತ್ರವನ್ನು, ಆದದೇ - ಹಿಡಿದು ಕೊಂಡನು, ಲಕ್ಷ್ಮಣಃ ಲಕ್ಷ್ಮಣನು, ವ್ಯಜನಂ-ಚಾಮರವನ್ನು, ತಸ್ಯ-ಆ ಶ್ರೀರಾಮನ, ಮೂರ್ಧ್ನಿ-ಮಂಡೆಯಲ್ಲಿ, ಪರ್ಯವೀಜಯತ್ - ಬೀಸಿದನು. ॥ ೨೮ ॥ ಶ್ವೇತಂ - ಶುಭ್ರವಾಗಿರುವ, ವಾಲವ್ಯಜನಂಚ - ಚಾಮರವನ್ನೂ ಕೂಡ, ಪುರತಃ - ಮುಂದುಗಡೆ, ಸ್ಥಿತಃ - ನಿಂತವನಾಗಿ, ಜಗ್ರಾಹ - ಹಿಡಿದು ಕೊಂಡನು, ಚಂದ್ರಸಂಕಾಶಂ - ಚಂದ್ರನಿಗೆ ಸಮಾನವಾದ, ಅಪರಂ - ಮತ್ತೊಂದು ಚಾಮರವನ್ನು, ರಾಕ್ಷಸೇಂದ್ರಃ - ರಾಕ್ಷಸರಾಜನಾದ ವಿಭೀಷಣನು, ಜಗ್ರಾಹ - ಹಿಡಿದನು, ತದಾ - ಆ ಕಾಲದಲ್ಲಿ, ಋಷಿಸಂಘೈಶ್ಚ - ಋಷಿಗಳ ತಂಡಗಳಿಂದಲೂ, ಸಮರುದ್ಗಣೈಃ - ದೇವತಾಗಣಗಳಿಂದೊಡಗೂಡಿದ, ದೇವೈಶ್ಚ - ದೇವತೆಗಳಿಂದಲೂ, ಆಕಾಶೇ - ಅಂತರಿಕ್ಷದಲ್ಲಿ, ಸ್ತೂಯಮಾನಸ್ಯ - ಸ್ತೋತ್ರ ಮಾಡಲ್ಪಟ್ಟ, ಮಧುರಧ್ವನಿಃ - ಕಿವಿಗಿಂಪಾಗಿರುವ ರಾವಣ ಸಂಹಾರವೇ ಮೊದಲಾದ ಮಾತುಗಳ ಧ್ವನಿಯು, ಶುಶ್ರುವೇ - ಕೇಳಿಸಿತು. ॥ ೨೯-೩೦ ॥ ತತಃ - ಬಳಿಕ, ಮಹಾತೇಜಾಃ - ಮಹಾ ತೇಜೋವಂತನಾದ, ಪ್ಲವಗರ್ಷಭಃ - ವಾನರರಾಜನಾದ, ಸುಗ್ರೀವಃ - ಸುಗ್ರೀವನು, ಪರ್ವತೋಪಮಂ - ಬೆಟ್ಟಕ್ಕೆ ಸಮಾನವಾದ, ಶತ್ರುಂಜಯಂನಾಮ - ಶತ್ರುಂಜಯವೆಂಬ, ಕುಂಜರಂ - ಆನೆಯನ್ನು, ಆರುರೋಹ - ಏರಿದನು. ॥ ೩೧ ॥ ವಾನರಾಃ - ಕಪಿಗಳು, ಮಾನುಷಂ - ಮನುಷ್ಯಸಂಬಂಧಪಾದ, ವಿಗ್ರಹಂ - ಶರೀರಗಳನ್ನು ಧರಿಸಿ, ಸರ್ವಾ....ತಾಃ - ಸಮಸ್ತ ಭೂಷಣಭೂಷಿತರಾಗಿ, ನವ....ಣಿ - ಒಂಭತ್ತುಸಾವಿರ ಆನೆಗಳ ಮೇಲೆ, ಆಸ್ಥಾಯ - ಕುಳಿತು, ಯಯುಃ - ತೆರಳಿದರು. ॥ ೩೨ ॥ ಪುರುಷವ್ಯಾಘ್ರಃ - ಪುರುಷ ಶ್ರೇಷ್ಠನಾದ ಶ್ರೀರಾಮನು, ಶಂಖ....ಶ್ಚ - ಶಂಖಧ್ವನಿಗಳಿಂದಲೂ, ಜನರ ಕೋಲಾಹಲ ಧ್ವನಿ

ಟನು. ಆಗ ಭರತಕುಮಾರನು ಸಾರಥ್ಯವನ್ನು ವಹಿಸಿದನು. ಶತ್ರುಘ್ನನು ಶ್ವೇತಛತ್ರಿಯನ್ನು ಹಿಡಿದನು. ಲಕ್ಷ್ಮಣಸ್ವಾಮಿಯು ಚಾಮರವನ್ನು ಹಾಕಿದನು. ರಾಕ್ಷಸೇಂದ್ರನಾದ ವಿಭೀಷಣನೂ ಸಹ ಬಹು ಬೆಳ್ಳಗಿರುವ ಇನ್ನೊಂದು ಚಾಮರವನ್ನು ಹಾಕುತ್ತಿದ್ದನು. ಆ ಸಮಯದಲ್ಲಿ ಮಹರ್ಷಿಗಳೂ, ದೇವತೆಗಳೂ, ಸಿದ್ಧವಿದ್ಯಾಧರರೂ ಆಕಾಶದಲ್ಲಿ ನಿಂತು, ಜಯಜಯಕಾರಗಳನ್ನು ಮಾಡಿದರು. ಆ ಮಹಾ ಧ್ವನಿಯು ಭೂಮ್ಯಂತರಿಕ್ಷಗಳೆಲ್ಲವನ್ನೂ ವ್ಯಾಪಿಸಿತು. ॥೨೯-೩೦॥ ಆಗ ವಾನರೋತ್ತಮನೂ ಸರ್ವೋತ್ತಮವಾದ ತೇಜಸ್ಸಂಪನ್ನನೂ ಆದ ಸುಗ್ರೀವನು ಶತ್ರುಂಜಯುವೆಂದು ಹೆಸರಾದುದೂ ಪರ್ವತಸಮಾನವಾದುದೂ ಆದ ಆನೆಯನ್ನೇರಿ ಹೊರಟನು. ವಾನರವೀರರೆಲ್ಲರೂ ಮಹಾರ್ಹವಾದ ಭೂಷಣಗಳನ್ನು ಧರಿಸಿ, ಮಾನವರೂಪಗಳನ್ನು ತಾಳಿ ಅನೇಕ ಸಹಸ್ರ ಗಜಶ್ರೇಷ್ಠಗಳನ್ನೇರಿ ಹೊರಟರು. ಆ ತರುವಾಯ ಪುರುಷೋತ್ತಮನಾದ ಶ್ರೀರಾಮಮೂರ್ತಿಯು ಶಂಖ ಭೇರೀ ವಾದ್ಯಗಳ ಧ್ವನಿಯಿಂದಲೂ, ಜನಗಳ

ಶಬ್ದಪ್ರಣಾದೈಶ್ಚ ದುಂದುಭೀನಾಂಚ ನಿಸ್ವನೈಃ । ಪ್ರಯಯೌ ಪುರುಷವ್ಯಾಘ್ರಸ್ತಾಂ ಪುರೀಂ ಹರ್ಮ್ಯಮಾಲಿನೀಂ ‖ ೩೩ ‖ ದದೃಶುಸ್ತೇ ಸಮಾಯಾಂತಂ ರಾಘವಂ ಸಪುರಸ್ಸರಂ । ವಿರಾಜಮಾನಂ ವಪುಷಾ ರಥೇನಾಽತಿರಥಂ ತದಾ ‖೩೪‖ ತೇ ವರ್ಧಯಿತ್ವಾ ಕಾಕುತ್‌ಸ್ಥಂ ರಾಮೇಣ ಪ್ರತಿನಂದಿತಾಃ । ಅನುಜಗ್ಮುರ್ಮಹಾತ್ಮಾನಂ ಭ್ರಾತೃಭಿಃ ಪರಿವಾರಿತಂ ‖ ೩೫ ‖ ಅಮಾತ್ಯೈರ್ಬ್ರಾಹ್ಮಣೈಶ್ಚೈವ ತಥಾ ಪ್ರಕೃತಿಭಿರ್ವೃತಃ । ಶ್ರಿಯಾ ವಿರುರುಚೇ ರಾಮೋ ನಕ್ಷತ್ರೈರಿವ ಚಂದ್ರಮಾಃ ‖ ೩೬ ‖ ಸಪುರೋಗಾಮಿಭಿಸ್ತೂರ್ಯೈಸ್ತಾಳಸ್ವಸ್ತಿಕಪಾಣಿಭಿಃ । ಪ್ರವ್ಯಾಹರದ್ಭಿರ್ಮುದಿತೈರ್ಮಂಗಳಾನಿ ಯಯೌ

ಗಳಿಂದಲೂ, ದುಂದುಭೀನಾಂ-ಭೇರಿಗಳ, ನಿಸ್ವನೈಶ್ಚ-ಧ್ವನಿಗಳಿಂದಲೂ ಕೂಡ, ಹರ್ಮ್ಯಮಾಲಿನೀಂ-ಪ್ರಾಸಾದ ಪಙ್ಕ್ತಿಯುಳ್ಳ, ತಾಂಪುರೀಂ - ಆ ಅಯೋಧ್ಯಾಪಟ್ಟಣವನ್ನು ಕುರಿತು, ಪ್ರಯಯೌ - ಹೊರಟನು. ‖ ೩೩ ‖ ತೇ - ಆ ನಗರದಲ್ಲಿರುವ ಪ್ರಜೆಗಳು, ತದಾ - ಆ ಕಾಲದಲ್ಲಿ, ಅತಿರಥಂ - ಅತಿರಥನಾದ, ರಥೇನ - ತೇರಿನಿಂದ, ಸಮಾಯಾಂತಂ - ಬರುತ್ತಿರುವ, ವಪುಷಾ - ತನ್ನ ಶರೀರದಿಂದ, ವಿರಾಜಮಾನಂ - ಬೆಳಗುತ್ತಿರುವ, ಸಪುರಸ್ಸರಂ - ಮುಂದೆ ಹೋಗತಕ್ಕ ಪರಿವಾರದಿಂದೊಡಗೂಡಿದ, ರಾಘವಂ - ಶ್ರೀರಾಮನನ್ನು, ದದೃಶುಃ - ಕಂಡರು. ‖ ೩೪ ‖ ತೇ - ಆ ಪ್ರಜೆಗಳು, ಕಾಕುತ್‌ಸ್ಥಂ - ಶ್ರೀರಾಮನನ್ನು ಜಯಘೋಷಗಳಿಂದ, ವರ್ಧಯಿತ್ವಾ - ಆಶೀರ್ವಾದ ಮಾಡಿ, ರಾಮೇಣ - ಶ್ರೀರಾಮನಿಂದ, ಪ್ರತಿನಂದಿತಾಃ - ಸಂತೋಷಗೊಳಿಸಿದವರಾಗಿ, ಭ್ರಾತೃಭಿಃ - ತಮ್ಮಂದಿರಿಂದ, ಪರಿವಾರಿತಂ - ಸುತ್ತುವರೆದ, ಮಹಾತ್ಮಾನಂ - ಮಹಾನುಭಾವನಾದ ಶ್ರೀರಾಮನನ್ನು, ಅನುಜಗ್ಮುಃ - ಅನುಸರಿಸಿದರು. ‖ ೩೫ ‖ ರಾಮಃ - ಶ್ರೀರಾಮನು, ಅಮಾತ್ಯೈಃ - ಮಂತ್ರಿಗಳಿಂದಲೂ, ಬ್ರಾಹ್ಮಣೈಶ್ಚೈವ - ಬ್ರಾಹ್ಮಣರಿಂದಲೂ, ತಥಾ - ಹಾಗೆಯೇ, ಪ್ರಕೃತಿಭಿಃ - ಪೌರಜನರಿಂದಲೂ, ವೃತಃ - ಸುತ್ತುವರೆದ, ನಕ್ಷತ್ರೈಃ - ನಕ್ಷತ್ರಗಳಿಂದ, ಚಂದ್ರಮಾ ಇವ - ಚಂದ್ರನಂತೆ, ಶ್ರಿಯಾ - ಕಾಂತಿಯಿಂದ, ವಿರುರುಚೇ - ಬೆಳಗುತ್ತಲಿದ್ದನು. ‖ ೩೬ ‖ ಸಃ - ಆ ಶ್ರೀರಾಮನು, ಪುರೋಗಾಮಿಭಿಃ - ಮುಂದೆ ಹೋಗುತ್ತಿರುವ, ತೂರ್ಯೈಃ - ತುತ್ತೂರಿಗಳನ್ನು ಬಾರಿಸುತ್ತಿರುವ, ತಾಳ....ಭಿಃ - ತಾಳಗಳೂ ಸ್ವಸ್ತಿಕಾದಿ ವಾದ್ಯವಿಶೇಷಗಳೇ ಕೈಗಳಲ್ಲುಳ್ಳ, ಮಂಗಳಾನಿ - ಶುಭ ವಚನಗಳನ್ನು, ಪ್ರವ್ಯಾಹರದ್ಭಿಃ - ಹೇಳುತ್ತಿರುವ, ಮುದಿತೈಃ - ಸಂತೋಷಗೊಂಡಿರುವ ಜನರಿಂದ, ವೃತಃ - ಪರಿವೃತನಾಗಿ, ಯಯೌ - ಹೊರಟನು.

ಜಯಜಯ ಧ್ವನಿಯಿಂದಲೂ ಕೂಡಿದವನಾಗಿ ಪ್ರಾಕಾರ ಪಙ್ಕ್ತಿಗಳಿಂದ ಶೋಭಿಸುತ್ತಿರುವ ನಯನಮನೋಹರವಾದ ಅಯೋಧ್ಯಾಪಟ್ಟಣವನ್ನು ಕುರಿತು ಪ್ರಯಾಣ ಮಾಡಿದನು. ಅನೇಕ ಸಹಸ್ರ ಮಂದಿ ಜನರೊಡಗೂಡಿ ಬರುತ್ತಿರುವವನೂ, ಅತಿರಥನೂ ಆದ ಶ್ರೀರಾಮಚಂದ್ರನನ್ನು ನೋಡಿ ಪ್ರಜೆಗಳೆಲ್ಲರೂ ಪರಮಾನಂದಭರಿತರಾದರು. ಆಗ ಎಲ್ಲ ಪ್ರಜೆಗಳೂ ಶ್ರೀರಾಮಸಂದರ್ಶನಜನಿತಾನಂದಸ್ವಾಂತರಾಗಿ ಮಹಾತ್ಮನೂ, ಅಣ್ಣತಮ್ಮಂದಿರೊಡಗೂಡಿದವನೂ, ಕಕುತ್ಸ್ಥವಂಶೋದ್ಭವನೂ ಆದ ಶ್ರೀರಾಮಮೂರ್ತಿಯೊಡನೆಯೇ ಅಯೋಧ್ಯಾಪಟ್ಟಣಕ್ಕೆ ಹೊರಟರು. ‖ ೩೧—೩೫ ‖ ಆ ಸಮಯದಲ್ಲಿ ಶ್ರೀರಾಮನಾದರೋ, ಮಂತ್ರಿಗಳೊಡನೆಯೂ, ಬ್ರಾಹ್ಮಣರೊಡನೆಯೂ, ಪ್ರಜೆಗಳೊಡನೆಯೂ ಕೂಡಿದವನಾಗಿ ನಕ್ಷತ್ರಗಳೊಡಗೂಡಿದ ಚಂದ್ರನಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದನು. ಆ ಮಹೋತ್ಸವದಲ್ಲಿ ಮಂಗಳವಾದ್ಯ ಧ್ವನಿಗಳೂ, ತಾಳಸ್ವಸ್ತಿಕಾದಿ ವಾದ್ಯಧ್ವನಿಗಳೂ, ಭೇರಿಯ ಭಾಂಕಾರ ಧ್ವನಿಗಳೂ ಅಪರಿಮಿತವಾಗಿ ಮೊಳ

ವೃತಃ ॥ ೩೭ ॥ ಅಕ್ಷತಂ ಜಾತರೂಪಂಚ ಗಾವಃ ಕನ್ಯಾಸ್ತಥಾ ದ್ವಿಜಾಃ । ನರಾ
ಮೋದಕಹಸ್ತಾಶ್ಚ ರಾಮಸ್ಯ ಪುರತೋ ಯಯುಃ ॥೩೮॥ ಸಖ್ಯಂ ಚ ರಾಮಸ್ಸುಗ್ರೀವೇ
ಪ್ರಭಾವಂ ಚಾಽನಿಲಾತ್ಮಜೇ । ವಾನರಾಣಾಂ ಚ ತತ್ಕರ್ಮ ರಾಕ್ಷಸಾನಾಂಚ ತದ್ಬಲಂ
॥ ೩೯ ॥ ವಿಭೀಷಣಸ್ಯ ಸಂಯೋಗಮಾಚಚಕ್ಷೇಚ ಮಂತ್ರಿಣಾಂ । ಶ್ರುತ್ವಾ ತು
ವಿಸ್ಮಯಂ ಜಗ್ಮುರಯೋಧ್ಯಾಪುರವಾಸಿನಃ ॥ ೪೦ ॥ ದ್ಯುತಿಮಾನೇತದಾಖ್ಯಾಯ
ರಾಮೋ ವಾನರಸಂವೃತಃ । ಹೃಷ್ಟಪುಷ್ಟಜನಾಕೀರ್ಣಾಮಯೋಧ್ಯಾಂ ಪ್ರವಿವೇಶಹ
॥ ೪೧ ॥ ತತೋಽಹ್ಯಭ್ಯುಚ್ಛ್ರಯನ್ ಪೌರಾಃ ಪತಾಕಾಸ್ತೇ ಗೃಹೇಗೃಹೇ । ಐಕ್ಷ್ವಾಕಾ

॥ ೩೭ ॥ ಜಾತರೂಪಂ-ಭಂಗಾರದ ಬಣ್ಣವುಳ್ಳ, ಅಕ್ಷತಂ-ಅಕ್ಷತ ಪಾತ್ರೆಯನ್ನು ಹಿಡಿದಿರುವ ಜನರು, ಗಾವಃ - ಗೋವುಗಳು, ಕನ್ಯಾಃ - ಕನ್ಯಕೆಯರು, ತಥಾ - ಹಾಗೆಯೇ, ದ್ವಿಜಾಃ - ಬ್ರಾಹ್ಮಣರೂ, ಮೋದಕಹಸ್ತಾಃ-ಮಂಗಳ ಮೋದಕಗಳೇ ಕೈಗಳಲ್ಲುಳ್ಳ, ನರಾಶ್ಚ-ಮನುಷ್ಯರೂ, ರಾಮಸ್ಯ-ಶ್ರೀರಾಮನ, ಪುರತಃ - ಮುಂಗಡೆ, ಯಯುಃ - ತೆರಳಿದರು. ॥ ೩೮ ॥ ರಾಮಃ - ಶ್ರೀರಾಮನು, ಮಂತ್ರಿಣಾಂ - ಮಂತ್ರಿಗಳಿಗೋಸುಗ, ಸುಗ್ರೀವೇ - ಸುಗ್ರೀವನಲ್ಲಿ, ಸಖ್ಯಂ - ಮೈತ್ರಿಯನ್ನು, ಅನಿಲಾತ್ಮಜೇ - ಆಂಜನೇಯನಲ್ಲಿನ, ಪ್ರಭಾವಂಚ - ಮಹಾತ್ಮ್ಯವನ್ನೂ, ವಾನರಾಣಾಂ - ಕಪಿಗಳ, ತತ್ಕರ್ಮ - ಆ ನಡತೆಯನ್ನೂ, ರಾಕ್ಷಸಾನಾಂ-ರಕ್ಕಸರ, ತದ್ಬಲಂಚ-ಆ ಸೈನ್ಯವನ್ನೂ, (ಪರಾಕ್ರಮವನ್ನೂ) ವಿಭೀಷಣಸ್ಯ-ವಿಭೀಷಣನ, ಸಂಯೋಗಂ-ಸಂಬಂಧವನ್ನೂ, ಆಚಚಕ್ಷೇ-ಹೇಳಿದನು, ಅಯೋಧ್ಯಾಪುರವಾಸಿನಃ-ಅಯೋಧ್ಯಾಪಟ್ಟಣವಾಸಿಗಳಾದ ಮಂತ್ರಿಗಳೇ ಮೊದಲಾದ ಪ್ರಜೆಗಳು, (ಅದನ್ನು) ಶ್ರುತ್ವಾ - ಕೇಳಿ, ವಿಸ್ಮಯಂ - ಆಶ್ಚರ್ಯವನ್ನು, ಜಗ್ಮುಃ - ಹೊಂದಿದರು. ॥ ೩೯-೪೦ ॥ ದ್ಯುತಿಮಾನ್ - ಪ್ರಕಾಶವಂತನಾದ, ರಾಮಃ - ಶ್ರೀರಾಮನು, ಏತತ್ - ಈ ಸುಗ್ರೀವ ಸಖ್ಯಾದಿ ಕಾರ್ಯವನ್ನು, ಆಖ್ಯಾಯ - ಹೇಳಿ, ವಾನ....ತಃ - ಕಪಿಗಳೊಡಗೂಡಿ, ಹೃಷ್ಟ....ರ್ಣಾಂ - ಸಂತೋಷದಿಂದುಬ್ಬಿದ ಜನರು ತುಂಬಿರುವ, ಅಯೋಧ್ಯಾಂ - ಅಯೋಧ್ಯಾಪಟ್ಟಣವನ್ನು, ಪ್ರವಿವೇಶ - ಹೊಕ್ಕನಷ್ಟೆ. ॥ ೪೧ ॥ ತತಃ - ಬಳಿಕ, ತೇಪೌರಾಃ - ಆ ಪಟ್ಟಣಸ್ಥರೂ, ಗೃಹೇಗೃಹೇ - ಮನೆಮನೆಯಲ್ಲಿಯೂ, ಪತಾಕಾಃ - ಧ್ವಜಪಟಗಳನ್ನೂ, ಅಭ್ಯುಚ್ಛ್ರಯನ್‌ಹಿ - ಅತ್ಯುನ್ನತವಾಗಿ ಎತ್ತಿ ಕಟ್ಟಿದರಷ್ಟೆ, ಐಕ್ಷ್ವಾಕಾ

ಗಿತು. ಶ್ರೀರಾಮನ ಮುಂಗಡೆ ಬ್ರಾಹ್ಮಣರೆಲ್ಲರೂ, ಜಾತರೂಪ (ಚಿನ್ನ)ದ ಅಕ್ಷತಪಾತ್ರೆಗಳನ್ನು ಹಿಡಿದು ಅಕ್ಷತೆಗಳನ್ನೆರಚುತ್ತ, ಗೋವುಗಳೊಡನೆಯೂ, ಕನ್ಯಕೆಯರೊಡನೆಯೂ, ಮೋದಕಹಸ್ತರಾದ ಮಾನವರೊಡನೆಯೂ ಬರುತ್ತಿದ್ದರು. ಆ ಸಮಯದಲ್ಲಿ ಶ್ರೀರಾಮಮೂರ್ತಿಯು, ಮಂತ್ರಿಗಳೆಲ್ಲರಿಗೂ, ಸುಗ್ರೀವನೊಡನೆ ಮೈತ್ರಿ, ಹನುಮಂತನ ಮಹಾದ್ಭುತ ಕಾರ್ಯಗಳು, ಆತನ ಅದ್ಭುತ ಸಾಮರ್ಥ್ಯ, ವಾನರವೀರರ ಮಹಾ ಭಯಂಕರ ಕಾರ್ಯಗಳು, ರಾಕ್ಷಸವೀರರ ಅಸಮ ಸಾಮರ್ಥ್ಯ, ಮತ್ತು ಸೈನ್ಯ ವಿಭೀಷಣನೊಡನೆ ಸಖ್ಯ ಇವೇ ಮೊದಲಾದ ಎಲ್ಲ ವಿಷಯಗಳನ್ನೂ ವಿವರಿಸಿ ಹೇಳಿದನು. ಅಯೋಧ್ಯಾವಾಸಿಗಳೆಲ್ಲರೂ ಆ ವೃತ್ತಾಂತವೆಲ್ಲವನ್ನೂ ಕೇಳಿ ಪರಮಾಶ್ಚರ್ಯಭರಿತರಾದರು. ॥ ೩೭-೪೦ ॥ ಹೀಗೆ ಹಿಂದೆ ನಡೆದ ವೃತ್ತಾಂತವೆಲ್ಲವನ್ನೂ ಹೇಳುತ್ತ, ಸಹಸ್ರಾರು ವಾನರವೀರಪರಿವೃತನೂ, ಮಹಾ ಕಾಂತಿಸಂಪನ್ನನೂ ಆದ ಶ್ರೀರಾಮಚಂದ್ರನು ಹೃಷ್ಟಪುಷ್ಟಜನಾಕೀರ್ಣವಾದ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಪುರಜನರೆಲ್ಲರೂ ಪ್ರತಿಯೊಂದು ಮನೆಯ ಮೇಲೆಯೂ ಧ್ವಜಪತಾಕೆಗಳನ್ನೇರಿಸಿ

ಧ್ಯುಷಿತಂ ರಮ್ಯಮಾಸಸಾದ ಪಿತುರ್ಗೃಹಂ ॥ ೪೨ ॥ ಅಥಾಽಬ್ರವೀದ್ರಾಜಸುತೋ
ಭರತಂ ಧರ್ಮಿಣಾಂ ವರಂ । ಅರ್ಥೋಪಹಿತಯಾ ವಾಚಾ ಮಧುರಂ ರಘುನಂದನಃ
॥ ೪೩ ॥ ಪಿತುರ್ಭವನಮಾಸಾದ್ಯ ಪ್ರವಿಶ್ಯಚ ಮಹಾತ್ಮನಃ । ಕೌಸಲ್ಯಾಂ ಚ ಸುಮಿ
ತ್ರಾಂಚ ಕೈಕೇಯೀಮಭಿವಾದ್ಯಚ ॥೪೪॥ "ಯಚ್ಚ ಮದ್ಭವನಂ ಶ್ರೇಷ್ಠಂ ಸಾಶೋಕ
ವನಿಕಂ ಮಹತ್ । ಮುಕ್ತಾವೈಡೂರ್ಯಸಂಕೀರ್ಣಂ ಸುಗ್ರೀವಾಯ ನಿವೇದಯ"
॥ ೪೫ ॥ ತಸ್ಯ ತದ್ವಚನಂ ಶ್ರುತ್ವಾ ಭರತಸ್ಸತ್ಯವಿಕ್ರಮಃ । ಪಾಣೌ ಗೃಹೀತ್ವಾ
ಸುಗ್ರೀವಂ ಪ್ರವಿವೇಶ ತಮಾಲಯಂ ॥ ೪೬ ॥ ತತಸ್ತೈಲಪ್ರದೀಪಾಂಶ್ಚ ಪರ್ಯಂಕಾ

ಧ್ಯುಷಿತಂ - ಇಕ್ಷ್ವಾಕುವಂಶಸ್ಥರಿಂದ ವಾಸ ಮಾಡಲ್ಪಟ್ಟ, ರಮ್ಯಂ - ಮನೋಹರವಾದ, ಪಿತುಃ - ತಂದೆಯ, ಗೃಹಂ - ಮನೆಯನ್ನು, ಆಸಸಾದ - ಹೊಂದಿದನು. ॥ ೪೨ ॥ ಅಥ - ಬಳಿಕ, ರಾಜಸುತಃ - ರಾಜಪುತ್ರನಾದ, ರಘುನಂದನಃ - ಶ್ರೀರಾಮನು, ಮಹಾತ್ಮನಃ - ಮಹಾ ಪ್ರಭಾವವಂತನಾದ, ಪಿತುಃ - ತಂದೆಯಾದ ದಶರಥರಾಯನ, ಭವನಂ - ಅರಮನೆಯನ್ನು, ಆಸಾದ್ಯ - ಹೊಂದಿ, ಪ್ರವಿಶ್ಯಚ - ಪ್ರವೇಶ ಮಾಡುತ್ತಲೇ, ಕೌಸಲ್ಯಾಂಚ - ಕೌಸಲ್ಯಾದೇವಿಯನ್ನೂ, ಸುಮಿತ್ರಾಂಚ - ಸುಮಿತ್ರಾದೇವಿಯನ್ನೂ, ಕೈಕೇಯೀಂಚ - ಕೈಕೇಯೀದೇವಿಯನ್ನೂ, ಅಭಿವಾದ್ಯ - ನಮಸ್ಕರಿಸಿ, ಧರ್ಮಿಣಾಂ - ಧರ್ಮಿಷ್ಠರಲ್ಲಿ, ವರಂ - ಶ್ರೇಷ್ಠನಾದ, ಭರತಂ - ಭರತನನ್ನು ಕುರಿತು, ಅರ್ಥೋಪಹಿತಯಾ - ಪ್ರಯೋಜನದಿಂದ ಕೂಡಿರುವ, ವಾಚಾ - ಮಾತಿನಿಂದ, ಮಧುರಂ - ಮನೋಹರವಾಗಿರುವಂತೆ, ಅಬ್ರವೀತ್ - ನುಡಿದನು. ॥ ೪೩-೪೪ ॥ ಸಾಶೋಕವನಿಕಂ - ಗೃಹೋದ್ಯಾನವನದಿಂದೊಡಗೂಡಿದ, ಮಹತ್ - ದೊಡ್ಡದಾದ, ಮುಕ್ತಾ....ರ್ಣಂ - ಮುತ್ತುಗಳಿಂದಲೂ ವೈಡೂರ್ಯಮಣಿಗಳಿಂದ ಖಚಿತವಾದ, ಶ್ರೇಷ್ಠಂ - ಸರ್ವೋತ್ತಮವಾದ, ಮದ್ಭವನಂ - ನನ್ನ ಮನೆಯು, ಯತ್ - ಯಾವುದೋ, ತತ್ - ಆ ಮನೆಯನ್ನು, ಸುಗ್ರೀವಾಯ - ಸುಗ್ರೀವನಿಗೆ, ನಿವೇದಯ - ಅರಿಕೆ ಮಾಡು. ॥ ೪೫ ॥ ತಸ್ಯ - ಆ ಶ್ರೀರಾಮನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಸತ್ಯವಿಕ್ರಮಃ - ಸಫಲವಾದ ಪರಾಕ್ರಮವುಳ್ಳ, ಭರತಃ - ಭರತನು, ಸುಗ್ರೀವಂ - ಸುಗ್ರೀವನನ್ನು, ಪಾಣೌ - ಹಸ್ತದಲ್ಲಿ, ಗೃಹೀತ್ವಾ - ಹಿಡಿದುಕೊಂಡು, ತಮಾಲಯಂ - ಆ ಶ್ರೀರಾಮನ ಮನೆಯನ್ನು, ಪ್ರವಿವೇಶ - ಪ್ರವೇಶಿಸಿದನು. ॥೪೬॥ ತತಃ - ಬಳಿಕ, ಶತ್ರುಘ್ನೇನ - ಶತ್ರುಘ್ನನಿಂದ, ಪ್ರಚೋದಿತಾಃ - ಪ್ರೇರೇಪಿಸಲ್ಪಟ್ಟ ಪರಿಚಾರಕರು,

---

ಶ್ರೀರಾಮನಿಗೆ ಅಭಿವೃದ್ಧಿಯನ್ನು ಕೋರುತ್ತಿದ್ದರು ಆ ತರುವಾಯ ಶ್ರೀರಾಮಮೂರ್ತಿಯು ಪರಂಪರೆಯಾಗಿ ಇಕ್ಷ್ವಾಕುವಂಶದ ರಾಜರುಗಳಿಂದ ವಾಸಿಸಲಾದ ರಮಣೀಯವಾದ ಮತ್ತು ತನ್ನ ತಂದೆಯಾದ ದಶರಥರಾಯನ ಅರಮನೆಯನ್ನು ಪ್ರವೇಶಿಸಿದನು. ಆಗಲಾತನು ಸಮಸ್ತರಿಗೂ ಸಂತೋಷವನ್ನುಂಟುಮಾಡುವವನಾಗಿ ಮಹಾ ಧರ್ಮವೇತ್ತನಾದ ಭರತನನ್ನು ಕುರಿತು ಮಹಾರ್ಥಪೂರಿತವಾದ ಮಧುರ ವಾಕ್ಯಗಳನ್ನು ಹೇಳಬಯಸಿ ಅರಮನೆಯನ್ನು ಪ್ರವೇಶಿಸಿ ತಾಯಿಯಾದ ಕೌಸಲ್ಯಾ, ಸುಮಿತ್ರೆ, ಕೈಕೇಯಿಯರಿಗೆ ನಮಸ್ಕರಿಸಿ ಆತನನ್ನು ಕುರಿತು, "ಎಲೈ ಭರತನೇ! ಅಶೋಕವನಸಹಿತವಾದುದೂ, ವಿಶಾಲವಾದುದೂ ಆದ ನನ್ನ ಭವ್ಯಭವನದಲ್ಲಿ ವಾನರೇಶ್ವರನಾದ ಸುಗ್ರೀವನನ್ನು ಪ್ರವೇಶಗೊಳಿಸಿ ಆತನಿಗೆ ಅರಿಕೆ ಮಾಡುವವನಾಗು" ಎಂದನು. ॥೪೧–೪೫॥ ಶ್ರೀರಾಮನಾಡಿದ ಈ ಮಾತುಗಳನ್ನುಕೇಳಿ ಸತ್ಯವಿಕ್ರಮನಾದ ಭರತನು ಸುಗ್ರೀವನ ಕೈಯನ್ನು ಹಿಡಿದುಕೊಂಡು ಕರೆದೊಯ್ದು ಆ ಭವನವನ್ನು ಪ್ರವೇಶಗೊಳಿಸಿದನು.

ಸ್ತರಣಾನಿಚ । ಗೃಹೀತ್ವಾ ವಿವಿಶುಃ ಕ್ಷಿಪ್ರಂ ಶತ್ರುಘ್ನೇನ ಪ್ರಚೋದಿತಾಃ ॥ ೪೭ ॥ ಉವಾಚ ಚ ಮಹಾತೇಜಾ ಸ್ಸುಗ್ರೀವಂ ರಾಘವಾನುಜಃ । "ಅಭಿಷೇಕಾಯ ರಾಮಸ್ಯ ದೂತಾನಾಜ್ಞಾಪಯ ಪ್ರಭೋ! ॥೪೮॥ ಸೌವರ್ಣಾನ್ವಾನರೇಂದ್ರಾಣಾಂ ಚತುರ್ಣಾಂ ಚತುರೋ ಘಟಾನ್ । ದದೌ ಕ್ಷಿಪ್ರಂ ಸಸುಗ್ರೀವ ಸ್ಸರ್ವರತ್ನವಿಭೂಷಿತಾನ್ ॥ ೪೯ ॥ "ಯಥಾ ಪ್ರತ್ಯೂಷಸಮಯೇ ಚತುರ್ಣಾಂ ಸಾಗರಾಂಭಸಾಂ । ಪೂರ್ಣೈ ರ್ಘಟೈಃ ಪ್ರತೀಕ್ಷಧ್ವಂ ತಥಾ ಕುರುತ ವಾನರಾಃ" ॥ ೫೦ ॥ ಏವಮುಕ್ತಾ ಮಹಾತ್ಮಾನೋ ವಾನರಾ ವಾರಣೋಪಮಾಃ । ಉತ್ಪೇತುರ್ಗಗನಂ ಶೀಘ್ರಂ ಗರುಡಾ ಇವ ಶೀಘ್ರಗಾಃ

ತೈಲ....ಶ್ಚ - ಎಣ್ಣೆಯ ದೀಪದ ಕಂಬಗಳನ್ನು, ಪರ್ಯ....ಚ - ಮಂಚಗಳನ್ನು ಹಾಸಿಗೆಗಳನ್ನೂ, ಗೃಹೀತ್ವಾ - ತೆಗೆದುಕೊಂಡು, ವಿವಿಶುಃ - ಪ್ರವೇಶ ಮಾಡಿದರು. ॥ ೪೭ ॥ ಮಹಾತೇಜಾಃ - ಬಹಳ ತೇಜೋವಂತನಾದ, ರಾಘವಾನುಜಃ - ಭರತನು, ಸುಗ್ರೀವಂ - ಸುಗ್ರೀವನನ್ನು, ಪ್ರಭೋ - ದೊರೆಯೇ. ರಾಮಸ್ಯ - ಶ್ರೀರಾಮನ, ಅಭಿಷೇಕಾಯ - ಪಟ್ಟಾಭಿಷೇಕಕ್ಕಾಗಿ, ದೂತಾನ್ - ದೂತರನ್ನು, ಆಜ್ಞಾಪಯ - ಅಪ್ಪಣೆ ಮಾಡು, ಇತಿ - ಇಂತೆಂದು, ಸುಗ್ರೀವಂ - ಸುಗ್ರೀವನನ್ನು ಕುರಿತು, ಉವಾಚ - ಹೇಳಿದನು. ॥ ೪೮ ॥ ಸಸುಗ್ರೀವಃ - ಆ ಸುಗ್ರೀವನು, ಸೌವರ್ಣಾನ್ - ಬಂಗಾರದ, ಸರ್ವ....ತಾನ್ - ಸಮಸ್ತ ರತ್ನಗಳಿಂದ ಕೆತ್ತಲ್ಪಟ್ಟ, ಚತುರಃ - ನಾಲ್ಕಾದ, ಘಟಾನ್ - ಬಿಂದಿಗೆಗಳನ್ನು, ಚತುರ್ಣಾಂ - ನಾಲ್ವರಾದ, ವಾನರೇಂದ್ರಾಣಾಂ - ವಾನರೋತ್ತಮರಿಗೆ, ಕ್ಷಿಪ್ರಂ - ಜಾಗ್ರತೆಯಾಗಿ, ದದೌ - ಕೊಟ್ಟನು. ॥ ೪೯ ॥ ವಾನರಾಃ - ಕಪಿಗಳಿರಾ, ಚತುರ್ಣಾಂ - ನಾಲ್ಕಾದ, ಸಾಗರಾಂಭಸಾಂ - ಸಮುದ್ರೋದಕಗಳಿಂದ, ಪೂರ್ಣೈಃ - ತುಂಬಿರುವ, ಘಟೈಃ - ಕಲಶಗಳಿಂದ, ಉಪಲಕ್ಷಿತಾಃ - ಕೂಡಿದವರಾಗಿ, ಪ್ರತ್ಯೂಷಸಮಯೇ - ಸೂರ್ಯೋದಯ ಕಾಲದಲ್ಲಿ, ಯಥಾ - ಹೇಗೆ, ಪ್ರತೀಕ್ಷಧ್ವಂ - ನೀವು ನಮ್ಮನ್ನು ನಿರೀಕ್ಷಣೆ ಮಾಡುವಿರೋ, ತಥಾ - ಹಾಗೆ, ಕುರುತ - ಮಾಡಿರಿ. ॥ ೫೦ ॥ ಏವಂ - ಈ ಪರಿಯಾಗಿ, ಉಕ್ತಾಃ - ಹೇಳಲ್ಪಟ್ಟ, ಮಹಾತ್ಮಾನಃ - ದೊಡ್ಡ ಶರೀರಗಳುಳ್ಳ, ವಾರಣೋಪಮಾಃ - ಆನೆಗಳಿಗೆ ಸಮಾನರಾದ, ವಾನರಾಃ - ಕಪಿಗಳು, ಶೀಘ್ರಗಾಃ - ಶೀಘ್ರವಾಗಿ ಹೋಗುತ್ತಿರುವ, ಗರುಡಾಃ ಇವ-ಗರುಡಪಕ್ಷಿಗಳಂತೆ, ಗಗನಂ-ಅಂತರಿಕ್ಷವನ್ನು ಕುರಿತು, ಶೀಘ್ರಂ-ಜಾಗ್ರತೆಯಾಗಿ, ಉತ್ಪೇತುಃ - ಹಾರಿದರು. ॥ ೫೧ ॥ ಅಥ - ಒಳಿಕ, ಜಾಂಬವಾಂಶ್ಚ - ಜಾಂಬ

ಶತ್ರುಘ್ನನ ಮಾತಿನಂತೆ ಅನೇಕ ಮಂದಿ ಆಳುಗಳು ತೈಲದೀಪಗಳನ್ನೂ, ಪರ್ಯಂಕಾಸ್ತರಣಗಳನ್ನೂ ತೆಗೆದುಕೊಂಡು ಸುಗ್ರೀವರಾಜನ ಹಿಂದೆ ಹೊರಟರು. ಆ ಸಮಯದಲ್ಲಿ ಶ್ರೀರಾಮಾನುಜನಾದ ಭರತನು ಸುಗ್ರೀವನನ್ನು ಕುರಿತು, "ಎಲೈ ವಾನರೇಶ್ವರನೇ! ಶ್ರೀರಾಮಮೂರ್ತಿಯ ಪಟ್ಟಾಭಿಷೇಕ ನಿಮಿತ್ತವಾಗಿ ಮಂಗಳೋದಕವನ್ನು ತರುವುದಕ್ಕಾಗಿ ದೂತರನ್ನು ಆಜ್ಞಾಪಿಸುವವನಾಗು" ಎಂದು ವಿಜ್ಞಾಪಿಸಿದನು. ಆ ಕೂಡಲೇ ಆತನು ಸ್ವರ್ಣನಿರ್ಮಿತವೂ ರತ್ನಖಚಿತವೂ ಆದ ನಾಲ್ಕು ಕಲಶಗಳನ್ನು ನಾಲ್ವರು ವಾನರವೀರರ ಕೈಗಿತ್ತು, ಬೆಳಗಾಗುವುದರೊಳಗಾಗಿ ನಾಲ್ಕು ಸಮುದ್ರಗಳಿಂದ ಮಂಗಳೋದಕಗಳನ್ನು ತರಬೇಕೆಂದು ಅಪ್ಪಣೆ ಮಾಡಿದನು. ॥ ೪೭–೫೦ ॥ ಸುಗ್ರೀವರಾಜನೀರೀತಿ ಆಜ್ಞಾಪಿಸುತ್ತಲೇ ಗಜೋಪಮರೂ, ಮಹಾತ್ಮರೂ, ಮಹಾ ಬಲಾಢ್ಯರೂ ಆದ ಆ ವಾನರವೀರರು ಮಹಾ ವೇಗದಿಂದ ಹೋಗುವ ಗರುತ್ಮಂತನಂತೆ ಆ ಕಲಶಗಳೊಡನೆ ಆಕಾಶಕ್ಕೆ ಹಾರಿದರು. ಆ ರೀತಿ ಹಾರಿ ಹೋದ

|| ೫೧ || ಜಾಂಬವಾಂಶ್ಚ ಹನೂಮಾಂಶ್ಚ ವೇಗದರ್ಶೀಚ ವಾನರಃ । ಋಷಭಶ್ಚೈವ ಕಲಶಾನ್ ಜಲಪೂರ್ಣಾನಥಾಽನಯನ್ || ೫೨ || ನದೀಶತಾನಾಂ ಪಂಚಾನಾಂ ಜಲಂ ಕುಂಭೇಷು ಚಾಹರನ್ । ಪೂರ್ವಾತ್ಸಮುದ್ರಾತ್ಕಲಶಂ ಜಲಪೂರ್ಣಮಥಾನಯತ್ । ಸುಷೇಣಸ್ಸತ್ವಸಂಪನ್ನಸ್ಸರ್ವರತ್ನವಿಭೂಷಿತಂ ||೫೩|| ಋಷಭೋ ದಕ್ಷಿಣಾತ್ತೂರ್ಣಂ ಸಮುದ್ರಾಜ್ಜಲಮಾಹರತ್ । ರಕ್ತಚಂದನಶಾಖಾಭಿಸ್ಸಂವೃತಂ ಕಾಂಚನಂ ಘಟಂ ||೫೪|| ಗವಯಃ ಪಶ್ಚಿಮಾತ್ತೋಯಮಾಜಹಾರ ಮಹಾರ್ಣವಾತ್ । ರತ್ನಕುಂಭೇನ ಮಹತಾ ಶೀತಂ ಮಾರುತವಿಕ್ರಮಃ ||೫೫|| ಉತ್ತರಾಚ್ಚ ಜಲಂ ಶೀಘ್ರಂ ಗರುಡಾನಿಲ

ವಂತನು, ಹನೂಮಾಂಶ್ಚ - ಆಂಜನೇಯನು, ವಾನರಃ - ಕಪಿಯಾದ, ವೇಗದರ್ಶೀ - ವೇಗದರ್ಶೀ ಎಂಬವನೂ, ಋಷಭಶ್ಚೈವ - ಋಷಭನೆಂಬವನೂ, ಜಲಪೂರ್ಣಾನ್ - ನೀರಿನಿಂದ ತುಂಬಿದ, ಕಲಶಾನ್ - ಕುಂಭಗಳನ್ನು, ಆನಯನ್ - ತಂದರು, ಪಂಚಾನಾಂ - ಐದಾದ, ನದೀಶತಾನಾಂ - ನೂರು ನದಿಗಳ, ಜಲಂ - ಉದಕವನ್ನು, ಕುಂಭೇಷು - ಕಲಶಗಳಲ್ಲಿ, ಆಹರನ್ - ತೆಗೆದುಕೊಂಡು ಬಂದರು. || ೫೨ || ಅಥ - ಬಳಿಕ, ಸತ್ವಸಂಪನ್ನಃ - ದೇಹಬಲದಿಂದ ಸಂಪನ್ನನಾದ, ಸುಷೇಣಃ - ಸುಷೇಣನು, ಪೂರ್ವಾತ್ಸಮುದ್ರಾತ್ - ಪೂರ್ವ ಸಮುದ್ರದಿಂದ, ಜಲಪೂರ್ಣಂ - ಜಲಪೂರಿತ ವಾದ, ಸರ್ವ....ತಂ - ಸಮಸ್ತವಾದ ರತ್ನಗಳಿಂದ ಕೆತ್ತಲ್ಪಟ್ಟ, ಕಲಶಂ - ಕಲಶವನ್ನು, ಆನಯತ್ - ತಂದನು. || ೫೩ || ಋಷಭಃ - ಋಷಭನೆಂಬವನು, ದಕ್ಷಿಣಾತ್ಸಮುದ್ರಾತ್ - ದಕ್ಷಿಣದ ಕಡಲಿನ ದೆಸೆಯಿಂದ, ರಕ್ತ....ಭಿಃ - ಕೆಂಪಾದ ಶ್ರೀಗಂಧದ ಕೊಂಬೆಗಳಿಂದ, ಸಂವೃತಂ - ಸುತ್ತು ವರೆದ, ಕಾಂಚನಂ - ಸುವರ್ಣವಿಕಾರವಾದ, ಘಟಂ - ಬಿಂದಿಗೆಯಲ್ಲಿ, ಜಲಂ - ಉದಕವನ್ನು, ಆಹರತ್ - ತೆಗೆದುಕೊಂಡು ಬಂದನು. ||೫೪|| ಮಾರು....ಮಃ - ವಾಯುವಿಗೆ ಸಮಾನವಾದ ಗಮನ ವುಳ್ಳ, ಗವಯಃ - ಗವಯನು, ಮಹತಾ - ದೊಡ್ಡದಾದ, ರತ್ನಕುಂಭೇನ - ರತ್ನಕಲಶದಿಂದ, ಶೀತಂ- ತಣ್ಣಗಿರುವ, ತೋಯಂ - ಉದಕವನ್ನು, ಪಶ್ಚಿಮಾತ್ಮಹಾರ್ಣವಾತ್ - ಪಡವಲ ಕಡಲಿನಿಂದ, ಆಜಹಾರ - ತಂದನು. || ೫೫ || ಧರ್ಮಾತ್ಮಾ - ಧರ್ಮಿಷ್ಠನಾದ, ಸರ್ವ....ತಃ - ಸಮಸ್ತ ಗುಣ ಗಳಿಂದಲೂ ಕೂಡಿರುವ, ಗರು....ಮಃ - ಗರುಡನಿಗೂ, ವಾಯುವಿಗೂ ಸಮಾನವಾದ ಪರಾಕ್ರಮ ವುಳ್ಳ, ಸನಳಃ - ಆ ನಳನು, ಉತ್ತರಾತ್ - ಉತ್ತರದ ಕಡಲಿನಿಂದ, ಜಲಂ - ಉದಕವನ್ನು,

---

ಜಾಂಬವಂತನೂ, ಮಹಾ ವೇಗಿಯಾದ ಹನುಮಂತನೂ, ವೇಗದರ್ಶಿಯೂ, ಸುಷೇಣನೂ ಅತ್ಯಲ್ಪಕಾಲದಲ್ಲಿಯೇ ಜಲಪೂರ್ಣವಾದ ಕಲಶಗಳನ್ನು ತೆಗೆದುಕೊಂಡು ಬಂದರು. ಮತ್ತೆ ಕೆಲವು ವಾನರರು ಅನೇಕ ಕಲಶಗಳೊಡನೆ ಹೊರಟು ಅನೇಕ ಪುಣ್ಯ ನದಿಗಳ ಪುಣ್ಯೋದಕ ಗಳನ್ನು ತುಂಬಿಕೊಂಡು ಬಂದರು. ಆ ವಾನರರಲ್ಲಿ ಮಹಾ ಪರಾಕ್ರಮಿಯಾದ ಸುಷೇಣನು ನಾನಾವಿಧಗಳಾದ ರತ್ನಗಳಿಂದಲಂಕೃತವಾದ ಕಲಶದಿಂದ ಪೂರ್ವ ಸಮುದ್ರೋದಕವನ್ನೂ, ಋಷಭನೆಂಬ ವಾನರವೀರನು ದಕ್ಷಿಣಸಾಗರ ಜಲವನ್ನೂ, ರಕ್ತಚಂದನ ಶಾಖಾಲಂಕೃತ ವಾದ ಕಲಶದಿಂದ ಗವಯನು ಪಶ್ಚಿಮ ಸಮುದ್ರೋದಕವನ್ನೂ, ಗರುಡಾನಿಲರ ವೇಗಕ್ಕೆ ಸಮಾನವಾದ ವೇಗವುಳ್ಳವನೂ, ಧರ್ಮಾತ್ಮನೂ ಆದ ನಲನು ಬಹು ದೊಡ್ಡ ರತ್ನ ಕಲಶ ದಿಂದ ಉತ್ತರ ಸಮುದ್ರೋದಕವನ್ನೂ ತೆಗೆದುಕೊಂಡು ಬಂದರು. ಹೀಗೆ ವಾನರೋತ್ತಮ ರೆಲ್ಲರೂ ತೆಗೆದುಕೊಂಡು ಬಂದ ಪೂರ್ಣ ಜಲಕುಂಭಗಳನ್ನು ನೋಡಿ ಶತ್ರುಘ್ನನು ಪರ

ವಿಕ್ರಮಃ । ಆಜಹಾರ ಸ ಧರ್ಮಾತ್ಮಾ ನಳಸ್ಸರ್ವಗುಣಾನ್ವಿತಃ । ತತಸ್ತೈರ್ವಾನರಶ್ರೇಷ್ಠೈರಾನೀತಂ ಪ್ರೇಕ್ಷ್ಯ ತಜ್ಜಲಂ ॥ ೫೬-೫೭ ॥

ಅಭಿಷೇಕಾಯ ರಾಮಸ್ಯ ಶತ್ರುಘ್ನಸ್ಸಚಿವೈಸ್ಸಹ ।
ಪುರೋಹಿತಾಯ ಶ್ರೇಷ್ಠಾಯ ಸುಹೃದ್ಭ್ಯಶ್ಚ ನ್ಯವೇದಯತ್ ॥ ೫೮ ॥

ಶೀಘ್ರಂ - ಜಾಗ್ರತೆಯಾಗಿ, ಆಜಹಾರ - ತಂದನು. ॥೫೬॥ ತತಃ - ಬಳಿಕ, ತೈರ್ವಾನರಶ್ರೇಷ್ಠೈಃ - ಆ ವಾನರೋತ್ತಮರಿಂದ, ಆನೀತಂ - ತರಲ್ಪಟ್ಟ, ತಜ್ಜಲಂ - ಆ ಉದಕವನ್ನು, ಪ್ರೇಕ್ಷ್ಯ - ಕಂಡು, ರಾಮಸ್ಯ - ಶ್ರೀರಾಮನಿಗೆ, ಅಭಿಷೇಕಾಯ - ಪಟ್ಟಾಭಿಷೇಕಕ್ಕೋಸ್ಕರ, ಸಚಿವೈಸ್ಸಹ - ಮಂತ್ರಿಗಳೊಡಗೂಡಿ, ಶತ್ರುಘ್ನಃ - ಶತ್ರುಘ್ನನು, ಪುರೋಹಿತಾಯ - ಪುರೋಹಿತರಾದ, ಶ್ರೇಷ್ಠಾಯ - ಪೂಜ್ಯರಾದ ವಸಿಷ್ಠಋಷಿಗಳಿಗಾಗಿ, ಸುಹೃದ್ಭ್ಯಶ್ಚ-ಸ್ನೇಹಿತರಿಗೋಸ್ಕರವೂ, ನ್ಯವೇದಯತ್-ತಿಳಿಸಿದನು. ॥೫೭-೫೮॥

ಮಾನಂದಭರಿತನಾಗಿ ಮಂತ್ರಿಗಳೊಡನೆ ಮಂತ್ರಾಲೋಚನೆ ಮಾಡಿ ಆ ವೃತ್ತಾಂತವೆಲ್ಲವನ್ನೂ ಪುರೋಹಿತರಾದ ವಸಿಷ್ಠರಿಗೂ ತನ್ನ ಮಿತ್ರರಿಗೂ ಅರಿಕೆ ಮಾಡಿ ಉದಕಕುಂಭಗಳನ್ನವರಿಗೆ ಸಮರ್ಪಿಸಿದನು. ॥ ೫೧–೫೮ ॥

—: ಅಥ ಶ್ರೀರಾಮ ಮೂರ್ತೇಃ ಪಟ್ಟಾಭಿಷೇಕ ಘಟ್ಟಃ —

ತತಸ್ಸ ಪ್ರಯತೋ ವೃದ್ಧೋ ವಸಿಷ್ಠೋ ಬ್ರಾಹ್ಮಣೈಸ್ಸಹ । ರಾಮಂ ರತ್ನಮಯೇ ಪೀಠೇ ಸಹಸೀತಂ ನ್ಯವೇಶಯತ್ ॥ ೫೯ ॥ ವಸಿಷ್ಠೋ ವಾಮದೇವಶ್ಚ ಜಾಬಾಲಿರಥ ಕಾಶ್ಯಪಃ । ಕಾತ್ಯಾಯನಸ್ಸುಯಜ್ಞಶ್ಚ ಗೌತಮೋ ವಿಜಯಸ್ತಥಾ ॥೬೦॥ ಅಭ್ಯಷಿಂಚನ್ನರವ್ಯಾಘ್ರಂ ಪ್ರಸನ್ನೇನ ಸುಗಂಧಿನಾ । ಸಲಿಲೇನ ಸಹಸ್ರಾಕ್ಷಂ ವಸವೋ ವಾಸವಂ ಯಥಾ ॥ ೬೧ ॥ ಋತ್ವಿಗ್ಭಿರ್ಬ್ರಾಹ್ಮಣೈಃ ಪೂರ್ವಂ ಕನ್ಯಾಭಿರ್ಮಂತ್ರಿಭಿಸ್ತಥಾ । ಯೋಧೈಶ್ಚೈವಾಽಭ್ಯಷಿಂಚಂಸ್ತೇ ಸಂಪ್ರಹೃಷ್ಟಾಸ್ಸನೈಗಮೈಃ

ತತಃ - ಬಳಿಕ, ಪ್ರಯತಃ - ಯತ್ನವಂತನಾದ, ವೃದ್ಧಃ - ಜ್ಞಾನದಿಂದಲೂ ವಯಸ್ಸಿನಿಂದಲೂ ವೃದ್ಧನಾದ, ಸವಸಿಷ್ಠಃ - ಆ ವಸಿಷ್ಠಋಷಿಯು, ಬ್ರಾಹ್ಮಣೈಸ್ಸಹ - ಬ್ರಾಹ್ಮಣರೊಡನೆ, ರತ್ನಮಯೇ - ರತ್ನಮಯವಾದ, ಪೀಠೇ - ಸಿಂಹಾಸನದಲ್ಲಿ, ಸಹಸೀತಂ - ಸೀತಾಸಮೇತನಾದ, ರಾಮಂ - ಶ್ರೀರಾಮನನ್ನು, ನ್ಯವೇಶಯತ್ - ಕೂಡಿಸಿದನು. ॥ ೫೯ ॥ ವಸಿಷ್ಠಃ - ವಸಿಷ್ಠನು, ವಾಮದೇವಶ್ಚ - ವಾಮದೇವನೂ, ಜಾಬಾಲಿಃ - ಜಾಬಾಲಿಯೂ, ಅಥ - ಬಳಿಕ, ಕಾಶ್ಯಪಃ - ಕಾಶ್ಯಪನೂ, ಕಾತ್ಯಾಯನಃ-ಕಾತ್ಯಾಯನನೂ, ಸುಯಜ್ಞಶ್ಚ-ಸುಯಜ್ಞನೂ, ಗೌತಮಃ-ಗೌತಮನೂ, ತಥಾ-ಹಾಗೆಯೇ, ವಿಜಯಶ್ಚ - ವಿಜಯನೂ ಈ ಎಂಟು ಜನರೂ, ಸುಗಂಧಿನಾ - ಸುವಾಸನೆಯುಳ್ಳ, (ಅಂದರೆ - ಪರಿಮಳಯುಕ್ತವಾದ,) ಪ್ರಸನ್ನೇನ - ನಿರ್ಮಲವಾದ, ಸಲಿಲೇನ - ಉದಕದಿಂದ, ಸಹಸ್ರಾಕ್ಷಂ - ಸಹಸ್ರನೇತ್ರನಾದ, ವಾಸವಂ - ದೇವೇಂದ್ರನನ್ನು, ವಸವೋಯಥಾ - ಅಷ್ಟವಸುಗಳಂತೆ, ನರವ್ಯಾಘ್ರಂ - ಪುರುಷಶ್ರೇಷ್ಠನಾದ ಶ್ರೀರಾಮನನ್ನು, ಅಭ್ಯಷಿಂಚನ್ - ಅಭಿಷೇಕ ಮಾಡಿದರು. ॥೬೦-೬೧॥ ತೇ - ಆ ಬ್ರಾಹ್ಮಣರು, ಪೂರ್ವಂ - ಮೊದಲು, ಋತ್ವಿಗ್ಭಿಃ - ಋತ್ವಿಜರಾದ, ಬ್ರಾಹ್ಮಣೈಃ - ಬ್ರಾಹ್ಮಣರಿಂದಲೂ, ಕನ್ಯಾಭಿಃ - ಷೋಡಶ ಕನ್ಯಕೆಯರಿಂದಲೂ, ತಥಾ - ಹಾಗೆಯೇ, ಮಂತ್ರಿಭಿಃ - ಮಂತ್ರಿಗಳಿಂದಲೂ, ಸನೈಗಮೈಃ - ವೈಶ್ಯರಿಂದೊಡಗೂಡಿದ, ಯೋಧೈಶ್ಚೈವ - ಭಟರಿಂದಲೂ, ಉಪಲಕ್ಷಿತಾಃ - ಕೂಡಿದವರಾಗಿ, ಸಂಪ್ರಹೃಷ್ಟಾಃ - ಸಂತೋಷಗೊಂಡು, ಅಭ್ಯಷಿಂಚನ್ - ಅಭಿಷೇಕ ಮಾಡಿದರು. ॥ ೬೨ ॥

—: ಶ್ರೀರಾಮ ಪಟ್ಟಾಭಿಷೇಕ ಘಟ್ಟವು :—

ಆ ಬಳಿಕ ಜ್ಞಾನದಿಂದಲೂ ವಯಸ್ಸಿನಿಂದಲೂ ಬಹಳ ವೃದ್ಧನಾದ ವಸಿಷ್ಠ ಮಹರ್ಷಿಯು ಬ್ರಾಹ್ಮಣರೊಡಗೂಡಿದವನಾಗಿ ಪ್ರಯತ್ನಪುರಸ್ಸರವಾಗಿ ಸೀತಾಸಮೇತನಾದ ಶ್ರೀರಾಮಮೂರ್ತಿಯನ್ನು ರತ್ನಮಯವಾದ ಸಿಂಹಾಸನದಲ್ಲಿ ಕುಳ್ಳಿರಿಸಿದನು. ಆಗ ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ಕಾತ್ಯಾಯನ, ಸುಯಜ್ಞ, ಗೌತಮ, ವಿಜಯ ಇವರೇ ಮೊದಲಾದ ಮಹರ್ಷಿಗಳೆಲ್ಲರೂ ಪುರುಷೋತ್ತಮನಾದ ಶ್ರೀರಾಮಮೂರ್ತಿಗೆ ಅಷ್ಟವಸುಗಳು ದೇವೇಂದ್ರನಿಗೆ ಹೇಗೋ ಹಾಗೆ ಸುಗಂಧೋದಕದಿಂದ ಅಭಿಷೇಕವನ್ನು ಮಾಡಿದರು. ಋತ್ವಿಜರೂ, ಬ್ರಾಹ್ಮಣರೂ ಮೊದಲು ಅಭಿಷೇಕ ಕಾರ್ಯವನ್ನು ಮಾಡಿದ ತರುವಾಯ ಇತರರಾದ ಮಂತ್ರಿಗಳೂ, ಅವರಾದಮೇಲೆ ಯೋಧರೂ, ಆಮೇಲೆ ವರ್ತಕರೂ ಮಹದಾನಂದಭರಿತರಾಗಿ ಆ ಶ್ರೀರಾಮಮೂರ್ತಿಗೆ ಅಭಿಷೇಕ ಮಾಡಿದರು. ಆ ಸಮಯದಲ್ಲಿ ವಸಿಷ್ಠರೇ ಮೊದಲಾದ



ಪುಟ ೭೯೮ ಶ್ರೀರಾಮ ಪಟ್ಟಾಭಿಷೇಕ

॥ ೬೨ ॥ ಸರ್ವೌಷಧಿರಸೈರ್ದಿವ್ಯೈರ್ದೈವತೈರ್ನಭಸಿ ಸ್ಥಿತೈಃ । ಚತುರ್ಭಿರ್ಲೋಕಪಾಲೈಶ್ಚ ಸರ್ವೈರ್ದೇವೈಶ್ಚ ಸಂಗತೈಃ ॥ ೬೩ ॥ ಬ್ರಹ್ಮಣಾ ನಿರ್ಮಿತಂ ಪೂರ್ವಂ ಕಿರೀಟಂ ರತ್ನಶೋಭಿತಂ । ಅಭಿಷಿಕ್ತಃ ಪುರಾ ಯೇನ ಮನುಸ್ತಂ ದೀಪ್ತತೇಜಸಂ ॥ ೬೪ ॥ ತಸ್ಯಾನ್ವವಾಯೇ ರಾಜಾನಃ ಕ್ರಮಾದ್ಯೇನಾಭಿಷೇಚಿತಾಃ । ಸಭಾಯಾಂ ಹೇಮಕ್ಲೃಪ್ತಾಯಾಂ ಶೋಭಿತಾಯಾಂ ಮಹಾಜನೈಃ ॥ ೬೫ ॥ ರತ್ನೈರ್ನಾನಾವಿಧೈಶ್ಚೈವ ಚಿತ್ರಿತಾಯಾಂ ಸುಶೋಭನೈಃ । ನಾನಾರತ್ನಮಯೇ ಪೀಠೇ ಕಲ್ಪಯಿತ್ವಾ ಯಥಾವಿಧಿ ॥ ೬೬ ॥ ಕಿರೀಟೇನ ತತಃ ಪಶ್ಚಾದ್ವಸಿಷ್ಠೇನ ಮಹಾತ್ಮನಾ । ಋತ್ವಿಗ್ಭಿ

ತೇ - ಆ ವಸಿಷ್ಠಾದಿ ಋಷಿಗಳು, ದಿವ್ಯೈಃ - ಮನೋಹರಗಳಾದ, ಸರ್ವೌಷಧಿರಸೈಃ - ಸಮಸ್ತ ಓಷಧಿ ರಸಗಳಿಂದಲೂ, ನಭಸಿ - ಅಂತರಿಕ್ಷದಲ್ಲಿ, ಸ್ಥಿತೈಃ - ಇರುವ, ದೈವತೈಃ - ದೇವತೆಗಳೊಡಗೂಡಿ, ಚತುರ್ಭಿಃ - ನಾಲ್ವರಾದ, ಲೋಕಪಾಲೈಶ್ಚ - ದಿಕ್ಪಾಲಕರೊಡನೆ, ಸಂಗತೈಃ - ಸೇರಿರುವ, ಸರ್ವೈರ್ದೇವೈಃ - ಸಮಸ್ತ ದೇವತೆಗಳಿಂದಲೂ, ಅಭ್ಯಷಿಂಚನ್ - ಅಭಿಷೇಕ ಮಾಡಿದರು. ॥ ೬೩ ॥ ಪುರಾ - ಪೂರ್ವದಲ್ಲಿ, ಮನುಃ - ಮನುಚಕ್ರವರ್ತಿಯು, ಯೇನ - ಯಾವ ಕಿರೀಟದಿಂದ, ಅಭಿಷಿಕ್ತಃ - ಅಭಿಷೇಕ ಮಾಡಲ್ಪಟ್ಟನೋ, ತಸ್ಯ - ಆ ಮನುಚಕ್ರವರ್ತಿಯ, ಅನ್ವವಾಯೇ - ವಂಶದಲ್ಲಿ, ರಾಜಾನಃ - ಅರಸರು, ಕ್ರಮಾತ್ - ಕ್ರಮವಾಗಿ, ಯೇನ - ಯಾವ ಕಿರೀಟದಿಂದ, ಅಭಿಷೇಚಿತಾಃ - ಅಭಿಷೇಕ ಮಾಡಲ್ಪಟ್ಟರೋ, ತಂ - ಅಂಥಾ, ಬ್ರಹ್ಮಣಾ - ಬ್ರಹ್ಮದೇವರಿಂದ, ನಿರ್ಮಿತಂ - ನಿರ್ಮಿಸಲ್ಪಟ್ಟ, ಪೂರ್ವಂ - ಪುರಾತನವಾದ, ರತ್ನಶೋಭಿತಂ - ರತ್ನಗಳಿಂದ ಪ್ರಕಾಶಿಸುತ್ತಿರುವ, ದೀಪ್ತತೇಜಸಂ - ಹೊಳೆಯುತ್ತಿರುವ ಕಾಂತಿಯುಳ್ಳ, ಕಿರೀಟಂ - ಕಿರೀಟವನ್ನು, ಹೇಮಕ್ಲೃಪ್ತಾಯಾಂ - ಚಿನ್ನದಿಂದ ನಿರ್ಮಿಸಲ್ಪಟ್ಟ, ನಾನಾವಿಧೈಃ - ಅನೇಕ ಬಗೆಗಳಾದ, ಸುಶೋಭನೈಃ - ಬಹಳವಾಗಿ ಪ್ರಕಾಶಿಸುತ್ತಿರುವ, ರತ್ನೈಃ - ರತ್ನಗಳಿಂದ, ಚಿತ್ರಿತಾಯಾಂ - ಚಿತ್ರವರ್ಣವಾಗಿ ಮಾಡಲ್ಪಟ್ಟ, ಮಹಾಜನೈಃ - ಬಹಳ ಜನರಿಂದ, ಶೋಭಿತಾಯಾಂ - ಹೊಳೆಯುತ್ತಿರುವ, ಸಭಾಯಾಂ - ಸಭೆಯಲ್ಲಿ, ನಾನಾರತ್ನಮಯೇ - ಅನೇಕ ರತ್ನಮಯವಾದ, ಪೀಠೇ - ಸಿಂಹಾಸನದಲ್ಲಿ, ಕಲ್ಪಯಿತ್ವಾ - ಕೂಡಿಸಿ, ಯಥಾವಿಧಿ - ಶಾಸ್ತ್ರೋಕ್ತವಾಗಿ, ಮಹಾತ್ಮನಾ - ಮಹಾತ್ಮನಾದ, ವಸಿಷ್ಠೇನ - ವಸಿಷ್ಠಋಷಿಯಿಂದ, ಋತ್ವಿಗ್ಭಿಃ - ಋತ್ವಿಜರೊಡಗೂಡಿ, ನಿದಧುಃ - ಇಟ್ಟರು, ತತಃ ಪಶ್ಚಾತ್ - ಆ ಬಳಿಕ, ರಾಘವಃ - ಶ್ರೀರಾಮನು, ತೇನಕಿರೀಟೇನ - ಆ ಕಿರೀಟದಿಂದಲೂ, ಭೂಷಣೈ

ಋತ್ವಿಜರು ಆಕಾಶದಲ್ಲಿ ನಿಂತಿರುವ ದೇವತೆಗಳಿಂದಲೂ, ನಾಲ್ವರು ದಿಕ್ಪಾಲಕರಿಂದಲೂ ಕೂಡಿದವರಾಗಿ ಸರ್ವೌಷಧಿ ರಸಗಳಿಂದಲೂ ಶ್ರೀರಾಮಮೂರ್ತಿಗೆ ಅಭಿಷೇಕ ಮಾಡಿದರು. ಆ ಬಳಿಕ ಪೂರ್ವದಲ್ಲಿ ರತ್ನಮಯವಾದ ಯಾವ ಕಿರೀಟವು ಬ್ರಹ್ಮದೇವನಿಂದ ನಿರ್ಮಿತವಾದುದೋ, ಯಾವುದರಿಂದ ಮಹಾ ತೇಜಸ್ವಿಯಾದ ಮನುರಾಯನು ಪಟ್ಟಾಭಿಷಿಕ್ತನಾದನೋ, ಯಾವುದರಿಂದ ಆ ಮನುವಂಶದ ರಾಜರು ಕ್ರಮವಾಗಿ (ಪಾರಂಪರ್ಯವಾಗಿ) ಪಟ್ಟಾಭಿಷಿಕ್ತರಾದರೋ, ಅಂಥ ಬಹು ಪ್ರಾಚೀನವಾದ ಕಿರೀಟವನ್ನು ಮಹದೈಶ್ವರ್ಯವಂತರಿಂದ ತುಂಬಿರುವ, ಸ್ವರ್ಣಮಯವಾದ, ವಿವಿಧ ರತ್ನವಿರಾಜಿತವಾದ, ಚಿತ್ರತರವಾದ, ಮಂಗಳಮಯವಾದ ಆ ಸಭೆಯಲ್ಲಿ ಪೂಜ್ಯರಾದ ವಸಿಷ್ಠಮಹರ್ಷಿಗಳು ಸಿಂಹಾಸನಾಸೀನನಾದ ಶ್ರೀರಾಮಚಂದ್ರನ ಶಿರಸ್ಸಿನ ಮೇಲಿಟ್ಟರು. ಆ ಬಳಿಕ ಇತರ ಋತ್ವಿಜರೆಲ್ಲರೂ ವಿವಿಧ ಭೂಷಣಗಳಿಂದ

ಭೂರ್ಷಣೈಶ್ಚೈವ ಸಮಯೋಕ್ಷ್ಯತ ರಾಘವಃ ||೬೭|| ಛತ್ರಂತು ತಸ್ಯ ಜಗ್ರಾಹ ಶತ್ರುಘ್ನಃ ಪಾಂಡುರಂ ಶುಭಂ । ಶ್ವೇತಂಚ ವಾಲವ್ಯಜನಂ ಸುಗ್ರೀವೋ ವಾನರೇಶ್ವರಃ ||೬೮|| ಅಪರಂ ಚಂದ್ರಸಂಕಾಶಂ ವಾಲವ್ಯಜನಮುತ್ತಮಂ । ಹೃಷ್ಟೋ ರಾಮಸ್ಯ ಜಗ್ರಾಹ ರಾಕ್ಷಸೇಂದ್ರೋ ವಿಭೀಷಣಃ ||೬೯|| ಮಾಲಾಂ ಜ್ವಲಂತೀಂ ವಪುಷಾ ಕಾಂಚನೀಂ ಶತಪುಷ್ಕರಾಂ । ರಾಘವಾಯ ದದೌ ವಾಯುರ್ವಾಸವೇನ ಪ್ರಚೋದಿತಃ ||೭೦|| ಪ್ರಜಗುರ್ದೇವಗಂಧರ್ವಾ ನನೃತುಶ್ಚಾಪ್ಸರೋಗಣಾಃ । ಅಭಿಷೇಕೇ ತದರ್ಹಸ್ಯ ತದಾ ರಾಮಸ್ಯ ಧೀಮತಃ ||೭೧|| ಭೂಮಿಸ್ಸಸ್ಯವತೀ ಚೈವ ಫಲವಂತಶ್ಚ

ಶ್ಚೈವ - ಇತರಗಳಾದ ಒಡವೆಗಳಿಂದಲೂ, ಸಮಯೋಕ್ಷ್ಯತ - ಕೂಡಿಸಲ್ಪಟ್ಟನು, ಶತ್ರುಘ್ನಃ - ಶತ್ರುಘ್ನನು, ತಸ್ಯ - ಆ ಶ್ರೀರಾಮನಿಗೆ, ಪಾಂಡುರಂ - ಬೆಳ್ಳಗಿರುವ, ಶುಭಂ - ಶುಭಕರವಾದ, ಛತ್ರಂ - ಶ್ವೇತಚ್ಛತ್ರವನ್ನು, ಜಗ್ರಾಹ - ಹಿಡಿದನು, ವಾನರೇಶ್ವರಃ - ವಾನರರಾಜನಾದ, ಸುಗ್ರೀವಃ - ಸುಗ್ರೀವನು, ಶ್ವೇತಂ - ಬೆಳ್ಳಗಿರುವ, ವಾಲವ್ಯಜನಂ - ಚಾಮರವನ್ನು, ಜಗ್ರಾಹ - ಹಿಡಿದನು, ಚಂದ್ರಸಂಕಾಶಂ - ಚಂದ್ರನಿಗೆ ಸಮಾನವಾದ ಪ್ರಕಾಶವುಳ್ಳ, ಅಪರಂ - ಮತ್ತೊಂದು ಚಾಮರವನ್ನು, ರಾಕ್ಷಸೇಂದ್ರಃ - ರಾಕ್ಷಸರಾಜನಾದ, ವಿಭೀಷಣಃ - ವಿಭೀಷಣನು, ಜಗ್ರಾಹ - ಹಿಡಿದನು. ||೬೮|| (ಆ ಸಮಯದಲ್ಲಿ) ವಾಯುಃ - ವಾಯುದೇವನು, ವಾಸವೇನ-ದೇವೇಂದ್ರನಿಂದ, ಪ್ರಚೋದಿತಃ-ಕಳುಹಲ್ಪಟ್ಟವನಾಗಿ, ಶತಪುಷ್ಕರಾಂ-ನೂರು ಕಮಲಗಳುಳ್ಳ, ಕಾಂಚನೀಂ-ಚಿನ್ನದ ವಿಕಾರವಾದ ವಪುಷಾ - ಆಕಾರದಿಂದ, ಜ್ವಲಂತೀಂ - ಬೆಳಗುತ್ತಿರುವ, ಮಾಲಾಂ - ಚಿನ್ನದ ಮಾಲಿಕೆಯನ್ನು, ರಾಘವಾಯ - ಶ್ರೀರಾಮನಿಗಾಗಿ, ದದೌ - ಕೊಟ್ಟನು. ||೬೯|| ಶಕ್ರಪ್ರಚೋದಿತಃ - ದೇವೇಂದ್ರನಿಂದ ಪ್ರೇರೇಪಿಸಲ್ಪಟ್ಟವನಾಗಿ, ಸರ್ವ....ಕ್ತಂ - ಸಮಸ್ತ ರತ್ನಗಳಿಂದ ಕೂಡಿರುವ ಶ್ರೇಷ್ಠವಾದ ರತ್ನಗಳಿಂದಲೇ ಅಲಂಕೃತವಾದ, ಮುಕ್ತಾಹಾರಂಚ - ಮುತ್ತಿನ ಸರವನ್ನೂ, ನರೇಂದ್ರಾಯ - ಶ್ರೀರಾಮನಿಗೋಸುಗ, ದದೌ - ಕೊಟ್ಟನು. ||೭೦|| ತದಾ - ಆ ಕಾಲದಲ್ಲಿ, ತದರ್ಹಸ್ಯ - ಆ ಅಭಿಷೇಕಕ್ಕೆ ಅರ್ಹನಾದ, ಧೀಮತಃ - ಬುದ್ಧಿಶಾಲಿಯಾದ, ತಸ್ಯ - ಆ ಶ್ರೀರಾಮನ, ಅಭಿಷೇಕೇ - ಅಭಿಷೇಕ ಕಾಲದಲ್ಲಿ, ದೇವಗಂಧರ್ವಾಃ - ದೇವತೆಗಳೂ ಗಂಧರ್ವರೂ, ಪ್ರಜಗುಃ - ಗಾನ ಮಾಡಿದರು, ಅಪ್ಸರೋಗಣಾಶ್ಚ - ಅಪ್ಸರಸ್ತ್ರೀಯರ ತಂಡಗಳು, ನನೃತುಃ - ನಾಟ್ಯಮಾಡಿದವು. ||೭೧|| ರಾಘವೋತ್ಸವೇ - ಶ್ರೀರಾಮನ ಪಟ್ಟಾಭಿಷೇಕೋತ್ಸವ ಕಾಲದಲ್ಲಿ, ಭೂಮಿಃ - ಭೂಮಿಯು, ಸಸ್ಯವತೀ - ತುಂಬು ಪೈರುಗಳುಳ್ಳದು, ಬಭೂವ -

ಶ್ರೀರಾಮನನ್ನಲಂಕರಿಸಿದರು. ಆ ಸಮಯದಲ್ಲಿ ಶತ್ರುಘ್ನನು ಮಂಗಳಕರವಾದ ಬೆಳುಗೊಡೆಯನ್ನು ಹಿಡಿದನು. ವಾನರೇಶ್ವರನಾದ ಸುಗ್ರೀವನು ಶುಭ್ರವೂ, ಬೆಳ್ಳಗೂ ಇರುವ ವಾಲವ್ಯಜನವನ್ನು ಹಿಡಿದನು ; ರಾಕ್ಷಸಾಧಿಪನಾದ ವಿಭೀಷಣನು ಮತ್ತೊಂದು ಶ್ವೇತವಾಲವ್ಯಜನವನ್ನು ಹಿಡಿದನು. ಆಗ ವಾಯುದೇವನು ಮಹೇಂದ್ರನಿಂದ ಪ್ರೇರಿತನಾಗಿ ಶ್ರೀರಾಮಮೂರ್ತಿಗೆ ಸಮಸ್ತ ರತ್ನಸಹಿತವೂ, ಅನರ್ಘ್ಯಮಣಿಭೂಷಿತವೂ ಸ್ವರ್ಣಕಮಲಶತವಿರಾಜಿತವೂ ಆದ ಹಾರವನ್ನೂ ಮತ್ತೊಂದು ಮುಕ್ತಾಹಾರವನ್ನೂ ಶ್ರೀರಾಮಚಂದ್ರನಿಗೆ ಸಮರ್ಪಿಸಿದನು. ಮಹಾರ್ಹವಾದ ಶ್ರೀರಾಮಮೂರ್ತಿಯ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ದೇವಗಂಧರ್ವರೆಲ್ಲರೂ ಮೃದುಮಧುರವಾಗಿ ಗಾನಮಾಡಿದರು. ಅಪ್ಸರೆಯರು ನಾಟ್ಯಮಾಡಿದರು. ಭೂಮಿಯೆಲ್ಲವೂ ಸಸ್ಯಸಮೃದ್ಧವಾಯಿತು. ವೃಕ್ಷಗಳೆಲ್ಲವೂ ಫಲಪುಷ್ಪಭರಿತವಾದುವು.

ಪಾದಪಾಃ । ಗಂಧವಂತಿಚ ಪುಷ್ಪಾಣಿ ಬಭೂವೂ ರಾಘವೋತ್ಸವೇ ॥ ೭೮ ॥ ಸಹಸ್ರ ಶತಮಶ್ವಾನಾಂ ಧೇನೂನಾಂಚ ಗವಾಂ ತಥಾ । ದದೌ ಶತಂ ವೃಷಾರ್ ಪೂರ್ವಂ ದ್ವಿಜೇಭ್ಯೋ ಮನುಜರ್ಷಭಃ ॥ ೭೯ ॥ ತ್ರಿಂಶತ್ಕೋಟೀರ್ಹಿರಣ್ಯಸ್ಯ ಬ್ರಾಹ್ಮಣೇಭ್ಯೋ ದದೌ ಪುನಃ । ನಾನಾಭರಣವಸ್ತ್ರಾಣಿ ಮಹಾರ್ಹಾಣಿ ಚ ರಾಘವಃ ॥ ೮೦ ॥ ಅರ್ಕ ರಶ್ಮಿಪ್ರತೀಕಾಶಾಂ ಕಾಂಚನೀಂ ಮಣಿವಿಗ್ರಹಾಂ । ಸುಗ್ರೀವಾಯ ಸ್ರಜಂ ದಿವ್ಯಾಂ ಪ್ರಾಯಚ್ಛನ್ಮನುಜರ್ಷಭಃ ॥ ೮೧ ॥ ವೈಡೂರ್ಯಮಣಿಚಿತ್ರೇಚ ವಜ್ರರತ್ನವಿಭೂಷಿತೇ । ವಾಲಿಪುತ್ರಾಯ ಧೃತಿಮಾನಂಗದಾಯಾಂಗದೇ ದದೌ ॥೮೨॥ ಮಣಿಪ್ರವರ

ಆಯಿತು, ಪಾದಪಾಃ - ಗಿಡಗಳು, ಫಲವಂತಶ್ಚ - ಫಲಗಳುಳ್ಳವುಗಳಾದವು, ಪುಷ್ಪಾಣಿ - ಹುವ್ವುಗಳು, (ಎಂದರೆ-ನಿರ್ಗಂಧ ಕುಸುಮಗಳೂ ಸಹ,) ಗಂಧವಂತಿಚ-ಸುಗಂಧವುಳ್ಳವುಗಳು, ಬಭೂವುಃ-ಆದವು. ॥೭೮॥ ಮನುಜರ್ಷಭಃ-ಮನುಷ್ಯಶ್ರೇಷ್ಠನಾದ ಶ್ರೀರಾಮನು, ಅಶ್ವಾನಾಂ-ಕುದುರೆಗಳ, ಸಹಸ್ರಶತಂ - ಲಕ್ಷವನ್ನು, ತಥಾ - ಅದೇ ಸಂಖ್ಯೆಯುಳ್ಳ, ಧೇನೂನಾಂ - ಹಾಲು ಕರೆಯುತ್ತಿರುವ, (ಆಗತಾನೆ ಕರು ಹಾಕಿದ), ಗವಾಂ - ಆಕಳುಗಳ, ಸಹಸ್ರಶತಂ - ಲಕ್ಷವನ್ನು, ಶತಂ - ನೂರಾದ, ವೃಷಾರ್ - ವೃಷಭಗಳನ್ನೂ, ಪೂರ್ವಂ - ಮೊದಲು, ದ್ವಿಜೇಭ್ಯಃ - ಬ್ರಾಹ್ಮಣರಿಗಾಗಿ, ದದೌ - ಕೊಟ್ಟನು. ॥ ೭೯ ॥ ರಾಘವಃ - ಶ್ರೀರಾಮನು, ಬ್ರಾಹ್ಮಣೇಭ್ಯಃ - ಬ್ರಾಹ್ಮಣರಿಗಾಗಿ, ಹಿರಣ್ಯಸ್ಯ - ಬಂಗಾರದ, ತ್ರಿಂಶತ್ಕೋಟೀಃ - ಮುವ್ವತ್ತುಕೋಟಿಗಳನ್ನು, ಪುನಃ - ಮತ್ತು, ಮಹಾರ್ಹಾಣಿ - ಅಮೂಲ್ಯಗಳಾದ, ನಾನಾ....ಚ - ಅನೇಕ ಬಗೆಗಳಾದ ಒಡವೆಗಳನ್ನೂ, ವಸ್ತ್ರಗಳನ್ನೂ, ದದೌ - ಕೊಟ್ಟನು. ॥ ೮೦ ॥ ಮನುಜರ್ಷಭಃ - ಮನುಷ್ಯರಾಜನಾದ ಶ್ರೀರಾಮನು, ಸುಗ್ರೀವಾಯ - ಸುಗ್ರೀವನಿಗಾಗಿ, ಅರ್ಕರಶ್ಮಿಪ್ರತೀಕಾಶಾಂ - ಸೂರ್ಯನ ಕಿರಣಗಳ ಕಾಂತಿಯಿಂದ ಬೆಳಗುತ್ತಿರುವ, ಮಣಿವಿಗ್ರಹಾಂ - ರತ್ನಪ್ರಚುರವಾದ, ಕಾಂಚಿನೀಂ - ಬಂಗಾರದ, ದಿವ್ಯಾಂ - ಮನೋಹರವಾದ, ಸ್ರಜಂ - ಹಾರವನ್ನು, ಪ್ರಾಯಚ್ಛತ್ - ಕೊಟ್ಟನು. ॥ ೮೧ ॥ ಧೃತಿಮಾರ್ - ಧೈರ್ಯವಂತನಾದ ಶ್ರೀರಾಮನು, ವೈಡೂರ್ಯಮಣಿಚಿತ್ರೇಚ - ವೈಡೂರ್ಯಮಣಿಗಳಿಂದ ಚಿತ್ರವರ್ಣವುಳ್ಳ, ವಜ್ರ....ತೇ - ವಜ್ರಗಳಿಂದಲೂ ರತ್ನಗಳಿಂದಲೂ ಅಲಂಕೃತವಾದ, ಅಂಗದೇ - ತೋಳುಬಂದಿಗಳನ್ನು, ವಾಲಿಪುತ್ರಾಯ - ವಾಲಿಯ ಮಗನಾದ, ಅಂಗದಾಯ - ಅಂಗದನಿಗಾಗಿ, ದದೌ - ಕೊಟ್ಟನು. ॥ ೮೨ ॥ ರಾಮಃ - ಶ್ರೀರಾಮನು,

---

ಶ್ರೀರಾಮನ ಪಟ್ಟಾಭಿಷೇಕ ಸಮಯದಲ್ಲಿ ಸಮಸ್ತ ನಿರ್ಗಂಧ ಕುಸುಮಗಳೂ ಸಹ ಸುಗಂಧ ಭರಿತವಾದುವು. ॥ ೭೮–೮೨ ॥ ಪುರುಷೋತ್ತಮನಾದ ಶ್ರೀರಾಮಮೂರ್ತಿಯು ಆ ಉತ್ಸವ ಸಮಯದಲ್ಲಿ ಮೊದಲು ಬ್ರಾಹ್ಮಣೋತ್ತಮರಿಗೆ ಒಂದು ಲಕ್ಷ ಕುದುರೆಗಳನ್ನೂ, ಆಗತಾನೇ ಕರು ಹಾಕಿದ ಒಂದು ಲಕ್ಷ ಗೋವುಗಳನ್ನೂ, ಒಂದು ಲಕ್ಷ ಎತ್ತುಗಳನ್ನೂ, ವಿವಿಧಾಭರಣಗಳನ್ನೂ, ವಿವಿಧ ವಸ್ತ್ರಗಳನ್ನೂ, ಮೂವತ್ತು ಕೋಟಿ ಸ್ವರ್ಣ ನಾಣ್ಯಗಳನ್ನೂ ಕೊಟ್ಟು ಸತ್ಕರಿಸಿದನು. ಇದಾದ ತರುವಾಯ ಮಾನವೇಶ್ವರನಾದ ಶ್ರೀರಾಮಮೂರ್ತಿಯು ಸೂರ್ಯ ಕಿರಣಗಳಿಗೆ ಸಮಾನವಾದ ಕಾಂತಿಯುಳ್ಳುದೂ, ರತ್ನಮಯವಾದುದೂ ಆದ ಸ್ವರ್ಣಹಾರವನ್ನು ಸುಗ್ರೀವರಾಜನಿಗೆ ಪಾರಿತೋಷಿಕವಾಗಿ ಕೊಟ್ಟನು. ವೈಡೂರ್ಯಮಣಿಮಯವೂ ಚಿತ್ರತರವೂ ಆಗಿ ಹೊಳೆಯುತ್ತಿರುವುದೂ, ವಜ್ರರತ್ನವಿರಾಜಿತವೂ ಆದ ಅಂಗದಗಳನ್ನು ವಾಲಿಪುತ್ರನಾದ ಅಂಗದನಿಗಿತ್ತನು. ತರುವಾಯ ಮಹಾ ಧೃತಿಮಂತನಾದ ಶ್ರೀರಾಮನು

ಜುಷ್ಟಂಚ ಮುಕ್ತಾಹಾರಮನುತ್ತಮಂ । ಸೀತಾಯೈ ಪ್ರದದೌ ರಾಮಶ್ಚಂದ್ರರಶ್ಮಿಸಮಪ್ರಭಂ ॥ ೭೩ ॥ ಅರಜೇ ವಾಸಸೀ ದಿವ್ಯೇ ಶುಭಾನ್ಯಾಭರಣಾನಿಚ । ಅವೇಕ್ಷಮಾಣಾ ವೈದೇಹೀ ಪ್ರದದೌ ವಾಯುಸೂನವೇ ॥ ೭೪ ॥ ಅವಮುಚ್ಯಾತ್ಮನಃ ಕಂಠಾದ್ಧಾರಂ ಜನಕನಂದಿನೀ । ಅನ್ವೈಕ್ಷತ ಹರೀನ್ ಸರ್ವಾನ್ ಭರ್ತಾರಂ ಚ ಮುಹುರ್ಮುಹುಃ ॥೭೫॥ ತಾಮಿಂಗಿತಜ್ಞಸ್ಸಂಪ್ರೇಕ್ಷ್ಯ ಬಭಾಷೇ ಜನಕಾತ್ಮಜಾಂ । "ಪ್ರದೇಹಿ ಸುಭಗೇ ಹಾರಂ ಯಸ್ಯ ತುಷ್ಟಾಸಿ ಭಾಮಿನಿ! ॥ ೭೬ ॥ ಪೌರುಷಂ ವಿಕ್ರಮೋ ಬುದ್ಧಿ

ಮಣಿ....ಚ - ಶ್ರೇಷ್ಠವಾದ ರತ್ನಗಳಿಂದ ವ್ಯಾಪ್ತವಾದ, ಅನುತ್ತಮಂ - ಸರ್ವೋತ್ತಮವಾದ, ಚಂದ್ರ....ಭಂ - ಚಂದ್ರನ ಕಿರಣಗಳಿಗೆ ಸಮಾನವಾದ ಪ್ರಕಾಶವುಳ್ಳ, ಮುಕ್ತಾಹಾರಂ - ಮುತ್ತುಗಳ ಕಂಠೀಸರವನ್ನು, ಸೀತಾಯೈ - ಸೀತಾದೇವಿಗೆ, ಪ್ರದದೌ - ಕೊಟ್ಟನು. ॥ ೭೩ ॥ ದಿವ್ಯೇ - ಮನೋಹರಗಳಾದ, ಅರಜೇ - ನೂತನಗಳಾದ, ವಾಸಸೀ - ದುಕೂಲವಸ್ತ್ರಗಳನ್ನು, ಶುಭಾನಿ - ಶುಭಕರಗಳಾದ, ಆಭರಣಾನಿಚ - ಒಡವೆಗಳನ್ನು, ವೈದೇಹೀ - ಸೀತಾದೇವಿಯು, ಅವೇಕ್ಷಮಾಣಾ - ನೋಡುತ್ತಿರುವಳಾಗಿ, ವಾಯುಸೂನವೇ - ವಾಯುಪುತ್ರನಾದ ಆಂಜನೇಯನಿಗೆ, ಪ್ರದದೌ - ಕೊಟ್ಟಳು, (ಇಲ್ಲಿ "ಅವೇಕ್ಷಮಾಣೋ ವೈದೇಹೀಂ" ಎಂಬ ಪಾಠ ಬಂದಿದೆ. ವೈದೇಹೀಂ - ಸೀತಾದೇವಿಯನ್ನು, ಅವೇಕ್ಷಮಾಣಃ - ನೋಡುತ್ತ, ವಾಯುಸೂನವೇ - ಆಂಜನೇಯನಿಗೋಸ್ಕರ, ವಾಸಸೀ - ವಸ್ತ್ರಗಳನ್ನು, ಆಭರಣಾನಿಚ - ಒಡವೆಗಳನ್ನು, ಪ್ರದದೌ - ಕೊಟ್ಟಳು.) ॥ ೭೪ ॥ ಜನಕನಂದಿನೀ - ಸೀತಾದೇವಿಯು, ಆತ್ಮನಃ - ತನ್ನ, ಕಂಠಾತ್ - ಕೊರಳಿನಿಂದ, ಹಾರಂ - ಮುಕ್ತಾಹಾರವನ್ನು, ಅವಮುಚ್ಯ - ತೆಗೆದು, ಸರ್ವಾನ್ - ಸಮಸ್ತರಾದ, ಹರೀನ್ - ಕಪಿಗಳನ್ನೂ, ಭರ್ತಾರಂ - ಗಂಡನನ್ನೂ, ಮುಹುರ್ಮುಹುಃ - ಬಾರಿಬಾರಿಗೂ, ಅನ್ವೈಕ್ಷತ - ನೋಡಿದಳು, ಇಂಗಿತಜ್ಞಃ - ಚೇಷ್ಟಾವಿಶೇಷದಿಂದ ಹೃದಭಿಪ್ರಾಯವನ್ನು ತಿಳಿವಿರುವ ಶ್ರೀರಾಮನು, ಜನಕಾತ್ಮಜಾಂ - ಜನಕರಾಯನ ಮಗಳಾದ, ತಾಂ - ಆ ಸೀತಾದೇವಿಯನ್ನು, ಅವೇಕ್ಷ್ಯ - ಕಂಡು, ಹೇ ಸುಭಗೇ - ಎಲೈ ಸುಂದರಳೇ, ಭಾಮಿನೀ - ಸ್ತ್ರೀಯೇ, ಯಸ್ಯ - ಯಾವನಿಂದ, ತ್ವಂ - ನೀನು, ತುಷ್ಟ - ಸಂತೋಷಗೊಂಡವಳು, ಅಸಿ - ಆದೆಯೋ, ಯಸ್ಮಿನ್ - ಯಾವನಲ್ಲಿ, ಪೌರುಷಂ - ಸಾಮರ್ಥ್ಯವೂ, ವಿಕ್ರಮಃ - ಸಮುದ್ರಲಂಘನದಲ್ಲಿ ಸಂಚಾರಕ್ರಮೆಯು, ಬುದ್ಧಿಃ - ಲಂಕಾದಹನಾದಿ ಮಹತ್ಕಾರ್ಯಗಳಲ್ಲಿ ಬುದ್ಧಿಯೂ, ಏತಾನಿ - ಈ ಗುಣಗಳು, ಸರ್ವಶಃ - ಸಮಸ್ತವೂ, ಸಂತಿ - ಇರು

ಶ್ರೇಷ್ಠವಾದ ಮಣಿಗಳಿಂದ ಕೂಡಿ, ಬಹು ಶ್ರೇಷ್ಠವಾದುದೂ, ಚಂದ್ರಕಿರಣಗಳಿಗೆ ಸಮಾನವಾದ ಕಾಂತಿಯುಳ್ಳುದೂ ಆದ ಮುಕ್ತಾಹಾರವನ್ನೂ, ನಿರ್ಮಲವಾದ ವಸ್ತ್ರಗಳನ್ನೂ, ಹಬು ಮಂಗಳಕರವಾದ ಆಭರಣಗಳನ್ನೂ ಸೀತಾದೇವಿಗೆ ಕೊಟ್ಟನು. ಆಗಲಾದೇವಿಯು ಹನುಮಂತನು ತನಗೆ ಮಾಡಿದ ಮಹೋಪಕಾರವನ್ನು ನೆನೆದು ಅವುಗಳೆಲ್ಲವನ್ನೂ ಆತನಿಗಿತ್ತಳು. ಆ ತರುವಾಯ ಆಕೆಯು ತನ್ನ ಕೊರಳಿನಲ್ಲಿರುವ ಅಮೂಲ್ಯವಾದ ಹಾರವನ್ನು ಹೊರತೆಗೆದು ಅಡಿಗಡಿಗೂ ವಾನರವೀರರನ್ನೂ, ತನ್ನ ಭರ್ತನಾದ ಶ್ರೀರಾಮಮೂರ್ತಿಯನ್ನೂ ನೋಡಿದಳು. ॥ ೭೩–೭೫ ॥ ಆಗ ಇಂಗಿತಜ್ಞನಾದ ಶ್ರೀರಾಮನು ಆಕೆಯನ್ನು ನೋಡಿ, "ಎಲೆ ಪ್ರೇಯಸಿ! ನೀನು ಯಾರ ವಿಷಯದಲ್ಲಿ ಸಂತೋಷವನ್ನು ಹೊಂದಿದೆಯೋ, ಯಾರಲ್ಲಿ ಪೌರುಷವೂ, ಸಾಮರ್ಥ್ಯವೂ, ದಾಕ್ಷಿಣ್ಯವೂ, ವಿನಯವೂ, ನಯವೂ, ಪೌರುಷ ಪರಾಕ್ರಮಗಳೂ, ಬುದ್ಧಿಯೂ ಶಾಶ್ವತವಾಗಿರುವುವೋ ಅಂಥವನಿಗೆ ಈ ಹಾರ

ರ್ಯಸ್ಮಿನ್ನೇತಾನಿ ಸರ್ವಶಃ । ದದೌ ಸಾ ವಾಯುಪುತ್ರಾಯ ತಂ ಹಾರಮಸಿತೇಕ್ಷಣಾ
॥ ೭೭ ॥ ಹನುಮಾಂಸ್ತೇನ ಹಾರೇಣ ಶುಶುಭೇ ವಾನರರ್ಷಭಃ । ಚಂದ್ರಾಂಶುಚಯ
ಗೌರೇಣ ಶ್ವೇತಾಭ್ರೇಣ ಯಥಾಽಚಲಃ ॥ ೭೮ ॥ ತತೋ ದ್ವಿವಿದಮೈಂದಾಭ್ಯಾಂ
ನೀಲಾಯ ಚ ಪರಂತಪಃ । ಸರ್ವಾನ್ ಕಾಮಗುಣಾನ್ ವೀಕ್ಷ್ಯ ಪ್ರದದೌ ವಸುಧಾಧಿಪಃ
॥ ೭೯ ॥ ಸರ್ವವಾನರವೃದ್ಧಾಶ್ಚ ಯೇ ಚಾನ್ಯೇ ವಾನರೇಶ್ವರಾಃ । ವಾಸೋಭಿ
ರ್ಭೂಷಣೈಶ್ಚೈವ ಯಥಾರ್ಹಂ ಪ್ರತಿಪೂಜಿತಾಃ ॥೮೦॥ ವಿಭೀಷಣೋಽಥ ಸುಗ್ರೀವೋ
ಹನುಮಾನ್ ಜಾಂಬವಾಂಸ್ತಥಾ । ಸರ್ವವಾನರಮುಖ್ಯಾಶ್ಚ ರಾಮೇಣಾಽಕ್ಲಿಷ್ಟ

ತ್ತಮೋ, ತಸ್ಮೈ - ಆ ಪುರುಷನಿಗಾಗಿ, ಪ್ರದೇಹಿ - ಕೊಡು, ಇತಿ - ಇಂತೆಂದು, ಅಭಾಷೇ - ನುಡಿದನು, ಅಸಿತೇಕ್ಷಣಾ - ಕಪ್ಪಾಗಿರುವ ನೇತ್ರಗಳುಳ್ಳ, ಸಾ - ಆ ಸೀತಾದೇವಿಯು, ವಾಯುಪುತ್ರಾಯ - ಆ ಆಂಜನೇಯನಿಗಾಗಿ, ತಂಹಾರಂ - ಆ ಹಾರವನ್ನು, ದದೌ - ಕೊಟ್ಟಳು. ॥ ೭೬ ೭೭ ॥ ವಾನರರ್ಷಭಃ - ವಾನರಶ್ರೇಷ್ಠನಾದ, ಹನುಮಾನ್ - ಆಂಜನೇಯನು, ಚಂದ್ರಾಂ....ಣ - ಚಂದ್ರನ ಕಿರಣಗಳ ತಂಡಗಳಿಂದ ಶುಭ್ರವಾದ, ಶ್ವೇತಾಭ್ರೇಣ - ಶರತ್ಕಾಲದ ಮೇಘದಿಂದ, ಅಚಲೋಯಥಾ - ಬೆಟ್ಟದಂತೆ, ಶುಶುಭೇ - ಹೊಳೆಯುತ್ತಿದ್ದನು. ॥ ೭೮ ॥ ತತಃ - ಬಳಿಕ, ಪರಂತಪಃ - ಶತ್ರುಸಂಹಾರಕನಾದ, ವಸುಧಾಧಿಪಃ - ಭೂಪತಿಯಾದ ಶ್ರೀರಾಮನು, ದ್ವಿವಿದಮೈಂದಾಭ್ಯಾಂ - ದ್ವಿವಿದನಿಗೂ ಮೈಂದನಿಗೂ, ನೀಲಾಯ ಚ - ನೀಲನೆಂಬ ವಾನರಸೇನಾಪತಿಗೂ, ಸರ್ವಾನ್ - ಸಮಸ್ತವಾದ, ಕಾಮಗುಣಾನ್ - ಬೇಡತಕ್ಕ ಗುಣಗಳುಳ್ಳವರನ್ನಾಗಿ, ವೀಕ್ಷ್ಯ - ಕಂಡು, ಪ್ರದದೌ - ಕೊಟ್ಟನು. ॥ ೭೯ ॥ ಸರ್ವವಾನರವೃದ್ಧಾಶ್ಚ - ವಾನರರಲ್ಲಿ ವೃದ್ಧರಾದವರೆಲ್ಲರೂ, ಅನ್ಯೇ - ಮತ್ತೆ ಕೆಲವರಾದ, ವಾನರೇಶ್ವರಾಃ - ವಾನರಯೂಥಪತಿಗಳು, ಯೇ - ಯಾರೋ, ತೇಪಿ - ಅವರೂ, ವಾಸೋಭಿಃ - ವಸ್ತ್ರಗಳಿಂದಲೂ, ಭೂಷಣೈಶ್ಚೈವ - ಒಡವೆಗಳಿಂದಲೂ, ಯಥಾರ್ಹಂ - ಯಥಾಯೋಗ್ಯವಾಗಿ, ಪ್ರತಿಪೂಜಿತಾಃ - ಪೂಜಿಸಲ್ಪಟ್ಟರು. ॥ ೮೦ ॥ ವಿಭೀಷಣಃ - ವಿಭೀಷಣನು, ಅಥ - ಬಳಿಕ, ಸುಗ್ರೀವಃ - ಸುಗ್ರೀವನು, ಹನುಮಾನ್ - ಆಂಜನೇಯನೂ, ತಥಾ - ಹಾಗೆಯೇ, ಜಾಂಬವಾನ್ - ಜಾಂಬವಂತನೂ, ಸರ್ವವಾನರಮುಖ್ಯಾಶ್ಚ - ಸಮಸ್ತ ವಾನರಯೂಥಾಧಿಪತಿಗಳೂ, ಅಕ್ಲಿಷ್ಟಕರ್ಮಣಾ - ಕ್ಲೇಶವಿಲ್ಲದೆ ಕಾರ್ಯವನ್ನು ಸಾಧಿಸುವುದರಲ್ಲಿ ಸಮರ್ಥನಾದ, ರಾಮೇಣ - ಶ್ರೀರಾಮನಿಂದ, ಯಥಾರ್ಹಂ - ಅವರವರ ಯೋಗ್ಯತಾನುಸಾರವಾಗಿ, ಸರ್ವೈಃ - ಸಮಸ್ತಗಳಾದ, ಕಾಮೈಃ - ಕೋರಿಕೆಗಳಿಂದಲೂ,

---

ವನ್ನು ಕೊಡುವವಳಾಗು" ಎಂದು ಹೇಳಿದನು. ಆಗ ಜನಕನಂದಿನಿಯಾದ ಸೀತಾದೇವಿಯು ಅನರ್ಘ್ಯವಾದ ಆ ಹಾರವನ್ನು ವಾಯುಪುತ್ರನಾದ ಹನುಮಂತನಿಗೆ ಕೊಟ್ಟಳು. ಆಗ ವಾನರೋತ್ತಮನಾದ ಹನುಮಂತನು ಆ ಹಾರದಿಂದ ಚಂದ್ರಕಿರಣಗಳಂತೆ ಬೆಳ್ಳಗಿರುವ ಮುಗಿಲಮಾಲೆಯಿಂದ ಶೋಭಿಸುವ ಪರ್ವತವೆಂತೋ ಅಂತು ವಿರಾಜಿಸಿದನು. ಮಹಾದ್ಭುತ ಕಾರ್ಯಗಳನ್ನೂ ಲೀಲಾಜಾಲವಾಗಿ ನಿರ್ವಹಿಸುವ ಶ್ರೀರಾಮಚಂದ್ರನು ಆ ತರುವಾಯ ಸಮಸ್ತ ವಾನರವೀರರನ್ನೂ ವಾನರವೃದ್ಧರನ್ನೂ ವಸ್ತ್ರಭೂಷಣಾದಿಗಳಿಂದ ಯಥಾಯೋಗ್ಯವಾಗಿ ಗೌರವಿಸಿದನು. ॥ ೭೬-೮೦ ॥ ದ್ವಿವಿದ ಮೈಂದರಿಗೂ, ನೀಲನಿಗೂ ಸಮಸ್ತ ಇಷ್ಟಾರ್ಥವೂ ಸಮೃದ್ಧವಾಗುವಂತೆ ಪಾರಿತೋಷಗಳನ್ನಿತ್ತನು. ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತರೇ ಮೊದಲಾದ ಎಲ್ಲ ವಾನರ ಮುಖ್ಯರನ್ನೂ ಯಥಾ

ಕರ್ಮಣಾ ॥ ೮೧ ॥ ಯಥಾರ್ಹಂ ಪೂಜಿತಾಸ್ಸರ್ವೇ ಕಾಮೈ ರತ್ನೈಶ್ಚ ಪುಷ್ಕಲೈಃ ।
ಪ್ರಹೃಷ್ಟಮನಸಸ್ಸರ್ವೇ ಜಗ್ಮುರೇವ ಯಥಾಗತಂ ॥ ೮೨ ॥ ನತ್ವಾ ಸರ್ವೇ ಮಹಾ
ತ್ಮಾನಂ ತತಸ್ತೇ ಪ್ಲವಗರ್ಷಭಾಃ । ವಿಸೃಷ್ಟಾಃ ಪಾರ್ಥಿವೇಂದ್ರೇಣ ಕಿಷ್ಕಿಂಧಾ ಮಭ್ಯು
ಪಾಗಮನ್ ॥ ೮೩ ॥ ಸುಗ್ರೀವೋ ವಾನರಶ್ರೇಷ್ಠೋ ದೃಷ್ಟ್ವಾ ರಾಮಾಭಿಷೇಚನಂ ।
ಪೂಜಿತಶ್ಚೈವ ರಾಮೇಣ ಕಿಷ್ಕಿಂಧಾಂ ಪ್ರಾವಿಶತ್ಪುರೀಂ । ರಾಮೇಣ ಸರ್ವ
ಕಾಮೈಶ್ಚ ಯಥಾರ್ಹಂ ಪ್ರತಿಪೂಜಿತಃ ॥ ಲಬ್ಧ್ವಾ ಕುಲಧನಂ ರಾಜಾ ಲಂಕಾಂ
ಪ್ರಾಯಾದ್ವಿಭೀಷಣಃ ॥೮೪॥ ಸರಾಜ್ಯಮಖಿಲಂ ಶಾಸನ್ನಿಹತಾರಿರ್ಮಹಾಯಶಾಃ ।
ರಾಘವಃ ಪರಮೋದಾರಃ ಶಶಾಸ ಪರಯಾ ಮುದಾ ॥ ೮೫ ॥ ಉವಾಚ ಲಕ್ಷ್ಮಣಂ

ಪುಷ್ಕಲೈಃ-ಸಮಗ್ರಗಳಾದ, ರತ್ನೈಶ್ಚ-ರತ್ನಗಳಿಂದಲೂ, ಪೂಜಿತಾಃ-ಮರ್ಯಾದೆ ಮಾಡಲ್ಪಟ್ಟವರಾಗಿ, ಸರ್ವೇ - ಸಮಸ್ತರನ್ನೂ, ಪ್ರಹೃಷ್ಟಮನಸೇವ - ಹರ್ಷದಿಂದ ಕೂಡಿದ ಮನಸ್ಸುಗಳುಳ್ಳವರಾಗಿಯೇ, ಯಥಾಗತಂ - ಬಂದಂತೆ, ಜಗ್ಮುಃ - ಹೊರಟುಹೋದರು. ॥ ೮೧-೮೨ ॥ ಸರ್ವೇ - ಸಮಸ್ತರಾದ, ತೇಪ್ಲವಗರ್ಷಭಾಃ - ಆ ವಾನರಾಧಿಪತಿಗಳು, ಮಹಾತ್ಮಾನಂ - ಉದಾರವಾದ ಮಹಾ ಮನವುಳ್ಳ ಶ್ರೀರಾಮನನ್ನು, ದೃಷ್ಟ್ವಾ - ಕಂಡು, (ಗೋ) ಪರಮಾತ್ಮಸ್ವರೂಪನಾದ ಶ್ರೀರಾಮನನ್ನು ಕಂಡು, ತತಃ - ಬಳಿಕ, ಪಾರ್ಥಿವೇಂದ್ರೇಣ - ರಾಜಾಧಿರಾಜನಾದ ಶ್ರೀರಾಮನಿಂದ, ವಿಸೃಷ್ಟಾಃ - ಕಳುಹಿಸಿ ಕೊಡಲ್ಪಟ್ಟವರಾಗಿ, ಕಿಷ್ಕಿಂಧಾಂ - ಕಿಷ್ಕಿಂಧಾಪಟ್ಟಣವನ್ನು ಕುರಿತು, ಅಭ್ಯುಪಾಗಮನ್ - ಅಭಿಮುಖ ರಾಗಿ ಹೊರಟರು. ॥ ೮೩ ॥ ವಾನರಶ್ರೇಷ್ಠಃ - ವಾನರರಾಜನಾದ, ಸುಗ್ರೀವಃ - ಸುಗ್ರೀವನು, ರಾಮಾಭಿಷೇಚನಂ - ಶ್ರೀರಾಮ ಪಟ್ಟಾಭಿಷೇಕವನ್ನು, ದೃಷ್ಟ್ವಾ - ಕಂಡು, ಪ್ರಾಯಾತ್ - ಕಿಷ್ಕಿಂಧಾ ಪಟ್ಟಣವನ್ನು ಕುರಿತು ಹೊರಟುಹೋದನು, ವಿಭೀಷಣಃ - ವಿಭೀಷಣನೆಂಬ, ರಾಜಾ - ರಕ್ಕಸ ರೊಡೆಯನು, ಕುಲಧನಂ - ಕುಲದೈವತಾಸ್ವರೂಪವಾದ ಲಂಕಾರಾಜ್ಯವನ್ನು, (ಗೋ) (ಶ್ರೀರಂಗ ನಾಥ ಮಂಟಪವನ್ನು) ಲಬ್ಧ್ವಾ - ಹೊಂದಿ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಪ್ರಾಯಾತ್ - ಹೊರಟುಹೋದನು. ॥ ೮೪ ॥ ಪರಮೋದಾರಃ - ಮಹಾದಾತನಾದ, ಮಹಾಯಶಾಃ - ಬಹಳ ಕೀರ್ತಿವಂತನಾದ, ಸರಾಘವಃ - ಆ ಶ್ರೀರಾಮನು, ನಿಹತಾರಿಃ - ಹಗೆಯರಿಲ್ಲದವನಾಗಿ, ಅಖಿಲಂ - ಸಮಸ್ತವಾದ, ರಾಜ್ಯಂ - ರಾಜ್ಯವನ್ನು, ಶಾಸನ್ - ದುಷ್ಟನಿಗ್ರಹ ಮಾಡುತ್ತಿರುವವನಾಗಿ, ಪರಯಾ ಮುದಾ - ಬಹಳ ಸಂತೋಷದಿಂದ, ಶಶಾಸ - ಪಾಲಿಸಿದನು. ॥ ೮೫ ॥ ಧರ್ಮವತ್ಸಲಃ -

---

ಯೋಗ್ಯವಾಗಿ ಸತ್ಕರಿಸಿದನು. ಎಲ್ಲರೂ ಸಮಸ್ತ ರತ್ನಗಳಿಂದಲೂ, ಪುಷ್ಕಲವಾಗಿ ಸತ್ಕಾರ ವನ್ನು ಪಡೆದ ತರುವಾಯ ಅವರವರ ಮನೆಗಳಿಗೆ ಹಿಂತಿರುಗಿದರು. ಹೀಗೆ ಮಹಾತ್ಮರಾದ ವಾನರೋತ್ತಮರೆಲ್ಲರೂ ಮಾನವೇಶ್ವರನಾದ ಶ್ರೀರಾಮನಿಂದ ಸತ್ಕರಿಸಲ್ಪಟ್ಟವರಾಗಿ ಕಿಷ್ಕಿಂಧೆ ಯನ್ನು ಕುರಿತು ಪ್ರಯಾಣ ಮಾಡಿದರು. ಹೀಗೆ ವಾನರೇಶ್ವರನಾದ ಸುಗ್ರೀವನು ಶ್ರೀರಾಮ ಮೂರ್ತಿಯ ಪಟ್ಟಾಭಿಷೇಕ ಮಹೋತ್ಸವವನ್ನು ನೋಡಿ, ಆತನಿಂದ ಪೂಜಿತನಾಗಿ ತನ್ನ ರಾಜ ಧಾನಿಯಾದ ಕಿಷ್ಕಿಂಧಾಪಟ್ಟಣವನ್ನು ಕುರಿತು ಹೊರಟುಹೋದನು. ಮಹಾ ಧರ್ಮಿಷ್ಠನಾದ ವಿಭೀಷಣನೂ ಶ್ರೀರಾಮನಿಂದ ಸತ್ಕೃತನಾಗಿ ಕುಲಧನವಾದ ತನ್ನ ಲಂಕಾರಾಜ್ಯವನ್ನು ಆತ ನಿಂದ ಪಡೆದು ತನ್ನಮಂತ್ರಿಗಳಾದ ರಾಕ್ಷಸೋತ್ತಮರೊಡನೆ ರಾಜಧಾನಿಗೆ ಹೊರಟನು. ಮಹಾ ಕೀರ್ತಿಸಂಪನ್ನನೂ, ಸಮಸ್ತ ಶತ್ರುಗಳನ್ನೂ ಸಂಹರಿಸಿದವನೂ ಆದ ಶ್ರೀರಾಮಮೂರ್ತಿಯು

ರಾಮೋ ಧರ್ಮಜ್ಞಂ ಧರ್ಮವತ್ಸಲಃ । " ಆತಿಷ್ಠ ಧರ್ಮಜ್ಞ ! ಮಯಾ ಸಹೇಮಾಂ ಗಾಂ ಪೂರ್ವರಾಜಾಧ್ಯುಷಿತಾಂ ಬಲೇನ ‖ ೮೬ ‖ ತುಲ್ಯಂ ಮಯಾ ತ್ವಂ ಪಿತೃಭಿರ್ಧೃತಾಯಾಂ ತ್ವಂ ಯೌವರಾಜ್ಯೇ ಧುರಮುದ್ವಹಸ್ವ" । ಸರ್ವಾತ್ಮನಾ ಪರ್ಯನುನೀಯಮಾನೋ ಯದಾ ನ ಸೌಮಿತ್ರಿರುಪೈತಿ ಯೋಗಂ । ನಿಯುಜ್ಯಮಾನೋಽಪಿ ಚ ಯೌವರಾಜ್ಯೇ ತತೋಽಭ್ಯಷಿಂಚದ್ಭರತಂ ಮಹಾತ್ಮಾ ‖ ೮೭-೮೮ ‖ ಪೌಂಡರೀಕಾಶ್ವಮೇಧಾಭ್ಯಾಂ ವಾಜಪೇಯೇನ ಚಾಽಸಕೃತ್ । ಅನ್ಯೈಶ್ಚ ವಿವಿಧೈರ್ಯಜ್ಞೈರಯಜತ್ಪಾರ್ಥಿವರ್ಷಭಃ ‖ ೮೯ ‖ ರಾಜ್ಯಂ ದಶಸಹಸ್ರಾಣಿ ಪ್ರಾಪ್ಯ ವರ್ಷಾಣಿ ರಾಘವಃ ।

ಧರ್ಮದಲ್ಲಿಯೇ ವಾತ್ಸಲ್ಯವುಳ್ಳ, ರಾಮಃ - ಶ್ರೀರಾಮನು, ಧರ್ಮಜ್ಞಂ - ಧರ್ಮಗಳನ್ನು ತಿಳಿದಿರುವ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಉವಾಚ - ಹೇಳಿದನು. ‖ ೮೬ ‖ ಧರ್ಮಜ್ಞ - ಧರ್ಮವನ್ನು ತಿಳಿದವನೇ, ಮಯಾಸಹ - ನನ್ನೊಡನೆ, ಇಮಾಂಗಾಂ - ಈ ಭೂಮಿಯನ್ನು, ಆತಿಷ್ಠ - ಪಾಲಿಸು, ಬಲೇನ - ಸ್ವಸಾಮರ್ಥ್ಯದಿಂದ, ಪೂರ್ವ....ತಾಂ - ಹಿಂದಣ ರಾಜರಿಂದ ಪರಿಪಾಲಿಸಲ್ಪಟ್ಟ, ಗಾಂ - ಭೂಮಿಯನ್ನು, ಆತಿಷ್ಠ - ಪರಿಪಾಲಿಸು, ತ್ವಂ - ನೀನು, ಮಯಾತುಲ್ಯಂ - ನನಗೆ ಸಮಾನನಾಗಿ, ಪಿತೃಭಿಃ-ಪಿತೃಪಿತಾಮಹಾದಿಗಳಿಂದ, ಯಾ-ಯಾವ ರಾಜ್ಯಭಾರವು, ಧೃತಾ-ಧರಿಸಲ್ಪಟ್ಟಿತೋ, ತಾಂ-ಅಂಥಾ, ಧುರಂ-ಭಾರವನ್ನು, ಯೌವರಾಜ್ಯೇ-ಎರಡನೆಯ ಅಧಿಕಾರದಲ್ಲಿ, (ತ್ವಂ-ನೀನು) ಉದ್ವಹಸ್ವ-ವಹಿಸು. ‖ ೮೭ ‖ ಸರ್ವಾತ್ಮನಾ - ಸರ್ವಪ್ರಕಾರದಲ್ಲಿಯೂ, ಪರ್ಯನುನೀಯಮಾನಃ - ಅನುಸರಿಸಿ ಬಹಳವಾಗಿ ಕೇಳಲ್ಪಡುತ್ತಿರುವನಾದರೂ, ನಿಯುಜ್ಯಮಾನೋಪಿ - ನಿಯಮಿಸಲ್ಪಟ್ಟವನಾದರೂ, ಸೌಮಿತ್ರಿಃ - ಲಕ್ಷ್ಮಣನು, ಯದಾ - ಯಾವಾಗ, ಯೋಗಂ - ಸಮ್ಮತಿಯನ್ನು, ನೋಪೈತಿ - ಹೊಂದಲಿಲ್ಲವೋ, ತತಃ - ಬಳಿಕ, ಮಹಾತ್ಮಾ - ಮಹಾತ್ಮನಾದ ಶ್ರೀರಾಮನು, ಭರತಂ - ಭರತನನ್ನು, ಯೌವರಾಜ್ಯೇ - ಯೌವರಾಜ್ಯದಲ್ಲಿ, ಅಭ್ಯಷಿಂಚತ್ - ಅಭಿಷೇಕ ಮಾಡಿದನು. ‖ ೮೮ ‖ ಪಾರ್ಥಿವರ್ಷಭಃ - ರಾಜಶ್ರೇಷ್ಠನಾದ ಶ್ರೀರಾಮನು, ಪೌಂಡ....ಭ್ಯಾಂ - ಪೌಂಡರೀಕದಿಂದಲೂ, ಅಶ್ವಮೇಧಯಾಗದಿಂದಲೂ, ವಾಜಪೇಯೇನಚ - ವಾಜಪೇಯದಿಂದಲೂ, ಅನ್ಯೈಃ - ಮತ್ತೆ ಕೆಲವಾದ, ವಿವಿಧೈಃ-ನಾನಾಬಗೆಗಳಾದ, ಯಜ್ಞೈಶ್ಚ - ಯಾಗಗಳಿಂದಲೂ, ಅಸಕೃತ್ - ಬಾರಿಬಾರಿಗೂ, ಅಯಜತ್ - ದೇವತಾ ಸಂತುಷ್ಟಿ ಮಾಡಿದನು. ‖ ೮೯ ‖ ರಾಘವಃ - ಶ್ರೀರಾಮನು, ರಾಜ್ಯಂ - ರಾಜ್ಯಭಾರವನ್ನು,

---

ಮಹಾನಂದಭರಿತನಾಗಿ ಸಾಕೇತಸಾಮ್ರಾಜ್ಯವನ್ನು ಆಳಿದನು. ‖೮೧–೮೫‖ ಆ ಸಮಯದಲ್ಲಿ ಧರ್ಮವತ್ಸಲನಾದ ಶ್ರೀರಾಮಮೂರ್ತಿಯು ತನ್ನ ತಮ್ಮನಾದ ಲಕ್ಷ್ಮಣಸ್ವಾಮಿಯನ್ನು ಕುರಿತು, "ಎಲೈ ಧರ್ಮಜ್ಞನಾದ ಲಕ್ಷ್ಮಣನೇ! ನಮ್ಮ ಪೂರ್ವಿಕರು ಪರಿಪಾಲಿಸಿದ ಈ ಭೂಮಂಡಲವನ್ನು ನನ್ನೊಡನೆ ನೀನು ಪಾಲಿಸುವವನಾಗಿ ನಮ್ಮ ಪಿತೃಪಿತಾಮಹಾದಿಗಳಿಂದ ಭರಿಸಲಾದ ಈ ರಾಜ್ಯಭಾರವನ್ನು ನೀನು ನನ್ನೊಡನೆ ಸಮಸಮವಾಗಿ ಭರಿಸುವವನಾಗು" ಎಂದನು. ಶ್ರೀರಾಮನು ಈ ರೀತಿ ಮೃದುಮಧುರ ವಚನನಿಚಯಗಳಿಂದ ಕೇಳುತ್ತಿದ್ದರೂ, ಆಜ್ಞಾಪಿಸಿದರೂ ಆ ಸೌಮಿತ್ರಿಯು ಯೌವರಾಜ್ಯವನ್ನು ಹೊಂದಬಯಸದಿರಲು ಆತನು ಭರತನನ್ನು ಯೌವರಾಜ್ಯದಲ್ಲಿ ಅಭಿಷಿಕ್ತನನ್ನಾಗಿ ಮಾಡಿದನು. ಆ ತರುವಾಯ ರಾಜಶ್ರೇಷ್ಠನಾದ ಶ್ರೀರಾಮಮೂರ್ತಿಯು ಅನೇಕ ಪೌಂಡರೀಕಾಶ್ವಮೇಧಯಾಗಗಳನ್ನೂ, ವಾಜಪೇಯಯಾಗವನ್ನೂ ಇನ್ನೂ ಇತರ ಮಹೋತ್ತಮವಾದ ಯಜ್ಞಗಳನ್ನೂ ಅನೇಕ ಬಾರಿ ಮಾಡಿದನು.

ದಶಾಶ್ವಮೇಧಾನಾಜಹ್ರೇ ಸದಶ್ವಾನ್ ಭೂರಿದಕ್ಷಿಣಾನ್ ॥ ೯೦ ॥ ಆಜಾನುಲಂಬಬಾಹು ಸ್ಸಮಹಾಸ್ಕಂಧಃ ಪ್ರತಾಪವಾನ್ । ಲಕ್ಷ್ಮಣಾನುಚರೋ ರಾಮಃ ಪೃಥಿವೀಮನ್ವಪಾಲ ಯತ್ ॥ ೯೧ ॥ ರಾಘವಶ್ಚಾಪಿ ಧರ್ಮಾತ್ಮಾ ಪ್ರಾಪ್ಯ ರಾಜ್ಯಮನುತ್ತಮಮ್ । ಈಜೇ ಬಹುವಿಧೈರ್ಯಜ್ಞೈಸ್ಸಸುಹೃದ್ಜ್ಞಾತಿಬಾಂಧವಃ ॥ ೯೨ ॥ ನಪರ್ಯದೇವನ್ವಿಧವಾ ನಚ ವ್ಯಾಳಕೃತಂ ಭಯಮ್ । ನವ್ಯಾಧಿಜಂ ಭಯಂ ವಾಪಿ ರಾಮೇ ರಾಜ್ಯಂ ಪ್ರಶಾಸತಿ ॥ ೯೩ ॥ ನಿರ್ದಸ್ಯುರಭವಲ್ಲೋಕೋ ನಾನರ್ಥಃ ಕಂಚಿದಸ್ಪೃಶತ್ । ನಚಸ್ಮ ವೃದ್ಧಾ ಬಾಲಾನಾಂ ಪ್ರೇತಕಾರ್ಯಾಣಿ ಕುರ್ವತೇ ॥ ೯೪ ॥ ಸರ್ವಂ ಮುದಿತಮೇವಾಸೀ

ದಶಸಹಸ್ರಾಣಿ - ಹತ್ತು ಸಾವಿರ ವರ್ಷಗಳು, ಪ್ರಾಪ್ಯ - ಹೊಂದಿ, ಸದಶ್ವಾನ್ - ಒಳ್ಳೆಯ ಕುದುರೆಗಳುಳ್ಳ, ಭೂರಿದಕ್ಷಿಣಾನ್-ಸಮೃದ್ಧವಾದ ದಕ್ಷಿಣೆಯುಳ್ಳ, ದಶಾಶ್ವಮೇಧಾನ್-ಹತ್ತು ಅಶ್ವಮೇಧ ಯಾಗಗಳನ್ನು, ಆಜಹ್ರೇ - ಮಾಡಿದನು, (ಗೋ) (ಶತಾಶ್ವಮೇಧಾನಾಜಹ್ರೇ - ನೂರು ಅಶ್ವಮೇಧ ಕ್ರತುಗಳನ್ನು ಮಾಡಿದನು) ॥ ೯೦ ॥ ಆಜಾನುಲಂಬಬಾಹುಃ - ಜಾನುಗಳ ಪರಿಯಂತವೂ ಲಂಬಾಯಮಾನವಾದ ಭುಜಗಳುಳ್ಳ, ಮಹಾಸ್ಕಂಧಃ - ಮಹಾ ಭುಜಶಿರಸ್ಸುಳ್ಳ, ಪ್ರತಾಪವಾನ್ - ಪರಾಕ್ರಮಶಾಲಿಯಾದ, ಸರಾಮಃ - ಶ್ರೀರಾಮನು, ಲಕ್ಷ್ಮಣಾನುಚರಃ - ಲಕ್ಷ್ಮಣನೇ ಅನುಚರನಾಗುಳ್ಳವನಾಗಿ, ಪೃಥಿವೀಂ - ಭೂಮಂಡಲವನ್ನು, ಅನ್ವಪಾಲಯತ್ - ಪರಿಪಾಲನ ಮಾಡಿದನು. ॥೯೧॥ ಧರ್ಮಾತ್ಮಾ - ಧರ್ಮಿಷ್ಠನಾದ, ರಾಘವಶ್ಚಾಪಿ - ಶ್ರೀರಾಮನೂ ಕೂಡ, ಅನುತ್ತಮಮ್ - ಸರ್ವೋತ್ತಮವಾದ, ರಾಜ್ಯಂ - ರಾಜ್ಯವನ್ನು, ಪ್ರಾಪ್ಯ - ಹೊಂದಿ, ಸಸುಹೃ....ವಃ - ಮಿತ್ರರಿಂದಲೂ, ಜ್ಞಾತಿಗಳಿಂದಲೂ, ಕೂಡಿ, ಬಹುವಿಧೈಃ-ಅನೇಕ ಬಗೆಗಳಾದ, ಯಜ್ಞೈಃ-ಯಾಗಗಳಿಂದ, ಈಜೇ - ದೇವತಾ ಪೂಜೆ ಮಾಡಿದನು. ॥೯೨॥ ರಾಮೇ-ಶ್ರೀರಾಮನು, ರಾಜ್ಯಂ-ಪಟ್ಟಣವನ್ನು, ಪ್ರಶಾಸತಿ - ಪರಿಪಾಲನೆ ಮಾಡುತ್ತಿರಲು, ವಿಧವಾಃ - ಭರ್ತೃಹೀನರಾದ ಸ್ತ್ರೀಯರುಗಳು, ನಪರ್ಯದೇವನ್ - ವ್ಯಸನಗೊಂಡವರಾಗಲಿಲ್ಲ, (ವಿಧವಾಃ - ವಿಧವೆಯರು, ಪರ್ಯದೇವನ್ - ಗೋಳಾಡಿದರು, (ಇತಿ) ಹೀಗೆಂಬುದು, ನ - ಇಲ್ಲವು) ವ್ಯಾಳಕೃತಂ - ಸರ್ಪಗಳಿಂದ, ಭಯಂ - ಭಯವು, ನ - ಇಲ್ಲ, ವ್ಯಾಧಿಜಂ - ಮನೋವ್ಯಾಧಿಯಿಂದ ಹುಟ್ಟಿದ, ಭಯಂವಾಪಿ - ಭಯವಾದರೂ, ನ - ಇಲ್ಲ. ॥೯೩॥ ಲೋಕಃ - ಲೋಕವು, ನಿರ್ದಸ್ಯುಃ - ಚೋರರಿಂದ ರಹಿತವಾದದ್ದು, ಅಭವತ್ - ಆಯಿತು, ಅನರ್ಥಃ - ಆಪತ್ತು, ಕಂಚಿತ್ - ಯಾವ ಪುರುಷನನ್ನೂ, ನಾಸ್ಪೃಶತ್ - ಹೊಂದಲಿಲ್ಲ, ವೃದ್ಧಾಃ - ಮುದುಕರು, ಬಾಲಾನಾಂ - ಹುಡುಗರಿಗೆ, ಪ್ರೇತಕಾರ್ಯಾಣಿ -

---

ಆ ರಘುಕುಲೋದ್ಭವನು ಉತ್ತಮಾಶ್ವಗಳುಳ್ಳದೂ, ಭೂರಿದಕ್ಷಿಣೆಗಳುಳ್ಳದೂ ಆದ ನೂರು (ಹತ್ತು) ಅಶ್ವಮೇಧ ಯಾಗಗಳನ್ನು ಮಾಡಿ ಹತ್ತು ಸಾವಿರ ವರ್ಷಗಳು ರಾಜ್ಯಭಾರ ಮಾಡಿದನು. ॥ ೮೯–೯೦ ॥ ಇಷ್ಟೆಯಲ್ಲದೆ ಆಜಾನುಬಾಹುವೂ, ಮಹಾ ಭುಜಶಿರಸ್ಕನೂ, ಮಹಾ ಪ್ರತಾಪವಂತನೂ, ಲಕ್ಷ್ಮಣಾನುಚರನೂ ಆದ ಶ್ರೀರಾಮನು ಅಖಂಡ ಭೂಮಂಡಲವನ್ನೂ ಚೆನ್ನಾಗಿ ಪಾಲಿಸಿದನು. ಜ್ಞಾತಿ ಜನರಲ್ಲಿ ಮಧುರಬಾಂಧವ್ಯವನ್ನವಲಂಬಿಸಿ ಸಂಚರಿಸುವವನೂ, ಧರ್ಮಾತ್ಮನೂ ಆದ ಆತನು ಬಹಳ ಶ್ರೇಷ್ಠವಾದ ರಾಜ್ಯವನ್ನು ಹೊಂದಿ ನಾನಾವಿಧಗಳಾದ ಕ್ರತುಗಳನ್ನು ಮಾಡಿದನು. ಶ್ರೀರಾಮನು ಭೂಮಂಡಲವನ್ನು ಪಾಲಿಸುತ್ತಿರಲು ಸ್ತ್ರೀಯರು ವೈಧವ್ಯ ದುಃಖವನ್ನು ಹೊಂದಿದರೆಂಬುದಿಲ್ಲ. ಸರ್ಪಾದಿ ಕ್ರೂರ ಜಂತುಗಳಿಂದ ಬಾಧೆಯೆಂಬುದಿಲ್ಲ. ರೋಗಾದಿ ಪೀಡೆಗಳಿಲ್ಲ. ಲೋಕದಲ್ಲೆಲ್ಲಿಯೂ ಕಳ್ಳತನವೆಂಬುದೇ ಆಗಲಿ, ಕಳ್ಳರೆಂಬವರೇ ಆಗಲಿ ಇರಲಿಲ್ಲ. ಇದು ಮಾತ್ರವಲ್ಲದೆ ಯಾವ ವಿಧವಾದ ಅನರ್ಥಗಳೂ

ತ್ಸರ್ವೋ ಧರ್ಮಪರೋಽಭವತ್ । ರಾಮಮೇವಾನುಪಶ್ಯಂತೋನಾಭ್ಯಹಿಂಸನ್ ಪರಸ್ಪರಂ ॥ ೯೫ ॥ ಆಸನ್ ವರ್ಷಸಹಸ್ರಾಣಿ ತಥಾ ಪುತ್ರಸಹಸ್ರಿಣಃ । ನಿರಾಮಯಾ ವಿಶೋಕಾಶ್ಚ ರಾಮೇ ರಾಜ್ಯಂ ಪ್ರಶಾಸತಿ ॥ ೯೬ ॥ "ರಾಮೋ ರಾಮೋ ರಾಮ" ಇತಿ ಪ್ರಜಾನಾಮಭವನ್ ಕಥಾಃ । ರಾಮಭೂತಂ ಜಗದಭೂದ್ರಾಮೇ ರಾಜ್ಯಂ ಪ್ರಶಾಸತಿ ॥ ೯೭ ॥ ನಿತ್ಯಪುಷ್ಪಾ ನಿತ್ಯಫಲಾಸ್ತರವಸ್ಕಂಧವಿಸ್ತೃತಾಃ । ಕಾಲೇ ವರ್ಷೀಚ ಪರ್ಜನ್ಯಸ್ಸುಖಸ್ಪರ್ಶಶ್ಚ ಮಾರುತಃ ॥ ೯೮ ॥ ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ

ಪಾರಲೌಕಿಕ ಕಾರ್ಯಗಳನ್ನು, ನಕುರ್ವತೇಸ್ಮ - ಮಾಡಲೇ ಇಲ್ಲವಷ್ಟೆ. ॥ ೯೪ ॥ ಸರ್ವಂ - ಸಮಸ್ತ ಲೋಕವೂ, ಮುದಿತಮೇವ - ಸಂತೋಷದಿಂದ ಕೂಡಿದ್ದೇ, ಆಸೀತ್ - ಆಯಿತು, ಸರ್ವಃ - ಸಮಸ್ತ ಜನವೂ, ಧರ್ಮಪರಃ - ಸ್ವಧರ್ಮಗಳಲ್ಲಿ ಆಸಕ್ತಿಯುಳ್ಳುದೆಂ, ಆಸೀತ್ - ಆಯಿತು, ರಾಮಮೇವ - ಶ್ರೀರಾಮನನ್ನೇ, ಅನುಪಶ್ಯಂತಃ - ನೋಡುತ್ತಿರುವುದಾಗಿ, ಪರಸ್ಪರಂ - ಒಬ್ಬರನ್ನೊಬ್ಬರು, ನಾಭ್ಯಹಿಂಸನ್ - ಹಿಂಸೆ ಮಾಡಲಿಲ್ಲವು. ॥ ೯೫ ॥ ರಾಮೇ - ಶ್ರೀರಾಮನು, ರಾಜ್ಯಂ - ಪಟ್ಟಣವನ್ನು, ಪ್ರಶಾಸತಿ - ಪರಿಪಾಲಿಸುತ್ತಿರಲು, ಪ್ರಜಾಃ - ಪ್ರಜೆಗಳು, ಪುತ್ರಸಹಸ್ರಿಣಃ - ಸಾವಿರಾರು ಮಕ್ಕಳುಗಳುಳ್ಳವರಾಗಿ, ನಿರಾಮಯಾಃ - ರೋಗರಹಿತರಾಗಿ, ವಿಶೋಕಾಶ್ಚ - ವ್ಯಸನವಿಲ್ಲದೆ, ವರ್ಷಸಹಸ್ರಾಣಿ - ಸಾವಿರ ವರ್ಷಗಳು, ಆಸನ್ - ಇದ್ದರು. ॥ ೯೬ ॥ ರಾಮೇ - ಶ್ರೀರಾಮನು, ರಾಜ್ಯಂ - ಪಟ್ಟಣವನ್ನು, ಪ್ರಶಾಸತಿ - ಸಂರಕ್ಷಣೆ ಮಾಡುತ್ತಿರಲು, ರಾಮೋರಾಮೋರಾಮ ಇತಿ ಶ್ರೀರಾಮ ರಾಮ ರಾಮ ಎಂದು, ಪ್ರಜಾನಾಂ - ಪ್ರಜೆಗಳಿಗೆ, ಕಥಾಃ - ಪ್ರಸ್ತಾಪವು, ಅಭವನ್ - ಆಯಿತು, ಜಗತ್ - ಜಗತ್ತು, ರಾಮಭೂತಂ - ರಾಮಸ್ವರೂಪವಾದಂಥಾದ್ದು, ಅಭೂತ್ - ಆಯಿತು. ॥ ೯೭ ॥ ತರವಃ - ಗಿಡಗಳು, ಸ್ಕಂಧವಿಸ್ತೃತಾಃ - ವಿಸ್ತಾರವಾದ ದೊಡ್ಡ ದೊಡ್ಡ ಕೊಂಬೆಗಳುಳ್ಳವುಗಳಾಗಿ, ನಿತ್ಯಪುಷ್ಪಾಃ - ಸರ್ವಕಾಲಗಳಲ್ಲಿಯೂ ಪುಷ್ಪಗಳುಳ್ಳವುಗಳೂ, ನಿತ್ಯಫಲಾಶ್ಚ - ನಿರಂತರವೂ ಫಲಗಳುಳ್ಳವೂ, ಆಸನ್ - ಆದುವು, ಪರ್ಜನ್ಯಃ - ಪರ್ಜನ್ಯನು, ಕಾಲವರ್ಷೀ - ಕಾಲದಲ್ಲಿ ವರ್ಷಿಸುವನಾದನು, ಮಾರುತಃ - ಗಾಳಿಯು, ಸುಖಸ್ಪರ್ಶಃ-ಸುಖಕರವಾದ ಸ್ಪರ್ಶವುಳ್ಳದ್ದಾಯಿತು. ॥ ೯೮ ॥ ಬ್ರಾಹ್ಮಣಾಃ ಬ್ರಾಹ್ಮಣರು, ಕ್ಷತ್ರಿಯಾಃ-ಕ್ಷತ್ರಿಯರು, ವೈಶ್ಯಾಃ - ವೈಶ್ಯರು, ಶೂದ್ರಾಃ - ಶೂದ್ರರು, ಲೋಭವಿವರ್ಜಿತಾಃ - ಧನಾದಿ ಲೋಭದಿಂದ

ಉಂಟಾಗುವುದೆಂಬುದಿಲ್ಲ. ವೃದ್ಧರಾದವರು ಬಾಲಕರಿಗೆ ಪ್ರೇತಕಾರ್ಯಗಳನ್ನು ಮಾಡುವುದೆಂಬುದಿಲ್ಲ. ಲೋಕವೆಲ್ಲವೂ ಆನಂದಭರಿತವಾಗಿದ್ದಿತು. ಸಮಸ್ತ ಪ್ರಜೆಗಳೂ ಧರ್ಮಪರರಾಗಿದ್ದರು. ಎಲ್ಲರೂ ಶ್ರೀರಾಮಮೂರ್ತಿಯನ್ನೇ ಆದರ್ಶವನ್ನಾಗಿ ನೋಡುತ್ತ ಒಬ್ಬರನ್ನೊಬ್ಬರು ಯಾವ ವಿಧದಲ್ಲಿಯೂ ಹಿಂಸೆ ಮಾಡದೆ ಧರ್ಮಮಾರ್ಗದಲ್ಲಿಯೇ ಸಂಚರಿಸುತ್ತಿದ್ದರು. ॥ ೯೧–೯೫ ॥ ಶ್ರೀರಾಮಮೂರ್ತಿಯು ರಾಜ್ಯಭಾರ ಮಾಡುತ್ತಿರುವಲ್ಲಿ ಪ್ರಜೆಗಳೆಲ್ಲರೂ ರೋಗರಹಿತರೂ ಶೋಕರಹಿತರೂ, ಪುತ್ರಸಹಸ್ರಸಹಿತರೂ ಸಹಸ್ರಾಯುಷ್ಯವಂತರೂ ಆಗಿ ಸುಖವಾಗಿದ್ದರು. ಶ್ರೀರಾಮರಾಜನು ರಾಜ್ಯಭಾರ ಮಾಡುತ್ತಿರುವಲ್ಲಿ ಎಲ್ಲೆಲ್ಲಿಯೂ ಎಲ್ಲ ಜನಗಳಲ್ಲಿಯೂ ಶ್ರೀರಾಮಮೂರ್ತಿಯ ಕಥಾಲಾಪನೇ ನಡೆದು ಜಗತ್ತೇ ರಾಮಮಯವಾಯಿತು. ವೃಕ್ಷಗಳೆಲ್ಲವೂ, ನಿತ್ಯಫಲಪುಷ್ಪಭರಿತಗಳಾಗಿದ್ದುವು. ಕಾಲಕಾಲಕ್ಕೆ ಮಳೆಗಳನ್ನು ಸುರಿಸುತ್ತ ವರುಣದೇವನು ಸುಪ್ರಸನ್ನನಾಗಿದ್ದನು. ಮಾರುತನು ಸುಖಸ್ಪರ್ಶವಾಗಿ ಬೀಸುತ್ತಿದ್ದನು. ಬ್ರಾಹ್ಮಣರೂ, ಕ್ಷತ್ರಿಯರೂ, ವೈಶ್ಯರೂ, ಶೂದ್ರರೂ

ಶೂದ್ರಾ ಲೋಭನಿವರ್ಜಿತಾಃ । ಸ್ವಕರ್ಮಸು ಪ್ರವರ್ತಂತೇ ತುಷ್ಟಾಸ್ಸ್ವೈರೇವ ಕರ್ಮಭಿಃ ॥ ೯೯ ॥ ಆಸನ್ ಪ್ರಜಾ ಧರ್ಮರತಾ ರಾಮೇ ಶಾಸತಿ ನಾಽನೃತಾಃ । ಸರ್ವೇ ಲಕ್ಷಣಸಂಪನ್ನಾಸ್ಸರ್ವೇ ಧರ್ಮಪರಾಯಣಾಃ ॥ ೧೦೦ ॥ ದಶವರ್ಷಸಹಸ್ರಾಣಿ ದಶವರ್ಷಶತಾನಿಚ । ಭ್ರಾತೃಭಿಸ್ಸಹಿತಃ ಶ್ರೀಮಾನ್ ರಾಮೋ ರಾಜ್ಯಮಕಾರಯತ್ ॥ ೧೦೧ ॥ ಧನ್ಯಂ ಯಶಸ್ಯಮಾಯುಷ್ಯಂ ರಾಜ್ಞಾಂ ಚ ವಿಜಯಾವಹಂ । ಆದಿಕಾವ್ಯಮಿದಂ ತ್ವಾರ್ಷಂ ಪುರಾ ವಾಲ್ಮೀಕಿನಾ ಕೃತಂ । ಯಃ ಪಠೇಚ್ಛೃಣುಯಾಲ್ಲೋಕೇ ನರಃ ಪಾಪಾದ್ವಿಮುಚ್ಯತೇ ॥ ೧೦೨ ॥ ಪುತ್ರಕಾಮಸ್ತು ಪುತ್ರಾನ್ವೈ ಧನ

ಬಿಡಲ್ಪಟ್ಟವರಾಗಿ, ಸ್ವೈಃ - ತಮ್ಮ, ಕರ್ಮಭಿರೇವ - ವ್ಯಾಪಾರಗಳಿಂದಲೇ, ತುಷ್ಟಾಃ - ಸಂತೋಷಗೊಂಡವರಾಗಿ, ಸ್ವಕರ್ಮಸು - ತಮ್ಮ ತಮ್ಮ ಕರ್ಮಗಳಲ್ಲಿ, ಪ್ರವರ್ತಂತೇ - ನಡೆಯುತ್ತಿದ್ದರು. ॥ ೯೯ ॥ ರಾಮೇ - ಶ್ರೀರಾಮನು, ಶಾಸತಿ - ಪಾಲಿಸುತ್ತಿರಲು, ಪ್ರಜಾಃ - ಪ್ರಜೆಗಳು, ಧರ್ಮರತಾಃ - ಧರ್ಮದಲ್ಲಿಯೇ ಆಸಕ್ತರು, ಆಸನ್ - ಆದರು, ನಾನೃತಾಃ - ಅಸತ್ಯವಂತರಾಗಲಿಲ್ಲ, ಸರ್ವೇ - ಸಮಸ್ತರೂ, ಲಕ್ಷಣಸಂಪನ್ನಾಃ - ಸಲ್ಲಕ್ಷಣಗಳಿಂದ ಕೂಡಿದವರಾಗಿದ್ದರು, ಸರ್ವೇ - ಸಮಸ್ತರೂ, ಧರ್ಮಪರಾಯಣಾಃ - ಧರ್ಮದಲ್ಲಿಯೇ ಆಸಕ್ತಿಯುಳ್ಳವರಾದರು. ॥೧೦೦॥ ಶ್ರೀಮಾನ್ - ಸಂಪದ್ಯುಕ್ತನಾದ, ರಾಮಃ - ಶ್ರೀರಾಮನು, ಭ್ರಾತೃಭಿಃ - ತಮ್ಮಂದಿರಿಂದ, ಸಹಿತಃ - ಕೂಡಿದವನಾಗಿ, ದಶವರ್ಷಸಹಸ್ರಾಣಿ - ಹತ್ತುಸಾವಿರ ವರ್ಷಗಳು, ದಶವರ್ಷಶತಾನಿಚ - ಮೇಲೆ ಸಾವಿರ ವರ್ಷಗಳು, (ಹನ್ನೊಂದುಸಾವಿರ ವರ್ಷಗಳು), ರಾಜ್ಯಂ ರಾಜ್ಯಭಾರವನ್ನು, ಅಕಾರಯತ್-ಮಾಡಿದನು. ॥೧೦೧॥ ಪುರಾ – ಪೂರ್ವದಲ್ಲಿ, ವಾಲ್ಮೀಕಿನಾ - ವಾಲ್ಮೀಕಿ ಮಹರ್ಷಿಯಿಂದ, ಕೃತಂ - ಮಾಡಲ್ಪಟ್ಟ, ಆರ್ಷಂ - ಋಷಿಪ್ರೋಕ್ತವಾದ, ಧನ್ಯಂ - (ಪುಣ್ಯಕರವಾದ) ಧನಸಂಪಾದಕವಾದ, ಯಶಸ್ಯಂ - ಯಶಸ್ಕರವಾದ, ಆಯುಷ್ಯಂ - ದೀರ್ಘಾಯುಷ್ಯವನ್ನುಂಟುಮಾಡುತ್ತಿರುವ, ರಾಜ್ಞಾಂ - ಅರಸುಗಳಿಗೆ, ವಿಜಯಾವಹಂ-ಜಯಪ್ರದಾಯಕವಾದ, ಆದಿಕಾವ್ಯಂ-ಕಾವ್ಯಗಳಲ್ಲಿ ಮೊದಲನೆಯದಾದ, ಇದಂ- ಈ ರಾಮಾಯಣವನ್ನು, ಲೋಕೇ - ಲೋಕದಲ್ಲಿ, ಯಃನರಃ - ಯಾವ ಮನುಷ್ಯನು, ಪಠೇತ್ - ಪಠನ ಮಾಡುವನೋ, ಶೃಣುಯಾದ್ವಾಪಿ - ಕೇಳುವನೋ, ಸಃ - ಆ ಪುರುಷನು, ಪಾಪಾತ್ - ಪಾಪದ ದೆಸೆಯಿಂದ, ವಿಮುಚ್ಯತೇ - ಬಿಡಲ್ಪಡುತ್ತಾನೆ. ॥ ೧೦೨ ॥ ಲೋಕೇ - ಲೋಕದಲ್ಲಿ, ಪುತ್ರಕಾಮಃ - ಪುತ್ರಾಪೇಕ್ಷೆಯುಳ್ಳ, ಧನಕಾಮಃ-ಧನಕಾಂಕ್ಷೆಯುಳ್ಳ, ಮನುಜಃ-ಮನುಷ್ಯನು, ರಾಮಾಭಿಷೇಚನಂ-ಶ್ರೀರಾಮ ಪಟ್ಟಾಭಿಷೇಕಾಂತ

ಎಲ್ಲ ಜಾತೀಯರೂ ಲೋಭರಹಿತರಾಗಿ ನಿತ್ಯತೃಪ್ತರಾಗಿದ್ದರು. ತಮ್ಮ ತಮ್ಮ ಕೆಲಸಗಳಲ್ಲಿ ತೃಪ್ತರಾಗಿ ಪ್ರಜೆಗಳೆಲ್ಲರೂ ತಂತಮ್ಮ ಕೆಲಸಗಳಲ್ಲಿ ಮಾತ್ರ ಪ್ರವೃತ್ತರಾಗಿದ್ದುದು ಮಾತ್ರವಲ್ಲದೆ ಯಾರೊಬ್ಬರೂ ಅನೃತವಾದಿಗಳಾಗಿರಲಿಲ್ಲವು. ಎಲ್ಲರೂ ಸರ್ವಲಕ್ಷಣಸಂಪನ್ನರಾಗಿ, ಎಲ್ಲರೂ ಧರ್ಮಪರಾಯಣರಾಗಿ ನಿತ್ಯಸುಖಿಗಳಾಗಿದ್ದರು. ॥೯೬–೧೦೦॥ ಮಹಾ ಕಾಂತಿಸಂಪನ್ನನೂ, ತೇಜೋಬಲಸಹಿತನೂ ಆದ ಶ್ರೀರಾಮನು ಈ ರೀತಿ ಹನ್ನೊಂದುಸಾವಿರವರ್ಷ ರಾಜ್ಯಭಾರ ಮಾಡಿದನು. ಧನ್ಯವೂ, ಯಶಸ್ಕರವೂ, ಆಯುರ್ವೃದ್ಧಿಕರವೂ, ಜಯಪ್ರದವೂ, ಆದಿಕಾವ್ಯವೂ, ಆರ್ಷವೂ ಆದ ಈ ರಾಮಾಯಣ ಮಹಾ ಕಾವ್ಯವನ್ನು ಪೂಜ್ಯನಾದ ವಾಲ್ಮೀಕಿಮುನಿಯು ರಚಿಸಿದನು. ಈ ಮಹಾ ಕಾವ್ಯವನ್ನು ಲೋಕದಲ್ಲಿ ಯಾವ ಮಾನವನು ಪಠಿಸುವನೋ ಆವನು ಪಾಪರಹಿತನಾಗುವನು. ಪುತ್ರಕಾಮನೆಯುಳ್ಳವನು ಪುತ್ರವಂತನಾಗುವನು. ಧನ

ಕಾಮಿನಾ ಧನಾನಿಚ । ಲಭತೇ ಮನುಜೋ ಲೋಕೇ ಶ್ರುತ್ವಾ ರಾಮಾಭಿಷೇಚನಂ ॥೧೦೩॥ ಮಹೀಂ ವಿಜಯತೇ ರಾಜಾ ರಿಪೂಂಶ್ಚಾಪ್ಯಧಿತಿಷ್ಠತಿ । ರಾಘವೇಣ ಯಥಾ ಮಾತಾ ಸುಮಿತ್ರಾ ಲಕ್ಷ್ಮಣೇನಚ । ಭರತೇನೇವ ಕೈಕೇಯೀ ಜೀವಪುತ್ರಾಸ್ತಥಾ ಸ್ತ್ರಿಯಃ ॥ ಭವಿಷ್ಯಂತಿ ಸದಾನಂದಾಃ ಪುತ್ರಪೌತ್ರಸಮನ್ವಿತಾಃ ॥ ೧೦೪-೧೦೫ ॥ ಶ್ರುತ್ವಾ ರಾಮಾಯಣಮಿದಂ ದೀರ್ಘಮಾಯುಶ್ಚ ವಿಂದತಿ । ರಾಮಸ್ಯ ವಿಜಯಂ ಚೈವ ಸರ್ವಮಕ್ಲಿಷ್ಟಕರ್ಮಣಃ ॥ ೧೦೬ ॥ ಶೃಣೋತಿ ಯ ಇದಂ ಕಾವ್ಯಮಾರ್ಷಂ ವಾಲ್ಮೀಕಿನಾ ಕೃತಂ । ಶ್ರದ್ದಧಾನೋ ಜಿತಕ್ರೋಧೋ ದುರ್ಗಾಣ್ಯತಿತರತ್ಯಸೌ ॥೧೦೭॥

ವಾದ ರಾಮಾಯಣವನ್ನು, ಶ್ರುತ್ವಾ - ಕೇಳಿ, ಪುತ್ರಾನ್ - ಪುತ್ರರನ್ನೂ, ಧನಾನಿಚ - ಧನಗಳನ್ನೂ, ಲಭತೇ - ಹೊಂದುತ್ತಾನೆ, ರಾಜಾ - ಅರಸು, ಮಹೀಂ - ಭೂಮಿಯನ್ನು, ವಿಜಯತೇ - ಜಯಿಸುತ್ತಾನೆ, ರಿಪೂನ್ - ಶತ್ರುಗಳನ್ನು, ಅಧಿತಿಷ್ಠತಿ - ಅತಿಕ್ರಮಿಸುತ್ತಾನೆ, ರಾಘವೇಣ - ಶ್ರೀರಾಮನಿಂದ, ಮಾತಾ - ಕೌಸಲ್ಯಾದೇವಿಯು, ಯಥಾ - ಹೇಗೆಯೋ, ಸುಮಿತ್ರಾ - ಸುಮಿತ್ರಾದೇವಿಯು, ಲಕ್ಷ್ಮಣೇನ - ಲಕ್ಷ್ಮಣನಿಂದ, ಯಥಾ - ಹೇಗೆಯೋ, ತಥಾ - ಹಾಗೆಯೇ, ಭರತೇನ - ಭರತನಿಂದ, ಕೈಕೇಯೀವ-ಕೈಕೇಯೀದೇವಿಯಂತೆ, ಸ್ತ್ರಿಯಃ-ಹೆಂಗಸರು, ಜೀವಪುತ್ರಾಃ-ದೀರ್ಘಾಯುಷ್ಮಂತರಾದ ಮಕ್ಕಳುಳ್ಳವರು, ಭವಂತಿ - ಆಗುತ್ತಾರೆ. ॥೧೦೪-೧೦೫॥ ಅಕ್ಲಿಷ್ಟಕರ್ಮಣಃ - ಕ್ಲೇಶವಿಲ್ಲದೆ ಕಾರ್ಯ ಮಾಡುವ, ರಾಮಸ್ಯ - ಶ್ರೀರಾಮನ, ವಿಜಯಂಚೈವ - ವಿಜಯಪ್ರಧಾನವಾದ, ಇದಂರಾಮಾಯಣಂ - ಈ ರಾಮಾಯಣವನ್ನು, ಶ್ರುತ್ವಾ - ಕೇಳಿ, ದೀರ್ಘೇಣ - ದೀರ್ಘವಾದ, ಆಯುಶ್ಚ - ಆಯುಸ್ಸನ್ನೂ, ವಿಂದತಿ - ಹೊಂದುತ್ತಾನೆ, ಯಃ - ಯಾವ ಪುರುಷನು, ಶ್ರದ್ದಧಾನಃ - ಭಕ್ತಿಯುಳ್ಳವನಾಗಿ, ಜಿತಕ್ರೋಧಃ - ಜಯಿಸಲ್ಪಟ್ಟ ಕೋಪವುಳ್ಳವನಾಗಿ, ವಾಲ್ಮೀಕಿನಾ - ವಾಲ್ಮೀಕಿಋಷಿಯಿಂದ, ಕೃತಂ - ಮಾಡಲ್ಪಟ್ಟ, ಆರ್ಷಂ - ಋಷಿಪ್ರೋಕ್ತವಾದ, ಇದಂಕಾವ್ಯಂ - ಈ ಕಾವ್ಯವನ್ನು, ಶೃಣೋತಿ -

---

ಕಾಮನು ಧನಾಢ್ಯನಾಗುವನು. ಇದಲ್ಲದೆ ಶ್ರೀರಾಮಮೂರ್ತಿಯ ಪಟ್ಟಾಭಿಷೇಕಾಂತದವರೆಗಣ ವೃತ್ತಾಂತವನ್ನು ಕೇಳಿದವನು ಮಹತ್ತರವಾದ ವಿಜಯವನ್ನು ಪಡೆಯುತ್ತಾನೆ. ದೊರೆಯಾದವನು ಇದನ್ನು ಕೇಳಿದರೆ ಯುದ್ಧದಲ್ಲಿ ವಿಜಯಿಯಾಗುವನು. ಈ ಮಹಾ ಕಾವ್ಯವನ್ನು ಕೇಳಿದ ಸ್ತ್ರೀಯರು ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರ ದೆಸೆಯಿಂದ, ಕೌಸಲ್ಯಾ ಸುಮಿತ್ರಾ ಕೈಕೇಯಿಯರು ಸಂತೋಷ ಹೊಂದಿದಂತೆಯೇ ನಿತ್ಯಸಂತೋಷಭರಿತರಾಗಿ ಚಿರಾಯುಷ್ಮಂತರಾದ ಸತ್ಪುತ್ರರೊಡಗೂಡಿ ಸುಖವಾಗಿ ಬಾಳುವರು. ॥೧೦೧-೧೦೫॥ ಅಲ್ಲದೆ ಈ ರಾಮಾಯಣ ಮಹಾ ಕಾವ್ಯವನ್ನು ಕೇಳಿದವನು ದೀರ್ಘಾಯುಷ್ಯವನ್ನು ಹೊಂದುವನು. ಅನಾಯಾಸವಾಗಿ ಸಮಸ್ತ ಕಾರ್ಯಗಳನ್ನೂ ನೆರವೇರಿಸುವ ಶ್ರೀರಾಮಮೂರ್ತಿಯ ವಿಜಯವೃತ್ತಾಂತವನ್ನು ಕೇಳಿದವನು ವಿಜಯವನ್ನು ಪಡೆಯುವನು. ಲೋಕದಲ್ಲಿ ಯಾವ ಮಾನವನು ಚಿತ್ತೈಕಾಗ್ರತೆಯುಳ್ಳವನಾಗಿ ವಾಲ್ಮೀಕಿ ಮಹಾಮುನಿ ಪ್ರಣೀತವಾದ ಈ ಮಹಾ

ಸಮಾಗಮಂ ಪ್ರವಾಸಾಂತೇ ಲಭತೇ ಚಾಪಿ ಬಾಂಧವೈಃ । ಪ್ರಾರ್ಥಿತಾಂಶ್ಚ ವರಾನ್ ಸರ್ವಾನ್ ಪ್ರಾಪ್ನುಯಾದಿಹ ರಾಘವಾತ್ ॥ ೧೦೮ ॥ ಶ್ರವಣೇನ ಸುರಾಸ್ಸರ್ವೇ ಪ್ರೀಯಂತೇ ಸಂಪ್ರಶೃಣ್ವತಾಂ । ವಿನಾಯಕಾಶ್ಚ ಶಾಮ್ಯಂತಿ ಗೃಹೇ ತಿಷ್ಠಂತಿ ಯಸ್ಯ ವೈ ॥ ೧೦೯ ॥ ವಿಜಯೇತ ಮಹೀಂ ರಾಜಾ ಪ್ರವಾಸೀ ಸ್ವಸ್ತಿಮಾನ್ ವ್ರಜೇತ್ । ಸ್ತ್ರಿಯೋ ರಜಸ್ವಲಾಶ್ಶೃತ್ವಾ ಪುತ್ರಾನ್ ಸೂಯುರನುತ್ತಮಾನ್ ॥ ೧೧೦ ॥ ಪೂಜಯಂಶ್ಚ ಪಠಂಶ್ಚೇಮಮಿತಿಹಾಸಂ ಪುರಾತನಂ । ಸರ್ವಪಾಪಾತ್ಪ್ರಮುಚ್ಯೇತ ದೀರ್ಘ

ಕೇಳುತ್ತಾನೆಯೋ, ಅಸೌ - ಈ ಪುರುಷನು, ದುರ್ಗಾಣಿ - ದಾರಿದ್ರ್ಯಾದಿ ದುಃಖಗಳನ್ನು, ಅತಿತರತಿ - ತರಿಸುತ್ತಾನೆ, ಪ್ರವಾಸಾಂತೇ - ಪ್ರಯಾಣ ಮುಗಿದ ಮೇಲೆ, ಬಾಂಧವೈಶ್ಚಾಪಿ - ಬಂಧುಗಳೊಡನೆ, ಸಮಾಗಮಂ - ಕೂಡುವಿಕೆಯನ್ನು, ಲಭತೇ - ಹೊಂದುತ್ತಾನೆ, ಇಹ - ಈ ಲೋಕದಲ್ಲಿ, ರಾಘವಾತ್ - ಶ್ರೀರಾಮನ ದೆಸೆಯಿಂದ, ಪ್ರಾರ್ಥಿತಾನ್ - ಪ್ರಾರ್ಥಿಸಲ್ಪಟ್ಟ, ಸರ್ವಾನ್ - ಸಮಸ್ತಗಳಾದ, ವರಾನ್ - ವರಗಳನ್ನೂ, ಪ್ರಾಪ್ನುಯಾತ್ - ಹೊಂದುವನು. ॥ ೧೦೭-೧೦೮ ॥ ಸಂಪ್ರಶೃಣ್ವತಾಂ - ರಾಮಾಯಣವನ್ನು ಕೇಳುತ್ತಿರುವವರಿಗೆ, ಶ್ರವಣೇನ - ರಾಮಾಯಣ ಶ್ರವಣದಿಂದ, ಸರ್ವೇ - ಸಮಸ್ತರಾದ, ಸುರಾಃ - ದೇವತೆಗಳು, ಪ್ರೀಯಂತೇ - ತೃಪ್ತಿಹೊಂದುತ್ತಾರೆ, ಯಸ್ಯ - ಯಾವನ, ಗೃಹೇ - ಮನೆಯಲ್ಲಿ, ವಿನಾಯಕಾಃ - ವಿಘ್ನಕಾರಿಗಳಾದ ಭೂತವಿಶೇಷಗಳು, ತಿಷ್ಠಂತಿ - ಇರುವುವೋ, ತಸ್ಯ - ಆ ಪುರುಷನಿಗೆ ತೇ - ಆ ಭೂತವಿಶೇಷಗಳು, ಶಾಮ್ಯಂತಿ - ಶಮನವನ್ನು ಹೊಂದುತ್ತವೆ. ॥ ೧೦೯ ॥ ರಾಜಾ - ಅರಸು, ಮಹೀಂ - ಭೂಮಿಯನ್ನು, ವಿಜಯೇತ - ಜಯಿಸುವನು, ಪ್ರವಾಸೀ - ಪ್ರಯಾಣ ಮಾಡಿರುವ ಪುರುಷನು, ಸ್ವಸ್ತಿಮಾನ್-ಕ್ಷೇಮವಂತನಾಗಿ, ವ್ರಜೇತ್-ಹಿಂದಿರುಗುವನು, ರಜಸ್ವಲಾಃ- ಆರ್ತವಧರ್ಮವನ್ನು ಅನುಸರಿಸುತ್ತಿರುವ, ಸ್ತ್ರಿಯಃ - ಸ್ತ್ರೀಯರುಗಳು, ಶೃತ್ವಾ - ಕೇಳಿ, ಅನುತ್ತಮಾನ್ - ಸರ್ವೋತ್ತಮರಾದ, ಪುತ್ರಾನ್ - ಮಕ್ಕಳನ್ನು, ಸೂಯುಃ - ಹೆರುವರು. ॥ ೧೧೦ ॥ ಪುರಾತನಂ - ಅನಾದಿಸಿದ್ಧವಾದ, ಇಮಮಿತಿಹಾಸಂ - ಈ ರಾಮಾಯಣವೆಂಬ ಇತಿಹಾಸವನ್ನು, ಪೂಜಯನ್ - ಪೂಜೆಮಾಡಿದವನಾಗಿ, ಪಠಂಶ್ಚ - ಪಾರಾಯಣವನ್ನೂ ಮಾಡುತ್ತಿರುವನಾಗಿ, ಸರ್ವಪಾಪಾತ್ -

---

ಕಾವ್ಯವನ್ನು ಕೇಳುವನೋ ಅವನು ಅನೇಕ ದಾರಿದ್ರ್ಯಾದಿ ಮಹಾ ಕಷ್ಟಗಳನ್ನೂ ಕಳೆಯುವನು. ಈ ಕಾವ್ಯದ ಶ್ರೋತೃವಾದವನು ಪ್ರವಾಸಾಂತ್ಯದಲ್ಲಿ ಸುಕ್ಷೇಮವಾಗಿ ಹಿಂತಿರುಗಿ ಬಂಧುಗಳೊಡಗೂಡಿ ಅಧಿಕ ಸಂತೋಷವನ್ನು ಪಡೆಯುವನು. ಅಲ್ಲದೆ ಈ ಕಾವ್ಯವನ್ನು ಕೇಳುತ್ತಿರುವವರೆಲ್ಲರನ್ನೂ ನೋಡಿ ದೇವತೆಗಳು ಸಂತೋಷಪಡುವರು. ಈ ರಾಮಾಯಣ ಮಹಾ ಕಾವ್ಯವನ್ನು ಕೇಳಿದವನ ಮನೆಯಲ್ಲಿ ವಿಘ್ನವನ್ನುಂಟುಮಾಡುವ ಅಶುಭದೇವತೆಗಳು ಶಾಂತಿಯನ್ನು ಹೊಂದುವರು. ರಾಜನಾದವನು ಜಯಶಾಲಿಯಾಗುವನು. ಪ್ರವಾಸ ಮಾಡುವಾತನು ಸಮಸ್ತ ಶುಭಗಳುಳ್ಳವನಾಗಿ ಸ್ವಗೃಹವನ್ನು ಸೇರುವನು. ರಜಸ್ವಲೆಯಾದ ಸ್ತ್ರೀಯರು ಕೇಳಿದರೆ ಸುಪುತ್ರರನ್ನು ಪಡೆಯುವಳು. ॥ ೧೦೭–೧೧೦ ॥ ಈ ರಾಮಾಯಣ ಮಹಾ ಕಾವ್ಯವನ್ನು ಪೂಜಿಸುವವರೂ, ಪಠಿಸುವವರೂ ಸಕಲ ಪಾಪರಹಿತರಾಗುವರಲ್ಲದೆ

ಮಾಯುರವಾಪ್ನುಯಾತ್ ॥೧೧೧॥ ಪ್ರಣಮ್ಯ ಶಿರಸಾ ನಿತ್ಯಂ ಶ್ರೋತವ್ಯಂ ಕ್ಷತ್ರಿಯೈರ್ದ್ವಿಜಾತ್ । ಐಶ್ವರ್ಯಂ ಪುತ್ರಲಾಭಶ್ಚ ಭವಿಷ್ಯತಿ ನಸಂಶಯಃ ॥೧೧೨॥ ರಾಮಾಯಣಮಿದಂ ಕೃತ್ನಂ ಶೃಣ್ವತಃ ಪಠತಸ್ಸದಾ । ಪ್ರೀಯತೇ ಸತತಂ ರಾಮಸ್ಸಹಿವಿಷ್ಣುಸ್ಸನಾತನಃ । ಆದಿದೇವೋ ಮಹಾಬಾಹುರ್ಹರಿರ್ನಾರಾಯಣಃ ಪ್ರಭುಃ । ಸಾಕ್ಷಾದ್ರಾಮೋ ರಘುಶ್ರೇಷ್ಠಶ್ಶೇಷೋ ಲಕ್ಷ್ಮಣ ಉಚ್ಯತೇ ॥೧೧೩॥ ಕುಟುಂಬವೃದ್ಧಿಂ ಧನಧಾನ್ಯವೃದ್ಧಿಂ ಸ್ತ್ರಿಯಶ್ಚ ಮುಖ್ಯಾಸ್ಸುಖಮುತ್ತಮಂಚ । ಶ್ರುತ್ವಾ ಶುಭಂ ಕಾವ್ಯ

ಸಮಸ್ತ ಪಾಪದ ದೆಸೆಯಿಂದಲೂ, ಪ್ರಮುಚ್ಯತೇ - ಬಿಡಲ್ಪಡುವವನಾಗುವನು, ದೀರ್ಘಂ - ದೀರ್ಘವಾದ, ಆಯುಃ - ಆಯುಸ್ಸನ್ನು, ಅವಾಪ್ನುಯಾತ್ - ಹೊಂದುವನು. ॥೧೧೧॥ ಕ್ಷತ್ರಿಯೈಃ - ಕ್ಷತ್ರಿಯರಿಂದ, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ನಮಸ್ಕರಿಸಿ, ದ್ವಿಜಾತ್ - ಬ್ರಾಹ್ಮಣನ ದೆಸೆಯಿಂದ, ನಿತ್ಯಂ - ನಿರಂತರವೂ, ಶ್ರೋತವ್ಯಂ - ಕೇಳತಕ್ಕುದು, ಐಶ್ವರ್ಯಂ - ಪ್ರಭುತ್ವವೂ, ಅಥವಾ ಧನಸಂಪತ್ತೂ, ಪುತ್ರಲಾಭಶ್ಚ - ಪುತ್ರಪ್ರಾಪ್ತಿಯೂ, ಭವಿಷ್ಯತಿ - ಆಗುತ್ತದೆ, ನಸಂಶಯಃ - ಸಂಶಯವಿಲ್ಲವು. ॥೧೧೨॥ ಕೃತ್ಸ್ನಂ - ಸಮಸ್ತವಾದ, ಇದಂರಾಮಾಯಣಂ - ಈ ರಾಮಾಯಣವನ್ನು, ಸದಾ - ನಿರಂತರವೂ, ಶೃಣ್ವತಃ - ಕೇಳುತ್ತಿರುವ, ಪಠತಃ - ಪಾರಾಯಣ ಮಾಡುತ್ತಿರುವವನಿಗೆ, ರಾಮಃ - ಶ್ರೀರಾಮನು, ಸತತಂ - ನಿರಂತರವೂ, ಪ್ರೀಯತೇ - ಸಂತುಷ್ಟನಾಗುತ್ತಾನೆ, ಹಿ - ಯಾವ ಕಾರಣದ ದೆಸೆಯಿಂದ, ಸಃ - ಆ ಶ್ರೀರಾಮನು, ಸನಾತನಃ - ಅನಾದಿಸಿದ್ಧನಾದ, ವಿಷ್ಣುಃ - ಸರ್ವಜಗದ್ವ್ಯಾಪಕನಾದ ಚೈತನ್ಯರೂಪನೋ, ಸಃ - ಆ ಶ್ರೀರಾಮನೇ, ಆದಿದೇವಃ - ದೇವತೆಗಳಿಗೆಲ್ಲಾ ಮೂಲಕಾರಣಭೂತನಾದವನು, ಮಹಾಬಾಹುಃ - ಮಹಾ ಭುಜಬಲಪರಾಕ್ರಮಶಾಲಿಯಾದವನು, ಹರಿಃ - ಸಕಲ ಪಾಪಗಳನ್ನು ಪರಿಹರಿಸುತ್ತಲಿರುವನು, ನಾರಾಯಣಃ - ಪ್ರಳಯೋದಕವೇ ಆಶ್ರಯವಾಗುಳ್ಳ ವಟಪತ್ರಶಾಯಿಯಾದ ನಾರಾಯಣ ಶಬ್ದವಾಚ್ಯನು, ಸಃ - ಆ ಶ್ರೀರಾಮನೇ, ಪ್ರಭುಃ - ಸಕಲ ಜಗತ್ತಿಗೂ ಸ್ವಾಮಿಯಾದವನು. ॥೧೧೩॥ ಭಕ್ತಃ - ಭಕ್ತಿಯುಳ್ಳ ಪುರುಷನು, ಮಹಾರ್ಥಂ - ಮಹಾ ಪ್ರಯೋಜನವನ್ನು, (ಅಂದರೆ ಮೋಕ್ಷರೂಪಪ್ರಯೋಜನವನ್ನು ಕೊಡುತ್ತಿರುವ) ಶುಭಂ-ಶುಭಕರವಾದ, ಇದಂಕಾವ್ಯಂ - ಈ ರಾಮಾಯಣವನ್ನು, ಶ್ರುತ್ವಾ - ಕೇಳಿ, ಕುಟುಂಬವೃದ್ಧಿಂ - ಕುಟುಂಬದ ವೃದ್ಧಿಯನ್ನೂ, ಧನಧಾನ್ಯವೃದ್ಧಿಂ - ಧನಸಮೃದ್ಧಿಯನ್ನೂ, ಧಾನ್ಯಸಮೃದ್ಧಿಯನ್ನೂ, ಮುಖ್ಯಾಃ -

---

ದೀರ್ಘಾಯುಷ್ಯವುಳ್ಳವರೂ ಆಗುವರು. ಕ್ಷತ್ರಿಯರು ದಿನದಿನದಲ್ಲಿಯೂ ಬ್ರಾಹ್ಮಣರಿಗೆ ಶಿರಸ್ಸಾಷ್ಟಾಂಗ ವಂದನೆಗಳನ್ನು ಮಾಡಿ ಈ ಮಹಾ ಕಾವ್ಯವನ್ನು ಕೇಳಿದರೆ ಐಶ್ವರ್ಯವನ್ನೂ, ಪುತ್ರಲಾಭವನ್ನೂ ಪಡೆಯುತ್ತಾರೆ. ಈ ಕಾವ್ಯವನ್ನು ಕೇಳುವವರನ್ನು ನೋಡಿ ಸನಾತನನೂ, ಸರ್ವವ್ಯಾಪಕನೂ, ಆದಿದೇವನೂ, ಮಹಾ ಬಾಹುವೂ ಆದ ಶ್ರೀಮನ್ನಾರಾಯಣನು ಪರಮ ಸಂತುಷ್ಟನಾಗುವನು. (ಶ್ರೀರಾಮನು ನಾರಾಯಣನೆಂದೂ, ಲಕ್ಷ್ಮಣಸ್ವಾಮಿಯು ಆದಿಶೇಷನೆಂದೂ ಹೇಳಲ್ಪಡುವರು.) ಈ ಕಾವ್ಯವನ್ನು ಭಕ್ತಿಶ್ರದ್ಧೆಗಳಿಂದ ಕೇಳುವವರು ಕುಟುಂಬವೃದ್ಧಿಯನ್ನೂ, ಧನಧಾನ್ಯವೃದ್ಧಿಯನ್ನೂ, ಉತ್ತಮ ಸ್ತ್ರೀಯರನ್ನೂ, ಸರ್ವೋತ್ತಮ

ಮಿದಂ ಮಹಾರ್ಥಂ ಪ್ರಾಪ್ನೋತಿ ಸರ್ವಾಂ ಭುವಿ ಚಾರ್ಥಸಿದ್ಧಿಂ ॥ ೧೧೪ ॥ ಆಯುಷ್ಯ
ಮಾರೋಗ್ಯಕರಂ ಯಶಸ್ಯಂ ಸೌಭ್ರಾತೃಕಂ ಬುದ್ಧಿಕರಂ ಸುಖಂಚ । ಶ್ರೋತವ್ಯಮೇತ
ನ್ನಿಯಮೇನ ಸದ್ಭಿರಾಖ್ಯಾನಮೋಜಸ್ಕರಮೃದ್ಧಿಕಾಮೈಃ ॥೧೧೫॥ ಏವಮೇತತ್ಪುರಾ
ವೃತ್ತಮಾಖ್ಯಾನಂ ಭದ್ರಮಸ್ತು ವಃ । ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ಣೋಃ
ಪ್ರವರ್ಧತಾಂ ॥ ೧೧೬ ॥ ದೇವಾಶ್ಚ ಸರ್ವೇ ತುಷ್ಯಂತಿ ಗ್ರಹಣಾಚ್ಛ್ರವಣಾತ್ತಥಾ ।
ರಾಮಾಯಣಸ್ಯ ಶ್ರವಣಾತ್ತುಷ್ಯಂತಿ ಪಿತರಸ್ತಥಾ ॥ ೧೧೭ ॥

ರೂಪವತಿಯಾದ, ಸ್ತ್ರಿಯಶ್ಚ - ಸ್ತ್ರೀಯರನ್ನೂ, ಭುವಿ - ಭೂಲೋಕದಲ್ಲಿ, ಸರ್ವಾಂ - ಸಮಸ್ತ ಇಷ್ಟಾರ್ಥಗಳನ್ನೂ, ಅರ್ಥಸಿದ್ಧಿಂ - ಕಾರ್ಯಸಿದ್ಧಿಯನ್ನೂ, ಪ್ರಾಪ್ನೋತಿ - ಹೊಂದುತ್ತಾನೆ. ॥ ೧೧೪ ॥ ಆಯುಷ್ಯಂ - ದೀರ್ಘಾಯುಷ್ಯವನ್ನುಂಟುಮಾಡುವ, ಯಶಸ್ಯಂ - ಯಶಸ್ಸಂಪಾದಕವಾದ, ಸೌಭ್ರಾತೃಕಂ - ಸುಭ್ರಾತೃತ್ವವನ್ನುಂಟುಮಾಡುತ್ತಿರುವ, ಬುದ್ಧಿಕರಂ - ಬುದ್ಧಿಪ್ರದಾಯಕವಾದ, ಸುಖಂಚ - ಸುಖಕರವಾದ, ಓಜಸ್ಕರಂ - ತೇಜಸ್ಸಂಪಾದಕವಾದ, ಇದಮಾಖ್ಯಾನಂ - ಈ ರಾಮಾಯಣವೆಂಬ ಉಪಾಖ್ಯಾನವು, ಬುದ್ಧಿಕಾಮೈಃ-ಅಭ್ಯುದಯವನ್ನು ಕೋರುತ್ತಿರುವ, ಸದ್ಭಿಃ-ಸತ್ಪುರುಷರಿಂದ, ನಿಯಮೇನ - ನಿಯಮದಿಂದ, ಶ್ರೋತವ್ಯಂ - ಕೇಳತಕ್ಕದು. ॥ ೧೧೫ ॥ ಏವಂ - ಈ ಪರಿಯಾಗಿ, ಏತತ್ - ಈ, ಪುರಾವೃತ್ತಂ - ಇತಿಹಾಸರೂಪವಾದ, ಆಖ್ಯಾನಂ - ರಾಮಾಯಣರೂಪವಾದ ಉಪಾಖ್ಯಾನವನ್ನು, ವಿಸ್ರಬ್ಧಂ - ಭಕ್ತಿಪುರಸ್ಸರವಾಗಿರುವಂತೆ, ಪ್ರವ್ಯಾಹರತ - ಪಠನಮಾಡಿರಿ, ವಃ - ನಿಮಗೆ, ಭದ್ರಂ - ಶುಭವು, ಅಸ್ತು - ಆಗಲಿ, ವಿಷ್ಣೋಃ - ಶ್ರೀಮಹಾವಿಷ್ಣುವಿನ, ಬಲಂ - ಬಲವು, ಪ್ರವರ್ಧತಾಂ - ಅಭಿವೃದ್ಧಿಯಾಗಲಿ. ॥ ೧೧೬ ॥ ಗ್ರಹಣಾತ್ - ರಾಮಾಯಣದ ಉಪದೇಶದಿಂದಲೂ, ತಥಾ - ಹಾಗೆಯೇ, ರಾಮಾಯಣಸ್ಯ - ರಾಮಾಯಣದ, ಶ್ರವಣಾತ್ - ಶ್ರವಣದಿಂದ, ಸರ್ವೇ - ಸಮಸ್ತರಾದ, ದೇವಾಶ್ಚ - ದೇವತೆಗಳೂ, ತುಷ್ಯಂತಿ - ಸಂತುಷ್ಟರಾಗುವರು, ತಥಾ - ಹಾಗೆಯೇ, ರಾಮಾಯಣಸ್ಯ - ರಾಮಾಯಣದ, ಶ್ರವಣಾತ್ - ಶ್ರವಣದಿಂದ, ಪಿತರಃ - ಪಿತೃದೇವತೆಗಳು, ತುಷ್ಯಂತಿ - ಸಂತುಷ್ಟರಾಗುತ್ತಾರೆ. ॥ ೧೧೭ ॥ ಯೇನರಾಃ - ಯಾವ ಜನರು,

---

ಪಾದ ಸುಖಗಳನ್ನೂ, ಇನ್ನೂ ಇತರ ಇಷ್ಟಾರ್ಥಗಳನ್ನೂ ಹೊಂದುವರು. ಇಷ್ಟು ಮಾತ್ರವಲ್ಲದೆ, ದೀರ್ಘಾಯುಷ್ಯವನ್ನೂ, ರೋಗರಾಹಿತ್ಯವನ್ನೂ, ಕೀರ್ತಿ, ಸೋದರಾಭಿವೃದ್ಧಿ, ಸುಖ, ತೇಜೋಬಲಗಳು, ಧೈರ್ಯಾದಿಗಳು ಎಲ್ಲವನ್ನೂ ಹೊಂದುವರು. ಆದಕಾರಣ ಬಹಳ ಮಂಗಳಕರವಾದುದೂ, ಹಿಂದಿನ ವಿಷಯಗಳನ್ನು ಬೋಧಿಸುವುದೂ ಆದ ಈ ಮಹಾಕಾವ್ಯವನ್ನು ಪಠಿಸಿದವರೆಲ್ಲರೂ ವಿಷ್ಣುಪರಮಾತ್ಮನ ಅನುಗ್ರಹದಿಂದ ಅಪಾರವಾದ ಅಭಿವೃದ್ಧಿಯನ್ನು ಪಡೆಯುವರು. ॥ ೧೧೧–೧೧೫ ॥ ಆದುದರಿಂದಲೈ ಮಾನವರಿರಾ! ಪುರಾತನವಾದ ಈ ರಾಮಾಯಣವೆಂಬ ಆಖ್ಯಾನವನ್ನು ಭಕ್ತಿಯಿಂದ ಪಠನಮಾಡಿರಿ. ನಿಮಗೆ ಮಂಗಳವಾಗಲಿ. ಶ್ರೀಮಹಾವಿಷ್ಣುವಿನ ಪ್ರಭಾವವು ಬೆಳೆಯಲಿ. ಈ ರಾಮಾಯಣ ಮಹಾಕಾವ್ಯವನ್ನು ಭಕ್ತಿಶ್ರದ್ಧೆಗಳಿಂದ ಕೇಳುವುದರಿಂದ ದೇವತೆಗಳೆಲ್ಲರೂ ಸಂತೋಷವನ್ನು ಹೊಂದುವರು.

ಭಕ್ತ್ಯಾ ರಾಮಸ್ಯ ಯೇ ಚೇಮಾಂ ಸಂಹಿತಾ ಮೃಷಿಣಾ ಕೃತಾಂ ।
ಲೇಖಯಂತೀಹ ಚ ನರಾಸ್ತೇಷಾಂ ವಾಸಸ್ತ್ರಿವಿಷ್ಟಪೇ * ॥ ೧೧೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಆದಿಕಾವ್ಯೇ ಶ್ರೀಮದ್ವಾಲ್ಮೀಕೀಯೇ
ಚತುರ್ವಿಂಶತ್ಸಹಸ್ರಿಕಾಯಾಂ ಸಂಹಿತಾಯಾಂ
ಯುದ್ಧಕಾಂಡೇ ಶ್ರೀರಾಮ ಪಟ್ಟಾಭಿಷೇಕೋನಾಮ
ಏಕತ್ರಿಂಶದುತ್ತರಶತತಮಸ್ಸರ್ಗಃ

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು

ಯುದ್ಧಕಾಂಡಸ್ಸಮಾಪ್ತಃ

ಋಷಿಣಾ - ವಾಲ್ಮೀಕಿ ಮುನಿಯಿಂದ, ಕೃತಾಂ - ಮಾಡಲ್ಪಟ್ಟ, ರಾಮಸ್ಯ - ಶ್ರೀರಾಮಮೂರ್ತಿಯ, ಇಮಾಂಸಹಿತಾಂ - ಈ ವೇದಸಮಾನವಾದ ಈ ಕಥೆಯನ್ನು, ಇಹ - ಈ ಲೋಕದಲ್ಲಿ, ಭಕ್ತ್ಯಾ - ಭಕ್ತಿಯಿಂದ, ಲೇಖಯಂತಿ - ಬರೆಸುತ್ತಾರೋ, ತೇಷಾಂ - ಅವರಿಗೆ, ತ್ರಿವಿಷ್ಟಪೇ - ಸ್ವರ್ಗದಲ್ಲಿ, ವಾಸಃ - ವಾಸವು, ಭವಿಷ್ಯತಿ - ಆಗುವುದು. ॥ ೧೧೮ ॥

* ಈ ಶ್ಲೋಕವಾದ ಬಳಿಕ, " ಕುಟುಂಬವೃದ್ಧಿಂ ಧನಧಾನ್ಯವೃದ್ಧಿಂ । ಸ್ತ್ರಿಯಶ್ಚ ಮುಖ್ಯಾಸ್ಸುಖಮುತ್ತಮಂಚ ॥ ಶ್ರುತ್ವಾ ಶುಭಂ ಕಾವ್ಯಮಿದಂ ಮಹಾರ್ಥಂ । ಪ್ರಾಪ್ನೋತಿ ಸರ್ವಾನ್ಭುವಿ ಚಾರ್ಥಸಿದ್ಧಿಂ ॥ " ಎಂಬ ಶ್ಲೋಕವನ್ನು ಪಾರಾಯಣ ಮಾಡತಕ್ಕದ್ದು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಆದಿಕಾವ್ಯೇ ಶ್ರೀಮದ್ವಾಲ್ಮೀಕೀಯೇ
ಚತುರ್ವಿಂಶತ್ಸಹಸ್ರಿಕಾಯಾಂ ಸಂಹಿತಾಯಾಂ
ಯುದ್ಧಕಾಂಡೇ ಶ್ರೀರಾಮ ಪಟ್ಟಾಭಿಷೇಕೋನಾಮ
ಏಕತ್ರಿಂಶದುತ್ತರಶತತಮಸ್ಸರ್ಗಃ

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು

ಯುದ್ಧಕಾಂಡಸ್ಸಮಾಪ್ತಃ

ಅಲ್ಲದೆ ವಾಲ್ಮೀಕಿ ಮಹಾಮುನಿ ರಚಿತವಾದ ಈ ರಾಮಾಯಣ ಸಂಹಿತೆಯನ್ನು ಭಕ್ತಿಯಿಂದ ಬರೆಯಿಸುವ ನರರು ಸ್ವರ್ಗಲೋಕದಲ್ಲಿ ಚಿರಕಾಲಸುಖವಾಗಿ ವಾಸಮಾಡುವರು.॥೧೧೬-೧೧೮॥

ಇಂತಿದು ಶ್ರೀರಾಮಪಟ್ಟಾಭಿಷೇಕ ಮಹೋತ್ಸವ ವೃತ್ತಾಂತವೆಂಬ
ನೂರಮುವ್ವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು

—: ಶ್ರೀ ಶ್ಶುಭಂ ದದಾತು :—

ಯುದ್ಧಕಾಂಡವು ಮುಗಿದುದು.